START

KARNATAKA
STATE
ARCHIVES

ARS 3 APP 2013

ಒಪ್ಪನ ಮಾಹಿತಿಯ ಪತ್ರದ ಸಂಖ್ಯೆ: ಬಕ/ಗ್ರಂಥಾಲಯ/
2012-13 ದಿನಾಂಕ 18-2-2013

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಮರು

ದಿನಾಂಕ 2.1.1911 ರಿಂದ 26.12.1932 ರ
ವರೆಗೆ ಒಟ್ಟು 17 ಸಂಪುಟಗಳು.

(Retakes of Mysore Star weekly News papers)

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಪಟ್ಟಿ

ಕ್ರಮ ಸಂ.	ವರ್ಷ	ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ದಿನಾಂಕ (ದಿಂದ ವರೆಗೆ)	ಪರಿಗ್ರಹಣ ಸಂಖ್ಯೆ
✓ 1	1911	2.1.1911 – 25.12.1911	N11.24
✓ 2	1912	1.1.1912 – 23.12.1912	N12.25
✓ 3	1914	5.1.1914 – 27.12.1914	N14.27
✓ 4	1915	3.1.1915 – 15.08.1915	N15.28
✓ 5	1916	2.1.1916 – 31.12.1916	N16.29
6	1917	7.1.1917 – 30.12.1917	N17.30
7	1918	6.1.1918 – 29.12.1918	N18.31
8	1919	9.2.1919 – 28.12.1919	N19.32
9	1920	4.1.1920 – 26.12.1920	N20.33
10	1921	9.1.1921 – 25.12.1921	N21.34
11	1922	1.1.1922 – 31.12.1922	N22.35
12	1923	14.1.1923 – 23.12.1923	N23.36
13	1923	21.1.1923 – 30.12.1923	N23.36
14	1924	6.1.1924 – 28.12.1924	N24.37
15	1925	4.1.1925 – 26.12.1925	N25.38
16	1926	2.1.1926 – 25.12.1926	N26.39
17	1929	5.1.1929 – 28.12.1929	N29.42
18	1932	4.1.1931 – 26.12.1932	N32.45

ಮೈಸೂರ್ ಸ್ಟಾರ್ ವಾರ ಪತ್ರಿಕೆಯ
ದಿನಾಂಕ 07-01-1917 ರಿಂದ
ಪ್ರಾರಂಭಿಸಿ

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಪಟ್ಟಿ

ಕ್ರಮ ಸಂ.	ವರ್ಷ	ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ದಿನಾಂಕ (ದಿಂದ ವರೆಗೆ)	ಪರಿಗ್ರಹಣ ಸಂಖ್ಯೆ
1	1911	2.1.1911 – 25.12.1911	N11.24
2	1912	1.1.1912 – 23.12.1912	N12.25
3	1914	5.1.1914 – 27.12.1914	N14.27
4	1915	3.1.1915 – 15.08.1915	N15.28
5	1916	2.1.1916 – 31.12.1916	N16.29
6	1917	7.1.1917 – 30.12.1917	N17.30
7	1918	6.1.1918 – 29.12.1918	N18.31
8	1919	9.2.1919 – 28.12.1919	N19.32
9	1920	4.1.1920 – 26.12.1920	N20.33
10	1921	9.1.1921 – 25.12.1921	N21.34
11	1922	1.1.1922 – 31.12.1922	N22.35
12	1923	14.1.1923 – 23.12.1923	N23.36
13	1923	21.1.1923 – 30.12.1923	N23.36
14	1924	6.1.1924 – 28.12.1924	N24.37
15	1925	4.1.1925 – 26.12.1925	N25.38
16	1926	2.1.1926 – 25.12.1926	N26.39
17	1929	5.1.1929 – 28.12.1929	N29.42
18	1932	4.1.1931 – 26.12.1932	N32.45

ಮೈಸೂರ್ ಸ್ಟಾರ್ ವಾರ ಪತ್ರಿಕೆಯ

ದಿನಾಂಕ 06-01-1918 ರಿಂದ

ಪ್ರಾರಂಭಿಸಿ

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೇ ಲಯಂ ಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಜನವರಿ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೧

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾತ್ಮ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ॥ ಗು॥ ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹೂಳಕೇರಿ, ಮುಳಗುಂದ, ಬಿದರಿ, ಅನಂತಪುರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇವರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದ ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದು ಸಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಶಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೋ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝಂಡೆ ಹಚ್ಚಿದ ಅದ್ವಿತೀಯ ಶಂಭುವಿನ ಅವತಾರಿಯಾದ «ಶ್ರೀ ಕಲ್ಯಾಣ ಬಸವೇಶ್ವರದೇವರ» ಅರಿವೆ ಮೇಲೆ ತೆಗೆದಿದ್ದ ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೋ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಆದ್ಯಕರ್ತವ್ಯ ಅದೆ ಫುಲ್‌ಸೈ॥ ೧ ಕ್ಕೆ ರೂ. ೧ ಕ್ಯಾ॥ ಸೈ॥ ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕ್ಕೆ ಬಣ್ಣದ್ದು ರೂ. ೧ ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೋ ಇರುತ್ತದೆ. ಫುಲ್‌ಸೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸೈಜು ರೂ. ೦-೮-೦ ಮೇಲೆ ಕ್ಕೆ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ಏರಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೋಟೋ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೆ ಫು॥ ಸೈ॥ ೧ ಕ್ಕೆ ರೂ. ೧ ಕ್ಯಾ॥ ಸೈ॥ ಆಣೆ ೮ ಮೇಲೆ ಕ್ಕೆ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೋ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಗಳಪ್ಪ ರುಷರ ಫೋಟೋ ಬೇರೆ ಬೇರೆ ಸಿಕ್ಕುತ್ತವೆ.

ಪುರವುಗೀ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಚಿರಗೇ ಮಾಲಿಕ, ಶ್ರೀ ಶಾರದಾ ಫೋಟೋ ಕಂಪನಿ,
12 ಸೊಲ್ಲಾಪುರ ಸಿಟಿ.

ಫುಕಟ! ೨೨ ಪುಟಗಳ ಪುಸ್ತಕವು. ಫುಕಟ!!

3 ಅಂಚೇ ಹಾಸಲು ಸಹ ಕೊಡಬೇಕಾಗಿಲ್ಲ.

ಒಕ್ಕಲಿಗರ ಜೀವನ ಸರ್ವಸ್ವವಾಗಿರುವ ದನಕರುಗಳ ಪ್ರತಿಯೊಂದು ರೋಗದ ಕಾರಣ, ಲಕ್ಷಣ, ಪರೋಗೀ ದನಗಳ ಉಪಚಾರ ಇವುಗಳನ್ನು ವಿಶದವಾಗಿ ವಿವರಿಸಿದ «ಪಶುಸಂಜೀವನ» ವೆಂಬ ಸುಂದರವಾದ ಪುಸ್ತಕವನ್ನು ಏನೂ ಬೆಲೆಯಿಲ್ಲದೆ ಕಳುಹಿಸುವೆವು. ಪ್ರತಿಗಳು ಹೇರಳವಾಗಿವೆ. ತ್ವರೆಯಿಂದ ತರಿಸಿ ಓದಿರಿ.

ಸುಪ್ರಸಿದ್ಧ] ಶಾಂತವೀರ. [ಸುವಾಸಿಕ

ಹುರುಕಿನ ಔಷಧ.

ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ. ಖರ್ಚು ಬೇರೆ. ಒಮ್ಮೆಲೆ ೧೦೦ ಪುಟ್ಟಿಗಳನ್ನು ತರಿಸಿಕೊಳ್ಳುವವರಿಗೆ ಅಂಚೇ ವೆಚ್ಚ ಸೇರಿ ೪—೮—೦.

ಕಣ್ಣುಬೇನೆಯ ಔಷಧ:—ಚೀಟು ೧ ಕ್ಕೆ ೩ ಪೈ. ೧೦೦ ಕ್ಕೆ ೧ ರೂಪಾಯಿ. ಟ. ಖರ್ಚು ೪೦೦ ಚೀಟುಗಳವರೆಗೆ ನಾಲ್ಕೇ ಆಣೆ.

ಹೇನು ವ ಶೀರು ನಾಶಕ ಚೂರ್ಣ:—ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೧—೮—೦. ಟ. ಖರ್ಚು ಬೇರೆ.

ಕ್ರಿಮಿನಾಶಕ ಚೂರ್ಣ (ಜಂತಿನ ಪುಡಿ):—ಚೀಟು ೧ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ.ಖರ್ಚು ಬೇರೆ.

ಪ್ಲೇಗ್ ಪ್ರತಿಬಂಧಕ ಗುಳಿಗೆ:—೨೫ ಕ್ಕೆ ೧ ರೂಪಾಯಿ. ೧೦೦ ಕ್ಕೆ ೩ ರೂಪಾಯಿ. ಟ. ಖರ್ಚು ಬೇರೆ.

ಪಶುಸಂಜೀವಿನೀ (ದನಗಳ ಔಷಧ):—೧೦ ತೊಲೆಯ ಡಬ್ಬಿ ೧ ಕ್ಕೆ ೧ ರೂಪಾಯಿ. ಡಜನ್ನಿಗೆ ಟ. ಖರ್ಚು ಸಹ ೧೦—೦—೦.

ನಮ್ಮ ಔಷಧಾಲಯದಲ್ಲಿ ಎಲ್ಲ ಪ್ರಕಾರದ ಕಾಢೆ, ಚೂರ್ಣ, ಮಾತ್ರೆ, ಗುಗ್ಗುಲ, ಗುಟಿಕಾ ಮುಂತಾದ ಆಯುರ್ವೇದಿಕ ಔಷಧಗಳು ತಯಾರ ಅವೆ. ಯೋಗ್ಯ ಕ್ರಯಕ್ಕೆ ಕಳುಹಿಸುವೆವು.

ಸೂಚನೆ:—ನಮ್ಮ ಔಷಧಗಳನ್ನು ಕೊಂಡುಕೊಳ್ಳುವದರಿಂದ ಪದೇ ಪದೇ ಹಣವನ್ನು ಕಳೆದುಕೊಳ್ಳುವದು ತಪ್ಪುತ್ತದೆ. ಬೇಕಾದವರು ಬೇಕಾದಷ್ಟು ತರಿಸಿಕೊಳ್ಳಬಹುದು. ಅನೇಕ ಬೂಟಾಟಿಕೆಯ ಔಷಧಗಳನ್ನು ತರಿಸಿ ಮೋಸಹೋಗಬೇಡಿರಿ. ಆರ್ಯವೈದ್ಯಕ ಶಾಸ್ತ್ರಕ್ಕನುಸರಿಸಿ ನಡೆಯುವ ಕರ್ನಾಟಕ ಪ್ರಾಂತದೊಳಗಿನ ಒಂದೇ ಔಷಧಾಲಯವು.

(ತಂತೀ ವಿಳಾಸ)
'ಶಾಂತವೀರ' ಕಿತ್ತೂರ

ವಿಳಾಸ:—ಕರ್ನಾಟಕ ಜಂಗೀ ವನೌಷಧಾಲಯ, ಕಿತ್ತೂರ.
ಮಾಲಕರು—ಡಾಕ್ಟರ, ಎಸ್.ಆರ್. ಕಿತ್ತೂರ, "ಪಶುಸಂಜೀವಿನೀ" ಶೋಧಕರು,
ಪೋಸ್ಟ್ ಕಿತ್ತೂರ, ಜಿಲ್ಲಾ ಬೆಳಗಾಂವ.

ಮದರಾಸ್ ಮೇಲ್‌ವಾಚ್.

೫ ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4.0.0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವುದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಫ್ಲಾಕ್, ಧೂಳು, ನೀರವಂಕೆ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವದಾಗಿ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕೆಳಗೆ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರಾಕ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗೆಜ್ಜೆ ಅಡ್ಡಿಕೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 3, ಜರಾಕ್ ಕೈಪಟ್ಟ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1 ಕ್ಕೆ ರೂ. 4.0.0.

ವಿಳಾಸ:—ವಿ. ಎ. ಎಸ್. ವಾಣಿ,
4 ಸಾಹುಕಾರ್‌ಪೇಟೆ, ಮದರಾಸ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜನ್ಮಂಡಲಹಿತೈಷಾ | ಘನಪಪಭಕ್ತಾವತಾರಾ ಪಕ್ಷ್ಯಜ್ಞನಪ್ಯತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಪಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೊಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦]   [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧)   ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜನವರಿ ತಾರೀಖು ೬ ನೆಯ ಭಾನುವಾರ.   (ಸಂಚಿಕೆ ೧

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾತ್ಮ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹಾಲಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೊಗಳು ಕೂಡಿಸಿ ಚಿತ್ತಾಕರ್ಷಕವಾದನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತ್ತದೆ. ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದ ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದು ಸಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಶಿಫಾರಸು ಮಾಡುತ್ತೇವೆ.   ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೋ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝುಂಡೆ ಹಚ್ಚಿದ ಅದ್ವಿತಿಯ ಶಂಭುವಿನ ಅವತಾರಿಯಾದ “ಶ್ರೀ ಕಲ್ಯಾಣ ಬಸವೇಶ್ವರದೇವರ” ಅರಿವೆ ಮೇಲೆ ತೆಗೆದಿದ್ದ ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅವ್ಯಕರ್ತವ್ಯ ಅದೆ ಫುಲ್‌ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕ್ಕೆ ಬಣ್ಣದ್ದು ರೂ. ೧ ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುತ್ತದೆ. ಫುಲ್‌ಸೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸೈಜು ರೂ. ೦-೮-೦ ಮೇಲೆ ಕ್ಕೆ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡೆಕೊಂಡ ಫೋಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೆ ಫು|| ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ಆಣೆ ೮ ಮೇಲೆ ಕ್ಕೆ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೊಟೊ ಬೇರೆ ಬೇರೆ ಸಿಕ್ಕುತ್ತವೆ.

ಪುರಪುರಿಗೇ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಬಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪನಿ,
12   ಸೊಲ್ಲಾಪುರ ಸಿಟಿ.

ಪ್ರಕಟ!   ೨೨ ಪುಟಗಳ ಪುಸ್ತಕವು.   ಪ್ರಕಟ!!

3   ಅಂಚೇ ಹಾಸಲು ಸಹ ಕೊಡಬೇಕಾಗಿಲ್ಲ.

ಒಕ್ಕಲಿಗರ ಜೀವನ ಸರ್ವಸ್ವವಾಗಿರುವ ದನಕರುಗಳ ಪ್ರತಿಯೊಂದು ರೋಗದ ಕಾರಣ, ಲಕ್ಷಣ, ವರೋಗೀ ದನಗಳ ಉಪಚಾರ ಇವುಗಳನ್ನು ವಿಶದವಾಗಿ ವಿವರಿಸಿದ “ಪಶುಸಂಜೀವನ” ವೆಂಬ ಸುಂದರವಾದ ಪುಸ್ತಕವನ್ನು ಏನೂ ಬೆಲೆಯಿಲ್ಲದೆ ಕಳುಹಿಸುವೆವು. ಪ್ರತಿಗಳು ಹೇರಳವಾಗಿವೆ. ತ್ವರೆಯಿಂದ ತರಿಸಿ ಓದಿರಿ.

ಸುಪ್ರಸಿದ್ಧ]   ಶಾಂತವೀರ.   [ಸುವಾಸಿಕ

ಹುರುಕಿನ ಔಷಧ.

ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ. ಖರ್ಚು ಬೇರೆ. ಒಮ್ಮೆಲೆ ೧೦೦ ಪುಟ್ಟಿಗಳನ್ನು ತರಿಸಿಕೊಳ್ಳುವವರಿಗೆ ಅಂಚೇ ವೆಚ್ಚ ಸೇರಿ ೪—೮—೦.

ಕಣ್ಣುಬೇನೆಯ ಔಷಧ:—ಚೀಟು ೧ ಕ್ಕೆ ೩ ಪೈ. ೧೦೦ ಕ್ಕೆ ೧ ರೂಪಾಯಿ. ಟ. ಖರ್ಚು ೪೦೦ ಚೀಟುಗಳವರೆಗೆ ನಾಲ್ಕೇ ಆಣೆ.

ಹೇನು ವ ಶೀರು ನಾಶಕ ಚೂರ್ಣ:—ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೧—೮—೦. ಟ. ಖರ್ಚು ಬೇರೆ.

ಕ್ರಿಮಿನಾಶಕ ಚೂರ್ಣ (ಜಂತಿನ ಪುಡಿ):—ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ.ಖರ್ಚು ಬೇರೆ.

ಪ್ಲೇಗ್ ಪ್ರತಿಬಂಧಕ ಗುಳಿಗೆ:—೨೫ ಕ್ಕೆ ೧ ರೂಪಾಯಿ. ೧೦೦ ಕ್ಕೆ ೩ ರೂಪಾಯಿ. ಟ. ಖರ್ಚು ಬೇರೆ.

ಪಶುಸಂಜೀವಿನೀ (ದನಗಳ ಔಷಧ):—೧೦ ತೊಲೆಯ ಡಬ್ಬಿ ೧ ಕ್ಕೆ ೧ ರೂಪಾಯಿ. ಡಜನ್ನಿಗೆ ಟ. ಖರ್ಚು ಸಹ ೧೦—೦—೦.

ನಮ್ಮ ಔಷಧಾಲಯದಲ್ಲಿ ಎಲ್ಲ ಪ್ರಕಾರದ ಕಾಢೆ, ಚೂರ್ಣ, ಮಾತ್ರೆ, ಗುಗ್ಗುಲ, ಗುಟಿಕಾ ಮುಂತಾದ ಆಯುರ್ವೇದಿಕ ಔಷಧಗಳು ತಯಾರ ಆವೆ. ಯೋಗ್ಯ ಕ್ರಯಕ್ಕೆ ಕಳುಹಿಸುವೆವು.

ಸೂಚನೆ:—ನಮ್ಮಲ್ಲೀ ಔಷಧಗಳನ್ನು ಕೊಂಡುಕೊಳ್ಳುವುದರಿಂದ ಪದೇ ಪದೇ ಹಣವನ್ನು ಕಳೆದುಕೊಳ್ಳುವುದು ತಪ್ಪುತ್ತದೆ. ಬೇಕಾದವರು ಬೇಕಾದಷ್ಟು ತರಿಸಿಕೊಳ್ಳಬಹುದು. ಅನೇಕ ಬೂಟಾಟಿಕೆಯ ಔಷಧಗಳನ್ನು ತರಿಸಿ ಮೋಸಹೋಗಬೇಡಿರಿ. ಆರ್ಯವೈದ್ಯಕ ಶಾಸ್ತ್ರಕ್ಕನುಸರಿಸಿ ನಡೆಯುವ ಕರ್ನಾಟಕ ಪ್ರಾಂತದೊಳಗಿನ ಒಂದೇ ಔಷಧಾಲಯವು.

(ತಂತೀ ವಿಳಾಸ)
'ಶಾಂತವೀರ' ಕಿತ್ತೂರ }
ವಿಳಾಸ:—ಕರ್ನಾಟಕ ಜಂಗೀ ವನೌಷಧಾಲಯ, ಕಿತ್ತೂರ.
ಮಾಲಕರು—ಡಾಕ್ಟರ, ಎಸ್.ಆರ್. ಕಿತ್ತೂರ, “ಪಶುಸಂಜೀವಿನೀ” ಶೋಧಕರು,
ಪೋಸ್ಟ್ ಕಿತ್ತೂರ, ಜಿಲ್ಲಾ ಬೆಳಗಾಂವ.

ಮದರಾಸ್ ಮೇಲ್‌ವಾಚ್.

೫ ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4.0.0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವುದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು, ಸೇರದಂತೆ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕೆಳಗೆ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗೆಜ್ಜೆ ಅಡ್ಡಿಕೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 3, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1 ಕ್ಕೆ ರೂ. 4.0.0.

ವಿಳಾಸ:—ಎ. ಎ. ಎಸ್. ಪಾಣಿ,
4   ಸಾಹುಕಾರ್‌ಪೇಟೆ, ಮದರಾಸ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಜನವರಿ ತಾ|| ೬ ನೆಯ ಭಾನುವಾರ.

೮ ನೆಯ ವೀರಶೈವ ಮಹಾಸಭೆ.

ದಾವಣಗೆರೆಯಲ್ಲಿ ನೆರವೇರಿದ ಈ ಮಹಾಸಭೆಯ ಆದ್ಯಂತ ವೃತ್ತಾಂತಗಳನ್ನು ಕಳೆದವಾರದ ಮತ್ತೂ ಈ ವಾರದ ಸಂಚಿಕೆಗಳಲ್ಲಿ ಪ್ರಕಟಿಸಿರುತ್ತೇವೆ. ಇದರಿಂದ ಅಲ್ಲಿ ನಡೆದ ಕಾರ್ಯಗಳ ಸ್ವರೂಪವು ವ್ಯಕ್ತವಾದೀತೇ ಹೊರತು ಆ ಸಭೆಯಲ್ಲಿ ಸೇರಿದ್ದ ಮಹಾಜನರ ಮತಾಭಿಮಾನವೂ, ನೂತನ ವಿಕಾಸವೂ, ಕಾರ್ಯದೀಕ್ಷಾಪರತ್ವವೂ, ಸಮಾಜೋದ್ಧರಣ ಗಾಢಾನುರಕ್ತಿಯೂ, ಯುಕ್ತಾಯುಕ್ತ ವಿಮರ್ಶನಶಕ್ತಿಯೂ ಎಷ್ಟು ಪ್ರಜ್ವಲವಾಗಿದ್ದುವೆಂಬುದನ್ನು ಜಡವಾದ ನಮ್ಮ ಲೇಖನಿಯು ವರ್ಣಿಸಿ ಬರೆದು ತಿಳಿಯಿಸಿಕೊಡಲು ಎಷ್ಟುಮಾತ್ರಕ್ಕೂ ಶಕ್ತವಲ್ಲ. ಸ್ವಸಮಾಜದ ಭವಿಷ್ಯದ್ವಿವಿಧಭಾಗ್ಯಭೋಗಸಂಪಾದನೆಯಲ್ಲಿ ವ್ಯಗ್ರಚಿತ್ತರಾಗಿದ್ದ ಮುಂದಾಳುಗಳ ಸನ್ಮಾರ್ಗದರ್ಶಕ ವಚನನಿಚಯಗಳು ಸಮಾಜೋದ್ಧರಣದಲ್ಲಿ ಬದ್ಧದೀಕ್ಷೆ ತಾಳದವರ ಜೀವಿತವು ವ್ಯರ್ಥವೆಂಬ ಭಾವವನ್ನು ಎಂಥವನಿಗೂ ಹುಟ್ಟಿಸದೆ ಬಿಡುತ್ತಿರಲಿಲ್ಲ. ಮಹಾಸಭೆಯನ್ನು ಕೂಡಿಸುವುದರಿಂದ ಒಂದೊಂದು ಸಲಕ್ಕೆ ಸಮಾಜದವರ ಹಸ್ತದಿಂದ ೧ ಲಕ್ಷ ರೂ.ಗೆ ಕಡಿಮೆಯಿಲ್ಲದಷ್ಟು ಹಣವು ಜಾರಿಹೋಗುವುದೊಂದೇ ಫಲವೆಂದು ಪ್ರಲಾಪಿಸುವ ಜನರಾರಾದರೂ ಇದ್ದರೆ, ಅಂಥವರು ಈ ಸಲದ ಸಭೆಗೆ ಬಂದಿದ್ದು ಅಲ್ಲಿ ನಡೆದ ಕೃತ್ಯವಿಶೇಷಗಳ ಮಹತ್ವವನ್ನು ಗಮನಿಸಿದ್ದರೆ, ಅವರು ಆ ತಮ್ಮ ತಪ್ಪಿನ ಅಭಿಪ್ರಾಯಗಳಿಗಾಗಿ ಪಶ್ಚಾತ್ತಾಪಪಡದೆಹೋಗುತ್ತಿರಲಿಲ್ಲ. ಸಭೆಯಲ್ಲಿ ಒಂದೆರಡು ಗಂಟೆಗಳಕಾಲ ವ್ಯವಸಾಯಮಾಡುವುದರೊಳಗಾಗಿ ೭೫ ಸಾವಿರ ರೂ. ಗಳ ವರ್ಗಣಿಯ ವಾಗ್ದಾನವಾಗುವುದೂ ಒಂದುದಿನದೊಳಗಾಗಿ ೩೫ ಸಾವಿರ ರೂ. ಗಳು ನಗದಾಗಿ ಧನರಾಶಿಗೆ ಕೂಡಿಹೋಗುವುದೂ, ನಮ್ಮ ಮಹಾಸಭೆಯ ಮಾತೇ ಏಕೆ? ಭರತಖಂಡದ ಯಾವುದೊಂದು ಮಹಾಸಭೆಯ ಚರಿತ್ರದಲ್ಲೂ ದುರ್ಲಭವಾದ ವಿಷಯವೇ ಸರಿ. ಸಾವಿರಕ್ಕೆ ಕಡಿಮೆಯಾದ ವರ್ಗಣಿಯನ್ನೂ ತೆಗೆದುಕೊಳ್ಳಲು ಅವಕಾಶ ಕೊಟ್ಟಿದ್ದರೆ ಇನ್ನೂ ೧೦ ಸಾವಿರ ರೂ.ಗಳು ಕೂಡಿಹೋಗುತ್ತಿದ್ದುವು. ಶ್ರೀಮಜ್ಜಗದ್ಗುರುಗಳು ಮಹಾಸಭೆಗೆ ಪಾದವನ್ನಿಟ್ಟು ಅದರಮೇಲೆ ಕೃಪಾಕಟಾಕ್ಷವನ್ನು ಬೀರಿದ ಮಾತ್ರದಿಂದಲೇ ಇಗೋ ಅಗೋ ಎನ್ನುವುದರೊಳಗಾಗಿ ಆ ಸಭೆಯು ಅಚ್ಯುತಪಟ್ಟವನ್ನು ಪಡೆದುಕೊಂಡುಬಿಟ್ಟಿತು. ನಮ್ಮ ಸಮಾಜದ ಸುಕೃತ ಪರಿಪಾಕದಿಂದಲೇ ಇಂಥ ಜಗದ್ಗುರುಗಳು ಸದ್ಯದ ವಿಲಕ್ಷಣಲೋಕಜಾಗರೂಕತೆಯಕಾಲದಲ್ಲಿ ನಮಗೆ ಲಭ್ಯರಾಗಿರುವರೆಂದು ಹೇಳುವಲ್ಲಿ ಲೇಶವೂ ಸಂಶಯವಿಲ್ಲ. ಶ್ರೀಶ್ರೀಗಳವರಿಗೆ ಅಹರ್ನಿಶಿಯೂ ಸಮಾಜೋದ್ಧಾರಚಿಂತೆಯ ಹೊರತು ಮತ್ತೊಂದಿಲ್ಲ. ಅವರು ಅಧಿಕಾರಕ್ಕೆ ಬಂದೀಚೆಗೆ ಈ ಮಹಾಕಾರ್ಯಕ್ಕಾಗಿ ಲಕ್ಷಾಂತರ ದ್ರವ್ಯಗಳನ್ನು ವಿನಿಯೋಗಿಸಿರುವರು. ಅವರ ಸತ್ಸಂಕಲ್ಪವು ಸದ್ಯಃ ಫಲದಾಯಕವಾಗಿ ಎಲ್ಲರ ಕಣ್ಣಮುಂದೆಯೂ ಕಲ್ಪವೃಕ್ಷದಂತೆ ಕಾಣಿಸುತ್ತಿರುವುದು. ನಮ್ಮ ಸಮಾಜದ ಪಂಚಾಚಾರ್ಯರುಗಳೆಲ್ಲರೂ ಹೀಗೆಯೇ ತಮ್ಮ ಕರ್ತವ್ಯದೀಕ್ಷೆಯಲ್ಲಿ ಬದ್ಧೋತ್ಸಾಹರಾಗಿ ನಿಂತರೆ ಸಮಾಜದ ದುರ್ದೈವವು ಹೇಳಹೆಸರಿಲ್ಲದಂತೆ ಹೋಗುವುದು ಅರಿದಲ್ಲ. ವೀರಶೈವ ಸಮಾಜದವರಲ್ಲಿ ಸ್ವಸಂಘೋದ್ಧರಣ ಕುತೂಹಲವು ಎಷ್ಟು ವ್ಯಕ್ತವಾಗಿದೆಯೆಂಬುದು ಈ ಸಲದ ಮಹಾಸಭೆಯ ಕಾರ್ಯಗಳಿಂದ ದೇಶಕ್ಕೆಲ್ಲಾ ವಿದಿತವಾಗಿದೆ. ಇಂಥ ಪವಿತ್ರವಾದ ಅಭಿಮಾನವಿಕಾಸವನ್ನು ಸರಿಯಾದ ಮಾರ್ಗದಲ್ಲಿ ವಿನಿಯೋಗಿಸಿ ಫಲಪ್ರದಮಾಡತಕ್ಕಂಥ ನೇತೃಗಳ ಸಂಖ್ಯೆಯು ಮಾತ್ರ ನಮ್ಮಲ್ಲಿ ಇನ್ನೂ ಹೆಚ್ಚಬೇಕಾಗಿದೆ.

ಪ್ರತಿಯೊಬ್ಬ ಮನುಷ್ಯನ ಉನ್ನತ ಜೀವಿತಕ್ಕೆಗೂ ಮತವು ಅತ್ಯವಶ್ಯಕ ಸಾಧನವು. ಆಸ್ತಿಕನಿಗೇ ಆಗಲೀ ನಾಸ್ತಿಕನಿಗೇ ಆಗಲೀ ಅವನು ಅರಿತಿರಲೀ ಅರಿಯದೆಯೇ ಇರಲೀ, ಅಂಗೀಕರಿಸಿರಲೀ ಅಂಗೀಕರಿಸದೆಯೇ ಇರಲೀ ಮತವೆಂಬುದೊಂದು ಇದ್ದೇ ಇರುವುದು. ಮತವು ಯಾವಾಗಲೂ ಉತ್ತಮವಾದ ಭಾವಗಳನ್ನೂ, ಸತ್ಕೃತ್ಯಗಳನ್ನೂ ಪ್ರಜ್ವಲಗೊಳಿಸುವುದು. ಮತವೇ ನಮ್ಮ ಜೀವಿತವನ್ನು ಸಾಂತ್ವನಗೊಳಿಸತಕ್ಕುದು. ಮತವನ್ನು ಬಿಟ್ಟು ನಮ್ಮ ಜೀವಿತವು ಎಂದಿಗೂ ಇರಲಾರದು. ಮತಾಭಿಮಾನವಿಲ್ಲದವನಿಗೆ ದೇಶಾಭಿಮಾನವೆತ್ತಣದು? ಅದಕ್ಕಾಗಿ ಪ್ರತಿಯೊಬ್ಬನೂ ತಾನು ಜನಿಸಿದ ಮತದ ಉದ್ಧಾರಕ್ಕಾಗಿ ಮೊದಲು ಪಾಟುಪಡಬೇಕು; ಬಳಿಕ ತನ್ನ ದೇಶಕ್ಕಾಗಿ ಪಾಟುಪಡಬೇಕು. ಸ್ವಮತಕ್ಕಾಗಿ ತನ್ನ ತನುಮನೋಧನವನ್ನು ಯಥಾಶಕ್ತಿಯಾಗಿ ವಿನಿಯೋಗಿಸದವನ ಜನ್ಮವು ವ್ಯರ್ಥವು. ಈ ತತ್ವವನ್ನು ನಮ್ಮ ಸಮಾಜಬಾಂಧವರುಗಳು ಗಮನಿಸಿಯೇ ಮತೋದ್ಧರಣಕ್ಕೆ ಆವಶ್ಯಕವಾದ ಎಚ್ಚರಿಕೆಯನ್ನೆಲ್ಲಾ ಕೊಡಲು ಮುಖ್ಯಸಾಧನವಾಗಿರುವ ಈ ಮಹಾಸಭೆಗೆ ಶಾಶ್ವತತ್ವವನ್ನುಂಟುಮಾಡಿಕೊಳ್ಳುವುದು ಪ್ರಥಮಕರ್ತವ್ಯವೆಂದು ತಿಳಿದು, ಉಚಿತೌದಾರ್ಯವನ್ನು ತೋರಿಸಿ, ಶಾಶ್ವತಧನರಾಶಿಯನ್ನು ಸ್ಥಾಪಿಸಿ, ಸಮಾಜದ ಗೌರವಪ್ರತಿಷ್ಠೆಗಳನ್ನು ಕಾಪಾಡಿದುದು ಬಹಳ ಪ್ರಶಂಸಾಪಾತ್ರವಾಯಿತೆಂದು ಹೇಳದಿರಲಾರೆವು. ಯಾವಯಾವ ಅನಿವಾರ್ಯಕಾರ್ಯಗಳಿಂದಲೋ ಸಭೆಗೆ ಬರಲನುಕೂಲವಾಗದೆಹೋದ ಧನಿಕಮಹನೀಯರುಗಳು ಈಗ ಆರಂಭಿಸಲ್ಪಟ್ಟಿರುವ ಧನನಿಧಿಯನ್ನು ೧ ಲಕ್ಷಕ್ಕೆ ಪೂರ್ಣಗೊಳಿಸಿ, ಅದರ ಬಲದಿಂದ ಮಹಾಸಭೆಯು ಆಚಂದ್ರಾರ್ಕವಾಗಿಯೂ ನಿರುಪಾಧಿಕವಾಗಿಯೂ ನಡೆದುಕೊಂಡು ಹೋಗುವಂತೆ ಮಾಡುವವರಾಗಬೇಕೆಂದು ಒತ್ತಿ ಹೇಳುವೆವು. ಮುಖ್ಯವಾಗಿ ಶ್ರೀ ಜಗದ್ಗುರು ಪಾದಸಾನಿಧ್ಯದಿಂದಲೂ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟಿಯವರ ನೇತೃತ್ವದಿಂದಲೂ ಅದ್ವಿತೀಯವಾಗಿ ಈ ಸಲದ ಮಹಾಸಭೆಯು ನಡೆದುದಕ್ಕಾಗಿ ಶ್ರೀ ಜಗದ್ಗುರು ಪಾದಕ್ಕೆ ಸಮಾಜದ ಪಕ್ಷದಿಂದ ಸಾಷ್ಟಾಂಗ ಪ್ರಣತಿಯನ್ನೂ, ದಿ|| ಬಹದ್ದೂರರವರಿಗೆ ಸಾನಂದಾಭಿನಂದನಗಳನ್ನೂ, ದಾವಣಗೆರೆಯ ನಮ್ಮ ಸಮಾಜಬಾಂಧವರಿಗೆ ವಂದನೆಗಳನ್ನೂ ಈ ಮೂಲಕ ಸಮರ್ಪಿಸುವೆವು.

ಒಳದೇಶದ ವೃತ್ತಾಂತಗಳು.

ವೀರಶೈವ ಮಹಾಸಭೆಗೆ ಬಂದಿದ್ದ ಪ್ರತಿನಿಧಿಗಳನ್ನು ದಾವಣಗೆರೆಯ ಮ|| ಮಾಗಾನಹಳ್ಳಿ ಪಡಕ್ಷರಪ್ಪನವರು ತಮ್ಮ ಯಂತ್ರಾಲಯವಿರುವ ತೋಟಕ್ಕೆ ಬರಮಾಡಿಕೊಂಡು, ವನವಿಹಾರಾಲ್ಪಾಹಾರ ಸಂಗೀತಶ್ರವಣಗಳಿಂದ ಸಂತೋಷಪಡಿಸಿದರು.

ಬೆಂಗಳೂರು ಮಿಂಟೋ ನೇತ್ರವೈದ್ಯಾಲಯದ ಚಿಕಿತ್ಸಕರಾಗಿದ್ದ ಮ|| ರಾಮಸ್ವಾಮಯ್ಯಂಗಾರರು ಕಳೆದ ತಿಂಗಳು ತಾ|| ೨೫ ರಲ್ಲಿ ವಿಧಿವಶರಾದರೆಂದು ತಿಳಿಯಿಸಲು ವಿಷಾದಪಡುತ್ತೇವೆ. ಇವರು ಸೀಮೆಗೆ ಹೋಗಿ ನೇತ್ರಚಿಕಿತ್ಸೆಯಲ್ಲಿ ವಿಶೇಷ ಪಾಂಡಿತ್ಯವನ್ನು ಪಡೆದು ಬಂದು ನಮ್ಮ ದೇಶದ ಲಕ್ಷಾಂತರ ಜನರಿಗೆ ತಮ್ಮ ಚಿಕಿತ್ಸಾಪ್ರಭಾವದಿಂದ ಕಣ್ಣನ್ನುಂಟುಮಾಡಿ ಆನಂದಪಡಿಸಿದ ಪುಣ್ಯಾತ್ಮರಾಗಿದ್ದರು.

ಮೈಸೂರು ಅರಸೀಕೆರೆ ಲೋಹಮಾರ್ಗದಮೇಲೆ ಜನಗಳು ಪ್ರಯಾಣಮಾಡುವುದಕ್ಕೆ ಅದರ ಪ್ರಾರಂಭಮಹೋತ್ಸವವನ್ನು ಕಳೆದ ಬುಧವಾರದ ದಿನ ನಮ್ಮ ಶ್ರೀಮನ್ಮಹಾರಾಜರವರು ನೆರವೇರಿಸಿದರು. ಅವರೂ ಶ್ರೀಮದ್ಯುವರಾಜರವರೂ, ರಾಜಕುಟುಂಬದವರೂ ದಿವಾನರು ಮೊದಲಾದ ಅಧಿಕಾರಿಗಳೂ ಸಹ ಹೊಗೆಬಂಡಿಯಮೇಲೆ ಕುಳಿತು ಲಕ್ಷ್ಮಣತೀರ್ಥ ಸೇತುವೆವರೆಗೆ ಹೋಗಿದ್ದು ಅದಕ್ಕೆ "ಶ್ರೀಕೃಷ್ಣರಾಜಸೇತು" ಎಂದು ನಾಮಕರಣಮಾಡಿ ಬಂದರು.

ದಾವಣಗೆರೆಯಲ್ಲಿ ವೀರಶೈವಮಹಾಸಭೆಯು ನೆರೆದಾಗ್ಗೆ ೨ ನೆಯ ದಿನ ಅಲ್ಲಿಯ ಪ್ರಸಿದ್ಧ ವೈಶ್ಯವರ್ತಕರಾದ ಮ|| ಬ್ರಹ್ಮಪ್ಪ ತವನಪ್ಪನವರು ಸಭೆಗೆ ಬಂದಿದ್ದ ೪-೫ ಸಹಸ್ರ ಜನರಿಗೆಲ್ಲಾ ಅಲ್ಪಾಹಾರದೇರ್ಪಾಟನ್ನು ನಡೆಯಿಸಿ, ಸಂಗೀತಶ್ರವಣವನ್ನು ಮಾಡಿಸಿ ಸಂತೋಷಗೊಳಿಸಿದರು. ಡಿ|| ಕಮಿಷನರು ಮೊದಲಾದ ಸರ್ಕಾರದುದ್ಯೋಗಿಗಳೂ ಬಂದಿದ್ದರು. ವಿಧರ್ಮೀಯರಾಗಿದ್ದರೂ ಮ|| ಬ್ರಹ್ಮಪ್ಪನವರು ತೋರಿಸಿದ ಈ ಸೌಭ್ರಾತೃತ್ವವು, ಸಮಯಬಿದ್ದಾಗ ಬಾಯಿಂದ ಮಾತ್ರ ಸಾನುಭೂತಿಯನ್ನು ತೋರಿಸತಕ್ಕ ಜನರಿಗೆಲ್ಲಾ ಅನುಕರಣೀಯವಾದ ಸೌಜನ್ಯವಾಗಿದ್ದಿತೆಂದು ಹೇಳಲು ಅಡ್ಡಿಯಿಲ್ಲ.

೮ ನೆಯ ವೀರಶೈವ ಮಹಾಸಭೆ.

(೩ ನೆಯ ದಿನದಲ್ಲಿ ನಡೆದ ಕಾರ್ಯ.)

ಈ ದಿನ ಬೆಳಗಿನ ೮ ಗಂಟೆಗೆ ಸಭೆಯು ಕೂಡಿತು. ಮೊದಲ ೨ ದಿನಗಳಿಗಿಂತಲೂ ಈ ದಿನ ನೆರೆದಿದ್ದ ಜನರ ಸಂಖ್ಯೆಯು ಹೆಚ್ಚಾಗಿ ಬಹುಶಃ ೫ ಸಾವಿರದವರೆಗೂ ಇದ್ದಿತು. ಮೊಟ್ಟಮೊದಲು "ಪ್ರತ್ಯೇಕ ಪ್ರಾತಿನಿಧ್ಯ"ದ ವಿಷಯವು ವಿಚಾರಕ್ಕೆ ಬಂದಿತು. ಇದರ ಸಂಬಂಧದಲ್ಲಿ ನಿರ್ಧಾರವಾಗಬೇಕೆಂದು ಮ|| ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿಯವರು ಸೂಚಿಸುವಾಗ್ಗೆ ಹೀಗೆ ಭಾಷಣಮಾಡಿದರು—ಹಿಂದೆ ನಮ್ಮ ಸಮಾಜದಲ್ಲಿ ರಾಜ್ಯವನ್ನಾಳತಕ್ಕ ಪ್ರಭುಗಳೂ, ಮಂತ್ರೀಶರೂ, ಸೇನಾಪತಿಗಳೂ, ಇತರ ನಾನಾ ಉದ್ಯೋಗಿಗಳೂ ಇದ್ದರು. ಈಗಲೂ ನಮ್ಮ ಸಮಾಜಕ್ಕೆ ಅಂಥ ಸ್ಥಿತಿ ಬರಬೇಕೆಂಬುದೇ ನಮ್ಮ ಅಪೇಕ್ಷೆ. ರಾಜ್ಯಾಂಗದಲ್ಲಿ ನಮಗೂ ಸರಿಪಾಲು ಇದ್ದರೆ ನಮ್ಮ ಧರ್ಮಾಭಿವೃದ್ಧಿ ಮೊದಲಾದುವುಗಳಿಗೆಲ್ಲಾ ಅವಕಾಶವಾಗುತ್ತದೆ. ರಾಜಕೀಯ ವಿಷಯದಲ್ಲಿ ಪ್ರಜಾಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿಯೇ ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೊಗ್ ರವರು ಭರತಖಂಡಕ್ಕೆ ದಯಮಾಡಿಸಿರುತ್ತಾರೆ. ಇಂಥ ಸುಸಮಯದಲ್ಲಿ ನಮ್ಮ ಪ್ರಾರ್ಥನೆಯನ್ನು ತಿಳಿಯಿಸಿಕೊಳ್ಳುವುದಕ್ಕೆ ಸಿದ್ಧರಾಗುವುದು ನಮ್ಮ ಕರ್ತವ್ಯ. ಸಾಮ್ರಾಜ್ಯ ನಿಯಮನಿರ್ಮಾಣ ಸಭೆಯಲ್ಲಿ ನಮ್ಮ ಸಮಾಜದವರಾರೂ ಸಭ್ಯರಾಗಿ ಸೇರಿಸುದಿಲ್ಲ. ಪ್ರಾಂತಿಕ ಶಾಸನ ಸಭೆಗಳಲ್ಲಾದರೂ ನಮ್ಮವರು ಕೃಚಿತ್ತಾಗಿದ್ದಾರೆ. ತಕ್ಕಷ್ಟು ಇರುವುದಿಲ್ಲ. ಈ ಲೋಪನಿವಾರಣೆಮಾಡಿಕೊಳ್ಳುವುದಕ್ಕಾಗಿ ನಾವು ಸರ್ಕಾರದವರನ್ನು ಪ್ರಾರ್ಥಿಸಬೇಕು. ನಮ್ಮಲ್ಲಿ ಮ|| ಫಕೀರಪ್ಪ ಹಳಕಟ್ಟಿ ಬಿ. ಎ., ಎಲ್. ಎಲ್. ಬಿ., ಯವರೂ, ಮ|| ಕಂಬಳಿ ಬಿ. ಎ., ಎಲ್. ಎಲ್. ಬಿ., ಯವರೂ ಸಹ ಬೊಂಬಾಯಿ ಶಾಸನ ಸಭೆಯಲ್ಲಿ ಸಭಿಕರಾಗಿ ಬರಲು ಪ್ರಯತ್ನಪಟ್ಟರು. ಆದರೆ ಅವರಿಗೆ ತಕ್ಕಷ್ಟು ಪ್ರಜಾಮತಗಳು ಸಿಗಲಿಲ್ಲ. ಅದುಕಾರಣ ನಮ್ಮವರು ಆ ಕೌನ್ಸಿಲುಗಳಲ್ಲಿ ಸಭಿಕರಾಗಿ ಬರುವುದಕ್ಕೆ ಅನುಕೂಲ್ಯವನ್ನು ಕಲ್ಪಿಸಿಕೊಳ್ಳಲು ಪ್ರಯತ್ನಪಡಬೇಕಾಗಿದೆ. ನಮ್ಮ ಸಮಾಜದ ಜನಸಂಖ್ಯೆಯು ೫೦ ಲಕ್ಷಕ್ಕೆ ಕಡಿಮೆಯಿಲ್ಲ. ಇಂಥ ಸಮಾಜಕ್ಕೆ ಕೌನ್ಸಿಲ್ಲುಗಳಲ್ಲಿ ಪ್ರಾತಿನಿಧ್ಯವಿಲ್ಲದಿರುವುದು ನ್ಯಾಯವೆ? ಈ ಮಹಾಸಭೆಯು ಇಡೀ ನಮ್ಮ ಸಮಾಜದ್ದಾದುದರಿಂದ ಇದರಭಿಪ್ರಾಯವು ಇಡೀ ಸಮಾಜದಭಿಪ್ರಾಯವಾಗಿರುತ್ತದೆ. ಆದುದರಿಂದ ಈ ಸಮಯದಲ್ಲಿ ನಮ್ಮ ಸಮಾಜದ ಪ್ರತಿನಿಧಿಗಳು ನಿರಾತಂಕವಾಗಿ ನಿಯಮನಿರ್ಮಾಣಸಭೆ ಮೊದಲಾದುವುಗಳಲ್ಲಿ ಸೇರಿರುವಂತೆ ಮಾಡಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಧಾರವೊಂದನ್ನು ಮಾಡುವುದು ಅತ್ಯವಶ್ಯಕವಾಗಿದೆ. ಆದಕಾರಣ ನಮ್ಮಭಿಪ್ರಾಯವನ್ನು ನಾವು ತಪ್ಪದೆ ಪ್ರಕಟಿಸಬೇಕು. ಉಮರಾವತಿಯ ಬಾಮಣಗಾಂವಕರರು ನಮ್ಮ ಸಮಾಜದ ಪ್ರತಿನಿಧಿಗಳೆಂದು ಅಲ್ಲಲ್ಲಿ ಸಭೆಗಳೊಳಗೆ ಹೇಳಿಕೊಳ್ಳುತ್ತಾರೆ. ಬಳ್ಳಾರಿಯ ಮಹಾಸಭೆಗೆ ಅವರು ಬಂದಿದ್ದರು. ಆಗ್ಗೆ ಅವರು ಶ್ರೀ ಹಾನಗಲ್ಲು ಮಹಾಸ್ವಾಮಿಯವರಲ್ಲಿ ಅದುವರೆಗೂ ತಮ್ಮಲ್ಲಿದ್ದ ಜಹಾಲಮತವನ್ನು ಇನ್ನು ಮುಂದೆ ಪರಿತ್ಯಜಿಸಿ ಬಿಡುವುದಲ್ಲದೆ ಮನಾಳರೂ ಕೂಡ ಆಗಿರುವುದಿಲ್ಲವೆಂದು ಪ್ರಮಾಣಮಾಡಿ ನಮಸ್ಕರಿಸಿ, ಅದಕ್ಕೆ ಮುಂಚೆ ತಮಗೆ ಇದ್ದ ನಾರಾಯಣ ಎಂಬ ಹೆಸರನ್ನು ಬದಲಾಯಿಸಿ, ಮಹಾದೇವಯ್ಯ ಎಂದು ಸಭಾಮಧ್ಯದಲ್ಲಿ ಕರೆಯಿಸಿಕೊಂಡು, ಹೀಗೆ ನಾನಾಂತರದಿಂದ ತಮ್ಮಲ್ಲಿ ಅಭಿಪ್ರಾಯಾಂತರವನ್ನೂ ಕೂಡ ಏರ್ಪಡಿಸಿಕೊಂಡಿದ್ದವರು ಈಗ ಮರಳಿ ನಾರಾಯಣಯ್ಯ ಎಂದು ಕರೆಯಿಸಿಕೊಳ್ಳುತ್ತಿರುವರು. ಈ ಹೆಸರೂ, ಇವರಭಿಪ್ರಾಯವೂ ನಮ್ಮ ಸಮಾಜಕ್ಕೆ ವಿಪರೀತವಾದುವುಗಳೇ ಸರಿ. ಅವರು ನಮ್ಮ ಪ್ರತಿನಿಧಿಗಳಲ್ಲ. ಅವರಭಿಪ್ರಾಯವು ನಮ್ಮಭಿಪ್ರಾಯವಲ್ಲ. ಶಾಸನನಿರ್ಮಾಣಸಭೆ ಮೊದಲಾದುವುಗಳಲ್ಲಿ ನಮ್ಮ ಪ್ರತಿನಿಧಿಗಳಿಂದಲೇ ನಮ್ಮಭಿಪ್ರಾಯವು ವ್ಯಕ್ತವಾಗುವಂತೆ ಮಾಡಿದರೇನೆಯೇ ನಮಗೆ ಅನುಕೂಲವಾದೀತು. ನಮ್ಮವರ ಹಿತಕ್ಕೆ ಧಕ್ಕೆ ಬಂದಾಗ್ಗೆ ಅದನ್ನು ನಿವಾರಣೆಮಾಡಿಕೊಳ್ಳುವುದರ ಬಗೆಗೆ ನಮ್ಮವರ ಪ್ರಾತಿನಿಧ್ಯದ ಉಪಯೋಗವಾದೀತೆಂದು ನಾವು ಇದನ್ನು ಕೇಳುತ್ತಿದ್ದೇವೆಯೇ ಹೊರತು ಇತರರಿಗೆ ಬಾಧೆಕೊಡಬೇಕೆಂಬುದಕ್ಕಲ್ಲ. ಮಹಮ್ಮದೀಯರ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶ ಕೊಟ್ಟುದರಿಂದ ಹಿಂದೂ ಮುಸಲ್ಮಾನರ ಮಧ್ಯದಲ್ಲಿ ವಿಶ್ವಾಸವೃದ್ಧಿಯಾಯಿತೇ ಹೊರತು ಅನ್ಯೋನ್ಯತೆಗೆ ಭಂಗಬರಲಿಲ್ಲ. ಅದುಕಾರಣ ಇಂಥ ಪ್ರತ್ಯೇಕ ಪ್ರಾತಿನಿಧ್ಯಪ್ರದಾನದಿಂದ ಪಂಗಡಗಳ ಮಧ್ಯದಲ್ಲಿ ಪರಸ್ಪರ ಸ್ನೇಹಾಭಿವೃದ್ಧಿಗೆ ಅವಕಾಶವಾಗುವುದೆಂಬುದು ಅಸಂಭವ. ಅದು ತಪ್ಪು ತಿಳಿವಳಿಕೆಯಾಗಿರುತ್ತದೆ. ಇಂಗ್ಲೀಷ್ ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ನಾವು ಹೆಚ್ಚು ಹೆಚ್ಚಾಗಿ ಸೇರಬೇಕೆಂದು ನಮ್ಮ ದೇಶದ ಮುಂಬರಿದ ಜನಗಳು ಪ್ರಾರ್ಥಿಸುತ್ತಿರುವಂತೆಯೇ ನಮ್ಮ ಸಮಾಜದ ತರುಣರಾದರೂ ಸರ್ಕಾರದ ಉದ್ಯೋಗಗಳಲ್ಲಿ ಹೆಚ್ಚಾಗಿ ಸೇರಬೇಕೆಂದೂ, ಕೌನ್ಸಿಲ್ಲುಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯವನ್ನು ಪಡೆದು ಪ್ರವೇಶಿಸಬೇಕೆಂದೂ ಕುತೂಹಲಪಡುವುದು ಸಹಜವಾಗಿದೆ. ನಮ್ಮಲ್ಲಿ ೧೦೦ಕ್ಕೆ ೫ ರಷ್ಟು ವಿದ್ಯಾವಂತರಿಲ್ಲ. ನಾವು ವಿದ್ಯೆಯಲ್ಲಿ ಹಿಂದೆಬಿದ್ದಿದ್ದೇವೆಯೇ ಹೊರತು ಇತರ ವಿಷಯಗಳಲ್ಲಲ್ಲ. ನಾವು ವಿದ್ಯೆಯಲ್ಲಿ ಮುಂದಾಗುತ್ತ ಬಂದಂತೆಲ್ಲಾ ರಾಜಕೀಯವಾದ ಆಡಳಿತದಲ್ಲಿ ಪ್ರವೇಶಗೊಳ್ಳುತ್ತ ಬಂದರೆ ರಾಜ್ಯಾಧಿಕಾರ ನಿರ್ವಾಹಕಾರ್ಯದಲ್ಲಿ ಪ್ರಭುತ್ವದವರಿಗೆ ನಾವೂ ಸಹಾಯವಾದುತ್ತೇವೆ. ನಾವು ಪ್ರಾಗತಿಕ ನಿಯಮಪಕ್ಷದವರು. ಇಂಥ ಪಕ್ಷದ ಭಾರತೀಯರೆಲ್ಲರೂ ನಮಗೆ ಅನುಕೂಲರಾಗಿದ್ದಾರೆ. ಮಾರ್ವಾಡಿ, ಗುಜ್ಜರ ಮೊದಲಾದ ಅನೇಕ ವರ್ಗಗಳವರು ಹೀಗೆಯೇ ಪ್ರಾತಿನಿಧ್ಯವನ್ನು ಬೇಡುತ್ತಿದ್ದಾರೆ. ಈ ಬೇಡುವಿಕೆಯು ಯುಕ್ತವಾಗಿರುತ್ತದೆ. ಅದುಕಾರಣ ನಮ್ಮ ಮಹಾಸಭೆಯವರು ಈ ಸಂಬಂಧದ ನಿರ್ಧಾರವನ್ನು ಅವಶ್ಯಕವಾಗಿ ಮಾಡಬೇಕೆಂದು ಸೂಚಿಸುತ್ತೇನೆ.

ಮ|| ಜಿ. ಪರಶಿವಯ್ಯ ಬಿ. ಎ., ಎಲ್ ಎಲ್. ಬಿ., ಯವರು— "ಈ ವಿಷಯವು ಅತ್ಯಂತೋಪಕಾರಿಯಾಗಿರುವುದರಿಂದ ಮ|| ತಮ್ಮಣ್ಣಪ್ಪನವರು ಇದರ ಸಂಬಂಧವಾಗಿ ವಿಶದವಾಗಿ ತಿಳಿಯಪಡಿಸಿರುತ್ತಾರೆ. ಇದಕ್ಕೆ ನಾನು ಸಂಪೂರ್ಣವಾಗಿ ಅನುಮೋದನವನ್ನು ಕೊಡುತ್ತೇನೆ" ಎಂದು ಅನುಮೋದಿಸಿದರು. ಬಳಿಕ ಮ|| ಹೊಸಮನಿ ಬಿ. ಎ., ಎಲ್. ಎಲ್. ಬಿ., ಯವರು—ನಾವುಗಳು ವ್ಯಾಪಾರ ವ್ಯವಸಾಯ ಮೊದಲಾದ ಉದ್ಯೋಗಗಳಲ್ಲಿ ಹೇಗೆ ಮುಂದೆಬರಬೇಕೆಂದಿರುವೆವೋ ಹಾಗೆಯೇ ರಾಜಕಾರ್ಯದಲ್ಲೂ ಮುಂಬರಿಯುವುದು ಅವಶ್ಯಕವು. ಬೊಂಬಾಯಿ ನಿಯಮನಿರ್ಮಾಣಸಭೆಗೆ ಸಭಿಕರಾಗಿರಲು, ಶಿವಮೂರ್ತಿಸ್ವಾಮಿ ಕಣಬುರಗಿಮಠ ಮೊದಲಾದ ಒಬ್ಬಿಬ್ಬರು ಪ್ರಯತ್ನಪಟ್ಟರೂ ಅವರುಗಳಿಗೆ ಸ್ಥಲವು ದೊರೆಯಲಿಲ್ಲ. ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕನ್ನು ಪಡೆಯುವುದರಿಂದಲೇ ಈ ವಿಷಯದಲ್ಲಿ ನಮ್ಮ ಮುಂಬರಿಯುವಿಕೆಯು ಸಾಗತಕ್ಕುದಾಗಿದೆ. ಅದುಕಾರಣ ಈ ಸೂಚನೆಯನ್ನು ನಾನು ಪುಷ್ಟೀಕರಿಸುತ್ತೇನೆ" ಎಂದು ಭಾಷಣಮಾಡಿದರು.

ಶ್ರೀರಂಗಪಟ್ಟಣದ ಮ|| ಸಿದ್ಧಲಿಂಗದೇವರೂ, ಸೊಲ್ಲಾಪುರದ ಮ|| ಮಲ್ಲಿಕಾರ್ಜುನಪ್ಪ ಪಾಟೀಲರವರೂ ಸಹ ಪುಷ್ಟೀಕರಿಸಿದರು. ಬಳಿಕ ಮ|| ಕಟ್ಟಿಮನಿಯವರು ಅನ್ನೇ ಪುಷ್ಟೀಕರಿಸುವಾಗ್ಗೆ—"ನಮಗೆ ಸ್ವಮತದವರಿಂದಾದ ಪ್ರಾತಿನಿಧ್ಯವೇ ಬೇಕಾದುದು. ನಮ್ಮಲ್ಲಿ ಈ ಕಾರ್ಯನಿರ್ವಾಹ ಮಾಡುವುದಕ್ಕೆ ಬೇಕಾದಷ್ಟು ಮಂದಿ ದೊರೆಯುತ್ತಾರೆ. ಒಂದುಸಲ ಸ್ಟೇಟ್ ಸೆಕ್ರೆಟರಿಯವರಿಂದ ೫ ಮಂದಿ ಗಣಿತಶಾಸ್ತ್ರಜ್ಞರು ಬೇಕೆಂದು ಅಪೇಕ್ಷಿಸಲ್ಪಟ್ಟಿರಲು, ಬೊಂಬಾಯಿ ಗವರ್ನರವರಿಂದ ಆರಿಸಿ ಕಳುಹಲ್ಪಟ್ಟ ಅಂಥ ೫ ಮಂದಿ ಶಾಸ್ತ್ರಜ್ಞರಲ್ಲಿ ನಮ್ಮ ಸಮಾಜದ ಡೆಪ್ಯುಟಿ ಚೆನ್ನಬಸವಪ್ಪನವರು ಒಬ್ಬರಾಗಿದ್ದರು. ಈಗಲೂ ಅಂಥವರು ನಮ್ಮ ಸಮಾಜದಲ್ಲಿಲ್ಲದೆ ಇಲ್ಲ. ನಮಗೆ ಕೌನ್ಸಿಲ್ಲುಗಳಲ್ಲಿ ಸ್ವಮತ ಪ್ರಾತಿನಿಧ್ಯ ಮಾತ್ರವೇ ಅಲ್ಲದೆ ಜನರಲ್ ಎಲಕ್ಷನ್ನಿನಲ್ಲೂ ನಮಗೆ ಅವಕಾಶವಿರುವಂತೆ ಕೇಳಿಕೊಳ್ಳಬೇಕು. ಇಂಥ ಹಕ್ಕು ಮುಸಲ್ಮಾನರಿಗೆ ಕೊಡಲ್ಪಟ್ಟಿದೆ" ಎಂದು ಹೇಳಿದರು.

ಮ|| ಮಂಗಸೂಳಿ ವಕೀಲರು—"ಭಿನ್ನಭಾವಗಳನ್ನಿಡದೆ ದೇಶೀಯರಲ್ಲೆಲ್ಲಾ ಸೌಭ್ರಾತೃತ್ವವನ್ನಿಟ್ಟು ಯಾರನ್ನು ಬೇಕಾದರೂ ಪ್ರತಿನಿಧಿಗಳನ್ನಾಗಿ ತಿಳಿದು ಮತಕೊಟ್ಟು ಆರಿಸಲು ಅಡ್ಡಿಯಿಲ್ಲವೆಂದು ಕೆಲವರು ನಮ್ಮ ಸಮಾಜದ ಅರಿಯದ ಜನರಿಗೆ ಬೋಧಿಸಿ ಮೋಸಪಡಿಸುತ್ತಾರೆ. ನಾವು ನಮ್ಮ ಆಸ್ತಿಯನ್ನು ಇತರರಿಗಾದರೂ ಟ್ರಸ್ಟಿಯನ್ನಾಗಿ ಮಾಡಿ ವಹಿಸಿಕೊಡಬೇಕಾದ ಸಂದರ್ಭ ಬಂದಾಗ ಎಷ್ಟೋ ವಿಚಾರಮಾಡುತ್ತೇವೆ. ಹೀಗಿರುವಾಗ ನಮ್ಮವರಲ್ಲಿ ನಾವು ನಂಬುಗೆಯಿಡುವುದನ್ನು ಬಿಟ್ಟು ಇತರರನ್ನು ಎಷ್ಟುಮಟ್ಟಿಗೆ ನಂಬಬಹುದು? ವಕೀಲಿವರ್ಗವೂ ವಿದ್ಯಾರ್ಥಿವರ್ಗವೂ (ನಾನೂ ವಕೀಲನಿದ್ದೇನೆ) ಎಷ್ಟೋ ಗೌಡಬಂಗಾಳಿ ಮಾಡುವುದುಂಟು. ಅಶಿಕ್ಷಿತರು ಮೋಸಹೋಗಬಾರದು. ನಮಗೆ ಸರ್ಕಾರದ ಮುಖ್ಯೋದ್ಯೋಗಗಳೇ ಅಲ್ಲ; ಎಲ್ಲತೆರದ ಉದ್ಯೋಗಗಳಲ್ಲೂ ನಮ್ಮವರು ಮುಂದಕ್ಕೆ ಬರಲೇಬೇಕು. ಹೀಗೆ ಪ್ರಾರ್ಥಿಸುತ್ತಾ ಬಂದರೆ ಎಲ್ಲ ಪಂಗಡಗಳಿಗೂ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದು ಹೇಗೆಂಬ ಅಸಾಧ್ಯತ್ವವನ್ನು ಮುಂದೆ ಮಾಡಿ ಕೆಲವರು ಮೋಸಪಡಿಸುವುದಕ್ಕೆ ಉಜ್ಜುಗಿಸುತ್ತಾರೆ. ಶಕ್ತರಾಗಿಯೂ ಅಪೇಕ್ಷೆಪಟ್ಟೂ ಬರುವ ಜನವರ್ಗದವರಿಗೆ ಪ್ರಾತಿನಿಧ್ಯವನ್ನು ಕೊಡುತ್ತ ಹೋಗುವುದರಲ್ಲಿ ಕಷ್ಟವೇನೂ ಇಲ್ಲ."

ಮೈಸೂರಿನ ಮ|| ಎಂ. ಎಚ್. ಸುಬ್ಬಣ್ಣ, ಬಿ.ಎ., ಎಲ್ ಎಲ್. ಬಿ., ಯವರು—"ನಾವು ಇದನ್ನು ರಾಜಭಕ್ತಿಯಿಂದ ಪ್ರಾರ್ಥಿಸುತ್ತೇವೆ. ಕೇವಲ ನಿಯಮನಿರ್ಮಾಣ ಸಭೆಯಲ್ಲಿ ಪ್ರಾತಿನಿಧ್ಯವು ನಮಗಿರಬೇಕೆಂಬುದಷ್ಟೇ ನಮ್ಮ ಪ್ರಾರ್ಥನೆಯಲ್ಲ. ಲೋಕಲ್ ಬೋರ್ಡುಗಳು, ಮ್ಯುನಿಸಿಪಲ್ ಬೋರ್ಡುಗಳು ಪ್ರಜಾಪ್ರತಿನಿಧಿಸಭೆ ಮೊದಲಾದುವುಗಳಲ್ಲೆಲ್ಲಾ ನಮ್ಮ ಜನಸಂಖ್ಯಾನುಗುಣವಾಗಿಯೂ, ಪ್ರಾಮುಖ್ಯಾನುಗುಣವಾಗಿಯೂ ಪ್ರಾತಿನಿಧ್ಯವನ್ನು ಕೊಡಬೇಕೆಂದು ನಿರ್ಧಾರವಾಗಬೇಕು. ನಮ್ಮ ಸಂಸ್ಥಾನದ ದಿವಾನರಾದ ಸರ್ ವಿಶ್ವೇಶ್ವರಯ್ಯನವರು ಸರ್ವ ಜನವರ್ಗದವರನ್ನೂ ರಾಜ್ಯಕಾರ್ಯದಲ್ಲಿ ಹೆಚ್ಚುಹೆಚ್ಚಾಗಿ ಪ್ರವೇಶಗೊಳಿಸಬೇಕೆಂದು ಎಷ್ಟೋ ಕುತೂಹಲಪಡುತ್ತಿದ್ದಾರೆ. ಅವರ ಉದ್ದೇಶಕ್ಕೆ ಈ ನಮ್ಮ ಪ್ರಾರ್ಥನೆಯು ಸಹಾಯಕಾರಿಯೇ ಆಗಿರುತ್ತದೆ."

ಮ|| ಗವಿಗಯ್ಯ ಹುಚ್ಚಯ್ಯ ಹೊನ್ನಾಪುರಮಠ ಧಾರವಾಡ ಇವರು—ಈ ತೆರದ ನಿರ್ಧಾರವು ಇದಕ್ಕೆ ಮುಂಚೆ ೧೯೧೦ ನೆ ವರ್ಷದಲ್ಲಿ ಬಳ್ಳಾರಿಯೊಳಗೆ ನೆರೆದ ಮಹಾಸಭೆಯಲ್ಲೇ ಆಗಿರುತ್ತದೆ. ಆ ಕಾಲಕ್ಕೆ ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯವು ಕೊಡಲ್ಪಟ್ಟಿದ್ದಿತು. ನಮಗಾದರೂ ಅಂಥ ಹಕ್ಕನ್ನು ಕೊಡಬೇಕೆಂಬ ಪ್ರಾರ್ಥನೆಯು ಆ ಸಭೆಯಲ್ಲೇ ಮಾಡಲ್ಪಟ್ಟಿದ್ದಿತು. ಅದನ್ನೇ ಈಗ ಮರಳಿ ಸಮರ್ಥನಮಾಡಿ ಮತ್ತೊಮ್ಮೆ ಸರ್ಕಾರದವರನ್ನು ಪ್ರಾರ್ಥಿಸುವವರಾಗಿದ್ದೇವೆ. ನಮ್ಮ ಸಮಾಜದವರು ನಾಮಿನೇಟಾಗಿ ಕೌನ್ಸಿಲ್ಲುಗಳಲ್ಲಿ ಬಂದರೆ ಪ್ರಯೋಜನವಿಲ್ಲ. ಅಂಥವರು ಸರ್ಕಾರದ ಬಾಲವನ್ನೇ ಬೀಸುತಿರುತ್ತಾರೆ. ಅದುಕಾರಣ ಸಮಾಜದವರಿಂದ ಆರಿಸಲ್ಪಟ್ಟವರು ಸಭಿಕರಾಗಿ ಬಂದರೇನೆಯೇ ಪ್ರಜೆಗಳಿಗೆ ಪ್ರಯೋಜನವಾಗುವುದು. ನಾವು ವ್ಯಾಪಾರ ವ್ಯವಸಾಯಗಳಲ್ಲಿ ಮಾತ್ರವೇ ಅಲ್ಲ; ವಿದ್ಯೆಯಲ್ಲೂ ಈಗೀಗ ಮುಂದಕ್ಕೆ ಬರುತ್ತಿದ್ದೇವೆ, ನಮ್ಮ ವಿದ್ಯಾಭಿವೃದ್ಧಿಗಾಗಿ ಧಾರವಾಡದಲ್ಲಿ ಫಂಡು ಸ್ಥಾಪಿತವಾಗಿ ೩೦ ವರ್ಷಗಳಾದುವು. ಅದರ ಸಹಾಯದಿಂದ ನಮ್ಮಲ್ಲಿ ಸುಶಿಕ್ಷಿತವರ್ಗವು ಹೆಚ್ಚುತ್ತಿದೆ. ನಮಗೆ ಸ್ವತಂತ್ರಪ್ರಾತಿನಿಧ್ಯವನ್ನು ಕೊಡಿರಿ ಎಂದು ನಾವು ಕೇಳಿಕೊಳ್ಳುವುದು ಅಸ್ವಾಭಾವಿಕವಾದುದಲ್ಲ. ಅದು ಧರ್ಮವಾಗಿರುತ್ತದೆ.

ರಾವ್ ಸಾಹೇಬ್ ಶಿವಮೂರ್ತಿಸ್ವಾಮಿ ಕಣಬರ್ಗಿಮಠ ಇವರು—ಲೋಕಲ್ ಬೋರ್ಡು ಮೊದಲಾದುವುಗಳಲ್ಲಿ ಸಭಿಕರಾಗುವವರ ಮತ್ತೂ ಮತಕೊಡುವವರ ಯೋಗ್ಯತೆಯು ಕಂದಾಯಕೊಡುವ ಯೋಗ್ಯತೆಯಮೇಲೆ ಅವಲಂಬಿಸಿರುತ್ತದೆ. ನಮ್ಮವರು ಅಂಥ ಕಂದಾಯ ಕೊಡುವುದರಲ್ಲಿ ಇತರರಿಗಿಂತ ಹೆಚ್ಚಾಗಿಯೇ ಇರುತ್ತಾರೆ. ಆ ಆಧಿಕ್ಯವನ್ನು ಅವರು ವಿಷಯದಲ್ಲಿ ಉಪಯೋಗಿಸುತ್ತ ಬಂದರೆ ಎಷ್ಟೋ ಚರಿತಾರ್ಥವಾಗುವುದು. ನಮ್ಮ ಪ್ರತಿನಿಧಿಗಳು ನಿಯಮನಿರ್ಮಾಣಸಭೆ ಮೊದಲಾದುವುಗಳಲ್ಲಿ ಇರುವುದರಿಂದ ಎಷ್ಟು ಹಿತವಾಗುವುದೆಂಬುದನ್ನು ಹೇಳಬೇಕಾಗಿಲ್ಲ. ಮೈಸೂರಿನ ಮ|| ಎಂ. ಬಸವಯ್ಯ ಬಿ. ಎ. ಬಿ. ಎಲ್. ರವರು ಅಲ್ಲಿಯ ನಿಯಮನಿರ್ಮಾಣಸಭೆಯಲ್ಲಿ ಸಭಿಕರಾಗಿರುವುದರಿಂದ ಆ ದೇಶದ ಹಿಂದುಳಿದ ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ೧ ಲಕ್ಷ ರೂ. ಗಳ ವೇತನವನ್ನು ಕೊಡಲು ಸರ್ಕಾರದವರು ಅನುಗ್ರಹಿಸುವಂತಾಯಿತು. ಇಂಥ ನಮ್ಮ ಪ್ರತಿನಿಧಿಗಳು ಅನೇಕರು ಅಂಥ ಸಭೆಗಳಲ್ಲಿ ಸಭಿಕರಾಗಿ ಬಂದರೆ ನಮಗೆ ಎಷ್ಟು ಫಲವಾಗಬಹುದೋ ನೀವೇ ಯೋಚಿಸಿರಿ. ನಾವು ಮೇಲಕ್ಕೇರುವಾಗ ನಡುವೆ ಅಡ್ಡಲಾಗಿರುವವರಿಗೆ ಈ ವಿಷಯದಲ್ಲಿ ಅಸಹನೆಯಿರಬಾರದೆಂಬುದೇ ನಮ್ಮ ಕೋರಿಕೆ. ನಮಗೆ ಸ್ವತಂತ್ರಪ್ರತಿನಿಧಿಗಳು ಬೇಕು" ಹೀಗೆ ಪುಷ್ಟೀಕರಣಪರವಾದ ಭಾಷಣಗಳು ೧|| ಗಂಟೆಯಹೊತ್ತು ನಡೆದ ಬಳಿಕ, ಇನ್ನೂ ಈ ವಿಷಯವಾಗಿ ಭಾಷಣಮಾಡುವವರು ೮-೧೦ ಮಂದಿಗಳಿದ್ದರೂ ಕಾಲವ್ಯವಧಾನವಿಲ್ಲದುದರಿಂದ ಅವೆಲ್ಲವನ್ನೂ ನಿಲ್ಲಿಸಬೇಕಾಯಿತು. ಸಭಾಧ್ಯಕ್ಷರು ಈ ಸಂಬಂಧದ ನಿರ್ಧಾರವನ್ನು ಹೀಗೆ ಓದಿ ಹೇಳಿದರು:—

"ಇಂಡ್ಯಾಸರ್ಕಾರ ಮತ್ತೂ ಮೈಸೂರು ಮೊದಲಾದ ದೇಶೀಯಸಂಸ್ಥಾನ ಸರಕಾರಗಳಲ್ಲಿ ಪ್ರಜಾಹಿತಕ್ಕಾಗಿ ಏರ್ಪಟ್ಟಿರುವ ಮತ್ತೂ ಏರ್ಪಡುವ ಮ್ಯುನಿಸಿಪಲ್ ಲೋಕಲ್ ಬೋರ್ಡುಗಳು ಲೆಜಿಸ್ಲೇಟೀವ್ ಕೌನ್ಸಿಲ್ಲುಗಳು ಮೊದಲಾದ ಸಭೆಗಳಲ್ಲೂ ಮತ್ತೂ ಆಯಾ ಸರ್ಕಾರದ ಉದ್ಯೋಗಸ್ಥಾನಗಳಲ್ಲೂ ಆಯಾ ಪ್ರದೇಶಗಳ ವೀರಶೈವಜನವರ್ಗದವರ ಪ್ರಾಮುಖ್ಯ, ಜನಸಂಖ್ಯೆ ಇವುಗಳಿಗನುಗುಣವಾಗಿ ಪ್ರಾತಿನಿಧ್ಯಸ್ಥಾನಗಳನ್ನು ಸ್ಪೆಸಲ್ ರೆಪ್ರಜೆಂಟೇಷನ್ ಜನರಲ್ ಎಲಕ್ಷನ್ ಗಳ ಮೂಲಕವಾಗಿ ಕೊಡುವಂತೆ ಮಾಡಬೇಕೆಂದು ಆಯಾ ಸರಕಾರಗಳನ್ನು ರಾಜಭಕ್ತಿಪೂರ್ವಕವಾಗಿ ಪ್ರಾರ್ಥಿಸಬೇಕೆಂದು ಮಹಾಸಭೆಯು ನಿರ್ಧಾರಮಾಡಿರುತ್ತದೆ" ಸಭಿಕರೆಲ್ಲರೂ ಮಹಾಕರತಾಡನಧ್ವನಿಯ ಮೂಲಕ ಇದನ್ನಂಗೀಕರಿಸಿದರು.

ಬಳಿಕ ಶ್ರೀ ಚಿತ್ರದುರ್ಗದ ಜಗದ್ಗುರು ಮಠದ ಅಡ್ಡಪಲ್ಲಕ್ಕಿ ಪಂಚಕಳಶದ ಬಿರುದಾವಳಿ ವಿಷಯವು ಬಂದಿತು. ನಿಂತುಹೋಗಿರುವ ಆ ಎರಡು ಬಿರುದುಗಳನ್ನು ಮೈಸೂರು ಶ್ರೀಮನ್ಮಹಾರಾಜ ಸರ್ಕಾರದವರು ನಡೆಯಿಸಿಕೊಡಬೇಕೆಂಬ ವಿಷಯವಾಗಿ ರಾ|| ಸಾ|| ಶಿವಮೂರ್ತಿಸ್ವಾಮಿ ಕಣಬರ್ಗಿಮಠ ಇವರು ಸೂಚನೆ ತಂದು ಭಾಷಣಮಾಡುವಾಗ್ಗೆ—ಶ್ರೀಮನ್ಮಹಾರಾಜಾ ಸರ್ಕಾರದವರು ಈ ಜಗದ್ಗುರು ಸಂಸ್ಥಾನದ ಇತರ ೩೨ ಬಿರುದಾವಳಿಗಳನ್ನು ನಡೆಯಿಸಿಕೊಡುತ್ತಿದ್ದಾರೆ. ಈ ಅಡ್ಡಪಲ್ಲಕ್ಕಿ ಪಂಚಕಳಶದ ಬಿರುದುಗಳು ಹಿಂದೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೂ ಚೀಫ್ ಕಮಿಷನರ ಕಾಲದಲ್ಲೂ ಆ ಸಂಸ್ಥಾನಕ್ಕೆ ನಡೆದುಬರುತ್ತಿದ್ದುವು. ಈಗಲೂ ಭರತಖಂಡದ ಇಂಗ್ಲೀಷ್ ರಾಜ್ಯದಲ್ಲೂ ಇತರ ನೇಟೀವ್ ಸಂಸ್ಥಾನಗಳಲ್ಲೂ ನಡೆದುಬರುತ್ತಿವೆ. ಹೀಗಿರುವಾಗ ಸಂಸ್ಥಾನನಿರತಕ್ಕೆ ಮೈಸೂರುದೇಶದಲ್ಲೇ ಈ ಬಿರುದುಗಳಿಗೆ ತಡೆಯಾಗಿರುವುದು ಇಡೀ ನಮ್ಮ ಸಮಾಜಕ್ಕೇ ದುಃಖಕರವಾಗಿದೆ. ಅದುಕಾರಣ ಈ ಬಿರುದುಗಳನ್ನು ಸಂಸ್ಥಾನಕ್ಕೆ ನಡೆಯಿಸಿಕೊಟ್ಟು ಸಮಾಜದವರೆಲ್ಲರ ಮನಸ್ಸಂಕಟವನ್ನು ನೀಗಿಸಿ ನಾವೆಲ್ಲಾ ಮೈಸೂರು ಸರ್ಕಾರಕ್ಕೆ ಚಿರಕೃತಜ್ಞರಾಗಿರುವಂತೆ ಶ್ರೀಮನ್ಮಹಾರಾಜರವರು ಅನುಗ್ರಹಿಸಬೇಕೆಂದು ಕೋರುತ್ತೇವೆ. ಅದುಕಾರಣ ಈ ಸಂಬಂಧವಾದ ನಿರ್ಧಾರವೊಂದನ್ನು ಮಹಾಸಭೆಯು ಮಾಡಬೇಕಾಗಿದೆಯೆಂದು ಸೂಚಿಸಲು, ಅದನ್ನು ಮ|| ಹೊಸಮನಿ ಬಿ. ಎ. ಎಲ್ ಎಲ್. ಬಿ. ಯವರು ಅನುಮೋದಿಸಲು, ಸರ್ವಾಂಗೀಕಾರದಿಂದ ಆವಿಷಯದಲ್ಲೂ ಒಂದು ನಿರ್ಧಾರವು ಮಾಡಲ್ಪಟ್ಟಿತು. ಅಲ್ಲಿಗೆ ಸಭೆಯು ನಿಲ್ಲಿಸಲ್ಪಟ್ಟು, ಮರಳಿ ಮಧ್ಯಾಹ್ನ ೧ ಗಂಟೆಗೆ ಸೇರಿತು.

ಶ್ರೀರಂಗಪಟ್ಟಣದ ಮ|| ಸಿದ್ಧಲಿಂಗದೇವರು-ನಮ್ಮ ಸಮಾಜದ ಉದ್ಯೋಗಗಳಲ್ಲಿ ಮುಖ್ಯವಾಗಿರುವ ವ್ಯವಸಾಯದ ಸುಧಾರಣೆಗಾಗಿ ಮಾಡಬೇಕಾದ ಯತ್ನಗಳನ್ನು ಕುರಿತು ತಮ್ಮ ಚಿರಕಾಲಾನುಭವ ಪರಿಪಾಕದಿಂದ ಸಿದ್ಧವಾದ ಉಪನ್ಯಾಸವನ್ನು ಮಾಡಿದರು. ಮಿ|| ಹೂಲಿಯವರು-ನಮ್ಮ ಪರಿಶ್ರಮಗಳ ಅಭಿವೃದ್ಧಿಗಾಗಿ ಬೊಂಬಾಯಿ ಕರ್ನಾಟಕಕ್ಕೊಂದು, ಮೈಸೂರು ದೇಶಕ್ಕೊಂದರಂತೆ ನಮ್ಮ ಸಮಾಜದ ಮುಖ್ಯ ಪರಸ್ಪರ ಸಹಾಯಸಂಘಗಳನ್ನು ಸ್ಥಾಪಿಸುವುದರ ಅವಶ್ಯಕತೆಯನ್ನು ಕುರಿತು ಪ್ರತಿಪಾದಿಸಿದರು.

ಬೆಂಗಳೂರು ಕೈಗಾರಿಕೆಗಳ ಸೂಪರಿಂಟೆಂಡೆಂಟರಾದ ಮ|| ಚನ್ನಪ್ಪನವರು ತಾವು ಜಪಾನಿಗೆ ಹೋಗಿ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಸಮಾಜಕ್ಕೆ ಉಂಟಾಗುವ ಲಾಭವನ್ನು ತಿಳಿದುಕೊಂಡು ಬಂದಿರುವುದರಿಂದ ಆ ವಿಷಯವನ್ನು ಕುರಿತು ಭಾಷಣಮಾಡುವಾಗ್ಗೆ ನಮ್ಮವರು ಕೃಷಿಯೊಂದನ್ನೇ ನಂಬಿಕೊಂಡಿದ್ದರೆ ವಿಶೇಷ ಲಾಭವಾಗುವುದಿಲ್ಲ; ಕೈಗಾರಿಕೆಗೆ ಹೆಚ್ಚು ಗಮನ ಕೊಡಬೇಕು ಎಂಬುದಾಗಿ ಅದನ್ನು ಸಮರ್ಥನಮಾಡಿ ಹೇಳಿದರು.

ಎಕನಾಮಿಕ್ ಲಕ್ಚರರಾದ ಮ|| ಎಚ್. ಕೆ. ಮಲ್ಲಪ್ಪನವರು ಕೂಡ ಇದೇ ವಿಷಯವನ್ನೇ ಪುಷ್ಟೀಕರಿಸಿ, ಕೈಗಾರಿಕೆಯ ಮರ್ಮವನ್ನು ಜಪಾನರು ತಿಳಿದುಕೊಂಡು ೧ ಕಾಸಿನ ಪದಾರ್ಥದಿಂದ ೧ ಆಣೆಯನ್ನು ಹೇಗೆ ಸಂಪಾದಿಸಿಕೊಳ್ಳುತ್ತಿರುವರೆಂಬುದರ ವಿವರಣವನ್ನೆಲ್ಲಾ ಹೇಳಿದರು. ಇದರಮೇಲೆ ಕೃಷಿ ವಾಣಿಜ್ಯ ಶಿಲ್ಪಾಭಿವೃದ್ಧಿಗಾಗಿ ಸಮಾಜದವರೆಲ್ಲರೂ ಹೆಚ್ಚು ಗಮನವನ್ನೂ ಪ್ರೋತ್ಸಾಹವನ್ನೂ ಕೊಡಬೇಕೆಂಬ ನಿರ್ಧಾರವು ಸರ್ವ ಸಭಾಂಗೀಕಾರದಿಂದ ಮಾಡಲ್ಪಟ್ಟಿತು.

ಬಳಿಕ ಸ್ತ್ರೀ ಶಿಕ್ಷಣ ವಿಷಯವಾಗಿ ಪೂನಾ ದೆಕ್ಕನ್ ಕಾಲೇಜು ವಿದ್ಯಾರ್ಥಿ ಮ|| ಸರ್ದಾರ್ ಯವರು ಸಂಸ್ಕೃತದಲ್ಲಿ ಭಾಷಣಮಾಡಿ ಸ್ತ್ರೀಯರಿಗೆ ೫ ರಿಂದ ೧೦ ವಯಸ್ಸಿನವರೆಗೂ ತಪ್ಪದೆ ವಿದ್ಯಾಭ್ಯಾಸ ಮಾಡಿಸಬೇಕು. ಪ್ರೌಢವಿದ್ಯಾಭ್ಯಾಸವು ಅವರಿಗೆ ಅಷ್ಟು ಆವಶ್ಯಕವಲ್ಲ. ಪಾಶ್ಚಾತ್ಯವಿದ್ಯಾಭ್ಯಾಸವೂ ಹೆಂಗುಸರಿಗೆ ಆವಶ್ಯಕವಲ್ಲ. ನೀತಿ, ಗೃಹಕೃತ್ಯ, ಆರೋಗ್ಯಸಾಧನ, ಧರ್ಮಸ್ವರೂಪಜ್ಞಾನ ಇತ್ಯಾದಿಗಳಿಗೆ ಸಾಧಕವಾದಷ್ಟು ವಿದ್ಯಾಭ್ಯಾಸ ನಡೆದರೆ ಸಾಕು ಎಂದು ಸೂಚಿಸಿದರು. ಇದನ್ನೇ ಕುರಿತು ಇಂಗ್ಲೀಷಿನಲ್ಲಿ ಮ|| ವಿ. ಬಿ. ಅಂಗಡಿಯವರು ಇಂಗ್ಲೀಷಿನಲ್ಲಿ, ಪ್ರತಿಪಾದಿಸಿದ ಬಳಿಕ-ಸೊಲ್ಲಾಪುರದ ಮ|| ಮಲ್ಲಿಕಾರ್ಜುನಪ್ಪ ಅಪ್ಪಾರಾವ್ ಪಾಟೀಲರು ಕನ್ನಡದಲ್ಲೂ ಮರಾಠಿಯಲ್ಲೂ ಭಾಷಣಮಾಡುವಾಗ್ಗೆ ಈ ನಮ್ಮ ಮಹಾಸಭೆಯ ಜತೆಗೆ ಸ್ತ್ರೀಪರಿಷತ್ತನ್ನೂ ಒಂದು ವಸ್ತುಪ್ರದರ್ಶನವನ್ನೂ ಕೂಡ ನೆರವೇರಿಸಬೇಕಾದ ಆವಶ್ಯಕತೆಯನ್ನು ಪ್ರತಿಪಾದಿಸಿದರು, ಬಳಿಕ ಮ|| ಬಸವನಾಳ ಎಂ. ಎ. ಯವರು ನಮ್ಮ ಸಮಾಜದ ವಿದ್ಯಾಪ್ರಸಾರವನ್ನು ಕುರಿತು ಉಪನ್ಯಾಸಮಾಡುವಾಗ್ಗೆ— ನಮ್ಮ ಸಮಾಜದಲ್ಲಿ ಬಾಲವಿದ್ಯಾ, ಪ್ರೌಢವಿದ್ಯಾ ಪ್ರಸಾರಗಳೆರಡೂ ಬಹಳ ಉತ್ತೇಜನದಿಂದ ನಡೆಯಬೇಕಾಗಿದೆ. ಕಳೆದವರ್ಷ ನಮ್ಮವರು ಬೊಂಬಾಯಿ ಅಧಿಪತ್ಯದಲ್ಲಿ ಕಲಾಶಾಲೆಗಳೊಳಗೆ (ಕಾಲೇಜು ಎಜ್ಯುಕೇಷನ್ನಿನಲ್ಲಿ) ೮೩ ಮಂದಿ ಇದ್ದರು. ಈ ವರ್ಷ ೨೭-೨೮ ಮಂದಿಗಳು ಬಿ. ಎ. ಪರೀಕ್ಷೆಗೆ ಕೊಡುವವರಾಗಿದ್ದಾರೆ. ಈ ಸಂಖ್ಯೆಯು ಇನ್ನೂ ಬಹಳವಾಗಿ ಹೆಚ್ಚಬೇಕಾಗಿದೆ. ಬಾಲವಿದ್ಯಾಭ್ಯಾಸವನ್ನು ಬಲಾತ್ಕಾರವಾಗಿ ಎಲ್ಲ ಕಡೆಯೂ ನಡೆಯಿಸುವಂತೆಯೂ, ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಹೆಚ್ಚಾಗಿ ಪ್ರೋತ್ಸಾಹಿಸುವಂತೆಯೂ ಮಾಡಿ ಅಲ್ಲಲ್ಲಿಗೆ ಹೈಸ್ಕೂಲುಗಳನ್ನು ಸ್ಥಾಪಿಸುವಂತೆ ಮಾಡಬೇಕು. ದಾವಣಗೆರೆಯಲ್ಲಿ ಒಂದು ಹೈಸ್ಕೂಲು ಸ್ಥಾಪಿತವಾಗುವಂತೆ ಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿದೆ" ಎಂದು ಪ್ರತಿಪಾದಿಸಿದರು. ಬಳಿಕ ಗದಗಿನ ಶ್ರೀ ಪಟ್ಟದಪ್ಪನವರಾದ ಪ್ರಭುದೇವರು-ಇದುವರೆಗೆ ತಮ್ಮ ಮಠದಲ್ಲಿ ವಿದ್ಯಾಪ್ರಸಾರಕ್ಕಾಗಿ ತನುಮನೋಧನಗಳನ್ನು ಶೆಟ್ಟಿ ಸಕ್ಕರಿ ಕರಡಪ್ಪನವರು, ಸಿರಸಂಗಿ ದೇಸಾಯರು ಮೊದಲಾದವರ ಸ್ಮರಣೆಯನ್ನು ಸಭೆಗೆ ತಂದುಕೊಟ್ಟುದಲ್ಲದೆ ಈಗ ವಿದ್ಯಾಪ್ರಸಾರಕ್ಕಾಗಿ ಶ್ರಮಪಡುತ್ತಿರುವ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಮೊದಲಾದವರನ್ನು ಕೊಂಡಾಡಿ ಇಂಥ ಕಾರ್ಯವನ್ನು ಸಮಾಜದ ಧನಿಕಪ್ರಮುಖರೆಲ್ಲಾ ಕೈಕೊಳ್ಳಬೇಕೆಂದೂ, ನಮ್ಮ ವೈದಿಕಮಂಡಲಿಯವರು ಸಂಸ್ಕೃತದ ಜತೆಗೆ ಇಂಗ್ಲೀಷ್ ಭಾಷೆಯನ್ನೂ ಕೂಡ ಅಭ್ಯಾಸಮಾಡಬೇಕಾದುದರ ಅವಶ್ಯಕತೆಯನ್ನೂ ಕುರಿತು ಪ್ರತಿಪಾದಿಸಿದರು.

ಡಾ|| ಟಿ. ಎಸ್. ಸಿದ್ದಪ್ಪನವರು-ವಿದ್ಯಾಪ್ರಸಾರವನ್ನು ಚೆನ್ನಾಗಿ ಮಾಡಿಸಬೇಕೆಂದು ಮಹಾಸಭೆಯಲ್ಲಿ ಪ್ರತಿಸಲವೂ ನಿರ್ಧಾರವಮಾಡುತ್ತ ಬರುವುದಕ್ಕಿಂತಲೂ, ಸಮಾಜದಲ್ಲಿ ಕೇವಲ ಬಡವರಲ್ಲದ ಲಕ್ಷಾಂತರ ಕುಟುಂಬದವರು ಮನೆಗೊಬ್ಬೊಬ್ಬರನ್ನಂತೆ ಪ್ರೌಢವಿದ್ಯಾಸಂಪನ್ನರನ್ನಾಗಿ ಮಾಡಿಸಲು ಬದ್ಧಕಂಕಣರಾದರೆ, ಸರ್ಕಾರದ ಉದ್ಯೋಗಗಳಲ್ಲೂ, ಇತರ ವೃತ್ತಿಗಳಲ್ಲೂ ನಮ್ಮವರು ಬೇಕಾದಷ್ಟು ಮುಂದಾಗುವರು ಎಂಬುದಾಗಿ ಭಾಷಣಮಾಡಿದರು. ಅನಂತರ

ರಾ|| ಸಾ|| ಕಣಬರ್ಗಿಮಠ ಇವರು-ಬಾಲಶಿಕ್ಷಣವನ್ನು ಬಲಾತ್ಕಾರವಾಗಿ ಮಾಡಿಸಬೇಕೆಂಬ ವಿಷಯವನ್ನು ಬೊಂಬಾಯಿ ನಿಯಮನಿರ್ಮಾಣಸಭೆಯ ಮುಂದಿಟ್ಟು ಮ್ಯುನಿಸಿಪಲ್ ಶಾಲೆಗಳಲ್ಲಿ ಹಾಗೆ ನಡೆಯಿಸಬಹುದೆಂಬ ಕಾನೂನನ್ನು ಮಾಡಿಸಿದ ಆ|| ಬಿ. ಜಿ. ಪಾಟೀಲರಿಗೂ, ಸಂಸ್ಥಾನದಲ್ಲೆಲ್ಲಾ ಬಲಾತ್ಕಾರ ಬಾಲವಿದ್ಯಾಭ್ಯಾಸಕ್ರಮವನ್ನು ರೂಢಿಗೆ ತರುವಂತೆ ಮಾಡಿರುವ ಮೈಸೂರು ಸರ್ಕಾರಕ್ಕೂ, ಹಿಂದುಳಿದವರ ವಿದ್ಯಾಪ್ರಸಾರಕ್ಕಾಗಿ ಸರ್ಕಾರದ ಸಹಾಯವಿಧಿಗಳನ್ನು ವಿಶೇಷವಾಗಿ ಪಡೆಯಲು ಶ್ರಮಪಡುತ್ತಿರುವ ಮ|| ಎಂ. ಬಸವಯ್ಯನವರಿಗೂ ಸಹ ನಾವುಗಳು ವಂದನೆಯನ್ನು ಕೊಡಬೇಕಾಗಿದೆ ಎಂಬುದಾಗಿ ಭಾಷಣಮಾಡಿದ ಬಳಿಕ ಈ ವಿದ್ಯಾಪ್ರಸಾರ ವಿಷಯವಾಗಿ ಸಮಾಜದವರೆಲ್ಲರೂ ಬದ್ಧೋತ್ಸಾಹದಿಂದ ಕೆಲಸಮಾಡಬೇಕೆಂಬ ವಿಷಯಕವಾದ ನಿರ್ಧಾರವು ಮಾಡಲ್ಪಟ್ಟಿತು. ಬಳಿಕ

ವೀರಶೈವಮತತತ್ವವನ್ನು ನಿರೂಪಿಸುವ ಗ್ರಂಥವೊಂದನ್ನು ಸಂಗ್ರಹಿಸಿ ಕನ್ನಡದಲ್ಲೂ ಇಂಗ್ಲೀಷಿನಲ್ಲೂ ಪ್ರಕಟಿಸಬೇಕಾದುದರ ಅವಶ್ಯಕತೆಯನ್ನು ಕುರಿತು ಹುಬ್ಬಳ್ಳಿಯ ಮ|| ಸಿದ್ಧರಾಮಪ್ಪ ಪಾವಟೆ ಬಿ. ಎ. ಎಲ್ ಎಲ್. ಬಿ. ಯವರು ಭಾಷಣಮಾಡಿ, ವೀರಶೈವಧರ್ಮ ಮತ್ತೂ ಸಮಾಜಗಳ ಪೂರ್ವಚಾರಿತ್ರವನ್ನು ಪರಿಶೋಧಿಸಿ ಮುದ್ರಿಸುವುದಕ್ಕಾಗಿ ಏರ್ಪಡಿಸಬೇಕು. ಇದರ ಸಾಧನೆಗಾಗಿ ಒಂದು ಗ್ರಂಥಾಲಯವನ್ನು ಸ್ಥಾಪಿಸಬೇಕು ಎಂದು ಸೂಚಿಸಿದರು. ಇದನ್ನು ಅನುಮೋದಿಸುವಾಗ್ಗೆ—

ಮ|| ಪಿ. ಮಹಾದೇವಯ್ಯ ಬಿ. ಎ. ಬಿ. ಎಲ್. ರವರು—

ನಮ್ಮ ಮತತತ್ವವು ನಮ್ಮವರಿಗೇ ತಿಳಿಯದು. ಅದಕ್ಕಾಗಿಯೂ, ಮತ್ತೂ ಪರಮತದವರು ನಮ್ಮ ಮತತತ್ವವನ್ನೆಲ್ಲಾ ತಿಳಿದುಕೊಂಡು ಗೌರವಿಸುವಂತೆ ಮಾಡುವುದಕ್ಕಾಗಿಯೂ ಸಹ ಇಂಥ ಗ್ರಂಥಪ್ರಕಟನೆಯು ಅತ್ಯವಶ್ಯಕವೆಂದು ವಿವರಿಸಿ ಭಾಷಣಮಾಡಿದಬಳಿಕ, ಸಭಾಧ್ಯಕ್ಷರು ಗ್ರಂಥಾಲಯಸ್ಥಾಪನೆಯನ್ನು ಗ್ರಂಥಪ್ರಕಟನೆಗಾಗಿ ಪ್ರಯತ್ನವನ್ನೂ ನಡೆಯಿಸಬೇಕೆಂಬ ನಿರ್ಧಾರವು ಸರ್ವಾನುಮತದಿಂದಾಯಿತು.

ಮುಖ್ಯ ಮಠಗಳಿಗೆ ಸಮಾಜದವರಿಂದ ನಿಯಮಿಸಲ್ಪಟ್ಟ ಅಧಿಕಾರಿಗಳನ್ನೇ ನಿಯಮಿಸಬೇಕಾದ ವಿಷಯದಲ್ಲಿ ಒಂದು ಕಮಿಟಿಯನ್ನೇರ್ಪಡಿಸಬೇಕೆಂದೂ ಈ ವಿಷಯದಲ್ಲಿ ನಿರ್ಧಾರವು ಮುಂದಣ ಸಭೆಯಲ್ಲಿ ಮಾಡಲ್ಪಡಬೇಕೆಂದೂ ಗೊತ್ತಾಯಿತು.

ಸಮಾಜದ ಪರವಾಗಿ ಒಂದು ಮುದ್ರಾಲಯವನ್ನೂ ವೃತ್ತಪತ್ರವನ್ನೂ ನೂತನವಾಗಿ ಸ್ಥಾಪಿಸಬೇಕೆಂಬ ವಿಷಯದಲ್ಲಿ ಪ್ರಕೃತದಲ್ಲಿರುವ ಮೈಸೂರು ಸ್ಟಾರ್, ಚಂದ್ರೋದಯ, ಧರ್ಮತರಂಗಿಣೀ-ಈ ಪತ್ರಿಕೆಗಳಿಗೇ ಸಮಾಜದವರು ಪ್ರೋತ್ಸಾಹಿಸಬಹುದಾಗಿರುವುದರಿಂದ ನವೀನಪ್ರಯತ್ನವು ಅನವಶ್ಯಕವೆಂದು ಸಭಾಧ್ಯಕ್ಷರು ಸೂಚನೆಮಾಡಲು, ಅದು ಸರ್ವಾಂಗೀಕೃತವಾಯಿತು. ಅನಂತರ

ವೀರಶೈವಮಹಾಸಭಾ ಶಾಶ್ವತ ನಿರ್ವರ್ತನಕ್ಕಾಗಿ ಏರ್ಪಟ್ಟಿರುವ ಧನರಾಶಿಗೆ ಈ ದಿವಸ ವರ್ಗಣಿಯನ್ನು ಹಾಕಿದವರ ಹೆಸರುಗಳು ಓದಲ್ಪಟ್ಟುವು. ಅವರಾರೆಂದರೆ—

ಕುಂಸಿ ಸಟ್ ತಾ|| ಹಾರನಹಳ್ಳಿಯ ಮ|| ಗಾಜನೂರು ಚೆನ್ನಪ್ಪನವರು ೧ ಸಾವಿರ. ಚಿತ್ರದುರ್ಗ ಡಿ|| ಚಳ್ಳಕೆರೆ ತಾ|| ನನ್ನಿವಾಳದಲ್ಲಿರುವ ಮ|| ಸಾ|| ಸಣ್ಣಶಿವಪ್ಪನವರು ೧೦೦೫. ಮುಷ್ಟಲಗುಮ್ಮಿ ಕೋಹನಗುರುಸಿದ್ದಪ್ಪನವರ ತಮ್ಮ ಮ|| ವೀರಭದ್ರಪ್ಪನವರು ೧೦೦೫. ದಾವಣಗೆರೆಯ ಮ|| ಪಲ್ಲಾಗಟ್ಟ ಗುರುಸಿದ್ಧಪ್ಪನವರು ೧೦೦೫. ದಾವಣಗೆರೆ ತಾ|| ಕೆಂದನಹೋಬಿಯಲ್ಲಿರುವ ಮ|| ಬೆಳ್ಳೋಡಿ ಮಲ್ಲಪ್ಪನವರ ಮಕ್ಕಳು ಗುರುಸಿದ್ಧಪ್ಪನವರು ೧ ಸಾವಿರ. ಹಿರೆಕೆರೂರಿನಲ್ಲಿರುವ ಮ|| ಮಠದಹಳ್ಳಿ ಚೆನ್ನಬಸವಪ್ಪನವರ ಮಕ್ಕಳು ಗುರುಬಸಪ್ಪನವರು ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ೧೦೦೫. ಬೆಂಗಳೂರು ಮ|| ಎಲೆ ಸಿದ್ಧಲಿಂಗಶೆಟ್ಟರು ೧೦೦೫. ದಾವಣಗೆರೆಯಲ್ಲಿರುವ ಮ|| ಮೈಸೂರುಮಠದ ಚನ್ನವೀರಪ್ಪನವರು ೧೦೧೫.

ಈ ದಿವಸ ಸಂಧ್ಯಾಕಾಲದಹೊತ್ತಿಗೆ ಶ್ರೀಮಜ್ಜಗದ್ಗುರುಗಳವರ ಸ್ವಾರಿಯು ಸಭಾಮಂಟಪಕ್ಕೆ ದಯಮಾಡಿಸಿತು. ಯಥಾಪ್ರಕಾರ ಸಭಿಕರ ವಂದನಘೋಷಗಳು ಸಂಭ್ರಮದಿಂದ ನಡೆದುವು. ಮೇಲೆಹೇಳಿದ ಕೆಲಸಗಳೆಲ್ಲಾ ಮುಗಿದಬಳಿಕ ಸಂಸ್ಥಾನದ ಪಾರುಪತ್ತೇಗಾರರಾದ ಮ|| ಲಿಂಗಪ್ಪನವರು—ಈಗಣ ಸ್ವಾಮಿಗಳು ಅಧಿಕಾರವನ್ನು ವಹಿಸಿದಾರಭ್ಯ ಧರ್ಮೋದ್ಧಾರ ವಿದ್ಯಾಪ್ರಸಾರಾದಿ ಕಾರ್ಯಗಳಿಗಾಗಿ ಎಷ್ಟು ಧನಸಹಾಯದಿಂದ ಯಾವಯಾವ ಪ್ರತಿಷ್ಠಾಪನೆಗಳನ್ನು ಮಾಡಿರುವರೆಂಬುದನ್ನು ವಿವರಿಸಿ ಹೇಳಿದರು. (ಆ ವಿವರವನ್ನು ಮತ್ತೊಂದು ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ) ಬಳಿಕ ಮಠಸೇವೆಗಾಗಿ ಯಾವಯಾವ ಮಹನೀಯರು ತನುಮನೋಧನಗಳನ್ನು ವಿನಿಯೋಗಿಸಿರುವರೋ ಅಂಥವರುಗಳಿಗೂ, ಕಲಾಕೌಶಲ್ಯವನ್ನು ವ್ಯಕ್ತಪಡಿಸಿದವರಿಗೂ ಸಹ ಶ್ರೀ ಸಂಸ್ಥಾನದಿಂದ ಸುವರ್ಣಪದಕಾದಿಪ್ರದಾನಗಳಿಂದ ಆಶೀರ್ವದಿಸುವ ಕಾರ್ಯವು ಆರಂಭವಾಯಿತು. ಇಂಥ ಆಶೀರ್ವಾದಕ್ಕೆ ಪಾತ್ರರಾದವರಾರೆಂದರೆ—೧. ತಿಪಟೂರಿನಲ್ಲಿರುವ ಮ|| ಗುರುಪಾದಪ್ಪನವರ ಕೊಟ್ಟೂರಪ್ಪನವರಿಗೆ ಒಂದು ಭಂಗಾರದ ಪದಕ ಮತ್ತು ಶಾಲುಜೋಡಿ. (ಇವರು ತಿಪಟೂರಿನಲ್ಲಿ ವೀರಶೈವಾನಂದಾಶ್ರಮಕ್ಕೂ ವಿದ್ಯಾರ್ಥಿಗಳ ಫಂಡಿಗೂ ಸಹ ೩೧ ಸಾವಿರ ರೂ. ಗಳನ್ನು ದಾನಮಾಡಿರುತ್ತಾರೆ.) ೨. ಚಿತ್ರದುರ್ಗ ಡಿ|| ಲಿಂಗದಹಳ್ಳಿ ಗ್ರಾಮದ ಮಠದ ಗುರುಸಿದ್ಧಪ್ಪಯ್ಯನವರಿಗೆ ಶಾಲುಜೋಡಿ, (ಇವರು ೨ ಕಣ್ಣುಗಳೂ ಇಲ್ಲದ ಅಂಧರು, ತಮಗೆ ಇರುವ ೨೦ ಸಾವಿರದ ಆಸ್ತಿಯಲ್ಲಿ ಚಿತ್ರದುರ್ಗದಲ್ಲಿ ಶ್ರೀ ಜಗದ್ಗುರುಗಳು ಏರ್ಪಡಿಸಿರುವ ಬೋರ್ಡಿಂಗಿಗಾಗಿ ೧೦ ಸಾವಿರದ ಆಸ್ತಿಯನ್ನು ಬರೆದು ಕೊಟ್ಟಿರುತ್ತಾರೆ.) ೩. ಚಿಕ್ಕಪ್ಪನಹಳ್ಳಿ ಸಾರಂಗಮಠದ ಗುರುಸಿದ್ಧಪ್ಪಯ್ಯನವರಿಗೆ ಭಂಗಾರದ ತೋಡ. (ಇವರು ಚಿತ್ರದುರ್ಗದ ಬೋರ್ಡಿಂಗಿಗೆ ವಿಶೇಷ ಸಹಾಯಮಾಡಿದವರು.) ೪. ಮೈಸೂರು ಆಸ್ಥಾನದ ಸಂಗೀತ ವಿದ್ವಾನ್ ರಾಚಪ್ಪನವರಿಗೆ ಭಂಗಾರದ ಪದಕ. (ಉತ್ತಮವಾಗಿ ಗಾನವಿದ್ಯಾಕೌಶಲವನ್ನು ಪ್ರದರ್ಶಿಸಿದುದಕ್ಕೆ) ೫. ಮೈಸೂರು ಆಸ್ಥಾನವಿದ್ವಾನ್ ಎಚ್. ಆರ್. ಕಂಬಸವಶಾಸ್ತ್ರಿಗಳಿಗೆ ಶಾಲುಜೋಡಿ ವಲ್ಲಿ ಸಹ (ಇವರು ೨೫ ವರ್ಷಗಳಿಂದಲೂ ಮತಗ್ರಂಥೋದ್ಧಾರಮಾಡುತ್ತ ಶ್ರೀ ಮಠದ ಕಾರ್ಯದಲ್ಲಿ ಪೂರ್ಣಾಭಿಮಾನವಾಳಿಗಳಾಗಿರುವರು) ೬. ಸೊಲ್ಲಾಪುರದ ಜೇರಿಗೆ ಸಂಗಪ್ಪನವರಿಗೆ ಭಂಗಾರದ ಮೆಡಲು, (ಇವರು ಶ್ರೀ ಜಗದ್ಗುರುಗಳೇ ಮೊದಲಾದ ಪೂಜ್ಯಪಾದರನೇಕರ ಭಾವಚಿತ್ರಗಳನೂ, ಬಸವೇಶ್ವರನ ಭಾವಚಿತ್ರವನೂ ತೆಗೆದು ಪ್ರಕಟಿಸಿ, ಮತಸೇವೆಮಾಡುತ್ತಿರುವರು) ೭. ವಿ. ಟಿ. ರಾಘವಾಚಾರ್ ಮೆಕಾನಿಕಲ್ ಇಂಜನಿಯರ್, ಇವರಿಗೆ ಭಂಗಾರದ ಮೆಡಲು (ಇವರು ಮಹಾಸಂಸ್ಥಾನಕ್ಕೆ ಸಂಬಂಧಿಸಿದ ಇಂಜನ್ ಕೆಲಸದಲ್ಲಿ ಬಹಳ ಮುತುವರ್ಜಿಯಿಂದ ಸಾಹಸ ತೋರಿಸಿದವರು) 8. ನಂಜನಗೂಡಿನ ತಬಲಾದ ನಂಜಪ್ಪನಿಗೆ ಭಂಗಾರದ ಮೆಡಲು, (ತಬಲಾವಾದನದಲ್ಲಿ ಕೌಶಲಪ್ರದರ್ಶನಮಾಡಿದುದಕ್ಕೆ) 9. ಬೆಂಗಳೂರಿನ ಪಿಟೀಲು ಪುಟ್ಟಸ್ವಾಮಪ್ಪನಿಗೆ ಭಂಗಾರದ ಉಂಗರ. (ಪಿಟೀಲ್ ವಾದನದಲ್ಲಿ ಚಾತುರ್ಯವನ್ನು ಪ್ರದರ್ಶಿಸಿದುದಕ್ಕೆ).

ಈ ಬಹುಮಾನಗಳು ಅವರವರಿಗೆ ಸಭಾಧ್ಯಕ್ಷರ ಮೂಲಕ ವಿನಿಯೋಗಿಸಲ್ಪಟ್ಟ ಬಳಿಕ ಶ್ರೀ ಜಗದ್ಗುರುಗಳವರು ತಮ್ಮ ಅಮೃತಧಾರಾಸದೃಶವಾದ ವಾಣಿಯಿಂದ ಸಭಾಧ್ಯಕ್ಷರು, ಇತರ ವಿದ್ಯಾವಂತರುಗಳು, ಸ್ಥಲದ ಸರ್ಕಾರದುದ್ಯೋಗಿಗಳು, ಧನಿಕರು, ವ್ಯಾಪಾರಿಗಳು, ಬೇಸಾಯಗಾರರು ಮೊದಲಾದವರೆಲ್ಲ ಸಭಾಕಾರ್ಯವನ್ನು ವಿಜೃಂಭಣೆಯಿಂದ ಸಾಗಿಸುವುದಕ್ಕೆ ಮಾಡಿದ ಮುತುವರ್ಜಿಗಾಗಿ ಸರ್ವರಿಗೂ ಸನ್ಮಂಗಳಗಳುಂಟಾಗಲೆಂದು ಆಶೀರ್ವದಿಸಿದುದಲ್ಲದೆ, ಪ್ರಕೃತದ ಮಹಾಯುದ್ಧದಲ್ಲಿ ಆಂಗ್ಲಸಾರ್ವಭೌಮರಿಗೂ ಅವರ ಪಕ್ಷದಲ್ಲಿ ಸೇರಿದ ಮಿತ್ರರಾಷ್ಟ್ರದವರಿಗೂ ಜಯವುಂಟಾಗಿ ಬೇಗನೆ ಯುದ್ಧಶಾಂತಿಯಾಗಲೆಂದೂ, ನಮ್ಮ ಶ್ರೀಮನ್ಮಹಾರಾಜರವರಿಗೂ, ಅವರ ಅನುಜರಾದ ಶ್ರೀಮದ್ಯುವರಾಜರವರಿಗೂ ಅವರ ಸಕಲ ಕುಟುಂಬಕ್ಕೂ ಸಕಲ ಸನ್ಮಂಗಳವೂ ಉಂಟಾಗಲೆಂದೂ ಆಶೀರ್ವದಿಸಿದ ಬಳಿಕ ಜಯನಮಃಪಾರ್ವತೀಪತೇ ಹರಹರ ಮಹಾದೇವ ಎಂಬ ಮಹಾಧ್ವನಿಯೊಡನೆ ಅಂದಿನ ಸಭಾಕಾರ್ಯವು ಮುಗಿದಿತು.

ತಾ|| ೩೦ ನೆ ಬೆಳಗಿನ ೮ ಗಂಟೆಗೆ ಮರಳಿ ಸಭೆಯು ನೆರೆದಿತು. ಮಹಾಸಭಾಕಾರ್ಯನಿರ್ವರ್ತನಕ್ಕಾಗಿ ಏರ್ಪಟ್ಟ ಫಂಡಿನ ರಕ್ಷಣೆ, ಅದಕ್ಕಾಗಿ ಒಂದು ಕಾರ್ಯಕಾರಿಸಂಘದ ರಚನೆ, ಸ್ಟ್ಯಾಂಡಿಂಗ್ ಕಮಿಟಿಯ ಪುನರ್ನಿರ್ಮಾಣ-ಇವುಗಳ ವಿಷಯವಾಗಿ ದೀರ್ಘಕಾಲ ಚರ್ಚೆಗಳು ನಡೆದು, ಕಡೆಗೆ ಸ್ಟ್ಯಾಂಡಿಂಗ್ ಕಮಿಟಿಯ ಪುನರ್ನಿರ್ಮಾಣವನ್ನು ಮುಂದಣ ಸಭೆಯಲ್ಲಿ ಆಲೋಚಿಸಬಹುದೆಂದೂ, ಫಂಡಿನ ರಕ್ಷಣೆಗಾಗಿ ಒಂದು ಕಮಿಟಿಯು ಏರ್ಪಡಿಸಲ್ಪಡಬೇಕೆಂದೂ, ಅದಕ್ಕೆ ವರ್ಗಣಿ ಕೊಟ್ಟ ಮಹಾಜನರೇ ಅದರ ಸಭಿಕರಾಗಿರಬೇಕೆಂದೂ, ಅದಕ್ಕೆ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಅಧ್ಯಕ್ಷರಾಗಿರಬೇಕೆಂದೂ, ಅವರ ಹೆಸರಿನಿಂದ ದಾವಣಗೆರೆಯಲ್ಲಿರುವ ಮೈಸೂರು ಬ್ಯಾಂಕಿನ ಶಾಖೆಯಲ್ಲಿ ಹಣವು ಬಡ್ಡಿಗಾಗಿ ಇಡಲ್ಪಡಬೇಕೆಂದೂ ಸಹ ನಿರ್ಧರಿಸಲ್ಪಟ್ಟಿತು. ಈ ಕಮಿಟಿಯವರ ಕಾರ್ಯನಿರ್ವಾಹಕ್ಕಾಗಿ ಸಿಬ್ಬಂದಿಯ ವೆಚ್ಚವೇನಾದರೂ ಬೇಕಾಗುವುದಾದರೆ ಮೂಲಧನದಲ್ಲಿ ಮುರಿಯಬಾರದೆಂದೂ ಅದಕ್ಕಾಗಿ ತಗಲಬಹುದಾದ ಹಣವು ವರ್ಷಕ್ಕೆ ೨೦೦ ರೂ. ಗಳವರೆಗಾದರೂ ಅದನ್ನು ತಾವು ಕೊಡುತ್ತೇವೆಂದೂ ಹುಬ್ಬಳ್ಳಿಯ ಮ|| ಶಿವಪ್ಪ ಸಿದ್ಧರಾಮಪ್ಪ ಕುಬಸದ ಇವರು ವಾಗ್ದಾನಮಾಡಿದರು. ಮುಂದಣವರ್ಷದ ಸಭೆಯನ್ನು ಬೀರೂರಿನಲ್ಲಿ ನಡೆಯಿಸುವುದಕ್ಕೆ ಶ್ರೀಮಂತ ಪತ್ರಿ ವೀರಪ್ಪನವರೇ ಮೊದಲಾದವರು ಪ್ರಾರ್ಥಿಸಿ, ಮಹಾಸಭೆಯ ಅನುಮತಿಯನ್ನು ಪಡೆದುಕೊಂಡರು.

ಕಡೆಗೆ ಸಭಾಧ್ಯಕ್ಷರು ಎದ್ದು ಉಪಸಂಹಾರಭಾಷಣಮಾಡಿದುದರಲ್ಲಿ—೪ ವರ್ಷಗಳಿಂದ ನಿಂತುಹೋಗಿದ್ದ ಮಹಾಸಭೆಯು ಶ್ರೀ ಜಗದ್ಗುರುಗಳ ಕೃಪಾಕಟಾಕ್ಷದಿಂದ ದಾವಣಗೆರೆಯಲ್ಲಿ ಅಭೂತಪೂರ್ವವಾದ ವೈಭವದಿಂದ ನಡೆಯುವಂತಾದುದಕ್ಕಾಗಿಯೂ, ಅದರ ಶಾಶ್ವತತೆಗೆ ಮಹಾಧನರಾಶಿಯೊಂದು ಸ್ಥಾಪಿಸಲ್ಪಟ್ಟುದಕ್ಕಾಗಿಯೂ, ಶ್ರೀ ಜಗದ್ಗುರು ಚರಣಕ್ಕೆ ತಮ್ಮ ಸಾಷ್ಟಾಂಗ ವಂದನೆಯನ್ನು ತಿಳಿಯಿಸಿದುದಲ್ಲದೆ, ಈ ಧನರಾಶಿಗೆ ಸಹಾಯಮಾಡಿದ ವಿತರಣಶಾಲಿಗಳ ಮತಾಭಿಮಾನವನ್ನು ಕೊಂಡಾಡಿ, ಅವರುಗಳಿಗೆಲ್ಲಾ ವಂದನೆಯನ್ನರ್ಪಿಸಿದುದಲ್ಲದೆ, ಉತ್ತರದೇಶದ ಶ್ರೀಮಂತರುಗಳು ಈ ಧನರಾಶಿಗೆ ಇನ್ನೂ ಧನಸಹಾಯ ಮಾಡಿ ೧ ಲಕ್ಷ ರೂ. ಗಳಿಗೆ ಭರ್ತಿಮಾಡಿ ಪ್ರಶಂಸಾಪಾತ್ರರಾಗದೆ ಇರಲಾರರೆಂಬ ತಮ್ಮ ನಿರೀಕ್ಷಣೆಯನ್ನು ವ್ಯಕ್ತಪಡಿಸಿದರು. ದಾವಣಗೆರೆಯ ಸ್ವಾಗತಸಂಘದವರು, ಮಹಾಸಭೆಯನ್ನು ನೆರವೇರಿಸುವುದಕ್ಕಿದ್ದ ಕಾಲವು ಸ್ವಲ್ಪವೇ ಇದ್ದರೂ ಬಹಳ ವಿಚಕ್ಷಣತೆಯಿಂದ ಎಲ್ಲಾ ಏರ್ಪಾಟನ್ನೂ ಮಾಡಿದ್ದುದಕ್ಕಾಗಿ ಅವರುಗಳಿಗೆ ವಂದನೆಯನ್ನೂ, ಎಲ್ಲಾ ದೇಶಭಾಗಗಳಿಂದಲೂ ಅರ್ಥವ್ಯಯ ದೇಹಶ್ರಮಾದಿಗಳನ್ನು ಸ್ವೀಕರಿಸಿಕೊಂಡು ಮತಸೇವಾಕಾರ್ಯಕ್ಕಾಗಿ ದಯಮಾಡಿಸಿದ್ದ ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಸಹ ವಂದನೆಯನ್ನು ಅರ್ಪಿಸಿದರು. ಅನೇಕ ವಿರಕ್ತಸ್ವಾಮಿಗಳೂ ಪಟ್ಟದಚರಮೂರ್ತಿಗಳೂ ವೈದಿಕ ಲೌಕಿಕ ವಿದ್ಯಾವಿಶಾರದರೂ ಸಹ ಸಭೆಯನ್ನಲಂಕರಿಸಿ ಸಭಾಕಾರ್ಯವು ಸಲಕ್ಷಣವಾಗಿ ನಡೆಯುವುದಕ್ಕೆ ಸಹಾಯಮಾಡಿದುದಕ್ಕಾಗಿ ವಂದಿಸಿದರು.

ಅನಂತರ ಹುಬ್ಬಳ್ಳಿಯ ಮ|| ಸಿದ್ಧರಾಮಪ್ಪ ಪಾವಟೆಯವರು—ಈ ಮಹಾಸಭಾರೂಪ ಸತ್ರಕ್ಕೆ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಅಧ್ವರ್ಯುಗಳಾಗಿದ್ದುಕೊಂಡು ವಿಚಕ್ಷಣತೆಯಿಂದ ಸರ್ವಕಾರ್ಯವನ್ನೂ ನೆರವೇರಿಸಿದುದಕ್ಕಾಗಿ ಸಭಾಪರವಾದ ವಂದನೆಯನ್ನು ಅವರಿಗೆ ತಿಳಿಯಿಸಿದರು. ಸ್ವಯಂಸೇವಕರುಗಳು ಬಹಳ ಮುತುವರ್ಜಿಯಿಂದ ಮಹಾಸಭಾ ಸಭಿಕರಿಗೆಲ್ಲಾ ಬೇಕಾದ ಸಾಹಾಯ್ಯಗಳನ್ನು ಒದಗಿಸಿಕೊಡುವುದರಲ್ಲಿ ತತ್ಪರರಾಗಿದ್ದುದಕ್ಕಾಗಿ ಸಭಾಪರವಾದ ಧನ್ಯವಾದವನ್ನು ಅವರುಗಳಿಗೆ ರಾ|| ಸಾ|| ಶಿವಮೂರ್ತಿಸ್ವಾಮಿಯವರು ತಿಳಿಯಪಡಿಸಿದರು. ಸಬ್ ಜಕ್ಟ್ ಕಮಿಟಿಯ ಚೇರ್ಮನ್ನರಾಗಿ ರಾ|| ಸಾ|| ಶಿವಮೂರ್ತಿಸ್ವಾಮಿ ಕಣಬರ್ಗಿಮಠ ಇವರು ಮಾಡಿದ ಪ್ರಶಂಸಾಪಾತ್ರವಾದ ಕಾರ್ಯಕ್ಕಾಗಿ ಅವರಿಗೆ ಸಭಾಪರವಾದ ವಂದನೆಯನ್ನು ಮ|| ಪಿ. ಮಹಾದೇವಯ್ಯನವರು ತಿಳಿಯಿಸಿದರು.

ನಮ್ಮ ಜನರು ಶ್ರೀಮನ್ಮಹಾರಾಜರ ಸೈನ್ಯದಲ್ಲೂ ಆಂಗ್ಲ ಸಾರ್ವಭೌಮರ ಸೈನ್ಯದಲ್ಲೂ ಸೇರಿ ದೇಶಸೇವೆಯನ್ನು ಮಾಡಿ, ಬಹುಕಾಲದಿಂದ ನಮ್ಮಲ್ಲಿ ಬಂದಿರುವ ರಾಜಭಕ್ತಿ ಶೌರ್ಯ-ಧೈರ್ಯ-ಸಾಹಸಾದಿ ಗುಣಗಳನ್ನು ವ್ಯಕ್ತಪಡಿಸಿ, ಆ ಮೂಲಕವಾಗಿಯೂ ಸಮಾಜಕ್ಕೆ ಕೀರ್ತಿಯನ್ನೂ ಭೂಷಣವನ್ನೂ ತಂದುಕೊಳ್ಳಬೇಕೆಂದು ಮ|| ಹೆಚ್. ಕೆ. ಮಲ್ಲಪ್ಪನವರು ಅಧ್ಯಕ್ಷರಪ್ಪಣೆಮೇರೆಗೆ ಸಭಿಕರಿಗೆ ಶ್ರುತಪಡಿಸಿದರು.

ಬಳಿಕ ದಾವಣಗೆರೆಯ ಮ|| ಮುಂಜಪ್ಪ ಹರ್ಡೇಕರ್ ರವರು—ದಾವಣಗೆರೆಯ ವೀರಶೈವ ಮಹಾಜನರ ಆಮಂತ್ರಣವನ್ನು ಗೌರವಿಸಿ ಎಲ್ಲ ಭಾಗದ ವೀರಶೈವ ಮಹನೀಯರೂ ದಯಮಾಡಿಸಿ, ತಮ್ಮ ಆತಿಥ್ಯದಲ್ಲಿ ಯಾವ ಲೋಪಗಳಿದ್ದರೂ, ಅದನ್ನು ಲಕ್ಷಿಸದೆ ಮಹಾಸಭಾಕಾರ್ಯವನ್ನು ಸಾಂಗಗೊಳಿಸಿದುದಕ್ಕಾಗಿ ಸಭಿಕರೆಲ್ಲರಿಗೂ, ಅಧ್ಯಕ್ಷರಿಗೂ ಸಹ ಸತ್ಕಾರಕ ಸಂಘದ ಪಕ್ಷದಿಂದ ವಂದನೆಯನ್ನು ತಿಳಿಯಿಸಿದುದಲ್ಲದೆ, ಇಂಥ ಮತಸೇವಾಕಾರ್ಯ ನಿರ್ವರ್ತನಕ್ಕೆ ಅಪ್ಪಣೆಮಾಡಿ, ತಾವೂ ಪ್ರತ್ಯಕ್ಷವಾಗಿ ಆಗಮಿಸಿ ಮಹಾಸಭೆಯನ್ನಲಂಕರಿಸಿ, ಅಭೂತಪೂರ್ವವಾದ ಕೀರ್ತಿಯಿಂದ ಸಭೆಯು ನೆರವೇರುವಂತೆ ಅನುಗ್ರಹಿಸಿದ ಶ್ರೀ ಜಗದ್ಗುರು ಮಹಾಪಾದಕ್ಕೆ ದಾವಣಗೆರೆಯವರೆಲ್ಲಾ ವಂಶಪಾರಂಪರ್ಯವಾಗಿ ಕೃತಜ್ಞತಾವಂದನೆಗಳನ್ನು ಅರ್ಪಿಸುತ್ತಿರುವರೆಂದು ಹೇಳಿ, ಮಹಾಸಭಾನಿರ್ವರ್ತನಕ್ಕೆ ಸಹಾಯಮಾಡಿದ ಸ್ಥಳೀಯ ಸರ್ಕಾರದುದ್ಯೋಗಿಗಳಿಗೂ, ಧನಲಕ್ಷ್ಮಿ ಥಿಯೇಟರ್ ಹಾಲನ್ನು ಸಭೆಗಾಗಿ ಕೊಟ್ಟಿದ್ದ ಅದರ ಕರ್ತರಿಗೂ, ಸಭೆಗೆ ಬಂದಿದ್ದವರಿಗೆಲ್ಲಾ ಅಲ್ಪಾಹಾರ ಪ್ರದಾನದಿಂದ ಮರ್ಯಾದಿಸಿದ ಮ|| ಬ್ರಹ್ಮಪ್ಪ ತವನಪ್ಪನವರ ಸೌಭ್ರಾತೃತ್ವಕ್ಕೂ ಸಹ ವಂದನೆಯನ್ನರ್ಪಿಸಿದರು. ಕಡೆಗೆ ಸಭಾಧ್ಯಕ್ಷರು ಮೊದಲಾದವರಿಗೆಲ್ಲಾ ಗಂಧ-ಪುಷ್ಪ-ಹಾರ-ಪೂಜಾ ವಿಗಳು ಸಮರ್ಪಿಸಲ್ಪಡಲು, ನಮ್ಮ ಜಾರ್ಜ್ ಸಾರ್ವಭೌಮರವರಿಗೂ, ನಮ್ಮ ಶ್ರೀಮನ್ಮಹಾರಾಜರವರಿಗೂ ತ್ರಿವಾರ ಜಯಘೋಷಗಳಾಗಿ, ಸಭೆಯು ಮುಗಿಸಲ್ಪಟ್ಟಿತು.

ವೀರಶೈವ ಮಹಾಸಭೆಯ ಧನರಾಶಿಗೆ ವರ್ಗಣಿ ಹಾಕಿದ್ದು ಮರುದಿನವೇ ವಸೂಲು ಕೊಟ್ಟ ಮಹನೀಯರ ಪಟ್ಟಿ:—

ಶ್ರೀ ಜಗದ್ಗುರು ಮಹಾಸ್ವಾಮಿಗಳು 5000 ರೂ, ಪತ್ರಿ ಚಂ|| ವೀರಪ್ಪನವರು, ಬೀರೂರು 3000 ರೂ, ಚಾರಮಣ್ಣನವರ ಬಸವಲಿಂಗಪ್ಪನವರು, ದಾವಣಗೆರೆ 3000 ರೂ, ಟಿ.ಎಂ. ಷಡಾಕ್ಷರಪ್ಪನವರು, ದಾವಣಗೆರೆ 1001 ರೂ, ಹೊದಿಗ್ಗೆರೆ ಅಡಿವೆಪ್ಪಶೆಟ್ಟರು 1000 ರೂ, ಸೀಗರಗೆಡ್ಡೆ ಶ|| ಶಿವಪ್ಪನವರು, ಬೆಂಗಳೂರು 1000 ರೂ, ಜಿ. ಎಂ. ಕಾಡಪ್ಪನವರು, ಶಿವಮೊಗ್ಗ 1000 ರೂ, ಹಾಸನದ ಕೇಣಿ ಮಹಾದೇವಪ್ಪನವರು 1000 ರೂ, ಬೆಂಗಳೂರು ಯಜಮಾನ್ ಚಿಕ್ಕವೀರಪ್ಪನವರು 1000 ರೂ, ಡಿ|| ಬಿ|| ಕೆ. ಪಿ. ಪುಟ್ಟಣ್ಣಶೆಟ್ಟರು 1000 ರೂ, ಉರುಫುಕೊಂಡೆ ಚೆನ್ನಬಸವಪ್ಪನವರು, ದಾವಣಗೆರೆ 1000 ರೂ, ಆಲೂರು ನಂಜುಂಡಪ್ಪನವರು (ಹಾಸನ ಡಿ||) 1000 ರೂ, ಹಾಸನದ ಎ. ಎಸ್. ಶ್ರೀಕಂಠಪ್ಪನವರು 1000 ರೂ, ತಿಬಟೂರು ಗು|| ಕೊಟ್ರಪ್ಪನವರು 1000 ರೂ, ಸಾಗರದ ಕೋರಿ ಅಡಿವೆಪ್ಪನವರು 1000 ರೂ, ಬಳ್ಳಾರಿ ಡಿ|| ಬ್ಯಾಕಲ್ ವೀರಾಪುರದ ಬಸವಣ್ಣಪ್ಪ ಈಶ್ವರಪ್ಪನವರು 1000 ರೂ, ಮೇಡ್ಲೇರಿ ಮುಂಡಾಸದ ಸಣ್ಣಪ್ಪನವರ ಮಕ್ಕಳು ವೀರಪ್ಪನವರು 1000 ರೂ, ಮಾಗಾನಹಳ್ಳಿ ಸಂಗಪ್ಪನವರು, ದಾವಣಗೆರೆ 1000 ರೂ, ದಾವಣಗೆರೆ ಗೌಡರ ಸಣ್ಣಮಹಲಿಂಗಪ್ಪ ಗುರುಶಾಂತಪ್ಪನವರು 1001 ರೂ, ಹರಿಹರದ ಮೂರುಕಲ್ಲು ಮಹಾಲಿಂಗಪ್ಪನವರ ಮಕ್ಕಳು ರಾಚಪ್ಪನವರು 1000 ರೂ, ಹರಿಹರದ ತಿಪ್ಪಣ್ಣನವರ ಮುರಿಗೆಪ್ಪನವರು 1000 ರೂ, ಕಂಟ್ರಾಕ್ಟರ್ ಟಿ. ರಾಚಪ್ಪನವರು, ಬೆಂಗಳೂರು 1000 ರೂ, ದೊಗ್ಗಳ್ಳಿ ಬಸವಣ್ಣಪ್ಪನವರು, ದಾವಣಗೆರೆ 1000 ರೂ, ಬೆಂಗಳೂರು ಬಳ್ಳಾಪುರಪೇಟೆ ಮಲ್ಲಿಕಾರ್ಜುನಪ್ಪನವರ ನಾಗಪ್ಪನವರು 1000 ರೂ, ಚಳ್ಳಕೆರೆ ತಾ|| ನನ್ನಿವಾಳದಲ್ಲಿರುವ ಸಾ|| ಚಿಕ್ಕಹಳ್ಳಿ ಸಣ್ಣಶಿವನಪ್ಪನವರು 1000 ರೂ, ಮುಷ್ಟಲಗುಮ್ಮಿ ವೀರಭದ್ರಪ್ಪ ಗುರುಸಿದ್ದಪ್ಪನವರು 1005 ರೂ, ದಾವಣಗೆರೆಯ ಪಲ್ಲಾಗಟ್ಟೆ ಗುರುಸಿದ್ದಪ್ಪನವರು 1005 ರೂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 5

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ್ಯ ಒಂದೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವೇಳೆಯಲ್ಲಿ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೮೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦

ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦

ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಫ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯಂ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯು ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಿತ್ರರೇ. ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿ ಜಡ್ಡು, ಗುದ್ದವ್ವನ ಬೇನೆ, ಹುರುಳು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನು ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆತಿರುತ್ತವೆ. ಈ ಆರೋಗ್ಯಬಿಂದು ತಯಾರಾಗಿ (೭) ವರ್ಷಗಳಾಗಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. [illegible] ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
42 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಡಾ|| ಎಂ. ಪೀಟರ್ಸ್‌ಯವರ

ಸಾಂಡೋ ಆಯಿಲ್.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯರ ದೂಷಿತವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ಮೈಥುನದಿಂದಲೂ, ಅತ್ಯಂತ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕುಳಿತುಕೊಂಡೇ ಇರುವುದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ ಶರೀರದ ಎಲ್ಲಾ ನಾಡಿಗಳೂ ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖದಲ್ಲಿ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು 7 ದಿನಗಳು ಮೇಲೆ ಸವರುವುದರಿಂದ ಗುಣವಾಗಿ ಪುರುಷವು ಬಲಹೀನವಾಗಿದ್ದರೂ ಸರಿಪಡಿಸುವುದು. ಕ್ರಯ ಶೀಶೆ 1 ಕ್ಕೆ 1.0.0.

ವಿಳಾಸ:—ಡಾ|| ಎಂ. ಪೀಟರ್ಸ್,
4 3 ಇರುಳಪ್ಪನ ಬೀದಿ, ಮದರಾಸು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ ಯೋಗಪಠಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
8 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ರಹಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶಶಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೫—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ತಾ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ.ಗಬೇ. ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ.ಗಬೇ. ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ.ಗಬೇ. ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು; ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
8 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೮ ನೆಯ ಇಸವಿ ಜನವರಿ ತಾ|| ೬ ರಿಂದ ೧೯೧೮ ನೆಯ ಜನವರಿ ತಾ|| ೧೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾರ್ಗಶಿರ ಬ|| ನವಮಿಯಿಂದ ಮಾರ್ಗಶಿರ ಬ|| ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ತೇದಿ
6	ಭಾನು	ನವಮಿ	55-53	ಚಿತ್ತ	33-12	23
7	ಸೋಮ	ದಶಮಿ	59-4	ಸ್ವಾತಿ	37-47	24
8	[1] ಮಂಗಳ	ಏಕಾದಶಿ	60	ವಿಶಾಖ	41-14	25
9	[2] ಬುಧ	ದ್ವಾದಶಿ	60	ಅನೂರಾಧ	43-21	26
10	[3] ಗುರು	ದ್ವಾದಶಿ	0-21	ಜ್ಯೇಷ್ಠ	59-37	27
11	[4] ಶುಕ್ರ	ಚತು	58-4	ಮೂಲ	44-5	28
12	[5] ಶನಿ	ಅಮಾ	54-53	ಪೂಷ	42-44	29

(1) ಸ್ಮಾರ್ತಾನಾಮೇಕಾದಶೀ. (2) ಶ್ರೀವೈಷ್ಣವಾನಾಂ ಮಾಧ್ವಾನಾಂಚೈಕಾದಶೀ, ಉಡುಪಿಯಲ್ಲಿ ಏಕಾಯನ ಉತ್ಸವಾರಂಭಃ, ಅಮೃತಸಿದ್ಧಿ ಯೋಗಃ. (3) ಮಾರ್ಗಶಿರ ಲಕ್ಷ್ಮೀವ್ರತಂ. (4) ಮಾಸಶಿವರಾತ್ರಿಃ, ಕೊಡಾರವಲ್ಲಂ. (5) ಎಳ್ಳಮಾವಾಸ್ಯಾಪ್ರಯುಕ್ತ ತೀರ್ಥಹಳ್ಳಿಯಲ್ಲಿ ತುಂಗಾನದೀಸ್ನಾನ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಿಕಾ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೀಲಾಂಶುಧೀಪುಂಗವ | ಸ್ತೋಮಾಭೀಷ್ಟದೋಲ ನಾಕರಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾಶೀತಯಶಃಪ್ರತಾಪವಿಭುಲಂ ಸದ್ವೃತ್ತಮಾರಾಕುಲಂ | ಶ್ರೀಮಂಚ್ಛ್ರೀಯುಂಸವಾಪುರೀಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಜನವರಿ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೨

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು||.ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬೀಳೂರ, ಹಾವೇರಿ, ಹೊಳಕೇರಿ, ಮುಳಗುಂದ, ಬೆದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರ್ವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದು ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದು ಸಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಶಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೊ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝೇಂಡೆ ಹಚ್ಚಿದ ಅದ್ವಿತೀಯ ಶಂಭುವಿನ ಅವತಾರಿಯಾದ "ಶ್ರೀ ಕಲ್ಯಾಣ ಬಸವೇಶ್ವರದೇವರ" ಅರಿವಿ ಮೇಲೆ ತೆಗೆದಿದ್ದ ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅದ್ಯಕರ್ತವ್ಯ ಅದೆ ಫುಲ್‌ಸ್ಕೆ|| ೧ ಕ್ಕೆ ರೂ. ೧ ಕ್ಯಾ|| ಸ್ಕೆ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕ್ಕೆ ಬಣ್ಣದ್ದು ರೂ. ೧ ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುತ್ತದೆ. ಫುಲ್‌ಸ್ಕೇಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸ್ಕೇಜು ರೂ. ೦-೮-೦ ಮೇಲೆ ಕ್ಕೆ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೋಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೆ ಫು|| ಸ್ಕೆ|| ೧ ಕ್ಕೆ ರೂ. ೧ ಕ್ಯಾ|| ಸ್ಕೆ|| ಆಣೆ ೮ ಮೇಲೆ ಕ್ಕೆ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೋಟೊ ಬೇರೆ ಬೇರೆ ಸಿಕ್ಕುತ್ತವೆ.

ಫುರಫುರಿಗೆ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಜಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪೆನಿ,
13 ಸೊಲ್ಲಾಪುರ ಸಿಟಿ.

ಫುಕಟ! ೨೨ ಪುಟಗಳ ಪುಸ್ತಕವು. ಫುಕಟ!!

4 ಅಂಚೇ ಹಾಸಲು ಸಹ ಕೊಡಬೇಕಾಗಿಲ್ಲ.

ಒಕ್ಕಲಿಗರ ಜೀವನ ಸರ್ವಸ್ವವಾಗಿರುವ ದನಕರುಗಳ ಪ್ರತಿಯೊಂದು ರೋಗದ ಕಾರಣ, ಲಕ್ಷಣ, ಪರೋಗೀ ದನಗಳ ಉಪಚಾರ ಇವುಗಳನ್ನು ವಿಶದವಾಗಿ ವಿವರಿಸಿದ "ಪಶುಸಂಜೀವನ" ವೆಂಬ ಸುಂದರವಾದ ಪುಸ್ತಕವನ್ನು ಏನೂ ಬೆಲೆಯಿಲ್ಲದೆ ಕಳುಹಿಸುವೆವು. ಪ್ರತಿಗಳು ಹೇರಳವಾಗಿವೆ. ತ್ವರೆಯಿಂದ ತರಿಸಿ ಓದಿರಿ.

ಸುಪ್ರಸಿದ್ಧ] ಶಾಂತವೀರ. [ಸುವಾಸಿಕ

ಹುರುಕಿನ ಔಷಧ.

ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ. ಖರ್ಚು ಬೇರೆ. ಒಮ್ಮೆಲೆ ೧೦೦ ಪೊಟ್ಲಗಳನ್ನು ತರಿಸಿಕೊಳ್ಳುವವರಿಗೆ ಅಂಚೇ ವೆಚ್ಚ ಸೇರಿ ೪—೮—೦.

ಕಣ್ಣುಬೇನೆಯ ಔಷಧ:—ಚೀಟು ೧ ಕ್ಕೆ ೩ ಪೈ. ೧೦೦ ಕ್ಕೆ ೧ ರೂಪಾಯಿ. ಟ. ಖರ್ಚು ೪೦೦ ಚೀಟುಗಳವರೆಗೆ ನಾಲ್ಕೇ ಆಣೆ.

ಹೇನು ವ ಶೀರು ನಾಶಕ ಚೂರ್ಣ:—ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೧—೮—೦. ಟ. ಖರ್ಚು ಬೇರೆ.

ಕ್ರಿಮಿನಾಶಕ ಚೂರ್ಣ (ಜಂತಿನ ಪುಡಿ):—ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ.ಖರ್ಚು ಬೇರೆ.

ಪ್ಲೇಗ್ ಪ್ರತಿಬಂಧಕ ಗುಳಿಗೆ:—೨೫ ಕ್ಕೆ ೧ ರೂಪಾಯಿ. ೧೦೦ ಕ್ಕೆ ೩ ರೂಪಾಯಿ. ಟ. ಖರ್ಚು ಬೇರೆ.

ಪಶುಸಂಜೀವಿನೀ (ದನಗಳ ಔಷಧ):—೧೦ ತೊಲೆಯ ಡಬ್ಬಿ ೧ ಕ್ಕೆ ೧ ರೂಪಾಯಿ. ಡಜನ್ನಿಗೆ ಟ. ಖರ್ಚು ಸಹ ೧೦—೦—೦.

ನಮ್ಮ ಔಷಧಾಲಯದಲ್ಲಿ ಎಲ್ಲಪ್ರಕಾರದ ಕಾಢೆ, ಚೂರ್ಣ, ಮಾತ್ರೆ, ಗುಗ್ಗುಲ, ಗುಟಿಕಾ ಮುಂತಾದ ಆಯುರ್ವೇದಿಕ ಔಷಧಗಳು ತಯಾರ ಅವೆ. ಯೋಗ್ಯ ಕ್ರಯಕ್ಕೆ ಕಳುಹಿಸುವೆವು.

ಸೂಚನೆ:—ಹಮ್ಮೀ ಔಷಧಗಳನ್ನು ಕೊಂಡುಕೊಳ್ಳುವುದರಿಂದ ಪದೇ ಪದೇ ಹಣವನ್ನು ಕಳೆದುಕೊಳ್ಳುವುದು ತಪ್ಪುತ್ತದೆ. ಬೇಕಾದವರು ಬೇಕಾದಷ್ಟು ತರಿಸಿಕೊಳ್ಳಬಹುದು. ಅನೇಕ ಜಾಹಿರಾತಿನ ಔಷಧಗಳನ್ನು ತರಿಸಿ ಮೋಸಹೋಗಬೇಡಿರಿ. ಆಯುರ್ವೈದ್ಯಕ ಶಾಸ್ತ್ರಕ್ಕನುಸರಿಸಿ ನಡೆಯುವ ಕರ್ನಾಟಕ ಪ್ರಾಂತದೊಳಗಿನ ಒಂದೇ ಔಷಧಾಲಯವು.

ವಿಳಾಸ:—ಕರ್ನಾಟಕ ಜಂಗೀ ವನೌಷಧಾಲಯ, ಕಿತ್ತೂರ.

(ತಂತೀ ವಿಳಾಸ)
'ಶಾಂತವೀರ' ಕಿತ್ತೂರ

ಮಾಲಕರು—ಡಾಕ್ಟರ, ಎಸ್.ಆರ್. ಕಿತ್ತೂರ, "ಪಶುಸಂಜೀವಿನೀ" ಶೋಧಕರು,
ಪೋಸ್ಟ ಕಿತ್ತೂರ, ಜಿಲ್ಲಾ ಬೆಳಗಾಂವ.

ಮದರಾಸ್ ಮೇಲ್.ವಾಚ್, 5 ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ರೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳು, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ತಾಮ್ರಂತಿಗೆಹುವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
5 3, ಇರುಳಪ್ಪನಬೀದಿ, ಮದರಾಸ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಶರಣಕಸುಗೆ, ಪಂಚಾಕ್ಷರಿ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನು ೬೩ ಶಿವಾಚಾರಗಳನ್ನು ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಗಣಪುರಾಣಂ-೧-೩-೦; ಸಟೀಕ ಪತ್ರಿತ್ರಯ [illegible] ೬ ಆಣೆ; [illegible] ೬ ಆಣೆ; [illegible] ಪಟಲ (ಸಟೀಕ) ೬ ಆಣೆ; ಸಟೀಕ ಶಿವಾಷ್ಟವಿಧಿ ೧೨ ಆಣೆ; [illegible] ೬ ಆಣೆ; [illegible] ೨ ಆಣೆ; [illegible] ೧ ಆಣೆ.

ಎ. ಆರ್. [illegible]
ಗ್ರಂಥಪ್ರಸಾರಕಮಂಡಲಿ, [illegible]

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜನವರಿ ತಾ|| ೧೩ ನೆಯ ಭಾನುವಾರ.

ಮಹಾಸಭೆಗಳ ಸುಗ್ಗಿ.

ಡಿಸೆಂಬರ್ ತಿಂಗಳ ಕೊನೆಯ ವಾರವು: ಭರತಖಂಡದ ಮಹಾಸಭೆಗಳ ಸುಗ್ಗಿಗಾಲವೆಂಬುದನ್ನು ಎಲ್ಲರೂ ಬಲ್ಲರು. ಈ ಸಲ ಈ ಸುಗ್ಗಿಯ ಸುಖಾನುಭವವು ಕಲ್ಕತ್ತಾಪಟ್ಟಣಕ್ಕೆ ಒದಗಿದ್ದಿತಷ್ಟೆ. ಆ ಕಾಲದಲ್ಲಿ ಅಲ್ಲಿ ನಡೆದಷ್ಟು ಸಭೆಗಳು ಇದುವರೆಗೆ ಇನ್ನಾವ ಪಟ್ಟಣದಲ್ಲೂ ಏಕಕಾಲದಲ್ಲಿ ನಡೆದುದಿಲ್ಲ. ಬಹುಶಃ ಅಲ್ಲಿ ಒಂದು ವಾರಕಾಲದೊಳಗಾಗಿ ೪೦ ಸಭೆಗಳು ಕೂಡಿದ್ದುವೆಂದು ಪ್ರಕಟವಾಗಿದೆ. ಇವುಗಳೆಲ್ಲಾ ಏಕೋದ್ದೇಶವುಳ್ಳವುಗಳಲ್ಲ. ೫ ಸಭೆಗಳು ರಾಜಕೀಯ ವಿಷಯೋದ್ದೇಶವುಳ್ಳವುಗಳು. ೩ ಸಭೆಗಳು ಸಂಘಸಂಸ್ಕರಣೋದ್ದೇಶವುಳ್ಳವುಗಳು. ೨ ಸಭೆಗಳು ಪವಿತ್ರನೋದ್ಧಾರ ವಿಷಯಕಗಳು. ೪ ಸಭೆಗಳು ಪ್ರಜೆಗಳಲ್ಲಿರುವ ದುಸ್ಥಿತಿಗಳ ನಿರೋಧಕ್ಕಾಗಿ ಕೂಡತಕ್ಕವುಗಳು. ಉಳಿಗುವೆಲ್ಲಾ ಒಂದೊಂದು ಜನವರ್ಗಗಳ ಅಭ್ಯುನ್ನತಿಗಾಗಿ ಕೂಡತಕ್ಕವುಗಳು. ಇವುಗಳಲ್ಲಿ ಮುಖ್ಯವಾದ ಸಭೆಗಳಿಗೆಲ್ಲಾ ಶ್ರೀಮತಿ ಅನಿಬೆಸೆಂಟ್, ತಿಲಕ್, ಗಂಧಿ, ಜಿನ್ನಾ, ಮಾಳವ್ಯ ಮೊದಲಾದ ಮುಖಂಡರುಗಳು ಹೋಗಿ ಉಪನ್ಯಸಿಸಿ ಬಂದಿರುವರು. ಇವೆಲ್ಲ ಸಭೆಗಳಿಗೂ ರಾಷ್ಟ್ರೀಯ ಮಹಾಸಭೆಯು ನಾಯಕಮಣಿಯಂತಿದ್ದಿತೆಂಬುದನ್ನು ಹೇಳಬೇಕಾಗಿಲ್ಲ. ಈಗ ಈ ಮಹಾಸಭೆಗೆ ೩೨ ವರ್ಷ ತುಂಬಿದ ಸೊಕ್ಕು ಜವ್ವನವು. ಆ ಅವಸ್ಥೆಗೆ ತಕ್ಕಂತೆಯೇ ಅದರ ರೂಪ-ಶಕ್ತಿ-ಕಾರ್ಯದಕ್ಷತೆ ಮೊದಲಾದುವುಗಳಲ್ಲೆಲ್ಲಾ ವಿಲಕ್ಷಣತೆಯು ಈ ಸಲದ ಸಭೆಯಲ್ಲಿ ವ್ಯಕ್ತವಾದುವು. ಈ ಸಭೆಗೆ ಬಂದಿದ್ದ ಪ್ರತಿನಿಧಿಗಳ ಸಂಖ್ಯೆಯು ೪೭೯೦ ಆಗಿದ್ದುದೂ, ಒಟ್ಟು ಸಭಾಸದರ ಸಂಖ್ಯೆಯು ೯ ಸಾವಿರಕ್ಕೆ ಮೀರಿದ್ದುದೂ ಸಹ ಅಭೂತಪೂರ್ವಗಳಾದ ಸಂಗತಿಗಳು. ಮತ್ತೂ ಸಭೆಯಲ್ಲಿ ವ್ಯಕ್ತವಾದ ನಿರರ್ಗಳೋತ್ಸಾಹವು ದೇಶೀಯ ಮಹಾಸಭಾ ಚರಿತ್ರಕ್ಕೆಲ್ಲಾ ಭೂಷಣಪ್ರಾಯವಾಗಿದ್ದಿತು. ಸ್ವಾಗತಸಂಘಾಧ್ಯಕ್ಷರಾದ ರಾಯಿ ವೈಕುಂಠನಾಥಸೇನರೂ, ಮಹಾಸಭಾಧ್ಯಕ್ಷರಾದ ಶ್ರೀಮತಿ ಅನಿಬೆಸೆಂಟಮ್ಮನವರೂ ಸಹ ಮಾಡಿದ ದೀರ್ಘ ಭಾಷಣಗಳೂ, ಸಭೆಯಲ್ಲಿ ಆದ ಕೆಲ ಮುಖ್ಯ ನಿರ್ಧಾರಗಳೂ ಕೂಡ ಮಹಾಸಭೆಯ ನೂತನ ದೃಕ್ಪಥವನ್ನೂ, ಕಾರ್ಯಕ್ರಮದ ವಿಶೇಷ ವೈಖರಿಯನ್ನೂ ವ್ಯಕ್ತಗೊಳಿಸಿರುವುವು. ಹಿಂದೆ ಮಾಡಿದ ವಿಷಯಗಳಮೇಲೆಯೇ ಉಪನ್ಯಾಸಗಳನ್ನೂ ನಿರ್ಧಾರಗಳನ್ನೂ ಮಾಡುವುದರಲ್ಲೇ ಕಾರ್ಯ ಸಂಪೂರ್ತಿಗೊಳಿಸದೆ, ಸ್ವರಾಜ್ಯಪ್ರಾಪ್ತಿವಿಷಯಕವಾಗಿಯೂ, ಮಹಮ್ಮದಾಲಿ ಸೋದರರ ಬಂಧವಿಮೋಚನ ವಿಷಯವಾಗಿಯೂ, ದೇಶರಕ್ಷಕ ಶಾಸನ ಪತ್ರಿಕಾ ಶಾಸನಗಳ ಉಪಸಹ್ಯಾರಾವಶ್ಯಕತೆಯ ವಿಷಯವಾಗಿಯೂ, ಮಹಾ ಉತ್ಸಾಹ ಪರಿಪ್ಲುತವಾದ ಭಾಷಣಗಳು, ರಾಷ್ಟ್ರೀಯ ಸಭಾಪ್ರಮುಖರಾದ ಅ|| ಸುರೇಂದ್ರನಾಥ ಬಾನರ್ಜಿ, ತಿಲಕ, ಜಿನ್ನಾ, ವಿಪಿನಚಂದ್ರಪಾಲ್, ಗಂಧಿ ಮೊದಲಾದವರುಗಳಿಂದ ಮಾಡಲ್ಪಟ್ಟು ತದ್ವಿಷಯಕ ನಿರ್ಧಾರಗಳೂ ಆದುವು. ಕೂಡಲೇ ಸಂಪೂರ್ಣ ಸ್ವರಾಜ್ಯವು ಭರತಖಂಡಕ್ಕೆ ಕೊಡಲ್ಪಡಬೇಕೆಂಬುದಾಗಿ ನಿರ್ಧಾರವನ್ನು ಮಾಡಿಸಬೇಕೆಂಬುದು ಬಂಗಾಳಾದ ಕೆಲ ಪ್ರಮುಖರ ಉದ್ದೇಶವಾಗಿದ್ದರೂ, ಸಬ್ ಜಕ್ಟ್ ಕಮಿಟಿಯಲ್ಲೂ ಮಹಾಸಭೆಯಲ್ಲೂ ಆದ ವಿಪುಲವಾದ ಚರ್ಚೆಯಮೇಲೆ ಕಡೆಗೆ, ನಿರ್ಣೀತವಾದ ಒಂದು ಕಾಲದೊಳಗಾಗಿ ಸಂಪೂರ್ಣ ಸ್ವರಾಜ್ಯವು ಭರತಖಂಡಕ್ಕೆ ಕೊಡಲ್ಪಡುವುದೆಂಬುದಾಗಿ ಪಾರ್ಲಿಮೆಂಟಿನವರು ಒಂದು ಶಾಸನವನ್ನು ಮಾಡಬೇಕೆಂದು ಪ್ರಾರ್ಥಿಸಬೇಕೆಂಬುದಾಗಿ ನಿರ್ಧಾರವಾಯಿತು.

ನವೀನ ರಾಜಕೀಯಸುಧಾರಣೆಯಲ್ಲಿ ಪ್ರತ್ಯೇಕಸಂಘ ಪ್ರಾತಿನಿಧ್ಯಕ್ಕೆ ಅನುವುಗೊಡಬೇಕೆಂಬುದಾಗಿ ಸದ್ಯದ ಆಂದೋಳನಗಳಲ್ಲಿ ಪ್ರಮುಖವಾಗಿರುವ ವಿಷಯಕ್ಕೆ ಈ ರಾಷ್ಟ್ರೀಯ ಮಹಾಸಭೆಯಲ್ಲಿ ಎಡೆಯಿಲ್ಲದೆಯೇಹೋಯಿತು. ದೇಶದ ಬಹು ಸಂಖ್ಯಾಕ ಪ್ರಜೆಗಳ ಅಭಿಮತವೇ ಈ ಮಹಾಸಭೆಯಲ್ಲಿ ವ್ಯಕ್ತವಾಗದೆಹೋದಬಳಿಕ ಏಕಪಕ್ಷ ಸೂತ್ರಾವಲಂಬಿಯಾದ ಈ ಸಭೆಗೆ ರಾಷ್ಟ್ರೀಯ ಮಹಾಸಭೆಯೆಂಬ ಹೆಸರು ಅನ್ವರ್ಥವಾಗುವುದು ಹೇಗೋ ತಿಳಿಯದು. ಈ ರಾಷ್ಟ್ರೀಯ ಸಭಾಪ್ರಮುಖರು ಮಹಮ್ಮದೀಯರ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಒಪ್ಪಿ ಅವರಲ್ಲಿ ತೋರಿಸಿದಷ್ಟು ಗೌರವವನ್ನೂ ತಮ್ಮ ಸಹೋದರ ಹಿಂದೂ ಜನವರ್ಗದ ಕೋಟ್ಯಂತರ ಜನರ ಕೋರಿಕೆಗೆ ತೋರಿಸದೆ ಹೋಗಿರುವುದನ್ನು ನೋಡಿದರೆ, ಮುಂದಾದ ಜನವರ್ಗದವರ ಕಾರ್ಯಭಾರದಲ್ಲಿ ಹಿಂದಾದ ಜನವರ್ಗದವರು ಸಂಶಯಪಡುವುದು ಅನುಚಿತವೇನೂ ಅಲ್ಲವೆಂದು ಹೇಳಬೇಕಾಗುತ್ತದೆ.

ಮೈಸೂರು ಸ್ಯಾನಿಟರಿ ಇನ್‌ಸ್ಪೆಕ್ಟರುಗಳ ವೇತನಾಭಿವೃದ್ಧಿ.

ಸ್ಯಾನಿಟರಿ ಕಮಿಷನರು ಈ ವಿಷಯವಾಗಿ ಬರೆದಿರುವ ಈ ಕೆಳಗೆ ಕಂಡ ಏರ್ಪಾಟುಗಳನ್ನು ನಮ್ಮ ಗೌರ್ನಮೆಂಟಿನವರು ಅನುಮೋದಿಸಿರುತ್ತಾರೆ. ಮತ್ತೂ ಈ ಏರ್ಪಾಟಿನ ವಿಷಯದಲ್ಲಿ ಸಂಸ್ಥಾನದ ಆಯಾ ಮ್ಯುನ್ಸಿಪಾಲಿಟಿಗಳು ತಮ್ಮ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಯಸಬೇಕೆಂದೂ ಕೋರಿರುತ್ತಾರೆ. ಆ ಏರ್ಪಾಟಿನ ಕ್ರಮವೇನೆಂದರೆ:—ಬೆಂಗಳೂರು ಮೈಸೂರು ಸಿಟಿ ಮ್ಯುನ್ಸಿಪಾಲಿಟಿಗಳಲ್ಲಿ ಒಬ್ಬೊಬ್ಬ ಮುಖ್ಯ ಸ್ಯಾನಿಟರಿ ಇನ್‌ಸ್ಪೆಕ್ಟರೂ, ಕೋಲಾರದಲ್ಲಿ ಒಂದು ಸ್ಯಾನಿಟರಿ ಬೋರ್ಡೂ ಸಹ ಇರಬೇಕು. ಈ ಮೂರು ಕಡೆಯ ಮ್ಯುನ್ಸಿಪಾಲಿಟಿಗಳವರೂ ಬೋರ್ಡಿನವರೂ ಸಹ ತಮ್ಮ ತಮ್ಮ ಸ್ಥಲಕ್ಕೆ ತಕ್ಕಷ್ಟು ಮಂದಿ ಸ್ಯಾ|| ಇನ್‌ಸ್ಪೆಕ್ಟರುಗಳನ್ನು ನಿಯಮಿಸಿಕೊಳ್ಳಬಹುದು. ವರ್ಷ ೧ ಕ್ಕೆ ೫ ಸಾವಿರ ರೂಪಾಯಿಗಳಾಗಲೀ ಅದಕ್ಕೆ ಮೇಲ್ಪಟ್ಟಾಗಲೀ ವರಮಾನವುಳ್ಳ ಪ್ರತಿಯೊಂದು ತಾಲ್ಲೂಕು ಬೋರ್ಡಿನವರೂ, ಮ್ಯುನ್ಸಿಪಾಲಿಟಿಯವರೂ ಸಹ ಒಬ್ಬೊಬ್ಬ ಸ್ಯಾ|| ಇನ್‌ಸ್ಪೆಕ್ಟರನ್ನು ತಪ್ಪದೆ ನಿಯಮಿಸಿಕೊಳ್ಳಬೇಕು. ಅದಕ್ಕೆ ಕಡಿಮೆ ವರಮಾನವುಳ್ಳ ಮ್ಯುನ್ಸಿಪಾಲಿಟಿಯವರು ಇಷ್ಟಪಟ್ಟರೆ ಸ್ಯಾ|| ಇನ್‌ಸ್ಪೆಕ್ಟರನ್ನು ನಿಯಮಿಸಿಕೊಳ್ಳಬಹುದು ಬಿಟ್ಟರೆ ಬಿಡಬಹುದು. ಮುಖ್ಯ ಸ್ಯಾ|| ಇನ್‌ಸ್ಪೆಕ್ಟರ ಮತ್ತೂ ಅವರ ಕೈಕೆಳಗಣ ಇನ್‌ಸ್ಪೆಕ್ಟರುಗಳ ಸಂಬಳವು ಇಷ್ಟೆಂಬುದು ಮೊದಲೇ ನಿರ್ಧಾರಿತವಾಗಿರಬೇಕು. ಅವರನ್ನು ಉದ್ಯೋಗಕ್ಕೆ ಇಟ್ಟುಕೊಂಡವರೇ ಅವರುಗಳ ಸಂಬಳವನ್ನು ಕೊಡಬೇಕು. ಮುಖ್ಯ ಸ್ಯಾ|| ಇನ್‌ಸ್ಪೆಕ್ಟರಿಗೆ ೮೦ ರಿಂದ ೧೦೦ ರವರೆಗೆ ಸಂಬಳವೂ, ಕುದುರೆಯ ಬತ್ಯಕ್ಕಾಗಿ ೧೫ ರೂ.ಗಳೂ ಕೊಡಲ್ಪಡಬೇಕು. ಮೊದಲ ೫ ವರ್ಷಗಳವರೆಗೆ ಸ್ಯಾ|| ಇನ್‌ಸ್ಪೆಕ್ಟರ ಸಂಬಳವು ೨೫ ರಿಂದ ವರ್ಷಕ್ಕೆ ಒಂದೊಂದರಂತೆ ಹೆಚ್ಚಿ ೩೦ ರೂ. ಗಳವರೆಗೂ, ಬಳಿಕ ೬ ನೇ ವರ್ಷದಿಂದ ಮುಂದೆ ಪ್ರತಿವರ್ಷಕ್ಕೂ ಎರಡೆರಡು ರೂ. ನಂತೆ ೪೦ ರೂ. ಗಳವರೆಗೂ ಹೆಚ್ಚಿಸಲ್ಪಡುತ್ತ ಹೋಗಬೇಕು. ೧೫ ವರ್ಷಗಳಿಗೆ ಕಡಿಮೆಯಿಲ್ಲದಷ್ಟು ಕಾಲ ಸ್ಯಾ|| ಇನ್‌ಸ್ಪೆಕ್ಟರಾಗಿ ಕೆಲಸಮಾಡಿದವರು ಮುಖ್ಯ ಸ್ಯಾ|| ಇನ್‌ಸ್ಪೆಕ್ಟರಾಗಿ ಆರಿಸಿಕೊಳ್ಳಲ್ಪಡಬೇಕು. ಈ ವಿಷಯವನ್ನು ನಮ್ಮ ಸರ್ಕಾರದವರು ಪ್ರತಿ ಮ್ಯುನ್ಸಿಪಾಲಿಟಿಗೂ ತಿಳಿಯಪಡಿಸಿದ್ದಾರೆ. ಆರೋಗ್ಯಸೂತ್ರಾನುಸಾರವಾಗಿ ಪ್ರತಿಯೊಂದು ಪ್ರಜಾವಾಸಸ್ಥಲವೂ ಶುಚಿಯಾಗಿರಬೇಕಾದುದು ಅತ್ಯವಶ್ಯಕ. ಇದಕ್ಕೆ ಮುಖ್ಯವಾಗಿ ಪ್ರಜೆಗಳೆಲ್ಲರೂ ಸ್ವಹಿತದ ದೃಷ್ಟಿಯ ಮೇಲಾದರೂ ಗಮನಕೊಡುವುದು ಅತ್ಯವಶ್ಯಕ. ಸ್ಯಾನಿಟರಿ ಇನ್‌ಸ್ಪೆಕ್ಟರುಗಳ ಮೂಲಕ ಆಯಾ ಸ್ಥಲಗಳ ಆರೋಗ್ಯರಕ್ಷಣೆಗೆ ವಿಶೇಷ ಸಹಾಯವಾಗುವುದೆಂಬುದೇ ಸ್ಯಾ|| ಕಮಿಷನರ ಮತ್ತೂ ಗೌರ್ನಮೆಂಟಿನವರ ಉದ್ದೇಶವಾಗಿರುತ್ತದೆ. ಅದುಕಾರಣ ಈ ಏರ್ಪಾಟಿಗೆ ಯಾವ ಮ್ಯುನ್ಸಿಪಾಲಿಟಿಯವರೂ ವಿಮುಖತೆಯನ್ನು ತೋರಿಸಲಾರರೆಂದು ನಂಬುತ್ತೇವೆ.

ಶ್ರೀ ಜಗದ್ಗುರು ಮಹಾಸ್ವಾಮಿಗಳ ಉಚಿತೌದಾರ್ಯ.

ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಚಿತ್ರದುರ್ಗದ ಜಗದ್ಗುರು ಪೀಠಾಧಿಕಾರವನ್ನು ವಹಿಸಿ ೧೪ ವರ್ಷಗಳು ತುಂಬಿದುವು. ಈ ಕಾಲದೊಳಗೆ ಅವರು ಸಮಾಜದ ಉದ್ಧಾರಕ್ಕಾಗಿ ಮಾಡಿರುವ ಪ್ರಯತ್ನಗಳೂ ಧನವ್ಯಯವೂ ವಿಪುಲವಾಗಿರುವುವು. ಅವುಗಳಲ್ಲಿ ತಿಳಿದ ಮಟ್ಟಿಗೆ ಕೆಲವನ್ನು ಇಲ್ಲಿ ಹೇಳುತ್ತೇವೆ:—ಧಾರವಾಡದಲ್ಲಿ ಕಟ್ಟಲ್ಪಟ್ಟಿರುವ ವಿದ್ಯಾರ್ಥಿ ನಿಲಯಕ್ಕಾಗಿ ೯ ಸಾವಿರ ರೂ. ಗಳನ್ನೂ, ಅಲ್ಲಿಯ ಕರ್ನಾಟಕ ಕಲಾಶಾಲೆಯ ಫಂಡಿಗಾಗಿ ೫ ಸಾವಿರ ರೂ.ಗಳನ್ನೂ ದಯಪಾಲಿಸಿರುತ್ತಾರೆ. ಕೊಲ್ಲಾಪುರ ಸಂಸ್ಥಾನದಲ್ಲಿ ನೂತನವಾಗಿ ಮಠಸ್ಥಾಪನೆಮಾಡಿ, ವೀರಶೈವ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸುವುದಕ್ಕೆ ೧ ಲಕ್ಷದ ೧೦ ಸಾವಿರ ರೂ. ಗಳನ್ನೂ, ಸತಾರಾ ಜಿಲ್ಲಾ ಔಂಧ ಸಂಸ್ಥಾನದಲ್ಲಿ ೨೫ ಮಂದಿ ವಿದ್ಯಾರ್ಥಿಗಳಿಗೆ ಅನುಕೂಲವಾದ ವಿದ್ಯಾರ್ಥಿ ನಿಲಯದ ಸ್ಥಾಪನೆಗೆ ೪೦ ಸಾವಿರ ರೂ. ಗಳನ್ನೂ, ಸತಾರಾದಲ್ಲಿ ಸ್ಥಾಪಿಸಿದ ವಿದ್ಯಾರ್ಥಿ ನಿಲಯಕ್ಕೆ ೮ ಸಾವಿರ ರೂ. ಗಳನ್ನೂ, ಸಾಂಗ್ಲಿಯಲ್ಲಿ ಸ್ಥಾಪಿಸಿದ ವಿದ್ಯಾರ್ಥಿ ನಿಲಯಕ್ಕೆ ೬ ಸಾವಿರ ರೂ. ಗಳನ್ನೂ, ಕಾರವಾರ ಜಿಲ್ಲಾ ಸಿರಸಿಯಲ್ಲಿ ಸ್ಥಾಪಿತವಾದ ವಿದ್ಯಾರ್ಥಿ ನಿಲಯಕ್ಕೆ ೩೦ ಸಾವಿರ ರೂ. ಗಳನ್ನೂ, ಶ್ರೀ ಉಳವೆ ಕ್ಷೇತ್ರದಲ್ಲಿ ಮಠದ ಚಂದ್ರಶಾಲಾ ನಿರ್ಮಾಣಕ್ಕಾಗಿ ೧೦ ಸಾವಿರ ರೂ. ಗಳನ್ನೂ, ತಿಬಟೂರಿನಲ್ಲಿ ಸ್ಥಾಪಿತವಾಗಿರುವ ವೀರಶೈವಾನಂದಾಶ್ರಮಕ್ಕೂ ವಿದ್ಯಾರ್ಥಿಗಳ ಅಶನವಸನಾರ್ಥವಾದ ಫಂಡಿಗೂ ಸಹ ೧೬ ಸಾವಿರ ರೂ. ಗಳನ್ನೂ, ಚಿತ್ರದುರ್ಗದಲ್ಲಿ ಸ್ಥಾಪಿತವಾಗಿರುವ ವಿದ್ಯಾರ್ಥಿ ನಿಲಯದ ನಿರ್ಮಾಣಕ್ಕೆ ೩೦ ಸಾವಿರ ರೂ. ಗಳನ್ನೂ, ಬೆಂಗಳೂರಿನಲ್ಲಿ ಕಟ್ಟಲ್ಪಡಲಿಕ್ಕಿರುವ ವೀರಶೈವ ವಿದ್ಯಾರ್ಥಿ ನಿಲಯಕ್ಕಾಗಿ ೩೦ ಸಾವಿರ ರೂ. ಗಳನ್ನೂ ಅಪ್ಪಣೆಮಾಡಿ, ಅದರೊಳಗೆ ಈಗಾಗಲೇ ೫ ಸಾವಿರ ರೂ. ಗಳನ್ನು ದಯಪಾಲಿಸಿರುತ್ತಾರೆ. ಚಿತ್ರದುರ್ಗದಲ್ಲಿ ಒಂದು ದೇಶಭಾಷಾ ಬಾಲಪಾಠಶಾಲೆಯನ್ನು ಕಟ್ಟಿಸಿಕೊಟ್ಟು ಅಲ್ಲಿ ಓದುವ ಅನಾಥ ವಿದ್ಯಾರ್ಥಿಗಳಿಗೆ ಅಶನವಸನಾದಿಗಳಿಗೂ ಅನುಕೂಲಪಡಿಸಿಕೊಟ್ಟಿರುತ್ತಾರೆ. ಚಿತ್ರದುರ್ಗದಲ್ಲಿರುವ ಶ್ರೀ ಸಂಸ್ಥಾನ ಬೃಹನ್ಮಠದ ಮಹಾದ್ವಾರ ಮೊದಲಾದುವುಗಳ ಜೀರ್ಣೋದ್ಧಾರಕ್ಕಾಗಿ ೭೦-೮೦ ಸಾವಿರ ರೂ.ಗಳನ್ನೂ ವಿನಿಯೋಗಿಸಿರುತ್ತಾರೆ. ಇದಲ್ಲದೆ ಬೇರೆ ಬೇರೆ ಸ್ಥಲಗಳಲ್ಲಿ ವಿದ್ಯಾವ್ಯಾಸಂಗ ಮಾಡುತ್ತಲಿರುವ ಅನೇಕ ವಿದ್ಯಾರ್ಥಿಗಳಿಗೆ ವರ್ಷವೊಂದಕ್ಕೆ ೪೦೦೦ ರೂ. ಗಳಿಗೆ ಕಡಿಮೆಯಿಲ್ಲದಷ್ಟು ವಿದ್ಯಾರ್ಥಿ ವೇತನವನ್ನು ಅನುಗ್ರಹಿಸುತ್ತಿದ್ದಾರೆ. [illegible] ಇನ್ನೂ ಎಷ್ಟೋ ಸಮಾಜೋದ್ಧಾರಕ ಕೃತ್ಯಗಳೂ ವಿತರಣಗಳೂ [illegible] ನಡೆಯುತ್ತಲೂ ಇರುತ್ತವೆ. ಇವುಗಳಿಂದೆಲ್ಲಾ ನಮ್ಮ ಸಮಾಜಕ್ಕೆ ಉಂಟಾಗುತ್ತಿರುವ ಫಲವು ಸಾಮಾನ್ಯತರವಾಗಿಲ್ಲ. ಇವರು ಕೇವಲ ಅಂತರ್ಮುಖಿಗಳಾದ ಪಟ್ಟಸ್ಥ ಲಬ್ಧಪ್ರತಿಷ್ಠವರೇಣ್ಯರು ಮಾತ್ರವೇ ಅಲ್ಲ. ವೀರಶೈವ ಜಗತ್ಕುಟುಂಬಭರಣಮಾಡಲು ಸಕಲ ವಿಧವಾದ ಪ್ರಾಜ್ಞತೆಯನ್ನೂ ಪಡೆದುಕೊಂಡ ಮಹಾರಾಜರ್ಷಿಗಳಾಗಿಯೂ ಇರುತ್ತಾರೆ. ನ್ಯಾಯ-ವ್ಯಾಕರಣ-ಮೀಮಾಂಸಾ ಶಾಸ್ತ್ರಗಳಲ್ಲಿ ಅಸಾಧಾರಣವಾದ ಪಾಂಡಿತ್ಯವನ್ನು ಪಡೆದುಕೊಂಡಿರುತ್ತಾರೆ. ಲೋಕರಕ್ಷಣ ಶಿಕ್ಷಣರೂಪಧರ್ಮವು ತಮ್ಮ ಕರ್ತವ್ಯವೆಂದು ಇವರು ಆಚರಿಸುತ್ತಿರುವರೇ ಹೊರತು ಬಹಿರಾಡಂಬರಕ್ಕೂ ಲೋಕದ ಮೆಚ್ಚಿಗೆಗೂ ಅದನ್ನವರು ಮಾಡುತ್ತಿರುವುದಿಲ್ಲ. ಆದರೂ ನಮ್ಮ ಗೌರ್ನಮೆಂಟಿನವರು ಆಗಾಗ್ಗೆ ಪ್ರಕಟಿಸುವ ಸಂಪದಭ್ಯುದಯ ಪ್ರೋತ್ಸಾಹಕ ಪ್ರಜೆಗಳ ಪಟ್ಟಿಯೊಳಗೆ ಇವರ ಹೆಸರನ್ನೂ ಪ್ರಕಟಿಸಿಕೊಂಡು ತೋರಿಸಿರುವ ಗೌರವವು ಆ ಜಗದ್ಗುರುಗಳ ಮನಸ್ಸಿಗೇನೂ ಹತ್ತದಿದ್ದರೂ ಅವರ ಭಕ್ತಕೋಟಿಯ ಮನಸ್ಸಿಗೆ ನೋವನ್ನು ತರುತ್ತಿದೆ. ಏಕೆಂದರೆ ವಿದ್ಯಾಪ್ರಸಾರ ಪವಿತ್ರನೋದ್ಧಾರ ಕಾರ್ಯಗಳಿಗಾಗಿ ಸಾಮಾನ್ಯವಾದ ಸಾವಿರಾರು ರೂ. ಗಳನ್ನು ವ್ಯಯಮಾಡಿರುವವರ ಹೆಸರುಗಳಿಗೆಲ್ಲಕ್ಕೂ ಕಡೆಯಲ್ಲಿ ಚಿತ್ರದುರ್ಗದ ಜಗದ್ಗುರು ಶ್ರೀಗಳವರ ಹೆಸರನ್ನು ಸಾಮಾನ್ಯವಾಗಿ ಕಾಣಿಸಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಈ ತೆರದ ಪ್ರಯತ್ನದಲ್ಲಿ ಸರ್ಕಾರದ ಉದ್ದೇಶವು ಘನತರವಾಗಿರುವುದೆಂಬುದನ್ನು ನಾವು ಬಲ್ಲೆವು. ಆದರೆ ಪಟ್ಟಿಯನ್ನು ರಚಿಸುವ ಉದ್ಯೋಗಿಗಳು ಮನಃಪೂರ್ವಕವಾಗಿಯೋ ಔದಾಸೀನ್ಯದಿಂದಲೋ ಆ ಉದ್ದೇಶಕ್ಕೆ ಲೋಪ ತರುವಂಥ ಕೆಲಸವನ್ನು ಒಂದೊಂದುಸಲ ಹೇಗೆ ಮಾಡುತ್ತಲಿರುವರೆಂಬುದಕ್ಕೆ ಇದನ್ನೊಂದು ಉದಾಹರಣವಾಗಿ ಹೇಳಬಹುದು. ಆ ವಿಷಯವಂತಿರಲಿ. ಈಗಣ ಶ್ರೀ ಜಯದೇವ ಮಹಾಸ್ವಾಮಿಗಳವರು ಅಧಿಕಾರಕ್ಕೆ ತರಲ್ಪಡುವಾಗ್ಗೆ ವಿದ್ಯಾವಂತರುಗಳೇ ಮುಖ್ಯ ಗುರುಪೀಠಗಳಿಗೆ ಬರಬೇಕು ಎಂಬದಾಗಿ ಕುತೂಹಲಪಟ್ಟು, ಶ್ರೀ|| ರಾ|| ಬ|| ವಾರದ ಮಲ್ಲಪ್ಪನವರೇ ಮೊದಲಾದ ಮಹಾಜನರು ಯಾವ ಉದ್ದೇಶದಿಂದಲೂ ಫಲನಿರೀಕ್ಷಣೆಯಿಂದಲೂ ಹಿಡಿದ ಪಟ್ಟನ್ನು ಸಾಧಿಸಿದರೋ ಅಂಥ ನಿರೀಕ್ಷಣೆಯು ಈಗ ಎಷ್ಟೋಮಟ್ಟಿಗೆ ಸಫಲವಾಗುತ್ತ ಬರುತ್ತಿರುವುದನ್ನು ಸಮಾಜದವರೆಲ್ಲರೂ ಕಂಡು ಸಂತೋಷಿಸುತ್ತಿರುವರು. ನಮ್ಮ ಮುಖ್ಯಾಚಾರ್ಯ ಪೀಠಗಳೆಲ್ಲವೂ ಅವುಗಳ ಶಾಖಾಮಠಗಳೂ ಸಹ ವಿದ್ಯಾಫಲಾನುಭವವುಳ್ಳ ವಿದ್ವತ್ಪಕ್ಷಪಾತಿ ವಿಬುಧಪುಂಗವರಿಂದಲೇ ಮಂಡಿತವಾಗುವಂತಾದರೆ ಸಮಾಜಕ್ಕೆ ಎಷ್ಟು ಹಿತವಾಗುವುದೆಂಬುದನ್ನು ಸಕಲ ಮಠಾಧಿಪತಿಗಳೂ ಸಮಾಜಬಾಂಧವರೂ ಸಹ ಪರ್ಯಾಲೋಚಿಸಿ, ತಕ್ಕ ಪ್ರಯತ್ನವನ್ನು ಮಾಡುವವರಾಗಲೆಂದು ಕೋರುವೆವು.

ಯುದ್ಧವಾರ್ತೆಯು.

ಈಗ ಚಳಿಗಾಲವಾಗಿರುವುದರಿಂದ ಯುದ್ಧರಂಗದಿಂದ ಮಹತ್ತರವಾದ ಜಯವಾರ್ತೆಗಳೇನೂ ಬರುತ್ತಿರುವುದಿಲ್ಲ. ಆದರೂ ಸಾಮಾನ್ಯ ಯುದ್ಧಗಳೂ ವೈಮಾನಿಕರ ದಾಳಿಗಳೂ ಪ್ರತಿದಿನವೂ ನಡೆಯುತ್ತಿವೆ. ಪಶ್ಚಿಮರಂಗವೆಲ್ಲಾ ಯಥಾಸ್ಥಿತಿಯಲ್ಲಿದೆ. ಇಟಲಿ ರಂಗದಲ್ಲಿ ಇಂಗ್ಲೀಷ್ ಫ್ರೆಂಚ್ ಸೇನಾ ಸಹಾಯದಿಂದ ಇಟಲಿಯವರು ಶತ್ರುಗಳ ಪುರೋಗಮನವನ್ನು ಚೆನ್ನಾಗಿ ತಡೆದುಬಿಟ್ಟಿದ್ದಾರೆ. ಒಂದೆರಡು ಕಡೆಯಲ್ಲಿ ಶತ್ರುಗಳನ್ನು ಹಿಂದಕ್ಕೂ ಅಟ್ಟಿ ಕೆಲ ಸೈನಿಕರನ್ನು ಸೆರೆಹಿಡಿದಿದ್ದಾರೆ. ಇಟಲಿಯವರ ಸೈನ್ಯವು ಈಗ ೪೩ ಲಕ್ಷವಿದೆ. ಪಾಲಸ್ತೈನ್ ರಂಗದಲ್ಲಿ ತುರ್ಕಿಯವರು ಜರ್ಮನರ ಸಹಾಯವನ್ನು ತೆಗೆದುಕೊಂಡು ಜರೂಸಲೇಮನ್ನು ಮರಳಿ ವಶಪಡಿಸಿಕೊಳ್ಳಬೇಕೆಂದು ೬-೭ ಸಲ ಮಹಾಯುದ್ಧವನ್ನು ಮಾಡಿ ಅಷ್ಟು ಸಲವೂ ಸೋತು ತಮ್ಮಲ್ಲಿ ೫ ಸಹಸ್ರ ಮಂದಿಗಳ ಪ್ರಾಣವನ್ನು ರಣರಂಗಕ್ಕೆ ಬಲಿಯಿತ್ತು ಹಿಮ್ಮೆಟ್ಟಿ ಓಡಿಹೋದರು. ಇಂಗ್ಲೀಷರ ಕಡೆಯ ಸೈನ್ಯವು ಶತ್ರುಗಳಕಡೆಯ ಸಾವಿರಾರು ಮಂದಿಗಳನ್ನು ಸೆರೆಹಿಡಿದು, ಜರೂಸಲೇಮಿನಿಂದ ಉತ್ತರಕ್ಕೂ ೧-೨ ಮೈಲಿಗಳ ದೂರ ಹೋಗಿ ಆ ಪ್ರದೇಶಗಳನ್ನು ವಶಪಡಿಸಿಕೊಂಡರು. ಸೆರೆಸಿಕ್ಕಿದ ಜನರಲ್ಲಿ ಕೆಲ ಜರ್ಮನರೂ ಇರುತ್ತಾರೆ. ಈಗ ತುರ್ಕಿಯವರು ಯೂರೋಪು ರಂಗದಲ್ಲಿರುವ ತಮ್ಮ ಸೈನ್ಯಗಳನ್ನೆಲ್ಲಾ ಪಾಲಸ್ತೈನ್, ಮೆಸಪಟೋಮಿಯಾ ರಂಗಗಳಿಗೆ ಕಳುಹಿಸಿಕೊಡಬೇಕೆಂಬ ಉದ್ದೇಶದಿಂದ ಹಿಂದಕ್ಕೆ ಕಳುಹಿಸಿಕೊಡಬೇಕೆಂದು ಜರ್ಮನಿ ಆಸ್ಟ್ರಿಯಾ ಸರ್ಕಾರಗಳಿಗೆ ಬರೆದಿರುತ್ತಾರೆಂದು ಪ್ರಕಟವಾಗಿದೆ.

ಯುದ್ಧಸಂಬಂಧವಾಗಿ ಪ್ರಪಂಚದ ಗಮನವನ್ನೆಲ್ಲಾ ಈಗ ಆಕರ್ಷಿಸಿರುವುದು ರಷ್ಯಾ-ಜರ್ಮನ್ ಸಂಧಿವಿಷಯವಾಗಿರುತ್ತದೆ. ಆದರೆ ಈ ಸಂಧಿಯು ಸುಸೂತ್ರವಾಗಿ ಸಾಗಿಹೋಗುವುದೆಂಬ ವಿಷಯದಲ್ಲಿ ಸಂಶಯವು ಕಂಡುಬರುತ್ತಿದೆ. ಜರ್ಮನರಿಗೆ ರಷ್ಯನರೊಡನೆ ಸಂಧಿಮಾಡಿಕೊಳ್ಳಬೇಕೆಂಬುದರಲ್ಲಿ ಮನಃಪೂರ್ವಕವಾದ ಇಚ್ಛೆಯಿಲ್ಲ. ಸಂಧಿಯ ಮಾತಿನ ನೆವದಿಂದ ಕಾಲಯಾಪನೆ ಮಾಡುತ್ತ ಈ ಸಂದಿನಲ್ಲಿ ಪೂರ್ವ ದಿಕ್ಕಿನ ತಮ್ಮ ಸೈನ್ಯವನ್ನು ಇಟಲಿ ರಂಗಕ್ಕೂ ಪಶ್ಚಿಮರಂಗಕ್ಕೂ ಸಾಗಿಸಿಕೊಂಡು ಹೋಗಿ, ಅಲ್ಲಿ ಮಿತ್ರಮಂಡಲಿಯವರನ್ನು ಸೋಲಿಸಿ, ಆಗ ತಾವು ಗೆದ್ದವರಂತೆ ಸಂಧಿನಿಬಂಧನೆಗಳನ್ನು ಹಾಕಿ, ಯುದ್ಧ ಪರಿಸಮಾಪ್ತಿಮಾಡಿಕೊಳ್ಳಬೇಕೆಂಬುದೇ ಅದರ ದುರುದ್ದೇಶವಾಗಿರುತ್ತದೆ. ಹಾಗೆ ಮಾಡದೆಹೋದರೆ ಯಾವಾಗಲಾದರೂ ತಾವು ಪರರಾಜ್ಯಗಳಿಗೆ ನಷ್ಟಪರಿಹಾರವನ್ನು ಕಟ್ಟಿಯೇ ಕೊಡಬೇಕಾಗುವುದೆಂಬುದನ್ನು ಅವರು ಚೆನ್ನಾಗಿ ಬಲ್ಲರು. ಈ ಕಪಟನಾಟಕದಲ್ಲಿ ಸಿಕ್ಕಿ ರಷ್ಯನರು ಈಗ ತೊಳಲುತ್ತಿದ್ದಾರೆ. ಜರ್ಮನರು ಇಷ್ಟರೊಳಗೇ ಇಟಲಿ-ಪಶ್ಚಿಮರಂಗಗಳಲ್ಲಿ ಸ್ವಲ್ಪಮಟ್ಟಿಗೆ ತಮ್ಮ ಉದ್ದೇಶಗಳನ್ನು ಸಾಗಿಸಿಕೊಂಡಿದ್ದಾರೆ. ರಷ್ಯನರ ಈ ಅವಿವೇಕದಿಂದ ಮಿತ್ರಮಂಡಲಿಯವರ ಸಂಕಲ್ಪಗಳೆಲ್ಲಾ ತಾರುಮಾರಾಗುವ ಹೊತ್ತು ಬಂದಿರುವುದು. ಅವರ ಕರ್ತವ್ಯಭಾರವು ಬಹಳ ಹೆಚ್ಚಿಹೋಗಿರುವುದು. ಅವರೆಲ್ಲರೂ ಸೈನ್ಯಬಲವನ್ನು ಬಹಳವಾಗಿ ಹೆಚ್ಚಿಸಿಕೊಳ್ಳಬೇಕಾಗಿ ಬಂದಿರುವುದು. ಯುದ್ಧದ ಪರ್ಯವಸಾನವು ಇನ್ನೂ ೨-೩ ವರ್ಷಗಳಲ್ಲಾದರೂ ಗೋಚರಿಸುವುದೇ ಇಲ್ಲವೋ ಎಂಬ ಯೋಚನೆಯನ್ನು ಜಗತ್ತಿಗೆ ಹುಟ್ಟಿಸಿರುವುದು. ತಾವೆರಚಿದ ಮಂಕುಬೂದಿಗೆ ಮರುಳರಾದ ರಷ್ಯನರು ಒಳಗಾದುದನ್ನು ತಿಳಿದುಕೊಂಡು ಜರ್ಮನರು ತಮ್ಮ ಕಪಟತಂತ್ರಪ್ರಯೋಗವನ್ನು ಬಹಳ ಚೆನ್ನಾಗಿ ಮಾಡಲುಪಕ್ರಮಿಸಿರುವರು. ರಷ್ಯನರ ಗೌರವಕ್ಕೆಲ್ಲಾ ಮಣ್ಣುಕೂಡಿಸುವಂಥ ಸಂಧಿನಿಬಂಧನೆಗಳನ್ನು ಚಾಚಿರುವರು. ಅವರು ಈ ಮಧ್ಯೆ ರಷ್ಯಾದೇಶದ ಸಾಂಘಿಕವಾದಿಗಳು " ಯಾವ ರಾಜ್ಯವೂ ಪರರಾಜ್ಯಗಳ ಆಸೆಗೂ ಸ್ವಾತಂತ್ರ್ಯಭಂಗಕ್ಕೂ ಕೈಹಾಕಬಾರದು. ಧನಿಕರ ಧನವೂ ಭೂಸ್ವಾಮಿಗಳ ಭೂಮಿಯೂ ಕೂಡ ಪ್ರಜೆಗಳ ಉಪಯೋಗಕ್ಕೆ ವಿನಿಯೋಗಿಸಲ್ಪಡಬೇಕು " ಎಂದು ಮೊದಲಾಗಿ ಪ್ರಕಟಿಸಿಕೊಂಡಿರುತ್ತಿರುವುದನ್ನೇ ಪರಿಪೋಷಿಸುವವರಂತೆ ಶತ್ರುಗಳು ನಟಿಸುತ್ತ, ಅವರ ಹಗ್ಗದಿಂದಲೇ ಅವರ ಕೈಗಳನ್ನು ಕಟ್ಟುವ ಚಮತ್ಕಾರವನ್ನು ಮಾಡಿದರು. ಹೇಗೆಂದರೆ—ರಷ್ಯಾದೇಶದಲ್ಲಿ ಇದುವರೆಗೆ ತಾವುಗಳು ಹಿಡಿದುಕೊಂಡಿರುವ ಕೂರ್ಲ್ಯಾಂಡು ಮೊದಲಾದ ಭಾಗಗಳೆಲ್ಲಾ ಅಲ್ಲಿಯ ಪ್ರಜೆಗಳ ಇಷ್ಟಾನುಸಾರವಾಗಿ ಮುಂದೆ ಆಳುವಂತಾಗಬೇಕೆಂಬುದರಲ್ಲಿ ತಾವು ರಷ್ಯಾ ಸಾಂಘಿಕವಾದಿಗಳ ಮಾತಿಗೇ ಕಟ್ಟುಬೀಳುವೆವೆಂಬ ಉದಾರತನವನ್ನು ವ್ಯಕ್ತಪಡಿಸಿದರು. ಅದಕ್ಕೆ ರಷ್ಯಾದ ಬೋಲ್ಷೆವಿಕ್ ಪಂಗಡದವರು ಹಿಗ್ಗಿಹೋದರು. ಅದರೊಳಗಿನ ಗೂಢತತ್ವವೇನಾಗಿದ್ದಿತೆಂದರೆ—ಕೂರ್ಲ್ಯಾಂಡನ್ನು ಈಗ ಜರ್ಮನರೇ ಪರಿಪಾಲಿಸುತ್ತಿರುವರಷ್ಟೆ. ಅಲ್ಲಿಯ ಪಾರ್ಲಿಮೆಂಟಿನಲ್ಲಿ ತಮ್ಮ ಪಕ್ಷದವರೇ ಹೆಚ್ಚಾಗಿರುವುದರಿಂದ, ತಮ್ಮ ಮುಖದಾಕ್ಷಿಣ್ಯಕ್ಕೆ ಬದ್ಧರಾಗಿರುವ ಆ ಜನರಿಂದ " ಜರ್ಮನರೇ ನಮ್ಮನ್ನು ಪರಿಪಾಲಿಸುತ್ತ ಬರಬೇಕು " ಎಂದು ಹೇಳಿಸಿಬಿಟ್ಟರು. ಪೋಲಾಂಡಿನವರಿಂದಲೂ ಹೀಗೆಯೇ ಮಾಡಿಸಿದರು. ರುಮೇನಿಯಾದಿಂದ ತಾವು ವಶಪಡಿಸಿಕೊಂಡಿರುವ ಡೋಬ್ರುಜಾವನ್ನೂ ಕೂಡ ಹೀಗೆಯೇ ಬಲ್ಗೇರಿಯಾಕ್ಕೆ ಸೇರಿಸಿಕೊಡಬೇಕೆಂಬ ಅಂತರುದ್ದೇಶವನ್ನು ತಾವು ಬಾಯ್ಬಿಟ್ಟು ಹೇಳದ ಒಂದು ವಿಚಾರಕಸಂಘವನ್ನೇರ್ಪಡಿಸಿದರು. ಅವರು ಡೋಬ್ರುಜಾವನ್ನು ಬಲ್ಗೇರಿಯಾಕ್ಕೆ ಬಿಟ್ಟುಕೊಡಬೇಕೆಂದು ತೀರ್ಮಾನಿಸಿದರು. ಹೀಗೆ ತಾವು ಇದುವರೆಗೆ ಜಯಿಸಿರುವ ರಾಜ್ಯಗಳನ್ನೆಲ್ಲಾ ಒಂದೊಂದಾಗಿ ಎತ್ತಿಹಾಕುವುದಕ್ಕೆ ಪರ್ಯಾಯದಿಂದ ಅಂತಃಪ್ರಯತ್ನಗಳನ್ನು ಮಾಡಿ, ಮೇಲೆ ರಷ್ಯನರಿಗೆ ಹಿತಕಾರಿಗಳಂತೆ ನಟಿಸುತ್ತ, ಅವರನ್ನು ಮೋಸಗೊಳಿಸುವುದಕ್ಕೆ ತಮ್ಮ ಮಾಯಾವಿದ್ಯೆಯನ್ನೆಲ್ಲಾ ವಿನಿಯೋಗಿಸಿದರು. ತುರ್ಕಿಯ ಪಾಲಸ್ತೈನ್, ಮೆಸಪಟೋಮಿಯಾ, ಈಜಿಪ್ಟ ರಾಜ್ಯಗಳನ್ನೂ, ಆಫ್ರಿಕಾದಲ್ಲಿದ್ದ ಜರ್ಮನಿಯ ಅಧಿನಿವೇಶಗಳನ್ನೂ ಹಾಗೆಯೇ ಮಾಡಿಸಬೇಕೆಂಬುದೇ ಜರ್ಮನಿಯ ಉದ್ದೇಶವು. ಆದರೆ ಬರುಬರುತ್ತ ಈ ಕಪಟತಂತ್ರವೆಲ್ಲಾ ರಷ್ಯಾದ ಬಾಲ್ಷೆವಿಕ್ ಪಕ್ಷದವರಿಗೆ ತಿಳಿಯದೆ ಹೋಗಲಿಲ್ಲ. ಎಂಥ ಅಧಮನಿಗಾದರೂ ಮಾನದಮೇಲಿ ಅಭಿಮಾನವು ಕಿಂಚಿತ್ತಾದರೂ ಇಲ್ಲದೆಹೋಗುವುದುಂಟೆ? ಈಗ ಬಾಲ್ಷೆವಿಕ್ ಪಕ್ಷದವರು ಜರ್ಮನರ ಸಂಧಿವಚನದಲ್ಲಿ ಸಂಶಯಗ್ರಸ್ತರಾಗಿ ಪ್ರತಿಭಟಿಸುತ್ತಿದ್ದಾರೆ. ತಮ್ಮ ಮುಂದಣ ಪರಿಪಾಲನಕ್ರಮವು ಹೀಗೆಯೇ ಇರತಕ್ಕದೆಂದು ಪ್ರಕಟವಾಗುವವರೆಗೂ ಈ ಸಂಧಿಗೆ ನಾವು ಒಡಂಬಡುವುದಿಲ್ಲವೆಂದು ಅವರು ಗಟ್ಟಿಯಾಗಿ ತಿಳಿಯಿಸಿಬಿಟ್ಟಿದ್ದಾರೆ. ಮತ್ತೂ ಈ ಸಂಧಿ ರಾಯಭಾರವು ಇನ್ನು ಮುಂದೆ ತಟಸ್ಥ ರಾಜ್ಯಕ್ಕೆ ಸೇರಿದ ಸ್ಟಾಕೋಹೋಂ ಪಟ್ಟಣದಲ್ಲಿ ನಡೆಯಬೇಕೆಂದು ತಿಳಿಯಿಸಿಬಿಟ್ಟರು. ಹಾಗಾದರೆ ಅಲ್ಲಿಗೆ ತಟಸ್ಥ ರಾಜ್ಯ ಪ್ರತಿನಿಧಿಗಳೂ, ಮಿತ್ರಮಂಡಲ ಪ್ರತಿನಿಧಿಗಳೂ ಕೂಡ ಬರಬಹುದಾದುದರಿಂದ ಅಲ್ಲಿ ತಮ್ಮ ಬೇಳೆಯು ಸರಿಯಾಗಿ ಬೆಯ್ಯಲಾರದೆಂದು ಯೋಚಿಸಿ ಜರ್ಮನರು ಅದಕ್ಕೆ ಒಪ್ಪದೆಹೋದರು. ಮತ್ತೂ ಈ ಸಂಧಿ ರಾಯಭಾರವು ಸದ್ಯಃ ಇಲ್ಲಿಗೆ ನಿಂತುಹೋಗಿರುವುದೆಂದು ಜರ್ಮನರು ಪ್ರಕಟಿಸಿರುವರು. ಮುಂದಣ ಸ್ಥಿತಿಗತಿಗಳು ಹೇಗಾಗುವುವೋ ನೋಡಬೇಕು. ನಾವುಹೇಳುವ ಸಂಧಿನಿಬಂಧನೆಗಳಿಗೆ ಮಿತ್ರಮಂಡಲಿಯವರು ಒಪ್ಪದಿದ್ದರೆ ಸಂಧಿಯಾಗುವುದಿಲ್ಲವೆಂದು ಈ ಮಧ್ಯೆ ಜರ್ಮನ್ ಕೈಸರರು ಹೇಳಿಕೊಂಡಿರುವರಂತೆ. ಎಂದಬಳಿಕ ಜರ್ಮನರು ತಾವು ಜಯಿಸಿರುವ ರಾಜ್ಯಗಳಿಗೆ ಪೂರ್ವದಂತೆ ಸ್ವಾತಂತ್ರ್ಯವನ್ನು ಕೊಡಲು ಎಂದಿಗೂ ಇಷ್ಟವುಳ್ಳವರಾಗಿಲ್ಲವೆಂಬುದು ಸಿದ್ಧವಾಗುವುದು. ಹಾಗಾದರೆ ಇದಕ್ಕೆ ಇಂಗ್ಲೀಷರೇ ಮೊದಲಾದ ಮಿತ್ರಮಂಡಲಿಯವರು ಎಂದಿಗಾದರೂ ಒಪ್ಪುವರೆ? ಜರ್ಮನು ಬೆಲ್ಜಿಯುಮ್ಮಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು, ಫ್ರಾನ್ಸಿನಲ್ಲಿ ಅವರು ಆಕ್ರಮಿಸಿಕೊಂಡಿರುವ ಅಲ್ಸಸ್ ಲೋರೈನ್ ಮೊದಲಾದ ಪ್ರದೇಶಗಳನ್ನೆಲ್ಲಾ ಹಿಂದಿರಿಗಿ ಕೊಟ್ಟು, ನಷ್ಟಪರಿಹಾರವನ್ನು ಕಟ್ಟಿಕೊಡುವವರೆಗೂ ಸಂಧಿಮಾಡಿಕೊಳ್ಳಲು ಇಷ್ಟಪಡದೆ ಯುದ್ಧವನ್ನು ಮಾಡಿಯೇ ಮುಗಿಸುವರೆಂಬುದಕ್ಕೆ ಸಂಶಯವಿಲ್ಲ. ಶತ್ರುಗಳು ಹೇಳಿದ ಒಡಂಬಡಿಕೆಗಳಿಗೆ ಒಪ್ಪಿಕೊಳ್ಳಬೇಕಾದಷ್ಟು ದುರವಸ್ಥೆಯು ಮಿತ್ರಮಂಡಲಿಯವರಿಗೇನೂ ಬಂದಿಲ್ಲ; ಬರುವ ಸಂಭವವೂ ಇಲ್ಲ. ಅಂತಹ ಸ್ಥಿತಿಯು ಬಂದರೆ ಮುಂದಾಗಿ ಜರ್ಮನರಿಗೇ ಬರಬಹುದು. ಆಂಗ್ಲ ಮುಖ್ಯಮಂತ್ರಿಗಳಾದ ಲಾಯಿಡ್ ಜಾರ್ಜರವರು ಕಳೆದವಾರ ತಮ್ಮ ಯುದ್ಧೋದ್ದೇಶವನ್ನು ಕುರಿತು ಒಂದು ಪ್ರಚಂಡವಾದ ಉಪನ್ಯಾಸವನ್ನು ಮಾಡಿರುವರು. ಅದರಲ್ಲಿ—" ಶತ್ರುಗಳು ಇದುವರೆಗೂ ತಮ್ಮ ನಿಜೋದ್ದೇಶಗಳನ್ನು ಪ್ರಕಟಿಸಿಲ್ಲ. ಅವರು ವಶಪಡಿಸಿಕೊಂಡಿರುವ ದೇಶಗಳನ್ನು ಆಯಾ ಪ್ರಜೆಗಳಿಗೆ ಕೊಟ್ಟು ನಷ್ಟಪರಿಹಾರವನ್ನು ತೆರುವೆವೆಂದು ಪ್ರಕಟಿಸಿಲ್ಲ. ಹೀಗೆ ಅವರು ಪ್ರಕಟಿಸುವವರೆಗೂ ನಾವು ಯುದ್ಧವನ್ನು ನಿಲ್ಲಿಸತಕ್ಕವರಲ್ಲ " ಎಂದು ವಿಸ್ಪಷ್ಟವಾಗಿ ಹೇಳಿರುವುದಲ್ಲದೆ, ಜರ್ಮನರು ರಷ್ಯನ್ನರೊಡನೆ ಸಂಧಿಭಾರಕ್ಕೆ ಪ್ರಯತ್ನಿಸಿರುವುದು, ರಷ್ಯಾ ದೇಶವನ್ನು ಜರ್ಮನಿಗೆ ಕೂಡಿಸಿಕೊಳ್ಳುವ ದುರುದ್ದೇಶದಿಂದಲೇ ಎಂಬುದನ್ನು ನಿಸ್ಸಂಶಯವಾಗಿ ಹೇಳಿ, ಮಿತ್ರಮಂಡಲಿಯವರ ಯುದ್ಧದ ಸದುದ್ದೇಶಗಳನ್ನೂ, ಜರ್ಮನರ ಯುದ್ಧಾಭಿನಿವೇಶವನ್ನೂ, ಮಿತ್ರಮಂಡಲಿಯವರು ಅಚಂಚಲವಾಗಿ ನಿರ್ವಹಿಸಬೇಕಾಗಿರುವ ಯುದ್ಧ ಕಾರ್ಯಭಾರವನ್ನೂ ಸಹ ಬಹಳ ಯುಕ್ತಿಯುಕ್ತವಾಗಿ ಉಪಪಾದಿಸಿರುವರು.

ಒಳದೇಶದ ವೃತ್ತಾಂತಗಳು.

ಪಾಟಿಯಾಲಾದಲ್ಲಿ ಕೂಡುವ ಸಂಸ್ಥಾನಿಕರ ಸಭೆಗಾಗಿ ನಮ್ಮ ದಿವಾನರವರು ದಯಮಾಡಿಸಿದ್ದಾರೆ.

ನಾಳೆ ಸೋಮವಾರ ಸಂಕ್ರಾಂತಿಯ ಪೊಂಗಲ್ ಹಬ್ಬವಾದುದರಿಂದ ಎಲ್ಲಾ ಕೋರ್ಟುಕಚೇರಿಗಳೂ ಪಾಠಶಾಲೆಗಳೂ ಮುಚ್ಚಲ್ಪಡುತ್ತವೆ.

ರಾಜಧಾನಿಯಲ್ಲಿ ಋತುಮಾನಕ್ಕನುಸರಿಸಿ ಚಳಿಯು ಹೆಚ್ಚಾಗಿದೆ. ಪ್ಲೇಗಿನಿಂದಲೂ ವಾಂತಿಭೇದಿಯಿಂದಲೂ ಎಂದಿಗಾದರೊಂದೊಂದು ದಿನ ೧-೨ ಮರಣಗಳಾಗುತ್ತಿವೆ.

ನಮ್ಮ ಶ್ರೀಮನ್ಮಹಾರಾಜರವರು " ನಮ್ಮ ದಿನ " ದ ಫಂಡಿಗೆ ಇದಕ್ಕೆ ಮುಂಚೆ ಕೊಟ್ಟಿದ್ದ ೫,೦೦೦ ರೂ. ಗಳಲ್ಲದೆ ಮತ್ತೆ ೧೫,೦೦೦ ರೂ ಗಳನ್ನು ದಯಪಾಲಿಸಿರುತ್ತಾರೆ.

ಬೆಂಗಳೂರು-ಚಿಕ್ಕಬಳ್ಳಾಪುರದ ಹೊಗೆಬಂಡಿಯನ್ನು ಬೆಂಗಳೂರು ನಿಲ್ದಾಣದಿಂದಲೂ ಪ್ರತ್ಯೇಕವಾದ ಮಾರ್ಗದಿಂದಲೇ ಬಿಡುವುದಕ್ಕೆ ಕಳೆದ ತಾ|| ೬ ರಿಂದ ಉಪಕ್ರಮವಾಗಿರುವುದು.

ಸಾರ್ವಭೌಮರವರು ದಯಪಾಲಿಸಿರುವ ನೂತನವರ್ಷ ಬಿರುದಾವಳಿಗಳಲ್ಲಿ ನಮ್ಮ ಶ್ರೀಯುವರಾಜರವರಿಗೆ " ಹಿಸ್ ಹೈನೆಸ್ " ಎಂಬ ಬಿರುದು ಬಂದಿರುವುದಕ್ಕಾಗಿ ಸಂತೋಷಿಸುತ್ತೇವೆ.

ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ಡೆಪ್ಯುಟಿ ರೆಜಿಸ್ಟ್ರಾರಾಗಿರುವ ಮ|| ಆರ್. ರಂಗರಾಯರು ತಾತ್ಕಾಲಿಕವಾಗಿ ಆ ಸಂಘದ ರೆಜಿಸ್ಟ್ರಾರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನೂತನ ವರ್ಷದ ಬಿರುದಾವಳಿಗಳೊಳಗೆ ನಮ್ಮ ಸಂಸ್ಥಾನದ ರಿಟೈರ್ಡ್ ಸೂಪರಿಂಟೆಂಡಿಂಗ್ ಇಂಜನಿಯರ್ ಮ|| ಬಿ. ಸುಬ್ಬರಾಯರಿಗೆ ರಾವ್ ಬಹದ್ದೂರ್ ಬಿರುದು ಪ್ರಾಪ್ತವಾಗಿರುವುದಕ್ಕಾಗಿ ಸಂತೋಷಿಸುತ್ತೇವೆ.

ರಜಾವನ್ನು ಪಡೆದುಕೊಂಡಿರುವ ೧ ನೆ ಕೌನ್ಸಿಲರ್ ಸರ್ದಾರ್ ಕಾಂತರಾಜ ಅರಸ್, ಸಿ. ಐ. ಇ., ಯವರು ಕಳೆದವಾರ ಬೆಂಗಳೂರಿನಿಂದ ಮದ್ರಾಸು ಮಾರ್ಗವಾಗಿ ಸಿಲೋನ್ ದ್ವೀಪಕ್ಕೆ ವಿಶ್ರಾಂತಿಗಾಗಿ ದಯಮಾಡಿಸಿದ್ದಾರೆ.

ನೆಲಮಂಗಲದ ತಾಲ್ಲೂಕಿನಲ್ಲಿ ಪ್ಲೇಗು ಉಲ್ಬಣವಾಗುತ್ತಿರುವುದರಿಂದ ಆ ತಾಲ್ಲೂಕಿಗೆ ಸೇರಿದ ಶಿವಗಂಗೆಯಲ್ಲಿ ಇದೇ ತಾ|| ೧೩ ರಿಂದ ೨೦ ರ ವರೆಗೆ ನಡೆಯುವ ಜಾತ್ರೆಗೆ ಯಾರನ್ನೂ ಸೇರಗೊಡದಂತೆ ಸರ್ಕಾರದವರು ತಡೆಮಾಡಿರುತ್ತಾರೆ.

ಪೂನಾದಲ್ಲಿರುವ ಮಹಿಳಾ ವಿಶ್ವವಿದ್ಯಾಲಯದ ಫಂಡಿಗೆ ಮೈಸೂರು ದೇಶದಿಂದೆಲ್ಲಾ ೧೪ ಸಾವಿರ ರೂ. ಗಳು ಕೊಡಲ್ಪಟ್ಟಿರುತ್ತವೆ. ಪ್ರೊ|| ಕರ್ವೆಯವರು ಮೈಸೂರು ದೇಶಕ್ಕೆ ಬಂದು ಮಾಡಿದ ವ್ಯವಸಾಯದಿಂದ ಇಷ್ಟು ಫಲವಾಯಿತು.

ನಂಜನಗೂಡಿನಲ್ಲಿ ಶ್ರೀಮನ್ಮಹಾರಾಜರವರ ಉದಾರ ಸಹಾಯದಿಂದ ಕಟ್ಟಲ್ಪಟ್ಟು ಸ್ಥಾಪಿತವಾಗಿರುವ ಶ್ರೀ ಕೃಷ್ಣರಾಜ ವಾಚನಾಲಯದ ಪ್ರಾರಂಭಮಹೋತ್ಸವವು ಮೊನ್ನೆ ಶುಕ್ರವಾರ ಸರ್ದಾರ್ ಕಾಂತರಾಜ ಅರಸಿನವರಿಂದ ನಡೆಯಿಸಲ್ಪಟ್ಟಿತು.

ಸಮುದ್ರಮಥನದಲ್ಲಿ ವಿಷಹುಟ್ಟಿದಂತೆ ರಾಜಧಾನಿಯ ಆನರ್‌ಡೇ ಮಹೋತ್ಸವದಿಂದ ಒಂದು ವಿಷವ್ಯವಹಾರ ಫಲೋದಯವಾಗಿರುತ್ತದೆ. ಇಲ್ಲಿಯ ಮ್ಯುನ್ಸಿಪಲ್ ಇಂಜನಿಯರ್ ಮ|| ರಾಜಗೋಪಾಲ ಮೊದಲಿಯಾರರಮೇಲೆ ಮ್ಯುನ್ಸಿಪಲ್ ಬ್ರಾಹ್ಮಣ ನೌಕರರೊಬ್ಬರು ಮಾನನಷ್ಟಾಭಿಯೋಗಮಾಡಿರುವುದೇ ಈ ಫಲೋದಯವಾಗಿರುತ್ತದೆ.

ಬನ್ನೂರಿಗೆ ಸೇರಿದ ದೊಡ್ಡ ಕೆರೆಯ ಏರಿಯಲ್ಲಿ ಸಣ್ಣ ಮೋಳೆ ಕಾಣಿಸಿಕೊಂಡಿದ್ದು, ಕೂಡಲೇ ಬದ್ರಪಡಿಸದೆಹೋದುದರಿಂದ ಏರಿಯು ಒಡೆದು ಹೋಗಿ, ಕೆಳಗಣ ಅನೇಕ ಗದ್ದೆಗಳಿಗೂ ತೋಟಗಳಿಗೂ ನೀರು ನುಗ್ಗಿದುದರಿಂದ ರೈತರಿಗೆ ಲಕ್ಷಾಂತ ರೂ. ಗಳ ನಷ್ಟವಾಯಿತೆಂದೂ, ದೈವಾಧೀನದಿಂದ ಪ್ರಾಣನಷ್ಟವೇನೂ ಆಗಲಿಲ್ಲವೆಂದೂ ಕೇಳುತ್ತೇವೆ.

ಮೈಸೂರು ನಿಯಮನಿರ್ಮಾಣ ಸಭಾಸಭಿಕರಲ್ಲೊಬ್ಬರಾದ ಮ|| ಅಡ್ವೋಕೇಟ್ ಸಿ. ನರಸಿಂಹಯ್ಯನವರು ಕಳೆದ ಕ್ರಿಸ್ಟ್‌ಮಸ್ ರಜಾಕಾಲವನ್ನು ವ್ಯರ್ಥವಾಗಿ ಕಳೆಯದೆ, ಸಂಸ್ಥಾನದ ಮೈಸೂರು, ತುಮಕೂರು, ಕೋಲಾರ ಡಿಸ್ಟ್ರಿಕ್ಟುಗಳ ಕೆರೆಗಳ ಸ್ಥಿತಿಗತಿಗಳನ್ನೂ, ಅವುಗಳ ನೀರಿನ ಆಸರೆಯ ರೈತರ ತೊಂದರೆಗಳನ್ನೂ ತಿಳಿದು ಬರುವುದರಲ್ಲಿ ವಿನಿಯೋಗಿಸಿದರೆಂದು ಕೇಳಿ ಸಂತೋಷಿಸುತ್ತೇವೆ. ಗೌರವಸ್ಥಾನಾಕ್ರಮಣಕ್ಕೆ ಮಾತ್ರವೇ ಪೇಚಾಡದೆ ಪ್ರಜೆಗಳ ಒಂದೊಂದು ಬಾಬಿನ ಕಷ್ಟನಷ್ಟಗಳನ್ನು ವಿಚಾರಿಸಿ ಅವುಗಳ ಪರಿಹಾರಕ್ಕಾಗಿ ಸರ್ಕಾರದ ಮುಂದೆ ಚರ್ಚಿಸಿ ತಮ್ಮ ಕರ್ತವ್ಯಭಾರವನ್ನು ನಿರ್ವಹಿಸುತ್ತ ಬಂದವರನ್ನು ಸರ್ವ ಪ್ರಜೆಗಳೂ ತಮ್ಮ ಹೆತ್ತವರಿಗಿಂತಲೂ ವಿಶೇಷವಾಗಿ ಆದರಿಸುವುದರಲ್ಲಿ ಸಂಶಯವಿಲ್ಲ. ಇಂಥವರೇ ಕೃತಕೃತ್ಯರು.

ಹಿಂದುಳಿದ ಜನವರ್ಗಗಳವರಿಗೆ ರಾಜಕೀಯ, ಸಾಂಘಿಕ, ವಾಣಿಜ್ಯ, ವಿದ್ಯಾವಿಷಯಕ ಸಮುನ್ನತಿಗಳನ್ನು ಸಾಧಿಸಿಕೊಳ್ಳುವ ಉದ್ದೇಶದಿಂದ ಬೆಂಗಳೂರಿನಲ್ಲಿ " ಪ್ರಜಾಮಿತ್ರ ಮಂಡಲಿ " ಎಂಬ ಹೆಸರಿನ ಸಂಘವೊಂದು ಕಳೆದ ತಾ|| ೬ ರಲ್ಲಿ ಸ್ಥಾಪಿತವಾಯಿತೆಂದು ಕೇಳುತ್ತೇವೆ. ಇದಕ್ಕೆ ಮ|| ಎಂ. ಬಸವಯ್ಯನವರು ಪ್ರಾವಿನ್ಷಿಯಲ್ ಸೆಕ್ರೆಟರಿಯವರಾಗಿದ್ದಾರೆ. ಸಾಂಘಿಕ ಪ್ರಾತಿನಿಧ್ಯವನ್ನಪೇಕ್ಷಿಸುವ ಪ್ರಜೆಗಳೆಲ್ಲರೂ ಈ ಸಂಘದ ಸಭ್ಯರುಗಳಾಗಬಹುದು. ಈ ಸಭೆಯವರು ಶ್ರೀಮನ್ಮಹಾರಾಜರವರಿಗೆ ಒಂದು ಡೆಪ್ಯುಟೇಷನ್ನಿನ ಮೂಲಕವನ್ನು ವಿಜ್ಞಾಪನವನ್ನರ್ಪಿಸಲು ನಿರ್ಧರಿಸಿರುವರಂತೆ. ಆ ವಿಜ್ಞಾಪನದಲ್ಲಿ ಮುಖ್ಯವಾಗಿ ತಾಲ್ಲೂಕು ಡಿಸ್ಟ್ರಿಕ್ಟ್ ಬೋರ್ಡುಗಳು, ಮ್ಯುನಿಸಿಪಲ್ ಬೋರ್ಡುಗಳು, ನಿಯಮನಿರ್ಮಾಣಸಭೆ, ಪ್ರಜಾಪ್ರತಿನಿಧಿಸಭೆ—ಇವುಗಳಲ್ಲೆಲ್ಲಾ ಕೋಮುವಾರು ಪ್ರತಿನಿಧಿಗಳನ್ನು ಆಯಾವರ್ಗ ಜನಸಂಖ್ಯಾನುಗುಣವಾಗಿ ನಿಯಮಿಸುವ ವಿಷಯಕವಾದ ಪ್ರಾರ್ಥನೆಯಿರುವುದಂತೆ. ಈ ವಿಜ್ಞಾಪನ ಸಮರ್ಪಣೆಗೆ ಮಿ|| ಗಣಿದ ನವಾಬ್ ಮಹಮ್ಮದ್ ಕಲಾಮಿಯವರು, ರಾವ್‌ಸಾಹೇಬ್ ಸಿ. ಚನ್ನಯ್ಯನವರು, ಮಹಮ್ಮದ್ ಜಾಫರ್ ಸಾಹೇಬರು, ಎಂ. ಸುಬ್ಬಯ್ಯನವರು, ಮಹಮ್ಮದ್ ಅಬ್ಬಾಸ್ ಖಾನರು, ಎ. ವಿ. ನಂಜುಂಡಶೆಟ್ಟರು, ಸಾ|| ಮೊಗಣ್ಣನವರು, ಧರ್ಮಪ್ರಕಾಶ ಡಿ. ಬನುಮಯ್ಯನವರು, ಅಡ್ವೋಕೇಟ್ ಎಂ. ನಾರಾಯಣಯ್ಯನವರು, ಧನಕೋಟಿಶೆಟ್ಟರು, ಟಿ. ಎಸ್. ನಂಜಪ್ಪನವರು, ಸಾ|| ತಿಮ್ಮಯ್ಯನವರು, ಮಹಮ್ಮದ್ ಸೇಟರು, ಎಂ. ಬಸವಯ್ಯನವರು ಮೊದಲಾದ ಇನ್ನು ಆರು ಮಂದಿಗಳು ಸಹ ಗೊತ್ತಾಗಿರುವರೆಂದು ಕೇಳುತ್ತೇವೆ. ಇವರ ಉದ್ದೇಶವು ಸಫಲವಾಗಿ ತನ್ಮೂಲಕ ದೇಶೋದ್ಧಾರವಾಗಲೆಂದು ಕೋರುವೆವು.

ದಾವಣಗೆರೆಯಲ್ಲಿ ನೆರವೇರಿದ ವೀರಶೈವ ಮಹಾಸಭೆಯ ಕಾರ್ಯವಿಶೇಷವನ್ನು ಕುರಿತು ಮೈಸೂರಿನ ಮತ್ತು ಧಾರವಾಡದ ಬ್ರಾಹ್ಮಣಪತ್ರಿಕೆಗಳು ಹೊಗಳಿ ಸಾನುಭೂತಿಯನ್ನು ಪ್ರದರ್ಶಿಸಿರುತ್ತವೆ. ಆದರೆ ಆ ಸಭೆಯಲ್ಲಿ ನಡೆದ ಪ್ರತ್ಯೇಕ ಪ್ರಾತಿನಿಧ್ಯದ ವಿಷಯವಾಗಿ ಮಾತ್ರ ಈ ಪತ್ರಿಕೆಗಳೊಂದಾದರೂ ಒಂದಕ್ಷರವನ್ನೂ ಉಪಯೋಗಿಸಿ ಸಾನುಭೂತಿಯನ್ನು ತೋರಿಸಿಲ್ಲ. ಮ|| ಕಡಬಾ ವಕೀಲರು ದಾವಣಗೆರೆಯಲ್ಲಿ ಮ|| ಹನಸಪ್ಪನವರ ಅಟ್‌ಹೋಂಪಾರ್ಟಿ ಸಮಾರಂಭಕಾಲಕ್ಕೆ ಭಾಷಣಮಾಡುವಾಗ್ಗೆ—" ವೀರಶೈವರೂ ನಾವೂ ಏಕೋದರಭಾವದಿಂದ ನಡೆಸುಕೊಳ್ಳಬೇಕು. ಪರಸ್ಪರ ಕಾರ್ಯಕ್ಕೆ ಸಾನುಭೂತಿಯನ್ನು ಈರ್ವರೂ ತೋರಿಸಬೇಕು. ನಾವುಗಳು ವೀರಶೈವ ಮಹಾಸಭೆಗೆ ವಾಲಂಟಿಯರಾಗಿರಲಿಕ್ಕೆ ಸಿದ್ಧರಿರುತ್ತೇವೆ. " ಎಂದು ಮೊದಲಾಗಿ ಹೇಳಿದರು. ಆದರೆ ಇಂಥ ಸಾನುಭೂತಿಗಳು " ವಚನಕ್ಕೇನು ದರಿದ್ರತೆ " ಎಂಬ ನುಡಿಯಂತೆ ಬಾಯ್ಮಾತಿನಲ್ಲಿ ವ್ಯಕ್ತವಾಗುವುದಕ್ಕಿಂತ ಸಮಯವಿದ್ದಾಗ ಕಾರ್ಯದಲ್ಲಿ ವ್ಯಕ್ತವಾಗುವುದಾದರೆ ನಿಜವಾದ ಸೌಹಾರ್ದವು ಪರಸ್ಪರವಾಗಿ ಬಳೆದೀತು. ವೀರಶೈವ ಜಗದ್ಗುರುಗಳು ತಾವು ಅನಾದಿಯಾಗಿ ಅನುಭವಿಸಿಕೊಂಡು ಬಂದ ಗೌರವವನ್ನು ನಡೆಯಿಸಿಕೊಳ್ಳುತ್ತಿದ್ದರೆ ಅಂಥ ಸಮಯದಲ್ಲಿ ಇವರ ಸಾನುಭೂತಿಗಳು ಹೇಗಿರುವುವೋ ಸರ್ಕಾರದಧಿಕಾರ ಮೊದಲಾದುವುಗಳ ಪಾಲಿಗೆ ವೀರಶೈವರು ಬರುವಾಗ ಇವರ ಸಾನುಭೂತಿಯು ಹೇಗಿರುವುದೋ ಅದನ್ನು ನೆನಸಿಕೊಂಡರೆ ಈ ಕೆಳಗಿನ ಬಾವುಗಾರರ ಕಥೆಯು ಸ್ಮರಣೆಗೆ ಬರುವುದು—ವಿದ್ಯುಚ್ಛಕ್ತಿಯ ಬೆಳಕಿನ ಅಂಗಡಿಯಲ್ಲಿ ಕುಳಿತು ಶೆಟ್ಟಿಗಾರರು ಹಣವನ್ನೆಣಿಸುತ್ತಿರುವಾಗ್ಗೆ ಬಹು ದಿನದ ಮೇಲೆ ಮೈದುನರು ಬಂದು ಕಾಣಿಸಿಕೊಂಡರು. ಅಂಗಡಿಯ ಶೆಟ್ಟರು ಅನುಪಮವಾದ ಪ್ರೀತಿ ವಿಶ್ವಾಸಗಳನ್ನು ತೋರಿಸುತ್ತ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಅಷ್ಟರಲ್ಲಿ ಥಟ್ಟನೆ ಕರೆಂಟು ನಿಂತುಹೋಗಿ ದೀಪವು ಆರಿತು. ಅಂಗಡಿ ಶೆಟ್ಟರಿಗೆ ದಿಗಿಲಾಯಿತು. ಉಪಚಾರದ ಮಾತುಗಳನ್ನಾಡುತ್ತಲೇ ಮೈದುನರ ಎರಡು ಕೈಗಳನ್ನೂ ಬಿಗಿಯಾಗಿ ಹಿಡಿದುಕೊಂಡು, ಅತಿ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದು, ಅಷ್ಟರಲ್ಲಿ ದೀಪವು ಹೊತ್ತಲು, ಕೈಗಳನ್ನು ಬಿಟ್ಟುಬಿಟ್ಟರಂತೆ. ವಿಶ್ವಾಸವು ಹೀಗಿದ್ದರೆ ಪ್ರಯೋಜನವೇನು? ನಿಜವಿಶ್ವಾಸವು ಬಳೆಯಬೇಕಾದರೆ ಪರಪ್ರಯೋಜನ ಸಮಯದಲ್ಲಿ ಸಹಾಯವನ್ನಾದರೂ ಮಾಡಬೇಕು, ಅಥವಾ ಸಹನೆಯಾದರೂ ಬೇಕು. ಅದು ಹೇಗಾದರೂ ಇರಲಿ. ವೀರಶೈವರು ಪರರ ದೂಷಣ ಭೂಷಣಗಳನ್ನೇ ತಮ್ಮ ಪ್ರಯತ್ನಕ್ಕೆ ಫಲವೆಂದು ತಿಳಿಯದೆ, ತಮ್ಮ ಉದ್ಧಾರದ ಕಾರ್ಯವನ್ನು ತಾವು ದೃಢಯತ್ನದಿಂದ ಸಾಗಿಸಿದರೆ ಸರಿ.

ಭರತಖಂಡದ ವೃತ್ತಾಂತಗಳು.

ಈ ವರ್ಷದ ರಾಷ್ಟ್ರೀಯಮಹಾಸಭೆಯು ದಿಲ್ಲಿಪಟ್ಟಣದಲ್ಲಿ ಕೂಡಲು ನಿರ್ಧರವಾಗಿದೆ.

ಭರತಖಂಡಕ್ಕೆ ಬೇಕಾಗಿರುವ ಚಿನ್ನದ ನಾಣ್ಯಗಳನ್ನೆಲ್ಲಾ ಇನ್ನುಮೇಲೆ ಬೊಂಬಾಯಿಯ ಟಂಕಸಾಲೆಯಲ್ಲೇ ಮುದ್ರಿಸುವುದಕ್ಕೆ ಪ್ರಭುತ್ವದವರು ಏರ್ಪಡಿಸಿರುವರು.

ಕಳೆದ ಡಿಸಂಬರ್ ತಿಂಗಳಿಂದ ೧ ರೂ.ನ ನೋಟುಗಳು ವ್ಯವಹಾರಕ್ಕೆ ತರಲ್ಪಟ್ಟುವಷ್ಟೆ. ಈ ವರ್ಷದ ಆದಿಯಿಂದ ೨|| ರೂ. ನ ನೋಟುಗಳೂ ವ್ಯವಹಾರಕ್ಕೆ ತರಲ್ಪಟ್ಟಿರುವುವು.

ಯಾವದ್ಭಾರತ ಹಿಂದೂ ಮಹಾಸಭೆಯು ಬರುವ ಫೆಬ್ರವರಿ ತಾ|| ೯-೧೦-೧೧ ರಲ್ಲಿ ಅಲಹಾಬಾದ್ ಪಟ್ಟಣದಲ್ಲಿ ಜರುಗುವುದು. ಕಾಸಿಂಬಜಾರು ಮಹಾರಾಜರು ಸ್ವಾಗತಸಂಘಾಧ್ಯಕ್ಷರು.

ಕಳೆದ ಡಿಸಂಬರ್ ತಾ|| ೨೯ ಕ್ಕೆ ಕಡೆಯಾದ ೧ ವಾರದ ಕಾಲದಲ್ಲಿ ಭರತಖಂಡದೊಳಗೆಲ್ಲಾ ೧೫೧೬೨ ಮಂದಿಗಳು ಪ್ಲೇಗುರೋಗದಿಂದ ಮೃತರಾಗಿರುವರು. ೧೮೭೫೩ ಮಂದಿಗೆ ರೋಗವು ತಗುಲಿತು.

ಈ ತಿಂಗಳ ೩ ನೆಯ ವಾರದಲ್ಲಿ ದಿಲ್ಲಿಪಟ್ಟಣದೊಳಗೆ ಸ್ಟೇಟ್‌ಸೆಕ್ರೆಟರಿಯವರ ಅಧ್ಯಕ್ಷತೆಯಿಂದ ಎಲ್ಲ ಅಧಿಪತ್ಯಗಳ ಗೌರ್ನರುಗಳ ಸಭೆಯೊಂದು ಜರುಗುವುದಾಗಿದೆ. ಮದ್ರಾಸ್ ಗೌರ್ನರರವರು ತಾ|| ೧೫ ರಲ್ಲಿ ಹೊರಟು ತಾ|| ೨೦ ಕ್ಕೆ ದಿಲ್ಲಿಪಟ್ಟಣವನ್ನು ಸೇರುವರು.

ಸ್ಟೇಟ್‌ಸೆಕ್ರೆಟರಿಯವರೂ ವೈಸ್ರಾಯರೂ ಸಹ ಬೊಂಬಾಯಿಯ ಕೆಲಸವನ್ನೆಲ್ಲಾ ಮುಗಿಸಿಕೊಂಡು, ತಾ|| ೨ ರಲ್ಲಿ ವೈಸ್ರಾಯರು ದಿಲ್ಲಿಗೂ, ಸೆಕ್ರೆಟರಿಯವರು ಗ್ವಾಲಿಯರ್ ಸಂಸ್ಥಾನಕ್ಕೂ ದಯಮಾಡಿಸಿದರು. ಅಲ್ಲಿಂದ ಸ್ಟೇಟ್‌ಸೆಕ್ರೆಟರಿಯವರು ಹೊರಟು ತಾ|| ೬ ನೆ ಬೆಳಗ್ಗೆ ದಿಲ್ಲಿಯನ್ನು ಸೇರಿದರು.

ಯುದ್ಧಸಾಮಗ್ರಿಗಳನ್ನೊದಗಿಸುವ ಮಂತ್ರಿಮಂಡಲದವರ ಸೂಚನೆಯ ಪ್ರಕಾರ ಅಮೇರಿಕಾದ ಸಂಯುಕ್ತ ರಾಷ್ಟ್ರದಿಂದ ಹೊರಕ್ಕೆ ಸೀಮೆಯೆಣ್ಣೆ ಟಿನ್ ರೇಕುಗಳು ಬರುವುದು ಕಟ್ಟಾಗಿಹೋಗಿದೆ. ಈ ಕಾರಣದಿಂದ ಭರತಖಂಡದಲ್ಲೆಲ್ಲಾ ಟಿನ್ ಡಬ್ಬಾಗಳ ಬೆಲೆಯು ಬಹಳ ಏರಿಹೋಗಿದೆ. ೨ ಆಣೆ ಬೆಲೆಯ ಡಬ್ಬಿಗೆ ಈಗ ೧| ರೂ. ವರೆಗೂ ಬೆಲೆಯೇರಿಹೋಗಿದೆ.

ಕಲ್ಕತ್ತಾದಲ್ಲಿ ನಡೆದ ರಾಷ್ಟ್ರೀಯ ಮಹಾಸಭೆಯ ಉಗ್ರವಾದಗಳನ್ನು ಕೇಳಿ ಅದನ್ನೊಗ್ಗದ ಡಾಕ್ಟರ್ ನೀಲರತ್ನ ಸರ್ಕಾರರೇ ಮೊದಲಾದ ೪೦ ಮಂದಿ ನಾನಾ ಪ್ರಾಂತದ ಪ್ರಮುಖರು ಮಹಾಸಭೆಯು ಮುಗಿದುಹೋದ ಬಳಿಕ ನೀಲರತ್ನ ಸರ್ಕಾರರ ಮನೆಯಲ್ಲಿ ಸಭೆಕೂಡಿ, ಯಾವುವೋ ಕೆಲ ವಿಷಯಗಳಲ್ಲಿ ನಿರ್ಧಾರಮಾಡಿಕೊಂಡರೆಂದು ಅಲ್ಲಿಯ ಬಂಗಾಳಿ ಪತ್ರಿಕೆಯು ಹೇಳಿರುತ್ತದೆ. ಮಿತವಾದ ಪಕ್ಷದ ದಿಗ್ದಂತಿಗಳು ದೇವಲೋಕಕ್ಕೆ ಹೋದ ಬಳಿಕ ಈ ಗುಸುಗುಟ್ಟುವಿಕೆಯಿಂದಾಗುವ ಪ್ರಯೋಜನವೇನು?

ಸರ್ ಜಗದೀಶಚಂದ್ರ ಬೋಸ್‌ರವರು ಬಂಗಾಳಾ ಗೌರ್ನರರವರ ಅಧ್ಯಕ್ಷತೆಯಲ್ಲಿ ಕಲ್ಕತ್ತಾಪಟ್ಟಣದೊಳಗೆ ನೂತನವಾಗಿ ಸ್ಥಾಪಿತವಾಗಿರುವ ತಮ್ಮ ಶಾಸ್ತ್ರಾಲಯದಲ್ಲಿ ಒಂದುಪನ್ಯಾಸವನ್ನು ಕಳೆದವಾರ ಮಾಡಿದರು. ಆಗ್ಗೆ ಫರೀದ್ಪುರದ ತಾಳೆಮರವನ್ನು ಕುರಿತು ಕೆಲ ವಿವರಣಗಳನ್ನು ಹೇಳಿದರು. ಈ ಮರವು ಪ್ರತಿದಿನ ಸಾಯಂಕಾಲವೂ ಸಾಷ್ಟಾಂಗಮಾಡುವಹಾಗೆ ಭೂಮಿಗೆ ಸೋಕುವಂತೆ ಬಗ್ಗುತ್ತ, ಬೆಳಗ್ಗೆ ಅರುಣೋದಯವಾಗುವಹೊತ್ತಿಗೆ ಏಳಲುಪಕ್ರಮಿಸಿ, ಮಧ್ಯಾಹ್ನದಹೊತ್ತಿಗೆ ನಿಂತುಕೊಳ್ಳುತ್ತಿರುವುದು. ಇದರಲ್ಲಿ ಏನೋ ಮಹಿಮೆಯಿರುವುದೆಂದು ಜನರು ಪ್ರತಿದಿನವೂ ಪೂಜಿಸುತ್ತಿರುವರಂತೆ. ಬೋಸ್‌ರವರು ಇದಕ್ಕೆ ಕಾರಣವನ್ನು ಹೇಳುವಾಗ್ಗೆ—" ಮನುಷ್ಯರಂತೆಯೇ ವೃಕ್ಷಜಾತಿಗೂ ಕೂಡ ನರಗಳು ಇರುವುವು. ಅವಕ್ಕೂ ಭಯ, ಸಂತೋಷ, ನಿದ್ರೆ, ಎಚ್ಚರಿಕೆ, ಮೊದಲಾದುವುಗಳೆಲ್ಲಾ ಇರುವುವು. ಇಂಥ ಶಕ್ತಿಯು ಫರೀದ್ಪುರದ ತಾಳೆಮರದಲ್ಲಿ ವಿಶೇಷವಾಗಿರುವುದೇ ಅದಕ್ಕೆ ಕಾರಣ " ಎಂಬುದಾಗಿ ತಮ್ಮ ಪರಿಶೋಧನೋದಾಹರಣಪೂರ್ವಕವಾಗಿ ಸಭಿಕರೆಲ್ಲಾ ಒಪ್ಪಿ ತಲೆದೂಗುವಂತೆ ವಿವರಿಸಿದರು. ಅಧ್ಯಕ್ಷರಾಗಿದ್ದ ಗೌರ್ನರರವರು ಸಭಿಕರ ಪರವಾಗಿ ಬೋಸ್‌ರವರಿಗೆ ವಂದನೆಯನ್ನರ್ಪಿಸಿ, ಸಭೆಯನ್ನು ಮುಗಿಸಿದರು. ಈ ಬೋಸ್‌ರವರು ಇಷ್ಟರಲ್ಲೇ ಬೊಂಬಾಯಿಗೂ ಬಂದು ಉಪನ್ಯಾಸಮಾಡುವವರಾಗಿದ್ದಾರಂತೆ.

ವಿದೇಶದವೃತ್ತಾಂತಗಳು.

ಯುದ್ಧದ ಮೂಲಕವಾಗಿ ನಾರ್ವೆಯವರಿಗೆ ಇದುವರೆಗೆ ೪೩೪ ಹಡಗುಗಳು ನಷ್ಟವಾಗಿರುತ್ತವೆ.

ಯುದ್ಧಾರಂಭಕ್ಕೆ ಮುಂಚೆಗಿಂತ ಈಗ ಜರ್ಮನಿಯಲ್ಲಿ ೧೦೦ ಕ್ಕೆ ೪೦ ನಷ್ಟು ಜನಸಂಖ್ಯೆಯು ಕಡಿಮೆಯಾಗಿಹೋಗಿದೆ. ಬಹುಮಂದಿ ಗಂಡುಸರು ರಣದೇವತೆಗೆ ಬಲಿಯಾಗಿರುವುದೂ, ರಣವಿಮಗ್ನರಾಗಿರುವುದೂ ಸಹ ಇದಕ್ಕೆ ಕಾರಣವಾಗಿರಬೇಕು.

ಮೆಸಪಟೋಮಿಯಾ ಸರ್ವಸೈನ್ಯಾಧಿಪತಿಗಳಾಗಿದ್ದು ವಾಂತಿಭೇದಿ ರೋಗಕ್ಕೆ ತುತ್ತಾದ ಜನರಲ್ ಸ್ಟ್ಯಾನ್ಲಿ ಮಾಡ್‌ರವರ ಹೆಸರಿನಮೇಲೆ ಬಸರಾ ಪಟ್ಟಣದಲ್ಲಿ ಒಂದು ದೊಡ್ಡ ವೈದ್ಯಾಲಯವನ್ನು ಕಟ್ಟುವ ಏರ್ಪಾಟು ನಡೆದಿದೆ. ಇದಕ್ಕಾಗಿ ಆಗಲೇ ೧ ಲಕ್ಷ ರೂ. ಗಳವರೆಗೆ ಕೂಡಿದೆ. ಪ್ರಪಂಚದ ನಾನಾ ಭಾಗಗಳಲ್ಲಿ ವಾಸವಾಗಿರುವ ಬಸರಾ ಪ್ರಜೆಗಳು ತಂತಮ್ಮ ಶಕ್ತ್ಯನುಸಾರವಾಗಿ ಈ ಧರ್ಮಕಾರ್ಯಕ್ಕೆ ಸಹಾಯ ಮಾಡಬಹುದೆಂದು ಆ ಪಟ್ಟಣದ ಮಿಲಿಟರಿ ಗೌರ್ನರರವರು ಪ್ರಕಟಿಸಿದ್ದಾರೆ.

ತಾತ್ಕಾಲಿಕ ಸಂಧಿನಿಬಂಧನೆಗಳಿಗೆ ವ್ಯತಿರಿಕ್ತವಾಗಿ ಜರ್ಮನರು ಪೂರ್ವರಣರಂಗದ ತಮ್ಮ ಸೈನ್ಯದಲ್ಲಿ ೩೫ ವರ್ಷ ವಯಸ್ಸಿನೊಳಗಣ ಆಣೆಯ ಸೈನಿಕರನ್ನೆಲ್ಲಾ ಆರಿಸಿ ಪಶ್ಚಿಮರಂಗಕ್ಕೆ ಕಳುಹಿಸಲು ಉಪಕ್ರಮಿಸಿದುದರಿಂದ ಜರ್ಮನ್ ಸೈನ್ಯದಲ್ಲಿ ಅನೇಕರು ಉದ್ಯೋಗವನ್ನು ಬಿಟ್ಟು ಹೊರಟುಹೋಗುತ್ತಿದ್ದಾರೆ. ಕೋವ್ನೋ ಕೋಟೆಗೆ ಪೂರ್ವದಲ್ಲಿದ್ದ ಸೈನ್ಯದಲ್ಲಿ ೨೫ ಸಾವಿರ ಮಂದಿಗಳು ರೇಗಿ ತಿರುಗಿಬಿದ್ದಿದ್ದಾರೆ. ಅಧಿಕಾರಿಗಳು ಏನನ್ನೂ ಮಾಡಲಾರದೆ ಅವರಿಗೆ ಆಹಾರಪದಾರ್ಥಗಳೊಂದೂ ಹೋಗಿ ಸೇರದಂತೆ ತಡೆಮಾಡಿದ್ದಾರೆ.

ಅಮೇರಿಕಾದವರು ಈಗಣ ಯುದ್ಧವು ಇನ್ನು ಮೂರು ವರ್ಷಗಳವರೆಗೂ ಮುಗಿಯಲಾರದೆಂದು ಯೋಚಿಸಿಕೊಂಡು, ಅಲ್ಲಿಯವರೆಗೂ ಆಗಬೇಕಾದಷ್ಟು ಸನ್ನಾಹಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಯುದ್ಧಕಾರ್ಯಕ್ಕೆ ಆಗಬೇಕಾದ ವೆಚ್ಚಗಳು ಮಿತಿಮೀರಿರುವುದರಿಂದ ಅದಕ್ಕಾಗಿ ಒಂದು ಧನರಾಶಿಯು ಸ್ಥಾಪಿತವಾಗಿದೆ. ಇದಕ್ಕೆ ಅಲ್ಲಿಯ ಕೋಟೀಶ್ವರ ತಿಲಕರಾದ ರಾಕ್‌ಫೆಲ್ಲರ್‌ರವರು ೫೫ ಲಕ್ಷ ಡಾಲರುಗಳ ಚಂದಾವನ್ನು ಕೊಟ್ಟರು. ಇದೂ ಸೇರಿಕೊಂಡು ಅವರು ಕೊಟ್ಟಿರುವ ಚಂದಾ ಹಣದ ಮೊತ್ತವು ೧೩ ಕೋಟಿ ಡಾಲರುಗಳಾಗಿರುವುವು.

ಬೋಲ್ಷೆವಿಕ್ಕುಗಳೊಡನೆ ತಮ್ಮ ಕಪಟೋಪಾಯದ ಸಂಧಿಯನ್ನು ಸಾಗಿಸುವುದು ಕಷ್ಟವೆಂದು ಜರ್ಮನ್ ಪ್ರಭುತ್ವದವರಿಗೆ ತೋರಿದುದರಿಂದ, ಈಗ ಅವರು, ಬೋಲ್ಷೆವಿಕ್ಕುಗಳ ಪ್ರಭುತ್ವವು ಸರಿಯಾದುದಲ್ಲವೆಂತಲೂ ಅವರೊಡನೆ ಸಂಧಿಮಾಡಿಕೊಳ್ಳಲಾಗುವುದಿಲ್ಲವೆಂತಲೂ, ಉಕ್ರೇನಿಯನ್ ಪಕ್ಷದವರೊಡನೆ ತಾವು ಸಂಧಿಮಾಡಿಕೊಳ್ಳುತ್ತೇವೆಂತಲೂ ಹೇಳಿರುತ್ತಾರೆ. ಅಂತರ್ಜಾತೀಯ ವ್ಯವಹಾರಗಳನ್ನು ತಾವೇ ಪರಿಷ್ಕರಿಸಿಕೊಳ್ಳುತ್ತೇವೆಂದು ಉಕ್ರೇನಿಯನ್ ಪಕ್ಷದವರು ಹೇಳುತ್ತಿರುವರಂತೆ. ಇದರಿಂದ ರಷ್ಯಾದಲ್ಲಿ ಮರಳಿ ಪಕ್ಷಾಂತರಗಳು ಪ್ರಬಲಿಸುವ ಚಿಹ್ನವೇ ಕಾಣುತ್ತಿದೆ.

ರಷ್ಯನರ ವಿಷಯದಲ್ಲಿ ಜರ್ಮನರು ಸೂಚಿಸಿದ ಸಂಧಿನಿಬಂಧನೆಗಳು ನ್ಯಾಯವಾದುವುಗಳಲ್ಲ; ಅದರಿಂದಲೇ ಇದಕ್ಕವರು ಒಪ್ಪಲಿಲ್ಲ. ಅವರ ರಾಜ್ಯಗಳನ್ನು ಅವರಿಗೆ ಒಪ್ಪಿಸಿಬಿಡುವುದಕ್ಕೂ ನಷ್ಟಪರಿಹಾರಗಳೇನೂ ಇಲ್ಲದಿರುವುದಕ್ಕೂ ಜರ್ಮನ್ ಪ್ರಭುತ್ವದವರು ಒಪ್ಪಿ, ಮತ್ತೆ ಸಂಧಿರಾಯಭಾರವನ್ನು ನಡೆಯಿಸುವಂತೆ ಮಾಡಬೇಕೆಂದು, ಜರ್ಮನಿ ರೀಚ್‌ಸ್ಟಾಗ್ ಸಭೆಯ ಸಾಂಘಿಕವಾದಿಗಳು ಬರ್ಲಿನ್ ಪಟ್ಟಣದಲ್ಲಿ ಕೂಡಿದ್ದ ಸಭೆಯೊಳಗೆ ನಿರ್ಧರಿಸಿ, ತಮ್ಮ ಪ್ರಭುತ್ವದವರಿಗೆ ಎಚ್ಚರಿಸಿದ್ದಾರೆ. ಪ್ರಭುತ್ವದವರ ಸಂಧಿಕಾಪಟ್ಯವನ್ನು ಆ ದೇಶದ ಒಂದೆರಡು ಪತ್ರಿಕೆಗಳೂ ಕೂಡ ಅಲ್ಲಗಳೆದಿರುತ್ತವೆ.

ಜಪಾನಿನಲ್ಲಿ ಟೋಕಿಯೋ ಪಟ್ಟಣದಲ್ಲಿ ಅದ್ವೈತಗುಹಾ ಎಂಬ ಹೆಸರಿನ ಹಿಂದೂ ದೇವಾಲಯವು ಭರತಖಂಡದ ಹೆಚ್. ಪಿ. ಶಾಸ್ತ್ರಿ ಎಂಬುವರಿಂದ ಕಳೆದ ನವಂಬರ್ ತಿಂಗಳು ತಾ|| ೧೮ ರಲ್ಲಿ ಸ್ಥಾಪಿಸಲ್ಪಟ್ಟಿತು. ವಸೆಡಾ ಪಟ್ಟಣದ ವಿಶ್ವವಿದ್ಯಾಲಯದ ಪಂಡಿತರಾಗಿಯೂ, ಸಂಸ್ಕೃತ ವಿದ್ಯೆಯಲ್ಲೂ ವೇದಾಂತವಿಚಾರದಲ್ಲಿಯೂ ಕುಶಲರಾಗಿಯೂ ಇರುವ ಪ್ರೊ|| ತಕೆಡಾರವರು ಇದಕ್ಕೆ ತುಂಬಾ ಸಹಾಯಮಾಡಿದರು. ಈ ದೇವಾಲಯಕ್ಕೆ ಜಪಾನ್ ದೇಶದ ತರುಣರೂ ನಾರೀಮಣಿಯರೂ ವಿದ್ಯಾರ್ಥಿಗಳೂ ಸಹ ಅನೇಕಾನೇಕ ಮಂದಿಗಳು ಬಂದು ಶಾಸ್ತ್ರಿಗಳ ಉಪನ್ಯಾಸಗಳನ್ನು ಕೇಳಿ, ಶ್ರದ್ಧೆಯುಳ್ಳವರಾಗಿ, ಈಗ ಹಿಂದುಗಳ ಉಡುಪುಗಳನ್ನೂ ಧರ್ಮಕರ್ಮಾಚರಣೆಗಳನ್ನೂ ಅನುಸರಿಸುತ್ತಿರುವರೆಂದು ಗೊತ್ತಾಗುತ್ತದೆ. ಪಶ್ಚಿಮದೇಶಗಳಲ್ಲಿ ಸ್ವಾಮಿ ವಿವೇಕಾನಂದರವರು ಮಾಡಿದಂಥ ಸಾಹಸವನ್ನು ಪ್ರಕೃತದಲ್ಲಿ ಮ|| ಹೆಚ್. ಪಿ. ಶಾಸ್ತ್ರಿಗಳು ನಮ್ಮ ಏಷ್ಯಾಖಂಡದ ಬೌದ್ಧದೇಶದಲ್ಲಿ ಮಾಡುತ್ತಿರುವರು.

ಜರ್ಮನ್ ಪ್ರಭುತ್ವದವರು ಕಳೆದ ವರ್ಷ ತಮ್ಮ ದೇಶದ ವೃತ್ತಪತ್ರಿಕೆಗಳಿಗೆ ಗುಟ್ಟಾಗಿ ಕಳುಹಿಸಿದ್ದ ಒಂದಾನೊಂದು ಅಪ್ಪಣೆಯನ್ನು ಅಮೇರಿಕಾ ಪ್ರಭುತ್ವದವರಿಗೆ ಸಿಕ್ಕಿದುದರಮೇಲೆ ಅದನ್ನವರು ಪ್ರಕಟಿಸಿದ್ದಾರೆ. ಇದರಿಂದ ಜರ್ಮನ್ ಸರ್ಕಾರದ ಕಪಟತಂತ್ರಗಳ ಪರಿಮಿತಿಯು ಗೊತ್ತಾಗುವುದು—" ಪತ್ರಿಕೆಯ ಮುಖ್ಯ ಲೇಖನಗಳೆಲ್ಲಾ ಪ್ರಭುತ್ವದವರ ಆಜ್ಞಾನುಸಾರವಾಗಿರಬೇಕು. ಆಹಾರ್ಯವಸ್ತುಗಳು, ಕಲ್ಲಿದ್ದಲ ಸ್ಥಿತಿಗತಿ, ಕೂಲಿನಾಲಿಗಳ ಸ್ಥಿತಿಗತಿ ಮೊದಲಾದ ಆರ್ಥಿಕಸ್ಥಿತಿಗಳೊಂದನ್ನೂ ಪತ್ರಿಕೆಗಳು ಚರ್ಚಿಸಕೂಡದು. ನಾಯಿಮಾಂಸದ ಸಂಗತಿಯನ್ನು ಪ್ರಕಟಿಸಲಾಗದು. ಅಮೇರಿಕಾದವರು ೧೯೧೭ ನೆ ವರ್ಷದ ಕೊನೆಗೆ ೫ ಡಿವಿಜನ್ ಸೈನ್ಯಗಳನ್ನು ಸಿದ್ಧಮಾಡಲಾರರೆಂದು ಪ್ರಕಟಿಸಬೇಕು. ರಷ್ಯಾ ದುಸ್ಥಿತಿಗೆ ಮಿತ್ರಮಂಡಲಿಯವರೇ ಕಾರಣರೆಂದೂ, ಅಮೇರಿಕನ್ನರು ಯುದ್ಧದಲ್ಲಿ ಪ್ರವೇಶಿಸುವವರೆಗೆ ರಷ್ಯಾವನ್ನು ತಮ್ಮ ಪಕ್ಷದಲ್ಲಿರಿಸಿಕೊಳ್ಳುವುದಕ್ಕಾಗಿ ಅವರು ಹೀಗೆ ಮಾಡಿದರೆಂದು ಪತ್ರಿಕೆಗಳಲ್ಲಿ ಬರೆಯಬೇಕು. ಎಲ್ಲ ರಂಗಗಳಲ್ಲೂ ಶತ್ರುಗಳು ಸೋತು ಓಡುತ್ತಿರುವರೆಂದು ಪ್ರಜೆಗಳಿಗೆ ತಿಳಿಯುವಂತೆ ಬರೆಯುತ್ತಿರಬೇಕು. ತಮ್ಮ ದೇಶದ ಪ್ರಜೆಗಳಲ್ಲಿ ಕಾಣಬರುವ ತಿರುಗುಬಾಟುಗಳನ್ನು ಪ್ರಕಟಿಸಲಾಗದು. ತಟಸ್ಥ ದೇಶಗಳಿಂದ ಜರ್ಮನಿಗೆ ಸಾಗಿಬರುವ ಸಾಮಗ್ರಿಗಳ ವಿಷಯವನ್ನಾಗಲೀ, ಆಕ್ರಮಿತ ದೇಶಗಳಿಂದ ಜರ್ಮನರು ಸಾಗಿಸಿಕೊಳ್ಳುತ್ತಿರುವ ಪದಾರ್ಥಗಳ ವಿಷಯವನ್ನಾಗಲೀ ಪ್ರಕಟಿಸಕೂಡದು " ಎಂದು ಅಪ್ಪಣೆಮಾಡಿರುತ್ತಾರೆ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 14

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 6

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿರುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಟ್ಟೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲಿಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ ಜಡ್ಡು, ಗುದ್ದವ್ವನ ಬೇನೆ, ತುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿನದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಟಿಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
43 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ಕಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರು ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧ಂತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಎಲ್ಲಾರೋಗಗಳಿಗೆ ೧೫-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಬಾರದು. ಸಕಲ ಔಷಧಗಳನ್ನು ಕೊಂಡು ನೋಡಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಜಪ್ಪಾಗಿ ಲಕ್ಷ್ಯದಲ್ಲಿಡಿರಿ !!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
9 . ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ ಯೋಗಪತಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
9 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ।	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೫—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೀಸೀ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇದೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರೆವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 5

ಇಮಿಟೇಷನ್ ಸಿಲ್ಕ ಗೋವರ್ ಜಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5-8.0
ಬಾಲಾಮಣಿ ಸೀರೆ	3.8.0

ವಿಳಾಸ:-ವೈರಂ ಅಂಡ್ ಕೊ, ಇರುಳಪ್ಪನಬೀದಿ, ಮದರಾಸು.

೧೯೧೮ ನೆಯ ಇಸವಿ ಜನವರಿ ತಾ|| ೧೩ ರಿಂದ ೧೯೧೮ ನೆಯ ಜನವರಿ ತಾ|| ೧೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಪುಷ್ಯ ಶು|| ಪಾಡ್ಯಮಿಯಿಂದ ಪುಷ್ಯ ಶು|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಳೆ ಕೇದಿ
13	1 ಭಾನು	ಪಾಡ್ಯ	50-34	ಉಷಾ	40-23	1
14	2 ಸೋಮ	ಬಿದಿಗೆ	45-42	ಶ್ರವಣ	37-19	2
15	3 ಮಂಗಳ	ತದಿಗೆ	40-14	ಧನಿಷ್ಠ	33-41	3
16	4 ಬುಧ	ಚೌತಿ	34-26	ಶತಭಿಷ	29-39	4
17	5 ಗುರು	ಪಂಚ	28-28	ಪೂಭಾ	25-25	5
18	6 ಶುಕ್ರ	ಷಷ್ಠಿ	22-32	ಉಭಾ	21-15	6
19	ಶನಿ	ಸಪ್ತಮಿ	16-55	ರೇವತಿ	17-20	7

(1) ತೀರ್ಥಹಳ್ಳಿಯಲ್ಲಿ ರಾಮೇಶ್ವರಸ್ವಾಮಿರಥಃ. (2) ಉತ್ತರಾಯಣ ಪುಣ್ಯಕಾಲಃ, ಶಿವಗಂಗಾ ಸಂಗೋತ್ಸವಃ. (3) ಕನೂಹಬ್ಬಾ, ಬುಂಚನಕಟ್ಟೆ ರಾಮಸ್ವಾಮಿ ರಥಃ, ಶಂಕರನಾರಾಯಣದಲ್ಲಿ ರಥಃ, ಉಡುಪಿಯಲ್ಲಿ ಚೂರ್ಣೋತ್ಸವಃ. (4) ದೂರ್ವಾಗಣಪತೀವ್ರತಂ. (5) ಮೂಗಶಿರ ಲಕ್ಷ್ಮೀವ್ರತಂ. (6) ಕುಕುಷಷ್ಠೀ, ಉಡುಪಿಯಲ್ಲಿ ಪರ್ಯಾಯೋತ್ಸವಃ, ಶ್ರೀರಂಗದಲ್ಲಿ ಭೂಪತಿ ಉತ್ಸವಾರಂಭಃ.

ಮೈಸೂರ್: ವೈ. ತಿರುಮಲಯ್ಯಂಗಾರವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷದ್ವಿಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ರಕೆಯಂಸದಾಪೂರಿಗೆ ಗೌರೀಕಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

REGISTERED NO M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಫೆಬ್ರವರಿ ತಾರೀಖು ೩ ನೆಯ ಭಾನುವಾರ. (ಸಂಚಿಕೆ ೫

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
8 3, ಇರುಳಪ್ಪನಬೀದಿ, ಮದರಾಸ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕೋಟೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಶ ಂಕರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತನೊತ್ತರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪುಕಟ! ೨೨ ಪುಟಗಳ ಪುಸ್ತಕವು. ಪುಕಟ!!

7 ಅಂಚೇ ಹಾಸಲು ಸಹ ಕೊಡಬೇಕಾಗಿಲ್ಲ.

ಒಕ್ಕಲಿಗರ ಜೀವನ ಸರ್ವಸ್ವವಾಗಿರುವ ದನಕರುಗಳ ಪ್ರತಿಯೊಂದು ರೋಗದ ಕಾರಣ, ಲಕ್ಷಣ, ವರೋಗೀ ದನಗಳ ಉಪಚಾರ ಇವುಗಳನ್ನು ವಿಶದವಾಗಿ ವಿವರಿಸಿದ "ಪಶುಸಂಜೀವನ" ವೆಂಬ ಸುಂದರವಾದ ಪುಸ್ತಕವನ್ನು ಏನೂ ಬೆಲೆಯಿಲ್ಲದೆ ಕಳುಹಿಸುವೆವು. ಪ್ರತಿಗಳು ಹೇರಳವಾಗಿವೆ. ತ್ವರೆಯಿಂದ ತರಿಸಿ ಓದಿರಿ.

ಸುಪ್ರಸಿದ್ಧ] [ಸುವಾಸಿಕ

ಶಾಂತವೀರ.

ಹುರುಕಿನ ಔಷಧ.

ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ. ಖರ್ಚು ಬೇರೆ. ಒಮ್ಮೆಲೆ ೧೦೦ ಪುಟ್ಟಿಗಳನ್ನು ತರಿಸಿಕೊಳ್ಳುವವರಿಗೆ ಅಂಚೇ ವೆಚ್ಚ ಸೇರಿ ೪—೮—೦.

ಕಣ್ಣುಬೇನೆಯ ಔಷಧ:—ಚೀಟು ೧ ಕ್ಕೆ ೩ ಪೈ. ೧೦೦ ಕ್ಕೆ ೧ ರೂಪಾಯಿ. ಟ. ಖರ್ಚು ೪೦೦ ಚೀಟುಗಳವರೆಗೆ ನಾಲ್ಕೇ ಆಣೆ.

ಹೇನು ವ ಶೀರು ನಾಶಕ ಚೂರ್ಣ:—ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೧—೮—೦. ಟ. ಖರ್ಚು ಬೇರೆ.

ಕ್ರಿಮಿನಾಶಕ ಚೂರ್ಣ (ಜಂತಿನ ಪುಡಿ)—ಚೀಟು ೧ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ. ಖರ್ಚು ಬೇರೆ.

ಪ್ಲೇಗ್ ಪ್ರತಿಬಂಧಕ ಗುಳಿಗೆ:—೨೫ ಕ್ಕೆ ೧ ರೂಪಾಯಿ. ೧೦೦ ಕ್ಕೆ ೩ ರೂಪಾಯಿ. ಟ. ಖರ್ಚು ಬೇರೆ.

ಪಶುಸಂಜೀವಿನೀ (ದನಗಳ ಔಷಧ):—೧೦ ತೊಲೆಯ ಡಬ್ಬಿ ೧ ಕ್ಕೆ ೧ ರೂಪಾಯಿ. ಡಜನ್ನಿಗೆ ಟ. ಖರ್ಚು ಸಹ ೧೦—೦—೦.

ನಮ್ಮ ಔಷಧಾಲಯದಲ್ಲಿ ಎಲ್ಲಪ್ರಕಾರದ ಕಾಢೆ, ಚೂರ್ಣ, ಮಾತ್ರೆ, ಗುಗ್ಗುಲ, ಗುಟಿಕಾ ಮುಂತಾದ ಆಯುರ್ವೇದಿಕ ಔಷಧಗಳು ತಯಾರ ಅವೆ. ಯೋಗ್ಯ ಕ್ರಯಕ್ಕೆ ಕಳುಹಿಸುವೆವು.

ಸೂಚನೆ:—ನಮ್ಮ ಔಷಧಗಳನ್ನು ಕೊಂಡುಕೊಳ್ಳುವುದರಿಂದ ಪದೇ ಪದೇ ಹಣವನ್ನು ಕಳೆದುಕೊಳ್ಳುವುದು ತಪ್ಪುತ್ತದೆ. ಬೇಕಾದವರು ಬೇಕಾದಷ್ಟು ತರಿಸಿಕೊಳ್ಳಬಹುದು. ಅನೇಕ ಬೂಟಾಟಿಕೆಯ ಔಷಧಗಳನ್ನು ತರಿಸಿ ಮೋಸಹೋಗಬೇಡಿರಿ. ಆರ್ಯವೈದ್ಯಕ ತತ್ವಕ್ಕನುಸರಿಸಿ ನಡೆಯುವ ಕರ್ನಾಟಕ ಪ್ರಾಂತದೊಳಗಿನ ಒಂದೇ ಔಷಧಾಲಯವು.

(ತಂತೀ ವಿಳಾಸ)
'ಶಾಂತವೀರ' ಕಿತ್ತೂರ

ವಿಳಾಸ:—ಕರ್ನಾಟಕ ಜಂಗೀ ವನೌಷಧಾಲಯ, ಕಿತ್ತೂರ.
ಮಾಲಕರು—ಡಾಕ್ಟರ, ಎಸ್.ಆರ್. ಕಿತ್ತೂರ, "ಪಶುಸಂಜೀವಿನೀ" ಶೋಧಕರು,
ಪೋಸ್ಟ್ ಕಿತ್ತೂರ, ಜಿಲ್ಲಾ ಬೆಳಗಾಂವ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ।	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 9

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿರುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಟ್ಟೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಫೆಬ್ರವರಿ ತಾ|| ೩ ನೆಯ ಭಾನುವಾರ.

ಆಹಾರ್ಯವಸ್ತುಗಳ ಬೆಲೆ.

ಮಹಾಪಾಪಿಯುದ್ಧವು ಗಂಟುಬಿದ್ದು ಜಗತ್ತನ್ನೆಲ್ಲಾ ಹಾಳ್ಮಾಡುತ್ತಿರುವುದು. ಇದರ ತಾಪದಿಂದ ಕಷ್ಟನಷ್ಟಗಳನ್ನನುಭವಿಸದಿರುವ ಮನುಷ್ಯಪ್ರಾಣಿಯು ಜಗತ್ತಿನಲ್ಲಿ ಈಗ ಒಬ್ಬನಾದರೂ ಇಲ್ಲವೆಂದು ಹೇಳುವುದು ತಪ್ಪಾಗುವುದಿಲ್ಲ. ಆಹಾರವಸ್ತುಗಳು ಉಡುವತೊಡುವ ಬಟ್ಟೆಬರೆಗಳು ಕೈಗಾರಿಕೆಯ ಮುಟ್ಟುಗಳು ಲೋಹಗಳು ಮೊದಲಾದ ಸಕಲ ಸಾಮಗ್ರಿಗಳಿಗೂ ಈಗ ಒಂದಕ್ಕೆರಡು ಹತ್ತರಷ್ಟು ಬೆಲೆಯೇರಿರುವುದೆಲ್ಲಾ ಈಗಣ ಯುದ್ಧದಿಂದಲೇ ಆಗಿರುತ್ತದೆ. ದೇಶದ ಎಲ್ಲ ಪುರಗ್ರಾಮಾಂತರಗಳಲ್ಲೂ ಪದಾರ್ಥಗಳ ಬೆಲೆಯು ಹೆಚ್ಚಿಗೆಯಿಂದ ಬಡಬಗ್ಗರೂ ಮಧ್ಯಸ್ಥರಾದ ಜನರೂ ಪಡುತ್ತಿರುವ ಕಷ್ಟನಷ್ಟಗಳು ವಾಚಾಮಗೋಚರವಾಗಿರುತ್ತವೆ. ಯಾರ ಅನಿಷ್ಟಿಯೇನಾದರೂ ಆಗಲಿ, ಸದ್ಯಕ್ಕೆ ಯುದ್ಧವು ನಿಂತರೆ ಸಾಕೆಂದು ಕೋಟ್ಯಂತರ ಜನರು ಅಹರ್ನಿಶಿಯೂ ಹಸಿಸುತ್ತಿದ್ದಾರೆ. ಯುದ್ಧರಂಗದ ಸ್ಥಿತಿಗತಿಯ ವಾರ್ತೆಗಳನ್ನು ಕೇಳಿದರೆ ಇನ್ನೂ ಈ ಹಾಳುಯುದ್ಧವು ವರ್ಷಗಟ್ಟಲೆಯಾದರೂ ಮುಗಿಯುವಂಥ ಚಿಹ್ನೆಗಳು ಕಂಡುಬರುವುದಿಲ್ಲ. ಯುದ್ಧಾರಂಭವಾಗಿ ಈಗ ೪ ನೆ ವರ್ಷ ನಡೆಯುತ್ತಿದೆ. ಯುದ್ಧಾರಂಭಕ್ಕೆ ಪೂರ್ವದಲ್ಲಿ ಪ್ರಪಂಚದಲ್ಲಿದ್ದ ವಸ್ತುಸಮೃದ್ಧಿಯಿಂದ ಹಾಗೂ ಹೀಗೂ ೩|| ವರ್ಷಗಳನ್ನು ತಳ್ಳಿಕೊಂಡು ಬಂದುದಾಯಿತು. ಯುದ್ಧಮಧ್ಯಕಾಲದಲ್ಲಿ ಆ ವಸ್ತುಸಮೃದ್ಧಿಯೆಲ್ಲಾ ಕರಗಿಹೋಯಿತು. ಇನ್ನೇನಾದರೂ ಒಂದೆರಡು ವರ್ಷಗಳು ಹೀಗೆಯೇ ಯುದ್ಧವು ನಡೆಯುವುದಾದರೆ ಪ್ರಪಂಚವೆಲ್ಲಾ ಆಹಾರ್ಯವಸ್ತುಗಳ ಕೊರತೆಯಿಂದ ಹಿಡಬಾರದಷ್ಟು ವ್ಯಥೆಯನ್ನು ಪಡಬೇಕಾಗುವುದು ತಪ್ಪುವುದಿಲ್ಲ. ಈಗಲೇ ಪದಾರ್ಥಗಳ ಬೆಲೆಯು ಮಹಾಪೀಡಕಾಲದ ಬೆಲೆಗೆ ಸಮನಾಗಿವೆ. ಯೂರೋಪುಖಂಡದಲಂತೂ ಪ್ರತಿದೇಶದಲ್ಲೂ ಆಹಾರ್ಯಲೋಪದ ಸಂಕಟವು ಎಲ್ಲಕ್ಕಿಂತಲೂ ದೊಡ್ಡದಾಗಿ ನಿಂತಿದೆ. ಪ್ರತಿಯೊಂದು ಪ್ರಭುತ್ವದವರೂ ಪ್ರಜೆಗಳಿಗೆ ಆಹಾರ್ಯವಸ್ತುಗಳನ್ನು ಮಿತವಾಗಿಯಾದರೂ ದೊರೆಯುವಂತೆ ಮಾಡುವುದಕ್ಕಾಗಿ ಒಂದೊಂದು ಸಂಘವನ್ನೂ ಒಬ್ಬೊಬ್ಬ ಮಂತ್ರಿಯನ್ನೂ ಏರ್ಪಡಿಸಿಟ್ಟು, ಬಹು ಜಾಗರೂಕರಾಗಿ ಕೆಲಸಮಾಡುತ್ತಿದ್ದಾರೆ. ಇನ್ನು ಮುಂದೆ ನಮ್ಮ ಭರತಖಂಡಕ್ಕೂ ಅಂಥ ಸ್ಥಿತಿಯೇ ಬರುವುದೋ ಏನೋ ಎಂಬ ಭಯವು ಹುಟ್ಟುತ್ತಿದೆ. ಆಗಲೇ ದೇಶದಲ್ಲೆಲ್ಲಾ ಕೊಲೆಸುಲಿಗೆಗಳೂ ಕಳವುಗಳೂ ಹೆಚ್ಚುತ್ತಲಿವೆ ದೊಡ್ಡದೊಡ್ಡ ಪಟ್ಟಣಗಳಲ್ಲಿ ಎಲ್ಲಿ "ಲೂಟಿ" ಯಾಗುವುದೋ ಎಂಬ ಚಿಂತೆಯು ಧನಿಕರಲ್ಲಿ ಕಾಣಿಸಿಕೊಂಡಿದೆ. ಪದಾರ್ಥಗಳ ಬೆಲೆಯನ್ನು ನಿಗದಿಮಾಡುವ ವಿಷಯದಲ್ಲಿ ಪ್ರಭುತ್ವದವರು ಪ್ರಯತ್ನಿಸತಕ್ಕುದು ಅತ್ಯಾವಶ್ಯಕವೆಂಬ ಮಂತ್ರಾಲೋಚನೆಯನ್ನು ದೀರ್ಘಾಲೋಚನಪರರುಗಳು ಹೇಳುತ್ತಿದ್ದಾರೆ. ಮುಖ್ಯಮುಖ್ಯ ಜನರು ಈ ವಿಷಯವಾಗಿ ಸರ್ಕಾರಕ್ಕೆ ಬಿನ್ನಯಿಸಿಕೊಳ್ಳುತ್ತಿದ್ದಾರೆ. ಬೊಂಬಾಯಿ ಗೌರ್ನರವರು ನಿನ್ನೆ ತಾನೇ ಈ ಆಹಾರ್ಯವಸ್ತುಗಳ ಬೆಲೆಯ ವಿಷಯವಾಗಿ ಒಂದು ಉಪನ್ಯಾಸವನ್ನು ಮಾಡುತ್ತಿರುವಾಗ - ಈ ದೇಶದಲ್ಲಿ ಆಹಾರ್ಯವಸ್ತುಗಳನ್ನು ಪ್ರಜೆಗಳಿಗೆಲ್ಲಾ ಸರ್ಕಾರದವರೇ ಹಂಚಿಕೊಡಬೇಕಾದ ಸ್ಥಿತಿಯು ಇನ್ನೂ ಪ್ರಾಪ್ತವಾಗದಿದ್ದರೂ, ಈಗಣಿಂದಲೂ ಪ್ರಜೆಗಳು ಮಿತವ್ಯಯದ ಪದ್ಧತಿಯನ್ನು ಅನುಷ್ಠಾನಕ್ಕೆ ತಂದುಕೊಳ್ಳುತ್ತ ಬರುವುದಾದರೆ ಇದಕ್ಕೆ ಸರ್ಕಾರದವರು ಪ್ರವೇಶಿಸಬೇಕಾದಂಥ ಪ್ರಸಂಗವು ಸಂಭವಿಸಲಾರದು. ಯೂರೋಪುಖಂಡದಲ್ಲಿ ಶ್ರೀಮಂತರು ಮೊದಲಾದವರೆಲ್ಲಾ ಸಾಮಾನ್ಯಪ್ರಜಾಹಿತಾರ್ಥವಾಗಿ ತಮ್ಮ ಭೋಗಾಧಿಕ್ಯಗಳನ್ನೆಲ್ಲಾ ಕಡಿಮೆಹಾಕಿ, ಆಹಾರಗಳನ್ನು ಮಿತಗೊಳಿಸಿಕೊಂಡಿದ್ದಾರೆ. ಅಂಥ ಏರ್ಪಾಟನ್ನು ಇಲ್ಲಿಯ ಧನಿಕವರ್ಗದವರೂ ಕೂಡ ಮಾಡಿಕೊಳ್ಳುವುದು ಉಚಿತವು. ಆದರೆ ಹೀಗೆ ಎಷ್ಟು ಜನಗಳು ಇಲ್ಲಿ ಮಾಡಿಕೊಂಡಿದ್ದಾರೆ? ಎಂದು ಹೇಳಿದರು. ಇದರಿಂದ ಮುಂದೆ ಈ ದೇಶದಲ್ಲಿ ಆಹಾರ್ಯಾದಿವಸ್ತುಗಳ ದುರ್ಭಿಕ್ಷವು ಎಷ್ಟುಮಟ್ಟಿಗೆ ಪ್ರಾಪ್ತವಾಗಲಿಕ್ಕಿರುವುದೆಂಬುದನ್ನು ಊಹಿಸಿಕೊಳ್ಳಬಹುದಾಗಿದೆ. ಬೆಳೆದ ವಸ್ತುಗಳೆಲ್ಲಾ ಅನ್ಯದೇಶಗಳಿಗೆ ಸಾಗಿಸಲ್ಪಡಲಿಕ್ಕಿರುವುದರಿಂದ ಅವುಗಳಿಗೆ ಹೆಚ್ಚಿನ ಬೆಲೆಯು ಸಿಕ್ಕುವುದರಲ್ಲಿ ಅಡ್ಡಿಯಿಲ್ಲ. ಬೆಲೆಯಾಸೆಗೆ ಪ್ರಜೆಗಳು ಅವನ್ನು ಮಾರಿಕೊಳ್ಳುವುದು ಸ್ವಭಾವವಾಗಿಯೇ ಇದೆ. ಇದರಮೇಲೆ ಪ್ರಭುತ್ವದವರು ಕೂಡ ಮಹಾಯುದ್ಧಕಾರ್ಯನಿರ್ವಾಹಕ್ಕಾಗಿ ತಮ್ಮ ಸಾಮ್ರಾಜ್ಯದ ಯಾವ ಮೂಲೆಯಲ್ಲಿ ಯಾವ ಪದಾರ್ಥಗಳು ದೊರೆದರೂ, ಅವಕ್ಕೆ ಹೇಳಿದ ಬೆಲೆಯನ್ನು ಕೊಟ್ಟು ಸಾಗಿಸಿಕೊಂಡುಹೋಗುವುದಕ್ಕೂ ಸಿದ್ಧರಾಗಿದ್ದಾರೆ. ಈ ಕಾರಣದಿಂದ ಬೆಲೆ ಹೆಚ್ಚುವುದನ್ನು ಸಂಪೂರ್ಣವಾಗಿ ತಪ್ಪಿಸುವುದು ಸಾಧ್ಯವಲ್ಲವೆಂದೇ ಕಾಣುತ್ತದೆ. ಈ ದುರ್ಭಿಕ್ಷಕಷ್ಟವನ್ನು ಬೆಳೆಯುವ ರೈತರು ಸ್ವಲ್ಪಮಟ್ಟಿಗೆ ತಪ್ಪಿಸಿಕೊಳ್ಳಬಹುದಾದರೂ ಬೆಳೆಯದಿರುವ ಇತರ ವಸ್ತುಗಳನ್ನು ಕೊಂಡುಕೊಳ್ಳುವಾಗ ಅವರೂ ಅವರಂತೆ ಇತರ ಪ್ರಜೆಗಳೂ ಸಹ ಅನುಭವಿಸದೆ ಇರುವುದಕ್ಕಾಗುವುದೇ ಇಲ್ಲ. ಜಗದೀಶ್ವರ ಕಟಾಕ್ಷದಿಂದ ಯುದ್ಧವು ಅನಿರೀಕ್ಷಣೆಯಿಂದ ಥಟ್ಟನೆ ನಿಂತುಹೋಗುವುದಾದರೆ ಲೋಕವೇ ಬದುಕಿಕೊಳ್ಳುವುದು. ಯಾವಾಗ್ಗೆ ಅಂಥ ಕಾಲವು ಬರುವುದೋ ಎಂದು ಜಗತ್ತೆಲ್ಲವೂ ನಿರೀಕ್ಷಿಸಬೇಕಾಗಿ ಬಂದಿದೆ.

ಆಹಾರ್ಯವಸ್ತುಗಳ ತಾಪತ್ರಯ ಚಿಂತೆಯು ಪ್ರಜೆಗಳಿಗಿಂತ ಪ್ರಭುಗಳಿಗೇನೂ ಕಡಿಮೆಯಾಗಿಲ್ಲ. ಅವರೂ ಕೂಡ ಎಷ್ಟೋ ದೂರದ ಯೋಚನೆಯಿಂದ ಪ್ರಜೆಗಳಿಗೆ ಉಚಿತ ಸೂಚನೆಗಳನ್ನು ಮಾಡುತ್ತಿದ್ದಾರೆ. ಅದನ್ನು ಅಲ್ಲಗಳೆಯದೆ ಗಮನಿಸಿ ಎಚ್ಚತ್ತು ನಡೆದುಕೊಳ್ಳುವುದು ಎಲ್ಲರಿಗೂ ಕರ್ತವ್ಯವಾಗಿದೆ. ಆದರೆ ಬೊಂಬಾಯಿ ಗೌರ್ನರಾದ ಲಾರ್ಡ್ ವಿಲ್ಲಿಂಗ್ಡನ್ನರವರು ಮೇಲೆ ಹೇಳಿದಂತೆ ಆತ್ಮಸೂಚನೆ ಮಾಡುತ್ತಿರುವಲ್ಲಿ ಪುಣೆಯ ಮರಾಠಾ ಪತ್ರಿಕೆಯು ಏನು ಹೇಳಿರುತ್ತದೆ ನೋಡಿರಿ—"ಈ ದೇಶದಲ್ಲೂ ಪ್ರಜೆಗಳಿಗೆ ಪದಾರ್ಥಗಳನ್ನು ಹಂಚಿಕೊಡುವ ವಿಷಯದಲ್ಲಿ ಯಾರದೂ ಅಭ್ಯಂತರವಿಲ್ಲ. ಆದರೆ ಇದನ್ನು ಹಂಚಿಕೊಡುವಂತೆಯೇ ಯೂರೋಪ್ಯರಿಂದ ವಿಶೇಷವಾಗಿ ಅನುಭವಿಸಲ್ಪಡುತ್ತಲಿರುವ ಅಧಿಕಾರದ "ಹಕ್ಕು" ಗಳನ್ನೂ ಪ್ರಜೆಗಳಿಗೆಲ್ಲಾ ಹಂಚಿಕೊಡಬೇಕೆಂಬುದೇ ಸ್ವರಾಜ್ಯವಾದಿಗಳ ಆಶಯವಾಗಿರುತ್ತದೆ" ಎಂದು ಹೇಳಿರುತ್ತದೆ. ಅತ್ತೆಗೆ ಹೊತ್ತಿಗೆ ಹೇಗೆ ಎಂಬ ಚಿಂತೆಯಾದರೆ ಸೊಸೆಗೆ ಮಸೆಯುವ ಚಿಂತೆಯಂತೆ. ಯೂರೋಪಿಯನ್ನರ ಕೈಯಲ್ಲಿರುವ ಅಧಿಕಾರವನ್ನು ಕಿತ್ತು ಹಂಚಿಕೊಳ್ಳಲಿಕ್ಕೆ ತಮಗೆ ಹಕ್ಕಿದೆಯೆಂದು ವಾದಿಸುವ ಸ್ವರಾಜ್ಯವಾದಿಗಳ ಬುದ್ಧಿಗೆ, ತಮ್ಮಂತೆ ತಮ್ಮ ಸಹೋದರರಾದ ಹಿಂದುಳಿದ ಸಕಲ ಪ್ರಜೆಗಳಿಗೂ ಆ ಅಧಿಕಾರಾನುಭವಕ್ಕಾಗಿ ಪ್ರತ್ಯೇಕ ಪ್ರಾತಿನಿಧ್ಯವನ್ನು ಒಪ್ಪದೆ ಹೋಗುವುದು ಸ್ವಜನದ್ರೋಹವಾಗುವುದೆಂಬುದು ಮಾತ್ರ ಸ್ಫುರಿಸುವುದಿಲ್ಲ! ಇದೇ ವಿಚಿತ್ರ. ಅದಂತಿರಲಿ.

ಬೊಂಬಾಯಿಯಲ್ಲಿ ಹೆಚ್ಚಿ ಹೋಗುತ್ತಿರುವ ಆಹಾರ್ಯವಸ್ತುಗಳ ಬೆಲೆ, ಮನೆಬಾಡಿಗೆ ಮೊದಲಾದುವುಗಳಿಂದ ಸಾಮಾನ್ಯ ಪ್ರಜೆಗಳಿಗೆ ಉಂಟಾಗಿರುವ ಕಷ್ಟವನ್ನು ನಿವಾರಣೆಮಾಡಬೇಕೆಂಬುದ್ದೇಶದಿಂದ ಅಲ್ಲಿಯ ಗೌರ್ನರೂ ಶಾಸನಪ್ರಮುಖರೂ ಪರ್ಯಾಲೋಚಿಸಿ, ವಸ್ತುಗಳ ಬೆಲೆಯ ನಿಗದಿ ಮೊದಲಾದುವುಗಳ ಏರ್ಪಾಡಿಗಾಗಿ ಒಬ್ಬ ಅಧಿಕಾರಿಯನ್ನೂ, ಒಂದು ಆಲೋಚನಾ ಸಂಘವನ್ನೂ ಮಾಡಬೇಕೆಂದು ಮೊನ್ನೆ ವಾರದಲ್ಲಿ ನಿರ್ಧರಿಸಿಕೊಂಡರು. ಆದರೆ ಬಡಬಗ್ಗರಾದ ಕೂಲಿ ಜನರು ತಮ್ಮ ಹೊಟ್ಟೆಪಾಡನ್ನು ಸೈರಿಸಲಾರದೆ ಬೊಂಬಾಯಿಯ ಕೆಲವು ಅಂಗಡಿಗಳನ್ನೇ ಕಳೆದವಾರದಲ್ಲಿ ಸುಲಿಗೆ ಮಾಡಿದರೆಂಬ ಭೀಕರವಾದ ವಾರ್ತೆಯು ಬಂದಿರುತ್ತದೆ. ಸಾಂಕ್ರಾಮಿಕ ಜಾಡ್ಯಗಳಿಂದ ಉಂಟಾಗುವ ಪ್ರಾಣಹಾನಿಗಿಂತಲೂ ಅನ್ನವಿಲ್ಲದೆ ಜನರು ಅನುಭವಿಸುವ ಕಷ್ಟವು ಭೀಕರವೂ-ದುಸ್ಸಹವೂ ಆಗುವುದು ಸಹಜವು. ತಮ್ಮ ಹೊಟ್ಟೆಯ ಭರಣಕ್ಕಾಗಿ ದೀನಜನರು ಯಾವ ಮಹಾಪರಾಧವನ್ನು ಮಾಡುವುದಕ್ಕೂ ಹೆದರುವುದಿಲ್ಲ. ಆಹಾರವಿಲ್ಲದೆ ಸಾಯುವುದೇ ಸಿದ್ಧವಾಗಿರುವಾಗ ದೇಹದಮೇಲೆ ಅವರಿಗೆ ಅಭಿಮಾನವೆಲ್ಲಿರುವುದು? ಅಂಥ ಕಾಲದಲ್ಲಿ ತಮ್ಮ ಬಿರಿಗೇ ಉಂಡುಂಡು ಮಲೆಯುತ್ತ ಮತ್ತರಾಗಿ ಬಡಬಗ್ಗರಮೇಲೆ ಲೇಶವೂ ಕನಿಕರವಿಲ್ಲದಿರುವ ಧನಿಕರನ್ನು ಕಂಡರೆ ಇವರುಗಳು ಬಹಳವಾಗಿ ರೇಗುವುದು ಸ್ವಭಾವವಾಗಿರುತ್ತದೆ. ಆ ರೇಗಾಟದ ಫಲವನ್ನು ಆ ಧನಿಕರುಗಳೇ ಮೊಟ್ಟಮೊದಲು ಅನುಭವಿಸಬೇಕಾಗುತ್ತದೆ. ಅದುಕಾರಣ ಇಂಥ ದುಷ್ಪರಿಣಾಮವನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ದೂರದೃಷ್ಟಿಯುಳ್ಳ ಶ್ರೀಮಂತರುಗಳು ತಮ್ಮ ಆಸ್ತಿಗೆ ಮೂಲತೋನಾಶವನ್ನು ಮಾಡಿಕೊಂಡು ವ್ಯಥೆಪಡುವುದಕ್ಕಿಂತಲೂ ಆಪತ್ಕಾಲದಲ್ಲಿ ತಮ್ಮ ನೆರೆಯ ಬಡಜನರ ಉದ್ಧಾರಕ್ಕಾಗಿ ಸ್ವಲ್ಪಮಟ್ಟಿಗೆ ಸ್ವಾರ್ಥತ್ಯಾಗಮಾಡಬೇಕೆಂದು ಅವರಲ್ಲಿ ಕೆಲವರು ವ್ಯಾಪಾರಿಗಳು ಲಾಭವನ್ನಿಡದೆ ಪದಾರ್ಥಗಳನ್ನು ಅಗ್ಗವಾಗಿ ಮಾರುವುದಕ್ಕೂ ಕೆಲರು ನಷ್ಟವನ್ನಾದರೂ ಪಟ್ಟುಕೊಂಡು ವಸ್ತುಗಳನ್ನು ವಿಕ್ರಯಿಸುವುದಕ್ಕೂ, ಕೆಲರು ಅನ್ನಸತ್ರಗಳನ್ನೇರ್ಪಡಿಸಿ ಅನಾಥರನ್ನು ರಕ್ಷಿಸುವುದಕ್ಕೂ ಹೀಗೆ ನಾನಾವಿಧವಾಗಿ ದೀನರಕ್ಷಣೆಯ ಏರ್ಪಾಟನ್ನು ಮಾಡಿ, ಆತ್ಮರಕ್ಷಣೆಯನ್ನೂ ಪುಣ್ಯಲಾಭವನ್ನೂ ಮಾಡಿಕೊಳ್ಳುತ್ತಿರುವರು. ಇಂಥ ಕಾರ್ಯವು ಪಶ್ಚಿಮದೇಶಗಳಲ್ಲಿ ವಿಶೇಷವಾಗಿ ನಡೆಯುತ್ತಿರುವುದು. ನಮ್ಮಲ್ಲೂ ಕ್ಷಾಮಕಾಲಗಳಲ್ಲಿ ಕೆಲವರು ಧರ್ಮಾತ್ಮರು ಇಂಥ ಕಾರ್ಯಗಳನ್ನು ಮಾಡಿ ಯಶಃಪುಣ್ಯಗಳನ್ನು ಸಂಪಾದಿಸಿರುವರು. ಆದರೆ ಈಗ ನಮಗೆ ತಟ್ಟಲಿಕ್ಕಿರುವುದು ಅನಾವೃಷ್ಟಿ-ಅತಿವೃಷ್ಟಿಗಳ ಮೂಲಕವಾದ ಕ್ಷಾಮವಾಗಿಲ್ಲ. ಪ್ರಪಂಚವನ್ನೇ ಪ್ರಳಯಗೊಳಿಸುತ್ತಿರುವ ಮಹಾಯುದ್ಧರೂಪವಾದ ದಾವರವಾಗಿರುತ್ತದೆ. ಇದರ ಬಾಧೆಯು ಅತಿಶಯ ಕ್ಷಾಮವನ್ನು ಜಗತ್ತಿಗೆ ತಂದಿಕ್ಕಿರುತ್ತದೆ. ಪಶ್ಚಿಮದೇಶೀಯರು ತಂತಮ್ಮ ದೇಶರಕ್ಷಣೆಗಾಗಿ ಸರ್ವಸ್ವವನ್ನೂ ಧಾರೆಯೆರೆಯುತ್ತಿದ್ದಾರೆ. ನಾವೂ ಯಥಾಶಕ್ತಿಯಾಗಿ ಯುದ್ಧಕಾರ್ಯಕ್ಕೆ ಸಹಾಯಮಾಡಿಯೂ ಮಾಡುತ್ತಲೂ ಇದ್ದೇವೆ. ರಣರಂಗದಲ್ಲಿ ನಮಗಾಗಿ ಹೋರಾಡುತ್ತಿರುವ ನಮ್ಮ ಸಹೋದರರಾದ ಸೈನಿಕರಿಗೆಲ್ಲಾ ಎಷ್ಟೋ ಸಹಾಯವನ್ನು ಇಲ್ಲಿಂದ ಒದಗಿಸುತ್ತಲಿದ್ದೇವೆ. ಇವುಗಳ ಜತೆಗೆ ಯುದ್ಧದ ಬೇಗೆಯಿಂದ ಪರಿತಪ್ತರಾಗಿ ನಮ್ಮ ದೇಶದಲ್ಲೇ ಸಂಕಟಪಡುತ್ತಿರುವ ಬಡಬಗ್ಗರಾದ ನಮ್ಮ ಸೋದರ ಪ್ರಜೆಗಳಿಗೆ ಈ ಕಷ್ಟಕಾಲದಲ್ಲಿ ಯತ್ಕಿಂಚಿದವಲಂಬನೆಯನ್ನಾದರೂ ಕೊಡುವುದಕ್ಕೆ ನಮ್ಮ ದೇಶದ ಧನಿಕವರ್ಗದವರೂ ವರ್ತಕವರ್ಗದವರೂ ಮನಸ್ಕರಿಸುವುದು ಅತ್ಯಾವಶ್ಯಕವಲ್ಲವೆ? ಯುದ್ಧದ ಕಾರಣವನ್ನು ಹೇಳಿಕೊಂಡು ನಿರ್ಘೃಣರಾದ ಕೆಲ ವರ್ತಕರು ಇದೇ ಸಮಯವೆಂದು ಪದಾರ್ಥಗಳಿಗೆ ಬೆಲೆಯನ್ನೇರಿಸಿ, ಹಣವನ್ನು ಗುಡಿಸಿ ಗುಡ್ಡೆಹಾಕುತ್ತಿರುವರು. ಧನಾರ್ಜನೆಯನ್ನು ಮಾಡುವುದು ಸರ್ವರಿಗೂ ಕರ್ತವ್ಯವಾಗಿದ್ದರೂ ಅದರಲ್ಲೂ ಧರ್ಮವನ್ನು ಮೀರಿ ಹೋಗಬಾರದು. ಹಾಲನ್ನು ಹಿಂಡುವುದು ಗೋಪಾಲನ ಕರ್ತವ್ಯವಾದರೂ ಕೆಚ್ಚಲನ್ನೇ ಕೊಯ್ದು ಬಿಡುವುದಾಗಲೀ, ಕರುವಿಗೆ ಒಂದು ತೊಟ್ಟು ಹಾಲನ್ನೂ ಬಿಡದೆ ಕರೆಯುವುದಾಗಲೀ ಎಂದಿಗೂ ಧರ್ಮವಲ್ಲವಷ್ಟೆ? ಇದನ್ನು ಪರ್ಯಾಲೋಚಿಸಿ ನಮ್ಮ ದೇಶದ ವರ್ತಕರು ಧನಿಕರು ಮೊದಲಾದ ಜನವರ್ಗದವರೆಲ್ಲಾ ಈ ವಿಪತ್ಕಾಲದಲ್ಲಿ ಬೊಂಬಾಯಿಯಂಥ ಪರಿಣಾಮವು ಇತರ ಪಟ್ಟಣಗಳಲ್ಲೂ ಸಂಭವಿಸದಂತೆ ಮಾಡಿಕೊಳ್ಳುವುದಕ್ಕಾಗಿ ತಮ್ಮಗಳ ಲಾಭವನ್ನೇ ಮುಖ್ಯಲಕ್ಷ್ಯವನ್ನಾಗಿಟ್ಟುಕೊಳ್ಳದೆ, ಪ್ರಾಣಿದಯೆ, ಪುಣ್ಯಲಾಭ, ಆತ್ಮರಕ್ಷಣೆಗಳಮೇಲೆ ದೃಷ್ಟಿಯಿಟ್ಟು ಉದಾರಭಾವದಿಂದ ವರ್ತಿಸುವವರಾದರೆ ಬಹಳ ಕ್ಷೇಮವುಂಟು. ಅವರುಗಳು ಹಾಗೆ ಮಾಡದೆಹೋದರೆ ಸರ್ಕಾರದವರು ಪ್ರವರ್ತಿಸಿ ಮಾಡಬೇಕಾದುದನ್ನು ಮಾಡುವ ಆವಶ್ಯಕತೆಯು ಬರದೆ ಇರಲಾರದು.

ಸರ್ ವಿಲಿಯಂ ವೆಡರ್ಬರ್ನ್‌ರವರು.

ಈ ಮಹಾಶಯರು ತಮ್ಮ ೮೦ ನೆ ವಯಸ್ಸಿನಲ್ಲಿ ದಿವಂಗತರಾದರೆಂಬ ವಾರ್ತೆಯು ಕಳೆದ ವಾರದಲ್ಲಿ ಬಂದು ಭಾರತೀಯರಿಗೆ ವಿಶೇಷ ದುಃಖವನ್ನುಂಟುಮಾಡಿದೆ. ಸಿವಿಲ್ ಸರ್ವೀಸ್ ಪರೀಕ್ಷೆ ಕೊಟ್ಟು ಸೀಮೆಯಿಂದ ಈ ದೇಶಕ್ಕೆ ಬಂದು ಎಷ್ಟೋ ಅಧಿಕಾರಗಳನ್ನು ನಿರ್ವಹಿಸಿ ಹೋದ ಸಾವಿರಾರು ಮಂದಿ ಯೂರೋಪ್ಯರಲ್ಲಿ ಇವರೂ ಒಬ್ಬರಾಗಿದ್ದರೆ ಇವರ ಮೃತಿಯು ಯಾರಿಗೂ ಅಷ್ಟೇನೂ ದುಃಖವನ್ನುಂಟುಮಾಡಲು ಕಾರಣವಿರಲಿಲ್ಲ. ಇವರು ಈ ದೇಶದ ಅಧಿಕಾರದಲ್ಲಿದ್ದಾಗಲೂ ಅದನ್ನು ಬಿಟ್ಟಮೇಲೆ ಜೀವಿತಾಂತವಾಗಿಯೂ ಭಾರತೀಯರ ಹಿತವನ್ನೇ ಅಹರ್ನಿಶಿಯೂ ಕೋರುತ್ತಿದ್ದವರು. ಇವರ ಪಿತೃಗಳು ಈ ದೇಶದಲ್ಲಿ ೩೦ ವರ್ಷಕಾಲ ಅಧಿಕಾರ ಮಾಡಿದವರು. ಇವರು ೧೮೬೦ ನೆ ವರ್ಷದಿಂದ ೧೮೮೭ ರ ವರೆಗೆ ೨೭ ವರ್ಷಕಾಲ ಜ್ಯುಡಿಸಿಯಲ್ ಕಮಿಷನರ್ ಪದವಿ, ಗೌರ್ನರವರ ಕಾರ್ಯದರ್ಶಿತ್ವ, ಹೈಕೋರ್ಟು ಜಡ್ಜಿ ಪದವಿ ಮೊದಲಾದನೇಕಾಧಿಕಾರಗಳನ್ನು ಪಾಲ್ಯಪಾಲಕರಿರ್ವರಿಗೂ ಹಿತಕರವಾಗುವಂತೆ ನಿರ್ವಹಿಸಿ, ಉದ್ಯೋಗದಿಂದ ವಿಶ್ರಾಂತರಾದಮೇಲೆ ಕಳೆದ ೩೦ ವರ್ಷಗಳಿಂದಲೂ ಸೀಮೆಯಲ್ಲಿ ವಾಸಮಾಡುತ್ತಿದ್ದರೂ, ಪಾರ್ಲಿಮೆಂಟಿನಲ್ಲಿ ೬-೭ ವರ್ಷಗಳಕಾಲ ಸಭಿಕರಾಗಿದ್ದರೂ, ಆಗೆಲ್ಲಾ ಭಾರತ ಕ್ಷೇಮವನ್ನೇ ತಮ್ಮ ವ್ಯವಸಾಯಫಲವನ್ನಾಗಿಟ್ಟುಕೊಂಡಿದ್ದರು. ಈ ದೇಶದಲ್ಲಿ ರಾಷ್ಟ್ರೀಯ ಮಹಾಸಭೆಯನ್ನು ಮೊದಲು ಸ್ಥಾಪಿಸಿದ ಹ್ಯೂಂ, ಉಮೇಶಚಂದ್ರಬಾನರ್ಜಿ ಮೊದಲಾದವರೊಳಗೆ ಇವರೂ ಒಬ್ಬರಾಗಿದ್ದರು. ಅದೇ ರಾಷ್ಟ್ರೀಯ ಸಭೆಗೆ ಇವರು ೨ ಸಲ ಅಧ್ಯಕ್ಷರಾಗಿದ್ದರು. ಭಾರತೀಯರ ಅಭ್ಯುದಯಾರ್ಥವಾಗಿ ಇವರು ಕಾಲಕಾಲಕ್ಕೆ ಮಾಡುತ್ತ ಬಂದ ಸೂಚನೆಗಳು ಬಹಳ ಫಲಪ್ರದವಾಗುತ್ತಿದ್ದುವು. ಇವರು ತಮ್ಮ ಸ್ವಾರ್ಜಿತದಲ್ಲಿ ಲಕ್ಷಾವಧಿ ದ್ರವ್ಯವನ್ನು ಭಾರತೀಯ ಹಿತಾರ್ಥವಾಗಿ ವಿನಿಯೋಗಿಸಿದ್ದರು. ಇವರು ಭರತಖಂಡೋದ್ಧಾರದ ವಿಷಯವಾಗಿ ಸ್ವದೇಶೀಯರಿಗಿಂತಲೂ ಮಿಗಿಲಾದ ಅಭಿಮಾನವನ್ನು ವಹಿಸಿ ಕಾರ್ಯಮಾಡುತ್ತಿದ್ದುದನ್ನು ಕಂಡು ಅವರ ದೇಶೀಯರಲ್ಲೆಷ್ಟೋಮಂದಿಗಳು ಮಾಡುತ್ತ ಬಂದ ಅಪಲಾಪಗಳಿಗೂ ನಿಂದನೆಗಳಿಗೂ ಒಳಗಾಗಬೇಕಾಯಿತು. ಆದರೂ ಅವನ್ನೊಂದನ್ನೂ ಗಣಿಸದೆ ಕಡೆಯವರೆಗೂ ಪಾಶ್ಚಾತ್ಯ ದೇಶೀಯರಿಗೆ ಭರತಖಂಡದವರ ವಿಷಯಕವಾದ ಯಥಾರ್ಥ ಜ್ಞಾನವು ಹುಟ್ಟಿ ಉಭಯರ ಮಧ್ಯದಲ್ಲಿ ಪರಸ್ಪರ ಸಾನುಭೂತಿ ಹುಟ್ಟುವಂತೆ ಮಾಡುವುದರಲ್ಲಿ ವಿಶೇಷ ಶ್ರಮಪಟ್ಟು ಆಂಗ್ಲದೇಶಕ್ಕೂ ಭರತಖಂಡಕ್ಕೂ ಅಸಾಧಾರಣ ಸೇವೆಯನ್ನು ಮಾಡಿದರು. ಭರತಖಂಡದ ರಾಜ್ಯಾಂಗ ವ್ಯವಹಾರದಲ್ಲಿ ವಿಶೇಷವಾದ ವೈಲಕ್ಷಣ್ಯಗಳು ತಲೆದೋರುತ್ತಿರುವ ಈಗಣ ವಿಶಿಷ್ಟ ಸಮಯದಲ್ಲಿ ಚಿರಾನುಭವಸಂಪನ್ನರಾದ ಇಂಥ ಮಹನೀಯರ ಮೂಲಕ ಲಭಿಸಬಹುದಾಗಿದ್ದ ಮಂತ್ರಾಲೋಚನೆಯು ತಪ್ಪಿಹೋಗುವಂತಾದುದು ಭರತಖಂಡಕ್ಕೆ ಮಾತ್ರವೇ ಅಲ್ಲದೆ ಆಂಗ್ಲಸಾಮ್ರಾಜ್ಯಕ್ಕೇ ವಿಶೇಷವಾದ ನಷ್ಟವೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಸ್ವದೇಶಭಕ್ತಾಗ್ರೇಸರರಾಗಿದ್ದ ಚಿರಸ್ಮರಣೀಯರಾದ ಸರ್ ಮೇಹ್ತಾ, ಗೋಖಲೆ, ನೌರೋಜಿ ಮೊದಲಾದ ಮಹನೀಯರ ಪಙ್ಕ್ತಿಯವರಾಗಿಯೂ, ಸೀಮೆಯೊಳಗಣ ಭಾರತಾಭಿಮಾನಿ ವಿರಳತರ ಪುರಾತನ ಜನರಲ್ಲಿ ಗಣ್ಯರಾಗಿಯೂ ಇದ್ದ ಈ ಮಹಾಪುರುಷರ ಅಳಿವಿನಿಂದ ಭರತಖಂಡವು ತನ್ನ ಅಸದೃಶವಾದ ಪಾಶ್ಚಾತ್ಯ ಬಂಧುರತ್ನವೊಂದನ್ನು ಕಳೆದುಕೊಂಡು ಕಣ್ಣೀರನ್ನು ಸುರಿಸುವಂತಾಯಿತು. ಈಕೇಡಿಗೆ ಪ್ರತಿಯಿಲ್ಲ. ಜಗದೀಶ್ವರನು ಅವರ ಪವಿತ್ರಾತ್ಮನಿಗೆ ಚಿರಶಾಂತಿಯನ್ನನುಗ್ರಹಿಸಲಿ.

ಬೊಂಬಾಯಿಯಲ್ಲಿ ಸೂರೆ.

ಬೊಂಬಾಯಿಯ ಯಂತ್ರಶಾಲೆಗಳ ಕೂಲಿಗಾರರು ಹೆಚ್ಚಾಗಿ ವಾಸಿಸುವ ಸ್ಥಲವಾದ ಪರೇಲ್ ಎಂಬ ಕಡೆಯಲ್ಲಿ ಕಳೆದ ತಾ|| ೨೫ ನೆಯ ರಾತ್ರಿ ಒಂದೆರಡು ಅಂಗಡಿಗಳನ್ನು ಕೂಲಿಕಾರ ಜನರು ನುಗ್ಗಿ ಒಳಗಿದ್ದ ಸಾಮಾನುಗಳನ್ನೆಲ್ಲಾ (ಬಹುಶಃ ೩೦ ಸಾವಿರ ರೂ. ಬೆಲೆ) ದೋಚಿಕೊಂಡರು. ಸುದ್ದಿ ತಿಳಿದು ೫೦ ಮಂದಿ ಆಯುಧಸಮೇತರಾದ ಪೊಲೀಸರೊಡನೆ ಪೊಲೀಸ್‌ಕಮಿಷನರೂ ಡಿ|| ಕಮಿಷನರೂ ಅಲ್ಲಿಗೆ ಬಂದು ದೊಂಬಿಯ ಜನರಲ್ಲಿ ಹಲವರನ್ನು ಹಿಡಿದರು. ಆ ಗದ್ದಲದಲ್ಲಿ ಅಂಗಡಿ ಯಜಮಾನನಿಗೆ ಏಟುಗಳೂ ಬಿದ್ದುವು. ಮುಂದೆ ಅಂಥ ಸುಲಿಗೆಯು ನಡೆಯದಿರುವಂತೆ ಪೊಲೀಸಧಿಕಾರಿಗಳು ಏರ್ಪಾಟುಮಾಡಿ ಬಂದರು. ಅದೇ ದಿನ ಮಧ್ಯಾಹ್ನ ಮಾತಂಗಬಜಾರ್ ಎಂಬ ಬೀದಿಯಲ್ಲೂ ಹಲವು ಅಂಗಡಿಗಳು ಹೀಗೆಯೇ ಸೂರೆಮಾಡಲ್ಪಟ್ಟುವು. ಪದಾರ್ಥಗಳ ಬೆಲೆಯು ಬಹಳ ಹೆಚ್ಚಿಹೋದ ಕಾರಣದಿಂದಲೇ ಕೂಲಿ ನಾಲಿಯ ಜನರು ಇಂಥ ಕೆಲಸಗಳನ್ನು ಮಾಡಿದರೆಂಬುದು ವ್ಯಕ್ತವಾಗಿರುವುದು. ಸರ್ಕಾರದವರು ಕೂಡಲೇ ಪ್ರವೇಶಿಸಿ ಅಡಗಿಸದಿದ್ದರೆ ಸಂಕ್ಷೋಭವು ಬಹಳವಾಗಿ ಹೆಚ್ಚಿಹೋಗುತ್ತಿದ್ದಿತು. ಬಹುದಿನದಿಂದ ಕೂಲಿಕಾರರು ಹೆಚ್ಚು ಬೆಲೆಯ ಸಂಕಟವನ್ನು ಸೈರಿಸಲಾರದೆ ಅಸಮಾಧಾನಪಟ್ಟುಕೊಂಡಿದ್ದರು. ಅದು ಮಿತಿಮೀರಿ ಬಂದು ಕಡೆಗೆ ತಾ|| ೨೫ ರಲ್ಲಿ ಹೊರಹೊಮ್ಮಿ ಇಂಥ ಅನರ್ಥವನ್ನುಂಟುಮಾಡಿಸಿತು. ಮೊದಲು ಯಂತ್ರಾಲಯದ ಕೂಲಿಗಾರರು ವಿಶ್ರಾಂತಿಗಾಗಿ ಹೊರಕ್ಕೆ ಬಿಡಲ್ಪಟ್ಟಾಗ ಸಮೀಪದಲ್ಲೇ ಇದ್ದ ಮಿಠಾಯಿಯಂಗಡಿಗಳ ಮೇಲೆ ಬಿದ್ದು ಸೂರೆಮಾಡಿದರು. ಅದನ್ನು ಕಂಡು ಕೆಲ ಚಿಲ್ಲರೆ ವರ್ತಕರು ಬಾಗಿಲುಗಳನ್ನು ಮುಚ್ಚಿಕೊಂಡು ಓಡಿಹೋದರು. ಅದನ್ನು ಯಾರೂ ಗಮನಿಸಲಿಲ್ಲ. ರಾತ್ರಿಯಾದ ಬಳಿಕ ಕೂಲಿಗಾರರೆಲ್ಲಾ ಯಂತ್ರಗಳ ಕೆಲಸವನ್ನು ಮುಗಿಸಿಕೊಂಡು ಹೊರಕ್ಕೆ ಬಂದ ಬಳಿಕ ತಂತಮ್ಮ ಮನೆಗಳಿಗೆ ಹೋಗದೆ ಬೀದಿಗಳಲ್ಲಿ ಕೇಕೆಹಾಕುತ್ತ ಜನರನ್ನೆಲ್ಲಾ ಬಲವಾಗಿ ಗುಂಪುಕೂಡಿಸಿಕೊಂಡು, ಧಾನ್ಯದ ಅಂಗಡಿಗಳಿಗೆ ನುಗ್ಗಿ ಕೈಗೆ ಸಿಕ್ಕಿದುದನ್ನೆಲ್ಲಾ ದೋಚಿಕೊಳ್ಳಲುಪಕ್ರಮಿಸಿದರು. ಕಂಡಕಂಡ ಅಂಗಡಿಗಳಿಗೆಲ್ಲಾ ನುಗ್ಗಿದರು. ಧಾನ್ಯಗಳನ್ನು ಮಾತ್ರವೇ ಅಲ್ಲದೆ ಹಣಕಾಸುಗಳನ್ನೂ ಬಟ್ಟೆಬರೆಗಳನ್ನೂ ಷಾಪಿನ ಸಾಮಗ್ರಿಗಳನ್ನೂ ಸಹ ದೋಚಿಕೊಂಡರು. ಕೆಲಕಡೆ ಕಬ್ಬಿಣದ ಪೆಟ್ಟಿಗೆಗಳನ್ನು ಕೂಡ ಒಡೆದುಹಾಕಿ ಹಣವನ್ನಪಹರಿಸಿದರು. ಷಾಪೂರ್ಜಿಬ್ರೋಚಾರವರ ಯಂತ್ರಶಾಲೆಯ ಇದಿರಿಗಿರುವ ಅಂಗಡಿಗಳಲ್ಲೇ ಹೆಚ್ಚಾಗಿ ಸೂರೆಯು ನಡೆಯಿತು. ಒಬ್ಬ ಮಾರ್ವಾಡಿ ಅಂಗಡಿಯ ಕಬ್ಬಿಣದ ಪೆಟ್ಟಿಗೆಯನ್ನು ನುಚ್ಚುನೂರಾಗುವಂತೆ ಒಡೆದು ಬಹಳ ಹಣವನ್ನು ಎತ್ತಿಹಾಕಿದರು. ಪೊಲೀಸು ಕಮಿಷನರೂ ಪೊಲೀಸಾಳುಗಳೂ ಅಶ್ವಸೈನ್ಯದವರೂ ಬಂದು ಬಹುಶಃ ೩೦೦ ಮಂದಿ ದೊಂಬಿಗಾರರನ್ನು ಸೆರೆಹಿಡಿದರು. ಅವರಲ್ಲಿದ್ದ ಹಲವು ಸೊತ್ತುಗಳನ್ನೂ ವಶಪಡಿಸಿಕೊಂಡರು. ಅಪರಾಧಿಗಳೆಲ್ಲಾ ಸೆರೆಯಲ್ಲಿಡಲ್ಪಟ್ಟಿದ್ದಾರೆ. ತಾ|| ೨೬ ನೆ ದಿನ ಅನೇಕ ವರ್ತಕರು ಭೀತಿಯಿಂದ ತಂತಮ್ಮಂಗಡಿಗಳ ಬಾಗಿಲನ್ನೇ ತೆರೆಯಲಿಲ್ಲ. ಬಳಿಕ ಅಧಿಕಾರಿಗಳು ಬೀದಿಗಳಿಗೆ ಹೋಗಿ, ವರ್ತಕರಿಗೆ ಸಮಾಧಾನವನ್ನು ಹೇಳಿ ಅಭಯಕೊಟ್ಟು ಬಾಗಿಲನ್ನು ತೆರೆಯಿಸಿದರು. ಬೀದಿಗಳಲ್ಲಿ ಪೊಲೀಸರನ್ನೂ ಸೈನಿಕರನ್ನೂ ಕಾವಲಿಡಿಸಿದರು. ಈಚೆಗೆ ಎಲ್ಲವೂ ಶಾಂತವಾಗಿದೆ.

ಯುದ್ಧವಾರ್ತೆಯು.

ಸಂಧಿಯಾಗಬೇಕಾದರೆ ಎಂಥೆಂಥ ನಿಬಂಧನೆಗಳಾಗಬೇಕೆಂಬುದನ್ನು ಕುರಿತು ಆಂಗ್ಲಮಂತ್ರೀಶ್ವರರಾದ ಲಾಯಿಡ್ ಜಾರ್ಜ್‌ರವರೂ, ಅಮೇರಿಕಾಧ್ಯಕ್ಷರಾದ ವಿಲ್ಸನ್ನರವರೂ ಕೂಡ ೧೫ ದಿನಗಳ ಕೆಳಗೆ ಮುಕ್ತಕಂಠವಾಗಿ ತಮ್ಮತಮ್ಮ ಅಭಿಪ್ರಾಯಗಳನ್ನು ತಿಳಿಯಿಸಿದ್ದರು. ಅಷ್ಟು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಶತ್ರುಗಳು ಯಾವಾಗಲೂ ತಿಳಿಯಿಸಿರುವುದಿಲ್ಲ. ಆದರೆ ಕಳೆದವಾರ ಜರ್ಮನಿ ಮುಖ್ಯಮಂತ್ರಿಯಾದ ಕೌಂಟ್‌ಹಾರ್ಟಿಂಗ್‌ರವರೂ, ಆಸ್ಟ್ರಿಯಾದ ಕೌಂಟ್ ಜರ್ನಿನ್ನರವರೂ ಸಹ ಇಂಗ್ಲೀಷರ ಮತ್ತೂ ಅಮೇರಿಕಾದವರ ಅಭಿಪ್ರಾಯಗಳಿಗೆ ಉತ್ತರರೂಪವಾಗಿ ತಮ್ಮ ಭಾಷಣಗಳನ್ನು ಮಾಡಿರುತ್ತಾರೆ. ಮುಖ್ಯಾಭಿಪ್ರಾಯಗಳಲ್ಲಿ ಪರಸ್ಪರ ಐಕ್ಯವೂ ಭಿನ್ನಭಾವವೂ ಎಷ್ಟುಮಟ್ಟಿಗಿದೆಯೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಅವರಡು ಪಕ್ಷದ ಅಭಿಪ್ರಾಯಗಳನ್ನೂ ಈ ಕೆಳಗೆ ಕೊಟ್ಟಿರುತ್ತೇವೆ:—

೧

ಲಾಯಿಡ್‌ಜಾರ್ಜ್—ಬೆಲ್ಜಿಯಂ ರಾಷ್ಟ್ರವನ್ನು ಸ್ವತಂತ್ರವಾಗಿ ಮಾಡಬೇಕು. ಆ ದೇಶವನ್ನು ಹಾಳ್ಮಾಡಿರುವುದಕ್ಕಾಗಿ ನಷ್ಟಪರಿಹಾರ ಕೊಡಬೇಕು.

ವಿಲ್ಸನ್—ಉಭಯಪಕ್ಷದವರೂ ಸಂಧಿರಾಯಭಾರವನ್ನು ಬಹಿರಂಗವಾಗಿ ನಡೆಯಿಸಬೇಕು. ಗುಟ್ಟಾದ ಯತ್ನವೇ ಆಗಲಿ ರಹಸ್ಯವಾದ ಸಂಧಿಯೇ ಆಗಲಿ ಜರುಗಕೂಡದು.

೨

ಲಾ.ಜಾ:—ಸರ್ವಿಯಾ ಮಾಂಟಿನೀಗ್ರೋ ದೇಶಗಳನ್ನೂ ಫ್ರಾನ್ಸ್, ಇಟಲಿ, ರೊಮೇನಿಯಾದೇಶಗಳಲ್ಲಿ ಇದುವರೆಗೆ ಶತ್ರುಗಳು ಆಕ್ರಮಿಸಿಕೊಂಡಿರುವ ಭಾಗಗಳನ್ನೂ ಬಿಟ್ಟುಬಿಡಬೇಕು.

ವಿಲ್ಸನ್—ಯುದ್ಧಕಾಲದಲ್ಲೂ ಶಾಂತಿಕಾಲದಲ್ಲೂ ಸಮುದ್ರಸಂಚಾರಸ್ವಾತಂತ್ರ್ಯವು ಸರ್ವರಿಗೂ ಇರಬೇಕು.

೩

ಲಾ.ಜಾ:—ಆಲ್ಸಸ್ ಲೊರೈನುಗಳನ್ನು ಹಿಂದಿರಿಗಿ ಫ್ರೆಂಚರಿಗೆ ಕೊಟ್ಟುಬಿಡಬೇಕು.

ವಿಲ್ಸನ್—ಆರ್ಥಿಕಕಷ್ಟಗಳನ್ನು ತೊಲಗಿಸಬೇಕು.

೪

ಲಾ.ಜಾ:—ರಷ್ಯಾದಲ್ಲಿ ಮತ್ತೆ ರಾಜಕೀಯವಿಧಾನವು ಏರ್ಪಟ್ಟ ಕೂಡಲೇ ಪೋಲೆಂಡ್ ಸ್ವಾತಂತ್ರ್ಯವಿಷಯವು ಏರ್ಪಡಬೇಕು.

ವಿಲ್ಸನ್—ಪರಸ್ಪರರ ನಂಬುಗೆಯಮೇಲೆ ಸೇನೆಗಳನ್ನು ತಗ್ಗಿಸಬೇಕು.

೫

ಲಾ.ಜಾ:—ಆಸ್ಟ್ರಿಯಾ ಹಂಗೇರಿ ಜಾತಿಯ ದೇಶಭಾಗಗಳಲ್ಲಿ ಅಪೇಕ್ಷಿಸಿದವರಿಗೆ ಸ್ವಪರಿಪಾಲನವನ್ನು ಕೊಡಬೇಕು.

ವಿಲ್ಸನ್—ಅಧಿನಿವೇಶರಾಜ್ಯಗಳ ಪ್ರಜೆಗಳಿಗೆ ಹಿತಕರವಾಗುವಂಥ ಏರ್ಪಾಟುಗಳನ್ನು ಅಲ್ಲಿ ನಡೆಯಿಸಬೇಕು.

೬

ಲಾ.ಜಾ:—ಇಟಾಲಿಯಾವನ್ನೂ ಅಡ್ರಿಯೆಂಟಾವನ್ನೂ ಮತ್ತೆ ಕೊಡಿಸಬೇಕು.

ವಿಲ್ಸನ್—ರಷ್ಯಾದೇಶವನ್ನೆಲ್ಲಾ ರಷ್ಯನ್ನರಿಗೆ ಬಿಟ್ಟುಕೊಡಬೇಕು.

೭

ಲಾ.ಜಾ:—ರುಮೇನಿಯಾದವರಿಗೆ ಸಹಜವಾಗಿದ್ದ ಹಕ್ಕುಗಳನ್ನೆಲ್ಲಾ ಕೊಡಬೇಕು.

ವಿಲ್ಸನ್—ಬೆಲ್ಜಿಯಮ್ಮನ್ನು ಅವರ ದೇಶೀಯರಿಗೆ ಬಿಟ್ಟುಕೊಡಬೇಕು.

೮

ಲಾ.ಜಾ:—ತುರ್ಕಿ ಸಾಮ್ರಾಜ್ಯವನ್ನು ಸ್ವದೇಶದಲ್ಲಿ - ಹೋಮ್‌ಲ್ಯಾಂಡ್ಸ್ - ಮಾತ್ರವಾಗಿ ಏರ್ಪಡಿಸಬೇಕು. ಜಲಸಂಧಿಗಳನ್ನು ಅಂತರ್ಜಾತೀಯಗಳನ್ನಾಗಿಯೂ ತಟಸ್ಥಗಳನ್ನಾಗಿಯೂ ಮಾಡಬೇಕು.

ವಿಲ್ಸನ್—ಫ್ರಾನ್ಸ್ ಉತ್ತರಭಾಗವನ್ನೂ ಆಲ್ಸಸ್ ಲೋರೈನುಗಳನ್ನೂ ಮರಳಿ ಫ್ರೆಂಚರಿಗೆ ಬಿಟ್ಟುಕೊಡಬೇಕು.

೯

ಲಾ.ಜಾ:—ಅರೇಬಿಯಾ, ಆರ್ಮೇನಿಯಾ, ಮೆಸಪಟೋಮಿಯಾಗಳನ್ನು ಪ್ರತ್ಯೇಕದೇಶಗಳನ್ನಾಗಿ ಪರಿಗಣಿಸಬೇಕು.

ವಿಲ್ಸನ್—ಜಾತೀಯತೆಯನ್ನು ಆಧಾರಪಡಿಸಿಕೊಂಡು ಇಟಲಿಯ ಮೇರೆಗಳನ್ನು ಮತ್ತೆ ಏರ್ಪಡಿಸಬೇಕು.

೧೦

ಲಾ.ಜಾ:—ಜರ್ಮನ್ ಅಧಿನಿವೇಶಗಳಲ್ಲಿ ಅಲ್ಲಿಯ ಪ್ರಜೆಗಳು ಇಷ್ಟಪಡುವ ಪ್ರಕಾರ ಪ್ರಭುತ್ವವು ಏರ್ಪಡುವಂತಾಗಬೇಕು.

ವಿಲ್ಸನ್—ಆಸ್ಟ್ರಿಯಾ-ಹಂಗೇರಿ ಪ್ರಜೆಗಳಿಗೆ ಸ್ವಪರಿಪಾಲನವನ್ನು ಕೊಡಬೇಕು.

೧೧

ಲಾ.ಜಾ:—ಹಾನಿಯನ್ನೂ, ಅಂತರ್ಜಾತೀಯ ನಿಬಂಧನಾತಿಕ್ರಮಣವನ್ನೂ, ಸಮುದ್ರದಲ್ಲಿ ಅತ್ಯಾಚಾರಘಾತಗಳನ್ನೂ ನಡೆಯಿಸಿರುವುದಕ್ಕಾಗಿ ಶತ್ರುಗಳು ಪರಿಹಾರವನ್ನು ಕೊಡಬೇಕು.

ವಿಲ್ಸನ್—ರುಮೇನಿಯಾ, ಸರ್ವಿಯಾ, ಮಾಂಟಿನೀಗ್ರೋ ದೇಶಗಳನ್ನು ಅವರವರಿಗೆ ಮರಳಿ ಕೊಟ್ಟುಬಿಡಬೇಕು. ಚರಿತ್ರಾನುಸಾರವಾಗಿ ಏರ್ಪಟ್ಟಿರುವ ಎಲ್ಲೆಕಟ್ಟುಗಳನ್ನನುಸರಿಸಿ ಬಾಲ್ಕನ್ ರಾಷ್ಟ್ರಗಳನ್ನೇರ್ಪಡಿಸಬೇಕು.

೧೨

ಲಾ.ಜಾ.—ಯುದ್ಧವನ್ನು ನಡೆಯಿಸಬೇಕಾದ ಆವಶ್ಯಕತೆಯು ಬೀಳದಹಾಗೆ ತಂತಮ್ಮ ಅಭಿಪ್ರಾಯ ಭೇದಗಳನ್ನು ಪರಿಷ್ಕರಿಸಿಕೊಳ್ಳುವುದಕ್ಕಾಗಿ ಒಂದು ಅಂತರ್ಜಾತೀಯ ಸಂಘವನ್ನೇರ್ಪಡಿಸಬೇಕು.

ವಿಲ್ಸನ್—ಒಟೋಮಾನ್ ಸಾಮ್ರಾಜ್ಯದಲ್ಲಿ ತುರ್ಕಿ ಯಾಜಮಾನ್ಯವನ್ನು ಏರ್ಪಡಿಸಬೇಕು. ಉಳಿದ ಭಾಗಗಳಿಗೆಲ್ಲಾ ಸ್ವಪರಿಪಾಲನವನ್ನಿತ್ತು, ಡಾರ್ಡಿನಲ್ಸ್ ಜಲಸಂಧಿಯನ್ನು ಅಂತರ್ಜಾತೀಯವನ್ನಾಗಿ ಮಾಡಬೇಕು.

೧೩

ವಿಲ್ಸನ್—ಪೋಲೆಂಡಿಗೆ ಸ್ವಾತಂತ್ರ್ಯವನ್ನು ಕೊಡಬೇಕು.

೧೪

ವಿಲ್ಸನ್—ಅಂತರ್ಜಾತೀಯ ಸಂಘವೊಂದನ್ನೇರ್ಪಡಿಸಬೇಕು.

ಇವುಗಳಲ್ಲಿ ಅಮೇರಿಕಾಧ್ಯಕ್ಷರಾದ ವಿಲ್ಸನ್ನರವರ ಅಭಿಪ್ರಾಯಗಳಿಗೆ ಶತ್ರುಪಕ್ಷದವರು ಉತ್ತರರೂಪವಾಗಿ ಕೊಟ್ಟಿರುವ ಅಭಿಪ್ರಾಯವೇನೆಂದರೆ:-

೧. ಇದು ನಮಗೆ ಸಮ್ಮತವೇ.

೨. ಸರಿಯೆ. ಆದರೆ ಇಂಗ್ಲಾಂಡು, ಜಿಬ್ರಾಲ್ಟರು, ಮಾಲ್ಟಾ, ಏಡನ್, ಹಾಂಕಾಂಗು, ಫಾಕ್ಲೆಂಡು ದ್ವೀಪಗಳ ಸಂಬಂಧವನ್ನು ಅವರೂ ಬಿಟ್ಟುಕೊಡಬೇಕು. ಎಲ್ಲದರಲ್ಲೂ ಸರ್ವರಿಗೂ ಸಮಾನಸ್ವಾತಂತ್ರ್ಯವಿರಬೇಕು.

೩. ಆಗಬಹುದು.

೪-೫. ಚರ್ಚೆಮಾಡಿ ಗೊತ್ತುಮಾಡಬೇಕಾದವುಗಳು.

೬. ಮಿತ್ರಮಂಡಲಿಯವರು ಸಂಧಿ ರಾಯಭಾರದಲ್ಲಿ ಕೂಡಿ ಚರ್ಚಿಸಲಂಗೀಕರಿಸಲಿಲ್ಲವಾದುದರಿಂದ, ನಾವು ರಷ್ಯಾ ಜರ್ಮನ್ ಮಿತ್ರದೇಶಗಳಿಗೆ ಸಂಬಂಧಿಸಿದ ವಿಷಯಗಳನ್ನು ಮಾತ್ರವೇ ಚರ್ಚಿಸುತ್ತೇವೆ. ನಾವು ನಾವು ಅದನ್ನು ಪರಿಷ್ಕಾರಕಾಲದಲ್ಲಿ ಯೋಚಿಸುತ್ತೇವೆ.

೭. ಈ ವಿಷಯವು ಇತರ ಸಂಧಿನಿಬಂಧನೆಗಳೊಡನೆ ರಾಯಭಾರದಲ್ಲಿ ಪ್ರಶ್ನಿಸಲ್ಪಟ್ಟು ನಿರ್ಧಾರವಾಗತಕ್ಕದು.

೮. ಕೆಲ ನಿಬಂಧನೆಗಳಮೇಲೆ ಬಿಟ್ಟುಕೊಡಲ್ಪಡಬಹುದು. ಆದರೆ ಆಲ್ಸಸ್, ಲೋರೈನುಗಳನ್ನು ಮಾತ್ರ ಎಂದಿಗೂ ಬಿಡಲಾರೆವು.

೯-೧೦-೧೧. ಇವು ಕೇವಲ ಆಸ್ಟ್ರಿಯಾ-ಹಂಗೇರಿ ದೇಶಕ್ಕೆ ಸಂಬಂಧಪಟ್ಟವುಗಳು. ಜರ್ಮನ್ ಸಹಾಯದಿಂದ ಅವರು ಅದನ್ನು ಏರ್ಪಡಿಸುವರು. ತುರ್ಕಿಯ ವಿಷಯವು ಆ ರಾಷ್ಟ್ರಪ್ರಭುತ್ವಕ್ಕೆ ಸಂಬಂಧಪಟ್ಟುದು. ಅದಕ್ಕೆ ಆ ದೇಶದ ರಾಜನೀತಿಜ್ಞರೇ ಉತ್ತರ ಕೊಡುವರು. ಜರ್ಮನರು ಅವರಿಗೆ ಎಲ್ಲ ವಿಷಯದಲ್ಲೂ ಸಹಾಯಮಾಡುವರು. ತುರ್ಕಿ ಸ್ವಾತಂತ್ರ್ಯವನ್ನೂ ಅದಕ್ಕೆ ಸೇರಿದ ಜಲಸಂಧಿಯನ್ನೂ ಕಾಪಾಡುವುದು ಜರ್ಮನರಿಗೆ ಮುಖ್ಯವು.

೧೩. ಪೋಲೆಂಡಿಗೆ ಜರ್ಮನ್ ಮಿತ್ರಮಂಡಲಿಯವರು ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟಿರುವರು. ಅದುಕಾರಣ ಅವರೇ ಅದರ ಭವಿಷ್ಯತ್‌ಸ್ಥಿತಿಯನ್ನು ನಿರ್ಧರಿಸುವರು.

೧೪. ಇತರ ಪ್ರಶ್ನೆಗಳೆಲ್ಲಾ ತೀರ್ಮಾನವಾದಬಳಿಕ ಜಾತೀಯ ಸಂಘಸ್ಥಾಪನೆಯ ವಿಷಯವನ್ನು ಚರ್ಚಿಸುವುದಕ್ಕೆ ನಾವು ಸಿದ್ಧರಾಗಿರುತ್ತೇವೆ.

ಆಸ್ಟ್ರಿಯಾ ಪ್ರಭುತ್ವದವರ ಉತ್ತರವೂ ಇದನ್ನೇ ಅನುಸರಿಸಿರುತ್ತದೆ. ಅದನ್ನು ನೋಡುವಲ್ಲಿ—ಶತ್ರುಗಳ ಕಡೆಯವರು ಲಾಯಿಡ್ ಜಾರ್ಜರ ಮತ್ತೂ ಪ್ರೆಸಿಡೆಂಟ್ ವಿಲ್ಸನ್ನರವರ ಸೂಚನೆಗಳಲ್ಲಿ ಕೆಲವಕ್ಕೆ ಅಂಗೀಕಾರವನ್ನು ತೋರಿಸಿದ್ದರೂ ಮುಖ್ಯ ವಿಷಯಗಳಲ್ಲಿ ಮಾತ್ರ ಅವರ ಉತ್ತರವು ತೃಪ್ತಿಕರವಾಗಿಲ್ಲವೆಂಬುದು ಚೆನ್ನಾಗಿ ವ್ಯಕ್ತವಾಗುವುದು. ಶತ್ರುಗಳು ಇದುವರೆಗೆ ತಾವು ಆಕ್ರಮಿಸಿರುವ ರಾಷ್ಟ್ರಗಳನ್ನು ಹಿಂದಿರಿಗಿ ಕೊಡುವುದಕ್ಕೇ ಆಗಲೀ, ನಷ್ಟಪರಿಹಾರವನ್ನೀಯುವುದಕ್ಕೇ ಆಗಲೀ ಸಮ್ಮತಿಸುವಂತೆ ಕಾಣುವುದಿಲ್ಲ. ತಮಗೆ ಲಾಭವಾಗುವ ವಿಷಯಕ್ಕೆ ಮಾತ್ರ ಒಪ್ಪುತ್ತಾರೆ. ಇತರ ವಿಷಯಗಳನ್ನೆಲ್ಲಾ ಬಿಟ್ಟುಬಿಟ್ಟಿದ್ದಾರೆ. ಅದುಕಾರಣ ಅಂಥ ಸ್ಥಿತಿಯಲ್ಲಿ ಸಂಧಿ ಕೂಡುವುದು ದುರ್ಲಭವೆಂಬುದು ಸಿದ್ಧವಾಗಿಯೇ ಇದೆ. ಯುದ್ಧದಲ್ಲಿ ಒಂದು ಪಕ್ಷಕ್ಕೆ ಸಂಪೂರ್ಣ ವಿಜಯವಾದಲ್ಲದೆ ಸಂಧಿಯಾಗುವುದು ಅಸಂಭವವೆಂಬುದು ಮತ್ತಷ್ಟು ಸ್ಪಷ್ಟವಾಗಿ ಸಿದ್ಧವಾದಂತಾಯಿತು. ಆದರೆ ಜರ್ಮನಿ-ಆಸ್ಟ್ರಿಯಾ ಮಂತ್ರಿಗಳೀರ್ವರೂ ತಮ್ಮ ಮಾಯಾ ವಚನದಿಂದ ಅಮೇರಿಕಾಧ್ಯಕ್ಷರನ್ನು ಪಕ್ಷಕ್ಕೆ ಸೆಳೆದುಕೊಳ್ಳುವುದಕ್ಕೆ ಇಂದ್ರಜಾಲ ಮಾತ್ರ ಮಾಡಿರುತ್ತಾರೆ. ಈ ಕಪಟ ಸರ್ವಸ್ವದ ಮರ್ಮವನ್ನೆಲ್ಲಾ ಅಮೇರಿಕನ್ನರು ಈಗ ಚೆನ್ನಾಗಿ ತಿಳಿದುಕೊಂಡಿರುವುದರಿಂದ ಅದಕ್ಕೆ ಮರುಳಾಗುವಹಾಗಿಲ್ಲ.

ರಷ್ಯಾದಲ್ಲಿ ಅಂತಃಕಲಹಗಳು ಬೆಳೆಯುತ್ತಲೇ ಇವೆ. ರಕ್ತದ ಕಾಲ್ವೆಗಳು ಪ್ರತಿದಿನವೂ ಹರಿಯುತ್ತಲೇ ಇವೆ. ಅವರೊಳಗೆ ಯಾದವ ಯುದ್ಧಕ್ಕೆ ತಪ್ಪಿಯೇ ಇಲ್ಲ. ಆದರೆ ಉಕ್ರೇನಿಯನ್ನರೊಡನೆ ಮರಳಿ ಸಂಧಿ ರಾಯಭಾರವನ್ನು ಆರಂಭಿಸಿರುವೆವೆಂದು ಜರ್ಮನರು ಹೇಳಿಕೊಳ್ಳುತ್ತಿದ್ದಾರೆ.

ಜರ್ಮನರು ತಮ್ಮ ಸಬ್‌ಮೆರೀನುಗಳಲ್ಲಿ ಬಹು ಭಾಗವನ್ನು ಹಿಂದಕ್ಕೆ ಕರೆಯಿಸಿಕೊಂಡಿದ್ದುದರಿಂದ ಹಡಗುಗಳ ನಷ್ಟವು ೧-೨ ವಾರಗಳಿಂದ ಕಡಿಮೆಯಾಗಿರುವುದು. ಇನ್ನು ಮುಂದೆ ಅವರು ಮತ್ತಷ್ಟು ಬಲವತ್ತರವಾದ ಸಬ್‌ಮೆರೀನುಗಳನ್ನು ಕಳುಹಿಸಿಕೊಟ್ಟು ಮಿತ್ರಮಂಡಲಿಯವರಿಗೆ ಅಮೇರಿಕಾ ಮೊದಲಾದ ಕಡೆಯಿಂದ ಸೈನ್ಯಗಳೂ ಯುದ್ಧಸಾಮಗ್ರಿಗಳೂ ಒದಗದಂತೆ ಅವುಗಳನ್ನೆಲ್ಲಾ ಮಧ್ಯಮಾರ್ಗದಲ್ಲೇ ಹಾಳ್ಮಾಡಬೇಕೆಂಬ ಉದ್ದೇಶವುಳ್ಳವರಾಗಿದ್ದಾರಂತೆ.

ರಣರಂಗಗಳ ವಾರ್ತೆಗಳಲ್ಲಿ ವಿಶೇಷಗಳೇನೂ ಇಲ್ಲ.

ಕಾನ್‌ಸ್ಟಾಂಟಿನೋಪಲ್ಲಿನಿಂದ ಪಾಲಸ್ಟೈನ್ ರಣರಂಗಕ್ಕೆ ತೆಗೆದುಕೊಂಡು ಬರುತ್ತಿದ್ದ ತುರ್ಕಿ ಸೈನ್ಯದಲ್ಲಿ ೧೬೦೦೦ ಮಂದಿಗಳು ಮಧ್ಯದಾರಿಯಲ್ಲಿ ಮೂರು ದಿನದೊಳಗೇ ಸೇನೆಯನ್ನು ಬಿಟ್ಟು ಹೊರಟುಹೋದುದರಿಂದ, ಅದರ ಮುಖ್ಯ ಸೇನಾಪತಿಯಾಗಿದ್ದ ಮಾರ್ಷಲ್ ಫಾಲ್ಕನ್‌ಹೇನನು ಧೈರ್ಯಗೆಟ್ಟು ಹಿಂದಿರಿಗಿ ಕಾನ್‌ಸ್ಟಾಂಟಿನೋಪಲ್ಲಿಗೇ ಹೋಗಿ ಸೇರಿದನೆಂದು ಅಮೇರಿಕಾದ ತಂತ್ರೀವಾರ್ತೆಯಿಂದ ಗೊತ್ತಾಗುತ್ತದೆ.

ಜರ್ಮನರ ೨ ಯುದ್ಧದ ಹಡಗುಗಳು ಕಳೆದ ವಾರದಲ್ಲಿ ಹೆಲಿಗೋಲ್ಯಾಂಡಿನಿಂದ ಬರುವಾಗ ಮದ್ದಿನ ಸುರಂಗಗಳಿಗೆ ಬಡಿದು ಮುಳುಗಿಹೋದುವು.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಫಲಪುಷ್ಪ ಪ್ರದರ್ಶನವು ಟೆನ್ನಿಸ್‌ಹಾಲಿನಲ್ಲಿ ಬರುವ ತಾ|| ೯-೧೦ ರಲ್ಲಿ ನಡೆಯುವುದು.

ರಾಜಧಾನಿಯಲ್ಲಿ ಚಳಿಯು ಹೆಚ್ಚಾಗಿದೆ. ದಕ್ಷಿಣದ ಮೊಹಲ್ಲೆಗಳಲ್ಲೂ, ಕುರಿಮಂಡಿಯಕಡೆಗೂ ಆಗಾಗ್ಗೆ ಪ್ಲೇಗುಮರಣಗಳಾಗುತ್ತಿವೆ.

ವೈದ್ಯಶಾಲೆಗಳು, ಪಾಠಶಾಲೆಗಳು, ಹೊಸದಾಗಿ ಕಟ್ಟುತ್ತಿರುವ ಕಟ್ಟಡಗಳು-ಇವೇ ಮೊದಲಾದ ಜನವಾಸವಿಲ್ಲದ ಮನೆಗಳ ಕಿಟಿಕಿಯ ಕಬ್ಬಿಣದ ಸಲಾಕಿಗಳನ್ನು ಕಳವುಮಾಡಿಕೊಂಡು ಹೋಗುತ್ತಿದ್ದ ಕಳ್ಳರಲ್ಲಿ ಇಬ್ಬರು ಪದಾರ್ಥಗಳ ಸಮೇತ ಪೊಲೀಸರ ಕೈಗೆ ಸಿಕ್ಕಿ ವಿಚಾರಣೆಗೆ ಗುರಿಯಾಗಿದ್ದಾರೆ.

ರಾಣೀವಾಸದವರು ನಾಳೆಯದಿನ ಮದರಾಸಿಗೆ ದಯಮಾಡಿಸುವುದಾಗಿ ತಿಳಿಯಬರುತ್ತದೆ. ಮಹಾರಾಜರವರ ಸ್ವಾರಿಯು ೪ ದಿನಗಳ ಕೆಳಗೆ ಬಂಡೀಪುರಕ್ಕೆ ಚಿತ್ತೈಸಿದ್ದಿತು. ಮತ್ತು ಬೂದಿಪಡಗದಲ್ಲಿ ಆನೆಯಬಂಗಡಿಯನ್ನು ಮತ್ತೊಂದುವೇಳೆ ಪರಾಮರ್ಶಿಸಲು ಇಷ್ಟರಲ್ಲೇ ಚಿತ್ತೈಸುವುದಾಗಿ ಕೇಳುತ್ತೇವೆ.

ವಿದ್ಯೆಯಲ್ಲೂ, ರಾಜಕೀಯವಿಚಾರದಲ್ಲೂ ಹಿಂದುಳಿದಿರುವ ಜನವರ್ಗದವರಭಿವೃದ್ಧಿಗಾಗಿ ಬೆಂಗಳೂರಲ್ಲೇರ್ಪಟ್ಟಿರುವ ಪ್ರಜಾಮಿತ್ರಮಂಡಲಿಯವರು ಮುಂದೆ ಮಾಡಬೇಕಾಗಿರುವ ಕಾರ್ಯಗಳನ್ನು ಕುರಿತು ಪರ್ಯಾಲೋಚಿಸುವ ಬಗೆಗೆ ಬರುವ ತಾ|| ೧೮ ರಲ್ಲಿ ಬೆಂಗಳೂರಲ್ಲಿ ಸಭೆ ಸೇರುವುದರಿಂದ ಆ ಕಾಲಕ್ಕೆ ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಸೆಕ್ರೆಟರಿಯವರು ಕೋರುತ್ತಾರೆ.

ಕೊಯಂಬತ್ತೂರು ಮೊದಲಾದ ಕಣಿವೆಕೆಳಗಿನ ದೇಶಗಳಲ್ಲಿ ಸಂಚರಿಸುತ್ತಿರುವ ಮೈಸೂರಿನ ರತ್ನಾವಳಿ ನಾಟಕಸಂಘದವರು ತಿರುಚನಾಪಲ್ಲಿಯಲ್ಲಿ ೨೧ ನಾಟಕಗಳನ್ನಭಿನಯಿಸಿ ೧೭೦೦೦ ರೂಪಾಯಿಗಳನ್ನು ಆರ್ಜಿಸಿದುದಲ್ಲದೆ ಆನಿಬೆಸೆಂಟಮ್ಮನವರ ಅಧ್ಯಕ್ಷತೆಯಲ್ಲಿ ಒಂದು ನಾಟಕವನ್ನು ಅಭಿನಯಿಸಿ ಅದರಿಂದುತ್ಪನ್ನವಾದ ೩೫೦೦ ರೂಪಾಯಿಗಳನ್ನು ಸಾರ್ವಜನಿಕ ಫಂಡಿ (ನ್ಯಾಷನಲ್‌ಫಂಡಿ) ಗೆ ಕೊಟ್ಟರೆಂದೂ, ಆ ದಿವಸ ದೊಡ್ಡ ಸರ್ಕಾರಿಯಧಿಕಾರಿಗಳೂ ಪುರಪ್ರಮುಖರೂ ಬಂದಿದ್ದು ಮ|| ಎ. ವಿ. ವರದಾಚಾರ್ಯರ ನಾಟಕಾಭಿನಯ ಕೌಶಲ್ಯಾದಿಗಳನ್ನು ಮೆಚ್ಚಿ ನಾಟಕಶಿರೋಮಣಿ ಎಂಬ ಪ್ರಶಸ್ತಿಯನ್ನೂ ನವರತ್ನಖಚಿತವಾದ ಒಂದು ಕಂಠಮಾಲೆಯನ್ನೂ ಬಹುಮಾನಿಸಿ, ಅವರ ಸಾಮರ್ಥ್ಯವನ್ನೂ ಉದಾರಬುದ್ಧಿಯನ್ನೂ ಕೊಂಡಾಡಿದರೆಂದೂ ತಿಳಿಯಲು ಆನಂದವಾಗುತ್ತದೆ. ಈ ರತ್ನಾವಳಿ ಸಂಘದವರು ಕನ್ನಡಭಾಷೆಯು ವಿರಳತಮವಾಗಿರುವ ಅನ್ಯದೇಶಗಳಿಗೆ ಹೋಗಿ ಈ ರೀತಿ ಜನಾನುರಾಗವನ್ನೂ ಬಹುಮಾನವನ್ನೂ ಸಂಪಾದಿಸಿ ಧನಾರ್ಜನೆಯನ್ನು ಮಾಡುತ್ತಿರುವುದು ಮೈಸೂರು ದೇಶಕ್ಕೇ ಭೂಷಣಪ್ರದವಾಗಿದೆ.

ಕಲ್ಕತ್ತಾ ವಿಶ್ವವಿದ್ಯಾಲಯ ಸಂಘದವರು ಕಳೆದವಾರ ಮೈಸೂರು ಬೆಂಗಳೂರುಗಳಿಗೆ ಬಂದು, ಇಲ್ಲಿಯ ವಿಶ್ವವಿದ್ಯಾಲಯಕ್ಕೆ ಸೇರಿದ ಅನೇಕ ಪಾಠಶಾಲೆಗಳನ್ನು ಪ್ರತ್ಯಕ್ಷವಾಗಿ ಅವಲೋಕಿಸಿದರು. ಇಲ್ಲಿಯ ವಿದ್ಯಾಪೀಠದ ಚರಿತ್ರವನ್ನೆಲ್ಲಾ ವೈಸ್‌ಛಾನ್ಸಿಲರು ಶ್ರುತಪಡಿಸಿದರು. ಬರುವ ಜುಲೈ ತಿಂಗಳಲ್ಲಿ ನ್ಯಾಯಶಾಸ್ತ್ರಕಲಾಶಾಲೆಯನ್ನೂ ಕೂಡ ಇಲ್ಲಿ ಏರ್ಪಡಿಸುವೆವೆಂತಲೂ, ವೈದ್ಯ, ವ್ಯವಸಾಯ, ಖನಿಜಶಾಸ್ತ್ರ ವಿಷಯಗಳನ್ನು ಹೇಳಿಕೊಡುವ ಕಲಾಶಾಲೆಗಳನ್ನೂ ಕೂಡ ಬೇಗನೆ ಏರ್ಪಡಿಸುವೆವೆಂತಲೂ, ಈಗ ಎಲ್ಲ ಕಲಾಶಾಲೆಗಳಲ್ಲೂ ೬೫೦ ಮಂದಿಗಳೂ, ಉನ್ನತ ಪಾಠಶಾಲೆಗಳಲ್ಲಿ ೪೩೭ ಮಂದಿಗಳೂ ಓದುತ್ತಿರುವರೆಂತಲೂ, ವಿದ್ಯಾಪೀಠಕ್ಕೆ ೧೩ ಮಂದಿ ಪ್ರಜೆಗಳು ೯೮೬೩೭ ರೂ. ಗಳನ್ನು ದಾನಮಾಡಿರುವರೆಂತಲೂ ಮೊದಲಾದ ವಿವರಣವುಳ್ಳ ಒಂದು ಚರಿತ್ರವನ್ನು ಬರೆದು ನಮ್ಮ ವಿಶ್ವವಿದ್ಯಾಲಯ ಸಭಿಕರು ಅವರಿಗೆ ಒಪ್ಪಿಸಿದರು. ಶ್ರೀಮನ್ಮಹಾರಾಜರವರು ಭಾನುವಾರ ಸಾಯಂಕಾಲ ಈ ಅತಿಥಿಗಳಿಗೆಲ್ಲಾ ಚಾಮುಂಡೀ ಜಂಬಾನಾದ ಬಯಲಿನಲ್ಲಿ ಅಲ್ಪಾಹಾರ ವಿನೋದಾದಿಗಳಿಂದ ಸಂತೋಷಪಡಿಸಿದರು. ವೈಸ್‌ಛಾನ್ಸಿಲರ್, ಮ|| ಹೆಚ್. ವಿ. ನಂಜುಂಡಯ್ಯನವರು ಕೂಡ ಅವರುಗಳಿಗೆ ಒಂದು ಟೀಪಾರ್ಟಿಯನ್ನು ಕೊಟ್ಟರು.

ಭರತಖಂಡದ ವೃತ್ತಾಂತಗಳು.

ಬೊಂಬಾಯಿಯಲ್ಲಿ ಕಲ್ಲಿದ್ದಲಿಗೆ ಅಭಾವಬರುವುದೆಂದು ಯೋಚಿಸಿ, ಯಂತ್ರಾಲಯಗಳವರು ಸವದೆಯನ್ನು ಕೊಂಡು ಶೇಖರಿಸುತ್ತಿರುವುದರಿಂದ ಸವದೆಯ ಬೆಲೆಯು ೧೦೦ ಕ್ಕೆ ೮೦ ರಷ್ಟು ಹೆಚ್ಚಿಹೋಗಿದೆ.

ಮದ್ರಾಸು ಮ್ಯುನಿಸಿಪಾಲಿಟಿಗೆ ಸೇರಿದ ಎಲಿಮೆಂಟರಿ ಪಾಠಶಾಲೆಗಳಲ್ಲಿ ಪಂಚಮರ ಮಕ್ಕಳನ್ನು ಸೇರಿಸಿಕೊಳ್ಳಬೇಕೆಂದು ಮ್ಯುನಿಸಿಪಾಲಿಟಿಯ ಸ್ಟಾಂಡಿಂಗ್‌ಕಮಿಟಿಯವರು ಆಜ್ಞೆಮಾಡಿದ್ದರು. ಕೆಲ ಶಾಲೆಗಳಲ್ಲಿ ಅದು ಅಂಗೀಕರಿಸಲ್ಪಟ್ಟಿರಲಿಲ್ಲ. ಅದನ್ನು ಕಂಡು ಆ ಆಜ್ಞೆಯನ್ನು ಎಲ್ಲಾ ಶಾಲೆಗಳಲ್ಲೂ ಅಂಗೀಕರಿಸಿಯೇ ತೀರಬೇಕೆಂದು ಮ್ಯುನಿಸಿಪಲ್ ಸಂಘದವರು ಕಟ್ಟುನಿಟ್ಟಾಗಿ ತೀರ್ಮಾನಿಸಿರುವರು.

ಪ್ರತಿದಿನವೂ ಜೀವನಕ್ಕಾಧಾರವಾಗಿರುವ ಪದಾರ್ಥಗಳ ಬೆಲೆಯನ್ನು ಬೊಂಬಾಯಿಯಲ್ಲಿ ಹೆಚ್ಚಿಸಿರುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸುವುದಕ್ಕೆ ಈಗ ಅಲ್ಲಿಯ ಗೌರ್ನರವರು ಪ್ರಯತ್ನಿಸಿರುವುದರಿಂದ ಅನೇಕ ಪದಾರ್ಥಗಳ ಬೆಲೆಯು ಈಗಾಗಲೇ ಬಹಳಮಟ್ಟಿಗೆ ಇಳಿದುಹೋಗಿದೆ. ಇದ್ದಲಿನ ಬೆಲೆಯು ಟನ್ ೧ ಕ್ಕೆ ೨|| ರೂ. ಸಂತೆ ಮಾರಲ್ಪಡುತ್ತಿದ್ದುದು ಈಗ ೧|| ರೂ. ಗೆ ಇಳಿದಿದೆ. ಇದರಂತೆ ಇತರ ಸಾಮಗ್ರಿಗಳ ಬೆಲೆಯೂ ಇಳಿಯಿಸಲ್ಪಟ್ಟಿದೆ. ಆದರೂ ಯುದ್ಧಕ್ಕೆ ಮುಂಚಿನ ಬೆಲೆಗಿಂತಲೂ ಹೆಚ್ಚಾಗಿಯೇ ಇದೆ.

ಸೇಲಮ್ಮಿನಲ್ಲಿ ಒಬ್ಬ ತೆಲುಗನು ರಾಜವೀಧಿಯ ಪಕ್ಕದಲ್ಲೇ ತನ್ನ ತಾತ ಮುತ್ತಾತಂದಿರ ಕಾಲದಿಂದಲೂ ಹಾಕಿಕೊಂಡು ಬಂದಿದ್ದ ಗಾಣವನ್ನು ಆಡಿಸಿಕೊಂಡಿದ್ದನು. ಅದರ ಧ್ವನಿಯಿಂದ ಮಾರ್ಗಸ್ಥರಿಗೂ ಸುತ್ತುಮುತ್ತಣ ಮನೆಯವರಿಗೂ ತೊಂದರೆಯಾಗುತ್ತಿದ್ದುದರಿಂದ ಮ್ಯುನಿಸಿಪಾಲಿಟಿಯವರು ಆ ಸ್ಥಲದಿಂದ ಗಾಣವನ್ನು ತೆಗೆಯಿಸಿಬಿಟ್ಟರು. ಗಾಣಿಗನು ಮ್ಯುನಿಸಿಪಾಲಿಟಿಯವರಮೇಲೆ ಜಿಲ್ಲಾ ಕೋರ್ಟಿನಲ್ಲಿ ವ್ಯಾಜ್ಯ ಹೂಡಿದನು. ಅಲ್ಲಿ ಮ್ಯುನಿಸಿಪಾಲಿಟಿಯವರ ಪಕ್ಷವಾಗಿಯೇ ತೀರ್ಮಾನವಾಯಿತು. ಕಡೆಗೆ ಅತನು ಹೈಕೋರ್ಟಿಗೆ ಅಪೀಲ್ ಮಾಡಿರಲು, ಅಲ್ಲೂ ಅವನಿಗೆ ವಿರುದ್ಧವಾಗಿಯೇ ತೀರ್ಮಾನವಾಯಿತು.

ಒಬ್ಬ ಠಕ್ಕನು ವಿಜಿಟಿಂಗ್ ಕಾರ್ಡುಗಳಮೇಲೂ ಕಾಗದಗಳಮೇಲೂ ತಂಜಾವೂರು ರಾಜಕುಮಾರನೆಂಬುದಾಗಿ ತನ್ನ ಹೆಸರನ್ನು ಮುದ್ರಿಸಿಕೊಂಡು, ಅಂಥ ಕಾಗದದಮೇಲೆ ಮದ್ರಾಸ್ ಸ್ಪೆನ್ಸರ್ ಕಂಪೆನಿಯವರಿಗೆ ೧೦೦೦ ರೂ. ಬೆಲೆಯ ಸಾರಾಯಿ, ಅತ್ತರು, ಬೂಟ್ಸು ಮೊದಲಾದ ಸಾಮಾನುಗಳನ್ನು ಕಳುಹಿಸಿಕೊಡಬೇಕೆಂದು ಬರೆದು ಕಳುಹಿಸಿರಲು, ಕಂಪೆನಿಯವರು ಕಾಗದದ ಠಬ್ಬನ್ನು ನೋಡಿ, ಪಟ್ಟಿಯಮೇರೆಗೆ ಸಾಮಾನುಗಳನ್ನು ಕಳುಹಿಸಿಕೊಟ್ಟರು. ಆದರೆ ಮೋಸಗಾರನು ಸಾಮಾನುಗಳನ್ನೆಲ್ಲಾ ತೆಗೆದುಕೊಂಡು ಮಾಯವಾದನು. ಹಣವು ಮಾತ್ರ ಕಂಪೆನಿಗೆ ಬರಲಿಲ್ಲ. ಅವರು ಸಂಶಯಪಟ್ಟು ಪೊಲೀಸಿಗೆ ತಿಳಿಯಿಸಿದರು. ಪೊಲೀಸರು ಅವನನ್ನು ನಾಗಪಟ್ಟಣದ ಹತ್ತಿರ ಹಿಡಿದು, ಈಗ ದಂಡಾಧಿಕಾರಿಯಮುಂದೆ ವಿಚಾರಣೆಗೆ ಗುರಿಪಡಿಸಿದ್ದಾರೆ.

ಕೊಚ್ಚಿ ರಾಜವಂಶಕ್ಕೆ ಸೇರಿದ ೭ ನೆ ಯುವರಾಜರಾದ ರಾಮವರ್ಮರಾಜರವರು ಆಯುರ್ವೇದ ವೈದ್ಯವನ್ನು ಅನೇಕ ವರ್ಷಗಳ ಕಾಲ ಶ್ರದ್ಧೆಯಿಂದ ಓದಿ ಅದರಲ್ಲಿ ಚೆನ್ನಾಗಿ ಜ್ಞಾನವನ್ನು ಸಂಪಾದಿಸಿಕೊಂಡಿದ್ದಾರೆ. ಈ ಕಾರಣದಮೇಲೆ ಅವರು ಪ್ರಜಾಹಿತಕ್ಕಾಗಿ ತಿರುಚೂರಿನಲ್ಲಿ ಒಂದು ವಿಷಚಿಕಿತ್ಸಾಲಯವನ್ನು ಸ್ಥಾಪಿಸಿದ್ದಾರೆ. ಇಲ್ಲಿ ನಡೆಯುತ್ತಿರುವ ಚಿಕಿತ್ಸೆಯೆಲ್ಲಾ ಆಯುರ್ವೇದ ಮರ್ಯಾದೆಯನ್ನೇ ಅನುಸರಿಸಿರುತ್ತದೆ. ಇಲ್ಲಿಗೆ ೧೯೧೬ ನೆ ವರ್ಷದಲ್ಲಿ ಸರ್ಪದಷ್ಟರಾಗಿ ಬಂದಿದ್ದ ೧೮೪ ಮಂದಿಗಳಲ್ಲಿ ೧೮೩ ಮಂದಿಗಳು ಗುಣಗೊಂಡಿರುವರು. ಅದರ ಹಿಂದಣ ವರ್ಷದಲ್ಲಿ ೧೧೭ ಮಂದಿಗೆ ೧೧೬ ಮಂದಿಗಳು ಗುಣಪಟ್ಟಿದ್ದರು. ಇತರ ವಿಷಪ್ರಾಣಿದಷ್ಟರಿಗೂ ಇಲ್ಲಿ ಚಿಕಿತ್ಸೆ ನಡೆಯುವುದು. ಒಟ್ಟು ಕಳೆದೆರಡು ವರ್ಷಗಳ ಕಾಲದಲ್ಲಿ ೪೭೮೩ ಮಂದಿಗಳು ಅಲ್ಲಿ ಚಿಕಿತ್ಸೆಗೊಂಡು ಗುಣಹೊಂದಿರುವರು.

ಸೀಮೆಗೆ ಹೋಗಿ ಸಿವಿಲ್ ಸರ್ವೀಸ್ ಪರೀಕ್ಷೆ ಕೊಟ್ಟು, ಈಗ ತಿರುನೆಲ್ವೇಲಿ ಜಿಲ್ಲೆಯಲ್ಲಿ ಸಬ್‌ಕಲೆಕ್ಟರಾಗಿರುವ ಮ|| ಎಸ್. ವೆಂಕಟರಾಮಮೂರ್ತಿ ಪಂತುಲು ಎಂಬುವವರು ಶರ್ಮದೇವಿ ಡಿವಿಜನ್ನಿನಲ್ಲಿದ್ದ ಒಂದು ಬ್ರಾಹ್ಮಣೇತರ ಸತ್ರದ ಮಡಿನಿಂದ ಒಂದಾನೊಂದು ಗ್ರಾಮದಲ್ಲಿ ಸಂಸ್ಕೃತಪಾಠಶಾಲೆಯನ್ನು ಅಸಮಸಾಹಸದಿಂದ ಸ್ಥಾಪನೆಗೊಳಿಸಿ, ಅಲ್ಲಿ ಬ್ರಾಹ್ಮಣರ ಹೊರತು ಇತರರು ವಿದ್ಯಾಭ್ಯಾಸ ಮಾಡಕೂಡದೆಂದು ವಿಧಿಸಿ, ಅದರಮೇಲೆ ಹುಟ್ಟಿದ ಗದ್ದಲದಿಂದ ಕಡೆಗೆ ಇತರರ ವಿದ್ಯಾಭ್ಯಾಸಕ್ಕೂ ಅವಕಾಶವಾಗಲು, ಬ್ರಾಹ್ಮಣವಿದ್ಯಾರ್ಥಿಗಳು ಬೆಂಚುಗಳಮೇಲೂ, ಇತರ ವಿದ್ಯಾರ್ಥಿಗಳು ನೆಲದಮೇಲೂ ಕುಳಿತು ಅಭ್ಯಾಸಮಾಡಬೇಕೆಂದು ವಿಧಿಸಿರುವರಂತೆ. ಆಂಗ್ಲಪ್ರಭುತ್ವದಧಿಕಾರದ ಕೈಕೆಳಗಿದ್ದರೂ, ಸೀಮೆಗೆ ಹೋಗಿ ಬಂದವರಾದರೂ ಇಂಥ ಸ್ವಜಾತ್ಯಭಿಮಾನವನ್ನು ಇಷ್ಟು ಪಕ್ಷಪಾತದಿಂದ ತೋರಿಸುತ್ತ ಇತರರನ್ನು ನೀಚದೃಷ್ಟಿಯಿಂದ ಕಾಣುವ ಜನರು ಸ್ವತಂತ್ರಾಧಿಕಾರಕ್ಕೆ ಬಂದರೆ ಇನ್ನೆಷ್ಟುಮಟ್ಟಿಗೆ ಪಕ್ಷಪಾತವನ್ನು ತೋರಿಸಬಹುದು.

ಬಂಗಾಳದ ಸುಪ್ರಸಿದ್ಧ ಪ್ರಕೃತಿಶಾಸ್ತ್ರ ಧುರಂಧರರಾದ ಸರ್ ಜಗದೀಶಚಂದ್ರ ಭೋಸ್‌ರವರು ಈಗ ಬೊಂಬಾಯಿ ಅಧಿಪತ್ಯದಲ್ಲೂ, ಸುಪ್ರಸಿದ್ಧ ರಾಸಾಯನಿಕ ಶಾಸ್ತ್ರಕೋವಿದ ಡಾಕ್ಟರ್ ಪ್ರಫುಲ್ಲ ಚಂದ್ರರಾಯರವರು ಮದ್ರಾಸಿನಲ್ಲೂ ತಮ್ಮ ಶಾಸ್ತ್ರಸಂಬಂಧವಾದ ಉಪನ್ಯಾಸಗಳನ್ನು ಕೊಡುತ್ತಿರುವರು. ಭೋಸ್‌ರವರು ಬೊಂಬಾಯಿಯಲ್ಲಿ ಉಪನ್ಯಾಸಮಾಡಿದಾಗ್ಗೆ ಪ್ರವೇಶದ ಟಿಕೆಟ್ ಒಂದಕ್ಕೆ ೧೦೦ ರೂ. ಗಳ ಬೆಲೆಯಿಟ್ಟಿದ್ದರು. ಅದರಿಂದ ೫೦ ಸಾವಿರ ರೂ. ಗಳು ಬಂದುವು. ಪುಣೆಯಲ್ಲಿ ೧೫ ಸಾವಿರ ರೂ. ಗಳು ಬಂದುವು. ಡಾಕ್ಟರ್ ರಾಯರವರು ಮದ್ರಾಸು ವಿಶ್ವವಿದ್ಯಾಲಯದವರ ಪ್ರಾರ್ಥನೆಯ ಮೇರೆಗೆ ಅಲ್ಲಿಗೆ ಬಂದು ತಮ್ಮ ಅಪೂರ್ವವಿಷಯಗುಂಫಿತವಾದ ಉಪನ್ಯಾಸಗಳನ್ನು ಮಾಡಿರುವರು. ಅವುಗಳಲ್ಲಿ ಆ ಶಾಸ್ತ್ರಜ್ಞಾನಸಂಪನ್ನರಿಗೆ ಮಾತ್ರವೇ ತಿಳಿಯಬಹುದಾದ ವಿಷಯಗಳು ಬೇರೆ ಇದ್ದುವು. ಅಲ್ಲದೆ ಸರ್ವರಿಗೂ ತಿಳಿದುಕೊಳ್ಳಲರ್ಹವಾದ ಭಾರತಪ್ರಾಚೀನ ರಾಸಾಯನಿಕ ವಿದ್ಯಾಪ್ರಾಮುಖ್ಯತೆಯು ಬಹು ಸ್ಪಷ್ಟವಾಗಿ ವಿವರಿಸಲ್ಪಟ್ಟಿತು.

ವಿದೇಶವಾರ್ತೆಗಳು.

ಆಸ್ಟ್ರಿಯಾದಲ್ಲಿ ೧೦ ಲಕ್ಷ ಮಂದಿ ಕಸಬುಗಾರರು ತಂತಮ್ಮ ಕೆಲಸವನ್ನು ಬಿಟ್ಟು ಮುಷ್ಕರ ಹಿಡಿದು ನಿಂತುಬಿಟ್ಟಿದ್ದಾರೆ.

ಯುದ್ಧಾರಂಭವಾದಂದಿನಿಂದ ಮಿತ್ರಮಂಡಲಿ ಪಕ್ಷದ ಸೈನ್ಯಗಳು ನೀರಿನಮೇಲೆ ೧೧೦೦೦೦೦೦ ಸಾಗಿಸಲ್ಪಟ್ಟಿವೆ. ಇದರೊಳಗೆ ೨ ಸಾವಿರ ಸೈನ್ಯ ಮಾತ್ರ ಹಡಗಿನಲ್ಲಿ ಹೋಗುವಾಗ ನಷ್ಟವಾಗಿದೆಯೆಂದು ತಿಳಿಯಬರುತ್ತದೆ.

ಸ್ಕಾಟ್ಲೆಂಡ್ ತೀರದಲ್ಲಿ ಕಳೆದ ತಾ|| ೧೨ ರಾತ್ರಿ ವಿಪರೀತವಾದ ಗಾಳಿಯ ಏಟಿನಿಂದ ಮಂಜಿನಗಡ್ಡೆಗೆ ಬಡಿದು ಇಂಗ್ಲೀಷರ ೨ ಯುದ್ಧದ ಹಡಗುಗಳು ಸಂಪೂರ್ಣವಾಗಿ ಒಡೆದುಹೋದುವು. ಒಳಗಿದ್ದವರಲ್ಲಿ ಒಬ್ಬನು ಹೊರತು ಉಳಿದವರೆಲ್ಲಾ ಮೃತರಾದರು.

ಕಾಂಗ್ರೆಸ್ ರಾಜಕೀಯ ಸಂಸ್ಕರಣಗಳನ್ನು ಸಫಲವಾಗುವಂತೆ ಮಾಡುವುದಕ್ಕೆ ಯಾವಯಾವ ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಈ ದೇಶದಲ್ಲೂ ಸೀಮೆಯಲ್ಲೂ ಸಾಗಿಸುವುದಕ್ಕಾಗಿ ಒಂದು ಮೇಲ್ವಿಚಾರಣೆಯ ಸಂಘವು ಏರ್ಪಡಿಸಲ್ಪಟ್ಟಿದೆ. ಅದಕ್ಕೆ ಪ್ರತಿಯೊಂದು ಅಧಿಪತ್ಯಗಳಿಂದಲೂ ಇಬ್ಬರು ಮೂವರಂತೆ ಪ್ರತಿನಿಧಿಗಳು ಆರಿಸಿಕೊಳ್ಳಲ್ಪಟ್ಟಿದ್ದಾರೆ.

ಡೆನ್ಮಾರ್ಕ್ ದೇಶಕ್ಕೆ ಸೇರಿದ ಕೋಪನ್‌ಹೇಗನ್ ಪಟ್ಟಣದಲ್ಲಿ ಕಳೆದ ನವಂಬರ್ ತಿಂಗಳಲ್ಲಿ ನೀರಿನಮೇಲೆ ಓಡುವ ಬೈಸಿಕಲ್ಲುಗಳ ಪಂದ್ಯವು ನಡೆದಿತು. ಈ ಸೈಕಲ್ಲುಗಳು ಹೇಗಿರುವುವೆಂದರೆ—ಅಲ್ಯುಮಿನಿಯಂ ಲೋಹದ ತಗಡಿನಮೇಲೆ ಬೈಸಿಕಲ್ಲಿನ ಆಕಾರದ ಯಂತ್ರವನ್ನು ನಿರ್ಮಿಸಿ, ಅದಕ್ಕೆ ನೀರಿನ ಮೇಲೆ ನಡೆಯಲನುಕೂಲಿಸುವಂಥ ೨ ಚಕ್ರಗಳನ್ನು ತೊಡಿಸಿರುವರು. ಕೆಳಗೆ ಹಾಸಿರುವ ಅಲ್ಯುಮಿನಿಯಂ ತಗಡು ತೆಪ್ಪದಂತೆ ತೇಲಿಸಲು ಸಾಧಕವಾಗಿಯೂ, ಚಕ್ರಗಳು ಮುಂದಕ್ಕೆ ಸಾಗಿಸಲು ಸಾಧಕಗಳಾಗಿಯೂ ಇರುವುವು.

ಅರಣ್ಯದಲ್ಲಿರುವ ಒಂದಾನೊಂದು ಜಾತಿಯ ವಿಷವೃಕ್ಷದಿಂದ ಅದರ ಬಳಿಯಲ್ಲಿ ಸಂಚರಿಸಿದ ಮೃಗಾದಿಗಳೂ ಕೂಡ ಮೃತವಾಗಿಹೋಗುವುವೆಂದು ಕೆಲರು ಹೇಳುತ್ತಾರೆ. ಆದರೆ ಡಾಕ್ಟರ್ ಟಿ. ಆಂಡರ್ಸನ್ ಎಂಬ ಪಾಶ್ಚಾತ್ಯಶಾಸ್ತ್ರಜ್ಞರು ಅಗ್ನಿಪರ್ವತ ಮೊದಲಾದುವುಗಳ ಸಂಬಂಧವಾಗಿ ಬರೆದಿರುವ ಒಂದು ಗ್ರಂಥದಲ್ಲಿ—ಇಂಥ ವಿಷವೃಕ್ಷವಿರುವುದು ಸುಳ್ಳೆಂಬುದಾಗಿಯೂ ಜಾವಾ ದ್ವೀಪದಲ್ಲಿರುವ ಒಂದು ಕಣಿವೆಯಲ್ಲಿ ಅಗ್ನಿಕುಂಡವಿರುವುದೆಂಬುದಾಗಿಯೂ ಅದರಿಂದ ಮೇಲಕ್ಕೆ ಒಂದು ತರದ ವಿಷ ವಾಯುವು ಬರುತ್ತಿರುವುದೆಂದೂ ಅದನ್ನು ಸೇವಿಸಿದ ಮೃಗ ಮೊದಲಾದುವುಗಳೆಲ್ಲಾ ಸತ್ತುಹೋಗುವುವೆಂಬುದಾಗಿಯೂ ಬರೆದಿರುತ್ತಾರೆ.

ಆಂಗ್ಲ ಯುದ್ಧಮಂತ್ರಿಮಂಡಲದಲ್ಲಿ ಒಬ್ಬರಾಗಿದ್ದ ಸರ್ ಎಡ್ವರ್ಡ್ ಕಾರ್ಸನ್‌ರವರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಅದನ್ನು ಮುಖ್ಯಮಂತ್ರಿಯವರು ಅಂಗೀಕರಿಸಿದರು. ಇವರು ಐರ್ಲಂಡಿಗೆ ಸ್ವರಾಜ್ಯವು ಕೊಡಬಾರದೆಂದು ಪ್ರತಿಭಟಿಸುವ ಪಕ್ಷದ ಮುಖಂಡರು. ಯುದ್ಧ ಮುಗಿಯುವವರೆಗೂ ಐರ್ಲಂಡ್ ಸ್ವರಾಜ್ಯಸಮಸ್ಯೆಯು ಪರಿಗ್ರಹಿಸಲ್ಪಡುವುದಿಲ್ಲವೆಂಬ ಕಾರಣದಿಂದ, ಯುದ್ಧಕಾರ್ಯದಲ್ಲಿ ಆಂಗ್ಲಸಾಮ್ರಾಜ್ಯದ ಜಯವೊಂದನ್ನೇ ಮುಖ್ಯ ಲಕ್ಷ್ಯವಾಗಿಟ್ಟುಕೊಂಡು ಮಂತ್ರಿಮಂಡಲದಲ್ಲಿ ಸೇರಿದ್ದರು. ಈಗ ಸ್ವರಾಜ್ಯಸಮಸ್ಯೆಯು ಮತ್ತೆ ಆರಂಭಿಸಲ್ಪಟ್ಟಿರುವುದರಿಂದ ಮಂತ್ರಿಮಂಡಲದಲ್ಲಿದ್ದುಕೊಂಡೇ ತಮ್ಮ ಪಕ್ಷದವರ ವಾದವನ್ನು ಹಿಡಿದು ಸಾಧಿಸುವುದಕ್ಕೆ ಆಗುವುದಿಲ್ಲವೆಂಬ ಕಾರಣದಿಂದ ಈ ಪದವಿಗೆ ರಾಜೀನಾಮೆ ಕೊಟ್ಟರು. ಇದರಿಂದ ಮುಂದೆ ಐರ್ಲಾಂಡಿನಲ್ಲಿ ಎಂಥ ಗದ್ದಲವೇಳುವುದೋ ಹೇಳಲಿಕ್ಕಾಗದು. ಇಂಗ್ಲೆಂಡ್ ದೇಶೀಯ ಕೋಶಾಧಿಕಾರಿಗಳಾಗಿದ್ದ ಸರ್ ಜೇಮ್ಸ್, ಕ್ರೇಗ್‌ರವರೂ ಕೂಡ ಈಚೆಗೆ ರಾಜೀನಾಮೆ ಕೊಟ್ಟರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚು ಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ|| ಬ|| ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತ್ರೆ.

೨

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ.ಗಳನ್ನು ದಾನಮಾಡಿ ಯಾವಯಾವ ಮಹಾತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

ವಿಳಾಸ:—ಎಂ. ಎಂ. ಹರ್ಡೀಕರ್, ದಾವಣಗೆರೆ.

ನವರಾತ್ರಿ ಬಹುಮಾನ   ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು   ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬಿಳೀ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 8

ಇಮಿಟೇಷನ್ ಸಿಲ್ಕ್ ಗೋವರ್ ಚಾಕ್ ಸೀರೆ	5.0.0
ಡೈಮಂಡ್ ಕೋಟ್ಟಡಿ ಸೀರೆ	5.0.0
ಬನಾರಸ್ ಸೀರೆ	5-8.0
ಬಾಲಾಮಣಿ ಸೀರೆ	3.8.0

ವಿಳಾಸ:-ವೈರಂ ಅಂಡ್ ಕೊ, ಇರುಳಪ್ಪನಬೀದಿ, ಮದರಾಸು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ!   ಬಹು ಲಾಭ,

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಸ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ ಜಡ್ಡು, ಗುದ್ದವ್ವನ ಬೇನೆ, ತುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು. ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷಮನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ, ಹೆಡ್ ಆಫೀಸ
46 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಗ.

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
12 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಕಾಳು ಕಡಿಯ ಜಂಗೀ ವಖಾರ

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
ಧಾರವಾಡ.

ಫುಕಟ]   [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರಾ ತಿಳಿಸಿದಲ್ಲಿ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಪೆ. ೧೦೦ ಕ್ಕೆ ೧-೪-೦

೩ ಜೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
12 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 17

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಫೆಬ್ರವರಿ ತಾ|| ೩ ರಿಂದ ೧೯೧೮ ನೆಯ ಫೆಬ್ರವರಿ ತಾ|| ೯ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಪುಷ್ಯ ಬ|| ಸಪ್ತಮಿಯಿಂದ ಪುಷ್ಯ ಬ|| ತ್ರಯೋದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಳೆ ಕೇದಿ
3	ಭಾನು	ಸಪ್ತ	34-24	ಸ್ವಾತಿ	56-35	22
4	ಸೋಮ	ಅಷ್ಟ	37-15	ವಿಶಾಖ	60	23
5	ಮಂಗಳ	ನವ	38-47	ಅನೂ	60	24
6	ಬುಧ	ದಶ	39-2	ಅನೂ	2-9	25
7	ಗುರು	ಏಕಾ	37-58	ಜ್ಯೇಷ್ಠ	3-31	26
8	ಶುಕ್ರ	ದ್ವಾದ	35-23	ಮೂಲ	3-33	27
9	ಶನಿ	ತ್ರಯೋ	32-35	ಪೂರ್ವಾ	2-36	28

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦]   [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧)   ಮೈಸೂರ್ ಸ್ಟಾರ್ ಸರ್ಕ ೧೯೧೮ ನೆಯ ಇಸವಿ ಫೆಬ್ರುವರಿ ತಾರೀಖು ೧೭ ನೆಯ ಭಾನುವಾರ.   (ಸಂಚಿಕೆ ೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರಾಕ್‌ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರಡಬುಬಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರಾಕ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ,
10 3, ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೬—೦
ಚಾರುಶೀಲೆಚರಿತ್ರ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರಲೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 11

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತವಾಗಾಗ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗನೇಬೇನೆ, ಬಹಿನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೮೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಫ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕರ್ನಲ್ಲಿಂಗ ಕೆಮಿಸ್ಟ್ ಏನಿಯಂ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಳೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರ ಉಪಯುಕ್ತವಾದ ಆರ್ಯವೈದ್ಯ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ ಕ್ಕೂ ೦—೧೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚು ಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,
ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!
ಕೈ. ರಾ|| ಬ|| ಮಲ್ಲಪ್ಪ ಬಸವಪ್ಪ ವಾರದ
ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ.ಗಳನ್ನು ದಾನಮಾಡಿ ಯಾವಯಾವ ಮಹಾತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

4 ವಿಳಾಸ:—ಎಂ. ಎಂ. ಹರ್ಡೀಕರ್, ದಾವಣಗೆರೆ.

ಸತ್ಯಮೇವಜಯತೇ.
ಗುಣವಾಗದಿದ್ದರೆ ಹಣ ಪರತ. 19
ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಫೆಬ್ರವರಿ ತಾ|| ೧೭ ನೆಯ ಭಾನುವಾರ.

ಸಾಮ್ರಾಜ್ಯಶಾಸನಸಭೆ.

ಭಾಷಾಪ್ರಯುಕ್ತ ರಾಷ್ಟ್ರವಿಭಾಗ.

ಭರತಖಂಡದಲ್ಲಿ ಸದ್ಯಃ ಕೋರಲ್ಪಡುತ್ತಲಿರುವ ರಾಜಕೀಯ ಸುಧಾರಣೆಗಳಲ್ಲಿ ಭಾಷಾಧಾರದಮೇಲೆ ರಾಷ್ಟ್ರವಿಭಾಗ ಮಾಡಬೇಕೆಂಬುದೂ ಒಂದಾಗಿರುತ್ತದೆ. "ಒಂದೊಂದೇ ಭಾಷೆಯನ್ನಾಡುವ ಪ್ರಜಾಬಾಹುಳ್ಯವುಳ್ಳ ದೇಶಭಾಗಗಳನ್ನೇ ಒಂದೊಂದು ಪ್ರಾಂತವನ್ನಾಗಿ ನಿರ್ಣಯಿಸಿದರೆ, ಪರಿಪಾಲನಸೌಕರ್ಯವೂ ಉಂಟಾಗುತ್ತದೆ, ವಿದ್ಯಾವ್ಯಾಪನೆಗೂ ಸಂಪದ್ವೃದ್ಧಿಗೂ ಅವಕಾಶವಾಗುತ್ತದೆ; ಭಿನ್ನಭಿನ್ನ ಭಾಷೆಗಳನ್ನು ಮಾತನಾಡುವವರು ಒಂದು ರಾಷ್ಟ್ರದಲ್ಲಿ ಸೇರಿಕೊಂಡಿದ್ದರೆ ಅಂಥ ಸೌಕರ್ಯಪ್ರಯೋಜನಗಳುಂಟಾಗುವುದಿಲ್ಲ" ಎಂಬುದೇ ಈ ಸುಧಾರಣೇಚ್ಛುಗಳ ಮುಖ್ಯಾಶಯವಾಗಿರುತ್ತದೆ. ಈ ಪ್ರಾರ್ಥನೆಯನ್ನು ಮೊಟ್ಟಮೊದಲು ಆಂಧ್ರದೇಶೀಯರೂ, ಅವರಿಂದೀಚೆಗೆ ಒಢ್ರರೂ, ಮಹಾರಾಷ್ಟ್ರೀಯರೂ, ಗುಜ್ಜರರೂ, ಕನ್ನಡಿಗರೂ, ಮಲಯಾಳಿಗಳೂ ಕೂಡ ಭಾಷಾಪ್ರಯುಕ್ತ ರಾಷ್ಟ್ರವಿಭಾಗ ಸೌಕರ್ಯಗಳನ್ನು ಅಪೇಕ್ಷಿಸುತ್ತಲಿದ್ದಾರೆ. ಈ ತಮ್ಮ ಅಭಿಪ್ರಾಯವನ್ನು ಆಂಧ್ರರೂ, ಮಹಾರಾಷ್ಟ್ರರೂ, ಒಢ್ರರೂ, ಕನ್ನಡಿಗರೂ ಸಹ ಸ್ಟೇಟ್ ಸೆಕ್ರೆಟರಿಯವರಿಗೆ ವಿಜ್ಞಾಪನಪತ್ರಿಕೆಗಳ ದ್ವಾರಾ ನಿವೇದಿಸಿಯೂ ಇದ್ದಾರೆ.

ಈ ಮಧ್ಯೆ ಅ|| ರಾ|| ಬ|| ಬಯ್ಯಾನರಸಿಂಹೇಶ್ವರಶರ್ಮರವರು ಕಳೆದ ಸಾಮ್ರಾಜ್ಯಶಾಸನ ಸಭೆಯಲ್ಲಿ ಈ ಸಂಬಂಧವಾದ ತೀರ್ಮಾನವನ್ನಿಡುವುದಕ್ಕೆ ವೈಸ್ರಾಯರ ಅಪ್ಪಣೆಯನ್ನು ಪಡೆದು ಕಳೆದ ತಾ|| ೬ ರ ಸಭೆಯೊಳಗೆ ಪ್ರತಿಪಾದಿಸಿದರು. ಆಗ ಸ್ಟೇಟ್ ಸೆಕ್ರೆಟರಿಯವರೂ ಕುಳಿತು ನೋಡುತ್ತಿದ್ದರು. ಅದ ಪರ್ಯವಸಾನವೇನೆಂದರೆ—ಸರ್ಕಾರದವರು ತಾವು ಯಾವ ಭಾವವನ್ನೂ ವ್ಯಕ್ತಪಡಿಸದೆ ಈ ವಿಷಯವಾಗಿ ಸಭಿಕರ ಅಭಿಪ್ರಾಯವನ್ನು ತಿಳಿಯಿಸಲು ಅವಕಾಶಕೊಟ್ಟರು. ಅದರಮೇಲೆ ಈ ತೆರದ ವಿಭಾಗ ಪ್ರಯತ್ನದಿಂದ ವೃಥಾ ತೊಂದರೆ, ಕಷ್ಟ, ಎಂದು ಸರ್ ಹ್ಯಾಮಿಲ್ಟನ್ ಗ್ರಾಂಟ್‌ರವರೂ, ಇದು ಅಯುಕ್ತವೆಂದು ಸರ್ ಗಂಗಾಧರ ಚಿಟ್ನಾವೀಸ್‌ರವರೂ, ಇದು ಅಕಾಲವೆಂದು ಫೇಗನ್‌ರವರೂ, ಸಣ್ಣ ಸಣ್ಣ ವಿಭಾಗಗಳನ್ನಾಗಿ ದೇಶವನ್ನು ಹಂಚುವುದು ಸುಸಾಧ್ಯವಲ್ಲವೆಂದು ಶಾಫಿಯವರೂ, ಇದು ದೇಶದ ಪುರೋವೃದ್ಧಿಗೆ ಭಂಗಕಾರಿಯೆಂದು ಸಪ್ರೂಯವರೂ, ಇದು ದೇಶದಲ್ಲಿ ಅನೈಕ್ಯವನ್ನೂ ಕಲಹವನ್ನೂ ಹೆಚ್ಚಿಸುವುದು, ಸ್ಟೇಟ್‌ಸೆಕ್ರೆಟರಿಯವರು ಉದ್ದೇಶಪಟ್ಟು ಬಂದಿರುವ ಕಾರ್ಯಕ್ಕೆ ಭಂಗವನ್ನು ತರುವುದು, ಮತ್ತೂ ಸಕಾಲಿಕವೂ ಅಲ್ಲ, ಎಂದು ಸುರೇಂದ್ರನಾಥ ಬಾನರ್ಜಿಯವರೂ, ಇದು ಉಪಯೋಗಕರವಾದ ತೀರ್ಮಾನವಾದರೂ ಈ ದೇಶದ ಸ್ಥಿತಿಗತಿಗೆ ಇದನ್ನು ಮಾಡುವುದು ಸಾಧ್ಯವಲ್ಲ, ಆಂಗ್ಲಭಾಷೆಯೇ ರಾಜನೀತಿಜ್ಞಾನವನ್ನು ಉಂಟುಮಾಡಿಕೊಟ್ಟುದರಿಂದ ಆ ಭಾಷೆಯನ್ನೇ ಎಲ್ಲಾ ಪ್ರಭುತ್ವದವರೂ ಶಾಸನಸಭೆಯವರೂ ಉಪಯೋಗಿಸುತ್ತ ಬರಬೇಕು, ಪ್ರತ್ಯೇಕ ಜಾತೀಯತಾಭಿಮಾನಕ್ಕೆಡೆಗೊಟ್ಟರೆ ಭಾರತಜಾತೀಯತಾಭಿವೃದ್ಧಿಗೆ ಭಂಗವುಂಟಾಗುವುದು, ಮಾಂಟೂಗ್‌ರವರು ಸ್ವಪರಿಪಾಲನ ವಿಷಯ ಪರಿಷ್ಕಾರಕ್ಕಾಗಿ ಇಲ್ಲಿಗೆ ಬಂದಿರುವ ಸಮಯದಲ್ಲಿ ಇಂಥ ಸಣ್ಣ ವಿಷಯಗಳನ್ನೆಲ್ಲಾ ಅವರ ಮುಂದೆ ಹಾಕಿ ಕಾರ್ಯಭಾರವನ್ನು ಹೆಚ್ಚಿಸಬಾರದು, ಎಂದು ಶ್ರೀನಿವಾಸಶಾಸ್ತ್ರಿಯವರೂ, ರಾಷ್ಟ್ರವಿಭಾಗವು ಭಾಷಾಧಾರವೊಂದನ್ನೇ ಮುಖ್ಯವಾಗಿಟ್ಟುಕೊಂಡಿರಲಾಗದೆಂದು ನವಾಬ್ ಅಲಿ ಚೌದರಿಯವರೂ, ಆಂಧ್ರರಾಷ್ಟ್ರವನ್ನಪೇಕ್ಷಿಸುವುದು ಶರ್ಮರವರ ಇಷ್ಟವಾಗಿದ್ದರೆ ಆ ವಿಷಯವನ್ನೀಸಭೆಗೇಕೆ ತರಬೇಕು? ಇದು ಹಾನಿಕರವಾದುದು, ತಮ್ಮ ದೇಶದ ಪ್ರಜೆಗಳೊಳಗೆ ಕೀರ್ತಿ ಸಂಪಾದಿಸಿಕೊಳ್ಳಬೇಕೆಂಬ ಉದ್ದೇಶದಿಂದ ಶರ್ಮರವರು ಈ ತೀರ್ಮಾನವನ್ನು ಸಾಮ್ರಾಜ್ಯಶಾಸನಸಭೆಗೆ ತಂದಿರಬೇಕು ಎಂದು ಹೇಳನಮಾಡಿ ಜೆನ್ನಾರವರೂ ಸಹ ಪ್ರತಿಭಟಿಸಿದರು. ಕೆ. ವಿ. ರಂಗಸ್ವಾಮಯ್ಯಂಗಾರರೊಬ್ಬರು ಮಾತ್ರ ಶರ್ಮರವರ ತೀರ್ಮಾನಕ್ಕೆ ಅನುಕೂಲವಾಗಿ ಮಾತನಾಡಿದರು. ಇದರಿಂದ ಈ ತೀರ್ಮಾನವು ಸಭಿಕರ ಒತ್ತಾಸೆಯೇ ಇಲ್ಲದೆ ಬಿದ್ದುಹೋಯಿತು. ದೇಶಭಾಷಾಪ್ರೇಮಿಗಳಿಗೆಲ್ಲಾ ಈ ಪರ್ಯವಸಾನವು ವ್ಯಸನಕರವಾಯಿತೆಂಬುದಕ್ಕೆ ಸಂಶಯವಿಲ್ಲ. ಬಂಧವೂ, ಔದಾಸೀನ್ಯವೂ, ದುರಭಿಮಾನವೂ ಇಲ್ಲದೆ ಸಾವಧಾನದಿಂದ ವಿಚಾರಮಾಡುವವರಿಗೆಲ್ಲಾ ಭಾಷಾಪ್ರಯುಕ್ತ ರಾಷ್ಟ್ರವಿಭಾಗದಿಂದ ವಿಶೇಷ ಫಲಗಳೂ ಸೌಕರ್ಯವೂ ಉಂಟೆಂಬುದು ಒಡೆದು ಕಾಣದೆ ಇರುವುದಿಲ್ಲ. ಅದುಕಾರಣ ಈಗ ಪ್ರತಿಭಟಿಸಿದವರೇ ಮುಂದೆ ಒಂದಾನೊಂದು ಕಾಲದಲ್ಲಿ ಒಪ್ಪುವಂಥ ಯೋಗವು ಬರದೆ ಹೋಗಲಾರದು. ಆದರೆ ಸ್ಟೇಟ್ ಸೆಕ್ರೆಟರಿಯವರಿಗೆ ಈ ವಿಷಯವಾಗಿ ವಿಜ್ಞಾಪನೆಮಾಡಿದ್ದುದರಿಂದ, ಅದು ಗರ್ಭಾವಸ್ಥೆಯಲ್ಲಿರಲಾಗಿ ಈಗಾಗಲೇ ಆಂಧ್ರಪ್ರತಿನಿಧಿಗಳು ಆತುರಪಟ್ಟು ಇದನ್ನು ಸಾಮ್ರಾಜ್ಯಶಾಸನಸಭೆಯ ಮುಂದಿಟ್ಟು ರಸಾಭಾಸಮಾಡಿಸಿಕೊಂಡುದು ಮಾತ್ರ ಅಕಾಲಪ್ರಸವ ಅಕ್ರಮಪ್ರಸವಗಳೆರಡೂ ಸಮಸಿಸಿ, ಪ್ರಕೃತದ ಗರ್ಭವು ನಿರರ್ಥಕವಾದಂತಾಯಿತೆಂಬುದನ್ನು ಮಾತ್ರ ನೆನೆಸಿಕೊಂಡರೆ ವಿಷಾದವಾಗುವುದು. ತಮ್ಮ ಮುಂದೆ ದೇಶೀಯರ ಒತ್ತಾಸೆಯೇ ಪಡೆಯದೆ ಹೋದ ಈ ವಿಷಯವನ್ನು ಸ್ಟೇಟ್‌ಸೆಕ್ರೆಟರಿಯವರು ಬೆರಳಿನ ಸಂದಿಯಲ್ಲಿ ಬಿಟ್ಟರೂ ಬಿಡಲು ಅವಕಾಶವನ್ನು ನಾವಾಗಿ ಮಾಡಿಕೊಟ್ಟಂತಾಯಿತು.

ಸಬ್‌ತಾಲ್ಲೂಕುಗಳನ್ನು ತಾಲ್ಲೂಕುಗಳನ್ನಾಗಿ ಮಾಡುವುದು.

ಮೈಸೂರು ಸಂಸ್ಥಾನದಲ್ಲಿರುವ ಸಬ್‌ತಾಲ್ಲೂಕುಗಳನ್ನು ತಪ್ಪಿಸಿ ಅವಶ್ಯವಾದೆಡೆಯಲ್ಲಿ ವಿಸ್ತೀರ್ಣವನ್ನು ಸರಿಪಡಿಸಿ ಹೊಸ ತಾಲ್ಲೂಕುಗಳನ್ನೇ ಸ್ಥಾಪಿಸಬೇಕೆಂಬುದ್ದೇಶವು ಸರ್ಕಾರದವರಿಗೆ ಕೆಲ ಕಾಲದಿಂದಿದ್ದಿತು. ಆ ವಿಷಯವನ್ನು ಪ್ರಜಾಪ್ರತಿನಿಧಿಸಭೆಯವರೂ ಅರಿಕೆಮಾಡುತ್ತಾ ಇದ್ದರು. ಅದರ ಮೇಲೆ ಸರ್ಕಾರದವರು ಈಗ ೧ ಪ್ರಕಟನೆಯನ್ನು ಮಾಡಿ, ಅದರಲ್ಲಿ ಇನ್ನು ಮುಂದೆ ತಾವು ಸ್ಥಾಪಿಸಲಿಕ್ಕಿರುವ ಕ್ರಮವನ್ನು ವಿವರಿಸಿದ್ದಾರೆ. ಈ ಯೋಜನೆಯ ವಿಷಯದಲ್ಲಿ ಆಕ್ಷೇಪವನ್ನಾಗಲೀ ಸೂಚನೆಯನ್ನೇ ಆಗಲೀ ಮಾಡಲಿಷ್ಟವುಳ್ಳ ಪ್ರಜೆಗಳು ೩ ತಿಂಗಳೊಳಗಾಗಿ ಸರ್ಕಾರಕ್ಕೆ ಶ್ರುತಪಡಿಸಿಕೊಳ್ಳಬಹುದಾಗಿದೆ. ಈಗಣ ಹೊಸ ಏರ್ಪಾಟಿನ ಕ್ರಮವೇನೆಂದರೆ ಇದುವರೆಗೆ ಸಂಸ್ಥಾನದಲ್ಲಿರುವ ೯ ಸಬ್ ತಾ|| ಗಳೊಳಗೆ (೧) ಆಲೂರು ಸಬ್ ತಾ|| ನ್ನು ತಪ್ಪಿಸಿ, ಅದನ್ನು ಹಾಸನ ತಾಲ್ಲೂಕಿಗೇ ಸೇರಿಸಿಬಿಡುವುದು. (೨) ಕುಂಸಿ ಸಬ್ ತಾಲ್ಲೂಕನ್ನು ತಪ್ಪಿಸಿ, ಶಿವಮೊಗ್ಗೆ ತಾಲ್ಲೂಕಿಗೇ ಸೇರಿಸಿಬಿಡುವುದು. (೩) ಕೋಲಾರದ ಸಬ್‌ತಾಲ್ಲೂಕನ್ನು ತಪ್ಪಿಸಿ, ಅದನ್ನು ತಾಲ್ಲೂಕಾಗಿ ಮಾಡಿ, ಅದಕ್ಕೆ ಇದುವರೆಗೆ ಇದ್ದ ಕೋಲಾರಪೇಟೆ, ಕೊಟಗಲ್ಲು, ಬಿಡದಿ, ಕೈಲಂಚ ಎಂಬ ಹೋಬಳಿಗಳ ಜತೆಗೆ ಕಾರ್ಕಾನಹಳ್ಳಿ ತಾ|| ಗೆ ಸೇರಿದ ಹಾರೋಹಳ್ಳಿ ಹೋಬಳಿಯನ್ನೂ, ಬೆಂಗಳೂರು ತಾ|| ಗೆ ಸೇರಿದ್ದ ಕೆಂಗೇರಿ ಹೋಬಳಿಯನ್ನೂ ಹೊಸದಾಗಿ ಸೇರಿಸುವುದು. (೪) ಗುಡಿಬಂಡೆ ಸಬ್‌ತಾಲ್ಲೂಕನ್ನು ತಾಲ್ಲೂಕಾಗಿ ಮಾಡಿ, ಅದಕ್ಕೆ ಇದುವರೆಗೆ ಸೇರಿದ್ದ ಗುಡಿಬಂಡೆ ಸೋಮೇನಹಳ್ಳಿ ಎಂಬ ೨ ಹೋಬಳಿಗಳ ಜತೆಗೆ ಹೊಸದಾಗಿ ಗೌರಿಬಿದನೂರು ತಾಲ್ಲೂಕಿನ ನಾಗರಕೆರೆ ಹೋಬಳಿಯನ್ನೂ ಇದಕ್ಕೆ ಸೇರಿಸುವುದು. (೫) ಕೊರಟಗೆರೆ ಸಬ್‌ತಾಲ್ಲೂಕನ್ನು ತಾಲ್ಲೂಕನ್ನಾಗಿ ಮಾಡಿ, ಅದಕ್ಕೆ ಇದುವರೆಗೆ ಸೇರಿದ್ದ ಕೊರಟಗೆರೆ, ಹೊಳವನಹಳ್ಳಿ, ಚಿನ್ನರಾಯದುರ್ಗ-ಈ ಮೂರು ಹೋಬಳಿಗಳ ಜತೆಗೆ ತುಮಕೂರು ತಾಲ್ಲೂಕಿಗೆ ಸೇರಿದ್ದ ಊರಡಗೆರೆ, ಕೋಳಾಲ, ಕೋರಾ-ಎಂಬ ಮೂರು ಹೋಬಳಿಗಳನ್ನೂ ೨ ಹೋಬಳಿಗಳಾಗಿ ಮಾಡಿ, ಹೊಸದಾಗಿ ಸೇರಿಸಿ, ಒಟ್ಟು ಆ ತಾಲ್ಲೂಕಿಗೆ ೫ ಹೋಬಳಿಗಳನ್ನು ಮಾಡುವುದು. (೬) ತುರುವೇಕೆರೆ ಸಬ್‌ತಾಲ್ಲೂಕನ್ನು ತಾಲ್ಲೂಕನ್ನಾಗಿ ಮಾಡಿ, ಅದಕ್ಕೆ ಇದುವರೆಗಿದ್ದ ತುರುವೇಕೆರೆ, ಮಾಯಸಂದ್ರ-ಎಂಬ ಹೋಬಳಿಗಳ ಜತೆಗೆ ಗುಬ್ಬಿ ತಾ|| ನ ದಂಡಿನಸಿವರ, ಕಡಬ, ಚೆಟ್ನಹಳ್ಳಿ ಎಂಬ ೩ ಹೋಬಳಿಗಳನ್ನು ೨ ಹೋಬಳಿಗಳನ್ನಾಗಿ ಮಾಡಿ ಸೇರಿಸುವುದು. (೭) ಫ್ರೆಂಚ್ ರಾಕ್ಸ್ ಸಬ್‌ತಾಲ್ಲೂಕನ್ನು ತಾಲ್ಲೂಕನ್ನಾಗಿ ಮಾಡಿ, ಅದಕ್ಕಿರುವ ಮೇಲುಕೋಟೆ, ಹಿರೋಡೆ-ಎಂಬ ೨ ಹೋಬಳಿಗಳ ಜತೆಗೆ ನಾಗಮಂಗಲ ತಾಲ್ಲೂಕಿನ ೩ ಗ್ರಾಮಗಳನ್ನೂ, ಮಂಡ್ಯ ತಾಲ್ಲೂಕಿನಿಂದ ೪ ಗ್ರಾಮಗಳನ್ನೂ, ಕೃಷ್ಣರಾಜಪೇಟೆ ತಾಲ್ಲೂಕಿನಿಂದ ೫ ಗ್ರಾಮಗಳನ್ನೂ ತೆಗೆದುಕೊಂಡು ಸೇರಿಸಿ, ಹೊರಕೆರೆ, ದುದ್ದ, ಚಿಕ್ಕಕೊರು-ಎಂಬ ಇನ್ನೂ ೩ ಹೋಬಳಿಗಳನ್ನೂ ಈ ತಾಲ್ಲೂಕಿಗೆ ಸೇರಿಸುವುದು. (೮) ನರಸಿಂಹರಾಜಪುರದ ಸಬ್‌ತಾಲ್ಲೂಕನ್ನು ಬಾಳೆಹೊನ್ನೂರು ತಾಲ್ಲೂಕನ್ನಾಗಿ ಮಾಡಿ, ಅದಕ್ಕಿದ್ದ ಎಡೆಹಳ್ಳಿ, ಧನಿವಾಸ, ಬಾಳೆಹೊನ್ನೂರು-ಎಂಬ ೩ ಹೋಬಳಿಗಳ ಜತೆಗೆ ಮೂಡಗೆರೆ ತಾಲ್ಲೂಕಿನ ೨ ಗ್ರಾಮಗಳನ್ನೂ, ಕೊಪ್ಪ ತಾಲ್ಲೂಕಿನ ೩ ಗ್ರಾಮಗಳನ್ನೂ, ಚಿಕ್ಕಮಗಳೂರು ತಾಲ್ಲೂಕಿನ ೫ ಗ್ರಾಮಗಳನ್ನೂ ತೆಗೆದುಕೊಂಡು ವೈಗುಂದ, ಖಾಂಡಿ, ಆವತಿ-ಎಂಬ ಇನ್ನು ೩ ಹೋಬಳಿಗಳನ್ನೂ ಇದಕ್ಕೆ ಸೇರಿಸುವುದು. (೯) ಹರಿಹರ ಸಬ್‌ತಾಲ್ಲೂಕನ್ನು ತಾಲ್ಲೂಕನ್ನಾಗಿ ಮಾಡಿ, ಅದಕ್ಕೆ ಈಗ ಇರುವ ಹರಿಹರ, ಮಾಳೇಬನ್ನೂರು-ಎಂಬ ೨ ಹೋಬಳಿಗಳಿಂದಲೇ ಅದನ್ನು ತಾಲ್ಲೂಕನ್ನಾಗಿ ಮಾಡುವುದು.

ಸಾಮ್ರಾಜ್ಯ ನಿಯಮನಿರ್ಮಾಣಸಭೆ.

ದಿಲ್ಲಿ ಪಟ್ಟಣದಲ್ಲಿ ವೈಸ್ರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ|| ೬ ರಲ್ಲಿ ಈ ಸಭೆಯು ಆರಂಭಿಸಲ್ಪಟ್ಟಿತು. ಸ್ಟೇಟ್ ಸೆಕ್ರೆಟರಿಯವರೂ ಬಂದಿದ್ದರು. ವೈಸ್ರಾಯರ ಪ್ರಾರಂಭೋಪನ್ಯಾಸದಲ್ಲಿ ತಾತ್ಕಾಲಿಕ ಮುಖ್ಯವಿಷಯ ಸಂಬಂಧವಾಗಿ ಪ್ರಭುತ್ವದವರ ಭಾವವೆಲ್ಲಾ ಸೂಚಿಸಲ್ಪಟ್ಟಿತು. ಭರತಖಂಡದ ರಾಜಕೀಯಸಂಸ್ಕರಣ ವಿಷಯವಾಗಿ ಸ್ಟೇಟ್‌ಸೆಕ್ರೆಟರಿಯವರು ಇಲ್ಲಿಗೆ ದಯಮಾಡಿಸಿದುದಕ್ಕಾಗಿ ಸಭಾಪಕ್ಷದ ವಂದನೆಯು ತಿಳಿಯಿಸಲ್ಪಟ್ಟಿತು. ಭರತಖಂಡದ ನಾನಾ ಸಂಘಗಳವರೆಲ್ಲಾ ಸಮರ್ಪಿಸಿದ ವಿಜ್ಞಾಪನಪತ್ರಗಳ ಕೌಶಲವು ಕೊಂಡಾಡಲ್ಪಟ್ಟಿತು. ಕಳೆದ ೩ ತಿಂಗಳಿಂದಲೂ ನಿತ್ಯವೂ ಸ್ಟೇಟ್‌ಸೆಕ್ರೆಟರಿಯವರೂ ತಾವೂ ರಾಜಕೀಯ ಸಂಸ್ಕರಣ ವಿಷಯವಾಗಿ ಆಲೋಚಿಸುತ್ತಿರುವೆವೆಂದು ತಿಳಿಯಿಸಿದರು. ಕಳೆದ ಆಗಸ್ಟ್ ತಾ|| ೨೦ರಲ್ಲಿ ಸ್ಟೇಟ್‌ಸೆಕ್ರೆಟರಿಯವರು ಮಾಡಿದ ಪ್ರಕಟನದಂತೆಯೇ ಮಂತ್ರಿಮಂಡಲದ ಸಹಕಾರಭಾವವೂ ಅನುಕೂಲಿಸಿದರೆ ಇಲ್ಲಿ ಪ್ರಜಾಪ್ರಭುತ್ವವೇರ್ಪಡುವುದಕ್ಕೆ ತಕ್ಕ ಸೌಕರ್ಯವುಂಟಾಗುವುದೆಂದೂ, ಕಾರ್ಯಸಿದ್ಧಿಯು ಮನುಷ್ಯಾಧೀನವಲ್ಲವೆಂದೂ, ಆದರೂ ಅಸಾಧ್ಯಕಾರ್ಯದಲ್ಲಿ ಹೊಕ್ಕು ಯಾರಾದರೂ ಜಯಶೀಲರಾದರೆ ಅಂಥವರು ಮಿ|| ಮಾಂಟೂಗ್‌ರವರೇ ಆಗಿರುವರೆಂದೂ, ರಾಜಕೀಯ ಸಂಸ್ಕರಣ ವಿಷಯವಾಗಿ ಪ್ರಭುತ್ವಾಭಿಪ್ರಾಯದಮೇಲೆ ತಂತಮ್ಮ ಅಭಿಪ್ರಾಯ ಕೊಡುವುದಕ್ಕೆ ಪ್ರಜೆಗಳಿಗೆ ಅವಕಾಶಕೊಡಲ್ಪಡುವುದೆಂದೂ, ಕಾಂಗ್ರೆಸ್ ರಾಯಭಾರವನ್ನು ಸೀಮೆಗೆ ಕಳುಹಿಸಬೇಕೆಂದಿರುವ ಸುದ್ದಿಯನ್ನು ನಾನು ಕೇಳಿರುವೆನೆಂದೂ, ಆದರೆ ಇಂಥ ಪ್ರಯತ್ನವನ್ನು ಇತರರೂ ಮಾಡುವುದಕ್ಕೆ ಅವಕಾಶವಾಗುವುದೆಂದೂ, ಯುಕ್ತಸಮಯ ಬಂದರೆ ಆಗ ಮಾಡಬಹುದೆಂದೂ, ಅದಕ್ಕೆ ಇಂಡ್ಯಾ ಸರ್ಕಾರದವರು ಅಡ್ಡಂತರವನ್ನು ಕಲ್ಪಿಸುವುದಿಲ್ಲವೆಂದೂ ಯುದ್ಧದ ಭಾರವು ಭರತಖಂಡದಮೇಲೂ ಹೆಚ್ಚಾಗಿ ಬಿದ್ದಿರುವುದೆಂದೂ ಹೇಳಿ, ಇದುವರೆಗೆ ಇಲ್ಲಿಯ ಸಂಸ್ಥಾನಿಕರುಗಳೂ ಪ್ರಜೆಗಳೂ ಮಾಡಿದ ಸಹಾಯವನ್ನು ವಿವರಿಸಿ ಕೊಂಡಾಡಿ, ಮುಂದೆಯೂ ಹಾಗೆಯೇ ಸಹಾಯಮಾಡಬೇಕೆಂದು ಕೋರಿ, ಯುದ್ಧಕಾರಣದಿಂದ ಉಪ್ಪು ಬಟ್ಟೆ ಮೊದಲಾದುವುಗಳ ಬೆಲೆ ಹೆಚ್ಚಿರುವ ವಿಷಯವನ್ನು ಪ್ರತಿಪಾದಿಸಿ, ಪ್ರಾಂತಿಕಪ್ರಭುತ್ವದವರೊಡನೆ ಪರ್ಯಾಲೋಚಿಸಿ ಈ ವಿಷಯವಾಗಿ ಮಾಡಬೇಕಾದ ಏರ್ಪಾಟನ್ನು ಮಾಡುತ್ತೇವೆಂದು ಹೇಳಿ, ದೇಶರಕ್ಷಕ ಸೈನ್ಯವನ್ನು ಕೂಡಿಸುವ ಕಾಲಾವಧಿಯನ್ನು ಇನ್ನೂ ಹೆಚ್ಚಿಸಿಕೊಡುತ್ತೇವೆಂದು ತಿಳಿಯಿಸಿ, ಬಲಾತ್ಕಾರ ಬಾಲವಿದ್ಯಾಭ್ಯಾಸ ವಿಷಯವಾಗಿ ಸುಮುಖತೆಯನ್ನು ವ್ಯಕ್ತಪಡಿಸಿ, ಪಾರಿಶ್ರಾಮಿಕಾಭಿವೃದ್ಧಿ ಮೊದಲಾದ ಇತರ ಕೆಲ ವಿಷಯಗಳನ್ನೂ ವಿವರಿಸಿದರು.

ಸೀಮೆಯೆಣ್ಣೆ ಮತ್ತೂ ಅದರ ಡಬ್ಬಿ.

ಈ ಯೆಣ್ಣೆಯ ಡಬ್ಬಗಳ ಬೆಲೆಯು ಒಂದೊಂದಕ್ಕೆ ಒಂದೂಕಾಲು ರೂ. ವರೆಗೂ ಏರಿರುವುದು ಎಲ್ಲರಿಗೂ ಗೊತ್ತಿದೆಯಷ್ಟೆ. ಕಾರಣವೇನೆಂದರೆ—ಸೈನ್ಯಕ್ಕೆ ಯುದ್ಧಸಾಮಗ್ರಿಗಳನ್ನು ಒದಗಿಸಿಕೊಡಬೇಕಾದ ಸಂಘದವರಿಗೆ ಈ ಟಿನ್ ಡಬ್ಬಿಗಳು ವಿಶೇಷವಾಗಿ ಬೇಕಾಗಿವೆ. ಅದುಕಾರಣ ಈ ಯೆಣ್ಣೆಯ ಡಬ್ಬಿಗಳು ಹೊರಕ್ಕೆ ಸಾಗಿಹೋಗದಂತೆ ಮಾಡಿಕೊಳ್ಳುವುದಕ್ಕಾಗಿ ಆ ಸಂಘದವರು ಹೇಳಿಕೊಂಡ ಪ್ರಕಾರಕ್ಕೆ ಇಂಡ್ಯಾ ಪ್ರಭುತ್ವದವರು ಟಿನ್ನು ೧ಕ್ಕೆ ೫ ಆಣೆಯಷ್ಟು ಬೆಲೆಯನ್ನು ಹೆಚ್ಚಿಸಿದರು. ೧೯೧೭ ನೆ ವರ್ಷದ ಜನವರಿ ತಿಂಗಳಲ್ಲಿ ಈ ಪ್ರಕಾರ ಬೆಲೆ ಹೆಚ್ಚಿಸಿದಾಗ ಸೀಮೆಯೆಣ್ಣೆಯ ಮಾರಾಟಮಾಡುವ ವರ್ತಕಸಂಘದವರೊಡನೆ ಆಲೋಚಿಸಿ, ಅವರ ಆಲೋಚನೆಯಮೇರೆಯೇ ಹಾಗೆ ಮಾಡಿದರು. ಹೀಗೆ ಮಾಡಿದರೂ ಸರ್ಕಾರದವರಿಗೆ ಬೇಕಾಗಿರುವಷ್ಟು ಡಬ್ಬಿಗಳು ದೊರೆಯದೆಹೋದುವು. ಇದರ ಮೇಲೆ ಮತ್ತೆ ಅವರು ಡಬ್ಬಿ ೧ ಕ್ಕೆ ಇನ್ನು ೪ ಆಣೆಯಷ್ಟು ಬೆಲೆಯನ್ನು ಹೆಚ್ಚಿಸಿದರು. ೧೯೧೭ ನೆ ವರ್ಷಕ್ಕೆ ಮುಂಚೆಯೇ ಈ ಡಬ್ಬಿಗಳ ಬೆಲೆಯು ಬಹುಶಃ ೧೦ ಆಣೆಯವರೆಗೂ ಇದ್ದಿತು. ಈಚೆಗೆ ಗೌರ್ನಮೆಂಟಿನವರು ೨ ಸಲದಿಂದ ೯ ಆಣೆಯಷ್ಟು ಬೆಲೆಯನ್ನು ಹೆಚ್ಚಿಸಿದ ಕಾರಣ ಒಂದೊಂದು ಡಬ್ಬಿಯ ಬೆಲೆಯು ರೂಪಾಯಿಗೆ ಮಿಂಚಿಹೋಯಿತು. ಮೇಲೆ ಕಂಡ ಕಾರಣದಿಂದ ಬರಿಯ ಡಬ್ಬಿಗಳ ಬೆಲೆಯು ಹೆಚ್ಚಬೇಕಾಯಿತೇ ಹೊರತು ಎಣ್ಣೆಯ ಬೆಲೆಯೇನೂ ಹೆಚ್ಚಿಲ್ಲ. ಅದರ ಬೆಲೆಯು ಮೊದಲಿದ್ದಷ್ಟೇ ಈಗಲೂ ಇದೆ. ಇದು ಮುಖ್ಯ ವಿಷಯ. ವರ್ತಕರಬಳಿಗೆ ಸ್ವಂತದ ಡಬ್ಬಿಗಳನ್ನು ತೆಗೆದುಕೊಂಡುಹೋದವರು ಬರಿಯೆಣ್ಣೆಯನ್ನು ಮೊದಲ ಬೆಲೆಗೇ ತೆಗೆದುಕೊಂಡು ಬರಬಹುದು. ಸಣ್ಣಸಣ್ಣ ವ್ಯಾಪಾರಿಗಳು ಬಡಬಗ್ಗರಿಗೆ ಸೀಸೆಗಟ್ಟಲೆ ಎಣ್ಣೆಯ ವ್ಯಾಪಾರಮಾಡುವಾಗ್ಗೆ ಹೆಚ್ಚು ಬೆಲೆಯನ್ನು ತೆಗೆದುಕೊಳ್ಳುವುದು ಅನ್ಯಾಯವಾಗಿರುತ್ತದೆ. ಈ ಕಾಲದಲ್ಲಿ ಸೀಮೆಯೆಣ್ಣೆಯನ್ನುಪಯೋಗಿಸದಿರುವ ಮನೆಗಳು ಗ್ರಾಮಾದಿಗಳಲ್ಲೂ ಕೂಡ ಇರುವುದಿಲ್ಲ. ಉಪ್ಪು ಸರ್ವರಿಗೂ ಬೇಕಾಗಿರುವಂತೆ ಈ ಸೀಮೆಯೆಣ್ಣೆಯೂ ನಿತ್ಯೋಪಯೋಗ್ಯವಸ್ತುವಾಗಿದೆ. ಇದರ ಬೆಲೆಯು ಹೆಚ್ಚಿಹೋದರೆ ಬಡಬಗ್ಗರಿಗೆ ಬಹಳ ಕಷ್ಟವಾಗುತ್ತದೆ. ಅದುಕಾರಣ ನಿರ್ನಿಮಿತ್ತವಾಗಿ ವರ್ತಕರು ಇದರ ಬೆಲೆಯನ್ನು ಹೆಚ್ಚಿಸಿರುವುದನ್ನು ವಿಚಾರಿಸಿ ಕ್ರಮಪಡಿಸುವುದಕ್ಕೆ ಬೆಂಗಳೂರು ವರ್ತಕಸಂಘದವರು ಪ್ರಯತ್ನಿಸಿರುವುದು ದೇಶೋಪಕಾರಕಾರ್ಯವಾಗಿರುತ್ತದೆ. ಅವರ ಪ್ರಯತ್ನವು ಸಾರ್ಥಕವಾಗಿ ಪ್ರಜೆಗಳಿಗೆ ಹಿತವಾಗಲೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಅ|| ಸರ್ಜನ್ ಡಾ|| ಸಿದ್ಧಪ್ಪನವರು ಶ್ರೀರಂಗಪಟ್ಟಣದಿಂದ ನಂಜನಗೂಡಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಕೋಲಾರದಲ್ಲಿ ಒಬ್ಬ ಮುಸಲ್ಮಾನನು ಸಾರಾಯಿ ಬಟ್ಟಿಯನ್ನಿಳಿಸುತ್ತಿದ್ದುದರಿಂದ ಅವನಿಗೆ ೩ ತಿಂಗಳ ಕಾರಾಗೃಹವಾಸಶಿಕ್ಷೆಯಾಯಿತು.

ಸಬ್‌ಪ್ರೋಟೆಂ ಮುನಸೀಫರಾದ ಮ|| ಎಸ್. ಆರ್. ರಾಮಸ್ವಾಮಿ ಅಯ್ಯರ್‌ರವರು ೫ ನೆಯ ತರಗತಿಯ ಮುನಸೀಫರಾಗಿ ಸ್ಥಿರಗೊಳಿಸಲ್ಪಟ್ಟಿರುವರು.

ಚಿರಸ್ಮರಣೀಯರಾದ ದಿವಂಗತ ಗೋಪಾಲಕೃಷ್ಣ ಗೋಖಲೆಯವರ ಪುಣ್ಯದಿನಮಹೋತ್ಸವವು ಬರುವ ತಾ|| ೧೯ ರಲ್ಲಿ ಬೆಂಗಳೂರಿನಲ್ಲಿ ನಡೆಯಿಸಲ್ಪಡುವುದು.

ಹಾಸನದ ಡಿ|| ಕಮಿಷನರಾಫೀಸ್ ಶಿರಸ್ತೆದಾರರಾದ ಮ|| ಕೆ. ಸೂರಪ್ಪನವರು ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರರಾಗಿ ನಿಯಮಿಸಲ್ಪಟ್ಟಿರುವರು.

ಶ್ರೀಮತಿ ಸರೋಜಿನೀದೇವಿಯವರು ಮೊನ್ನೆ ವಾರದಲ್ಲಿ ರಾಜಧಾನಿಗೆ ಬಂದಿದ್ದು ಮಹಾರಾಜಾಂಗ್ಲೇಯ ಕಲಾಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಕುರಿತು ಒಂದುಪನ್ಯಾಸಮಾಡಿದರು.

ಬೆಂಗಳೂರಿನ ಚೀಫ್ ಪೊಲೀಸ್ ಇನ್‌ಸ್ಪೆಕ್ಟರಾದ ಮಿ|| ಸಿ. ಎವರಾರ್ಡ್‌ರವರು ಅ|| ಕಮಿಷನರಾಗಿ ನಿಯಮಿಸಲ್ಪಟ್ಟು ರಾಜಧಾನಿಯ ಪೊಲೀಸ್ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುವರು.

ಬೆಂಗಳೂರು ಚಿಲ್ಲರೆ ವರ್ತಕರು ಸೀಮೆಯೆಣ್ಣೆ ಬೆಲೆಯನ್ನು ಹೆಚ್ಚಿಸಿ ಮಾರುತ್ತಿರುವುದರಿಂದ ಬಡಬಗ್ಗರಿಗೆ ಕಷ್ಟವಾಗಿದೆ. ಈ ವಿಷಯವನ್ನು ಕುರಿತು ಅಲ್ಲಿಯ ವರ್ತಕಸಂಘದವರು ವಿಚಾರಣೆ ಮಾಡುತ್ತಿದ್ದಾರೆ.

ಕೋಲಾರದ ಚಿನ್ನದ ಗಣಿಗಳಿಂದ ಕಳೆದ ಜನವರಿ ತಿಂಗಳಲ್ಲಿ ತೋಡಿ ತೆಗೆಯಲ್ಪಟ್ಟ ೧೫೩೩೩೬ ರೂ. ಗಳ ಬೆಲೆಯ ಭಂಗಾರವು ಕಳೆದ ತಾ|| ರಲ್ಲಿ ಬೆಂಗಳೂರಿನಿಂದ ಬೊಂಬಾಯಿ ಟಂಕಸಾಲೆಗೆ ಕಳುಹಿಸಲ್ಪಟ್ಟಿತು.

ಬೆಂಗಳೂರ ದಂಡಿನಲ್ಲಿ ಒಂದು ಮಗುವು ಅದರ ಮೈಮೇಲಿದ್ದ ಆಭರಣದಾಸೆಗಾಗಿ ಕೊಲೆಮಾಡಲ್ಪಟ್ಟಿತು. ಪೋಲೀಸರು ಅನುಮಾನದಮೇಲೆ ಇಬ್ಬರು ಹೆಂಗುಸರನ್ನು ಒಬ್ಬ ಗಂಡುಸನ್ನೂ ಹಿಡಿದು ಬಂಧನದಲ್ಲಿಟ್ಟಿರುತ್ತಾರೆ.

ಕಾಶೀಕ್ಷೇತ್ರದಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನಾಧೀಶ ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಮಾರ್ಚಿ ತಾ|| ೬, ೭ ಮತ್ತು ೮ ರಲ್ಲಿ ಮಹಾಸಭೆಯು ಕೂಡಿ ಧರ್ಮವಿಚಾರವಾಗಿ ಪಂಡಿತರುಗಳಿಂದ ವ್ಯಾಖ್ಯಾನಗಳು ಮಾಡಲ್ಪಡುವುವು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್‌ಪ್ರೆಸಿಡೆಂಟ್‌ರಾದ ಮ|| ಟಿ. ಜಿ. ಲಕ್ಷ್ಮಣರಾಯರು ತಮ್ಮ ಕುಮಾರರ ವಿವಾಹವನ್ನು ನಡೆಸಲು ಈ ತಾ|| ೧೬ ರಿಂದ ೧೫ ದಿನಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವ ಪ್ರಯುಕ್ತ ಹೆಲ್ತಾಫೀಸರಾದ ಡಾ|| ಕರ್ಪೆಯವರು ತಮ್ಮ ಕೆಲಸದೊಡನೆ ಮ್ಯು|| ಕೌನ್ಸಿಲಿನ ಪ್ರೆಸಿಡೆಂಟರ ಮತ್ತೂ ಟ್ರಸ್ಟ್‌ಬೋರ್ಡಿನ ಚೇರ್ಮನ್ನರ ಕೆಲಸಗಳನ್ನೂ ನೋಡುವಂತೇರ್ಪಾಟಾಗಿದೆ.

ಕಳೆದ ತಾ|| ೧೩ ರ ರಾತ್ರಿ ಬೆಂಗಳೂರ ಬಸವನಗುಡಿ ಎಕ್ಸ್‌ಟೆನ್ಷನ್ನಲ್ಲಿ ನಾಲ್ಕು ಜನ ಕಳ್ಳರು ಚೀಫ್ ಸೆಕ್ರೆಟರಿ ಮ|| ಬಾಲಸುಂದರಂ ಅಯ್ಯರ್‌ರವರ ಮನೆಗೆ ಕನ್ನವನ್ನಿಕ್ಕಿ ಒಳಗೆ ನುಗ್ಗಿ ಪದಾರ್ಥಗಳನ್ನು ತೆಗೆದುಕೊಂಡು ಸಾಗಿಸುತ್ತಿರುವಷ್ಟರಲ್ಲಿ ಮನೆಯವರು ಕಂಡು ವೆಂಕಟಿಗಾಡು ಎಂಬುವನೊಬ್ಬನನ್ನು ಹಿಡಿದುಕೊಂಡು ಪೊಲೀಸರ ಸೆರೆಯಲ್ಲಿಡಿಸಿದರು. ಉಳಿದ ಮೂವರು ಕತ್ತಲೆಯಲ್ಲಿ ತಪ್ಪಿಸಿಕೊಂಡೋಡಿದರು.

ಬೆಂಗಳೂರಿನ ಕಾರಾಗೃಹದಲ್ಲಿಡಲ್ಪಟ್ಟಿದ್ದ ಇಬ್ಬರು ಸೋಲ್ಜರುಗಳು ಸೈನ್ಯಾಧಿಕಾರಿಗಳ ಅಪ್ಪಣೆಯಿಲ್ಲದೆಯೇ ತಲೆತಪ್ಪಿಸಿಕೊಂಡು ಮದ್ರಾಸು ಬಂಡಿಯಲ್ಲಿ ಟಿಕೇಟನ್ನು ತೆಗೆದುಕೊಳ್ಳದೆಯೇ ಪ್ರಯಾಣಮಾಡುತ್ತಿದ್ದರು. ಬೌರಿಂಗ್‌ಪೇಟೆ ಸ್ಟೇಷನ್ನಿನಲ್ಲಿ ಅವರ ಕಳ್ಳತನವು ಗೊತ್ತಾಗಿ, ಅಲ್ಲಿ ಅವರು ಇಳಿಯದೆಹೋಗಿ, ವೆಲ್ಲೂರಿನಲ್ಲಿ ಪೊಲೀಸರ ಅಧೀನರಾದರು. ಬೆಂಗಳೂರಿನಿಂದ ಕೆಲರು ಸೈನಿಕರು ಹೋಗಿ ಅವರಿಬ್ಬರನ್ನೂ ಬೆಂಗಳೂರಿಗೆ ಕರೆತಂದಿದ್ದಾರೆ.

ಹಿಂದುಳಿದವರ ವಿದ್ಯಾಪ್ರೋತ್ಸಾಹಕ್ಕಾಗಿ ನಮ್ಮ ಶ್ರೀಮನ್ಮಹಾರಾಜ ಸರ್ಕಾರದವರು ೧ ಲಕ್ಷ ರೂ. ಗಳನ್ನು ಅಪ್ಪಣೆಮಾಡಿದ್ದಾರಷ್ಟೆ. ಅದಕ್ಕೆ ಇನ್ನೂ ೫೦ ಸಾವಿರ ರೂ. ಗಳನ್ನು ಹೆಚ್ಚಾಗಿ ಸಹಾಯಮಾಡಬೇಕೆಂದೂ, ಅಲ್ಲದೆ ನಿಮ್ನಜಾತಿಗಳವರ ವಿದ್ಯಾಭಿವೃದ್ಧಿಗಾಗಿಯೇ ಪ್ರತ್ಯೇಕವಾಗಿ ೧ ಲಕ್ಷ ರೂ. ಗಳನ್ನು ಸಹಾಯಮಾಡಬೇಕೆಂದೂ ಸಹ ಸಂಪದಭ್ಯುದಯಸಮಾಜದ ವಿದ್ಯಾಶಾಖಾಸಂಘದವರು ಸರ್ಕಾರಕ್ಕೆ ಸೂಚಿಸಿರುವರೆಂದು ಕೇಳುತ್ತೇವೆ.—ಅರ್ಹವಾದ ಸೂಚನೆಯೇ ಸರಿ.

ಕಳೆದ ತಾ|| ೩ ರಲ್ಲಿ ಬೆಂಗಳೂರಿನಿಂದ ಗದಗಿಗೆ ರೇಶ್ಮೆ ಬಟ್ಟೆಗಳ ಒಂದು ಮೂಟೆಯು ಪಾರ್ಸಲ್ಲಾಗಿ ಹೊಗೆಬಂಡಿಯಮೂಲಕ ಕಳುಹಿಸಲ್ಪಟ್ಟಿತು. ಆ ಬಂಡಿಯಲ್ಲಿ ಹೋದ ಗಾರ್ಡು ಮತ್ತೂ ಅಂಡರ್‌ಗಾರ್ಡುಗಳಾಗಿದ್ದ ಮಹಮ್ಮದೀಯರಿಬ್ಬರು ಅರಸೀಕೆರೆಯಲ್ಲಿಳಿದಾಗ ಹೊಸಗಾರ್ಡಿನವಶಕ್ಕೆ ಆ ಪಾರ್ಸಲನ್ನು ಒಪ್ಪಿಸದೆ ಅದನ್ನು ತಮ್ಮ ಸಂಗಡಲೇ ತಿರುಗಿ ಬೆಂಗಳೂರಿಗೆ ತೆಗೆದುಕೊಂಡು ಬಂದು ಅಪಹರಿಸುವುದಕ್ಕೆ ಪ್ರಯತ್ನಿಸಿದುದರಿಂದ ಅವರಿಬ್ಬರಮೇಲೂ ಕ್ರಿಮಿನಲ್ ವ್ಯಾಜ್ಯವು ಹೂಡಲ್ಪಟ್ಟಿದೆ. ಅಪರಾಧಿಗಳು ರೈಲ್ವೆ ಪೊಲೀಸರಧೀನದಲ್ಲಿದ್ದಾರೆ.

"ದಾವಣಗೆರೆಯಲ್ಲಿ ಹೈಸ್ಕೂಲನ್ನು ಕಟ್ಟಿಸುವುದಕ್ಕೂ ಮತ್ತೂ ಅದರ ಬೋರ್ಡಿಂಗ್ ಕಟ್ಟಡಕ್ಕೂ ಸಹ ಅಲ್ಲಿಯ ಸಾಹುಕಾರ್ ಮ|| ಚಿಗಟೇರಿ ಮುರಿಗೆಪ್ಪನವರು ಅಲ್ಲಿ ಡಿ|| ಕಮಿಷನರ ಅಧ್ಯಕ್ಷತೆಯಿಂದ ನೆರವಿದ್ದ ವಿವಾಟಿಂಗನಲ್ಲಿ ಒಪ್ಪಿದರೆಂದು............" ಕಳೆದ ವಾರದ ಈ ಪತ್ರಿಕೆಯ ಒಳದೇಶದ ವೃತ್ತಾಂತದಲ್ಲಿ ಪ್ರಕಟಿತವಾಗಿರುವುದಷ್ಟೆ. ದಾವಣಗೆರೆಯಲ್ಲಿ ಹೈಸ್ಕೂಲು ಸ್ಥಾಪಿತವಾದರೆ ವೀರಶೈವ ಬಡವಿದ್ಯಾರ್ಥಿಗಳ ಪೋಷಣಕ್ಕಾಗಿ ೧೦ ಸಾವಿರ ರೂ. ಗಳನ್ನೂ ಮತ್ತೂ ವೀರಶೈವ ವಿದ್ಯಾರ್ಥಿಗಳ ಬೋರ್ಡಿಂಗ್ ಕಟ್ಟಡಕ್ಕಾಗಿ ೫ ಸಾವಿರ ರೂ. ಗಳನ್ನು ಕೊಡುವುದಾಗಿ ಮ|| ಶಿವರುದ್ರಪ್ಪ ಮುರುಘಪ್ಪ ಚಿಗಟೇರಿ ಎಂಬ ವಿದ್ಯಾಭಿಮಾನಿಗಳು ಬಹಳ ಉದಾರಮನಸ್ಸಿನಿಂದ ಡಿ|| ಕಮಿಷನರ ಅಧ್ಯಕ್ಷತೆಯಲ್ಲಿ ಕೂಡಿದ್ದ ತಾಲ್ಲೂಕು ಕಾನ್ಫರೆನ್ಸಿನಲ್ಲಿ ವಾಗ್ದಾನಮಾಡಿದರೆಂದೂ, ಈ ಪ್ರಕಾರ ಈವರೆಗೂ ಮತ್ತಾರೂ ಈ ಕಾರ್ಯಕ್ಕೆ ಇನ್ನೊಂದುಹಣವನ್ನು ದಾನಮಾಡಿಲ್ಲವೆಂದೂ ದಾವಣಗೆರೆಯ ನಿವಾಸಿಗಳೊಬ್ಬರು ತಿಳಿಸಿರುತ್ತಾರೆ.

ಭರತಖಂಡದ ವೃತ್ತಾಂತಗಳು.

ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೂಗ್‌ರವರು ಲಾರ್ಡ್ ಡನ್ಮೋರ್‌ರವರೊಡನೆ ಕೂಡಿ ದಿಲ್ಲಿಯಿಂದ ಕಳೆದ ತಾ|| ೬ ರಲ್ಲಿ ಪ್ರಯಾಣಮಾಡಿದರು. ಮತ್ತೆ ತಾ|| ೧೮ ಕ್ಕೆ ದಿಲ್ಲಿಯನ್ನು ಸೇರುವವರಾಗಿದ್ದಾರೆ.

ಮದ್ರಾಸಿನಲ್ಲಿ ಪಂಡಿತ ಡಿ|| ಗೋಪಾಲಾಚಾರ್ಲುಯವರು ಸ್ಥಾಪಿಸಿ ನಡೆಯಿಸುತ್ತಿರುವ ಆಯುರ್ವೇದ ವೈದ್ಯಶಾಲೆಗೆ ಅಲ್ಲಿಯ ಮ್ಯುನಿಸಿಪಾಲಿಟಿಯಿಂದ ವರ್ಷ ೧ ಕ್ಕೆ ೧ ಸಾವಿರ ರೂ. ಗಳನ್ನು ಸಹಾಯಮಾಡಲು ತೀರ್ಮಾನಿಸಿರುತ್ತಾರೆ.

ಸಂಯುಕ್ತರಾಷ್ಟ್ರಗಳ ಗೌರ್ನರ್ ಪದವಿಯನ್ನು ಸರ್ ಹಾರ್ಕೋರ್ಟ್ ಬಟ್ಲರ್‌ರವರು ಸ್ವೀಕರಿಸುವುದಕ್ಕಾಗಿ ತಾ|| ೧೪ ರಲ್ಲಿ ಅವರು ಲಕ್ನೋಪಟ್ಟಣಕ್ಕೆ ಹೋದರು. ತಾ|| ೧೫ ರಲ್ಲಿ ಸರ್ ಜಾರ್ಜ್‌ಮೆಸ್ಟನ್‌ರವರು ಆ ಪಟ್ಟಣವನ್ನು ಬಿಟ್ಟು ಸೀಮೆಗೆ ಪ್ರಯಾಣಮಾಡಿದರು.

ಕಳೆದ ಪುಷ್ಯ ಬಹುಳ ಅಮಾವಾಸ್ಯೆಯದಿವಸ ಪ್ರಯಾಗದಲ್ಲಿ ನಡೆದ ಕುಂಭಮೇಲೋತ್ಸವಕ್ಕೆ ೩೦ ಲಕ್ಷ ಮಂದಿ ಯಾತ್ರಿಕರು ಕೂಡಿದ್ದರು. ತ್ರಿವೇಣೀಸಂಗಮದಲ್ಲಿ ಉಷಃಕಾಲದಿಂದ ಹಿಡಿದು ಮರುದಿನ ಸರಿರಾತ್ರಿಯವರೆಗೂ ಸ್ನಾನಮಾಡುವವರ ಗುಂಪುಗಳು ಕಿಕ್ಕಿರಿದಿದ್ದುವು. ಅಪಾಯಗಳಾವುವೂ ಸಂಭವಿಸದೆ ಯಾತ್ರೋತ್ಸವಗಳೆಲ್ಲಾ ನಡೆಯುತ್ತಿರುವುವು.

ಮದ್ರಾಸಿನಲ್ಲಿ ಈ ವರ್ಷಾರಂಭದಿಂದ ಪೋಲೀಸರ ಸಂಬಳವು ೨ ರೂ. ನಷ್ಟು ಹೆಚ್ಚಿಸಲ್ಪಟ್ಟಿದೆ. ಹೊಸದಾಗಿ ಸೇರುವ ಕಾನ್‌ಸ್ಟೇಬಲುಗಳಿಗೆ ೧೩ ರೂ. ಸಂಬಳ. ~~ಮುಂದೆ ಮೂರು ವರ್ಷಗಳೊಳಗಾಗಿ ಇದು ೧೬ ರೂ.~~ ಗೆ ಹೆಚ್ಚಿಸಲ್ಪಡುವುದು. ಹಳೆಯ ಕಾನ್‌ಸ್ಟೇಬಲುಗಳ ಸಂಬಳವು ಅವರ ಅರ್ಹತೆಯನ್ನೂ ಕೂಡಿ ೯ ರೂ. ನಿಂದ ೧೩|| ರೂ. ಗೆ ಹೆಚ್ಚಿಸಲ್ಪಟ್ಟಿರುವುದು.

ಮದ್ರಾಸುಪಟ್ಟಣದ ಮಹಾಜನರು ಸರ್ ವೆಡರ್ಬರ್ನ್‌ರವರ ಮೃತಿಯ ವಿಷಯದಲ್ಲಿ ತಮ್ಮ ಸಹಾನುಭಾವವನ್ನು ಅವರ ಕುಟುಂಬದವರಿಗೆ ತಿಳಿಯಪಡಿಸುವುದಕ್ಕಾಗಿ ಒಂದು ಮಹಾಸಭೆಯನ್ನು ಕೂಡಿಸಿದ್ದರು. ಅವರವಿಷಯದಲ್ಲಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವುದಕ್ಕಾಗಿ ಮದ್ರಾಸುಪಟ್ಟಣದಲ್ಲಿ ಅವರ ಶಿಲಾಮೂರ್ತಿಯೊಂದನ್ನು ಪ್ರತಿಷ್ಠಾಪಿಸಬೇಕೆಂದು ನಿರ್ಧರಿಸಿದರು.

ಬೊಂಬಾಯಿಯಲ್ಲಿ ಪದಾರ್ಥಗಳ ಬೆಲೆಗಳನ್ನು ಕ್ಲುಪ್ತಗೊಳಿಸುವುದಕ್ಕಾಗಿ ಮಿ|| ಪಿ. ಆರ್. ಕಾಡೆಲ್ ಎಂಬುವವರು ಅಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ. ಮನೆಗಳ ಮತ್ತೂ ಅಂಗಡಿಗಳ ಬಾಡಿಗೆಗಳು ಇಷ್ಟೇ ಇರಬೇಕೆಂದು ಇವರು ವಿಧಿಸುವರು. ಇದರಿಂದ ಪ್ರಜೆಗಳ ಕಷ್ಟವು ಬಹಳವು ಟ್ಟಿಗೆ ಕಡಿಮೆಯಾಗುವುದು. ಆಹಾರವಸ್ತುಗಳ ಬೆಲೆಯನ್ನು ನಿರ್ಣಯಿಸುವುದಕ್ಕೆ ಪೇಟೆಯ ಪ್ರಮುಖಜನರ ಸಂಘವೊಂದನ್ನೇರ್ಪಡಿಸುವರು.

ಮದ್ರಾಸು ಸರ್ಕಾರದವರು ಪ್ರೊಬೇಷನರಿ ಡೆಪ್ಯುಟಿ ತಾಹಸೀಲ್ದಾರ್ ಪದವಿಗಳು ೬ ಕ್ಕೆ ಇಷ್ಟವಿದ್ದವರು ಬಿನ್ನಹಗಳನ್ನು ಬರೆದುಕೊಳ್ಳಬೇಕೆಂದು ತಿಳಿಯಿಸಿರಲು, ೨೭೦ ಮಂದಿಗಳು ಬರೆದುಕೊಂಡಿದ್ದರು. ಅವರಲ್ಲಿ ೬ ಮಂದಿಗಳನ್ನು ಸರ್ಕಾರದವರು ಆರಿಸಿಕೊಂಡುದಲ್ಲದೆ, ರೆವಿನ್ಯೂಶಾಖೆಯ ಉನ್ನತೋದ್ಯೋಗದಲ್ಲಿ ಇದುವರೆಗೆ ಯಾರೊಬ್ಬರೂ ಸೇರದಿರುವ ಒಂದಾನೊಂದು ವರ್ಗಕ್ಕೆ ಸೇರಿದವರೊಬ್ಬರನ್ನು ೭ ನೆ ಸ್ಥಾನಕ್ಕೆ ಸೇರಿಸಿ ಆರಿಸಿಕೊಂಡಿರುತ್ತೇವೆಂದು ಪ್ರಕಟಿಸಿದ್ದಾರೆ. ಬಹುಶಃ ಇವರು ಪಂಚಮಜನವರ್ಗಕ್ಕೆ ಸೇರಿದವರಾಗಿರಬಹುದು.

ಕೊಲಂಬೋವಿನಲ್ಲಿ ಒಬ್ಬ ಆಂಗ್ಲಸ್ತ್ರೀಯು ತವರುಮನೆಗೆ ಹೋಗಿದ್ದಾಗ್ಗೆ ಆಕೆಯ ಪೆಟ್ಟಿಗೆಯನ್ನು ಗಂಡನು ಒಡೆದು ಒಳಗಿದ್ದ ವಸ್ತ್ರಾಭರಣಗಳನ್ನು ಅಪಹರಿಸಿದ್ದನು. ಗಂಡನಮನೆಗೆ ಬಂದು ಹೆಂಡತಿಯು ತನ್ನ ಪೆಟ್ಟಿಗೆಯನ್ನು ನೋಡುವಾಗ್ಗೆ ಈ ಸಂಗತಿಯು ವ್ಯಕ್ತವಾಯಿತು. ಆಕೆಯು ವಕೀಲನನ್ನಿಟ್ಟು ಗಂಡನಮೇಲೆ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ವ್ಯಾಜ್ಯವನ್ನು ಹಾಕಿಸಿದಳು. ಗಂಡನಮೇಲೆ ಕಳ್ಳತನದ ವ್ಯಾಜ್ಯವನ್ನು ತರುವುದಕ್ಕೆ ಹೆಂಡತಿಗೆ ಅಧಿಕಾರವಿಲ್ಲವೆಂದೂ, ವಿವಾಹಬಂಧ ಪರಿತ್ಯಾಗವನ್ನು ಮಾಡಿದ ನಂತರ ವ್ಯಾಜ್ಯವನ್ನು ನಡೆಯಿಸಬಹುದೆಂದೂ ಕೋರ್ಟಿನವರು ಹೇಳಿ ತಿರಸ್ಕರಿಸಿ ಕಳುಹಿಸಿಬಿಟ್ಟರು. ಈ ದಂಪತಿಗಳಿಗೆ ಮದುವೆಯಾಗಿ ಎರಡೇ ತಿಂಗಳಾಗಿದೆಯಂತೆ.

ಧರ್ಮಪುರಿ ಡಿಸ್ಟ್ರಿಕ್ಟ್ ಮುನ್‌ಸೀಫ್‌ಕೋರ್ಟಿನಲ್ಲಿ ೧೯೧೬ ನೆ ವರ್ಷದ ೫೫೭ ನೆ ನಂ|| ವ್ಯಾಜ್ಯದಲ್ಲಿ ಒಂದು ವಿಚಿತ್ರವಾದ ಸಂಗತಿಯು ೧೫ ದಿನಗಳ ಕೆಳಗೆ ನಡೆದಿತೆಂದು ಆ ಊರಿನ ವಕೀಲರೊಬ್ಬರು ತಾವು ಪ್ರತ್ಯಕ್ಷವಾಗಿ ಕಂಡುದಾಗಿ ಮದ್ರಾಸಿನ ಒಂದಾನೊಂದು ಪತ್ರಿಕೆಗೆ ಬರೆದಿರುತ್ತಾರೆ. ಏನೆಂದರೆ—ಆ ವ್ಯಾಜ್ಯದಲ್ಲಿ ಪ್ರತಿವಾದಿಯಾದಾತನು ತನ್ನ ಪರವಾಗಿ ಸಾಕ್ಷ್ಯ ನುಡಿಯಲಿಕ್ಕೆ ತಿರುಪತಿ ವೆಂಕಟೇಶನಿಗೆ ಸಮನ್ ಮಾಡಬೇಕೆಂದು ಕೋರ್ಟಿಗೆ ಅರ್ಜಿ ಹಾಕಿಕೊಂಡನು. ಈ ವಿಪರೀತವಾದ ಕೆಲಸವನ್ನು ನಡೆಯಿಸುವುದು ತಮ್ಮಿಂದ ಸಾಧ್ಯವಲ್ಲವೆಂದು ಮುನ್‌ಸೀಫರು ಅರ್ಜಿಯನ್ನು ನಿರಾಕರಿಸಿಬಿಟ್ಟರು. ಆದರೆ ವೆಂಕಟೇಶ್ವರನು ಹೀರಂಗಿನ ದಿನಕ್ಕೆ ಕೋರ್ಟಿಗೆ ಬರುವನೆಂಬ ಸುದ್ದಿಯು ಊರಲ್ಲೆಲ್ಲಾ ಹರಡಿತು. ಹೀರಂಗಿನ ದಿನ ವಾದಿ ಪರವಾದ ಸಾಕ್ಷ್ಯಗಳ ವಿಚಾರಣೆಯೆಲ್ಲಾ ಮುಗಿದಬಳಿಕ ಪ್ರತಿವಾದಿಯ ಪರದ ಸಾಕ್ಷ್ಯಗಳು ಬರಲೆಂದು ಕೋರ್ಟಿನವರು ಅಪ್ಪಣೆಮಾಡಲಾಗಿ, ಪ್ರತಿವಾದಿಯು ಒಂದು ತಟ್ಟೆಯಲ್ಲಿ ಕಾಯಿ ಹಣ್ಣು ತಾಂಬೂಲಗಳನ್ನಿಟ್ಟು ಕರ್ಪೂರವನ್ನು ಹೊತ್ತಿಸಿ, "ವೆಂಕಟಾಚಲಪತೀ" ಎಂದು ಮೂರು ಸಲ ಕೋರ್ಟಿನ ಹೊರಗೆ ನಿಂತು ಕೂಗಿದನು. ಯಾರೂ ಬರಲಿಲ್ಲ. ಕೋರ್ಟಿನವರೇ ಕೂಗಿಸಬೇಕೆಂದು ಆತನು ಮುನ್‌ಸೀಫರಿಗೆ ಹೇಳಿಕೊಂಡನು. ಕೋರ್ಟಿನ ದಫೇದಾರನ ಮೂಲಕ ವೆಂಕಟಾಚಲಪತೀ ಎಂದು ಮೂರುಸಲ ಕೂಗಿಸಲಾಗಿ, ಕೋರ್ಟಿನ ಒಳಗಡೆಯಲ್ಲಿ ಮೇಲ್ಗಡೆಯಿಂದ ಮಧ್ಯಭಾಗದಲ್ಲಿ ಹೂವಿನ ದಳಗಳು ಸುರಿದುಬಿದ್ದುವಂತೆ! ಅದನ್ನು ಕಂಡು ಅಲ್ಲಿದ್ದವರೆಲ್ಲರೂ ಗೋವಿಂದನಾಮಸ್ಮರಣೆ ಮಾಡಿದರಂತೆ. ಹೀಗಾಗುವುದು ಈ ಕಾಲದಲ್ಲಿ ಸಂಭವನೀಯವೆ? ಅಥವಾ ಇದು ವೆಂಕಟಾಚಲಪತಿಯ ಮಹಿಮೆಯನ್ನು ಹೆಚ್ಚಿಸುವುದಕ್ಕೆ ಹುಟ್ಟಿಸಿದ ಕಥೆಯೊ! ತಿಳಿಯಲಿಲ್ಲ.

ವಿದೇಶದವೃತ್ತಾಂತಗಳು.

ಕಳೆದ ೧೯೧೭ ನೆ ವರ್ಷವೊಂದರಲ್ಲೇ ಇಂಗ್ಲೀಷರಿಗೆ ೧೦ ಲಕ್ಷ ಸೇನಾಕ್ಷಯವಾಗಿರುತ್ತದೆ.

೧೯೧೭ ನೆ ವರ್ಷದಲ್ಲಿ ಯುದ್ಧಮಾಡಿದಂತೆಯೇ ಈಗ ಮರಳಿ ಶತ್ರುಗಳೂ ವರ್ದೂನ್ ರಂಗದಲ್ಲಿ ಮಹಾಯುದ್ಧಕ್ಕೆ ಆರಂಭಿಸಿರುತ್ತಾರೆ.

ಕಳೆದ ತಾ|| ೬ ಕ್ಕೆ ಕಡೆಯಾದ ವಾರದಲ್ಲಿ ಶತ್ರುಗಳಿಂದ ಇಂಗ್ಲೀಷರ ೧೫ ಹಡಗುಗಳೂ, ಫ್ರೆಂಚರ ೩ ಹಡಗುಗಳೂ, ಇಟಲಿಯವರ ೧೪ ಹಡಗುಗಳೂ ಮುಳುಗಿಸಲ್ಪಟ್ಟವೆ.

ಹಿಂದಣ ತುರ್ಕೀ ಸುಲ್ತಾನರಾಗಿದ್ದು ಇದುವರೆಗೆ ಸೆರೆಯಲ್ಲಿಡಲ್ಪಟ್ಟಿದ್ದ ಅಬ್ದುಲ್‌ಹಮಿದ್‌ರವರು ದಿವಂಗತರಾದರೆಂದು ಕೇಳುತ್ತೇವೆ. ಇವರ ತಮ್ಮಂದಿರೇ ಈಗಣ ಸುಲ್ತಾನರು.

ರಷ್ಯನ್ನರು ಪೆಟ್ರೋಗ್ರೇಡಿನಲ್ಲಿದ್ದ ಮಿತ್ರಮಂಡಲಿ ರಾಯಭಾರಿಗಳ ಆಸ್ತಿಯನ್ನೆಲ್ಲಾ ದೋಚಿಕೊಂಡುದಲ್ಲದೆ, ಅವರನ್ನೆಲ್ಲಾ ದೇಶಬಿಟ್ಟು ಓಡಿಸಿದರು. ಅವರೆಲ್ಲಾ ಸ್ವೀಡನ್ ದೇಶಕ್ಕೆ ಬಂದಿರುವರು.

ಪೆಟ್ರೋಗ್ರೇಡ್ ಪಟ್ಟಣದ ಬೀದಿಬೀದಿಗಳಲ್ಲೇ ಒಂದೊಂದು ಪಕ್ಷದವರಿಗೆ ಕಡಿದಾಟಗಳು ಇನ್ನೂ ಜರುಗುತ್ತಿವೆ. ಸೈನಿಕರಿಗೂ ಬೊಂಬಿಕೂಟದವರಿಗೂ ಒಂದುದಿನ ಜಗಳ ನಡೆದುದರಲ್ಲಿ ೧೨೦ ಮಂದಿ ಸತ್ತರು.

ಇನ್ನು ಮೂರುತಿಂಗಳು ನಮಗೆ ಶತ್ರುಗಳ ಸಬ್‌ಮೆರೀನಿನ ಹಾವಳಿಯು ಅಧಿಕವಾಗಿರುವುದು. ಅದನ್ನ ಹೇಗಾದರೂ ನಾವು ತಾಳಿಕೊಂಡರೆ ಬರುವ ಆಗಸ್ಟಿನಲ್ಲಿ ಆ ಉಪದ್ರವವು ನಿರ್ನಾಮವಾಗುವುದೆಂದು ಇಂಗ್ಲೀಷ್ ನೌಕಾದಳದ ಅಡ್ಮಿರಲ್ಲಾದ ಸರ್ ಜಾನ್ ಜೆಲ್ಲಿಕೋರವರು ಹೇಳಿರುವರು.

ಇಂಗ್ಲಾಂಡಿನಲ್ಲಿ ಈಗ ೫೦ ಸಾವಿರ ಮಂದಿ ಶತ್ರುಸೈನಿಕರು ಸೆರೆಯಾಳುಗಳಾಗಿದ್ದಾರೆ. ಇವರಲ್ಲಿ ೪೦ ಸಾವಿರ ಮಂದಿಗಳಿಂದ ಮಾರ್ಗಗಳನ್ನು ಹಾಕಿಸುವುದೇ ಮೊದಲಾದ ಕೆಲಸಗಳನ್ನೂ ೪ ಸಾವಿರ ಮಂದಿಯಿಂದ ವ್ಯವಸಾಯದ ಕೆಲಸವನ್ನೂ ಮಾಡಿಸಿಕೊಳ್ಳುತ್ತಿದ್ದಾರೆ. ಉಳಿದವರು ಗೆಯ್ಯುವುದಕ್ಕೆ ಅನರ್ಹರಾಗಿದ್ದಾರೆ.

ಜರ್ಮನಿ ಪ್ರಭುತ್ವಪಕ್ಷದಿಂದ ಜನರಲ್ ಮೆಕೆನ್ಸೀನರು ರುಮೇನಿಯಾದವರಿಗೆ ೪ ದಿನಗಳ ಗಡುವನ್ನು ಕೊಟ್ಟು ಅಷ್ಟರಲ್ಲಿ ನೀವು ನಮ್ಮೊಡನೆ ಸಂಧಿಮಾಡಿಕೊಳ್ಳಬೇಕೆಂದು ಅಂತ್ಯಲೇಖನವನ್ನು ಬರೆದಿದ್ದಾರೆ. ಮಂತ್ರಿವರ್ಗದವರು ಈ ಲೇಖನ ವಿಷಯವಾಗಿ ಬಹಳಹೊತ್ತು ಚರ್ಚಿಸಿ, ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು. ಪ್ರಭುವು ಅದನ್ನಂಗೀಕರಿಸಿದರು.

ಹೆಡ್ಜಾಜಿನಲ್ಲಿ ಅರಬ್ಬಿಯವರು ಜನವರಿ ತಾ|| ೨೬ ರಲ್ಲಿ ೧೧ ತುರ್ಕಿ ಪಟಾಲಮ್ಮುಗಳೊಡನೆ ಯುದ್ಧಮಾಡಿ ಸೋಲಿಸಿ, ಹಿಮ್ಮೆಟ್ಟಿಸಿ, ೪೦೦ ಜನರನ್ನು ಕೊಂದು, ೩೦೦ ಮಂದಿಗಳನ್ನೂ ೨ ಬೆಟ್ಟದ ಫಿರಂಗಿಗಳನ್ನೂ ೧೮ ಮಿಷನ್ ಫಿರಂಗಿಗಳನ್ನೂ ೮೦೦ ತುಪಾಕಿಗಳನ್ನೂ ವಶಪಡಿಸಿಕೊಂಡರು. ಶತ್ರುಗಳು ಟಫೈಲಿಗೆ ಉತ್ತರದಲ್ಲಿ ೧೧ ಮೈಲಿಗಳ ದೂರ ಹಿಂದಕ್ಕೆ ಓಡಿಹೋದರು.

ಜರ್ಮನರು ರಷ್ಯಾದ ಉಕ್ರೇನಿಯನ್ ಪಕ್ಷದವರೊಡನೆ ಸಂಧಿಯನ್ನು ಮಾಡಿಕೊಂಡರೆಂದೂ ಉಭಯಪಕ್ಷದವರೂ ಸಂಧಿಪತ್ರಕ್ಕೆ ಹಸ್ತಾಕ್ಷರಗಳನ್ನು ಹಾಕಿದರೆಂದೂ, ಬೋಲ್ಷೆವಿಕ್ ಪಕ್ಷದವರನ್ನೆಲ್ಲಾ ಸೋಲಿಸಿ ಓಡಿಸುವುದಕ್ಕಾಗಿ ತಮ್ಮ ಸಹಾಯಸೈನ್ಯವನ್ನು ಕಳುಹಿಸಿಕೊಡುವುದಾಗಿ ಉಕ್ರೇನಿಯನ್ನರಿಗೆ ಜರ್ಮನರು ವಾಗ್ದಾನಮಾಡಿರುವರೆಂದೂ, ಸೇನೆಯ ಭಯವನ್ನು ತೋರಿಸಿ, ರುಮೇನಿಯಾದವರನ್ನೂ ಸಂಧಿಗೆ ಒಪ್ಪಿಕೊಳ್ಳುವಂತೆ ಜರ್ಮನರು ಮಾಡಬೇಕೆಂದಿರುವರೆಂದೂ ಪ್ರಕಟವಾಗಿದೆ.

ಜರ್ಮನರ ಫೀಲ್ಡ್ ಮಾರ್ಷಲ್ ವಾನ್‌ಹಿಂಡನ್‌ಬರ್ಗನೊಡನೆ ಜರ್ಮನ್ ಪತ್ರಿಕಾಧಿಪತಿಗಳು ಮಾತನಾಡುತ್ತ, ಬರುವ ಮೇ ತಿಂಗಳಹೊತ್ತಿಗೆ ತಮ್ಮ ದೇಶದಲ್ಲಿ ಆಹಾರಪದಾರ್ಥಗಳಿಗೆ ಬರ ಬರುವುದೆಂದು ಹೇಳಲಾಗಿ, ಅದಕ್ಕೆ ಹಿಂಡನ್‌ಬರ್ಗರು ಪ್ರತ್ಯುತ್ತರವನ್ನು ಕೊಡುವಾಗ್ಗೆ—"ಏಪ್ರಿಲ್ ತಾ|| ೧ ರ ಹೊತ್ತಿಗೆ ನಮ್ಮ ಸೇನೆಗಳು ಪ್ಯಾರಿಸ್ ಪಟ್ಟಣದಲ್ಲಿರುವುವು" ಎಂದು ಜಂಭವನ್ನು ಕೊಚ್ಚಿರುವರಂತೆ! ಮತ್ತೂ ಫೆಬ್ರವರಿ ತಾ|| ೧೯ ರಲ್ಲಿ ಜರ್ಮನಿ ಪಾರ್ಲಿಮೆಂಟು ಕೂಡಿರುವಾಗ್ಗೆ ಶುಭವರ್ತಮಾನವನ್ನು ಅಲ್ಲಿಗೆ ತಿಳಿಯಿಸುವುದಕ್ಕಾಗಿ ಅವರು ಫೆಬ್ರವರಿ ತಾ|| ೧೫ ರಲ್ಲೇ ತಮ್ಮ ಮಹಾಯುದ್ಧಗಳನ್ನು ಪಶ್ಚಿಮರಂಗದಲ್ಲಿ ಆರಂಭಿಸುವವರಾಗಿದ್ದಾರಂತೆ!

ಕಳೆದ ತಾ|| ೩ ರಲ್ಲಿ ಪಾರ್ಲಿಮೆಂಟ್ ಸಭೆಯು ಮುಗಿಸಲ್ಪಟ್ಟು ಬರುವ ಏಪ್ರಿಲ್ ತಾ|| ೧೨ ರವರೆಗೆ ಮುಚ್ಚಲ್ಪಟ್ಟಿತು. ಆಗ ಸಾರ್ವಭೌಮರವರು ಒಂದು ಉಪನ್ಯಾಸವನ್ನು ಮಾಡಿ, ಇದುವರೆಗಣ ಯುದ್ಧದ ಸಂಗತಿಗಳನ್ನೆಲ್ಲಾ ಸಮಾಲೋಚನಮಾಡಿ, ಅದಕ್ಕಾಗಿ ಸ್ವದೇಶೀಯರಿಂದಲೂ ಅಧೀನದೇಶಗಳೆಲ್ಲದರಿಂದಲೂ ಮಾಡಲ್ಪಟ್ಟ ಸಹಾಯವನ್ನು ಅಭಿನಂದಿಸಿ, ಶತ್ರುಗಳ ದುರಾಶೆಯು ಇನ್ನೂ ತಗ್ಗಲಿಲ್ಲವೆಂತಲೂ, ಪ್ರಪಂಚದ ಮೇಲೂ ಪ್ರಜಾಪ್ರಭುತ್ವಪರಗಳಾದ ದೇಶಗಳೆಲ್ಲವೂ ನ್ಯಾಯವನ್ನೂ ಶಾಶ್ವತಸಂಧಿಯನ್ನೂ ಕೋರುತ್ತಿರುವುವೆಂತಲೂ, ಶತ್ರುಗಳನ್ನು ಸಂಪೂರ್ಣವಾಗಿ ಜಯಿಸುವುದರಲ್ಲೇ ನಾವೆಲ್ಲರೂ ಬದ್ಧದೀಕ್ಷರಾಗಿರಬೇಕೆಂತಲೂ, ಜಗದೀಶನು ಈ ವಿಷಮಸ್ಥಿತಿಯಲ್ಲಿ ನಮಗೆ ಸಹಾಯೀಭವಿಸಬೇಕೆಂತಲೂ ಕೋರಿದರು.

ಕಳೆದ ತಾ|| ೬ ರಲ್ಲಿ ಶ್ರೀ ಸಾರ್ವಭೌಮರು ತಮ್ಮ ಬಕಿಂಗ್ಹಾಂ ಅರಮನೆಯಲ್ಲಿ ರಾಜಪುತ್ರರ ಗೋವಿಂದಸಿಂಗ್ ಎಂಬ ಅಶ್ವಸೇನೆಯ ಸುಬೇದಾರರಿಗೆ ವಿಕ್ಟೋರಿಯಾ ಕ್ರಾಸ್ ಎಂಬ ಘನತರವಾದ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದರು. ಬಳಿಕ ಅಲ್ಲಿಯ ಭಾರತಜಾತೀಯ ಸಮಾಜದವರು ಆ ಗೋವಿಂದಸಿಂಗರನ್ನೂ ಅವರ ಜತೆಯ ಇನ್ನು ೧೦ ಮಂದಿ ಅಶ್ವದಳ ಪ್ರಮುಖರನ್ನೂ ವಿಜ್ಞಾಪನಪತ್ರ ಸಮರ್ಪಣದ್ವಾರಾ ಗೌರವಿಸಿ, ಒಂದು ಬೆಳ್ಳಿಯ ಗಿಂಡಿಯನ್ನು ಕೊಟ್ಟು ಮರ್ಯಾದಿಸಿದರು. ಆ ಗಿಂಡಿಯಮೇಲೆ ಗೋವಿಂದಸಿಂಗರ ಪರಾಕ್ರಮವನ್ನು ವ್ಯಕ್ತಪಡಿಸುವ ವರ್ಣನೆಯ ಲೇಖನಗಳು ಕೆತ್ತಲ್ಪಟ್ಟಿರುತ್ತವೆ. ಬಳಿಕ ತಮ್ಮ ರಾಷುತರಲ್ಲಿ ಇಂಥ ಘನತರವಾದ ಪ್ರಶಸ್ತಿಯನ್ನು ಒಬ್ಬಾತನು ಪಡೆದುಕೊಂಡುದಕ್ಕಾಗಿ ತಮಗುಂಟಾದ ಸಂತೋಷವನ್ನು ಕುರಿತು ಸರ್ ಪ್ರತಾಪಸಿಂಹರವರು ಒಂದು ಭಾಷಣ ಮಾಡಿದರು.

ಟೂಸ್ಕಾನಿಯಾ ಎಂಬ ಹಡಗು ಅಮೇರಿಕಾ ದೇಶದ ಸೈನ್ಯವನ್ನು ತುಂಬಿಕೊಂಡು ಇಂಗ್ಲಾಂಡ್ ದೇಶಕ್ಕೆ ಬರುತ್ತಿರುವಾಗ ಐರ್ಲಾಂಡ್ ತೀರಕ್ಕೆ ೧೦ ಮೈಲಿಗಳ ದೂರದಲ್ಲಿರುವಾಗ್ಗೆ ರಾತ್ರಿಯಹೊತ್ತು ಶತ್ರುಗಳ ಸಬ್‌ಮೆರೀನಿನ ಹೊಡೆತದಿಂದ ಅದು ಮುಳುಗಿಹೋಯಿತು. ಒಳಗಿದ್ದವರಲ್ಲಿ ೧೬೬ ಮಂದಿಗಳು ಹತರಾದರು; ೨೨೩೫ ಮಂದಿಗಳು ಕಾಪಾಡಲ್ಪಟ್ಟರು. ಹಡಗಿಗೆ ಆಪತ್ತು ಸಂಘಟಿಸಿದ ಕೂಡಲೇ ಹಡಗಿನಲ್ಲಿದ್ದವರು ಪ್ರಾಣರಕ್ಷಣೆಗಾಗಿ ತಂತಿಮೂಲಕವಲ್ಲದ ವಾರ್ತೆಗಳನ್ನು ಕೊಡಲಾಗಿ ಇಂಗ್ಲೀಷರ ಡಿಸ್ಟ್ರಾಯರುಗಳೂ ಟ್ರಾಲರುಗಳೂ ಅಲ್ಲಿಗೆ ಬಂದು ಸೈನಿಕರನ್ನು ಕಾಪಾಡಿದುವು. ಶತ್ರುಗಳ ಸಬ್‌ಮೆರೀನು ಆ ಡಿಸ್ಟ್ರಾಯರುಗಳ ಮೇಲೂ ಮೂರು ಟಾರ್ಪೆಡೋಗಳನ್ನು ಪ್ರಯೋಗಿಸಿತು. ಆದರೆ ಇಂಗ್ಲೀಷ್ ನೌಕಾದಳದವರ ಜಾಗರೂಕತೆಯಿಂದ ಅವುಗಳು ಗುರಿತಪ್ಪಿಹೋದುವು. ಬಳಿಕ ಇಂಗ್ಲೀಷರು ಆ ಸಬ್‌ಮೆರೀನಿನಮೇಲೆ ಹಲವು ಗುಂಡುಗಳನ್ನು ಪ್ರಯೋಗಿಸಿದರು. ಅದು ಮುಳುಗಿಹೋಯಿತು. ಜರ್ಮನರು ತಮ್ಮವರ ಹಡಗಿಗೆ ಇಂಥ ಅಪಾಯವನ್ನು ಮಾಡಿದುದರಮೇಲೆ ಅಮೇರಿಕಾ ದೇಶೀಯರಿಗೆ ವಿಶೇಷಾಗ್ರಹವುಂಟಾಗಿ, ಅವರು ಶತ್ರುಗಳಮೇಲೆ ಹಗೆ ತೀರಿಸಿಕೊಳ್ಳುವುದಕ್ಕಾಗಿ ತಮ್ಮ ಸೈನ್ಯಾಧಿಕಾರಿಗಳ ಬಳಿಗೆ ಬಂದು "ನಮ್ಮನ್ನು ಸೇನೆಗೆ ಸೇರಿಸಿಕೊಂಡು ಬೇಗನೆ ರಣರಂಗಕ್ಕೆ ಕಳುಹಿಸಿಕೊಡಿರಿ. ನಾವು ಪ್ರತೀಕಾರ ಮಾಡುತ್ತೇವೆ" ಎಂದು ಬಹು ಜನರು ಕೇಳುತ್ತ ಹೆಚ್ಚುಹೆಚ್ಚಾಗಿ ಹೆಸರುಗಳನ್ನು ರಿಜಿಸ್ಟರ್ ಮಾಡಿಸುತ್ತಿದ್ದಾರೆ.

ಪತ್ರವ್ಯವಹಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಂಘ.

ಮೇಲ್ಕಂಡ ಸಂಘವು 1905 ನೆ ಇಸವಿಯಲ್ಲಿ ಶ್ರೀಮದ್ವೀರಶೈವ ಮಹಾಸಭೆಯು ಬೆಂಗಳೂರಿನಲ್ಲಿ ಕೂಡಿದ್ದಾಗ್ಗೆ ಸ್ಥಾಪಿಸಲ್ಪಟ್ಟಿತು. ಅಂದಿನಿಂದಲೂ ಮ|| ರಾ|| ದಿವಾನ್ ಬಹದ್ದೂರು ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು ಅದರ ಪ್ರೆಸಿಡೆಂಟರಾಗಿರುವರು. ಈ ಫಂಡು ಇದುವರೆಗೆ ಎಷ್ಟರಮಟ್ಟಿನ ಅಭಿವೃದ್ಧಿಯನ್ನು ಹೊಂದಿರುವುದೆಂಬುದನ್ನು ತಿಳಿಯಲು ಬಹಳ ಜನರಿಗೆ ಕುತೂಹಲವಿರಬಹುದು.

ಸಂಘವು ಏರ್ಪಟ್ಟಾಗ್ಗೆ ಸುಮಾರು 15 ಸಹಸ್ರ ರೂಪಾಯಿವರೆಗೆ ಧನರಾಶಿಯು ಕೂಡಿತು. ಈಚೆಗೆ 12 ವರ್ಷಗಳು ತುಂಬಿದರೂ, ಧನರಾಶಿಯು ಮಾತ್ರ 20 ಸಹಸ್ರಗಳಿಗೆ ಮೀರಲಿಲ್ಲ. ಮರುದಿನ ಮುಂತಾದ ಶುಭಕಾರ್ಯಗಳಲ್ಲಿ ಮತಾಭಿಮಾನಿಗಳು ತಾವಾಗಿ, ಸಂಘದವರ ಯಾವವಿಧವಾದ ಪ್ರಯತ್ನವೂ ಇಲ್ಲದೆ ಕಳುಹಿಸಿದ ಮೊಬಲಗಿನಿಂದ ಫಂಡು ಇಷ್ಟಾಗಲು ಅವಕಾಶವಾಯಿತು. 1905 ನೇ ಇಸವಿಯಲ್ಲಿ ಸಭೆಗೆ ಬಂದಿದ್ದ ಮಹನೀಯರನೇಕರು 60.70 ಸಾವಿರ ರೂಪಾಯಿಗಳ ವಾಗ್ದಾನವನ್ನು ಮಾಡಿದ್ದರು. ಹೀಗೆ ವಾಗ್ದಾನಮಾಡಿದವರಲ್ಲಿ ಅನೇಕರು ಈಗ ವಿಧಿವಶರಾಗಿರುವರು. ಬದುಕಿರುವವರನ್ನು ನೀವು ಮಾಡಿದ ವಾಗ್ದಾನದಂತೆ ಹಣವನ್ನು ಕೊಡಿಯೆಂದು ಕೇಳಿದವರೇ ಇಲ್ಲ. ಈ ಕಾಲದಲ್ಲಿ ಯಾರುತಾನೇ ತಾವಾಗಿ ಹಣವನ್ನು ತಂದು ನಮ್ಮ ಕೈಯಲ್ಲಿ ಕೊಡುವರು? ಕುವೆಂಪಿನ ಪ್ರೆಸಿಡೆಂಟರೇ ಆದಿಯಾಗಿ ಕೆಲವು ವೀರಶೈವ ಪ್ರಮುಖರು ಹೋಗಿದ್ದುದರ ಮೇಲೆ ಸ್ವಲ್ಪಮಟ್ಟಿಗಿನ ಪ್ರಯೋಜನವಾದರೂ ಆಯಿತು. ಇತ್ತೀಚೆಗೆ ಫಂಡನ್ನು ಕೂಡಿಸಲು ಸಂಘದವರು ಯಾವ ವಿಧವಾದ ಪ್ರಯತ್ನವನ್ನೂ ಮಾಡಿದಂತೆ ಕಾಣುವುದಿಲ್ಲ. ಕಳೆದ ಡಿಸೆಂಬರ್ ತಿಂಗಳಲ್ಲಿ ದಾವಣಗೆರೆಯಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ಒಂದು ದಿವಸದಲ್ಲೇ ಅವರಲ್ಲಿ ಕೆಲವು ಘಂಟೆಗಳ ಅವಧಿಯಲ್ಲೇ 63 ಸಾವಿರ ರೂಪಾಯಿಯ ವಾಗ್ದಾನವಾಗಿ 35 ಸಹಸ್ರ ರೂಪಾಯಿಗಳು ನಗದಾಗಿ ಕೂಡಿದುವು. ಸಂಘದ ಪ್ರೆಸಿಡೆಂಟರಾದ ಮ|| ರಾ|| ಶೆಟ್ಟರವರೇ ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಇದರಿಂದಲಾದರೂ ವೀರಶೈವರಲ್ಲಿ ಐಶ್ವರ್ಯವಂತರಾದವರುಗಳು ಧರ್ಮಕಾರ್ಯಗಳನ್ನು ಮಾಡಲು ಹಿಂಜರಿಯುವವರಲ್ಲವೆಂಬ ವಿಷಯವು ಮ|| ರಾ|| ಶೆಟ್ಟರ ಗಮನಕ್ಕೆ ಬಂದಿರಬೇಕಲ್ಲವೆ? ವೀರಶೈವಮತದವರಲ್ಲೊಬ್ಬರಾಗಿ ಸರ್ಕಾರದಲ್ಲಿ ಉನ್ನತಪದವಿಯನ್ನು ಪಡೆದಿದ್ದು ವಿಶ್ರಾಂತಿಸುಖವನ್ನನುಭವಿಸುತ್ತಲಿರುವ ಮ|| ರಾ|| ಶೆಟ್ಟರವರು ಈಗಲಾದರೂ ಅಲ್ಪಸ್ವಲ್ಪಮತಸೇವೆಯನ್ನು ಮಾಡಿ ಶಾಶ್ವತವಾದ ಕೀರ್ತಿಯನ್ನು ಪಡೆಯಲು ಪ್ರಯತ್ನಪಡದಿರುವುದು ಮತಾಭಿಮಾನಿಯಾದ ಪ್ರತಿಯೊಬ್ಬನ ಮನಸ್ಸಿಗೂ ಬಹಳ ಖೇದವನ್ನುಂಟುಮಾಡುತ್ತಲಿರುವುದು. ಸಂಘವು ಏರ್ಪಟ್ಟಂದಿನಿಂದ ಸ್ವಲ್ಪಮಟ್ಟಿಗೆ ದೇಶಪ್ರವಾಸಿಗಳನ್ನು ಮಹಿಸಿ ವೀರಶೈವರು ಇತರತ್ರ ಮುಖ್ಯಸ್ಥಳಗಳಿಗೆ ಹೋಗುತ್ತಾ ಇದ್ದರೆ ಇದುವರೆಗೆ ಲಕ್ಷಾಂತರ ರೂ. ಗಳು ಕೂಡಿಹೋಗುತ್ತಿದ್ದುವು. ಇವರಂತೆ ಸರ್ಕಾರಿಯುದ್ಯೋಗದಿಂದ ವಿಶ್ರಾಂತಿಯನ್ನು ಹೊಂದಿರುವ ಮ|| ರಾ|| ರಾ|| ಬ|| ಅರಟಾಳುರುದ್ರಗೌಡ ಚನ್ನವೀರಗೌಡ ಇ. ಎಸ್. ಓ. ಯವರು ಕರ್ನಾಟಕ ಕಾಲೇಜಿನ ಸ್ಥಾಪನೆಗಾಗಿ 6 ತಿಂಗಳುಗಳಲ್ಲಿ 1 ಲಕ್ಷ ರೂಪಾಯಿಯನ್ನು ಕೂಡಿಸಲಿಲ್ಲವೆ?

ತಾವಾಗಿ ಬಂದ ಹಣವನ್ನು ತಕ್ಕಷ್ಟು ವಿಚಕ್ಷಣೆಯಿಂದ ಕಾಪಾಡುವುದರಲ್ಲೂ ಸಂಘವು ಪ್ರಯತ್ನಪಡದಿರುವುದು ಮತ್ತಷ್ಟು ವಿಷಾದಕರವಾದ ಸಂಗತಿಯಾಗಿರುವುದು. ಬೆಂಗಳೂರು ಕೈ|| ಸೂಲಬೆಲೆ ರಾಮಣ್ಣನವರು ತಮ್ಮ ಸರ್ವಸ್ವವನ್ನೂ ಮೇಲ್ಕಂಡ ಸಂಘಕ್ಕೆ ಅರ್ಪಿಸಿರುವರೆಂಬ ವಿಷಯವು ಸರ್ವರಿಗೂ ವಿದಿತವಾಗಿರುವುದು. ಇವರ ಆಸ್ತಿಯನ್ನು ಸಂಘದ ಸ್ವಾಧೀನಕ್ಕೆ ವಹಿಸಿಕೊಳ್ಳುವ ವಿಚಾರದಲ್ಲಿ ಕೋರ್ಟಿಗೆ ಹೋಗದೆ ಸಾಧ್ಯವಾದಮಟ್ಟಿಗೂ ನಿಹಿತವಾಗಿ ನಡೆಯಿಸಿಕೊಂಡಿದ್ದರೆ ಈಗಾಗಲೇ ಅನೇಕ ವಿದ್ಯಾರ್ಥಿಗಳು ವೇತನದ ಮೂಲಕ ಮೇಲ್ಕಂಡ ಧರ್ಮದ ಪ್ರತಿಫಲವನ್ನು ಅನುಭವಿಸಲು ಅವಕಾಶವಾಗುತ್ತಿತ್ತು. ಕೋರ್ಟುಗಳು ಮೊದಲಾಗಿ ಉಳಿಯುತ್ತಿದ್ದುದಲ್ಲದೆ ಒಂದು ವರ್ಷದ ಬಡ್ಡಿಯೂ ಸಹ ಬರುತ್ತಲಿದ್ದಿತು. ಇದಾವುದಕ್ಕೂ ಅವಕಾಶವಿಲ್ಲದೆ ಮುಂದೆ ಧರ್ಮಮಾಡತಕ್ಕವರಿಗೆ ಒಂದು ವಿಧವಾದ ಭೀತಿಯನ್ನೂ ನಿರುತ್ಸಾಹವನ್ನೂ ಉಂಟುಮಾಡಿದಂತಾಯಿತು. ಈಗಲಾದರೂ ಸಂಘದವರು ಎಚ್ಚತ್ತು ಮೇಲ್ಕಂಡ ವಿಷಯದಲ್ಲಿ ಸರಿಯಾದ ಪ್ರಯತ್ನವನ್ನು ಮಾಡಿ ಜಾಗ್ರತೆಯಲ್ಲಿ ಅದರ ಪ್ರತಿಫಲವು ವೀರಶೈವ ವಿದ್ಯಾರ್ಥಿಗಳಿಗೆ ದೊರಕುವಂತೆ ಮಾಡುವರೆಂದು ನಂಬುತ್ತೇನೆ. ರಾಮಣ್ಣನವರ ಧರ್ಮಪತ್ನಿಯವರು ತಮ್ಮ ಪತಿಯವರ ಧರ್ಮಸಂಕಲ್ಪವು ಸಾಂಗವಾಗಿ ನಡೆಯುವಂತೆ ತಮ್ಮ ಸಹಾನುಭೂತಿಯನ್ನು ತೋರಿಸಿ ಶಾಶ್ವತವಾದ ಕೀರ್ತಿಗೆ ಅವರು ಪಾತ್ರರಾಗಬೇಕಾಗಿ ಪ್ರತಿಯೊಬ್ಬ ಮತಾಭಿಮಾನಿಯ ಕೋರಿಕೆಯಾಗಿರುವುದು. ಈ ಸಂಘಕ್ಕೆ ಸಂಬಂಧಪಟ್ಟ ಮುಖ್ಯವಾದ ಇನ್ನೂ ಕೆಲವು ವಿಷಯಗಳನ್ನು ಮುಂದೆ ತಿಳುಹಿಸಬೇಕೆಂದಿರುವೆನು.

ಮತಾಭಿಮಾನಿ.

ಬ್ರಹ್ಮದ್ವೇಷಿಗಳಾರು?

(ಬರೆದುಬಂದುದು)

ಪ್ರಶ್ನೋತ್ತರರೂಪ.

ಪ್ರ—ವಸ್ತುಗಳಿಗೆ ಹುಟ್ಟುವಾಗಲೇ ಇಲ್ಲದಿರುವ ಗುಣಗಳು ಮಧ್ಯದಲ್ಲಿ ಬರುವುವೆ? ವರ್ಣವು ಜನ್ಮದಿಂದಲೇ ಬರಕೂಡದೆ?

ಉ—ಚಿನ್ನಕ್ಕೆ ಹುಟ್ಟುವಾಗ ಮಣ್ಣು ಮೊದಲಾದ ಮಲಿನಪದಾರ್ಥಗಳು ಅಂಟಿಕೊಂಡಿರುವುವು. ಅವುಗಳನ್ನೆಲ್ಲಾ ತೊಲಗಿಸಿದಾಗ ಶುದ್ಧ ಭಂಗಾರವಾಗುವುದು. ಇದರಂತೆಯೇ ಪ್ರತಿ ವಸ್ತುವನ್ನೂ ಶುದ್ಧಗೊಳಿಸುವುದು ಅವಶ್ಯವಾಗಿದೆ. ಅದರಂತೆಯೇ ಬ್ರಾಹ್ಮಣತ್ವವು ಸಂಸ್ಕಾರವಶದಿಂದ ಬರತಕ್ಕದ್ದಾಗಿದೆ. ವೇದಾಧ್ಯಯನ ಮೊದಲಾದವುಗಳು ಬ್ರಾಹ್ಮಣ್ಯಬರುವುದಕ್ಕೆ ಸಾಧನಗಳು, ಅಥವಾ ಮಲಿನಗುಣ ವಿನಾಶಮಾಡುವುದಕ್ಕೆ ಹೇತುಗಳು. ಮನುಷ್ಯರಲ್ಲಿ ನಾಲ್ಕು ವರ್ಣಗಳ ಗುಣಗಳಿರುತ್ತವೆ. ಅವುಗಳಲ್ಲಿ ಯಾವುದು ಪ್ರಾಧಾನ್ಯವಾಗಿಯೂ ಪರಿಶುದ್ಧವಾಗಿಯೂ ವ್ಯಕ್ತವಾಗುವುದೋ ಆ ವರ್ಣವು ಹೇಳಲ್ಪಡುತ್ತದೆ. ಇಷ್ಟುಮಾತ್ರವನ್ನು ತಿಳಿದುಕೊಳ್ಳಲಾರದ ಪಾಂಡಿತ್ಯವು ಸುಡಲ್ಪಡುವುದಕ್ಕೆ ಮಾತ್ರವೇ ಅರ್ಹವಾದುದು. ಶಮದಮಾದಿ ಬ್ರಾಹ್ಮಣಗುಣಗಳು ಜನ್ಮತಃ ದ್ವಿಜರಲ್ಲಿರುವುವೆಂದು ಹೇಳಲ್ಪಡುವ ಪಕ್ಷದಲ್ಲಿ ಕ್ಷತ್ರಿಯ ವೈಶ್ಯ ಶೂದ್ರಗುಣಗಳೂ ಕೂಡ ಜತೆಯಲ್ಲೇ ಇರುವುವು ಎಂದು ಪ್ರತ್ಯಕ್ಷಸಿದ್ಧವಾದುದು. ಅದುಕಾರಣ ವರ್ಣವು ಜನ್ಮತಃ ಸಿದ್ಧವಾಗತಕ್ಕದ್ದಲ್ಲ. ಅದಕ್ಕಾಗಿಯೇ "ಕರ್ಮಣಾದ್ವಿಜಉಚ್ಯತೆ" ಎಂಬ ವಚನವು ಪ್ರಮಾಣವಾಗಿರುವುದು.

ಪ್ರ—ಜನ್ಮದ ಜತೆಗೇ ವರ್ಣವು ಸಿದ್ಧವಾಗುವುದೆಂದು ಭಾವಿಸುವುದರಿಂದ ನಷ್ಟವೇನು ?

ಉ—ಹಾಗೆ ಭಾವಿಸುವುದು ಕೇವಲ ಅನ್ಯಾಯವು. ಒಬ್ಬ ಬ್ರಾಹ್ಮಣನು ಮಲಿನನಾಗಿ ಮಹಮ್ಮದೀಯ ಕ್ರೈಸ್ತಾದಿ ಮತಗಳಿಗೆ ಸೇರಿಕೊಂಡರೂ ಅವನನ್ನು ಬ್ರಾಹ್ಮಣನೆಂದೇ ಭಾವಿಸಬೇಕಾದೀತು. ಅಲ್ಲದೆ ಬ್ರಾಹ್ಮಣ ಲಕ್ಷಣವೇ ಪ್ರತ್ಯೇಕವಾಗಿ ಹೇಳಲ್ಪಡಬೇಕಾಗಿಯೂ ಇರಲಿಲ್ಲ. ಶಾಸ್ತ್ರಗಳಲ್ಲಿ ವರ್ಣಗಳಿಗೆ ಪ್ರತ್ಯೇಕ ಲಕ್ಷಣಪ್ರಶಸ್ತಿಗಳು ನಿರೂಪಿಸಲ್ಪಟ್ಟಿವೆ. ಈಗಲಾದರೋ ಹುಟ್ಟಿನಿಂದಲೇ ನಾವು ಬ್ರಾಹ್ಮಣರಾಗಿದ್ದೇವೆಂಬ ಗರ್ವವು ಪ್ರಬಲವಾಗಿರುವುದರಿಂದ ಬ್ರಾಹ್ಮಣಲಕ್ಷಣವಾದ ಸದ್ಗುಣಗಳು ಸಮೂಲ ನಾಶವಾಗಿ ಹೋಗಿವೆ. ಇದಕ್ಕಿಂತ ಬೇರೆ ನಷ್ಟವುಂಟೆ ? ಅಂಥ ಸರ್ವೋತ್ತಮಬ್ರಾಹ್ಮಣ ಲಕ್ಷಣವನ್ನು ನಾಶಮಾಡುವವನೇ ಅಲ್ಲವೆ ಬ್ರಹ್ಮದ್ವೇಷಿಯು ? ಅವನೇ ಅಲ್ಲವೆ ಪಾಷಂಡಿಯು ? ತಾವು ಬ್ರಾಹ್ಮಣ್ಯದ ಮೂಲಕ್ಕೇ ಕುಠಾರವಾಗಿರುವುದನ್ನು ನೆನಸಿಕೊಳ್ಳದೆ ಕೆಲರು ಇತರರನ್ನು ಬ್ರಹ್ಮದ್ವೇಷಿಗಳೆಂದು ಬೊಗಳಿಕೊಳ್ಳುತ್ತಾರೆ ; ಫಲವೇನು ?

ಪ್ರ—ಈಗ ಗುಣವನ್ನು ಗಣಿಸುವರಾರು ? ರೂಢಿಯನ್ನೇ ಅಲ್ಲವೆ ಎಲ್ಲರೂ ಗಮನಿಸುವುದು ? ಸರ್ಕಾರದವರೂ ಕೂಡ ಜನ್ಮತಃ ಉಂಟಾಗುವ ಬ್ರಾಹ್ಮಣ್ಯವನ್ನೇ ಅಲ್ಲವೆ ನಂಬುವುದು ? ಇದಕ್ಕೆ ಕಾರಣವೇನು ?

ಉ—ಪ್ರಭುತ್ವದವರು ಇದರ ಅಂತರ್ವಾದವಿವಾದಕ್ಕೆ ಕೈ ಹಾಕಿ ತೀರ್ಮಾನಿಸುವಷ್ಟರ ಅವಶ್ಯಕತೆಯನ್ನು ಹಚ್ಚಿಕೊಳ್ಳುವುದಿಲ್ಲ. ಅವರು ಲೋಕರೂಢಿಯನ್ನು ಮಾತ್ರ ಅನುಸರಿಸುತ್ತಾರೆ. ಪ್ರಭುಗಳ ತೀರ್ಮಾನವೇ ಮುಖ್ಯವೆಂದು ಮತವಿಷಯದಲ್ಲಿ ಹೇಳಲಾಗದು. ಪ್ರಭುಗಳು ಸ್ತ್ರೀಶೂದ್ರರಿಗೆ ವೇದಾಧಿಕಾರವಿಲ್ಲವೆಂಬ ವಿಧಿಯನ್ನೇನೂ ಮಾಡಿರುವುದಿಲ್ಲ. ಇದು ನ್ಯಾಯವೆಂದು ಅವರೂ ತಿಳಿಯುವುದಿಲ್ಲ. ಇದಕ್ಕೆ ಕಾರಣವೇನು ? ಅದು ಕಾರಣ ಪ್ರಶ್ನೆಯು ಸರಿಯಾದುದಲ್ಲ.

ಪ್ರ—ಹಾಗಾದರೆ ಲಕ್ಷಣಗಳನ್ನು ಅನುಸರಿಸಿ ವರ್ಣವಿರುವುದೆ ? ಅಥವಾ ವರ್ಣಗಳನ್ನು ಲಕ್ಷಣಗಳು ಅನುಸರಿಸಿರುವುವೆ ?

ಉ—ಶಮದಮಾದಿ ಲಕ್ಷಣಗಳಿಗೇ ಬ್ರಾಹ್ಮಣಾದಿನಾಮಗಳುಂಟಾಗಿರುವುವು. ಗುಣಸಮುದಾಯವೇ ವರ್ಣವೆಂದು ಹೇಳಲ್ಪಡುವುದು. ಆ ಗುಣಗಳು ನಾಲ್ಕು ಭಾಗವಾಗಿರುವುವು. ಒಂದೊಂದು ಭಾಗಕ್ಕೆ ಒಂದೊಂದು ಹೆಸರಿಡಲ್ಪಟ್ಟಿದೆ.

ಪ್ರ—ಹಾಗಾದರೆ ಬ್ರಹ್ಮದ್ವೇಷಿಗಳಾರು ?

ಉ—ಬ್ರಾಹ್ಮಣಲಕ್ಷಣಗಳನ್ನು ಹಾಳುಮಾಡುತ್ತ, ವರ್ಣಕ್ಕೆ ಲಕ್ಷಣವು ಮುಖ್ಯವಲ್ಲವೆಂತಲೂ, ಹುಟ್ಟಿನಿಂದಲೇ ವರ್ಣವು ಬರುವುದೆಂತಲೂ ವಾದಿಸುವವರೇ ಬ್ರಹ್ಮದ್ವೇಷಿಗಳೂ ವರ್ಣದ್ವೇಷಿಗಳೂ ಆಗಿರುವರು.

ಕಾಳು ಕಡಿಯ ಜಂಗೀ ವ್ಯಾಪಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಶನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
3 ಧಾರ್ವಾಡ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು !

೧. ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಸೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಸೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ ! ಚನ್ನಾಗಿ ಲಕ್ಷದಲ್ಲಿಡಿರಿ !!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
13 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇವಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶಕಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಶೀಘ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
14 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಸೆಪಟ್ಟವರು

ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!

(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಿತ್ರರತ್ನ, ಲುಕ್ಮಾನಿ ಇವೇ ಮೊದಲಾದ ಹಸ್ತಲಿಪಿಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳೇನೂ ತೋರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು “ಸಂಜೀವನಿ” ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ “ಕಾಮಸಂಜೀವನಿಲೇಹ್ಯವು” ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ಸ್ವಪ್ನಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ “ಕಾಮಸಂಜೀವನಿಲೇಹ್ಯವು” ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇವೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ

ಸೂಚನೆ:—ಇದರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಧಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತಪ್ಪಾ ಕಾಳಪ್ಪಾ ಲೇಂಗಡೆ,
2 ಪೋಸ್ಟ ಪಾಪೂರ, (ಬೆಳಗಾಂವ)

ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೇರೆ ಮಗ್ಗಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 10

ಇಮಿಟೇಷನ್ ಸಿಲ್ಕ ಗೋವರ್ ಚಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	3.8.0

ವಿಳಾಸ:-ವೈರಂ ಅಂಡ್ ಕೊ, ಇರುಳಪ್ಪನವೀದಿ, ಮದರಾಸು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಯೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರಪಲಿಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿ, ಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊಂಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇನೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
48 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

೧೯೧೮ ನೆಯ ಇಸವಿ ಫೆಬ್ರವರಿ ತಾ॥ ೧೭ ರಿಂದ ೧೯೧೮ ನೆಯ ಫೆಬ್ರವರಿ ತಾ॥ ೨೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾಘ ಶು॥ ಸಪ್ತಮಿಯಿಂದ ಮಾಘ ಶು॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ತೇದಿ
17	[1] ಭಾನು	ಸಪ್ತ	44-32	ಭರಣಿ	31-10	6
18	[2] ಸೋಮ	ಅಷ್ಟ	40-50	ಕೃತ್ತಿಕೆ	29-0	7
19	[3] ಮಂಗಳ	ನವಮಿ	38-8	ರೋಹಿಣಿ	27-43	8
20	ಬುಧ	ದಶಮಿ	36-37	ಮೃಗಶಿರೆ	27-35	9
21	[4] ಗುರು	ಏಕಾದಶಿ	36-15	ಆರಿದ್ರೆ	28-31	10
22	ಶುಕ್ರ	ದ್ವಾದಶಿ	37-10	ಪುನರ್ವಸು	30-49	11
23	[5] ಶನಿ	ತ್ರಯೋ	39-26	ಪುಷ್ಯ	34-19	12

(1) ರಥಸಪ್ತಮಿ, ಸೂರ್ಯಚಂದ್ರವ್ರತಂ, ಹೇಮಗಿರಿ ರಂಗಸ್ವಾಮಿ ರಥಃ, ಶ್ರೀರಂಗಪಟ್ಟಣದ ರಂಗಸ್ವಾಮಿರಥಃ. (2) ಭೀಷ್ಮಾಷ್ಟಮಿ. (3) ಮಧ್ವನವಮಿ, ಮುದುಕುತೊರೆ ಮಲ್ಲಿಕಾರ್ಜುನಸ್ವಾಮಿ ರಥಃ. (4) ಸರ್ವತ್ರ ಭೀಷ್ಮೈಕಾದಶೀ, ತಿಲಪದ್ಮವ್ರತಂ. (5) ತ್ರಿನೇತ್ರರಸ್ವಾಮಿ ರಥಃ, ತೊಂಡನೂರು ಗೋಪಾಲಸ್ವಾಮಿ ರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ಞನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತಿ ಲೀಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಫೆಬ್ರವರಿ ತಾರೀಖು ೨೪ ನೆಯ ಭಾನುವಾರ. (ಸಂಚಿಕೆ ೮

ಉತ್ತಮ. ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್ಮೆಂಟ್ ಮಾಡಿರುವುದು ಮತ್ತು ಫ್ಯಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಹಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರದುಬಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಸ್ತ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
11 3, ಇರುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 12

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯನ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಲ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಲ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಸಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರತ್ಯಕ್ಷದರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಸಂತುಷ್ಟನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಔಷಧಗಳು ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅನೇಕ್ಷನವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ಲ್ಯಾಂಕ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ॥ ಬಾ॥ ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ. ಗಳನ್ನು ದಾನಮಾಡಿ ಯಾವಯಾವ ಮಹತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

5 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 20

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾದಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ತೈಕ್ಷ್ಣ್ಯವನ್ನೂ [illegible] ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಗಳ ಸಂಗಡ [illegible] ಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ [illegible]

ವಿಳಾಸ—ವೈದ್ಯ, ಜೆ. ಎಲ್. ಜೋಶಿ [illegible]
ಪೋಸ್ಟ ಬಸವನ [illegible]

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಫೆಬ್ರವರಿ ತಾ|| ೨೪ ನೆಯ ಭಾನುವಾರ.

ಲಂಚದ ಹಾವಳಿ.

ಕಳ್ಳಮೇವನ್ನು ಮೆಯ್ಯುವ ತುಂಡುದನಗಳನ್ನು ಹಿಡಿದು ಕೂಡುವುದಕ್ಕೆ ದೊಡ್ಡಿಗಳು ಏರ್ಪಡಿಸಲ್ಪಟ್ಟಿವೆ. ಕಳ್ಳರನ್ನು ಹಿಡಿದು ಕಾರಾಗೃಹವಾಸಕ್ಕೆ ಕಳುಹಿಸಲು ಪೋಲೀಸರಿದ್ದಾರೆ. ಪ್ಲೇಗು ವಾಂತಿಭೇದಿ ರೋಗಗಳ ಸೋಂಕು ಹರಡಿ ದೇಶವಿನಾಶವಾಗದಂತೆ ಅವುಗಳ ಕ್ರಿಮಿಗಳನ್ನು ಹಾಳ್ಮಾಡುವುದಕ್ಕೆ ಆರೋಗ್ಯಶಾಖೆಯವರು ಸಿದ್ಧರಾಗಿದ್ದಾರೆ. ಪೈರು ಪಚ್ಚೆಗಳಿಗೆ ಹತ್ತಿ ಕೇಡುಮಾಡುವ ಕ್ರಿಮಿಕೀಟಗಳನ್ನೂ ರೋಗಗಳನ್ನೂ ನಿರ್ಮೂಲಮಾಡಲು ವ್ಯವಸಾಯಶಾಖೆಯವರು ವ್ಯಗ್ರರಾಗಿದ್ದಾರೆ. ಆದರೆ ಗೋವುಗಳ ರೋಮದೊಳಗೆ ಹೊಕ್ಕು ಸದ್ದಿಲ್ಲದಹಾಗೆ ಅವುಗಳ ಮೆಯ್ಯ ರಕ್ತವನ್ನು ಹೀರುವ ಉಣ್ಣೆಗಳಂತೆ ಪ್ರಜೆಗಳ ಕಷ್ಟಾರ್ಜಿತ ಧನವನ್ನು ತಮ್ಮ ದಗ್ಧೋದರ ಪೋಷಣೆಗಾಗಿ ಲಂಚದ ರೂಪದಿಂದ ಸುಲಿಯುವ ದ್ರೋಹಿಗಳನ್ನು (ಇಂಥವರನ್ನು ಸರ್ಕಾರದ ಉದ್ಯೋಗಿಗಳೆಂದು ಕರೆಯುವುದು ಸರ್ಕಾರಕ್ಕೇ ಅಪಮಾನಪಡಿಸಿದಂತೆ ಆಗುತ್ತದೆ) ಹಿಡಿದು ಶಿಕ್ಷಿಸುವವರೇ ದಿಕ್ಕಿಲ್ಲವೆ?

ನಮ್ಮ ಸಂಸ್ಥಾನದ ಕೋರ್ಟು ಕಚೇರಿಗಳೊಳಗೆಲ್ಲಾ ಸಣ್ಣಸಣ್ಣ ಉದ್ಯೋಗಗಳಲ್ಲಿರುವ ಲಂಚಗುಳಿಗಳಿಂದ ಪ್ರಜೆಗಳು ಬಹು ನಷ್ಟಕಷ್ಟಗಳನ್ನನುಭವಿಸುತ್ತಿದ್ದಾರೆ. ನರಮಾಂಸದ ರುಚಿಯನ್ನರಿತ ಹುಲಿಗಳು ಊರಿಗೇ ನುಗ್ಗಲುಪಕ್ರಮಿಸುವಂತೆ ಅಲ್ಪಸ್ವಲ್ಪ ಲಂಚವನ್ನು ಗುಟ್ಟಾಗಿ ತಿಂದು ರುಚಿಕಂಡ ಜನರು ಬಹಿರಂಗವಾಗಿಯೇ "ಮಿರಾಸು" ಮಾಡಿಕೊಂಡು ಸುಲಿಯುತ್ತಿರುವರೆಂಬ ಸಂಗತಿಯು ಎಲ್ಲೆಲ್ಲಿಯೂ ಬಹಿರಂಗವಾದ ಗುಟ್ಟಾಗಿ ಪರಿಣಮಿಸಿರುತ್ತದೆ. ಈಗಣ ಕಾಲದಲ್ಲಿ ಪ್ರಜೆಗಳ ಅಭ್ಯುದಯಕ್ಕಾಗಿ ನಾನಾವಿಧವಾದ ನವೀನೋದ್ಯಮಗಳನ್ನು ಪ್ರಜಾವಾತ್ಸಲ್ಯವುಳ್ಳ ಸರ್ಕಾರದವರು ಒಂದುಕಡೆ ಏರ್ಪಡಿಸುತ್ತ ದೇಶೋದ್ಧಾರಮಾಡುವುದರಲ್ಲಿ ವ್ಯಗ್ರರಾಗಿದ್ದರೂ, ಮತ್ತೊಂದು ಕಡೆಯಲ್ಲಿ ಮರಕ್ಕೆ ಹಿಡಿದ ಕುಟ್ಟೆಯಂತೆ ಸಣ್ಣ ಪುಟ್ಟ ಉದ್ಯೋಗಿಗಳಿಂದ ಪ್ರಜೆಗಳಿಗೆ ಕೊಡಲ್ಪಡುತ್ತಲಿರುವ ಲಂಚದ ಹಿಂಸೆಯು ಬಹಳ ಅನರ್ಥಕಾರಿಯಾಗಿರುತ್ತದೆ. ಪ್ರತ್ಯೇಕವಾದ ಏರ್ಪಾಟನ್ನು ಮಾಡಿ ಸರ್ಕಾರದವರು ತಮ್ಮ ದರ್ಪದಿಂದಲೂ ಶಿಕ್ಷಾಭಯಪ್ರದರ್ಶನದಿಂದಲೂ ಈ ಲಂಚದ ಹಾವಳಿಯನ್ನು ನಿರ್ನಾಮಗೊಳಿಸದಿದ್ದರೆ, ಮುಂದೆ ಇದು ವಿಪರೀತಕ್ಕೆ ಬಂದು ದೇಶವಿನಾಶಕ್ಕೇ ಒಂದು ಮಹಾಮಾರಿಯಂತೆ ಕಾರಣವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ನ್ಯಾಯವನ್ನು ಅನ್ಯಾಯವನ್ನಾಗಿಯೂ, ಅಧರ್ಮವನ್ನು ಧರ್ಮವನ್ನಾಗಿಯೂ, ನಿರಪರಾಧಿಗಳನ್ನು ಅಪರಾಧಿಗಳನ್ನಾಗಿಯೂ, ದುರ್ಜನರನ್ನು ಸಜ್ಜನರನ್ನಾಗಿಯೂ, ಸಾಧುವನ್ನು ದುಷ್ಟನನ್ನಾಗಿಯೂ ಮೋಸದಿಂದ ತೋರ್ಪಡಿಸಿ ಕೊಟ್ಟು, ಸತ್ಯ ಸೀತೆ ಮೊದಲಾದುವುಗಳನ್ನೆಲ್ಲಾ ವನವಾಸಕ್ಕಟ್ಟಲು ಸಾಮರ್ಥ್ಯವುಳ್ಳ ಈ ಲಂಚಗುಳಿತನವನ್ನು ಔದಾಸೀನ್ಯದಿಂದ ಬಳೆಯಬಿಡುವುದು ಪ್ರಜಾಪಾಲಕರಿಗೆ ಧರ್ಮವಲ್ಲ.

ಈಗಣ ಸ್ಥಿತಿಗತಿಗಳ ವಿಷಯಕವಾದ ಸುದ್ದಿಗಳನ್ನು ಕೇಳುತ್ತಿರುವುದರಲ್ಲಿ ಯಾವ ಶಾಖೆಯಲ್ಲೂ ಈ ಲಂಚದ ಹಾವಳಿಯು ಸುತರಾಂ ಇಲ್ಲದೆ ಇದೆಯೆಂದು ಹೇಳುವುದೇ ಕಷ್ಟವಾಗಿರುತ್ತದೆ. [illegible] ರಿಜಿಸ್ಟ್ರೇಷನ್ ಶಾಖೆಯೊಳಗೆ ಇದರ ಹಾವಳಿಯು ತುಂಬ ತುಳುಕುತ್ತಿದೆಯೆಂಬುದನ್ನು ಅರಿಯದ ಪ್ರಜೆಗಳಾರೂ ಇರಲಾರರು. ಈ ಶಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣದ ಹುಟ್ಟುವಳಿಯಾಗುವುದೋ ಅದರಲ್ಲಿ ಅರ್ಧ ಮುಕ್ಕಾಲುಪಾಲು ಹಣಕ್ಕೆ ಕಡಿಮೆಯಿಲ್ಲದಷ್ಟು ಹಣವು ಪ್ರಜೆಗಳ ಕೈಯಿಂದ ಲಂಚದ ರೂಪವಾಗಿ ಬೇರೆ ಸುಲಿದುಹೋಗುತ್ತಿರುವುದೆಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ.

ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಿಗೆ ದೂರವಾಗಿರುವ ಸ್ಥಳಗಳ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಲಂಚದ ಹಾವಳಿಯು ಹೆಚ್ಚಾಗಿರುವುದು ಹಾಗಿರಲಿ; ಬೇಕಾದಷ್ಟು ದೊಡ್ಡಧಿಕಾರಿಗಳು ತುಂಬಿರುವ ಹೆಡ್‌ಕ್ವಾರ್ಟರುಗಳ ರಿಜಿಸ್ಟ್ರಾರ್ ಆಫೀಸುಗಳಲ್ಲೇ ೧ ರೂ.ನ ಸ್ಟಾಂಪಿನ ಕಾಗದಕ್ಕೆ || ರೂ. ಲಂಚದ "ಮಿರಾಸಿ" ಯನ್ನು ಹಾಕಿಕೊಂಡು, ನಿರ್ದಾಕ್ಷಿಣ್ಯ ನಿರ್ಭಯವಾಗಿ ಸುಲಿಯುತ್ತಿರುವ ಹಾವಳಿಯನ್ನೇನೆಂದು ವರ್ಣಿಸಬಹುದು! ಇನ್ನು ಇಂಜನಿಯರಿಂಗ್ ಶಾಖೆ, ರೆವಿನ್ಯೂ ಶಾಖೆ, ಜ್ಯುಡಿಷಿಯಲ್ ಶಾಖೆಗಳೂ ಕೂಡ ಈ ಭಾಗದ ಪ್ರಸಿದ್ಧಿಯಲ್ಲಿ ಕಡಿಮೆಯಾಗಿಲ್ಲ. ಇದಕ್ಕೆ ಅಪವಾದವಾದ ಆಫೀಸುಗಳು ಎಲ್ಲೋ ಕೆಲವಿದ್ದರೂ ಇರಬಹುದು.

ಶಿಕ್ಷಾಸ್ಮೃತಿಯಲ್ಲಿ ಲಂಚವನ್ನು ಕೊಟ್ಟವರೂ ತೆಗೆದುಕೊಂಡವರೂ ಇಬ್ಬರೂ ಶಿಕ್ಷಾರ್ಹರೇ ಎಂದು ಹೇಳಲ್ಪಟ್ಟಿರುವ ಕಾರಣ, ಈ ಲಂಚಗುಳಿಗಳ ದ್ರೋಹವು ಹೊರಬೀಳುವುದಕ್ಕೆ ಅವಕಾಶ ಕಡಿಮೆಯಾಗಿದೆ. ಅವಿವೇಕಿಗಳಾದ ಪ್ರಜೆಗಳು ತಮ್ಮ ಕೆಲಸದ ಅವಸರಕ್ಕೋ ದುಷ್ಟಸಾಧನೆಗೋ ತಾವಾಗಿ ಲಂಚವನ್ನು ತೆತ್ತು, ಇದರ ಪ್ರಸರಣೆಗೆ ದಾರಿಮಾಡಿಕೊಡುತ್ತಾರೆ. ಆದುಕಾರಣ, ಲಂಚವನ್ನು ಕೊಡುವ ತೆಗೆದುಕೊಳ್ಳುವವರಿಬ್ಬರೂ ದಂಡನಾರ್ಹರಾಗಿರಬೇಕಾದುದೇ ಯುಕ್ತವಾಗಿದೆ. ಆದರೆ ಇಂಥ ನೀಚಕೃತ್ಯದ ಕಾಟಿಗೆ ಸಿಕ್ಕಿ ಇತರ ಸತ್ಪ್ರಜೆಗಳೂ ಕೂಡ ಬಲಿಯಾಗಬೇಕಾಗಿರುವ ನಿರ್ಬಂಧವು ಸರ್ವತೋವ್ಯಾಪಿಯಾಗಬಹುದೆ?

ನಿಯಮನಿರ್ಮಾಣ ಸಭಾಸಭಿಕರಲ್ಲಾಗಲೀ ಪ್ರಜಾಪ್ರತಿನಿಧಿ ಸಭಾಸಭಿಕರಲ್ಲಾಗಲೀ ಸತ್ಯಧರ್ಮ ಸುನೀತಿರಕ್ಷಣಪುಣ್ಯಕ್ಕೂ ದೇಶರಕ್ಷಣ ಕೀರ್ತಿಗೂ ಭಾಗಿಗಳಾಗಬೇಕಾದ ಯೋಗವುಳ್ಳ ಮಹಾಶಯರಾರಾದರೂ ಈ ವಿಷಯವನ್ನು ಪಟ್ಟಾಗಿ ಹಿಡಿದು ಚರ್ಚಿಸಿ, ಈ ಕೆಟ್ಟಚಾಳಿಯ ನಿರ್ಮೂಲನಕ್ಕೆ ಏನಾದರೊಂದು ಪ್ರಬಲವಾದ ಏರ್ಪಾಟನ್ನು ಮಾಡಿಸಲಾಗದೆ? ಡಿಸ್ಟ್ರಿಕ್ಟುಗಳ ದಂಡಾಧಿಕಾರಿಗಳಾದರೂ ಈ ವಿಷಯದಲ್ಲಿ ಮುತುವರ್ಜಿಯನ್ನು ವಹಿಸಿ, ಗೂಢವಾಗಿ ಪರಿಶೋಧಿಸುವುದಕ್ಕೆ ಪ್ರಯತ್ನಿಸಿದರೆ, ಎಷ್ಟೋ ಮಂದಿ ಲಂಚಗುಳಿಗಳಾದ ತುಂಡುಗೂಳಿಗಳನ್ನು ಹಿಡಿದು ದೊಡ್ಡಿಗೆ ಕೂಡಿಸುವುದು ಅಸಾಧ್ಯವಲ್ಲ. ಪೋಲೀಸು ಶಾಖೆಯಲ್ಲಿ "ಸಿ. ಐ. ಡಿ." ಯನ್ನು ಏರ್ಪಡಿಸಿರುವುದಕ್ಕಿಂತಲೂ, ಲಂಚಗುಳಿಗಳನ್ನು ಹೊರದೆಗೆದುಹಾಕುವುದಕ್ಕಾಗಿ ಒಂದು ಡಿಪಾರ್ಟುಮೆಂಟನ್ನು ಏರ್ಪಡಿಸುವುದು ಅತ್ಯವಶ್ಯಕವೆಂದು ನಮಗೆ ತೋರುವುದು. ದೇಶಕಂಟಕರಾದ ಇಂಥ ದುರಾತ್ಮರು ಸರ್ಕಾರಕ್ಕೂ ದ್ರೋಹಿಗಳಾಗಿರುವುದಲ್ಲದೆ ತಮ್ಮ ಸಹೋದರರಾದ ಪ್ರಜೆಗಳಿಗೂ ದ್ರೋಹಿಗಳಾಗಿರುತ್ತಾರೆ. ಆದುಕಾರಣ, ಇಂಥವರನ್ನು ಮೂಲೆಗೆ ಕುಳ್ಳಿರಿಸುವುದಕ್ಕೆ ತಕ್ಕ ಸಾಹಸಪ್ರಯತ್ನಗಳನ್ನು ಪಾಲಕರೂ ಪಾಲ್ಯರಾದ ಪ್ರಜೆಗಳೂ ಕೂಡ ಮಾಡುತ್ತ ಬಂದು ಕೆಲಕೆಲರಿಗಾದರೂ ಕಠಿನಶಿಕ್ಷೆಯಾಗುವಂತೆ ಮಾಡಿದರೆ ಉಳಿದವರೂ ಎಚ್ಚತ್ತುಕೊಂಡು ತನ್ಮೂಲಕ ದೇಶೋದ್ಧಾರವಾಗುವುದಕ್ಕೆ ಮಾರ್ಗವಾದೀತು.

ಭರತಖಂಡದಲ್ಲಿ ಚಿನ್ನದ ನಾಣ್ಯ.

ಈ ದೇಶದಲ್ಲಿ ಚಿನ್ನದ ನಾಣ್ಯಗಳ ವ್ಯವಹರಣೆಯಿಲ್ಲದುದರಿಂದ ಅರ್ಥಶಾಸ್ತ್ರರೀತ್ಯಾ ಬಹಳ ಕಷ್ಟನಷ್ಟಗಳು ದೇಶಕ್ಕೆ ತಟ್ಟುತ್ತಿವೆ. ಪರದೇಶದೊಡನೆ ನಾವು ವ್ಯಾಪಾರಾದಿ ವ್ಯವಹಾರವನ್ನು ನಡೆಯಿಸುವಾಗ ಇವು ಚೆನ್ನಾಗಿ ವ್ಯಕ್ತವಾಗುತ್ತವೆ. ಪಾಶ್ಚಾತ್ಯ ದೇಶದಲ್ಲಿ ಒಂದು ಪೌನಿಗೆ ೧೦ ರೂ. ಗಳಾಗಿದ್ದರೆ ನಾವು ಅದೇ ಪೌನಿಗೆ ೧೫ ರೂ. ಗಳಂತೆ ಲೆಕ್ಕವನ್ನು ತೀರಿಸಬೇಕಾಗುತ್ತದೆ. ಇಂಥ ನಷ್ಟಕಷ್ಟಗಳನ್ನು ತಪ್ಪಿಸುವುದಕ್ಕಾಗಿ ಭರತಖಂಡದಲ್ಲಿ ಚಿನ್ನದ ನಾಣ್ಯಗಳನ್ನು ವ್ಯವಹಾರಕ್ಕೆ ತರಿಸಬೇಕೆಂದು ದೇಶೀಯ ಪ್ರಮುಖರಾದ ವರ್ತಕರು ಕಾಲು ಶತಮಾನದಿಂದಲೂ ಸರ್ಕಾರಕ್ಕೆ ಮೊರೆಯಿಟ್ಟುಕೊಳ್ಳುತ್ತಿದ್ದಾರೆ. ನಮ್ಮ ಬೆಳ್ಳಿಯ ರೂ. ಗಳಿಗೂ ಭಂಗಾರದ ಸವರನ್ನುಗಳಿಗೂ ವಿನಿಮಯದ ಬೆಲೆಯನ್ನು ನಿರ್ಣಯಿಸಿದ ಪಂಚಾಯಿತಿಯ ಸಂಘದವರೂ ಕೂಡ ಚಿನ್ನದ ನಾಣ್ಯವನ್ನು ಈ ದೇಶಕ್ಕೆ ಉಪಯೋಗಿಸುವುದು ಅವಶ್ಯಕವೆಂದು ಅಭಿಪ್ರಾಯಕೊಟ್ಟಿದ್ದಾರೆ. ಆದರೂ ಪ್ರಭುತ್ವದವರು ಯಾವ ಕಾರಣದಿಂದಲೋ ಇದುವರೆಗೂ ಅದಕ್ಕೆ ಮನಸ್ಸು ಕೊಟ್ಟಿರಲಿಲ್ಲ. ಈಗಣ ಯುದ್ಧದಿಂದ ತಾನಾಗಿ ಆ ಸೌಕರ್ಯವು ಭರತಖಂಡಕ್ಕೆ ಪ್ರಾಪ್ತವಾಗಿರುತ್ತದೆ. ಈ ದೇಶದ ಭಂಗಾರವನ್ನು ಸೀಮೆಗೆ ಕಳುಹಿಸುವಾಗ್ಗೂ, ಅಲ್ಲಿ ಅದನ್ನು ಸೌರನ್ನುಗಳನ್ನು ಮಾಡಿಸಿ ಇಲ್ಲಿಗೆ ಮರಳಿ ತರಿಸುವಾಗ್ಗೂ, ಮಧ್ಯಮಾರ್ಗದಲ್ಲಿ ಶತ್ರುಗಳ ಸಬ್‌ಮೆರೀನುಗಳ ಹಾವಳಿಯಿಂದ ಎಷ್ಟೋ ಭಾಗವು ಸಮುದ್ರದ ಪಾಲಾಗಿ ಬಹಳ ನಷ್ಟವಾಗುತ್ತಿದ್ದಿತು. ಆದುಕಾರಣ ಪ್ರಭುತ್ವದವರು ಈ ದೇಶದಲ್ಲೂ ಆಸ್ಟ್ರೇಲಿಯಾದಲ್ಲೂ ಆಫ್ರಿಕಾದಲ್ಲೂ ಉತ್ಪನ್ನವಾಗುವ ಭಂಗಾರವನ್ನೆಲ್ಲಾ ಬೊಂಬಾಯಿಯ ಟಂಕಸಾಲೆಯಲ್ಲೇ ನಾಣ್ಯವನ್ನಾಗಿ ಮಾಡಿಸಲು ಅಪ್ಪಣೆಮಾಡಿರುತ್ತಾರೆ. ಈಯೇರ್ಪಾಟಿನಿಂದ ಪ್ರಭುತ್ವದವರಿಗುಂಟಾಗುತ್ತಿದ್ದ ವೃಥಾ ನಷ್ಟ-ಕಷ್ಟ-ಪ್ರಯಾಸಾದಿಗಳೆಲ್ಲಾ ತಪ್ಪಿದುದಲ್ಲದೆ, ಆಂಗ್ಲದೇಶಕ್ಕೂ ಭರತಖಂಡಕ್ಕೂ ಸಹ ಲಾಭವಾಗುವಂತಾಯಿತು. ಆದರೆ ಪ್ರಭುತ್ವದವರು ಈ ಯೇರ್ಪಾಟನ್ನು ಯುದ್ಧದ ಸಮಯದವರೆಗೆ ಮಾತ್ರವಾಗಿಟ್ಟುಕೊಳ್ಳದೆ ಶಾಶ್ವತವಾಗಿರುವಂತೆ ಮಾಡಿದುದೇ ಆದರೆ ಭಾರತೀಯರ ಚಿರಕೃತಜ್ಞತೆಗೆ ಪಾತ್ರರಾಗುವರು.

ಒಳದೇಶದ ವೃತ್ತಾಂತಗಳು.

ಗುರುವಾರ ಸಾಯಂಕಾಲದಲ್ಲಿ ಬೆಂಗಳೂರಲ್ಲಿ ಕೊಂಚ ತುಂತುರು ಮಳೆಯಾಯಿತು.

ರಾಜಧಾನಿಯಲ್ಲಿ ಚೀಫ್ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮಿ|| ಸಿರಾಜುದ್ದೀನ್‌ರವರು ಬೆಂಗಳೂರಿಗೆ ಚೀಫ್ ಇನ್ಸ್‌ಪೆಕ್ಟರಾಗಿ ವರ್ಗಾಯಿಸಲ್ಪಟ್ಟಿರುವರು.

ದೇಹಾರೋಗ್ಯಕ್ಕಾಗಿ ಮದ್ರಾಸಿಗೆ ಹೋಗಿದ್ದ ಡೆ|| ಕಮಿಷನರ್ ಮ|| ಎಲ್. ಕೃಷ್ಣರಾಯರು ಮದ್ರಾಸಿನಲ್ಲಿ ವಿಧಿವಶರಾದರೆಂದು ತಿಳುಹಲು ವಿಷಾದಿಸುತ್ತೇವೆ.

ಬೆಂಗಳೂರ ಡಿ|| ನಲ್ಲಿ ಅ|| ಇಂಜನಿಯರಾಗಿದ್ದ ಮ|| ಬಿ. ಕೃಷ್ಣಸ್ವಾಮಯ್ಯಂಗಾರವರು ಮೈಸೂರ ಇಂಜನಿಯರಿಂಗ್ ಸ್ಕೂಲಿನ ಹೆಡ್ಮಾಸ್ಟರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರರಾದ ಮಿ|| ರೀಗೋಯವರು ತಮ್ಮ ಕೆಲಸದೊಡನೆ ಮೈಸೂರು ತಾ|| ಅಮಲ್ದಾರರುದ್ಯೋಗವನ್ನೂ ನೋಡುವಂತೆ ಗೊತ್ತುಮಾಡಲ್ಪಟ್ಟಿರುತ್ತಾರೆ.

ಶ್ರೀ ಕಾಶೀಕ್ಷೇತ್ರದಲ್ಲಿ ಮಾರ್ಚಿ ತಾ|| ೬-೭ ಮತ್ತು ೮ ರಲ್ಲಿ ಶ್ರೀ ವಿಶ್ವಾರಾಧ್ಯ ಪೀಠದ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಜರುಗುವ ಮಹಾಸಭೆಯ ಸ್ವಾಗತಸಂಘಕ್ಕೆ ಅಬ್ಬಿಗೇರಿ ಹಿರೇಮಠದ ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು ಸೆಕ್ರೆಟರಿಯವರಾಗಿರುವುದರಿಂದ ಸಭಾಸಂಬಂಧವಾದ ಪತ್ರವ್ಯವಹಾರಗಳನ್ನು ಅವರ ಹೆಸರಿನಲ್ಲಿ ನಡಿಸುವುದು.

ರಾಜಧಾನಿಯ ಹಳೆಯ ಅಗ್ರಹಾರದಲ್ಲಿರುವ ಬಸಮ್ಮಯ್ಯನ ಸತ್ರದ ಮಳಿಗೆಗಳಲ್ಲಿ ನಶ್ಯದ ವ್ಯಾಪಾರಿಗಳು ಹಗಲೂ ರಾತ್ರಿ ನಶ್ಯವನ್ನು ಕುಟ್ಟುತ್ತಿರುವುದರಿಂದ ಸತ್ರದೊಳಗಡೆ ವಾಸವಾಗಿರುವ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಬಹಳ ಅಡಚಣೆಯಾಗಿರುತ್ತದೆಂದು ಕೆಲ ವಿದ್ಯಾರ್ಥಿಗಳು ನಮ್ಮಲ್ಲಿ ದೂರಿಕೊಂಡಿರುತ್ತಾರಾಗಿ ಈ ಸತ್ರದ ಮೇಲ್ವಿಚಾರಕರಾದ ಧರ್ಮದರ್ಶಿಗಳಾಗಲೀ ಸ್ಥಳಾಧಿಕಾರಿಗಳಾಗಲೀ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅಡಚಣೆಯಾಗಿರುವ ಭಾಗವನ್ನು ವಿಚಾರಿಸಿ, ತಪ್ಪಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಮ್ಯು|| ಕೌನ್ಸಿಲ್ ಪ್ರೆಸಿಡೆಂಟರೂ ಟ್ರಸ್ಟ್‌ಬೋರ್ಡಿನ ಚೇರ್ಮನ್ನರೂ ಆದ ಮ|| ಟಿ. ಜಿ. ಲಕ್ಷ್ಮೀನರಾಯರು ಇಂಜನಿಯರಿಲಾಖೆಗೆ ವರ್ಗಾಯಿಸಲ್ಪಟ್ಟು, ಪೋಲೀಸ್ ಇ|| ಜನರಲ್ಲುದ್ಯೋಗದಿಂದ ನಿವೃತ್ತರಾಗಿರುವ ದಿ|| ಬ|| ಮ|| ಶ್ರೀಕಂಠೇಶ್ವರಯ್ಯರ್‌ರವರು ಇಲ್ಲಿನ ಮ್ಯು|| ಪ್ರೆಸಿಡೆಂಟರಾಗಿಯೂ, ಇಂಜನಿಯರುದ್ಯೋಗದಿಂದ ನಿವೃತ್ತರಾಗಿರುವ ರಾ|| ಬ|| ಸುಬ್ಬರಾಯರು ಟ್ರಸ್ಟ್‌ಬೋರ್ಡಿನ ಚೇರ್ಮನ್ನರಾಗಿಯೂ ನಿಯಮಿಸಲ್ಪಡುವರೆಂಬ ವದಂತಿಯು ಪ್ರಬಲವಾಗಿದೆ ಈ ಬದಲಾವಣೆಯು ಬಹಳ ಅಪೇಕ್ಷಣೀಯವಾಗಿದ್ದಿತು.

ಭರತಖಂಡದ ವೃತ್ತಾಂತಗಳು.

ಮದ್ರಾಸುಪಟ್ಟಣದಲ್ಲಿ ೫|| ಲಕ್ಷ ಪ್ರಜೆಯಿದೆ. ವಾರವೊಂದಕ್ಕೆ ಅಲ್ಲಿ ೪೦೦ ಕ್ಕೆ ಮೇಲ್ಪಟ್ಟು ಮರಣಗಳಾಗುವುದು ಸಾಮಾನ್ಯವಾಗಿದೆ.

ಯಾವದ್ಭಾರತ ಹಿಂದೀಸಾಹಿತ್ಯ ಸಮ್ಮೇಳನವು ಇಂದೂರಿನಲ್ಲಿ ಬರುವ ಮಾರ್ಚಿ ತಾ|| ೨೯-೩೦-೩೧ ರಲ್ಲಿ ಶ್ರೀಮಾನ್ ಗಂಧಿಯವರ ಅಧ್ಯಕ್ಷತೆಯಲ್ಲಿ ಜರುಗುವುದು.

ಭರತಖಂಡದಲ್ಲೆಲ್ಲಾ ಜಾತೀಯ ವಿದ್ಯಾಸ್ಥಾಪನೆಗಾಗಿ ಧನರಾಶಿಯನ್ನು ಕೂಡಿಸಲು ಆನಿಬೆಸೆಂಟಮ್ಮನವರ ಪಕ್ಷದವರಿಂದ ವಿಶೇಷ ಪ್ರಯತ್ನಗಳು ನಡೆಯಿಸಲ್ಪಡುತ್ತಿವೆ.

ದಿಲ್ಲಿಪಟ್ಟಣದಲ್ಲಿ ಸರ್ಕಾರದಿಂದ ನಿಯುಕ್ತರಾಗಿರುವ ಕಮಿಟಿಯವರು ರೂ. ಗೆ ೧೬ ಸೇರಿನಂತೆ ಉಪ್ಪನ್ನು ಮಾರುವಂತೆಯೂ ಪ್ರತಿಯೊಬ್ಬ ಮನುಷ್ಯನಿಗೆ ೪ ಸೇರಿಗಿಂತ ಹೆಚ್ಚಾಗಿ ಮಾರದಂತೆಯೂ ಏರ್ಪಾಟು ಮಾಡಿದ್ದಾರೆ.

ಸಾಮ್ರಾಜ್ಯಶಾಸನನಿರ್ಮಾಣಸಭೆಯ ಅನುದ್ಯೋಗಿಕ ಸಭಾಸದರೆಲ್ಲಾ ಕೂಡಿ ಸ್ಟೇಟ್‌ಸೆಕ್ರಿಟರಿ ಮಿ|| ಮಾಂಟೇಗ್‌ರವರಿಗೆ ಕಳೆದ ತಾ|| ೨೧ರಲ್ಲಿ ದಿಲ್ಲಿಪಟ್ಟಣದ ಮೆಟ್ಕಾಲ್ಫ್ ಭವನದಲ್ಲಿ ಒಂದು ಔತಣವನ್ನು ಮಾಡಿ ಮರ್ಯಾದಿಸಿದರು.

ಭರತಖಂಡದ ದೇಶಸೇವಕ ಮಂಡಲಿಗೆ ಅಧ್ಯಕ್ಷರಾಗಿರುವ ಆ|| ಶ್ರೀನಿವಾಸಶಾಸ್ತ್ರಿಯವರು "ಹಿಂದೂದೇಶಸೇವಕ" ಎಂಬ ಹೆಸರಿನ ಆಂಗ್ಲಭಾಷೆಯ ವಾರಪತ್ರಿಕೆಯನ್ನು ಕಳೆದ ತಾ|| ೧೯ ರಲ್ಲಿ ಉಪಕ್ರಮಿಸಿ ಪುಣಾಪಟ್ಟಣದಿಂದ ಪ್ರಕಟಿಸುತ್ತಿರುವರು.

ಬೊಂಬಾಯಿಯಲ್ಲಿ ಅಂಗಡಿಗಳಿಗೆ ನುಗ್ಗಿ ಸೂರೆಮಾಡಿದ ಜನರಲ್ಲಿ ೨೯ ಮಂದಿಯಮೇಲೆ ಕೇಸು ಮಾಡಲ್ಪಟ್ಟಿದ್ದಿತು. ೪ ಮಂದಿಗೆ ಚಡಿಯೇಟನ್ನು ಹೊಡೆಯಿಸಿ, ೮ ಜನರನ್ನು ನಿರಪರಾಧಿಗಳನ್ನು ಬಿಡಿಸಿ, ಉಳಿದವರಿಗೆ ಕಾರಾಗೃಹವಾಸಶಿಕ್ಷೆಯನ್ನು ದಂಡಾಧಿಕಾರಿಗಳು ವಿಧಿಸಿದರು.

ತಿರುವಾಂಕೂರು ಪ್ರಜಾಪ್ರತಿನಿಧಿ ಸಭೆಯು ಕಳೆದ ತಾ|| ೨೦ ರಲ್ಲಿ ಆರಂಭಿಸಲ್ಪಟ್ಟಿತು. ದಿವಾನರು ತಮ್ಮ ಆರಂಭೋಪನ್ಯಾಸವನ್ನು ಮಾಡುವಾಗ್ಗೆ ಆ ದೇಶಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯವಿರಬೇಕಾದ ಅವಶ್ಯಕತೆಯನ್ನು ಸೂಚಿಸಿ, ವಿಶ್ವವಿದ್ಯಾಲಯ ಸಂಘವನ್ನು ಸ್ಥಾಪಿಸಿದರು.

ಲಕ್ನೋಪಟ್ಟಣದಲ್ಲಿ ಕ್ಷತ್ರಿಯರಿಗೋಸ್ಕರವಾಗಿ ಒಂದು ಕಲಾಶಾಲೆಯನ್ನು ಸ್ಥಾಪಿಸುವುದಕ್ಕಾಗಿ ಅಲ್ಲಿಯ ಲೆಫ್ಟನೆಂಟ್ ಗೌರ್ನರವರ ಅಧ್ಯಕ್ಷತೆಯಿಂದ ಒಂದು ಸಭೆಗೂಡಿದ್ದಿತು. ಅನೇಕ ಮಹಾರಾಜರೂ ರಾಜರೂ ಬಂದಿದ್ದರು. ಬಿಂಗಾಸಂಸ್ಥಾನದ ರಾಣಿಯವರು ಅದರ ಫಂಡಿಗೆ ೬ ಲಕ್ಷ ರೂ. ಗಳನ್ನು ಕೊಟ್ಟಿರುವುದಾಗಿ ಅಧ್ಯಕ್ಷರು ತಿಳಿಯಪಡಿಸಿದರು.

ಬಂಗಾಳಾ ವಿದ್ಯಾಪೀಠದವರು ಸ್ವದೇಶಭಾಷೆಯಲ್ಲೇ ವಿದ್ಯಾಭ್ಯಾಸ ಮಾಡಿಸುವಂತೆಯೂ, ಆಂಗ್ಲಭಾಷಾ ಪ್ರಾಮುಖ್ಯವನ್ನು ತಪ್ಪಿಸುವಂತೆಯೂ, ಹಿಂದೀ ಭಾಷೆಯನ್ನು ೨ ನೆ ಭಾಷೆಯನ್ನಾಗಿ ಪ್ರತಿಯೊಬ್ಬ ಬಂಗಾಳಾ ವಿದ್ಯಾರ್ಥಿಗೂ ಕಲಿಸಿಕೊಡುವಂತೆ ಮಾಡಬೇಕೆಂಬುದಾಗಿಯೂ ಬಂಗಾಳಾ ಜಮೀನ್ದಾರರು ಸ್ಟೇಟ್ ಸೆಕ್ರಿಟರಿಯವರಿಗೆ ಒಪ್ಪಿಸಿರುವ ವಿಜ್ಞಾಪನಪತ್ರದಲ್ಲಿ ಪ್ರಾರ್ಥಿಸಿಕೊಂಡಿರುವರಂತೆ.

ಏಕಮುಖರುದ್ರಾಕ್ಷವು ಸಕಲ ಸಂಪತ್ಕರವೂ ಅತ್ಯಂತ ದುರ್ಲಭವೂ ಎಂಬ ವಿಷಯವು ಆಸ್ತಿಕರಿಗೆಲ್ಲಾ ಗೊತ್ತಿದೆ. ಅಂಥ ಒಂದು ರುದ್ರಾಕ್ಷವು ಮದ್ರಾಸಿನ ರತ್ನಪಡಿ ವ್ಯಾಪಾರಿಗಳಲ್ಲಿ ಪ್ರಸಿದ್ಧರಾದ ತಾತಾಕಂಪೆನಿಯವರ ಬಳಿಯಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿದೆಯಂತೆ. ಇದು ಮಾರ್ಚಿ ತಿಂಗಳ ಕಡೆಯವರೆಗೂ ಅಲ್ಲಿರುವುದು. ಬೇಕಿದ್ದವರು ಅಲ್ಲಿಗೆ ಹೋಗಿ ನೋಡಿ ಬೆಲೆಯನ್ನು ಗೊತ್ತುಮಾಡಿಕೊಳ್ಳಬಹುದಾಗಿದೆ.

ಇದುವರೆಗೆ ಬರ್ಮಾ ಗೌರ್ನರಾಗಿದ್ದ ಸರ್ ಹಾರ್ಕೋರ್ಟ್ ಬಟ್ಲರ್‌ರವರು ಕಳೆದ ತಾ|| ೧೫ ರಲ್ಲಿ ಸರ್ ಜೇಮ್ಸ್ ಮೆಸ್ಟನ್‌ರವರಿಂದ ಸಂಯುಕ್ತರಾಷ್ಟ್ರಗಳ ಲೆ|| ಗೌರ್ನರ ಪದವಿಯನ್ನಂಗೀಕರಿಸಿದರು. ಅದೇ ದಿನ ಮಧ್ಯಾಹ್ನ ಮೆಸ್ಟನ್ ದಂಪತಿಗಳು ಸೀಮೆಗೆ ಪ್ರಯಾಣಮಾಡಿದರು. ಈಗ ಬರ್ಮಾದ ಗೌರ್ನರ್ ಪದವಿಗೆ ವೈಸ್‌ರಾಯರ ಕಾರ್ಯಕಾರಿ ಸಭೆಯ ಮೊದಲನೆ ಸಭಿಕರಾಗಿದ್ದ ಸರ್ ರೆಜಿನಾಲ್ಡ್ ಕ್ರಡಕ್‌ರವರು ನಿಯಮಿಸಲ್ಪಟ್ಟಿರುವರು.

ಕಾಶಿಯ ಹಿಂದೂವಿಶ್ವವಿದ್ಯಾಲಯದ ಉಪಾಧ್ಯಕ್ಷರೂ, ಅಲಹಾಬಾದ್ ಅಡ್ವೋಕೇಟರಲ್ಲೆಲ್ಲಾ ಅಗ್ರೇಸರರೂ ನಿಯಮನಿರ್ಮಾಣ ಸಭಾಸಭಿಕರೂ ಆಗಿದ್ದ ಡಾಕ್ಟರ್ ಸರ್ ಸುಂದರಲಾಲ್‌ರವರು ಹೃದಯರೋಗದಿಂದ ಕಳೆದ ತಾ|| ೧೩ ರ ರಾತ್ರಿ ತಮ್ಮ ೬೦ ನೆ ವಯಸ್ಸಿನಲ್ಲಿ ಅಕಸ್ಮಾತ್ತಾಗಿ ವಿಧಿವಶರಾದುದನ್ನು ಕೇಳಿ ದೇಶೀಯರೆಲ್ಲಾ ವಿಷಾದಪಡುತ್ತಿದ್ದಾರೆ. ಇವರ ಗೌರವಾರ್ಥವಾಗಿ ಮರುದಿವಸ ಆ ಪಟ್ಟಣದ ಕೋರ್ಟು ಕಚೇರಿಗಳೆಲ್ಲಾ ಮುಚ್ಚಲ್ಪಟ್ಟಿದ್ದುವು.

ಬೊಂಬಾಯಿಯ ತಾತಾ ಕಂಪೆನಿಯವರು ಲೋನಾವಿ ಹತ್ತಿರ ಮಹತ್ತರವಾದ ಜಲಾಶಯವನ್ನು ಕಲ್ಪಿಸಿ, ಅದರ ಮೂಲಕ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ಯಂತ್ರಾಲಯ ಮೊದಲಾದುವುಗಳಿಗೆಲ್ಲಾ ಒದಗಿಸಿ ಧನಸಂಪಾದನೆ ಮಾಡುತ್ತಿರುವುದು ವಿಖ್ಯಾತವಾಗಿನೆಯಷ್ಟೆ. ಇವರು ಪಶ್ಚಿಮತೀರ ದೇಶಭಾಗಗಳ ಪುರೋಭಿವೃದ್ಧಿಗಾಗಿ ಮತ್ತೊಂದು ದೊಡ್ಡ ಪ್ರಯತ್ನಕ್ಕೆ ಕೈಹಾಕಿರುತ್ತಾರೆ. ಕೊಯಾನಾನದಿಯ ನೀರಿಗೆ ಅಣೆಕಟ್ಟು ಹಾಕಿ ಅದರ ಜಲಪಾತ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ, ಪಶ್ಚಿಮತೀರದ ಅಲ್ಯೂಮಿನಿಯಂ, ಉಕ್ಕು ಮೊದಲಾದ ಪಾರಿಶ್ರಾಮಿಕ ಸ್ಥಾಪನೆಗಳಿಗೆ ಆ ಶಕ್ತಿಯನ್ನು ಅಗ್ಗವಾಗಿ ಒದಗಿಸಿಕೊಡುವರು. ಆ ಸ್ಥಾಪನೆಗಳನ್ನೆಲ್ಲಾ ಇವರೇ ಮಾಡುವವರಾಗಿಲ್ಲ. ಯಾರು ಅಂಥ ಪಾರಿಶ್ರಾಮಿಕ ಯಂತ್ರಾಲಯ ಸ್ಥಾಪನೆಗಳನ್ನು ಮಾಡಿದರೂ ಅವಕ್ಕೆ ವಿದ್ಯುಚ್ಛಕ್ತಿ ಸಹಾಯವನ್ನು ಇವರು ಒದಗಿಸಿಕೊಡುವರು.

ಕಳೆದ ತಾ|| ೨೦ ರಲ್ಲಿ ಸಾಮ್ರಾಜ್ಯ ನಿಯಮನಿರ್ಮಾಣ ಸಭೆಯು ಮತ್ತೆ ಉಪಕ್ರಮಿಸಲ್ಪಟ್ಟಿತು. ಉಪಾಧ್ಯಕ್ಷರಾದ ಸರ್ ಜಾರ್ಜ್‌ಲವೆಂಡಸ್‌ರವರು ಅಧ್ಯಕ್ಷರಾಗಿದ್ದರು. ಸರ್ ವಾಚಾ, ಮಜರುಲ್‌ಹಕ್ ಮೊದಲಾದ ಸಭಾಸದರು ಕೂಡ ಬಂದಿದ್ದರು. ಭರತಖಂಡದಿಂದ ಹೊರಕ್ಕೆ ಸಾಗಿಸಲ್ಪಡುವ ನೀಲಿಯಮೇಲೆ ಹೊಸದಾಗಿ ಸುಂಕವನ್ನು ಹಾಕುವ ವಿಧಿಯ ತೀರ್ಮಾನವು ಅಂಗೀಕೃತವಾಯಿತು. ೨ ಆಣೆಯ ನಿಕ್ಕಲ್ ನಾಣ್ಯವನ್ನು ಸರ್ಕಾರದವರು ಎರಕವೆರೆಯಿಸುತ್ತಿರುವರೆಂದೂ ಅದು ವ್ಯವಹಾರಕ್ಕೆ ತರಲ್ಪಡುವುದೆಂದೂ ಕೋಶಾಧ್ಯಕ್ಷರು ಪದ್ಧತಿಯಮೇರೆಗೆ ಸೂಚಿಸಿದರು. ಮದದ್ರವ್ಯದ ಮಾರಾಟದ ಶಾಖೆಯನ್ನೇ ತೆಗೆದುಬಿಡಬೇಕೆಂಬ ಒಂದು ತೀರ್ಮಾನವನ್ನು ಅ|| ಬಯ್ಯಾ ನರಸಿಂಹೇಶ್ವರಶರ್ಮರವರು ಉಪಪಾದಿಸಿದರು. ಅನುಕೂಲವಾದ ಮತಗಳು ೨೦ ಮೊರೆದು ಪ್ರತಿಕೂಲ ಮತಗಳು ೩೩ ಬಂದುದರಿಂದ ಅದು ಬಿದ್ದುಹೋಯಿತು. ಇನ್ನೂ ಅನೇಕ ವಿಷಯಗಳು ಚರ್ಚಿತವಾದುವು.

ಮದ್ರಾಸ್ ಅಫಿಷಿಯಲ್ಲಿ ಹಿಂದೆ ರೆವಿನ್ಯೂ ಇನ್ಸ್‌ಪೆಕ್ಟರಾಗಿದ್ದು ಉದ್ಯೋಗದಿಂದ ಬಿಡುಗಡೆಮಾಡಲ್ಪಟ್ಟ ಸೀತಾರಾಮಾಚಾರ್ ಎಂಬಾತನು ಇಂಗ್ಲೀಷ್ ಪ್ರಭುತ್ವದಮೇಲಣ ಹಗೆಯಿಂದ ಜರ್ಮನರೊಡನೆ ಪತ್ರವ್ಯವಹಾರವನ್ನು ನಡೆಯಿಸಿ ಈ ದೇಶಕ್ಕೆ ಅವರ ಸೈನ್ಯವನ್ನು ಬರಮಾಡಿಕೊಳ್ಳುವ ಪ್ರಯತ್ನವನ್ನು ನಡೆಯಿಸುತ್ತಿದ್ದನೆಂಬ ತಪ್ಪಿತಕ್ಕಾಗಿ ಚಂಗಲ್ಪಟ್ಟು ಜಿಲ್ಲಾ ಜಡ್ಜರ ಮುಂದೆ ವಿಚಾರಣೆಗೊಳಗಾಗಿರುವನು. ಆದರೆ ಈ ಮಧ್ಯೆ ಮದರಾಸಿನಲ್ಲಿ ಬಂಗಾಳದಹಾಗೆ ರಾಜಕೀಯ ವಿಪ್ಲವದ ಚಳವಳಿಗಳು ತಲೆದೋರುವ ಚಿಹ್ನೆಗಳು ತಲೆದೋರಿರುತ್ತವೆ. ಕಳೆದ ವಾರದಲ್ಲಿ ಮದ್ರಾಸು ಪಟ್ಟಣದ ಪೋಸ್ಟ್ ಆಫೀಸು ಮೊದಲಾದ ಕಡೆಯ ಮುಖ್ಯವಾದ ಕಟ್ಟಡಗಳ ಗೋಡೆಗಳಮೇಲೆ ದಪ್ಪನಾದ ಇಂಗ್ಲೀಷು ಅಕ್ಷರಗಳಲ್ಲಿ "ಇಂಡ್ಯಾದಲ್ಲಿ ತಕ್ಕ ಪರಿಪಾಲನೆಯಿಲ್ಲ. ಬಡವರಿಗೆ ಬರಬಂದಿದೆ. ಜರ್ಮನರೊಡನೆ ಯುದ್ಧಮಾಡುವುದರಿಂದ ಫಲವಿಲ್ಲ. ಎಲ್ಲ ವ್ಯವಹಾರವೂ ಲಂಚದ ಮೂಲಕವಾಗಿ ಸಾಗುತ್ತಿದೆ. ೧೯೧೦ ನೆ ವರ್ಷದಿಂದ ಮುಖ್ಯವಾಗಿ ಅಕ್ಕಿಯ ಬೆಲೆಯು ಬಹಳ ಹೆಚ್ಚಾಗಿದೆ. ಹೀಗಾಗುವುದಕ್ಕೆ ಕಾರಣವೇನು? ಈ ದೇಶದಲ್ಲಿ ಸರಿಯಾದ ಪಾಲನೆಯಿಲ್ಲ. ಕಾಲಕ್ರಮವು ಹೀಗೆಯೇ ಇದ್ದರೆ ಮದರಾಸು ಪಟ್ಟಣವು ಲೂಟಿಮಾಡಲ್ಪಡುವುದು" ಎಂಬುದಾಗಿ ಬರೆಯಲ್ಪಟ್ಟಿದ್ದ ಕಾಗದಗಳು ಅಂಟಿಸಲ್ಪಟ್ಟಿದ್ದುವು. ಪೋಲೀಸರು ಅವುಗಳನ್ನೆಲ್ಲಾ ತೆಗೆದು ಈ ಕೃತ್ಯ ನಡೆಯಿಸಿದವರಾರೆಂಬುದನ್ನು ಪರಿಶೋಧಿಸುತ್ತಿದ್ದಾರೆ. ಇದು ಕೇವಲ ಬಡವರಾದ ಅರಿಯದ ಜನರ ಸಾಹಸವು ಮಾತ್ರವೇ ಅಲ್ಲವೆಂದೂ, ಇದರಲ್ಲಿ ಕುಶಲರಾರೋ ಸೇರಿ ನಡೆಯಿಸಿದ ಕಪಟವಾಗಿರಬೇಕೆಂದೂ ಕಾಣುತ್ತಿದೆ.

ವಿದೇಶದವೃತ್ತಾಂತಗಳು.

ಜರ್ಮನರ ಕಪಟತಂತ್ರಪ್ರೇರಿತನಾಗಿ ಧನದಾಸೆಯನ್ನು ತೋರಿಸಿ, ಫ್ರಾನ್ಸಿನಲ್ಲಿ ಭೇದತಂತ್ರವನ್ನು ನಡೆಯಿಸುತ್ತಿದ್ದನೆಂಬ ತಪ್ಪಿತಕ್ಕೆ ಗುರಿಯಾಗಿ ವಿಚಾರಣೆ ಮಾಡಲ್ಪಡುತ್ತಿದ್ದ ಬೋಲೋಪಾಷಾ ಎಂಬುವನಿಗೆ ಮರಣದಂಡನೆ ವಿಧಿಸಲ್ಪಟ್ಟಿತು.

ನಾರ್ವೆಯವರಿಗೆ ಬೇಕಾದ ಸಾಮಗ್ರಿಗಳನ್ನು ಮಿತ್ರಮಂಡಲಿಯವರು ಒದಗಿಸಿಕೊಡುವುದಕ್ಕೂ, ನಾರ್ವೆಯವರು ಜರ್ಮನರಿಗೆ ಯಾವುದೊಂದು ವಸ್ತುವನ್ನೂ ಕಳುಹಿಸಿಕೊಡದಿರುವುದಕ್ಕೂ ಮಿತ್ರಮಂಡಲಿಯವರಿಗೂ ಒಪ್ಪಂದವಾಯಿತೆಂದು ಅಮೇರಿಕಾದವರು ಪ್ರಕಟಿಸಿದ್ದಾರೆ.

ಯೂರೋಪು ತುರ್ಕಿಗೂ, ಆಸ್ಯಾಮಿಗೂ ಮಧ್ಯದಲ್ಲಿರುವ ಸಮುದ್ರದ ಕೆಳಗೆ ಭೂಮಿಯಲ್ಲೇ ಸುರಂಗದ ದ್ವಾರದಿಂದ ಲೋಹಮಾರ್ಗವನ್ನು ಹಾಕಬೇಕೆಂದು ತುರ್ಕಿ ಪಾರ್ಲಿಮೆಂಟಿನವರು ತೀರ್ಮಾನಿಸಿರುವರೆಂದೂ ಏಪ್ರಿಲ್ ತಿಂಗಳಲ್ಲಿ ಕಾರ್ಯಾರಂಭವಾಗುವುದೆಂದೂ ವರ್ತಮಾನವಿದೆ.

ಏಪ್ರಿಲ್‌ವರೆಗೂ ಮುಚ್ಚಬೇಕೆಂದಿದ್ದ ಪಾರ್ಲಿಮೆಂಟ್ ಸಭೆಯು ಅವಸರದ ಕಾರ್ಯಗಳಿಂದ ಮರಳಿ ತಾ|| ೧೩ ರಲ್ಲಿ ತೆರೆಯಲ್ಪಟ್ಟಿತು. ಚಕ್ರವರ್ತಿಯವರು ಆರಂಭೋಪನ್ಯಾಸವನ್ನು ಮಾಡಿ ಜರ್ಮನರು ನ್ಯಾಯವಾದ ಸಂಧಿಯಾಗುವುದಕ್ಕೆ ತಕ್ಕ ಉತ್ತರವಾವುದನ್ನೂ ಕೊಡದಿರುವುದರಿಂದ, ನಮ್ಮ ಯಾವಚ್ಛಕ್ತಿಯನ್ನೂ ವಿನಿಯೋಗಿಸಿ ಯುದ್ಧಮಾಡಿ ಮುಗಿಸಿ ಗೌರವವಾದ ಸಂಧಿಯು ಜರುಗುವಂತೆ ಮಾಡಬೇಕೆಂದು ಹೇಳಿದರು.

ದಕ್ಷಿಣಾಫ್ರಿಕಾದಲ್ಲಿರುವ ಕಬ್ಬಿನ ಗದ್ದೆಗಳು ವಿಶೇಷವಾಗಿರುವ ಜಿಲ್ಲೆಗಳಲ್ಲಿ ೧ ದಿನದೊಳಗೆ ೧೬ ಅಂಗುಲದಷ್ಟು ಮಳೆಯಾದುದರಿಂದ ಉಂಫೋ, ಲೋಸಿ, ಎಂಬ ಹೊಳೆಗಳಲ್ಲಿ ೭೫ ಅಡಿಗಳಷ್ಟು ಎತ್ತರವಾಗಿ ಪ್ರವಾಹವು ಬಂದು, ನದೀತೀರದ ಪುರಗ್ರಾಮಾದಿಗಳಿಗೆಲ್ಲಾ ಮಹಾನರ್ಥವನ್ನುಂಟುಮಾಡಿದೆ. ತೀರಗ್ರಾಮಗಳಲ್ಲಿದ್ದ ನೂರಾರು ಭಾರತೀಯರ ಗುಡಿಸಲುಗಳು ಕೊಚ್ಚಿಹೋದುವು. ೩೦೦ ಮಂದಿಗಳು ಮೃತರಾದರೆಂದು ಸುದ್ದಿಬಂದಿದೆ. ಬಹಳ ಕಟ್ಟಡಗಳೂ ಲೋಹಮಾರ್ಗಗಳೂ ತಂತಿಯ ಕಂಬಗಳೂ ಯಂತ್ರಾಲಯಗಳೂ ಹಾಳಾಗಿರುವುವು.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಈ ರಂಗದಲ್ಲಿ ಹಿಮವು ಕಡಿಮೆಯಾಗಿ ಭೂಮಿಯು ಆರುತ್ತಲಿರುವುದರಿಂದ ಯುದ್ಧಕಾರ್ಯಕ್ಕೆ ಅನುಕೂಲಿಸುತ್ತಿದೆ. ಆದುಕಾರಣ ಬೇಸಗೆಯ ಯುದ್ಧಾರಂಭವು ಕಳೆದ ವಾರದಲ್ಲೇ ನಡೆದಂತೆ ಕಾಣುತ್ತಿದೆ. ಕಳೆದ ವಾರದಲ್ಲಿ ಫ್ರೆಂಚರು ಒಂದುಕಡೆಯೂ, ಇಂಗ್ಲೀಷರು ಒಂದುಕಡೆಯೂ ಶತ್ರುಸೇನಾಪಙ್ಕ್ತಿಯಮೇಲೆ ಬಿದ್ದು ಯುದ್ಧಮಾಡಿ ಸ್ವಲ್ಪಸ್ವಲ್ಪ ಸ್ಥಲವನ್ನೂ ಕೆಲವು ಫಿರಂಗಿಗಳನ್ನೂ ಹಿಡಿದು ಜಯವನ್ನು ಪಡೆದಿದ್ದಾರೆ. ಹಲವುಕಡೆ ಪ್ರತಿದಿನವೂ ಜರ್ಮನ್ ಪಙ್ಕ್ತಿಯಮೇಲೆ ಬಿದ್ದು ಯುದ್ಧಗಳನ್ನು ನಡೆಯಿಸುತ್ತಿದ್ದಾರೆ. ಜರ್ಮನರೂ ಕೂಡ ಹಲವುಕಡೆ ಮಿತ್ರಮಂಡಲಿ ಸೇನೆಯನ್ನು ಕೆಣಕಿ ಯುದ್ಧವನ್ನು ಮಾಡಿದ್ದಾರೆ. ಆದರೆ ಅವರು ಮಿತ್ರಮಂಡಲಿಯಂತೆ ಮುಂದುವರಿದು ಬಂದಿರುವುದೇನೂ ಇಲ್ಲ. ಇಂಗ್ಲೀಷ್-ಫ್ರೆಂಚ್ ವೈಮಾನಿಕರು ಶತ್ರುಸೇನಾಪಙ್ಕ್ತಿಯ ಹಿಂಗಡೆಗೆ ಹೋಗಿ ಅವರ ಸನ್ನಾಹಕ್ರಮಗಳನ್ನೆಲ್ಲಾ ತಿಳಿದುಕೊಂಡು ಬರುತ್ತಿದ್ದಾರೆ. ಮತ್ತೂ ಮದ್ದುಗುಂಡಿರುವ ಸ್ಥಲಗಳಮೇಲೂ ಸೇನೆಗಳ ಶಿಬಿರಗಳಮೇಲೂ ಹಲವು ಸಿಡಿಮದ್ದುಗಳನ್ನು ಹಾಕಿ ಬಂದಿರುತ್ತಾರೆ.

ರಷ್ಯಾದ ಉಕ್ರೇನಿಯನ್ ಪ್ರಾಂತದವರೇನೋ ಜರ್ಮನರೊಡನೆ ಸಂಧಿಯನ್ನು ಮಾಡಿಕೊಂಡುಬಿಟ್ಟರು. ಅದರ ಪ್ರಕಾರ ಗೆಲೀಷಿಯಾದಲ್ಲಿ ಅವರಾಕ್ರಮಿಸಿಕೊಂಡಿದ್ದ ಬ್ರಾಡೀ ಪಟ್ಟಣ ಮೊದಲಾದ ಭಾಗಗಳನ್ನೆಲ್ಲಾ ಆಸ್ಟ್ರಿಯನ್ನರಿಗೆ ಮಹಿಸಿ ಕೊಟ್ಟುಬಿಟ್ಟರು. ಆದರೆ ಇದನ್ನು ರಷ್ಯಾದ ವಿಪ್ಲವಕಾರ ಪಕ್ಷದವರು ಒಪ್ಪುತ್ತಲಿಲ್ಲ. ಜರ್ಮನರ ಬಲವದ್ವೇಷಾಕ್ರಮಣದಿಂದ ಇಲ್ಲಿಯ ಕೆಲಸಗಾರರಿಗೆಲ್ಲಾ ಬಾಧೆಯುಂಟಾಗುವುದರಿಂದ ನಾವು ಅದನ್ನೊಪ್ಪುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಮತ್ತೂ ನಮ್ಮಂಥ ವೈತಸಾಯಗಾರರೂ ಕಸಬುದಾರರೂ ಆದ ಜರ್ಮನಿ-ಆಸ್ಟ್ರಿಯಾ ಪ್ರಜೆಗಳಮೇಲೆ ಯುದ್ಧಮಾಡುವುದಕ್ಕೆ ನಮಗೆ ಮನಸ್ಸಿಲ್ಲವಾದಕಾರಣ ನಮ್ಮ ಸೇನೆಯನ್ನು ಚದರಿಸಿಬಿಟ್ಟು ದೇಶದ ಎಲ್ಲೆಯನ್ನು ಕಾಪಾಡುವುದಕ್ಕೆ ಮಾತ್ರ ಕೆಲ ಸೈನ್ಯವನ್ನು ಇರಿಸಿಕೊಂಡಿದ್ದೇವೆಂದು ಅವರು ಪ್ರಕಟಿಸಿದ್ದಾರೆ. ಮುಖ್ಯವಾಗಿ ಈಗಣ ಸಂಧಿಯ ಭವಿಷ್ಯತ್ಫಲಾಫಲಗಳು ಹೇಗಿದ್ದರೂ ಜರ್ಮನಿಗೆ ಈ ದೇಶಭಾಗದಿಂದ ಆಹಾರ್ಯವಸ್ತುಗಳು ಸಾಗುವುದಕ್ಕೂ ವ್ಯಾಪಾರಗಳು ನಡೆಯುವುದಕ್ಕೂ ಅನುಕೂಲವಾಯಿತು. ಪೋಲೆಂಡಿನಲ್ಲಿ ಕೆಲ ಭಾಗವನ್ನು ಉಕ್ರೇನಿಯನ್ನರಿಗೆ ಸೇರಿಸಿಕೊಡುತ್ತೇವೆಂದು ಜರ್ಮನರು ಉಕ್ರೇನಿಯನ್ನರಿಗೆ ವಾಗ್ದಾನಮಾಡಿದ್ದಾರಂತೆ. ಇದು ಪೋಲೆಂಡಿನವರಿಗೆ ಸಮಾಧಾನಕರವಾಗಿಲ್ಲ. ಇದರಮೇಲೆ ಅಲ್ಲಿಯ ಮಂತ್ರಿವರ್ಗದವರೆಲ್ಲಾ ರಾಜೀನಾಮೆಕೊಟ್ಟಿದ್ದಾರೆ. ಅಲ್ಲದೆ ರಷ್ಯಾದಲ್ಲಿ ಉಕ್ರೇನಿಯನ್ ಜಾತಿಯವರೊಬ್ಬರು ಸಂಧಿಮಾಡಿಕೊಂಡರೂ ಇನ್ನು ಮೂರು ಜಾತಿಯವರು ಸಂಧಿಗೆ ಬದ್ಧರಾಗಿಲ್ಲ. ಆ ಒಳತೋಟಿಯು ಇನ್ನೂ ಇದ್ದೇ ಇದೆ. ಪೋಲೆಂಡಿಗೆ ಸೇರಿದ ವಾರ್ಸಾದಲ್ಲೂ ಲಿಂಬರ್ಗನಲ್ಲೂ ಪ್ರಜೆಗಳು ಗುಂಪುಕಟ್ಟಿ ದೊಂಬಿಯೆದ್ದಿದ್ದಾರೆ. ಜರ್ಮನಿ ಸೈನಿಕರು ಬೀದಿಗಳಲ್ಲಿ ಕಾವಲುಗೊಡುತ್ತಿದ್ದಾರೆ. ಬೋಲ್ಷೆವಿಕ್ಕರಿಗೂ ರಾಧಾ ಪಕ್ಷದವರಿಗೂ ಯುದ್ಧವಾಗುತ್ತಿದೆ. ಪೆಟ್ರೋಗ್ರೇಡಿನಲ್ಲಿದ್ದ ಜರ್ಮನ್ ಮಿತ್ರರಾಯಭಾರಿಗಳೆಲ್ಲಾ ಬಿಟ್ಟು ಓಡಿದರೆಂದು ಒಂದು ವಾರ್ತೆ ಬಂದಿದೆ. ಇದರಿಂದ ಜರ್ಮನರಿಗೂ ಬೋಲ್ಷೆವಿಕ್ಕರಿಗೂ ಮರಳಿ ಯುದ್ಧವಾರಂಭವಾಗುವಂತೆ ಕಾಣುತ್ತಿದೆ. ಪೆಟ್ರೋಗ್ರೇಡ್ ಪಟ್ಟಣದ ಸ್ಥಿತಿಯು ಅತಿ ಭಯಂಕರವೂ ದಯನೀಯವೂ ಆಗಿದೆ. ಬೀದಿಬೀದಿಗಳಲ್ಲೇ ಕೊಲೆಗಳೂ ಸುಲಿಗೆಗಳೂ ನಡೆಯುತ್ತಿವೆ. ಸಿಕ್ಕಿಸಿಕ್ಕಿದವರಮೇಲೆ ತುಪಾಕಿಗುಂಡುಗಳು ಹಾರಿಸಲ್ಪಡುತ್ತಿವೆ. ಕ್ರೈಮಿಯಾಪ್ರಾಂತ್ಯದ ಉಕ್ರೇನಿಯನ್ನರನ್ನು ಸೋಲಿಸಿ ಓಡಿಸಿದೆವೆಂದು ಬೋಲ್ಷೆವಿಕ್ಕರು ಪ್ರಕಟಿಸಿದ್ದಾರೆ. ಫಿನ್ಲಂಡಿನಲ್ಲಿ ಮಧ್ಯಮ ತರಗತಿಯ ಜನರಿಗೂ ಸಾಂಘಿಕ ಸ್ವಾತಂತ್ರ್ಯವಾದಿಗಳಿಗೂ ಯುದ್ಧವಾಗುತ್ತಿದೆ. ಅಲ್ಲಿಯವರ ಸೈನ್ಯಕ್ಕೆ ಸಹಾಯಮಾಡಲು ಜರ್ಮನರು ಸಮುದ್ರದಮೇಲೆ ಕಳುಹಿಸುತ್ತಿದ್ದ ೩೦೦೦ ಸೈನಿಕರನ್ನು ರಷ್ಯಾ ಕಾವಲಿನ ನೌಕಾದಳದವರು ಹಿಡಿದು ಸೆರೆಯಿಟ್ಟುಕೊಂಡಿರುವರು. ಅಲ್ಲಿರುವ ವೈಟ್‌ಗಾರ್ಡ್ ಸಿಪಾಯಿಗಳು ೧೫೦೦ ಮಂದಿ ಕೊಲಿಕಾರ ಪಕ್ಷದ ಜನರನ್ನೂ ವಿಪ್ಲವಸೈನಿಕ ಸಭ್ಯರೆಲ್ಲರನ್ನೂ ಕೊಂದುಹಾಕಿರುತ್ತಾರೆ. ಪೆಟ್ರೋಗ್ರೇಡ್ ಪ್ರಭುತ್ವದವರ ಈ ಅಕ್ರಮಪ್ರವರ್ತನೆಗಳಿಂದ ತಾತ್ಕಾಲಿಕ ಸಂಧಿಯು ರದ್ದುಗೊಳಿಸಲ್ಪಟ್ಟಿದೆ. ೧ ವಾರ ಕಳೆದನಂತರ ತಾವು ತಮ್ಮ ಮನಸ್ಸಿಗೆ ತೋಚಿದಂತೆ ನಡೆದುಕೊಳ್ಳುತ್ತೇವೆಂದು ಜರ್ಮನರು ಪ್ರಕಟಿಸಿರುವರೆಂಬುದಾಗಿ ಒಂದು ತಂತ್ರೀವಾರ್ತೆಯಿಂದ ಗೊತ್ತಾಗುತ್ತದೆ. ಹೀಗೆ ರಷ್ಯಾ ವಿಷಯವು ಗೊತ್ತುಗುರಿಯಿಲ್ಲದ ಅವಸ್ಥೆಯಲ್ಲಿ ನಿಂತಿರುತ್ತದೆ.

ಇತರವಿಷಯಗಳು.

ಇಟಲಿಯವರು ಕಳೆದ ವಾರದಲ್ಲಿ ಸಾಯುಧಗಳಾದ ಆಸ್ಟ್ರಿಯನ್ ಹಡಗುಗಳೆರಡನ್ನು ಮುಳುಗಿಸಿದ್ದಾರೆ.

ಇಂಗ್ಲೀಷ್ ಫ್ರೆಂಚ್ ವೈಮಾನಿಕರು ಆಗಾಗ್ಗೆ ಶತ್ರುದೇಶ ಪಟ್ಟಣಗಳ ಮೇಲೆ ವಿಪರೀತವಾಗಿ ಸಿಡಿಮದ್ದುಗಳನ್ನು ಹಾಕಿ ಬರುತ್ತಲೇ ಇದ್ದಾರೆ.

ಕಳೆದ ತಾ|| ೩ಕ್ಕೆ ಕಡೆಯಾದ ೧ ವಾರಕಾಲದಲ್ಲಿ ಶತ್ರುಗಳಿಂದ ಇಂಗ್ಲೀಷರವು ೧೯, ಫ್ರೆಂಚರವು ೨, ಇಟಲಿಯವರವು ೭ ಹಡಗುಗಳು ಮುಳುಗಿಸಲ್ಪಟ್ಟಿವೆ.

ರುಮೇನಿಯಾದವರೊಡನೆ ಸಂಧಿಮಾಡಿಕೊಳ್ಳುವುದಕ್ಕಾಗಿ ಜರ್ಮನರು ಅಂತ್ಯಲೇಖನವನ್ನು ಕಳುಹಿಸಿ ತಿಳಿಯಿಸಿದ್ದ ೪ ದಿನಗಳ ಗಡುವನ್ನು ತಾ|| ೨೨ ರವರೆಗೆ ಹೆಚ್ಚಿಸಿದ್ದರು.

ತಾ|| ೧೮ ನೆ ಹಗಲು ೧೨ ಗಂಟೆ ಹೊತ್ತಿನಲ್ಲಿ ಶತ್ರುಗಳ ಒಂದು ಸಬ್‌ಮೆರೀನು ಡೋವರ್ ತೀರಪಟ್ಟಣದಮೇಲೆ ೩ ನಿಮಿಷಗಳೊಳಗಾಗಿ ೩೦ ಗುಂಡುಗಳನ್ನು ಹೊಡೆಯಿತು. ಅದರಿಂದ ೭-೮ ಮಂದಿಗಳಿಗೆ ಗಾಯವಾದುದಲ್ಲದೆ, ಒಬ್ಬ ಹುಡುಗನು ಸತ್ತನು.

ನಾರ್ವೆಯವರ ವ್ಯಾಪಾರಿ ಹಡಗುಗಳು ಯುದ್ಧಾರಂಭದಿಂದ ಕಳೆದ ತಿಂಗಳ ಕಡೆಯವರೆಗೆ ಒಟ್ಟು ೧೦ ಲಕ್ಷ ಟನ್ನುಗಳ ಭಾರವನ್ನು ಹೊರುವಷ್ಟು ೭೧೪ ಹಡಗುಗಳು ಮುಳುಗಿಸಲ್ಪಟ್ಟಿವೆ. ಅವುಗಳಲ್ಲಿದ್ದವರಲ್ಲಿ ೮೮೩ ನಾವಿಕರು ಮೃತರಾದರು. ೫೩ ಹಡಗುಗಳೂ ೭೦೦ ಮಂದಿ ನಾವಿಕರೂ ಏನಾದರೋ ಗೊತ್ತಿಲ್ಲ.

ಜರ್ಮನರ ಒಂದು ನೌಕಾದಳವು ಕಳೆದ ತಾ|| ೧೪ ರ ರಾತ್ರಿ ಇಂಗ್ಲೀಷರ ಡೋವರ್ ಜಲಸಂಧಿಗೆ ಬಂದು, ಒಂದು ಶತ್ರು ಸಬ್‌ಮೆರೀನನ್ನು ಅಟ್ಟುತ್ತಿದ್ದ ೮ ಇಂಗ್ಲೀಷ್ ಹಡಗುಗಳನ್ನು ಮುಳುಗಿಸಿದುವು. ಅಷ್ಟರಲ್ಲಿ ಇಂಗ್ಲೀಷರ ಹಡಗುಗಳ ಗುಂಪು ಅಲ್ಲಿಗೆ ಬರುತ್ತಿದ್ದುದನ್ನು ಕಂಡು ತಲೆತಪ್ಪಿಸಿಕೊಂಡು ಓಡಿದುವು.

ಜನವರಿ ತಿಂಗಳಲ್ಲಿ ಇಂಗ್ಲೀಷ್ ಫ್ರೆಂಚ್ ವೈಮಾನಿಕರು ಜರ್ಮನಿ ದೇಶದ ಮೇಲಕ್ಕೆ ೩೧ ಆವೃತ್ತಿ ಹೋಗಿದ್ದು, ಕೈಗಾರಿಕೆಗಳು ಹೆಚ್ಚಾಗಿ ನಡೆಯುತ್ತಿರುವ ೧೫ ಜಿಲ್ಲೆಗಳಲ್ಲೂ, ೧೪ ಪಟ್ಟಣಗಳಮೇಲೂ, ಸಿಡಿಮದ್ದುಗಳನ್ನು ಹಾಕಿದರು. ಹಿಂದಣ ತಿಂಗಳಲ್ಲಿ ನಡೆಯಿಸಿದ ದಾಳಿಗಳಿಗಿಂತಲೂ ಆ ತಿಂಗಳಲ್ಲಿ ನಡೆಯಿಸಿದ ದಾಳಿಯು ಹೆಚ್ಚು ಎಂಬುದಾಗಿ ಜರ್ಮನರೇ ಪ್ರಕಟಿಸಿದ್ದಾರೆ.

ಉಕ್ರೇನಿಯನ್ನರೊಡನೆ ಸಂಧಿಯಾದ ಕಾರಣದಿಂದ ಜರ್ಮನಿ ಕೈಸರರ ಅಹಂಕಾರವು ಮೀರಿಹೋಗಿದೆ. "ವಿಜಯಶಾಲಿಯಾದ ಜರ್ಮನ್ ಸೈನ್ಯದಿಂದ ನಮ್ಮ ಶತ್ರುಗಳ ಒಗ್ಗಟ್ಟು ಭೇದಿಸಲ್ಪಟ್ಟಿತು. ಜರ್ಮನಿ ಖಡ್ಗವು ಸಂಧಿಯನ್ನು ಸಮಕೊಡಿಸುವ ಬಾಗಿಲನ್ನು ತೆರೆಯಿಸಿತು" ಎಂದು ತಮ್ಮ ಮಂತ್ರಿ ಮೊದಲಾದವರಿಗೆ ತಂತ್ರೀವಾರ್ತೆಯ ಮೂಲಕ ಅವರು ತಿಳಿಯಪಡಿಸಿರುವರಂತೆ.

ತಾ|| ೧೬ ನೆ ರಾತ್ರಿ ೯|| ಗಂಟೆ ಹೊತ್ತಿನಲ್ಲಿ ೬ ಶತ್ರುವಿಮಾನಗಳು ಲಂಡನ್ ಪಟ್ಟಣದಕಡೆಗೆ ಬಂದುವು. ಇಂಗ್ಲೀಷ್ ಕಾವಲುದಳದವರ ಏಟಿನಿಂದ ೫ ವಿಮಾನಗಳು ಹಿಂದಿರಿಗಿ ಓಡಿದುವು. ೧ ವಿಮಾನ ಮಾತ್ರ ಲಂಡನ್ನಿನಮೇಲೆ ಹೋಗಿ ನೈರುತಿ ಭಾಗದಲ್ಲಿ ೧ ಸಿಡಿಮದ್ದನ್ನು ಹಾಕಿತು. ಅದರಿಂದ ಒಂದು ಮನೆಯು ಧ್ವಂಸವಾಯಿತು. ಆ ಮನೆಯಲ್ಲಿ ೪ ಮಂದಿ ಸತ್ತರು. ಬಳಿಕ ಪೂರ್ವಭಾಗದಲ್ಲಿ ಅದೇ ವಿಮಾನವು ಇನ್ನು ಕೆಲ ಸಿಡಿಮದ್ದುಗಳನ್ನು ಹಾಕಿತು. ನಷ್ಟವೇನೂ ವಿಶೇಷವಾಗಿ ಆಗಿಲ್ಲ.

ಅಮೇರಿಕಾದ ಅಧ್ಯಕ್ಷರ ಲೋಕೋತ್ತರಭಾಷಣ.

ಜರ್ಮನಿ ಆಸ್ಟ್ರಿಯಾ ಮಂತ್ರಿಗಳು ಸಂಧಿವಿಷಯವಾಗಿ ಕೊಟ್ಟಿದ್ದ ಅಭಿಪ್ರಾಯಗಳನ್ನು ಅಮೇರಿಕಾದ ಅಧ್ಯಕ್ಷರೂ, ಇಂಗ್ಲೀಷ್ ಮಂತ್ರೀಶ್ವರರೂ ಕೂಡ ವಿಮರ್ಶೆಮಾಡಿ ತಮ್ಮತಮ್ಮ ಪಾರ್ಲಿಮೆಂಟುಗಳಲ್ಲಿ ಸಮರ್ಥವಾದ ಭಾಷಣಗಳನ್ನು ಮಾಡಿರುತ್ತಾರೆ. ಅಮೇರಿಕಾದ ಅಧ್ಯಕ್ಷರ ಭಾಷಣದ ಮುಖ್ಯಾಭಿಪ್ರಾಯವೇನೆಂದರೆ—"ಅಮೇರಿಕಾ-ಆಸ್ಟ್ರಿಯಾ ಪ್ರಭುತ್ವಗಳವರಿಂದ ಹಲವುವಿಷಯಗಳಲ್ಲಿ ಏಕಾಭಿಪ್ರಾಯವು ಸೂಚಿಸಲ್ಪಟ್ಟಿದೆ. ಆದರೆ ಜರ್ಮನರ ಅಭಿಪ್ರಾಯವು ಮಾತ್ರ ಆಧಾರರಹಿತವಾಗಿದೆ. ಅಲ್ಲದೆ ಅವರಿಬ್ಬರ ಉಪನ್ಯಾಸಗಳೇ ಒಂದಕ್ಕೊಂದು ಪ್ರತಿಕೂಲವಾಗಿವೆ. ಅಂತರ್ಜಾತೀಯ ಸಹಕಾರಭಾವವೆಂದರೂ ಅಂತರ್ಜಾತೀಯ ಸಂಘವೆಂದರೂ ಕೂಡ ಕೌಂಟ್ ಹರ್ಟ್ಲಿಂಗ್‌ರವರಿಗೆ ಸೇರದು. ಸಂಧಿವಿಷಯವನ್ನು ಆಯಾದೇಶದವರು ಪ್ರತ್ಯೇಕವಾಗಿ ವ್ಯವಸ್ಥೆಮಾಡಿಕೊಳ್ಳಬೇಕೆಂದು ಅವರು ಹೇಳುತ್ತಾರೆ. ಬಹಿರಂಗಸಭೆಯಲ್ಲಿ ಅದನ್ನು ಚರ್ಚಿಸಲಾಗದಂತೆ. ಸಮುದ್ರಸ್ವಾತಂತ್ರ್ಯವು ಅವರಿಗೆ ಬೇಕಂತೆ. ಆದರೆ ಅದನ್ನು ಅಂತರ್ಜಾತೀಯ ಸಂಘಮೂಲಕವಾಗಿ ಪಡೆಯಲಾಗದಂತೆ. ಪೋಲೆಂಡನ್ನು ಕುರಿತು ಆಸ್ಟ್ರಿಯಾದವರೊಡನೆಯೂ, ಬಾಲ್ಟಿಕ್ಕನ್ನು ಕುರಿತು ರಷ್ಯಾದವರೊಡನೆಯೂ ಮಾತ್ರವೇ ಆಲೋಚಿಸಬೇಕಂತೆ. ಬಾಲ್ಕನ್ ವಿಷಯವನ್ನು ತುರ್ಕಿ ಆಸ್ಟ್ರಿಯಾದವರಿಗೂ, ತುರ್ಕಿಗೆ ಸಂಬಂಧಿಸಿದ ಇತರ ವಿಷಯಗಳನ್ನೆಲ್ಲಾ ಅವರ ಪಾಲಿಗೂ ಬಿಟ್ಟುಬಿಡಬೇಕಂತೆ. ಯುದ್ಧ ಮುಗಿದಮೇಲೆ ಸೇನೆಯನ್ನು ತಗ್ಗಿಸುವುದಂತೆ. ಜರ್ಮನ್ ಅಧಿನಿವೇಶನಗಳನ್ನೆಲ್ಲಾ ಮರಳಿ ಅವರಿಗೆ ಕೊಟ್ಟುಬಿಡಬೇಕಂತೆ. ಹೀಗೆಲ್ಲಾ ಆದರೆ ಬಳಿಕ ಅಧಿಕಾರ ಸಮತ್ವವನ್ನು ಕಾಪಾಡುವುದಕ್ಕಾಗಿ ಜಾತೀಯಸಂಘವನ್ನಂಗೀಕರಿಸುತ್ತೇವೆಂದು ಅವರು ಹೇಳುತ್ತಾರೆ. ಇದಕ್ಕೆ ನಾವು ಒಪ್ಪುವುದಿಲ್ಲ. ಸಂಧಿ ಕುದುರುವುದೂ ಇಲ್ಲ. ನ್ಯಾಯ ಸ್ವಾತಂತ್ರ್ಯ ಮೂಲತತ್ತ್ವಗಳನ್ನಾಧಾರವಾಡಿಕೊಂಡಿರುವ ಅಂತರ್ಜಾತೀಯ ನಿಯಮಕ್ಕಾಗಿ ನಾವು ಪ್ರಯತ್ನಿಸುತ್ತೇವೆಯೇಹೊರತು ಸ್ವಲ್ಪ ವಿಷಯಗಳಿಂದಲೇ ತೃಪ್ತಿಗೊಳ್ಳುವವರಲ್ಲ. ಸಂಧಿಸಮಸ್ಯೆಯು ಪ್ರಪಂಚಕ್ಕೆಲ್ಲಾ ಸಂಬಂಧಿಸಿದುದು. ಸ್ವಾರ್ಥಪರತ್ವವೂ ಮತ್ಸರವೂ ಇಲ್ಲದೆ ನ್ಯಾಯಬುದ್ಧಿಯಿಂದ ಆಯಾದೇಶಗಳಿಗೆ ಸಂಬಂಧಿಸಿದ ಪ್ರಜೆಗಳ ಕೋರಿಕೆಗಳನ್ನೂ ಸಹಜಸಂಬಂಧಗಳನ್ನೂ ಜಾತಿವಾಂಛೆಗಳನ್ನೂ ಹಿಡಿದು ಆಲೋಚಿಸದೆ ಇದ್ದರೆ ಶಾಶ್ವತಸಂಧಿಯು ಜರುಗುವುದೇ ಇಲ್ಲ. ವಿಷಯಗಳನ್ನು ಪ್ರತ್ಯೇಕವಾಗಿ ಚರ್ಚಿಸಲು ಅವಕಾಶವಿಲ್ಲ. ಏಕೆಂದರೆ ಈಗಣ ಸಂಧಿಯು ಮಾನವಲೋಕಕ್ಕೆಲ್ಲಾ ಸೇರಿದುದಾಗಿದೆ. ಸೈನಿಕಬಲಾಧಾರದಿಂದ ಯಾವುದು ನಡೆದರೂ ಅದು ನಡೆಯುವಂತೆಯೇ ಸರಿ. ವಿಜ್ಞಾಪನವನ್ನು ಪಡೆದಿರುವ ಪ್ರಪಂಚಾಭ್ಯಾಸ್ಥಾನದ ಮುಂದೆ ನಿಂತು ನಾನು ಮಾತನಾಡುತ್ತಿದ್ದೇನೆಂಬ ಭಾವವು ಕೌಂಟ್ ಹಾರ್ಟ್‌ಲಿಂಗ್‌ರವರಿಗೆ ಉಂಟಾಗಲಿಲ್ಲವೆಂದು ಕಾಣುತ್ತದೆ. "ದೇಶಾಕ್ರಮಣವು ಕೂಡದು, ಅರ್ಥದಂಡ[illegible] ಕೂಡದು, ನಷ್ಟಪರಿಹಾರವನ್ನು ಕೇಳಕೂಡದು. ಆಯಾದೇಶ ಪ್ರಜೆಗಳನ್ನು [illegible] ಮಾರಕೊಡದು" ಎಂಬುದಾಗಿ ಜರ್ಮನ್ ರಾಜ್ಯಾಂಗಸಭೆಯವರು ತಾ|| ೧೯-೭-೧೭ರಲ್ಲಿ ಮಾಡಿದ ತೀರ್ಮಾನವನ್ನು ಹಾರ್ಟ್‌ಲಿಂಗ್‌ರವರು ಮರೆತುಬಿಟ್ಟರೋ? ಅಥವಾ ಮರೆಮಾಡಿರುವರೋ ತಿಳಿಯಲಿಲ್ಲ. ತಾವು ಮೊದಲು ನಿರ್ಧಾರಮಾಡಿದ ಮುಖ್ಯ ವಿಷಯವನ್ನೇ ರಾಜನೀತಿಜ್ಞರು ಮರೆತುಬಿಟ್ಟರೆ ತಮಗೆ ತಾವೇ ಕೇಡನ್ನು ತಂದುಕೊಳ್ಳುವರು. ಪ್ರತಿಯೊಂದು ಸಂಧಿನಿಬಂಧನೆಯನ್ನೂ ಯುದ್ಧಕ್ಕೆ ಸಂಬಂಧಿಸಿದ ಎಲ್ಲದೇಶಗಳವರೂ ಕೂಡಿಯೇ ಆಲೋಚಿಸಿ ನಿರ್ಧರಿಸಬೇಕೇಹೊರತು ಬೇರೆ ಮಾರ್ಗವಿಲ್ಲ. ಯೂರೋಪುದೇಶವಿಷಯದಲ್ಲಿ ಅಮೇರಿಕಾಸಂಯುಕ್ತರಾಷ್ಟ್ರದವರು ಯಾವ ಅಧಿಕಾರಸ್ಥಾಪನೆಗೂ ಅಪೇಕ್ಷಿಸುವವರಲ್ಲ. ಅಲ್ಲಿಯ ಪ್ರಜೆಗಳ ದುರ್ಬಲಸ್ಥಿತಿಯೇ ತಮ್ಮ ಅಧಿಕಾರವ್ಯಾಪನೆಗೆ ತಕ್ಕ ಸಂಧಿಯೆಂದು ಯೋಚಿಸತಕ್ಕವರಲ್ಲ. ಅವರು ಇದುವರೆಗೆ ಮಾಡುತ್ತ ಬಂದ ಸೂಚನೆಗಳಲ್ಲಿ ಲೋಪವೇನಾದರೂ ಇದೆಯೆ ಎಂಬುದನ್ನು ಮಾತ್ರ ತಿಳಿಯಲು ಅವರು ಕೋರುತ್ತಾರೆ. ಜರ್ಮನ್ ಯುದ್ಧಾಭಿನಿವಿಷ್ಟರ ದೌರ್ಜನ್ಯದಿಂದ ಬಾಧಿತರಾದ ಪ್ರಜೆಗಳ ದುಸ್ಸ್ಥಿತಿಯನ್ನು ನೋಡಿ ಅದರ ನಿವಾರಣೆಗೆ ಸಾಧಕವೆಂದು ತೋರಿದ ಸೂಚನೆಗಳನ್ನು ಅವರು ಮಾಡಿದರು. ಅದಕ್ಕಾಗಿಯೇ ಅವರು ಯುದ್ಧಕ್ಕೂ ನಿಂತರು. ನಾಗರಕತಾ ಸಂರಕ್ಷಣೆಗಾಗಿ ಪ್ರಯತ್ನಿಸಿದವರಿಗೆಲ್ಲರಿಗೂ ಸಂಧಿನಿರ್ಧಾರಣ ವಿಷಯದಲ್ಲಿ ಸಮಾನವಾದ ಬಾಧ್ಯತೆಯು ಇದ್ದೇ ಇರುವುದು.

ಶಾಶ್ವತಸಂಧಿಯುಂಟಾಗಬೇಕಾದರೆ ದೃಢವಾದ ನಿಬಂಧನೆಗಳೇರ್ಪಡಬೇಕು. ಪ್ರಜೆಗಳನ್ನೂ ರಾಷ್ಟ್ರಗಳನ್ನೂ ಒಂದು ಪ್ರಭುತ್ವದಿಂದ ಮತ್ತೊಂದು ಪ್ರಭುತ್ವಕ್ಕೆ ವರ್ಗಮಾಡಕೂಡದು. ಆ ಆ ದೇಶದ ಪ್ರಜೆಗಳನ್ನು ಅಡವಿಟ್ಟ ನಗಗಳಂತೆ ಭಾವಿಸಲಾಗದು. ಆಯಾ ರಾಷ್ಟ್ರಪಾಲಕರನ್ನು ಸಂತೃಪ್ತಿಗೊಳಿಸುವುದಕ್ಕಲ್ಲದೆ ಆಯಾ ರಾಷ್ಟ್ರನಿವಾಸಿಗಳ ಸೌಕರ್ಯಾರ್ಥವಾಗಿ ಸಂಧಿ ಜರುಗಬೇಕಾಗಿದೆ. ಮರಳಿ ಶಾಂತಿಗೆ ಭಂಗವನ್ನು ತರುವಂಥ ವೈರಲೇಶವುಂಟಾಗದಂತೆ ಸಂಧಿಯಾಗಬೇಕಾಗಿದೆ. ಅಂಥ ಸಂಧಿ ಜರುಗುವವರೆಗೂ ಯುದ್ಧವನ್ನು ನಡೆಯಿಸಬೇಕಾದುದೇ ಕರ್ತವ್ಯವು. ನಮಗೆ ತಿಳಿದಮಟ್ಟಿಗೆ ಈ ಮೇಲೆ ಕಂಡ ತತ್ತ್ವಗಳನ್ನು ಯುದ್ಧಾಭಿನಿವೇಶಸಂಪನ್ನರೂ ದೇಶಾಕ್ರಮಣಕುತುಕರೂ ಆದ ಜರ್ಮನರ ಹೊರತು ಇತರರೆಲ್ಲರೂ ಅಂಗೀಕರಿಸಿಯೇ ಇರುತ್ತಾರೆ. ಸಕಲ ಪ್ರಪಂಚವಾಸಿಗಳಿಗೂ ಯಾವುದು ನ್ಯಾಯವೆಂದು ತೋರುವುದೋ ಅದನ್ನು ಸಾಗದಂತೆ ಮಾಡುವುದಕ್ಕಾಗಿಯೇ ಜರ್ಮನರು ಲಕ್ಷಗಟ್ಟಲೆಯ ಪ್ರಜೆಗಳನ್ನು ರಣರಂಗಕ್ಕಟ್ಟಿ ಬಲಿಯಿಕ್ಕುವುದಕ್ಕಿಷ್ಟಪಟ್ಟರೆ, ಅದಕ್ಕೆ ತಕ್ಕ ಶಿಕ್ಷೆಯನ್ನು ಪಡೆದೂ ಇರುವುದು ದುಷ್ಟಕಾಲಪರಿಪಾಕವಾಗಿರುವುದು. ನಾವು ದೊಡ್ಡ ಕಾರಣವಿಲ್ಲದೆ ಯುದ್ಧಕ್ಕೆ ದುಮುಕಿದವರಲ್ಲ. ಆ ತತ್ತ್ವವು ಸಫಲವಾದಲ್ಲದೆ ನಾವು ಹಿಂದಿರುಗುವವರಲ್ಲ. ನಮ್ಮ ಆಧಾರಗಳು ಸ್ವಲ್ಪಮಟ್ಟಿಗೆ ಸಮಾಕಲಿಸಲ್ಪಟ್ಟಿವೆ. ಸಂಪೂರ್ಣವಾಗಿ ಸಮಾಕೃತವಾಗುವವರೆಗೂ ನಾವು ನಿರೀಕ್ಷಿಸಿಕೊಂಡಿರುವವರಲ್ಲ. ಪೋಲೆಂಡ್‌ರಾಷ್ಟ್ರವೆಲ್ಲಾ ಇತರಾಕ್ರಮಣದಿಂದ ವಿಮುಕ್ತಿಗೊಂಡು ಸ್ವತಂತ್ರವಾಗಬೇಕು. ಬೆಲ್ಜಿಯಂ ರಾಷ್ಟ್ರವನ್ನು ಬಿಟ್ಟುಬಿಟ್ಟು ಅವರು ಇದುವರೆಗೆ ಹೊಂದಿರುವ ನಷ್ಟಗಳಿಗೆ ಪರಿಹಾರವನ್ನು ಕೊಡಬೇಕೆಂದು ಯೂರೋಪುದೇಶವೆಲ್ಲಾ ಇಷ್ಟಪಡುತ್ತದೆ. ಇದಲ್ಲದೆ ಜರ್ಮನಿ ಸಾಮ್ರಾಜ್ಯದಲ್ಲಿರುವ ಬೇರೆಬೇರೆ ರಾಷ್ಟ್ರಗಳ ಅಭಿಪ್ರಾಯಗಳನ್ನೂ ಕೂಡ ಗಮನಿಸಬೇಕಾಗಿದೆ." ಎಂದು ಮೊದಲಾಗಿ ವಿಲ್ಸನ್‌ರವರು ಅಪ್ಪಣೆಕೊಡಿಸಿ, ಕಡೆಗೆ—"ನಮ್ಮ ಸೈನ್ಯಗಳು ಬಹು ಶೀಘ್ರವಾಗಿ ರಣರಂಗಕ್ಕೆ ಹೋಗುತ್ತಿವೆ. ಸ್ವಾತಂತ್ರ್ಯರಕ್ಷಣಾರ್ಥವಾದ ಈಗಣ ಯುದ್ಧದಲ್ಲಿ ನಮ್ಮ ಸರ್ವ ಬಲವನ್ನೂ ವಿನಿಯೋಗಿಸುವವರಾಗಿದ್ದೇವೆ. ಅಂತರ್ಜಾತೀಯ ಸಂಬಂಧಗಳಲ್ಲಿ ನೂತನವಿಧಾನಗಳೇರ್ಪಡಬೇಕು. ಅಧರ್ಮ, ಸ್ವಾರ್ಥಪರತೆ ಮೊದಲಾದ ದುರ್ಗುಣಗಳಿಂದ ಅದನ್ನು ಸಂಸ್ಕರಿಸಬೇಕು. ಇದನ್ನು ಸಾಧಿಸುವುದಕ್ಕಾಗಿಯೇ ನಾವು ಉದ್ಯುಕ್ತರಾಗಿದ್ದೇವೆ. ಸಂಕಲ್ಪಸಿದ್ಧಿಯಾಗುವವರೆಗೂ ನಾವು ಹಿಮ್ಮೆಟ್ಟಲಾಗದು. ಈ ಮೇಲೆ ಕಂಡ ನನ್ನ ಮಾತುಗಳಲ್ಲಿ ಯಾವುದೊಂದೂ ಶತ್ರುಗಳನ್ನು ಬೆದರಿಸುವುದಕ್ಕಾಗಿ ಆಡಿದುದಲ್ಲ. ಅಮೇರಿಕಾದವರ ಮನೋಭಾವಗಳನ್ನು ಪ್ರಕಟಪಡಿಸಬೇಕೆಂಬುದೇ ನನ್ನಭಿಪ್ರಾಯವು. ಅಮೇರಿಕಾದವರು ಧರ್ಮಸ್ವಾತಂತ್ರ್ಯಪರಿಪಾಲನೆಗಳ ವಿಷಯದಲ್ಲಿ ವಾಕ್ಶೂರರಲ್ಲ; ಕಾರ್ಯಶೂರರೆಂಬುದನ್ನು ಪ್ರಪಂಚವೆಲ್ಲಾ ಅರಿಯಬೇಕೆಂಬುದಕ್ಕಾಗಿಯೇ ನಾನು ಹೀಗೆ ನುಡಿದಿರುತ್ತೇನೆ. ಅಮೇರಿಕಾಸಂಯುಕ್ತರಾಷ್ಟ್ರದವರ ಪ್ರಾಬಲ್ಯವು ಯಾವ ಜಾತೀಯರಿಗೇ ಆಗಲೀ ಯಾವ ರಾಷ್ಟ್ರಕ್ಕೇ ಆಗಲೀ ಪ್ರಮಾದಕಾರಕವಲ್ಲ. ಅಮೇರಿಕಾದವರು ತಮ್ಮ ಔನ್ನತ್ಯವನ್ನು ಅನ್ಯದೇಶಾಕ್ರಮಣ ಮೊದಲಾದ ಸ್ವಲಾಭಕ್ಕಾಗಿ ಯಾವಾಗಲೂ ಉಪಯೋಗಿಸುವವರಲ್ಲ. ಸ್ವಾತಂತ್ರ್ಯದಿಂದಲೇ ಅವರಿಗೆ ಅಧಿಕಾರಪ್ರಾಬಲ್ಯವು ಲಬ್ಧವಾಗಿದೆ, ಅಂಥ ಸ್ವಾತಂತ್ರ್ಯದ ರಕ್ಷಣಾರ್ಥವಾಗಿಯೇ ಅವರು ತಮ್ಮ ಬಲವನ್ನು ವಿನಿಯೋಗಿಸುವರು" ಎಂದು ಹೇಳಿ ಮುಗಿಸಿದರು.

ಈ ಲೋಕೋತ್ತರವಾದ ಭಾಷಣದಲ್ಲಿ ಅಮೇರಿಕನ್ನರ ಸತ್ಯನ್ಯಾಯಧರ್ಮಸ್ವಾತಂತ್ರ್ಯಪ್ರಿಯತೆಯೂ ನಿಸ್ಪೃಹತೆಯೂ ತಾಂಡವವಾಡುತ್ತ, ಅದು ಲೋಕವನ್ನೆಲ್ಲಾ ತಲೆದೂಗುವಂತೆ ಮಾಡಿರುತ್ತದೆ. ಆದರೆ ಜರ್ಮನರಿಗೆ ಮಾತ್ರ ಪ್ರತಿಯೊಂದು ವಾಕ್ಯವೂ ಒಂದೊಂದು ಅಲಗಿನಂತೆ ಇರುವುವು. ಧರ್ಮನ್ಯಾಯಗಳೇ ಪರಿಣಾಮದಲ್ಲಿ ಜಯಿಸುವುವೆಂಬುದು ಇದುವರೆಗಣ ಜಗಚ್ಚರಿತ್ರದಿಂದ ಗೊತ್ತಾಗುತ್ತಲಿದೆ. ಅದನ್ನು ಆದರಿಸಿಯೇ ಮಿತ್ರಮಂಡಲಿಯು ಯುದ್ಧಪ್ರವೃತ್ತವಾಗಿದೆ. ಅಧರ್ಮಕ್ಕೆ ಜಯವಾದರೆ ಧರ್ಮರೂಪನಾದ ಜಗದೀಶ್ವರನೇ ಸೋತಂತಲ್ಲವೆ? ಆದುಕಾರಣ ಧರ್ಮವು ಜಯಿಸಲಿ.

ಪತ್ರವ್ಯವಹಾರ.

ಶ್ರೀಮದ್ವೀರಶೈವ ಶಿವಯೋಗಮಂದಿರದ ಮಹಾಶಿವರಾತ್ರಿಯ ಸಮಾರಂಭವು.

ಮಹಾಶಿವರಾತ್ರಿಯದಿವಸ ಪದ್ಧತಿಯಂತೆ ಸಾಯಂಕಾಲಕ್ಕೆ ಪಾದಪೂಜೆ ರಾತ್ರಿ ಪುರಾಣ-ಕೀರ್ತನೆಗಳು ವ ೩೦ ದಿವಸ ಮುಂಜಾನೆ ಆಲೋಚನಾಸಭೆಯು, ಮಧ್ಯಾಹ್ನದ ೨ ಗಂಟೆಯಿಂದ ೫ ಗಂಟೆಯವರೆಗೆ ಬೇರೆ ಬೇರೆ ಸ್ಥಳಗಳಲ್ಲಿ ಸ್ತ್ರೀಯರ ಮತ್ತು ಪುರುಷರ ಧರ್ಮಗ್ರಂಥಗಳ ಪರೀಕ್ಷೆಯು ಮತ್ತು ಭಾಷಣಗಳು, ೫ ಗಂಟೆಯಿಂದ ೭ ಗಂಟೆಯವರೆಗೆ ರಥೋತ್ಸವವು, ೭ ಗಂಟೆಯಿಂದ ೯ ಗಂಟೆಯವರೆಗೆ ಶಿವಕೀರ್ತನ. ತಾ|| ೧ ಬೆಳಗ್ಗೆ ೭ ಗಂಟೆಯಿಂದ ೧೧ ಗಂಟೆಯವರೆಗೆ ಶ್ರೀ ಸಾಧಕರ ಮತ್ತು ವಟುಗಳ ಪರೀಕ್ಷೆಯು ಮತ್ತು ಉತ್ತಮ ಹೋರಿಗಳ ಮಾರಾಟವು, ಆಲೋಚನಾಸಭೆಯು, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಇನಾಮುಗಳು ಹಂಚಲ್ಪಡುವುವು. ಮಧ್ಯಾಹ್ನದಲ್ಲಿ ಭಾಷಣವೂ ಹೋರಿಗಳ ಮಾರಾಟವೂ, ರಾತ್ರಿ ೭ ರಿಂದ ೯ ರವರೆಗೆ ಕೀರ್ತನ ಪಾಠಸೋತ್ಸವಗಳೂ ನಡೆಯುವುವು.

ಆದ್ದರಿಂದ ಜನರಲ್ ಕಮಿಟಿಯ ಮೆಂಬರರೂ ಹಾಗೂ ಧರ್ಮಾಭಿಮಾನಿಗಳೂ ಆದ ತಾವು ತಮ್ಮ ಪ್ರಾಂತದ ಜನರೊಡನೆ ಇತರ ಕ್ಷೇತ್ರಯಾತ್ರೆಗಳಿಗೆ ಹೋಗುವಂತೆ ಸಕಲ ಸನ್ನಾಹದೊಡನೆ ಇಲ್ಲಿಗೆ ಕುಟುಂಬಸಹಿತವಾಗಿ ಬಂದು ಇಲ್ಲಿ ಜರುಗುವ ಪುಣ್ಯಕಾರ್ಯಗಳ ಫಲಭಾಗಿಗಳಾಗಿ ಶ್ರೀಗುರು ಚರಣಾಶೀರ್ವಾದಗಳನ್ನು ಪಡೆಯಬೇಕೆಂದು ಕೋರುತ್ತೇನೆ.

ಮಂದಿರವು ವಿಜಾಪುರ ಜಿಲ್ಲಾ ಬಾದಾಮಿ ಸ್ಟೇಶನ್‌ದಿಂದ ೯ ಮೈಲು ಅಂತರದಲ್ಲಿ ಇದೆ. ಬಾಡಿಗೆ ಟಾಂಗಾ ಹಾಗೂ ಬಂಡಿಗಳು ಸ್ಟೇಶನ್ ಮೇಲೆ ದೊರೆಯುವುವು.

ಶಿವಯೋಗಮಂದಿರ,
೧೫-೨-೧೯೧೮.

[illegible]

ಶ್ರೀಮಂತ ರಾ|| ಬ|| ಅಪ್ಪಾಸಾಹೇಬ ವಾರದ ಇವರ ೭ ನೆ ಪುಣ್ಯತಿಥಿಯು.

ಪ್ರತಿ ವರ್ಷದಂತೆ ಕೈ. ರಾ|| ಬ|| ಅಪ್ಪಾಸಾಹೇಬ ವಾರದ ಇವರ ೭ ನೆ ಪುಣ್ಯತಿಥಿಯ ಮಹೋತ್ಸವವು ಇವರ ಪುಣ್ಯಾಶ್ರಮೋದ್ಯಾನದಲ್ಲಿ ಪೌಷ ಬಹುಳ ೫-೬-೭ ಈ ಮೂರು ದಿನಗಳಲ್ಲಿ ಅತಿ ವಿಜೃಂಭಣೆಯಿಂದಲೂ ಶ್ರದ್ಧೆಯಿಂದಲೂ ನೆರವೇರಿಸಲ್ಪಟ್ಟಿತು. ಮೊದಲನೆ ಎರಡು ದಿವಸಗಳಲ್ಲಿ ವೀರ ಮಾಹೇಶ್ವರ ಸಂತರ್ಪಣೆಯೂ ದೀನಜನರಿಗೆ ಅನ್ನದಾನವೂ ಮಾಡಲ್ಪಟ್ಟು, ಸಾಯಂಕಾಲ ೫ ರಿಂದ ೭ ರವರೆಗೂ ತೋರಣ, ರಂಭಾಸ್ತಂಭ, ಮೊದಲಾದವುಗಳಿಂದ ಅತ್ಯಂತ ಸುಂದರವೆನಿಸಿದ ಲೋಹಮಯ ಸಭಾಮಂಟಪದಲ್ಲಿ ಪುರಾಣ, ಕೀರ್ತನೆ, ಭಜನೆಗಳು ಲವಲವಿಕೆಯಿಂದ ನಡಿಸಲ್ಪಟ್ಟವು. ತಾ|| ೩ ರವಿವಾರದ ಸಾಯಂಕಾಲ ೫ ಗಂಟೆಗೆ ಇಲ್ಲಿಯ ಲೋಕಪ್ರಿಯ ಸೆಶನ ಮತ್ತು ಡಿ|| ಜಡ್ಜ್ ಸಾಹೇಬ ಮಿ|| ದೀಕ್ಷಿತ ಇವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿದ್ದಿತು. ಸಭೆಗೆ ದೊಡ್ಡದೊಡ್ಡ ಸರ್ಕಾರಿ ಅಧಿಕಾರಿಗಳೂ, ನಾಮದಾರ ಸಾತೆ ಇವರೇ ಮೊದಲಾದ ವಕೀಲರೂ, ಪಂಡಿತರೂ, ಪುರಾಣಿಕರೂ, ದೊಡ್ಡದೊಡ್ಡ ವರ್ತಕರೇ ಮೊದಲಾದ ಪುರಪ್ರಮುಖರೂ ಸೇರಿದ್ದರು. ಪೂನಾದ ಸುಪ್ರಸಿದ್ಧ ಮಹಾರಾಷ್ಟ್ರಕವಿ, ಪ್ರೊಫೆಸರ್ ರಾ|| ಬ|| ಆಗಾಶೆ ಪೆನಶನರರು ಅಪ್ಪಾಸಾಹೇಬರ ಜೀವನಚರಿತ್ರದಲ್ಲಿಯ ಸಮತಾ, ದಾನವೃತ್ತಿ, ಪತ್ನೀವ್ರತ, ಧರ್ಮದಲ್ಲಿ ಉದಾರವಿಶ್ವಾಸ ಮೊದಲಾದ ಗುಣಗಳನ್ನು ಕುರಿತು ಮನಮುಟ್ಟುವಂತೆ ಭಾಷಣಮಾಡಿ ಕಡೆಗೆ ರಾ|| ಬ|| ಇವರನ್ನು ಒಂದೆರಡು ಗುಣಗಳಲ್ಲಿಯಾದರೂ ನಾವು ಅನುಕರಣಮಾಡುವುದು ಮಾನವತನಕ್ಕೆ ಸಾರ್ಥಕವೆಂದು ಹೇಳಿ, ಸಭೆಯಲ್ಲಿಟ್ಟಿದ್ದ ರಾ|| ಬ|| ರವರ ಛಾಯಾಚಿತ್ರದ ಕಂಠದಲ್ಲಿ ಮರಾಠಿ ಆರ್ಯಾ ಪದ್ಯಗಳನ್ನು ಕಮಲಮಾಲಿಕೆಯ ರೂಪದಿಂದ ಅರ್ಪಿಸಿದರು. ಬಳಿಕ ಪೂನಾದ ಬ್ಯಾರಿಸ್ಟರ ಗಾಡಗೀಳ ಇವರೂ ಮತ್ತು ಮೆ|| ಹಾಜೀಹುಜಂತ್‌ಬಾ ಇವರೂ ಸದ್ಯಃಯವರ ಸ್ವಭಾವವನ್ನು ಕುರಿತು ಹೃದಯಂಗಮವಾಗಿ ಉಪನ್ಯಸಿಸಿದರು. ಬಳಿಕ ಕುಸುಮಮಾಲಾ, ಗಂಧ, ಪನ್ನೀರು, ತಾಂಬೂಲ ಮೊದಲಾದವುಗಳಿಂದ ಸತ್ಕರಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಸಭಾಂಗಣದಿಂದ ಅಧ್ಯಕ್ಷರು ಹೊರಹೊರಟ ಕೂಡಲೇ ಮದ್ದಿನ ವಿನೋದವು ನಡೆಯಿತು.

"ಅಪ್ಪಾಸಾಹೇಬರ ಸ್ಮರಣಾರ್ಥವಾಗಿ ಇಲ್ಲಿ (ಸೋಲಾಪೂರದಲ್ಲಿ) ವ್ಯಾಪಾರೀ ಅಥವಾ ಶಹರ ಸಭಾ " ಸ್ಥಾಪಿಸಲ್ಪಡಬೇಕು " ಎಂಬುವ ವಿಷಯದಲ್ಲಿ ನೋಟೀಸುಗಳನ್ನು ರಾ|| ಪಟವರ್ಧನ ವಕೀಲ ಇವರು ಸಭೆಯಲ್ಲಿ ಹಂಚಿದರು.

ಕಾಳು ಕಡಿಯ ಜಂಗೀ ವ ಖಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
4 ಧಾರ್ವಾಡ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಶಕ್ತಮಟ್ಟು ಅಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳ ಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದ ಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾ ರೋಗಗಳಿಗೆ ೧೬-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
14 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿವೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲುವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅವಶ್ಯಕವುಳ್ಳವರು ಶೀಘ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
15 ಪಾಠಶಾಲಾ ಮಹಾಗಾಂವ್ ಜಿಲ್ಲಾ ಗುಲ್ಬರ್ಗ.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಸೆಪಟ್ಟವರು

ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!

(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ್ಯ (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಿತ್ರದತ್ತಾ, ಲುಕ್ಮಾನಿ ಇವೇ ಮೊದಲಾದ ಹಸ್ತಲಿಪಿ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ನಿದ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅಮೃತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೨ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೪ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ

ಸೂಚನೆ:—ಇದರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂದಿಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರೆಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತಪ್ಪಾ ಕಾಳಪ್ಪಾ ಲೇಂಗಡೆ,
3 ಹೊಸೂರ, ಪೋಸ್ಟ ಸಾಪೂರ, (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬಿಳೀ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಜಲ್ಲಿ ಅಂಚು ಇಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇದೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 11

ಇಮಿಟೇಷನ್ ಸಿಲ್ಕ್ ಗೋವರ್ ಜರ್ ಸೀರೆ 5.0.0
ಡೈಮಂಡ್ ಕೋಟ್ಟಿಪಿ ಸೀರೆ 5.0.0
ಬನಾರಸ್ ಸೀರೆ 5.8.0
ಬಾಣಾಮಣಿ ಸೀರೆ 3.8.0

ವಿಳಾಸ:-ವೈರಂ ಅಂಡ್ ಕೊ, ಇರುಳಪ್ಪನವೀದಿ, ಮದರಾಸು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಟುಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚಿ, ಜಡ್ಡು, ಗುದ್ದಪ್ಪನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊಂಬೇಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಏದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಬೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಲತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
49 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

೧೯೧೮ ನೆಯ ಇಸವಿ ಫೆಬ್ರವರಿ ತಾ|| ೨೪ ರಿಂದ ೧೯೧೮ ನೆಯ ಮಾರ್ಚ ತಾ|| ೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾಘ ಶು|| ಚತುರ್ದಶಿಯಿಂದ ಮಾಘ ಬ|| ಪಂಚಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಶಂ ತೇದಿ
24	ಭಾನು	ಚತುರ	42-54	ಆಶ್ಲೇಷ	38-55	13
25	¹ಸೋಮ	ಪೌರ್ಣ	47-14	ಮಘಾ	44-31	14
26	ಮಂಗಳ	ಪಾಡ್ಯ	52-24	ಪುಬ್ಬ	50-49	15
27	²ಬುಧ	ಬಿದಿಗೆ	57-54	ಉಥ	57-27	16
28	ಗುರು	ತದಿಗೆ	60	ಹಸ್ತ	60	17
1	³ಶುಕ್ರ	ಚೌತಿ	3-11	ಹಸ್ತ	3-58	18
2	ಶನಿ	ಪಂಚ	7-48	ಚಿತ್ತ	9-54	19

(1) ವ್ಯಾಸಪೂಜಾ, ಹುರುಳೀನರಸಿಂಹಸ್ವಾಮಿ ರಥ, ಮೇಳಿಗೆ ಮತ್ತು ಅರಗದಲ್ಲಿ ರಥ. (2) ಕಲೀಘಟ್ಟದ ಶ್ರೀನಿವಾಸಸ್ವಾಮಿ ರಥ. (3) ಸಂಕಷ್ಟಚತುರ್ಥಿ.

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತವಾಲಾಕುಲಂ | ಪ್ರೇಮಂಬೆಟಿ ಕೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

REGISTERED NO M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮಾರ್ಚಿ ತಾರೀಖು ೩ ನೆಯ ಭಾನುವಾರ. (ಸಂಚಿಕೆ ೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶರಣರ ಚರಿತ್ರೆಗಳು-ಷಟ್ಸ್ಥಲಾಚಾರ, ಕರಣಹಸುಗೆ, ಪಂಚೀಕ ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು

MADRAS
MAIL
WATCH
WITH 15
PRESENTS

ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರದಮುಖಿ 1, ಮುಖ ನೋಡಿಕೊಳ್ಳುವ-ದಂತದ ಕನ್ನಡಿ 1, ಸುವಾಸನೆ ಟೋಯಿಲೆಟ್ ಸೋಪ್ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಇವೆಲ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
13 3, ಇರುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹಂದಾಸಿ	೦—೪—೦
ವ್ರತಪಂಚಕ	೦—೩—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 13

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗವರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪ್ರಕಟಿಸಲ್ಪಟ್ಟ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉತ್ತಮೋತ್ತಮವಾದ ಆರ್ಯವೈದ್ಯದ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಸ್ಟಾರಾಫೀಸ್, ಮೈಸೂರ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ|| ಬ|| ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ.ಗಳನ್ನು ದಾನಮಾಡಿ ಯಾವಯಾವ ಮಹಾಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

6 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 21

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಕೇವಲ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ ಕೊಡಲಾಗುವದು ಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫ್ರೀ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬಾಗವಾಡಿ ಉತ್ತರಕಾನಡಾ ಜಿಲ್ಲಾ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮಾರ್ಚಿ ತಾ|| ೩ ನೆಯ ಭಾನುವಾರ.

ನಿಯಮನಿರ್ಮಾಣಸಭೆ, ಮತ್ತೂ ಪ್ರತ್ಯೇಕ ಪ್ರಾತಿನಿಧ್ಯತತ್ತ್ವ.

ಕಳೆದ ತಿಂಗಳು ತಾ|| ೨೧ ರಲ್ಲಿ ಕೂಡಿದ್ದ ಮೈಸೂರು ನಿಯಮನಿರ್ಮಾಣಸಭೆಯಲ್ಲಿ ಮ್ಯುನಿಸಿಪಲ್ ಮತ್ತೂ ಲೋಕಲ್ ಬೋರ್ಡುಗಳಿಗೆ ಸಂಬಂಧಪಟ್ಟ ವಿಧಿಯಲ್ಲಿ ಪ್ರತ್ಯೇಕಪ್ರಾತಿನಿಧ್ಯತತ್ತ್ವಸ್ವೀಕಾರವಾಗಬೇಕೆಂಬ ವಿಷಯದಲ್ಲಿ ಚರ್ಚೆಯು ದೀರ್ಘವಾಗಿ ನಡೆದಿತು. ಇದು ವಿಧಿಯಾಗಿ ಏರ್ಪಡುವುದಕ್ಕೆ ಮುಂಚೆಯೇ ಕೋಮುವಾರು ಪ್ರತಿನಿಧಿಗಳು ಮ್ಯುನಿಸಿಪಾಲಿಟಿ ಮೊದಲಾದುವುಗಳಲ್ಲಿ ಆರಿಸಲ್ಪಡುವಂತಾಗಬೇಕೆಂಬುದನ್ನು ಕುರಿತು ಕಳೆದ ಅಕ್ಟೋಬರ್ ತಿಂಗಳಲ್ಲೇ ಮ|| ಎಂ. ಬಸವಯ್ಯನವರು ಬರೆದುಕೊಂಡಿರುವ ವಿಜ್ಞಾಪನಪತ್ರಿಕೆಯನ್ನು ಆಲೋಚಿಸಬೇಕೆಂಬ ವಿಷಯವು ಮೊದಲು ಸಭೆಗೆ ಶ್ರುತಪಡಿಸಲ್ಪಟ್ಟಿತು. ಅದಕ್ಕೆ ಕಾಲಾತೀತವೆಂಬುದೇ ಮೊದಲಾದ ಕೆಲ ಬಾಹ್ಯಕಾರಣಗಳು ಹೇಳಲ್ಪಟ್ಟುದರಮೇಲೆ, ಹಾಗಾದರೆ ಆ ವಿಜ್ಞಾಪನಪತ್ರವನ್ನು ಶ್ರೀಮನ್ಮಹಾರಾಜರವರ ಅವಗಾಹನೆಗೆ ಕಳುಹಿಸಿಕೊಟ್ಟು ಅವರಭಿಪ್ರಾಯ ಬರುವವರೆಗೂ ಈ ಬಿಲ್ಲನ್ನು ವಿಧಿಯಾಗಿ ಮಾಡುವುದಕ್ಕೆ ಇನ್ನು ಸ್ವಲ್ಪಕಾಲದವರೆಗೆ ಅವಕಾಶಕೊಡಬೇಕೆಂದು ಮಿ|| ಕಲಾಮಿಯವರೂ, ರಾ|| ಬ|| ಚೆನ್ನಯ್ಯನವರೂ, ಮಿ|| ಚಾಂಡಿಯವರೂ ಸಹ ಅಭಿಪ್ರಾಯಪಟ್ಟರು. ಮ|| ಸಿ. ನರಸಿಂಹಯ್ಯನವರು ಕರಣಿಕ ಕೃಷ್ಣಮೂರ್ತಿರಾಯರೇ ಮೊದಲಾದ ಸಭಿಕರುಗಳು ಅದಕ್ಕೆ ಅವಕಾಶಕೊಡಲಾಗದೆಂದು ಪ್ರತಿಭಟಿಸಿದರು. ಕಡೆಗೆ ಕೌನ್ಸಿಲರ್ ಮಿ|| ಬಾನರ್ಜಿಯವರು ಒಂದು ದೀರ್ಘಭಾಷಣವನ್ನು ಮಾಡಿದರು. ಇದು ವಿಧಿಯಾಗಿ ಏರ್ಪಟ್ಟಿತು.

ಇದರ ಸಂಬಂಧಪಟ್ಟು ಆದ್ಯಂತವಾಗಿ ನಡೆದ ಸಂಗತಿಗಳನ್ನೆಲ್ಲಾ ಪರ್ಯಾಲೋಚಿಸಿದರೆ, ಸರ್ಕಾರದ ಪಕ್ಷವಾಗಿಯೂ ಪ್ರಜಾಪಕ್ಷವಾಗಿಯೂ ಇರುವ ಮುಂದಾದ ಜನವರ್ಗಕ್ಕೆ ಸೇರಿದ ಸಭಿಕರಾರಗೂ ಈ ಪ್ರತ್ಯೇಕ ಪ್ರಾತಿನಿಧ್ಯತತ್ತ್ವಕ್ಕೆ ಒಪ್ಪುವರಾಗಿಲ್ಲವೆಂದೂ, ಹಿಂದಾದ ಜನವರ್ಗದವರು ಮಾತ್ರ ಈ ಅನುಕೂಲ್ಯಪ್ರಾಪ್ತಿಗಾಗಿ ತಾಪತ್ರಯಪಡುತ್ತಿರುವರೆಂದೂ ಗೊತ್ತಾಗುವುದು. ಇದರಿಂದ ೨ ಪಕ್ಷವು ಸಿದ್ಧವಾದಂತಾಯಿತೇಹೊರತು ನ್ಯಾಯಾನ್ಯಾಯವಿಮರ್ಶನೆಗೆ ಹೆಚ್ಚು ಅನುವು ಕಲ್ಪಿಸಲ್ಪಟ್ಟಂತಾಗಲಿಲ್ಲ. ರಾಜಕೀಯ ಕಾರ್ಯನಿರ್ವಾಹದಲ್ಲಿ ವ್ಯಾಪಕತೆಯನ್ನು ಹೆಚ್ಚಾಗಿ ಸಂಪಾದಿಸಿಕೊಂಡಿರುವ ಜನರು ತಮಗಿರುವ ಹೆಚ್ಚುಪಾಲನ್ನು ಇತರರು ಎಲ್ಲಿ ಕಸುಕೊಂಡುಬಿಡುವರೋ ಎಂಬ ದಿಗಿಲಿನಿಂದ ಪ್ರತ್ಯೇಕಪ್ರಾತಿನಿಧ್ಯತತ್ತ್ವಕ್ಕೆ ಅವರುಗಳು ಅಡ್ಡಿಮಾಡುತ್ತಲಿರುವುದಾಗಿಯೇ ವಿನಾ ಮತ್ತೇನೂ ಕಾಣಲಿಲ್ಲ. ಪ್ರತ್ಯೇಕಪ್ರಾತಿನಿಧ್ಯತತ್ತ್ವವು ಅನುಸರಣೆಗೆ ಅಸಾಧ್ಯವಾದುದು, ಮತ್ತೂ ಕುಲ ಜಾತಿ ಮತಗಳ ಭಿನ್ನಭಾವಗಳ ವೃದ್ಧಿಗೆ ಅದು ಹೆಚ್ಚು ಅವಕಾಶ ಕೊಡುವುದು ಎಂಬ ಅವರ ವಾದಗಳೆಲ್ಲಾ ನೆಪಮಾತ್ರವಾದುವುಗಳು. ಯಾವ ವರ್ಗದವರು ತಕ್ಕ ಅರ್ಹತೆಯನ್ನು ಪಡೆದುಕೊಂಡು, ತಮಗೆ ಪ್ರತ್ಯೇಕಪ್ರಾತಿನಿಧ್ಯವನ್ನು ಕೋರುವವರಾಗಿ ಬರುತ್ತಾರೋ ಅಂಥವರ ಯೋಗ್ಯತಾಯೋಗ್ಯತೆಗಳನ್ನು ವಿಮರ್ಶಿಸಿ, ಅಂಥವರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಪ್ರಭುತ್ವದವರು [illegible] ಕಷ್ಟವೇನೂ ಇಲ್ಲ. ದೇಶದಲ್ಲಿರುವ ನೂರಾರು ಪಂಗಡಗಳೆಲ್ಲಾ ಅಂಥ ಪ್ರತ್ಯೇಕ ಪ್ರಾತಿನಿಧ್ಯಪ್ರಾಪ್ತಿಗೆ ಹಾತೊರೆಯುವ ಸ್ಥಿತಿಯಲ್ಲಿಲ್ಲವೆಂಬುದು ಗೊತ್ತೇ ಇದೆ. ಅರ್ಹತೆಯನ್ನು ಪಡೆದುಕೊಂಡು ಅಪೇಕ್ಷಿಸುತ್ತ ಬಂದಿರುವ ಜನವರ್ಗಕ್ಕೆ ನಿರಾಶೆಯನ್ನು ಮಾಡುತ್ತ ಬರುವುದು ವೈಷಮ್ಯವೃದ್ಧಿಗೆ ದಾರಿಮಾಡುವುದೇ ಹೊರತು, ಇಷ್ಟಪ್ರಾಪ್ತಿಮಾಡಿಕೊಡುವುದರಿಂದ ವಿರೋಧವೃದ್ಧಿಗವಕಾಶವಾಗುವುದಿಲ್ಲವೆಂಬುದನ್ನು ಸರ್ಕಾರದವರು ನಿಷ್ಪಕ್ಷಪಾತಮತಿಯಿಂದ ಗಮನಿಸುವವರಾಗಬೇಕು. ಇಂಡ್ಯಾದೇಶದಲ್ಲಿ ಉತ್ತರಹಿಂದೂಸ್ಥಾನದೊಳಗೆ ನಿಯಮನಿರ್ಮಾಣ ಸಭೆಮೊದಲಾದುವುಗಳಲ್ಲಿ ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯಾಧಿಕಾರವನ್ನು ಕೊಟ್ಟುದರಿಂದ ಉಭಯಜನವರ್ಗದಲ್ಲಿ ಉಂಟಾದ ಐಕ್ಯಾಭಿವೃದ್ಧಿಯೇ ಇದಕ್ಕೆ ದೃಷ್ಟಾಂತವಾಗಿದೆ.

ಪ್ರಕೃತದ ಸ್ಥಿತಿಯಲ್ಲಿ ಮುಂದಾದ ಜನವರ್ಗದ ಪ್ರಾಬಲ್ಯವೇ ಹೆಚ್ಚಾಗಿರುವ ರಾಜಕೀಯ ಸಭೆಗಳಲ್ಲಿ ಇತರರ ಪ್ರಾರ್ಥನೆಗಳಿಗೆಲ್ಲಾ ಇಂಥ ಅವಸ್ಥೆಯುಂಟಾಗುವುದೇನೂ ಆಶ್ಚರ್ಯವಲ್ಲ. ಇದರ ಕಾರಣವನ್ನು ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಸರ್ವ ಪ್ರಜಾರಂಜನೈಕ ಬದ್ಧಾದರರಾದ ಅವರ ಅಮಾತ್ಯಶ್ರೇಷ್ಠರೂ ಸಹ ಗಮನಿಸಿ, ಹಿಂದಾದ ಜನವರ್ಗದವರು ತಲೆಯೆತ್ತಿಕೊಳ್ಳುವುದಕ್ಕೆ ಮೊದಲನೇ ದ್ವಾರವಾಗಿರುವ ಈ ಪ್ರತ್ಯೇಕ ಪ್ರಾತಿನಿಧ್ಯತತ್ತ್ವಕ್ಕೆ ಅವಕಾಶವನ್ನುಂಟುಮಾಡಿಕೊಟ್ಟರೇನೆಯೇ ಸರ್ವಪ್ರಜೆಗಳನ್ನೂ ಏಳ್ಗೆಗೆ ತಂದು ದೇಶವನ್ನು ಸರ್ವಾಂಗಪುಷ್ಟಿಗೊಳಿಸಬೇಕೆಂಬ ಅವರ ಸತ್ಸಂಕಲ್ಪವು ಸಿದ್ಧಿಸಬಹುದಲ್ಲದೆ ಅನ್ಯಥಾ ಮಾಡುವ ಪ್ರೋತ್ಸಾಹಗಳೆಲ್ಲಾ ಸಂಪೂರ್ಣ ಫಲದಾಯಕಗಳಾಗಲಾರವು.

ಹಿಂದಾದ ಜನವರ್ಗದವರ ಅಭ್ಯುನ್ನತಿಸಾಧನೆಗಾಗಿ ಪ್ರಯತ್ನಪಟ್ಟು ಈ ಪ್ರತ್ಯೇಕಪ್ರಾತಿನಿಧ್ಯತತ್ತ್ವಸ್ಥಾಪನೆಗೆ ದೃಢಚಿತ್ತದಿಂದ ಕೆಲಸಮಾಡುತ್ತ, ಈ ವಿಷಯವನ್ನು ಶಾಸನಸಭೆಯ ಮುಂದಿಟ್ಟ ಮಹಾಶಯರೆಲ್ಲರೂ ಅಭಿನಂದನೀಯರಾಗಿರುವರು. ಯಾವ ಕಾರ್ಯದಲ್ಲೂ ಫಲಸಿದ್ಧಿಯು ತತ್ಕ್ಷಣದಲ್ಲೇ ಆಗುವುದು ಅಪೂರ್ವವು. ಒಂದೊಂದು ರಾಜಕೀಯಫಲಪ್ರಾಪ್ತಿಗಾಗಿ ನಮ್ಮ ಸಹೋದರರಾದ ಭಾರತೀಯಪ್ರಮುಖರು ೨-೩ ಪಟ್ಟಗಳಿಂದಲೂ ಒಂದೇ ಸಮನಾಗಿ ಸಾಹಸಮಾಡುತ್ತಲಿದ್ದರೂ, ಕೃತಾರ್ಥರಾಗಿರುವುದಿಲ್ಲ. ಯಾವ ಕಾರ್ಯದಲ್ಲೂ ಜಯಾಪಜಯಗಳು ಈಶ್ವರಾಧೀನಗಳಾಗಿರುತ್ತವೆ. ಪ್ರಯತ್ನವನ್ನು ಮಾಡುವುದು ಮಾತ್ರ ನಮ್ಮಧೀನವು. ಉನ್ನತವೂ ಧರ್ಮವೂ ಆದ ಆದರ್ಶವನ್ನು ಮುಂದಿಟ್ಟುಕೊಂಡು ಸ್ವಾರ್ಥಪರಿತ್ಯಾಗದಿಂದ ಎಷ್ಟು ಕಷ್ಟಗಳಿಗಾದರೂ ಎದೆಗೊಟ್ಟುಕೊಂಡು ವಿಘ್ನಗಳಿಗೆ ಹೆದರದೆ ಕಾರ್ಯಭಾರವನ್ನು ನಿರ್ವಹಿಸುವುದರಲ್ಲಿ ಉತ್ತಮಪುರುಷರಿಗೆ ಇರುವಷ್ಟು ಆನಂದವು ಮತ್ತಾವುದರಲ್ಲೂ ಇರಲಾರದು. ದುರ್ಬಲರ ಉದ್ಧಾರವು ಕರ್ತವ್ಯವೆಂಬ ಜ್ಞಾನವು ಒಂದಾನೊಂದು ಕಾಲಕ್ಕಾದರೂ ಪ್ರತಿಪಕ್ಷದವರಿಗೂ ಕೂಡ ಉಂಟಾಗದೆ ಇರಲಾರದು. ಹೀಗಿರುವಲ್ಲಿ ಸರ್ವಜನೋದ್ಧರಣ ಭಾರವನ್ನು ಹೊತ್ತಿರುವ ಪ್ರಭುತ್ವದವರಿಗೆ ಅದು ತೋರುವುದಿಲ್ಲವೆ? ಹಾಗಾಗುವವರೆಗೂ ಹಿಂದಾದ ಜನವರ್ಗದವರು ದೃಢಯತ್ನದಿಂದ ತಮ್ಮ ಇಷ್ಟಸಿದ್ಧಿಗಾಗಿ ಪ್ರಯತ್ನಗಳನ್ನು ಮತ್ತಷ್ಟು ದೃಢತರವಾಗಿ ಮಾಡುತ್ತ ಬರಬೇಕು.

ವರ್ಣಾಶ್ರಮವ್ಯವಸ್ಥೆ.

ಭರತಖಂಡದಲ್ಲಿರತಕ್ಕ ಜಾತಿ ಮತಗಳ ಪ್ರಯುಕ್ತಗಳಾದ ಭೇದಗಳು ಬಹಳ ಪ್ರಾಚೀನವಾದುವುಗಳು. ಇವುಗಳು ಮಧ್ಯೇಮಧ್ಯೆ ಎಷ್ಟೋ ಉಪಹತಿಗಳಿಗೊಳಗಾದರೂ ನಾಮಾವಶೇಷವಾಗದೆ ಉಳಿದಿವೆ. ಇನ್ನಾದರೂ ಅವಕ್ಕೆ ಅಳಿವಿಲ್ಲ. ಆದರೆ ವಿದೇಶೀಯರಂತೆ ಕೆಲ ಸ್ವದೇಶೀಯರೂ ಸಹ ಈ ಭೇದಗಳೆಲ್ಲಾ ಅಳಿದಲ್ಲದೆ ಈ ದೇಶದಲ್ಲಿ ಜಾತೀಯತೆಯಾಗಲೀ ರಾಜಕೀಯ ಸಾಂಪತ್ತಿಕಾಭಿವೃದ್ಧಿಗಳಾಗಲೀ ಉಂಟಾಗುವ ಸಂಭವವಿಲ್ಲವೆಂದು ನಿರ್ಧರಿಸಿಕೊಂಡಿದ್ದಾರೆ, ಮತ್ತೂ ಬಾಯ್ಬಿಟ್ಟು ನುಡಿಯುತ್ತಲೂ ಇದ್ದಾರೆ. ಆದರೆ ಕೈಗೂಡಲಾಗದ ಅಂಥ ಹವ್ಯಾಸಕ್ಕೆ ಬೀಳುವುದಕ್ಕಿಂತಲೂ ಪ್ರಯಾಗದಲ್ಲಿ ಕಳೆದ ತಿಂಗಳೊಳಗೆ ಕೂಡಿದ್ದ ಯಾವದ್ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರು ಹೇಳಿರುವ ಗಮನೀಯವಾದ ಅಭಿಪ್ರಾಯವನ್ನನುಸರಿಸಿ ಕಾರ್ಯಸಾಧನೆ ಮಾಡಲು ಭಾರತೀಯರೆಲ್ಲರೂ ತೊಡಗಿದರೆ ಅಪೇಕ್ಷಣೀಯವಾದ ದೇಶೀಯ ಹಿತಗಳೆಲ್ಲವೂ ನಿರುಪಾಧಿಕವಾಗಿ ಸಿದ್ಧಿಸುವುದರಲ್ಲಿ ಸಂಶಯವಿಲ್ಲ. ಅವರ ಅಭಿಪ್ರಾಯಗಳೇನೆಂದರೆ—"ನಮ್ಮ ಅಭಿವೃದ್ಧಿಯ ತೆರೆಗಳು ಪೂರ್ವಾಚಾರಗಳೆಂಬ ದಡಕ್ಕೆ ಅಪ್ಪಳಿಸುತ್ತಲಿರುವುದು ಸಹಜವೂ ಪ್ರಯೋಜಕವೂ ಆಗದೆ ಇಲ್ಲ. ವರ್ಣವ್ಯವಸ್ಥೆಯನ್ನು ತಿರಸ್ಕರಿಸುವುದು ಸರಿಯಲ್ಲ. ಯಾವುದೋ ಒಂದು ತೆರದ ವರ್ಣವ್ಯವಸ್ಥೆಯು ಪ್ರತಿ ದೇಶದಲ್ಲೂ ಪ್ರತಿಯೊಂದು ಯುಗದಲ್ಲೂ ಇದ್ದೇ ಇರುವುದು. ಹಾಗಿಲ್ಲದ ದೇಶವೇ ಇಲ್ಲ. ಇನ್ನು ಮುಂದಾದರೂ ಹಾಗೆ ಇದ್ದೇ ತೀರುವುದು. ಆದರೆ ಪ್ರಾಚೀನಕಾಲದಲ್ಲಿ ವರ್ಣವ್ಯವಸ್ಥೆಯು ಸಾಂಘಿಕಾಭಿವೃದ್ಧಿಗೆ ಸಾಧಕವಾಗಿದ್ದಿತು. ಈಗಲಾದರೂ ಅದು ಶಿಥಿಲವಾಗಿ ವಿಪರೀತವಾಗಿದೆ. ಪರಸ್ಪರ ವಿರೋಧಗಳಿಗೂ ಈರ್ಷ್ಯಾಸೂಯೆಗಳಿಗೂ ಕಾರಣವಾಗಿದೆ. ಈಗಿರತಕ್ಕ ವರ್ಣಾಶ್ರಮ ವಿಧಾನಗಳು ಪ್ರಾಚೀನಕಾಲದಲ್ಲಿದ್ದ ಅವುಗಳ ವಿಧಾನಕ್ಕೆ ಸಂಪೂರ್ಣ ಪ್ರತಿಕೂಲವಾಗಿವೆ. ಹಿಂದೂ ಮತವನ್ನು ನಿರ್ವಚಿಸುವುದಕ್ಕೆ ಈಗಣ ಸ್ಥಿತಿಯನ್ನು ಆಧಾರವನ್ನಾಗಿಟ್ಟುಕೊಳ್ಳಕೂಡದು. ಅದನ್ನಭಿವೃದ್ಧಿಗೊಳಿಸುವುದಕ್ಕೆ ಅವಕಾಶವಿಲ್ಲವೆಂದೂ ಕೂಡ ನಾವು ತಿಳಿದುಕೊಳ್ಳಲಾಗದು. ನಮ್ಮ ಮತದ ಮುಖ್ಯತತ್ತ್ವಗಳನ್ನು ಉಪನಿಷದನುಗುಣವಾಗಿ ಆಚರಣೆಗೆ ತಂದುಕೊಳ್ಳಬೇಕು. ಹಾಗಲ್ಲದಿದ್ದರೆ ನಾವು ನಮ್ಮ ಪೂರ್ವೋನ್ನತ್ಯವನ್ನು ಪಡೆಯಲಾರೆವು. ಆಚರಿಸಲಳವಲ್ಲದುದನ್ನು ಬೋಧಿಸಲಾಗದು. ಬೋಧಿಸಿದುದನ್ನೆಲ್ಲಾ ಸ್ವತಃ ಆಚರಿಸುತ್ತಲಿರಬೇಕು."

ಈ ಉಪದೇಶದಲ್ಲಿ ವರ್ಣಿತವಾಗಿರುವಂಥ ಸ್ಥಿತಿಯು ಸಕಲ ಮತದವರಲ್ಲಿಯೂ ಸಕಲ ವರ್ಣಗಳಲ್ಲಿಯೂ ಉಂಟಾದರೇನೆಯೇ ವರ್ಣಾಶ್ರಮವ್ಯವಸ್ಥೆಯನ್ನು ಕಂಡರೆ ದಿಗಿಲುಬೀಳುತ್ತಲಿರುವುದೆಲ್ಲಾ ತಪ್ಪಿ, ಪರಸ್ಪರ ಸೌಹಾರ್ದವು ದೇಶೀಯರಲ್ಲೆಲ್ಲಾ ಅಭಿವೃದ್ಧಿಹೊಂದೀತು. ಆದರೆ ಸ್ವಾರ್ಥೈಕಪರರ ಭೇರೀಡಮ್ಮಟೆಯ ಕೋಲಾಹಲದಲ್ಲಿ ಈ ಕಿನ್ನರಿಯ ಗಾನವು ಕೇಳುವುದೆಲ್ಲಿ ?

ಮತಾಚಾರ್ಯರಿಗೆ ರಾಜಕೀಯ ಪ್ರಸಕ್ತಿ.

ಕೋಲ್ಹಾಪುರದ ಶ್ರೀ ಶಂಕರಾಚಾರ್ಯ ಪೀಠವನ್ನು ಈಗ ಅಲಂಕರಿಸಿರುವ ಸ್ವಾಮಿಗಳು ಕೇವಲ ವೈದಿಕವಿದ್ಯೆಯಲ್ಲೇ ಅಲ್ಲದೆ ಪಾಶ್ಚಾತ್ಯ ವಿದ್ಯಾವೈದುಷ್ಯದಿಂದಲೂ ಮಂಡಿತರಾಗಿ ತನ್ಮೂಲಕ ಜಗತ್ಪ್ರಗತಿಸ್ವರೂಪವನ್ನು ಚೆನ್ನಾಗಿ ಅರಿತುಕೊಂಡಿರುವರೆಂಬ ಸಂಗತಿಯು ಅನೇಕರಿಗೆ ತಿಳಿದಿರಬಹುದು. ಇವರು ಪೂರ್ವಾಚಾರ್ಯರುಗಳಂತೆ ಕೇವಲ ವೇದಾಂತಬೋಧಾ ಸಮಯಾಚಾರ ಕಲಾಪಗಳಲ್ಲೇ ಪರಿತೃಪ್ತರಾಗಿರದೆ ಇತರ ಲೌಕಿಕವಿಷಯಗಳಲ್ಲೂ ಪ್ರವೃತ್ತರಾಗಿರುವರು. ಧೂಮಶಕಟಾದಿಗಳಲ್ಲಿ ಹತ್ತಿ ಮಾರ್ಗಕ್ರಮಣವನ್ನು ಮಾಡಬಾರದೆಂಬ ಕಟ್ಟುಪಾಡನ್ನೇನೂ ಇವರು ಇಟ್ಟುಕೊಂಡಿಲ್ಲ. ಪ್ರಯಾಗದಲ್ಲಿ ಕೂಡಿದ್ದ ಹಿಂದೂ ಮಹಾಸಭೆಗೆ ಇವರು ದಯಮಾಡಿಸಿದ್ದರು. ಅದೇ ಸಮಯದಲ್ಲಿ ಸ್ವರಾಜ್ಯಸಂಘಪಕ್ಷದಿಂದ ಕೂಡಿದ್ದ ಒಂದು ರಾಜಕೀಯ ಸಭೆಗೆ ಆಹೂತರಾಗಿ ಹೋಗಿದ್ದು, ಅದರಲ್ಲಿ ಅಧ್ಯಕ್ಷತೆಯನ್ನು ವಹಿಸಿ, ತಮ್ಮ ಕೆಲ ವಿಚಾರಗಳನ್ನು ವ್ಯಕ್ತಪಡಿಸಿದರು. ಅವರಲ್ಲಿ ಮುಖ್ಯವಾಗಿದ್ದಂಶಗಳನ್ನು ಇಲ್ಲಿ ಪ್ರಕಟಿಸಿರುತ್ತೇವೆ—"ರಾಜಕೀಯ ಮೊದಲಾದ ಯಾವ ಮಹಾಪ್ರಯತ್ನಕ್ಕಾದರೂ ಧರ್ಮವೇ ಮೂಲಬಲವಾಗಿರಬೇಕು. ದೇಶಾಭಿವೃದ್ಧಿಗೆ ರಾಜಕೀಯ ಸಾಂಘಿಕಾಭಿವೃದ್ಧಿಗಳೆರಡೂ ಒಟ್ಟಿಗೆ ಕೂಡಿ ಸಹಕರಿಸಬೇಕು. ಭರತಖಂಡದಲ್ಲಿ ಮತಜೀವನಕ್ಕೂ ಸಾಂಘಿಕಜೀವನಕ್ಕೂ ವಿಶೇಷ ಸಂಬಂಧವಿರುವುದು. ಆದುಕಾರಣ ಮಠಾಧಿಪತಿಗಳೆಲ್ಲರೂ ಕೂಡಿ ಸಾಂಘಿಕ ಜೀವನಕ್ಕೂ ರಾಜಕೀಯ ಜೀವನಕ್ಕೂ ಸಂಬಂಧವನ್ನೇರ್ಪಡಿಸಿ ಕೆಲಸಮಾಡುತ್ತ ಬರಬೇಕು. ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನೂ ಸ್ವದೇಶ ಪುನರುದ್ಧಾರಕ್ಕಾಗಿ ಪ್ರಯತ್ನಿಸಬೇಕಾಗಿರುವ ಈ ಕಾಲದಲ್ಲಿ ಪರಸ್ಪರ ವೈಷಮ್ಯ, ರಾಜಕೀಯ ವಿಭೇದ ಮೊದಲಾದುವುಗಳನ್ನಿಟ್ಟುಕೊಳ್ಳಬಾರದು. ಪ್ರಜಾಪ್ರಭುಗಳ ಮಧ್ಯದಲ್ಲಿ ಭಿನ್ನಾಭಿಪ್ರಾಯಗಳುಂಟಾದಾಗ ಮಠಾಧಿಪತಿಗಳು ಮಧ್ಯವರ್ತಿಯಾಗಿದ್ದುಕೊಂಡು ಅವರವರ ಅನ್ಯೋನ್ಯತೆಯನ್ನು ದೃಢಮೂಲಮಾಡಬೇಕು. ಯೂರೋಪುಖಂಡದಲ್ಲಿ ಅವಲಂಬನೀಯಗಳಾಗಿರುವ ಸಕ್ರಮವಿಧಾನಗಳಂಥ ವಿಧಾನಗಳನ್ನು ಭರತಖಂಡವು ಅನುಸರಿಸಲಾಗದು. ನಾವು ಭಾರತೀಯರು; ನಮಗೆ ಪ್ರತ್ಯೇಕ ಸಾಂಘಿಕವ್ಯವಸ್ಥೆ ಇದೆಯೆಂಬುದನ್ನು ಭಾರತ ಪ್ರಮುಖರು ಜ್ಞಪ್ತಿಯಲ್ಲಿಟ್ಟುಕೊಳ್ಳಬೇಕು. ಯೂರೋಪಿಯನ್ ಮಿಷನರಿಗಳಂತೆ ಭಾರತೀಯ ಮಠಾಧಿಪತಿಗಳೂ ಕೂಡ ಪ್ರಜೆಗಳಿಗೆ ರಾಜಕೀಯ ಜೀವನಾಭಿವೃದ್ಧಿಯನ್ನು ಹೆಚ್ಚಿಸಿ, ಸಾಂಘಿಕ ಪರಿಸ್ಥಿತಿಗಳನ್ನು ಸಂಸ್ಕರಿಸಿದರೆ ಇಲ್ಲಿ ರಾಜಕೀಯ ವಿಷಯಾಭಿವೃದ್ಧಿಯುಂಟಾಗುವುದು. ಪ್ರಭುತ್ವದವರು ಕೂಡ ಮತಸಾಂಘಿಕ ವಿಷಯಗಳಲ್ಲಿ ಮಠಾಧಿಪತಿಗಳ ಸಲಹೆಗಳನ್ನು ತೆಗೆದುಕೊಂಡು ತಮ್ಮ ರಾಜಕೀಯವಾದ ಏರ್ಪಾಟುಗಳನ್ನು ಮಾಡುವಂತಾಗಬೇಕು. ಸರ್ವಮತ ಸಮನ್ವಯವನ್ನು ಮಾಡಿ ಆರ್ಥಿಕ ರಾಜಕೀಯಾದಿ ವಿಷಯಾಭಿವೃದ್ಧಿಗೆ ಸಹಾಯಾಕರಿಸುವ ಮತವೇ ವಾಸ್ತವವಾದ ಮತವು. ಭೂಪಾಲಕರೆಲ್ಲಾ ಮತತತ್ತ್ವಜ್ಞಾನಸಂಪನ್ನರಾಗುತ್ತ ಬಂದರೆ ಲೋಕವೆಲ್ಲಾ ಸುಖಿಸುವುದು. ನವೀನ ಯುಗಪದ್ಧತಿಗಳನ್ನರಿಯದ ಮಠಾಧಿಪತಿಗಳು ತಂತಮ್ಮ ಭಾವನೆಗಳನ್ನು ಹೊರಗೆಡಹಲಾರದವರಾಗಿರುತ್ತಾರೆ. ರಾಜಕೀಯ ಸಂಬಂಧವನ್ನು ಹೊಂದಿದ ಮಠಾಧಿಪತಿಗಳು ತಮ್ಮ ಕರ್ತವ್ಯವನ್ನು ಘನತರವಾಗಿ ನೆರವೇರಿಸುವುದಕ್ಕೆ ಅವಕಾಶವುಳ್ಳವರಾಗುತ್ತಾರೆ. ಆಂಗ್ಲ ಪ್ರಭುತ್ವದವರಿಗೆ ಬಿಷಪ್ಪುಗಳೇ ಕೂಡಿರುವ ಒಂದು ಮತಸಂಬಂಧ ಶಾಖೆಯಿರುವಂತೆ ಹಿಂದೂ ಮತಶಾಖೆಯೂ ಅವರಿಗೆ ಸಹಾಯಕವಾಗಿದ್ದರೆ ಪರಿಪಾಲನ ಸೌಕರ್ಯವು ಚೆನ್ನಾಗಿ ಉಂಟಾಗುವುದು. ಮತಗುರುಗಳು ತಂತಮ್ಮ ಕರ್ತವ್ಯಗಳನ್ನು ಅರಿತುಕೊಂಡು ಸಾಮಾನ್ಯಜನರಿಗೆಲ್ಲಾ ಸಾಂಘಿಕ ಲೌಕಿಕ ವಿಷಯಾಭಿವೃದ್ಧಿಗಾಗಿ ಉಪದೇಶಿಸುವ ಕಾಲವು ಸನ್ನಿಹಿತವಾಗಿದೆ." ಇತ್ಯಾದಿ.

ತಮ್ಮ ಮುಖ್ಯವಾದ ಧರ್ಮರಕ್ಷಣ ಕಾರ್ಯಭಾರವನ್ನೇ ಸರಿಯಾಗಿ ನಿರ್ವರ್ತಿಸಲಾರದಿರುವ ಈಗಣ ಮಠಾಚಾರ್ಯವರ್ಗದವರು ಗಹನವಾದ ರಾಜಕೀಯ ವಿಷಯಗಳಲ್ಲೂ ಪ್ರವರ್ತಿಸಿ ಪಾಲ್ಯಪಾಲಕರೀರ್ವರಿಗೂ ಹಿತವನ್ನಾಚರಿಸುವರೆಂಬ ವಿಷಯವು ಆಕಾಶಕ್ಕೆ ಏಣಿಯನ್ನಿಡುವ ಪ್ರಯತ್ನದಂತೆಯೇ ಸರಿ. ಆದರೆ ಈ ಕರವೀರಪೀಠಾಧಿಪತಿಗಳಂತೆ ಪೌರ್ವಾತ್ಯ ಪಾಶ್ಚಾತ್ಯ ವಿದ್ಯಾವೈದುಷ್ಯಗಳೆರಡರಿಂದಲೂ ಶೋಭಿತರಾದ ಪೀಠಾಧಿಪತಿಗಳು ನಮ್ಮ ದೇಶದಲ್ಲಿ ಹೆಚ್ಚುವುದಾದರೆ ಯತ್ಕಿಂಚಿತ್ತಾದರೂ ಈ ರೀತಿಯು ಈಡೇರಬಹುದು. ಆದರೆ ಧರ್ಮರಕ್ಷಣ ದೀಕ್ಷಾಬದ್ಧರಾದ ಆ ಆಚಾರ್ಯರುಗಳು ದ್ವಿವಿಧಭಾರವನ್ನು ಹೊರುವುದಕ್ಕೆ ಕೈಚಾಚುವುದಕ್ಕಿಂತಲೂ ಕಾಲಸ್ಥಿತಿಯನ್ನನುಸರಿಸಿ, ಮತಜಾತಿ ಪ್ರಯುಕ್ತ ದ್ವೇಷಾಸೂಯೆಗಳ ಹುಟ್ಟನ್ನಡಗಿಸುವುದರಲೂ ವೈದಿಕಧರ್ಮರಕ್ಷಣ ಪ್ರಸರಣ ಕಾರ್ಯದಲ್ಲೂ ಸಮರ್ಥರಾಗಿದ್ದರೆ, ಅಷ್ಟೇ ಸಾಕಾಗಿರುತ್ತದೆ.

ಇದೇ ಸಭೆಗೆ ಗೋವರ್ಧನ ಪೀಠಾಧಿಪತಿಗಳೂ, ಶಾರದಾ ಪೀಠಾಧಿಪತಿಗಳೂ, ದೇರಾದೂನಿನ ಪ್ರಕಾಶಾನಂದ ಸ್ವಾಮಿಯವರೂ, ಕಾಶ್ಮೀರದ ಶಾಂತಿದೇವಸ್ವರೂಪ ಸ್ವಾಮಿಯವರೂ ಇನ್ನೂ ಅನೇಕ ಸ್ವಾಮಿಗಳೂ ಬಂದಿದ್ದರು. ಅವರಲ್ಲಿ ಕೆಲಕೆಲರು ಸಮಯೋಚಿತ ಭಾಷಣಗಳನ್ನು ಮಾಡಿದರು. ಶಾರದಾ ಪೀಠಾಧಿಪತಿಗಳು ತಮ್ಮ ಭಾಷಣದಲ್ಲಿ ಸ್ವರಾಜ್ಯವು ಭರತಖಂಡಕ್ಕೆ ಅತ್ಯವಶ್ಯಕವೆಂದು ಹೇಳುವಾಗ—ಭಾರತೀಯರಿಗೆ ಇದು ಪ್ರಾಚೀನ ಸಿದ್ಧವಾದುದೆಂಬುದನ್ನು ದೃಷ್ಟಾಂತೀಕರಿಸುವುದಕ್ಕೆ ಅಥರ್ವಣವೇದದ ಪೃಥ್ವೀಸೂಕ್ತದ "ಸಾಮ್ರಾಜ್ಯಂ ಭೌಜ್ಯಂ ಸ್ವಾರಾಜ್ಯಂ ವೈರಾಜ್ಯಂ ಪಾರಮೇಷ್ಠ್ಯಂ ರಾಜ್ಯಂ ಮಹಾರಾಜ್ಯಮಾಧಿಪತ್ಯಮಯಂ ಸಮಂತಪರ್ಯಾಯೀ ಸ್ಯಾತ್, ಸಾರ್ವಭೌಮಃ ಸಾರ್ವಾಯುಷ ಆಂತಾದಾಪರಾರ್ಧಾತ್ ಪೃಥಿವ್ಯೈ ಸಮುದ್ರಪರ್ಯಂತಾಯಾ ಏಕರಾಡಿತಿ" ಎಂಬ ವಚನವನ್ನುದಹರಿಸಿ, ಅದಕ್ಕೆ ಅರ್ಥವನ್ನು ವಿವರಿಸಿದರು. ಬಳಿಕ ಪ್ರಕಾಶಾನಂದ ಸ್ವಾಮಿಯವರು ಭಾಷಣಮಾಡುವಾಗ—ನಮಗೆ ಸ್ವರಾಜ್ಯವು ನೂತನವಲ್ಲ. ವೇದಾದಿ ಅನೇಕ ಗ್ರಂಥಗಳಲ್ಲಿ ಉದಾಹೃತವಾಗಿದೆ. ಆದರೆ ಪ್ರಜೆಗಳಲ್ಲಿ ಉಚ್ಚನೀಚಾದಿ ಭೇದಗಳು ಇರುವಷ್ಟು ಕಾಲವೂ, ಉತ್ತಮಾಧಮ ಜಾತಿಗಳೆಂಬ ಭೇದಗಳಿರುವವರೆಗೂ ನಮಗೆ ಸ್ವರಾಜ್ಯವು ಲಭಿಸುವುದಿಲ್ಲ. ಸಂಘದಲ್ಲಿರುವ ಸಕಲ ವರ್ಣಗಳವರೂ ಪರಸ್ಪರ ಸಮಾನರೆಂಬುದಾಗಿಯೂ, ಒಬ್ಬರನ್ನು ಕಂಡರೆ ಮತ್ತೊಬ್ಬರು ಅಸಹ್ಯಪಟ್ಟುಕೊಳ್ಳುವುದು ತಪ್ಪೆಂಬುದಾಗಿಯೂ, ದುರ್ಬಲರಿಗೆ ಪ್ರಬಲರು ಸಹಾಯಮಾಡುತ್ತ ಎಲ್ಲರಲ್ಲೂ ಸಮಾನಬುದ್ಧಿಯುಂಟಾಗುವಂತೆ ಮಾಡಿದರೇನೆಯೇ ದೇಶಹಿತವಾಗುವುದೆಂಬುದಾಗಿಯೂ ಉಪದೇಶಿಸಿದರು.

ಸ್ವರಾಜ್ಯಕ್ಕೆ ತಕ್ಕ ಸಾಧನೆಗಳು ನಮ್ಮಲ್ಲಿ ಮೊದಲು ಸಮಗ್ರವಾಗಬೇಕೆಂದು ವಿವೇಕಿಗಳೆಲ್ಲಾ ಹೀಗೆ ಹೇಳುತ್ತಿದ್ದರೂ ನಮ್ಮ ದೇಶದ ತೀಕ್ಷ್ಣವಾದಿಗಳ ಭಾಗಕ್ಕೆ ಸಾಧ್ಯಪ್ರಾಪ್ತಿಯನಂತರ ಸಾಧನ ಸಂಪಾದನವೇ ವಿಹಿತವಾಗಿ ತೋರುತ್ತಿರುವುದು.

ಯುದ್ಧವಾರ್ತೆಯು.

ರಷ್ಯಾ—ರಷ್ಯನರ ಅಂತಃಕಲಹವು ಇನ್ನೂ ತಪ್ಪಲಿಲ್ಲ. ಅವರ ದೌರ್ಬಲ್ಯವನ್ನು ನೋಡಿ ಜರ್ಮನರು ತಾವು ಹೇಳಿದ ಮಾತಿಗೆ ಅವರನ್ನೊಪ್ಪಿಕೊಳ್ಳುವಂತೆ ಮಾಡುತ್ತಿದ್ದಾರೆ. ಮತ್ತೊಂದುಕಡೆ ಕೋವೆಲ್ಲಿನಮೇಲೆ ಹಾಯ್ದು ಪೆಟ್ರೋಗ್ರೇಡಿನಕಡೆಗೆ ಸಾಗುತ್ತಿದ್ದಾರೆ. ಉಕ್ರೇನಿಯಾ ಪ್ರಾಂತದವರೊಡನೆ ಅವರು ಈ ಮೊದಲೇ ಸಂಧಿಮಾಡಿಕೊಂಡಿದ್ದರಷ್ಟೆ. ಬೋಲ್ಷಿವಿಕ್ಕರೂ ಕೂಡ ಸಂಧಿಮಾಡಿಕೊಂಡರೆಂಬ ಕಳೆದ ವಾರದಲ್ಲಿ ವಾರ್ತೆ ಬಂದಿದೆ. ರಿವೆಲ್ಲಿನಕಡೆಗೆ ಜರ್ಮನರ ನೌಕಾದಳವು ಸಾಗುತ್ತಿದೆಯೆಂಬ ವರ್ತಮಾನ ಬೇರೆ ಬಂದಿರುತ್ತದೆ. ರಷ್ಯನ್ ನೌಕಾದಳದಲ್ಲಿ ಸ್ವಲ್ಪವೂ ಸಾಮರ್ಥ್ಯವುಳಿದಿಲ್ಲ, ಅದು ಮಂಜಿನ ಗಡ್ಡೆಗಳ ಮಧ್ಯದಲ್ಲಿ ಸಿಕ್ಕಿಕೊಂಡೂ ಇದೆಯಂತೆ. ಪೆಟ್ರೋಗ್ರೇಡಿನಲ್ಲಿ ಸೈನಿಕ ಶಾಸನವು ಸಾರಲ್ಪಟ್ಟಿದೆ. ಜರ್ಮನ್ ಚಾರರು, ವಿಪ್ಲವಕಾರರು, ಪ್ರಭುತ್ವ ತಿರಸ್ಕಾರಕರು, ಆಹಾರವಸ್ತುಗಳನ್ನು ಅವಿತಿಕೊಳ್ಳುವವರು ಇವರುಗಳನ್ನೆಲ್ಲಾ ಸುಟ್ಟುಹಾಕಬೇಕೆಂದು ಪ್ರಕಟಿಸಿದ್ದಾರೆ. ರಷ್ಯಾ ವಿಷಯವಾಗಿ ಪರಸ್ಪರ ವಿರುದ್ಧವಾದ ಅನೇಕ ತಂತ್ರೀವಾರ್ತೆಗಳು ಕಳೆದವಾರ ಬಂದಿರುತ್ತವೆ. ಪಶ್ಚಿಮ ರಣಾಂಗಣದಲ್ಲಿ ವಿಶೇಷ ವಾರ್ತೆಗಳೇನೂ ಇಲ್ಲ.

ಪಾಲಸ್ತೈನಿನಲ್ಲಿ ಇಂಗ್ಲೀಷ್ ಸೈನಿಕರು ಜರೂಸಲೇಮಿಗೆ ಪೂರ್ವದಲ್ಲಿದ್ದ ಮುಖ್ಯವಾದ ಗುಡ್ಡಗಳನ್ನೆಲ್ಲಾ ಆಕ್ರಮಿಸಿದುದಲ್ಲದೆ ಜರೀಕೋ ಎಂಬ ಒಂದು ಪಟ್ಟಣವನ್ನೂ ವಶಪಡಿಸಿಕೊಂಡರು. ತುರ್ಕಿ ಸೈನ್ಯವು ತುಂಬಾ ಪರಾಜಯವನ್ನು ಹೊಂದಿ ಹಿಮ್ಮೆಟ್ಟಿಹೋಯಿತು. ಈಗ ನಮ್ಮವರ ಸೈನ್ಯಗಳು ಜೋರ್ಡನ್ ನದೀತೀರದವರೆಗೆ ಆಕ್ರಮಿಸಿದಂತಾಯಿತು. ಇದರಿಂದ ಇವರ ಸೈನ್ಯದ ಬಲಭಾಗದ ಕೊನೆಯು ಮೃತ್ಯುಸಮುದ್ರ (ಡೆಡ್‌ಸಿ) ಸಮೀಪಕ್ಕೂ, ಎಡಗಡೆಯ ಕೊನೆಯು ಮೆಡಿಟರೇನಿಯನ್ ಸಮುದ್ರದವರೆಗೂ ವ್ಯಾಪಿಸಿದಂತಾಯಿತು. ಈ ಕಾರಣದಿಂದ ಶತ್ರುಗಳು ಇನ್ನು ಮುಂದೆ ಪ್ರತಿಭಟಿಸಬೇಕಾದರೆ ಎರಡು ಪಕ್ಕಗಳಲ್ಲೂ ಬರುವುದಕ್ಕವಕಾಶವಿಲ್ಲದೆ ಮುಂಭಾಗದಲ್ಲಿ ಮಾತ್ರ ಬರಬೇಕಾಯಿತು. ಅಲ್ಲದೆ ಬಲಗಡೆಯಲ್ಲಿರುವ ಅರಬ್ಬಿ ಸೈನ್ಯದ ಸಂಬಂಧವು ಈ ನಮ್ಮ ಸೈನ್ಯಕ್ಕೆ ಕೂಡಲನುಕೂಲವೂ ಆಯಿತು. ಇದರಿಂದ ಜನರಲ್ ಅಲೆನ್ಬಿಯವರ ಸೈನ್ಯವು ಮುಂದೆ ದಮಾಸ್ಕಸ್ ಲೋಹಮಾರ್ಗವನ್ನು ಆಕ್ರಮಿಸಲು ಅನುಕೂಲ ಹೆಚ್ಚಿದಂತಾಯಿತು.

ರುಮೇನಿಯಾದವರ ಸಂಧಿವಿಷಯವು ಬುಖಾರೆಸ್ಟ್ ಪಟ್ಟಣದಲ್ಲಿ ಚರ್ಚಿಸಲ್ಪಡುತ್ತಿದೆ. ಬೆಸ್ಸರೇಬಿಯಾವನ್ನು ತಮಗೆ ಬಿಟ್ಟುಕೊಟ್ಟರೆ ಬಲ್ಗೇರಿಯನ್ನರಿಗೆ ದೋಬ್ರುಜಾವನ್ನು ಬಿಟ್ಟುಕೊಡಲು ರುಮೇನಿಯಾದವರಿಗೆ ಇಷ್ಟವಾಗಿದೆ. ಇಂಗ್ಲಂಡಿನಲ್ಲಿರುವ ರುಮೇನಿಯಾ ರಾಯಭಾರಿಯು ಅಲ್ಲಿಂದ ಸ್ವದೇಶಕ್ಕೆ ಪ್ರಯಾಣಮಾಡಿರುವನು. ಪೆಟ್ರೋಗ್ರೇಡಿನಲ್ಲಿರುವ ಜಪಾನ್ ರಾಯಭಾರಿಯು ಸ್ವದೇಶಕ್ಕೆ ಪ್ರಯಾಣಮಾಡಿರುವನು. ಆದರೆ ರಷ್ಯಾ ಜರ್ಮನಿ ದೇಶಕ್ಕೆ ಸಂಧಿ ಜರುಗಿಹೋದರೆ ಅದಕ್ಕೆ ತಕ್ಕ ಪ್ರತಿಕ್ರಿಯೆಮಾಡಲು ಜಪಾನರು ಯೋಚಿಸುವರು. ಅಲ್ಲಿಯ ಸ್ಥಿತಿಯು ಅಶಾಂತಿಮಯವಾದುದರಿಂದ ಇವರು ತಮ್ಮ ರಾಯಭಾರಿಯನ್ನು ಹಿಂದಕ್ಕೆ ಕರೆಯಿಸಿಕೊಂಡರೇ ಹೊರತು ಇವರವರ ಮೈತ್ರಿಯು ಕೆಟ್ಟುದರಿಂದಲ್ಲ. ರಷ್ಯಾದವರು ಪ್ರತ್ಯೇಕ ಸಂಧಿಮಾಡಿಕೊಂಡರೆ ನಾವು ಮಿತ್ರಮಂಡಲಿಯವರೊಡನೆ ಸಂಪೂರ್ಣವಾಗಿ ಏಕೀಭವಿಸಿರುವೆವೆಂದು ಜಪಾನ್ ವಿದೇಶಾಂಗ ಮಂತ್ರಿಯವರು ಹೇಳಿದ್ದಾರೆ.

ಒಳದೇಶದ ವೃತ್ತಾಂತಗಳು.

ಬಗ್ಗವಳ್ಳಿ ಗುರುರಾಯರ ಕೊಲೆಯ ವ್ಯಾಜ್ಯದಲ್ಲಿ ಚೀಫ್ ಕೋರ್ಟು ೩ ನೆ ಜಡ್ಜಿಯವರ ತೀರ್ಮಾನದಪ್ರಕಾರ ಚೆನ್ನಬಸವಯ್ಯ, ರಾಚಯ್ಯ ಎಂಬ ಅಪರಾಧಿಗಳಿಬ್ಬರಿಗೂ ಮರಣದಂಡನೆಯು ಸ್ಥಿರಗೊಳಿಸಲ್ಪಟ್ಟಿತು.

ಕಳೆದ ವಾರದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗೂ, ಡಿಸ್ಟ್ರಿಕ್ಟ್ ಕಾನ್ಫರೆನ್ಸೂ ಪರಸ್ಪರ ಸಹಾಯಕ ಸಂಘಗಳ ಕಾನ್ಫರೆನ್ಸೂ ಕೂಡ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಡಿ|| ಕಮೀಷನರವರ ಅಧ್ಯಕ್ಷತೆಯಲ್ಲಿ ನಡೆದುವು.

ನಂಜನಗೂಡಿನ ಗೌರ್ನಮೆಂಟ್ ಹೈಸ್ಕೂಲಿನ ವಾರ್ಷಿಕೋತ್ಸವವೂ, ಪ್ರದರ್ಶನವೂ ವಿದ್ಯಾಭ್ಯಾಸದ ಇ|| ಜನರಲ್‌ರವರಾದ ಮ|| ರಾಮಲಿಂಗರೆಡ್ಡಿ, ಎಂ. ಎ., ಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಈ ದಿವಸ ನೆರವೇರತಕ್ಕವಾಗಿವೆ.

ಚೀಫ್‌ಕಮಾಂಡೆಂಟರಾದ ಕರ್ನಲ್ ದೇಶರಾಜ ಅರಸಿನವರು ಉದ್ಯೋಗದಿಂದ ನಿವೃತ್ತರಾಗುವರೆಂದೂ, ಯುದ್ಧಭೂಮಿಗೆ ಹೋಗಿದ್ದು ಹಿಂದಿರುಗಿ ಬಂದಿರುವ ಮ|| ಚಾಮರಾಜ ಬಹದ್ದೂರ್‌ರವರು ಚೀಫ್‌ಕಮಾಂಡೆಂಟರಾಗಿ ನಿಯಮಿಸಲ್ಪಡುವರೆಂದೂ ವದಂತಿಯಿದೆ.

ರಾಜಧಾನಿ ಮ್ಯುನಿಸಿಪಾಲಿಟಿಯ ಆನರರಿ ಪ್ರೆಸಿಡೆಂಟ್ ಪದವಿಯನ್ನು ಡಿ|| ಬ|| ಶ್ರೀಕಂಠೇಶ್ವರಯ್ಯರ್‌ರವರು ಈ ತಿಂಗಳು ತಾ|| ೯ ರಲ್ಲಿ ವಹಿಸಿಕೊಳ್ಳುವವರಾಗಿದ್ದಾರೆಂದು ಕೇಳುತ್ತೇವೆ. ರಾ|| ಬ|| ಸುಬ್ಬಾರಾಯರವರೂ ಕೂಡ ಬಹುಶಃ ಆ ದಿನವೇ ಟ್ರಸ್ಟ್‌ಬೋರ್ಡು ಚೇರ್ಮನ್ ಪದವಿಯನ್ನೂ ವಹಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರು ಗುಂಡ್ಲುಪೇಟೆ ತಾ|| ಬಂಡಿಪುರಕ್ಕೆ ಮೃಗಯಾವಿಹಾರಕ್ಕಾಗಿ ದಯಮಾಡಿಸಿ ಒಂದು ದೊಡ್ಡ ಹುಲಿಗೆ ಗುರಿಕಟ್ಟಿ ಗುಂಡನ್ನು ಹೊಡೆದರು. ಅದು ಪೆಟ್ಟನ್ನು ತಿಂದೋಡಿಹೋಯಿತೆಂದು ಕೇಳುತ್ತೇವೆ. ಪ್ರಭುಗಳು ಅಲ್ಲಿಂದ ರಾಜಧಾನಿಗೆ ಹಿಂದಿರುಗಿ ಬಂದು ಗುರುವಾರ ಬೆಂಗಳೂರಿಗೆ ಪ್ರಯಾಣಮಾಡಿದರು. ಅಲ್ಲಿ ೩-೪ ವಾರಗಳವರೆಗಿರುವುದಾಗಿ ತಿಳಿಯಬರುತ್ತದೆ.

ತಿಪಟೂರಿನ ವರ್ತಕರಾದ ಮ|| ಸಿಂಗ್ರಿ ನಂಜಪ್ಪನವರು ವಿದ್ಯಾಭಿಮಾನದಿಂದ ತಿಪ್ಟೂರಿನಲ್ಲಿ ಕಟ್ಟಿಸಿರುವ ಆರ್ಯಬಾಲಿಕಾ ಪಾಠಶಾಲೆಯ ಆರಂಭೋತ್ಸವವು ನೆನ್ನೆಯದಿನ ಮಧ್ಯಾಹ್ನ ೪ ಗಂಟೆಯಲ್ಲಿ ದಿವಾನ್ ಸರ್ ವಿಶ್ವೇಶ್ವರಯ್ಯ, ಕೆ.ಸಿ.ಐ.ಇ., ಯವರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಮ|| ಸಿಂಗ್ರಿ ನಂಜಪ್ಪನವರು ಈ ಮಹೋತ್ಸವಕ್ಕಾಗಿ ವಿಶೇಷವಾದೇರ್ಪಾಟನ್ನು ಮಾಡಿದ್ದಾಗಿ ಕೇಳುತ್ತೇವೆ.

ಫೆಬ್ರವರಿ ತಾ|| ೯ ಕ್ಕೆ ಕಡೆಯಾದ ೧ ವಾರಕಾಲದಲ್ಲಿ ಮೈಸೂರು ದೇಶದ ಲೋಹಮಾರ್ಗಗಳೊಳಗೆ ಬ್ರಾಡ್‌ಗೇಜಿನಲ್ಲಿ ೩೩೩೩೩ ರೂ. ಮೀಟರ್‌ಗೇಜಿನಲ್ಲಿ ೭೩೪೭೫ ರೂ., ಕೋಲಾರ್ ಡಿಸ್ಟ್ರಿಕ್ಟ್ ರೈಲ್ವೆಯಲ್ಲಿ ೨೭೦೯ ರೂ., ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್‌ರೈಲ್ವೆಯಲ್ಲಿ ೨೮೯೦ ರೂ., ತರೀಕೆರೆ ಎಡೆಹಳ್ಳಿ ಟ್ರಾಮ್ವೆಯಲ್ಲಿ ೩೩೮ ರೂ., ಮೈಸೂರು ಅರಸೀಕೆರೆ ರೈಲ್ವೆಯಲ್ಲಿ ೪೮೫೧ ರೂ. ಉತ್ಪನ್ನವಾಗಿವೆ.

ವಿದ್ಯೆಯಲ್ಲಿ ಹಿಂದುಳಿದಿರುವ ಜನರ ಪ್ರೋತ್ಸಾಹಕ್ಕಾಗಿ ಸರ್ಕಾರದವರಿಂದ ಕೊಡಲ್ಪಟ್ಟಿರುವ ೧ ಲಕ್ಷ ರೂ. ಗಳಲ್ಲಿ ಒಟ್ಟು ೫೯ ಪ್ರೌಢಶಾಲಾ ವೇತನಗಳಲ್ಲಿ ೧೪ ಮಹಮ್ಮದೀಯರಿಗೂ, ೧೦ ಲಿಂಗಾಯತರಿಗೂ, ಇತರ ವೇತನಗಳಲ್ಲಿ ೧೬೭ ಮಹಮ್ಮದೀಯರಿಗೂ, ೯೭ ಲಿಂಗಾಯತರಿಗೂ, ೧೨೭ ಒಕ್ಕಲಿಗರಿಗೂ ಕೊಡಲ್ಪಟ್ಟಿರುವುವೆಂದು ಪಿ|| ಬ|| ಚಕ್ರವರ್ತಿಯವರು ನಿಯಮನಿರ್ಮಾಣ ಸಭೆಯಲ್ಲಿ ಹೇಳಿರುವರು.

ದಿವಾನ್ ಸರ್ ವಿಶ್ವೇಶ್ವರಯ್ಯನವರು ಕಳೆದ ಸೋಮವಾರದ ದಿವಸ ತುಮಕೂರು ಡಿಸ್ಟ್ರಿಕ್ಟ್ ಸಂಚಾರಕ್ಕಾಗಿ ಬೆಂಗಳೂರಿನಿಂದ ಪ್ರಯಾಣಮಾಡಿದರು. ಈ ತಿಂಗಳು ತಾ|| ೮ ರವರೆಗೂ ತಮ್ಮ ಸಂಚಾರವನ್ನು ಮುಗಿಸಿಕೊಂಡು ತಾ|| ೯ ಕ್ಕೆ ಬೆಂಗಳೂರಿಗೆ ಬರುವವರಾಗಿದ್ದಾರೆ. ಜನಮೆಚ್ಚುಗೆಗಲ್ಲದೆ ಮನಮೆಚ್ಚುಗೆಗಾಗಿ ಕೆಲಸಮಾಡತಕ್ಕವರೆಂದರೆ ನಮ್ಮ ದಿವಾನರೇ ಸರಿ. ಇಂಥವರು ನಾಲ್ಕಾರುಮಂದಿಗಳಾದರೂ ನಮ್ಮ ಸಂಸ್ಥಾನದ ಉಚ್ಚ ಪದವಿಗಳಲ್ಲಿದ್ದರೆ ಶ್ರೀಮನ್ಮಹಾರಾಜರ ಸತ್ಸಂಕಲ್ಪಗಳು ಇನ್ನೂ ಅತಿಶಯ ಫಲಪ್ರದವಾದಾವು.

ಬೆಂಗಳೂರು ಡಿಸ್ಟ್ರಿಕ್ಟ್ ಗ್ರಾಮಗಳಿಗೆ ಸೇರಿದ ನಾಡು ಹೆಣ್ಣು ಕುದುರೆಗಳಿಗೆ ಹತ್ತಿಸುವುದಕ್ಕೆ ಯೋಗ್ಯವಾದ ಒಂದು ಗಂಡುಕುದುರೆಯನ್ನು ಬೆಂಗಳೂರು ಹಳೆ ಸವಾರ್‌ಲೈನಿನಲ್ಲಿಯೂ, ಮೈಸೂರು ಡಿಸ್ಟ್ರಿಕ್ಟ್ ಗ್ರಾಮಗಳಲ್ಲಿರುವ ಹೆಣ್ಣು ಕುದುರೆಗಳಿಗೆ ಹತ್ತಿಸುವುದಕ್ಕೆ ಅನುಕೂಲವಾದ ೧ ಕುದುರೆಯನ್ನು ಮೈಸೂರು ಗೌರ್ನಮೆಂಟ್ ಹೌಸಿನ ಲಾಯದಲ್ಲಿಯೂ ಸರ್ಕಾರದವರು ಇಡಿಸಿರುತ್ತಾರೆ. ಬೇಕಿದ್ದವರು ಗೌರ್ನಮೆಂಟ್ ಸ್ಟೇಬಲ್ ಸೂಪರಿಂಟೆಂಡೆಂಟರಿಗೆ ಅರ್ಜಿ ಬರೆದುಕೊಂಡು ಉಚಿತವಾಗಿ ಸಹಾಯ ಪಡೆಯಬಹುದಾಗಿದೆ.

ಧರ್ಮಪದ ಮೊದಲಾದ ಬುದ್ಧನ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿರುವ ಮತ್ತೂ ಆಸ್ಥಾನವಿದ್ವಾಂಸರುಗಳಲ್ಲೊಬ್ಬರಾದ ೪೪-೪೫ ವರ್ಷ ವಯಸ್ಸಿನ ಮ|| ಬಿದರೆ ಅಶ್ವತ್ಥನಾರಾಯಣಶಾಸ್ತ್ರಿಗಳು ಬೆಂಗಳೂರ ತಮ್ಮ ಮನೆಯಲ್ಲಿ ೩-೪ ದಿನಗಳ ಹಿಂದೆ ತಮ್ಮ ದೊಡ್ಡ ಹೆಂಡತಿಯನ್ನೂ, ಚಿಕ್ಕವಯಸ್ಸಿನ ಕಿರಿಯಹೆಂಡತಿಯನ್ನೂ, ೧೦-೧೧ ವರ್ಷ ವಯಸ್ಸಿನ ಅವಿವಾಹಿತ ಮಗಳನ್ನೂ ಒಂದು ಕುಡುಗೋಲಿನಿಂದ ಕತ್ತರಿಸಿ ಕೊಲೆಮಾಡಿ ಅನಂತರ ತಮ್ಮ ಶರೀರಕ್ಕೆ ಸೀಮೆಯೆಣ್ಣೆಯನ್ನು ಸುರಿದುಕೊಂಡು ಬೆಂಕಿಯನ್ನು ಹೊತ್ತಿಸಿ ಆತ್ಮಹತ್ಯೆಯನ್ನು ಮಾಡಿಕೊಂಡರು. ಹೀಗೆ ಘೋರಕೃತ್ಯವನ್ನು ಮಾಡಲು ಅವರಿಗಿದ್ದ ಕುಟುಂಬಬಾಧೆಯು ಕಾರಣವಾಗಿರಬಹುದೆಂದೂಹಿಸಬೇಕಾಗಿದೆ.

ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಜತದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— [illegible] 1, [illegible] 1, ಸೆಂಟ್ ಬಾಟಲ್ 1, [illegible] 1, [illegible] 1, [illegible] 1, [illegible] 1, [illegible] 1, [illegible] 4, [illegible] 1, [illegible] 1, ಒಟ್ಟು 15 [illegible] 1 ಕ್ಕೆ ಕ್ರಯ ರೂ. ೬-೦-೦.

ವಿಳಾಸ:—ಪಿ. ಎ. ಕೃಷ್ಣ ಅಂಡ್ ಕೋ,

10 3, [illegible], ಮದರಾಸ್.

[illegible]

ವರ್ತಮಾನಸಂಗ್ರಹ.

ಸೀಮೆಗೆ ಹೋಗಬೇಕೆಂದಿದ್ದ ಕಾಂಗ್ರೆಸ್ ರಾಯಭಾರವು ಸದ್ಯಃ ಅವಶ್ಯಕವಿಲ್ಲವೆಂದು ದಿಲ್ಲಿಯಲ್ಲಿ ನೆರೆದಿದ್ದ ಕಾಂಗ್ರೆಸ್‌ಸ್ಥಾಯಿಸಂಘದವರು ನಿರ್ಣಯಿಸಿರುವರು.

ಈಗ ಎರಕ ಹುಯ್ಯುತ್ತಲಿರುವ ೨ ಆಣೆಯ ನಿಕ್ಕಲ್ ನಾಣ್ಯವು ಸ್ವಲ್ಪ ಕಡಿಮೆ ಅರ್ಧರೂಪಾಯಿನಷ್ಟು ಅಗಲವಾಗಿಯೂ ಚದರವಾಗಿಯೂ ನಾಲ್ಕು ಮೂಲೆಯೂ ದುಂಡಾಗಿಯೂ ಇರುವುದೆಂದೂ, ಒಂದು ಕಡೆಯಲ್ಲಿ ಸಾರ್ವಭೌಮರ ಆಕೃತಿಯೂ ಮತ್ತೊಂದುಕಡೆ ನಾಲ್ಕು ಭಾಷೆಗಳಲ್ಲಿ ನಾಣ್ಯದ ಬೆಲೆಯೂ ಅಚ್ಚೊತ್ತಲ್ಪಟ್ಟಿರುವುವೆಂದೂ ಗೊತ್ತಾಗುತ್ತದೆ.

ಅನ್ಯದೇಶಗಳಿಂದ ಭರತಖಂಡಕ್ಕೆ ಬರುವ ನೂಲಿನ ಬಟ್ಟೆಗಳ ಮೇಲೆ ೧ ಪೌಂಡ್ ಬೆಲೆಯ ಸಾಮಾನಿಗೆ ೧೪ ಆಣೆಯಾರಭ್ಯ ೧—೧೪—೦ ವರೆಗೂ ಬಟ್ಟೆಯ ತರಗತಿಗಳನ್ನನುಸರಿಸಿ ಈ ತಿಂಗಳ ೧ನೆ ತಾರೀಖಿನಾರಭ್ಯ ಸುಂಕವನ್ನು ವಿಧಿಸಿರುವಂತೆ ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಇದರಿಂದ ವಿದೇಶದ ಬಟ್ಟೆಗಳ ಬೆಲೆಯು ಇನ್ನೂ ಹೆಚ್ಚಬಹುದು.

ಬೇಟೆಯಾಡುವುದಕ್ಕಾಗಿ ಕುದುರೆಮೇಲೆ ಹೋಗಿದ್ದ ಬೊಂಬಾಯಿ ಗೌರ್ನರ್ ಲಾರ್ಡ್ ವೆಲ್ಲಿಂಗ್ಡನ್‌ರವರು ಕುದುರೆ ಮುಗ್ಗರಿಸಿದುದರಿಂದ, ಅದರ ತಲೆಯಮೇಲಿಂದ ತಲೆಕೆಳಕಾಗಿ ಗೌರ್ನರವರು ಬಿದ್ದುಬಿಟ್ಟರು. ಅವರ ಪತ್ನಿಯವರೇ ಮೊದಲಾದವರು ಬಂದು ಶೈತ್ಯೋಪಚಾರವಾಡಿದ ಬಳಿಕ ಅವರಿಗೆ ಸ್ಮೃತಿ ಬಂದಿತು. ಮೋಟಾರುಬಂಡಿಯಲ್ಲಿ ಕುಳ್ಳಿರಿಸಿ ಕರೆದುಕೊಂಡು ಹೋಗಿ ಚಿಕಿತ್ಸೋಪಚಾರಗಳನ್ನು ಮಾಡಿದುದರಿಂದ ಈಗ ಅವರ ದೇಹಸ್ಥಿತಿಯು ಅನುಕೂಲವಾಗಿದೆ.

ನಮ್ಮ ಪೂರ್ವದ ಪುರಾಣ ಪುಣ್ಯಕಥೆಗಳ ಸಂದರ್ಭಗಳನ್ನು ನೋಡುವಾಗ್ಗೆ ಆ ಕಾಲದ ಕೆಲ ಪುರುಷರು ಪಶುಪಕ್ಷಿ ಮೃಗಾದಿಗಳ ಭಾಷೆಗಳ ಜ್ಞಾನವನ್ನೂ ಪಡೆದಿದ್ದರೆಂದು ಹೇಳಬೇಕಾಗುತ್ತದೆ. ಆದರೆ ಈಗ ಅಂಥವರು ನಮ್ಮಲ್ಲಿಲ್ಲ. ಪಾಶ್ಚಾತ್ಯರು ನವೀನವಾಗಿ ಪಕ್ಷಿ ಭಾಷಾಜ್ಞಾನಕ್ಕೂ ತೊಡಗಿ ಹೇಗೆ ಸಫಲರಾಗಿದ್ದಾರೆಂಬುದನ್ನು ಈ ಕೆಳಗಣ ವಾರ್ತೆಯಿಂದ ತಿಳಿಯಬಹುದು. ಫ್ರಾನ್ಸ್ ದೇಶದಲ್ಲಿ ಕಾಗೆಗಳು ಹೆಚ್ಚಾಗಿ ತುಂಬಿಕೊಂಡಿರುವ ಜಿಲ್ಲೆಗಳಲ್ಲಿ ವಾಸಮಾಡುತ್ತಿದ್ದ ಡ್ಯುಪಾಂಗ್‌ಡಿನೆಮೂರ್ ಎಂಬಾತನು ಕಾಗೆಗಳು ಪರಸ್ಪರ ಕೂಗಾಡುವುದನ್ನೇ ೨ ವರ್ಷಗಳಕಾಲ ಗಮನಿಸುತ್ತಿದ್ದು, ಅದರಮೇಲೆ ಕಾಕಭಾಷಾ ನಿಘಂಟುವೊಂದನ್ನು ರಚಿಸಿರುತ್ತಾನೆ. ಅವುಗಳೊಳಗೆ ಕಂಡಿರುವ ಮುಖ್ಯವಾದ ಶಬ್ದಗಳು ೨೫ ರೊಳಗೇ ಇರುತ್ತವೆ. ಒಂದು ಪದದ ಹೊರತು ಉಳಿದುವೆಲ್ಲಾ "ಕ್ರಾ" ಅಥವಾ "ಗ್ರಾ" ಎಂಬ ಹಲ್ವರ್ಣದೊಡನೆಯೇ ಆರಂಭಗೊಳ್ಳುವುವು. ನಾಲ್ಕು ಪದಗಳ ಕೊನೆಯಲ್ಲಿ ಮಾತ್ರ "ಸ್ಸ" ಎಂಬ ವರ್ಣೋಚ್ಚಾರಣೆಯು ಕೇಳಬರುವುದು. ಆ ಪದಗಳೊಳಗೆ—"ಇಲ್ಲಿ, ಬಲಪಕ್ಕಕ್ಕೆ, ಎಡಪಕ್ಕಕ್ಕೆ, ಮುಂಗಡೆ, ನಿಂತುಕೊ, ಇಲ್ಲಿ ಆಹಾರವಿದೆ, ಎಚ್ಚರಿಕೆ, ಹೋಗಬೇಕಾದ ಸಮಯವಾಗಿದೆ, ತುಪಾಕಿಯೊಡಗೂಡಿ ಮನುಷ್ಯನು ದೂರದಿಂದ, ದೊಣ್ಣೆಯೊಡನೆ ಮನುಷ್ಯನು" ಎಂಬರ್ಥವುಳ್ಳ ಶಬ್ದಗಳೇ ಮುಖ್ಯವಾದುವುಗಳು, ಎಂದು ಬರೆದಿರುತ್ತಾನೆ. ಕಾಗೆಗೆ ಕರ್ಕಶಕಂಠಧ್ವನಿಯಿರುವುದಕ್ಕೆ ಕಾರಣವೇನೆಂಬುದನ್ನು ಈ ಗ್ರಂಥಕರ್ತನು ಬರೆದಿಲ್ಲ.

ಪ್ರಜಾಮಿತ್ರಮಂಡಲಿ.

ಈ ಮಂಡಲಿಯು ಹಿಂದುಳಿದ ಜನವರ್ಗದವರ ಕ್ಷೇಮಾಭ್ಯುದಯಗಳಿಗಾಗಿ ಕಳೆದ ಡಿಸಂಬರು 16 ನೆಯ ತಾರೀಖಿನಲ್ಲಿ ಸ್ಥಾಪಿಸಲ್ಪಟ್ಟಿತು. ಇದರ ಕಾರ್ಯನಿರ್ವಾಹಕರ ಮೀಟಿಂಗು ಕಳೆದ 17 ನೆಯ ತಾರೀಖಿನಲ್ಲಿ ಬೆಂಗಳೂರ ಅರಳೇಪೇಟೆಯಲ್ಲಿರುವ 10 ನೆಯ ನಂಬರು ಮನೆಯಲ್ಲಿ ಜರುಗಿತು. ನಿಯಮನಿರ್ಮಾಣಸಭೆಯ ಮೆಂಬರಾದ ರಾವ್ ಸಾಹೇಬ್ ಮ|| ಎಚ್. ಚೆನ್ನಯ್ಯನವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಈ ಸಂಸ್ಥಾನದ ನಾನಾಭಾಗಗಳಿಂದ ಪ್ರತಿನಿಧಿಗಳು ಸಭೆಗೆ ದಯಮಾಡಿಸಿದ್ದರು. ಸಭೆಗೆ ಬರಲವಕಾಶವಿಲ್ಲದ ದೊಡ್ಡ ಮನುಷ್ಯರು ಕೆಲವರು ತಂತಮ್ಮ ಸಾನುಭೂತಿಯನ್ನು ತಂತೀವರ್ತಮಾನದ ಮೂಲಕ ಸೂಚಿಸಿದ್ದರು. ಅವನ್ನು ಸೆಕ್ರೆಟರಿಯವರು ಸಭಿಕರಿಗೆ ಶ್ರುತಪಡಿಸಿದರು.

ಅನಂತರ ಹಿಂದಣ ಮೀಟಿಂಗಿನಲ್ಲಿ ಮಾಡಿದ ತೀರ್ಮಾನಗಳು ಓದಲ್ಪಟ್ಟು ಇದುವರೆಗೆ ನಡೆದಿರುವ ಕಾರ್ಯಕ್ರಮಗಳು ವಿವರಿಸಲ್ಪಟ್ಟುವು. ಬಳಿಕ ಮಂಡಲಿಯ ಪರವಾಗಿ ಪ್ರಕಟಿಸಬೇಕೆಂದಿರುವ "ಮ್ಯಾನಿಫೆಸ್ಟೊ" ಎಂಬ ಪ್ರಸಿದ್ಧಪತ್ರಿಕೆಯು ಸಭೆಯ ಮುಂದೆ ಓದಲ್ಪಟ್ಟು ಸರ್ವಾನುಮೋದದನೆಯನ್ನು ಪಡೆಯಿತು.

ತರುವಾಯ ಈ ಕೆಳಗೆ ಕಂಡ ನಿರ್ಧಾರಗಳು ಏಕವಾಕ್ಯತೆಯಿಂದಲೂ ಸಂತೋಷದಿಂದಲೂ ಮಾಡಲ್ಪಟ್ಟುವು:—

ಭಾರತ ಚಕ್ರವರ್ತಿಗಳವರಿಂದ ನಮ್ಮ ಶ್ರೀಮನ್ಮಹಾರಾಜರವರಿಗೆ "ಎಕ್ಸಾಲ್ಟೆಡ್ ಆರ್ಡರ್ ಆಫ್ ದಿ ನೈಟ್ ಗ್ರ್ಯಾಂಡ್ ಕ್ರಾಸ್" ಎಂಬ ಬಿರುದು ಬಂದುದಕ್ಕಾಗಿಯೂ "ಹೀಸ್ ಹೈನೆಸ್" ಎಂಬ ಬಿರುದು ಶ್ರೀಮದ್ಯುವರಾಜರವರಿಗೆ ಬಂದುದಕ್ಕಾಗಿಯೂ ಮಂಡಲಿಯವರು ತಮ್ಮ ಸಂತೋಷಾತಿಶಯಗಳನ್ನು ಅವರುಗಳಿಗೆ ಶ್ರುತಪಡಿಸತಕ್ಕದ್ದು.

ಪ್ರತಿಯೊಂದು ಜನವರ್ಗದವರೂ ವಿದ್ಯಾವಂತರಾಗಲು ಪ್ರೋತ್ಸಾಹವಾಗುವಂತೆ ಸರ್ಕಾರಿ ಕೆಲಸಗಳನ್ನು ಪ್ರತಿಯೊಂದು ಕೋಮಿನವರಿಗೂ ಸಮವಾಗಿ ಹಂಚಿ ಕೊಡಬೇಕೆಂತಲೂ, ಸಮಸ್ತ ಜನವರ್ಗದವರಲ್ಲೂ ವಿದ್ಯಾಭ್ಯಾಸವು ಹರಡಿ ಎಲ್ಲರಲ್ಲಿಯೂ ವಿದ್ಯಾವಂತರಾದ ಜನರು ದೊರೆಯುವವರೆಗೆ ಆಯಾ ಕೋಮಿನ ವಿದ್ಯಾವಂತರಾದ ಜನರನ್ನು ಹೊರಗಣಿಂದ ತರಬೇಕೆಂತಲೂ ಕೇಳಿಕೊಳ್ಳತಕ್ಕದ್ದು.

ಮುಜರಾಯಿ ಫಂಡನ್ನು ಒಂದು ಜನವರ್ಗದ ಪ್ರಯೋಜನಕ್ಕೋಸ್ಕರವೇ ವಿನಿಯೋಗಿಸದೆ ಅದಕ್ಕಾಗಿ ಸಹಾಯ ಮಾಡಿದ ಸಮಸ್ತ ಜನರಿಗೂ ಅದರ ಪ್ರಯೋಜನವು ದೊರೆಯುವಂತೆ ಮಾಡಬೇಕೆಂತಲೂ, ಒಂದು ಜನವರ್ಗದ ಉಪಯೋಗದಲ್ಲಿರುವ ಸಂಸ್ಕೃತ ಕಾಲೇಜುಗಳೆರಡೂ ಶ್ರೀಮನ್ಮಹಾರಾಜರವರ ಸಮಸ್ತ ಪ್ರಜೆಗಳ ಪ್ರಯೋಜನಕ್ಕೂ ವಿನಿಯೋಗಿಸಲ್ಪಟ್ಟ ಹೊರತು ಅವುಗಳಿಗೆ ಪಬ್ಲಿಕ್ ಫಂಡನ್ನು ಉಪಯೋಗಿಸಬಾರದೆಂತಲೂ ಕೇಳಿಕೊಳ್ಳತಕ್ಕದ್ದು.

ಸ್ವಪರಿಪಾಲನೆಗೆ ಸಂಬಂಧಪಟ್ಟ ಎಲ್ಲ ಕೌನ್ಸಿಲುಗಳಲ್ಲೂ ಪ್ರತ್ಯೇಕ ಪ್ರಾತಿನಿಧ್ಯದ ತತ್ತ್ವವು ಆಚರಣೆಗೆ ಬರುವಂತೆ [illegible] ರೂಪಿಸಬೇಕೆಂತಲೂ, ಈ ತಿದ್ದುಪಾಟು ಆಗುವವರೆಗೂ ಸದರಿ ಕೌನ್ಸಿಲುಗಳಿಗೆ ಹೆಚ್ಚು ಅಧಿಕಾರಗಳನ್ನು ಕೊಡುವುದಾಗಲಿ ಇತರ ಬದಲಾವಣೆಯನ್ನು ಮಾಡುವುದಾಗಲಿ [illegible] ಕೇಳಿಕೊಳ್ಳತಕ್ಕದ್ದು.

ಸರ್ಕಾರಿ ಉದ್ಯೋಗಗಳಲ್ಲಿ ಪ್ರತಿಯೊಂದು ಕೋಮಿನ ಜನರು ಎಷ್ಟೆಷ್ಟು ಮಂದಿ ಇರುವರೆಂಬ ವಿಷಯದಲ್ಲಿ ಸರ್ಕಾರದವರು ಮಾಡುತ್ತಿರುವ ವಿಚಾರಣೆಯು ಪ್ರಕಟಿಸಲ್ಪಡಬೇಕೆಂತಲೂ, ಸರ್ಕಾರಿ ಉದ್ಯೋಗಗಳನ್ನು ಒಂದು ಜನವರ್ಗದವರೇ ಆಕ್ರಮಿಸಿಕೊಳ್ಳದಂತೆ ಅವುಗಳಿಗೆ ಗೊತ್ತಾಗಿರುವ ಯೋಗ್ಯತಾವಿಶೇಷಗಳು ವಿಮರ್ಶಿಸಲ್ಪಡಬೇಕೆಂತಲೂ, ಸರ್ಕಾರಿ ಹುದ್ದೆಗಳಲ್ಲಿ ಹಿಂದೆ ಇದ್ದ ಅಥವಾ ಈಗ ಇರುವ ಅಧಿಕಾರಿಗಳಿಗೆ ಸಂಬಂಧಿಗಳಲ್ಲದವರೂ ಸರ್ಕಾರಿ ಉದ್ಯೋಗಗಳಿಗೆ ಚುನಾಯಿಸಲ್ಪಡಬೇಕೆಂತಲೂ, ಪ್ರಸಿದ್ಧಿಪತ್ರಿಕೆಯ ನಕಲನ್ನು ಮುದ್ರಿಸಿ ಪ್ರಕಟಿಸುವ ಭಾರವನ್ನು ಸೆಕ್ರೆಟರಿಯವರು ವಹಿಸಬೇಕೆಂತಲೂ, ಪ್ರಸಿದ್ಧಿಪತ್ರಿಕೆಯಲ್ಲಿ ವ್ಯಕ್ತವಾಗಿರುವ ಮೇರೆಗೆ ಎಲ್ಲ ಡಿಸ್ಟ್ರಿಕ್ಟಿನ ಪ್ರತಿನಿಧಿಗಳು ಶ್ರೀಮನ್ಮಹಾರಾಜರವರಿಗೆ ಸಮೂಹತ್ವೇನ ಅರಿಕೆಮಾಡಿಕೊಳ್ಳಬೇಕೆಂತಲೂ ನಿರ್ಧಾರಗಳು ಮಾಡಲ್ಪಟ್ಟುವು.

ವೆಚ್ಚಗಳಿಗಾಗಿ ಸಭೆಯಲ್ಲಿಯೇ ಸುಮಾರು 1,400 ರೂಪಾಯಿಗಳು ಚಂದಾ ಹಾಕಲ್ಪಟ್ಟಿತು. ಮ|| ಟಿ. (ತುಬಗೆರೆ) ನಂಜಪ್ಪನವರು 400 ರೂ. ಬೆಲೆಬಾಳುವ ಒಂದು ಟೈಪ್‌ರೈಟರನ್ನು ಮಂಡಲಿಗೆ ಬಹುಮಾನವಾಗಿ ಒಪ್ಪಿಸಿದರು. ಅನಂತರ ಶ್ರೀಮನ್ಮಹಾರಾಜರವರಿಗೆ ಮಂಗಳವಾಗಲೆಂಬ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪತ್ರವ್ಯವಹಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

(ಮರಿಮಲ್ಲಪ್ಪನವರ ಹೈಸ್ಕೂಲು)

ಕೆಲವು ದಿನಗಳ ಹಿಂದೆ ಮೈಸೂರು ಮರಿಮಲ್ಲಪ್ಪನವರ ಸ್ಕೂಲಿನಿಂದ ವೀರಶೈವ ವಿದ್ಯಾರ್ಥಿಗಳಿಗೆ ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತಲಿದೆಯೆಂಬುದನ್ನು ತಿಳಿಯಲು ಸಂಘದವರು ಅಡ್ವೋಕೇಟ್ ಮ|| ರಾ|| ಬಸವಯ್ಯ ಬಿ. ಎ. ಬಿ. ಎಲ್. ಯವರಿಗೆ ಅದರ ಕಾರ್ಯಕ್ರಮವು ಯಾವರೀತಿ ನಡೆಸಲ್ಪಡುತ್ತಲಿದೆಯೆಂಬುದನ್ನು ತಿಳಿದುಕೊಳ್ಳಲು ಅಧಿಕಾರ ಕೊಟ್ಟರು. ಆದರೆ ಇದುವರೆಗೆ ಅದರ ವಿಚಾರವೇನಾಯಿತೆಂಬುದು ಯಾರಿಗೂ ಗೊತ್ತಿಲ್ಲ. ಮ|| ರಾ|| ಬಸವಯ್ಯನವರು ಇದರ ವಿಚಾರದಲ್ಲಿ ಅಷ್ಟು ಶ್ರದ್ಧೆ ವಹಿಸಿರುವಂತೆ ಕಾಣಬರುವುದಿಲ್ಲ. ಸಂಘದವರಾದರೋ ನಿರ್ಧಾರಗಳನ್ನು ಮಾಡುವುದರಲ್ಲಿ ತೋರಿಸುವ ಶ್ರದ್ಧೆಯನ್ನು, ಆ ನಿರ್ಧಾರಗಳನ್ನು ಕಾರ್ಯರೂಪವಾಗಿ ಪರಿಣಾಮಗೊಳಿಸುವುದರಲ್ಲಿ ವ್ಯಕ್ತಪಡಿಸುತ್ತಲಿಲ್ಲ. ಮ|| ರಾ|| ಬಸವಯ್ಯನವರು ಉದಾಸೀನದಿಂದಿರಲು ಕಾರಣವೇನೋ ತಿಳಿಯದು. ಹಿಂದುಳಿದ ಜನಾಂಗದವರ ಪುರೋಭಿವೃದ್ಧಿಗಾಗಿ ದೇಹಶ್ರಮಾದಿಗಳನ್ನು ಸ್ವಲ್ಪವೂ ಗಮನಿಸದೆ ಹಗಲಿರುಳೂ ಪಾಟುಪಡುತ್ತಲಿರುವುದರಿಂದ ಅವರಿಗೆ ಸಾಕಷ್ಟು ಕಾಲವು ದೊರೆದಂತೆ ಕಾಣುವುದಿಲ್ಲ. ಆದಾಗ್ಗ್ಯೂ, ತಮ್ಮ ಜನಾಂಗದವರೂ ಹಿಂದುಳಿದ ಜನಾಂಗದಲ್ಲಿ ಒಂದು ಮುಖ್ಯಾಂಗವಾಗಿರುವುದೆಂಬ ವಿಷಯವು ಮ|| ರಾ|| ಬಸವಯ್ಯನವರಿಗೆ ಗೊತ್ತೇ ಇರುವುದು. ನಮ್ಮ ಇತರೇಯ ಬಾಂಧವರು ಎಷ್ಟೋ ಶ್ರಮವನ್ನು ವಹಿಸಿ ಬೆಳಗಾಂನಲ್ಲಿ ಗಿಲಗಂಜಿ ಅರಟಾಳ ಹೈಸ್ಕೂಲನ್ನು ಸ್ಥಾಪಿಸಿರುವರು. ಬಹಳ ದಿವಸಗಳಿಂದಲೂ ನಡೆದು ಬಂದಿರುವ ಮರಿಮಲ್ಲಪ್ಪನವರ ಹೈಸ್ಕೂಲು ನಮ್ಮ ಜನಾಂಗದವರಿಗೆ ಎಷ್ಟರಮಟ್ಟಿನ ಪ್ರಯೋಜನಕರವಾಗಿದೆ ಎಂಬುದನ್ನು ಕೂಡ ವಿಚಾರ ಮಾಡದಿರುವುದು ಸಂಘಕ್ಕೆ ಬಹಳ ಲಾಂಛನವಾದ ಸಂಗತಿಯಾಗಿರುವುದು. ಈಗಲಾದರೂ ಸಾಧ್ಯವಾದಷ್ಟು ಜಾಗ್ರತೆಯಿಂದ ಮ|| ರಾ|| ಬಸವಯ್ಯನವರು ಮೇಲ್ಕಂಡ ವಿಚಾರದಲ್ಲಿ ತಕ್ಕ ತರದೂದನ್ನು ಮಾಡಿ ವೀರಶೈವ ಜನಾಂಗದವರೆಲ್ಲರ ವಂದನೆಗೂ ಪಾತ್ರರಾಗುವರೆಂದು ನಂಬಿರುತ್ತೇನೆ.

ವಿದ್ಯಾರ್ಥಿ ನಿಲಯ.

ಬೆಂಗಳೂರಿಗೆ ಪರಸ್ಥಳದಿಂದಬಂದು ಓದತಕ್ಕ ವಿದ್ಯಾರ್ಥಿಗಳು ಭೋಜನಾದಿಗಳಿಗೆ ಅನುಕೂಲವಿಲ್ಲದೆ ಬಹಳ ತೊಂದರೆಪಡುತ್ತಲಿದ್ದುದನ್ನು ನೋಡಿ, ಮ|| ರಾ|| ಊಮಬತ್ತಿನಾಥ ಶೆಟ್ಟಪ್ಪನವರು ಸುಮಾರು 4-5 ವರ್ಷಗಳ ಹಿಂದೆ ವೀರಶೈವಾಶ್ರಮವೆಂಬ ಒಂದು ವಿದ್ಯಾರ್ಥಿನಿಲಯವನ್ನು ಏರ್ಪಡಿಸಿದುದಲ್ಲದೆ, ಅದರ ಮೇಲ್ವಿಚಾರಣೆಯನ್ನು ತಾವೇ 5-6 ತಿಂಗಳುಗಳ ವರೆಗೂ ನೋಡಿಕೊಂಡಿದ್ದು, ಅನಂತರ ಅದನ್ನು ಸಂಘದವರಿಗೆ ವಹಿಸಿದರು. ಸಂಘದವರು ಇದರ ಮೇಲ್ವಿಚಾರಣೆಗಾಗಿ ಬೆಂಗಳೂರಿನ ಕೆಲವು ದೊಡ್ಡ ಮನುಷ್ಯರುಗಳಿಂದ ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಿದರು. ಅಂದಿನಿಂದಲೂ ಆಶ್ರಮವು ಆ ಕಮಿಟಿಯವರ ಪೋಷಣೆಯಲ್ಲಿರುವುದು. ಆದರೆ ವರ್ಷಕ್ಕೊಂದು ಸಲವಾದರೂ ಕಮಿಟಿ ಮೆಂಬರುಗಳು ಆಶ್ರಮದಲ್ಲಿರತಕ್ಕ ವಿದ್ಯಾರ್ಥಿಗಳ ಕುಂದು ಕೊರತೆಗಳ ವಿಚಾರಮಾಡುವಂತೆ ಕಂಡುಬರಲಿಲ್ಲ. ಸಂಘದಿಂದಲೂ ಸ್ವಲ್ಪಮಟ್ಟಿಗೆ ಧನಸಹಾಯ ಮಾತ್ರ ದೊರೆಯುವಂತೆ ಕಾಣುತ್ತದೆ. ಸರ್ಕಾರದವರು ಕಳೆದ ಜೂನ್ ತಿಂಗಳಿಂದಲೂ ತಿಂಗಳು ಒಂದಕ್ಕೆ 40 ರೂ. ನಂತೆ ಸಹಾಯ ಮಾಡುತ್ತಲಿರುವರು. ಈಗ ಸುಮಾರು 50 ವಿದ್ಯಾರ್ಥಿಗಳಿರುವರು. ಸರ್ಕಾರದವರಿಂದ ಈಗ ದೊರೆಯತಕ್ಕ ಸಹಾಯವು ಬಹಳ ಕಡಿಮೆಯಾಗಿರುವುದು. ಸಂಘದವರು ಇದರ ವಿಚಾರದಲ್ಲಿ ಶ್ರದ್ಧೆಯನ್ನು ವಹಿಸಿ ಸರ್ಕಾರದಿಂದ ಸರಿಯಾದ ಸಹಾಯವು ದೊರೆಯುವಂತೆ ಮಾಡಬೇಕಾಗಿರುವುದು.

ಸ್ವಂತಕಟ್ಟಡವಿಲ್ಲದೆ ಪದೇಪದೇ ಸ್ಥಳ ಬದಲಾವಣೆ ಮಾಡುವುದರಿಂದಲೂ, ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾದ ಕಟ್ಟಡ ಸಿಕ್ಕದೆಯೂ, ಬಹಳ ತೊಂದರೆಯಾಗಿದ್ದುದನ್ನು ನೋಡಿ ಶ್ರೀ ಚಿತ್ರದುರ್ಗದ ಜಗದ್ಗುರು ಸ್ವಾಮಿಗಳವರು ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸುವುದಾಗಿ ಒಪ್ಪಿ ಆಗಲೇ 5 ಸಹಸ್ರ ರೂಪಾಯಿಗಳನ್ನು ಕೊಟ್ಟಿರುವರು. ಮ|| ರಾ|| ಅತ್ತಿಬೆಲೆ ಸಿದ್ಧಬಸಪ್ಪನವರು 10 ಸಹಸ್ರ ರೂಪಾಯಿಗಳನ್ನು ಕೊಟ್ಟಿರುವರು. ಹಿಂದುಳಿದ ಜನಾಂಗದವರು ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿದರೆ ಸರ್ಕಾರದವರು ಕಟ್ಟಡಕ್ಕೆ ನಿವೇಶನವನ್ನೂ, ಮತ್ತು ಕಟ್ಟಡವನ್ನು ಕಟ್ಟಲು ತಗಲುವ ಖರ್ಚಿನಲ್ಲಿ ಅರ್ಧಖರ್ಚನ್ನೂ ಕೊಡುವರೆಂದು ನಾನು ಕೇಳಿರುವೆನು. ಹೀಗಿದ್ದಾಗ್ಗ್ಯೂ ಸರ್ಕಾರದಿಂದ ಭೂಮಿಯನ್ನು ಪ್ರತಿಫಲವಿಲ್ಲದೇನೆಯೇ ಪಡೆದುದೇ ಬಹಳ ದುಸ್ತರವೆಂದು ತಿಳಿದೋ ಏನೋ ಕಟ್ಟಡವನ್ನು ಸರ್ಕಾರದಿಂದ ಮತ್ತಾವ ಸಹಾಯವನ್ನೂ ಕೋರದೆ ಕಟ್ಟಿಸುವುದಾಗಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಸಂಘದವರು ಮುಚ್ಚಳಿಕೆಯನ್ನು ಬರೆದು ಕೊಡಲು ಉದ್ಯುಕ್ತರಾಗಿರುವರೆಂದು ಕೇಳುತ್ತೇನೆ. ಹೀಗೆಯೇ [illegible] 500 ರೂಪಾಯಿಗಳವರೆಗೆ ಖರ್ಚುಮಾಡಿ ವೀರಶೈವ ವಿದ್ಯಾರ್ಥಿಗಳ ಭೋಜನಶಾಲೆಯನ್ನು ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿನಿಲಯದ ಕಾಂಪೌಂಡಿನಲ್ಲಿ ಸಂಘದವರೇ ಕಟ್ಟಿಸಿದರು. ಕೊನೆಗೆ ಅದು ರಿಪೇರಿಯಿಲ್ಲದೆ ಬಹಳ ಶಿಥಿಲವಾಗಲು ಹಾಸ್ಟೆಲ್ [illegible] ವರಿಗೆ ವಹಿಸಲ್ಪಡಬೇಕಾಯಿತು. ಸರ್ಕಾರಿ ವಿದ್ಯಾರ್ಥಿನಿಲಯದ ಆವರಣದಲ್ಲಿ ಸಂಘದವರು ಕಟ್ಟಿಸಿದುದು ಎಷ್ಟರ ನ್ಯಾಯವೋ ತಿಳಿಯಲಿಲ್ಲ. ಎಲ್ಲಾ ಜನಾಂಗದವರ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸರ್ಕಾರದವರಿಂದ ಕಟ್ಟಲ್ಪಟ್ಟಿರುವ ವಿದ್ಯಾರ್ಥಿನಿಲಯದಲ್ಲಿ ವೀರಶೈವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬೇರೆ ಭೋಜನಶಾಲೆಯನ್ನು ಕಟ್ಟಿಸಿ ಕೊಡಬೇಕೆಂದು ಸರ್ಕಾರದವರನ್ನು ಕೇಳಿದ್ದರೆ ಕಟ್ಟಿಸುವುದಕ್ಕಾಗುವುದಿಲ್ಲವೆಂದು ಅವರು ಹೇಳುತ್ತಿದ್ದರೆ ? ಎಂದಿಗೂ ಇಲ್ಲ. ಮೈಸೂರು [illegible] 10,15 [illegible] [illegible] ವಿದ್ಯಾರ್ಥಿನಿಲಯದಲ್ಲಿ [illegible]

ಶಾಲೆಯೊಂದು ಹೊಸದಾಗಿ ಕಟ್ಟಡಗಳನ್ನು ಕಟ್ಟಿಸುತ್ತಲಿರುವಾಗ, ಒಟ್ಟು ಜನಸಂಖ್ಯೆಯಲ್ಲಿ ½ ಭಾಗ ಜನಸಂಖ್ಯೆಯುಳ್ಳ ವೀರಶೈವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದವರ ಕರ್ತವ್ಯವಲ್ಲವೆ? ಮ॥ ರಾ॥ ಶೆಟ್ಟರವರು ಆಸ್ಪತ್ರೆಯನ್ನು ಕಟ್ಟುವುದಕ್ಕಾಗಿ 25 ಸಹಸ್ರ ರೂ. ಗಳನ್ನು ಕೊಟ್ಟಿರುವರಲ್ಲ. ಸರ್ಕಾರದವರು ಇನ್ನೂ 25 ಸಹಸ್ರ ರೂ. ಗಳನ್ನು ಹಾಕಿ ಕೊಟ್ಟು ಒಟ್ಟು ನೆಲಗಳಲ್ಲಿ ಮ॥ ರಾ॥ ಶೆಟ್ಟರವರ ಹೆಸರಿನಲ್ಲಿ ಆಸ್ಪತ್ರೆಯನ್ನು ಕಟ್ಟಲು ಅಪ್ಪಣೆಕೊಡಲಿಲ್ಲವೆ? ಇಂಥಾ ಜನೋಪಯುಕ್ತವಾದ ಕಾರ್ಯಗಳಿಗೆ ಸರ್ಕಾರದವರು ಪೂರ್ಣವಾದ ಸಹಾನುಭೂತಿಯನ್ನು ತೋರಿಸುವರೆಂಬ ವಿಚಾರದಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಸರ್ಕಾರದಿಂದ ನ್ಯಾಯವಾಗಿ ಪಡೆದುಕೊಳ್ಳಬೇಕಾದ ಸಹಾಯವನ್ನು ಪಡೆದುಕೊಳ್ಳಲು ತಕ್ಕ ವ್ಯವಸಾಯವನ್ನು ನಡೆಯಿಸದೆ ನಮ್ಮ ವಿದ್ಯಾಭಿವೃದ್ಧಿ ಫಂಡ್ ಸಂಘದವರು ದುಡುಕುವುದಾದರೆ ಅವರು ಕರ್ತವ್ಯಾಸಮರ್ಥತೆಯನ್ನೇ ವ್ಯಕ್ತಪಡಿಸಿಕೊಂಡಂತಾಗುವುದಲ್ಲದೆ ಸಮಾಜಕ್ಕೆ ಅಹಿತವನ್ನೂ ಮಾಡಿದವರಾಗುವರು. ಆದುಕಾರಣ, ಸಂಘದವರು ವಿದ್ಯಾರ್ಥಿ ನಿಲಯವನ್ನು ಕಟ್ಟಿಸುವ ವಿಷಯದಲ್ಲಿ ದೀರ್ಘಾಲೋಚನೆಯಿಂದ ನಡೆದುಕೊಳ್ಳುವರೆಂದು ನಂಬಿರುತ್ತೇನೆ.

ಒಬ್ಬ ಸಮಾಜಬಂಧು.

ನೋಟೀಸ್.

ಸಮಸ್ತ ಜನರಿಗೆ ತಿಳಿಯಪಡಿಸೋದೇನೆಂದರೆ:—

ನನ್ನ ಮಗ ಹಿರಾಲಾಲ ಮಗನಲಾಲ ಜಿಗಿ ಯಾರೊಡನೆಯೂ ಉದ್ರಿ ವ್ಯಾಪಾರ ಮಾಡಿದರೆ ಅದಕ್ಕೆ ನಮ್ಮ ಸಮ್ಮತಿ ಇಲ್ಲ. ಮತ್ತು ನಾವು ಇಬ್ಬರು ಸೇರಿ ನಮ್ಮ ಜಿನಿಂಗಫ್ಯಾಕ್ಟರಿ (ದಿ ದಾವಣಗೆರೆ ಜಿನಿಂಗಫ್ಯಾಕ್ಟರಿ) ವಹಿವಾಟವನಾತಲಿಕ್ಕೆ ಕಾಳಿದಾಸ ಜಯಚಂದ ಇವರಿಗೆ ಎಲ್ಲಾ ಹಕ್ಕುಕೊಟ್ಟಿರುತ್ತೇನೆ. ಈಗ ಯಾರಾದರೂ ಯಾವಪ್ರಕಾರದಿಂದ ನನ್ನ ಮಗ ಹಿರಾಲಾಲಗೆ ದುಷ್ಟಜನರ ಪ್ರೇರಣೆಯಿಂದ ನನ್ನ ಮಗನಿಗೆ ಮೋಸಪಡಿಸಬೇಕೆಂಬ ಇರಾದೆಯಿಂದ ಬೇರೆ ವ್ಯವಹಾರನಡಿಸುತ್ತಾ ಇದ್ದಾರೆ. ಇವರಿಗೆ ಸಾಲಾಕೊಡುವದಾಗಲಿ ಯಾನಾದರೂ ಲೇವಾದೇವಿ ಮಾಡುವದಾಗಲಿ ಇತರ ನನ್ನ ಗಂಡನ ಸ್ವತ್ತು ವಗೈರೆ ಬರೆಸಿಕೊಳ್ಳುವುದಾಗಲಿ ನಡಿಸಿದಲ್ಲಿ ನನ್ನ ಗಂಡನಸ್ವತ್ತು ಜವಾಬುದಾರಿ ಆಗುವುದಿಲ್ಲ. ಹಾಗೇನಾದರೂ ಯಾರಾದರೂ ನಡಿಸಿದಲ್ಲಿ ಲುಕ್ಸಾನಿಗೆ ಅವರೇ ಜವಾಬುದಾರರಾಗುತ್ತಾರೆ.

ಬಾಯಿಮಣಿಬಾಯಿ ಜೀರಾಲಾಲ.

ಕಾಳು ಕಡಿಯ ಜಂಗೀ ವ್ಯಾಪಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಶನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
5 ಧಾರ್ವಾಡ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ವ್ಯಾಪಾರಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರಾ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಪೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ನಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
15 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನು, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನು ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷಿಸುವವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
16 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ದ ಕಾರ್ಯದಲ್ಲೂ ಫಲಸಿದ್ಧಿಯು ತತ್‌ಕ್ಷಣದಲ್ಲೇ ಆಗುವುದಪೂರ್ವವು. ಒಂದೊಂದು ರಾಜಕೀಯಫಲ ಪ್ರಾಪ್ತಿಗಾಗಿ ಸಹೋದರರಾದ ಭಾರತೀಯಪ್ರಮುಖರು ೨-೩ ಪಟ್ಟಲೂ ಒಂದೇ ಸಮವಾಗಿ ಸಾಹಸಮಾಡುತ್ತಲಿದ್ದರೂ, ರ್ಥರಾಗಿರುವುದಿಲ್ಲ. ಯಾವ ಕಾರ್ಯದಲ್ಲೂ ಜಯಾಪಜಯ

ವುದು ಗಳ: ಳನ್ನು ಆಥಿ ವಾಸ ರಾಸ

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಿತ್ರರತ್ನಾ, ಲುಕ್ಮಾನಿ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಶಿಪಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ಸ್ವಪ್ನಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ತಿಜ್ವರ, ಅನೇಕವಿಧವಾದ ಮೂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೨ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೪ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಶುದ್ಧ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ:—ಇವರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ತುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಧಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶ್ಯಾಂತಪ್ಪಾ ಕಾಳಪ್ಪಾ ಲೇಂಗಡೆ,
4 ಹೊಸೂರ, ಪೋಸ್ಟ್ ಪಾಪೂರ, (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೇರೆ ಮಗ್ಗಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇದೆ. ಚಿಲ್ಲ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 12

ಇಮಿಟೇಷನ್ ಸಿಲ್ಕ್ ಗೋವರ್ ಜಾಕ್ ಸೀರೆ	5.0.
ಡೈಮಂಡ್ ಕೊಟ್ಟಡಿ ಸೀರೆ	5.0.
ಬನಾರಸ್ ಸೀರೆ	3.8.
ಬಾಲಾಮಣಿ ಸೀರೆ	3.8.

ವಿಳಾಸ:-ಮೈರಂ ಅಂಡ್ ಕೊ, ಇರುಳಪ್ಪನಬೀದಿ, ಮದರಾಸು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಳೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು, ಇಸಬು, ಛಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇನೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
50 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

೧೯೧೮ ನೆಯ ಇಸವಿ ಮಾರ್ಚ ತಾ॥ ೩ ರಿಂದ ೧೯೧೮ ನೆಯ ಮಾರ್ಚ ತಾ॥ ೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾಘ ಬ॥ ಪಂಚಮಿಯಿಂದ ಮಾಘ ಬ॥ ಏಕಾದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಶಿಂ ಮಾ
3	ಭಾನು	ಪಂಚ	11-38	ಸ್ವಾತಿ	14-57	20
4	ಸೋಮ	ಷಷ್ಠಿ	14-15	ವಿಶಾಖಾ	18-54	21
5	ಮಂಗಳ	ಸಪ್ತ	15-42	ಅನೂ	21-40	22
6	ಬುಧ	ಅಷ್ಟಮಿ	15-47	ಜ್ಯೇಷ್ಠ	23-10	23

ದ ಸಂಬಂಧವು ಈ ನಮ್ಮ ಸೈನ್ಯಕ್ಕೆ ಕೊಡಲನುಕೂಲವೂ ಆಯಿತು. ರಿಂದ ಜನರಲ್ ಅಲನ್ಬಿಯವರ ಸೈನ್ಯವು ಮುಂದೆ ದಮಾಸ್ಕಸ್ ಲೋಹ ಹಬ್ಬದನಗರವನ್ನು ಆಕ್ರಮಿಸಲು ಅನುಕೂಲ ಹೆಚ್ಚಿದಂತಾಯಿತು.

ರುಮೇನಿಯಾದವರ ಸಂಧಿವಿಷಯವು ಬುಖಾರೆಸ್ಟ್ ಪಟ್ಟಣದಲ್ಲಿ ಚರ್ಚಿಸುತ್ತಿದೆ. ಬೆಸ್ಸರೇಬಿಯಾವನ್ನು ತನಗೆ ಬಿಟ್ಟುಕೊಟ್ಟರೆ ಬಲ್ಗೇರಿಯಗೆ ದೋಬ್ರುಜಾವನ್ನು ಬಿಟ್ಟುಕೊಡಲು ರುಮೇನಿಯಾದವರಿಗೆ ಇಷ್ಟವಿದೆ. ಇಂಗ್ಲಾಂಡಿನಲ್ಲಿರುವ ರುಮೇನಿಯಾ ರಾಯಭಾರಿಯು ಅಲ್ಲಿಂದ ದೇಶಕ್ಕೆ ಪ್ರಯಾಣಮಾಡಿರುವನು. ಪೆಟ್ರೋಗ್ರೇಡಿನಲ್ಲಿರುವ ಜಪಾನ್ ರಾಯಭಾರಿಯು ಸ್ವದೇಶಕ್ಕೆ ಪ್ರಯಾಣಮಾಡಿರುವನು. ಆದರೆ ರಷ್ಯಾ ನ ದೇಶಕ್ಕೆ ಸಂಧಿ ಜರುಗಿಹೋದರೆ ಅದಕ್ಕೆ ತಕ್ಕ ಪ್ರತಿಕ್ರಿಯೆಮಾಡಲು ನರು ಯೋಚಿಸುವರು. ಅಲ್ಲಿಯ ಸ್ಥಿತಿಯು ಅಶಾಂತಿಮಯವಾದರೂ

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವಕಾರಾ ಪಕ್ಷಜ್ಞ ನಕ್ಷತ್ರಮೋಹರಾಜೀಯತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಮ್ರಾಜ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಟಿತಿ ಲೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮಾರ್ಚ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೧೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

[illegible].—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಥಾಳೀ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವದಾಗಿ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಗದಕೈ 1, ಶಾಮಂತಿಗೆಹೂವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಿಲ್ಟ್ [illegible] 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, [illegible] 1, ವಜ್ರದ ಹರಳು ಗುಂಡಿಗಳು 4, ಜರ್ಮನ್ [illegible] 1, ರೋಲ್ಡ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಒಟ್ಟು 15 [illegible] 1 ಕ್ಕೆ ಕ್ರಯ ರೂ. [illegible]

ವಿಳಾಸ—ಪಿ. ಎ. ಕೃಷ್ಣ ಅಂಡ್ ಕೊ,
13 3, [illegible], ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ತಂದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 14

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಫ್. ಎ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಫ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಚಳಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಜಾಹೀರಾತಿನಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಯಲು ನಾನು ತುಂಬಾ ಆನಂದ ಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ [illegible] ಉತ್ತಮವಾದ [illegible] ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ [illegible] ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ॥ ಬ॥ ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ. ಗಳನ್ನು ದಾನಮಾಡಿ ಯಾವಯಾವ ಮಹಾತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

7 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 22

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, [illegible], ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಕೇವಲ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ [illegible] ಖರ್ಚು ಬೇರೆ. ಒಂದಾಣೆ ಸ್ಟ್ಯಾಂಪ್ ಕಳಿಸಿದರೆ ಕ್ಯಾಟಲಾಗು ಫ್ರೀ.

ವಿಳಾಸ—ವೈದ್ಯ. ಜಿ. ಎಸ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕಾನಡಾ ಜಿಲ್ಲ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮಾರ್ಚಿ ತಾ|| ೧೦ ನೆಯ ಭಾನುವಾರ.

ಪ್ರಜಾಸ್ವಾತಂತ್ರ್ಯವಿಕಾಸದಮೇಲೆ ಗದಾಪ್ರಹಾರ.

ಈಗ ಜಗತ್ತಿನಲ್ಲೆಲ್ಲಾ ಸ್ವಾತಂತ್ರ್ಯೇಚ್ಛೆಯೆಂಬುದು ತಾನೇ ತಾನಾಗಿ ನಾಟ್ಯವಾಡುತ್ತಿದೆ. ದುರ್ಬಲರ ಸ್ವಾತಂತ್ರ್ಯರಕ್ಷಣೆಗಾಗಿಯೇ ಇಂಗ್ಲೀಷರು ಫ್ರೆಂಚರು ಅಮೇರಿಕನ್ನರು ಮೊದಲಾದ ಅನಂತ ರಾಷ್ಟ್ರಗಳವರು ತಮ್ಮ ಸರ್ವಸ್ವವನ್ನೂ ಯುದ್ಧಾಗ್ನಿಗೆ ಬಲಿಕೊಡುತ್ತಿದ್ದಾರೆ. ಭರತಖಂಡದಲ್ಲೂ ಇದೇ ಸ್ವಾತಂತ್ರ್ಯೇಚ್ಛೆಯೇ ಪ್ರಬಲಿಸುತ್ತಿದೆ. ನಮ್ಮ ದೇಶವನ್ನು ನಾವು ಆಳಿಕೊಳ್ಳುವುದೇ ಹಿತಕರವಾದುದೆಂಬ ವಾದವೂ ಅದರ ಸಾಧನೆಗೆ ಹಲವು ತೆರದ ಪ್ರಯತ್ನಗಳೂ ನಡೆಯುತ್ತಿವೆ. “ಇಂಗ್ಲೀಷರು ಎಷ್ಟು ಧರ್ಮದಿಂದ ಈಗ ಪರಿಪಾಲಿಸುತ್ತಿದ್ದರೂ ಅದು ಸುರಾಜ್ಯವಾದೀತೇ ಹೊರತು ಸ್ವರಾಜ್ಯವಾಗುವುದಿಲ್ಲ; ಅದು ಕಾರಣ ನಮಗೆ ಸ್ವರಾಜ್ಯವು ಲಭಿಸಬೇಕೆಂದು ಈ ದೇಶದ ವಿದ್ಯಾವಂತರೆಲ್ಲರೂ ಉದ್ಘೋಷಿಸುತ್ತಿದ್ದಾರೆ. ಮತಗುರುಗಳಂಥವರು ಕೂಡ ಈ ಸ್ವರಾಜ್ಯಸಾಧನ ಪ್ರಯತ್ನ ಪ್ರೋತ್ಸಾಹಕರಾಗಿ ನಿಲ್ಲುವ ಕಾಲವು ಪ್ರಾಪ್ತವಾಗಿದೆ. ವಿದ್ಯಾಶೂನ್ಯರಾಗಿರುವ ಗ್ರಾಮ್ಯಜನರಲ್ಲೂ ಸ್ವಾತಂತ್ರ್ಯಪ್ರೀತಿ ಸ್ವರಾಜ್ಯಕಾಂಕ್ಷೆ ಸ್ವೋದ್ಧಾರಯತ್ನಗಳು ದೃಢಮೂಲವಾಗುವಂತೆ ಮಾಡುವುದಕ್ಕೆ ರಾಷ್ಟ್ರಭಕ್ತರೆನಿಸಿಕೊಂಡಿರುವವರು ಅನಂತಶ್ರಮಗಳನ್ನು ಪಡುತ್ತಿದ್ದಾರೆ. ನಮ್ಮ ಮೈಸೂರು ಪ್ರಭುತ್ವದವರೂ ಕೂಡ ತಮ್ಮ ದೇಶದ ಪ್ರಜೆಗಳನ್ನು ಸರ್ವವಿಧದಿಂದಲೂ ಮುಂದಕ್ಕೆ ತರುವುದಕ್ಕೆ ಸಿದ್ಧರಾಗಿರುವೆವೆಂದು ಹೇಳಿಕೊಳ್ಳುತ್ತಿದ್ದಾರೆ. ಎಲ್ಲರನ್ನೂ ಆತ್ಮಾವಲಂಬಿಗಳನ್ನಾಗಿ ಮಾಡುವೆವೆಂದು ಹವಣಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಇಷ್ಟೆಲ್ಲಾ ಪರಿಸ್ಥಿತಿಯಿರುತ್ತಿದ್ದರೂ ವಿದ್ಯಾವಿವೇಕಾದಿಗಳಲ್ಲಿ ಹಿಂದುಳಿದ ಪ್ರಜಾಸಾಮಾನ್ಯದ ಸ್ವಾತಂತ್ರ್ಯೇಚ್ಛೆಗೂ, ಆತ್ಮಾವಲಂಬನ ಶಕ್ತಿವೃದ್ಧಿಗೂ, ರಾಜಕೀಯ ವಿವೇಕವಿಕಸನಕ್ಕೂ ಪ್ರತಿರೋಧಕವಾಗಿ ಗದಾಪ್ರಹಾರವು ನಡೆಯುತ್ತಲಿರುವುದು ವಿಚಿತ್ರವಲ್ಲವೆ? ಅದೆಲ್ಲಿ ನಡೆದಿದೆಯೆಂದು ಕೇಳತಕ್ಕವರು ಕಳೆದ ತಿಂಗಳಲ್ಲಿ ನಡೆದ ನಮ್ಮ ಮೈಸೂರು ನಿಯಮನಿರ್ಮಾಣ ಸಭಾ ಚರ್ಯೆಗಳನ್ನು ಗಮನಿಸಬೇಕು.

ಭರತಖಂಡವು ಭಿನ್ನಭಿನ್ನ ರಾಷ್ಟ್ರಗಳಿಂದಲೂ, ವಿವಿಧಮತಗಳಿಂದಲೂ, ಜಾತ್ಯುಪಜಾತಿಗಳಿಂದಲೂ, ಅನೇಕ ಭಾಷಾವಿಭೇದಗಳಿಂದಲೂ, ನಾನಾ ಸಂಪ್ರದಾಯಾಚಾರಗಳಿಂದಲೂ ಕೂಡಿದುದೇ ಹೊರತು ಏಕರೂಪವಾಗಿಲ್ಲ. ಆದರೂ ಭರತಖಂಡವೆಂಬ ನಾಮದ ಏಕತ್ವವು ಭಿನ್ನತ್ವವಿಕಾಸದಲ್ಲಿರುವುದೇ ಅಲ್ಲದೆ ಮುಂದಾದರೂ ಹಾಗೆಯೇ ಇರುವುದೇ ಹೊರತು ಆ ಭಿನ್ನತ್ವವಿನಾಶದಿಂದ ಅದು ನಿರೂಪಿತವಾಗುವಹಾಗಿಲ್ಲ. ಹೀಗಿರುವಾಗ, ಭಿನ್ನಭಿನ್ನ ರಾಷ್ಟ್ರ ಮತ ಜಾತಿ ಭಾಷೆ ಮೊದಲಾದುವುಗಳೆಲ್ಲದರ ಸಂರಕ್ಷಣದಿಂದ ದೇಶೀಯವಿಕಾಸವು ಸಿದ್ಧವಾಗಬೇಕೇ ಹೊರತು ಏಕಭಾಗಸಂರಕ್ಷಣ ಮಾತ್ರದಿಂದ ಸಾಧ್ಯವಾಗುವುದಲ್ಲ. ಭರತಖಂಡದಲ್ಲಿ ಸ್ವರಾಜ್ಯಪಾಲನವೆಂದರೂ ಕೂಡ ಸರ್ವ ಪ್ರಜೆಗಳಿಗೂ ಸಮವಾಗಿ ಸಿದ್ಧವಾದ ಪರಿಪಾಲನವೇ ಹೊರತು ಅಲ್ಪಸಂಖ್ಯಾಕರಾದ ಪ್ರಜೆಗಳು ಮಾತ್ರ ಮಾಡಿಕೊಳ್ಳುವ ಪರಿಪಾಲನೆಯೆಂದರ್ಥವಲ್ಲ. ರಾಜ್ಯಪರಿಪಾಲನ ಪದ್ಧತಿಯನ್ನು [illegible]ಗಳೆಲ್ಲಾ ಗ್ರಹಿಸಿಕೊಳ್ಳುತ್ತ ಬರುವುದರಿಂದ ಆ ಪ್ರಜಾ[illegible] ಸುಸಾಧ್ಯವಾಗುತ್ತದೆ. ಅದುಕಾರಣ, ಜನಸಾಮಾನ್ಯಕ್ಕೂ ರಾಜ್ಯಾಂಗ ಪರಿಜ್ಞಾನವುಂಟಾಗುವಂತೆ ಮಾಡಲು ಅವಕಾಶವನ್ನು ಕಲ್ಪಿಸಿಕೊಡತಕ್ಕುದು ಸರ್ವ ಪ್ರಜಾಸಮುದ್ಧರಣವೇ ಧರ್ಮವಾಗುಳ್ಳ ಪ್ರಭುತ್ವಕ್ಕೆ ದುರ್ನಿವಾರವಾದ ಕರ್ತವ್ಯವಾಗಿರುತ್ತದೆ. ಈ ಕರ್ತವ್ಯಜ್ಞಾನದಿಂದಲೇ ಸ್ವಪರಿಪಾಲನೆಗೆ ಮೊದಲನೆ ಸೋಪಾನದಂತಿರುವ ಮ್ಯುನ್ಸಿಪಲ್ ಲೋಕಲ್‌ಬೋರ್ಡುಗಳ ಸ್ಥಿತಿಗತಿಯನ್ನು ಸುಧಾರಿಸುವುದಕ್ಕಾಗಿ ನಮ್ಮ ಗೌರ್ನಮೆಂಟಿನವರು ೧೯೧೪ ನೆ ವರ್ಷದಲ್ಲೇ ಪ್ರಯತ್ನಿಸಿದರು. ಇದಕ್ಕೆ ಅವರು ಪ್ರಯತ್ನಿಸಿದಾಗ ಅವರುಏನು ಹೇಳಿಕೊಂಡರೆಂದರೆ—

“ಆಯಾ ಸ್ಥಳದ ಕಾರ್ಯಗಳ ಆಡಳಿತದಲ್ಲಿ ಜನರ ಪ್ರತಿನಿಧಿಗಳನ್ನು ಇನ್ನೂ ಹೆಚ್ಚಾಗಿ ಸೇರಿಸಿಕೊಂಡು, ತಂತಮ್ಮ ಸ್ಥಳಿಕ ಸಂಘಗಳ ಧನವ್ಯಯದ ವಿಷಯದಲ್ಲಿ ನ್ಯಾಯವಾದ ಅಧಿಕಾರವನ್ನು ಅವರಿಗೆ ಹೆಚ್ಚುಮಾಡಿಕೊಟ್ಟು, ದೇಶದ ಆಡಳಿತದಲ್ಲಿ ಅವರು ನ್ಯಾಯವಾಗಿ ಮಾಡಬಹುದಾದ ಕರ್ತವ್ಯವನ್ನು ಮಾಡಲು ವಿಶೇಷಾಸಕ್ತಿಯುಂಟಾಗುವಂತೆ ಮಾಡಬೇಕಾಗಿದೆ” ಎಂದು ಪೀಠಿಕೆ ಹಾಕಿಕೊಂಡು ಉಪಕ್ರಮಿಸಿದರು. ಅದರಮೇಲೆ ಮ್ಯು|| ಲೋ|| ಬೋರ್ಡುಗಳ ವಿಧಿ ಸುಧಾರಣಾಕ್ರಮವನ್ನು ಸೂಚಿಸುವುದಕ್ಕೆ ೨ ಕಮಿಟಿಗಳನ್ನೇರ್ಪಡಿಸಿದರು. ಅವುಗಳ ವರದಿಯನ್ನು ತರಿಸಿಕೊಂಡುದಲ್ಲದೆ, ೧೯೧೬ ನೆ ವರ್ಷದಲ್ಲಿ ೧ ಕಾನ್ಫರೆನ್ಸೂ ಕೂಡ ರಾಜಧಾನಿಯಲ್ಲಿ ನಡೆಯಲು, ಅದರ ನಿರ್ಧಾರವನ್ನೂ ತರಿಸಿಕೊಂಡು, ಇವೆಲ್ಲ ಸೂಚನೆಗಳಾಧಾರದಮೇಲೆ ಸಿಟಿ, ಟವರ್, ಮೈನರ್ ಮ್ಯುನಿಸಿಪಾಲಿಟಿಗಳ ಮತ್ತೂ ಡಿಸ್ಟ್ರಿಕ್ಟ್ ತಾಲ್ಲೂಕು ಬೋರ್ಡು ಮೊದಲಾದುವುಗಳ ಅಧಿಕಾರವನ್ನೂ, ಪ್ರಜಾಪಕ್ಷದ ಸಭಿಕರುಗಳ ಸಂಖ್ಯಾಧಿಕ್ಯವನ್ನೂ, ಕರ್ತವ್ಯಪರಿಮಿತಿಯನ್ನೂ ಹೆಚ್ಚಿಸುವ ಒಂದು “ಮಸೂದೆಯನ್ನು” ಹಿಂದಣ ೧೯೧೬ ನೆ ವರ್ಷದ ಮ್ಯು|| ರೆಗ್ಯುಲೇಷನ್ನನ್ನು ತಿದ್ದುಪಾಟುಮಾಡುವುದಕ್ಕಾಗಿ ರಚಿಸಿ, ಅದನ್ನು ನಿಯಮನಿರ್ಮಾಣ ಸಭೆಯ ಚರ್ಚೆಗೆ ತಂದು ಅದರಮೇಲೆ ಸೆಲೆಕ್ಟ್ ಕಮಿಟಿಯವರ ಅಭಿಪ್ರಾಯವನ್ನೂ ತೆಗೆದುಕೊಂಡು, ಕಡೆಗೆ ಅದನ್ನು ಕಳೆದ ತಿಂಗಳ ಸಭೆಯಲ್ಲಿ ಅನುಮೋದನೆಗೊಳಿಸಿ, ಶ್ರೀಮನ್ಮಹಾರಾಜರವರ ಅನುಮೋದನೆಯಮೇಲೆ ವಿಧಿಯಾಗುವುದಕ್ಕೆ ಅದನ್ನು ಸಿದ್ಧಪಡಿಸಿದ್ದಾರೆ.

ಈ ವಿಧಿಯ ಸುಧಾರಣೆಗೆ ಉಂಟಾಗಿದ್ದ ಕಾರಣವೇನೋ ಅದನ್ನು ಮೇಲೆಯೇ ವಿವರಿಸಿದೆಯಷ್ಟೆ. ಆದರೆ ಆ ಸದುದ್ದೇಶವನ್ನು ಸಾರ್ಥಕಪಡಿಸತಕ್ಕ ಕ್ರಮವು ಮಾತ್ರ ಚೆನ್ನಾಗಿ ಅನುಸರಿಸಲ್ಪಡಲಿಲ್ಲ. ಈಗಣ ವಿಧಿಪ್ರಕಾರ ಬೋರ್ಡುಗಳಿಗೆ ಹೊಸಕಂದಾಯಸುಂಕ ಮೊದಲಾದುವುಗಳನ್ನು ವಿಧಿಸುವುದಕ್ಕೂ ಬೇಕಾದರೆ ಸಾಲವನ್ನು ತೆಗೆಯುವುದಕ್ಕೂ ಕೂಡ ಅಧಿಕಾರವಿದೆ. ಇಂಥ ಹೆಚ್ಚಿನ ಅಧಿಕಾರವುಳ್ಳ ಬೋರ್ಡುಗಳಲ್ಲಿ ಯಾರು ಹೆಚ್ಚಾಗಿ ಕಂದಾಯ ಮೊದಲಾದುವುಗಳನ್ನು ತೆರತಕ್ಕ ಪ್ರಜೆಗಳೋ ಅಂಥವರ ಸಂಖ್ಯೆಯು ಹೆಚ್ಚಾಗಿರಲು ಅವಕಾಶವಿಲ್ಲದೆ, ಒಟ್ಟು ಪ್ರಜಾಸಂಖ್ಯೆಯಲ್ಲಿ ಬಹಳ ಕಡಿಮೆಯಾಗಿಯೂ, ಅದರಂತೆ ಕಂದಾಯ ತೆರುವುದರಲ್ಲೂ ಕಡಿಮೆಯಾಗಿಯೂ ಇರತಕ್ಕ ಜನರೇ ಹೆಚ್ಚಾಗಿ ಸೇರಲು ಅವಕಾಶವಿರುವಂತಾದರೆ ಈ ಬೋರ್ಡುಗಳ ಕೆಲಸವು ಸರ್ವಪ್ರಜಾಹಿತಕರವಾಗಿಯೂ ನಿಷ್ಪಕ್ಷಪಾತವಾಗಿಯೂ ನಡೆಯುವುದಕ್ಕವಕಾಶವೆಲ್ಲಿರುವುದು?

ಈ ವಿಧಿ ಸುಧಾರಣೆಯ ಉದ್ದೇಶದಿಂದ ಮಾಡಲ್ಪಟ್ಟ ೨ ಕಮಿಟಿಗಳಲ್ಲೂ ರೈತರು, ವರ್ತಕರು, ಮಹಮ್ಮದೀಯರು ಮೊದಲಾದ ಪ್ರಮುಖ ಪ್ರಜೆಗಳ ಪ್ರತಿನಿಧಿಗಳನ್ನು ಕಮಿಟಿಗಳಲ್ಲಿ ಸೇರಿಸಿ ಅವರಭಿಪ್ರಾಯವನ್ನು ತೆಗೆದುಕೊಳ್ಳಲೇ ಇಲ್ಲ. ಮೊದಲನೆ ಕಮಿಟಿಯಲ್ಲಿದ್ದ ೧೫ ಮಂದಿ ಸಭಿಕರಲ್ಲಿ ೧೧ ಮಂದಿ ಸರ್ಕಾರದ ಉದ್ಯೋಗಿಗಳಾಗಿಯೂ ಉಳಿದ ೪ ಮಂದಿ ಬ್ರಾಹ್ಮಣ ವಕೀಲರಾಗಿಯೂ, ೨ ನೆ ಕಮಿಟಿಯಲ್ಲಿದ್ದ ೧೧ ಮಂದಿ ಸಭಿಕರುಗಳೊಳಗೆ ೭ ಮಂದಿ ಸರ್ಕಾರದುದ್ಯೋಗಿಗಳಾಗಿಯೂ, ೩ ಮಂದಿ ಬ್ರಾಹ್ಮಣ ವಕೀಲರಾಗಿಯೂ ಇದ್ದರು. ನಿಯಮನಿರ್ಮಾಣ ಸಭೆಯ ಸೆಲೆಕ್ಟ್ ಕಮಿಟಿಯಲ್ಲೂ ಕೂಡ ಏರ್ಪಟ್ಟ ೧೦ ಮಂದಿ ಸಭಿಕರಲ್ಲಿ ೯ ಮಂದಿಗಳು ಬ್ರಾಹ್ಮಣರು ಮತ್ತೂ ಪೆನ್ಷನ್ಡ್ ಆಫೀಸರುಗಳಾಗಿಯೂ, ಒಬ್ಬರು ಮಾತ್ರ ಪ್ರಜಾಸಾಮಾನ್ಯದ ಪ್ರತಿನಿಧಿಯಾದವರಾಗಿಯೂ ಇದ್ದರು. ಒಬ್ಬರ ಹೊರತು ಇವರೆಲ್ಲರ ಅಭಿಪ್ರಾಯಗಳೂ ಪ್ರಜಾಸಾಮಾನ್ಯದ ಶಕ್ತಿವಿಕಾಸ, ಸಹಾಯಾಧಿಕ್ಯ ಮೊದಲಾದುವುಗಳನ್ನು ಹೆಚ್ಚಿಸುವಂಥ ಸುಧಾರಣೆಗಳ ಸೂಚನೆಯನ್ನು ಮಾಡತಕ್ಕುವುಗಳಾಗಿಯೇ ಇರಲಿಲ್ಲ.

ಇದುವರೆಗೆ ಇರುವ ಲೋಕಲ್‌ಬೋರ್ಡು, ಮ್ಯುನ್ಸಿಪಲ್ ಬೋರ್ಡು ಮೊದಲಾದುವುಗಳಲ್ಲಿ ಪ್ರಜಾಸಾಮಾನ್ಯದ ಮತಕ್ಕೆ ಆಧಿಕ್ಯವಿಲ್ಲದಿರುವುದರಿಂದ ವಾಚಾಲುಗಳಾದ ಒಂದೇತೆರದ ಜನವರ್ಗದವರ ಪ್ರಾಬಲ್ಯ ಪಕ್ಷಪಾತಗಳಿಂದ ಇತರ ಸಾಮಾನ್ಯ ಪ್ರಜೆಗಳು ಎಷ್ಟು ಅನರ್ಥವನ್ನನುಭವಿಸಿರುವರೆಂಬುದನ್ನು ವಿವರಿಸುವುದಕ್ಕೆ ತುಳಿತರೆ ಭಾರತ ರಾಮಾಯಣಗಳೆರಡನ್ನೂ ಮೀರಿದಷ್ಟು ಗ್ರಂಥಗಳಾಗುವುವು. ಇಂಥ ಕಷ್ಟವನ್ನೆಲ್ಲಾ ಅನುಭವಿಸಿರುವ ಸಾಮಾನ್ಯಪ್ರಜೆಗಳು ಈಗ ಉದಾಸೀನಮಾಡತಕ್ಕ ಸಮಯವಲ್ಲವೆಂದು ತಿಳಿದು, ಬೆಂಗಳೂರು, ಮೈಸೂರು, ಕೋಲಾರ—ಈ ಮುಖ್ಯಪಟ್ಟಣಗಳಲ್ಲಿ ಸಭೆಗೂಡಿ, ಕೋಮುವಾರು ಪ್ರತಿನಿಧಿಗಳಿಗಾಗಿ ಬೋರ್ಡುಗಳಲ್ಲಿ ಕೆಲ ಸ್ಥಾನಗಳನ್ನು ಮೀಸಲಾಗಿಡುವಂತೆ ವಿಧಿಯನ್ನು ಮಾಡಿಕೊಟ್ಟರೇ ಪ್ರಜಾಹಿತವೂ ಸರ್ಕಾರದ ಸದುದ್ದೇಶವೂ ನೆರವೇರುವುವೆಂದು ನಿರ್ಧರಿಸಿ, ಬಿನ್ನೈಸುತ್ತ ಬಂದರು. ನಿಯಮನಿರ್ಮಾಣ ಸಭೆಗೂ ಈ ವಿಷಯವು ಶ್ರುತಿಪಡಿಸಲ್ಪಟ್ಟಿತು. ಅಲ್ಲಿ ಸಾಮಾನ್ಯ ಪ್ರಜಾಪಕ್ಷದವರಾಗಿದ್ದ ಸಭಿಕರೆಲ್ಲಾ ಇದಕ್ಕೆ ಅನುಮೋದನೆಯನ್ನಿತ್ತರು. ಸರ್ಕಾರದ ಉಪಕಾರ ವೇತನವನ್ನು ಪಡೆಯುತ್ತ ದಾಕ್ಷಿಣ್ಯಬದ್ಧರಾಗಿರುವವರೂ, ಸರ್ಕಾರದುದ್ಯೋಗದಲ್ಲಿದ್ದುಕೊಂಡು ಸ್ವತಂತ್ರಮತ ಪ್ರದಾನಕ್ಕೆ ಅವಕಾಶವಿಲ್ಲದ ಒಬ್ಬಿಬ್ಬರೂ ಹಿಂದುಳಿದ ಜನವರ್ಗದವರಿಗೆ ಸೇರಿದವರಾಗಿದ್ದರೂ ತಮ್ಮ ಮನಸ್ಸಾಕ್ಷಿಗೆ ಅನುಗುಣವಾದ ಅಭಿಪ್ರಾಯವನ್ನು ಕೊಡುವುದಕ್ಕೆ ಯತ್ನವಿಲ್ಲದೆ, ವಿರುದ್ಧವಾದಭಿಪ್ರಾಯವನ್ನೇ ಕೊಟ್ಟರು. ಉಳಿದ ಮುಂದಾದ ಜನವರ್ಗದವರೆಲ್ಲರೂ ಪ್ರತಿರೋಧಿಸುವುದಂತೂ ಕಂಡೇ ಇದೆ. ಆದರೆ ಕೋಮುವಾರು ಪ್ರತಿನಿಧಿಗಳಿಗೆ ಅವಕಾಶ ಕೊಡಬೇಕೆಂಬ ಸಂಬಂಧವಾಗಿ ಕೊಟ್ಟಿರುವ ಅರ್ಜಿಯನ್ನೂ ತತ್ಸಂಬಂಧವಾದ ಕಾಗದಪತ್ರಗಳನ್ನೂ ಸರ್ಕಾರದವರು ಮೊದಲೇ ಪ್ರಜಾಸಾಮಾನ್ಯಾಭಿಪ್ರಾಯಕ್ಕಾಗಿ ಪ್ರಕಟಮಾಡಲೇ ಇಲ್ಲ. ಅವುಗಳನ್ನು ಸಭೆಯಮುಂದೆ ತೆಗೆದಿಡಬೇಕೆಂದು ಕೇಳಿದರೂ, ಶ್ರೀಮನ್ಮಹಾರಾಜರವರ ಸನ್ನಿಧಿಗೆ ಈ ವಿಷಯವು ಹೋಗಿ ವಿಚಾರಗೊಂಡು ಬರುವವರೆಗೂ ಅವಕಾಶಕೊಡಿರೆಂದು ಸಾಮಾನ್ಯ ಪ್ರಜಾಪಕ್ಷದವರು ಪ್ರಾರ್ಥಿಸಿಕೊಂಡರೂ ಅದೆಲ್ಲಾ ಅರಣ್ಯರೋದನವಾಯಿತು. ಒಂದೇ ತೆರದ ಪ್ರಜಾವರ್ಗದವರೇ ಸಾರ್ವಜನಿಕ ಸಭೆಗಳಲ್ಲಿ ಹೆಚ್ಚಿದರೆ ಎಂಥ ವಿಷಮಪರಿಣಾಮವುಂಟಾಗುವುದೆಂಬುದಕ್ಕೆ ಆ ಸಭೆಯ ಕಾರ್ಯಕ್ರಮವೇ ಮೊದಲನೆಯ ನಿದರ್ಶನವಾಗಿ ಪರಿಣಮಿಸಿತು. ಈ ಕಾರಣದಿಂದ ಪ್ರಜಾಸಾಮಾನ್ಯಕ್ಕೂ ಬೇರೆಬೇರೆ ಪ್ರಾತಿನಿಧ್ಯವನ್ನು ಕೊಡುವುದರ ಅವಶ್ಯಕತೆಯನ್ನು ಈ ಸಭೆಯು ಹಂತ್ರಿಯೇ ಸಿದ್ಧಪಡಿಸಿಕೊಟ್ಟಂತಾಯಿತು. ದುರ್ಬಲವಾದ ಪ್ರಜಾಸಾಮಾನ್ಯದ ಸ್ವತಂತ್ರಾಭಿಪ್ರಾಯವ್ಯಾಪ್ತಿ ಸ್ವಶಕ್ತಿ ವಿಕಾಸಾದಿಗಳಿಗೆ ಎಷ್ಟುಮಟ್ಟಿನ ಗದಾಪ್ರಹಾರವು ನಡೆಯುತ್ತಲಿವೆಯೆಂಬುದನ್ನು ಶ್ರೀಮನ್ಮಹಾರಾಜರವರು ಈ ವಿದ್ಯಮಾನಗಳಿಂದೆಲ್ಲಾ ತಿಳಿದು, ಸರ್ವಪ್ರಜಾಸಮುದ್ಧಾರಕ್ಕೆ ಅವಶ್ಯಕವಾದ ಶಾಶ್ವತಮಾರ್ಗವನ್ನು ಸ್ಥಾಪಿಸಿಕೊಡದಿದ್ದರೆ ಸಾಮಾನ್ಯ ಪ್ರಜೆಗಳು ಆತ್ಮೋದ್ಧಾರಕ್ಕೆ ಎಂದಿಗೂ ಶಕ್ತರಾಗಲಾರರು.

ರಾಜಧಾನಿಯ ಆನರರಿ ಪ್ರೆಸಿಡೆಂಟರು.

ಮೈಸೂರು ಪಟ್ಟಣಕ್ಕೆ ಸರ್ಕಾರದ ಉದ್ಯೋಗಿಗಳಲ್ಲದೆ ಸಂಬಳವನ್ನು ತೆಗೆದುಕೊಳ್ಳದೆ ಗೌರವಾರ್ಥವಾಗಿ ಕೆಲಸಮಾಡತಕ್ಕ ಮ್ಯುನ್ಸಿಪಲ್ ಪ್ರೆಸಿಡೆಂಟರಾಗಿ ಮೊಟ್ಟಮೊದಲು ಬಂದವರು ದಿವಾನ್ ಬಹದ್ದೂರ್ ಸಿ. ಶ್ರೀಕಂಠೇಶ್ವರಯ್ಯರವರಾಗಿರುತ್ತಾರೆ. ಇವರು ಈ ಕೆಲಸಕ್ಕೆ ಒಪ್ಪಿದುದು ಅವರ ದೇಶಸೇವಾತತ್ಪರತೆಯನ್ನು ವ್ಯಕ್ತಪಡಿಸಿರುತ್ತದೆ. ಅದಕ್ಕಾಗಿ ಅವರಿಗೆ ನಾವು ಸಂತೋಷದಿಂದ ಸ್ವಾಗತವನ್ನು ಮಾಡುತ್ತೇವೆ. ಇವರು ತಾ|| ೧೧ ರಲ್ಲಿ ಈ ಪದವಿಯನ್ನು ವಹಿಸುವರು. ರಾಜಧಾನಿಯನ್ನು ಸರ್ವವಿಧದಿಂದಲೂ ಪುರೋವೃದ್ಧಿಗೆ ತರಬೇಕೆಂಬ ಕುತೂಹಲವು ನಮ್ಮ ಶ್ರೀಮನ್ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ವಿಶೇಷವಾಗಿರುತ್ತದೆ. ಅದನ್ನು ಸಂಪೂರ್ಣಫಲಪ್ರದವಾಗುವಂತೆ ಮಾಡುವುದಕ್ಕೆ ನಿಷ್ಪಕ್ಷಪಾತಿಗಳೂ ಪರಹಿತ ಪರಾಯಣರೂ ಆದ ಮ|| ಶ್ರೀಕಂಠೇಶ್ವರಯ್ಯರ್‌ರವರಂಥ ಮ್ಯು|| ಪ್ರೆಸಿಡೆಂಟರು ಒದಗಿದುದು ಕಬ್ಬಿನಮೇಲೆ ಜೇನಿಟ್ಟಂತೆಯಾಗಿರುವುದೆಂದು ಎಣಿಸುವೆವು. ಇವರು ನಮ್ಮ ಸಂಸ್ಥಾನದಲ್ಲಿ ಚಿರಕಾಲ ದೊಡ್ಡದೊಡ್ಡ ಅಧಿಕಾರಸ್ಥಾನಗಳನ್ನು ನಿರ್ವಹಿಸಿ ಒಳ್ಳೆ ಹೆಸರನ್ನು ಪಡೆದು, ಕಟ್ಟಕಡೆಗೆ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಪದವಿಯಿಂದ ವಿಶ್ರಾಂತಿಯನ್ನು ಪಡೆದವರಾಗಿರುತ್ತಾರೆ. ಇವರು ನಿರ್ವಹಿಸಿದ ಪ್ರತಿಕಾರ್ಯದಲ್ಲೂ ಲೋಕಪ್ರಿಯತೆಯನ್ನೂ, ಸರ್ಕಾರದ ಮೆಚ್ಚುಗೆಯನ್ನೂ ಪಡೆದು ಬಂದಿರುತ್ತಾರೆ. ಕೋಲಾರದ ಡಿ|| ಕಮಿಷನರಾಗಿದ್ದಾಗ ಆ ಪಟ್ಟಣದ ಆರೋಗ್ಯಸಂಸ್ಕರಣಕ್ಕೂ ಅಲಂಕರಣಕ್ಕೂ ವಿಶೇಷ ಶ್ರಮವನ್ನು ವಹಿಸಿ, ಅಲ್ಲಿಯ ಪ್ರಜೆಗಳ ಪೂರ್ಣ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಡಿಸ್ಟ್ರಿಕ್ಟ್ ಲೋಹಮಾರ್ಗಗಳೊಳಗೆ ಮೊಟ್ಟಮೊದಲನೆಯದಾಗಿ ಸ್ಥಾಪಿತವಾದ ಕೋಲಾರ ಚಿಂತಾಮಣಿ ಲೋಹಮಾರ್ಗದ ಸ್ಥಾಪನೆಯ ಕೀರ್ತಿಯು ಇವರ ಭಾಗಕ್ಕೆ ಸೇರಿದುದಾಗಿದೆ. ಇವರಲ್ಲಿ ಇಷ್ಟು ಕರ್ತವ್ಯದಕ್ಷತೆಯೂ ಪರೋಪಕಾರನಿರತತೆಯೂ ಇದ್ದರೂ ಪಕ್ಷಪಾತವೂ, ದುರಭಿಮಾನವೂ, ದುರಹಂಕಾರವೂ ಲೇಶವೂ ಇರುವುದಿಲ್ಲ. ಇವರು ಪ್ರಜಾಹಿತವೇ ತಮ್ಮ ಶ್ರಮದ ಪ್ರತಿಫಲವೆಂದು ತಿಳಿದುಕೊಂಡಿರತಕ್ಕವರಾಗಿದ್ದಾರೆ. ಆದುದರಿಂದಲೇ ನಮ್ಮ ಸರ್ಕಾರದವರು ಇವರನ್ನು ರಾಜಧಾನಿಯ ಆ|| ಪ್ರೆಸಿಡೆಂಟ್ ಕೆಲಸಕ್ಕೆ ಆರಿಸಿದುದೂ, ಅದಕ್ಕೆ ಇವರು ಒಪ್ಪಿದುದೂ ಇವೆರಡೂ ಕೂಡ ರಾಜಧಾನಿಯ ನಿವಾಸಿಗಳ ಸುಕೃತ ಪರಿಪಾಕವೆಂದು ಎಣಿಸುತ್ತೇವೆ. ಇದುವರೆಗೆ ಪ್ರೆಸಿಡೆಂಟರಾಗಿದ್ದ ಮ|| ಟಿ. ಲಕ್ಷ್ಮಣರಾಯರ ಕಾಲದಲ್ಲೂ ರಾಜಧಾನಿಯು ಎಷ್ಟೋ ಸಂಸ್ಕರಣಾಲಂಕರಣಗಳನ್ನು ಪಡೆದರೂ, ಅವರ ಕಾರ್ಯಭಾರಗಳಲ್ಲಿ ಕೆಲವು ನಿವಾರಣೀಯವಾದ ನ್ಯೂನಾತಿರೇಕಗಳಿದ್ದುವು. ಮತ್ತೂ ಅವರಿಗೆ ಟ್ರಸ್ಟ್‌ಬೋರ್ಡ್ ಚೇರ್ಮನ್ ಅಧಿಕಾರವೂ ಕೂಡ ಸೇರಿದ್ದಿತು. ಈಗಣ ಪ್ರೆಸಿಡೆಂಟರಿಗೆ ಮ್ಯುನ್ಸಿಪಲ್‌ಪ್ರೆಸಿಡೆಂಟ್ ಅಧಿಕಾರವೊಂದೇ ಕೊಡಲ್ಪಟ್ಟಿರುವುದು. ಟ್ರಸ್ಟ್‌ಬೋರ್ಡು ಚೇರ್ಮನ್ ಪದವಿಗೆ ರಾ|| ಬ|| ಸುಬ್ಬಾಯರವರು ನಿಯಮಿಸಲ್ಪಟ್ಟಿರುವರು. ಪ್ರೆಸಿಡೆಂಟರ ಕೈಕೆಳಗೆ ವೈಸ್‌ಪ್ರೆಸಿಡೆಂಟರೊಬ್ಬರಿರುವರು. ಹೀಗೆ ಮೂರು ಜನರಿಂದ ನಿರ್ವಹಿಸಲ್ಪಡಬೇಕಾದಷ್ಟು ಕಾರ್ಯಭಾರವು ರಾಜಧಾನಿಯಲ್ಲಿ ಅಷ್ಟೇನೂ ಇರಲಾರದು. ಸಂಸ್ಥಾನದ ದಿವಾನಗಿರಿಯನ್ನು ಕೊಟ್ಟರೂ ನಿರ್ವಹಿಸಬಲ್ಲವರಾಗಿರುವ ಮ|| ಅಯ್ಯರ್‌ರವರಿಗೆ ಸಾಮಾನ್ಯವಾದ ಒಂದು ಸಿಟಿ ಮ್ಯುನ್ಸಿಪಲ್ ಪ್ರೆಸಿಡೆಂಟ್ ಪದವಿಯ ಕಾರ್ಯಭಾರವು ಒಂದುಲೆಕ್ಕವಲ್ಲ. ಕಾರ್ಯದಕ್ಷರಿಗೆ ತಕ್ಕಷ್ಟು ಕೈತುಂಬಾ ಕೆಲಸವಿಲ್ಲದೆಹೋಗುವುದು ಅವರ ಉತ್ಸಾಹಕ್ಕೆ ಭಂಗಕಾರಿಯೇ ಆಗುವುದು. ಅದುಕಾರಣ ಮ|| ಲಕ್ಷ್ಮಣರಾಯರಿಗೆ ಸೇರಿದ್ದಂತೆ ಎರಡು ಕಾರ್ಯಗಳನ್ನೂ ಇವರಿಗೇ ವಹಿಸಿದ್ದರೆ ಅನುಕೂಲವಾಗಿರುತ್ತಿತ್ತು. ಇಂಜನಿಯರಿಂಗ್ ಸಹಾಯಕ್ಕೆ ಟ್ರಸ್ಟ್‌ಬೋರ್ಡಿನ ಇಂಜನಿಯರಿದ್ದೇ ಇದ್ದಾರೆ. ಇದನ್ನು ಸರ್ಕಾರದವರು ಮತ್ತೊಮ್ಮೆ ವಿಚಾರಮಾಡುವವರಾಗಲೆಂದು ಕೋರುತ್ತೇವೆ.

ಆದರೆ ಈ ಸಂದರ್ಭದಲ್ಲಿ ತೋರುವ ಮತ್ತೊಂದು ವಿಷಯವೇನೆಂದರೆ: ಪ್ರಜಾನಿಯುಕ್ತರಾದ ಅಧಿಕಾರಿಗಳಿಂದ ಸ್ಥಳಿಕ ಸರ್ಕಾರಗಳ ಕಾರ್ಯವು ನಿರ್ವಹಿಸುವಂತಾಗಬೇಕೆಂಬುದೂ, ಅವುಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಉಚ್ಚದಶೆಗೆ ತರಬೇಕೆಂಬುದೂ ಪ್ರಭುತ್ವದವರ ಸಂಕಲ್ಪವಾಗಿರುವಾಗ, ಇಂಥ ಸಿಟಿ ಮ್ಯುನ್ಸಿಪಾಲಿಟಿಗಳಿಗೂ ಕೂಡ ಅಲ್ಲಲ್ಲಿಯ ಕೌನ್ಸಿಲರುಗಳೇ ತಮ್ಮಲ್ಲಿಯ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳುವುದಕ್ಕೆ ಅವಕಾಶವನ್ನು ಕೊಡದೆ, ತಮಗೆ ತೋಚಿದ ಅಥವಾ ತಮ್ಮನ್ನು ಅನುಸರಿಸಿಕೊಂಡಿದ್ದ ಯಾರಾದರೊಬ್ಬೊಬ್ಬರನ್ನು ಇಂಥ ಅಧಿಕಾರಗಳಿಗೆ ತಂದರೆ, ಘನತರವಾದ ಸರ್ಕಾರದ ಉದ್ದೇಶವು ನೆರವೇರುವುದು ಹೇಗೆ? ಟವರ್ ಮ್ಯುನ್ಸಿಪಾಲಿಟಿಗಳ ವೈಸ್‌ಪ್ರೆಸಿಡೆಂಟ್ ಪದವಿಗಳಿಗೂ ಕೂಡ ಪ್ರಭುತ್ವದವರು ಹೀಗೆಯೇ ಮಾಡುತ್ತ ಬಂದಿದ್ದಾರೆ. ಬೊಂಬಾಯಿ ಮದ್ರಾಸ್ ಅಧಿಪತ್ಯಗಳಲ್ಲಿ ಅಂಥ ಪದ್ಧತಿಯನ್ನು ಸರ್ಕಾರದವರು ಬಿಟ್ಟು ಪ್ರಜಾನಿಯುಕ್ತರಾದ ಅಧಿಕಾರಿಗಳನ್ನೇ ನಿಯಮಿಸಿಕೊಳ್ಳುವುದಕ್ಕೆ ಆಯಾ ಬೋರ್ಡುಗಳಿಗೆ ಸ್ವಾತಂತ್ರ್ಯವನ್ನು ಅವರು ಕೊಟ್ಟಿರುವಂತೆಯೇ ನಮ್ಮ ಪ್ರಭುತ್ವದವರಾದರೂ ಸಿಟಿ ಟವರ್ ಮ್ಯುನಿಸಿಪಾಲಿಟಿಗಳಲ್ಲೆಲ್ಲಾ ವೈಸ್‌ಪ್ರೆಸಿಡೆಂಟರನ್ನಾದರೂ ಸ್ಥಳದ ಕೌನ್ಸಿಲರುಗಳೇ ಆರಿಸಿಕೊಳ್ಳುವಂಥ ಸ್ವಾತಂತ್ರ್ಯವನ್ನು ಕೊಟ್ಟು ತಾವು ಕಲ್ಪಿಸುವ ವಿಧಿಗಳಿಗೆ ಸಾರ್ಥಕತೆಯನ್ನೂ ಗೌರವವನ್ನೂ ಇನ್ನುಮೇಲಾದರೂ ಉಂಟುಮಾಡುವವರಾಗಬೇಕೆಂದು ಕೋರುವೆವು.

ಯುದ್ಧವಾರ್ತೆಯು.

ಪಶ್ಚಿಮರಣರಂಗದಲ್ಲಿ ಇಂಗ್ಲೀಷ್ ಫ್ರೆಂಚ್ ಬೆಲ್ಜಿಯಂ ಪೋರ್ಚುಗಲ್ ಅಮೇರಿಕಾ ಸೇನಾಪಙ್ಕ್ತಿಗಳ ಮುಂದಿರುವ ಜರ್ಮನರಿಗೂ ಇವರಿಗೂ ಒಂದೊಂದು ಕಡೆ ಚೂಟಿಯ ಕಾಳಗಗಳು ನಡೆಯುತ್ತಲೇ ಇರುವುವು. ಉಭಯಪಕ್ಷದವರ ಸನ್ನಾಹವೂ ವರ್ಣನಾತೀತವಾಗಿರುವುದು. ಈ ಸನ್ನಾಹದಿಂದೆಲ್ಲಾ ನಡೆಯುವ ಈ ವರ್ಷದ ಮಹಾಯುದ್ಧದಿಂದ ಜಯಪರಾಜಯಗಳು ಎತ್ತೆತ್ತ ತಿರುಗುವುವೋ ನೋಡಬೇಕು. ಅಂತು ಇಷ್ಟರಲ್ಲೇ ಭೀಕರಮಹಾಯುದ್ಧಗಳು ಜರುಗುವುದರಲ್ಲಿವೆ. ಕಳೆದ ವಾರದಲ್ಲಿ ಫ್ರೆಂಚರು ಮ್ಯೂಜ ನದಿಗೆ ಪೂರ್ವದಲ್ಲಿ ಒಂದು ಕಡೆ ಮಂಜಿನಿಂದ ಕೂಡಿದ ಗಾಳಿ ಮಳೆಯು ಸುರಿಯುತ್ತಿರುವಾಗ ಅಕಸ್ಮಾತ್ತಾಗಿ ಶತ್ರುಗಳಮೇಲೆ ಬಿದ್ದು ಅವರ ಸೇನಾಪಙ್ಕ್ತಿಗಳು ೩ ನ್ನು ಭೇದಿಸಿಕೊಂಡು ೪ ನೆ ಪಙ್ಕ್ತಿಗೂ ಕೂಡ ಹೋಗಿ ಸೇರಿದರು. ಅಲ್ಲಿ ಪೂರ್ಣವಾದ ವಿಜಯವು ಇವರಿಗೆ ಲಭಿಸಿತು. ಅದೇ ಸಮಯದಲ್ಲಿ ಜರ್ಮನರು ಫ್ರೆಂಚ್ ಸೇನೆಯ ಎಡಗಡೆಯಲ್ಲಿ ಮೇಲೆಬಿದ್ದು ಪ್ರತಿಭಟಿಸಿ ಯುದ್ಧಮಾಡಿ ಬಹಳ ನಷ್ಟಪಟ್ಟು ಹಿಮ್ಮೆಟ್ಟಿದರು.

ರಷ್ಯನರು ಜರ್ಮನರಬಳಿಗೆ ಬಲಬಿದ್ದುಹೋದುದರಿಂದ ಜರ್ಮನರ ದುರಾಶೆಯೂ ಕುತಂತ್ರವೂ ಮಿತಿಮೀರಿ, ಏಷ್ಯಾಖಂಡದಲ್ಲೂ ಯುದ್ಧಾಗ್ನಿಜ್ವಾಲೆಯು ಹರಡಬಹುದಾಗಿದೆ. ಜರ್ಮನರಿಗೆ ಭರತಖಂಡದಮೇಲೆ ಅಕ್ಷಿಯಿದೆ. ತುರ್ಕಿಯವರನ್ನು ಅವರು ಸರಿಮಾಡಿಕೊಂಡಿದ್ದುದು ಮೆಸಪಟೋಮಿಯಾದ ಮೇಲಿಂದ ಬಸ್ಸಾರಾದ ಮಾರ್ಗವಾಗಿ ಈ ದೇಶದ ಕಡೆಗೆ ಸಾಗಿಬರಬೇಕೆಂಬುದಕ್ಕಾಗಿಯೇ. ಆದರೆ ದೀರ್ಘದರ್ಶಿಗಳಾದ ಆಂಗ್ಲಜನರು ತುರ್ಕಿದೇಶದ ಮೆಸಪಟೋಮಿಯಾ ಪಾಲೆಸ್ಟೈನ್ ಅರೇಬ್ಯ ಮೊದಲಾದ ಭಾಗಗಳಲ್ಲಿ ಜಯಿಸಿಕೊಂಡ ಮಹಾಜಯದಿಂದಲೂ ನೇತಾಕ್ರಮದಿಂದಲೂ, ಈ ಮಾರ್ಗದ ಅವರ ಆಶೆಯು ನಿರ್ಮೂಲವಾಗಿಹೋಯಿತು. ಈಗ ಜರ್ಮನರು ರಷ್ಯಾದೇಶದ ಸೈಬೇರಿಯಾ ಭಾಗವನ್ನೆಲ್ಲಾ ಆಕ್ರಮಿಸಿ, ಅಲ್ಲಿಂದ ಪಸಿಫಿಕ್‌ಸಾಗರಕ್ಕೂ ತಲೆಹಾಕುವುದಕ್ಕೆ ಹಿಂದೆಗೆಯಲಾರರು. ಆಗ ಭರತಖಂಡಕ್ಕೆ ಅಪಾಯಕರವಾಗುವುದು. ಅಲ್ಲದೆ ಜಪಾನರು ರಷ್ಯಾದವರಿಗೆ ಸಹಾಯಮಾಡುವುದಕ್ಕೆ ಒಪ್ಪಿಕೊಂಡಿದ್ದ ಪ್ರಕಾರ ಗೊತ್ತುಗುರಿಯಿಲ್ಲದಷ್ಟು ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನು ಸೈಬೇರಿಯಾದ ಲೋಹಮಾರ್ಗಗಳಲ್ಲಿ ಉದ್ದಕ್ಕೂ ಅಡಕಿರುವರು. ಆ ಲೋಹಮಾರ್ಗವೂ ಸಾಮಗ್ರಿಗಳೂ ಕೂಡ ಜರ್ಮನರಿಗೆ ಈಗ ಸಿಕ್ಕಿಹೋದರೆ ಅಪಾಯವು ಇನ್ನೂ ಹೆಚ್ಚುವುದು. ಅದುಕಾರಣ ಮಿತ್ರಮಂಡಲಿಯವರು ತಡಮಾಡದೆ ಅದನ್ನೆಲ್ಲಾ ಆಕ್ರಮಿಸಿಕೊಳ್ಳಬೇಕಾಗಿದೆ. ಈ ಕೆಲಸವನ್ನು ಬೇಗನೆ ನೆರವೇರಿಸುವುದಕ್ಕೆ ಮಿತ್ರಮಂಡಲಿ ಪಕ್ಷದ ಜಪಾನರಿಗೆ ಇರುವಷ್ಟು ಸೌಕರ್ಯವು ಇತರರಿಗಿರುವುದಿಲ್ಲ. ಅವರಾದರೂ ಈ ಕೆಲಸಕ್ಕೆ ಸಿದ್ಧರಾಗಿದ್ದಾರೆ. ಆದರೆ ಅಮೇರಿಕನ್ನರು ಮಾತ್ರ ಜಪಾನರ ವಿಷಯದಲ್ಲಿ ಸ್ವಲ್ಪ ಸಂಶಯಗೊಂಡು ತಮ್ಮ ಸೈನ್ಯವನ್ನೂ ಜಪಾನರ ಜತೆಗೆ ಕಳುಹಿಸಿಕೊಡುತ್ತೇವೆಂದು ಹೇಳುತ್ತಿದ್ದಾರೆ. ಹಾಗೆ ಅವರು ಮಾಡುವುದಾದರೆ ಪಶ್ಚಿಮರಂಗದಲ್ಲಿ ಅವರು ಮಾಡಬೇಕಾಗಿರುವ ಸೇನಾಸಹಾಯದಲ್ಲಿ ಕೊರತೆಬೀಳಬಹುದು. ಅದೂ ಮಿತ್ರಮಂಡಲಿಗೆ ಹಾನಿಕರವು. ಜಪಾನರಾದರೋ ನೀವುಗಳು ಈ ಭಾಗದ ಯುದ್ಧಪ್ರಕರಣದ ಭಾರವನ್ನು ಹಚ್ಚಿಕೊಳ್ಳಬೇಡಿ. ನಮ್ಮಲ್ಲಿ ನಂಬುಗೆಯಿಟ್ಟು ನಮಗೇ ಇದರ ನಿರ್ವಾಹಭಾರವನ್ನು ಹೊರಿಸಿಬಿಡಿ ಎಂದು ಹೇಳುತ್ತಿದ್ದಾರೆ. ಈಚೆಗೆ ಅಮೇರಿಕನ್ನರೂ ಕೂಡ ಇಂಗ್ಲೀಷ್, ಫ್ರೆಂಚ್, ಇಟಲಿಯವರ ಅಭಿಪ್ರಾಯದಂತೆಯೇ ನಡೆದುಕೊಳ್ಳಲು ಒಪ್ಪಿದರೆಂದು ವಾರ್ತೆ ಬಂದಿದೆ. ಇದನ್ನು ತಿಳಿದು ಜರ್ಮನರು ಆಗಲೇ ಆಗ್ರಹಪರವಶರಾಗಿದ್ದಾರೆ. ರಷ್ಯಾದಲ್ಲಿ ತಮಗುಂಟಾಗುವ ಲಾಭಕ್ಕೆ ಇತರರು ಅಡ್ಡಿಮಾಡುವುದಾದರೆ ರಷ್ಯನರಿಗೆ ಬೇಕಾದ ಸಹಾಯಮಾಡಿ, ಅವರ ಜತೆಯಲ್ಲಿ ಇತರರಮೇಲೆ ಯುದ್ಧಮಾಡುವುದಕ್ಕೆ ಅಣಿಯಾಗುವೆವೆಂಬ ಧ್ವನಿಯನ್ನು ಆ ದೇಶದ ಪತ್ರಿಕೆಗಳು ಸೂಚಿಸುತ್ತಿವೆ. ಹೀಗೆ ಸೈಬೇರಿಯಾದಲ್ಲಿ ಯುದ್ಧವಾದರೂ ಕೂಡ ಮಿತ್ರಮಂಡಲಿಗೆ ಲಾಭವೇ. ಏಕೆಂದರೆ ಶತ್ರುಗಳ ಕೆಲ ಸೈನ್ಯವು ಅತ್ತಕಡೆಗೆ ಹೋಗಬೇಕಾಗುವುದು. ದಕ್ಷಿಣ ಪಶ್ಚಿಮ ರಂಗಗಳಲ್ಲಿ ಅವರ ಬಲವು ಸ್ವಲ್ಪ ಕಡಿಮೆಯಾಗುವುದು. ಜಪಾನರಿಗಾದರೋ ಚೀನಾದವರೂ ಕೂಡ ಸಹಾಯವಾಗಿರಲು ಸಿದ್ಧರಾಗಿದ್ದಾರೆ.

ಒಳದೇಶದ ವೃತ್ತಾಂತಗಳು.

ಶ್ರೀಯುವರಾಜರು ಪರಿವಾರಸಮೇತ ಕಳೆದ ತಾ|| ೫ ರಲ್ಲಿ ಮದ್ರಾಸಿನಿಂದ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು.

ಮುನಸೀಫ್ ಮ|| ಬಿ. ರಂಗಯ್ಯಂಗಾರ್, ಬಿ.ಎ., ಬಿ.ಎಲ್., ರವರು ೩ನೆಯ ತರಗತಿಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಸರ್ಕಾರದವರು ಗಾಂಜಾಮೇಲಣ ಸುಂಕವನ್ನು ೮೦ ತೋಲದ ೧ ಸೇರಿಗೆ ೧೨|| ರೂ. ಇಂದ ೧೫ ರೂ. ಗೆ ಬರುವ ಜುಲೈ ತಾ|| ೧ ರಿಂದ ಹೆಚಿಸುತ್ತಾರೆ.

ಇಂಡ್ಯಾದೇಶದ ರಕ್ಷಣಶಾಸನವು ಕಳೆದ ಫೆಬ್ರವರಿ ತಾ|| ೨೪ ರಿಂದ ಮೈಸೂರು ಸಂಸ್ಥಾನಕ್ಕೂ ಅನ್ವಯಿಸಲ್ಪಡುವುದೆಂದು ಎಕ್ಸ್ಟ್ರಾರ್ಡಿನರಿ ಗೆಜೆಟ್ಟಿನ ಮೂಲಕ ಪ್ರಕಟಿಸಲ್ಪಟ್ಟಿದೆ.

ಮೈಸೂರು ಕಲೇಜಿಯೇಟ್ ಹೈಸ್ಕೂಲ್ ಅ|| ಮ್ಯಾಸ್ಟರಾಗಿದ್ದ ಮ|| ಲಕ್ಷ್ಮೀಪತಯ್ಯ ಬಿ. ಎ. ಯವರು ಮೈಸೂರು ಸಂಸ್ಕೃತ ಕಲಾಶಾಲೆಯ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟಿದ್ದಾರೆ.

ಸರ್ದಾರ್ ಕಾಂತರಾಜ ಅರಸ್ ಬಿ.ಎ. ಸಿ.ಎಸ್.ಐ. ಯವರು ಕೊಲಂಬೋವಿನಿಂದ ಬೆಂಗಳೂರಿಗೆ ದಯಮಾಡಿಸಿ, ತಮ್ಮ ೧ ನೆ ಕೌನ್ಸಿಲರ್ ಪದವಿಯನ್ನು ಕಳೆದ ತಾ|| ೧ ರಲ್ಲಿ ಪರಿಗ್ರಹಿಸಿರುವರು.

ಸರ್ಜನರುಗಳಾದ ಮ|| ಬಿ. ಡಿ. ರಾಘವೇಂದ್ರರಾಯರು ಚಿತ್ರದುರ್ಗಕ್ಕೂ, ಮ|| ಸಿ. ರಾಜಾರಾಮರಾಯರು ತುಮಕೂರಿಗೂ ಡಿಸ್ಟ್ರಿಕ್ಟ್ ಸಾನಿಟರಿ ಮತ್ತೂ ಮೆಡಿಕಲ್ ಆಫೀಸರುಗಳಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಶ್ರೀಮನ್ಮಹಾರಾಜರವ ಅ|| ಪ್ರೈವೇಟ್ ಸೆಕ್ರೆಟರಿಗಳಾಗಿದ್ದ ಮ|| ಎಂ. ಎನ್. ಬಾಳರಾಜ ಅರಸ್ ಬಿ. ಎ. ಯವರು ಅರ್ಥಸಾಧಕಸಭೆಯ ಕೈಗಾರಿಕೆಯ ಶಾಖೆ ಕಮಿಟಿ ಸೆಕ್ರೆಟರಿಗಳಾಗಿ ವರ್ಗಾಯಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ಸ್ತ್ರೀಹತ್ಯ ಶಿಶುಹತ್ಯ ಆತ್ಮಹತ್ಯಗಳನ್ನು ಮಾಡಿದ ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಯು ಬರೆದಿಟ್ಟಿದ್ದ ಕಾಗದಗಳಲ್ಲಿ ತನ್ನ ಹಿರಿಹೆಂಡತಿಯ ವ್ಯಭಿಚರಣದೋಷದಿಂದಲೇ ತಾನು ಇಂಥ ಕಾರ್ಯವನ್ನು ಮಾಡಿದೆನೆಂಬುದಾಗಿ ಬರೆದಿಟ್ಟಿದ್ದನಂತೆ.

ಶ್ರೀಮನ್‌ಮಹಾರಾಜರವರು ಬೆಂಗಳೂರು ಸೋಲ್ಜರುಗಳ ಸಹಾಯಾರ್ಥವಾದ ಫಂಡಿಗೆ ೩೦೦೦ ರೂಪಾಯಿಗಳನ್ನೂ, ಎಂಗ್‌ಮೆನ್ಸ್ ಕ್ರಿಸ್ಟಿಯನ್ ಅಸೋಸಿಯೇಷನ್ನಿನ ಶಿಬಿರಸಂಘಕ್ಕೆ ೨೦೦೦ ರೂಪಾಯಿಗಳನ್ನೂ ದಯಪಾಲಿಸಿರುವರು.

ಮ|| ಕೆ. ಎ. ಕರ್ನೆಸಟ್ ಅ|| ಇಂಜನಿಯರ್‌ರವರು ಬೆಂಗಳೂರು ಹೆಡ್‌ಕ್ವಾರ್ಟರ್ ರೇಂಜಿನಿಂದ ಮೈಸೂರು ಡಿವಿಜನ್ನಿಗೂ, ಮೈಸೂರು ರೇಂಜಿನಲ್ಲಿದ್ದ ಮ|| ಡಿ. ಎ. ಹುಕ್ಕೇರಿಯವರು ಬೆಂಗಳೂರು ರೇಂಜಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಪೋಲೀಸ್ ಸೂಪರಿಂಟೆಂಡೆಂಟುಗಳಲ್ಲಿ ಮ|| ಸಿ. ರಾಮರಾವ್ ಬಿ.ಎ., ಯವರು ೨ನೇ ಗ್ರೇಡಿನಿಂದ ೧ನೆ ಗ್ರೇಡಿಗೂ, ಮ|| ಎನ್. ಮೂರ್ತಿರಾವ್ ಬಿ. ಎ., ಯವರೂ, ಮ|| ಬಿ. ವಿ. ನರಸಿಂಹಯ್ಯ ಬಿ.ಎ., ಯವರೂ ಸಹ ೨ನೆ ಗ್ರೇಡಿಗೂ ಹೆಚ್ಚಿಸಲ್ಪಟ್ಟಿರುತ್ತಾರೆ.

ಇದೇ ಮಾರ್ಚಿ ಮೊದಲುಗೊಂಡು ೪ ತಿಂಗಳುಗಳವರೆಗೆ ಮೊಳಕಾಲ್ಮುರು ಗ್ರಾಮಕೋರ್ಟಿಗೆ ಶ್ಯಾನುಬೋಗ್ ಮ|| ನಾರಾಯಣರಾಯರೂ, ತಗಲೂರು ಗ್ರಾಮಕೋರ್ಟಿಗೆ ಪಟೇಲ್ ಮ|| ಗುರಪ್ಪನವರೂ, ಸೊಕ್ಕೆ ಗ್ರಾಮಕೋರ್ಟಿಗೆ ಮ|| ಕರವೀರಪ್ಪನವರೂ ಗ್ರಾಮಮುನ್ಸೀಫರುಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಹರಿಹರದಲ್ಲಿ ಏಪ್ರಿಲ್ ತಾ|| ೪-೫-೬ ರಲ್ಲಿ ನಡೆಯುವ ಶ್ರೀ ಸಂಗಮೇಶ್ವರ ಜಾತ್ರೆಕಾಲದಲ್ಲೂ, ಮದ್ದಗಿರಿಯಲ್ಲಿ ಮಾರ್ಚಿ ತಾ|| ೧೯ ರಿಂದ ೧೦ ದಿನಗಳವರೆಗೆ ನಡೆಯುವ ದಂಡಿನ ಮಾರಮ್ಮನ ಜಾತ್ರೆಕಾಲದಲ್ಲೂ ದನಗಳ ಪ್ರದರ್ಶನವೂ, ಉತ್ತಮವಾದ ರಾಸುಗಳಿಗೆ ಬಹುಮಾನಪ್ರದಾನವೂ ನಡೆಯಲು ಏರ್ಪಾಟಾಗಿರುತ್ತದೆ.

ಬೆಂಗಳೂರು ಡಿಸ್ಟ್ರಿಕ್ಟ್ ಕಾನ್ಫರೆನ್ಸಿನ ಎರಡನೆಯ ವರ್ಷದ ಅಧಿವೇಶನವು ಡೆ|| ಕಮಿಷನರ್ ಮಿ|| ಪಿ. ಎಚ್. ಬೌರಿಂಗ್‌ರವರ ಅಧ್ಯಕ್ಷತೆಯಲ್ಲಿ ದೊಡ್ಡಣ್ಣನವರ ಹಾಲಿನಲ್ಲಿ ಕಳೆದ ತಾ|| ೫ ರ ಮಧ್ಯಾಹ್ನ ೧೨ ಗಂಟೆಯಲ್ಲಿ ಆರಂಭವಾಯಿತು. ಸೆಕ್ರೆಟರಿಯವರಾದ ಮ|| ರಾಜೋಜಿರಾಯರು ವರ್ಷದ ವರದಿಯನ್ನು ಕನ್ನಡದಲ್ಲಿ ಓದಿದರು. ಆ ನಂತರ ಅಧ್ಯಕ್ಷರು ಸಂಕ್ಷಿಪ್ತವಾದ ಭಾಷಣವನ್ನು ಮಾಡಿದರು.

ಕೆಲದಿನಗಳ ಕೆಳಗೆ ಬೆಂಗಳೂರಿಗೆ ಅಗಳಿಯಿಂದ ಬಂದಿದ್ದ ನಾಟಕಸಂಘದವರು ಸರ್ಕಾರಿಯ ಮುದ್ರಣಾಲಯದ ಸೂಪರಿಂಟೆಂಡೆಂಟರಾದ ಮ|| ಡಿ|| ಬಿ. ರಾಮಚಂದ್ರಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಲಂಕಾದಹನವೆಂಬ ನಾಟಕವನ್ನು ಅಭಿನಯಿಸಿ, ಅದರಿಂದ ಬಂದುತ್ಪನ್ನವನ್ನು ಬೆಂಗಳೂರಿನ ಶ್ರೀ ರುದ್ರದೇವಸ್ಥಾನದ ಫಂಡಿಗೆ ಕೊಟ್ಟರು. ಈ ಸಂಘದವರ ಧರ್ಮಬುದ್ಧಿಯು ಶ್ಲಾಘ್ಯವಾದುದು ಎಂದು ಈ ಪತ್ರಿಕಾವಾಚಕರೊಬ್ಬರು ತಿಳಿಸಿರುತ್ತಾರೆ.

ಮೈಸೂರು ಸಂಸ್ಕೃತಕಲಾಶಾಲೆಯ ಮ್ಯಾನೇಜಿಂಗ್‌ಕಮಿಟಿಗೆ ಮ|| ಬಿ. ರಾಮಕೃಷ್ಣರಾಯರು ಪ್ರೆಸಿಡೆಂಟರಾಗಿಯೂ ಧರ್ಮದರ್ಶಿಗಳಾದ ಪಂಡಿತ ಕುಣಿಗಲ್ ರಾಮಶಾಸ್ತ್ರಿಗಳೂ, ನವೀನಂ ರಾಮಾನುಜಾಚಾರ್ಯರೂ, ಮಹಾವಿದ್ವಾನರುಗಳಾದ ಹೊಳವನಹಳ್ಳಿ ಶೇಷಾಚಾರ್ಯರೂ, ಟಿ. ಶ್ರೀನಿವಾಸ ರಾಘವಾಚಾರ್ಯರೂ, ಡಿ. ವೆಂಕಟರಾಮಯ್ಯನವರೂ, ಮುಜರಾಯಿ ಭಕ್ಷಿಯವರಾದ ಹೆಚ್. ಲಿಂಗರಾಜ ಅರಸಿನವರೂ ಸಹ ಸಭಿಕರುಗಳಾಗಿಯೂ, ಕಲಾಶಾಲೆಯ ಪ್ರಿನ್ಸಿಪಾಲರೇ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರು ಮಹಾರಾಣಿ ಕಲಾಶಾಲೆಯ ಮ್ಯಾನೇಜಿಂಗ್ ಕಮಿಟಿಗೆ ರಾಜಸೇವಾಧುರೀಣ ಮ|| ಎಂ. ಕಾಂತರಾಜ ಅರಸ್ ಬಿ.ಎ., ಸಿ.ಎಸ್.ಐ. ಯವರು ಪ್ರೆಸಿಡೆಂಟರಾಗಿಯೂ, ರಾ|| ಬಹದ್ದೂರ್ ಎ. ನರಸಿಂಹಯ್ಯಂಗಾರರು ವೈಸ್‌ಪ್ರೆಸಿಡೆಂಟರಾಗಿಯೂ, ಮಿ|| ದೆನ್ಹಾಂರವರ ಪತ್ನಿಯವರೂ, ಮಿ|| ಆರ್. ಹೆಚ್. ಕೇಂಬಲ್ ಸಿ. ಐ. ಇ. ಯವರೂ, ಮ|| ಗಳಾದ ವೈ. ಶ್ರೀನಿವಾಸರಾವ್‌ರವರು, ಎಂ. ವೆಂಕಟಕೃಷ್ಣಯ್ಯನವರು, ಎಂ. ಸಿ. ರಂಗಯ್ಯಂಗಾರರು, ಡಿ|| ವೆಂಕಟರಾಮಯ್ಯನವರು ಸಹ ಮೆಂಬರುಗಳಾಗಿಯೂ ನಿಯಮಿಸಲ್ಪಟ್ಟಿದ್ದಾರೆ.

ಪೌರಸಾಮಾಜಿಕಸುಧಾರಣಾ ಸಂಘದ ಕಾರ್ಯಕ್ರಮವನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ ಸರ್ಕಾರದವರು ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾದ ಮ|| ಎಂ. ರಾಮರಾಯರನ್ನು ಒಂದು ವರ್ಷ ಕಾಲದವರೆಗೆ ಈ ಸಂಘದ ಸೆಕ್ರೆಟರಿಯನ್ನಾಗಿ ನಿಯಮಿಸಿ ಅವರ ಪ್ರತಿತಿಂಗಳ ಸಂಬಳದ ಜತೆಗೆ ೭೫ ರೂಪಾಯಿಗಳೂ ಪ್ರಯಾಣದ ಖರ್ಚೂ ಸರ್ಕಾರದಿಂದಲೇ ಸಲ್ಲತಕ್ಕದಾಗಿ ಅಪ್ಪಣೆಮಾಡಿರುವುದಲ್ಲದೆ, ಸಂಘದ ಕಾರ್ಯನಿರ್ವಾಹದ ವೆಚ್ಚಕ್ಕಾಗಿ ೫೦೦೦ ರೂ. ಗಳನ್ನೂ ಒಂದು ವರ್ಷದವರೆಗೆ ೨೦೦ ರೂ. ಗಳ ಮಾಸಾಶನವನ್ನೂ ಕೊಡಲಪ್ಪಣೆಮಾಡಿರುತ್ತಾರೆ.

ಮೈಸೂರು ಸೀಮೆಯ ಹಿಂದುಳಿದ ಜನಾಂಗದವರು ವಿದ್ಯೆ ಮತ್ತು ರಾಜಕೀಯ ವಿಚಾರಗಳಲ್ಲಿ ಮುಂದುವರಿಯುವಂತೆ ಮಾಡುವುದಕ್ಕಾಗಿ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಪ್ರಜಾಮಿತ್ರಮಂಡಲಿಯ ಶಾಖೆಯೊಂದನ್ನು ರಾಜಧಾನಿಯಲ್ಲೂ ಸ್ಥಾಪಿಸುವ ಬಗೆಗೆ ರಿಟೈರ್ಡ್ ಪೊ|| ಸೂಪರಿಂಟೆಂಡೆಂಟ್ ಮಹಮದ್ ಜಾಫರ್ ಸಾಹೇಬರು ರಾ|| ಸಾ|| ಚೆನ್ನಯ್ಯನವರು ಎ.ಸಿ. ಲಿಂಗರಾಜ ಅರಸಿನವರು, ಮ|| ಬಸುಮಯ್ಯನವರು, ಸಾಹುಕಾರ್ ತಿಮ್ಮಯ್ಯನವರು, ಮ|| ರೈಸ್‌ಮಿಲ್ ದೊಡ್ಡಯ್ಯನವರು ಮ|| ನೀಲಗಿರಿ ಮದ್ದಣ್ಣನವರು, ಮಿ|| ಮಹಮದ್ ಸೇಟ್‌ರವರು, ಮ|| ಪುರುಷೋತ್ತಮಾನಂದಗಿರಿ ಗೋಸಾಯಿಯವರು ಮೊದಲಾದ ಪ್ರಮುಖ ಮಹಾಶಯರು ಧರ್ಮಪ್ರಕಾಶ ಸಾಹುಕಾರ್ ಡಿ|| ಬಸುಮಯ್ಯನವರ ಸ್ಕೂಲಿನಲ್ಲಿ ಈ ದಿವಸ ಸಾಯಂಕಾಲ ಸಭೆಯನ್ನು ಕೂಡಿಸಲೇರ್ಪಡಿಸಿರುತ್ತಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಕಾನ್ಫರೆನ್ಸು ಡೆ|| ಕಮಿಷನರ್ ಮ|| ಎಂ. ಎ. ನಾರಣಯ್ಯಂಗಾರರ ಅಧ್ಯಕ್ಷತೆಯಲ್ಲಿ ಕಳೆದ ತಾ|| ೩ ರಲ್ಲಿ ನಡೆದು ಕಮಿಟಿಯ ಸೆಕ್ರೆಟರಿಯವರು ಪ್ರತಿನಿಧಿಗಳ ಸುಸ್ವಾಗತವನ್ನು ಬಯಸಿ ಕಮಿಟಿಯ ವಾರ್ಷಿಕವರದಿಯನ್ನೂ ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮ|| ಬಿ. ಭೀಮರಾಯರು ಗ್ರಾಮಾಭಿವೃದ್ಧಿಕಾರ್ಯದ ವರದಿಯನ್ನೂ ಓದಿದಮೇಲೆ ಅನೇಕೋಪಯುಕ್ತ ವಿಷಯಗಳ ಚರ್ಚೆಗಳು ಯುಕ್ತಿಯುಕ್ತವಾಗಿ ಮಾಡಲ್ಪಟ್ಟುವು. ಸ್ಯಾನಿಟರಿ ಕಮಿಷನರಾದ ಡಾ|| ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಆರೋಗ್ಯವಿಚಾರವಾಗಿ ಸಭೆಗೂಡಿದ್ದು ಪ್ಲೇಗು, ಮಲೇರಿಯಾ ಮೊದಲಾದ ರೋಗಗಳ ಸಂಬಂಧವಾಗಿ ಉಪನ್ಯಾಸಗಳು ಮಾಡಲ್ಪಟ್ಟುವು. ಸಂಪದಭಿವೃದ್ಧಿ ಸಮಾಜದ ಸೆಕ್ರೆಟರಿಯವರಾದ ಮಿ|| ಡಿಸೋಜರವರ ಅಧ್ಯಕ್ಷತೆಯಲ್ಲಿ ವಿದ್ಯಾವಿಚಾರವಾಗಿ ಸಭೆ ನಡೆದು ಅನೇಕ ಉಪನ್ಯಾಸಗಳು ನಡೆದು ವಿಷಯಗಳು ಚರ್ಚಿಸಲ್ಪಟ್ಟುವು. ಡಿ|| ಕೆ|| ಮ|| ನಾರಾಯಣಯ್ಯಂಗಾರ್ಯರು ಸಂಪದಭಿವೃದ್ಧಿಯ ಕಾರ್ಯಗಳನ್ನು ಬೇರೆಬೇರೆ ಹಂಚಿಕೊಟ್ಟು ತನ್ಮೂಲಕ ತೃಪ್ತಿಕರವಾಗಿ ನಡಸಿರುವುದು ಶ್ಲಾಘ್ಯವಾಗಿರುವುದೆಂದೂ ಸಂಪದಭಿವೃದ್ಧಿ ಸಮಾಜವೇರ್ಪಡುವುದಕ್ಕೆ ಪೂರ್ವ ಸ್ಕೂಲುಗಳ ಸಂಖ್ಯೆಯು ೨೨೪ ಇದ್ದುದು ಈಗ ೫೨೪ ಕ್ಕೂ ಏಡೆಡ್ ಸ್ಕೂಲುಗಳು ೨೨ ರಿಂದ ೩೧೪ ಕ್ಕೂ ಹೆಚ್ಚಿರುವುದಲ್ಲದೆ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತೀರ್ಥಹಳ್ಳಿಯು ಪ್ರಥಮಸ್ಥಾನವನ್ನೂ ನಗರವು ದ್ವಿತೀಯಸ್ಥಾನವನ್ನೂ ಹೊಂದಿರುತ್ತವೆಂದು ಅಪ್ಪಣೆಕೊಡಿಸಿದರು. ಮ|| ಕೆ. ಎಚ್. ರಾಮಯ್ಯ ಬ್ಯಾರಿಸ್ಟರ್‌ರವರೂ ಮ|| ಎಚ್. ಕೆ. ಮಲ್ಲಪ್ಪನವರೂ ಸಂಪದಭಿವೃದ್ಧಿಯ ವಿಚಾರದಲ್ಲಿ ಜನರ ಮನಸ್ಸು ಜಾಗರಿತವಾಗುವಂತೆ ಆವೇಶಯುಕ್ತವಾದ ಭಾಷಣಗಳನ್ನು ಮಾಡಿದರು.

ಪ್ರಸಿದ್ಧಪತ್ರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಇದೇ 1918 ನೇ ಇಸವಿ ಏಪ್ರಲ್ ತಿಂಗಳಲ್ಲಿ ನಡೆಯುವ ಇಂಗ್ಲಿಷ್ ಮತ್ತು ಕನ್ನಡ ಲೋವರ್ ಸೆಕಂಡರಿ ಪರೀಕ್ಷೆಗೆ ತುಮಕೂರು ಸೆಂಟರಿಗೆ ಬರುವ ವೀರಶೈವ ಮತ್ತು ಇತರ ಮತಸ್ಥರ ವಿದ್ಯಾರ್ಥಿಗಳಿಗೂ ಇಲ್ಲಿನ ವೀರಶೈವ ಪ್ರಮುಖಜನಗಳಿಂದ ಟೈಂ ಪ್ರಕಾರ ಊಟಕ್ಕೂ ವಾಸಕ್ಕೂ ಸಹ ಏರ್ಪಾಡುಮಾಡಿ ಇರುತ್ತಾದ್ದರಿಂದ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳು ಇದೇ ತಿಂಗಳು 15 ನೇ ತಾರೀಖಿನ ಒಳಗಾಗಿ ಈ ಕೆಳಗಿನ ಅಡ್ರಸ್ಸಿಗೆ ಬರೆದುಕೊಳ್ಳತಕ್ಕದ್ದು. ಮತ್ತು ತಂಬಿಗೆ, ಪಾಸಿಗೆ ಜೊತೆಯಲ್ಲಿ ತರತಕ್ಕದ್ದು.

ಟಿ. ಸಿ. ರೇವಣ್ಣ,
ಆನರರಿ ಮ್ಯಾಜಿಸ್ಟ್ರೇಟ್, ತುಮಕೂರು.

ಪತ್ರವ್ಯವಹಾರ.

ಮರಿಮಲ್ಲಪ್ಪನವರ ಹೈಸ್ಕೂಲು.

ಅಯ್ಯಾ,

ಈ ಸ್ಕೂಲಿನಿಂದ ಸ್ಕೂಲ್‌ಫೈನಲ್ ಪರೀಕ್ಷೆಗೆ ಕಳೆದವರ್ಷ ಕಳುಹಿಸಲ್ಪಟ್ಟಿದ್ದ ೨೦ ಮಂದಿ ವಿದ್ಯಾರ್ಥಿಗಳಲ್ಲಿ ಮೂವರು ಮಾತ್ರ ಉತ್ತೀರ್ಣರಾದರೆಂದು ವರ್ತಮಾನವಿದೆ. ಇದು ನಿಜವೋ ಸುಳ್ಳೋ ಗೊತ್ತಾಗಲಿಲ್ಲ. ಇಲ್ಲಿನ ಹೆಡ್ಮಾಸ್ಟರಾಗಿರುವ ಮ|| ವೆಂಕಟಕೃಷ್ಣಯ್ಯನವರಿಗೆ ೮೦ ವರ್ಷಗಳ ಮೇಲೆಯೇ ಆಗಿರಬೇಕು. ಹಲ್ಲುಗಳು ಒಂದಾದರೂ ಇರಲಾರದು. ಇಂಥವರಿಂದ ಬೋಧಕತ್ವ ನಿರ್ವಾಹವಾಗುವುದು ಹೇಗೋ ನಾನು ಕಾಣೆ. ನಿಮಿತ್ತ ಮಾತ್ರವಾಗಿ ಇವರಿಗೆ ಈ ಕೆಲಸವಿರುವಂತೆ ಕಾಣುತ್ತದೆ. ೪-೫ ಪತ್ರಿಕೆಗಳ ಪ್ರಕಟನದ ಹೊರೆಯನ್ನು ಇವರು ಕಟ್ಟಿಕೊಂಡಿದ್ದಾರೆ. ಸ್ಥಳದಲ್ಲಿರುವ ಯಾವುದೊಂದು ಕಾನ್ಫರೆನ್ಸು ಕಮಿಟಿಗಳಿಗೂ ಇವರು ಸೇರದೆ ಇರುವುದೇ ಇಲ್ಲ. ಅವುಗಳ ಮೀಟಿಂಗುಗಳಿಗೆಲ್ಲಾ ಹೋಗುವುದಕ್ಕೆ ಇವರಿಗೆ ಸ್ಕೂಲ್‌ಕೆಲಸವು ಪ್ರತಿಬಂಧಕ ಮಾಡುವಂತೆ ತೋರುವುದಿಲ್ಲ. ಇವರಿಗೆ ರಜವನ್ನು ಕೊಡುವವರೂ ಕಾರ್ಯಲೋಪಾಲೋಪಗಳನ್ನು ಕೇಳುವವರೂ ಯಾರಿದ್ದಾರೋ ಕಾಣೆ. ಅಷ್ಟು ಮುದಿತನದಲ್ಲಿ ಅವರಿಂದ ದುಡಿಸಿಕೊಳ್ಳುತ್ತಿರುವ ಟ್ರಸ್ಟಿಗಳು ಬಹಳ ದಯಾಶಾಲಿಗಳಾಗಿರಬೇಕು! ಬಹುಶಃ ಅಲ್ಲಿಯ ಹೆಡ್ಮಾಸ್ಟರ ಕೆಲಸಕ್ಕೆ ಶಕ್ತರು ಯಾರೂ ಸಿಕ್ಕದೆ ಇರಬಹುದೇನೋ! ಸ್ಕೂಲಿನ ಕಾರ್ಯನಿರ್ವಾಹದಲ್ಲಿ ಎಷ್ಟೋ ನ್ಯೂನಾತಿರೇಕಗಳಿರುವುವೆಂದು ವರ್ತಮಾನವಿದೆ. ಅದನ್ನು ಕೇಳುವವರೇ ದಿಕ್ಕಿಲ್ಲದಂತಾಗಿದೆ. ಲೆಕ್ಕಪತ್ರಗಳನ್ನು ಇದುವರೆಗೂ ಯಾರಾದರೂ ಆಡಿಟ್ ಮಾಡಿರುವರೆ? ಆ ಧರ್ಮಸಂಬಂಧವಾದ ಲೆಕ್ಕವಗೈರೆಗಳನ್ನು ಯಾವಾಗಾದರೂ ಪ್ರಕಟಮಾಡಿರುವರೆ? ಧರ್ಮಕರ್ತರು ಮೃತರಾಗಿರುವುದರಿಂದ ಆ ಧರ್ಮನಿರ್ವಾಹದ ಭಾರವನ್ನು ಹೊತ್ತಿರುವ ಟ್ರಸ್ಟಿಗಳು ತಮ್ಮ ಕರ್ತವ್ಯವನ್ನು ಸತ್ಯನ್ಯಾಯಗಳಿಗೆ ಬದ್ಧವಾಗಿ ನಡೆಸದಿದ್ದರೆ ಆ ದೋಷಗಳಿಗೆ ಇವರೇ ಭಾಗಿಗಳಾಗುವರಲ್ಲವೆ? **ಹಿತಚಿಂತಕ.**

ಸ್ವಾಮಿ!

ಸಿ. ನರಸಿಂಹಶಾಸ್ತ್ರಿ ಎಂಬುವವರು ಸಾಧ್ವೀ ಪತ್ರಿಕೆಗೆ ಒಂದು ಕರಸ್ಪಾಂಡೆನ್ಸನ್ನು ಬರೆದು, ಅದರಲ್ಲಿ—ದಾವಣಗೆರೆ ವೀರಶೈವ ಮಹಾಸಭೆಯವರು ಚಿತ್ರದುರ್ಗದ ವಿರಕ್ತಮಠದ ಸ್ವಾಮಿಗಳಿಗೆ ಅಡ್ಡಪಲ್ಲಕ್ಕಿ ಪಂಚಕಲಶಗಳ ಬಹುಮಾನವನ್ನು ಕೊಡುವಬಗ್ಗೆ ಮೈಸೂರು ಸರ್ಕಾರಕ್ಕೆ ಅರ್ಜಿ ಮಾಡಿಕೊಳ್ಳಬೇಕೆಂದು ಸರ್ವಾನುಮತದಿಂದ ಠರಾವುಪಾಸು ಮಾಡಿದ್ದು ಪ್ರತಿಯೊಬ್ಬನಿಗೂ ಆಶ್ಚರ್ಯವಾಗಿರುವುದಲ್ಲದೆ ವೀರಶೈವರಲ್ಲಿ ಧರ್ಮತತ್ವವನ್ನು ಬಲ್ಲಂಥ ಪಂಡಿತರು ಯಾರೂ ಇಲ್ಲವೆಂದು ವ್ಯಕ್ತವಾಗುತ್ತದೆಯೆಂದೂ, ವೀರಶೈವ ಮತಗ್ರಂಥಗಳನ್ನು ನೋಡಿದರೆ ಈ ಮತಕ್ಕೆ ಪಂಚಾಚಾರ್ಯರು ಗುರುಗಳೆಂದೂ, ಅವರ ಅನುಮತಿಯಿಂದಲೇ ಸಾಮಾನ್ಯವೀರಶೈವ, ಶುದ್ಧವೀರಶೈವ, ವಿಶೇಷವೀರಶೈವ, ನಿರಾಭಾರಿವೀರಶೈವರೆಂಬ ಸಮಸ್ತ ವೀರಶೈವರೂ ಶಿಕ್ಷಾದೀಕ್ಷಾದಿಗಳನ್ನು ಹೊಂದಿ ಅವರ ಆಜ್ಞಾಪ್ರಕಾರ ವರ್ತಿಸಬೇಕಾಗಿರುವರೆಂದೂ, ವೀರಶೈವರಲ್ಲಿ ಒಂದು ಶಾಖೆಗೆ ಸೇರಿದ ಚಿತ್ರದುರ್ಗದ ಸ್ವಾಮಿಗಳು ತಮ್ಮ ಗುರುಗಳಾದ ಪಂಚಾಚಾರ್ಯರ ಸಮಾನ ಮಾನವನ್ನು ಬಯಸುವುದು ಧರ್ಮವಿರುದ್ಧವೆಂದೂ, ಸುಪ್ರಬೋಧಾಗಮದಲ್ಲಿ “ಪಂಚಪೀಠಾಧಿಪಾನಾಂ ಯೋ ಜಾನಂತಿ ಸಮಾನತಾಂ | ತೇಗದರ್ಭಾಕ್ಷಸಂಪ್ರೋಕ್ತಾ ಜ್ಞಾನಶೂನ್ಯತ್ವಶಕ್ತಿತಃ” ಎಂಬ ಆಧಾರವಿರುವುದೆಂತಲೂ, “ಯಾನಾರೂಢಂ ಯತಿಂ ದೃಷ್ಟ್ವಾ ಸಚೇಲಂ ಸ್ನಾನಮಾಚರೇತ್” ಎಂದು ಧರ್ಮಶಾಸ್ತ್ರವಚನವೂ, “ನಾಂದೋಲಿಕಾಂ ಸಮಾರೋಹೇ ದಶ್ವಾರೋಹಣವರ್ಜಿತಃ | ಪಾದಚಾರೀ ಚಸಂಭೂಯ ಚರೇದ್ಭೂವಲಯೇ ಸದಾ” ಎಂದು ಪಾಶುಪತಾಗಮ ವಚನವು ಇರುವುವೆಂತಲೂ, ಈ ಪ್ರಮಾಣಗಳನ್ನೆಲ್ಲಾ ಸಕಲ ವೀರಶೈವರೂ, ಪ್ರಖ್ಯಾತಿ ಹೊಂದಿದ ದಿ|| ಬ|| ಪುಟ್ಟಣ್ಣಶೆಟ್ಟರೂ, ಚಿತ್ರದುರ್ಗದ ಸ್ವಾಮಿಗಳೂ ಸಹ ಯಾಕೆ ಯೋಚಿಸಲಿಲ್ಲವೆಂತಲೂ, ತಮ್ಮ ಧರ್ಮವಿರುದ್ಧವಾದ ವರ್ತನಕ್ಕೆ ಸರ್ಕಾರದಪ್ಪಣೆಯನ್ನು ಬೇಡುವುದು ಶಾಸ್ತ್ರವಿರುದ್ಧವೆಂತಲೂ, ಧರ್ಮರಾಜ್ಯದ ಕಾರ್ಯಧುರಂಧರರಾದ ಮಂತ್ರಿವರ್ಯರಾದ ಸರ್ ವಿಶ್ವೇಶ್ವರಯ್ಯನವರಾದರೂ ಸರಿಯಾಗಿ ವಿಚಾರಿಸಬೇಕೆಂತಲೂ, ಶಾಸ್ತ್ರದ ನಿಯಮಗಳು ನಮ್ಮ ಧರ್ಮರಾಜ್ಯದಲ್ಲಿ ಕೆಡಬಾರದೆಂತಲೂ, ತಳತಳಿಯಿಂದ ಶಾಸ್ತ್ರಸಮ್ಮತವಾಗಿ ಒರೆದ ತಮ್ಮ ಪ್ರಾರ್ಥನೆಯನ್ನು ಸಫಲಮಾಡಬೇಕೆಂತಲೂ ಬರೆದುಕೊಂಡಿರುವರು.

ಇವರಮೇಲೆ ಆ ಪತ್ರದ ಸಂಪಾದಕರು—“ಎಲ್ಲಾ ಸ್ವಾಮಿಗಳೂ ವಿರಕ್ತಸ್ವಾಮಿಗಳೇ. ಈ ಶಾಸ್ತ್ರಗಳು ಹೇಳತಕ್ಕದ್ದು ಎಲ್ಲಾ ಮಠಾಧಿಪತಿಗಳಿಗೂ ಅನ್ವಯಿಸುವುದೆಂದು ನಮಗೆ ತೋರುತ್ತದೆ” ಎಂದು ತಮ್ಮಭಿಪ್ರಾಯವನ್ನು ಬರೆದು ಪ್ರಕಟಿಸಿರುವರು. ಅಷ್ಟರಿಂದಲೇ ಆ ಕರೆಸ್ಪಾಂಡೆನ್ಸಿನ ವಾದಕ್ಕೆ ತಕ್ಕ ಮಂಗಳಾರತಿಯಾಗಿದ್ದರೂ, ಆ ಲೇಖನದಮೇಲೆ ಇನ್ನು ಕೊಂಚ ವಿಚಾರಮಾಡತಕ್ಕದ್ದಿರುವುದೆಂದು ನನಗೆ ತೋರುತ್ತದೆ.

ಈ ನರಸಿಂಹಶಾಸ್ತ್ರಿಗಳಿಗೆ ಈ ಕರೆಸ್ಪಾಂಡೆನ್ಸನ್ನು ಬರೆಯುವುದಕ್ಕಿದ್ದ ಮುಖ್ಯೋದ್ದೇಶವೇನು? (೧) ವೀರಶೈವ ಪಂಚಸಿಂಹಾಸನಗಳಿಗೆ ಈ ಮರ್ಯಾದೆಗಳು ಸಲ್ಲಬೇಕಾದುವು; ಅವು ದುರ್ವಿನಿಯೋಗವಾಗಬಾರದೆಂದು ಇವರಿಗೆ ಆ ಪಂಚಸಿಂಹಾಸನಾಚಾರ್ಯರ ವಿಷಯದಲ್ಲಿ ಅನುತಾಪವೆ? ಅಥವಾ (೨) ಸನ್ಯಾಸಿಗಳು ಯಾನಾರೂಢರಾದರೆ ಶಾಸ್ತ್ರವಿರುದ್ಧವಾದ ಆ ನಡೆಯಿಂದ ದೇಶಾರಿಷ್ಟವುಂಟಾಗುವುದಾದಕಾರಣ ಅದನ್ನು ತಪ್ಪಿಸಿ ದೇಶೋದ್ಧಾರಮಾಡಬೇಕೆಂಬುದು ಸಂಕಲ್ಪವೆ? (೩) ಅಥವಾ ವೀರಶೈವ ಧರ್ಮಶಾಸ್ತ್ರವಚನ ರಕ್ಷಣಾಭಿಮಾನವಿರುವುದೇ ಕಾರಣವೆ? ವಿಚಾರಮಾಡಿ ತಿಳಿಯೋಣ.

ಇವರ ಹೆಸರಿನಿಂದಲೇ ಇವರು ಪರಮತಸ್ಥರೆಂದು ವ್ಯಕ್ತವಾಗಿರುತ್ತದೆ. ಇವರಿಗೆ ಪಂಚಸಿಂಹಾಸನದವರೂ ಒಂದೇ, ಚಿತ್ರದುರ್ಗದ ಸ್ವಾಮಿಗಳೂ ಒಂದೇ. ಪಂಚಾಚಾರ್ಯರುಗಳು ಇವರ ಗುರುಗಳಾಗಿದ್ದು, ಆ ಪಂಚಾಚಾರ್ಯರುಗಳಿಗೆ ಅಡ್ಡಪಲ್ಲಕ್ಕಿ ಮೊದಲಾದ ಬಿರುದುಗಳನ್ನು ಇವರ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯಿಸಗೊಡುತ್ತಿದ್ದು, ಅಂಥಾದ್ದನ್ನು ಅನ್ಯರಾದ ಚಿತ್ರದುರ್ಗದ ಸ್ವಾಮಿಗಳಿಗೆ ಹೊಸದಾಗಿ ಈಗ ಕೊಡಿಸಬೇಕೆಂದು ಪಂಚಾಚಾರ್ಯರಲ್ಲಿ ಅಭಿಮಾನವಿಲ್ಲದ ವೀರಶೈವ ಮಹಾಸಭೆಯವರು ಪ್ರಯತ್ನಪಟ್ಟಿದ್ದರೆ, ಅದನ್ನು ಆಕ್ಷೇಪಿಸಲು ಈ ಲೇಖಕರಿಗೆ ಸ್ವಲ್ಪವಾದರೂ ಅವಕಾಶವುಂಟಾಗುತ್ತಿತ್ತೋ ಏನೋ! ಅಂಥ ಸ್ಥಿತಿಯೇನೂ ಕಾಣಬರುವುದಿಲ್ಲವಾದುದರಿಂದ, ಮೊದಲನೇ ಕಾರಣವು ಲೇಖನೋದ್ದೇಶವಲ್ಲವೆಂಬುದು ಸಿದ್ಧಾಂತವಾಗುತ್ತದೆ. ಇನ್ನು ೨ ನೆ ಕಾರಣವಿದ್ದೀತೆ? ಎಂದರೆ-ಅದೂ ಇಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ—ಶಾಸ್ತ್ರವಿರುದ್ಧವಾದ ಆಚರಣೆಗಳೆಲ್ಲಾ ದೇಶಾರಿಷ್ಟದಾಯಕಗಳೆಂದೂ, ಪ್ರಾಚೀನ ಶಾಸ್ತ್ರಸಂಪ್ರದಾಯಗಳನ್ನೆಲ್ಲಾ ಆಚರಣೆಗೆ ತರಬೇಕೆಂದೂ ಸರ್ಕಾರದವರು ಸಂಕಲ್ಪಿಸುವರಾದರೆ, ಇವರ ಗುರುಗಳೂ ಈ ಶಾಸ್ತ್ರಿಗಳ ಕುಲಪರಂಪರೆಯೆಲ್ಲವೂ ಊರು ಕೇರಿಗಳನ್ನೆಲ್ಲಾ ಬಿಟ್ಟು ಬೆಟ್ಟಗುಡ್ಡಗಳನ್ನು ಸೇರಬೇಕಾಗುತ್ತದೆಯೇ ಹೊರತು ಚಿತ್ರದುರ್ಗದ ಸ್ವಾಮಿಗಳ ಯಾನಾರೋಹಣಕ್ಕಾಗಲೀ ಅವರ ಮರ್ಯಾದೆಗಾಗಲೀ ಕೊರತೆಯೇನೂ ಬರುವಹಾಗಿಲ್ಲ. ಆದಕಾರಣ ಇದೂ ನಿಜವಾದ ಕಾರಣವಾಗಿರಲಾರದು. ಇನ್ನು ೩ ನೆ ಕಾರಣವಿರಬಹುದೆ? ಎಂದರೆ-ತಮ್ಮ ಶಾಸ್ತ್ರೋದ್ಧರಣೆಗೇ ಶಕ್ತಿಯಿಲ್ಲದವರು ಪರಶಾಸ್ತ್ರೋದ್ಧಾರವನ್ನು ಮಾಡುವುದೆಲ್ಲಿಬಂದಿತು? ಅದರ ಅವಶ್ಯಕತೆಯೇ ಇವರಿಗೇನಿರುವುದು? ಅದ್ದರಿಂದ ಲೇಖನವನ್ನು ಬರೆಯುವುದಕ್ಕೆ ಅದೊಂದೂ ಕಾರಣವಾಗಿಲ್ಲ. ಮತ್ತೇನೆಂದರೆ—

ದಾವಣಗೆರೆಯಲ್ಲಿ ಕೂಡಿದ ಮಹಾಸಭೆಯ ಕಾರ್ಯವಿಜೃಂಭಣೆಗಳನ್ನೆಲ್ಲಾ ನೋಡಿ ಅಥವಾ ಕೇಳಿ ಸೈರಿಸದೆ ಅದಕ್ಕೊಂದು ಕೆಟ್ಟ ಹೆಸರನ್ನಿಡಬೇಕೆಂಬುದೂ, ವೀರಶೈವ ಮಠಸಾಮಾನ್ಯದ ಪ್ರಾರ್ಥನೆಯನ್ನು ತಿರಸ್ಕರಿಸಲಾರದೆ ಅಷ್ಟಪಲ್ಲಕ್ಕಿ ಮೊದಲಾದ ಬಿರುದಾವಳಿಗಳನ್ನು ಶ್ರೀಮನ್ಮಹಾರಾಜ ಸರ್ಕಾರದವರು ದಯಪಾಲಿಸಿಬಿಟ್ಟರೆ, ತಮ್ಮಂಥವರು ನೋಡಿ ಸೈರಿಸಿಕೊಂಡಿರಬೇಕಾಗಿ ಬರುವುದಲ್ಲಾ! ಎಂಬ ಹೊಟ್ಟೆಯುರಿಯಿದ್ದಿರುವುದೂ, ಪಂಚಸಿಂಹಾಸನಾಧೀಶರಿಗೂ ಚಿತ್ರದುರ್ಗದ ಮಹಾಸ್ವಾಮಿಗಳಿಗೂ ಈ ಮರ್ಯಾದೆಯ ವಿಷಯದಲ್ಲಿ ಜಗಳವನ್ನು ತಂದಿಕ್ಕಿದರೆ ಸ್ವಲ್ಪವೇನಾದರೂ ತಮ್ಮ ಪ್ರಸಿದ್ಧಿಯಾದೀತೆಂಬ ಕಾರಣದಿಂದ ಕೀಡೆ ಹಾಕಬೇಕೆಂದು ಯೋಚಿಸಿರುವುದೂ ಸಹ ಇದಕ್ಕೆ ಕಾರಣವಲ್ಲದೆ ಮತ್ತೇನೂ ಅಲ್ಲ.

ಜರ್ಮನರ ಮಾಯಾಜಾಲಕ್ಕೆ ಬಲಿಬಿದ್ದು ಈಗ ಮಹಾನರ್ಥವನ್ನು ಅನುಭವಿಸುತ್ತಲಿರುವ ಯುರೋಪುಖಂಡವು ಎಚ್ಚತ್ತುಕೊಂಡಿರುವಂತೆ, ಈ ನರಸಿಂಹಶಾಸ್ತ್ರಿಯವರಂಥವರ ಕೇಟಜಾಲ ಭೇದತಂತ್ರ ಮೊದಲಾದುವುಗಳಿಗೆ ಮರುಳಾಗಿ ಯುಗಯುಗಾಂತರದಿಂದ ಕೆಂಗೆಟ್ಟು ಈಗತಾನೇ ಎಚ್ಚತ್ತು ಮೊಣಕಾಲುಗಳಮೇಲೆ ಕೈಯೂರಿ ಏಳುತ್ತಲಿರುವ ಜನವರ್ಗಗಳವರಮೇಲೆ ಈಗಲೂ ತಮ್ಮ ಭೇದೋಪಾಯಗಳು ಕೆಂದುವುವೆಂದು ಇವರಂಥವರು ತಿಳಿದುಕೊಳ್ಳುವುದು ಬರೀ ಭ್ರಮೆಯಲ್ಲವೆ?

ಅಷ್ಟಪಲ್ಲಕ್ಕಿ ಪಂಚಕಲಶ ಮೊದಲಾದ ಶ್ರೇಷ್ಠ ಬಿರುದುಗಳು ತಮ್ಮ ಗುರುಪೀಠಗಳಿಗೆ ಬಹುಕಾಲದಿಂದಲೂ ನಡೆಯುತ್ತಿದ್ದುದರಿಂದ ಅವನ್ನು ವೀರಶೈವ ಮಠಸ್ಥರೆಲ್ಲರೂ ತಮ್ಮ ಮಠಕ್ಕೇ ನಡೆಯುತ್ತಿರುವ ಒಂದು ಗೌರವವೆಂದು ಭಕ್ತಿಪೂರ್ವಕವಾಗಿಯೂ ತಿಳಿದಿರುವರು. ಆ ಬಿರುದಾವಳಿಗಳನ್ನು ಪ್ರಭುಗಳವರು ಈ ಮಠದ ಯಾವ ಆಚಾರ್ಯಪೀಠಕ್ಕೆ ನಡೆಯಿಸಿಕೊಟ್ಟರೂ ಅವನ್ನು ಸರ್ವಗುರುಪರಂಪರೆಗೂ ಆದ ಮರ್ಯಾದೆಯೆಂದು ಮಠಸ್ಥರು ಭಾವಿಸುವುದರಲ್ಲಿ ಸಂಶಯವಿಲ್ಲ. ಸಕಲಶಾಸ್ತ್ರ ಧುರಂಧರರಂತೆ ವರ್ತಿಸುತ್ತಿರುವ ತಮ್ಮ ಪ್ರಾರ್ಥನೆಯನ್ನು ಮೈಸೂರು ಸರ್ಕಾರದವರು ಶಿರಸಾವಹಿಸಿ ನಡೆಯಿಸಿಕೊಡುವರೆಂದು ತಿಳಿದುಕೊಂಡು ಲೇಖನವನ್ನು ಬರೆದಿರುವ ಈ ನರಸಿಂಹಶಾಸ್ತ್ರಿಗಳಿಗೆ ಅಂಥ ಶಕ್ತಿಯಿದ್ದರೆ ಇವರು ಒಪ್ಪುವ ಯಾವ ವೀರಶೈವ ಮಠಾಚಾರ್ಯಪೀಠವಾಗಲಿ ಆ ಬಿರುದುಗಳನ್ನು ನಡೆಯಿಸಿಕೊಡುವಂತೆ ಮಾಡಲಿ. ಅದಿಲ್ಲದಿದ್ದರೆ ಈ ವಿಷಯದಲ್ಲಿ ಪ್ರವೇಶಿಸುವುದಕ್ಕೆ ಅಧಿಕಾರವೆತ್ತಣದು?

ಇನ್ನು ಶಾಸ್ತ್ರಿಗಳ ಶಾಸ್ತ್ರಜ್ಞಾನ ಮಹತ್ವವನ್ನು ಕುರಿತು ಸ್ವಲ್ಪ ವಿಚಾರ ಮಾಡೋಣ:- ವೀರಶೈವರಲ್ಲಿ ತಮ್ಮ ಧರ್ಮತತ್ವವನ್ನು ಬಲ್ಲಂಥ ಪಂಡಿತರಾರೂ ಇಲ್ಲವೆಂದು ಈ ಶಾಸ್ತ್ರಿಗಳಿಗೆ ವ್ಯಕ್ತವಾಗಿರುವುದಂತೆ! ಭಲಾ! ನರಸಿಂಹಶಾಸ್ತ್ರಿಗಳಿಗೆಲ್ಲವೂ ಗತವಾಗಿರುವಷ್ಟು ವೀರಶೈವ ಧರ್ಮಶಾಸ್ತ್ರಜ್ಞಾನವುಳ್ಳವರು ನಿಜವಾಗಿಯೂ ವೀರಶೈವ ವೈದಿಕವರ್ಗದಲ್ಲಿ ಒಬ್ಬರೂ ಇರಲಾರರು. ಈ ಶಾಸ್ತ್ರಿಗಳು ಯಾವ ಗುರುವಿನ ಬಳಿಯಲ್ಲಿ ವೀರಶೈವ ಧರ್ಮಗ್ರಂಥಾಧ್ಯಯನ ಮಾಡಿರುವರೋ ಗೊತ್ತಾಗಲಿಲ್ಲ. ವೀರಶೈವರಲ್ಲಿ “ಸಾಮಾನ್ಯವೀರಶೈವ, ಶುದ್ಧವೀರಶೈವ, ವಿಶೇಷವೀರಶೈವ, ನಿರಾಭಾರಿವೀರಶೈವ” ಎಂಬ ನಾಲ್ಕು ಭೇದಗಳಿರುವವೆಂದು ವೀರಶೈವ ಮಠದ ಅಲ್ಪಸ್ವಲ್ಪ ಧರ್ಮಜ್ಞಾನವಿರುವ ಯಾವನೊಬ್ಬ ಬಾಲಕನೂ ಕೂಡ ಹೇಳಬಲ್ಲನು. ಒಂದು ತಪ್ಪಲೆಯ ಅನ್ನದ ಪಾಕವನ್ನು ಒಂದಗುಳನ್ನು ಹಿಸುಕಿ ತಿಳಿಯುವಂತೆ ಈ ಶಾಸ್ತ್ರಿಗಳ ವೀರಶೈವ ಧರ್ಮಶಾಸ್ತ್ರಜ್ಞಾನಪ್ರಮಾಣವನ್ನು ಇದೊಂದು ಮಾತಿನಿಂದಲೇ ತಿಳಿದುಕೊಳ್ಳಬಹುದು. ಸ್ಥೂಲ ವಿಷಯ ಜ್ಞಾನವೇ ಹೀಗಿರುವಾಗ, ವೀರಶೈವ ಪಂಚಾಚಾರ್ಯ ಲಕ್ಷಣ ಮರ್ಯಾದೆ, ನಿರಾಭಾರಿಸ್ವರೂಪ, ಅವರುಗಳ ಮರ್ಯಾದೆ, ಪೂಜಕಪೂಜ್ಯಭಾವ ಮಠಸ್ಥರಲ್ಲಿರುವ ಸಂಪ್ರದಾಯ-ಇವುಗಳೆಲ್ಲಾ ಇವರಿಗೆಲ್ಲಿ ತಿಳಿಯಬೇಕು? ಎಲ್ಲೋ ಹೊಂಚುಹಾಕಿಯು ಯಾರಬಾಯಿಂದಲೋ ಯಾವ ಸಂದರ್ಭದಲ್ಲೋ ಹೇಳಲ್ಪಟ್ಟ ಕಲ್ಪಿತವಚನವೊಂದೆರಡನ್ನು ಕಲಿತುಕೊಂಡು ಸಕಲ ವೀರಶೈವ ಧರ್ಮರಹಸ್ಯಜ್ಞರಂತೆ ಮಾತನಾಡಿರುವ ಈ ಶಾಸ್ತ್ರಿಗಳಿಗೆ - “ಕಿಂತು ತತ್ರ ವಿಶೇಷಂ ತೇ ವಕ್ಷ್ಯಾಮಿ ಶೃಣು ಪಾರ್ವತಿ| ಸನ್ಯಾಸಸ್ಯಾನ್ಯಧರ್ಮಸ್ಯ ವೀರಶೈವಮತಸ್ಯಚ| ಖಟ್ವಾರೋಹಂದಿವಾನಿದ್ರಾಂ ತಾಂಬೂಲಾಭ್ಯಂಗವಿಗ್ರಹಾನ್| ಸುವರ್ಣಂ ಶುಕ್ಲ ವಾಸಶ್ಚ ಸ್ತ್ರಿಲಿಂಗೀ ವರ್ಜಯೇದ್ಯತಿಃ” ಎಂಬುದು ಮೊದಲಾದ ವಚನಗಳಲ್ಲಿ ವೀರಶೈವ ಲಿಂಗಧಾರಿಯಲ್ಲದ ಸನ್ಯಾಸಿಯ ಧರ್ಮಕ್ಕೂ ವೀರಶೈವ ಸನ್ಯಾಸಿಧರ್ಮಕ್ಕೂ ಎಷ್ಟೋ ವ್ಯತ್ಯಾಸವಿರುತ್ತದೆಂದು ತೋರಿಸುವಾಗ್ಗೆ ಖಟ್ವಾರೋಹಾದಿಗಳ ನಿಷೇಧಗಳು ಲಿಂಗಧಾರಿಯಲ್ಲದ ಸನ್ಯಾಸಿಗಳಿಗೇ ಹೊರತು ವೀರಶೈವಯತಿಗಳಿಗಲ್ಲವೆಂದು ಪಾರಮೇಶ್ವರಾಗಮದಲ್ಲಿ ಸ್ಪಷ್ಟೋಕ್ತಿಗಳಿಂದ ಘಂಟಾಘೋಷವಾಗಿ ಸಾರಿರುವುದೂ, ಸೂತಸಂಹಿತೆಯಲ್ಲಿ “ಅತಿವರ್ಣಾಶ್ರಮೀ ಸಾಕ್ಷಾದ್ಗುರೂಣಾಂ ಗುರುರುಚ್ಯತೇ| ಅತಿವರ್ಣಾಶ್ರಮೀ ಪ್ರೋಕ್ತೋ ಗುರುಸ್ಸರ್ವಾಧಿಕಾರಿಣಾಂ” ಎಂದಿರುವ ವಚನದಿಂದ ಅತಿವರ್ಣಾಶ್ರಮಿಗಳಾದ ನಿರಾಭಾರಿಗಳಲ್ಲಿ ಗುರುತ್ವ ಮಹತ್ವವು ಸಿದ್ಧವಾಗಿ, “ಲಿಂಗ[illegible] ಸ್ಯಾದ್ವ್ಯಾತ್ಮಕಂ ಚರಂಚಾಚರಮೇವಚ| ಚರಂತ್ವತಿಥಿರೂಪಂಸ್ಯಾದ[illegible]ಕಂ” ಎಂಬ ಸಿದ್ಧಾಂತಶಿಖಾಮಣ್ಯಾದಿ ವಚನಪ್ರಕಾರ ಚರಮೂರ್ತಿಯವರಾದ ಈ ನಿರಾಭಾರಿ ಗುರೂತ್ತಮನಿಗೆ ಜಂಗಮರೂಪಲಿಂಗತ್ವವು ಸಿದ್ಧವಾಗಿ, “ರಥೋತ್ಸವಾದಿಕಂ ಸರ್ವಂ ಗುರವೇ ಕಾರಯೇತ್ಸುಧೀಃ” ಎಂಬ ಶಿವಧರ್ಮಶಾಸ್ತ್ರವಚನಪ್ರಕಾರ ಭಕ್ತನು ತನ್ನ ಶ್ರೇಯಸ್ಸಿಗಾಗಿ ಗುರುಮೂರ್ತಿಗೆ ರಥೋತ್ಸವಾದಿಗಳೆಲ್ಲವನ್ನೂ ಮಾಡಬೇಕೆಂದು ಪ್ರೋಕ್ತವಾಗಿರುವುದರಿಂದಲೂ “ಸ್ಮರಯನ್ಗುರುಪಾದಾಬ್ಜಂ ಗತ್ವಾಪೂರ್ವಂ ತದೇವಹಿ| ನಮಸ್ಕೃತ್ಯಾಥಗುರುಮೇ ಸ್ವಗೃಹಂ ಪ್ರತಿ ತಂಗುರುಂ| ಆಂದೋಳಿಕಾಯಾಮಾರೋಪ್ಯ ಗಜೇವಾಪಿ ತುರಂಗಮೇ| ಅನುಗಚ್ಛೇತ್ಸ್ವಯಂ ಭಕ್ತ್ಯಾ ವಾದ್ಯಘೋಷಸಮನ್ವಿತಃ” ಎಂದು ಕ್ರಿಯಾಸಾರದಲ್ಲಿ ಗುರುಪೂಜಾ ಪ್ರಕರಣದಲ್ಲಿ ಶಿಷ್ಯನು ಗುರುವಿನಬಳಿಗೆ ಹೋಗಿ ನಮಸ್ಕರಿಸಿ ಪ್ರಾರ್ಥನೆಮಾಡಿ ಪಲ್ಲಕ್ಕಿಯ ಮೇಲೋ ಆನೆಕುದುರೆಗಳಮೇಲೋ ಕುಳ್ಳಿರಿಸಿ ವಾದ್ಯವೈಭವದೊಡನೆ ತನ್ನ ಮನೆಗೆ ಕರೆದುಕೊಂಡು ಹೋಗಿ ಪಾದಪೂಜೆ ಮಾಡಬೇಕು” ಎಂದು ಮೊದಲಾಗಿ ಹೇಳಿರುವುದರಿಂದಲೂ ಸಹ ನಿರಾಭಾರಿ ಗುರುವರೇಣ್ಯರು ಸರ್ವಸಂಗ ಪರಿತ್ಯಾಗಿಗಳಾದರೂ ಭಕ್ತಾನುಗ್ರಹಾರ್ಥವಾಗಿ ಶಿವನು ಸಾಕಾರನಾಗಿರುವಂತೆ ಮುಮುಕ್ಷುಗಳಾದ ಭಕ್ತಜನರನ್ನನುಗ್ರಹಿಸುವುದಕ್ಕಾಗಿ ಅವರ ಪ್ರಾರ್ಥನೆಯ ಮೇರೆಗೆ ಅವರು ಶಾಸ್ತ್ರಾವಿರುದ್ಧವಾದ ಯಾನಾರೋಹಣಾದಿ ಕ್ರಿಯೆಯನ್ನು ಮಾಡಲು ಅಧಿಕೃತರಾಗಿಯೇ ಇರುತ್ತಾರೆಂದು ಸಿದ್ಧವಾಗುತ್ತಿರುವಲ್ಲಿ, ಪರರ ಮನೆಗೆ ಬೆಂಕಿಯಿಕ್ಕಿ ತಮಾಷೆನೋಡುವುದಕ್ಕೆ ಬಂದಿರುವವರಂತಿರುವ ಈ ನರಸಿಂಹಶಾಸ್ತ್ರಿಗಳಿಗೆ ಗಿಳಿಪಾಠದಂತೆ ಅಲ್ಲಲ್ಲಿ ಕೇಳಿದ ಒಂದೆರಡು ಮಾತು ಗೊತ್ತಿರಬಹುದೇ ಹೊರತು ಈ ವೀರಶೈವ ಸಂಪ್ರದಾಯವಾಗಲಿ ಶಾಸ್ತ್ರರಹಸ್ಯಗಳಾಗಲೀ ತಿಳಿಯುವ ಬಗೆಯೆಲ್ಲಿ? ಆದರೂ ಮೂಲೆಯಲ್ಲಿ ಕುಳಿತು ಮಾರುದ್ದ ನಾಲಗೆಯನ್ನು ಚಾಚಿ ಕೂಗಿರುವ ನರಸಿಂಹಶಾಸ್ತ್ರಿಗಳ ಸಾಹಸವೇ ಸಾಹಸವಲ್ಲವೇ? ಇವರ ಈ ಪ್ರಯತ್ನದಿಂದ ಇವರಲ್ಲಿರುವ ಅಜ್ಞತೆಯು ವ್ಯಕ್ತವಾದುದು ಮಾತ್ರವೇ ಅಲ್ಲದೆ, “ಯಾನಾರೂಢಂಯತಿಂದೃಷ್ಟ್ವಾ ಸಚೇಲಂ ಸ್ನಾನಮಾಚರೇತ್” ಎಂಬ ವಚನವನ್ನುದಹರಿಸಿಬಿಟ್ಟು ಇತರ ಮಠಸನ್ಯಾಸಿಗಳ ಗೌರವಕ್ಕೆ ಹಾನಿತರಬೇಕೆಂದು ತಾನು ಪ್ರಯತ್ನಿಸಿದರೆ, ಶೃಂಗೇರಿಗುರುಗಳು, ರಾಜಗುರುಗಳಾದ ಪರಕಾಲಮಠಸನ್ಯಾಸಿಗಳು ಮೊದಲಾದವರಿಗೆಲ್ಲಾ ಇದೇ ಪ್ರಯೋಗವನ್ನು ತಾನು ಮಾಡಿ ದ್ರೋಹವನ್ನಾಚರಿಸಿದಂತಾಗುವನೆಂಬ ದೂರಾಲೋಚನೆಯೂ ಕೂಡ ಇವರಲ್ಲಿ ಹುಟ್ಟದಂತೆ ಮಾಡಿರುವ ಅಸೂಯಾಂಧತೆಯ ಮಹತ್ವವೂ ಸಹ ವ್ಯಕ್ತವಾಗಿರುವುದಲ್ಲವೆ? ಆದರೆ ಮಾಡುವುದೇನು? ಹೆರರಿಗೆ ಅಪಶಕುನವನ್ನು ಮಾಡಬೇಕೆನ್ನುವವರು ತಮ್ಮ ಮೂಗನ್ನು ಕುಯ್ದುಕೊಳ್ಳುವುದಕ್ಕೂ ಹೇಸರಲ್ಲವೆ?

[ಸಶೇಷ.] ಎಚ್. ಶರಭಾರಾಧ್ಯ.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನು ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ.

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತ ಚಕ್ರದತ್ತ, ಲುಕ್ಮಾನಿ ಇವೇ ಮೊದಲಾದ ಹಸ್ತಲಿಪಿ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿಸುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿಸುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಗಾಢ್ಯವನ್ನುಂಟುಮಾಡುವುದರಿಂದ ಇದನ್ನು “ಸಂಜೀವನಿ” ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಣದಿಂದ ಈ “ಕಾಮಸಂಜೀವನಿಲೇಹ್ಯವು” ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ನಿದ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮೂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ “ಕಾಮಸಂಜೀವನಿಲೇಹ್ಯವು” ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇವೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ

ಸೂಚನೆ:—ಇದರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಡಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರಸ್ಸು, ಗ್ರಾಮು, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತಪ್ಪಾ ಕಾಳಪ್ಪಾ ಲೇಂಗಡೆ,
5 ಹೊಸೂರ, ಪೋಸ್ಟ್ ಸಾಪೂರ, (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಬಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೇರೆ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಜಲ್ಲಿ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 13

ಇಮಿಟೇಷನ್ ಸಿಲ್ಕ್ ಗೋವರ್ ಜಾಗ್ ಸೀರೆ	5.0.0
ಡೈಮಂಡ್ ಕಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	3.8.0

ವಿಳಾಸ:-ವೈರಂ ಅಂಡ್ ಕೊ, ಇರುಳಪ್ಪನವೀದಿ, ಮದರಾಸು.

ಕಾಳು ಕಡಿಯ ಜಂಗೀ ವಖಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
6 ಧಾರವಾಡ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ ಡಿಂಗಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-ಡಿಂಗಬೇ- ಇಪ್ಪ. ೧೦೦ ಕ್ಕೆ ೧-೪-೦

೩. ಹೇನುಶೀರು ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-ಡಿಂಗಬೇ- ಇಪ್ಪ. ೧೦೦ಕ್ಕೆ ೧-೮-೦

೪. ಜಂತ ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಎಲ್ಲಾರೋಗಗಳಿಗೆ ೧೮-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ— ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
16 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
17 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

೧೯೧೮ ನೆಯ ಇಸವಿ ಮಾರ್ಚಿ ತಾ|| ೧೦ ರಿಂದ ೧೯೧೮ ನೆಯ ಮಾರ್ಚಿ ತಾ|| ೧೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾಘ ಬ|| ದ್ವಾದಶಿಯಿಂದ ಫಾಲ್ಗುಣ ಶು|| ಚೌತಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಜಂ ದಿ
10	ಭಾನು	ದ್ವಾದಶಿ	4-35	ಶ್ರವಣ	55-24	27
11	1 ಸೋಮ	ಚತುರ್ದ	54-18	ಧನಿಷ್ಠ	14-36	28
12	2 ಮಂಗಳ	ಅಮಾ	48-22	ಶತಭಿಷ	10-47	29
13	ಬುಧ	ಪಾಡ್ಯ	42-13	ಪೂಭಾ	6-41	30
14	3 ಗುರು	ಬಿದಿಗೆ	36-14	ಉಭಾ	2-30	1
15	4 ಶುಕ್ರ	ತದಿಗೆ	30-33	ಅಶ್ವಿನಿ	54-53	2
16	5 ಶನಿ	ಚೌತಿ	25-22	ಭರಣಿ	51-25	3

(1) ಮಹಾಶಿವರಾತ್ರಿ, ಮಾರೀಮಡೆ. (2) ಸರ್ವತ್ರಾಮಾವಾಸ್ಯಾ, ದ್ವಾಪರಯುಗಾದಿಃ, ಪೆರಡೂರಿನಲ್ಲಿ ಉತ್ಸವಾರಂಭ. (3) ಕಾರಗಾಂವಜಾತ್ರೆ. (4) ಪೆರಡೂರಿನಲ್ಲಿ ವಸಂತೋತ್ಸವ. (5) ಪೆರಡೂರಿನಲ್ಲಿ ರಥ.

ಮೈಸೂರ್: ಕೈ. ವಿರೂಪಾಕ್ಷಪ್ಪನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯತ್ವನಪೃತ್ತಮೋಹರಾಜೀಯಾಸ್ ||
ಶ್ರೀಮತ್ಕೃಷ್ಣನೃಪಾಲನುತ ಮಹಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಳಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತಿ ಕಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಮಾರ್ಚಿ ತಾರೀಖು ೧೭ ನೆಯ ಭಾನುವಾರ. (ಸಂಚಿಕೆ ೧೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೦ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹೊಸಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚಾರಿತ್ರ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ. — ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕೆ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.



ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಭಾರೀ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಪಾಮಂತಿಗೆ ಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರದಬುಡ್ಡಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಟೋಯಿಲೆಟ್ ಸೋಪ್ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ,
14 3, ಇರುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

[illegible] ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ



ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 15

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ ಬರ್ಮ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಸೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಧ್ಯರಾತ್ರಿಯಾಗೂ ವೈದ್ಯರ ಸಹಾಯವನ್ನು ನೀವು ಬಯಸುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗರ್ಸೋಬೇನೆ, ಬಲಹೀನತೆ, ಕಿಟ್ಟಕನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಆರಾ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೮೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆರೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್ ವೈ ಇನ್ಸ್‌ಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ವಿ. ಎಸ್. ಆಫ್ ಸ್ಯಾನಿಟರಿ ಇನ್ಸ್‌ಟ್ಯೂಟ್ ಲಂಡನ್ ಕಸ್ಸೆಲ್ಸಿಂಗ ಕೆಮಿಸ್ಟು ಎಗಿಯಾ ಲೇಕ್ ನಂ ೨ ಬೊಂಬಾಯಿ ಇವರು ಬರೆಯುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಹಿಂದಿನಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಪಡುತ್ತಾ ಇದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ಷಾಯಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ|| ಬ|| ಮಲ್ಲಪ್ಪ ಬಸವಪ್ಪ ವಾರದ
ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ.ಗಳನ್ನು ದಾನಮಾಡಿ ಯಾವಯಾವ ಮಹಾತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಅನುಕ್ರಮವಾಗಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

8 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 23

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶೀಘ್ರಪತನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂತವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಶ್ಚಟದಿಂದುಂಟಾದ ಶಿಥಿಲ ನಿರ್ಬಲತೆ ಮೊದಲಾದವು ಶೀಘ್ರವಾಗಿ ಕೇವಲ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೈರ್ಘ್ಯವನ್ನೂ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೩-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟ್ಯಾಂಪ್ ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನ್ನಡ ಜಿ||

ದಾವಣಗೆರೆಯಲ್ಲಿ ಕೂಡಿದ ಮಹಾಸಭೆಯ ಕಾರ್ಯವಿಜೃಂಭಣೆಗಳನ್ನೆಲ್ಲಾ ನೋಡಿ ಅಥವಾ ಕೇಳಿ ಸೈರಿಸದೆ ಅವಕ್ಕೊಂದು ಕೆಟ್ಟ ಹೆಸರನ್ನಿಡಬೇಕೆಂಬುದೂ, ವೀರಶೈವ ಮಹಸಾಮಾನ್ಯದ ಪ್ರಾರ್ಥನೆಯನ್ನು ತಿರಸ್ಕರಿಸಲಾರದೆ ಅಷ್ಟವಲ್ಲಕ್ಕಿ ಮೊದಲಾದ ಬಿರುದಾವಳಿಗಳನ್ನು ಶ್ರೀಮನ್ಮಹಾರಾಜ ಸರ್ಕಾರದವರು ದಯಪಾಲಿಸಿಬಿಟ್ಟರೆ, ತಮ್ಮಂಥವರು ನೋಡಿ ಸೈರಿಸಿಕೊಂಡಿರಬೇಕಾಗಿ ಬರುವುದಲ್ಲಾ! ಎಂಬ ಹೊಟ್ಟೆಯುರಿಯುಬ್ಬಿರುವುದೂ, ಪಂಚಸಿಂಹಾಸನಾಧೀಶರಿಗೂ ಚಿತ್ರದುರ್ಗದ ಮಹಾಸ್ವಾಮಿಗಳಿಗೂ ಈ ಮರ್ಯಾದೆಯ ವಿಷಯದಲ್ಲಿ ಜಗಳವನ್ನು ತಂದಿಕ್ಕಿದರೆ ಸ್ವಲ್ಪವೇನಾದರೂ ತಮ್ಮಿಷ್ಟಸಿದ್ಧಿಯಾದೀತೆಂಬ ಕಾರಣದಿಂದ ಕಿಡಿ ಹಾಕಬೇಕೆಂದು ಯೋಚಿಸಿರುವುದೂ ಸಹ ಇದಕ್ಕೆ ಕಾರಣವಲ್ಲದೆ ಮತ್ತೇನೂ ಅಲ್ಲ.

ಜರ್ಮನರ ಮಾಯಾಜಾಲಕ್ಕೆ ಬಲಿಬಿದ್ದು ಈಗ ಮಹಾನರ್ಥವನ್ನು ಅನುಭವಿಸುತ್ತಲಿರುವ ಯೂರೋಪುಖಂಡವು ಎಚ್ಚತ್ತುಕೊಂಡಿರುವಂತೆ, ಈ ನರಸಿಂಹಶಾಸ್ತ್ರಿಯವರಂಥವರ ಕೌಟಿಲ್ಯ ಭೇದತಂತ್ರ ಮೊದಲಾದುವುಗಳಿಗೆ ಮರುಳಾಗಿ ಯುಗಯುಗಾಂತರದಿಂದ ಕೆಂಗೆಟ್ಟು ಈಗತಾನೇ ಎಚ್ಚತ್ತು ಮೊಣಕಾಲುಗಳಮೇಲೆ ಕೈಯೂರಿ ಏಳುತ್ತಲಿರುವ ಜನವರ್ಗಗಳವರಮೇಲೆ ಈಗಲೂ ತಮ್ಮ ಭೇದೋಪಾಯಗಳು ಸಲ್ಲುವುವೆಂದು ಇವರಂಥವರು ತಿಳಿದುಕೊಳ್ಳುವುದು ಬರೀ ಭ್ರಮೆಯಲ್ಲವೆ?

ಅಷ್ಟವಲ್ಲಕ್ಕಿ ಪಂಚಕಲಶ ಮೊದಲಾದ ಶ್ರೇಷ್ಠ ಬಿರುದುಗಳು ತಮ್ಮ ಗುರುಪೀಠಗಳಿಗೆ ಬಹುಕಾಲದಿಂದಲೂ ನಡೆದುಬರುತ್ತಿದ್ದುದರಿಂದ ಅವನ್ನು ವೀರಶೈವ ಮತಸ್ಥರೆಲ್ಲರೂ ತಮ್ಮ ಮಠಕ್ಕೇ ನಡೆದುಬರುತ್ತಿರುವ ಒಂದು ಗೌರವವೆಂದು ತಿಳಿದುಕೊಂಡಿರುವರು. ಆ ಬಿರುದಾವಳಿಗಳನ್ನು ಪ್ರಭುಗಳವರು ಈ ಮಠದ ಯಾವ ಆಚಾರ್ಯಪೀಠಕ್ಕೆ ನಡೆಯಿಸಿಕೊಟ್ಟರೂ ಅವನ್ನು ಸರ್ವಗುರುಪರಂಪರೆಗೂ ಆದ ಮರ್ಯಾದೆಯೆಂದು ಮತಸ್ಥರು ಭಾವಿಸುವುದರಲ್ಲಿ ಸಂಶಯವಿಲ್ಲ. ಸಕಲಶಾಸ್ತ್ರ ಧುರಂಧರರಂತೆ ಮಾತನಾಡುವ ತಮ್ಮ ಪ್ರಾರ್ಥನೆಯನ್ನು ಮೈಸೂರು ಸರ್ಕಾರದವರು ಶಿರಸಾವಹಿಸಿ ನಡೆಯಿಸಿಕೊಡುವರೆಂದು ತಿಳಿದುಕೊಂಡು ಲೇಖನವನ್ನು ಬರೆದಿರುವ ಈ ನರಸಿಂಹಶಾಸ್ತ್ರಿಗಳಿಗೆ ಅಂಥ ಶಕ್ತಿಯಿದ್ದರೆ ಇವರು ಒಪ್ಪುವ ಯಾವ ವೀರಶೈವ ಮಠಾಚಾರ್ಯಪೀಠದವರಿಗಾದರೂ ಆ ಬಿರುದುಗಳನ್ನು ನಡೆಯಿಸಿಕೊಡುವಂತೆ ಮಾಡಲಿ. ಅದಿಲ್ಲದಿದ್ದರೆ ಈ ವಿಷಯದಲ್ಲಿ ಪ್ರವೇಶಿಸುವುದಕ್ಕೆ ಅಧಿಕಾರವೆತ್ತಣದು?

ಇನ್ನು ಶಾಸ್ತ್ರಿಗಳ ಶಾಸ್ತ್ರಜ್ಞಾನ ಮಹತ್ವವನ್ನು ಕುರಿತು ಸ್ವಲ್ಪ ವಿಚಾರಮಾಡೋಣ:-ವೀರಶೈವರಲ್ಲಿ ತಮ್ಮ ಧರ್ಮತತ್ವವನ್ನು ಬಲ್ಲಂಥ ಪಂಡಿತರಾರೂ ಇಲ್ಲವೆಂದು ಈ ಶಾಸ್ತ್ರಿಗಳಿಗೆ ವ್ಯಕ್ತವಾಗಿರುವುದಂತೆ! ಭಲೆ! ನರಸಿಂಹಶಾಸ್ತ್ರಿಗಳಿಗೆಲ್ಲವುಗತವಾಗಿರುವಷ್ಟು ವೀರಶೈವ ಧರ್ಮಶಾಸ್ತ್ರಜ್ಞಾನವುಳ್ಳವರು ನಿಜವಾಗಿಯೂ ವೀರಶೈವ ವೈದಿಕವರ್ಗದಲ್ಲಿ ಒಬ್ಬರೂ ಇರಲಾರರು. ಈ ಶಾಸ್ತ್ರಿಗಳು ಯಾವ ಗುರುವಿನ ಬಳಿಯಲ್ಲಿ ವೀರಶೈವ ಧರ್ಮಗ್ರಂಥಾಧ್ಯಯನ ಮಾಡಿರುವರೋ ಗೊತ್ತಾಗಲಿಲ್ಲ. ವೀರಶೈವರಲ್ಲಿ “ಸಾಮಾನ್ಯವೀರಶೈವ, ಶುದ್ಧವೀರಶೈವ, ವಿಶೇಷವೀರಶೈವ, ನಿರಾಭಾರಿವೀರಶೈವ” ಎಂಬ ನಾಲ್ಕು ಭೇದಗಳಿರುವವೆಂದು ವೀರಶೈವ ಮತದ ಅಲ್ಪಸ್ವಲ್ಪ ಧರ್ಮಜ್ಞಾನವಿರುವ ಯಾವೊಬ್ಬ ಬಾಲಕನೂ ಕೂಡ ಹೇಳಬಲ್ಲನು. ಒಂದು ತಪ್ಪಲೆಯ ಅನ್ನದ ಪಾಕವನ್ನು ಒಂದಗುಳನ್ನು ಹಿಸುಕಿ ತಿಳಿಯುವಂತೆ ಈ ಶಾಸ್ತ್ರಿಗಳ ವೀರಶೈವ ಧರ್ಮಶಾಸ್ತ್ರಜ್ಞಾನಪ್ರಮಾಣವನ್ನು ಇದೊಂದು ಮಾತಿನಿಂದಲೇ ತಿಳಿದುಕೊಳ್ಳಬಹುದು. ಸ್ಥೂಲ ವಿಷಯ ಜ್ಞಾನವೇ ಹೀಗಿರುವಾಗ, ವೀರಶೈವ ಪಂಚಾಚಾರ್ಯ ಲಕ್ಷಣ ಮರ್ಯಾದೆ, ನಿರಾಭಾರಿಸ್ವರೂಪ, ಅವರುಗಳ ಮರ್ಯಾದೆ, ಪೂಜಕಪೂಜ್ಯಭಾವ ಮತಸ್ಥರಲ್ಲಿರುವ ಸಂಪ್ರದಾಯ-ಇವುಗಳೆಲ್ಲಾ ಇವರಿಗೆಲ್ಲಿ ತಿಳಿಯಬೇಕು? ಎಲ್ಲೋ ಹೊಂಚುಹಾಕಿಯು ಯಾರಬಾಯಿಂದಲೋ ಯಾವ ಸಂದರ್ಭದಲ್ಲೋ ಹೇಳಲ್ಪಟ್ಟ ಕಲ್ಪಿತವಚನವೊಂದೆರಡನ್ನು ಕಲಿತುಕೊಂಡು ಸಕಲ ವೀರಶೈವ ಧರ್ಮರಹಸ್ಯಜ್ಞರಂತೆ ಮಾತನಾಡಿರುವ ಈ ಶಾಸ್ತ್ರಿಗಳಿಗೆ “ಕಿಂತು ತತ್ರ ವಿಶೇಷಂ ತೇ ವಕ್ಷ್ಯಾಮಿ ಶೃಣು ಪಾರ್ವತಿ | ಸನ್ಯಾಸಸ್ಯಾನ್ಯಧರ್ಮಸ್ಯ ವೀರಶೈವಮತಸ್ಯ ಚ | ಖಟ್ವಾರೋಹಂ ದಿವಾನಿದ್ರಾಂ ತಾಂಬೂಲಾಭ್ಯಂಗವಿಗ್ರಹಾನ್ | ಸುವರ್ಣಂ ಶುಕ್ಲವಾಸಶ್ಚ ಲಿಂಗೀ ವರ್ಜಯೇದ್ಯತಿಃ ||” ಎಂಬುದು ಮೊದಲಾದ ವಚನಗಳಲ್ಲಿ ವೀರಶೈವ ಲಿಂಗಧಾರಿಯಲ್ಲದ ಸನ್ಯಾಸಿಯ ಧರ್ಮಕ್ಕೂ ವೀರಶೈವ ಸನ್ಯಾಸಿಧರ್ಮಕ್ಕೂ ಎಷ್ಟೋ ವ್ಯತ್ಯಾಸವಿರುವುದೆಂದು ತೋರಿಸುವಾಗ್ಗೆ ಖಟ್ವಾರೋಹಾದಿಗಳ ನಿಷೇಧಗಳು ಲಿಂಗಧಾರಿಯಲ್ಲದ ಸನ್ಯಾಸಿಗಳಿಗೇ ಹೊರತು ವೀರಶೈವಯತಿಗಳಿಗಲ್ಲವೆಂದು ಪಾರಮೇಶ್ವರಾಗಮದಲ್ಲಿ ಸ್ಪಷ್ಟೋಕ್ತಿಗಳಿಂದ ಘಂಟಾಘೋಷವಾಗಿ ಸಾರಿರುವುದೂ, ಸೂತಸಂಹಿತೆಯಲ್ಲಿ “ಅತಿವರ್ಣಾಶ್ರಮೀ ಸಾಕ್ಷಾದ್ಗುರೂಣಾಂ ಗುರುರುಚ್ಯತೇ | ಅತಿವರ್ಣಾಶ್ರಮೀ ಪ್ರೋಕ್ತೋ ಗುರುಸ್ಸರ್ವಾಧಿಕಾರಿಣಾಂ” ಎಂದಿರುವ ವಚನದಿಂದ ಅತಿವರ್ಣಾಶ್ರಮಿಗಳಾದ ನಿರಾಭಾರಿಗಳಲ್ಲಿ ಗುರೂತ್ತಮತ್ವವು ಸಿದ್ಧವಾಗಿ, “ಲಿಂಗದ್ವಯಂ ಸಮಾಖ್ಯಾತಂ ಚರಂ ಚಾಚರಮೇವ ಚ | ಚರಂ ತ್ವತಿಥಿರೂಪಂ ಸ್ಯಾದಚರಂ ಸ್ಥಿರನಾಯಕಂ” ಎಂಬ ಸಿದ್ಧಾಂತಶಿಖಾಮಣ್ಯಾದಿ ವಚನಪ್ರಕಾರ ಚರಮೂರ್ತಿಸ್ವರೂಪನಾದ ನಿರಾಭಾರಿ ಗುರೂತ್ತಮನಿಗೆ ಜಂಗಮರೂಪಲಿಂಗತ್ವವು ವಿಹಿತವಾಗಿ, “ರಥೋತ್ಸವಾದಿಕಂ ಸರ್ವಂ ಗುರವೇ ಕಾರಯೇತ್ಸುಧೀಃ” ಎಂಬ ಶಿವಧರ್ಮಶಾಸ್ತ್ರವಚನಪ್ರಕಾರ ಭಕ್ತನು ತನ್ನ ಶ್ರೇಯಸ್ಸಿಗಾಗಿ ಗುರುಮೂರ್ತಿಗೆ ರಥೋತ್ಸವಾದಿಗಳೆಲ್ಲವನ್ನೂ ಮಾಡಬೇಕೆಂದು ಪ್ರೋಕ್ತವಾಗಿರುವುದರಿಂದಲೂ “ತ್ವರಯಾ ಗುರುಸಾನ್ನಿಧ್ಯಂ ಗತ್ವಾ ಪೂರ್ವವದೇವ ಹಿ | ನಮಸ್ಕೃತ್ಯ ತಥಾ ಗತ್ವಾ ಸ್ವಗೃಹಂ ಪ್ರತಿ ತಂ ಗುರುಂ | ಆಂದೋಳಿಕಾಯಾನಮಾರೋಪ್ಯ ಗಜೇ ವಾಪಿ ತುರಂಗಮೇ | ಅನುಗಚ್ಛೇತ್ಸ್ವಯಂ ಭಕ್ತ್ಯಾ ವಾದ್ಯಘೋಷಸಮನ್ವಿತಃ” ಎಂದು ಕ್ರಿಯಾಸಾರದಲ್ಲಿ ಗುರುಪೂಜಾ ಪ್ರಕರಣದಲ್ಲಿ ಶಿಷ್ಯನು ಗುರುವಿನ ಬಳಿಗೆ ಹೋಗಿ ನಮಸ್ಕರಿಸಿ ಪ್ರಾರ್ಥನೆಮಾಡಿ ಪಲ್ಲಕ್ಕಿಯ ಮೇಲೆಯೋ ಆನೆಕುದುರೆಗಳಮೇಲೆಯೋ ಕುಳ್ಳಿರಿಸಿ ವಾದ್ಯವೈಭವದೊಡನೆ ತನ್ನ ಮನೆಗೆ ಕರೆದುಕೊಂಡು ಹೋಗಿ ಪಾದಪೂಜೆ ಮಾಡಬೇಕು” ಎಂದು ಮೊದಲಾಗಿ ಹೇಳಿರುವುದರಿಂದಲೂ ಸಹ ನಿರಾಭಾರಿ ಗುರುವರೇಣ್ಯರು ಸರ್ವಸಂಗಪರಿತ್ಯಾಗಿಗಳಾದರೂ ಭಕ್ತಾನುಗ್ರಹಾರ್ಥವಾಗಿ ಶಿವನು ಸಾಕಾರನಾಗಿರುವಂತೆ ಮುಮುಕ್ಷುಗಳಾದ ಭಕ್ತಜನರನ್ನನುಗ್ರಹಿಸುವುದಕ್ಕಾಗಿ ಅವರ ಪ್ರಾರ್ಥನೆಯ ಮೇರೆಗೆ ಅವರು ಶಾಸ್ತ್ರಾವಿರುದ್ಧವಾದ ಯಾನಾರೋಹಣಾದಿ ಕ್ರಿಯೆಯನ್ನು ಮಾಡಲು ಅಧಿಕೃತರಾಗಿಯೇ ಇರುತ್ತಾರೆಂದು ಸಿದ್ಧವಾಗುತ್ತಿರುವಲ್ಲಿ, ಪರರ ಮನೆಗೆ ಬೆಂಕಿಯಿಕ್ಕಿ ತಮಾಷೆನೋಡುವುದಕ್ಕೆ ಬಂದಿರುವವರಂತಿರುವ ಈ ನರಸಿಂಹಶಾಸ್ತ್ರಿಗಳಿಗೆ ಗಿಣಿಪಾಠದಂತೆ ಅಲ್ಲಲ್ಲಿ ಕೇಳಿದ ಒಂದೆರಡು ಮಾತು ಗೊತ್ತಿರಬಹುದೇ ಹೊರತು ಈ ವೀರಶೈವ ಸಂಪ್ರದಾಯವಾಗಲೀ ಶಾಸ್ತ್ರರಹಸ್ಯಗಳಾಗಲೀ ತಿಳಿಯುವ ಬಗೆಯೆಲ್ಲಿ? ಆದರೂ ಮೂಲೆಯಲ್ಲಿ ಕುಳಿತು ಮಾರುದ್ದ ನಾಲಗೆಯನ್ನು ಚಾಚಿ ಕೂಗಿರುವ ನರಸಿಂಹಶಾಸ್ತ್ರಿಗಳ ಸಾಹಸವೇ ಸಾಹಸವಲ್ಲವೇ! ಇವರ ಈ ಪ್ರಯತ್ನದಿಂದ ಇವರಲ್ಲಿರುವ ಅಜ್ಞತೆಯು ವ್ಯಕ್ತವಾಗುವುದು ಮಾತ್ರವೇ ಅಲ್ಲದೆ, “ಯಾನಾರೂಢಂ ಯತಿಂ ದೃಷ್ಟ್ವಾ ಸಚೇಲಂ ಸ್ನಾನಮಾಚರೇತ್” ಎಂಬ ವಚನವನ್ನುದಹರಿಸಿಬಿಟ್ಟು ಇತರ ಮತಸನ್ಯಾಸಿಗಳ ಗೌರವಕ್ಕೆ ಹಾನಿತರಬೇಕೆಂದು ತಾನು ಪ್ರಯತ್ನಿಸಿದರೆ, ಶೃಂಗೇರಿಗುರುಗಳು, ರಾಜಗುರುಗಳಾದ ಪರಕಾಲಮಠಸನ್ಯಾಸಿಗಳು ಮೊದಲಾದವರಿಗೆಲ್ಲಾ ಇದೇ ಪ್ರಯೋಗವನ್ನು ತಾನು ಮಾಡಿ ದ್ರೋಹವನ್ನಾಚರಿಸಿದಂತಾಗುವನೆಂಬ ದೂರಾಲೋಚನೆಯೂ ಕೂಡ ಇವರಲ್ಲಿ ಹುಟ್ಟದಂತೆ ಮಾಡಿರುವ ಅಸೂಯಾಂಧತೆಯ ಮಹತ್ವವೂ ಸಹ ವ್ಯಕ್ತವಾಗುವುದಲ್ಲವೆ? ಆದರೆ ಮಾಡುವುದೇನು? ಹೆರರಿಗೆ ಅಪಶಕುನವನ್ನು ಮಾಡಬೇಕೆನ್ನುವವರು ತಮ್ಮ ಮೂಗನ್ನು ಕುಯ್ದುಕೊಳ್ಳುವುದಕ್ಕೆ ಹೇಸರಲ್ಲವೆ?

[ಸಶೇಷ.]   ಎಚ್. ಶರಭಾರಾಧ್ಯ.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ!   ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ)   (ದಮ್ಮಿನಮೇಲೆ ರಾಂಬಾಣ.

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತ, ಚಿಕಿತ್ಸಾದತ್ತ, ಉಕ್ತಾನಿ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಶಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು “ಸಂಜೀವನಿ” ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ “ಕಾಮಸಂಜೀವನಿಲೇಹ್ಯವು” ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ನಿದ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮೂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಸುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಾಶಕ್ತಿಯನ್ನುಂಟುಮಾಡುವುದರಲ್ಲಿ “ಕಾಮಸಂಜೀವನಿಲೇಹ್ಯವು” ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಕ್ಕೆ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ:—ಇದರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಿಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ತುರಿಕೆ, ತದ್ದು, ಹುಳುಕಡ್ಡಿ, ಮೇಹಸಂಬಂಧಿ ಚಟ್ಟೆ (ಶಾಕಿ) ಹಡವರ್ಣ, ಯಲುಸಂದಿಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರೆಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತ್ಯಪ್ಪಾ ಕಾಳಪ್ಪಾ ಲೇಂಗಡೆ,
5   ಹೊಸೂರ, ಪೋಸ್ಟ್ ಪಾಶ್ಚಾಪೂರ, (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ನವರಾತ್ರಿ ಬಹುಮಾನ   ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು   ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬಿನ್ನೀ ಮಿಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ.   13

ಇಮಿಟೇಷನ್ ಸಿಲ್ಕ್ ಗೋಪರ್ ಜರಿ ಸೀರೆ	5.0.0
ಡೈಮಂಡ್ ಕೊಟ್ಟಿಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	2.8.0

ವಿಳಾಸ:-ವೈರಂ ಅಂಡ್ ಕೊ, ಇರುಳಪ್ಪನವೀದಿ, ಮದರಾಸು.

ಕಾಳು ಕಡಿಯ ಜಂಗೀ ವೆಪಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
6   ಧಾರವಾಡ.

ಫುಕಟ]   [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರಾ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚೆರೋಗಗಳಮೇಲೆ. ಲಿ-೧ಬೇ-೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ ೧ಬೇ- ೩ಪ್ಯ. ೧೦೦ ಕ್ಕೆ ೧-೪-೦

೩ ಹೇನುಸೀರು ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಯ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಎಲ್ಲಾ ರೋಗಗಳಿಗೆ ೧ಡ-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ.—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
16   ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವವರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
17   ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

೧೯೧೮ ನೆಯ ಇಸವಿ ಮಾರ್ಚಿ ತಾ|| ೧೦ ರಿಂದ ೧೯೧೮ ನೆಯ ಮಾರ್ಚಿ ತಾ|| ೧೬ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾಘ ಬ|| ದ್ವಾದಶಿಯಿಂದ ಫಾಲ್ಗುಣ ಶು|| ಚೌತಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭಾ
10	ಭಾನು	ದ್ವಾದಶಿ	4-35	ಶ್ರವಣ	55-24	27
11	[1]ಸೋಮ	ಚತುರ್ದ	54-18	ಧನಿಷ್ಠ	14-36	28
12	[2]ಮಂಗಳ	ಅಮಾ	48-22	ಶತಭಿಷ	10-47	29
13	ಬುಧ	ಪಾಡ್ಯ	42-13	ಪೂಭಾ	6-41	30
14	[3]ಗುರು	ಬಿದಿಗೆ	36-14	ಉಭಾ	2-30	1
15	[4]ಶುಕ್ರ	ತದಿಗೆ	30-33	ಅಶ್ವಿನಿ	54-53	2
16	[5]ಶನಿ	ಚೌತಿ	25-23	ಭರಣಿ	51-35	3

(1) ಮಹಾಶಿವರಾತ್ರಿಃ, ಮಾರೀಮಹೆ. (2) ಸರ್ವತ್ರಾಮಾವಾಸ್ಯಾ, ದ್ವಾಪರಯುಗಾದಿಃ, ಪೆರಮೂರಿನಲ್ಲಿ ಉತ್ಸವಾರಂಭ. (3) ಅರಗಿಣಿಯುತ್ಸವ. (4) ಪೆರಮೂರಿನಲ್ಲಿ ಪಶುಪೋತ್ಸವಃ. (5) ಪೆರಮೂರಿನಲ್ಲಿ ರಥಃ.

ಮೈಸೂರ್: ಶ್ರೀ. [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಂತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಸಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಲೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಲೆಯಂತದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦]   [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦)   ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮಾರ್ಚಿ ತಾರೀಖು ೧೭ ನೆಯ ಭಾನುವಾರ.   (ಸಂಚಿಕೆ ೧೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು



ಲೋಕಪ್ರಸಿದ್ಧಿ ಹೊಂದುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕೆಳಗೆ ಬರೆದಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಸಿಲ್ವರ್ [illegible] 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ಬಂಗಾರದ [illegible] 1, ಗಡಿಯಾರದ ಸರಪಣಿ 1, ಗೆಜ್ಜೆ ಉಂಗುರ 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ಬಂಗಾರದ ಕನ್ನಡಿ 1, ಸುವಾಸನೆ [illegible] 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಸಿಲ್ವರ್ [illegible] 1, ರೋಲ್ಡ್ ಗೋಲ್ಡ್ ಎಂಬ ಶೃಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
14   ೩, ಇರುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಬಾಣಕೀಲಚಂದ್ರಿ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ರೋಗಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ.   15

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ ಬರ್ಮ, ಸಿಲೋನ್, ಮಲೆಯನ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ರೋಗಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಹಾಯವನ್ನು ನೀವು ಎದುರುನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದೆ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫಿರೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಫ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಫಿಸಿಷನ್ ಎಗಿಯು ಲೇನ್ ನಂ ೨ ಬೊಂಬಾಯಿ ಇವರು ಬರೆಯುವುದು.

ತಮ್ಮ ರೋಗಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ರೋಗಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪ್ರಕಟಿಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಸಂತೋಷಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಔಷಧಿಗಳನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಶ್ರೀ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಶೀಘ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಶೀಘ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,
ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ|| ಬ|| ಮಲ್ಲಪ್ಪ ಬಸವಪ್ಪ ವಾರದ
ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ. ಗಳನ್ನು ದಾನಮಾಡಿ ಯಾವಯಾವ ಮಹತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಹಸ್ತಾಕ್ಷರಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

8   ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ.   23

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಶಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷರ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಹಸ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅಪೂರ್ವದ ಸಂಗಡ ಟಪಾಲುಖರ್ಚ ಬೇರೆ. ಒಂದಾಣೆ ಸ್ಟ್ಯಾಂಪು ಕಳಿಸಿದರೆ ಕ್ಯಾಟಲಾಗು ಫ್ರೀ.

ವಿಳಾಸ—ವೈದ್ಯ, ಜಿ. ಎಸ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕಾನಡಾ ಜಿ||

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮಾರ್ಚಿ ತಾ|| ೧೭ ನೆಯ ಭಾನುವಾರ.

ಮರಿಮಲ್ಲಪ್ಪನವರ ಹೈಸ್ಕೂಲು.

ಇದಕ್ಕೆ ಸಂಬಂಧಪಟ್ಟ ಟ್ರಸ್ಟಿಯ ಆಡಳಿತದ ಲೋಪವನ್ನು ಕುರಿತು ಬಂದಿದ್ದ ೧-೨ ಪತ್ರವ್ಯವಹಾರಗಳನ್ನು ಇದುವರೆಗೆ ನಾವು ಪ್ರಕಟಿಸಿರುತ್ತೇವೆ. ಇದರ ನ್ಯೂನಾತಿರೇಕ ಪರಿಹಾರಚಿಂತನೆಯಿಂದ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಂಘದವರು ಸ್ವಲ್ಪ ಪರಿಚಲನವನ್ನು ವ್ಯಕ್ತಪಡಿಸಿದುದು ವಿಹಿತವೂ ಅವರ ಕರ್ತವ್ಯಬುದ್ಧಿಗೆ ಭೂಷಣವೂ ಆಗಿರುತ್ತದೆ. ಆ ಸಂಘದಿಂದ ನಿಯುಕ್ತರಾದ ಮ|| ಎಂ. ಬಸವಯ್ಯನವರು ತದ್ವಿಷಯವಾಗಿ ನಡೆಯಿಸಿರುವ ನಡವಳಿಕೆಗಳು ಈ ಸಂಚಿಕೆಯಲ್ಲಿ ಪ್ರಕಟಿಸಿರುವ ಅವರ ಪತ್ರವ್ಯವಹಾರದಿಂದ ವಿದಿತವಾಗುತ್ತವೆ. ಡಿಸ್ಟ್ರಿಕ್ಟ್ ಜಡ್ಜರು ಈ ಸಂಬಂಧವಾಗಿ ಮೊನ್ನೆತಾನೇ ಮಾಡಿರುವ ಅಪ್ಪಣೆಯನ್ನು ನೋಡಲಾಗಿ ಟ್ರಸ್ಟಿನ ಅಕ್ರಮಗಳು ವಿಶೇಷವಾಗಿವೆಯೆಂಬುದು ಸಿದ್ಧವಾಗಿರುತ್ತದೆ. ಆದರೆ ಅಕ್ಷಮ್ಯವಾಗಿರುವ ಅಂಥ ದೋಷಗಳನ್ನು ಡಿಸ್ಟ್ರಿಕ್ಟ್ ಜಡ್ಜರು ಮನ್ನಿಸಿರುತ್ತೇವೆಂದು ಹೇಳುವುದಕ್ಕೆ ಏನು ಕಾರಣವೋ ನಮಗೆ ತಿಳಿಯಲಿಲ್ಲ. ಧರ್ಮಕರ್ತರು ಮೃತರಾಗಿರುವುದರಿಂದ ಅವರ ಧರ್ಮದಪರಿಪಾಲನಭಾರವು ಧರ್ಮಾಭಿಮಾನಿಗಳಾದ ಎಲ್ಲ ಮಹಾಜನರಿಗೂ ಸೇರಿಯೇ ಇರಬೇಕಾದುದಾಗಿದೆ. ಅದರಮೇಲೆ ಪ್ರಭುತ್ವದವರೂ ವಿಶೇಷತಃ ಆ ಧರ್ಮದ ಟ್ರಸ್ಟಿಗಳೂ ಇದಕ್ಕೆ ವಿಶೇಷವಾಗಿ ಬಾಧ್ಯರಾಗಿರತಕ್ಕವರಾಗಿದ್ದಾರೆ. ಲೆಕ್ಕಪತ್ರಗಳನ್ನೂ, ಸ್ಕೂಲಿನ ಕಾರ್ಯನಿರ್ವಾಹಕ್ರಮ ಮೊದಲಾದುವುಗಳನ್ನೂ ಪರಿಶೋಧಿಸುವುದಾದರೆ ಇನ್ನೆಷ್ಟು ನ್ಯೂನಾತಿರೇಕಗಳು ಹೊರಪಡುವುವೋ ಗೊತ್ತಿಲ್ಲ. ದೇಶೋದ್ಧಾರದ ಭಾರವನ್ನೇ ಹೊತ್ತಿರುವೆವೆಂದು ತೋರ್ಪಡಿಸಿಕೊಳ್ಳುತ್ತಿರುವ ಮ|| ಎಂ. ವೆಂಕಟಕೃಷ್ಣಯ್ಯನವರ ದರಬಾರಿಗೊಳಪಟ್ಟ ಈ ಸ್ಕೂಲಿನ ಮತ್ತೂ ಟ್ರಸ್ಟಿನ ಕಾರ್ಯಭಾರಗಳು ಇಷ್ಟು "ಮೊಗಲಾಯಿ" ಯಾಗಿ ನಡೆದಿರುವುದು ಶೋಚನೀಯವು. ಟ್ರಸ್ಟು ಸಾಮರ್ಥ್ಯವುಳ್ಳುದಾಗಿದ್ದರೆ ಇಷ್ಟೊಂದು ಅವ್ಯವಸ್ಥೆಗೆ ಅವಕಾಶವಾಗುತ್ತಿರಲಿಲ್ಲವೆಂದು ನಮಗೆ ತೋರುತ್ತದೆ. ಡಿಸ್ಟ್ರಿಕ್ಟ್ ಜಡ್ಜರು ಇಷ್ಟು ಅಪ್ಪಣೆಮಾಡಿಬಿಟ್ಟುದರಿಂದಲೇ ಅವರ ಕರ್ತವ್ಯವು ಮುಗಿದಿತೆಂದು ನಾವು ತಿಳಿಯುವುದಿಲ್ಲ. ಇದುವರೆಗಣ ರೀತಿಯಿಂದ ಉಂಟಾಗಿರುವ ಪರಿಣಾಮಗಳನ್ನೆಲ್ಲಾ ಪರ್ಯಾಲೋಚಿಸಿದ ಬಳಿಕ, ನಿಬಂಧನೆ ಮೊದಲಾದುವುಗಳಲ್ಲಿ ಸುಧಾರಣೆಗಳನ್ನು ಮಾಡಿ, ಮುಂದೆ ನ್ಯೂನಾತಿರೇಕಗಳಿಗೆ ಎಡೆಯಿಲ್ಲದಂತೆಯೂ ಸ್ಕೂಲಿನ ಕಾರ್ಯವು ಧರ್ಮಕರ್ತರ ಉದ್ದೇಶಕ್ಕನುಸರಿಸಿ ಫಲಪ್ರದವಾಗುವಂತೆಯೂ ಮಾಡಲು ತಕ್ಕ ಅಪ್ಪಣೆಯನ್ನು ಮಾಡಿಯೇ ತೀರಬೇಕಾಗಿದೆ. ಮುಖ್ಯವಾಗಿ ಮರಿಮಲ್ಲಪ್ಪನವರು ವೀರಶೈವರಾಗಿದ್ದು, ಅವರ ಉದ್ದೇಶವು ಸ್ವಜನವಿದ್ಯಾಭಿವೃದ್ಧಿಗಾಗಿದ್ದುದರಿಂದ, ಅವರು ಮಾಡಿದ ಈ ಧರ್ಮದಿಂದ ಅವರ ಉದ್ದೇಶವು ಸಫಲವಾಗುವಂತೆಯೂ, ಧರ್ಮರಕ್ಷಣಭಾರವನ್ನು ವಹಿಸಿರುವ ಪ್ರಭುತ್ವದವರಿಗೆ ಪುಣ್ಯಕೀರ್ತಿಗಳು ಲಭಿಸುವಂತೆಯೂ ಮಾಡುವುದು ವೀರಶೈವರಾಗಿ ಹುಟ್ಟಿರುವ ಪ್ರತಿಯೊಬ್ಬ ಮನುಷ್ಯರಿಗೂ ದುರ್ನಿವಾರವಾದ ಕರ್ತವ್ಯವಾಗಿದೆ. ದಾಕ್ಷಿಣ್ಯಕ್ಕೋ ಮತ್ತಾವ ಕಾರಣಕ್ಕೋ ಒಳಗಾಗಿ ಕರ್ತವ್ಯದಲ್ಲಿ ಅಶ್ರದ್ಧೆ ಅಶಕ್ತಿಗಳನ್ನು ತೋರಿಸತಕ್ಕವರು ಸಮಾಜದ್ರೋಹ ಧರ್ಮದ್ರೋಹಗಳಿಗೆರಡಕ್ಕೂ ಗುರಿಯಾಗದೆ ತಪ್ಪುವುದಿಲ್ಲ. ಧರ್ಮಾತ್ಮನು ಮಾಡಿರುವ ಧರ್ಮವನ್ನು ಉಚಿತರೀತಿಯಿಂದ ಉದ್ಧಾರಮಾಡಿ ರಕ್ಷಿಸಿಕೊಂಡು ಹೋಗುವಷ್ಟರ ಯೋಗ್ಯತೆಯೂ ಪುಂಸ್ತ್ವವೂ ಈಗಣ ಅವರ ಸಹಸಮಯದವರಿಗೆ ಇಲ್ಲದೆ ಹೋಗುವುದೆಂದರೆ ಬಹಳ ಲಾಂಛನವೇ ಸರಿ. ಅದಕ್ಕಾಗಿ ಇದರಲ್ಲಿ ಪ್ರವೃತ್ತರಾಗಿರುವ ಮ|| ಬಸವಯ್ಯನವರೂ ಇತರ ವೀರಶೈವ ಸಮಾಜದವರೂ ಸಹ ಮುಂದೆ ಮಾಡಬೇಕಾಗಿರುವುದನ್ನು ನಿಷ್ಕರ್ಷಿಸಿ, ಮರಿಮಲ್ಲಪ್ಪನವರ ಧರ್ಮವು ಅವರ ಉದ್ದೇಶಕ್ಕೆ ಅನುಸಾರವಾಗಿ ನಡೆಯುವಂತೆ ಮಾಡುವಲ್ಲಿ ಸ್ವಲ್ಪವೂ ಉದಾಸೀನಮಾಡಲಾಗದೆಂದು ಒತ್ತಿ ಹೇಳುತ್ತೇವೆ.

ಮ|| ಎ. ಆರ್. ಬಾನರ್ಜಿಯವರ ಭಾಷಣ.

(ಭಾಗ ೧.)

ಕೌನ್ಸಿಲರ್ ಮ|| ಎ. ಆರ್. ಬಾನರ್ಜಿಯವರು ನಿಯಮನಿರ್ಮಾಣಸಭೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ವಿರುದ್ಧವಾಗಿ ಮಾಡಿದ ಭಾಷಣವು ಬಹಳ ಉದ್ದವಾಗಿದ್ದಿತು. ಅದನ್ನೆಲ್ಲಾ ಆದ್ಯಂತವಾಗಿ ಓದಿ ನೋಡುವಲ್ಲಿ ಅವರು ಮನಸ್ಸಾಕ್ಷಿಗನುಸಾರವಾಗಿ ಅದನ್ನಾಡಿರುವರೆ ಎಂದು ಸಂಶಯವುಂಟಾಗುವುದು. ಏಕೆಂದರೆ ಒಂದು ಪಕ್ಷದವರಿಂದ "ಭಲಾ" ಎನ್ನಿಸಿಕೊಳ್ಳುವುದಕ್ಕೆ ಸಾಧಕವಾದಂತೆ ಅದು ಇರುವುದೇ ಹೊರತು ವಿಶೇಷಾಂಶಗಳೇನೂ ಅದರಲ್ಲಿಲ್ಲ. ಹಿಂದೆ ಸಾಧ್ವೀ ಪತ್ರಿಕೆಯಲ್ಲಿ ನೊಕಾಸಿಯೆಂಬುವರೊಬ್ಬರು ವೇದವ್ಯಾಸರ ವಿಷಯವನ್ನು ಕುರಿತು ಬರೆದಿದ್ದಾಗ "ತಾನು ಅಂಬಿಗಿತ್ತಿ ಹೊಟ್ಟೆಯಲ್ಲಿ ಹುಟ್ಟಿದವನಾದುದರಿಂದ ತನ್ನನ್ನು ಬ್ರಾಹ್ಮಣರು ಬಹಿಷ್ಕರಿಸಲು, ಅವರನ್ನು ಸರಿಮಾಡಿಕೊಳ್ಳುವುದಕ್ಕಾಗಿ ಬ್ರಾಹ್ಮಣರೇ ಭೂದೇವರೆಂತಲೂ ಅವರಿಗೆ ದಾನಮಾಡಿದರೆ ಸಕಲ ಪಾಪಕ್ಷಯವೂ ಆಗುವುದೆಂತಲೂ, ಅವರೇ ಸರ್ವಪೂಜ್ಯರೆಂತಲೂ ಮೊದಲಾಗಿ ಬೇಕಾದಷ್ಟು ಕಥೆಗಳನ್ನು ತನ್ನ ಪುರಾಣಗಳಲ್ಲಿ ಬರೆದು, ಅವರ ಒಲ್ಮೆಯನ್ನು ಸಂಪಾದಿಸಿಕೊಂಡು ತಾನು ದೊಡ್ಡವನಾದನು" ಎಂದು ಹೇಳಿದ್ದಾರೆ. ಅದು ಸುಳ್ಳಾಗಲೀ ನಿಜವಾಗಲೀ ನಮಗೆ ಬೇಕಿಲ್ಲ. ಆ ಕಥೆಯು ಈಗಣ ಸಂದರ್ಭದಲ್ಲಿ ನಮ್ಮ ಸ್ಮರಣೆಗೆ ಬರುತ್ತಿದೆ. ನಮ್ಮ ಬಾನರ್ಜಿಯವರು ಬಂಗಾಳಾದೇಶೀಯರು, ಮತ್ತೂ ಪಶ್ಚಿಮದೇಶಗಳಿಗೆ ಹೋಗಿ ವಿಶೇಷ ವಿದ್ಯಾಭ್ಯಾಸಮಾಡಿ ಸಿವಿಲ್ ಸರ್ವಿಸ್ ಪರೀಕ್ಷೆ ಕೊಟ್ಟು, ಪಾಶ್ಚಾತ್ಯದೇಶಸಂಪ್ರದಾಯಗಳನ್ನೆಲ್ಲಾ ಅರಿತು ವಿಶಾಲವಾದ ಮನೋಭಾವವುಳ್ಳವರಾಗಿ ಬಂದವರು. ಭರತಖಂಡದಲ್ಲಿ ೧-೨ ಜಿಲ್ಲೆಗಳ ಕಲೆಕ್ಟರಾಗಿದ್ದರು. ಕೊಚ್ಚಿ ಸಂಸ್ಥಾನದ ದಿವಾನ್ಗಿರಿಯನ್ನು ಮಾಡಿ ಸಮರ್ಥರೂ ನಿಷ್ಪಕ್ಷಪಾತಿಗಳೂ ಎಂದು ಹೆಸರನ್ನು ತೆಗೆದುಕೊಂಡರು. ಇಂಥವರನ್ನು ನಮ್ಮ ಪ್ರಭುಗಳು ಸಂಸ್ಥಾನದ ಕೌನ್ಸಿಲರ್ ಪದವಿಗೆ ನಿಯಮಿಸಿಕೊಂಡಾಗ, ನಿಷ್ಪಕ್ಷಪಾತಾಧಿಕಾರವನ್ನೇ ಕೋರುತ್ತಿರುವ ಈ ದೇಶದ ದುರ್ಬಲಜನವರ್ಗದವರೆಲ್ಲಾ ಆನಂದವನ್ನೂ ಆಶೆಯನ್ನೂ ಹೊಂದಿದರು. ಆದರೆ "ಮೈಸೂರು ಮೈಸೂರಿನವರಿಗೇ ಇರಬೇಕು" ಎಂದು ಬಾಹ್ಯಕಪಟೋಕ್ತಿಯನ್ನಾಡುತ್ತಿರುವ ಕೆಲಜನರು ಮಾತ್ರ ತಮ್ಮ ಪತ್ರಿಕೆಗಳಲ್ಲಿ ಹೊರದೇಶದವರನ್ನು ಇಲ್ಲಿಯ ಅಧಿಕಾರಕ್ಕೆ ತಂದರಲ್ಲಾ! ಎಂದು ಮೈಸೂರು ಪ್ರಭುತ್ವದವರನ್ನೂ ಶ್ರೀಮನ್ಮಹಾರಾಜರನ್ನೂ ಆಗ್ರಹವಚನರಾಶಿಯಿಂದ ತುಂಬಿಬಿಟ್ಟರು. ಆಗಣ ಸನ್ನಿವೇಶವು ಮ|| ಬಾನರ್ಜಿಯವರಲ್ಲಿ ಯಾವ ವೈಲಕ್ಷಣ್ಯವನ್ನುಂಟುಮಾಡಿತೋ ನಾವರಿಯೆವು. ಈಗ ಅದೇ ಪತ್ರಿಕೆಗಳೇ ಮ|| ಬಾನರ್ಜಿಯವರ ಭಾಷಣವನ್ನು "ಮೆಮೊರೆಬಲ್‌ಸ್ಪೀಚ್" ಎಂದು ಶ್ಲಾಘಿಸಿ ಆದ್ಯಂತವಾಗಿ ಪ್ರಕಟಿಸಿಕೊಂಡು, ಅವರನ್ನು ತಲೆಯಮೇಲೇರಿಸಿಕೊಂಡು ಕುಣಿಸುತ್ತಿವೆ. ಹೊರಗಣವರು ಮೈಸೂರಿನವರೂ ಮೈಸೂರಿನವರು ಹೊರಗಣವರೂ ಆಗುವುದು ಎಷ್ಟರಲ್ಲಿದೆಯೆಂಬುದು ಮ|| ಬಾನರ್ಜಿಯವರಿಗೂ ಸಹ ಈ ದೇಶಕ್ಕೆ ಬಂದಮೇಲೆ ಗೊತ್ತಾಗಿರಬಹುದು.

ಆದರೆ "ಉದಾರಚರಿತಾನಾಂತು ವಸುಧೈವಕುಟುಂಬಕಂ" ಎಂಬ ನೀತಿಯಂತೆ ಘನತರವಾದ ತಮ್ಮ ಯೋಗ್ಯತೆಯಿಂದ ಪ್ರಪಂಚದ ಯಾವ ಮೂಲೆಗೆ ಹೋದರೂ ಸಂಭಾವಿಸಲ್ಪಡಲರ್ಹರಾಗಿರುವ ಮ|| ಬಾನರ್ಜಿಯವರು ಏಕದೇಶೀಯರಾಗಿರುವ ಕೆಲವರ ಮುಖವಿಕಾಸಕ್ಕಾಗಿ ಬಹುಜನಹಿತಕ್ಕೆ ವಿಘಾತಕವಾದ ಮಾರ್ಗಕ್ಕೆ ಪುಷ್ಟೀಕರಣವಾಗಿ ವಾದಿಸುವುದೆಂದರೆ ಏನನ್ಯಾಯ! ಲಾರ್ಡ್ ಕರ್ಜನ್‌ರವರ ಕಾಲದಲ್ಲಿ ಯಾವ ಪಂಜಾಬ್ ಗೌರ್ನರಾದ ಸರ್ ಬಿ. ಫುಲ್ಲರ್‌ರವರು "ನನಗೆ ಇಬ್ಬರು ಹೆಂಡತಿಯರು, ಅವರಲ್ಲಿ ಒಬ್ಬಳು ಹಿಂದೂ, ಒಬ್ಬಳು ಮುಸಲ್ಮಾನ್; ಇವರಲ್ಲಿ ಕಿರಿಯೆಂಡತಿಯಾದ ಮುಸಲ್ಮಾನಳನ್ನು ಕಂಡರೆ ಬಹಳ ಅಕ್ಕರೆ" ಎಂದು ಹೇಳಿಬಿಟ್ಟು, ಭಾರತೀಯರೆಲ್ಲರ ಆಗ್ರಹಕ್ಕೂ ಪಾತ್ರರಾಗಿ ಕಡೆಗೆ ಅಧಿಕಾರಕ್ಕೇ ರಾಜೀನಾಮೆಕೊಟ್ಟು ಹೊರಟುಹೋಗಬೇಕಾಯಿತು. ನಮ್ಮ ಬಾನರ್ಜಿಯವರೂ ಕೂಡ ಅವರ ಮೇಲುಪಂಕ್ತಿಯನ್ನೇ ಈ ಸಂದರ್ಭದಲ್ಲಿ ಅನುಸರಿಸಿದಂತೆ ತೋರ್ಪಟ್ಟುಕೊಂಡಿರುವುದನ್ನು ನೋಡಿ ನಮ್ಮ ಎದೆಯು ಝಗ್ಗೆಂದಿತು. ಇವರು ತಮ್ಮ ಭಾಷಣದಲ್ಲಿ ಏನು ಹೇಳಿರುವರೆಂದರೆ——"ಮಹಮ್ಮದೀಯರು ಹಿಂದೂಗಳೊಡನೆ ಸೇರಿ ಪ್ರತ್ಯೇಕಪ್ರಾತಿನಿಧ್ಯದ ಹಕ್ಕನ್ನು ಕೇಳುವುದಕ್ಕೆ ಏಕೆ ಬಂದರು? ಹೀಗೆ ಮಾಡುವುದರಿಂದ ಅವರು ತಮ್ಮ ಲಾಭವನ್ನು ತಾವೇ ಹಾಳ್ಮಾಡಿಕೊಳ್ಳುವರಲ್ಲವೆ? ಇದು ಅವರಿಗೆ ತೋಚದೆ ಹೋಗಿದೆ" ಎಂದು ಹೇಳಿದ್ದಾರೆ. ಈ ರಾಜತಂತ್ರವು ಹೇಗಿದೆ ನೋಡಿರಿ! ಮಂತ್ರಿವರ್ಯರಾದ ಸರ್ ವಿಶ್ವೇಶ್ವರಯ್ಯನವರು ತಮ್ಮ ಭಾಷಣಗಳಲ್ಲಿ "ನಮ್ಮ ದೇಶೀಯರಲ್ಲಿ ವಿದ್ಯಾಭ್ಯಾಸವು ಸಾಲದು, ಸಂಪಾದನೆ ಸ್ವಲ್ಪ, ಆಹಸ್ಯಹಜೀವನ, ಪರಸ್ಪರಸಹಾಯಕಬುದ್ಧಿ ಕಡಿಮೆ, ಉತ್ತಮಸ್ಥಿತಿಗೆ ಬರಬೇಕೆಂಬ ಆಶೆಯೂ ತಕ್ಕ ಪ್ರಯತ್ನವೂ ಇಲ್ಲ. ಇದರಿಂದ ದೇಶವು ಹೀನಸ್ಥಿತಿಯಲ್ಲಿದೆ. ಜನಗಳು ಉತ್ಸಾಹಯುಕ್ತರಾಗಿ ಸ್ವತಃ ಕೆಲಸಮಾಡತೊಡಗದಹೊರತು ಸರ್ಕಾರದವರ ಪ್ರಯತ್ನವೊಂದಲೇ ವಿಶೇಷ ಪ್ರಯೋಜನವುಂಟಾಗಲಾರದು. ನಮ್ಮಲ್ಲಿ ಪ್ರತಿಯೊಬ್ಬರಿಂದಲೂ ಕೆಲಸವನ್ನು ತೆಗೆದುಕೊಳ್ಳಲು ಸಂಸ್ಥಾನಕ್ಕೆ ಬಾಧ್ಯತೆ ಇದೆ. ದೇಶಸೇವಾಬುದ್ಧಿಯು ಸಾರ್ವತ್ರಿಕವಾಗಿ ನೆಲಸಬೇಕು. ಪ್ರಜಾಸಾಮಾನ್ಯಕ್ಕೆ ಪ್ರಯೋಜನಕರವಾದ ಕಾರ್ಯವನ್ನು ಮಾಡಬೇಕಾದ ಸಂದರ್ಭದಲ್ಲಿ ಜಾತಿ ಮತಸಂಬಂಧವಾದ ವೈಷಮ್ಯಗಳು ನಮ್ಮಲ್ಲಿ ಭೇದಬುದ್ಧಿಯನ್ನುಂಟುಮಾಡಲು ಅವಕಾಶಕೊಡಬಾರದು. ಅವರವರ ಸ್ಥಿತಿಗೂ ಸಾಮರ್ಥ್ಯಕ್ಕೂ ಅವಕಾಶಕ್ಕೂ ತಕ್ಕಂತೆ ಪ್ರತಿಯೊಬ್ಬರ ಸಹಾಯವೂ ಅವಶ್ಯಕವಾಗಿರುವುದು. ಎಲ್ಲರೂ ಸಹಾಯಮಾಡಬೇಕು. ಶ್ರೀಮನ್ಮಹಾರಾಜರ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ತಮ್ಮ ದೇಶಪ್ರಯೋಜನಕ್ಕಾಗಿ ತಮ್ಮಿಂದ ಸಾಧ್ಯವಾದಷ್ಟು ಸಹಾಯವನ್ನಾದರೂ ಮಾಡಬೇಕಲ್ಲದೆ ಹಾಗೆ ಸಹಾಯಮಾಡುವುದು ತಮಗೆ ಗೌರವವೆಂದು ತಿಳಿದುಕೊಳ್ಳಬೇಕು" ಎಂದು ಮೊದಲಾಗಿ ಹೇಳಿರುತ್ತಾರೆ. ಈ ವಚನಗಳು ಎಷ್ಟು ಆದಾತರಣೀಯವಾಗಿವೆ ನೋಡಿರಿ. ನಮ್ಮ ಮಹಾರಾಜಾ ಪ್ರಭುತ್ವದವರ ಆಶಯಗಳು ಎಷ್ಟು ಉದಾರವಾಗಿವೆಯೆಂಬುದನ್ನು ದೃಷ್ಟಾಂತಪಡಿಸುವುದಕ್ಕೆ ಇದಕ್ಕಿಂತಲೂ ಉನ್ನತವಾದ ಸನ್ನದುಗಳು ಯಾವುವು ಬೇಕು? ಪ್ರತ್ಯೇಕಪ್ರಾತಿನಿಧ್ಯವನ್ನು ಕೋರತಕ್ಕವರ ಉದ್ದೇಶವು ತಮ್ಮ ಕೈಯಿಂದಾಗುವ ಸಹಾಯವನ್ನು ಸರ್ಕಾರಕ್ಕೆ ಮಾಡಬೇಕೆಂಬುದೇ ಅಲ್ಲವೆ? ಸರ್ಕಾರದ ಅಧಿಕಾರಗಳಲ್ಲೂ ಮ್ಯುನಿಸಿಪಲ್ ಬೋರ್ಡು, ಲೋಕಲ್ ಬೋರ್ಡು ಮೊದಲಾದುವುಗಳಲ್ಲೂ ತಾವು ಹೆಚ್ಚಾಗಿ ಪ್ರವೇಶಿಸಿ, ಕಾರ್ಯಭಾರಗಳನ್ನು ಹೆಚ್ಚಾಗಿ ನಿರ್ವಹಿಸಿ, ಸಾಮರ್ಥ್ಯವನ್ನು ಪ್ರದರ್ಶಿಸಿ, ತನ್ಮೂಲಕವಾಗಿ ದೇಶವನ್ನು ಉನ್ನತಸ್ಥಿತಿಗೆ ತರಬೇಕೆಂಬುದೇ ಅಲ್ಲವೆ ಅವರ ಮಹತ್ವಾಕಾಂಕ್ಷೆ? ಅವರಿಗೆ ಮುಂದಾದವರ ಜತೆಗೆ ನಾವೂ ಸೇರಿ ಒಗ್ಗಟ್ಟಾಗಿ ಕೆಲಸಮಾಡಬೇಕೆಂಬಪೇಕ್ಷೆಯಿರುವುದೇ ಹೊರತು ಒಡೆದುಕೊಂಡು ದೂರಹೋಗಿ ದ್ವೇಷಿಸಬೇಕೆಂಬುದಿಲ್ಲವಷ್ಟೆ? ಹೀಗಿರುವಾಗ ಇವೆಲ್ಲವನ್ನೂ ನಮ್ಮ ದಿವಾನರು ಅಪ್ಪಣೆಕೊಡಿಸಿರುವುದಕ್ಕೆ ಅನುಗುಣವಾಗಿ ಪ್ರಜೆಗಳಲ್ಲಿ ಕಂಡುಬಂದಿರುವ ಜಾಗರೂಕತೆಯೆಂದು ಹೇಳಬಹುದೇಹೊರತು ವಿರುದ್ಧವಾದುದೆಂದು ಹೇಗೆಹೇಳಬಹುದು? ಹೀಗಿರುವಲ್ಲಿ ನಿಯಮನಿರ್ಮಾಣಸಭೆಯ ನಡವಳಿಕೆಯ ಕಡೆಗೆ ನೋಡಿರಿ, ಮತ್ತೂ ಮ|| ಬಾನರ್ಜಿಯವರಭಾಷಣದ ಕಡೆಗೆ ನೋಡಿರಿ. ಆ ಭಾಷಣವು ಪ್ರಜೆಗಳ ಏಕಾಭಿವೃದ್ಧಿಗೆ ಎಷ್ಟುಮಟ್ಟಿಗೆ ವಿಷವನ್ನು ಹಿಂಡುವಂತಹುದಾಗಿದೆಯೋ ಯೋಚಿಸಿರಿ. ಸಾಮಾನ್ಯ ಪ್ರಜೆಗಳ ಶಕ್ತಿವಿಕಸನಕ್ಕೆ ಸಹಾಯಕವಾಗುವಂತ ಪ್ರತ್ಯೇಕಪ್ರಾತಿನಿಧ್ಯತತ್ವವನಂಗೀಕರಿಸಬೇಕೆಂದು ಕೇಳಿಕೊಂಡ ಸಭಿಕರನ್ನು ಆ ಸಭೆಯಲ್ಲಿಯೇ ನೀವು ತೀಟೆಜಗಳ ತೆಗೆಯುವವರೆಂದು ಹೇಳಬಹುದೆ? ದಿವಾನರ ಭಾಷಣವೂ, ಮ|| ಬಾನರ್ಜಿಯವರ ಭಾಷಣವೂ ಸಹ ಸರ್ಕಾರದ ಅಭಿಪ್ರಾಯಗಳೇ ಆಗಿದ್ದರೆ ಒಂದಕ್ಕೊಂದಕ್ಕೆ ಹಗಲು ರಾತ್ರಿಗಳಿಗಿರುವಷ್ಟು ತಾರತಮ್ಯವು ಇರಬಹುದೆ? ಹಿಂದೂ ಮಹಮ್ಮದೀಯರು ಒಗ್ಗಟ್ಟಾಗಿರುವುದು ನಮ್ಮ ಶ್ರೀಮನ್ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ಇಷ್ಟವಾದುದಲ್ಲವೆ? ಇಷ್ಟವಾಗಿದ್ದರೆ ಮ|| ಬಾನರ್ಜಿಯವರು ಆ ತತ್ತ್ವಕ್ಕೆ ನಿರ್ಮೂಲನಕರವಾದ ಭಾಷಣವನ್ನು ನಿಯಮನಿರ್ಮಾಣಸಭೆಯಂಥ ಪವಿತ್ರಸ್ಥಾನದಲ್ಲಿ ಹೇಗೆ ಆಡಿದರು? ಶ್ರೀಮನ್ಮಹಾರಾಜರ ಪ್ರತಿನಿಧಿಗಳಾಗಿದ್ದ ದಿವಾನರವರು ಅದನ್ನು ಕೇಳಿಕೊಂಡು ಸುಮ್ಮನೆ ಹೇಗೆ ಕುಳಿತಿದ್ದರು? ಇಂಥ ಹಣೀಯವಾದ ವಾಗ್ಜಾಲದಿಂದ ತುಂಬಿದ್ದ ಭಾಷಣವನ್ನು "ಮೆಮೊರೆಬಲ್ ಸ್ಪೀಚ್" ಎಂದು ಪ್ರಕಟಿಸಿಕೊಂಡು ಉಳಿದ ಸಾಮಾನ್ಯ ಪ್ರಜಾಪಕ್ಷದ ಸಭಿಕರ ಭಾಷಣೆಗಳನ್ನೇ ಆಗಲೀ ಚರ್ಚೆಗಳನ್ನೇ ಆಗಲೀ ಲೇಶವೂ ಪ್ರಕಟಪಡಿಸದೆ ಹೋಗಿರುವ ವರ್ತಮಾನಪತ್ರಿಕೆಗಳು ದೇಶಸಾಮಾನ್ಯದ ಹಿತಕ್ಕಾಗಿ ಕೆಲಸಮಾಡತಕ್ಕ ಪತ್ರಿಕೆಗಳೋ, ಸ್ವಜನೋದ್ಧಾರ ಸಾಂಕೇತಿಕ ಪತ್ರಿಕೆಗಳೋ ಎಂಬುದನ್ನು ನಿರ್ಪಕ್ಷಮತಿಗಳಾದ ಮಹಾಜನರೂ, ಪ್ರತ್ಯಕ್ಷದೈವವೂ ಧರ್ಮಾಧರ್ಮವಿಮರ್ಶಾವಿಚಕ್ಷಣರೂ ಆದ ನಮ್ಮ ಪ್ರಭುವರ್ಯರೂ ಗಮನಿಸುವವರಾಗಬೇಕು.

ಪ್ರಜಾಮಿತ್ರಮಂಡಲಿ.

ಹಿಂದುಳಿದಿರುವ ಪ್ರಜೆಗಳ ಏಳ್ಗೆಯನ್ನು ಕುರಿತು ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಮೇಲಿಕಂಡ ಹೆಸರಿನ ಸಂಘದ ಶಾಖೆಯೊಂದನ್ನು ಮೈಸೂರು ಪಟ್ಟಣದಲ್ಲೂ ಸ್ಥಾಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಇಲ್ಲಿಯ ಕೆಲ ಮಹಾಜನರು ಮಾಡಿದ ಉದ್ದೇಶಪ್ರಕಾರ ಕಳೆದ ತಾ|| ೧೦ ನೆ ಭಾನುವಾರ ಸಾ|| ಧರ್ಮಪ್ರಕಾಶ ಡಿ|| ಬನುಮಯ್ಯನವರ ಸ್ಕೂಲ್ ಕಟ್ಟಡದಲ್ಲಿ ಕೂಡಿದ್ದ ಸಭೆಯವರು ಶಾಖಾಸಂಘವನ್ನು ಸ್ಥಾಪಿಸಿದರು. ಇದಕ್ಕಾಗಿ ಆಹೂತರಾಗಿದ್ದ ಕೆಲ ಮಹನೀಯರು ಬೆಂಗಳೂರು, ಕೋಲಾರ, ತುಮಕೂರು ಡಿಸ್ಟ್ರಿಕ್ಟ್‌ಗಳಿಂದಲೂ ಬಂದಿದ್ದರು. ಒಟ್ಟು ಸಭಿಕರು ೩೦೦ ರವರೆಗೆ ಇದ್ದರು. ರಾ|| ಸಾ|| ರಿಟೈರ್ಡ್ ಸಬ್‌ಜಡ್ಜ್ ಮ|| ಚೆನ್ನಯ್ಯನವರು ಸಭಾಧ್ಯಕ್ಷರಾಗಿದ್ದರು. ಸಭೆಯ ಉದ್ದೇಶ, ಹಿಂದುಳಿದವರ ಉದ್ಧಾರಕ್ಕಾಗಿ ಮಾಡಬೇಕಾಗಿರುವ ಪ್ರಯತ್ನ, ಇದುವರೆಗೆ ನಡೆದಿರುವ ನಡೆಯುತ್ತಿರುವ ಕೆಲಸ ಮೊದಲಾದುವುಗಳೆಲ್ಲಾ ಮ|| ಎಂ. ಬಸವಯ್ಯ ಬಿ. ಎ. ಬಿ. ಎಲ್. ರವರು, ಮಿ|| ನವಾಬ್ ಮಹಮ್ಮದ್ ಕಲಾಮಿಯವರು, ಮ|| ಎಂ. ಎನ್. ಸುಬ್ಬಣ್ಣ ಬಿ. ಎ. ಎಲ್. ಎಲ್. ಬಿ. ಯವರು, ಮ|| ಪುರುಷೋತ್ತಮಾನಂದಗಿರಿ ಬಾವಾಜಿಯವರು, ಮ|| ಧನಕೋಟಿಶೆಟ್ಟರು ಮೊದಲಾದವರುಗಳೂ ಸಭಾಧ್ಯಕ್ಷರೂ ಮಾಡಿದ ಭಾಷಣಗಳಿಂದ ವ್ಯಕ್ತವಾದುವು. ಉದ್ದೇಶಕ್ಕೆ ತಕ್ಕ ಕೆಲ ನಿರ್ಧಾರಗಳು ಮಾಡಲ್ಪಟ್ಟುವು. ಸಂಘದ ಮೆಂಬರುಗಳನ್ನು ಸೇರಿಸಿಕೊಳ್ಳುವುದೇ ಮೊದಲಾದ ಕೆಲಸಕ್ಕಾಗಿ ಒಂದು ಕಾರ್ಯಕಾರಿಮಂಡಲವು ಸ್ಥಾಪಿಸಲ್ಪಟ್ಟಿತು. ಸಭೆಯ ಪ್ರೊಸಿಡಿಂಗ್ಸ್ ಕಾಪಿಯನ್ನು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಕಳುಹಿಸಬೇಕೆಂದು ನಿರ್ಧಾರವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಾದ ನಂತರ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಯುದ್ಧವಾರ್ತೆಯು.

ರಷ್ಯಾವು ಜರ್ಮನರ ನಾತಿಗೆ ಮರುಳಾಗಿ ಮಿತ್ರಮಂಡಲಿಗೆ ದ್ರೋಹಮಾಡಿ, ಪ್ರತ್ಯೇಕ ಸಂಧಿಮಾಡಿಕೊಂಡುದರಿಂದ ಗತ್ಯಂತರವಿಲ್ಲದೆ ರುಮೇನಿಯಾವೂ ಸಂಧಿಮಾಡಿಕೊಳ್ಳಬೇಕಾಯಿತು. ಇವೆರಡುದೇಶದ ಪ್ರತಿನಿಧಿಗಳೂ ಸಂಧಿಪತ್ರಗಳಿಗೆ ಹಸ್ತಾಕ್ಷರವನ್ನು ಹಾಕಿ ಮುಗಿದಿತು. ರಷ್ಯಾವುಅವರ ನಡತೆಗೆ ತಕ್ಕ ಫಲವನ್ನು ಈಗ ಅನುಭವಿಸುವಂತಾಗಿದೆ. ಹೇಗೆಂದರೆ——ರಷ್ಯಾವು ಚಿರಕಾಲಾರಬ್ಧ ಪಡೆದುಕೊಂಡಿದ್ದ ಗೌರವಪ್ರತಿಷ್ಠೆಗಳೆಲ್ಲಾ ಮಣ್ಣುಪಾಲಾದುವು. ತನ್ನ ದೇಶದಲ್ಲಿ ದೊಡ್ಡ ಭಾಗವನ್ನು ಅದು ಜರ್ಮನಿಗೆ ಒಪ್ಪಿಸಬೇಕಾಗಿ ಬಂದುದೇ ಅಲ್ಲದೆ ತುರ್ಕಿಯಲ್ಲಿ ಹಿಡಿದುಕೊಂಡಿದ್ದ ಭಾಗಗಳನ್ನೂ ಕೂಡ ಬಿಟ್ಟುಕೊಡಬೇಕಾಗಿ ಬಂದಿತು. ಅನಟೋಲಿಯಾ ರಾಷ್ಟ್ರಗಳನ್ನು ಬಹು ನಷ್ಟಕಷ್ಟಗಳಿಂದ ರಷ್ಯನರು ಹಿಡಿದಿದ್ದರು. ಅವನ್ನೆಲ್ಲಾ ಈಗ ತುರ್ಕಿಯವರಿಗೆ ಕೊಡಲು ಒಪ್ಪಿ ಬಿಟ್ಟುಕೊಟ್ಟರು. ಎಡ್‌ವಾನು, ಬಾಟೂಮು, ಕಾರ್ಸು ಮೊದಲಾದ ಜಿಲ್ಲೆಗಳು ಕೂಡ ತುರ್ಕಿಗೇ ಸೇರಿಹೋದುವು. ಕಪ್ಪುಸಮುದ್ರವನ್ನೂ ಜರ್ಮನಿಯು ವಶಪಡಿಸಿಕೊಂಡಿತು. ಅತ್ತ ಬಾಲ್ಟಿಕ್ ಸಮುದ್ರಪ್ರಾಂತದಲ್ಲಿರುವ ಇಸ್ತೋನಿಯಾ ಲಿವೋನಿಯಾ ರಾಷ್ಟ್ರಗಳನ್ನು ಕೂಡ ರಷ್ಯಾದೇಶವು ಬಿಟ್ಟುಕೊಡಬೇಕೆಂದು ಗೊತ್ತಾಗಿರುತ್ತದೆ. ಆದರೆ ಇವನ್ನು ಬಿಟ್ಟುಕೊಡಲಾರದೆ ರಷ್ಯನರು ಸ್ವಲ್ಪ ಪ್ರತಿಭಟಿಸುವ ಸಾಹಸವನ್ನು ತೋರಿಸಿದರು. ಆದರೇನು? ಪ್ರಯೋಜನವಿಲ್ಲದೆಹೋಯಿತು. ಈ ರಾಷ್ಟ್ರಭಾಗಗಳನ್ನು ರಷ್ಯಾದಿಂದ ಪ್ರತ್ಯೇಕಪಡಿಸಿ ತಾವು ಸೇರಿಸಿಕೊಳ್ಳುವುದರಲ್ಲಿ ಅಲ್ಲಿಯ ಪ್ರಜೆಗಳ ಇಷ್ಟದಂತೆ ಕಾರ್ಯಕ್ರಮವನ್ನು ಜರುಗಿಸುವೆವೆಂದು ಜರ್ಮನರು ಬಾಯಿಯಲ್ಲಿ ಹೇಳುತ್ತಿದ್ದಾರೆ. ಆದರೆ ಅವರ ಅಂತರುದ್ದೇಶವು ಬೇರೆಯೇ ಇರುವುದು. ೧೯೦೪ ನೆ ವರ್ಷದಲ್ಲಿ ರಷ್ಯಾಕ್ಕೂ ಜರ್ಮನಿಗೂ ನಡೆದಿದ್ದ ವರ್ತಕಸಂಬಂಧವಾದ ಸಂಧಿನಿಬಂಧನೆಯು ಮರಳಿ ಅನುಸರಿಸಲ್ಪಡಬೇಕಾಯಿತು. ಇದರಿಂದ ಪರ್ಷಿಯಾ, ಅಫ್ಘಾನಿಸ್ಥಾನಗಳೊಡನೆ ವ್ಯಾಪಾರಸಂಬಂಧವನ್ನು ಸಾಗಿಸಿಕೊಳ್ಳಲು ದಾರಿಯನ್ನು ಮಾಡಿಕೊಟ್ಟಂತಾಯಿತು. ೧೯೨೫ ನೆ ವರ್ಷದವರೆಗೂ ವ್ಯಾಪಾರದ ಪದಾರ್ಥಗಳಮೇಲೆ ಸುಂಕವನ್ನು ಹೆಚ್ಚಿಸುವುದಿಲ್ಲವೆಂದು ರಷ್ಯನರು ಒಪ್ಪಿಕೊಂಡರು. ಜರ್ಮನರ ಸಾಲವನ್ನೆಲ್ಲಾ ಮೊದಮೊದಲೇ ತೀರಿಸಿಬಿಡುವುದಕ್ಕೆ ಒಪ್ಪಿಕೊಂಡಿರುವರು. ಮಿತ್ರಮಂಡಲಿಯವರುಕೊಟ್ಟಿದ್ದ ಸಾಲವನ್ನು ನುಂಗಿಹಾಕುವುದಕ್ಕೆ ಜರ್ಮನರು ಮಾಡಿದ ಬಲವಂತಕ್ಕೆ ಒಪ್ಪಿದರು. ಇವರ ಹಡಗುಗಳೆಲ್ಲಾ ನಿರಾಯುಧವಾಗಿರಬೇಕಾಯಿತು. ಮಿತ್ರಮಂಡಲಿಯವರ ಹಡಗುಗಳೂ ಕೂಡ ಇದ್ದಲ್ಲಿಯೇ ಪರಿಚಲನವಿಲ್ಲದೆ ನಿಂತಿರಬೇಕಾಯಿತು. ಸೈನ್ಯಗಳನ್ನೆಲ್ಲಾ ತೆಗೆದುಹಾಕಿಬಿಡಬೇಕಾಯಿತು. ರಷ್ಯಾ ಸಮುದ್ರದಲ್ಲಿದ್ದ ಮದ್ದಿನ ಸುರಂಗಗಳನ್ನೆಲ್ಲಾ ತೆಗೆದು ಅಲ್ಲಿ ಜರ್ಮನ್ ವ್ಯಾಪಾರಿ ಹಡಗುಗಳು ನಡೆದಾಡುವಂತಾಯಿತು. ರಷ್ಯನರಲ್ಲಿ ಸೆರೆಯಾಗಿದ್ದ ಜರ್ಮನಿ ಆಸ್ಟ್ರಿಯಾ ಸೈನಿಕರನ್ನೆಲ್ಲಾ ಬಿಟ್ಟುಕೊಡಬೇಕಾಯಿತು. ಅವರವರ ಯುದ್ಧದ ವೆಚ್ಚಗಳನ್ನು ಅವರವರೇ ವಹಿಸಬೇಕಾಯಿತು. ಇದರಿಂದೆಲ್ಲಾ ರಷ್ಯಾವು ಜರ್ಮನರ ಮುಂದೆ ಕೈಜೋಡಿಸಿ ನಿಂತುಕೊಂಡ ಅಬ್ಬೆಪರಿಯಸ್ಥಿತಿಗೆ ಬಂದಿತೆಂಬುದನ್ನು ಹೇಳಬೇಕಾಗಿಲ್ಲ.

ರುಮೇನಿಯಾದವರು ಸಂಧಿಗೊಪ್ಪಿದುದರಿಂದ ಅವರು ಡಾನ್ಯೂಬ್ ನದಿಯವರೆಗೂ ಡೋಬ್ರುಜ್ಯಾವನ್ನು ಬಿಟ್ಟುಕೊಡಬೇಕಾಯಿತು. ಜರ್ಮನ್ ಸೈನ್ಯಗಳು ಮಾಲ್ಡೇವಿಯಾ, ಬೆಸ್ಸರೇಬಿಯಾಗಳಮೇಲೆ ಲೋಹಮಾರ್ಗದ ದ್ವಾರಾ ಒಡೆಸ್ಸಾರೇವಿಗೆ ಹೋಗಿ ಸೇರುವುದಕ್ಕೆ ಒಪ್ಪಿಕೊಂಡಿತು. ಒಡೆಸ್ಸಾರೇವಿಯಿಂದ ಜರ್ಮನರಿಗೆ ಧಾನ್ಯಗಳನ್ನೂ ಕಲ್ಲೆಣ್ಣೆ ಮೊದಲಾದುವುಗಳನ್ನೂ ತಮ್ಮ ದೇಶದಿಂದ ಒದಗಿಸುವ ಸೌಕರ್ಯವನ್ನು ಕಲ್ಪಿಸಿಕೊಡಬೇಕಾಯಿತು. ಇಂಥ ಅನುಕೂಲ ಸಂಧಿ ಒದಗಿದುದರಿಂದ ಜರ್ಮನ್ ಚಕ್ರವರ್ತಿಯ ಮತ್ತು ಅವನ ಸೇನಾಪತಿಗಳ ಸಂತೋಷಾಡಂಬರಗಳಿಗೆ ಪರಿಮಿತಿಯೇ ಇಲ್ಲದೆಹೋಗಿದೆ.

ಈಗ ಜರ್ಮನರಿಗೆ ರಷ್ಯಾದಿಂದ ಆಹಾರ್ಯಾದಿಸಾಮಗ್ರಿಗಳೂ ಲೋಹಗಳೂ ರುಮೇನಿಯಾದಿಂದ ಕೆರೋಸಿಯಲ್ ಎಣ್ಣೆ, ಪೆಟ್ರೋಲ್ ಮೊದಲಾದುವುಗಳೂ ವಿಶೇಷವಾಗಿ ಸಾಗುವುದಕ್ಕೆ ಅನುಕೂಲವಾಯಿತು. ಏಪ್ರಿಲ್ ತಾ|| ೧೫ ರೊಳಗಾಗಿ ಉಕ್ರೇನಿಯನ್ನರು ಜರ್ಮನರಿಗೆ ೩೦೦೦ ಹೊಗೆಬಂಡಿಗಳ ಧಾನ್ಯವನ್ನೂ ೧೨೦೦ ವಾಗಿನ್ನುಗಳ ಸಕ್ಕರೆಯನ್ನೂ ೨೦೦೦ ವಾಗಿನ್ನುಗಳ ಮಾಂಸವನ್ನೂ ೧೦೦೦ ವಾಗಿನ್ನುಗಳ ಹಣ್ಣುದಿನಸುಗಳನ್ನೂ ಒದಗಿಸಿಕೊಡುವುದಕ್ಕೆ ಒಪ್ಪಿದ್ದಾರೆ. ಹೀಗೆ ಪದಾರ್ಥಸಮೃದ್ಧಿಯು ತಮಗೆ ದೊರೆಯುವಂತಾದುದರಿಂದ ಜರ್ಮನರು ಚೇತರಿಸಿಕೊಂಡು ಇನ್ನೆಷ್ಟುಕಾಲಬೇಕಿದ್ದರೂ ಯುದ್ಧಮಾಡುವೆವೆಂಬ ವಿಜೃಂಭಣೆಯನ್ನು ಮಾಡುತ್ತಿದ್ದಾರೆ. ಅವರಿಗೆ ಪೂರ್ವರಂಗದ ಯುದ್ಧಕಾರ್ಯವೆಲ್ಲಾ ಮುಗಿದಂತಾಯಿತು. ಇನ್ನು ಅವರ ಗಮನವೆಲ್ಲಾ ಪಶ್ಚಿಮದಕಡೆಗೂ ಇಟಲಿಯಕಡೆಗೂ ವಿಶೇಷವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಇದನ್ನು ಮಿತ್ರಮಂಡಲಿಯವರು ಅರಿಯದೆ ಇಲ್ಲ. ಇವರು ತಮ್ಮ ಯಾವಚ್ಛಕ್ತಿಯನ್ನೂ ಈ ರಂಗಗಳಲ್ಲಿ ಉಪಯೋಗಿಸಿ ಶತ್ರುವಿಜೃಂಭಣೆಯನ್ನು ಅಡಗಿಸುವುದಕ್ಕೆ ಸಿದ್ಧರಾಗಿದ್ದಾರೆ. ಅಮೇರಿಕನ್ನರು ಅನುಪಮವಾದ ಸಹಾಯವನ್ನು ಮಾಡುತ್ತಿದ್ದಾರೆ. ಅವರ ನೌಕಾನಿರ್ಮಾಣ ಸಂಘದವರು ಕಳೆದ ಫೆಬ್ರವರಿ ತಿಂಗಳೊಂದರಲ್ಲಿ ೧೭ ಹಡಗುಗಳನ್ನು ಹೊಸ ಗಿ ನಿರ್ಮಿಸಿಕೊಳ್ಳುತ್ತಿದ್ದಾರೆ. ಈ ಮಾರ್ಚಿ ತಿಂಗಳಲ್ಲಿ ೨೪ ಹಡಗುಗಳನ್ನು ಮಾಡಿಕೊಡುವೆವೆಂದು ವಾಗ್ದಾನಮಾಡಿದ್ದಾರೆ. ಸೈನ್ಯಸಹಾಯವೂ ಆಹಾ ದಿವಸ್ತುಗಳ ಸಹಾಯವೂ ವಿಶೇಷವಾಗಿ ಒದಗುತ್ತಿದೆ. ಫ್ರಾನ್ಸ್‌ದೇಶ ಲ್ಲಿ ಕೋಟ್ಯಂತರ ವ್ಯಯದಿಂದ ತಮ್ಮದೊಂದು ಬಂದರನ್ನೂ, ತಮ್ಮ ಮ ದ್ದುಗುಂಡು ಆಯುಧಗಳ ನಿರ್ಮಾಣದ ಸ್ಥಾನಗಳನ್ನೂ ಅಗಾಧವಾಗಿ ವರ್ಧಿ ಸುತ್ತಿದ್ದಾರೆ. ಪಶ್ಚಿಮರಂಗದಲ್ಲಿ ಆಗಲೇ ಮಹಾಯುದ್ಧಗಳಿಗೆ ಆರಂಭವಾಗಿ ರುತ್ತದೆ. ಶತ್ರುಗಳು ಪರ್ಷಿಯಾ ಮಾರ್ಗವಾಗಿ ಅಫ್ಘಾನಿಸ್ಥಾನದಕಡೆಗೆ ಸಾ ಗಿಬರುವ ಚಿಹ್ನೆಗಳುಂಟೆಂಬ ವಾರ್ತೆಯಿದೆ. ಶತ್ರುಗಳು ಕಳೆದ ವಾರದಲ್ಲಿ ಲಂಡನ್ನಿನಮೇಲೂ, ಪ್ಯಾರಿಸ್ಸಿನಮೇಲೂ ವಿಮಾನಗಳ ಮೂಲಕ ಸಿಡಿಮದ್ದು ಗಳನ್ನು ಹಾಕಿ ಕೆಲ ನಷ್ಟಗಳನ್ನುಂಟುಮಾಡಿದ್ದಾರೆ. ಇಂಗ್ಲೀಷ್ ಫ್ರೆಂಚ್ ವಿಮಾನಿಕರು ಅದಕ್ಕೆ ಮುಯ್ಯಾಗಿ ಶತ್ರುದೇಶಗಳಮೇಲೂ ಹಾಗೆಯೇ ಮಾಡಬಂದಿದ್ದಾರೆ.

ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕುದು.

ಬೆಂಗಳೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಊಟಕ್ಕೂ ವಾಸಕ್ಕೂ ಎಂದಿನಂತೆ ತಕ್ಕೇರ್ಪಾಟು ಮಾಡಲ್ಪಟ್ಟಿರುತ್ತದೆಯಾದುದರಿಂದ ವಿದ್ಯಾರ್ಥಿಗಳು ತಾವು ಬರತಕ್ಕ ಕಾಲವನ್ನೂ ಮತ್ತು ಬರತಕ್ಕವರ ಸಂಖ್ಯೆಯನ್ನೂ ಈ ಮಾರ್ಚಿ ತಿಂಗಳು ತಾ|| ೨೫ ರೊಳಗೆ ಈ ಕೆಳಗೆ ಕಂಡವರಿಗೆ ಬರೆದು ತಿಳುಹತಕ್ಕುದು. ಅಲ್ಲದೆ ಹಾಸಿಗೆ ಹೊದ್ದಿಕೆಗಳನ್ನೂ ತಂಬಿಗೆಗಳನ್ನೂ ಕೂಡ ತೆಗೆದುಕೊಂಡು ಬರತಕ್ಕುದು.

ಎಸ್. ಕಲ್ಲಪ್ಪ

ಊದುಬತ್ತೀಸಾಪು, ದೊಡ್ಡಪೇಟೆ ಬೆಂಗಳೂರು ಸಿಟಿ.

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಇಂಗ್ಲಿಷ್ ಮತ್ತು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ದಾವಣಗೆರೆ ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಪದ್ಧತಿ ಪ್ರಕಾರ ದಾವಣಗೆರೆ ಶ್ರೀ ವಿರಕ್ತಮಠದಲ್ಲಿ ವಾಸಕ್ಕೂ, ಊಟಕ್ಕೂ, ಕಾಲಕ್ಕೆ ಸರಿಯಾಗಿ ಅನುಕೂಲ ಪಡಿಸುತ್ತದೆಯಾದುದರಿಂದ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳು ಮಾರ್ಚಿ ತಾ|| 25 ಕ್ಕೆ ಸರಿಯಾಗಿ ಈ ಕೆಳಗಿನ ಅಡ್ರಸ್ಸಿಗೆ ತಿಳಿಸುವದು.

ಪಲ್ಲಾಗಟ್ಟಿ ಗುರುಸಿದ್ದಪ್ಪ ಸೆಕ್ರೆಟರಿ,

ವೀರಶೈವ ವಿದ್ಯಾವರ್ಧಕ ಸಂಘದ ಫಂಡ್ ದಾವಣಗೆರೆ.

ಇದೇ ಬರುವ ಏಪ್ರಿಲ್ ತಿಂಗಳಲ್ಲಿ ಜರುಗುವ ಕನ್ನಡ ಮತ್ತು ಇಂಗ್ಲೀಷು ಲೋವರ್ ಸೆಕೆಂಡರಿ ಪರೀಕ್ಷೆಗೆ ಕಡೂರು ಸೆಂಟರಿಗೆ ಬರುವ ವೀರಶೈವರಿಗೂ ಮತ್ತು ಇವರಲ್ಲಿ ಭೋಜನ ಮಾಡತಕ್ಕ ಇತರಮತದ ವಿದ್ಯಾರ್ಥಿಗಳಿಗೂ ಸಹ ಮಾಮೂಲಿನಂತೆ ಊಟಕ್ಕೂ ವಾಸಕ್ಕೂ ಏರ್ಪಾಟು ಮಾಡುತ್ತಾದ್ದರಿಂದ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳು ಇದೇ ತಿಂಗಳು ತಾರೀಖು 25 ರ ಒಳಗಾಗಿ ಬರೆದುಕೊಳ್ಳಬೇಕಾಗಿಯೂ ಮತ್ತು ತಂಬಿಗೆ ಹಾಸಿಗೆಗಳನ್ನು ಜೊತೆಯಲ್ಲಿ ತರಬೇಕಾಗಿಯೂ ಬೀರೂರು ಯನ್. ಯಂ. ವಲಿಂಗಪ್ಪಯ್ಯನವರು ಕೋರುತ್ತಾರೆ.

ಪತ್ರವ್ಯವಹಾರ.

ಮ|| ರಾ|| ಮೈಸೂರ್ ಸ್ಟಾರ್ ಎಡಿಟರವರ ಸ|| ಕ್ಕೆ.

ಮೈಸೂರು ಸ್ಟಾರಿನ 3 ನೆಯ ಮಾರ್ಚಿ ಸಂಚಿಕೆಯಲ್ಲಿ ಮರಿಮಲ್ಲಪ್ಪನವರ ಸ್ಕೂಲ್ ಮ್ಯಾನೇಜ್‌ಮೆಂಟ್ ವಿಚಾರದಲ್ಲಿ "ಸಮಾಜಬಂಧು" ಗಳು ಬರೆದಿರತಕ್ಕ ವಿಷಯವನ್ನು ನೋಡಿದೆನು. ಈ ವಿಷಯದಲ್ಲಿ ಸದರಿ ಸ್ಕೂಲಿನ ಹೆಡ್ಮಾಸ್ತರಾದ ಮ|| ವೆಂಕಟಕೃಷ್ಣಯ್ಯನವರಿಂದ ಸ್ಕೂಲಿನ ಕಾರ್ಯಕ್ರಮದ ವಿಚಾರವನ್ನೂ ಲೆಕ್ಕಗಳ ವಿವರವನ್ನೂ ತಿಳಿದುಕೊಳ್ಳಬೇಕೆಂಬುದ್ದೇಶದಿಂದ ಅವರನ್ನು ಸ್ವತಃ ಕಂಡು ಕೇಳಿದ್ದರಮೇಲೂ ಮತ್ತು ಪತ್ರವ್ಯವಹಾರ ನಡೆಸಿದ್ದರಮೇಲೂ, ಅವರು ಸ್ಕೂಲ್ಕಿನ ವಾರ್ಷಿಕ ರಿಪೋರ್ಟೊಂದನ್ನು ಕಳುಹಿಸಿದರೇ ಹೊರ್ತು ಮತ್ತಾವ ವಿಶದವಾದ ವಿವರವನ್ನೂ ಕೊಡಲಿಲ್ಲವಾದ ಕಾರಣ, ಮೈಸೂರುಡಿಸ್ಟ್ರಿಕ್ಟು ಜಡ್ಜಿಯವರೊಡನೆ ಕರೆಸ್ಪಾಂಡೆನ್ಸ್ ಬೆಳೆಯಿಸಿದ್ದರಮೇಲೆ ಅವರು ಕಳುಹಿಸಿ ಕೊಟ್ಟಿರುವ ಪ್ರೊಸೀಡಿಂಗ್ಸ್ "ಕಾಪಿಯೊಂದನ್ನು ನಿಮ್ಮ ಬಳಿಗೆ ಕಳುಹಿಸಿರುತ್ತೇನೆ. ಈ ಪ್ರೊಸಿಡಿಂಗ್ಸ್ ನನಗೆ ತಲುಪಿದ ನಂತರ ನನ್ನ ಮೊದಲಿನ ಕಾಗದಗಳಲ್ಲಿ ತಿಳಿಸಿರುವಂತೆ ಸ್ಕೂಲಿನ ಲೆಕ್ಕಗಳಲ್ಲಿ ವ್ಯತ್ಯಾಸಬಂದು, ಹಾಗೆ ಕಾಣಬರುದಾದ ವ್ಯತ್ಯಾಸ ಅಥವಾ ನಷ್ಟಕ್ಕೆ ಯಾರು ಕಾರಣರೋ ಆ ಜವಾಬ್ದಾರಿಯನ್ನು ನಿರ್ಧರಿಸಿ ತೀರ್ಮಾನವಾಗಬೇಕೆಂತಲೂ ಮತ್ತು ಸದರಿ "ಪ್ರೊಸೀಡಿಂಗ್ಸ್" 6 ನೇ ಪ್ಯಾರಾದಲ್ಲಿ ನಮೂದಿಸಿರುವಂತೆ ಇದುವರೆಗಾಗಿರತಕ್ಕ ಲೋಪಗಳನ್ನು ಮನ್ನಿಸುವುದು ಅಸಾಧ್ಯವೆಂತಲೂ ಡಿಸ್ಟ್ರಿಕ್ಟ್ ಜಡ್ಜಿಯವರಿಗೆ ನಾನು ತಿಳಿಯಪಡಿಸಿರುವುದಲ್ಲದೆ ಈಗ ದರಖಾಸ್ತು ಮಾಡಿರುವ ಲವು ಕಾಪಿಗಳು ಬಂದ ನಂತರ ಕ್ಷಿಪ್ರದಲ್ಲಿಯೇ ಮುಂದಿನ ಕಾರ್ಯಕ್ರಮವನ್ನು ನಡಿಸಬೇಕಾಗಿರುವ ನಿಮಿತ್ತ ನಿಮ್ಮ ಪತ್ರಿಕಾದ್ವಾರಾ ವೀರಶೈವ ಸಾಂಗದವರ ತಿಳವಳಿಕೆಗಾಗಿ ನನ್ನ ಕಾಗದವನ್ನೂ ಪ್ರೊಸೀಡಿಂಗ್ಸ್ ಕಾಪಿಯನ್ನೂ ಪ್ರಕಟಿಸಪಡಿಸಬೇಕಾಗಿ ಕೋರುತ್ತೇನೆ.

ಇತಿ ನಿಮ್ಮಹಿತೈಷಿ.

M. Basavaiya.

ಮೈಸೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರು 1918 ನೆಯ ಫೆಬ್ರವರಿ ತಾ|| 18 ರಲ್ಲಿ ಮಾಡಿದಪ್ಪಣೆ (ಪ್ರೊಸಿಡಿಂಗ್ಸ್).

ಕೆಳಗೆ ಕಾಣಿಸಿರುವ ಕಾಗದಗಳನ್ನು ಓದಲಾಯಿತು.

1. ಮರಿಮಲ್ಲಪ್ಪನವರ ಧರ್ಮಕಾರ್ಯದ ಆಡಳಿತದಲ್ಲುಂಟಾಗಿರುವ ಕೆಲ ನ್ಯೂನಾತಿರೇಕಗಳನ್ನು ಗಮನಿಸಬೇಕೆಂದು ಮ|| ಎಂ. ಬಸವಯ್ಯ, ಬಿ ಎ., ಬಿ.ಎಲ್., ರವರು ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿನ ಸಂಘದ ಪರವಾಗಿ ಬರೆದಿರುವ 1918 ನೆಯ ಜನವರಿ ತಾ|| 22 ರ ಲೇಖನವು.

2. 1918 ನೆಯ ಜನವರಿ ತಾ|| ೨೮ ರಲ್ಲಿ ಮಾಡಲ್ಪಟ್ಟ ಈ ಕೋರ್ಟಿನ 2650/607 ನೆಯ ನಂ. ಅಪ್ಪಣೆಯಮೇಲೆ ಮರಿಮಲ್ಲಪ್ಪನವರ ಸ್ಕೂಲಿನ ಹೆಡ್ಮಾಸ್ತರು ಇದೇ ತಾ|| 12 ರಲ್ಲಿ ಮಾಡಿರುವ 123 ನೆಯ ನಂ. ವರದಿಯು.

3. ಮೇಲೆ ಹೇಳಲ್ಪಟ್ಟ ಧರ್ಮಕಾರ್ಯಗಳ ಆಡಳಿತಕ್ಕೆ ಸಂಬಂಧಪಟ್ಟ ಅಷ್ಟಗ್ರಾಮ ಡಿವಿಜನ್ ಕಮಿಷನರಲ್ಲಿ ನಡೆದ 1879 ನೆಯ ಇಸವಿ O. S. ನಂ. 4 ರ ಕಾಗದಪತ್ರಗಳು.

ಈ ಕೋರ್ಟಿನಲ್ಲಿ ನಡೆದ 1879 ನೆಯ ಇಸವಿ 4 ನೆಯ ನಂ. ಒರಿಜಿನಲ್ ವಿವಾದದಲ್ಲಿ ಆಗಿರುವ ಡಿಕ್ರಿಯಲ್ಲಿ ಕಂಡಂಶಗಳಿಗಾಗಲಿ ಅಥವ ಧರ್ಮಕಾರ್ಯಪಾಲನಕ್ಕಾಗಿ ೧೮೯೩ ರಲ್ಲಿ ಕೋರ್ಟಿನವರೊಪ್ಪಿಗೆಯ ಮೇರೆಗೆ ಮಾಡಲ್ಪಟ್ಟಿರುವ ನಿಬಂಧನೆಗಳಿಗಾಗಲಿ ಈ ಆಡಳಿತದವರು ಗಮನಕೊಟ್ಟಿಲ್ಲವೆಂದು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ತರು ಮಾಡಿರುವ ವರದಿಯಿಂದ ವ್ಯಕ್ತವಾಗುತ್ತದೆ.

2. ಡಿಕ್ರಿಯಲ್ಲಿ ಹೇಳಲ್ಪಟ್ಟಿರುವ ಪ್ರಕಾರವೂ 1893 ರಲ್ಲಿ ಮಾಡಲ್ಪಟ್ಟಿರುವ ನಿಬಂಧನೆಗಳಲ್ಲೊಂದಾದ 16 ನೆಯ ನಿಬಂಧನೆಯ ಪ್ರಕಾರವೂ ಆಡಳಿತದ ಲೆಕ್ಕಗಳೂ ಮತ್ತೂ ವರದಿಯೂ ಪ್ರತಿ ವರ್ಷದಲ್ಲೂ ಈ ಕೋರ್ಟಿಗೆ ಕಳುಹಲ್ಪಡಬೇಕಾದುವಾಗಿದ್ದರೂ ಅದರಂತೆ 1909-1910 ಆರಭ್ಯ ಕಳುಹಿಸಲ್ಪಟ್ಟಿಲ್ಲವು.

3. 1893 ರಲ್ಲಾಗಿರುವ ನಿಬಂಧನೆ (ರೂಲ್ಸ್) ಗಳಲ್ಲೊಂದಾದ 5 ನೆಯ ನಿಬಂಧನೆಯಪ್ರಕಾರ ಟ್ರಸ್ಟಿಗಳು 3 ತಿಂಗಳಿಗೊಂದಾವೃತ್ತಿ ಅಥವಾ ಅವಶ್ಯಕವಿದ್ದಲ್ಲಿ ಪದೇಪದೇ ಮೀಟಿಂಗನ್ನು ನಡೆಸತಕ್ಕುದಾಗಿದೆ. ಆದರೆ ಕಳೆದ ಕೆಲ ವರ್ಷಗಳಿಂದಲೂ ಆ ಪ್ರಕಾರ ನಡಿಸಲ್ಪಟ್ಟಿಲ್ಲವು.

4. 4 ನೆಯ ನಿಬಂಧನೆಯಪ್ರಕಾರ ಪ್ರೆಸಿಡೆಂಟ್, ಸೆಕ್ರೆಟರಿ ಮತ್ತು ಟ್ರೆಜರರ್-ಇವರುಗಳು ಎರಡನೆಯ ವರ್ಷಾಂತ್ಯದಲ್ಲಿ ತಮ್ಮುದ್ಯೋಗದಿಂದ ನಿವೃತ್ತರಾಗಬೇಕಾಗಿದೆ. ಕೋರ್ಟಿನವರ ಅನುಮೋದನದಮೇಲೆ ಮೆಂಬರುಗಳು ಪುನಃ ಆರಿಸಲ್ಪಡಬೇಕು, ಅಥವಾ ಹೊಸಬರು ನಿಯಮಿಸಲ್ಪಡಬೇಕು. ಈ ನಿಬಂಧನೆಯು ಸಹ ಸಂಪೂರ್ಣವಾಗಿ ಅಲಕ್ಷಿಸಲ್ಪಟ್ಟಿದೆ. ಮತ್ತೂ 1908 ರಲ್ಲಿ ನಿಯಮಿತರಾದ ಮೆಂಬರುಗಳೇ ಈಗಲೂ ಇರುವಂತೆ ತೋರಿಬರುತ್ತದೆ. ಇದು ಬಹಳ ಅಕ್ರಮವಾದುದು.

5. ಮ|| ಜಹಗೀರ್ದಾರ್ ಮಾದಪ್ಪನವರು ಮೃತಪಟ್ಟಿರುವುದಾಗಿ ವರದಿಯಾಗಿದೆ. 3 ನೆಯ ನಿಬಂಧನೆಯನ್ನನುಸರಿಸಿ ಟ್ರಸ್ಟಿಗಳು ಮೀಟಿಂಗ್ ಮಾಡಿ, ಬಿಡುವಾಗಿರತಕ್ಕ ಸ್ಥಳಕ್ಕೆ ಅರ್ಹರಾದವರೊಬ್ಬರನ್ನು ಆರಿಸಬೇಕಾಗಿದ್ದಿತು.

6. ಅವಶ್ಯಕವಿದ್ದಾಗ ಮೀಟಿಂಗು ನಡಿಸಲ್ಪಡುತ್ತಿದ್ದಿತೆಂದು ಹೆಡ್ಮಾಸ್ತರು ತಿಳಿಸುತ್ತಾರೆ. ನಿಬಂಧನೆಗಳು ಇದಕ್ಕೆ ವ್ಯತಿರಿಕ್ತವಾಗಿರುವುದರಿಂದ ಅವುಗಳನ್ನು ಖಂಡಿತವಾಗಿ ಅನುಸರಿಸಬೇಕಾಗಿದೆ. ಕೋರ್ಟಿನವರು ಹಿಂದೆ ನಡೆದಿರುವ ಅಕ್ರಮಗಳನ್ನು ಮನ್ನಿಸುವವರಾಗಿರುವರು. ಆದರೆ ಇದುವರೆಗೆ ನಿಬಂಧನೆಗಳಿಗೆ ವಿರುದ್ಧವಾಗಿ ನಡೆದುದು ಮುಂದೆಯೂ ಅರೀತಿ ನಡೆಯಲು ಆಧಾರವಾಗಿರುತ್ತದೆಂದು ಯಾವರೀತಿಯಿಂದಲೂ ಭಾವಿಸಲ್ಪಡತಕ್ಕುದಲ್ಲ. ಟ್ರಸ್ಟಿಗಳ ಕಾರ್ಯನಿರ್ವಾಹಕ್ಕಾಗಿ ಮಾಡಲ್ಪಟ್ಟಿರುವ ನಿಬಂಧನೆಗಳು ಸಡಿಲಬಿಡಲ್ಪಟ್ಟಿರುವುದನ್ನು ಕೋರ್ಟಿನವರು ಒಪ್ಪುವುದಿಲ್ಲವು.

7. ಟ್ರಸ್ಟಿಗಳು ತತ್‌ಕ್ಷಣದಲ್ಲಿ ಮೀಟಿಂಗುಮಾಡಿ ಮ|| ಜಹಗೀರ್ದಾರ್ ಮಾದಪ್ಪನವರ ಬದಲು ಬೇರೊಬ್ಬ ಟ್ರಸ್ಟಿಯನ್ನು ಆರಿಸಿ ಮತ್ತು ಪ್ರೆಸಿಡೆಂಟ್ ಸೆಕ್ರೆಟರಿ ಮತ್ತು ಟ್ರಜರರು ಇವರುಗಳನ್ನೂ ಈ ಕೋರ್ಟಿನ ಅನುಮೋದನೆಗೆ ಒಳಪಟ್ಟು ನಿಯಮಿಸಲು ತಕ್ಕ ಪ್ರಯತ್ನಮಾಡಬೇಕು.

8. ಟ್ರಸ್ಟಿಗಳು ಇತಃಪರಃ ನಿಬಂಧನೆಗಳಲ್ಲೊಂದಾದ 5 ನೆಯ ನಿಬಂಧನೆಯಲ್ಲಿ ಹೇಳಿರುವಪ್ರಕಾರ 3 ತಿಂಗಳಿಗೊಂದಾವೃತ್ತಿ ಮೀಟಿಂಗನ್ನು ನಡಿಸಬೇಕು. ಅಲ್ಲದೆ ನಿಬಂಧನೆಗಳಿಗನುಸಾರವಾಗಿ ವರದಿಯನ್ನೂ ಲೆಕ್ಕವನ್ನೂ ಈ ಕೋರ್ಟಿಗೆ ಕಳುಹಿಸಿಕೊಡಬೇಕು.

ವೀರ್ ಹಂಜಾಹುಸೇನ್,

ಡಿಸ್ಟ್ರಿಕ್ಟ್ ಜಡ್ಜ್.

(ಎಂದು ಇಂಗ್ಲೀಸಿನಲ್ಲಿದೆ.)

ಪ್ರಜಾಮಿತ್ರಮಂಡಲಿ.

ಮ|| ರಾ|| ಸ್ಟಾರ್ ಎಡಿಟರವರ ಸ|| ಕ್ಕೆ.

ಮ|| ಬನುಮಯ್ಯನವರ ಹಾಲಿನಲ್ಲಿ ಹಿಂದುಳಿದ ಜನರ ಸಮುದ್ಧಾರ ಪ್ರಯತ್ನಕ್ಕಾಗಿ ಏರ್ಪಟ್ಟ ಈ ಸಂಘದ ಆರಂಭ ಗಣಪತಿಪೂಜೆಯಲ್ಲಿ ಹಾಕಲ್ಪಟ್ಟ ಧೂಪದ ಹೊಗೆಯು ಸಮೀಪದಲ್ಲೇ ಇರುವ ಸಂಪದಭ್ಯುದಯ ಪತ್ರಿಕೆಗಳ ಕಣ್ಣು ಮೂಗುಗಳಿಗೆ ಹೊಕ್ಕು ನಿರುಪಮವಾದ ಆವೇಶವನ್ನು ಹುಟ್ಟಿಸಿದಂತೆ ಕಾಣುತ್ತದೆ. ಕಳೆದ ೨-೩ ದಿನಗಳಿಂದಲೂ ಆ ಪತ್ರಿಕೆಗಳಲ್ಲಿ ಕಾಲಂಗಟ್ಟಲೆಯಾಗಿ ತುಂಬಿ ಬರುತ್ತಿರುವ ಲೇಖನಗಳು ಅವುಗಳ ವಿಕಾರಕ್ಕೆ ನಿದರ್ಶನಗಳಾಗಿವೆ. ಪ್ರತಿಯೊಂದು ಜನವರ್ಗದವರಿಗೂ ತಂತಮ್ಮ ಏಳಿಗೆ ಸಾಧಕವಾದ ಪ್ರಯತ್ನಗಳನ್ನು ಮಾಡಿಕೊಳ್ಳುವುದಕ್ಕೆ ಸ್ವಾತಂತ್ರ್ಯವಿರುತ್ತದೆ. ಇತರರೆಲ್ಲಾ ತಮ್ಮ ಹೀನಸ್ಥಿತಿಯನ್ನು ಅರಿತುಕೊಂಡು ಮುಂದಕ್ಕೆ ಬರಲು ಪ್ರಯತ್ನಿಸುತ್ತಿರುವುದನ್ನು ಕಂಡು ಅದಕ್ಕೆ ಪ್ರೋತ್ಸಾಹಿಸುವುದು ಸಜ್ಜನರ ಕರ್ತವ್ಯವಾಗಿರುತ್ತದೆ. ಸಾಧ್ವೀ-ಸಂಪದಭ್ಯುದಯಗಳಿಗೆ ಪರರ ಶ್ರೇಯಸ್ಸನ್ನು ನೋಡಿ ಸೈರಿಸುವುದು ಜನ್ಮಜನ್ಮಾಂತರದಿಂದಲೂ ಬಂದಿಲ್ಲ. ಸಹಸಮಯದವರಾದ ಮದ್ರಾಸು ಪಕ್ಷದ ಸರ್ ಕೆ. ಶೇಷಾದ್ರಿ ಅಯ್ಯರು, ಮ|| ವಿ. ಪಿ. ಮಾಧವರಾಯರೇ ಮೊದಲಾದವರುಗಳನ್ನು ಕೂಡ ಅದು ಎರಡುಹೊತ್ತೂ ದ್ವೇಷಿಸುತ್ತಲಿದ್ದಿತೇ ಹೊರತು ದೇಶವಿಖ್ಯಾತರಾದ ಅವರುಗಳ ಕೃತ್ಯವನ್ನು ಯಾವಾಗಲೂ ಶ್ಲಾಘಿಸಿದುದಿಲ್ಲ. ಇವುಗಳ ಸ್ವಭಾವವನ್ನರಿತವರಲ್ಲಿ ಇವುಗಳ ಕೂಗಿಗೆ ಬೆಲೆಯೇ ಇರುವುದಿಲ್ಲ. ಮೈಸೂರು ದೇಶದ ಹಿಂದುಳಿದ ಪ್ರತಿಯೊಂದು ಜನವರ್ಗದವರೂ ಕುಂಬಾರ, ಅಗಸ, ನಾಪಿತ, ಹೊಲೆಯ, ಮಾದಿಗ, ಕ್ರಿಸ್ತ, ಮಹಮ್ಮದೀಯ, ಒಕ್ಕಲಿಗ ಲಿಂಗಾಯತ, ಮೊದಲಾದ ಸಕಲ ಜನವರ್ಗದವರೂ ವಿದ್ಯಾಬುದ್ಧಿಯಲ್ಲೂ, ಸರ್ಕಾರದ ಹುದ್ದೆಗಳಲ್ಲೂ, ಸಂಪತ್ಪ್ರಾಪ್ತಿಯಲ್ಲೂ, ಸಮಾಜಗೌರವದಲ್ಲೂ ಸರ್ವಸಮಾನರಾಗಿ ಮುಂದುವರಿದು ಬರಬೇಕೆಂಬ ಮಹಾಕಾಂಕ್ಷೆಯೇ ಈ ಸಂಘದ ಮುಖ್ಯೋದ್ದೇಶವು. ನಮ್ಮ ಕುಲಬಾಂಧವರಿಗೆ ಮಾತ್ರವೇ ಸರ್ಕಾರದ ಹುದ್ದೆಗಳು ಜಹಗೀರಾಗಿರಬೇಕು, ಇತರರೆಲ್ಲಾ ವಿದ್ಯಾಬುದ್ಧಿಯನ್ನು ಕಲಿತು ಅಧಿಕಾರಗಳಿಗೆ ಬಂದರೆ ಜಹಗೀರಿಯ ಪಾಲನ್ನು ಕೊಡಬೇಕಾಗುವುದೆಂಬ ಹೊಟ್ಟೆಯುರಿಯು ಸಾಧ್ವೀ-ಸಂಪದಭ್ಯುದಯಗಳಿಗೆ ಇಲ್ಲದೆ ದೇಶಾಭಿಮಾನವೇ ಅವುಗಳ ಉದ್ದೇಶವಾಗಿದ್ದರೆ ಹಿಂದುಳಿದವರ ಪ್ರಯತ್ನದ ವಿಷಯವಾಗಿ ಅವು ಬಾಯಿ ಹಾಕಬೇಕಾದುದೇ ಇಲ್ಲ. ಆಂಗ್ಲಜನರನ್ನು ಈ ದೇಶದ ಅಧಿಕಾರಗಳಿಂದಲೇ ತಪ್ಪಿಸಿ, ಈ ದೇಶವನ್ನು ತಾವೇ ಆಳಿಕೊಳ್ಳಬೇಕೆಂದು ಕೇಳುತ್ತಿರುವ ಜನರಂತೆ ಉಪಕಾರಮಾಡಿದ ಪ್ರಭುತ್ವಕ್ಕೆ ಎರಡು ಬಗೆಯುವ ಸ್ವಭಾವವೂ ದ್ರೋಹಬುದ್ಧಿಯೂ ಮೈಸೂರು ದೇಶದ ಯಾವ ಹಿಂದುಳಿದವರಲ್ಲೂ ಇರುವುದಿಲ್ಲ. ಸರ್ವರ ಯೋಗ್ಯತೆಯನ್ನೂ ಅರಿತಿರುವ ಪ್ರಭುವರ್ಯರು ಯಾರು ಅಸೂಯಾಳುಗಳು, ಯಾರು ದುರ್ಬಲರು, ಯಾರು ಪರೋತ್ಕರ್ಷಾಸಹಿಷ್ಣುಗಳು, ಯಾರು ಸ್ವಾರ್ಥಪರರು, ಯಾರು ಕೃತಜ್ಞರಾದ ರಾಜಭಕ್ತಿಪರರು, ಯಾರು ಸಹಾಯಪಾತ್ರರು ಎಂಬುದನ್ನೆಲ್ಲಾ ವಿಮರ್ಶೆಮಾಡಬಲ್ಲವರಾಗಿರುತ್ತಾರೆ. ಮುಂದಾಗಿ ಬಂದವರನ್ನೂ ಅವರ ಪ್ರಯತ್ನಗಳನ್ನೆಲ್ಲ ಹೇಗಾದರೂ ಮಾಡಿ ಮುರಿದುಬಿಡಬೇಕೆಂಬ ದುರುದ್ದೇಶದಿಂದಲ್ಲದ ಅಪವಾದಗಳನ್ನೂ ಅನೃತವಾದ ಸಂಗತಿಗಳನ್ನೂ ಸಾಧ್ವೀ-ಸಂಪದಭ್ಯುದಯಗಳು ಬರೆಯುವುದರಿಂದಲೇ ಕೃತಕೃತ್ಯತೆಯನ್ನು ವಹಿಸಬೇಕೆಂದಿದ್ದರೆ ಅವುಗಳ ಸ್ವಾರ್ಥಪರತೆಯೂ, ಪರೋತ್ಕರ್ಷಾಸಹನ ದೇಶಾಭಿಮಾನ ಶೂನ್ಯತೆಯೂ ವ್ಯಕ್ತವಾಗುವುದಲ್ಲದೆ ಮತ್ತೇನೂ ಫಲವಾಗುವುದಿಲ್ಲ.

ಆ ಸಭೆಯು ಹಿಂದುಳಿದವರ ಕರ್ತವ್ಯಕ್ಕುದ್ದೇಶಪಟ್ಟದ್ದಾಗಿದ್ದರೂ, ಅದರಮೇಲೆ ಏನಾದರೂ ಕೆಡಿಹಾಕಬೇಕೆಂಬುದ್ದೇಶದಿಂದ ಕೆಲವರು ಅದಕ್ಕೆ ಜನರನ್ನು ಹೋಗಗೊಡದಂತೆ ದುರ್ಬೋಧನೆಮಾಡುತ್ತಲೂ, ಅದು ರಾಜದ್ರೋಹಕರವಾದುದೆಂದು ಹೇಳಿ ಬೆದರಿಕೆ ಹುಟ್ಟಿಸುತ್ತಲೂ ಇದ್ದರೆಂದು ಕೇಳಿರುತ್ತೇನೆ. ಇಷ್ಟೇ ಅಲ್ಲದೆ ಪ್ರತಿವರ್ಗದವರಿಗೂ ಸ್ವತಂತ್ರಪ್ರಾತಿನಿಧ್ಯವಿರಬೇಕೆಂದು ಹೇಳುವ ಈ ಸಭೆಯವರ ಉದ್ದೇಶಕ್ಕೆ ವಿರುದ್ಧವಾಗಿ ಒಬ್ಬ ಬ್ರಾಹ್ಮಣಯುವಕನು ಪಂಚಮರ ಪ್ರತಿನಿಧಿಯೆಂದು ಕಳುಹಿಸಲ್ಪಟ್ಟನು. ಅದೊಂದು ತಿಟಿಯಾಗಿತ್ತು. ತನ್ನುದ್ದೇಶಕ್ಕೆ ವಿರುದ್ಧವಾದ ಆ ಯುಕ್ತಿಕ್ಕೆ ಅನುಮೋದನೆಯನ್ನು ಸಂಘದವರು ಕೊಡಲಿಲ್ಲ. ಸಭೆಯವರ ಸದುದ್ದೇಶವನ್ನು ಕುರಿತು ಸಭೆಯಲ್ಲಿ ನಡೆದ ವಿಷಯಗಳ ವರ್ಣನೆಯನ್ನು ಬಿಟ್ಟು ಸಭೆಯ ವಿಷಯವಾಗಿ ಜನರಲ್ಲಿ ತಪ್ಪುತಿಳುವಳಿಕೆಗಳುಂಟಾಗುವಂತೆ ಮಾಡಬೇಕೆಂಬುದ್ದೇಶದಿಂದಲೇ ಸಂಪದಭ್ಯುದಯ ಕರ್ತರು ಕೆಲವು ಸುಳ್ಳುಬರವಣಿಗೆಯನ್ನು ಬರೆದುಕೊಂಡಿದ್ದಾರೆ. ಮ|| ಎಂ. ಎನ್. ಸುಬ್ಬಣ್ಣನವರು ಸಭೆಯ ಉದ್ದೇಶವನ್ನು ವಿವರಿಸುವಾಗ್ಗೆ "ಈ ಸಂಘಕ್ಕೆ ಯಾರನ್ನು ದ್ವೇಷಿಸಬೇಕೆನ್ನುವುದೂ ಉದ್ದೇಶವಲ್ಲ. ಹಿಂದುಳಿದ ತಮ್ಮವರನ್ನು ಮುಂದಕ್ಕೆ ತರುವುದೇ ಉದ್ದೇಶವಾಗಿರುತ್ತದೆ. ದುರುದ್ದೇಶವು ಇದಕ್ಕಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ" ಎಂದು ಹೇಳಿದರು. ಅದನ್ನು ಸಂಪದಭ್ಯುದಯದವರು ಬೇರೆ ತೆರನಾಗಿ ತಿರುಗಿಸಿಕೊಂಡು ಸಂಘದವರಿಗೆ ಕೆಟ್ಟುದ್ದೇಶವಿರುವಂತೆಯೂ ಅದನ್ನು ತಿದ್ದುವ ಭಾಷಣವನ್ನು ಅವರು ಮಾಡಿದಂತೆಯೂ ಹೇಳಿ, ಸಭೆಗೆ ಅಪಖ್ಯಾತಿಯನ್ನೂ, ಸುಬ್ಬಣ್ಣನವರಿಗೆ ಯುಕ್ತಾಯುಕ್ತ ವಿವೇಚನಲೋಪವನ್ನೂ ಆರೋಪಿಸಲು ಸಾಹಸಪಟ್ಟಿರುತ್ತಾರೆ. ಮ|| ಪುರುಷೋತ್ತಮಾನಂದಗಿರಿಯವರ ಭಾಷಣದ ವಿಷಯವೂ ಕೂಡ ಹಾಗೆಯೇ ತಿಳಿಸಲ್ಪಟ್ಟಿದೆ. ಅವರು ಕಮ್ಯುನಿಯಲ್ ರೆಪ್ರಜಂಟೇಷನ್ನಿಗೆ ಅನುಮೋದನೆಕೊಡುವಾಗ ಇದುವರೆಗೂ ಇಲ್ಲದ ಪ್ರಯತ್ನವನ್ನು ಹಿಂದುಳಿದವರು ಈಗ ಏತಕ್ಕೆ ಮಾಡಬೇಕಾಯಿತೆಂದರೆ ನಮ್ಮ ಸರ್ಕಾರದವರು ಯೂನಿವರ್ಸಿಟಿಯನ್ನು ಈಗ ಸ್ಥಾಪಿಸಿದರು. ಸರ್ವರಲ್ಲೂ ವಿದ್ಯಾವ್ಯಾಪನೆಯನ್ನು ಮಾಡಿ ಮುಂದಕ್ಕೆ ತರಬೇಕೆಂದು ದೊಡ್ಡ ಪ್ರಯತ್ನಮಾಡಿದ್ದಾರೆ. ಈ ಸಮಯದಲ್ಲಿ ಇತರರೆಲ್ಲಾ ತಮ್ಮ ಪ್ರಯೋಜನವನ್ನು ತಾವು ಮಾಡಿಕೊಳ್ಳದೆ ಬಿಟ್ಟರೆ, ದೊಡ್ಡ ನಾಲೆಯು ಬಂದಾಗ ಅದರ ಕೆಳಗೆ ಇರುವ ಖರಾಬು ಭೂಮಿಗಳನ್ನು ಗದ್ದೆಯನ್ನಾಗಿಯೂ ಬಾಗಾಯಿತನ್ನಾಗಿಯೂ ಮಾಡಿಕೊಳ್ಳದೆ ಹೋದರೆ, ಹಾಗೆ ಮಾಡಿಕೊಳ್ಳದೆ ಹೋದವರದೇ ತಪ್ಪಾಗುವುದಲ್ಲದೆ, ತರಿ ಬಾಗಾಯತ್ ಕಂದಾಯವನ್ನು ತೆರುವುದು ಮಾತ್ರ ಅವರಿಗೆ ತಪ್ಪುವುದಿಲ್ಲ" ಎಂದು ಮೊದಲಾಗಿ ಹೇಳಿದರು. ಅದನ್ನೂ ವ್ಯಂಗ್ಯವಾಗಿ ಸಂಪದಭ್ಯುದಯಕರ್ತರು ಬರೆದು ಸಂತೋಷಪಟ್ಟುಕೊಂಡಿದ್ದಾರೆ. ವೈದ್ಯನ ಮುಂದೆ ರೋಗಿಯೇ ತನ್ನ ಅನುಭವಗಳನ್ನು ಹೇಳಿಕೊಳ್ಳುವುದರಿಂದಾಗುವ ಪ್ರಯೋಜನವು ಅವನ ಪ್ರತಿನಿಧಿಗಳಾಗಿ ಇತರರು ಹೇಳಿಕೊಳ್ಳುವುದರಿಂದ ಹೇಗೆ ಆಗುವುದಿಲ್ಲವೋ ಹಾಗೆ ಆಯಾ ಜನರಿಗೆ ಸ್ವತಂತ್ರಪ್ರತಿನಿಧಿತ್ವವಿದ್ದರೇ ಪ್ರಯೋಜನಕಾರಿಯಾಗುವುದೆಂದು ಮ|| ಧನಕೋಟಿಶೆಟ್ಟರು ಹೇಳಿ, ಕಮ್ಯುನಿಯಲ್ ರೆಪ್ರಜಂಟೇಷನ್ನನ್ನು ಅನುಮೋದಿಸಿದ ವಿಷಯವನ್ನು ಸಂಪದಭ್ಯುದಯದ ರಿಪೋರ್ಟರೆಂಬುವರೂ ಸಂಪದಭ್ಯುದಯ ಕರ್ತರೂ ಸಹ ಎತ್ತಿಯೇ ಇಲ್ಲ. ಮ|| ಬಾನರ್ಜಿಯವರ ವಿಷಯದಲ್ಲಿ ಯಾರೋ ಒಂದು ಮಾತನಾಡಿದರೆಂದು ಅದನ್ನೂ ಸೊಟ್ಟನಾಗಿ ಹೇಳಿದ್ದಾರೆ. ಹೀಗೆಲ್ಲಾ ಸಂಪದಭ್ಯುದಯವು ಮಾಡುವುದಕ್ಕೆ ಅದು ಹಿಂದುಳಿದವರ ಅಭ್ಯುದಯ ಯತ್ನಗಳನ್ನು ನೋಡಿ ಸೈರಿಸದೆ ಇರುವುದೇ ಕಾರಣವಲ್ಲದೆ ಮತ್ತೇನೂ ಇಲ್ಲ. ಎಷ್ಟೋ ಮಂದಿ ಸದ್ಬ್ರಾಹ್ಮಣರು ದುರ್ಬಲರಿಗೆ ಪ್ರಬಲರು ಸಹಾಯಮಾಡಬೇಕಾದುದು ಧರ್ಮವೆಂದು ಒಪ್ಪಿಕೊಳ್ಳುತ್ತಿದ್ದಾರೆ. ಮ|| ವೆಂಕಟಕೃಷ್ಣಯ್ಯನವರ ಪಕ್ಷದ ಕೆಲವರು ಹೀಗೆ ಅಸೂಯೆ ತೋರಿಸಿ, ಜನರಲ್ಲಿ ದ್ವೇಷ ಬುದ್ಧಿ ಮತ್ಸರಗಳು ಹುಟ್ಟುವುದಕ್ಕೆ ದಾರಿಮಾಡುತ್ತಿದ್ದಾರೆ. ಗೌರ್ನಮೆಂಟಿನವರು ಅವರ ಅಶಾಂತಿಕಾರಕಪ್ರಯತ್ನಗಳನ್ನು ನೋಡುತ್ತಾ ಸುಮ್ಮನೆ ಕುಳಿತುಕೊಂಡಿರುವುದನ್ನು ನೋಡಿದರೆ ಆಶ್ಚರ್ಯವಾಗಿದೆ. ಅಸೂಯಾಳುಗಳು ಏನುಬೇಕಾದರೂ ಕೂಗಿಕೊಳ್ಳಲಿ. ನರಿ ಕೂಗಿದರೆ ದೇವಲೋಕವು ಹಾಳೆ? ಕುಹಕಿಗಳ ಪ್ರವೇಶಕ್ಕೇ ಸಂಘದವರು ಎಡೆಗೊಡದೆ ತಮ್ಮ ಉದ್ದಿಷ್ಟಕಾರ್ಯವನ್ನು ದೃಢಮನಸ್ಸಿನಿಂದಲೂ ಉದಾರವಾಗಿಯೂ ನಡೆಸುತ್ತ, ಸದುದ್ದೇಶವನ್ನು ಸರ್ವರಿಗೂ ತಿಳಿಸುತ್ತ, ಸತ್ಯಧರ್ಮಗಳಮೇಲೂ, ದೈವಕಟಾಕ್ಷದಮೇಲೂ, ಆತ್ಮಪ್ರಯತ್ನದಮೇಲೂ, ಪ್ರಭುತ್ವದವರ ಉದಾರಚಿತ್ತನಿಷ್ಪಕ್ಷಪಾತತೆಗಳಮೇಲೂ ವಿಶ್ವಾಸವಿಟ್ಟು ಕೆಲಸಮಾಡುವವರಾಗಲಿ.

ಒಬ್ಬ ಪ್ರತ್ಯಕ್ಷದರ್ಶಿ.

ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಲ್ಲಿಯಾದರೂ ಉಂಟೆ ! ಇಲ್ಲಿನೋಡಿರಿ !

ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ನಾರ್ಮಲ್ ಸ್ಕೂಲುಗಳಿವೆ. ಪ್ರಾಯಶಃ ಆ ಸ್ಕೂಲುಗಳ ವಿದ್ಯಾರ್ಥಿಗಳೆಲ್ಲರೂ ಬಡಸ್ಕೂಲ್ ಮಾಸ್ತರುಗಳಾಗಿದ್ದಾರೆ. ಇವರ ಕಷ್ಟವನ್ನು ನೋಡಿ ದಯಾಳು ಸರ್ಕಾರದವರು ಇವರಿಗೆ ತಿಂಡಿಯ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ ಮಾಹೆಯಾನ 60 ರೂಪಾಯಿಗಳವರೆಗೂ ಹಾಸ್ಟಲ್ ಗ್ರಾಂಟ್ ಮಾಡಿರುತ್ತಾರೆ. ಮುಂಜೂರಾದ ಮೊಬಲಗು ನಾರ್ಮಲ್ ಸ್ಕೂಲಿನ ವಿದ್ಯಾರ್ಥಿಗಳೆಲ್ಲರ ಸಹಾಯಾರ್ಥವಾಗಿ ಉಪಯೋಗಿಸಬೇಕೇ ಹೊರ್ತು ಕೆಲವರಿಗೆ ಮಾತ್ರವಲ್ಲವೆಂಬುದು ಸರ್ಕಾರದವರ ಉದ್ದೇಶವೆನ್ನುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ ಕಾರ್ಯತಃ ಈ ಪೂರಾಗ್ರಾಂಟು ಒಂದೇ ಜನಾಂಗದವರಿಗೆ ಮಾತ್ರ ಉಪಯೋಗವಾಗಿ ಇತರರ ಬಾಯಿಗೆ ಕುಕ್ಕೇಕಟ್ಟುವ ಆಚರಣೆಯಲ್ಲಿದೆ.

ಈ ಸಂಗತಿ ವಿದ್ಯಾಭ್ಯಾಸದ ಇಲಾಖಾ ಅಧಿಕಾರಿಗಳ ಗೋಚರಕ್ಕೆ ಬಾರದೇ ಇಲ್ಲ. ಆದರೆ ಅವರಲ್ಲಿ ಯಾರಾದರೂ ಒಬ್ಬರು "ಸರ್ವೇಜನಾಸ್ಸುಖಿನೋಭವಂತು" ಎಂಬ ಉದಾರಧರ್ಮವುಳ್ಳವರಾಗಿದ್ದರೆ ಈ ಬಾಯಿಕುಕ್ಕೆಯು ಬಿಚ್ಚಲ್ಪಡದೆ ಇರುತ್ತಿತ್ತೆ? ಮತ್ತು ಈ ಬಡಉಪಾಧ್ಯಾಯರುಗಳು ಇಷ್ಟು ಅನಾದರಣೆಗೆ ಒಳಗಾಗುತ್ತಿದ್ದರೆ?

ಶಿವಮೊಗ್ಗಾ ಡಿ|| ನಾರ್ಮಲ್ ಸ್ಕೂಲಿಗೆ ಮಾಹೆಯಾನಾ 60 ರೂಪಾಯಿಗಳವರೆಗೆ ಹಾಸ್ಟಲ್ ಗ್ರ್ಯಾಂಟ್ ಸಲ್ಲುತ್ತಲಿದೆ. ಆದರೆ ಈ ಪೂರಾ ಮೊಬಲಗು 30 ವಿದ್ಯಾರ್ಥಿಗಳಿಗೆ ಮಾತ್ರ ಉಪಯೋಗವಾಗುತ್ತಲಿದೆ. ಕಾರಣವೇನೆಂದರೆ-ಈ ವಿದ್ಯಾರ್ಥಿಗಳು ಸ್ಕೂಲ್ ಹೆಡ್ಮಾಸ್ತರವರ ಜಾತಿಯವರಾಗಿಯೂ ಅವರ ಪ್ರೀತಿಗೂ ಆಶೀರ್ವಚನಕ್ಕೂ ಪಾತ್ರರಾಗಿಯೂ ಇರುವುದೇ. ಇತರ 30 ವಿದ್ಯಾರ್ಥಿಗಳು ಈ ಸೌಲಭ್ಯಕ್ಕೆ ದೂರೀಕರಿಸಲ್ಪಟ್ಟಿರುವರು. ಅವರು ಬೇರೆ ಜಾತಿಯವರಾಗಿರುವುದು ಅವರ ದುರ್ದಶೆಗೆ ಕಾರಣವಾಗಿದೆ ಈ ಸೌಲಭ್ಯವನ್ನು ತಮಗೂ ದೊರಕಿಸಿ ಕೊಡಬೇಕೆಂದು ಅನೇಕ ಕಾಲದಿಂದಲೂ ಮೊರೆಯಿಡುತ್ತಿರುವರಾದರೂ ಅವರ ಗೋಳು ಅರಣ್ಯರೋದನವಾಗಿರುವುದು ಮಾಡತಕ್ಕುದೇನು? ಇವರ ಮೊರೆಯನ್ನು ಸಾವಧಾನಚಿತ್ತನಾಗಿ ಲಾಲಿಸಿಕೇಳುವ ಸೌಮ್ಯಚಂದ್ರನು ಯಾವಾಗ ಉದಯಿಸುವನೋ ಅಂದಿಗೆ ಕೃಷ್ಣಪಕ್ಷದ ಕಾಟವು ತೊಲಗಿ ಶುಕ್ಲಪಕ್ಷದ ಛಾಯೆಯು ಬಿಂಬಿಸಿದಂತಾಗುವುದು.

ನ್ಯಾಯವಿಮರ್ಶಕ.

(ಕಳೆದವಾರದ ಶೇಷ.)

ಶ್ರೀ ಜಗದ್ಗುರು ಚಿತ್ರದುರ್ಗದ ಮಹಾಸ್ವಾಮಿಗಳ ಅಂದೋಳಿಕಾರೋಹಣಾದಿ ಕೃತ್ಯಗಳು ವೀರಶೈವ ಧರ್ಮಕ್ಕೆ ವಿರುದ್ಧವಲ್ಲವೆಂಬುದನ್ನೂ, ಅದು ಶಾಸ್ತ್ರವಿಹಿತವೇ ಆಗಿರುವುದೆಂಬುದನ್ನೂ ಮೇಲೆ ಕಂಡ ವಿವರಣದಿಂದ ತಿಳಿಯಬಹುದಷ್ಟೆ. ಅದು ಅವರಿಗೆ ಉಚಿತವಾದುದರಿಂದಲೇ ಮೈಸೂರು ಸಂಸ್ಥಾನವನ್ನಾಳಿದ ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರ ರಾಜ್ಯಭಾರಕಾಲದಲ್ಲಿ (ಸನ್ ೧೮೫೭) ಶ್ರೀ ಚಿತ್ರದುರ್ಗ ಮಠಕ್ಕೆ ಕೊಟ್ಟಿರುವ ಅನೇಕ ಸನ್ನದು ಕಡತಾಂಗಳಲ್ಲಿ ಶ್ರೀಗಳವರ ಅಡ್ಡಪಲ್ಲಕ್ಕಿ ಸವಾರಿ ಮುಂದೆ ನಡೆಯುವಂತೆ ಮಕರತೋರಣ, ನಂದಿಧ್ವಜದಲ್ಲಿ ಧ್ವಾಜಸ ತೋಳು, ಸಂಜೀವನಗಿ,

ದೋಷಾರ್ಗಲು, ಪಟ್ಟಾಪಟ್ಟೆ..........ಬೆಳ್ಳಿಕಟ್ಟಿಗೆ ೫೦, ಹಸುಬೆಗೆ ೫೦ ಈ ಮೇರಿಗೆ ಬಿರುದುಗಳಸಹಿತವಾಗಿ ಸೀಮೆ ಸಂಚಾರವಮಾಡುವ ಪದ್ಧತಿ ಪೂರ್ವಾರಭ್ಯ ಉಂಟಾಗುವದರಿಂದ ಈಗಲೂ ಸಂಚಾರವಮಾಡುತ್ತಿರುವಲ್ಲಿ ಅಡ್ಡಿಮಾಡಲಾಗದು" ಎಂದು ಅಪ್ಪಣೆಯಾಗಲ್ಪಟ್ಟಿರುವುದೂ, ಅನಂತರ ಮೈಸೂರು ರಾಜ್ಯವನ್ನು ಕೆಲವುಕಾಲ ಆಳುತ್ತಿದ್ದ ಇಂಗ್ಲೀಷ್ ಪ್ರಭುಗಳ ಕಾಲದಲ್ಲಿನ ಚೀಫ್ ಕಮಿಷನರೂ ಕೂಡ ೧೮೭೬ ನೆ ಇಸವಿಯಲ್ಲಿ ಮಾಡಿರುವ ಅಪ್ಪಣೆಯಲ್ಲಿ ಚಿತ್ರದುರ್ಗದ ಮಠದವರು ಎಲ್ಲ ಬಿರುದುಗಳನ್ನು ಉಪಯೋಗಿಸಿಕೊಳ್ಳಬಹುದೆಂದು ವಿವರಿಸಿರುವುದೂ, ಆ ಅಪ್ಪಣೆಗಳೆಲ್ಲಾ ಸರ್ಕಾರದ ದಾಖಲೆಯಲ್ಲಿದೆಯೆಂದು ಮುಜರಾಯಿ ಇಲಾಖೆಯವರು ಒಂದಾನೊಂದು ಇಂಡಾರ್ಸನ್ನು ಕೊಡುವಾಗ್ಗೆ ೧೮೦೭ ನೆ ಇಸವಿಯಲ್ಲಿ ಒಪ್ಪಿಕೊಂಡಿರುವುದೂ, ಇವುಗಳೆಲ್ಲಾ ಶ್ರೀ ಚಿತ್ರದುರ್ಗ ಸ್ವಾಮಿಗಳಿಗೆ ಅಡ್ಡಪಲ್ಲಕ್ಕಿ ಮೊದಲಾದ ಬಿರುದುಗಳು ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವ ಹಾಸ್ವಾಮಿಗಳ ಕಾಲಕ್ಕೆ ಹಿಂದಿನಿಂದಲೂ ನಡೆದುಬಂದಿರತಕ್ಕದ್ದೂ, ವೀರಶೈವ ಧರ್ಮಶಾಸ್ತ್ರಕ್ಕೆ ಅನುಗುಣವಾದುವುಗಳೂ ಎಂಬುದನ್ನು ಸಿದ್ಧಪಡಿಸುತ್ತವೆ. ಆದ್ದರಿಂದ ಹಿಂದೆ ಬಹುಕಾಲಾರಭ್ಯ ನಡೆದುಬಂದು ಮಧ್ಯೆ ಯಾವ ಕಾರಣದಿಂದಲೋ ತಡೆಯಲ್ಪಟ್ಟಿರುವ ಶ್ರೀ ಚಿತ್ರದುರ್ಗ ಮಠದ ಬಿರುದುಗಳನ್ನು ಸರ್ಕಾರದವರು ನಡೆಯಿಸಿಕೊಟ್ಟರೆ, ಅವರ ಪೂರ್ವದ ಆರ್ಡರುಗಳಿಗೆ ಅವರೇ ಮರ್ಯಾದೆಯನ್ನು ಸಲಿಸಿದ ಹಾಗುವುದು ಮಾತ್ರವಲ್ಲದೆ, ಮಹಾರಾಜರಲ್ಲಿ ಅತ್ಯುತ್ತಮವಾದ ರಾಜಭಕ್ತಿಯಿಂದ ಅವರ ದಯಾರಸವನ್ನೇ ತಮ್ಮ ಸರ್ವವಿಧದ ಪುರೋಭಿವೃದ್ಧಿಗೂ ಅವಲಂಬನೆಯನ್ನಾಗಿ ಹಿಡಿದುಕೊಂಡಿರುವ ಅನನ್ಯಗತಿಕರಾದ ಲಕ್ಷಾಂತರ ಪ್ರಜೆಗಳ ಪ್ರಾರ್ಥನೆಯನ್ನೂ ಗೌರವವನ್ನೂ ಕಾಪಾಡಿದಂತಾಗುತ್ತದೆ. ಇದಕ್ಕಾಗಿಯೇ ವೀರಶೈವ ಮಹಾಸಭೆಯವರು ಈ ಠರಾವನ್ನು ಪಾಸುಮಾಡಿಯಿದ್ದಾರೆಯೇ ಹೊರತು, ಎಂದೂ ಇಲ್ಲದ ಹೊಸಬಿರುದನ್ನು ಪಡೆಯಬೇಕೆಂಬ ದುರಾಶೆಯಿಂದಲೇ ಆಗಲೀ, ಪರರ ಸ್ವತ್ವನ್ನು ಅಪಹರಿಸಿ ತಾವು ಸುಖಗೌರವಪ್ರತಿಷ್ಠೆಗಳನ್ನುಸಂಪಾದಿಸಿಕೊಂಡು ಬಾಳಬೇಕೆಂಬ ದುಸ್ಸಂಕಲ್ಪದಿಂದಲೇ ಆಗಲೀ ಮಾಡಿದವರಲ್ಲ. ವೀರಶೈವ ಧರ್ಮತತ್ವವನ್ನೂ ಹಿಂದಿನ ರಿಕಾರ್ಡುಗಳನ್ನೂ ಪರಾಮರಿಸಿ ನ್ಯಾಯವನ್ನನುಸರಿಸಿ ನಿಷ್ಪಕ್ಷಪಾತವಾದ ಅಪ್ಪಣೆಯನ್ನು ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಮಾಡಬೇಕೆಂಬುದು ಸರ್ವ ವೀರಶೈವ ಜನವರ್ಗದವರ ಪ್ರಾರ್ಥನೆಯಾಗಿರುತ್ತದೆ. ಧರ್ಮವಿರುದ್ಧ ನ್ಯಾಯವಿರುದ್ಧವಾದ ಅಪ್ಪಣೆಯನ್ನು ಮಾಡಬೇಕೆಂದು ಕೇಳುವ ದುಸ್ಸಾಹಸಕ್ಕೆ ವೀರಶೈವ ಮಹಾಸಭೆಯವರು ಯತ್ನಿಸಿರುವುದೂ ಇಲ್ಲ, ಯತ್ನಿಸುವವರೂ ಅಲ್ಲ. ಪಿ. ನರಸಿಂಹಶಾಸ್ತ್ರಿಯವರು ಹೇಳಿರುವಂತೆ ಮ|| ಸರ್ ವಿಶ್ವೇಶ್ವರಯ್ಯನವರು ಧರ್ಮರಾಜ್ಯದ ಕಾರ್ಯಧುರಂಧರರಾದ ಮಂತ್ರಿವರ್ಯರೆಂತಲೂ, ಅವರು ಸರಿಯಾಗಿ ವಿಚಾರಿಸುವರೆಂತಲೇ ವೀರಶೈವರೂ ಕೂಡ ನಂಬಿಕೊಂಡು, ಈ ಠರಾವನ್ನು ಪಾಸ್‌ಮಾಡಿ ಧರ್ಮಪ್ರಭುಗಳೂ ದೀನಜನೋದ್ಧಾರಬದ್ಧಾದರರೂ ಆದ ಶ್ರೀಮನ್ಮಹಾರಾಜರವರಬಳಿಗೆ ಕಳುಹಿಸಿಕೊಂಡು ನಿರೀಕ್ಷಿಸುತ್ತಿರುವರು.

ಈ ಬಿರುದುಗಳನ್ನು ಕುರಿತು ವೀರಶೈವ ಮಹಾಸಭೆಯಲ್ಲಿ ಠರಾವು ಮಾಡಿರುವುದು ಧರ್ಮವಿರುದ್ಧವಾದ ಕೃತ್ಯವೆಂದು ಪಿ. ನರಸಿಂಹಶಾಸ್ತ್ರಿಗಳು ಹೇಳಿ, ಅಪ್ರಕಾರದೋಷವನ್ನು ಆ ಸಭೆಗೂ ವೀರಶೈವ ಜನವರ್ಗವೆಲ್ಲಕ್ಕೂ ಹೊರಿಸುವದಾದರೆ, ಆ ದೋಷಕ್ಕೆ ಇವರು ಇದಕ್ಕಿಂತ ಮೊದಲು ಶ್ರೀ ಮುಮ್ಮಡಿ ಕೃಷ್ಣರಾಜ ಮಹಾಪ್ರಭುಗಳಿಗೂ ಚೀಫ್ ಕಮಿಷನರ ರಾಜ್ಯಾಧಿಕಾರಕ್ಕೂ ಸಹ ದೋಷವನ್ನು ಕಲ್ಪಿಸಿದಂತಾಗುತ್ತದೆ. ಗೂಬೆಯ ಕಣ್ಣಿಗೆ ಸೂರ್ಯನ ಬೆಳಕಿನ ಯೋಗ್ಯತೆಯ ಅರಿವು ಉಂಟಾಗದಿರುವಂತೆ ಅಜ್ಞಾನಾಂಧರಾಗಿರುವ ಪಿ. ನರಸಿಂಹಶಾಸ್ತ್ರಿಗಳಂಥವರ ಸಂಕುಚಿತ ದೃಷ್ಟಿಗೆ ಈ ಸಂಗತಿಗಳೆಲ್ಲಾ ಲೋಕನಕಾಲಕ್ಕೆ ಗೋಚರವಾಗದಿರಬಹುದು. "ಸರ್ವೇಜನಾಸ್ಸುಖಿನೋಭವಂತು" ಎಂದು ಪ್ರತಿದಿನವೂ ಸಂಧ್ಯಾವಂದನಕಾಲದಲ್ಲಿ ಕೋರುತ್ತಿರುವೆವೆಂದು ಹೇಳಿಕೊಳ್ಳುತ್ತಿರುವ ಜನರು ಪರರ ಉತ್ಕರ್ಷದಲ್ಲಿ ಎಷ್ಟುಮಟ್ಟಿಗೆ ಸಹನೆಯನ್ನು ತೋರಿಸುತ್ತಲಿರುವರೆಂಬುದನ್ನು ಪಿ ನರಸಿಂಹಶಾಸ್ತ್ರಿಯವರಂಥವರ ವರ್ತನೆಗಳಿಂದ ತಿಳಿದುಕೊಳ್ಳಬೇಕು. "ನಾವೂ ನೀವೂ ಕೈ ಕೈ ಕೂಡಿಸಿ ನಡೆಯಬೇಕು; ನಮ್ಮ ಸಭೆಗಳಿಗೆ ನೀವು ವಾಲಂಟಿಯರಾಗಿ ಬರಬೇಕು; ನಿಮ್ಮ ಸಭೆಗೆ ನಾವು ವಾಲಂಟಿಯರಾಗಿ ಬರುತ್ತೇವೆ; ಸಾರ್ವಜನಿಕ ದೇಶೋದ್ಧಾರಕ ಕಾರ್ಯಗಳಲ್ಲಿ ಉಭಯಾನರ್ಥಕಾರಿಯಾದ ಪರಸ್ಪರ ಭಿನ್ನಭಾವಗಳನ್ನು ದೂರೀಕರಿಸಿ ನಡೆಯಬೇಕು" ಎಂದು ದಾವಣಗೆರೆಯ ಮ|| ಶಿವನಪ್ಪನವರ ಅಟ್‌ಹೋಂ ಪಾರ್ಟಿಯಲ್ಲಿ ಉದಾರವಾಗಿ ಅಪ್ಪಣೆಕೊಡಿಸಿದ ಮ|| ಕಡಾಬಿ ವಕೀಲರೇ ಮೊದಲಾದವರು ಈ ಪಿ. ನರಸಿಂಹಶಾಸ್ತ್ರಿಗಳ ದುರ್ವ್ಯಾಪಾರಕ್ಕೆ ಏನು ಹೇಳುತ್ತಾರೆಯೋ ಗೊತ್ತಾಗಲಿಲ್ಲ. ಇಂಥ ತಮ್ಮವರ ಬಾಯ್ಮುಚ್ಚಿಸುವುದಕ್ಕೆ ಅವರುಗಳು ಯಾವ ರೀತಿಯಿಂದ ಪ್ರಯತ್ನಪಟ್ಟು ತಮ್ಮ ಸಾನುಭೂತಿ ಸೌಹಾರ್ದಗಳ ಬಣ್ಣವನ್ನು ಒರೆಯಿಕ್ಕಿ ತೋರಿಸುತ್ತಾರೆಂಬುದನ್ನು ನೋಡುವುದಕ್ಕೆ ವೀರಶೈವರೆಲ್ಲರೂ ಕುತೂಹಲಪಡುವುದು ಸಹಜವಲ್ಲವೆ?

ಪಿ. ನರಸಿಂಹಶಾಸ್ತ್ರಿಗಳ ಲೇಖನದಲ್ಲಿ ಇನ್ನೊಂದು ವಿಷಯವನ್ನು ಕುರಿತು ಮಾತ, ಮಾತನಾಡುವುದು ಬಾಕಿ ಉಳಿದಿರುತ್ತದೆ. ಅದನ್ನೊಂದಿಷ್ಟು ವಿಚಾರಮಾಡಿ ಈ ನನ್ನ ಉದ್ದವಾಗಿ ಬೆಳೆದ ಲೇಖನವನ್ನು ಮುಗಿಸಬಯಸುತ್ತೇನೆ.

ಧರ್ಮರಾಜ್ಯವಾದ ಮೈಸೂರಿನಲ್ಲಿ ಶಾಸ್ತ್ರಗಳ ನಿಯಮಗಳು ಕೆಡಬಾರದು. ಅವು ಕೆಟ್ಟರೆ ರಾಜ್ಯಕ್ಕೆ ಅರಿಷ್ಟವುಂಟಾಗುವುದೆಂದು ಶಾಸ್ತ್ರಿಗಳು ಬರೆದಿರುತ್ತಾರೆ. ಇದು ಒಪ್ಪತಕ್ಕ ಮಾತೇ ಆಗಿರುತ್ತದೆ "ರಾಜಾರಾಷ್ಟ್ರಕೃತಂಪಾಪಂ ರಾಜಪಾಪಂ ಪುರೋಹಿತಃ" ಎಂದು ನೀತಿವಚನವಾದರೂ ಇರುತ್ತದೆ. ರಾಷ್ಟ್ರದಲ್ಲಿ ಶಾಸ್ತ್ರವಿರುದ್ಧಾಚರಣವು ಬೆಳೆಯುವುದಕ್ಕೆ ಪ್ರಭುಗಳು ಅವಕಾಶ ಕೊಟ್ಟರೆ ದೋಷವು ಹುಟ್ಟುವುದು. ಪ್ರಭುಗಳಿಗೆ ಶಾಸ್ತ್ರವಿಹಿತಾಚಾರಗಳ ಮತ್ತು ಶಾಸ್ತ್ರವಿರುದ್ಧಾಚಾರಗಳ ಜ್ಞಾನವನ್ನು ಮಾಡಿಕೊಟ್ಟು, ದುಷ್ಟಾಚಾರಗಳ ನಿರ್ಮೂಲನಕ್ಕೂ, ವಿಹಿತಾಚಾರ ರಕ್ಷಣೆಗೂ ಸಲಹೆಗಳನ್ನು ಕೊಡದೆ ಹೋಗುವ ಕಾರಣದಿಂದ ರಾಜನಿಗೆ ತಟ್ಟುವ ಆ ದೋಷಗಳೆಲ್ಲಾ ಪುರೋಹಿತ ಅಥವಾ ಧರ್ಮಾಚಾರ್ಯರುಗಳು ಗುರಿಯಾಗಬೇಕಾದುದು ಧರ್ಮವಾಗಿರುತ್ತದಲ್ಲವೆ? ಮಹಾವಿದ್ವಾನ್ ಎಲ್ಲಶಾಸ್ತ್ರಿ ಕೃಷ್ಣಾಚಾರ್ಯರು ತಮ್ಮ ಒಂದು ಉಪನ್ಯಾಸದಲ್ಲಿ ಅಪ್ಪಣೆಕೊಡಿಸಿದಂತೆ ಬೋಧಕರಾದ ಜನರೇ ಬೋಧ್ಯರಾದ ಜನರಿಗಿಂತಲೂ ನಿಕೃಷ್ಟವಾಗಿ ದುರಾಚಾರಗಳನ್ನು ಅನುಸರಿಸುವುದಕ್ಕೆ ತೊಡಗಿರುವಾಗ, ಮೊಟ್ಟಮೊದಲು ದೇಶದ ಸರ್ವಾನರ್ಥಕ್ಕೂ ಮೂಲಭೂತರಾರೆಂಬುದನ್ನು ವಿಚಾರಿಸಬೇಕಲ್ಲವೆ? ಬುಡಕ್ಕೆ ನೀರೆರೆದರೆ ಮರವೆಲ್ಲಾ ಚಿಗುರಿಕೊಳ್ಳುವಂತೆ ಬೋಧಕರಾದ ಜನವರ್ಗದವರು ಮೊದಲು ಸಂಸ್ಕೃತರಾಗಬೇಕಾಗುತ್ತದೆ ಅದುಕಾರಣ ಪಿ ನರಸಿಂಹಶಾಸ್ತ್ರಿಗಳವರೂ ಅವರ ಕುಲಬಾಂಧವರೂ ಶಾಸ್ತ್ರವಿಹಿತವಾದ ತಮ್ಮ ವರ್ಣಾಶ್ರಮದ ಕಟ್ಟಳೆಗಳ ವಿರುದ್ಧವಾದ ದೋಷಗಳಿಗೆ ಪ್ರಾಯಶ್ಚಿತ್ತವನ್ನು ಪಡೆದುಕೊಂಡು, ಆ ಮೂಲಕವಾಗಿ ದೇಶಾರಿಷ್ಟವನ್ನು ತಪ್ಪಿಸುವಂತೆ ಪ್ರಭುತ್ವದವರು ಮೊಟ್ಟಮೊದಲು ಮಾಡುವುದು ದೇಶಾಭಿಮಾನಿಗಳಿಗೆಲ್ಲರಿಗೂ ಅಪೇಕ್ಷಣೀಯವಾಗಿಯೇ ಇರುವುದು. ನಮ್ಮಲ್ಲೆಲ್ಲಾ ಶಾಸ್ತ್ರೋಕ್ತಾನುಸಾರವಾಗಿಯೇ ಧರ್ಮಕರ್ಮಾಚರಣೆಗಳಿರುವುವು, ವಿರುದ್ಧಾಚರಣಗಳಿಲ್ಲವೆಂದು ಪಿ ನರಸಿಂಹಶಾಸ್ತ್ರಿಗಳಿಗೆ ಹೇಳುವುದಕ್ಕೆ ಧೈರ್ಯವಿದ್ದರೆ ಹೇಳಲಿ, ಅನಂತರ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಮುಂದೆ ಸಿದ್ಧನಾಗುತ್ತೇನೆ. ನಾನಾಗಿ ಬರೆಯುವುದಕ್ಕೆ ಹೋದರೆ ಆ ದೊಡ್ಡ ಲೇಖನಕ್ಕೆ ಪತ್ರಿಕೆಯವರು ಸ್ಥಲವನ್ನು ಕೊಡುವರೋ ಇಲ್ಲವೋ ಎಂದು ಸಂಶಯಪಟ್ಟು ಬಿಡುತ್ತಿದ್ದೇನೆ.

ಎಸ್. ಶರಭಾಚಾರ್ಯ.

ಈಗ್ಗೆ ೩೫ ವರ್ಷಗಳ ಲೋಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನು ತೆಗೆದುಕೊಂಡು ನಿರಾಶೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ.

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಿತ್ರದತ್ತಾ, ಲುಕ್ಮಾನಿ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೩೫ ವರ್ಷಗಳ ಲೋಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಪಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿಸುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿಸುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕವ್ಯಾಧಿಗಳ ಮುಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ನಿದ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮೂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗಮುಕ್ತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದು ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ

ಸೂಚನೆ:—ಇವರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರುಕು, ತದ್ದು, ಹುಳಕಡ್ಡಿ, ಮೇಹ ಸಂಬಂಧಿ ಚಟ್ಟಿ (ಟಾಕಿ) ಹಲವರ್ಣ, ಯಲುಸಂಧಿಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ವೈದ್ಯರಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತವೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಮುಲಾಜೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾಗುವದು. ಮತ್ತು ತಮ್ಮ ಅಡ್ರೆಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೇಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತಪ್ಪಾ ಕಾಳಪ್ಪಾ ಲೇಂಗಡೆ,
6 ಹೊಸೂರ, ಪೋಸ್ಟ್ ಪಾಪೂರ, (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬಿಳೀ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಜರಿ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ಕೊಳ್ಳಿರಿ. 14

ಇಮಿಟೇಷನ್ ಸಿಲ್ಕ್ ಗೋವರ್ ಜಾಕ್ ಸೀರೆ 5.0.0
ಡೈಮಂಡ್ ಚೌಕ್ಕುಡಿ ಸೀರೆ 5.0.0
ಬನಾರಸ್ ಸೀರೆ 5.8.0
ಬಾಲಾಮಣಿ ಸೀರೆ 3.8.0

ವಿಳಾಸ:—ವೈರಂ ಅಂಡ್ ಕೊ, ಇರುಳಪ್ಪನವೀದಿ, ಮದರಾಸು.

ಕಾಳು ಕಡಿಯ ಜಂಗೀ ವ್ಯಾಪಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮೀಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
7 ಧಾರವಾಡ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಶ್ರಮಪಟ್ಟು ಅಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ತುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ. ೧ಬೇ. ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ. ೧ಬೇ. ೩ಪ್ಯ. ೧೦೦ ಕ್ಕೆ ೧-೪-೦

೩ ಹೇನುಶಿರು ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ. ೧ಬೇ. ೩ಪ್ಯ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷ್ಯದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
17 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
18 ಪಾಠಶಾಲಾ ಮಹಾಗಾಂವ್ ಜೆಲ್ಲ ಗುಲ್ಬರ್ಗ.

೧೯೧೮ ನೆಯ ಇಸವಿ ಮಾರ್ಚಿ ತಾ|| ೧೭ ರಿಂದ ೧೯೧೮ ನೆಯ ಮಾರ್ಚಿ ತಾ|| ೨೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಫಾಲ್ಗುಣ ಶು|| ಪಂಚಮಿಯಿಂದ ಫಾಲ್ಗುಣ ಶು|| ಏಕಾದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾ ತೇದಿ
17	[1] ಭಾನು	ಪಂಚಮಿ	20-52	ಕೃತ್ತಿಕಾ	49-0	4
18	[2] ಸೋಮ	ಷಷ್ಠಿ	17-10	ರೋಹಿಣಿ	47-31	5
19	[3] ಮಂಗಳ	ಸಪ್ತಮಿ	14-30	ಮೃಗಶಿರ	47-3	6
20	ಬುಧ	ಅಷ್ಟಮಿ	12-54	ಆರಿದ್ರಾ	47-44	7
21	ಗುರು	ನವಮಿ	12-33	ಪುನರ್ವಸು	49-39	8
22	[4] ಶುಕ್ರ	ದಶಮಿ	13-20	ಪುಷ್ಯ	52-51	9
23	ಶನಿ	ಏಕಾದಶಿ	15-40	ಆಶ್ಲೇಷ	57-13	10

(1) ಪುತ್ರಕಾಮ್ಯಗೌರೀವ್ರತಂ. (2) ಮಾರೀಚಿ. (3) ಮೇಲುಕೋಟೆಯಲ್ಲಿ ಕಲ್ಯಾಣೋತ್ಸವ. (4) [illegible] ಶ್ರೀ[illegible].

ಮೈಸೂರ್: ಕೃ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತಿ ಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಮಾರ್ಚಿ ತಾರೀಖು ೨೪ ನೆಯ ಭಾನುವಾರ. (ಸಂಚಿಕೆ ೧೨

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, 5 ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಫ್ಲಾಟ್, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೇಸುಗೆ 1, ತಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ತರಟು ಗುಂಡಿಗಳು 4, ಜರ್ಮನ್ ಕೈಪಸ್ತ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ,
15 8, ಇರುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶಕಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಪಂಡಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 16

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ವಾರ್ಧಕ್ಯವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಣೆಬೇನೆ, ಬಲಹೀನತೆ, ಕೆಟ್ಟಹಸು, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತವೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಸ್. ವೈ. ಇನ್ಸ್ಟಿಟ್ಯೂಟ್ ಆಫ್ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಮ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟು ಎನಿಯರಿ ರೋಡ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
19 ಪಾಠಶಾಲಾ ಮಹಾಗಾಂವ್ ಜೆಲ್ಲ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 24

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರತುದ ಬಳ್ಳೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ನುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನ್ನಡಾ ಜಿ||.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮಾರ್ಚಿ ತಾ|| ೨೪ ನೆಯ ಭಾನುವಾರ.

ಮ|| ಎ. ಆರ್. ಬಾನರ್ಜಿಯವರ ಭಾಷಣ.

(ಭಾಗ II).

ಪ್ರತ್ಯೇಕ ಜನವರ್ಗಕ್ಕೆ ಪ್ರಾತಿನಿಧ್ಯವನ್ನು ಕೊಡುವ ತತ್ವವು ಯಾವ ಪ್ರಭುತ್ವದಲ್ಲೂ ಇಲ್ಲವೆಂದು ಮ|| ಎ. ಆರ್. ಬಾನರ್ಜಿಯವರು ತಮ್ಮ ನಿಯಮನಿರ್ಮಾಣ ಸಭೆಯ ಭಾಷಣದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ. ಇದು ಆಶ್ಚರ್ಯಕರವಾದುದು. ಪಶ್ಚಿಮದೇಶಗಳಲ್ಲಿ ವರ್ತಕರು ಕೂಲಿಕಾರರು ಮೊದಲಾದ ಜನರ ಪಕ್ಷಗಳಿರುವಂತೆಯೇ ನಮ್ಮ ಭರತಖಂಡದಲ್ಲಿ ಕಸಬಿನ ಮೇಲೆ ಒಂದೊಂದು ಜನವರ್ಗಕ್ಕೆ ಒಂದೊಂದು ಹೆಸರು ಬಂದಿದೆ. ಕೆಲವರಿಗೆ ಮತದ ಹೆಸರು ರೂಢಿಯಲ್ಲಿದೆ. ಕೆಲವರಿಗೆ ಕಸಬನ್ನು ನಿರೂಪಿಸುವ ಹೆಸರುಗಳು ರೂಢವಾಗಿವೆ. ಇಂಥ ಜನವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡುವುದೆಂದರೆ ಪಶ್ಚಿಮದೇಶಗಳಲ್ಲಿ ರೂಢವಾಗಿರುವಂಥ ಪ್ರಾತಿನಿಧ್ಯವನ್ನು ಕೊಟ್ಟ ಹಾಗಾಗುವುದೇ ಹೊರತು ಹೊಸದೇನೂ ಅಲ್ಲ. ಇದಲ್ಲದೆ ಭರತಖಂಡದೊಳಗೆ ನವೀನ ರಾಜಕೀಯ ಸುಧಾರಣೆಗಳಾಗಬೇಕೆಂಬ ಚಳವಳಿಯು ನಡೆಯುತ್ತಿರುವ ಈ ಕಾಲದಲ್ಲಿ ನೂತನಶಕ್ತಿವಿಕಾಸಗೊಂಡಿರುವ ಬೊಂಬಾಯಿ ಬಂಗಾಳಾ ಮದ್ರಾಸು ಪಂಜಾಬು ಆಧಿಪತ್ಯಗಳ ಅನೇಕ ಜನವರ್ಗಗಳವರು ಸ್ಟೇಟ್‌ಸೆಕ್ರೆಟರಿಯವರಿಗೂ ವೈಸ್ರಾಯರಿಗೂ ಬಿನ್ನಯಿಸಿಕೊಂಡಿರುವ ವಿಜ್ಞಾಪನ ಪತ್ರಗಳಲ್ಲಿ ಈ ಪ್ರತ್ಯೇಕ ಪ್ರಾತಿನಿಧ್ಯತತ್ವಸ್ಥಾಪನೆಯ ಅವಶ್ಯಕತೆಯು ನಿರೂಪಿಸಲ್ಪಟ್ಟಿರುತ್ತದೆ.

ಆಲ್ ಇಂಡ್ಯಾ ಕಾಂಗ್ರೆಸ್ ಕಾನ್‌ಸ್ಟಿಟ್ಯೂಷನ್ ಕಮಿಟಿಯವರು ೧೯೧೬ ನೆಯ ವರ್ಷದಲ್ಲಿ ಈ ಪ್ರತ್ಯೇಕ ಪ್ರಾತಿನಿಧ್ಯತತ್ವವನ್ನು ಒಪ್ಪಿಕೊಂಡಿದ್ದಾರೆ. ಮದ್ರಾಸ್ ಪ್ರೊವಿನ್ಷಿಯಲ್ ಕಾಂಗ್ರೆಸ್ಸಿನವರೂ ಆಂಧ್ರಮಹಾಜನಸಭೆಯವರೂ ವೀರಶೈವ ಮಹಾಸಭೆಯವರೂ ಇದರ ಅವಶ್ಯಕತೆಯನ್ನು ಒಪ್ಪಿ ನಿರ್ಧಾರ ಮಾಡಿರುತ್ತಾರೆ. ಕೈ|| ಗೋಖಲೆಯವರಂತು ಈ ತತ್ವವನ್ನು ಘಂಟಾಘೋಷವಾಗಿ ಒಪ್ಪಿ ಬರೆದಿದ್ದಾರೆ. ಈಗಣ ನಮ್ಮ ಸ್ಟೇಟ್‌ಸೆಕ್ರೆಟರಿಯವರು ಮಾರ್ಲೆಯವರ ಕಾಲದಲ್ಲಿ ಅಸಿಸ್ಟೆಂಟ್ ಸೆಕ್ರೆಟರಿಯವರಾಗಿದ್ದಾಗ್ಗೆ ೧೯೧೧-೧೨ ನೆ ವರ್ಷದ ಇಂಡ್ಯಾ ಬಡ್ಜೆಟ್ ಭಾಷಣದಲ್ಲಿ ಈ ಪ್ರತ್ಯೇಕ ಪ್ರಾತಿನಿಧ್ಯ ತತ್ವಕ್ಕೆ ಅಂಗೀಕಾರವನ್ನು ಸೂಚಿಸಿರುತ್ತಾರೆ. ಇಷ್ಟೆಲ್ಲಾ ಚಲನವಲನವು ನಮ್ಮ ಮೈಸೂರಿನ ಹೊರಗಡೆ ನಡೆದೂ ನಡೆಯುತ್ತಲೂ ಇದ್ದರೂ, ಅವೊಂದನ್ನೂ ಕಾಣದವರಂತೆ ಮ|| ಬಾನರ್ಜಿಯವರು ಮೈಸೂರು ದೇಶದ ಸಾಮಾನ್ಯ ಬಹುಪ್ರಜಾವರ್ಗದ ಹಿತಾರ್ಥವಾಗಿ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೋರುವವರ ತತ್ವವನ್ನು ಜಗತ್ತಿಗೇ ಹೊಸದಾಗಿ ಬಂದುದನ್ನಾಗಿ ಹೇಳುತ್ತ ಅದನ್ನು ಸೂಚಿಸಿದವರನ್ನು ಕೂಡ ತುಚ್ಛವಾದ ಮಾತುಗಳಿಂದ ತೇಜೋವಧೆ ಮಾಡುವುದು ಅವರ ಮನಸ್ಸಾಕ್ಷಿಗನುರೂಪವಾದ ಕಾರ್ಯವಾಗಿದ್ದೀತೆ ?

ಇದಲ್ಲದೆ ಮ|| ಬಾನರ್ಜಿಯವರೂ ಅವರ ಗಾನಕ್ಕೆ ಉಪಶ್ರುತಿ ಕೊಡುವ ಪತ್ರಿಕೆಗಳೂ ಕೂಡ ಈ ಪ್ರತ್ಯೇಕ ಪ್ರಾತಿನಿಧ್ಯ ತತ್ವದ ವಿರುದ್ಧವಾಗಿ ಆಡುವ ಮತ್ತೊಂದು ವಿಷಯವಿರುತ್ತದೆ. ಅದು ಕೂಡ ಹೇತ್ವಾಭಾಸವಾಗಿದೆಯೇ ಹೊರತು ಒಪ್ಪತಕ್ಕ ಕಾರಣವಾಗಿರುವುದಿಲ್ಲ. ಅದೇನೆಂದರೆ—ಈಗಿರುವ ಏರ್ಪಾಟಿನಿಂದಲೇ ಯಾವ ಪ್ರಜೆಗಳು ಬೇಕಾದರೂ ಮ್ಯು|| ಲೋ|| ಬೋರ್ಡು ಮೊದಲಾದುವುಗಳಲ್ಲೂ ಪ್ರಜಾಪ್ರತಿನಿಧಿ ಸಭೆಯಲ್ಲೂ ನಿಯಮನಿರ್ಮಾಣ ಸಭೆಯಲ್ಲೂ ಪ್ರಜೆಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳಾಗಿ ಬರಲು ಅವಕಾಶವಿದೆಯೆಂದು ಹೇಳುತ್ತಾರೆ. ಈ ಆರಿಸುವಿಕೆಯು ಸಕ್ರಮವಾಗಿದ್ದರೆ ಪ್ರತ್ಯೇಕ ಪ್ರಾತಿನಿಧ್ಯ ಪ್ರಾರ್ಥನೆಯೇ ಬೇಕಿರಲಿಲ್ಲ. ಈಗ ಕೆಲ ಮ್ಯುನಿಸಿಪಾಲಿಟಿ ಮೊದಲಾದ ಕಡೆಗಳಲ್ಲಿ ನಡೆಯತಕ್ಕ ಪ್ರಜಾಪ್ರಾತಿನಿಧ್ಯವು ತಕ್ಕಮಟ್ಟಿಗೆ ಪ್ರಜಾಸ್ವಾತಂತ್ರ್ಯದಿಂದ ನಡೆಯುತ್ತಿದ್ದರೂ, ದೇಶದ ಎಲ್ಲಾ ಭಾಗದಲ್ಲೂ ತಾ|| ಬೋರ್ಡು, ಡಿ|| ಬೋರ್ಡು, ಪ್ರಜಾಪ್ರತಿನಿಧಿಸಭೆ, ನಿಯಮನಿರ್ಮಾಣಸಭೆ—ಇವುಗಳಿಗೆ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ದಾಕ್ಷಿಣ್ಯ ಮೊದಲಾದುವುಗಳ ಎಡರಿಲ್ಲದೆ ಸ್ವತಂತ್ರವಾಗಿ ತಮಗೆ ಬೇಕಾದವರಿಗೆ "ಓಟು" ಕೊಟ್ಟು ಆರಿಸುವ ಕ್ರಮಗಳಿರುವುದಿಲ್ಲ. ಸ್ಥಳಾಧಿಕಾರಿಗಳಲ್ಲಿ ಕೆಲವರು ಇಂಥವರಿಗೇ ಓಟುಕೊಡಬೇಕೆಂದು ಪ್ರಜೆಗಳಿಗೆ ಹೇಳುತ್ತ ಇದಿರಿಗೇ ಕುಳಿತಿರುವಾಗ, ಅದಕ್ಕೆ ವಿರೋಧಿಸಿ ತಮಗೆ ಬೇಕಾದವರಿಗೆ ಓಟನ್ನು ಕೊಡುವಷ್ಟರ ಧಾರ್ಷ್ಟ್ಯವು ಗ್ರಾಮಾಂತರದ ಪ್ರಜೆಗಳಿಗೆಲ್ಲಿರುವುದು ? ಇಂಥ ನೂರೆಂಟು ವಕ್ರಗಳು ಕಾರ್ಯಾಚರಣೆಯಲ್ಲಿರುವಾಗ ಸರ್ವಪ್ರಜೆಗಳಿಗೂ ಪ್ರಾತಿನಿಧ್ಯದ "ಹಕ್ಕು" ಈಗ ಇದ್ದೇ ಇದೆಯೆಂದು ಹೇಳುವ ಮಾತು ವಚನಸರಣಿಯಲ್ಲಿ ಮಾತ್ರ ರಮ್ಯವಾಗಿದೆಯೇ ಹೊರತು ಪ್ರತ್ಯೇಕ ಪ್ರಾತಿನಿಧ್ಯ ತತ್ವದ ಅವಶ್ಯಕತೆಯನ್ನು ಮಾತ್ರ ತಪ್ಪಿಸಲಾರದು.

ಇದುಹೊರತು "ಪ್ರಜೆಗಳಲ್ಲಿ ಅನೇಕ ಜನವರ್ಗಗಳಿರುತ್ತವೆ. ಅವರಿಗೆಲ್ಲಾ ಬೇರೆಬೇರೆ ಪ್ರಾತಿನಿಧ್ಯವನ್ನು ಕೊಡುವುದು ಸಾಧ್ಯವಲ್ಲ. ಮತ್ತು ಅವರುಗಳಲ್ಲೆಲ್ಲಾ ಕಾರ್ಯನಿರ್ವಾಹಶಕ್ತಿಯುಳ್ಳ ಜನರೂ ಇಲ್ಲ" ಎಂಬ ಮತ್ತೊಂದು ಕಾರಣವನ್ನು ಮ|| ಬಾನರ್ಜಿಯವರೂ ಅವರ ಪಕ್ಷವನ್ನು ಸಾಧಿಸುವ ವಕೀಲರುಗಳೂ ಹೇಳುತ್ತಾರೆ. ಇದುಕೂಡ ಸಾಕಾದ ಕಾರಣವಾಗಿಲ್ಲ. ಹಿಂದುಳಿದ ಜನವರ್ಗಗಳನ್ನು ಮುಂದಕ್ಕೆ ತರುವುದಕ್ಕಾಗಿ ನಮ್ಮ ಪ್ರಭುತ್ವದವರು ನಾಮಿನೇಟೆಡ್ ಪ್ರೊಬೇಷನರಿ ಏರ್ಪಾಟನ್ನೂ, ಅವರುಗಳ ಅಧಿಕಾರಪ್ರಾಪ್ತಿಗೆ ಇತರ ಸೌಕರ್ಯಗಳನ್ನೂ, ವಿದ್ಯಾಪ್ರೋತ್ಸಾಹಕ್ಕೆ ಪ್ರತ್ಯೇಕಸಹಾಯವನ್ನೂ ಮಾಡಿರುತ್ತಾರೆ. ಹೀಗೆ ಅವರುಗಳಿಗೆಲ್ಲಾ ಪ್ರತ್ಯೇಕವಾದ ಏರ್ಪಾಟುಗಳನ್ನು ಮಾಡುವಾಗ್ಗೆ ನೂರಾರು ಜನವರ್ಗಗಳಿಗೆಲ್ಲಾ ಈ ಪ್ರತ್ಯೇಕ ಸೌಲಭ್ಯಗಳನ್ನು ಕಲ್ಪಿಸುವುದು ಹೇಗೆಂದು ತಡೆಯನ್ನೊಡ್ಡಿ ತಪ್ಪಿಸಿಕೊಂಡಿರುವುದಿಲ್ಲ. ಅಧಿಕಾರಗಳ ಪ್ರಾಪ್ತಿಗೆ ನಾಮಿನೇಷನ್ ಮಾಡುವಾಗ್ಗೆ ಆ ಹಿಂದುಳಿದ ಜನವರ್ಗಗಳಲ್ಲಿ ಅರ್ಹರಾಗಿ ಬಂದವರಿಗೆ ಕ್ಲುಪ್ತವಾದಷ್ಟು ಸ್ಥಲಗಳನ್ನು ಕೊಡುತ್ತಾರೆಯೇ ಹೊರತು ಎಲ್ಲಿ ಜನವರ್ಗಗಳಿಗೂ ಕೊಡುತ್ತಲಿರುವುದಿಲ್ಲ. ಇಂಥ ಮರ್ಯಾದೆಯನ್ನು ಈ ಪ್ರತ್ಯೇಕ ಪ್ರಾತಿನಿಧ್ಯತತ್ವಕ್ಕೂ ಏಕೆ ಅಂಗೀಕರಿಸಬಾರದು ? ಪ್ರತಿಯೊಂದು ಜನವರ್ಗದವರಿಗೂ ಕೊಡುವುದು ಸಾಧ್ಯವಲ್ಲದಿದ್ದರೆ ಇಷ್ಟು ವರ್ಗಗಳಿಗೆ ಇಷ್ಟು ಪ್ರಾತಿನಿಧ್ಯಸ್ಥಲವೆಂಬ ಕ್ಲುಪ್ತಿಯನ್ನೇರ್ಪಡಿಸಿ ಹಾಗಾದರೂ ಕೊಡಬಹುದಷ್ಟೆ? ಸಾಮರ್ಥ್ಯವುಳ್ಳವರು ಎಲ್ಲ ವರ್ಗಗಳಲ್ಲೂ ಇಲ್ಲದೆ ಹೋದರೆ, ಅವರಿಗಾಗಿ ಅವಕಾಶವನ್ನು ಕಲ್ಪಿಸಿಟ್ಟು, ಅವರಲ್ಲಿ ಸಮರ್ಥರಾದವರು ಬಂದು ಕೇಳುವವರೆಗೆ ಇತರರಿಗೆ ಆ ಸ್ಥಾನಗಳನ್ನು ವಹಿಸಲು ಅವಕಾಶಕೊಡಬಹುದಷ್ಟೆ. ಶಕ್ತರು ಇಲ್ಲದಿರುವ ಕೆಲವು ಪಂಗಡಗಳನ್ನು ತೋರಿಸಿ ಶಕ್ತರಿರುವ ಪಂಗಡಗಳ ಪ್ರಾತಿನಿಧ್ಯಕ್ಕೂ ತಡೆಯೊಡ್ಡುವುದು ವಂಚನೆಯಲ್ಲವೆ? ನಮ್ಮ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸುವಾಗ ಮೈಸೂರು ದೇಶದ ಪ್ರಜೆಗಳೆಲ್ಲರೂ ಅದರ ಪ್ರತಿನಿಧಿಗಳಾಗಿ ಬಂದು ಕಾರ್ಯನಿರ್ವಾಹವನ್ನು ಮಾಡುವ ಯೋಗ್ಯತೆಯನ್ನು ಸಂಪಾದಿಸಿಕೊಂಡಿದ್ದರೆ? ಆದರೂ ಅದನ್ನು ಏರ್ಪಡಿಸಿದುದರಿಂದಲೇ ಅಲ್ಲವೆ ೩೬ ವರ್ಷಗಳ "ತಯಾರಿ"ಯಿಂದ ಕಾರ್ಯನಿರ್ವಾಹ ಸಾಮರ್ಥ್ಯವು ಅದರ ಸಭಿಕರಲ್ಲಿ ವ್ಯಕ್ತವಾಗುತ್ತಬಂದಿರುವುದು ? ಗುರಿಯನ್ನು ಭೇದಿಸುವ ಸಾಮರ್ಥ್ಯವನ್ನು ಪಡೆದಮೇಲೆಯೇ ಪ್ರಜೆಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವೆವೆಂದು ನಿಯಮಮಾಡಿದರೆ ತಕ್ಕಷ್ಟು ಸೈನಿಕರು ಪ್ರಭುತ್ವದವರ ಸಹಾಯಕ್ಕೂ ದೇಶರಕ್ಷಣೆಗೂ ದೊರೆಯುವರೆ? ಒಂದು ಗುರಿಯನ್ನು ಕಲ್ಪಿಸಿಟ್ಟು ಸೈನ್ಯಕ್ಕೆ ಇಂಥಿಂಥ ದೇಶಭಾಗಗಳಿಂದ ಇಷ್ಟಿಷ್ಟು ಜನರು ಬಂದು ಸೇರಬೇಕೆಂದು ವಿಧಿಸಿದರೆ, ಹಾಗೆ ಅವಕಾಶವನ್ನು ಪಡೆದವರು ಉತ್ಸಾಹದಿಂದ ಬಂದು ಸೇರಿ ಲಕ್ಷ್ಯಭೇದನದಲ್ಲಿ ಸಾಮರ್ಥ್ಯವನ್ನು ಪಡೆದೇ ಪಡೆಯುವರು. ಅದುಕಾರಣ ಕೆಲ ಜನರ ಅಸಾಮರ್ಥ್ಯವನ್ನು ಮುಂದುಮಾಡಿ ಇದಕ್ಕೆ ತಡೆಯೊಡ್ಡುವುದೂ ಕೂಡ ನ್ಯಾಯವಾದ ಕಾರಣವಾಗಿರುವುದಿಲ್ಲ.

ಇದಲ್ಲದೆ ಭರತಖಂಡದಲ್ಲಿ ಮುಂದೆ ರಾಜಕೀಯ ಸುಧಾರಣೆಗಳು ಕ್ಷಿಪ್ರದಲ್ಲೇ ಆಗುವುದರಲ್ಲಿವೆ. ಅದರೊಳಗೆ ಈ ಸ್ಥಳಿಕ ಸರ್ಕಾರಗಳ ಕಾರ್ಯನಿರ್ವಾಹಸಂಬಂಧದ ಸುಧಾರಣೆಯೇ ಪ್ರಮುಖವಾಗಿ ಬರುವಂತಿರುತ್ತದೆ. ಈ ಕಾರಣದಿಂದಲೇ ಮ್ಯು|| ಲೋ|| ಬೋರ್ಡುಗಳ ಸಂಬಂಧವಾದ ಬಿಲ್ಲುಗಳನ್ನು ಈಗೊಂದುಸಲ ವಿಧಿಯನ್ನಾಗಿಮಾಡಿಟ್ಟು, ಇನ್ನು ಸ್ವಲ್ಪಕಾಲದೊಳಗೆ ಮತ್ತೊಂದುಸಲ ಬದಲಾವಣೆ ಮಾಡಬೇಕಾಗುವಂತಾಗಬಾರದೆಂದು ಸಾಮ್ರಾಜ್ಯ ನಿಯಮನಿರ್ಮಾಣ ಸಭೆಯವರೂ ಅದನ್ನನುಸರಿಸಿ ಮಧ್ಯಪ್ರಾಂತ ಮೊದಲಾದವುಗಳ ನಿಯಮನಿರ್ಮಾಣಸಭೆಯವರೂ ಸಹ ಹಾಗೆಯೇ ತಡೆದಿಟ್ಟಿರುವಲ್ಲಿ, ಇಂಥ ವಿಧಿಕಲ್ಪನೆಯಲ್ಲೆಲ್ಲಾ ಆಂಗ್ಲಸರ್ಕಾರದ ನೆಲಲನ್ನೇ ಅನುಸರಿಸುತ್ತಿರುವ ನಮ್ಮ ಸರ್ಕಾರದವರೂ ನಿಯಮನಿರ್ಮಾಣ ಸಭೆಯವರೂ ಸಹ, ಕೆಲವು ಸಭಿಕರು ಇನ್ನೂ ಕೆಲಕಾಲ ಇದನ್ನು ವಿಧಿಯಾಗಿ ಮಾಡದೆ ತಡೆದಿಟ್ಟಿರಬೇಕೆಂದು ಬಿನ್ನಯಿಸಿಕೊಂಡರೂ ಕೇಳದೆ, ಹಠವನ್ನು ತೊಟ್ಟವರಂತೆ ಕೈಮಿಂಚಿಸಿಯೇ ಬಿಡುವುದಕ್ಕೆ ಪ್ರಯತ್ನಿಸಿರುವುದು ಸರ್ವಥಾ ಒಪ್ಪತಕ್ಕುದಾಗಿರುವುದಿಲ್ಲ. ಈ ವಿಷಯಗಳನ್ನೆಲ್ಲಾ ಸರ್ವ ಪ್ರಜಾಸಮುದ್ಧಾರ ಭಾರವನ್ನು ವಹಿಸಿರುವ ಶ್ರೀಮನ್ಮಹಾರಾಜರವರು ಪರ್ಯಾಲೋಚಿಸಿ, ಇತರ ಅನೇಕ ವಿಷಯಗಳಲ್ಲಿ ಹಿಂದುಳಿದವರಿಗೆ ಸೌಕರ್ಯಗಳನ್ನು ಕಲ್ಪಿಸಿ ಅವರ ಮುಂಬರಿಯುವಿಕೆಗೆ ಸಹಾಯಮಾಡಿರುವಂತೆಯೇ ಮುಖ್ಯವಾದ ಈ ವಿಷಯದಲ್ಲಾದರೂ ಯುಕ್ತವಾದ ಅವಕಾಶವನ್ನು ಕಲ್ಪಿಸಿಕೊಟ್ಟು ಅನನ್ಯಗತಿಕರಾದ ಆ ಪ್ರಜೆಗಳನ್ನು ಉದ್ಧರಿಸುವವರಾಗಲೆಂದು ಶ್ರುತಪಡಿಸುವೆವು.

ನಿಯಮನಿರ್ಮಾಣ ಸಭೆ.

ಕಳೆದ ವಾರದಲ್ಲಿ ದಿಲ್ಲಿಯೊಳಗೆ ವೈಸ್ರಾಯರ ಅಧ್ಯಕ್ಷತೆಯಲ್ಲಿ ನೆರೆದಿದ್ದ ಸಾಮ್ರಾಜ್ಯ ನಿಯಮನಿರ್ಮಾಣ ಸಭೆಯೊಳಗೆ ನಡೆದ ಚರ್ಚೆಗಳೊಳಗೆ ಆದಾಯದ ಮೇಲಣ ತೆರಿಗೆಯನ್ನು ಹೆಚ್ಚಿಸುವ ವಿಷಯಕವಾದ ವಿಧಿಗೆ ಸಂಬಂಧಪಟ್ಟ ಚರ್ಚೆಯು ದೀರ್ಘಕಾಲದವರೆಗೆ ನಡೆದುದಾಗಿದ್ದಿತು. ಭೂಮಿಯ ಮೇಲೆ ಉತ್ಪನ್ನವಾಗುವ ಆದಾಯದಮೇಲೂ ಕಂದಾಯವನ್ನು ವಿಧಿಸಬೇಕೆಂದು ಸರ್ಕಾರದ ಪಕ್ಷದಿಂದ ಹೇಳಲ್ಪಟ್ಟಿತು. ಇದರ ಮೇಲೆ ಅನೇಕ ಸಭಿಕರು ಹಲವು ತೆರನಾಗಿ ವಾದಿಸಿದರು. ಆ|| ರಾಯ ಸೀತಾನಾಥರಾಯರವರು ಭೂಸ್ವತ್ವ ಸಾಯುಗಾರರ ಮೇಲೆ ಈ ಕಂದಾಯವು ಬೀಳದಂತೆ ಶಾಸನವನ್ನು ಏರ್ಪಡಿಸಬೇಕು. ಅವರು ಭೂಮಿಯ ಕಂದಾಯವನ್ನು ಮೊದಲೇ ಕೊಡುತ್ತಿದ್ದಾರೆ. ಮತ್ತೊಂದು ಕಂದಾಯವು ಭೂಮ್ಯುತ್ಪನ್ನದ ಮೇಲೆ ಬೀಳಲಾಗದು. ವ್ಯಾಪಾರ ಪರಿಶ್ರಮಾದಿಗಳ ಉತ್ಪನ್ನದ ಮೇಲೆ ಬೇಕಿದ್ದರೆ ಹೆಚ್ಚಿಸಬಹುದು ಎಂದು ವಾದಿಸಿದರು. ಆದರೆ ಈ ಸಂದರ್ಭದಲ್ಲಿ ಈ ಬಿಲ್ಲನ್ನು ಸರ್ಕಾರದ ಪಕ್ಷದಿಂದ ಸಭೆಯ ಮುಂದಕ್ಕೆ ತಂದ ಇಂಡ್ಯಾ ಸರ್ಕಾರದ ಕೋಶಾಧ್ಯಕ್ಷರಾದ ಮಿ|| ವಿಲಿಯಂ ಮೇಯರ್ ರವರು ಹೇಳಿದುದೇನೆಂದರೆ—"ಈ ತೀರ್ಮಾನದ ವಿಷಯದಲ್ಲಿ ತಮ್ಮ ತಮ್ಮ ಸ್ವತಂತ್ರಾಭಿಪ್ರಾಯಗಳನ್ನು ಕೊಡುವುದರಲ್ಲಾಗಲೀ ಭಾಷಣಮಾಡುವುದರಲ್ಲಾಗಲೀ ಸರ್ಕಾರದ ಅಧಿಕಾರದಲ್ಲಿರುವ ಸಭಿಕರುಗಳು ತಮ್ಮ ಇಷ್ಟಬಂದಂತೆ ಮಾಡಬಹುದು. ಸರ್ಕಾರದ ಪಕ್ಷವಾಗಿಯೇ ಮತವನ್ನು ಕೊಡಬೇಕೆಂಬ ನಿರ್ಬಂಧವೇನೂ ಇಲ್ಲ" ಎಂದು ಅಪ್ಪಣೆಕೊಡಿದರು. ಅದರ ಮೇಲೆ ದಾಕ್ಷಿಣ್ಯಾದಿಗಳಿಗೊಂದಕ್ಕೂ ಒಳಗಾಗದೆ [illegible] ಅಧಿಕಾರಿ ಸಭಿಕರಲ್ಲಿ ಹಲವರು ರಾಯ ಸೀತಾನಾಥರಾಯರವರ ಸೂಚನೆಗೇ ಅನುಮೋದನೆ ಕೊಟ್ಟುದರಿಂದ ಅಪಕ್ಷಕ್ಕೆ ೩೦ ಮತಗಳೂ, ವಿರುದ್ಧಪಕ್ಷಕ್ಕೆ ೨೩ ಮತಗಳೂ ದೊರೆದುದರಿಂದ ರಾಯರವರ ಸೂಚನೆಯು ಅಂಗೀಕೃತವಾಗಿಹೋಯಿತು. ಹೀಗೆ ಸತ್ಯ, ನಿರ್ದಾಕ್ಷಿಣ್ಯ, ನಿಷ್ಪಕ್ಷಪಾತಕಗಳಿಗೆ ಎಲ್ಲಿ ಜಯವಿರುವುದೋ ಅದಕ್ಕೆ ನಿಯಮನಿರ್ಮಾಣ ಸಭೆಯೆಂಬ ಪವಿತ್ರವಾದ ನಾಮವಿರುವುದು ಉಚಿತವೇ ಆಗಿರುತ್ತದೆ. ಆದರೆ ನಮ್ಮ ಸಂಸ್ಥಾನದ ನಿಯಮನಿರ್ಮಾಣ ಸಭೆಯಲ್ಲಿ ಕೆಲವುವೇಳೆ ಸರ್ಕಾರದ ಪಕ್ಷದ ಸಭಿಕರು ಸ್ವತಂತ್ರಾಭಿಪ್ರಾಯ ಕೊಡುವುದಕ್ಕೆ ಸಿದ್ಧರಾಗಿದ್ದರೂ ಪ್ರಭುತ್ವದವರು ಅಧಿಕಾರದರ್ಪದ ಚಾಟಿಯನ್ನು ತೋರಿಸಿ ಎಚ್ಚರಪಡಿಸುತ್ತಿರುವುದೂ ಕೂಡ ಉಂಟೆಂಬುದನ್ನು ಕೇಳುವಾಗ ನಿಯಮನಿರ್ಮಾಣ ಸಭೆಯೆಂಬ ನಾಮದ ಅನ್ವರ್ಥತೆಯು ಇದಕ್ಕೆ ಎಷ್ಟುಮಟ್ಟಿಗೆ ಇದೆಯೆಂಬುದನ್ನು ಯೋಚಿಸಬೇಕಾಗುವುದಲ್ಲವೆ ?

ಶ್ರೀ ರಾಮಕೃಷ್ಣ ಪರಮಹಂಸರವರ ಜನ್ಮದಿನೋತ್ಸವ.

ಕಳೆದ ತಾ|| ೧೭ ನೆ ಭಾನುವಾರ ರಾಜಧಾನಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರವರ ಜನ್ಮದಿನೋತ್ಸವವು ಸಹಸ್ರಾರು ಜನಗಳಿಂದ ಅತಿ ವೈಭವದೊಡನೆ ಆಚರಿಸಲ್ಪಟ್ಟಿತು. ರಾಜಧಾನಿಯಲ್ಲಿ ಎಷ್ಟೋ ಕಾಲದಿಂದಲೂ ಪರಮಹಂಸ ಮಂಡಲಿಗೆ ಪಾರಮಾರ್ಥಿಕ ಬುದ್ಧಿಯಿಂದ ಆಶ್ರಯದಾತರಾಗಿರುವ ಮ|| ಧರ್ಮಪ್ರಕಾಶ ಡಿ. ಬನುಮಯ್ಯನವರೇ ಮೊದಲಾದ ವರ್ತಕರು ಆ ದಿನ ಸಾವಿರಾರು ಮಂದಿ ಬಡಬಗ್ಗರಿಗೆ ತಮ್ಮ ಸತ್ರದಲ್ಲಿ ಅನ್ನದಾನ ಮಾಡಿಸಿದರು. ಸಂಜೆಗೆ ಆನೇ ಸತ್ರದಿಂದ ವಾದ್ಯವೈಭವದೊಡನೆ ಮಹಾ ಜನಸ್ತೋಮವು ಸ್ವಾಮಿ ಪರಮಹಂಸರ ಮತ್ತು ವಿವೇಕಾನಂದರವರ ಭಾವಪಟಗಳನ್ನು ಉತ್ಸವಮಾಡಿಕೊಂಡು ಟೌನ್‌ಹಾಲಿಗೆ ದಯಮಾಡಿಸಿದರು. ಅಲ್ಲಿ ಮ|| ರಾಮಕೃಷ್ಣರಾಯರ ಅಧ್ಯಕ್ಷತೆಯಿಂದ ನೆರೆದಿದ್ದ ಸಭೆಯಲ್ಲಿ ಮೊಟ್ಟಮೊದಲು ಪಂಚಮರ ಬಾಲೆಯರು ದೇವತಾಸ್ತುತಿಯನ್ನು ಮಾಡಿದ ಬಳಿಕ ಮ|| ಗಳಾದ ಪ್ರೊ|| ರಾಧಾಕುಮುದಮುಕರ್ಜಿಯವರು, ಎಂ. ವೆಂಕಟಕೃಷ್ಣಯ್ಯನವರು, ಪುರುಷೋತ್ತಮಾನಂದಗಿರಿ ಬಾವಾಜಿಯವರು, ಬಿ. ಸುಬ್ಬಣ್ಣನವರು, ಗಣಪತಿನಾಯಕರು, ಎಂ.ಎಸ್. ಕೃಷ್ಣನಾಯಕರು, ಸಭಾಧ್ಯಕ್ಷರು-ಇವರೆಲ್ಲರ ಭಾಷಣಗಳು ಶ್ರೀ ಪರಮಹಂಸರ ಮಹತ್ತ್ವ, ಗುಣಾವಳಿ, ಸಚ್ಚರಿತ್ರೆ ಮೊದಲಾದುವುಗಳ ವಿವರಣ ಪರವಾಗಿ ಶ್ಲಾಘನೀಯವಾಗಿ ನಡೆದುವು. ಆ ಸಮಯದಲ್ಲಿ ಒಬ್ಬಿಬ್ಬರು ಈಗ ಜಾತಿ ಮತದ್ವೇಷಗಳನ್ನು ಹೆಚ್ಚಿಸುವ ಪ್ರಯತ್ನವು ನಡೆಯುತ್ತಿರುವುದೆಂದು ಆಡಿ ತೋರಿಸಿದರು. ದೀಪದ ಬುಡದಲ್ಲಿಯೇ ಕತ್ತಲೆ ಇರುವುದನ್ನು ಜಗತ್ತು ಅರಿಯದೆ? ಜಗನ್ಮಾನ್ಯರಾದ ಶ್ರೀ ಪರಮಹಂಸರ ಜನ್ಮೋತ್ಸವವನ್ನು ಹೀಗೆ ಉತ್ಸವವಾಗಾಡಂಬರಗಳಲ್ಲಿ ಮಾಡಿ ಮುಗಿಸಿ ಕೃತಾರ್ಥರಾಗುವುದಕ್ಕಿಂತಲೂ ಆ ಪರಮಹಂಸರ ಶುದ್ಧ ವರ್ತನವನ್ನು ಆದರ್ಶವಾಗಿಟ್ಟುಕೊಂಡು ಅತ್ಯಲ್ಪವಾಗಿಯಾದರೂ ನಡೆಯುವುದಕ್ಕೆ ಪ್ರವರ್ತಿಸಿದರೇನೆಯೇ ಅವರ ಜನ್ಮಸ್ಮರಣೆಯನ್ನು ನಿಜವಾಗಿ ಮಾಡಿದಂತೆಯೂ, ದೇಶೋಪಕಾರ ಮಾಡಿದಂತೆಯೂ ಆದೀತೇ ಹೊರತು, ಇವುಗಳ ವ್ಯಾಜದಿಂದ ಪರದೂಷಣವನ್ನೂ ಆತ್ಮಭೂಷಣವನ್ನೂ ಮಾಡಿಕೊಂಡರೆ ಎಂದಿಗೂ ಆಗಲಾರದು.

ವೀರಶೈವ ಮಹಾಸಭೆಯ ಫಂಡು.

ದಾವಣಗೆರೆಯಲ್ಲಿ ಕಳೆದ ಡಿಸಂಬರ್ ತಿಂಗಳಲ್ಲಿ ನೆರೆದಿದ್ದ ಮಹಾಸಭೆಯೊಳಗೆ ಪ್ರತಿವರ್ಷದಲ್ಲೂ ಮಹಾಸಭೆಯನ್ನು ಒಂದೊಂದು ಕಡೆ ನೆರವೇರಿಸಲು ಧನಸಹಾಯವಾಗುವುದಕ್ಕೆ ಅನುಕೂಲಿಸುವಂತೆ ಒಂದು ಫಂಡು ಏರ್ಪಡಿಸಲ್ಪಟ್ಟಿತಷ್ಟೆ. ಇದಕ್ಕಾಗಿ ವಾಗ್ದಾನವಾದ ಚಂದಾಹಣ ೬೨ ಸಾವಿರ ಚಿಲ್ಲರೆ ರೂ. ಗಳಲ್ಲಿ ಸಭಾಂಗಣದಲ್ಲೇ ೩೧ ಸಾವಿರ ರೂ. ಗಳು ಕೂಡಿಹೋದುವು. ಉಳಿದ ಹಣದಲ್ಲಿ ಎಷ್ಟು ಭಾಗವು ವಾಗ್ದಾನಮಾಡಿದ ಮಹಾಜನರಿಂದ ಈಚೆಗೆ ಬಂದಿದೆಯೋ ಗೊತ್ತಾಗಲಿಲ್ಲ. ಫಂಡಿನ ಸ್ಥಾಪನೆಯಾಗಿ ೩ ತಿಂಗಳು ತುಂಬಿದುವು. ವಾಗ್ದಾನಮಾಡಿದವರಲ್ಲಿ ಕೆಲರು ಕೊಟ್ಟು ಕೆಲರು ಕೊಡದೆ ನಿಲ್ಲಿಸಿ ಕೊಳ್ಳುವುದು ಸರಿಯಲ್ಲ. ವಾಗ್ದಾನವಾದ ಹಣವೆಲ್ಲಾ ಎಷ್ಟು ಬೇಗ ಕೂಡಿದರೆ ಆಗಣಿಂದಲೂ ಅದರ ಬಡ್ಡಿಯು ವೃದ್ಧಿಯಾಗಲು ಅವಕಾಶವಾಗುತ್ತದೆ. ಈ ಫಂಡಿಗೆ ವಾಗ್ದಾನಮಾಡಿರುವ ಮಹಾಜನರಲ್ಲಿ ಯಾರೂ ವ್ಯಾಜವನ್ನು ಹೇಳಿ ಕಾಲಹರಣಮಾಡುವವರಿರಲಾರರೆಂದು ನಂಬುತ್ತೇವೆ. ಅದುಕಾರಣ, ಈ ಫಂಡಿನ ಕಾರ್ಯಕಾರಿಸಂಘದ ಅಧ್ಯಕ್ಷರಾಗಲೀ ಕಾರ್ಯದರ್ಶಿಗಳಾಗಲೀ ಒಂದೊಂದು ಪತ್ರವನ್ನು ಆಯಾ ಜನರಿಗೆ ಬರೆದು ಜ್ಞಪ್ತಿಗೆ ತರುವುದಾದರೆ, ಉಳಿದ ಹಣವೂ ಬೇಗನೆ ಕೂಡಿಹೋಗುತ್ತದೆಂಬುದಕ್ಕೆ ಸಂಶಯವಿಲ್ಲ. ಅದುಕಾರಣ ಹಿಡಿದ ಕೈಯಲ್ಲೇ ತಡಮಾಡದೆ ಕಾರ್ಯವನ್ನು ಕೊನೆಮುಟ್ಟಿಸುವುದಕ್ಕೆ ತಕ್ಕ ಯತ್ನವನ್ನು ಕಾರ್ಯಕಾರಿ ಸಂಘದವರು ಅವಶ್ಯಕವಾಗಿ ಮಾಡುವವರಾಗಬೇಕೆಂದು ಶ್ರುತಪಡಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ನಂಜನಗೂಡಿನಲ್ಲಿ ಶ್ರೀಕಂಠೇಶ್ವರನ ರಥೋತ್ಸವವು ನಾಳೆ ಸೋಮವಾರದದಿವಸ ನಡೆಯುವುದು.

ಬೆಂಗಳೂರಿಗೆ ವರ್ಗವಾಗಿದ್ದ ಸಬ್ ಅ|| ಸರ್ಜನ್ ಶಿವರಾಮಯ್ಯನವರು ಪ್ಲೇಗಿನಿಂದ ವಿಧಿವಶರಾದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ.

ಕಾಶಿಗೆ ಪ್ರಯಾಣವಾಗಿ ಹೋಗುತ್ತಿದ್ದ ಮ|| ಎನ್. ಸುಬ್ಬರಾಯರು ಮಾರ್ಗಮಧ್ಯದಲ್ಲಿ ಬೊಂಬಾಯಿಯೊಳಗೆ ಸ್ವರ್ಗಸ್ಥರಾದರೆಂದು ಕೇಳುತ್ತೇವೆ.

ನಮ್ಮ ದಿವಾನರ ಸಂಬಳವನ್ನು ೪ ಸಾವಿರದಿಂದ ೫ ಸಾವಿರಕ್ಕೆ ಶ್ರೀಮನ್ಮಹಾರಾಜರವರು ಹೆಚ್ಚಿಸಿಕೊಟ್ಟಿರುವರೆಂದು ಕೇಳಿ ಸಂತೋಷಿಸುತ್ತೇವೆ.

ದಾವಣಗೆರೆಯಲ್ಲಿ ಹೈಸ್ಕೂಲನ್ನು ಸ್ಥಾಪಿಸುವುದಕ್ಕೆ ಸರ್ಕಾರದವರ ಅಪ್ಪಣೆಯು ಕಳೆದ ವಾರದಲ್ಲಿ ಕೊಡಲ್ಪಟ್ಟಿತೆಂದು ಕೇಳಿ ಸಂತೋಷಿಸುತ್ತೇವೆ.

ನಮ್ಮ ಶ್ರೀಮನ್ಮಹಾರಾಜರವರು ಮಾತೃಶ್ರೀಯವರೇ ಮೊದಲಾದ ರಾಣಿವಾಸದವರ ಸಮೇತ ಕಳೆದ ಮಂಗಳವಾರ ಮದರಾಸಿನಿಂದ ಬೆಂಗಳೂರಿಗೆ ಬಂದು ಸೇರಿದರು.

ಶಿವಮೊಗ್ಗೆಗೆ ೩ ಮೈಲಿಗಳ ದೂರದಲ್ಲಿರುವ ಹೊಳೆಬೆನವಳ್ಳಿ, ಲಂಬಾಣಿ ತಾಂಡಕ್ಕೆ ಬೆಂಕಿಬಿದ್ದು ಎಲ್ಲ ವಸತಿಗಳೂ ಸುಟ್ಟುಹೋದುವಲ್ಲದೆ ೨ ಮುದುಕರೂ ೨ ಹುಡುಗರೂ ಸಹ ಮೃತರಾದರು.

ಮ|| ಸಿ. ರಾಮಲಿಂಗರೆಡ್ಡಿ, ಎಂ. ಎ., ಯವರು ವಿದ್ಯಾಭ್ಯಾಸ ಶಾಖೆಯ ಇನ್‌ಸ್ಪೆಕ್ಟರ್ ಜನರಲ್ ಪದವಿಯಲ್ಲಿ ೧೫೦೦ ರೂ. ಸಂಬಳದಮೇಲೆ ಸ್ಥಿರಗೊಳಿಸಲ್ಪಡುವುದರಲ್ಲಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ.

೨ ನೆ ಕೌನ್ಸಿಲರ್ ಮ|| ಎ. ಆರ್. ಬಾನರ್ಜಿಯವರ ಅಧಿಕಾರದ ಅವಧಿಯು ಈ ವಾರದಲ್ಲಿ ಮುಗಿಯುವುದು. ಅವರು ಮತ್ತಿನ್ನೆರಡು ವರ್ಷಗಳ ಕಾಲದವರೆಗೆ ಸಂಸ್ಥಾನದ ಉದ್ಯೋಗದಲ್ಲಿರುವಂತೆ ಏರ್ಪಡಿಸಲ್ಪಟ್ಟಿದೆ.

ಧಾರವಾಡದಲ್ಲಿ ನೆರೆಯುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರಾಕ್ತನ ವಿಮರ್ಶನ ವಿಚಕ್ಷಣ ಆರ್. ನರಸಿಂಹಾಚಾರ್ ಎಂ.ಎ.,ಯವರು ವಹಿಸುವವರಾಗಿದ್ದಾರೆಂದು ಕೇಳುತ್ತೇವೆ. ಉಚಿತವಾದ ಯೋಜನೆಯೇ ಸರಿ.

ತಿರುಮಕೂಡಲು ನರಸೀಪುರದ ತಾ|| ಅಮಲ್ದಾರರಾಗಿ ವರ್ಗಾಯಿಸಲ್ಪಟ್ಟಿದ್ದ ಮ|| ಸೂರಪ್ಪನವರು ಅಲ್ಲಿಂದ ಶ್ರೀರಂಗಪಟ್ಟಣಕ್ಕೂ, ಅಲ್ಲಿಯ ಅಮಲ್ದಾರರಾಗಿದ್ದ ಮ|| ಎನ್. ಎಸ್. ಹನುಮಂತರಾಯರು ತಿ|| ನರಸೀಪುರಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ

ರಾಜಧಾನಿಯ ಮ್ಯುನ್ಸಿಪಾಲಿಟಿಯ ವೈಸ್‌ಪ್ರೆಸಿಡೆಂಟರನ್ನಾಗಿ ತಮ್ಮಲ್ಲೊಬ್ಬರನ್ನು ಆರಿಸಿಕೊಳ್ಳುವುದಕ್ಕೆ ಸ್ವಾತಂತ್ರ್ಯವನ್ನು ಸರ್ಕಾರದವರು ಈಗತಾನೇ ಅನುಮತಿಸಿಕೊಟ್ಟಿರುತ್ತಾರೆ. ಹೀಗೆಯೇ ಉಳಿದ ಸಿಟಿ ಟೌನ್ ಮ್ಯುನ್ಸಿಪಾಲಿಟಿಗಳಿಗೆಲ್ಲಾ ಮಾಡುವುದು ಒಳ್ಳೆಯದು.

ರಾಜಧಾನಿಯ ಮ್ಯುನ್ಸಿಪಲ್ ಆಫೀಸಿನ ಆಕ್ಟಿಂಗ್ ಮ್ಯಾನೇಜರಾಗಿರುವ ಮ|| ಕೆ.ಎನ್. ವೆಂಕಟಕೃಷ್ಣಯ್ಯನವರು ಮಿ|| ಎಲ್.ಎಸ್. ರಿಗೋರವರು ಬೇರೆ ಕೆಲಸದಲ್ಲಿರುವವರೆಗೂ ಮೈಸೂರು ತಾ|| ಡಿ|| ಅಮಲ್ದಾರಿಯನ್ನು ಆಕ್ಟಿಂಗಾಗಿ ನೋಡುವಂತೆ ನಿಯಮಿಸಲ್ಪಟ್ಟಿದ್ದಾರೆ.

ದೇವನಹಳ್ಳಿ ತಾ|| ಹುಣಸೂಮಾರನಹಳ್ಳಿಯ ಶ್ರೀ ಚಂದ್ರಮೌಳೀಶ್ವರ ಸ್ವಾಮಿ ರಥೋತ್ಸವವು ಬರುವ ಹುಣ್ಣಿಮೆಯ ದಿವಸ ನಡೆಯುವುದು. ಆಗ್ಗೆ ಒಂದು ದನಗಳ ಪ್ರದರ್ಶನವೂ ನಡೆಯುವುದು. ಬಂದವರ ಅನ್ನದಾನೋಪಚರಗಳಿಗೆಲ್ಲಾ ಅಲ್ಲಿಯ ಮಠಾಧ್ಯಕ್ಷ ಸ್ವಾಮಿಗಳವರು ಪದ್ಧತಿಯಂತೆ ಏರ್ಪಾಟನ್ನು ಮಾಡಿಸಿದ್ದಾರೆ.

ನರಸಿಂಹರಾಜಪುರವು ಸಬ್‌ತಾಲ್ಲೂಕಾಗಿದ್ದುದನ್ನು ತಪ್ಪಿಸಿ, ಒಂದು ಹೋಬಳಿಯನ್ನಾಗಿ ಮಾಡಲು ಸರ್ಕಾರದವರು ಮಾಡಿಕೊಂಡಿರುವ ಯೋಚನೆಗೆ ಅಸಮಾಧಾನಪಟ್ಟು ಅದರಿಂದ ತಮಗಳಿಗುಂಟಾಗುವ ಕೊರತೆಗಳನ್ನು ಶ್ರುತಪಡಿಸಿಕೊಳ್ಳುವುದಕ್ಕಾಗಿ ಅಲ್ಲಿಯ ಪ್ರಜಾಪ್ರಮುಖರು ಕೆಲರು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಹೋಗುವವರಾಗಿದ್ದಾರೆ.

ಕಳೆದ ವಾರದಲ್ಲಿ ಮದ್ರಾಸು ಪಟ್ಟಣದಲ್ಲಿ ನಮ್ಮ ಗಾನವಿಶಾರದ ಮ|| ಬಿ. ಕೃಷ್ಣಪ್ಪನವರ ಹಾಡುಗಾರಿಕೆಯು, ಮ|| ಶಾಯಪ್ಪನವರ ಪಿಟೀಲು, ನಂಜಪ್ಪನವರ ತಬಲಾವಾದನಗಳೊಡನೆ ಕೆಲವು ಕಡೆ ನಡೆದು ಸಭಿಕರು ಅತಿಶಯವಾಗಿ ಕರ್ಣಾನಂದಪಟ್ಟರು. ಈ ದಿನ ತಿರುವಲಿಕ್ಕೇಣಿಯ ಸಂಗೀತ ಸಭಾಮಂದಿರದಲ್ಲಿ ಮೇಲೆ ಕಂಡ ಮೂವರ ಕಚೇರಿಯು ನಡೆಯಲು ಏರ್ಪಾಟಾಗಿದೆ.

ಬರುವ ಏಪ್ರಿಲ್ ತಿಂಗಳ ಕೊನೆಯಲ್ಲಿ ವಿಜಾಪುರದಲ್ಲಿ ಜೈನ ವೀರಶೈವ ಮೊದಲಾದ ಹಿಂದುಳಿದ ಜನವರ್ಗದವರುಗಳು ತಮ್ಮ ರಾಜಕೀಯ ಪ್ರಗತಿಗಾಗಿ ಒಂದು ಮಹಾಸಭೆಯನ್ನು ನೆರವೇರಿಸುವವರಾಗಿದ್ದಾರೆ. ಆದರೆ "ಇದ್ದರೆ ಇತರರು ನಮ್ಮ ಬಾಲವಾಗಿರಬೇಕು; ಇಲ್ಲದಿದ್ದರೆ ಹೆಸರಿಲ್ಲದೆ ಹೋಗಬೇಕು" ಎಂದು ಬಯಸುವ ಕೆಲವರಿಗೆ ಈ ಪ್ರಯತ್ನವು ಸೇರದೆ ಅವರು ಬಾಯ್ತುಂಬ ಶಪಿಸಿ ತೃಪ್ತರಾಗುತ್ತಲಿದ್ದಾರೆ.

ಕಳೆದ ತಾ|| ೨೧ ರಲ್ಲಿ ಗುಂಡ್ಲುಪೇಟೆಯ ಟೌನ್‌ಹಾಲ್ ಕಟ್ಟಡದ ಶಂಕುಸ್ಥಾಪನಮಹೋತ್ಸವವು ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರವರಿಂದ ಆಚರಿಸಲ್ಪಟ್ಟಿತು. ೫ ಸಾವಿರ ರೂ. ಗಳ ವೆಚ್ಚವು ಹಿಡಿಯುವ ಈ ಕಟ್ಟಡಕ್ಕೆ ಸರ್ಕಾರದಿಂದ ೧೫೦೦ ರೂ. ಗಳು ದಯಪಾಲಿಸಲ್ಪಟ್ಟಿವೆ. ತಾಲ್ಲೂಕು ಪ್ರಜೆಗಳು ೩೫೦೦ ರೂ. ಗಳನ್ನು ಕೊಡಿಸಿದ್ದಾರೆ. ಉತ್ತರೋತ್ತರ ಇದರಲ್ಲಿಡಲ್ಪಡುವ ಪುಸ್ತಕಭಾಂಡಾರಕ್ಕಾಗಿ ಅಲ್ಲಿಯ ಮ್ಯುನ್ಸಿಪಾಲಿಟಿಯವರು ೧ ಸಾವಿರ ರೂ. ಗಳನ್ನು ಕೊಡುವವರಾಗಿದ್ದಾರೆ.

ಧಾರವಾಡದಲ್ಲಿ ಬರುವ ಮೇ ತಿಂಗಳಲ್ಲಿ ನೆರೆಯಲಿಕ್ಕಿರುವ ಕರ್ನಾಟಕ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ನಾಟಕಪ್ರಯೋಗಗಳನ್ನು ಮಾಡಿಸಿ, ನಾಟಕಗ್ರಂಥಗಳನ್ನು ಬರೆದವರಿಗೂ ಅವುಗಳನ್ನು ಅಭಿನಯಿಸಿದವರಿಗೂ ಬಹುಮಾನವನ್ನು ಕೊಡುವುದಕ್ಕೆ ಏರ್ಪಡಿಸಿದ್ದಾರೆ. ಪರೀಕ್ಷೆಯಲ್ಲಿ ಉತ್ತಮವಾಗಿ ಕಂಡವುಗಳಿಗೇ ಈ ಬಹುಮಾನವು ಸಿಕ್ಕುವುದು. ಐತಿಹಾಸಿಕ ಸಾಮಾಜಿಕ ಬೋಧಪ್ರದನಾಟಕಗಳಿಗೇ ಲಕ್ಷ್ಯಕೊಡಲ್ಪಡುವುದು. ಮಾರ್ಚಿ ತಾ|| ೧೫ ರೊಳಗಾಗಿ ಬರೆದು ಹೋಗಿದ್ದ ನಾಟಕಗ್ರಂಥಗಳನ್ನು ನೋಡಿ, ಉತ್ತಮವಾಗಿ ಕಂಡ ೩ ನಾಟಕಕಂಪೆನಿಗಳಿಗೆ ಕಮಿಟಿಯವರು ಆಹ್ವಾನಕೊಟ್ಟು ಬರಮಾಡಿಕೊಂಡು ಆಡಿಸುವರು. ಮತ್ತೂ ಅವರ ಆವಶ್ಯಕವಾದ ವೆಚಗಳಿಗೆ ೧ ನೂರು ರೂ. ಗಳ ವರೆಗೂ ಕಮಿಟಿಯವರು ಕೊಡುವರು. ನಾಟಕವಾಡುವುದರಿಂದ ಬರುವ ಉತ್ಪತ್ತಿಯನ್ನೆಲ್ಲಾ ಕಮಿಟಿಯವರೇ ತೆಗೆದುಕೊಳ್ಳುವರು.

ಭರತಖಂಡದ ವೃತ್ತಾಂತಗಳು.

ಕ್ವಿನಿನ್ ನಿರ್ಮಾಣ ವ್ಯಾಪಾರಗಳಿಂದ ಮದ್ರಾಸು ಸರ್ಕಾರದವರಿಗೆ ಕಳೆದ ವರ್ಷ ೯ ಲಕ್ಷ ರೂ. ಗಳ ಆದಾಯವಾಗಿದೆ.

ಬೊಂಬಾಯಿ ನಿಯಮನಿರ್ಮಾಣಸಭೆಯ ಸಭಿಕರಾಗಿದ್ದ ಆ|| ವಿ. ಜೆ. ಪಟೇಲ್‌ರವರು ಸಾಮ್ರಾಜ್ಯ ನಿಯಮನಿರ್ಮಾಣಸಭೆಯ ಸಭಿಕರಾಗಿ ಬೊಂಬಾಯಿ ಪಕ್ಷದಿಂದ ಆರಿಸಲ್ಪಟ್ಟಿರುವರು.

ಭರತಖಂಡದಲ್ಲಿ ಹೊಗೆಬಂಡಿ ಇಂಜನ್ನುಗಳಿಗೆ ಕಲ್ಲಿದ್ದಲಿಗೆ ಪ್ರತಿಯಾಗಿ ಸೀಮೆಯೆಣ್ಣೆಯನ್ನು ಉಪಯೋಗಿಸಿದರೂ ವೆಚ್ಚವು ಒಂದೇ ಆಗುವುದೆಂದು ಪರಿಶೋಧನೆಯಿಂದ ಗೊತ್ತುಮಾಡಿದ್ದಾರೆ.

ಬರ್ಮಾದೇಶಕ್ಕೆ "ಹಿಂದೂ" "ನ್ಯೂ ಇಂಡಿಯಾ" ಎಂಬ ಪತ್ರಿಕೆಗಳು ಬರಕೂಡದೆಂದು ಅಲ್ಲಿಯ ಪ್ರಭುತ್ವದವರು ಕೆಲ ಕಾಲದಿಂದಲೂ ಆಜ್ಞೆಮಾಡಿದ್ದಾರೆ. ಈಗ ಅಮೃತಬಜಾರ್ ಪತ್ರಿಕೆಯೂ ಅಲ್ಲಿಗೆ ಬರಲಾಗದೆಂದು ಶಾಸನಮಾಡಿದ್ದಾರೆ.

ವೈಸ್ರಾಯರ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾದ ಸರ್ ಶಂಕರನ್ ನಾಯರ್‌ರವರು ಈ ತಿಂಗಳು ತಾ|| ೨೭ ರಲ್ಲಿ ದಿಲ್ಲಿಯಿಂದ ಹೊರಟು ಕಲ್ಕತ್ತಾ, ಮದ್ರಾಸು, ಬೊಂಬಾಯಿ ಪ್ರಾಂತಗಳಲ್ಲಿ ಸಂಚರಿಸಿಕೊಂಡು ಏಪ್ರಿಲ್ ತಾ|| ೧೩ ಕ್ಕೆ ಮರಳಿ ದಿಲ್ಲಿಗೆ ಹೋಗುವವರಾಗಿದ್ದಾರೆ.

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ಎರ್ನಾಕುಲಮ್ಮಿನಲ್ಲಿ ಆಸ್ಥಾನದ ದಿವಾನರು ತೋರಿಸಿಕೊಟ್ಟ ೬೦ ಎಕರೆ ಸ್ಥಲವನ್ನು ಟಾಟಾ ಕಂಪೆನಿ ಪಕ್ಷದ ಏಜಂಟರು ನೋಡಿ, ತಮ್ಮ ಕೊಬ್ಬರಿತುಪ್ಪ ಮತ್ತು ಸಾಬೂನು ಇವುಗಳ ನಿರ್ಮಾಣದ ಯಂತ್ರಾಲಯವನ್ನು ಸ್ಥಾಪಿಸಲು ಗೊತ್ತುಮಾಡಿರುತ್ತಾರೆ.

ಭರತಖಂಡದ ರಾಜಕೀಯ ಸುಧಾರಣೆಯ ವಿಷಯವಾಗಿ ಹಿಂದುಳಿದ ಜನವರ್ಗಗಳವರ ನಿಜಾಭಿಪ್ರಾಯವನ್ನು ಆಂಗ್ಲ ಮಹಾಜನರಲ್ಲಿ ನಿವೇದಿಸುವುದಕ್ಕಾಗಿ ಮದ್ರಾಸಿನ ಡಾಕ್ಟರ್ ನಾಯರ್‌ರವರೂ, ಮ|| ಕೂರ್ಮಾ ವೆಂಕಟರೆಡ್ಡಿ ನಾಯುಡುರವರೂ ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ಸಾಮ್ರಾಜ್ಯ ನಿಯಮನಿರ್ಮಾಣ ಸಭೆಯ ಶಾಶ್ವತ ಸಭಿಕರೇ ಚಂದಾ ಹಾಕಿ ಶಿವಂಗತ ಗೋಖಲೆಯವರ ಅಮೃತಶಿಲಾವಿಗ್ರಹ (ಊರ್ಧ್ವದೇಹ ಮಾತ್ರವನ್ನು) ದಿಲ್ಲಿ ನಗರದಲ್ಲಿರುವ ಸಾಮ್ರಾಜ್ಯಶಾಸನಸಭಾ ಮಂದಿರದಲ್ಲಿ ಸ್ಥಾಪನೆಮಾಡಿರುತ್ತಾರೆ. ಅದರ ಪ್ರಕಾಶನವನ್ನು ವೈಸ್ರಾಯರು ಕಳೆದ ತಾ|| ೨೨ ರಲ್ಲಿ ಮಾಡಿದರು.

೧೬ ವರ್ಷ ವಯಸ್ಸಿನೊಳಗಣ ಹುಡುಗ ಹುಡುಗಿಯರುಗಳು ಬೀದಿಯಲ್ಲಿ ಭಿಕ್ಷವನ್ನೆತ್ತುವುದು, ಸಿಗರೆಟ್ಟು ಮೊದಲಾದುವುಗಳನ್ನು ಸೇದುವುದು ಮೊದಲಾದ ಕೆಟ್ಟ ಚಾಳಿಯಲ್ಲಿದ್ದರೆ ಅಂಥವರನ್ನು ಪೋಲೀಸರು ಹಿಡಿದು ಶಿಕ್ಷೆಮಾಡಿಸುವುದಕ್ಕೆ ಸಾಧಕವಾದ ಶಾಸನವನ್ನು ಮದ್ರಾಸ್ ಸರ್ಕಾರದವರು ಏರ್ಪಡಿಸುವುದರಲ್ಲಿದ್ದಾರೆ.

ರಾಜಕೋಟೆಸಂಸ್ಥಾನದ ಪ್ರಭುಗಳು ತಾವು ಸಿಂಹಾಸನಾರೋಹಣಮಾಡಿದ ಶುಭಸಂದರ್ಭದಲ್ಲಿ ತಮ್ಮ ರಾಜ್ಯದೊಳಗೆ ಪ್ರಾರಂಭವಿದ್ಯೆಯನ್ನು ಬಲಾತ್ಕಾರವಾಗಿಯೂ ಉಚಿತವಾಗಿಯೂ ಅಭ್ಯಾಸಮಾಡಿಸುವ ಶಾಸನವನ್ನು ಸ್ಥಾಪಿಸಿದುದಲ್ಲದೆ, ಸಣ್ಣ ಬಡಹುಡುಗರಿಗೆ ಪುಸ್ತಕಗಳನ್ನೂ ಹಲಗೆಗಳನ್ನೂ ಕೂಡ ಉಚಿತವಾಗಿ ಒದಗಿಸಿಕೊಡುವುದಕ್ಕೂ ಅಪ್ಪಣೆಮಾಡಿದ್ದಾರೆ.

ಕಳೆದ ವರ್ಷದಲ್ಲಿ ಭರತಖಂಡದ ಲೋಹಮಾರ್ಗಗಳಲ್ಲಿ ಓಡಾಡುವ ಬಂಡಿಗಳ ಸಂಖ್ಯೆಯು ಕಡಿಮೆಯಾದರೂ, ಪ್ರಯಾಣಿಕರ ಬಾಡಿಗೆಗಳು ಹೆಚ್ಚಿಸಲ್ಪಟ್ಟಿದ್ದರೂ ಕೂಡ ಪ್ರಯಾಣಮಾಡಿರುವ ಜನಸಂಖ್ಯೆಯೂ, ಕಂಪೆನಿಯವರ ಆದಾಯವೂ ಕೂಡ ಅದರ ಹಿಂದಣ ವರ್ಷಕ್ಕಿಂತ ಹೆಚ್ಚಾಗಿದೆ. ಮೊನ್ನೆವರ್ಷದ ಉತ್ಪತ್ತಿಗಿಂತ ನಿನ್ನೆವರ್ಷದ ಉತ್ಪತ್ತಿಯು ೫ ಕೋಟಿಯಷ್ಟು ಹೆಚ್ಚಾಗಿದೆ.

ಹೈದರಾಬಾದಿನಲ್ಲಿ ಕೆಲವು ಊರುಗಳೊಳಗೆ ರೂ. ಗೆ ೫ ಸೇರು ಅಕ್ಕಿಯು ದೊರೆಯುವುದು ಕಷ್ಟವಾಗಿದೆ. ಹೈದರಾಬಾದು ಪಟ್ಟಣದಲ್ಲೂ ಇರುವ ಈ ಕಷ್ಟವನ್ನು ಪರಿಹರಿಸಿ ಬಡಬಗ್ಗರಿಗೆ ಹಿತಮಾಡುವುದಕ್ಕಾಗಿ ಅಲ್ಲಿಯ ನೈಜಾಂರವರು ರೂ. ಗೆ ೮ ಸೇರಿಗೆ ಕಡಿಮೆಯಿಲ್ಲದಂತೆ ಸರ್ಕಾರದ ಕಡೆಯಿಂದ ಅಕ್ಕಿಯ ಮಾರಾಟ ಮಾಡಬೇಕೆಂದು ಅಪ್ಪಣೆಮಾಡಿ ಪ್ರಜೆಗಳ ಕೃತಜ್ಞತೆಗೆ ವಿಶೇಷ ಪಾತ್ರರಾಗಿದ್ದಾರೆ.

ಅಲಹಾಬಾದಿನಲ್ಲಿ ಮಹಮ್ಮದೀಯರು ಕಾನ್‌ಪೂರ್ ಬ್ಯಾರಿಸ್ಟರ್ ಮಿ|| ಹಿದಾಯತ್ ಹುಸೇನ್‌ರವರ ಅಧ್ಯಕ್ಷತೆಯಿಂದ ಸಭೆಗೂಡಿ, ಕಾಂಗ್ರೆಸ್ ಮುಸ್ಲಿಂಲೀಗಿನವರು ಕೋರತಕ್ಕ ರಾಜಕೀಯ ಸಂಸ್ಕರಣಗಳು ಅಪಾಯಕರಗಳೆಂದೂ ಅವು ಕೆಲವರಿಗೆ ಮಾತ್ರ ಇಷ್ಟವೇ ಹೊರತು ವಿಶೇಷ ಸಂಖ್ಯಾಕರಾದ ಮಹಮ್ಮದೀಯರಿಗೆ ಒಪ್ಪಿತವಾದುವಲ್ಲವೆಂದೂ, ಅದನ್ನು ತಾವು ಅಂಗೀಕರಿಸುವುದಿಲ್ಲವೆಂದೂ ತೀರ್ಮಾನಿಸಿದರು.

ಇಂಡ್ಯಾ ಸರ್ಕಾರದವರು ೧೯೧೫ ನೆ ವರ್ಷಕ್ಕೆ ಹಿಂದೆ ವಿದ್ಯಾಭ್ಯಾಸ ಶಾಖೆಗಾಗಿ ವರ್ಷ ೧ಕ್ಕೆ ೪|| ಕೋಟಿಯನ್ನು ವೆಚ್ಚಮಾಡುತ್ತಿದ್ದರು. ಈ ವರ್ಷ ೫ ಕೋಟಿಯನ್ನು ವೆಚ್ಚಮಾಡಿದರು. ಮುಂದಣ ವರ್ಷದಲ್ಲಿ ೬ ಕೋಟಿಯನ್ನು ವೆಚ್ಚಮಾಡುವವರಾಗಿದ್ದಾರೆ. ಇದು ಒಟ್ಟು ರಾಜಾದಾಯದಲ್ಲಿ ೧೦೦ ಕ್ಕೆ ೪ ರ ಪ್ರಕಾರ ವಿದ್ಯಾಭ್ಯಾಸಕ್ಕಾಗಿ ವೆಚ್ಚಮಾಡಿದಂತಾಯಿತು. ಮೈಸೂರು ಸಂಸ್ಥಾನದಲ್ಲಿ ೧೦೦ ಕ್ಕೆ ೯ ರಷ್ಟೂ, ತಿರುವಾಂಕೂರು ಸಂಸ್ಥಾನದಲ್ಲಿ ೧೦೦ ಕ್ಕೆ ೧೫ ರಷ್ಟೂ ವೆಚ್ಚಮಾಡಲ್ಪಡುತ್ತಿದೆ.

ಮದ್ರಾಸು ಆಧಿಪತ್ಯಕ್ಕೆ ಸೇರಿದ ಪೊನ್ನಲೂರಿನಲ್ಲಿ "ಮೀನಾಕ್ಷಿ" ಎಂಬ ಹೆಸರಿನ ಕಾಗದದ ನಿರ್ಮಾಣದ ಯಂತ್ರಾಲಯವು ಸ್ಥಾಪಿಸಲ್ಪಟ್ಟಿದೆ. ಇಲ್ಲಿ ಬಿದಿರುನಾರಿನಿಂದ ಗೋದುವೆಬಣ್ಣದ ಕಾಗದವೂ ಎಲೆ ಹಸರುಬಣ್ಣದ ಕಾಗದವೂ ಸದ್ಯ: ನಿರ್ಮಿಸಲ್ಪಡುತ್ತಿವೆ. ಈ ಕಾಗದಗಳು ಕವರುಗಳನ್ನು ಮಾಡುವುದು ಕಾಪಿ ಬರೆಯುವುದು ಮೊದಲಾದ ಕೆಲಸಗಳಿಗೆ ಚೆನ್ನಾಗಿ ಉಪಯೋಗಕರಗಳಾಗಿರುವುವು. ಕೆಲವರು ಅಚ್ಚಿಗೂ ಉಪಯೋಗಿಸುತ್ತಿರುವರು. ಬರೆದರೆ ಶಾಯಿಯಿಳಿಯುವುದಿಲ್ಲ. ಈ ಯಂತ್ರಾಲಯದವರು ಇಷ್ಟರಲ್ಲೇ ಬಿಳಿಯಕಾಗದದ ನಿರ್ಮಾಣಕ್ಕೂ ತೊಡಗುವವರಾಗಿದ್ದಾರೆ.

ಹೋಂರೂಲು ಪಕ್ಷವಾಗಿ ಸೀಮೆಗೆ ರಾಯಭಾರವಾಗಿ ಹೋಗಲಿಕ್ಕಿರುವ ಶ್ರೀಯುತರುಗಳಾದ ಬಾಲಗಂಗಾಧರ ತಿಲಕ್, ಕಪರ್ದೆ, ಕೇಳಕರ್, ವಿಪಿನಚಂದ್ರಪಾಲ್, ಕರಂದಿಕರ್, ಇವರುಗಳೆಲ್ಲಾ ಏಪ್ರಿಲ್ ತಾ|| ೩ ರಲ್ಲಿ ಪ್ರಯಾಣಮಾಡುವರು. ಮ|| ಗಳಾದ ಬಿ. ಚಕ್ರವರ್ತಿ, ಸಿ. ಆರ್. ದಾಸ್ ಪ್ರೊ|| ಜೆ.ಎನ್. ಬನರ್ಜಿ ಇವರುಗಳು ಏಪ್ರಿಲ್ ಕೊನೆಯಲ್ಲಿ ಹೊರಡುವರು. ಇದಕ್ಕೆ ಮುಂಚೆ ಮದ್ರಾಸುಕಡೆಯ ಆ|| ಶರ್ಮರವರೇ ಮೊದಲಾದ ಕೆಲರು ಪ್ರಯಾಣಮಾಡಿ ಹೋಗಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದಿಂದ ರಾಯಭಾರವು ಮಾತ್ರ ಹೋಗಿಲ್ಲ. ಸದ್ಯ: ಹೋಗಕೂಡದೆಂದು ಕಾಂಗ್ರೆಸ್‌ಸ್ಥಾಯಿ ಸಂಘದವರು ನಿರ್ಣಯಿಸಿದ್ದಾರೆ.

1918 ನೆ ಫೆಬ್ರವರಿ 21 ನೆ ತಾರೀಖಿನಲ್ಲಿ ಮೈಸೂರು ನಿಯಮನಿರ್ಮಾಣ ಸಭೆಯಲ್ಲಿ ಕಲಾಮಿಯವರು ಮಾಡಿದ ಭಾಷಣದ ಸಾರಾಂಶ.

ಸಭಿಕರುಗಳೆ, ಮ್ಯುನಿಸಿಪಲ್ ರೆಗ್ಯುಲೇಷನ್ ಅಮೆಂಡ್‌ಮೆಂಟ್ ಬಿಲ್ ವಿಷಯವಾಗಿ ಕೊನೇ ಅಭಿಪ್ರಾಯವನ್ನು ಕೊಡುವುದರ ವಿಷಯವಾಗಿ ಚರ್ಚಿಸುವುದಕ್ಕೆ ಮುಂಚಿತವಾಗಿ ಆ ವಿಚಾರವನ್ನು ದಯವಿಟ್ಟು ನಿದಾನಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

ಮೈಸೂರ್ ಮ್ಯುನಿಸಿಪಲ್ ರೆಗ್ಯುಲೇಷನ್ ಅಮೆಂಡ್‌ಮೆಂಟ್ ಬಿಲ್ ಮತ್ತು ಲೋಕಲ್ ರೆಗ್ಯುಲೇಷನ್ ಅಮೆಂಡ್‌ಮೆಂಟ್ ಬಿಲ್ ಈ 2 ಬಿಲ್ಲುಗಳನ್ನು ಕೌನ್ಸಿಲ್‌ನಲ್ಲಿ ಪ್ಯಾಸ್ ಮಾಡಕೂಡದೆಂದು ಬಹಳ ಆಕ್ಷೇಪಣೆಗಳು ಬಂದಿರುವುದರಿಂದ ಸದರಿ ಬಿಲ್ಲುಗಳ ವಿಚಾರವಾಗಿ ಚರ್ಚೆ ಮಾಡುವುದನ್ನು 6 ತಿಂಗಳವರೆಗೂ ನಿಲ್ಲಿಸುವುದು ಉತ್ತಮವಲ್ಲವೆ ? ಮತ್ತೂ ಲೋಕಲ್ ಮ್ಯುನಿಸಿಪಲ್ ಲೆಜಿಸ್ಲೆಟಿವ್ ಕೌನ್ಸಿಲುಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯತತ್ವವನ್ನು ವ್ಯವಹಾರಕ್ಕೆ ತರುವ ವಿಚಾರದಲ್ಲಿ ಗೌರ್ನಮೆಂಟಿಗೂ ಮತ್ತೂ ನಿಯಮನಿರ್ಮಾಣ ಸಭೆಗೂ ಬರೆದುಕೊಂಡಿರುವ ವಿಜ್ಞಾಪನಪತ್ರಗಳನ್ನು ಸರ್ಕಾರದವರು ಈಗ ಕೌನ್ಸಿಲ್ ಮುಂದೆ ಹಾಜರ್ಮಾಡುತ್ತಾರೆಯೆ ? ಎಂಬ ಈ ಎರಡು ಪ್ರಶ್ನೆಗಳನ್ನು ನಾನು ತಮಗೆ ಕಳುಹಿಸಿಕೊಟ್ಟಿದ್ದೆ. ಆದರೆ ನನ್ನ ಪ್ರಶ್ನೆಗಳು ಮಂಜೂರಾಗಲಿಲ್ಲವೆಂದು ಸೆಕ್ರೆಟರಿಯವರಿಂದ 5 ದಿನಗಳ ಕೆಳಗೆ ತಿಳಿಯಬಂದಿತು. ಆದರೆ ಮೈಸೂರು ದೇಶದಲ್ಲಿ ಮಿಂಟೋ ಮಾರ್ಲೇಯವರ ಸ್ಕೀಂ ಎಂಬ ಕೆಲವು ಹೊಸ ಏರ್ಪಾಡುಗಳನ್ನು ಜಾರಿಗೆ ತರುವ ವಿಚಾರದಲ್ಲಿ ಮ|| ಕರಣಿಕ ಕೃಷ್ಣಮೂರ್ತಿರಾಯರು ಹಾಕಿದ ಪ್ರಶ್ನೆಯನ್ನು ಮಾತ್ರ ಕೌನ್ಸಿಲ್‌ನವರು ಮಂಜೂರು ಮಾಡಿರುವುದನ್ನೂ ನನ್ನ ಸೂಚನೆಯನ್ನು ಹೀಗೆ ಮಾಡಿರುವುದನ್ನೂ ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಒಂದೇ ರೂಲಿಗೆ ನನ್ನ ವಿಷಯದಲ್ಲಿ ಒಂದು ತೆರನಾಗಿಯೂ ಇನ್ನೊಬ್ಬರ ವಿಷಯದಲ್ಲಿ ಮತ್ತೊಂದು ತೆರನಾಗಿಯೂ ಅರ್ಥಮಾಡುವುದನ್ನು ನೋಡಿದರೆ ನನಗೆ ಬಹಳ ಸಂಕಟವಾಗುತ್ತದೆ. ಅಲ್ಲದೆ ಪ್ರತ್ಯೇಕಪ್ರಾತಿನಿಧ್ಯ ವಿಚಾರವಾಗಿ ಬಂದಿರುವ ಎಲ್ಲಾ ವಿಜ್ಞಾಪನಪತ್ರಗಳನ್ನೂ ಈ ಸಭೆಯ ಮುಂದೆ ಹಾಜರ್ ಪಡಿಸಬೇಕೆಂದು ನಾನು ಕೇಳಿದುದಕ್ಕೆ ಮ|| ಬಸವಯ್ಯನವರಿಂದ ಬಂದ ವಿಜ್ಞಾಪನಪತ್ರವನ್ನು ಮಾತ್ರ ಹಾಜರ್ಮಾಡಿದರೇ ಹೊರತು ದೇಶದಲ್ಲಿ ಅನೇಕ ಕಡೆ ನೆರೆದ ಸಭೆಗಳಿಂದ ಬಂದಿರುವ ಅರ್ಜಿಗಳನ್ನೂ ಮತ್ತೂ ಸುಮಾರು 90 ಜನಗಳಿಗೆ ಮೇಲ್ಪಟ್ಟು ರೆಪ್ರಜಂಟೇಟಿವ್ ಅಸೆಂಬ್ಲಿ ಮೆಂಬರುಗಳಿಂದ ಬಂದ ಅರ್ಜಿಗಳನ್ನೂ ಕೂಡ ಹಾಜರ್‌ಪಡಿಸಲಿಲ್ಲ. ಇವೆಲ್ಲವನ್ನೂ ನೋಡಲಾಗಿ ನಾನು ನಿಯಮನಿರ್ಮಾಣಸಭೆಗೆ ಮಾಡಿಕೊಂಡ ಪ್ರಾರ್ಥನೆಯು ಸ್ವಲ್ಪವೂ ಸಫಲವಾಗಲಿಲ್ಲವಾಗಿ ಬಹಳ ವ್ಯಸನಪಡಬೇಕಾಗಿದೆ.

ಮ್ಯುನಿಸಿಪಲ್ ರೆಗ್ಯುಲೇಷನ್ ಬಿಲ್ಲಿನ ವಿಚಾರವಾಗಿ ಹೋದ ಮೀಟಿಂಗಿನಲ್ಲಿ ನಾನೇನೂ ವಿರೋಧವಾಗಿರಲಿಲ್ಲ. ಈಗಲೂ ಕೂಡ ನಾನು ವಿರೋಧ ಮಾಡತಕ್ಕವನಲ್ಲ. ಆದರೆ ಪ್ರಜೆಗಳ ಕ್ಷೇಮಲಾಭವನ್ನು ಹೆಚ್ಚಿಸುವುದಕ್ಕಾಗಿ ಪ್ರತ್ಯೇಕ ಪ್ರಾತಿನಿಧ್ಯ ಎಂಬ ವಿಧಾನವನ್ನು ಅನುಸರಿಸಿ ಮೇಲ್ಕಂಡ ಬಿಲ್ ಜಾರಿಗೆ ಬಂದರೆ ನಾನು ಅದನ್ನು ಒಪ್ಪುತ್ತೇನೆಯೇ ಹೊರತು ಅನ್ಯಥಾ ಇಲ್ಲ. ವಿಶೇಷ ಪ್ರಬಲಸ್ಥಿತಿಯಲ್ಲಿರುವ ಒಂದೇ ಮತಕ್ಕೆ ಸೇರಿದವರಾದಾಗ್ಯೂ, ದೇಶದ ಸಕಲ ಜನಗಳಿಗೂ ತಾವೇ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಿರುವ ಮೆಂಬರುಗಳು ಇಲ್ಲಿ ಮಾಡಿದ ಭಾಷಣಗಳನ್ನು ಕೇಳಿದ್ದರಮೇಲೂ ಮತ್ತೂ ದೇಶದ ಪ್ರಜೆಗಳು ಕೇಳಿಕೊಳ್ಳುವ ಪ್ರಾರ್ಥನೆಗೆ ಸರ್ಕಾರದವರು ತೋರಿಸುವ ವಿರೋಧಭಾವವನ್ನು ನೋಡಿದಮೇಲೂ ಸದ್ಯ: ಚರ್ಚಿಸ್ಪಡವಾಗಿರುವ ವಿಷಯವನ್ನು ಅಧಿಕಾರಿಗಳು ಮತ್ತೊಂದಾವೃತ್ತಿ ಯೋಚನೆಮಾಡಿ ದೇಶದ ತೊಂದರೆಯನ್ನೂ ದುಃಖವನ್ನೂ ನಿವಾರಣೆಮಾಡುವಂತೆ ಮಾಡಿಸುವುದಕ್ಕೆ ನಾನು ಬೇರೆ ವಿಧಾನಗಳನ್ನು ಅನುಸರಿಸಲು ಮನಸ್ಸಿಲ್ಲದಿದ್ದರೂ ಅನಿವಾರ್ಯದಿಂದ ಮಾಡಬೇಕಾಗಿದೆ. ಹೀಗೆ ನಾನು ಮಾಡುವದಾದರೆ ಗೌರ್ನಮೆಂಟಿನವರೂ ಪುನರ್ವಿಮರ್ಶೆಗೆ ತೊಡಗಾರು. ಪ್ರಜೆಗಳ ಕಷ್ಟಗಳೂ ನಿವಾರಣೆಗೊಂಡಾವು. ದೇಶದಲ್ಲಿ ಪ್ರಮುಖರಾದ ಜನಗಳ ಸಂಗಡ ಮಾತನಾಡಿದ್ದರಲ್ಲೂ ಮತ್ತೂ ಅವರು ನನಗೆ ಹೇಳಿ ಕಳುಹಿಸಿದ್ದರಲ್ಲೂ ನನಗೆ ತಿಳಿದುಬರುತ್ತಿರುವದೇನೆಂದರೆ ಸರ್ಕಾರದವರು ಈಗ ಸೂಚಿಸಿರುವವರೀತಿಗೆ ಬಿಲ್ಲುಗಳು ಜಾರಿಗೆ ಬರುವ ಸಂಭವವಿದ್ದಲ್ಲಿ ಜನಗಳ ಪ್ರತಿನಿಧಿಗಳೆಂದು ಹೇಳಿಕೊಳ್ಳುವವರೆಲ್ಲರೂ ಏಕಮನಸ್ಸಿನಿಂದ ತಕರಾರುಹಾಕುವುದು ಅವರ ಕರ್ತವ್ಯವೆಂದು ನಾನು ಖಂಡಿತವಾಗಿಯೂ ಒತ್ತಿ ಹೇಳುತ್ತೇನೆ. ಹಾಗಲ್ಲದಿದ್ದರೆ ಅವರು ಜನಗಳ ಪ್ರತಿನಿಧಿಗಳಾಗಿ ಕೆಲಸಮಾಡುವುದಕ್ಕೆ ಅರ್ಹರಾಗಿರುವುದಿಲ್ಲ. ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡು ಅಮೆಂಡ್‌ಮೆಂಟ್ ಬಿಲ್ ಇವುಗಳ ಮುಖ್ಯೋದ್ದೇಶವೇನೆಂದರೆ—ಪ್ರಾತಿನಿಧಿಕ ಪ್ರಭುತ್ವವನ್ನು ಅಭಿವೃದ್ಧಿಪಡಿಸಿ ಈ ವಿಚಾರದಲ್ಲಿ ಜನಗಳ ಕೋರಿಕೆ ಮತ್ತು ಪ್ರಾರ್ಥನೆಗಳನ್ನು ಅನುಸರಿಸಿ ನಡೆಯತಕ್ಕದ್ದೇ ಮೇಲ್ಕಂಡ ಬಿಲ್‌ಗಳ ಪ್ರಥಮತತ್ವವಾಗಿದೆ. ಈ ಬಿಲ್ಲುಗಳ ವಿಚಾರದಲ್ಲಿ ದೇಶದ ಜನಗಳೆಲ್ಲಾ ತಂತಮ್ಮ ಅಭಿಪ್ರಾಯಗಳನ್ನು ದೀರ್ಘಾಲೋಚನೆಮಾಡಿ ಸ್ಪಷ್ಟವಾಗಿ ಕೊಟ್ಟಿರುವುದು ತಮ್ಮ ಚಿತ್ತಕ್ಕೆ ವೇದ್ಯವೇ ಇದೆ. ನಿಜವಾಗಿಯೂ ಈ ಬಿಲ್ಲುಗಳಿಂದ ಜನಗಳಿಗೆ ಬಹಳ ಕೇಡುಕಗಳೂ ಮತ್ತು ಅನ್ಯಾಯಗಳೂ ಉಂಟಾಗುವ ಸಂಭವವಿದ್ದಾಗ್ಯೂ ಮೇಲೆ ನೋಟಕ್ಕೆ ಮಾತ್ರ ಪ್ರಯೋಜನಗಳನ್ನುಂಟುಮಾಡತಕ್ಕುವೆಂಬುದಾಗಿ ತಪ್ಪಭಿಪ್ರಾಯವನ್ನು ಹುಟ್ಟಿಸಿ ಜನಗಳನ್ನು ಮರುಳುಮಾಡುವುದರಲ್ಲಿ ಏನೂ ಸಂದೇಹವಿಲ್ಲವೆಂಬ ಅಭಿಪ್ರಾಯವು ಜನರಲ್ಲೆಲ್ಲಾ ಹರಡಿಕೊಂಡಿದೆ. ಕೋಮುವಾರು ಪ್ರತಿನಿಧಿ ವಿಧಾನವನ್ನು ಜಾರಿಗೆ ತರಬೇಕೆಂಬುದಾಗಿ ಬೆಂಗಳೂರು ಜನಗಳು ೧೯೧೭ ನೆ ಮೇ ತಾ|| ೩೦ ರಲ್ಲಿ ಸಭೆ ಸೇರಿ ರೆಜ್ಯುಲೇಷನ್ ಪ್ಯಾಸ್ ಮಾಡಿದ್ದಾರೆ. ಅಲ್ಲದೆ ಹೋದ ವರ್ಷ ನಡೆದ ಪ್ರಜಾಪ್ರತಿನಿಧಿ ಸಭೆಗೆ ಬಂದಿದ್ದ ಹಿಂದುಳಿದ ಜನವರ್ಗದ ಪ್ರತಿನಿಧಿಗಳೂ, ಮೈಸೂರು ನಗರದ ಜನಗಳೂ, ಕೋಲಾರದ ಜನಗಳೂ, ನರಸಿಂಹರಾಜಪುರದ ಜನಗಳೂ ಇವರೆಲ್ಲರೂ ಪ್ರತ್ಯೇಕ ಪ್ರಾತಿನಿಧ್ಯ ವಿಚಾರದಲ್ಲಿ ಗೌರ್ನಮೆಂಟಿಗೆ ಬಿನ್ನೈಸಿಕೊಂಡಿದ್ದಾರೆ. ಅಲ್ಲದೆ ದಾವಣಗೆರೆಯಲ್ಲಿ 1917 ನೇ ಡಿಸಂಬರ್ ತಾ|| 28 ರಲ್ಲಿ ನೆರೆದಿದ್ದ ವೀರಶೈವ ಮಹಾಸಭೆಯವರೂ ಕೂಡ ಇದೇ ರೀತಿಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗಿರುವಲ್ಲಿ ಇಂಥಾ ವಿಚಾರವು ಎಂದಿಗೂ ಅನ್ಯಾಯವಾದುದಲ್ಲ, ಮತ್ತು ಇಂಥಾ ವಿಚಾರವು ಖಂಡಿತವಾಗಿಯೂ ತಿರಸ್ಕರಿಸಲ್ಪಡತಕ್ಕುದಲ್ಲ. [ಸಶೇಷ].

ಪತ್ರವ್ಯವಹಾರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿನಾಂ

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನದಿಂದ—ಯಾವತ್ತರಿಗೂ ಸೂಚಿಸುವದೇನೆಂದರೆ, ಶ್ರೀಮನ್ಮಹಾ|| ಖಾಸಾ ಸ್ವಾರಿಯು ಸಕಲ ಅಜಬಾಬು ಸಮೇತ ಬೃಹನ್ಮಠದಿಂದ ಪೊರಮಟ್ಟು ದಾವಣಗೆರೆ ತಾಲ್ಲೂಕು ಕೊಡಗನೂರು ಸ್ಟೇಷನ್‌ಗೆ ಸಮೀಪವಾಗಿರುವ ಕಬ್ಬೂರು ಗ್ರಾಮಕ್ಕೆ ಚಿತ್ತೈಸಿ ಅಲ್ಲಿಂದ ತಾರೀಖು 1ನೇ ಏಪ್ರಿಲ್ 1918ನೇ ಇಸ್ವಿ ಚಂದ್ರವಾರ ದಾವಣಗೆರೆ ತಾಲ್ಲೂಕು ಕಂದಗಲ್ ಗ್ರಾಮಕ್ಕೆ ಮೊಕ್ಕಾಮಾಡಿ ಅಲ್ಲಿಯೇ ಒಂದೆರಡು ವಾರದವರಿವಿಗೂ ಮೊಕ್ಕಾಂ ಇರುವ ಪ್ರಯುಕ್ತ ಮಹಾಸನ್ನಿಧಿಯ ದರ್ಶನಾಶೀರ್ವಾದಕ್ಕೆ ಬರತಕ್ಕವರು ಕೊಡಗನೂರಿಗೆ ರೈಲು ಇಳಿದು ಬರತಕ್ಕದ್ದು. ಹಾಗು ಪತ್ರಗಳನ್ನು ಬಿನ್ನೈಸಿಕೊಳ್ಳುವವರು ದಾವಣಗೆರೆ ತಾಲ್ಲೂಕು ಕೊಡಗನೂರು ಪೋಸ್ಟು ಕೊಡಗನೂರು ಸಾಹುಕಾರ್ ಮಾಗಾನಹಳ್ಳಿ ಹಾಲಪ್ಪ ಇವರು ಸೋದಿ ಮಹಾ|| ಸನ್ನಿಧಿಗೆ ತಲ್ಪಿಸುವಂತೆ ಬರೆದುಕೊಳ್ಳುವದು.

(*Sd.*) Channabasavaya, Harihar, Clerk.
ತಾ|| 22 ಮಾರ್ಚಿ 1918ನೆ ಇಸವಿ.

ಮ|| ರಾ|| ಎಡಿಟರವರ ಸ|| ಕೈ.

ಮರಿಮಲ್ಲಪ್ಪನವರ ಹೈಸ್ಕೂಲು.

ಈ ಸ್ಕೂಲಿನ ವಿಷಯವಾಗಿಯೂ ಟ್ರಸ್ಟಿನ ಕಾರ್ಯದ ಸಂಬಂಧವಾಗಿಯೂ ಮೈಸೂರು ಸ್ಟಾರಿನ ಸಂಚಿಕೆಗಳಲ್ಲಿ ಬಂದಿರುವ ಬರವಣಿಗೆಗಳನ್ನು ನೋಡಿ ಬಹಳ ವ್ಯಸನವಾಯಿತು. ಮರಿಮಲ್ಲಪ್ಪನವರು ಗತಿಸುವಾಗ್ಗೆ ತಮಗೆ ಸಂತಾನವಿಲ್ಲದಿದ್ದುದರಿಂದ ದತ್ತಪುತ್ರನನ್ನು ಮಾಡಿಕೊಳ್ಳುವುದಕ್ಕೆ ಇಷ್ಟಪಡದೆ, ತಮ್ಮ ಹಣದ ಸಹಾಯದಿಂದ ಸ್ವಮತಸ್ಥರು ಮುಂದೆ ವಿದ್ಯಾವಂತರಾಗಿ ಏಳಿಗೆಗೆ ಬರುವಂತಾದರೆ ಅದೇ ನನಗೆ ಸತ್ಸಂತಾನವೆಂದು ಬಂದವರೊಡನೆಲ್ಲಾ ಹೇಳುತ್ತ, ಅದೇ ಸಂಗತಿಯನ್ನು ಸಿ. ರಂಗಾಚಾರ್ಲುಯವರೊಡನೆಯೂ ಹೇಳಿ, ವಿಲ್ಲಿನ ಮೂಲಕ ತಮ್ಮ ಆಸ್ತಿಯ ವಿನಿಯೋಗವನ್ನು ಬರೆದಿಟ್ಟರೆಂದು ಕೇಳಿರುವೆನು. ತಮ್ಮ ಮತದ ಜನರಿಗೆ ಅನ್ನವನ್ನು ಹಾಕಿ ವಿದ್ಯಾಭ್ಯಾಸ ಮಾಡಿಸಬೇಕೆಂಬುದೇ ಅವರ ಉದ್ದೇಶವಾಗಿತ್ತು. ಅವರು ಮೃತರಾದನಂತರ ಅವರ ಉದ್ದೇಶವು ಇಲ್ಲಿನವರೆಗೆ ಯಾವ ರೂಪವಾಗಿ ಎಷ್ಟುಮಟ್ಟಿಗೆ ಸಾಗಿಸಲ್ಪಟ್ಟಿದೆ? ಅದರ ಹಾನಿವೃದ್ಧಿಗಳೇನು ? ಮತಕ್ಕೆ ಎಷ್ಟು ಪ್ರಯೋಜನವಾಗಿದೆಯೆಂಬುವುದನ್ನು ಮತಸ್ಥರಿಗೆಲ್ಲಾ ತಿಳಿಯುವಂತೆ ಟ್ರಸ್ಟಿಯವರಾಗಲೀ ಇತರರು ಯಾರೇ ಆಗಲೀ ಪ್ರಕಟಿಸಿದರೆ ಚೆನ್ನಾಗಿದೆ. ಲೋಪವಿದ್ದರೆ ಮುಂದೆ ತಿದ್ದಿಕೊಳ್ಳುವುದಕ್ಕೂ, ಸುಖವಾಗಿದ್ದರೆ ಅದುವರೆಗೆ ತಪ್ಪು ತಿಳಿವಳಿಕೆ ಹೊಂದಿದ್ದವರು ಸಮಾಧಾನವಾಗುವುದಕ್ಕೂ ಅವಕಾಶವಾಗುತ್ತದೆ. [illegible]

ಗತಿಯೇ ಹಾಗಾದರೆ ಕುದುರೆಯ ನಡೆಯನ್ನು ಹೇಳುವುದೇನು? ಆದ ಕಾರಣ ಈಗ ಆ ಚಾರಟಿಯನ್ನು ಸುಕ್ರಮಕ್ಕೆ ತಂದಿಡಲು ಸರ್ವರೂ ಸಹಾಯಮಾಡಬೇಕಾಗಿದೆ. ಈಗಿರುವ ಸ್ಕೂಲೇ ಧರ್ಮಕರ್ತರ ಉದ್ದೇಶದ ಉದ್ಧಾರಕ್ಕೆ ಸಹಾಯಕವಾಗಿದ್ದರೆ ಅದಕ್ಕೆ ಸಮರ್ಥರಾದ ಯುರೋಪಿಯನ್ ಹೆಡ್ಮಾಸ್ತರರನ್ನು ನಿಯಮಿಸಬೇಕು. ಟ್ರಸ್ಟಿಯಲ್ಲಿ ವೀರಶೈವ ಜನವರ್ಗದವರು ಅರ್ಧಪಾಲೂ, ಇತರ ಹಿಂದೂ ಜನವರ್ಗದವರು ಮತ್ತು ಮುಸಲ್ಮಾನ್ ಕ್ರಿಸ್ತಜನವರ್ಗದವರು ಅರ್ಧಪಾಲೂ ಮೆಂಬರುಗಳಾಗಿರುವಂತೆ ಏರ್ಪಾಟಾಗಬೇಕು. ಹಾಗಲ್ಲದಿದ್ದರೆ ಈ ಸ್ಕೂಲನ್ನೇ ವಜಾಮಾಡಿ ಮೂಲಧನವು ಎಷ್ಟು ಇದೆಯೋ ಅದನ್ನೂ, ಸ್ಕೂಲು ಕಟ್ಟಡವನ್ನು ಮಾರಿ ಅದನ್ನೂ ಸರ್ಕಾರದ ಖಜಾನೆಯಲ್ಲಿಟ್ಟು, ಬಡ್ಡಿ ಹಣದಿಂದ ವಿದ್ಯಾಭ್ಯಾಸಮಾಡುವ ವೀರಶೈವ ವಿದ್ಯಾರ್ಥಿಗಳಿಗೆ ಸ್ಕಾಲರ್ಶಿಪ್ಪು ದೊರೆಯುವಂತೆ ಮಾಡಬೇಕು. ಹಿಂದೆ ಎಜ್ಯುಕೇಷನಲ್ ಇನ್ಸ್ಪೆಕ್ಟರ್ ಜನರಲ್ಲಾಗಿದ್ದ ರಾ॥ ಬ॥ ಎಂ. ಶ್ಯಾಮರಾವ್, ಎಂ. ಎ., ರವರು ಕನ್ನಿಗೌಡನ ಕೊಪ್ಪಲು ಶಾಲಾ ಪ್ರತಿಷ್ಠೆ ಮಾಡುವಾಗ ಮರಿಮಲ್ಲಪ್ಪನವರ ಸ್ಕೂಲು ಕಟ್ಟಡವು ೧ ಲಕ್ಷ ರೂ. ಬಾಳುವ ದೊಡ್ಡ ಆಸ್ತಿಯಾಗಿದೆಯೆಂದು ಅಪ್ಪಣೆಕೊಟ್ಟಿದ್ದಾರೆ. ಅವರೇ ಅದನ್ನು ವಹಿಸಿಕೊಂಡು ೧ ಲಕ್ಷ ರೂ. ಗಳನ್ನು ಕೊಟ್ಟರೆ ವೀರಶೈವ ವಿದ್ಯಾಭ್ಯಾಸಕ್ಕೆ ಎಷ್ಟೋ ಪ್ರೋತ್ಸಾಹಕೊಟ್ಟು ಉಪಕರಿಸಿದಂತಾಗುವುದು. ಈ ವಿಷಯವನ್ನು ಈ ಚಾರಟಿಯ ಟ್ರಸ್ಟಿಯವರೂ, ವೀರಶೈವ ಮಹಾಜನರೂ ಸ್ಕೂಲಿಗೆ ಬಹುಕಾಲದಿಂದ ಹೆಡ್ಮಾಸ್ತರಾಗಿ ಬಂದಿರುವ ಮ॥ ಎಂ. ವೆಂಕಟಕೃಷ್ಣಯ್ಯನವರೂ, ಇತರ ವ್ಯವಸ್ಥೆಯ ನಿಯಾಮಕರಾದ ಡಿಸ್ಟ್ರಿಕ್ಟ್ ಜಡ್ಜರೂ ಕೂಡ ಪರ್ಯಾಲೋಚಿಸುವವರಾಗಬೇಕೆಂದು ನನ್ನ ಪ್ರಾರ್ಥನೆ.

ಒಬ್ಬ ವೀರಶೈವ.

ಎರಡನೆಯ ವೀರಶೈವ ತರುಣರ ಸಮ್ಮೇಲನ ಬೆಳಗಾಂವ.

(ತಾ॥ ೨೧,೨೨-೪-೧೯೧೮).

ಪ್ರತಿಯೊಂದು ಸಮಾಜದ ಉತ್ಕರ್ಷವು ಆ ಸಮಾಜದ ಉತ್ಸಾಹಿಗಳಾದ ತರುಣ ಜನರನ್ನು ಅವಲಂಬಿಸಿರುವುದರಿಂದ ಅವರೆಲ್ಲರೂ ಕೂಡಿ ಸಮಾಜಸೇವೆಯನ್ನು ಮಾಡಲಿಕ್ಕೆ ಕಂಕಣಬದ್ಧರಾಗಿ ನಿಂತ ಹೊರತು ಯಾವ ಸಮಾಜವೂ ಮುಂದೆ ಬರಲಾರದು. ಆದ್ದರಿಂದ "ವೀರಶೈವ ತರುಣರ ಸಂಘ"ದವರು ಎರಡನೆಯ ಸಮ್ಮೇಲನವನ್ನು ಈ ಸಾರೆ ಬೆಳಗಾಂವಿಯಲ್ಲಿ ಕೂಡಿಸಬೇಕೆಂದು ನಿಶ್ಚಯಿಸಿರುವರು. ಈ ಸಭೆಯು ಬರುವ ಏಪ್ರಿಲ್ ತಿಂಗಳ ೨೧-೨೨ ನೆಯ ತಾರೀಖುಗಳಲ್ಲಿ ಕೂಡುವದಿದ್ದು, ಇದರಲ್ಲಿ ಯಾವ ತರದ ರಾಜಕೀಯ ವಿಷಯಗಳೂ ಚರ್ಚಿಸಲ್ಪಡದೆ, ಕೇವಲ ಧಾರ್ಮಿಕ, ಸಾಮಾಜಿಕ, ವಿದ್ಯಾವರ್ಧಕ ಮೊದಲಾದ ವಿಷಯಗಳು ನಡೆಯುವುವು. ವೀರಶೈವ ಸಮಾಜದವರೆಲ್ಲರೂ ಸಭೆಗೆ ದಯಮಾಡಿಸಬೇಕೆಂದು ಪ್ರಾರ್ಥನೆ.

ಈ ಸಭೆಯ ಅಧ್ಯಕ್ಷಸ್ಥಾನವನ್ನು ಮ॥ ರಾ॥ ರುದ್ರಪ್ಪಾ ಗರಡಿ ಎಂ. ಎ. (Oxon) ಬಾರ್. ಅಟ್. ಲಾ. ಬೆಂಗಳೂರ ಇವರು ಸ್ವೀಕರಿಸುವರು.

ಸಭೆಯಲ್ಲಿ ಚರ್ಚಿಸತಕ್ಕ ಮುಖ್ಯ ವಿಷಯಗಳು.

(೧) (ಅ) ವೀರಶೈವ ಮತವೂ, ಅದರ ಏಳಿಗೆಯ ಉಪಾಯಗಳೂ. (ಬ) ವೀರಶೈವರಲ್ಲಿಯ ಪಂಗಡಗಳ ಏಕೀಕರಣ. (೨) (ಅ) ವಿದ್ಯಾಪ್ರಸಾರ, ಸ್ತ್ರೀಶಿಕ್ಷಣ, ವ್ಯಾಪಾರ, ಕೈಗಾರಿಕೆ, ಒಕ್ಕಲತನಗಳ ಶಿಕ್ಷಣ. (ಬ) ಪರದೇಶಗಮನ. (೩) ಮಾಸಪತ್ರಿಕೆಗಳ ಅವಶ್ಯಕತೆ. (೪) ತರುಣರಿಂದ ಆಗತಕ್ಕ ಸಮಾಜಸೇವೆ.

ಈ ವಿಷಯಗಳನ್ನು ಕುರಿತು ಭಾಷಣಮಾಡಲಿಚ್ಛಿಸುವವರು ತಮ್ಮ ಭಾಷಣಗಳನ್ನು ಬರೆದು ಸ್ವಾಗತ ಸಂಘದ ಸೆಕ್ರೆಟರಿಗಳ ಕಡೆಗೆ ಏಪ್ರಿಲ್ ತಿಂಗಳ ೧೨ ನೆಯ ತಾರೀಖಿನೊಳಗಾಗಿ ಕಳುಹಿಸತಕ್ಕದ್ದು.

ಪ್ರತಿನಿಧಿಗಳ ಫೀ ರೂ. ೧, ಪ್ರತಿನಿಧಿಗಳಿಗೆ ಮಾತ್ರ ಊಟಕ್ಕೂ, ಇರಲಿಕ್ಕೂ ವ್ಯವಸ್ಥೆಮಾಡಲ್ಪಡುವುದು, ಆದರೆ ಅವರು ತಮ್ಮ ಹಾಸಿಗೆ, ತಂಬಿಗೆ ಮೊದಲಾದ ಅವಶ್ಯವಾದ ಸಾಮಾನುಗಳನ್ನು ಸಂಗಡ ತರತಕ್ಕದ್ದು. ಪ್ರತಿನಿಧಿಗಳಾಗಿ ಬರತಕ್ಕವರು ಏಪ್ರಿಲ್ ತಿಂಗಳ ೧೨ ನೆಯ ತಾರೀಖಿನೊಳಗಾಗಿ ತಿಳಿಸಬೇಕು. ಇಲ್ಲಿ ಯಾವ ತರದ ರೋಗಗಳೂ ಇರುವುದಿಲ್ಲ. ಹವೆಯು ಚೆನ್ನಾಗಿರುತ್ತದೆ.

ಇಲ್ಲಿಗೆ ಬರತಕ್ಕ ರೈಲ್ವೆ ಗಾಡಿಗಳ ಕಾಲ.

ಬೆಂಗಳೂರ ಕಡೆಯಿಂದ ಬರತಕ್ಕವು—ಪ್ಯಾಸೆಂಜರ್ ಮುಂಜಾನೆ ೬॥ ಘಂಟೆ, ಮೇಲ್ ಸಂಜೆಯ ೪॥ ಘಂಟೆ. ಪುಣೆಯ ಕಡೆಯಿಂದ ಬರತಕ್ಕವು—ಪ್ಯಾಸೆಂಜರ್ ರಾತ್ರಿ ೯॥ ಘಂಟೆ, ಮೇಲ್ ಮುಂಜಾನೆ ೯॥ ಘಂಟೆ.

ಸ್ವಾಗತ ಸಂಘ.

ಮ॥ ರಾ॥ ಮಹಾರುದ್ರಪ್ಪಾ ರೇವಪ್ಪಾ ಸಾಖರೆ ಎಂ. ಎ. ಚೇರಮನ್.

ಮ॥ ಗಳಾದ ಚನಮಲ್ಲಪ್ಪಾ ಕಿತ್ತೂರ, ಶಿವಪ್ಪಾ ಕಣವೇಲಿ, ರೇವಣಸಿದ್ದಪ್ಪಾ ಜಿಗಜಿನ್ನಿ, ವೀರಪ್ಪಾ ಉಪ್ಪಿನ, ವಿರೂಪಾಕ್ಷಪ್ಪಾ ಬೆಂಬಳಗಿ, ಹುಚ್ಚಪ್ಪಾ ಕಂಕಣವೇಲಿ, ಗುರುಲಿಂಗಪ್ಪಾ ಜಗಜಂಪಿ, ಮೈಜಪ್ಪಾ ನಿಂಗಪ್ಪಾ ಸಿದ್ದಣ್ಣವರ, ಎಂ. ಎಸ್. ಸರದಾರ, ಬಿ. ಎ., ಸಿರಡಿ, ಎಂ. ಎಸ್. ಪಾಟೀಲ, ವ್ಹಿ. ಜಿ. ಜಿಗಜಿನ್ನಿ, ಎಸ್. ಎಂ. ಭೋಜ, ಆರ್. ಎಸ್. ಮಹಾಂತಶೆಟ್ಟಿ, ವಿ. ಎಸ್. ಕಣಗಲಿ, ಸಿ. ಎನ್. ಪಾಟೀಲ.

ಬೆಳಗಾಂವ, } ಬಸಪ್ಪಾ ನೂರೊಂದಪ್ಪಾ ತಿಗಡಿ.
ತಾ॥ ೧೬-೩-೧೯೧೮. } ಸೆಕ್ರೆಟರಿ, ವಿ. ತ. ಸಮ್ಮೇಲನ, ಬೆಳಗಾಂವ.

ನೋಟೀಸ್.

ಚಿತ್ರದುರ್ಗದಲ್ಲಿ ಶ್ರೀಮನ್ಮಹಾ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟಿರುವ ಶ್ರೀ ವೀರಶೈವ ಬೋರ್ಡಿಂಗ್ ಹೋಮಿನಲ್ಲಿ ಚಿತ್ರದುರ್ಗ ಸೆಂಟರಿಗೆ ಇಂಗ್ಲೀಷ್ ಮತ್ತು ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳಿಗೆ ಅನ್ನಪಾನಾದಿಗಳಿಗೆ ತಕ್ಕ ಏರ್ಪಾಟು ಇಡಿಸಲ್ಪಡುವುದು. ಈ ಸೆಂಟರಿಗೆ ಬರತಕ್ಕ ವಿದ್ಯಾರ್ಥಿಗಳು ತಮ್ಮ ಹಾಸಿಗೆ ಮತ್ತು ತಂಬಿಗೆ ಸಮೇತ ಬರತಕ್ಕದ್ದು.

ಟಿ. ಜಿ. ಹೊನ್ನಯ್ಯ, ಸೂಪರ್‌ವೈಜರ್,
ವೀರಶೈವ ಬೋರ್ಡಿಂಗ್, ಚಿತ್ರದುರ್ಗ.

ಶಿವಮೊಗ್ಗದಲ್ಲಿ ಮುಂದಿನ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಹೊಳೆಯ ದಡದಲ್ಲಿ ಸೇತುವೆ ಹತ್ತಿರ ಇರುವ ಬೆಕ್ಕಿನಕಲ್ಲು ಮಠದಲ್ಲಿ ಭೋಜನಕ್ಕೆ ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘದವರು ಏರ್ಪಾಡುಮಾಡಿಸಿರುತ್ತಾರೆ.

K. HALAPPA,
Shimoga, Secretary,
19-3-1918. Nagar Dn. V. V. Sangha.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತ ಚಿತ್ರದತ್ತಾ, ಲುಕ್ಮಾನಿ ಇವೇ ಮೊದಲಾದ ಹಸ್ತಲಿಪಿ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ನಿದ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ತಿಜ್ವರ ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ:—ಇದರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರುಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಡಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರೆಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತ್ಯಪ್ಪಾ ಕಾಳಪ್ಪಾ ಲೇಂಗಡೆ,
7 ಹೊಸೂರ, ಪೋಸ್ಟ್, ಪಾಪೂರ (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

8 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬಿನ್ನೀ ಮಿಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇದೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 15

ಇಮಿಟೇಷನ್ ಸಿಲ್ಕ್ ಗೋವರ್ ಚಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	3.8.0

ವಿಳಾಸ:-ವೈರಂ ಅಂಡ್ ಕೊ, ತಿರುಳಪ್ಪನಬೀದಿ, ಮದರಾಸು.

ಕಾಳು ಕಡಿಯ ಜಂಗೀ ವಖಾರ.

ಗೋಧಿ ಕುಸುಬಿ ಅಡ್ಡಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
8 ಧಾರವಾಡ.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಯೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಯೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
18 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಪ್ರತಿಯೊಬ್ಬರೂ ಆವಶ್ಯಕವಾಗಿ ಓದಬೇಕಾದ,
ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ॥ ಬ॥ ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ. ಗಳನ್ನು ದಾನಮಾಡಿ ಯಾವಯಾವ ಮಹಾತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

9 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

೧೯೧೮ ನೆಯ ಇಸವಿ ಮಾರ್ಚಿ ತಾ॥ ೨೪ ರಿಂದ ೧೯೧೮ ನೆಯ ಮಾರ್ಚಿ ತಾ॥ ೩೦ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಫಾಲ್ಗುಣ ಶು॥ ದ್ವಾದಶಿಯಿಂದ ಫಾಲ್ಗುಣ ಬ॥ ತದಿಗೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾನ ತೇದಿ
24	ಭಾನು	ದ್ವಾದಶಿ	19-2	ಮಘಾ	60	11
25	[1]ಸೋಮ	ತ್ರಯೋ	23-21	ಮಘಾ	3-30	12
26	[2]ಮಂಗಳ	ಚತುರ್ದ	28-22	ಪುಫ	9-21	13
27	[3]ಬುಧ	ಪೌರ್ಣ	33-41	ಉಫ	15-54	14
28	[4]ಗುರು	ಪಾಡ್ಯ	38-55	ಹಸ್ತ	22-26	15
29	ಶುಕ್ರ	ಬಿದಿಗೆ	43-30	ಚಿತ್ತ	28-29	16
30	ಶನಿ	ತದಿಗೆ	47-15	ಸ್ವಾತಿ	33-49	17

(1) ನಂಜನಗೂಡಿನಲ್ಲಿ ಶ್ರೀಕಂಠೇಶ್ವರಸ್ವಾಮಿ ರಥಃ, ತಿರುಮಕೂಡ್ಲುನಲ್ಲಿ ಅಗಸ್ತ್ಯೇಶ್ವರಸ್ವಾಮಿ ರಥಃ. (2) ತಿ.ನರಸೀಪುರದಲ್ಲಿ ಪ್ರಹ್ಲಾದೋತ್ಸವ, ಮೇಲುಕೋಟೆ ಚಲುವರಾಯಸ್ವಾಮಿ ರಥಃ. (3) ನಾಗಮಂಗಲದ ಸೌಮ್ಯಕೇಶವಸ್ವಾಮಿ ರಥಃ, ಪ್ರಸನ್ನ ನಂಜುಂಡೇಶ್ವರಸ್ವಾಮಿ ರಥಃ, ಕಾಮದಹನಾ, ಹೋಳೀಹಬ್ಬಾ, ಬಾರ್ಕೂರಿನಲ್ಲಿ ಪಂಚಲಿಂಗೇಶ್ವರಸ್ವಾಮಿ ರಥಃ. (4) ತಿ. ನರಸೀಪುರದಲ್ಲಿ ಗುಂಜಾ ನರಸಿಂಹಸ್ವಾಮಿ ರಥಃ, ಮೇಲುಕೋಟೆ ನಾರಾಯಣಸ್ವಾಮಿ ಜಯಂತೀ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರನೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧ್ವಸ್ತ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತಿ ಲಿಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮಾರ್ಚಿ ತಾರೀಖು ೩೧ ನೆಯ ಭಾನುವಾರ. (ಸಂಚಿಕೆ ೧೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ, ಲಾಂಛನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಆರ್ಮ್‌ಲೆಟುಗೆ 1, ಶಾಮಂತಿಗೆಹೂವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರದಬುಡ್ಡಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಆರ್ಮ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಟು ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
16 3, ತಿರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಪಂಚತಂತ್ರಂ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಕಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹಂಬಾಸ	೦—೪—೦
ವ್ರತಪಂಚಕ	೦—೩—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 17

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್‌ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹತ್ತುಕಾಲಕ್ಕೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುವು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಟೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಲ್. ವ್ಹಿ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಲ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕ [illegible] ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚು ಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷೆಯುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
20 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 25

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ [illegible] ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವಿಷ್ಟ [illegible] ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ [illegible] ಟಪಾಲುಖರ್ಚು ಬೇರೆ. ಒಂದಾಣೆ ಸ್ಟ್ಯಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
[illegible]

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮಾರ್ಚಿ ತಾ|| ೩೧ ನೆಯ ಭಾನುವಾರ.

ಮದದ್ರವ್ಯಶಾಖೆಯ ವರದಿ.

ನಮ್ಮ ಸಂಸ್ಥಾನದ ೧೯೧೬-೧೭ ನೆ ವರ್ಷಕ್ಕೆ ಸಂಬಂಧಪಟ್ಟ ಮದದ್ರವ್ಯಶಾಖೆಯ ವರದಿಯು ಈಗತಾನೇ ನಮ್ಮ ಹಸ್ತಗತವಾಗಿರುತ್ತದೆ. ಇದರ ಪ್ರಕಾರ ಆ ವರ್ಷದಲ್ಲಿ ಒಟ್ಟು ಈ ಶಾಖೆಯಿಂದ ೬೩೩೯೭೦೧ ರೂ. ಗಳ ಆದಾಯವಾಗಿರುತ್ತದೆ. ಅದಕ್ಕೆ ಹಿಂದಿನ ವರ್ಷದಲ್ಲಿ ೫೮೦೯೫೯೭ ರೂ. ಗಳು ಉತ್ಪನ್ನವಾಗಿದ್ದುವು. ಎಂದರೆ ೧೯೧೫-೧೬ ನೆ ವರ್ಷಕ್ಕಿಂತ ೧೬-೧೭ ನೆ ವರ್ಷದ ಹುಟ್ಟುವಳಿಯು ೫೪೭೦೦೭ ರೂ. ನಷ್ಟು ಹೆಚ್ಚಿದಂತಾಯಿತು. ನಮ್ಮ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯನ್ನೂ ಈ ಆದಾಯವನ್ನೂ ಹೋಲಿಸಿ ನೋಡಿದರೆ ಪ್ರತಿಯೊಬ್ಬ ಪ್ರಜೆಯ ತಲೆಗೂ ೧-೧-೮ ರೂ. ನಷ್ಟು ಬಿದ್ದಂತಾಗುವುದು. ೧೯೧೫-೧೬ ನೆ ವರ್ಷದಲ್ಲಿ ಪ್ರತಿಯೊಂದು ತಲೆಗೆ ೧-೦-೫ ರೂ. ಬಿದ್ದಂತೆ ಇದ್ದಿತು. ವರ್ಷೇವರ್ಷೇ ಹೀಗೆ ಮದದ್ರವ್ಯಶಾಖೆಯ ಆದಾಯವು ಹೆಚ್ಚುತ್ತಿರುವುದು ಭಯಂಕರವಾಗಿದೆ. ಏಕೆಂದರೆ—ಇದರ ಹೆಚ್ಚುವಿಕೆಯು ಪ್ರಜೆಗಳಲ್ಲಿ ಕುಡಿತದ ದುರ್ವ್ಯಸನವು ಹೆಚ್ಚುತ್ತಿರುವುದನ್ನು ಸಿದ್ಧಾಂತಪಡಿಸುತ್ತದೆ. ಸಂಸ್ಥಾನದಲ್ಲೆಲ್ಲಾ ಭೂಗಂದಾಯದ ವರಮಾನವು ೧ ಕೋಟಿಯೂ ೧೦ ಲಕ್ಷದೊಳಗಿರುವಲ್ಲಿ ಈ ಶಾಖೆಯ ಆದಾಯವು ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿರುವುದು. ಭರತಖಂಡದ ಸರ್ಕಾರಕ್ಕೆ ಈ ಶಾಖೆಯ ಮೂಲಕ ಬರುವ ವರಮಾನವನ್ನು ನೋಡುವಲ್ಲಿ ಈ ರಾಷ್ಟ್ರದ ಒಟ್ಟು ೩೩ ಕೋಟಿ ಪ್ರಜೆಗಳಿಗೆ ತಲೆಗೆ ೮ ಆಣೆಯಂತೆ ಬಿದ್ದಹಾಗೆ ಲೆಕ್ಕವಾಗುವುದು. ನಾಲ್ಕೂಕಾಲು ಕೋಟಿ ಪ್ರಜಾಸಂಖ್ಯೆಯುಳ್ಳ ಮದ್ರಾಸು ಅಧಿಪತ್ಯದಲ್ಲಿ ಈ ಶಾಖೆಯಿಂದ ೧೯೧೬-೧೭ ನೆ ವರ್ಷದಲ್ಲಿ ೩ ಕೋಟಿಯೂ ೭೫ ಲಕ್ಷ ರೂ. ವರಮಾನವಿದ್ದಿತು. ಎಂದರೆ ತಲೆಗೆ ೧೪ ಆಣೆಯಂತೆ ಬಿದ್ದಹಾಗಾಯಿತು. ಬೊಂಬಾಯಿ ಅಧಿಪತ್ಯದಲ್ಲಿ ೨ ಕೋಟಿಯೂ ೭೦ ಲಕ್ಷ ಪ್ರಜಾಸಂಖ್ಯೆಯಿರುವುದು. ಅಲ್ಲಿಯ ಈ ಶಾಖೆಯ ವರಮಾನವು ಕಳೆದ ವರ್ಷದಲ್ಲಿ ಬಹುಶಃ ೨|| ಕೋಟಿಯಷ್ಟಾಗಿದ್ದಿತು. ಎಂದಬಳಿಕ ಅಲ್ಲೂ ತಲೆಗೆ ೧ ರೂ.ಗಿಂತಲೂ ಕಡಿಮೆಯೇ ಬಿದ್ದಹಾಗಾಯಿತು. ಹೀಗಿರುವಲ್ಲಿ ೫೮ ಲಕ್ಷ ಜನಸಂಖ್ಯೆಯುಳ್ಳ ನಮ್ಮ ದೇಶದಲ್ಲಿ ಮದ್ಯಶಾಖೆಯ ವರಮಾನವು ೬೩|| ಲಕ್ಷಕ್ಕಿಂತ ಮಿಾರಿಹೋಗಿ, ತಲೆಗೆ ೧-೧-೮ ಯಷ್ಟು ಬಿದ್ದಿರುವುದೆಂದರೆ ಯಾವ ದೇಶಾಭಿಮಾನಿಗೆ ತಾನೇ ವ್ಯಸನವಾಗುವುದಿಲ್ಲ?

ಒಟ್ಟಿನಲ್ಲಿ ಭರತಖಂಡಾದ್ಯಂತದಲ್ಲೂ ಮದ್ಯಪಾನ ದುರ್ವ್ಯಸನವು ವರ್ಷೇವರ್ಷೇ ಬಳೆಯುತ್ತಲೇ ಇದೆಯೆಂದು ಹೇಳುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ. ಸರ್ಕಾರದ ಲೆಕ್ಕಗಳಿಂದಲೇ ಅದು ಸಿದ್ಧವಾಗುತ್ತದೆ. ಯಾವ ದೇಶದಲ್ಲಿ ಮದ್ಯಪಾನವು ಪಂಚಮಹಾಪಾತಕಗಳಲ್ಲೊಂದಾಗಿ ವಿಧಿಸಲ್ಪಟ್ಟಿರುವುದೋ, ಯಾವ ಪ್ರಮುಖಜನಾಂಗಗಳಾದ ಹಿಂದೂ ಮಹಮ್ಮದೀಯರೀರ್ವರಲ್ಲೂ ಅದು ದುರಾಚಾರವಾಗಿ ನಿಷೇಧಿಸಲ್ಪಟ್ಟಿರುವುದೋ, ಯಾವ ದೇಶವು ಪ್ರಪಂಚದ ಪ್ರಸಿದ್ಧ ರಾಷ್ಟ್ರಗಳನ್ನು ನೋಡಿ ತಾನೂ ಅದರಂತೆ ಆಗಬೇಕೆಂದು ಹವಣಿಸುತ್ತಿದೆಯೋ ಅಂಥ ಈ ನಮ್ಮ ರಾಷ್ಟ್ರದಲ್ಲಿ, ಸರ್ವನಾಶಕ್ಕೂ ಮೂಲಭೂತವಾದ ದುರ್ನೀತಿಮಯ ದುಷ್ಪ್ರವರ್ತನ ಕಾರಣವಾದ ಈ ಮದ್ಯಪಾನ ವ್ಯಸನರೂಪ ಮಹಾಕಾಳವಿಷವು ಭಯಂಕರವಾಗಿ ಪ್ರಸರಿಸುತ್ತಿರುವುದನ್ನು ನೋಡಿ ಹೇಗೆ ಸೈರಿಸಿಕೊಂಡಿರಬಹುದು! ಎಲ್ಲಿ ಮದದ್ರವ್ಯಪಾನಕ್ಕೆ ನಿಷೇಧವಿಲ್ಲವೋ ಅಂಥ ಪಾಶ್ಚಾತ್ಯ ರಾಷ್ಟ್ರಗಳಲ್ಲೇ ಯುದ್ಧಾರಂಭವಾದನಂತರ ಈ ಮದದ್ರವ್ಯ ಸೇವನೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೂ ಕಡಿಮೆಮಾಡಿಬಿಡುವುದಕ್ಕೂ ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ರಷ್ಯಾ ಪ್ರಭುತ್ವದವರು ಆ ಶಾಖೆಯನ್ನೇ ತೆಗೆದುಹಾಕಿಬಿಟ್ಟು ನಾಲ್ಕಾರು ವರ್ಷಗಳಾದುವು. ನಮ್ಮ ಆಂಗ್ಲ ಸಾರ್ವಭೌಮರು ಸ್ವತಃ ಮದ್ಯಪಾನ ಪರಿತ್ಯಾಗ ವ್ರತವನ್ನು ಸ್ವೀಕರಿಸಿ ತಮ್ಮ ಸಾಮ್ರಾಜ್ಯಕ್ಕೆಲ್ಲಾ ಮೇಲುಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಆ ದೇಶದ ಕೂಲಿ ಜನರಲ್ಲೂ ಸೈನಿಕರಲ್ಲೂ ಈ ದುರಭ್ಯಾಸವು ಕಡಿಮೆಯಾದುದರಿಂದ ಅವರಲ್ಲಿ ದೇಹಶಕ್ತಿಯೂ ನೈತಿಕ ಶಕ್ತಿಯೂ ಧನಸಂಗ್ರಹಶಕ್ತಿಯೂ ಹೆಚ್ಚುತ್ತ ಬಂದಿರುವುದನ್ನು ಒಂದೆರಡು ವರ್ಷಗಳ ಅನುಭವದಿಂದಲೇ ತಿಳಿದುಕೊಂಡಿದ್ದಾರೆ. ಅಮೇರಿಕಾ ಸಂಯುಕ್ತರಾಷ್ಟ್ರಗಳಲ್ಲೂ ಕೂಡ ಮದ್ಯಪಾನವನ್ನು ಕುಗ್ಗಿಸುವುದಕ್ಕೆ ವಿಶಿಷ್ಟತರವಾದ ಪ್ರಯತ್ನಗಳನ್ನು ಆ ಸರ್ಕಾರದವರು ಮಾಡಿರುತ್ತಾರೆ. ದೇಶಾಭಿಮಾನವೇ ತಪಸ್ಸಾಗುಳ್ಳ ಆ ದೇಶದ ೮೦೦ ದಿನಪತ್ರಿಕೆಗಳು ತಮ್ಮಲ್ಲಿ ಮದದ್ರವ್ಯ ವಿಕ್ರಯ ವಿಷಯಕವಾದ ಪ್ರಕಟನಗಳನ್ನು ಮುದ್ರಿಸುವುದನ್ನೇ ಬಿಟ್ಟುಬಿಟ್ಟಿರುತ್ತವೆ. ಅಲ್ಲಿಯ ಕೆಲ ಪ್ರಭುತ್ವಗಳಲ್ಲಿ ಮದದ್ರವ್ಯ ವಿಷಯಕ ಪ್ರಕಟನವು ಶಿಕ್ಷಾರ್ಹವೆಂಬುದಾಗಿ ವಿಧಿಯು ಕೂಡ ಕಲ್ಪಿಸಲ್ಪಟ್ಟಿದೆ. ನಮ್ಮ ದೇಶದಲ್ಲಾದರೊ ಪ್ರಭುತ್ವದವರಿಗೆ ಅದು ಬೇಕಿಲ್ಲ. ದೇಶಾಭಿಮಾನಿಗಳಾದ ಕೆಲವರು ಮದ್ಯಪಾನ ನಿಷೇಧಕ ಸಭೆಗಳನ್ನು ಸ್ಥಾಪಿಸಿಯೂ, ಶಾಸನನಿರ್ಮಾಣಸಭೆಗಳಲ್ಲಿ ಈ ವಿಷಯವಾಗಿ ಪ್ರಸ್ತಾಪಿಸಿ ಇದರ ನಿರೋಧಕ್ಕೆ ಗೌರ್ನಮೆಂಟಿನವರಿಂದ ಶಾಸನವೊಂದನ್ನೇರ್ಪಡಿಸಬೇಕೆಂಬುದಾಗಿಯೂ, ಸಭೆಗಳಲ್ಲಿ ಉಪನ್ಯಸಿಸುತ್ತಲೂ ಪತ್ರಿಕೆಗಳಲ್ಲಿ ಬರೆಯುತ್ತಲೂ ಪಾಟುಪಡುತ್ತಿದ್ದಾರೆ. ಆದರೇನು? ಎಲ್ಲವೂ ನಿಷ್ಫಲವಾಗುತ್ತಲಿವೆ. ಸರ್ಕಾರದವರು ಈ ಶಾಖೆಯ ವರಮಾನವನ್ನು ಕಳೆದುಕೊಳ್ಳುವುದಕ್ಕೆ ಇಷ್ಟವುಳ್ಳವರಾಗಿಲ್ಲ. ಇದನ್ನು ಕಡಿಮೆಮಾಡಿಸುತ್ತೇವೆಂದು ಅವರು ನಿರ್ಧರಿಸಿಕೊಳ್ಳುವ ಉಪಾಯಗಳಿಂದ ಅವರ ಉದ್ದೇಶವು ಸ್ವಲ್ಪವೂ ನೆರವೇರದೆ ಅವರ ಆದಾಯವು ಮಾತ್ರ ಹೆಚ್ಚುತ್ತಲೇ ಇದೆ. ಈ ತಿಂಗಳಲ್ಲಿ ನೆರವೇರಿದ ಸಾಮ್ರಾಜ್ಯನಿಯಮನಿರ್ಮಾಣಸಭೆ ಪ್ರಾಂತಿಕ ಶಾಸನಸಭೆಗಳಲ್ಲೆಲ್ಲಾ ಈ ಮದ್ಯಪಾನ ನಿರೋಧನ ವಿಷಯಕವಾದ ಚರ್ಚೆಗಳು ಬಂದೇಬಂದಿರುತ್ತವೆ. ಆದರೇನು? ಫಲಮಾತ್ರ ಆಗಲಿಲ್ಲ. ಮದ್ಯಪಾನ ನಿಷೇಧಕ ವಿಧಿಕಲ್ಪನೆಯು ಮಾನವ ಸ್ವಾತಂತ್ರ್ಯಕ್ಕೆ ಭಂಗಕಾರಿಯೆಂದೂ, ಅದು ಅಸಾಧ್ಯವಾದ ಯತ್ನವೆಂದೂ ಮೊದಲಾಗಿ ಹೇಳಿ, ಪ್ರಭುತ್ವದವರು ತಮ್ಮ ದಾರಿಯನ್ನು ತಾವು ಕಾಪಾಡಿಕೊಂಡರು. ಅದಕ್ಕೆ ಅವರ ಹಿಂಬಾಲಕರಾದ ಅನೇಕ ಮಂದಿ ಸಭಿಕರೂ ಒತ್ತಾಸೆಯಾದರು. ಇದೇ ಭರತಖಂಡದ ದುರ್ದೈವಚಿಹ್ನೆಯು.

ಇತರ ಪ್ರಭುತ್ವಗಳವರು ಹೇಳಿಕೊಳ್ಳುವಂತೆಯೇ ನಮ್ಮ ಸರ್ಕಾರದವರಾದರೂ ಮದ್ಯಪಾನ ವ್ಯಸನವನ್ನು ತಗ್ಗಿಸುವುದಕ್ಕಾಗಿ ಅವುಗಳನ್ನು ಮಾರುವ ಅಂಗಡಿಗಳ ಸಂಖ್ಯೆಯನ್ನು ಕಡಿಮೆಮಾಡುವುದು, ಮಾದಕವಸ್ತುಗಳ ಬೆಲೆಯನ್ನು ಹೆಚ್ಚಿಸುವುದು, ಇವೇ ಮೊದಲಾದ ಉಪಾಯಗಳನ್ನು ಮಾಡುತ್ತಿರುವಂತೆ ಹೇಳಿಕೊಳ್ಳುತ್ತಾರೆ. ಆದರೆ ಇಂಥ ಪ್ರಯತ್ನಗಳಿಂದ ಲೇಶವೂ ಫಲವಿಲ್ಲವೆಂದು ಅವರಿಗೆ ಮನದಟ್ಟಾಗದೆ ಇರಲಾರದು. ಅಂಗಡಿಗಳು ಕಡಿಮೆಯಾದ ಮಾತ್ರಕ್ಕೇ ಮಾರಾಟವಾಗಿರುವ ಪದಾರ್ಥಗಳ ಪರಿಮಿತಿಯು ಕಡಿಮೆಯಾಗಿದೆಯೆ? ೧೦ ಅಂಗಡಿಗಳಲ್ಲಿ ೧೦೦ ಗ್ಯಾಲನ್ನು ಮಾರಿದರೆ, ಮತ್ತೊಂದುಕಡೆ ಒಂದೇ ಅಂಗಡಿಯಲ್ಲಿ ೫೦೦ ಗ್ಯಾಲನ್ನುಗಳ ಮಾರಾಟವಾಗಿರಬಾರದೆ? ಈ ಸರ್ಕಾರಿ ವರದಿಯಲ್ಲಿ ಕಂಡ ಪಟ್ಟಿಗಳನ್ನು ನೋಡುವಲ್ಲಿ ಪ್ರಸಕ್ತ ವರ್ಷದಲ್ಲಿ ಮಾರಾಟವಾಗಿರುವ ಅರಕ್ಕು ಕಳೆದ ೧೫-೧೬ ನೆ ವರ್ಷದಲ್ಲಿ ೩,೭೨,೮೮೭ ಗ್ಯಾಲನ್ನಾಗಿದ್ದುದಕ್ಕೆ ೧೬-೧೭ ನೆ ವರ್ಷದಲ್ಲಿ ೪,೩೫,೦೦೯ ಗ್ಯಾಲನ್ನುಗಳ ಮಾರಾಟವಾಗಿದೆಯೆಂದು ಗೊತ್ತಾಗುತ್ತದೆ. ಹೀಗಿರುವುದರಿಂದ ಅಂಗಡಿಗಳ ಸಂಖ್ಯೆಯನ್ನು ಕಡಿಮೆಮಾಡುವುದರಿಂದಲೇ ಈ ದುರ್ವ್ಯಸನವು ತಗ್ಗುತ್ತದೆಂದು ಹೇಳುವುದು ಅಸಂಗತವಲ್ಲವೆ? ಮಾದಕವಸ್ತುಗಳ ಬೆಲೆಯನ್ನು ಹೆಚ್ಚಿಸುವುದರಿಂದಲೂ ಕೂಡ ಇದರ ವ್ಯಾಪನೆಯು ನಿಜವಾಗಿಯೂ ಕುಗ್ಗಲಾರದು. ಅಭ್ಯಾಸಬದ್ಧರು ಹೇಗಾದರೂ ಮಾಡಿ ದುಡ್ಡನ್ನು ಸಂಪಾದಿಸಿ ಇದಕ್ಕೆ ತೆತ್ತು ಮತ್ತಷ್ಟು ಬಡವರಾಗುವರು. ಆದರಿಂದ ಪ್ರಜೆಗಳಲ್ಲಿ ಬಡತನವನ್ನು ಹೆಚ್ಚಿಸಿ, ಸರ್ಕಾರದ ಬೊಕ್ಕಸವನ್ನು ಇನ್ನಷ್ಟು ಪುಷ್ಟಿಗೊಳಿಸಿಕೊಂಡಂತಾಗುವುದೇ ಹೊರತು ಮತ್ತೇನೂ ಫಲವಿಲ್ಲ. ಇದಲ್ಲದೆ ಬಡಜನರು ತಮ್ಮ ದುರ್ವ್ಯಸನಗಳಿಗೆ ಹೆಚ್ಚು ಹಣವನ್ನು ಒದಗಿಸಿಕೊಳ್ಳುವುದಕ್ಕಾಗಿ ಸಾಲಗಳನ್ನು ಮಾಡಿಯೋ ಕಳ್ಳರಾಗಿಯೋ ಕೆಟ್ಟುಹೋಗಲು ಇನ್ನಷ್ಟು ಮಾರ್ಗವಾಗುವುದು. ಆದುಕಾರಣ ಇಂಥ ಕ್ಷುದ್ರಪ್ರಯತ್ನಗಳಿಂದೆಲ್ಲಾ ಫಲವಾಗುವುದೆಂದು ಹೇಳುವುದೂ ನಿರೀಕ್ಷಿಸುವುದೂ ವ್ಯರ್ಥವೇ. ಅಕ್ರಮ ದುರ್ನೀತಿಗಳಿಗೆ ದಾರಿಹಾಕಿಕೊಟ್ಟು ಪ್ರಜೆಗಳನ್ನು ನಿಸ್ಸತ್ವರನ್ನಾಗಿ ಮಾಡುವಲ್ಲಿ ಅನರ್ಗಳ ಶಕ್ತಿಯುಳ್ಳ ಈ ದುರ್ವ್ಯಸನವನ್ನು ಪ್ರಬಲವಾದ ನಿಷೇಧದಿಂದ ತಡೆಯತಕ್ಕುದು ಪ್ರಭುತ್ವದವರಿಗೆ ಮುಖ್ಯ ಧರ್ಮವಾಗಿರುವುದು. ದೇಶವನ್ನು ಸಂಪದಭಿವೃದ್ಧಿ ಮೊದಲಾದುವುಗಳಿಂದ ಉನ್ನತಿಗೆ ತರುವುದಕ್ಕಾಗಿ ಒಂದು ಕಡೆ ಲಕ್ಷಾಂತರ ರೂ. ಗಳನ್ನು ನಿರ್ಲಕ್ಷ್ಯವಾಗಿ ವೆಚ್ಚಮಾಡುತ್ತಿರುವ ಪ್ರಭುತ್ವದವರು ಮತ್ತೊಂದು ಕಡೆ ಪ್ರಜೆಗಳ ಸಾರವನ್ನೆಲ್ಲಾ ದಿನಕ್ರಮೇಣ ಹೀರಿ ನಾಶಗೊಳಿಸುವ ಕುಷ್ಠಹುಳುವಿನಂತಿರುವ ಈ ದುರ್ವ್ಯಸನವನ್ನು ತೊಲಗಿಸದೆ, ಅದರ ಮೂಲಕವಾಗಿ ಬರುವ ಆದಾಯವನ್ನೇ ಮುಖ್ಯಲಕ್ಷ್ಯವನ್ನಾಗಿಟ್ಟುಕೊಳ್ಳುವುದು ಎಂದಿಗೂ ಧರ್ಮವಲ್ಲ. ಕುಡಿತವು ಸಂಪೂರ್ಣವಾಗಿ ನಿಷೇಧಿಸಲ್ಪಡುವವರೆಗೂ ದೇಶದಲ್ಲಿ ಪ್ರಜಾಸೌಖ್ಯವೆಂಬುದು ವ್ಯರ್ಥವೇ ಸರಿ.

ಪ್ರಭುತ್ವದವರು ತಮ್ಮ ಆದಾಯದ ದೊಡ್ಡ ಭಾಗವನ್ನು ಕಳೆದುಕೊಳ್ಳಲಾರದೆ ಪ್ರಜಾಸಮಾಧಾನಕ್ಕಾಗಿ ಶಮನೋಪಾಯಗಳನ್ನು ನಟಿಸುತ್ತಿರುವುದೊಂದುಕಡೆಯಾದರೆ, ಪ್ರಜೆಗಳಲ್ಲಿ ಸಾಂಘಿಕಾಚಾರರಕ್ಷಕರೂ ಸದಾಚಾರಬೋಧಕರೂ ವಿದ್ಯಾಧಿಕರೂ ಆದ ಜನರಾದರೂ ಇದರ ನಿರೋಧಕ್ಕೆ ತಕ್ಕ ವ್ಯವಸಾಯವನ್ನು ಮಾಡದಿರುವುದು ಬಹಳ ಅನ್ಯಾಯವಲ್ಲವೆ? ಈಗ ವಿದ್ಯಾಧಿಕರಲ್ಲೇ ಈ ದುರ್ವ್ಯಸನವು ಪಾಶ್ಚಾತ್ಯ ಸಂಸರ್ಗದಿಂದ ವೃದ್ಧಿಯಾಗುತ್ತಿದೆಯಲ್ಲಾ! ಮಠಾಚಾರ್ಯರುಗಳು ಕಣ್ಣುಮುಚ್ಚಿಕೊಂಡು ಕುಳಿತಿದ್ದಾರಲ್ಲಾ! ಸಂಘದ ಕಟ್ಟುಪಾಡುಗಳೆಲ್ಲಾ ಕಳಚಿಹೋಗಿವೆಯಲ್ಲಾ! ಮ|| ಎ. ಎಸ್. ನರಸಿಂಹಯ್ಯಂಗಾರರಂಥ ಹಳಬರು ಈ ವಿದ್ಯಾಧಿಕರಾದ ಜನರ ಸಭೆಯಲ್ಲಿ ದುರ್ವ್ಯಸನ ನಿರೋಧಕವಾದ ಹಿತೋಕ್ತಿಗಳನ್ನಾಡುವುದಕ್ಕೆ ಹೆದರಿಯೋ ಮತ್ತಾವ ಕಾರಣದಿಂದಲೋ ಅದನ್ನು ಬಿಟ್ಟು, ಎಲ್ಲೋ ಅಪೂರ್ವವಾಗಿ ನಗರವಾಸ ಸಾಂಕರ್ಯದಿಂದ ದುರ್ವ್ಯಸನಕ್ಕೆ ಬಲಿಯಾದ ಒಬ್ಬಿಬ್ಬರನ್ನು ವಿರಳವಾಗಿ ಹೊಂದಿರುವ ಜನವರ್ಗದವರನ್ನು ಕುರಿತು ನೀವೆಲ್ಲಾ ಕುಡಿಕರೆಂದು ಬುದ್ಧಿಹೇಳುವುದಕ್ಕೆ ಪ್ರವರ್ತಿಸಿ, ತಾವನ್ಮಾತ್ರದಿಂದ ಕೃತಾರ್ಥಂಮನ್ಯರಾಗುತ್ತಿರುವರಲ್ಲಾ! ಚೀನಾದೇಶದ ಪ್ರಭುತ್ವದವರು ಮಹತ್ತರವಾಗಿದ್ದ ಅಫೀಮಿನ ದುರ್ವ್ಯಸನವನ್ನು ತಮ್ಮ ಪ್ರಜೆಗಳಲ್ಲಿ ತಪ್ಪಿಸುವುದಕ್ಕಾಗಿ, ಮೊಟ್ಟಮೊದಲು ತಮ್ಮ ಸರ್ಕಾರದುದ್ಯೋಗಗಳಲ್ಲಿರುವ ಯಾರೊಬ್ಬರೂ ಅದನ್ನು ಸೇವಿಸದಂತೆ ಮಾಡುವುದಕ್ಕಾಗಿ ಬಲವಾದ ಕಟ್ಟುಮಾಡಿದಂತೆ ನಮ್ಮ ಪ್ರಭುತ್ವವು ಯಾಕೆ ಮಾಡಬಾರದು? ಇದು ಮದ್ಯಪಾನ ನಿಷೇಧವಿಲ್ಲದ ಆಂಗ್ಲ ಜನರ ಪ್ರಭುತ್ವವಾಗಿರದೆ ಅನೂಚಾನವಾಗಿ ಅದರ ನಿಷೇಧವುಳ್ಳ ದೇಶೀಯರ ಪ್ರಭುತ್ವವಷ್ಟೆ. ಸರ್ಕಾರದಧಿಕಾರದಲ್ಲಿರುವ ಯಾವ ಉದ್ಯೋಗಿಯು ಈ ದುರ್ವ್ಯಸನಕ್ಕೆ ಬಲಿಬಿದ್ದಿರುವನೆಂಬುದನ್ನು ತಿಳಿದ ಕೂಡಲೇ ಅಂಥವನನ್ನು ಕೆಲಸದಿಂದ ತಳ್ಳಿಹಾಕುವ ಏರ್ಪಾಟನ್ನು ಏತಕ್ಕೆ ಮಾಡಬಾರದು? ಉತ್ತಮವರ್ಣೀಯರೂ ವಿದ್ಯಾಧಿಕರೂ ಆದ ಜನರಲ್ಲಿ ಈ ಅಭ್ಯಾಸವಿಟ್ಟುಕೊಂಡವರನ್ನು ಆಯಾ ಸಂಘದವರು ಬಹಿಷ್ಕರಿಸುವುದಕ್ಕೂ ಬೇಕಿದ್ದರೆ ಪ್ರಭುತ್ವದವರು ಗಡೀಪಾರು ಮಾಡಿಸುವುದಕ್ಕೂ ಏತಕ್ಕೆ ಪ್ರಯತ್ನಿಸಬಾರದು? ಪ್ರಭುತ್ವದವರು ನಿಶ್ಶೇಷವಾಗಿ ಈ ಶಾಖೆಯನ್ನೇ ಮುಚ್ಚಿಬಿಡುವುದಕ್ಕೆ ಸಿದ್ಧರಾಗದಿದ್ದರೂ ಇಂಥ ಕಠಿನೋಪಾಯಗಳನೇಕವನ್ನು ಆಚರಿಸಬಹುದಲ್ಲವೆ? ಇದು ಹೊರತು ಸಾಮಾನ್ಯಜನರಲ್ಲಿ ವಿವೇಕಾಭಿವೃದ್ಧಿಯಾಗುವುದಕ್ಕೆ ಅವಕಾಶವಾಗುವಂತೆ ಈ ಶಾಖೆಯಿಂದ ಬರುವ ಸರ್ವಾದಾಯವನ್ನೂ ಮಿಾಸಲಾಗಿ ವಿದ್ಯಾಶಾಖೆಗೆ ಉಪಯೋಗಿಸುವುದಕ್ಕಾದರೂ ಸಂಕಲ್ಪಿಸಿದರೆ ದೇಶಾಭಿಮಾನಿಗಳಿಗೆ ಎಷ್ಟೋ ಸಮಾಧಾನವಾದೀತು. ಈ ದುಷ್ಟಾದಾಯದ ಸಂಸರ್ಗ ದೋಷದಿಂದ ಬೊಕ್ಕಸವು ಅಶುದ್ಧವಾಗದಂಥ ಪರಿಣಾಮವಾದರೂ ಲಭಿಸೀತು.

ಅಸ್ಪೃಶ್ಯತಾ ನಿವಾರಕ ಮಹಾಸಭೆ.

ಭರತಖಂಡದಲ್ಲಿರುವ ಪಂಚಮಜನರ ಸಂಖ್ಯೆಯು ಈ ದೇಶದ ಒಟ್ಟು ಪ್ರಜಾಸಂಖ್ಯೆಯಲ್ಲಿ ⅕ ಭಾಗವಾಗುತ್ತದೆ. ಇವರು ಅಸ್ಪೃಶ್ಯರೆಂದು ಕಲ್ಪಿಸಲ್ಪಟ್ಟು ವಿದ್ಯಾರ್ಜನೆಗವಕಾಶವೊಂದದೆ ಪಶುಗಳಿಗಿಂತಲೂ ಕೀಳಾಗಿ ಕಾಣಲ್ಪಡುತ್ತಲಿರುವುದು ಸರ್ವರಿಗೂ ವಿದಿತವಾಗಿದೆ. ಕ್ರೈಸ್ತರು ಇವರುಗಳಿಗೆ ಸ್ವಲ್ಪ ಅವಲಂಬನೆಯನ್ನು ಕೊಟ್ಟುದರಿಂದ ಇವರಲ್ಲಿ ಹಲವರು ಸ್ವಮತಭ್ರಷ್ಟರಾಗಿ ಕ್ರೈಸ್ತಮತಸ್ವೀಕಾರದಿಂದ ಉನ್ನತಿ ಪಡೆದುಕೊಂಡರು. ಹೀಗೆ ಹಿಂದೂಮತದಲ್ಲಿ ಇವರಿಗೆ ತಕ್ಕ ಆಶ್ರಯವಿಲ್ಲದೆಹೋದುದರಿಂದ ಇವರುಗಳು ಅನ್ಯರ ಪಾಲಾಗುತ್ತಿರುವುದನ್ನು ತಪ್ಪಿಸುವುದು ಭಾರತೀಯರೆಲ್ಲರಿಗೂ ಕರ್ತವ್ಯವಾಗಿದೆ. ಈ ಪತಿತಜನೋದ್ಧಾರಪ್ರಯತ್ನವು ಈಗ ಭರತಖಂಡದ ಮುಖ್ಯಚರ್ಚಾಸ್ಪದವಿಷಯಗಳಲ್ಲಿ ಒಂದಾಗಿ ನಿಂತಿರುತ್ತದೆ. ಇದಕ್ಕಾಗಿ ಗಾಢತರವಾದ ಪ್ರಯತ್ನಗಳು ನಡೆದೇ ತೀರಬೇಕಾಗಿವೆ. ಭರತಖಂಡದ ಸಂಘಸುಧಾರಕ ಸಭೆಯವರು ವರ್ಷೇವರ್ಷೇ ಇದಕ್ಕಾಗಿ ತಕ್ಕ ಸೂಚನೆಗಳನ್ನು ಕೊಟ್ಟು ಪ್ರಜಾಪ್ರಮುಖರನ್ನು ಎಚ್ಚರಿಸುತ್ತಿದ್ದಾರೆ. ದೇಶದಲ್ಲಿ ಅಲ್ಲಿಗಲ್ಲಿಗೆ ಈ ಪ್ರಯತ್ನಸಾಧನೆಯ ಸಂಘಗಳು ಸ್ಥಾಪಿಸಲ್ಪಟ್ಟಿವೆ. ಪ್ರಭುತ್ವಗಳವರೂ ಕೂಡ ಈ ಕಾರ್ಯಕ್ಕೆ ಉದಾರವಾಗಿ ಸಹಾಯಪ್ರೋತ್ಸಾಹಗಳನ್ನು ಮಾಡುತ್ತಿದ್ದಾರೆ.

ಕಳೆದವಾರ ಬೊಂಬಾಯಿಯಲ್ಲಿ ಇದಕ್ಕಾಗಿ ಒಂದು ಮಹಾಸಭೆಯು ಬರೋಡಾ ಮಹಾರಾಜರವರ ಅಧ್ಯಕ್ಷತೆಯಿಂದ ಕಳೆದ ತಾ|| ೨೩-೨೪ ರಲ್ಲಿ ಕೂಡಿದ್ದಿತು. ಸರ್ ನಾರಾಯಣ ಚಂದ್ರವಾರ್ಕರ್‌ರವರು ಸ್ವಾಗತಸಂಘಾಧ್ಯಕ್ಷರಾಗಿದ್ದರು. ಪ್ರಜಾಪ್ರಮುಖರನೇಕರು ಸಭೆಗೆ ಬಂದಿದ್ದರು. ಅನೇಕಮಂದಿ ನಿಮ್ನಜಾತಿ ಜನರು ಸಕುಟುಂಬರಾಗಿ ಬಂದಿದ್ದರು. ಮೊದಲು ಸತ್ಕಾರಕ ಸಂಘಾಧ್ಯಕ್ಷರು ಸಭಿಕರಿಗೆ ಸ್ವಾಗತವನ್ನು ಮಾಡಿ ಭಾಷಣಮಾಡಿದಾಗ್ಗೆ ಸಭೆಯ ಉದ್ದೇಶವನ್ನೆಲ್ಲಾ ವಿವರಿಸಿದುದಲ್ಲದೆ "ನಮ್ಮ ಹಿಂದೂ ಜನಾಂಗದಲ್ಲಿ ಹೊಲೆಯ ಮಾದಿಗರುಗಳು ಅಸ್ಪೃಶ್ಯರೆಂಬುದಾಗಿ ಉತ್ತಮವರ್ಣದವರಿಂದ ಎದುವರೆಗೂ ಭಾವಿಸಲ್ಪಟ್ಟಿರುವರೋ ಅದುವರೆಗೂ ಆ ಉನ್ನತವರ್ಣದವರನ್ನು ಹೊಲೆಯ ಮಾದಿಗರನ್ನಾಗಿಯೇ ಭಗವಂತನು ಅಣಗಿಸಿಬಿಡದೆ ಹೋಗುವುದಿಲ್ಲ" ಎಂದು ಹೇಳಿದರು. ಬಳಿಕ ಸಭಾಧ್ಯಕ್ಷರು ಮಾಡಿದ ಭಾಷಣದಲ್ಲಿ—ಈ ಹೊಲೆಯ ಮಾದಿಗರು ಮಾತ್ರವೇ ಅಲ್ಲದೆ ಶೂದ್ರರೆಂಬ ಅಲಕ್ಷೀಕರಿಸಲ್ಪಟ್ಟಿರುವ ಇನ್ನೂ ಕೋಟ್ಯಂತರ ಜನರ ಸಾಂಘಿಕಸ್ಥಿತಿಯನ್ನೂ ಕೂಡ ಭಾರತೀಯರೆಲ್ಲಾ ಧೈರ್ಯದಿಂದ ಸುಧಾರಿಸಬೇಕೆಂದು ಹೇಳಿದರು. ಕೊಲ್ಲಾಪುರದ ಶಂಕರಾಚಾರ್ಯ ಮಠಾಧಿಪತಿಗಳಾದ ಸ್ವಾಮಿಗಳು ಈ ಸಭೆಗೆ ಬರಲು ಆಶ್ವಾಸನ ಕೊಟ್ಟಿದ್ದರು. ಕಾರ್ಯಾಂತರಗಳಿಂದ ಬರಲನುಕೂಲಿಸದೆ ಹೋದಕಾರಣ, ಇದರ ವಿಷಯವಾಗಿ ಸಾನುಭೂತಿಯನ್ನು ತೋರಿಸಿ ಒಂದು ಪತ್ರವನ್ನು ಬರೆದು, ಅದರಲ್ಲಿ "ಆಧ್ಯಾತ್ಮಿಕೋನ್ನತಸೂತ್ರಗಳಿಂದ ನಮ್ಮ ಶಾಸ್ತ್ರಗಳು ನಿಬಿಡವಾಗಿವೆ. ಆದರೆ ಕಾಲಕ್ರಮದಲ್ಲಿ ಅನೇಕ ಮೂರ್ಖಾಚಾರಗಳು ಹುಟ್ಟಿ ಪ್ರಬಲಿಸಿವೆ. ಹಿಂದೂಗಳಲ್ಲಿರುವ ನಿಮ್ನಜಾತಿ ಜನರನ್ನು ನೀಚಭಾವದಿಂದ ಕಾಣುವ ಲೌಕಿಕನು ಪಾಪಿಷ್ಠನು. ವಿಶ್ವಮಾನವಸಮತ್ವಸೂತ್ರವನ್ನು ಹಿಡಿದು ನನಗೆ ಅವರಮೇಲೆ ವಿಶೇಷ ಸಾನುಭೂತಿಯಿರುವುದು. ಅವರು ದುರಭ್ಯಾಸಗಳೊಳಗಾಗಿ ಹೀನಸ್ಥಿತಿಗೆ ಬಂದಿರುವರು. ಅವರ ಸ್ಥಿತಿಯನ್ನು ಸುಧಾರಿಸಬೇಕು. ಈ ನಿಮ್ಮ ಜಾತಿಯವರಿಂದ ಅನೇಕ ಮಹರ್ಷಿಗಳು ಉದ್ಭವಿಸಿದರು. ಈ ನಿಮ್ಮ ಜಾತಿಯವರನ್ನು ಉತ್ತಮಜಾತಿಯವರ ಸ್ಥಿತಿಗೆ ತರಬೇಕು. ಅವರ ಪುರೋವೃದ್ಧಿಗೆ ಆತಂಕವಾಗಿರುವ ನಿಯಮಗಳನ್ನೆಲ್ಲಾ ತೊಲಗಿಸಬೇಕು. ಈ ಮಹಾಸಭೆಯ ಕಾರ್ಯಗಳು ಸಫಲವಾಗಬೇಕು. ಧಾರ್ಮಿಕವಿಷಯದಲ್ಲಿ ಏನಾದರೂ ಮಾರ್ಪನ್ನು ಮಾಡಬೇಕಾಗಿದ್ದರೆ ಅದನ್ನು ನನ್ನ ಸಹೋದರ ಪೀಠಾಧಿಪತಿಗಳೊಡನೆ ಆಲೋಚಿಸಿ, ನಮ್ಮ ಶಾಸ್ತ್ರಾನುಗುಣ್ಯವಾಗಿಯೂ ಕಾಲೋಚಿತವಾಗಿಯೂ ಏರ್ಪಡಿಸುವ ವಿಷಯದಲ್ಲಿ ಆಲೋಚಿಸುವೆನು." ಎಂದು ಅಭಿಪ್ರಾಯ ಕೊಟ್ಟಿರುವರು. ಶ್ರೀಯುತ ಬಾಲಗಂಗಾಧರ ತಿಲಕರವರು ಈ ಸಭೆಗೆ ಬಂದಿದ್ದು ಒಂದು ಉಪನ್ಯಾಸಮಾಡಿ, ಹಿಂದೂಶಾಸ್ತ್ರದಲ್ಲಿ ಅಸ್ಪೃಶ್ಯತ್ವವಿಷಯವಾಗಿ ಎಲ್ಲೂ ಆಧಾರವಿಲ್ಲವೆಂದೂ, ರಾಷ್ಟ್ರೀಯಮಹಾಸಭೆಯವರು ನಿಮ್ನಜಾತಿಯವರ ದುಸ್ಸ್ಥಿತಿನಿವಾರಣೆಗೆ ಸಾಹಸಪಡುವುದು ಅವಶ್ಯಕವೆಂದೂ ಅಭಿಪ್ರಾಯಪಟ್ಟರು. ಹೀಗೆ ಇನ್ನೂ ಕೆಲರ ಭಾಷಣಗಳಾದ ಬಳಿಕ, ಅಸ್ಪೃಶ್ಯರೆಂದು ತಿಳಿಯಲ್ಪಟ್ಟಿರುವ ಈ ಜನರು ಸಾರ್ವಜನಿಕಗಳಾದ ಕೋರ್ಟು ಕಚೇರಿಗಳು ಪಾಠಶಾಲೆಗಳು ದೇವಾಲಯಗಳು ಮೊದಲಾದ ಕಡೆಗಳಿಗೆ ಹೋಗುವುದಕ್ಕೆ ನಿರಾತಂಕವಾಗಿರುವಂತೆ ಮಾಡಬೇಕು. ಜಲಾಶಯಗಳು ಮೊದಲಾದುವುಗಳು ಇವರಿಗಾಗಿ ಪ್ರತ್ಯೇಕವಾಗಿರುವುದನ್ನು ತಪ್ಪಿಸಬೇಕು. ಇವರ ವಿದ್ಯಾವಿಕಾಸ, ವ್ಯಾಪಕತೆ ಮೊದಲಾದ ಸರ್ವವಿಷಯಗಳಲ್ಲೂ ದೇಶೀಯ ಮಹಾಸಭೆಯವರೂ ದೇಶಪ್ರಮುಖರೂ ಕೈಯಲ್ಲಾಗುವ ಸಹಾಯಗಳನ್ನೆಲ್ಲಾ ಮಾಡಬೇಕು. ಹಿಂದೂಮತದಿಂದ ಭ್ರಷ್ಟರಾಗಿ ಹೋಗಿರುವ ಈ ಜನರನ್ನು ಪುನಃ ಪ್ರಾಯಶ್ಚಿತ್ತಪೂರ್ವಕ ಹಿಂದೂಸಂಘಕ್ಕೆ ಸೇರಿಸಿಕೊಳ್ಳಬೇಕು" ಇತ್ಯಾದಿ ನಿರ್ಧಾರಗಳು ಮಾಡಲ್ಪಟ್ಟುವು.

ಒಳದೇಶದ ವೃತ್ತಾಂತಗಳು.

ಧರ್ಮಪ್ರಕಾಶ ಡಿ. ಬನುಮಯ್ಯನವರ ಪಾಠಶಾಲೆಯ ಗ್ರಾಂಟನ್ನು ಸರ್ಕಾರದವರು ೫೦ ರಿಂದ ೧೦೦ ರೂ. ಗಳಿಗೆ ಹೆಚ್ಚಿಸಿಕೊಟ್ಟಿರುತ್ತಾರೆ. ಇದರಿಂದ ಆ ಶಾಲೆಯ ಉಪಾಧ್ಯಾಯರ ವೇತನಗಳು ಹೆಚ್ಚಿಸಲ್ಪಡಲವಕಾಶವಾಯಿತು.

ರಾಜಧಾನಿಗೆ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಹಳೆ ಅಗ್ರಹಾರದಲ್ಲಿರುವ ಮ|| ಸೋಮಶೇಖರಯ್ಯನವರು ಮುಡುಕುದೊರೆ ವೀರಶೈವ ಮತ ಸಂವರ್ಧನೀ ಸಭೆಯ ಪರವಾಗಿ ಅಶನ ವಸತಿಗಳಿಗೆ ಅನುಕೂಲಪಡಿಸಿರುತ್ತಾರೆ.

ರಾಜಧಾನಿಯಲ್ಲಿ ಕಳೆದ ಸೋಮವಾರ ಹಗಲೂ ಮಂಗಳವಾರ ರಾತ್ರಿಯೂ ಹದವಾದ ಮಳೆಯಾಯಿತು. ಮಕ್ಕಳಿಗೆ ಸಿಡುಬು ಏಳುವುದು ಹೆಚ್ಚುತ್ತಿದೆ. ಅದರಿಂದಾಗುವ ಮರಣಗಳ ಸಂಖ್ಯೆಗಳೂ ಹೆಚ್ಚುತ್ತಿವೆ. ಸಿಡುಬನ್ನು ಮಕ್ಕಳಿಗೆ ಹಾಕಿಸದೆ ಇರುವವರು ತತ್‌ಕ್ಷಣವೇ ಹೆಲ್ತಾಫೀಸಿಗೆ ಹೋಗಿ ಸಿಡುಬು ಹಾಕಿಸುವುದು ಒಳ್ಳೇದು.

ಕಳೆದ ಡಿಶಂಬರ್ ತಿಂಗಳಲ್ಲಿ ರಾಜಧಾನಿಗೆ ಸಮಿಾಪದಲ್ಲಿ ಲೋಹಮಾರ್ಗದ ಕಂಬಿಗಳು ಕಿತ್ತುಹಾಕಲ್ಪಟ್ಟಿದ್ದುದರಿಂದ ಬಂಡಿಗಳು ಉರುಳಿದುವಷ್ಟೆ. ಅದರ ಕಾರಣವನ್ನು ವಿಚಾರಿಸುವುದಕ್ಕೆ ನಿಯುಕ್ತರಾಗಿದ್ದ ಸಂಘದವರ ವರದಿಯ ಪ್ರಕಾರ ಆ ಕಾರ್ಯವನ್ನು ಯಾರೋ ಬೇಕೆಂದು ಮಾಡಿದ್ದುದಾಗಿ ವ್ಯಕ್ತವಾಗಿರುತ್ತದೆ. ಆ ದುಷ್ಟರಾರೋ ಇನ್ನೂ ಸಿಕ್ಕಿಲ್ಲ.

ಕ್ಲೋಸ್‌ಪೇಟೆಯ ಟವನ್ನಿನಲ್ಲಿ ಪದ್ಧತಿಯಪ್ರಕಾರ ನಡೆಯುವ ರಾಮಗಿರಿಯ ಶ್ರೀ ರಾಮದೇವರ ರಥೋತ್ಸವ ಸಮಯದಲ್ಲಿ ಅಂದರೆ ಬರುವ ಏಪ್ರಿಲ್ ತಾ|| ೧೮ ಮತ್ತು ೧೯ ರಲ್ಲಿ ದನಗಳ ಪ್ರದರ್ಶನವು ನಡೆಸಲ್ಪಟ್ಟು ಉತ್ತಮವಾದ ದನಗಳಿಗೆ ಬಹುಮಾನ ಕೊಡಲೇರ್ಪಡಿಸಲ್ಪಟ್ಟಿರುವಂತೆಯೂ ಜನಗಳಿಗೂ ದನಗಳಿಗೂ ಸ್ಥಳ ಮತ್ತು ನೀರಿನ ವಸತಿಯು ಅನುಕೂಲಪಡಿಸಲ್ಪಟ್ಟಿರುವಂತೆಯೂ ತಿಳಿಯಬರುತ್ತದೆ.

ನ್ಯಾಯಶಾಖೆ ಪರಿಪಾಲನಶಾಖೆಗಳೆರಡನ್ನೂ ಪ್ರತ್ಯೇಕಿಸುವ ಅಪ್ಪಣೆಯನ್ನು ನಮ್ಮ ಸರ್ಕಾರದವರು ಇಷ್ಟರಲ್ಲೇ ಕೊಡುವುದಕ್ಕಿದ್ದಾರೆಂದೂ ಡಿಸ್ಟ್ರಿಕ್ಟ್ ಡಿ|| ಕಮಿಾಷನರುಗಳ ನ್ಯಾಯಾಧಿಕಾರ ನಿರ್ವಾಹಕ್ಕೆ ಲೋಪವಿಲ್ಲದಂತೆಯೂ ಒಂದೊಂದು ಡಿಸ್ಟ್ರಿಕ್ಟಿಗೆ ಇಬ್ಬರು ಅಥವಾ ಮೂವರಂತೆ ನ್ಯಾಯಾಧಿಕಾರಿಗಳನ್ನು ಹೆಚ್ಚಾಗಿ ನಿಯಮಿಸುವಂತೆಯೂ ಇದಕ್ಕಾಗಿ ೨-೩ ಲಕ್ಷ ರೂ.ಗಳ ವೆಚ್ಚವು ಹೆಚ್ಚುವುದೆಂತಲೂ ಕೇಳುತ್ತೇವೆ.

ನಮ್ಮ ವಿದ್ಯಾಭ್ಯಾಸಶಾಖಾ ಇನ್‌ಸ್ಪೆಕ್ಟರ್ ಜನರಲ್ಲರಾಗಿರುವ ಮ|| ಸಿ. ರಾಮಲಿಂಗರೆಡ್ಡಿ, ಎಂ. ಎ., ಯವರು ಇದುವರೆಗೆ ಮಾಡಲ್ಪಡುತ್ತಲಿದ್ದ ವಿದ್ಯಾಪ್ರಸರಣ ಪ್ರಯತ್ನಗಳಲ್ಲಿದ್ದ ಲೋಪಗಳನ್ನೆಲ್ಲಾ ಪರಿಹರಿಸಲು ಉತ್ಕಂಠರಾಗಿರುವರೆಂದು ಕೇಳಿ ಸಂತೋಷಿಸುತ್ತೇವೆ. ಉಂಡವಂಗೇ ಉಣಲಿಕ್ಕುವಂತೆ ಪಟ್ಟಣಗಳಲ್ಲಿ ಬೀದಿಗೊಂದೊಂದರಂತೆ ಪಾಠಶಾಲೆಗಳನ್ನು ಸ್ಥಾಪಿಸಿಕೊಟ್ಟು ಗ್ರಾಮಾಂತರಗಳನ್ನು ಅಲಕ್ಷಿಸಿರುತ್ತಿದ್ದ ಲೋಪವನ್ನು ನಿರ್ಮೂಲಮಾಡಿ, ಗ್ರಾಮಾಂತರದಲ್ಲಿ ನಿರಕ್ಷರರಾಗಿರುವ ಪ್ರಜೆಗಳ ಮಕ್ಕಳಿಗೆ ಬಲಾತ್ಕಾರ ವಿಧಿಯ ನಿರ್ಬಂಧದಿಂದ ವಿದ್ಯಾಭ್ಯಾಸ ಮಾಡಿಸುವುದಕ್ಕೆ ತಕ್ಕ ಸಹಾಯಗಳನ್ನು ಮಾಡುವಲ್ಲಿ ಅವರು ವಿಶೇಷ ದೃಷ್ಟಿಯನ್ನು ಕೊಡುವವರಾಗಬೇಕೆಂದು ಕೋರುವೆವು.

ರಾಜಧಾನಿಯ ಟ್ರಸ್ಟ್‌ಬೋರ್ಡು ಮೆಂಬರೂ ಮತ್ತು ಮ್ಯುನಿಸಿಪಲ್ ಕೌನ್ಸಿಲರೂ ಆದ ಶ್ರೀಮಂತ ಮೋತೀಖಾನೆ ಅನಂತರಾಜಯ್ಯನವರು ಕಳೆದ ತಾ|| ೫ ರಲ್ಲಿ ನೂತನಗೃಹಪ್ರವೇಶ ಸಮಾರಂಭವನ್ನೂ, ತಾ|| ೧೮ ರಲ್ಲಿ ತಮ್ಮ ಷಷ್ಟಿಪೂರ್ತಿಶಾಂತಿ ಮಹೋತ್ಸವವನ್ನೂ ವಿಜೃಂಭಣೆಯಿಂದ ವಿಧ್ಯುಕ್ತವಾಗಿ ನೆರವೇರಿಸಿ, ದಕ್ಷಿಣೆಯನ್ನು ಯಥೇಚ್ಛವಾಗಿ ಕೊಟ್ಟು, ಸ್ಥಳ ಪರಸ್ಥಳದ ಬಂಧುಮಿತ್ರರುಗಳಿಗೆಲ್ಲಾ ಮೃಷ್ಟಾನ್ನಭೋಜನ ಮಾಡಿಸಿದರು. ಮತ್ತೂ ತಾ|| ೧೮ ರ ಸಾಯಂಕಾಲ ಅಮೃತಮಹಲ್ ಸೂಪರಿಂಟೆಂಡೆಂಟರಾಗಿದ್ದ ಮ|| ಎಚ್. ನಂಜುಂಡರಾಜ ಅರಸಿನವರು, ದರ್ಬಾರ್ ಭಕ್ಷಿ ಲಿಂಗರಾಜಅರಸಿನವರು, ಡಿ|| ಜಡ್ಜಿ ಮಿ|| ಹಂಜಾತುಸೇಠ್ ರವರು, ವೈಸ್ ಪ್ರೆಸಿಡೆಂಟ್ ಮ|| ಜಿ. ನಾರಾಯಣರಾಯರು ಮೊದಲಾದ ಸರ್ಕಾರಿಯುದ್ಯೋಗಸ್ಥರು ಮ್ಯು|| ಕೌನ್ಸಿಲರುಗಳು, ವರ್ತಕರು ಮೊದಲಾದ ಅನೇಕ ಮಂದಿ ಮಿತ್ರರುಗಳನ್ನು ಮನೆಗೆ ಬರಮಾಡಿಕೊಂಡು ಸಂಗೀತಶ್ರವಣದಿಂದ ಆನಂದಗೊಳಿಸಿ ಗಂಧ ಪುಷ್ಪ ತಾಂಬೂಲ ವಿನಿಯೋಗದಿಂದ ಸತ್ಕರಿಸಿದರು. ಬಹುಕಾಲದಿಂದ ಪುರಕಾರ್ಯ ನಿರ್ವಾಹಸಂಘಗಳ ಮೆಂಬರಾಗಿದ್ದುಕೊಂಡು ಲೋಕಸೇವೆಯನ್ನು ಮಾಡುತ್ತಲಿರುವ ಈ ಶ್ರೀಮಂತರು ದೀರ್ಘಾಯುರಾರೋಗ್ಯವನ್ನು ಪಡೆದು ಇನ್ನೂ ಬಹುಕಾಲ ದೇಶಸೇವಾಕಾರ್ಯವನ್ನು ನೆರವೇರಿಸುವವರಾಗಲೆಂದು ಹಾರೈಸುತ್ತೇವೆ.

ಯುದ್ಧವಾರ್ತೆಯು.

ಜರ್ಮನರು ಈ ವರ್ಷದ ಬೇಸಗೆಯಲ್ಲಿ ಪಶ್ಚಿಮರಣರಂಗದೊಳಗೆ ಮಾಡಲಿಕ್ಕಿದ್ದ ಮಹಾಯುದ್ಧವು ಕಳೆದ ತಾ|| ೨೧ ರಲ್ಲಿ ಆರಂಭಿಸಲ್ಪಟ್ಟಿತು. ಮುಖ್ಯವಾಗಿ ತಮ್ಮ ಪ್ರಪಂಚಾಧಿಪತ್ಯ ದುರಾಶೆಗೆ ಇಂಗ್ಲೀಷರೇ ನಿರೋಧವನ್ನುಂಟುಮಾಡತಕ್ಕವರೆಂಬ ಕಾರಣದಿಂದ ಅವರಮೇಲೆ ತಮಗಿರುವ ಹಗೆತನವನ್ನು ತೀರಿಸುವುದಕ್ಕಾಗಿಯೂ, ೮ ತಿಂಗಳ ಕೆಳಗೆ ಕಾಂಬ್ರೆ ಹತ್ತಿರ ತಾವು ಕಳೆದುಕೊಂಡ ಹಿಂಡನ್ಬರ್ಗ್ ಉಕ್ಕಿನ ಕೋಟೆಯೆಂಬ ಅಭೇದ್ಯ ಸ್ಥಳಗಳನ್ನು ಮರಳಿ ವಶಪಡಿಸಿಕೊಳ್ಳಬೇಕೆಂಬುದಾಗಿಯೂ, ಇಂಗ್ಲೀಷ್ ಫ್ರೆಂಚ್ ಸೇನಾಪಙ್ಕ್ತಿಗಳೆರಡರ ಕೂಟವನ್ನೂ ಕಡಿದುಹಾಕಿ ದಾರಿಮಾಡಿಕೊಂಡು ಪ್ಯಾರಿಸ್ ಕಡೆಗೆ ನುಗ್ಗಿಹೋಗಬೇಕೆಂಬುದಾಗಿಯೂ ಏಪ್ರಿಲ್ ತಾ|| ೧ ರಲ್ಲಿ ಪ್ಯಾರಿಸ್ಸನ್ನು ಸೇರಿರಬೇಕೆಂದು ತಾವು ಮಾಡಿಕೊಂಡಿದ್ದ ನಿರ್ಧಾರವನ್ನು ಸಫಲಮಾಡಿಕೊಳ್ಳಬೇಕೆಂಬುದಾಗಿಯೂ ಅವರು ಯೋಚನೆಮಾಡಿಕೊಂಡು, ತಮ್ಮ ಸರ್ವಸನ್ನಾಹವನ್ನೂ ಪೂರೈಸಿಕೊಂಡು, ಆಸ್ಟ್ರಿಯಾ ಫಿರಂಗಿ ಸೈನ್ಯಗಳನ್ನು ವಿಶೇಷವಾಗಿ ಜತೆಗೂಡಿಸಿಕೊಂಡು, ಬಲ್ಗೇರಿಯನ್ ಸೇನೆಯನ್ನು ಸೇರಿಸಿಕೊಂಡು, ಕೈಜರರೇ ಈ ರಣರಂಗದ ಯಾಜಮಾನ್ಯವನ್ನು ಸ್ವತಃ ವಹಿಸಿಕೊಂಡು, ವಾನ್ ಹಿಂಡನ್‌ಬರ್ಗ್, ವಾನ್ ಹಂಟೆರ್, ಲುಡೆಂಡಾರ್ಫ್ ಮೊದಲಾದ ಜನರಲ್ಲುಗಳನ್ನು ಸೇನೆಯನ್ನು ನಡೆಯಿಸುವುದಕ್ಕೆ ನಿಲ್ಲಿಸಿ ತಟಸ್ಥ ರಾಷ್ಟ್ರಗಳವರಿಗೆಲ್ಲಾ ತಮ್ಮ ಪ್ರತಾಪವನ್ನು ತೋರಿಸುವುದಕ್ಕೆ ರಣಾಂಗಣಕ್ಕೆ ಆಹ್ವಾನ ಕೊಟ್ಟು, ಯುದ್ಧವನ್ನಾರಂಭಿಸಿದರು. ಫ್ರಾನ್ಸ್, ಬೆಲ್ಜಿಯಂ ರಣರಂಗಗಳೆರಡಕ್ಕೂ ಅವರು ೧೯೦ ಡಿವಿಜನ್ ಸೈನ್ಯಗಳನ್ನು ಸೇರಿಸಿ, ಅದರಮೇಲೆ ಯಾವ ಕಡೆಗೆ ಬೇಕಾದರೆ ಆ ಕಡೆಗೆ ಭರ್ತಿಮಾಡಿ ಕಳುಹಿಸುವುದಕ್ಕೆ ಇನ್ನು ೭೦ ಡಿವಿಜನ್ ಸೈನ್ಯಗಳನ್ನು ಮಿಾಸಲಾಗಿಟ್ಟುಕೊಂಡಿದ್ದರು. ಇಷ್ಟೆಲ್ಲಾ ಆದ ಬಳಿಕ ಇಂಗ್ಲೀಷ್ ಸೇನಾಪಙ್ಕ್ತಿಯ ಮುಂಗಡೆಯಲ್ಲಿ ಸ್ಕಾರ್ಪ್ ನದಿಯಿಂದ ಹಿಡಿದು ಆಯಿಸ್ ನದಿಯವರೆಗಣ ಬಹುಶಃ ೫೦ ಮೈಲಿಗೆ ಕಡಿಮೆಯಿಲ್ಲದಷ್ಟು ಅಗಲದ ಪ್ರದೇಶದಲ್ಲಿ ಯುದ್ಧವನ್ನು ಉಪಕ್ರಮಿಸಿದರು. ೧ ಸಹಸ್ರ ಫಿರಂಗಿಗಳು ಸಾಲಿಗಿಡಲ್ಪಟ್ಟಿದ್ದು ಒಂದೇಸಲ ಇಂಗ್ಲೀಷ್ ಸೇನೆಯಮೇಲೆ ಗುಂಡಿನ ಮಳೆಯನ್ನು ಸುರಿಸುವುದಕ್ಕುಪಕ್ರಮಿಸಿದುವು. ಇಂಥ ಮಹಾಯುದ್ಧವನ್ನು ಜರ್ಮನರು ಹೂಡುವರೆಂಬುದನ್ನು ಮಿತ್ರಮಂಡಲಿಯವರು ತಿಳಿದೇ ಇದ್ದರು. ತಕ್ಕ ಸನ್ನಾಹವನ್ನು ಮಾಡಿಕೊಂಡೇ ಇದ್ದರು. ಪ್ರತಿಯುದ್ಧಕ್ಕೆ ಇವರೂ ತೊಡಗಿದರು. ಫಿರಂಗಿಗಳೂ ಟ್ಯಾಂಕು ಬಂಡಿಗಳೂ ಮಹಾಪ್ರಳಯಕರವಾದ ಗುಂಡುಗಳನ್ನು ಹಾರಿಸುವುದಕ್ಕುಪಕ್ರಮಿಸಿದುವು. ಮಾರ್ನೆ ಯುದ್ಧವಾದೀಚೆಗೆ ಇಂಥ ಘೋರ ಯುದ್ಧವು ಯಾವುದೂ ಆಗಲಿಲ್ಲವೆಂದು ಜಗತ್ತೆಲ್ಲಾ ಹೇಳುವಂತೆ ಅಸಮಯುದ್ಧವನ್ನು ಉಭಯಪಕ್ಷದವರೂ ೩-೪ ದಿನಗಳ ಕಾಲ ನಡೆಯಿಸಿದರು. ೨ ಕಡೆಯೂ ಲಕ್ಷಗಟ್ಟಲೆ ಸೇನೆಯು ನಾಶವಾಯಿತು. ಇದುವರೆಗೆ ಆಗಿರುವ ಯುದ್ಧಪರಿಣಾಮವೇನೆಂದರೆ—ಜರ್ಮನರ ಸಂಕಲ್ಪದಂತೆ ಇಂಗ್ಲೀಷ್ ಫ್ರೆಂಚ್ ಸೇನಾಪಙ್ಕ್ತಿಯು ಭೇದಿಸಲ್ಪಡಲಿಲ್ಲ. ಅದು ಭೇದಿಸಿಹೋಗಿದ್ದರೆ ಜರ್ಮನರು ಇಷ್ಟರೊಳಗೇ ಪ್ಯಾರಿಸ್ಸನ್ನು ಸಮಿಾಪಿಸಿಬಿಡುತ್ತಿದ್ದರು. ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡೂ ಬಲವಾಗಿ ಹೆಣೆದುಕೊಂಡು ತಮ್ಮ ವ್ಯೂಹವನ್ನು ಅಭೇದ್ಯವನ್ನಾಗಿ ಮಾಡಿಕೊಂಡು ಸೆಂಟ್ ಕ್ವೆಂಟಿನ್ನಿಗೆ ಪಶ್ಚಿಮದಲ್ಲಿ ಸುರಕ್ಷಿತವಾದ ಸ್ಥಲಕ್ಕೆ ಕೆಲವು ದೂರ ಹಿಂಜರಿದು ಅಭೇದ್ಯವಾಗಿ ನಿಂತಿವೆ. ಕೆಲ ಕಡೆ ಫರ್ಲಾಂಗುಗಳ ದೂರವಾಗಿಯೂ ಕೆಲಕಡೆ ನಾಲ್ಕೆಂಟು ಮೈಲಿಗಳಷ್ಟು ದೂರವಾಗಿಯೂ ಹಿಮ್ಮೆಟ್ಟಿ ನಿಂತುವು. ಜರ್ಮನರು ಬಾಪಾಂ ಎಂಬ ಸ್ಥಲವನ್ನು ವಶಪಡಿಸಿಕೊಂಡರು. ಅದನ್ನುಳಿಹಿಕೊಳ್ಳುವುದಕ್ಕಾಗಿ ವಿಪರೀತ ಸೇನಾನಷ್ಟಗೊಳಿಸುವುದು ತರವಲ್ಲವೆಂದು ಇಂಗ್ಲೀಷರೇ ಅದನ್ನು ತೆರವುಮಾಡಿ ಬಂದುಬಿಟ್ಟರು. ಜರ್ಮನರು ಸೋಮುನದಿಯನ್ನೂ ಕೆಲಕಡೆ ದಾಟಿ, ೨-೩ ಗ್ರಾಮಗಳನ್ನೂ ರೋಯಿನನ್ನೂ ವಶಪಡಿಸಿಕೊಂಡಿದ್ದಾರೆ. ಜರ್ಮನರಿಗೆ ೧|| ಲಕ್ಷ ಸೇನಾನಷ್ಟವಾಗಿರಬೇಕೆಂದು ಊಹಿಸಲ್ಪಟ್ಟಿದೆ. ಇಂಗ್ಲೀಷ್ ಸೇನಾನಷ್ಟವೂ ಬಹಳವಾಗಿಯೇ ಇರಬೇಕು. ಇತರ ಸಾಮಗ್ರಿನಷ್ಟವೂ ಅಧಿಕವಾಗಿದೆ. ಆದರೂ ವ್ಯೂಹಭೇದನಕ್ಕೆ ಅವಕಾಶಕೊಡದೆ ಅನರ್ಗಳಪರಾಕ್ರಮದಿಂದ ಶತ್ರುಗಳ ಮನೋರಥವನ್ನು ಭಂಗಪಡಿಸಿರುವುದಕ್ಕಾಗಿ ಇಂಗ್ಲೀಷ್ ಸೇನೆಯನ್ನೂ ಅದರ ಮುಖ್ಯಾಧಿಪತಿಯನ್ನೂ ಸಹ ಅಭಿನಂದಿಸಿ, ಜಾರ್ಜ್ ಸಾರ್ವಭೌಮರೂ ಅಮೇರಿಕಾದ ಅಧ್ಯಕ್ಷರೂ ಫ್ರೆಂಚ್ ಪ್ರೆಸಿಡೆಂಟರೂ ಸಹ ತಂತ್ರೀವಾರ್ತೆಗಳನ್ನು ಕಳುಹಿಸಿರುತ್ತಾರೆ. ಅತ್ತ ಜರ್ಮನ್ ಕೈಜರರು ತಮ್ಮ ವಾನ್ ಹಿಂಡನ್‌ಬರ್ಗರಿಗೆ ಅತ್ಯಮೌಲ್ಯವಾದ ಐರನ್‌ಕ್ರಾಸ್ ಬಿರುದನ್ನೂ ಉಳಿದ ಪ್ರಮುಖದಳಪತಿಗಳಿಗೆ ನಾನಾಶ್ರೇಷ್ಠ ಬಿರುದುಗಳನ್ನೂ ಕೊಟ್ಟು ಪ್ರೋತ್ಸಾಹಿಸಿರುತ್ತಾರೆ. ಯುದ್ಧವು ಇನ್ನೂ ನಡೆಯುತ್ತಲೇ ಇದೆ. ಇಂಗ್ಲೀಷ್ ಫ್ರೆಂಚ್ ಅಮೇರಿಕಾ ಸೈನ್ಯಗಳ ಪ್ರತಾಪವು ಉಜ್ಜ್ವಲವಾಗಿದೆ. ಅಮೇರಿಕಾ ಪಾರ್ಲಿಮೆಂಟಿನವರು ಆದಷ್ಟುಬೇಗನೆ ಈ ರಂಗಕ್ಕೆ ತಮ್ಮ ೨೦ ಲಕ್ಷ ಸೈನ್ಯವನ್ನು ಕಳುಹಿಸಿಕೊಡಬೇಕೆಂದೂ ಇನ್ನು ೨೦ ಲಕ್ಷ ಸೈನ್ಯವನ್ನು ದೇಶದಲ್ಲಿ ಸಿದ್ಧಗೊಳಿಸಬೇಕೆಂದೂ ಯೋಚಿಸಿದ್ದಾರೆ. ಫ್ರೆಂಚ್ ಸೇನಾಮುಖದಲ್ಲೂ ಯುದ್ಧವು ಪ್ರಬಲವಾಗಿ ನಡೆಯುತ್ತಿದೆ. ಜಯಾಪಜಯ ನಿರ್ಧಾರಗಳನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ. ಶತ್ರುಗಳು ಅಪೂರ್ವತರವಾದ ಫಿರಂಗಿಗಳನ್ನು ೭೫ ಮೈಲಿಗಳ ದೂರದಲ್ಲಿಟ್ಟು ಪ್ಯಾರಿಸ್ಸಿನಮೇಲೆ ಕಾಲುಗಂಟೆಗೊಂದುಸಲ ಗುಂಡುಗಳನ್ನು ಹೊಡೆಯುತ್ತಿರುವರೆಂಬ ವಾರ್ತೆಯು ಬಂದಿದೆ. ಇದು ಸುಳ್ಳು. ೨೪ ಮೈಲಿಗಳ ದೂರದಿಂದ ಈ ಗುಂಡುಗಳು ಪ್ರಯೋಗಿಸಲ್ಪಡುತ್ತಿರಬೇಕೆಂದು ಊಹಿಸಲ್ಪಟ್ಟಿದೆ. ಆದರೆ ಇದರಿಂದ ಪ್ಯಾರಿಸ್ಸಿನಲ್ಲಿ ಯಾವ ವಿಶೇಷ ನಷ್ಟವೂ ಆಗುತ್ತಲಿಲ್ಲ. ಅಲ್ಲಿಯ ವ್ಯವಹಾರಗಳೆಲ್ಲಾ ಯಥಾಪ್ರಕಾರ ನಡೆಯುತ್ತಲೇ ಇವೆ.

ಮೆಸಡೋನಿಯಾದಲ್ಲಿ ಜರ್ಮನ್ ಬಲ್ಗೇರಿಯಾ ಸೈನ್ಯಗಳು ೮ ಲಕ್ಷದಷ್ಟು ಕೂಡಿವೆ. ಅವುಗಳ ಜತೆಗೆ ಇನ್ನಷ್ಟು ಸೈನ್ಯವನ್ನು ಕೂಡಿಸಿಕೊಂಡು ಅವರು ಬರುವ ಬೇಸಗೆಯಲ್ಲಿ ಮಹಾಯುದ್ಧವನ್ನು ಸಾಲೋನಿಕಾದಲ್ಲೂ ಹೂಡುವವರಾಗಿದ್ದಾರೆಂದು ವಾರ್ತೆಬಂದಿದೆ.

ರಷ್ಯಾದಲ್ಲಿ ಜರ್ಮನರು ಪೆಟ್ರೋಗ್ರೇಡನ್ನೂ ಮಾಸ್ಕೋನಗರವನ್ನೂ ಹಿಡಿದುಕೊಳ್ಳಲು ಮುಂದಕ್ಕೆ ಸಾಗುತ್ತಿರುವರು. ಅವರ ಈ ದ್ರೋಹಕ್ಕಾಗಿ ಅಲ್ಲಿಯ ಮತಗುರುಗಳೂ ಪ್ರಜೆಗಳೂ ಸಹ ರೇಗಿ ಮರಳಿ ಸೈನ್ಯವನ್ನು ಕಟ್ಟಿ, ಜರ್ಮನರಿಗೆ ಪ್ರತಿಕ್ರಿಯೆ ಮಾಡಬೇಕೆಂದು ಹವಣಿಸುತ್ತಿದ್ದಾರೆ. ಅಮೇರಿಕನ್ನರೇ ಮೊದಲಾದ ಮಿತ್ರಮಂಡಲಿಯವರು ಆ ಪ್ರಯತ್ನದಲ್ಲಿ ರಷ್ಯಾಕ್ಕೆ ಸಹಾಯಮಾಡಲು ಸಿದ್ಧರಾಗಿರುವೆವೆಂದು ತಿಳಿಸಿದ್ದಾರೆ.

1918 ನೆ ಫೆಬ್ರವರಿ 21 ನೆ ತಾರೀಖಿನಲ್ಲಿ ಮೈಸೂರು ನಿಯಮನಿರ್ಮಾಣ ಸಭೆಯಲ್ಲಿ ಮಿ|| ಗುಲಾಮ್ ಅಹಮದ್ ಕಲಾಮಿಯವರು ಮಾಡಿದ ಭಾಷಣದ ಸಾರಾಂಶ.

(ಕಳೆದವಾರದ ಶೇಷ.)

ಸರ್ಕಾರಿ ಕೆಲಸಗಳಲ್ಲಿಯೂ ಮ್ಯುನಿಸಿಪಲ್ ಕೌನ್ಸಿಲ್ ಲೆಜಿಸ್ಲೆಟಿವ್ ಇವೇ ಮೊದಲಾದ ಕೌನ್ಸಿಲ್‌ಗಳಲ್ಲಿಯೂ ಪ್ರಜಾಸಂಖ್ಯೆಗೆ ಅನುಗುಣವಾಗಿ ಕೋಮುವಾರು ಪ್ರತಿನಿಧಿಗಳನ್ನು ನಿಯಮಿಸುವುದಕ್ಕೆ ಮೈಸೂರ್ ಸರ್ಕಾರದವರೂ ಮತ್ತು ಸರ್ಕಾರಿ ಪಕ್ಷವನ್ನು ವಹಿಸಿಕೊಂಡು ಮಾತನಾಡುವ ಇತರ ಮೆಂಬರುಗಳೂ ತಿರಸ್ಕರಿಸಿದುದರಿಂದ ಪ್ರಜೆಗಳ ಮನಸ್ಸಿನಲ್ಲಿ ಒಂದು ಕಡೆ ಬಹಳ ದುಃಖವೂ, ಮತ್ತೊಂದುಕಡೆ ಆಗ್ರಹವೂ ಹುಟ್ಟುವುದಕ್ಕೆ ಕಾರಣವಾಯಿತು. ಇಂಥ ಕಷ್ಟಗಳನ್ನು ನಿವಾರಣೆಮಾಡಿ ಪ್ರಜೆಗಳ ಕ್ಷೇಮಲಾಭವನ್ನು ಹೆಚ್ಚಿಸುವುದಕ್ಕೆ ಪ್ರಜಾಮಿತ್ರಮಂಡಲಿ ಎಂಬ ಸಭೆಯು ಸ್ಥಾಪಿಸಲ್ಪಟ್ಟಿತು. ಈ ಸಭೆಯಲ್ಲಿ ಪ್ರತಿಯೊಂದು ಜಾತಿಯಲ್ಲಿಯೂ ಮುಖಂಡರಾಗಿರುವ ದೊಡ್ಡಮನುಷ್ಯರುಗಳೂ ಮೆಂಬರುಗಳಾಗಿದ್ದಾರೆ. ಮೇಲೆ ನಮೂದಿಸಿರುವ ಕಷ್ಟಗಳಿಗೆ ಒಳಗಾಗಿರುವ ಮಹಮ್ಮದೀಯ ಜನಗಳೂ ಕೂಡ ಈ ಸಭೆಗೆ ಮೆಂಬರುಗಳಾಗಿ ಒಗ್ಗಟ್ಟಿನಿಂದ ಕೆಲಸಮಾಡಿ ಎಲ್ಲಾ ಪ್ರಜೆಗಳಿಗೂ ಸುಖವನ್ನುಂಟುಮಾಡುವುದಕ್ಕೆ ದೃಢಮನಸ್ಕರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಜನಗಳ ಇಂಗಿತಕ್ಕೆ ಅನುಸಾರವಾಗಿ ನಡೆಯಬೇಕೆಂಬುದಾಗಿ ಘಂಟಾಘೋಷವಾಗಿ ಹೇಳಿಕೊಳ್ಳುತ್ತಿರುವ ನಮ್ಮ ಸರ್ಕಾರದವರು, ಪ್ರಜಾವಾತ್ಸಲ್ಯತತ್ಪರ ನಮ್ಮ ದಯಾಳು ಮಹಾರಾಜರವರು ಕೊಟ್ಟಿರುವ ಅಧಿಕಾರವನ್ನು ಒಳ್ಳೇ ಮಾರ್ಗದಲ್ಲಿ ಉಪಯೋಗಿಸಬೇಕೇ ಹೊರತು ಪ್ರಜೆಗಳ ದೂರುಗಳನ್ನೂ ಕೋರಿಕೆಗಳನ್ನೂ ಎಂದಿಗೂ ತಿರಸ್ಕರಿಸಬಾರದು. ಸರ್ಕಾರದವರು ಸಹನೆಯನ್ನು ಮನಸ್ಸಿಗೆ ತೆಗೆದುಕೊಂಡು ಚೆನ್ನಾಗಿ ದೀರ್ಘಾಲೋಚನೆ ಮಾಡುವುದಕ್ಕೆ ವ್ಯವಧಾನವನ್ನು ತೆಗೆದುಕೊಳ್ಳಬೇಕಲ್ಲದೆ ಜನಗಳಿಗೂ ಕೂಡ ಯೋಚನೆಮಾಡುವುದಕ್ಕೆ ಅವಕಾಶಕೊಟ್ಟು ಎಲ್ಲಾ ಪ್ರಜೆಗಳಿಗೂ ಹಿತವನ್ನುಂಟುಮಾಡುವ ಉದ್ದೇಶದಿಂದ ನಿಷ್ಪಕ್ಷವಾಗಿ ಸೌಮ್ಯಗುಣವನ್ನು ತೋರಿಸಬೇಕಾದುದು ಕರ್ತವ್ಯವಾಗಿದೆ.

ಮೈಸೂರು ದೇಶದಲ್ಲಿ ಹಿಂದೆ ಯಾವ ಬಿಲ್ಲನ್ನು ಸರ್ಕಾರದವರು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನಪಟ್ಟಾಗಲೂ ಈಗ ಪ್ರಜೆಗಳು ಏಕಮನಸ್ಸಿನಿಂದ ಮಾಡುತ್ತಿರುವಷ್ಟು ಗಲಭೆಯು ಯಾವಾಗ್ಗೂ ನಡೆದಿಲ್ಲ. ಇಂಥಾ ಗಲಭೆಯನ್ನು ಸರ್ಕಾರದವರು ತೃಣಮಾತ್ರಕ್ಕೆ ಸಮಾನಮಾಡಿ ತಿರಸ್ಕರಿಸುವುದಕ್ಕಾದೀತೆ? ಎಂದಿಗೂ ಕೂಡದು. ಒಂದುಪಕ್ಷ ಹಾಗೇನಾದರೂ ಮಾಡಿದರೆ ಪ್ರಜಾಪ್ರಭುತ್ವವೆಂಬ ತತ್ವವೇ ಅಳಿಸಿಹೋಗುತ್ತದೆ. ಅಥವಾ ಒಳ್ಳೆ ಮಾತಿನಿಂದ ವಿಧಿಬದ್ಧವಾಗಿ ಪ್ರಜೆಗಳು ತಮ್ಮ ದೂರುಗಳನ್ನು ಹೇಳಿಕೊಳ್ಳುವುದರಲ್ಲಿ ಏನೂ ಪ್ರಯೋಜನವಿಲ್ಲವೆಂಬುದಾಗಿ ಜನಗಳ ಮನಸ್ಸಿಗೆ ತೋರಲವಕಾಶವಾಗುತ್ತದೆ. ಈ ನಿಯಮನಿರ್ಮಾಣ ಸಭೆಯವರು—"ನಾವು ಮಾಡುವ ತೀರ್ಮಾನವನ್ನು ಮಾಡಿಕೊಳ್ಳುತ್ತೇವೆ; ಅದು ಸೂಕ್ತವಾಗಿ ಕಾಣದಿದ್ದರೆ ಮಹಾರಾಜರವರು ಬೇಕಾದರೆ ತಿದ್ದುಪಾಟುಮಾಡಿಕೊಳ್ಳಲಿ" ಎಂಬುದಾಗಿ ಹೇಳಿಕೊಳ್ಳಬಹುದು. ಆದರೆ ಆ ರೀತಿ ಯೋಚನೆಮಾಡತಕ್ಕದ್ದು ರಾಜಶಾಸನಕ್ಕೂ ಮತ್ತು ಸ್ವಾಮಿಭಕ್ತಿಗೂ ವಿರುದ್ಧವಾದದ್ದು. ಶ್ರೀಮನ್ಮಹಾರಾಜರವರ ವಿಚಾರದಲ್ಲಿ ಜನಗಳು ತಪ್ಪಭಿಪ್ರಾಯವನ್ನು ತಿಳಿದುಕೊಳ್ಳದಂತೆ ಕೆಲಸಗಳನ್ನು ಮಾಡತಕ್ಕದ್ದು ನಮ್ಮ ಈ ಸಭೆಯ ಕರ್ತವ್ಯವಾಗಿರುತ್ತದೆ.

ಹೋದಸಲ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದವರು ಅಪ್ಪಣೆಕೊಡಿಸಿದ್ದರಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ವಿಚಾರದಲ್ಲಿ ಮುಂದಣ ಪ್ರಜಾಪ್ರತಿನಿಧಿ ಸಭೆ ನಡೆಯುವ ಕಾಲಕ್ಕೆ ದೀರ್ಘಾಲೋಚನೆಮಾಡಿ ಯಾವುದನ್ನೂ ಖಂಡಿತವಾಗಿ ಹೇಳುತ್ತೇವೆಂಬುದಾಗಿ ಅಪ್ಪಣೆ ಕೊಡಿಸಿದರು. ಅವರು ವಾಗ್ದಾನಮಾಡಿದಂತೆಯೇ ಈಗಲೂ ನಡಿಸಬೇಕೆಂಬುದಾಗಿ ನಾನು ಕೋರುತ್ತೇನೆ. ಆದರೆ ಕೆಲಸವನ್ನು ಮೊದಲು ಮಾಡಿಬಿಟ್ಟು ಅನಂತರ ಅದರ ವಿಚಾರವಾಗಿ ನಾವು ಪರ್ಯಾಲೋಚನೆ ಮಾಡುವುದು ಉಚಿತವಾಗಿ ತೋರುವುದಿಲ್ಲ.

ದೇಶದಲ್ಲಿ ಮುಕ್ಕಾಲುಪಾಲಿಗಿಂತಲೂ ಹೆಚ್ಚಾಗಿರುವ ಪ್ರಜೆಗಳಿಗೆ ಪ್ರತಿನಿಧಿಗಳಾಗಿ ಬಂದಿರುವ ನಾವುಗಳು ಮೇಲ್ಕಂಡ ಮ್ಯುನಿಸಿಪಲ್ ರೆಗ್ಯುಲೇಷನ್ ಬಿಲ್ಲನ್ನು ಈಗಿನ ತರದಲ್ಲಿ ಜಾರಿಗೆ ಬರುವುದಕ್ಕೆ ಖಂಡಿತವಾಗಿಯೂ ಒಪ್ಪುವುದಿಲ್ಲ. ಆದರೆ ಪ್ರಜೆಗಳ ಕೋರಿಕೆಗಳಿಗೆ ನಿಯಮನಿರ್ಮಾಣ ಸಭೆಯವರು ಲಕ್ಷ್ಯಕೊಡದೆ ಇದ್ದರೆ ಇಂಥಾ ಸಭೆಯಲ್ಲಿ ನಮ್ಮಂಥವರು ಕೆಲಸಮಾಡುವುದರಿಂದ ಏನುತಾನೇ ಪ್ರಯೋಜನವಾದೀತು? ಪ್ರಾತಿನಿಧಿಕ ಪ್ರಭುತ್ವದ ತತ್ವವನ್ನು ನಿಜವಾಗಿಯೂ ಆಚರಣೆಗೆ ತರಬೇಕೆಂಬುದಾಗಿ ನಿಯಮನಿರ್ಮಾಣ ಸಭಾ ಸಭಿಕರುಗಳಿಗೆ ಮನಸ್ಸಿದ್ದರೆ ಅವರುಗಳು ನಮ್ಮ ಕೋರಿಕೆಗೆ ಸಮ್ಮತಕೊಟ್ಟು ಮೇಲ್ಕಂಡ ಮ್ಯುನಿಸಿಪಲ್ ರೆಗ್ಯುಲೇಷನ್ ಬಿಲ್ಲಿನ ವಿಷಯವಾಗಿ ಪ್ರಸ್ತಾಪ ನಡೆಸುವುದನ್ನು ಸದ್ಯಕ್ಕೆ ನಿಧಾನಮಾಡಬೇಕು. ಈ ಬಿಲ್ಲಿನ ವಿಚಾರದಲ್ಲಿ ಪ್ರಜೆಗಳ ಮನಸ್ಸಿನಲ್ಲೆಲ್ಲಾ ಬಹಳ ಕಳವಳ ಹುಟ್ಟಿರುವುದರಿಂದ ನಮ್ಮ ಸರ್ಕಾರದವರು ಸ್ವಲ್ಪ ಸಹನೆಯನ್ನು ತಾಳಿಕೊಂಡು, ಸದರಿ ಬಿಲ್ಲಿನ ಪರ್ಯಾಲೋಚನೆಯನ್ನು ಸ್ವಲ್ಪ ದಿವಸಗಳು ಕಳೆದನಂತರ ಮಾಡಬೇಕೆಂದು ನಾನು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

ಪತ್ರವ್ಯವಹಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಸಂಘ.

ಸ್ವಾಮಿ,

ತಮ್ಮ ಪತ್ರಿಕೆಯಲ್ಲಿ ಮೇಲ್ಕಂಡ ಸಂಘದ ವಿಚಾರದಲ್ಲಿ ಸುಮಾರು ತಿಂಗಳಿಂದೀಚೆಗೆ ಪ್ರಕಟವಾಗಿದ್ದ ಕೆಲವು ಲೇಖನಗಳನ್ನು ನೋಡಿ ವಿಷಾದಪಡಬೇಕಾಗಿದೆ. ಮೈಸೂರು ಸಂಸ್ಥಾನದ ವೀರಶೈವಸಮಾಜದ ತಿಲಕಪ್ರಾಯರಾದ ಮುಖಂಡರ ಪೋಷಣೆಯಲ್ಲಿರುವ ಈ ಸಂಘದ ಆಡಳಿತಗಳು ಇಷ್ಟು ಶೋಚನೀಯಾವಸ್ಥೆಗೆ ಬಂದಿರುವುದನ್ನು ನೋಡಿದರೆ ಮತಾಭಿಮಾನಿಗಳೆಲ್ಲರಿಗೂ ಖೇದಜನಕವಾಗಿದೆ. ಆದಷ್ಟು ತ್ವರೆಯಿಂದ ಈ ಸಂಘದ ಕಾರ್ಯಕ್ರಮದ ಲೋಪಗಳನ್ನು ಸರಿಪಡಿಸುವುದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ. ಆದುದರಿಂದ ಈ ವರ್ಷದ ಜನರಲ್ ಕಮಿಟಿ ಮೀಟಿಂಗಿಗೆ ಮೆಂಬರುಗಳೆಲ್ಲರೂ ತಪ್ಪದೆ ಆಗಮಿಸಿ ಯುಕ್ತವಾದ ಸಲಹೆಗಳನ್ನು ಕೊಡತಕ್ಕುದವಶ್ಯಕವಾಗಿದೆ. ಬರುವ ಏಪ್ರಲ್ ತಿಂಗಳ ಕೊನೆಯಲ್ಲಿ ಮೈಸೂರಿನಲ್ಲಿ ಪ್ರಜಾಪ್ರತಿ ಸಭೆಯು ನೆರೆಯುತ್ತದೆ. ಸದರಿ ಸಭೆಗೆ ಎಲ್ಲಾ ಡಿಸ್ಟ್ರಿಕ್ಟಿನಿಂದಲೂ ವೀರಶೈವ ದೊಡ್ಡ ಮನುಷ್ಯರು ದಯಮಾಡಿ ಹಿಂದಿರಿಗಿ ಹೋಗುವಾಗ್ಗೆ ಬೆಂಗಳೂರಿನಲ್ಲಿ ಮೊಕ್ಕಾಂಮಾಡಿ ಸಮಾಜದ ಕೆಲಸವನ್ನು ನೆರವೇರಿಸುವುದಕ್ಕೆ ಅವರುಗಳಿಗೆ ಅವಕಾಶವಾಗುವಂತೆ ಆ ಸಭೆ ಮುಗಿದ 1—2 ದಿವಸಗಳಲ್ಲೇ ಈ ಮೀಟಿಂಗನ್ನು ಬೆಂಗಳೂರಿನಲ್ಲಿ ಜರುಗಿಸುವುದುತ್ತಮ. ಇದಕ್ಕಾಗಿ ಸಂಘದ ಸೆಕ್ರೆಟರಿಯವರು ಇಷ್ಟರಲ್ಲೇ ಜನರಲ್ ಮೀಟಿಂಗಿನ ತಾರೀಖನ್ನು ನಿರ್ಧರಿಸಿ ಪ್ರಕಟಿಸಬೇಕೆಂದು ಪ್ರಾರ್ಥನೆ. ಮೀಟಿಂಗಿನಲ್ಲಿ ಚರ್ಚಿಸಲಿಕ್ಕಿರುವ ವಿಷಯಗಳ ಪಟ್ಟಿಯನ್ನು ಮುಂದಾಗಿಯೇ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಲ್ಲದೆ ಪ್ರತಿಯೊಬ್ಬ ಮೆಂಬರಿಗೂ ಕಳುಹಿಸಿಕೊಟ್ಟರೆ ಅಭಿಮಾನಶಾಲಿಗಳು ಈಗಿನಿಂದಲೂ ಪರ್ಯಾಲೋಚಿಸಿ ಮೀಟಿಂಗಿನಲ್ಲಿ ತಕ್ಕ ಸಲಹೆಗಳನ್ನು ಕೊಡಲನುಕೂಲವಾಗುತ್ತದೆ. ಈ ನನ್ನ ಪ್ರಾರ್ಥನೆಯನ್ನು ಮ್ಯಾನೇಜಿಂಗ್ ಕಮಿಟಿಯವರು ಗಮನಿಸುವರೆಂದು ನಂಬಿದ್ದೇನೆ. ಸಮಾಜಸೇವಕ.

ಗುಂಡ್ಲುಪೇಟೆ ಟೌನ್‌ಹಾಲ್ ಶಂಕುಸ್ಥಾಪನ ಮಹೋತ್ಸವ.

ಸನ್ 1918 ನೆ ಇಸವಿ ಮಾರ್ಚಿ 21 ನೆ ತಾ|| ಗುರುವಾರದದಿವಸ ಈ ಊರು ಟೌನ್‌ಹಾಲ್ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಲು ಇಲ್ಲಿನ ಟೌನ್‌ಹಾಲ್ ಕಮಿಟಿಯವರ ಪ್ರಾರ್ಥನೆ ಮೇರೆಗೆ ನಮ್ಮ ಪ್ರಜಾನುರಾಗಿಗಳಾದ ಡೆಪ್ಯುಟಿ ಕಮಿಷನರ್ ಸಾಹೇಬರವರಾದ ಮೆಹಬೂಬ್ ಕೆ. ಮೆಹಬೂಬ್ ಬಿ. ಎ. ಯವರು ಅಗ್ರಾಸನವನ್ನಲಂಕರಿಸಿದ್ದರು. ಆ ದಿವಸ ಸಾಯಂಕಾಲ 4 ಗಂಟೆಗೆ ಸರಿಯಾಗಿ ಟೌನ್‌ಹಾಲ್ ಮುಂದುಗಡೆ ಅಂದವಾಗಿ ಶೃಂಗರಿಸಲ್ಪಟ್ಟಿದ್ದ ಚಪ್ಪರದಲ್ಲಿ ಸಭೆ ಸೇರಿತು. ಡೆಪ್ಯುಟಿ ಕಮಿಷನರ್ ಸಾಹೇಬರೂ, ನಂಜನಗೂಡು ಸಬ್‌ಡಿವಿಜನ್ ಸಾಹೇಬರೂ, ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರೂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರೂ, ಈ ತಾಲ್ಲೋಕಿನ ಆಫೀಸರುಗಳೂ ಮತ್ತು ಪ್ರತಿನಿಧಿಗಳೂ ಸಹ ಸಭೆಯನ್ನಲಂಕರಿಸಿದ್ದರು. ಅಗ್ರಾಸನಾಧಿಪತಿಗಳು ದಯಮಾಡಿದ ಒಡನೆಯೇ ಇಲ್ಲಿನ ಗರ್ಲ್ಸ್ ಸ್ಕೂಲ್ ವಿದ್ಯಾರ್ಥಿನಿಯರುಗಳಿಂದ ಮಂಗಳಶ್ಲೋಕಗಳು ಹೇಳಲ್ಪಟ್ಟವು ನಂತರ ಇಲ್ಲಿನ ಪ್ರಜೆಗಳ ಪ್ರಾರ್ಥನೆಯಂತೆ ಮೈಸೂರು ಅರಮನೆ ವಿದ್ವಾಂಸರಾದ ವೇ|| ಎಸ್. ಆರ್. ಕರಿಬಸವಶಾಸ್ತ್ರಿಗಳಿಂದ ವಿರಚಿತವಾಗಿದ್ದ ಸ್ವಾಗತಪದ್ಯಾವಳಿಗಳು ಮೈಸೂರು ಸಂಗೀತ ವಿದ್ವಾನ್ ಮ|| ರಾ|| ರಾಚಪ್ಪನವರಿಂದ ಅತಿಮನೋಹರವಾಗಿ ಹೇಳಲ್ಪಟ್ಟವು. ಕೂಡಲೇ ಇಲ್ಲಿನ ಟೌನ್‌ಹಾಲ್ ಕಮಿಟಿಯವರಿಂದ ಒಂದು ರಿಪೋರ್ಟು ಓದಲ್ಪಟ್ಟಿತು.

ಅಗ್ರಾಸನಾಧಿಪತಿಗಳು ತಾವು ಈಗ ಹಾಕುವ ಅಸ್ತಿಭಾರವು ಅಸ್ತಿಭಾರವಲ್ಲ; ಇದನ್ನು ಕಟ್ಟಲು ಪ್ರಜೆಗಳು ಮಾಡಿದ ಪ್ರಯತ್ನವೇ ಅಸ್ತಿಭಾರವೆಂತಲೂ ಈ ತಾಲ್ಲೂಕು ಇತರ ತಾಲ್ಲೂಕುಗಳಿಗಿಂತ ಐಶ್ವರ್ಯದಲ್ಲಿ ಕಡಮೆಯಾದಾಗ್ಯೂ ವಿದ್ಯಾವಿಚಾರದಲ್ಲಿ ಈ ತಾಲ್ಲೂಕಿನವರಿಗಿರುವ ಶ್ರದ್ಧೆಯು (ಇವರು ಸುಮಾರು ಅರ್ಧಲಕ್ಷ ರೂಪಾಯಿಗಳನ್ನು ವಿದ್ಯೆಗಾಗಿ ಖರ್ಚುಮಾಡಿರುವುದರಿಂದ) ಇತರ ಎಲ್ಲಾ ತಾಲ್ಲೂಕುಗಳನ್ನೂ ಮೀರಿಸಿದೆಯೆಂದೂ ಪ್ರತಿಯೊಬ್ಬ ಮನುಷ್ಯನೂ ದೇವರ ಪೂಜೆಮಾಡಲು ದೇವಸ್ಥಾನವನ್ನು ಹೇಗೆ ನಿರ್ಮಿಸುತ್ತಾನೋ ಹಾಗೆಯೇ ಪುರೋಭಿವೃದ್ಧಿಗೆ ಒಂದು ಟೌನ್‌ಹಾಲಿರುವುದು ಅತ್ಯಾವಶ್ಯಕವೆಂದೂ, ಈ ಟೌನ್‌ಹಾಲ್ ಶಂಕುಸ್ಥಾಪನೆ ಮಾಡಲು ಕಮಿಟಿಯವರ ಪರವಾಗಿ ಅಮಲ್ದಾರ್ರು ಮ|| ಜಿ. ಮಲ್ಲಿಕಾರ್ಜುನಯ್ಯನವರು ಪ್ರಾರ್ಥಿಸಿದ್ದರಿಂದ ತಮಗೆ ಈ ಕಾರ್ಯವನ್ನು ಜರುಗಿಸಲು ತುಂಬಾ ಸಂತೋಷವುಂಟಾಗಿದೆಯೆಂತಲೂ ಉಪನ್ಯಾಸಮಾಡಿ ಸ್ವಹಸ್ತದಿಂದ ಅಸ್ತಿಭಾರವನ್ನು ಹಾಕಿದರು. ಅನಂತರ ಮೈಸೂರು ಸಂಗೀತ ವಿದ್ವಾನ್ ಮ|| ರಾಚಪ್ಪನವರಿಂದ ಸಂಗೀತನಡೆದು ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು.

ಈ ಟೌನ್‌ಹಾಲ್ ಕಟ್ಟಲು ಇಲ್ಲಿ ಮೊದಲು ಅಮಲ್ದಾರರಾಗಿದ್ದ ಮ|| ಸಿ|| ಬಿ. ಲಕ್ಷ್ಮಣರಾಯರು ಆರಂಭಿಸಿದ್ದನ್ನು ನಮ್ಮ ಈಗಿನ ಪ್ರಜಾನುರಾಗಿಗಳಾದ ಅಮಲ್ದಾರ್ರು ಮ|| ಜಿ. ಮಲ್ಲಿಕಾರ್ಜುನಯ್ಯನವರು ತುಂಬಾ ಮುತುವರ್ಜಿವಹಿಸಿ ಇದಕ್ಕೆ ಬೇಕಾಗುವಷ್ಟು ಮೊಬಲಗನ್ನು ಶೇಖರಿಸಿ ಈ ಜನೋಪಕಾರವಾದ ಶಾಶ್ವತವಾದ ಕಾರ್ಯವನ್ನು ನೆರವೇರಿಸಿದ್ದು ತುಂಬಾ ಸ್ತೋತ್ರಾರ್ಹವಾಗಿದೆ.

ಈ ಮಹೋತ್ಸವವನ್ನು ಸುಲಲಿತವಾಗಿ ಜರುಗಿಸಲು ಕಮಿಟಿಯ ಪ್ರೆಸಿಡೆಂಟರಾದ ಮ|| ಜಿ. ಮಲ್ಲಿಕಾರ್ಜುನಯ್ಯನವರು ಮ|| ರಾ|| ಸೆಕ್ರೆಟರಿಗಳಾದ ಮ|| ರಾ|| ಬಿ. ವಿ. ಶೇಷಯ್ಯನವರು ಮ|| ರಾ|| ವಿ. ಕೆ. ನಂಜುಂಡಯ್ಯನವರು ಮಾಡಿದ್ದ ಏರ್ಪಾಡುಗಳು ಬಹು ಶ್ಲಾಘನೀಯವಾಗಿದ್ದವು.

ಪ್ರತ್ಯಕ್ಷದರ್ಶೀ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೧—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
ಆನಂದ ಬುಕ್‌ಡಿಪೋ, ಮೈಸೂರು.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಿತ್ರದತ್ತಾ, ಲುಕ್ಮಾನಿ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇವರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ಸಿಪ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಕ್ಕ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ

ಸೂಚನೆ:—ಇವರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರುಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಧಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು ಜವಾಬಿಗಾಗಿ ಟಿಕೇಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶ್ಯಾಂತಪ್ಪಾ ಕಾಳಪ್ಪಾ ಲೇಂಗಡೆ,
8 ಹೊಸೂರ, ಪೋಸ್ಟ್, ಪಾಪೂರ (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

8 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೀಸೀ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಜಲ್ಲಾ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 16

ಇಮಿಟೇಷನ್ ಸಿಲ್ಕ ಗೋವರ್ ಜಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	3.8.0

ವಿಳಾಸ:—ಮೈಲಂ ಅಂಡ್ ಕೊ, ಇರುಳಪ್ಪನವೀದಿ, ಮದರಾಸು.

ಕಾಳು ಕಡಿಯ ಜಂಗೀ ವೆಖಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರಪ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
9 ಧಾರವಾಡ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ತಾ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳ ಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಯೆ. ೧೦೦ ಕ್ಕೆ ೧-೪-೦

೩. ಜೇನುಶಿರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಯೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ !!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
19 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ|| ಬ|| ಮಲ್ಲಪ್ಪ ಬಸವಪ್ಪ ವಾರದ
ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ.ಗಳನ್ನು ದಾನಮಾಡಿ ಯಾವಯಾವ ಮಹಾತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

10 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

೧೯೧೮ ನೆಯ ಇಸವಿ ಮಾರ್ಚಿ ತಾ|| ೩೧ ರಿಂದ ೧೯೧೮ ನೆಯ ಏಪ್ರಿಲ್ ತಾ|| ೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಫಾಲ್ಗುಣ ಬ|| ಚೌತಿಯಿಂದ ಫಾಲ್ಗುಣ ಬ|| ದಶಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ತೇದಿ
31	ಭಾನು	ಚೌತಿ	49-51	ವಿಶಾಖ	38-7	18
1	ಸೋಮ	ಪಂಚ	51-10	ಅನೂರಾಧ	41-11	19
2	[1]ಮಂಗಳ	ಷಷ್ಠಿ	51-13	ಜ್ಯೇಷ್ಠ	42-58	20
3	ಬುಧ	ಸಪ್ತಮಿ	49-56	ಮೂಲ	43-30	12
4	ಗುರು	ಅಷ್ಟಮಿ	47-27	ಪೂಷಾ	42-57	22
5	ಶುಕ್ರ	ನವಮಿ	43-54	ಉಷಾ	41-14	23
6	[2]ಶನಿ	ದಶಮಿ	39-26	ಶ್ರವಣ	38-38	24

(1) ಚಿಟ್ಟದಲ್ಲಿ ಮಹಾಬಲೇಶ್ವರಸ್ವಾಮಿ ರಥಃ. (2) ಹಿಮವದ್ಗೋಪಾಲಸ್ವಾಮಿ ರಥಃ.

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತಿ ಲೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಏಪ್ರಿಲ್ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೧೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರದಬುಡಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ,
17 3, ಇರುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 18

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್‌ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ. ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಶೀಘ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
21 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 26

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂತವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಕೇವಲ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪ್ನಿ,
ಪೋಸ್ಟ್ ಬುಬಾಸಿ ಉತ್ತರಕನ್ನಡಾ ಜಿ||.

ಸೂಚನೆ.

ಬರುವ ಶುಕ್ರವಾರದ ದಿವಸ ಯುಗಾದಿ ಹಬ್ಬವಾದ ಕಾರಣ ಮುಂದಣ ಭಾನುವಾರದ ಸ್ಟಾರ್ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ. ಪ್ರ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಏಪ್ರಿಲ್ ತಾ|| ೭ ನೆಯ ಭಾನುವಾರ.

ಸ್ವರಾಜ್ಯವಾದಿ ರಾಯಭಾರವು.

ಶ್ರೀಯುತರುಗಳಾದ ಬಾಲಗಂಗಾಧರ ತಿಲಕರು, ವಿಪಿನ ಚಂದ್ರಪಾಲರು, ಕಪರ್ದಿಯವರು, ಕೇಳಕರ್‌ರವರು, ಕರಂದಿಕರ್‌ರವರು ಈ ೫ ಮಂದಿಗಳು ಸ್ವರಾಜ್ಯಸಂಪಾದನೆಗಾಗಿ ಸೀಮೆಗೆ ಹೋಗುವುದಕ್ಕೆ ಕಳೆದವಾರ ಮದ್ರಾಸಿನ ಮಾರ್ಗವಾಗಿ ಕೊಲಂಬೋವಿಗೆ ಹೋಗಿ ಅಲ್ಲಿಂದ ಹಡಗನ್ನು ಹತ್ತಿ ಪ್ರಯಾಣಮಾಡಿದರು. ಕಳೆದ ತಿಂಗಳು ತಾ|| ೩೦ ರಲ್ಲಿ ಇವರುಗಳು ಮದ್ರಾಸನ್ನು ಸೇರಿದರು. ಆನಿಬೆಸೆಂಟಮ್ಮನವರೇ ಮೊದಲಾದ ಸ್ವರಾಜ್ಯವಾದಿ ಪ್ರಮುಖರುಗಳು ಇವರುಗಳ ಸತ್ಕಾರಕ್ಕೆ ಅಸಾಧಾರಣವಾದ ಏರ್ಪಾಟುಗಳನ್ನು ಮಾಡಿದ್ದರು. ಇವರು ಅಲ್ಲಿಗೆ ಹೋಗಿ ಸೇರಿದಾಗಲೂ, ಆ ಪಟ್ಟಣವನ್ನು ಬಿಟ್ಟು ತೆರಳಿದಾಗಲೂ, ಹತ್ತಿಪ್ಪತ್ತು ಸಹಸ್ರ ಜನರು ನೆರೆದು ಮಹಾಸಂಭ್ರಮವನ್ನು ವ್ಯಕ್ತಪಡಿಸಿದರು. ಮಹಾರಾಷ್ಟ್ರಸಂಘ ಆಂಧ್ರಸಂಘ, ಮಹಾಜನಸಂಘ ಮೊದಲಾದುವುಗಳ ವಿಜ್ಞಾಪನಪತ್ರಗಳು ಅರ್ಪಿಸಲ್ಪಟ್ಟುವು. ಗೌರೀವಿಲಾಸೋದ್ಯಾನದಲ್ಲಿ ಸರ್ ಸುಬ್ರಹ್ಮಣ್ಯಯ್ಯರ ಅಧ್ಯಕ್ಷತೆಯಲ್ಲಿ ಕೂಡಿದ್ದ ಮಹಾಸಭೆಯಲ್ಲಿ ಆನಿಬೆಸೆಂಟಮ್ಮನವರು ಒಂದು ವಿಜ್ಞಾಪನಪತ್ರವನ್ನೋದಿ ಸಮರ್ಪಿಸಿದರು. ಆಗ ತಿಲಕರು ಪಾಲರು ಮೊದಲಾದವರುಗಳ ಉಪನ್ಯಾಸಗಳು ನಡೆದುವು.

ಈ ರಾಯಭಾರವೂ ಸೇರಿ ಸೀಮೆಗೆ ಸ್ವರಾಜ್ಯಸಾಧನೆಗಾಗಿ ಹೋಗುವ ಗುಂಪು ಮೂರು. ಈ ಗುಂಪುಗಳೆಲ್ಲಾ ಭರತಖಂಡದ ರಾಷ್ಟ್ರೀಯ ಮಹಾಸಭೆಯ ಪಕ್ಷದಿಂದ ಪ್ರತಿನಿಧಿಗಳಾಗಿಯಾಗಲೀ ನಮ್ಮ ದೇಶದ ಪ್ರತಿನಿಧಿಗಳಾಗಿಯಾಗಲೀ ಹೋಗುವವರಾಗಿಲ್ಲ. ಭರತಖಂಡದ ರಾಜಕೀಯಾಭ್ಯುದಯವನ್ನು ಕೋರಿ ಕಳೆದ ೩೩ ವರ್ಷಗಳಿಂದಲೂ ಕೆಲಸಮಾಡುತ್ತಿರುವ ರಾಷ್ಟ್ರೀಯ ಮಹಾಸಭೆಯ ಸ್ಥಾಯಿ ಸಂಘದವರು ಸದ್ಯಃ ಸೀಮೆಗೆ ರಾಯಭಾರವನ್ನೇ ಕಳುಹಿಸಲಾಗದೆಂದು ನಿರ್ಧರಿಸಿಬಿಟ್ಟಿರುವಾಗ ಈ ರಾಯಭಾರದವರನ್ನು ರಾಷ್ಟ್ರೀಯ ಸಭಾಪಕ್ಷದವರೆಂದು ಹೇಳುವುದಾಗಲೀ, ದೇಶಪಕ್ಷದವರೆಂದು ಹೇಳುವುದಾಗಲೀ ಸಮಂಜಸವಲ್ಲ. ಇವರೆಲ್ಲಾ ಸ್ವರಾಜ್ಯಸಂಘ ಪಕ್ಷದವರು. ಈ ಪಕ್ಷದವರು ಅಮಿತವಾದಿಗಳೆಂದು ಮೊದಲಿನಿಂದಲೂ ಹೆಸರಾದವರು. ಆ ಕಾರಣದಿಂದಲೇ ಕೆಲ ಕಾಲ ರಾಷ್ಟ್ರೀಯ ಮಹಾಸಭೆಯಿಂದ ದೂರಸ್ಥರಾಗಿಯೂ ಮಾಡಲ್ಪಟ್ಟಿದ್ದರು. ಇವರಿಂದ ಹುರಿದುಂಬಿಸಲ್ಪಟ್ಟಿರುವ ಜನರುಗಳು ಇವರನ್ನು ಒಲೈಸುವುದು ಹೆಚ್ಚುತ್ತ ಬಂದಿರುವಂತೆಲ್ಲಾ ಇವರ ಮಾತುಗಳಿಗೆ "ಲಗಾಮೇ" ಇಲ್ಲದಂತೆ ಆಗಿದೆ. ಈಗ ಇವರುಗಳು ಭರತಖಂಡದ ಪ್ರಭುತ್ವವನ್ನು ತೃಣದಂತೆ ಕಂಡು ಮಾತನಾಡುತ್ತಿದ್ದಾರೆ. ಆ ಮಾತುಗಳ ಸ್ವರೂಪವನ್ನು ತೋರಿಸುವುದಕ್ಕಾಗಿ ಅವರ ಉಪನ್ಯಾಸಗಳಿಂದ ಕೆಲ ವಾಕ್ಯಗಳನ್ನು ಇಲ್ಲಿ ಉದ್ಧರಿಸಿ ಪ್ರಕಟಿಸಿರುತ್ತೇವೆ:—"ನಾವು ಇಂಗ್ಲೆಂಡಿಗೆ ಹೋಗುವುದು ಆಂಗ್ಲಪ್ರಭುತ್ವದವರಲ್ಲಿ ಅಥವಾ ಆಂಗ್ಲ ಪ್ರಜೆಗಳಲ್ಲಿ ಸ್ವರಾಜ್ಯದ ಭಿಕ್ಷೆಯನ್ನು ಬೇಡುವುದಕ್ಕಾಗಿಯೇನೂ ಅಲ್ಲ. ಇಂಥ ಬೇಡುವಿಕೆಯನ್ನು ನಾವು ೧೦ ವರ್ಷಗಳಹಿಂದೆ ಮಾಡುತ್ತಿದ್ದೆವು. ಆಗ್ಗೂ ಈಗ್ಗೂ ಬಹಳ ಮಾರ್ಪಾಟಾಗಿದೆ. ಆಂಗ್ಲ ಸಾಮ್ರಾಜ್ಯ ರಕ್ಷಣೆಗಾಗಿ ಅವರೇ ನಮಗೆ ಸ್ವರಾಜ್ಯವನ್ನು ಕೊಡಬೇಕಾದ ಹೊತ್ತು ಬಂದಿದೆ. ಅರ್ಥಿಕಾಧಿಕಾರ, ನಿಯಮನಿರ್ಮಾಣಸಭೆಯಲ್ಲಿ ಪ್ರಭುತ್ವಕಾರ್ಯನಿರ್ವಾಹಕಸಂಘದವರು ಶಾಸನನಿರ್ಮಾಣ ಸಭಿಕರ ಅಧಿಕಾರಕ್ಕಧೀನರಾಗಿರುವುದು, ನಿಯಮನಿರ್ಮಾಣ ಸಭೆಯ ೧೦೦ ಮಂದಿ ಸಭಿಕರಲ್ಲಿ ೮೦ ಮಂದಿಗಳು ಪ್ರಜೆಗಳಿಂದ ಆರಿಸಲ್ಪಟ್ಟವರೇ ಆಗಿರುವುದು—ಈ ಮೂರು ಅಧಿಕಾರ ಸ್ವಾತಂತ್ರ್ಯಗಳನ್ನು ನಮಗೆ ಕೊಟ್ಟರೆ ಸಾಕು. ಇಷ್ಟನ್ನು ನಮಗೆ ಕೊಡದಿದ್ದರೆ ಆಂಗ್ಲಸಾಮ್ರಾಜ್ಯಕ್ಕೆ ನಾವು ಮಾಡಬಹುದಾದಷ್ಟು ಸಹಾಯವನ್ನು ಮಾಡಲಾರೆವು. ನಾವು ಸಹಾಯ ಮಾಡದಿದ್ದರೆ ಆಂಗ್ಲಸಾಮ್ರಾಜ್ಯವು ಬಹಳಕಾಲ ನಿಲ್ಲುವುದು ದುರ್ಲಭವು. ಇಂಗ್ಲೀಷರಿಗೆ ಜಯವಾಗಬೇಕಾದರೆ ಭರತಖಂಡ ಸಹಾಯದಿಂದಲೇ. ಅವರಿಗೆ ನಾವೇ ಗತಿ. ಅದುಕಾರಣ ಅವರು ನಮಗೆ ಸ್ವರಾಜ್ಯವನ್ನು ಕೊಟ್ಟೇತೀರಬೇಕಾಗಿದೆ. ಅವರು ಅಲ್ಪಸ್ವಲ್ಪ ವರಗಳನ್ನು ಕೊಟ್ಟರೆ ಅದಕ್ಕೆ ನೀವು ತೃಪ್ತಿಪಟ್ಟು ನಿಮ್ಮ ಆಂದೋಳನಗಳನ್ನು ನಿಲ್ಲಿಸಿಬಿಡಲಾಗದು. ಸಾತ್ವಿಕ ನಿರೋಧ ಪದ್ಧತಿಯನ್ನು ಅವಲಂಬಿಸಿರಿ. ನಮಗೆ ಸ್ವರಾಜ್ಯವನ್ನು ಇಂಗ್ಲೀಷರು ಕೊಡದೆಹೋದರೆ ಅದರ ಫಲವನ್ನು ಅವರೇ ಅನುಭವಿಸುವರು" ಇವೆಲ್ಲಾ ತಿಲಕರ ಮಾತುಗಳು. ಇನ್ನು ವಿಪಿನಚಂದ್ರಪಾಲರ ಮಾತುಗಳು ಹೇಗಿರುವುವೆಂದರೆ—"ಭರತಖಂಡಕ್ಕೆ ಅನ್ಯಪರಿಪಾಲಿತತ್ವವನ್ನು ತಪ್ಪಿಸಿಬಿಟ್ಟು ಸ್ವಾತಂತ್ರ್ಯವನ್ನು ಕೊಡದಿದ್ದರೆ ಆಂಗ್ಲಸಾಮ್ರಾಜ್ಯವೆಲ್ಲವೂ ಬಿದ್ದುಹೋಗುವುದು. ಭರತಖಂಡದ ಈಗಣ ಪರಿಪಾಲನಕ್ರಮದಲ್ಲಿ ಪೋಲೀಸಾಳುಗಳು ಹೆಡ್ ಕಾನ್‌ಸ್ಟೆಬಲ್ಲಿಗೂ, ಹೆಡ್ ಕಾನ್‌ಸ್ಟೇಬಲ್ಲರು ಸಬ್ ಇನ್‌ಸ್ಪೆಕ್ಟರಿಗೂ, ಸಬ್ ಇನ್‌ಸ್ಪೆಕ್ಟರು ಇನ್‌ಸ್ಪೆಕ್ಟರಿಗೂ, ಇನ್‌ಸ್ಪೆಕ್ಟರು ಪೋಲೀಸ್ ಸೂಪರಿಂಟೆಂಡೆಂಟರಿಗೂ, ಪೋಲೀಸ್ ಸೂಪರಿಂಟೆಂಡೆಂಟರು ಇನ್‌ಸ್ಪೆಕ್ಟರ್ ಜನರಲ್ಲಿಗೂ, ಇನ್|| ಜನರಲ್ಲು ಎ|| ಕೌನ್ಸಿಲ್ ಸಭಿಕರಿಗೂ, ಆ ಸಭಿಕರು ಗೌರ್ನರಿಗೂ, ಗೌರ್ನರು ಗೌರ್ನರ್ ಜನರಲ್ಲಿಗೂ, ಗೌ|| ಜನರಲ್ಲು ಸ್ಟೇಟ್ ಸೆಕ್ರೆಟರಿಗೂ, ಸ್ಟೇ|| ಸೆಕ್ರೆಟರಿಯು ಆಂಗ್ಲಮಂತ್ರಿಗಳಿಗೂ, ಅವರುಗಳು ಪಾರ್ಲಿಮೆಂಟಿಗೂ ಹೀಗೆ ಒಬ್ಬರಿಗೊಬ್ಬರು ಅಧೀನರಾಗಿರುವರು. ಹೀಗೆ ಈ ಅಧಿಕಾರಗಳೆಲ್ಲಾ ಪರಾಧೀನವಾಗಿರುವುದು ತಪ್ಪಿ, ಭರತಖಂಡದ ಪ್ರಜೆಗಳಿಗೇ ಅಧೀನವಾಗಿರುವಂತೆ ಮಾಡಬೇಕೆಂದು ನಾವು ಕೋರುತ್ತೇವೆ. ನಮಗೆ ಸ್ವರಾಜ್ಯ ಬಂದರೆ ಆಂಗ್ಲಸಾಮ್ರಾಜ್ಯವು ರಕ್ಷಿತವಾಗುವುದು. ನಾನು ಕಮಂಡಲುವನ್ನು ಹಿಡಿದು ಇಂಗ್ಲೀಷರ ಅನುಗ್ರಹವನ್ನು ಬೇಡುವುದಕ್ಕಾಗಿ ಸೀಮೆಗೆ ಹೋಗುವುದಿಲ್ಲ. ನಿಮ್ಮ ಪೂರ್ವಿಕರು ಸ್ಥಾಪಿಸಿದ ಸಾಮ್ರಾಜ್ಯಕ್ಕೂ ನಿಮ್ಮ ದೇಶೀಯರಿಗೂ ಈಗ ಅಪಾಯವು ಬರುವಂತಿದೆಯೆಂಬಂಶವನ್ನು ಘಂಟಾಘೋಷವಾಗಿ ಅವರಿಗೆ ಹೇಳುವುದಕ್ಕೆ ಹೋಗುತ್ತೇನೆ. ಇಂಗ್ಲೀಷರು ಈಗ ಕಷ್ಟದಶೆಯಲ್ಲಿರುವುದರಿಂದ ೧೫೦ ವರ್ಷಗಳಾರಭ್ಯ ಅವರು ಭರತಖಂಡಕ್ಕೆ ಮಾಡಿದ ಕಾರ್ಯಗಳನ್ನೆಲ್ಲಾ ಗಣನೆಮಾಡದೆಯೂ, ಅವರು ನಮಗೆ ಮಾಡಿದ ಗೌರವಭಂಗವನ್ನೂ ತಿರಸ್ಕಾರಭಾವಗಳನ್ನೂ ಸ್ಮರಣೆಗೆ ತಂದುಕೊಳ್ಳದೆಯೂ ಸುಮ್ಮನಿದ್ದೆವು. ಸಂಪೂರ್ಣಬಾಧ್ಯತೆಯಿಂದ ಕೂಡಿದ ಸ್ವರಾಜ್ಯವನ್ನೇ ನಮಗೆ ಕೊಟ್ಟು ನಮ್ಮ ಅಸಂತೃಪ್ತಿಯನ್ನು ಅವರು ಪರಿಹರಿಸಬೇಕು" ಇತ್ಯಾದಿ. ಆಂಗ್ಲಜನರು ಮಹಾಯುದ್ಧದ ವಿಷಮಸಂಕಟದಲ್ಲಿ ಸಿಕ್ಕಿರುವ ಸಂಧಿಯನ್ನು ತಿಳಿದು ಉಗ್ರಪಕ್ಷೀಯರು ಇಷ್ಟು ನಿರಂಕುಶವಾಗಿಯೂ, ಕಠಿನವಾಗಿಯೂ, ಕೃತಘ್ನವಾಗಿಯೂ ಶೂಲದಿಂದ ತಿವಿದಂತೆ ಆಡುತ್ತಿರುವ ಮಾತುಗಳು ಭರತಖಂಡದ ಗೌರವಕ್ಕೂ ಕೃತಜ್ಞಸ್ವಭಾವಕ್ಕೂ ಸಾದ್ಗುಣ್ಯಕ್ಕೂ ಉಚಿತವಾದುವೆಂದು ಹೇಗೆತಾನೇ ಹೇಳಬಹುದು? ಇಂಥ ನಿರಂಕುಶ ವಚನಶೂರರನ್ನು ರಾಷ್ಟ್ರೀಯಮಹಾಸಭೆಯು ಭರತಖಂಡದ ಪಕ್ಷದ ರಾಯಭಾರಿಗಳೆಂದು ಕಳುಹಿಸಿಕೊಡದೆಹೋದುದೇ ಉಚಿತವಾಗಿ ತೋರುತ್ತದೆ. ಸ್ಟೇಟ್ ಸೆಕ್ರೆಟರಿಯವರು ಭರತಖಂಡವನ್ನು ಬಿಟ್ಟು ಇನ್ನೂ ಸೀಮೆಗೆ ಪ್ರಯಾಣಮಾಡಿಯೇ ಇಲ್ಲ. ಅವರು ಹೋಗಿ ತಮ್ಮ ಅಭಿಪ್ರಾಯವನ್ನು ಮಂತ್ರಿಮಂಡಲಕ್ಕೆ ನಿವೇದಿಸದ ಹೊರತು ಯಾವ ಸಿದ್ಧಾಂತವನ್ನೂ ಅವರು ಮಾಡುವಹಾಗಿಲ್ಲ. ಈಗಾಗಲೇ ಈ ರಾಯಭಾರಿಗಳು ಸೀಮೆಗೆ ಹೋಗಿ ವಾಗ್ವಿಜೃಂಭಣೆಯಿಂದ ಏನೇನನ್ನು ಆಡಿಕೊಂಡರೂ, ಅಲ್ಲಿಯವರು ಭಾರತ ಪ್ರಜೆಗಳೆಲ್ಲರೂ ಇವರಂತೆಯೇ ಸಮಯವನ್ನು ಸಾಧಿಸಿ ಕೊರಲನ್ನು ಹಿಸುಕುವ ಸ್ವಭಾವದವರಲ್ಲವೆಂಬುದನ್ನು ತಿಳಿದುಕೊಳ್ಳುವಂತಾದರೆ ಸಾಕು. ಅಷ್ಟನ್ನು ತಿಳಿದುಕೊಳ್ಳಲಾರದವರು ಮಂತ್ರಿಮಂಡಲದಲ್ಲಿ ಯಾರೂ ಇರಲಾರರು. ಭರತಖಂಡದಲ್ಲಿ ಲೋಕೋತ್ತರವಾದ ಶಾಂತಿಯನ್ನು ಸ್ಥಾಪಿಸಿ ನೂರಾರು ವರ್ಷಗಳಿಂದ ಕಾಪಾಡುತ್ತ ಬಂದಿರುವ ಆಂಗ್ಲ ಸಾಮ್ರಾಜ್ಯದವರನ್ನು ಅವರಿಗೆ ಅಪೂರ್ವತರವಾಗಿ ಸಂಭವಿಸಿರುವ ವಿಷಮಸಂಧಿಯ ಬಿಕ್ಕಟ್ಟಿನಲ್ಲಿ ಸ್ವಾರ್ಥೈಕಚಿಂತೆಯಿಂದಲೂ ಕೃತಘ್ನತೆಯಿಂದಲೂ ಟೊಣೆಯುವುದಾಗಲೀ ಬೆದರಿಸುವುದಾಗಲೀ ಭರತಖಂಡಕ್ಕೆ ಲಾಂಛನವೇ ಹೊರತು ಘನತೆಯಲ್ಲ. ಭರತಖಂಡದ ೩೩ ಕೋಟಿ ಪ್ರಜೆಯೂ ತಮ್ಮಧೀನದಲ್ಲಿರುವುದೆಂದು ತಿಳಿದುಕೊಂಡು, ಈ ಉಗ್ರಸ್ವರಾಜ್ಯವಾದಿಗಳು ನಮಗೆ ಸ್ವರಾಜ್ಯವನ್ನು ಕೊಟ್ಟರೆ ಈ ದೇಶದ ಕೋಟ್ಯಂತರ ಪ್ರಜೆಗಳನ್ನು ಸೈನಿಕರನ್ನಾಗಿ ಮಾಡಿ ಶತ್ರುಗಳಮೇಲೆ ನುಗ್ಗಿಸಿ ಆಂಗ್ಲ ಸಾಮ್ರಾಜ್ಯವನ್ನು ಕಾಪಾಡಿಬಿಡುವೆವೆಂದು ಹೇಳಿಕೊಳ್ಳುತ್ತಿದ್ದಾರೆ. ಇದಕ್ಕೆ ಮುಂಚೆ "ಭಾರತೀಯರಿಗೆ ಸೈನ್ಯದಲ್ಲಿ ದೊಡ್ಡದೊಡ್ಡ ಹುದ್ದೆಗಳನ್ನು ಕೊಡುವುದಿಲ್ಲ; ಇವರುಗಳನ್ನು ಈಸ್ಟಿಂಡಿಯನ್ನರಂತೆ ವಾಲಂಟಿಯರನ್ನಾಗಿ ತೆಗೆದುಕೊಳ್ಳುವುದಿಲ್ಲ" ಎಂದು ಆಕ್ಷೇಪಿಸುತ್ತಲೂ, ಆ ಲೋಪಗಳನ್ನು ಪರಿಹರಿಸಿದರೆ ಅನವಧಿಕವಾದ ಸೇನಾಸಹಾಯವು ಭರತಖಂಡದಿಂದ ದೊರೆಯುವುದೆಂತಲೂ ಹೇಳುತ್ತಿದ್ದರು. ಆವೆರಡು ವರಗಳನ್ನೂ ಸರ್ಕಾರದವರು ಕೊಟ್ಟರು. ಆದರೂ ವರ್ಷ ಕಳೆದರೂ ಭರತಖಂಡದಿಂದ ೫-೬ ಸಾವಿರ ಸೈನ್ಯ ಸೇರುವುದಕ್ಕೇ ಎಷ್ಟೋ ಕಷ್ಟವಾಗಿಹೋಯಿತು. ಈಗ ಸ್ವರಾಜ್ಯವನ್ನು ಕೋರಿಸುತ್ತಿದ್ದಾರೆ. ಅದು ಕೊಡಲ್ಪಟ್ಟರೆ ಬಹುಶಃ ಇವರು ನಿರ್ಬಂಧ ಸೈನಿಕಶಾಸನವನ್ನು ಈ ದೇಶದ ಅನಕ್ಷರಸ್ಥ ಜನರಮೇಲೆಲ್ಲಾ ಕಲ್ಪಿಸಿ ಸಾರಿಸಿ, ಅವರನ್ನೆಲ್ಲಾ ರಣರಂಗಕ್ಕೆ ಸಾಗಿಸಬಹುದೆಂದು ಯೋಚಿಸಿರುವರೋ ಹೇಗೋ ಗೊತ್ತಾಗಲಿಲ್ಲ. ಅಂತು ಆಂಗ್ಲರಾಜ್ಯಕ್ಕೆ ಒಂದು ತೆರದ ವಿಷಮಾವಸ್ಥೆಯು ಪ್ರಾಪ್ತವಾಗಿದ್ದರೆ ಭರತಖಂಡಕ್ಕೂ ಒಂದು ತೆರದ ವಿಷಮಾವಸ್ಥೆಯು ಪ್ರಾಪ್ತವಾಗಿರುವುದು. ದೈವಸಂಕಲ್ಪವು ಹೇಗಿದೆಯೋ ತಿಳಿಯದು.

ಸಂಘಸಂಸ್ಕರಣ ಮತ್ತು ನಿಮ್ನಜನೋದ್ಧಾರ.

ನಮ್ಮ ಸಂಸ್ಥಾನದಲ್ಲೂ ಇದರ ಹೊರಗೂ ಪತಿತ ಜನರ ಉದ್ಧಾರಕ್ಕಾಗಿಯೂ ಇತರ ಸಂಘಸಂಸ್ಕರಣಗಳಿಗಾಗಿಯೂ ನಿಷ್ಕಪಟವಾದ ಯತ್ನಗಳಿಂದಲೂ ಕರುಣಾಪೂರಿತ ಭಾವದಿಂದಲೂ ದೇಶೋದ್ಧಾರದ ದೃಷ್ಟಿಯಿಂದಲೂ ಕೆಲಸಮಾಡತಕ್ಕ ಹಲವರು ಮಹನೀಯರು ಇರುತ್ತಾರೆ. ಆದರೆ ನಿರ್ಮಲವೂ ಸಸಾರವೂ ಆದ ಕಾಂಬೋಡಿಯಾ ಹತ್ತಿಯ ಜತೆಯಲ್ಲಿ "ಕಂತ್ರಿ" ಹತ್ತಿಯು ಬೆರೆದು ರಾಶಿಯ ಬೆಲೆಯನ್ನೇ ಕೆಡಿಸಿಬಿಡುವಂತೆ ಸ್ವಾರ್ಥೈಕಪರರಾದ ಕೆಲವರು ತಾವೂ ದೇಶೋದ್ಧಾರಕರೆಂದೂ, ಸಂಘಸಂಸ್ಕಾರಕರೆಂದೂ, ತಾವೇ ನಿಮ್ನಜನೋದ್ಧರಣವನ್ನು ಮಾಡತಕ್ಕವರೆಂದೂ, ಸರ್ವಸಮಾನದೃಷ್ಟಿಯಿಂದ ಸರ್ವಹಿತವನ್ನೂ ಕೋರಿ ಸರ್ವರಿಗೂ ಪ್ರತಿನಿಧಿಗಳಾಗಿರಲು ತಾವೇ ಅರ್ಹರೆಂದೂ ಮೊದಲಾಗಿ ಹೇಳಿಕೊಂಡು, ಅಂತರಂಗದ ತಮ್ಮ ಸ್ವಾರ್ಥೈಕಸಾಧನಬಪಕ್ಕೆ ದಾರಿಯನ್ನು ಮಾತ್ರ ಸರಿಪಡಿಸಿಕೊಳ್ಳುತ್ತಲಿರುತ್ತಾರೆ. ಸತ್ಯಶೌಚ ಇಂದ್ರಿಯನಿಗ್ರಹಾದಿ ಸೌಜನ್ಯವು ಯಾರಲ್ಲಿರುವುದೋ ಅವರು ಜನ್ಮತಃ ಚಂಡಾಲರಾಗಿದ್ದರೂ ಸದ್ಬ್ರಾಹ್ಮಣರೇ; ಈ ಗುಣಗಳಿಗೆ ದೂರರಾಗಿರುವವರು ಬ್ರಾಹ್ಮಣರೇ ಆಗಿದ್ದರೂ ಅವರು ಚಂಡಾಲರೇ; ಎಂದು ಮೊದಲಾಗಿಯೂ ಸಮಯ ಬಿದ್ದಾಗ ಇವರುಗಳು ಹೇಳಿಕೊಳ್ಳುವುದುಂಟು. ಆದರೆ ಕೋಟ್ಯಂತರ ನಿಮ್ನ ಜಾತಿಯವರಲ್ಲಿ ಉತ್ತಮಗುಣಾಢ್ಯನಾದ ಯಾವನೊಬ್ಬ ಜನ್ಮಚಂಡಾಲನನ್ನೂ ಇವರು ಬ್ರಾಹ್ಮಣನನ್ನಾಗಿ ಆದರಿಸಿ, ತಮಗೆ ಬರುವ ದಾನಾದಿ ಫಲಗಳನ್ನು ಅವನಿಗೆ ಕೊಡಿಸಿದ ಪ್ರತ್ಯಕ್ಷ ದೃಷ್ಟಾಂತವು ಎಲ್ಲೂ ಕಂಡುಬಂದಿಲ್ಲ. ವಿದ್ಯಾದಾನ ಮಾಡಿ ಆ ನಿಮ್ನಜಾತಿಯವರನ್ನು ಉದ್ಧರಿಸುತ್ತಿದ್ದೇವೆಂದು ಮೇಲೆ ಜಂಭ ಕೊಚ್ಚಿಕೊಳ್ಳುತ್ತಿರುವ ಈ ಜನರೇ, ಆ ಜನರ ಮನೆಮಟಗಳು ಈಗಳೇ ಎಷ್ಟೋ ದೂರದಲ್ಲಿದ್ದರೂ ಇರಗೊಡಿಸದೆ ದೂರದೂರಕ್ಕೆ ಹೊತ್ತುಹಾಕಲು ಒಳಗೊಳಗೇ ಪ್ರಯತ್ನಪಡುತ್ತಿರುತ್ತಾರೆ. ಇಂಥ ಕಪಟಾಚಾರಗಳಿಂದಲೂ, ಗಂಟಲಿನಿಂದೀಚೆಗೆ ಆಡುವ ಉಪಚಾರ ವಚನಗಳಿಂದಲೂ ಸಹ ನಿಜವಾದ ಸಂಘಸಂಸ್ಕರಣಗಳೂ, ನಿಮ್ನಜಾತಿ ಸಮುದ್ಧರಣವೂ ಎಂದಿಗಾದರೂ ಆಗುವುದುಂಟೆ? ಸ್ವಾರ್ಥತ್ಯಾಗದಿಂದಲ್ಲದೆ ಉದಾರಮನಸ್ಕರಿಂದಲ್ಲದೆ ಇಂಥ ಮಹತ್ಕಾರ್ಯಗಳು ಎಂದಿಗೂ ಸಾಧ್ಯವಾಗಲಾರವು. ೫೦ ವರ್ಷಗಳ ಹಿಂದೆ ಎಷ್ಟೋ ಹೀನಸ್ಥಿತಿಯಲ್ಲಿದ್ದ ಜಪಾನ್ ದೇಶವು ಸಂಘಾಚಾರ ವಿಷಯದಲ್ಲೂ ಗಾಢಾಂಧಕಾರಮಯವಾಗಿ ನಮ್ಮ ದೇಶದ ಹಾಗೆಯೇ ಇದ್ದಿತು. ಆದರೆ ದೇಶೋದ್ಧಾರಕ್ಕಾಗಿ ಅಲ್ಲಿಯವರು ಮಾಡಿದ ಇತರ ಪ್ರಯತ್ನಗಳಂತೆಯೇ ಸಂಘಸಂಸ್ಕರಣಕ್ಕಾಗಿ ಮಾಡಿದ ಪ್ರಯತ್ನಗಳಾದರೂ ಬಹಳ ಶುದ್ಧವಾಗಿಯೂ ಸ್ವಾರ್ಥತ್ಯಾಗ ಸುಸಂಸ್ಕೃತವಾಗಿಯೂ ದೃಢತಮವಾಗಿಯೂ ಇದ್ದುವು. ಹೇಗೆಂದರೆ—ಅಲ್ಲಿದ್ದ ಭೂಸ್ವಾಮಿಗಳೆಲ್ಲರೂ ತಮಗೆ ಅನೂಚಾನವಾಗಿ ಬಂದಿದ್ದ "ಹಕ್ಕು"ಗಳನ್ನು ಬುದ್ಧಿಪೂರ್ವಕವಾಗಿ ತಮ್ಮ ರಾಜರಿಗೆ ಒಪ್ಪಿಸಿಬಿಟ್ಟು, ಅವರಿಂದ ಕೊಡಲ್ಪಟ್ಟ ಬಿರುದುಗಳನ್ನು ಮಾತ್ರ ತಾವು ಗ್ರಹಿಸಿ ಸಂತೃಪ್ತರಾದರು. ಬಹುಕಾಲದಿಂದ ಉನ್ನತಿ ಸ್ಥಾನವನ್ನಡರಿ ಬಂದಿದ್ದ ಸಾಮುರಾಯಿಕೆಂಬ ಕ್ಷತ್ರಿಯ ವಂಶೀಯರು ತಮ್ಮ ತಲೆತಲಾಂತರದಿಂದ ಅನಾಯಾಸವಾಗಿ ಅನುಭವಿಸುತ್ತಿದ್ದ ಉಪಕಾರವೇತನಗಳನ್ನೂ ವರ್ಣಾಧಿಕಾರವನ್ನೂ ಪರಿತ್ಯಜಿಸಿ, ಇತರ ವೃತ್ತಿಗಳಲ್ಲಿ ಪ್ರವರ್ತಿಸಿ ಜೀವನವನ್ನು ಸಾಗಿಸುವುದಕ್ಕೆ ತೊಡಗಿದರು. ಅಲ್ಲಿಯ ಪ್ರಭುತ್ವದವರು ೧೮೭೧ ನೆಯ ವರ್ಷದಲ್ಲಿ ಒಂದು ಶಾಸನವನ್ನು ಪ್ರಕಟಪಡಿಸಿ ವರ್ಣವಿಭೇದವನ್ನು ನಿರ್ನಾಮಗೊಳಿಸಿದರು. ಮತ್ತು ಅದೇ ವರ್ಷದಲ್ಲಿ ಇನ್ನೊಂದು ಶಾಸನವನ್ನು ನಿಮ್ನಜಾತಿ ಜನರ ಸಮುದ್ಧಾರಕ್ಕಾಗಿ ಪ್ರಕಟಿಸಿದರು. ಅದಕ್ಕೆ ಮುಂಚೆ ಅಲ್ಲಿಯ ನಿಮ್ನಜಾತಿ ಜನರು "ಹಿನಿನ್" (ಎಂದರೆ ಮನುಷ್ಯಜಾತಿ ಸಮಾನರಲ್ಲವೆಂದು ಅರ್ಥಕೊಡುವ ಹೆಸರು) ಎಂಬುದಾಗಿ ಕರೆಯಲ್ಪಡುತ್ತಿದ್ದರು. ಇವರ ಗುಂಪು ಅಸ್ಪೃಶ್ಯವೂ ರಾಜಕೀಯಾದಿ ಮಹಾಪರಾಧಶಿಕ್ಷಿತಾಶ್ರಯವೂ ಆದ ಒಂದು ಮಹಾನಿಪಾತಗಣವಾಗಿ ಭಾವಿಸಲ್ಪಟ್ಟಿದ್ದಿತು. ಅಂಥ ಹೆಸರನ್ನು ಇನ್ನುಮೇಲೆ ಉಪಯೋಗಿಸಕೂಡದೆಂದು ಮೇಲೆಕಂಡ ಶಾಸನದ ಮೂಲಕವಾಗಿ ನಿಷೇಧಿಸಿದುದಲ್ಲದೆ, ಅವರೆಲ್ಲಾ ಇತರ ಪ್ರಜೆಗಳ ತರಗತಿಗೆ ಇನ್ನುಮೇಲೆ ಸೇರಿಸಲ್ಪಡುವರೆಂದೂ, ಅವರ ಸಾಂಘಿಕಸ್ಥಿತಿಯೂ ಜೀವಿತಮಾರ್ಗಗಳೂ ಸಹ ಇತರ ಸಕಲ ಪ್ರಜೆಗಳ ಸ್ಥಿತಿಗತಿಗಳಿಗೆ ಸಮಾನವಾಗಿಯೇ ಇರುವುವೆಂದೂ ವಿಧಿಸಲ್ಪಟ್ಟಿತು. ಹೀಗೆ ಮಾಡಿದುದರಿಂದ ಅಲ್ಲಿಯ ಪ್ರಜಾಕೋಟಿಯಲ್ಲಿ ವೈಷಮ್ಯವೇ ತೊಲಗಿಹೋಗಿ ಸರ್ವರೂ ಒಂದೇ ವಿಧವಾದ ಪುರೋವೃದ್ಧಿಯನ್ನು ಹೊಂದಲವಕಾಶವಾಯಿತು. ಸ್ವಲ್ಪ ಕಾಲದೊಳಗೇ ಆ ನಿಮ್ನಜಾತಿಜನರು ಭೂಸ್ವಾಮಿಗಳಾದರು. ದೇಶರಕ್ಷಕ ಸೈನ್ಯಗಳಲ್ಲಿ ಸೈನಿಕರಾಗಿ ಸೇರಿದರು. ಸರ್ಕಾರದ ದೊಡ್ಡದೊಡ್ಡ ಉದ್ಯೋಗಗಳಿಗೂ ಸೇರಿದರು. ಎಲ್ಲ ರಾಜಕೀಯ ಸಂಘಗಳಲ್ಲೂ ಅವರಿಗೆ ಪ್ರವೇಶ ದೊರೆದು ಸರ್ವಸಮಾನರಾಗಿ ಬಾಳುವಂತಾದರು. ಉನ್ನತಿಯಲ್ಲಿದ್ದ ಅಲ್ಲಿಯ ಪ್ರಜೆಗಳು ತಮ್ಮ ವರ್ಣಾಧಿಕಾರವೂ ಪ್ರಾಬಲ್ಯವೂ ಅಳಿದುಹೋಗುವುದಲ್ಲಾ ಎಂಬ ಸಂಕಟದಿಂದ ಇತರರ ಅಭ್ಯುದಯಕ್ಕೆ ಅಡ್ಡಿಯನ್ನೊಡ್ಡಲಿಲ್ಲ. ಪ್ರಭುತ್ವದವರೂ ಕೂಡ ದೇಶೋದ್ಧಾರವೊಂದನ್ನೇ ಲಕ್ಷ್ಯವನ್ನಾಗಿಟ್ಟುಕೊಂಡು ಧೈರ್ಯದಿಂದ ಕೆಲಸಮಾಡಿದಕಾರಣ ಲೋಕೋತ್ತರವಾದ ಅಭಿವೃದ್ಧಿಯು ಆ ದೇಶದಲ್ಲಿ ಕಾಣುವುದಕ್ಕವಕಾಶವಾಯಿತು. ನಮ್ಮಲ್ಲಿ ಮಾತುಮಾತಿಗೂ ಜಪಾನ್ ದೇಶವನ್ನು ಉದಾಹರಣೆಗೆ ತೆಗೆದುಕೊಂಡು ತಾವೂ ಅವರಂತೆ ಆಗಬೇಕೆಂದು ಹೇಳುವವರು ಅನೇಕರಿರುತ್ತಾರೆ. ಆದರೆ ಬರಿಯ ಮಾತಿನಲ್ಲೇ ಜಪಾನರು ಲೋಕೋತ್ತರತ್ವವನ್ನು ಪಡೆದುಕೊಂಡರೆ ಎಂಬುದನ್ನು ಮಾತ್ರ ಇವರು ಯೋಚಿಸುವುದಿಲ್ಲ. ಜಪಾನ್ ಪ್ರಜೆಗಳೂ ಜಪಾನ್ ಪ್ರಭುತ್ವವೂ ಸಹ ದೇಶೋದ್ಧರಣಕ್ಕಾಗಿ ಸ್ವಾರ್ಥಪರಿತ್ಯಾಗವನ್ನೂ ದೃಢತರ ಧೀರಪ್ರಶಮವನ್ನೂ ಆಚರಿಸಿ ಹೇಗೆ ಕೃತಕೃತ್ಯರಾದರೆಂಬುದನ್ನು ಪರಿಭಾವಿಸಿ ಅದರಂತೆ ಕೆಲಸಮಾಡಿದರೇನೆಯೇ ನಮ್ಮ ದೇಶದಲ್ಲೂ ನಿಜವಾದ ಸಂಘಸಂಸ್ಕರಣಗಳೂ ದೇಶೋದ್ಧಾರವೂ ಆದೀತಲ್ಲದೆ ಬರಿಯ ಸವಿಮಾತುಗಳಿಂದಲೇ ಯಾವ ಫಲಿತಾರ್ಥವೂ ಆಗಲಾರದು.

ವೇತನಗಳು.

ಶ್ರೀಮನ್ಮಹಾರಾಜರವರು ಮಂತ್ರಿವರ್ಯರಾದ ಸರ್. ವಿಶ್ವೇಶ್ವರಯ್ಯನವರ ವೇತನವನ್ನು ೫೦೦೦ ರೂ. ಗಳಿಗೂ, ೧ ನೆ ಕೌನ್ಸಿಲರ ವೇತನವನ್ನು ೨|| ಸಾವಿರಕ್ಕೂ, ೨ ನೆ ಕೌನ್ಸಿಲರ ವೇತನವನ್ನು ೩ ಸಾವಿರಕ್ಕೂ ಹೆಚ್ಚಿಸಿರುವರೆಂದು ಕೇಳುತ್ತೇವೆ. ಸಂಸ್ಥಾನದ ಉತ್ಪತ್ತಿಯೂ ವರ್ಷೇವರ್ಷೆ ಹೆಚ್ಚುತ್ತಿರುವಾಗ್ಗೆ, ರಾಜ್ಯಕಾರ್ಯನಿರ್ವಾಹ ಭಾರವೂ ಹೆಚ್ಚುತ್ತಿರುವಾಗ್ಗೆ ಔಚಿತ್ಯವನ್ನರಿತು ವೇತನಗಳ ಅಭಿವೃದ್ಧಿಯನ್ನು ಮಾಡುವುದು ಧರ್ಮವೇ ಆಗಿರುತ್ತದೆ. ಆದರೆ ೧ ನೆ ಕೌನ್ಸಿಲರ ವೇತನವು ೨ ನೆ ಕೌನ್ಸಿಲರ ವೇತನಕ್ಕಿಂತಲೂ ಕಡಿಮೆಯಾಗಿರುವಂತೆ ಏರ್ಪಡಿಸಿರುವುದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ. ಈ ಸಂಪ್ರದಾಯವು ಹಿಂದೆ ಯಾವ ಕೌನ್ಸಿಲರ ವಿಷಯದಲ್ಲೂ ಆಚರಿಸಲ್ಪಟ್ಟಿರಲಿಲ್ಲ. ಸರ್‌ದಾರ್ ಕಾಂತರಾಜೇ ಅರಸಿನವರು ಸೌಮ್ಯರೂ ಸಹನವಂತರೂ ಆಗಿರುವುದೇ ಇದಕ್ಕೆ ಕಾರಣವೆ? ರಾಜಬಂಧುಗಳಾಗಿಯೂ, ಪ್ರಜಾರಂಜನೈಕಪರಾಯಣರಾಗಿಯೂ, ಕಾರ್ಯನಿರ್ವಾಹಸಮರ್ಥರಾಗಿಯೂ, ಉತ್ತರೋತ್ತರ ಮಂತ್ರಿಪದವಿಯನ್ನು ವಹಿಸಲು ಅರ್ಹರಾಗಿಯೂ ಇರುವ ಅಂಥವರ ವಿಷಯದಲ್ಲಿಯೇ ಹೀಗೆ ವಿಷಮವಾದ ಏರ್ಪಾಟು ನಡೆದಿರುವುದು ಆಶ್ಚರ್ಯವು. ಸ್ವವಿಷಯವಾದುದರಿಂದ ಧೀರೋದಾತ್ತರಾದ ಅವರು ಇದನ್ನು ಕುರಿತು ಖಂಡಿಸುವುದಕ್ಕೆ ಹಿಂತೆಗೆದಿರಬಹುದಾದರೂ, ಸ್ಥಾನಮರ್ಯಾದೆಯನ್ನು ಪ್ರಭುತ್ವದವರಾದರೂ ಕಾಪಾಡಬೇಕಲ್ಲವೆ? ೧ ನೆ ಕೌನ್ಸಿಲರ ಸ್ಥಾನದಲ್ಲಿ ಒಬ್ಬ ಬ್ರಾಹ್ಮಣಾಧಿಕಾರಿಯಿದ್ದು ೨ ನೆ ಸ್ಥಾನದಲ್ಲಿ ಇತರರೊಬ್ಬರಿದ್ದು ಹೀಗೆ ನಡೆದಿದ್ದರೆ ಈ ದೇಶದ ಬ್ರಾಹ್ಮಣ ಪತ್ರಿಕೆಗಳು ಈಗಿನಂತೆ ತಟಸ್ಥವಾಗಿರುತ್ತಿದ್ದುವೆ?

ಹಿಂದೀ ಸಾಹಿತ್ಯ ಸಮ್ಮೇಳನವು.

ಇಂದೂರು ಪಟ್ಟಣದಲ್ಲಿ ಶ್ರೀಮಾನ್ ಗಂಧಿ ಮಹಾಶಯರ ಅಧ್ಯಕ್ಷತೆಯಲ್ಲಿ ಕಳೆದವಾರ ಈ ಸಮ್ಮೇಳನವು ೩ ದಿನಗಳವರೆಗೆ ಮಹಾ ವಿಜೃಂಭಣೆಯಿಂದ ನೆರವೇರಿತು. ೧೦ ಸಹಸ್ರ ಮಂದಿ ಸಭಿಕರು ಸೇರಿದ್ದರು. ಮಹಾರಾಜರು ಕೊಲ್ಲಾಪುರಕ್ಕೆ ಹೋಗಿದ್ದುದರಿಂದ ೧೨ ವರ್ಷ ವಯಸ್ಸಿನ ಯುವರಾಜರಾದ ಯಶವಂತರಾವ್ ಹೋಲ್ಕರ್‌ರವರು ಹಿಂದೀ ಭಾಷೆಯಲ್ಲಿ ಸಭಿಕರಿಗೆ ಸ್ವಾಗತವನ್ನು ಮಾಡಿ ಸಭಾರಂಭವನ್ನು ಮಾಡಿದರು. ಅಧ್ಯಕ್ಷರು ತಮ್ಮ ವಿಚಾರ ಪರಿಪ್ಲುತವಾದ ಭಾಷಣದಲ್ಲಿ ಹಿಂದೀ ಭಾಷೆಯ ಪ್ರಾಶಸ್ತ್ಯವನ್ನೂ ಅದರ ವ್ಯಾಪಕತೆಯನ್ನೂ ಅದನ್ನು ಭರತಖಂಡದ ಸರ್ವಸಾಮಾನ್ಯ ಭಾಷೆಯನ್ನಾಗಿ ಮಾಡಬೇಕಾದುದರ ಅವಶ್ಯಕತೆಯನ್ನೂ ಕುರಿತು ವಿಶದವಾಗಿ ಹೇಳಿದರು. ಅನೇಕಮಂದಿ ವಿದ್ವಜ್ಜನರ ಮತ್ತು ನಾರೀಮಣಿಗಳ ಭಾಷಣಗಳು ಶ್ಲಾಘನೀಯವಾಗಿ ನಡೆದುವು. ಹಿಂದೀಭಾಷಾಭಿವೃದ್ಧಿ ಪ್ರಯತ್ನಕ್ಕೆ ೧೦ ಸಾವಿರ ರೂ.ಗಳನ್ನು ಕೊಡಲು ಹೋಲ್ಕರ್ ಮಹಾರಾಜರು ಮಾಡಿದ ಅಪ್ಪಣೆಯು ಸಭೆಯಲ್ಲಿ ತಿಳಿಸಲ್ಪಟ್ಟಿತು. ಅದೇ ಉದ್ದೇಶದಿಂದ ಆರಂಭಿಸಿದ ಫಂಡಿಗೆ ಸಭೆಯಲ್ಲಿ ೩೦ ಸಾವಿರ ರೂ. ಗಳವರೆಗೆ ವರ್ಗಣಿಯು ಬಿದ್ದಿತು. ಭಾಷಾವ್ಯಾಪಕತೆಗಾಗಿ ಅನೇಕ ನಿರ್ಧಾರಗಳು ಮಾಡಲ್ಪಟ್ಟುವು. ಹಿಂದೀ ಭಾಷಾ ವ್ಯವಹಾರವು ಬಹಳ ಕಡಿಮೆಯಾಗಿರುವ ದಕ್ಷಿಣಪ್ರಾಂತದ ತೆನುಗು ತಮಿಳು ದೇಶಭಾಗಗಳಲ್ಲಿ ಆ ಭಾಷೆಯ ಪ್ರಚಾರ ಮಾಡುವುದಕ್ಕಾಗಿ ಕೆಲ ಮಂದಿ ಉಪಾಧ್ಯಾಯರನ್ನು ಉಚಿತವಾಗಿ ಅಭ್ಯಾಸಮಾಡಿಸಲು ಕಳುಹಿಸಿಕೊಡುವುದಕ್ಕೂ, ಈ ಪ್ರಾಂತದಲ್ಲಿ ಹಿಂದೀ ಅಭ್ಯಾಸಮಾಡುವ ೧೨ ಮಂದಿ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವುದಕ್ಕೂ ಸಹ ಅವರು ನಿರ್ಧಾರಮಾಡಿದರು. ಸಭೆಯ ಆದ್ಯಂತ ವೃತ್ತಾಂತಗಳು ದೇಶಭಾಷಾಪ್ರೇಮಿಗಳಿಗೆಲ್ಲಾ ಎಷ್ಟೋ ಆನಂದಕರವಾಗಿರುವುವು. ಆ ಸಭಾವೈಭವವೂ ಆ ಭಾಷಾಭಕ್ತರ ಉತ್ಸಾಹವೂ ಸ್ವಲ್ಪಮಟ್ಟಿಗಾದರೂ ಕನ್ನಡಿಗರನ್ನು ಎಚ್ಚರಿಸಲಾರವೆ? ಸ್ಥಲಾಭಾವದಿಂದ ಅದನ್ನೆಲ್ಲಾ ಇಲ್ಲಿ ವಿವರಿಸುವುದಕ್ಕೆ ಅಶಕ್ತರಾಗಿರುವೆವು. ೮ ಕೋಟಿ ಹಿಂದೀ ಭಾಷಾ ಸುಪುತ್ರರು ಸ್ವಭಾಷಾ ಪ್ರೇಮದಿಂದ ಅಷ್ಟು ಮಹಾಪ್ರಯತ್ನವನ್ನು ಮಾಡುತ್ತಿರುವಾಗ ೧ ಕೋಟಿ ಕರ್ನಾಟಕ ಭಾಷಾಪುತ್ರರು ¼ ಭಾಗದ ಪ್ರಯತ್ನವನ್ನಾದರೂ ಮಾಡಬೇಕಾದುದು ಕರ್ತವ್ಯವಲ್ಲವೆ?

ಒಳದೇಶದ ವೃತ್ತಾಂತಗಳು.

ಶ್ರೀ ಶಿವಗಂಗೆಯ ಸ್ವಾಮಿಗಳು ರಾಮೇಶ್ವರಕ್ಕೆ ಹೋಗುವ ನಿಮಿತ್ತವಾಗಿ ರಾಜಧಾನಿಗೆ ಈ ವಾರದಲ್ಲಿ ಬರುವವರಾಗಿದ್ದಾರೆ.

ಶ್ರೀರಂಗಪಟ್ಟಣದ ಮ್ಯುನಿಸಿಪಾಲಿಟಿಗೆ ಅಲ್ಲಿಯ ಪ್ರಜೆಗಳಿಂದ ಮ|| ಗಳಾದ ಸಿದ್ಧಲಿಂಗದೇವರು, ಸಯ್ಯದ್ ಅಹಮ್ಮದ್ ಸಾಬರು, ರಾಜಗೋಪಾಲರವರು ಸಹ ಕೌನ್ಸಿಲರುಗಳಾಗಿ ಆರಿಸಲ್ಪಟ್ಟಿರುವರು.

ಮದ್ರಾಸ್ ಪಚ್ಚಪ್ಪ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದ ಮ|| ಜೆ. ಸಿ. ರೋಲೋ ಎಂಬ ಯೂರೋಪ್ಯ ಪಂಡಿತರು ರಾಜಧಾನಿಯ ಮಹಾರಾಜಾಂಗ್ಲಕಲಾಶಾಲೆಯ ಇಂಗ್ಲೀಷ್ ಪ್ರೊಫೆಸರ್ ಕೆಲಸಕ್ಕೆ ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ.

ಕಳೆದ ತಾ|| ೩ ರಿಂದ ೬ ವಾರಗಳ ರಜಾದಮೇಲೆ ಹೋಗಿರುವ ಮ|| ಕೆ. ಮೇಥ್ಯೂ ರವರ ಸ್ಥಾನದಲ್ಲಿ ಸೀನಿಯರ್ ಅ|| ಕಮಿಷನರ್ ಮ|| ಟಿ. ಚೊಕ್ಕಣ್ಣನವರು ಮೈಸೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ಡಿ|| ಕಮಿಷನರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರು ಯೂನಿವರ್ಸಿಟಿಯ ಕೌನ್ಸಿಲ್‌ಮೀಟಿಂಗೂ ಸೆನೇಟ್‌ಮೀಟಿಂಗೂ ಕಳೆದ ತಾ|| ೫ ಮತ್ತು ೬ ರಲ್ಲಿ ನಡೆದು ಅನೇಕ ವಿಷಯಗಳು ಚರ್ಚಿಸಲ್ಪಟ್ಟುವು. ಲಾ ಕಾಲೇಜು ರಾಜಧಾನಿಯಲ್ಲಿ ಸ್ಥಾಪಿಸಲ್ಪಡತಕ್ಕುದೆಂದು ನಿರ್ಧಾರವಾಗಿರುವುದಾಗಿ ಕೇಳುತ್ತೇವೆ.

ಬರುವ ನವರಾತ್ರಿಯ ಕಾಲದಲ್ಲಿ ರಾಜಧಾನಿಯಲ್ಲಿ ನಡೆಯಿಸಲ್ಪಡಲಿಕ್ಕಿರುವ ವಸ್ತುಪ್ರದರ್ಶನಕ್ಕೆ ಮೈಸೂರು ದೇಶದ ಹೊರಗಣ ಭರತಖಂಡದ ಯಾವಭಾಗದ ಕೈಗಾರಿಕೆಯ ಸಾಮಗ್ರಿಗಳೂ ಬರಲು ಅನುಕೂಲಪಡಿಸುವವರಾಗಿದ್ದಾರೆ. ಇದು ಉಚಿತವಾದೇರ್ಪಾಟು.

ಶ್ರೀಮನ್ಮಹಾರಾಜರ ಅ|| ಪ್ರೈವೇಟ್ ಸೆಕ್ರೆಟರಿಯವರಾಗಿದ್ದ ಮ|| ಎಂ. ಎಫ್. ಬಾಳರಾಜ ಅರಸ್ ಬಿ. ಎ. ಯವರು ಸಂಪದಭ್ಯುದಯ ಸಮಾಜದ ಶಿಲ್ಪವಾಣಿಜ್ಯಶಾಖೆಯ ಕಾರ್ಯದರ್ಶಿ ಕೆಲಸಕ್ಕೆ ನಿಯಮಿಸಲ್ಪಟ್ಟು, ಆ ಕೆಲಸದಲ್ಲಿದ್ದ ಮ|| ಕೆ. ಸುಬ್ಬರಾಯರು ಮ|| ವಿ. ಆರ್. ತ್ಯಾಗರಾಜಯ್ಯರ ಸಹಾಯಕರಾಗಿ ಕೆಲಸಮಾಡುವಂತೆ ನಿಯಮಿಸಲ್ಪಟ್ಟಿದ್ದಾರೆ.

ನಂಜನಗೂಡು ತಾ|| ಹುಲ್ಲಹಳ್ಳಿ ಹೋಬಳಿ ಸಂಗಮ ಕ್ಷೇತ್ರದಲ್ಲಿ ಶ್ರೀಮದ್ರಾಮೇಶ್ವರ ಲಿಂಗಮೂರ್ತಿಯ ರಥೋತ್ಸವವು ಪದ್ಧತಿಯ ಪ್ರಕಾರ ಬರುವ ಚೈತ್ರ ಶು|| ೫ (15-4-18) ಸೋಮವಾರದಲ್ಲೂ ರುದ್ರಕೊಂಡ ತೆಪ್ಪೋತ್ಸವಗಳು ಶು|| ೬ ಮಂಗಳವಾರದಲ್ಲೂ ನಡೆಯುವುದರಿಂದ ಭಗವದ್ಭಕ್ತರು ಬಂದು ಈಶ್ವರಾರಾಧನೆಯನ್ನು ನಡೆಸಬೇಕೆಂದು ಸಂಗಮದ ಮಠದ ಸರ್ವಾಧಿಕಾರಿಗಳು ತಿಳಿಸುತ್ತಾರೆ.

ಮೈಸೂರು ಅರಸೀಕೆರೆ ಲೋಹಮಾರ್ಗದಲ್ಲಿ ಪ್ರಯಾಣಿಕರ ಸಂದಣಿಯು ವಿಶೇಷವಾಗಿದೆ. ಬರುವ ತಾ|| ೧೫ ರಿಂದ ಈ ಮಾರ್ಗದಲ್ಲಿ ಈಗ ನಡೆಯುತ್ತಿರುವ ೧ ಬಂಡಿಗೆ ಪ್ರತಿಯಾಗಿ ೨ ಬಂಡಿಗಳನ್ನು ಬಿಡುವಂತೆಯೂ, ಪೂನಾಕಡೆಯಿಂದ ಬರುವ ಮತ್ತೂ ಅತ್ತ ಹೋಗುವ ಮೇಲ್‌ಬಂಡಿಯ ಹೊತ್ತಿಗೆ ಅರಸೀಕೆರೆಯ ಬಳಿಯಲ್ಲಿ ಈ ಬಂಡಿಗಳು ಕೂಡುವಂತೆಯೂ ನಮ್ಮ ಸರ್ಕಾರದವರು ಏರ್ಪಡಿಸುವುದರಲ್ಲಿದ್ದಾರೆಂದು ತಿಳಿಯುತ್ತೇವೆ.

ಹಾಸನ ಡಿ|| ಅರಸೀಕೆರೆ ತಾ|| ಮೇಟಿಕುರಿಕೆ ಗ್ರಾಮಕ್ಕೆ ಶ್ರೀ ಗಿರಿರಾಜ ಶೂನ್ಯಸಿಂಹಾಸನದ ಚರಪಟ್ಟಾಧ್ಯಕ್ಷರು ಆಗಮಿಸಿದ್ದುದರ ಜ್ಞಾಪನಾರ್ಥವಾಗಿ ಅಲ್ಲಿ ಸ್ಥಾಪಿಸಲ್ಪಟ್ಟಿರುವ ವೀರಶೈವ ವಾಚನಮಂದಿರದ ಮೀಟಿಂಗು ಈ ತಾ|| ೧೫ ರಲ್ಲಿ ನಡೆಯುವಾಗ್ಗೆ ವೀರಶೈವ ಮತಸುಧಾರಣೋಪಾಯ ಮುಂತಾದ ವಿಷಯಗಳಮೇಲೆ ಉಪನ್ಯಾಸಗಳಾಗಲೇರ್ಪಟ್ಟಿರುವುದರಿಂದ ಆ ಕಾಲಕ್ಕೆ ಮತಾಭಿಮಾನಿಗಳು ದಯಮಾಡಿಸಬೇಕೆಂದು ಸೆಕ್ರೆಟರಿಯವರಪೇಕ್ಷಿಸುತ್ತಾರೆ.

ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕಸಭೆಯು ಜನ್ಮಿಸಿದಾರಭ್ಯ ಬಹುಕಾಲದವರೆಗೂ ಪ್ರತಿಯೊಂದು ನಾಟಕದಲ್ಲೂ ಮುಖ್ಯ ನಾಯಕನ ಪಾತ್ರವನ್ನು ವಹಿಸುತ್ತಿದ್ದು ಕಂದಗಳನ್ನು ಹಾಡುವುದರಲ್ಲೂ, ಪಾತ್ರೋಚಿತ ಭಾವಾಭಿನಯದಲ್ಲೂ ಅದ್ವಿತೀಯರೆಂದು ಪ್ರಖ್ಯಾತಿಗೊಂಡು ಶ್ರೀಮನ್ಮಹಾರಾಜರವರ ಅನುರಾಗಕ್ಕೆ ಪಾತ್ರರಾಗಿದ್ದ ಮ|| ಎಂ. ಡಿ. ಸುಬ್ಬಣ್ಣನವರು ೮-೧೦ ವರ್ಷಗಳಿಂದಲೂ ಪಾರ್ಶ್ವವಾಯುರೋಗಗ್ರಸ್ತರಾಗಿ ಎಷ್ಟೋ ವೈದ್ಯಚಿಕಿತ್ಸೆಯನ್ನು ಹೊಂದಿದಾಗ್ಗೂ ಗುಣಹೊಂದದೆ ಕಳೆದ ತಾ|| ೫ ರ ರಾತ್ರಿ ೯ ಗಂಟೆಯಲ್ಲಿ ಸ್ವಗೃಹದಲ್ಲಿ ವಿಧಿವಶರಾದರೆಂದು ತಿಳಿಯಿಸಲು ವ್ಯಸನವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ ಪ್ರಾಯಶಃ ೫೮ ವರ್ಷ ವಯಸ್ಸಿರಬಹುದು. ಇವರಿಗೆ ಮೂವರು ಪುತ್ರರಿರುವರು.

ರಾಜಧಾನಿಯ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮ|| ಜೆ. ನಾರಾಯಣರಾವ್, ಬಿ.ಎ., ಬಿ.ಎಲ್., ರವರು ಶಿವಮೊಗ್ಗೆಯ ಡಿ|| ಕಮಿಷನರ ಪರ್ಸನಲ್ ಅ|| ಕಮಿಷನರಾಗಿಯೂ, ಮ|| ಎ. ಮೃತ್ಯುಂಜಯ ಅಯ್ಯರ್‌ರವರು ಗುಬ್ಬಿ ಸಬ್‌ಡಿವಿಜನ್ನಿನಿಂದ ಮೈಸೂರು ಡಿ|| ಕಮಿಷನರ ಪರ್ಸನಲ್ ಅ|| ಕಮಿಷನರಾಗಿಯೂ, ಮ|| ಎಸ್. ನಾರಾಯಣರಾಯರು ಮಾಲೂರು ಸಬ್‌ಡಿವಿಜನ್ನಿನಿಂದ ಬೆಂಗಳೂರು ಡಿ|| ಕಮಿಷನರ ಪ|| ಅಸಿಸ್ಟೆಂಟರಾಗಿಯೂ, ಮ|| ಬಿ. ರಾಮಸ್ವಾಮಯ್ಯ ಬಿ.ಎ., ಯವರು ತರೀಕೆರೆ ಸಬ್‌ಡಿವಿಜನ್ನಿನಿಂದ ತುಮಕೂರು ಡಿ|| ಕಮಿಷನರ ಪ|| ಅ|| ಕಮಿಷನರಾಗಿಯೂ, ಮ|| ಸಿ. ಬಿ. ಲಕ್ಷ್ಮಣರಾಯರು ಮೈಸೂರಿನಿಂದ ಮಾಲೂರು ಸಬ್‌ಡಿವಿಜನ್ನಿಗೂ, ಮ|| ಎಂ. ಚೆನ್ನರಾಜ ಅರಸಿನವರು ತರೀಕೆರೆ ಸಬ್‌ಡಿವಿಜನ್ನಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಯುದ್ಧವಾರ್ತೆಯು.

ಪಶ್ಚಿಮ ರಣರಂಗದಲ್ಲಿ ಮಹಾ ಪ್ರಳಯಕರವಾದ ಯುದ್ಧವು ಅಖಂಡವಾಗಿ ನಡೆಯುತ್ತಲೇ ಇದೆ. ಆದರೆ ಜರ್ಮನರು ಮೊದಮೊದಲು ಸರ್ವಾರಂಭದಿಂದ ನುಗ್ಗಿದಾಗ ಪಡೆದುಕೊಂಡಂಥ ಜಯವನ್ನೂ ದೇಶಾಕ್ರಮಣವನ್ನೂ ಈಗ ಹೊಂದುತ್ತಿರುವುದಿಲ್ಲ. ಅವರ ಮುಂಬರಿಯುವಿಕೆಯು ಬಹಳಮಟ್ಟಿಗೆ ಇಂಗ್ಲೀಷ್ ಫ್ರೆಂಚ್ ಅಮೆರಿಕನ್ ಸೈನ್ಯಗಳಿಂದ ತಡೆಯಲ್ಪಟ್ಟಿದೆ. ಆದರೆ ಇದುವರೆಗೆ ಶತ್ರುಗಳು ತೋರಿಸಿದ ಶೌರ್ಯಸಾಹಸಗಳಿಂದಲೂ ಅವರು ಪಟ್ಟ ವಿಪರೀತವಾದ ಸೇನಾನಷ್ಟದಿಂದಲೂ ಕೂಡ ಅವರು ೧೯೧೬ ನೆ ವರ್ಷದಲ್ಲಿ ಮಿತ್ರಮಂಡಲಿ ಸೈನ್ಯವು ಯಾವ ಸಾಲಿನಲ್ಲಿದ್ದಿತೋ ಆ ಸಾಲಿನವರೆಗೂ ಒತ್ತರಿಸಿಕೊಂಡು ಬಂದಿದ್ದಾರೆ. ಮಿತ್ರಮಂಡಲಿಯವರು ಈ ಸಂದರ್ಭದಲ್ಲಿ ಕೆಲವು ಕಡೆ ತಮಗಿಂತ ೨-೩ ಭಾಗದಷ್ಟು ಹೆಚ್ಚಾಗಿದ್ದ ಶತ್ರುಸೈನ್ಯದೊಡನೆಯೂ ಹೋರಾಡಬೇಕಾಗಿ ಬಂದಿತು. ಆದರೂ ಇವರು ತೋರಿಸಿದ ಧೈರ್ಯಸ್ಥೈರ್ಯ ಪರಾಕ್ರಮಗಳು ವರ್ಣನಾತೀತವಾಗಿದ್ದುದರಿಂದ ಶತ್ರುಗಳ ಸಂಕಲ್ಪಗಳೆಲ್ಲಾ ಪೂರ್ಣವಾಗಿ ಸಿದ್ಧಿಸುವುದಕ್ಕೆ ಅವಕಾಶವಿಲ್ಲದೆ ಹೋಗಿದೆ. ಈಗ ಈ ರಂಗದಲ್ಲಿರುವ ಮಿತ್ರಮಂಡಲಿ ಕಡೆಯ ಇಂಗ್ಲೀಷ್ ಫ್ರೆಂಚ್ ಅಮೆರಿಕನ್ ಸೈನ್ಯವೆಲ್ಲಾ ಮುಖ್ಯವಾದ ಒಬ್ಬ ಸರ್ವಸೇನಾಪತಿಯ ಅಧೀನದಲ್ಲಿದ್ದು ಕೆಲಸಮಾಡುವಂತೆ ಮಿತ್ರಮಂಡಲಿಯವರು ಏರ್ಪಡಿಸಿಕೊಂಡಿದ್ದಾರೆ. ಆ ಮುಖ್ಯ ಸೇನಾಪತಿ ಯಾರೆಂದರೆ—ಫ್ರೆಂಚರ ಸುಪ್ರಸಿದ್ಧ ಸೇನಾನಿಯಾದ ಜನರಲ್ ಫಾಕ್ ಎಂಬುವರೇ ಆಗಿರುತ್ತಾರೆ. ಈ ನಿಯಮನವನ್ನು ಸರ್ವಸೇನೆಯೂ ಸೇನಾಪತಿಗಳೂ ಸಂತೋಷದಿಂದ ಅಂಗೀಕರಿಸಿರುತ್ತಾರೆ. ಇದರಿಂದ ರಣರಂಗದ ಕಾರ್ಯವೆಲ್ಲವೂ ಒಮ್ಮೊಗವಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ. ಶತ್ರುಗಳು ಇದೇ ತೆರದ ಏರ್ಪಾಟನ್ನೇ ಮೊದಲಿಂದಲೂ ಮಾಡಿಕೊಂಡು ಬಂದಿದ್ದಾರೆ. ಈಗ ಮಿತ್ರಮಂಡಲಿಯವರು ಶತ್ರುಗಳ ನುಗ್ಗಾಟವನ್ನು ತಡೆಯುವುದರಲ್ಲಿ ಮಾತ್ರವೇ ತೃಪ್ತರಾಗದೆ ಅವರ ಮೇಲೆ ಬಿದ್ದು ಯುದ್ಧಮಾಡಿ ಹಿಂದಕ್ಕಟ್ಟುವುದರಲ್ಲೂ ವ್ಯಗ್ರರಾಗಿದ್ದಾರೆ. ನವೀನಸೈನ್ಯಗಳೂ ಹೊಸಹೊಸ ಫಿರಂಗಿಗಳೂ ಅಗಣಿತವಾಗಿ ಇವರುಗಳ ಸಹಾಯಕ್ಕೆ ಹೋಗಿ ಸೇರುತ್ತಿವೆ. ೩-೪ ದಿನಗಳಿಂದ ಬರುತ್ತಿರುವ ತಂತೀವಾರ್ತೆಗಳು ನಿರಾಶೆಗೆ ಅವಕಾಶ ಕೊಡದೆ ಉತ್ಸಾಹಜನಕವಾಗಿರುತ್ತವೆ.

ಶತ್ರುಗಳು ಆರ್ರಾಸ್, ಅಮಿಯನ್ಸ್ ಎಂಬ ಪ್ರಮುಖಪಟ್ಟಣಗಳನ್ನೂ ಅಮಿಯನ್ಸ್ ಲೋಹಮಾರ್ಗವನ್ನೂ ಹಿಡಿದುಕೊಳ್ಳಬೇಕೆಂಬ ಉದ್ದೇಶದಿಂದ ಘೋರಯುದ್ಧವನ್ನು ಈಗ ನಡೆಯಿಸುತ್ತಿದ್ದಾರೆ. ಈ ಸ್ಥಳದಲ್ಲಿ ಜರ್ಮನಿ ಯುವರಾಜನು ತಮ್ಮ ಬಹಳ ಸೈನ್ಯವನ್ನು ಬಲಿಯಿತ್ತು ೭-೮ ಗ್ರಾಮಗಳನ್ನು ವಶಪಡಿಸಿಕೊಂಡನು. ಆದರೆ ಸ್ವಲ್ಪಕಾಲದೊಳಗೇ ಮಿತ್ರಮಂಡಲಿಯವರು ಹಿಂದಿರಿಗಿ ಅವನ್ನು ಹಿಡಿದುಕೊಂಡುಬಿಟ್ಟರು. ಆದಕ್ಕೆ ದಕ್ಷಿಣದಲ್ಲಿ ಮಾಂಟ್ ಡೀಡರ್, ಲಾಸಗ್ನಿಗಳ ಮಧ್ಯದಲ್ಲೂ ಬಹಳ ಭಯಂಕರವಾದ ಯುದ್ಧಗಳನ್ನು ಶತ್ರುಗಳು ಮಾಡುತ್ತಿದ್ದಾರೆ. ಹೊಸಹೊಸ ದಳಗಳನ್ನು ಹೆಚ್ಚಾಗಿ ತಂದು ಮೇಲೆ ಬೀಳಿಸುತ್ತಿದ್ದಾರೆ. ರಾಕ್ಷಸಫಿರಂಗಿಗಳನ್ನು ವಿಪರೀತವಾಗಿ ತಂದು ಅಹರ್ನಿಶಿಯೂ ಅವುಗಳಿಂದ ಗುಂಡುಗಳನ್ನು ಸುರಿಸುತ್ತಿದ್ದಾರೆ. ಆದರೂ ಫ್ರೆಂಚರ ಮತ್ತೂ ಇಂಗ್ಲೀಷರ ಮಹಾಫಿರಂಗಿಗಳೂ ಪದಾತಿಗಳ ಮತ್ತೂ ಕಾಲ್ಬಲದವರ ಅತ್ಯಂತ ವೀರಾವೇಶಪೂರ್ಣವಾದ ಪ್ರತಿಭಟನವೂ ಸಹ ಒಟ್ಟುಗೂಡಿ ಶತ್ರುಗಳ ಹಮ್ಮನ್ನಡಗಿಸುತ್ತಿರುವುದರಿಂದ ಶತ್ರುಗಳಿಗೆ ಈ ಸ್ಥಳದಲ್ಲಿ ಸಂಭವಿಸಿದ ನಷ್ಟವು ಅಭೂತಪೂರ್ವವಾಗಿದೆ. ೨೪ ಗಂಟೆಗಳ ಹೊತ್ತು ಎಡೆಬಿಡದೆ ಇಲ್ಲಿ ಉಭಯಪಕ್ಷಕ್ಕೂ ಯುದ್ಧವಾದುದರ ವರ್ಣನೆಯನ್ನು ಕೇಳುವಲ್ಲಿ ಅದರ ತೀಕ್ಷ್ಣತ್ವವು ವರ್ಣನಾತೀತವಾಗಿ ಮಹಾ ಪ್ರಳಯವನ್ನೇ ಪ್ರತ್ಯಕ್ಷ ತೋರಿಸಿದ್ದಿತೆಂದು ಊಹಿಸಬೇಕಾಗುತ್ತದೆ. ಆದರೂ ಆ ಸ್ಥಲದಲ್ಲಿ ಶತ್ರುಗಳಿಗೆ ಎಷ್ಟುಮಾತ್ರದ ಸ್ಥಳಾಕ್ರಮಣವೂ ಲಭಿಸಲಿಲ್ಲ. ಪ್ಲಿಮಾಂಟಿನ ಹತ್ತಿರ ಫ್ರೆಂಚರ ಸೈನ್ಯವೊಂದೇ ಜರ್ಮನರ ಮೇಲೆ ಯುದ್ಧಮಾಡಿ ೨ ಜರ್ಮನ್ ಸೈನ್ಯಗಳನ್ನು ಸೋಲಿಸಿ ಅವರು ನಿಂತಿದ್ದ ಸ್ಥಳವನ್ನೂ ೭೦೦ ಮಂದಿ ಸೈನಿಕರನ್ನೂ ವಶಪಡಿಸಿಕೊಂಡರು. ಲೂಸಿ, ಅವ್ರೀ ಪ್ರಾಂತಗಳಲ್ಲಿ ಶತ್ರುಗಳ ನುಗ್ಗಾಟವನ್ನು ಮಿತ್ರಮಂಡಲಿಯವರು ತಡೆದುಬಿಟ್ಟಿದ್ದಾರೆ. ಸೀರಿ ಪ್ರಾಂತದಲ್ಲಿ ಇಂಗ್ಲೀಷರು ಶತ್ರುಗಳ ೧೯ ಯಂತ್ರದ ಫಿರಂಗಿಗಳನ್ನು ವಶಪಡಿಸಿಕೊಂಡರು, ಮತ್ತೂ ಮುಂದಕ್ಕೆ ಕೆಲವು ದೂರ ಸಾಗಿ ಹೋದರು. ಮೋರೆಲ್ ಹಾಂಗಾರ್ಡಿನ ಹತ್ತಿರ ಶತ್ರುಗಳನ್ನು ಹಿಮ್ಮೆಟ್ಟಿಸಿ ಸ್ಥಾನಾಕ್ರಮಣ ಮಾಡಿದ್ದಾರೆ. ಸೋಮುನದಿಗೆ ಉತ್ತರದಲ್ಲಿ ಶತ್ರುಗಳು ಬಹಳ ಸೈನ್ಯವನ್ನು ಕೂಡಿಸಿದ್ದಾರೆ. ವಿಲ್ಲರ್ಸ್, ಬೋರ್ಟನೋ ಪ್ರಾಂತದಲ್ಲಿ ಭೀಕರಯುದ್ಧಗಳು ನಡೆದುದರಲ್ಲಿ ಶತ್ರುಗಳನ್ನು ಮುಂದಕ್ಕೆ ಬರಗೊಡಿಸಲಿಲ್ಲ. ಈ ಭಾಗದಲ್ಲಿ ಇಂಗ್ಲೀಷರ ಸೇನಾಪಙ್ಕ್ತಿಯು ಬಹಳ ದೃಢವಾಗಿ ನಿಂತಿದೆ. ಶತ್ರುಗಳಿಗೆ ದುರ್ಭೇದ್ಯವಾಗಿದೆ. ಇಲ್ಲಿ ಜನರಲ್ ಹಾರ್ನಿಬಿಂಗ್‌ರವರ ಕೈಕೆಳಗಣ ಸೈನ್ಯವು ಬಹು ಜಾಗರೂಕವಾಗಿಯೂ ಶೂರವಾಗಿಯೂ ಇದ್ದುಕೊಂಡು ಶತ್ರುಗಳ ಮುಂದೆ ಸಿಂಹಗಳಂತೆ ಕಾಣಿಸಿಕೊಳ್ಳುತ್ತಿವೆ. ಅಮೇರಿಕನ್ನರು ತಮ್ಮ ಸೇನಾಸಹಾಯವನ್ನು ವಿಶೇಷವಾಗಿ ಒದಗಿಸುವುದಕ್ಕೆ ಪೂರ್ಣವಾಗಿ ಸಾಹಸಪಡುತ್ತಿದ್ದಾರೆ. ಅನರು ಸಂಕಲ್ಪಿಸಿರುವ ಸೈನ್ಯದಲ್ಲಿ ಅರ್ಧದಷ್ಟಾದರೂ ಬೇಗನೆ ಒದಗಿದರೆ ಶತ್ರುಗಳು ಈ ರಂಗದಲ್ಲಿ ತಮ್ಮ ಜಯಕಾಂಕ್ಷೆಯನ್ನು ಬಿಟ್ಟೇಬಿಡಬೇಕಾಗುತ್ತದೆ. ಆದರೆ ಅಮೇರಿಕಾದಿಂದ ನೂತನಸೈನ್ಯಗಳು ಹೆಚ್ಚಾಗಿ ಬಂದೊದಗುವುದರೊಳಗಾಗಿ ಪ್ಯಾರಿಸ್ಸಿನಕಡೆಗೋ ಸಮುದ್ರತೀರಕ್ಕೋ ಹೋಗಿ ಸೇರಿಬಿಡಬೇಕೆಂದು ಶತ್ರುಗಳು ನಿಮಿಷಾರ್ಧವನ್ನೂ ವ್ಯರ್ಥವಾಗಿ ಕಳೆಯದೆ ಹೊಸಹೊಸದಾಗಿ ಸೈನ್ಯಗಳನ್ನೂ ಯುದ್ಧೋಪಕರಣಗಳನ್ನೂ ಪ್ರತಿಕ್ಷಣಕ್ಕೂ ತಂದು ಒದಗಿಸಿ, ಭಯಬಲಾತ್ಕಾರಪ್ರೋತ್ಸಾಹಾದಿಗಳಿಂದೆಲ್ಲಾ ತಮ್ಮ ಸೈನ್ಯಗಳನ್ನು ನುಗ್ಗಿಸಿ ಅತುಲಯುದ್ಧವನ್ನು ಮಾಡಿಸುತ್ತಿದ್ದಾರೆ. ಇನ್ನೂ ಅವರ ಯುದ್ಧಗಳು ಬಹಳ ಭಯಂಕರವಾಗಿಯೂ ಬಲವತ್ತರವಾಗಿಯೂ ನಡೆಯುತ್ತವೆನ್ನುವುದಕ್ಕೆ ಸಂಶಯವಿಲ್ಲ. ಆದರೂ ದಿನದಿನಕ್ಕೆ ಮಿತ್ರಮಂಡಲಿ ಸೇನೆಯಲ್ಲಿ ಶತ್ರುಗಳಮೇಲಣ ದ್ವೇಷವೂ ವೀರಾವೇಶವೂ ಹೆಚ್ಚುತ್ತಲೂ, ಸಹಾಯವು ಅಧಿಕವಾಗಿ ಕೂಡುತ್ತಲೂ ಇರುವುದರಿಂದ ಶತ್ರುಗಳಿಗೆ ತಕ್ಕ ಪ್ರತಿಕ್ರಿಯೆಯನ್ನು ಮಾಡುವುದಕ್ಕೆ ಇವರೂ ಮೈಮರೆಯುವುದಿಲ್ಲವೆಂಬುದು ಸಿದ್ಧವಾಗಿಯೇ ಇದೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮತ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
2 ಆನಂದ ಬುಕ್ ಡಿಪೋ, ಮೈಸೂರು.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿನಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹುದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ನೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಿತ್ತಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚಿ, ಜಡ್ಡು, ಗುದ್ದನ್ನನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇವಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡುತ್ತೆ.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನು ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಕ್ರದತ್ತಾ, ಬುಕ್ಕಾನಿ ಇವೇ ಮೊದಲಾದ ಹಸ್ತಲಿಪಿ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇವರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು “ಸಂಜೀವನಿ” ಎಂಬು ಧಾರಾಳವಾಗಿ ಹೇಳಬಹುದು. ಇದು ಅನೇಕವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ “ಕಾಮಸಂಜೀವನಿಲೇಹ್ಯವು” ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ಸ್ವಪ್ನಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರೋಗವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ “ಕಾಮಸಂಜೀವನಿಲೇಹ್ಯವು” ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ:—ಇದರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟೆ (ಟಾಕಿ) ಹಡವರ್ಣ, ಯಲುಸಂಧಿಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರೆಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು ಜವಾಬಿಗಾಗಿ ಟಿಕೇಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತಪ್ಪಾ ಕಾಳಪ್ಪಾ ಲೇಂಗಡೆ,
9 ಹೊಸೂರ, ಪೋಸ್ಟ್, ಪಾಪೂರ (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

8 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನಿ ಸೀರೆಗಳನ್ನು ಬೇರೆ ಮಗ್ಗಿನಲ್ಲಿ ತಯಾರಿಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇದೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 17

ಇಮಿಟೇಷನ್ ಸಿಲ್ಕ್ ಗೋವರ್ ಜಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	3.8.0

ವಿಳಾಸ:-ವೈರಂ ಅಂಡ್ ಕೋ, ಇರುಳಪ್ಪನವೀದಿ, ಮದರಾಸು.

ಕಾಳು ಕಡಿಯ ಜಂಗೀ ವಖಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
10 ಧಾರ್ವಾಡ.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರಾ ತಿಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲಿಂಬೇ. ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲಿಂಬೇ. ಇಷ್ಟೆ. ೧೦೦ ಕ್ಕೆ ೧-೪-೦

೩. ಹೇನುಸೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ. ಇಷ್ಟೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲಿಗೆ ೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಪೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
20 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ॥ ಬ॥ ಮಲ್ಲಪ್ಪ ಬಸವಪ್ಪ ವಾರದ
ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ.ಗಳನ್ನು ದಾನಮಾಡಿ ಯಾವಯಾವ ಮಹಾಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

11 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

೧೯೧೮ ನೆಯ ಇಸವಿ ಏಪ್ರಿಲ್ ತಾ॥ ೭ ರಿಂದ ೧೯೧೮ ನೆಯ ಏಪ್ರಿಲ್ ತಾ॥ ೧೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಫಾಲ್ಗುಣ ಬ॥ ಏಕಾದಶಿಯಿಂದ ಶಾಲಿವಾಹನಶಕ ೧೮೪೧ ನೇ ಕಾಳಯುಕ್ತಿನಾಮ ಸಂವತ್ಸರದ ಚೈತ್ರ ಶು॥ ತದಿಗೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾನ ತೇದಿ
7	ಭಾನು	ಏಕಾದ	34-17	ಧನಿಷ್ಠ	35-23	25
8	ಸೋಮ	ದ್ವಾದಶಿ	28-36	ಶತಭಿಷ	31-35	26
9	ಮಂಗಳ	ತ್ರಯೋ	22-33	ಪೂಭಾ	27-27	27
10	[1] ಬುಧ	ಚತು	16-28	ಉಭಾ	23-15	28
11	ಗುರು	ಅಮಾ	11-23	ರೇವತಿ	19-9	29
12	[2] ಶುಕ್ರ	ಪಾಡ್ಯ	4-48	ಅಶ್ವಿನಿ	54-25	30
13	[3] ಶನಿ	ತದಿಗೆ	54-33	ಭರಣಿ	12-13	1

(1) ಅಮಾವಾಸ್ಯಾತಿಥಿಃ. (2) ಚಾಂದ್ರಸಂವತ್ಸರಾರಂಭಃ. (3) ಸೌಭಾಗ್ಯಗೌರೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಞ ಸಹ್ಯತ್ರ್ಮೋದರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಜ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚೆತಿ ಲೆಯಂಸದಾಪುರಿಗೆ ಗೌರೀತಾಸುತಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಏಪ್ರಿಲ್ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೧೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾ ಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

MADRAS
MAIL
WATCH
WITH 15
PRESENTS

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
18 3, ಇರುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 19

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾತುಮಾಶಿಗೂ ವೈದ್ಯರ ಸಮಯವನ್ನು ಕಾದು ನೋಡಿಯಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟತನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲಿಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಲಿಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸ್ಥಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷೆಯುಳ್ಳವರು ಶೀಘ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
22 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 27

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮಹೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಜಿ॥.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಏಪ್ರಿಲ್ ತಾ|| ೨೧ ನೆಯ ಭಾನುವಾರ.

ಪಾರಿಶ್ರಾಮಿಕ ಧನಾಗಾರ.

ಪ್ರಪಂಚದಮೇಲೆ ಪ್ರಖ್ಯಾತವಾಗಿರುವ ಯಾವುದೊಂದು ದೇಶದ ಸಂಪದಭಿವೃದ್ಧಿಗೂ ಅಲ್ಲಿಯ ಪಾರಿಶ್ರಾಮಿಕಾಭ್ಯುದಯವೇ ಮುಖ್ಯಕಾರಣವಾಗಿರುವುದೆಂದು ವ್ಯಕ್ತವಾಗುತ್ತದೆ. ನಮ್ಮಾ ಭರತಖಂಡವು ವ್ಯವಸಾಯವೇ ಮುಖ್ಯವೃತ್ತಿಯಾಗುಳ್ಳದಾಗಿ ಆ ಉದ್ಯೋಗವೇ ಇಲ್ಲಿಯ ಸಂಪದಭಿವೃದ್ಧಿಗೆ ಮುಖ್ಯಸಾಧಕವಾಗಿದ್ದರೂ ಅದಕ್ಕೆರಡನೆಯದಾದ ಪರಿಶ್ರಮಗಳೇ ಅಭಿವೃದ್ಧಿಗೆ ಮುಖ್ಯಾಧಾರಗಳು. ನಾವು ಎಷ್ಟು ಅಧಿಕವಾಗಿ ವ್ಯವಸಾಯವನ್ನು ಮಾಡಿ ಎಷ್ಟು ಅಪಕ್ವವಸ್ತುಗಳನ್ನು ಉತ್ಪತ್ತಿ ಮಾಡಿದರೂ, ಕೈಗಾರಿಕೆಯಲ್ಲಿ ತಕ್ಕಷ್ಟು ವ್ಯಾಪಕತೆಯು ನಮಗಿಲ್ಲದಿರುವುದರಿಂದ, ಇದರ ಸಂಬಂಧವಾದ ವಿಶೇಷಲಾಭವು ಪರದೇಶೀಯರ ಹಸ್ತಗತವಾಗುತ್ತಿದೆ. ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ದೇಶೋದ್ಧರಣಕ್ಕಾಗಿ ಪಾಟುಪಡುತ್ತಿದ್ದೇವೆಂದು ಹೇಳಿಕೊಳ್ಳುವ ನಮ್ಮ ದೇಶದ ವಿದ್ಯಾಧಿಕ ಜನರಲ್ಲಿ ಮುಕ್ಕಾಲುಮೂರುವೀಸಪಾಲು ಜನರೆಲ್ಲಾ ಸ್ವರಾಜ್ಯಸಾಧನಕ್ಕೂ, ಸರ್ಕಾರದ ಉದ್ಯೋಗಸಂಪಾದನೆಗೂ ಮಾಡುತ್ತಿರುವ ಯತ್ನಗಳಲ್ಲಿ $\frac{1}{16}$ ಪಾಲು ಶ್ರಮವನ್ನೂ ಅತ್ಯವಶ್ಯಕವಾದ ಈ ಪರಿಶ್ರಮೋದ್ಧಾರದ ವಿಷಯದ ಕಡೆಗೆ ವಿನಿಯೋಗಿಸುತ್ತಿರುವುದಿಲ್ಲ. ಸಾಮಾನ್ಯಪ್ರಜೆಗಳಲ್ಲಿ ಹಲವರಿಗೆ ಈ ವಿಚಾರವೇ ತಿಳಿಯದು. ಅಷ್ಟೂ ಇಷ್ಟೂ ಅರಿತಿರುವವರಲ್ಲಿ ಸಾಮರ್ಥ್ಯವಿರುವುದಿಲ್ಲ. ಹೀಗಾಗಿ ರೋಗದ ಮೂಲವೊಂದಾದರೆ ವೈದ್ಯನು ಮಾಡುವ ಚಿಕಿತ್ಸೆಯೊಂದಾದಂತೆ ದೇಶದ ಅವನತಿಯ ಶೀಘ್ರನಿವಾರಣೆಗೆ ತಕ್ಕ ಯತ್ನವು ಸಾಗದೆ ಇರುವುದು ಭರತಖಂಡದ ದುರ್ದೈವವಾಗಿದೆ.

ಯುದ್ಧವು ಪ್ರಾಪ್ತವಾದೀಚೆಗೆ ನಮ್ಮ ದೇಶದ ಪರಿಶ್ರಾಮಿಕ ನ್ಯೂನತೆಯ ಫಲವನ್ನು ಸರ್ವರೂ ಅನುಭವಿಸುತ್ತಿದ್ದರೂ, ಅದರ ನಿವಾರಣೆಗೆ ತಕ್ಕ ಶ್ರದ್ಧೆಯನ್ನು ಈಗಲಾದರೂ ತೋರಿಸದೆ ಇರಬಹುದೆ? ಭರತಖಂಡದ ಪ್ರಭುತ್ವದವರು ಪರಿಶ್ರಮೋದ್ಧಾರಕ್ಕಾಗಿ ಅಲ್ಪಸ್ವಲ್ಪ ಪ್ರಯತ್ನಗಳನ್ನೇನೋ ಈಗೀಗ ಮಾಡುತ್ತಿದ್ದಾರೆ. ಆದರೆ ಅವು ಬಹಳ ಮಂದಗತಿಯುಳ್ಳವುಗಳು. ಅವುಗಳಿಂದ ತಕ್ಕ ಫಲವು ದೇಶಕ್ಕೆ ಯಾವಕಾಲಕ್ಕೆ ಆಗುವುದೋ ಊಹಿಸುವುದು ಕಷ್ಟ. ನಮ್ಮ ದೇಶದ ಪರಿಶ್ರಮಗಳು ಹೀನಸ್ಥಿತಿಗೆ ಬರುವುದಕ್ಕೆ ಉಂಟಾದ ಕಾರಣಗಳನ್ನು ವಿವರಿಸುತ್ತ ಕುಳಿತುಕೊಳ್ಳುವುದರಲ್ಲಿ ಫಲವಿಲ್ಲ. ಅವುಗಳ ವೃದ್ಧಿಗೆ ಆತಂಕವಾಗಿರುವ ಕಾರಣವನ್ನು ಕಂಡುಹಿಡಿದು ಅದನ್ನು ನಿವಾರಣೆಗೊಳಿಸುವುದೇ ಮುಖ್ಯಕರ್ತವ್ಯವಾಗಿದೆ. ನಮ್ಮ ಪರಿಶ್ರಮಗಳ ಹೀನಸ್ಥಿತಿಗೆ ಧನಸಹಾಯದ ಅಭಾವವು ಒಂದು ಪ್ರಬಲಕಾರಣವಾಗಿದೆ. ಈ ದೇಶದಲ್ಲಿ ಮುಖ್ಯಪಟ್ಟಣಗಳೊಳಗೆ ವಿದೇಶೀಯರುಗಳು ಎಷ್ಟೋ ಧನಾಗಾರ (ಬ್ಯಾಂಕು) ಗಳನ್ನು ಸ್ಥಾಪಿಸಿಕೊಂಡಿದ್ದರೂ ಅವುಗಳಿಂದ ಆ ವಿದೇಶೀಯವರ್ತಕರ ಕೈಗಾರಿಕೆಯ ಪ್ರತಿಷ್ಠಾಪನೆಗಳಿಗೆ ಧನಸಹಾಯವಾಗುವಂತೆ ನಮ್ಮವರ ಪ್ರತಿಷ್ಠಾಪನೆಗಳಿಗೆ ಆಗುತ್ತಲಿಲ್ಲ. ಇದರಿಂದ ಒದಗಿರುವ ದುಸ್ಥಿತಿಯನ್ನು ತೊಲಗಿಸುವುದು ದೇಶೀಯರಿಗೆ ಮುಖ್ಯಕರ್ತವ್ಯವಾಗಿದ್ದಿತು. ಇದನ್ನು ಬೊಂಬಾಯಿಯ ಪ್ರಸಿದ್ಧ ವ್ಯಾಪಾರಿಕುಲ ಶೇಖರರಾದ ಸರ್ ದೊರಾಬ್ಜಿ ತಾತಾರವರು ನೆರವೇರಿಸುವುದಕ್ಕೆ ಮನಸ್ಸುಮಾಡಿ, ಕಳೆದ ತಾ|| ೪ ರಲ್ಲಿ ಬೊಂಬಾಯಿಪಟ್ಟಣದಲ್ಲಿ "ತಾತಾ ಇಂಡಸ್ಟ್ರಿಯಲ್ ಬ್ಯಾಂಕ್" ಎಂಬ ಹೆಸರಿನಿಂದ ಒಂದು ಧನಾಗಾರವನ್ನು ಸ್ಥಾಪಿಸಿದರು. ಅದನ್ನು ಇಂಡ್ಯಾ ಸರ್ಕಾರದ ಕೋಶಾಧ್ಯಕ್ಷರಾದ ಸರ್ ವಿಲಿಯಂ ಮೇಯರ್‌ರವರು ಪ್ರತಿಷ್ಠಾಪನೆ ಮಾಡಿದರು. ಸರ್ ತಾತಾರವರು ಇದುವರೆಗೆ ಕೈಹಾಕಿರುವ ಪ್ರತಿಯೊಂದು ಪಾರಿಶ್ರಾಮಿಕೋದ್ಯೋಗಗಳೂ ಬಹಳ ಫಲವತ್ತರವಾಗಿ ಎಲ್ಲರ ಕಣ್ಣಿದಿರಿಗೂ ಕಟ್ಟಿರುವುದರಿಂದ ಅವರು ಆರಂಭಿಸಿದ ಕಾರ್ಯಗಳೆಲ್ಲಾ ವಿಶೇಷ ಲಾಭದಾಯಕವಾಗಿರುವುವೆಂದೂ, ಪ್ರಾಮಾಣಿಕವಾಗಿ ನಡೆಯಿಸಲ್ಪಡುವುವೆಂದೂ ಸರ್ವರಿಗೂ ಮನವರಿಕೆಯಾಗಿದೆ. ಈ ಕಾರಣದಿಂದಲೇ ಸದ್ಯಃ ಆರಂಭಿಸಲ್ಪಟ್ಟಿರುವ ಧನಾಗಾರಕ್ಕಾದರೂ ಬಹುಬೇಗನೆ ಹಣವು ಕೂಡುತ್ತಿದೆ. ಈ ಧನಾಗಾರವು ಸದ್ಯಃ ೧೨ ಕೋಟಿ ರೂ. ಗಳ ಮೂಲಧನದಿಂದ ಆರಂಭಿಸಲ್ಪಡಲು ನಿರ್ಧರಿಸಲ್ಪಟ್ಟಿತು. ಈಗಾಗಲೇ ಅದರಲ್ಲಿ ೭ ಕೋಟಿ ರೂ. ಗಳಷ್ಟು ಷೇರುಗಳು ಕೊಳ್ಳಲ್ಪಟ್ಟು ೭೦ ಲಕ್ಷ ರೂ. ಗಳು ಆಗಲೇ ಸಂದಾಯವಾಗಿರುವುವು. ಇದರ ಡೈರೆಕ್ಟರುಗಳ ಸಂಘಕ್ಕೆ ಸರ್ ಡಿ. ತಾತಾರವರೇ ಅಧ್ಯಕ್ಷರು. ಸರ್ ಡೇವಿಡ್ ಸಾಸೂರ್ನ್, ಆರ್. ಎನ್. ಮುಕರ್ಜಿ, ನರೋತ್ತಮಮುರಾರ್ಜಿ ಗೋಕುಲದಾಸ್, ಸರ್ ಫ್ರಾನ್ಸಿಸ್ ಸ್ಟುವರ್ಟ್, ಆಲಿ ಗುಲಾಂ ಮಹಮ್ಮದ್ ಮೊದಲಾದ ಪಾರ್ಸಿ, ಹಿಂದೂ, ಐರೋಪ್ಯರ್ನ, ಮಹಮ್ಮದ್ ಜನವರ್ಗಗಳ ಪ್ರಮುಖರುಗಳು ಕೆಲರು ಡೈರೆಕ್ಟರುಗಳಾಗಿದ್ದಾರೆ. ಜಾನ್ಸ್‌ಮೆಕ್‌ಫೇಲ್‌ರವರು ಜನರಲ್ ಮ್ಯಾನೇಜರರಾಗಿದ್ದಾರೆ. ಈ ಬ್ಯಾಂಕಿಗೆ ಇತರ ಬ್ಯಾಂಕುಗಳೊಡನೆ "ಲೇವಾದೇವಿ" ವಿಷಯವಾಗಿ ಪೈಪೋಟಿಮಾಡುವುದೂ ವ್ಯಾಪಾರಕ್ಕಾಗಿ ಸಾಲಕೊಡುವುದೂ ಉದ್ದೇಶವಲ್ಲ. ಕೈಗಾರಿಕೆಗಳಿಗೆ ಧನಸಹಾಯಮಾಡಿ, ಅವುಗಳನ್ನು ಅಭಿವೃದ್ಧಿಗೊಳಿಸುವುದೇ ಮುಖ್ಯೋದ್ದೇಶವಾಗಿದೆ. ಈಗ ಇರತಕ್ಕ ಪರಿಶ್ರಮಗಳಿಗೆ ಸಾಲವಾಗಿ ಹಣವನ್ನು ಕೊಡುವರು. ಲಾಭಕರವಾದ ನೂತನಪರಿಶ್ರಮಗಳನ್ನು ಇದರ ಧನಸಹಾಯದಿಂದ ಸ್ಥಾಪಿಸುವರು. ಸರ್ ತಾತಾ ಸಂಘದವರು ಇದುವರೆಗೆ ಸ್ಥಾಪಿಸಿ ನಡೆಯಿಸಿಕೊಂಡು ಬರುತ್ತಿರುವ ಕಬ್ಬಿಣದ ಮತ್ತೂ ಉಕ್ಕಿನ ಕಾರ್ಯಾಲಯ, ಲೋನಾವಲಿ ಬಳಿಯಣ ವಿದ್ಯುಚ್ಛಕ್ತಿ ಕಾರ್ಯಾಲಯ ಮೊದಲಾದುವುಗಳಂತೆಯೇ ಈ ನೂತನ ಪ್ರತಿಷ್ಠಾಪನೆಯೂ ಭಾಗಸ್ಥರಿಗೆ ಲಾಭದಾಯಕವಾಗಿಯೂ, ದೇಶಕ್ಕೆ ಮಹೋಪಕಾರಿಯಾಗಿಯೂ ಪರಿಣಮಿಸಲೆಂದು ಕೋರುವೆವು.

ನಮ್ಮ ಮೈಸೂರು ದೇಶದಲ್ಲಿ "ಮೈಸೂರು ಬ್ಯಾಂಕು" ಎಂಬುದೊಂದು ಸ್ಥಾಪಿತವಾಗಿ ಪ್ರಾಮಾಣಿಕವಾಗಿ ನಡೆಯಿಸಲ್ಪಡುತ್ತಲಿರುವುದರಿಂದ ಅದರ ಸಾಹಾಯ್ಯದ ಮೂಲಕ ಈ ದೇಶ ವ್ಯಾಪಾರಾಭಿವೃದ್ಧಿಗೆ ಎಷ್ಟು ಅನುಕೂಲವಾಯಿತೆಂಬುದನ್ನು ಎಲ್ಲರೂ ತಿಳಿದಿರುತ್ತೇವೆ. ನಮ್ಮ ದೇಶದ ಪರಿಶ್ರಮಾಭ್ಯುದಯಗಳಿಗೆ ಧನಸಹಾಯವನ್ನು ಸದ್ಯಃ ಸರ್ಕಾರದವರೇ ತಕ್ಕಮಟ್ಟಿಗೆ ಮಾಡುತ್ತಿದ್ದಾರೆ. ಈಗಣ ಮಹಾಯುದ್ಧದ ಕಾರಣದಿಂದ ಯಂತ್ರೋಪಕರಣಗಳ ಬೆಲೆಯು ಹೆಚ್ಚಿಹೋಗಿ ನವೀನ ಪರಿಶ್ರಮಸ್ಥಾಪನೆಗಳಿಗೆ ಉತ್ಸಾಹವೂ ಅನುಕೂಲ್ಯವೂ ಕಡಿಮೆಯಾಗಿವೆ. ಇದರಿಂದ ದೊಡ್ಡದೊಡ್ಡ ಪರಿಶ್ರಮಗಳನ್ನಾರಂಭಿಸಲಾಗದಿದ್ದರೂ ಸಣ್ಣ ಪುಟ್ಟವುಗಳ ಸ್ಥಾಪನೆಯನ್ನು ಮಾಡುವುದಕ್ಕೂ, ಅವುಗಳು ಪ್ರಜೆಗಳ ಸ್ವಂತದ ಬಂಡವಾಳದಿಂದಲೇ ವಿಶೇಷತಃ ಅಭಿವೃದ್ಧಿಗೊಳ್ಳುವುದಕ್ಕೂ ಅವಕಾಶವಾಗುವಂತೆ ವಿದ್ಯಾಧಿಕರಾದ ಜನರು ಪದೇಪದೇ ಪ್ರೋತ್ಸಾಹಿಸುತ್ತ ಬಂದರೆ, ಸಣ್ಣಸಣ್ಣ ಕೈಗಾರಿಕೆಗಳಲ್ಲಿ ರುಚಿಕಂಡ ಜನರು ದೊಡ್ಡದೊಡ್ಡ ಸ್ಥಾಪನೆಗಳನ್ನು ಮಾಡುವುದರಲ್ಲೂ ಧೈರ್ಯೋತ್ಸಾಹಗಳನ್ನು ಹೊಂದಲು ಅವಕಾಶವಾಗುತ್ತದೆ. ಕೈಗಾರಿಕೆಗಳಿಗೆ ನಮ್ಮ ಸರ್ಕಾರದವರು ಈಗ ಮಾಡಿಸುತ್ತಿರುವ ಪ್ರೋತ್ಸಾಹದಿಂದ ಸ್ವಲ್ಪಕಾಲದೊಳಗೇ ಸ್ವಕೀಯ ಪಾರಿಶ್ರಾಮಿಕ ಧನಾಗಾರಗಳನ್ನು ಪ್ರಜೆಗಳೇ ಸ್ಥಾಪಿಸಿಕೊಳ್ಳಬೇಕಾದ ಕಾಲವು ಒದಗುವಂತಾಗಲೆಂಬುದೇ ನಮ್ಮ ಕೋರಿಕೆ.

ಜರ್ಮನರ ದುರಾಶೆ, ಪ್ರೆ|| ವಿಲ್ಸನ್‌ರವರ ಧರ್ಮಪ್ರತಿಜ್ಞೆ, ಭಾರತೀಯರ ಕರ್ತವ್ಯ.

ರಷ್ಯಾದೇಶವು ತಮ್ಮ ಮಾಯಾಜಾಲಕ್ಕೆ ಒಳಗಾಗಿ ನಿಸ್ಸತ್ವಗೊಳಿಸಲ್ಪಟ್ಟಬಳಿಕ ಜರ್ಮನ್ ಕೈಜರರ ದುರಾಶಾ ದುರಹಂಕಾರಗಳು ಮಿತಿಮೀರಿಹೋಗಿರುತ್ತವೆ. ಪ್ರಪಂಚವನ್ನೆಲ್ಲಾ ಜರ್ಮನ್ ಸಾಮ್ರಾಜ್ಯವನ್ನಾಗಿ ಮಾಡಿಬಿಡುವುದು ತನಗೆ ಸಾಧ್ಯವೆಂದು ಕೈಜರರು ತಿಳಿದುಕೊಂಡಿರುವಂತೆ ಕಾಣುತ್ತದೆ. ಜರ್ಮನ್ ಪರಿಪಾಲನ ದೌಷ್ಟ್ಯದ ಸ್ವಭಾವವನ್ನು ಇದುವರೆಗಣ ಅನುಭವದಿಂದ ಅರಿತಿರುವವರೆಲ್ಲರೂ ಜರ್ಮನ್ ಔದ್ಧತ್ಯವನ್ನು ನಿರ್ಮೂಲ ಮಾಡಿದಲ್ಲದೆ ಜಗತ್ತಿಗೆ ಸುಖಶಾಂತಿಗಳು ಉಂಟಾಗುವುದಿಲ್ಲವೆಂದು ನಿರ್ಧರಿಸಿಕೊಂಡಿದ್ದಾರೆ. ಈ ನಿರ್ಧಾರವನ್ನು ಭರತಖಂಡವೂ ಮಾಡಿಕೊಂಡು ಶತ್ರುನಿಗ್ರಹಕ್ಕೆ ಸರ್ವಸಾಹಸವನ್ನೂ ಮಾಡುವುದು ಆವಶ್ಯಕವಾಗಿದೆ. ಏಕೆಂದರೆ ಆಂಗ್ಲಸಾಮ್ರಾಜ್ಯದಲ್ಲಿ ನಮಗೆ ದೊರೆದಿರುವಂಥ ಸುಖಸೌಭಾಗ್ಯಶಾಂತಿಸಮೃದ್ಧಿಗಳೂ, ಪುರೋವೃದ್ಧಿಮಾರ್ಗಗಳೂ ಮತ್ತಾವ ಪ್ರಭುತ್ವದಿಂದಲೂ ನಮಗೆ ದೊರೆಯುವಹಾಗಿಲ್ಲ. ಮಿತ್ರಮಂಡಲಿಯ ಅಪಜಯದೊಡನೇ ಭರತಖಂಡದ ಸುಖಶಾಂತಿಗಳು ಅಸ್ತಂಗತವಾಗುವುವೆಂಬುದು ಖಂಡಿತ. ಜರ್ಮನರ ಹಸ್ತಗತವಾಗಿರುವ ಬೆಲ್ಜಿಯಂ, ಸರ್ವಿಯಾ, ರಷ್ಯಾ ಮೊದಲಾದ ದೇಶಗಳು ಈಗ ಯಾನತೆರದ ಸಂಕಲೆಗೊಳಗಾಗಿ ನರಳುತ್ತಲಿವೆಯೆಂಬುದನ್ನು ಕೇಳುವುದರಿಂದಲೇ ಅದನ್ನು ಗೊತ್ತುಮಾಡಿಕೊಳ್ಳಬಹುದಾಗಿದೆ. ಆಂಗ್ಲಸಾಮ್ರಾಜ್ಯಕ್ಕೆ ಅಧೀನವಾಗಿರುವುದರಿಂದ ನಾವು ಸ್ವರಾಜ್ಯ ಮೊದಲಾದುವುಗಳನ್ನು ಕೇಳುವಷ್ಟರ ಸ್ವಾತಂತ್ರ್ಯವನ್ನಾದರೂ ಪಡೆದಿರುತ್ತೇವೆ. ಜಗತ್ತನ್ನೆಲ್ಲಾ ಜರ್ಮನ್ ಮಯವನ್ನಾಗಿ ಮಾಡಿ ಸರ್ವಸಾರವನ್ನೂ ಹೀರಿ ಹಿಪ್ಪೆಮಾಡಬೇಕೆಂಬ ಉದ್ದೇಶವುಳ್ಳ ಜರ್ಮನ್ ಪ್ರಭುತ್ವದ ಆಶ್ರಯಕ್ಕೆ ಭರತಖಂಡವು ಬಂದರೆ (ಅದು ಸಂಭವನೀಯವೇ ಅಲ್ಲ) ಈ ದೇಶವು ಯಮನ ಕೋರೆದಾಡೆಗೆ ಸಿಕ್ಕಿದಹಾಗೆಯೇ ಆಗುವುದು. ಇದನ್ನು ತಿಳಿದೂ ತಿಳಿಯದವರಂತೆ ಕೆಲ ಅದೂರದರ್ಶಿಗಳು "ನವನವಗುಣರಾಗೀಪ್ರಾಯಶಸ್ಸರ್ವಲೋಕಃ" ಎಂಬ ಉಕ್ತಿಗನುಸಾರವಾಗಿ ಹೊಸಗಂಡನ ಅಭಿರುಚಿಯನ್ನು ಬಯಸುವ ಮಿಂಡಿಯರಂತೆ ಜರ್ಮನ್ ಜಯವನ್ನು ಕೇಳಿ ಉಬ್ಬುತ್ತಲೂ, ಒಗ್ಗಿಬಂದಿರುವ ಪ್ರಭುತ್ವದ ಅಲ್ಪಾಲ್ಪದೋಷಗಳನ್ನೂ ಪರ್ವತಸಮಾನಮಾಡಿ ಹಳಿಯುತ್ತಲೂ ಇರುವುದನ್ನು ಕೇಳಿದರೂ ನೋಡಿದರೂ ವಿಸ್ಮಯವೂ ಕನಿಕರವೂ ಉಂಟಾಗುತ್ತದೆ. ಇಂಥ ಜನರು ಸ್ವಾಮಿದ್ರೋಹಿಗಳು ಮಾತ್ರವೇ ಅಲ್ಲದೆ ದೇಶದ್ರೋಹಿಗಳೂ ಆಗಿರುತ್ತಾರೆ. ಇಂಥವರುಗಳೂ ಇವರುಗಳ ಮಾತಿಗೆ ಮರುಳಾಗಿ ಸೈಗುಟ್ಟುವ ಅಜ್ಞಜನರೂ ಸಹ ಅಮೇರಿಕಾದ ಅಧ್ಯಕ್ಷರಾದ ವಿಲ್ಸನ್‌ರವರು ಮೊನ್ನೆತಾನೇ ಒಂದು ಭಾಷಣದಲ್ಲಿ ಜರ್ಮನರ ವಿಷಯವಾಗಿ ಆಡಿರುವ ವಚನಗಳನ್ನು ಕೇಳಿ ವಿವೇಕಸೊಂದಾರೆಂದು ನಂಬಿ ಆಭಾಷಣದ ಸಾರಾಂಶವನ್ನು ಇಲ್ಲಿ ಕೊಟ್ಟಿರುತ್ತೇವೆ—

"ಮಾನವಸ್ವಾತಂತ್ರ್ಯರಕ್ಷಣೆಗಾಗಿ ನಾವು ಜರ್ಮನರಮೇಲೆ ಕತ್ತಿಯೆತ್ತಿ ೧ ವರ್ಷವಾಯಿತು. ನಮ್ಮ ದೇಶೀಯರೆಲ್ಲಾ ಉತ್ಸಾಹಪೂರಿತರಾಗಿದ್ದಾರೆ. ನಾವು ಸರ್ವಸ್ವವನ್ನೂ ಯುದ್ಧಕ್ಕಾಗಿ ಸಮರ್ಪಿಸಲು ಸಿದ್ಧರಾಗಿದ್ದೇವೆ. ನಾವು ಜರ್ಮನರಿಗೆ ಕೇಡುಮಾಡಬೇಕೆಂದು ಎಂದೂ ಆಲೋಚಿಸಲಿಲ್ಲ. ಅವರ ಭಾವವೇನೆಂಬುದನ್ನು ಅವರ ಮುಖದಿಂದಲೇ ಕೇಳಿ ತಿಳಿದುಕೊಳ್ಳಬೇಕೆಂದು ನಾನು ಪ್ರಯತ್ನಿಸಿದೆ. ನಮ್ಮ ಅಭಿಪ್ರಾಯವನ್ನು ಅವರಿಗೆ ತಿಳಿಸಿದೆ. ನಾವು ಅನ್ಯಾಯವನ್ನಾಗಲೀ ದೌರ್ಜನ್ಯವನ್ನಾಗಲೀ ಪ್ರೋತ್ಸಾಹಿಸಲಿಲ್ಲ. ಜರ್ಮನರು ನ್ಯಾಯವನ್ನೂ ವಿಶ್ವರಾಷ್ಟ್ರವನ್ನೂ ಅಪೇಕ್ಷಿಸುವರೆ? ಯಾಜಮಾನ್ಯವನ್ನು ಕೋರುವರೇ? ಎಂದು ನಾನು ಪ್ರಶ್ನೆಮಾಡಿದೆನು. ಅವರು ರಾಷ್ಟ್ರವನ್ನೂ ಪ್ರಪಂಚದ ಯಾಜಮಾನ್ಯವನ್ನೂ ಕೋರುವೆವೆಂದು ಉತ್ತರಕೊಟ್ಟರು. ಜರ್ಮನ್ ರಾಜನೀತಿಜ್ಞರು ಹೀಗೆ ನುಡಿಯಲಿಲ್ಲ. ಆ ದೇಶದಲ್ಲಿ ಈಗ ಅಧಿಪತ್ಯವನ್ನು ವಹಿಸಿರುವ ಸೈನಿಕಾಧಿಕಾರಿಗಳು ಹೀಗೆ ನುಡಿದರು. ಜರ್ಮನ್ ಪ್ರಜೆಗಳು ಸಂಧಿಯನ್ನು ಕೋರುತ್ತಿದ್ದಾರೆ. ನ್ಯಾಯವಾದ ಸಂಧಿನಿಬಂಧನೆಗಳಿಗೆ ಅವರು ಒಪ್ಪುವವರೂ ಆಗಿದ್ದಾರೆ. ಆದರೆ ಅವರುಗಳ ಮಾತು ಸಾಗುವುದಿಲ್ಲ. ಬ್ರೆಸ್ಟ್‌ಲಿಟೋವಿಸ್ಕ್ ಸಂಧಿಯೇ ಇದಕ್ಕೆ ನಿದರ್ಶನವು. ಅದರ ಪರ್ಯವಸಾನವನ್ನು ಈಗ ನಾವು ನೋಡುತ್ತಿದ್ದೇವೆ. ಪ್ರಜೆಗಳ ಮಾತುಗಳನ್ನು ಅಲ್ಲಿಯ ಪ್ರಭುತ್ವದವರು ಒತ್ತರಿಸಿಬಿಟ್ಟು ದೌರ್ಜನ್ಯಕ್ಕೆ ತೊಡಗಿದರು. ರಷ್ಯಾ, ಫಿನ್ಲೆಂಡು, ಉಕ್ರೇನಿಯನ್, ರುಮೇನಿಯಾ-ಇವುಗಳಲ್ಲಿ ಜರುಗಿದ ಚರ್ಯೆಗಳು ಸಂಶಯವನ್ನೆಲ್ಲಾ ತೊಲಗಿಸಿದುವು. ಅದರಿಂದ ಸರ್ವವೂ ವಿದಿತವಾಯಿತು. ರಷ್ಯಾದಲ್ಲಿ ಅವರು ನಿರಾಯಾಸವಾಗಿ ಲಾಭವನ್ನು ಪಡೆದರು. ಧೈರ್ಯಶಾಲಿಗಳು ಇಂಥ ಲಾಭಪ್ರಾಪ್ತಿಗೆ ಎಂದಿಗೂ ಆಸೆಪಡರು. ಆ ದೊಡ್ಡದೇಶದವರು ಸ್ವಾಪರಾಧದಿಂದ ಕೆಲಕಾಲದಮಟ್ಟಿಗೆ ಜರ್ಮನರ ದಯೆಗೆ ಪಾತ್ರರಾಗಬೇಕಾದ ಗತಿಗೆ ಈಡಾದರು. ಜರ್ಮನ್ ಪ್ರಭುತ್ವದವರ ಮಾತಿನ ತಿರುಳು ಹೊರಬಿದ್ದಿತು. ಅವರು ಎಲ್ಲೂ ನ್ಯಾಯವನ್ನು ಪ್ರತಿಷ್ಠಿಸಿದುದಿಲ್ಲ. ತಮ್ಮ ಅಧಿಕಾರವನ್ನು ಆ ದೇಶದಲ್ಲಿ ನಟ್ಟು ಅಲ್ಲಿನ ಸೊತ್ತನ್ನೆಲ್ಲಾ ದೋಚಿಕೊಳ್ಳುವುದಕ್ಕೆ ತೊಡಗಿದರು. ಪಶ್ಚಿಮರಂಗದಲ್ಲಿ ಮಿತ್ರಮಂಡಲಿ ಮಹಾಸೇನೆಯು ಅವರನ್ನು ತಡೆದು ನಿಲ್ಲಿಸದಿದ್ದರೆ ಅಲ್ಲೂ ಅವರು ಹಾಗೆಯೇ ಮಾಡದೆ ಬಿಡುವವರಲ್ಲ. ಅವರು ತಮ್ಮ ಅಧಿಕಾರಬಲದ ಸೈನಿಕಶಕ್ತಿಯ ದೌರ್ಜನ್ಯವಿಜೃಂಭಣದ ಆಧಾರದಮೇಲೆ ಸಾಮ್ರಾಜ್ಯವನ್ನು ಸ್ಥಾಪಿಸಿಕೊಳ್ಳಬೇಕೆಂದಿದ್ದಾರೆ. ಅವರ ಅಂಥ ಸಾಮ್ರಾಜ್ಯವು ಪ್ರಪಂಚಕ್ಕೆಲ್ಲಾ ಹಾನಿಕರವಾಗಿ ಪರಿಣಮಿಸುವುದು. ಆ ಸಾಮ್ರಾಜ್ಯವು ಭರತಖಂಡವನ್ನೂ ಪಾರಸೀಕದೇಶವನ್ನೂ ಚೀನಾ ಜಪಾನುಗಳನ್ನೂ ಕೂಡ ಒಳಹಾಕಿಕೊಳ್ಳಬೇಕೆಂದಿರುವುದು. ಆ ಸಾಮ್ರಾಜ್ಯದ ಕೆಳಗೆ ನ್ಯಾಯಸ್ವಾತಂತ್ರ್ಯ ಪ್ರಜಾಭಿಪ್ರಾಯ ಮೊದಲಾದುವುಗಳೊಂದಕ್ಕೂ ಅವಕಾಶವಿರುವುದಿಲ್ಲ. ಬಾಹುಬಲಕ್ಕೇ ಪ್ರಪಂಚದಮೇಲಣ ಅಧಿಕಾರವಿರುವುದೆಂಬುದು ಅವರ ಭಾವ. ಅವರ ವ್ಯಾಪಾರವು ಪ್ರಪಂಚದಲ್ಲೆಲ್ಲಾ ವ್ಯಾಪಿಸಬೇಕು. ಇನ್ನೊಬ್ಬರ ಅಭಿಪ್ರಾಯವನ್ನು ಅವರು ಗಣಿಸುವುದಿಲ್ಲ. ಪ್ರಪಂಚನಿವಾಸಿಗಳೆಲ್ಲಾ ಅವರ ದಾಸರಾಗಿರಬೇಕು. ಇಂಥ ಅವರ ಅಭಿಪ್ರಾಯಗಳೆಲ್ಲಾ ಸಾಗದಂತೆ ಮಾಡುವುದಕ್ಕಾಗಿಯೇ ಸ್ವಾತಂತ್ರ್ಯನ್ಯಾಯ ಧರ್ಮರಕ್ಷಣತತ್ಪರರಾದ ಅಮೇರಿಕಾದವರೂ ಅವರ ಮಿತ್ರರೂ ಸಹ ಸರ್ವಶಕ್ತಿಗಳನ್ನೂ ವಿನಿಯೋಗಿಸಿ ಯುದ್ಧಮಾಡಬೇಕಾಗಿದೆ. ಹಾಗೆ ಜರುಗದಿದ್ದರೆ ದುರ್ಬಲರಿಗೆ ನ್ಯಾಯವುಂಟಾಗುವುದಿಲ್ಲ. ಅಮೇರಿಕಾದವರಿಗೆ ಅತ್ಯಂತ ಪ್ರಿಯವಾಗಿರುವ ನ್ಯಾಯಸ್ವಾತಂತ್ರ್ಯಕಾರುಣ್ಯದಾಕ್ಷಿಣ್ಯಗಳು ಸಂಪೂರ್ಣವಾಗಿ ನಿರ್ಮೂಲವಾಗುವುವು. ಹಾಗಾಗಕೂಡದು. ನಾನು ಯಾವಾಗಲೂ ಸರ್ವಸಮತ್ವವನ್ನು ಉಂಟುಮಾಡತಕ್ಕ ಸಂಧಿಯನ್ನು ಕುರಿತು ಚರ್ಚಿಸುವುದಕ್ಕೆ ಸಿದ್ಧನಾಗಿದ್ದೇನೆ" ಈ ಉಪನ್ಯಾಸವನ್ನು ೧೦ ಸಾವಿರ ಮಂದಿಗಳು ಏಕಕಾಲದಲ್ಲಿ ಕೇಳಿ ಅತ್ಯಂತೋತ್ಸಾಹವನ್ನು ವ್ಯಕ್ತಪಡಿಸಿದರು. ಆ ದೇಶೀಯರು ಈಗ ಲಕ್ಷಗಟ್ಟಲೆ ಸೈನಿಕರಾಗಿ ಸೇರಿ ಯುದ್ಧಶಿಕ್ಷಣವನ್ನು ಪಡೆಯುತ್ತಿದ್ದಾರೆ. ನಮ್ಮ ಭರತಖಂಡವು ಧನವಿಷಯದಲ್ಲಿ ಅಲ್ಲದಿದ್ದರೆ ಸೇನಾಸಹಾಯವಿಷಯದಲ್ಲಾದರೂ ಅಮೇರಿಕಾವನ್ನು ಹಿಂದುಮಾಡಿ ಮಿತ್ರಮಂಡಲಿಗೆ ನೆರವಾಗಿ ಶತ್ರುಗಳ ದುರಭಿನಿವೇಶನಗಳಿಗೆ ಬೇಗನೆ ಉತ್ತರಕ್ರಿಯೆಗಳಾಗುವಂತೆ ಮಾಡಿ, ತನ್ನ ಚಿರಕಾಲಿಕ ಕೀರ್ತಿಗೌರವ ಪ್ರತಿಷ್ಠೆಗಳನ್ನು ಕಾಪಾಡಿಕೊಳ್ಳುವುದಕ್ಕೆ ಇದು ಅತ್ಯಂತೋಚಿತಸಮಯವಾಗಿರುವುದಿಲ್ಲವೆ?

ಸ್ವರಾಜ್ಯವಾದಿ ರಾಯಭಾರವು.

ಶ್ರೀಮತ್ ತಿಲಕರೇ ಮೊದಲಾದವರು ಸ್ವರಾಜ್ಯವಾದಿಸಂಘದ ರಾಯಭಾರಿಗಳಾಗಿ ಕೊಲಂಬೋ ಮಾರ್ಗವಾಗಿ ಸೀಮೆಗೆ ತೆರಳಿದರೆಂದು ಹಿಂದಣ ತಾ|| ೭ ರ ಸಂಚಿಕೆಯಲ್ಲಿ ನಾವು ಬರೆದು, ಈ ಪ್ರಯಾಣವು ಅಕಾಲಿಕವಾದುದೆಂದು ಮೊದಲಾಗಿ ನಮ್ಮಭಿಪ್ರಾಯವನ್ನು ತಿಳಿಯಿಸಿದ್ದೆವಷ್ಟೆ. ಅಲ್ಲಿಂದೀಚೆಗೆ ಈ ರಾಯಭಾರದ ವಿಷಯವಾಗಿ ೨-೩ ಅಪ್ಪಣೆಗಳು ಪ್ರಕಟವಾಗಿ ಅಡಿಗೆ ಪ್ರಯಾಣವು ನಿಲ್ಲಿಸಲ್ಪಟ್ಟಿತೆಂದು ಗೊತ್ತಾಗುತ್ತದೆ. ಈ ರಾಯಭಾರವು ಸೀಮೆಗೆ ಹೋಗುವ ವಿಷಯದಲ್ಲಿ ಇಂಡ್ಯಾ ಗೌರ್ನಮೆಂಟಿನವರು ಮೊದಲು ಅಪ್ಪಣೆಚೀಟಿಯನ್ನು ಕೊಟ್ಟಿದ್ದರು. ಅದರಮೇಲೆ ಇವರು ಸಿಹ್ಮಳದ್ವೀಪಕ್ಕೆ ಹೋಗಿ ಸೇರಿದಬಳಿಕ ಮುಂದಕ್ಕೆ ಹಡಗನ್ನೇರಿ ಪ್ರಯಾಣಮಾಡುವಷ್ಟರಲ್ಲಿ, ಇವರು ಈಗ ಪ್ರಯಾಣಮಾಡಿ ಬರಲಾಗದೆಂಬ ತಂತ್ರೀವಾರ್ತೆಯು ವೈಸರಾಯರಿಗೆ ಬರಲು, ಅದನ್ನು ಅವರು ಸಿಹ್ಮಳದ ಸರ್ಕಾರದವರಮೂಲಕ ರಾಯಭಾರದವರಿಗೆ ತಲುಪಿಸಿದರು. ಇದರಮೇಲೆ ರಾಯಭಾರದವರು ವೈಸ್ರಾಯರಿಗೆ ಬರೆದುಕೊಳ್ಳಲಾಗಿ, ಗುಡ್‌ಹೋಪಿನವರೆಗೆ ಪ್ರಯಾಣಮಾಡಿ ಹೋಗಬಹುದೆಂತಲೂ, ಅಷ್ಟರಲ್ಲಿ ಸೀಮೆಯ ಪ್ರಭುತ್ವದವರು ಪ್ರಯಾಣಕ್ಕೆ ಅಂಗೀಕರಿಸಿದ ಉತ್ತರವನ್ನು ಕೊಡದಿದ್ದರೆ ರಾಯಭಾರದವರು ಹಿಂದಿರುಗಿ ಬರುವುದಕ್ಕೆ ಬದ್ಧರಾಗಿರಬೇಕೆಂತಲೂ ವೈಸ್ರಾಯರು ಉತ್ತರಕೊಟ್ಟರು. ಆದರೆ ಗುಡ್‌ಹೋಪಿನ ಮಾರ್ಗವಾಗಿ ಹೋಗುವುದಕ್ಕೆ ಹಡಗು ದೊರೆಯದೆ ಹೋದುದರಿಂದ ಸೂಯೇಜ್ ಕಾಲ್ವೆಯ ಮೂಲಕ ಹೋಗುವುದಕ್ಕೆ ಸಿದ್ಧವಾಗಿದ್ದ ಒಂದು ಹಡಗಿನಲ್ಲಿ ಕುಳಿತು ಹೊರಡುವುದಕ್ಕೆ ರಾಯಭಾರದವರು ಸಿದ್ಧರಾದರು. ಅದಕ್ಕೆ ಸಿಹ್ಮಳದ ಪ್ರಭುತ್ವದವರು ಅಡ್ಡಿಮಾಡಿದರು. ಅದರಮೇಲೆ ರಾಯಭಾರದವರು ಮತ್ತೆ ವೈಸ್ರಾಯರನ್ನು ತಂತ್ರೀವಾರ್ತೆಯಮೂಲಕ ಸೂಯೇಜ್ ಮಾರ್ಗವಾಗಿಯೇ ಪ್ರಯಾಣಮಾಡುವುದಕ್ಕೆ ತಮಗೆ ಅಪ್ಪಣೆಕೊಡಿಸಬೇಕೆಂದು ಕೇಳಿಕೊಂಡರು. ಬಳಿಕ ವೈಸ್ರಾಯರು ಸೂಯೇಜ್ ಮಾರ್ಗವಾಗಿ ಹೋಗುವುದಕ್ಕೂ ಅಂಗೀಕಾರವನ್ನು ಕಳುಹಿಸಿದರಂತೆ. ಅಷ್ಟರಲ್ಲಿ ಸೂಯೇಜ್ ಮಾರ್ಗದ ಹಡಗು ಹೊರಟುಹೋಗಿಬಿಟ್ಟಿದ್ದಿತು. ಇವೆಲ್ಲಾ ನಡೆಯುವುದರೊಳಗೆ ಸೀಮೆಯಿಂದ ಆಂಗ್ಲಪ್ರಭುತ್ವದವರೂ ಕೂಡ ರಾಯಭಾರಿಗಳ ಆಗಮನಕ್ಕೆ ಅನುಮತಿಯನ್ನಿತ್ತರೆಂಬ ವಾರ್ತೆಯು ಪ್ರಕಟವಾಗಿ, ಈ ಸಂಬಂಧವಾದ ಕಳವಳವೆಲ್ಲಾ ತಪ್ಪಿತೆಂದು ಭಾವಿಸಲ್ಪಟ್ಟಿದ್ದಿತು. ಆದರೆ ಕಟ್ಟಕಡೆಗೆ ಕಳೆದ ತಾ|| ೧೭ ರಲ್ಲಿ ಭಾರತ ಮಂತ್ರಿಯವರು ಪ್ರಕಟಪಡಿಸಿದ ಅಪ್ಪಣೆಯಲ್ಲಿ—"ಈ ವಿಷಯವಾಗಿ ಈ ದಿನ ಯುದ್ಧಮಂತ್ರಿಮಂಡಲದವರು ಚರ್ಚೆಮಾಡಿದರು. ಈಗಣ ಸ್ಥಿತಿಯಲ್ಲಿ ಸ್ವರಾಜ್ಯಸಂಘದ ಪ್ರತಿನಿಧಿಗಳಾರನ್ನೂ ಈ ದೇಶಕ್ಕೆ ಬರಗೊಡಿಸಕೂಡದು. ಅವರು ಈಗ ಪ್ರಯಾಣಮಾಡಿ ಬರಬೇಕಾದ ಅವಶ್ಯಕತೆಯೂ ಕಾಣುತ್ತಿರುವುದಿಲ್ಲ. ಭಾರತ ಮಂತ್ರಿಯವರು ಭರತಖಂಡದಲ್ಲೇ ಇರುತ್ತಿರುವಾಗ, ಅವರು ಕೊಟ್ಟ ಸೂಚನೆಗಳು ಇನ್ನೂ ಪ್ರಕಟಿಸಲ್ಪಡದೆಯೇ ಇರುವಾಗ, ಸ್ವರಾಜ್ಯವಾದಿಗಳು ಸೀಮೆಗೆ ಬಂದು ಆಂದೋಳನವನ್ನು ಹುಟ್ಟಿಸುವುದಕ್ಕೆ ಪ್ರಯತ್ನಿಸುವುದು ಉತ್ತಮವಾದ ಮಾರ್ಗವಾಗಿಲ್ಲ. ಮತ್ತೂ ಈಗಣ ಮಹಾಯುದ್ಧದಲ್ಲಿ ಇಂಥ ವಿಷಮಸ್ಥಿತಿಯಲ್ಲಿ ಯಾವ ತೆರದ ರಾಜಕೀಯ ಚರ್ಚೆಯನ್ನೂ ಮಾಡುವುದಕ್ಕೆ ಪ್ರಭುತ್ವದವರು ಅಂಗೀಕರಿಸಲಾರರು. ಇದಲ್ಲದೆ ಉದಾರಭಾವದಿಂದ ಪಾರ್ಲಿಮೆಂಟಿನಲ್ಲಿ ಪ್ರಕಟಿಸಿ ಸ್ಟೇಟ್ ಸೆಕ್ರಿಟರಿಯವರನ್ನು ಭರತಖಂಡಕ್ಕೆ ಕಳುಹಿಸಿಕೊಟ್ಟಿರುವಲ್ಲಿ, ಅವರ ವರದಿಯನ್ನು ಕುರಿತು ಆಲೋಚಿಸುವುದಕ್ಕೆ ಮುಂಚಿತವಾಗಿಯೇ ಆಗಲೀ ಆಲೋಚಿಸುತ್ತಿರುವಾಗಲೇ ಆಗಲೀ ಹಾನಿಕರವಾದ ಇಂಥ ಪ್ರಯತ್ನವನ್ನು ಪ್ರೇರೇಪಿಸುವುದು ಪ್ರತಿಕೂಲಕರವಾಗುವುದು. ಆದುಕಾರಣ ಉಪಾಯಾಂತರವಿಲ್ಲದೆ ಆಂಗ್ಲಪ್ರಭುತ್ವದವರು ಹೀಗೆ ತಿಳಿಯಪಡಿಸಬೇಕಾಗಿ ಬಂದುದಕ್ಕಾಗಿ ಅವರು ಬಹಳ ಚಿಂತಿಸುತ್ತಾರೆ" ಎಂದು ತಿಳಿಯಿಸಲ್ಪಟ್ಟಿತು.

ಇದರಮೇಲೆ ಸ್ವರಾಜ್ಯವಾದಿ ರಾಯಭಾರವು ಸದ್ಯಃ ಸೀಮೆಗೆ ಹೋಗುವುದು ಅಸಂಭವವೆಂಬುದು ಸಿದ್ಧವಾಯಿತು. ರಾಷ್ಟ್ರೀಯ ಮಹಾಸಭೆಯವರು ಈ ಕಾಲದಲ್ಲಿ ಸೀಮೆಗೆ ರಾಯಭಾರವನ್ನು ಕಳುಹಿಸಬಾರದೆಂದು ನಿರ್ಧರಿಸಿದುದು ಬಹಳ ದೂರದರ್ಶಿತ್ವದಿಂದ ಪರಿಪೂರ್ಣವಾಗಿದ್ದಿತೆಂಬುದು ಈಗ ಯಾವರೂ ಉಗ್ರಪಕ್ಷೀಯರಿಗೆ ತೋರದೆಹೋಗಿರಲಾರದು. ದುಡುಕಿಗೆ ಪ್ರತಿಫಲವೇ ಹೀಗೆ. ಅಂತು ಸ್ವರಾಜ್ಯವಾದಿಗಳಿಗೆ ಹುರುಪನ್ನು ಹೆಚ್ಚಿಸುವುದಕ್ಕೂ, ಕಟ್ಟಕಡೆಗೆ ಇಂಥ ಆಶಾಭಂಗವುಂಟಾಗುವುದಕ್ಕೂ ವೈಸರಾಯರ ನಿಯಮನಿರ್ಮಾಣ ಸಭಾಭಾಷಣವೂ, ಅನಾಲೋಚಿತತೆಯಿಂದ ಅವರು ಕೊಟ್ಟ ಪ್ರೋತ್ಸಾಹವೂ ಬಲುಮಟ್ಟಿಗೆ ಕಾರಣವಾಯಿತೆಂಬುದನ್ನು ಹೇಳುವುದಕ್ಕೆ ವಿಷಾದವಾಗುವುದು. ಈಗ ಸಂಭವಿಸಿದ ಆಶಾಭಂಗದಿಂದ ಭರತಖಂಡದಲ್ಲಿ ಚಳವಳಿಯನ್ನು ಬಹಳ ಹೆಚ್ಚಿಸಬೇಕೆಂದು ದುಡುಕಿನ ಕೆಲವರು ಅಭಿಪ್ರಾಯಪಡುತ್ತಿದ್ದಾರೆ. ಅದು ಉದ್ದೇಶಕ್ಕೆ ಮತ್ತಷ್ಟು ಹಾನಿಕರವೇ ಹೊರತು ಸಾಹಾಯ್ಯಕವಾಗಲಾರದು. ಹಿಂದೆ ಭಾರತೀಯ ಯೋಧರು ನಿಸರ್ಗ ರಾಜಭಕ್ತಿಯಿಂದ ಫ್ರಾನ್ಸ್‌ರಣರಂಗಕ್ಕೆ ಹೋಗಿ ಜಯವನ್ನು ಸಂಪಾದಿಸಿಕೊಂಡುದರಿಂದಲೇ ಆಂಗ್ಲ ಮಹಾಜನರು ಭರತಖಂಡದಮೇಲೆ ವಿಶೇಷ ಸಾನುಭೂತಿಯನ್ನು ತೋರಿಸಲು ಅವಕಾಶವಾಯಿತು. ಅದರಿಂದೀಚೆಗೆ ಸ್ವರಾಜ್ಯಪ್ರಾಪ್ತಿಯ ಕುತೂಹಲವನ್ನು ಬಹಿರಂಗಪಡಿಸುವುದಕ್ಕಾದರೂ ಅವಕಾಶವಾಯಿತು. ಅದೇ ಸನ್ಮಾರ್ಗವನ್ನು ಈಗಲೂ ಬಿಡದೆ ಈಗಣ ವಿಷಮಸಂಧಿಯಲ್ಲಿ ಆಂಗ್ಲಪ್ರಭುತ್ವಕ್ಕೆ ಅಧಿಕವಾದ ಜನಧನಸಹಾಯವನ್ನು ಭರತಖಂಡದಿಂದ ಒದಗಿಸುವಂತೆ ಮಾಡಿಸಲು ಈ ನಮ್ಮ ಸ್ವರಾಜ್ಯವಾದಿಗಳೆಲ್ಲಾ ನಡುಕಟ್ಟಿ ಕೆಲಸಮಾಡಿದರೆ, ಅಗುಣಗ್ರಾಹಿಗಳಲ್ಲದ ಆಂಗ್ಲಮಹಾಜನರು ಭರತಖಂಡದ ಇಷ್ಟಾರ್ಥವನ್ನು ತಾವಾಗಿಯೇ ಪೂರೈಸಿಕೊಡುವರು. ಸೀಮೆಯಲ್ಲಿ ಸ್ವತಂತ್ರಮತಪ್ರದಾನಾಧಿಕಾರಕ್ಕಾಗಿ ಬಡಿದಾಡುತ್ತಿದ್ದ ಆಂಗ್ಲಸ್ತ್ರೀಜನರು ಯುದ್ಧಾರಂಭವಾದಬಳಿಕ ಆ ತಮ್ಮ ಸ್ವಾರ್ಥಸಾಧನೋದ್ದೇಶವನ್ನೆಲ್ಲಾ ಒಂದುಕಡೆಗೆ ಕಟ್ಟಿಟ್ಟು, ಯುದ್ಧಕ್ಕೆ ಅನುಪಮ ಸಹಾಯವನ್ನು ಮಾಡಿಕೊಡಲು ನಡುಕಟ್ಟಿ ನಿಂತುಕೊಂಡುದರಿಂದ, ಮಂತ್ರಿಮಂಡಲದಲ್ಲಿ ಯುದ್ಧಕ್ಕೆ ಮುಂಚೆ ಸ್ತ್ರೀಯರ ಇಷ್ಟಾರ್ಥಕ್ಕೆ ವಿರುದ್ಧರಾಗಿದ್ದ ಮಿ|| ಆಸ್ಕ್ವಿತ್‌ರವರೇ ಮೊದಲಾದ ಮಹನೀಯರೆಲ್ಲಾ ಈಗ ತಾವೇ ಮುಂದಾಗಿ ನಿಂತು, ಆ ಸ್ತ್ರೀ ಜನರ ಇಷ್ಟಾರ್ಥಪೂರಣಕ್ಕೆ ಸಹಾಯಮಾಡಿಕೊಡಲಿಲ್ಲವೆ? ಆ ಮಾರ್ಗವನ್ನು ಭಾರತೀಯ ವಿದ್ಯಾಧಿಕರೂ ಕೂಡ ಈಗ ಅವಲಂಬಿಸುವುದು ನಮ್ಮ ದೇಶಕ್ಕೇ ಮುಕ್ತಿಸಾರ್ಥಕವೂ ಅವರುಗಳಿಗೆ ಕೀರ್ತಿಗೌರವಪ್ರದವೂ ಆಗಿರುವುದೆಂಬ ವಿಷಯವನ್ನು ಖಚಿತಪಡಿಸದೆ ಇರಲಾರೆವು.

ಈಗಲಾದರೂ ಯುದ್ಧವು ಬಹಳ ತೀಕ್ಷ್ಣಾವಸ್ಥೆಗೆ ಬಂದಿರುವುದು. ಮಿತ್ರಮಂಡಲಿಯವರು ವಿಷಮಾವಸ್ಥೆಯಲ್ಲಿರುವರು. ಮಿತ್ರಮಂಡಲಿ ಜಯವು ಆಂಗ್ಲಸಾಮ್ರಾಜ್ಯರಕ್ಷಣೆಗೂ ವಿಶೇಷತಃ ಭರತಖಂಡದ ರಕ್ಷಣೆಗೂ ಕೂಡ ಅವಶ್ಯಕವಾಗಿರುವುದು. ಮುಖ್ಯಮಂತ್ರಿ ಮಿ|| ಲಾಯಿಡ್‌ಜಾರ್ಜ್‌ರವರು "ಶತ್ರುಗಳು ಯೂರೋಪುಖಂಡದಲ್ಲಿ ಮಾತ್ರವೇ ಅಲ್ಲದೆ ಏಷ್ಯಾಖಂಡದಲ್ಲೂ ತಮ್ಮ ನಿರಂಕುಶ ಪರಿಪಾಲನವನ್ನು ಸ್ಥಾಪಿಸಿಕೊಳ್ಳಬೇಕೆಂಬ ದುರಾಶೆಯಿಂದ ಅಸಮಸಾಹಸವನ್ನು ಮಾಡುತ್ತಿದ್ದಾರೆ. ಈ ಸಮಯದಲ್ಲಿ ಭರತಖಂಡದ ಪ್ರಜೆಗಳೂ ಅಲ್ಲಿಯ ಪ್ರಭುಗಳೂ ಸಹ ತಂತಮ್ಮ ಸಹಾಯ ಸಾಹಸಗಳನ್ನು ದ್ವಿಗುಣವಾಗಿ ಮಾಡಬೇಕು. ಇದುವರೆಗೂ ಭರತಖಂಡವು ಮಾಡಿದ ಸಾಹಸಪ್ರಯತ್ನ ಸಹಾಯಗಳಿಗಿಂತಲೂ ಅತಿಶಯವಾದ ಸಾಹಸವನ್ನು ಭರತಖಂಡದ ಪ್ರತಿಯೊಬ್ಬರೂ ಮಾಡಿ ತಮ್ಮ ಕೀರ್ತಿಗೌರವಗಳನ್ನು ಹೆಚ್ಚಿಸಿಕೊಳ್ಳಬೇಕು" ಎಂದು ಘಂಟಾಘೋಷವಾಗಿ ಅಪ್ಪಣೆ ಕೊಡಿಸಿರುವುದರಿಂದ ಜಗದೀಶನೂ ಸಾರ್ವಭೌಮ ಪ್ರಭುವೂ ಮೆಚ್ಚುವಂತೆ ಮಿತ್ರಮಂಡಲಿಯ ಜಯಕ್ಕಾಗಿ ಈಗ ಪ್ರತಿಯೊಬ್ಬ ಭಾರತೀಯನೂ ಮನಃಪೂರ್ವಕವಾದ ಸಹಾಯವನ್ನು ಮಾಡುವುದೊಂದನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡಿದ್ದರೆ ನಮ್ಮ "ನಿಯ್ಯತ್ತಿಗೆ" ತಕ್ಕ ಫಲವು ಸಿದ್ಧವಾಗಿಯೇ ಇರುವುದಲ್ಲವೆ?

ನಮ್ಮ ಸ್ವರಾಜ್ಯವಾದಿಗಳಿಗೆ ಸಹಾಯಕವಾಗಿ ಸೀಮೆಯಲ್ಲಿ ಕೆಲಸಮಾಡುತ್ತಲಿರುವ "ಲೇಬರ್" ಪಕ್ಷಸಂಘದ ಯಜಮಾನರಾದ ಜಾರ್ಜ್‌ಲಾನ್ಸ್‌ಬರಿಯವರು ಇಲ್ಲಿಯ ಸ್ವರಾಜ್ಯವಾದಿಗಳಿಗಾಗಿ ಈಗ ತಂತ್ರೀವಾರ್ತೆಯ ಮೂಲಕ ಕಳುಹಿಸಿರುವ ಹಿತೋಪದೇಶದಲ್ಲಿ—"ನಾವು ಇಲ್ಲಿ ಬಹಳ ಸಂದಿಗ್ಧವೂ ಅಪಾಯಕರವೂ ಆದ ದಿನಗಳನ್ನು ಕಳೆಯುತ್ತಿದ್ದೇವೆ. ಆದುಕಾರಣ ಭರತಖಂಡದಲ್ಲಿರುವ ನಮ್ಮ ಸ್ನೇಹಿತರು ಸಹನೆಯಿಂದಿರುವುದು ಅವಶ್ಯಕವು. ಈ ಸಂದಿಗ್ಧಾವಸ್ಥೆಯು ತೀರಿದಬಳಿಕ ಆಂಗ್ಲಪ್ರಭುತ್ವದವರು ನಮ್ಮಭಿಪ್ರಾಯಕ್ಕೆ ಕಿವಿಗೊಟ್ಟೇ ತೀರಿಸುವರು" ಎಂಬುದಾಗಿ ಹೇಳಿರುವ ಹಿತೋಕ್ತಿಯನ್ನಾದರೂ ನಮ್ಮ ಸ್ವರಾಜ್ಯವಾದಿಗಳು ಗಮನಿಸುವವರಾಗಲೆಂದು ಕೋರುವೆವು.

ಯುದ್ಧವಾರ್ತೆಯು.

ಈಗಣ ಮಹಾಯುದ್ಧವು ಇದುವರೆಗಣ ೪ ವರ್ಷದ ಯುದ್ಧಗಳೆಲ್ಲಕ್ಕಿಂತಲೂ ಮಹತ್ತರವಾಗಿರುವುದರಿಂದ ತತ್ಸಂಬಂಧವಾಗಿ ಪ್ರತಿದಿನವೂ ಬರುತ್ತಿರುವ ಅಪರಿಮಿತ ವಾರ್ತೆಗಳನ್ನೆಲ್ಲಾ ವಿಸ್ತರಿಸಿ ಹೇಳುವುದು ಸಾಧ್ಯವಲ್ಲ. ದಿನಪತ್ರಿಕೆಯವರಿಗೆ ಮಾತ್ರ ಅದು ಯತ್ಕಿಂಚಿತ್ಸಾಧ್ಯವು. ಮುಖ್ಯವಿಷಯಗಳನ್ನು ಮಾತ್ರ ನಾವು ನಮ್ಮ ವಾಚಕರಿಗೆ ತಿಳಿಯಿಸಬಲ್ಲೆವು:—ಇಂಗ್ಲೀಷರನ್ನು ಫ್ರೆಂಚ್ ಸೈನ್ಯಪಙ್ಕ್ತಿಯಿಂದ ಬೇರ್ಪಡಿಸಿಬಿಟ್ಟು ಸುತ್ತುಗಟ್ಟಿ ನಾಶಮಾಡಿ ಇಂಗ್ಲೀಷು ಕಡಲುಕಾಲ್ವೆಯ ಉತ್ತರಭಾಗದ ದಡವನ್ನು ಹೋಗಿ ಸೇರಿಬಿಡಬೇಕೆಂಬುದು ಶತ್ರುಗಳ ಈಗಣ ಮಹಾಕಾಂಕ್ಷೆ. ಅದರಂತೆ ದಕ್ಷಿಣದಲ್ಲಿ ಪ್ಯಾರಿಸ್ಸನ್ನು ವಶಪಡಿಸಿಕೊಂಡುಬಿಡಬೇಕೆಂಬುದು ಇನ್ನೊಂದು ದುರಾಶೆ. ಇದಕ್ಕಾಗಿ ಅವರು ಮಾಡುತ್ತಿರುವ ಸಾಹಸಗಳೂ ಬಲಿಕೊಡುತ್ತಿರುವ ಸೈನ್ಯಗಳ ಸಂಖ್ಯೆಯೂ ವಾಚಾಮಗೋಚರವಾಗಿರುವುವು. ಅಲ್ಲದೆ ಅವರು ಇತರ ಎಲ್ಲಾ ರಂಗಗಳ ತಮ್ಮ ಸೈನ್ಯವನ್ನೂ ಇಲ್ಲಿಗೆ ಕೂಡಿಸಿಕೊಂಡಿರುವುದರಿಂದ ಅವರ ಬಲವೇ ಹೆಚ್ಚಾಗಿದೆ. ಮತ್ತೆ ೧೯೧೯-೨೦ ನೆ ವರ್ಷದಲ್ಲಿ ಉಪಯೋಗಿಸಬಹುದಾಗಿದ್ದ ಸೈನ್ಯಗಳನ್ನೆಲ್ಲಾ (ಹುಡುಗರನ್ನೆಲ್ಲಾ) ಈಗಣ ಯುದ್ಧಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಮತ್ತೂ ಆಪತ್ಕಾಲೋಪಯೋಗಕ್ಕಾಗಿ ಇಟ್ಟುಕೊಂಡಿದ್ದ ರಿಜರ್ವ್ ಸೈನ್ಯವೂ ಕೂಡ ಈಗಾಗಲೇ ಅವರಿಂದ ಬಳಸಲ್ಪಡುತ್ತಿದೆ. ಇಂಥ ಅವರ ಅಗಾಧಪ್ರಯತ್ನದಿಂದ ನಮ್ಮವರಿಗೆ ಸಂದಿಗ್ಧಸ್ಥಿತಿಯು ಪದೇಪದೇ ಪ್ರಾಪ್ತವಾಗುತ್ತಿದೆ. ಲಾಬೆಸ್ಸಿ, ಮೆಸಿನೀಸ್‌ಗಳ ಮಧ್ಯದಲ್ಲಿ ಅವರ ನುಗ್ಗಾಟವು ಬಹು ಭೀಕರವಾಗಿದ್ದಿತು. ಅದನ್ನು ತಡೆದು ನಿಲ್ಲಿಸುವುದರಲ್ಲಿ ಇಂಗ್ಲೀಷರು ತೋರಿಸಿದ ಶೌರ್ಯಧೈರ್ಯಗಳನ್ನು ಪ್ರಪಂಚವೇ ಈಗ ಕೊಂಡಾಡುತ್ತಿರುವುದು. ಇಲ್ಲಿ ಶತ್ರುಗಳು ದಾರಿಮಾಡಿಕೊಂಡು ನುಗ್ಗಿಹೋಗಿಬಿಟ್ಟಿದ್ದರೆ ಕೆಲೆ, ಬೋಲೋನುಗಳ ಮಧ್ಯದಲ್ಲಿರುವ ಸಮುದ್ರತೀರಪ್ರದೇಶವು ಇಷ್ಟರಲ್ಲೇ ಶತ್ರುಗಳ ವಶವಾಗಿಹೋಗುತ್ತಿದ್ದಿತು. ಹಾಗಾಗಿದ್ದರೆ ಆಂಗ್ಲದೇಶಕ್ಕೆ ಶತ್ರುಗಳು ಕೇವಲ ಸಮಾಪಸ್ಥರೇ ಆಗುತ್ತಿದ್ದರು. ಇಷ್ಟೇ ಅಲ್ಲದೆ ಬೆಲ್ಜಿಯಂಸೈನ್ಯವೂ ಇಂಗ್ಲೀಷ್ ಸೈನ್ಯದ ಎಡಗಡೆಯ ಭಾಗವೂ ಸಹ ಶತ್ರುಗಳ ಮುತ್ತಿಗೆಯೊಳಕ್ಕೆ ಸಿಕ್ಕಿ ಬಂಧಿಸಿಹೋಗಿಬಿಡುತ್ತಿದ್ದಿತು. ಇಂಗ್ಲೀಷ್ ಸೈನ್ಯವು ತಮ್ಮ ಪಙ್ಕ್ತಿಯನ್ನು ಶತ್ರುಗಳಿಗೆ ದುರ್ಭೇದ್ಯಮಾಡಿಕೊಂಡು ಇದುವರೆಗೆ ಎಷ್ಟೋ ದೂರ ಹಿಮ್ಮೆಟ್ಟಿ ಕಡೆಯ ಸುರಕ್ಷಿತಸ್ಥಾನಕ್ಕೆ ಹೋಗಿ ನಿಂತಿರುವರು. ಇನ್ನು ಅಲ್ಲಿಂದ ಹಿಂಜರಿಯುವುದು ಅವರಿಗೆ ಅಪಾಯಕರ. ಆದುಕಾರಣ ಸರ್ವಸೇನಾಧಿಪತಿಗಳಾದ ಸರ್ ಡಗ್ಲಸ್‌ಹೇಗ್‌ರವರು ತಮ್ಮ ಸೈನ್ಯವನ್ನು ಕುರಿತು—"ಯಾವೊಬ್ಬ ಸೈನಿಕನೂ ಇಲ್ಲಿ ಕಾಲನ್ನು ಹಿಂದೆಗೆಯಲಾಗದು" ಎಂದು ಕಟ್ಟಪ್ಪಣೆಮಾಡಿದುದರಿಂದ ಸಿಹ್ಮದ ಮರಿಗಳಂತೆ ಅವರು ಅಲ್ಲಿ ಶತ್ರುಗಳ ಮೇಲೆಬಿದ್ದು ಕಾದಾಡುತ್ತಿರುವರು. ಶತ್ರುಗಳು ಇದುವರೆಗೆ ೨ ಕಡೆಯಲ್ಲಿ ಭೇದಿಸಿಕೊಂಡು ಹೋಗುವುದಕ್ಕೆ ಮಹಾಸಾಹಸವನ್ನು ಹೂಡಿ ಅವೆರಡು ಕಡೆಯಲ್ಲೂ ಹತಾಶರಾಗಿ ಈಗ ಮೂರನೆ ಮುತ್ತಿಗೆಯನ್ನು ಭಯಂಕರವಾಗಿ ಆರಂಭಿಸಿದ್ದಾರೆ. ಒಂದೊಂದುಸಲಕ್ಕೆ ೪೦-೫೦ ಮೈಲಿನ ಅಗಲದಲ್ಲಿ ಯುದ್ಧವನ್ನಾರಂಭಿಸಿ ಒತ್ತರಿಸಿಕೊಂಡು ಬರುತ್ತಿದ್ದಾರೆ. ಅವರ ಆಯುಧಗಳೂ ನವೀನತರವಾಗಿ ಭೀಕರವಾಗಿವೆ. ಪ್ರತಿಸನ್ನಾಹವನ್ನು ಮಿತ್ರಮಂಡಲಿಯವರೂ ತಕ್ಕಂತೆಯೇ ಮಾಡಿಕೊಂಡಿದ್ದಾರೆ. ಇಂಗ್ಲೀಷ್ ಸೈನ್ಯಕ್ಕೆ ಸಹಾಯವಾಗಿ ಫ್ರೆಂಚ್ ಅಮೇರಿಕನ್ ಸೈನ್ಯಗಳೂ ಒದಗುತ್ತಿವೆ. ಫ್ರೆಂಚ್ ಸೇನಾಮುಖದಲ್ಲೂ ಕೂಡ ಶತ್ರುಗಳು ಯುದ್ಧಮಾಡುತ್ತಿದ್ದರೂ, ಅಲ್ಲಿಗಿಂತಲೂ ಅವರ ಲಕ್ಷ್ಯವೆಲ್ಲಾ ಇಂಗ್ಲೀಷ್ ಸೇನಾಮುಖದಮೇಲೆಯೇ ವಿಶೇಷವಾಗಿದೆ. ಒಂದೊಂದು ಸ್ಥಾನಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಅಥವಾ ರಕ್ಷಿಸಿಕೊಳ್ಳುವುದಕ್ಕಾಗಿ ಎರಡು ಪಕ್ಷದವರೂ ಅಪರಿಮಿತ ಹಾನಿಯನ್ನು ಅನುಭವಿಸುತ್ತಿದ್ದಾರೆ. ಕೆಲವು ಸ್ಥಳಗಳು ಗಳಿಗೆಗಳಿಗೆಗೆ ಒಬ್ಬರಕೈಯಿಂದ ಮತ್ತೊಬ್ಬರ ಕೈಗೆ ಸೇರುತ್ತಿರುತ್ತವೆ. ಈಗ ಜರ್ಮನ್ ಸೈನ್ಯವು ಸಮುದ್ರತೀರದ ಡನ್‌ಕರ್ಕಿಗೆ ೩೦ ಮೈಲಿಗಳ ದೂರದಲ್ಲೂ ಕೆಲೆಗೆ ೪೦ ಮೈಲಿಗಳ ದೂರದಲ್ಲೂ ಇವೆ. ಅಷ್ಟರವರೆಗೂ ಮಿತ್ರಮಂಡಲಿಯ ಸೈನ್ಯವು ಅಖಂಡವಾಗಿದೆ. ಈಗಣ ೩ ನೆಯ ಮುತ್ತಿಗೆಯನ್ನು ಶತ್ರುಗಳು ಉತ್ತರದಲ್ಲಿ ಫ್ಲಾಂಡರ್ಸಿನೊಳಗೆ ಆರ್ಮೆಂಟಿಯೇಸಿನ ಕಡೆಯಲ್ಲಿ ಮಾಡುತ್ತಿದ್ದಾರೆ. ಮೂರು ನಾಲ್ಕು ಮಾರ್ಗಗಳು ಸೇರುವ ನ್ಯೂಲಿಇಗ್ಲಿಸ್ ಎಂಬ ಗ್ರಾಮವನ್ನೂ, ಬೆಯುಲಿಯಲ್ ಎಂಬ ಗ್ರಾಮವನ್ನೂ, ಮಾಂಟಿಡಿಡಿಲ್, ಸಿವೆಲ್ಸ್ ಬರ್ಗ್‌ಗಳನ್ನೂ ವಿಟ್ಸ್‌ಚೇಟನ್ನೂ, ಮೆಸೀನ್ ಗುಡ್ಡದಲ್ಲಿ ಬಹುಭಾಗವನ್ನೂ ಶತ್ರುಗಳು ವಶಪಡಿಸಿಕೊಂಡರು. ಉಳಿದ ಸ್ಥಾನರಕ್ಷಣೆಗಾಗಿ ಇಂಗ್ಲೀಷರು ಬಹುಭೀಕರಯುದ್ಧವನ್ನು ಮಾಡುತ್ತಿದ್ದಾರೆ. ದಕ್ಷಿಣದ ಸೋಮುರಂಗ ಮೊದಲಾದ ಕಡೆಯ ಯುದ್ಧವು ಸ್ವಲ್ಪ ಶಾಂತವಾಗಿದೆ.

ಇತರವಿಷಯಗಳು.

೭೦ ಮೈಲಿಗಳ ದೂರದವರೆಗೂ ಗುಂಡುಗಳನ್ನು ಹೊಡೆಯಬಲ್ಲ ಫಿರಂಗಿಗಳನ್ನು ನಿರ್ಮಿಸುವ ಏರ್ಪಾಟನ್ನು ಈಗ ಇಂಗ್ಲೀಷರು ಮಾಡುತ್ತಲಿದ್ದಾರೆ.

ಇಂಗ್ಲೆಂಡಿನಲ್ಲಿ ಈಗ ಸೇನೆಗೆ ಸೇರಬೇಕಾದವರ ವಯಃಪರಿಮಿತಿಯನ್ನು ೫೫ ವರ್ಷಗಳವರೆಗೂ ಹೆಚ್ಚಿಸಿರುತ್ತಾರೆ. ಐರ್ಲೆಂಡಿನಲ್ಲಿ ನಿರ್ಬಂಧಸೇನಾಶಾಸನವನ್ನು ಏರ್ಪಡಿಸಲು ಬಲವಾದ ಪ್ರಯತ್ನಗಳು ನಡೆಯುತ್ತಿವೆ.

ಕಳೆದ ವರ್ಷದಲ್ಲಿ ೩-೪-೫ ತಿಂಗಳ ಕಾಲದಲ್ಲಿ ನಿರ್ಮಿಸುತ್ತಿದ್ದಷ್ಟು ಗುಂಡುಗಳು, ಫಿರಂಗಿಗಳು, ಆಕಾಶವಿಮಾನಗಳು ಮೊದಲಾದುವನ್ನು ಒಂದೊಂದು ವಾರಕಾಲದಲ್ಲೇ ಇಂಗ್ಲೀಷರು ನಿರ್ಮಾಣಮಾಡಿಸುತ್ತಿದ್ದಾರೆ.

ಸೈಬೇರಿಯಾ ಪೂರ್ವಭಾಗದಲ್ಲಿ ಜಪಾನ್ ಜನರಲ್ಲಿ ಕೆಲರು ಕೊಲ್ಲಲ್ಪಟ್ಟುದರಿಂದ ಸ್ವಜನರಕ್ಷಣೆಗಾಗಿ ಜಪಾನರ ನೌಕಾಸೇನೆಯೂ ತಮ್ಮ ರಾಯಭಾರಿಗಳ ರಕ್ಷಣೆಗಾಗಿ ಅವರ ಜತೆಯಲ್ಲಿ ಇಂಗ್ಲೀಷ್ ನೌಕಾದಳವೂ ಸಹ ರಷ್ಯನರ ವ್ಲಾಡಿವೋಸ್ಟಾಕ್ ರೇವೆಯಲ್ಲಿಳಿದಿರುತ್ತಾರೆ. ಅಲ್ಲಿರುವ ಸೋವಿಯಟ್ ಮ್ಯುನಿಸಿಪಲ್ ಸಂಘದವರು ಇದಕ್ಕೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿರುವುದಲ್ಲದೆ, ಅಪರಾಧಮಾಡಿದವರನ್ನು ತಾವು ಹಿಡಿದು ಶಿಕ್ಷಿಸುತ್ತೇವೆಂತಲೂ ಮ್ಯಾಕ್ಸಿಮಲಿಸ್ಟ್ ಪಕ್ಷದವರು ಜಪಾನರಿಗೆ ವಿರೋಧಿಗಳಲ್ಲವೆಂತಲೂ ಜಪಾನರಿಗೆ ಲಿಖಿತಮೂಲಕವಾಗಿ ತಿಳಿಯಪಡಿಸಿದ್ದಾರೆ.

ರಷ್ಯನರು ಜರ್ಮನರೊಡನೆ ಸಂಧಿಮಾಡಿಕೊಂಡುದರಿಂದ ತಮಗಾದ ನಷ್ಟವನ್ನು ಅವರೇ ತಮ್ಮ ಪಾರ್ಲಿಮೆಂಟಿನಲ್ಲಿ ಹೇಳಿಕೊಂಡಿರುತ್ತಾರೆ. ಅದರ ವಿವರವು ಹೇಗೆಂದರೆ—೭೮೦೦೦೦ ಕಿಲೋಮಿಟರ್ ವಿಶಾಲವಾದ ದೇಶಭಾಗವೂ, ೫೬೦೦೦೦೦೦ ಪ್ರಜೆಗಳೂ, ೨೧ ಸಾವಿರ ಕಿಲೋಮಿಟರ್ ಉದ್ದವಾದ ಲೋಹಮಾರ್ಗವೂ, ೧೦೦ ಕ್ಕೆ ೭೩ ಭಾಗದಷ್ಟು ಕಬ್ಬಿಣವೂ, ೧೦೦ ಕ್ಕೆ ೮೯ ಪಾಲು ಕಲ್ಲಿದ್ದಲೂ, ೨೬೮ ಸಕ್ಕರೆಯ ಯಂತ್ರಾಲಯಗಳೂ, ೯೧೮ ಬಟ್ಟೆಯ ಯಂತ್ರಾಲಯಗಳೂ, ೩೭೪ ಸಾರಾಯಿ ಬಟ್ಟಿಗಳೂ, ೧೩೩ ಹೊಗೆಸೊಪ್ಪಿನ ಯಂತ್ರಾಲಯಗಳೂ, ೬೧೫ ಕಾಗದದ ಯಂತ್ರಾಲಯಗಳೂ, ೧೮೦೦ ಬ್ಯಾಂಕುಗಳೂ ಸಹ ಜರ್ಮನರ ಅಧೀನವಾದುವು. ಒಟ್ಟು ೮೪೫೦೦೦೦೦೦ ರೂಬಲುಗಳ ಆದಾಯವುಳ್ಳ ಪ್ರದೇಶವು ಜರ್ಮನರ ವಶವಾಗಿರುವುದು.

ಅಮೇರಿಕಾದಲ್ಲಿ ಹಿಂದೆ ಪ್ರೆಸಿಡೆಂಟರಾಗಿದ್ದ ಟಾಫ್ಟ್‌ರವರು ನ್ಯೂಯಾರ್ಕ್ ಶಾಸನಸಭೆಯಲ್ಲಿ ಮಾತನಾಡುವಾಗ್ಗೆ—"ಅಮೇರಿಕಾದವರು ಕೂಡಲೇ ೫೦-೭೦ ಲಕ್ಷ ಸೈನ್ಯವನ್ನು ಫ್ರಾನ್ಸ್‌ರಂಗಕ್ಕೆ ಕಳುಹಿಸಿಕೊಡಬೇಕು. ಹೀಗೆ ಮಾಡುವುದಕ್ಕೆ ೨ ವರ್ಷ ಹಿಡಿಯುವುದು. ಇದು ಜರುಗಿದರೆ ಮಿತ್ರಮಂಡಲಿಯವರಿಗೆ ತಪ್ಪದೆ ಜಯಲಾಭವಾಗುವುದು. ಮಿತ್ರಮಂಡಲಿಯವರು ಕಳೆದ ಮೂರು ವರ್ಷಗಳಿಂದ ಯುದ್ಧಮಾಡಿ ಬಳಲಿರುವುದರಿಂದ ಅಮೇರಿಕಾದವರಿಗೆ ಇದು ಕರ್ತವ್ಯವು. ಅವರೇ ಯುದ್ಧದ ಮುಖ್ಯಭಾರವನ್ನು ವಹಿಸಬೇಕು. ಮಿತ್ರಮಂಡಲಿಯವರೆಲ್ಲಾ ಕೂಡಿ ಜಯವನ್ನು ಪಡೆದುಕೊಂಡಬಳಿಕ ಅಂತರ್ಜಾತೀಯ ಸಂಘವನ್ನೇರ್ಪಡಿಸಬೇಕು" ಎಂದು ಭಾಷಣಮಾಡಿದ ಬಳಿಕ ಸಭೆಯವರು ಹಾಗೆಯೇ ತೀರ್ಮಾನಿಸಿದರು. ಇದರಿಂದ ಅಮೇರಿಕಾದವರಿಗೆ ಯುದ್ಧಕಾರ್ಯದಲ್ಲಿರುವ ದೃಢಪಕ್ಷಯವು ಗೊತ್ತಾಗುವುದು.

ಒಳದೇಶದ ವೃತ್ತಾಂತಗಳು.

ಪ್ರಜಾಪ್ರತಿನಿಧಿ ಸಭೆಯ ಕಾರ್ಯಗಳು ನಾಳೆ ತಾ|| ೨೨ ರಿಂದ ರಾಜಧಾನಿಯಲ್ಲಿ ಆರಂಭಿಸಲ್ಪಡುವುವು.

ಮ|| ಟಿ. ಸಿಂಗಾರವೇಲುಮೊದಲಿಯಾರ್, ಬಿ. ಎ., ಬಿ. ಎಲ್., ಆಕ್ಟಿಂಗ್ ಮುನ್ಸೀಫರು ಆ ಕೆಲಸದಲ್ಲಿ ಸ್ಥಿರಗೊಳಿಸಲ್ಪಟ್ಟಿದ್ದಾರೆ.

ಕಳೆದ ಮಾರ್ಚಿ ತಿಂಗಳಲ್ಲಿ ಕೋಲಾರದ ಗಣಿಗಳಿಂದ ತೋಡಲ್ಪಟ್ಟ ೧೪೨೯೧೧೬ ರೂ. ಗಳ ಬೆಲೆಬಾಳುವ ಭಂಗಾರವು ಬೊಂಬಾಯಿ ಟಂಕಸಾಲೆಗೆ ಕಳೆದವಾರದಲ್ಲಿ ಕಳುಹಿಸಲ್ಪಟ್ಟಿತು.

ಮೈಸೂರು ನಿಯಮನಿರ್ಮಾಣ ಸಭೆಗೆ ರಾ|| ಬ|| ಎಂ. ಶ್ಯಾಮರಾಯರವರ ಪ್ರತಿಯಾಗಿ ವಿದ್ಯಾಶಾಖಾ ಇನ್|| ಜನರಲ್ ಮ|| ಸಿ. ರಾಮಲಿಂಗರೆಡ್ಡಿಯವರು ಸಭಿಕರಾಗಿ ನಿಯಮಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ಬಿಸಿಲ ಬೇಗೆಯು ಹೆಚ್ಚಾಗಿದೆ. ಸಿಡುಬಿನಿಂದ ಮಕ್ಕಳ ಮರಣಗಳು ಹೆಚ್ಚುತ್ತಿವೆ. ಹೊಟ್ಟೆಕಳಕದ ಬಾಧೆಯು ಹೊರತು ಇತರ ರೋಗೋದ್ಭವಪ್ರವಗಳೇನೂ ಇರುವುದಿಲ್ಲ. ಕಳೆದ ಗುರುವಾರ ರಾತ್ರಿ ಒಂದು ಹದ ಒಳ್ಳೆ ಮಳೆಯಾಯಿತು.

ರಾಜಧಾನಿ ಕಾರಂಜಿಕೆರೆ ಪೂರ್ವಭಾಗದ ಬಯಲಿನಲ್ಲಿ "ಅತಿಥಿಗಳ ಅರಮನೆ" (ಗೆಸ್ಟ್ ಪ್ಯಾಲೆಸ್) ಎಂಬ ಹೆಸರಿನ ಭವನವು ಬಹುಶಃ ೧೪ ಲಕ್ಷ ರೂ. ಗಳ ವೆಚ್ಚದಿಂದ ಕಟ್ಟಲ್ಪಡಲು ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿರುವುದಾಗಿ ಕೇಳುತ್ತೇವೆ.

ಚಾಮರಾಜನಗರದ ತಾ|| ಅಮಲ್ದಾರರಾದ ಮಿ|| ಕಲಕ್‌ರವರು ಕೆಡ್ಡಾ ಸಮಯದಲ್ಲೂ ಈಚೆಗೆ ಪದೇಪದೇ ನಡೆದ ಬೇಟೆಯ ಕಾಲದಲ್ಲೂ ಮಾಡಿದ್ದ ಸಮರ್ಪಕವಾದ ಏರ್ಪಾಟುಗಳಿಗಾಗಿ ಶ್ರೀಮನ್ಮಹಾರಾಜರವರು ಮೆಚ್ಚಿ, ಅವರಿಗೆ ಒಂದು ಭಂಗಾರದ ಕೈ ಗಡಿಯಾರವನ್ನು ಅನುಗ್ರಹಿಸಿದರೆಂದು ಕೇಳುತ್ತೇವೆ.

ಹಿಂದುಳಿದವರ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ನಮ್ಮ ಸರ್ಕಾರದವರು ಕೊಡಲಿಕ್ಕೇರ್ಪಡಿಸುವ ೧ ಲಕ್ಷ ರೂ. ಗಳನ್ನು ೧|| ಲಕ್ಷಕ್ಕೆ ಹೆಚ್ಚಿಸಿರುತ್ತಾರೆ. ಪಂಚಮ ಜನರ ವಿದ್ಯಾಭಿವೃದ್ಧಿಗಾಗಿ ಪ್ರತ್ಯೇಕವಾಗಿ ೧ ಲಕ್ಷ ರೂ. ಗಳನ್ನು ವಿನಿಯೋಗಿಸುವುದಕ್ಕೂ ನಿರ್ಧರಿಸಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಗುಂಡ್ಲುಪೇಟೆ ತಾ|| ಅಮಲ್ದಾರ್ ಮ|| ಜಿ. ಮಲ್ಲಿಕಾರ್ಜುನಯ್ಯ, ಬಿ. ಎ., ಯವರು ೬ ವಾರಗಳ ರಜಾ ಪಡೆದುಕೊಂಡಿರುವುದರಿಂದ ಆ ಕಾಲದಲ್ಲಿ ಆ ತಾಲ್ಲೂಕಿನ ಅಮಲ್ದಾರಿಯನ್ನು ಆಕ್ಟಿಂಗಾಗಿ ನೋಡುವುದಕ್ಕೆ ರೆವಿನ್ಯೂ ಆಫೀಸ್ ಕ್ಲರ್ಕರಾದ ಮ|| ಡಿ. ಶ್ರೀನಿವಾಸರಾವ್ ಬಿ. ಎ., ಯವರು ನಿಯಮಿಸಲ್ಪಟ್ಟಿದ್ದಾರೆ.

ನರಸಿಹ್ಮರಾಜಪುರವನ್ನು ಹೋಬಳಿಯನ್ನಾಗಿ ಮಾಡಲು ಯೋಚಿಸಿರುವುದನ್ನು ತಪ್ಪಿಸಿ, ಅದನ್ನು ತಾಲ್ಲೂಕು ಮುಖ್ಯಸ್ಥಲವನ್ನಾಗಿಯೇ ಏರ್ಪಡಿಸಿಕೊಡಬೇಕೆಂದು ದಿವಾನರವರಲ್ಲಿ ಭಿನ್ನವಿಸಿಕೊಳ್ಳುವುದಕ್ಕಾಗಿ ನರಸಿಹ್ಮರಾಜಪುರದ ಪ್ರಮುಖರಾದ ಮ|| ಎಂ. ರಾಂತಪ್ಪಶೆಟ್ಟರೇ ಮೊದಲಾದ ಕೆಲವರು ಹೋಗಿದ್ದು, ಹಿತವಾಗಿ ಪರ್ಯಾಲೋಚಿಸುವೆವೆಂಬ ಉತ್ತರವನ್ನು ಪಡೆದಿರುವರೆಂದು ಕೇಳುತ್ತೇವೆ.

ಹುಣಸೂರು ತಾ|| ಹಳೇಬೀಡು ಗ್ರಾಮದಲ್ಲಿ ವರ್ಷವರ್ಷ ನಡೆಯುವ ಮಾಹೇಶ್ವರನ ಜಾತ್ರೆಕಾಲದಲ್ಲಿ ಜರುಗುತ್ತಿದ್ದಂತೆ ಈಸಲವೂ ಹೋಬಳಿಯ ಕಾನ್ಫರೆನ್ಸು ಬಹಳ ವಿಜೃಂಭಣೆಯಿಂದ ನೆರವೇರಿತು. ಏಕನಾಮಿಕ್ ಸೂ|| ಮ|| ನರಸಿಹ್ಮಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. ಆ ಗ್ರಾಮದ ಪಟೇಲ್ ಮ|| ಅಪ್ಪಾಜಿಗೌಡರು ಈ ಕಾನ್ಫರೆನ್ಸಿನ ಕಾರ್ಯಗಳೆಲ್ಲಾ ಸಮರ್ಪಕವಾಗಿ ನಡೆಯಲು ತಕ್ಕ ಏರ್ಪಾಟನ್ನು ಮಾಡಿದ್ದರು.

ಶ್ರೀ ಶಿವಗಂಗಾ ಸ್ವಾಮಿಗಳು ಕಳೆದ ತಾ|| ೧೧ ರಲ್ಲಿ ರಾಜಧಾನಿಗೆ ದಯಮಾಡಿಸಿದರು. ಪದ್ಧತಿಯಂತೆ ಮರ್ಯಾದೆಗಳೆಲ್ಲಾ ನಡೆದುವು. ಕಳೆದ ಸೋಮವಾರ ಅರಮನೆಯಲ್ಲಿ ಪಾದಪೂಜೆ ನಡೆಯಿತು. ಅವರ ಬಿಡಾರವಾದ ಸಂಸ್ಕೃತ ಮಹಾಪಾಠಶಾಲಾ ಭವನದಲ್ಲಿ ಅವರು ವರ್ಣಾಶ್ರಮ ಧರ್ಮವಿಷಯವಾಗಿಯೂ ಆಸ್ತಿಕ್ಯವಿಷಯವಾಗಿಯೂ ಪುರವಾಸಿಗಳಿಗೆ ಎರಡು ಉಪನ್ಯಾಸಗಳನ್ನು ಮಾಡಿದರು. ತಾ|| ೨೦ ರಲ್ಲಿ ಇವರು ಹಿಂದಿರುಗಿ ಶಿವಗಂಗೆಗೆ ಪ್ರಯಾಣಮಾಡಿದರು.

ಸಂಸ್ಥಾನದ ರಾಜ್ಯಾದಾಯವನ್ನು ವಿನಿಯೋಗಮಾಡುವುದರ ನ್ಯೂನಾತಿರೇಕಗಳನ್ನು ಕುರಿತು ವಿಚಾರಿಸುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸಬೇಕೆಂದು ಪ್ರಜಾಪ್ರತಿನಿಧಿಗಳು ಮಾಡುತ್ತಲಿದ್ದ ಕೋರಿಕೆಯನ್ನು ನೆರವೇರಿಸುವುದಕ್ಕಾಗಿ ಶ್ರೀಮನ್ಮಹಾರಾಜರವರು "ಫೈನಾನ್ಸಿಯಲ್ ಕಮಿಟಿ" ಎಂಬ ಹೆಸರಿನಿಂದ ಒಂದು ಸಂಘವನ್ನೇರ್ಪಡಿಸಿದ್ದಾರೆ. ಅದಕ್ಕೆ ನಿಯಮನಿರ್ಮಾಣ ಸಭೆಯಿಂದ ಮ|| ಬಿ. ನರಸಿಂಗರಾಯರೂ, ಪ್ರಜಾಪ್ರತಿನಿಧಿಸಭೆಯ ಪಕ್ಷದಿಂದ ಮ|| ಎಂ. ಬಸವಯ್ಯನವರೂ, ಮ|| ಎಸ್. ವೆಂಕಟೇಶಯ್ಯನವರೂ ಸಹ ಅನಧಿಕಾರಿ ಸಭಿಕರಾಗಿ ಆರಿಸಿಕೊಳ್ಳಲ್ಪಟ್ಟಿದ್ದಾರೆ.

ಕಳೆದ ತಾ|| ೧೦ ರಿಂದ ಮೈಸೂರು ಅರಸೀಕೆರೆ ಲೋಹಮಾರ್ಗ, ಬೆಂಗಳೂರು, ಚಿಕ್ಕಬಳ್ಳಾಪುರ ಬೌರಿಂಗ್‌ಪೇಟೆ ಲೋಹಮಾರ್ಗ, ತರೀಕೆರೆ ನರಸಿಹ್ಮರಾಜಪುರ ಟ್ರಾಂವೇಗಳಲ್ಲಿ ಬಂಡಿಗಳು ಹೋಗಿಬರುವ ಕಾಲಗಳಲ್ಲಿ ವ್ಯತ್ಯಾಸವು ಮಾಡಲ್ಪಟ್ಟಿದೆ. ಹೇಗೆಂದರೆ-ಮೈಸೂರಿಂದ ಮಧ್ಯಾಹ್ನ ೧೨-೩೫ ಕ್ಕೆ ಹೊರಟ ಬಂಡಿಯು ರಾತ್ರಿ ೮-೧೦ ಕ್ಕೆ ಅರಸೀಕೆರೆಗೂ ಅರಸೀಕೆರೆಯಿಂದ ಬೆಳಗಿನ ೬ ಗಂಟೆಗೆ ಹೊರಟ ಬಂಡಿಯು ಮೈಸೂರಿಗೆ ಮಧ್ಯಾಹ್ನ ೧|| ಗಂಟೆಗೂ ಬಂದು ಸೇರುತ್ತವೆ. ಬೆಂಗಳೂರಿಂದ ಬೆಳಗಿನ ೭-೨೫ ಕ್ಕೆ ಹೊರಟ ಬಂಡಿಯು ಚಿಕ್ಕಬಳ್ಳಾಪುರಕ್ಕೆ ೧೦-೫೯ ಕ್ಕೂ ಬೌರಿಂಗ್‌ಪೇಟೆಗೆ ಸಂಜೆ ೫ ಗಂಟೆಗೂ, ಬೌರಿಂಗ್‌ಪೇಟೆಯಿಂದ ಬೆಳಗಿನ ೯-೩೭ ಕ್ಕೆ ಹೊರಟ ಬಂಡಿಯು ಚಿಕ್ಕಬಳ್ಳಾಪುರಕ್ಕೆ ಮಧ್ಯಾಹ್ನ ೩-೩೦ ಕ್ಕೂ ಬೆಂಗಳೂರಿಗೆ ಸಾಯಂಕಾಲ ೭-೩೦ ಕ್ಕೂ ಬಂದು ಸೇರುತ್ತವೆ. ತರೀಕೆರೆಯಿಂದ ಬೆಳಗಿನ ೬-೫೦ ಕ್ಕೆ ಹೊರಟ ಬಂಡಿಯು ನರಸಿಹ್ಮರಾಜಪುರಕ್ಕೆ ೧೧-೫ ಕ್ಕೂ, ನರಸಿಹ್ಮರಾಜಪುರದಿಂದ ಮಧ್ಯಾಹ್ನ ೨ ಗಂಟೆಗೆ ಹೊರಟ ಬಂಡಿಯು ತರೀಕೆರೆಗೆ ೬-೧೫ ಕ್ಕೂ ಬಂದು ಸೇರುತ್ತವೆ.

ಭರತಖಂಡದ ವೃತ್ತಾಂತಗಳು.

ಕೊಲಂಬೋನಗರದಲ್ಲಿ ಸ್ವರಾಜ್ಯವಾದಿ ರಾಯಭಾರಿಗಳು ನಿಂತುಬಿಟ್ಟರಷ್ಟೆ. ಅವರಲ್ಲೊಬ್ಬರಾದ ಮ|| ಬಿಪಿನಚಂದ್ರಪಾಲ ಬಾಬುರವರು ಸತೀಪುತ್ರಸಮೇತರಾಗಿ ಮದ್ರಾಸಿಗೆ ಬಂದು ಅಲ್ಲಿಂದ ಕಲ್ಕತ್ತೆಗೆ ಪ್ರಯಾಣಮಾಡಿ ಹೋದರು.

ಮುಖ್ಯಮಂತ್ರಿಯವರು ಭರತಖಂಡವನ್ನು ಕುರಿತು ಕೊಟ್ಟ ಅಪ್ಪಣೆಯನ್ನು ತಾವ ಓದಿ ಕೇಳಿ, ಅದಕ್ಕೆ ತಕ್ಕ ಸಹಾಯವನ್ನು ಮಾಡುವುದಾಗಿ ಹೈದರಾಬಾದು ನೈಜಾಮರು ತಿಳಿಸಿ ಸದ್ಯಃ ೧೫ ಲಕ್ಷ ರೂ. ಗಳನ್ನು ವೈಸ್ರಾಯರಿಗೆ ಕಳುಹಿಸಿಕೊಟ್ಟಿರುವರು.

ಯುದ್ಧಸಂಬಂಧವಾಗಿ ಭರತಖಂಡದಿಂದ ಸಮಗ್ರವಾದ ಸಹಾಯವನ್ನು ಹೇಗೆ ಮಾಡಬೇಕೆಂಬುದನ್ನು ಗೊತ್ತುಮಾಡುವುದಕ್ಕಾಗಿ ಈ ದೇಶದ ಸಂಸ್ಥಾನಾಧೀಶರು, ಅಧಿಕಾರಿಪ್ರಮುಖರು ಪ್ರಜಾಪ್ರಮುಖರು ಪಾಶ್ಚಾತ್ಯಪ್ರಮುಖರು ಪ್ರಾಂತಾಧಿಕಾರಿಗಳು ಮೊದಲಾದವರೆಲ್ಲರನ್ನೂ ಕೂಡಿಸಿ ೧ ಮಹಾಸಭೆಯನ್ನು ವೈಸ್ರಾಯರು ಇಷ್ಟರಲ್ಲೇ ನೆರವೇರಿಸುವವರಾಗಿದ್ದಾರೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕದೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವತ್ತಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
3 ಆನಂದ ಬುಕ್‌ಡಿಪ್ಪೋ, ಮೈಸೂರು.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
2 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಿಕಿತ್ಸಾ, ಲುಕ್ಮಾನ ಇವೇ ಮೊದಲಾದ ಹಸ್ತಲಿಪಿ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ನಿದ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ತಿಜ್ವರ, ಅನೇಕವಿಧವಾದ ಮೂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೨ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೫೪ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ

ಸೂಚನೆ:—ಇದರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟೆ (ಟಾಕಿ) ಹಡವರ್ಣ, ಯಲುಸಂಧಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತ್ಯಪ್ಪಾ ಕಾಳಪ್ಪಾ ಲೇಂಗಡೆ,
10 ಹೊಸೂರ, ಪೋಸ್ಟ್, ಪಾಪೂರ (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೋಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

8 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೀಮ್ ಮಗ್ಗಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಇಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 18

ಇಮಿಟೇಷನ್ ಸಿಲ್ಕ್ ಗೋವರ್ ಚಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಚಾಟಾಮಣಿ ಸೀರೆ	3.8.0

ವಿಳಾಸ:-ಮೈರಂ ಅಂಡ್ ಕೊ, ಇರುಳಪ್ಪನಬೀದಿ, ಮದರಾಸು.

ಕಾಳು ಕಡಿಯ ಜಂಗೀ ವಖಾರ.

ಗೋಧಿ ಕುಸುಬಿ ಕಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಶನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
11 ಧಾರವಾಡ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ಇಪ್ಪೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ಇಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
21 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಬೇಕಾದ,

ಹೊಸ ಪುಸ್ತಕ! ಬೇಗ ತರಿಸಿಕೊಳ್ಳಿ! ಸ್ವಲ್ಪ ಪ್ರತಿಗಳಿವೆ!

ಕೈ. ರಾ॥ ಬ॥ ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತ್ರೆ.

ವೀರಶೈವ ಜನಾಂಗಕ್ಕೆ ಮಹದುಪಕಾರವನ್ನು ಮಾಡಿ ಕೀರ್ತಿಶೇಷರಾದ ಶ್ರೀ ವಾರದ ಮಲ್ಲಪ್ಪನವರು ಚಿಕ್ಕಂದಿನಲ್ಲಿಯೂ, ಪ್ರೌಢಾವಸ್ಥೆಯಲ್ಲಿಯೂ, ಹೇಗೆ ವಿದ್ಯಾರ್ಜನೆ ಮಾಡಿದರೆಂಬುದನ್ನೂ, ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳಲ್ಲಿ ಯಾವಯಾವ ಸುಧಾರಣೆಗಳನ್ನು ಮಾಡಿ ವಿಶೇಷವಾದ ಸಂಪತ್ತನ್ನು ಹೇಗೆ ಸಂಪಾದಿಸಿದರೆಂಬುದನ್ನೂ, ಸಾಧಾರಣ ೧೦ ಲಕ್ಷ ರೂ. ಗಳನ್ನು ದಾನಮಾಡಿ ಯಾವಯಾವ ಮಹತ್ಕಾರ್ಯಗಳನ್ನು ನೆರವೇರಿಸಿದರೆಂಬುದನ್ನೂ, ಇವರ ಆಚಾರ, ಗುಣ, ಸ್ವಭಾವಾದಿಗಳ ಆಶ್ಚರ್ಯಕರವಾದ ಅನೇಕ ದೃಷ್ಟಾಂತಗಳನ್ನೂ, ಧಾರ್ಮಿಕ, ಸಾಮಾಜಿಕ, ವ್ಯಾಪಾರಾದಿ ವಿಷಯಗಳಲ್ಲಿ ಇವರು ತಿಳುಹಿಸಿರುವ ಅನೇಕಮಹತ್ವದ ಸಂಗತಿಗಳನ್ನೂ, ಮತ್ತು ಇವರ ಚರಿತ್ರೆಯಿಂದ ಪ್ರತಿಯೊಬ್ಬರೂ ಕಲಿತುಕೊಳ್ಳಬೇಕಾದ ಮುಖ್ಯವಿಷಯಗಳನ್ನೂ, ಆರುಪ್ರಕರಣಗಳಲ್ಲಿ ಬಹು ವಿಸ್ತಾರವಾಗಿ ವಿವರಿಸಿದೆ.

ಇವರ ಮತ್ತು ಇವರಪುತ್ರ, ಕುಟುಂಬ, ಬಂಗ್ಲೆ ಮೊದಲಾದವುಗಳ ಎಂಟು ಸುಂದರವಾದ ಚಿತ್ರಗಳು, ಇವರ ಮತ್ತು ಇವರಪುತ್ರರ ಜನ್ಮಕುಂಡಲಿಗಳು, ಈ ಪುಸ್ತಕದಲ್ಲಿವೆ. ಕ್ರಯ ೧೨ ಆಣೆ.

12 ವಿಳಾಸ:—ಎಂ. ಎಂ. ಹರ್ಡೇಕರ್, ದಾವಣಗೆರೆ.

೧೯೧೮ ನೆಯ ಇಸವಿ ಏಪ್ರಿಲ್ ತಾ॥ ೨೧ ರಿಂದ ೧೯೧೮ ನೆಯ ಏಪ್ರಿಲ್ ತಾ॥ ೨೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮಸಂವತ್ಸರದ ಚೈತ್ರ ಶು॥ ಏಕಾದಶಿಯಿಂದ ಚೈತ್ರ ಬ॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
21	ಭಾನು	ಏಕಾದ	56-30	ಮಖಾ	21-45	9
22	[1]ಸೋಮ	ದ್ವಾದಶಿ	60	ಪುಭ	27-45	10
23	[2]ಮಂಗಳ	ದ್ವಾದಶಿ	1-49	ಉಭ	34-17	11
24	[3]ಬುಧ	ತ್ರಯೋ	6-58	ಹಸ	40-55	12
25	[4]ಗುರು	ಚತು	12-0	ಚಿತ್ತ	47-11	13
26	[5]ಶುಕ್ರ	ಪೌರ್ಣ	16-26	ಸ್ವಾತಿ	52-30	14
27	ಶನಿ	ಪಾಡ್ಯ	20-1	ವಿಶಾಖ	57-27	15

(1) ಬೇಲೂರು ಕೇಶವಸ್ವಾಮಿ ರಥ, ಮಂಡ್ಯದ ಜನಾರ್ದನಸ್ವಾಮಿ ರಥ. (2) ಮಾಗಡಿ ರಂಗಸ್ವಾಮಿ ರಥ. (3) ಮಳೂರು ಅಪ್ರಮೇಯಸ್ವಾಮಿ ರಥ. (4) ಪೂರ್ಣಮಾತಿಥಿ, ಬಿಳಿಗಿರಿರಂಗಸ್ವಾಮಿ ರಥ. (5) ಮಹಿಷಿ ಅಶ್ವತ್ಥನಾರಾಯಣಸ್ವಾಮಿ ರಥ, ಚಿತ್ರಾಪೂರ್ಣಿಮಾ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಲೆಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಏಪ್ರಿಲ್ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೧೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ನಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಸುಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು



ನೇ
ಯಬಲ್ಲೆವೆಂದು ಫ್ರೆಂಚರು ಕೃತನಿಶ್ಚಯರಾಗಿದ್ದಾರೆ.

ಇತರವಿಷಯಗಳು.

ತುರ್ಕಿಯವರ ಮೂರು ಯುದ್ಧನೌಕೆಗಳು ಕಪ್ಪುಸಮುದ್ರದ ರಷ್ಯನ್ ಸ್ವಾರೇವೆಗೆ ಬಂದಿರುತ್ತವೆ.

ಇಟಲಿರಂಗದಲ್ಲಿ ಆಸ್ಟ್ರಿಯನ್ನರು ಭಯಂಕರ ಯುದ್ಧವನ್ನು ಇಷ್ಟರಲ್ಲಿ ನಡೆಯಿಸುವರೆಂಬ ಸೂಚನೆಗಳು ಕಾಣುತ್ತವೆ.

ನಪತ್ರವು
ಸರ್ ರಾ
ಬಹಿರಂಗ
ಸ್ತ್ರೀಸಂಘ
ರು ತಮ್ಮ



ಡಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಕಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಟು ಗುಂಡಿಗಳು 4, ಜರ್ಮನ್ ಕೈನಸ್ಟ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
19 3, ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೯—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 20

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತಾಪಿತೃಗಳಿಗೂ ವೈದ್ಯರ ಸಮಯವನ್ನು ಕಾದು ಮರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಆರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಚ್. ಎಂ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದು ದಲ್ಲಿವರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧ ಕ್ರಿಟಿರಿಯಕ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧಕ್ಕ ಎಲ್ಲ ವಿಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ರ —೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಹಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿ ಆ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನು ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇನೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಅಪೇಕ್ಷಿಸುವವರು ಶೀಘ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
23 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 28

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಏಪ್ರಿಲ್ ತಾ|| ೨೮ ನೆಯ ಭಾನುವಾರ.

ಬಿಟ್ಟಿಯಾಗಿ ಪ್ರೌಢವಿದ್ಯಾಭ್ಯಾಸ.

ನಮ್ಮ ವಿಶ್ವವಿದ್ಯಾಲಯದ ಸಂಘದವರು ಈಸಲ ರಾಜಧಾನಿಯಲ್ಲಿ ಕೂಡಿ ನಡೆಯಿಸಿದ ವಿಚಾರಗಳಲ್ಲಿ ನಮ್ಮ ವಿದ್ಯಾಪೀಠದ ಕಲಾಶಾಲಾ ವಿದ್ಯಾಭ್ಯಾಸವನ್ನೆಲ್ಲಾ "ಫೀ" ತೆಗೆದುಕೊಳ್ಳದೆ ಬಿಟ್ಟಿಯಾಗಿ ಮಾಡಿಸುವಂತೆ ಏರ್ಪಡಿಸಬೇಕೆಂಬ ವಿಷಯವು ಒಂದಾಗಿದ್ದಿತು. ಈ ಸೂಚನೆಯನ್ನು ರಾ|| ಬ|| ಎಂ.ಸಿ. ರಂಗಯ್ಯಂಗಾರರು ಸಭೆಯಮುಂದಿಟ್ಟರು. ಇದಕ್ಕೆ ವಿರೋಧಿಸಿದ ಜನರು ಕೆಲವರು ಮಾತ್ರವಾಗಿದ್ದು ಅನುಮೋದಿಸಿದವರೇ ಹೆಚ್ಚಾದುದರಿಂದ ಅದು ಸಭೆಯಿಂದ ಅಂಗೀಕೃತವಾಯಿತು. ಆದರೆ ಈ ವಿಷಯದಲ್ಲಿ ಗೌರ್ನಮೆಂಟಿನವರೂ ಹೀಗೆಯೇ ಅಭಿಪ್ರಾಯಪಟ್ಟು ಅನುಮೋದಿಸಬಲ್ಲರೆ ಎಂದು ಯೋಚಿಸಬೇಕಾಗಿರುವುದು. ಏಕೆಂದರೆ ವಿದ್ಯಾಭ್ಯಾಸದ ಈಗಣ ಏರ್ಪಾಟಿನಲ್ಲಿ ಅತಿಶಯವಾಗಿರುವ ನ್ಯೂನಾತಿರೇಕಗಳನ್ನು ಮೊದಲು ಸರಿಪಡಿಸಿಕೊಳ್ಳಬೇಕಾಗಿರುವುದು. ಸರ್ಕಾರದವರು ವರ್ಷೇವರ್ಷೆ ವಿದ್ಯಾಭ್ಯಾಸ ಶಾಖೆಗಾಗಿ ವೆಚ್ಚಮಾಡುವ ಹಣವನ್ನೇನೋ ಹೆಚ್ಚಿಸುತ್ತಲಿರುವರು. ಈ ವರ್ಷದ ಬಡ್ಜೆಟ್ಟಿನಲ್ಲಿ ೩೭ ಲಕ್ಷ ರೂ. ಗಳು ವಿದ್ಯಾಶಾಖಾ ವ್ಯಯಕ್ಕಾಗಿ ನಿಗದಿಮಾಡಲ್ಪಟ್ಟಿರುವುವು. ಎಂದರೆ ಸ್ವಲ್ಪ ಕಡಿಮೆ ಒಟ್ಟು ರಾಜಾದಾಯದಲ್ಲಿ $\frac{1}{8}$ ಭಾಗದಷ್ಟನ್ನು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ವಿನಿಯೋಗಿಸಿದಂತಾಗುವುದು. ಇದು ಸಂತೋಷಪ್ರದವೇ ಸರಿ. ಆದರೆ ವೆಚ್ಚದ ಪಟ್ಟಿಯಲ್ಲಿ ಇದು ರಮಣೀಯವಾಗಿ ಕಂಡಮಾತ್ರದಿಂದಲೇ ಅದರ ಸಾರ್ಥಕತೆಯು ಎಷ್ಟುಮಟ್ಟಿಗೆ ಯಾವವಿಧದಿಂದ ಉಂಟಾಗುತ್ತಲಿದೆಯೆಂಬುದನ್ನು ವಿಚಾರಮಾಡಿ ನೋಡಿದರೆ ಅಷ್ಟು ಸಂತೋಷಪಡುವುದಕ್ಕೆ ಎಡೆಯಿರುವುದಿಲ್ಲ. ಈ ಶಾಖೆಯ ಹಣದಲ್ಲಿ ಸಾಮಾನ್ಯಪ್ರಜೆಗಳ ವಿದ್ಯಾಭಿವೃದ್ಧಿಗೆ ಶಕ್ಯವಷ್ಟು ಸಹಾಯವಾಗುತ್ತಿರುವುದಿಲ್ಲ. ಪ್ರೌಢವಿದ್ಯಾಭ್ಯಾಸಕ್ಕಾಗಿಯೇ ಸ್ವಲ್ಪ ಕಡಿಮೆಯಾಗಿ ಅರ್ಧ ಭಾಗದಷ್ಟು ಹಣವೆಲ್ಲಾ ವ್ಯಯವಾಗಿಹೋಗುತ್ತದೆ. ಅಂಥ ಪ್ರೌಢವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿ ಸಂಖ್ಯೆಯು ೧ ಸಾವಿರದಷ್ಟೂ ಇರುವುದಿಲ್ಲ. ಉಳಿದ ಲಕ್ಷಾಂತರ ಪ್ರಜೆಗಳ ಬಾಲಬಾಲಿಕೆಯರ ಬಾಲವಿದ್ಯಾಭ್ಯಾಸಕ್ಕೆ ಅರ್ಧಭಾಗದಷ್ಟು ಹಣವು ಮಾತ್ರ ವಿನಿಯೋಗವಾಗುತ್ತಿದೆ. ಅದರಲ್ಲೂ ನಗರಗಳ ಪಟ್ಟಣಗಳ ಪ್ರಜೆಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿಕೊಟ್ಟಿರುವ ಸೌಕರ್ಯದಲ್ಲಿ $\frac{1}{100}$ ಪಾಲು ಸೌಕರ್ಯಗಳೂ ಗ್ರಾಮಾಂತರದ ಪ್ರಜೆಗಳಿಗಿರುವುದಿಲ್ಲ. ಪಟ್ಟಣದ ಪ್ರಜೆಗಳಿಗಿಂತ ಅವರು ಕಂದಾಯ ಕೌಳಿಗೆಗಳನ್ನು ಕೊಡುವುದರಲ್ಲಿ ಏನೂ ಕಡಿಮೆಯಾಗಿಲ್ಲದಿದ್ದರೂ, ಪಟ್ಟಣದ ಪ್ರಜೆಗಳ ವಿದ್ಯಾಭಿವೃದ್ಧಿಗೆ ಸೆಕೆಂಡರಿ ಪಾಠಶಾಲೆಗಳು, ಪ್ರೌಢಕಲಾಶಾಲೆಗಳು, ಹಾಸ್ಟಲುಗಳು ಮೊದಲಾದ ಅನೇಕಾನೇಕ ಸೌಕರ್ಯಗಳನ್ನು ಸರ್ಕಾರದವರು ಮಾಡಿಕೊಟ್ಟಿರುವಂತೆ ಗ್ರಾಮಾಂತರದ ಪ್ರಜೆಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿಕೊಟ್ಟಿರುವುದಿಲ್ಲ. ಅವರು ಯಾವ ಸೌಕರ್ಯವನ್ನು ಕಲ್ಪಿಸಬೇಕೆಂದು ಕೇಳಿಕೊಂಡರೂ ಹೋಟಲಿನವರು ಫಲಾಹಾರದ ಸಾಮಗ್ರಿಗಳಿಗೆ ನಿಗದಿಯ ಬೆಲೆಯನ್ನು ಕೇಳುವಂತೆ ಪಾಠಶಾಲೆಯ ಕಟ್ಟಡವನ್ನು ನೀವು ಕಟ್ಟಿಸಿಕೊಡಿ, ಉಪಾಧ್ಯಾಯರ ಸಂಬಳದಲ್ಲಿ ಅರ್ಧವನ್ನು ಕೊಡಿ, ಉಪಾಧ್ಯಾಯರಿಗೆ ಮನೆಯನ್ನು ಕಟ್ಟಿಸಿಕೊಡಿ ಎಂದು ಮೊದಲಾಗಿ ಕೇಳುತ್ತಿರುವರು. ಇದು ಯಾವ ಧರ್ಮ? ಬಲಾತ್ಕಾರ ಬಾಲವಿದ್ಯಾಭ್ಯಾಸ ಕ್ರಮವನ್ನು ಏರ್ಪಡಿಸಿದ್ದರೂ, ಅದರ ಅವಶ್ಯಕತೆಯು ಗ್ರಾಮಾಂತರಗಳಿಗೆ ಹೆಚ್ಚಾಗಿದ್ದರೂ, ಉಂಡವಂಗೇ ಉಣಲಿಡುವಂತೆ ಅದರ ಸೌಕರ್ಯಗಳನ್ನೂ ಪುರನಿವಾಸಿಗಳಿಗೇ ಹೆಚ್ಚುಹೆಚ್ಚಾಗಿ ಮಾಡಿಕೊಡುತ್ತಿರುವರು. ಈ ದೊಡ್ಡ ಅನ್ಯಾಯವು ತಪ್ಪಿದಲ್ಲದೆ ಪ್ರಜಾಸಾಮಾನ್ಯ ವಿದ್ಯಾಭಿವೃದ್ಧಿಯು ಸಮರ್ಪಕವಾಗಿ ಈಡೇರಲಾರದು. ಗ್ರಾಮಾಂತರದ ಅನಕ್ಷರಸ್ಥ ಪ್ರಜೆಗಳು ಓನಾಮವನ್ನು ಕಲಿಯುವುದಕ್ಕೂ "ಸ್ಪೆಷಲ್" ಹೊರೆಯನ್ನು ಹೊರಬೇಕಾಗಿರುವಾಗ, ಪ್ರೌಢತರಗತಿಯ ವಿದ್ಯಾಭ್ಯಾಸ ಮಾಡಶಕ್ಯರು ಅದನ್ನೂ ಬಿಟ್ಟಿಯಾಗಿಯೇ ಪಡೆಯಬೇಕೆಂದು ಅಪೇಕ್ಷಿಸುವುದು ಹೇಗೆ ಧರ್ಮವಾಗುವುದು? ಸಾಮಾನ್ಯ ಪ್ರಜೆಗಳ ಸಾಮಾನ್ಯ ವಿದ್ಯಾಭ್ಯಾಸಕ್ಕೆ ಸಕಲವಿಧದ ಸೌಕರ್ಯವೂ ಒದಗಿಸಲ್ಪಟ್ಟು ಮುಗಿದಬಳಿಕ ಪ್ರೌಢವಿದ್ಯಾಭ್ಯಾಸ ವಿಷಯವಾಗಿ ಸೌಕರ್ಯವನ್ನು ಯೋಚಿಸುವುದೂ ಕಲ್ಪಿಸುವುದೂ ನ್ಯಾಯವು. ಒಕ್ಕಣ್ಣಿನ ಒಂಟೆಯಂತೆ ಒಮ್ಮಗ್ಗುಲನ್ನೇ ನೋಡಿಕೊಂಡು ಹೋಗುವುದು ಪ್ರಜಾಪ್ರಮುಖರಿಗೇ ಆಗಲೀ ಪ್ರಭುತ್ವದವರಿಗೇ ಆಗಲೀ ಧರ್ಮವಲ್ಲವೆಂದು ಹೇಳದಿರಲಾರೆವು. ಸಂಸ್ಥಾನದಲ್ಲಿರುವ ಗಂಡುಹುಡುಗರಿಗೆಲ್ಲಾ ನಿರ್ಬಂಧವಿದ್ಯಾಭ್ಯಾಸ ಸೌಕರ್ಯಗಳನ್ನು ಒದಗಿಸಿಕೊಡಲಾರದ ನಮ್ಮ ಪ್ರಭುತ್ವದವರು ಬಲಾತ್ಕಾರ ಸ್ತ್ರೀ ವಿದ್ಯಾಭ್ಯಾಸಕ್ರಮವನ್ನೂ ಏರ್ಪಡಿಸಿಕೊಂಡಂತೆ ಸರ್ವ ವಿದ್ಯಾಭ್ಯಾಸವನ್ನೂ ಉಚಿತವಾಗಿ ಮಾಡಿಸುವ ಏರ್ಪಾಟನ್ನೂ ಮಾಡಿಬಿಟ್ಟರೆ, ಇಂಥ ಹೊಸ ಏರ್ಪಾಟುಗಳ ಆಡಂಬರದಿಂದ ಸಂಸ್ಥಾನದ ಕಾರ್ಯಭಾರದ ಪ್ರತಿಷ್ಠೆಯು ಹೊರಗಣವರಿಗೆ "ದೂರತಃ ಪರ್ವತೋರಮ್ಯಃ" ಎಂಬಂತಾದೀತೇ ಹೊರತು ಅಂತಸ್ಸ್ಥಿತಿಯು ರಮ್ಯವಾಗಿ ಪರಿಣಮಿಸಲಾರದು. ದೂರತೋ ರಮ್ಯವಾಗಿರಬೇಕೆಂಬುದೇ ನಮ್ಮ ಪ್ರಭುತ್ವದವರ ಉದ್ದೇಶವಾಗಿರಬಾರದು. ಅಲ್ಲದೆ ಭರತಖಂಡದ ಯಾವ ಭಾಗದಲ್ಲೂ ಪ್ರೌಢವಿದ್ಯಾಭ್ಯಾಸವು ಉಚಿತವಾಗಿ ನಡೆಯದಿರುವಾಗ ನಮ್ಮ ಸಂಸ್ಥಾನದಲ್ಲಿ ಮಾತ್ರವೇ ಅದು ಏರ್ಪಟ್ಟರೆ, ಎಲ್ಲ ಭಾಗಗಳಿಂದಲೂ ದುಮ್ಮಿಕ್ಕುವ ವಿದ್ಯಾರ್ಥಿಪರಂಪರೆಗೆ ಲೆಕ್ಕವಿಲ್ಲದಷ್ಟು ಕಲಾಶಾಲೆಗಳನ್ನು ನಾವು ಕಟ್ಟಿ ತೆರೆದಿಟ್ಟುಕೊಂಡಿರಬೇಕಾದೀತಲ್ಲದೆ ಮತ್ತಷ್ಟು ಹೆಚ್ಚು ವೆಚ್ಚವನ್ನು ಪ್ರೌಢವಿದ್ಯಾಭ್ಯಾಸಕ್ಕೇ ವಿನಿಯೋಗಿಸಬೇಕಾಗಿ ಬಂದು ಸಾಮಾನ್ಯ ವಿದ್ಯಾಭ್ಯಾಸಕ್ಕೆ ದ್ರವ್ಯದ ಕೊರತೆಯು ಇನ್ನಷ್ಟು ಹೆಚ್ಚಾದೀತು. ಇದನ್ನೆಲ್ಲಾ ನಮ್ಮ ಪ್ರಭುತ್ವದವರು ಸಾವಧಾನವಾಗಿ ಪರ್ಯಾಲೋಚಿಸುವವರಾಗಬೇಕೆಂದು ಕೋರುವೆವು.

ಪ್ರಜಾಪ್ರತಿನಿಧಿಸಭೆಯ ೨ ನೆ ಸಮ್ಮೇಳನ.

ಕಳೆದ ತಾ|| ೨೨ ನೆ ಸೋಮವಾರದಿಂದ ಈ ಸಭೆಯು ರಾಜಧಾನಿಯಲ್ಲಿ ಸಂಸ್ಥಾನದ ಮಂತ್ರಿವರ್ಯರ ಅಧ್ಯಕ್ಷತೆಯಿಂದ ೪ ದಿವಸಗಳಕಾಲ ನಡೆದಿತು. ಕೌನ್ಸಿಲರೇ ಮೊದಲಾದ ಮುಖ್ಯಾಧಿಕಾರಿಗಳೂ, ಪ್ರಜಾಪ್ರತಿನಿಧಿಗಳು ೧೫೪ ಮಂದಿಗಳೂ, ಅನೇಕ ಮಂದಿ ಪ್ರೇಕ್ಷಕರೂ ಸಭೆಯನ್ನಲಂಕರಿಸಿದ್ದರು. ಮೊದಲ ದಿವಸ ದಿವಾನರು ತಮ್ಮ ಉಪನ್ಯಾಸವನ್ನು ಇಂಗ್ಲೀಷಿನಲ್ಲೂ, ಸೆಕ್ರೆಟರಿ ಮ|| ಬಾಲಸುಂದರಂ ಅಯ್ಯರವರು ಕನ್ನಡದಲ್ಲೂ ಓದಿ ಹೇಳಿದರು. ಅದು ಮುಗಿದಕೂಡಲೇ ಪ್ರತಿನಿಧಿಗಳ ಪರವಾಗಿ ಮ|| ಎಂ. ವೆಂಕಟಕೃಷ್ಣಯ್ಯನವರು ರಾಜ್ಯಭಾರದ ಪ್ರಜಾರಂಜಕವಾದ ಏರ್ಪಾಟುಗಳಿಗಾಗಿ ಕೃತಜ್ಞತಾಪೂರ್ವಕವಾದ ವಂದನೆಯನ್ನು ಶ್ರೀಮನ್ಮಹಾರಾಜರಿಗೆ ತಿಳಿಯಿಸಬೇಕೆಂದು ಕೃತಪಡಿಸಿಕೊಂಡರು. ಅಂದಿನಿಂದ ಕಳೆದ ಗುರುವಾರ ಸಾಯಂಕಾಲದವರೆಗೆ ಸಭಾಕಾರ್ಯಗಳೆಲ್ಲಾ ಜರುಗಿ ಮುಗಿದುವು. ಈ ಸಭೆಯಲ್ಲಿ ಮುಖ್ಯವಾಗಿ ಬಡ್ಜೆಟ್ಟಿನ ಪರ್ಯಾಲೋಚನೆಯು ನಡೆದುದಲ್ಲದೆ ಹಿಂದಣ ಸಭೆಯಲ್ಲಿ ಚರ್ಚಿತವಾಗದೆ ಉಳಿದಿದ್ದ ವಿಷಯಗಳ ಮತ್ತು ಕೆಲ ನೂತನ ವಿಷಯಗಳ ಚರ್ಚೆಯೂ, ಹಿಂದೆ ಏರ್ಪಡಿಸಿದ್ದ ವಿಶಿಷ್ಟ ಸಂಘಗಳವರು ಮಾಡಿರುವ ವರದಿಗಳಮೇಲಣ ಚರ್ಚೆಯೂ ನಡೆದುವು. ಕಾರ್ಯಗಳನ್ನೆಲ್ಲಾ ಮುಗಿಸುವುದಕ್ಕೆ ಇನ್ನೂ ೨-೩ ದಿನಗಳು ಬೇಕಾಗುವಂತಿದ್ದರೂ ದಿಲ್ಲಿಯಲ್ಲಿ ತಾ|| ೨೭ ರಲ್ಲಿ ಕೂಡುವ ವೈಸ್‌ರಾಯರಮಹಾಸಭೆಗೆ ನಮ್ಮ ಸಂಸ್ಥಾನದ ಪ್ರತಿನಿಧಿಗಳಾಗಿ ದಿವಾನರವರು ದಯಮಾಡಿಸಬೇಕಾಗಿದ್ದ ಪ್ರಯುಕ್ತ ೪ ದಿನಗಳಿಗೇ ಸಭಾಕಾರ್ಯಗಳು ಮುಗಿಸಲ್ಪಟ್ಟುವು.

ಮಂತ್ರಿವರ್ಯರು ಮಾಡಿದ ಉಪನ್ಯಾಸವು ಸಂಕ್ಷಿಪ್ತವಾಗಿದ್ದಿತು. ಅದರ ಆದಿಯಲ್ಲಿ ನಮ್ಮ ಶ್ರೀಮನ್ಮಹಾರಾಜರವರಿಗೆ ಸಾಮ್ರಾಜ್ಯ ಪ್ರಭುತ್ವದವರಿಂದ ಅನುಗ್ರಹಿಸಲ್ಪಟ್ಟ ಬಿರುದಿಗಾಗಿ ಅಭಿನಂದನವೂ, ಬಳಿಕ ಈಗಣ ಮಹಾಯುದ್ಧದ ತೀಕ್ಷ್ಣಾವಸ್ಥೆಯಲ್ಲಿ ಆಂಗ್ಲ ಮುಖ್ಯಮಂತ್ರಿಯವರ ಸಂದೇಶದಂತೆ ನಾವೆಲ್ಲರೂ ಸಹಾಯಮಾಡಬೇಕಾದ ವಿಷಯವೂ, ಇದುವರೆಗೆ ಮೈಸೂರು ದೇಶದ ೨ ಸೈನ್ಯಗಳು ಕೀರ್ತಿಕರವಾಗಿ ಕೆಲಸಮಾಡಿರುವುದೂ, ಮೈಸೂರು ಸೈನ್ಯಕ್ಕೆ ಸೇರುವವರಿಗೆ ಉದಾರವಾಗಿ ವೇತನ ಬಹುಮಾನಗಳನ್ನು ಕೊಡಲು ಶ್ರೀಮನ್ಮಹಾರಾಜರವರು ಏರ್ಪಡಿಸಿರುವ ವಿಷಯವೂ ನಿರೂಪಿಸಲ್ಪಟ್ಟು ಪ್ರಜಾಮುಖಂಡರೆಲ್ಲರೂ ಜನರನ್ನು ಸೈನ್ಯಕ್ಕೆ ಸೇರಿಸಿಕೊಡಬೇಕಾದ ಅವಶ್ಯ ಕರ್ತವ್ಯವು ಸೂಚಿಸಲ್ಪಟ್ಟಿದ್ದಿತು. ಅನಂತರ ಆಯವ್ಯಯ ಸಂಬಂಧದ ಮುಖ್ಯ ವಿಷಯಗಳು ವಿವರಿಸಲ್ಪಟ್ಟ ಬಳಿಕ ಕಳೆದ ಸಭೆಯಿಂದೀಚೆಗೆ ೬ ತಿಂಗಳ ಕಾಲದಲ್ಲಿ ನಡೆದಿರುವ ಮುಖ್ಯಕಾರ್ಯಗಳನ್ನು ದಿವಾನರವರು ವಿವರಿಸಿದರು. ಅದರಲ್ಲಿ ಪೊಲೀಸ್ ಶಾಖೆಯ ಕಾರ್ಯಗಳನ್ನು ಸಮರ್ಪಕವಾಗಿ ನಡೆಯುವಂತೆ ಮಾಡುವುದಕ್ಕೆ ಉತ್ತಮವಾದ ಉದ್ಯೋಗಿಗಳನ್ನು ನಿಯಮಿಸುವುದಕ್ಕೂ ಪೊಲೀಸಾರುಗಳ ಸಂಬಳವನ್ನು ಹೆಚ್ಚಿಸುವುದಕ್ಕೂ ಸಹ ೨ ಲಕ್ಷ ರೂ. ಗಳನ್ನು ಹೆಚ್ಚಿಗೆ ವೆಚ್ಚಮಾಡಲು ನಿರ್ಧರಿಸಿರುವುದು, ಅಟವಿಯ ಶಾಖೆಯ ಕಾರ್ಯಗಳ ಸುಧಾರಣೆಗಾಗಿ ವಾರ್ಷಿಕ ವ್ಯಯದಲ್ಲಿ ಇನ್ನು ೫೬ ಸಾವಿರ ರೂ. ಗಳನ್ನು ಹೆಚ್ಚಿಸಿದುದು, ಸೆಕ್ರೆಟರಿಯೇಟಿನ ಕೆಲಸವು ಮೊದಲಿಗಿಂತಲೂ ಈಗ ೧೦೦ ಕ್ಕೆ ೭೦ ರಷ್ಟು ಹೆಚ್ಚಿರುವುದರಿಂದ ಅದರ ಸಿಬ್ಬಂದಿಯನ್ನು ಬಲಪಡಿಸುವುದಕ್ಕೆ ೪೯೦೦೦ ರೂ. ಗಳನ್ನು ಹೆಚ್ಚಿಸಿದುದೂ, ವಿದ್ಯುಚ್ಛಕ್ತ್ಯುಪಯೋಗವೂ ಅದನ್ನೊದಗಿಸುವಿಕೆಯ ಭಾರವೂ ಹೆಚ್ಚಿರುವುದರಿಂದ ಆ ಶಾಖೆಯ ವೆಚ್ಚವನ್ನು ೪೬೦೦೦ ರೂ. ಗಳಷ್ಟು ಹೆಚ್ಚಿಸಿದುದೂ, ಹೇಳಲ್ಪಟ್ಟಿರುವುದಲ್ಲದೆ ಉಳಿದ ಶಾಖೆಗಳಲ್ಲಿ ನಡೆಯುವ ಕೆಲ ಕೆಲ ಸಾಮಾನ್ಯಾಭಿವೃದ್ಧಿ ಕಾರ್ಯಗಳೂ ಸೂಚಿಸಲ್ಪಟ್ಟದ್ದುವು. ಮತ್ತೂ ಬಹುಕಾಲದಿಂದ ಪ್ರಜೆಗಳು ಪ್ರಾರ್ಥಿಸುತ್ತಿದ್ದ ಜುಡಿಸಿಯಲ್ ಮತ್ತು ಎಗ್ಸಿಕ್ಯುಟಿವ್ ಅಧಿಕಾರಗಳನ್ನು ಪ್ರತ್ಯೇಕಿಸುವ ವಿಷಯದಲ್ಲಿ ಸರ್ಕಾರದವರು ಮಾಡಿರುವ ನಿಶ್ಚಯವೂ ಅದರ ಸ್ವರೂಪವೂ ಕೂಡ ಅದರಲ್ಲಿ ತಿಳಿಯಿಸಲ್ಪಟ್ಟಿತು. ಹೇಗೆಂದರೆ—೨ ಮತ್ತೂ ೩ ನೆ ತರಗತಿಯ ವ್ಯಾಜ್ಯಗಳನ್ನು ವಿಚಾರಮಾಡುವುದಕ್ಕಾಗಿ ೨ ಅಥವಾ ೩ ತಾಲ್ಲೂಕುಗಳಿಗೆ ಸೇರಿದಂತೆ ಮುನ್ಸೀಫ್ ಅಂತಸ್ತಿಗೆ ಸಮನಾದ ಒಬ್ಬೊಬ್ಬ ಸ್ಪೇಷಲ್ ಮ್ಯಾಜಿಸ್ಟ್ರೇಟರನ್ನೂ, ೧ ನೆ ತರಗತಿಯ ವ್ಯಾಜ್ಯಗಳ ವಿಚಾರಣೆಗಾಗಿ ಪ್ರತಿಯೊಂದು ಡಿಸ್ಟ್ರಿಕ್ಟು ಮುಖ್ಯಪಟ್ಟಣದಲ್ಲಿ ಸಬ್‌ಜಡ್ಜ್ ಅಂತಸ್ತಿನ ಒಬ್ಬೊಬ್ಬ ಮ್ಯಾಜಿಸ್ಟ್ರೇಟರನ್ನೂ ನಿಯಮಿಸುವರು. ಈ ಸ್ಪೆಷಲ್ ಮ್ಯಾಜಿಸ್ಟ್ರೇಟರೆಲ್ಲಾ ಜ್ಯುಡಿಸಿಯಲ್ ಶಾಖೆಯ ಒಂದು ಪ್ರತ್ಯೇಕ ಶಾಖೆಗೆ ಸೇರಿದವರಾಗಿ ಮಾಡಲ್ಪಡುವರು. ಇನ್ನು ಮುಂದಕ್ಕೆ ಸಬ್‌ಡಿವಿಜನಾಫೀಸರುಗಳೂ ತಾ|| ಅಮಲ್ದಾರರುಗಳೂ ಸಹ ಕ್ರಿಮಿನಲ್ ವಿವಾದಗಳನ್ನು ವಿಚಾರಮಾಡುವವರಾಗಿರುವುದಿಲ್ಲ. ರೆವಿನ್ಯೂ ಮೊದಲಾದ ಇತರ ಕಾರ್ಯಭಾರಗಳನ್ನು ಮಾತ್ರ ನಿರ್ವಹಿಸುತ್ತಿರುವರು. ಅವರೂ ಉದ್ಯೋಗಪ್ರಯುಕ್ತರಾದ ಮ್ಯಾಜಿಸ್ಟ್ರೇಟರಾಗಿದ್ದುಕೊಂಡು, ಅತ್ಯಾವಶ್ಯಕತೆ ಬಿದ್ದ ಸಮಯದಲ್ಲಿ ಮಾತ್ರ ಪೊಲೀಸ್ ಅಧಿಕಾರಗಳನ್ನು ಸಾಗಿಸುವರು. ಆದರೆ ಡಿ|| ಕಮಿಷನರುಗಳಿಗೆ ಮಾತ್ರ ಎಂದಿನಂತೆ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಇದ್ದೇ ಇರುವುವು. ಈ ತೆರನಾದ ಏರ್ಪಾಟನ್ನು ಈ ಮುಂದಿನ ವರ್ಷದಲ್ಲಿ ೨ ಡಿಸ್ಟ್ರಿಕ್ಟುಗಳೊಳಗೆ ವ್ಯವಹಾರಕ್ಕೆ ತಂದು ಪರೀಕ್ಷೆಮಾಡಿ, ಬಹುಶಃ ಅದರಾಚೆ ವರ್ಷದಿಂದ ಉಳಿದ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ವ್ಯವಹಾರಕ್ಕೆ ತರುವವರಾಗಿರುವರು. ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಿಗೂ ಈ ಹೊಸ ಏರ್ಪಾಟನ್ನು ವ್ಯವಹಾರಕ್ಕೆ ತಂದರೆ ೧೫೫೦೦೦ ರೂ. ಗಳ ವೆಚ್ಚವು ಹೆಚ್ಚಾಗುವುದಂತೆ. ಅದರೂ ಚಿಂತೆಯಿಲ್ಲ. ಈ ಏರ್ಪಾಟನ್ನು ಈಗಲಾದರೂ ಸರ್ಕಾರದವರು ವ್ಯವಹರಣೆಗೆ ತರುವಂತಾದುದು ಪ್ರಜೆಗಳಿಗೆ ಸಂತೋಷವನ್ನುಂಟುಮಾಡತಕ್ಕುದೆಂಬುದಕ್ಕೆ ಸಂಶಯವಿಲ್ಲ. ಏಕೆಂದರೆ ಇದರಿಂದ ಕ್ರಿಮಿನಲ್ ವ್ಯಾಜ್ಯಗಳು ಬೇಗಬೇಗನೆ ಇತ್ಯರ್ಥವಾಗುವುದಕ್ಕೂ, ರೆವಿನ್ಯೂ ಕಾರ್ಯಭಾರಗಳು ತಡವಿಲ್ಲದೆ ಸಾಗಿಹೋಗುವುದಕ್ಕೂ ತನ್ಮೂಲಕ ಪ್ರಜೆಗಳ ಎಷ್ಟೋ ಕಷ್ಟನಷ್ಟಗಳು ತಪ್ಪುವುದಕ್ಕೂ ಮಾರ್ಗವಾಗುತ್ತದೆ. ಮಲೆನಾಡಿನ ಅಭಿವೃದ್ಧಿ ಕಾರ್ಯಗಳಿಗೆ ವರ್ಷೆವರ್ಷೆ ಕೊಡುತ್ತಿದ್ದ ೧|| ಲಕ್ಷ ರೂ. ಗಳನ್ನು ೨ ಲಕ್ಷಕ್ಕೆ ಹೆಚ್ಚಿಸಿ, ಇನ್ನು ೫ ವರ್ಷಗಳವರೆಗೂ ಅದನ್ನು ನಡೆಯಿಸಿಕೊಂಡು ಹೋಗುವುದಾಗಿ ಸರ್ಕಾರದವರು ನಿಶ್ಚಯಿಸಿರುವುದನ್ನು ದಿವಾನರು ಅಪ್ಪಣೆ ಕೊಡಿಸಿ. ಕಟ್ಟಕಡೆಗೆ ಈ ಸಂಸ್ಥಾನದ ಪ್ರಜೆಗಳು ಮಾರ್ಗಪ್ರದರ್ಶನ ಮಾಡಿಕೊಟ್ಟರೆ ಅವನ್ನು ಬಿಡದೆ ಅನುಸರಿಸುವಲ್ಲಿ ಎಷ್ಟು ತತ್ಪರರಾಗಿದ್ದಾರೆಂಬುದನ್ನು, ವಿದ್ಯಾಪ್ರಸಾರ ಕುತೂಹಲ, ಧರ್ಮಕಾರ್ಯಸಕ್ತಿ, ಸಂಪದಭ್ಯುದಯ ಚಿಂತನೆಗಳು ಪ್ರಜೆಗಳಲ್ಲಿ ಹೆಚ್ಚುತ್ತಿರುವುದೆಂಬುದಾಗಿ ತಮ್ಮ ಸಂಚಾರಕಾಲದಲ್ಲಿ ಕಣ್ಣಾರ ಕಂಡು ಅದನ್ನು ಕೊಂಡಾಡಿರುವುದಲ್ಲದೆ, ಕೊನೆಗೆ ೨ ಮುಖ್ಯ ವಿಷಯಗಳನ್ನು ವಿವರಿಸಿ ದೇಶೀಯರನ್ನು ಆನಂದಪಡಿಸಿದ್ದಾರೆ. ಅವಾವುವೆಂದರೆ—ಈ ದೇಶದಲ್ಲಿ ವ್ಯವಹಾರದಲ್ಲಿರುವ ಮುದ್ರಣ ಶಾಸನವನ್ನು ಎಂದಾದರೂ ಉಪಯೋಗಿಸಬೇಕಾಗಿ ಬಂದರೂ, ಅದಕ್ಕೆ ಪೂರ್ವವೇ ಅಪರಾಧಸ್ಥರನ್ನು ಜ್ಯುಡಿಸಿಯಲ್ ವಿಚಾರಣೆಗೆ ಗುರಿಪಡಿಸಿ ತದನಂತರ ಶಾಸನದ ದಂಡಕ್ಕೆ ಬದ್ಧರನ್ನಾಗಿ ಮಾಡುವುವೆಂಬುದೊಂದು. ಈ ಶಾಸನವನ್ನೇ ತೆಗೆದುಹಾಕಲಾಗದಿದ್ದರೆ ಈ ಮೇಲಿನಂತಹ ಸೌಲಭ್ಯವನ್ನಾದರೂ ಕಲ್ಪಿಸಿಕೊಡಬೇಕೆಂದು ಭರತಖಂಡದ ದೇಶಾಭಿಮಾನಿಗಳು ಎಷ್ಟೋ ವಿಧವಾಗಿ ಪ್ರಾರ್ಥಿಸುತ್ತಿದ್ದರೂ ಆಂಗ್ಲ ಪ್ರಭುತ್ವದವರು ಮಾಡಿಕೊಟ್ಟಿರುವುದಿಲ್ಲ. ನಮ್ಮ ಸಂಸ್ಥಾನದಲ್ಲಿ ಮುದ್ರಣ ಶಾಸನದ ಪ್ರಯೋಗಕ್ಕೇ ಎಡೆಯಿಲ್ಲವಾಗಿದೆ. ಆದರೂ ಇಂಥ ಅಭಯದಾನವನ್ನು ಸರ್ಕಾರದವರು ಮಾಡಿದುದು ಶ್ಲಾಘನೀಯವಾಗಿದೆ. ಮತ್ತೊಂದು ವಿಷಯವಾವುದೆಂದರೆ—ಈ ಸಭೆಯ ರಚನೆಯ ವಿಧಾನವನ್ನೂ ನಡವಳಿಕೆಯ ಕ್ರಮಗಳನ್ನೂ ಇನ್ನಷ್ಟು ಉತ್ತಮ ಫಲಪ್ರದವಾಗುವಂತೆ ಮಾಡುವುದಕ್ಕಾಗಿ, ಈ ಸಭಾಸಭಿಕರ ಕೆಲಸವು ಬರಿಯ ಅರಿಕೆಯನ್ನು ಮಾಡುವುದೊಂದೇ ಆಗಿದೆಯೆಂಬ ತಿಳವಳಿಕೆಯನ್ನು ತಪ್ಪಿಸಿ, ಪ್ರಜಾಹಿತಕರವಾದ ಯಾವ ವಿಷಯವಾಗಿಯಾದರೂ ಪ್ರಶ್ನೆಗಳನ್ನು ಮಾಡಿ ಚರ್ಚಿಸತಕ್ಕ ಅಧಿಕಾರವೂ ಕೂಡ ಈ ಸಭೆಗೆ ಉಂಟೆಂದು ನಿಸ್ಸಂಶಯವಾದ ಅಪ್ಪಣೆಯನ್ನು ಕೊಡಿಸಿರುವರು. ಮತ್ತೂ ಸಭೆಗೆ ಸಭಿಕರಾಗಿ ಬರತಕ್ಕವರ ಮತ್ತೂ ಸಭಿಕರನ್ನು ಆರಿಸತಕ್ಕ ಜನರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ಇದುವರೆಗಿದ್ದ ಅರ್ಹತೆಯ ನಿಬಂಧನೆಗಳನ್ನು ಇನ್ನಷ್ಟು ಸಡಿಲಮಾಡಿ ತಗ್ಗಿಸಿರುವರು. ಈ ಹೊಸ ಏರ್ಪಾಟಿನ ಪ್ರಕಾರ ಇನ್ನು ಮುಂದೆ ಸಭೆಗೆ ಪ್ರಜಾಪ್ರತಿನಿಧಿಗಳಾಗಿ ಬರತಕ್ಕವರೂ ಅಂಥವರನ್ನು ಆರಿಸಿ ಕಳುಹಿಸತಕ್ಕ ಜನರೂ ಸಹ ೫೦ ರೂ. ರೆವಿನ್ಯೂ ಕಂದಾಯವನ್ನಾಗಲೀ ೧೦ ರೂ. ಮೊಹತರ್ಫಾ ತೆರುಗೆಯನ್ನಾಗಲೀ ಕೊಡತಕ್ಕವರಾಗಿದ್ದರೆ ಸಾಕಾಗಿರುತ್ತದೆ. ಇದರಿಂದ ಇನ್ನೂ ಅನೇಕಾನೇಕ ಜನರಿಗೆ ಪ್ರತಿನಿಧಿಗಳಾಗಿ ಬರಲೂ ಓಟುಗಳನ್ನು ಕೊಡುವವರಾಗುವುದಕ್ಕೂ ಅವಕಾಶ ಸಿಕ್ಕಿದಂತಾಯಿತು. ಈ ಹೊಸ ಏರ್ಪಾಟಿನ ಅನುಕೂಲ್ಯವನ್ನುಪಯೋಗಿಸಿಕೊಂಡು ಮುಂದಣ ಸಭಾಸದರ ಆರಿಸುವಿಕೆಯು ನಡೆಯುವಂತೆ ಮಾಡುವುದಕ್ಕಾಗಿ, ಸದ್ಯದಲ್ಲಿ ಆಗಬೇಕಾಗಿದ್ದ ಆರಿಸುವಿಕೆಯನ್ನು ಮುಂದಣ ವರ್ಷದವರೆಗೆ ನಿಲ್ಲಿಸಿಬಿಟ್ಟಿರುವರು. ಎಂದರೆ ಈಗ ಸಭಿಕರಾಗಿರುವವರೇ ಇನ್ನೊಂದು ವರ್ಷಕಾಲದವರೆಗೆ ಇರಬಹುದಾಯಿತು. ಅನಂತರ ಹೊಸ "ಚುನಾವಣೆಯು" ನಡೆಯುವುದು. ಈ ಮೇಲೆ ಕಂಡ ಉದಾರವಾದ ಏರ್ಪಾಟುಗಳನ್ನು ಶ್ರೀಮನ್ಮಹಾರಾಜರವರು ಮಾಡಿಕೊಟ್ಟುದು ಪ್ರಜೆಗಳಿಗೆ ಹಿತಕರವಾಗಿಯೂ ಸಂತೋಷಪ್ರದವಾಗಿಯೂ ಇರುತ್ತದೆ. ಸಭೆಯ ಉಳಿದ ನಡವಳಿಕೆಗಳನ್ನು ಮುಂದಣ ಸಂಚಿಕೆಯಲ್ಲಿ ತಿಳಿಯಿಸುವೆವು.

ಒಳದೇಶದ ವೃತ್ತಾಂತಗಳು.

ಮ|| ಡಿ. ಶ್ರೀನಿವಾಸರಾವ್ ಬಿ.ಎ., ಯವರು ಗುಂಡ್ಲುಪೇಟೆ ತಾ|| ಆಕ್ಟಿಂಗ್ ಅಮಲ್ದಾರರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಳೆದವಾರ ರಾಜಧಾನಿಯಲ್ಲೂ ಸುತ್ತುಮುತ್ತಣ ಸ್ಥಳಗಳಲ್ಲೂ ಹದವಾದ ಮಳೆಗಳಾಗಿರುತ್ತವೆ. ಜೋಳದ ಬಿತ್ತನೆಯು ನಡೆಯುತ್ತಿದೆ.

ರಾಜಧಾನಿಯಲ್ಲಿ ಸ್ಥಾಪಿಸಲ್ಪಡಲಿಕ್ಕಿರುವ ಲಾ ಕಾಲೇಜಿಗೆ ರಾ|| ಬ|| ಎಂ. ಸಿ. ರಂಗಯ್ಯಂಗಾರರು ಪ್ರಿನ್ಸಿಪಾಲರಾಗಿ ನಿಯಮಿಸಲ್ಪಡುವುದರಲ್ಲಿದ್ದಾರೆಂದು ಕೇಳುತ್ತೇವೆ.

ಮ|| ಎಸ್. ಗರಳಪುರಿಶಾಸ್ತ್ರಿ, ಬಿ.ಎ., ಎಂ.ಎಸ್.ಸಿ., ಎಫ್.ಸಿ.ಎಸ್., ರವರು ಕೈಗಾರಿಕೆ ಮತ್ತು ವಾಣಿಜ್ಯಶಾಖೆಯಲ್ಲಿ ಇಂಡಸ್ಟ್ರಿಯಲ್ ಕೆಮಿಸ್ಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಸಬ್ ರಿಜಿಸ್ಟ್ರಾರುಗಳಾದ ಮ|| ಕೆ. ದೊರೆಸಾಮಯ್ಯಂಗಾರರು ಕುಣಿಗಲಿನಿಂದ ನೆಲಮಂಗಲಕ್ಕೂ, ಮ|| ಬಿ. ನರಸಿಂಹಯ್ಯಂಗಾರರು ನೆಲಮಂಗಲದಿಂದ ಕುಣಿಗಲಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಮದ್ರಾಸಿನ ಮೈಲಾಪೂರಿನಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಒಂದು ಮನೋಹರವಾದ ಬಂಗಲೆಯನ್ನು ರಾಜಬಂಧುವರ್ಗದವರು ಹೋದಾಗ ಇಳಿದುಕೊಳ್ಳಲು ಅನುಕೂಲಿಸುವಂತೆ ಕಟ್ಟಿಸುವವರಾಗಿದ್ದಾರೆಂದು ಕೇಳುತ್ತೇವೆ.

ಪ್ರಕಟವಾಗಿರುವ ಬಡ್ಜೆಟ್ಟಿನ ಪ್ರಕಾರ ನಮ್ಮ ಸಂಸ್ಥಾನದ ಮುಂದಣ ವರ್ಷದ ರಾಜಾದಾಯವು ೩೯೭೭೭೦೦೦ರೂ. ವ್ಯಯವು ೩೯೦೪೮೦೦೦ ರೂ. ಗಳೆಂದೂ, ಒಟ್ಟು ವೆಚ್ಚಕ್ಕಾಗಿ ೩೬೩೪೧೦೦೦ ರೂ. ಗಳನ್ನು ನಿಗದಿಮಾಡಿರುವರೆಂದೂ ವ್ಯಕ್ತವಾಗುತ್ತದೆ.

ನಮ್ಮ ಸಂಸ್ಥಾನದ ಪರಸ್ಪರ ಸಹಾಯಕಸಂಘಗಳಲ್ಲಿ ಸಾಲ ಕೊಡಬೇಕಾದರೆ ಆಯಾ ಕಮಿಟಿ ಮೆಂಬರುಗಳಿಗೆ ಕೊಡಲ್ಪಡಬೇಕಾದ ಸಾಲವು ಸಾಮಾನ್ಯವಾಗಿ ಸೇಕಡಾ ೨೫ ಕ್ಕೆ ಮೀರಿರಕೂಡದೆಂದೂ ತಕ್ಕ ಕಾರಣವಿದ್ದರೆ ರಿಜಿಸ್ಟ್ರಾರರವರು ಈ ವಿಧಿಯನ್ನು ಯಾವ ಸಂಘಕ್ಕಾದರೂ ವ್ಯತ್ಯಾಸಗೊಳಿಸಿಕೊಡಬಹುದೆಂದೂ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಧಾರವಾಡದಲ್ಲಿ ಬರುವ ಮೇ ತಾ|| ೪-೫-೬ ರಲ್ಲಿ ಕೂಡಿಸಬೇಕೆಂದು ನಿರ್ಣಯವಾಗಿದ್ದ ಕರ್ಣಾಟಕ ಸಾಹಿತ್ಯಸಮ್ಮೇಳನವನ್ನು ದಿಲ್ಲಿ ಮಹಾಸಭೆಯ ಕಾರಣದಿಂದ ಇನ್ನಷ್ಟು ಮುಂದಕ್ಕೆ ಒತ್ತಿಡಬೇಕಾಗಿ ಬಂದು ಅದರ ಪರ್ಯಾಲೋಚನೆಯು ನಡೆಯುತ್ತಿರುವುದೆಂದು ಕರ್ನಾಟಕವೃತ್ತವು ಹೇಳುತ್ತದೆ. ಸಭೆಯ ಸ್ವಾಗತಸಂಘಾಧ್ಯಕ್ಷತೆಯನ್ನು ಶ್ರೀಮಂತ ಸರ್ದಾರ್ ಹಂದಿಗನೂರು ದೇಸಾಯರು ವಹಿಸುವರು. ಸಭಾಧ್ಯಕ್ಷತೆಯು ರಾ|| ಬ|| ಪ್ರಾಕ್ತನವಿಮರ್ಶನ ವಿಚಕ್ಷಣ ಆರ್. ನರಸಿಂಹಾಚಾರ್ಯರಿಂದ ಸ್ವೀಕರಿಸಲ್ಪಡುವುದು.

	21	ಭಾನು	ಏಕಾದ	56-30	ಮಘಾ	21-45	9
0.0	22	1 ಸೋಮ	ದ್ವಾದಶಿ	60	ಪುಬ್ಬ	27-45	10
ನ್ನು ಲೂ ಬು	23	2 ಮಂಗಳ	ದ್ವಾದಶಿ	1-49	ಉಬ್ಬ	34-17	11
	24	3 ಬುಧ	ತ್ರಯೋ	6-58	ಹಸ	40-55	

ಹಿಂದುಳಿದವರ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಕೊಡುವ ವೇತನಗಳಿಗೆ ಗೊತ್ತಾಗಿರುವ ೧ ಲಕ್ಷ ರೂ. ಗಳನ್ನು ೧ ಲಕ್ಷದಿಂದ ೧|| ಲಕ್ಷಕ್ಕೆ ಹೆಚ್ಚಿಸಬೇಕೆಂದೂ ಪಂಚಮರ ವೇತನಗಳಿಗಾಗಿ ಪ್ರತ್ಯೇಕವಾಗಿ ೧ ಲಕ್ಷವನ್ನು ಕೊಡಬೇಕೆಂದೂ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸಶಾಖಾ ಕಮಿಟಿಯವರು ಸರ್ಕಾರಕ್ಕೆ ಬರೆದಿದ್ದರು. ಆದರೆ ಸರ್ಕಾರದವರು ಅದಕ್ಕೆ ಒಪ್ಪಿದಂತೆ ಕಾಣುವುದಿಲ್ಲ. ೧ ಲಕ್ಷ ರೂ. ಗಳ ವೇತನಗಳನ್ನೇ ಹಿಂದುಳಿದವರಿಗೆ ನಿಗದಿಮಾಡಿ, ಪಂಚಮರಿಗೆ ಮಾತ್ರ ಪ್ರತ್ಯೇಕವಾಗಿ ೫೦ ಸಾವಿರ ರೂ. ಗಳನ್ನು ವಿನಿಯೋಗಿಸಲು ಬಡ್ಜೆಟ್ಟಿನಲ್ಲಿ ಕಾಣಿಸಲ್ಪಟ್ಟಿದೆ. ಇದು ಅನ್ಯಾಯ. ಸಾಮಾನ್ಯಜನ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಈ ವೇತನಗಳ ಸಂಖ್ಯೆಯನ್ನು ಹೆಚ್ಚಿಸಬೇಕಾದ ಅವಶ್ಯಕತೆಯು ಬಹಳವಾಗಿದೆ. ಅದನ್ನು ಗೌರ್ನಮೆಂಟಿನವರು ಮತ್ತೊಮ್ಮೆ ಪರ್ಯಾಲೋಚಿಸಿ, ವಿದ್ಯಾಭ್ಯಾಸ ಕಮಿಟಿಯವರ ಸೂಚನೆಯನ್ನು ನೆರವೇರಿಸಿಕೊಡುವುದು ಧರ್ಮವಾಗಿದೆ.

ತಿಪಟೂರಿನ ಮ|| ಗುರುಪಾದಪ್ಪನವರ ಕೆಂಚೋರಪ್ಪಯ್ಯನವರು ಕಳೆದ ತಾ|| ೧೮ ರಲ್ಲಿ ಶಿವೈಕ್ಯರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ವರು ಆ ಊರಿನ ವೀರಶೈವ ಶ್ರೀಮಂತರಲ್ಲಿ ತಿಲಕಪ್ರಾಯರಾಗಿದ್ದುದಲ್ಲದೆ ಶಾಭಿಮಾನಿಗಳಾಗಿಯೂ ಅಲ್ಲಿಯ ವೀರಶೈವಾನಂದಾಶ್ರಮಕ್ಕೂ ವಿದ್ಯಾರ್ಥಿ ಸಹಾಯದ ಫಂಡಿಗೂ ೩೦ ಸಾವಿರ ರೂ. ಗಳ ಮೇಲೆಯೇ ಧನಸಹಾ ಮಾಡಿದ್ದರು. ಹೀಗೆಯೇ ಅನೇಕ ಧರ್ಮಕಾರ್ಯಗಳಲ್ಲಿ ತತ್ಪರರಾಗಿದ್ದರು. ಜಾಪ್ರತಿನಿಧಿಸಭೆ, ಡಿಸ್ಟ್ರಿಕ್ಟುಬೋರ್ಡು, ಮ್ಯು|| ಬೋರ್ಡು ಮೊದ ದುವುಗಳಲ್ಲಿ ಸಭಿಕರಾಗಿ ದೇಶಸೇವೆಯನ್ನು ಮಾಡುತ್ತ ಪ್ರಜಾಪ್ರಿಯರಾ ಯೂ, ನಿಗರ್ವಶಿಖಾಮಣಿಗಳಾಗಿಯೂ ಇದ್ದರು. ಕಳೆದ ವರ್ಷ ದಸರಾ ರ್ಬಾರಿನಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಇವರ ಧರ್ಮಬುದ್ಧಿಗಾಗಿ ಟ್ಟಿ, ಕಿಲ್ಲತ್ತನ್ನು ದಯಪಾಲಿಸಿದ್ದರು. ಕಳೆದ ವೀರಶೈವ ಮಹಾಸಭೆ ಲ್ಲಿ ನಮ್ಮ ಜಗದ್ಗುರುಗಳವರು ಇವರಿಗೆ ಒಂದು ಭಂಗಾರದ ಪದಕವನ್ನು ರ್ವದಿಸಿದ್ದರು. ಇಂಥ ಗುಣಾಢ್ಯರು ಗತಿಸಿದುದು ಸಮಾಜಕ್ಕೇ ಅಲ್ಲದೆ ಶಕ್ಕೇ ನಷ್ಟಕರವು. ಇದರಿಂದ ಅವರ ಪುತ್ರರುಗಳೇ ಮೊದಲಾದ ಕುಟುಂ ದವರಿಗೆಲ್ಲಾ ಉಂಟಾದ ವಿಯೋಗದುಃಖಕ್ಕಾಗಿ ನಾವು ಅತ್ಯಂತ ವಿಷಾದಿ ವುದಲ್ಲದೆ ಈ ಮೂಲಕ ನಮ್ಮ ಸಾನುತಾಪವನ್ನು ನಿವೇದಿಸುತ್ತೇವೆ.

ಯುದ್ಧವಾರ್ತೆಯು.

ಜರ್ಮನರು ಮತ್ತೊಂದು ಕಟ್ಟಕಡೆಯ ಮಹಾಯುದ್ಧವನ್ನು ಭೀಕರವಾಗಿ ಸಾಗಿಸಿ ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳುವುದರಲ್ಲಿದ್ದಾರೆಂದು ವಾರ್ತೆಗಳು ಬರುತ್ತಿವೆ. ಈ ಮಧ್ಯೆ ಅವರ ಮುತ್ತಿಗೆಗಳು ಸ್ವಲ್ಪ ಶಾಂತವಾಗಿರುವುದೇ ಇದಕ್ಕೆ ಸೂಚನೆಯೆಂದು ಹೇಳಲ್ಪಡುತ್ತಿದೆ. ಈಗ ಅವರು ಗಿವೆಂಚಿ, ಲೋಬೆಕ್ಕುಗಳ ಪೂರ್ವಭಾಗದಲ್ಲಿ ಯುದ್ಧವನ್ನು ಹೂಡಿದ್ದಾರೆ. ಅಲ್ಲೂ ಅವರಿಗೆ ವಿಶೇಷ ಲಾಭವಾಗಿಲ್ಲ. ಲಾಬಸ್ಸಿ ಕಾಲ್ವೆಗೆ ಅವರು ಸೇತುವನ್ನು ಕಟ್ಟಿಕೊಂಡರು. ಆದರೆ ಅದನ್ನು ದಾಟಿಬಂದ ಶತ್ರುಗಳೆಲ್ಲರೂ ಸೆರೆಹಿಡಿಯಲ್ಪಟ್ಟರು. ಇಲ್ಲಿ ಇಂಗ್ಲೀಷರ ಸೇನಾಪಙ್ಕ್ತಿಯು ದೃಢತರವಾಗಿದೆ. ಇಲ್ಲಿಗೆ ಫ್ರೆಂಚ್ ಸೇನೆಯೂ ಸಹಾಯವಾಗಿ ಬಂದಿದೆ. ಬಹುದಿನದಿಂದ ಕಾಪಾಡಿಕೊಂಡು ಬಂದಿದ್ದ ಇಪ್ರೆಸ್ ಎಂಬ ಬಲವತ್ತರ ಸ್ಥಾನವು ಶತ್ರುಗಳ ಅಧೀನವಾದುದು ಮಿತ್ರಮಂಡಲಿಗೆ ವಿಷಾದಕರವೂ ಶತ್ರುಗಳಿಗೆ ವಿಶೇಷೋತ್ಸಾಹ ಜನಕವೂ ಆಯಿತು. ಆದರೂ ಸಮುದ್ರತೀರಕ್ಕೂ ಅಲ್ಲಿಗೂ ಮಧ್ಯದಲ್ಲಿರುವ ಮುಖ್ಯವಾದ ಗುಡ್ಡಗಳು ಶತ್ರುಗಳ ವಶವಾಗಲಿಲ್ಲ. ಗಿವೆಂಚಿಯೂ ಅವರ ವಶವಾಗಲಿಲ್ಲ. ಹಜೆಬ್ರೂಕನ್ನೂ ಅವರು ಸಮೀಪಿಸಲಿಲ್ಲ. ಹೇಜಿಬ್ರೋಕು ವಶವಾದಲ್ಲದೆ ಮೇಲಣ ಗುಡ್ಡಗಳು ವಶವಾಗಲಾರವು. ಉತ್ತರ ರಣರಂಗದಲ್ಲಿ ಜರ್ಮನರಿಗೆ ಅಪರಿಮಿತ ನಷ್ಟವಾಗಿದೆ. ಮೆಸಿಲ್ಯೂಲಿಗೆ ಪಶ್ಚಿಮದಲ್ಲಿರುವ ಮೇಟೇರಾಸನ್ನು ದಾಟಿ ಹೋಗಬೇಕೆಂದು ಅವರು ಯತ್ನಿಸುತ್ತಿದ್ದಾರೆ. ಈ ಪಶ್ಚಿಮರಂಗದಲ್ಲಿ ಜರ್ಮನರಿಗೆ ೩೪೦ ಪಟಾಲಮುಗಳಿವೆ. ಇನ್ನೂ ಇತರ ರಂಗಗಳಿಂದ ಅವರು ೭೦ ಪಟಾಲಮುಗಳನ್ನು ತರಬಲ್ಲರೆಂದು ಹೇಳಲ್ಪಡುತ್ತಿದೆ. ಅದುಕಾರಣ ಇನ್ನೂ ಬೇಸಗೆ ಮುಗಿಯುವುದರೊಳಗೆ ಬಹಳ ಘೋರವಾದ ಯುದ್ಧಗಳು ನಡೆಯುವುವೆಂಬುದು ಸಿದ್ಧ. ಮಿತ್ರಮಂಡಲಿಯವರು ಸ್ಥಾನಗಳನ್ನು ಕಳೆದುಕೊಂಡರೂ ತಮ್ಮ ಸೈನ್ಯವಿನಾಶಮಾಡಿಕೊಳ್ಳದೆ ಜಾಗರೂಕತೆಯಿಂದ ಆತ್ಮರಕ್ಷಣೆ ಮಾಡಿಕೊಳ್ಳುತ್ತಿದ್ದಾರೆ. ಶತ್ರುಗಳು ಹಮ್ಮಿನಿಂದ ಬಿದ್ದುಬಿದ್ದು ಸೈನ್ಯವನ್ನು ಕುಗ್ಗಿಸಿಕೊಂಡಾದಬಳಿಕ ಮಿತ್ರಮಂಡಲಿಯವರು ತಮ್ಮ ಮುತ್ತಿಗೆಗಳನ್ನು ಆರಂಭಿಸಬೇಕೆಂದು ಸಂಕಲ್ಪಿಸಿದ್ದಾರೆ. ಹಾಗಲ್ಲದೆ ಈಗಣ ಸ್ಥಿತಿಯಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸುವುದು ಇವರಿಗೆ ಶಕ್ಯವಾಗಿಲ್ಲ. ಈಗ ಪಶ್ಚಿಮರಂಗದಲ್ಲಿ ಇಂಗ್ಲೀಷು, ಫ್ರೆಂಚು, ಅಮೇರಿಕಾ, ಪೋರ್ಚುಗೀಸು, ಬೆಲ್ಜಿಯಂ, ಇಟಲಿ-ಇವಿಷ್ಟು ಸೈನ್ಯಗಳೂ ಸೇರಿ ಶತ್ರುಗಳನ್ನು ಇದಿರಿಸುತ್ತಿವೆ. ಮಿತ್ರಮಂಡಲಿಯವರು ಸುಮ್ಮನೆ ಹಿಂಗಾಲು ತೆಗೆದು ಹೋಗುತ್ತಿರುವುದಿಲ್ಲ. ಅಡಿಗಡಿಗೆ ಮಹಾಯುದ್ಧವನ್ನು ಮಾಡಿ ಶತ್ರುಗಳಿಗೆ ವಿಪರೀತ ನಷ್ಟವನ್ನುಂಟುಮಾಡುತ್ತಲೂ, ಅವರ ಕಡೆಯ ಅನೇಕ ಸೈನ್ಯವನ್ನು ಸೆರೆಹಿಡಿಯುತ್ತಲೂ ಇದ್ದಾರೆ. ಶತ್ರುಗಳ ಸೈನ್ಯದಲ್ಲಿ ಬಹಳ ದುರವಸ್ಥೆಗಳು ಪ್ರಾಪ್ತವಾಗುವಂತೆ ಮಾಡಿದ್ದಾರೆ. ಅವರ ಹಲವು ಸೈನ್ಯಗಳು ರಣರಂಗದಲ್ಲಿ ಸತ್ತುಬಿದ್ದಿರುವ ಕುದುರೆಗಳ ಮಾಂಸವನ್ನೇ ತಿನ್ನುತ್ತಿವೆ. ಇನ್ನು ೩೦ ಲಕ್ಷ ಸೈನ್ಯವನ್ನು ಅವರು ಬಲಿಕೊಟ್ಟರೂ ಅವರ ಉದ್ದೇಶವನ್ನು ಈ ರಂಗದಲ್ಲಿ ಸಾಧಿಸಿಕೊಳ್ಳುವುದು ಕಷ್ಟವೆಂದು ಯುದ್ಧಕಲಾಭಿಜ್ಞರು ಊಹಿಸುತ್ತಿದ್ದಾರೆ. ಅಪಜಯದ ಭಯವು ಲೇಶವೂ ಇಲ್ಲದೆ ಇನ್ನು ೧೮ ತಿಂಗಳವರೆಗಾದರೂ ನಾವು ಅಖಂಡವಾಗಿ ಯುದ್ಧವನ್ನು ನಡೆಯಿಸಬಲ್ಲೆವೆಂದು ಫ್ರೆಂಚರು ಕೃತನಿಶ್ಚಯರಾಗಿದ್ದಾರೆ.

ಇತರವಿಷಯಗಳು.

ತುರ್ಕಿಯವರ ಮೂರು ಯುದ್ಧನೌಕೆಗಳು ಕಪ್ಪುಸಮುದ್ರದ ರಷ್ಯನ್ ಒಡೆಸ್ಸಾರೇವಿಗೆ ಬಂದಿರುತ್ತವೆ.

ಇಟಲಿರಂಗದಲ್ಲಿ ಆಸ್ಟ್ರಿಯನ್ನರು ಭಯಂಕರ ಯುದ್ಧವನ್ನು ಇಷ್ಟರಲ್ಲೇ ನಡೆಯಿಸುವರೆಂಬ ಸೂಚನೆಗಳು ಕಾಣುತ್ತಿವೆ.

ಫಿನ್ಲಾಂಡಿನಲ್ಲಿ ಜರ್ಮನರು ಬೇರನ್ನು ಬಲವಾಗಿ ಬಿಡುತ್ತಲೂ ನೂತನ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಲೂ ಇದ್ದಾರೆ.

ಪ್ಯಾರಿಸ್‌ಪಟ್ಟಣದಮೇಲೆ ಶತ್ರುಗಳ ದೂರಗಾಮಿ ಫಿರಂಗಿಗಳ ಗುಂಡಿನೇಟುಗಳು ಆಗಾಗ್ಗ ಇನ್ನೂ ಬೀಳುತ್ತಲೇ ಇವೆ.

ಅಮೇರಿಕನ್ನರು ತಾವು ಯೋಚಿಸಿಕೊಂಡಿದ್ದುದಕ್ಕಿಂತ ಮೂರುಪಾಲು ಹೆಚ್ಚಾಗಿ ಫಿರಂಗಿಗಳನ್ನು ರಭಸದಿಂದ ನಿರ್ಮಿಸುತ್ತಿದ್ದಾರೆ.

ಫ್ರೆಂಚ್‌ರಂಗದಲ್ಲಿ ರೀಮ್ಸ್‌ನಗರವು ಶತ್ರುಗಳ ಗುಂಡಿನೇಟಿನಿಂದ ಹಾಳಾಯಿತು. ಪಟ್ಟಣವು ನಿರ್ಜನವಾಗುತ್ತಿದೆ. ಅಲ್ಲಿಯ ಮ್ಯುನ್ಸಿಪಾಲಿಟಿಯು ಪ್ಯಾರಿಸ್‌ಪಟ್ಟಣಕ್ಕೆ ಸಾಗಿಸಲ್ಪಟ್ಟಿದೆ.

ರಷ್ಯಾದಲ್ಲಿ ಅಂತಃಕಲಹಗಳು ಇನ್ನೂ ತಪ್ಪಿಲ್ಲ. ಸೋವಿಯಟ್ಟಿನ ದಳಕ್ಕೂ ಕಾರ್ನಿಲಾಫರ ಸೈನ್ಯಗಳಿಗೂ, ಅರಾಜಕರಿಗೂ ಬಾಲ್ಶೆವಿಕ್ಕರಿಗೂ ವೈಟ್‌ಗಾರ್ಡುಗಳಿಗೂ ರೆಡ್ಡುಗಾರ್ಡುಗಳಿಗೂ ಯುದ್ಧವು ನಡೆಯುತ್ತಲೇ ಇದೆ.

ಬಾಲ್ಟಿಕ್‌ಸಮುದ್ರತೀರರಾಷ್ಟ್ರಗಳನ್ನು ರಷ್ಯಾದಿಂದ ಬೇರೆಗೊಳಿಸಿ, ಅದನ್ನು ಜರ್ಮನಿಯೊಡನೆ ಮೈತ್ರಿಯುಳ್ಳ ಒಬ್ಬ ಪ್ರಭುವಿನ ಪಾಲನೆಗೊಳಿಸಬೇಕೆಂದು ಲಿವೋನಿಯಾ ಇಸ್ಥೋನಿಯಾ ರಾಜ್ಯಾಂಗಸಭೆಯವರು ತೀರ್ಮಾನಿಸಿದ್ದಾರೆ. ಇದು ತನಗೆ ಅಸಮ್ಮತವೆಂದು ಇಸ್ಥೋನಿಯಾದ ತಾತ್ಕಾಲಿಕ ಪ್ರಭುತ್ವದವರು ತಿಳಿಯಪಡಿಸಿದ್ದಾರೆ. ಇದೇ ಜರ್ಮನರ ಕುತಂತ್ರ.

ಪಾಲಿಸ್ತೈನ್ ರಂಗದಲ್ಲಿ ಜೋರ್ಡನ್ ಪ್ರಾಂತದಲ್ಲಿ ಆಸ್ಟ್ರೇಲಿಯನ್ ಸೈನಿಕರು ಶತ್ರುಗಳಿಗೆ ವಿಪರೀತ ನಷ್ಟವನ್ನುಂಟುಮಾಡಿ ಹೆಡ್ಜಾಜ್ ಲೋಹಮಾರ್ಗದಲ್ಲಿ ೫ ಮೈಲಿ ಉದ್ದದ ಭಾಗವನ್ನು ಹಾಳ್ಮಾಡಿ ೧೦೦೦ ಮಂದಿ ತುರ್ಕಿ ಸೈನಿಕರನ್ನು ಸೆರೆಹಿಡಿದರು. ರಣರಂಗದಲ್ಲಿ ೧೦೦೦ ಮಂದಿ ತುರ್ಕಿ ಸೈನಿಕರು ಸತ್ತುಬಿದ್ದರು. ಅವರು ಇತರ ನಷ್ಟವನ್ನೂ ವಿಶೇಷವಾಗಿ ಹೊಂದಿ ಹಿಮ್ಮೆಟ್ಟೋಡಿದರು.

ಸದ್ಯದಲ್ಲಿ ತನಗುಂಟಾಗಿರುವ ಜಯದಿಂದ ಜರ್ಮನರು ಉಬ್ಬಿ ಈಗ ಸಂಧಿ ಜರುಗಬೇಕಾದರೆ ಇಂಗ್ಲೀಷ್ ಫ್ರೆಂಚ್ ಪ್ರಭುತ್ವದವರು ಯುದ್ಧನಷ್ಟ ಪರಿಹಾರರೂಪವಾಗಿ ೫೦ ಲಕ್ಷ ಪೌನುಗಳನ್ನು ಕೊಡಬೇಕೆಂದೂ ಫ್ರೆಂಚರು ತಮ್ಮ ಅಧಿನಿವೇಶನಗಳಲ್ಲಿ ಕೆಲವನ್ನು ಕೊಡಬೇಕೆಂದೂ, ಇಂಗ್ಲೀಷರು ತಮ್ಮಲ್ಲಿನ ಅಪಕ್ವಪದಾರ್ಥಗಳನ್ನು ತಮಗೆ ಸಾಗಿಸಿಕೊಡಲು ಒಪ್ಪಿಕೊಳ್ಳಬೇಕೆಂದೂ ಮೊದಲಾಗಿ ತಾವುತಾವೇ ಸಂಧಿನಿಬಂಧನೆಗಳನ್ನು ಹೇಳಿಕೊಳ್ಳುತ್ತಿದ್ದಾರೆ.

ಜರ್ಮನಿಯ ಬರ್ಲಿನ್ ಪಟ್ಟಣದಲ್ಲಿ "ಜರ್ಮನ್ ಇಂಡ್ಯಾ" ಎಂಬ ಒಂದು ಸಂಘವು ಸ್ಥಾಪಿಸಲ್ಪಟ್ಟಿದೆಯಂತೆ. ಜರ್ಮನಿಗೂ ಭರತಖಂಡಕ್ಕೂ ಸಂಬಂಧವನ್ನೇರ್ಪಡಿಸಿ ಈ ದೇಶದ ವಿಷಯವಾಗಿ ಜರ್ಮನರಿಗೆ ಹೆಚ್ಚು ತಿಳುವಳಿಕೆಯನ್ನುಂಟುಮಾಡಿಕೊಡುವುದೇ ಅದರ ಉದ್ದೇಶವಂತೆ. ಆ ಸಂಘಕ್ಕೆ ಹೇರ್ ವೈರೆನ್ ಎಂಬಾತನು ಅಧ್ಯಕ್ಷನು. ಹೇರ್ ಚಂಪಕರಾಮನ್ ಪಿಳ್ಳೆಯೆಂಬುವವನು ಕಾರ್ಯದರ್ಶಿ. ಈ ಸಂಘದ ನಿಬಂಧನೆಗಳನ್ನು ನಿರ್ಧರಿಸುವುದಕ್ಕೆ ಮೂವರು ರಾಜಕೀಯ ಪ್ರತಿನಿಧಿಗಳು ೬ ಮಂದಿ ಜರ್ಮನರು ಉಳ್ಳ ಒಂದು ಉಪಸಂಘವು ಏರ್ಪಡಿಸಲ್ಪಟ್ಟಿದೆಯಂತೆ.

ಭರತಖಂಡದ ವೃತ್ತಾಂತಗಳು.

ಕಳೆದವರ್ಷ ಭರತಖಂಡದಲ್ಲಿ ೪೪೪೫೦೦ ಮಂದಿಗಳು ಹೊಸದಾಗಿ ಸೈನ್ಯಕ್ಕೆ ಸೇರಿರುವರು.

ಪಾಟಿಯಾಲಾ ಮಹಾರಾಜರು ೩ ಪದಾತಿ ದಳವನ್ನು ಕೊಡಿಸಿ ಕಳುಹಿಸಿಕೊಡುವೆನೆಂದು ವೈಸ್ರಾಯರಿಗೆ ಬಿನ್ನಯಿಸಿಕೊಂಡಿದ್ದಾರೆ.

ಕಳೆದವಾರ ಕಲ್ಕತ್ತಾದಲ್ಲಿ ಬಿರುಗಾಳಿ ಮಳೆಗಳ ಅವಾಂತರದಿಂದ ಪಟ್ಟಣವೆಲ್ಲಾ ಸ್ವಲ್ಪಹೊತ್ತು ಜಲಮಯವಾಗಿದ್ದಿತು. ಕೆಲ ಮನೆಗಳೂ ಮರಗಳೂ ಉರುಳಿದುವು.

ಗತಿಸಿದ ಡಾಕ್ಟರ್ ಸುಂದರಲಾಲ್‌ರವರಿಗೆ ಪ್ರತಿಯಾಗಿ ಕಾಶೀವಿಶ್ವವಿದ್ಯಾಲಯದ ವೈಸ್ ಛಾನ್ಸಲರ ಸ್ಥಾನಕ್ಕೆ ಮದ್ರಾಸಿನ ಸರ್. ಶಿವಸ್ವಾಮಯ್ಯರು ನಿಯಮಿಸಲ್ಪಟ್ಟಿದ್ದಾರೆ.

ಕಾಶೀಸೆಂಟರಲ್ ಹಿಂದೂಕಲಾಶಾಲೆಗೆ ಡಾಕ್ಟರ್ ಗಣೇಶಪ್ರಸಾದರವರು ಪ್ರಿನ್ಸಿಪಾಲರಾಗಿಯೂ ವಿಶ್ವವಿದ್ಯಾಲಯದ ಗಣಿತಶಾಸ್ತ್ರೋಪನ್ಯಾಸಕರಾಗಿಯೂ ನಿಯಮಿಸಲ್ಪಟ್ಟಿದ್ದಾರೆ.

ಪುಣೆಯ ಈಶ್ವರದಾಸ ಬಾಲಮುಕುಂದದಾಸ್‌ರವರು ಕ್ರೈಸ್ತಮತಕ್ಕೆ ಸೇರಿದ್ದು ಮತ್ತೆ ಬೊಂಬಾಯಿ ಹಿಂದೂಮತಬೋಧಕಸಂಘದವರಿಂದ ಪ್ರಾಯಶ್ಚಿತ್ತಗೊಂಡು ಹಿಂದೂಮತಕ್ಕೆ ಸೇರಿಕೊಂಡರು.

ಇದಕ್ಕೆ ಮುಂಚೆ ಸ್ವರಾಜ್ಯರಾಯಭಾರಿಗಳಾಗಿ ಸೀಮೆಗೆ ಹೋಗುತ್ತಿದ್ದ ೧ ನೆ ಗುಂಪಿನ ಅಬ್ದುಲ್‌ಹುಸೇನ್, ಅಯ್ಯರ್ ಮೊದಲಾದವರು ಜಿಬ್ರಾಲ್ಟರಿನಲ್ಲಿ ತಡೆಯಲ್ಪಟ್ಟುದರಿಂದ ಅವರುಗಳು ಹಿಂದಿರಿಗಿ ಬರುವುದರಲ್ಲಿದ್ದಾರೆ.

ಪಾರ್ಸಿ ಶ್ರೀಮಂತರಾದ ಸರ್ ದಿನ್ಷಾ ಪೆಟಿಟ್‌ರವರ ಕುಮಾರಿ ಶ್ರೀಮತಿ ರತನ್‌ಬಾಯಿಯವರು ಕಳೆದ ತಾ|| ೧೮ ರಲ್ಲಿ ಮಹಮ್ಮದೀಯ ಮತವನ್ನು ಸ್ವೀಕರಿಸಿ ತಾ|| ೧೯ ರಲ್ಲಿ ಆ|| ಜಿನ್ನಾರವರನ್ನು ಮದುವೆಯಾದರು.

ಆ|| ಡಾಕ್ಟರ್ ತೇಜಬಹದ್ದೂರ್ ಸಪ್ರು, ಆ|| ಸಿ. ವೈ. ಚಿಂತಾಮಣಿ, ರಾಯಿಕೃಷ್ಣಾಜಿ, ಮೆಹತಾಕೃಷ್ಣರಾಮ್, ಡಾಕ್ಟರ್, ಸುಬ್ಬರಾಂ— ಇವರುಗಳು ಸ್ವರಾಜ್ಯಸಮಿತಿಯ ಸಭ್ಯತ್ವಕ್ಕೆ ರಾಜೀನಾಮೆಕೊಟ್ಟರೆಂದೂ ಸಪ್ರೂರವರು ದೇಶಭಾಷಾಪ್ರಚಾರಕಸಂಘದ ಸಭ್ಯತ್ವವನ್ನೂ ಕೂಡ ತ್ಯಜಿಸಿಬಿಟ್ಟರೆಂದೂ ಪ್ರಕಟವಾಗಿದೆ.

ಬೊಂಬಾಯಿಯಲ್ಲಿ ಕಲ್ಲಿದ್ದಲಿಗೂ ಸವುದೆಗೂ ಬಂದಿರುವ ದುರ್ಭಿಕ್ಷವು ಭಯಂಕರವಾಗಿದೆ. ಯಂತ್ರಾಲಯಗಳವರೂ ಸವುದೆಯನ್ನುಪಯೋಗಿಸುವ ಹೊತ್ತು ಬಂದಿದೆ. ಅಲ್ಲಿ ಸೀಮೆಯೆಣ್ಣೆಯ ಬೆಲೆಯು ವಿಪರೀತವಾಗಿಹೋಗಿದ್ದುದರಿಂದ ಡಬ್ಬಿ ೧ ಕ್ಕೆ ೨—೯—೦ ಗೆ ವಿಕ್ರಯದಂತೆಯೂ ಸೀಸೆ ೧ ಕ್ಕೆ ೨ ಆಣೆಗೆ ವಿಕ್ರಯದಂತೆಯೂ ಮಾರಾಟಮಾಡಬೇಕೆಂದೂ ಇದಕ್ಕೆ ತಪ್ಪಿದವರಿಗೆ ಶಿಕ್ಷೆ ವಿಧಿಸಲ್ಪಡುವುದೆಂದೂ ಅಲ್ಲಿಯ ಸರ್ಕಾರದವರು ಪ್ರಕಟಿಸಿದ್ದಾರೆ.

ಹಿಂದುಳಿದ ಜನವರ್ಗಗಳ ರಾಜಕೀಯ ಸಾಮಾಜಿಕ ವಿದ್ಯಾವಿಷಯಕಾಭ್ಯುನ್ನತಿಗಳನ್ನು ಸಾಧಿಸುವ ಉದ್ದೇಶದಿಂದ ಆರಂಭಿಸಲ್ಪಟ್ಟಿರುವ ಮುಂಬೈ ಪ್ರಾಂತಿಕ ಪ್ರಥಮಪರಿಷತ್ತು ಪುಣೆಯ ಅಡ್ವೋಕೇಟರಾದ ಶ್ರೀಯುತ ಜಿ. ಡಿ. ನಾಯಕ ಎಂ. ಎ. ಎಲ್. ಎಲ್. ಬಿ. ಯವರ ಅಧ್ಯಕ್ಷತೆಯಿಂದ ಕಳೆದ ತಾ|| ೨೫-೨೬-೨೭ ರಲ್ಲಿ ಬಿಜಾಪುರದಲ್ಲಿ ನಡೆಯಿತು. ಶ್ರೀಮನ್ ಕ್ಷೇಮಚಂದ್ ರಾಮಚಂದ್ ಸೇಟ್‌ಜಿಯವರು ಸ್ವಾಗತಸಂಘಾಧ್ಯಕ್ಷರಾಗಿದ್ದರು.

ಕಳೆದ ತಾ|| ೧೮ ರಲ್ಲಿ ಪುಣೆಯ ಪ್ರೊ|| ಕರ್ವೆಯವರಿಗೆ ಷಷ್ಟ್ಯಬ್ದಪೂರ್ತಿಮಹೋತ್ಸವವು ಜರುಗಿತು. ದೂರದೂರದಿಂದ ಅನೇಕರು ಅವರ ಸಂದರ್ಶನಕ್ಕೆ ಬಂದಿದ್ದರು. ವಿದ್ಯಾರ್ಥಿನಿಯರ ಪಕ್ಷದಿಂದ ೨ ವಿಜ್ಞಾಪನಪತ್ರಗಳು ಅವರಿಗೆ ಸಮರ್ಪಿಸಲ್ಪಟ್ಟುವು. ಭಾರತಮಹಿಳೆಯರ ಪಕ್ಷದಿಂದ ೧ ಸನ್ಮಾನಪತ್ರವೂ ೩೬೦೦ ರೂ. ಗಳ ಕಾಣಿಕೆಯೂ ಅರ್ಪಿಸಲ್ಪಟ್ಟುವು. ಡಾ|| ಸರ್ ರಾಮಕೃಷ್ಣ ಭಂಡಾರ್ಕರ್‌ರವರು ಕರ್ವೆಯವರ ಭಾವಚಿತ್ರಪಟವನ್ನು ಬಹಿರಂಗಪಡಿಸಿದರು. ಇನ್ನು ಮುಂದೆಯೂ ತಮ್ಮ ದೇಹಾಂತವಾಗಿಯೂ ಸ್ತ್ರೀಸಂಘೋದ್ಧರಣರೂಪದೇಶಸೇವೆಯನ್ನೇ ಮಾಡುತ್ತಿರುವೆನೆಂದು ಕರ್ವೆಯವರು ತಮ್ಮ ದೃಢಸಂಕಲ್ಪವನ್ನು ವಿವರಿಸಿ ಒಂದು ಭಾಷಣವನ್ನು ಮಾಡಿದರು.

ದಿಲ್ಲಿಪಟ್ಟಣದಲ್ಲಿ ನಿನ್ನೆಯದಿನ (ತಾ|| ೨೭) ವೈಸ್ರಾಯರೂ ಸ್ಟೇಟ್‌ಸೆಕ್ರೆಟರಿಯವರೂ ಸಹ ಒಂದು ಮಹಾಸಭೆಯನ್ನು ಕೂಡಿಸಿರುವರು. ಅದಕ್ಕೆ ಎಲ್ಲ ಸಂಸ್ಥಾನಗಳ ಪ್ರತಿನಿಧಿಗಳೂ, ಪ್ರಾಂತಾಧಿಕಾರಿಗಳೂ ಸಾಮ್ರಾಜ್ಯನಿಯಮನಿರ್ಮಾಣಸಭೆಯ ಎಲ್ಲ ಸಭಿಕರುಗಳೂ, ಇನ್ನೂ ಅನೇಕ ಪ್ರಜಾಪ್ರಮುಖರೂ ಬರಮಾಡಲ್ಪಟ್ಟಿದ್ದಾರೆ. ಈ ಸಭೆಯಲ್ಲಿ ಮೂರು ಉದ್ದೇಶಗಳು ನಿರ್ಧರಿಸಲ್ಪಡುವುವೆಂದು ಪ್ರಕಟವಾಗಿದೆ. ಯಾವುವೆಂದರೆ—೧. ಅಭಿಪ್ರಾಯಭೇದಗಳನ್ನೆಲ್ಲಾ ಬಿಟ್ಟು ಯುದ್ಧ ಮುಗಿಯುವವರೆಗೂ ಯಾವ ತೆರದ ರಾಜಕೀಯಾಂದೋಳನವನ್ನೂ ನಡೆಯಿಸದಿರುವಂತೆ ಪ್ರಜೆಗಳು ಸಹಾಯಮಾಡುವುದು. ೨. ಯುದ್ಧಕ್ಕೆ ಮನುಷ್ಯಬಲ ಮೊದಲಾದ ಸಾಧನಸಂಪತ್ತಿಗಳನ್ನು ಒದಗಿಸುವುದಕ್ಕೆ ಸಹಾಯವನ್ನು ಕೊಡುವುದು. ೩. ಯುದ್ಧವು ಜಯಕರವಾಗಿ ಪರಿಣಮಿಸುವಂತೆ ಮಾಡುವುದಕ್ಕೆ ಅವಶ್ಯಕವಾದ ಸರ್ವವಿಧತ್ಯಾಗಗಳನ್ನೂ ಭಾರತೀಯರು ಸಂತೋಷಪೂರ್ವಕವಾಗಿ ಮಾಡಲು ಸಿದ್ಧರಾಗಿರುವಂತೆ ಮಾಡುವುದು.

ಶ್ರೀಯುತ ತಿಲಕರೇ ಮೊದಲಾದ ಸ್ವರಾಜ್ಯರಾಯಭಾರಿಗಳು ಕೊಲಂಬೋವಿನಿಂದ ಮರಳಿ ಮದ್ರಾಸಿಗೆ ಬಂದು ತಮ್ಮತಮ್ಮ ಸ್ಥಳಗಳಿಗೆ ಕಳೆದವಾರ ಹೋದರು. ಮದ್ರಾಸಿನ ಗೌರಿವಿಲಾಸೋದ್ಯಾನದಲ್ಲಿ ತಿಲಕರು ಮತ್ತೊಂದುಪನ್ಯಾಸವನ್ನು ಮಾಡಿದರು. ಅಗ್ಗ ಅವರು "ಸ್ವರಾಜ್ಯವರಪ್ರದ

ಸ್ಟಾರ್

REGISTERED NO. M. 194.

ತ್ರ ದು.

ನಕ್ಷತ್ರಮೋಹರಾಜೀಯಾತ್ ||
ಕಲಿತ ಸಾದ್ಗುಣ್ಯಾಲವಾಲಂವಲಂ ||
ಗೆ ಗೌರೀಶಾನುಕಂಪೋಜ್ವಲಂ ||

[ಅಂಚೆವೆಚ್ಚ ಸೇರಿ ೧-೧೪-೦]

ಉ ೫ ನೆಯ ಭಾನುವಾರ. (ಸಂಚಿಕೆ ೧೮

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪಕಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
24 ಪಾಠಶಾಲಾ ಮಹಾಗಾಂವ್ ಜಿಲ್ಲೆ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 29

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರವೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟೆ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಏಪ್ರಿಲ್ ತಾ॥ ೨೮ ನೆಯ ಭಾನುವಾರ.

ಬಿಟ್ಟಿಯಾಗಿ ಪ್ರೌಢವಿದ್ಯಾಭ್ಯಾಸ.

ನಮ್ಮ ವಿಶ್ವವಿದ್ಯಾಲಯದ ಸಂಘದವರು ಈಸಲ ರಾಜಧಾನಿಯಲ್ಲಿ ಕೂಡಿ ನಡೆಯಿಸಿದ ವಿಚಾರಗಳಲ್ಲಿ ನಮ್ಮ ವಿದ್ಯಾಪೀಠದ ಕಲಾಶಾಲಾ ವಿದ್ಯಾಭ್ಯಾಸವನ್ನೆಲ್ಲಾ "ಫೀ" ತೆಗೆದುಕೊಳ್ಳದೆ ಬಿಟ್ಟಿಯಾಗಿ ಮಾಡಿಸುವಂತೆ ಏರ್ಪಡಿಸಬೇಕೆಂಬ ವಿಷಯವು ಒಂದಾಗಿದ್ದಿತು. ಈ ಸೂಚನೆಯನ್ನು ರಾ॥ ಬ॥ ಎಂ.ಸಿ. ರಂಗಯ್ಯಂಗಾರರು ಸಭೆಯಮುಂದಿಟ್ಟರು. ಇದಕ್ಕೆ ವಿರೋಧಿಸಿದ ಜನರು ಕೆಲವರು ಮಾತ್ರವಾಗಿದ್ದು ಅನುಮೋದಿಸಿದವರೇ ಹೆಚ್ಚಾದುದರಿಂದ ಅದು ಸಭೆಯಿಂದ ಅಂಗೀಕೃತವಾಯಿತು. ಆದರೆ ಈ ವಿಷಯದಲ್ಲಿ ಗೌರ್ನಮೆಂಟಿನವರೂ ಹೀಗೆಯೇ ಅಭಿಪ್ರಾಯಪಟ್ಟು ಅನುಮೋದಿಸಬಲ್ಲರೆ ಎಂದು ಯೋಚಿಸಬೇಕಾಗಿರುವುದು. ಏಕೆಂದರೆ ವಿದ್ಯಾಭ್ಯಾಸದ ಈಗಣ ಏರ್ಪಾಟಿನಲ್ಲಿ ಅತಿಶಯವಾಗಿರುವ ನ್ಯೂನಾತಿರೇಕಗಳನ್ನು ಮೊದಲು ಸರಿಪಡಿಸಿಕೊಳ್ಳಬೇಕಾಗಿರುವುದು. ಸರ್ಕಾರದವರು ವರ್ಷೇವರ್ಷೆ ವಿದ್ಯಾಭ್ಯಾಸ ಶಾಖೆಗಾಗಿ ವೆಚ್ಚಮಾಡುವ ಹಣವನ್ನೇನೋ ಹೆಚ್ಚಿಸುತ್ತಲಿರುವರು. ಈ ವರ್ಷದ ಬಡ್ಜೆಟ್ಟಿನಲ್ಲಿ ೩೭ ಲಕ್ಷ ರೂ. ಗಳು ವಿದ್ಯಾಶಾಖಾ ವ್ಯಯಕ್ಕಾಗಿ ನಿಗದಿಮಾಡಲ್ಪಟ್ಟಿರುವುವು. ಎಂದರೆ ಸ್ವಲ್ಪ ಕಡಿಮೆ ಒಟ್ಟು ರಾಜಾದಾಯದಲ್ಲಿ $\frac{1}{8}$ ಭಾಗದಷ್ಟನ್ನು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ವಿನಿಯೋಗಿಸಿದಂತಾಗುವುದು. ಇದು ಸಂತೋಷಪ್ರದವೇ ಸರಿ. ಆದರೆ ವೆಚ್ಚದ ಪಟ್ಟಿಯಲ್ಲಿ ಇದು ರಮಣೀಯವಾಗಿ ಕಂಡಮಾತ್ರದಿಂದಲೇ ಅದರ ಸಾರ್ಥಕತೆಯು ಎಷ್ಟುಮಟ್ಟಿಗೆ ಯಾವವಿಧದಿಂದ ಉಂಟಾಗುತ್ತಲಿದೆಯೆಂಬುದನ್ನು ವಿಚಾರಮಾಡಿ ನೋಡಿದರೆ ಅಷ್ಟು ಸಂತೋಷಪಡುವುದಕ್ಕೆ ಎಡೆಯಿರುವುದಿಲ್ಲ. ಈ ಶಾಖೆಯ ಹಣದಲ್ಲಿ ಸಾಮಾನ್ಯಪ್ರಜೆಗಳ ವಿದ್ಯಾಭಿವೃದ್ಧಿಗೆ ತಕ್ಕಷ್ಟು ಸಹಾಯವಾಗುತ್ತಿರುವುದಿಲ್ಲ. ಪ್ರೌಢವಿದ್ಯಾಭ್ಯಾಸಕ್ಕಾಗಿಯೇ ಸ್ವಲ್ಪ ಕಡಿಮೆಯಾಗಿ ಅರ್ಧ ಭಾಗದಷ್ಟು ಹಣವೆಲ್ಲಾ ವ್ಯಯವಾಗಿಹೋಗುತ್ತದೆ. ಅಂಥ ಪ್ರೌಢವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿ ಸಂಖ್ಯೆಯು ೧ ಸಾವಿರದಷ್ಟೂ ಇರುವುದಿಲ್ಲ. ಉಳಿದ ಲಕ್ಷಾಂತರ ಪ್ರಜೆಗಳ ಬಾಲಬಾಲಿಕೆಯರ ಬಾಲವಿದ್ಯಾಭ್ಯಾಸಕ್ಕೆ ಅರ್ಧಭಾಗದಷ್ಟು ಹಣವು ಮಾತ್ರ ವಿನಿಯೋಗವಾಗುತ್ತಿದೆ. ಅದರಲ್ಲೂ ನಗರಗಳ ಪಟ್ಟಣಗಳ ಪ್ರಜೆಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿಕೊಟ್ಟಿರುವ ಸೌಕರ್ಯದಲ್ಲಿ $\frac{1}{100}$ ಪಾಲು ಸೌಕರ್ಯಗಳೂ ಗ್ರಾಮಾಂತರದ ಪ್ರಜೆಗಳಿಗಿರುವುದಿಲ್ಲ. ಪಟ್ಟಣದ ಪ್ರಜೆಗಳಿಗಿಂತ ಅವರು ಕಂದಾಯ ಕೊಳಗೆಗಳನ್ನು ಕೊಡುವುದರಲ್ಲಿ ಏನೂ ಕಡಿಮೆಯಾಗಿಲ್ಲದಿದ್ದರೂ, ಪಟ್ಟಣದ ಪ್ರಜೆಗಳ ವಿದ್ಯಾಭಿವೃದ್ಧಿಗೆ ಸೆಕಂಡರಿ ಪಾಠಶಾಲೆಗಳು, ಪ್ರೌಢಕಲಾಶಾಲೆಗಳು, ಹಾಸ್ಟಲುಗಳು ಮೊದಲಾದ ಅನೇಕಾನೇಕ ಸೌಕರ್ಯಗಳನ್ನು ಸರ್ಕಾರದವರು ಮಾಡಿಕೊಟ್ಟಿರುವಂತೆ ಗ್ರಾಮಾಂತರದ ಪ್ರಜೆಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿಕೊಟ್ಟಿರುವುದಿಲ್ಲ. ಅವರು ಯಾವ ಸೌಕರ್ಯವನ್ನು ಕಲ್ಪಿಸಬೇಕೆಂದು ಕೇಳಿಕೊಂಡರೂ ಹೋಟಲಿನವರು ಫಲಾಹಾರದ ಸಾಮಗ್ರಿಗಳಿಗೆ ಸಿಗದಿಯ ಬೆಲೆಯನ್ನು ಕೇಳುವಂತೆ ಪಾಠಶಾಲೆಯ ಕಟ್ಟಡವನ್ನು ನೀವು ಕಟ್ಟಿಸಿಕೊಡಿ, ಉಪಾಧ್ಯಾಯರ ಸಂಬಳದಲ್ಲಿ ಅರ್ಧವನ್ನು ಕೊಡಿ, ಉಪಾಧ್ಯಾಯರಿಗೆ ಮನೆಯನ್ನು ಕಟ್ಟಿಸಿಕೊಡಿ ಎಂದು ಮೊದಲಾಗಿ ಕೇಳುತ್ತಿರುವರು. ಇದು ಯಾವ ಧರ್ಮ? ಬಲಾತ್ಕಾರ ಬಾಲವಿದ್ಯಾಭ್ಯಾಸ ಕ್ರಮವನ್ನು ಏರ್ಪಡಿಸಿದ್ದರೂ, ಅದರ ಅವಶ್ಯಕತೆಯು ಗ್ರಾಮಾಂತರಗಳಿಗೆ ಹೆಚ್ಚಾಗಿದ್ದರೂ, ಉಂಡವರಿಗೇ ಉಣಲಿಡುವಂತೆ ಅದರ ಸೌಕರ್ಯಗಳನ್ನೂ ಪುರನಿವಾಸಿಗಳಿಗೇ ಹೆಚ್ಚುಹೆಚ್ಚಾಗಿ ಮಾಡಿಕೊಡುತ್ತಿರುವರು. ಈ ದೊಡ್ಡ ಅನ್ಯಾಯವು ತಪ್ಪಿದಲ್ಲದೆ ಪ್ರಜಾಸಾಮಾನ್ಯ ವಿದ್ಯಾಭಿವೃದ್ಧಿಯು ಸಮರ್ಪಕವಾಗಿ ಈಡೇರಲಾರದು. ಗ್ರಾಮಾಂತರದ ಅನಕ್ಷರಸ್ಥ ಪ್ರಜೆಗಳು ಓನಾಮವನ್ನು ಕಲಿಯುವುದಕ್ಕೂ "ಸ್ಪೆಷಲ್" ಹೊರೆಯನ್ನು ಹೊರಬೇಕಾಗಿರುವಾಗ, ಪ್ರೌಢತರಗತಿಯ ವಿದ್ಯಾಭ್ಯಾಸ ಮಾಡಶಕ್ಕವರು ಅದನ್ನೂ ಬಿಟ್ಟಿಯಾಗಿಯೇ ಪಡೆಯಬೇಕೆಂದು ಅಪೇಕ್ಷಿಸುವುದು ಹೇಗೆ ಧರ್ಮವಾಗುವುದು? ಸಾಮಾನ್ಯ ಪ್ರಜೆಗಳ ಸಾಮಾನ್ಯ ವಿದ್ಯಾಭ್ಯಾಸಕ್ಕೆ ಸಕಲವಿಧದ ಸೌಕರ್ಯವೂ ಒದಗಿಸಲ್ಪಟ್ಟು ಮುಗಿದಬಳಿಕ ಪ್ರೌಢವಿದ್ಯಾಭ್ಯಾಸ ವಿಷಯವಾಗಿ ಸೌಕರ್ಯವನ್ನು ಯೋಚಿಸುವುದೂ ಕಲ್ಪಿಸುವುದೂ ನ್ಯಾಯವು. ಒಕ್ಕಣ್ಣಿನ ಒಂಟಿಯಂತೆ ಒಮ್ಮುಗ್ಗುಲನ್ನೇ ನೋಸಿಕೊಂಡು ಹೋಗುವುದು ಪ್ರಜಾಪ್ರಮುಖರಿಗೇ ಆಗಲೀ ಪ್ರಭುತ್ವದವರಿಗೇ ಆಗಲೀ ಧರ್ಮವಲ್ಲವೆಂದು ಹೇಳದಿರಲಾರೆವು. ಸಂಸ್ಥಾನದಲ್ಲಿರುವ ಗಂಡುಹುಡುಗರಿಗೆಲ್ಲಾ ನಿರ್ಬಂಧವಿದ್ಯಾಭ್ಯಾಸ ಸೌಕರ್ಯಗಳನ್ನು ಒದಗಿಸಿಕೊಡಲಾರದ ನಮ್ಮ ಪ್ರಭುತ್ವದವರು ಬಲಾತ್ಕಾರ ಸ್ತ್ರೀ ವಿದ್ಯಾಭ್ಯಾಸಕ್ರಮವನ್ನೂ ಏರ್ಪಡಿಸಿಕೊಂಡಂತೆ ಸರ್ವ ವಿದ್ಯಾಭ್ಯಾಸವನ್ನೂ ಉಚಿತವಾಗಿ ಮಾಡಿಸುವ ಏರ್ಪಾಟನ್ನೂ ಮಾಡಿಬಿಟ್ಟರೆ, ಇಂಥ ಹೊಸ ಏರ್ಪಾಟುಗಳ ಆಡಂಬರದಿಂದ ಸಂಸ್ಥಾನದ ಕಾರ್ಯಭಾರದ ಪ್ರತಿಷ್ಠೆಯು ಹೊರಗಣವರಿಗೆ "ದೂರತಃ ಪರ್ವತೋರಮ್ಯಃ" ಎಂಬಂತಾದೀತೇ ಹೊರತು ಅಂತಸ್ಸ್ಥಿತಿಯು ರಮ್ಯವಾಗಿ ಪರಿಣಮಿಸಲಾರದು. ದೂರತೋ ರಮ್ಯವಾಗಿರಬೇಕೆಂಬುದೇ ನಮ್ಮ ಪ್ರಭುತ್ವದವರ ಉದ್ದೇಶವಾಗಿರಬಾರದು. ಅಲ್ಲದೆ ಭರತಖಂಡದ ಯಾವ ಭಾಗದಲ್ಲೂ ಪ್ರೌಢವಿದ್ಯಾಭ್ಯಾಸವು ಉಚಿತವಾಗಿ ನಡೆಯದಿರುವಾಗ ನಮ್ಮ ಸಂಸ್ಥಾ

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವನ್ನಿಶಿಸ್ವವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತ ಮಂದಿಗಳಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
4 ಆನಂದ ಬುಕ್‌ಡಿಪೋ, ಮೈಸೂರು.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತಚಿತ್ರದತ್ತಾ, ಲುಕ್ಮಾನ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಪಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತೆ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ಶಕ್ತಿಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ಸ್ವಪ್ನಭಂಗ, ಮಲಬದ್ಧತೆಯಿಂದುಂಟಾವ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅಯಿಚ, ಅತಿಸಾರ, ಅಸ್ತಿಜ್ವರ, ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ:—ಇವರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡಿವರ್ಣ, ಯಲುಸಂಡಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾನ್ಯಾತಪ್ಪಾ ಕಾಳಪ್ಪಾ ಲೇಂಗಡೆ,
11 ಹೊಸೂರ, ಪೋಸ್ಟ್, ಪಾಪೂರ (ಬೇಗಾಂವ)

ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಧಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ಕಾಳು ಕಡಿಯ ಜಂಗೀ ವ ಖಾರ.

ಗೋಧಿ ಉಳುಬಿ ಅಡ್ಡಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
12 ಧಾರ್ವಾಡ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೀ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇದೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರಿವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 19

ಇಮಿಟೇಷನ್ ಸಿಲ್ಕ್ ಗೋವರ್ ಜಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	3.8.0

ವಿಳಾಸ:—ವೈರಂ ಅಂಡ್ ಕೊ, ಇರುಳಪ್ಪನಬೀದಿ, ಮದರಾಸು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ತಾ ತಿಳಿಸಿದರೆ ಪುಕಟಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಪೆ. ೧೦೦ ಕ್ಕೆ ೧-೪-೦

೩ ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
22 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೮ ನೆಯ ಇಸವಿ ಏಪ್ರಿಲ್ ತಾ॥ ೨೮ ರಿಂದ ೧೯೧೮ ನೆಯ ಮೇ ತಾ॥ ೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮಸಂವತ್ಸರದ ಚೈತ್ರ ಬ॥ ಬಿದಿಗೆಯಿಂದ ಚೈತ್ರ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
28	ಭಾನು	ಬಿದಿಗೆ	22-29	ಅನೂರಾಧ	60	16
29	[1]ಸೋಮ	ತದಿಗೆ	23-41	ಅನೂರಾಧ	0-13	17
30	[2]ಮಂಗಳ	ಚೌತಿ	23-36	ಜ್ಯೇಷ್ಠ	2-16	18
1	[3]ಬುಧ	ಪಂಚ	22-14	ಮೂಲ	3-4	19
2	ಗುರು	ಷಷ್ಠಿ	19-42	ಪೂಷಾ	2-44	20
3	ಶುಕ್ರ	ಸಪ್ತ	16-9	ಉಷಾ	1-20	21
4	ಶನಿ	ಅಷ್ಟ	12-3	ಧನಿಷ್ಠ	66-36	22

(1) ಶುಭಪ್ರದ ಗೌರೀವ್ರತಂ. (2) ಕಮಲಾಲಯದಲ್ಲಿ ರಥ, ಶ್ರೀರಂಗದಲ್ಲಿ ಚೈತ್ರೋತ್ಸವಾರಂಭ. (3) ಮಡ್ಡೂರು ನೃಸಿಂಹಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟು ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮ್ಣಂಚೇತಿ ಳಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಮೇ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೧೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ನಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಕಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರದುಬಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ,
30 3, ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ವರವಾದಿ ಗಜಾಂಕುಶಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 21

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುವಾತಿಗೂ ವೈದ್ಯರ ಸಮಯವನ್ನು ಕಾದು ಮರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೀಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇಚ್ಛಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
24 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 23

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಹ್ಲಾದಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಏಪ್ರಿಲ್ ತಾ|| ೨೮ ನೆಯ ಭಾನುವಾರ.

ಬಿಟ್ಟಿಯಾಗಿ ಪ್ರೌಢವಿದ್ಯಾಭ್ಯಾಸ.

ನಮ್ಮ ವಿಶ್ವವಿದ್ಯಾಲಯದ ಸಂಘದವರು ಈಸಲ ರಾಜಧಾನಿಯಲ್ಲಿ ಕೂಡಿ ನಡೆಯಿಸಿದ ವಿಚಾರಗಳಲ್ಲಿ ನಮ್ಮ ವಿದ್ಯಾಪೀಠದ ಕಲಾಶಾಲಾ ವಿದ್ಯಾಭ್ಯಾಸವನ್ನೆಲ್ಲಾ "ಫೀ" ತೆಗೆದುಕೊಳ್ಳದೆ ಬಿಟ್ಟಿಯಾಗಿ ಮಾಡಿಸುವಂತೆ ಏರ್ಪಡಿಸಬೇಕೆಂಬ ವಿಷಯವು ಒಂದಾಗಿದ್ದಿತು. ಈ ಸೂಚನೆಯನ್ನು ರಾ|| ಬ|| ಎಂ.ಸಿ. ರಂಗಯ್ಯಂಗಾರರು ಸಭೆಯಮುಂದಿಟ್ಟರು. ಇದಕ್ಕೆ ವಿರೋಧಿಸಿದ ಜನರು ಕೆಲವರು ಮಾತ್ರವಾಗಿದ್ದು ಅನುಮೋದಿಸಿದವರೇ ಹೆಚ್ಚಾದುದರಿಂದ ಅದು ಸಭೆಯಿಂದ ಅಂಗೀಕೃತವಾಯಿತು. ಆದರೆ ಈ ವಿಷಯದಲ್ಲಿ ಗೌರ್ನಮೆಂಟಿನವರೂ ಹೀಗೆಯೇ ಅಭಿಪ್ರಾಯಪಟ್ಟು ಅನುಮೋದಿಸಬಲ್ಲರೆ ಎಂದು ಯೋಚಿಸಬೇಕಾಗಿರುವುದು. ಏಕೆಂದರೆ ವಿದ್ಯಾಭ್ಯಾಸದ ಈಗಣ ಏರ್ಪಾಟಿನಲ್ಲಿ ಅತಿಶಯವಾಗಿರುವ ನ್ಯೂನಾತಿರೇಕಗಳನ್ನು ಮೊದಲು ಸರಿಪಡಿಸಿಕೊಳ್ಳಬೇಕಾಗಿರುವುದು. ಸರ್ಕಾರದವರು ವರ್ಷೇವರ್ಷೇ ವಿದ್ಯಾಭ್ಯಾಸ ಶಾಖೆಗಾಗಿ ವೆಚ್ಚಮಾಡುವ ಹಣವನ್ನೇನೋ ಹೆಚ್ಚಿಸುತ್ತಲಿರುವರು. ಈ ವರ್ಷದ ಬಡ್ಜೆಟ್ಟಿನಲ್ಲಿ ೩೭ ಲಕ್ಷ ರೂ. ಗಳು ವಿದ್ಯಾಶಾಖಾ ವ್ಯಯಕ್ಕಾಗಿ ನಿಗದಿಮಾಡಲ್ಪಟ್ಟಿರುವುವು. ಎಂದರೆ ಸ್ವಲ್ಪ ಕಡಿಮೆ ಒಟ್ಟು ರಾಜಾದಾಯದಲ್ಲಿ ⅑ ಭಾಗದಷ್ಟನ್ನು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ವಿನಿಯೋಗಿಸಿದಂತಾಗುವುದು. ಇದು ಸಂತೋಷಪ್ರದವೇ ಸರಿ. ಆದರೆ ವೆಚ್ಚದ ಪಟ್ಟಿಯಲ್ಲಿ ಇದು ರಮಣೀಯವಾಗಿ ಕಂಡಮಾತ್ರದಿಂದಲೇ ಅದರ ಸಾರ್ಥಕತೆಯು ಎಷ್ಟುಮಟ್ಟಿಗೆ ಯಾವವಿಧದಿಂದ ಉಂಟಾಗುತ್ತಲಿದೆಯೆಂಬುದನ್ನು ವಿಚಾರಮಾಡಿ ನೋಡಿದರೆ ಅಷ್ಟು ಸಂತೋಷಪಡುವುದಕ್ಕೆ ಎಡೆಯಿರುವುದಿಲ್ಲ. ಈ ಶಾಖೆಯ ಹಣದಲ್ಲಿ ಸಾಮಾನ್ಯಪ್ರಜೆಗಳ ವಿದ್ಯಾಭಿವೃದ್ಧಿಗೆ ತಕ್ಕಷ್ಟು ಸಹಾಯವಾಗುತ್ತಿರುವುದಿಲ್ಲ. ಪ್ರೌಢವಿದ್ಯಾಭ್ಯಾಸಕ್ಕಾಗಿಯೇ ಸ್ವಲ್ಪ ಕಡಿಮೆಯಾಗಿ ಅರ್ಧ ಭಾಗದಷ್ಟು ಹಣವೆಲ್ಲಾ ವ್ಯಯವಾಗಿಹೋಗುತ್ತದೆ. ಅಂಥ ಪ್ರೌಢವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿ ಸಂಖ್ಯೆಯು ೧ ಸಾವಿರದಷ್ಟೂ ಇರುವುದಿಲ್ಲ. ಉಳಿದ ಲಕ್ಷಾಂತರ ಪ್ರಜೆಗಳ ಬಾಲಬಾಲಿಕೆಯರ ಬಾಲವಿದ್ಯಾಭ್ಯಾಸಕ್ಕೆ ಅರ್ಧಭಾಗದಷ್ಟು ಹಣವು ಮಾತ್ರ ವಿನಿಯೋಗವಾಗುತ್ತಿದೆ. ಅವರಲ್ಲೂ ನಗರಗಳ ಪಟ್ಟಣಗಳ ಪ್ರಜೆಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿಕೊಟ್ಟಿರುವ ಸೌಕರ್ಯದಲ್ಲಿ $\frac{1}{100}$ ಪಾಲು ಸೌಕರ್ಯಗಳೂ ಗ್ರಾಮಾಂತರದ ಪ್ರಜೆಗಳಿಗಿರುವುದಿಲ್ಲ. ಪಟ್ಟಣದ ಪ್ರಜೆಗಳಿಗಿಂತ ಅವರು ಕಂದಾಯ ಕೌಳಿಗೆಗಳನ್ನು ಕೊಡುವುದರಲ್ಲಿ ಏನೂ ಕಡಿಮೆಯಾಗಿಲ್ಲದಿದ್ದರೂ, ಪಟ್ಟಣದ ಪ್ರಜೆಗಳ ವಿದ್ಯಾಭಿವೃದ್ಧಿಗೆ ಸೆಕಂಡರಿ ಪಾಠಶಾಲೆಗಳು, ಪ್ರೌಢಕಲಾಶಾಲೆಗಳು, ಹಾಸ್ಟಲುಗಳು ಮೊದಲಾದ ಅನೇಕಾನೇಕ ಸೌಕರ್ಯಗಳನ್ನು ಸರ್ಕಾರದವರು ಮಾಡಿಕೊಟ್ಟಿರುವಂತೆ ಗ್ರಾಮಾಂತರದ ಪ್ರಜೆಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿಕೊಟ್ಟಿರುವುದಿಲ್ಲ. ಅವರು ಯಾವ ಸೌಕರ್ಯವನ್ನು ಕಲ್ಪಿಸಬೇಕೆಂದು ಕೇಳಿಕೊಂಡರೂ ಹೋಟಲಿನವರು ಫಲಾಹಾರದ ಸಾಮಗ್ರಿಗಳಿಗೆ ನಿಗದಿಯ ಬೆಲೆಯನ್ನು ಕೇಳುವಂತೆ ಪಾಠಶಾಲೆಯ ಕಟ್ಟಡವನ್ನು ನೀವು ಕಟ್ಟಿಸಿಕೊಡಿ, ಉಪಾಧ್ಯಾಯರ ಸಂಬಳದಲ್ಲಿ ಅರ್ಧವನ್ನು ಕೊಡಿ, ಉಪಾಧ್ಯಾಯರಿಗೆ ಮನೆಯನ್ನು ಕಟ್ಟಿಸಿಕೊಡಿ ಎಂದು ಮೊದಲಾಗಿ ಕೇಳುತ್ತಿರುವರು. ಇದು ಯಾವ ಧರ್ಮ? ಬಲಾತ್ಕಾರ ಬಾಲವಿದ್ಯಾಭ್ಯಾಸ ಕ್ರಮವನ್ನು ಏರ್ಪಡಿಸಿದ್ದರೂ, ಅದರ ಅವಶ್ಯಕತೆಯು ಗ್ರಾಮಾಂತರಗಳಿಗೆ ಹೆಚ್ಚಾಗಿದ್ದರೂ, ಉಂಡವರಿಗೇ ಉಣಲಿಡುವಂತೆ ಅದರ ಸೌಕರ್ಯಗಳನ್ನೂ ಪುರನಿವಾಸಿಗಳಿಗೇ ಹೆಚ್ಚುಹೆಚ್ಚಾಗಿ ಮಾಡಿಕೊಡುತ್ತಿರುವರು. ಈ ದೊಡ್ಡ ಅನ್ಯಾಯವು ತಪ್ಪಿದಲ್ಲದೆ ಪ್ರಜಾಸಾಮಾನ್ಯ ವಿದ್ಯಾಭಿವೃದ್ಧಿಯು ಸಮರ್ಪಕವಾಗಿ ಈಡೇರಲಾರದು. ಗ್ರಾಮಾಂತರದ ಅನಕ್ಷರಸ್ಥ ಪ್ರಜೆಗಳು ಓನಾಮವನ್ನು ಕಲಿಯುವುದಕ್ಕೂ "ಸ್ಪೆಷಲ್" ಹೊರೆಯನ್ನು ಹೊರಬೇಕಾಗಿರುವಾಗ, ಪ್ರೌಢತರಗತಿಯ ವಿದ್ಯಾಭ್ಯಾಸ ಮಾಡತಕ್ಕವರು ಅದನ್ನೂ ಬಿಟ್ಟಿಯಾಗಿಯೇ ಪಡೆಯಬೇಕೆಂದು ಅಪೇಕ್ಷಿಸುವುದು ಹೇಗೆ ಧರ್ಮವಾಗುವುದು? ಸಾಮಾನ್ಯ ಪ್ರಜೆಗಳ ಸಾಮಾನ್ಯ ವಿದ್ಯಾಭ್ಯಾಸಕ್ಕೆ ಸಕಲವಿಧದ ಸೌಕರ್ಯವೂ ಒದಗಿಸಲ್ಪಟ್ಟು ಮುಗಿದಬಳಿಕ ಪ್ರೌಢವಿದ್ಯಾಭ್ಯಾಸ ವಿಷಯವಾಗಿ ಸೌಕರ್ಯವನ್ನು ಯೋಚಿಸುವುದೂ ಕಲ್ಪಿಸುವುದೂ ನ್ಯಾಯವು. ಒಕ್ಕಣ್ಣಿನ ಬಂಡಿಯಂತೆ ಒಮ್ಮಗ್ಗುಲನ್ನೇ ಪೋಷಿಸಿಕೊಂಡು ಹೋಗುವುದು ಪ್ರಜಾಪ್ರಮುಖರಿಗೇ ಆಗಲೀ ಪ್ರಭುತ್ವದವರಿಗೇ ಆಗಲೀ ಧರ್ಮವಲ್ಲವೆಂದು ಹೇಳದಿರಲಾರೆವು. ಸಂಸ್ಥಾನದಲ್ಲಿರುವ ಗಂಡುಹುಡುಗರಿಗೆಲ್ಲಾ ನಿರ್ಬಂಧವಿದ್ಯಾಭ್ಯಾಸ ಸೌಕರ್ಯಗಳನ್ನು ಒದಗಿಸಿಕೊಡಲಾರದ ನಮ್ಮ ಪ್ರಭುತ್ವದವರು ಬಲಾತ್ಕಾರ ಸ್ತ್ರೀ ವಿದ್ಯಾಭ್ಯಾಸಕ್ರಮವನ್ನೂ ಏರ್ಪಡಿಸಿಕೊಂಡಂತೆ ಸರ್ವ ವಿದ್ಯಾಭ್ಯಾಸವನ್ನೂ ಉಚಿತವಾಗಿ ಮಾಡಿಸುವ ಏರ್ಪಾಟನ್ನೂ ಮಾಡಿಬಿಟ್ಟರೆ, ಇಂಥ ಹೊಸ ಏರ್ಪಾಟುಗಳ ಆಡಂಬರದಿಂದ ಸಂಸ್ಥಾನದ ಕಾರ್ಯಭಾರದ ಪ್ರತಿಷ್ಠೆಯು ಹೊರಗಣವರಿಗೆ "ದೂರತಃ ಪರ್ವತೋರಮ್ಯಃ" ಎಂಬಂತಾದೀತೇ ಹೊರತು ಅಂತಸ್ಸ್ಥಿತಿಯು ರಮ್ಯವಾಗಿ ಪರಿಣಮಿಸಲಾರದು. ದೂರತೋ ರಮ್ಯವಾಗಿರಬೇಕೆಂಬುದೇ ನಮ್ಮ ಪ್ರಭುತ್ವದವರ ಉದ್ದೇಶವಾಗಿರಬಾರದು. ಅಲ್ಲದೆ ಭರತಖಂಡದ ಯಾವ ಭಾಗದಲ್ಲೂ ಪ್ರೌಢವಿದ್ಯಾಭ್ಯಾಸವು ಉಚಿತವಾಗಿ ನಡೆಯದಿರುವಾಗ ನಮ್ಮ ಸಂಸ್ಥಾ

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಮೂಲ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕಮೊದಲಾದ ಪ್ರಭೃತಿಗಳ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವೂ ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತ ಮುಂತಿಗಳಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
4 ಆನಂದ ಬುಕ್ ಡಿಪ್ಪೋ, ಮೈಸೂರು.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಶೆಪಟ್ಟವರು

ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!

(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಸುಶ್ರುತ, ವಾಗ್ಭಟ, ನಿತ್ಯನಾಥ, ಯೋಗರತ್ನಾಕರ, ವೈದ್ಯಚಿಂತಾಮಣಿ, ಪೂಜ್ಯಪಾದ, ಸುಶ್ರುತಚಿತ್ರದತ್ತಾ, ಲುಕ್ಮಾನ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇವರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ಸ್ವಪ್ನಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅಮೃತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇವೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇವರ ಕ್ರಯವನ್ನು ಬಹಳೆ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೨ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೪ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಫಕ್ತ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ:—ಇವರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಹುಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಡಕ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾದೀತು. ಮತ್ತು ತಮ್ಮ ಅಡ್ರೆಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾನ್ಯಶಪ್ಪಾ ಕಾಳಪ್ಪಾ ಲೇಂಗಡೆ,
11 ಹೊಸೂರ, ಪೋಸ್ಟ್, ಸಾಪೂರ (ಬೆಳಗಾಂವ)

ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ಕಾಳು ಕಡಿಯ ಜಂಗೀ ವ ಖಾರ.

ಗೋಧಿ ಉಸುಬಿ ಅಡ್ಲಿ ಹತ್ತಿ ಕಾಳು ವಗೈರೆ ಜಿನಸುಗಳ ಕಮಿಷನ್ ಏಜಂಟ್ ಹೆಚ್ಚಿನ ಮಾಹಿತಿ ಪತ್ರದ್ವಾರ ಅಥವ ಸಮಕ್ಷಮ.

ಬಸಪ್ಪಾ ಸಂಗನಬಸಪ್ಪಾ ಮಿಣಜಿಗಿ ದಲಾಲ,
12 ಧಾರವಾಡ.

ನವರಾತ್ರಿ ಬಹುಮಾನ ನವರಾತ್ರಿ ಬಹುಮಾನ

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಒಂದು ಭಂಗಾರದ ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

ಮಧುರೆ ಚುನ್ನಡಿ ಅಂಚಿನ ಸೀರೆ.

18 ಮೊಳ ಉಳ್ಳದ್ದು ಕ್ರಯ ರೂ. 3.0.0

ಈ ಹೊಸನಮೂನೆ ಸೀರೆಗಳನ್ನು ಬೀ ಮಲ್ಲಿನಲ್ಲಿ ತಯಾರಿಸಿ ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿರುತ್ತೆ. ಇದು ಉಡುವುದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಹೊಸ ನಮೂನೆಯಾಗಿಯೂ ಇವೆ. ಬಣ್ಣ ಹೋಗದು. ಇಂಥಾ ಸೀರೆಗಳು ಇದುವರೆವಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಮಾತ್ರ ಹಬ್ಬದ ನಿಮಿತ್ತ ಬಂದಿರುತ್ತೆ. ಜಾಗ್ರತೆ ತರಿಸಿ ನೋಡಿರಿ. 19

ಇಮಿಟೇಷನ್ ಸಿಲ್ಕ್ ಗೋವರ್ ಜಾಕ್ ಸೀರೆ	5.0.0
ಡೈಮಂಡ್ ಕೊಟ್ಟಡಿ ಸೀರೆ	5.0.0
ಬನಾರಸ್ ಸೀರೆ	5.8.0
ಬಾಲಾಮಣಿ ಸೀರೆ	3.8.0

ವಿಳಾಸ:-ವೈರಂ ಅಂಡ್ ಕೊ, ಇರುಳಪ್ಪನಬೀದಿ, ಮದರಾಸು.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲ್ಪಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ತಾ ತಿಳಿಸಿದರೆ ಫುಕಟಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಪೆ. ೧೦೦ ಕ್ಕೆ ೧-೪-೦

೩ ಜೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
22 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೮ ನೆಯ ಇಸವಿ ಏಪ್ರಿಲ್ ತಾ|| ೨೮ ರಿಂದ ೧೯೧೮ ನೆಯ ಮೇ ತಾ|| ೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮಸಂವತ್ಸರದ ಚೈತ್ರ ಬ|| ಬಿದಿಗೆಯಿಂದ ಚೈತ್ರ ಬ|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
28	ಭಾನು	ಬಿದಿಗೆ	22-29	ಅನೂರಾಧ	60	16
29	1 ಸೋಮ	ತದಿಗೆ	23-41	ಅನೂರಾಧ	0-13	17
30	2 ಮಂಗಳ	ಚೌತಿ	23-36	ಜ್ಯೇಷ್ಠ	2-16	18
1	3 ಬುಧ	ಪಂಚ	22-14	ಮೂಲ	3-4	19
2	ಗುರು	ಷಷ್ಠಿ	19-42	ಪೂಷಾ	2-44	20
3	ಶುಕ್ರ	ಸಪ್ತ	16-9	ಉಷಾ	1-20	21
4	ಶನಿ	ಅಷ್ಟ	12-3	ಧನಿಷ್ಠ	66-36	22

(1) ಶುಭಪ್ರದ ಗೌರೀವ್ರತಂ. (2) ಕಮರಹಳ್ಳಿಯಲ್ಲಿ ರಥ, ಶ್ರೀರಂಗಪಟ್ಟಣದಲ್ಲಿ ಚೈತ್ರೋತ್ಸವಾರಂಭ. (3) ಮದ್ದೂರು ನೃಸಿಂಹಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸ್ಪಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕಸ್ಥತಾವತಾರಾ ಪಕ್ಷಜ್ಞ ನಪ್ತೃತ್ವಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಮೇ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೧೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಥಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರಾಕ್ ಬೀಸಣಿಗೆ 1, ತಾಮಂತಿಗೆಹುಷ್ಪ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಉತ್ತರವುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
30 3, ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ವರಪಾದಿ ಗಜಾಂತಕಕಥಾರಾಶಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 31

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲಿಯುಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗನೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಆರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೮೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ, ಯೋಗಪತಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿರುದ್ರಪ್ಪಶಾಸ್ತ್ರಿಗಳು,
24 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 29

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಜಿ||.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮೇ ತಾ|| ೫ ನೆಯ ಭಾನುವಾರ.

ದಿಲ್ಲಿಯ ಯುದ್ಧಮಹಾಸಭೆ.

ಈ ಸಭೆಯು ಸೇರಿದ ಉದ್ದೇಶವನ್ನು ಇದಕ್ಕೆ ಮುಂಚೆಯೇ ನಾವು ತಿಳಿಯಿಸಿರುತ್ತೇವೆ. ಈ ಮಹಾಸಭೆಗೆ ಬರುವುದಕ್ಕೆ ೩೦೦ ಕ್ಕಿಂತ ಹೆಚ್ಚಾದ ಜನರಿಗೆ ಆಹ್ವಾನ ಪತ್ರಿಕೆಯು ಕಳುಹಿಸಲ್ಪಟ್ಟಿದ್ದಿತಂತೆ. ಸ್ವದೇಶ ಸಂಸ್ಥಾನಾಧಿಪತಿಗಳಲ್ಲಿ ಬರೋಡಾ, ಗ್ವಾಲಿಯರ್, ಕಾಶ್ಮೀರ, ಬಿಕನೀರ್, ಪಾಟಿಯಾಲಾ, ನವಾನಗರ, ಭೂಪಾಲ ಮೊದಲಾದ ಸಂಸ್ಥಾನಗಳ ಅನೇಕ ಪ್ರಭುಗಳೂ, ಪ್ರಾಂತಿಕ ಸರ್ಕಾರಗಳ ಅಧಿಕಾರಿಗಳೂ, ಸಾಮ್ರಾಜ್ಯ ಶಾಸನ ಸಭೆಯ ಸಭಿಕರುಗಳೂ, ಕೆಲ ಮುಖ್ಯ ಮುಖ್ಯ ವೃತ್ತಪತ್ರಿಕಾ ಸಂಪಾದಕರುಗಳೂ, ದೇಶೀಯ ನಾಯಕರೂ ದಯಮಾಡಿಸಿದ್ದರು. ಸ್ವರಾಜ್ಯಸಂಘ ಪ್ರಮುಖರಾದ ತಿಲಕರು, ಆನಿಬೆಸೆಂಟಮ್ಮನವರು ಮಾತ್ರ ಕರೆಯಲ್ಪಟ್ಟಿದ್ದಂತೆ ಕಾಣಲಿಲ್ಲ. ಗಂಧಿಯವರು ಕರೆಯಲ್ಪಟ್ಟಿದ್ದರು. ಅವರು ದಿಲ್ಲಿಗೆ ಹೋಗಿದ್ದರೂ ತಿಲಕರನ್ನು ಕರೆಯಲಿಲ್ಲವೆಂಬ ಕಾರಣದಿಂದ ಮುಳಿಸಿಕೊಂಡು ಸಭೆಗೆ ಹೋಗಲಿಲ್ಲವಂತೆ. ಆದರೆ ೨ ನೆ ದಿವಸ ಸಭೆಗೆ ಹೋಗಿ ಎಲ್ಲರಂತೆ ಅವರೂ ಉತ್ಸಾಹದಿಂದ ಕೆಲಸಮಾಡಿ ಬಂದರು. ತಾ|| ೨೭ ನೆ ಶನಿವಾರದ ದಿನ ಈ ಸಭೆಯು ಆರಂಭಿಸಲ್ಪಟ್ಟರೂ, ಅದಕ್ಕೆ ಮುಂಚಿನ ದಿನವೇ ಬರೋಡಾ ಮಹಾರಾಜರೇ ಮೊದಲಾದ ಕೆಲ ಪ್ರಭುಗಳೂ, ಇನ್ನೂ ಕೆಲ ದೊಡ್ಡ ಮನುಷ್ಯರೂ ವೈಸ್‌ರಾಯರ ಎ|| ಕೌನ್ಸಿಲ್ ಮೆಂಬರಾದ ಸರ್ ಕ್ಲಾಡ್‌ಹಿಲ್‌ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿ, ಮರುದಿನದಿಂದ ನಡೆಯುವ ಮಹಾಸಭೆಯ ಮುಂದೆ ಚರ್ಚಿಸಬೇಕಾದ ವಿಷಯಗಳನ್ನು ನಿರ್ಧರಿಸಿದರು.

೨೭ ನೆ ತಾ|| ಶನಿವಾರ ಹಗಲು ೧೦|| ಗಂಟೆಗೆ ವೈಸ್ರಾಯರ ಅಧ್ಯಕ್ಷತೆಯಿಂದ ಮಹಾಸಭೆಯು ಆರಂಭಿಸಲ್ಪಟ್ಟಿತು. ಅವರು ತಮ್ಮ ಭಾಷಣದೊಳಗೆ ದಿಲ್ಲಿಪಟ್ಟಣದ ಪ್ರಾಚೀನ ಪ್ರಾಶಸ್ತ್ಯವನ್ನೂ, ಆಂಗ್ಲ ಪ್ರಭುತ್ವಕಾಲದಲ್ಲೂ ಅದಕ್ಕೆ ಕೊಡಲ್ಪಟ್ಟಿರುವ ಪ್ರಾಶಸ್ತ್ಯವನ್ನೂ ವರ್ಣಿಸಿ, ಆ ವೈಭವವೆಲ್ಲಾ ಈಗ ಕೂಡಿರುವ ಸಭೆಯು ಫಲವತ್ತರವಾಗಿ ಜರುಗುವುದರಿಂದಲೇ ಸಾರ್ಥಕವಾಗತಕ್ಕುವುಗಳೆಂದು ಹೇಳಿ, ಸದ್ಯದಲ್ಲಿ ಜರ್ಮನರು ದೇಶಾಕ್ರಮಣ ದುರಾಶೆಯಿಂದ ಯುದ್ಧಮಾಡುತ್ತಿರುವುದನ್ನೂ, ಅವರ ಭೇದೋಪಾಯಾದಿಗಳಿಂದ ರಷ್ಯಾ ದೇಶವು ಮಿತ್ರಮಂಡಲಿಯಿಂದ ಒಡೆದುಹೋದ ಕಾರಣದಿಂದ ಪಶ್ಚಿಮರಣರಂಗದಲ್ಲಿ ಯುದ್ಧವು ಭೀಕರವಾಗಿ ವಿಷಮಸ್ಥಿತಿಯಲ್ಲಿರುವುದನ್ನೂ, ಇದುವರೆಗೂ ಶತ್ರುಗಳು ಬೆಲ್ಜಿಯಂ ಮೊದಲಾದ ಕಡೆಗಳಲ್ಲಿ ನಡೆಯಿಸಿರುವ ಅಧರ್ಮ, ಅನೀತಿ ಪರಂಪರೆಗಳನ್ನೂ, ಅವರಿಗೆ ಭರತಖಂಡದಮೇಲೆ ಕಣ್ಣಿರುವುದನ್ನೂ, ತುರ್ಕಿಯಮೇಲೆ ಭರತಖಂಡದಕಡೆಗೆ ನುಗ್ಗಿ ಬರುವುದಕ್ಕೆ ಮೆಸಪಟೋಮಿಯಾ ಪ್ರಾಂತದಲ್ಲಿ ಆಂಗ್ಲ ಸೈನ್ಯದ ಮತ್ತೂ ಭರತಖಂಡದ ಸೈನ್ಯ ಪರಾಕ್ರಮ ಜಯಾತಿಶಯದಿಂದ ಶತ್ರುಗಳಿಗೆ ಸಾಧ್ಯವಿಲ್ಲದಿರುವುದನ್ನೂ, ಪಶ್ಚಿಮರಂಗದಲ್ಲಿ ಶತ್ರುಗಳ ಹಾವಳಿಯು ಹೆಚ್ಚಾಗಿದ್ದರೂ ಮಿತ್ರಮಂಡಲಿ ಸೇನಾಪಙ್ಕ್ತಿಯು ದುರ್ಭೇದ್ಯವಾಗಿರುವುದನ್ನೂ, ಏಷ್ಯಾಖಂಡದಮೇಲೂ ಶತ್ರುಗಳು ಕಣ್ಣಿಟ್ಟಿರುವುದರಿಂದ ನಾವು ಭರತಖಂಡದವರು ಸಿದ್ಧರಾಗಿರಬೇಕಾದ ಅವಶ್ಯಕತೆಯನ್ನೂ, ಆಫ್ಘಾನಿಸ್ಥಾನದ ಅಮೀರರು ಯುದ್ಧಕ್ಕೆ ಮುಂಚೆ ಇದ್ದುದಕ್ಕಿಂತಲೂ ಅಧಿಕವಾಗಿಯೇ ಮೈತ್ರಿಯನ್ನು ದೃಢವಾಗಿಟ್ಟುಕೊಂಡಿರುವುದನ್ನೂ, ಶತ್ರುಗಳು ಭರತಖಂಡದಲ್ಲಿ ಭೇದೋಪಾಯ ನಡೆಯಿಸುವುದಕ್ಕೆ ಪ್ರಯತ್ನಿಸಿ ವಿಫಲಮನೋರಥರಾದುದನ್ನೂ ಹೇಳಿ, ನಾವು ಸಾಮ್ರಾಜ್ಯ ವಿಜಯಕ್ಕಾಗಿ ಅತಿಶಯವಾಗಿ ಸೈನ್ಯವನ್ನು ಕೂಡಿಸಬೇಕಾಗಿರುವುದನ್ನೂ, ಯುದ್ಧಪರಿಕರಾದಿಗಳನ್ನು ಒದಗಿಸಬೇಕಾದುದನ್ನೂ ಕುರಿತು ಕಟ್ಟಕಡೆಗೆ ಹೇಳುವಾಗ್ಗೆ ಈ ಯುದ್ಧವು ಭರತಖಂಡದ ಯುದ್ಧವೇ ಎಂತಲೂ, ಇದಕ್ಕೆ ಭಾರತಪುತ್ರರೇ ನಡುಕಟ್ಟಿ ನಿಲ್ಲಬೇಕೆಂತಲೂ, ಆ ವಿಧವಾದ ಭಾವನೆಯನ್ನು ದೇಶದಲ್ಲೆಲ್ಲಾ ಉಂಟುಮಾಡಬೇಕೆಂತಲೂ, ಸಂಪೂರ್ಣ ವಿಜಯ ಪ್ರಾಪ್ತಿಯಾಗುವವರೆಗೂ ನಾವು ಇಂಥ ಪ್ರಯತ್ನವನ್ನು ಬಿಡಲಾಗದೆಂತಲೂ ಹೇಳಿ, ಈ ಕಾರ್ಯಸ್ವರೂಪ ನಿರ್ಣಯವನ್ನು ಮರವಿಮಾಡುವುದಕ್ಕಾಗಿ ೨ ಸಂಘಗಳನ್ನು ನಿರ್ಮಿಸಬೇಕಾದ ಅವಶ್ಯಕತೆಯನ್ನೂ, ಯುದ್ಧಭಾರವನ್ನು ನಿರ್ವಹಿಸುವುದಕ್ಕಾಗಿ ಪ್ರಜೆಗಳ ಮೇಲೆ ಹೊಸ ತೆರಿಗೆಗಳನ್ನು ಹಾಕಬೇಕಾಗಿ ಬಂದಿರುವುದನ್ನೂ, ಅಮೇರಿಕಾದಿಂದ ಇಷ್ಟರಲ್ಲೇ ಬರುವುದಾಗಿರುವ ಬೆಳ್ಳಿಯು ಇಲ್ಲಿಗೆ ಬಂದು ಸೇರಿದ ಕೂಡಲೇ ಇಲ್ಲಿ ಆರ್ಥಿಕ ವಿಷಯಕವಾದ ಭಾರವು ಸ್ವಲ್ಪ ತಗ್ಗುವುದೆಂಬುದನ್ನೂ, ಈಗಣ ವಿಷಮಾವಸ್ಥೆಯಲ್ಲಿ ಭರತಖಂಡವೂ ಸಕಲವಿಧದಿಂದಲೂ ಸಾಮ್ರಾಜ್ಯಕ್ಕೆ ಸಹಾಯಮಾಡಿ ತನ್ನ ಗೌರವವನ್ನು ಕಾಪಾಡಿಕೊಳ್ಳಬೇಕೆಂಬುದನ್ನೂ ಅಪ್ಪಣೆಕೊಡಿಸಿದುದಲ್ಲದೆ, ರಾಜಕೀಯ ಸುಧಾರಣ ಸಂಬಂಧದ ಚಳವಳಿಯ ವಿಷಯವಾಗಿ ಮಾತನಾಡುವಾಗ್ಗೆ—"ಇಂಥ ಕಷ್ಟದಿನದಲ್ಲಿ ಧರ್ಮಸೂಕ್ಷ್ಮ ಮೂಲದಲ್ಲೇ ಅಭಿಪ್ರಾಯ ಭೇದವನ್ನು ಹೊಂದಿರುವ ಜನರನ್ನು ಇಂಥ ಸಭೆಗೆ ಬರಮಾಡಿಕೊಳ್ಳುವುದು ನಿಷ್ಪ್ರಯೋಜನವು. ಈ ಮಹಾಶಯರು ಧರ್ಮಸೂಕ್ಷ್ಮಗಳನ್ನು ಕುರಿತು ಮಲ್ಲಗಾಳಗ ಮಾಡುತ್ತಾರೆ. ಮನೆಗೆ ಬೆಂಕಿ ಅಂಟಿಕೊಂಡಿದೆ. ಇಂಗ್ಲೆಂಡು ದೇಶಕ್ಕೆ ಈಗ ಒದಗಿರುವ ಕಷ್ಟದಶೆಯನ್ನು ತಮಗೆ ಲಾಭಕರವನ್ನಾಗಿ ಮಾಡಿಕೊಳ್ಳುವದಕ್ಕೆ ಕೆಲವರು ಯೋಚಿಸುತ್ತಿದ್ದಾರೆ. ಈ ಮಹನೀಯರು ಭರತಖಂಡದ ವೈಖರಿಯನ್ನು ಕುರಿತು ದುಷ್ಟವ್ಯಾಖ್ಯಾನವನ್ನು ಮಾಡುತ್ತಿದ್ದಾರೆ. ಅಂಥ ರೀತಿಯ ಜನರು ಈ ಸಭೆಯಲ್ಲಿರುವರೆಂದು ನಾನು ನಂಬುವುದಿಲ್ಲ. ಒಂದನ್ನು ಕೊಟ್ಟು ಒಂಬನ್ನು ತೆಗೆದುಕೊಳ್ಳುವ ಮಾರಾಟದ ರೀತಿಯನ್ನು ಸೂಚಿಸುವ ಕೆಲವರಿರುವರು. ಅಂಥ ಬುದ್ಧಿಯಿಂದ ಯಾರೂ ಈ ಸಭೆಗೆ ಬಂದಿಲ್ಲವೆಂದು ನಾನು ಯೋಚಿಸುತ್ತೇನೆ. ಮೊದಲು ನಮಗೆ ಅದಾಗಬೇಕು, ಇದಾಗಬೇಕು ಎಂದು ಹಾರಾಡುವ ಕೆಲವರಿದ್ದಾರೆ. ಯುದ್ಧವು ಮುಗಿದ ಕೂಡಲೇ ರಾಜಕೀಯ ವ್ಯವಸ್ಥೆಯು ಪುನರ್ನಿರ್ಮಿತವಾಗದೆ ಹೋಗುವುದಿಲ್ಲವೆಂಬುದನ್ನು ನಾವು ಬಲ್ಲೆವು. ಆ ವಿಷಯದಲ್ಲಿ ನಾವು ಮಾಡಬೇಕಾದ ಕಾರ್ಯವೆಲ್ಲಾ ಮುಗಿದುಹೋಗಿದೆ. ಎಲ್ಲರೂ ಹೇಳಿದುದನ್ನೆಲ್ಲಾ ಕೇಳಿದ್ದೇವೆ. ಇನ್ನು ಸಹನೆಯಿಂದ ನಿರೀಕ್ಷಿಸಿಕೊಂಡಿರಬೇಕು. ವಿಮರ್ಶೆಗೂ ಚರ್ಚೆಗೂ ಅವಕಾಶ ಕೊಡದೆ ಯಾವ ತೀರ್ಮಾನವೂ ಮಾಡಲ್ಪಡುವುದಿಲ್ಲ. ಈ ವಿಷಯವಾಗಿ ಭರತಖಂಡವು ಸಂಶಯಪಡಬೇಕಾದುದಿಲ್ಲ. ಲೋಕಸ್ವಾತಂತ್ರ್ಯವನ್ನು ಮೊದಲು ರಕ್ಷಿಸಿಕೊಂಡು ಅನಂತರ ನಮ್ಮ ಸ್ವಾತಂತ್ರ್ಯರಕ್ಷಣೆಗೆ ಯೋಚಿಸಿಕೊಳ್ಳುವುದು ಉತ್ತಮವು" ಎಂದು ಹೇಳಿ ತಮ್ಮ ಉಪನ್ಯಾಸವನ್ನು ಮುಗಿಸಿ, ಬಳಿಕ ಈ ಸಭೆಗಾಗಿ ಸಾರ್ವಭೌಮರು ತಂತ್ರೀವಾರ್ತೆಯ ಮೂಲಕ ಕಳುಹಿಸಿಕೊಟ್ಟಿದ್ದ ಸಂದೇಶವನ್ನು ಓದಿ ಹೇಳಿದರು. ಅದರಲ್ಲಿ—"ಲೋಕಸ್ವಾತಂತ್ರ್ಯವಿನಾಶಕ್ಕಾಗಿ ಶತ್ರುಗಳು ಸಾಗಿಸುತ್ತಿರುವ ಈಗಣ ಮಹಾಯುದ್ಧಕ್ಕಾಗಿ ಸಕಲ ಸಹಾಯವನ್ನೂ ಒದಗಿಸಿಕೊಟ್ಟು, ತಮಗೆ ಶಕ್ತಿಯಿರುವವಮಟ್ಟಿಗೂ ಯುದ್ಧವನ್ನು ಜಯಪ್ರದವಾಗುವಂತೆ ಸಾಗಿಸಲು ತಮ್ಮ ಕೃತನಿಶ್ಚಯವನ್ನು ವ್ಯಕ್ತಪಡಿಸುವುದಕ್ಕಾಗಿ ಈ ಮಹಾ ಸಭೆಯು ಕೂಡಲಿಕ್ಕಿರುವುದೆಂದು ಕೇಳಿ ನನಗೆ ತುಂಬಾ ಸಂತೋಷವಾಯಿತು. ಇದುವರೆಗೆ ಭರತಖಂಡವು ಮಿತ್ರಮಂಡಲಿಗೆ ಎಷ್ಟೋ ಸಹಾಯಮಾಡಿದ್ದರೂ ಅದು ಸಾಲದು. ನನ್ನ ಪ್ರತಿನಿಧಿಯು (ವೈಸ್ರಾಯರು) ಮಾಡಿಕೊಡುವ ಮಾರ್ಗಪ್ರದರ್ಶನದಂತೆ ಭಾರತೀಯರೆಲ್ಲಾ ನಡೆದು ತಮ್ಮ ಪ್ರಯತ್ನವನ್ನು ಜಯಶಾಲಿಯನ್ನಾಗಿ ಮಾಡಿಕೊಳ್ಳುವರೆಂದು ನಂಬುತ್ತೇನೆ. ಈ ಸಭೆಯವರು ಪ್ರಜೆಗಳಲ್ಲಿ ದೇಶಭಕ್ತಿಪೂರಿತವಾದ ಐಕ್ಯವನ್ನೂ, ಸರ್ವಪ್ರಯತ್ನ ಸಮಗ್ರತೆಯನ್ನೂ, ಸ್ವಾರ್ಥತ್ಯಾಗ ಸಮುತ್ಸಾಹವನ್ನೂ ವೃದ್ಧಿಗೊಳಿಸದಿರಲಾರರೆಂದು ನಂಬಿ ಈ ಮಹಾಸಭೆಯ ಫಲವನ್ನು ನಿರೀಕ್ಷಿಸುತ್ತಲಿರುವೆನು. ಹೀಗೆ ಮಾಡಿದಲ್ಲದೆ ನಮ್ಮ ಘನತರಾಶಯವನ್ನು ಸಫಲಗೊಳಿಸತಕ್ಕ ಶಾಶ್ವತ ವಿಜಯವು ನಮಗೆ ಲಭಿಸುವುದಿಲ್ಲ" ಎಂಬ ಅಭಿಪ್ರಾಯವು ತಿಳಿಯಿಸಲ್ಪಟ್ಟಿದ್ದಿತು.

ಇದನ್ನೋದಿ ಮುಗಿಸಿದಬಳಿಕ ೨ ಕಾರ್ಯಾಲೋಚನ ಸಭೆಗಳು ಏರ್ಪಡಿಸಲ್ಪಟ್ಟುವು. ಇವುಗಳಲ್ಲಿ ಮೊದಲನೆಸಭೆಯು ಯುದ್ಧಕ್ಕೆ ಮನುಷ್ಯಬಲವನ್ನು ಯಾವ ರೀತಿಯಿಂದ ಒದಗಿಸಿಕೊಳ್ಳಬಹುದೆಂಬುದನ್ನು ನಿರ್ಧರಿಸುವುದು. ಇದಕ್ಕೆ ಭರತಖಂಡದ ಸರ್ವಸೇನಾಪತಿಗಳು ಅಧ್ಯಕ್ಷರು. ಕಾಶ್ಮೀರ, ಬಿಕನೀರು, ಪಾಟಿಯಾಲಾ ಮಹಾರಾಜರುಗಳೂ ಇತರ ಅನೇಕ ಮಂದಿ ಸಭಿಕರುಗಳೂ ಸಭ್ಯರಾಗಿ ಸೇರಿಸಲ್ಪಟ್ಟರು. ೨ ನೆ ಸಭೆಯು ಯುದ್ಧಕ್ಕೆ ಬೇಕಾದ ಆಹಾರ್ಯವಸ್ತುಗಳು ಮದ್ದುಗುಂಡುಗಳು ಮೊದಲಾದ ಸಾಮಗ್ರಿಗಳನ್ನು ಯಾವ ರೀತಿಯಿಂದ ಒದಗಿಸಿಕೊಳ್ಳಬಹುದೆಂಬುದನ್ನು ನಿರ್ಧರಿಸುವುದು. ಇದಕ್ಕೆ ಸರ್. ಕ್ಲಾಡ್‌ಹಿಲ್‌ರವರು ಅಧ್ಯಕ್ಷರು. ಗ್ವಾಲಿಯರ್, ಧೋಲ್ಪುರ, ನವಾನಗರ್ ಸಂಸ್ಥಾನಾಧಿಪತಿಗಳೂ, ಇತರ ಅನೇಕ ಮಂದಿ ಸಭಿಕರೂ ಸಭ್ಯರಾಗಿರುವರು. ಇವೆರಡು ಸಭೆಯವರೂ ಸಹ ಬೇರೆ ಬೇರೆ ಶನಿವಾರ ಮಧ್ಯಾಹ್ನವೂ ಭಾನುವಾರವೂ ಸಹ ಆಲೋಚನೆಮಾಡಿ ತಮ್ಮ ಸೂಚನೆಗಳನ್ನು ಸೋಮವಾರದದಿನ ಕೂಡಿದ ಸಭೆಯಮುಂದಿಟ್ಟರು. ಮೊದಲನೆ ಸಭೆಯವರು ಮಾಡಿದ ಸೂಚನೆಗಳೇನೆಂದರೆ—

ಸಾರ್ವಭೌಮರು ಕಳುಹಿಸಿಕೊಟ್ಟ ಸಂದೇಶಕ್ಕೆ ಕೃತಜ್ಞತೆಯನ್ನು ತಿಳಿಯಿಸುವುದು, ಜನಬಲವನ್ನು ಕೂಡಿಸಿಕೊಡುವುದರಲ್ಲಿ ಪ್ರಭುತ್ವದವರಿಗೆ ಸಂಪೂರ್ಣ ಸಹಾಯವನ್ನು ಮಾಡುವೆವೆಂಬುದು, ಸ್ವೇಚ್ಛಾ ಸೈನಿಕರ ಪಟಾಲಮ್ಮುಗಳನ್ನೇ ಏರ್ಪಡಿಸುವುದು, ನಿರ್ಬಂಧಸೈನಿಕ ಶಾಸನವನ್ನು ಕುರಿತು ಸದ್ಯದಲ್ಲಿ ಯೋಚಿಸಲವಶ್ಯವಿಲ್ಲ. ಭಾರತೀಯರಿಗೆ ಸೇನಾನಾಯಕೋದ್ಯೋಗಗಳನ್ನು ಕೊಟ್ಟು ಅವರಿಗೆ ತಕ್ಕ ಶಿಕ್ಷಣೆಯನ್ನು ಕೂಡಲೇ ಕೊಡಿಸುವುದು, ಯುದ್ಧಭಟರ ಸಂಬಳವನ್ನು ಹೆಚ್ಚಿಸುವುದು, ಪ್ರತಿಯೊಂದು ಪ್ರಾಂತದಲ್ಲೂ ಉದ್ಯೋಗಿಗಳ ಕೂಟವನ್ನೇರ್ಪಡಿಸಿ ಹೊಸ ಪಟಾಲಮುಗಳನ್ನು ಅಣಿಮಾಡುವುದು. ಇನ್ನು ೨ ನೆ ಸಭೆಯವರು ಸೂಚಿಸಿರುವುದೇನೆಂದರೆ—ಪ್ರಜೆಗಳು ಪ್ರತಿ ವಿಷಯದಲ್ಲೂ ಮಿತವ್ಯಯವನ್ನು ಸಾಧಿಸುವಂತೆ ಮಾಡುವುದು, ಸರ್ಕಾರದವರು ಈಗ ಕಟ್ಟಿಸುತ್ತಲಿರುವ ಕಟ್ಟಡಗಳಲ್ಲಿ ಅತ್ಯವಸರವಲ್ಲದುವುಗಳ ಕೆಲಸವನ್ನೆಲ್ಲಾ ನಿಲ್ಲಿಸಿಬಿಟ್ಟು ಅದರ ಹಣವನ್ನು ಶೇಖರಿಸುವುದು. ಲೋಹಮಾರ್ಗಗಳಮೇಲೆ ಜರುಗುತ್ತಿರುವ ವ್ಯಾಪಾರವನ್ನು ಸಾಧ್ಯವಾಗುವಷ್ಟು ಕಾಲದವರೆಗೆ ತಡೆದು ನಿಲ್ಲಿಸುವುದು. ಅವಶ್ಯಕವಾದಷ್ಟು ಸಾಮಗ್ರಿಗಳನ್ನು ಮಾತ್ರ ಲೋಹಮಾರ್ಗಗಳಮೇಲೆ ಸಾಗಿಸುವಂತೆ ಮಾಡುವುದು. ಈ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಸರ್ಕಾರಿ ಶಾಖೆಗಳಿಗೂ ಪ್ರಜೆಗಳಿಗೂ ಸಹಾಯಮಾಡುವುದಕ್ಕಾಗಿ ಎಲ್ಲ ಪ್ರದೇಶಗಳಲ್ಲೂ ಸ್ಟೇಟ್ ಕಮಿಟಿಗಳನ್ನು ಏರ್ಪಡಿಸುವುದು. ಲೋಹಮಾರ್ಗಗಳಮೇಲೆ ಸರಕು ಸಾಗಿಸುವುದನ್ನು ಕಡಿಮೆಮಾಡಿ ಜಲಮಾರ್ಗದಲ್ಲಿ ಅವುಗಳನ್ನು ಹೆಚ್ಚಿಗೆ ಸಾಗಿಸುವಂತೆ ಮಾಡುವುದಕ್ಕಾಗಿ ಪ್ರಭುತ್ವದವರು ದೋಣಿಗಳನ್ನೂ ಹಡಗುಗಳನ್ನೂ ಹೊಸದಾಗಿ ಕಟ್ಟುವವರನ್ನು ಪ್ರೋತ್ಸಾಹಿಸಬೇಕು. ಪ್ರಾಂತಿಕ ಸಭೆಗಳೇರ್ಪಟ್ಟು, ಅವುಗಳು ಅಲ್ಲಲ್ಲಿ ಮದ್ದು ಗುಂಡು ಮೊದಲಾದ ಸಾಮಗ್ರಿಗಳನ್ನು ನಿರ್ಮಿಸುವ ಸಂಘಗಳಿಗೆ ಬೇಕಾದ ವಸ್ತುಗಳನ್ನು ದೇಶದಲ್ಲಿ ಸಮೃದ್ಧವಾಗಿ ಹುಟ್ಟಿಸುವುದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಬೇಕು. ಯುದ್ಧಾವಸರಕ್ಕಾಗಿ ದೇಶದ ವೆಚ್ಚವನ್ನು ಸಾಧ್ಯವಾದಷ್ಟು ಕಡಿಮೆಮಾಡುವುದು. ಸಾಮಾನುಗಳ ಬೆಲೆಯು ಮಿತಿಮೀರಿಹೋಗದಂತೆ ನೋಡಿಕೊಳ್ಳುವುದು. ಬೇಸಾಯಗಾರರೊಡನೆಯೂ ತಜ್ಞೋದ್ಯೋಗಿಗಳೊಡನೆಯೂ ಆಲೋಚನೆಮಾಡಿ ದೇಶದಲ್ಲಿ ಆಹಾರ್ಯಪದಾರ್ಥಗಳನ್ನು ವಿಶೇಷವಾಗಿ ಬೆಳೆಯುವಂತೆ ಮಾಡುವುದು.

ಈ ಮೇಲ್ಕಂಡ ಸೂಚನೆಗಳನ್ನೆಲ್ಲಾ ಮಹಾಸಭೆಯವರು ಸೋಮವಾರದಿಂದಲೂ ಆಲೋಚಿಸುವುದಕ್ಕೆ ಆರಂಭಿಸಿದರು. ಬಳಿಕ ಅನೇಕ ನಿರ್ಧಾರಗಳು ಮಾಡಲ್ಪಟ್ಟುವು.

ಮೊದಲನೆ ತೀರ್ಮಾನವು, ಸಾರ್ವಭೌಮರಿಗೆ ನಮ್ಮ ರಾಜಭಕ್ತಿಯನ್ನು ತಿಳಿಯಪಡಿಸುವುದಾಗಿದ್ದಿತು. ಇದನ್ನು ಬರೋಡಾ ಮಹಾರಾಜರು ಉಪಪಾದಿಸಿದರು. ಗ್ವಾಲಿಯರ್, ಭೋಪಾಲ್, ಬಿಕಾನೀರ್, ಪಾಟಿಯಾಲಾ ಮಹಾರಾಜರುಗಳೂ, ಸುರೇಂದ್ರನಾಥ ಬಾನರ್ಜಿ, ಮಹಮ್ಮದಾಬಾದ್ ರಾಜರು, ಹಸನ್ ಇಮಾಮ್, ಶ್ರೀನಿವಾಸಶಾಸ್ತ್ರಿ, ಗಂಧಿ, ಪಂಡಿತ ಮದನಮೋಹನ ಮಾಳವ್ಯ ಮೊದಲಾದನೇಕರು ಬಲಪಡಿಸಿ ಮಾತನಾಡಿದರು. ಇದಾದಬಳಿಕ ಮೇಲ್ಕಂಡ ಸಂಘಗಳ ಸೂಚನೆಯನ್ನನುಸರಿಸಿಯೇ ಅನೇಕ ತೀರ್ಮಾನಗಳು ಮಾಡಲ್ಪಟ್ಟು ಸಭಾಕಾರ್ಯವು ಮುಗಿದಿತು.

ವೈಸ್ರಾಯರು ತಕ್ಕ ಸಮಯದಲ್ಲಿ ಮುಂದಾಲೋಚನೆಯಿಂದ ಈ ಮಹಾಸಭೆಯನ್ನು ಕೂಡಿಸಿ, ಭಾರತ ಪ್ರಮುಖರ ಅಭಿಪ್ರಾಯವನ್ನೆಲ್ಲಾ ಯುದ್ಧಕಾರ್ಯನಿರ್ವಾಹದಲ್ಲಿ ಕೇಂದ್ರೀಕರಿಸುವಂತೆ ಮಾಡಿದುದು ಸಾಮ್ರಾಜ್ಯಕ್ಕೂ ಮುಖ್ಯವಾಗಿ ಭರತಖಂಡಕ್ಕೂ ಬಹಳ ಹಿತಕರವಾದ ಏರ್ಪಾಟಾಗಿದೆ. ಮಹಾಸಭೆಯಲ್ಲಿ ಅವರು ಮಾಡಿದ ಭಾಷಣವೂ, ಚಕ್ರವರ್ತಿಯವರು ಕಳುಹಿಸಿಕೊಟ್ಟಿದ್ದ ಸಂದೇಶವೂ ಕೂಡ ಸಕಲ ಭಾರತ ಪ್ರಜಾಚಿತ್ತಾಕರ್ಷಕವಾಗಿಯೂ, ಸಮಯೋಚಿತವಾಗಿಯೂ, ಉತ್ಸಾಹಜನಕವಾಗಿಯೂ, ಮಹೋದಾರವಾಗಿಯೂ, ರಾಜಭಕ್ತಿ ದೇಶಭಕ್ತಿ ಶೌರ್ಯ ಧೈರ್ಯ ಪರಾಕ್ರಮ ಪ್ರತಿಷ್ಠೆಗಳನ್ನೂ ಸತ್ಯಧರ್ಮಾಭಿಮಾನಗಳನ್ನೂ ಪ್ರೋತ್ಸಾಹಿಸತಕ್ಕುವುಗಳಾಗಿಯೂ ಇರುತ್ತಿವೆ. ಯುದ್ಧ ಮುಗಿದಕೂಡಲೇ ಭರತಖಂಡದ ರಾಜಕೀಯ ಸುಧಾರಣೆಯ ವಿಷಯವು ತಪ್ಪದೆ ಗಮನಿಸಲ್ಪಡುವುದೆಂಬ ಅಭಯವಾದರೂ ಅದರಲ್ಲಿ ಕಾಣಿಸಲ್ಪಟ್ಟಿದೆ. ಅಲ್ಲದೆ ಕೆಲವು ಮಂದಿ ಉಗ್ರಪಕ್ಷೀಯ ತತ್ಕ್ಷಣ ಸ್ವರಾಜ್ಯಕುತೂಹಲರ ನಿರಂಕುಶವಾಕ್ಯಗಳು, ಸ್ವರಾಜ್ಯವಾದ ಸುಮುಖರಾದ ವೈಸ್ರಾಯರ ಮನಸ್ಸನ್ನೂ ಕೂಡ ಇತ್ತೀಚೆಗೆ ಹೇಗೆ ಕಲುಷಗೊಳಿಸಿದೆಯೆಂಬ ವಿಷಯವಾದರೂ ಅವರ ಭಾಷಣದಿಂದ ಗೊತ್ತಾಗುತ್ತದೆ. ದೇಶೀಯ ಪ್ರಮುಖರೆನಿಸಿಕೊಳ್ಳುವವರು ಈ ಬಿಕ್ಕಟ್ಟಿನ ಸಮಯವನ್ನೇ ಅನುಕೂಲವೆಂದೆಣಿಸಿ, ಚಳವಳಿಯನ್ನು ಹುಟ್ಟಿಸುವುದಕ್ಕಾಗಿ ಎಷ್ಟೆಷ್ಟು ಗದ್ದಲಮಾಡುತ್ತ ಬರುವರೋ ಅಷ್ಟಷ್ಟೂ ಪ್ರಭುತ್ವದವರ ಮನಸ್ಸು ಕಠಿನವಾಗುತ್ತ ಭರತಖಂಡದ ಸ್ವರಾಜ್ಯಪ್ರಾಪ್ತಿಯು ದೂರವಾಗುತ್ತ ಬರುತ್ತದೆನ್ನುವುದಕ್ಕೆ ಸಂಶಯವಿಲ್ಲ.

ಈ ಮಹಾಸಭೆಗೂ ಸಹ ಸ್ವರಾಜ್ಯವಿಷಯವಾದ ಸೂಚನೆಯನ್ನು ಆ ಪಕ್ಷದ ಆ|| ಕಪರ್ದೆಯವರು ಕಳುಹಿಸಿರಲು "ಯುದ್ಧ ಮುಗಿದಮೇಲೆ ರಾಜಕೀಯ ವ್ಯವಹಾರ ವ್ಯವಸ್ಥೆಯು ತಪ್ಪದೆ ಮಾಡಲ್ಪಡುವುದು. ಆ ವಿಷಯವನ್ನು ಈಗ ಯೋಚಿಸುವುದು ಅಪ್ರಕೃತವು ಮತ್ತೂ ಅಕಾಲವು" ಎಂದು ಮೊದಲಾಗಿ ವೈಸ್ರಾಯರು ಅಪ್ಪಣೆಕೊಡಿಸಿ, ಆ ತೀರ್ಮಾನವನ್ನು ನಿರಾಕರಿಸಿಬಿಟ್ಟರು. ಇದರಿಂದ ಭಾರತ ಪ್ರಭುತ್ವದವರ ಗಮನವು ಹೇಗಿದೆಯೆಂಬುದು ವಿಸ್ಪಷ್ಟವಾಗಿರುವುದು. ಈ ವಿಷಯವಾಗಿ ಹಿಂದೆ ನಾವು ಹಲವುಸಲ ಸಾರಿರುವಂತೆ ಈಗಲೂ ಹೇಳುವುದೇನೆಂದರೆ—ಭಾರತೀಯರೆಲ್ಲರೂ ಈಗ ಒಮ್ಮನಸ್ಸಿನಿಂದ ಶತ್ರುನಿಗ್ರಹ ಮಾಡುವುದೊಂದನ್ನೇ ಮುಖ್ಯ ಲಕ್ಷ್ಯವಾಗಿಟ್ಟುಕೊಂಡು ನಿಷ್ಕಾಮಕರ್ಮಿಗಳಂತೆ ಕೆಲಸಮಾಡುವರಾದರೆ, ಪ್ರಭುತ್ವದವರು ಭರತಖಂಡದ ಇಷ್ಟಾರ್ಥವನ್ನು ಯುದ್ಧಮುಗಿದಕೂಡಲೇ ಪರಿಪೂರಣ ಮಾಡಿಕೊಡದೆ ಲೋಕನಿಂದೆಗೆ ಎಂದಿಗೂ ಪಾತ್ರರಾಗಲಾರರು. ಬರವಸೆಯಿಟ್ಟು ನಾವು ಜನಬಲ ಧನಬಲ ಮೊದಲಾದುವುಗಳನ್ನೆಲಾ ರಾಜಭಕ್ತಿಯಿಂದ ಒದಗಿಸಿಕೊಡುವುದೊಂದೇ ನಮ್ಮ ಕರ್ತವ್ಯಕರ್ಮವಾಗಿರಬೇಕು. ನಮ್ಮ ದೇಶೀಯ ಪ್ರಮುಖರೆನಿಸಿಕೊಂಡು ದೇಶಹಿತಸಾಧನವನ್ನು ಮಾಡತಕ್ಕವರೆಲ್ಲರೂ ಈಗ ಎಲ್ಲ ತೆರದ ಚಳವಳಿಗಳನ್ನೂ ಕಟ್ಟಿಟ್ಟು, ಸಾಮ್ರಾಜ್ಯರಕ್ಷಣವೊಂದನ್ನು ಮಾಡಿಕೊಳ್ಳುವುದರಲ್ಲಿ ವ್ಯಗ್ರರಾಗಿ ಪ್ರಭುತ್ವದವರಿಗೆ ಸರ್ವಸಹಾಯವನ್ನೂ ಮಾಡಿಸಿಕೊಡುತ್ತ ಬಂದರೆ ಅಂಥ ಕ್ರಿಯಾಸಿದ್ಧಿಯು ತಕ್ಕ ಫಲವನ್ನು ಭರತಖಂಡಕ್ಕೆ ಮಾಡಿಕೊಟ್ಟೇ ಕೊಡುವುದು.

ಒಳದೇಶದ ವೃತ್ತಾಂತಗಳು.

ಕಳೆದ ಗುರುವಾರ ರಾಜಧಾನಿಯಲ್ಲಿ ಬಲವಾದ ಮಳೆಯಾಯಿತು. ದಗೆಯು ಇನ್ನೂ ಅಡಗಿಲ್ಲ.

ಶ್ರೀಮನ್ಮಹಾರಾಜರು ಯುದ್ಧದ ವೆಚ್ಚಕ್ಕಾಗಿ ೧೦ ಲಕ್ಷ. ಯುದ್ಧದ ಸಾಲಕ್ಕೆ ೩೦ ಲಕ್ಷ ರೂ. ಗಳನ್ನು ಕೊಟ್ಟಿರುವರು.

ನಮ್ಮ ದಿವಾನರು ದಿಲ್ಲಿಗೆ ಪ್ರಯಾಣಮಾಡುವರೆಂದಿದ್ದ ಸುದ್ದಿಯು ನಿರಾಧಾರವಾಯಿತು. ಬರುವ ವಾರದಲ್ಲಿ ಅವರು ನೀಲಗಿರಿಗೆ ಪ್ರಯಾಣಮಾಡುವವರಲ್ಲಿರುವರು.

ರಾಜಧಾನಿಯಲ್ಲಿ ನಮ್ಮ ದಿವಾನ್ ಸರ್ ವಿಶ್ವೇಶ್ವರಯ್ಯನವರ ಭಾವಪ್ರತಿಮೆಯು ಪ್ರತಿಷ್ಠಿಸಲ್ಪಡುವಂತೆ ಮಾಡುವುದಕ್ಕೆ ದೇಶೀಯರಲ್ಲಿ ಕೆಲವರು ಪ್ರಯತ್ನಿಸಿರುವರೆಂದು ಕೇಳುತ್ತೇವೆ.

ರೆವಿನ್ಯೂ ಅಧಿಕಾರಿಗಳಿಂದ ಮೇಜಿಸ್ಟ್ರೇಟ್ ಅಧಿಕಾರವನ್ನು ಪ್ರತ್ಯೇಕಪಡಿಸುವ ಏರ್ಪಾಟು ಸದ್ಯಃ ಮೈಸೂರು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಪರೀಕ್ಷಿಸಲ್ಪಡುವುದಕ್ಕಿದೆಯೆಂದು ಕೇಳುತ್ತೇವೆ.

ಬೆಂಗಳೂರಿನ ಮ|| ಬುಳ್ಳಪ್ಪನವರು ಚಾಮರಾಜಪೇಟೆಯಲ್ಲಿ ರೂ. ಗೆ ೧೦ ಮಣ ಸವಿದೆಯಂತೆ ಮಾರಿಸುವುದಕ್ಕೆ ಏರ್ಪಡಿಸಿರುವುದರಿಂದ ಪ್ರಜೆಗಳಿಗೆ ಬಹಳ ಅನುಕೂಲವಾಗಿದೆಯೆಂದು ಕೇಳುತ್ತೇವೆ.

ನಮ್ಮ ದೇಶದಲ್ಲಿ ಬಹುದಿನ ಮುಜರಾಯಿ ಸೆಕ್ರೆಟರಿಯವರಾಗಿದ್ದು ನಿವೃತ್ತರಾಗಿದ್ದ ಮ|| ಆರ್ಕಾಟ್ ಶ್ರೀನಿವಾಸಾಚಾರ್ಲುಯವರು ಕಳೆದ ತಾ|| ೨೭ರಲ್ಲಿ ತಂಜಾವೂರಿನಲ್ಲಿ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

ಮ|| ಆರ್. ಶ್ಯಾಮಾಶಾಸ್ತ್ರಿಗಳು ಮೈಸೂರು ಓರಿಯಂಟಲ್ ಲೈಬ್ರೆರಿಯ ಕ್ಯೂರೇಟರಾಗಿ ನಿಯಮಿಸಲ್ಪಟ್ಟಿರುವರು. ಇವರು ಕೆಲ ಕಾಲ ಅದೇ ಲೈಬ್ರೆರಿಯಲ್ಲಿ ಬೇರೆ ಕೆಲಸದಮೇಲಿದ್ದು ಈಚೆಗೆ ಬೆಂಗಳೂರು ಕಲಾಶಾಲೆಯ ಅಧ್ಯಕ್ಷರಾಗಿದ್ದರು.

೪ ನೆ ಕರ್ನಾಟಕ ಸಾಹಿತ್ಯ ಸಮ್ಮೇಳನವು ಇದೇ ತಿಂಗಳು ತಾ|| ೧೧-೧೨-೧೩ ರಲ್ಲಿ ಧಾರವಾಡದಲ್ಲಿ ನೆರವೇರುವುದು. ಭಾಷಾಭಿಮಾನಿಗಳೆಲ್ಲರೂ ಈ ಕಾರ್ಯದಲ್ಲಿ ಅಂಗವಾಗಿದ್ದುಕೊಂಡು ಯಥಾಶಕ್ತಿ ಭಾಷಾಸೇವೆಯನ್ನು ಮಾಡುವುದಕ್ಕೆ ಹಿಂಜರಿಯಬಾರದು.

ದೊಡ್ಡಬಳ್ಳಾಪುರದ ಮ|| ಡಿ. ಕೊಂಗಾಡಿಯಪ್ಪನವರು ಅಲ್ಲಿಯ ಮ್ಯುನಿಸಿಪಲ್ ಕೌನ್ಸಿಲ್ಲಿನ ವೈಸ್‌ಪ್ರೆಸಿಡೆಂಟರಾಗಿಯೂ ಚನ್ನಪಟ್ಟಣದ ಮ್ಯುನಿ- ಸಂಘಕ್ಕೆ ಅಲ್ಲಿಯ ಮ|| ಅಬ್ದುಲ್ ಖುದೂಸ್ ಸಾಹೇಬರು ವೈಸ್‌ಪ್ರೆಸಿಡೆಂಟರಾಗಿಯೂ ನಿಯಮಿಸಲ್ಪಟ್ಟಿದ್ದಾರೆ.

ವಿದ್ಯಾಭ್ಯಾಸಶಾಖಾ ಇನ್ಸ್|| ಜನರಲ್‌ರಾದ ಮ|| ಸಿ. ರಾಮಲಿಂಗಂ ಎಂ.ಎ., ಯವರು ಕಳೆದವಾರ ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿಗಳಲ್ಲಿ ಹಲವನ್ನು ಸೇರಿಸಿ ವಿದ್ಯಾಭ್ಯಾಸವನ್ನು ಸಮರ್ಪಕವಾಗಿ ನಡೆಯಿಸಬೇಕಾದ ವಿಷಯದಲ್ಲಿ ಅವರುಗಳ ಸೂಚನೆಯನ್ನು ತೆಗೆದುಕೊಂಡರು.

ಒಂದು ವರ್ಷ ಕಾಲದಿಂದ ಪಕ್ಷಪತ್ರಿಕೆಯಾಗಿ ಪ್ರಕಟವಾಗುತ್ತಿದ್ದ ಗಳೂರು ಡಿಸ್ಟ್ರಿಕ್ಟ್ ಪತ್ರಿಕೆಯು ಇನ್ನುಮೇಲೆ ವಾರಪತ್ರಿಕೆಯಾಗಿ ಮಾಡಲ್ಪಡುವುದೆಂದೂ, ಅದರ ವರ್ಗಣಿಯು ೧|| ರೂ. ಯಿಂದ ೧ ರೂ.ಗೆ ಕಡಿಮಾಡಲ್ಪಡುವುದೆಂದೂ ಸ್ವದೇಶ ವಿದೇಶ ವರ್ತಮಾನಾದಿಗಳೆಲ್ಲಾ ಅದರಲ್ಲಿ ಪ್ರಕಟಿಸಲ್ಪಡುವುವೆಂದೂ ಆ ಪತ್ರಿಕಾಕರ್ತರು ಪ್ರಕಟಿಸಿದ್ದಾರೆ.

ಶ್ರೀ ಬಸವೇಶ್ವರಜಯಂತಿ.

ಈ ಜಯಂತ್ಯುತ್ಸವವನ್ನು ಪದ್ಧತಿಯಪ್ರಕಾರ ಇದೇ ಬರುವ ವೈಶಾಖ ಶುದ್ಧ ೨ ಭಾನುವಾರ ತಾ|| ೧೨-೫-೧೯೧೮ ನೆಯ ದಿವಸ ಎಲ್ಲಾಕಡೆಯಲ್ಲಿಯೂ ವೀರಶೈವ ಮಹಾಶಯರು ಬಹು ಸಂಭ್ರಮದಿಂದ ಜರುಗಿಸಿ ಪುಣ್ಯ ಗಳಾಗಬೇಕಾಗಿ ಕೋರುವ,

ದಾವಣಗೆರೆ, } ಸೆಕ್ರೆಟರಿ
ತಾ|| 26—4—1918. } "ವೀರಶೈವ ಹಿತೋಪದೇಶಕ ಸಂಘ"

ವೃತ್ತಾಂತಗಳು.

ಕಳೆದ ವರ್ಷ ಇಂಗ್ಲೀಷರು ಮಿತ್ರಮಂಡಲಿ ರಾಷ್ಟ್ರಗಳಿಗೆ ೫೦|| ಕೋಟಿ ಪೌನುಗಳನ್ನು ಸಾಲ ಕೊಟ್ಟಿದ್ದಾರೆ. ಅಮೇರಿಕಾದವರು ಮಿತ್ರಮಂಡಲಿಯವರಿಗೆಲ್ಲಾ ೫ ಕೋಟಿ ಪೌನ್ ಸಾಲ ಕೊಟ್ಟಿದ್ದಾರೆ.

ಯುದ್ಧಸಹಾಯಾರ್ಥವಾಗಿ ಸದ್ಯಃ ಯಾವ ಹೊಸ ತೆರಿಗೆಯನ್ನೂ ಭರತಖಂಡದ ಸರ್ಕಾರದವರು ಏರ್ಪಡಿಸುವವರಾಗಿಲ್ಲ, ಕಳೆದ ವರ್ಷದಂತೆ ಯುದ್ಧದ ಸಾಲವನ್ನು ಈಸಲವೂ ತೆಗೆಯಲು ಏರ್ಪಾಟಾಗಿರುತ್ತದೆ.

ಈಗ ದಿನ ೧ ಕ್ಕೆ ಇಂಗ್ಲೀಷರಿಗೆ ಯುದ್ಧಕ್ಕಾಗಿ ೬೯೫೦೦೦೦ ಪೌನು ವೆಚ್ಚವಾಗುತ್ತಿವೆ. ಈ ವರ್ಷವೆಲ್ಲಾ ಯುದ್ಧಕ್ಕಾಗಿ ೨೫೭೨೯೦೦೦೦೦ ಪೌನುಗಳನ್ನು ವೆಚ್ಚಮಾಡಬೇಕಾಗುವುದೆಂದು ಅವರು ನಿರ್ಧರಿಸಿದ್ದಾರೆ.

ಪಶ್ಚಿಮರಂಗದಲ್ಲಿ ಈಗ ಇರುವ ಆಂಗ್ಲ ಸೈನ್ಯದ ಹಿಂಗಡೆಯಲ್ಲಿ ೧೯೧೭ ವರ್ಷದಲ್ಲೇ ೯೦೦ ಮೈಲಿಗಳುದ್ದದ ದೊಡ್ಡ ಲೋಹಮಾರ್ಗವನ್ನೂ ೦೦ ಮೈಲಿಗಳುದ್ದದ ಚಿಕ್ಕ ಲೋಹಮಾರ್ಗಗಳನ್ನೂ ಏರ್ಪಡಿಸಿಕೊಂಡಿರುವರು.

ಸೀಮೆಯಲ್ಲಿ ಸೇರುವ ಸಾಮ್ರಾಜ್ಯ ಮಹಾಸಭೆಗೆ ಭರತಖಂಡದ ಪ್ರತಿನಿಧಿಗಳಾಗಿ ಹೋಗಲು ಸರ್ ಸತ್ಯೇಂದ್ರಪ್ರಸನ್ನ ಸಿಂಹರೇ ಈ ಸಲವೂ ಆರಿಸಲ್ಪಟ್ಟಿದ್ದಾರೆ. ಸಂಸ್ಥಾನಿಕರ ಪ್ರತಿನಿಧಿಗಳಾಗಿ ಪಾಟಿಯಾಲಾ ಮಹಾರಾಜರು ಆರಿಸಿಕೊಳ್ಳಲ್ಪಟ್ಟಿದ್ದಾರೆ.

೨ ಆಣೆಯ ಹೊಸ ನಿಕಲ್ ನಾಣ್ಯಗಳು ಕಳೆದ ತಿಂಗಳಲ್ಲಿ ವ್ಯವಹಾರಕ್ಕೆ ಬಂದುವು. ಆದರೆ ಈಗಾಗಲೇ ಅದೇ ತೆರದ ಸೃಷ್ಟನೆಯ ನಾಣ್ಯಗಳು ಕಲ್ಕತ್ತಾ ಪಟ್ಟಣದಲ್ಲಿ ಒಬ್ಬನಹತ್ತಿರ ಇದ್ದುದನ್ನು ಪೋಲೀಸರು ಕಂಡು ಅವನನ್ನು ಸೆರೆಯಲ್ಲಿಟ್ಟಿದ್ದಾರೆ.

ರಷ್ಯಾ ದೇಶದಲ್ಲಿ ಪೂರ್ವದ ಚಕ್ರವರ್ತಿಯವರ ಅಪ್ರಾಪ್ತವಯಸ್ಕನಾದ ಕುಮಾರನು ಚಕ್ರವರ್ತಿಯಾಗಿ ಪ್ರಕಟಿಸಲ್ಪಟ್ಟಿರುವನೆಂದೂ, ಗ್ರಾಂಡ್‌ಡ್ಯೂಕ್ ಮೈಕೇಲ್‌ರವರು ರೀಜಂಟರಾಗಿರುವರೆಂದೂ ಒಂದು ವಾರ್ತೆ ಬಂದಿದೆ. ಯ ಯಾವ ಪಕ್ಷದವರು ಈ ಏರ್ಪಾಟನ್ನು ಮಾಡಿರುವರೋ ಇದು ಎಷ್ಟುಮಟ್ಟಿಗೆ ಸಫಲವಾಗುವುದೋ ಇನ್ನೆಂತಹ ಕಲಹಗಳು ಅಲ್ಲಿ ಹುಟ್ಟುವುವೋ ಗೊತ್ತಾಗಲಿಲ್ಲ.

"೪ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನ"
ಧಾರವಾಡ.

ಕೆಲವು ಸದ್ಗೃಹಸ್ಥರಿಂದ ಬಂದ ಸೂಚನೆಗಳನ್ನು ವಿಚಾರಮಾಡಿ ಕೆಳಗೆ ಸಿದ ಠರಾವುಗಳ ಕಚ್ಚಾ ಮಸೂದೆಯನ್ನು ತಯಾರಿಸಿದ್ದೇವೆ. ಸಮ್ಮೇಲನದ ವಿಷಯ ನಿಯಾಮಕ ಕಮಿಟಿಯಲ್ಲಿ ಈ ವಿಷಯಗಳ ಚರ್ಚೆಯಾಗಿ ಆ ಕಮಿಟಿಯಲ್ಲಿ ಮಂಜೂರಾದ ಠರಾವುಗಳು ಮಾತ್ರವೇ ಸಮ್ಮೇಲನದಮುಂದೆ ಬರಲ್ಪಡುವುವು. ಇವಲ್ಲದೆ ಮತ್ತಾರಿಗಾದರೂ ಏನಾದರೂ ಸೂಚನೆಗಳನ್ನು ಸೂಚಿಸತಕ್ಕುದಿದ್ದರೆ ಅವರು ದಯಮಾಡಿ ಹಾಗೆ ತಿಳಿಸಬೇಕು.

ವಿಷಯ ನಿಯಾಮಕ ಕಮಿಟಿಯ ಮುಂದೆ ಬರತಕ್ಕ ಸೂಚನೆಗಳು:—

(೧) ಈಗ ಯೂರೋಪು ಖಂಡದಲ್ಲಿ ನಡೆದಿರುವ ಭಯಂಕರ ಯುದ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಶೀಘ್ರವೇ ಜಯಪ್ರಾಪ್ತಿಯಾಗಬೇಕೆಂದು ಈ ಸಭೆಯು ಮನಃಪೂರ್ವಕವಾಗಿ ಪ್ರಾರ್ಥಿಸುತ್ತದೆ. (೨) ವಿದ್ಯಾರ್ಥಿಗಳು ಪರಭಾಷೆಯ ದ್ವಾರದಿಂದ ವಿಷಯಗಳ ಗ್ರಹಣಮಾಡುವುದೆಂದರೆ ಅವರಿಗೆ ಹೇರಳ ಮಾನಸಿಕ ಶ್ರಮವಾಗುವುದಲ್ಲದೆ ಅವರ ವಿಚಾರಶಕ್ತಿಯೂ ಚನ್ನಾಗಿ ಬೆಳವಣಿಗೆಯನ್ನು ಹೊಂದುವುದಿಲ್ಲ. ಆದಕಾರಣ ಸ್ಕೂಲ ಲೀವಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಇಂಗ್ಲಿಷ ಭಾಷೆಯೊಂದನ್ನು ಬಿಟ್ಟು ಉಳಿದ ಎಲ್ಲ ವಿಷಯಗಳ ಪರೀಕ್ಷೆಯನ್ನು ಜಾಯಿಂಟ ಬೋರ್ಡಿನವರು ಮಾತೃಭಾಷೆಯಲ್ಲಿ ತೆಗೆದುಕೊಳ್ಳಬೇಕೆಂದು ಈ ಸಮ್ಮೇಲನದ ಅಭಿಪ್ರಾಯವಿರುತ್ತದೆ. (೩) ಉಚ್ಚ ಶಿಕ್ಷಣದ ಅಭ್ಯಾಸಕ್ರಮದಲ್ಲಿ ಮಾತೃಭಾಷೆಯನ್ನು ಸ್ಕೂಲ ಶಿಕ್ಷಣದ ಅಭ್ಯಾಸ ಕ್ರಮದಲ್ಲಿಯಂತೆಯೇ ಅವಶ್ಯಕ ವಿಷಯವನ್ನಾಗಿ ಇಡಬೇಕೆಂದು ಈ ಸಮ್ಮೇಲನದ ಅಭಿಪ್ರಾಯವುಂಟು. ಈ ಠರಾವನ್ನು ಮುಂಬಯಿ ಮತ್ತು ಮದ್ರಾಸು ವಿಶ್ವವಿದ್ಯಾಲಯಗಳಕಡೆಗೆ ಅಧ್ಯಕ್ಷರು ಕಳಿಸತಕ್ಕದ್ದು. (೪) ಈಗಿನ ಮುಂಬಯಿ ವಿಶ್ವವಿದ್ಯಾಲಯದವರು ಎಂ. ಎ. ಪರೀಕ್ಷೆಗೆ ನೇಮಿಸಿದ ಪುಸ್ತಕಗಳಲ್ಲಿ ಅನೇಕ ಪುಸ್ತಕಗಳು ದೊರೆಯುವದು ದುಸ್ತರವಾದುದರಿಂದ ಅನೇಕ ವಿದ್ಯಾರ್ಥಿಗಳು ಕನ್ನಡ ವಿಷಯವನ್ನು ಬಿಟ್ಟು ಇತರ ವಿಷಯಗಳನ್ನು ತೆಗೆದುಕೊಳ್ಳುತ್ತಾರೆ. ಹೀಗಾಗುವುದು ಯೋಗ್ಯವಲ್ಲದ್ದರಿಂದ ಪರಿಷತ್ತಿನವರು ಅದಷ್ಟು ಯತ್ನಮಾಡಿ ಆ ಪುಸ್ತಕಗಳು ಸುಲಭವಾಗಿ ಸಿಗುವಂತೆ ಮುದ್ರಿಸಿ ಪ್ರಸಿದ್ಧಮಾಡಬೇಕು. (೫) ಬ್ರಿಟಿಷ್ ಇಲಾಖೆಯು ಮತ್ತು ಕರ್ನಾಟಕದೊಳಗಿನ ದೇಶೀಯ ಸಂಸ್ಥಾನಗಳಲ್ಲಿ ಕನ್ನಡ ಭಾಷೆಯು ಪ್ರಚಾರದಲ್ಲಿದ್ದು ಶಾಲೆಗಳಲ್ಲಿ ಶಿಕ್ಷಣವು ಬೇರೆ ಭಾಷೆಗಳ ದ್ವಾರದಿಂತ ಕೊಡಲ್ಪಡುತ್ತದೆ. ಕನ್ನಡ ಭಾಷೆಗೆ ದೊರೆಯತಕ್ಕಷ್ಟು ಉತ್ತೇಜನವು ದೊರೆಯುವುದಿಲ್ಲ. ಆದಕಾರಣ ಕನ್ನಡ ಭಾಷೆಯು ಪ್ರಚಾರದಲ್ಲಿರುವ ಸ್ಥಳಗಳಲ್ಲೆಲ್ಲ ಕನ್ನಡ ಶಾಲೆಗಳನ್ನೇ ಸ್ಥಾಪಿಸಬೇಕೆಂದು ಈ ಸಮ್ಮೇಲನವು ಆಯಾ ಸರ್ಕಾರಗಳಿಗೆ ವಿನಂತಿಯನ್ನು ಮಾಡಿಕೊಳ್ಳುತ್ತದೆ. (೬) ಮೊದಲಾದ ಪೌರ್ವಾತ್ಯ ಭಾಷೆಗಳಲ್ಲಿ ಪ್ರಾವೀಣ್ಯವನ್ನು ಹೊಂದಲಿಚ್ಛಿಸುವ ವಿದ್ಯಾರ್ಥಿಗಳ ಸಲುವಾಗಿ ಒಂದು ವಿಶಿಷ್ಟ ಅಭ್ಯಾಸಕ್ರಮವನ್ನು ತಿಪಡಿಸಿ ಆ ವಿಷಯದಲ್ಲಿ ಪರೀಕ್ಷೆಯನ್ನು ತೆಗೆದುಕೊಂಡು ಪದವಿಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಮ್ಮೇಲನವು ಮುಂಬಯಿ, ಮದ್ರಾಸು ಮತ್ತು ಮೈಸೂರು ವಿಶ್ವವಿದ್ಯಾಲಯದವರಿಗೆ ಬೇಡಿಕೊಳ್ಳುತ್ತದೆ. (೭) ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಈಗಿರುವ ಕನ್ನಡ ಪುಸ್ತಕಗಳು ಅಯೋಗ್ಯವಾಗಿರುವುದರಿಂದ ಅವರಿಗೆ ತಕ್ಕ ಕ್ರಮಿಕ ಪುಸ್ತಕಗಳನ್ನು ಮೈಸೂರು, ಮದ್ರಾಸು ಮತ್ತು ಮುಂಬಯಿ ವಿಶ್ವವಿದ್ಯಾಲಯದವರು ತಯಾರಿಸಿ ಪ್ರಸಿದ್ಧಪಡಿಸಬೇಕೆಂದು ಈ ಸಮ್ಮೇಲನದ ಅಭಿಪ್ರಾಯವಿರುವುದು. (೮) ಚಿಕ್ಕ ಮಕ್ಕಳ ಸಲುವಾಗಿ ಬೇಕಾಗಿರುವ ಬಾಲವಾಙ್ಮಯವು ಕನ್ನಡ ಭಾಷೆಯಲ್ಲಿ ಸಾಕಷ್ಟು ಇಲ್ಲದಿರುವುದರಿಂದ ಆ ತರದ ವಾಙ್ಮಯವು ಹೊರಬೀಳುವವರಕಡೆಗೆ ಗ್ರಂಥಕರ್ತರು ಲಕ್ಷ್ಯಪೂರೈಸಬೇಕೆಂದು ಈ ಸಮ್ಮೇಲನದ ಅಭಿಪ್ರಾಯವುಂಟು. (೯) ಆಗಾಗ್ಗೆ ಪ್ರಸಿದ್ಧವಾಗುವ ವಾಙ್ಮಯವನ್ನು ನಿಷ್ಪಕ್ಷಪಾತ ಬುದ್ಧಿಯಿಂದ ಪರೀಕ್ಷಿಸಿ ಅಧಿಕಾರಯುಕ್ತ ಜನರು ತಮ್ಮ ಅಭಿಪ್ರಾಯವನ್ನೂ ಸೂಚನೆಗಳನ್ನೂ ಪ್ರಸಿದ್ಧಪಡಿಸುವುದು ಅವಶ್ಯವಿರುತ್ತದೆ. ಅದಕ್ಕಾಗಿ ಸಮ್ಮೇಲನವು ನಾಲ್ಕು ಉಪಸಭೆಗಳನ್ನು ನೇಮಿಸತಕ್ಕದ್ದು. [(೧) ಲಲಿತವಾಙ್ಮಯ, (೨) ಅಧಿಭೌತಿಕಶಾಸ್ತ್ರಗಳು, (೩) ಆಧ್ಯಾತ್ಮಿಕ ಶಾಸ್ತ್ರಗಳು, (೪) ಸಮಾಜಶಾಸ್ತ್ರ. ಹೀಗೆ ವಿಷಯಗಳನ್ನು ವಿಭಾಗಿಸಿ] ಅದರಲ್ಲಿ ಕೆಳಗೆ ಬರೆದ ಶರದ್ದು ಇರತಕ್ಕದ್ದು. (೧೦) ಕನ್ನಡ ವಾಙ್ಮಯದ ಸೇವೆ ಮಾಡಿದ ಪ್ರತಿಭಾಶಾಲಿಗಳಾದ ಗ್ರಂಥಕಾರರನ್ನೂ, ಕವಿಗಳನ್ನೂ, ಸಾರ್ವಜನಿಕ ರೀತಿಯಿಂದ ಗೌರವಿಸುವುದಕ್ಕಾಗಿ ಯಾವುದೊಂದು ಸುವ್ಯವಸ್ಥೆಯನ್ನು ಯೋಚಿಸಿ ಅದನ್ನು ಮುಂದಿನ ವರ್ಷದ ಸಮ್ಮೇಲನದಮುಂದೆ ಇಡುವುದಕ್ಕಾಗಿ ಕೆಳಗೆ ಕಾಣಿಸಿದ ಸದಸ್ಯರದೊಂದು ಉಪಸಭೆಯನ್ನು ನೇಮಿಸತಕ್ಕದ್ದು. (೧೧) ಕನ್ನಡ ಪ್ರಾಂತದಲ್ಲೆಲ್ಲಾ ಬರಹದ ಶೈಲಿಯು ಆದಷ್ಟು ಮಟ್ಟಿಗೆ ಒಂದೇ ಆಗುವುದು ಅವಶ್ಯವಿರುವುದರಿಂದ ಮೈಸೂರು, ಮದ್ರಾಸು ಮತ್ತು ಮುಂಬಯಿ ಸರ್ಕಾರದವರು ಈ ವಿಷಯಗಳನ್ನು ಯೋಚಿಸಿ ಶಾಲೆಗಳಲ್ಲಿ ಒಂದೇತರದ ಅಕ್ಷರ ಮಾದರಿಗಳನ್ನು (ಕಿತ್ತಿ) ಪ್ರಚಾರದಲ್ಲಿ ತರಬೇಕು. (೧೨) ಕನ್ನಡ ಭಾಷೆಯು ಅವನತಸ್ಥಿತಿಯಲ್ಲಿದ್ದು ಕನ್ನಡ ಪ್ರದೇಶಗಳಲ್ಲಿ ಕನ್ನಡ ಗ್ರಂಥ ಸಂಗ್ರಹಾಲಯಗಳೂ ವಾಚನಾಲಯಗಳೂ ಸ್ಥಾಪಿಸಲ್ಪಡಬೇಕೆಂದೂ ಅವುಗಳಿಗೆ ಕರ್ನಾಟಕ ಸಾಹಿತ್ಯಪರಿಷತ್ತಿನವರು ಕೈಲಾದಮಟ್ಟಿಗೆ ಸಹಾಯಮಾಡಬೇಕೆಂದೂ ಈ ಸಮ್ಮೇಲನದ ಅಭಿಪ್ರಾಯವುಂಟು. (೧೩) ಕರ್ನಾಟಕ ಭಾಷೆಯ ಪ್ರಚಂಡ ಕೋಶಗಳನ್ನು ಪ್ರಸಿದ್ಧಗೊಳಿಸುವ ಮಹತ್ಕಾರ್ಯವನ್ನು ಮೈಸೂರ ಸರ್ಕಾರದವರು ಸಾಹಿತ್ಯಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ ಮುಂತಾದ ಸಂಸ್ಥೆಗಳ ಸಹಾಯದಿಂದಲೂ ಕನ್ನಡ ವಿದ್ವಜ್ಜನರ ಸಹಾಯದಿಂದಲೂ ಶೀಘ್ರವೇ ಪ್ರಸಿದ್ಧಿಪಡಿಸಬೇಕೆಂದು ಈ ಸಮ್ಮೇಲನವು ಅಭಿಪ್ರಾಯಪಡುತ್ತದೆ. (೧೪) ಕನ್ನಡ ನಾಣ್ನುಡಿಗಳನ್ನೂ, ನೌಕಾವಿಷಯಕ, ಲಷ್ಕರೀವಿಷಯಕ ಮತ್ತು ಆಯಾ ವ್ಯವಸಾಯ ವಿಷಯಕ ಕನ್ನಡ ಶಬ್ದಗಳ ಚಿಕ್ಕ ಚಿಕ್ಕ ಕೋಶಗಳನ್ನೂ, ಶಾಸ್ತ್ರೀಯ ವಿಷಯಕ ಕನ್ನಡ ಶಬ್ದಗಳ ಕೋಶಗಳನ್ನೂ ಮುದ್ರಿಸುವ ಕೆಲಸವನ್ನು ಪರಿಷತ್ತಿನವರು ಕೈಕೊಳ್ಳಬೇಕೆಂದು ಈ ಸಮ್ಮೇಲನದ ಅಭಿಪ್ರಾಯವಿರುತ್ತದೆ. (೧೫) ಮುಂದಿನ ವರ್ಷದೊಳಗಾಗಿ ಇಂಗ್ಲೀಷ, ಮರಾಠಿ, ಬಂಗಾಲಿ ಮುಂತಾದ ಭಾಷೆಯೊಳಗಿನ ಉತ್ಕೃಷ್ಟವಾದ ವಿವಿಧ ಪುಸ್ತಕಗಳ ಆಧಾರದಿಂದಲೂ ಸ್ವತಂತ್ರವಾಗಿಯೂ ಕೆಲವು ಪುಸ್ತಕಗಳನ್ನು ಕನ್ನಡದಲ್ಲಿ ಪ್ರಸಿದ್ಧಪಡಿಸಬೇಕೆಂಬ ಉದ್ದೇಶದಿಂದ ಮುಂದಿನ ವರುಷ ಗ್ರಂಥಗಳನ್ನು ಬರೆಯಲಿಚ್ಛಿಸುವವರದೊಂದು ಉಪಸಭೆಯನ್ನು ಸ್ಥಾಪಿಸಿ ಅವರು ತಮ್ಮತಮ್ಮೊಳಗೆ ವಿಚಾರಮಾಡಿ ಕೆಲವು ಪುಸ್ತಕಗಳನ್ನು ಬರೆಯಬೇಕು. (೧೬) ಕನ್ನಡ ನಾಡುಗಳಲ್ಲೆಲ್ಲ ಭಾಷಾವಿಷಯಕ ಜಾಗೃತಿಯನ್ನು ಮಾಡುವ ಕುರಿತು ಕಾಯಂ ಉಪದೇಶಕರನ್ನು ನೇಮಿಸಬೇಕೆಂದು ಈ ಸಭೆಯು ಅಭಿಪ್ರಾಯಕೊಡುತ್ತದೆ. (೧೭) ಕೋರ್ಟುಗಳಲ್ಲಿಯೂ ಕಚೇರಿಗಳಲ್ಲಿಯೂ ಆದಷ್ಟು ಶುದ್ಧ ಭಾಷೆಯನ್ನು ಉಪಯೋಗಿಸಬೇಕು. ಮತ್ತು ಠರಾವುಗಳನ್ನು ಮುನಸೂಫ್ ಮೊದಲಾದವರು ಕನ್ನಡದಲ್ಲಿ ಬರೆಯಬಹುದೆಂದು ಅಪ್ಪಣೆ ಕೊಡಲಿಕ್ಕೆ ಸರ್ಕಾರದವರಿಗೆ ಈ ಸಮ್ಮೇಲನವು ಪ್ರಾರ್ಥಿಸುತ್ತದೆ. (೧೮) ಹಿಂದುಸ್ಥಾನದಲ್ಲಿಯ ಯಾವತ್ತು ಸಾಹಿತ್ಯ ಸಮ್ಮೇಲನಗಳಿಗೆ ಸಾಮಾನ್ಯವಾಗಿರುವ ವಿಷಯಗಳನ್ನು ಚರ್ಚಿಸಿ ಈ ವಿಷಯಕ್ಕೆ ಮುಂದೆ ಏನು ಮಾಡಬೇಕೆಂಬುದನ್ನು ಯೋಚಿಸುವ ಬಗ್ಗೆ ಆಯಾ ಭಾಷೆಯ ಸಾಹಿತ್ಯ ಸಮ್ಮೇಲನದ ಪ್ರತಿನಿಧಿಗಳದೊಂದು ಸಭೆಯನ್ನು ಕೂಡಿಸುವುದು ಉಚಿತವೆಂದು ಈ ಸಮ್ಮೇಲನದ ಅಭಿಪ್ರಾಯವಿರುತ್ತದೆ. ಮತ್ತು ಮಾತೃಭಾಷೆಯ ಸಮ್ಮೇಲನದೊಡನೆ ಶಕ್ಯವಿದ್ದಷ್ಟುಮಟ್ಟಿಗೆ ಸಹಕಾರಿಯಾಗಿ ನಡೆಯುವುದಕ್ಕೆ ಈ ಸಮ್ಮೇಲನವು ಸಿದ್ಧವಿರುತ್ತದೆ. (೧೯) ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿಯ ಭಾಷೆಯು ಏಕರೂಪ ಹೊಂದಲಿಕ್ಕೆ ಕೆಳಗೆ ಬರೆದ ಉಪಾಯಗಳನ್ನು ಸಾಹಿತ್ಯ ಪರಿಷತ್ತಿನವರು ಕೈಕೊಳ್ಳಬೇಕೆಂದು ಈ ಸಮ್ಮೇಲನದ ಅಭಿಪ್ರಾಯವಿರುತ್ತದೆ.—(ಅ) ಮೈಸೂರ, ಮದ್ರಾಸ, ಮುಂಬಯಿ ಇಲಾಖೆಗಳ ಕ್ರಮಿಕ ಪುಸ್ತಕಗಳು ಒಂದೇ ಆಗುವುದಕ್ಕೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬುದನ್ನು ಯೋಚಿಸುವುದಕ್ಕೆ ಆಯಾ ಸರಕಾರದವರು ಒಂದು ಕಮಿಟಿಯನ್ನು ನೇಮಿಸಬೇಕು. (ಬ) ಮೈಸೂರ ಕಡೆಯ ಎರಡು ಪುಸ್ತಕಗಳನ್ನು ಇತ್ತಕಡೆಯ ಇಬ್ಬರು ಓದಿ ಇತ್ತಕಡೆಯ ಎರಡು ಪುಸ್ತಕಗಳನ್ನು ಅತ್ತಕಡೆಯ ಇಬ್ಬರು ಓದಿ ಆ ಭಾಷೆಯಲ್ಲಿ ಇತ್ತಕಡೆಗೆ ಅಪರಿಚಿತವಾದ ಭಾಷಾಶಬ್ದಗಳೂ ಪ್ರಯೋಗಗಳೂ ಯಾವುವೆಂಬುದನ್ನು ತಿಳಿದುಕೊಳ್ಳುವ ಉದ್ದೇಶದಿಂದ ಪುಸ್ತಕವನ್ನು ಭಾಷಾದೃಷ್ಟಿಯಿಂದ ಸಂಪೂರ್ಣವಾಗಿ ಚರ್ಚಿಸಿ ಪ್ರಸಿದ್ಧಪಡಿಸಬೇಕು. (ಕ) ಗ್ರಂಥಕಾರರ ಒಂದು ಮಂಡಲವನ್ನು ಸ್ಥಾಪಿಸಬೇಕು. ಅವರು ಬೇರೆಬೇರೆ ಪುಸ್ತಕಗಳಮೇಲೆ ತಮ್ಮ ಅಭಿಪ್ರಾಯವನ್ನು ಪ್ರಸಿದ್ಧಪಡಿಸಬೇಕು. (೨೦) ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷೆಯ ಜನರು ಬರುವುದು ಸದ್ಯಕ್ಕೆ ಶಕ್ಯವಿಲ್ಲದ್ದರಿಂದ ಮುಂಬಯಿ ವಿಶ್ವವಿದ್ಯಾಲಯದವರು ಕನ್ನಡ ಫೆಲೋಗಳನ್ನು ತಾವು ನೇಮಿಸಬೇಕು.

ವೆ. ಬಿ. ಆಲೂರ, ವೆ. ನ. ಮುಗದಾಳ,
ಕಾರ್ಯದರ್ಶಿಗಳು.

ಎರಡನೆಯ ವೀರಶೈವ ತರುಣರ ಸಮ್ಮೇಲನ.
ಬೆಳಗಾಂವ.

ಈ ಮುಂಚೆ ಪ್ರಕಟವಾದ ಪ್ರಕಾರ ಈ ಸಮ್ಮೇಲನದ ಕಾರ್ಯವು ಎಪ್ರಿಲ್ ೨೧ ನೆಯ ತಾರೀಖಿನ ಪ್ರಾತಃಕಾಲ ೮ ಗಂಟೆಗೆ ಪ್ರಾರಂಭವಾಯಿತು. ಈ ಸಮ್ಮೇಲನದ ಅಧ್ಯಕ್ಷರಾದ ಶ್ರೀಯುತ ಬ್ಯಾರಿಸ್ಟರ್ ರುದ್ರಪ್ಪ ಗರಡಿ, ಎಂ. ಎ., ಇವರು ತಾರೀಖು ೨೦ ನೆಯ ದಿವಸ ಸಾಯಂಕಾಲ ೫ ಘಂಟೆಗೆ ಇಲ್ಲಿಗೆ ಆಗಮಿಸಿದರು. ಅನೇಕ ಪ್ರಮುಖರು ಅಧ್ಯಕ್ಷರನ್ನು ಬಹು ಸಂಭ್ರಮದಿಂದ ಬರಮಾಡಿಕೊಂಡರು. ಮರುದಿವಸ ತಾ|| ೨೧ ನೆಯ ಬೆಳಗಿನ ೮ ಘಂಟೆಗೆ ಶಿವಾನಂದ ನಾಟಕಶಾಲೆಯಲ್ಲಿ ಸಭೆಯು ಸೇರಿತು. ದಾವಣಗೆರೆ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಶ್ರೀಮಾನ್ ಸರದಾರ ನಾಯಿಕ್ ಬಹದ್ದೂರ್ ಚಚಡಿಯವರು, ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ, ಪ್ರೊಫೆಸರ್ ಲಕ್ಷ್ಮಿ, ಬೊಂಬಾಯಿಯ ಸೇವಾಸಮಾಜದ ಶ್ರೀಯುತ ಕುಲಕರ್ಣಿ, ಬಿ.ಎ., ರವರೇ ಮೊದಲಾದ ಪ್ರಮುಖರು ಸಭೆಗೆ ಆಗಮಿಸಿದ್ದರು. ಆರಂಭದಲ್ಲಿ ಸ್ವಾಗತಪರ ಸಂಗೀತವು ಜರುಗಿದನಂತರ ಸ್ವಾಗತಸಂಘಾಧ್ಯಕ್ಷರಾದ ಶ್ರೀಯುತ ಎಂ. ಆರ್. ಸಾಖರೆ, ಎಂ. ಎ., ಅವರು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಓದಿದರು. ಈ ಉಪನ್ಯಾಸದ ಕನ್ನಡ ಭಾಷಾಂತರವನ್ನು ಮ|| ರಾ|| ಎಂ. ಎಸ್. ಸರದಾರ ಇವರು ಓದಿದರು. ಅನಂತರ ರಾವಸಾಹೇಬ ಕಣಬರಗಿಮಠ ಇವರು ಮ|| ರಾ|| ಗರಡಿಯವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳಲು ಸಭಿಕರಿಗೆ ಸೂಚಿಸಿದರು. ಮ|| ರಾ|| ಎಂ. ಎಸ್. ದೊಡ್ಡಬಸಪ್ಪನವರು ಮ|| ರಾ|| ಮಾನೆಯವರು ಅನುಮೋದಿಸಲು ಮ|| ರಾ|| ಗರಡಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ತರುವಾಯ ಈ ಸಮ್ಮೇಲನದ ಸೆಕ್ರೆಟರಿ ಮ|| ರಾ|| ತಿಗಡಿಯವರು ಈ ಸಮ್ಮೇಲನವು ಜಯಪ್ರದವಾಗಿ ಜರುಗಲೆಂದು ಶ್ರೀ ಶ್ರೀ ಜಗದ್ಗುರು ಮುರಘರಾಜೇಂದ್ರ ಸ್ವಾಮಿಗಳಿಂದಲೂ ಪ್ರಿನ್ಸಿಪಾಲ ಆರ್. ಪಿ. ಪರಾಂಜಪೆ, ಪ್ರೊಫೆಸರ್ ವಿ. ಜಿ. ಕಾಳೆ, ಮ|| ರಾ|| ಹಳಕಟ್ಟಿ ಮ|| ರಾ|| ಕಂಬಳಿ ಮ|| ರಾ|| ಬಸವಾರಾಧ್ಯ ಮೊದಲಾದ ದೊಡ್ಡಮನುಷ್ಯರುಗಳಿಂದಲೂ ಬಂದತಂತ್ರೀವಾರ್ತೆ ಮತ್ತು ಪತ್ರಗಳನ್ನು ಓದಿ ಹೇಳಿದರು. ಅನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಓದಿ ಹೇಳಿದರು.

ತಾ|| ೨೧ ನೆಯ ಮಧ್ಯಾಹ್ನ ೩ ಘಂಟೆಗೆ ಸಭೆಯು ಪ್ರಾರಂಭವಾಯಿತು. ವೀರಶೈವ ಮಠವೂ, ಇದರಲ್ಲಿಯ ಪಂಗಡಗಳ ಏಕೀಕರಣವೂ, ಎಂಬ ವಿಷಯಗಳನ್ನು ಕುರಿತು ಮ||ರಾ|| ಎಂ.ಎಸ್. ದೊಡ್ಡಬಸವಪ್ಪನವರು ಕನ್ನಡದಲ್ಲಿಯೂ, ಮ|| ರಾ|| ಮಾನೆಯವರು ಮರಾಠಿಯಲ್ಲಿಯೂ ಭಾಷಣಮಾಡಿದರು. ಅನಂತರ ವಿದ್ಯಾಪ್ರಸಾರದ ವಿಷಯವನ್ನು ಕುರಿತು ಮ|| ರಾ|| ಗು. ಶಿ. ಸಾಂಬ್ರಾಣಿ ಮತ್ತು ಮ|| ರಾ|| ಮ. ಫ. ಗಣಾಚಾರಿ ಇವರುಗಳು ಉಪನ್ಯಾಸ ಮಾಡಿದರು. ಇವರುಗಳ ಉಪನ್ಯಾಸಗಳಿಗೆ ಸಂತೋಷಿಸಿ ರಾವಸಾಹೇಬ ಕಣಬರಗಿಮಠ ಇವರು ಐವತ್ತು ರೂ. ಗಳನ್ನು ಬಹುಮಾನವಾಗಿ ಕೊಟ್ಟರು. ಅನಂತರ ಪರದೇಶಗಮನವನ್ನು ಕುರಿತು ಮ|| ರಾ|| ಸಿ. ಕೆ. ಒಡೆಯರ್ ಮತ್ತು ಮ|| ರಾ|| ಎಂ. ಎಸ್. ಸರದಾರ ಇವರುಗಳು ಉಪನ್ಯಾಸಮಾಡಿದನಂತರ ಆ ದಿನದ ಕಾರ್ಯ ಪೂರೈಸಿತು.

ತಾ|| ೨೨ ನೆಯ ಬೆಳಗ್ಗೆ ೮ ಘಂಟೆಗೆ ಸಭೆ ಸೇರಲು ಮ|| ರಾ|| ಮಂಜಪ್ಪ ಹರ್ಡೇಕರ್ ಇವರು ಮಾಸಪತ್ರಿಕೆಗಳ ಅವಶ್ಯಕತೆಯನ್ನು ಕುರಿತು ಭಾಷಣಮಾಡಿದಮೇಲೆ ಬೊಂಬಾಯಿಯಿಂದ ಬಂದಿದ್ದ ಮ|| ರಾ|| ಕುಲಕರ್ಣಿ ಬಿ. ಎ., ಯವರು ಇದೇ ವಿಷಯವನ್ನು ಕುರಿತು ಮರಾಠಿಯಲ್ಲಿ ಉಪನ್ಯಾಸ ಮಾಡಿದರು. ಅನಂತರ ಮ|| ರಾ|| ಎಂ. ಎಸ್. ದೊಡ್ಡಬಸಪ್ಪನವರು ಈ ವಿಷಯದಲ್ಲಿ ಭಾಷಣಮಾಡಿ ಇಂತಹ ಪತ್ರಿಕೆಯನ್ನು ಹೊರಡಿಸಲು ಒಂದು ಧನರಾಶಿ ಸೇರಿದರೆ ಅದಕ್ಕೆ ನಾನು ೨೦೧ ರೂ. ಕೊಡುತ್ತೇನೆಂದು ಹೇಳಿದರು. ಅನಂತರ ಮ|| ರಾ|| ಗಳಾದ ಉರುವುಕೊಂಡೆ ಚನ್ನಬಸವಪ್ಪನವರು ೨೦೧ ರೂ., ಪಲ್ಲಾಗಟ್ಟಿ ಅಡಿವೆಪ್ಪನವರು ೨೦೧ ರೂ., ಬಿ.ಸಿ. ಮುಪ್ಪಣ್ಣನವರು ೧೦೧ ರೂ., ವೇ|| ಕೋಗುಂಡಿ ನಂಜುಂಡಯ್ಯನವರು ೫೧ರೂ., ಕುರುವತ್ತಿ ಬಸವಪ್ಪನವರು ೫೦ ರೂ., ಮಾಗಾನಹಳ್ಳಿ ಗಣಪತಿ ಷಡಕ್ಷರಿಯಪ್ಪನವರು ೧೦೦ ರೂ. ಈ ಪ್ರಕಾರ ದಾವಣಗೆರೆಯವರು ವಾಗ್ದಾನ ಮಾಡಲು ಶ್ರೀಮಾನ್ ಸರದಾರ ನಾಯಿಕ ಚಚಡಿಯವರು ೫೦೦ ರೂ. ಗಳನ್ನೂ, ಮ||ರಾ|| ಹಿರೆಕೆರೆ ದೊಡ್ಡಅಡಿವೆಪ್ಪನವರು ೧೦೧ ರೂ.ಗಳನ್ನೂ, ಬಾನಾಪುರದ ಮ|| ರಾ|| ಚನ್ನಬಸವಪ್ಪ ಹೊಸಮನಿ ೧೦೧ ರೂ. ಗಳನ್ನೂ ಕೊಡಲು ವಾಗ್ದಾನಮಾಡಿದರು. ಮತ್ತು ಅನೇಕ ತರುಣರು ತಂತಮ್ಮ ಶಕ್ತ್ಯನುಸಾರ ಸಹಾಯಮಾಡಿದ್ದಲ್ಲದೆ, ಸಮ್ಮೇಲನದ ಅಧ್ಯಕ್ಷರೂ ೫೦ ರೂ. ಗಳನ್ನು ಈ ಧನರಾಶಿಗೆ ಕೊಟ್ಟು ಪ್ರೋತ್ಸಾಹಿಸಿದರು. ಅನಂತರ ಶ್ರೀ ಶ್ರೀ ಮೃತ್ಯುಂಜಯಸ್ವಾಮಿಗಳವರು ಈ ಧನರಾಶಿಯು ಅಭಿವೃದ್ಧಿಯಾಗಿ ಇದರಿಂದ ಮಹತ್ತರವಾದ ಕಾರ್ಯವು ನೆರವೇರಲೆಂದು ಆಶೀರ್ವದಿಸಿದ್ದಲ್ಲದೆ ೫೦ ರೂ. ಗಳನ್ನು ದಯಪಾಲಿಸಿ ತುಂಬಾ ಪ್ರೋತ್ಸಾಹಿಸಿದರು. ಅಂತು ೨೪೬೬ ರೂ. ಗಳ ಚಂದಾ ಪಟ್ಟಿಯು ಸಿದ್ಧವಾದುದಲ್ಲದೆ ಆಗಲೇ ೫೨೩ ರೂ. ಗಳು ಸೇರಿದುವು. ಈ ಪ್ರಕಾರ ಶೇಖರವಾದೊಡನೆ ಪತ್ರಿಕೆಯನ್ನು ಪ್ರಕಟಿಸಲು ತಾವು ಸಿದ್ಧರಾಗಿದ್ದೇವೆಂದು ಮ|| ರಾ|| ಎಸ್. ಎಸ್. ಬಸವನಾಳ್ ಎಂ.ಎ., ಮ|| ರಾ|| ಎಂ.ಆರ್. ಸಾಖರೆ ಎಂ.ಎ, ಮ||ರಾ|| ಕಟ್ಟಿಮನಿ ಇವರುಗಳು ಸಭೆಯಲ್ಲಿಯೇ ಪ್ರಕಟಗೊಳಿಸಿ ಸಭಿಕರಿಗೆ ಅತ್ಯಾನಂದವನ್ನುಂಟುಮಾಡಿದರು.

ತಾ|| ೨೨ ನೆಯ ಮಧ್ಯಾಹ್ನ ೩ ಘಂಟೆಗೆ ಮತ್ತೆ ಸಭೆ ಸೇರಿತು. ರಾವ ಬಹದ್ದೂರ್ ಅರಟಾಳ ಸಾಹೇಬ ಐ. ಎಸ್. ಓ. ರವರೂ, ಪೂನಾ ಪಟ್ಟಣದ ಪ್ರಸಿದ್ಧ ಅಡ್ವೋಕೇಟ್ ನಾಯಿಕ್ ಎಂ. ಎ. ಎಲ್. ಎಲ್. ಬಿ. ಪ್ರೊಫೆಸರ್ ಲಕ್ಷ್ಮಿ ಎಂ. ಎ. ಎಲ್. ಎಲ್. ಬಿ. ಮೊದಲಾದ ಪ್ರಸಿದ್ಧ ಪುರುಷರು ಸಭೆಗೆ ಆಗಮಿಸಿದ್ದರು. ಸೈನ್ಯಶಾಖೆಯಲ್ಲಿ ತರುಣರು ಸೇರಬೇಕಾದ ವಿಷಯವನ್ನು ಕುರಿತು ಸೈನ್ಯಶಾಖೆಗೆ ಸೇರಿದ ಮ|| ರಾ|| ಎಸ್. ಕೆ. ಒಡೆಯರ್ ಎಂಬ ತರುಣ ವಿದ್ಯಾರ್ಥಿಗಳು ಕನ್ನಡದಲ್ಲಿ ಉಪನ್ಯಾಸ ಮಾಡಿದರು. ಇದೇ ವಿಷಯವನ್ನು ಕುರಿತು ಮ|| ರಾ|| ಸಾಂಬ್ರಾಣಿಯವರು ಭಾಷಣಮಾಡಿದಮೇಲೆ ಶ್ರೀಮಾನ್ ಚಚಡಿ ದೇಸಾಯರವರು ರಿಕ್ರೂಟಿಂಗಿನ ವಿಷಯವಾಗಿ ಬರೆದಿದ್ದ ಉಪನ್ಯಾಸವನ್ನು ಮ|| ರಾ|| ಎಸ್. ಎಸ್. ಬಸವನಾಳರವರು ಓದಿ ಹೇಳಿದರು. ಆಮೇಲೆ ತರುಣರಿಂದಾಗತಕ್ಕ ಸಮಾಜಸೇವೆಯನ್ನು ಕುರಿತು ಮ|| ರಾ|| ಸಿ. ಕೆ. ಒಡೆಯರ್‌ರವರು ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದರು. ಇದೇ ವಿಷಯವನ್ನು ಕುರಿತು ಮ|| ರಾ|| ಜಿ.ಎಂ. ಮಹಾದೇವಯ್ಯನವರು ಇಂಗ್ಲೀಷಿನಲ್ಲಿ ಉಪನ್ಯಾಸಮಾಡಲು ಸಂತೋಷಪಟ್ಟು ಮ|| ರಾ|| ಉರುವುಕೊಂಡೆ ಚನ್ನಬಸವಪ್ಪನವರು ೫ ರೂ. ಗಳನ್ನೂ ಮ|| ರಾ|| ಮಾಗಾನಹಳ್ಳಿ ದೊಡ್ಡಬಸವಪ್ಪನವರು ೫ ರೂ. ಗಳನ್ನೂ ಬಹುಮಾನವಾಗಿ ಕೊಟ್ಟರು. ಅನಂತರ ಮ|| ರಾ|| ಕುಲಕರ್ಣಿ ಬಿ. ಎ., ಯವರು ಬೊಂಬಾಯಿಯ ಸೇವಾಸಮಾಜದ ಕಾರ್ಯಗಳನ್ನೂ ತರುಣರಿಂದಾಗತಕ್ಕ ಸಮಾಜಸೇವೆಯನ್ನೂ ಕುರಿತು ಮರಾಠಿಯಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ತರುವಾಯ ಶ್ರೀಯುತ ಅಡ್ವೋಕೇಟ್ ನಾಯಿಕ್‌ರವರು ಬಾಲ್ಯವಿವಾಹ ಮತ್ತು ವರದಕ್ಷಿಣೆಗಳಿಂದ ಆಗುವ ಅನರ್ಥಗಳನ್ನು ಕುರಿತೂ, ಮತ್ತು ಪ್ರೊಫೆಸರ್ ಲಕ್ಷ್ಮಿಯವರು ವೀರಶೈವಸಮಾಜಕ್ಕೂ ಜೈನ ಸಮಾಜಕ್ಕೂ ಇರತಕ್ಕ ಸಂಬಂಧ ಮೊದಲಾದುವುಗಳನ್ನು ಕುರಿತೂ ಮರಾಠಿಯಲ್ಲಿ ಸೊಗಸಾದ ಭಾಷಣಗಳನ್ನು ಮಾಡಿದರು. ಪರಸ್ಪರ ಕೃತಜ್ಞತಾದರ್ಶಕವಾದ ಭಾಷಣಗಳಾಗಲು ಸಭೆಯು ಮುಕ್ತಾಯವಾಯಿತು.

ತಾ|| ೨೩ ನೆಯ ಬೆಳಗ್ಗೆ ೧೦ಗಂಟೆ ಅರಟಾಳ ಹೈಸ್ಕೂಲಿನಲ್ಲಿ ಪತ್ರಿಕೆಗಾಗಿ ಸೇರಿದ್ದ ಧನರಾಶಿಯ ವಿನಿಯೋಗವನ್ನು ಕುರಿತು ನಿರ್ಣಯಿಸಲು ಒಂದು ಸಭೆ ಸೇರಿತು. ಶ್ರೀಮಾನ್ ಸರದಾರ ನಾಯಿಕ್ ಬಹದ್ದೂರ್ ಚಚಡಿಯವರು ಈ ಸಂಘಕ್ಕೆ ಅಧ್ಯಕ್ಷರಾಗಿ ಅವರ ಹೆಸರಿನಲ್ಲಿಯೇ ಬ್ಯಾಂಕಿನಲ್ಲಿ ಹಣವಿರಬೇಕೆಂತಲೂ, ಕನ್ನಡ ಭಾಷೆಯೇ ಪ್ರಾಧಾನ್ಯವಾಗಿರುವ ಒಂದು ಮಾಸಪತ್ರಿಕೆಯನ್ನು ಬೆಳಗಾಂವಿಯಲ್ಲಿ ಪ್ರಕಟಿಸಬೇಕೆಂತಲೂ ತೀರ್ಮಾನವಾಯಿತು. ಶ್ರೀಯುತ ಎಸ್. ಎಸ್. ಬಸವನಾಳ ಎಂ. ಎ. ರವರು ಈ ಪತ್ರಿಕೆಗೆ ಸಂಪಾದಕರಾಗಿ ನಿಯಾಮಕವಾಯಿತು.

ಈ ಸಭೆಯಲ್ಲಿ ಮಾಡಲ್ಪಟ್ಟ ನಿರ್ಧಾರಗಳು.

೧ ಕೇವಲ ಮಾನವಸ್ವಾತಂತ್ರ್ಯವನ್ನೂ ಮತ್ತು ಸಣ್ಣ ಪುಟ್ಟ ರಾಷ್ಟ್ರಗಳನ್ನೂ ಕಾಪಾಡುವುದಕ್ಕೋಸ್ಕರ ಮಿತ್ರರಾಷ್ಟ್ರಗಳೊಡನೆ ಟೊಂಕಕಟ್ಟಿಕೊಂಡು ಹೋರಾಡುವ ನಮ್ಮ ದಯಾಳು ಬ್ರಿಟಿಷ್ ಸರ್ಕಾರಕ್ಕೆ ಈ ಘೋರವಾದ ಸಾಂಪ್ರತದ ಯುದ್ಧದಲ್ಲಿ ಸಂಪೂರ್ಣ ಜಯವು ದೊರಕಲೆಂದು ಈ ಸಭೆಯು ದಯಾಘನನಾದ ಪರಮೇಶ್ವರನನ್ನು ಕುರಿತು ಅನನ್ಯಭಾವದಿಂದ ಪ್ರಾರ್ಥಿಸುತ್ತದೆ.

೨. ವೀರಶೈವ ಪಂಡಿತರಿಂದ ಬೇರೆ ಬೇರೆ ಭಾಷೆಗಳಲ್ಲಿ ಗ್ರಂಥಗಳನ್ನು ಬರೆಯಿಸುವುದು, ಮತ್ತು ವ್ಯಾಖ್ಯಾನ ಕೀರ್ತನಗಳನ್ನು ಮಾಡಿಸುವುದು, ಈ ಮೂಲಕ ಅನಾದಿ ಸಂಸಿದ್ಧವಾದ ವೀರಶೈವ ಮತದ ಪ್ರಸಾರವನ್ನು ಮಾಡುವರೆಂದು ಈ ತರುಣ ಸಮ್ಮೇಲನವು ಅಭಿಪ್ರಾಯಪಡುತ್ತದೆ.

೩. ವೀರಶೈವ ಸಮಾಜದಲ್ಲಿ ಸದ್ಯಕ್ಕಿರುವ ಪಂಗಡಗಳು ವೀರಶೈವ ಮತತತ್ವಗಳಿಗೆ ವಿರುದ್ಧವಿರುವುದರಿಂದ ಆಚಾರ ವಿಚಾರಶುದ್ಧರಾದ ಲಿಂಗಾಂಗಿಗಳು ಪರಸ್ಪರ ಬಳಿಕೆ ಮಾಡಬೇಕೆಂದು ಈ ಸಮಾಜದ ಅಭಿಪ್ರಾಯವಿದೆ.

೪. ವೀರಶೈವ ಸಮಾಜದವರಿಗೆ ಶಿಕ್ಷಣವು ಅವಶ್ಯಕವಾಗಿರುವುದರಿಂದ ನಮ್ಮ ಸಮಾಜದ ಸ್ತ್ರೀಪುರುಷರಲ್ಲಿ ವಿದ್ಯಾಪ್ರಸಾರಕ್ಕೋಸ್ಕರವಾಗಿ "ಫಂಡು" ಬೋರ್ಡಿಂಗುಗಳನ್ನೂ ಪುಸ್ತಕಾಲಯಗಳನ್ನೂ ಎಲ್ಲ ಭಾಗಗಳಲ್ಲಿಯೂ ಸ್ಥಾಪಿಸಲು ವೀರಶೈವ ತರುಣರು ಅವಿಶ್ರಾಂತ ಶ್ರಮಪಡಬೇಕೆಂದು ಮತ್ತೂ ವೀರಶೈವ ಸಮಾಜದ ಸಂಪದಭಿವೃದ್ಧಿಯು ಅಗತ್ಯವಾಗಿರುವುದರಿಂದ ನಮ್ಮ ಸಮಾಜದವರು ಅವಲಂಬಿಸಿರುವ ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳನ್ನು ವೃದ್ಧಿಗೊಳಿಸಲು ಮತ್ತು ಇವುಗಳಲ್ಲಿ ಸುಧಾರಣೆಯನ್ನು ಮಾಡಲೂ ನಮ್ಮ ಸಮಾಜದ ತರುಣರು ಇಂಥ ಶಿಕ್ಷಣವನ್ನು ಹೊಂದಬೇಕೆಂದು ಈ ಸಮ್ಮೇಲನದವರು ಅಭಿಪ್ರಾಯಪಡುತ್ತಾರೆ.

೫. ವೀರಶೈವ ಜನಾಂಗದ ಅಭಿವೃದ್ಧಿಗೆ ಈ ಕಾಲದಲ್ಲಿ ಅನೇಕ ಪಾಶ್ಚಿಮಾತ್ಯ ಶಿಕ್ಷಣಗಳು ಅಗತ್ಯವಾಗಿರುವುದರಿಂದ ಅಂಥ ಶಿಕ್ಷಣಗಳನ್ನು ಹೊಂದಲು ನಮ್ಮ ಸಮಾಜದ ತರುಣರು ಪರದೇಶಗಳಿಗೆ ಹೋಗಲು ಸಿದ್ಧರಾಗಬೇಕೆಂತಲೂ, ಇಂಥ ವಿದ್ಯಾರ್ಥಿಗಳಿಗಾಗಿ ವೀರಶೈವ ಸಮಾಜದವರು ತಕ್ಕ ಸೌಲಭ್ಯಗಳನ್ನು ಉಂಟುಮಾಡಿಕೊಡಬೇಕೆಂತಲೂ ಈ ಸಮ್ಮೇಲನದವರು ಆಗ್ರಹಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತಾರೆ. ವಾಸಪತ್ರಿಕೆಗಳ ವರ್ತಮಾನಪತ್ರಗಳ ಅವಶ್ಯಕತೆಯು ಹೆಚ್ಚಿರುವಕಾರಣ ನಮ್ಮ ತರುಣರು ಅದಕ್ಕೆ ಸರಿಯಾದ ಶಿಕ್ಷಣವನ್ನು ಹೊಂದಿ ಅವುಗಳನ್ನು ಹೊರಡಿಸಲು ಯತ್ನಿಸತಕ್ಕದ್ದೆಂದೂ ನಮ್ಮ ಸಮಾಜವು ಅದಕ್ಕೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕದ್ದೆಂದೂ ಈ ಸಮ್ಮೇಲನದವರು ಅಭಿಪ್ರಾಯಪಡುತ್ತಾರೆ.

೬. ಬಾಲವಿವಾಹ, ಕರ, ವರದಕ್ಷಿಣೆ, ದುಂದುಗಾರಿಕೆ ಮೊದಲಾದವು ಅನಿಷ್ಟಕಾರಕವಾದುವುಗಳಾಗಿರುವುದರಿಂದ ನಮ್ಮ ತರುಣರು ಅವಶ್ಯವಾಗಿ ಅವುಗಳನ್ನು ನಿರಾಕರಿಸತಕ್ಕದ್ದು.

೭. ನಮ್ಮ ದಯಾಳು ಸಾರ್ವಭೌಮರು ಈಗ ಕಷ್ಟಮಯಸ್ಥಿತಿಯಲ್ಲಿರುವುದರಿಂದ ಅವರಿಗೆ ನಮ್ಮ ಸಮಾಜದವರು ತನುಮನೋಧನಗಳಿಂದ ಸಹಾಯಮಾಡಬೇಕೆಂದು ಈ ಸಮ್ಮೇಲನದವರು ಅಭಿಪ್ರಾಯಪಡುತ್ತಾರೆ.

N.B. ವಾಸಪತ್ರಿಕೆಯ ವೆಚ್ಚಕ್ಕೆ ಸುಮಾರು ೪೦೦೦ ರೂ. ವರ್ಗಣಿ ಆಗಿ ೮೦೦ ರೂ. ಗಳು ರೋಖ ಕೂಡಿದುವು. ಮೊದಲನೇ ಸಂಚಿಕೆಯು ವಿಜಯಸಪ್ತಮಿಯ ಶುಭಮುಹೂರ್ತದಲ್ಲಿ ಹೊರಡುವುದು.

ಈ ರೀತಿಯಾಗಿ ಎರಡನೆಯ ಸಮ್ಮೇಲನವು ಅತ್ಯಂತ ವಿಜೃಂಭಣೆಯಿಂದ ಕಾರ್ಯರೂಪದಲ್ಲಿ ಪರಿಸಮಾಪ್ತಿಯಾಯಿತು. ಪ್ರತ್ಯಕ್ಷದರ್ಶಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
5 ಆನಂದ ಬುಕ್‌ಡಿಪೋ, ಮೈಸೂರು.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು

ಎಲ್ಲಾ ಔಷಧಿಗಳನ್ನೂ ತೆಗೆದುಕೊಂಡು ನಿರಾಶೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮಿನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತ, ಚಕ್ರದತ್ತಾ, ಲುಕ್ಮಾನ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸಿಫಾರಸ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹುಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ಸ್ವಪ್ನಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮೂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಶ್ಯ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಶುದ್ಧ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ.—ಇವರ ಹೊರತು ನಮ್ಮಲ್ಲಿ ಮೇಹಸಂಬಂಧ ಔಷಧಿಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ಚಿಬ್ಬು, ಬಿಳಿಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಧಿ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾಗುವದು. ಮತ್ತು ತಮ್ಮ ಅಡ್ರಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಬ್ಯಾತಪ್ಪಾ ಕಾಳಪ್ಪಾ ಲೇಂಗಡೆ,
12 ಹೊಸೂರ, ಪೋಸ್ಟ್, ಪಾಪೂರ (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ವೃಷಣಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಚ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಛಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅವರ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾ ಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವವ ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
4 ಮುಕ್ಕಾಮ ಶಹಪೂರ, ಬೆಳಗಾಂವ

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ಬಾಟ್ಲು ಕಮಿಷನ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರು

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದ ಸರ್ಪ ಚೇಳುಗಳ ವಿಷಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪ ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವರಿ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಶೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ ರೂ. 5.
ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕೊ.,
20 ಸಾಹುಕಾರಪೇಟೆ, ಮದ್ರಾಸ್.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹ ತರು ತ್ವರೆಮಾಡಬೇಕು!

೧. ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇ ಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಪೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷ್ಯದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
23 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

೧೯೧೮ ನೆಯ ಇಸವಿ ಮೇ ತಾ|| ೫ ರಿಂದ ೧೯೧೮ ನೆಯ ಮೇ ತಾ|| ೧೧ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮಸಂವತ್ಸರದ ಚೈತ್ರ ಬ|| ನವಮಿಯಿಂದ ವೈಶಾಖ ಶು|| ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
5	ಭಾನು	ನವಮಿ	6-32	ಶತಭಿಷ	52-30	23
6	[1]ಸೋಮ	ದಶಮಿ	0-55	ಪೂಭಾ	54-8	24
7	[2]ಮಂಗಳ	ದ್ವಾದಶಿ	48-46	ಉಭಾ	44-10	25
8	[3]ಬುಧ	ತ್ರಯೋ	42-39	ರೇವತಿ	39-55	26
9	ಗುರು	ಚತುದ	36-48	ಅಶ್ವಿನಿ	36-4	27
10	[4]ಶುಕ್ರ	ಅಮಾ	31-29	ಭರಣಿ	32-40	28
11	ಶನಿ	ಪಾಡ್ಯ	26-48	ಕೃತ್ತಿಕೆ	20-55	29

(1) ಶ್ರೀ ಶ್ವೇತವರಹಸ್ವಾಮಿರಥಃ. (2) ಶ್ರೀ ವೈಷ್ಣವಾನಾಂ ಮಧ್ವಾನಾಂ ಚೈಕಾದಶೀ, ಹರಿವಾಸರಃ. (3) ಶ್ವೇತವರಹಸ್ವಾಮಿಜಯಂತೀ, ಶ್ರೀರಂಗದ ರಂಗನಾಥಸ್ವಾಮಿರಥಃ. (4) ಸರ್ವತ್ರಮಾವಾಸ್ಯಾ, ಕರಗವ್ರತಂ ಕೃಷ್ಣಾಪುರದ ಸಂತಾನಗೋಪಾಲಕೃಷ್ಣಸ್ವಾಮಿರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾ ಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಸಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತ ಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮೇ ತಾರೀಖು ೧೨ ನೆಯ ಭಾನುವಾರ. (ಸಂಚಿಕೆ ೧೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ, ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅದ್ದಿಗೆ 1, ಗಡಿಯಾರದ ಅತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
31 3, ತಿರುಳಪ್ಪನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೯—೦
ಪರವಾದಿ ಗಜಾಂಕುಶಶತಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 22

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟತನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಸ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚು ಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಸ್ಟಾರ್‌ಆಫೀಸ್, ಮೈಸೂರ್.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
6 ಆನಂದ ಬುಕ್‌ಡಿಪೋ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 30

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟ್ಯಾಂಪು ಕಳಿಸಿದರೆ ಕ್ಯಾಟಲಾಗು ಪುಕಟೆ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನ್ನಡಾ ಡಿ||

೨. ವೀರಶೈವ ಪಂಡಿತರಿಂದ ಬೇರೆ ಬೇರೆ ಭಾಷೆಗಳಲ್ಲಿ ಗ್ರಂಥಗಳನ್ನು ಬರೆಯಿಸುವುದು, ಮತ್ತು ವ್ಯಾಖ್ಯಾನ ಕೀರ್ತನೆಗಳನ್ನು ಮಾಡಿಸುವುದು, ಈ ಮೂಲಕ ಅನಾದಿ ಸಂಸಿದ್ಧವಾದ ವೀರಶೈವ ಮತದ ಪ್ರಸಾರವನ್ನು ಮಾಡುವರೆಂದು ಈ ತರುಣ ಸಮ್ಮೇಲನವು ಅಭಿಪ್ರಾಯಪಡುತ್ತದೆ.

೩. ವೀರಶೈವ ಸಮಾಜದಲ್ಲಿ ಸದ್ಯಕ್ಕಿರುವ ಪಂಗಡಗಳು ವೀರಶೈವ ಮತತತ್ವಗಳಿಗೆ ವಿರುದ್ಧವಿರುವುದರಿಂದ ಆಚಾರ ವಿಚಾರಶುದ್ಧರಾದ ಲಿಂಗಾಂಗಿಗಳು ಪರಸ್ಪರ ಬಳಿಕೆ ಮಾಡಬೇಕೆಂದು ಈ ಸಮಾಜದ ಅಭಿಪ್ರಾಯವಿದೆ.

೪. ವೀರಶೈವ ಸಮಾಜದೇಳ್ಗೆಗೆ ಶಿಕ್ಷಣವು ಅವಶ್ಯಕವಾಗಿರುವುದರಿಂದ ನಮ್ಮ ಸಮಾಜದ ಸ್ತ್ರೀಪುರುಷರಲ್ಲಿ ವಿದ್ಯಾಪ್ರಸಾರಕ್ಕೋಸ್ಕರವಾಗಿ "ಫಂಡು" ಬೋರ್ಡಿಂಗುಗಳನ್ನೂ ಪುಸ್ತಕಾಲಯಗಳನ್ನೂ ಎಲ್ಲ ಭಾಗಗಳಲ್ಲಿಯೂ ಸ್ಥಾಪಿಸಲು ವೀರಶೈವ ತರುಣರು ಅವಿಶ್ರಾಂತ ಶ್ರಮಪಡಬೇಕೆಂದು ಮತ್ತೂ ವೀರಶೈವ ಸಮಾಜದ ಸಂಪದಭಿವೃದ್ಧಿಯು ಅಗತ್ಯವಾಗಿರುವುದರಿಂದ ನಮ್ಮ ಸಮಾಜದವರು ಅವಲಂಬಿಸಿರುವ ವ್ಯಾಪಾರ, ಒಕ್ಕಲತನ, ಕೈಗಾರಿಕೆಗಳನ್ನು ವೃದ್ಧಿಗೊಳಿಸಲು ಮತ್ತು ಇವುಗಳಲ್ಲಿ ಸುಧಾರಣೆಯನ್ನು ಮಾಡಲೂ ನಮ್ಮ ಸಮಾಜದ ತರುಣರು ಇಂಥ ಶಿಕ್ಷಣವನ್ನು ಹೊಂದಬೇಕೆಂದು ಈ ಸಮ್ಮೇಲನದವರು ಅಭಿಪ್ರಾಯಪಡುತ್ತಾರೆ.

೫. ವೀರಶೈವ ಜನಾಂಗದ ಅಭಿವೃದ್ಧಿಗೆ ಈ ಕಾಲದಲ್ಲಿ ಅನೇಕ ಪಾಶ್ಚಿಮಾತ್ಯ ಶಿಕ್ಷಣಗಳು ಅಗತ್ಯವಾಗಿರುವುದರಿಂದ ಅಂಥ ಶಿಕ್ಷಣಗಳನ್ನು ಹೊಂದಲು ನಮ್ಮ ಸಮಾಜದ ತರುಣರು ಪರದೇಶಗಳಿಗೆ ಹೋಗಲು ಸಿದ್ಧರಾಗಬೇಕೆಂತಲೂ, ಇಂಥ ವಿದ್ಯಾರ್ಥಿಗಳಿಗಾಗಿ ವೀರಶೈವ ಸಮಾಜದವರು ತಕ್ಕ ಸೌಲಭ್ಯಗಳನ್ನು ಉಂಟುಮಾಡಿಕೊಡಬೇಕೆಂತಲೂ ಈ ಸಮ್ಮೇಲನದವರು ಆಗ್ರಹಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತಾರೆ. ಮಾಸಪತ್ರಿಕೆಗಳ ವರ್ತಮಾನಪತ್ರಗಳ ಅವಶ್ಯಕತೆಯು ಹೆಚ್ಚಿರುವಕಾರಣ ನಮ್ಮ ತರುಣರು ಅದಕ್ಕೆ ಸರಿಯಾದ ಶಿಕ್ಷಣವನ್ನು ಹೊಂದಿ ಅವುಗಳನ್ನು ಹೊರಡಿಸಲು ಯತ್ನಿಸತಕ್ಕದ್ದೆಂದೂ ನಮ್ಮ ಸಮಾಜವು ಅದಕ್ಕೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕದ್ದೆಂದೂ ಈ ಸಮ್ಮೇಲನದವರು ಅಭಿಪ್ರಾಯಪಡುತ್ತಾರೆ.

೬. ಬಾಲವಿವಾಹ, ಕೆರ, ವರದಕ್ಷಿಣೆ, ದುಂದುಗಾರಿಕೆ ಮೊದಲಾದವು ಅನಿಷ್ಟಕಾರಕವಾದುವುಗಳಾಗಿರುವುದರಿಂದ ನಮ್ಮ ತರುಣರು ಅತ್ಯವಶ್ಯವಾಗಿ ಅವುಗಳನ್ನು ನಿರಾಕರಿಸತಕ್ಕದ್ದು.

೭. ನಮ್ಮ ದಯಾಳು ಸಾರ್ವಭೌಮರು ಈಗ ಕಷ್ಟಮಯಸ್ಥಿತಿಯಲ್ಲಿರುವುದರಿಂದ ಅವರಿಗೆ ನಮ್ಮ ಸಮಾಜದವರು ತನುಮನೋಧನಗಳಿಂದ ಸಹಾಯಮಾಡಬೇಕೆಂದು ಈ ಸಮ್ಮೇಲನದವರು ಅಭಿಪ್ರಾಯಪಡುತ್ತಾರೆ.

N.B. ಮಾಸಪತ್ರಿಕೆಯ ಪೇಟೆಯಿಂದ ಸುಮಾರು ೩೦೦೦ ರೂ. ವರ್ಗಣಿ ಆಗಿ ೮೦೦ ರೂ. ಗಳು ರೊಖ ಕೂಡಿದುವು. ಮೊದಲನೇ ಸಂಚಿಕೆಯು ವಿಜಯದಶಮಿಯ ಶುಭಮುಹೂರ್ತದಲ್ಲಿ ಹೊರಡುವುದು.

ಈ ರೀತಿಯಾಗಿ ಎರಡನೆಯ ಸಮ್ಮೇಲನವು ಅತ್ಯಂತ ವಿಜೃಂಭಣೆಯಿಂದ ಕಾರ್ಯರೂಪದಲ್ಲಿ ಪರಿಸಮಾಪ್ತಿಯಾಯಿತು. ಪ್ರತ್ಯಕ್ಷದರ್ಶಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
5 ಆನಂದ ಬುಕ್‌ಡಿಪೊ, ಮೈಸೂರು.

ಈಗ್ಗೆ ೨೫ ವರ್ಷಗಳ ಲಾಗಾಯಿತು ಅನುಭವಸಿದ್ಧವಾದ
ರಾಂಬಾಣ ಔಷಧಿಗಳು
ಎಲ್ಲಾ ಔಷಧಿಗಳನ್ನು ತೆಗೆದುಕೊಂಡು ನಿರಾಸೆಪಟ್ಟವರು
ಇತ್ತಕಡೆಗೆ ನೋಡಿರಿ! ಇತ್ತಕಡೆಗೆ ನೋಡಿರಿ!
(ಧಾತುಪೌಷ್ಟಿಕ) (ದಮ್ಮು ನಮೇಲೆ ರಾಂಬಾಣ)

ಕಾಮಸಂಜೀವನಿಲೇಹ, (ಮತ್ತು) ಮಹಾಂಕಾಳಿಭಸ್ಮ.

ಈ ಔಷಧಿಗಳು ಪುರಾತನ ಅತ್ಯುತ್ತಮ ವೈದ್ಯಗ್ರಂಥಗಳಾದ ಚರಕ, ಪೂಜ್ಯಪಾದ, ಸುಶ್ರುತ, ಚಿತ್ರದತ್ತ, ಉತ್ತಾನಿ ಇವೇ ಮೊದಲಾದ ಹಸ್ತಲಿಖಿತ ಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳಿಂದ ತಯಾರುಮಾಡಿ ಈಗ ೨೫ ವರ್ಷಗಳ ಲಾಗಾಯ್ತು ಅನುಭವಸಿದ್ಧವಾಗಿ ಇರುತ್ತವೆ. ಇದರ ಖಾತ್ರಿಯು ನಮಗೆ ದೊರೆತ ಸರ್ಟಿಫಿಕೇಟ್ ಪತ್ರಗಳಿಂದಲೂ, ಗ್ರಾಹಕರ ಬೇಡಿಕೆಯ ಪತ್ರಗಳಿಂದಲೂ ಗೊತ್ತಾಗುತ್ತ. ನಮ್ಮಲ್ಲಿ ದೊರೆಯುವ ಯಾವತ್ತು ಔಷಧಿಗಳಲ್ಲಿ ರಸಾಯನ ವಗೈರೆ ಕೂಡಿರುವುದಿಲ್ಲ. ಯಾರಾದರೂ ನಮ್ಮ ಔಷಧಿಗಳಲ್ಲಿ ರಸಾಯನ ವಗೈರೆ ಬಾಧಕವಸ್ತುಗಳು ಕೂಡಿರುವುದಾಗಿ ಸಿದ್ಧಮಾಡಿಕೊಟ್ಟರೆ ಒಂದು ನೂರು (೧೦೦) ರೂಪಾಯಿಗಳು ಬಹುಮಾನ ಕೊಡಲಿಕ್ಕೆ ಸಿದ್ಧರಿರುತ್ತೇವೆ.

ಕಾಮಸಂಜೀವನಿಲೇಹ:—ಇದರ ಸೇವನೆಯಿಂದ ಮುಖ್ಯವಾಗಿ ಬಾಲ್ಯದ ಅತ್ಯಾಚಾರದಿಂದ ಧಾತುನಷ್ಟವನ್ನೂ, ರಕ್ತಹೀನತೆಯನ್ನೂ ಹೊಂದಿರುವ ಅತಿ ದುರ್ಬಲರಾದ ಸ್ತ್ರೀಪುರುಷರಿಗೂ ಸಹ ಈ ಔಷಧವು ಬಹು ಸೌಖ್ಯವನ್ನುಂಟುಮಾಡುವುದರಿಂದ ಇದನ್ನು "ಸಂಜೀವನಿ" ಎಂದು ಧಾರಾಳವಾಗಿ ಹೇಳಬಹುದು. ಇದು ಅನೇಕ ವ್ಯಾಧಿಗಳ ದುಃಖದಿಂದ ಹೇಳಲಸಾಧ್ಯವಾದ ಸಂಕಟಗಳನ್ನು ಅನುಭವಿಸುತ್ತಿರುವ ಅನೇಕ ರೋಗಿಗಳ ಹಿತಾರ್ಥವಾಗಿ ಮೇಲ್ಕಂಡ ಅತ್ಯುತ್ತಮ ಪುರಾತನ ವೈದ್ಯಗ್ರಂಥಗಳನ್ನು ಪರಿಶೋಧಿಸಿ ಶುದ್ಧ ವನಮೂಲಿಕೆಗಳ ಮತ್ತು ಚೂರ್ಣದ್ರವ್ಯಗಳ ಮಿಶ್ರಿತದಿಂದ ಈ "ಕಾಮಸಂಜೀವನಿಲೇಹ್ಯವು" ತಯಾರುಮಾಡಲ್ಪಟ್ಟಿರುತ್ತೆ. ಇದರ ಸೇವನೆಯಿಂದ ರಕ್ತಹೀನತೆ ನರಗಳ ದೌರ್ಬಲ್ಯ, ಧಾತುನಾಶ, ಧಾತುಸ್ರಾವ, ಅನೇಕ ವಿಧವಾದ ಧಾತುಕ್ಷಯ, ನಿದ್ರಾಭಂಗ, ಮಲಬದ್ಧತೆಯಿಂದುಂಟಾದ ಅನೇಕ ರೋಗಗಳು, ಅಗ್ನಿಮಾಂದ್ಯ, ಅಜೀರ್ಣ, ಅರುಚಿ, ಅತಿಸಾರ, ಅಸ್ಥಿಜ್ವರ, ಅನೇಕವಿಧವಾದ ಮಂತ್ರದೋಷಗಳು, ಸ್ತ್ರೀಯರ ರಕ್ತಸ್ರಾವ ಮತ್ತು ಅನೇಕ ಗುಪ್ತರೋಗಗಳನ್ನು ಹೋಗಲಾಡಿಸಿ ಗರ್ಭಸ್ಥಾನವನ್ನು ನಿರ್ದೋಷವಾಗಿ ಮಾಡಿ, ಗರ್ಭಧಾರಣಶಕ್ತಿಯನ್ನುಂಟುಮಾಡುವುದರಲ್ಲಿ "ಕಾಮಸಂಜೀವನಿಲೇಹ್ಯವು" ಅದ್ಭುತ ಗುಣವುಳ್ಳದ್ದಾಗಿರುತ್ತೆ. ಒಂದಾವೃತ್ತಿ ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ, ಜಾಹೀರಾತಿನಮೂಲಕ ಪ್ರಸಿದ್ಧಮಾಡಿದ್ದೇನೆ. ಇದು ಬಡವರಿಗೂ ಧನವಂತರಿಗೂ ಸಹ ಉಪಯೋಗವಾಗಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಯಿಟ್ಟಿರುತ್ತೆ. ನಮೂನೆ ಉದ್ದಿಷ್ಟ ೨೦ ತೊಲೆ ಡಬ್ಬಿ ೧ ಕ್ಕೆ ೨ ರೂಪಾಯಿ. ೪೦ ತೊಲೆ ಡಬ್ಬಿ ೧ ಕ್ಕೆ ೩ ರೂ. ೮ ಆಣೆ. ೮೦ ತೊಲೆಯ ಡಬ್ಬಿ ೧ ಕ್ಕೆ ೬ ರೂಪಾಯಿ. ಇದರ ಹೊರ್ತು ವಿ. ಪಿ. ಪ್ಯಾಕಿಂಗ್ ಖರ್ಚು ಬೇರೆ. ಅನುಪಾನಪತ್ರವು ಡಬ್ಬಿಯೊಂದಿಗೆ ಇರುತ್ತೆ. ಇದನ್ನು ೪೦ ದಿವಸ ಸೇವನೆ ಮಾಡಿದರೆ ೬೦ ವರ್ಷದ ಮುದುಕನಾದಾಗ್ಯೂ ಕೂಡ ೧೬ ವರ್ಷದ ಪ್ರಾಯದವನಂತೆ ಆಗುತ್ತಾನೆ. ವಿ. ಪಿ. ಖರ್ಚು ೨೦ ತೊಲೆ ಡಬ್ಬಿಗೆ ೪ ಆಣೆ. ೪೦ ತೊಲೆ ಡಬ್ಬಿಗೆ ೫ ಆಣೆ. ೮೦ ತೊಲೆ ಡಬ್ಬಿಗೆ ೮ ಆಣೆ ಬೀಳುತ್ತೆ.

ಮಹಾಂಕಾಳಿಭಸ್ಮ:—ಇದು ಶುದ್ಧ ವನಸ್ಪತಿಗಳ ಭಸ್ಮ ಇರುತ್ತೆ. ಇದರ ಸೇವನೆಯಿಂದ ಎಂಥಾ ಭಯಂಕರ ದಮ್ಮು, ಶ್ವಾಸ, ಕಫಾ, ಕೆಮ್ಮು ಇವೇ ಮೊದಲಾದ ಕಫರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ೪೦ ದಿವಸ ಸೇವನೆ ಮಾಡಿದರೆ ಬಹುಕಾಲದ ದಮ್ಮು, ಶ್ವಾಸ ಖಾತ್ರಿಯಿಂದ ಗುಣವಾಗುತ್ತೆ. ೪೦ ದಿವಸ ಆಗುವ ಡಬ್ಬಿ ೧ ಕ್ಕೆ ೪ ರೂಪಾಯಿ. ವಿ. ಪಿ. ಪ್ಯಾಕಿಂಗ್ ಖರ್ಚು ೪ ಆಣೆ ಬೀಳುತ್ತೆ. ಅನುಪಾನಪತ್ರವು ಡಬ್ಬಿ ಸಂಗಡ ಇರುತ್ತೆ.

ಸೂಚನೆ.—ಇವರ ಹೊರತು ನಮ್ಮಲ್ಲಿ ಮೇಹಸಂಬಂಧಿ ಔಷಧಗಳು ಮತ್ತು ಗಜಕರ್ಣ, ಇಸಬು, ಕಜ್ಜಿ, ಹುರಕು, ತದ್ದು, ಬಿಳಕಡ್ಡಿ, ಮೇಹಸಂಬಂಧಿ ಚಟ್ಟಿ (ಟಾಕಿ) ಹಡವರ್ಣ, ಯಲುಸಂಧಿ ಮೊದಲಾದ ಹುಣ್ಣುಗಳ ಮುಲಾಮುಗಳೂ ಸಹ ಖಾತ್ರಿ ಲಾಯಕ್ಕ ಇರುತ್ತವೆ. ರಸಾಯನ ಮೈಯ್ಯಲ್ಲಿ ಇದ್ದು ಬಾಧಿಸುತ್ತಿದ್ದರೆ ತೆಗೆಯುವ ಔಷಧವು ಸಹ ನಮ್ಮಲ್ಲಿ ದೊರೆಯುತ್ತದೆ. ಗ್ರಾಹಕರು ತಮ್ಮ ಪ್ರಕೃತಿಮಾನವನ್ನು ಖುಲಾಸೆಯಿಂದ ಬರೆದು ತಿಳಿಸಿದರೆ ತಕ್ಕ ಔಷಧ ಕಳಿಸಲಾಗುವದು. ಮತ್ತು ತಮ್ಮ ಅಡ್ರೆಸ್ಸು, ಗ್ರಾಮ, ಪೋಸ್ಟು ವಗೈರೆ ಖುಲಾಸೆಯಿಂದ ಬರೆಯಬೇಕು. ಜವಾಬಿಗಾಗಿ ಟಿಕೀಟು ಬಂದ ಹೊರತು ಜವಾಬು ಬರೆಯಲಿಕ್ಕಿಲ್ಲ.

ನಮ್ಮ ಪತ್ತೆ:—ಶಾಂತ್ಯಪ್ಪಾ ಕಾಳಪ್ಪಾ ಲೇಂಗಡೆ,
12 ಹೊಸೂರ, ಪೋಸ್ಟ್, ಶಾಪೂರ (ಬೆಳಗಾಂವ)
ನಮ್ಮ ಔಷಧಿಗಳು ದೊರೆಯುವ ಎರಡನೆ ಪತ್ತೆ:—
ಬಸಪ್ಪಾ ಭೋಜಪ್ಪಾ ಕೊಳದೂರ ಮಾಸ್ತರ ಭಡಕಲ್ಲಗಲ್ಲಿ,
ಮುಕ್ಕಾಂ ಪೋಸ್ಟ್ ಬೆಳಗಾಂವ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.
ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ
ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ಸೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗೂ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಅರ್ಧಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲಿಶೂಲಿ, ನಡಶೂಲಿ, ವಾತಶೂಲಿ, ರೇಶ್ಮೆ, ಜಡ್ಡು, ಗುದ್ದವ್ಯನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಪೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದರೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾ ಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ ಹೆಡ್ ಆಫೀಸ
4 ಮುಕ್ಕಾಮ ಶಹಪೂರ, ಬೆಳಗಾಂವ

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ಬಾಟ್ಲಿ ಕಮಿಶನ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರು

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದ ಸರ್ಪ ಚೇಳುಗಳ ವಿಷ ಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರು ನನ್ನು ಕಂಡ ಸರ್ಪ ಕೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯು ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ ರೂ. 5.
ನಮ್ಮ ವಿಳಾಸ:— ಎ. ಎ. ಎಸ್. ವಾಣಿ ಅಂಡ್ ಕೊ.,
20 ಸಾಹುಕಾರಪೇಟೆ, ಮದ್ರಾಸ್.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧. ಸುವಾಸಿತ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ. ೧ಬೇ. ೧೪-೨೫ ಕ್ಕೆ ೧-೪-೦
೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ. ೧ಬೇ. ಡಜ಼ ೧೦೦ ಕ್ಕೆ ೧-೪-೦
೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ. ೧ಬೇ. ಡಜ಼. ೧೦೦ಕ್ಕೆ ೧-೮-೦
೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.
೫. ಪಕ್ವಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
23 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೮ ನೆಯ ಇಸವಿ ಮೇ ತಾ|| ೫ ರಿಂದ ೧೯೧೮ ನೆಯ ಮೇ ತಾ|| ೧೧ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮಸಂವತ್ಸರದ ಚೈತ್ರ ಬ|| ನವಮಿಯಿಂದ ವೈಶಾಖ ಶು|| ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಶೇದಿ
5	ಭಾನು	ನವಮಿ	6·32	ಶತಭಿಷ	52·30	23
6	[1]ಸೋಮ	ದಶಮಿ	0·55	ಪುಭಾ	54·8	24
7	[2]ಮಂಗಳ	ದ್ವಾದಶಿ	48·46	ಉಭಾ	44·10	25
8	[3]ಬುಧ	ತ್ರಯೋ	42·39	ರೇವತಿ	39·55	26
9	ಗುರು	ಚತುರ್ದ	36·48	ಅಶ್ವಿನಿ	36·4	27
10	[4]ಶುಕ್ರ	ಅಮಾ	31·29	ಭರಣಿ	32·40	28
11	ಶನಿ	ಪಾಡ್ಯ	26·48	ಕೃತ್ತಿಕೆ	20·55	29

(1) ಶ್ರೀ ಶ್ವೇತವರಹಸ್ವಾಮಿರಥಃ. (2) ಶ್ರೀ ವೈಷ್ಣವಾನಾಂ ಮಧ್ವಾನಾಂಚೈಕಾದಶೀ, ಹರಿವಾಸರಃ. (3) ಶ್ವೇತವರಹಸ್ವಾಮಿಜಯಂತೀ, ಶ್ರೀರಂಗದ ರಂಗನಾಥಸ್ವಾಮಿರಥಃ. (4) ಸರ್ವತ್ರಮಾವಾಸ್ಯಾ, ಕರಗವ್ರತಂ ಕೃಷ್ಣಾಪುರದ ಸಂತಾನಗೋಪಾಲಕೃಷ್ಣಸ್ವಾಮಿರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.
ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.
ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಹಲಾರೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತಿ ಲಯಂಸದಾಪುರೇಗೆ ಗೌರೀಶಾನುಕಂಪೋಜ್ವಲಂ ||
[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]
ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮೇ ತಾರೀಖು ೧೨ ನೆಯ ಭಾನುವಾರ. (ಸಂಚಿಕೆ ೧೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, 5 ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಛಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಕಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
31 3, ತಿರುವೆಳ್ಳಪ್ಪನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಾವಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 22

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಮ್. ವೈ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತವೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೇ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್‌ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಕ್ಷಿಪ್ರಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್‌ಆಫೀಸ್, ಮೈಸೂರ್.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
6 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 30

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಪಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನ್ನಡಾ ಡಿ||

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮೇ ತಾ|| ೧೨ ನೆಯ ಭಾನುವಾರ.

ಬಸವೇಶ್ವರಜಯಂತಿ.

ಲೋಕದಲ್ಲಿ ಶಿವಭಕ್ತಿ ಶಿವಮತಾಚಾರಗಳು ಕ್ಷೀಣವಾಗಿದ್ದ ಕಾಲದಲ್ಲಿ ಅದನ್ನುದ್ಧಾರಮಾಡುವುದಕ್ಕಾಗಿ ಶಿವನಪ್ಪಣೆಯನೇರೆ ಭೂತಲದಲ್ಲಿ ಅವತರಿಸಿ ಕಲ್ಯಾಣಪಟ್ಟಣದ ಬಿಜ್ಜಳನ ಮಂತ್ರೀಶನಾಗಿದ್ದ ಧರ್ಮಸ್ವರೂಪ ಶ್ರೀ ಬಸವೇಶ್ವರನ ಜಯಂತ್ಯುತ್ಸವವು ಈ ದಿವಸ ವೀರಶೈವಮಂಡಲಿಯಿಂದೆಲ್ಲಾ ಆಚರಿಸಲ್ಪಡತಕ್ಕದಾಗಿದೆ.

"ಜಯಂ ಪುಣ್ಯಂಚ ತನುತೇ ಜಯಂತೀಂ ತೇನತಾಂ ವಿದುಃ"

ಎಂಬ ವಚನಪ್ರಕಾರ ಜಯವನ್ನೂ ಪುಣ್ಯವನ್ನೂ ಉಂಟುಮಾಡುವ ಕಾರಣದಿಂದ ಇದಕ್ಕೆ ಜಯಂತೀ ಎಂಬ ಹೆಸರು ಪ್ರಾಪ್ತವಾಗಿರುವುದು. ಶ್ರೀ ಬಸವೇಶ್ವರನು ಹೇಗೆ ತನ್ನ ಸರ್ವಸ್ವವನ್ನೂ ಶಿವಮತೋದ್ಧಾರಕ್ಕೆ ಸಮರ್ಪಿಸಿ ಕೃತಕೃತ್ಯನಾದನೋ ಅದನ್ನು ಆತನ ಪವಿತ್ರ ಚಾರಿತ್ರದಿಂದ ಅರಿತುಕೊಂಡು ಪ್ರತಿಯೊಬ್ಬ ವೀರಶೈವರೂ ತಮ್ಮ ಶಕ್ತಿವಂಚನೆಯಿಲ್ಲದೆ ಸ್ವಮತದ ಅಭ್ಯುದಯಕ್ಕಾಗಿ ಯಾವ ತೆರದ ಸೇವೆಯನ್ನು ಮಾಡುವುದಕ್ಕಾದರೂ ಈ ಶುಭದಿವಸದಲ್ಲಿ ಸಂಕಲ್ಪಮಾಡುವುದೇ ಜಯವನ್ನೂ ಪುಣ್ಯವನ್ನೂ ಉಂಟುಮಾಡಲು ಸಾಧಕವಾದ ಜಯಂತ್ಯುತ್ಸವವೆನಿಸಿಕೊಳ್ಳುವುದು. ಅದನ್ನು ಸಕಲ ವೀರಶೈವರೂ ಶ್ರೀ ಬಸವೇಶ್ವರನ ಚರಿತಾದರ್ಶದಿಂದ ನೆರವೇರಿಸಿ ಕೃತಕೃತ್ಯರಾಗಲೆಂದು ಬಯಸುವೆವು.

ಸರ್ ಸುಬ್ರಹ್ಮಣ್ಯಯ್ಯರವರ ಲೇಖನ.

ಮದ್ರಾಸಿನ ಸರ್ ಸುಬ್ರಹ್ಮಣ್ಯಯ್ಯರು ಕಳೆದವರ್ಷ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾದ ವಿಲ್ಸನ್ ರವರಿಗೆ ಭರತಖಂಡದ ಸ್ವರಾಜ್ಯವಿಷಯವಾಗಿ ಒಂದು ಲೇಖನವನ್ನು ಬರೆದಿದ್ದರೆಂದೂ, ಅದನ್ನವರು ಇಂಡ್ಯಾ ವೈಸ್ರಾಯರಿಗೆ ಕಳುಹಿಸಿಕೊಟ್ಟಿದ್ದರೆಂದೂ, ವೈಸ್ರಾಯರೂ ಸ್ಟೇಟ್ ಸೆಕ್ರೆಟರಿಯವರೂ ಸಹ ಮದ್ರಾಸಿಗೆ ಬಂದಿದ್ದಾಗ್ಗೆ ಸರ್ ಸುಬ್ರಹ್ಮಣ್ಯರನ್ನು ಇದಿರಿಗೆ ಬರಮಾಡಿಕೊಂಡು, ಆ ಪತ್ರವನ್ನು ಅವರಿಗೆ ತೋರಿಸಿ, ಇಂಥ ಕಾರ್ಯವನ್ನು ನೀವು ನಡೆಯಿಸಬಹುದೆ? ಎಂದು ಭರ್ತ್ಸನಮಾಡಿದ್ದರೆಂದೂ ಇದಕ್ಕೆ ಮುಂಚೆಯೇ ಪ್ರಕಟವಾಗಿದ್ದಿತು. ಆದರೆ ಕಳೆದ ವಾರದ ನ್ಯೂ ಇಂಡಿಯಾ ಪತ್ರಿಕೆಯಲ್ಲಿ ಆ ಲೇಖನವು ಯಥಾವತ್ತು ಮುದ್ರಿಸಲ್ಪಟ್ಟಿರುವುದನ್ನು ನೋಡಲಾಗಿ ಅದು ಯಥಾರ್ಥವೆಂದು ಸಿದ್ಧವಾಗುವುದು. ಆ ಲೇಖನದ ಮುಖ್ಯಾಭಿಪ್ರಾಯವೇನೆಂದರೆ—"ನಾನು ಭರತಖಂಡದ ಸ್ವರಾಜ್ಯಸಂಘಕ್ಕೆ ಅಧ್ಯಕ್ಷನು. ಈ ಸಂಘವು ರಾಷ್ಟ್ರೀಯ ಮಹಾಸಭೆ ಮುಸ್ಲೀಂಲೀಗು ಇವೆರಡರ ನಿರ್ಧಾರಗಳಿಗೆ ಅನುಸಾರವಾಗಿರುತ್ತದೆ. ಇವೆರಡು ರಾಜಕೀಯ ಸಂಘಗಳಿಗೆ ಸೇರಿದ ಬಹುಶಃ ೫೦೦೦ ಮಂದಿಗಳು ಲಕ್ನೋ ಪಟ್ಟಣದಲ್ಲಿ ಕೂಡಿ "ಈ ಭರತಖಂಡಕ್ಕೆ ಸ್ವರಾಜ್ಯವು ಅನುಗ್ರಹಿಸಲ್ಪಡಬೇಕು. ಆಂಗ್ಲ ಸಾಮ್ರಾಜ್ಯದ ಇತರ ಭಾಗಗಳಂತೆ ಈ ದೇಶವನ್ನೂ ಗಣಿಸಬೇಕು" ಎಂದು ನಿರ್ಧರಿಸಿ ಅದನ್ನು ಸರ್ಕಾರಕ್ಕೆ ಬಿನ್ನಯಿಸಿಕೊಂಡರು. ಆದಕ್ಕೆ ಅವರು ಯಾವ ಉತ್ತರವನ್ನೂ ಕೊಡಲಿಲ್ಲ. ಇದಕ್ಕೆ ಯುದ್ಧವೇ ಕಾರಣವಾಗಿರಬಹುದು. ನಾವು ಆಂಗ್ಲಸಾಮ್ರಾಜ್ಯಕ್ಕಧೀನವಾದ ಸ್ವರಾಜ್ಯವನ್ನು ಕೋರಿದೆವು. ಈ ದೇಶಕ್ಕೆ ಸ್ವರಾಜ್ಯವನ್ನು ಕೊಟ್ಟರೆ ೧೫ ಕೋಟಿ ಪ್ರಜೆಗಳುಳ್ಳ ಈ ದೇಶದಿಂದ ೫೦ ಲಕ್ಷ ಜನರು ಯುದ್ಧಕ್ಕೆ ಒದಗುವುದು ಬಹಳ ಸುಲಭವು. ಈಗ ಅವರು ಏತಕ್ಕೆ ಬರುವುದಿಲ್ಲವೆಂದರೆ—ಈಗ ಭರತಖಂಡದ ವೀರಪುರುಷರು ಯುದ್ಧಮಾಡುತ್ತಿರುವುದು ತಮಗೋಸ್ಕರವಲ್ಲ. ತಮ್ಮನ್ನು ಅಣಗಿಸಿ ಮೆಟ್ಟಿ ಪರಿಪಾಲಿಸುತ್ತಿರುವ ವಿದೇಶೀಯರಿಗಾಗಿ. ಯುದ್ಧದಲ್ಲಿ ಭಾರತ ವೀರರು ತೋರಿಸಿರುವ ಶೌರ್ಯ ಪರಾಕ್ರಮಗಳು ಜಗದ್ವಿಖ್ಯಾತವಾಗಿವೆ. ಒಂದಾವೃತ್ತಿ ಅತ್ಯಂತ ಸಂದಿಗ್ಧಾವಸ್ಥೆಯಲ್ಲಿದ್ದ ಆಂಗ್ಲ ರಾಜ್ಯವನ್ನು ಕಾಪಾಡಿದವರು ಭಾರತ ವೀರರೆಂಬುದು ಎಲ್ಲರಿಗೂ ಗೊತ್ತುಂಟು. ಸ್ವಾತಂತ್ರ್ಯವಿಲ್ಲದೆ ದಾಸ್ಯದಲ್ಲಿ ಬಿದ್ದಿರುವಾಗಲೇ ಹಾಗೆ ಹೋರಾಡಿದ ಭಾರತ ವೀರರು ತಮಗೆ ಸ್ವಾತಂತ್ರ್ಯವು ಬಂದಾಗ ಕೃತಜ್ಞತೆಯಿಂದ ಆಂಗ್ಲೇಯರು ಎಷ್ಟೆಷ್ಟು ತೆರದ ಸಹಾಯಮಾಡಬಹುದೆಂಬುದನ್ನು ಪರ್ಯಾಲೋಚಿಸಬೇಕು. ಈಗಳಾದರೂ ಪ್ರಜೆಗಳು ತಮ್ಮ ದಾಸಭಾವದಿಂದ ಉಂಟಾಗಿರುವ ಅಸಂತುಷ್ಟಿಕಾರಣದಿಂದಲೇ ಯುದ್ಧಕ್ಕೆ ಹೆಚ್ಚುಹೆಚ್ಚಾಗಿ ಸೇರದೆ ಇದ್ದಾರೆ. ಈ ಮಧ್ಯೆ ಪ್ರಭುತ್ವದವರು ಸ್ವಯಂ ಸೇವಕ ಸೈನ್ಯಕ್ಕೆ ಜನರನ್ನು ಸೇರಿಸಲು ಕರೆದಾಗ ಈ ಕೋಟ್ಯಂತರ ಪ್ರಜೆಗಳಲ್ಲಿ ೫೫೦ ಮಂದಿಗಳು ಮಾತ್ರವೇ ಬಂದರು. ಪ್ರಜಾಸ್ವಾತಂತ್ರ್ಯವನ್ನೂ ಪ್ರಜಾಪರಿಪಾಲನವನ್ನೂ ಜಗತ್ತಿನಲ್ಲಿ ಸುಪ್ರತಿಷ್ಠೆಗೊಳಿಸುವುದಕ್ಕೆ ಬದ್ಧಕಂಕಣರಾದ ನೀವು ಆಂಗ್ಲಪ್ರಭುತ್ವದವರನ್ನೂ ಕೂಡ ನಿಮ್ಮ ಆಶಯಾದರ್ಶವುಳ್ಳವರನ್ನಾಗಿಯೇ ಮಾಡುತ್ತೀರೆಂದೂ, ಈ ದೇಶೀಯರುಗಳಿಗೆ ತಮ್ಮ ಸಂಪೂರ್ಣ ಸಹಾಯವನ್ನು ಯುದ್ಧಕ್ಕೆ ಒಪ್ಪಿಸಲು ಅವಕಾಶವನ್ನು ಕಲ್ಪಿಸಿಕೊಡುವಿರೆಂದೂ ನಂಬುತ್ತೇನೆ. ಇಲ್ಲಿಯ ಸ್ಥಿತಿಗತಿಗಳು ನಿಮಗೆ ಚೆನ್ನಾಗಿ ತಿಳಿಯವು. ಇಲ್ಲಿಯ ಪ್ರಭುತ್ವದವರು ಮಾಡುತ್ತಿರುವ ಅಧರ್ಮ ಪರಿಪಾಲನವನ್ನು ತಿಳಿಯುವುದಕ್ಕೆ ನಿಮಗೆ ಅವಕಾಶವಿಲ್ಲ. ವಿದೇಶೀಯರಾದ ಇವರು ತಮ್ಮ ಇಷ್ಟಪ್ರಕಾರವೇ ನಮ್ಮನ್ನು ನಡೆಯಿಸಿಕೊಳ್ಳಬೇಕೆನ್ನುತ್ತಾರೆ. ತಮಗೆ ತಾವೇ ಹೆಚ್ಚು ಸಂಬಳವನ್ನೂ ಅಲೋಯನ್ಸುಗಳನ್ನೂ ತೆಗೆದುಕೊಳ್ಳುತ್ತಾರೆ. ನಮಗೆ ವಿದ್ಯಾದಾನವನ್ನು ಮಾಡಿಸದೆ ಇದ್ದಾರೆ. ನಮ್ಮ ದೇಶದ ಸಂಪತ್ತನ್ನು ಸೂರೆಮಾಡುತ್ತಿದ್ದಾರೆ. ನಮ್ಮ ಸಮ್ಮತಿಯಿಲ್ಲದೆಯೇ ಬೆಟ್ಟದಷ್ಟು ಭಾರವಾದ ತೆರುಗೆ ಕಂದಾಯಗಳನ್ನು ನಮ್ಮ ಮೇಲೆ ಹೊರಿಸುತ್ತಾರೆ. ದೇಶಾಭಿಮಾನದಿಂದ ಮಾತನಾಡತಕ್ಕ ಜನರನ್ನೆಲ್ಲಾ ಸಾವಿರಗಟ್ಟಲೆಯಾಗಿ ಹಿಡಿದು ಕಾರಾಗೃಹದಲ್ಲಿಡಿಸುತ್ತಿದ್ದಾರೆ. ತಪ್ಪು ಇಂತಹದೆಂದು ಹೇಳದೆಯೇ ನ್ಯಾಯಸ್ಥಾನದಲ್ಲಿ ವಿಚಾರಮಾಡಿಸದೆಯೇ ಈ ದೇಶಕ್ಕೆ ಅತ್ಯಂತೋಪಕಾರಮಾಡಿದ ಆನಿಬೆಸೆಂಟಮ್ಮನವರನ್ನು ಸೆರೆಯಲ್ಲಿಡಿಸಿದುದೇ ಇದಕ್ಕೆ ನಿದರ್ಶನವು." ಎಂದು ಮೊದಲಾಗಿ ಅಯ್ಯರು ಬರೆದಿದ್ದಾರೆ. ಈ ಅಯ್ಯರು ಸಾಮಾನ್ಯರಲ್ಲ. ಲೋಕಾನುಭವವಿಲ್ಲದ ಹುಡುಗರಲ್ಲ. ೮೦ ವರ್ಷದ ವೃದ್ಧರು. ವಿದ್ಯಾಗಂಧವಿಲ್ಲದ ಒರಟರಲ್ಲ. ಎಲ್. ಎಲ್. ಡಿ. ಪ್ರಶಸ್ತಿಯನ್ನು ಪಡೆದವರು. ಆಂಗ್ಲಧರ್ಮಪ್ರಭಾವದ ಪರಿಚಯವಿಲ್ಲದವರೇನೂ ಅಲ್ಲ. ಸದ್ಧರ್ಮರಕ್ಷಣೆಗಾಗಿಯೇ ಅವರ ಪ್ರಭುತ್ವದಲ್ಲಿ ಮದ್ರಾಸ್ ಹೈಕೋರ್ಟು ನ್ಯಾಯಾಧೀಶತ್ವವನ್ನು ವಹಿಸಿ, ಸರ್ ಪ್ರಶಸ್ತಿಯನ್ನು ಅವರಿಂದ ಪಡೆದುಕೊಂಡವರು. ಇಂಥ ಪ್ರಸಿದ್ಧಪುರುಷರೇ ಆಂಗ್ಲಪ್ರಭುತ್ವ ವಿಷಯವಾಗಿ ಇಂಥ ಅಬದ್ಧಮಯವೂ ಅನ್ಯಾಯವೂ ರಾಜಭಕ್ತಿ ದೂರವೂ ಆದ ಲೇಖನವನ್ನು ಪರರಾಜ್ಯದವರೊಡನೆ ಹೇಗೆ ಬಳೆಯಿಸಿದರು? ಆಂಗ್ಲರಲ್ಲಿ ಮಿತ್ರರಾಗಿರುವ ಅಮೇರಿಕಾ ಪ್ರಭುತ್ವದವರೊಡನೆ ಹೀಗೆಲ್ಲಾ ದೂರಿ ಅವರವರ ಮಧ್ಯದಲ್ಲಿ ಮನಸ್ತಾಪಗಳು ಹುಟ್ಟಲವಕಾಶ ಮಾಡಬಹುದೆ? ಆಂಗ್ಲರ ಇಲ್ಲಿಯ ಪರಿಪಾಲನವು ಅಧರ್ಮಭೂಯಿಷ್ಠವಾಗಿದ್ದರೆ ಅಂಥ ಪ್ರಭುತ್ವದಲ್ಲಿ ಇವರು ನ್ಯಾಯಾಧಿಪತಿಗಳಾಗಿ ಮಾಡಿದ ತೀರ್ಮಾನಗಳೆಲ್ಲಾ ಅಧರ್ಮಮಯವೇ ಆಗಿರಬೇಕಾಯಿತಲ್ಲಾ! ಅಂಥ ಪ್ರಭುತ್ವದ ಕಾರ್ಯನಿರ್ವಾಹಮಾಡಿ ಲಕ್ಷಾಂತರ ರೂ. ಗಳ ಸಂಬಳವನ್ನು ಪಡೆದು ಈಗಲೂ ಪೆನ್ಷನ್ನನ್ನು ಪಡೆಯುತ್ತಿರುವ ಇವರ ಕೃತ್ಯವು ಮಾತ್ರ ಹೇಗೆ ಧರ್ಮಮಯವಾಗಿರುವುದು? ಈ ದೇಶೀಯರಿಗೆ ಆಂಗ್ಲ ಜನರು ವಿದ್ಯಾದಾನವನ್ನೇ ಮಾಡಿಸದೆ ಇದ್ದರೆ ಈ ಅಯ್ಯರು ಯಾವ ಪರಲೋಕದಲ್ಲಿ ವಿದ್ಯಾಭ್ಯಾಸಮಾಡಿ ಬಂದರು? ಅವರಿಂದ ರಾಜಕೀಯ ಶಿಕ್ಷಣವಾಗದಿದ್ದರೆ ಭರತಖಂಡದ ಸ್ವರಾಜ್ಯವಾದಿಗಳಿಗೆ ಅದನ್ನು ಕೋರುವ ಯೋಗ್ಯತೆಯೂ ಶಕ್ತಿಯೂ ಎಲ್ಲಿಂದ ಬಂದಿತು?

ಈ ರಹಸ್ಯ ಲೇಖನವನ್ನು ಅಂಚೆಯಮೂಲಕ ಅಮೇರಿಕಾಕ್ಕೆ ಕಳುಹಿಸಿಕೊಟ್ಟರೆ ಯಾವ ಪ್ರಮಾದವುಂಟಾಗುವುದೋ ಎಂಬ ಶಂಕೆಯಿಂದಲೋ ಏನೋ ಭರತಖಂಡದಿಂದ ಅಮೇರಿಕಾಕ್ಕೆ ಪ್ರಯಾಣಮಾಡಿ ಹೋಗುತ್ತಿದ್ದ ಹಾಕ್ಜನ್ ಎಂಬ ದಂಪತಿಗಳ ವಶಕ್ಕೆ ಈ ಪತ್ರವನ್ನು ಅಯ್ಯರು ಕೊಟ್ಟು, ವಿಲ್ಸನ್ ರವರಿಗೆ ತಲಪಿಸುವಂತೆ ಮಾಡಿದರಂತೆ. ನ್ಯಾಯಾನ್ಯಾಯ ವಿಷಯವಾಗಿ ಯಾವ ಚರ್ಚೆ ಹೋರಾಟಗಳನ್ನೂ ತಮ್ಮ ಪ್ರಭುತ್ವದವರಲ್ಲಿ ಮಾಡಿ ಅನುಕೂಲಪಡಿಸಿಕೊಳ್ಳುವುದು ಗೌರವಕರವೂ ನ್ಯಾಯಸಮ್ಮತವೂ ಆದ ಮಾರ್ಗವಾಗಿರುವಲ್ಲಿ ಅದನ್ನು ಬಿಟ್ಟು ಇವರು ಪರರೊಡನೆ ತಮ್ಮ ಪ್ರಭುತ್ವದವರಮೇಲೆ ಅಲ್ಲಸಲ್ಲದ ದೋಷಗಳನ್ನು ಹೊರಿಸಿ ದೂರಿಕೊಳ್ಳಬಹುದೆ? ಪ್ರಮುಖರೆನಿಸಿಕೊಳ್ಳುವ ಇಂಥ ಜನರೇ ಹೀಗೆ ನಡೆದುಕೊಳ್ಳುವುದು ಭಾರತೀಯರ ವಿಷಯದಲ್ಲಿ ಆಂಗ್ಲಪ್ರಭುತ್ವದವರ ಮನಸ್ಸನ್ನು ಕಲುಷಗೊಳಿಸುವುದಕ್ಕೂ ಸಂಶಯವನ್ನು ಹೆಚ್ಚಿಸುವುದಕ್ಕೂ ಮಾರ್ಗವಾದೀತಲ್ಲದೆ ಮತ್ತೇನೂ ಅಲ್ಲ. ವಿದ್ಯಾವಂತರೂ ವಿವೇಕಿಗಳೂ ವೃದ್ಧರೂ ಆದ ಜನರೇ ಇಂಥ ವಕ್ರಮಾರ್ಗದಲ್ಲಿ ನಡೆಯಲು ದಾರಿಹಾಕಿಕೊಟ್ಟರೆ ಜ್ಞಾನಲವದುರ್ವಿದಗ್ಧರಾದ ಜನರು ಇನ್ನೆಷ್ಟು ಅರಾಜಕತನದಿಂದ ನಡೆದುಕೊಳ್ಳಲು ಪ್ರೋತ್ಸಾಹವಾಗುವುದೆಂಬುದನ್ನು ಹೇಳಬೇಕಾಗಿಲ್ಲ. ಆನೆಯು ಮುಗ್ಗರಿಸಿದಾಗ ಆಳಿಗೊಂದು ಕಲ್ಲನ್ನು ಹಾಕಬಹುದೆ? ಆಂಗ್ಲ ಜನರು ವಿಷಮಾವಸ್ಥೆಯಲ್ಲಿರುವಾಗ ಅವರ ಆಶ್ರಯದಿಂದ ತಲೆಯೆತ್ತಿಕೊಂಡಿರುವ ನಾವುಗಳೆಲ್ಲಾ ಕೃತಘ್ನತೆಯನ್ನು ಲೇಶಮಾತ್ರ ತೋರಿಸಿದರೂ ಆ ದೋಷಕ್ಕೆ ದೈವವಿಮುಖತೆಯೇ ಫಲವಲ್ಲದೆ ಮತ್ತೇನೂ ಆಗಲಾರದು.

ಯುದ್ಧ ಸಹಾಯ.

ದಿಲ್ಲಿಯ ಮಹಾಸಭೆಯಲ್ಲಿ ವೈಸ್ರಾಯರು ಭಾಷಣಮಾಡುವಾಗ್ಗೆ ಭರತಖಂಡದ ಸಂಸ್ಥಾನಾಧಿಪತಿಗಳು ಯುದ್ಧ ಸಹಾಯಾರ್ಥವಾಗಿ ಈಗತಾನೇ ಮಾಡಿರುವ ವಾಗ್ದಾನಗಳನ್ನು ಹೀಗೆ ವಿವರಿಸಿದರು—ಗ್ವಾಲಿಯರ್ ಮಹಾರಾಜರು ಯುದ್ಧ ಮುಗಿಯುವವರೆಗೂ ವರ್ಷ ೧ ಕ್ಕೆ ೧೫ ಲಕ್ಷದಂತೆ ಕೊಡುವರು. ಹೈದರಾಬಾದು ನೈಜಾಮರು ೧೫ ಲಕ್ಷ, ಬರೋಡಾ ಮಹಾರಾಜರು ೧೫ ಲಕ್ಷ, ಮೈಸೂರು ಮಹಾರಾಜರು ೧೦ ಲಕ್ಷ, ಕಾಶ್ಮೀರದ ಮತ್ತೂ ಜಯಪುರದ ಮಹಾರಾಜರೂ ಸಹ ೫ ಲಕ್ಷ, ನವನಗರದ ಜಾಂರವರು ಯುದ್ಧ ಮುಗಿಯುವವರೆಗೂ ವರ್ಷಕ್ಕೆ ೩ ಲಕ್ಷ, ಕೊಚ್ಚಿ ಮಹಾರಾಜರು ವರ್ಷಕ್ಕೆ ೧ ಲಕ್ಷ, ಆಳ್ವಾರ್ ಮತ್ತೂ ಫರೀದ್‌ಕೋಟೆಯ ರಾಜರುಗಳು ೧ ಲಕ್ಷ, ಭೂಂದಿ ರಾಜರು ೨೫ ಸಾವಿರ, ಧೋಕನಲ್ ರಾಜರು ತಿಂಗಳಿಗೆ ೫೦೦ ರೂ.ನಂತೆ ಕೊಡುವೆನೆಂದು ವಾಗ್ದಾನಮಾಡಿರುವರು. ಪಾಟಿಯಾಲಾ ಮಹಾರಾಜರು ೩ ಕಾಲ್ಬಲಗಳನ್ನೂ, ಭಾವಲ್ಪೂರು ಮಹಾರಾಜರು ಒಂದು ಒಂಟೆಗಳ ಸೈನ್ಯವನ್ನೂ ೧ ರಕ್ಷಕ ಭಟವರ್ಗವನ್ನೂ, ಚಾಂಬಾ ರಾಜರು ೧೦ ಸಾವಿರ ರೂ. ಗಳನ್ನೂ, ೫೦೦ ಮಂದಿ ಸೈನಿಕರನ್ನೂ, ಮಾಲರ್ಕೊಟ್ಲ ಸಂಸ್ಥಾನದ ಪ್ರಭುಗಳು ೨ ಡಬ್ಬಲ್ ಕಂಪೆನಿಗಳನ್ನೂ ಒಂದು ವಿಮಾನವನ್ನೂ ಕಳುಹಿಸಿಕೊಡುವುದಕ್ಕೆ ವಾಗ್ದಾನಮಾಡಿರುವರು. ಹೀಗೆಯೇ ಇನ್ನುಳಿದ ಪ್ರಭುಗಳು ಯಥಾಶಕ್ತಿ ಸಹಾಯಮಾಡುತ್ತಾರೆಂಬುದಕ್ಕೆ ಸಂಶಯವಿಲ್ಲ. ನಮ್ಮ ಸಂಸ್ಥಾನಾಧಿಪತಿಗಳೇ ಹೀಗೆ ಸಾರ್ವಭೌಮ ನಿಷ್ಠೆಯನ್ನು ವ್ಯಕ್ತಪಡಿಸಿರುವಾಗ ಆಂಗ್ಲಪ್ರಭುತ್ವದಿಂದ ಸುಖಶಾಂತಿಗಳನ್ನನುಭವಿಸುತ್ತಿರುವ ಭಾರತ ಪ್ರಜೆಗಳೆಲ್ಲಾ ಯಥಾಶಕ್ತಿ ತನುಧನಗಳಿಂದ ಸಹಾಯಮಾಡುವುದು ಕೃತಜ್ಞತಾ ಲಕ್ಷಣವಲ್ಲವೆ?

ಚೀನಾದಲ್ಲಿ ಭಯಂಕರ ಜಲಪ್ರಳಯ.

ಚೀನಾ ದೇಶದ ಚಿಹ್ಲೀಯೆಂಬ ಜಿಲ್ಲೆಯಲ್ಲಿ ಪಶ್ಚಿಮಭಾಗದೊಳಗೆ ಎತ್ತರವಾದ ಪರ್ವತಪ್ರಾಂತಗಳಿರುವುವು. ಅದರ ಪೂರ್ವಭಾಗದಲ್ಲಿ ಸಮುದ್ರದವರೆಗೂ ಸಮನಾದ ಭೂಮಿಯು ವಿಸ್ತಾರವಾಗಿರುವುದು. ಇಲ್ಲಿ ಬೇಸಾಯಗಾರರೇ ಹೆಚ್ಚಾಗಿ ವಾಸಮಾಡಿಕೊಂಡಿರುವರು. ಆ ಬೆಟ್ಟಗಾಡಿನಲ್ಲಿ ಬಿದ್ದ ಮಳೆಯು ಹೆಚ್ಚಾದರೆ ಅಲ್ಲಿಯ ಪ್ರವಾಹಗಳಲ್ಲಿ ಮಿತಿಮೀರಿ ನೀರುತುಂಬಿ ಪುರಗ್ರಾಮಗಳಿಗೆ ನಷ್ಟವನ್ನುಂಟುಮಾಡುವುದು. ಇದು ಪದ್ಧತಿ. ಈ ಪ್ರಾಂತದಲ್ಲಿ ಹರಿಯುವ ನದಿಗಳೆಲ್ಲಾ ಟೀನ್ ಸ್ಟೀನ್ ಎಂಬ ಕಡೆ ಕೂಡುವುವು. ಈಸಲ ಅಲ್ಲಿ ವಿಪರೀತ ವೃಷ್ಟಿಯಾದುದರಿಂದ ಆ ದೇಶಭಾಗವೆಲ್ಲಾ ಜಲಮಯವಾಗಿದೆ. ಬಹುಶಃ ೮೨೦೦೦ ಗ್ರಾಮಗಳು ಪ್ರವಾಹದಿಂದ ಕೊಚ್ಚಿಹೋದುವು. ಎಷ್ಟೋ ಪ್ರಜೆಗಳು ಸತ್ತರು. ೩೦ ಕೋಟಿ ಬೆಲೆಬಾಳುವಷ್ಟು ಪೈರುಗಳು ಹಾಳಾದುವು. ಮೃತಶೇಷರಾದ ಪ್ರಜೆಗಳ ಸದ್ಯದ ದುರವಸ್ಥೆಯು ವರ್ಣನಾತೀತವಾಗಿರುವುದು. ತಂತಮ್ಮ ಕಷ್ಟಾರ್ಜಿತವೆಲ್ಲಾ ನಿಶ್ಶೇಷವಾಗಿ ಹೋದುದನ್ನು ನೋಡಿಯೋ, ತಂತಮ್ಮ ಭಗ್ನಾವಶೇಷವಾಗಿರುವ ಮನೆಗಳನ್ನು ನೋಡಿಯೋ, ಅನ್ನಾಹಾರಾದಿಗಳಿಲ್ಲದೆಯೋ, ನೀರಿನಲ್ಲಿ ಬಿದ್ದೋ, ಬಟ್ಟೆಬರೆಗಳಿಲ್ಲದೆಯೋ, ಅಳಿದುಹೋದ ಹೆಂಡಿರುಮಕ್ಕಳನ್ನು ಸ್ಮರಿಸಿಯೋ, ಗೋಳಾಡುತ್ತಲೂ ದೈವವನ್ನು ದೂರುತ್ತಲೂ ಇರುವ ಜನರನ್ನೂ, ಈ ತೆರದ ನಾನಾ ಕಷ್ಟಗಳನ್ನು ಕಣ್ಣಿಂದ ನೋಡಲಾರದೆ ಪ್ರಾಣಹತ್ಯ ಮಾಡಿಕೊಳ್ಳುತ್ತಿರುವವರನ್ನೂ ಎಲ್ಲೆಲ್ಲೂ ಕಾಣಬಹುದಾಗಿದೆಯಂತೆ! ಫ್ರೆಂಚರೇ ಮೊದಲಾದ ವಿದೇಶೀಯರು ವಾಸಮಾಡುವ ಸ್ಥಳಗಳಲ್ಲಿ ಪ್ರಜೆಗಳ ಸೌಕರ್ಯಾರ್ಥವಾಗಿ ಕೆಲ ಏರ್ಪಾಟುಗಳು ಮಾಡಲ್ಪಟ್ಟಿವೆ. ಚೀನಾ ಪ್ರಜೆಗಳು ವಾಸಮಾಡುತ್ತಿದ್ದ ಸ್ಥಳಗಳೇ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುವುವು. ಒಟ್ಟು ೧೫೦೦೦ ಚದರಮೈಲಿಯಗಲದ ಪ್ರದೇಶವು ಜಲಮಯವಾಗಿದೆ. ಸರ್ಕಾರದವರು ವಿಪನ್ನ ಪ್ರಜೆಗಳಿಗೆ ಸಾಧ್ಯವಾದಷ್ಟು ಸಹಾಯಗಳನ್ನು ಮಾಡಿಸುತ್ತಿದ್ದಾರೆ.

ವಂಗದೇಶದ ಯುದ್ಧ ಸಹಾಯಸಭೆ.

ದಿಲ್ಲಿಯಲ್ಲಿ ಮಹಾ ಸಭೆನಡೆದೀಚೆಗೆ ಪ್ರತಿಯೊಂದು ಪ್ರಾಂತದಲ್ಲೂ ಅದೇ ರೀತಿಯಲ್ಲಿ ಯುದ್ಧಮಹಾಸಭೆಗಳನ್ನು ಜರುಗಿಸಲಾರಂಭವಾಗಿದೆ. ಕಲ್ಕತ್ತಾ ಪಟ್ಟಣದಲ್ಲಿ ಬಂಗಾಳಾ ಗೌರ್ನರಾದ ರೋನಾಲ್ಡ್ಸೆ ಪ್ರಭುಗಳ ಯಾಜಮಾನ್ಯದಿಂದ ಒಂದು ಸಭೆಯು ಕಳೆದವಾರ ಕೂಡಿದ್ದಿತು. ಅಧಿಕಾರಿ ಅನಧಿಕಾರಿಗಳೆಲ್ಲಾ ಬಹುಶಃ ೨೦೦ ಮಂದಿಗಳು ಸಭೆಗೆ ಸೇರಿದ್ದರು. ಮೊನ್ನೆತಾನೇ ಯುದ್ಧದ ಫಂಡಿಗೆ ೧ ಲಕ್ಷ ರೂ. ಗಳನ್ನು ಕೊಟ್ಟ ತಿಪ್ಪೆರಾ ಮಹಾರಾಜರಿಗೂ ಯುದ್ಧ ಮುಗಿಯುವವರೆಗೂ ವರ್ಷಕ್ಕೆ ೩೦ ಸಾವಿರ ರೂ. ಗಳಂತೆ ಕೊಡಲು ವಾಗ್ದಾನಮಾಡಿದ ಕುಚ್‌ಬಿಹಾರ್ ಮಹಾರಾಜರಿಗೂ ಸಹ ಗೌರ್ನರು ವಂದನೆಯನ್ನು ತಿಳಿಯಿಸಿದರು. ದಿಲ್ಲಿ ಮಹಾಸಭೆಯ ಸೂಚನೆಯಂತೆ ಕಾರ್ಯನಿರ್ವಾಹಕ ಸಂಘಗಳನ್ನೇರ್ಪಡಿಸುವುದಕ್ಕೆ ಇಂಡ್ಯಾ ಸರ್ಕಾರದ ಉತ್ತರವನ್ನೇ ನಿರೀಕ್ಷಿಸುತ್ತಿರುವುದಾಗಿ ಗೌರ್ನರು ಹೇಳಿದುದಲ್ಲದೆ, ಯುದ್ಧವಿಷಯವಾಗಿ ಸರ್ವರೂ ಸಹಾಯಮಾಡಬೇಕೆಂದು ಶ್ರುತಪಡಿಸಿದರು. ಮತ್ತೂ ಇದುವರೆಗೂ ಬಂಗಾಳಾದವರು ಯುದ್ಧಕ್ಕೆ ಮಾಡಿರುವ ಸಹಾಯವನ್ನು ವರ್ಣಿಸುವಾಗ ವಂಗದೇಶೀಯರು ಯುದ್ಧಋಣಕ್ಕೆ ೧೨ ಕೋಟಿ ಪೌನುಗಳನ್ನೂ ಉಳಿದ ಯುದ್ಧನಿಧಿಗಳಿಗೆ ೧೬|| ಲಕ್ಷ ರೂ. ಗಳನ್ನೂ ಕೊಟ್ಟಿರುವುದಲ್ಲದೆ ೨|| ಸಾವಿರ ಯುದ್ಧಭಟರನ್ನೂ, ೫೭೦೦ ಮಂದಿ ಯುದ್ಧಕಾರ್ಯಸಹಾಯಕ ಜನರನ್ನೂ ರಣರಂಗಕ್ಕೆ ಕಳುಹಿಸಿಕೊಟ್ಟಿರುವರೆಂದೂ, ತಿಂಗಳೊಂದಕ್ಕೆ ೧೨೦ ಮಂದಿಗಳಂತೆ ಒದಗಿಸಿಕೊಟ್ಟಿರುವರೆಂದೂ ಈಗಣ ಸ್ಥಿತಿಯಲ್ಲಿ ತಿಂಗಳೊಂದಕ್ಕೆ ೧೦೦೦ ಮಂದಿಗಳಂತೆ ಒದಗಿಸಿಕೊಡಬೇಕಾಗಿದೆಯೆಂದೂ ಹೇಳಿದರು. ಬಳಿಕ ಸಭೆಯಲ್ಲಿದ್ದವರೊಳಗೆ ಕುಚ್‌ಬಿಹಾರ್ ಮಹಾರಾಜರು ಶ್ರೀ ಸಾರ್ವಭೌಮರ ಸಂದೇಶದಂತೆ ದಿಲ್ಲಿ ಮಹಾಸಭೆಯವರು ನಿರ್ಧಾರಮಾಡಿರುವ ಪ್ರಕಾರ ನಾವೂ ಸಹಾಯಮಾಡಲು ಸಿದ್ಧರಾಗಿರುವೆವೆಂದು ಒಂದು ತೀರ್ಮಾನವನ್ನುಪಪಾದಿಸಲು, ಅದನ್ನು ಬರದ್ವಾನ್ ಮಹಾರಾಜರು, ಸುರೇಂದ್ರನಾಥ ಬಾನರ್ಜಿಯವರು ಮೊದಲಾದವರು ಬಲಪಡಿಸಿದರು. ಚಕ್ರವರ್ತಿಯವರಿಗೆ ಈ ವಿಷಯವನ್ನು ಬಿನ್ನಯಿಸಬೇಕೆಂದು ನಿರ್ಧಾರವಾಗಿ ಸಭೆ ಮುಗಿಸಲ್ಪಟ್ಟಿತು.

ಯುದ್ಧವಾರ್ತೆಯು.

ಶತ್ರುಗಳು ಮೊನ್ನೆ ವಾರದಲ್ಲಿ ಮತ್ತೊಂದಾವೃತ್ತಿ ಮಹಾಯುದ್ಧವನ್ನು ಬಹು ರಭಸದಿಂದ ಆರಂಭಿಸಿದರು. ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡನ್ನೂ ಬೇರ್ಪಡಿಸಿ ವಿಧ್ವಂಸಮಾಡಬೇಕೆಂಬ ಇಷ್ಟಾರ್ಥವನ್ನೇ ಸಾಧಿಸುವುದಕ್ಕೆ ಅವರು ಇದುವರೆಗೆ ಪ್ರಯತ್ನಿಸಿ ಏಮಿಯನ್ಸಿನ ಕಡೆಯಲ್ಲಿ ಇದಕ್ಕಾಗಿ ಅವರು ನುಗ್ಗಿ ಎಷ್ಟು ಪ್ರಯತ್ನಪಟ್ಟು ಹಾನಿಪಡೆದುಕೊಂಡರೂ ಅವರ ಮನೋರಥವು ನೆರವೇರಲಿಲ್ಲ. ಇಂಗ್ಲೀಷ್ ಫ್ರೆಂಚ್ ಸೈನಿಕರ ಅತಿದೃಢತರವಾದ ಶೌರ್ಯ ಸಾಹಸಗಳಿಂದ ಶತ್ರುಗಳ ಆಟವು ಸಾಗಲಿಲ್ಲ. ಅದುಕಾರಣ ಅವರು ಉತ್ತರಕ್ಕೆ ನುಗ್ಗಿದರು. ಅಲ್ಲಿ ಈಗಣ ಯುದ್ಧವು ಮಹಾ ಭಯಂಕರವಾಯಿತು. ಈಪ್ರೆಸ್ಸಿಗೆ ದಕ್ಷಿಣದಲ್ಲಿ ಮುಂದಕ್ಕೆ ನುಗ್ಗಿಹೋಗಬೇಕೆಂದು ಅವರು ಬಹು ಪ್ರಯತ್ನಪಟ್ಟರು. ಇಲ್ಲಿ ಮಿತ್ರಮಂಡಲಿ ಸೇನಾಪಙ್ಕ್ತಿಯು ಛೇದಿಸಲ್ಪಟ್ಟರೆ ಇವರಿಗೆ ಬಹಳ ನಷ್ಟವುಂಟಾಗುವುದು. ಅದುಕಾರಣ ತಾವೆಷ್ಟು ನಷ್ಟಪಟ್ಟರೂ ಈ ಸ್ಥಳಗಳಲ್ಲಿ ಶತ್ರುಗಳ ನುಗ್ಗಾಟಕ್ಕೆ ಬಹು ಪ್ರತಿಬಂಧಕವನ್ನು ಮಿತ್ರಮಂಡಲಿಯವರು ಮಾಡಿದರು. ಆದರೂ ಜರ್ಮನರ ಸೇನಾಧಿಕ್ಯದಿಂದಲೂ, ದಾರುಣವಾದ ಮುತ್ತಿಗೆಯಿಂದಲೂ, ಫಿರಂಗಿಗಳ ಆಧಿಕ್ಯದಿಂದಲೂ ಸೆಂಟ್‌ಕ್ವಿಂಟೀನ್ ಏಮಿಯನ್ ಮಾರ್ಗದಮೇಲಿರುವ ವಿಲ್ಲಿಯರ್ಸ್, ಬ್ರೆಟೋನಾಕ್ಸ್ ಎಂಬ ಗ್ರಾಮಗಳನ್ನು ಅವರು ವಶಪಡಿಸಿಕೊಂಡರು. ಈ ಪ್ರಧಾನಸ್ಥಾನವನ್ನು ಕಳೆದುಕೊಂಡರೆ ತಮಗೆ ಬಹು ನಷ್ಟವೆಂಬುದನ್ನು ಅರಿತಿದ್ದ ಮಿತ್ರಮಂಡಲಿಯವರು ಅಸಮಸಾಹಸದಿಂದ ಪ್ರತಿಯುದ್ಧಮಾಡಿ ಅವನ್ನು ಮರಳಿ ವಶಪಡಿಸಿಕೊಂಡರು. ಈ ಸಮಯದಲ್ಲೇ ಶತ್ರುಗಳು ಫ್ರೆಂಚರ ವಶದಲ್ಲಿದ್ದ ಹಾಂಗಾರ್ಡ್ ಎಂಬ ಗ್ರಾಮವನ್ನು ವಶಪಡಿಸಿಕೊಂಡರು. ಮರಳಿ ಅದನ್ನೂ ಫ್ರೆಂಚರು ವಶಪಡಿಸಿಕೊಂಡರು. ಹೀಗೆ ಈ ಗ್ರಾಮವು ಎಷ್ಟೋಸಲ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಸೇರಿ ಕಡೆಗೆ ಫ್ರೆಂಚರಿಗೇ ದಕ್ಕಿಹೋಯಿತು. ಈಪ್ರೆಸ್ಸಿಗೆ ದಕ್ಷಿಣದಲ್ಲಿ ಶತ್ರುಗಳು ೧ ಲಕ್ಷ ಸೈನ್ಯವನ್ನು ಕೂಡಿಸಿ ಕೈಜರರು ಪ್ರತ್ಯಕ್ಷವಾಗಿ ನಿಂತುಕೊಂಡು ಪ್ರಬಲವಾದ ಯುದ್ಧವನ್ನು ಮಾಡಿಸಿದುದರಿಂದ ಕೇಮೆಲ್ ಎಂಬ ಗ್ರಾಮವೂ ಗುಡ್ಡವೂ ಶತ್ರುಗಳ ವಶವಾಯಿತು. ಈ ಬಳಿಯಣ ಯುದ್ಧವು ಬಹಳ ಪ್ರಳಯಕಾರಿಯಾಗಿದ್ದಿತು. ಫ್ರೆಂಚರು ಗುಡ್ಡದ ತುದಿಯಲ್ಲಿ ನಿಂತು ಕೊನೆಯವರೆಗೂ ಬಹಳ ವೀರಾವೇಶದಿಂದ ಕಾದು ಅಪರಿಮಿತ ನಷ್ಟವನ್ನು ಶತ್ರುಗಳಿಗುಂಟುಮಾಡಿದರು. ಇಂಗ್ಲೀಷರು ಗುಡ್ಡದ ಎರಡು ಪಕ್ಕಗಳಲ್ಲೂ ನಿಂತು ಶತ್ರುಗಳಮೇಲೆ ಯುದ್ಧಮಾಡಿದರು. ಕಡೆಗೂ ಅಲ್ಲಿ ಶತ್ರುಗಳಿಗೇ ಜಯವಾಯಿತು. ಇದಕ್ಕೆ ೩ ಮೈಲಿಗಳ ದೂರದಲ್ಲಿರುವ ವೂರ್ಜೆಮಿಲಿಯೆಂಬ ಗ್ರಾಮವನ್ನು ಶತ್ರುಗಳು ಹಿಡಿದರು. ಆದರೆ ಅದನ್ನು ಇಂಗ್ಲೀಷರು ಮತ್ತೆ ವಶಪಡಿಸಿಕೊಂಡರು. ಲೋಕ್ರೆಯೆಂಬ ಗ್ರಾಮವೂ ಹೀಗೆಯೇ ಶತ್ರುವಶವಾಗಿದ್ದು ಮತ್ತೆ ಇಂಗ್ಲೀಷರಿಂದ ಹಿಡಿಯಲ್ಪಟ್ಟಿತು. ಹೀಗೆ ಅನೇಕ ಸ್ಥಳಗಳಲ್ಲಿ ಯುದ್ಧವು ನಡೆದು ಕೆಲ ಕೆಲ ಭಾಗಗಳು ಒಬ್ಬರ ಕೈಯಿಂದ ಒಬ್ಬರ ಕೈಗೆ ಸೇರುತ್ತಲೂ ಕಳೆದುಹೋಗುತ್ತಲೂ ಇರುವುವು. ಮುಖ್ಯವಾಗಿ ಕಳೆದ ೬ ವಾರಗಳಿಂದಲೂ ಶತ್ರುಗಳು ನಡೆಯಿಸಿದ ಮಹಾಯುದ್ಧದಲ್ಲಿ ಗಣನೀಯವಾದ ಅವರ ಲಾಭವಾವುದೆಂದರೆ ಕೆಮ್ಮಲ್ ಪರ್ವತವನ್ನು ಹಿಡಿದುಕೊಂಡುದೇ ಆಗಿರುತ್ತದೆ. ಆದರೂ ಅದಕ್ಕಾಗಿ ಅವರು ಪಟ್ಟ ನಷ್ಟಗಳು ಅಪರಿಮಿತವಾಗಿರುತ್ತವೆ. ಅದು ಹೊರತು ಲಾಬಸ್ಸೆ ಕಾಲ್ವೆ, ಬೆಲ್ಜಿಯಂ ರಂಗ, ವಿಲ್ಲರ್ಸ್‌ಬ್ರೆಟೋನೋ, ಬೆಲಿನೇಲ್, ಈಪ್ರೆಸ್ ಮೊದಲಾದ ರಂಗಗಳಲ್ಲೆಲ್ಲಾ ಅವರು ಭಗ್ನಾಶರಾಗಿ ಹಿಮ್ಮೆಟ್ಟಿಹೋಗಿದ್ದಾರೆ. ಅವುಗಳೊಳಗೆಲ್ಲಾ ಮೊನ್ನೆ ಸೋಮವಾರ ಈ ಪ್ರೆಸ್ಸಿನಕಡೆ ಅವರಿಗಾದ ಅಪಜಯವು ಮಹತ್ತರವಾದುದು. ಈಪ್ರೆಸ್ ಪಟ್ಟಣವು ಅವರ ವಶವಾಗಲಿಲ್ಲ. ಏಮಿಯನ್ಸ್ ಪಟ್ಟಣವು ಅವರ ಹಸ್ತಗತವಾಗಲಿಲ್ಲ. ಈಸಲ ಈಪ್ರೆಸ್ಸು ಶತ್ರುವಶವಾಗಿ ಹೋಗಬಹುದೆಂದು ಜಗತ್ತೆಲ್ಲಾ ಭಾವಿಸುತ್ತಿದ್ದಿತು. ಆದರೆ ಮಿತ್ರಮಂಡಲಿಯ ಸೇನಾಶೌರ್ಯದಿಂದ ಅದು ಹಾಗ ನಡೆಯಲಿಲ್ಲ. ಕೆಲೆ, ಪ್ಯಾರಿಸ್ ಪಟ್ಟಣಗಳನ್ನು ಶತ್ರುಗಳು ವಶಪಡಿಸಿಕೊಳ್ಳುವರೆಂಬ ವಿಷಯವೂ ಗಗನಕುಸುಮದಂತೆಯೇ ಭಾವಿಸಬೇಕಾಗಿದೆ. ಎಲ್ಲೋ ಸ್ವಲ್ಪವಾದ ಲಾಭವನ್ನು ಪಡೆದುಕೊಳ್ಳುವುದಕ್ಕಾಗಿ ಜರ್ಮನರು ಹೊಂದಿದ ಅಪರಿಮಿತ ಸೇನಾದಿ ನಷ್ಟಗಳು ಭಯಂಕರವಾಗಿರುವುದು ಮಾತ್ರವೇ ಅಲ್ಲದೆ ಜರ್ಮನ್ ದೇಶದ ಪ್ರಜೆಗಳ ಮನಸ್ಸನ್ನೆಲ್ಲಾ ಕೆಡಿಸಿಬಿಡಲು ಸಾಧಕವಾಗಿದೆ. ಸೇನಾನಾಶವು ಇಷ್ಟು ಅತಿಶಯವಾಗುತ್ತಿದ್ದರೆ ಇನ್ನು ಬಹು ಕಾಲ ಅವರು ಯುದ್ಧವನ್ನು ಕೊಡಲಾರರು. ಮಿತ್ರಮಂಡಲಿಯವರು ಸ್ಥಾನಗಳನ್ನು ಬಿಟ್ಟುಕೊಟ್ಟರೂ ಸೇನಾನಾಶವನ್ನು ಹೀಗೆ ಮಾಡಿಕೊಂಡಿರುವುದಿಲ್ಲ. ಅವರು ತಮ್ಮ ಮೂಲಸೈನ್ಯಗಳನ್ನು ಉಪಯೋಗಿಸಿಕೊಂಡೇ ಇಲ್ಲ; ಮೀಸಲಾಗಿಯೇ ಇಟ್ಟುಕೊಂಡಿದ್ದಾರೆ. ಜರ್ಮನರ ಉರವಣೆಯೆಲ್ಲಾ ತಗ್ಗಿದಮೇಲೆ ತಮ್ಮ ಸುರಕ್ಷಿತ ಸೈನ್ಯಗಳನ್ನು ಶತ್ರುಗಳಮೇಲೆ ನುಗ್ಗಿಸಿ ಕಾರ್ಯಸಾಧನೆ ಮಾಡಬೇಕೆಂದು ಸಮಯ ನಿರೀಕ್ಷಣೆ ಮಾಡುತ್ತಿದ್ದಾರೆ. ಇಂಗ್ಲೀಷ್ ಫ್ರೆಂಚ್ ಸೇನಾಪತಿಗಳೂ ಮಂತ್ರಿಮಂಡಲದವರೂ ಸಹ ಈಗಣ ಸ್ಥಿತಿಗತಿಗಳಿಂದ ಭಯವನ್ನೇ ಆಗಲೀ ಚಿಂತೆಯನ್ನೇ ಆಗಲೀ ಹೊಂದಿರುವುದಿಲ್ಲ. ಇದರಮೇಲೆ ಸುಸಜ್ಜಿತವಾದ ಅಮೇರಿಕನ್ ಸೈನ್ಯಗಳು ಬೇರೆ ಬಂದು ಇಳಿಯುತ್ತಿವೆ. ವಿಶೇಷ ಸೈನ್ಯಗಳು ಇನ್ನೂ ಆ ದೇಶದಲ್ಲಿ ಅಣಿಯಾಗುತ್ತಿವೆ. ಇನ್ನು ಮುಂದೆ ಅಮೇರಿಕನ್ ಸೈನ್ಯವೆಲ್ಲಾ ರಣರಂಗಕ್ಕೆ ಬಂದು ಸೇರಿದ ಬಳಿಕ ಜರ್ಮನರು ಜಯಶೀಲರಾಗುವರೆಂಬುದು ಸುಳ್ಳು. ಇದುವರೆಗಣ ಅವರ ಮಹಾಪ್ರಯತ್ನದಿಂದ ಪಶ್ಚಿಮರಂಗದಲ್ಲಿ ಯುದ್ಧಾರಂಭ ಕಾಲದೊಳಗೆ ಬೆಲ್ಜಿಯಂ ಫ್ರಾನ್ಸ್ ಸೈನ್ಯಗಳು ಸಿದ್ಧವಾಗಿಲ್ಲದಕಾಲದಲ್ಲಿ ಜರ್ಮನರು ಎಷ್ಟು ದೇಶಭಾಗವನ್ನು ದುಘುಮ್ಮನೆ ನುಗ್ಗಿ ಆಕ್ರಮಿಸಿದರೋ ಅದಕ್ಕಿಂತ ಹೆಚ್ಚಿನ ಭಾಗವನ್ನು ಜಯಿಸಿ ಹಿಡಿಯುವುದು ಅಸಾಧ್ಯವೆಂಬುದು ಜರ್ಮನರಿಗೆ ಈಗ ಚೆನ್ನಾಗಿ ಗೊತ್ತಾದಂತಾಯಿತು. ಈಗ ತಾವು ಪಡೆದುಕೊಂಡಷ್ಟರ ಲಾಭವನ್ನು ತೋರಿಸುತ್ತಲೇ ಜಗತ್ತನ್ನೂ ತನ್ನ ದೇಶದವರನ್ನೂ ಭ್ರಮೆಗೊಳಿಸಿ ಮತ್ತೊಂದುಸಲ ಸಂಧಿಪ್ರಸ್ತಾಪವನ್ನು ಎತ್ತಿರುತ್ತದೆ. ಯುದ್ಧದ ಒಂದೊಂದು ಪರ್ವವು ಕಡೆಯಾದಾಗ ಒಂದೊಂದು ಸಲ ಜರ್ಮನರು ಸಂಧಿಯನಾಟಕವನ್ನೆತ್ತುವರೆಂಬುದು ಜಗತ್ತಿಗೆ ಗೊತ್ತೇಇದೆ. ಕ್ರೈಸ್ತ ಜಗದ್ಗುರುವಿನ ದ್ವಾರಾ ಸಂಧಿ ಸೂಚನೆಗಳು ಹೊರಬೀಳುವುವೆಂದು ಅಮೇರಿಕದಲ್ಲಿ ವಾರ್ತೆಯುಂಟಾಗಿದೆ. ಜರ್ಮನರು ಪ್ರತ್ಯಕ್ಷವಾಗಿ ನಿಷ್ಕಲ್ಮಷವಾದ ಸಂಧಿನಿಬಂಧನೆಗಳನ್ನು ಸೂಚಿಸುವುದೇ ಇಲ್ಲ. ಇತರರ ಮೂಲಕ ಸಂಧಿಯ ಮಾತನ್ನು ಒಂದುಕಡೆಯಲ್ಲಿ ಆಡಿಸುತ್ತ ಅದರಿಂದ ಶತ್ರುಗಳ ಸನ್ನಾಹದಲ್ಲಿ ಮಂದತ್ವವನ್ನುಂಟುಮಾಡಿ, ತಾನು ಮಾತ್ರ ಪ್ರಬಲ ಸನ್ನಾಹವನ್ನು ಮಾಡಿಕೊಳ್ಳುತ್ತ ತನ್ನ ಶತ್ರುಗಳನ್ನು ವಂಚಿಸುವುದೇ ಅವರ ಸಂಧಿಪ್ರಸ್ತಾಪದ ಮುಖ್ಯಫಲವಾಗಿ ಮಾಡಿಕೊಂಡಿದ್ದಾರೆ. ಈಗಣ ಸಂಧಿಪ್ರಸ್ತಾಪವೂ ಹಾಗೆಯೇ ಇದೆಯೋ ಏನೋ! ಇದೇತೆರದ ನಾಟಕವನ್ನಾಡಿ ಅವರು ರಷ್ಯಾವನ್ನು ಛಿನ್ನಭಿನ್ನಮಾಡಿ ಏಷ್ಯಾಖಂಡಕ್ಕೆ ಮಾರ್ಗವನ್ನು ಸರಿಮಾಡಿಕೊಳ್ಳುತ್ತಿದ್ದಾರೆ. ಈ ಖಂಡದ ಮೇಲೆಯೇ ಅವರ ದೃಷ್ಟಿಯು ಹೆಚ್ಚು. ಅದುಕಾರಣವೇ ಅವರು ದಕ್ಷಿಣ ರಷ್ಯಾದಲ್ಲಿ ಒಂದಾಗುತಲೊಂದು ಪ್ರದೇಶಗಳನ್ನು ಹಿಡಿದುಕೊಂಡು ಬರುತ್ತಿದಾರೆ. ಬಾಲ್ಷೆವಿಕ್ಕರ ಬಾಧೆಯಿಂದ ತಪ್ಪಿಸುತ್ತೇವೆಂಬ ನೆಪದಿಂದ ಉಕ್ರೇನಿಯನ್ ಭಾಗದಲ್ಲಿ ಜರ್ಮನರು ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಕ್ರಿಮಿಯಾದಲ್ಲಿ ನುಗ್ಗಿ ಮುಖ್ಯ ಗ್ರಾಮಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಥಿಯೊಡೀಸಿಯಾವೂ, ಸಿಬಾಸ್ಟಪೋಲು ಕೂಡ ಅವರ ವಶವಾದ ವರ್ತಮಾನವು ಬಂದಿದೆ. ಇವೆಲ್ಲವೂ ಅವರ ಪೂರ್ವದಿಗ್ಗಮನ ಲಕ್ಷಣವನ್ನು ಸಿದ್ಧಾಂತಪಡಿಸುತ್ತವೆ. ಅಲ್ಲದೆ ಇಟಲಿಯೊಡನೆಯೂ ಪ್ರತ್ಯೇಕ ಸಂಧಿಮಾಡಿಕೊಂಡಂತೆ ಮಾಡಿ ಅವರನ್ನು ಬಲೆಗೆ ಹಾಕಿಕೊಂಡು, ಆ ದೇಶದ ಮೇಲೆ ಕವಿದಿರುವ ತಮ್ಮ ಸೈನ್ಯವನ್ನೆಲ್ಲಾ ಏಷ್ಯಾಖಂಡದ ಕಡೆಗೆ ನುಗ್ಗಿಸುವ ಯೋಚನೆಯೂ ಇದ್ದಂತೇ ಕಾಣುತ್ತದೆ. ಪಶ್ಚಿಮರಂಗದಲ್ಲಿ ತಮಗೆ ಜಯವಾಗುವ ಸಂಭವವಿಲ್ಲವೆಂದೂ ಅವರು ಸಿದ್ಧಾಂತಪಡಿಸಿಕೊಂಡೇ ಇರಬಹುದು. ತಮ್ಮ ಪೂರ್ವದಿಗ್ಗಮನ ಸನ್ನಾಹಕ್ಕೆ ಅವಕಾಶ ಮಾಡಿಕೊಳ್ಳುವ ನಿಮಿತ್ತದಿಂದ ಅವರು ಈಗಣ ಸಂಧಿಯ ಬೊಬ್ಬೆಯನ್ನೆಬ್ಬಿಸಿರಬಹುದು. ಜರ್ಮನೀ ಪಕ್ಷಪಾತಿಗಳಾದ ತಟಸ್ಥ ದೇಶೀಯರು ಕೆಲವರು ಮಿತ್ರಮಂಡಲಿ ದೇಶಗಳಿಗೆ ಹೋಗಿರುವರೆಂತಲೂ ಅವರು ಸಂಧಿಪ್ರಸ್ತಾಪವನ್ನು ಬಳೆಯಿಸಿರುವರೆಂತಲೂ ಟೈಮ್ಸ್ ಪತ್ರಿಕೆಯು ಹೇಳುತ್ತದೆ. ಬಾರನ್ ಕುಹುಲ್‌ಮೆನ್ ರವರ ಮಿತ್ರನೊಬ್ಬರು ಆಂಗ್ಲದೇಶಕ್ಕೆ ಬಂದಿರುವರಂತೆ. ರಷ್ಯಾದ ಬಾಲ್ಷೆವಿಕ್ಕರಂತೆ ಆಂಗ್ಲ ಜನರು ತಮ್ಮ ಬಲೆಗೆ ಬಿದ್ದು ಹೋಗುವರೆಂದು ಕೈಜರರು ಯೋಚಿಸಿರಬಹುದು. ಹಾಗಿದ್ದರೆ ಅದು ಕೇವಲ ಭ್ರಮೆಯೇ ಸರಿ. ಇಂಗ್ಲೀಷರೇ ಆಗಲೀ ಇಟಲಿಯವರೇ ಆಗಲೀ ಅವರ ಬಲೆಗೆ ಎಂದಿಗೂ ಬೀಳರು. ತಾವು ಯುದ್ಧಕ್ಕೆ ನಿಂತ ಉದ್ದೇಶವು ಫಲಿಸಿದ್ದಲ್ಲದೆ ಅವರು ಸಂಧಿಗೆ ಒಡಂಬಟ್ಟರೆ ಆಚಂದ್ರತಾರಕವಾಗಿ ಅವರಿಗೆ ಅಪಯಶಸ್ಸು ತಟ್ಟುವುದಲ್ಲದೆ ಉತ್ತರೋತ್ತರ ಜರ್ಮನ್ ಘಾತಕದಿಂದ ಸಂಭವಿಸುವ ಜಗದ್ವಿನಾಶಕ್ಕೆ ಇವರೇ ದಾರಿಮಾಡಿಟ್ಟಂತಾಗುವುದು. ಮುಖ್ಯವಾಗಿ ಅಮೇರಿಕನ್ನರು ತಮ್ಮ ಪ್ರತಿಜ್ಞೆಗೆ ವಿರುದ್ಧವಾಗಿ ಯುದ್ಧವನ್ನುಪಸಂಹರಿಸಲಾರರು. ಅವರ ಇಷ್ಟವಿಲ್ಲದೆ ಮಿತ್ರಮಂಡಲಿಯ ಇನ್ನಾರೂ ಶತ್ರುಗಳ ಮಾಯೋಪಾಯಕ್ಕೆ ಒಳಗಾಗಲಾರರು. ಶತ್ರುಗಳು ಲೋಕಶಾಂತಿಯನ್ನೇ ಲಕ್ಷ್ಯವನ್ನಾಗಿಟ್ಟುಕೊಂಡು ತಾವು ಗೆದ್ದಿರುವ ದೇಶಭಾಗಗಳನ್ನೆಲ್ಲಾ ಆಯಾಯ ದೇಶದವರಿಗೆ ಬಿಟ್ಟುಕೊಟ್ಟು ಇನ್ನೆಂದೂ ಇಂಥ ಯುದ್ಧಕ್ಕವಕಾಶವಿಲ್ಲದಂತೆ ಸರ್ವರೂ ಮಾಡಿಕೊಳ್ಳಲೆಳಸುವ ಸಂಧಿನಿಬಂಧನೆಗಳಿಗೊಪ್ಪುವವರಾದರೆ ಮಿತ್ರಮಂಡಲಿಯವರು ಯುದ್ಧವನ್ನು ಉಪಸಂಹರಿಸಬಹುದು. ಅದಕ್ಕೆ ಜರ್ಮನರು ಒಪ್ಪುವಹಾಗಿಲ್ಲ. ತಾವು ಗೆದ್ದವರೆಂಬ ಭಾವದಿಂದ ಅವರು ಸಂಧಿಸೂಚನೆಗಳನ್ನು ತಮ್ಮ ಕಪಟೋದ್ದೇಶಸಾಧನೆಗೆ ಹವಿಯಾಗುವಂತೆ ಮಾಡುತ್ತಾರೆ. ಅದಕ್ಕೆ ಮಿತ್ರಮಂಡಲಿಯವರು ಎಂದಿಗೂ ಒಪ್ಪುವಹಾಗಿಲ್ಲ. ಅದುಕಾರಣ ಇನ್ನೆಷ್ಟುಕಾಲವಾದರೂ ಶತ್ರು ಯುದ್ಧಾಭಿನಿವೇಶನಿರ್ಮೂಲನದಿಂದಲ್ಲದೆ ಲೋಕಕಲ್ಯಾಣಸಾಧಕವಾದ ಸಂಧಿಯು ನೆರವೇರುವಹಾಗಿಲ್ಲ. ಅದಕ್ಕಾಗಿಯೇ ಜಗತ್ ಸ್ವಾತಂತ್ರ್ಯ ರಕ್ಷಣೆಗಾಗಿಯೇ ಧರ್ಮಪರಿಪಾಲನೆಗಾಗಿಯೇ ತಮ್ಮ ಸರ್ವಸ್ವವನ್ನು ಯುದ್ಧಾಗ್ನಿಗೆ ಧಾರೆಯೆರೆಯುತ್ತಲಿರುವ ಮಿತ್ರಮಂಡಲಿಯವರಿಗೆ ಸರ್ವವಿಧದ ಸಹಾಯಗಳನ್ನು ನಾವುಗಳು ಎಷ್ಟು ಅತಿಶಯವಾಗಿ ಒದಗಿಸಿಕೊಟ್ಟರೆ ಅಷ್ಟುಬೇಗನೆ ಯುದ್ಧ ಮುಗಿದು ಜಗತ್ತನ್ನೇ ರಕ್ಷಿಸಿದ ಫಲವು ಲಭಿಸುವುದು.

ಇತರವಿಷಯಗಳು.

ಮೆಸಪಟೋಮಿಯಾದಲ್ಲಿ ಕಳೆದ ವಾರದಲ್ಲೂ ಇಂಗ್ಲೀಷರು ಜಯಶಾಲಿಗಳಾಗಿ ಕೆಲವು ಪ್ರದೇಶಗಳನ್ನಾಕ್ರಮಿಸಿ, ಶತ್ರುಸೈನಿಕರನ್ನು ಸೆರೆಹಿಡಿದು ಮುಂದುವರೆವರೆಂಬ ವಾರ್ತೆಯು ಬಂದಿದೆ. ಟಜ್ ಖುರ್ಮಟಿಯಾ ಎಂಬ ಪಟ್ಟಣವು ಕಳೆದವಾರ ನಮ್ಮವರ ಹಸ್ತಗತವಾಯಿತು. ಏಪ್ರಿಲ್ ತಾ|| ೨೯ ರಿಂದ ಇದುವರೆಗೆ ಸೆರೆಸಿಕ್ಕಿರುವ ತುರ್ಕೀ ಸೈನಿಕರ ಸಂಖ್ಯೆ ೧೪೦೦.

ಜರ್ಮನರು ರಷ್ಯಾದ ಅತಿವಾದಿಗಳನ್ನು ಅಣಗಿಸಿ ತಮಗೆ ರಾಜ್ಯವನ್ನು ಕೊಡಿಸುವರೆಂದು ಉಕ್ರೇನಿಯನ್ನರು ಜರ್ಮನರನ್ನು ನಂಬಿ ಅವಕಾಶಮಾಡಿಕೊಟ್ಟರು. ಈಗ ಜರ್ಮನರು ಉಕ್ರೇನಿಯನ್ನರ ರಾಜ್ಯವನ್ನೆಲ್ಲಾ ತಾವೇ ಆಳುವುದಕ್ಕುಪಕ್ರಮಿಸಿದುದನ್ನು ಉಕ್ರೇನಿಯನ್ನರು ಕಂಡು ಭಗ್ನಮನೋರಥರಾಗಿ ಈಗ ಮತ್ತೆ ರಷ್ಯಾ ಅತಿವಾದಿಗಳೊಡನೆ ಸೇರಿ ಜರ್ಮನರನ್ನು ಸ್ವದೇಶದಿಂದ ಉಚ್ಚಾಟನೆಗೊಳಿಸಲು ಪ್ರಯತ್ನಿಸುತ್ತಿರುವರಂತೆ. ಕೆಟ್ಟಮೇಲೆ ಬುದ್ಧಿ ಬರುವುದು!

ಪಾಲಸ್ತೈನಿನಲ್ಲಿ ಈಸಲ್ಟಿಗೆ ದಕ್ಷಿಣದಲ್ಲೂ ಜಾರ್ಡನ್ನಿಗೆ ಪಶ್ಚಿಮದಲ್ಲೂ ಅರಬ್ಬಿಯವರು ಮುಂದಕ್ಕೆ ಸಾಗಿ ಒಂದು ಗ್ರಾಮವನ್ನು ಹಿಡಿದರು. ಮಾನ್ನಿಗೆ ದಕ್ಷಿಣದಲ್ಲಿ ಏಪ್ರಿಲ್ ತಾ|| ೧೧ ರಿಂದೀಚೆಗೆ ತುರ್ಕಿಯವರಮೇಲೆ ಅರಬ್ಬಿಯವರು ನಡೆಯಿಸಿದ ಯುದ್ಧದಲ್ಲಿ ಸಾವಿರಾರು ಮಂದಿ ತುರ್ಕಿಯವರನ್ನೂ ಅನೇಕ ಫಿರಂಗಿಗಳನ್ನೂ ಇತರ ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡಿರುವರು. ಲೋಹಮಾರ್ಗದ ಸಾವಿರಾರು ಕಂಬಿಗಳನ್ನು ಕಿತ್ತುಹಾಳ್ಮಾಡಿರುವರು. ಮೂರು ನಿಲ್ದಾಣಗಳನ್ನೂ ೨೦ ಸೇತುಗಳನ್ನೂ ಹಾಳ್ಮಾಡಿರುವರು.

ಆಂಗ್ಲನೌಕಾದಳದವರು ಒಂದು ಅದ್ಭುತ ಸಾಹಸಕೃತ್ಯವನ್ನು ಮೊನ್ನೆ ವಾರದಲ್ಲಿ ಮಾಡಿರುತ್ತಾರೆ. ಜೀಬ್ರುಗ್ ಎಂಬ ಬೆಲ್ಜಿಯಂ ಸಮುದ್ರತೀರದ ರೇವೆಯನ್ನು ಜರ್ಮನರು ಆಕ್ರಮಿಸಿಕೊಂಡು ಅಲ್ಲಿ ತಮ್ಮ ಸಬ್‌ಮೆರೀನು ಮೊದಲಾದುವುಗಳನ್ನಿಟ್ಟುಕೊಂಡು ಹೊಸ ಹಡಗುಗಳನ್ನು ಅಲ್ಲಿ ಕಟ್ಟುತ್ತಿರುವರು. ಈ ಸ್ಥಾನಕ್ಕೆ ಹೊರಗಣಿಂದ ಸಬ್‌ಮೆರೀನುಗಳು ಬಾರದಿರುವಂತೆಯೂ ಒಳಗಿದ್ದ ಹಡಗು ಮೊದಲಾದುವುಗಳು ಹೊರಕ್ಕೆ ಹೋಗದಂತೆಯೂ ದಿಗ್ಬಂಧನವನ್ನು ಇಂಗ್ಲೀಷ್ ನೌಕಾದಳದವರು ಮಾಡಿದರು. ಹೇಗೆಂದರೆ ಶತ್ರುಸ್ಥಾನವು ಬ್ರೂಜಸ್ ನದಿಯ ಕಾಲುವೆಯಲ್ಲಿದೆ. ಇಲ್ಲಿ ಶತ್ರುಗಳ ಸಬ್‌ಮೆರೀನುಗಳು ಸ್ವಚ್ಛಂದವಾಗಿ ತಿರುಗುತ್ತ ಮಿತ್ರಮಂಡಲಿಯ ಹಡಗುಗಳಿಗೆ ಬಹಳ ಅನರ್ಥವನ್ನು ಮಾಡುತ್ತಿದ್ದುವು. ಒಂದು ರಾತ್ರಿಯಲ್ಲಿ ಈ ನದಿಯ ಮುಖದ್ವಾರದ ಬಳಿಗೆ ಮಿತ್ರಮಂಡಲಿ ನೌಕಾದಳದವರು ಹಳೆಯ ಕಾಲದ ೫ ಹಡಗುಗಳಲ್ಲಿ ಸಿಮೆಂಟು ಮೊದಲಾದ ಪದಾರ್ಥಗಳನ್ನು ತುಂಬಿಕೊಂಡು ಫಿರಂಗಿಗಳ ಸಮೇತ ಸೈನಿಕರನ್ನು ಏರಿಸಿಕೊಂಡು ಅತ್ಯಂತ ಧೈರ್ಯಸಾಹಸಗಳಿಂದ ಹೋಗಿ, ಅಲ್ಲಿ ಸಮುದ್ರಕ್ಕೆ ಚಾಚಿ ತೀರಕ್ಕೆ ಸೇರಿಸಿ ಕಟ್ಟಿದ್ದಂಥ ಅರ್ಧಕಟ್ಟೆಯ ಕೆಳಗೆ ತಮ್ಮ ಹಡಗುಗಳನ್ನು ನುಗ್ಗಿಸಿ ಸಿಡಿಮದ್ದುಗಳಿಂದ ಅವನ್ನು ಒಡೆಯಿಸಿದ ರಭಸಕ್ಕೆ ಕಟ್ಟೆಯೆಲ್ಲಾ ಧ್ವಂಸವಾಗಿಹೋಯಿತು. ಇದೇ ಸಮಯದಲ್ಲಿ ತೀರದಲ್ಲಿ ಶತ್ರುಗಳು ತಮ್ಮ ಫಿರಂಗಿಗಳಿಂದ ಬಹಳ ಗುಂಡುಗಳನ್ನು ನಮ್ಮವರಮೇಲೆ ಹೊಡೆದು ವಿಶೇಷ ನಷ್ಟಪಡಿಸಿದರು. ಆದರೂ ಇಂಗ್ಲೀಷ್ ಸೈನಿಕರಲ್ಲಿ ಕೆಲವರು ದಡದಮೇಲಕ್ಕೇರಿಹೋಗಿ ಬಹಳ ಸಾಹಸದಿಂದ ಕಾದಾಡಿ ಅವರ ಫಿರಂಗಿಗಳು ಯಂತ್ರಾಲಯಗಳು ಮೊದಲಾದುವುಗಳಿಗೆ ಬಹಳ ನಷ್ಟಪಡಿಸಿದರು. ಈ ಮಹಾಪ್ರಯತ್ನದಲ್ಲಿ ಇಂಗ್ಲೀಷರಕಡೆ ೨೦೦೦ ಸೈನಿಕರು ನಷ್ಟವಾದರು. ಆದರೂ ಶತ್ರುಗಳಿಗೆ ಉಂಟುಮಾಡಲ್ಪಟ್ಟ ಹಾನಿಯು ಅಪಾರವು. ಅವರ ಸಬ್‌ಮೆರೀನುಗಳ ಸಂಚಾರವು ಇಲ್ಲಿ ಕಟ್ಟಾಗಿಹೋಯಿತು. ನೌಕಾಶ್ರಯಸ್ಥಾನವು ಧ್ವಂಸವಾಯಿತು.

ಒಳದೇಶದ ವೃತ್ತಾಂತಗಳು.

ಈಗ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾಗಿರುವ ಮ|| ಕೆ. ರೇವಣ್ಣನವರು 1917 ನೆಯ ನವೆಂಬರ್ ತಾ|| ೧ರಿಂದ ಅಸಿಸ್ಟೆಂಟ್ ಕನ್ಸರ್ವೇಟರ್ ತರಗತಿಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಈಗ ರಜದ ಮೇಲಿರುವ ಗುಂಡ್ಲುಪೇಟೆ ತಾ|| ಅಮಲ್ದಾರ್ ಮ|| ಜಿ. ಮಲ್ಲಿಕಾರ್ಜುನಯ್ಯ, ಬಿ.ಎ., ಯವರು ಚಿಕ್ಕನಾಯಕನಹಳ್ಳಿ ತಾ|| ಅಮಲ್ದಾರರಾಗಿ ವರ್ಗಮಾಡಲ್ಪಟ್ಟಿರುತ್ತಾರೆ.

ಸ್ಪೆಷಲ್ ಡ್ಯೂಟಿಯ ಮೇಲಿರುವ ಎಕ್ಸಿಕ್ಯುಟಿವ್ ಇಂಜನಿಯರ್ ಮ|| ಟಿ. ಜಿ. ಲಕ್ಷ್ಮಣರಾಯರು ಕಬ್ಬಿಣವನ್ನು ತೆಗೆಯುವುದರ ಸಂಬಂಧದಲ್ಲಿ ಸ್ಪೆಷಲ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು.

ತುಮಕೂರು ಡಿ|| ಎಕ್ಸೈಸ್ ಆಫೀಸರಾದ ಮ|| ವಿ. ಎಸ್. ರಾಜಗೋಪಾಲಾಚಾರ್ಯರು ವರ್ಗಮಾಡಲ್ಪಟ್ಟಿರುವುದರಿಂದ ಮಂಡ್ಯ ತಾ|| ಅಮಲ್ದಾರ್ ಮ|| ಎಚ್. ಬಸವರಾಜ ಅರಸಿನವರು ತುಮಕೂರು ಡಿ|| ಎಕ್ಸೈಸ್ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮೆ|| ಮೆಥಾನ್ ರವರು ಈ ತಾ|| 15 ರಲ್ಲಿ ಮೈಸೂರು ಡಿ|| ಡೆ|| ಕಮಿಷನರ ಛಾರ್ಜನ್ನು ವಹಿಸಿಕೊಳ್ಳುವುದಾಗಿಯೂ ಈಗ ಆಕ್ಟ್ ಮಾಡುತ್ತಿರುವ ಮ|| ಟಿ. ಚೊಕ್ಕಣ್ಣನವರು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರಾಗಿ ನಿಯಮಿಸಲ್ಪಡುವುದಾಗಿಯೂ ತಿಳಿಯುತ್ತೇವೆ.

ರಾಜಧಾನಿಯ ಜನರಲ್ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾ|| ಕೃಷ್ಣಸ್ವಾಮಯ್ಯರ್‌ರವರು ಅರಮನೆಯುದ್ಯೋಗಕ್ಕೂ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾ|| ಸಿ. ಎ. ನಂಜಪ್ಪನವರು ಜನರಲ್ ಆಸ್ಪತ್ರೆಗೂ ವರ್ಗಾಯಿಸಲ್ಪಡುವರೆಂಬ ವದಂತಿಯು ಪ್ರಬಲವಾಗಿದೆ.

ನೋಟೀಸು.

ರಾಜಧಾನಿಯಲ್ಲಿರುವ ವೀರಶೈವಾಶ್ರಮವು ಬೇಸಿಗೆ ರಜಾಕೋಸ್ಕರವಾಗಿ ಮುಚ್ಚಲ್ಪಟ್ಟಿರುವುದು ಸರಿಯಷ್ಟೆ. ಸದರಿ ಆಶ್ರಮವು ಬರುವ ಮಾಹೆ ತಾರೀಖು ೩ ನೆ ಸೋಮವಾರ ತೆರೆಯಲ್ಪಡುತ್ತದೆ. ಈ ಆಶ್ರಮದಲ್ಲಿ ಬೋರ್ಡರ್ ಆಗಿ ಇರಲು ಅಪೇಕ್ಷಿಸತಕ್ಕವರು ತಮ್ಮ ದರಖಾಸ್ತನ್ನು ಈ ಮಾಹೆ ತಾರೀಖು ೨೦ ರ ಒಳಗಾಗಿ ಈ ಕೆಳಗೆ ರುಜು ಮಾಡಿರತಕ್ಕವರಿಗೆ ಬಂದು ತಲಪುವಂತೆ ರವಾನಿಸಬೇಕು. ದರಖಾಸ್ತು ಫಾರಂಗಳನ್ನು ಸೆಕ್ರೆಟರಿಯವರಿಗೆ ಅರ್ಧಾಣಾ ಸ್ಟಾಂಪನ್ನು ಕಳುಹಿಸಿ ತರಿಸಿಕೊಳ್ಳಬಹುದು.

N. BASAPPA,
Secretery
VEERASYVASRAMA.

ಪತ್ರವ್ಯವಹಾರ.

"ಕಾಳಯುಕ್ತಿನಾಮ ಸಂವತ್ಸರವು ಸರ್ವರಿಗೂ ಸುಖವನ್ನು ಕೊಡಲಿ"

೮ ನೇ ವೀರಶೈವ ಮಹಾಸಭೆಯು.

ಶ್ರೀ ಗುರುಗಳ ಆಶೀರ್ವಾದದಿಂದಲೂ, ಜಗದೀಶನ ಕೃಪೆಯಿಂದಲೂ, ದಾವಣಗೇರಿಯ ಪ್ರಮುಖ ಮುಂದಾಳುಗಳ ಅಭಿಮಾನಪೂರಿತವಾದ ಉತ್ಸಾಹದಿಂದಲೂ ೮ ನೇ ವೀರಶೈವ ಮಹಾಸಭೆಯು ಉತ್ತಮರೀತಿಯಿಂದ ನೆರವೇರಿ ಅಖಿಲ ವೀರಶೈವರ ಮನಾನಂದಗೊಳಿಸಲಿಕ್ಕೆ ಮಹತ್ವದ ಎರಡು ಕಾರಣಗಳಾದವೆಂದು ತಿಳಿಯಲಿಕ್ಕೆ ಬಾಧೆಯಿಲ್ಲ. ಸನ್ ೧೯೧೨ ನೆ ಇಸವಿಯಲ್ಲಿ ರಾ|| ಸಾ|| ಶ್ರೀಮಂತ ಮಲ್ಲಪ್ಪಣ್ಣಾ ಶಿಂತ್ರೆ ಇವರು ನಿಪ್ಪಾಣಿಯಲ್ಲಿ ೭ ನೇ ಸಭೆಯನ್ನು ಕೂಡಿಸಿದನಂತರ ಒಂಟಿಗರಾಗಿ ಸಭೆಯನ್ನು ನೆರವೇರಿಸುವುದು ಕೇವಲ ಕಠಿಣವೆಂತಲೋ, ಮುಂದಾಳುಗಳಲ್ಲಿ ಐಕ್ಯತೆಯು ಕಡಿಮೆಯಾದುದರಿಂದಲೋ, ಈ ಸಭೆಯ ಪಿತಾಮಹರು ಎರಡನೇ ಕೆಲಸಗಳಲ್ಲಿ ತೊಡಗಿದ್ದರಿಂದಲೋ, ಸ್ಟಾಂಡಿಂಗ ಕಮಿಟಿಯವರ ಔದಾಸೀನ್ಯತೆಯಿಂದಲೋ, ಸಭೆಗಳಿಂದ ತಕ್ಕ ಸೌಕರ್ಯವೂ ಮತಾಭಿವೃದ್ಧಿಯೂ ಆಗುವುದಿಲ್ಲವೆಂಬ ಕೆಲವು ಜನರ ಹಟಮಾರಿತನದಿಂದಲೋ, ನಮ್ಮ ಸಾರ್ವಭೌಮರು ಘನಘೋರವಾದ ಯುದ್ಧದಲ್ಲಿ ತೊಡಗಿದುದರಿಂದಲೋ ಅಥವಾ ಯಾವ ಮಹಾತ್ಮನ ಶಾಪದಿಂದಲೋ ೫ ವರ್ಷಗಳವರೆಗೆ ನಿಂತಿದ್ದ ಸಭೆಯು ದಾವಣಗೇರಿಯ ಪ್ರಮುಖರು ಈ ತುಸುದಿವಸಗಳಲ್ಲಿ ಮುಂದೆವರೆದು ಸರ್ವರೀತಿಯಿಂದ ಮಂಗಳಕರವಾಗಿ ನೆರವೇರಿಸಿದ್ದು ಒಂದನೇ ಕಾರಣವು. ಇನ್ನು ಇಂಥ ಸಭೆಯು ಪ್ರತಿವರ್ಷ ಸ್ಟ್ಯಾಂಡಿಂಗ ಕಮಿಟಿಯವರ [illegible]

ತಮ್ಮ ನಗರಗಳಲ್ಲಿ ಸಭೆಗಳು ಆಗಬೇಕೆಂಬ ಕುತೂಹಲವನ್ನು ತೋರಿಸಿ ಮುಂದೆ ಬರುವ ಮಹನೀಯರ ಅಪ್ರಾಲೋಚನೆಯಾಗಿ ಸಭೆಗಳು ತಪ್ಪದಲೆ ಸಾಗುವುದನ್ನು ಕುರಿತು ಶ್ರೀ ಮುರುಘರಾಜೇಂದ್ರ ಜಗದ್ಗುರುಗಳ ಸಮ್ಮುಖದಲ್ಲಿ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಈ., ಇವರ ಅಧ್ಯಕ್ಷತೆಯ ಕೆಳಗೆ ಮ|| ರಾ|| ಗಳಾದ ಗದಿಗೆಯ್ಯಾಸ್ವಾಮಿ ಹೊನ್ನಾಪುರಮಠ, ಪಿ. ಮಹದೇವಯ್ಯನವರು, ರಾ|| ಸಾ|| ಶಿವಮೂರ್ತಿಸ್ವಾಮಿ ಕಣಬರಗಿಮಠ ಈ ತ್ರಿವರ್ಗದ ಕಳಕಳಿಯ ಸೂಚನೆಯನ್ನು ಯಾವತ್ತು ಸಭಿಕರು ಅಭಿಮಾನಪೂರ್ವಕವಾಗಿ ಒಪ್ಪಿ ತತ್ಕ್ಷಣದಲ್ಲಿಯೇ ೬೩ ಸಾವಿರ ರೂಪಾಯಿಗಳ ವಾಗ್ದಾನವನ್ನು ಮಾಡಿ ವೀರಶೈವ ಮಹಾಸಭೆಯನ್ನು ನಿರಂತರವಾಗಿ ನಡೆಯಿಸಬೇಕಾಗುವುದನ್ನು ಕುರಿತು ೩೫ ಸಾವಿರ ರೂಪಾಯಿ ರೋಖ ಅದೇ ದಿವಸ ಕೂಡಿದ್ದನ್ನು ನೋಡಿ ಯಾರಿಗೆತಾನೆ ಆನಂದವಾಗಲಿಕ್ಕಿಲ್ಲ. ಇದು ಎರಡನೇ ಕಾರಣವು. ಇದಕ್ಕಾಗಿ ವೀರಶೈವರಲ್ಲಿಯ ಅಭಿಮಾನವೂ, ಧರ್ಮದಲ್ಲಿಯ ಶ್ರದ್ಧೆಯೂ, ಪ್ರತಿವರ್ಷ ಮಹಾಸಭೆಯನ್ನು ಬೇರೆಬೇರೆ ಸ್ಥಳಗಳಲ್ಲಿ ಕೂಡಿಸಿ, ಧರ್ಮಸುಧಾರಣೆ, ದೇಶದ ರೀತಿ ನಡಾವಳಿ, ವ್ಯಾಪಾರದ ಉನ್ನತಿ, ಬೇರೆಬೇರೆ ದೇಶಗಳಿಂದ ಬರುವ ವೀರಶೈವರ ಪರಿಚಯ, ಅನುಭವಿಕರ ವ್ಯಾಖ್ಯಾನ, ಜಗದ್ಗುರುಗಳ ಷಟ್ಸ್ಥಲಚರಮೂರ್ತಿ, ಸಾಧುವರ್ಯ ಗುರುಗಳ ದರ್ಶನಲಾಭ, ವಿದ್ಯಾಪ್ರಸಾರಣೆ, ಮುಂತಾದ ನೈತಿಕ, ಸಾಮಾಜಿಕ, ಧಾರ್ಮಿಕ, ಪಾರಮಾರ್ಥಿಕ ಮುಂತಾದ ಅನೇಕ ಪ್ರಕಾರದ ಸುಧಾರಣೆಗಳನ್ನು ಮಾಡಿಕೊಳ್ಳುವುದಕ್ಕೆ ಇಂಥ ವಾರ್ಷಿಕ ಸಭೆಗಳ ಪ್ರಯೋಜನವು ಎಷ್ಟಿರುವುದೆಂಬುದನ್ನು ಇಲ್ಲಿ ವರ್ಣಿಸುವುದಕ್ಕಿಂತಲೂ ಮಹಾಸಭೆಗೆ ಅನೇಕಸಾರೆ ಪ್ರತಿನಿಧಿಗಳಾಗಿ ಬಂದ ನಮ್ಮ ಬಂಧುಗಳಕಡೆಗೇ ಅದರ ಲಾಭವನ್ನು ಒಪ್ಪಿಸಿಬಿಡುವುದು ಲೇಸು. ಸೂರ್ಯನ ಪ್ರಕಾಶವನ್ನು ನೋಡಿ ಜಗತ್ತಿನ ಅನೇಕಾನೇಕ ಪಶುಪಕ್ಷಿ ಮಾನವಪ್ರಾಣಿಗಳು ಸಂತೋಷಗೊಳ್ಳುತ್ತಿದ್ದರೂ ಗೂಗೆಯಂತಿರುವ ಅನೇಕ ಪಕ್ಷಿಗಳಿಗೆ ಸೂರ್ಯನ ಕಿರಣಗಳು ತಾಪದಾಯಕವಾಗುವುದು ನೈಸರ್ಗಿಕ ಧರ್ಮವಿರುವಂತೆ ನಮ್ಮಲ್ಲಿಯೂ ಕೆಲವು ಮಹನೀಯರು ಇಂಥ ಸಭೆಗಳ ಪ್ರಯೋಜನವಿಲ್ಲವೆಂತಲೂ, ವ್ಯರ್ಥ ಸಮಾಜದ ದುಡ್ಡು ಹಾಳಾಗುವುದೆಂತಲೂ, ಮಹಾಸಭೆಯಲ್ಲಿ ನಿರ್ಣಯಿಸಿದ ಠರಾವುಗಳು ಇನ್ನೂ ಜಾರಿಯಲ್ಲಿ ಬರಲಿಲ್ಲವೆಂತಲೂ, ತಾವು ಇಂಥ ಅವಿಚಾರದ ಸಭೆಗಳಿಗೆ ಬರಲಾರೆವೆಂತಲೂ ಏನಕೇನಪ್ರಕಾರೇಣವೆಂಬಂತೆ ಹುಂಬ ಜನರ ಮುಂದೆ ತಮ್ಮ ವಾಕ್ಚಾತುರ್ಯವನ್ನೂ ಪಾಂಡಿತ್ಯವನ್ನೂ ತೋರಿಸುವ ಆಡಂಬರದಲ್ಲಿ ಇರುವುದನ್ನು ಅನೇಕರು ಅನೇಕಾವೃತ್ತಿ ಕಣ್ಣಾರೆ ಕಂಡಿರಬಹುದು. ಪ್ರತಿವರ್ಷ ಮಹಾಸಭೆ ಕೂಡಲಿಕ್ಕೂ ಅದರಲ್ಲಿ ಪಾಸಾದ ನಿಯಮಗಳನ್ನು ಅಮಲಿನಲ್ಲಿ ತರಲಿಕ್ಕೂ, ನಮ್ಮ ಸುಧಾರಣೆಯನ್ನು ನಾವು ಮಾಡಲಿಕ್ಕೂ, ಧರ್ಮಜಾಗ್ರತೆಯನ್ನು ಹೊಂದಲಿಕ್ಕೂ, ಗುರುಹಿರಿಯರಲ್ಲಿ ರಾಜರಲ್ಲಿ ಭಯ ಭಕ್ತಿ ವಿನಯವನ್ನು ತೋರಿಸಲಿಕ್ಕೂ, ಆತ್ಮಜ್ಞಾನ ಮಾಡಿಕೊಳ್ಳಲಿಕ್ಕೂ, ಪರಮತಸ್ಥರಸಂಗಡ ಸಹಾನುಭೂತಿ ಪ್ರೀತಿ ದಯೆಗಳನ್ನು ತೋರಿಸಲಿಕ್ಕೂ ಪರಸ್ಪರರ ಪ್ರೀತಿಗೆ ಪಾತ್ರರಾಗಿ ನಮ್ಮ ರಾಷ್ಟ್ರವನ್ನು ಪಾವನಮಾಡಿಕೊಳ್ಳಲಿಕ್ಕೂ ನಾವೇ ಕಾರಣರು. ಸುಮ್ಮನೆ ಮನೆಯಲ್ಲಿ ಕೂತು ವೇಳೆ ಹೋಗುವುದಕ್ಕೆ ಗೊಡ್ಡುಹರಟೆಯನ್ನು ಕೊಚ್ಚಿ ಪ್ರತಿಯೊಂದು ಕೆಲಸದಲ್ಲಿಯ ಉತ್ತಮ ಗುಣಗಳನ್ನು ಬಿಟ್ಟು ಅದರ ದೋಷಗಳನ್ನೇ ಎತ್ತಿ ತಿರಸ್ಕರಿಸಿ ಬಾಡಿಗೆ ಬೀಳದ ನಾಲಿಗೆಯಿಂದ ಸಿಕ್ಕಿದಂತೆ ಮಾತನಾಡಿದರೆ ಯಾವ ಕಾರ್ಯವೂ ಆದಂತೆ ಆಗುವುದಿಲ್ಲ. ಇದೆಲ್ಲವನ್ನೂ ಲಕ್ಷದಲ್ಲಿ ತಂದು ಈ ಸಾರೆ ಮಹಾಸಭೆಯಲ್ಲಿ ಧನರಾಶಿಯ ವ್ಯವಸ್ಥೆ ಮಾಡಿದ್ದು ಪರಮಾನಂದಕ್ಕೆ ಕಾರಣವಾಗಿರುವುದು. ಆದರೆ ಸಭೆಯು ಮುಗಿದು ಈಗ ಐದನೇ ತಿಂಗಳಾದರೂ ಯಾವ ಯಾವ ಮಹನೀಯರ ಕಡೆಯಿಂದ ವಾಗ್ದಾನದ ಹಣವು ಜಮೆಯಾಯಿತು, ಇನ್ನೂ ಕೊಡತಕ್ಕವರು ಯಾರು, ಆ ಹಣವೆಲ್ಲ ಯಾವಕಡೆಗೆ, ಯಾವಲ್ಲಿ ಇದೆ, ಅದಕ್ಕೆ ಯಾರಯಾರ ಕಮಿಟಿ ನೇಮಿಸಿರುವುದು, ಬ್ಯಾಂಕಿನಲ್ಲಿ ಇಟ್ಟದ್ದರೆ ಆ ರಕಮಿನ ಬಡ್ಡಿಯು ಯಾವ ದರದ್ದು ಅದೆ, ಅದಕ್ಕೆ ಸೆಕ್ರೆಟರಿಗಳು ಯಾರು, ಅಧ್ಯಕ್ಷರು ಯಾರು, ಚೇರ್ಮನ್ನರು ಯಾರು? ಹಣಕೊಟ್ಟ ಜನರಿಗೆ ಯೋಗ್ಯ ಸ್ಟ್ಯಾಂಪಿನಮೇಲೆ ಜಗದ್ಗುರುಗಳ ಅಥವಾ ಪಂಚಸಿಂಹಾಸನಾಧಿಪತಿಗಳ ಶಿಕ್ಕೆ ಮೊಹರುಗಳನ್ನು ಹಾಕಿಸಿ ಸನದುಗಳನ್ನು ತಯಾರಿಸಿ ಸದರೀ ರಕಮು ಮಹಾಸಭೆಯು ನಿರಂತರ ನಡೆಯಿಸುವ ವಿಚಾರವನ್ನು ಕುರಿತು ಸ್ವೀಕರಿಸಲ್ಪಟ್ಟರೆ ಆ ರಕಮು ಯೋಗ್ಯ ಸರಕಾರದ ಜವಾಬುದಾರಿಯ ಬ್ಯಾಂಕಿನಲ್ಲಿಟ್ಟು ಅದರ ಬಡ್ಡಿಯ ಉಪಯೋಗವನ್ನೇ ಮಹಾಸಭೆಯ ವೆಚ್ಚಕ್ಕಾಗಿ ಪ್ರಸಂಗ ಬಿದ್ದಾಗ ಉಪಯೋಗಿಸತಕ್ಕದ್ದು ಇನ್ನಾವ ಕಾರ್ಯಕ್ಕೂ ಉಪಯೋಗಿಸುವಂತಿಲ್ಲ. ಮುಖ್ಯ ಭಾಂಡವಲಕ್ಕೆ ರಕಮು ಕೊಟ್ಟ ಮಹನೀಯರೇ ಮಾಲಕರು ಇರುವರು. ಯಾವ ಕೆಲಸಕ್ಕಾಗಿ ರಕಮು ಕೂಡಿಸಿರುತ್ತದೆ. ಅದರ ವಿರುದ್ಧ ಕಮಿಟಿಯು ನಡೆದಲ್ಲಿ ರಕಮು ಕೊಟ್ಟ ಜನರು ಸಭೆಗೂಡಿಸಿ ಬಹು ಮತದಿಂದ ಪಾಸು ಮಾಡಿದಂತೆ ವರ್ತಿಸಬೇಕೆಂತ ಅದರಲ್ಲಿ ಬರೆದು ಆಸನದು ಶಿಕೆ ಮೋಹರ ಸಹಿಯಾಗಿ ಅನವರತ ವಂಶಪರಂಪರೆಯಾಗಿ ನಡೆಯಬೇಕು. ಪ್ರತಿ ಮಹಾಸಭೆಗಳಲ್ಲಿ ಅವರಿಗೆ ಯಾವ ಪ್ರಕಾರದ ಫೀ ಇಲ್ಲದೆ ಉಚ್ಚಾಸನವು ಬಹುಮಾನಾರ್ಥವಾಗಿ ದೊರೆಯಬೇಕು. ಮುಂತಾದ ಷರತ್ತುಗಳನ್ನು ಆ ಸನದಿನಲ್ಲಿ ಕಾಣಿಸಿ, ೮ ನೇ ಸಭೆಯ ಅಧ್ಯಕ್ಷರೂ, ಸ್ವಾಗತ ಕಮಿಟಿಯ ಚೇರ್ಮನ್ನರೂ ಸೆಕ್ರೆಟರಿಗಳೂ ಸಹಿ ಮಾಡುವುದಲ್ಲದೆ ಶ್ರೀ ಜಗದ್ಗುರುಗಳು ಆಶೀರ್ವದಿಸಬೇಕು. ಈ ಪ್ರಕಾರ ನಿದಾನ ೧೦ ರೂಪಾಯಿ ಸ್ಟ್ಯಾಂಪಿನಮೇಲೆ ಬರೆದು ಹಣ ಕೊಟ್ಟ ಪ್ರತಿಯೊಬ್ಬರಿಗೆ ಅವುಗಳನ್ನು ತೀವ್ರ ಮುಟ್ಟಿಸಬೇಕು. ಒಂದು ಆಣೆಯ ಟಿಕೇಟು ಹಚ್ಚಿ ನಮ್ಮ ಕಡೆಯಿಂದ ೧೦೦೦ ರೂಪಾಯಿ ಮುಟ್ಟಿದುವು ಅಂತ ಒಂದು ಪಾವತಿ ಕೊಡುವುದರಿಂದ ಆ ಕೆಲಸ ಆಗುವಂತಿಲ್ಲ.

ಹಿಂದಕ್ಕೆ ರಾಜರು ಸನದು ಕೊಟ್ಟಂತೆ ಮಹಾಸಭೆಯವರೂ ಗುರುಗಳೂ ಸನದುಗಳನ್ನು ಅವರವರಿಗೆ ಮುಟ್ಟಿಸಬೇಕು. ಈ ಪ್ರಕಾರ ಹಣಕೊಟ್ಟ ಜನರ ಫೋಟೋ ತೆಗಸಿತ್ತು. ಅವು ಮೈಸೂರು ಸ್ಟಾರಿನಲ್ಲಿ ಇನ್ನೂ ಮುದ್ರಿಸಲಿಲ್ಲ. ಸೋಲಾಪೂರ ಜೀರಗೇ ಫೋಟೋಗ್ರಾಫರರು ಅವನ್ನು ಸ್ಟಾರಕರ್ತರ ಕಡೆಗೆ ಕಳಿಸಿರುವರೋ ಇಲ್ಲವೋ ತಿಳಿಯಲಿಲ್ಲ. ಮೇಲಿನ ಎಲ್ಲ ವರ್ತಮಾನ ಸ್ಟಾರ್ ಮತ್ತು ಚಂದ್ರೋದಯಗಳಲ್ಲಿ ತೀವ್ರ ಪ್ರಸಿದ್ಧವಾಗಬೇಕು. ಹಣ ಕೊಟ್ಟವರ ವಾಗ್ದಾನಮಾಡಿದವರ ವಸೂಲಿ ಬಗ್ಗೆ ಏನು ಏರ್ಪಾಟು ಮಾಡಿದೆ ಮುಂತಾದ್ದು ಪ್ರಕಟಿಸಬೇಕು. ೮ ನೇ ಮಹಾಸಭೆಯ ರಿಪೋರ್ಟು ತಯಾರಾಗಲಿಕ್ಕೆ ಇನ್ನೂ ಅವಕಾಶ ಎಷ್ಟಿದೆ ಅದನ್ನು ಚಾಣಾಕ್ಷ ಸೆಕ್ರೆಟರಿ ಮಂಜಪ್ಪನವರು ತೀವ್ರ ತಿಳಿಸಿ ಅದನ್ನು ತಯಾರಿಸುವರೆಂದು ಆಶಿಸುವೆನು. ಅದರಲ್ಲಿ ಹಣಕೊಟ್ಟ ಮಹನೀಯರ ಭಾವಚಿತ್ರಗಳು ಬರುವಂತೆ ಮಾಡಬೇಕು. ದಾವಣಗೇರಿ ಸಭೆಯ ಆದಾಯ ಖರ್ಚಿನ ಪಟ್ಟಿ ತೀವ್ರ ಪ್ರಕಟಿಸುವ ವ್ಯವಸ್ಥೆಯಾಗಬೇಕು. ಹೊಸ ಸ್ಟ್ಯಾಂಡಿಂಗ ಕಮಿಟಿಯ ಕೆಲಸ ಎಲ್ಲಿಗೆ ಬಂದಿದೆ, ಅದರ ಬಗ್ಗೆ ಮುಂದಿನ ತಿಂಗಳಲ್ಲಿ ದಾವಣಗೇರಿಯಲ್ಲಿ ಒಂದು ಚಿಕ್ಕ ಸಭೆ ಕೂಡತಕ್ಕದ್ದಿತ್ತು. ಅದರ ಬಗ್ಗೆ ಏನು ಆಯಿತೋ ತಿಳಿಯಲಿಲ್ಲ. ಈ ಎಲ್ಲ ಮಹತ್ವದ ಕೆಲಸಗಳ ಕಡೆಗೆ ಚಾಲಕರು ಲಕ್ಷ ಕೊಟ್ಟು ಸಮರ್ಪಕ ಉತ್ತರವನ್ನು ಸ್ಟಾರ ಮುಖಾಂತರ ಕೊಡುವರೆಂದು ಆಶಿಸುವೆನು. ಹೋದ ದಿಸೆಂಬರದಲ್ಲಿ ಆದ ಚರ್ಚೆಯನ್ನು ಮುಂದಿನ ದಿಸೆಂಬರದ ೯ ನೇ ಸಭೆಯಲ್ಲಿ ಬೀರೂರಲ್ಲಿ ತೆಗೆಯುವ ಪ್ರಸಂಗದಂತೆ ವ್ಯವಸ್ಥೆ ಮಾಡುವುದು ಉತ್ತಮ. ಬೀರೂರ ವೀರಶೈವರು ೯ನೇ ಸಭೆಯು ತಮ್ಮಲ್ಲಿ ಆಗಬೇಕೆಂದು ದಾವಣಗೇರಿಯ ಮಹಾಸಭೆಯವರಿಗೆ ಬಿನ್ನಯಿಸಿಕೊಂಡಂತೆ ಅಲ್ಲಿಯ ವ್ಯವಸ್ಥೆ ಏನು ಜರುಗಿದೆ? ದಿವಸಗಳು ಸಮೀಪ ಬರುವವರೆಗೆ ಸುಮ್ಮನೆ ಕೂತು ನಂತರ [illegible] ವುದು ವಿಹಿತವಲ್ಲ. ಈಗಿನ ಪರಿಸ್ಥಿತಿಯನ್ನು ಸಿಂಹಾವಲೋಕನಮಾಡಿದರೆ ನಮ್ಮ ಸಮಾಜವು ಸಾಮಾಜಿಕ ಕೆಲಸದಲ್ಲಿ ಬಹಳ ಹಿಂದುಳಿದಿರುವುದೆಂದು ತಾನೇ ತಿಳಿಯುವುದು. ಆದುದರಿಂದ ಸದ್ಗುರುಗಳೂ, ಚಾಣಾಕ್ಷ ಸಮಾಜ ಧುರೀಣರೂ, ಟೊಂಕಕಟ್ಟಿ ಏಕಮತ್ಯದಿಂದ ಸಮಾಜೋನ್ನತಿಯನ್ನೂ ಪರಮಾರ್ಥ ಲಾಭವನ್ನೂ ಪಡೆಯುವರೆಂದು ಆಶಿಸುವ,

ಬೆಳಗಾಂವ,
ತಾ|| ೧೨—೪—೧೯೧೮

ತಮ್ಮ
"ಸಮಾಜ ಹಿತಚಿಂತಕ"

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

(೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವಶರೀರವೈದ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಜರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೊ ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಳೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂಡಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ, ಜಡ್ಡು, ಗುದ್ದವ್ಯಸನಬೇನೆ, ಹುಯುಕುಳಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ಬಡವ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೇರು ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಅಡ್ಡಿಕ್ಕ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಅದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರಿಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು [illegible] ಒಪ್ಪಿಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಾಂಡರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವವು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
5 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಶನ್ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ ಅಂಡ್ ಕೊ.,
21 ಸಾಹುಕಾರಪೇಟೆ, ಮದ್ರಾಸ್.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರಾ ತಿಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-ಡಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-ಡಬೇ- ೩ಪ್ಪೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-ಡಬೇ- ೩ಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾ ರೋಗಗಳಿಗೆ ೧ಡ-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
24 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೮ ನೆಯ ಇಸವಿ ಮೇ ತಾ|| ೧೨ ರಿಂದ ೧೯೧೮ ನೆಯ ಮೇ ತಾ|| ೧೮ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ವೈಶಾಖ ಶು|| ಬಿದಿಗೆಯಿಂದ ವೈಶಾಖ ಶು|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ವೃಷ
12	[1] ಭಾನು	ಬಿದಿಗೆ	23-1	ರೋಹಿಣಿ	28-0	30
13	[2] ಸೋಮ	ತದಿಗೆ	20-10	ಮೃಗಶಿರೆ	27-7	31
14	ಮಂಗಳ	ಚೌತಿ	18-35	ಆರಿದ್ರೆ	27-19	1
15	[3] ಬುಧ	ಪಂಚ	17-56	ಪುನರ್ವಸು	28-46	2
16	ಗುರು	ಷಷ್ಠಿ	19-0	ಪುಷ್ಯ	31-23	3
17	[4] ಶುಕ್ರ	ಸಪ್ತ	20-42	ಆಶ್ಲೇಷ	35-16	4
18	ಶನಿ	ಅಷ್ಟ	23-52	ಮಖ	40-16	5

(1) ಪರಶುರಾಮಜಯಂತಿ. (2) ವಾರ್ತಾಕಗೌರೀವ್ರತಂ, ಅರುಣಗಿರಿ ವೆಂಕಟರಮಣಸ್ವಾಮಿ ರಥ. (3) ರಾವಳ್ಯಗೌರೀವ್ರತಂ, ಶಂಕರಜಯಂತಿ, (4) ಶ್ರೀರಂಗಪಟ್ಟಣ ವಸಂತೋತ್ಸವಾರಂಭ.

[illegible]: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಚಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಕಜ್ಞನಕ್ಷತ್ರವೋಹರಾಜೀಯೊತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲಿಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಲಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮೇ ತಾರೀಖು ೧೯ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವ ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ, ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, [illegible] 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ [illegible] 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಎಂಬ ಶೃಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. ೩.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
[illegible] ೩, [illegible], ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೮—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 23

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಚ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ಇವಳಿಕೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರತಿಷ್ಠಿತರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕವಿಧ ಉತ್ತಮವಾದ [illegible]

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೮—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೬—೦ ರೂ. ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ರ್ಯಾಂಚ್ ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೮—೦; ಅನಂತರ ಪ್ರತಿ ೧೦೦ ಕ್ಕೂ ೧—೬—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ [illegible]ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೮—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೮—೦ ಆಣೆಯಂತೆಯೂ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರ್.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ [illegible] ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
7 ಆನಂದ ಬುಕ್‌ಡಿಪೋ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 31

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಆತಿಶ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ [illegible] ಇಂದ್ರಿಯದ [illegible] ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ [illegible]

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ.
[illegible]

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮೇ ತಾ|| ೧೯ ನೆಯ ಭಾನುವಾರ.

ಕರ್ಣಾಟಕ ಸಾಹಿತ್ಯಸಮ್ಮೇಳನ.

ಗೊತ್ತಾಗಿದ್ದ ಮೇರೆಗೆ ಧಾರವಾಡದಲ್ಲಿ ಈ ಸಮ್ಮೇಳನದ ಕಾರ್ಯಗಳು ಕಳೆದ ತಾ|| ೧೧ ರಿಂದ ಮೂರುದಿನಗಳ ವರೆಗೆ ವೈಭವದಿಂದ ಸಾಗಿದುವೆಂಬ ಸುದ್ದಿಯನ್ನು ಕೇಳಿ ಸಂತೋಷಿಸುತ್ತೇವೆ. ಇದುವರೆಗೆ ನಡೆದ ೩ ಸಭೆಗಳಿಗೆ ಮೈಸೂರು ಪ್ರಭುತ್ವಾಶ್ರಯವಿದ್ದರೂ, ಈ ಸಲದ ೪ನೆ ಸಮ್ಮೇಳನವು ಔತ್ತರೀಯ ಭಾಷಾಭಿಮಾನಿಗಳ ಸಮುಚಿತ ಪ್ರಯತ್ನ ಮಾತ್ರದಿಂದಲೇ ಹಿಂದಣ ಎಲ್ಲಾ ಸಭೆಗಳಿಗಿಂತಲೂ ಯಶಸ್ವಿಯಾಗಿ ನಡೆದಿತೆಂಬುದನ್ನು ಕೇಳುವುದಕ್ಕೆ ಮತ್ತಷ್ಟು ಸಂತೋಷವಾಗುತ್ತದೆ. ಈ ಸಭೆಗೆ ೬೦೦ ಪ್ರತಿನಿಧಿಗಳು ಬಂದಿದ್ದರೆಂಬುದು ಹಿಂದಣ ಸಭಾ ಚರಿತ್ರವನ್ನು ಕೇಳಿದ್ದವರಿಗೆಲ್ಲಾ ಸಮಾಧಾನಕರವಾಗಿದ್ದರೂ ಕರ್ಣಾಟಕ ಮಂಡಲದ ವೈಶಾಲ್ಯದ ಕಡೆಗೆ ಗಮನಿಸಿ ಈ ಸಂಖ್ಯೆಯನ್ನು ಅವಲೋಕಿಸಿದರೆ ಅಷ್ಟೇನೂ ತೃಪ್ತಿಕರವಾಗಿರಲಾರದು. ನಮ್ಮ ಶ್ರೀಮದ್ಯುವರಾಜರವರೂ, ದಿವಾನ್ ಸರ್ ವಿಶ್ವೇಶ್ವರಯ್ಯನವರೂ, ನಮ್ಮ ವಿದ್ಯಾಭ್ಯಾಸಶಾಖಾ ಇನ್|| ಜನರಲ್ ಸಾಹೇಬರೂ ಸಾನುಭೂತಿ ಪರವಾದ ಪತ್ರಗಳನ್ನು ಸಭೆಗೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಿದುದು ಅವರ ದೇಶಭಾಷಾಪ್ರೇಮಕ್ಕೆ ನಿದರ್ಶಕವಾಗಿದ್ದುವು. ಇನ್ನೂ ಹಲವು ಕಡೆಯ ಅಭಿಮಾನಿಜನಗಳಿಂದ ಇದೇ ತೆರದ ಸಾನುಭೂತಿಗಳು ತಿಳಿಯಿಸಲ್ಪಟ್ಟಿದ್ದುವು. ಸ್ವಾಗತ ಸಂಘಾಧ್ಯಕ್ಷರಾದ ಶ್ರೀಮಂತ ಸರ್ದಾರ್ ಹಂದಿಗನೂರು ದೇಶಾಯಿರವರು ಮೊಟ್ಟಮೊದಲು ಮಾಡಿದ ತಮ್ಮ ಭಾಷಣದಲ್ಲಿ ಕರ್ಣಾಟಕದ ಇತಿಹಾಸವನ್ನು ಸಂಕ್ಷಿಪ್ತವಾಗಿ ವರ್ಣಿಸಿ, ಆಧುನಿಕಸ್ಥಿತಿಯ ವಿಚಾರಮಾಡಿ, ದುಸ್ಥಿತಿಯ ನಿವಾರಣೆಯಮೂಲಕ ಸರ್ವಾಂಗಪುಷ್ಟಿಯನ್ನುಂಟುಮಾಡಿಸುವ ಕೆಲಸವು ಆಧುನಿಕರಾದ ಭಾಷಾಪುತ್ರರಿಗೆ ದುರ್ನಿವಾರವಾದ ಕಾರ್ಯವಾಗಿರುವುದೆಂದು ಹೇಳಿದರು.

ಸಭಾಧ್ಯಕ್ಷರಾಗಿದ್ದ ರಾ|| ಬ|| ಪ್ರಾಕ್ತನ ವಿಮರ್ಶನವಿಚಕ್ಷಣ ಆರ್. ನರಸಿಂಹಾಚಾರ್ಯರ ಭಾಷಣವಂತೂ ಅವರ ಯೋಗ್ಯತಾವಿಶೇಷವನ್ನು ಅರಿತಿದ್ದವರೆಲ್ಲರೂ ನಿರೀಕ್ಷಿಸಿದ್ದಂತೆಯೇ ಪ್ರೌಢವೂ ವಕ್ತವ್ಯಾಂಶ ಪರಿಪೂರ್ಣವೂ ವಿಚಾರಪರಿಪ್ಲುತವೂ ಆಗಿದ್ದಿತು. ಮೈಸೂರು ಸಂಸ್ಥಾನದಲ್ಲಿ ಇವರಿಗೆ ಆದಿಯಿಂದಲೂ ದೊರೆತ ಉದ್ಯೋಗಪ್ರಯುಕ್ತವಾದ ಆನುಕೂಲ್ಯವು ಕರ್ಣಾಟಕ ವಾಙ್ಮಯ ಸಂಶೋಧನೆಗೆ ಬಲುಮಟ್ಟಿಗೆ ಉಪಕರಿಸಿತು. ಅಂಥ ಅನುಕೂಲ್ಯವನ್ನು ವ್ಯರ್ಥಗೊಳಿಸಿಕೊಳ್ಳದೆ ಸಫಲಗೊಳಿಸಿ, ಅತುಲವಾದ ಭಾಷಾಸೇವೆಯನ್ನು ಮಾಡಿ ಕೃತಾರ್ಥತೆಯನ್ನು ಪಡೆದು ದೇಶಬಾಂಧವರ ಚಿರಕೃತಜ್ಞತೆಗೆ ಪಾತ್ರರಾಗಿರುವರೆಂಬುದನ್ನು ಅವರ ಕರ್ಣಾಟಕ ಕವಿಚರಿತ್ರೆಯೇ ಡಂಗುರಿಸುತ್ತಿರುವುದು. ಭಾಷಾಸೇವಾರೂಪ ನಿರೂಪಣವನ್ನು ಮಾಡುವುದಕ್ಕೆ ಇವರಿಗಿರುವಷ್ಟು ಅರ್ಹತೆಯು ಇತರರಿಗಿರಲಾರದೆಂದು ನಾವು ತಿಳಿಯುವೆವು. ಅದುಕಾರಣ ಈ ಸಮ್ಮೇಳನದ ಅಧ್ಯಕ್ಷತೆಯು ಇದಕ್ಕೆ ಮುಂಚೆಯೇ ಅವರಿಗೆ ಸಲ್ಲಬೇಕಾಗಿದ್ದರೂ ಈಗಲಾದರೂ ನೆರೆಯ ದೇಶದವರು ಅವರ ಅರ್ಹತೆಯನ್ನು ತಿಳಿದು ಅವರಿಗೆ ಅಧ್ಯಕ್ಷತೆಯನ್ನು ಸಮರ್ಪಿಸಿಕೊಟ್ಟುದು ಅವರ ಕರ್ತವ್ಯದಕ್ಷತೆಗೆ ಭೂಷಣವನ್ನು ಉಂಟುಮಾಡಿಕೊಂಡಂತೆಯೇ ಆಯಿತು.

ಅಧ್ಯಕ್ಷರು ಮಾಡಿದ ಭಾಷಣವು ಸಾಂಗವಾಗಿ ಇನ್ನೂ ನಮ್ಮ ಕೈಸೇರದಿರುವುದರಿಂದ ಅದರ ಸಮಾಲೋಚನೆಯನ್ನು ಮತ್ತೊಂದು ಸಲ ಮಾಡಬೇಕೆಂದಿರುವೆವು. ದೀರ್ಘವಾಗಿದ್ದ ಅವರ ಭಾಷಣದಲ್ಲಿ ಮುಖ್ಯವಾಗಿ ಕರ್ಣಾಟಕ ಭಾಷೆ, ಕನ್ನಡ ನಾಡಿನಲ್ಲಿದ್ದ ಭೂಪತಿಗಳು, ಕನ್ನಡ ನಾಡಿನ ಮಹತ್ವ, ಕನ್ನಡಿಗರು ಪರದೇಶೀಯರೊಡನೆ ನಡೆಯಿಸುತ್ತಿದ್ದ ವ್ಯಾಪಾರಾದಿ ಸಂಬಂಧಗಳ ಮಹತ್ವ, ಕನ್ನಡಿಗರ ಅಭೂತಪೂರ್ವ ಶಿಲ್ಪಕೌಶಲ್ಯ, ಕನ್ನಡಕ್ಕೆ ದೊರೆದ ಪ್ರೋತ್ಸಾಹವನ್ನು ಕೊಟ್ಟ ಭೂಪರು, ಕನ್ನಡಕಬ್ಬಿಗರು, ಕನ್ನಡ ನಾಡಿನಲ್ಲಿ ಮತಾಚಾರ್ಯರುಗಳು ಜನಿಸಿದ ಮಹತ್ವ, ಈಗಣ ಕನ್ನಡದವರ ಶೋಚನೀಯಸ್ಥಿತಿ, ಅದರ ಅಭ್ಯುನ್ನತಿಗೆ ಮಾಡಬೇಕಾದ ಪ್ರಯತ್ನಗಳು, ಕನ್ನಡದ ಅಭ್ಯುನ್ನತಿಗೆ ಪ್ರತಿಬಂಧಕಗಳಾಗಿರುವ ಪದ್ಧತಿಗಳು, ದೇಶಭಾಷಾಪುತ್ರರು ದೃಢಾಭಿಮಾನದಿಂದ ಭಾಷೋದ್ಧಾರಕ್ಕೆ ನಡುಕಟ್ಟಿ ನಿಲ್ಲಬೇಕಾಗಿರುವ ಆವಶ್ಯಕತೆ—ಈ ವಿಷಯಗಳನ್ನೆಲ್ಲಾ ಕುರಿತು ಅನುಭವಪರಿಪಾಕವುಳ್ಳ ಸ್ವಾಭಿಪ್ರಾಯಗಳನ್ನು ಪ್ರತಿಪಾದಿಸಿರುವರು.

ಮರುದಿನದಿಂದ ನಡೆದ ಸಭೆಗಳಲ್ಲಿ ಬೇರೆಬೇರೆ ವಿದ್ವಜ್ಜನರ ಭಾಷಣಗಳೂ ಉಚಿತವಾದ ನಿರ್ಧಾರಗಳೂ ಮಾಡಲ್ಪಟ್ಟಿರುವುವು. ಅವನ್ನೆಲ್ಲಾ ಮುಂದಣವಾರದಲ್ಲಿ ಪ್ರಸ್ತಾಪಿಸಬೇಕೆಂದಿರುವೆವು.

ಭರತಖಂಡದಲ್ಲಿ ೨ ನೆಯ ಸಲದ ಯುದ್ಧ ಋಣ.

ದಿಲ್ಲಿಯ ಯುದ್ಧಮಹಾಸಭೆಯಲ್ಲಿ ನಿರ್ಣಯವಾಗಿರುವಂತೆ ಈಗ ಮತ್ತೊಂದು ಸಲ ೧೦ ಕೋಟಿ ರೂ. ಗಳ ಸಾಲವನ್ನು ಈ ದೇಶದಲ್ಲಿ ಎತ್ತುವುದಕ್ಕೆ ನಿರ್ಣಯಿಸಿ ಭರತಖಂಡದ ಸರ್ಕಾರದವರು ಪ್ರಕಟ ಮಾಡಿರುತ್ತಾರೆ. ಈ ಹಣಕ್ಕೆ ಸರ್ಕಾರದ ರಾಜಾದಾಯವೇ ಈಡಾಗಿರುತ್ತದೆ. ಸಾಲವಾಗಿ ಕೊಡಲ್ಪಟ್ಟಿರುವ ಹಣಕ್ಕೆ ವರಮಾನದ ಕಂದಾಯವನ್ನು ಸರ್ಕಾರದವರು ಮನ್ನಿಸಿಬಿಡುವರು. ೧೦೦ ಕ್ಕೆ ೫ ರೂ. ಬಡ್ಡಿಯ ಮೇರೆ ತೆಗೆದುಕೊಳ್ಳಲ್ಪಡುವ ಸಾಲವು ೧೯೨೧ನೆ ವರ್ಷದಲ್ಲಿ ಮರಳಿ ಸಲ್ಲಿಸಲ್ಪಡುವುದು. ೧೯೨೮ ನೆ ವರ್ಷದಲ್ಲಿ ಹಿಂದಿರುಗಿ ಕೊಡಲ್ಪಡುವ ಸಾಲಕ್ಕೆ ೧೦೦ಕ್ಕೆ ೫|| ರೂ. ನಂತೆ ಬಡ್ಡಿಯು ಕೊಡಲ್ಪಡುವುದು. ಬಡ್ಡಿಯು ಪ್ರತಿ ವರ್ಷದಲ್ಲೂ ೨ ಸಲ ಎಂದರೆ ಮಾರ್ಚಿ ತಾ|| ೧೫, ಸೆಪ್ಟೆಂಬರ್ ತಾ|| ೧೫ ರಲ್ಲಿ ಕೊಡಲ್ಪಡುವುದು. ಇದಲ್ಲದೆ ಪೋಸ್ಟಾಫೀಸಿನ ಮೂಲಕವೂ ಈ 'ಲೇವಾದೇವಿ' ಯನ್ನು ನಡೆಯಿಸಬಹುದು. ಪ್ರತಿಯೊಬ್ಬರೂ ೧೦ ಸಾವಿರ ರೂ.ಗಳವರೆಗೂ ಸಾಲವನ್ನು ಕೊಟ್ಟು ಋಣಕ್ಕೆ ಪತ್ರಗಳನ್ನು ಪಡೆಯಬಹುದು.

ಈ ಸಮಯವನ್ನು ಬಡಬಗ್ಗರಾದಿಯಾಗಿ ಶ್ರೀಮಂತರು ರಾಜಾಧಿರಾಜರವರೆಗಣ ಸರ್ವರೂ ಉಪಯೋಗಿಸಿಕೊಂಡು ಅನುಕೂಲವಾದಷ್ಟು ಹಣವನ್ನು ಭರತಖಂಡದ ಸರ್ಕಾರಕ್ಕೆ ಸಾಲವಾಗಿ ಕೊಟ್ಟರೆ ತಾವು ಬಡ್ಡಿಯ ರೂಪವಾದ ಪ್ರತಿಫಲವನ್ನು ಪಡೆಯಬಹುದಲ್ಲದೆ ಸಾಮ್ರಾಜ್ಯಕ್ಕೆ ತಮ್ಮ ಸೇವೆಯನ್ನು ಸಮರ್ಪಿಸಿ ಇದುವರೆಗೆ ಆಂಗ್ಲಸಾರ್ವಭೌಮರು ಭರತಖಂಡಕ್ಕೆ ಮಾಡಿರುವ ಮಹೋಪಕಾರಕ್ಕೆ ಕೃತಜ್ಞತೆಯನ್ನೂ ಸಮರ್ಪಿಸಿದಂತಾಗುವುದು. ಆಂಗ್ಲಸಾಮ್ರಾಜ್ಯಕ್ಕೆ ನಾವುಗಳು ಸಾಲವನ್ನು ಕೊಡುವುದರಲ್ಲಿ ಯಾವ ಭೀತಿ ಸಂಶಯಗಳನ್ನೂ ಪಡಬೇಕಾದುದಿಲ್ಲ. ಆಂಗ್ಲಸಾಮ್ರಾಜ್ಯಕ್ಕೆ ಅಧೀನವಾಗಿರುವ ಕಾನಡಾ ಆಸ್ಟ್ರೇಲಿಯಾ ಮೊದಲಾದ ಅಧಿನಿವೇಶ ರಾಜ್ಯಗಳೆಲ್ಲಾ ಕೋಟ್ಯಂತರ ರೂ. ಗಳನ್ನು ಇದುವರೆಗೆ ಯುದ್ಧಋಣ ರೂಪವಾಗಿಯೂ ಉಚಿತ ಸಹಾಯವಾಗಿಯೂ ಕೊಟ್ಟಿರುವುದಲ್ಲದೆ ಈಗಲೂ ಕೊಡುತ್ತಲಿವೆ. ಅವು ಹೊರತು ಅಮೇರಿಕಾದಂಥ ಪರರಾಷ್ಟ್ರದವರೂ ಸಹ ಕೋಟಿಗಟ್ಟಲೆ ಪೌನುಗಳನ್ನು ಪ್ರತಿವರ್ಷವೂ ಸಾಲವಾಗಿ ಕೊಡುತ್ತಿದ್ದಾರೆ. ಎಷ್ಟೋ ಅರ್ಬುದ ಸಾಲವನ್ನು ಇದುವರೆಗೇ ಆಂಗ್ಲಸರ್ಕಾರದವರು ಮಾಡಿರುತ್ತಾರೆ. ಈಗಲೂ ಯಾವ ದೇಶದಲ್ಲೂ ಅವರಿಗೆ ಸಾಲವು ಹುಟ್ಟುವಂತೆ ಇತರರಿಗೆ ಹುಟ್ಟುತ್ತಿರುವುದಿಲ್ಲ. ಅವರ ನಾಣ್ಯವು ಎಲ್ಲೂ ಕಡಿಮೆಯಾಗಿಲ್ಲ. ಅರ್ಬುದಗಟ್ಟಲೆ ಸಾಲವನ್ನು ಕೊಡುವವರಿಗೆ ಇಲ್ಲದ ಭೀತಿಯು ನಮಗೇಕೆ? ಇದಲ್ಲದೆ ಪರಿಣಾಮದಲ್ಲಿ ಶತ್ರುಮಂಡಲಿಗೆ ವಿಜಯವಾಗುವುದೇ ಅಸಂಭವವೆಂದು ವಿಶೇಷಜ್ಞರು ನಿರ್ಧರಿಸಿರುವಾಗ್ಗೆ ಭರತಖಂಡವು ಪರಾಧೀನವಾಗುವುದೆಂಬ ಅದೂರದರ್ಶಿಗಳ ಮಾತು ಕೂಡ ಪಳ್ಳುಕೂಗೇ ಹೊರತು ಪ್ರಮಾಣಭೂತವಾದುದಲ್ಲ. ಯಾವ ದೇಶಭಾಗವನ್ನು ಬಿಟ್ಟರೂ ಆಂಗ್ಲಜನರು ಭರತಖಂಡವನ್ನು ಶತ್ರುಗಳಿಗೆ ಬಿಟ್ಟುಕೊಡಲಾರರು. ಈ ದೇಶವು ಪರಹಸ್ತಗತವಾಗುವುದು ಭಾರತೀಯರಿಗೂ ಹಿತಾವಹವಲ್ಲ. ಅಂಥ ವಿಪತ್ಕಾಲ ಬಂದರೆ ಈ ದೇಶದ ಕೋಟ್ಯಂತರ ಪ್ರಜೆಗಳು ಯುದ್ಧಸನ್ನದ್ಧರಾಗಿ ನಿಂತು ಸ್ವದೇಶವನ್ನೂ ಆಂಗ್ಲಸಾಮ್ರಾಜ್ಯವನ್ನೂ ಕಾಪಾಡಿಕೊಳ್ಳುವರೆಂಬುದಕ್ಕೂ ಅದಕ್ಕೆ ತಕ್ಕ ಸನ್ನಾಹಗಳನ್ನು ಆಂಗ್ಲಪ್ರಭುತ್ವದವರೂ ಆಶ್ರಿತಸಂಸ್ಥಾನಾಧಿಪತಿಗಳೂ ಈ ದೇಶದ ಪ್ರಜಾನಾಯಕರೂ ಸಹ ಮಾಡುತ್ತಾರೆಂಬುದಕ್ಕೂ ಲೇಶವೂ ಸಂಶಯವಿಲ್ಲ. ಇದಲ್ಲದೆ ಇದುವರೆಗೆ ನಡೆದಿರುವ ಮಹಾಯುದ್ಧದಲ್ಲಿ ಆಗಿರುವ ಪರಿಣಾಮವನ್ನೆಲ್ಲಾ ಪರ್ಯಾಲೋಚಿಸಿದರೆ ನಮ್ಮ ಸಾಮ್ರಾಜ್ಯ ಪ್ರಭುತ್ವದವರೇ ಶತ್ರುಮಂಡಲಿಗೆ ಲಕ್ಷಾಂತರ ಮೈಲಿ ವಿಸ್ತಾರದ ದೇಶಭಾಗಗಳನ್ನು ಆಫ್ರಿಕಾ ಮೆಸಪೆಟೋಮಿಯಾ ಈಜಿಪ್ಟು ಚೀನಾ ಈ ರಾಷ್ಟ್ರಗಳಲ್ಲಿ ಗೆದ್ದುಕೊಂಡಿರುತ್ತಾರೆಯೇ ಹೊರತು ತಮ್ಮ ಪ್ರಭುತ್ವಕ್ಕೊಳಪಟ್ಟಿರುವ ಪ್ರಪಂಚದ ¼ ಭಾಗದ ರಾಷ್ಟ್ರದಲ್ಲಿ ಒಂದು ಅಂಗಯ್ಯಗಲದ ಪ್ರದೇಶವನ್ನೂ ಕೂಡ ಶತ್ರುಗಳ ಕೈಗೆ ಹತ್ತಗೊಟ್ಟಿರುವುದಿಲ್ಲ. ಹೀಗಿರುವಾಗ ನಮಗೆ ಆಂಗ್ಲಛತ್ರಾಶ್ರಯವು ತಪ್ಪಿಹೋಗುವುದೆಂಬ ಮಾತು ಕನಸುಮನಸಿನಲ್ಲೂ ನೆನೆಯತಕ್ಕುದಾಗಿರುವುದಿಲ್ಲ. ನಾವು ಸಾಲ ಕೊಡದಿದ್ದರೆ ಆಂಗ್ಲಪ್ರಭುತ್ವದವರಿಗೆ ಸಾಲವು ಇನ್ನೆಲ್ಲೂ ಹುಟ್ಟದೆ ಹೋಗುವುದೆಂಬುದಾದರೂ ಉಂಟೆ? ಹಾಗೆನ್ನುವುದು ಹಾಸ್ಯಾಸ್ಪದವೇ ಸರಿ. ಅಲ್ಲದೆ ನಾವು ಕೊಡುವ ಸಾಲವಾದರೂ ಎಷ್ಟು ೧೦ ಕೋಟಿ ರೂ. ಗಳನ್ನು ಸಾಲಕೊಟ್ಟರೂ ಈಗಣ ಅವರ ೧ ದಿನದ ವೆಚ್ಚಕ್ಕೆ ಮಾತ್ರ ಇದು ಸಾಕಾಗಬಹುದು. ವರ್ಷಕ್ಕೆ ಅರ್ಬುದಗಟ್ಟಲೆಯ ಹಣವನ್ನು ಯುದ್ಧಕ್ಕಾಗಿ ವೆಚ್ಚಮಾಡುತ್ತಲಿರುವ ಪ್ರಭುತ್ವದವರಿಗೆ ನಾವು ಕೊಡುವ ಸಾಲವು ಒಂದು ಗಣನೀಯವೆ? ಇದನ್ನು ನಂಬಿಯೇ ಅವರು ಕೆಲಸ ಮಾಡುವರೆ? ಎಂದಿಗೂ ಇಲ್ಲ. ಅವರು ಕೇಳದಿದ್ದರೂ ನಾನಾ ರೀತಿಯಿಂದ ಸಹಾಯ ಮಾಡಿ ನಮ್ಮ ರಾಜನಿಷ್ಠೆಯನ್ನು ವ್ಯಕ್ತಪಡಿಸುವುದು ನಮಗೇ ದುರ್ನಿವಾದ ಕರ್ತವ್ಯವಾಗಿರುತ್ತದೆ. ವಿಪತ್ಕಾಲದಲ್ಲಿ ಮಾಡಿದ ಸಹಾಯವು ಅಲ್ಪಾಲ್ಪತಮವಾಗಿದ್ದರೂ ಅದಕ್ಕ ಎಷ್ಟೋ ಘನತೆ ಬರುವುದು ಸ್ವಭಾವವಷ್ಟೆ? ನಮ್ಮ ದೇಶವು ಪಶ್ಚಿಮ ರಾಷ್ಟ್ರಗಳಷ್ಟು ಸಂಪದ್ವಿಶಿಷ್ಟವಲ್ಲದಿರುವ ಕಾರಣದಿಂದ ನಾವು ಯಥಾಶಕ್ತಿಯಾಗಿ ಈಗ ಎಷ್ಟುಮಟ್ಟಿನ ಅಳಲಿನ ಸೇವೆಯಂಥ ಸಹಾಯವನ್ನು ಮಾಡಿದರೂ ಅದು ವಿಶೇಷತಃ ಗಣಿಸಲ್ಪಟ್ಟು ಆಂಗ್ಲಪ್ರಭುತ್ವದ ವಿಶೇಷ ಸಾನುಭೂತಿಯನ್ನು ನಮ್ಮ ದೇಶಕ್ಕ ಒದಗಿಸಿಕೊಡಲು ಅವಕಾಶಮಾಡಿಕೊಡುವುದು. ಅದುಕಾರಣ ಈ ಸಂಧಿಯನ್ನು ಹೋಗಗೊಡದೆ ಸಾಧ್ಯವಾದಷ್ಟು ಹಣವನ್ನು ಸಾಲವಾಗಿ ಸರ್ಕಾರಕ್ಕೆ ಕೊಡಲು ಶಕ್ತಿಯಿರುವವರೆಲ್ಲರೂ ಪ್ರಯತ್ನಿಸುವವರಾಗಬೇಕೆಂದು ಸೂಚಿಸುವೆವು.

ಯುದ್ಧವಾರ್ತೆಯು.

ಮೊನ್ನೆ ವಾರದಲ್ಲಿ ಸೋಮು, ಉಕ್ರೆ ಗ್ರಾಮಗಳ ಮಧ್ಯದಲ್ಲಿ ಆಂಗ್ಲಸೈನ್ಯವು ಮುಂದೆ ನುಗ್ಗಿಹೋದ ಬಳಿಕ ಕಳೆದ ವಾರವೂ ಇನ್ನೂ ಸ್ವಲ್ಪ ನುಗ್ಗಿಹೋಗಿರುವುದು. ಈಪ್ರೆಸ್ ರಣರಂಗದಲ್ಲಿ ಶತ್ರುಗಳು ಭಗ್ನಮನೋರಥರಾದರು. ಅದನ್ನು ವಶಪಡಿಸಿಕೊಳ್ಳುವುದು ಅಸಾಧ್ಯವೆಂಬುದು ಅವರಿಗೆ ಗೊತ್ತಾಗಿ ಹೋಯಿತು. ಎಟ್ಟಗಿಸದ ದ್ರಾಕ್ಷಿ ಗೊಂಚಲನ್ನು ಹುಳಿಯೆಂದು ಜರೆದುಹೋದ ನರಿಯಂತೆ ಜರ್ಮನರು ಈಗ ಆ ಸ್ಥಲವನ್ನು ನಿರುಪಯೋಗವಾದ ಸ್ಥಲವೆಂದು ಜರೆಯುವುದಕ್ಕಾರಂಭಿಸಿದ್ದಾರೆ. ಇದರ ಸಾಧನೆಗಾಗಿಯೇ ಯುದ್ಧಾರಂಭದಿಂದ ಲಕ್ಷಾಂತರ ಸೈನ್ಯವನ್ನು ಈ ರಂಗದಲ್ಲಿ ಅವರು ಬಲಿಯಿಕ್ಕಿ, ಸಾಧ್ಯವಾಗದ ಮೇಲೆ ಹೀಗೆ ಹೇಳುತ್ತಿದ್ದಾರೆ. ಆದರೆ ಕೆಲವು ಜರ್ಮನ್ ಪತ್ರಿಕೆಗಳು ಮಾತ್ರ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಪ್ರಕಟಪಡಿಸಿ, ಈಪ್ರೆಸ್ಸನ್ನು ಇಂಗ್ಲೀಷರು ಬಹಳ ಬಿಗಿಪಟ್ಟಿನಿಂದ ರಕ್ಷಿಸಿಕೊಂಡಿರುತ್ತಾರೆಂದೂ ಜರ್ಮನರ ಪ್ರಯತ್ನವು ಅಲ್ಲಿ ಫಲಿಸಲಾರದೆಂದೂ ಪ್ರಕಟಿಸಿರುತ್ತವೆ. ಇನ್ನು ಕೆಲ ಜರ್ಮನ್ ಪತ್ರಿಕೆಗಳು ಪಶ್ಚಿಮರಂಗದಲ್ಲಿ ಯುದ್ಧವು ಸಮಾಪ್ತವಾಯಿತೆಂತಲೂ ಯಾವ ಉತ್ತಮ ಪರ್ಯವಸಾನವೂ ತೋರಲಿಲ್ಲವೆಂತಲೂ ಅದುಕಾರಣ ಸಾಧ್ಯವಾದಷ್ಟು ಬೇಗನೆ ಸಂಧಿಯಾಗುವುದು ಉತ್ತಮವೆಂತಲೂ ಬರೆಯುತ್ತಿವೆ. ಲಾಟ್ ಬಿಟ್ಟನ್ನಿಗೂ ಪೋರ್ ಮಿಚಲೀಸಿಗೂ ಮಧ್ಯದಲ್ಲಿರುವ ಪ್ರದೇಶದಲ್ಲಿ ಶತ್ರುಗಳನ್ನು ಫ್ರೆಂಚರೂ ಇಂಗ್ಲೀಷರೂ ಹಿಂದಕ್ಕೋಡಿಸಿ ಮುಂದಕ್ಕೆ ನುಗ್ಗಿಹೋಗಿರುತ್ತಾರೆ. ಆಲ್ಬರ್ಟ್ ರಂಗದಲ್ಲಿ ಇಂಗ್ಲೀಷರು ತಾವು ಕಳೆದುಕೊಂಡಿದ್ದ ಕಂದಕವನ್ನು ಮರಳಿ ವಶಪಡಿಸಿಕೊಂಡರು. ಕಳೆದ ವಾರದಲ್ಲಿ ಮಿತ್ರಮಂಡಲಿ ವೈಮಾನಿಕರು ರಣರಂಗದಲ್ಲಿ ನೂರಾರು ಶತ್ರುವಿಮಾನಗಳನ್ನು ನಾಶಮಾಡಿಯೂ ಕೆಳಕ್ಕೆ ಇಳುಹಿಸಿಯೂ ಇದ್ದಾರೆ. ಫ್ರೆಂಚರು ಗ್ರಿವೆಸ್ನೆಸ್ಸು, ಲಾಸಿನಿಸೋಯರ್ ಗ್ರಾಮಗಳ ಮಧ್ಯದಲ್ಲಿ ಭಯಂಕರ ಫಿರಂಗಿಯುದ್ಧವನ್ನು ನಡೆಯಿಸಿ ಶತ್ರುಗಳಿಗೆ ಬಹು ಪ್ರಮುಖವಿಹಾರ ಸ್ಥಾನವಾಗಿದ್ದ ಪ್ರದೇಶವನ್ನು ವಶಪಡಿಸಿಕೊಂಡುದಲ್ಲದೆ ೨೦೮ ಮಂದಿ ಸೈನಿಕರನ್ನು ಸೆರೆಹಿಡಿದರು. ಕೇಮೆಲ್ ಗುಡ್ಡವನ್ನು ವಶಪಡಿಸಿಕೊಂಡ ಶತ್ರುಸೈನಿಕರು ಜೇರ್ ಪರ್ ಬರ್ಗನ್ನು ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಲು, ಫ್ರೆಂಚರೂ ಇಂಗ್ಲೀಷರೂ ಸಹ ಒಟ್ಟಾಗಿ ಪ್ರತಿಭಟಿಸಿ ಜರ್ಮನರ ಜಪವನ್ನು ಸಾಗದಂತೆ ಮಾಡಿದರು.

ಒಳದೇಶದ ವೃತ್ತಾಂತಗಳು.

ಮ|| ಎಸ್. ರಾಮಚಂದ್ರಶಾಸ್ತ್ರಿ, ಬಿ. ಎ., ಬಿ. ಎಲ್., ರವರು ಆಕ್ಟಿಂಗ್ ಮುನಸೀಫರಾಗಿ ನಿಯಮಿಸಲ್ಪಟ್ಟು ನರಸಿಂಹರಾಜಪುರಕ್ಕೆ ಕಳುಹಲ್ಪಟ್ಟಿರುತ್ತಾರೆ.

ಕಡೂರು ಡಿ|| ಅಫಿಷಿಯೇಟಿಂಗ್ ಡಿ||ಕಮಿಷನರಾದ ಮ|| ಸಿ. ದೇವರಾಜ ಅರಸಿನವರಿಗೆ ಕೊಡಲ್ಪಟ್ಟಿದ್ದ ೧ ತಿಂಗಳ ಪ್ರಿವಿಲೇಜ್ ರಜವು ವಜಾಮಾಡಲ್ಪಟ್ಟಿರುತ್ತದೆ.

ಮೈಸೂರು ನಿಯಮನಿರ್ಮಾಣ ಸಭೆಯು ಬರುವ ಜೂನ್ ತಾ|| ೨೮ ನೆಯ ಶುಕ್ರವಾರ ಬೆಳಿಗ್ಗೆ ೧೨ ಗಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಜರುಗುವುದು.

ಬರೋಡಾ ಮಹಾರಾಜ ದಂಪತಿಗಳು ಕಳೆದ ತಾ|| ೧೬ ರ ಬೆಳಗಿನ ರೈಲುಬಂಡಿಯಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ಬಂದು ನಿಲ್ದಾಣದಲ್ಲಿ ೧ ಗಂಟೆಯ ಕಾಲ ವಿಶ್ರಮಿಸಿಕೊಂಡು ಮೋಟಾರುಬಂಡಿಗಳಲ್ಲಿ ಉದಕಮಂಡಲಕ್ಕೆ ಪ್ರಯಾಣಮಾಡಿದರು.

ಮೈಸೂರು ಡಿಸ್ಟ್ರಿಕ್ಟಿನ ಅಫಿಷಿಯೇಟಿಂಗ್ ಡಿ|| ಕಮಿಷನರಾದ ಮ|| ಟಿ. ಚೊಕ್ಕಣ್ಣನವರು ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ನಿಗೂ, ಅ|| ಕಮಿಷನರು ಫ್ರೆಂಚ್‌ರಾಕ್ಸಿನಿಂದ ತರೀಕೆರೆ ಸಬ್‌ಡಿವಿಜನ್ನಿಗೂ, ಅ|| ಕಮಿಷನರು ಮಿ|| ಅಬ್ದುಲ್‌ಹಕ್ ರವರು ಕೋಲಾರ ಡಿ|| ಟ್ರಜರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ತುಮಕೂರು ಡಿ|| ಎಕ್ಸೈಸ್ ಆಫೀಸರಾದ ಮ|| ಎ. ಎಸ್. ರಾಜಗೋಪಾಲಾಚಾರರು ಮತ್ತು ಚಿಕ್ಕಮಗಳೂರಿನ ಅಮಲ್ದಾರರಾದ ಮಿ|| ಜೆ. ಬಾಲ್‌ರವರು ಬಿ ಷೆಡ್ಯೂಲ್ ೪ನೆಯ ತ|| ಅಸಿಸ್ಟೆಂಟ್ ಕಮೀಷನರಾಗಿ ನಿಯಮಿಸಲ್ಪಟ್ಟು ಮೊದಲನೆಯವರು ಗುಬ್ಬಿ ಸಬ್‌ಡಿವಿಜನ್ನಿಗೂ ಎರಡನೆಯವರು ಶಿವಮೊಗ್ಗ ಡಿ|| ಟ್ರಜರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮುನಸೀಫರುಗಳಾದ ಮೆಸರ್ಸ್. (೧) ಸಿ. ಸುಬ್ರಹ್ಮಣ್ಯ ಅಯ್ಯರ್‌ರವರು ಶ್ರೀರಂಗಪಟ್ಟಣದ ೧ನೆಯ ಕೋರ್ಟಿನಿಂದ ೨ ನೆಯ ಕೋರ್ಟಿಗೆ (೨) ಟಿ. ವೆಂಕೋಬರಾಯರು ಬೆಂಗಳೂರಿನ ೧ ನೆಯ ಕೋರ್ಟಿನಿಂದ ಶ್ರೀರಂಗಪಟ್ಟಣದ ೧ ನೆಯ ಕೋರ್ಟಿಗೆ (೩) ಎ. ಶ್ರೀನಿವಾಸ ರಾಘವಾಚಾರ್ರು ಮೈಸೂರಿನ ೨ ನೆಯ ಕೋರ್ಟಿನಿಂದ ಬೆಂಗಳೂರಿನ ೧ ನೆಯ ಕೋರ್ಟಿಗೆ, (೪) ಡಿ. ಅಳಸಿಂಗ್ರಾಚಾರ್ರು ತುಮಕೂರಿನ ೨ ನೆಯ ಕೋರ್ಟಿನಿಂದ ಮೈಸೂರಿನ ೨ ನೆಯ ಕೋರ್ಟಿಗೆ, (೫) ಸಿ. ಅಬ್ದುಲ್‌ಘನಿಯವರು ಚಿಕ್ಕಮಗಳೂರಿಂದ ತುಮಕೂರಿನ ೨ ನೆಯ ಕೋರ್ಟಿಗೆ, (೬) ಟಿ. ಶಿಂಗಾರುವೇಲು ಮೊದಲಿಯಾರರು ಮದ್ದಿಗಿರಿಯಿಂದ ಚಿಕ್ಕಮಗಳೂರಿಗೆ, (೭) ಎಸ್. ಎ. ವೈದ್ಯೇಶ್ವರ ಅಯ್ಯರ್‌ರವರು ನರಸಿಂಹರಾಜಪುರದಿಂದ ಮದ್ದಿಗಿರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿನಿಂದ ತಿಂಗಳೊಂದಕ್ಕೆ ೧೫ ರೂ. ನಂತೆ ೫|| ವರ್ಷಕಾಲ ವೇತನವನ್ನು ಪಡೆದು ಬೊಂಬಾಯಿನ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಪರೀಕ್ಷೆಯನ್ನು ಕೊಟ್ಟು ಈಗ ಯುದ್ಧಭೂಮಿಗೆ ಹೋಗಿರುವ ಲೆಫ್ಟಿನೆಂಟ್ ವೈ. ವಿ. ಅಯ್ಯ (ವಿಶ್ವನಾಥಯ್ಯ) ಐ.ಎಂ.ಎಸ್. ರವರು ತಾವು ಪಡೆದಿದ್ದ ವೇತನಕ್ಕಾಗಿ ಕಳೆದ ತಾ|| ೨೨ ರಲ್ಲಿ ೧೦೦೦ ರೂ. ಗಳನ್ನು ಒಟ್ಟಿಗೆ ಕೊಟ್ಟರೆಂದು ತಿಳುಹಲು ಅತ್ಯಂತ ಸಂತೋಷವಾಗುತ್ತದೆಂದೂ, ಇವರಂತೆ ಫಂಡಿನಿಂದ ವೇತನವನ್ನು ಪಡೆದು ತಿಂಗಳೊಂದಕ್ಕೆ ೩೦ ರೂ. ಗೆ ಕಡಿಮೆಯಿಲ್ಲದೆ ವರಮಾನ ಉಳ್ಳಂತಹವರು ಒಟ್ಟಿಗೆಯಾಗಲಿ ಅಥವಾ ತಿಂಗಳಿಗೆ ಸ್ವಲ್ಪಸ್ವಲ್ಪವಾಗಿಯಾಗಲಿ ತಾವು ಪಡೆದುಕೊಂಡಿರುವ ಮೊಬಲಗನ್ನು ಫಂಡಿಗೆ ವಾಪತಿ ಮಾಡುವುದಾಗಿ ನಿರೀಕ್ಷಿಸುತ್ತೇವೆಂದೂ ಫಂಡಿನ ಸೆಕ್ರೆಟರಿಯವರು ಈ ಪತ್ರಿಕಾ ಮೂಲಕ ತಿಳಿಸುತ್ತಾರೆ.

ರಾಜಧಾನಿಯಲ್ಲಿ ಕಳೆದ ಶುಕ್ರವಾರರಾತ್ರಿ ಒಂದುಹದ ಮಳೆಯಾಯಿತು ಮತ್ತು ಇನ್ನೂ ಬರುವ ಚಿಹ್ನೆಯಿದೆ. ಈ ವರೆಗಾದ ಮಳೆಯಿಂದ ಜೋಳದಪೈರು ಬಹಳ ಚೆನ್ನಾಗಿರುತ್ತದೆ. ಅಕ್ಕಿ ರಾಗಿ ಬೇಳೆ ಮೊದಲಾದ ಆಹಾರ್ಯ ಪದಾರ್ಥಗಳ ಬೆಲೆಯಂತೂ ಪ್ರತಿನಿತ್ಯದಲ್ಲೂ ವಿಷದಂತೆ ಏರುತ್ತ ತಿಂಗಳೊಂದಕ್ಕೆ ನೂರು ರೂ. ಗೆ ಮೇಲ್ಪಟ್ಟು ವರಮಾನವುಳ್ಳವರ ವಿನಾ ಇತರರಿಗೆ ನಿತ್ಯ ಕ್ಷಾಮವಾಗಿ ಪರಿಣಮಿಸಿರುತ್ತದೆ. ರಾಜಧಾನಿಯು ಹೆಗ್ಗಡದೇವನಕೋಟೆ ಮೊದಲಾದ ಕಾಡುಗಳಿಗೆ ಸಮೀಪವಾಗಿದ್ದರೂ ಸೌದೆ ರೂಪಾಯಿ ೧ಕ್ಕೆ ೫ ಮಣ ಸಹ ದೊರೆಯುವುದು ಪ್ರಯಾಸವಾಗಿದೆ ಮತ್ತು ಸಾಮಾನ್ಯ ಬಂಡಿಯೊಂದಕ್ಕೆ ೬-೮-೦ ರೂ. ಕೊಡಬೇಕಾಗಿದೆ. ಸೀಮೆಯೆಣ್ಣೆಯು ಸೀಸೆ ೧ಕ್ಕೆ ೫ ಆಣೆಯವರೆಗೂ ಮಾರಲ್ಪಡಲುಪಕ್ರಮವಾಗಿತ್ತು. ಆದರೆ ಎಣ್ಣೆಯ ಕಂಪನಿಯವರು ಕೆಲದಿನಗಳಿಂದ ಸೀಸೆಯೊಂದಕ್ಕೆ ೨|| ಆಣೆಯಂತೆ ಮಾರಲುಪಕ್ರಮಿಸಿರುವುದರಿಂದ ಬಡವರಿಗುಪಕಾರವಾಯಿತು. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿನಸಿ ಧಾರಣೆಯು ಮಿತಿಮೀರಿ ಏರುತ್ತಿರುವುದನ್ನು ಸರ್ಕಾರದವರು ನಿರೋಧಿಸಬೇಕೆಂದು ಮೆಂಬರುಗಳು ಪ್ರಾರ್ಥಿಸಿಕೊಂಡುದರ ಮೇಲೆ ಆ ರೀತಿ ಮಾಡುವುದಾಗುತ್ತದೆಂದು ಅಪ್ಪಣೆಕೊಡಿಸಿದ್ದಾಗ್ಗೂ ಈವರೆಗೆ ಯಾವ ಪ್ರಯತ್ನವನ್ನೂ ನಡಿಸದಿರಲು ಕಾರಣ ಗೊತ್ತಾಗಲಿಲ್ಲವು. ಈಗಲೂ ಸರ್ಕಾರದವರು ಪದಾರ್ಥಗಳ ಬೆಲೆಯನ್ನು ನಿರುಕು ಮಾಡಿ ಅದರಂತೆ ವರ್ತಕರು ಮಾರಬೇಕೆಂದು ಕಟ್ಟುಮಾಡದಿದ್ದಲ್ಲಿ ಬಡಜನರು ಜೀವಿಸುವುದು ಕಷ್ಟವಾಗುತ್ತದೆ.

ಮೈಸೂರು ನವಸೈನಿಕಪತ್ರಿಕೆ ಎಂಬ ಹೆಸರಿನಿಂದ ಒಂದು ತ್ರೈಮಾಸಪತ್ರಿಕೆಯು ಬೆಂಗಳೂರು ಸೆಂಟ್ರಲ್ ರಿಕ್ರೂಟ್‌ಮೆಂಟ್ ಕಮಿಟಿಯ ಆಶ್ರಯದಿಂದ ಪ್ರಕಟಿತವಾಗುವುದು. ಇದರ ಪ್ರಥಮ ಸಂಚಿಕೆಯು ಈಗತಾನೇ ನಮ್ಮ ಹಸ್ತಗತವಾಗಿರುತ್ತದೆ. ಈ ಪತ್ರಿಕೆಯಲ್ಲಿ ಹೊಸದಾಗಿ ಸೇನೆಗೆ ಸೇರುವವರ ವಿಚಾರದಲ್ಲಿ ನಮ್ಮ ಸರ್ಕಾರದವರು ಮಾಡುತ್ತಿರುವ ಪ್ರಯತ್ನವಿಶೇಷಗಳೂ, ನಮ್ಮ ದೇಶದ ಸೈನಿಕರ ಸಂಬಂಧವಾದ ವೃತ್ತಾಂತಗಳೂ ಇವರಲ್ಲಿ ಸನ್ಮಾನಿತರೂ, ವೀರರೂ, ಶೂರರೂ ಆದವರ ಭಾವಚಿತ್ರಗಳೊಡನೆ ಪ್ರತಿಯೊಬ್ಬರೂ ಸುಲಭವಾಗಿ ತಿಳಿಯುವಂತೆ ಕನ್ನಡ ಭಾಷೆಯಲ್ಲಿ ಪ್ರಕಟಿಸಲ್ಪಡುವುವು. ಇದರ ಬೆಲೆ ಪ್ರತಿಯೊಂದಕ್ಕೆ ಅರ್ಧಾಣೆ ಮಾತ್ರ. ಈ ಪ್ರಥಮ ಸಂಚಿಕೆಯಲ್ಲಿ ಶ್ರೀಮನ್ಮಹಾರಾಜರವರ ಮತ್ತೂ ಶ್ರೀಮದ್ಯುವರಾಜರವರ ಭಾವಚಿತ್ರಪಟವು ಹಾಗೂ, ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಕುದುರೆಗಳಮೇಲೆ ಕವಾತುಮಾಡುವುದು, ಬ್ರಿಟಿಷ್ ಸಾರ್ವಭೌಮರ ಸಹಾಯಾರ್ಥವಾಗಿ ಹೊರಟ ಮೈಸೂರು ದೇಶದ ಸೈನ್ಯಸಮೂಹ, ಮೈಸೂರು ಇ|| ಸ|| ಲ್ಯಾ|| ಮಿಲಿಟರಿ ಯೂನಿಫಾರಂಡ್ರೆಸ್ಸಿನ ಎಸ್ಕಾರ್ಟ್ ಮೊದಲಾಗಿ ೨೧ ಭಾವಚಿತ್ರಗಳು ಕೊಡಲ್ಪಟ್ಟಿರುವುದರಿಂದ ಪತ್ರಿಕೆಯು ಚಿತ್ತಾಕರ್ಷಕವಾಗಿದೆ. ಈ ಪತ್ರಿಕೆಯನ್ನು ಪ್ರತಿಯೊಬ್ಬರೂ ತರಿಸಿಕೊಂಡು ನೋಡಿ ಸೇನೆಗೆಸೇರಲು ಅರ್ಹರಾದ ಯೌವನಸ್ಥರನ್ನು ಪ್ರೋತ್ಸಾಹಿಸಿ ಕಳುಹಿಸಿ ತನ್ಮೂಲಕ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸುವವರಾಗಲೆಂದು ಕೋರುತ್ತೇವೆ. ಈ ನವಸೇನೆಗೆ ಈವರೆಗೆ ಮೈಸೂರು ಸೀಮೆಯ ೮ ಡಿಸ್ಟ್ರಿಕ್ಟುಗಳಿಂದಲೂ ಈ ಏಪ್ರಿಲ್ ತಾ|| ೧೩ ರ ವರೆಗೆ ಒಟ್ಟು ೧೩೦೦ ಮಂದಿ ಸೇರಿಸಲ್ಪಟ್ಟು ಅವರಲ್ಲಿ ೪೦೩ ಜನರು ಅಸಮರ್ಥರೆಂದು ತೆಗೆದುಹಾಕಲ್ಪಟ್ಟರು. ಇವರಲ್ಲಿ ಮಹಮ್ಮದೀಯರು ೩೩೦, ಮರಾಟಿಯವರು ೧೪೪, ಒಕ್ಕಲಿಗರು ೧೧೬, ಕ್ರೈಸ್ತರು ೯೫, ಪಂಚಮರು ೮೫, ಲಿಂಗಾಯತರು ೪೨, ಬ್ರಾಹ್ಮಣರು ೨೯, ಜಂಟೊಸರು ೨ ಮತ್ತೂ ಇತರ ಹಿಂದೂಗಳು ೪೧೬ ಈ ಪ್ರಕಾರ ಸೇರಿರುವರು.

ಮೈಸೂರು ಶ್ರೀಮನ್ ಮಹಾರಾಜ ಸಾಹೇಬ್ಬಹಾದೂರವರ ಸರ್ಕಾರೀ ಹುಕುಂ.

ಮೈಸೂರು ಪ್ರಜಾಪ್ರತಿನಿಧಿಸಭೆ.

ಈ ಕೆಳಗೆ ಕಂಡ ಕಾಗದಪತ್ರಗಳನ್ನು ಓದಲಾಯಿತು.—ಪ್ರಜಾಪ್ರತಿನಿಧಿ ಸಭೆಯ ರಚನಾವಿಧಾನ ಮತ್ತು ಕೆಲಸಕಾರ್ಯಗಳ ನಡವಳಿಕೆಗೆ ಸಂಬಂಧಪಟ್ಟ ನಿಯಮಗಳನ್ನು ಪ್ರಕಟಿಸಿ ಸಾದರಾದ 1915 ನೆ ಮಾರ್ಚಿ 22 ನೆ ಮರ್ಕುಂ ಜ. 10156—ಜ. ರಿ. 33-14-1 ನೆ ನಂಬರ್ ಇಸ್ತಿಹಾರ್ನಾಮೆಯ 2 ನೆಯ ನಿಯಮ. ಮೇಲಿನ ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಸಾದರಾದ 1918 ನೆ ಏಪ್ರಿಲ್ 22 ನೆ ಮರ್ಕುಂ ಕ್ಯಾಂಪ್ 8-58 ನೆ ನಂಬರ್ ಸರ್ಕಾರಿ ಹುಕುಂ.

ನಂ. ಜ. 14465-515-ಜ. ಮಿ. 599-17-1. ತಾ|| 27ನೆ ಏಪ್ರಿಲ್ 1918.

ಹುಕುಂ.—ಮೇಲೆ ಉದಹರಿಸಿದ ಇಸ್ತಿಹಾರ್ನಾಮೆಯೊಡನೆ ಪ್ರಕಟಿತವಾದ ಪ್ರಜಾಪ್ರತಿನಿಧಿ ಸಭೆಯ ರಚನಾವಿಧಾನಕ್ಕೂ ಕೆಲಸಕಾರ್ಯಗಳ ನಡವಳಿಕೆಗೂ ಸಂಬಂಧಪಟ್ಟ ನಿಯಮಗಳಲ್ಲೊಂದಾದ 2 ನೆಯ ನಿಯಮದ ಮೇರೆಗೆ ತಾಲ್ಲೂಕುಗಳಿಂದ ಮತ್ತು ಸಬ್‌ತಾಲ್ಲೂಕುಗಳಿಂದ ಮೆಂಬರುಗಳನ್ನು ಆರಿಸುವುದರ ಬಗ್ಗೆ ಚುನಾವಣೆಯು 3 ವರ್ಷಗಳಿಗೆ ಒಂದುಸಲ ನಡೆಯಬೇಕಾಗಿರುವುದರಿಂದಲೂ ಈಗಿನ ಈ ತರಹೆ ಮೆಂಬರುಗಳ ಮೆಂಬರುತನದ ಕಾಲಾವಧಿಯು ಈ ವರ್ಷಕ್ಕೆ ಪೂರೈಸುವುದರಿಂದಲೂ ಸಾಮಾನ್ಯತಃ ಮುಂದಿನ ಮೂರು ವರ್ಷದ ಬಗ್ಗೆ ಚುನಾವಣೆಯು ಈ ವರ್ಷದಲ್ಲಿ ನಡೆಯಬೇಕಾಗಿತ್ತು. ಆದರೆ 1918 ನೆ ಏಪ್ರಿಲ್ 22 ನೆ ತಾರೀಖಿನ ಸರ್ಕಾರಿಹುಕುಂ ಮೂಲಕ ಸದರಿ ಸಭೆಯ ರಚನಾ ವಿಧಾನದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುವುದರಿಂದಲೂ ಇದರಿಂದ ಸಭೆಯ ಸ್ವಭಾವವು ತುಂಬಾ ಬದಲಾಯಿಸುತ್ತದೆಯಾಗಿಯೂ ಈ ಬದಲಾವಣೆಗಳನ್ನು ಸಾಧ್ಯವಾದಮಟ್ಟಿಗೂ ಸಾವಕಾಶ ಮಾಡದೆ ಜಾರಿಗೆ ತರುವುದು ಅಪೇಕ್ಷಣೀಯವಾಗಿರುವುದರಿಂದಲೂ ಶ್ರೀಮನ್ಮಹಾರಾಜರವರ ಸರ್ಕಾರದವರು, ಹೊಸದಾಗಿ ಕ್ಲುಪ್ತಪಡಿಸಿರುವ ಅರ್ಹತೆಗಳಿಗನುಸಾರವಾಗಿ ಸಮ್ಮತಿ ಕೊಡುವವರ (ವೋಟರ್ಸ್) ಪಟ್ಟಿಗಳನ್ನು ತಯಾರ್ಮಾಡಲು ಅವಕಾಶ ಕೊಡುವುದಕ್ಕಾಗಿ ಸದರಿ ತ್ರೈವಾರ್ಷಿಕ ಸಂಬಂಧವಾದ ಚುನಾವಣೆ ಕೆಲಸವನ್ನು ಒಂದುವರ್ಷದವರೆಗೆ ನಿಲ್ಲಿಸಬೇಕೆಂದು ಭಾವಿಸಿ, ಅದರಂತೆಯೇ ತಾಲ್ಲೂಕು ಮತ್ತು ಸಬ್‌ತಾಲ್ಲೂಕುಗಳಿಗೆ ಪ್ರತಿನಿಧಿಗಳಾದ ಸಭೆಯ ಈಗಿನ ಮೆಂಬರುಗಳ ಮೆಂಬರುತನದ ಕಾಲವನ್ನು ಒಂದು ವರ್ಷದವರೆಗೆ ಹೆಚ್ಚಿಸಲು ಅಪ್ಪಣೆ ದಯಪಾಲಿಸಿರುತ್ತಾರೆ. ಇದನ್ನು ಅನುಸರಿಸಿ ಬದಲಾಯಿಸಿರುವ ಮುಂದಿನ ದಸರಾ ಸಭೆಯ ಕ್ಯಾಲೆಂಡರನ್ನು (ಕಾರ್ಯಕ್ರಮವನ್ನು) ಈ ಹುಕುಮಿಗೆ ಜಂಟಿಸಿರುತ್ತೆ.

ಸಿ. ಎಸ್. ಬಾಲಸುಂದರಂ ಅಯ್ಯರ್, ಸರ್ಕಾರದ ಚೀಫ್‌ಸೆಕ್ರೆಟರಿ.

1918ನೇ ಸಾಲಿನ ದಸರಾ ಕ್ಯಾಲೆಂಡರ್.

1. ಜ್ಯೇಷ್ಠ ಬಹುಳ ಅಷ್ಟಮಿಯೊಳಗಾಗಿ—1918ನೆ ಜುಲೈ 1 ರೊಳಗಾಗಿ—ಲೋಕಲ್ ಫಂಡ್ ಬೋರ್ಡುಗಳಿಂದಲೂ, ಮ್ಯುನಿಸಿಪಲ್ ಕೌನ್ಸಿಲುಗಳಿಂದಲೂ, ಅಂಗೀಕೃತವಾದ ಸಂಘಗಳಿಂದಲೂ, ಕಳುಹಿಸಲ್ಪಡುವ ಮೆಂಬರುಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರುಗಳಿಗೆ ತಿಳಿಯಪಡಿಸತಕ್ಕದ್ದು. 2. ಆಷಾಢ ಶುದ್ಧ ಚತುರ್ಥಿಯೊಳಗಾಗಿ—1918ನೆ ಜುಲೈ 12 ರೊಳಗಾಗಿ—(a) ತಾಲ್ಲೂಕು ಮೆಂಬರುಗಳೂ, ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳೂ, ಮ್ಯುನಿಸಿಪಲ್ ಕೌನ್ಸಿಲುಗಳೂ, ಅಂಗೀಕೃತವಾದ ಸಂಘಗಳೂ, ಮೈಸೂರಲ್ಲಿ ಮುಂದಿನ ಸಭೆಯ ಮೀಟಿಂಗಿನಲ್ಲಿ ಚರ್ಚೆಗೆ ತರಬೇಕೆಂದು ಅಪೇಕ್ಷಿಸುವ ವಿಷಯಗಳಮೇಲೆ ವಿಜ್ಞಾಪನೆಗಳನ್ನೂ ಸಲಹೆಗಳನ್ನೂ ಕುರಿತು ಮೆಮೋರಾಂಡಂಗಳನ್ನು ತಮ್ಮ ತಮ್ಮ ಡೆಪ್ಯುಟಿ ಕಮಿಷನರುಗಳಿಗೆ ಕಳುಹಿಸಬೇಕು. b) ಚುನಾಯಿಸಲ್ಪಟ್ಟ ಜನಗಳ ಮತ್ತು ಕಳುಹಿಸಲ್ಪಡುವ ಮೆಂಬರುಗಳ ಪಟ್ಟಿಗಳನ್ನು, ಎಷ್ಟುಮಂದಿ ಮೆಂಬರುಗಳು ಮೀಟಿಂಗಿಗೆ ಹೋಗುವ ಸಂಭವ ಉಂಟೆಂಬ ಸಮಾಚಾರದೊಡನೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಆಫೀಸಿಗೆ ಕಳುಹಿಸಿಕೊಡಬೇಕು. 3. ಆಷಾಢ ಬಹುಳ ಸಪ್ತಮಿಯೊಳಗಾಗಿ—1918ನೇ ಜುಲೈ 29 ರೊಳಗಾಗಿ—ಡೆಪ್ಯುಟಿ ಕಮಿಷನರುಗಳು ಸಂಸ್ಥಾನವಳಿ ಪಟ್ಟಿಯಲ್ಲಿ ಸೇರಿಸುವುದಕ್ಕಾಗಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಆಫೀಸಿಗೆ ಕಳುಹಿಸತಕ್ಕ ವಿಷಯಗಳನ್ನು ಆಖೈರಾಗಿ ಚುನಾಯಿಸುವುದಕ್ಕೋಸ್ಕರ ಡಿಸ್ಟ್ರಿಕ್ಟ್ ಕಸಬೆಗಳಲ್ಲಿ ಮೆಂಬರುಗಳ ಒಂದು ಮೀಟಿಂಗನ್ನು ನಡೆಸಬೇಕು. 4. ಶ್ರಾವಣ ಶುದ್ಧ ಚತುರ್ಥಿಯೊಳಗಾಗಿ—1918 ನೇ ಆಗಸ್ಟ 10 ರೊಳಗೆ—ಸಭೆಯಲ್ಲಿ ಚರ್ಚಿಸಲ್ಪಡತಕ್ಕ ವಿಷಯಗಳ ಒಟ್ಟು ಪಟ್ಟಿಗಳನ್ನು ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯದೊಡನೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯವರ ಆಫೀಸಿಗೆ ತಲುಪಿಸಬೇಕು. 5. ಆಶ್ವೀಜ ಶುದ್ಧ ಚತುರ್ಥಿಯೊಳಗಾಗಿ—1918 ನೇ ಅಕ್ಟೋಬರ್ 8 ರೊಳಗೆ—ಸಭೆಯ ಪ್ರಾರಂಭ ದಿನದಲ್ಲಿ ಒಪ್ಪಿಸಬೇಕೆಂದಿರುವ ಎಲ್ಲಾ ವಿಜ್ಞಾಪನಾಪತ್ರಿಕೆಗಳ ಅಡ್ವಾನ್ಸ್ ಕಾಪಿಗಳನ್ನು ತ್ರಿಪ್ರತಿಗಳಲ್ಲಿ 1918 ನೇ ಅಕ್ಟೋಬರ್ 8ನೇ ತಾರೀಖಿನ ದಿನದಲ್ಲಿ ಯಾ ಅದಕ್ಕಿಂತ ಮುಂಚಿತವಾಗಿ ಚೀಫ್ ಸೆಕ್ರೆಟರಿಯವರಿಗೆ ಸೇರುವಂತೆ ಕಳುಹಿಸಿಕೊಡಬೇಕು. (1917 ನೇ ಮೇ 10 ನೇ ಮರ್ಕುಂ ಜ. 14902-11—ಜ. ಮಿ. 422-16-2 ನೆಯ ನಂಬರ್ ಸರ್ಕಾರಿ ಹುಕುಮಿನ 4ನೆಯ ಪ್ಯಾರಾವನ್ನು ನೋಡತಕ್ಕದ್ದು). 6. ಆಶ್ವೀಜ ಶುದ್ಧ ತ್ರಯೋದಶಿ—1918ನೇ ಅಕ್ಟೋಬರ್ 17 ನೇ ತಾರೀಖು ಸಭೆಯ ಆರಂಭದ ದಿನ. 7. ಆಶ್ವೀಜ ಶುದ್ಧ ಚತುರ್ದಶಿ—1918 ನೇ ಅಕ್ಟೋಬರ್ 18ನೇ ತಾರೀಖು ಸಭೆಯ ಮೀಟಿಂಗುಗಳು ಪ್ರಾರಂಭವಾಗುವುವು. 8. ಆಶ್ವೀಜ ಶುದ್ಧ ಚತುರ್ದಶಿ—1918 ನೇ ಅಕ್ಟೋಬರ್ 18 ನೇ ತಾರೀಖು ಸಭೆಯ ಮೀಟಿಂಗಿನಲ್ಲಿ ಚರ್ಚೆಗೆ ತರಬೇಕೆಂದು ಅಪೇಕ್ಷಿಸುವ ಸಪ್ಲಿಮೆಂಟಲ್ ವಿಷಯಗಳನ್ನು 1918ನೇ ಅಕ್ಟೋಬರ್ 18 ನೇ ತಾರೀಖು ಮಧ್ಯಾಹ್ನ 12 ಘಂಟೆಯೊಳಗಾಗಿ ಚೀಫ್ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು. (1915 ನೇ ನವಂಬರ್ 24ನೇ ತಾರೀಖಿನ ಸರ್ಕಾರೀ ಜ. 6395-444—ಜ. ಮಿ 311-15-1ನೇ ನಂಬರು ಸರ್ಕಾರಿ ಹುಕುಮನ್ನು ನೋಡತಕ್ಕದ್ದು).

ಪತ್ರವ್ಯವಹಾರ.

ಶ್ರೀ ಬಸವಜಯಂತುತ್ಸವವು.

ಮೈಸೂರು.

ಇಲ್ಲಿಯ ಪೇಟೆಯ ವೀರಶೈವ ಮಹಾಜನರು ಕಳೆದ ಭಾನುವಾರ ಪ್ರಾತಃಕಾಲ ಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನವನ್ನು ಸಾರಣೆ ಕಾಣೆಗಳಿಂದಲೂ ಕದಳೀ ಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಿ ಬಸವೇಶ್ವರಮೂರ್ತಿಗೆ ಮಹಾ ರುದ್ರಾಭಿಷೇಕ ಪೂಜೆಯನ್ನೂ ಮಧ್ಯಾಹ್ನದಲ್ಲಿ ಸರ್ವರಿಗೂ ಫಲಾಹಾರಾದಿಗಳನ್ನೂ ನಡೆಯಿಸಿ ರಾತ್ರಿಯಲ್ಲಿ ನೂತನವಾಗಿಡಿಸಲ್ಪಟ್ಟಿರುವ ವಿದ್ಯುಚ್ಛಕ್ತಿಯ ದೀಪಗಳನ್ನು ಹೊತ್ತಿಸಿ ಸುತ್ತೂರು ವೇ|| ಗುರುಶಾಂತ ಶಾಸ್ತ್ರಿಗಳಿಂದ ಬಸವಪುರಾಣಶ್ರವಣವನ್ನು ಮಾಡಿಸಿ ಮಂಗಳಾರತಿಯಾದನಂತರ ಸ್ವಾಮಿಯ ಪ್ರಸಾದವಿನಿಯೋಗದಿಂದ ಮಹಾಜನಗಳನ್ನು ಸತ್ಕರಿಸಿದರು. ಆ ದಿವಸದ ಕಾರ್ಯದಲ್ಲಿ ಮ|| ಗಳಾದ ಬಳೆ ಹುಚ್ಚೀರಪ್ಪನವರು, ಬಳೆ ಮಹಾದೇವಪ್ಪನವರು, ಗುರುಕಾರ್ ಮುರುಡಪ್ಪನವರು, ಹಾವಣ್ಣನವರು ಮುಂದಾಳುಗಳಾಗಿದ್ದು ಬಹಳ ಸಮರ್ಪಕತೆಯಿಂದ ನೆರವೇರಿಸಿದುದು ವಂದನೀಯವಾಗಿದೆ.

ಉತ್ಸವಾಭಿಮಾನಿ.

ಕಾನಕಾನಹಳ್ಳಿ

ಕಾನಕಾನಹಳ್ಳಿಯಲ್ಲಿ ಇದೇಶ್ರೀ ಕಾಳಯುಕ್ತಿನಾಮಸಂವತ್ಸರದ ವೈಶಾಖ ಶುದ್ಧ ಬಿದಿಗೆ ಭಾನುವಾರ ಶ್ರೀಬಸವೇಶ್ವರಸ್ವಾಮಿಯವರ ಜಯಂತ್ಯುತ್ಸವವನ್ನು ಅತಿ ವಿಜೃಂಭಣೆಯಿಂದ ನಡೆಯಿಸಲಾಯ್ತು.

ಈ ಊರಿನ ಮ|| ರಾ|| ಗಳಾದ ಗುರುಕಾರು ಚನ್ನಬಸಪ್ಪನವರು ಶೆಟ್ರು ಚನ್ನಪ್ಪನವರು ಪಂಡಿತ ನಂಜುಂಡಪ್ಪನವರು ಗಂದಿಗೆ ಅಂಗಡಿ ಮುದ್ದಪ್ಪನವರು ಮ|| ಷಾವುಅಂಗಡಿ ಪುಟ್ಟಣ್ಣಯ್ಯನವರು ಅಡಿಕೆ ಸಿದ್ದಪ್ಪನವರು ಯಂ. ಪುಟ್ಟಣ್ಣನವರು ಮ|| ಬೈರನಹಳ್ಳಿ ಮರಿಯಪ್ಪನವರು ಸಿಂಗಣ್ಣರಾಚಣ್ಣ ವೀರಭದ್ರಪ್ಪನವರು ದೊಡ್ಡಮನೆ ಪುಟ್ಟಣ್ಣಯ್ಯನವರು ಮುಂತಾದ ವೀರಶೈವ ಮಹಾಶಯರುಗಳು ಭಕ್ತಿವಾತ್ಸಲ್ಯದಿಂದ ಈ ವೈಶಾಖ ಶುದ್ಧ ಬಿದಿಗೆ ಭಾನುವಾರ ಪ್ರಾತಃಕಾಲ 6 ಘಂಟೆಯಿಂದ ಸ್ವಾಮಿಯವರಿಗೆ ಮಹಾರುದ್ರಾಭಿಷೇಕ, ಬಸವೇಶ್ವರ ಸಹಸ್ರನಾಮ ಪಾರಾಯಣ, ಬಿಲ್ವಾರ್ಚನೆ ಮಧ್ಯಾಹ್ನ ಬಸವೇಶ್ವರ ಪುರಾಣಶ್ರವಣ, ಸಂಜೆ ಶಿವಪೂಜೆ ತದಿಗೆ ಸೋಮವಾರ ನಂದೀಧ್ವಜ ಸಮೇತವಾದ ಬಿರುದುಗಳೊಡನೆ ಉತ್ಸವವನ್ನು ಅತಿ ವಿಜೃಂಭಣೆಯಿಂದ ನಡೆಯಿಸಿದರು. ಇದೇರೀತಿಯಾಗಿ ಪ್ರತಿ ಸಂವತ್ಸರ ವೈಶಾಖ ಶುದ್ಧ ಬಿದಿಗೆಯಲ್ಲಿ ದ್ವಿತೀಯ ಶಂಭುವಾದ ಶ್ರೀ ಬಸವೇಶ್ವರ ಸ್ವಾಮಿಯವರ ಜಯಂತ್ಯುತ್ಸವವನ್ನು ಮಹಾಭಿಮಾನಿಗಳಾದ ಸರ್ವರೂ ಚ್ಯುತಿಯಿಲ್ಲದೆ ನಡೆಯಿಸಿಕೊಂಡು ಬರುವರೆಂಬುದಾಗಿ ನಿರೀಕ್ಷಿಸುತ್ತೇವೆ.

ಓರ್ವ ಮತಾಭಿಮಾನಿ.

ಯುದ್ಧದ ಫಂಡಿಗೆ ಸಹಾಯ.

ಹಾರೋಹಳ್ಳಿ ಗೋಪಾಲರಾಜ ಅರಸಿನವರ ನಾಟಕ ಕಂಪನಿಯವರು ಸುಮಾರು ಎರಡು ತಿಂಗಳಿಂದ ಈ ನೀಲಗಿರಿ ಜಿಲ್ಲಾ ಗೂಡಲೂರು ತಾಲ್ಲೂಕಿನಲ್ಲಿ, ನೆಲ್ಯಾಳ, ಈ ಪ್ರಾಂತಗಳಲ್ಲಿ ಅನೇಕ ನಾಟಕಗಳನ್ನಭಿನಯಿಸಿ ನೆಲ್ಯಾಳಂ ಶ್ರೀ|| ರಾಣಿಯವರ ಮೆಚ್ಚುಗೆಗೂ ಪಾತ್ರರಾಗಿ ಈಗ ಪಂದಲೂರಲ್ಲಿ ಆಡುತ್ತಿರುವರು. ಈ ನಾಟಕಾಧ್ಯಕ್ಷರು ಬಹುಕಾಲದಿಂದಲೂ ಈ ವೃತ್ತಿಯಲ್ಲಿ ಖ್ಯಾತರಾಗಿದ್ದು ಕಾಲಯೋಗದಿಂದೀಚೆಗೆ ಅಪಾರ ನಷ್ಟಕಷ್ಟಗಳನ್ನು ಹೊಂದಿ ಕೆಲಕಾಲದಿಂದ ವಿಶ್ರಾಂತರಾಗಿದ್ದು ಈಗತಾನೆ ಕೆಲವು ಪಾತ್ರಗಳಂ ಶೇಖರಿಸಿ ಬಂದಿರುವುದರಿಂದ ಇವರ ಮೆಹನತ್ತು ಬಹಳವಾಗಿದೆ. ಯುದ್ಧದ ಫಂಡಿಗೆ ಸಹಾಯಮಾಡಬೇಕೆಂದು ಈ ತಾಲ್ಲೂಕುತಹಸೀಲ್‌ದಾರ್ರು ಮೊದಲಾದ ಮಹನೀಯರು ಪ್ರೋತ್ಸಾಹಿಸಿದಂತೆ ಕಳೆದ ಫೆಬ್ರವರಿ ತಾ|| ೨೩ನೇ ತಾ|| ಶನಿವಾರ ಏಕಾದಶಿ ರಾತ್ರಿ ಇವರು "ರುಕ್ಮಾಂಗದ ಚರಿತ್ರೆ" ಎಂಬ ನಾಟಕವನ್ನಾಡಿ ಎಲ್ಲರನ್ನೂ ಸಂತೋಷಪಡಿಸಿದರು. ಇದರಲ್ಲಿ ಮನುಜನು ಧರ್ಮಾಧರ್ಮಗಳ ಮಧ್ಯೆ ಸಿಲುಕಿ ಹೇಗೆ ಬಾಧ್ದಡುವನೆಂಬುದನ್ನೂ, ಪ್ರಾರಬ್ಧನು ತತ್ಕಾಲಚಾಂಚಲ್ಯದಿಂದ ಸೋತರೂ ಧರ್ಮದಮೇಲೆಯೇ ದೃಷ್ಟಿಯಿಟ್ಟು ಸಕಲ ಕಷ್ಟಗಳನ್ನೂ ಅನುಭವಿಸಿ ಪಾರಾಗಿ ಹೇಗೆ ಮೋಕ್ಷಕ್ಕೆ ಪಾತ್ರನಾಗುವನೆಂಬ ಸಿದ್ಧಾಂತವನ್ನೂ ರುಕ್ಮಾಂಗದ ಪಾತ್ರವನ್ನು ವಹಿಸಿದ್ದ ಗೋಪಾಲರಾಜ ಅರಸಿನವರು ಚನ್ನಾಗಿ ವ್ಯಕ್ತಪಡಿಸಿದರು. ಮೋಹಿನೀ ವೇಷಧಾರಿಯಾಗಿದ್ದ ನಾರಿಯು ರಾಜನನ್ನು ಅಧರ್ಮಕ್ಕೆಳೆಯಲು ಪಟ್ಟ ಸಾಹಸವೂ, ತೋರಿಸಿದ ಹಾವಭಾವವಿಲಾಸಗಳೂ ಜನಸಾಮಾನ್ಯಕ್ಕೆ ತೃಪ್ತಿಕರವಾಗಿದ್ದುವು. ರಾಜನ ಮಹಿಷಿಯು ಪತಿಯನ್ನು ಧರ್ಮದ ಕಡೆಗೆ ಎಳೆಯುತ್ತಿದ್ದುದೂ ಸವತಿಯಾದ ಮೋಹಿನಿಯನ್ನು ಹೀಯಾಳಿಸಿ ಕಡೆಗೆ ಸ್ವಂತ ಕುವರನಂ ಬಲಿಕೊಡಲು ಒಪ್ಪಿದುದೂ, ಸಾಧ್ವೀಮಣಿಯ ಸುಗುಣಗಳನ್ನು ಪ್ರತ್ಯಕ್ಷತಃ ತೋರಿಸಿದಂತಿದ್ದುವು. ಕಡೆಗೆ ಸುಕುಮಾರನಂ ಛೇದಿಸುವ ವಿಷಾದಘಟ್ಟದಲ್ಲಿ ಕಮಲಾಸನನ ಆಗಮನ, ಆತನ ಮೆಚ್ಚುವಿಕೆ ಇವುಗಳಿಂದ ಸುಕುಮಾರನ ಪಟ್ಟಾಭಿಷೇಕವಾಗಿ ನಾಟಕವು ಸಕಲರ ಕರಾಸ್ಫಾಲನಗಳಿಂದ ಸಮಾಪ್ತಿ ಹೊಂದಿತು. ಅಂತ್ಯದಲ್ಲಿ ನಾಟಕಾಧ್ಯಕ್ಷರಾದ ಮ|| ಗೋಪಾಲರಾಜ ಅರಸಿನವರು ಸಭಿಕರನ್ನು ವಂದಿಸಿ ತಮ್ಮ ಶಕ್ತ್ಯನುಸಾರ ಸಾರ್ವಭೌಮ ಸರ್ಕಾರಕ್ಕೆ ಯುದ್ಧದ ಫಂಡಿಗಾಗಿ ಆದಿನದುತ್ಪತ್ತಿಯ ಅರ್ಧಾಂಶವನ್ನರ್ಪಿಸಿರುವುದರಿಂದ ಸ್ವೀಕರಿಸಬೇಕೆಂತಲೂ, ಇದೇ ರೀತಿಯಾದ ಅಭಿಮಾನವನ್ನು ಮುಂದೆಯೂ ತೋರಿಸಿ ಸಂಘವನ್ನು ಮುಂದಕ್ಕೆ ತರಬೇಕೆಂತಲೂ ಪ್ರಾರ್ಥಿಸಿದರು. ಇದಕ್ಕೆ ಸಭಿಕರ ಪರವಾಗಿ ನೆಲ್ಲಾಳದ ಅರಮನೆ ಏಜಂಟರಾದ ಮ|| ಸುಬ್ಬರಾಯರು ಮ|| ಅರಸಿನವರನ್ನು ವಂದಿಸಿ ಸ್ವದೇಶ ಸ್ವಭಾಷಾ ಸೇವೆಗಳಂ ಮಾಡುವುದು ಪ್ರತಿ ಒಬ್ಬನ ಕರ್ತವ್ಯವೆಂತಲೂ, ಅದನ್ನನುಸರಿಸಿ ಅರಸಿನವರು ಸ್ವಭಾಷಾ ಸೇವೆಯನ್ನು ಮಾಡುತ್ತಿರುವುದು ಸ್ತುತ್ಯವಾದುದೆಂತಲೂ, ಯುದ್ಧದ ಫಂಡಿಗೆ ಇವರು ಮಾಡಿದ ಸಹಾಯವು ಮೈಸೂರು ದೇಶೀಯರು ರಾಜಭಕ್ತಿನಿರತರೆಂಬುದನ್ನು ದೃಢೀಕರಿಸಿತೆಂತಲೂ, ಧರ್ಮದ ಕಡೆ ಹೆಚ್ಚು ಗಮನವಿಟ್ಟು ಈ ದಿನ ಅಭಿನಯಿಸಿದಂತೆ ಮುಂದೆಯೂ ಮಾಡುತ್ತ ನಾಟಕಾವಲೋಕನದಿಂದ ಜನರಿಗೆಲ್ಲ ಧರ್ಮಬುದ್ಧಿಯು ನೆಲೆಗೊಳ್ಳಲು ಸಾಧಕವಾಗುವಂತೆ ಮಾಡಬೇಕೆಂತಲೂ ಹೇಳಿದರು. ಕಡೆಗೆ ರೆ|| ಇನ್ಸ್‌ಪೆಕ್ಟರೂ ಮ|| ಕೃಷ್ಣಯ್ಯರೂ ಮೊದಲಾದ ಮಹನೀಯರು ಮಾಡಿದ ಮೆಹನತ್ತಿಗಾಗಿ ಅವರನ್ನು ವಂದಿಸಿ, ಸಾರ್ವಭೌಮರಾದ ಜಾರ್ಜ್ ಪ್ರಭುಗಳಿಗೆ ಜಯವಾಗಲೆಂದು ಕೋರಿ ಎಲ್ಲರೂ ಸಂತೋಷದಿಂದ ತೆರಳಿದರು.

ಪ್ರತ್ಯಕ್ಷದರ್ಶಿ.

ಗ್ರಾಮನೈರ್ಮಲ್ಯಕ್ಕೆ ಆತಂಕ.

ವಾಚಕ ಮಹಾಶಯರೇ,

ಪರಸ್ಥಳ ಸಂಚಾರವಿಲ್ಲದ ಅವಿದ್ಯಾವಂತರೇ ಹೆಚ್ಚು ಗ್ರಾಮವಾಸಿಗಳಾಗಿರುವುದರಿಂದ ನೈರ್ಮಲ್ಯವು ಅನೇಕ ಗ್ರಾಮಗಳಲ್ಲಿ ತಲೆಯೆತ್ತಲವಕಾಶವಿಲ್ಲದಂತಾಗಿರುತ್ತೆ. ಇದನ್ನಾಲೋಚಿಸಿಯೇ ದಯಾಳುಗಳಾದ ನಮ್ಮ ಸರ್ಕಾರದವರು ಸರ್ವರ ವಿದ್ಯಾಭಿವೃದ್ಧಿಗೆ ಅನೇಕಾನೇಕ ವಿಧವಾಗಿ ಸಹಾಯಮಾಡುತ್ತ ನೈರ್ಮಲ್ಯಕ್ಕೂ ತಕ್ಕ ತಿಳಿವಳಿಕೆಯನ್ನು ಸೂಚಿಸುತ್ತಲೇ ಇರುತ್ತಾರೆ. ಈಗಿನ ನವೀನ ಪದ್ಧತಿಯನ್ನಾಚರಿಸಿ, ನೈರ್ಮಲ್ಯವನ್ನು ಪ್ರಬಲಿಸುವುದು ಗ್ರಾಮನಿವಾಸಿಗಳ ಕರ್ತವ್ಯವಾಗಿರುತ್ತದೆ.

ಸರ್ಕಾರದವರ ಸೂಚನೆಯಿಂದಲೂ ವಿದೇಶ ಸಂಚಾರಾನುಭವವುಳ್ಳ ವಿದ್ಯಾವಂತರ ಉಪನ್ಯಾಸಗಳಿಂದಲೂ, ವರ್ತಮಾನ ಪತ್ರಿಕೆಗಳ ಪ್ರಕಟನೆಯಿಂದಲೂ ಈಗೀಗ ಕೆಲವು ಗ್ರಾಮಗಳಲ್ಲಿ ನೈರ್ಮಲ್ಯವೆಂಬ ಬೀಜವು ಅಂಕುರಿಸಿ ಚಿಗುರುತ್ತಿರುವಲ್ಲಿ "ಚಿಗುರನ್ನು ಅಗಿದು ತಿನ್ನಲು ಹೋತನು ನೆಗೆಯಿತು" ಎಂಬಂತಾಗಿರುತ್ತದೆ. ಅದರೇನು ಬೀಜಸ್ಥಾಪಕರಾದ ನಮ್ಮ ಸರ್ಕಾರದವರು ಫಲಾಪೇಕ್ಷೆಯಿಲ್ಲದೆ ಸಸ್ಯವನ್ನು ಹೋತನಿಗೆ ಆಹಾರವಾಗಿ ಕೊಡುವರೆ? ತಿಳುವಳಿಕೆಯುಳ್ಳ ಗ್ರಾಮನಿವಾಸಿಗಳು ಹೋತನಹಾವಳಿಗೆ ಹೆದರಿ ನೈರ್ಮಲ್ಯವೆಂಬೀ ಸಸ್ಯನಾಶಕ್ಕೆ ಕಾರಣಭೂತರಾಗುವರೆ? ಎಂದಿಗೂ ಇಲ್ಲ. ಉದಾಹರಣೆಗಾಗಿ—ಮಾಗಡಿ ತಾಲ್ಲೂಕು ಕುದೂರುಹೋಬಳಿ ಕಣನೂರುಗ್ರಾಮವು ಬಹುಪುರಾತನ ಗ್ರಾಮವಾಗಿರುವುದರಿಂದ ನೇರವಾದ ಬೀದಿಗಳಿರಲೂ, ಮನೆಗಳೊಳಗೆ, ವಾಯು ಬೆಳಕೂ, ಪ್ರವೇಶಿಸಲೂ ಅನುಕೂಲವೇ ಇಲ್ಲ. ಗ್ರಾಮತಾಣದ ಪೂರ್ವಕ್ಕೆ ಕೆರೆಯೂ ದಕ್ಷಿಣಕ್ಕೆ ತಿಪ್ಪೆಗುಂಡಿಗಳು ಎಲ್ಲೆಯಾಗಿಯೂ ಕೆರೆಯ ಅಂಗಳ

ತಲೂ ತಗ್ಗಾದ ಪ್ರದೇಶದಲ್ಲಿ ಕೆರೆ ಇರುವುದರಿಂದಲೂ, ಕೋಟೆ ಕಂದಕವೂ, ತಿಪ್ಪೆಹಳ್ಳಗಳೂ, ಊರಿನಸುತ್ತಲೂ ಇರುವುದರಿಂದಲೂ, ಮಳೆಗಾಲದಲ್ಲಿ ಜೌಗುವ್ಯಾಪಿಸಿ ಸೊಳ್ಳೆ, ಸೊಣ, ಮುಂತಾದ ಕ್ರಿಮಿಗಳಿಗೆ ತೌರೂರಾಗಿ ಜನ, ಜಾನುವಾರುಗಳಿಗೆ ಉಂಟಾಗುತ್ತಿರುವ ಕಷ್ಟನಷ್ಟವನ್ನು ವಿವರಿಸಲಸಾಧ್ಯವಾಗಿರುತ್ತದೆ. ಈ ಗ್ರಾಮವು ಸುಮಾರು ಹತ್ತು ಎಕರಾ ಪ್ರದೇಶವುಳ್ಳದ್ದಾಗಿ ಒಂದು ನೂರುಮನೆಗಳಿಂದ ಕೂಡಿರುತ್ತೆ. ಪ್ರತಿಯೊಂದು ಮನೆಯಲ್ಲಿ ಎರಡು ಮೂರು ಸಂಸಾರಗಳು ವಾಸಿಸುವುದರಿಂದ ಜನ ಜಾನುವಾರುಗಳು ಏಕಗೃಹಕೃತ್ಯವನ್ನನುಭವಿಸಬೇಕಾಗಿರುತ್ತದೆ. ಇಂಥ ಇಕ್ಕಟ್ಟಿನ ಸಂಸಾರಗಳು ಬೇರೆಮನೆಗಳನ್ನು ಕಟ್ಟಿಕೊಳ್ಳಲು ಗ್ರಾಮಠಾಣದಲ್ಲಿ ಅನುಕೂಲವಾದ ಖಾಲೀಜಮೀನೇ ಇಲ್ಲ. ಇಂಥಾ ಕಷ್ಟನಿವಾರಣೆಗೆ ತಕ್ಕ ಪರಿಹಾರವನ್ನು ಕಲ್ಪಿಸಿಕೊಳ್ಳಲು ಗ್ರಾಮನಿವಾಸಿಗಳಲ್ಲಿ ತಿಳುವಳಿಕೆಯುಳ್ಳ ಕೆಲವರು ಪ್ರಯತ್ನಪಟ್ಟರು. ಈ ಆಲೋಚನೆಯು ಗ್ರಾಮಕಮಿಟಿಯ ಪ್ರೆಸಿಡೆಂಟರಾಗಿದ್ದವರ್ಗೇನೆ ಅಸಮ್ಮತ. ಏಕೆಂದರೆ ಕಮಿಟಿ ಎಂಬುದೇ ತಮ್ಮ ಗೌರವನಾಶಕ್ಕೆ ಕಾರಣವೆಂದು ಸೂಚಿಸುವರು. ಹೇಗೆಂದರೆ, ದನಕಾಯುವುದಕ್ಕೆ ಯೋಗ್ಯರಲ್ಲದಂಥವರನ್ನೆಲ್ಲ ನಮ್ಮ ಜೊತೆಯಲ್ಲಿ ಸೇರಿಸಿಕೊಂಡು ಅವರಿಗೆ ಜ್ಞಾನಾರ್ಜನೆಯನ್ನುಂಟುಮಾಡಿದರೆ ನಮಗೆ ಗೌರವವೆಲ್ಲಿ ಅವರಿರುವ ಸ್ಥಿತಿಯಲ್ಲಿಯೇ ಇರಬೇಕು, ಎಂದು ಹೇಳುತ್ತಾರೆ. ಸ್ಕೂಲನ್ನ ಅಭಿವೃದ್ಧಿಸ್ಥಿತಿಗೆ ತಂದರೆ ಎಲ್ಲರೂ ವಿದ್ಯಾವಂತರಾಗುತ್ತಾರೆ. ನಾವು (ಬ್ರಹ್ಮಜ್ಞಾನಂತು ಬ್ರಾಹ್ಮಣ) ಎಂಬುದರಿಯದೆ ಬ್ರಾಹ್ಮಣರು ನಮಗೆ ಹೊರತು ಅನ್ಯರಿಗೇಕೆ ? ಆದ್ದರಿಂದ ಇದರ ಏಳಿಗೆಗೆ ಅವಕಾಶಕೊಡಬಾರದೆಂದು ಪ್ರಯತ್ನಿಸುತ್ತಾರೆ. ಇದಕ್ಕೆ ನಿದರ್ಶನವೇನೆಂದರೆ-ಹಾಲಿಸ್ಕೂಲ್ಮಾಸ್ಟರು ನಿಷ್ಪಕ್ಷಪಾತಿಗಳಾಗಿ ಎಲ್ಲರ ಪ್ರೀತಿಯುಕ್ತತೆಯಿಂದ ಸ್ಕೂಲನ್ನು ಅಭಿವೃದ್ಧಿಸ್ಥಿತಿಗೆ ತಂದಿರುತ್ತಾರೆ. ಇಂಥವರಿಗೆ ಈ ಪ್ರೆಸಿಡೆಂಟರು ದುರ್ಬೋಧನೆಯನ್ನು ಮಾಡಲು ಅದಕ್ಕವರು ಸಮ್ಮತಿಸದೆ ಇದ್ದುದರಿಂದ ಅವರ ಫಿರ್ಯಾದುತಂದಿರುತ್ತಾರೆ. ಸ್ಕೂಲುಸ್ಥಾಪನಾರಂಭದಿಂದಲೂ ಈವರೆಗೆ ಬಂದ ಮಾಸ್ಟರುಗಳಮೇಲೆಲ್ಲಾ ದ್ವೇಷಿಸಿರುವದೇ ನಿದರ್ಶನವಾಗಿದೆ. ಅಲ್ಲದೆ ಯಾವಗ್ರಾಮಾಭಿವೃದ್ಧಿಕಾರ್ಯವೂ ಇವರಿಗಾಗದು. ಇದಕ್ಕಾಗಿ ಗ್ರಾಮಸ್ಥರು ಇವರನ್ನೇ ಪ್ರೆಸಿಡೆಂಟ್ ಪದವಿಯಿಂದ ನಿವೃತ್ತರನ್ನಾಗಿ ಮಾಡಿದರು. ಇವುಗಳಂತಿರಲಿ. ಈ ಗ್ರಾಮವನ್ನು ನೈರ್ಮಲ್ಯಸ್ಥಿತಿಗೆ ತರಬೇಕಾದರೆ ಹಾಲಿ ಗ್ರಾಮವನ್ನು ಪೂರ್ತಾಬಿಟ್ಟು ಬೇರೆ ಅನುಕೂಲವಾಗಿರುವ ಪ್ರದೇಶದಲ್ಲಿ ಗ್ರಾಮ ಬಡಾವಣೆ ಮಾಡಬೇಕೆಂಬ ಉದ್ದೇಶದಿಂದ ನಮ್ಮ ಅಹವಾಲನ್ನು ಘನವನ್ನು ಹೊಂದಿದ ಗವರ್ನಮೆಂಟಿನವರಲ್ಲಿ ಪ್ರಾರ್ಥಿಸಿಕೊಳ್ಳಲಾಗಿ ಗ್ರಾಮಸ್ಥಿತಿ, ಗ್ರಾಮ ಬಡಾವಣೆಯ ಸ್ಥಳ ಇವುಗಳನ್ನು ಪರೀಕ್ಷಿಸಲು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು ದಯಮಾಡಿಸಿದ್ದರು. ಆಗ್ಗೆ ತಮ್ಮ ಅಭಿಮತವನ್ನವರಿಗೆ ಈ ಗೌರವಶಾಲಿಗಳು ಹೇಳಿಕೊಳ್ಳಲಾಗಿ ಅದನ್ನಾಲಿಸಿ ಮೆ|| ಆಫೀಸರವರು ಹೀಗೆ ಹೇಳುವುದುಚಿತವಲ್ಲವೆಂದು ಬುದ್ಧಿವಾದವನ್ನು ಸೂಚಿಸಿದರು. ಆದರೂ ಈ ಗೌರವಶಾಲಿಗಳು ತಮ್ಮ ಪೂರ್ವದ ನಡೆನುಡಿಗಳನ್ನು ಇನ್ನೂ ಪ್ರಬಲಸ್ಥಿತಿಗೆ ತರುವುದರಲ್ಲಿರುತ್ತಾರೆ. ವಿದ್ಯಾವಂತರಾಗಿಯೂ ಈಗಿನ ನಾಗರಿಕತೆಯನ್ನರಿತ ಇಂಥ ಮಹನೀಯರೇ ಹೀಗಾದಲ್ಲಿ ಅವಿದ್ಯಾವಂತರಾಗಿ ನೈರ್ಮಲ್ಯವನ್ನರಿಯದವರು ಹೇಗೆ ನೈರ್ಮಲ್ಯವೆಂಬೀ ಸುಪಥಸಂಚಾರಕ್ಕೆ ಆಸೆಪಡುವರು ? ನೈರ್ಮಲ್ಯಾಭಿಮಾನಿಗಳಿಗೋಸ್ಕರ ಈ ಮಹನೀಯರು "ಶ್ರೇಯಾಂಸಿಬಹುವಿಘ್ನಾನಿ" [illegible] ಆರ್ಯೋಕ್ತಿಗೆ ಶ್ರೇಯಸ್ಸನ್ನು ಬಯಸುತ್ತಿರುವುದಕ್ಕಾಗಿ [illegible] "ಸರ್ವೇಜನಾಸ್ಸುಖಿನೋಭವಂತು" ಎಂಬ ಆರ್ಯೋಕ್ತಿಗೆ ಸಹಾಯದಾತರಾದ ನಮ್ಮ ಪ್ರಭುವರ್ಯರವರಿಗೂ ಪ್ರಭುಪ್ರತಿನಿಧಿಗಳಿಗೂ ಸರ್ವಜನ ಹಿತೈಷಿಗಳಿಗೂ ವಂದನೆಯನ್ನು ಸಮರ್ಪಿಸುತ್ತಾ ಲೇಖವನ್ನಿಲ್ಲಿಗೆ ಮುಗಿಯಿಸಿರುತ್ತೇನೆ. ಒಬ್ಬ ಗ್ರಾಮವಾಸಿ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿ

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನದಿಂದ ಸಮಸ್ತ ಭಕ್ತಾದಿಗಳಿಗೆ ತಿಳಿಯಪಡಿಸುವುದೇನೆಂದರೆ:—

ಶ್ರೀಮಹಾಸ್ವಾಮಿಯು ತಾರೀಖು 13-5-1918 ಕ್ಕೆ ದಾವಣಗೆರೆ ತಾ|| ಮಾಯಕೊಂಡ ಮುಕ್ಕಾಮಿಗೆ ಚಿತ್ತೈಸೋಣವಾಗುತ್ತೆ. ಮಾಯಕೊಂಡದಲ್ಲಿ ಪೋಸ್ಟಾಫೀಸ್ ಮತ್ತು ರೈಲ್ವೆ ಸ್ಟೇಶನ ಇರುತ್ತವೆ ಪತ್ರ ಬಿನ್ನೈಸಿಕೊಳ್ಳತಕ್ಕವರು ಮಾಯಕೊಂಡ ಮುಕ್ಕಾಮಿಗೆ ಬಿನ್ನೈಸಿಕೊಳ್ಳುವದು.

ತಾ|| 5—5—1918. } ಏಜಂಟ್.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘದ ಪ್ರಕಟನೆ.

ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಅಭ್ಯಾಸಮಾಡುವ, ಈ ಸಾಲಿನಲ್ಲಿ ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗುವ ಮತ್ತು ಹೈಸ್ಕೂಲ್ ಅಥವಾ ಮೇಲ್ಪಟ್ಟ ತರಗತಿಗಳಲ್ಲಿ ಓದುವ ನಗರ ಡಿವಿಜನ್ ವೀರಶೈವ ವಿದ್ಯಾರ್ಥಿಗಳ ಅನುಕೂಲ್ಯಕ್ಕಾಗಿ ಮೇಲ್ಕಂಡ ಸಂಘದವರು ಈ ಮಾಹೆ ತಾ|| 26 ರ ಲಾಗಾಯ್ತು ಶಿವಮೊಗ್ಗ ಟವನ್ನಿನಲ್ಲಿ ಸ್ಟುಡೆಂಟ್ಸ್‌ಹೋಮನ್ನು ಏರ್ಪಡಿಸುವವರಾಗಿದ್ದಾರೆ. ಸದರಿ ಹೋಮಿಗೆ ಸೇರಲು ಇಷ್ಟವುಳ್ಳ ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ಫಾರಮ್ಮಿನಲ್ಲಿ ಸಂಘದ ಸೆಕ್ರೆಟರಿಯವರಿಗೆ ಕೂಡಲೇ ಬರೆದುಕೊಳ್ಳತಕ್ಕದ್ದು. ಕೇವಲ ಬಡವಿದ್ಯಾರ್ಥಿಗಳು ಸಂಘದ ಕಮಿಟಿ ಮೆಂಬರುಗಳ ಶಿಫಾರಸ್ ಪಡೆದಲ್ಲಿ ಅವರ ಭೋಜನದ ವೆಚ್ಚದಲ್ಲಿ ಸಾಧ್ಯವಾದಷ್ಟು ರಿಯಾಯಿತಿ ತೋರಿಸಲ್ಪಡುತ್ತೆ. ಭೋಜನದ ಖರ್ಚು ಪ್ರಾಯಶಃ ಮಾಹೆಯಾನಾ ೬ ರೂಪಾಯಿಗೆ ಜಾಸ್ತಿಯಾಗಲಾರದು.

ಅಪ್ಲಿಕೇಶನ್ ಫಾರಂ ನಮೂನೆ.

1. ವಿದ್ಯಾರ್ಥಿಯ ಹೆಸರು ಮತ್ತು ತಂದೆಯ ಹೆಸರು.
2. ವಯಸ್ಸು.
3. ವಾಸಸ್ಥಳ.
4. ಕಡೆಯಲ್ಲಿ ಓದುತ್ತಿದ್ದ ಸ್ಕೂಲ್ ಮತ್ತು ತರಗತಿ (ರ್‍ಯಾಂಕು ಸಹ
5. ತಂದೆ ಅಥವಾ ಪೋಷಕರ ಕಸಬು. ನಮೂದಿಸತಕ್ಕದ್ದು)
6. ಸಂಘದ ಕಮಿಟಿ ಮೆಂಬರ ಅಭಿಪ್ರಾಯ.

ಶಿವಮೊಗ್ಗ,
ತಾ|| 8—5—1918. } H. G. Basavappa,
ಸೆಕ್ರೆಟರಿ.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ !

(೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಛಾಯಾಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ. ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ - ಭಗವದ್ಗೀತೆ - ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಅಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ. ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

2 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜನ್ಮೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‍ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿನಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ಯನಬೇನೆ, ಹುರುಳುಳಜ್ಜ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗಬೇಕೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೇರು ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಕ್ಕ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳ ಕಮಿಶನ್ ಕೊಡುತ್ತದೆ. ಅದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿ ಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊಂಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದ್ದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
6 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷ ಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ದರ್ಜನ್ 1 ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕೊ.,
22 ಸಾಹುಕಾರಪೇಟೆ, ಮದ್ರಾಸ್.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ತಾ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು !

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲಿನಬೇ. ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲಿನಬೇ. ಕಿಮ್ಮ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-ಇನಬೇ. ಕಿಮ್ಮ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾ ರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ ! ಚನ್ನಾಗಿ ಲಕ್ಷದಲ್ಲಿಡಿರಿ !

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
25 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೮ ನೆಯ ಇಸವಿ ಮೇ ತಾ|| ೧೯ ರಿಂದ ೧೯೧೮ ನೆಯ ಮೇ ತಾ|| ೨೬ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ವೈಶಾಖ ಶು|| ನವಮಿಯಿಂದ ವೈಶಾಖ ಶು|| ಪೌರ್ಣಿಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ವೃಷ
19	ಭಾನು	ನವಮಿ	27-57	ಪುಬ್ಬ	46-7	6
20	ಸೋಮ	ದಶಮಿ	32-51	ಉಬ್ಬ	52-31	7
21	[1]ಮಂಗಳ	ಏಕಾದ	38-0	ಹಸ್ತ	59-19	8
22	ಬುಧ	ದ್ವಾದಶಿ	43-4	ಚಿತ್ತ	60	9
23	ಗುರು	ತ್ರಯೊ	47-31	ಚಿತ್ತ	5-35	10
24	[2]ಶುಕ್ರ	ಚತು	51-7	ಸ್ವಾತಿ	11-12	11
25	[3]ಶನಿ	ಪೌರ್ಣ	53-42	ವಿಶಾಖಾ	15-58	12

(1) ಸರ್ವತ್ರೈಕಾದಶಿ, ವರದರಾಜ ಜಯಂತಿ. (2) ಸರ್ವತ್ರ ಶ್ರೀ ನೃಸಿಂಹಜಯಂತಿ. (3) ಅರ್ಧನಾರೀಶ್ವರವ್ರತಂ, ಶ್ರೀರಂಗಪಟ್ಟಣದಲ್ಲಿ ಸಂಗಮಂಗಲದ ಯೋಗಾನೃಸಿಂಹಸ್ವಾಮಿ ರಥಃ, ಅನಂತಪುರದಲ್ಲಿ ಶ್ರೀರಂಗನಾಥಸ್ವಾಮಿ ರಥಃ.

ಮೈಸೂರ್: ವೈ. ವಿರೂಪಾಕ್ಷಪ್ಪನವರಿಂದ ಶ್ರೀ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಷೂರಪುರೀತಾರಾ ಪರಮಾಧಿಗತರಾಜಮಂಡಲಹಿತೈಷಾ । ಘನಪಕ್ಷಕೈತಾವತಾರಾ ಪಕ್ಷ್ಯಜ್ಞ ನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ ಲಿಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

REGISTERED NO M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಮೇ ತಾರೀಖು ೨೬ ನೆಯ ಭಾನುವಾರ. (ಸಂಚಿಕೆ ೨೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆಯ ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿನ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳ ಶಿಷ್ಯರಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕುಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು

MADRAS
MAIL
WATCH
WITH 15
PRESENTS

ಲೋಕಪ್ರಸಿದ್ಧಿಯಾಗುವದಾಗಿ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— [illegible] 1, [illegible] 1, ಸೆಂಟ್ ಬಾಟಲ್ 1, [illegible] 1, ಗಡಿಯಾರದ ಸರಪಣಿ 1, [illegible] 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ [illegible] 1, [illegible] 1, [illegible] 4, [illegible] 1, ರೋಲ್ ಗೋಲ್ಡ್ ಎಂಬ ಶೃಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.

ವಿಳಾಸ—ವಿ. ಎ. ಕೃಷ್ಣ ಅಂಡ್ ಕೊ.,
30 [illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೯—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 24

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ್ಯ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹಾಮಾರಿಗೂ ವೈದ್ಯರ ಸಮಯವನ್ನು ಕಾದು ನೋಡಿಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ವಾರ್ಧಕ್ಯವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಆರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತನ್ನ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ [illegible] ವೈದ್ಯಶಾಲೆಯ [illegible] ರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. [illegible] ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ [illegible] ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ [illegible] ನಾನು [illegible] ಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ [illegible] ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. [illegible] ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ [illegible] ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
8 ಆನಂದ ಬುಕ್‌ಡಿಪೋ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 32

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಸ್ಥಾಪಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಕ್ಷ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ತಾ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು !

೧. ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲಿನಬೇ. ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲಿನಬೇ. ಕಿಮ್ಮ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-ಇನಬೇ. ಕಿಮ್ಮ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾ ರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ ! ಚನ್ನಾಗಿ ಲಕ್ಷದಲ್ಲಿಡಿರಿ !

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
26 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮೇ ತಾ|| ೨೬ ನೆಯ ಭಾನುವಾರ.

ಮರಿಮಲ್ಲಪ್ಪನವರ ಹೈಸ್ಕೂಲು.

ಇದರ ಸಂಬಂಧವಾದ ಚರ್ಚೆಯು ಈಗ ವಿಶೇಷವಾಗಿ ನಡೆಯುತ್ತಿದೆ. ಈ ಧರ್ಮದ ಟ್ರಸ್ಟಿಗಳ ಮೀಟಿಂಗು ಮೊನ್ನೆ ವಾರದಲ್ಲಿ ನಡೆಯಿತು. ಈ ಸಂಬಂಧವಾಗಿ ಎಲ್ಲೆಲ್ಲಿ ಯಾವಯಾವ ಸಭೆಗಳೂ ಚರ್ಚೆಗಳೂ ನಡೆದರೂ ಗೂಢಚಾರರನ್ನಿಟ್ಟು ತಿಳಿದುಕೊಂಡು ಹೊರಹಾಕಲುಜ್ಜುಗಿಸಿರುವ ಸಂಪದಭ್ಯುದಯ ಪತ್ರಿಕೆಯು, ಹೈಸ್ಕೂಲಿನೊಳಗೇ ಕೂಡಿದ್ದ ಟ್ರಸ್ಟಿಗಳ ಸಭೆಯ ನಡವಳಿಕೆಯನ್ನು ಮಾತ್ರ ಪ್ರಕಟಿಸದಿರುವುದು ಆಶ್ಚರ್ಯ. ಆ ಮೀಟಿಂಗಿನಲ್ಲಿ ನಡೆದ ಚರ್ಚೆಗಳೊಳಗೆ ಇದುವರೆಗೆ ನಡೆದಿರುವ ಲೆಕ್ಕಗಳ ಪರಿಶೋಧನೆಗಾಗಿ ಟ್ರಸ್ಟಿಗಳಲ್ಲೊಬ್ಬರಾದ ಮ|| ಲಿಂಗಪ್ಪಯ್ಯನವರನ್ನು ನಿಯಮಿಸಬೇಕೆಂಬ ವಿಷಯವೊಂದಾಗಿದ್ದಿತು. ಅದಕ್ಕೆ ಅನೇಕರು ಒಪ್ಪದೆ ಹೋದುದರ ಮೇಲೆ ಗೌರ್ನಮೆಂಟಿಗೆ ಬರೆದು ಸಮರ್ಥರಾದವರೊಬ್ಬರನ್ನು ಕರೆತರಿಸಿ ಆಡಿಟ್ ಮಾಡಿಸಬೇಕೆಂದು ನಿರ್ಧರವಾಯಿತೆಂದು ಕೇಳುತ್ತೇವೆ. ಬಹುಕಾಲದ ಲಕ್ಷಾಂತರ ರೂ. ಗಳ ಆದಾಯವ್ಯಯವನ್ನು ಪರಿಶೋಧಿಸುವುದಕ್ಕೆ ಒಬ್ಬಾನೊಬ್ಬನನ್ನು ನಿಯಮಿಸುವುದಕ್ಕಿಂತ ಸಮರ್ಥರಾದ ಇಬ್ಬರನ್ನಾದರೂ ಗೊತ್ತುಪಡಿಸಿ ಪರಿಶೋಧಿಸುವುದೇ ಒಳ್ಳೆಯದು. ಇದಕ್ಕಾಗಿ ಮಾಡಲ್ಪಡುವ ಧನವ್ಯಯವು ಎಷ್ಟಾದರೂ ಅದು ದುರ್ವಿನಿಯೋಗವಾಗುವುದಿಲ್ಲ. ನಿಷ್ಪಕ್ಷಪಾತವಾಗಿಯೂ ಸಾಮರ್ಥ್ಯದಿಂದಲೂ ಪರಿಶೋಧನೆ ನಡೆಯಿಸತಕ್ಕವರನ್ನು ಆರಿಸುವುದು ಆವಶ್ಯಕ.

ಮೀಟಿಂಗಿನಲ್ಲಿ ಚರ್ಚೆಗೆ ಬಂದಿದ್ದ ವಿಷಯಗಳಲ್ಲಿ ಮ|| ವೆಂಕಟಕೃಷ್ಣಯ್ಯನವರಿಗೆ ೧೦೦ ರೂ ಗಳ ಪೆನ್ಷನ್ ಕೊಡಬೇಕೆಂಬುದೂ ಒಂದಾಗಿದ್ದಿತು. ಇದನ್ನು ಮ|| ವೆಂಕಟಕೃಷ್ಣಯ್ಯನವರೇ ಪ್ರೆಸಿಡೆಂಟರಿಗೆ ಬರೆದುಕೊಂಡಿದ್ದರಂತೆ. ಅದಕ್ಕೂ ದಾರಿಯು ಸುಗಮವಾಗಿ ಬರಲಿಲ್ಲವೆಂದು ಕೇಳುತ್ತೇವೆ. ಈಗ ಅವರಿಗೆ ಸಲ್ಲುತ್ತಿದ್ದ ೨೦೦ ರೂ. ವೇತನದಲ್ಲಿ ೧೫೦ ರೂ. ಗಳಿಗೆ ಒಬ್ಬ ಸಮರ್ಥ ಮುಖ್ಯೋಪಾಧ್ಯಾಯರನ್ನು ನಿಯಮಿಸಿಕೊಂಡು, ಉಳಿದ ೫೦ ರೂ. ಗಳನ್ನು ಇವರಿಗೆ ಪೆನ್ಷನ್ ರೂಪವಾಗಿ ಕೊಡಬಹುದೆಂದು ಅಭಿಪ್ರಾಯಪಟ್ಟರಂತೆ. ಮ|| ವೆಂಕಟಕೃಷ್ಣಯ್ಯನವರು ಸ್ಕೂಲಿನ ಅಭಿವೃದ್ಧಿಗಾಗಿ ಬಹಳ ಶ್ರಮಪಟ್ಟವರಾಗಿರಬಹುದು. ಆದರೆ ಪ್ರತಿಫಲವಿಲ್ಲದೆ ಅವರೇನೂ ಮಾಡಿರುವಂತಿಲ್ಲ. ಅವರ ಶ್ರಮಕ್ಕಿಂತಲೂ ಅತಿಶಯವಾಗಿಯೇ ಈ ಸ್ಕೂಲಿನ ಮೂಲಕವಾಗಿ ಅವರು ಪ್ರಯೋಜನವನ್ನು ಪಡೆದಿರುವರೆಂಬುದರಲ್ಲಿ ಸಂಶಯವೇನೂ ಇಲ್ಲ. ಇದನ್ನು ಅವರ ಆತ್ಮನೇ ಬಲ್ಲುದು. ನ್ಯಾಯ ಧರ್ಮಾನುಸಾರವಾಗಿ ಅವರು ತಮ್ಮ ೫೫ ನೆ ವಯಸ್ಸಿನಲ್ಲೇ ಈ ಶಾಲಾ ಮುಖ್ಯೋಪಾಧ್ಯಾಯತ್ವದಿಂದ ನಿವೃತ್ತರಾಗಿ ಮತ್ತೊಬ್ಬ ಸಮರ್ಥನನ್ನು ಆ ಸ್ಥಾನಕ್ಕೆ ನಿಯಮಿಸಿದ್ದರೆ ಈ ಸ್ಕೂಲು ಇನ್ನೂ ಪ್ರಖ್ಯಾತವಾಗಿಯೂ ಪ್ರಯೋಜಕವಾಗಿಯೂ ಪರಿಣಮಿಸುತ್ತಲಿದ್ದಿತು. ಹಾಗೆ ಮಾಡದೆ ಈಚೆಗೆ ೨೦ ವರ್ಷಕಾಲ ಈ ಸ್ಕೂಲಿನ ವೇತನದಿಂದ || ಲಕ್ಷ ರೂ. ಗಳವರೆಗೆ ಅನುಭವಿಸಿದ್ದಾರೆ. ನಿಸ್ಪೃಹರೂ ವೈರಾಗ್ಯಚಕ್ರವರ್ತಿಗಳೂ ಎನಿಸಿಕೊಳ್ಳುವ ಅವರು ಇದರ ಮೇಲೂ ತಮಗೆ ಪೆನ್ಷನ್ ಆಗಬೇಕೆಂದು ಹೇಗೆ ಅಪೇಕ್ಷಿಸಿದರೋ ಗೊತ್ತಾಗಲಿಲ್ಲ. ಅಲ್ಲದೆ ಇವರೊಬ್ಬರಿಗೆ ಮಾತ್ರ ಪೆನ್ಷನ್ ಕೊಡುವುದು ಸಾಧ್ಯವೆ? ಇವರಂತೆ ಕೆಲಸ ಮಾಡಿದ ಸಹಾಯೋಪಾಧ್ಯಾಯರೆಲ್ಲಾ ಅದೇ ಮೇಲುಪಂಕ್ತಿಯನ್ನನುಸರಿಸಿ ತಮಗೂ ಪೆನ್ಷನನ್ನು ಸಲ್ಲಬೇಕೆಂದು ಕೇಳಿದರೆ ಆಗ ಟ್ರಸ್ಟಿಗಳು ಏನು ಸಮಾಧಾನ ಹೇಳುವರು? ಈ ಪೆನ್ಷನ್ ಪರಂಪರೆಯನ್ನು ತೆರುವುದಕ್ಕೆ ಬಂಡವಾಳವೆಲ್ಲಿರುವುದು? ವಿಧಿಗಳಲ್ಲಿ ಅವಕಾಶವೆಲ್ಲಿರುವುದು? ಇದನ್ನೆಲ್ಲಾ ಟ್ರಸ್ಟಿಗಳೂ ಶಾಲೆಯ ಧರ್ಮಾಭಿಮಾನಿಗಳೂ ಮ|| ವೆಂಕಟಕೃಷ್ಣಯ್ಯನವರೂ ಸಹ ಪರ್ಯಾಲೋಚಿಸಬಾರದೆ? ಇದುವರೆಗೆ ಮ|| ವೆಂಕಟಕೃಷ್ಣಯ್ಯನವರು ಶಾಲಾಭಿವೃದ್ಧಿಗಾಗಿ ಮಾಡಿದ ಸಾಹಸಕ್ಕೆ ಅವರ ಪ್ರಖ್ಯಾತಿಯೇ ಬೋನಸ್ಸಾಗಿರುವುದು. ಮತ್ತೂ ಈ ಧರ್ಮಕಾರ್ಯನಿರ್ವಾಹದ ಲೋಪಾಲೋಪ ವಿವೇಚನೆಗಾಗಿ ಇಷ್ಟರಲ್ಲೇ ನಡೆಯಬಹುದಾಗಿರುವ ಕಾರ್ಯಭಾಗಗಳ ಪರಿಣಾಮದಿಂದ ಸಿದ್ಧವಾಗುವ ಫಲವೂ ಕೂಡ ಅವರ ಚಿರಕಾಲಿಕ ಕೀರ್ತಿಗೆ ದ್ಯೋತಕವಾದ ಸುಪ್ರತಿಷ್ಠೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ನಿರ್ಣಯವಾದ ಬಳಿಕ ಅದರ ಮೇಲೆ ಯಾವ ತೆರದ ಬಹುಮಾನ ಪ್ರತಿಫಲಗಳನ್ನು ಮಾಡುವುದಕ್ಕಾದರೂ ಯೋಚಿಸಹುದು. ಇಲ್ಲವೆ ಅವರಿಂದ ಉಪಕೃತರಾಗಿರುವವರೆಲ್ಲರೂ ಚಂದಾ ಮೂಲಕ ಹಣವನ್ನು ಕೂಡಿಸಿ ಬಹುಮಾನವಾಗಿ ಸಮರ್ಪಿಸಬಹುದು.

ಸದ್ಯಃ ಇವರನ್ನು ಹೆಡ್ಮಾಸ್ಟರ್ ಕೆಲಸದಿಂದ ನಿವೃತ್ತಿಗೊಳಿಸಿ ೧೫೦ ರೂ. ಗಳ ವೇತನದಲ್ಲಿ ಒಬ್ಬ ಸಮರ್ಥರಾದ ಮುಖ್ಯೋಪಾಧ್ಯಾಯರನ್ನು ಈ ಶಾಲೆಗೆ ಕಳುಹಿಸಿಕೊಡಬೇಕೆಂದು ಇನ್ಸ್ಪೆಕ್ಟರ್ ಜನರಲ್ಲರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಟ್ರಸ್ಟಿಗಳ ಮೀಟಿಂಗಿನಲ್ಲಿ ನಿರ್ಧರವಾಗಿರುವುದೆಂದು ಕೇಳುತ್ತೇವೆ. ಇದು ಪ್ರಶಸ್ತವಾದ ಏರ್ಪಾಡೇ ಸರಿ. ಧರ್ಮಕಾರ್ಯನಿರ್ವಾಹ ಭಾರವನ್ನು ಹೊತ್ತ ಟ್ರಸ್ಟಿಗಳು ಮೊದಲಿಂದಲೂ ಇಷ್ಟು ಚಟುವಟಿಕೆಯನ್ನು ವ್ಯಕ್ತಪಡಿಸುತ್ತಿದ್ದರೆ ಆ ಶಾಲೆಯ ಕಾರ್ಯಗಳ ವಿಷಯದಲ್ಲಿ ಯಾವ ದೂರಿಗೂ ಅವಕಾಶವಿರುತ್ತಿರಲಿಲ್ಲ. ಈಗಲಾದರೂ ಅದರ ಅವ್ಯವಸ್ಥೆಯ ನಿವಾರಣೆಗೆ ದಾರಿಯುಂಟಾದುದಕ್ಕಾಗಿ ನಾವು ಇದರ ಮೂಲಭೂತರನ್ನೆಲ್ಲಾ ಈ ಮೂಲಕವಾಗಿ ಅಭಿನಂದಿಸುತ್ತೇವೆ.

ಬೆಲೆಹೆಚ್ಚಿರುವುದರ ಕಷ್ಟ.

ಯುದ್ಧವು ನಡೆಯುತ್ತಿರುವ ಯೂರೋಪುಖಂಡದಲ್ಲಿ ಪದಾರ್ಥಗಳ ಬೆಲೆಯು ಹೆಚ್ಚಿಯೂ, ಎಷ್ಟು ಹಣ ಕೊಟ್ಟರೂ ಕೆಲ ಸಾಮಗ್ರಿಗಳು ದೊರೆಯದೆಯೂ, ಅನೇಕ ಪದಾರ್ಥಗಳನ್ನು ಮಿತಿಯಿಂದ ಉಪಯೋಗಿಸಬೇಕೆಂಬ ನಿರ್ಬಂಧವುಂಟಾಗಿಯೂ ಇರುವುದೆಂಬ ಕಷ್ಟಗಳನ್ನು ನಾವು ಇದುವರೆಗೆ ಪತ್ರಿಕೆಗಳ ಮೂಲಕ ಓದಿ ಕೇಳುತ್ತಿದ್ದೆವು. ಈಗ ಪೂರ್ವದೇಶೀಯರಾದ ನಾವು ಆ ಕಷ್ಟಗಳನ್ನು ಪ್ರತ್ಯಕ್ಷವಾಗಿ ಅನುಭವಿಸುವ ಹೊತ್ತು ಬಂದಿದೆ. ಜೀವನಕ್ಕೆ ಅವಶ್ಯಕವಾದ ಪ್ರತಿಯೊಂದು ಪದಾರ್ಥದ ಬೆಲೆಯೂ ದಿನದಿನಕ್ಕೆ ಮಿತಿಮೀರಿಹೋಗುತ್ತಿದೆ. ಸಾಮಾನ್ಯಜನರು ಕಾಲಯಾಪನೆಮಾಡುವುದು ಬಹಳ ಕಷ್ಟಕ್ಕೆ ಬಂದಿದೆ. ವಿದೇಶದಿಂದ ಬರಬೇಕಾದ ಸಾಮಗ್ರಿಗಳಿಗೆ ಬೆಲೆಯು ಹೆಚ್ಚುವುದಕ್ಕೆ ಕಾರಣವಿರುವುದರಿಂದ ಅವು ತಗ್ಗಾಗುವುದು ಸಹಜ. ಆದರೆ ಸ್ವದೇಶದಲ್ಲೇ ಬೆಳೆಯುತ್ತಿರುವ ಪದಾರ್ಥಗಳಿಗೂ ಇಷ್ಟೊಂದು ಬೆಲೆ ಹೆಚ್ಚಿರುವುದಕ್ಕೆ ಕಾರಣವಿರುವುದಿಲ್ಲ. ಧಾನ್ಯಾದಿಗಳು ಬೆಳೆಯದೆ ಕ್ಷಾಮದಿಂದ ಪದಾರ್ಥಗಳ ಬೆಲೆ ಹೆಚ್ಚಿದ್ದರೆ ಆಕ್ಷೇಪಮಾಡಲು ಅವಕಾಶವಿರುತ್ತಿರಲಿಲ್ಲ. ಧಾನ್ಯಗಳು ಸಮೃದ್ಧವಾಗಿ ಪೇಟೆಗಳಿಗೆ ಬರುತ್ತಿದ್ದರೂ ಅವುಗಳ ಬೆಲೆಯನ್ನು ಮಾತ್ರ ಹೆಚ್ಚಿಸುತ್ತಿರುವುದು ನ್ಯಾಯವಾಗಿರುವುದಿಲ್ಲ. ಯಾವ ಕಷ್ಟವನ್ನಾದರೂ ಪ್ರಜೆಗಳು ಸೈರಿಸಿಕೊಂಡಾರು. ಆಹಾರಾಭಾವದ ಮೂಲಕ ಉಂಟಾಗುವ ಸಂಕಟವನ್ನು ಸೈರಿಸಲಾರರು. “ಜೀವನಂನಿಂದೆಯಾದುದು ಬಂಕ” ಎಂಬ ವಚನದಂತೆ ಜೀವನಕ್ಕೆ ಕಟ್ಟಾಗುವಂತಾದರೆ ಬಡಜನರು ಶಾಪಭೀತಿ ದಂಡಭಯ ಮೊದಲಾದವುಗಳನ್ನೆಲ್ಲಾ ಮೂಲೆಗೊತ್ತರಿಸಿ ತಮ್ಮ ಉದರರಕ್ಷಣೆಗಾಗಿ ಎಂಥ ದೌರ್ಜನ್ಯವನ್ನಾಚರಿಸುವುದಕ್ಕೂ ಸಿದ್ಧರಾಗುವುದು ಸಹಜವಾಗಿರುತ್ತದೆ. ಇದರಿಂದ ದೇಶದಲ್ಲಿ ಅಶಾಂತಿಯು ಹಬ್ಬುವುದಕ್ಕೆ ಮಾರ್ಗವಾಗುವುದು. ಅದು ಪ್ರಭುತ್ವದವರಿಗೂ ಹಿತವಲ್ಲ; ಪ್ರಜೆಗಳಿಗೂ ಹಿತವಲ್ಲ. ಅದುಕಾರಣವೇ ಡಿಲ್ಲಿಯ ಯುದ್ಧಮಹಾಸಭೆಯಲ್ಲಿ ಆಹಾರ್ಯಪದಾರ್ಥಗಳ ಬೆಲೆಯನ್ನು ಒಂದು ಕ್ರಮದಲ್ಲಿರುವಂತೆ ಮಾಡುವುದಕ್ಕೆ ಪ್ರಯತ್ನಿಸುವುದಾಗಿ ವೈಸ್ರಾಯರಿಂದ ತಿಳಿಯಿಸಲ್ಪಟ್ಟಿತು. ಆದರೆ ಆ ಪ್ರಯತ್ನವು ಸಾವಕಾಶವಿಲ್ಲದೆ ಬೇಗನಾಗಿ ಮಾಡಲ್ಪಡಬೇಕಾದುದಾಗಿದ್ದರೂ ಇನ್ನೂ ಎಲ್ಲ ಕಡೆಯೂ ಆಚರಿಸಲ್ಪಟ್ಟಿರುವುದಿಲ್ಲ. ಪ್ರತಿದಿನದ ಕಷ್ಟವನ್ನು ಬಡಜನರು ಸೈರಿಸಲಾರರು. ಬೊಂಬಾಯಿ, ಬಂಗಾಳ, ಬಿಹಾರು ಮೊದಲಾದ ಪ್ರಾಂತಗಳಲ್ಲಿ ಹಲವುಕಡೆ ಹೊಟ್ಟೆಗಿಲ್ಲದ ಜನರು ಸೂರೆಮಾಡಿದರೆಂಬ ವಾರ್ತೆಗಳನ್ನು ಕೇಳಿದ್ದೆವು. ಈಗ ಮದ್ರಾಸಾಧಿಪತ್ಯದಲ್ಲೂ ಇಂಥ ಘೋರಕೃತ್ಯಗಳು ಆರಂಭವಾಯಿತೆಂದು ಕಳೆದವಾರದ ಸುದ್ದಿಗಳಿಂದ ಗೊತ್ತಾಗುತ್ತದೆ. ಇಂಥ ವಿಷಮಸ್ಥಿತಿಯು ತಮ್ಮಲ್ಲಿ ಪ್ರಾಪ್ತವಾಗದಿರುವಂತೆ ಮುಂದಾಗಿ ಎಚ್ಚತ್ತು ನಡೆಯುವುದು ಪ್ರತಿಯೊಂದು ಪಟ್ಟಣದವರಿಗೂ ಆವಶ್ಯಕರ್ತವ್ಯವಾಗಿದೆ. ಪ್ರಭುತ್ವದವರೂ ಸಹ ವಿಳಂಬನಮಾಡದೆ ಪ್ರಮುಖವರ್ತಕರನ್ನು ಬರಮಾಡಿಕೊಂಡು ಮುಖ್ಯವಸ್ತುಗಳ ಬೆಲೆಯನ್ನು ನಿರ್ಣಯಮಾಡಿ, ಅದಕ್ಕೆ ಮೀರಿದ ಬೆಲೆಗೆ ಯಾರೂ ಮಾರಕೂಡದೆಂದು ಕಟ್ಟುಮಾಡುವುದು ಅತ್ಯವಶ್ಯಕವಾಗಿದೆ. ವರ್ತಕರು ಲಾಭದ ಆಸೆಯಿಂದ ಧಾನ್ಯಗಳನ್ನು ಕೊಂಡು ತುಂಬಿಟ್ಟು, ಸಹೋದರ ಪ್ರಜೆಗಳು ಹಸಿದಿದ್ದರೂ ಕನಿಕರವಿಲ್ಲದೆ ಹೆಚ್ಚು ಬೆಲೆಗೆ ಮಾರಬೇಕೆಂದು ಸಂಕಲ್ಪಿಸಿಕೊಳ್ಳುವುದು ಧರ್ಮವಲ್ಲ. ಭೂತದಯಾಧರ್ಮಗಳ ಮೂಲಕವಲ್ಲದೆ ಮಾನವನು ಅರ್ಥತೃಷ್ಣೆ ನಿರ್ದಯಗಳಿಂದ ಮುಂದಕ್ಕೆ ಬರುವುದು ಅಸಂಭವ. ಮುಂದಾಲೋಚನೆಯುಳ್ಳ ಧರ್ಮಾತ್ಮರಾದ ವರ್ತಕರಾರೂ ಇಂಥ ಸಮಯವನ್ನೇ ತಮ್ಮ ಸಂಪಾದನೆಗೆ ಸುಸಮಯವೆಂದು ತಿಳಿದುಕೊಳ್ಳಲಾರರು. ಅತ್ಯಾಶೆಯುಳ್ಳ ವರ್ತಕರು ಹಲವರು ಹೀಗೆ ಮಾಡಿ ಮೂಲಕ್ಕೇ ಹಾನಿಮಾಡಿಕೊಳ್ಳುತ್ತಿರುವುದನ್ನು ಪದೇಪದೇ ನಾವೇ ಕೇಳುತ್ತಿದ್ದೇವೆ. ಕಪಟದಿಂದ ಯಾರಾದರೂ ವರ್ತಕರು ಬೆಲೆಗಳನ್ನು ನಿಷ್ಕಾರಣವಾಗಿ ಹೆಚ್ಚಿಸುತ್ತಿದ್ದರೆ ಪ್ರಭುತ್ವದವರು ದರ್ಪದಿಂದ ಈ ವಿಷಯದಲ್ಲಿ ಪ್ರವರ್ತಿಸಿ ಅವರ ಆಟವನ್ನು ಸಾಗಗೊಡದಂತೆ ಮಾಡಬೇಕು. ಮುಖ್ಯಮುಖ್ಯಸ್ಥಳಗಳಲ್ಲಿ ಬೇಗನೆ ಇದಕ್ಕೆ ಏರ್ಪಾಟನ್ನು ಮಾಡಬೇಕು. ಪ್ರಜಾಪ್ರಮುಖರೂ ಸಹ ತಮ್ಮ ಕರ್ತವ್ಯವನ್ನು ತಿಳಿದು ಪ್ರಭುತ್ವದವರಿಗೆ ಸಹಾಯಮಾಡುವುದು ಅತ್ಯಾವಶ್ಯಕವಾಗಿದೆ. ಸ್ಥಳಿಕ ಸರ್ಕಾರಗಳು ಇಂಥ ವಿಷಮಸಮಯದಲ್ಲೂ ಕೈಕಟ್ಟಿಕೊಂಡು ಕುಳಿತಿರುವುದು ಚೋದ್ಯವಾಗಿದೆ. ಪ್ರಭುತ್ವದವರು ತಮ್ಮ ಅನೇಕ ಶಾಖೆಗಳಲ್ಲಿ ಸಣ್ಣ ಸಂಬಳದ ಕೆಲಸಗಾರರಿಗೆಲ್ಲಾ ಅಲೋಯನ್ಸನ್ನು ಕೊಡುವುದಕ್ಕೆ ಏರ್ಪಡಿಸಿಕೊಂಡಿದ್ದಾರೆ. ಸರ್ಕಾರದ ಸಂಬಳವುಳ್ಳವರಿಗೆ ನಿಯತವಾಗಿ ತಿಂಗಳಿಗೆ ಅಷ್ಟು ಹಣವಾದರೂ ಕೈಸೇರುತ್ತದೆ. ಆದರೆ ರೈತಾಪಿ ಜನರಲ್ಲೂ ಇತರ ಜನರಲ್ಲೂ ಲಕ್ಷಾಂತರ ಬಡಬಗ್ಗರು ನಿಯತವಾದ ಜೀವಿಕೆಯೂ ಬೆಳಸೂ ಇಲ್ಲದೆ ಹಂಬಲಿಸುತ್ತಿದ್ದಾರೆ. ಇವರ ಯೋಗಕ್ಷೇಮವನ್ನೆಲ್ಲಾ ಯಾರೂ ವಿಚಾರಿಸಬಾರದೆ? ಬೆಂಗಳೂರು ಮೈಸೂರಿನಂಥ ಮುಖ್ಯಪಟ್ಟಣಗಳಲ್ಲೇ ಅಕ್ಕಿಯು ಪಲ್ಲಕ್ಕೆ ೨೦ ರಿಂದ ೩೦ ರೂ. ಗಳವರೆಗೆ ಮಾರಲ್ಪಡುತ್ತಲಿದೆ. ರಾಗಿಯ ಬೆಲೆಯು ೧೦ ರೂ. ಜೋಳದ ಬೆಲೆ ೧೨ ರೂ. ಆಗಿದೆ. ರೂ. ಗೆ ೩-೪ ಮಣ ಸಿಗದೆಯೂ ೬-೮ ಆಣೆಗೊಂದು ಸೀಸೆಯಂತೆ ಸೀಮೆಯೆಣ್ಣೆಯೂ ಮಾರಲ್ಪಡುತ್ತಿವೆ. ಉಳಿದ ಒಟ್ಟಿಬರಿ ಮೊದಲಾದ ಪದಾರ್ಥಗಳ ಬೆಲೆಯ ವಿಷಯವೂ ಹೀಗೆಯೇ ಆಗಿದೆ. ತಿಂಗಳಿಗೆ ೪-೬ ರೂ. ಆದಾಯವೂ ಇಲ್ಲದ ಬಡಜನರು ಇಂಥ ಕಾಲದಲ್ಲಿ ಹೇಗೆ ಬದುಕಬೇಕು? ಹೊಟ್ಟೆಗಿಲ್ಲದ ಕಷ್ಟವನ್ನು ಅವರು ಹೇಗೆ ಎಷ್ಟುಕಾಲ ಸೈರಿಸಬಲ್ಲರು? ಆದುಕಾರಣ ಪ್ರಭುತ್ವದವರು ನಮ್ಮ ದೇಶದಲ್ಲೂ ಅಶಾಂತಿ ದೌರ್ಜನ್ಯಗಳು ತಲೆಯಿಕ್ಕುವುದಕ್ಕೆ ಮುಂಚೆಯೇ ಆಹಾರ್ಯವಸ್ತುಗಳು ಹೊರಕ್ಕೆ ಸಾಗಿಹೋಗದಂತೆ ಮೊದಲುಮಾಡುವುದಲ್ಲದೆ ಆಹಾರ್ಯಪದಾರ್ಥಗಳ ಬೆಲೆಯನ್ನು ನಿಗದಿಮಾಡುವ ಯತ್ನವನ್ನು ಮಾಡಿ, ಸಾಧ್ಯವಾದ ಕಡೆಯಲ್ಲಿ ಬೇಕಾದ ಸಹಾಯಪ್ರೋತ್ಸಾಹಗಳನ್ನಿತ್ತು ಪ್ರತ್ಯೇಕವಾದ ಅಂಗಡಿಗಳ ಮೂಲಕ ಪದಾರ್ಥಗಳನ್ನು ಮಿತವಾದ ಬೆಲೆಗೆ ಮಾರಿಸುವ ಏರ್ಪಾಟನ್ನು ಮಾಡಿ ದೇಶವನ್ನು ಕಾಪಾಡುವವರಾಗಬೇಕೆಂದು ಕೋರುತ್ತೇವೆ.

ಕರ್ನಾಟಕ ಸಾಹಿತ್ಯಸಮ್ಮೇಳನದಲ್ಲಿ ಆದ ನಿರ್ಧಾರಗಳು.

೧. ಈಗಣ ಯುದ್ಧದಲ್ಲಿ ಆಂಗ್ಲಸಾಮ್ರಾಜ್ಯದ ಜಯಪ್ರಾರ್ಥನೆ.

೨. ಮಾಧ್ಯಮಿಕಶಾಲೆಗಳಲ್ಲಿ ಅನ್ಯಭಾಷೆಯಿಂದ ವಿದ್ಯಾಭ್ಯಾಸಮಾಡಿಸುವಕಾರಣ ವಿದ್ಯಾರ್ಥಿಗಳಿಗೆ ಶಾರೀರಕ ಮಾನಸಿಕ ಭಾರವನ್ನು ಹೆಚ್ಚಿಸಿದಂತಾಗುವುದರಿಂದ ಆಂಗ್ಲಭಾಷೆಯ ಹೊರತು ಉಳಿದ ವಿಷಯಗಳನ್ನೆಲ್ಲಾ ದೇಶಭಾಷೆಯಲ್ಲೇ ಕಲಿಸುವಂತೆಯೂ, ಕಲಾಶಾಲಾ ಶಿಕ್ಷಣದಲ್ಲಿ ಕನ್ನಡವನ್ನು ದ್ವಿತೀಯ ಭಾಷಾಕೋಟಿಯಲ್ಲಿ ಸೇರಿಸುವಂತೆಯೂ ಮಾಡಬೇಕೆಂದು ಅಧಿಕಾರಿಗಳಲ್ಲಿ ಪ್ರಾರ್ಥಿಸುವುದು.

೩. ಕನ್ನಡವು ಬಳಕೆಯಲ್ಲಿರುವ ಇಂಗ್ಲೀಷ್ ಆಳಿಕೆಯ ದೇಶಭಾಗಗಳಲ್ಲೂ ದೇಶೀಯಸಂಸ್ಥಾನಗಳಲ್ಲೂ ಬಾಲವಿದ್ಯಾಭ್ಯಾಸವನ್ನು ಕನ್ನಡದಲ್ಲೇ ನಡೆಸಿ, [illegible] ಶಿಕ್ಷಣವನ್ನು ಪಸರಿಸುವಂತೆಯೂ, ರಾಜಕೀಯ ವ್ಯವಹಾರವನ್ನು ಕನ್ನಡದಲ್ಲಿ ನಡೆಯಿಸುವಂತೆಯೂ ಪ್ರಾರ್ಥಿಸುವುದು.

೪. ಮೈಸೂರು, ಬೊಂಬಾಯಿ, ಮದ್ರಾಸು ಶಾಲೆಗಳಲ್ಲಿ ಉಪಯೋಗಿಸತಕ್ಕ ಪಠ್ಯಪುಸ್ತಕಗಳೆಲ್ಲಾ ಒಂದೇತೆರದುವಾಗಿರುವಂತೆ ಮಾಡಬೇಕೆಂದು ಆಯಾ ಸರ್ಕಾರಗಳನ್ನು ಪ್ರಾರ್ಥಿಸುವುದು.

೫. ಮದ್ರಾಸು, ಮೈಸೂರು ಪ್ರಭುತ್ವದವರುಗಳು ಸ್ಥಾಪಿಸಿರುವಂತೆ ಬೊಂಬಾಯಿ ಪ್ರಭುತ್ವದವರೂ ಪಂಡಿತಪರೀಕ್ಷೆಯನ್ನು ಏರ್ಪಡಿಸಬೇಕೆಂದು ಪ್ರಾರ್ಥಿಸುವುದು.

೬. ಕನ್ನಡನುಡಿಯ ಮಹಾನಿಘಂಟುವೊಂದನ್ನು ರಚಿಸಬೇಕು. ಕನ್ನಡದ ನವೀನಗ್ರಂಥಗಳನ್ನು ಕಾಲೋಚಿತವಾಗಿ ಬರೆಯಿಸಿಯೂ ಪ್ರಾಚೀನಾದುವುಗಳನ್ನು ಸಂಪಾದಿಸಿಯೂ ಪರಿಶೋಧಿಸಿ ಪ್ರಕಟಿಸುವುದಕ್ಕೆ ಒಂದು ಸಂಘವನ್ನು ಏರ್ಪಡಿಸಬೇಕು.

೭. ಬಾಲಿಕೆಯರ ವಿದ್ಯಾಭ್ಯಾಸಕ್ಕೇ ತಕ್ಕುವಾದ ಗ್ರಂಥಗಳನ್ನು ಬರೆಯಿಸಿ ಅಚ್ಚುಮಾಡಿಸಿ ಕಲಿಸುವಂತೆ ಸರ್ಕಾರದವರನ್ನು ಪ್ರಾರ್ಥಿಸುವುದು.

೮. ಬೊಂಬಾಯಿ ಮದ್ರಾಸು ಮೈಸೂರು ಪ್ರಾಂತಗಳ ಕರ್ನಾಟಕಾಕ್ಷರ ಲೇಖನಸ್ವರೂಪವು ಒಂದೇತೆರನಾಗುವಂತೆ ಮಾಡುವುದು ಅವಶ್ಯಕವಾದುದರಿಂದ ಒಂದೇತೆರದ ಅಕ್ಷರಮಾಲೆಯನ್ನು ಎಲ್ಲ ಸರ್ಕಾರದವರೂ ಉಪಯೋಗಿಸುವಂತೆ ಮಾಡಬೇಕೆಂದು ಪ್ರಾರ್ಥಿಸುವುದು.

೯. ಮಹಾರಾಷ್ಟ್ರ, ಗುಜರಾತಿ, ತೆನುಗು ಮೊದಲಾದ ದೇಶೀಯ ಭಾಷಾ ಸಾಹಿತ್ಯಸಮ್ಮೇಲನದವರೊಡನೆ ಕರ್ನಾಟಕ ಸಾಹಿತ್ಯಸಮ್ಮೇಳನದವರೂ ಕೂಡಿ ಭಾಷಾಸಾಮಾನ್ಯಸುಧಾರಣ ವಿಷಯದಲ್ಲಿ ಒಟ್ಟಿಗೆ ಕೂಡಿ ಕೆಲಸಮಾಡಬೇಕು.

ಹೀಗೆ ನಿರ್ಧಾರಗಳಾದುದಲ್ಲದೆ ಮ|| ಬಾಳಾಚಾರ್ಯ ಸಕ್ಕರಿ ಎಂಬುವರು ನೂತನವಾಗಿ ರಚಿಸಿರುವ ವಿಜಯನಗರ ಸಾಮ್ರಾಜ್ಯ ಎಂಬ ವಿಷಯಕವಾದ ಕೀರ್ತನವೂ, ಗದಗಿನ ಅಮ್ಯಾಚೂರ್ ನಾಟಕಸಂಘದವರ ಗದ್ಯರೂಪ ನಾಟಕಪ್ರಯೋಗವೂ ನಡೆದು ಭಾಷಾಸೇವಕರ ಮನಸ್ಸನ್ನು ಆನಂದಗೊಳಿಸಿದುವು. ಕರ್ನಾಟಕೇತಿಹಾಸಕ ಸಂಶೋಧಕಸಂಘದ ವಾರ್ಷಿಕಸಭೆಯೂ ಅದೇಕಾಲಕ್ಕೆ ರಾ|| ಬ|| ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಆ ಸಂಘದವರು ಇದುವರೆಗೆ ಸಂಶೋಧಿಸಿ ಸಂಗ್ರಹಿಸಿದ್ದ ಕೆಲ ತಾಮ್ರಪಟಗಳೂ, ಭಾವಚಿತ್ರಗಳೂ, ಪುರಾತನ ಗ್ರಂಥಗಳೂ ಸಹ ಪ್ರದರ್ಶನಕ್ಕಿಡಲ್ಪಟ್ಟಿದ್ದುವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಬರುವ ಜೂನ್ ತಾ|| ೨೦ ರಲ್ಲಿ ನಡೆಯುವುದಾಗಿದೆ.

೨ ನೆಯ ಕೌನ್ಸಿಲರಾದ ಮ|| ಸಿ. ಆರ್. ಬಾನರ್ಜಿಯವರಿಗೆ ಜೂನ್ ತಾ|| ೩ ರಿಂದ ೨ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುತ್ತದೆ.

ರಾಜಧಾನಿಯಲ್ಲಿ ಗಾಳಿಯು ಹೆಚ್ಚಾಗಿ ಬಿಸಿಲು ಕಡಿಮೆಯಾಗಿದೆ. ಸದಾ ಮೋಡ ಮುಸುಕಿಕೊಂಡಿದ್ದರೂ ಗಟ್ಟಿಯಾದ ಮಳೆಯಿಲ್ಲ. ಪದಾರ್ಥಗಳ ಧಾರಣೆಯು ಬಹಳ ಏರಿಕೆಯಲ್ಲಿದೆ.

ಮುಂದಣ ಜೂನ್ ತಾ|| ೧೭ ರಲ್ಲಿ ಮೈಸೂರು ಸಂಪದಭ್ಯುದಯ ಸಮಾಜದ ವಾರ್ಷಿಕಾಧಿವೇಶನವು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ನಡೆಯುವುದು.

ರೆವಿನ್ಯೂ ಮತ್ತೂ ಕ್ರಿಮಿನಲ್ ಅಧಿಕಾರಗಳನ್ನು ಬೇರ್ಪಡಿಸುವ ನೂತನವಿಧಾನವು ಸದ್ಯಃ ಬೆಂಗಳೂರು ಮತ್ತೂ ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಬರುವ ಜನವರಿ ತಿಂಗಳಾರಭ್ಯ ಏರ್ಪಡಿಸಲ್ಪಡುತ್ತದೆ.

ಕಳೆದ ಬುಧವಾರದ ಒಕ್ಕಲಿಗರಪತ್ರಿಕೆಯ ಅಗ್ರಲೇಖನದಲ್ಲಿ ಮೈಸೂರು ಪ್ರಭುತ್ವದಲ್ಲಿ ಪಕ್ಷಪಾತದಿಂದ ನಡೆಯಿಸಲ್ಪಡುತ್ತಿರುವ ಅಕ್ರಮಗಳು ಸಯುಕ್ತಿಕವಾಗಿಯೂ ನ್ಯಾಯವಾಗಿಯೂ ಆಕ್ಷೇಪಿಸಲ್ಪಟ್ಟಿರುವುದು ಅವಲೋಕನೀಯವಾಗಿದೆ.

ಶ್ರೀಹಾನಗಲ್ ಕುಮಾರಸ್ವಾಮಿಯವರನುಗ್ರಹದಿಂದ ಶಿಕಾರಿಪುರ ತಾ|| ಕಪ್ಪನದ ಹಳ್ಳಿಯ ಬಳಿ ಸಂಗಮದ ಹತ್ತಿರ ೧ ವರ್ಷದ ಕೆಳಗೆ ಪ್ರತಿಷ್ಠಾಪಿಸಲ್ಪಟ್ಟಿರುವ ಶಿವಯೋಗಾಶ್ರಮದ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತೆಂದೂ ಈಗ ಅದು ಮನೋಹರವಾದ ಋಷ್ಯಾಶ್ರಮದಂತೆ ಸದ್ಭಕ್ತಿ ಸದಾಚಾರ ಧರ್ಮಕ್ಕೆ ಮೂಲಭೂತವಾಗಿರುವುದೆಂದೂ ಒಬ್ಬ ಪತ್ರವ್ಯವಹಾರಕರು ಬರೆದಿರುವುದನ್ನು ತಿಳಿಯಿಸಲು ಸಂತೋಷಿಸುತ್ತೇವೆ.

ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ನಾನಾತೆರದ ವಿಜೃಂಭಣೆಗಳಿಂದಲೂ, ಭಕ್ತಿಭಾವದಿಂದಲೂ, ಮತಾಭಿಮಾನದಿಂದಲೂ ನಡೆಯಿಸಿರುವ ಬಗೆಗೆ ಚಿಕ್ಕಮಗಳೂರು, ಮದ್ದಗಿರಿ ತಾ|| ಚಕ್ರಪಾಳ್ಯ, ಹಿರೆಕೆರೂರು, ತಾಳೀಕೋಟೆ, ಬೆಳಕವಾಡಿ, ಪಾಳ್ಯ ಇತ್ಯಾದಿ ಸ್ಥಳಗಳಿಂದ ಬಂದಿರುವ ಲೇಖನಗಳು ಬಹಳ ದೀರ್ಘವಾಗಿ ಬರೆಯಲ್ಪಟ್ಟಿರುತ್ತವೆ. ಸ್ಥಳಾಭಾವದಿಂದ ಆ ವಿವರವನ್ನೆಲ್ಲಾ ಪ್ರಕಟಿಸಲಾರದುದಕ್ಕಾಗಿ ಲೇಖಕರ ಕ್ಷಮೆಯನ್ನು ಬೇಡುವುದಲ್ಲದೆ ಈ ಉತ್ಸವವನ್ನು ಅಭಿಮಾನದಿಂದ ನಡೆಯಿಸುತ್ತ ಬಂದಿರುವ ಮಹಾಜನರನ್ನೆಲ್ಲಾ ಅಭಿನಂದಿಸುತ್ತೇವೆ.

ಮೈಸೂರಿನ ವೀರಶೈವ ಮಹಾಜನರು ಮರಿಮಲ್ಲಪ್ಪನವರ ಹೈಸ್ಕೂಲಿನ ಆಡಳಿತವನ್ನು ಕ್ರಮಪಡಿಸುವುದಕ್ಕೆ ಕಾರ್ಯಭಾಗವನ್ನು ನಡೆಯಿಸುವ ವಿಷಯದಲ್ಲಿ ಯೋಚಿಸುವುದಕ್ಕಾಗಿ ಕಳೆದ ತಾ|| ೧೮ ರಲ್ಲಿ ಶಂಕರವಿಲಾಸ ಪಾಠಶಾಲಾಭವನದಲ್ಲಿ ಮ|| ವೈ. ವಿರೂಪಾಕ್ಷಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದು ಮ|| ಎಂ. ಬಸವಯ್ಯ, ಬಿ.ಎ., ಬಿ.ಎಲ್., ರವರಿಗೆ ಈ ಭಾರವನ್ನು ವಹಿಸಿಕೊಡುವ ನಿರ್ಧಾರವನ್ನು ಮಾಡಿದರು. ಇದಕ್ಕೆ ವಿರುದ್ಧವಾಗಿ ಈಚೆಗೆ ವೀರಶೈವರ ಮನೆಮನೆಗೆ ಹೋಗಿ ಒಂದು ಕಾಗದಕ್ಕೆ ಒಬ್ಬಾನೊಬ್ಬರು ರುಜುಹಾಕಿಸುತ್ತಲಿರುವರೆಂದೂ, ಅವರು ಟ್ರಸ್ಟಿಗಳ ಪೈಕಿ ಒಬ್ಬರಾಗಿರುವರೆಂದೂ ಕೇಳಿ ಆಶ್ಚರ್ಯಪಡುತ್ತೇವೆ.

ಯುದ್ಧವಾರ್ತೆಯು.

ಮಳೆಯು ಹೆಚ್ಚಾಗಿ ಸುರಿದಿರುವ ಕಾರಣದಿಂದ ಭೂಮಿಯ ಮೇಲೆ ಯುದ್ಧಮಾಡುವುದಕ್ಕೆ ಪಶ್ಚಿಮರಂಗದಲ್ಲಿ ಅನುವು ಕಡಿಮೆಯಾಗಿದೆ. ಶತ್ರುಗಳ ನುಗ್ಗಾಟವನ್ನು ಮಿತ್ರಮಂಡಲಿಯವರು ಪ್ರತಿಯೊಂದು ಕಡೆಯೂ ನಿಲ್ಲಿಸಿಬಿಟ್ಟಿರುವುದಲ್ಲದೆ ಹಲವು ಕಡೆ ಮಿತ್ರಮಂಡಲಿಯವರೇ ಶತ್ರುಗಳ ಮೇಲೆ ನುಗ್ಗಿಹೋಗುತ್ತಿದ್ದಾರೆ. ಶತ್ರುಗಳು ತಮ್ಮ ಆರಂಭಶೂರತ್ವವು ಹೇಗೆ ವ್ಯರ್ಥವಾಯಿತೆಂಬುದನ್ನು ಅರಿತುಕೊಂಡಿದ್ದಾರೆ. ಮತ್ತೊಂದುಸಲ ಅವರು ಪಶ್ಚಿಮರಂಗದಲ್ಲಿ ಬಲವಾದ ಅವಸ್ಕಂದನವನ್ನಾರಂಭಿಸುವಂತಿದೆ. ಇದೇ ಸಮಯದಲ್ಲಿ ಇಟಲಿಯ ಮೇಲೆ ಆಸ್ಟ್ರಿಯನ್ನರು ಬಲವಾದ ಅವಸ್ಕಂದನವನ್ನಾರಂಭಿಸುವಂತೆ ಮಾಡುವರೆಂದೂ ೨ ಕಡೆಯೂ ಹೀಗೆ ದಾಳಿಯಿಟ್ಟರೆ ತಮ್ಮ ಕಾರ್ಯ ಸಿದ್ಧಿಯಾಗುವುದೆಂದೂ ಅವರು ಯೋಚಿಸಿಕೊಂಡಿರುವಂತೆ ವರ್ತಮಾನವಿದೆ. ಪಶ್ಚಿಮರಂಗಕ್ಕೆ ಬಂದಿದ್ದ ಆಸ್ಟ್ರಿಯನ್ ಫಿರಂಗಿಗಳನ್ನೆಲ್ಲಾ ಅವರು ಇಟಲಿ ರಂಗಕ್ಕೆ ಕಳುಹಿಸಿಕೊಟ್ಟಿದ್ದಾರಂತೆ. ಈಗ ಅಮೇರಿಕಾ ಸೈನ್ಯವು ಪಶ್ಚಿಮ ರಂಗದ ಉತ್ತರ ಭಾಗವನ್ನೆಲ್ಲಾ ವಿಶೇಷವಾಗಿ ವ್ಯಾಪಿಸಿಕೊಂಡಿದೆ. ಬೆಲ್ಜಿಯಮ್ಮಿನವರಿಗಿಂತಲೂ ಇವರು ಆವರಿಸಿರುವ ಪ್ರದೇಶವೇ ಮಿಗಿಲಾಗಿದೆ. ಶತ್ರುಗಳು ಇಂಗ್ಲಿಷ್ ಫ್ರೆಂಚ್ ಸೇನೆಗಳನ್ನು ಬೇರ್ಪಡಿಸಿ ನುಗ್ಗಿ ಸಮುದ್ರತೀರ ಪಟ್ಟಣಗಳಿಗೆ ಸೇರಬೇಕೆಂದು ಯಾವ ಭಾಗದಮೇಲೆ ಗುರಿಯಿಟ್ಟಿರುವರೋ ಅಂಥಸ್ಥಳದಲ್ಲಿ ಬಲವಾಗಿ ನಿಂತಿರುವ ಇಂಗ್ಲಿಷ್ ಸೈನ್ಯಕ್ಕೆ ಜತೆಗೇ ಅಮೇರಿಕನ್ ಸೈನ್ಯವು ಕೂಡ ವಿಶೇಷವಾಗಿ ಹೋಗಿ ಸೇರಿದೆ. ದಕ್ಷಿಣದ ಕಡೆಯಲ್ಲಿ ಪ್ಯಾರಿಸ್ಸಿನ ಮೇಲಕ್ಕೂ ಪಶ್ಚಿಮದ ಕಡೆಯಲ್ಲಿ ಇಂಗ್ಲಿಷ್ ಕಡಲುಕಾಲುವೆಯ ತೀರಕ್ಕೂ ನುಗ್ಗಿಹೋಗಲು ಅನುಕೂಲಿಸುವಂಥ ಮಾರ್ಗಗಳುಳ್ಳ ಮಧ್ಯರಾಷ್ಟ್ರಸ್ಥಳದಲ್ಲಿ ನಿಂತಿರುವ ಮಿತ್ರಮಂಡಲಿ ಸೈನ್ಯದ ಮೇಲೆ ಶತ್ರುಗಳು ಈಗ ಮಹಾ ಪ್ರಸ್ಕಂದನವನ್ನು ಮಾಡುವುದರಲ್ಲಿದ್ದಾರೆ. ನ್ಯೂಪೋರ್ಟಿನಿಂದ ಏಮಿಯನ್ಸಿನವರೆಗಿರುವ ೫೦ ಮೈಲಿಗಳುದ್ದದ ಸ್ಥಲವೇ ಆ ಮಧ್ಯಪ್ರದೇಶವಾಗಿದೆ. ಇಲ್ಲಿ ಮಿತ್ರಮಂಡಲಿ ಸೈನ್ಯವು ದುರ್ಭೇದ್ಯವಾಗಿದೆ. ಇಲ್ಲಿಗೆ ಅಮೇರಿಕನ್ ಸೈನ್ಯವೂ ಸೇರಿದೆ. ಇಟಲಿಯ ಒಂದು ಸೈನ್ಯವೂ ಇಲ್ಲಿಗೆ ಬಂದಿದೆ. ಅವಶ್ಯಕತೆ ಬಿದ್ದ ಸ್ಥಳಕ್ಕೆ ಬೇಕು ಬೇಕಾದಾಗ ಹೊಸಹೊಸ ಸೈನ್ಯಗಳನ್ನು ಸಾಗಿಸುವುದಕ್ಕೆ ವಿರಾಮವಿಲ್ಲದ ಸೈನ್ಯಗಳನ್ನು ಬೇರೆ ಇಟ್ಟುಕೊಂಡಿದ್ದಾರೆ. ಜರ್ಮನರು ಕೂಡ ಈ ಪಶ್ಚಿಮರಂಗದಲ್ಲಿಟ್ಟಿರುವ ತಮ್ಮ ಸೈನ್ಯದಲ್ಲೆಲ್ಲಾ (೧೬ ಲಕ್ಷ) ೩ ಭಾಗದಷ್ಟು ಸೈನ್ಯವನ್ನು ಓಯಿಜ, ಉಪ್ರೆಸ್‌ಗಳ ಮಧ್ಯದಲ್ಲಿ ಕೂಡಿಸಿಕೊಂಡಿದ್ದಾರೆ. ಆ ಸೈನ್ಯವು ಮಿತ್ರಮಂಡಲಿ ಸೈನ್ಯದ ಮೇಲೆ ನುಗ್ಗಿ ಭೇದಿಸಿಬಿಟ್ಟರೆ ಬಳಿಕ ಮಿತ್ರಮಂಡಲಿಯವರ ಸಂಚಾರದ ಮಾರ್ಗಗಳೆಲ್ಲಾ ವಿಪತ್ತಿಗೆ ಗುರಿಯಾಗುವುವು. ಅದುಕಾರಣ ಬಲುಮಟ್ಟಿಗೆ ಈ ಭಾಗವನ್ನು ಮಿತ್ರಮಂಡಲಿಯವರು ಶತ್ರುಗಳಿಗೆ ದುರ್ಭೇದ್ಯಗೊಳಿಸಿ ಕಾಪಾಡುವುದಕ್ಕೆ ತಮ್ಮ ಯಾವಚ್ಛಕ್ತಿಯನ್ನೂ ಉಪಯೋಗಿಸುವವರಾಗಿದ್ದಾರೆ. ಅಂತು ಇಷ್ಟರಲ್ಲೇ ಈ ಭಾಗದೊಳಗೆ ನಡೆಯುವುದಕ್ಕಿರುವ ಮಹಾಯುದ್ಧವು ಪರಿಣಾಮ ಫಲದ್ಯೋತಕವಾಗುವುದೆಂಬುದು ಸುಳ್ಳಲ್ಲ. ಕಳೆದೆರಡು ವಾರಗಳ ಕಾಲದಲ್ಲಿ ವಿಶೇಷ ಯುದ್ಧಗಳೇನೂ ನಡೆಯದಿದ್ದರೂ ಸಾಮಾನ್ಯವಾಗಿ ನಡೆದ ಯುದ್ಧಗಳಲ್ಲಿ ಮಿತ್ರಮಂಡಲಿಯವರಿಗುಂಟಾದ ಜಯವೇ ಹೆಚ್ಚಾಗಿದೆ. ವೈಮಾನಿಕ ಯುದ್ಧದಲ್ಲಿ ಇಂಗ್ಲೀಷ್ ಫ್ರೆಂಚ್ ವೈಮಾನಿಕರೇ ಶತ್ರುಗಳ ಹಮ್ಮನ್ನಡಗಿಸಿಬಿಟ್ಟಿದ್ದಾರೆ. ಇನ್ನು ಅಮೇರಿಕನ್ ವಿಮಾನದಳವೂ ಬಂದು ಸೇರಿಬಿಟ್ಟರೆ ಶತ್ರುವಿಮಾನದಳದ ಗತಿಯೇನಾಗುವುದೋ ದೇವರೇ ಬಲ್ಲ. ಇಂಗ್ಲೀಷ್ ಸೇನಾಮುಖದಲ್ಲಿ ವಿಲ್ಲೇರ್ಸ್ ಆಂಕ್ರೆಗಳ ಹತ್ತಿರ ನಡೆದ ಯುದ್ಧದಲ್ಲಿ ಆಸ್ಟ್ರೇಲಿಯನ್ ಸೈನಿಕರು ಆ ಗ್ರಾಮದ ಸುತ್ತಲೂ ಇದ್ದ ಜರ್ಮನ ಪ್ರದೇಶವನ್ನೆಲ್ಲಾ ವಶಪಡಿಸಿಕೊಂಡುದಲ್ಲದೆ ೧೬೦ ಮಂದಿ ಸೈನಿಕರನ್ನೂ ೨೦ ಯಂತ್ರದ ಫಿರಂಗಿಗಳನ್ನೂ ವಶಪಡಿಸಿಕೊಂಡು ಜಯಶಾಲಿಗಳಾದರು. ಇದರಿಂದ ಅಲ್ಲಿಯ ಇಂಗ್ಲೀಷ್ ಸೇನಾಪಂಕ್ತಿಯು ೨ ಮೈಲಿಯಗಲದ ರಂಗದಲ್ಲಿ ಮುಂದಕ್ಕೆ ಸರಿದಂತಾಯಿತು. ಫ್ರೆಂಚ್ ಸೇನಾಮುಖದಲ್ಲಿ ಹಾಂಗಾರ್ಡ್ ಪ್ರಾಂತದೊಳಗೆ ಫ್ರೆಂಚ್ ಸೈನಿಕರು ಶತ್ರುಗಳ ೩ ನೆ ಸಾಲು ಕಂದಕದ ವರೆಗೂ ನುಗ್ಗಿಹೋಗಿ ಶತ್ರುಗಳಿಗೆ ವಿಶೇಷ ನಷ್ಟಗೊಳಿಸಿ ಅನೇಕಮಂದಿ ಸೈನಿಕರನ್ನು ಸೆರೆಹಿಡಿದುಕೊಂಡು ಬಂದಿದ್ದಾರೆ. ಜರ್ಮನರು ಯಾವ ಭಾಗದಲ್ಲಿ ನುಗ್ಗಿದರೂ ಅಲ್ಲೆಲ್ಲಾ ಅವರನ್ನು ಮಿತ್ರಮಂಡಲಿ ಸೈನ್ಯಗಳು ತಡೆದು ಹಿಮ್ಮೆಟ್ಟಿಸುತ್ತಲೇ ಇವೆ.

ಮೆಸೊಪೊಟೋಮಿಯದಲ್ಲಿ ಇಂಗ್ಲೀಷ್ ಸೈನ್ಯವು ಮುಂದುವರಿಯುತ್ತ ತುರ್ಕಿಸೈನ್ಯವು ಪರ್ಶಿಯಾ ಕಡೆಗೆ ಬಹುದೂರ ನುಗ್ಗಿಹೋಗುವುದಕ್ಕೆ ಅವಕಾಶವಿಲ್ಲದಂತೆ ಮಾಡುವುದರಲ್ಲಿದೆ. ತುರ್ಕಿ ಸೈನ್ಯವು ಪರ್ಶಿಯಾದಲ್ಲಿ ೨ ಪಟ್ಟಣಗಳನ್ನು ಹಿಡಿದಿದೆ.

ಭರತಖಂಡದವೃತ್ತಾಂತಗಳು.

ಜಸ್ಟಿಸ್ ಪತ್ರಿಕಾ ಸಂಪಾದಕರಾದ ಡಾಕ್ಟರ್ ನಾಯರ್‌ರವರು ದೇಹಾರೋಗ್ಯಕ್ಕಾಗಿ ಸೀಮೆಗೆ ಪ್ರಯಾಣಮಾಡಿ ಹೋದರೆಂದು ಪ್ರಕಟವಾಗಿದೆ.

ಅಹಮ್ಮದಾಬಾದ್ ಕಾರಾಗೃಹದಲ್ಲಿ ಸೆರೆಯಿಡಲ್ಪಟ್ಟಿದ್ದ ಜರ್ಮನ್ ಆಸ್ಟ್ರಿಯನ್ ಪ್ರಜೆಗಳಲ್ಲಿ ೧೧ ಮಂದಿಗಳು ತಪ್ಪಿಸಿಕೊಂಡು ಓಡಿಹೋಗಿದ್ದಾರೆ.

ರಂಗೂನಿನಲ್ಲಿ ಕಳೆದ ತಾ|| ೧೫ ರ ರಾತ್ರಿ ಒಂದು ಧಾನ್ಯದ ಯಂತ್ರಾಲಯಕ್ಕೆ ಬೆಂಕಿಬಿದ್ದು ೪ ಲಕ್ಷ ರೂ. ಗಳ ಯಂತ್ರಸಾಮಗ್ರಿಗಳೂ ೩ ಲಕ್ಷ ರೂ. ಗಳ ಧಾನ್ಯವೂ ಹಾಳಾದುವು.

ಯುದ್ಧಕಾರ್ಯಕ್ಕೆ ಉಪಯೋಗಿಸಿಕೊಳ್ಳುವುದಕ್ಕಾಗಿ ಭೂಪಾಲದ ಬೇಗಂರವರು ೧ ಲಕ್ಷ ರೂ. ಗಳನ್ನೂ ಚಾಂಜೀರಾನಬಾಬರು || ಲಕ್ಷ ರೂ. ಗಳನ್ನೂ ವೈಸ್ರಾಯರಿಗೆ ಅರ್ಪಿಸಿದ್ದಾರೆ.

ಕಳೆದವಾರದಲ್ಲಿ ಧಾರವಾಡದೊಳಗೆ ಒಂದೇ ಒಂದು ರಾತ್ರಿಯಲ್ಲಿ ೪-೫ ಅಂಗುಲದಷ್ಟು ಮಳೆಯಾಗಿ ಊರನ್ನೆಲ್ಲಾ ಜಲಮಯಮಾಡಿದುದಲ್ಲದೆ ಕೆರೆಕಟ್ಟೆಗಳಿಗೆ ವಿಶೇಷವಾಗಿ ನೀರು ತುಂಬಿತು.

ಸರ್ ಎಸ್. ಪಿ. ಸಿಂಹರವರು ಸಾಮ್ರಾಜ್ಯಯುದ್ಧಸಭೆಗೆ ಭಾರತಪ್ರತಿನಿಧಿಗಳಾಗಿ ಪ್ರಯಾಣಮಾಡಿದುದರಿಂದ ಅವರ ಸ್ಥಾನಕ್ಕೆ ಬರದ್ವಾನ್ ಮಹಾರಾಜರು ವೈಸ್‌ರಾಯರ ಕಾರ್ಯನಿರ್ವಾಹಕ ಸಭೆಯ ಸಭ್ಯರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕೃಷ್ಣಾ ಜಿಲ್ಲೆಗೆ ಸೇರಿದ ಉಯ್ಯೂರು ಎಂಬ ಊರಿನಲ್ಲಿಯೂ ಕಂಚಿಪಾಡು ಎಂಬ ಗ್ರಾಮದಲ್ಲಿಯೂ ಅಂಗಡಿಗಳ ಸೂರೆಗಳು ಹಗಲುಹೊತ್ತಿನಲ್ಲೇ ನಡೆದು ಲಕ್ಷಾಂತರ ರೂ. ಗಳ ಸೊತ್ತುಗಳು ದೋಚಿಕೊಳ್ಳಲ್ಪಟ್ಟಿರುವುವೆಂದು ಪ್ರಕಟವಾಗಿದೆ.

ಕಳೆದ ತಾ|| ೧೭ ರಿಂದ ಅಮೇರಿಕಾದಿಂದ ೧೦ ಲಕ್ಷ ಡಾಲರುಗಳ ಬೆಲೆಯ ಬೆಳ್ಳಿಯು ಪೂರ್ವದೇಶಗಳಿಗೆ ಕಳುಹಿಸಿಕೊಡಲ್ಪಟ್ಟಿರುವುದು. ಅದಕ್ಕೆ ಹಿಂದಣವಾರದಲ್ಲಿ ೨೦ ಲಕ್ಷ ಡಾಲರುಗಳ ಬೆಲೆಯಬೆಳ್ಳಿಯು ಈ ದೇಶಗಳಿಗೆ ಕಳುಹಿಸಿಕೊಡಲ್ಪಟ್ಟಿರುವುದು.

ಮಚಲಿಬಂದರಿನಲ್ಲಿ ಕೂಲಿಗಾರರಾದ ಬಡಜನರು ಬಟ್ಟೆಯ ಮತ್ತೂ ಧಾನ್ಯದ ಅಂಗಡಿಗಳಿಗೆ ನುಗ್ಗಿ ಸೂರೆಮಾಡಿರುವರು. ಅಲ್ಲಿಯ ಧರ್ಮಾತ್ಮರು ಬಡಬಗ್ಗರಿಗಾಗಿ ಪದಾರ್ಥಗಳನ್ನು ಅಗ್ಗವಾಗಿ ಮಾರಲು ವಾಗ್ದಾನಮಾಡಿದುದರಿಂದ ಗದ್ದಲವು ಶಾಂತವಾಗಿದೆ.

ಆಂಗ್ಲಪ್ರಭುತ್ವಕ್ಕೆ ದ್ರೋಹಮಾಡುವ ಉದ್ದೇಶದಿಂದ ಶತ್ರುಗಳೊಡನೆ ಕಾರ್ಯಭಾಗ ನಡೆಯಿಸಿದನೆಂಬ ತಪ್ಪಿತಕ್ಕೆ ಗುರಿಯಾಗಿ ಚೆಂಗಲ್ಪಟ್ ಜಿಲ್ಲಾ ಜಡ್ಜರ ಮುಂದೆ ವಿಚಾರಣೆ ಮಾಡಲ್ಪಡುತ್ತಿದ್ದ ಸೀತಾರಾಮಯ್ಯರ್ ಎಂಬುವನಿಗೆ ೧೨ ವರ್ಷಗಳ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು.

ಅಮೇರಿಕಾದಿಂದ ಬಹಳ ಬೆಳ್ಳಿಯು ಮೊನ್ನೆವಾರದಲ್ಲಿ ಭರತಖಂಡಕ್ಕೆ ಬಂದಿಳಿದಿರುತ್ತದೆ. ಇನ್ನಷ್ಟು ಬೆಳ್ಳಿಯು ಭರತಖಂಡಕ್ಕೆ ಬರುತ್ತಲಿದೆ. ಬೊಂಬಾಯಿಯ ಟಂಕಸಾಲೆಯಲ್ಲಿ ಬೆಳ್ಳಿಯನ್ನು ಕರಗಿಸಿ ರೂಪಾಯಿಗಳನ್ನು ಮಾಡುತ್ತಿದ್ದಾರೆ. ಈ ತಿಂಗಳ ಕೊನೆಯೊಳಗೇ ಈ ವರ್ಷದ ಹೊಸ ರೂ. ಗಳು ವ್ಯವಹಾರಕ್ಕೆ ಬರುವುದರಲ್ಲಿವೆ.

ಬೊಂಬಾಯಿಪಟ್ಟಣದಲ್ಲಿ ಅಖಿಲಭಾರತ ಹಿಂದೂಯುನಾನಿ ವೈದ್ಯ ಸಭೆಯು ಆ|| ಸರ್. ಫಜುಲ್ಭಾಯಿ ಕರೀಂಭಾಯಿರವರ ಅಧ್ಯಕ್ಷತೆಯಿಂದ ಜರುಗಿತು. ಗ್ವಾಲಿಯರ್ ಮಹಾರಾಜರೇ ಮೊದಲಾದ ಅನೇಕ ಮಹನೀಯರು ಸಭೆಗೆ ದಯಮಾಡಿದ್ದರು. ಹಿಂದೂ ಯುನಾನಿ ವೈದ್ಯಗಳೆರಡನ್ನೂ ಆಧುನಿಕ ಪದ್ಧತಿಯನ್ನನುಸರಿಸಿ ಶೋಧಿಸಿ ಅವುಗಳ ವ್ಯಾಪನೆಯನ್ನು ಹೆಚ್ಚಿಸುವ ವಿಷಯದಲ್ಲಿ ನಿರ್ಧಾರಗಳು ಮಾಡಲ್ಪಟ್ಟುವು.

ಅಸ್ಸಾಮಿನಲ್ಲಿ [illegible] ಕೂಲಿಗಾರರು ಅಂಗಡಿಬೀದಿಗಳನ್ನು ಸೂರೆಮಾಡುವುದಕ್ಕಾರಂಭಿಸಿರುವರು. ಟಿಪ್ಪೆರಾ ಜಿಲ್ಲೆಯಲ್ಲಿ ಇಂಥ ಅನರ್ಥಗಳು ೧೨ ಕಡೆ ನಡೆದಿರುವುವು. ಮಾರ್ವಾಡಿಗಳ ಅಂಗಡಿಗಳೇ ಹೆಚ್ಚಾಗಿ ಸೂರೆಮಾಡಲ್ಪಟ್ಟು, ಅಂಗಡಿಗಾರರಿಗೂ ಸೂರೆಗಾರರಿಗೂ ಕದನಗಳು ನಡೆದಿರುವುವು. ಅಲ್ಲಿಗೆ ಸೈನ್ಯವು ಕಳುಹಿಸಲ್ಪಟ್ಟು ಶಾಂತಿಯುಂಟುಮಾಡಲ್ಪಟ್ಟಿದೆ. ಪದಾರ್ಥಗಳ ಬೆಲೆ ಹೆಚ್ಚಿರುವುದೇ ಇಂಥ ಕೃತ್ಯ ನಡೆಯಲು ಕಾರಣವಂತೆ.

ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೆಗ್‌ರವರೂ ಬಾಬು ಭೂಪೇಂದ್ರನಾಥ ಬಾಸುರವರು ಸಹ ಭರತಖಂಡದಿಂದ ಸೀಮೆಗೆ ಸುರಕ್ಷಿತವಾಗಿ ಹೋಗಿ ಸೇರಿದರೆಂದು ಕಳೆದವಾರದ ತಂತ್ರೀವಾರ್ತೆಗಳಿಂದ ಗೊತ್ತಾಗುತ್ತದೆ. ಬಾಸುರವರು ಇಂಡ್ಯಾ ಕೌನ್ಸಿಲಿನಲ್ಲಿ ತಮ್ಮ ಕೆಲಸವನ್ನು ನೋಡುವುದಕ್ಕೆ ಉಪಕ್ರಮಿಸಿದ್ದಾರೆ. ಮಿ|| ಮಾಂಟೆಗ್‌ರವರು ತಾ|| ೧೭ ರಲ್ಲಿ ಸಾರ್ವಭೌಮರ ದರ್ಶನವನ್ನು ತೆಗೆದುಕೊಂಡು ಸಂಭಾಷಿಸಿ ಬಂದರು. ಭಾರತರಾಜಕೀಯ ಸಂಸ್ಕರಣ ವಿಷಯವಾಗಿ ಇವರು ಇಷ್ಟರಲ್ಲೇ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸುವವರಾಗಿದ್ದಾರೆಂದು ವರ್ತಮಾನ ಬಂದಿದೆ.

ಕೊಯಮತ್ತೂರಿನಲ್ಲಿ ತಾ|| ೨೦ ರಲ್ಲಿ ನಡೆದ ಆರ್ಯವೈಶ್ಯ ಮಹಾಸಭೆಗೆ ಅಧ್ಯಕ್ಷರಾಗಬೇಕಾಗಿದ್ದ ಹೈದರಾಬಾದಿನ ಮ|| ರಾಮುನಿವಲ್ಲಯ್ಯಶ್ರೇಷ್ಠರು ತಮ್ಮ ಅಸ್ವಸ್ಥತೆಯ ಮೂಲಕ ಬರದೆಹೋದ ಕಾರಣ ಮೈಸೂರಿನ ಮ|| ಎಸ್. ವಿ. ಶೆಟ್ಟಿಯವರು ಅಧ್ಯಕ್ಷರಾಗಿ ಮಾಡಲ್ಪಟ್ಟಿದ್ದರು. ಇವರನ್ನು ನಿಲ್ದಾಣದಿಂದ ಉತ್ಸವ ಪೂರ್ವಕವಾಗಿ ಅಟ್ಟಹಾಸದಿಂದ ಕರೆದುಕೊಂಡು ಹೋದರು. ಮಹಿಳಾಸಭೆಗೆ ಸೇಲಮ್ಮಿನ ಆದಿನಾರಾಯಣ ಸೆಟ್ಟರ ಪತ್ನಿಯವರು ಅಧ್ಯಕ್ಷೆಯರಾಗಿ ಆರಿಸಲ್ಪಟ್ಟಿದ್ದರು. ಇದರ ಜತೆಗೆ ಆರ್ಯವೈಶ್ಯ ಅಧಿವಿದ್ಯಾರ್ಥಿ ಮಹಾಸಭೆಯೂ ನೆರವೇರಿತು.

ದ್ರಾವಿಡದೇಶದ ಒಂದು ಪ್ರಸಿದ್ಧಪಟ್ಟಣವಾದ ಮಧುರೆಯಲ್ಲಿ ಈ ವರ್ಷದ ಆಂಧ್ರಸಾಹಿತ್ಯ ಪರಿಷತ್ಸಭೆಯು ಆನೆಗೊಂದಿ ಸಂಸ್ಥಾನದ (ಕರ್ನಾಟಕ ಸಾರ್ವಭೌಮರೆನಿಸಿದ ವಿಜಯನಗರ ಪ್ರಭುಗಳ ವಂಶೀಯರಾದ) ಶ್ರೀರಂಗದೇವರಾಯಲುರವರ ಅಧ್ಯಕ್ಷತೆಯಿಂದ ಕಳೆದ ತಾ|| ೧೧ ರಲ್ಲಿ ಸಾಗಿತು. ಆ ಸಭೆಯಲ್ಲಿ ಸ್ವಾಗತಸಂಘಾಧ್ಯಕ್ಷರಾದ ಮ|| ವೀರಭದ್ರನಾಯುಡುರವರೂ ಮ|| ಜಯಂತಿರಾಮಯ್ಯ ಪಂತುಲುಯವರೂ ಮಾಡಿದ ಉಪನ್ಯಾಸಗಳಿಂದ ಪೂರ್ವದಲ್ಲಿ ತಂಜಾವೂರು, ತಿರುಚನಾಪಲ್ಲಿ, ಮಧುರಾಸಂಸ್ಥಾನಗಳು ಆಂಧ್ರವಿಜ್ಞಾನಕ್ಕೆ ನೆಲೆಮನೆಯಾಗಿದ್ದುವೆಂದೂ ಆ ಮಂಡಲಿಗಳಲ್ಲಿ ಎಷ್ಟೋ ಪ್ರಸಿದ್ಧಾಂಧ್ರಕವಿಗಳಿದ್ದರೆಂದೂ ವ್ಯಕ್ತವಾಯಿತು.

ವಿದೇಶದವೃತ್ತಾಂತಗಳು.

ರಷ್ಯಾದ ಹಿಂದಣ ಚಕ್ರವರ್ತಿ ಕುಟುಂಬವೆಲ್ಲವೂ ಮತ್ತು ಗ್ರ್ಯಾಂಡ್ ಡ್ಯೂಕ್ ನಿಕೋಲಸ್‌ರವರೂ, ಪೀಟರ್ ನಿಕೋಲೆವಿಚ್ಚರವರೂ ಸಹ ಈಗ ಕ್ರಿಮಿಯಾದಲ್ಲಿ ನಿರ್ಬಂಧದಲ್ಲಿಡಲ್ಪಟ್ಟಿರುವರಂತೆ.

ಅಮೇರಿಕನ್ನರು ಫ್ರಾನ್ಸಿಗೆ ೫ ಲಕ್ಷ ಸೈನ್ಯವನ್ನು ಕಳುಹಿಸಿಕೊಡುವೆವೆಂದು ಒಪ್ಪಿಕೊಂಡಿದ್ದ ಗಡುವಿನೊಳಗಾಗಿ ಅದಕ್ಕಿಂತಲೂ ಹೆಚ್ಚಾಗಿಯೇ ಕಳುಹಿಸಿಕೊಟ್ಟಿರುವರೆಂದು ಯುದ್ಧಮಂತ್ರಿಯವರು ಹೇಳಿರುತ್ತಾರೆ.

ಇಂಗ್ಲೀಷರು ಸುಯೇಜ್ ಕಾಲ್ವೆಯ ಮೇಲೆ ಕಂಟಾರಾ ಪಟ್ಟಣದ ಹತ್ತಿರ ಕಟ್ಟುತ್ತಿದ್ದ ಸೇತುವಿನ ಕೆಲಸವು ಕಳೆದ ತಾ|| ೧೫ ಕ್ಕೆ ಮುಗಿದಿತು. ಇದರ ಮೂಲಕವಾಗಿ ಕೈರೋ ಪಟ್ಟಣದಿಂದ ಪಾಲೆಸ್ಟೈನಿಗೆ ಲೋಹಮಾರ್ಗವು ಹಾಕಲ್ಪಟ್ಟಿದೆ.

ಯುದ್ಧಾರಂಭವಾದ ಮೇಲೆ ಜರ್ಮನಿಯಲ್ಲಿ ಶಿಶುಗಳ ಮರಣಸಂಖ್ಯೆಯು ಬಹಳ ಹೆಚ್ಚಿದೆ. ೧೯೧೭ ನೆ ವರ್ಷದಲ್ಲಿ ಪ್ರಷ್ಯಾದಲ್ಲಿಯ ಶಿಶುಮರಣಸಂಖ್ಯೆಯು ೧೦೦೦ ಕ್ಕೆ ೧೨೮ ರಿಂದ ೧೯೩ ಕ್ಕೂ ಸ್ಯಾಕ್ಸನಿಯಲ್ಲಿ ೧೪೦ ಇದ್ದುದು ೨೪೨ ಕ್ಕೂ ಬವೇರಿಯಾದಲ್ಲಿ ೧೬೦ ಇದ್ದುದು ೨೩೭ ಕ್ಕೂ ಹೆಚ್ಚಿದೆ. ಇಂಥ ಮರಣಸಂಖ್ಯೆಯು ಇಂಗ್ಲೆಂಡು ವೇಲ್ಸ್ ದೇಶಗಳಲ್ಲಿ ೧೦೦೦ ಕ್ಕೆ ೧೦೮ ರಷ್ಟು ಇರುತ್ತದೆ.

ಆಸ್ಟ್ರಿಯಾ ಚಕ್ರವರ್ತಿಯವರು ಜರ್ಮನಿಗೆ ಹೋಗಿ ಅಲ್ಲಿಯ ಚಕ್ರವರ್ತಿಯವರೊಡನೆ ಮುಂದಣ ಜರ್ಮನಿ ಆಸ್ಟ್ರಿಯಾ ವರ್ತನದ ವಿಷಯವಾಗಿ ನೂತನ ಸಂಧಿಯನ್ನು ಮಾಡಿಕೊಂಡು ಬಂದರೆಂದು ಪ್ರಕಟವಾಗಿದೆ. ಈ ಸಂಧಿನಿಬಂಧನೆಗಳಲ್ಲಿ ಜರ್ಮನ್ನರ ಅಧಿಕಾರ ಪ್ರಾಬಲ್ಯೋನ್ನತಿಗಳೇ ವಿಶೇಷವಾಗಿದ್ದು ಆಸ್ಟ್ರಿಯಾವು ಜರ್ಮನಿಯ ಸಾಮಂತ ಸ್ಥಿತಿಗೆ ಬರುವುದರಲ್ಲಿರುವುದರಿಂದ ಆಸ್ಟ್ರಿಯಾ ಪ್ರಜೆಗಳಲ್ಲಿ ಅದು ಅಸಮಾಧಾನವನ್ನುಂಟುಮಾಡಿದೆ.

ರಷ್ಯಾದ ಪ್ರಭುತ್ವವು ಈಗ ಮಾಸ್ಕೋ ಪಟ್ಟಣದಲ್ಲಿ ಸ್ಥಾಪಿತವಾಗಿದೆಯಷ್ಟೆ. ಅಲ್ಲಿ ರಾಜದ್ರೋಹಿಗಳು ಬಹುಶಃ ೬೦ ಸಾವಿರದವರೆಗೂ ಇರುವರಂತೆ. ಬೊಲ್ಷೆವಿಕ್ಕರಿಗೂ ಈ ರಾಜದ್ರೋಹಿಗಳಿಗೂ ಮೊನ್ನೆವಾರದಲ್ಲಿ ಯುದ್ಧವಾಯಿತು. ಎರಡು ಪಕ್ಷದವರೂ ಪರಸ್ಪರ ಫಿರಂಗಿ ಮೊದಲಾದ ಆಯುಧಗಳನ್ನುಪಯೋಗಿಸಿ ಕಾದಾಡಿದರು. ೨ ಕಡೆಯೂ ನಷ್ಟವಾಯಿತು. ಕೆಲಮಂದಿ ಅರಾಜಕರನ್ನು ಬಂಧಿಸಿ ಕಾರಾಗೃಹಕ್ಕೆ ಕೂಡಿದರು.

ರಷ್ಯಾದ ಬಾಲ್ಷೆವಿಕ್ ಪಕ್ಷದವರು ಜರ್ಮನರ ಮಾಯಾವಾದಗಳಿಗೆ ಮರುಳಾಗಿ ಸಂಧಿಮಾಡಿಕೊಂಡರಷ್ಟೆ. ಈಚೆಗೆ ಜರ್ಮನರು ಮಾಡುತ್ತಿರುವ ದೇಶಾಕ್ರಮಣ ಮೊದಲಾದ ದೌರ್ಜನ್ಯಗಳಿಂದ ತಾವು ಮೋಸಹೋದೆವೆಂಬುದನ್ನು ತಿಳಿದುಕೊಂಡು, ಜರ್ಮನರ ಹಸ್ತಗತವಾಗಿದ್ದ ಪ್ರದೇಶಗಳನ್ನು ತಾವು ಮರಳಿ ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದ್ದಾರೆ. ಕಳೆದವಾರದಲ್ಲಿ ಅವರು ಬಾಕೊನ್ ಎಂಬ ಪಟ್ಟಣವನ್ನು ಜರ್ಮನರಿಂದ ಕಿತ್ತುಕೊಂಡಿರುವರು.

ಬಾಲ್ಟಿಕ್ ಸಮುದ್ರದ ಹಾಂಗೋ ರೇವೆಯಲ್ಲಿ ಇಂಗ್ಲಿಷರ ಮತ್ತು ಅಮೇರಿಕನ್ನರ ಸಬ್‌ಮೆರೀನುಗಳು ರಷ್ಯಾದವರ ಸಹಾಯಾರ್ಥವಾಗಿ ಹೋಗಿದ್ದುವು ಅಲ್ಲೇ ನಿಂತುಬಿಟ್ಟಿದ್ದುವು. ಈಚೆಗೆ ಅಲ್ಲೆಲ್ಲಾ ಜರ್ಮನರ ಪ್ರವೇಶವಾದ ಬಳಿಕ ಅವರ ನೌಕಾದಳಕ್ಕೆ ಈ ಸಬ್‌ಮೆರೀನುಗಳು ವಶವಾಗದಂತೆ ಮಾಡಬೇಕೆಂಬ ಇಂಗ್ಲೀಷ್ ನೌಕಾದಳದವರ ಅಭಿಪ್ರಾಯ ಪ್ರಕಾರ ಆ ಸಬ್‌ಮೆರೀನುಗಳೆಲ್ಲಾ ನಾಶಗೊಳಿಸಲ್ಪಟ್ಟುವು. ಅವುಗಳಲ್ಲಿದ್ದ ನಾವಿಕರೆಲ್ಲಾ ಪೆಟ್ರೊಗ್ರೇಡಿಗೆ ಹೋದರು.

ಇತರವಿಷಯಗಳು.

ಮೇ ತಾ|| ೯ ರಿಂದ ೧೫ ರೊಳಗಾಗಿ ಇಂಗ್ಲೀಷರು ಶತ್ರುಗಳ ೬೧ ವಿಮಾನಗಳನ್ನು ಹೊಡೆದು ಕೆಡಹಿದರು. ಇಂಗ್ಲೀಷರವು ೧೯ ಕಾಣದೆಹೋದುವು. ರಣರಂಗದಲ್ಲೆಲ್ಲಾ ಯಥಾಪ್ರಕಾರ ಮಿತ್ರಮಂಡಲಿಯ ವಿಮಾನದಳದ ಆಧಿಕ್ಯವೇ ಸಂಪೂರ್ಣವಾಗಿದೆ.

ರಷ್ಯಾದ ದಕ್ಷಿಣ ಭಾಗದಲ್ಲಿದ್ದ ಜರ್ಮನರು ಇನ್ನೂ ಮುಂದಕ್ಕೆ ನುಗ್ಗಿಬರುತ್ತಲೇ ಇದ್ದಾರೆ. ರಷ್ಯನರು ಕೆರ್ಚ್ ಪಟ್ಟಣವನ್ನು ಬಿಟ್ಟುಕೊಟ್ಟರೆಂದೂ, ಅಲ್ಲಿಯ ರೈಲ್ವೆ ಪಂಕರಗಳನ್ನೆಲ್ಲಾ ಸೈನಿಕರು ಪರಿಶೋಧಿಸುತ್ತಿರುವರೆಂದೂ ಗೊತ್ತಾಗುತ್ತದೆ. ರಷ್ಯನರಿಗೂ ಜರ್ಮನರಿಗೂ ಮರಳಿ ಶತ್ರುತ್ವವು ವೃದ್ಧಿಯಾಗುವ ಲಕ್ಷಣವೇ ಕಾಣುತ್ತದೆ. ಆದರೆ ಈಗ ರಷ್ಯನರಿಂದಾಗುವುದೇನು?

ರಷ್ಯಾಕ್ಕೆ ಸೇರಿದ ಉಕ್ರೇನಿಯಾದ ಲೇಕ್ಸ್‌ಬರ್ಗ್ ಬಳಿಯಲ್ಲಿರುವ ಜರ್ಮನ್ ಸೈನಿಕರಲ್ಲಿ ಕೆಲರು ತಿರುಗಿಬಿದ್ದು ಅನೇಕಮಂದಿ ಸೈನ್ಯಾಧಿಕಾರಿಗಳನ್ನು ಕೊಂದರು. ಆಗ ಜರ್ಮನ್ ಸೇನಾನಿಯು ನಂಬಿಕೆಯುಳ್ಳ ಕೆಲವು ಸೈನ್ಯವನ್ನು ಅಲ್ಲಿಗೆ ಕಳುಹಿಸಿದಾಗ ಅವರು ತಿರುಗಿಬಿದ್ದವರಲ್ಲಿ ೨೦೦ ಮಂದಿಗಳನ್ನು ಕೊಂದರು. [illegible] ದಳದವರೂ ಹೀಗೆಯೇ ತಿರುಗಿಬಿದ್ದರೆಂದು ವರ್ತಮಾನ ಬಂದಿದೆ.

ಕಳೆದ ಭಾನುವಾರ ರಾತ್ರಿ ೧೧ ಗಂಟೆಗೆ ಬಹುಶಃ ೨೦-೩೦ ಶತ್ರುವಿಮಾನಗಳು ಲಂಡನ್ ಜಿಲ್ಲೆಯ ಮೇಲಕ್ಕೆ ಹೋಗಿ ಸಿಡಿಮದ್ದುಗಳನ್ನು ಹಾಕಿದುವು. ಅದರಿಂದ ೧೭ ಮಂದಿ ಗಂಡುಸರೂ, ೧೪ ಮಂದಿ ಹೆಂಗುಸರೂ, ೬ ಮಕ್ಕಳೂ ಕೊಲ್ಲಲ್ಪಟ್ಟರು. ೮೩ ಮಂದಿ ಗಂಡುಸರಿಗೂ, ೩೩ ಮಂದಿ ಹೆಂಗುಸರಿಗೂ ೨೩ ಮಕ್ಕಳಿಗೂ ಏಟುಬಿದ್ದವೆ. ಬಹಳ ಮನೆಗಳಿಗೆ ನಷ್ಟವುಂಟಾಗಿರುವುದು. ಈ ಶತ್ರುವಿಮಾನಗಳ ಮೇಲೆ ಇಂಗ್ಲೀಷ್ ವೈಮಾನಿಕರೂ ಕಾವಲಿನ ದಳದವರೂ ಗುಂಡುಗಳನ್ನು ಪ್ರಯೋಗಿಸಿ ಬಹಳಮಟ್ಟಿಗೆ ನಿರೋಧಿಸಿದರು. ಗೊಥಾಜಾತಿಯ ಶತ್ರುವಿಮಾನವೊಂದು ಕೆಡಹಲ್ಪಟ್ಟು ಒಳಗಿದ್ದವರೆಲ್ಲಾ ಸಂಹೃತರಾದರು. ಒಟ್ಟು ಶತ್ರುಗಳ ೬ ವಿಮಾನಗಳು ನಷ್ಟಗೊಳಿಸಲ್ಪಟ್ಟುವು. ಇದಕ್ಕೆ ಮುಯ್ಯಾಗಿ ಆಂಗ್ಲವೈಮಾನಿಕರು ಶತ್ರುಗಳ ಕೊಲೋನ್ ಪಟ್ಟಣದ ಮೇಲಕ್ಕೆ ಅನಂತವಾಗಿ ಸಿಡಿಮದ್ದುಗಳನ್ನಿಟ್ಟು ಬಹಳ ನಷ್ಟಗೊಳಿಸಿ ತಾವು ಯಾವ ಅಪಾಯಕ್ಕೂ ಗುರಿಯಾಗದೆ ಹಿಂದಿರುಗಿ ಬಂದಿರುತ್ತಾರೆ. ಇದರಿಂದ ಆ ಪಟ್ಟಣದಲ್ಲಿ ೨೫ ಮಂದಿ ಸತ್ತರೆಂದೂ ೪೭ ಮಂದಿಗೆ ಏಟುಬಿದ್ದು ಗಾಯವಾದವೆಂದೂ, ವೈಮಾನಿಕರ ಸಿಡಿಮದ್ದುಗಳು ಬಹಳವಾಗಿ ಪಟ್ಟಣದ ಮಧ್ಯದಲ್ಲೇ ಬಿದ್ದುದರಿಂದ ನಷ್ಟವು ಅಪರಿಮಿತವಾಗಿ ಸಂಭವಿಸಿತೆಂದೂ ಹಲವು ಮನೆಗಳು ಧ್ವಂಸವಾದುವೆಂದೂ ಪ್ರಕಟವಾಗಿದೆ.

ಪತ್ರವ್ಯವಹಾರ.

ಮರಿಮಲ್ಲಪ್ಪನವರ ಹೈಸ್ಕೂಲು.

ಮ|| ರಾ|| ಸ್ಟಾರ್ ಪತ್ರಿಕಾ ಎಡಿಟರವರ ಸ|| ಕ್ಕೆ.

ಸ್ವಾಮಿ!

ಈ ಸ್ಕೂಲಿನ ಆಡಳಿತವು ಸಮರ್ಪಕವಾಗಿಲ್ಲವೆಂಬ ಸುದ್ದಿಯು ಎಷ್ಟೋ ದೀರ್ಘಕಾಲದಿಂದಲೂ ಇತ್ತು. ಈಗ ಅದರ ನಿಜಸ್ಥಿತಿಯನ್ನು ಹೊರಪಡಿಸಿ ಸರ್ವರನ್ನೂ ಸಮಾಧಾನಪಡಿಸುವ ಕಾಲವು ಸನ್ನಿಹಿತವಾಗಿದೆ. ಸ್ವಕಾರ್ಯಸ್ವಾರ್ಥಗಳಮೇಲೆ ಲೇಶವೂ ಚಿಂತೆಯಿಲ್ಲದೆ ದೇಶಹಿತಾರ್ಥವಾಗಿಯೇ ತಮ್ಮ ವಿದ್ಯಾಬುದ್ಧಿ ಶಕ್ತಿಸಾಧನಗಳನ್ನೆಲ್ಲಾ ಉಪಯೋಗಿಸಿ ಧನ್ಯಜನ್ಮರಾಗಬೇಕೆಂಬ ಸಂಕಲ್ಪವು ಯಾವ ಮ|| ಎಂ. ಬಸವಯ್ಯ ಬಿ.ಎ.ಬಿ.ಎಲ್. ರವರಿಗೆ ಇರುವುದೋ ಅಂಥವರಿಂದಲೇ ಈ ದೇಶಹಿತಸಾಧಕವಾದ ಮರಿಮಲ್ಲಪ್ಪ ಹೈಸ್ಕೂಲಿನ ವಿಷಯವಾದರೂ ಪರಿಷ್ಕೃತವಾದೀತೆಂದು ವೀರಶೈವ ಮಂಡಲಿಯವರು ಯೋಚಿಸಿರುವುದು ಸಹಜವಾಗಿಯೇ ಇರುತ್ತದೆ. ವೀರಶೈವಮತಸ್ಥರಾದ ಒಬ್ಬ ಧರ್ಮಾತ್ಮರಿಂದ ವೀರಶೈವರ ವಿದ್ಯಾಭಿವೃದ್ಧಿಗಾಗಿ ಒಂದಾನೊಂದು ಕಾಲದಲ್ಲಿ ಏರ್ಪಡಿಸಲ್ಪಟ್ಟ ಈ ಧರ್ಮಪ್ರತಿಷ್ಠಾಪನೆಗೆ ನ್ಯೂನತೆಯುಂಟಾಗದಂತೆ ಕಾಪಾಡುವುದು ವೀರಶೈವಮತಸಂಭೂತರೆಲ್ಲರಿಗೂ ಕರ್ತವ್ಯವಾಗಿದ್ದರೂ, ಮ|| ಬಸವಯ್ಯನವರಂಥ ಸಮರ್ಥರು ತಮ್ಮ ಸಮಾಜಬಾಂಧವರ ಕಟ್ಟಪ್ಪಣೆಗೆ ಒಳಗಾಗಿ ನಡುಕಟ್ಟಿ ನಿಂತುದು ಅವರಿಗೆ ಶ್ರೇಯಸ್ಕರವೂ ಕೀರ್ತಿಪ್ರದವೂ ಆಗಿರುವುದೆಂದು ಹೇಳಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಆದರೆ ಧರ್ಮಪ್ರತಿಷ್ಠಾ ಪರಿಷ್ಕರಣ ಕಾರ್ಯಕ್ಕೆ ಯಾರು ತೊಡಗಿದರೂ ಅದಕ್ಕೆ ಧರ್ಮಾಭಿಮಾನಿಗಳೆಲ್ಲರೂ ಸಂತೋಷಪಡಬೇಕಾದುದು ನ್ಯಾಯವಾಗಿದ್ದರೂ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಿಗೆ ಮಾತ್ರ ಈ ಕಾರ್ಯವು ಏತಕ್ಕೋ ಸೇರದೆಹೋಗಿದೆ. ಹಿಂದುಳಿದವರ ಉದ್ಧಾರಕ್ಕಾಗಿ ಸರ್ಕಾರದವರು ವೇತನಗಳನ್ನು ಕಲ್ಪಿಸಿದುದೇ ಮೊದಲಾದ ಪ್ರಯತ್ನಗಳನ್ನೂ ಹಿಂದುಳಿದವರು ಮುಂದಕ್ಕೆ ಬರುತ್ತಿರುವುದನ್ನೂ ನೋಡಿ ಸೈರಿಸದೆ ಎಷ್ಟೆಷ್ಟೋ ವಿಕಾರವಾಗಿ ಕೂಗಿಕೊಂಡುದರಿಂದ ಹೊರಪಟ್ಟಿರುವ ಆ ಪತ್ರಿಕೆಗಳ ಅಂತರುದ್ದೇಶಗಳನ್ನು ತಿಳಿದಿರುವ ಪ್ರಜಾಸಾಮಾನ್ಯವು ಈಗಲೂ ಕೂಡ ಈ ನೂತನಪ್ರಯತ್ನದ ವಿಷಯದಲ್ಲಿ ಸಾಧ್ವೀ ಸಂಪದಭ್ಯುದಯಗಳು ಏಕೆ ವಿಲಾಪಿಸಿಕೊಳ್ಳುತ್ತಿವೆಯೆಂಬುದನ್ನು ಅರಿಯದೆ ಹೋಗಲಾರದು.

ಆದರೂ ಸದರಿ ಪತ್ರಿಕೆಗಳಲ್ಲಿ ತರಂಗತರಂಗವಾಗಿ ಬರುತ್ತಲಿರುವ ಲೇಖನಗಳಲ್ಲಿ ಕಂಡುಬಂದಿರುವ ಅನ್ಯಾಯವಾದ ಕೆಲವಂಶಗಳನ್ನು ಕುರಿತು ಚರ್ಚಿಸದಿದ್ದರೆ ಯಥಾಜಾತರಾದ ಜನರು ಮೋಸಹೋಗಬಹುದೆಂದು ನಂಬಿ ಈ ಲೇಖನವನ್ನು ಬರೆದಿರುವಿರುತ್ತೇನೆ.

ಈ ಲೇಖನಗಳಲ್ಲಿ—“ಬಸವಯ್ಯನವರು ಬ್ರಹ್ಮದ್ವೇಷಿಗಳು, ವೆಂಕಟಕೃಷ್ಣಯ್ಯನವರು ಬ್ರಾಹ್ಮಣರು. ಇವರಮೇಲಣ ದ್ವೇಷದಿಂದ ಇವರನ್ನು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ಟರ್‌ಗಿರಿಯಿಂದ ವಜಾಮಾಡಿಸಬೇಕೆಂಬುದು ಅವರ ಪ್ರಯತ್ನವಾಗಿದೆ. ಇವರಿಗೆ ವಿದ್ಯಾಭ್ಯಾಸಶಾಖಾ ಇನ್ಸ್|| ಜನರಲ್ ಸಾಹೇಬರಾದ ರೆಡ್ಡಿಯವರು ಸಹಾಯಭೂತರಾಗಿಯೂ ಸೂತ್ರಧಾರಿಗಳಾಗಿಯೂ ಇದ್ದಾರೆ. ಸ್ಕೂಲಿನ ಆಡಳಿತವು ಬಹಳ ಸಮರ್ಪಕವಾಗಿದೆ. ವೆಂಕಟಕೃಷ್ಣಯ್ಯನವರು ೪೩ ವರ್ಷಗಳಿಂದ ಕೆಲಸಮಾಡಿ ಈ ಸ್ಕೂಲನ್ನು ಬಹಳ ಅಭಿವೃದ್ಧಿಗೆ ತಂದಿದ್ದಾರೆ. ಮರಿಮಲ್ಲಪ್ಪನವರ ಫಂಡಿನಿಂದ ಮಾಹೆಯಾನಾ ೧೨೫ ರೂ. ಗಳು ಮಾತ್ರ ಬಡ್ಡಿಯ ರೂಪವಾಗಿ ಬರುತ್ತದೆ. ಮಾಹೆಯಾನಾ ೩೫೦ ರೂ. ಸರ್ಕಾರಿ ಗ್ರ್ಯಾಂಟು ಬರುತ್ತದೆ. ಸ್ಕೂಲಿನ ಮಾಹೆವಾರು ಖರ್ಚು ೧೨೦೦ ರೂ. ಗಳವರೆಗೂ ಆಗುವುದು. ವೆಂಕಟಕೃಷ್ಣಯ್ಯನವರು ವೀರಶೈವ ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಬಹಳ ಶ್ರದ್ಧೆಯುಳ್ಳವರು, ಅವರೇ ಮೈಸೂರು ವೀರಶೈವಾಶ್ರಮವನ್ನು ಸ್ಥಾಪಿಸಿ, ೩೦ ರೂ. ಸರ್ಕಾರಿ ಗ್ರ್ಯಾಂಟು ಬರುವಂತೆ ಮಾಡಿದರು. ಸ್ಕೂಲ್ ಫಂಡಿನಿಂದ ೫ ರೂ. ಕೊಡುತ್ತಿರುವರು. ಮರಿಮಲ್ಲಪ್ಪನವರ ಹೊರತು ಈ ಸ್ಕೂಲಿಗೆ ಇನ್ಯಾವ ಲಿಂಗಾಯಿತನೂ ಒಂದು ಕಾಸನ್ನೂ ಸಹಾಯಮಾಡದಿರುವಾಗ ಈ ಸ್ಕೂಲಿನ ವಿಷಯವಾಗಿ ಕಾರ್ಯಭಾಗಮಾಡುವುದಕ್ಕೆ ಯಾವ ಲಿಂಗಾಯಿತನಿಗೆ ಹಕ್ಕಿದೆ? ಈ ಸ್ಕೂಲಿನ ಧರ್ಮಕಾರ್ಯಭಾರ ನಿರ್ವಾಹಕರಮೇಲೆ ಬಸವಯ್ಯನವರು ದಾವಾ ಮಾಡಬೇಕಾದರೆ ಅವರಿಗೆ ಮರಿಮಲ್ಲಪ್ಪನವರಿಂದ ಪವರಾಫ್ ಆರ್ಟಿ ಬಂದಿದೆಯೆ? ಲಿಂಗಾಯಿತ ಫಂಡಿಗೂ ಲಿಂಗಾಯತರಿಗೂ ಈ ಸ್ಕೂಲಿಗೂ ಸಂಬಂಧವೇನು? - ಸ್ಕೂಲಿಗೆ ದಯಮಾಡಿಸಿ ಎಲ್ಲಾ ಲೆಕ್ಕಗಳನ್ನೂ ವಿದ್ಯಮಾನಗಳನ್ನೂ ಪರಿಶೀಲಿಸಿ, ತಪ್ಪೆಂದು ಅಪ್ಪಣೆಕೊಡಿಸಿದರೆ ತಮ್ಮ ಆಜ್ಞೆಯನ್ನು ಶಿರಸಾವಹಿಸುತ್ತೇನೆ” ಎಂದು ಮ|| ಎಂ. ವೆಂಕಟಕೃಷ್ಣಯ್ಯನವರು ಎಂ. ಬಸವಯ್ಯನವರಿಗೆ ಮುಂದಾಗಿಯೇ ಹೇಳಿಕೊಂಡರು. ಅದರಂತೆಯೂ ನೋಡದೆ ಬಸವಯ್ಯನವರು ವೆಂಕಟಕೃಷ್ಣಯ್ಯನವರ ಮೇಲಣ ದ್ವೇಷದಿಂದಲೇ ಗಲಾಟೆಮಾಡುತ್ತಿದ್ದಾರೆ. ವೆಂಕಟಕೃಷ್ಣಯ್ಯನವರು, ಲೋಕಬಾಂಧವರು, ವೈರಾಗ್ಯಚಕ್ರವರ್ತಿಗಳು, ನಿಸ್ಪೃಹರು. ಬಸವಯ್ಯನವರು ಕೋಪತಾಪಗಳಿಗೆ ಅಧೀನರಾಗಿ ಕುಣಿಯತಕ್ಕವರು. ಮರಿಮಲ್ಲಪ್ಪನವರ ಧರ್ಮದಿಂದ ಈ ಸ್ಕೂಲಿಗೆ ಮಾಹೆಯಾನಾ ೧೨೫ ರೂ. ಮಾತ್ರ ಆದಾಯವಿದೆ, ಉಳಿದ ಸಾವಿರ ರೂ. ಗಳು ವೀರಶೈವೇತರ ವಿದ್ಯಾರ್ಥಿಗಳ ಫೀಜಿನ ಮೂಲಕ ಬರುತ್ತದೆ. ಲಿಂಗಾಯಿತ ಹುಡುಗರು ಈ ಸ್ಕೂಲಿನಲ್ಲಿ ಫೀಜನ್ನು ಕೊಡದೆಯೇ ಓದುತ್ತಾರೆ. ಬಸವಯ್ಯನವರು ಈ ಸ್ಕೂಲಿನ ವಿಷಯದಲ್ಲಿ ಪ್ರವರ್ತಿಸಿದಮೇಲೆ ಇತರರೆಲ್ಲಾ ಈ ಸ್ಕೂಲನ್ನೇ ಬಿಟ್ಟು ವಳವಾಯರ ಆಂಗ್ಲೋವರ್ನಾಕ್ಯುಲರ್ ಸ್ಕೂಲು, ಬನುಮಯ್ಯನವರ ಸ್ಕೂಲು, ಶಾರದಾವಿಲಾಸ ಪಾಠಶಾಲೆ, ಸದ್ವಿದ್ಯಾಪಾಠಶಾಲೆ ಈ ನಾಲ್ಕನ್ನೂ ಹೈಸ್ಕೂಲನ್ನಾಗಿ ಮಾಡಿ ಅಲ್ಲಿ ತಮ್ಮ ಹುಡುಗರ ಭಾಕಕ್ಕೆ ಅನುಕೂಲಮಾಡಿಕೊಂಡು, ಮರಿಮಲ್ಲಪ್ಪನವರ ಸ್ಕೂಲನ್ನು ಬಸವಯ್ಯನವರಿಗೂ ಅವರ [illegible]

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಮೇ ತಾ|| ೨೬ ನೆಯ ಭಾನುವಾರ.

ಮರಿಮಲ್ಲಪ್ಪನವರ ಹೈಸ್ಕೂಲು.

ಇದರ ಸಂಬಂಧವಾದ ಚರ್ಚೆಯು ಈಗ ವಿಶೇಷವಾಗಿ ನಡೆಯುತ್ತಿದೆ. ಈ ಧರ್ಮದ ಟ್ರಸ್ಟಿಗಳ ಮೀಟಿಂಗು ಮೊನ್ನೆ ವಾರದಲ್ಲಿ ನಡೆದಿತು. ಈ ಸಂಬಂಧವಾಗಿ ಎಲ್ಲೆಲ್ಲಿ ಯಾವಯಾವ ಸಭೆಗಳೂ ಚರ್ಚೆಗಳೂ ನಡೆದರೂ ಗೂಢಚಾರರನ್ನಿಟ್ಟು ತಿಳಿದುಕೊಂಡು ಹೊರಹಾಕಲುಬ್ಬುಗಿಸಿರುವ ಸಂಪದಭ್ಯುದಯ ಪತ್ರಿಕೆಯು, ಹೈಸ್ಕೂಲಿನೊಳಗೇ ಕೂಡಿದ್ದ ಟ್ರಸ್ಟಿಗಳ ಸಭೆಯ ನಡವಳಿಕೆಯನ್ನು ಮಾತ್ರ ಪ್ರಕಟಿಸದಿರುವುದು ಆಶ್ಚರ್ಯ. ಆ ಮೀಟಿಂಗಿನಲ್ಲಿ ನಡೆದ ಚರ್ಚೆಗಳೊಳಗೆ ಇದುವರೆಗೆ ನಡೆದಿರುವ ಲೆಕ್ಕಗಳ ಪರಿಶೋಧನೆಗಾಗಿ ಟ್ರಸ್ಟಿಗಳಲ್ಲೊಬ್ಬರಾದ ಮ|| ಲಿಂಗಪ್ಪಯ್ಯನವರನ್ನು ನಿಯಮಿಸಬೇಕೆಂಬ ವಿಷಯವೊಂದಾಗಿದ್ದಿತು. ಅದಕ್ಕೆ ಅನೇಕರು ಒಪ್ಪದೆ ಹೋದುದರ ಮೇಲೆ ಗೌರ್ನಮೆಂಟಿಗೆ ಬರೆದು ಸಮರ್ಥರಾದವರೊಬ್ಬರನ್ನು ಕರೆಸಿ ಆಡಿಟ್ ಮಾಡಿಸಬೇಕೆಂದು ನಿರ್ಧರವಾಯಿತೆಂದು ಕೇಳುತ್ತೇವೆ. ಬಹುಕಾಲದ ಲಕ್ಷಾಂತರ ರೂ. ಗಳ ಆದಾಯವ್ಯಯವನ್ನು ಪರಿಶೋಧಿಸುವುದಕ್ಕೆ ಒಬ್ಬಾನೊಬ್ಬನನ್ನು ನಿಯಮಿಸುವುದಕ್ಕಿಂತ ಸಮರ್ಥರಾದ ಇಬ್ಬರನ್ನಾದರೂ ಗೊತ್ತುಪಡಿಸಿ ಪರಿಶೋಧಿಸುವುದೇ ಒಳ್ಳೆಯದು. ಇದಕ್ಕಾಗಿ ಮಾಡಲ್ಪಡುವ ಧನವ್ಯಯವು ಎಷ್ಟಾದರೂ ಅದು ದುರ್ವಿನಿಯೋಗವಾಗುವುದಿಲ್ಲ. ನಿಷ್ಪಕ್ಷಪಾತವಾಗಿಯೂ ಸಾಮರ್ಥ್ಯದಿಂದಲೂ ಪರಿಶೋಧನೆ ನಡೆಯಿಸತಕ್ಕವರನ್ನು ಆರಿಸುವುದು ಆವಶ್ಯಕ.

ಮೀಟಿಂಗಿನಲ್ಲಿ ಚರ್ಚೆಗೆ ಬಂದಿದ್ದ ವಿಷಯಗಳಲ್ಲಿ ಮ|| ವೆಂಕಟಕೃಷ್ಣಯ್ಯನವರಿಗೆ ೧೦೦ ರೂ ಗಳ ಪೆನ್ಷನ್ ಕೊಡಬೇಕೆಂಬುದೂ ಒಂದಾಗಿದ್ದಿತು. ಇದನ್ನು ಮ|| ವೆಂಕಟಕೃಷ್ಣಯ್ಯನವರೇ ಪ್ರೆಸಿಡೆಂಟರಿಗೆ ಬರೆದುಕೊಂಡಿದ್ದರಂತೆ. ಅದಕ್ಕೂ ದಾರಿಯು ಸುಗಮವಾಗಿ ಬರಲಿಲ್ಲವೆಂದು ಕೇಳುತ್ತೇವೆ. ಈಗ ಅವರಿಗೆ ಸಲ್ಲುತ್ತಿದ್ದ ೨೦೦ ರೂ. ವೇತನದಲ್ಲಿ ೧೫೦ ರೂ. ಗಳಿಗೆ ಒಬ್ಬ ಸಮರ್ಥ ಮುಖ್ಯೋಪಾಧ್ಯಾಯರನ್ನು ನಿಯಮಿಸಿಕೊಂಡು, ಉಳಿದ ೫೦ ರೂ. ಗಳನ್ನು ಇವರಿಗೆ ಪೆನ್ಷನ್ ರೂಪವಾಗಿ ಕೊಡಬಹುದೆಂದು ಅಭಿಪ್ರಾಯಪಟ್ಟರಂತೆ. ಮ|| ವೆಂಕಟಕೃಷ್ಣಯ್ಯನವರು ಸ್ಕೂಲಿನ ಅಭಿವೃದ್ಧಿಗಾಗಿ ಬಹಳ ಶ್ರಮಪಟ್ಟವರಾಗಿರಬಹುದು. ಆದರೆ ಪ್ರತಿಫಲವಿಲ್ಲದೆ ಅವರೇನೂ ಮಾಡಿರುವಂತಿಲ್ಲ. ಅವರ ಶ್ರಮಕ್ಕಿಂತಲೂ ಅತಿಶಯವಾಗಿಯೇ ಈ ಸ್ಕೂಲಿನ ಮೂಲಕವಾಗಿ ಅವರು ಪ್ರಯೋಜನವನ್ನು ಪಡೆದಿರುವರೆಂಬುದರಲ್ಲಿ ಸಂಶಯವೇನೂ ಇಲ್ಲ. ಇದನ್ನು ಅವರ ಆತ್ಮವೇ ಬಲ್ಲುದು. ನ್ಯಾಯ ಧರ್ಮಾನುಸಾರವಾಗಿ ಅವರು ತಮ್ಮ ೫೫ ನೆ ವಯಸ್ಸಿನಲ್ಲೇ ಈ ಶಾಲಾ ಮುಖ್ಯೋಪಾಧ್ಯಾಯತ್ವದಿಂದ ನಿವೃತ್ತರಾಗಿ ಮತ್ತೊಬ್ಬ ಸಮರ್ಥನನ್ನು ಆ ಸ್ಥಾನಕ್ಕೆ ನಿಯಮಿಸಿದ್ದರೆ ಈ ಸ್ಕೂಲು ಇನ್ನೂ ಪ್ರಖ್ಯಾತವಾಗಿಯೂ ಪ್ರಯೋಜಕವಾಗಿಯೂ ಪರಿಣಮಿಸುತ್ತಲಿದ್ದಿತು. ಹಾಗೆ ಮಾಡದೆ ಈಚೆಗೆ ೨೦ ವರ್ಷಕಾಲ ಈ ಸ್ಕೂಲಿನ ವೇತನದಿಂದ || ಲಕ್ಷ ರೂ. ಗಳವರೆಗೆ ಅನುಭವಿಸಿದ್ದಾರೆ. ನಿಸ್ಪೃಹರೂ ವೈರಾಗ್ಯಚಕ್ರವರ್ತಿಗಳೂ ಎನಿಸಿಕೊಳ್ಳುವ ಅವರು ಇದರ ಮೇಲೂ ತಮಗೆ ಪೆನ್ಷನ್ ಆಗಬೇಕೆಂದು ಹೇಗೆ ಆಪೇಕ್ಷಿಸಿದರೋ ಗೊತ್ತಾಗಲಿಲ್ಲ. ಅಲ್ಲದೆ ಇವರೊಬ್ಬರಿಗೆ ಮಾತ್ರ ಪೆನ್ಷನ್ ಕೊಡುವುದು ಸಾಧ್ಯವೆ? ಇವರಂತೆ ಕೆಲಸ ಮಾಡಿದ ಸಹಾಯೋಪಾಧ್ಯಾಯರೆಲ್ಲಾ ಇದೇ ಮೇಲುಪಂಕ್ತಿಯನ್ನನುಸರಿಸಿ ತಮಗೂ ಪೆನ್ಷನನ್ನು ಸಲ್ಲಬೇಕೆಂದು ಕೇಳಿದರೆ ಆಗ ಟ್ರಸ್ಟಿಗಳು ಏನು ಸಮಾಧಾನ ಹೇಳುವರು? ಈ ಪೆನ್ಷನ್ ಪರಂಪರೆಯನ್ನು ತೆರುವುದಕ್ಕೆ ಬಂಡವಾಳವೆಲ್ಲಿರುವುದು? ವಿಧಿಗಳಲ್ಲಿ ಅವಕಾಶವೆಲ್ಲಿರುವುದು? ಇದನ್ನೆಲ್ಲಾ ಟ್ರಸ್ಟಿಗಳೂ ಶಾಲೆಯ ಧರ್ಮಾಭಿಮಾನಿಗಳೂ ಮ|| ವೆಂಕಟಕೃಷ್ಣಯ್ಯನವರೂ ಸಹ ಪರ್ಯಾಲೋಚಿಸಬಾರದೆ? ಇದುವರೆಗೆ ಮ|| ವೆಂಕಟಕೃಷ್ಣಯ್ಯನವರು ಶಾಲಾಭಿವೃದ್ಧಿಗಾಗಿ ಮಾಡಿದ ಸಾಹಸಕ್ಕೆ ಅವರ ಪ್ರಖ್ಯಾತಿಯೇ ಬೋನಸ್ಸಾಗಿರುವುದು. ಮತ್ತೂ ಈ ಧರ್ಮಕಾರ್ಯನಿರ್ವಾಹದ ಲೋಪಾಲೋಪ ವಿವೇಚನೆಗಾಗಿ ಇಷ್ಟರಲ್ಲೇ ನಡೆಯಬಹುದಾಗಿರುವ ಕಾರ್ಯಭಾಗಗಳ ಪರಿಣಾಮದಿಂದ ಸಿದ್ಧವಾಗುವ ಫಲವೂ ಕೂಡ ಅವರ ಚಿರಕಾಲಿಕ ಕೀರ್ತಿಗೆ ದ್ಯೋತಕವಾದ ಸುಪ್ರತಿಷ್ಠೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ನಿರ್ಣಯವಾದ ಬಳಿಕ ಅದರ ಮೇಲೆ ಯಾವ ತೆರದ ಬಹುಮಾನ ಪ್ರತಿಫಲಗಳನ್ನು ಮಾಡುವುದಕ್ಕಾದರೂ ಯೋಚಿಸಬಹುದು. ಇಲ್ಲವೆ ಅವರಿಂದ ಉಪಕೃತರಾಗಿರುವವರೆಲ್ಲರೂ ಚಂದಾ ಮೂಲಕ ಹಣವನ್ನು ಕೂಡಿಸಿ ಬಹುಮಾನವಾಗಿ ಸಮರ್ಪಿಸಬಹುದು.

ಸದ್ಯಃ ಇವರನ್ನು ಹೆಡ್ಮಾಸ್ಟರ್ ಕೆಲಸದಿಂದ ನಿವೃತ್ತಿಗೊಳಿಸಿ ೧೫೦ ರೂ. ಗಳ ವೇತನದಲ್ಲಿ ಒಬ್ಬ ಸಮರ್ಥರಾದ ಮುಖ್ಯೋಪಾಧ್ಯಾಯರನ್ನು ಈ ಶಾಲೆಗೆ ಕಳುಹಿಸಿಕೊಡಬೇಕೆಂದು ಇನ್ಸ್ಪೆಕ್ಟರ್ ಜನರಲ್ಲರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಟ್ರಸ್ಟಿಗಳ ಮೀಟಿಂಗಿನಲ್ಲಿ ನಿರ್ಧರವಾಗಿರುವುದೆಂದು ಕೇಳುತ್ತೇವೆ. ಇದು ಪ್ರಶಸ್ತವಾದ ಏರ್ಪಾಡೇ ಸರಿ. ಧರ್ಮಕಾರ್ಯನಿರ್ವಾಹ ಭಾರವನ್ನು ಹೊತ್ತ ಟ್ರಸ್ಟಿಗಳು ಮೊದಲಿಂದಲೂ ಇಷ್ಟು ಪಟುವಟಿಕೆಯನ್ನು ವ್ಯಕ್ತಪಡಿಸುತ್ತಿದ್ದರೆ ಆ ಶಾಲೆಯ ಕಾರ್ಯಗಳ ವಿಷಯದಲ್ಲಿ ಯಾವ ದೂರಿಗೂ ಅವಕಾಶವಿರುತ್ತಿರಲಿಲ್ಲ. ಈಗಲಾದರೂ ಅದರ ಅವ್ಯವಸ್ಥೆಯ ನಿವಾರಣೆಗೆ ದಾರಿಯುಂಟಾದುದಕ್ಕಾಗಿ ನಾವು ಇದರ ಮೂಲಭೂತರನ್ನೆಲ್ಲಾ ಈ ಮೂಲಕವಾಗಿ ಅಭಿನಂದಿಸುತ್ತೇವೆ.

ಬೆಲೆಹೆಚ್ಚಿರುವುದರ ಕಷ್ಟ.

ಯುದ್ಧವು ನಡೆಯುತ್ತಿರುವ ಯೂರೋಪುಖಂಡದಲ್ಲಿ ಪದಾರ್ಥಗಳ ಬೆಲೆಯು ಹೆಚ್ಚಿಯೂ, ಎಷ್ಟು ಹಣ ಕೊಟ್ಟರೂ ಕೆಲ ಸಾಮಗ್ರಿಗಳು ದೊರೆಯದೆಯೂ, ಅನೇಕ ಪದಾರ್ಥಗಳನ್ನು ಮಿತಿಯಿಂದ ಉಪಯೋಗಿಸಬೇಕೆಂಬ ನಿರ್ಬಂಧವುಂಟಾಗಿಯೂ ಇರುವುದೆಂಬ ಕಷ್ಟಗಳನ್ನು ನಾವು ಇದುವರೆಗೆ ಪತ್ರಿಕೆಗಳ ಮೂಲಕ ಓದಿ ಕೇಳುತ್ತಿದ್ದೆವು. ಈಗ ಪೂರ್ವದೇಶಿಯರಾದ ನಾವು ಆ ಕಷ್ಟಗಳನ್ನು ಪ್ರತ್ಯಕ್ಷವಾಗಿ ಅನುಭವಿಸುವ ಹೊತ್ತು ಬಂದಿದೆ. ಜೀವನಕ್ಕೆ ಅತ್ಯಾವಶ್ಯಕವಾದ ಪ್ರತಿಯೊಂದು ಪದಾರ್ಥದ ಬೆಲೆಯೂ ದಿನದಿನಕ್ಕೆ ಮಿತಿಮೀರಿಹೋಗುತ್ತಿದೆ. ಸಾಮಾನ್ಯಜನರು ಕಾಲಯಾಪನೆಮಾಡುವುದು ಬಹಳ ಕಷ್ಟಕ್ಕೆ ಬಂದಿದೆ. ವಿದೇಶದಿಂದ ಬರಬೇಕಾದ ಸಾಮಗ್ರಿಗಳಿಗೆ ಬೆಲೆಯು ಹೆಚ್ಚುವುದಕ್ಕೆ ಕಾರಣವಿರುವುದರಿಂದ ಅವು ತಗ್ಗಗುವುದು ಸಹಜ. ಆದರೆ ಸ್ವದೇಶದಲ್ಲೇ ಬೆಳೆಯುತ್ತಿರುವ ಪದಾರ್ಥಗಳಿಗೂ ಇಷ್ಟೊಂದು ಬೆಲೆ ಹೆಚ್ಚಿರುವುದಕ್ಕೆ ಕಾರಣವಿರುವುದಿಲ್ಲ. ಧಾನ್ಯಾದಿಗಳು ಬೆಳೆಯದೆ ಕ್ಷಾಮದಿಂದ ಪದಾರ್ಥಗಳ ಬೆಲೆ ಹೆಚ್ಚಿದ್ದರೆ ಆಕ್ಷೇಪಮಾಡಲು ಅವಕಾಶವಿರುತ್ತಿರಲಿಲ್ಲ. ಧಾನ್ಯಗಳು ಸಮೃದ್ಧವಾಗಿ ಪೇಟೆಗಳಿಗೆ ಬರುತ್ತಿದ್ದರೂ ಅವುಗಳ ಬೆಲೆಯನ್ನು ಮಾತ್ರ ಹೆಚ್ಚಿಸುತ್ತಿರುವುದು ನ್ಯಾಯವಾಗಿರುವುದಿಲ್ಲ. ಯಾವ ಕಷ್ಟವನ್ನಾದರೂ ಪ್ರಜೆಗಳು ಸೈರಿಸಿಕೊಂಡಾರು. ಆಹಾರಾಭಾವದ ಮೂಲಕ ಉಂಟಾಗುವ ಸಂಕಟವನ್ನು ಸೈರಿಸಲಾರರು. "ಜೀವನಂಬೆರ್ದೊಡದುದುಂಟೆ" ಎಂಬ ವಚನದಂತೆ ಜೀವನಕ್ಕೆ ಕಟ್ಟಾಗುವಂತಾದರೆ ಬಡಜನರು [illegible] ಎಲ್ಲಾ ಮಾರಿಗೊತ್ತರಿಸಿ ತಮ್ಮ ಉದರರಕ್ಷಣೆಗಾಗಿ ಎಂಥ ದೌರ್ಜನ್ಯವನ್ನಾಚರಿಸುವುದಕ್ಕೂ ಸಿದ್ಧರಾಗುವುದು ಸಹಜವಾಗಿರುತ್ತದೆ. ಇದರಿಂದ ದೇಶದಲ್ಲಿ ಅಶಾಂತಿಯು ಹಬ್ಬುವುದಕ್ಕೆ ಮಾರ್ಗವಾಗುವುದು. ಅದು ಪ್ರಭುತ್ವದವರಿಗೂ ಹಿತವಲ್ಲ; ಪ್ರಜೆಗಳಿಗೂ ಹಿತವಲ್ಲ. ಆದುಕಾರಣವೇ ದಿಲ್ಲಿಯ ಯುದ್ಧಮಹಾಸಭೆಯಲ್ಲಿ ಆಹಾರ್ಯಪದಾರ್ಥಗಳ ಬೆಲೆಯನ್ನು ಒಂದು ಕ್ರಮದಲ್ಲಿಯೇ ನಿಯಂತ್ರಿಸುವುದಕ್ಕೆ ಪ್ರಯತ್ನಿಸುತ್ತದಾಗಿ ವೈಸ್ರಾಯರಿಂದ ಹೇಳಿಸಲ್ಪಟ್ಟಿತು. ಆದರೆ ಆ ಪ್ರಯತ್ನವು ಸಾವಕಾಶದಲ್ಲದೆ ವೇಗವಾಗಿ ಮಾಡಲ್ಪಡಬೇಕಾದುದಾಗಿದ್ದರೂ ಇನ್ನೂ ಎಲ್ಲಿ ಕಡೆಯೂ ಆಚರಿಸಲ್ಪಟ್ಟಿರುವುದಿಲ್ಲ. ಪ್ರತಿದಿನದ ಕಷ್ಟವನ್ನು ಬಡಜನರು ಸೈರಿಸಲಾರರು. ಬೊಂಬಾಯಿ, ಬಂಗಾಳ, ಬಿಹಾರು ಮೊದಲಾದ ಪ್ರಾಂತಗಳಲ್ಲಿ ಹಲವುಕಡೆ ಹೊಟ್ಟೆಗಿಲ್ಲದ ಜನರು ಸೂರೆಮಾಡಿದರೆಂಬ ವಾರ್ತೆಗಳನ್ನು ಕೇಳಿದ್ದೇವೆ. ಈಗ ಮದ್ರಾಸಿನಲ್ಲಿಯೂ ಇಂಥ ಘೋರಕೃತ್ಯಕ್ಕೆ ಆರಂಭವಾಯಿತೆಂದು ಕಳೆದವಾರದ ಸುದ್ದಿಗಳಿಂದ ಗೊತ್ತಾಗುತ್ತದೆ. ಇಂಥ ವಿಷಮಸ್ಥಿತಿಯು ತಮ್ಮಲ್ಲಿ ಪ್ರಾಪ್ತವಾಗದಂತೆ ಮುಂದಾಗಿ ಎಚ್ಚತ್ತು ನಡೆಯುವುದು ಪ್ರತಿಯೊಂದು ಪಟ್ಟಣದವರಿಗೂ ಆವಶ್ಯಕರ್ತವ್ಯವಾಗಿದೆ. ಪ್ರಭುತ್ವದವರು ಸಹ ವಿಳಂಬನೆಯಿಲ್ಲದೆ ಪ್ರಮುಖವರ್ತಕರನ್ನು ಬರಮಾಡಿಕೊಂಡು ಮುಖ್ಯವಸ್ತುಗಳ ಬೆಲೆಯನ್ನು ನಿರ್ಣಯಿಸಿ, ಅದಕ್ಕೆ ಮೀರಿದ ಬೆಲೆಗೆ ಯಾರೂ ಮಾರಕೂಡದೆಂದು ಕಟ್ಟುಮಾಡುವುದು ಅತ್ಯಾವಶ್ಯಕವಾಗಿದೆ. ವರ್ತಕರು ಲಾಭದ ಆಸೆಯಿಂದ ಧಾನ್ಯಗಳನ್ನು ಕೊಂಡು ತುಂಬಿಟ್ಟು, ಸಹೋದರ ಪ್ರಜೆಗಳು ಹಸಿವಿನ ತಾಪದಿಂದ ನರಳಿ ಸಾಯುತ್ತಿರುವಾಗ ಹೆಚ್ಚುಬೆಲೆಗೆ ಮಾರಬೇಕೆಂದು ಸಂಕಲ್ಪಿಸಿಕೊಳ್ಳುವುದು ಧರ್ಮವಲ್ಲ. ಭರತಖಂಡದ ಧರ್ಮಗಳ ಮೂಲಕವಲ್ಲದೆ ಮಾನವರು ಅಧಿಕ ಆಸ್ತಿ ನಿರ್ದಯನಾಗಿದ್ದು ಮುಂದಕ್ಕೆ ಬರುವುದು ಅಸಂಭವ. ಮುಂದಾಲೋಚನೆಯುಳ್ಳ ಧರ್ಮಾತ್ಮರಾದ ವರ್ತಕರಾರೂ ಇಂಥ ಸಮಯವನ್ನೇ ತಮ್ಮ ಸಂಪಾದನೆಗೆ ಸುಸಂಧಿಯೆಂದು ತಿಳಿದುಕೊಳ್ಳಲಾರರು. ಆತ್ಮಾಶಯುಳ್ಳ ವರ್ತಕರು ಹಲವರು ಹೀಗೆ ಮಾಡಿ ಮೂಲಕ್ಕೇ ಹಾನಿಮಾಡಿಕೊಳ್ಳುತ್ತಿರುವುದನ್ನು ಪದೇಪದೇ ನಾವೇ ಕೇಳುತ್ತಿದ್ದೇವೆ. ಕಪಟದಿಂದ ಯಾವನಾದರೂ ವರ್ತಕರು ಬೆಲೆಗಳನ್ನು ನಿಷ್ಕಾರಣವಾಗಿ ಹೆಚ್ಚಿಸುತ್ತಿದ್ದರೆ ಪ್ರಭುತ್ವದವರು ದಣ್ಡದಿಂದ ಈ ವಿಷಯದಲ್ಲಿ ಪ್ರವರ್ತಿಸಿ ಅವರ ಆಟವನ್ನು ಸಾಗಗೊಡದಂತೆ ಮಾಡಬೇಕು. ಮುನಿಸಿಪಾಲಿಟಿಗಳಲ್ಲಿ ಬೇಗನೆ ಇದಕ್ಕೆ ಏರ್ಪಾಟನ್ನು ಮಾಡಬೇಕು. ಪ್ರಜಾಪ್ರಮುಖರೂ ಸಹ ತಮ್ಮ ಕರ್ತವ್ಯವನ್ನು ತಿಳಿದು ಪ್ರಭುತ್ವದವರಿಗೆ ಸಹಾಯಮಾಡುವುದು ಅತ್ಯಾವಶ್ಯಕವಾಗಿದೆ. ಸ್ಥಳಿಕ ಸರ್ಕಾರಗಳು ಇಂಥ ವಿಷಮಸಮಯದಲ್ಲೂ ಕೈಚಾಚಿ ಮೂಡದೆ ಕುಳಿತಿರುವುದು ಚೋದ್ಯವಾಗಿದೆ. ಪ್ರಭುತ್ವದವರು ತಮ್ಮ ಅನೇಕ ಶಾಖೆಗಳ ಸನ್ನಾಹ ಸಂಬಳದ ಕೆಲಸಗಾರರಿಗೆಲ್ಲಾ ಅಲೋಯನ್ಸನ್ನು ಕೊಡುವುದಕ್ಕೆ ಏರ್ಪಡಿಸಿಕೊಂಡಿದ್ದಾರೆ. ಸರ್ಕಾರದ ಸಂಬಳವುಳ್ಳವರಿಗೆ ನಿಯತವಾಗಿ ತಿಂಗಳಿಗೆ ಅಷ್ಟು ಹಣವಾದರೂ ಕೈಸೇರುತ್ತದೆ. ಆದರೆ ರೈತಾಬಿ ಜನರಲ್ಲೂ ಇತರ ಜನರಲ್ಲೂ ಲಕ್ಷಾಂತರ ಬಡಬಗ್ಗರು ನಿಯತವಾದ ಜೀವಿಕೆಯೂ ಇಲ್ಲದೆ ಹಂಬಲಿಸುತ್ತಿದ್ದಾರೆ. ಇವರ ಯೋಗಕ್ಷೇಮವನ್ನಲ್ಲಾ ಯಾರೂ ವಿಚಾರಿಸಬಾರದೆ? ಬೆಂಗಳೂರು ಮೈಸೂರಿನಂಥ ಮುಖ್ಯಪಟ್ಟಣಗಳಲ್ಲೇ ಅಕ್ಕಿಯು ಪಲ್ಲಕ್ಕೆ ೨೦ ರಿಂದ ೩೦ ರೂ. ಗಳವರೆಗೆ ಮಾರಲ್ಪಡುತ್ತಲಿದೆ. ರಾಗಿಯ ಬೆಲೆಯು ೧೦ ರೂ. ಜೋಳದ ಬೆಲೆ ೧೨ ರೂ. ಆಗಿದೆ. ರೂ. ಗೆ ೩-೪ ಮಣ ಸಿಗುತ್ತಿದ್ದ ೮-೮ ಆಣೆಗೊಂದು ಸೀಸೆಯಂತೆ ಸೀಮೆಯೆಣ್ಣೆಯೂ ಮಾರಲ್ಪಡುತ್ತಿದೆ. ಉಳಿದ ಒಟ್ಟೆಬರೆ ಮೊದಲಾದ ಪದಾರ್ಥಗಳ ಬೆಲೆಯ ವಿಷಯವೂ ಹೀಗೆಯೇ ಆಗಿದೆ. ತಿಂಗಳಿಗೆ ೮-೭ ರೂ. ಆದಾಯವೂ ಇಲ್ಲದ ಬಡವರು ಇಂಥ ಕಾಲದಲ್ಲಿ ಹೇಗೆ ಬದುಕಬೇಕು? ಹೊಟ್ಟೆಗಿಲ್ಲದ ಕಷ್ಟವನ್ನು ಅವರು ಹೇಗೆ ಎಷ್ಟುಕಾಲ ಸೈರಿಸಬಲ್ಲರು? ಅದು ಕಾರಣ ಪ್ರಭುತ್ವದವರು ನಮ್ಮ ದೇಶದಲ್ಲೂ ಅಶಾಂತಿ ದೌರ್ಜನ್ಯಗಳು ತಲೆಯೆತ್ತುವುದಕ್ಕೆ ಮುಂಚೆಯೇ ಆಹಾರ್ಯವಸ್ತುಗಳು ಹೊರಕ್ಕೆ ಸಾಗಿಹೋಗದಂತೆ ನಿರ್ಬಂಧಿಸುವುದಲ್ಲದೆ ಆಹಾರ್ಯೇತರಪದಾರ್ಥಗಳ ಬೆಲೆಯನ್ನು ನಿಗದಿಮಾಡುವ ಯತ್ನವನ್ನು ಮಾಡಿ, ಸಾಧ್ಯವಾದ ಕಡೆಯಲ್ಲಿ ಬೇಕಾದ ಸಹಾಯಪ್ರೋತ್ಸಾಹಗಳನ್ನು ಪ್ರಕೃತೀಕರಿಸಿ ಅಂಗಡಿಗಳ ಮೂಲಕ ಪದಾರ್ಥಗಳನ್ನು ಮಿತವಾದ ಬೆಲೆಗೆ ಮಾರಿಸುವ ಏರ್ಪಾಟನ್ನು ಮಾಡಿ ದೇಶವನ್ನು ಕಾಪಾಡುವವರಾಗಬೇಕೆಂದು ಕೋರುತ್ತೇವೆ.

ಕರ್ನಾಟಕ ಸಾಹಿತ್ಯಸಮ್ಮೇಳನದಲ್ಲಿ ಆದ ನಿರ್ಧಾರಗಳು.

೧. ಈಗಣ ಯುದ್ಧದಲ್ಲಿ ಆಂಗ್ಲಸಾಮ್ರಾಜ್ಯದ ಜಯಪ್ರಾರ್ಥನೆ.

೨. ಮಾಧ್ಯಮಿಕಶಾಲೆಗಳಲ್ಲಿ ಆಂಗ್ಲಭಾಷೆಯಿಂದ ವಿದ್ಯಾಭ್ಯಾಸವಾದುದರಿಂದ ವಿದ್ಯಾರ್ಥಿಗಳಿಗೆ ಶಾರೀರಕ ಮಾನಸಿಕ ಭಾರವನ್ನು ಹೆಚ್ಚಿಸಿರುತ್ತಿರುವುದರಿಂದ ಆಂಗ್ಲಭಾಷೆಯ ಹೊರತು ಉಳಿದ ವಿಷಯಗಳನ್ನೆಲ್ಲಾ ದೇಶಭಾಷೆಯಲ್ಲೇ ಕಲಿಸುವಂತೆಯೂ, ಕಲಾಶಾಲಾ ಶಿಕ್ಷಣದಲ್ಲಿ ಕನ್ನಡವನ್ನು ದ್ವಿತೀಯ ಭಾಷೆಗಳೊಳಗೊಂದಾಗಿ ಸೇರಿಸುವಂತೆಯೂ ಮಾಡಬೇಕೆಂದು ಅಧಿಕಾರಿಗಳಲ್ಲಿ ಪ್ರಾರ್ಥಿಸುವುದು.

೩. ಕನ್ನಡವು ಬಳಕೆಯಲ್ಲಿರುವ ಇಂಗ್ಲಿಷ್ ಆಳಿಕೆಯ ದೇಶಭಾಗಗಳಲ್ಲೂ ದೇಶೀಯಸಂಸ್ಥಾನಗಳಲ್ಲೂ ಬಾಲವಿದ್ಯಾಭ್ಯಾಸವನ್ನು ಕನ್ನಡದಲ್ಲೇ [illegible], ರಾಜಕೀಯ ವ್ಯವಹಾರವನ್ನು ಕನ್ನಡದಲ್ಲಿ ನಡೆಯುವಂತೆಯೂ ಪ್ರಾರ್ಥಿಸುವುದು.

೪. ಮೈಸೂರು, ಬೊಂಬಾಯಿ, ಮದ್ರಾಸು ಕಾಲೇಜುಗಳಲ್ಲಿ ಉಪಯೋಗಿಸತಕ್ಕ ಪಠ್ಯಪುಸ್ತಕಗಳೆಲ್ಲಾ ಒಂದೇರೀತಿಯಾಗಿರುವಂತೆ ಮಾಡಬೇಕೆಂದು ಆಯಾ ಸರ್ಕಾರಗಳನ್ನು ಪ್ರಾರ್ಥಿಸುವುದು.

೫. ಮದ್ರಾಸು, ಮೈಸೂರು ಪ್ರಭುತ್ವದವರುಗಳು ಸ್ಥಾಪಿಸಿರುವಂತೆ ಬೊಂಬಾಯಿ ಪ್ರಭುತ್ವದವರೂ ಪಂಡಿತಪರೀಕ್ಷೆಯನ್ನು ಏರ್ಪಡಿಸಬೇಕೆಂದು ಪ್ರಾರ್ಥಿಸುವುದು.

೬. ಕನ್ನಡನಾಡಿಯ ಮಹಾನಿಘಂಟುವೊಂದನ್ನು ರಚಿಸಬೇಕು. ಕನ್ನಡದ ನವೀನಗ್ರಂಥಗಳನ್ನು ಕಾಲೋಚಿತವಾಗಿ ಬರೆಯಿಸಿಯೂ ಪ್ರಾಚೀನವಾದುವುಗಳನ್ನು ಸಂಪಾದಿಸಿಯೂ ಪರಿಶೋಧಿಸಿ ಪ್ರಕಟಿಸುವುದಕ್ಕೆ ಒಂದು ಸಂಘವನ್ನು ಏರ್ಪಡಿಸಬೇಕು.

೭. ಬಾಲಿಕೆಯರ ವಿದ್ಯಾಭ್ಯಾಸಕ್ಕೆ ತಕ್ಕುವಾದ ಗ್ರಂಥಗಳನ್ನು ಬರೆಯಿಸಿ ಅಚ್ಚುಮಾಡಿಸಿ ಕಲಿಸುವಂತೆ ಸರ್ಕಾರದವರನ್ನು ಪ್ರಾರ್ಥಿಸುವುದು.

೮. ಬೊಂಬಾಯಿ ಮದ್ರಾಸು ಮೈಸೂರು ಪ್ರಾಂತಗಳ ಕರ್ನಾಟಕಾಕ್ಷರ ಲೇಖನಸರಣಿಯು ಒಂದೇರೀತಿಯಾಗುವಂತೆ ಮಾಡುವುದು ಅವಶ್ಯಕವಾದುದರಿಂದ ಒಂದೇತೆರದ ಅಕ್ಷರಮಾಲೆಯನ್ನು ಎಲ್ಲ ಸರ್ಕಾರದವರೂ ಉಪಯೋಗಿಸುವಂತೆ ಮಾಡಬೇಕೆಂದು ಪ್ರಾರ್ಥಿಸುವುದು.

೯. ಮಹಾರಾಷ್ಟ್ರ, ಗುಜರಾತಿ, ತೆನುಗು ಮೊದಲಾದ ದೇಶೀಯ ಭಾಷಾ ಸಾಹಿತ್ಯಸಮ್ಮೇಳನದವರೊಡನೆ ಕರ್ನಾಟಕ ಸಾಹಿತ್ಯಸಮ್ಮೇಳನದವರೂ ಕೂಡಿ ಭಾಷಾಸಾಮಾನ್ಯಸುಧಾರಣ ವಿಷಯದಲ್ಲಿ ಒಟ್ಟಿಗೆ ಕೂಡಿ ಕೆಲಸಮಾಡಬೇಕು.

ಹೀಗೆ ನಿರ್ಧಾರಗಳಾದುದಲ್ಲದೆ ಮ|| ಬಾಲಾಚಾರ್ಯ ಸಕ್ಕರಿ ಎಂಬವರು ನೂತನವಾಗಿ ರಚಿಸಿರುವ 'ವಿಜಯನಗರ ಸಾಮ್ರಾಜ್ಯ' ಎಂಬ ವಿಷಯಕವಾದ ಕೀರ್ತನವೂ, ಗದಗಿನ ಆತ್ಮಾಚಾರ್ ನಾಟಕಸಂಘದವರ ಗದ್ಯರೂಪ ನಾಟಕಪ್ರಯೋಗವೂ ನಡೆದು ಭಾಷಾಸೇವಕರ ಮನಸ್ಸನ್ನು ಆನಂದಗೊಳಿಸಿದುವು. ಕರ್ನಾಟಕೇತಿಹಾಸಕ ಸಂಶೋಧಕಸಂಘದ ವಾರ್ಷಿಕಸಭೆಯೂ ಆ ದೇಶಾಲಕ್ಕೆ ರಾ|| ಬ|| ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಆ ಸಂಘದವರು ಇದುವರೆಗೆ ಸಂಶೋಧಿಸಿ ಸಂಗ್ರಹಿಸಿದ್ದ ಕೆಲ ತಾಮ್ರಪಟಗಳೂ, ಭಾವಚಿತ್ರಗಳೂ, ಪುರಾತನ ಗ್ರಂಥಗಳೂ ಸಹ ಪ್ರದರ್ಶನಕ್ಕಿಡಲ್ಪಟ್ಟಿದ್ದುವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಬರುವ ಜೂನ್ ತಾ|| ೨೦ ರಲ್ಲಿ ನಡೆಯುವುದಾಗಿದೆ.

೨ ನೆಯ ಕೌನ್ಸಿಲರಾದ ಮ|| ಸಿ. ಆರ್. ಬಾನರ್ಜಿಯವರಿಗೆ ಜೂನ್ ತಾ|| ೫ ರಿಂದ ೨ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ.

ರಾಜಧಾನಿಯಲ್ಲಿ ಗಾಳಿಯು ಹೆಚ್ಚಾಗಿ ಬಿಸಿಲು ಕಡಿಮೆಯಾಗಿದೆ. ಸದಾ ಮೋಡ ಮುಸುಕಿಕೊಂಡಿದ್ದರೂ ಗಟ್ಟಿಯಾದ ಮಳೆಯಿಲ್ಲ. ಪದಾರ್ಥಗಳ ದಾರಣೆಯು ಬಹಳ ಏರಿಕೆಯಲ್ಲಿದೆ.

ಮುಂದಣ ಜೂನ್ ತಾ|| ೧೭ ರಲ್ಲಿ ಮೈಸೂರು ಸಂಪದಭ್ಯುದಯ ಸಮಾಜದ ವಾರ್ಷಿಕಾಧಿವೇಶನವು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ನಡೆಯುವುದು.

ರೆವಿನ್ಯೂ ಮತ್ತು ಕ್ರಿಮಿನಲ್ ಅಧಿಕಾರಗಳನ್ನು ಬೇರ್ಪಡಿಸುವ ನೂತನವಿಧಾನವು ಸದ್ಯಃ ಬೆಂಗಳೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಬರುವ ಜನವರಿ ತಿಂಗಳಾರಭ್ಯ ಏರ್ಪಡಿಸಲ್ಪಡುತ್ತದೆ.

ಕಳೆದ ಬುಧವಾರದ ಒಕ್ಕಲಿಗರಪತ್ರಿಕೆಯ ಅಗ್ರಲೇಖನದಲ್ಲಿ ಮೈಸೂರು ಪ್ರಭುತ್ವದಲ್ಲಿ ಪಕ್ಷಪಾತದಿಂದ ನಡೆಯಿಸಲ್ಪಡುತ್ತಿರುವ ಅಕ್ರಮಗಳು ಸಯುಕ್ತಿಕವಾಗಿಯೂ ನ್ಯಾಯವಾಗಿಯೂ ಆಕ್ಷೇಪಿಸಲ್ಪಟ್ಟಿರುವುದು ಅವಲೋಕನೀಯವಾಗಿದೆ.

ಶ್ರೀಹಾನಗಲ್ ಕುಮಾರಸ್ವಾಮಿಯವರನುಗ್ರಹದಿಂದ ಶಿಕಾರಿಪುರ ತಾ|| ಕಪ್ಪನಹಳ್ಳಿಯ ಬಳಿ ಸಂಗನಬ ಹತ್ತಿರ ಗವಿಮಠದ ಕೆಳಗೆ ಪ್ರತಿಷ್ಠಾಪಿಸಲ್ಪಟ್ಟಿರುವ ಶಿವಯೋಗಾಶ್ರಮದ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ನಡೆಸಿತೆಂದೂ ಈಗ ಅದು ಮನೋಹರವಾದ ಯತ್ಯಾಶ್ರಮದಂತೆ ಸದ್ಭಕ್ತಿ ಸದಾಚಾರ ಧರ್ಮಕ್ಕೆ ಮೂಲಭೂತವಾಗಿರುವುದೆಂದೂ ಒಬ್ಬ ಪ್ರತ್ಯವಹಾರಕರು ಬರೆದಿರುವುದನ್ನು ತಿಳಿಯಲು ಸಂತೋಷಿಸುತ್ತೇವೆ.

ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ನಾನಾತೆರದ ವಿಜೃಂಭಣೆಗಳಿಂದಲೂ, ಭಕ್ತಿಭಾವದಿಂದಲೂ, ಮತಾಭಿಮಾನದಿಂದಲೂ ನಡೆಯಿರುವ ಬಗೆಗೆ ಚಿಕ್ಕಮಗಳೂರು, ಮದ್ದಗಿರಿ ತಾ|| ಚಕ್ರವಾಳ್ಳ, ಹಿರೇಕೆರೂರು, ತಾಳೀಕೋಟೆ, ಬೇಲವಾಡಿ, ಪಾಳ್ಯ ಇತ್ಯಾದಿ ಸ್ಥಳಗಳಿಂದ ಬಂದಿರುವ ಲೇಖನಗಳು ಬಹಳ ದೀರ್ಘವಾಗಿ ಬರೆಯಲ್ಪಟ್ಟಿರುತ್ತವೆ. ಸ್ಥಳಾಭಾವದಿಂದ ಆ ವಿವರವನ್ನೆಲ್ಲಾ ಪ್ರಕಟಿಸಲಾರದುದಕ್ಕಾಗಿ ಲೇಖಕರ ಕ್ಷಮೆಯನ್ನು ಬೇಡುವುದಲ್ಲದೆ ಈ ಉತ್ಸವವನ್ನು ಅಭಿಮಾನದಿಂದ ನಡೆಯಿಸುತ್ತ ಬಂದಿರುವ ಮಹಾಜನರನ್ನೆಲ್ಲಾ ಅಭಿನಂದಿಸುತ್ತೇವೆ.

ಮೈಸೂರಿನ ವೀರಶೈವ ಮಹಾಜನರು ಮರಿಮಲ್ಲಪ್ಪನವರ ಹೈಸ್ಕೂಲಿನ ಆಡಳಿತವನ್ನು ಕ್ರಮಪಡಿಸುವುದಕ್ಕೆ ಕಾರ್ಯಭಾಗವನ್ನು ನಡೆಯುವ ವಿಷಯದಲ್ಲಿ ಯೋಚಿಸುವುದಕ್ಕಾಗಿ ಕಳೆದ ತಾ|| ೧೮ ರಲ್ಲಿ ಶಂಕರಲಿಂಗ ಪಾಠಶಾಲಾಭವನದಲ್ಲಿ ಮ|| ವೈ. ವಿರುಪಾಕ್ಷಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದು ಮ|| ಎಂ. ಬಸವಯ್ಯ, ಬಿ.ಎ., ಬಿ.ಎಲ್., ರವರಿಗೆ ಈ ಭಾರವನ್ನು ವಹಿಸಿಕೊಡುವ ನಿರ್ಧಾರವನ್ನು ಮಾಡಿದರು. ಇದಕ್ಕೆ ವಿರುದ್ಧವಾಗಿ ಈಚೆಗೆ ವೀರಶೈವರ ಮನೆಮನೆಗೆ ಹೋಗಿ ಒಂದು ಕಾಗದಕ್ಕೆ ಒಬ್ಬೊಬ್ಬರು ರುಜುಹಾಕಿಸುತ್ತಲಿರುವರೆಂದೂ, ಅವರು ಟ್ರಸ್ಟಿಗಳ ಪೈಕಿ ಒಬ್ಬರಾಗಿರುವರೆಂದೂ ಕೇಳಿ ಆಶ್ಚರ್ಯಪಡುತ್ತೇವೆ.

ಯುದ್ಧವಾರ್ತೆಯು.

ಮಳೆಯು ಹೆಚ್ಚಾಗಿ ಸುರಿದಿರುವ ಕಾರಣದಿಂದ ಭೂಮಿಯ ಮೇಲೆ ಯುದ್ಧಮಾಡುವುದಕ್ಕೆ ಪಶ್ಚಿಮರಂಗದಲ್ಲಿ ಅವಧಿ ಕಡಿಮೆಯಾಗಿದೆ. ಶತ್ರುಗಳ ನುಗ್ಗಾಟವನ್ನು ಮಿತ್ರಮಂಡಲಿಯವರು ಪ್ರತಿಯೊಂದು ಕಡೆಯೂ ನಿಲ್ಲಿಸಿಬಿಟ್ಟಿರುವುದಲ್ಲದೆ ಹಲವು ಕಡೆ ಮಿತ್ರಮಂಡಲಿಯವರೇ ಶತ್ರುಗಳ ಮೇಲೆ ನುಗ್ಗಿ ಹೋಗುತ್ತಿದ್ದಾರೆ. ಶತ್ರುಗಳು ತಮ್ಮ ಆರಂಭಕಾಲದ ಶಕ್ತಿಯು ಹೀಗೆ ವ್ಯರ್ಥವಾಯಿತೆಂಬುದನ್ನು ಅರಿತುಕೊಂಡಿದ್ದಾರೆ. ಮತ್ತೊಂದುಸಲ ಅವರು ಪಶ್ಚಿಮರಂಗದಲ್ಲಿ ಬಲವಾದ ಆಕ್ರಮಣವನ್ನಾರಂಭಿಸಬಹುದು. ಇದೇ ಸಮಯದಲ್ಲಿ ಇಟಲಿಯ ಮೇಲೆ ಆಸ್ಟ್ರಿಯನ್ನರು ಬಲವಾದ ಆಕ್ರಮಣವನ್ನಾರಂಭಿಸುವಂತೆ ಮಾಡುವರೆಂದೂ ಎರಡು ಕಡೆಯೂ ಹೀಗೆ ದಾಳಿಯಿಟ್ಟರೆ ತಮ್ಮ ಕಾರ್ಯಸಿದ್ಧಿಯಾಗುವುದೆಂದೂ ಅವರು ಯೋಚಿಸಿಕೊಂಡಿರುವಂತೆ ವರ್ತಮಾನವಿದೆ. ಪಶ್ಚಿಮರಂಗಕ್ಕೆ ಬಂದಿದ್ದ ಆಸ್ಟ್ರಿಯನ್ ಫಿರಂಗಿಗಳನ್ನೆಲ್ಲಾ ಅವರು ಇಟಲಿ ರಂಗಕ್ಕೆ ಕಳುಹಿಸಿಕೊಟ್ಟಿದ್ದಾರಂತೆ. ಈಗ ಅಮೇರಿಕಾ ಸೈನ್ಯವು ಪಶ್ಚಿಮ ರಂಗದ ಉತ್ತರ ಭಾಗವನ್ನೆಲ್ಲಾ ವಿಶೇಷವಾಗಿ ವ್ಯಾಪಿಸಿಕೊಂಡಿದೆ. ಬೆಲ್ಜಿಯಮ್ಮಿನವರಿಂದಲೂ ಅವರು ಆವರಿಸಿರುವ ಪ್ರದೇಶವು ಮಿಗಿಲಾಗಿದೆ. ಶತ್ರುಗಳು ಇಂಗ್ಲಿಷ್ ಫ್ರೆಂಚ್ ಸೇನೆಗಳನ್ನು ಬೇರ್ಪಡಿಸಿ ನುಗ್ಗಿ ಸಮುದ್ರತೀರದ ಪಟ್ಟಣಗಳಿಗೆ ಸೇರಬೇಕೆಂದು ಯಾವ ಭಾಗದಲ್ಲಿ ಸುರಿಯುತ್ತಿರುವರೋ ಅಂಥ ಭಾಗದಲ್ಲಿ ಬಲವಾಗಿ ನಿಂತಿರುವ ಇಂಗ್ಲಿಷ್ ಸೈನ್ಯದ ಜತೆಗೆ ಅಮೇರಿಕ ಸೈನ್ಯವೂ ಕೂಡ ವಿಶೇಷವಾಗಿ ಹೋಗಿ ಸೇರಿದೆ. ಶತ್ರುಗಳು ಆ ಕಡೆಯಲ್ಲಿ [illegible] ಪ್ಯಾರಿಸ್ಸಿನ ಮೇಲಕ್ಕೂ ಪಶ್ಚಿಮದ ಕಡೆಯಲ್ಲಿ ಇಂಗ್ಲಿಷ್ ಕಡಲುಕಾಲುವೆಯ ತೀರಕ್ಕೂ ನುಗ್ಗಿಹೋಗಲು ಅನುಕೂಲಿಸುವಂಥ ಮಾರ್ಗಗಳುಳ್ಳ ಮಧ್ಯಭಾಗದಲ್ಲಿ ನಿಂತಿರುವ ಮಿತ್ರಮಂಡಲಿ ಸೈನ್ಯದ ಮೇಲೆ ಶತ್ರುಗಳು ಈಗ ಮಹಾ ಪ್ರಚಂಡವನ್ನು ಮಾಡುತ್ತಿದ್ದಾರೆ. ನ್ಯಾಪೋಲಿಯಿಂದ ಏಮಿಯನ್ನವರೆಗಿರುವ ೫೦ ಮೈಲಿಗಳುದ್ದದ ಸ್ಥಳವೇ ಆ ಮುಖ್ಯಪ್ರದೇಶವಾಗಿದೆ. ಇಲ್ಲಿ ಮಿತ್ರಮಂಡಲಿ ಸೈನ್ಯವು ದುರ್ಭೇದ್ಯವಾಗಿದೆ. ಇಲ್ಲಿಗೆ ಅಮೇರಿಕನ್ ಸೈನ್ಯವೂ ಸೇರಿದೆ. ಇಟಲಿಯ ಒಂದು ಸೈನ್ಯವೂ ಇಲ್ಲಿಗೆ ಬಂದಿದೆ. ಆವಶ್ಯಕತೆ ಬಿದ್ದ ಸ್ಥಳಕ್ಕೆ ಬೇಕು ಬೇಕಾದಾಗ ಹೊಸಹೊಸ ಸೈನ್ಯಗಳನ್ನು ಸಾಗಿಸುವುದಕ್ಕೆ ವಿಶಾಲ ಸೈನ್ಯಗಳನ್ನು ಬೇರೆ ಇಟ್ಟುಕೊಂಡಿದ್ದಾರೆ. ಜರ್ಮನರು ಕೂಡ ಈ ಪಶ್ಚಿಮರಂಗದಲ್ಲಿಟ್ಟಿರುವ ತಮ್ಮ ಸೈನ್ಯದಲ್ಲೆಲ್ಲಾ (೧೭ ಲಕ್ಷ) ತ್ರಿಭಾಗದಷ್ಟು ಸೈನ್ಯವನ್ನು ಓಯಿಜ್, ಏಪ್ರೆಸ್ಗಳ ಮಧ್ಯದಲ್ಲಿ ಕೂಡಿಸಿಕೊಂಡಿದ್ದಾರೆ. ಆ ಸೈನ್ಯವು ಮಿತ್ರಮಂಡಲಿ ಸೈನ್ಯದ ಮೇಲೆ ನುಗ್ಗಿ ಭೇದಿಸಿಬಿಟ್ಟರೆ ಬಳಿಕ ಮಿತ್ರಮಂಡಲಿಯವರ ಸಂಚಾರದ ಮಾರ್ಗಗಳೆಲ್ಲಾ ವಿಪತ್ತಿಗೆ ಗುರಿಯಾಗುವುವು. ಆದುಕಾರಣ ಬಲಮೆಟ್ಟನೆ ಈ ಭಾಗವನ್ನು ಮಿತ್ರಮಂಡಲಿಯವರು ಶತ್ರುಗಳಿಗೆ ದುರ್ಭೇದ್ಯಗೊಳಿಸಿ ಕಾಪಾಡುವುದಕ್ಕೆ ತಮ್ಮ ಯಾವತ್ತು ಶಕ್ತಿಯನ್ನು ಉಪಯೋಗಿಸುವವರಾಗಿದ್ದಾರೆ. ಅಂತು ಇಷ್ಟರಲ್ಲೇ ಈ ಭಾಗದೊಳಗೆ ನಡೆಯುವುದಕ್ಕಿರುವ ಮಹಾಯುದ್ಧವು ಪರಿಣಾಮ ಫಲದ್ಯೋತಕವಾಗುವುದೆಂಬುದು ಸುಳ್ಳಲ್ಲ. ಕಳೆದೆರಡು ವಾರಗಳ ಕಾಲದಲ್ಲಿ ವಿಶೇಷ ಯುದ್ಧಗಳೇನೂ ನಡೆಯದಿದ್ದರೂ ಸಾಮಾನ್ಯವಾಗಿ ನಡೆದ ಯುದ್ಧಗಳಲ್ಲಿ ಮಿತ್ರಮಂಡಲಿಯವರಿಗುಂಟಾದ ಜಯವೇ ಹೆಚ್ಚಾಗಿದೆ. ವೈಮಾನಿಕಯುದ್ಧದಲ್ಲಿ ಇಂಗ್ಲಿಷ್ ಫ್ರೆಂಚ್ ವೈಮಾನಿಕರೇ ಶತ್ರುಗಳ ಹಮ್ಮನ್ನಡಗಿಸಿಬಿಟ್ಟಿದ್ದಾರೆ. ಇನ್ನು ಅಮೇರಿಕರ ವಿಮಾನದಳವೂ ಬಂದು ಸೇರಿಬಿಟ್ಟರೆ ಶತ್ರುವಿಮಾನದಳದ ಗತಿಯೇನಾಗುವುದೋ ದೇವರೇ ಬಲ್ಲ. ಇಂಗ್ಲಿಷ್ ಸೇನಾಮುಖದಲ್ಲಿ ವಿಲ್ಲೇರ್ಸ್ ಬ್ರೆಟೊನ್ನೋ ಹತ್ತಿರ ನಡೆದ ಯುದ್ಧದಲ್ಲಿ ಆಸ್ಟ್ರೇಲಿಯನ್ ಸೈನಿಕರು ಆ ಗ್ರಾಮದ ಸುತ್ತಲೂ ಇದ್ದ ಜರ್ಮನ ಪ್ರದೇಶವನ್ನೆಲ್ಲಾ ವಶಪಡಿಸಿಕೊಂಡುದಲ್ಲದೆ ೧೬೦ ಮಂದಿ ಸೈನಿಕರನ್ನೂ ೨೦ ಯಂತ್ರದ ಫಿರಂಗಿಗಳನ್ನೂ ವಶಪಡಿಸಿಕೊಂಡು ಜಯಶಾಲಿಗಳಾದರು. ಇದರಿಂದ ಅಲ್ಲಿಯ ಇಂಗ್ಲಿಷ್ ಸೇನಾಪಂಕ್ತಿಯು ೨ ಮೈಲಿಗಳುದ್ದ ರಂಗದಲ್ಲಿ ಮುಂದಕ್ಕೆ ಸರಿದಂತಾಯಿತು. ಫ್ರೆಂಚ್ ಸೇನಾಮುಖದಲ್ಲಿ ಹಾಂಗಾರ್ಡ್ ಪ್ರಾಂತದೊಳಗೆ ಫ್ರೆಂಚ್ ಸೈನಿಕರು ಶತ್ರುಗಳ ೩ ನೆ ಸಾಲು ಕಂದಕದ ವರೆಗೂ ನುಗ್ಗಿ ಹೋಗಿ ಶತ್ರುಗಳಿಗೆ ವಿಶೇಷ ನಷ್ಟಗೊಳಿಸಿ ಅನೇಕಮಂದಿ ಸೈನಿಕರನ್ನು ಸೆರೆಹಿಡಿದುಕೊಂಡು ಬಂದಿದ್ದಾರೆ. ಜರ್ಮನರು ಯಾವ ಭಾಗದಲ್ಲಿ ನುಗ್ಗಿದರೂ ಅಲ್ಲೆಲ್ಲಾ ಅವರನ್ನು ಮಿತ್ರಮಂಡಲಿ ಸೈನ್ಯಗಳು ತಡೆದು ಹಿಮ್ಮೆಟ್ಟಿಸುತ್ತಲೇ ಇವೆ.

ಮೆಸೊಪೊಟೋಮಿಯದಲ್ಲಿ ಇಂಗ್ಲಿಷ್ ಸೈನ್ಯವು ಮುಂದುವರಿಯುತ್ತ ತುರ್ಕಿಸೈನ್ಯವು ಪರ್ಷಿಯಾ ಕಡೆಗೆ ಬಹುದೂರ ನುಗ್ಗಿಹೋಗುವುದಕ್ಕೆ ಅವಕಾಶವಿಲ್ಲದಂತೆ ಮಾಡುವುದರಲ್ಲಿದೆ. ತುರ್ಕಿ ಸೈನ್ಯವು ಪರ್ಷಿಯಾದಲ್ಲಿ ೨ ಪಟ್ಟಣಗಳನ್ನು ಹಿಡಿದಿದೆ.

ಭರತಖಂಡದವೃತ್ತಾಂತಗಳು.

ಜಸ್ಟಿಸ್ ಪತ್ರಿಕಾ ಸಂಪಾದಕರಾದ ಡಾಕ್ಟರ್ ನಾಯರ್ರವರು ದೇಹಾರೋಗ್ಯಕ್ಕಾಗಿ ಸೀಮೆಗೆ ಪ್ರಯಾಣಮಾಡಿ ಹೋದರೆಂದು ಪ್ರಕಟವಾಗಿದೆ.

ಅಹಮ್ಮದಾಬಾದ್ ಕಾರಾಗೃಹದಲ್ಲಿ ಸೆರೆಯಿಡಲ್ಪಟ್ಟಿದ್ದ ಜರ್ಮನ್ ಆಸ್ಟ್ರಿಯನ್ ಪ್ರಜೆಗಳಲ್ಲಿ ೧೧ ಮಂದಿಗಳು ತಪ್ಪಿಸಿಕೊಂಡು ಓಡಿಹೋಗಿದ್ದಾರೆ.

ರಂಗೂನಿನಲ್ಲಿ ಕಳೆದ ತಾ|| ೧೫ ರ ರಾತ್ರಿ ಒಂದು ಧಾನ್ಯದ ಯಂತ್ರಾಲಯಕ್ಕೆ ಬೆಂಕಿಬಿದ್ದು ೮ ಲಕ್ಷ ರೂ. ಗಳ ಯಂತ್ರಸಾಮಗ್ರಿಗಳೂ ೩ ಲಕ್ಷ ರೂ. ಗಳ ಧಾನ್ಯವೂ ಹಾಳಾದುವು.

ಯುದ್ಧಕಾರ್ಯಕ್ಕೆ ಉಪಯೋಗಿಸಿಕೊಳ್ಳುವುದಕ್ಕಾಗಿ ಭೂಪಾಲದ ಬೇಗಂರವರು ೧ ಲಕ್ಷ ರೂ. ಗಳನ್ನೂ ಜಾಂಬವಾನಬಾಬರು || ಲಕ್ಷ ರೂ. ಗಳನ್ನೂ ವೈಸ್ರಾಯರಿಗೆ ಅರ್ಪಿಸಿದ್ದಾರೆ.

ಕಳೆದವಾರದಲ್ಲಿ ಧಾರವಾಡದೊಳಗೆ ಒಂದೇ ಒಂದು ರಾತ್ರಿಯಲ್ಲಿ ೪-೫ ಅಂಗುಲದಷ್ಟು ಮಳೆಯಾಗಿ ಊರನ್ನೆಲ್ಲಾ ಜಲಮಯವಾಡಿದುದಲ್ಲದೆ ಕೆರೆಕಟ್ಟೆಗಳಿಗೆ ವಿಶೇಷವಾಗಿ ನೀರು ತುಂಬಿತು.

ಸರ್ ಎಸ್. ಪಿ. ಸಿನ್ಹರವರು ಸಾಮ್ರಾಜ್ಯಯುದ್ಧಸಭೆಗೆ ಭಾರತಪ್ರತಿನಿಧಿಗಳಾಗಿ ಪ್ರಯಾಣಮಾಡುದರಿಂದ ಅವರ ಸ್ಥಾನಕ್ಕೆ ಬರದ್ವಾನ್ ಮಹಾರಾಜರು ವೈಸ್ರಾಯರ ಕಾರ್ಯನಿರ್ವಾಹಕ ಸಭೆಯ ಸದಸ್ಯರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕೃಷ್ಣಾ ಜಿಲ್ಲೆಗೆ ಸೇರಿದ ಉಯ್ಯೂರು ಎಂಬ ಊರಿನಲ್ಲಿಯೂ ಕಂಚಿಪಾಡು ಎಂಬ ಗ್ರಾಮದಲ್ಲಿಯೂ ಅಂಗಡಿಗಳ ಸೂರೆಗಳು ಹಗಲುಹೊತ್ತಿನಲ್ಲೇ ನಡೆದು ಲಕ್ಷಾಂತರ ರೂ. ಗಳ ಸೊತ್ತುಗಳು ದೋಚಿಕೊಳ್ಳಲ್ಪಟ್ಟಿರುವುವೆಂದು ಪ್ರಕಟವಾಗಿದೆ.

ಕಳೆದ ತಾ|| ೧೭ ರಿಂದ ಅಮೇರಿಕಾದಿಂದ ೧೦ ಲಕ್ಷ ಡಾಲರುಗಳ ಬೆಲೆಯ ಬೆಳ್ಳಿಯು ಪೂರ್ವದೇಶಗಳಿಗೆ ಕಳುಹಿಸಿಕೊಡಲ್ಪಟ್ಟಿರುವುದು. ಅದಕ್ಕೆ ಹಿಂದಣವಾರದಲ್ಲಿ ೨೦ ಲಕ್ಷ ಡಾಲರುಗಳ ಬೆಲೆಯ ಬೆಳ್ಳಿಯು ಈ ದೇಶಗಳಿಗೆ ಕಳುಹಿಸಿಕೊಡಲ್ಪಟ್ಟಿರುವುದು.

ಮಚಲಿಬಂದರಿನಲ್ಲಿ ಕೂಲಿಗಾರರಾದ ಬಡಜನರು ಬಟ್ಟೆಯ ಮತ್ತೂ ಧಾನ್ಯದ ಅಂಗಡಿಗಳಿಗೆ ನುಗ್ಗಿ ಸೂರೆಮಾಡಿದರು. ಅಲ್ಲಿಯ ಧರ್ಮಾತ್ಮರು ಬಡಬಗ್ಗರಿಗಾಗಿ ಪದಾರ್ಥಗಳನ್ನು ಅಗ್ಗವಾಗಿ ಮಾರಲು ಏರ್ಪಡಿಸಿದುದರಿಂದ ಗದ್ದಲವು ಶಾಂತವಾಗಿದೆ.

ಆಂಗ್ಲಪ್ರಭುತ್ವಕ್ಕೆ ದ್ರೋಹಮಾಡುವ ಉಪದೇಶದಿಂದ ಶತ್ರುಗಳೊಡನೆ ಕಾರ್ಯಭಾಗ ನಡೆಯಿಸಿದನೆಂಬ ತಪ್ಪಿತಕ್ಕೆ ಗುರಿಯಾಗಿ ಚಂಗಲ್ಪಟ್ ಜಿಲ್ಲಾಜಡ್ಜರ ಮುಂದೆ ವಿಚಾರಣೆ ಮಾಡಲ್ಪಡುತ್ತಿದ್ದ ಸೀತಾರಾಮಯ್ಯರ್ ಎಂಬುವನಿಗೆ ೧೨ ವರ್ಷಗಳ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು.

ಅಮೇರಿಕಾದಿಂದ ಬಹಳ ಬೆಳ್ಳಿಯು ಮೊನ್ನೆವಾರದಲ್ಲಿ ಭರತಖಂಡಕ್ಕೆ ಬಂದಿಳಿದಿರುತ್ತದೆ. ಇನ್ನಷ್ಟು ಬೆಳ್ಳಿಯು ಭರತಖಂಡಕ್ಕೆ ಬರುತ್ತಲಿದೆ. ಬೊಂಬಾಯಿಯ ಟಂಕಸಾಲೆಯಲ್ಲಿ ಬೆಳ್ಳಿಯನ್ನು ಕರಗಿಸಿ ರೂಪಾಯಿಗಳನ್ನು ಮಾಡುತ್ತಿದ್ದಾರೆ. ಈ ತಿಂಗಳ ಕೊನೆಯೊಳಗೇ ಈ ವರ್ಷದ ಹೊಸ ರೂ. ಗಳು ವ್ಯವಹಾರಕ್ಕೆ ಬರುವುದರಲ್ಲಿವೆ.

ಕೋಯಮುತ್ತೂರಿನಲ್ಲಿ ಅಖಿಲಭಾರತ ಹಿಂದೂಯುನಾನಿ ವೈದ್ಯ ಸಭೆಯು ಆ|| ಸರ್. ಫಜಲ್ಭಾಯಿ ಕರೀಂಭಾಯಿಯವರ ಅಧ್ಯಕ್ಷತೆಯಿಂದ ಜರುಗಿತು. ಗ್ವಾಲಿಯರ್ ಮಹಾರಾಜರೇ ಮೊದಲಾದ ಅನೇಕ ಮಹನೀಯರು ಸಭೆಗೆ ದಯಮಾಡಿದ್ದರು. ಹಿಂದೂ ಯುನಾನಿ ವೈದ್ಯಗಳನ್ನು ಆಧುನಿಕ ಪದ್ಧತಿಯನ್ನನುಸರಿಸಿ ಬೋಧಿಸಿ ಅವುಗಳ ವ್ಯಾಪನೆಯನ್ನು ಹೆಚ್ಚಿಸಬೇಕೆಂಬ ನಿರ್ಧಾರಗಳು ಮಾಡಲ್ಪಟ್ಟುವು.

[illegible] ಕೂಲಿಗಾರರು ಅಂಗಡಿಗಳನ್ನು ಸೂರೆಮಾಡುತ್ತಿರುವರು. [illegible] ಜಿಲ್ಲೆಯಲ್ಲಿ ಇಂಥ [illegible] ಜರುಗಿದುವು. [illegible] ಅಂಗಡಿಗಳು [illegible] ರುವುವು. ಅಲ್ಲಿಗೆ ಸೈನ್ಯವು ಕಳುಹಿಸಲ್ಪಟ್ಟು ಶಾಂತಿಯುಂಟುಮಾಡಲಟ್ಟಿದೆ. ಪದಾರ್ಥಗಳ ಬೆಲೆ ಹೆಚ್ಚಿರುವುದೇ ಇಂಥ ಕೃತ್ಯ ನಡೆಯಲು ಕಾರಣವಂತೆ.

ಸ್ಟೇಟ್ಸೆಕ್ರೆಟರಿ ಮ|| ಮಾಂಟೆಗ್ರವರು ಬಾಬು ಭೂಪೇಂದ್ರನಾಥ ಬಾಸುರವರು ಸಹ ಭರತಖಂಡದಿಂದ ಸೀಮೆಗೆ ಸುರಕ್ಷಿತವಾಗಿ ಹೋಗಿ ಸೇರಿದರೆಂದು ಕಳೆದವಾರದ ತಂತ್ರೀವಾರ್ತೆಗಳಿಂದ ಗೊತ್ತಾಗುತ್ತದೆ. ಬಾಸುರವರು ಇಂಡಿಯಾ ಕೌನ್ಸಿಲಿನಲ್ಲಿ ತಮ್ಮ ಕೆಲಸವನ್ನು ನೋಡುವುದಕ್ಕೆ ಉಪಕ್ರಮಿಸಿದ್ದಾರೆ. ಮ|| ಮಾಂಟೆಗ್ರವರು ತಾ|| ೧೭ ರಲ್ಲಿ ಸಾರ್ವಭೌಮರ ದರ್ಶನವನ್ನು ತೆಗೆದುಕೊಂಡು ಸಂಭಾಷಿಸಿ ಬಂದರು. ಭಾರತರಾಜಕೀಯ ಸಂಸ್ಕರಣ ವಿಷಯವಾಗಿ ಅವರು ಇಷ್ಟರಲ್ಲೇ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸುವವರಾಗಿದ್ದಾರೆಂದು ವರ್ತಮಾನ ಬಂದಿದೆ.

ಕೊಯಮುತ್ತೂರಿನಲ್ಲಿ ತಾ|| ೨೦ ರಲ್ಲಿ ನಡೆದ ಆರ್ಯವೈಶ್ಯ ಮಹಾಸಭೆಗೆ ಅಧ್ಯಕ್ಷರಾಗಬೇಕಾಗಿದ್ದ ಹೈದರಾಬಾದಿನ ಮ|| ರಾಮುನಿಪಲ್ಲಿಯ್ಯಶ್ರೇಷ್ಠರು ತಮ್ಮ ಅಸ್ವಸ್ಥತೆಯ ಮೂಲಕ ಬರದೆಹೋದ ಕಾರಣ ಮೈಸೂರಿನ ಮ|| ಎಸ್. ಪಿ. ಶೆಟ್ಟಿಯವರು ಅಧ್ಯಕ್ಷರಾಗಿ ಮಾಡಲ್ಪಟ್ಟಿದ್ದರು. ಇವರನ್ನು ನಿಲ್ದಾಣದಿಂದ ಉತ್ಸವಪೂರ್ವಕವಾಗಿ ಅಟ್ಟಹಾಸದಿಂದ ಕರೆದುಕೊಂಡು ಹೋದರು. ಮಹಿಳಾಸಭೆಗೆ ಸೇಲಮ್ಮಿನ ಆದಿನಾರಾಯಣ ಸೆಟ್ಟರ ಪತ್ನಿಯವರು ಅಧ್ಯಕ್ಷೆಯರಾಗಿ ಆರಿಸಲ್ಪಟ್ಟಿದ್ದರು. ಇದರ ಜತೆಗೆ ಆರ್ಯವೈಶ್ಯ ವಿದ್ಯಾರ್ಥಿ ಮಹಾಸಭೆಯೂ ನೆರವೇರಿತು.

ದ್ರಾವಿಡದೇಶದ ಒಂದು ಪ್ರಸಿದ್ಧ ಪಟ್ಟಣವಾದ ಮಧುರೆಯಲ್ಲಿ ಈ ವರ್ಷದ ಆಂಧ್ರಸಾಹಿತ್ಯ ಪರಿಷತ್ಸಭೆಯು ಆನೆಗೊಂದಿ ಸಂಸ್ಥಾನದ (ಕರ್ನಾಟಕ ಸಾರ್ವಭೌಮರೆನಿಸಿದ ವಿಜಯನಗರ ಪ್ರಭುಗಳ ವಂಶೀಯರಾದ) ಶ್ರೀರಂಗದೇವರಾಯಲುರವರ ಅಧ್ಯಕ್ಷತೆಯಿಂದ ಕಳೆದ ತಾ|| ೧೧ ರಲ್ಲಿ ಸಾಗಿತು. ಆ ಸಭೆಯಲ್ಲಿ ಸ್ವಾಗತಸಂಘಾಧ್ಯಕ್ಷರಾದ ಮ|| ವೀರಭದ್ರನಾಯುಡುರವರೂ ಮ|| ಜಯಂತಿರಾಮಯ್ಯ ಪಂತುಲುರವರೂ ಮಾಡಿದ ಉಪನ್ಯಾಸಗಳಿಂದ ಪೂರ್ವದಲ್ಲಿ ತಂಜಾವೂರು, ತಿರುಚನಾಪಲ್ಲಿ, ಮಧುರಾಸಂಸ್ಥಾನಗಳು ಆಂಧ್ರವಿಜ್ಞಾನಕ್ಕೆ ನೆಲೆಮನೆಯಾಗಿದ್ದುವೆಂದೂ ಆ ಮಂಡಲಿಗಳಲ್ಲಿ ಎಷ್ಟೋ ಪ್ರಸಿದ್ಧಾಂಧ್ರಕವಿಗಳಿದ್ದರೆಂದೂ ವ್ಯಕ್ತವಾಯಿತು.

ವಿದೇಶದವೃತ್ತಾಂತಗಳು.

ರಷ್ಯಾದ ಹಿಂದಣ ಚಕ್ರವರ್ತಿ ಕುಟುಂಬವೆಲ್ಲವೂ ಮತ್ತು ಗ್ರಾಂಡ್ ಡ್ಯೂಕ್ ನಿಕೋಲಸ್ರವರೂ, ಪೀಟರ್ ನಿಕೋಲೆವಿಚ್ ರವರೂ ಸಹ ಈಗ ಕ್ರಿಮಿಯಾದಲ್ಲಿ ನಿರ್ಬಂಧದಲ್ಲಿಡಲ್ಪಟ್ಟಿರುವರಂತೆ.

ಅಮೇರಿಕನ್ನರು ಫ್ರಾನ್ಸಿಗೆ ೫ ಲಕ್ಷ ಸೈನ್ಯವನ್ನು ಕಳುಹಿಸಿಕೊಡುವೆನೆಂದು ಒಪ್ಪಿಕೊಂಡಿದ್ದ ಗಡುವಿನೊಳಗಾಗಿ ಅದಕ್ಕಿಂತಲೂ ಹೆಚ್ಚಾಗಿಯೇ ಕಳುಹಿಸಿಕೊಟ್ಟಿರುವರೆಂದು ಯುದ್ಧಮಂತ್ರಿಯವರು ಹೇಳಿರುತ್ತಾರೆ.

ಇಂಗ್ಲೀಷರು ಸುಯೆಜ್ ಕಾಲ್ವೆಯ ಮೇಲೆ ಕಂಟಾರಾ ಪಟ್ಟಣದ ಹತ್ತಿರ ಕಟ್ಟುತ್ತಿದ್ದ ಸೇತುವಿನ ಕೆಲಸವು ಕಳೆದ ತಾ|| ೧೫ ಕ್ಕೆ ಮುಗಿದಿತು. ಇದರ ಮೂಲಕವಾಗಿ ಕೈರೋ ಪಟ್ಟಣದಿಂದ ಪಾಲೆಸ್ಟೈನಿಗೆ ಲೋಹಮಾರ್ಗವು ಹಾಕಲ್ಪಟ್ಟಿದೆ.

ಯುದ್ಧಾರಂಭವಾದ ಮೇಲೆ ಜರ್ಮನಿಯಲ್ಲಿ ಶಿಶುಗಳ ಮರಣಸಂಖ್ಯೆಯು ಬಹಳ ಹೆಚ್ಚಿದೆ. ೧೯೧೫ ನೆ ವರ್ಷದಲ್ಲಿ ಪ್ರಷ್ಯಾದಲ್ಲಿಯ ಶಿಶುಮರಣಸಂಖ್ಯೆಯು ೧೦೦೦ ಕ್ಕೆ ೧೨೪ ರಿಂದ ೧೪೩ ಕ್ಕೂ ಸ್ಯಾಕ್ಸನಿಯಲ್ಲಿ ೧೫೦ ಇದ್ದುದು ೨೪೨ ಕ್ಕೂ ಬವೇರಿಯಾದಲ್ಲಿ ೧೭೬ ಇದ್ದುದು ೩೩೭ ಕ್ಕೂ ಹೆಚ್ಚಿದೆ. ಇಂಥ ಮರಣಸಂಖ್ಯೆಯು ಇಂಗ್ಲೆಂಡು ವೇಲ್ಸ್ ದೇಶಗಳಲ್ಲಿ ೧೦೦೦ ಕ್ಕೆ ೧೧೮ ರಷ್ಟು ಇರುತ್ತದೆ.

ಆಸ್ಟ್ರಿಯಾ ಚಕ್ರವರ್ತಿಯವರು ಜರ್ಮನಿಗೆ ಹೋಗಿ ಅಲ್ಲಿಯ ಚಕ್ರವರ್ತಿಯವರೊಡನೆ ಮುಂದಣ ಜರ್ಮನಿ ಆಸ್ಟ್ರಿಯಾ ವರ್ತನದ ವಿಷಯವಾಗಿ ನೂತನ ಸಂಧಿಯನ್ನು ಮಾಡಿಕೊಂಡು ಬಂದರೆಂದು ಪ್ರಕಟವಾಗಿದೆ. ಈ ಸಂಧಿನಿಬಂಧನೆಗಳಲ್ಲಿ ಜರ್ಮನ್ನರ ಅಧಿಕಾರ ಪ್ರಾಬಲ್ಯವೇ ವಿಶೇಷವಾಗಿದ್ದು ಆಸ್ಟ್ರಿಯಾವು ಜರ್ಮನಿಯ ಸಾಮಂತ ಸ್ಥಿತಿಗೆ ಬರುವುದರಲ್ಲಿರುವುದರಿಂದ ಆಸ್ಟ್ರಿಯಾ ಪ್ರಜೆಗಳಲ್ಲಿ ಅದು ಅಸಮಾಧಾನವನ್ನುಂಟುಮಾಡಿದೆ.

ರಷ್ಯಾದ ಪ್ರಭುತ್ವವು ಈಗ ಮಾಸ್ಕೋ ಪಟ್ಟಣದಲ್ಲಿ ಸ್ಥಾಪಿತವಾಗಿದೆಯಷ್ಟೆ. ಅಲ್ಲಿ ರಾಜದ್ರೋಹಿಗಳು ಬಹುಶಃ ೬೦ ಸಾವಿರದವರೆಗೂ ಇರುವರಂತೆ. ಬೋಲ್ಶೆವಿಕರಿಗೂ ಈ ರಾಜದ್ರೋಹಿಗಳಿಗೂ ಮೊನ್ನೆವಾರದಲ್ಲಿ ಯುದ್ಧವಾಯಿತು. ಎರಡು ಪಕ್ಷದವರೂ ಪರಸ್ಪರ ಫಿರಂಗಿ ಮೊದಲಾದ ಆಯುಧಗಳನ್ನು ಪ್ರಯೋಗಿಸಿ ಕಾದಾಡಿದರು. ೨ ಕಡೆಯೂ ನಷ್ಟವಾಯಿತು. ಕೆಲಮಂದಿ ಆರಾಜಕರನ್ನು ಬಂಧಿಸಿ ಕಾರಾಗೃಹಕ್ಕೆ ಕೂಡಿದರು.

ರಷ್ಯಾದ ಬಾಲ್ಶೆವಿಕ್ ಪಕ್ಷದವರು ಜರ್ಮನರ ಮಾಯಾವಾದಗಳಿಗೆ ಮರುಳಾಗಿ ಸಂಧಿಮಾಡಿಕೊಂಡರಷ್ಟೆ. ಈಚೆಗೆ ಜರ್ಮನರು ಮಾಡುತ್ತಿರುವ ದೇಶಾಕ್ರಮಣ ಮೊದಲಾದ ದೌರ್ಜನ್ಯಗಳಿಂದ ತಾವು ಮೋಸಹೋದೆವೆಂಬುದನ್ನು ತಿಳಿದುಕೊಂಡು, ಜರ್ಮನರ ಹಸ್ತಗತವಾಗಿದ್ದ ಪ್ರದೇಶಗಳನ್ನು ತಾವು ಮರಳಿ ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದ್ದಾರೆ. ಕಳೆದವಾರದಲ್ಲಿ ಅವರು ಬಾಕೋಫ್ ಎಂಬ ಪಟ್ಟಣವನ್ನು ಜರ್ಮನರಿಂದ ಕಿತ್ತುಕೊಂಡಿರುವರು.

ಬಾಲ್ಟಿಕ್ ಸಮುದ್ರದ ಹಾಂಗೋ ರೇವಿನಲ್ಲಿ ಇಂಗ್ಲೀಷರ ಮತ್ತು ಅಮೇರಿಕನ್ನರ ಸಬ್ಮೆರೀನುಗಳು ರಷ್ಯಾದವರ ಸಹಾಯಾರ್ಥವಾಗಿ ಹೋಗಿದ್ದವು ಅಲ್ಲೇ ನಿಂತುಬಿಟ್ಟಿದ್ದುವು. ಈಚೆಗೆ ಅಲ್ಲೆಲ್ಲಾ ಜರ್ಮನರ ಪ್ರವೇಶವಾದ ಬಳಿಕ ಅವರ ನೌಕಾದಳಕ್ಕೆ ಈ ಸಬ್ಮೆರೀನುಗಳು ವಶವಾಗದಂತೆ ನಾಶಪಡಿಸಬೇಕೆಂಬ ಇಂಗ್ಲೀಷ್ ನೌಕಾದಳದವರ ಅಭಿಪ್ರಾಯ ಪ್ರಕಾರ ಆ ಸಬ್ಮೆರೀನುಗಳೆಲ್ಲಾ ನಾಶಗೊಳಿಸಲ್ಪಟ್ಟುವು. ಅವುಗಳಲ್ಲಿದ್ದ ನಾವಿಕರೆಲ್ಲಾ ಪೆಟ್ರೋಗ್ರೇಡಿಗೆ ಹೋದರು.

ಇತರವಿಷಯಗಳು.

ಮೇ ತಾ|| ೯ ರಿಂದ ೧೫ ರೊಳಗಾಗಿ ಇಂಗ್ಲೀಷರು ಶತ್ರುಗಳ ೬೧ ವಿಮಾನಗಳನ್ನು ಹೊಡೆದು ಕೆಡಹಿದರು. ಇಂಗ್ಲೀಷರವು ೧೯ ಕಾಣದೆಹೋದುವು. ರಣರಂಗದಲ್ಲೆಲ್ಲಾ ಯಥಾಪ್ರಕಾರ ಮಿತ್ರಮಂಡಲಿಯ ವಿಮಾನದಳದ ಆಧಿಕ್ಯವೇ ಸಂಪೂರ್ಣವಾಗಿದೆ.

ರಷ್ಯಾದ ದಕ್ಷಿಣಭಾಗದಲ್ಲಿದ್ದ ಜರ್ಮನರು ಇನ್ನೂ ಮುಂದಕ್ಕೆ ನುಗ್ಗಿ ಬರುತ್ತಲೇ ಇದ್ದಾರೆ. ರಷ್ಯನರು ಕೆರ್ಚ್ ಪಟ್ಟಣವನ್ನು ಬಿಟ್ಟುಕೊಟ್ಟರೆಂದೂ, ಅಲ್ಲಿಯ ರೈಲ್ವೆ ಪರಿಕರಗಳನ್ನೆಲ್ಲಾ ಸ್ವೀಕರಿಸಿ ಪರಿಶೋಧಿಸುತ್ತಿರುವರೆಂದೂ ಗೊತ್ತಾಗುತ್ತದೆ. ರಷ್ಯನರಿಗೂ ಜರ್ಮನರಿಗೂ ಮರಳಿ ಶತ್ರುತ್ವವು ವೃದ್ಧಿಯಾಗುವ ಲಕ್ಷಣವೇ ಕಾಣುತ್ತದೆ. ಆದರೆ ಈಗ ರಷ್ಯನರಿಂದೇನು ನಡೆದೀತು?

ರಷ್ಯಾಕ್ಕೆ ಸೇರಿದ [illegible] ರೋಸ್ಟರ್ಬರ್ಗ್ ಬಳಿಯಲ್ಲಿರುವ ಜರ್ಮನ್ ಸೈನಿಕರಲ್ಲಿ ಕೆಲರು ತಿರುಗಿಬಿದ್ದು ಅನೇಕಮಂದಿ ಸೈನ್ಯಾಧಿಕಾರಿಗಳನ್ನು ಕೊಂದರು. ಆಗ ಜರ್ಮನ್ ಸೇನಾಪತಿಯು ಸಂಬಳಕೊಟ್ಟು ಕೆಲವು ಸೈನ್ಯವನ್ನು ಅಲ್ಲಿಗೆ ಕಳುಹಿಸಲಾಗಿ ಅವರು ತಿರುಗಿಬಿದ್ದವರಲ್ಲಿ ೨೦೦ ಮಂದಿಗಳನ್ನು ಕೊಂದರು. [illegible]

ಕಳೆದ ಭಾನುವಾರ ರಾತ್ರಿ ೧೧ ಗಂಟೆಗೆ ಬಹುಶಃ ೨೦-೩೦ ಶತ್ರುವಿಮಾನಗಳು ಲಂಡನ್ ಜಿಲ್ಲೆಯ ಮೇಲಕ್ಕೆ ಹೋಗಿ ಸಿಡಿಮದ್ದುಗಳನ್ನು ಹಾಕಿದುವು. ಅದರಿಂದ ೧೭ ಮಂದಿ ಗಂಡಸರೂ, ೧೪ ಮಂದಿ ಹೆಂಗಸರೂ, ೬ ಮಕ್ಕಳೂ ಕೊಲ್ಲಲ್ಪಟ್ಟರು. ೮೩ ಮಂದಿ ಗಂಡಸರಿಗೂ, ೮೩ ಮಂದಿ ಹೆಂಗಸರಿಗೂ ೨೩ ಮಕ್ಕಳಿಗೂ ಏಟುಬಿದ್ದಿವೆ. ಬಹಳ ಮನೆಗಳಿಗೆ ನಷ್ಟವುಂಟಾಗಿರುವುದು. ಈ ಶತ್ರುವಿಮಾನಗಳ ಮೇಲೆ ಇಂಗ್ಲೀಷ್ ವೈಮಾನಿಕರೂ ಕಾವಲಿನ ದಳದವರೂ ಗುಂಡುಗಳನ್ನು ಪ್ರಯೋಗಿಸಿ ಬಹಳಮಟ್ಟಿಗೆ ನಿರೋಧಿಸಿದರು. ಗೊಥಾಜಾತಿಯ ಶತ್ರುವಿಮಾನವೊಂದು ಕೆಡಹಲ್ಪಟ್ಟು ಒಳಗಿದ್ದವರೆಲ್ಲಾ ಸಂಹೃತರಾದರು. ಒಟ್ಟು ಶತ್ರುಗಳ ೬ ವಿಮಾನಗಳು ನಷ್ಟಗೊಳಿಸಲ್ಪಟ್ಟುವು. ಇದಕ್ಕೆ ಮುಯ್ಯಾಗಿ ಆಂಗ್ಲವೈಮಾನಿಕರು ಶತ್ರುಗಳ ಕೊಲೋನ್ ಪಟ್ಟಣದ ಮೇಲಕ್ಕೆ ಅನಂತವಾಗಿ ಸಿಡಿಮದ್ದುಗಳನ್ನಿಟ್ಟು ಬಹಳ ನಷ್ಟಗೊಳಿಸಿ ತಾವು ಯಾವ ಅಪಾಯಕ್ಕೂ ಗುರಿಯಾಗದೆ ಹಿಂದಿರುಗಿ ಬಂದಿರುತ್ತಾರೆ. ಇದರಿಂದ ಆ ಪಟ್ಟಣದಲ್ಲಿ ೨೫ ಮಂದಿ ಸತ್ತರೆಂದೂ ೪೭ ಮಂದಿಗೆ ಏಟುಬಿದ್ದು ಗಾಯವಾದರೆಂದೂ, ವೈಮಾನಿಕರ ಸಿಡಿಮದ್ದುಗಳು ಬಹಳವಾಗಿ ಪಟ್ಟಣದ ಮಧ್ಯದಲ್ಲೇ ಬಿದ್ದುದರಿಂದ ನಷ್ಟವು ಅಪರಿಮಿತವಾಗಿ ಸಂಭವಿಸಿತೆಂದೂ ಹಲವು ಮನೆಗಳು ಧ್ವಂಸವಾದುವೆಂದೂ ಪ್ರಕಟವಾಗಿದೆ.

ವರ್ತಮಾನಹಾರ.

ಮರಿಮಲ್ಲಪ್ಪನವರ ಹೈಸ್ಕೂಲು.

ಮ|| ರಾ|| ಸ್ಟಾರ್ ಪತ್ರಿಕಾ ಎಡಿಟರವರ ಸ|| ಕ್ಕೆ.

ಸ್ವಾಮಿ!

ಈ ಸ್ಕೂಲಿನ ಆಡಳಿತವು ಸಮರ್ಪಕವಾಗಿಲ್ಲವೆಂಬ ಸುದ್ದಿಯು ಎಷ್ಟೋ ದೀರ್ಘಕಾಲದಿಂದಲೂ ಇತ್ತು. ಈಗ ಅದರ ನಿಜಸ್ಥಿತಿಯನ್ನು ಹೊರಪಡಿಸಿ ಸರ್ವರನ್ನೂ ಸಮಾಧಾನಪಡಿಸುವ ಕಾಲವು ಸನ್ನಿಹಿತವಾಗಿದೆ. ಸ್ವಕಾರ್ಯಸ್ವಾರ್ಥಗಳಮೇಲೆ ಲೇಶವೂ ಚಿಂತೆಯಿಲ್ಲದೆ ದೇಶಹಿತಾರ್ಥವಾಗಿಯೇ ತಮ್ಮ ವಿದ್ಯಾಬುದ್ಧಿ ಶಕ್ತಿ ಸಾಹಸಗಳನ್ನೆಲ್ಲಾ ಉಪಯೋಗಿಸಿ ಧನ್ಯಜನ್ಮರಾಗಬೇಕೆಂಬ ಸಂಕಲ್ಪವು ಯಾವ ಮ|| ಎಂ. ಬಸವಯ್ಯ, ಬಿ.ಎ.ಬಿ.ಎಲ್. ರವರಿಗೆ ಇರುವುದೋ ಅಂಥವರಿಂದಲೇ ಈ ದೇಶಹಿತಸಾಧಕವಾದ ಮರಿಮಲ್ಲಪ್ಪ ಹೈಸ್ಕೂಲಿನ ವಿಷಯವಾದರೂ ಪರಿಷ್ಕೃತವಾಗಬೇಕೆಂದು ವೀರಶೈವ ಮಂಡಲಿಯವರು ಯೋಚಿಸಿರುವುದು ಸಹಜವಾಗಿಯೇ ಇರುತ್ತದೆ. ವೀರಶೈವಮತಸ್ಥರಾದ ಒಬ್ಬ ಧರ್ಮಾತ್ಮರಿಂದ ವೀರಶೈವರ ವಿದ್ಯಾಭಿವೃದ್ಧಿಗಾಗಿ ಒಂದಾನೊಂದು ಕಾಲದಲ್ಲಿ ಏರ್ಪಡಿಸಲ್ಪಟ್ಟ ಈ ಧರ್ಮಪ್ರತಿಷ್ಠಾಪನೆಗೆ ನ್ಯೂನತೆಯುಂಟಾಗದಂತೆ ಕಾಪಾಡುವುದು ವೀರಶೈವಮತಸಂಭೂತರೆಲ್ಲರಿಗೂ ಕರ್ತವ್ಯವಾಗಿದ್ದರೂ, ಮ|| ಬಸವಯ್ಯನವರಂಥ ಸಮರ್ಥರು ತಮ್ಮ ಸಮಾಜಬಾಂಧವರ ಕೆಟ್ಟದೆಸೆಗೆ ಒಳಗಾಗಿ ಮನಸಿಟ್ಟು ನಿಂತುದು ಅವರಿಗೆ ಶ್ರೇಯಸ್ಕರವೂ ಕೀರ್ತಿಪ್ರದವೂ ಆಗಿರುವುದೆಂದು ಹೇಳಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಆದರೆ ಧರ್ಮಪ್ರತಿಷ್ಠಾ ಪರಿಷ್ಕರಣ ಕಾರ್ಯಕ್ಕೆ ಯಾರು ತೊಡಗಿದರೂ ಅದಕ್ಕೆ ಧರ್ಮಾಭಿಮಾನಿಗಳೆಲ್ಲರೂ ಸಂತೋಷಿಸಬೇಕಾದುದು ನ್ಯಾಯವಾಗಿದ್ದರೂ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಿಗೆ ಮಾತ್ರ ಈ ಕಾರ್ಯವು ಐಕ್ಯಕ್ಕೇ ಸೇರದೆ ಹೋಗಿದೆ. ಹಿಂದುಳಿದವರ ಉದ್ಧಾರಕ್ಕಾಗಿ ಸರ್ಕಾರದವರು ವೇತನಗಳನ್ನು ಕಲ್ಪಿಸುವುದೇ ಮೊದಲಾದ ಪ್ರಯತ್ನಗಳನ್ನೂ ಹಿಂದುಳಿದವರು ಮುಂದಕ್ಕೆ ಬರುತ್ತಿರುವುದನ್ನೂ ನೋಡಿ ಸೈರಿಸದೆ ಎಷ್ಟೆಷ್ಟೋ ವಿಕಾರವಾಗಿ ಕೂಗಿಕೊಂಡುದರಿಂದ ಹೊರಪಟ್ಟಿರುವ ಆ ಪತ್ರಿಕೆಗಳ ಅಂತರುದ್ದೇಶಗಳನ್ನು ತಿಳಿದಿರುವ ಪ್ರಜಾಸಾಮಾನ್ಯವು ಈಗಲೂ ಕೂಡ ಈ ನೂತನಪ್ರಯತ್ನದ ವಿಷಯದಲ್ಲಿ ಸಾಧ್ವೀ ಸಂಪದಭ್ಯುದಯಗಳು ಏಕೆ ವಿರಾಪಿಸಿಕೊಳ್ಳುತ್ತಿವೆಯೆಂಬುದನ್ನು ಅರಿಯದೆ ಹೋಗಲಾರದು.

ಆದರೂ ಸದರಿ ಪತ್ರಿಕೆಗಳಲ್ಲಿ ತರಂಗತರಂಗವಾಗಿ ಬರುತ್ತಲಿರುವ ಲೇಖನಗಳಲ್ಲಿ ಕಂಡುಬಂದಿರುವ ಅನ್ಯಾಯವಾದ ಕೆಲವಂಶಗಳನ್ನು ಕುರಿತು ಚರ್ಚಿಸದಿದ್ದರೆ ಯಥಾರ್ಥಜ್ಞರಾದ ಜನರು ಮೋಸಹೋಗಬಹುದೆಂದು ನಂಬಿ ಈ ಲೇಖನವನ್ನು ಬರೆದಿರುತ್ತೇನೆ.

ಈ ಲೇಖನಗಳಲ್ಲಿ—'ಬಸವಯ್ಯನವರು ಬ್ರಾಹ್ಮದ್ವೇಷಿಗಳು, ವೆಂಕಟಕೃಷ್ಣಯ್ಯನವರು ಬ್ರಾಹ್ಮಣರು. ಇವರಮೇಲಣ ದ್ವೇಷದಿಂದ ಇವರನ್ನು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ಟರ್ಗಿರಿಯಿಂದ ವಜಾಮಾಡಿಸಬೇಕೆಂಬುದು ಅವರ ಪ್ರಯತ್ನವಾಗಿದೆ. ಇವರಿಗೆ ವಿದ್ಯಾಭ್ಯಾಸಶಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರಾದ ರೆಡ್ಡಿಯವರು ಸಹಾಯಭೂತರಾಗಿಯೂ ಸೂತ್ರಧಾರಿಗಳಾಗಿಯೂ ಇದ್ದಾರೆ. ಸ್ಕೂಲಿನ ಆಡಳಿತವು ಬಹಳ ಸಮರ್ಪಕವಾಗಿದೆ. ವೆಂಕಟಕೃಷ್ಣಯ್ಯನವರು ೪೩ ವರ್ಷಗಳಿಂದ ಕೆಲಸಮಾಡಿ ಈ ಸ್ಕೂಲನ್ನು ಬಹಳ ಅಭಿವೃದ್ಧಿಗೆ ತಂದಿದ್ದಾರೆ. ಮರಿಮಲ್ಲಪ್ಪನವರ ಫಂಡಿನಿಂದ ಮಾಹೆಯಾನಾ ೧೨೫ ರೂ. ಗಳು ಮಾತ್ರ ಬಡ್ಡಿಯ ರೂಪವಾಗಿ ಬರುತ್ತದೆ. ಮಾಹೆಯಾನಾ ೩೫೦ ರೂ. ಸರ್ಕಾರಿ ಗ್ರಾಂಟು ಬರುತ್ತದೆ. ಸ್ಕೂಲಿನ ಮಾಹೆವಾರು ಖರ್ಚು ೧೨೦೦ ರೂ. ಗಳವರೆಗೂ ಆಗುತ್ತದೆ. ವೆಂಕಟಕೃಷ್ಣಯ್ಯನವರು ವೀರಶೈವ ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಬಹಳ ಶ್ರದ್ಧೆಯುಳ್ಳವರು, ಅವರೇ ಮೈಸೂರು ವೀರಶೈವಾಶ್ರಮವನ್ನು ಸ್ಥಾಪಿಸಿ, ೩೦ ರೂ. ಸರ್ಕಾರಿ ಗ್ರಾಂಟು ಬರುವಂತೆ ಮಾಡಿದರು. ಸ್ಕೂಲ್ ಫಂಡಿನಿಂದ ೫ ರೂ. ಕೊಡುತ್ತಿರುವರು. ಮರಿಮಲ್ಲಪ್ಪನವರ ಹೊರತು ಈ ಸ್ಕೂಲಿಗೆ ಇನ್ಯಾವ ಲಿಂಗಾಯತನೂ ಒಂದು ಕಾಸನ್ನೂ ಸಹಾಯಮಾಡಿರುವುದಿಲ್ಲ. ಈ ಸ್ಕೂಲಿನ ವಿಷಯವಾಗಿ ಕಾರ್ಯಭಾಗಮಾಡುವುದಕ್ಕೆ ಯಾವ ಲಿಂಗಾಯತನಿಗೆ ಹಕ್ಕಿದೆ? ಈ ಸ್ಕೂಲಿನ ಧರ್ಮಕಾರ್ಯಭಾರ ನಿರ್ವಾಹಕರಮೇಲೆ ಬಸವಯ್ಯನವರು ದಾವಾ ಮಾಡಬೇಕಾದರೆ ಅವರಿಗೆ ಮರಿಮಲ್ಲಪ್ಪನವರಿಂದ ಪವರಾಫ್ ಅಟಾರ್ನಿ ಬಂದಿದೆಯೇ? ಲಿಂಗಾಯತ ಫಂಡಿಗೂ ಲಿಂಗಾಯತರಿಗೂ ಈ ಸ್ಕೂಲಿಗೂ ಸಂಬಂಧವೇನು?—ಸ್ಕೂಲಿಗೆ ದಯಮಾಡಿ ಎಲ್ಲಾ ಲೆಕ್ಕಗಳನ್ನು ವಿದ್ಯಮಾನಗಳನ್ನು ಪರೀಕ್ಷಿಸಿ, ತಪ್ಪೆಂದು ಅಪ್ಪಣೆಕೊಡಿಸಿದರೆ ತಮ್ಮ ಅಪ್ಪಣೆಯನ್ನು ಶಿರಸಾವಹಿಸುತ್ತೇನೆ' ಎಂದು ಮ|| ಎಂ. ವೆಂಕಟಕೃಷ್ಣಯ್ಯನವರು ಎಂ. ಬಸವಯ್ಯನವರಿಗೆ ಮುಂದಾಗಿಯೇ ಹೇಳಿಕೊಂಡರು. ಅದರಂತೆಯೂ ನಡೆಯದೆ ಬಸವಯ್ಯನವರು ವೆಂಕಟಕೃಷ್ಣಯ್ಯನವರ ಮೇಲಣ ದ್ವೇಷದಿಂದಲೇ ಗಲಾಟೆಮಾಡುತ್ತಿದ್ದಾರೆ. ವೆಂಕಟಕೃಷ್ಣಯ್ಯನವರು, ಲೋಕಬಾಂಧವರು, ವೈರಾಗ್ಯಚಕ್ರವರ್ತಿಗಳು, ಪಿತೃಪ್ರಾಯರು, ಬಸವಯ್ಯನವರು ಕೋಪತಾಪಗಳಿಗೆ ಅಧೀನರಾಗಿ ಕುಣಿಯತಕ್ಕವರು. ಮರಿಮಲ್ಲಪ್ಪನವರ ಧರ್ಮದಿಂದ ಈ ಸ್ಕೂಲಿಗೆ ಮಾಹೆಯಾನಾ ೧೨೫ ರೂ. ಮಾತ್ರ ಆದಾಯವಿದೆ. ಆರೆದ ಸಾವಿರ ರೂ. ಗಳು ವೀರಶೈವೇತರ ವಿದ್ಯಾರ್ಥಿಗಳ ಫೀಜಿನ ಮೂಲಕ ಬರುತ್ತದೆ. ಲಿಂಗಾಯತ ಹುಡುಗರು ಈ ಸ್ಕೂಲಿನಲ್ಲಿ ಫೀಜನ್ನು ಕೊಡದೆಯೇ ಓದುತ್ತಾರೆ. ಬಸವಯ್ಯನವರು ಈ ಸ್ಕೂಲಿನ ವಿಷಯದಲ್ಲಿ ಪ್ರವರ್ತಿಸಿದಮೇಲೆ ಇತರರೆಲ್ಲಾ ಈ ಸ್ಕೂಲನ್ನೇ ಬಿಟ್ಟು ವರದಾಚಾರರ ಆಂಗ್ಲೋವರ್ನಾಕ್ಯುಲರ್ ಸ್ಕೂಲು, ಬಸಮುಮಯ್ಯನವರ ಸ್ಕೂಲು, ಶಾರದಾವಿಲಾಸ ಪಾಠಶಾಲೆ, [illegible] ಈ ಶಾಲೆಗಳನ್ನು ಸೇರುವರಾಗಿ ಮಾಡಿ ಅಲ್ಲಿ ತಮ್ಮ [illegible] ಮರಿಮಲ್ಲಪ್ಪನವರ [illegible]

೬. ಇತ್ಯಾದಿಯಾಗಿ ಬರೆಯಲ್ಪಟ್ಟಿರುವುದು. ಇದಕ್ಕೆಲ್ಲಾ ಸಮಾಧಾನವನ್ನು ಬರೆದು ತುಂಡಿಸಬೇಕಾದರೆ ಒಂದು ಪುಸ್ತಕದಷ್ಟು ಲೇಖನವಾಗುವದು. ಆದುದರಿಂದ ಸಂಕ್ಷೇಪಿಸಿ ಮುಖ್ಯವಾದ ಕೆಲ ಮಾತುಗಳನ್ನಾಡುತ್ತೇನೆ.

ಮ|| ವೆಂಕಟಕೃಷ್ಣಯ್ಯನವರು ವೈರಾಗ್ಯಚಕ್ರವರ್ತಿಗಳಾಗಿಯೂ, ನಿಸ್ಪೃಹರಾಗಿಯೂ, ಸ್ಕೂಲು ಕಾರ್ಯಗಳನ್ನು ನ್ಯೂನಾತಿರೇಕವಿಲ್ಲದಂತೆ ನಡೆಸಿಕೊಂಡು ಬಂದಿರುವವರಾಗಿಯೂ, ಟ್ರಸ್ಟಿಯ ಕಾರ್ಯಭಾರವು ಲೋಪಗಳಿಲ್ಲದ್ದಾಗಿಯೂ ಇರುತ್ತಿದ್ದರೆ ಬಸವಯ್ಯನವರಂಥ ಸಾವಿರಾರು ಜನರು ಗಲಾಟೆ ಮಾಡುವುದಕ್ಕೆ ಯತ್ನಿಸಿದರೂ ವೆಂಕಟಕೃಷ್ಣಯ್ಯನವರೇ ಆಗಲೀ ಅವರ ಸಾಧ್ವೀ ಸಂಪದಭ್ಯುದಯಗಳೇ ಆಗಲೀ ಥರಗುಟ್ಟಬೇಕಾದ ಅವಶ್ಯಕತೆಯೇನಿರುವದು? ಈ ತಾಪತ್ರಯದ ತರಲೆ ಬರವಣಿಗೆಗಳೆಲ್ಲಾ ಏತಕ್ಕೆ? ಕುಂಬಳಕಾಯಿ ಸುದ್ದಿಯೆತ್ತಿದ ಕೂಡಲೇ ಹೆಗಲನ್ನು ಮುಟ್ಟಿನೋಡಿಕೊಂಡವನು ತನ್ನ ದೋಷವನ್ನು ತಾನೇ ಹೊರಹಾಕಿಕೊಂಡಂತಾಗುವನಲ್ಲವೆ? ಆದಕಾರಣ ಈ ಗಲಾಟೆಗಳೆಲ್ಲಾ ಕೊನೆಮುಟ್ಟುವವರೆಗೂ ಮ|| ವೆಂಕಟಕೃಷ್ಣಯ್ಯನವರೂ ಅವರ ಹಿತೇಚ್ಛುಗಳೂ ಸಹ ಪರ್ವತದಂತೆ ಅಚಲರಾಗಿಯೂ ಗಂಭೀರರಾಗಿಯೂ ಇರುವುದೇ ಅವರಿಗೆ ಕರ್ತವ್ಯವೂ ಭೂಷಣವೂ ಆಗಿರುವುದೆಂದು ನಾನು ಅವರ ಹಿತಾಕಾಂಕ್ಷೆಯಿಂದ ಸೂಚಿಸುತ್ತೇನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರಿಂದ ಸ್ಕೂಲುಕಾರ್ಯ ವಿಚಾರಣೆಗೆ ನಿಯುಕ್ತರಾದ ಬಸವಯ್ಯನವರು ಕಾರ್ಯಭಾಗಕ್ಕೆ ಆರಂಭಿಸುವುದಕ್ಕೆ ಮೊದಲೇ ಮ|| ಎಂ. ವೆಂಕಟಕೃಷ್ಣಯ್ಯನವರನ್ನು ಪ್ರತ್ಯಕ್ಷವಾಗಿ ಕಂಡು ಸ್ಕೂಲಿನ ಕಾರ್ಯಕ್ರಮ ಲೆಕ್ಕಪಕ್ಕಗಳನ್ನು ತಿಳಿದುಕೊಳ್ಳಬೇಕೆಂದು ಎಷ್ಟು ಕೇಳಿದರೂ ವಿವರಣವು ದೊರೆಯದೆ ಹೋದುದರಮೇಲೂ ಲೇಖನವನ್ನು ಬರೆದರೂ ಅವಶ್ಯಕವಾಗಿದ್ದ ಸಂಗತಿಗಳು ಗೊತ್ತಾಗದೆಹೋದುದರಮೇಲೂ ಅವರು ಡಿಸ್ಟ್ರಿಕ್ಟ್ ಜಡ್ಜರಲ್ಲಿಗೆ ಬರೆದುಕೊಳ್ಳಬೇಕಾಯಿತೆಂಬುವದು ಸದರಿ ಎಂ. ಬಸವಯ್ಯನವರು ಸ್ಟಾರ್ ಪತ್ರಿಕೆಯ ಮಾರ್ಚಿ ತಾ|| ೧೭ ರ ಸಂಚಿಕೆಗೆ ಬರೆದುಕೊಂಡಿರುವ ಕರಸ್ಪಾಂಡೆನ್ಸಿನಿಂದ ವ್ಯಕ್ತವಾಗಿರುತ್ತದೆ. ಹೀಗಿರುವಾಗ ಮ|| ವೆಂಕಟಕೃಷ್ಣಯ್ಯನವರೇ ಬಸವಯ್ಯನವರನ್ನು ಸ್ಕೂಲಿಗೆ ಬರಬೇಕೆಂದೂ ಲೆಕ್ಕಪಕ್ಕಗಳನ್ನು ನೋಡಬೇಕೆಂದೂ ಪ್ರಾರ್ಥಿಸಿದ್ದು ಎಷ್ಟುಮಟ್ಟಿಗೆ ನಿಜವಾಗಿರಬಹುದು! ಬಸವಯ್ಯನವರೇ ಮೊದಲಾದ ವೀರಶೈವರು ಸ್ಕೂಲಿಗೆ ೧ ಕಾಸನ್ನೂ ಸಹಾಯಮಾಡದಿರುವಾಗ ಅವರುಗಳಿಗೆ ಈ ಸ್ಕೂಲಿನ ಆಡಳಿತದಲ್ಲಿ ಕೈಬಾಯಿ ಹಾಕುವುದಕ್ಕೆ ಯಾವ ಅಧಿಕಾರವೂ ಇಲ್ಲವೆನ್ನುವ ಲೇಖನದ ಅಭಿಪ್ರಾಯಕ್ಕೂ, ಮ|| ಬಸವಯ್ಯನವರನ್ನು ಸ್ಕೂಲು ಆಡಳಿತದ ಪರಾಂಬರಿಕೆಗೆ ಹೆಡ್ಮಾಸ್ಟರು ಕರೆಯುವುದಕ್ಕೂ ಸಾಮಂಜಸ್ಯವನ್ನು ಕಲ್ಪಿಸುವದು ಹೇಗೆ? ವೀರಶೈವರಿಗೆ ಇದರ ವಿಷಯದಲ್ಲಿ ಯಾವ ಹಕ್ಕೂ ಇಲ್ಲವೆಂದು ಬರೆದಿರುವ ಈ ಲೇಖಕರಿಗೆ ಇರುವಷ್ಟು ಧರ್ಮಶಾಸ್ತ್ರಜ್ಞಾನವೂ ಕೂಡ ಡಿಸ್ಟ್ರಿಕ್ಟ್ ಜಡ್ಜಿಯವರಿಗೆ ಇಲ್ಲದಿದ್ದುದರಿಂದಲೇ ಅವರು ಮ|| ಬಸವಯ್ಯನವರ ಕರಸ್ಪಾಂಡೆನ್ಸಿಗೆ ಗಮನವಿತ್ತು ಪ್ರೊಸಿಡಿಂಗ್ಸ್ ನಡೆಸಿರಬೇಕು. ಅವರ ಆ ತಪ್ಪನ್ನು ಕುರಿತು ಈ ಲೇಖಕರು ಚೀಫ್ ಕೋರ್ಟಿಗೆ ಅಪ್ಪೀಲ್ ಮಾಡಿ ಅವರಿಗೆ ಬುದ್ಧಿಸುವುದಕ್ಕೂ ಪ್ರಯತ್ನಿಸದಿರಲಾರರೆಂದು ನಿರೀಕ್ಷಿಸುತ್ತೇನೆ.

ವೀರಶೈವರ್ಯಾರೂ ಈ ಸ್ಕೂಲಿನ ವಿಷಯದಲ್ಲಿ ಬಾಯಿಹಾಕುವುದಕ್ಕೆ ಮಾರ್ಗವಿಲ್ಲವೆಂದು ಸ್ಕೂಲುಕಾರ್ಯದ ಸೂತ್ರಧಾರಕರು ನಿರ್ಧರಿಸಿಕೊಂಡಿದ್ದರೆ ಆ ನಿರ್ಧರಯತ್ನದಿಂದ ಅದರ ಕಾರ್ಯಭಾರದಲ್ಲಿ ಬೇಕಾದಷ್ಟು ನ್ಯೂನಾತಿರೇಕಗಳು ಸಂಭವಿಸಲು ಅವಕಾಶವಿದ್ದೇ ಇರಬೇಕೆಂದು ಸುಲಭವಾಗಿ ಊಹಿಸಬಹುದಾಗಿದೆ. ಅಂಥ ಸಂಭವವಿಲ್ಲದಿದ್ದರೆ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಲ್ಲಿ ಗಾಬರಿಪಟ್ಟವರ ಕೈಬಾಯಿ ತುಟಿಗಳ ನಡುಗುವಂತೆ ಲೇಖನತರಂಗಗಳು ಈಗ ಬರುವುದಕ್ಕೆ ಕಾರಣವಿರುತ್ತಿರಲಿಲ್ಲವೆಂದು ನನಗೆ ತೋರುತ್ತದೆ. ಮ|| ಎಂ. ವೆಂಕಟಕೃಷ್ಣಯ್ಯನವರಿಗೆ ವೀರಶೈವರ ಪುರೋಭಿವೃದ್ಧಿಯಲ್ಲಿ ಬಹಳ ಅಭಿಮಾನವಿದೆಯೆಂದು ಹೇಳಲ್ಪಟ್ಟಿದೆಯಷ್ಟೆ. ಅದು ಎಷ್ಟುಮಟ್ಟಿಗೆ ನಿಜವೋ ನಾನು ಕಾಣೆ. ಅವರ ಅಂತರಂಗವು ದೈವಕ್ಕೇ ಗೊತ್ತು. ಅವರಿಗೆ ಹಾಗೆ ನಿಜವಾದ ಅಭಿಮಾನವಿದ್ದರೆ ಸರ್ಕಾರದವರು ಹಿಂದುಳಿದವರ ಗುಂಪಿನಲ್ಲಿ ವೀರಶೈವರನ್ನೂ ಸೇರಿಸಿ ಸ್ಕಾಲರ್‌ಷಿಪ್ ಕೊಡುವುದಕ್ಕೆ ಏರ್ಪಡಿಸಿದ ಮೇಲೆ ಇವರ ಸಾಧ್ವೀ ಸಂಪದಭ್ಯುದಯಗಳು ಭೂಮ್ಯಾಕಾಶವೊಂದಾಗುವಂತೆ ರೋದಿಸುವುದಕ್ಕೆ ಕಾರಣವಿರುತ್ತಿರಲಿಲ್ಲ. ಇವರ ಮಾತಿನಮೇಲೆಯೇ ವೀರಶೈವಾಶ್ರಮಕ್ಕೆ ಗ್ರಾಂಟು ಬಂದಿದ್ದರೆ ಇಂಥವರ ಮಾತಿಗೆ ಕಿವಿಗೊಡುವ ವಿದ್ಯಾಭ್ಯಾಸಾಧಿಕಾರಿಗಳು ಇನ್ನೂ ಯಾವ ಕೆಲಸವನ್ನು ಬೇಕಾದರೂ ಮಾಡುವುದು ಸಾಧ್ಯವಾಗಿದ್ದಿತೆಂದು ಹೇಳಬಹುದಲ್ಲವೆ? ಆ ಕಾರಣದಿಂದಲೇ ಏನೋ ಸಾಧ್ವೀ ಸಂಪದಭ್ಯುದಯಗಳು [illegible] ಎಂ. ಶ್ಯಾಮರಾಯರನ್ನು ಅಪರಿಮಿತಿಯೂ ಗಗನಕ್ಕೇರಿಸಿ ಸ್ತುತಿಪಾಠವನ್ನುಗ್ಗಡಿಸುತ್ತಿದ್ದುವು. ಶ್ಯಾಮರಾಯರು ವೆಂಕಟಕೃಷ್ಣಯ್ಯನವರನ್ನೂ ಇವರು ಅವರನ್ನೂ ಸಮಯಬಿದ್ದಾಗಲೆಲ್ಲಾ ಹೊಗಳುತ್ತಿದ್ದುದನ್ನು ಎಲ್ಲರೂ ಬಲ್ಲರು. ವಿದ್ಯಾಭ್ಯಾಸ ಇಲಾಖಾಧಿಕಾರಿಗಳ ಅಂಥ ಪ್ರಸನ್ನತೆಯು ವೆಂಕಟಕೃಷ್ಣಯ್ಯನವರ ಮೇಲಿದ್ದುದರಿಂದಲೇ ಏನೋ ಹತ್ತಾರುವರ್ಷಗಳ ಸ್ಕೂಲು ಲೆಕ್ಕವನ್ನಾದರೂ ಅವರು ಕೇಳದೆ ಇದ್ದುದೂ, ಸ್ಕೂಲಿನ ಅವ್ಯವಸ್ಥೆಯು ನಿರುಪಾಧಿಕವಾಗಿ ಸಾಗುತ್ತಿದ್ದುದೂ ಆಗಿರಬೇಕು. ಇವರವರ ಸಂಬಂಧವು ಹಾಗಿದ್ದುದರಿಂದಲೇ ಏನೋ ಹುಚ್ಚರ ಆಸ್ಪತ್ರೆಗೆ ದಾಖಲಾಗಲ್ಪಡಬೇಕಾದವರಿಗೂ ಕೂಡ ಮ|| ರಾಯರು ನಿರುಪಾಧಿಕವೇತನವನ್ನು ಕೊಟ್ಟು ಸಲಹಿಕೊಂಡು ಬಂದುದು? ಮ|| ರಡ್ಡಿಯವರು ಇನ್ಸ್|| ಜನರಲ್ಲಾಗಿ ಬಂದುಬಿಟ್ಟರೆ ಇಂಥ ಈರಾಟಕೆಗಳಿಗೆಲ್ಲಾ ಅವಕಾಶ ತಪ್ಪಿಹೋಗುವುದೆಂಬ ಯೋಚನೆಯೇ ಮ|| ವೆಂಕಟಕೃಷ್ಣಯ್ಯನವರೂ ಅವರ ಸಹಚರರೂ ಅವರ ಪತ್ರಿಕೆಗಳೂ ಕೂಡ ರಡ್ಡಿಸಾಹೇಬರಿಗೆ ವಿದ್ಯಾಭ್ಯಾಸ ಶಾಖಾಧ್ಯಕ್ಷತೆಯು ದೊರೆಯದಿರುವಂತೆ ಮಾಡಲು ಅವಿಶ್ರಾಂತಶ್ರಮಪಡುವುದಕ್ಕೂ, ಆ ಯತ್ನದಲ್ಲಿ ಹತಾಶರಾದುದರಿಂದಲೇ ಮ|| ರಡ್ಡಿಯವರನ್ನು ಈಗಲೂ ದ್ವೇಷಿಸುತ್ತಿರುವುದಕ್ಕೂ ಕಾರಣವಾಗಿರಬೇಕು. ಹಿಂದುಳಿದಿದ್ದವರನ್ನೆಲ್ಲಾ ಮುಂದಕ್ಕೆ ತರುವುದಕ್ಕಾಗಿ ಆತ್ಮಯಜ್ಞವನ್ನಾದರೂ ಮಾಡಲು ಸಿದ್ಧರಾಗಿರುವ ಮ|| ಬಸವಯ್ಯನವರು ರಾ|| ಸಾ|| ಚನ್ನಯ್ಯನವರು ಮಿ|| ಕೆಲಾಮಿಯವರು ಮ|| ಎಂ. ಸುಬ್ಬಯ್ಯನವರು, ಇದುವರೆಗೂ ಸುಷುಪ್ತಿಯಲ್ಲಿದ್ದ ಜನರನ್ನೆಲ್ಲಾ ಎಚ್ಚರಿಸಿ, ನಿರುಪಾಧಿಕ ಸ್ವಸಾಮ್ರಾಜ್ಯಸುಖವಕ್ಕೆ ಇತರರನ್ನೆಲ್ಲಾ ಪಾಲುಗಾರರನ್ನಾಗಿ ಮಾಡುವುದಕ್ಕೆ ಬಂದರಲ್ಲಾ ಎಂಬ ಆಗ್ರಹದಿಂದ ತಮ್ಮ ಲೋಕದ್ವೇಷವನ್ನು ಮರೆಮಾಚಿಕೊಳ್ಳುವುದಕ್ಕಾಗಿ ದೀನಜನಬಂಧುಗಳಾದ ಆ ಪ್ರಮುಖರಿಗೂ ಅವರಿಗೆ ಒತ್ತಾಸೆಯಾದ ಮಹಾಜನರಿಗೂ ಬ್ರಹ್ಮದ್ವೇಷಿಗಳೆಂಬ ನಾಮವನ್ನು ಕಟ್ಟಲೂ ಹಿಂಜರಿಯದಿರುವ ಈ ಜನರು, ಗೌರ್ನಮೆಂಟಿನವರ ಉದ್ದೇಶಾನುಸಾರವಾಗಿ ಸರ್ವಜನಸಮಾನ ವಿದ್ಯಾವ್ಯಾಪನೆಯಲ್ಲಿ ಬದ್ಧಾದರರಾಗಿರುವ ಮ|| ರಡ್ಡಿಯವರನ್ನೂ ಮ|| ಬಸವಯ್ಯನವರೇ ಮೊದಲಾದವರ ಕೋಟಿಯಲ್ಲಿ ಸೇರಿಸಿಕೊಂಡು ದೋಷಾರೋಪಣೆಮಾಡುವುದರಲ್ಲಿ ಆಶ್ಚರ್ಯವೇನು? ಇಂಥವರು ಮಾಡುವ ದೋಷಾರೋಪಣೆಗಳಿಂದ ಆಲೋಕಸೇವಕರ ಸದ್ಧರ್ಮಕ್ಕೆ ಆಗುವ ಲೋಪವೇನು? ಈಗಣ ಇ|| ಇನ್ಸ್|| ಜನರಲ್‌ರಾಗಿರುವ ಮ|| ರಡ್ಡಿಸಾಹೇಬರು ಇತ್ತೀಚೆಗೆ ಮರಿಮಲ್ಲಪ್ಪನವರ ಸ್ಕೂಲಿನ ೧೦ ವರ್ಷದ ಲೆಕ್ಕಗಳ ಸಮಜಾಯಿಷಿಯನ್ನು ಕೇಳಿರುವರೆಂದು ಸುದ್ದಿಯಿದೆ. ಹೀಗೆ ಮಾಡಿರುವುದೂ ಕೂಡ ಮ|| ವೆಂಕಟಕೃಷ್ಣಯ್ಯನವರ ಆಗ್ರಹಕ್ಕೆ ಇನ್ನೊಂದು ಕಾರಣವಾಗಿರಬಹುದೋ ಏನೋ!

ಕೋರಿಕೆಗೆ ಒಂದೆರಡು ಕೆಲಸಗಳನ್ನು ಕಾಣಿಸಿ, ತಾವನ್ಮಾತ್ರದಿಂದಲೇ ಒಬ್ಬಾನೊಬ್ಬರನ್ನು ಒಂದು ಜನವರ್ಗದ ಮೇಲಣ ಅಭಿಮಾನಿಯೆಂದು ಸಿದ್ಧಾಂತಪಡಿಸುವುದಾದರೆ ನೂರು ರೂ. ಬೆಲೆ ಬಾಳುವ ಪಕ್ಷಿಯ ಲಾಭಕ್ಕಾಗಿ ೧ ಕಾಸಿನ ಚರೆಯನ್ನು ವ್ಯಯಮಾಡುವ ಬೇಟೆಗಾರನನ್ನೂ ಕೂಡ ಪರಮದಾತೃವೆಂದು ಸಿದ್ಧಾಂತಮಾಡಬೇಕಾದೀತು.

ವೀರಶೈವರಿಗೆಲ್ಲಾ ಮರಿಮಲ್ಲಪ್ಪನವರ ಸ್ಕೂಲು ಫ್ರೀಯಾಗಿ ಪಾಠವನ್ನು ಹೇಳಿಕೊಡತಕ್ಕ ಸ್ಥಾನವಾಗಿರುವಲ್ಲಿ, ಅಲ್ಲಿಯ ಪಾಠಪ್ರವಚನಗಳು ವೀರಶೈವ ವಿದ್ಯಾರ್ಥಿಗಳಿಗೆ ಅನುಕೂಲವಾಗಿ ನಡೆಯುತ್ತಿದ್ದಲ್ಲಿ, ಈ ಶಾಲೆಯಲ್ಲಿ ಓದಬಹುದಾಗಿದ್ದ ನೂರಾರುಮಂದಿ ವಿದ್ಯಾರ್ಥಿಗಳು ಬೇರೆ ಸ್ಕೂಲುಗಳಲ್ಲಿ ಫೀಯನ್ನಾದರೂ ಕೊಟ್ಟು ಓದಿಕೊಳ್ಳುತ್ತಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ. ಮರಿಮಲ್ಲಪ್ಪನವರು ಗತಿಸಿಹೋಗಿ ೪೫ ವರ್ಷಗಳಾಗಿರಬಹುದು. ಅಂದಿನಿಂದಲೂ ಇವರ ಯಾಜಮಾನ್ಯವೆಲ್ಲಾ ವೀರಶೈವೇತರರ ಹಸ್ತಗತವಾಗಿದ್ದರೂ ವೀರಶೈವರು ಅದಕ್ಕೆ ಒಪ್ಪಿ ಒಟ್ಟುಗೂಡಿ ನಡೆದುಕೊಂಡೇ ಬಂದರು. ಆದರೆ ಈಗ ಇವರ ನ್ಯೂನಾತಿರೇಕಗಳೇನೆಂದು ವೀರಶೈವರು ಕೇಳುವುದಕ್ಕೆ ಆರಂಭಮಾಡಿದ ಮಾತ್ರದಿಂದಲೇ ಆ ಇತರರುಗಳಿಗೆ ಇದು ಸೈರಣೆಗೆ ಬರದೆಹೋಗಿದೆ. ಈಗ ತಾವು ಮರಿಮಲ್ಲಪ್ಪನವರ ಸ್ಕೂಲಿನ ಸಂಬಂಧವನ್ನೇ ಬಿಟ್ಟುಬಿಡಬೇಕಂತೆ. ಬೇರೆ ಹೈಸ್ಕೂಲನ್ನೇರ್ಪಡಿಸಿಕೊಳ್ಳಬೇಕಂತೆ! ಪರರನ್ನು ಹೊಂದಿ ನಡೆಯಬೇಕೆಂಬ ಗುಣವೂ, ಪರೋತ್ಕರ್ಷವನ್ನು ಸಹಿಸುವಿಕೆಯೂ ಇವರಲ್ಲಿ ಎಷ್ಟುಮಟ್ಟಿಗಿದೆ ನೋಡಿದಿರಾ? ಇಂಥವರು ಕೋಮುವಾರುಪ್ರತಿನಿಧಿತ್ವಕ್ಕೆ ಒಪ್ಪುವುದುಂಟೆ? ಪರರು ಸರ್ಕಾರಿ ಅಧಿಕಾರಿಗಳಿಗೆ ಬಂದರೆ ಸೈರಿಸುವರೆ? ಪರರಿಗೆ ಸಹಾಯಮಾಡುವರೆ? ಇದ್ದರೆ ಇವರಿಗೆ ಅಖಂಡಸಾಮ್ರಾಜ್ಯವಾಗಿರಬೇಕು. ಹಾಗಿಲ್ಲದಿದ್ದರೆ ಎಲ್ಲರೂ ನಿರ್ನಾಮವಾಗಿಹೋಗಬೇಕು, ಎಂಬುದೇ ಇವರ ಗಾಢಸಿದ್ಧಾಂತವೆಂಬುದು ಇವರ ಬಾಯಿಮಾತಿನಿಂದಲೇ ಈಗ ಹೊರಬಿದ್ದಂತಾಗಲಿಲ್ಲವೆ? ಆಗಲಿ. ಮ|| ವೆಂಕಟಕೃಷ್ಣಯ್ಯನವರು ಬಿಟ್ಟುಹೋಗುವುದರಿಂದ ಸ್ಕೂಲು ನಿರ್ನಾಮವಾಗುವಂತೆ ಮಾಡುವುದು ಸಾಧ್ಯವಾದರೆ ಅವರುಗಳು ತಮ್ಮ ಹೊಟ್ಟೆಕಿಚ್ಚನ್ನು ತೀರಿಸಿಕೊಳ್ಳಲಿ. ವೀರಶೈವರಿಗೆ ಈ ಸ್ಕೂಲೇಬೇಡ. ಅವರ ನೂರಾರುವಿದ್ಯಾರ್ಥಿಗಳಿಗೆ ಇಂಥ ಒಂದುಪ್ರತ್ಯೇಕವಾದ ಸ್ಕೂಲೇಬೇಕಿಲ್ಲ. ಈ ಸ್ಕೂಲು ಕಟ್ಟಡ ಮೊದಲಾದುವುಗಳೆಲ್ಲಾ ಮಾರಲ್ಪಟ್ಟು, ಮೂಲಧನದ ಜತೆಗೆ ಆ ಹಣವನ್ನೂ ಸೇರಿಸಿ ಮರಿಮಲ್ಲಪ್ಪನವರ ಹೆಸರಿನ ಮೇಲೆ ಆ ಫಂಡನ್ನಿಟ್ಟು, ಅದರ ವೃದ್ಧ್ಯಂಶದಿಂದ ವೀರಶೈವ ವಿದ್ಯಾರ್ಥಿಗಳಿಗೆ ಉದಾರವಾದ ವೇತನಗಳು ದೊರೆಯುವಂತಾದರೆ ಫೀಜನ್ನು ಕೊಟ್ಟು ಯಾವ ಶಾಲೆಗಳಲ್ಲಾದರೂ ಇವರು ಓದಿಕೊಳ್ಳುವರು. ಈಗಿನ ಸ್ಕೂಲು ನಿರ್ನಾಮವಾಗುವುದರಿಂದ ವೀರಶೈವರಿಗೆ ನಷ್ಟವೇನೂ ಇಲ್ಲ. ಮತ್ತಷ್ಟು ಲಾಭವೇ ಆಗುವುದು. ಈ ಸ್ಕೂಲನ್ನು ಈ ರೀತಿಯಲ್ಲಿ ಸ್ಥಾಪಿಸಬೇಕೆನ್ನುವುದು ಧರ್ಮಕರ್ತರ ಉದ್ದೇಶವೂ ಆಗಿರಲಿಲ್ಲ. ಮ|| ವೆಂಕಟಕೃಷ್ಣಯ್ಯನವರೂ ಅವರ ಅನುಯಾಯಿಗಳೂ ಅವರ ಇಷ್ಟವಿದ್ದಂತೆ ಮಾಡಲಿ.

ಒಬ್ಬ ವೀರಶೈವ.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ
ಮೂರು ಪುಸ್ತಕಗಳು ಉಚಿತ!

(೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವಕರ್ತವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ “ಭಗವದ್ಗೀತೆ” ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ. ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

3 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.
ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ
ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ
ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ಕಷಾಯ ಮುಂತಾದ್ದು ಕೂಡಿರುವುದಿಲ್ಲ. ಇದು [illegible] ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಸಂಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮೆ, ಜಡ್ಡು, ಗುದ್ದವ್ರನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ ಹೆಡ್ ಆಫೀಸ
7 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರುವ
ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷ ಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ ಅಂಡ್ ಕೊ.,
23 ಸಾಹುಕಾರಪೇಟೆ, ಮದ್ರಾಸ್.

೧೯೧೮ ನೆಯ ಇಸವಿ ಮೇ ತಾ|| ೨೬ ರಿಂದ ೧೯೧೮ ನೆಯ ಜೂನ್ ತಾ|| ೧ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ವೈಶಾಖ ಬ|| ಪಾಡ್ಯದಿಂದ ವೈಶಾಖ ಬ|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ
26	¹ಭಾನು	ಪಾಡ್ಯ	56-1	ಅನೂ	19-32	13
27	ಸೋಮ	ಬಿದಿಗೆ	54-48	ಜ್ಯೇಷ್ಠ	21-52	14
28	ಮಂಗಳ	ತದಿಗೆ	53-31	ಮೂಲ	22-56	15
29	²ಬುಧ	ಚೌತಿ	50-54	ಪೂಷಾ	22-52	16
30	ಗುರು	ಪಂಚ	47-19	ಉಷಾ	21-37	17
31	³ಶುಕ್ರ	ಷಷ್ಠಿ	42-48	ಶ್ರವಣ	19-27	18
1	ಶನಿ	ಸಪ್ತ	37-23	ಧನಿಷ್ಠ	16-31	19

(1) ಶ್ರೀ ಲಕ್ಷ್ಮೀರಮಣಸ್ವಾಮಿರಥ, ಮೃತ್ಯುಯೋಗ. (2) ಮಾರಹಳ್ಳಿನೃಸಿಂಹಸ್ವಾಮಿರಥ, ಕಂಚಿ ವರದರಾಜಸ್ವಾಮಿರಥ, ಮೇಲುಕೋಟೆಯಲ್ಲಿ ಪಲ್ಲಕ್ಕಿ ಪಾರಂಭ. (3) ಅಗ್ನಿನಕ್ಷತ್ರನಿವೃತ್ತಿ.

ಮೈಸೂರ್: ವೈ. ತಿರುಮಲೈಯ್ಯಂಗಾರವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯೋತ್ ‖
ಶ್ರೀಮತ್ಕೃಷ್ಣನೃಪಾಲನುತ ಮಹಲಾಲೋಲಂಸುಧೀಭೃಂಗವ | ಸ್ತ್ರೀಮಾಭೀಷ್ಟದಶೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆ ಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜೂನ್ ತಾರೀಖು ೨ ನೆಯ ಭಾನುವಾರ. (ಸಂಚಿಕೆ ೨೨

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಫಾಳೀ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
24 ೫, ಇರುಳಪ್ಪನಬೀದಿ, ಮದರಾಸ್



ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಾವಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ



ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 25

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಚ್. ಪೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ವಿ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಅವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಚಳಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಅವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
9 ಆನಂದ ಬುಕ್ ಡಿಪೊ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ತಾ ತಿಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಪೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧ಂತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೮.

ಇವುಗಳಲ್ಲದೆ ಆಯುರ್ವೇದಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
27 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ
ಮೂರು ಪುಸ್ತಕಗಳು ಉಚಿತ!

(೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವಕರ್ತವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ “ಭಗವದ್ಗೀತೆ” ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ. ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

3 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಳೆ." ಇತ್ಯಾದಿಯಾಗಿ ಬರೆಯಲ್ಪಟ್ಟಿರುವುದು. ಇದಕ್ಕೆಲ್ಲಾ ಸಮಾಧಾನವನ್ನು ಬರೆದು ಖಂಡಿಸಬೇಕಾದರೆ ಒಂದು ಪುಸ್ತಕದಷ್ಟು ಲೇಖನವಾಗುವದು. ಆದುದರಿಂದ ಸಂಕ್ಷೇಪಿಸಿ ಮುಖ್ಯವಾದ ಕೆಲ ಮಾತುಗಳನ್ನಾಡುತ್ತೇನೆ.

ಮ॥ ವೆಂಕಟಕೃಷ್ಣಯ್ಯನವರು ವೈರಾಗ್ಯಚಕ್ರವರ್ತಿಗಳಾಗಿಯೂ, ನಿಸ್ಪೃಹರಾಗಿಯೂ, ಸ್ಕೂಲು ಕಾರ್ಯಗಳನ್ನು ನ್ಯೂನಾತಿರೇಕವಿಲ್ಲದಂತೆ ನಡೆಸಿಕೊಂಡು ಬಂದಿರುವವರಾಗಿಯೂ, ಟ್ರಸ್ಟಿಯ ಕಾರ್ಯಭಾರವು ಲೋಪಗಳಿಲ್ಲದ್ದಾಗಿಯೂ ಇರುತ್ತಿದ್ದರೆ ಬಸವಯ್ಯನವರಂಥ ಸಾವಿರಾರು ಜನರು ಗಲಾಟೆ ಮಾಡುವುದಕ್ಕೆ ಯತ್ನಿಸಿದರೂ ವೆಂಕಟಕೃಷ್ಣಯ್ಯನವರೇ ಆಗಲೀ ಅವರ ಸಾಧ್ವೀ ಸಂಪದಭ್ಯುದಯಗಳೇ ಆಗಲೀ ಥರಗುಟ್ಟಬೇಕಾದ ಅವಶ್ಯಕತೆಯೇನಿರುವದು? ಈ ತಾಪತ್ರಯದ ತರಲೆ ಬರವಣಿಗೆಗಳೆಲ್ಲಾ ಏತಕ್ಕೆ? ಕುಂಬಳಕಾಯಿ ಸುದ್ದಿಯೆತ್ತಿದ ಕೂಡಲೇ ಹೆಗಲನ್ನು ಮುಟ್ಟಿನೋಡಿಕೊಂಡವನು ತನ್ನ ದೋಷವನ್ನು ತಾನೇ ಹೊರಹಾಕಿಕೊಂಡಂತಾಗುವನಲ್ಲವೆ? ಆದಕಾರಣ ಈ ಗಲಾಟೆಗಳೆಲ್ಲಾ ಕೊನೆಮುಟ್ಟುವವರೆಗೂ ಮ॥ ವೆಂಕಟಕೃಷ್ಣಯ್ಯನವರೂ ಅವರ ಹಿತೇಚ್ಛುಗಳೂ ಸಹ ಪರ್ವತದಂತೆ ಅಚಲರಾಗಿಯೂ ಗಂಭೀರರಾಗಿಯೂ ಇರುವುದೇ ಅವರಿಗೆ ಕರ್ತವ್ಯವೂ ಭೂಷಣವೂ ಆಗಿರುವುದೆಂದು ನಾನು ಅವರ ಹಿತಾಕಾಂಕ್ಷೆಯಿಂದ ಸೂಚಿಸುತ್ತೇನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರಿಂದ ಸ್ಕೂಲಿನ ಕಾರ್ಯ ವಿಚಾರಣೆಗೆ ನಿಯುಕ್ತರಾದ ಬಸವಯ್ಯನವರು ಕಾರ್ಯಭಾಗಕ್ಕೆ ಆರಂಭಿಸುವುದಕ್ಕೆ ಮೊದಲೇ ಮ॥ ಎಂ. ವೆಂಕಟಕೃಷ್ಣಯ್ಯನವರನ್ನು ಪ್ರತ್ಯಕ್ಷವಾಗಿ ಕಂಡು ಸ್ಕೂಲಿನ ಕಾರ್ಯಕ್ರಮ ಲೆಕ್ಕಪತ್ರಗಳನ್ನು ತಿಳಿದುಕೊಳ್ಳಬೇಕೆಂದು ಎಷ್ಟು ಕೇಳಿದರೂ ವಿವರಣವು ದೊರೆಯದೆ ಹೋದುದರಮೇಲೂ ಲೇಖನವನ್ನು ಬರೆದರೂ ಅವಶ್ಯಕವಾಗಿದ್ದ ಸಂಗತಿಗಳು ಗೊತ್ತಾಗದೆಹೋದುದರಮೇಲೂ ಅವರು ಡಿಸ್ಟ್ರಿಕ್ಟ್ ಜಡ್ಜರಲ್ಲಿಗೆ ಬರೆದುಕೊಳ್ಳಬೇಕಾಯಿತೆಂಬುವದು ಸದರಿ ಎಂ. ಬಸವಯ್ಯನವರು ಸ್ಟಾರ್ ಪತ್ರಿಕೆಯ ಮಾರ್ಚಿ ತಾ॥ ೧೭ ರ ಸಂಚಿಕೆಗೆ ಬರೆದುಕೊಂಡಿರುವ ಕರಸ್ಪಾಂಡೆನ್ಸಿನಿಂದ ವ್ಯಕ್ತವಾಗಿರುತ್ತದೆ. ಹೀಗಿರುವಾಗ ಮ॥ ವೆಂಕಟಕೃಷ್ಣಯ್ಯನವರೇ ಬಸವಯ್ಯನವರನ್ನು ಸ್ಕೂಲಿಗೆ ಬರಬೇಕೆಂದೂ ಲೆಕ್ಕಪತ್ರಗಳನ್ನು ನೋಡಬೇಕೆಂದೂ ಪ್ರಾರ್ಥಿಸಿದ್ದು ಎಷ್ಟುಮಟ್ಟಿಗೆ ನಿಜವಾಗಿರಬಹುದು! ಬಸವಯ್ಯನವರೇ ಮೊದಲಾದ ವೀರಶೈವರು ಸ್ಕೂಲಿಗೆ ೧ ಕಾಸನ್ನೂ ಸಹಾಯಮಾಡದಿರುವಾಗ ಅವರುಗಳಿಗೆ ಈ ಸ್ಕೂಲಿನ ಆಡಳಿತದಲ್ಲಿ ಕೈಬಾಯಿ ಹಾಕುವುದಕ್ಕೆ ಯಾವ ಅಧಿಕಾರವೂ ಇಲ್ಲವೆನ್ನುವ ಲೇಖನದ ಅಭಿಪ್ರಾಯಕ್ಕೂ, ಮ॥ ಬಸವಯ್ಯನವರನ್ನು ಸ್ಕೂಲು ಆಡಳಿತದ ಪರಾಂಬರಿಕೆಗೆ ಹೆಡ್ಮಾಸ್ಟರು ಕರೆಯುವುದಕ್ಕೂ ಸಾಮಂಜಸ್ಯವನ್ನು ಕಲ್ಪಿಸುವದು ಹೇಗೆ? ವೀರಶೈವರಿಗೆ ಇವರ ವಿಷಯದಲ್ಲಿ ಯಾವ ಹಕ್ಕೂ ಇಲ್ಲವೆಂದು ಬರೆದಿರುವ ಈ ಲೇಖಕರಿಗೆ ಇರುವಷ್ಟು ಧರ್ಮಶಾಸ್ತ್ರಜ್ಞಾನವೂ ಕೂಡ ಡಿಸ್ಟ್ರಿಕ್ಟ್ ಜಡ್ಜಿಯವರಿಗೆ ಇಲ್ಲದಿದ್ದುದರಿಂದಲೇ ಅವರು ಮ॥ ಬಸವಯ್ಯನವರ ಕರಸ್ಪಾಂಡೆನ್ಸಿಗೆ ಗಮನವಿತ್ತು ಪ್ರೊಸಿಡಿಂಗ್ಸ್ ನಡೆಸಿರಬೇಕು. ಅವರ ಆ ತಪ್ಪನ್ನು ಕುರಿತು ಈ ಲೇಖಕರು ಚೀಫ್ ಕೋರ್ಟಿಗೆ ಅಪ್ಪೀಲ್‌ಮಾಡಿ ಅವರಿಗೆ ಬುದ್ಧಿಸುವುದಕ್ಕೂ ಪ್ರಯತ್ನಿಸದಿರಲಾರರೆಂದು ನಿರೀಕ್ಷಿಸುತ್ತೇನೆ.

ವೀರಶೈವರ್ಯಾರೂ ಈ ಸ್ಕೂಲಿನ ವಿಷಯದಲ್ಲಿ ಬಾಯಿಹಾಕುವುದಕ್ಕೆ ಮಾರ್ಗವಿಲ್ಲವೆಂದು ಸ್ಕೂಲುಕಾರ್ಯದ ಸೂತ್ರಧಾರಕರು ನಿರ್ಧರಿಸಿಕೊಂಡಿದ್ದರೆ ಆ ನಿರ್ಧಯತ್ವದಿಂದ ಅವರ ಕಾರ್ಯಭಾರದಲ್ಲಿ ಬೇಕಾದಷ್ಟು ನ್ಯೂನಾತಿರೇಕಗಳು ಸಂಭವಿಸಲು ಅವಕಾಶವಿದ್ದೇ ಇರಬೇಕೆಂದು ಸುಲಭವಾಗಿ ಊಹಿಸಬಹುದಾಗಿದೆ. ಅಂಥ ಸಂಭವವಿಲ್ಲದಿದ್ದರೆ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಲ್ಲಿ ಗಾಬರಿಪಟ್ಟವರ ಕೈಬಾಯಿ ತುಟಿಗಳ ಒದರಾಟದಂತೆ ಲೇಖನತರಂಗಗಳು ಈಗ ಬರುವುದಕ್ಕೆ ಕಾರಣವಿರುತ್ತಿರಲಿಲ್ಲವೆಂದು ನನಗೆ ತೋರುತ್ತದೆ. ಮ॥ ಎಂ. ವೆಂಕಟಕೃಷ್ಣಯ್ಯನವರಿಗೆ ವೀರಶೈವರ ಪುರೋವೃದ್ಧಿಯಲ್ಲಿ ಬಹಳ ಅಭಿಮಾನವಿದೆಯೆಂದು ಹೇಳಲ್ಪಟ್ಟಿದೆಯಷ್ಟೆ. ಅದು ಎಷ್ಟುಮಟ್ಟಿಗೆ ನಿಜವೋ ನಾನು ಕಾಣೆ. ಅವರ ಅಂತರಂಗವು ದೈವಕ್ಕೇ ಗೊತ್ತು. ಅವರಿಗೆ ಹಾಗೆ ನಿಜವಾದ ಅಭಿಮಾನವಿದ್ದರೆ ಸರ್ಕಾರದವರು ಹಿಂದುಳಿದವರ ಗುಂಪಿನಲ್ಲಿ ವೀರಶೈವರನ್ನೂ ಸೇರಿಸಿ ಸ್ಕಾಲರ್ಷಿಪ್ ಕೊಡುವುದಕ್ಕೆ ಏರ್ಪಡಿಸಿದ ಮೇಲೆ ಇವರ ಸಾಧ್ವೀ ಸಂಪದಭ್ಯುದಯಗಳು ಭೂಮ್ಯಾಕಾಶವೊಂದಾಗುವಂತೆ ರೋದಿಸುವುದಕ್ಕೆ ಕಾರಣವಿರುತ್ತಿರಲಿಲ್ಲ. ಇವರ ಮಾತಿನಮೇಲೆಯೇ ವೀರಶೈವಾಶ್ರಮಕ್ಕೆ ಗ್ರ್ಯಾಂಟು ಬಂದಿದ್ದರೆ ಇಂಥವರ ಮಾತಿಗೆ ಕಿವಿಕೊಡುವ ವಿದ್ಯಾಭ್ಯಾಸಶಾಖಾಧಿಕಾರಿಗಳು ಇನ್ನೂ ಯಾವ ಕೆಲಸವನ್ನು ಬೇಕಾದರೂ ಮಾಡುವುದು ಸಾಧ್ಯವಾಗಿದ್ದಿತೆಂದು ಹೇಳಬಹು[illegible] ಆ ಕಾರಣದಿಂದಲೇ ಏನೋ ಸಾಧ್ವೀ ಸಂಪದಭ್ಯುದಯಗಳು [illegible] ಎಂ. ಶ್ಯಾಮರಾಯರನ್ನು ಅಹರ್ನಿಶಿಯೂ ಗಗನಕ್ಕೇರಿಸಿ ಸ್ತುತಿ[illegible]ಸುತ್ತಿದ್ದುವು. ಶ್ಯಾಮರಾಯರು ವೆಂಕಟಕೃಷ್ಣಯ್ಯನವರನ್ನೂ ಇವರು ಅವರನ್ನೂ ಸಮಯಬಿದ್ದಾಗಲೆಲ್ಲಾ ಹೊಗಳುತ್ತಿದ್ದುದನ್ನು ಎಲ್ಲರೂ ಬಲ್ಲರು. ವಿದ್ಯಾಭ್ಯಾಸ ಇಲಾಖಾಧಿಕಾರಿಗಳ ಅಂಥ ಪ್ರಸನ್ನತೆಯು ವೆಂಕಟಕೃಷ್ಣಯ್ಯನವರ ಮೇಲಿದ್ದುದರಿಂದಲೇ ಏನೋ ಹತ್ತಾರುವರ್ಷಗಳ ಸ್ಕೂಲು ಲೆಕ್ಕವನ್ನಾದರೂ ಅವರು ಕೇಳದೆ ಇದ್ದುದೂ, ಸ್ಕೂಲಿನ ಅವ್ಯವಸ್ಥೆಯು ನಿರುಪಾಧಿಕವಾಗಿ ಸಾಗುತ್ತಿದ್ದುದೂ ಆಗಿರಬೇಕು. ಇವರವರ ಸಂಬಂಧವು ಹಾಗಿದ್ದುದರಿಂದಲೇ ಏನೋ ಹುಚ್ಚರ ಆಸ್ಪತ್ರೆಗೆ ದಾಖಿಲ್ಮಾಡಲ್ಪಡಬೇಕಾದವರಿಗೂ ಕೂಡ ಮ॥ ರಾಯರು ನಿರುಪಾಧಿಕವೇತನವನ್ನು ಕೊಟ್ಟು ಸಲಹಿಕೊಂಡು ಬಂದುದು? ಮ॥ ರೆಡ್ಡಿಯವರು ಇನ್ಸ್॥ ಜನರಲ್ಲಾಗಿ ಬಂದುಬಿಟ್ಟರೆ ಇಂಥ ಈರಾಟಕೆಗಳಿಗೆಲ್ಲಾ ಅವಕಾಶ ತಪ್ಪಿಹೋಗುವುದೆಂಬ ಯೋಚನೆಯೇ ಮ॥ ವೆಂಕಟಕೃಷ್ಣಯ್ಯನವರೂ ಅವರ ಸಹಚರರೂ ಅವರ ಪತ್ರಿಕೆಗಳೂ ಕೂಡ ರೆಡ್ಡಿ ಸಾಹೇಬರಿಗೆ ವಿದ್ಯಾಭ್ಯಾಸ ಶಾಖಾಧ್ಯಕ್ಷತೆಯು ದೊರೆಯದಿರುವಂತೆ ಮಾಡಲು ಅವಿಶ್ರಾಂತಶ್ರಮಪಡುವುದಕ್ಕೂ, ಆ ಯತ್ನದಲ್ಲಿ ಹತಾಶರಾದುದರಿಂದಲೇ ಮ॥ ರೆಡ್ಡಿಯವರನ್ನು ಈಗಲೂ ದ್ವೇಷಿಸುತ್ತಿರುವುದಕ್ಕೂ ಕಾರಣವಾಗಿರಬೇಕು. ಹಿಂದುಳಿದವರನ್ನೆಲ್ಲಾ ಮುಂದಕ್ಕೆ ತರುವುದಕ್ಕಾಗಿ ಆತ್ಮಯಜ್ಞವನ್ನಾದರೂ ಮಾಡಲು ಸಿದ್ಧರಾಗಿರುವ ಮ॥ ಬಸವಯ್ಯನವರು ರಾ॥ ಸಾ॥ ಚನ್ನಯ್ಯನವರು ವಿ॥ ಕೈಲಾಸಿಯವರು ಮ॥ ಎಂ. ಸುಬ್ಬಯ್ಯನವರು, ಇದುವರೆಗೂ ಸುಷುಪ್ತಿಯಲ್ಲಿದ್ದ ಜನರನ್ನೆಲ್ಲಾ ಎಚ್ಚರಿಸಿ, ನಿರುಪಾಧಿಕ ಸ್ವಸಾಮ್ರಾಜ್ಯಾನುಭವಕ್ಕೆ ಇತರರನ್ನೆಲ್ಲಾ ಪಾಲುಗಾರರನ್ನಾಗಿ ಮಾಡುವುದಕ್ಕೆ ಬಂದರಲ್ಲಾ ಎಂಬ ಆಗ್ರಹದಿಂದ ತಮ್ಮ ಲೋಕದ್ವೇಷವನ್ನು ಮರೆಮಾಚಿಕೊಳ್ಳುವುದಕ್ಕಾಗಿ ದೀನಜನಬಂಧುಗಳಾದ ಆ ಪ್ರಮುಖರಿಗೂ ಅವರಿಗೆ ಒತ್ತಾಸೆಯಾದ ಮಹಾಜನರಿಗೂ ಬ್ರಹ್ಮದ್ವೇಷಿಗಳೆಂಬ ನಾಮವನ್ನು ಕಟ್ಟಲೂ ಹಿಂಜರಿಯದಿರುವ ಈ ಜನರು, ಗೌರ್ನಮೆಂಟಿನವರ ಉದ್ದೇಶಾನುಸಾರವಾಗಿ ಸರ್ವಜನಸಮಾನ ವಿದ್ಯಾವ್ಯಾಪನೆಯಲ್ಲಿ ಬದ್ಧಾದರರಾಗಿರುವ ಮ॥ ರೆಡ್ಡಿಯವರನ್ನೂ ಮ॥ ಬಸವಯ್ಯನವರೇ ಮೊದಲಾದವರ ಕೋಟಿಯಲ್ಲಿ ಸೇರಿಸಿಕೊಂಡು ದೋಷಾರೋಪಣೆಮಾಡುವುದರಲ್ಲಿ ಆಶ್ಚರ್ಯವೇನು? ಇಂಥವರು ಮಾಡುವ ದೋಷಾರೋಪಣೆಗಳಿಂದ ಆ ಲೋಕಸೇವಕರ ಸದ್ಧರ್ಮಕ್ಕೆ ಆಗುವ ಲೋಪವೇನು? ಈಗಣ ವಿ॥ ಇನ್ಸ್॥ ಜನರಲ್‌ರಾಗಿರುವ ಮ॥ ರೆಡ್ಡಿಸಾಹೇಬರು ಇತ್ತೀಚೆಗೆ ಮರಿಮಲ್ಲಪ್ಪನವರ ಸ್ಕೂಲಿನ ೧೦ ವರ್ಷದ ಲೆಕ್ಕಗಳ ಸಮಜಾಯಿಷಿಯನ್ನು ಕೇಳಿರುವರೆಂದು ಸುದ್ದಿಯಿದೆ. ಹೀಗೆ ಮಾಡಿರುವುದೂ ಕೂಡ ಮ॥ ವೆಂಕಟಕೃಷ್ಣಯ್ಯನವರ ಆಗ್ರಹಕ್ಕೆ ಇನ್ನೊಂದು ಕಾರಣವಾಗಿರಬಹುದೋ ಏನೋ!

ತೋರಿಕೆಗೆ ಒಂದೆರಡು ಕೆಲಸಗಳನ್ನು ಕಾಣಿಸಿ, ತಾವನ್ಮಾತ್ರದಿಂದಲೇ ಒಬ್ಬಾನೊಬ್ಬರನ್ನು ಒಂದು ಜನವರ್ಗದ ಮೇಲಣ ಅಭಿಮಾನಿಯೆಂದು ಸಿದ್ಧಾಂತಪಡಿಸುವುದಾದರೆ ನೂರು ರೂ. ಬೆಲೆ ಬಾಳುವ ಪಕ್ಷಿಯ ಲಾಭಕ್ಕಾಗಿ ೩ ಕಾಸಿನ ಚರೆಯನ್ನು ವ್ಯಯಮಾಡುವ ಬೇಟೆಗಾರನನ್ನೂ ಕೂಡ ಪರಮದಾತೃವೆಂದು ಸಿದ್ಧಾಂತಮಾಡಬೇಕಾದೀತು.

ವೀರಶೈವರಿಗೆಲ್ಲಾ ಮರಿಮಲ್ಲಪ್ಪನವರ ಸ್ಕೂಲು ಫ್ರೀಯಾಗಿ ಪಾಠವನ್ನು ಹೇಳಿಕೊಡತಕ್ಕ ಸ್ಥಾನವಾಗಿರುವಲ್ಲಿ, ಅಲ್ಲಿಯ ಪಾಠಪ್ರವಚನಗಳು ವೀರಶೈವ ವಿದ್ಯಾರ್ಥಿಗಳಿಗೆ ಅನುಕೂಲವಾಗಿ ನಡೆಯುತ್ತಿದ್ದಲ್ಲಿ, ಈ ಶಾಲೆಯಲ್ಲಿ ಓದಬಹುದಾಗಿದ್ದ ನೂರಾರುಮಂದಿ ವಿದ್ಯಾರ್ಥಿಗಳು ಬೇರೆ ಸ್ಕೂಲುಗಳಲ್ಲಿ ಫೀಯನ್ನಾದರೂ ಕೊಟ್ಟು ಓದಿಕೊಳ್ಳುತ್ತಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ. ಮರಿಮಲ್ಲಪ್ಪನವರು ಗತಿಸಿಹೋಗಿ ೪೫ ವರ್ಷಗಳಾಗಿರಬಹುದು. ಅಂದಿನಿಂದಲೂ ಇವರ ಯಜಮಾನ್ಯವೆಲ್ಲಾ ವೀರಶೈವೇತರರ ಹಸ್ತಗತವಾಗಿದ್ದರೂ ವೀರಶೈವರು ಅದಕ್ಕೆ ಒಪ್ಪಿ ಒಟ್ಟುಗೂಡಿ ನಡೆದುಕೊಂಡೇ ಬಂದರು. ಆದರೆ ಈಗ ಇವರ ನ್ಯೂನಾತಿರೇಕಗಳೇನೆಂದು ವೀರಶೈವರು ಕೇಳುವುದಕ್ಕೆ ಆರಂಭಮಾಡಿದ ಮಾತ್ರದಿಂದಲೇ ಆ ಇತರರುಗಳಿಗೆ ಇದು ಸೈರಣೆಗೆ ಬರದೆಹೋಗಿದೆ. ಈಗ ತಾವು ಮರಿಮಲ್ಲಪ್ಪನವರ ಸ್ಕೂಲಿನ ಸಂಬಂಧವನ್ನೇ ಬಿಟ್ಟುಬಿಡಬೇಕಂತೆ. ಬೇರೆ ಹೈಸ್ಕೂಲನ್ನೇರ್ಪಡಿಸಿಕೊಳ್ಳಬೇಕಂತೆ! ಪರರನ್ನು ಹೊಂದಿ ನಡೆಯಬೇಕೆಂಬ ಗುಣವೂ, ಪರೋತ್ಕರ್ಷವನ್ನು ಸಹಿಸುವಿಕೆಯೂ ಇವರಲ್ಲಿ ಎಷ್ಟುಮಟ್ಟಿಗಿದೆ ನೋಡಿದಿರಾ? ಇಂಥವರು ಕೋಮುವಾರುಪ್ರತಿನಿಧಿತ್ವಕ್ಕೆ ಒಪ್ಪುವುದುಂಟೆ? ಪರರು ಸರ್ಕಾರಿ ಅಧಿಕಾರಗಳಿಗೆ ಬಂದರೆ ಸೈರಿಸುವರೆ? ಪರರಿಗೆ ಸಹಾಯಮಾಡುವರೆ? ಇದ್ದರೆ ಇವರಿಗೆ ಅಖಂಡಸಾಮ್ರಾಜ್ಯವಾಗಿರಬೇಕು. ಹಾಗಿಲ್ಲದಿದ್ದರೆ ಎಲ್ಲರೂ ನಿರ್ನಾಮವಾಗಿಹೋಗಬೇಕು, ಎಂಬುದೇ ಇವರ ಗಾಢಸಿದ್ಧಾಂತವೆಂಬುದು ಇವರ ಬಾಯಿಮಾತಿನಿಂದಲೇ ಈಗ ಹೊರಬಿದ್ದಂತಾಗಲಿಲ್ಲವೆ? ಆಗಲಿ. ಮ॥ ವೆಂಕಟಕೃಷ್ಣಯ್ಯನವರು ಬಿಟ್ಟುಹೋಗುವುದರಿಂದ ಸ್ಕೂಲು ನಿರ್ನಾಮವಾಗುವಂತೆ ಮಾಡುವುದು ಸಾಧ್ಯವಾದರೆ ಆ ಅವರುಗಳು ತಮ್ಮ ಹೊಟ್ಟೇಕಿಚ್ಚನ್ನು ತೀರಿಸಿಕೊಳ್ಳಲಿ. ವೀರಶೈವರಿಗೆ ಈ ಸ್ಕೂಲೇಬೇಡ. ಅವರ ನೂರಾರುವಿದ್ಯಾರ್ಥಿಗಳಿಗೆ ಇಂಥ ಒಂದುಪ್ರತ್ಯೇಕವಾದ ಸ್ಕೂಲೇಬೇಕಿಲ್ಲ. ಈ ಸ್ಕೂಲು ಕಟ್ಟಡ ಮೊದಲಾದುವುಗಳೆಲ್ಲಾ ಮಾರಲ್ಪಟ್ಟು, ಮೂಲಧನದ ಜತೆಗೆ ಆ ಹಣವನ್ನೂ ಸೇರಿಸಿ ಮರಿಮಲ್ಲಪ್ಪನವರ ಹೆಸರಿನ ಮೇಲೆ ಆ ಫಂಡನ್ನಿಟ್ಟು, ಅದರ ವೃದ್ಧ್ಯಂಶದಿಂದ ವೀರಶೈವ ವಿದ್ಯಾರ್ಥಿಗಳಿಗೆ ಉದಾರವಾದ ವೇತನಗಳು ದೊರೆಯುವಂತಾದರೆ ಫೀಜನ್ನು ಕೊಟ್ಟು ಯಾವ ಶಾಲೆಗಳಲ್ಲಾದರೂ ಇವರು ಓದಿಕೊಳ್ಳುವರು. ಈಗಿನ ಸ್ಕೂಲು ನಿರ್ನಾಮವಾಗುವುದರಿಂದ ವೀರಶೈವರಿಗೆ ನಷ್ಟವೇನೂ ಇಲ್ಲ. ಮತ್ತಷ್ಟು ಲಾಭವೇ ಆಗುವುದು. ಈ ಸ್ಕೂಲನ್ನು ಈ ರೀತಿಯಲ್ಲಿ ಸ್ಥಾಪಿಸಬೇಕೆನ್ನುವುದು ಧರ್ಮಕರ್ತರ ಉದ್ದೇಶವೂ ಆಗಿರಲಿಲ್ಲ. ಮ॥ ವೆಂಕಟಕೃಷ್ಣಯ್ಯನವರೂ ಅವರ ಅನುಯಾಯಿಗಳೂ ಅವರ ಇಷ್ಟವಿದ್ದಂತೆ ಮಾಡಲಿ.

ಒಬ್ಬ ವೀರಶೈವ.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಟ್ಟಿಗೇಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

(೧) ರಾ॥ ಬ॥ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ. ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

3 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಟುಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ವಿಷ ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿಪಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಚಿತ ಸಿಗುವದು. ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
7 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಶನ್ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷ ಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ ಅಂಡ್ ಕೊ.,
23 ಸಾಹುಕಾರಪೇಟೆ, ಮದ್ರಾಸ್.

೧೯೧೮ ನೆಯ ಇಸವಿ ಮೇ ತಾ॥ ೨೬ ರಿಂದ ೧೯೧೮ ನೆಯ ಜೂನ್ ತಾ॥ ೧ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ವೈಶಾಖ ಬ॥ ಪಾಡ್ಯದಿಂದ ವೈಶಾಖ ಬ॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃತ
26	[1] ಭಾನು	ಪಾಡ್ಯ	55-1	ಅನೂ	19-32	13
27	ಸೋಮ	ಬಿದಿಗೆ	54-48	ಜ್ಯೇಷ್ಠ	21-52	14
28	ಮಂಗಳ	ತದಿಗೆ	53-31	ಮೂಲ	22-56	15
29	[2] ಬುಧ	ಚೌತಿ	50-54	ಪೂಷಾ	22-52	16
30	ಗುರು	ಪಂಚ	47-19	ಉಷಾ	21-37	17
31	[3] ಶುಕ್ರ	ಷಷ್ಠಿ	42-43	ಶ್ರವಣ	19-27	18
1	ಶನಿ	ಸಪ್ತ	37-23	ಧನಿಷ್ಠ	16-31	19

(1) ಶ್ರೀ ಲಕ್ಷ್ಮೀರಮಣಸ್ವಾಮಿರಥ, ಮೃತ್ಯುಯೋಗ. (2) ಮಾರಹಳ್ಳಿ ನೃಸಿಂಹಸ್ವಾಮಿರಥ, ಕಂಚಿ ವರದರಾಜಸ್ವಾಮಿರಥ, ಮೇಲುಕೋಟೆಯಲ್ಲಿ ತಪ್ಪಲ ಪಲ್ಲಕ್ಕಿ ಉತ್ಸವಾರಂಭ. (3) ಅಗ್ನಿನಕ್ಷತ್ರ ನಿವೃತ್ತಿ.

ಮೈಸೂರ್: ವೈ. ತಿರುಮಲೆಯ್ಯಂಗಾರ್‌ರವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಹಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಕೆಯಂಸವಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜೂನ್ ತಾರೀಖು ೨ ನೆಯ ಭಾನುವಾರ. (ಸಂಚಿಕೆ ೨೨

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಫಾಳೀ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಜೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಪಿ. ಎ. ಕೃಷ್ಣ ಅಂಡ್ ಕೋ.,
24 ೩, ಬಕುಳಪ್ಪನವೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 25

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್‌ಆಫ್ರಿಕಾ, ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹಾಲು, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೫೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಫ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಅವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಶೀತಲಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿಶತವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಅವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. [illegible] ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಯಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ [illegible] ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಔಷಧಗಳು ದೊರೆಯುತ್ತವೆ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೮.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
9 ಆನಂದ ಏಕ್‌ಡಿಪೊ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಪುಕಟೆಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚೆರೋಗಗಳಮೇಲೆ. ೧ಬೇ. ೧೮-೨೫ ಕ್ಕೆ ೧-೪-೦

೨ ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩ ಹೇನುಶಿರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪ ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫ ಪರುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಅನ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷ್ಯದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
27 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಟ್ಟಿಗೇಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

(೧) ರಾ॥ ಬ॥ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ. ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

೬ ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜೂನ್ ತಾ|| ೨ ನೆಯ ಭಾನುವಾರ.

ಮೈಸೂರು ಪರಸ್ಪರ ಸಹಾಯಸಂಘಗಳ ೧೯೧೬-೧೭ ನೆಯ ವರ್ಷದ ವರದಿ.

ಈಗತಾನೇ ನಮ್ಮ ಹಸ್ತಗತವಾಗಿರುವ ಈ ವರದಿಯನ್ನು ನೋಡಲಾಗಿ ಯಥಾಪ್ರಕಾರ ನಮ್ಮ ಸಂಸ್ಥಾನದಲ್ಲಿ ಸಹಕಾರ ಸಂಘಗಳ ಅಭಿವೃದ್ಧಿಯು ನಡೆಯುತ್ತಲೇ ಇರುವುದೆಂದು ಚೆನ್ನಾಗಿ ವ್ಯಕ್ತವಾಗುತ್ತಿದೆ. ಹಿಂದಣ ವರ್ಷಕ್ಕಿಂತ ಪ್ರಸಕ್ತ ವರ್ಷದಲ್ಲಿ ಸಂಸ್ಥಾನದಲ್ಲಿರುವ ಸಂಘಗಳ ಸಭಿಕರುಗಳ ಮತ್ತೂ ಮೂಲಧನದ ಪರಿಮಿತಿಯೆಲ್ಲವೂ ಹೆಚ್ಚಿಯೇ ಇರುತ್ತವೆ. ಹೇಗೆಂದರೆ—ಎಲ್ಲತೆರದ ಸಂಘಗಳ ಸಂಖ್ಯೆಯೂ ಹಿಂದಣ ವರ್ಷದಲ್ಲಿ ೮೦೦ ಇದ್ದುವು ಪ್ರಸಕ್ತವರ್ಷದಲ್ಲಿ ೯೭೮ ಆದುವು. ಸಂಘಗಳ ಸಭಿಕರ ಸಂಖ್ಯೆಯು ೫೪೮೫೭ ರಿಂದ ೭೪೯೦೬ ಕ್ಕೆ ಹೆಚ್ಚಿತು. ಸಂಘಗಳ ಮೂಲಧನವು ೪೪.೨೧೫೮೮ ರಿಂದ ೫೭.೬೪೦೩೮ ಕ್ಕೆ ಹೆಚ್ಚಿತು. ರಿಜರ್ವ್ ಫಂಡು ೧೫೪೭.೬೨ ರೂ. ನಿಂದ ೩.೪೪೫೪೦ ರೂ. ಗೆ ಹೆಚ್ಚಿತು. ಇದೆಲ್ಲವೂ ಸಂತೋಷಕರವೇ. ಆದರೆ ಈ ಸಂಘಗಳಲ್ಲೆಲ್ಲಾ ಲೇವಾದೇವಿ ನಡೆಯಿಸುವ ಸಂಘಗಳು ಹೆಚ್ಚಾಗಿವೆಯೇ ಹೊರತು ಕೈಗಾರಿಕೆ ಮೊದಲಾದುವುಗಳ ಅಭಿವೃದ್ಧಿಗಾಗಿ ಸಹಾಯಗೊಳಿಸತಕ್ಕ ಸಂಘಗಳು ಹೆಚ್ಚಾಗಿಲ್ಲ. ಬೆಲ್ಲದ ನಿರ್ಮಾಣಕ್ಕಾಗಿ ೪, ನೆಯ್ಗೆಯವರ ಸಹಾಯಕ್ಕಾಗಿ ೩, ನಿಮ್ನಜಾತ್ಯುದ್ಧಾರಕ್ಕಾಗಿ ೧, ಗೃಹನಿರ್ಮಾಣಸಹಾಯಕ್ಕಾಗಿ ೨, ಪ್ರತ್ಯೇಕ ಸಂಘಾಭಿವೃದ್ಧಿಗಾಗಿ ೨, ಧಾನ್ಯನಿಧಿಯನ್ನಭಿವೃದ್ಧಿಗೊಳಿಸುವುದಕ್ಕೆ ೯, ದಂತದ ಮತ್ತು ಗಂಧದ ಕೈಗಾರಿಕೆಯ ಅಭಿವೃದ್ಧಿಗೆ ೨. ಇಷ್ಟುಮಾತ್ರವೇ ಬೇರೆಬೇರೆ ಪರಿಶ್ರಮಗಳ ಅಭಿವೃದ್ಧಿಗಾಗಿ ಕೆಲಸಮಾಡತಕ್ಕ ಸಂಘಗಳಾಗಿರುವುವೆಂದು ವ್ಯಕ್ತವಾಗುತ್ತದೆ. ವ್ಯವಸಾಯಾಭಿವೃದ್ಧಿಗಾಗಿ ಸಹಾಯಮಾಡತಕ್ಕ ಸಂಘಗಳು ಮಾತ್ರ ೧೫೫ ಇರುವುವೆಂಬುದು ಸ್ವಲ್ಪ ಸಮಾಧಾನಕರವಾಗಿದೆ. ಒಟ್ಟಿಗೆ ಈ ಸಂಘಗಳ ಸಂಖ್ಯೆಯು ಹೆಚ್ಚಿನಲ್ಲಿದ್ದರೂ ಗ್ರಾಮಾಂತರಗಳಲ್ಲಿ ಇವುಗಳ ಸ್ಥಾಪನೆಯಾಗಿರುವುದು ಬಹಳ ಕಡಿಮೆ. ಮುಖ್ಯವಾಗಿ ಗ್ರಾಮಾಂತರದ ಜನರಿಗೆ ಸಹಕಾರ ಸಂಘಗಳ ಸಹಾಯವು ಒದಗಬೇಕಾದುದು ಅವಶ್ಯಕವು. ಇದನ್ನು ಪ್ರಭುತ್ವದವರು ಸಹ ಎತ್ತಿ ಆಡಿ ಎಚ್ಚರಿಸಿರುವುದು ನ್ಯಾಯವಾಗಿರುತ್ತದೆ. ಸಂಸ್ಥಾನದಲ್ಲೆಲ್ಲಾ ಸ್ಥಾಪಿತವಾಗಿರುವ ಒಟ್ಟು ಸಂಘಗಳಲ್ಲಿ ೧೧೮ ಕಳೆದ ವರ್ಷ ಹೊಸದಾಗಿ ಸ್ಥಾಪಿಸಲ್ಪಟ್ಟುವು. ಉಳಿದುವುಗಳಲ್ಲಿ ೭೬ ಸಂಘಗಳು ಮಾತ್ರ ಬಹಳ ಸಮರ್ಪಕವಾಗಿ ಕೆಲಸಮಾಡಿರುವುವೆಂದೂ, ೩೨೭ ಸಂಘಗಳು ಸಾಧಾರಣವಾಗಿ ಕೆಲಸ ಮಾಡಿರುವುವೆಂದೂ, ೧೩೨ ಸಂಘಗಳು ಕನಿಷ್ಠವಾಗಿ ಕೆಲಸ ಮಾಡಿರುವುವೆಂದೂ ವ್ಯಕ್ತವಾಗುತ್ತದೆ. ಇದನ್ನು ನೋಡಲಾಗಿ ಸಂಘಗಳ ಸಂಖ್ಯೆಯ ಅಭಿವೃದ್ಧಿಯನ್ನು ನೋಡಿಯೇ ಸಂತೋಷಪಡುವುದು ಯುಕ್ತವಾದುದಲ್ಲವೆಂದು ಹೇಳಬೇಕಾಗುತ್ತದೆ. ಇದ್ದಷ್ಟು ಸಂಘಗಳೂ ಕೆಲಸಗಳನ್ನು ಸಮರ್ಪಕವಾಗಿ ನಡೆಯಿಸಿದರೇನೆಯೇ ಸಹಕಾರೋದ್ಯಮವು ಸಾರ್ಥಕವಾದೀತು. ಈ ವಿಷಯದಲ್ಲಿಯೂ, ಮತ್ತು ಸಾಧ್ಯವಾದಮಟ್ಟಿಗೂ ಸಹಕಾರ ಸಂಘಗಳು ಲೇವಾದೇವಿಯನ್ನೇ ಮುಖ್ಯಲಕ್ಷ್ಯವನ್ನಾಗಿಟ್ಟುಕೊಳ್ಳದೆ ಹಲವುತೆರದ ಪರಿಶ್ರಮಾಭ್ಯುದಯಗಳಿಗೆ ಇವು ಸಹಾಯಕವಾಗುವಂತೆ ಮಾಡುವುದರಲ್ಲಿಯೂ ಶಾಖಾಧಿಕಾರಿಗಳು ಗಮನಕೊಡಬೇಕೆಂದು ಗೌರ್ನಮೆಂಟಿನವರು ಅಭಿಪ್ರಾಯಪಟ್ಟಿರುವುದು ಯುಕ್ತವಾಗಿರುತ್ತದೆ. ಅಲ್ಲದೆ ಸಂಘಗಳ ಸಭಿಕರುಗಳೇ ಲೇವಾದೇವಿಯ ಹೆಚ್ಚುಭಾಗವನ್ನೆಲ್ಲಾ ತಾವೇ ಉಪಯೋಗಿಸಿಕೊಳ್ಳುತ್ತಿರುವುದಕ್ಕಿಂತ, ಹೆಚ್ಚುಬಡ್ಡಿಯನ್ನು ತೆರಲಾರದೆ ಋಣದಾರರ ಮಕ್ಕಳಾಗಿ ನರಳುತ್ತಿರುವ ಬಡಬಗ್ಗರಾದ ರೈತರೇ ಮೊದಲಾದವರ ಅವಶ್ಯಕ ವ್ಯಯಗಳಿಗೆ ಸಾಲವನ್ನು ಸುಲಭವಾದ ಬಡ್ಡಿಯಿಂದ ಕೊಡುವುದಕ್ಕೆ ಹೆಚ್ಚುಗಮನ ಕೊಡುವುದು ಅತ್ಯವಶ್ಯಕವಾಗಿರುವುದು. ಅದುಕಾರಣವೇ ಸರ್ಕಾರದವರೂ ಈ ಸಂಘಗಳ ಸಹಾಯದಿಂದ ಕೃಷಿ ಕೈಗಾರಿಕೆಗಳ ಅಭಿವೃದ್ಧಿಗೆ ಅವಕಾಶವಾಗುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿರುತ್ತಾರೆ. ಸಂಘಗಳಲ್ಲಿ ನಡೆದಿರುವ ಲೇವಾದೇವಿಗಳಲ್ಲಿ ೧೦೦ ಕ್ಕೆ ೫೭ ರಷ್ಟು ಭಾಗದ ಸಾಲವು ತಂತಮ್ಮ ಕಸಬುಗಳ ಅಭಿವೃದ್ಧಿಯ ಉದ್ದೇಶದಿಂದ ತೆಗೆದುಕೊಳ್ಳಲ್ಪಟ್ಟುದಾಗಿಯೂ, ೧೦೦ ಕ್ಕೆ ೩೫ ರಷ್ಟು ಭಾಗದ ಸಾಲವು ಹಿಂದಣ ಸಾಲಗಳನ್ನು ತೀರಿಸಿಕೊಳ್ಳುವುದಕ್ಕಾಗಿ ತೆಗೆಯಲ್ಪಟ್ಟುದಾಗಿಯೂ, ೧೦೦ ಕ್ಕೆ ೪ ರಿಂದ ೭ ರಷ್ಟು ಭಾಗದ ಸಾಲವು ಮದುವೆ ಮುಂಜಿ ಮೊದಲಾದುವುಗಳಿಗಾಗಿ ತೆಗೆಯಲ್ಪಟ್ಟಿರುವುದಾಗಿಯೂ ಕಾಣಬರುವುದರಿಂದ ಮದುವೆ ಮುಂಜೆಗಳ ದುಂದುವೆಚ್ಚಗಳಿಗಾಗಿಯೇ ಜನರು ಸಾಲಗಾರರಾಗದಂತೆ ಮಾಡುವ ವಿಷಯದಲ್ಲಿ ನಮ್ಮ ಸಂಸ್ಥಾನದ ಸಹಕಾರ ಸಂಘಗಳು ಹೆಚ್ಚು ಗಮನವನ್ನು ಕೊಡುತ್ತಿರುವುವೆಂಬುದನ್ನು ಕಂಡು ಸಂತೋಷಿಸಬೇಕಾಗಿದೆ. ಮತ್ತೂ ಸಂಘಗಳಲ್ಲಿ ಸಾಲವನ್ನು ಪಡೆದವರು ಅದನ್ನು ಮರಳಿ ಕೊಟ್ಟು ತೀರಿಸುವುದರಲ್ಲಿ ತಡಮಾಡುತ್ತಿರುವುದನ್ನು ಕಂಡು ಗೌರ್ನಮೆಂಟಿನವರು ಅಸಮಾಧಾನ ಪಟ್ಟಿರುವುದಲ್ಲದೆ, ಸಂಘಗಳು ಪರಿಶ್ರಮಾಭ್ಯುದಯೋದ್ದೇಶಕ್ಕಲ್ಲದೆ ಉಳಿದ ಕಾರ್ಯಗಳಿಗಾಗಿ ಸಾಲವನ್ನು ಸುಲಭವಾಗಿ ದೊರೆಯುವಂತೆ ಮಾಡಬಾರದೆಂಬುದಾಗಿಯೂ, ಸಂಘಗಳಲ್ಲಿ ಸಾಲ ಹುಟ್ಟುವುದು ಸುಲಭವೆಂದು ಅದರಿಂದ ಪ್ರಜೆಗಳಿಗೆ ರುಚಿ ಹತ್ತಿದರೆ ಮತ್ತಷ್ಟು ಸಾಲಗಾರರಾಗಿಯೂ ಬಡವರಾಗಿಯೂ ಅವರು ಪರಿಣಮಿಸಬಹುದೆಂದೂ ಎಚ್ಚರಿಸಿರುವುದಲ್ಲದೆ, ಬಡ್ಡಿಯ ದುರಾಶೆಯುಳ್ಳ ಸಾಹುಕಾರರ ಪೀಡೆಯಿಂದ ಬಡವರನ್ನುದ್ಧರಿಸುವ ವಿಷಯದಲ್ಲಿ ಹೆಚ್ಚು ಗಮನವನ್ನು ಸಂಘಗಳು ಕೊಡುತ್ತಿರಬೇಕೆಂದು ತಿಳಿಯಿಸಿರುತ್ತಾರೆ.

ಹೀಗೆ ಸಂಸ್ಥಾನದಲ್ಲಿ ಸಹಕಾರ ಸ್ಥಾಪನೆಯು ಹೆಚ್ಚುತ್ತ ಬಂದಂತೆಲ್ಲ ಅವರ ಕಾರ್ಯನಿರ್ವಾಹ ಭಾರವೂ ಹೆಚ್ಚುತ್ತಿದೆ. ಇದಕ್ಕಾಗಿ ಇನ್ಸ್‌ಪೆಕ್ಟರುಗಳ ಸಂಖ್ಯೆಯು ೨೭ ರಿಂದ ೩೦ ರ ವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ. ಅಲ್ಲದೆ ಸಂಬಳವಿಲ್ಲದೆ ಗೌರವಾರ್ಥವಾಗಿ ಕೆಲಸಮಾಡತಕ್ಕ ಸೂಪರ್ವೈಜರುಗಳ ಸಂಖ್ಯೆಯು ಕೂಡ ೪೫ ರಿಂದ ೫೭ ಕ್ಕೆ ಹೆಚ್ಚಿಸಲ್ಪಟ್ಟಿದೆ. ಪ್ರಸಕ್ತವರ್ಷದಲ್ಲಿ ಸಹಕಾರ ಸಂಘಗಳ ಮಹಾಸಭೆಯೊಂದಲ್ಲದೆ ಜಿಲ್ಲಾ ಸಭೆಗಳು ೬, ತಾಲ್ಲೂಕು ಸಭೆಗಳು ೩೦, ನಡೆಯಿಸಲ್ಪಟ್ಟಿರುತ್ತವೆ. ಈ ವರದಿಗೆ ಸಂಬಂಧಪಟ್ಟ ವರ್ಷದಲ್ಲಿ ಈ ಶಾಖೆಗೆ ಮ|| ಎಂ. ಎ. ನಾರಾಯಣಯ್ಯಂಗಾರ್, ಬಿ.ಎ., ಬಿ.ಎಲ್., ರವರೇ ರಿಜಿಸ್ಟ್ರಾರರಾಗಿದ್ದರು. ಅವರು ದೀರ್ಘಕಾಲಪರ್ಯಂತ ಈ ಸಂಘಗಳ ಅಭಿವೃದ್ಧಿಗಾಗಿ ಎಷ್ಟು ಶ್ರಮಸಾಹಸಗಳನ್ನು ವಹಿಸಿದ್ದರೆಂಬುದನ್ನು ದೇಶವೇ ಬಲ್ಲುದು. ಇವರ ಅಧಿಕಾರ ಸಹಾಯದಿಂದ ಸಂಸ್ಥಾನದ ಸಹಕಾರ ವ್ಯಾಪನೆಯಲ್ಲಿ ಉಂಟಾದ ಫಲಿತಾಂಶವನ್ನು ಪ್ರಭುತ್ವದವರೂ ಕೂಡ ಮೆಚ್ಚಿಕೊಂಡಿರುತ್ತಾರೆ. ಗೌರ್ನಮೆಂಟಿನವರ ಸೂಚನೆಯನ್ನು ಲಕ್ಷಿಸಿ, ಸಂಸ್ಥಾನದ ಸಂಘಗಳೆಲ್ಲವೂ ಕೃಷಿ ಶಿಲ್ಪೋದ್ಧಾರಗಳ ಕಡೆಗೆ ವಿಶೇಷ ಗಮನವಿತ್ತು ಅವುಗಳಲ್ಲಿ ಪ್ರವರ್ತಿಸಿದವರಿಗೆ ಸಂಘಗಳಿಂದ ಅವಶ್ಯವಾದ ಸಹಾಯವನ್ನು ಮಾಡಿಕೊಡುತ್ತಾ ಬಂದರೆ ದೇಶವು ಸಹಕಾರೋದ್ಯಮದ ಮೂಲಕ ಬೇಗನೆ ವೃದ್ಧಿಗೆ ಬರಲು ಮಾರ್ಗವಾಗುವುದು.

ಬೆಲೆ ಹೆಚ್ಚುಗೆಯು.

ಈ ಕಾಲದಲ್ಲಿ ಜಗತ್ತಿನಲ್ಲೆಲ್ಲಾ ಪದಾರ್ಥಗಳ ಬೆಲೆಯು ದಿನದಿನಕ್ಕೆ ಅಪರಿಮಿತವಾಗಿ ಹೆಚ್ಚಿ ಹೋಗುತ್ತಿರುವುದರಿಂದ ಪ್ರಜೆಗಳು ಜೀವನಕ್ಕೆ ಅವಶ್ಯಕಗಳಾದ ಪದಾರ್ಥಗಳನ್ನೂ ಕೂಡ ಕೊಂಡುಕೊಳ್ಳಲಾರದೆ ಪಡಲಾಗದ ಕಷ್ಟಗಳನ್ನು ಅನುಭವಿಸುತ್ತಿರುವುದನ್ನು ಕಣ್ಣಾರ ಕಾಣುತ್ತಿದ್ದೇವೆ. ಜೀವಿತಕ್ಕಾಗಿ ಆಗುವ ವ್ಯಯವು ದಿನದಿನಕ್ಕೆ ಅಭಿವೃದ್ಧಿಗೊಳ್ಳುತ್ತಿರುವುದೂ, ಧನದ ಬೆಲೆಯು ಅತಿ ತ್ವರಿತಗತಿಯಿಂದ ತಗ್ಗಿ ಹೋಗುತ್ತಿರುವುದೂ ಸಹ ಈಗ ಈಕಾಲದ ಭಯಂಕರಗಳಾದ ವಿಷಯಗಳಾಗಿರುತ್ತವೆ. ಇಂಥ ಸ್ಥಿತಿಯುಂಟಾಗುವುದಕ್ಕೆ ಅನೇಕರು ಅನೇಕ ಕಾರಣಗಳನ್ನು ಹೇಳುತ್ತಾರೆ. ಯುದ್ಧವೇ ಈ ದುಸ್ಥಿತಿಗೆ ಕಾರಣವೆಂತಲೂ ಯುದ್ಧ ಮುಗಿದಬಳಿಕ ಇದು ತೊಲಗಿ ಹೋಗುವುದೆಂತಲೂ ಸರ್ವಸಾಧಾರಣವಾಗಿ ಹೇಳುವುದು ವಾಡಿಕೆಯಾಗಿದೆ. ಆದರೆ ಈ ಬೆಲೆ ಹೆಚ್ಚುಗೆಗೆ ಯುದ್ಧವೇ ಕಾರಣವಲ್ಲವೆಂತಲೂ ಯುದ್ಧಕ್ಕೆ ಮುಂಚಿನಿಂದಲೂ ಬೆಲೆಯು ಕ್ರಮಕ್ರಮವಾಗಿ ಹೆಚ್ಚುತ್ತಲೇ ಬಂದಿರುವುದೆಂತಲೂ, ಪ್ರಭುತ್ವದವರ ಲೋಪದಿಂದ ಇಂಥ ಸ್ಥಿತಿಗತಿಗಳು ಪ್ರಾಪ್ತವಾಗಿರುವುವೆಂತಲೂ ಡಬ್ಲ್ಯು. ಇ. ಮೆಕಚ್ಚಿ ಎಂಬ ಪಾಶ್ಚಾತ್ಯಪಂಡಿತರು "ಹೆಚ್ಚು ಬೆಲೆಗಳು" ಎಂಬ ಗ್ರಂಥದಲ್ಲಿ ಬರೆದಿರುತ್ತಾರೆ. ಈ ಪುಸ್ತಕದಲ್ಲಿ ಪ್ರತಿಪಾದಿತವಾಗಿರುವ ವಿಷಯಗಳು ಆಂಗ್ಲದೇಶಕ್ಕೆ ಉಪಯುಕ್ತವಾಗುವಂತೆ ಬರೆಯಲ್ಪಟ್ಟಿದ್ದರೂ, ಅವು ಎಲ್ಲಾರಾಜ್ಯಗಳಿಗೂ ಅನ್ವಯಿಸುವುವೆಂಬುದಕ್ಕೆ ಸಂಶಯವಿಲ್ಲ. ತತ್ರಾಪಿ ನಮ್ಮ ಭರತಖಂಡಕ್ಕೆ ಅದು ಸಂಪೂರ್ಣವಾಗಿ ಅನುವರ್ತಿಸುವುದು. ಈ ಗ್ರಂಥಕರ್ತರು ೧೮೯೬ ನೆ ವರ್ಷದಿಂದಲೂ ಹಣದ ಬೆಲೆಯು ತಗ್ಗಿ ಹೋಗುತ್ತಲೂ ಪದಾರ್ಥಗಳ ಬೆಲೆಯು ಹೆಚ್ಚಿ ಹೋಗುತ್ತಲೂ ಇರುವುವೆಂದೂ, ಆ ವರ್ಷಕ್ಕಿಂತ ೧೯೧೭ ನೆ ವರ್ಷದ ಬೆಲೆಯು ಬಹುಶಃ ಮೂರು ಭಾಗದಷ್ಟು ಹೆಚ್ಚಿಹೋಗಿದೆಯೆಂದೂ ಹೇಳುತ್ತಾರೆ. ಇದಕ್ಕೆ ಕಾರಣವನ್ನು ಪ್ರಭುತ್ವದವರು ಗೊತ್ತುಮಾಡಿ ತಮ್ಮ ಲೋಪಗಳನ್ನು ತಿದ್ದಿಕೊಂಡು, ಕರೆನ್ಸಿ ವಿಧಾನವನ್ನು ಸಂಸ್ಕರಿಸಿಕೊಂಡಲ್ಲದೆ ಯುದ್ಧ ಮುಗಿದ ಮೇಲೂ ಕೂಡ ಪದಾರ್ಥಗಳ ಬೆಲೆಯು ಇಳಿಯುವುದಿಲ್ಲವೆಂದು ಈ ಪಂಡಿತರು ಹೇಳುತ್ತಾರೆ. ಇಂಥ ಬೆಲೆ ಹೆಚ್ಚುಗೆಯಿಂದ ಕೆಡುಕಷ್ಟವನ್ನು ಪಡುವವರು ಸಾಮಾನ್ಯಜನರು. ಒಂದುಕಡೆ ದುಸ್ಸಹ ದಾರಿದ್ರ್ಯದಿಂದ ಪೀಡಿತರಾದ ಬಡವರೂ, ಮತ್ತೊಂದುಕಡೆ ಲಕ್ಷ ಕೋಟಿಗಟ್ಟಲೆ ಧನವನ್ನಾರ್ಜಿಸುತ್ತಿರುವ ಶ್ರೀಮಂತರೂ ಸಹ ಎಲ್ಲೆಲ್ಲೂ ಕಣ್ಣಿಗೆ ಬೀಳುತ್ತಿದ್ದಾರೆ. ಇಂಥ ಸ್ಥಿತಿಯು ಜಾತೀಯಸೌಖ್ಯಕ್ಕೂ ಸಂಘಶಾಂತಿಗೂ ಭಂಗಕರವಾದುದೆಂದು ಇದೇ ಗ್ರಂಥಕರ್ತರು ಅಭಿಪ್ರಾಯಪಟ್ಟಿರುತ್ತಾರೆ. ಪದಾರ್ಥಗಳನ್ನು ಕೊಂಡುಕೊಳ್ಳಬಲ್ಲ ಶಕ್ತಿಯನ್ನು ಅನುಸರಿಸಿಯೇ ಧನದ ಬೆಲೆಯು ನಿರ್ಣಯಿಸಲ್ಪಡುವುದು. ೧೮೯೬ ನೆ ವರ್ಷದಲ್ಲಿ ೧ ರೂ. ಗೆ ದೊರೆಯುತ್ತಿದ್ದ ವಸ್ತುವು ೧೯೧೭ ನೆ ವರ್ಷದಲ್ಲಿ ೩ ರೂ. ಬೆಲೆಯುಳ್ಳುದಾಗಿದೆ. ಅದುಕಾರಣ ರೂಪಾಯಿಯ ಬೆಲೆಯು ಮೂರುಭಾಗದಷ್ಟು ತಗ್ಗಿ ಹೋಗಿದೆಯೆಂದು ವ್ಯಕ್ತವಾಗುತ್ತದೆ. ಇದಕ್ಕೆ ಕಾರಣವೇನು? ಪೂರ್ವದಲ್ಲಿದ್ದ ಧನವು ಈಗ ದ್ವಿಗುಣೀಕೃತವಾಗಿ ಮಾಡಲ್ಪಟ್ಟಿರುವುದೂ, ಕರೆನ್ಸಿ ನೋಟುಗಳು ವಿಪರೀತವಾಗಿ ವ್ಯವಹಾರಕ್ಕೆ ಇಡಲ್ಪಟ್ಟಿರುವುದೂ ಇದಕ್ಕೆ ಕಾರಣವೆಂಬುದನ್ನು ನಿದರ್ಶನಪೂರ್ವಕವಾಗಿ ನಿರೂಪಿಸುವುದೇ ಈ ಗ್ರಂಥದ ಉದ್ದೇಶವಾಗಿರುವುದು. ಕರೆನ್ಸಿ ನೋಟುಗಳನ್ನು ಒದಗಿಸಿಕೊಡುವುದಕ್ಕೆ ಪ್ರಭುತ್ವದವರಿಗೆ ಯಾವ ಕಷ್ಟವೂ ಇಲ್ಲ. ಆದುದರಿಂದ ಧನವನ್ನು ವೃದ್ಧಿಗೊಳಿಸಬೇಕೆಂದು ಅವರಿಗೆ ತೋರಿದಾಗಲೆಲ್ಲಾ ನೋಟುಗಳನ್ನು ಬೇಕಾದಷ್ಟು ಅಚ್ಚೊತ್ತಿ ವ್ಯವಹಾರಕ್ಕೆ ತರುವುದು ಸಹಜವಾಗಿದೆ. ಇದರಿಂದ ದೇಶದಲ್ಲಿ ಪದಾರ್ಥಗಳನ್ನು ಕೊಂಡುಕೊಳ್ಳುವಾಗ ಉಪಯೋಗಿಸಲ್ಪಡಬೇಕಾದ ಧನವು ಹೆಚ್ಚಬೇಕಾಗಿರುತ್ತದೆ. ಆದರೆ ವಸ್ತುಸಾಮಗ್ರಿಗಳ ಮೊತ್ತವು ಮಾತ್ರ ಯಥಾಸ್ಥಿತಿಯಲ್ಲಿಯೇ ಇರುತ್ತದೆ. ಇದರಿಂದಲೇ ಬೆಲೆಯು ಹೆಚ್ಚುತ್ತಿದೆ. ಇಂಥ ಸ್ಥಿತಿಯನ್ನು ಹೋಗಲಾಡಿಸುವುದು ಹೇಗೆ? ಲೋಕದಲ್ಲಿರುವ ಯಾವ ನಾಗರಿಕ ಪ್ರಭುತ್ವಗಳಲ್ಲೂ ನಿರ್ಣೀತವಾದ ಬೆಲೆಯ ಪರಿಮಾಣವು (fixed measure of value) ಇರುವುದಿಲ್ಲ. ಈ ಕಾರಣದಿಂದಲೇ ರೂಪಾಯಿಯ ಅಥವಾ ಸವರನ್ನಿನ ಬೆಲೆಯು ಮಾರ್ಪುಗೊಳ್ಳದೆ ಒಂದೇ ಸ್ಥಿತಿಯಲ್ಲಿರಲಾರದು. ಆದುದರಿಂದ ಮೊಟ್ಟಮೊದಲು ಬೆಲೆಯ ಪರಿಮಾಣದ ನಿರ್ಣಯವನ್ನು (fix the standard of value) ಮಾಡುವುದು ಅತ್ಯಾವಶ್ಯಕವೆಂದು ಗ್ರಂಥಕರ್ತರು ಹೇಳಿರುತ್ತಾರೆ. ಕೂಲಿಗಾರರ ಸಂಬಳವು ತಗ್ಗಿ ಹೋಗದೆ ಇರಬೇಕಾದರೆ, ನಾಗರಿಕತೆಗೆ ಲಾಂಛನಪ್ರದವಾದ...ಅನ್ಯಾಯವಾದ...ಅಸಮಾನಧನವಿಭಜನವು ರೂಪುಗೆಟ್ಟು ಹೋಗಬೇಕಾಗಿದ್ದರೆ, ಧನದ ಬೆಲೆಯ ಪರಿಮಾಣವನ್ನು ನಿರ್ಣಯಿಸುವುದೇ ಅತ್ಯವಶ್ಯಕವು. ಈ ಪ್ರಯತ್ನವನ್ನು ಮಾಡದೆಹೋದರೆ ನಮ್ಮ ಸಾಂಘಿಕದುಸ್ಥಿತಿಯು ತೊಲಗಿಹೋಗಲಾರದು ಎಂಬುದಾಗಿ ಈ ಗ್ರಂಥಕರ್ತರು ಸಿದ್ಧಾಂತಮಾಡಿ ಘಂಟಾಘೋಷದಿಂದ ಸಾರಿರುತ್ತಾರೆ. ಈ ವಿಷಯವನ್ನು ನಮ್ಮ ಭಾರತಪ್ರಭುತ್ವದವರೂ ಗಮನಿಸಿ ಅದರಂತೆ ನಡೆಯುವವರಾದರೆ ದೇಶಕ್ಕೇ ಕ್ಷೇಮವಾದೀತು. ನಮ್ಮ ಇಂಡ್ಯಾ ಪ್ರಭುತ್ವದವರ ಕರೆನ್ಸಿ ವಿಧಾನವು ತೃಪ್ತಿಕರವಾಗಿಲ್ಲವೆಂದು ಅರ್ಥಶಾಸ್ತ್ರಜ್ಞರನೇಕರು ಅಭಿಪ್ರಾಯಪಟ್ಟಿರುತ್ತಾರೆ. ರೂಪಾಯಿಗೆ ಕೃತ್ರಿಮ (ಅನನುಗುಣ) ವಾದ ಬೆಲೆಯು ಇಡಲ್ಪಟ್ಟಾಗಿನಿಂದಲೂ ನಮ್ಮ ದೇಶದಲ್ಲಿ ಪದಾರ್ಥಗಳ ಬೆಲೆಯು ಹೆಚ್ಚಲಾರಂಭಿಸಿತು. ಅದರ ಜತೆಗೆ ಕರೆನ್ಸಿ ನೋಟುಗಳೂ ಹೆಚ್ಚುಹೆಚ್ಚಾಗಿ ಬಂದುವು. ಇದರಿಂದ ಮತ್ತಷ್ಟು ಬೆಲೆ ಹೆಚ್ಚುವಂತಾಯಿತು. ಯುದ್ಧವು ಆರಂಭವಾದ ಬಳಿಕ ೨|| ರೂ. ನ ೧ ರೂ. ನ ನೋಟುಗಳು ಕೂಡ ವ್ಯವಹಾರಕ್ಕೆ ಬಂದಿರುತ್ತವೆ. ಚಿನ್ನ, ಬೆಳ್ಳಿ ಮೊದಲಾದ ಲೋಹಗಳು ವಿದೇಶಕ್ಕೆ ಸಾಗಿಹೋಗುತ್ತ ಅವು ಕಡಿಮೆಯಾಗುತ್ತಿವೆ. ಶುದ್ಧವಾದ ತಾಮ್ರದ ನಾಣ್ಯಗಳಿಗೆ ಪ್ರತಿಯಾಗಿ ಬೆರಕೆಲೋಹದ ಕಾಸುಗಳೂ, ಮಿಶ್ರವಾದ ನಿಕ್ಕಲ್ಲಿನ ೧-೨ ಆಣೆಯ ನಾಣ್ಯಗಳೂ ಕೂಡ ವ್ಯವಹಾರಕ್ಕೆ ತರಲ್ಪಟ್ಟಿವೆ. ಇವೆಲ್ಲವುಗಳಿಂದ ಗೊತ್ತಾಗುವುದೇನೆಂದರೆ—ನಮ್ಮ ದೇಶದಲ್ಲಿ ಧನವು ಕೃತ್ರಿಮವಾಗಿ ವೃದ್ಧಿಹೊಂದುತ್ತಿದೆ, ಧನದ ಬೆಲೆಯು ತಗ್ಗುತ್ತಿದೆ, ಆದರಿಂದಲೇ ಪದಾರ್ಥಗಳ ಬೆಲೆಯು ಕಾಲಕ್ರಮವಾಗಿ ವೃದ್ಧಿಹೊಂದುತ್ತಲಿದೆ. ಈ ಭಯಂಕರಸ್ಥಿತಿಯು ತೊಲಗಿಹೋಗಬೇಕಾದರೆ ಮೇಲೆಹೇಳಿದಂತೆ ಮೂಲಕಾರಣವನ್ನು ಸಂಸ್ಕರಿಸಲೇಬೇಕು.

ಸಂಘಪ್ರಾತಿನಿಧ್ಯಾನುಮೋದನ.

ಸ್ವರಾಜ್ಯತತ್ತ್ವವು ಅಧಿಷ್ಠಿತವಾಗಬೇಕಾದರೆ ಸ್ಥಾನಿಕಸ್ವಪರಿಪಾಲನವು ಮೊಟ್ಟಮೊದಲು ದೃಢಮೂಲವಾಗಬೇಕು. ನಮ್ಮ ದೇಶದಲ್ಲಿ ಲಾರ್ಡ್ ರಿಪ್ಪನ್‌ರವರ ವೈಸ್ರಾಯಿಗಿರಿಯಲ್ಲಿ ಸ್ಥಾನಿಕಸ್ವಪರಿಪಾಲನಕ್ರಮವು ಆರಂಭಿಸಲ್ಪಟ್ಟರೂ ಇದುವರೆಗೂ ಅದು ಅಧಿಕಾರವಲಂಬನೆಯಿಲ್ಲದೆ ಸ್ವತಂತ್ರವಾಗಿ ನಿರ್ವಹಿಸಲ್ಪಡುವಷ್ಟು ಸಾಮರ್ಥ್ಯವುಳ್ಳುದಾಗಿರುವುದಿಲ್ಲ. ಅದುಕಾರಣ ಸ್ಥಾನಿಕಸ್ವಪರಿಪಾಲನಕ್ಕೆ ಸ್ವಾತಂತ್ರ್ಯವನ್ನು ಹೆಚ್ಚಿಸಬೇಕೆಂಬ ತತ್ತ್ವವು ಈಗ ಸರ್ವತ್ರ ಅಂಗೀಕೃತವಾಗುತ್ತಿದೆ. ನಮ್ಮ ಮೈಸೂರು ಪ್ರಭುತ್ವದವರು ೨-೩ ವರ್ಷಗಳಿಂದಲೂ ಇದಕ್ಕಾಗಿ ಸ್ವಲ್ಪ ಪ್ರಚಲನವನ್ನು ವ್ಯಕ್ತಪಡಿಸಿ ಈ ಸಂಬಂಧವಾಗಿ ನೂತನನಿಧಿಯನ್ನು ಕಲ್ಪಿಸುವುದರಲ್ಲಿ ವ್ಯಗ್ರರಾಗಿರುವುದು ಗೊತ್ತೇ ಇದೆ. ಇದರ ಸಂಬಂಧದಲ್ಲೇ ಪ್ರತ್ಯೇಕಸಾಂಘಿಕ ಪ್ರಾತಿನಿಧ್ಯತತ್ತ್ವದ ಮೇಲೆ ಸ್ಥಳಿಕಸ್ವಪರಿಪಾಲನ ಕಾರ್ಯವು ನಿರ್ವಾಹವಾಗುವಂತೆ ಮಾಡಬೇಕೆಂಬುದಾಗಿ ನಮ್ಮ ಮುಂದಾಳುಗಳು ನಿಯಮನಿರ್ಮಾಣಸಭೆ ಮೊದಲಾದುವುಗಳಲ್ಲಿ ಪ್ರಚಾರವನ್ನು ವ್ಯಕ್ತಪಡಿಸುತ್ತಿರುವುದೂ ಕೂಡ ಎಲ್ಲರಿಗೂ ಗೊತ್ತೇ ಇದೆ. ಇಂಥ ಪ್ರತ್ಯೇಕಪ್ರಾತಿನಿಧ್ಯತತ್ತ್ವಸ್ವೀಕರಣವನ್ನು ಸ್ಥಳಿಕಸರ್ಕಾರಗಳಲ್ಲಿ ಮಾತ್ರವೇ ಅಲ್ಲದೆ ಪ್ರಾಂತಿಕಸಾಮ್ರಾಜ್ಯಕ ನಿಯಮನಿರ್ಮಾಣ ಸಭೆಗಳಲ್ಲೂ ಕೂಡ ಅನುಸರಿಸುವಂತೆ ಮಾಡಬೇಕೆಂದು ಸಹ ಭರತಖಂಡದ ದೇಶಾಭಿಮಾನಿಗಳಲ್ಲನೇಕರು ಪ್ರಭುತ್ವದವರನ್ನು ಪ್ರಾರ್ಥಿಸುತ್ತಿದ್ದಾರೆ. ಮುಂದೆ ನಡೆಯಬಹುದಾಗಿರುವ ರಾಜಕೀಯ ಸಂಸ್ಕರಣ ಕ್ರಮದಲ್ಲಿ ಈ ಪ್ರಜಾಪ್ರಾರ್ಥನೆಯು ಮೂಲೆಗೊತ್ತಲ್ಪಡಲಿಕ್ಕಿಲ್ಲವೆಂದು ಕೋಟ್ಯಂತರ ಪ್ರಜೆಗಳು ಇದಿರುನೋಡುತ್ತಿದ್ದಾರೆ. ಅವರ ನಿರೀಕ್ಷಣೆಯು ವ್ಯರ್ಥವಾಗಲಿಕ್ಕಿಲ್ಲವೆಂಬುದಕ್ಕೆ ಒಂದು ಶುಭಪ್ರಕಾಶವು ಇಂಡ್ಯಾ ಸರ್ಕಾರದ ಕಳೆದವಾರದ ಒಂದು ಪ್ರಕಟನೆಯಲ್ಲಿ ಸುವ್ಯಕ್ತವಾಗಿರುತ್ತದೆ. ಅದಾವುದೆಂದರೆ—ಭರತಖಂಡದ ಪ್ರಭುತ್ವದವರು ಸ್ಥಾನಿಕಸ್ವಪರಿಪಾಲನಾಭಿವೃದ್ಧಿಗಾಗಿ ಮಾಡಿರುವ ಒಂದಾನೊಂದು ದೊಡ್ಡ ತೀರ್ಮಾನದ ಪ್ರಕಟನದಲ್ಲಿ ಪ್ರತಿಯೊಂದು ಪುರಪಾಲಕ ಸಂಘಗಳಲ್ಲೂ ಗ್ರಾಮಬೋರ್ಡುಗಳಲ್ಲೂ ಪ್ರಜೆಗಳಿಂದ ಆರಿಸಲ್ಪಟ್ಟ ಸಭಿಕರ ಸಂಖ್ಯೆಯನ್ನು ಹೆಚ್ಚುಗೊಳಿಸುವುದಕ್ಕೂ, ಸ್ವಲ್ಪಸಂಖ್ಯಾಕರಾದ ಬೇರೆಬೇರೆ ಪ್ರಜಾವರ್ಗಗಳ ಪ್ರತಿನಿಧಿಗಳನ್ನು ಪ್ರಭುತ್ವದವರು ಆರಿಸಿ ಅವರುಗಳ ಪ್ರಾತಿನಿಧ್ಯವು ಈ ಸಂಘಗಳಲ್ಲಿರುವಂತೆ ಮಾಡುವುದಕ್ಕೂ, ಈ ಸಂಘಗಳಲ್ಲಿ ಸರ್ಕಾರದ ಉದ್ಯೋಗಿಗಳು ಕೆಲರನ್ನು ನಿಯಮಿಸಿದರೂ ಅವರಿಗೆ ಓಟನ್ನು ಕೊಡುವ ಅಧಿಕಾರವಿಲ್ಲದೆಯೇ ಅವರ ಅನುಭವಪ್ರಯೋಜನವು ಮಾತ್ರ ಸ್ಥಳಿಕಸಂಘಗಳಿಗುಂಟಾಗುವಂತೆ ಮಾಡುವುದಕ್ಕೂ, ಮತ್ತೂ ಹಿಂದೆಬಿದ್ದು ಹೋಗಿರುವ ಜನವರ್ಗದವರಿಗೆ ಓಟುಕೊಡುವ ಸ್ವಾತಂತ್ರ್ಯವನ್ನು ಅಭಿವೃದ್ಧಿಗೊಳಿಸಿ ರೈತವಾಣಿಜನರ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದಕ್ಕೂ ಈ ತೀರ್ಮಾನದಲ್ಲಿ ಏರ್ಪಾಟುಗಳು ಮಾಡಲ್ಪಟ್ಟಿವೆ. ಕೆಲವಿಶಿಷ್ಟ ಪುರಪಾಲಕ ಸಂಘಗಳ ಹೊರತು ಉಳಿದ ಸಂಘಗಳೆಲ್ಲಾ ತಮ್ಮ ಅಧ್ಯಕ್ಷರನ್ನು ತಾವೇ ಆರಿಸಿಕೊಳ್ಳುವುದಕ್ಕೂ ಒಂದು ಕ್ಲುಪ್ತಪರಿಮಿತಿಯವರೆಗೆ ಅವರೇ ಕಂದಾಯ ತೆರಿಗೆಗಳನ್ನು ವಿಧಿಸುವುದಕ್ಕೂ, ತಮ್ಮತಮ್ಮ ಬಡ್ಜೆಟ್ಟುಗಳನ್ನು ಏರ್ಪಡಿಸಿಕೊಳ್ಳುವುದಕ್ಕೂ ತಮ್ಮ ಕಾರ್ಯನಿರ್ವಾಹಕ್ಕೆ ತಕ್ಕ ಉದ್ಯೋಗಿಗಳನ್ನು ತಾವೇ ನಿಯಮಿಸಿಕೊಳ್ಳುವುದಕ್ಕೂ ಈ ಸ್ಥಾನಿಕ ಸ್ವಪರಿಪಾಲನ ಸಂಘಗಳಿಗೆ ಅಧಿಕಾರವು ಕೊಡಲ್ಪಟ್ಟಿರುವುದು.

ಈ ಏರ್ಪಾಟಿನಿಂದ ಸ್ಥಳಿಕಸರ್ಕಾರಗಳಿಗೆ ಸಂಪೂರ್ಣವಾದುದಲ್ಲದಿದ್ದರೂ ಬಲುಮಟ್ಟಿಗೆ ಸ್ವತಂತ್ರತೆಯು ಕೊಡಲ್ಪಟ್ಟಂತೆಯೇ ಆಗುವುದು. ೧೯೦೭ ನೆ ವರ್ಷದಲ್ಲಿ ಏರ್ಪಡಿಸಲ್ಪಟ್ಟ ಡಿಸೆಂಟ್ರಲೈಜೇಷನ್ ಕಮಿಷನ್ನಿನವರು ವಿಚಾರಣಪೂರ್ವಕವಾಗಿ ಕೊಟ್ಟ ಸೂಚನೆಗಳ ಫಲವು ಈಗ ಇಷ್ಟುಮಟ್ಟಿಗೆ ಇಂಡ್ಯಾ ಪ್ರಭುತ್ವದವರಿಂದ ಸಫಲಗೊಂಡಂತೆ ಕಾಣುತ್ತದೆ. ಹೀಗೆಯೇ ದಿನಕ್ರಮೇಣ ಸ್ಥಾನಿಕಸ್ವಪರಿಪಾಲನ ಸ್ವಾತಂತ್ರ್ಯವನ್ನು ಸಂಪೂರ್ಣಸ್ಥಿತಿಗೆ ತರುವುದರ ಜತೆಗೆ ಭರತಖಂಡದ ಸ್ವಪರಿಪಾಲನತತ್ತ್ವವೂ ಹದಿಮಟ್ಟಿಲ್ಪಡುವಂತೆ ಉದಾರವಾದ ಆಂಗ್ಲಸಾಮ್ರಾಜ್ಯಪ್ರಭುತ್ವದಿಂದ ಮಾಡಲ್ಪಡದೆ ಹೋಗಲಾರದು.

ಈ ಸ್ಥಾನಿಕ ಸ್ವಪರಿಪಾಲನಾಭಿಕ್ರಮದಲ್ಲಿ ಭರತಖಂಡದ ಸರ್ಕಾರಕ್ಕಿಂತಲೂ ಮುಂದುವರಿಯಲು ಪ್ರಯತ್ನಿಸಿದ ನಮ್ಮ ಮೈಸೂರು ಸರ್ಕಾರದವರು ಪ್ರತ್ಯೇಕಸಂಘ ಪ್ರಾತಿನಿಧ್ಯತತ್ತ್ವಕ್ಕೆ ಇಂಡ್ಯಾಸರ್ಕಾರದವರು ಮನಸ್ಕರಿಸಿದ ಮೇಲಾದರೂ ತಾವು ಅದನ್ನು ಅನುಸರಿಸದೆ ಹೋಗುವುದೆಂದರೆ, ಹಿಂದುಳಿದ ಜನರ ಸಮುದ್ಧರಣೆಯಲ್ಲಿ ಇವರಿಗೆ ನಿಜವಾದ ಅಭಿಮಾನವಿರುವುದೆಂದೂ, ಪಕ್ಷಪಾತವು ಇವರಿಗಿಲ್ಲವೆಂದೂ ಹೇಗೆ ಹೇಳಿಸಿಕೊಳ್ಳಬಲ್ಲರು?

ಭಾರತೀಯ "ಸಿನಿಮಾ" ಚಿತ್ರಪಟಗಳು.

ಸಿನಿಮಾ ಚಿತ್ರಪಟಗಳನ್ನು ಪ್ರದರ್ಶಿಸುವುದು ಪ್ರತಿಯೊಂದು ಪಟ್ಟಣಗಳಲ್ಲೂ ಹೆಚ್ಚುತ್ತಿದೆಯಷ್ಟೆ. ಈ ಚಿತ್ರಪಟಗಳೆಲ್ಲಾ ಸಾಮಾನ್ಯವಾಗಿ ವಿದೇಶಗಳಲ್ಲೇ ನಿರ್ಮಿತವಾದುವುಗಳು. ನಮ್ಮ ಭರತಖಂಡದವು ಇಲ್ಲವೇ ಇಲ್ಲ. ಆದರೆ ಬೊಂಬಾಯಿಯ ಡಿ|| ಜಿ. ಫಲ್ಕೆ ಎಂಬ ಭಾರತೀಯರು ನಮ್ಮ ಹಿಂದೂಪುರಾಣದ ಭಸ್ಮಾಸುರ ಮೋಹಿನೀ, ಲಂಕಾದಹನ, ಸಾವಿತ್ರೀ, ಹರಿಶ್ಚಂದ್ರ ಮೊದಲಾದ ಚರಿತ್ರೆಗಳನ್ನು ಈ ಚಿತ್ರಪಟಗಳ ರೂಪದಿಂದ ಪ್ರದರ್ಶಿಸುವುದಕ್ಕೆ ರಚಿಸಿದ್ದಾರೆ. ಬೊಂಬಾಯಿಯಲ್ಲಿ ಈಗ ಅವು ಪ್ರತಿದಿನವೂ ಪ್ರದರ್ಶಿಸಲ್ಪಡುತ್ತಿವೆ. ಅವು ಬಹು ಚಿತ್ತಾಕರ್ಷಕಗಳಾಗಿವೆ. ಪ್ರೇಕ್ಷಕರಿಂದ ನಾಟಕಶಾಲೆಗಳು ತುಂಬಿಹೋಗುತ್ತಿವೆ. ದ್ರವ್ಯಾದಾಯವು ವಿಶೇಷವಾಗಿ ಆಗುತ್ತಿದೆ. ಪ್ರತಿರಾತ್ರಿಯೂ ೪ ಸಲ ಇವುಗಳ ಪ್ರದರ್ಶನವನ್ನು ಮಾಡಿಸುತ್ತಿದ್ದಾರೆ. ಈ ಚಿತ್ರಗಳಿಂದ ಮಿ|| ಫಲ್ಕೆರವರಿಗೆ ೭೦ ಸಾವಿರ ರೂ. ಗಳ ಮೇಲೆಯೇ ಆದಾಯವಾಗಿದೆಯಂತೆ. ಅನೇಕ ಪರಸ್ಥಳಗಳವರು ಈ ಚಿತ್ರಪಟಗಳನ್ನು ಬಾಡಿಗೆಗಾಗಿ ಕೋರುತ್ತಿದ್ದಾರೆ. ಪ್ರತಿಪ್ರದರ್ಶನಕ್ಕೂ ೮೦೦-೯೦೦ ರೂ. ಗಳಿಗೆ ಕಡಿಮೆಯಿಲ್ಲದೆ ಆದಾಯವಾಗುತ್ತಿರುವುದಂತೆ. ಬೊಂಬಾಯಿಯ ಸ್ಥಳಿಕಪತ್ರಿಕೆಗಳೆಲ್ಲಾ ಅವನ್ನು ಹೊಗಳಿರುತ್ತವೆ. ಈಗಾಗಲೇ ಈ ಸಿನಿಮಾ ಪಟಗಳು ಬರೋಡಾ, ಗ್ವಾಲಿಯರ್, ಇಂದೋರ್ ಮೊದಲಾದ ಅನೇಕ ಸ್ಥಳಗಳಲ್ಲಿ ಪ್ರದರ್ಶಿಸಲ್ಪಟ್ಟಿವೆ. ಈ ಚಿತ್ರಪಟಗಳ ಸುರುಳಿಯೊಂದೊಂದಕ್ಕೆ ವರ್ಷಕ್ಕೆ ೧೨ ಸಾವಿರದಿಂದ ೬೦ ಸಾವಿರದವರೆಗೆ ಬಾಡಿಗೆ ಕೊಡುತ್ತೇವೆಂದು ಅನೇಕರು ಕೇಳುತ್ತಿದ್ದಾರಂತೆ. ಈ ನೂತನರಚನೆಯಿಂದ ಭಾರತೀಯ ಮಂಡಲಕ್ಕೆಲ್ಲಾ ಪ್ರತಿಷ್ಠೆಯನ್ನುಂಟುಮಾಡಿದ ಮಿ|| ಫಲ್ಕೆರವರು ೧೮೮೬ ನೆ ವರ್ಷದಲ್ಲಿ ಬರೋಡಾದಲ್ಲಿ ಚಿತ್ರಲೇಖನಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ನಾಟಕದ ಸೀನರಿಗಳನ್ನು ಬರೆದುಕೊಡುವ ಉದ್ಯೋಗಕ್ಕಾರಂಭಿಸಿ, ಆಗಲೇ ನಾಟಕಸಾಮರ್ಥ್ಯವನ್ನರಿತುಕೊಂಡು, ೧೮೯೦ ನೆ ವರ್ಷದಲ್ಲಿ ಫೋಟೋಗ್ರಾಫರ್ ಕೆಲಸಕ್ಕೆ ತೊಡಗಿ ಪ್ರಖ್ಯಾತಿಪಡೆದು, ಆ ಬಳಿಕ ಚಿತ್ರಲೇಖನ ಚಿತ್ರಮುದ್ರಣಗಳಿಗಾಗಿ ಒಂದು ಯಂತ್ರಶಾಲೆಯನ್ನು ಸ್ಥಾಪಿಸಿ, ಅದರಲ್ಲಿ ಒಳ್ಳೆಯ ಲಾಭವನ್ನೂ ಕೀರ್ತಿಯನ್ನೂ ಪಡೆದರು. ಸ್ವದೇಶೀಯವಿದೇಶೀಯರಲ್ಲೆಲ್ಲಾ ಅವರ ಖ್ಯಾತಿಯು ಹರಡಿತು. ಅವರ ಉದ್ಯೋಗಮಹತ್ತ್ವವು ಅನೇಕ ಸ್ವರ್ಣಪದಕಗಳನ್ನು ಅವರಿಗೆ ದೊರಕಿಸಿಕೊಟ್ಟಿತು. ಇವೆಲ್ಲಾ ಅವರ ಉತ್ಸಾಹವನ್ನು ಹೆಚ್ಚಿಸಿ, ಸಿನಿಮಾ ಚಿತ್ರರಚನೆಗೆ ತೊಡಗಿಸಿದುವು. ಈಗಲಾದರೂ ಅವರು ಅಭೂತಪೂರ್ವವಾದ ಜಯವನ್ನು ಪಡೆದು ಸ್ವದೇಶಕ್ಕೆ ಗೌರವವನ್ನುಂಟುಮಾಡಿ, ಭಾರತೀಯ ಪ್ರಖ್ಯಾತಪುರುಷರಲ್ಲೊಬ್ಬರಾಗಿ ಪರಿಣಮಿಸಿದರು. "ಉದ್ಯೋಗಿನಂ ಪುರುಷಸಿಂಹಮುಪೈತಿಲಕ್ಷ್ಮೀಃ" ಎಂಬ ವಚನವು ಇಂಥ ಮಹನೀಯರಿಂದಲೇ ಲೋಕಕ್ಕೆ ನಿದರ್ಶನವನ್ನುಂಟುಮಾಡುತ್ತಿರುವುದು.

ವೀ|| ವಿ "ಫಂಡ್" ಕಮಿಟಿಯ ಮೀಟಿಂಗು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆಯ ಜನರಲ್‌ಕಮಿಟಿ ಮೀಟಿಂಗು ಬರುವ ತಾ|| ೯ ನೆ ಭಾನುವಾರ ಸಾಯಂಕಾಲ ಬೆಂಗಳೂರಿನಲ್ಲಿ ಧರ್ಮಪ್ರವರ್ತಕ ರಾ|| ಬ|| ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ನಡೆಯಲು ಏರ್ಪಟ್ಟಿದೆ. ತತ್ಸಂಬಂಧವಾದ ಆಹ್ವಾನಪತ್ರಿಕೆಗಳು ಮೆಂಬರುಗಳಿಗೆಲ್ಲಾ ಇಷ್ಟರಲ್ಲೇ ತಲುಪಿರಬಹುದು. ಈ ಸಭೆಯಲ್ಲಿ ಪದ್ಧತಿಯಂತೆ ಕಳೆದ ವರ್ಷದ ಲೆಕ್ಕಪಕ್ಕಗಳ ಹೇಳಿಕೆ ಕೇಳಿಕೆಗಳು ಮಾತ್ರವೇ ಅಲ್ಲದೆ, ಪ್ರಜಾಪ್ರತಿನಿಧಿಸಭೆಗೆ ಸಂಘದ ಪ್ರತಿನಿಧಿಯನ್ನಾರಿಸಿ ಕಳುಹಿಸಿಕೊಡುವುದು, ಸಭೆಯ ನಿಯಮಗಳನ್ನು ತಿದ್ದುಪಾಟು ಮಾಡುವುದು, ಬೆಂಗಳೂರಿನಲ್ಲಿ ನೂತನ ವೀರಶೈವ ವಿದ್ಯಾರ್ಥಿ ನಿಲಯವನ್ನು ಕಟ್ಟಿಸಬೇಕಾದ ವಿಚಾರ, ಫಂಡಿನ ಹಣದ ವಸೂಲಿ ಏರ್ಪಾಟು — ಇತ್ಯಾದಿ ಮುಖ್ಯ ವಿಷಯಗಳನೇಕವನ್ನು ವಿಚಾರದಿಂದ ನಿರ್ಧರಿಸಲು ಏರ್ಪಡಿಸಿರುವುದರಿಂದ ಫಂಡ್ ಸಭೆಯ ಉದ್ದೇಶವನ್ನು ಮತಕ್ಕೆ ಹಿತಪ್ರದವಾಗುವಂತೆ ಸಾರ್ಥಕಗೊಳಿಸಬೇಕೆಂದು ಬಯಸುವ ಅಭಿಮಾನಿಗಳೆಲ್ಲರೂ ಅವಶ್ಯಕವಾಗಿ ಆ ದಿವಸಕ್ಕೆ ಬೆಂಗಳೂರಿಗೆ ದಯಮಾಡಿಸಿ, ಸಭಾಕಾರ್ಯವನ್ನು ಫಲಪ್ರದವಾಗುವಂತೆ ಮಾಡಬೇಕು. ಮೇಲೆ ಕಂಡುವೇ ಅಲ್ಲದೆ ಜೂನ್ ತಾ|| ೪ ರೊಳಗಾಗಿ ಫಂಡ್ ಸೆಕ್ರೆಟರಿಯವರ ಬಳಿಗೆ ಲಿಖಿತಮೂಲಕವಾಗಿ ತಿಳಿಸಲ್ಪಡುವ ಇತರ ನೂತನ ವಿಷಯಗಳೂ ಸಹ ಸಭೆಯಲ್ಲಿ ಚರ್ಚಿಸಲ್ಪಡುವುವು.

ಒಳದೇಶದ ವೃತ್ತಾಂತಗಳು.

ದಾವಣಗೆರೆಯಲ್ಲಿ ನಾಳೆ ೪ ನೆ ತಾರೀಖಿನಿಂದ ಹೈಸ್ಕೂಲು ತರಗತಿಗಳು ಆರಂಭಿಸಲ್ಪಡುವುವು.

ಬೆಂಗಳೂರಿನಲ್ಲಿ ಸರ್ಕಾರದ ಸಹಾಯದಿಂದ ರೂಪಾಯಿಗೆ ೮ ಮಣ ಸವದೆಯಂತೆ ಮಾರಲು ಏರ್ಪಾಟಾಗಿದೆಯೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ರಾಮೇಶ್ವರದಿಂದ ಕಳೆದ ತಾ|| ೨೯ ರಲ್ಲಿ ಬೆಂಗಳೂರಿಗೆ ಬಂದು ಅಲ್ಲಿಂದ ತಾ|| ೩೦ ರಲ್ಲಿ ರಾಜಧಾನಿಗೆ ದಯಮಾಡಿಸಿದರು.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಬೆಂಗಳೂರು ಮೈಸೂರು ಸೆಂಟರುಗಳಲ್ಲಿ ೯ ಮಂದಿ ವೀರಶೈವ ವಿದ್ಯಾರ್ಥಿಗಳು ಉತ್ತೀರ್ಣರಾದರೆಂದು ಕೇಳಿದೆವು.

ಮಿ|| ಕೆ. ಚಾಂಡಿಯವರಿಗೆ ತಮ್ಮ ಎಕ್ಸೈಜ್ ಕಮಿಷನರ್ ಅಧಿಕಾರದ ಜತೆಗೆ ಪದಾರ್ಥಗಳ ದರದ ನಿರ್ಣಯವಿಷಯಕವಾದ ಅಧಿಕಾರವು ಕೂಡ ನಮ್ಮ ಸರ್ಕಾರದವರಿಂದ ಕೊಡಲ್ಪಟ್ಟಿದೆ.

೨ ನೆ ಕೌನ್ಸಿಲರ್ ಮ|| ಎ. ಆರ್. ಬಾನರ್ಜಿಯವರು ೨ ತಿಂಗಳ ರಜಾವನ್ನು ತೆಗೆದುಕೊಂಡಿರುವುದರಿಂದ ಅವರ ಸ್ಥಾನಕ್ಕೆ ರೆವಿನ್ಯೂ ಕಮಿಷನರ್ ಮ|| ಪಿ. ರಾಘವೇಂದ್ರರಾಯರು ನಿಯಮಿಸಲ್ಪಟ್ಟಿದ್ದಾರೆಂದು ಕೇಳುತ್ತೇವೆ.

"ಧರ್ಮ" ಎಂಬ ಹೆಸರಿನ ಮಾಸಪತ್ರವು ಬೆಂಗಳೂರ ಸಿದ್ಧಶಾರಸ್ವತಾಶ್ರಮದಿಂದ ಕಳೆದ ಚೈತ್ರಮಾಸಾರಭ್ಯ ಪ್ರಕಟಿಸಲ್ಪಡುತ್ತಿರುವುದು. ಹೆಸರಿಗೆ ತಕ್ಕಂತೆ ಇಹಪರಶ್ರೇಯಸ್ಸಾಧಕ ವಿಷಯಗಳು ಶುದ್ಧವಾಗಿಯೂ ಸಪ್ರಮಾಣವಾಗಿಯೂ ಇದರಲ್ಲಿ ಬರೆಯಲ್ಪಡುವುವು. ಆಸ್ತಿಕ್ಯವೃದ್ಧಿಗೆ ಸಹಾಯಕವಾದುದು. ವರ್ಷದ ಚಂದಾ ೩ ರೂ. ನಿಂದ ೧೦೦ ರೂ. ವರೆಗೆ.

೧೯೧೮ ನೆ ವರ್ಷದ ಇಂಡ್ಯಾದೇಶರಕ್ಷಣ ಶಾಸನದ ಪ್ರಕಾರ, ಮೈಸೂರು ಸಂಸ್ಥಾನದಲ್ಲಿ ಮಾರಾಟವಾಗುವ ಸೀಮೆಯೆಣ್ಣೆಯ ಮೇಲೆಲ್ಲಾ ತಾವು ಅಧಿಕಾರವನ್ನು ವಹಿಸಿಕೊಳ್ಳುವುದು ದೇಶರಕ್ಷಣಾರ್ಥವಾಗಿ ಅವಶ್ಯಕವಾದುದರಿಂದ ನಮ್ಮ ಗೌರ್ನಮೆಂಟಿನವರು ಹಾಗೆ ಮಾಡಿದ್ದಾರೆ. ಇದರಿಂದ ಸೀಮೆಯೆಣ್ಣೆ ಬೆಲೆಯು ನಿಯಮಿತಸ್ಥಿತಿಯಲ್ಲಿರುವುದಕ್ಕೂ ಬಡಬಗ್ಗರ ತಾಪತ್ರಯವು ಕಡಿಮೆಯಾಗುವುದಕ್ಕೂ ಅವಕಾಶವಾಗಬಹುದು.

ಮ|| ಎಂ. ವೆಂಕಟಕೃಷ್ಣಯ್ಯನವರು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ಟರ್ ಕೆಲಸದಿಂದ ಇನ್ನು ೩ ತಿಂಗಳಲ್ಲಿ ನಿವೃತ್ತರಾಗಬೇಕೆಂದೂ, ೧೫೦ ರೂ. ಸಂಬಳದ ಒಬ್ಬ ಹೆಡ್ಮಾಸ್ಟರನ್ನು ವಿದ್ಯಾಭ್ಯಾಸದ ಇಲಾಖೆಯವರ ಮೂಲಕ ಬರಮಾಡಿಕೊಂಡು ಆ ಶಾಲೆಗೆ ನಿಯಮಿಸುವುದಾಗಿಯೂ, ಮ|| ವೆಂಕಟಕೃಷ್ಣಯ್ಯನವರಿಗೆ ತಿಂಗಳಿಗೆ ೫೦ ರೂ. ನಂತೆ ವರ್ಷಾಶನವನ್ನು ಕೊಡುವುದಾಗಿಯೂ ಮರಿಮಲ್ಲಪ್ಪನವರ ಧರ್ಮದ ಟ್ರಸ್ಟಿಗಳು ಗೊತ್ತುಮಾಡಿರುವರೆಂದು ಕೇಳುತ್ತೇವೆ.

ಮೈಸೂರು ಜನರಲ್ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿದ್ದ ಮ|| ಡಾಕ್ಟರ್ ಇ. ಎಚ್. ಕೃಷ್ಣಸ್ವಾಮಯ್ಯರ್‌ರವರು ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿಯೂ, ಜನರಲ್ ಆಸ್ಪತ್ರೆ, ಮತ್ತೂ ವಾಣೀವಿಲಾಸ ಆಸ್ಪತ್ರೆಗಳ ಸೂಪರಿಂಟೆಂಡೆಂಟರಾಗಿಯೂ, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿದ್ದ ಮ|| ಎಸ್. ಸುಬ್ಬರಾವ್‌ರವರು ಜನರಲ್ ಆಸ್ಪತ್ರೆಯ ಡ್ಯೂಟಿ ಮೇಲೆಯೂ, ಆ ಡ್ಯೂಟಿಮೇಲಿದ್ದ ಮ|| ಡಿ. ಎಸ್. ಪುಟ್ಟಣ್ಣನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ, ಆ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿದ್ದ ಮ|| ಸಿ. ಎ. ನಂಜಪ್ಪನವರು ಮೈಸೂರು ಜನರಲ್ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಯುದ್ಧವಾರ್ತೆಯು.

ಪಶ್ಚಿಮರಂಗದಲ್ಲಿ ಜರ್ಮನರು ಮರಳಿ ೩ನೆ ಮಹಾವಸ್ಕಂದನವನ್ನು ಕಳೆದ ತಾ|| ೨೮ರಲ್ಲಿ ಆರಂಭಿಸಿದರು. ಭೀಕರವಾಗಿ ಉಭಯ ಪಕ್ಷಗಳಿಗೂ ಮಹಾಯುದ್ಧವು ಈಗ ನಡೆಯುತ್ತಿದೆ. ಜರ್ಮನರು ತಮ್ಮ ಪೂರ್ವಪದ್ಧತಿಯಂತೆಯೇ ಗುಂಪುಗುಂಪಾಗಿ ಸೈನ್ಯಗಳನ್ನು ನುಗ್ಗಿಸಿ ಬಹಳ ನಷ್ಟವನ್ನುಂಟುಮಾಡಿಕೊಳ್ಳುತ್ತಿದ್ದಾರೆ. ಅವರ ಫಿರಂಗಿಗಳು ಮಿತ್ರಮಂಡಲಿಯ ಸೈನ್ಯದ ಮುಂಗಡೆಯಮೇಲೆಯೇ ಅಲ್ಲದೆ ಹಿಂಗಡೆಯ ಸೈನ್ಯದಮೇಲೂ ವಿಶೇಷವಾಗಿ ಗುಂಡಿನ ಮಳೆಯನ್ನು ಸುರಿಸುತ್ತಿವೆ. ಅವರ ವಿಮಾನ ಸೈನಿಕರು ಬಹಳ ಭಯಂಕರವಾಗಿಯೂ ಸಾಹಸದಿಂದಲೂ ಸಿಡಿಮದ್ದುಗಳನ್ನೂ ಗುಂಡುಗಳನ್ನೂ ಪ್ರಯೋಗಿಸುತ್ತಿದ್ದಾರೆ. ವಿಷದ ಹೊಗೆಗಳೂ ಅಗ್ನಿದ್ರಾವಕಗಳೂ ಸಹ ವಿಪರೀತವಾಗಿ ಸುರಿಸಲ್ಪಡುತ್ತಿವೆ. ಮಿತ್ರಮಂಡಲಿಯವರು ಇದಕ್ಕೆ ಪ್ರತಿಕ್ರಿಯೆಯನ್ನಾಚರಿಸುತ್ತ ಅಪ್ರತಿಮ ಶೌರ್ಯದಿಂದ ಕಾದಾಡುತ್ತಿದ್ದಾರೆ. ಈ ಯುದ್ಧಗಳು ಊಪ್ರಿಸ್‌ಕಾಲ್ವೆ, ನಿಯಸ್ತ್ರಿಕಾಡು ಇವುಗಳ ಮಧ್ಯದಲ್ಲೂ, ಫ್ರೆಂಚರ ಪಕ್ಕದಲ್ಲಿರುವ ಇಂಗ್ಲೀಷ್ ಸೈನ್ಯದ ಮುಂಗಡೆಯಲ್ಲೂ, ಫ್ರೆಂಚರ ಸೇನೆಯ ಸಾಲಿನ ಮುಂಗಡೆ ಡಿಯೋಕೆಬಿಷ್ಟಿ ಸರಸ್ಸಿಗೆ ದಕ್ಷಿಣದಲ್ಲೂ ಬಹಳ ಬಲವಾಗಿ ನಡೆಯುತ್ತಿವೆ. ಒಂದುಕಡೆ ಫ್ರೆಂಚರು ಸ್ವಲ್ಪ ಹಿಮ್ಮೆಟ್ಟಬೇಕಾಗಿ ಬರಲು ಸ್ಥಳವನ್ನು ಕೊಟ್ಟಿದ್ದು, ಮರಳಿ ಅದನ್ನು ಪ್ರತಿಯುದ್ಧದಿಂದ ಆಕ್ರಮಿಸಿಕೊಂಡರು. ಇನ್ನೊಂದು ಕಡೆಯಲ್ಲಿ ಶತ್ರುಗಳು ಸ್ವಲ್ಪ ಸ್ಥಳವನ್ನಾಕ್ರಮಿಸಿದರು. ವಾಲೆಲಿಯನ್ನಿನಿಂದ ಬಿಮಾಂಟಿನವರೆಗೆ ಇರುವ ಸ್ಥಳದಲ್ಲಿ ಸಾಯಂಕಾಲದವರೆಗೂ ನಡೆದ ಮಹಾಯುದ್ಧದಲ್ಲಿ ಎರಡು ಕಡೆಗೂ ಅಪಾರ ನಷ್ಟವಾಯಿತು. ಅಲ್ಲಿದ್ದ ಇಂಗ್ಲೀಷ್ ಸೈನ್ಯವು ಸ್ವಲ್ಪ ಸ್ಥಳವನ್ನು ಕಳೆದುಕೊಂಡಿತು. ಪಿನಾರ್ಚ್ ಕಾಡು, ರೀಮ್ಸ್ ನಗರ ಇವುಗಳ ಮಧ್ಯದಲ್ಲಿ ಇಂಗ್ಲೀಷ್-ಫ್ರೆಂಚ್ ದಳಗಳೆರಡೂ ನಿಂತು ಜನರಲ್ ಫಾಕ್ ಸೇನಾಪತಿಯ ರಕ್ಷಣೆಯಲ್ಲಿ ನಿಂತು ಶತ್ರುಗಳನ್ನು ಬಲು ಬಲವಾಗಿ ನಿರೋಧಿಸುತ್ತಿವೆ. ಎಸ್ಪ್ರಿಮಾಂಟ್ ಅರಣ್ಯದಲ್ಲಿ ಶತ್ರುಗಳನ್ನು ತಡೆದು ಹಿಮ್ಮೆಟ್ಟಿಸಿದರು. ಬೇರ್ಡ್‌ವಿಲ್ಲರ್ಸ್, ಲಿಮಿರಂಗಗಳಲ್ಲಿ ಶತ್ರುಸೇನೆಗಳು ಹಿಮ್ಮೆಟ್ಟಿ ಹೋದುವು. ಅಲ್ಲಿ ಅನೇಕ ಶತ್ರು ಸೈನಿಕರನ್ನು ನಮ್ಮವರು ಸೆರೆ ಹಿಡಿದರು. ಅಮೇರಿಕಾ ಸೈನ್ಯಗಳ ಸಾಲಿನಮೇಲೂ ಹಲವುಕಡೆ ಜರ್ಮನರು ಯುದ್ಧವನ್ನಾರಂಭಿಸಿದ್ದಾರೆ. ಇಂಥ ಯುದ್ಧವೊಂದರಲ್ಲಿ ಶತ್ರುಗಳ ಪ್ರಬಲ ಫಿರಂಗಿಗಳಿಂದ ಅಮೇರಿಕನ್ನರು ಬಹು ನಷ್ಟವನ್ನನುಭವಿಸಿದರು. ಆದರೂ ಅಮೇರಿಕನ್ನರು ಧೈರ್ಯಗೆಡದೆ ಮತ್ತಷ್ಟು ರೋಷಾವೇಶಪೂರಿತರಾಗಿ ಪ್ರತಿಯುದ್ಧದಿಂದ ಶತ್ರುಗಳಿಗೂ ವಿಶೇಷ ನಷ್ಟಗೊಳಿಸಿದರು. ಈಗ ಮಿತ್ರಮಂಡಲಿ ವೈಮಾನಿಕರು ಬಹಳ ಸಾಹಸದ ಯುದ್ಧಗಳನ್ನು ಅಭೂತಪೂರ್ವವಾಗಿ ನಡೆಯಿಸುತ್ತ ಶತ್ರುಗಳ ಎದೆ ಬಿರಿಯುವಂತೆ ಮಾಡುತ್ತಿದ್ದಾರೆ.

ಬೆಲ್ಜಿಯಂ ಸೇನಾಪತ್ಯದ ಮುಂದೆ ಈಪ್ರಿಸ್ ಹೋಲ್ಬೀಕೋ ಅರಣ್ಯಗಳ ಮಧ್ಯದಲ್ಲಿ ಶತ್ರುಗಳು ಮೇಲೆಬಿದ್ದು ಕಾದಾಡಿ ವಿಫಲರಾಗಿ ಹಿಮ್ಮೆಟ್ಟಿಹೋದರು. ಇಂಗ್ಲೀಷ್ ಸೇನಾಮುಖದಲ್ಲಿ ಎಯಿಷ್ನ್ ನದಿಯ ಹತ್ತಿರ ಶತ್ರುಗಳು ಇಂಗ್ಲೀಷರ ಒಂದು ಸಾಲನ್ನು ಭೇದಿಸಿಕೊಂಡು ನುಗ್ಗಿ ಹೋದುದರಿಂದ ಹಿಂಜರಿದು ಇವರು ತಮ್ಮ ಸಾಲನ್ನು ಬಲಪಡಿಸಿಕೊಳ್ಳಬೇಕಾಯಿತು. ಶತ್ರುಗಳು ಎಯಿಷ್ನ್ ನದಿಯನ್ನು ದಾಟಿ ಮುಂದಕ್ಕೆ ಬಂದರು. ಈಗ ವೀಪಲ್, ಎಯಿಷ್ನ್ ನದಿಗಳ ಮಧ್ಯದಲ್ಲಿ ಶತ್ರುಗಳ ಮೇಲೆ ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡೂ ಘೋರವಾಗಿ ಕಾದಾಡುತ್ತಿವೆ.

ಇಟಲಿ—ಈ ರಂಗಕ್ಕೆ ಅಮೇರಿಕನ್ನರ ೧ ಸೈನ್ಯವು ಇಟಲಿಯವರ ಪ್ರಾರ್ಥನೆಯ ಪ್ರಕಾರ ಕಳುಹಿಸಲ್ಪಟ್ಟಿದೆ. ಜಿಗೋಲ್ಟ್ ಪರ್ವತ, ಪ್ರೀಜ್ಲ್ ಸರೋವರ ಪ್ರಾಂತ, ಮಾಂಟಿಲೋ ಕಣಿವೆ, ಈ ಸ್ಥಳಗಳನ್ನು ಇಟಲಿ ಸೈನ್ಯಗಳು ದೊಂಬಿ ಯುದ್ಧವನ್ನು ಮಾಡಿ ಆಕ್ರಮಿಸಿಕೊಂಡುದಲ್ಲದೆ, ಶತ್ರುಗಳಿಗೆ ಅಪಾರ ನಷ್ಟವನ್ನುಂಟುಮಾಡಿ ಅವರ ೮೭೦ ಮಂದಿ ಸೈನಿಕರನ್ನೂ ೨೫ ಫಿರಂಗಿಗಳನ್ನೂ ಇತರ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು. ಕಾರ್ಕೋ ಪರ್ವತದಮೇಲಿರುವ ಇಟಲಿಯವರ ಸ್ಥಾನವನ್ನು ಶತ್ರುಗಳು ಮುತ್ತಿ ವಿಫಲರಾಗಿ ಹೋದರು. ಅಲ್ಲಿಗೆ ಬಂದಿದ್ದ ಶತ್ರುವಿಮಾನಗಳಲ್ಲಿ ೮ ನ್ನು ಇಟಲಿಯವರು ನಾಶಗೊಳಿಸಿದರು.

ಭರತಖಂಡದ ವೃತ್ತಾಂತಗಳು.

ಕೊಯಮತ್ತೂರಿನಲ್ಲಿ ನೆರೆದಿದ್ದ ಆರ್ಯವೈಶ್ಯಮಹಾಸಭೆಯಲ್ಲಿ ವೈಶ್ಯವಿದ್ಯಾಭಿವೃದ್ಧಿ ಫಂಡಿಗೆ ೨೨ ಸಾವಿರ ರೂ. ಗಳ ಚಂದಾ ಕೂಡಿತು.

ಪಶ್ಚಿಮ ಇಂಡ್ಯಾ ಟರ್ಫ್ ಕ್ಲಬ್ಬಿನವರು ೧೯೧೭-೧೮ನೆ ವರ್ಷದಲ್ಲಿ ಯುದ್ಧದ ಫಂಡು ಮೊದಲಾದುವುಗಳಿಗಾಗಿ ೯ ಲಕ್ಷ ರೂ. ಗಳನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ.

ಆಂಗ್ಲಪ್ರಭುತ್ವದವರಿಗೆ ಯುದ್ಧದಲ್ಲಿ ಜಯವುಂಟಾಗಬೇಕೆಂದು ಪ್ರಾರ್ಥಿಸಿ ಕಲ್ಕತ್ತಾದ ಮಾರ್ವಾಡಿ ಸಂಘದವರು ಗಂಗಾತೀರದಲ್ಲಿ ೨೦ ಸಾವಿರ ರೂ. ಗಳ ವೆಚ್ಚದಿಂದ ಒಂದು ಯಾಗವನ್ನು ಮಾಡಿಸುತ್ತಿರುವರು.

ಸರ್ ರವೀಂದ್ರನಾಥ ಠಾಗೂರ್‌ರವರಲ್ಲಿ ಸೆಕ್ರೆಟರಿಯಾಗಿ ಕೆಲಕಾಲದವರೆಗೆ ಇದ್ದ ಪಿಯರ್ಸನ್ ಎಂಬ ಪಾಶ್ಚಾತ್ಯರು ಚೀನಾದೇಶದ ಪಿಕಿಂಗ್ ಪಟ್ಟಣದಲ್ಲಿ ಯಾವುದೋ ಕಾರಣದಿಂದ ಹಿಡಿಯಲ್ಪಟ್ಟು ಸೆರೆಯಲ್ಲಿಡಲ್ಪಟ್ಟಿದ್ದಾರೆ.

ಕಾಶೀಹಿಂದೂವಿಶ್ವವಿದ್ಯಾನಿಲಯ ನಿಧಿಗೆ ಪಾಟಿಯಾಲಾ ಮಹಾರಾಜರವರು ೫ ಲಕ್ಷ ರೂ. ಗಳನ್ನು ಕೊಟ್ಟುದಲ್ಲದೆ, ಯಾಂತ್ರಿಕಶಾಸ್ತ್ರಶೋಧನೆಗಾಗಿ ಪ್ರತಿವರ್ಷವೂ ೨೪ ಸಾವಿರ ರೂ. ಗಳನ್ನು ಕೊಡಲು ವಾಗ್ದಾನ ಮಾಡಿರುವರು.

ಅಹಮ್ಮದಾಬಾದಿನ ಯಂತ್ರಶಾಲಾಧಿಕಾರಿಗಳು ಯುದ್ಧಕ್ಕಾಗಿ ಕೊಟ್ಟಿರುವ ಸಹಾಯದ್ರವ್ಯವೆಲ್ಲಾ ಬಹುಶಃ ೩೦ ಲಕ್ಷ ರೂ. ಗಳಾಗಿರುತ್ತವೆ. ಅಲ್ಲಿಯ ಯಂತ್ರಶಾಲಾಧಿಕಾರಿಗಳ ಸಮಾಜಕ್ಕೆ ಅಧ್ಯಕ್ಷರಾಗಿರುವ ಅಂಬಾಲಾಲರವರು ಸ್ವತಃ ೮|| ಲಕ್ಷ ರೂ. ಗಳನ್ನು ಕೊಟ್ಟುದಲ್ಲದೆ ಅವರ ಮುತುವರ್ಜಿಯಿಂದಲೇ ಉಳಿದ ಹಣವೂ ಕೂಡ ೪ ದಿನಗಳಲ್ಲೇ ಕೂಡಿಹೋಯಿತು.

ನಾಳೆ ೩ ನೇ ತಾ|| ಸೋಮವಾರ ಶ್ರೀ ಜಾರ್ಜ್‌ಸಾರ್ವಭೌಮರವರ ವರ್ಧಂತೀಮಹೋತ್ಸವ ದಿವಸವಾದುದರಿಂದ ಎಲ್ಲಾ ಕೋರ್ಟ್ ಕಚೇರಿಗಳಿಗೂ ವಿಶ್ರಾಂತಿಯು ಕೊಡಲ್ಪಡುವುದು. ಆದರೆ ಅದಿನ ವಿಶೇಷವಾದ ವಿನೋದಾದಿಗಳೇನೂ ನಡೆಯಿಸಲ್ಪಡುವುದಿಲ್ಲ. ಸರ್ಕಾರಿ ಕಟ್ಟಡಗಳಮೇಲೆ ಧ್ವಜಗಳನ್ನೆತ್ತಿ ಕಟ್ಟುವರು. ಜನ್ಮದಿನೋತ್ಸವ ಸಂದರ್ಭದಲ್ಲಿ ಕೊಡಲ್ಪಡುವ ಬಿರುದಾವಳಿಗಳ ಪಟ್ಟಿಯು ಪ್ರಕಟಿಸಲ್ಪಡುವುದು.

ಬರುವ ಸಾಮ್ರಾಜ್ಯ ಮಂತ್ರಿವರ್ಗಸಭೆಗೂ, ಯುದ್ಧಸಭೆಗೂ ಸಹ ಭಾರತ ಪ್ರತಿನಿಧಿಗಳಾಗಿ ಕಳುಹಿಸಲ್ಪಟ್ಟ ಸರ್. ಸತ್ಯೇಂದ್ರಪ್ರಸನ್ನಸಿಂಹರೊಡನೆ ರಾಜಷಾಹಿ ಜಿಲ್ಲೆಯ ಕಮಿಷನರಾಗಿದ್ದ ಜೆ. ಎನ್. ಗುಪ್ತ, ಐ.ಸಿ.ಎಸ್. ರವರು ಕಾರ್ಯದರ್ಶಿಗಳಾಗಿ ಪ್ರಯಾಣ ಮಾಡಿರುವರು. ದೇಶೀಯ ಪ್ರಭುಗಳ ಪ್ರತಿನಿಧಿಯಾಗಿ ಆ ಸಭೆಗಳಿಗೆ ಕಳುಹಿಸಲ್ಪಟ್ಟಿರುವ ಪಾಟಿಯಾಲಾ ಮಹಾರಾಜರ ಜತೆಯಲ್ಲಿ ೯ ಮಂದಿ ಅನುಚರರು ಹೋಗಿರುತ್ತಾರೆ.

ವಿದೇಶ ವೃತ್ತಾಂತಗಳು.

ರಷ್ಯಾದ ಈಗಣ ಬೋಲ್ಷೆವಿಕ್ ಪ್ರಭುತ್ವದವರು ಆ ದೇಶದ ಅಖಿಲ ಮಹಮ್ಮದೀಯ ಸಭೆಯನ್ನು ಎತ್ತಿಹಾಕಿ ಬಿಟ್ಟುದರಿಂದ ಆ ದೇಶದಲ್ಲಿರುವ ಮಹಮ್ಮದೀಯರೆಲ್ಲಾ ಆ ಪ್ರಭುತ್ವದಮೇಲೆ ಬಹಳ ಕೋಪಮಾಡಿಕೊಂಡಿದ್ದಾರೆ.

ರಷ್ಯಾದ ಯುಕ್ರೇನಿಯಾ ಮಂಡಲದಲ್ಲಿ ಮರಳಿ ನಿರಂಕುಶಪ್ರಭುತ್ವವು ಆರಂಭವಾಗಿದೆ. ಅನೇಕ ಪ್ರಜಾನಾಯಕರು ಬಂಧಿಸಲ್ಪಟ್ಟಿದ್ದಾರೆ. ವಾರ್ತಾಪತ್ರಿಕೆಗಳು ನಿರೋಧಿಸಲ್ಪಟ್ಟಿವೆ. ಅಲ್ಲಿಯ ಕಾರ್ಮಿಕಸಭೆಯೂ, ರೈತರಸಭೆಯೂ ನಿಲ್ಲಿಸಲ್ಪಟ್ಟಿವೆ.

ಅಮೇರಿಕಾದವರು ಬರುವ ಜೂನ್ ತಾ|| ೬ ರೊಳಗಾಗಿ ೨೦ ಲಕ್ಷ ಸೈನ್ಯವನ್ನು ಜತೆ ಮಾಡಿಸುವರು. ಇವುಗಳ ಪ್ರಯಾಣವು ನಿಶ್ಚಿತವಾದಕೂಡಲೇ ಮತ್ತೆ ೧೦ ಲಕ್ಷ ಸೈನ್ಯವನ್ನು ಸಿದ್ಧಮಾಡುವರು. ಎಂದರೆ ಬೇಸಗೆಕಾಲವು ಮುಗಿಯುವುದರೊಳಗಾಗಿ ಫ್ರಾನ್ಸಿನಲ್ಲಿರುವ ಅಮೇರಿಕಾ ದಳವು ೧ ಕ್ಕೆ ೩ ರಷ್ಟಾಗುವುದು.

ಆಸ್ಟ್ರಿಯಾ ಚಕ್ರವರ್ತಿ ದಂಪತಿಗಳು ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ಹೋಗಿ ಅಲ್ಲಿಯ ಸುಲ್ತಾನರಿಂದ ವಿಶೇಷವಾಗಿ ಗೌರವಿಸಲ್ಪಟ್ಟು ಬಂದರು. ಬೇಗನೆ ಯುದ್ಧಸಮಾಪ್ತಿ ಮಾಡಿಕೊಳ್ಳುವಲ್ಲಿ ಆಸ್ಟ್ರಿಯಾದವರಿಗೂ ತುರ್ಕಿಯವರಿಗೂ ಇಷ್ಟವಿರುವುದೇ ಈ ಉಭಯರ ಸಮಾಗಮಕ್ಕೆ ಕಾರಣವೆಂದು ಹೇಳಲ್ಪಡುತ್ತಿದೆ.

ಕಳೆದ ಏಪ್ರಿಲ್ ತಿಂಗಳಲ್ಲಿ ಇಂಗ್ಲೀಷರ ೨೨೦೭೯ ಟನ್ನುಗಳ ಭಾರವಾಹಕವಾದಷ್ಟು ಹಡಗುಗಳೂ, ತಟಸ್ಥರಾಜ್ಯದವರ ೮೪೩೯೨ ಟನ್ನುಗಳ ಹಡಗುಗಳೂ ನಷ್ಟವಾಗಿರುತ್ತವೆ. ೧೯೧೭ನೇ ವರ್ಷದ ಇದೇ ಏಪ್ರಿಲ್ ತಿಂಗಳಲ್ಲಿ ಆಗಿದ್ದ ನಷ್ಟವು ಇಂಗ್ಲೀಷಿನವರದು ೫೫೫೦೫೬ ಟನ್ನುಗಳಷ್ಟು ತಟಸ್ಥರದು ೩೩೪೮೨೧ ಟನ್ನುಗಳಷ್ಟು ಆಗಿದ್ದುವು. ಇದರಿಂದ ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ ಆಗುತ್ತಿರುವ ನಷ್ಟವು ಅರ್ಧಕ್ಕಿಂತಲೂ ಕಡಿಮೆಯಾಯಿತೆಂದು ವ್ಯಕ್ತವಾಗಿರುತ್ತದೆ.

ಅಮೇರಿಕಾದವರು ೧೦ ಲಕ್ಷ ಸೈನ್ಯವನ್ನು ಶಿಕ್ಷಣಗೊಳಿಸಿ ರಣರಂಗಕ್ಕೆ ಕಳುಹಿಸಿಕೊಡಲು ತಮ್ಮ ಪ್ರೆಸಿಡೆಂಟರಿಗೆ ಅಧಿಕಾರವನ್ನು ಕೊಟ್ಟುಕೊಂಡಿದ್ದರು. ಈಗಲಾದರೊ ಆ ವಿಧಿಯನ್ನು ಸಂಸ್ಕರಿಸಿ ಶತ್ರುಗಳನ್ನು ಸೋಲಿಸಿ ಜಯಸಂಪಾದನೆ ಮಾಡುವುದಕ್ಕಾಗಿ ೫೦ ಲಕ್ಷ ಅಥವಾ ೧ ಕೋಟಿ ಸೈನ್ಯವನ್ನಾದರೂ ತಮ್ಮ ಪ್ರೆಸಿಡೆಂಟರು ಕೊಡಿಸಬಹುದೆಂದು ಏರ್ಪಡಿಸಿಕೊಂಡಿದ್ದಾರೆ. ಯುದ್ಧದಲ್ಲಿ ಜಯಸಂಪಾದನೆ ಮಾಡುವ ವಿಷಯದಲ್ಲಿ ಅಮೇರಿಕನ್ನರು ಎಷ್ಟು ದೃಢನಿಶ್ಚಯವುಳ್ಳವರಾಗಿರುವರೆಂಬುದು ಇದರಿಂದ ಚೆನ್ನಾಗಿ ವ್ಯಕ್ತವಾಗುತ್ತದೆ.

ಇಂಗ್ಲೀಷ್‌ದೇಶದ ಹಡಗುಗಳು ಯುದ್ಧಾದಿಯಿಂದ ೧೯೧೭ ನೇ ಆಗಸ್ಟ್ ತಿಂಗಳ ಕೊನೆಯವರೆಗೆ ಸಮುದ್ರದಮೇಲೆ ಬೇರೆಬೇರೆ ರಂಗಗಳಿಗೆ ೧ ಕೋಟಿಯೂ ೩೦ ಲಕ್ಷ ಸೈನ್ಯವನ್ನು ಸಾಗಿಸಿಕೊಟ್ಟಿವೆ. ಅಷ್ಟರೊಳಗೆ ೩|| ಸಾವಿರ ಮಂದಿ ಮಾತ್ರ ನಷ್ಟವಾಗಿದ್ದಾರೆ. ಇಂಗ್ಲೀಷ್ ನೌಕಾನಿರ್ಮಾಣಾಲಯದವರು ಯುದ್ಧಾರಂಭದಿಂದ ಇದುವರೆಗೆ ೩೧೪೭೦ ಹಡಗುಗಳನ್ನು ಜೀರ್ಣೋದ್ಧಾರಮಾಡಿಕೊಟ್ಟಿದ್ದಾರೆ. ಈಗಲೂ ಪ್ರತಿದಿನವೂ ಬ್ರಿಟನ್ ದೇಶವು ಫ್ರಾನ್ಸ್‌ದೇಶದ ರಣರಂಗಕ್ಕೆ ೭ ಸಾವಿರ ಸೈನ್ಯವನ್ನೂ ೩೦ ಸಾವಿರ ಟನ್ನುಗಳ ತೂಕದ ಸಾಮಗ್ರಿಗಳನ್ನೂ ಸಾಗಿಸಿಕೊಡುತ್ತಿದೆ.

ಮೊನ್ನೆವಾರದಲ್ಲಿ ಶತ್ರುಗಳು ಲಂಡನ್ನಿನಮೇಲೂ ಪ್ಯಾರಿಸ್ಸಿನಮೇಲೂ ದಾಳಿಯಿಡುವುದಕ್ಕೆ ಕಳುಹಿಸಿಕೊಟ್ಟಿದ್ದ ಗೋಥಾಜಾತಿಯ ವಿಮಾನಗಳು ಬಹಳ ದೊಡ್ಡವಾಗಿಯೂ ನೂತನವಾಗಿಯೂ ಇದ್ದುವಂತೆ. ಅವುಗಳ ಒಂದೊಂದು ರಕ್ಕೆಯು ೪೦ ಮೀಟರುಗಳ ಉದ್ದವಾಗಿಯೂ, ಒಂದೊಂದು ಮುನ್ನೂರು ಕುದುರೆಯ ಶಕ್ತಿಯುಳ್ಳ ಮೂರು ಮೋಟಾರುಗಳಿಂದ ಪ್ರತಿಯೊಂದು ವಿಮಾನವೂ ಸೆಳೆಯಲ್ಪಡುತ್ತಿರುವುದಾಗಿಯೂ, ಬಹಳ ಭಾರವಾದ ಸಿಡಿಮದ್ದುಗಳನ್ನು ವಿಶೇಷವಾಗಿ ಅವುಗಳಲ್ಲಿ ತುಂಬಿಕೊಂಡು ಒಂದೊಂದರಲ್ಲೂ ೫-೬ ಮಂದಿ ವೈಮಾನಿಕರು ಕುಳಿತಿರುವುದಾಗಿಯೂ ಇದ್ದುವಂತೆ.

ಆಸ್ಟ್ರಿಯಾ ಚಕ್ರವರ್ತಿ ದಂಪತಿಗಳು ತುರ್ಕಿಗೆ ಹೋಗುತ್ತಿರುವಾಗ ಅವರ ಹೊಗೆಬಂಡಿಯಮೇಲೆ ಬಲ್ಗೇರಿಯಾ ಸೈನಿಕರು ಕಲ್ಲುಗಳನ್ನು ಎಸೆದರು. ಅದರಿಂದ ಅವರ ಬಂಡಿಯ ಕಿಟಕಿಯ ಕದಗಳೆಲ್ಲಾ ಮುರಿದು ಒಡೆದುಹೋದುವು. ಬಲ್ಗೇರಿಯಾ ಸೈನ್ಯಕ್ಕೆ ತಕ್ಕಷ್ಟು ಆಹಾರಾದಿಗಳಿಲ್ಲದೆ ಮನಸ್ಸು ರೋಸಿಹೋಗಿದೆ. ಪ್ರಜೆಗಳಲ್ಲೂ ಆಹಾರವಿಲ್ಲದೆ ಬಹುಜನರು ಸತ್ತರು. ಯುದ್ಧವು ನಿಂತು ಎಂದಿಗೆ ಸಂಧಿಯಾಗುವುದೋ ಎಂದು ಆ ದೇಶೀಯರೆಲ್ಲಾ ಚಿಂತಿಸುತ್ತಿದ್ದಾರೆ. ಸಮಯ ಸಿಕ್ಕಿದರೆ ತಲೆತಪ್ಪಿಸಿಕೊಂಡು ಸೈನ್ಯವನ್ನು ಬಿಟ್ಟುಬಿಡಬೇಕೆಂದು ಅಲ್ಲಿಯ ಸೈನಿಕರನೇಕರು ನಿರೀಕ್ಷಿಸಿಕೊಂಡಿದ್ದಾರೆ.

೪ನೆ ಕರ್ನಾಟಕ ಸಾಹಿತ್ಯ ಪರಿಷತ್ಸಮ್ಮೇಳನದಲ್ಲಿ ಅಧ್ಯಕ್ಷರು ಮಾಡಿದ ಭಾಷಣವು.

ಮಹಾಶಯರೇ! ದೇಶಬಾಂಧವರೇ! ಭಾಷಾಭಿಮಾನಿಗಳೇ!

ತಾವುಗಳು ತಮ್ಮಗಳ ಉದಾರಾಶಯದಿಂದ ಅಲ್ಪಜ್ಞನಾದ ನನ್ನನ್ನು ಈ ಉನ್ನತಪದವಿಗೆ ನಿಯಮಿಸಿ, ಗೌರವಿಸಿದುದಕ್ಕಾಗಿ ನನ್ನ ಕೃತಜ್ಞತೆಯ ಪರಿಮಿತಿಯನ್ನು ಮಾತುಗಳ ಮೂಲಕ ತಿಳಿಸಲು ಅಶಕ್ತನಾಗಿದ್ದೇನೆ. ಈ ಮಹಾ ಪದವಿಯ ಕಾರ್ಯವನ್ನು ನಿರ್ವಹಿಸುವ ಶಕ್ತಿ ನನ್ನಲ್ಲಿಲ್ಲದಿದ್ದರೂ ದೇಶಬಾಂಧವರೂ ಭಾಷಾಭಿಮಾನಿಗಳೂ ಆದ ತಮ್ಮಗಳ ಆಜ್ಞೆಯನ್ನು ಶಿರಸಾವಹಿಸಿ ನನ್ನಿಂದಾದಮಟ್ಟಿಗೆ ಕನ್ನಡನಾಡಿನ ಮತ್ತು ಕನ್ನಡನುಡಿಯ ಸೇವೆಯನ್ನು ಅಲ್ಪಸ್ವಲ್ಪವಾದರೂ ತಮ್ಮೊಡನೆ ಸೇರಿ ಮಾಡುವುದು ಕರ್ತವ್ಯವೆಂದು ತಿಳಿದು ಈ ಮಹಾಕಾರ್ಯಕ್ಕೆ ಸಮ್ಮತಿಸಿರುವೆನು. ಈ ಕಾರ್ಯವು ತಮ್ಮಗಳ ಸಹಾಯದಿಂದ ಸುಲಲಿತವಾಗಿ ನಡೆದು ಫಲೋದರ್ಕವಾಗಬೇಕೆಂದು ಜಗದೀಶ್ವರನಲ್ಲಿ ಪ್ರಾರ್ಥಿಸುವೆನು.

ಕನ್ನಡನಾಡಿನ ಮತ್ತು ಕನ್ನಡನುಡಿಯ ಪ್ರಾಚೀನತೆ.

ಕ್ರಿಸ್ತಪೂರ್ವ ೩ನೆಯ ಶತಮಾನದಲ್ಲಿ ಅಶೋಕನು ಬನವಾಸಿಗೆ ಒಬ್ಬ ಬೌದ್ಧಬೋಧಕನನ್ನು ಕಳುಹಿಸಿದಂತೆ ತಿಳಿಯುತ್ತದೆ. ಅದೇ ಕಾಲದಲ್ಲಿ ಮಹಿಷಮಂಡಲಕ್ಕೆ ಮತ್ತೊಬ್ಬ ಬೋಧಕನನ್ನು ಕಳುಹಿಸಿದಂತೆಯೂ ತಿಳಿಯುತ್ತದೆ. ಈ ಮಹಿಷಮಂಡಲವು ಮೈಸೂರು ದೇಶವಲ್ಲ, ಗೋದಾವರಿಯ ಸಮೀಪದ ಪ್ರಾಂತ್ಯವು ಎಂದು ಮ|| ಫ್ಲೀಟ್ ಬರೆದಿದ್ದಾರೆ. ಆದರೂ ಮೈಸೂರು ಸೀಮೆಗೆ ಮಹಿಷರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಶಾಸನಗಳಲ್ಲಿಯೂ ಪ್ರಾಚೀನ ಗ್ರಂಥಗಳಲ್ಲಿಯೂ ದೊರೆಯುತ್ತದೆ. ಮೈಸ ಎಂಬುದು ಮಹಿಷ ಎಂಬ ಶಬ್ದದ ತದ್ಭವವು. ತಮಿಳು ಭಾಷೆಯಲ್ಲಿರುವ ಅಗನಾನೂರು ಎಂಬ ಕವಿಸೂಕ್ತಿ ಕದಂಬದಲ್ಲಿ ಕ್ರಿಸ್ತಶಕ ೨ ನೆಯ ಶತಮಾನದಲ್ಲಿದ್ದ ಮಾಮೂಲನಾರ್ ಎಂಬ ಕವಿಯ ಉಕ್ತಿಯಾದ ೧೧೫ ನೆಯ ಪದ್ಯದಲ್ಲಿ ಎರುಮೈನಾಡು (ಎರುಮೈ=ಮಹಿಷ) ಎಂಬ ಹೆಸರನ್ನು ಹೇಳಿ ಅದು ಪಶ್ಚಿಮ ಪ್ರಾಂತ್ಯದಲ್ಲಿ (ಕುಡನಾಡು) ಅದೆ ಎಂದೂ ಹೇಳಿದೆ. ನಕ್ಕೀರರ್ ಎಂಬ ಮತ್ತೊಬ್ಬ ಪುರಾತನ ಕವಿಯ ಉಕ್ತಿಯಾದ ೨೫೩ ನೆಯ ಪದ್ಯದಲ್ಲಿ

ನೆಡುಂಜೆಳಿಯನ್ ಎಂಬ ಪಾಂಡ್ಯರಾಜನು ತಲೈಯಾಲಂಕಾನಂ ಎಂಬ ಸ್ಥಳದಲ್ಲಿ ಚೇರನ್, ಚೋಳನ್, ತಿತಿಯನ್, ಎಳಿನಿ, ಎರುಮೈಯೂರನ್ (ಮಹಿಷಪುರದವನು), ಇರುಂಕೋವೇಣ್ಮಾನ್, ಪೊರುನನ್ ಎಂಬ ಏಳು ರಾಜರನ್ನೂ ಯುದ್ಧದಲ್ಲಿ ಸೋಲಿಸಿದಂತೆ ಹೇಳಿದೆ. ಅದೇ ಕವಿಯ ಉಕ್ತಿಯಾದ ೨೩೩ ನೆಯ ಪದ್ಯದಲ್ಲಿ ಮಹಿಷಪುರದವನು ಬಡಗರ ಕುಲದವನು ಎಂದು ಉಕ್ತವಾಗಿದೆ. ಶಿಲಪ್ಪದಿಕಾರಂ ಎಂಬ ಮತ್ತೊಂದು ತಮಿಳು ಗ್ರಂಥದಲ್ಲಿ ಎರಡನೆಯ ಶತಮಾನದಲ್ಲಿದ್ದ ಶೆಂಗುಟ್ಟುವನ್ ಎಂಬ ಚೇರರಾಜನು ಉತ್ತರದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ತಂಗಿ ಕನ್ನಡರು ಆಡಿದ ಕುಣಿತವನ್ನು ನೋಡಿ ಸಂತೋಷಿಸಿದನು ಎಂದು ಹೇಳಿದೆ. ಈ ಕುಣಿತವು ಈಗ ಮಲೆನಾಡಿನಲ್ಲಿ ಆಡುವ ಸುಗ್ಗಿಯ ಕುಣಿತದಂತಿದ್ದಿರಬಹುದೆಂದು ತೋರುತ್ತದೆ.

ಉತ್ತರ ದೇಶದಲ್ಲಿ ಭದ್ರಬಾಹುವೆಂಬ ಶ್ರುತಕೇವಲಿಯ ಕಾಲದಲ್ಲಿ ದ್ವಾದಶ ವಾರ್ಷಿಕ ಕ್ಷಾಮವುಂಟಾಗಲು, ಜೈನಸಂಘವು ದಕ್ಷಿಣ ದಿಕ್ಕಿನಲ್ಲಿರುವ ಪುನ್ನಾಟರಾಷ್ಟ್ರಕ್ಕೆ ಪ್ರಯಾಣಮಾಡಿದಂತೆ ಜೈನಗ್ರಂಥಗಳಲ್ಲಿ ಹೇಳಿದೆ. ಈ ಪುನ್ನಾಟರಾಷ್ಟ್ರವು ಮೈಸೂರು ಸೀಮೆಯ ದಕ್ಷಿಣ ಭಾಗದಲ್ಲಿದ್ದಿತು. ಇದನ್ನು ರಾಷ್ಟ್ರವರ್ಮನೇ ಮೊದಲಾದ ರಾಜರು ಕೀರ್ತಿಪುರವೆಂಬ ರಾಜಧಾನಿಯಲ್ಲಿ ನೆಲಸಿ ಆಳಿದರು. ಇದಕ್ಕೆ ಕನ್ನಡದಲ್ಲಿ ಪುನ್ನಾಡು ಎಂದು ಹೆಸರು. ಕೀರ್ತಿಪುರವೆಂಬುದು ಈಗ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಕಿತ್ತೂರು. ಎರಡನೆಯ ಶತಮಾನದಲ್ಲಿದ್ದ ಟಾಲೆಮಿ ಪುನ್ನಾಟರಾಷ್ಟ್ರದ ಹೆಸರನ್ನು ಪೌನ್ನಟ ಎಂದು ಹೇಳಿ ಅದು ಮರಕತರತ್ನಕ್ಕೆ (Beryl) ಹೆಸರುವಾಸಿಯನ್ನು ಹೊಂದಿದ್ದಿತು ಎಂದು ಬರೆದಿದ್ದಾನೆ.

ಆಂಧ್ರಭೃತ್ಯರ ಕಾಲದಲ್ಲಿ ಅವರ ಪ್ರತಿನಿಧಿಯೊಬ್ಬನು ಚಿತ್ರದುರ್ಗದಲ್ಲಿ ನಿಂತು ಆಳುತ್ತಿದ್ದಂತೆ ಅಲ್ಲಿ ದೊರೆತ ನಾಣ್ಯಗಳಿಂದ ತಿಳಿಯುತ್ತದೆ. ಈ ನಾಣ್ಯಗಳು ಸೀಸದವು. ಇವುಗಳೊಳಗೆ ರಾಜರ ನಾಣ್ಯಗಳಲ್ಲಿ ಚೈತ್ಯವೂ ಬೋಧಿವೃಕ್ಷವೂ ಅಂಕಿತವಾಗಿರುವುದಲ್ಲದೆ, ಮುಡಾನಂದ, ಚುಟುಕಡಾನಂದ ಎಂಬ ಹೆಸರುಗಳೂ ದೊರೆಯುತ್ತವೆ. ಪ್ರತಿನಿಧಿಯ ನಾಣ್ಯಗಳಲ್ಲಿ ಅವನ ಹೆಸರೂ ವೃಷಭವೂ ಬೋಧಿವೃಕ್ಷವೂ ಕೆತ್ತಲ್ಪಟ್ಟಿವೆ. ಶಿವಮೊಗ್ಗಾ ಜಿಲ್ಲಾ ಶಿಕಾರಿಪುರ ತಾಲ್ಲೂಕು ತಾಳಗುಂದಗ್ರಾಮದ ಪ್ರಣವೇಶ್ವರ ದೇವಸ್ಥಾನದ ಇದಿರಿಗಿರುವ ಶಿಲಾಸ್ತಂಭದಲ್ಲಿ ೫ ನೆಯ ಶತಮಾನದ ಕದಂಬ ರಾಜರ ಒಂದು ಶಾಸನವಿದೆ. ಇದರಲ್ಲಿ ಆ ದೇವರು ಶಾತಕರ್ಣಿ ಮೊದಲಾದವರಿಂದ ಪೂಜಿಸಲ್ಪಟ್ಟುದಾಗಿ ಹೇಳಿದೆ.

ಕೆಳಗಣ ಈಜಿಪ್ಟ ದೇಶದಲ್ಲಿಯ ಆಕ್ಸಿರಿಂಕಸ್ ಎಂಬ ಸ್ಥಳದಲ್ಲಿ ದೊರೆತ ೨ ನೆಯ ಶತಮಾನದಲ್ಲಿ ರಚಿತವಾದ ಒಂದು ಗ್ರೀಕ್ ನಾಟಕದಲ್ಲಿ ಕೆಲವು ಕನ್ನಡ ಶಬ್ದಗಳೂ, ವಾಕ್ಯಗಳೂ ದೊರೆಯುತ್ತವೆ. ಉದಾಹರಣೆ—ಪಾನಂ ಬೇರೆತ್ತಿ ಕಟ್ಟಿ ಮಧುಪಂ ಬೇರೆತ್ತುವೆನ್. ರಾಷ್ಟ್ರಕೂಟರಾಜನಾದ ನೃಪತುಂಗನು ತನ್ನ ಕವಿರಾಜ ಮಾರ್ಗದಲ್ಲಿ ತನಗೆ ಹಿಂದೆ ಇದ್ದ ಗದ್ಯಗ್ರಂಥಕರ್ತೃಗಳಲ್ಲಿ ದುರ್ವಿನೀತನ ಹೆಸರನ್ನು ಹೇಳಿದ್ದಾನೆ. ಈತನು ಆ ಹೆಸರಿನ ಗಂಗರಾಜನಾಗಿರಬಹುದು. ಇವನ ಕಾಲವು ಸುಮಾರು ೫೦೦ ಆಗುತ್ತದೆ. ೫ ನೆಯ ಶತಮಾನದಿಂದ ಕನ್ನಡ ಶಾಸನಗಳು ದೊರೆಯುತ್ತವೆ. ಭಟ್ಟಾಕಳಂಕನು ಕನ್ನಡ ಭಾಷೆಯ ವಿಷಯವಾಗಿ—ನಚೈಷಾ ಭಾಷಾ ಶಾಸ್ತ್ರಾನುಪಯೋಗಿನೀ : ತತ್ವಾರ್ಥ ಮಹಾಶಾಸ್ತ್ರವ್ಯಾಖ್ಯಾನಸ್ಯ ಷಣ್ಣವತಿ ಸಹಸ್ರಪ್ರಮಿತಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯಾನ್ಯೇಷಾಂಚ ಶಬ್ದಾಗಮ ಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರಕಲಾಶಾಸ್ತ್ರವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತೀನಾಮುಪಲಭ್ಯಮಾನತ್ವಾತ್ (ಕನ್ನಡದಲ್ಲಿ ತತ್ವಾರ್ಥ ಮಹಾಶಾಸ್ತ್ರಕ್ಕೆ ವ್ಯಾಖ್ಯಾನರೂಪವಾದ ೯೬,೦೦೦ ಗ್ರಂಥಪರಿಮಿತಿಯುಳ್ಳ ಚೂಡಾಮಣಿಯೂ, ಶಬ್ದಾಗಮ, ಯುಕ್ತ್ಯಾಗಮ, ಪರಮಾಗಮ ಇವುಗಳಿಗೆ ಸಂಬಂಧಪಟ್ಟ ಗ್ರಂಥಗಳೂ, ಕಾವ್ಯ, ನಾಟಕ, ಅಲಂಕಾರ, ಕಲಾಶಾಸ್ತ್ರ ಈ ವಿಷಯವಾದ ಗ್ರಂಥಗಳೂ ಹೇರಳವಾಗಿ ದೊರೆಯುವುದರಿಂದ ಈ ಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುದಲ್ಲ) ಎಂದು ಬರೆದಿದ್ದಾನೆ. ಈ ಚೂಡಾಮಣಿಯನ್ನು ಬರೆದವನು ತುಂಬುಲೂರಾಚಾರ್ಯ ಎಂಬ ನಾಮಾಂತರವುಳ್ಳ ಶ್ರೀವರ್ಧದೇವನು. ಇವನನ್ನು

ಜಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ |
ಶ್ರೀವರ್ಧದೇವ ಸಂಧತ್ಸೇ ಜಿಹ್ವಾಗ್ರೇಣ ಸರಸ್ವತೀಂ ||

(ಈಶ್ವರನು ಗಂಗೆಯನ್ನು ಜಟಾಗ್ರದಲ್ಲಿ ಧರಿಸಿದನು; ಶ್ರೀವರ್ಧನನೇ! ನೀನು ಸರಸ್ವತಿಯನ್ನು ನಾಲಗೆಯ ತುದಿಯಲ್ಲಿ ಧರಿಸಿದ್ದೀಯೆ) ಎಂದು ೭ ನೆಯ ಶತಮಾನದ ಅಂತ್ಯದಲ್ಲಿದ್ದ ದಂಡಿ ಸ್ತುತಿಸಿರುವಂತೆ ಒಂದು ಶಾಸನದಿಂದ ತಿಳಿಯುತ್ತದೆ. ೭ನೆಯ ಶತಮಾನಕ್ಕೆ ಹಿಂದೆಯೇ ಇಂಥಾ ಅಪಾರವಾದ ಗ್ರಂಥವು ಹುಟ್ಟಬೇಕಾದರೆ ಆ ಕಾಲಕ್ಕೆ ಬಹಳ ಹಿಂದೆಯೇ ಕನ್ನಡದಲ್ಲಿ ಗ್ರಂಥರಚನೆ ಆರಂಭವಾಗಿರಬೇಕು. ಸುಮಾರು ೭೦೦ ರಲ್ಲಿದ್ದ ಶ್ಯಾಮಕುಂದಾಚಾರ್ಯನು ಪ್ರಾಕೃತವನ್ನು ಕನ್ನಡದಲ್ಲಿ ಬರೆದಿರುವುದಾಗಿ ಇಂದ್ರನಂದಿಯ ಶ್ರುತಾವತಾರದಲ್ಲಿಯ

ಕಾಲೇ ತತಃ ಕಿಯತ್ಯಪಿ ಗತೇ ಪುನಃ ಶ್ಯಾಮಕುಂದಸಂಜ್ಞೇನ |
ಪ್ರಾಕೃತ ಸಂಸ್ಕೃತ ಕರ್ಣಾಟಭಾಷಯಾ ಪದ್ಧತಿಃ ಪರಾರಚಿತಾ ||

ಎಂಬ ಪದ್ಯದಿಂದ ತಿಳಿಯುತ್ತದೆ. ೯ ನೆಯ ಶತಮಾನದಲ್ಲಿ ಹುಟ್ಟಿದ ಕವಿರಾಜಮಾರ್ಗವೇ ನಮಗೆ ದೊರೆತಿರುವ ಆದಿಗ್ರಂಥವಾಗಿದೆ.

ಯಾಪ್ಪರುಂಗಲಕ್ಕಾರಿಕೈ ಎಂಬ ತಮಿಳು ಛಂದೋಗ್ರಂಥದಿಂದ ಕನ್ನಡದಲ್ಲಿ ಗುಣಗಾಂಕಿಯಂ ಎಂಬ ಒಂದು ಛಂದೋಗ್ರಂಥವು ಇದ್ದಂತೆ ತಿಳಿಯುತ್ತದೆ. ಗುಣಗಾಂಕಿಯವು ಸ್ತ್ರೀಗೆ ಸಂಬೋಧಿಸಿದೆ ಎಂದೂ, ತಮಿಳು ಗ್ರಂಥವೂ ಆ ರೀತಿಯನ್ನೇ ಅನುಸರಿಸಿದೆ ಎಂದೂ ಹೇಳಿದೆ. ತಮಿಳು ಗ್ರಂಥವನ್ನು ಬರೆದ ಅಮೃತಸಾಗರನೆಂಬ ಕವಿ ೧೧ ನೆಯ ಶತಮಾನಕ್ಕೆ ಹಿಂದೆ ಇದ್ದವನು. ಕನ್ನಡ ಗ್ರಂಥವನ್ನು ಬರೆದ ಕವಿಯ ಹೆಸರು ಹೇಳಿಲ್ಲ. ಅವನು ತನ್ನ ಗ್ರಂಥವನ್ನು ಗುಣಗ, ಗುಣಗಾಂಕ, ಗುಣಕೆನಲ್ಲ ಎಂಬ ವಿಶೇಷಣಗಳುಳ್ಳ ೩ ನೆಯ ವಿಜಯಾದಿತ್ಯನೆಂಬ (೮೪೪-೮೮೮) ಪೂರ್ವ ದೇಶದ ಚಾಲುಕ್ಯರಾಜನಿಗೆ ಅಂಕಿತ ಮಾಡಿದಂತೆ ತೋರುತ್ತದೆ. ಈ ಗ್ರಂಥವು ನಮಗೆ ದೊರೆತಿಲ್ಲ. ನಾಗವರ್ಮನ ಕಾಲಕ್ಕೆ ಹಿಂದೆ ಹುಟ್ಟಿದ ಈ ಗ್ರಂಥವೇ ಕನ್ನಡ ಛಂದಸ್ಸಿನಲ್ಲಿ ಆದಿಗ್ರಂಥ.

ಸುಮಾರು ೯೦೦ ರಲ್ಲಿದ್ದ ರಾಜಶೇಖರನೆಂಬ ಸಂಸ್ಕೃತಕವಿ ತನ್ನ ಕಾವ್ಯಮೀಮಾಂಸೆಯೆಂಬ ಗ್ರಂಥದಲ್ಲಿ ಕರ್ಣಾಟರು ಓದುವ ರೀತಿಯನ್ನು ಕುರಿತು ಹೀಗೆ ಬರೆದಿದ್ದಾನೆ—

ರಸಃ ಕೋಪ್ಯಸ್ತು ಕಾಪ್ಯಸ್ತು ರೀತಿಃ ಕೋಪ್ಯಸ್ತು ವಾಗುಣಃ |
ಸಗರ್ವಂ ಸರ್ವಕರ್ಣಾಟಾಷ್ಟಂಕಾರೋತ್ತರಪಾಠಿನಃ ||

(ರಸ, ರೀತಿ, ಗುಣ ಇವು ಆವುವಾದರೂ ಆಗಲಿ, ಎಲ್ಲಾ ಕರ್ಣಾಟರೂ ಹೆಮ್ಮೆಯಿಂದ ಟಂಕಾರದೊಡನೆ ಓದುತ್ತಾರೆ). (ಸಶೇಷ).

ಪತ್ರವ್ಯವಹಾರ.

ಕಳೆದ ವಾರದಲ್ಲಿಯೂ ನಮ್ಮಲ್ಲಿಗೆ ಅನೇಕ ಸ್ಥಲಗಳಲ್ಲಿ ನಡೆದ ಬಸವೇಶ್ವರ ಜಯಂತ್ಯುತ್ಸವದ ಲೇಖನಗಳು ಬಂದಿರುತ್ತವೆ. ಅವರ ಭಕ್ತಿಭಾವವನ್ನು ನಾವು ಕೊಂಡಾಡುವೆವಲ್ಲದೆ; ಆ ಲೇಖನಗಳನ್ನೆಲ್ಲಾ ಸ್ಥಲಾಭಾವದಿಂದ ಪ್ರಕಟಿಸಲಾಗದುದಕ್ಕಾಗಿ ಕ್ಷಮೆಯನ್ನು ಬೇಡುತ್ತೇವೆ.

ಸಂಪಗಾಂವಿಯಲ್ಲಿ ಈ ಉತ್ಸವಸಮಯದಲ್ಲಿ ಸಮಾಜಬಾಂಧವರು ಕೂಡಿದ್ದ ಸಭೆಯೊಳಗೆ ಶರಣ ವೀರಶೈವಸಂಘ ಸಮ್ಮೇಳನದ ನಿರ್ಧಾರದ ಪ್ರಕಾರ ಏರ್ಪಟ್ಟ ಮಾಸಪತ್ರಿಕೆಯ ಫಂಡಿಗಾಗಿ ೮೦ ರೂ. ಗಳು ಕೊಡಿಸಲ್ಪಟ್ಟುವು.

ಹಿರೆಕೆರೂರಿನಲ್ಲಿ ಜಯಂತ್ಯುತ್ಸವಸಮಯದಲ್ಲಿ ಕೂಡಿದ್ದ ಸಭೆಯೊಳಗೆ ಶ್ರೀ ಚರವರ್ಯ ದಾವಣಗೆರೆ ಮೃತ್ಯುಂಜಯ ಸ್ವಾಮಿಗಳು ಉಪನ್ಯಾಸಮಾಡಿದುದರಮೇಲೆ ಧಾರವಾಡದ ವೀರಶೈವ ವಿದ್ಯಾರ್ಥಿನಿಲಯದ ಸಹಾಯಕ್ಕಾಗಿ ಕೆಲ ಮಹನೀಯರಿಂದ ವರ್ಷಾಶನ ಕೊಡುವಂತೆ ವಾಗ್ದಾನಮಾಡಲ್ಪಟ್ಟಿತು.

ಗದಗ ತಾ॥ ಹಮ್ಮಿಗಿಯಲ್ಲಿ ಜೋಳವು ರೂ. ಗೆ ೫ ಸೇರಿನಂತೆ ಮಾರಲ್ಪಡುತ್ತಿದ್ದುದರಿಂದ ಬಡಬಗ್ಗರು ಪಡುತ್ತಿದ್ದ ಕಷ್ಟವನ್ನು ನೋಡಿ ಅಲ್ಲಿನ ಮ॥ ವಿರೂಪಾಕ್ಷಪ್ಪ ಹಂಪಣ್ಣ ಕುಬಸದ ಇವರು ರೂ. ಗೆ ೭ ಸೇರು ಜೋಳದಂತೆ ಮಾರಲು ಏರ್ಪಡಿಸಿ ದೀನಜನರಿಗೆ ಬಹಳ ಸಹಾಯವಾಡಿರುವರೆಂದು ಅಲ್ಲಿಯ ಸ್ಥಳಿಕರೊಬ್ಬರು ತಿಳಿಯಸಿರುತ್ತಾರೆ.

ಈ ಕೆಳಗೆ ಕಂಡನೋರೆ ಬಂದಿರುವ ಕೈ. ವೈ. ವೀರಸಂಗಪ್ಪನವರ ಅಗ್ರತಾಂಬೂಲದ ಬಾ॥ ರೂ. ಗಳನ್ನು ನಾವು ವಂದನಾಪೂರ್ವಕ ಸ್ವೀಕರಿಸಿರುತ್ತೇವೆ.

ಹಾಗಲವಾಡಿ ಪಟೇಲ್ ಸಿದ್ಧಲಿಂಗೇಗೌಡರ ಲಗ್ನದಲ್ಲಿ ೨ ರೂ. ಶಿವನಿಗ್ರಾಮದ ಮ॥ ಪಟೇಲ್ ಪುರದಪ್ಪನವರ ಮನೆಯಲ್ಲಿ ನಡೆದ ಸದರಿಯವರ ತಮ್ಮ ನಾಗಪ್ಪನವರ ಪುತ್ರಿಯ ಲಗ್ನದಲ್ಲಿ ೧ ರೂ. (ವಿದ್ಯಾಭಿವೃದ್ಧಿಫಂಡಿಗೆ ೪ ರೂ.) ತಿರುಮಕೂಡಲು ನರಸಿಪುರದ ವೇ॥ ಹುಚ್ಚಪ್ಪಶಾಸ್ತ್ರಿಗಳ ಮನೆಯಲ್ಲಿ ನಡೆದ ಅವರ ಮಗನ ಶಿವದೀಕ್ಷಾ ವಿವಾಹಮಹೋತ್ಸವಗಳಲ್ಲಿ ೧ ರೂ. ಚಿಕ್ಕಕೆರೆ ತಾ॥ ಕ್ಯಾಬಿಗ್ಗೆರೆ ಹಳ್ಳಿಗೌಡರ ಕೆಂಚಪ್ಪನವರ ಮಗ ಸಂಕಪ್ಪನವರಿಗೂ, ಹೊಲಿಕುಂಟೆ ರಾ॥ ಲಿಂಗಪ್ಪನವರ ಕುಮಾರಿ ಗೌರಮ್ಮನಿಗೂ, ಹಸರಣ್ಣಗಳ ಮುರಿಗಪ್ಪನವರ ಮಗ ಮುರಿಗಪ್ಪನಿಗೂ, ದಾನಪ್ಪನವರ ಕುಮಾರಿ ಗೌರಮ್ಮನಿಗೂ, ಅಜ್ಜಪ್ಪನವರ ಮಗ ಮಲ್ಲಪ್ಪನಿಗೂ, ಕ್ಯಾ॥ ಬಸಪ್ಪನವರ ಮಗಳು ಹೊನ್ನಮ್ಮನಿಗೂ, ಮ॥ ಸಂಗನಬಸಪ್ಪನವರ ಮಗ ನಂಜುಂಡಪ್ಪನಿಗೂ ದು॥ ನಂಜಪ್ಪನವರ ಮಗಳು ಕಲ್ಲಮ್ಮನಿಗೂ, ಕ್ಯಾ॥ ಉ॥ ಲಿಂಗಪ್ಪನವರ ಮಗ ಅಡಿವೆಪ್ಪನಿಗೂ, ಕ॥ ಬಸಪ್ಪನವರ ಮಗಳು ನಂಜಮ್ಮನಿಗೂ, ಕ॥ ಬಸಪ್ಪನವರ ಮಗ ಕಲ್ಲಪ್ಪನಿಗೂ ಬಾ॥ ರುದ್ರಪ್ಪನವರ ಮಗಳು ನಂಜಮ್ಮನಿಗೂ ನಡೆದ ವಿವಾಹಮಹೋತ್ಸವಗಳು ಪ್ರತಿಯೊಂದರಲ್ಲೂ ಅಗ್ರತಾಂಬೂಲದ ಬಗೆಗೆ ಒಂದೊಂದು ರೂ. (ವಿದ್ಯಾಭಿವೃದ್ಧಿಫಂಡಿಗೆ ಎರಡೆರಡು ರೂ. ನಂತೆ) ತುಮಕೂರು ತಾ॥ ಜೋಳಂಬಳ್ಳಿಯಲ್ಲಿ ಪಾ॥ ಶಿವರುದ್ರಪ್ಪನವರ ಪುತ್ರಿ ಚೆನ್ನವೀರಮ್ಮನನ್ನು ಕೊತ್ತಕೆರೆ ಅಡಿವಪ್ಪನಿಗೆ ಕೊಟ್ಟು ನಡೆಯಿಸಿದ ಲಗ್ನದಲ್ಲಿ ಅಗ್ರತಾಂ॥ ೧ ರೂ. ತುಮಕೂರು ತಾ॥ ದಂಡಿನ ಶಿವರದ ಮ॥ ಹೊ॥ ಹೊನ್ನಗಂಗಯ್ಯನಿಗೆ ಗುಬ್ಬಿ ತಾ॥ ಪುರದಮಠದ ಕಲ್ಲಪ್ಪದೇವರ ಕುಮಾರಿಯನ್ನು ಕೊಟ್ಟು ನಡೆಯಿಸಿದ ಲಗ್ನದಲ್ಲಿ ಅಗ್ರತಾಂ॥ ೧ ರೂ. ಮೈಸೂರು ಗುರುಕಾರ್ ಸಿದ್ದಲಿಂಗಪ್ಪನವರ ಮಗ ಕಾಶಿಯಪ್ಪನಿಗೆ ಮಾಗಡಿ ಮ॥ ಮಲ್ಲಿಕಾರ್ಜುನಪ್ಪನವರ ಕುಮಾರಿಯನ್ನು ಕೊಟ್ಟು ನಡೆಯಿಸಿದ ಲಗ್ನದಲ್ಲಿ ಅಗ್ರತಾಂ॥ ೧ ರೂ. (ವಿದ್ಯಾಭಿವೃದ್ಧಿ ಫಂಡಿಗೆ ೨ ಕಡೆಯಿಂದಲೂ ೫ ರೂ.) ಚಿತ್ರದುರ್ಗದ ಸಾಹುಕಾರ್ ವೀರಭದ್ರಪ್ಪನವರ ಗುಮಾಸ್ತ ದೇವರಮನೆ ಮ॥ ಮಹಾಲಿಂಗಯ್ಯನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಅಗ್ರತಾಂ॥ ೧ ರೂ. ಮೇಲೆ ಕಂಡಂತೆ ನಮ್ಮಲ್ಲಿಗೆ ಬಂದಿದ್ದ ವಿದ್ಯಾಭಿವೃದ್ಧಿ ಫಂಡ್ ಹಣವನ್ನು ಫಂಡ್‌ಸೆಕ್ರೆಟರಿಗಳಲ್ಲಿಗೆ ರವಾನಿಸಿಕೊಟ್ಟಿದ್ದೇವೆ.—ಪ.ಪ್ರ.

ರಾ॥ ಹೊನ್ನಗಂಗಯ್ಯನ ಲಗ್ನಕಾಲದಲ್ಲಿ ಕೂಡಿದ್ದ ಸಭೆಯಲ್ಲಿ ಹೊನ್ನುಡಿಕೆ ಮ॥ ಹೊನ್ನಶೆಟ್ಟಪ್ಪನವರು ಮಾಡಿದ ಉಪನ್ಯಾಸದ ಸಾರಾಂಶ:—

ಮಹನೀಯರೇ ! ನಮ್ಮ ವೀರಶೈವ ಮತಸುಧಾರಣೆಗಾಗಿ ಕೈ॥ ಮ॥ ರಾ॥ ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ಮೊದಲಾದ ಮಹನೀಯರು ಉದಾರಾಶ್ರಯವನ್ನಿತ್ತು ವಿದ್ಯಾಪ್ರಸಾರಣೆಯನ್ನು ಮಾಡುತ್ತಿರುವುದು ಎಲ್ಲರಿಗೂ ತಿಳಿದಿದೆ. ಮತ್ತು ಮಹಾಸಭೆಗಳು ಏರ್ಪಟ್ಟು ಈವರೆಗೆ 8 ಸಭೆಗಳಾಗಿ ಪ್ರತಿಸಭೆಗಳಲ್ಲಿಯೂ ಮತ ವಿದ್ಯೆ ಆಚಾರ ರಾಜಕೀಯವಿದ್ಯೆ ವೈದಿಕವಿದ್ಯೆ ಮೊದಲಾದ ಸನ್ಮಾರ್ಗಾವಲಂಬನೆಗೆ ದಾಂತೋರಿಸಿ ಮತಗೌರವವಂ ಪಡೆಯುವುದಕ್ಕಾಗಿ ಎಲ್ಲಾ ವೀರಶೈವ ಜನಾಂಗದವರು ಶುಭಕಾಲಗಳಲ್ಲಿ ಶಕ್ತ್ಯನುಸಾರವಾಗಿ ಸಹಾಯಮಾಡಬೇಕೆಂತಲೂ, ದುಂದುವೆಚ್ಚಗಳನ್ನು ನಿಲ್ಲಿಸಬೇಕೆಂತಲೂ ವಗ್ಯೆರೆ ನಿಬಂಧನೆಗಳನ್ನು ಮಾಡಿ ಅದರಂತೆ ಆಚರಿಸುತ್ತಿದ್ದಾಗ್ಯೂ ಮಠಸ್ಥಾಪನಾಚಾರ್ಯರು ಮತಸುಧಾರಣೆಗೆ ಬದ್ಧಾದರರಾಗದೆ ಇರುವದರಿಂದ ನಿರ್ಧಾರಗಳು ಜಾರಿಗೆ ಬಾರದೇನೂ ರಾಜಕೀಯವಿದ್ಯಾಪ್ರವರ್ತನೆಯಲ್ಲಿರುವ ಕೆಲವರಲ್ಲಿ ಮತಧರ್ಮಗಳು ಹಿನ್ನು ಬಸ್ತು ತಪ್ಪಿ ಸ್ನಾನ ಶಿವಾರ್ಚನೆಗಳನ್ನು ಉದಾಸೀನಮಾಡುವುದು ಮಾಂದಾಸ ಮೊದಲಾದ ವೀರಶೈವೇತರರ ಫಲಾಹಾರದಂಗಡಿಗಳಲ್ಲಿಯೂ ಹೋಟಲುಗಳಲ್ಲಿಯೂ ಬೆಂದ ಪದಾರ್ಥಗಳನ್ನು ನಿಯಮವಿಲ್ಲದೆ ತಿನ್ನುವದು, ಕಾಫಿ, ಟೀ, ಸೋಡಾವಾಟರ್, ಲೆಮೆಡ್ ಮೊದಲಾದವುಗಳನ್ನು ಕುಡಿಯುವದು, ವಿದ್ಯಾಸಾಧನೆಗಿಂತ ರುಚಿಸಾಧನೆಗೆ ಹೆಚ್ಚು ಖರ್ಚು ಮಾಡುವುದು, ಕ್ರಾಪ್ ಮುಖಕ್ಷೌರ ಮೊದಲಾದ ವೇಷಗಳ ವೃತ್ತಿಗಳು ದಿನೇದಿನೆ ಹೆಚ್ಚುತ್ತಿವೆ. ಇವುಗಳನ್ನು ಯಾರಾದರೂ ಶಿಕ್ಷಣೆಯಿಂದಲಾಗಲಿ ಬೋಧನೆಯಿಂದಲಾಗಲಿ ನಿರೋಧಮಾಡದೆ ಇದ್ದರೆ ಸ್ವಲ್ಪದಿವಸದಲ್ಲಿಯೇ ಅಷ್ಟಾವರಣದ ಚಿನ್ಹೆಗಳೇ ಮಾಜಿಹೋಗಿ ಎಲ್ಲಾ ಧರ್ಮಗಳೂ ನಿರ್ಮೂಲವಾಗುವದರಲ್ಲಿ ಸಂದೇಹವಿಲ್ಲ. ಆದಕಾರಣ ಸಭೆಗಳಲ್ಲಿ ನಡೆದ ಬರೀರಚನೆಗಳಿಂದ ಏನೂ ಪ್ರಯೋಜನವಿಲ್ಲವಾಗುತ್ತದೆ. ಮೊನ್ನೆತಾನೇ ನಡೆದಿರುವ ಪಂಚಾಚಾರ್ಯಸಭೆಗೆ ಬಿನ್ನೈಸಿಕೊಂಡು ಅವರು ಮತಸುಧಾರಕರಾಗಿ ಬದ್ಧಕಂಕಣದಿಂದ ಏರ್ಪಡಿಸಬೇಕೆಂದು ಸರ್ವರೂ ಗಮನಕ್ಕೆ ತಂದುಕೊಳ್ಳದಿದ್ದರೆ ಬಹುಜನರು ಭ್ರಷ್ಟರಾಗಿ ಹೋಗುತ್ತಾರೆ. ಪ್ರತ್ಯಕ್ಷದರ್ಶಿ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜನ್ಮೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧ ಮಾಡಿದೆನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿಂದ ತಕ್ಷಣ ಗುಣಹೊಂದುವರು. ಇದು ಅಮೃತದಂತೆ ರುಚಿಕರವಾದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರ್ಧದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ಯನಬೇನೆ, ಹುರುಕುತಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗಬೇಕೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟ ತೋರಿದರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
8 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷ ಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕೊ.,
24 ಸಾಹುಕಾರಪೇಟೆ, ಮದ್ರಾಸ್.

೧೯೧೮ ನೆಯ ಇಸವಿ ಜೂನ್ ತಾ॥ ೨ ರಿಂದ ೧೯೧೮ ನೆಯ ಜೂನ್ ತಾ॥ ೮ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ವೈಶಾಖ ಬ॥ ಅಷ್ಟಮಿಯಿಂದ ವೈಶಾಖ ಬ॥ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ
2	ಭಾನು	ಅಷ್ಟಮಿ	31-38	ಶತಭಿಷ	12-55	20
3	ಸೋಮ	ನವಮಿ	25-33	ಪೂಭಾ	9-1	21
4	ಮಂಗಳ	ದಶಮಿ	19-23	ಉಭಾ	4-52	22
5	[1]ಬುಧ	ಏಕಾದ	13-15	ರೇವತಿ	0-41	23
6	ಗುರು	ದ್ವಾದಶಿ	7-22	ಭರಣಿ	53-0	24
7	ಶುಕ್ರ	ತ್ರಯೋ	1-35	ಉಪರಿ	54-49	25
8	[2]ಶನಿ	ಅಮಾ	53-4	ರೋಹಿಣಿ	47-54	26

(೧) ದ್ವಾದಶೀತಿಥಿಃ, ಸರ್ವತ್ರೈಕಾದಶೀ. (೨) ಸರ್ವತ್ರಾಮಾವಾಸ್ಯಾ, ಅಮೃತಸಿದ್ಧಿಯೋಗಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿ ಲಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜೂನ್ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೨೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳೀ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

MADRAS
MAIL
WATCH
WITH 15
PRESENTS

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾವಂತಿಗೆಹುವ್ವು 1, ಸೆಂಟ್ ಬಾಟ್ಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
36 3, ತಿರುಕಳ್ಳನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶಧಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 26

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ! ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಆರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
10 ಆನಂದ ಬುಕ್ ಡಿಪೊ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧. ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧ತೊಲೆಗೆ.೧ರೂ,

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ನಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
28 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೇಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ !

(೧) ರಾ॥ ಬ॥ ಮಲ್ಲಪ್ಪನವರ ಚರಿತ್ರೆ—ಇವರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವಕರ್ತವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ. ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ • ಭಗವದ್ಗೀತೆ • ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಜರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ. ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

6 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜೂನ್ ತಾ॥ ೯ ನೆಯ ಭಾನುವಾರ.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ.; ಜಿ.ಸಿ.ಬಿ.ಈ., ಅವರು ಈ ಸಂಸ್ಥಾನದ ಪ್ರಜೆಗಳಿಗೆ ಅಪ್ಪಣೆ ಕೊಡಿಸಿದ ಸಂದೇಶ.

ಬ್ರಿಟಿಷ್ ಚಕ್ರಾಧಿಪತ್ಯದವರು, ಸ್ವಾತಂತ್ರ್ಯವನ್ನೂ ಧರ್ಮವನ್ನೂ ಕಾಪಾಡುವುದಕ್ಕಾಗಿ ಪ್ರವರ್ತಿಸಿರುವಂತಹ ಮತ್ತು ನಮ್ಮ ಸೈನ್ಯದವರು ಸ್ವಲ್ಪಮಟ್ಟಿಗಾಗಿದ್ದರೂ ಮನಃಪೂರ್ವಕವಾಗಿ ದಕ್ಷತೆಯಿಂದ ಭಾಗಿಗಳಾಗಿರುವಂತಹ ಘೋರಯುದ್ಧದ ಈಗಿನ ಸ್ಥಿತಿಯು ಈ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಇರುವ ಅಭಿಮಾನಶಾಲಿಗಳಾದ ನಮ್ಮ ಪ್ರಜೆಗಳಿಗೆಲ್ಲಾ ಗೊತ್ತೇ ಇರುತ್ತದೆ. ಇಂತಹ ಸ್ಥಿತಿಯಲ್ಲಿ ಗ್ರೇಟ್ ಬ್ರಿಟನ್ನಿನವರ ಮತ್ತು ಅವರ ಮಿತ್ರಮಂಡಲಿಯವರ ಸೈನ್ಯಗಳಿಗೆ ಜಯವಾಗುವಂತೆಯೂ ಮುಂದೆ ಪ್ರಪಂಚದಲ್ಲಿ ಶಾಂತಿಯು ನೆಲೆಗೊಳ್ಳುವಂತೆಯೂ ಮಾಡುವುದಕ್ಕೋಸ್ಕರ ಚಕ್ರಾಧಿಪತ್ಯಕ್ಕೆ ಸೇರಿದ ಪ್ರತಿಯೊಬ್ಬ ಪ್ರಜೆಯೂ ತನ್ನ ಕೈಲಾದಮಟ್ಟಿಗೆ ಎಲ್ಲಾ ಸಹಾಯವನ್ನೂ ಮಾಡತಕ್ಕದ್ದು ಅವನ ಕರ್ತವ್ಯವಾಗಿರುತ್ತದೆ. ಜನಸಹಾಯವೂ ಧನಸಹಾಯವೂ ಜರೂರಾಗಿ ಬೇಕಾಗಿರುತ್ತವೆ: ನಾವು ಮಾಡತಕ್ಕ ಸಹಾಯವು ಪ್ರಕೃತಸಂದರ್ಭಕ್ಕೆ ಅನುಗುಣವಾಗಿಯೂ ಮೈಸೂರು ಸಂಸ್ಥಾನದ ಯೋಗ್ಯತೆಗೂ ಗೌರವಕ್ಕೂ ತಕ್ಕದ್ದಾಗಿಯೂ ಇರಬೇಕು.

೨. ಜನಸಹಾಯದ ವಿಷಯದಲ್ಲಿ, ಜನರು ಮೈಸೂರು ರೆಜಿಮೆಂಟುಗಳಲ್ಲಿಯಾಗಲೀ, ಬ್ರಿಟಿಷ್ ಸೈನ್ಯದಲ್ಲಿಯಾಗಲೀ ಯೋಧರಾಗಿ ಅಥವಾ ಪರಿವಾರದವರಾಗಿ ನೌಕರಿಗಳಿಗೆ ಸೇರುವುದಕ್ಕಾಗಿ ಮುಂದಕ್ಕೆ ಬರಲು ಬೇಕಾದಷ್ಟು ಸೌಲಭ್ಯಗಳನ್ನೂ ಪ್ರೋತ್ಸಾಹಗಳನ್ನೂ ಅವರಿಗೆ ನಮ್ಮ ಸರ್ಕಾರದವರು ಉಂಟುಮಾಡಿಕೊಟ್ಟಿರುತ್ತಾರೆ. ಕಳೆದ ಕೆಲವು ತಿಂಗಳುಗಳಲ್ಲಿ ಈ ಸಂಸ್ಥಾನದ ಪ್ರಜೆಗಳ ಪೈಕಿ ಒಂದು ಸಾವಿರಕ್ಕೆ ಮೇಲ್ಪಟ್ಟಷ್ಟು ಜನರು ಈ ಸೈನ್ಯಗಳಿಗೆ ಸೇರಿರುವುದು ನಮಗೆ ಸಂತೋಷಕರವಾಗಿಯೂ ತೃಪ್ತಿಕರವಾಗಿಯೂ ಇರುತ್ತದೆ. ಆದರೆ ಯುದ್ಧವು ನಿಲ್ಲದೆ ಇನ್ನೂ ನಡಿಯುತ್ತಲೇ ಇರುವುದರಿಂದ ನಾವು ನಮ್ಮ ಪ್ರಯತ್ನಗಳನ್ನು ಇಮ್ಮಡಿಯಾಗಿ ನಡಿಸಿ ಇನ್ನೂ ವಿಶೇಷವಾಗಿ ಜನಗಳು ಸೈನ್ಯಕ್ಕೆ ಸೇರುವಂತೆ ಮಾಡುವುದು ಅವಶ್ಯಕವಾಗಿರುತ್ತದೆ. ನಮ್ಮ ಪ್ರಜೆಗಳು ಇನ್ನೂ ಹೆಚ್ಚುಹೆಚ್ಚಾಗಿ ಮುಂದೆ ಬಂದು ಸೈನ್ಯಕ್ಕೆ ಸೇರಬೇಕೆಂತಲೂ, ಹಾಗೆ ಸೇರುವುದರಮೂಲಕ ಮೈಸೂರು ಸಂಸ್ಥಾನದ ಒಳ್ಳೇ ಹೆಸರುವಾಸಿಯನ್ನು ಉಳಿಸಿಕೊಳ್ಳಬೇಕೆಂತಲೂ ನಾವು ನಮ್ಮ ಪ್ರಜೆಗಳಿಗೆ ತಿಳಿಯಪಡಿಸುತ್ತೇವೆ.

೩. ದ್ರವ್ಯಸಹಾಯದ ವಿಷಯದಲ್ಲೂ, ಯುದ್ಧದ ಖರ್ಚಿಗಾಗಿ ನಮ್ಮ ಸಂಸ್ಥಾನದ ಹುಟ್ಟುವಳಿಯಲ್ಲಿ ಸಾಧ್ಯವಾದಷ್ಟು ಮೊಬಲಗನ್ನು ಘನತೆಯೈದಿದ ವೈಸ್‌ರಾಯಿರವರ ಸ್ವಾಧೀನಕ್ಕೆ ನಾವು ಆಗಿಂದಾಗ್ಗೆ ಒಪ್ಪಿಸಿರುತ್ತೇವೆಯಲ್ಲದೆ, ನಮ್ಮ ಸರ್ಕಾರದವರೂ ನಮ್ಮ ಪ್ರಜೆಗಳೂ ಸಹ ಮೊದಲನೇ ಇಂಡಿಯನ್ ವಾರ್‌ಲೋನ್ ಎಂಬ ಯುದ್ಧದ ಸಾಲಕ್ಕಾಗಿ ವಿಶೇಷವಾಗಿ ಚಂದಾ ಹಣವನ್ನು ಕೊಟ್ಟಿರುತ್ತಾರೆ. ಈಗತಾನೇ ಇಂಡಿಯಾ ಸರ್ಕಾರದವರು ಷರತ್ತುಗಳ ಸಹಿತ ಪ್ರಕಟಪಡಿಸಿರುವಂತಹ ಎರಡನೇ ಸಾಲಕ್ಕೆ ಚಂದಾ ಮೂಲಕ ಸಹಾಯಮಾಡಲು ಮತ್ತೊಂದು ಅವಕಾಶವು ನಮಗೆ ಒದಗಿರುತ್ತದೆ. ಯುದ್ಧದ ಈ ಎರಡನೇ ಸಾಲಕ್ಕಾಗಿ 30 ಲಕ್ಷ ರೂಪಾಯಿಗಳನ್ನು ಕೊಡುವಂತೆ ನಾವು ನಮ್ಮ ಸರ್ಕಾರಕ್ಕೆ ಆಜ್ಞಾಪಿಸಿರುತ್ತೇವೆ. ನಮ್ಮ ಪ್ರಜೆಗಳೂ ಕೂಡ ಈ ಸಾಲಕ್ಕೆ ಧಾರಾಳವಾಗಿ ಹಣವನ್ನು ಕೊಡುವುದರ ಮೂಲಕ ಚಕ್ರಾಧಿಪತ್ಯಕ್ಕೆ ವಿಶೇಷವಾಗಿ ಸಹಾಯವನ್ನು ಮಾಡಿ ಹಿಂದೆ ಯಾವಾಗಲೂ ತೋರ್ಪಡಿಸಿರುವಂತೆಯೇ ಈಗಲೂ ತಮ್ಮ ರಾಜಭಕ್ತಿಯನ್ನು ಕಾರ್ಯತಃ ತೋರ್ಪಡಿಸುವರೆಂದು ನಾವು ಸಂಪೂರ್ಣವಾಗಿ ನಂಬಿರುತ್ತೇವೆ.

ಕೃಷ್ಣರಾಜ ಒಡೆಯರ್.

ಪ್ರಜಾಕರ್ತವ್ಯ.

ಈಗಣ ಸಂಧಿಯಲ್ಲಿ ಪ್ರಜೆಗಳಾದ ನಾವು ಧನಸಹಾಯ ಜನಸಹಾಯಗಳನ್ನು ಮಾಡಿ ಆಂಗ್ಲಸಾಮ್ರಾಜ್ಯಕ್ಕೆ ಯುದ್ಧದಲ್ಲಿ ಜಯವಾಗುವಂತೆ ಮಾಡುವುದು ಭಾರತಪ್ರಜೆಗಳಾದ ನಮ್ಮೆಲ್ಲರಿಗೂ ಎಷ್ಟು ಅವಶ್ಯಕರ್ತವ್ಯವಾಗಿರುವುದೆಂಬುದನ್ನೂ, ಸೈನ್ಯಕ್ಕೆ ಸೇರುವವರಿಗೆ ನಮ್ಮ ಮೈಸೂರು ಪ್ರಭುತ್ವದವರು ಎಷ್ಟು ಉದಾರವಾದ ಸಂಬಳಗಳನ್ನೂ ಬಹುಮಾನಗಳನ್ನೂ ಕೊಡಲಿಕ್ಕೂ, ಸಾಲವಾಗಿ ಕೊಡಲ್ಪಡುವ ಹಣಕ್ಕೆ ಇಂಡ್ಯಾ ಸರ್ಕಾರದವರು ಪ್ರತಿಫಲವನ್ನು ಕೊಡುವುದಕ್ಕೂ ಎಷ್ಟು ಉದಾರವಾದ ಏರ್ಪಾಟು ಮಾಡಿರುವರೆಂಬುದನ್ನೂ ನಾವು ಇದೇ ಪತ್ರಿಕೆಯ ಮೂಲಕ ಹಲವು ಸಲ ತಿಳಿಯಿಸಿರುತ್ತೇವೆ. ಈ ಕರ್ತವ್ಯವನ್ನರಿತು ನೆರೆಹೊರೆಯ ನಮ್ಮ ದೇಶಬಾಂಧವರುಗಳು ಹೇಗೆ ವಿಶೇಷವಾಗಿ ಸಹಾಯ ಮಾಡುತ್ತಿರುವರೆಂಬುದನ್ನು ಪ್ರತಿ ಸಂಚಿಕೆಯ ವೃತ್ತಾಂತಗಳಲ್ಲಿ ತಿಳಿಯಬಹುದಾಗಿದೆ. ಅಂಥ ಕರ್ತವ್ಯವನ್ನು ನಮ್ಮ ಪ್ರಜೆಗಳೆಲ್ಲಾ ತಿಳಿದು ಸಂಪೂರ್ಣವಾಗಿ ನೆರವೇರಿಸಿ ಕೃತಕೃತ್ಯರಾಗಲೆಂಬ ಉದ್ದೇಶದಿಂದಲೇ ಶ್ರೀಮನ್ಮಹಾರಾಜರವರೂ ಸಹ ಒಂದು ಸಂದೇಶವನ್ನು ತಮ್ಮ ಪ್ರಜೆಗಳಿಗಾಗಿ ಅಪ್ಪಣೆ ಕೊಡಿಸಿರುತ್ತಾರೆ. ಅದನ್ನು ಮೇಲ್ಗಡೆಯಲ್ಲಿ ಪ್ರಕಟಿಸಿದ್ದೇವೆ. ಅವರು ಅಪ್ಪಣೆ ಕೊಡಿಸಿರುವಂತೆಯೇ ಮೈಸೂರು ಪ್ರಜೆಗಳೆಲ್ಲರೂ ನಿರ್ವಂಚನೆಯಾಗಿ ತನುಮನೋಧನಗಳ ಮೂಲಕ ಸಾಮ್ರಾಜ್ಯ ಸೇವೆಯನ್ನು ಮಾಡಿ ಮೈಸೂರು ದೇಶಕ್ಕೆ ಕೀರ್ತಿಯನ್ನೂ ತಮಗೆ ಲಾಭವನ್ನೂ ಮಾಡಿಕೊಳ್ಳುವುದರಲ್ಲಿ ಹಿಂದೆಗೆಯಲಾರರೆಂದು ನಂಬುತ್ತೇವೆ.

ವ್ಯಭಿಚಾರಿಗಳು.

ನಮ್ಮ ದೇಶದಲ್ಲಿ ವ್ಯಭಿಚಾರವೆಂಬ ದುರ್ವೃತ್ತಿಯು ಅಪರಿಮಿತವಾಗಿ ವೃದ್ಧಿಹೊಂದುತ್ತಲಿದೆ. ಈ ವ್ಯಭಿಚಾರವೆಂಬ ಮಹಾಸಮುದ್ರದ ತೆರೆಗಳಲ್ಲಿ ಸಿಕ್ಕಿ ನಮ್ಮ ಯುವಕರನೇಕರು ತಮ್ಮ ಧನ ಮಾನ ಪ್ರಾಣಗಳನ್ನೆಲ್ಲಾ ಕಳೆದುಕೊಳ್ಳುತ್ತಿದ್ದಾರೆ. ತಮ್ಮ ಗಾನ ನರ್ತನ ವಿದ್ಯಾವೈದುಷ್ಯದಿಂದ ರಸಿಕಜನಾಹ್ಲಾದವನ್ನುಂಟುಮಾಡುತ್ತಿದ್ದ ಕಾರಣದಿಂದ ವಿದ್ವದ್ರಾಜಸಭಾಯೋಗ್ಯೆಯರೂ ದೇವಾಲಯಸೇವಾನಿಯುಕ್ತೆಯರೂ ಆಗಿದ್ದ ದೇವದಾಸಿಯರೂ ಬರುಬರುತ್ತ ರೂಪಾಜೀವೆಯರಾಗಿ ಪರಿಣಮಿಸಿ, ತಮ್ಮ ಗೌರವ ಪ್ರತಿಷ್ಠೆಗಳನ್ನು ಕಳೆದುಕೊಂಡು ಸಂಘಕಂಟಕಿಯರಾಗಿ ಪರಿಣಮಿಸಿರುವುದು ಶೋಚನೀಯವು. ಇಂಥ ದುರ್ವ್ಯಾಪಾರಕ್ಕೆ ನಿಂತಿರುವ ಕೆಲ ಸ್ತ್ರೀಯರು ವಿವೇಕಿಗಳೂ ಧೀಮಂತರೂ ವಿದ್ಯಾವಂತರೂ ಆದ ಎಷ್ಟೋ ಮಂದಿ ಯುವಕರನ್ನು ತಮ್ಮ ಮೋಹದಜಾಲಕ್ಕೆ ಸಿಕ್ಕಿಸಿಕೊಂಡು, ಜನ್ಮಾಂತರದವರೆಗೆ ಅನುಭವಿಸಿದರೂ ತೀರದಂಥ ದುಃಖಸಂಕಟದಲ್ಲಿ ಅವರನ್ನು ಮುಳುಗಿಸಿ ಈ ಲೋಕದಲ್ಲೇ ನರಕಯಾತನೆಯನ್ನನುಭವಿಸುವಂತೆ ಮಾಡುತ್ತಿದ್ದಾರೆ. ಇಂಥ ವಾರಾಂಗನೆಯರಿಗೆ ಸೋತುಹೋದ ಯುವಕರು ಮಾಡುತ್ತಲಿರುವ ಪಾಪಗಳನ್ನೂ ಅನ್ಯಾಯವನ್ನೂ ಕಳ್ಳತನವನ್ನೂ ಠಕ್ಕುಗಾರಿಕೆಯನ್ನೂ ವರ್ಣಿಸಲಳವಲ್ಲ. ಎಷ್ಟೋ ಮಂದಿ ಧನಾಢ್ಯರು ಈ ಜಾರತನದಿಂದ ಭೋಗಿಗಳಾಗುತ್ತೇವೆಂದು ಭ್ರಮಿಸಿ, ರೋಗಿಗಳಾಗಿಯೂ ಕಡೆಗೆ ಜೋಗಿಗಳಾಗಿಯೂ ಪರಿಣಮಿಸಿ, ಊರೂರಿಗೆ ಭಿಕ್ಷೆಯೆತ್ತುತ್ತಲೂ ಹುಚ್ಚರಾಗಿಯೂ ಹೋಗುತ್ತಿರುವುದನ್ನು ಕಣ್ಣಾರ ನೋಡುತ್ತಿದ್ದೇವೆ. ಇಂಥವರುಗಳು ತಾವು ಕೆಡುವುದು ಮಾತ್ರವೇ ಅಲ್ಲದೆ ತಮ್ಮ ಕೈಹಿಡಿದ ಭಾರ್ಯೆಯರನ್ನೂ ರೋಗಿಷ್ಠೆಯರನ್ನಾಗಿ ಮಾಡಿ ಅವರ ಬಾಳನ್ನು ನಾಯಿಬಾಳಿಗಿಂತಲೂ ಕಡೆಯಾಗಿ ಮಾಡಿ ಆಜೀವವಾಗಿ ದುಃಖಿಸುವಂತೆ ಮಾಡಿಡುವರು. ಕೆಟ್ಟುಹೋದ ಬಳಿಕ ತಮ್ಮ ದುರ್ವರ್ತನದಿಂದಲೇ ಹೀಗಾದೆವೆಂದು ನಿಟ್ಟುಸುರುಬಿಟ್ಟು ಅವರೇ ಹೇಳಿಕೊಳ್ಳುವರು. ಇದನ್ನು ಅಹರ್ನಿಶಿಯೂ ಕಾಣುತ್ತಿದ್ದರೂ ಪರರನ್ನು ನೋಡಿ ಎಚ್ಚತ್ತುಕೊಳ್ಳದೆ ನಮ್ಮ ತರುಣರನೇಕರು ತಮ್ಮ ದೇಹೇಂದ್ರಿಯಾದಿಗಳು ಬಲಿಯುವುದಕ್ಕೆ ಮುಂಚೆಯೇ ದುಸ್ಸಹವಾಸದೋಷದಿಂದ ತಮ್ಮ ಜೀವಿತವನ್ನೆಲ್ಲಾ ದುಃಖಮಯವನ್ನಾಗಿ ಮಾಡತಕ್ಕ ವ್ಯಭಿಚಾರ ಪಂಕದಲ್ಲಿ ಮುಳುಗಿ ಸದ್ವಿದ್ಯೆ, ಸುಜ್ಞಾನಗಳನ್ನು ಸಂಪಾದಿಸಲನುಕೂಲವಾದ ಅಮೋಘವಾದ ಕಾಲದಲ್ಲಿಯೇ ಸುಳ್ಳು, ಮೋಸ, ದುರ್ವರ್ತನ, ಠಕ್ಕು, ಧೂರ್ತತ್ವ, ಕೃತಘ್ನತೆ, ನೀಚತ್ವ, ನಿರ್ಘೃಣತ್ವ, ಅವಿಧೇಯತೆ, ಚೋರತ್ವ, ದುರಾಚಾರ ಇತ್ಯಾದಿಗಳನ್ನೆಲ್ಲಾ ಸುಲಭವಾಗಿ ಅಭ್ಯಾಸ ಮಾಡಿ ಎಂಥ ಹೇಯವಾದ ಕೆಲಸವನ್ನು ಮಾಡುವುದಕ್ಕೂ ಹೇಸದೆ ಜಾರೆಯರ ದಾಸಾನುದಾಸರಾಗಿ ಕೆಟ್ಟುಹೋಗುತ್ತಲಿರುವರು. ನಮ್ಮ ಸಮಾಜದಲ್ಲಿ ಪುರುಷರು ಮಾಡುವ ವ್ಯಭಿಚಾರವು ಅಷ್ಟು ದೂಷಣೀಯವಲ್ಲವೆಂಬ ಗರ್ಹಣೀಯವಾದ ದುಸ್ಸಂಪ್ರದಾಯವು ಪ್ರಬಲಿಸುತ್ತ ಬಂದಿರುವುದೇ ಇಂಥ ಅನರ್ಥಕ್ಕೆಲ್ಲಾ ಮೂಲವೆಂದು ಹೇಳುವಲ್ಲಿ ಲೇಶವೂ ಸಂಶಯವಿಲ್ಲ. ಮಾನಹೀನರಾದನೇಕರು ಸೂಳೆಯರ ಮನೆಗೆ ಹೋಗುವುದನ್ನು ತಮ್ಮ ಪುರುಷತ್ವಕ್ಕೆ ಗೌರವವೆಂದು ತಿಳಿದುಕೊಂಡು ಬಹಿರಂಗವಾಗಿ ಆ ಕೆಲಸವನ್ನು ಮಾಡುತ್ತಿರುವರು. ತಮ್ಮ ಗೃಹಿಣಿಯರನ್ನು ಮನೆಗಾವಲಿಗೆ ಹಾಕಿ ತಾವು ಪರನಾರಿಯರಲ್ಲಿ ಲೋಲರಾಗಿ ಕಾಲಯಾಪನೆ ಮಾಡುತ್ತಿರುವರು. ಹಿರಿಯರೇ ಹೀಗೆ ಮಾಡುತ್ತಿರುವಾಗ ಕಿರಿಯರಾದವರೂ ಅಬಲೆಯರೂ ಇಂಥ ಮೇಲುಪಂತಿಯನ್ನನುಸರಿಸಿ ಪ್ರವರ್ತಿಸುವುದರಲ್ಲಿ ಆಶ್ಚರ್ಯವೇನಿರುವುದು? ತಾನೇ ಕಳ್ಳನಾಗಿರುವವನು ತನ್ನ ಕುಟುಂಬದವರು ಮಾಡುವ ಕಳ್ಳತನವನ್ನು ನಿರೋಧಿಸುವುದಕ್ಕೆ ಹೇಗೆ ಶಕ್ತನಾಗುವನು? ತಮ್ಮ ಯುವಕರನ್ನು ವ್ಯಭಿಚಾರ ರೂಪ ಪಾಪಕೂಪದಲ್ಲಿ ಮುಳುಗಿಹೋಗದಂತೆ ಕಾಪಾಡಬೇಕೆಂಬ ಯಜಮಾನರುಗಳು ಮೊಟ್ಟಮೊದಲು ತಮ್ಮ ನಡೆ ನುಡಿಗಳನ್ನು ಶುದ್ಧವಾಗಿಟ್ಟುಕೊಳ್ಳುವುದೂ, ಅವರಿಗೆ ದುಸ್ಸಹವಾಸದಿಂದ ದುಷ್ಟವಾಸನೆಗಳು ತಗುಲದಂತೆ ಎಚ್ಚರದಿಂದ ನೋಡಿಕೊಳ್ಳುವುದೂ, ಸತ್ಸಹವಾಸದಲ್ಲಿರುವಂತೆ ಮಾಡುವುದೂ ಸಹ ಅತ್ಯವಶ್ಯಕವಾಗಿರುವುದು. ಮಕ್ಕಳನ್ನು ಹಡೆದವರೆಲ್ಲಾ ಧನ್ಯರಾಗುವುದಿಲ್ಲ. ಹೆತ್ತ ಮಕ್ಕಳನ್ನು ಸದ್ವಿದ್ಯಾ ಸದ್ಗುಣಾಢ್ಯರನ್ನಾಗಿ ಮಾಡಿದ ಬಳಿಕವೇ ತಾಯ್ತಂದೆಗಳು ಪುತ್ರಭಾಗ್ಯವನ್ನು ಪಡೆದವರೆಂದು ಪರರಿಂದಲೂ ತಿಳಿಯಲ್ಪಡುವುದಲ್ಲದೆ ತಾವೂ ಆ ಸುಖವನ್ನು ಅನುಭವಿಸುವರು. ಪೂರ್ವಕಾಲದಲ್ಲಿನಂತೆ ಈಗ ಬಾಲಬಾಲೆಯರ ಬ್ರಹ್ಮಚರ್ಯೆಯು ಸಮಗ್ರವಾಗಿ ಕಾಪಾಡಲ್ಪಡುವುದೂ ಇಲ್ಲ. ಸಣ್ಣ ವಯಸ್ಸಿನಲ್ಲಿಯೇ ಅವುಗಳ ಮನಸ್ಸಿಗೆ ಮದುವೆ ಒಸಗೆಗಳ ವಾಸನೆಯನ್ನು ಅಂಟಿಸಿ, ದೇಹಬಲಿಯುವುದರೊಳಗಾಗಿ ಕಾಮವ್ಯಾಪಾರಕ್ಕೆ ಅವರವರೇ ಪ್ರವೃತ್ತರಾಗುವಂತೆ ತಾಯ್ತಂದೆಗಳೇ ಮಾಡುತ್ತಾರೆ. ಇದರಿಂದ ಈ ಕಾಲದ ಹುಡುಗರಲ್ಲಿ ಅಕಾಲದಲ್ಲೇ ವ್ಯಭಿಚರಣ ದೋಷಗಳೂ ಮುಷ್ಟಿಪ್ರಯೋಗಾದಿ ಅಸ್ವಾಭಾವಿಕ ಪಾಪಾಚರಣೆಗಳೂ ಬಲುಮಟ್ಟಿಗೆ ಪ್ರಬಲಿಸುತ್ತಿವೆ. ಈ ದುರ್ವೃತ್ತಿಗಳು ನಮ್ಮ ಯುವಕರನ್ನು ಎಷ್ಟು ತೀವ್ರಗತಿಯಿಂದ ಪಾತಾಳಗಾಣಿಸುತ್ತಿರುವುವೆಂಬುದನ್ನು ನೆನೆದುಕೊಂಡರೆ ಎದೆಯು ಬಿರಿದುಹೋಗುತ್ತಿರುವುದು. ವೇಶ್ಯೆಯರನ್ನು ದೇವಾಲಯಗಳಿಗೂ ಶುಭಶೋಭನಗಳ ಗೃಹಗಳಿಗೂ ಬರಲವಕಾಶವಿತ್ತರೆ ಅವರ ದರ್ಶನ ಸಂಭಾಷಣಾದಿಗಳಿಂದ ನಮ್ಮ ತರುಣರು ಕೆಡುವರೆಂದು ಯೋಚಿಸಿ ಸಂಘಸಂಸ್ಕರಣಾಭಿಮಾನಿಗಳು ಅದಕ್ಕೆ ಒಂದು ತಡೆಯನ್ನು ಕಲ್ಪಿಸಿದರೂ, ಆ ದೇವದಾಸಿಯರಿಗಿಂತಲೂ ನೂರು ಪಾಲು ಹೆಚ್ಚಾಗಿ ಅನರ್ಥವನ್ನುಂಟುಮಾಡತಕ್ಕ ಸ್ತ್ರೀಯರು ಗೃಹಿಣಿಯರಲ್ಲೇ ಹೆಚ್ಚಿಹೋಗುತ್ತಿರುವರು. ವಿದ್ಯಾವತಿಯರೆನಿಸಿಕೊಂಡು ಕಲಿತವಿದ್ಯೆಗೇ ಅಪಕೀರ್ತಿಯನ್ನು ತರಿಸಲು ಹೇಸದಿರುವ ತರುಣಿಯರನೇಕರು ದೇಶಕ್ಕೆ ಮೃತ್ಯುಗಳಾಗಿ ಪರಿಣಮಿಸಿರುವರು. ಕೊಟ್ಟ ತಂದ ಮನೆಗೆರಡಕ್ಕೂ ಅಪವಾದವನ್ನು ತರುವ ಇಂಥ ಮಾರಿಯರಿಂದ ಪವಿತ್ರವಾದ ಕುಟುಂಬಗಳೆಲ್ಲಾ ನರಕವಾಸವಾಗುತ್ತಿರುವುವು. ಈ ಪರ್ಯವಸಾನವನ್ನು ನೋಡಿ ಅನೇಕರು ಸ್ತ್ರೀವಿದ್ಯಾ ಸ್ತ್ರೀಸ್ವಾತಂತ್ರ್ಯಗಳು ದೇಶಕ್ಕೆ ವಿಘಾತಕಗಳೆಂದು ಸಿದ್ಧಾಂತಮಾಡುವ ಹೊತ್ತು ಬಂದಿರುವುದು. ಸ್ತ್ರೀಪುರುಷರ ವ್ಯಭಿಚಾರದೋಷದಿಂದ ದೇಶದಲ್ಲಿ ಉಂಟಾಗುತ್ತಿರುವ ಅನರ್ಥವನ್ನು ಇಷ್ಟೆಂದು ವರ್ಣಿಸುವುದಕ್ಕೆ ಯಾರಿಂದಲೂ ಸಾಧ್ಯವಲ್ಲ. ಕಳ್ಳಕಾಕರ ಬೆಂಕಿಬೇಗೆಗಳ ಕ್ಷಾಮಡಾಮರಗಳ ರೋಗ ಗಾಗಳಗಳ ಮೂಲಕವಾದ ಸರ್ವಾನರ್ಥಗಳಿಗಿಂತಲೂ ಈ ವ್ಯಭಿಚಾರ ಮೂಲಕವಾದ ಅನರ್ಥವು ತಟ್ಟುವುದೇ ಹೆಚ್ಚೆಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಆದರೆ ಪ್ರಭುತ್ವದವರು ಅವುಗಳಿಗೆಲ್ಲಾ ಪ್ರತೀಕಾರವನ್ನು ಮಾಡಿ ನಿರೋಧವನ್ನು ಕಲ್ಪಿಸುತ್ತಿದ್ದರೂ, ಈ ದುರ್ವ್ಯಾಪಾರಕ್ಕೆ ಮಾತ್ರ ಯಾವ ತಡೆಯೂ ಇಲ್ಲದಂತೆ ಕಾಣುತ್ತದೆ. ಸ್ವರ್ಗವಾಸಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಹರೆಯಕ್ಕೆಬಂದ ಸಿರಿವಂತರ ಮಕ್ಕಳನ್ನು ಉಪಾಯದಿಂದ ಕರೆದುಕೊಂಡು ಹೋಗಿ ಜಾರೆಯರ ಸಹವಾಸಕ್ಕೆ ತಗುಲಿಸಿ, ಅವರುಗಳ ಮನೆಯ ಸಂಪತ್ತನ್ನೆಲ್ಲಾ ಸೂರೆಮಾಡಿಸಿ ನಿರ್ಗತಿಕರನ್ನಾಗಿ ಮಾಡಿ, ಹೀಗೆ ಹಲವರನ್ನು ಕೆಡಿಸುತ್ತಿದ್ದ ಒಬ್ಬೊಬ್ಬ ದುಷ್ಟರ ಸುದ್ದಿಯನ್ನು ಪ್ರಭುಗಳು ಕೇಳಿ, ಅಂಥವರಲ್ಲಿ ಪ್ರಮುಖನಾಗಿದ್ದವನೊಬ್ಬನನ್ನು ಹಿಡಿತರಿಸಿ, ಬೇಕಾದಷ್ಟು ವಾಗ್ದಂಡನೆ ಮಾಡಿದುದಲ್ಲದೆ ಶ್ರೀರಾಮಪೇಟೆಯ ಸೇತುವೆಯ ಮೇಲೆ ಬಿಸಿತಲೆಯಲ್ಲಿ ಅವನನ್ನು ಕುಳ್ಳಿರಿಸಿ, ಅವನು ಮಾಡುತ್ತಿದ್ದ ದುಷ್ಕ್ರಿಯೆಯನ್ನೆಲ್ಲಾ ಹೋಗಿಬರುವವರೊಡನೆ ವರ್ಣಿಸಿ ಹೇಳುವುದಕ್ಕೆ ಒಬ್ಬ ತಳಾರನನ್ನು ಅವನ ಮಗ್ಗುಲಲ್ಲಿ ನಿಲ್ಲಿಸಿ, ಅದನ್ನು ಕೇಳಿದವರೆಲ್ಲಾ ತಂಬುಲವನ್ನು ಅವನ ತಲೆಯ ಮೇಲೆ ಉಗಿದುಹೋಗುವಂತೆ ಏರ್ಪಡಿಸಿದರಂತೆ. ಈ ಸುದ್ದಿಯು ಊರಿನಲ್ಲೆಲ್ಲಾ ಹಬ್ಬಿದ ಕೂಡಲೇ ಆ ತೆರದ ಪುಂಡು ನಿಂತೇಹೋಯಿತೆಂಬುದಾಗಿ ಕೇಳುತ್ತಿದ್ದೇವೆ. ಈಗಣ ಪ್ರಭುಗಳಾಗಲೀ ಅವರ ಸರ್ಕಾರದವರೇ ಆಗಲೀ ಅಂಥ ಏರ್ಪಾಟನ್ನು ಮಾಡಲಾಗುವುದಿಲ್ಲ. ಸ್ವಾತಂತ್ರ್ಯದ ಸಾಮ್ರಾಜ್ಯವು ಮೆರೆಯುತ್ತಿರುವ ಈಗಣ ಕಾಲದಲ್ಲಿ ಪುರುಷನೇ ಆಗಲೀ ಸ್ತ್ರೀಯೇ ಆಗಲೀ ತನ್ನ ಇಷ್ಟಬಂದಂತೆ ವ್ಯಭಿಚರಿಸುವುದಕ್ಕೆ ತೊಡಗಿದರೆ ಯಾವ ಕಾನೂನೂ ತಡೆಗಟ್ಟುವಹಾಗಿಲ್ಲ. ಶಾಸ್ತ್ರಪುರಾಣಗಳ ಕಟ್ಟುಕತೆಗಳು ಈಗಣವರ ಹತ್ತಿರಕ್ಕೆ ಹೋಗಲು ಅವೇ ಭಯಪಡುತ್ತವೆ. ಹೀಗಾದಬಳಿಕ ನಮ್ಮ ಯುವತೀ ಯುವಕರ ಉದ್ಧಾರಕ್ಕೆ ಮಾರ್ಗವೇನು? ದೇಶೀಯ ಮಹಾಶಯರೆಲ್ಲರೂ ಇದನ್ನು ಮುಖ್ಯವಾಗಿ ಗಮನಿಸಬೇಡವೆ? ಈಗ ವಿದ್ಯಾಪ್ರಸಾರಣೆಗಿಂತಲೂ ನೀತಿಪ್ರಸಾರಣೆಯು ನಮಗೆ ಅತ್ಯಂತ ಮುಖ್ಯವಾಗಿದೆಯೆಂದು ಕಾಣಿಸುವುದಿಲ್ಲವೆ? ನಮ್ಮ ಮಕ್ಕಳು ವಿದ್ಯೆ ಕಲಿಯದಿದ್ದರೂ ಸದ್ಗುಣಾಢ್ಯರಾಗಿದ್ದರೆ ಸಾಕೆಂದು ಭಾವಿಸುವ ಹೊತ್ತು ಬಂದಿಲ್ಲವೆ? ನಮ್ಮ ಶ್ರೀಮನ್ಮಹಾರಾಜರವರ ಪವಿತ್ರ ಸಚ್ಚರಿತ್ರವನ್ನು ಆದರ್ಶವಾಗಿಟ್ಟುಕೊಂಡು ನಮ್ಮ ದೇಶದ ಪ್ರತಿಯೊಬ್ಬ ಪ್ರಭುತ್ವೋದ್ಯೋಗಿಗಳೂ, ಮುಖ್ಯವಾಗಿ ಪಾಠಶಾಲಾಧ್ಯಾಪಕರುಗಳೂ, ಆಚಾರ್ಯರುಗಳೂ, ಮಾತಾಪಿತೃಗಳೂ ಸಹ ತಾವು ಸಚ್ಚರಿತ್ರರಾಗಿರುವುದಕ್ಕೆ ಮೊದಲು ಪ್ರಯತ್ನಿಸಿ, ಬಳಿಕ ತಂತಮ್ಮ ಸಂತತಿಗಳಲ್ಲಿ ಸುನೀತಿ ಸತ್ಪ್ರವರ್ತನೆಗಳು ರೂಢಮೂಲವಾಗುವಂತೆ ಮಾಡಿ ದೇಶೋದ್ಧಾರವನ್ನು ಮಾಡಿಕೊಳ್ಳುವುದು ಎಲ್ಲಕ್ಕಿಂತಲೂ ಮುಖ್ಯಕಾರ್ಯವಾಗಿರುವುದು. ನಾವು ಸ್ವರಾಜ್ಯಬೇಕೆಂದು ಕೋರುತ್ತೇವೆ; ಮಕ್ಕಳನ್ನು ವಿದ್ಯಾವಂತರನ್ನು ಮಾಡಿ ಸಂಪದಾರ್ಜನ ಸಮರ್ಥರಾಗುವಂತ ಮಾಡಬೇಕೆಂದು ಕುತೂಹಲಪಡುತ್ತೇವೆ; ಅಧಿಕಾರಸಂಪಾದನೆಗೆ ಬಡಿದಾಡುತ್ತೇವೆ; ಇದರಿಂದೆಲ್ಲಾ ನಮ್ಮ ಕಣ್ಣುಗಳು ಮೇಲಕ್ಕೇರಿಹೋಗುವುದರಲ್ಲಿ ಊರ್ಧ್ವಮುಖವಾದಂತಿವೆಯೇ ಹೊರತು ನಾವು ಹತ್ತುತ್ತಿರುವ ಏಣಿಗಳ ಕೆಳಗಣ ಮೆಟ್ಟಲುಗಳೇ ಕಳಚಿ ಬಿದ್ದುಹೋಗುತ್ತಿರುವುದನ್ನು ಮಾತ್ರ ನಮ್ಮ ಕಣ್ಣುಗಳು ನೋಡುತ್ತಿರುವುದಿಲ್ಲ. ಈ ಅನರ್ಥವನ್ನೆಲ್ಲಾ ನಿವಾರಣೆ ಮಾಡಬೇಕೆಂಬ ದೂರಾಲೋಚನೆಯಿಂದಲೇ ನಮ್ಮ ಶ್ರೀಮನ್ಮಹಾರಾಜರವರಿಂದಲೂ ಶ್ರೀಮದ್ಯುವರಾಜರವರಿಂದಲೂ ಮಂತ್ರಿವರ್ಯರಿಂದಲೂ ಸಂಸ್ಥಾನದಲ್ಲಿ ಪೌರಸಾಮಾಜಿಕ ಸಭೆಯು ಸ್ಥಾಪಿಸಲ್ಪಟ್ಟಿರುವುದು. ಅದು ಶಾಖೋಪಶಾಖೆಯಾಗಿ ದೇಶದ ಎಲ್ಲಾ ಭಾಗಗಳಲ್ಲೂ ವ್ಯಾಪಿಸಿ, ಸತ್ಫಲಪ್ರದವಾಗುವಂತೆ ದೇಶೀಯರೆಲ್ಲರಿಂದಲೂ ಮಾಡಲ್ಪಡಬೇಕು. ದೇಶಬಾಂಧವರೆಲ್ಲರೂ ಅದಕ್ಕೆ ವಿಶೇಷವಾಗಿ ಲಕ್ಷ್ಯಕೊಡುವರಾಗಬೇಕೆಂದು ಕೋರುವೆವು.

ತೋಟದ ಬೇಸಾಯ.

ಈ ಪುಸ್ತಕವನ್ನು ಬೆಂಗಳೂರಿನ ಮ॥ ಎಂ. ಸುಬ್ಬಯ್ಯ ಬಿ.ಎ. ಯವರು ಬರೆದು ಮುದ್ರಿಸಿ ಪ್ರಕಟಿಸಿದ್ದಾರೆ. ಹೂವು ಹಣ್ಣು ಕಾಯಿ ಮೊದಲಾದುವುಗಳನ್ನು ತೋಟಗಳಲ್ಲಿ ಯಾವಯಾವ ರೀತಿಯಲ್ಲಿ ಬೆಳೆದು ಪ್ರಯೋಜನವನ್ನು ಹೊಂದಬಹುದೆಂಬುದನ್ನು ಸಕ್ರಮವಾಗಿಯೂ ಶಾಸ್ತ್ರೀಯವಿಧಾನದಿಂದಲೂ ತಿಳಿಯಿಸಿಕೊಡಬೇಕೆಂಬುದೇ ಈ ಗ್ರಂಥದ ಉದ್ದೇಶ. ಇಂಥ ಗ್ರಂಥವನ್ನು ಬರೆಯುವುದಕ್ಕೆ ಇವರು ಸಂಪೂರ್ಣವಾಗಿ ಅರ್ಹರು. ಇವರಿಗೆ ಈ ವೃತ್ತಿಯು ಹಿರಿಯರ ಕಾಲದಿಂದ ಬಂದುದು. ಇವರ ಯಜಮಾನರು ಮೈಸೂರು ಅರಮನೆಗೆ ಫಲಪುಷ್ಪಾದಿಗಳನ್ನೊಪ್ಪಿಸುವುದರಲ್ಲಿ ಹೆಸರುಗೊಂಡು ರಾಜಾನುಗ್ರಹಕ್ಕೆ ಪಾತ್ರರಾಗಿ, ವಚನರೂಪ ಭಾರತರಾಮಾಯಣ ಭಾಗವತ ಗ್ರಂಥಗಳನ್ನು ಮುದ್ರಿಸಿ ಭಾಷಾಸೇವೆಯನ್ನೂ ಮಾಡಿ ಪ್ರಖ್ಯಾತರಾಗಿದ್ದ ಎಂ. ರುದ್ರಪ್ಪನವರು. ಅಂಥವರ ಕುಮಾರರಾದ ಮ॥ ಸುಬ್ಬಯ್ಯನವರು ಕೂಡ ಬಿ.ಎ. ಪದವೀಧರರಾಗಿದ್ದರೂ ಸರ್ಕಾರದ ಉದ್ಯೋಗಗಳಿಗಾಸೆಪಡದೆ ತಮ್ಮ ವಿದ್ಯಾಬಲದಿಂದ ತಮ್ಮ ಪೂರ್ವವೃತ್ತಿಯನ್ನೇ ಅಭಿವೃದ್ಧಿ ಪಡಿಸುವುದರಲ್ಲಿ ನಿರತರಾಗಿ ವಿಶೇಷಾನುಭವವನ್ನು ಪಡೆದು, ಈಗ ತಮ್ಮ ಆ ಅನುಭವವನ್ನು ತಮ್ಮ ದೇಶೀಯರಿಗೂ ತಿಳಿಯಪಡಿಸಿಕೊಟ್ಟು ಉಪಕರಿಸಬೇಕೆಂಬ ಸಂಕಲ್ಪವುಳ್ಳವರಾಗಿದ್ದಾರೆ. ಆ ಸಂಕಲ್ಪದ ಒಂದು ಅಂಶವೇ ಈ ಗ್ರಂಥರೂಪವಾಗಿರುವುದು. ತೋಟದ ಬೇಸಾಯವನ್ನು ಮೈಸೂರುದೇಶದಲ್ಲಿ ಆಧುನಿಕ ಮರ್ಯಾದೆಗೆ ತಕ್ಕಂತೆ ಅಭಿವೃದ್ಧಿಗೆ ತರಲು ಪ್ರಥಮಪ್ರವರ್ತಕರಾದ ಅವರ ತಂದೆಯವರಿಗೆ ಈ ಗ್ರಂಥವು ಸಮರ್ಪಿಸಲ್ಪಟ್ಟಿರುವುದು ಅವರ ಪಿತೃಗುರುಭಕ್ತಿಗೆ ದ್ಯೋತಕವಾಗಿರುವುದು. ಗ್ರಂಥವು ಸುಲಭವಾದ ಕನ್ನಡನುಡಿಯಲ್ಲಿ ಬರೆಯಲ್ಪಟ್ಟಿರುವುದರಿಂದ ಬಾಲಕಬಾಲಿಕೆಯರಾದಿಯಾಗಿ ಸರ್ವರೂ ಓದಿ ತಿಳಿದುಕೊಳ್ಳಲರ್ಹವಾಗಿರುವುದು. ಯಾವಯಾವತೆರದ ತರಕಾರಿ ಗಿಡಗಳನ್ನೂ, ಹಣ್ಣಿನ ಗಿಡಗಳನ್ನೂ, ಹೂವಿನಗಿಡಗಳನ್ನೂ ಯಾವಯಾವ ತೆರದ ಗೊಬ್ಬರದಿಂದ ಯಾವಯಾವ ಋತುವಿನಲ್ಲಿ ಹೇಗೆಹೇಗೆ ವ್ಯವಸಾಯ ಮಾಡಬೇಕೆಂಬುದರ ಸಾಮಾನ್ಯ ವಿವರಣಗಳೆಲ್ಲಾ ಈ ಗ್ರಂಥದಲ್ಲಿ ವಿರಳವಾಗಿ ಕೊಡಲ್ಪಟ್ಟಿರುವುವು. ಪಾಠಶಾಲೆಗಳಲ್ಲಿ ಕಲಿಸಿ ಕೇಳುವುದಕ್ಕೂ ಅರ್ಹವಾಗಿರುವಂತೆ ಆಯಾವಿಷಯಗಳ ಅಡಿಯಲ್ಲಿ ಅದಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಹಾಕಲ್ಪಟ್ಟಿರುವುವು. ಆಯಾ ಪಾಠಗಳ ಬಳಿಯಲ್ಲಿಯೇ ಅವಕ್ಕೆ ಸಂಬಂಧಪಟ್ಟ ಫಲಪುಷ್ಪಶಾಕಾದಿಗಳ ಅಂದವಾದ ಚಿತ್ರಗಳು ಮುದ್ರಿಸಲ್ಪಟ್ಟಿರುವುದು ಪುಸ್ತಕದ ಅಂದವನ್ನೂ ಪ್ರಯೋಜನವನ್ನೂ ಮತ್ತಷ್ಟು ಹೆಚ್ಚಿಸಿರುವುದು. ಈ ಗ್ರಂಥವು ಪ್ರಥಮಾಭ್ಯಾಸಿಗಳಿಗೆ ಅತ್ಯನುಕೂಲವಾಗಿರುವುದರಿಂದ ಬಾಲತರಗತಿಯ ಶಾಲೆಗಳಿಗೆಲ್ಲಾ ಪಠ್ಯಗ್ರಂಥವನ್ನಾಗಿ ಏರ್ಪಡಿಸಬಹುದಾಗಿದೆ. ಮ॥ ಸುಬ್ಬಯ್ಯನವರು ಪ್ರೌಢವಿಷಯಗಳನ್ನೊಳಗೊಂಡ ಇದರ ದ್ವಿತೀಯಭಾಗವನ್ನೂ ಸಿದ್ಧಪಡಿಸುತ್ತಿರುವಂತೆ ಕಾಣುತ್ತದೆ. ತೋಟದ ಬೇಸಾಯದ ವಿಷಯದಲ್ಲಿ ಅಭೂತಪೂರ್ವವಾಗಿದ್ದ ಇಂಥ ಗ್ರಂಥವನ್ನು ದೇಶಭಾಷೆಯಲ್ಲಿ ಬರೆದು ಉಪಕರಿಸಿದ ಗ್ರಂಥಕರ್ತರಿಗೆ ನಾವು ಧನ್ಯವಾದವನ್ನರ್ಪಿಸುವುದಲ್ಲದೆ ವಿಶೇಷ ಲಾಭದಾಯಕವಾದ ಈ ವೃತ್ತಿಯಲ್ಲಿ ಪ್ರವೇಶಿಸುವುದಕ್ಕೆ ನಮ್ಮ ಜನರಿಗೆ ಇಂಥ ಪುಸ್ತಕಗಳ ಅವಲೋಕನವು ಪ್ರೋತ್ಸಾಹಕಾರಿಯಾಗದಿರಲಾರದೆಂದು ನಂಬುತ್ತೇವೆ. ಇದರ ಬೆಲೆ ಎಷ್ಟೋ ತಿಳಿಯಲಿಲ್ಲ.

ಸ್ತ್ರೀಶೂದ್ರಾಧ್ಯಯನವಿಧಿ.

ಶ್ರೀ ವಿಶ್ವೇಶ್ವರಾನಂದ ಸರಸ್ವತಿಯವರಿಂದ ಹಿಂದೀಭಾಷೆಯಲ್ಲಿ ಬರೆಯಲ್ಪಟ್ಟಿದ್ದ ಪುರುಷಾರ್ಥಪ್ರಕಾಶವೆಂಬ ಗ್ರಂಥಕ್ಕೆ ಮ॥ ವೆಲ್ಲಾಳ ಸುಬ್ಬರಾವ್ ಪಂಡಿತರು ಆಂಧ್ರಭಾಷೆಯಲ್ಲಿ ಪರಿವರ್ತನಮಾಡಲ್ಪಟ್ಟಿದ್ದ ಪ್ರತಿಯ ಆಧಾರದಮೇಲೆ ಈ ಗ್ರಂಥವು ಕನ್ನಡಕ್ಕೆ ಪರಿವರ್ತಿಸಲ್ಪಟ್ಟುದಾಗಿದೆ. ಇದನ್ನು ಚಿತ್ರದುರ್ಗದ ಆರ್ಯನಾರೀಸಮಾಜದ ಸೆಕ್ರಟರಿ ಶ್ರೀಮತಿ ಸರಸ್ವತಮ್ಮನವರು ರಚಿಸಿದ್ದಾರೆ. ಗ್ರಂಥದ ಆದಿಭಾಗದಲ್ಲಿ ಗ್ರಂಥಕರ್ತ್ರಿಯರ ವಿದ್ಯಾಭ್ಯಾಸಾದಿ ವಿಷಯಗಳೆಲ್ಲಾ ವಿವರಿಸಲ್ಪಟ್ಟಿವೆ. ಸ್ತ್ರೀಯರಿಗೂ ಶೂದ್ರರಿಗೂ ವೇದಾಧ್ಯಯನಮಾಡುವುದಕ್ಕೆ ಅಧಿಕಾರವುಂಟೆಂಬುದನ್ನು ವೇದಶಾಸ್ತ್ರಾದಿಗಳ ಆಧಾರಪೂರ್ವಕವಾಗಿ ನಿರೂಪಿಸುವುದೇ ಗ್ರಂಥದ ವಿಷಯವಾಗಿರುತ್ತದೆ. ಕಲಿತವಿದ್ಯೆಯನ್ನು ಸಾರ್ಥಕಪಡಿಸಿಕೊಳ್ಳಲು ಶ್ರೀಮತಿ ಸರಸ್ವತಮ್ಮನವರು ಇಂಥ ಲೋಕಹಿತಗ್ರಂಥರಚನಾಕಾರ್ಯದಲ್ಲಿ ಪ್ರವೃತ್ತರಾದುದನ್ನು ಕಂಡು ನಾವು ವಿಶೇಷವಾಗಿ ಸಂತೋಷಿಸುತ್ತೇವೆ. ದೇಶೀಯರೆಲ್ಲರಿಗೂ ಇದು ಓದಲರ್ಹವಾಗಿದೆ. ಅರ್ಧಾಣೆಯ ಪೋಸ್ಟ್ ಸ್ಟಾಂಪನ್ನಿಟ್ಟು ಕಾಗದ ಬರೆದುಕೊಂಡವರಿಗೆ ಚಿತ್ರದುರ್ಗದ ಆರ್ಯನ್ ಸ್ಟುಡೆಂಟ್ಸ್‌ಹೋಂ ಮ್ಯಾನೇಜರ್ ಮ॥ ಎಸ್.ವಿ. ಹನುಮಂತರಾಜುಯವರು ಈ ಗ್ರಂಥವನ್ನು ಉಚಿತವಾಗಿ ಕಳುಹಿಸಿಕೊಡುವರು.

ಒಳದೇಶದ ವೃತ್ತಾಂತಗಳು.

ಈ ತಿಂಗಳು ೨೮ ನೆ ತಾರೀಖಿನದಿನ ಬೆಂಗಳೂರು ಅಠಾರಾಕಚೇರಿ ಭವನದಲ್ಲಿ ನಿಯಮನಿರ್ಮಾಣಸಭೆಯು ನಡೆಯುವುದು.

ಬೆಂಗಳೂರು ಡಿಸ್ಟ್ರಿಕ್ಟ್ ಡಿ॥ ಕಮಿಷನರಾಗಿದ್ದ ಮಿ॥ ಪಿ. ಎಫ್. ಬೌರಿಂಗ್‌ರವರು ಮೈಸೂರು ದೇಶದ ರಿಕ್ರೂಟಿಂಗ್ ಡೈರೆಕ್ಟರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯಲ್ಲಿ ಕಳೆದ ೨೦ ದಿನಗಳಿಂದಲೂ ಮಳೆಯಿಲ್ಲ. ಸೆಕೆಗಾರಂಭವಾಗುತ್ತಿದೆ. ಮುಂಗಾರಿನ ಜೋಳದ ರಾಗಿಯ ಪೈರುಗಳು ಬಹುಚೆನ್ನಾಗಿ ತಲೆಯೆತ್ತಿದ್ದು ಈಚೆಗೆ ಮಳೆಯ ಅಭಾವದಿಂದ ಕೊರಗುತ್ತಿರುವುದನ್ನು ನೋಡಿ ರೈತರು ಕಣ್ಣೀರನ್ನು ಸುರಿಸುತ್ತಿದ್ದಾರೆ. ದಾರಣೆವಾಸಿಗಳು ಹೆಚ್ಚಾಗಿಯೇ ಇವೆ.

ಮ॥ ಪಿ. ರಾಘವೇಂದ್ರರಾಯರು ೨ ನೆ ಕೌನ್ಸಿಲರಾಗಿರುವಕಾಲದವರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾಗಿದ್ದ ಮ॥ ಕೆ. ಶ್ರೀನಿವಾಸಯ್ಯಂಗಾರರು ರೆವಿನ್ಯೂ ಕಮಿಷನರಾಗಿಯೂ, ಮಿ॥ ವಿನಾರ್ ಹಂಜಾಹುಸೇಕ್ಷರವರು ಪೊಲೀಸ್ ಇ॥ ಜನರಲ್‌ರಾಗಿಯೂ, ಮ॥ ಬಿ. ಸುಬ್ಬಣ್ಣನವರು ಮೈಸೂರು ಡಿಸ್ಟ್ರಿಕ್ಟ್ ಜಡ್ಜರಾಗಿಯೂ ಇರಲು ವರ್ಗಾಯಿಸಲ್ಪಟ್ಟಿದ್ದಾರೆ.

ದಗೆಯಡಗಿ ವಾಯುಗುಣವು ಶೀತವಾಗಿದ್ದುದರಿಂದ ಈ ಸಲ ಶ್ರೀಮನ್ಮಹಾರಾಜ ಕುಟುಂಬದವರು ಹೆಚ್ಚುಕಾಲ ನೀಲಗಿರಿಯಲ್ಲಿ ನಿಲ್ಲದೆ ರಾಜಧಾನಿಗೆ ದಯಮಾಡಿಸಿರುವುದರಿಂದ ಶ್ರೀಮದ್ಯುವರಾಜರವರ ೩೧ ನೆ ವರ್ಷವರ್ಧಂತಿಯು ಕಳೆದ ತಾ॥ ೫ ರಲ್ಲಿ ರಾಜಧಾನಿಯ ಅರಮನೆಯಲ್ಲೇ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಬೀದಿಯುತ್ಸವದ ಹೊರತು ಉಳಿದ ದರ್ಬಾರು ಆರತ್ಯಕ್ಷತೆ ಮೊದಲಾದುವುಗಳೆಲ್ಲಾ ಸಾಂಗವಾಗಿ ಜರುಗಿದುವು.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶವನ್ನು ನೋಡುವಲ್ಲಿ ಮೈಸೂರು ಸಂಸ್ಥಾನದಲ್ಲೆಲ್ಲಾ ಚಿಕ್ಕಬಳ್ಳಾಪುರದ ಹೈಸ್ಕೂಲು ಅಗ್ರಸ್ಥಾನವನ್ನು ಪಡೆದಿರುವುದೆಂದು ಕೇಳುತ್ತೇವೆ. ಏಕೆಂದರೆ ಅಲ್ಲಿಂದ ಆ ಪರೀಕ್ಷೆಗೆ ಹೋಗಿದ್ದ ೧೨ ಮಂದಿಗಳಲ್ಲಿ ಅಷ್ಟು ಜನರೂ ತೇರ್ಗಡೆಯಾಗಿರುತ್ತಾರಂತೆ. ಮೈಸೂರಿನ ವೆಸ್ಲಿಯನ್‌ಮಿಷನ್ ಹೈಸ್ಕೂಲಿನಿಂದ ಆ ಪರೀಕ್ಷೆಗೆ ಹೋಗಿದ್ದ ೭೪ ಮಂದಿಗಳಲ್ಲಿ ೬೭ ಮಂದಿ ಉತ್ತೀರ್ಣರಾಗಿರುವರು. ಆದರೆ ಮರಿಮಲ್ಲಪ್ಪನವರ ಹೈಸ್ಕೂಲಿನಿಂದ ಈ ಪರೀಕ್ಷೆಗೆ ಹೋಗಿದ್ದ ೧೨೯ ಮಂದಿಗಳಲ್ಲಿ ೨೪ ಮಂದಿಗಳು ಮಾತ್ರ ಉತ್ತೀರ್ಣರಾಗಿರುವರಂತೆ!

ದಾವಣಗೆರೆಯಲ್ಲಿ ಕಳೆದ ತಾ॥ ೪ ರಿಂದ ಹೈಸ್ಕೂಲು ತರಗತಿಗಳು ಆರಂಭಿಸಲ್ಪಟ್ಟಿರುವುದು ಆ ಸುತ್ತಿನ ವಿದ್ಯಾರ್ಥಿಗಳಿಗೆಲ್ಲಾ ಬಹಳ ಅನುಕೂಲವಾಯಿತು. ಇದರಮೇಲೆ ವೀರಶೈವ ವಿದ್ಯಾರ್ಥಿಗಳ ಅನುಕೂಲ್ಯಕ್ಕಾಗಿ ಅಲ್ಲಿ ಆಲಯವು ಸ್ಥಾಪಿಸಲ್ಪಟ್ಟಿರುವುದೂ ಅದರಲ್ಲಿ ಬಡವಿದ್ಯಾರ್ಥಿಗಳಿಗೆ ಅಶನವಸತಿಗಳು ಉಚಿತವಾಗಿ ಏರ್ಪಡಿಸಲ್ಪಟ್ಟಿರುವುದೂ ಸಹ ಶ್ಲಾಘನೀಯವಾಗಿರುತ್ತವೆ. ತತ್ಸಂಬಂಧವಾದ ಪ್ರಕಟನೆಯನ್ನು ನಾವು ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಇಂಥ ಅನುಕೂಲ್ಯದ ಉಪಯೋಗವನ್ನು ಮಾಡಿಕೊಂಡು ವೀರಶೈವ ವಿದ್ಯಾರ್ಥಿಗಳು ವಿದ್ಯಾರ್ಜನೆಯ ಲಾಭವನ್ನು ಪಡೆದುಕೊಳ್ಳದೆ ಬಿಡಬಾರದು.

ಯುದ್ಧವಾರ್ತೆಯು.

ಪಶ್ಚಿಮರಣಾಂಗಣದಲ್ಲಿ ಶತ್ರುಗಳು ಸಮುದ್ರತೀರವಾದ ಕೆಲೆ ಕಡೆಗೂ ಪ್ಯಾರಿಸ್ಸಿನ ಕಡೆಗೂ ನುಗ್ಗಬೇಕೆಂದು ಮತ್ತೊಂದುಸಲ ಮಾಡಿದ ಈಗಣ ಪ್ರಯತ್ನದಲ್ಲಿಯೂ ಅವರು ಪೂರ್ಣ ಕೃತಾರ್ಥರಾಗುವಂತೆ ತೋರಲಿಲ್ಲ. ಆರಂಭದ ಮೂರುದಿನಗಳೊಳಗೆ ಅವರು ಪಡೆದಂಥ ಫಲವು ಈಗ ಅವರಿಗೆ ಲಭಿಸುತ್ತಿಲ್ಲ. ಮಿತ್ರಮಂಡಲಿಯ ಸೇನಾಪಙ್ತಿಯು ಎಲ್ಲಿ ದುರ್ಬಲವಾಗಿರುವುದೋ ಅದನ್ನು ಶೋಧಿಸಿಕೊಂಡಿದ್ದು, ಬೇಕೆಂದುಕಡೆ ನುಗ್ಗುವವರಹಾಗೆ ನಟಿಸುತ್ತಿದ್ದು ಮತ್ತೊಂದುಕಡೆ ನುಗ್ಗುವ ಅವರ ಕಪಟತಂತ್ರದಿಂದ ಆ ಭಾಗದಲ್ಲಿ ಅವರು ಸ್ವಲ್ಪ ಜಯಪಡೆಯುವುದು ಸಹಜವಾಗಿದೆ. ಶತ್ರುಗಳು ಎಲ್ಲಿ ನುಗ್ಗಿ ಸಂದಿಕೆಡಹಿದರೆಂಬುದು ಗೊತ್ತಾದಕೂಡಲೇ ಮಿತ್ರಮಂಡಲಿಯವರು ಅಲ್ಲಿಗೆ ತಮ್ಮ ಹೆಚ್ಚು ಸೈನ್ಯಗಳನ್ನು ಸಾಗಿಸಿ ತಡೆಯುವುದರಿಂದ ಶತ್ರುಗಳ ನುಗ್ಗಾಟವು ಅಲ್ಲಿಗೇ ತಡೆದುಹೋಗುತ್ತದೆ. ಈ ಸಲ ಶತ್ರುಗಳು ಪ್ಯಾರಿಸ್ಸಿನ ಕಡೆ ನುಗ್ಗುವುದಕ್ಕೆ ಏಸ್ನ್ ನದಿಯ ಕಡೆ ಮಾಡಿದ ಪ್ರಯತ್ನದಲ್ಲಿ ಅವರ ಸೈನ್ಯವು ಮಿತ್ರಮಂಡಲಿ ಸೈನ್ಯಕ್ಕಿಂತ ೪-೫ ಭಾಗದಷ್ಟು ಹೆಚ್ಚಾಗಿದ್ದಿತು. ಆ ದಳವನ್ನು ಜರ್ಮನ್ ಯುವರಾಜನೇ ನಡೆಯಿಸುತ್ತಿದ್ದನು. ಆ ಸೈನ್ಯವು ಎಯ್ಸ್ನ್ ನದಿಯ ಬಳಿಗೆ ಬಂದು ಸೇರಿದಾಗ ಸೋಮವಾರ ಮಧ್ಯಾಹ್ನದ ಹೊತ್ತಾಗಿದ್ದಿತು. ಆ ಸೈನ್ಯಕ್ಕೆ ಬಲಗಡೆಯಲ್ಲಿ ಇಂಗ್ಲೀಷರೂ ಎಡಗಡೆಯಲ್ಲಿ ಫ್ರೆಂಚರೂ ಮುತ್ತಿ ಕಡುಕಾಳಗಕ್ಕೆ ಆರಂಭಿಸಿದರು. ಆ ಮಿತ್ರಮಂಡಲಿ ಸೈನ್ಯಕ್ಕಿಂತ ಎಷ್ಟೋಪಾಲು ಹೆಚ್ಚಾಗಿ ಶತ್ರುಸೈನ್ಯವಿದ್ದುದರಿಂದ ಶತ್ರುಗಳನ್ನು ನದಿಯಾಚೆಯೇ ತಡೆದುಬಿಡುವುದು ಮಿತ್ರಮಂಡಲಿಯವರಿಗೆ ಸಾಧ್ಯವಾಗಿ ತೋರಲಿಲ್ಲ. ಆದರಮೇಲೆ ಸೇನೆಯ ಮತ್ತು ಫಿರಂಗಿ ಮೊದಲಾದ ಸಾಮಗ್ರಿಗಳ ನಾಶವಿಲ್ಲದಂತೆ ಎಲ್ಲವನ್ನೂ ನದಿಯಿಂದ ಹಿಂದಕ್ಕೆ ಸಾಗಿಸಿಕೊಂಡು ಹೋಗುವುದು ಅವಶ್ಯಕವೆಂದು ಮಿತ್ರಮಂಡಲಿ ಸೇನಾನಿಗಳು ಆಲೋಚಿಸಿಕೊಂಡರು. ಆಗ ಮಿತ್ರಮಂಡಲಿ ಸೈನ್ಯಗಳು ನದಿಯ ಆಚೆಯೇ ಇದ್ದುವು. ಅವನ್ನೆಲ್ಲಾ ಹಿಂದಕ್ಕೆ ಸಾಗಿಸಿಕೊಳ್ಳುವವರೆಗೂ ನದಿಯಾಚೆಯಿದ್ದ ಶತ್ರುಸೈನ್ಯಗಳೊಡನೆ ಹೋರಾಡುತ್ತಿರುವುದಕ್ಕಾಗಿ ಮಿತ್ರಮಂಡಲಿಯವರು ತಮ್ಮಲ್ಲಿ ಅತಿ ಪ್ರಸಿದ್ಧವಾಗಿದ್ದ ಸೈನ್ಯವೊಂದನ್ನು ನಿಯಮಿಸಿದರು. ಆ ಸೈನ್ಯದವರಿಗೆಲ್ಲಾ ಬಿರುದುಗಳನ್ನೂ ಕೊಟ್ಟಿರು. ಆ ಸೈನ್ಯದಮೇಲೆ ಯುದ್ಧಮಾಡುವುದಕ್ಕೆ ಶತ್ರುಗಳು ಬಹಳ ಸೇನೆಯನ್ನು ಕಳುಹಿಸಿಕೊಟ್ಟರು. ಮಧ್ಯಾಹ್ನ ೧ ಗಂಟೆಯಿಂದ ರಾತ್ರಿಯವರೆಗೂ ಅಲ್ಲಿ ಯುದ್ಧವು ಬಹಳ ಭೀಕರವಾಗಿ ನಡೆದಿತು. ಅಷ್ಟರಲ್ಲಿ ಜರ್ಮನರು ೩ ಸಲ ನದಿಯನ್ನು ದಾಟಿದರು. ಆದರೂ ಅಲ್ಲಿಯ ಗುಡ್ಡದಮೇಲಿದ್ದ ಫ್ರೆಂಚ್ ಶೂರಭಟರನ್ನು ಕದಲಿಸಲಾಗಲಿಲ್ಲ. ಅಲ್ಲಿದ್ದ ೩ ಗ್ರಾಮಗಳನ್ನು ಶತ್ರುಗಳು ೬ ಸಲವೂ ಮಿತ್ರಮಂಡಲಿಯವರು ೬ ಸಲವೂ ಹಿಡಿದುಕೊಂಡರು. ಎನ್ನುವಾಗ ಎಷ್ಟು ಭೀಕರಯುದ್ಧವು ಒಂದೊಂದು ಸ್ಥಲಾಕ್ರಮಣಕ್ಕಾಗಿ ನಡೆದಿರುವುದೆಂಬುದು ವ್ಯಕ್ತವಾಗುವುದು. ಮಿತ್ರಮಂಡಲಿಯ ೧ ರಿಜಿಮೆಂಟು ಸರಿರಾತ್ರಿಯವರೆಗೂ ಶತ್ರುಗಳನ್ನು ಅಲ್ಲಿ ತಡೆದಿತು. ಅಷ್ಟರೊಳಗೆ ಮಿತ್ರಮಂಡಲಿ ಕಡೆಯ ಸೈನ್ಯಗಳೂ ಸಾಮಗ್ರಿಗಳೂ ಕೂಡ ನಿರಪಾಯವಾಗಿ ನದಿಯಿಂದೀಚೆಗೆ ಸಾಗಿಸಿಕೊಳ್ಳಲ್ಪಟ್ಟು ಸಾಗಿಸಲಾಗದ ಕೆಲವು ಮಾತ್ರ ಶತ್ರುಗಳ ಕೈಸೇರದಂತೆ ಧ್ವಂಸಮಾಡಲ್ಪಟ್ಟುವು. ಇನ್ನು ಹಿಂದಕ್ಕೆ ಬಂದುಬಿಡಬಹುದೆಂದು ಸೇನಾನಿಗಳು ಉಳಿದಿದ್ದ ಸೈನ್ಯಕ್ಕೆ ಅಪ್ಪಣೆಮಾಡಿ ಕರೆಯಿಸಿಕೊಂಡ ಬಳಿಕ ಅರ್ಧರಾತ್ರಿ ಕಾಲದಲ್ಲಿ ಶತ್ರುಗಳು ಗುಂಪುಗುಂಪಾಗಿ ಎಯ್ಸ್ನ್ ನದಿಯನ್ನು ದಾಟಿ ಮುಂದಕ್ಕೆ ಬಂದರು. ಹೀಗೆ ಆ ರಂಗದಲ್ಲಿ ಎಷ್ಟೋ ಯುದ್ಧಗಳು ನಡೆದಿರುವುವು. ಈ ಆಕ್ರಮಣವನ್ನಾರಂಭಿಸಿದೀಚೆಗೆ ಶತ್ರುಗಳು ೨ ದಿನಗಳ ಕಾಲದಲ್ಲಿ ೧೬ ಮೈಲಿಗಳಷ್ಟು ದೂರ ಮುಂದಕ್ಕೆ ನುಗ್ಗಿಬಂದಿರುವರು. ಆದರೆ ಇಲ್ಲಿ ಬಲವತ್ತರವಾದ ಪ್ರದೇಶಗಳಾವುವೂ ಅವರ ಅಧೀನವಾಗಿಲ್ಲ. ಪ್ಯಾರಿಸ್ಸಿಗೆ ಹೋಗಿ ಸೇರುವುದಕ್ಕೆ ಇನ್ನೂ ೫೦ ಮೈಲಿಗಳಿಗೆ ಮಿಗಿಲಾದಷ್ಟು ದೂರವೂ ಅತ್ಯಂತ ದುರ್ಭೇದ್ಯಗಳಾದ ಅನೇಕ ಸ್ಥಲಗಳೂ ಅಡ್ಡಲಾಗಿವೆ. ಫ್ರೆಂಚ್ ಸೈನ್ಯಗಳ ಉತ್ಸಾಹವೂ ರೋಷವೂ ಶೌರ್ಯವೂ ಉದ್ರೇಕಗೊಂಡಿವೆ. ಈ ರಂಗದಲ್ಲಿ ಶತ್ರುಗಳಿಗಾದಲಾಭದಿಂದ, ಬಹುಕಾಲದ ಹಿಂದೆಯೇ ಮಿತ್ರಮಂಡಲಿಯವರು ಶತ್ರುಹಸ್ತದಿಂದ ಕಿತ್ತುಕೊಂಡು ಬಲಪಡಿಸಿಕೊಂಡಿದ್ದ ಕೆಲಸ್ಥಲವೂ ಕೆಲವು ದೊಡ್ಡ ಫಿರಂಗಿಗಳೂ ಈಗ ಕಳೆದುಹೋಯಿತೆಂಬ ವಿಚಾರದಹೊರತು ಮತ್ತಾವ ಭೀತಿಯೂ ಮಿತ್ರಮಂಡಲಿಯವರಿಗೆ ಉಂಟಾಗಿಲ್ಲ. ಈ ಭಾಗದಲ್ಲಿದ್ದ ಸೋಯಿಜನ್ಸ್‌ಪುರ ಕ್ರಿಯೋನಿ ಚಮುಂದೇಸ್‌ದೆಮ್ಸ್‌ಡೆನ್ ಮೊದಲಾದ ಹಿಂದಣ ವಸಂತರ್ತುವಿನಲ್ಲಿ ಮಿತ್ರಮಂಡಲಿಯವರು ಹಿಡಿದಿದ್ದ ಸ್ಥಲವೆಲ್ಲಾ ಶತ್ರುವಶವಾದಂತಾಯಿತು. ಅಮಿಯನ್ಸಿನಕಡೆ ನುಗ್ಗುವುದು ಶತ್ರುಗಳಿಗೆ ಸುಲಭವಾಗಿಲ್ಲ. ರೀಮ್ಸ್ ಪಟ್ಟಣವು ಬಿಡುವುಮಾಡಲ್ಪಟ್ಟಿದೆ. ಸೆಂಟ್‌ಥಿಯಲಿ ಶಿಬಿರದಹತ್ತಿರ ಶತ್ರುಗಳು ಎಷ್ಟು ಸಲ ದಂಡೆತ್ತಿಬಂದರೂ ಇಂಗ್ಲೀಷರು ಅವರನ್ನು ತಡೆದುಬಿಟ್ಟರು. ಅಲ್ಲಿ ಶತ್ರುಗಳಿಗೆ ಬಹಳ ನಷ್ಟವು ಸಂಭವಿಸಿತು. ಮಾಂಟಿಡಿಯರಿಗೆ ಪಶ್ಚಿಮದಲ್ಲಿ ಅಮೇರಿಕನ್ ಸೈನ್ಯವು ಫ್ರೆಂಚ್ ಟಾಂಕುಬಂಡಿಗಳ ಸಹಾಯದಿಂದ ರಭಸವಾಗಿ ಮುಂದಕ್ಕೆ ನುಗ್ಗಿಹೋಗಿ ಕಾಂಟಿಗ್ನಿ ಎಂಬ ಮುಖ್ಯ ಪ್ರದೇಶವನ್ನು ಶತ್ರುಗಳಿಂದ ಕಿತ್ತುಕೊಂಡುದಲ್ಲದೆ ಅವರ ೧೭೦ ಮಂದಿ ಸೈನಿಕರನ್ನೂ ಸೆರೆಹಿಡಿದರು. ಶತ್ರುಗಳು ಆ ಸ್ಥಲವನ್ನು ಮರಳಿ ಬಿಡಿಸಿಕೊಳ್ಳಬೇಕೆಂದು ಎಷ್ಟು ಬಲವಾಗಿ ಪ್ರತಿಯುದ್ಧವನ್ನು ನಡೆಯಿಸಿದರೂ ಸೋತು ಹಿಮ್ಮೆಟ್ಟಬೇಕಾಯಿತು. ಸೋಯಿಜನ್ಸನ್ನು ಹಿಡಿದಮೇಲೆ ಶತ್ರುಗಳು ಅದರ ಪಶ್ಚಿಮದಲ್ಲಿ ಫ್ರೆಂಚರಿಂದ ತಡೆಯಲ್ಪಟ್ಟರು. ಬಳಿಕ ಶತ್ರುಗಳು ಮಧ್ಯಭಾಗದಲ್ಲಿ ನುಗ್ಗಿ ೨ ಗ್ರಾಮಗಳನ್ನು ಹಿಡಿದರು. ಫ್ರೆಂಚರು ಪ್ರತಿಯುದ್ಧದಿಂದ ಥಿಲ್ಲೋಯಸ್ ಗ್ರಾಮವನ್ನು ವಶಪಡಿಸಿಕೊಂಡರು. ತೀರಿರೋಡೂ ತೀರಿಪಟ್ಟಣವೂ ಶತ್ರುಗಳ ಅಧೀನವಾಗಿದ್ದು ಮತ್ತೆ ಫ್ರೆಂಚರಿಗೆ ವಶವಾದುವು. ಶತ್ರುಗಳು ಈಗ ಮಾರ್ನ್‌ನದಿಯಕಡೆಗೆ ನುಗ್ಗುವುದರಲ್ಲಿದ್ದಾರೆ. ಅಲ್ಲಿ ಪ್ಯಾರಿಸ್ ಚಾಲನ್ಸ್ ರೈಲ್ವೆಯಿದೆ. ಅದು ಪ್ಯಾರಿಸ್ಸಿಗೂ ವರ್ಡನ್ನಿಗೂ ಹೋಗುವುದಕ್ಕೆ ಮುಖ್ಯವಾದ ಲೋಹಮಾರ್ಗವಾಗಿದೆ. ಆದುಕಾರಣ ಜರ್ಮನರಿಗೆ ಅದರಮೇಲೆ ಕಣ್ಣು. ಇದನ್ನು ಶತ್ರುವಶಗೊಳಿಸದಂತೆ ಕಾಪಾಡಲು ಮಿತ್ರಮಂಡಲಿಯವರು ಈಗ ಬಹಳ ಸಾಹಸಮಾಡುತ್ತಿದ್ದಾರೆ. ಅವರು ತಮ್ಮ ವಿಮಾನದಳಗಳನ್ನು ಅಲ್ಲಿ ಕೂಡಿಸಿ ಶತ್ರುಗಳನ್ನು ತಡೆಯುತ್ತಿದ್ದಾರೆ. ಇಲ್ಲಿ ಯಾವ ಪಕ್ಷದವರು ದೀರ್ಘಕಾಲದವರೆಗೆ ತಮ್ಮ ವಿಮಾನದಳಗಳನ್ನು ನಿಲ್ಲಿಸಿಕೊಳ್ಳಬಲ್ಲರೋ ಅವರೇ ಜಯಶೀಲರಾಗುವರೆಂದು ಎಣಿಸಲ್ಪಟ್ಟಿದೆ. ಇಲ್ಲಿ ಎರಡುಪಕ್ಷದ ವಿಮಾನದಳಗಳೂ ಕೂಡಿರುತ್ತವೆ. ವೈಮಾನಿಕದಳಗಳು ಆಕಾಶರಂಗದಲ್ಲಿ ಅಪರಿಮಿತ ಪರಾಕ್ರಮವನ್ನು ತೋರಿಸುತ್ತಿವೆ. ಈಗ ಶತ್ರುಗಳು ಓಯಿಜ ನದಿಯಿಂದ ಹಿಡಿದು ಮಾರ್ನ್‌ವರೆಗಣ ರಂಗದಲ್ಲೆಲ್ಲಾ ಕಡುಕಾಳಗವನ್ನು ಮಾಡುತ್ತಿದ್ದಾರೆ. ಸೋಯಿಜನ್ಸ್ ಮೊದಲು ವಿಜರೀವರೆಗಣ ಬಳಿಯ ಯುದ್ಧದಲ್ಲೆಲ್ಲಾ ಶತ್ರುಗಳು ವಿಫಲರಾದರು. ಚೋಯಿಸ್ಸೂಲಿ, ಸೆಂಟ್‌ಫಾಂಟುಗಳನ್ನು ಶತ್ರುಗಳು ಹಿಡಿದರು. ಷಾಂಪಲ್ಲಿಕೋಟೆಯನ್ನು ಶತ್ರುಗಳು ವಶಪಡಿಸಿಕೊಳ್ಳಲು ಮರಳಿ ಅದನ್ನು ಫ್ರೆಂಚರು ಹಿಡಿದುಕೊಂಡರು. ಅಲ್ಲಿ ಫ್ರೆಂಚರಿಗೆ ಶತ್ರುಗಳಕಡೆಯ ೨೦೦ ಮಂದಿ ಸೈನಿಕರೂ, ೪ ಟಾಂಕುಬಂಡಿಗಳೂ ಕೂಡ ಸಿಕ್ಕಿದುವು.

ಆಂಗ್ಲಸೇನೆಗಳಿರುವ ರಂಗದಲ್ಲೂ ಶತ್ರುಗಳು ಬಹಳವಾಗಿ ಸನ್ನಾಹ ಮಾಡಿಕೊಳ್ಳುತ್ತಿರುವುದರಿಂದ ಅಲ್ಲೂ ಅವರು ದೊಡ್ಡ ಯುದ್ಧವೊಂದನ್ನಾರಂಭಿಸುವಂತಿದೆ. ಎಲ್ಲ ಕಡೆಯೂ ಇಂಗ್ಲೀಷ್ ದಳವು ದುರ್ಭೇದ್ಯವಾಗಿ ನಿಂತಿದೆ. ಅಲ್ಲಿ ಒಂದು ಕಡೆ ಶತ್ರುಗಳು ಒಂದೇ ಸಲ ೨೫ ಪಟಾಲಮ್ಮುಗಳನ್ನು ನುಗ್ಗಿಸಿದರು. ಆ ಭೀಕರವಾದ ನುಗ್ಗಾಟವನ್ನು ಇಂಗ್ಲೀಷರು ತಡೆದು ಯಾವಕಡೆಯಲ್ಲೂ ಸಂದುಕೊಡದೆ ಶತ್ರುಗಳನ್ನು ಹಿಮ್ಮೆಟ್ಟಿಸಿದರು.

ಫ್ರೆಂಚರಿಗೂ ಶತ್ರುಗಳಿಗೂ ಈಚೆಗೆ ಪ್ರತಿದಿನವೂ ನಡೆಯುತ್ತಿರುವ ಯುದ್ಧಗಳಲ್ಲಿ ಲಾಂಗುಫಾಂಟು, ಗಾರ್ಡಿಫೇವರ್ ಮೊದಲಾದ ಕೆಲ ಗ್ರಾಮಗಳು ಒಂದು ಸಲ ಶತ್ರುಗಳ ವಶಕ್ಕೂ ಮತ್ತೊಂದುಸಲ ಫ್ರೆಂಚರ ವಶಕ್ಕೂ ಸೇರುತ್ತಲಿವೆ. ಹೀಗೆ ಸ್ಥಿರವಲ್ಲದ ಜಯಗಳು ಉಭಯರಿಗೂ ಲಭಿಸುತ್ತಲಿವೆ. ಫ್ರೆಂಚ್ ಸೈನಿಕರು ಬಹು ಪೌರುಷದಿಂದ ಶತ್ರುಗಳ ನುಗ್ಗಾಟವನ್ನು ತಡೆಯುತ್ತಲಿದ್ದಾರೆ.

ಇಂಗ್ಲೀಷ್‌ಸೈನಿಕರು ಫ್ಲ್ಯಾಕ್ಸ್, ಬೆರ್ಗು ಯರ್ನ್ ಮೆದ್ರಿಕ್‌ಗಳ ಸಮೀಪದಲ್ಲಿ ತಾವೇ ಶತ್ರುಗಳ ಮೇಲೆ ಮುತ್ತಿಗೆಯನ್ನಾರಂಭಿಸಿ ೧೯೩ ಮಂದಿ ಶತ್ರುಸೈನಿಕರನ್ನೂ ಅನೇಕ ಯಂತ್ರದ ಫಿರಂಗಿಗಳನ್ನೂ ಕಂದಕದ ಫಿರಂಗಿಗಳನ್ನೂ ಸಹ ವಶಪಡಿಸಿಕೊಂಡು, ತಮ್ಮ ಸೇನಾಪಙ್ತಿಯನ್ನು ಸ್ವಲ್ಪ ಮುಂದಕ್ಕೆ ಸಾಗಿಸಿರುವರು. ಅರ್ರಾಸ್, ಲೆನ್ಸ್, ಕೆಮ್ಮೆಲ್ಲಿಗಳ ಸ್ಥಲದಲ್ಲೂ ಯುದ್ಧಮಾಡಿ ಮುಂದುವರಿದಿರುವರು.

ಇತರವಿಷಯಗಳು.

ಕಳೆದ ತಾ॥ ೩೦ ದಿನ ವೊಂದರಲ್ಲೇ ಮಿತ್ರಮಂಡಲಿಯವರು ಶತ್ರುಗಳ ೩೦ ವಿಮಾನಗಳನ್ನು ಹೊಡೆದು ಕೆಡಹಿರುವರು.

ಕಳೆದ ಮೇ ತಿಂಗಳಲ್ಲಿ ಇಂಗ್ಲೀಷರು ೧೧೫೮ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿರುವರು.

ಫ್ರೆಂಚರು ಮೊನ್ನೆ ಶುಕ್ರವಾರ ವೊಂದರಲ್ಲೇ ಶತ್ರುಗಳ ೨೬ ವಿಮಾನಗಳನ್ನೂ ೬ ಬೆಲೂನುಗಳನ್ನೂ ಹಾಳ್ಮಾಡಿದರು. ತಾ॥ ೩೦ ರ ರಾತ್ರಿ ಶತ್ರುವಿಮಾನಗಳು ಫ್ರೆಂಚ್ ಸೇನಾಪಙ್ತಿಯನ್ನು ದಾಟಿ ಪ್ಯಾರಿಸ್ಸಿನಮೇಲೆ ನುಗ್ಗಿಹೋಗಬೇಕೆಂದು ಯತ್ನಿಸಿ ಫ್ರೆಂಚರ ಫಿರಂಗಿಗುಂಡಿನೇಟನ್ನು ತಡೆಯಲಾರದೆ ಹಿಮ್ಮೆಟ್ಟಿಹೋದುವು.

ಬಾಲ್ಕನ್ ರಂಗದಲ್ಲಿ ಗ್ರೀಕರು ಫ್ರೆಂಚ್ ಫಿರಂಗಿದಳದ ಸಹಾಯದಿಂದ ಸ್ಕ್ರಾಡಿಲೇಗನ್ನಿನ ಹತ್ತಿರ ಬಹಳ ಬಲವತ್ತರವಾಗಿದ್ದ ಶತ್ರುಸ್ಥಾನವೊಂದನ್ನು ಮುತ್ತಿ ವಶಪಡಿಸಿಕೊಂಡುದಲ್ಲದೆ ೧೫೦೦ ಮಂದಿ ಜರ್ಮನ್ ಬಲ್ಗೇರಿಯನ್ ಸೈನಿಕರನ್ನೂ ಅನೇಕ ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡರು. ಶತ್ರುಗಳು ಪ್ರತಿಯುದ್ಧಮಾಡಿ ಸೋತುಹೋದರು.

ಜರ್ಮನರು ರಷ್ಯಾದ ಉಕ್ರೇನಿಯಾ ಪ್ರಾಂತದಲ್ಲಿನ ಪ್ರಜೆಗಳನ್ನೆಲ್ಲಾ ಶಾಸನದ ಮೂಲಕ ನಿರಾಯುಧರನ್ನಾಗಿ ಮಾಡಬೇಕೆಂದು ಪ್ರಯತ್ನಿಸಿರುವರು. ಇದರಿಂದ ಆ ಪ್ರಜೆಗಳು ಅಸಂತುಷ್ಟರಾಗಿ ತಿರುಗಿಬಿದ್ದಿರುವರು.

ಮೇ ತಿಂಗಳಲ್ಲಿ ಇಟಲಿಯವರು ಶತ್ರುಗಳ ೫೪ ವಿಮಾನಗಳನ್ನೂ ಇಂಗ್ಲೀಷರು ೮೪ ವಿಮಾನಗಳನ್ನೂ ಹಾಳ್ಮಾಡಿ ಕೆಡಹಿರುವರು.

ಪಾಲಸ್ಟೈನಿನಲ್ಲಿ ೫॥ ಮೈಲಿಯಗಲದಷ್ಟು ರಂಗದಲ್ಲಿ ನಮ್ಮವರು ೧॥ ಮೈಲಿಯಷ್ಟು ದೂರ ಮುಂದಕ್ಕೆ ನುಗ್ಗಿಹೋದರು. ೨ ಸ್ಥಲಗಳಲ್ಲಿ ಶತ್ರುಸೈನವನ್ನು ಸೋಲಿಸಿ ಓಡಿಸಿದರು. ೨ ಕಡೆಯಲ್ಲಿ ಶತ್ರುಗಳು ಪ್ರತಿಭಟಿಸಿ ಯುದ್ಧಮಾಡಿ ಬಹಳ ನಷ್ಟಪಟ್ಟು ಸೋತು ಓಡಿದರು. ಅರಬ್ಬಿಯವರು ಲೋಮಾವಿಗೆ ಉತ್ತರದಲ್ಲಿ ಹೆಡ್ಜಾಜು ಲೋಹಮಾರ್ಗದ ಹತ್ತಿರ ತುರ್ಕಿಯವರಮೇಲೆ ಯುದ್ಧಮಾಡಿ ೧೨೫ ಮಂದಿಯನ್ನು ಸೆರೆಹಿಡಿದರು. ಎಷ್ಟೋ ಸಾವಿರಾರು ಕಂಬಿಗಳನ್ನು ಕಿತ್ತು ಲೋಹಮಾರ್ಗವನ್ನು ಹಾಳ್ಮಾಡಿದರು.

ಭರತಖಂಡದ ವೃತ್ತಾಂತಗಳು.

ರೀವಾ ಮಹಾರಾಜರು ಯುದ್ಧದ ಫಂಡಿಗೆ ೨ ಲಕ್ಷ ರೂ. ಗಳನ್ನು ಕೊಟ್ಟರು.

ಕೊಚಿನ್ ರಾಜರು ಯುದ್ಧದ ವೆಚ್ಚಕ್ಕಾಗಿ ೧ ಲಕ್ಷ ರೂ. ಗಳನ್ನೂ ಕೋಟಾ ಮಹಾರಾಜರು ॥ ಲಕ್ಷ ರೂ. ಗಳನ್ನು ಕೊಟ್ಟರು.

ಯುದ್ಧದ ಸಾಲಕ್ಕಾಗಿ ತಾ॥ ೪ ರೊಳಗಾಗಿ ಕರಾಚಿಯಲ್ಲಿ ೨೦ ಲಕ್ಷ ರೂ. ಕೂಡಿರುವುವು. ಇನ್ನೂ ಕೂಡಿಸುವುದಕ್ಕೆ ಅನೇಕ ಸಂಘಗಳು ಸ್ಥಾಪಿಸಲ್ಪಟ್ಟಿವೆ.

ಯುದ್ಧದ ಸೆರೆಮನೆಗಳಿಂದ ತಲೆತಪ್ಪಿಸಿಕೊಂಡು ಹೋದವರನ್ನು ಹಿಡಿದುಕೊಟ್ಟವರಿಗೆ ತಲೆಗೆ ೫ ರೂ. ನಂತೆ ಬಹುಮಾನ ಕೊಡಲು ಭರತಖಂಡದ ಸರ್ಕಾರದವರು ಪ್ರಕಟಿಸಿರುವರು.

ಮದ್ರಾಸು ಗೌರ್ನರಾದ ಲಾರ್ಡ್ ಪೆಟ್ಲಂಡ್‌ರವರಿಗೂ, ಕೊಚಿನ್ ಮಹಾರಾಜರಿಗೂ ಸಹ ಜಿ. ಸಿ. ಐ. ಇ. ಬಿರುದೂ, ಪಿಠಾಪುರದ ರಾಜರಿಗೆ ಸಿ. ಬಿ. ಇ. ಎಂಬ ಬಿರುದೂ ಕೊಡಲ್ಪಟ್ಟಿರುತ್ತವೆ.

ಬೊಂಬಾಯಿ ಅಧಿಪತ್ಯದಲ್ಲಿ ಯುದ್ಧಋಣಪತ್ರದ ಮಾರಾಟಕ್ಕೆ ಆರಂಭಿಸಿದ ಮೊದಲನೆ ದಿವಸ ಎಂದರೆ ೩ ನೆ ತಾ॥ ಸೋಮವಾರ ರಾತ್ರಿ ೭ ಗಂಟೆ ಹೊತ್ತಿನೊಳಗಾಗಿ ಒಟ್ಟು ವಸೂಲಾದ ಹಣವು ೧ ಕೋಟಿಯೂ ೫೮ ಲಕ್ಷಕ್ಕೆ ಏರಿಹೋಗಿದ್ದಿತು.

೧೯೧೪ ನೆ ವರ್ಷದಲ್ಲಿ ರಣರಂಗಕ್ಕೆ ಹೋದ ರಟ್ಲಾಂ ರಾಜರವರು ಈಗತಾನೇ ತಮ್ಮ ರಾಷ್ಟ್ರಕ್ಕೆ ಮರಳಿ ಬಂದರು. ಚಕ್ರವರ್ತಿಯವರೂ ಆಂಗ್ಲಮಹಾಜನರೂ ತಮ್ಮನ್ನೂ ಭಾರತೀಯ ಸೈನಿಕರನ್ನೂ ಅತಿಶಯವಾಗಿ ಆದರಿಸಿದರೆಂದು ಈ ಪ್ರಭುಗಳು ಹೇಳಿರುವರು.

ಕಳೆದ ತಾ॥ ೧೯ ರಲ್ಲಿ ಕರಾಚಿ ಪೋಸ್ಟಾಫೀಸಿನಲ್ಲಿದ್ದ ೭೫೮೫ ರೂ. ಗಳ ಬೆಲೆಯ ಕರೆನ್ಸಿ ನೋಟುಗಳು ಕದಿಯಲ್ಪಟ್ಟಿವೆ. ಕಳ್ಳರನ್ನು ಗೊತ್ತುಹಚ್ಚಿಕೊಟ್ಟವರಿಗೆ ೫೦೦ ರೂ. ಗಳ ಬಹುಮಾನ ಕೊಡುವೆವೆಂದು ಬೊಂಬಾಯಿ ಪೋ॥ ಮ್ಯಾ॥ ಜನರಲ್‌ರವರು ಪ್ರಕಟಿಸಿದ್ದಾರೆ.

ಯುದ್ಧಾರಂಭವಾದೀಚೆಗೆ ಬಂಗಾಳದ ಗೋಣಿನಾರಿನ ಯಂತ್ರಾಲಯದವರು ಅಧಿಕವಾಗಿ ಲಾಭ ಸಂಪಾದನೆಮಾಡಿರುವರು. ಹೇಗೆಂದರೆ— ೧೯೧೪ ನೆ ವರ್ಷದಲ್ಲಿ 982000, ೧೯೧೫ ನೆ ವರ್ಷದಲ್ಲಿ 8820000, ೧೯೧೬ ನೆ ವರ್ಷದಲ್ಲಿ 6300000, ೧೯೧೭ ನೆ ವರ್ಷದಲ್ಲಿ 4831000 ಪೌನುಗಳ ಲಾಭವು ಬಂದಿರುವುದು.

ಬರ್ಮಾದಲ್ಲಿ ಈಗ ಮಳೆಯು ಹೆಚ್ಚಾಗಿ ಸುರಿದಿರುವುದರಿಂದ ೫೦ ಮೈಲಿಗಳುದ್ದದ ಲೋಹಮಾರ್ಗವು ಶಿಥಿಲವಾಗಿಹೋಗಿದೆ. ಹೊಳೆಗಳಲ್ಲಿ ಮಿತಿಮೀರಿ ಪ್ರವಾಹಬಂದಿವೆ. ದನಕರುಗಳೂ ಗ್ರಾಮಗಳೂ ಧಾನ್ಯಗಳೂ ಮರದ ಹಲಗೆ ದಿಮ್ಮಿಗಳೂ ಒಂಟೆ ಮೊದಲಾದ ಪ್ರಾಣಿಗಳೂ ಬಂಡಿಗಳು ಮೊದಲಾದ ಅನೇಕಾನೇಕ ಸಾಮಗ್ರಿಗಳೂ ಪ್ರವಾಹದಲ್ಲಿ ಕೊಚ್ಚಿಹೋಗಿರುವುವು.

ಈಗ ವ್ಯವಹಾರಕ್ಕೆ ತರಲ್ಪಟ್ಟಿರುವ ೧ ರೂ. ೨॥ ರೂ. ನ ನೋಟುಗಳು ಕೊಳೆಯಾಗಿದ್ದರೂ ಎಣ್ಣೆ ಸೋಂಕಿದ್ದರೂ ಹರಿದುಹೋಗಿದ್ದರೂ ಅವು ಸಲ್ಲಲಾರವೆಂದು ಯಾರೂ ಭಾವಿಸಕೂಡದು. ನೋಟಿನ್ನು ಗುರ್ತಿಸಲೇ ಆಗದಂತೆಯೂ ಅವುಗಳ ನಂಬರುಗಳು ತಿಳಿಯಲಾಗದಂತೆಯೂ ಹೋಗಿರುವಾಗ ಮಾತ್ರ ಅವುಗಳನ್ನು ಸಲ್ಲಲಾರದುವುಗಳನ್ನಾಗಿ ಎಣಿಸಬೇಕೆಂದು ಮದ್ರಾಸು ಸರ್ಕಾರದವರು ಪ್ರಕಟಿಸಿದ್ದಾರೆ.

ಡಿಲ್ಲಿಯಲ್ಲಿ ಯುದ್ಧಮಹಾಸಭೆಯು ನಡೆಯಿಸಲ್ಪಟ್ಟಂತೆ ಈಗ ಪ್ರತಿಯೊಂದು ಅಧಿಪತ್ಯಗಳಲ್ಲೂ ಆಯಾ ಗೌರ್ನರ ಅಧ್ಯಕ್ಷತೆಯಿಂದಲೂ ಜಿಲ್ಲೆಗಳಲ್ಲಿ ಕಲೆಕ್ಟರುಗಳ ಅಧಿಪತ್ಯದಿಂದಲೂ ಸಭೆಗೂಡಿಸಲಾರಂಭವಾಗಿರುತ್ತದೆ. ಉದ್ದೇಶವು ಯುದ್ಧಸಹಾಯಕ್ಕಾಗಿ ಜನವನ್ನೂ ಧನವನ್ನೂ ಕೊಡಿಸುವುದೇ ಆಗಿರುತ್ತದೆ. ಇಂಥ ಸಭೆಯು ಬೊಂಬಾಯಿಯಲ್ಲಿ ಬರುವ ತಾ॥ ೧೦ ರಲ್ಲಿ ಕೂಡುವುದಾಗಿದೆ. ಆ ಸಭೆಗೆ ಆ ಅಧಿಪತ್ಯದಲ್ಲಿರುವ ಸಂಸ್ಥಾನಿಕರು ಪ್ರಮುಖಜನರುಗಳಿಗೆ ಆಹ್ವಾನಪತ್ರಿಕೆಗಳು ಕಳುಹಿಸಲ್ಪಟ್ಟಿವೆ. ಡಿಲ್ಲಿ ಸಭೆಗೆ ಕರೆಯಲ್ಪಡದಿದ್ದ ಮ॥ ಬಾಲಗಂಗಾಧರ ತಿಲಕರು ಕೇಳ್ಕರು ಮೊದಲಾದವರಿಗೂ ಸಹ ಆಹ್ವಾನಗಳು ಕೊಡಲ್ಪಟ್ಟಿವೆ.

ಶ್ರೀ ಜಾರ್ಜ್ ಸಾರ್ವಭೌಮರವರ ವರ್ಧಂತಿಯದಿವಸ ಕಲ್ಕತ್ತಾದಲ್ಲಿ ಗೌರ್ನರವರ ಅಧ್ಯಕ್ಷತೆಯಿಂದ ೬೦೦೦ ಮಂದಿ ಸಭಿಕರು ಕೂಡಿ ಅದ್ಭುತ [illegible] ಸಭೆಯನ್ನು ನಡೆಯಿಸಿದರು. ಯುದ್ಧದ ಸಾಲವನ್ನು [illegible]

ಕೊಡುವ ವಿಷಯದಲ್ಲಿ ಇರುವ ಪ್ರಯೋಜನವನ್ನು ಕುರಿತು ಗವರ್ನರು, ಚೀಫ್‌ಜಸ್ಟಿಸರು, ಸುರೇಂದ್ರನಾಥ ಬಾನರ್ಜಿಯವರು, ಮಜರುಲ್‌ಹಕ್, ರಾಯ ಶಿವಪ್ರಸಾದ್ ಮೊದಲಾದ ಅನೇಕ ಮಂದಿಗಳು ಉಪನ್ಯಾಸಮಾಡಿದರು. ಬೊಂಬಾಯಿ ಅಧಿಪತ್ಯದಲ್ಲಿ ಕೊಡುವ ಯುದ್ಧಹಣಕ್ಕಿಂತ ಬಂಗಾಳಾದಲ್ಲಿ ಕೊಡಿಸುವುದನ್ನೇ ಹೆಚ್ಚಿಸಬೇಕೆಂದು ಸಭಿಕರೆಲ್ಲರಲ್ಲೂ ಉತ್ಸಾಹಧ್ವನಿಯು ಕೇಳಿಬರುತ್ತಿದ್ದಿತು. ಮಧ್ಯಾಹ್ನ ೩ ಗಂಟೆಯೊಳಗಾಗಿ ೯ ಕೋಟಿ ರೂ. ಗಳನ್ನು ಸಾಲವಾಗಿ ಕೊಡುವುದಕ್ಕೆ ದರಖಾಸ್ತುಗಳು ಸೇರಿದುವೆಂದು ಸಭೆಯ ಕೊನೆಯಲ್ಲಿ ಗವರ್ನರವರು ಅಪ್ಪಣೆಕೊಡಿಸಿದರು.

ಮದ್ರಾಸು ವಿಶ್ವವಿದ್ಯಾಲಯದವರು ತಮ್ಮ ವಿದ್ಯಾಪೀಠದಲ್ಲಿ ಬಿ. ಎಸ್. ಸಿ. ಪರೀಕ್ಷೆಯನ್ನು ಸ್ಥಾಪಿಸುವುದಕ್ಕೆ ನಿರ್ಧರಿಸಿರುತ್ತಾರೆ. ಇದರಲ್ಲಿ ಗಣಿತಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ, ಜಂತುಶಾಸ್ತ್ರ, ಭೂಗರ್ಭಶಾಸ್ತ್ರ—ಇವಿಷ್ಟರಲ್ಲಿ ಯಾವುದಾದರೂ ಮೂರನ್ನು ತೆಗೆದುಕೊಂಡು ಓದಿ, ಕೃತಾರ್ಥರಾದವರಿಗೆ ಮೇಲಿಕಂಡ ಪಟ್ಟವು ಕೊಡಲ್ಪಡುವುದು. ಮತ್ತೂ ಬಿ. ಎ. ಆನರ್ಸ್‌ಪರೀಕ್ಷೆಯಲ್ಲಿನಂತೆಯೇ ಗಣಿತ ಪದಾರ್ಥವಿಜ್ಞಾನ ರಸಾಯನ ಶಾಸ್ತ್ರಗಳಲ್ಲೂ ಬಿ. ಎಸ್. ಸಿ. ಆನರ್ಸ್ ಪರೀಕ್ಷೆಯು ಏರ್ಪಡಿಸಲ್ಪಟ್ಟಿದೆ. ಇದಲ್ಲದೆ ಎಂ. ಎಸ್. ಸಿ. ಡಿಗ್ರಿಯನ್ನು ಕೊಡುವುದಕ್ಕೂ ಏರ್ಪಡಿಸಿದ್ದಾರೆ. ಮತ್ತೂ ಆರ್ಥಿಕಶಾಸ್ತ್ರಾಭ್ಯಾಸಮಾಡಿದವರಿಗೆ ಪ್ರತ್ಯೇಕವಾಗಿ ಪ್ರಶಸ್ತಿಯನ್ನು ಕೊಡುವುದಕ್ಕೂ ಏರ್ಪಡಿಸಿದ್ದಾರೆ. ಈ ಪರೀಕ್ಷೆಗೆ ಹೋಗುವವರು ಆರ್ಥಿಕಸಿದ್ಧಾಂತ, ಆರ್ಥಿಕಚರಿತ್ರ, ಗ್ರಾಮವ್ಯವಸ್ಥೆ, ಪರಿಶ್ರಮ ನಿರ್ಮಾಣ, ವಾಣಿಜ್ಯಮಾರ್ಗ, ಬ್ಯಾಂಕಿಂಗು, ಕರೆನ್ಸಿ ಮೊದಲಾದ ವಿಷಯಗಳನ್ನೆಲ್ಲಾ ಓದಬೇಕು.

ಪಾರ್ಲಿಮೆಂಟಿನಲ್ಲಿ ಭರತಖಂಡದ ರಾಜಕೀಯ ಸಂಸ್ಕರಣ ವಿಷಯವಾಗಿ ಪ್ರಶ್ನೆಮಾಡಿದ ವರ್ಜ್‌ವುಡ್ಡರವರಿಗೆ ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೆಗ್ಯೂರವರು ಉತ್ತರಕೊಡುವಾಗ್ಗೆ—ನಾನೂ ವೈಸ್ರಾಯರೂ ಕೂಡ ಮುಖ್ಯಮಂತ್ರಿಯವರಿಗೆ ನಮ್ಮ ಸೂಚನೆಗಳನ್ನು ಕಳುಹಿಸಿಕೊಟ್ಟೆವು. ಅವರಮೇಲೆ ಮುಖ್ಯಮಂತ್ರಿಯವರೂ ಮಂತ್ರಿಮಂಡಲದವರೂ ಕೂಡ ಆಲೋಚಿಸುವುದಕ್ಕೆ ಅವಕಾಶಬೇಕಾಗಿದೆ. ಆದುಕಾರಣ ಈ ಸಂಬಂಧವಾಗಿ ಯಾವ ಅಭಿಪ್ರಾಯವನ್ನೂ ನಾನು ಕೊಡಲಾಗುವುದಿಲ್ಲವೆಂದು ಹೇಳಿದರು. ಪಾರ್ಲಿಮೆಂಟಿನಮುಂದೆ ವಿಚಾರಕ್ಕೆ ಬಿಲ್ಲನ್ನು ತರುವುದಕ್ಕೆ ಮುಂಚೆಯೇ ಯಾವ ಸಂಸ್ಕಾರವನ್ನಾದರೂ ವ್ಯವಹಾರಕ್ಕೆ ತರುವಿರಾ ? ಎಂದು ಮತ್ತೊಬ್ಬ ಸಭಿಕರು ಪ್ರಶ್ನೆಮಾಡಲಾಗಿ, ಕಳೆದ ಆಗಸ್ಟ್ ತಾ|| ೨೦ ರಲ್ಲಿ ಪ್ರಭುತ್ವದವರು ಮಾಡಿದ ಸೂಚನೆಯಪ್ರಕಾರವೇ ನಡೆಯಿಸಲ್ಪಡುವುದೆಂತಲೂ ಸಂಸ್ಕರಣ ಸೂಚನೆಗಳಮೇಲೆ ಭಾರತೀಯರು ಅಭಿಪ್ರಾಯ ಕೊಡುವುದಕ್ಕೆ ಅವಕಾಶವೀಯಲ್ಪಡುವುದೆಂತಲೂ ಸಹ ಉತ್ತರಕೊಟ್ಟರು.

೨ ನೆ ಯುದ್ಧದ ಸಾಲವನ್ನು ಕೊಡಿಸುವುದಕ್ಕೆ ಕಳೆದ ತಾ|| ೩ ರಲ್ಲಿ ಆರಂಭಿಸಲ್ಪಟ್ಟರೂ ತಾ|| ೪ ರೊಳಗಾಗಿ ಎಂದರೆ ೨ ದಿನಗಳ ಕಾಲದೊಳಗಾಗಿ ಈ ಕೆಳಗೆ ಕಂಡಂತೆ ಆಯಾ ಅಧಿಪತ್ಯದ ಬ್ಯಾಂಕುಗಳಲ್ಲಿ ಯುದ್ಧ ಹುಣಪತ್ರಗಳು ಪ್ರಜೆಗಳಿಂದ ಕೊಳ್ಳಲ್ಪಟ್ಟಿವೆ. ಹೇಗೆಂದರೆ—

ಬಂಗಾಳಾ	ರೂ. ೩೬೭೦೮೫೦೦
ಬೊಂಬಾಯಿ	೧೮೨೧೫೫೦೦
ಮದ್ರಾಸು	೮೬೨೫೫೦೦
ಪಂಜಾಬು	೩೪೮೫೦೦೦
ಬರ್ಮಾ	೨೬೩೨೫೦೦
ಸಂಯುಕ್ತಪ್ರಾಂತ	೨೦೩೦೦೦೦
ಮಧ್ಯಪ್ರಾಂತ	೯೬೬೭೦೦
ಬೀಹಾರು ಒರಿಸ್ಸಾ	೭೧೧೬೦೦
ಒಟ್ಟು	೭೩೩೭೫೩೦೦

ಮುಂದೆ ಭರತಖಂಡದ ರಾಜಕೀಯ ಸಂಸ್ಕರಣಗಳು ಏರ್ಪಡಿಸಲ್ಪಡುವುದರಲ್ಲಿ ಕರ್ಟಿಸ್‌ರವರು ಸೂಚಿಸಿದ ವಿಧಾನಗಳು ಅಂಗೀಕರಿಸಲ್ಪಡುವುವೆಂತಲೂ, ಆರೋಗ್ಯ ವಿದ್ಯಾಶಾಖೆಗಳ ನಿರ್ವಾಹಸ್ವಾತಂತ್ರ್ಯವು ಭಾರತೀಯರಿಗೆ ವಹಿಸಲ್ಪಡುವುದೆಂತಲೂ, ಸಿವಿಲ್ ಸರ್ವೀಸಿನಲ್ಲಿ ೧೦೦ ಕ್ಕೆ ೪೫ ಪಾಲು ಭಾರತೀಯರಿಗೆ ಕೊಡಲ್ಪಡುವುದೆಂತಲೂ ವದಂತಿಯಿರುವುದೆಂದು ಇಂಡಿಯನ್ ಡೇಲಿ ನ್ಯೂಸ್ ಪತ್ರಿಕೆಯು ಹೇಳುತ್ತದೆ. ಆದರೆ ಹೀಗೆ ಉಂಟಾಗುವ ಸಂಸ್ಕರಣಾಪ್ರಮೇಯದ ವಿಷಯದಲ್ಲಿ ಭರತಖಂಡದ ಪ್ರಮುಖರಲ್ಲಿ ಭಿನ್ನಾಭಿಪ್ರಾಯಗಳ ವಾಗ್ವಾದವು ಈಗ ನಡೆಯುತ್ತಿದೆ. ಪ್ರಭುತ್ವದಿಂದ ಎಷ್ಟುಮಟ್ಟಿನ ವರದಾನವಾದರೆ ಅವನ್ನಂಗೀಕರಿಸಿಕೊಂಡು ಉಳಿದ ಫಲಾವಾಪ್ತಿಗೆ ಮುಂದೆ ಪ್ರಯತ್ನಿಸಬೇಕೆಂಬುದು ಮಿತವಾದಿಗಳ ಅಭಿಪ್ರಾಯವಾಗಿದೆ. ರಾಷ್ಟ್ರೀಯಸಭೆ ಮುಸ್ಲಿಂಲೀಗುಗಳು ಸೂಚಿಸಿರುವಷ್ಟು ಸಂಸ್ಕರಣಗಳೆಲ್ಲಾ ನಮ್ಮ ಮೊದಲಿಗೆ ಒಂದೇಆವೃತ್ತಿ ಬೀಳುವವರೆಗೂ ನಾವು ಅಲ್ಪಸ್ವಲ್ಪ ವರಗಳಿಗೆ ಒಪ್ಪಿಕೊಳ್ಳದೆ ಚಳವಳವನ್ನು ನಡೆಯಿಸುತ್ತಲೇ ಇರಬೇಕೆಂದು ಕೆಲ ತೀಕ್ಷ್ಣವಾದಿಗಳು ಕೋಲಾಹಲ ಮಾಡುತ್ತಿದ್ದಾರೆ.

ಭರತಖಂಡದಲ್ಲಿ ಮುಖ್ಯಮುಖ್ಯ ಪದಾರ್ಥಗಳ ಬೆಲೆಯು ಯುದ್ಧಕ್ಕೆ ಮುಂಚೆ ಎಷ್ಟಿತ್ತು, ಈಗ ಎಷ್ಟುಮಟ್ಟಿಗಿದೆಯೆಂದು ಶೋಧಿಸಿ ಸರ್ಕಾರದವರು ಒಂದು ಪುಸ್ತಕದಲ್ಲಿ ಮುದ್ರಿಸಿ ಪ್ರಕಟಿಸಿದ್ದಾರೆ. ಕಳೆದ ಡಿಸಂಬರ್ ತಿಂಗಳ ಕೊನೆಯಲ್ಲಿ ಕಲ್ಕತ್ತಾದೊಳಗೆ ಉಪ್ಪು, ತುಪ್ಪಗಳ ಬೆಲೆಯು ಎಲ್ಲಕ್ಕಿಂತಲೂ ಹೆಚ್ಚಾಗಿದ್ದಿತು. ಬೊಂಬಾಯಿಯಲ್ಲಿ ಹಾಲು, ಟೀ, ಮಾಂಸಗಳ ಬೆಲೆಯೂ ಎಲ್ಲಕ್ಕಿಂತಲೂ ಮಿಗಿಲಾಗಿದ್ದಿತು. ಕರಾಚಿಯಲ್ಲಿ ಸಕ್ಕರೆ ಗೋದುವೆ, ಕೋಳಿಮೊಟ್ಟೆ, ಹಾಲುಗಡ್ಡೆಗಳ ಬೆಲೆಯೂ, ರಂಗೂನಿನಲ್ಲಿ ಕಾಳು ದಿನಸುಗಳ ಬೆಲೆಯೂ ಉಳಿದ ಪದಾರ್ಥಗಳೆಲ್ಲಕ್ಕಿಂತಲೂ ಹೆಚ್ಚಾಗಿದ್ದುವು. ಈ ವರ್ಷದ ಕಳೆದ ಮಾರ್ಚಿ ತಿಂಗಳಲ್ಲಿ ಆಹಾರ್ಯಪದಾರ್ಥಗಳ ಬೆಲೆಯು ಯುದ್ಧಕ್ಕೆ ಮುಂಚೆ ಇದ್ದ ಬೆಲೆಗಿಂತಲೂ ನೂರಕ್ಕೆ ೯ ರಷ್ಟು ಕರಾಚಿಯಲ್ಲೂ, ೩೦ ರಷ್ಟು ಬೊಂಬಾಯಿಯಲ್ಲೂ, ೧೩ ರಷ್ಟು ಕಲ್ಕತ್ತಾದಲ್ಲೂ, ೮ ರಷ್ಟು ರಂಗೂನಿನಲ್ಲೂ, ೬ ರಷ್ಟು ಮದ್ರಾಸಿನಲ್ಲೂ, ಹೆಚ್ಚಿಹೋಗಿದ್ದುವು. ಕರಾಚಿಯಲ್ಲಿ ಮನೆಬಾಡಿಗೆಗಳು ೧೯೧೩ನೇ ವರ್ಷದಲ್ಲಿದ್ದುದಕ್ಕೆ ೪ ರಷ್ಟೂ, ಮದ್ರಾಸಿನಲ್ಲಿ ೨೨ ರಷ್ಟೂ, ಬೊಂಬಾಯಿಯಲ್ಲಿ ೧೮ ರಷ್ಟೂ, ಕಲ್ಕತ್ತಾದಲ್ಲಿ ಇವೆಲ್ಲಕ್ಕಿಂತಲೂ ಕಡಿಮೆಯಾಗಿಯೂ ಹೆಚ್ಚಿಕೊಂಡಿದ್ದುವೆಂದು ಗೊತ್ತಾಗುತ್ತದೆ.

ಹಿಂದೂಸ್ಥಾನ ಸರ್ಕಾರದವರು ೨ ನೆ ಸಲ ಸಾಲತೆಗೆಯುವುದಕ್ಕೆ ಏರ್ಪಡಿಸಿರುವ ನಿಬಂಧನೆಗಳು ಸಾಲ ಕೊಡುವವರಿಗೆ ಅನುಕೂಲವಾಗಿವೆ. ಸಾಲವಾಗಿ ಕೊಡಲ್ಪಡುವ ಹಣಕ್ಕೆ ೧೦೦ ಕ್ಕೆ ವರ್ಷ ೧ ಕ್ಕೆ ೫|| ರೂ. ನಂತೆ ಬಡ್ಡಿಯು ವರ್ಷಕ್ಕೆ ೨ ಕಂತುಗಳಲ್ಲಿ ಎಂದರೆ ಮಾರ್ಚಿ ತಾ|| ೧೫ ಮತ್ತೂ ಸೆಪ್ಟಂಬರ್ ತಾ|| ೧೫ ಹೀಗೆ ೨ ಸಲ ಸಲ್ಲಿಸಲ್ಪಡುವುದು. ಸಾಲವಾಗಿ ಕೊಟ್ಟ ಹಣದಮೇಲೆ ಆದಾಯದ ತೆರುಗೆಯು ಮನ್ನಿಸಲ್ಪಡುವುದು. ಅಲ್ಲದೆ ಹೀಗೆ ತೆಗೆದುಕೊಂಡ ಹಣವು ೧೯೨೧ ನೆ, ೧೯೨೩ ನೆ ವರ್ಷಗಳಲ್ಲಿ ಹಿಂದಿರಿಗೆ ಕೊಡಲ್ಪಡಬೇಕಾದರೆ ೧೦೦ ಕ್ಕೆ ೧೦೦ ರೂ. ಗಳಂತೆಯೂ, ೧೯೨೫ ನೆ ವರ್ಷದಲ್ಲಿ ಹಿಂದಿರಿಗೆ ಕೊಡಲ್ಪಡಬೇಕಾದರೆ ೧೦೦ ಕ್ಕೆ ೧೦೩ ರಂತೆಯೂ, ೧೯೨೮ ನೆ ವರ್ಷದಲ್ಲಿ ಹಿಂದಿರಿಗೆ ಕೊಡಲ್ಪಡಬೇಕಾದರೆ ೧೦೦ ಕ್ಕೆ ೧೦೫ ರೂ. ನಂತೆಯೂ ಕೊಡಲ್ಪಡುವುದು. ಸಾಲವಾಗಿ ಕೊಟ್ಟ ಹಣಕ್ಕೆಲ್ಲಾ ಭರತಖಂಡದ ಸರ್ಕಾರದ ಆದಾಯವೇ ಹೊಣೆಯಾಗಿರುವುದು. ಸಾಲದ ನಿಬಂಧನೆಗಳು ಮೇಲೆಕಂಡಂತೆ ಲಾಭಕರವಾಗಿರುವುದರಿಂದ ದೇಶೀಯರೆಲ್ಲರೂ ಶಕ್ತಿವಂಚನೆಯಿಲ್ಲದೆ ಸರ್ಕಾರಕ್ಕೆ ಸಾಲಕೊಟ್ಟು, ಸ್ವಲಾಭವನ್ನು ನೋಡಿಕೊಳ್ಳುವುದರ ಜತೆಗೆ ಸಾಮ್ರಾಜ್ಯಸೇವೆಯನ್ನೂ ಮಾಡಲು ಅನುಕೂಲ ಸಮಯವಾಗಿರುವುದು. ಈ ಸಾಲವನ್ನು ಕೊಡಲು ಶ್ರೀ ಸಾರ್ವಭೌಮರ ಶುಭಜನ್ಮದಿನವಾದ ಕಳೆದ ತಾ|| ೩ ನೆ ಸೋಮವಾರವೇ ಆರಂಭದಿನವು.

ಪತ್ರವ್ಯವಹಾರ.

ಶ್ರೀ ಜಯದೇವ ವೀರಶೈವ ಬೋರ್ಡಿಂಗ್, ದಾವಣಗೆರೆ.

ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಶ್ರೀಮನ್ಮಹಿಸೂರು ಮಹಾರಾಜಾ ಸರ್ಕಾರವು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ದಾವಣಗೆರೆಯಲ್ಲಿ ೪-೬-೧೯೧೮ ರ ಲಾಗಾಯ್ತು ಇಂಗ್ಲೀಷ್ ಹೈಸ್ಕೂಲನ್ನು ಸ್ಥಾಪನೆಮಾಡಿ ತತ್ಕಾಲಕ್ಕೆ ಇಂಗ್ಲೀಷ್ IV ನೆಯ ಫಾರಂ ಓಪನ್ ಮಾಡಿಸಿರುತ್ತಾರೆ. ಈ ಸ್ಕೂಲಿಗೆ ವಿದ್ಯಾಭ್ಯಾಸಕ್ಕಾಗಿ ಬರಲು ಅಪೇಕ್ಷಿಸುವ ವೀರಶೈವ ವಿದ್ಯಾರ್ಥಿಗಳಲ್ಲಿ ಬಡವರಿಗೆ ಮಾತ್ರ ಭೋಜನಕ್ಕೂ ವಸತಿಗೂ ಸಹ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಆಶೀರ್ವಾದಾಶ್ರಯಬಲದಿಂದ ಇಲ್ಲಿ ಫ್ರೀ ಬೋರ್ಡಿಂಗ್ ಸ್ಥಾಪಿತವಾಗಿರುತ್ತದೆ.

ಈ ಸ್ಕೂಲಿನ IV ನೆಯ ಫಾರಂನಲ್ಲಿ ವಿದ್ಯಾಭ್ಯಾಸಮಾಡಲು ಬರಲಪೇಕ್ಷೆಯುಳ್ಳ ವೀರಶೈವ ಬಡ ವಿದ್ಯಾರ್ಥಿಗಳು ಮೇಲ್ಕಂಡ ತಾರೀಖಿನೊಳಗಾಗಿ ಇದರಡಿ ರುಜು ಮಾಡಿರುವವರ ಹೆಸರಿಗೆ ಅಪ್ಲಿಕೇಷನ್ ಕಳುಹಿಸತಕ್ಕದ್ದು.

ಬರತಕ್ಕ ವಿದ್ಯಾರ್ಥಿಗಳು ಇದರಡಿ ನಮೂದಿಸಿರುವ ನಿಯಮಗಳಿಗೆ ಒಳಪಟ್ಟವರಾಗಿರತಕ್ಕದ್ದು:—೧. ಪ್ರತಿಯೊಬ್ಬ ವಿದ್ಯಾರ್ಥಿಯೂ ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ೨. ವಿದ್ಯಾರ್ಥಿಯೂ ಬಡವನಾಗಿರುತ್ತಾನೆಂಬ ಬಗ್ಗೆ ತಮ್ಮ ಸ್ಥಳೀಯ ಮುಖ್ಯಸ್ಥರಿಂದ ಸರಟಿಫಿಕೇಟ್ ಪಡೆದು ಅಪ್ಲಿಕೇಷನ್ ಜೊತೆಯಲ್ಲಿ ಕಳುಹಿಸತಕ್ಕದ್ದು. ೩. ಪ್ರತಿ ವಿದ್ಯಾರ್ಥಿಯು ಬೋರ್ಡಿಂಗ್ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

ಒ. ಚನ್ನಬಸಪ್ಪ.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಚಂದಾ ಕೊಟ್ಟ ಮಹನೀಯರುಗಳ ಪಟ್ಟಿ.

ಇಲ್ಲಿಯವರೆಗೆ ಪತ್ರಿಕೆಯಲ್ಲಿ ಪ್ರಚುರವಾಗಿರುವುದು ೧೩೭೩೩-೭-೩. ಮ|| ಗಳಾದ ಬುಮ್ಮಿ ಪಂಚಾಕ್ಷರಪ್ಪನವರು (ಇವರ ಮುಂದಿಗೆ ವ್ಯಾಪಾರಕ್ಕೆ ಬಂದ ಆಸಾಮಿಗಳಿಂದ ವಸೂಲುಮಾಡಿದ್ದು) ೫೫-೦-೦, ಲಕ್ಕವಳ್ಳಿ ಕೋರಿ ನಂಜಪ್ಪನವರ ಮಕ್ಕಳು ಬಸಪ್ಪನವರು ೫-೦-೦, ಕೆರೆ ಕೋಡಿ ಮಠದ ಗುರುಲಿಂಗಯ್ಯನವರು ಸಾಗರ ೧೦೦-೦-೦, ಅನಂತಪುರದ ಕಡಿ ೯ ಬಸಪ್ಪನವರು ಸಾಗರ ೧೦-೧೦-೦, ಕಂಚಿ ವೀ. ಹಾಲಪ್ಪನವರು ಸಾಗರ ೫-೫-೦, ಗವುಡರ ಮಲ್ಲಿಕಾರ್ಜುನಪ್ಪನವರು ಸಾಗರ ೧೦-೧೦-೦, ಚಿರುಡೋಣಿ ಮಠದ ಚನ್ನಬಸಯ್ಯನವರು ಲಿಂಗದಹಳ್ಳಿ ೨೫-೦-೦, ಗೌಡ ಈಶ್ವರಪ್ಪನವರು ಲಿಂಗದಹಳ್ಳಿ ೫೦-೦-೦, ಗೌಡ ಚಂದಪ್ಪನವರು ಲಿಂಗದಹಳ್ಳಿ ೨೫-೦-೦, ಪಟೇಲ್ ಕರಿಸಿದ್ದಪ್ಪನವರು ಸೋಮಕಟ್ಟೆಹಳ್ಳಿ ೨೫-೦-೦, ಗೌಡ ಗಿರಿಯಪ್ಪನವರು ಸೋಮಕಟ್ಟೆಹಳ್ಳಿ ೫೦-೦-೦, ಮಠದ ಹಾಲಯ್ಯನವರು ೧೫-೦-೦, ಸ್ವಾಮತಿ ರೇವಣಸಿದ್ದಯ್ಯನವರು ೨೫-೦-೦, ಸಾಗರದ ದುಗ್ಗಾವಿ ಸೋಮಪ್ಪಶೆಟ್ಟರವರು ೨೫-೦-೦, ಸಾಗರದ ಭದ್ರಾಪುರದ ವೀರಪ್ಪಶೆಟ್ಟರವರು ೫೦-೦-೦, ಸಾಗರದ ಗೊಜ್ಜನೂರು ಚನ್ನಪ್ಪನವರು ೧೦೦-೦-೦, ಸಾಗರದ ದಳವಾಯಿ ಬಸಲಿಂಗಪ್ಪನವರು ೧೦೦-೦-೦, ಸಾಗರದ ಅವಟಿಕೊಪ್ಪದ ಬಸವಣ್ಣೆಪ್ಪನವರು ೨೫-೦-೦, ಶ್ರೀಗಳವರಿಂದ ೬-೪-೦, ಸಾಗರದ ಬಡರಾಳ ನಿಂಬೆಪ್ಪನವರು ೨೫-೦-೦, ಅಂತರವಳ್ಳಿ ಪಟೇಲ್ ಬಸಪ್ಪಗೌಡರವರು (ತಮ್ಮ ಮಕ್ಕಳು ಪುಟ್ಟಸ್ವಾಮಿಗೌಡರ ಲಗ್ನದಲ್ಲಿ) ೨-೦-೦, ಬಸವಣ್ಣೆಪ್ಪಗೌಡರವರು ಅದರಂತೆ (ತಮ್ಮ ವೀರಭದ್ರಯ್ಯಗೌಡರ ಲಗ್ನದಲ್ಲಿ) ೨-೦-೦, ಹೊಂಬೈಲು ಗುರುವಯ್ಯಗೌಡರವರು (ನೂತನ ಗೃಹಪ್ರವೇಶಕಾಲದಲ್ಲಿ) ೧-೦-೦. ಒಟ್ಟು ೧೪,೬೯೬-೪-೩.

ನೋಟ್:—ಮ|| ಲಕ್ಕವಳ್ಳಿ ಬಸಪ್ಪನವರು ತಮ್ಮ ತಂದೆಯವರ ಆಬ್ದಿಕ ತಿಥಿ ಕಾಲದಲ್ಲಿ ದೊಡ್ಡತ್ತಿನಹಳ್ಳಿ ಮ|| ಶಿವಪೂಜಾ ಗುರುಬಾಂತಪ್ಪನವರು ಮತ್ತು ಅವರ ಅಣ್ಣಂದಿರು ಮ|| ಕೋರಿ ದೊಡ್ಡಬಸಪ್ಪನವರ ಪ್ರೇರೇಪಣೆಯಿಂದ ಮೇಲೆ ನಮೂದಾಗಿರುವ ಮೊಬಲಗನ್ನು ಈ ಸಂಘಕ್ಕೆ ಕೊಟ್ಟಿರುತ್ತಾರೆ. ಇದೇ ರೀತಿಯಾಗಿ ಪ್ರತಿಯೊಬ್ಬರೂ ಶುಭಶೋಭನಾದಿ ಕಾರ್ಯಗಳಲ್ಲಿ ಸಹಾಯಮಾಡುವುದರಿಂದ ಫಂಡು ಶೀಘ್ರದಲ್ಲಿಯೇ ಅಭಿವೃದ್ಧಿಗೆ ಬರುವುದರಲ್ಲಿ ಯಾವ ಅನುಮಾನವೂ ಇಲ್ಲ. ಪ್ರತಿ ಶುಭಕಾರ್ಯಗಳಲ್ಲಿಯೂ ಹಾಜರಿ ಇರತಕ್ಕ ಆಚಾರ್ಯರುಗಳು ಫಂಡನ್ನು ಅಭಿವೃದ್ಧಿಗೊಳಿಸಬೇಕೆಂಬ ಮನಸ್ಸಿನಿಂದ ಕೆಲಸಮಾಡುತ್ತಾ ಬಂದರೆ ಸಂಘದವರ ಆಸೆಯು ಸಫಲವಾಗುವುದರಲ್ಲಿ ಏನೂ ಅಭ್ಯಂತರವಿರುವುದಿಲ್ಲವಾದ್ದರಿಂದ ಅವರಿಗೆ ಸಂಘದವರು ವಿನಯಪೂರ್ವಕವಾಗಿ ತಾವು ನಡೆಸತಕ್ಕ ಪ್ರತಿ ಶುಭಕಾರ್ಯಗಳಲ್ಲಿಯೂ ತಮ್ಮ ಭಕ್ತರಿಂದ ಅವರವರ ಯೋಗ್ಯತಾನುಸಾರ ಈ ಫಂಡಿಗೆ ದಕ್ಷಿಣೆ ವಸೂಲುಮಾಡಿ ಕಳುಹಿಸುತ್ತಾ ಬರಬೇಕೆಂದು ಬೇಡಿಕೊಳ್ಳುತ್ತಾರೆ.

ಜ|| ಮು|| ಕಾಡಪ್ಪ,
ಟ್ರೆಜರರ್, ಶಿವಮೊಗ್ಗ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂತೆ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಿಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರ್ಧತಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಭಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟ ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದೇಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
9 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೬ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಮದರಾಸ್ ಗವರ್ನಮೆಂಟಿನವರಿಂದ ರೆಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ ಅಂಡ್ ಕೊ.,
25 ಸಾಹುಕಾರಪೇಟೆ, ಮದ್ರಾಸ್.

೧೯೧೮ ನೆಯ ಇಸವಿ ಜೂನ್ ತಾ|| ೯ ರಿಂದ ೧೯೧೮ ನೆಯ ಜೂನ್ ತಾ|| ೧೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೧ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಜ್ಯೇಷ್ಠ ಶು|| ಪಾಡ್ಯಮಿಯಿಂದ ಜ್ಯೇಷ್ಠ ಶು|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಿಥು
9	[1] ಭಾನು	ಪಾಡ್ಯ	49-50	ಮೃಗಶಿರ	46-47	27
10	ಸೋಮ	ಬಿದಿಗೆ	47-58	ಆರಿದ್ರೆ	46-39	28
11	[2] ಮಂಗಳ	ತದಿಗೆ	47-24	ಪುನರ್ವಸು	47-44	29
12	ಬುಧ	ಚೌತಿ	48-0	ಪುಷ್ಯ	50-9	30
13	[3] ಗುರು	ಪಂಚ	49-52	ಆಶ್ಲೇಷ	54-17	31
14	ಶುಕ್ರ	ಷಷ್ಠಿ	52-58	ಮಖ	58-31	1
15	ಶನಿ	ಸಪ್ತ	57-0	ಪುಬ	60	2

(1) ಪುನ್ನಾಗಗೌರೀವ್ರತಂ. (2) ಕದಳೀಗೌರೀವ್ರತಂ. (3) ಸ್ಕಂದಪಂಚಮಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಚಕ್ರಾವತಾರಾ ಪಕ್ಕಜ್ಜನಕ್ಷತ್ರಮೋಹರಾಜೀಯಾತ್
ಶ್ರೀಮತ್ಕೃಷ್ಣನೃಪಾಲನುತ ಮಕಲಾಲಿಕೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦]
[ಅಂಚೆವೆಚ್ಚ [illegible]-೦]

REGISTERED NO. M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜೂನ್ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೨೪

ಬೆಂಗಳೂರು

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋ ಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತ ಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾ ದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿ . ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭ ಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿ ನ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀ ಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸು ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತ ಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗ ದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾ ರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗ ನ್ನು ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪ್ರಕರಣಕ್ಕೆ ೧-೩-೦.

ಸ ರದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಸಿದ್ಧಾಂತರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ವತಿಮುಕ್ತಾ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟ ಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಿತ್ರಗಳಲ್ಲಿ ಕಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ಕರಾರುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕ್ರೈಸ್ತ್ ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಕಿ 15 ಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
36 ೩, ತಿರುಚ್ಚಪ್ಪನವೀಧಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 27

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕಠಸಲ್ಪಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಬ್ಬೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಸಂತೋಷಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ವಿಕ್ರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಸಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
11 ಆನಂದ ಬುಕ್‌ಡಿಪೊ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧. ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೀ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೀ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೀ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಎಲ್ಲಾ ರೋಗಗಳಿಗೆ ೧೨-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ, ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
29 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

(೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವಶರೀರವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ " ಭಗವದ್ಗೀತೆ " ಯ ತರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅಪೂರ್ವವೆಂದು ಬೋಧಿಸಿ ಪ್ರಕಾಶಕರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಅದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನರ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ, ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

6 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜೂನ್ ತಾ|| ೧೬ ನೆಯ ಭಾನುವಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಂಘದ ವಾರ್ಷಿಕ ಸಂಮೇಳನ

ಗೊತ್ತಾಗಿದ್ದಮೇರೆಗೆ ಇದು ರಾ|| ಬ|| ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟಿ, ಸಿ.ಐ.ಇ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ಥಳೀಯ ಸಭಿಕರೇ ಅಲ್ಲದೆ ಪರಸ್ಥಳದಿಂದಲೂ ಕೆಲವರು ಬಂದಿದ್ದರು. ಕಳೆದ ವರ್ಷದಲ್ಲಿ ನಡೆದ ವಿದ್ಯಮಾನಗಳೆಲ್ಲಾ ಕಾರ್ಯದರ್ಶಿಗಳಾದ ಮ|| ಕೆ. ರೇವಣ್ಣನವರು ಓದಿದ ವರದಿಯಿಂದ ವ್ಯಕ್ತವಾಯಿತು. ಆಡಿಟರುಗಳ ವರದಿಯೂ ಓದಿಸಲ್ಪಟ್ಟಿತು. ಬಳಿಕ ಈ ವರ್ಷದ ಕಾರ್ಯನಿರ್ವಾಹಕ್ಕೆ ಮ್ಯಾನೇಜಿಂಗ್ ಕಮಿಟಿಯು ಏರ್ಪಡಿಸಲ್ಪಟ್ಟಿತು. ಎಂದಿನಂತೆ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರೇ ಅಧ್ಯಕ್ಷರಾಗಿಯೂ, ಮ|| ಆರ್. ಪುಟ್ಟಣ್ಣನವರು ಉಪಾಧ್ಯಕ್ಷರಾಗಿಯೂ, ಮ|| ಜಿ. ಪರಶಿವಯ್ಯ, ಬಿ. ಎ., ಎಲ್. ಎಲ್. ಬಿ. ಯವರು ಸೆಕ್ರೆಟರಿಯವರಾಗಿಯೂ, ಮ|| ಜಿ. ಕೆ. ರುದ್ರಾರ್ಯರು ಅ|| ಸೆಕ್ರೆಟರಿಯವರಾಗಿಯೂ ನಿರ್ಣಯಿಸಲ್ಪಟ್ಟರು. ಪ್ರಜಾಪ್ರತಿನಿಧಿ ಸಭೆಗೆ ಸಂಘದ ಪರವಾಗಿ ಮ|| ಎಂ. ಬಸವಯ್ಯ, ಬಿ. ಎ., ಬಿ. ಎಲ್. ರವರು ಸಭಿಕರಾಗಿ ಆರಿಸಲ್ಪಟ್ಟರು. ಈಸಲ ಮೈಸೂರು ಪ್ರಭುತ್ವದವರು ಬಿ. ಷೆಡ್ಯೂಲ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳನ್ನು ಆರಿಸಿಕೊಳ್ಳುವಾಗ್ಗೆ ಹಿಂದುಳಿದಜನವರ್ಗದವರನ್ನು ನಾಮಿನೇಟ್ ಮಾಡುವುದರಲ್ಲಿ ವೀರಶೈವ ಜನವರ್ಗದಲ್ಲಿ ಅರ್ಹರಾದವರೊಬ್ಬರನ್ನು ಆರಿಸಿಕೊಳ್ಳದೆ ಬಿಟ್ಟುದಕ್ಕಾಗಿ ಸಂಘದ ವಿಷಾದಪ್ರದರ್ಶನವು ಮಾಡಲ್ಪಟ್ಟು ಮುಂದಾದರೂ ಹಾಗೆ ಮಾಡದಂತೆ ಪ್ರಭುತ್ವದವರನ್ನು ಪ್ರಾರ್ಥಿಸಬೇಕೆಂದು ನಿರ್ಧರಿಸಲ್ಪಟ್ಟಿತು. ದೀರ್ಘಕಾಲದವರೆಗೆ ಚರ್ಚೆ ನಡೆದು ಕಡೆಗೆ ಕೈ|| ಶಾಮಣ್ಣನವರ ವಿಲ್ಲಿನಂತೆ ಅವರ ಸೊತ್ತುಗಳನ್ನು ಕೋರ್ಟಿನವರು ತೀರ್ಮಾನಿಸಿದಂತೆ ಫಂಡ್ ಕಮಿಟಿಯವರು ಪರಿಗ್ರಹಿಸಿಕೊಳ್ಳುವುದೇ ವಿಹಿತವೆಂದು ನಿರ್ಧರಿಸಲ್ಪಟ್ಟಿತು. ಅದುಕಾರಣ ಆ ವ್ಯಾಜ್ಯವು ನ್ಯಾಯಸ್ಥಾನಕ್ಕೆ ಹತ್ತಬೇಕಾಯಿತು. ಸಂಘದವರಿಗೆ ಇದು ಇಷ್ಟವಲ್ಲದಿದ್ದರೂ ಅನ್ಯಥಾ ನಿರ್ವಾಹವಿಲ್ಲದೆ ಹಾಗೆ ಮಾಡಬೇಕಾಯಿತು.

ಕಳೆದ ವರ್ಷದ ಸಂಘದ ವಿದ್ಯಮಾನಗಳನ್ನೆಲ್ಲಾ ನೋಡಲಾಗಿ ಚಂದಾ ಹಣದ ವಸೂಲಿಯ ಹೊರತು ಉಳಿದ ಕಾರ್ಯಗಳನ್ನೆಲ್ಲಾ ಸಂಘದವರು ಯಥೋಚಿತವಾಗಿ ನೆರವೇರಿಸಿಕೊಂಡು ಬಂದಿರುವರೆಂದೇ ಹೇಳಬಹುದು. ಸೆಕ್ರೆಟರಿಯವರ ವರದಿಯು ಪ್ರಶಸ್ತವಾಗಿದ್ದಿತು. ಆದರೆ ಹಣದ ವಸೂಲಿಗೆ ತಕ್ಕ ಯತ್ನವನ್ನು ಸೆಕ್ರೆಟರಿಗಳೇ ಆಗಲೀ ಸಂಘಾಧ್ಯಕ್ಷರೇ ಆಗಲೀ ಸಭಿಕರೇ ಆಗಲೀ ಮಾಡದೆಹೋದುದು ಮಾತ್ರ ವಿಷಾದಕರವಾಗಿರುವುದು. ಸಮ್ಮೇಳನದ ಸಮಯದಲ್ಲಾದರೂ ಆ ವಿಷಯವನ್ನು ಎತ್ತಿ ಕರ್ತವ್ಯಸ್ವರೂಪ ನಿರ್ಧಾರಮಾಡದೆಹೋದುದು ಮತ್ತಷ್ಟು ವಿಷಾದಕರವು. ನಮ್ಮ ದಿವಾನ್ ಬಹದ್ದೂರ್ ಶೆಟ್ಟರವರ ಸುಯೋಗವಿಶೇಷದಿಂದ ಅವರ ಕಾಲದಲ್ಲಿ ಅವರ ಪ್ರಮುಖತ್ವದಿಂದ ವೀರಶೈವರ ವಿದ್ಯಾಭಿವೃದ್ಧಿಗೆ ಎಷ್ಟೋ ಸಹಾಯವಾಗಿರುವುದೆಂಬುದನ್ನು ಯಾರೂ ಅಲ್ಲಗಳೆಯುವಂತಿರುವುದಿಲ್ಲ. ಈ ಫಂಡನ್ನು ಶೇಖರಿಸುವ ವಿಷಯದಲ್ಲಿ ಮಾತ್ರ ಅವರು ಮಾಡಬೇಕಾಗಿರುವಷ್ಟು ಕಾರ್ಯವನ್ನು ಇನ್ನೂ ಮಾಡಿರುವುದಿಲ್ಲ. ಅವರು ಮನಸ್ಸುಮಾಡಿದರೆ ಇದನ್ನು ಒಂದು ವರ್ಷದೊಳಗಾಗಿ ಲಕ್ಷ ರೂಪಾಯಿನ ಮೆಟ್ಟಿಲು ಹತ್ತಿಸುವುದು ಕಷ್ಟವಾಗಿಲ್ಲ. ಆ ಸ್ಥಿತಿಯನ್ನು ಫಂಡಿಗೆ ಉಂಟುಮಾಡಿ ಕೊಡದಿರುವುದು ಫಂಡಿನ ಉತ್ಪಾದಕರಿಗೂ ಮೈಸೂರು ವೀರಶೈವ ಮಂಡಲಿಗೂ ಭೂಷಣವಲ್ಲ. ಒಂದಾನೊಂದು ಸಲ ಫಂಡಿನ ಸಂಘದ ಅಧ್ಯಕ್ಷರೂ ಇತರ ಪ್ರಮುಖರೂ ಸಹ ತುಮಕೂರಿಗೆ ಪ್ರಯಾಣಮಾಡಿ ಬಂದುದರಿಂದಲೇ ಫಂಡಿಗೆ ಎಷ್ಟೋ ಸಾವಿರ ರೂ. ಗಳು ಸುಲಭವಾಗಿ ಕೂಡಿಹೋದುವು. ತಿಂಗಳಿಗೊಂದುವಾರ ಇಂಥ ಸಂಚಾರವನ್ನು ಒಂದೊಂದು ಕಡೆಗೆ ಇಟ್ಟುಕೊಂಡರೂ ಎಷ್ಟೋ ಧನ ಶೇಖರವಾಗಿಹೋಗುವುದು. ಇದಕ್ಕೆ ನಮ್ಮ ಸಂಘದ ಪ್ರೆಸಿಡೆಂಟರೂ ಅವರ ಎಡಬಲ ಭುಜದಂತಿರುವ ಮ|| ಯಜಮಾನ್ ಬಸಪ್ಪನವರೂ, ಮ|| ವೀರಭದ್ರಶೆಟ್ಟರೂ, ಇತರ ಪ್ರಮುಖರೂಸಹ ಕಾಲವಿಳಂಬ ಮಾಡದೆ "ಶುಭಸ್ಯಶೀಘ್ರಂ" ಎನ್ನುವಂತೆ ದೃಢಸಂಕಲ್ಪವನ್ನು ಮಾಡಿ, ತನ್ಮೂಲಕ ವಿದ್ಯಾಭಿವೃದ್ಧಿ ಫಂಡನ್ನು ಸಮಾಜಕ್ಕೆ ವಿಶೇಷ ಪ್ರಯೋಜನಕರವಾಗುವ ಸ್ಥಿತಿಗೆ ತಂದಿಟ್ಟು, ಶಾಶ್ವತ ಕೀರ್ತಿಪ್ರತಿಷ್ಠಾಪುಣ್ಯಗಳಿಗೆ ಭಾಜನರಾಗಬೇಕೆಂದು ಕೋರುವೆವು.

ಫಂಡಿನ ಸಂಘದವರ ಪ್ರಯತ್ನದಿಂದ ನಡೆದ ಕಾರ್ಯಗಳಲ್ಲಿ ಬೆಂಗಳೂರಿನೊಳಗೆ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟುವುದು ಒಂದು ಮುಖ್ಯಾಂಶವಾಗಿದೆ. ಇದಕ್ಕೆ ತಗಲುವ ೪೫ ಸಾವಿರ ರೂ. ಗಳಲ್ಲಿ ೩೫ ಸಾವಿರವನ್ನು ಶ್ರೀಮಜ್ಜಗದ್ಗುರುಗಳವರೂ ೧೦ ಸಾವಿರವನ್ನು ಅತ್ತಿಬೆಲೆಯ ಸಿಡಿಲಬಸವಪ್ಪನವರೂ ಕೊಡಲು ಸಮ್ಮತಿಸಿದ್ದಾರೆ. ಕಟ್ಟಡದ ಪ್ಲಾನುಗಳೆಲ್ಲಾ ಸಿದ್ಧವಾಗಿ ಇಷ್ಟರಲ್ಲೇ ಕಾರ್ಯಾರಂಭವಾಗುವುದರಲ್ಲಿದೆ. ಇದಕ್ಕೆ ತಕ್ಕ ಜಾಗವನ್ನು ಬಹುಶಃ ೨ ಎಕರೆಯಷ್ಟನ್ನು ಸರ್ಕಾರದವರು ಉಚಿತವಾಗಿ ಕೊಟ್ಟಿರುತ್ತಾರೆ. ನಿಲಯದ ಕಟ್ಟುವಿಕೆಗೆ ತಗಲುವ ವೆಚ್ಚದಲ್ಲಿ ಅರ್ಧದಷ್ಟು ಅಥವಾ ⅓ ಭಾಗದಷ್ಟು ಹಣವನ್ನಾದರೂ ಸರ್ಕಾರದವರು ಸಹಾಯಮಾಡಬೇಕಾದುದು ಧರ್ಮವಾಗಿದ್ದರೂ, ಈ ವಿಷಯದಲ್ಲಿ ಹಾಗೆ ನಡೆಯದೆ ಹೋಗಿರುವುದು ವಿಸ್ಮಯವಾಗಿದೆ. ತ್ರಿಮತವಿದ್ಯಾರ್ಥಿಗಳಿಗೆ ಸರ್ಕಾರದವರು ಪೂರ್ಣವಾದ ವೆಚ್ಚವನ್ನು ತಾವೇ ಮಾಡಿ ವಿದ್ಯಾರ್ಥಿನಿಲಯವನ್ನು ಕಟ್ಟಿಸಿಕೊಡುತ್ತಿರುವಲ್ಲಿ ವೀರಶೈವ ವಿದ್ಯಾರ್ಥಿನಿಲಯದ ವೆಚ್ಚದಲ್ಲಿ ಅರ್ಧಭಾಗವನ್ನಾದರೂ ವಹಿಸದಿರುವುದು ಅನ್ಯಾಯವಲ್ಲವೆ? ಈ ಭಾಗದಲ್ಲಿ ತಕ್ಕ ಕೃಷಿಯನ್ನು ಮಾಡದೆ ಹೋದುದರಿಂದಲೇ ಈ ಅನ್ಯಾಯಾಚರಣೆಗೆ ಅವಕಾಶವಾಗಿರಬೇಕೆಂದು ಎಣಿಸುತ್ತೇವೆ.

ಅಂತೂ ಸ್ವಸಮಾಜದವರ ವಿದ್ಯಾಭಿವೃದ್ಧಿಗೆ ಫಂಡು ಸಂಘದವರು ಯಥೋಚಿತ ಸಾಹಸಗಳನ್ನು ಮಾಡುತ್ತಲೇ ಇದ್ದಾರೆ. ಅಲ್ಲಲ್ಲಿರುವ ಅಭಿಮಾನಿಗಳೂ ಸಹ ನಾನಾತೆರದ ಸಹಾಯಗಳನ್ನು ಮಾಡುತ್ತಿದ್ದಾರೆ. ಫಂಡಿನಿಂದ ಕಳೆದವರ್ಷ ಸ್ವಲ್ಪ ಕಡಿಮೆ ೫೦೦ ರೂ. ಗಳವರೆಗೆ ವಿದ್ಯಾರ್ಥಿವೇತನವು ಕೊಡಲ್ಪಟ್ಟಿದೆ. ಶ್ರೀ ಜಗದ್ಗುರು ಸಂಸ್ಥಾನದಿಂದ ೬೦೦ ರೂ. ಗಳ ವೇತನವು ಕೊಡಲ್ಪಟ್ಟಿದೆ. ದಾವಣಗೆರೆಯ ವಿದ್ಯಾವರ್ಧಕಫಂಡಿನವರೂ, ಶಿವಮೊಗ್ಗ ವಿದ್ಯಾಭಿವೃದ್ಧಿ ಫಂಡಿನವರೂ ಇನ್ನು ಕೆಲ ಮತಾಭಿಮಾನಿಗಳೂ ಸಹ ಬೇರೆಬೇರೆಯಾಗಿ ವಿದ್ಯಾರ್ಥಿವೇತನಗಳನ್ನು ಕೊಡುತ್ತಲಿದ್ದಾರೆ. ಬೆಂಗಳೂರು ತೋಟದಪ್ಪನವರ ಸತ್ರದಲ್ಲಿ ೬೦ ಮಂದಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಅನ್ನಕ್ಕೂ ವಸತಿಗೂ ಏರ್ಪಾಟುಮಾಡಿಕೊಡಲ್ಪಟ್ಟಿದೆ. ಇವೆಲ್ಲವುಗಳಮೇಲೆ ಸರ್ಕಾರದಿಂದ ಕೊಡಲ್ಪಡುವ ಹಿಂದುಳಿದ ಜನವರ್ಗದವರ ವಿದ್ಯಾರ್ಥಿ ವೇತನಗಳ ಭಾಗವೂ ಕೂಡ ಇವರಿಗೆ ಸಲ್ಲುತ್ತಿದೆ. ಇಷ್ಟಾದರೂ ಈ ದೇಶದ ವೀರಶೈವ ವಿದ್ಯಾರ್ಥಿಗಳಲ್ಲಿ ಆಗುತ್ತಿರುವ ವಿದ್ಯಾಭ್ಯಾಸಕ್ರಮವು ಮಾತ್ರ ತೃಪ್ತಿಕರವಾಗಿಲ್ಲ. ಬಾಲವಿದ್ಯಾಭ್ಯಾಸವು ತಕ್ಕಮಟ್ಟಿಗೆ ವಿಸ್ತಾರವಾಗಿ ಇವರಲ್ಲಿ ನಡೆಯುತ್ತಿದ್ದರೂ, ಮಧ್ಯಮವಿದ್ಯಾಭ್ಯಾಸವೂ ಪ್ರೌಢವಿದ್ಯಾಭ್ಯಾಸವೂ ಬಹಳ ಕಡಿಮೆಯಾಗಿವೆ. ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿರುವುದು ಮಾತ್ರವೇ ಅಲ್ಲದೆ ಪರೀಕ್ಷೆಯಲ್ಲುತ್ತೀರ್ಣರಾಗಿರುವವರ ಸಂಖ್ಯೆಯೂ ಬಹಳ ಹೀನವಾಗಿರುತ್ತದೆ. ನಮ್ಮ ದೇಶದ ವೀರಶೈವ ವಿದ್ಯಾರ್ಥಿಗಳಲ್ಲೆಲ್ಲಾ ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ೫೦ ಮಂದಿಗಳು ಮಾತ್ರವೇ ಉತ್ತೀರ್ಣರಾಗಿದ್ದಾರೆ. ವಿಶ್ವವಿದ್ಯಾಲಯ ಪ್ರವೇಶಪರೀಕ್ಷೆಯಲ್ಲಿ ೫ ಮಂದಿಗಳು ಮಾತ್ರವೇ ಉತ್ತೀರ್ಣರಾಗಿದ್ದಾರೆ. ಬಿ. ಎ. ಪರೀಕ್ಷೆಗೆ ಹೋಗಿದ್ದವರಲ್ಲಿ ಒಬ್ಬರಾದರೂ ಉತ್ತೀರ್ಣರಾಗಿಲ್ಲ. ತೋಟದಪ್ಪನವರ ಸತ್ರದ ವಿದ್ಯಾರ್ಥಿವರ್ಗದವರ ಅಭ್ಯಾಸಪರಿಣಾಮವೂ ಕೂಡ ಹೀನತಮವಾಗಿರುವುದೆಂದು ಕೇಳುತ್ತೇವೆ. ಈ ಫಲಿತಾಂಶವು ಸಮಾಜದ ಅಭಿಮಾನಶಾಲಿಗಳಿಗೆಲ್ಲಾ ಬಹಳ ಆಶಾಭಂಗವನ್ನೂ ಮನಃಖೇದವನ್ನೂ ಹುಟ್ಟಿಸತಕ್ಕದಾಗಿರುವುದು. ನಮ್ಮ ಬಾಲಕರು ಹೇಗಾದರೂ ವಿದ್ಯೆಯಲ್ಲಿ ಮುಂದಕ್ಕೆ ಬಂದರೆ ಸಾಕೆಂದು ಹಗಲಿರುಳೂ ಚಿಂತಿಸುತ್ತ ಎಷ್ಟೋ ತೆರದ ಸಹಾಯಗಳನ್ನು ವಿದ್ಯಾರ್ಥಿಗಳಿಗಾಗಿ ಕಲ್ಪಿಸಿಕೊಡಲು ಅಭಿಮಾನಶಾಲಿಗಳು ಪಾಟುಪಡುತ್ತಿರುವಾಗ, ವಿದ್ಯಾರ್ಥಿಗಳು ದೃಢಚಿತ್ತದಿಂದ ನಿರ್ವ್ಯಸನಿಗಳಾಗಿ ಚಿಂತನೆಮಾಡದೆ ಪರೀಕ್ಷೆಯಲ್ಲಿ ಬಿದ್ದು ಹೋಗುವುದು ಬಹಳ ಅನ್ಯಾಯವು. ಇದು ಅವರಿಗೆ ತುಂಬಾ ಲಾಂಛನಕರವಾಗಿರುವುದಲ್ಲದೆ ಅವರುಗಳು ಸಮಾಜಕ್ಕೆ ಭಾರಭೂತರೆಂದು ತಿಳಿಯಲ್ಪಡುವರು. ತಕ್ಕಷ್ಟು ಚಿಂತನೆಯನ್ನು ಮಾಡದೆ ಔದಾಸೀನ್ಯದಿಂದ ಪರೀಕ್ಷೆಯ ದುಷ್ಪರಿಣಾಮವನ್ನು ಪಡೆದುಕೊಂಡ ಪ್ರೌಢವಿದ್ಯಾರ್ಥಿಗಳು ಅದರಿಂದ ತಮಗೂ ಸಮಾಜಕ್ಕೂ ಎಷ್ಟು ಹಾನಿಯೆಂಬುದನ್ನು ಪರ್ಯಾಲೋಚಿಸಿ ನಡೆದುಕೊಳ್ಳುವವರಾಗಬೇಕು.

ತಾಯ್ತಂದೆಗಳನ್ನಗಲಿ ದೂರದ ಊರುಗಳಿಗೆ ಬಂದು ಹಾಸ್ಟಲ್ಲಿನಲ್ಲಿಯೋ ಸತ್ರದಲ್ಲಿಯೋ ಭೋಜನವನ್ನು ಮಾಡಿಕೊಂಡಿರುವ ವಿದ್ಯಾರ್ಥಿಗಳಮೇಲೆ ತಕ್ಕ ವಿಚಾರಕರಿಲ್ಲದಿದ್ದರೆ ಅವರ ಸತ್ಸಹವಾಸ ಸುನೀತಿ ಸತ್ಪ್ರವರ್ತನೆಗಳಿಗೆ ಭಂಗಬರಲು ವಿಶೇಷಾವಕಾಶವಿರುವುದು. ತೋಟದಪ್ಪನವರ ಸತ್ರದಲ್ಲಿರುವ ಕೆಲ ವಿದ್ಯಾರ್ಥಿಗಳಲ್ಲಿ ಅಸತ್ಪ್ರವರ್ತನೆಯು ಹೆಚ್ಚುತ್ತಿರುವುದೆಂದು ನಾವು ಕೇಳುತ್ತೇವೆ. ಇಂಥ ದುರ್ವರ್ತನವು ಒಬ್ಬಿಬ್ಬರಲ್ಲಿ ತಲೆದೋರಿದಕೂಡಲೇ ಅಂಥವರನ್ನು ದೂರಸ್ಥರನ್ನಾಗಿ ಮಾಡದಿದ್ದರೆ ಇತರರಿಗೆಲ್ಲಾ ಅದರ ಸೋಂಕು ತಗುಲುವ ಸಂಭವವುಂಟು. ಇದಕ್ಕೆ ಅವಕಾಶವಿದ್ದುದರಿಂದಲೇ ಅಲ್ಲಿಯ ವಿದ್ಯಾರ್ಥಿಗಳ ಅಭ್ಯಾಸ ಫಲಿತಾಂಶವು ತೃಪ್ತಿಕರವಾಗಿಲ್ಲದೆ ಹೋಗಿರಬೇಕು. ಇದರ ಕಡೆಗೆ ಅಲ್ಲಿಯ ವಿದ್ಯಾಭಿಮಾನಿಗಳೂ ಕಾರ್ಯಕಾರಿ ಸಂಘದವರೂ ವಿಶೇಷ ಗಮನವಿತ್ತು ಪರೀಕ್ಷೆಯಲ್ಲುತ್ತೀರ್ಣರಾಗದೆ ಹೋದವರನ್ನೂ ದುರ್ನಯಕ್ಕೀಡಾದವರೆಂಬ ಸಂಶಯಕ್ಕೆ ಆಸ್ಪದರಾದವರನ್ನೂ ಸತ್ರದಿಂದ ಹೊರಪಡಿಸುವುದರಲ್ಲಿ ನಿರ್ದಾಕ್ಷಿಣ್ಯದಿಂದ ಪ್ರವರ್ತಿಸದಿದ್ದರೆ ಸತ್ರದ ಕಾರ್ಯನಿರ್ವಾಹವು ಅಸಾರ್ಥಕವಾಗುವುದು. ಮುಂದಣವರ್ಷದ ನಮ್ಮವರ ವಿದ್ಯಾಭ್ಯಾಸ ಫಲಿತಾಂಶವು ಉತ್ತೇಜನಕವಾಗಿ ಪರಿಣಮಿಸಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ನಾಳೆಯಿಂದ ಸಂಪದಭ್ಯುದಯ ಸಮಾಜದ ಕಮಿಟಿಗಳ ವಾರ್ಷಿಕಸಭೆಯು ರಾಜಧಾನಿಯಲ್ಲಿ ನಡೆಯಲಾರಂಭವಾಗುವುದು.

ಮ|| ಸಿ. ರಂಗನಾಥರಾವ್ ಸಾಹೇಬರವರು ಪದಾರ್ಥಗಳ ಬೆಲೆಯ ನಿಗದಿಮಾಡುವುದು ಮತ್ತೂ ಒದಗಿಸುವುದು-ಈ ಕೆಲಸಗಳ ಕಂಟ್ರೋಲರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಮ್ಯುನಿಸಿಪಾಲಿಟಿಯವರು ದೇವರಾಜಮಾರ್ಕೆಟ್ಟಿನಲ್ಲಿ ಸೀಮೆಯೆಣ್ಣೆಯನ್ನು ಸೀಸೆಯೊಂದಕ್ಕೆ ೦—೨—೧ ಬೆಲೆಯಿಂದ ಮಾರುವುದಕ್ಕೆ ಏರ್ಪಡಿಸಿದ್ದಾರೆ. ಪ್ರತಿಯೊಂದು ಮೊಹಲ್ಲೆಯಲ್ಲಿಯೂ ಹೀಗೆ ಮಾಡಿದರೆ ಅನುಕೂಲ.

ಬಿಜಾಪುರದ ವೀರಶೈವ ಪ್ರಮುಖರಲ್ಲೊಬ್ಬರಾದ ಮ|| ಗುರುಬಸವಪ್ಪ ಫಕೀರಪ್ಪ ಹಳಕಟ್ಟಿ ಬಿ.ಎ. ಎಲ್.ಎಲ್. ಬಿ. ಯವರಿಗೆ ಸಾರ್ವಭೌಮರಿಂದ ರಾವ್‌ಸಾಹೇಬ್ ಬಿರುದು ಕೊಡಲ್ಪಟ್ಟಿರುವುದೆಂದು ತಿಳಿಯಸುವು ಕ್ಕೆ ಸಂತೋಷಿಸುತ್ತೇವೆ.

ಆಹಾರಾದಿ ವಸ್ತುಗಳನ್ನು ಬಡಬಗ್ಗರಿಗೆ ಅನುಕೂಲವಾಗುವ ಮಾರಾಟಮಾಡಿಸುವ ವಿಷಯದಲ್ಲಿ ಏನೇನನ್ನು ಮಾಡಬೇಕೆಂಬುದನ್ನು ಲೋಚಿಸುವುದಕ್ಕಾಗಿ ಟವರ್ನ್‌ಹಾಲಿನಲ್ಲಿ ಪುರಜನರ ಸಭೆಯೊಂದು ಕೂಡಿ ತು. ಈ ಕಾರ್ಯಕ್ಕೆ ತಕ್ಕ ಸಹಾಯಮಾಡುವುದು ಸರ್ವರಿಗೂ ಕರ್ತವ್ಯವಾ ದರಿಂದ ಯಾರೂ ಹಿಂದೆಗೆಯದೆ ಮನಸ್ಕರಿಸಿ ಬಡಬಗ್ಗರನ್ನುದ್ಧರಿಸುವ ಣ್ಯಕ್ಕೆ ಭಾಗಿಗಳಾಗಬೇಕು.

ಈ ಊರಿನ ಸಾ|| ಲಾಡರಪೇಟೆ ಕಾಡಯ್ಯನವರ ಮನೆಯ ೯. ಮಂದಿಗಳು ತಮ್ಮ ಮೋಟಾರಿನಲ್ಲಿ ಕುಳಿತು ಕಳೆದ ಭಾನುವಾರ ಕನ್ನಂಬ ಡಿಕಟ್ಟೆಗೆ ಹೋಗಿದ್ದು ಮರಳಿ ಬರುತ್ತಿರುವಾಗ ಸಾಯಂಕಾಲದಲ್ಲಿ ಪವನ ಪ್ಪಿ ಬಂಡಿಯು ಹಳ್ಳಕ್ಕೆ ಮಗುಚಿಕೊಂಡುದರಿಂದ ಒಳಗಿದ್ದವರಲ್ಲಿ ಶೇಷ ಗಯ್ಯ ಎಂಬಾತನು ಕೂಡಲೇ ಮೃತನಾದನು. ಪೆಟ್ಟುಗಳು ಬಿದ್ದ ಇನ್ನು ಮೂವರಿಗೆ ಗುಣವಾಗುತ್ತಿದೆ.

ಕುಣಿಗಲ್ ತಾ|| ಅಮೃತೂರು ಪೋಸ್ಟ್ ಕೀಲಾರದ ನೇಟಿವ್ ಡಾಕ್ಟ ರ್ ಮ|| ಎಂ. ಎಸ್. ವೆಂಕಟಶಾಮಯ್ಯನವರು ಚೇಳುಕಡಿತಕ್ಕೆ ಔಷಧ ನ್ನು ಮಾಡಿರುವುದಾಗಿಯೂ, ಇದನ್ನು ಹಚ್ಚಿದಕೂಡಲೆ ಉರಿ ಬೇಳಕು ನಿಲ್ಲು ವುದಾಗಿಯೂ, ಇಷ್ಟವುಳ್ಳವರು ಅರ್ಧಾಣೆ ಸ್ಟಾಂಪನ್ನು ಕಳುಹಿಸಿಕೊಟ್ಟ ಔಷಧವನ್ನು ಉಚಿತವಾಗಿ ಕಳುಹಿಸಿಕೊಡುವುದಾಗಿಯೂ ತಿಳಿಸಿರುತ್ತಾರೆ. ಜನರು ಇದನ್ನು ತರಿಸಿ ಪರೀಕ್ಷಿಸತಕ್ಕದಾಗಿದೆ.

ರಾಜಧಾನಿಯ ವರ್ತಕಮಹಾಜನರು ಧನಾರ್ಜನೆಯ ಕೆಲಸವೊಂ ದೇ ತಮ್ಮ ಕರ್ತವ್ಯವೆಂಬ ಭಾವವನ್ನು ಬಿಟ್ಟು ನಾಗರಕಕರ್ತವ್ಯವನ್ನು ರ್ಯಾಲೋಚಿಸಿ, ತಮಗೂ ತಮ್ಮ ನೆರೆಹೊರೆಯವರಿಗೂ ಹಿತವಾಗುವಂಥ ಕಾ ರ್ಯಗಳನ್ನು ಆಲೋಚಿಸಲು ಆರಂಭಮಾಡಿರುವುದನ್ನು ಕಂಡು ಸಂತೋಷಿ ದೆವು. ಕಳೆದವಾರದಲ್ಲಿ ದೊಡ್ಡಪೇಟೆಯಲ್ಲಿ ಉತ್ತರಭಾಗದ ವರ್ತಕಮಹಾ ಜನರನೇಕರು ಮ|| ಕಾವೇರಿಶೆಟ್ಟಿ ಇಂ ಸುಬ್ಬರಾಯಶೆಟ್ಟರ ಅಧ್ಯಕ್ಷತೆಯಿಂ ಸಭೆಗೂಡಿದ್ದು ಪುರಜನರಿಗೆ ಹಿತಕರವಾದ ಕಾರ್ಯಗಳನ್ನು ಆಗಾಗ್ಗೆ ಚರ್ಚಿ ಮ್ಯುನಿಸಿಪಾಲಿಟಿಯವರ ಮತ್ತೂ ಸರ್ಕಾರದವರ ಗಮನಕ್ಕೆ ತರುವುದಕ್ಕಾ ಒಂದು ಸಂಘವನ್ನು ಸ್ಥಾಪಿಸಿದರು. ಇದಕ್ಕೆ ಮ|| ಆರ್. ರಂಗಯ್ಯನ ರು ಸೆಕ್ರೆಟರಿಯವರಾಗಿರುವರು. ಹೀಗೆ ಕರ್ತವ್ಯಜಾಗರೂಕರಾಗದಿದ್ದರೆ ವ ರ್ತಕಮಹಾಜನರು ಪ್ರಬಲರಾಗಲಾರರು.

ಮ|| ಎಂ. ವೆಂಕಟಕೃಷ್ಣಯ್ಯನವರು ಮರಿಮಲ್ಲಪ್ಪನವರ ಹೈಸ್ಕೂ ಲು ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟರಷ್ಟೆ. ಹೀಗಾಗುವುದಕ್ಕೆ ಅವರ ಕ ವೇ ಕಾರಣಭೂತವು. ಇದಕ್ಕೆ ಅಪ್ಪಣೆ ಮಾಡಿದವರು ಆ ಶಾಲೆಯ ಧರ್ಮ ರ್ತರುಗಳು. ಹೀಗಿದ್ದರೂ ವೆಂಕಟಕೃಷ್ಣಯ್ಯನವರ ಸಾಧ್ವೀ ಸಂಪದಭ್ಯು ಯ ಪತ್ರಿಕೆಗಳಲ್ಲಿ ಈ ಕಾರ್ಯಕ್ಕೆ ಮ|| ರೆಡ್ಡಿಯವರೂ, ಮ|| ಬಸವಯ್ಯ ವರೂ ಕಾರಣಭೂತರೆಂದು ಆಪಾದನೆಮಾಡಿ, ಅಖಂಡವಾದ ಲೇಖನಗಳ ಬರುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ವೈರಾಗ್ಯಚಕ್ರವರ್ತಿ ಲೆಂದೆನ್ನಿಸಿಕೊಳ್ಳಬೇಕೆಂದಿರುವ ಮ|| ವೆಂಕಟಕೃಷ್ಣಯ್ಯನವರು ತಮ್ಮ ಕ್ಕದಂತಿರುವ ಆ ಪತ್ರಿಕೆಗಳಲ್ಲೇ ಆತ್ಮಭೂಷಣ ಪರನಿಂದೆಗಳು ತುಂಬಿ ಳುಕುತ್ತಿರುವ ಇಂಥ ಲೇಖನಗಳು ಬರುವಂತೆ ಮಾಡಿರುವುದನ್ನು ನೋಡಿದ "ಆತ್ಮಸ್ತುತಿ ಪರನಿಂದೆಯನ್ನು ಮಾಡದ ನಿಸ್ಪೃಹನಾದ ನನಗೆ ಈ ಶುಂಠ ಜತೆಗೆ ೩ ಕಾಸು ದಕ್ಷಿಣೆಯನ್ನು ಕೊಡಬಹುದೆ?" ಎಂದು ಆಕ್ಷೇಪಿಸಿದ ಭಟ್ಟ ನ ಕಥೆಯು ಸ್ಮರಣೆಗೆ ಬರುತ್ತದೆ. ಮ|| ರಾ|| ಯವರು ತಮಗೆ ಅಪರವಯ ನಲ್ಲಿ ವಿಶ್ರಾಂತಿ ದೊರೆದುದಕ್ಕಾಗಿ ಸಂತೋಷಿಸಿ ಸಾಧ್ಯವಾದಮಟ್ಟಿಗೆ ಲೋಕ ನೆಯನ್ನು ಮಾಡಿಕೊಂಡು ಇಂಥ ಅನುಕೂಲ್ಯವನ್ನು ಕಲ್ಪಿಸಿದವರಲ್ಲಿ ಕೃತಜ್ಞ ತೋರಿಸುವುದನ್ನು ಬಿಟ್ಟು, ಆಗ್ರಹಪರವಶರಾಗಿ ಇಂಥಗದ್ದಲವನ್ನು ಮಾಡಿಕೊ ಳ್ಳುವುದು ಅವರ ವಯಸ್ಸಿಗೆ ಎಂದಿಗೂ ಭೂಷಣವಲ್ಲವೆಂದು ತೋರುವುದು.

ಯುದ್ಧದ ಸಾಲಕ್ಕೆ ಹಣವನ್ನು ಕೊಡಿಸುವ ವಿಷಯದಲ್ಲಿ ಕಳೆದ ತಾ ೧೨ ರಲ್ಲಿ ಬೆಂಗಳೂರಿನಲ್ಲಿ ಸರ್ದಾರ್ ಕಾಂತರಾಜ ಅರಸಿನವರ ಅಧ್ಯಕ್ಷ ಯಿಂದ ಒಂದು ಸಭೆಗೂಡಿದ್ದಿತು. ನಮ್ಮ ದೇಶೀಯರು ಈ ಕರ್ತವ್ಯವನ್ನು ಅವಶ್ಯಕವಾಗಿ ಮಾಡುವುದರ ಪ್ರಯೋಜನವನ್ನು ಕುರಿತು ಸಭಾಧ್ಯಕ್ಷರ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು, ದಿವಾನ್ ವಿಶ್ವೇಶ್ವರಯ್ಯನವರು, ಕ ಡೆಂಟರು, ದಿ|| ಬ|| ಚಕ್ರವರ್ತಿಯವರು, ಮೈಸೂರು ಬ್ಯಾಂಕಿನ ದಿ|| ರೆ ಜರವರು, ರಾ|| ಬ|| ಶ್ಯಾಮರಾಯರು, ಮ|| ಗಳಾದ ರಾಮಲಿಂಗರೆ ಯವರು, ಹೂಬಗೆರೆ ನಂಜಪ್ಪನವರು, ಕಲಾಮಿಯನವರು, ಬುಳ್ಳಪ್ಪನವ ಮೊದಲಾದವರ ಭಾಷಣಗಳಾದುವು. ಈ ಕಾರ್ಯನಿರ್ವಾಹಕ್ಕೆ ಒಂದು ಸಂ ವು ಏರ್ಪಡಿಸಲ್ಪಟ್ಟಿತು. ಅದಕ್ಕೆ ದಿ|| ಬ|| ಪುಟ್ಟಣ್ಣಶೆಟ್ಟರು ಅಧ್ಯಕ್ಷರಾ ಯೂ, ಮ|| ಆರ್. ಸುಬ್ಬರಾಯರು ಸೆಕ್ರೆಟರಿಯವರಾಗಿಯೂ ಮಾಡಲ್ ಟ್ಟರು. ಸಭೆಗೆ ಕೂಡಿದ್ದವರಲ್ಲಿ ದಿ|| ಬ|| ಶೆಟ್ಟರು ೩೦ ಸಾವಿರ. ಸರ್ದಾ ಕಾಂತರಾಜ ಅರಸಿನವರು ೨೦ ಸಾವಿರ. ಮೈಸೂರುಬ್ಯಾಂಕಿನ ಡೈರೆಕ್ಟ ಗಳೆಲ್ಲಾ ಸೇರಿ ೩೫ ಸಾವಿರ. ದಿವಾನರವರು ೧೫ ಸಾವಿರ. ಕರ್ನಲ್ ದೇ ರಾಜ ಅರಸಿನವರು ೧೫ ಸಾವಿರ. ಮ|| ಪಿ. ರಾಘವೇಂದ್ರರಾಯರು ೧ ಸಾವಿರ. ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ೧೦ ಸಾವಿರ ಹೀ ಯೇ ಅನೇಕರು ಸಾಲವಾಗಿ ಕೊಡುವುದಕ್ಕೆ ಮಾಡಿದ ವಾಗ್ದಾನದಿಂದ ೩ ಲಕ್ಷದ ಮೇಲೆಯೇ ಕೂಡಿತು. ಇಂಥ ಏರ್ಪಾಟಂಗು ರಾಜಧಾನಿಯಲ್ಲೂ ಷ್ಪರಲ್ಲೇ ನಡೆಯುವುದರಲ್ಲಿದೆ.

ಯುದ್ಧವಾರ್ತೆಯು.

ಶತ್ರುಗಳು ಪಶ್ಚಿಮ ರಂಗದಲ್ಲಿ ೩ನೆ ಸಲ ಆಕಸ್ಮಾತ್ತಾಗಿ ಆರಂಭಿಸಿ ಮಹಾ ಯುದ್ಧವು ಮೇ ತಾ|| ೨೭ ರಿಂದ ೫-೬ ದಿನಗಳವರೆಗೆ ನಡೆ ಶಾಂತವಾಯಿತು. ಅಷ್ಟರಲ್ಲಿ ಅವರು ೨೦-೩೦ ಮೈಲಿಗಳ ದೂರ ಮು ದಕ್ಕೆ ನುಗ್ಗಿ ಬಂದರು. ಆದರೆ ಮಿತ್ರಮಂಡಲಿಗೆ ಸಹಾಯಕ ಸೈನ ಹೆಚ್ಚಾಗಿ ಒದಗಿದುದರಿಂದ ಶತ್ರುಗಳ ನುಗ್ಗಾಟವು ಕಟ್ಟಾಯಿತು. ಅ ರಿಂದೀಚೆಗೆ ಮಿತ್ರಮಂಡಲಿ ಸೈನ್ಯಗಳು ಬಹಳ ವೀರಾವೇಶದ ಯುದ್ಧಗ ನ್ನು ಶತ್ರುಗಳ ಮೇಲೆ ಮಾಡಿ, ಎಲೋಪು, ಲೇಪೋರ್ಟ್, ವಿಸ್ಲೀ, ಬಲಿ ಮ್ಯಾಲೀ ಲಾಫೋರ್ಟ್, ಬೋರೆಸ್ನಸ್ ಮೊದಲಾದ ಅನೇಕ ಗ್ರಾಮ ನ್ನೂ ಕೆಲವು ಕಾಡುಗಳನ್ನೂ ಪ್ರಮುಖವಾದ ಕೆಲವು ಗುಡ್ಡಗಳನ್ ಸಾವಿರಾರು ಮಂದಿ ಸೈನಿಕರನ್ನೂ ಕೂಡ ಹಿಡಿದುಕೊಂಡರು. ಅ ರಿಂದ ಜರ್ಮನರ ತೀವ್ರತೆಯು ಎಷ್ಟೋ ಅಡಗಿಹೋಯಿತು. ನ ವರು ತಮ್ಮ ಸೇನಾ ಪಂಕ್ತಿಗಳನ್ನು ಬಹಳ ಬಲಪಡಿಸಿಕೊಂಡರು. ಶ ಗಳು ಪ್ರತಿಯುದ್ಧ ಮಾಡಿ ಹಲವು ಕಡೆ ವಿಫಲರಾದರು. ಒಂದು ಕಡೆ ಮೇರಿಕನ್ ಸೈನ್ಯವೊಂದೇ ಶತ್ರುಗಳನ್ನಿದಿರಿಸಿ ಯುದ್ಧಮಾಡಿ ಸೋ ಒಂದು ಮೈಲಿಯವರೆಗೆ ಮುಂದಕ್ಕೆ ನುಗ್ಗಿ ಹೋಗಿ, ಬಹುಮಂದಿ ಶ ಸೈನಿಕರನ್ನು ಸೆರೆ ಹಿಡಿದಿತು. ಏಕ್‌ಬರ್ಗನ ಹತ್ತಿರ ಹೀಗೆಯೇ ಇಂಗ್ಲಿ ಷ್ ಸೈನ್ಯವೊಂದೇ ಶತ್ರುಗಳ ಮೇಲೆ ಯುದ್ಧಮಾಡಿ ೧೦೦೦ ಗಜ ದೂರ ಮುಂದಕ್ಕೆ ನುಗ್ಗಿ ೪೦೦ ಗಜಗಳಗಲದ ಶತ್ರು ಕಂದಕಗಳನ್ ವಶಪಡಿಸಿಕೊಂಡಿತು. ಆ ಯುದ್ಧದಲ್ಲಿ ಜರ್ಮನ್ ಸೈನ್ಯದ ೧ ಕಂ ಯು ಸಂಪೂರ್ಣವಾಗಿ ನಾಶವಾಯಿತು.

ಇಷ್ಟು ಕೆಲಸಗಳನ್ನು ಮಿತ್ರಮಂಡಲಿಯವರು ೨-೩ ದಿನಗಳೊಳಗೆ ನಡೆಯಿಸುವುದರೊಳಗಾಗಿ ಶತ್ರುಗಳು ನೂತನ ಸೈನ್ಯಗಳನ್ನು ವಿಶೇಷವಾಗಿ ಸೇರಿಸಿಕೊಂಡು ಮೊದಲಿಗಿಂತಲೂ ಪ್ರಬಲವಾದ ಯುದ್ಧವನ್ನು ತಾ|| ೮ ನೆ ಅರ್ಧರಾತ್ರಿಯಲ್ಲಿ ಮತ್ತೊಂದುಸಲ ಆರಂಭಿಸಿರುವರು. ಯಾವಲ್ಲಿ ಅವರು ಯುದ್ಧಾರಂಭಮಾಡುವರೆಂದು ಫ್ರೆಂಚರು ಊಹಿಸಿಕೊಂಡಿದ್ದರೋ ಅಂಥ ಸ್ಥಾನವಾದ ಮಾಂಟಡೀಡರ್-ನಾಯನ್ ಪಟ್ಟಣಗಳ ಮಧ್ಯದಲ್ಲೇ ಅವರು ಆರಂಭಿಸಿ ನುಗ್ಗಿದರು. ಇಂಗ್ಲೀಷ್ ಫ್ರೆಂಚ್ ಸೈನ್ಯಗಳನ್ನು ಪರಸ್ಪರ ಅಗಲಿಸಿಬಿಡಬೇಕೆಂಬ ಸಂಕಲ್ಪವನ್ನು ಶತ್ರುಗಳು ಇನ್ನೂ ಬಿಟ್ಟಂತೆ ಕಾಣುವುದಿಲ್ಲ. ಈ ಕಾರಣದಿಂದಲೇ ಅವರು ಫ್ರೆಂಚರಿಗೆ ಮುಖ್ಯವಾದ ಪ್ಯಾರಿಸ್ ಪಟ್ಟಣವನ್ನೊಂದುಕಡೆಯಲ್ಲೂ ಇಂಗ್ಲೀಷರಿಗೆ ಮುಖ್ಯಸ್ಥಾನವಾಗಿರುವ ಸಮುದ್ರತೀರಗಳನ್ನೊಂದುಕಡೆಯಲ್ಲೂ ಮುತ್ತುವುದಕ್ಕಾರಂಭಿಸಿದರೆ ಅವುಗಳ ರಕ್ಷಣೆಗೆ ಅವರಿಬ್ಬರೂ ಹೆಚ್ಚು ಲಕ್ಷ್ಯಕೊಡಬೇಕಾಗಿ ಬರುವುದರಿಂದ ಮಧ್ಯದಲ್ಲಿರುವ ಅವರ ದುರ್ಭೇದ್ಯ ಸೇನಾಪಂಕ್ತಿಯು ಸಡಿಲಬಿದ್ದುಹೋಗುವುದೆಂಬುದೇ ಶತ್ರುಗಳ ಸಂಧಾನವಾಗಿರುತ್ತದೆ. ಇದಕ್ಕಾಗಿ ಅವರು ಈಗಣ ಯುದ್ಧದಿಂದ ಆಯಿಸ್ ಮಾರನ್ ನದಿಗಳಮೇಲೆ ಹಾಯ್ದು ಪ್ಯಾರಿಸ್ಸನ್ನು ಮುತ್ತಬೇಕೆಂದು ಹವಣಿಸುತ್ತಿದ್ದಾರೆ. ಹೀಗಾಗಬೇಕಾದರೆ ಆ ದಾರಿಯಲ್ಲಿರುವ ಕಾಂಪೆಯನ್, ವಿಲ್ಲಿಯರ್ಸ್ ಕಾಟರೇಟ್ ಪಟ್ಟಣಗಳನ್ನು ಮೊದಲು ಹಿಡಿದುಕೊಳ್ಳಬೇಕಾಗುವುದು. ಈ ಪಟ್ಟಣಗಳೆರಡೂ ಲೋಹಮಾರ್ಗಗಳು ಕೂಡುವ ಮುಖ್ಯಸ್ಥಳಗಳಾಗಿರುವುವು. ಇವೆರಡರಿಂದಲೂ ಪ್ಯಾರಿಸ್ ಪಟ್ಟಣಕ್ಕೆ ಲೋಹಮಾರ್ಗಗಳಿರುವುವು. ಮತ್ತೂ ಇವುಗಳಿಗೆ ದುರ್ಭೇದ್ಯವಾದ ಕೋಟೆಗಳೂ ಇರುವುವು. ಇವುಗಳೇ ಪ್ಯಾರಿಸ್ಸಿಗೆ ಬಹಿಃಪ್ರಾಣದಂತಿರುವುವು. ಇವು ಶತ್ರುವಶವಾದರೆ ಪ್ಯಾರಿಸ್ಸಿನ ಬಲವೇ ಹೋಗುವುದು. ಅದುಕಾರಣ ಇವುಗಳನ್ನು ಶತ್ರುಗಳಕೈಗೆ ಬಿದ್ದುಹೋಗದಂತೆ ಕಾಪಾಡುವುದರಲ್ಲಿ ಫ್ರೆಂಚರು ತಮ್ಮ ಸರ್ವಸ್ವವನ್ನೂ ಧಾರೆಯೆರೆಯಲು ಸಿದ್ಧರಾಗಿರುವರು. ಪ್ಯಾರಿಸ್ಸನ್ನು ಬಿಟ್ಟುಕೊಡುವುದಕ್ಕೆ ಯಾವೊಬ್ಬ ಫ್ರೆಂಚನೂ ಒಪ್ಪುವಹಾಗಿಲ್ಲ. ಮತ್ತೂ ಇದುವರೆಗೆ ಸೇನಾರಕ್ಷಣೆಗಾಗಿ ಫ್ರೆಂಚರು ಸ್ಥಾನಗಳನ್ನು ಬಿಟ್ಟುಕೊಡುತ್ತ ಬಂದಂತೆ ಇನ್ನು ಮುಂದೆ ಸ್ಥಳಗಳನ್ನು ಬಿಟ್ಟುಕೊಡಲು ಲೇಶವೂ ಅವಕಾಶವಿರುವುದಿಲ್ಲ. ಆದುದರಿಂದ ಈಗಣ ಮಹಾಯುದ್ಧದಲ್ಲಿ ೨ ಪಕ್ಷದವರ ಪ್ರಬಲವಾದ ಫಿರಂಗಿಗುಂಡಿನೇಟುಗಳಿಂದ ಅಡಿಗಡಿಗೆ ಸಾವಿರಾರು ತಲೆಗಳು ರಣದೇವತೆಗೆ ಬಲಿ ಬೀಳುತ್ತಿವೆ. ಶತ್ರುಗಳು ಮಿತಿಯಿಲ್ಲದಷ್ಟು ಸೈನ್ಯವನ್ನು ಮಿಡತೆ ದಂಡಿನಂತೆ ನುಗ್ಗಿಸುತ್ತಿರುವುದರಿಂದ ಅವರ ಸೇನಾನಷ್ಟವು ವಾಚಾಮಗೋಚರವಾಗಿದೆ. ಈಗ ಅವರು ಕಾಂಪೆಯನ್ ಪಟ್ಟಣವನ್ನು ಗುರಿಯಾಗಿಟ್ಟುಕೊಂಡು ಎಸ್ಟ್ರೀಸ್, ರಿಬೆಕೋರ್ಟುಗಳಕಡೆಗೆ ನುಗ್ಗಿ ಬರುತ್ತಿದ್ದಾರೆ. ಒಂದೆರಡುಕಡೆ ಬಹು ನಷ್ಟಪಟ್ಟು ಮುಂದಕ್ಕೆ ಸಾಗಿಬಂದರೂ ಹಲವುಕಡೆ ಮಿತ್ರಮಂಡಲಿ ಸೈನ್ಯದಿಂದ ಬಲು ಗಟ್ಟಿಯಾಗಿ ನಿರೋಧಿಸಲ್ಪಟ್ಟಿದ್ದಾರೆ. ಮಿತ್ರಮಂಡಲಿಯವರು ಒಂದುಕಡೆ ಹೀಗೆ ಶತ್ರುಗಳನ್ನು ತಡೆಯುತ್ತಿರುವುದೇ ಅಲ್ಲದೆ ಬೇರೆಕಡೆ ಅವರ ಮೇಲೆ ತಾವೇ ಬಿದ್ದು ಸೋಲಿಸಿ ಹಿಮ್ಮೆಟ್ಟಿಸುತ್ತಿದ್ದಾರೆ. ಬ್ರೂಯಿಜರ್ನಿಗೆ ದಕ್ಷಿಣದಲ್ಲಿರುವ ಎಲೋಪ್ ವನವನ್ನೂ ೨೦೦ ಮಂದಿ ಜರ್ಮನ್ ಸೈನಿಕರನ್ನೂ ಹಿಡಿದುಕೊಂಡರು. ಮಿತ್ರಮಂಡಲಿ ಸೇನೆಯ ಬಲ ಎಡಭಾಗಗಳು ದುರ್ಭೇದ್ಯವಾಗಿಯೇ ಇವೆ. ಅಲ್ಲಿ ಶತ್ರುಗಳು ಸ್ವಲ್ಪವೂ ಮುಂದಕ್ಕೆ ನುಗ್ಗಿಹೋಗಲಾರದೆ ಇದ್ದಾರೆ. ಮಧ್ಯಭಾಗದಲ್ಲಿ ಮಾತ್ರ ಅವರು ಸಾಗಿ ರೆಸ್ಸಾನ್ಸ್, ಸರ್‌ನಾಟ್ಸ್, ಮಾರ್ಸಲೀಸ್ ಮೊದಲಾದ ಕೆಲ ಗ್ರಾಮಗಳನ್ನು ಹಿಡಿದರು. ೭ ಮೈಲಿ ಮುಂದಕ್ಕೆ ಬಂದಂತಾಯಿತು. ಆ ಬಳಿಯಣ ಯುದ್ಧದಲ್ಲಿ ಮಿತ್ರಮಂಡಲಿಯವರು ಶತ್ರುಗಳ ೫೦೦ ಮಂದಿ ಸೈನಿಕರನ್ನು ಸೆರೆ ಹಿಡಿದರು. ವಿಸ್ಲೀ, ಬುಸ್ಸಿಯರೀಸ್ ಪ್ರಾಂತದಲ್ಲಿ ಫ್ರೆಂಚ್ ಅಮೇರಿಕಾ ದಳಗಳು ಶತ್ರುಗಳ ಕೆಲ ಸ್ಥಾನಗಳನ್ನು ಹಿಡಿದು ಅವರ ೨೫೦ ಮಂದಿ ಸೈನಿಕರನ್ನೂ ೧೩೦ ಯಂತ್ರದ ಫಿರಂಗಿಗಳನ್ನೂ ವಶಪಡಿಸಿಕೊಂಡರು. ಈಗಲೂ ಈ ಸ್ಥಳದಲ್ಲಿ ಮಹಾಯುದ್ಧವು ಭಯಂಕರವಾಗಿ ನಡೆಯುತ್ತಿದೆ. ಇದು ೨ ನೆ ವರ್ದನ್ ಯುದ್ಧದಂತೆ ಪರಿಣಮಿಸಬಹುದಾಗಿ ಕಾಣುತ್ತದೆ. ಇಂಗ್ಲೀಷ್ ಫ್ರೆಂಚ್ ಸೈನ್ಯಗಳೂ ಜರ್ಮನ್ ಸೈನ್ಯಗಳೂ ಸಹ ಕಳೆದ ೪ ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಯುದ್ಧಮಾಡಿ ಬಳಲಿಹೋಗಿವೆ. ಅಮೇರಿಕಾಸೈನ್ಯವು ಮಾತ್ರ ಅಚ್ಚಳಿಯದ ಪರಾಕ್ರಮವುಳ್ಳುದಾಗಿ ಕಾದಾಡುತ್ತಿದೆ. ಅಂಥವರ ಸಹಾಯವು ಸರ್ವವಿಧದಿಂದಲೂ ಮಿತ್ರಮಂಡಲಿಗೆ ಇರುವುದಲ್ಲದೆ ಧರ್ಮದೃಷ್ಟಿಯೂ ದೈವಬಲವೂ ಇವರಕಡೆಗಿರುವುದರಿಂದ ಪರಿಣಾಮದ ಜಯವು ಮಿತ್ರಮಂಡಲಿಗೇ ಸಿದ್ಧವೆಂದು ದೂರದರ್ಶಿಗಳು ನಿಶ್ಚಯಿಸಿದ್ದಾರೆ. ಈಗಣ ಯುದ್ಧವು ಈ ವರ್ಷದ ಕೊನೆಯೊಳಗಾಗಿ ಪರಿಣಾಮಫಲದ್ಯೋತಕವಾಗದೆಹೋಗುವುದಿಲ್ಲ.

ಆದರೆ ಈಗ ಜರ್ಮನರು ಮತ್ತೊಂದುಸಲ ತಮ್ಮ ಸಂಧಿನಾಟಕವನ್ನು ಹೂಡಿದ್ದಾರೆ. ಫ್ರೆಂಚರ ಇಷ್ಟಪೂರಣವನ್ನು ಮಾಡಿ ಇಂಗ್ಲೀಷರಿಂದ ಅವರನ್ನು ಬೇರ್ಪಡಿಸಿ, ಫ್ರಾನ್ಸನ್ನೂ ರಷ್ಯಾದಂತೆ ಮಾಡಬೇಕೆಂದೂ ಕಡೆಗೆ ಇಂಗ್ಲೀಷರೊಬ್ಬರಮೇಲೆ ತಮ್ಮ ಹಗೆತನವನ್ನು ತೀರಿಸಿಕೊಳ್ಳಬೇಕೆಂದೂ ನೋಡುತ್ತಲಿದ್ದಾರೆ. ಈಗ ಜರ್ಮನಿ ಪತ್ರಿಕೆಗಳು - ಬ್ರಿಟನ್ನೂ ಜರ್ಮನಿಯೂ ಒಂದನ್ನೊಂದು ಧ್ವಂಸಮಾಡಲಾರವು. ಒಂದನ್ನೊಂದು ಬಿಟ್ಟೂ ಇರಲಾರವು. ಅದುಕಾರಣ ಯಾವುದೋ ಒಂದು ರೀತಿಯಲ್ಲಿ ಇಬ್ಬರಿಗೂ ಅನುಕೂಲವಾಗುವಂತೆ ಸಂಧಿಮಾಡಿಕೊಳ್ಳುವುದು ಒಳ್ಳೆಯದು. ಅಂಥ ಕೆಲಸಕ್ಕೆ ಮಿತ್ರಮಂಡಲಿಯು ಅಡ್ಡಿ ಮಾಡುತ್ತಿದೆ. ಇದರಿಂದ ಉತ್ತರೋತ್ತರ ಜರ್ಮನರ ವಿಜಯದಿಂದ ಅವೇ ಶಕ್ತಿಗುಂದಿಹೋಗುತ್ತವೆ. ಜರ್ಮನಿಗೆ ಏನೇನುಬೇಕೋ ಅದನ್ನು ಸೂಚಿಸುವುದು ಅದಕ್ಕೆ ಕರ್ತವ್ಯವು " ಎಂದು ಮೊದಲಾಗಿ ಸಂಧಿರಾಗವನ್ನು ಹಾಡುವುದಕ್ಕೆ ಪ್ರಾರಂಭಿಸಿವೆ. ಆದರೆ ಫ್ರೆಂಚರೇ ಮೊದಲಾದ ಮಿತ್ರಮಂಡಲಿಯವರೆಲ್ಲರೂ ಮಹೋದ್ದೇಶವುಳ್ಳವರಾಗಿರುವುದರಿಂದ ಈ ಕಪಟನಾಟಕಕ್ಕೆ ಅವರಾರೂ ಲಕ್ಷ್ಯಕೊಡುವಹಾಗಿಲ್ಲ. ಈ ಸೂಚನೆಗಳನ್ನು ಅಮೇರಿಕಾ ಪ್ರಭುತ್ವದವರು ಆಗಲೇ ತಿರಸ್ಕರಿಸಿಬಿಟ್ಟರು. - ಶತ್ರುಗಳ ಗೊಡ್ಡು ಬೆದರಿಕೆಗೆ ಫ್ರಾನ್ಸು ಹೆದರುವುದಿಲ್ಲ. ಅವರಿಗೆ ನಮ್ಮ ರಾಷ್ಟ್ರದ ಸ್ವಲ್ಪ ಭಾಗ ಸಿಕ್ಕಿಹೋಗಿದ್ದರೂ ಮಿತ್ರಮಂಡಲಿಯು ತನ್ನ ಸಮುದ್ರಾಧಿಪತ್ಯ ಶಕ್ತಿಯಿಂದ ಶತ್ರುಗಳನ್ನು ಪ್ರಪಂಚದಿಂದಲೇ ಬಹಿಷ್ಕೃತರನ್ನಾಗಿ ಮಾಡಬಲ್ಲುದು " ಎಂದು ಫ್ರೆಂಚ್ ಪತ್ರಿಕೆಗಳು ಪ್ರತ್ಯುತ್ತರವನ್ನು ಕೊಟ್ಟಿರುತ್ತವೆ.

ಇತರವಿಷಯಗಳು.

ರಷ್ಯಾದ ಉಕ್ರೇನಿಯನ್ ಪ್ರಾಂತದಲ್ಲಿದ್ದ ತಮ್ಮ ಸೈನ್ಯವನ್ನು ಜರ್ಮನರು ಫ್ರಾನ್ಸ್ ರಂಗಕ್ಕೆ ಕರೆಯಿಸಿಕೊಂಡುಬಿಟ್ಟುದರಿಂದ ಅದರ ಸ್ಥಳಕ್ಕೆ ಆಸ್ಟ್ರಿಯಾ ಸೈನ್ಯವನ್ನು ಕಳುಹಿಸಿಕೊಟ್ಟಿದ್ದಾರೆ.

ರೀಮ್ಸ್‌ಪಟ್ಟಣದ ಮೂರುಭಾಗದಲ್ಲೂ ಶತ್ರುಗಳು ಮುತ್ತಿ ಗುಂಡುಗಳನ್ನು ಹೊಡೆಯುತ್ತಿರುವುದರಿಂದ ಫ್ರೆಂಚರು ಅವರಲ್ಲಿರುವ ದೇವಾಲಯಗಳ ಹೊರತು ಉಳಿದುವನ್ನೆಲ್ಲಾ ವಿನಾಶಗೊಳಿಸಿಯೂ ತೆರವುಮಾಡಿಯೂ ಇದ್ದಾರೆ.

ರಷ್ಯನರೆಲ್ಲಾ ತಮ್ಮ ರಾಜ್ಯವನ್ನು ಕೂಡಲೇ ಬಿಟ್ಟುಹೋಗದಿದ್ದರೆ ಅರ್ಥದಂಡವೂ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಡುವುವೆಂದು ಫಿನ್ಲೆಂಡ್ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಇಲ್ಲೆಲ್ಲಾ ಜರ್ಮನರಪ್ರಾಬಲ್ಯವು ಹೆಚ್ಚಿಕೊಂಡಿದೆ.

• ಮೇ ತಿಂಗಳಲ್ಲಿ ಜಪಾನಿಯವರ ೧೪ ಹಡಗುಗಳು ಮುಳುಗಿಸಲ್ಪಟ್ಟಿವೆ. ಇದುವರೆಗೆ ಅವರವು ಒಟ್ಟು ೬೮ ಹಡಗುಗಳೂ ೧೧೬ ಮಂದಿ ನಾವಿಕರೂ ಹಾಳಾಗಿದ್ದಾರೆ. ೬೦೦ ಮಂದಿ ಪ್ರಯಾಣಿಕರಿದ್ದ ೫೫ ಹಡಗುಗಳೇನಾದುವೋ ಗೊತ್ತಾಗಿಲ್ಲ.

ಪಾಲಸ್ತೀನ್ ರಂಗದಲ್ಲಿ ಸಮುದ್ರತೀರದೊಳಗೆ ನಮ್ಮವರು ಶತ್ರುಗಳ ೧ ಮೈಲಿ ಕಂದಕವನ್ನಾಕ್ರಮಿಸಿದರು. ಶತ್ರುಗಳು ಮೇಲೆ ಬೀಳಲಾಗಿ ಹೊಡೆದೋಡಿಸಿದರು. ಮದೀನಾಕ್ಕೆ ಉತ್ತರದಲ್ಲಿ ಅರಬ್ಬಿಯವರು ದಂಡೆತ್ತಿಹೋಗಿ ತುರ್ಕಿಯವರ ಲೋಹಮಾರ್ಗವನ್ನೂ ತಂತಿಕಂಬಗಳನ್ನೂ ಹಾಳುಮಾಡಿಬಂದರು.

ದಕ್ಷಿಣಾಫ್ರಿಕಾದಿಂದ ಹಿಂದಿರುಗಿ ಲಂಡನ್ನಿಗೆ ಬರುತ್ತಿದ್ದ ಒಂದು ಟಪ್ಪಾಲು ಹಡಗು ರಾತ್ರಿವೇಳೆಯಲ್ಲಿ ಇನ್ನೊಂದು ಹಡಗಿಗೆ ಡಿಕ್ಕಿಹೊಡೆದುದರಿಂದ ಒಳಗೆ ೨ ಕಡೆ ಒಡೆದು ಹಾನಿ ಬಹಳ ಶಿಥಿಲವಾಗಿ ಹೇಗೋ ದಡಕ್ಕೆ ಸೇರಿತು. ಒಳಗೆ ೩೦೦ ಮಂದಿ ಪ್ರಯಾಣಿಕರಿದ್ದರು, ಬಹುಮಂದಿ ಅಗೋಚರರಾಗಿರುವರು.

ಜರ್ಮನ್ ಸಬ್‌ಮೆರೀನುಗಳ ಹಾವಳಿಯು ಬರುಬರುತ್ತ ಬಹಳ ಕಡಿಮೆಯಾಗುತ್ತಿದೆ. ಅವರ ಹಲವು ಸಬ್‌ಮೆರೀನುಗಳನ್ನು ಇಂಗ್ಲೀಷರು ವಿಶೇಷವಾಗಿ ಮುಳುಗಿಸುತ್ತಿರುವುದೇ ಇದಕ್ಕೆ ಕಾರಣ. ಅವರು ಹೊಸದಾಗಿ ಕಟ್ಟಿಸುತ್ತಿರುವ ಸಬ್‌ಮೆರೀನುಗಳಿಗೆ ದ್ವಿಗುಣವಾಗಿ ಮಿತ್ರಮಂಡಲಿಯವರಿಂದ ವಿನಾಶಗೊಳಿಸಲ್ಪಡುತ್ತಿವೆ.

ಶತ್ರುಗಳ ಸಬ್‌ಮೆರೀನುಗಳು ಅಮೇರಿಕಾದ ಸೈನ್ಯಗಳನ್ನು ಫ್ರಾನ್ಸ್ ರಂಗಕ್ಕೆ ಬರದಂತೆ ಮಾಡುವುದಕ್ಕಾಗಿ ಅಟ್ಲಾಂಟಿಕ್ ಸಮುದ್ರಕ್ಕೆ ಬಂದು ಅಲ್ಲಲ್ಲಿ ಸುರಂಗಗಳನ್ನು ಹಾಕಿರುವುವಂತೆ. ಇಂಥ ಸಬ್‌ಮೆರೀನುಗಳ ತಲೆಯನ್ನೆಲ್ಲಿಕಂಡರೂ ಧ್ವಂಸಗೊಳಿಸುವುದಕ್ಕಾಗಿ ಅಮೇರಿಕಾದ ಸಬ್‌ಮೆರೀನುಗಳು, ಯುದ್ಧದ ಹಡಗುಗಳು, ನೌಕಾವಿಮಾನಗಳು ಮೊದಲಾದುವೆಲ್ಲಾ ಹೊರಟಿರುತ್ತವೆ.

ಇಂಗ್ಲೀಷ್ ಫ್ರೆಂಚ್ ಗ್ರೀಕ್ ಸೈನ್ಯಗಳು ಸೇರಿ ಬಾಲ್ಕನ್ ರಂಗದ ಮೆಸಿಡೋನಿಯಾ ಪ್ರಾಂತದಲ್ಲಿ ಭೀಕರಯುದ್ಧಗಳನ್ನು ಮಾಡುತ್ತ ಶತ್ರುಗಳ ಅಭೇದ್ಯವಾಗಿದ್ದ ಸೇನೆಯ ೧-೨ ನೆ ಪಂಕ್ತಿಗಳನ್ನು ವಶಪಡಿಸಿಕೊಂಡು ೧೭೨೧ ಮಂದಿ ಸೈನಿಕರನ್ನೂ ಸೆರೆಹಿಡಿದರು. ೧೯೧೬ ನೆ ವರ್ಷದಲ್ಲಿ ಮಿತ್ರಮಂಡಲಿಯವರು ಮೊನಾಸ್ಟಿರನ್ನು ಹಿಡಿದುಕೊಂಡಂದಿನಿಂದೀಚೆಗೆ ಇಂಥ ಮಹಾವಿಜಯವನ್ನು ಆ ರಂಗದ ಮಿತ್ರಾವಳಿಯೂ ಪಡೆದಿರಲಿಲ್ಲ.

ಪಶ್ಚಿಮರಂಗಕ್ಕೆ ಅಮೇರಿಕನ್ ಸೈನ್ಯವು ಅತ್ಯುತ್ಸಾಹದಿಂದ ನಿರ್ವಿಘ್ನವಾಗಿ ಬಂದಿಳಿಯುತ್ತಲೇ ಇವೆ. ಆ ಸೈನ್ಯವು ಬಂದೊದಗಿದಷ್ಟೂ ಮಿತ್ರಮಂಡಲಿಯವರ ವಿಜಯವಿಶ್ವಾಸವು ಹೆಚ್ಚುತ್ತಿದೆ. ಸಮುದ್ರತೀರದಿಂದ ಹಿಡಿದು ಸ್ವಿಟ್ಜರ್ಲಾಂಡಿನವರೆಗೂ ಎಲ್ಲಿ ನೋಡಿದರೂ ಯಾವುದೊಂದು ಗ್ರಾಮದಲ್ಲೂ ಕೂಡ ಅಮೇರಿಕನ್ನರು ಕಾಣಬರುತ್ತಿದ್ದಾರೆ. ಹಲವು ಕಡೆ ಅಮೇರಿಕನ್ ಸೈನ್ಯವು ಇಂಗ್ಲೀಷ್ ಫ್ರೆಂಚ್ ಸೈನ್ಯಗಳೊಡನೆ ಕಲೆತೂ, ಕೆಲವುಕಡೆ ಸ್ವತಂತ್ರವಾಗಿಯೂ ಯುದ್ಧಮಾಡುತ್ತಿವೆ. ಅಮೇರಿಕನ್ನರ ಗುಂಡಿನೇಟಿನಿಂದ ಸತ್ತುಬಿದ್ದಿರುವ ಶತ್ರುಗಳ ಹೆಣಗಳನ್ನು ಪರೀಕ್ಷಿಸಲಾಗಿ ಪ್ರತಿಯೊಬ್ಬ ಸೈನಿಕನ ಎದೆ, ಅಥವಾ ತಲೆಗಳಿಗೇ ಗುಂಡುಹೊಕ್ಕಿರುವುದು ಕಂಡುಬಂದಿರುವುದರಿಂದ ಅಮೇರಿಕನ್ನರ ಕೈಗುರಿಯು ಬಹಳ ಸಮರ್ಪಕವಾಗಿರುವುದೆಂದು ಶ್ಲಾಘಿಸಲ್ಪಡುತ್ತಿದೆ.

ಭರತಖಂಡದ ವೃತ್ತಾಂತಗಳು.

ತಿರುವಾಂಕೂರು ಮಹಾರಾಜರು ಯುದ್ಧದ ಸಾಲಕ್ಕೆ ೧೦ ಲಕ್ಷ ರೂ. ಗಳನ್ನು ಕೊಟ್ಟರು.

ಕಲ್ಕತ್ತಾದ ಗೋಣಿನಾರಿನ ಯಂತ್ರಾಲಯದವರೆಲ್ಲರೂ ಯುದ್ಧಋಣಕ್ಕಾಗಿ ೬ ಕೋಟಿ ರೂ. ಗಳನ್ನು ಕೊಟ್ಟಿರುವರು.

ಪಂಜಾಬು ದೇಶದಲ್ಲಿ ಕಳೆದ ಏಪ್ರಿಲ್ ತಿಂಗಳು ಬೆಳೆಸಿನಕಾಲವಾಗಿದ್ದರೂ ಆ ತಿಂಗಳಲ್ಲಿ ಸೈನ್ಯಕ್ಕೆ ೧೨೬೦೦ ಮಂದಿಗಳು ದೊರೆದಿರುವರು.

ಯುದ್ಧದ ಸಾಲಕ್ಕೆ ಹಣ ಕೊಟ್ಟವರಿಗೆ ಸಲ್ಲಬೇಕಾದ ಬಡ್ಡಿ ಹಣಕ್ಕಾಗಿ ಅವರವರ ಭೂಗಂದಾಯದಲ್ಲಿ ವಜಾಹಾಕಿಕೊಳ್ಳಬಹುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ತಿರುವಾಂಕೂರಿಗೆ ಸೇರಿದ ಎರ್ನಾಕುಲಮ್ಮಿನಲ್ಲಿ ಟಾಟಾ ಕಂಪೆನಿಯವರ ತೈಲ ಯಂತ್ರಾಲಯಸ್ಥಾಪನೆಗಾಗಿ ೯೬ ಎಕರೆಯ ಭೂಮಿಯನ್ನು ಕೊಡಲು ಅಲ್ಲಿನ ಪ್ರಭುತ್ವದವರು ಅಪ್ಪಣೆಮಾಡಿದ್ದಾರೆ.

ಕಳೆದ ತಾ|| ೬ ರ ವರೆಗೆ ಯುದ್ಧಸಾಲಕ್ಕಾಗಿ ೧೧೪೪೮೫೩೦೦ ರೂ. ಕೂಡಿದ್ದುವು. ತಾ|| ೮ ರವರೆಗೆ ೧೨೪೬೦೧೩೦೦ ರೂ. ಗಳಾಗಿದ್ದುವು. ತಾ|| ೧೨ರ ವರೆಗೆ ೧೩೦೬೭೨೯೦೦ ರೂ. ಗಳಾದುವು.

ಸ್ವರ್ಗವಾಸಿ ತಿರುವಾಂಕೂರು ಮಹಾರಾಜರ ಕುಮಾರರಾದ ಶ್ರೀ ನಾರಾಯಣ ತಂಪಿಯವರ ಕುಮಾರರಾದ ಪರಮೇಶ್ವರಂ ತಂಪಿಯವರೆಂಬ ೨೦ ವರ್ಷದ ಯುವಕರು ಕಳೆದ ತಾ|| ೬ ರಲ್ಲಿ ಕೆರೆಗೆ ಸ್ನಾನಕ್ಕೆ ಹೋಗಿದ್ದು ಮುಳುಗಿಹೋದರು.

ಅಮೇರಿಕಾ ಪ್ರಭುತ್ವದವರೊಡನೆ ಭರತಖಂಡದ ಸರ್ಕಾರದವರು ಇದುವರೆಗೆ ಮಾಡಿಕೊಂಡಿರುವ ಏರ್ಪಾಟುಗಳ ಪ್ರಕಾರ ಆ ದೇಶದಿಂದ ನಮ್ಮ ಭರತಖಂಡಕ್ಕೆ ಬೆಳ್ಳಿಯು ಅಪರಿಮಿತವಾಗಿ ಬಂದಿದೆ. ಇನ್ನೂ ಬರುತ್ತಲಿದೆ. ಬಂದ ಬೆಳ್ಳಿಯು ಆಗಲೇ ನಾಣ್ಯಗಳಾಗಿ ಮುದ್ರಿಸಲ್ಪಡುತ್ತಿದೆ. ಇನ್ನು ಕೆಲ ವಾರಗಳೊಳಗಾಗಿ ೧೩ ಕೋಟಿ ರೂ. ಗಳಿಗೆ ತಕ್ಕಷ್ಟು ಬೆಳ್ಳಿಯು ಬರುವುದೆಂದೂ, ಆ ಬಳಿಕ ಅದಕ್ಕಿಂತಲೂ ಹೆಚ್ಚಾದ ಬೆಳ್ಳಿಯು ಬರುವುದರಲ್ಲಿದೆಯೆಂದೂ ಗೊತ್ತಾಗುತ್ತದೆ.

ಕೆರೆ ಕಟ್ಟೆ ಕೊಳ ಮೊದಲಾದುವುಗಳಲ್ಲಿ ಪಾಚಿಯಾಗಲೀ ಅಂತರಗಂಗೆ ಮೊದಲಾದ ಸತ್ತೆಗಳಾಗಲೀ ದಟ್ಟವಾಗಿ ತುಂಬಿಕೊಂಡಿರುವುದುಂಟಷ್ಟೆ. ಇವನ್ನು ನಿರಾಯಾಸವಾಗಿ ತೆಗೆದುಬಿಡುವುದಕ್ಕೆ ಚಿಕ್ಕಚಿಕ್ಕ ಟಾರ್ಪಿಡೋಗಳು ಕಟ್ಟಿದ ಉದ್ದುದ್ದವಾದ ಒಂದು ತೆರದ ಗರಗಸವು ಕಂಡು ಹಿಡಿಯಲ್ಪಟ್ಟಿದೆ. ಇವರ ಸಹಾಯದಿಂದ ಅನುಭವವಿಲ್ಲದ ಇಬ್ಬರು ಹುಡುಗರಾದರೂ ಒಂದು ದೊಡ್ಡ ಕೆರೆಯಲ್ಲಿ ಕಟ್ಟಿಕೊಂಡಿರುವ ಕಸವನ್ನೆಲ್ಲಾ ಒಂದು ದಿನದೊಳಗೆ ತೊಲಗಿಸಿಬಿಡಬಹುದಾಗಿದೆಯಂತೆ.

ಭರತಖಂಡದ ಸಿವಿಲ್ ಸರ್ವೀಸ್ ಪರೀಕ್ಷೆಗೆ ಹಿಂದೂಸಂಸ್ಥಾನಿಕ ಪ್ರಜೆಗಳೂ ಸೇರಿಸಲ್ಪಡುವರೆಂಬುದಾಗಿ ಅದಕ್ಕೆ ಮುಂಚೆ ಪ್ರಕಟವಾಗಿದ್ದಿತು. ಈಚೆಗೆ ಸ್ಟೇಟ್ ಸೆಕ್ರೆಟರಿಯವರು ಅದರರ್ಥವನ್ನು ಪಾರ್ಲಿಮೆಂಟಿನಲ್ಲಿ ವಿವರಿಸಿದಾಗ ಯಾರಾದರೂ ಆಂಗ್ಲ ಪರಿಪಾಲಿತ ಭಾರತದೇಶಪ್ರಜೆಗಳಾಗಿದ್ದು ದೇಶೀಯ ಸಂಸ್ಥಾನಗಳಲ್ಲಿ ಹುಟ್ಟಿಯೋ ಅಥವಾ ಅವನ ತಾಯ್ತಂದೆಗಳು ಆ ಸಂಸ್ಥಾನಗಳಲ್ಲಿ ಹುಟ್ಟಿದವರಾಗಿಯೋ ಇದ್ದರೆ ಮಾತ್ರ ಅಂಥವರಿಗೆ ಈಗಣ ಸಂಸ್ಕರಣವು ಅನುವರ್ತಿಸುವುದೆಂದು ಹೇಳಿರುವರು.

ಕೈರಾ ಜಿಲ್ಲೆಯಲ್ಲಿ ೪ ಆಣೆಗಿಂತ ಕಡಿಮೆಯಾಗಿ ಬೆಳೆಸಾದ ಭೂಮಿಯ ರೈತರು ಕಂದಾಯವನ್ನು ಕೊಡದೆ ಮ|| ಗಂಧಿಯವರ ಉಪದೇಶದಮೇಲೆ ತಮ್ಮನ್ನು ಸರ್ಕಾರದವರು ಯಾವ ರೂಪದಿಂದ ಶಿಕ್ಷಿಸಿದರೂ ಪ್ರತಿಕ್ರಿಯೆ ಮಾಡದೆ ಅದನ್ನನುಭವಿಸುವುದಕ್ಕೂ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡುಬಿಟ್ಟರೂ ಸಹಿಸಿಕೊಂಡಿರುವುದಕ್ಕೂ ದೃಢಸಂಕಲ್ಪರಾಗಿದ್ದುದರಮೇಲೆ ಸರ್ಕಾರದವರು ಆಪನ್ನರಾಗಿರುವ ರೈತರು ಕಂದಾಯವನ್ನು ಕೊಟ್ಟುಬಿಡಬಹುದೆಂದೂ ಶಕ್ತಿಯುಳ್ಳವರು ಮುಂದಣವರ್ಷದವರೆಗೆ ನಿಲ್ಲಿಸಿಕೊಂಡಿದ್ದು ಅನಂತರ ಕೊಡಬಹುದೆಂದೂ ಉದಾರವಾದ ಅಪ್ಪಣೆಯನ್ನು ಮಾಡಿದುದರಿಂದ ರೈತರೆಲ್ಲರೂ ಸಂತುಷ್ಟರಾಗಿ ಶಾಂತರಾಗಿರುವರು.

ಬೊಂಬಾಯಿಗೆ ೧೦ ಮೈಲಿಗಳ ದೂರದಲ್ಲಿರುವ ಬಾಂದ್ರಾ ಸಮೀಪದಲ್ಲಿರುವ ಒಂದು ಗ್ರಾಮದ ಬಳಿಗೆ ಸಮುದ್ರತೀರದಲ್ಲಿ ಒಂದು ಮದ್ದಿನಸುರಂಗದ ತೋಟಾವು ಕೊಚ್ಚಿಕೊಂಡು ಬಂದಿದ್ದಿತು. ಆ ಗ್ರಾಮದ ಇಬ್ಬರು ಕ್ರೈಸ್ತರು ಅದನ್ನು ಕಂಡು ಇದೇನೆಂದು ಪರೀಕ್ಷಿಸಲು ಮುಟ್ಟಿದಾಗ ಅದು ಮಹಾಧ್ವನಿಯೊಡನೆ ಹಾರಿ ಅವರಿಬ್ಬರನ್ನೂ ಕೊಂದುಬಿಟ್ಟಿತು. ಅಲ್ಲಿ ಭೂಮಿಯಮೇಲೆ ಒಂದು ದೊಡ್ಡ ಡೊಗರನ್ನೂ ಕೆಡಹಿಬಿಟ್ಟಿತು. ಇಂತಹದೇ ಇನ್ನೊಂದು ತೋಟಾವು ಮಾಹಿಮ್ಮಿನ ಹತ್ತಿರ ಇರುವ ಕೆಲ್ವಿಬಳಿಗೆ ಕೊಚ್ಚಿ ಬಂದಿದ್ದಿತಂತೆ. ಬಹುಶಃ ಈ ತೋಟಾಗಳು ತೀರರಕ್ಷಣಾರ್ಥವಾಗಿ ನಮ್ಮವರಿಂದಲೇ ಹಾಕಲ್ಪಟ್ಟಿದ್ದು ಗಾಳಿಯಿಂದ ಕೊಚ್ಚಿ ಬಂದಿರಬಹುದು.

ಸವರನ್ನುಗಳ ಬೆಲೆಯು ದಿನದಿನಕ್ಕೆ ವಿಪರೀತವಾಗಿ ಹೆಚ್ಚಿಹೋಗುತ್ತಿದೆಯಷ್ಟೆ. ಈಗ ಅದರ ಬೆಲೆಯು ೧೯-೧೨-೦ ವರೆಗೆ ಏರಿಹೋಗಿದೆ. ಹೀಗಿದ್ದರೂ ಮೊನ್ನೆ ವಾರದಲ್ಲಿ ೫ ಲಕ್ಷಕ್ಕಿಂತಲೂ ಹೆಚ್ಚಿದ ಬೆಲೆಯಷ್ಟು ಭಂಗಾರದ ಗಟ್ಟಿಗಳನ್ನು ಚಿನ್ನದ ಕಾಸುಗಳಾಗಿ ಎರಕವೆರೆಯಿಸಿಕೊಳ್ಳುವುದಕ್ಕಾಗಿ ಬೊಂಬಾಯಿ ಟಂಕಸಾಲೆಗೆ ಕೆಲ ಮಂದಿಗಳು ಆ ಟಂಕಸಾಲೆಯ ಬಳಿಯಲ್ಲೇ ವಾಸಮಾಡಿಕೊಂಡಿದ್ದವರು ತೆಗೆದುಕೊಂಡು ಹೋಗಿರಲಾಗಿ, ಸವರನ್ನುಗಳನ್ನು ಕರಗಿಸಲಾಗದೆಂದು ಸರ್ಕಾರದ ಶಾಸನವಾಗಿದ್ದರೂ ಅವನ್ನು ಮಾರಿ ವರ್ತಕರು ಅಷ್ಟು ಚಿನ್ನವನ್ನೂ ಸವರನ್ನುಗಳನ್ನು ಕರಗಿಸಿಯೇ ಚಿನ್ನದ ಗಟ್ಟಿಗಳನ್ನಾಗಿ ಮಾಡಿ ತಂದಿರಬೇಕೆಂದು ಊಹಿಸಿ, ನಿಜಸ್ಥಿತಿ ತಿಳಿಯುವುದಕ್ಕಾಗಿ ಸಿ. ಐ. ಡಿ. ಪೋಲೀಸಿನವರು ಆ ಗಟ್ಟಿಗಳನ್ನು ತಮ್ಮ ವಶಪಡಿಸಿಕೊಂಡಿದ್ದಾರೆ.

ಮದ್ರಾಸಿನ ಸರ್ ಸುಬ್ರಹ್ಮಣ್ಯಯ್ಯರವರು ಅಮೇರಿಕಾದ ಪ್ರೆಸಿಡೆಂಟರಿಗೆ ಬರೆದಿದ್ದ ಲೇಖನದ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಸಭಿಕರೊಬ್ಬರು ಪ್ರಶ್ನೆ ಮಾಡಲಾಗಿ - ಆ ಲೇಖನವನ್ನು ಬರೆದವರ ಘನತೆಯ ದೃಷ್ಟಿಯಿಂದ ಇದನ್ನು ನೋಡಿದರೆ ಈ ಅವಮಾನಕರವಾದ ಲೇಖನವನ್ನು ಬರೆದುದು ಮತ್ತಷ್ಟು ದೋಷಾಸ್ಪದವಾಗಿರುತ್ತದೆ. ಆ ಬರವಣಿಗೆಯಲ್ಲಿ ಕಂಡಿರುವ ವಿಷಯಗಳು ಕೇವಲ ನಿರಾಧಾರವಾಗಿಯೂ ತೀಕ್ಷ್ಣಗಳಾಗಿಯೂ ಇರುವುದರಿಂದ ಬಾಧ್ಯತೆಯುಳ್ಳ ಅಧಿಕಾರಿಗಳಾರೂ ಅದನ್ನು ಗಮನಿಸಬೇಕಾದ ಆವಶ್ಯಕತೆಯು ಕಾಣಬರುವುದಿಲ್ಲ. ಅದನ್ನು ಕುರಿತು ಇದುವರೆಗೂ ಯಾವ ಚರ್ಚೆಯೂ ಜರುಗಿಸಲ್ಪಟ್ಟಿಲ್ಲ. ನನಗೂ ವೈಸ್ರಾಯರಿಗೂ ಈ ವಿಷಯವಾಗಿ ಲೇಖನಗಳು ಜರುಗುತ್ತಿವೆ - ಎಂದು ಸ್ಟೇಟ್ ಸೆಕ್ರೆಟರಿ ಮಾಂಟೆಗ್ಯೂರವರು ಉತ್ತರ ಕೊಟ್ಟರು.

ಮಹಮ್ಮದೀಯರು ಸಂಸ್ಕೃತ ಭಾಷಾಭ್ಯಾಸವನ್ನು ಮಾಡುವುದು ಅಪೂರ್ವ. ಹೈದರಾಬಾದಿನಲ್ಲಿ ವಿದ್ಯಾಶಾಖಾಧ್ಯಕ್ಷರಾಗಿದ್ದ ನವಾಬ್ ಸಯ್ಯದ್ ಅಲಿ ಬಿಲ್ಗ್ರಾಮಿಯವರು ಸಂಸ್ಕೃತಭಾಷೆಯನ್ನು ತೆಗೆದುಕೊಂಡು ಪಟ್ಟಪರೀಕ್ಷೆಯನ್ನು ಕೊಟ್ಟಿದ್ದರು. ಅವರಿಗೆ ವೇದಭಾಷ್ಯಜ್ಞಾನವೂ ಇದ್ದಿತು. ಈಗ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಎಂ. ಎ. ಪರೀಕ್ಷೆಗೆ ಹೋಗಿದ್ದ ಖಾನ್‌ಸಾಹೇಬ್ ಅಬ್ದುಲ್ ಅಜೀಜ್‌ಖಾನ್‌ರವರು ಸಂಸ್ಕೃತವನ್ನು ತೆಗೆದುಕೊಂಡು ಉತ್ತೀರ್ಣರಾಗಿರುವರು. ಇವರು ಧರ್ಮಶಾಸ್ತ್ರ ಮತ್ತೂ ಮೀಮಾಂಸೆಗಳಲ್ಲಿ ಪರೀಕ್ಷೆಯನ್ನು ಕೊಟ್ಟರು. ಇವರು ಇದುವರೆಗೆ ಮಧ್ಯಪ್ರಾಂತಸರ್ಕಾರದಲ್ಲಿ ಓರಿಯಂಟಲ್ ಟ್ರಾನ್ಸ್‌ಲೇಟರ್ ಉದ್ಯೋಗದಲ್ಲಿದ್ದರು. ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದೊಳಗೆ ಪಟ್ಟಪರೀಕ್ಷೆಯನ್ನು ಕೊಟ್ಟವರಲ್ಲಿ ಇವರೇ ಮೊದಲನೆಯವರು.

ದಕ್ಷಿಣಾಫ್ರಿಕಾದಲ್ಲಿ ಮರಳಿ ಭಾರತೀಯರಿಗೆ ಅವಮಾನಕರವಾದ ಅನವಶ್ಯಕ ನಿರ್ಬಂಧಗಳು ಅಲ್ಲಿಯ ಪ್ರಭುತ್ವದವರಿಂದ ಕಲ್ಪಿಸಲ್ಪಟ್ಟಿರುವುದಾಗಿ ವಾರ್ತೆ ಬಂದಿದೆ. ಹೊಗೆಬಂಡಿಗಳಲ್ಲಿ ಕೆಲವು ಭಾರತೀಯರಿಗಾಗಿಯೇ ಪ್ರತ್ಯೇಕಿಸಲ್ಪಟ್ಟಿರುವುವೆಂದೂ, ಅವುಗಳ ಹೊರತು ಉಳಿದ ಬಂಡಿಗಳಿಗೆ ಇವರು ಪ್ರವೇಶಿಸಲಾಗದೆಂದೂ, ಸ್ಟೇಷನ್‌ಮಾಸ್ಟರು, ಟಿಕೆಟ್‌ಕಲೆಕ್ಟರು, ಗಾರ್ಡುಗಳು, ಇವರಲ್ಲಾರಾದರೂ ಯಾವ ಪ್ರಯಾಣಿಕನನ್ನಾದರೂ ಯಾವ ಕಾರಣವನ್ನೂ ತಿಳಿಯಪಡಿಸದೆಯೇ ಅವನು ಪ್ರಯಾಣಮಾಡುತ್ತಿದ್ದ ಬಂಡಿಯಿಂದ ಸೆಳೆದು ಹಾಕಿಬಿಡಬಹುದೆಂದೂ, ಮರ್ಯಾದಾದೂರವಾಗಿರುವ ಉಡುಪುಗಳನ್ನು ಧರಿಸಿದವರೆಂದು ತೋರಿದ ಯಾವೊಬ್ಬ ಭಾರತೀಯನಿಗಾದರೂ ೧-೨ ನೆ ತರಗತಿಯ ಟಿಕೇಟನ್ನು ಕೂಡ ಕೊಡದೆ ತಿರಸ್ಕರಿಸಿಬಿಡಬಹುದೆಂದೂ ಮೊದಲಾಗಿ ನೂತನಶಾಸನವನ್ನೇರ್ಪಡಿಸಿದ್ದಾರೆ. ಈ ಅವಮಾನಕರವಾದ ವಿಧಿಯ ವಿಷಯವಾಗಿ ತಮ್ಮ ಅಸಮ್ಮತಿಯನ್ನು ತೋರಿಸುವುದಕ್ಕಾಗಿ ಅಲ್ಲಿಯ ಜೋಹಾನ್ಸ್‌ಬರ್ಗಿನಲ್ಲಿ ಭಾರತೀಯರೆಲ್ಲಾ ಒಂದು ದೊಡ್ಡ ಸಭೆಗೂಡಿದ್ದುದಲ್ಲದೆ, ನಡೆದ ವಿಷಯವನ್ನೆಲ್ಲಾ ಮ|| ಗಂಧಿಯವರಿಗೆ ತಂತ್ರಿಯಮೂಲಕ ತಿಳಿಯಪಡಿಸಿರುವರು.

ಭರತಖಂಡದಿಂದ ಮೆಸಪಟೋಮಿಯಾದಿಗೂ ಇತರ ರಂಗಗಳಿಗೂ ಹೊಗೆಬಂಡಿಗಳೂ ಅದರ ಉಪಕರಣಗಳೂ ಸಹ ಅನೇಕವಾಗಿ ತೆಗೆದುಕೊಂಡು ಹೋಗಲ್ಪಟ್ಟಿರುವುದರಿಂದ ಈ ದೇಶದಲ್ಲಿ ಅವುಗಳ ಸಂಖ್ಯೆಯು ತಗ್ಗಿಹೋಗಿದೆ. ಹೊಸಬಂಡಿಗಳನ್ನು ನಿರ್ಮಿಸುವುದಕ್ಕೆ ತಕ್ಕ ಸಾಮಗ್ರಿಗಳು ದೊರೆಯುವುದು ಕಷ್ಟವಾಗಿದೆ. ಇಲ್ಲಿರುವಷ್ಟು ಬಂಡಿಗಳ ಮೇಲಾದರೂ ಯುದ್ಧೋಪಕರಣಗಳನ್ನೂ ಸೈನಿಕರನ್ನೂ ಸಾಗಿಸಿಕೊಡಬೇಕಾದ ಕಾರ್ಯಭಾರವು ಹೆಚ್ಚಾಗಿ ಬಿದ್ದಿದೆ. ಈ ಕಾರಣಗಳಿಂದ ಅನವಶ್ಯಕವಾದ ಜನರ ಪ್ರಯಾಣವನ್ನೂ ಅನವಶ್ಯಕವಾದ ಎಂದರೆ ಕೇವಲ ಸ್ವಲಾಭಾರ್ಥವಾಗಿಯೇ ಮಾರಾಟಮಾಡುವವರ ಸರಕುಗಳ ಸಾಗಿಸುವುದನ್ನೂ ಕಡಿಮೆಮಾಡಲಾಗುವುದೆಂದು ಮದ್ರಾಸು ಸರ್ಕಾರದವರು ಒಂದು ಪ್ರಕಟನವನ್ನು ಮಾಡಿದ್ದಾರೆ. ವ್ಯಾಪಾರನಿರ್ಣಯಕ್ಕಾಗಿ ನಿಯಮಿಸಲ್ಪಟ್ಟಿರುವ ಸಂಘದವರು ಯಾವಯಾವ ಪದಾರ್ಥಗಳನ್ನು ಪ್ರಜೆಗಳ ಪ್ರಯೋಜನಕ್ಕಾಗಿ ಎಲ್ಲಿಂದೆಲ್ಲಿಗೆ ಸಾಗಿಸಬಹುದೆಂಬುದನ್ನು ನಿರ್ಧರಿಸಿ, ಅವಶ್ಯಕವಾದ ಸಾಮಗ್ರಿಗಳನ್ನು ಹೊಗೆಬಂಡಿಗಳಮೇಲೆ ಸಾಗಿಸಲು ಅವಕಾಶಕೊಡಿಸಿಕೊಡುವರು. ಪ್ರಜೆಗಳ ಹಿತಾರ್ಥವಾಗಿಯೇ ಮಾಡಲ್ಪಡುವ ಈ ಏರ್ಪಾಟಿಗೆ ಸಕಲ ಪ್ರಜೆಗಳೂ ಸಹಾಯಮಾಡಬೇಕೆಂದು ಅವರು ಕೋರಿರುವರು.

ಬೊಂಬಾಯಿ ಪ್ರಾಂತದ ಯುದ್ಧಮಹಾಸಭೆಗೆ ಶ್ರೀಮಾನ್ ತಿಲಕರೇ ಮೊದಲಾದವರು ಕರೆಯಲ್ಪಟ್ಟಿದ್ದರಷ್ಟೆ. ಸಭೆ ನಡೆಯುವಾಗ್ಗೆ ತಿಲಕರು ಒಂದು ಉಪನ್ಯಾಸ ಮಾಡುವುದಕ್ಕೆ ನಿಂತು ದೇಶರಕ್ಷಣೆಗೂ ಸ್ವರಾಜ್ಯಕ್ಕೂ ಕೇವಲ ಸಮೀಪ ಸಂಬಂಧವಿರುತ್ತದೆಂದು ವಿವರಿಸುವುದಕ್ಕೆ ಆರಂಭಿಸಿದುದನ್ನು ಸಭಾಧ್ಯಕ್ಷರಾದ ಗೌವರ್ನರವರು ಕಂಡು ಅವರ ಉಪನ್ಯಾಸವನ್ನು ಮುಂದಕ್ಕೆ ಸಾಗಗೊಡದೆ ನಿಲ್ಲಿಸಿಬಿಟ್ಟರು. ಕೂಡಲೇ ತಿಲಕರು ಸಭೆಯನ್ನು ಬಿಟ್ಟು ಹೊರಟುಹೋದರು. ಬಳಿಕ ಮ|| ಕೇಳಕರ್‌ರವರು ಹಾಗೇ ಉಪನ್ಯಾಸ ಮಾಡಲಾರಂಭಿಸಲು, ಅದಕ್ಕೂ ತಡೆಮಾಡಲ್ಪಟ್ಟಿತು. ಅದರಿಂದ ಅವರೂ, ಹಾರ್ನಿಮನ್, ಬೊಮ್ಮಂಜಿ, ಜಮುನಾದಾಸ್ ದ್ವಾರಕದಾಸ್‌ರವರೂ ಸಭೆಯನ್ನು ಬಿಟ್ಟು ಹೊರಟು ಹೋದರು. ಬಳಿಕ ಸಭಾಕಾರ್ಯಗಳು ಸಾಗಿದುವು. ಹುಟ್ಟು ಹೊಳೆಯಲ್ಲಿ ಸಾಬರೇ ಕೊಚ್ಚಿಹೋಗುತ್ತಿರುವಾಗ ಗಡ್ಡಕ್ಕೆ ಹೇಗೆಂದು ಯೋಚಿಸುವಂತೆ ದೇಶಕ್ಕೇ ವಿಪತ್ಪರಂಪರೆಯು ಸಂಘಟಿಸುತ್ತಿರುವ ವಿಷಮಸಮಯದಲ್ಲಿ ಉಳಿದ ಯೋಚನೆಯನ್ನೆಲ್ಲಾ ಬಿಟ್ಟು ಸಾಮ್ರಾಜ್ಯಸ್ಥಿರತೆಗೆ ಅವಶ್ಯಕವಾದ ಕಾರ್ಯಗಳನ್ನು ಮಾಡಿಕೊಡುವುದನ್ನು ಬಿಟ್ಟು ಈ ದೇಶದ ಕೆಲವರು ನಮಗೆ ಮೊದಲು ಸ್ವರಾಜ್ಯ ಕೊಟ್ಟರೆ ಮುಂದಣ ಮಾತೆಂದು ಹಠಮಾರಿತನವನ್ನು ಮಾಡುತ್ತಿರುವುದು ಶ್ರೇಯಸ್ಕರವಾಗಿ ಕಾಣುವುದಿಲ್ಲ.

ವಿದೇಶ ವೃತ್ತಾಂತಗಳು.

ಅಮೇರಿಕಾದಿಂದ ಫ್ರಾನ್ಸಿಗೆ ಇದುವರೆಗೆ ೧೩೦೦ ವಿಮಾನಗಳು ಕಳುಹಿಸಿಕೊಡಲ್ಪಟ್ಟಿವೆ.

ಇಂಗ್ಲೀಷರು ಸ್ತ್ರೀ ವೈಮಾನಿಕರನ್ನು ಸಿದ್ಧಪಡಿಸುವ ಯೋಚನೆಯಲ್ಲಿದ್ದಾರೆ. ಫ್ರೆಂಚ್ ಯುವತಿಯರು ಈಗಾಗಲೇ ಆ ಕೆಲಸವನ್ನು ಮಾಡುತ್ತಿದ್ದಾರೆ.

ಅಮೇರಿಕಾದವರು ಕಳೆದ ಸೆಪ್ಟಂಬರ್ ತಿಂಗಳಿಂದ ಕಳೆದ ತಾ|| ೫ ರವರೆಗೆ ೧೧ ಲಕ್ಷ ಟನ್ ಭಾರದ ೧೬೦ ಹಡಗುಗಳನ್ನು ಹೊಸದಾಗಿ ಕಟ್ಟಿಸಿರುವರು.

ಈಗ ಯೂರೋಪುಸಮುದ್ರದಲ್ಲಿ ಅಮೇರಿಕನ್ನರ ೧೫೦ ಯುದ್ಧದ ಹಡಗುಗಳು ಸಂಚರಿಸುತ್ತಿವೆ. ಅವುಗಳೊಳಗೆಲ್ಲಾ ೪೦ ಸಾವಿರ ಮಂದಿಗಳವರೆಗೆ ಸೈನಿಕರಿದ್ದಾರೆ.

ಜರ್ಮನರ ಸಬ್‌ಮೇರೀನುಗಳು ಅಮೇರಿಕಾದೇಶಕ್ಕೆ ಬಂದು ಸಂಚರಿಸುತ್ತಿರುವುವೆಂಬ ವಾರ್ತೆಯನ್ನು ಅಮೇರಿಕಾಪ್ರಭುತ್ವದವರು ಕೇಳಿ ಜಾಗರೂಕತೆಯಿಂದ ಪರಿಶೋಧಿಸುತ್ತಿದ್ದಾರೆ.

ನೂತನ ಪ್ರಪಂಚಚರಿತ್ರದಲ್ಲಿ ಒಂದು ಮುಖ್ಯಾಂಶವೆಂದು ಹೇಳಲ್ಪಡಲು ಅರ್ಹವಾದ ರಚನೆಯಿಂದ ಕೂಡಿದ ಒಂದು ಯುದ್ಧದ ಹಡಗನ್ನು ಇಂಗ್ಲೀಷರು ನಿರ್ಮಿಸಿ ಅದನ್ನು ೨೦ ದಿನಗಳ ಕೆಳಗೆ ಸಮುದ್ರಕ್ಕೆ ಪ್ರವೇಶಗೊಳಿಸಿದರು.

ಅಮೇರಿಕಾದವರು ಈಗಾಗಲೇ ಮಿತ್ರಮಂಡಲಿಯವರ ಸಹಾಯಕ್ಕಾಗಿ ೭ ಲಕ್ಷಕ್ಕೆ ಮೀರಿಯೇ ಸೈನ್ಯವನ್ನು ಕಳುಹಿಸಿಕೊಟ್ಟಿದ್ದಾರೆ. ಈ ಜೂನ್ ತಿಂಗಳೊಂದರಲ್ಲೇ ಇನ್ನು ೨೫೦೦೦೦ ಮಂದಿಗಳನ್ನು ಕಳುಹಿಸಿಕೊಡುವವರಾಗಿದ್ದಾರೆ.

ಪ್ಯಾರಿಸ್ಸಿನಿಂದ ಲಂಡನ್ನಿಗೆ ವಿಮಾನದ ಮೂಲಕ ಅಂಚೆಯನ್ನು ಸಾಗಿಸಿಕೊಂಡು ಹೋಗಿ ೨||| ಗಂಟೆಯೊಳಗೆ ಸೇರಿರುವರು. ಆ ವೈಮಾನಿಕರು ಕೂಡಲೇ ಅಲ್ಲಿಂದ ಹೊರಟು ಪ್ಯಾರಿಸ್ಸಿಗೆ ೨ ಗಂಟೆ ೩೫ ನಿಮಿಷಗಳಲ್ಲಿ ಬಂದು ಸೇರಿದರು.

ಇಂಗ್ಲೀಷರು ಕಳೆದ ಮೇ ತಿಂಗಳಲ್ಲಿ ೧೯೭೨೭೪ ಟನ್ನುಗಳ ಭಾರವಾಹಕವಾದ ಹಡಗುಗಳನ್ನು ನಿರ್ಮಿಸಿದ್ದಾರೆ. ಅದರ ಹಿಂದಣ ತಿಂಗಳಲ್ಲಿ ೧೧೧೫೩೩ ಟನ್ನುಗಳ ಹಡಗುಗಳು ಕಟ್ಟಲ್ಪಟ್ಟಿದ್ದುವು. ಈಗ ಹಡಗಿನ ಕಟ್ಟಾಟವು ಬಹು ಶೀಘ್ರವಾಗಿ ನಡೆಯುತ್ತಿದೆ. ೫ ಸಾವಿರ ಟನ್ನುಗಳ ಒಂದು ಹಡಗು ೧೯ ದಿನಗಳ ಕಾಲದೊಳಗಾಗಿ ಕಟ್ಟಲ್ಪಡುತ್ತಿದೆ.

ಪ್ಯಾರಿಸ್ ಪಟ್ಟಣದಲ್ಲಿ ಮುಖ್ಯವಾದ ಯುದ್ಧಮಂತ್ರಿಸಭೆಯು ಕೂಡಿದ್ದಿತು. ಅದಕ್ಕೆ ಫ್ರೆಂಚರ ಮುಖ್ಯಮಂತ್ರಿ ಕ್ಲೆಮೆಂಕೋರವರು ಅಧ್ಯಕ್ಷರಾಗಿದ್ದರು. ಅದಕ್ಕೆ ಆಂಗ್ಲಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರು, ಲಾರ್ಡ್ ಮಿಲ್ನರ್‌ರವರು, ಅಮೇರಿಕಾ, ಜಪಾನ್, ಇಟಲಿ ರಾಯಭಾರಿಗಳೂ, ಜನರಲ್ ಫಾಕ್‌ರವರೂ, ಇನ್ನು ಕೆಲ ಮುಖ್ಯ ಸೇನಾನಿಗಳೂ ಕೂಡಿದ್ದರು.

ಸೀಮೆಯಲ್ಲಿ ಸಾಮ್ರಾಜ್ಯ ಯುದ್ಧ ಮಂತ್ರಿ ಸಭೆಯು ಕಳೆದ ತಾ|| ೧೧ರಲ್ಲಿ ಲಾಯಿಡ್ ಜಾರ್ಜ್‌ರವರ ಅಧ್ಯಕ್ಷತೆಯಿಂದ ಆರಂಭಿಸಲ್ಪಟ್ಟಿತು. ತಾ|| ೧೨ ನೆ ದಿನ ಸಾಮ್ರಾಜ್ಯ ಯುದ್ಧ ಸಭೆಯು ವಾಲ್ಟರ್ ಲಾಂಗ್‌ರವರ ಅಧ್ಯಕ್ಷತೆಯಿಂದ ಆರಂಭಿಸಲ್ಪಟ್ಟಿತು. ಅನೇಕ ಮಂದಿ ಅಧಿನಿವೇಶ ಮಂತ್ರಿಗಳು ಈ ಸಭೆಗಳಿಗಾಗಿ ಹೋಗಿ ಸೇರಿದ್ದಾರೆ. ನಮ್ಮ ಭರತಖಂಡದ ಪ್ರತಿನಿಧಿಗಳೂ ಹೋಗಿ ಸೇರಿದ್ದಾರೆ.

ಐರ್ಲಂಡಿನ ಗೌರ್ನರ್ ಜನರಲ್ಲರಾಗಿರುವ ಲಾರ್ಡ್ ಫ್ರೆಂಚರವರು ನೂತನವಾಗಿ ಒಂದು ಅಪ್ಪಣೆಯನ್ನು ಮಾಡಿ ಬರುವ ಸೆಪ್ಟಂಬರ್ ತಿಂಗಳ ಕೊನೆಯೊಳಗಾಗಿ ಪ್ರಜೆಗಳೊಳಗೆ ವ್ಯವಸಾಯ ಕೈಗಾರಿಕೆಗಳಿಗೆ ಲೋಪಬರದಿರುವಂತೆ ಸೈನ್ಯಕ್ಕೆ ೫೦ ಸಾವಿರ ಮಂದಿಗಳನ್ನು ಸೇರಿಸಬೇಕು. ಆ ಬಳಿಕ ತಿಂಗಳಿಗೆ ೨-೩ ಸಾವಿರದಂತೆ ಸೇರಿಸುತ್ತ ಬರಬೇಕು. ಈಗ ೧೮ ರಿಂದ ೨೭ ವರ್ಷ ವಯಸ್ಸಿನವರೂ ಅದಕ್ಕೆ ಮೀರಿದ ವಯಸ್ಸಿನವರೊಳಗೆ ಅರ್ಹರಾದವರು ಸೇರಬಹುದು ಎಂದು ತಿಳಿಯಪಡಿಸಿದ್ದಾರೆ.

ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರು ತಮ್ಮಲ್ಲಿರುವ ಭೌತಿಕಶಾಸ್ತ್ರಜ್ಞರು ೬೦೦ ಮಂದಿಗಳನ್ನು ಕೂಡಿಸಿ, ಯುದ್ಧಸಹಾಯಕ್ಕಾಗಿ ಯಾರುಯಾರು ಯಾವಯಾವ ತೆರದ ನವೀನ ಯುದ್ಧೋಪಕರಣಗಳನ್ನು ನಿರ್ಮಿಸಿಕೊಡಬಲ್ಲಿರೆಂದು ಕೇಳಲಾಗಿ ಅನೇಕರು ಅನೇಕ ರಚನೆಗಳನ್ನು ಮಾಡಿಕೊಡಲು ಒಪ್ಪಿಕೊಂಡಿರುವರು. ಅವರಲ್ಲಿ ಕೆಲವರು ಒಬ್ಬೊಬ್ಬರಿಗೆ ಒಂದೊಂದುನೂರು ನವೀನರಚನೆಗಳನ್ನು ಮಾಡಿಕೊಡಲು ಒಪ್ಪಿರುವರು. ಅಂಥವರಲ್ಲಿ ಒಬ್ಬರ ರಚನೆಯು ೧೦೦ ಮೈಲಿಗಳ ದೂರಕ್ಕೆ ಗುಂಡನ್ನು ಹೊಡೆಯಬಲ್ಲ ಹೊಸತೆರದ ಫಿರಂಗಿಯಾಗಿರುವುದು. ಈ ಫಿರಂಗಿಯು ಒಟ್ಟು ೪೯೪೭೭ ಟನ್ನುಗಳ ತೂಕವೂ, ೩೭೫ ಅಡಿಗಳ ಉದ್ದವೂ, ಅದರ ಬಾಯಿಯು ಮೇಲಿನಿಂದ ಕೆಳಗಣವರೆಗೆ ನೀಟಾಗಿರುವ ಉದ್ದದ ಅಳತೆಯು ೫|| ಅಡಿಯೂ, ಅದಕ್ಕೆ ಹಾಕಲ್ಪಡುವ ತೋಟಾದ ಉದ್ದವು ೨೬|| ಅಡಿಗಳೂ, ಭಾರವು ನೂರುಟನ್ನುಗಳೂ ಉಳ್ಳುದಾಗಿರುವುದು. ಈ ಮಹಾ ಫಿರಂಗಿಯಿಂದ ಹೊಡೆದ ಗುಂಡು ಸಾವಿರಾರು ಚದರಮೈಲಿಯಷ್ಟಗಲದಲ್ಲಿರುವ ಪ್ರದೇಶವನ್ನೆಲ್ಲಾ ಹಾಳುಗೆಡಹುವುದಲ್ಲದೆ ಅದರಿಂದ ಉತ್ಪನ್ನವಾಗುವ ವಿಷಧೂಮವು ಅವಲಯದಲ್ಲಿರುವ ೭ ಲಕ್ಷ ಜನರನ್ನು ಮತಿಗೆಡಿಸಿ ಹುಚ್ಚರನ್ನು ಮಾಡಿಬಿಡುವುದು.

ಸ್ವೀಕಾರ.

ಮೈಸೂರು ಮ|| ರಾ|| ಹಾವಣ್ಣನವರ ಮಗಳ ಲಗ್ನದಲ್ಲಿ ೧ ರೂ, ಮ|| ರಾ|| ಯಜಮಾನ್ ಸೋಮಣ್ಣನವರ ಅಣ್ಣನವರ ಮಗನ ಲಗ್ನದಲ್ಲಿ ೧ ರೂ, ಡೆಂಕಣಿಕೋಟೆಯ ಮ||ರಾ|| ನೋಟಿಗಾರ್ ನಂಜಪ್ಪನವರ ಮಗಳ ಲಗ್ನದಲ್ಲಿ ೧ ರೂ. ಈ ಪ್ರಕಾರ ಮೈಸೂರು ಕೈ. ವೈ. ವೀರಲಿಂಗಪ್ಪನವರ ಅಗ್ರತಾಂಬೂಲಕ್ಕಾಗಿ ತೆಗೆಯಲ್ಪಟ್ಟ ರೂಪಾಯಿಗಳನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಪತ್ರವ್ಯವಹಾರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿ

ಶ್ರೀಮಚ್ಛಿನ್ಮೂಲಾದ್ರಿ ಬೃಹನ್ಮಠ ಮಹಾ ಸಂಸ್ಥಾನದಿಂದ ಸಮಸ್ತ ಭಕ್ತಾದಿಗಳಿಗೆ ತಿಳಿಯಪಡಿಸುವುದೇನೆಂದರೆ—

ಶ್ರೀ ಮಹಾ ಸ್ವಾಮಿಯು ತಾ|| 6.6.1918 ಕ್ಕೆ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರ ಮುಕ್ಕಾಮಿಗೆ ಚಿತ್ತೈಸೋಣಾಗುತ್ತದೆ. ಇಲ್ಲಿ ಪೋಸ್ಟಾಫೀಸು ಇದೆ. ದರ್ಶನಕ್ಕೆ ಬರತಕ್ಕವರು ಪ್ಯಾಸೆಂಜರ ಟ್ರೇನಿನಿಂದ ಸಾಸಲು ಸ್ಟೇಷನ್ನಿಗೆ ಬರತಕ್ಕದ್ದು. ಒಂಭತ್ತು ಮೈಲು ಫಾಸಲೆ ಇದೆ. ಇಲ್ಲಿ ಮೇಲ್ ನಿಲ್ಲುವುದಿಲ್ಲ.

ಮುಕ್ಕಾಂ ಅಂದನೂರು, }
ತಾ|| ೬—6—1918. }

ಏಜಂಟ್,
ಸಂಸ್ಥಾನ ಚಿತ್ರದುರ್ಗ.

ದಾವಣಗೆರೆ.

ಚಿತ್ರದುರ್ಗ, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ವಾಸವಾಗಿರುವ ಮೈಸೂರು ಸೀಮೆಯವರಾದ ವೀರಶೈವ ಬಡ ವಿದ್ಯಾರ್ಥಿಗಳು ಅಂದರೆ ಇಂಗ್ಲೀಷ್ ಹೈಸ್ಕೂಲ್ ಮತ್ತು ಕಾಲೇಜಿನಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಸ್ಕಾಲರ್‌ಷಿಪ್ ದೊರೆಯುತ್ತದೆ. ಅಪ್ಲಿಕೇಷನ್ ಫಾರಂ ಶಿವಮೊಗ್ಗ ಫಂಡಿನ ಸೆಕ್ರೆಟರಿಯವರಲ್ಲಿಯೂ, ಚಿತ್ರದುರ್ಗದ ಪ್ಲೀಡರ್ ಸಿದ್ಧನಂಜಪ್ಪನವರಲ್ಲಿಯೂ ದೊರೆಯುವುವು. ತೆಗೆದುಕೊಂಡು ಈ ತಿಂಗಳು ಇಪ್ಪತ್ತೈದು ತಾರೀಖಿನೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು.

2. ಚಿತ್ರದುರ್ಗ, ಶಿವಮೊಗ್ಗ, ಕಡೂರ್, ತುಮ್ಕೂರ್ ಈ ನಾಲ್ಕು ಡಿಸ್ಟ್ರಿಕ್ಟಿನ ವೀರಶೈವ ಬಡ ವಿದ್ಯಾರ್ಥಿಗಳು ದಾವಣಗೆರೆ ಅಪ್ಪರ್‌ಸೆಕೆಂಡರಿ ಕ್ಲಾಸಿನಲ್ಲಿ ಅಭ್ಯಾಸಮಾಡುವವರಿಗೆ ಪುಸ್ತಕಗಳಿಗೋಸ್ಕರ ಸ್ಕಾಲರ್‌ಷಿಪ್ ದೊರೆಯುತ್ತದೆ. ಅಪೇಕ್ಷೆಯುಳ್ಳವರು ಈ ತಿಂಗಳು ತಾ|| 25 ರ ಒಳಗೆ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಬರೆಯತಕ್ಕದ್ದು.

3. ಅಕ್ಷರಗಳು ಸ್ಫುಟವಾಗಿದ್ದು ಸಂಪೂರ್ಣ ವಿಳಾಸ ಬರೆಯತಕ್ಕದ್ದು. ಫಾರಂನಲ್ಲಿರುವ ಹೆಡ್ಡಿಂಗ್ ತಪ್ಪು ಇಲ್ಲದಂತೆ ಬರೆಯುವುದು. ಸರಿಯಾಗಿ ಅರ್ಥವಾಗದಂತೆ ಬರೆಯಲ್ಪಡುವ ಅಪ್ಲಿಕೇಷನ್‌ಗಳು ಅಂಗೀಕರಿಸಲ್ಪಡುವುದಿಲ್ಲ.

ದಾವಣಗೆರೆ, } ಸೆಕ್ರೆಟರಿ
ತಾ|| 8—6—18. } ವೀರಶೈವ ವಿದ್ಯಾವರ್ಧಕ ಸಂಘದ ಫಂಡ್.

ಅಮೋಘವಾದ ಸಹಾಯ.

ಶ್ರೀ ಶ್ರೀ ಹಾನಗಲ್ಲ ಮಠದ ಕುಮಾರಸ್ವಾಮಿಗಳವರು ಶ್ರೀ ಶ್ರೀ ಹಾವೇರಿ ಹುಕ್ಕೇರಿ ಮಠದ ಮಹಾಸ್ವಾಮಿಗಳವರನ್ನೂ ಕೆಳದೀ ಸಂಸ್ಥಾನ ಹಿರೇಮಠದ ಪಟ್ಟಾಧ್ಯಕ್ಷರನ್ನೂ ಕೂಡಿಕೊಂಡು ಶಿಕಾರಿಪುರದ ಪ್ರಮುಖ ವೀರಶೈವ ಜನರನ್ನು ಪ್ರೋತ್ಸಾಹಗೊಳಿಸಿ ನಗರ ಡಿವಿಜನ್ನು ವೀರಶೈವ ವಿದ್ಯಾವರ್ಧಕ ಸಂಘದ ಸಹಾಯಕ್ಕಾಗಿ ಮೂರು ದಿನಗಳಷ್ಟು ಅಲ್ಪಕಾಲದಲ್ಲಿಯೇ ಎರಡು ಸಾವಿರದ ಏಳುನೂರು ರೂಪಾಯಿಗಳವರೆಗೆ ಚಂದಾ ಹಾಕಿಸಿ ಆಗಲೆ ವಸೂಲಾದ ಎರಡು ಸಾವಿರದ ಒಂದುನೂರು ರೂಪಾಯಿಗಳನ್ನು ಪೂರ್ತಿಯಾಗಿ ಕಳುಹಿಸಿಕೊಟ್ಟಿರುತ್ತಾರೆ. ಆ ಪೂಜ್ಯರಿಂದ ಇಷ್ಟು ಆದದ್ದು ಸ್ಥಾನಗೌರವದಿಂದಲ್ಲ, ಮಠಾಧಿಕಾರದ ಮಹಿಮೆಯಿಂದಲೂ ಅಲ್ಲ, ಸಂಸ್ಥಾನದ ಆಡಂಬರದ ಸಹಾಯದಿಂದಲೂ ಅಲ್ಲ. ಮತ್ತಾವುದರಿಂದಲೆಂದರೆ ಶಿಷ್ಯಮಂಡಲಿಯನ್ನು ಉದ್ಧರಿಸಬೇಕೆಂಬ ನಿಜವಾದ ಅವರ ಕಳಕಳಿಯಿಂದ ಮಾತ್ರವೇ. ಇತರ ಸಹಾಯಗಳಿಲ್ಲದ ಶ್ರೀ ಹಾನಗಲ್ಲ ಮಠದ ಮಹಾಸ್ವಾಮಿಗಳವರಿಂದ ಇಷ್ಟಾಗಿರುವಾಗ ಸ್ಥಳೀಯ ಗೌರವವುಳ್ಳ ಮಠಾಧಿಕಾರಿಗಳು ಪ್ರಯತ್ನಪಟ್ಟರೆ ಲಕ್ಷಾಂತರ ರೂಪಾಯಿಗಳು ಶೇಖರವಾಗುವುದು ಅಸಾಧ್ಯವೇ? ನಗರ ಡಿವಿಜನ್ ವೀರಶೈವರಿಂದ ಯಾವ ಉತ್ಪತ್ತಿಯೂ ಇಲ್ಲದ ಹಾನುಗಲ್ಲ ಮಠದ ಮಹಾಸ್ವಾಮಿಗಳವರೇ ಇಷ್ಟು ಸಹಾಯವನ್ನು ಮಾಡುತ್ತಿರುವಾಗ ಬಹು ಕಾಲದಿಂದ ಈ ಪ್ರಾಂತ್ಯದ ಭಕ್ತಮಂಡಲಿಯ ಸೇವೆಯನ್ನು ಹೊಂದಿರುವ ಮತ್ತು ಹೊಂದುತ್ತಿರುವ ಸ್ಥಳೀಯ ಮಠಗಳು ತಮ್ಮ ಶಿಷ್ಯರ ವಿದ್ಯಾಭಿವೃದ್ಧಿಗೆ ಯತ್ನಿಸದಿರಬಹುದೆ? ತಮ್ಮ ಮಠಗಳಲ್ಲಿ ಬೆಳಕು ಮಾಡುವುದಕ್ಕೆ ಬಲಾತ್ಕಾರದಿಂದಾದರೂ ದೀಪಾರಾಧನೆ ಕಾಣಿಕೆಗಳನ್ನು ಎತ್ತುತ್ತಿರುವ ಸಂಸ್ಥಾನಾಧಿಪತಿಗಳು ಶಿಷ್ಯರ ಹೃದಯಗಳನ್ನು ಮುಸುಕಿರುವ ಕತ್ತಲೆಯನ್ನು ಕಂಡು ಸುಮ್ಮನಿರುವರೇ? ಆದ್ದರಿಂದ ವೀರಶೈವರ ವಿದ್ಯಾಭಿವೃದ್ಧಿಯೇ ಮುಖ್ಯೋದ್ದೇಶವಾಗುಳ್ಳ ಸಂಘದ ಕಾರ್ಯಗಳು ಶೀಘ್ರದಲ್ಲಿಯೇ ನೆರವೇರುವಂತೆ ಸ್ಥಳೀಯ ಮಠಾಧಿಪತಿಗಳ ನಿಜವಾದ ಯತ್ನಗಳಿಂದ ಪೂರ್ಣ ಸಹಾಯ ಮಾಡಬೇಕಾಗಿ ಕಮಿಟಿಯವರು ಪ್ರಾರ್ಥಿಸುತ್ತಾರೆ. ವೀರಶೈವ ಬಂಧು.

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಹೋರೂಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೋಪರ್‌ಜಾನ್ ಸೀರೆ ...	5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ ...	3.0.0	ಜಪಾನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ ...	5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
26 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 33

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಳ್ಳೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಸ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಸಂಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಪಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಳಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
10 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

೧೯೧೮ ನೆಯ ಇಸವಿ ಜೂನ್ ತಾ|| ೧೬ ರಿಂದ ೧೯೧೮ ನೆಯ ಜೂನ್ ತಾ|| ೨೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಜ್ಯೇಷ್ಠ ಶು|| ಅಷ್ಟಮಿಯಿಂದ ಜ್ಯೇಷ್ಠ ಶು|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು
16	ಭಾನು	ಅಷ್ಟಮಿ	60	ಪೂಫ	4-43	3
17	ಸೋಮ	ಅಷ್ಟಮಿ	2-1	ಉಫ	11-3	4
18	ಮಂಗಳ	ನವಮಿ	7-11	ಹಸ್ತ	17-36	5
19	ಬುಧ	ದಶಮಿ	12-5	ಚಿತ್ತ	24-4	6
20	[1]ಗುರು	ಏಕಾದ	10-32	ಸ್ವಾತಿ	29-54	7
21	ಶುಕ್ರ	ದ್ವಾದಶಿ	20-5	ವಿಶಾಖ	34-52	8
22	ಶನಿ	ತ್ರಯೋ	22-34	ಅನೂರಾಧ	38-46	9

(1) ಖಾಸ್ ವರ್ಧಂತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೀಲಾಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಕೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜೂನ್ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೨೫

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋ ಷದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತ ಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾ ದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿ . ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭ ಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿ ುವ ಕಥೆಗಳೆಲ್ಲಾ ರಸವತ್ತಾಗಿ ಬರಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀ ಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಅಷ್ಟಾವರಣ, ಕರಣಹಸು , ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತ ಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗ ಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾ ರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗ ನ್ನು ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾ ು ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಟೀಕೆ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟ ಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಕಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸವಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು



ೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ರ್ಮಾನ್ ಬೀಸಣಿಗೆ 1, ಕಾಮಂತಿಗೆಮುವ್ವ 1, ಸೆಂಟ್ ಬಾಟಲ್ 1, ದಂತದ ಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅದ್ದಿಕೆ 1, ಗಡಿಯಾರದ ್ತ್ರರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ರಾಯಲ್ ಸೀಸೆ 1, ವಸ್ತ್ರದ ಪರಟು ಗುಂಡಿಗಳು 4, ಜರ್ಮಾನ್ ಕೈವಸ್ತ್ರ , ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುನ್ನಾ 15 ಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. ೬-0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
37 ೩, ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶಶತಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚಂದ್ರ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 28

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಯುತ್ತಿರುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಆಮ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಲ್. ವಿ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರುಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ವಿಕ್ರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
12 ಆನಂದ ಬುಕ್‌ಡಿಪೋ, ಮೈಸೂರು.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧. ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧೧೦.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾ ರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷ್ಯದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
30 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

(೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(೩) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ"ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧೀ ಪತ್ರಕಾರರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣವಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

7 ವಿಳಾಸ—ಎಂ. ಎಂ. ಹರ್ಡೀಕರ್ ದಾವಣಗೆರೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜೂನ್ ತಾ|| ೨೩ ನೆಯ ಭಾನುವಾರ.

ಅರ್ಥಸಾಧಕಸಭೆ.

ಈ ಸಭೆಯ ವಾರ್ಷಿಕಾಧಿವೇಶನವು ಕಳೆದ ತಾ|| ೧೭ ರಲ್ಲಿ ದಿವಾನ್ ಸರ್ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಿಂದ ಆರಂಭಿಸಲ್ಪಟ್ಟು ೪ ದಿನ ನಡೆದಿತು. ಕೌನ್ಸಿಲರುಗಳು, ಶಾಖಾ ಮುಖ್ಯಾಧಿಕಾರಿಗಳು, ಡಿ|| ಕಮಿಷನರುಗಳು, ಡಿಸ್ಟ್ರಿಕ್ಟ್ ಎ|| ಸೂಪರಿಂಟೆಂಡೆಂಟರುಗಳು, ಶಾಖಾ ಮುಖ್ಯಸಂಘಗಳ ಉಪಸಂಘಗಳ ಸಭಿಕರುಗಳು, ಅನೇಕ ಮಂದಿ ಪುರಪ್ರಮುಖರುಗಳು ಸಹ ಸಭೆಯನ್ನಲಂಕರಿಸಿದ್ದರು. ಮಧ್ಯಾಹ್ನ ೧೨ ಗಂಟೆಗೆ ಸಭಾಕಾರ್ಯೋಪಕ್ರಮವಾಯಿತು. ಆದಿಯಲ್ಲಿ ದಿವಾನರು ತಮ್ಮ ಉಪನ್ಯಾಸವನ್ನು ಮಾಡಿದರು. ಬಳಿಕ ಸಭೆಯ ಮುಖ್ಯಶಾಖಾ ಸಂಘಗಳು ಕಳೆದ ವರ್ಷ ನಡೆಯಿಸಿರುವ ಮತ್ತು ಮುಂದೆ ನಡೆಯಿಸಬೇಕೆಂದಿರುವ ಕಾರ್ಯಗಳ ವರದಿಯು ಓದಲ್ಪಟ್ಟಿತು. ಅಲ್ಲಿಂದೀಚೆಗೆ ಮೂರು ದಿನಗಳವರೆಗೆ ಸಭಿಕರು ಕೃಷಿ, ವಾಣಿಜ್ಯ, ಶಿಲ್ಪ, ವಿದ್ಯಾಭ್ಯಾಸ–ಇವುಗಳಿಗೆ ಸಂಬಂಧಪಟ್ಟ ಅನೇಕ ವಿಷಯಗಳಲ್ಲಿ ತಂತಮ್ಮ ಸೂಚನೆಗಳನ್ನು ನಿವೇದಿಸಿರುವರು.

ಈ ಅರ್ಥಸಾಧಕ ಸಭೆಯ ಮೂಲೋದ್ದೇಶದಲ್ಲಿ ಅಡಗಿರುವ ಒಂದೊಂದು ವಿಷಯಗಳೂ ಎಷ್ಟೋ ಅಗಾಧವಾಗಿರುವವು. ೪ ವಿಷಯಗಳನ್ನೂ ಪರಿಗ್ರಹಿಸಿ ಏಕಕಾಲದಲ್ಲಿ ಕೆಲಸ ಮಾಡಬೇಕೆಂದಿರುವಾಗ ಅದರ ಕಾರ್ಯಜಾಲವೂ ಭಾರವೂ ಎಷ್ಟು ವಿಸ್ತಾರವಾಗಿರುವುದೆಂಬುದನ್ನು ಹೇಳಬೇಕಾಗಿಲ್ಲ. ಆದರೂ ಇದರ ನಿರ್ವಾಹ ವಿಷಯದಲ್ಲಿ ಪ್ರಭುತ್ವದವರೂ ಪ್ರಜಾಪಕ್ಷದವರೂ ಸಹ ಸೇರಿ ತೋರಿಸುತ್ತಿರುವ ಶ್ರದ್ಧೆಯನ್ನು ನೋಡಿದರೆ ಬರುಬರುತ್ತ ಈ ಸಭಾ ಕಾರ್ಯಭಾಗಗಳು ಬಲುಮಟ್ಟಿಗೆ ಫಲಕಾರಿಯಾಗದೆ ಹೋಗಲಾರವೆಂದು ಹೇಳಬಹುದಾಗಿದೆ. ಸಂಪತ್ತಿನ ಆಗಮನಕ್ಕೆ ವಿದ್ಯಾ, ಶಿಲ್ಪ, ಕೃಷಿ, ವಾಣಿಜ್ಯಗಳೇ ಮುಖ್ಯವಾದ ೪ ಹೆಬ್ಬಾಗಿಲುಗಳು. ಈ ನಾಲ್ಕು ದ್ವಾರಗಳೂ ಸುಗಮವಾದರೆ ಇಷ್ಟಾರ್ಥಸಿದ್ಧಿಯು ದೂರದಲ್ಲಿರುವುದಿಲ್ಲ. ಅದಕ್ಕೆ ತಕ್ಕ ನಿರಂತರಸೋತ್ಸಾಹ ಕೃಷಿಯು ಮಾತ್ರ ಹೀಗೆಯೇ ಮಾಡಲ್ಪಡುತ್ತಿರಬೇಕು.

ಪ್ರಜಾಪ್ರತಿನಿಧಿಸಭೆಗಿಂತಲೂ ಘನತರವಾದ ಕಾರ್ಯಭಾರವನ್ನು ಮಾಡಿ ದೇಶವನ್ನುದ್ಧರಿಸಬಲ್ಲುದಾಗಿರುವ ಈ ಅಭೂತಪೂರ್ವವಾದ ಸಭೆಯನ್ನು ಸ್ಥಾಪಿಸಿದ ಕೀರ್ತಿಪ್ರತಿಷ್ಠೆಗಳು ಶ್ರೀಮನ್ಮಹಾರಾಜರವರಿಗೆ ಪ್ರಾಪ್ತವಾಗಿದ್ದರೂ, ಅದನ್ನು ತಕ್ಕ ಕ್ರಮದಿಂದ ಸಾರ್ಥಕಪಡಿಸಲು ಹಗಲಿರುಳೂ ಚಿಂತಿಸುತ್ತಿರುವ ಸರ್ ವಿಶ್ವೇಶ್ವರಯ್ಯನವರ ಕರ್ತವ್ಯಜಾಗರೂಕತೆಯನ್ನು ನಾವೆಂದಿಗೂ ಮರೆಯುವಂತಿರುವುದಿಲ್ಲ. ಆದಿಯಿಂದಲೂ ಅವರು ಮಹಾದರ್ಶವನ್ನೇ ಮೈಸೂರು ಪ್ರಜೆಗಳ ಮುಂದಿಡುತ್ತ, ಅವರ ಹೀನಸ್ಥಿತಿಗತಿಗಳನ್ನೂ ಪಶ್ಚಿಮ ದೇಶಗಳ ಸಂಪದ್ವಿಶಿಷ್ಟ ರಾಷ್ಟ್ರಗಳ ಸ್ಥಿತಿಗತಿಗಳನ್ನೂ ಒಂದರ ಮಗ್ಗುಲಲ್ಲಿ ಒಂದನ್ನು ಇರಿಸಿ ತಾರತಮ್ಯವನ್ನು ತೋರ್ಪಡಿಸಿ, ನಮ್ಮಗಳ ಕ್ಷೀಣಸ್ಥಿತಿಯ ನಿವಾರಣೆಗೆ ನಾವು ಎಷ್ಟು ವಿಶೇಷವಾದ ಪ್ರಯತ್ನಗಳನ್ನು ನಡೆಯಿಸಬೇಕಾಗಿರುವುದೆಂಬುದನ್ನೂ, ಅದಕ್ಕೆ ಎಷ್ಟು ಅವಕಾಶವಿದೆಯೆಂಬುದನ್ನೂ, ಅದನ್ನು ನಾವು ತಕ್ಕಹಾಗೆ ವಿನಿಯೋಗಿಸಿಕೊಳ್ಳದೆ ನಿಷ್ಫಲಮಾಡಿ ಜ್ಯೇಷ್ಠಾಲಕ್ಷ್ಮಿಯ ದಾಸಾನುದಾಸರಾಗಿ ಬಡವರಲ್ಲೆಲ್ಲಾ ಬಡವರೆಂಬುವವರು ಜಗತ್ತಿನಲ್ಲೆಲ್ಲಾ ನಾವೇ ಎಂಬುದನ್ನು ಹೇಗೆ ತೋರ್ಪಡಿಸಿಕೊಂಡಿರುವೆವೆಂಬುದನ್ನೂ ಒತ್ತೊತ್ತಿ ಹೇಳಿ, ನಮ್ಮನ್ನು ಗಾಢನಿದ್ರೆಯಿಂದ ತಟ್ಟೆಬ್ಬಿಸುತ್ತಿರುವರು. ಈ ಸಲ ಮಾಡಿರುವ ಅವರ ಉಪನ್ಯಾಸದಲ್ಲೂ ಈ ಪ್ರಶಸ್ತವಾದ ಭಾಗವು ಇಲ್ಲದೆಹೋಗಿಲ್ಲ. ನಮ್ಮ ಸ್ಥಿತಿಯನ್ನು ಅವರು ಸಪ್ರಮಾಣವಾಗಿ ಉದಹರಿಸಿಕೊಟ್ಟಿರುವುದು ಹೇಗೆಂದರೆ—

೨೯೦೦೦ ಚದರಮೈಲಿ ವಿಸ್ತೀರ್ಣವುಳ್ಳ ಮೈಸೂರು ರಾಜ್ಯದಲ್ಲಿ ೬೦ ಲಕ್ಷ ಪ್ರಜೆಗಳಿರುವರಷ್ಟೆ. ಈ ರಾಜ್ಯದ ಐಶ್ವರ್ಯವೆಲ್ಲಾ ಎಷ್ಟಾಗುವುದೆಂದರೆ— ೭೦ ಲಕ್ಷ ಎಕರೆಯಳತೆಯುಳ್ಳ ಭೂಮಿಯ ಒಟ್ಟು ಬೆಲೆ ೩೪ ಕೋಟಿ ರೂ, ಕೆರೆ ಕಾಲ್ವೆಗಳ ಬೆಲೆ ೩೫ ಕೋಟಿ ರೂ, ಹೊಸ ನೀರಾವರಿ ಕೆಲಸಗಳ ಬೆಲೆ ೩ ಕೋಟಿ, ಕಾಡುಗಳ ಮತ್ತು ಅವುಗಳ ಉತ್ಪತ್ತಿ ೧೦ ಕೋಟಿ, ಖನಿಜಗಳು ೩೫ ಕೋಟಿ, ಪ್ರಜೆಗಳ ಕಟ್ಟಡಗಳು ೨೩ ಕೋಟಿ, ಸರ್ಕಾರಿ ಕಟ್ಟಡಗಳು ೩ ಕೋಟಿ, ಆಭರಣಗಳು ಮೊದಲಾದ ಉಪಕರಣಗಳು ೧೦ ಕೋಟಿ, ದನಕರುಗಳು ವ್ಯವಸಾಯೋಪಕರಣಗಳು ೨೦ ಕೋಟಿ, ಲೋಹಮಾರ್ಗ ೫ ಕೋಟಿ, ಸಾಧಾರಣಮಾರ್ಗಗಳು ೩ ಕೋಟಿ, ವಿದ್ಯುಚ್ಛಕ್ತಿ ಕಾರ್ಯಗಳು ೧ ಕೋಟಿ, ನೀರಿನ ನಲ್ಲಿಗಳು ಬಚ್ಚಲುಗಳು ೧ ಕೋಟಿ, ವ್ಯಾಪಾರಸಾಮಗ್ರಿಗಳು ೧೫ ಕೋಟಿ, ಬ್ಯಾಂಕುಗಳು ಇತರ ಸಂಘಗಳು ೨ ಕೋಟಿ, ಚಿನ್ನ ಬೆಳ್ಳಿಯ ನಗ ನಾಣ್ಯಗಳು ೩ ಕೋಟಿ, ಒಟ್ಟು ೨೦೩ ಕೋಟಿ ರೂ. ಗಳು ಮೈಸೂರು ರಾಜ್ಯದ ಒಟ್ಟು ಆಸ್ತಿಯ "ಅಂದಾಜು" ಆಗಿರುವುದು. ಈ ಆಸ್ತಿಯನ್ನು ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಹಂಚಿಹಾಕಿದರೆ ತಲೆಗೆ ೩೪೮ ರೂ. ನಂತೆ ಆಗುತ್ತದೆ. ಇತರ ದೇಶಗಳಲ್ಲಿರುವ ಪ್ರಜೆಗಳ ಆಸ್ತಿಯು ತಲೆಯೊಂದಕ್ಕೆ ಹೇಗಿರುವುದೆಂದರೆ— ಇಂಗ್ಲೆಂಡಿನಲ್ಲಿ ೬೦೦೦ ರೂ. ಕೆನಡಾದಲ್ಲಿ ೪೪೪೦ ರೂ. ಆಸ್ಟ್ರೇಲಿಯಾದಲ್ಲಿ ೩೯೬೦ ರೂ. ಸಂಸ್ಥಾನದ ಹುಟ್ಟುವಳಿಯು ೧೯೧೫ ನೆ ವರ್ಷದಲ್ಲಿ ಬೇಸಾಯದಿಂದ ೧೮ ಕೋಟಿ, ಕೈಗಾರಿಕೆಯಿಂದ ೪ ಕೋಟಿ ರೂ, ಆಗಿರುವುದು. ಇದನ್ನು ಪ್ರಜಾಸಂಖ್ಯೆಗೆ ಹಂಚಿಹಾಕಿದರೆ ತಲೆಯೊಂದಕ್ಕೆ ಸಂಪಾದನೆಯು ೩೧ ರೂ. ಆದಂತೆ ಆಗುವುದು. ಬೆಲೆಯೇರಿರುವ ಕಾಲದಲ್ಲಿ ೪೦ ರೂ. ವರೆಗೂ ಆಗಬಹುದು. ಆದರೆ ಮೇಲೆ ಹೇಳಿರುವ ಇತರ ದೇಶಗಳ ಪ್ರಜೆಗಳ ಸಂಪಾದನೆಯು ತಲೆಯೊಂದಕ್ಕೆ ೫೦೦ ರೂ. ನಿಂದ ೬೨೦ ರೂ. ಗಳವರೆಗೆ ಆಗುವುದು.

ಈ ವಿವರಣವನ್ನು ನೋಡಲಾಗಿ ನಾವು ಎಷ್ಟು ಬಡತನದಲ್ಲಿ ಬಿದ್ದಿದ್ದೇವೆ ನಮ್ಮ ಆರ್ಜನೆಯು ಎಷ್ಟು ಹೀನತರವಾಗಿದೆಯೆಂಬುದು ಸುವ್ಯಕ್ತವಾಗುವುದು. ಈ ತಾರತಮ್ಯವನ್ನು ಸರ್ ವಿಶ್ವೇಶ್ವರಯ್ಯನವರು ವಿವರಿಸಿ, ಪಾಶ್ಚಾತ್ಯದೇಶದಲ್ಲಿ ೧೦೦ ಕ್ಕೆ ೯೦ ರಂತೆ ವಿದ್ಯಾವಂತರಿದ್ದರೆ ನಮ್ಮಲ್ಲಿ ೧೦೦ ಕ್ಕೆ ೬ ರಂತೆ ವಿದ್ಯಾವಂತರು ಸಿಕ್ಕುತ್ತಲಿದ್ದಾರೆಂಬುದರಿಂದ ನಮ್ಮಲ್ಲಿರುವ ವಿದ್ಯಾಹೀನತೆಯನ್ನು ತೋರ್ಪಡಿಸಿ, ನಾವು ಸರ್ವವಿಧದಿಂದಲೂ ಅಭಿವೃದ್ಧಿಗೆ ಬರುವುದಕ್ಕೆ ನಮ್ಮ ದೇಶದ ಸ್ಥಿತಿಯು ಎಷ್ಟು ಅನುಕೂಲವಾಗಿದೆಯೆಂಬುದನ್ನು ನಮ್ಮಲ್ಲಿರುವ ನದಿಗಳು, ಬೆಟ್ಟಗಳು, ಗಣಿಗಳು, ಕಾಡುಗಳು ಮೊದಲಾದ ಸಾಧನ ಸಂಪತ್ತಿಗಳ ಉದಾಹರಣೆಯಿಂದ ವ್ಯಕ್ತಪಡಿಸಿ, ನಮ್ಮ ಜನರು ವಿದ್ಯಾವಂತರಾಗಿ, ಕಾಲವನ್ನು ವ್ಯರ್ಥವಾಗಿ ಕಳೆಯುವ ಚಾಳಿಯನ್ನು ನಿರ್ಮೂಲಗೊಳಿಸಿ, ಮೈಬಗ್ಗಿ ಕೆಲಸಮಾಡುವ ಪರಿಪಾಟಿಯನ್ನಿಟ್ಟುಕೊಂಡು, ನಮ್ಮ ವ್ಯವಸಾಯ ಶಾಖೆಯವರು ಹೇಳಿಕೊಡುವಂತೆ ಶಾಸ್ತ್ರೀಯ ವ್ಯವಸಾಯ ಕ್ರಮವನ್ನು ರೂಢಿಗೆ ತಂದರೆ, ನಮ್ಮ ಆರಣ್ಯಕ ವಸ್ತುಗಳನ್ನೂ ಖನಿಜಗಳನ್ನೂ ಸತ್ಕ್ರಮವಾಗಿ ಉಪಯೋಗಕ್ಕೆ ತಂದುಕೊಂಡರೆ, ನಮಗೆ ಬೇಕಾಗುವ ಬಟ್ಟೆಬರೆ ಮೊದಲಾದ ಅವಶ್ಯಕ ಸಾಮಗ್ರಿಗಳನ್ನು ನಾವೇ ಸಿದ್ಧಪಡಿಸಿಕೊಳ್ಳುವಂತಾದರೆ, ನಮ್ಮ ಸಂಪತ್ತು ಎಷ್ಟೋ ಹೆಚ್ಚುವುದೆಂದು ಉಪದೇಶಿಸಿರುತ್ತಾರೆ. ಮತ್ತು ಈ ಕಾರ್ಯಸಾಧನೆಗಾಗಿ ಜನರನ್ನು ಹೇಗೆ ಸನ್ನದ್ಧರನ್ನು ಮಾಡಬೇಕೆಂಬುದನ್ನು ಕೂಡ ಇವರು ಹೇಗೆ ಸೂಚಿಸಿರುತ್ತಾರೆಂದರೆ—ನಮ್ಮ ದೇಶಕ್ಕೆ ದೊಡ್ಡ ಆಸ್ತಿಯಾಗಿರುವ ಪ್ರಜೆಗಳಲ್ಲಿ ಮುಕ್ಕಾಲು ಭಾಗದವರೆಲ್ಲರೂ ಕೃಷಿಯೊಂದನ್ನೇ ನಂಬಿಕೊಂಡಿರುವುದು ತಪ್ಪು. ಮಳೆಬೆಳೆಗಳ ನಚ್ಚಿಗೆಯಿಲ್ಲದ ಈಗಣ ಕಾಲದಲ್ಲಿ ಇದೊಂದುದ್ಯೋಗವನ್ನೇ ನಂಬಿಕೊಂಡಿದ್ದರೆ ಒಂದೊಂದುಸಲ ಕ್ಷಾಮತಟ್ಟಿದರೆ ಸೈರಿಸಿಕೊಳ್ಳುವುದೇ ಕಷ್ಟವಾಗುವುದು. ವ್ಯವಸಾಯವೊಂದನ್ನೇ ನಂಬಿ ಐಶ್ವರ್ಯವಂತರಾಗುವುದು ಕಷ್ಟ. ಆದುಕಾರಣ ೧೪ರಿಂದ ೧೮ ವಯಸ್ಸಿನೊಳಗಣ ನಮ್ಮ ಹುಡುಗರಿಗೆಲ್ಲಾ ಆಯಾಪ್ರಾಂತಕ್ಕೆ ಅವಶ್ಯಕವಾದ ಮತ್ತು ಅನುಕೂಲವಾದ ಯಾವುದಾದರೊಂದು ತರದ ಕಸಬನ್ನು ಕಲಿಸಬೇಕು. ಸ್ತ್ರೀಯರಿಗೂ ಕೂಡ ಯಾವುದಾದರೊಂದು ತೆರದ ಕೈಗಾರಿಕೆಯು ಬಂದಿರುವಂತೆ ಮಾಡಿಡಬೇಕು. ನಮ್ಮ ದೇಶದ ಪ್ರಜಾಸಂಖ್ಯೆಯಲ್ಲಿ ¼ ಭಾಗದಷ್ಟು ಪ್ರಜೆಗಳಾದರೂ ವಾಣಿಜ್ಯದಲ್ಲಿ ಪ್ರವರ್ತಿಸುವಂತೆಯೂ ಆ ವ್ಯಾಪಾರವನ್ನಾದರೂ ಈಗಣ ಕಾಲಕ್ಕೆ ಅನುಗುಣವಾಗಿ ನಡೆಯಿಸುವಂತೆಯೂ ಮಾಡಬೇಕು. ಇದೆಲ್ಲಾ ಸಾಧ್ಯವಾಗಬೇಕಾದರೆ ಪ್ರಜೆಗಳು ಮುಖ್ಯವಾಗಿ ಪ್ರಯತ್ನಿಸಬೇಕು. ಎಂದು ಹೇಳಿ, ಆ ಕಾರ್ಯನಿರ್ವಾಹಕ್ಕೆ ಇದುವರೆಗೆ ಸ್ವಸಂತೋಷದಿಂದ ೮೦೦೦ ಪ್ರಜೆಗಳು ಸೇರಿರುವರೆಂದೂ, ಮುಂದೆ ನಡೆಯಿಸಬೇಕಾಗಿರುವ ಕಾರ್ಯವನ್ನು ೩ ಭಾಗ ಮಾಡಿದ್ದರೆ ಪ್ರಥಮಭಾಗಕ್ಕೆ ೨೦೦, ೨ನೆ ಭಾಗಕ್ಕೆ ೫೦೦, ೩ನೆ ಭಾಗಕ್ಕೆ ೧೦೦೦೦ ಜನರು ನಡುಕಟ್ಟಿ ನಿಂತು ಪರೋಪಕಾರಬುದ್ಧಿಯಿಂದ ಕೆಲಸಮಾಡುತ್ತ ದೇಶಾಭಿವೃದ್ಧಿಗೆ ಸಹಾಯಮಾಡಬೇಕೆಂದೂ ಸೂಚಿಸಿರುತ್ತಾರೆ. ಯುದ್ಧಕಾರಣದಿಂದ ಯಂತ್ರೋಪಕರಣಗಳು ದೊರೆಯುವುದು ಕಷ್ಟವಾಗಿರುವ ಕಾರಣ ಮುಂದಣ ವರ್ಷದಲ್ಲಿ ಈ ಸಭೆಯವರು ಸಣ್ಣಸಣ್ಣ ಕೈಗಾರಿಕೆಗಳ ಅಭಿವೃದ್ಧಿ, ಕಸಬುಗಳಿಗೆ ಪ್ರೋತ್ಸಾಹ, ಉತ್ಪತ್ತಿ ಮೊದಲಾದುವುಗಳ ಲೆಕ್ಕವನ್ನು ಸಂಗ್ರಹಿಸುವುದು, ಆಹಾರ್ಯವಸ್ತುಗಳ ಬೆಲೆಯು ಈಗಣ ಯುದ್ಧದಿಂದ ಮಿತಿಮೀರಿ [illegible] ಕಾರಣ ಕ್ಷಾಮವು ನಮಗೆ ತಟ್ಟದಂತೆ ಮಾಡಿಕೊಳ್ಳುವುದಕ್ಕಾಗಿ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಮುಖ್ಯವಾಗಿ ಗಮನಿಸುವುದು–ಇಷ್ಟನ್ನೂ ಮಾಡಬೇಕೆಂದು ಹೇಳಿರುತ್ತಾರೆ.

ಕಟ್ಟಕಡೆಗೆ ದಿವಾನರವರು ಆಡಿರುವ ಮಾತುಗಳು ದೇಶಾಭಿವೃದ್ಧಿಯ ವಿಷಯದಲ್ಲಿ ಅವರಿಗೆ ನಿಸರ್ಗವಾಗಿರುವ ಕುತೂಹಲವನ್ನೂ ಪ್ರಜೆಗಳ ಮೇಲಿರುವ ಕನಿಕರವನ್ನೂ ಚೆನ್ನಾಗಿ ಹೊರಪಡಿಸುತ್ತಿರುವುವು. ಹೇಗೆಂದರೆ—

"ನಮ್ಮ ಜನರು ಪಡುತ್ತಿರುವ ಅಲ್ಪಶ್ರಮವನ್ನೂ ಅವರ ಅಲ್ಪಸಂಪಾದನಾಶಕ್ತಿಯನ್ನೂ, ಅಲ್ಪಜೀವನಕ್ರಮವನ್ನೂ ಕುರಿತು ಅನೇಕವೇಳೆ ತಮಗೆ ನಿವೇದಿಸಿರುತ್ತೇವೆ. ಆದರೆ ಇವುಗಳನ್ನು ದಾಟಿ ಇನ್ನೂ ಮೇಲಾಗಿ ಬಾಳಲು ನಮ್ಮ ಜನರು ಇದುವರೆಗೂ ದೃಢವಾದ ಯಾವ ಪ್ರಯತ್ನವನ್ನೂ ಮಾಡಿರುವುದಿಲ್ಲ. ಅಡಿಗಡಿಗೆ ತಲೆದೋರುತ್ತಿರುವ ಕ್ಷಾಮಗಳಿಂದ ಅವರು ಮತ್ತಷ್ಟು ನಿರ್ಗತಿಕರಾಗುತ್ತಿರುವರು. ದೊಡ್ಡ ದೊಡ್ಡ ವಿಷಯಗಳನ್ನು ಕುರಿತು ಆಲೋಚಿಸುವುದಕ್ಕೆ ಅವರಿಗೆ ಅವಕಾಶವಿಲ್ಲ. ಕಷ್ಟಗಳಿಗೆ ಎದೆಗೊಟ್ಟು ನಿಂತು ಹೋರಾಡುವುದಕ್ಕೆ ಉತ್ಸಾಹವಿಲ್ಲ. ನಿರ್ಬಂಧ ವಿದ್ಯಾಭ್ಯಾಸವಿಲ್ಲ. ಪಟ್ಟಿಗೆ ಸೇರಿ ಕಟ್ಟಳೆಗೆ ಒಡಂಬಟ್ಟು ನಿರ್ಬಂಧದಿಂದ ಕೆಲಸಮಾಡುವುದಕ್ಕೆ ಅನುಕೂಲವಿಲ್ಲ. ಗಾಢವಾಗಿ ಆಲೋಚಿಸುವ ಅಭ್ಯಾಸವುಂಟಾಗುವುದಕ್ಕೂ ಕೀರ್ತಿಪ್ರದವಾದ ಕೆಲಸಗಳನ್ನು ಮಾಡುವುದಕ್ಕೂ ಬೆಂಬಲವಂತೂ ಮೊದಲೇ ಇಲ್ಲ. ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ಕೊಡುತ್ತಿರುವ ಪ್ರೋತ್ಸಾಹದಿಂದ ನಾವು ಏಳು ವರ್ಷಗಳಿಂದಲೂ ಅರ್ಥಸಾಧನ ವಿಷಯಕ್ಕೆ ಮನಸ್ಸಿಟ್ಟಿರುತ್ತೇವೆ. ಜನರು ವಿಷಯಗಳನ್ನು ತಿಳಿದು ಆಲೋಚಿಸಿ ಪರಿಶೀಲಿಸುವಂತೆ ಮಾಡಿದ್ದೇವೆ. ಹೀಗೆ ನಿರಂತರವೂ ಆಲೋಚನೆಮಾಡಿ ವಿಷಯಗಳನ್ನು ಪರಿಶೀಲಿಸುತ್ತಿರುವುದರಿಂದ ಹಿಂದಣ ನಮ್ಮ ತಪ್ಪುಗಳೆಲ್ಲ ಒಂದೊಂದಾಗಿ ತಿಳಿಯುತ್ತಿವೆ. ಮತ್ತು ಮುಂದಣ ಸಂದರ್ಭಗಳೇನೆಂಬುದು ಮನಸ್ಸಿಗೆ ಹತ್ತುತ್ತಿದೆ. ಆದರೆ ನಾವು ಇಷ್ಟಕ್ಕೇ ಬಿಡಕೂಡದು. ಇನ್ನೂ ವಿಚಾರಮಾಡುತ್ತಲೇ ಇರಬೇಕು. ಒಂದುಸಾರಿ ಹೊತ್ತಿಸಿದ ದಿವ್ಯಜ್ಯೋತಿಯನ್ನು ನಮ್ಮ ಅರ್ಥಸಾಧನ ರಾಜ್ಯಲಕ್ಷ್ಮಿಯ ಮನೆಯಲ್ಲಿ ಕಗ್ಗತ್ತಲೆ ತುಂಬಿರುವ ಸಂದಿಮೂಲೆಗಳೆಲ್ಲವೂ ಸಂಪೂರ್ಣವಾಗಿ ಕಾಣುವಂತಾಗುವವರೆಗೆ—ಸಂಪದಭ್ಯುದಯವು ನಮ್ಮ ಸೀಮೆಯ ಪ್ರತಿಯೊಂದು ಭಾಗಕ್ಕೂ ವ್ಯಾಪಿಸುವವರೆಗೆ-ದೇಶದ ಮಹಾಜನರಲ್ಲಿ ಪ್ರತಿಯೊಬ್ಬರ ನಿತ್ಯಕರ್ಮದಲ್ಲಿಯೂ ಆ ಜ್ಞಾನವು ಹೆಣೆದುಕೊಂಡು ಬರುವವರೆಗೆ.ತಪ್ಪದೆ ಉರಿಸುತ್ತಲೇ ಇರಬೇಕು.

ಈ ಕಡೆಯ ವಾಕ್ಯವನ್ನು ನೋಡಲಾಗಿ ನಮ್ಮ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಸಹ ದೇಶದ ಸಂಪದ್ವೃದ್ಧಿಗಾಗಿ ಎಷ್ಟು ಕುತೂಹಲವನ್ನೂ ಶ್ರದ್ಧೆಯನ್ನೂ ವಹಿಸಿರುವರೆಂಬುದನ್ನೂ, ಪ್ರಭುತ್ವದ ಕರ್ತವ್ಯದಲ್ಲಿ ಇದು ಅನುಪೇಕ್ಷಣೀಯವಾದ ಒಂದು ಮುಖ್ಯಭಾಗವೆಂಬುದಾಗಿ ತಿಳಿದು ಇದಕ್ಕಾಗಿ ಅವರು ನಿರಂತರ ಕೃಷಿಯನ್ನು ಮಾಡಲು ಹೇಗೆ ಸಿದ್ಧರಾಗಿರುವರೆಂಬುದನ್ನೂ ನಾವು ತಿಳಿದುಕೊಳ್ಳಬಹುದಾಗಿದೆ. ಇದೆಲ್ಲಾ ಸ್ವದೇಶದ ಪ್ರಜೆಗಳನ್ನು ಸಂಪದ್ವಿಶಿಷ್ಟರನ್ನಾಗಿ ಮಾಡುವುದಕ್ಕಾಗಿಯೇ ಸಂಕಲ್ಪಿಸಿರುವ ಕಾರ್ಯವೆಂಬುದನ್ನು ಪ್ರಜೆಗಳಾದ ನಾವುಗಳು ಯೋಚಿಸಿಕೊಂಡರೆ, ನಾವು ಆ ಸರ್ಕಾರಕ್ಕಾಗಿ ಎಷ್ಟು ಕೃತಜ್ಞರಾಗಿರಬೇಕೆಂಬುದನ್ನು ಹೇಳಬೇಕಾಗಿಲ್ಲ. ಆದರೆ ಆ ಕೃತಜ್ಞತೆಯು ಇನ್ನಾವ ರೀತಿಯಲ್ಲೂ ಪ್ರದರ್ಶಿಸಲ್ಪಡಬೇಕಾಗಿಲ್ಲ. ಈ ಸಂಬಂಧದಲ್ಲಿ ಸರ್ಕಾರದವರು ನಮ್ಮ ಏಳ್ಗೆಗಾಗಿ ಮಾಡುತ್ತಲಿರುವ ಸೂಚನೆಗಳನ್ನು ತಿಳಿದುಕೊಂಡು ಮೈಬಗ್ಗಿಸಿ ಆಚರಿಸುತ್ತ ಬರುವುದೊಂದೇ ಸಾಕಾಗಿದೆ. ಹಾಗೆ ದೇಶದ ಪ್ರತಿಯೊಬ್ಬ ಪ್ರಜೆಯೂ ಕರ್ತವ್ಯತತ್ಪರನಾಗುವುದಾದರೆ ಪ್ರಭುತ್ವದವರೂ ತೃಪ್ತರಾಗುವರು, ಪ್ರಜೆಗಳ ಆತ್ಮೋದ್ಧಾರವೂ ಆಗುವುದು. ಯುದ್ಧಸಂಬಂಧದಿಂದ ಶಿಲ್ಪಾಭಿವೃದ್ಧಿಗೆ ಪ್ರತಿಬಂಧಕವಾಗಿದ್ದರೂ ವಿದ್ಯಾಪ್ರಸಾರಣ ಕಾರ್ಯವು ಈ ಸಭೆಯವರ ಕೃಷಿಯಿಂದ ವೃದ್ಧಿಗೊಳ್ಳುತ್ತಿರುವುದನ್ನು ಎಲ್ಲರೂ ಕಾಣಬಹುದಾಗಿದೆ. ಕೃಷಿ ವಾಣಿಜ್ಯ ವಿಷಯಗಳು ತಲೆಯೆತ್ತಲು ಇನ್ನೂ ಬಹು ಕಾಲ ಬೇಕೆಂದು ಕಾಣುವುದು. ಅರ್ಥಸಾಧನ ಸಭೆಯ ನಿರಂತರ ಕೃಷಿಯಿಂದ ತಕ್ಕ ಫಲವು ಕಾಲಾನುಕಾಲದಲ್ಲಿ ಆಗದೆ ಹೋಗಲಾರದು. ಆದರೆ ಸಭೆಯ ಸಂಬಂಧವಾಗಿ ಮಿತವಿಲ್ಲದೆ ಹರಿದುಹೋಗುತ್ತಿರುವ ಧನಪ್ರವಾಹವು ಮಾತ್ರ ತಗ್ಗಲೇಬೇಕು.

ಸ್ಫುಟವಿಚಾರಗಳು.

ಸರ್ಕಾರದವರು ತತ್‌ಕ್ಷಣವೇ ಸ್ವರಾಜ್ಯಪ್ರಕಟನವನ್ನು ಮಾಡಿ ಭರತಖಂಡದಿಂದ ಧನ ಜನ ಸಹಾಯವನ್ನು ಪಡೆಯಬೇಕೆಂದು ಮೊದಲಾಗಿ ಬೊಂಬಾಯಿ ಯುದ್ಧಮಹಾಸಭೆಯಲ್ಲಿ ಷರತ್ತನ್ನು ಹೇಳಿ ಗೌರ್ನರು ಮಾಡಿದ ವಾಗ್ಬಂಧನದಿಂದ ಶ್ರೀಮಾನ್ ತಿಲಕರೇ ಮೊದಲಾದವರು ಸಭೆಯನ್ನು ಬಿಟ್ಟು ಹೊರಟುಹೋದರಷ್ಟೆ. ಆ ಬಳಿಕ ಸಭೆಯಲ್ಲೇ ಇದ್ದ ಸರ್ ನಾರಾಯಣ ಚಂದ್ರ ವಾರ್ಕರ್‌ರವರು ಒಂದು ಭಾಷಣವನ್ನು ಮಾಡಿದರು. ಅದು ಗಂಭೀರವಾಗಿಯೂ ಸಮಗ್ರಭಾರತ ಗೌರವಪ್ರತಿಷ್ಠೆಗಳಿಗೆ ಅನುಗುಣವಾಗಿಯೂ ಇದ್ದಿತು. ಅದರ ಮುಖ್ಯಾಭಿಪ್ರಾಯವೇನೆಂದರೆ— "ಭಾರತೀಯರ ರಾಜಭಕ್ತಿಯು ಸುಸ್ಥಿರವಾದುದಾಗಿದ್ದರೆ, ಸಾರ್ವಭೌಮರು ಈ ಸಮಯದಲ್ಲಿ ಕೋರಿರುವ ಸಹಾಯವನ್ನು ಭಾರತೀಯರೆಲ್ಲರೂ ಮಾಡುವುದಕ್ಕೆ ಕುತುಕರಾಗಿದ್ದರೆ, ಭಾರತೀಯರು ತಮ್ಮ ಹಕ್ಕುಗಳನ್ನೆಲ್ಲಾ ಬಿಟ್ಟುಕೊಟ್ಟು ಸಹಾಯಮಾಡಬೇಕು. ಸಾರ್ವಭೌಮರ ಪಕ್ಕದಲ್ಲಿ ನಿಂತು ತಮ್ಮ ಯಾವಚ್ಛಕ್ತಿಯನ್ನೂ ತ್ಯಾಗಮಾಡಬೇಕು. ಈ ಸ್ವಾರ್ಥತ್ಯಾಗವು ಇಂಗ್ಲೆಂಡಿಗೋಸ್ಕರವೇನೂ ಅಲ್ಲ. ಫ್ರಾನ್ಸಿಗಾಗಿಯೂ ಅಲ್ಲ. ನಮ್ಮ ಮನೆ ಮಠಗಳನ್ನು ಕಾಪಾಡಿಕೊಳ್ಳುವುದಕ್ಕಾಗಿಯೂ ಅಲ್ಲ. ಮತ್ತೇನೆಂದರೆ ಶಾಶ್ವತಫಲಪ್ರಾಪ್ತಿಗಾಗಿ, ಇಂಗ್ಲೆಂಡು ಯುದ್ಧಕ್ಕೆ ತೊಡಗಿದ ಪವಿತ್ರಧರ್ಮಕ್ಕಾಗಿ, ಅಮೇರಿಕಾಧ್ಯಕ್ಷರಾದ ಡಾ|| ವಿಲ್ಸನ್‌ರವರು ಈಗಣ ಯುದ್ಧವನ್ನು ಕುರಿತು ಮಾತನಾಡುವಾಗ ಯಾವುದೊಂದು ವ್ಯಕ್ತಿಯ ಅಥವಾ ಯಾವುದೊಂದು ರಾಜ್ಯದ ಲಾಭಾಪೇಕ್ಷೆಗಲ್ಲದೆಯೇ ಲೋಕೋಪಕಾರಾರ್ಥವಾಗಿ ಇದು ಪರಿಗ್ರಹಿಸಲ್ಪಟ್ಟಿದೆಯೆಂದು ಹೇಳಿರುತ್ತಾರೆ. ಇದೇ ವಾಸ್ತವವಾಗಿದ್ದರೆ ನಮ್ಮ ಕೋರಿಕೆಗಳನ್ನು ಸರ್ಕಾರದವರು ನೆರವೇರಿಸಿ ಕೊಡದಿದ್ದರೆ ನಾವು ಸಾರ್ವಭೌಮರಿಗೆ ಸಹಾಯಮಾಡುವುದಿಲ್ಲವೆಂದು ಸ್ವಾರ್ಥಪರರಾಗಿ ನುಡಿಯುವುದು ಯುಕ್ತವಾದುದಲ್ಲ. ಅಮೇರಿಕಾದವರು ಸ್ವದೇಶಸ್ವಗೃಹಗಳ ರಕ್ಷಣೆಗಾಗಿ ಯುದ್ಧಕ್ಕೆ ನಿಲ್ಲಲಿಲ್ಲ. ದೈವವೇ ಅವರನ್ನು ರಕ್ಷಿಸುವುದು. ಜರ್ಮನ್ ಸಾಮ್ರಾಜ್ಯವು ಲೋಕಸ್ವಾತಂತ್ರ್ಯವನ್ನೂ ಲೋಕಶಾಂತಿಯನ್ನೂ ಪಾವಿತ್ರ್ಯವನ್ನೂ ಹಾಳ್ಮಾಡುವುದಕ್ಕೆ ನಿಂತುದರಿಂದಲೇ ಇಂಗ್ಲೆಂಡು ಯುದ್ಧಕ್ಕೆ ನಿಂತಿತೆಂದು ಜರ್ಮನ್ ಮಂತ್ರಿ ಮೊದಲುಗೊಂಡು ಕೊನೆಯವರೆಗಣ ಸಕಲ ಜನರೂ ಒಪ್ಪಿಕೊಂಡಿರುತ್ತಾರೆ. ಹೀಗಿರುವಲ್ಲಿ ಈಗಣ ಯುದ್ಧದಲ್ಲಿ ನಾವು ಯಾವುದೊಂದು ಷರತ್ತನ್ನೂ ಹೇಳದೆ ಯುದ್ಧಕ್ಕೆ ಸಹಾಯಮಾಡಲು ಸಿದ್ಧರಾಗಿದ್ದೇವೆಂದು ಹೇಳಬಾರದೆ? ಭರತಖಂಡವು ಯಾವ ಷರತ್ತನ್ನೂ ಹೇಳದೆ ಇಂಗ್ಲೆಂಡು ಸಂಕಲ್ಪಿಸಿದ ಧರ್ಮಸ್ಥಾಪನೆಗಾಗಿ ಅವರ ಪಕ್ಷವಾಗಿ ಯುದ್ಧಮಾಡಿದರೆ ಚರಿತ್ರೆಯಲ್ಲಿ ಭರತಖಂಡದ ಹೆಸರು ಗಂಭೀರವಾದ ಅಕ್ಷರಗಳಲ್ಲಿ ಕೆತ್ತಲ್ಪಡುವುದು. ಷರತ್ತುಗಳಮೇಲೆ ನಾವು ಸಹಾಯಮಾಡಲು ಸಂಕಲ್ಪಿಸಿದರೆ ಭರತಖಂಡಕ್ಕೆ ಗತಿಯೇ ಇಲ್ಲವಾಗುವುದು" ಈ ಜ್ಞಾನವೃದ್ಧರ ಉಪದೇಶಾಮೃತವನ್ನು ಬಾಲ್ಯಪುಂಗವರೆಲ್ಲಾ ಪಾನಮಾಡಿ ವಿವೇಕಿಗಳಾಗಬಾರದೆ?—

ಬೊಂಬಾಯಿ ಯುದ್ಧಸಭೆಯಲ್ಲಿ ಸಭಾಧ್ಯಕ್ಷರಾಗಿದ್ದ ಗೌರ್ನರ್ ಲಾರ್ಡ್ ವಿಲ್ಲಿಂಗ್ಡನ್‌ರವರು ಮಾಡಿದ ಭಾಷಣದೊಳಗೆ "ಸ್ವರಾಜ್ಯವಾದಿಗಳು ಮಾಡುತ್ತೇವೆಂದು ಹೇಳುವ ಸಹಾಯವು ಮನಃಪೂರ್ವಕವಾದುದೆಂದು ನಾನು ನಂಬಲಾರೆನು. ಸಮಯದೊರೆದಾಗಲೆಲ್ಲಾ ಸರ್ಕಾರದವರಿಗೆ ತೊಡಕುಗಳನ್ನೊಡ್ಡಿ ಅವರ ಕಷ್ಟಗಳನ್ನು ಹೆಚ್ಚುಮಾಡುವುದೇ ಅವರ ಉದ್ದೇಶವೆಂದು ನಾನು ಬಹಿರಂಗವಾಗಿ ಹೇಳುತ್ತೇನೆ" ಎಂದು ಮೊದಲಾಗಿ ಆಡಿರುವ ಮಾತುಗಳು ಪ್ರಭುತ್ವದವರನ್ನು ತೃಣಗಣಾಯಮಾನವಾಗಿ ಟೀಕಿಸುತ್ತಿರುವ ಸ್ವರಾಜ್ಯವಾದಿಗಳಿಗೆ ಬೆಸೆಹಾಕಿದಂತಾಗಿರುತ್ತದೆ.

ಸರ್ ಸುಬ್ರಹ್ಮಣ್ಯಯ್ಯರವರು ಡಾ|| ವಿಲ್ಸನ್‌ರವರಿಗೆ ಬರೆದ ಲೇಖನವನ್ನು ಕುರಿತು ಪಾರ್ಲಿಮೆಂಟಿನಲ್ಲಿ ಕೇಳಲ್ಪಟ್ಟ ಪ್ರಶ್ನೆಗೆ ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೆಗ್‌ರವರು ಅದು ಲಜ್ಜೆಗೇಡಾದ ಅವಮಾನಕರವಾದ ಮತ್ತು ಕ್ಷಮಾರ್ಹವಲ್ಲದ ಮೂಢಪ್ರಲಾಪವಾಗಿದೆಯೆಂದು ಮೊದಲಾಗಿ ಖಂಡಿಸಿದುದರಮೇಲೆ ಇಲ್ಲಿಯ ಸ್ವರಾಜ್ಯವಾದಿ ಪತ್ರಿಕೆಗಳು "ಅದು ಭರತಖಂಡದಲ್ಲಿ ನಿರ್ಬಂಧವಿಧಾನದಿಂದ ಉದ್ರೇಕಪೂರಿತವಾಗಿದ್ದ ಅಶಾಂತಿಸಮಯದಲ್ಲಿ ಬರೆಯಲ್ಪಟ್ಟ ಲೇಖನವಾದುದರಿಂದ ಅದನ್ನು ಈಗ ಎತ್ತಿಕೊಳ್ಳುವುದು ಹಿತವಲ್ಲ" ವೆಂದು ಆಡುತ್ತಿವೆ. ಈ ಲೇಖನದ ವಿಷಯವಾಗಿ ಮುಂದೆ ಚರ್ಚೆಯು ನಡೆಯಿಸಲ್ಪಡುವುದೆಂದು ಸ್ಟೇಟ್ ಸೆಕ್ರೆಟರಿಯವರು ಹೇಳಿರುತ್ತಾರೆ. ಭರತಖಂಡದ ವಿಷಯದಲ್ಲಿ ತ್ರಿಕರಣದಲ್ಲೂ ಅನುಕಂಪವುಳ್ಳವರಾಗಿದ್ದ ಮಿ|| ಮಾಂಟೆಗ್‌ರವರಂಥವರ ಮನಸ್ಸನ್ನುಕೂಡ ನಮ್ಮ ದೇಶದ ಸ್ವರಾಜ್ಯವಾದಿ ತೀಕ್ಷ್ಣಪಕ್ಷದವರು ತಮ್ಮ ನಡೆ ನುಡಿಗಳಿಂದ ಹೇಗೆ ಕಲಕುತ್ತಿರುವರೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದಾಗಿದೆ. ಅವರುಗಳ ಅನಾಲೋಚಿತ ಪ್ರಯತ್ನಗಳ ಪರಿಣಾಮಫಲಗಳೆಲ್ಲಾ ಹೀಗೆಯೇ ಆಗುವುದರಲ್ಲಿ ಸಂಶಯವಿಲ್ಲ.

ಪಾರ್ಲಿಮೆಂಟಿನಲ್ಲಿ ತಮ್ಮ ಲೇಖನದ ವಿಷಯವಾಗಿ ಚರ್ಚೆ ನಡೆದುದರಮೇಲೆ ಮರಳಿ ಇದು ರಚ್ಚೆಗೇಡಾಗಬಹುದೆಂದು ತೋರಿದುದರಿಂದ ಸರ್ ಅಯ್ಯರವರು ಈಗ ಒಂದು ಲೇಖನವನ್ನು ನ್ಯೂಇಂಡಿಯಾ ಪತ್ರಿಕೆಯಲ್ಲಿ ಬರೆದು, ಅದರಲ್ಲಿ—ಮದ್ರಾಸಿಗೆ ಸ್ಟೇಟ್‌ಸೆಕ್ರೆಟರಿಯವರೂ ವೈಸ್ರಾಯರೂ ಬಂದಿದ್ದಾಗ ನನ್ನನ್ನು ಕರೆಯಿಸಿಕೊಂಡು ಈ ಲೇಖನದ ವಿಷಯವಾಗಿ ಮಾತನಾಡಿ, ವೈಸ್ರಾಯರು ನನಗೆ ಛೀಮಾರಿಮಾಡಿದ್ದರೆಂತಲೂ, ಆ ಕೂಡಲೇ ಈ ವಿಷಯವಾಗಿ ಇನ್ನೇನೂ ಚರ್ಯೆಯು ನಿಮ್ಮಮೇಲೆ ತೆಗೆದುಕೊಳ್ಳಲ್ಪಡುವುದಿಲ್ಲವೆಂದು ಮದ್ರಾಸು ಪ್ರಭುತ್ವದವರಿಂದ ನನಗೆ ಲಿಖಿತಮೂಲಕವಾಗಿ ತಿಳಿಯಲ್ಪಟ್ಟಿದ್ದಿತೆಂತಲೂ, ಈಗ ಬೇರೆ ಕ್ರಮವನ್ನು ನನ್ನ ಮೇಲೆ ನಡೆಯಿಸುವುದಾಗಿ ಸ್ಟೇಟ್‌ಸೆಕ್ರೆಟರಿಯವರು ಆಡಿರುವುದನ್ನು ನೋಡಿದರೆ ನನಗೆ ಕೊಡಲ್ಪಟ್ಟಿರುವ ಬಿರುದೂ ಪೆನ್ಷನ್ನೂ ಕಿತ್ತುಕೊಳ್ಳಲ್ಪಡಬಹುದೆಂತಲೂ, ಅವನ್ನು ಬಿಟ್ಟುಕೊಡುವುದಕ್ಕೆ ಈಗಲೇ ನಾನು ಸಿದ್ಧನಾಗಿದ್ದೇನೆಂತಲೂ, ಬಿರುದು ಬೆಲೆಯಿಲ್ಲದುದೆಂತಲೂ, ಪೆನ್ಷನ್ನು ಹೋದರೆ ಸನ್ಯಾಸಿ ಸಂಘದವರು ನನ್ನನ್ನು ಸಲಹುವರೆಂತಲೂ, ಇಷ್ಟೇ ಅಲ್ಲದೆ ದ್ವೀಪಾಂತರವಾಸಾದಿ ಯಾವ ಶಿಕ್ಷೆಯನ್ನು ವಿಧಿಸಿದರೂ ನನಗೆ ಭಯವಿಲ್ಲವೆಂತಲೂ, ನನ್ನ ಮೇಲೆ ಪ್ರಭುತ್ವದವರಿಂದ ನಡೆಯಿಸಲ್ಪಡುವ ಚರ್ಯೆಯಿಂದ ದೇಶದ ಜನರೆಲ್ಲಾ ರೇಗಿಸೋಗುವಂತಾದರೆ ನಾನು ಧನ್ಯನಾಗುವೆನೆಂತಲೂ ಮೊದಲಾಗಿ ಬರೆದುಕೊಂಡಿದ್ದಾರೆ. ಮತ್ತು ತಮ್ಮ ಕೆ.ಸಿ.ಐ.ಇ. ಬಿರುದಾಂಕನವನ್ನೂ ದಿವಾನ್ ಬಹದೂರ್ ಪದಕವನ್ನೂ ಅಂಚೆಯದ್ವಾರಾ ಮದ್ರಾಸು ಸರ್ಕಾರದವರ ಹೆಸರಿಗೆ ಕಳುಹಿಸಿಬಿಟ್ಟಿದ್ದಾರೆ. ಈಗ ಹೀಗೆ ಹೇಳುವ ಅಯ್ಯರ್‌ರವರು ಬೆಲೆಯಿಲ್ಲದ ಆ ಬಿರುದನ್ನು ಇದುವರೆಗೂ ಧರಿಸಿಕೊಂಡಿದ್ದುದೇತಕ್ಕೋ? ಕಳೆದುಹೋಗುವ ಹೊತ್ತು ಬಂದಿದೆಯೆಂದು ತಿಳಿದಾಗ ತಾನಾಗಿ ತೆಗೆದುಬಿಡುತ್ತೇನೆನ್ನುವುದು ಒಂದು ತೆರದ ಜಾಣತನವೇ ಸರಿ. ತನಗೆ ಪರಾಭವವಾದರೆ ದೇಶವೆಲ್ಲಾ ಉದ್ರೇಕಗೊಳ್ಳಬೇಕೆಂದು ಅಯ್ಯರವರು ಕೋರಿಕೊಳ್ಳುವುದು ತಿಗಳ ಶಾ ಕೆಡುತ್ತ ಏಳು ನೆರೆಯನ್ನೂ ಕೆಡಿಸಿದನೆಂಬ ಗಾದೆಗೆ ಸಮನಾಗಿದೆ.

ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರು— "ಎಲ್ಲಾ ಜಾತಿಗಳಿಗೂ ಪ್ರಪಂಚವು ಒಂದು ಕುಟುಂಬದಂತಿದೆ. ಒಂದು ಜಾತಿಯು ಮತ್ತೊಂದು ಜಾತಿಯ ಸ್ವಾತಂತ್ರ್ಯವನ್ನು ಭಂಗಪಡಿಸದಿರುವಂತೆ ರಕ್ಷಣೆಯಿರಬೇಕು. ಪ್ರಪಂಚದ ಶಾಂತಿಯು ಇದರಿಂದಲೇ ಸಿದ್ಧಿಸುವುದು. ಅನುಮಾನವು ಪ್ರಬಲಿಸಿರುವವರೆಗೂ ಅಭಿಪ್ರಾಯದಲ್ಲಿ ಐಕ್ಯವು ಸಮನಿಸುವುದಿಲ್ಲ. ಕೂಡಲೇ ಅಶಾಂತಿಯು ಹುಟ್ಟುವುದು. ಪರಸ್ಪರ ವಿಶ್ವಾಸವು ಏರ್ಪಟ್ಟೊಡನೆಯೇ ಶಾಶ್ವತ ಸಂಧಿಯು ಜರುಗುವುದು" ಎಂದು ಈಗತಾನೇ ತಮ್ಮ ಒಂದು ಉಪನ್ಯಾಸದಲ್ಲಿ ಹೇಳಿದ್ದಾರೆ. ಇದಕ್ಕೆ ಜಗತ್ತೆಲ್ಲಾ ತಲೆದೂಗುತ್ತಿದೆ. ನಮ್ಮೂರ ಸಂಪದಭ್ಯುದಯ ಕರ್ತರೂ ಕೂಡ ತಮ್ಮ ೧೪ ನೆ ತಾ|| ಸಂಚಿಕೆಯ ಅಗ್ರಲೇಖನದಲ್ಲಿ ಇದೇ ಸಿದ್ಧಾಂತವನ್ನು ಅನುಮೋದಿಸಿ, "ಈ ಮನ್ರೋ ಸಿದ್ಧಾಂತವು ದೈವಸಿದ್ಧಾಂತವಾಗಿ ಇರುವುದೆಂದು ನಮಗೆ ತೋರುತ್ತದೆ. ಪರಿಣಾಮದಲ್ಲಿ ಇದೇ ಜಯಿಸುವುದು. ನಮ್ಮ ದೇಶದಲ್ಲಿಯೂ ಮನ್ರೋ ಸಿದ್ಧಾಂತವನ್ನು ಆಚರಣೆಗೆ ತರುವ ವಿಷಯವು ಪರ್ಯಾಲೋಚಿಸಲ್ಪಡಬೇಕು. ಎಲ್ಲರೂ ಅವರವರ ಕುಟುಂಬಕ್ಕೆ ಅವರೇ ಯಜಮಾನರಾಗಿರಬೇಕು. ಎಲ್ಲಾ ರಾಜ್ಯಾಧಿಪತಿಗಳೂ ಅವರವರ ರಾಜ್ಯಕ್ಕೆ ಅವರೇ ಅಧಿಪತಿಗಳಾಗಿರಬೇಕು. ಹಾಗೆ ಇರುವಂತೆ ಮಾಡುವುದು ಪ್ರಭುಗಳಿಗೆ ಹೇಗೋ ಹಾಗೆ ಪ್ರಜೆಗಳಿಗೂ ಕರ್ತವ್ಯವು" ಎಂದು ಬರೆದುಕೊಂಡಿರುತ್ತಾರೆ. ಹೀಗೆ ಪರರಿಗೆ ಉಪದೇಶಮಾಡುವುದರಲ್ಲಿ ಪಂಡಿತರಾಗಿರುವವರು, ಪ್ರತಿಯೊಂದು ಜನವರ್ಗದವರೂ ತಂತಮ್ಮ ಯೋಗಕ್ಷೇಮಸಾಧನೆಗೆ ತಾವು ತಾವೇ ಸ್ವತಂತ್ರರಾಗಿರುವಂತೆ ಮಾಡಬೇಕೆಂಬ ಇತರರ ಸಂಘಪ್ರಾತಿನಿಧ್ಯಪ್ರಯತ್ನಕ್ಕೆ ತಾವೇ ಅಡ್ಡಿಯನ್ನು ಮಾಡುತ್ತಾರೆ. ಸ್ವಾರ್ಥಕ್ಕೆ ಭಂಗಬರುವುದೆಂದು ತೋರಿದಾಗ ನ್ಯಾಯ ಧರ್ಮಗಳನ್ನೆಲ್ಲಾ ಮೂಲೆಗೊತ್ತಿರುವವರು ಮಾನವಮಂಡಲಿಯಲ್ಲಿ ಬಹಳ ವಿರಳರಲ್ಲವೆ?

ಕಳೆದ ತಾ|| ೧೩ ರಲ್ಲಿ ಪಾರ್ಲಿಮೆಂಟಿನಲ್ಲಿ ಭರತಖಂಡದ ರಾಜಕೀಯ ಸಂಸ್ಕರಣ ವಿಷಯವಾಗಿ ಒಬ್ಬ ಸಭಿಕರು ಮಾಡಿದ ಪ್ರಶ್ನೆಗೆ ಸ್ಟೇಟ್ ಸೆಕ್ರೆಟರಿಯವರು ಉತ್ತರ ಕೊಡುವಾಗ್ಗೆ—ನಾನೂ ವೈಸ್ರಾಯರೂ ಕೂಡ ನಿರ್ಧರಿಸಿದ ಸೂಚನೆಗಳನ್ನು ಯುದ್ಧಮಂತ್ರಿಮಂಡಲದವರಿಗೆ ಸಮರ್ಪಿಸಿದ್ದೇವೆ. ಯುದ್ಧದ ಮಹಾ ಕಾರ್ಯಭಾರದ ಮಧ್ಯದಲ್ಲಿ ಅವರು ಈ ವಿಷಯವನ್ನು ಕುರಿತು ಈಗಲೇ ಆಲೋಚಿಸುವರೆಂದು ಹೇಳಲಾಗುವುದಿಲ್ಲ. ಆದುಕಾರಣ ಈ ಸಂಸ್ಕರಣಗಳ ಪ್ರತಿಗಳು ಸಿದ್ಧವಾದಕೂಡಲೇ ಪಾರ್ಲಿಮೆಂಟಿನ ಮುಂದೆಯೂ ಇಡಲ್ಪಡುವುವು. ಮತ್ತು ಭರತಖಂಡದಲ್ಲೂ ಈ ವಿಷಯವಾಗಿ ಚರ್ಚಿಸುವುದಕ್ಕೆ ತಕ್ಕಷ್ಟು ಅವಕಾಶವು ಬೇಗನೆ ಕೊಡಲ್ಪಡುವುದು. ಆದರಮೇಲೆ ಪ್ರಜೆಗಳು ವಿಮರ್ಶೆಮಾಡಿ ಮುಗಿಸಿದಮೇಲೆ ಪ್ರಭುತ್ವದವರು ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸುವರು" ಎಂದು ಹೇಳಿರುವುದರಿಂದ ಮೊದಲು ಪ್ರಕಟಿಸಿದ್ದಂತೆ ರಾಜಕೀಯ ಸೂಚನೆಗಳಮೇಲೆ ಪ್ರಭುತ್ವದವರ ಅಭಿಪ್ರಾಯಕೊಟ್ಟಾದನಂತರ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳುವ ರೀತಿಯು ತಪ್ಪಿ, ಪ್ರಜಾಭಿಪ್ರಾಯವೆಲ್ಲಾ ಮುಗಿದಮೇಲೆ ಪ್ರಭುತ್ವದವರು ತಮ್ಮ ತೀರ್ಮಾನಕ್ಕೆ ಕೊನೆಯ ಗಡುಬವನ್ನಿಟ್ಟುಕೊಳ್ಳುವರೆಂಬುದು ಸಿದ್ಧವಾಯಿತು.

ವರ್ಧಂತ್ಯುತ್ಸವವು.

ಶ್ರೀಮನ್ಮಹಾರಾಜರವರ ೩೫ ನೆ ವರ್ಷ ವರ್ಧಂತ್ಯುತ್ಸವವು ಕಳೆದ ತಾ|| ೨೦ ರಲ್ಲಿ ಸರ್ವಾಂಗ ಸಂಪೂರ್ಣವಾಗಿ ವಿಜೃಂಭಣೆಯಿಂದ ನೆರವೇರಿತು. ಇದಕ್ಕಾಗಿ ಪುರಾಲಂಕರಣವು ಈ ಸಲ ವಿಶೇಷವಾಗಿಯೇ ನಡೆದಿದ್ದಿತು. ಪರಸ್ಥಲದ ಜನರೂ ತಕ್ಕಮಟ್ಟಿಗೆ ಸೇರಿದ್ದರು. ಆ ದಿನ ಪ್ರಾತಃಕಾಲ ೬ ಗಂಟೆಗೆ ಮಂಗಳಸ್ನಾನವಾಗುವಾಗ ೩೫ ಗುಂಡುಗಳು ಹಾರಿಸಲ್ಪಟ್ಟುವು. ಶಾಂತಿಹೋಮಾದಿ ಕರ್ಮಗಳೆಲ್ಲಾ ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟ ಬಳಿಕ ೧೦ ಗಂಟೆಗೆ ಅರಮನೆಯಲ್ಲಿ ಶ್ರೀಮನ್ಮಹಾರಾಜರವರು ಯುವರಾಜರ ಸಮೇತರಾಗಿ ಭದ್ರಪೀಠಗಳನ್ನಲಂಕರಿಸಿ ದರ್ಬಾರನ್ನು ನಡೆಯಿಸಿದರು. ಸೈನಿಕರ ಮರ್ಯಾದೆಗಳೆಲ್ಲಾ ನಡೆದುವು. ಸಾಯಂಕಾಲ ೫|| ಗಂಟೆಗೆ ದೊಡ್ಡಪೇಟೆಯ ಮಾರ್ಗವಾಗಿ ಸಕಲ ಚತುರಂಗಬಲ ಸಮೇತರಾಗಿ ಶ್ರೀಮನ್ಮಹಾರಾಜರೂ ಯುವರಾಜರೂ ಬೇರೆಬೇರೆ ದಿವ್ಯಾಶ್ವಗಳನ್ನೇರಿ ಹೊರಟ ಉತ್ಸವವು ಬಹಳ ರಮಣೀಯವಾಗಿದ್ದಿತು. ದೊಡ್ಡ ಬಂಗಲೆಗೆ ಹೋಗಿ ಸೇರಿದ ಬಳಿಕ ಅಲ್ಲಿ ನಡೆದ ಸೈನಿಕ ವಿನ್ಯಾಸಗಳನ್ನೆಲ್ಲಾ ಪರಾಮರಿಸಿ, ಉತ್ಸವವು ಮಹಾದೀಪೋತ್ಸವ ಮಧ್ಯದಲ್ಲಿ ಹೊರಟುದು ಮತ್ತಷ್ಟು ಪ್ರೇಕ್ಷಣೀಯವಾಗಿದ್ದಿತು. ಬೀದಿಯುದ್ದಕ್ಕೂ ಕಿಕ್ಕಿರಿದು ನಿಂತಿದ್ದ ಪ್ರಜಾಮಂಡಲಿಯು ಪ್ರಭುವರರ ಸಂದರ್ಶನದಿಂದ ಆತ್ಮಾನಂದಗೊಂಡು ದೀರ್ಘಾಯುರಾರೋಗ್ಯವನ್ನು ಕೋರಿ ಜಯಘೋಷವನ್ನು ಮಾಡುತ್ತಿದ್ದರು. ಸ್ವಾರಿಯು ಉತ್ಸವವನ್ನು ಮುಗಿಸಿಕೊಂಡು ದೇವಾಲಯಗಳಿಗೆ ದಯಮಾಡಿಸಿ ಪ್ರಸಾದವನ್ನು ಸ್ವೀಕರಿಸಿ ಅರಮನೆಯನ್ನು ಸೇರುವಹೊತ್ತಿಗೆ ರಾತ್ರಿ ೧೦|| ಗಂಟೆಯಾಯಿತು. ಮ್ಯುನಿಸಿಪಾಲಿಟಿಯವರು ಕಲ್ಯಾಣಿ ಮೈದಾನದಲ್ಲೂ ಪೋಲೀಸಿನವರು ಸೆಂಟ್ರಲ್ ಪೋಲೀಸ್ ಸ್ಟೇಷನ್ನಿನ ಮುಂಭಾಗದಲ್ಲೂ ಒಂದೊಂದು ಹಸುರಾಣೆ ಚಪ್ಪರಗಳನ್ನು ಹಾಕಿಸಿದ್ದುದು ಬಹಳ ಮನೋಹರವಾಗಿದ್ದಿತು. ಆರೋಗ್ಯಶಾಖೆಯವರು ವೀಧಿಯಲಂಕಾರಕ್ಕೂ ಶುಚೀಕರಣಕ್ಕೂ ಮಾಡಿದ್ದ ಏರ್ಪಾಟು ವಿಶೇಷವಾಗಿದ್ದಿತು. ಆ ದಿನ ೨ ವೇಳೆ ಬೀದಿಗಳಿಗೆಲ್ಲಾ ಮಳೆ ಹೊಯ್ದಷ್ಟು ನೀರನ್ನು ಸುರಿಸಿ ತಂಪುಮಾಡಿದ್ದರು. ಉತ್ಸವದ ಜತೆಯಲ್ಲಿ ಹೊರಟಿದ್ದ ಅಶ್ವಪದಾತಿ ಸೈನ್ಯಗಳೂ, ಸ್ವಾರಿ ಮುಂದುಗಡೆ ಸಾಲುಗೊಂಡು ಹೋಗುತ್ತಿದ್ದ ರಾಜಬಂಧುವರ್ಗದವರ ಅಧಿಕಾರಿಮಂಡಲಿಯ ಮತ್ತು ಪುರಪ್ರಮುಖರ ಸಂಖ್ಯೆಯಾದರೂ ವಿಶೇಷವಾಗಿದ್ದಿತು. ವಾರಿನಾರಿಯರು.ಸಂಗಡ ಬರುವುದು ಮಾತ್ರ ತಪ್ಪಿಸಲ್ಪಟ್ಟಿದ್ದಿತು. ಕೋಟೆಯ ಉತ್ತರದಿಕ್ಕಿನ ೨ ನೂತನ ಮಹಾ ದ್ವಾರಗಳೂ ಹೊಸದಾಗಿ ವಿದ್ಯುದ್ದೀಪಾವಳಿಗಳಿಂದ ಅಲಂಕರಿಸಲ್ಪಟ್ಟಿದ್ದುದು ಈ ಸಲದ ಅಲಂಕಾರಗಳಲ್ಲಿ ವಿಶೇಷಭಾಗವಾಗಿದ್ದಿತು. ಸರ್ವವಿಧದಿಂದಲೂ ಪ್ರಜಾರಂಜನ ಮಾಡಿಕೊಂಡು ಭೂದೇವೇಂದ್ರ ವೈಭವವನ್ನನುಭವಿಸುತ್ತಿರುವ ನಮ್ಮ ಶ್ರೀಮನ್ಮಹಾರಾಜರವರ ಅನೇಕ ವರ್ಷೋತ್ಸವಗಳನ್ನು ಅವರ ಪ್ರಜೆಗಳು ಅವಲೋಕಿಸುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಕುದುರೆ ಜೂಜಿನ ಬಯಲಿನಲ್ಲಿ ಪದ್ಧತಿಯಂತೆ ವಿನೋದಕರವಾದ ಪಂದ್ಯಗಳು ನಿನ್ನೆಯೂ ಮೊನ್ನೆಯೂ ನಡೆದುವು.

ನಮ್ಮ ವಿದ್ಯಾಪೀಠದಲ್ಲಿ ಓದಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ತಮ್ಮಲ್ಲಿನ ಲಾ ಪರೀಕ್ಷೆಗೆ ಸೇರಿಸಿಕೊಳ್ಳಲು ಬೊಂಬಾಯಿ ವಿದ್ಯಾಪೀಠದವರು ಒಪ್ಪಿಕೊಂಡಿರುವುದರಿಂದ ನಮ್ಮ ಸಂಸ್ಥಾನದಲ್ಲಿ ಲಾ ಕಾಲೇಜನ್ನು ಏರ್ಪಡಿಸುವ ಯೋಚನೆಯು ಸದ್ಯದಲ್ಲಿ ನಿಲ್ಲಿಸಲ್ಪಟ್ಟಿದೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಪ್ರಯುಕ್ತವಾಗಿ ತಾ|| ೨೦ ನೆಯ ದಿವಸ ಎಲ್ಲಾ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ವಿಶ್ರಾಂತಿಯು ಕೊಡಲ್ಪಟ್ಟಿದ್ದಿತು. ತಾ|| ೨೧ನೆ ದಿನ ಆಯಾ ಶಾಲೆಗಳಲ್ಲಿ ಬಾಲಬಾಲಿಕೆಯರ ಸ್ಪೋರ್ಟ್ಸುಗಳು ನಡೆದು ತಿಂಡಿಯ ಪದಾರ್ಥಗಳು ಹಂಚಲ್ಪಟ್ಟುವು.

ಬೊಂಬಾಯಿ ಕರ್ನಾಟಕದಲ್ಲಿರುವ ವೀರಶೈವ ಜನವರ್ಗದ ವಿದ್ಯಾರ್ಥಿಗಳಲ್ಲಿ ಕಳೆದ ವರ್ಷದ ವಿಶ್ವವಿದ್ಯಾಲಯ ಪರೀಕ್ಷೆಗಳೊಳಗೆ ೮ ಮಂದಿಗಳು ಬಿ.ಎ., ಯಲ್ಲೂ, ೪೪ ಮಂದಿಗಳು ಮೆಟ್ರಿಕ್ಯುಲೇಷನ್ನಿನಲ್ಲೂ ಉತ್ತೀರ್ಣರಾಗಿರುವರೆಂದು ತಿಳಿಯುತ್ತೇವೆ. ಮೈಸೂರು ದೇಶದ ವೀರಶೈವ ವಿದ್ಯಾಭ್ಯಾಸ ಫಲಿತಾಂಶಕ್ಕಿಂತಲೂ ಅಲ್ಲಿಯ ಫಲಿತಾಂಶವೇ ಉತ್ಸಾಹಜನಕವಾಗಿದೆ.

"ತಾರಕೋದಯ" ಎಂಬ ಹೆಸರಿನ ಚಿಕ್ಕ ಮಾಸಪತ್ರಿಕೆಯೊಂದು ಬೆಂಗಳೂರಿನಿಂದ ಪ್ರಕಟವಾಗುತ್ತಲಿದೆ. ಇದರ ೬ ಸಂಚಿಕೆಗಳನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಇದು ಮುಂದೆ ಜಗದ್ಗುರುವಿನವತಾರವಾಗುವುದೆಂಬುದನ್ನು ಸೂಚಿಸುವ ದಿವ್ಯಜ್ಞಾನಸಮಾಜಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸತಕ್ಕುದಾಗಿದೆ. ಇದರ ವರ್ಗಣಿ ಅಂಚೆವೆಚ್ಚ ಸೇರಿ ೬ ಆಣೆ.

ಮ|| ಮುನ್ನಾರ್ ಕೃಷ್ಣಶೆಟ್ಟರಿಗೆ ಶ್ರೀಮನ್ಮಹಾರಾಜರವರಿಂದ "ವಣಿಗ್ರತ್ನ" ಎಂಬ ಪ್ರಶಸ್ತಿಯು ಕಳೆದ ನವರಾತ್ರಿಯ ಕಾಲದಲ್ಲಿ ಅನುಗ್ರಹಿಸಲ್ಪಟ್ಟುದಕ್ಕಾಗಿ ತಮ್ಮ ಜನವರ್ಗದವರಿಗೆಲ್ಲಾ ಉಂಟಾಗಿರುವ ಸಂತೋಷವನ್ನು ವ್ಯಕ್ತಪಡಿಸಿ, ಮ|| ಶೆಟ್ಟರನ್ನು ಅಭಿನಂದಿಸುವ ಸಮಾರಂಭವನ್ನು ಈ ದಿನ ರಾಜಧಾನಿಯ ಮತ್ತು ಪರಸ್ಥಲದ ವೈಶ್ಯಮಹಾಜನರು ನಡೆಯಿಸಲು ಏರ್ಪಡಿಸಿಕೊಂಡಿರುವರು.

ಸಂಘಪ್ರಾತಿನಿಧ್ಯಾದಿ ವಿಷಯಗಳನ್ನು ಕುರಿತು ಬಿನ್ನಯಿಸಿಕೊಳ್ಳಲು ಡೆಪ್ಯುಟೇಷನ್ನಿಗೆ ಅವಕಾಶಕೊಡಬೇಕೆಂದು ಹಿಂದುಳಿದವರ ಪಕ್ಷದ ಪ್ರತಿನಿಧಿಗಳು ಮಾಡಿಕೊಂಡಿದ್ದ ಪ್ರಾರ್ಥನೆಯ ಪ್ರಕಾರ ಬರುವ ತಾ|| ೨೪ ನೆಯ ದಿವಸ ಅವರುಗಳ ವಿಜ್ಞಾಪನೆಗೆ ಅವಕಾಶವನ್ನು ಕೊಡುವುದಾಗಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಟ್ಟಿರುವರೆಂದು ಕೇಳುತ್ತೇವೆ. ಇದಕ್ಕಾಗಿ ಪರಸ್ಥಲದಿಂದಲೂ ಕೆಲವರು ಬಂದಿರುತ್ತಾರೆ.

ಈ ವರ್ಷದ ಅರ್ಥಸಾಧಕ ಸಭೆಯು ನಡೆಯುವ ಕಾಲದಲ್ಲಿ ದೇಶದ ಕೈಗಾರಿಕೆಗಳಲ್ಲಿ ಎಷ್ಟೆಷ್ಟು ಅಭಿವೃದ್ಧಿಯು ಕಂಡುಬಂದಿದೆಯೆಂಬುದನ್ನು ತೋರಿಸುವುದಕ್ಕೆ ಸಾಧನಗಳಾದ ಬೆಂಕಿಕಡ್ಡಿಗಳು, ಚಾಪೆಗಳು, ಕಾಲುಚೀಲಗಳು, ಕಂಬಳಿಗಳು, ಬಟ್ಟೆಗಳು, ಸಾಬೂನುಗಳು ಮೊದಲಾದ ನಾನಾ ವಸ್ತುಗಳು ಪ್ರದರ್ಶನಕ್ಕಿಡಲ್ಪಟ್ಟಿದ್ದುವು. ಇವುಗಳೆಲ್ಲಾ ಬೆಂಗಳೂರು ಮೈಸೂರುಮನೆ ಕೈಗಾರಿಕೆಯ ಇನ್ಸ್ಟಿಟ್ಯೂಟಿನವರಿಂದ ನಿರ್ಮಿಸಲ್ಪಟ್ಟುವು.

ರಾಜಧಾನಿಯಲ್ಲಿಯ ವರ್ತಕರೂ ಧರ್ಮಾತ್ಮರೂ ಆಗಿರುವವರಲ್ಲಿ ಕೆಲವರು ಕಳೆದ ವರ್ಧಂತಿಯ ದಿವಸದಿಂದ ಬಡಬಗ್ಗರ ಅನುಕೂಲ್ಯಕ್ಕಾಗಿ ರೂ. ಗೆ ೬ ಸೇರಿನಂತೆ ಅಕ್ಕಿಯನ್ನೂ, ೧೪ ಸೇರಿನಂತೆ ರಾಗಿಯನ್ನೂ ಮಾರಿಸಲು ಏರ್ಪಡಿಸಿರುತ್ತಾರೆ. ಈ ಕಾರ್ಯವನ್ನು ಮ|| ಗಳಾದ ಅಲಪ್ಪನವರು, ಹನುಮಂತಪ್ಪನವರು, ಬಾಲಕೃಷ್ಣಸಿಂಗ್‌ರವರು, ಪುರುಷೋತ್ತಮಾನಂದಗಿರಿ ಬಾವಾಜಿಯವರು, ಗೋಪಾಲಸಿಂಗ್‌ರವರು, ರಾಮಯ್ಯನವರು ಮಾಡುತ, ಪುಣ್ಯವನ್ನೂ ಕೀರ್ತಿಯನ್ನೂ ಪಡೆದುಕೊಳ್ಳುತ್ತಿದ್ದಾರೆ.

ಕಳೆದ ತಾ|| ೧೮-೧೯ ರಲ್ಲಿ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಪೌರಸಾಮಾಜಿಕ ಸಭೆಯು ನಡೆದು ಸ್ತ್ರೀಯರ ವಿವಾಹನಿಷೇಕ ವಯೋನಿರ್ಬಂಧವನ್ನು ಕಲ್ಪಿಸುವ ವಿಷಯವು ಪರ್ಯಾಲೋಚಿಸಲ್ಪಟ್ಟಿತು. ಮದುವೆಯಾಗುವ ಹೆಣ್ಣುಗಳ ವಯಸ್ಸು ೮ ವರ್ಷಕ್ಕೆ ಕಡಿಮೆಯಾಗಿರಕೂಡದೆಂದು ಈಗ ಇರುತ್ತಿರುವ ನಿರ್ಬಂಧವನ್ನು ೧೨-೧೪ ರವರೆಗಾದರೂ ಹೆಚ್ಚಿಸಬೇಕೆಂದುದ್ದೇಶಪಟ್ಟರು. ಬಹು ಜನರು ೧೦ ವರ್ಷಕ್ಕೆ ಹೆಚ್ಚಿಸಲೂ ಅನುಮತಿ ಕೊಡದೆ ಈ ವಿಷಯಕ್ಕೆ ನಿರ್ಬಂಧವೇ ಕೂಡದೆಂದು ಗದ್ದಲಮಾಡಿದುದರಿಂದ ಉದ್ದೇಶವು ಕೊನೆಮುಟ್ಟಲಿಲ್ಲ.

೨೦ ವರ್ಷಕ್ಕೆ ಮೇಲ್ಪಟ್ಟಕಾಲ ಪ್ರಜಾಪ್ರತಿನಿಧಿ ಸಭೆಯ ಸಭಿಕರಾಗಿ ಕೆಲಸ ಮಾಡಿರುವ ಜನರಿಗೆ ಒಂದು ಗೌರವವನ್ನು ತೋರಿಸಲು ಶ್ರೀಮನ್ಮಹಾರಾಜರು ಅನುಗ್ರಹಿಸಿರುತ್ತಾರೆ. ಅವರುಗಳು ಅಪ್ಪಣೆಚೀಟಿಯುಲ್ಲದ ಜೀವಾಂತವಾಗಿ ಆಯುಧಗಳನ್ನಿಟ್ಟುಕೊಂಡಿರಬಹುದು. ಅವರುಗಳಿಗೆ ರಾಜಾಸ್ಥಾನದಲ್ಲಿಖಾಸಾ ಹೂವಿನ ಹಾರದ ಮರ್ಯಾದೆಯು ಸಲ್ಲುವುದು. ಇಂಥ ಮರ್ಯಾದೆಗೆ ಈಗ ಅರ್ಹರಾಗಿರುವವರು ಮ||ಗಳಾದ ನಾಗಮಾಲದ ಪ|| ಲಿಂಗೇಗೌಡರು, ಸಿ. ಶ್ರೀನಿವಾಸರಾಯರು, ವಾಸುದೇವರಾಯರು, ಎಂ. ವೆಂಕಟಕೃಷ್ಣಯ್ಯನವರು, ಕೆ. ರಾಮಾನುಜಯ್ಯಂಗಾರರು, ಅಣ್ಣಯ್ಯಪಂಡಿತರು.

ಬೆಂಗಳೂರಿನಿಂದ "ಬ್ರಾಹ್ಮಣ" ಎಂಬ ಹೆಸರಿನ ಪತ್ರಿಕೆಯು ಅಲ್ಲಿ ಸ್ಥಾಪಿತವಾಗಿರುವ ಬ್ರಾಹ್ಮಣ ಸಂಘದಿಂದ ಪ್ರತಿ ಗುರುವಾರ ಪ್ರಕಟಿಸಲಾರಂಭಗೊಂಡಿದೆ. ಇದರ ಪ್ರಥಮ ಸಂಚಿಕೆಯನ್ನು ನಾವು ವಿಶ್ವಾಸದಿಂದ ಸ್ವೀಕರಿಸಿದೆವು. ಪರಸ್ಥಲದವರಿಗೆ ಅಂಚೆ ವೆಚ್ಚ ಸೇರಿ ಇದರ ವರ್ಗಣಿ ೨ ರೂ. ಹೆಸರಿಗೆ ತಕ್ಕಂತೆ ಇದು ಬ್ರಾಹ್ಮಣ್ಯೋದ್ಧಾರಕ್ಕೆ ತಕ್ಕ ಲೇಖನಗಳನ್ನು ಪ್ರಕಟಿಸಲು ಸಂಕಲ್ಪಗೊಂಡಿದೆ. ನಮ್ಮ ಈ ನೂತನ ಬಂಧುವಿನ ಸಂಕಲ್ಪ ಸಾಹಸಗಳು ದೇಶಮಧ್ಯದಲ್ಲಿ ಶಾಸ್ತ್ರೀಯ ಬ್ರಾಹ್ಮಣ್ಯೋದ್ಧಾರಕ್ಕೆ ಯತ್ಕಿಂಚಿತ್ತಾದರೂ ಸಾಧಕವಾಗುವಂತಾದರೆ ಅವರ ಉದಯವು ಸಾರ್ಥಕವಾಗುವುದು. ಆ ಕೆಲಸವನ್ನು ನೆರವೇರಿಸುತ್ತ ಇದು ಚಿರಾಯುವಾಗಲೆಂದು ಕೋರುವೆವು.

ಈಸಲದ ಅರ್ಥಸಾಧಕ ಸಭೆಯಲ್ಲಿ ವಿದ್ಯಾವಿಷಯದ ಚರ್ಚೆಗಳು ನಡೆಯುವಾಗ್ಗೆ ಸ್ತ್ರೀವಿದ್ಯಾಭ್ಯಾಸವನ್ನು ದೇಶಭಾಷಾಮೂಲಕವಾಗಿಯೇ ನಡೆಯಿಸುವುದು ಆವಶ್ಯಕವೆಂದೂ, ಆಂಗ್ಲಭಾಷೆಯನ್ನು ಉಪಭಾಷೆಯಾಗಿ ತೆಗೆದುಕೊಳ್ಳಬಹುದೆಂದೂ, ಪುರುಷರು ಮಾಡುವ ವಿದ್ಯಾಭ್ಯಾಸವನ್ನೇ ಸ್ತ್ರೀಯರಿಗೂ ಕೂಡ ಮಾಡಿಸುವುದು ಯುಕ್ತವಲ್ಲವೆಂದೂ, ಅವರಿಗಾಗಿ ಅವಶ್ಯಕವಾದ ಅಭ್ಯಾಸಕ್ರಮವು ಏರ್ಪಡಿಸಬೇಕೆಂದೂ ಮೊದಲಾಗಿ ಒಂದು ಸೂಚನೆಯನ್ನು ಮ|| ರಾಮಲಿಂಗರೆಡ್ಡಿ, ಎಂ.ಎ., ಯವರು ಮಾಡಿದರು. ಮಹಾರಾಣಿ ಕಾಲೇಜಿನ ಅಧ್ಯಕ್ಷೆಯರಾದ ರುಕ್ಮಿಣಮ್ಮ, ಬಿ.ಎ., ಯವರು ಇಂಗ್ಲೀಷಿನಲ್ಲೇ ಅಭ್ಯಾಸ ಮಾಡಿಸುವ ಈಗಣ ಪದ್ಧತಿಯನ್ನು ತಪ್ಪಿಸುವುದು ವಿಹಿತವಲ್ಲವೆಂದು ಪ್ರತಿಯಾಗಿ ವಾದಿಸಿದರು. ಆದರೂ ಬಹುಜನರು ರೆಡ್ಡಿಯವರ ಸೂಚನೆಯನ್ನೇ ಅನುಮೋದಿಸಿದುದರಿಂದ ಆ ಸೂಚನೆಯೇ ಅಂಗೀಕೃತವಾಯಿತು. ಗಂಡುಸರಂತೆಯೇ ಹೆಂಗುಸರೂ ಆಗಬೇಕೆಂಬ ಭ್ರಮೆಯು ನಮ್ಮ ಕೆಲಮಂದಿ ನಾರೀಮಣಿಗಳಿಗಿರಬಹುದು. ಗೃಹಿಣೀತ್ವರಕ್ಷಣೆಗೆ ವಿದೇಶಭಾಷಾಭ್ಯಾಸವೇ ಆಗಬೇಕೆ?

ಧರ್ಮಪ್ರಕಾಶ ಡಿ|| ಬನುಮಯ್ಯನವರ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವ ವಾರ್ಷಿಕ ಸಮಾರಂಭವು ಕಳೆದ ತಾ|| ೧೯ ನೇ ಬುಧವಾರ ಸಾಯಂಕಾಲ ಶಾಲಾಭವನದಲ್ಲಿ ವಿದ್ಯಾಭ್ಯಾಸಶಾಖಾ ಇನ್ಸ್|| ಜನರಲ್‌ರವರಾದ ಮ|| ರಾಮಲಿಂಗರೆಡ್ಡಿ, ಎಂ. ಎ., ಯವರ ಅಧ್ಯಕ್ಷತೆಯಿಂದ ಮನೋಹರವಾಗಿ ನಡೆದಿತು. ಶ್ರೀಮನ್ಮಹಾರಾಜರವರ ಪ್ರೈ|| ಸೆಕ್ರೆಟರಿ ಮಿ|| ಕೇಂಬಲ್‌ರವರು, ಮಿ|| ಗುಲಾಂ ಅಹಮದ್ ಕಲಾಮಿ, ಮ|| ಗಳಾದ ಬಸವಯ್ಯ, ಬಿ ಎ., ಬಿ.ಎಲ್. ರವರು, ಅಣ್ಣಯ್ಯ ಪಂಡಿತರು, ಸಾ|| ತಿಮ್ಮಯ್ಯನವರು, ಪುರುಷೋತ್ತಮಾನಂದಗಿರಿಯವರು, ಎ. ರಾಮಣ್ಣನವರು, ಎ. ಕೃಷ್ಣರಾಯರು, ಮಹಮ್ಮದ್ ಸೇಟರು ಮೊದಲಾದನೇಕ ದೊಡ್ಡಮನುಷ್ಯರೂ ವಿದ್ಯಾರ್ಥಿಗಳ ಪೋಷಕರೂ, ವಿದ್ಯಾರ್ಥಿಗಳೂ ಸಹ ಕಿಕ್ಕಿರಿದು ಸಭೆಯಲ್ಲಿ ತುಂಬಿದ್ದರು. ಸ್ವಾಗತ ಪದ್ಯಗಳೂ ಸ್ಕೂಲಿನ ವರದಿಗಳೂ ಓದಲ್ಪಟ್ಟು ವಿದ್ಯಾರ್ಥಿಗಳ ವಿನೋದ ಸಂಭಾಷಣವು ನಡೆದ ಬಳಿಕ ಸಭಾಧ್ಯಕ್ಷರಾದ ಮ|| ರೆಡ್ಡಿಯವರು ಆಂಗ್ಲಭಾಷೆಯಲ್ಲಿ ಹೃದಯಂಗಮವಾದ ಉಪನ್ಯಾಸ ಮಾಡಿದರು. ಶಾಲಾವಿದ್ಯಾಭ್ಯಾಸ ಕ್ರಮ, ಗ್ರಾಂಟಿನೇಡ್ ಶಾಲೆಗಳ ಸ್ಥಿತಿಗತಿ, ಅವುಗಳಿಗೆ ಸರ್ಕಾರದಿಂದ ಸಲ್ಲುವ ಸಹಾಯದ್ರವ್ಯವು ಸಾರ್ಥಕವಾಗಬೇಕಾದ ರೀತಿ, ಇತ್ಯಾದಿಗಳನ್ನೆಲ್ಲಾ ತಿಳಿಸಿ, ಶಾಲೆಯು ಹೈಸ್ಕೂಲಾಗಿ ಅಭಿವೃದ್ಧಿಗೊಳ್ಳಲೆಂದು ಕೋರಿದುದಲ್ಲದೆ, ಪಾಶ್ಚಾತ್ಯರಾಷ್ಟ್ರಗಳಂತೆ ದೇಶದ ವಿದ್ಯಾಭಿವೃದ್ಧಿಗೆ ಸಾಧಕಗಳಾದ ಶಾಲಾಪ್ರತಿಷ್ಠಾಪನೆಗಳು ಪ್ರಜೆಗಳಿಂದಲೇ ಹೆಚ್ಚುಹೆಚ್ಚಾಗಿ ಸ್ಥಾಪಿಸಲ್ಪಡುತ್ತ ಬರಬೇಕೆಂದು ಹೇಳಿ, ಅಂಥ ಮಹತ್ಕಾರ್ಯವೊಂದನ್ನು ಮ|| ಬನುಮಯ್ಯನವರು ಮಾಡಿ ಲೋಕೋಪಕಾರಿಗಳಾಗಿ ಶ್ರೀಮನ್ಮಹಾರಾಜರವರ ಮೆಚ್ಚುಗೆಯನ್ನು ಪಡೆದು ಕೀರ್ತಿಭಾಜನರಾದುದಕ್ಕಾಗಿ ಅವರನ್ನು ಕೊಂಡಾಡಿ, ಸಾಧ್ಯವಾಗುವ ಸಹಾಯಗಳನ್ನೆಲ್ಲಾ ಶಾಲೆಗೆ ಮಾಡಿಕೊಡುವುದಾಗಿ ಅಭಯದಾನ ಮಾಡಿದರು. ಬಳಿಕ ವಿದ್ಯಾರ್ಥಿಗಳಿಗೆ ಪುಸ್ತಕಗಳ ಬಹುಮಾನವನ್ನು ಹಂಚಿದರು. ಸಭಿಕರು ವೈ|| ಶಿ|| ಮ|| ಶೇಷಣ್ಣನವರ ವೀಣಾವಾದನದಿಂದಲೂ, ಮ|| ಶ್ರೀನಿವಾಸಯ್ಯಂಗಾರ್ಯರ ಹಾಡುಗಾರಿಕೆಯಿಂದಲೂ, ಸಿನಿಮಾ ಚಿತ್ರಪಟಪ್ರದರ್ಶನದಿಂದಲೂ ಆನಂದಪಡಿಸಲ್ಪಟ್ಟರು.

ಯುದ್ಧವಾರ್ತೆಯು.

ಕಳೆದ ವಾರದಲ್ಲಿ ಶತ್ರುಗಳು ಪಶ್ಚಿಮರಂಗದಲ್ಲಿ ಮಾಡಿದ ಮಹಾಯುದ್ಧಗಳಿಂದ ಮುಂದಕ್ಕೆ ಸಾಗಿಬರುವುದಾಗಲಿಲ್ಲ. ವಿಪರೀತ ನಷ್ಟಗಳನ್ನು ಮಾತ್ರ ಹೊಂದುತ್ತಿದ್ದಾರೆ. ಮಿತ್ರಮಂಡಲಿಯವರು ಸರ್ವಾಯತ್ತರಾಗಿರುವುದರಿಂದ ಮಾಂಟಿಡಿಡಿಯರ್ ರಂಗದಲ್ಲಿ ಜರ್ಮನರು ರಿಬೇಕೋರ್ಟನ್ನು ದಾಟಿ ಮುಂದಕ್ಕೆ ನುಗ್ಗುವುದು ಸಾಧ್ಯವಾಗಲಿಲ್ಲ. ಅಲ್ಲಿಗೆ ಅವರು ನಿಂತುಹೋಗಿರುವರು. ಕಾಂಪೆಯ್ನ್ ಕಾಡನ್ನೂ ಹಿಡಿದುಕೊಳ್ಳಲಾರದೆ ಹೋದರು. ಈ ಕಾರಣದಿಂದ ೪ ನೆ ಅವಸ್ಕಂದನದಲ್ಲೂ ಅವರು ತಮ್ಮ ಗಮ್ಯಸ್ಥಾನವಾವುದನ್ನೂ ಸೇರಿದಂತಾಗಲಿಲ್ಲ. ಆದರೂ ಅವರ ಯುವರಾಜರ ಬಳಿಯಲ್ಲಿ ಹಲವು ವಿನಾಸಲು ಸೈನ್ಯಗಳು ಸಿದ್ಧವಾಗಿರುವುವೆಂದು ಗೊತ್ತಾಗುವುದರಿಂದ ಇನ್ನಾವ ಕಡೆಯಲ್ಲಾದರೂ ಅವರು ಯುದ್ಧವನ್ನಾರಂಭಿಸಿ ನುಗ್ಗುವುದರಲ್ಲಿ ಸಂಶಯವಿಲ್ಲ. ಅಮೇರಿಕನ್ ಸೈನ್ಯವು ಬಂದುಬಂದು ಸೇರುತ್ತಲೇ ಇರುವುದರಿಂದ ಮಿತ್ರಮಂಡಲಿಯವರು ಬಲಿಷ್ಠರಾಗುತ್ತಲೇ ಇದ್ದಾರೆ. ಆಸ್ಟ್ರಿಯಾದಲ್ಲಿ ಅಂತಃಕಲಹಗಳು ಹೆಚ್ಚಾಗಿವೆ. ಅದನ್ನು ಶಾಂತಿಮಾಡುವುದಕ್ಕಾಗಿ ಆಸ್ಟ್ರಿಯನ್ನರು ತಮ್ಮ ಸೈನ್ಯದಿಂದ ಇಟಲಿಮೇಲೆ ಮತ್ತೊಂದುಸಲ ನೂತನಾವಸ್ಕಂದನವನ್ನಾರಂಭಿಸಿರುವರು. ಆಸಿಯಾಗೋ ಪೀಠಭೂಮಿಯ ಮೇಲಿದ್ದ ಆಂಗ್ಲಸೇನಾಪಜ್ಞ್ತಿಯೆದಿರಿಗೆ ಅವರು ಮೇಲೆ ಬಿದ್ದರು. ಅವರು ಇಟಲಿ ಇಂಗ್ಲೀಷ್ ಫ್ರೆಂಚ್‌ಸೇನೆಗಳಿಂದ ಬಹು ನಷ್ಟಕಷ್ಟಗಳನ್ನನುಭವಿಸಿದರು. ಮುಂದಕ್ಕೆ ನುಗ್ಗಿಬರಬೇಕೆಂದಿದ್ದ ಅವರ ಸಾಹಸವೆಲ್ಲಾ ವ್ಯರ್ಥವಾಯಿತು. ಪ್ಯಾವಿನದಿ ಬೆಂಟಾನದಿಗಳನ್ನು ದಾಟಿದ ಶತ್ರುಗಳ ಕಡೆಯ ೫ ಸಾವಿರ ಮಂದಿ ಸೈನಿಕರೂ ಅನೇಕ ಫಿರಂಗಿ ಮೊದಲಾದ ಸಾಮಗ್ರಿಗಳೂ ಮಿತ್ರಮಂಡಲಿಗೆ ಸಿಕ್ಕಿದುವು. ಶತ್ರುಗಳಿಗೆ ಯುದ್ಧಾರಂಭದಲ್ಲೇ ಆದ ಈ ಪರಾಭವವು ಅವರ ಉತ್ತರೋತ್ತರ ಅಪಜಯಕ್ಕೆ ಸೂಚನೆಯಾಗಿದೆ.

ಭರತಖಂಡದ ವೃತ್ತಾಂತಗಳು.

ಭರತಖಂಡದ ಪ್ರತಿನಿಧಿಗಳಾಗಿ ಸಾಮ್ರಾಜ್ಯ ಯುದ್ಧಸಭೆಗೆ ದಯಮಾಡಿಸಿರುವ ಪಾಟಿಯಾಲಾ ಮಹಾರಾಜರವರು ಸೀಮೆಗೆ ತಲುಪಿದ ಕೂಡಲೇ ಅವರಿಗೆ ಮೇಜರ್ ಜನರಲ್ ಎಂಬ ಬಿರುದೂ, ಸರ್ ಸತ್ಯೇಂದ್ರಪ್ರಸನ್ನ ಸಿನ್ಹರವರಿಗೆ ಕೆ. ಸಿ. (ಕಿಂಗ್ಸ್‌ಕಾನ್ಸಲ್) ಎಂಬ ಬಿರುದೂ ಕೂಡ ಸಾರ್ವಭೌಮರಿಂದ ಅನುಗ್ರಹಿಸಲ್ಪಟ್ಟಿತು.

ಇಂಡಿಯಾ ಸರ್ಕಾರದವರು ಈಗತಾನೇ ಒಂದು ಪ್ರಕಟನವನ್ನು ಮಾಡಿ, ಅದರಲ್ಲಿ ಇನ್ನು ಮುಂದೆ ಸವರನ್ನಿನ ತೂಕಕ್ಕೂ ಬಣ್ಣಕ್ಕೂ ಸಮನಾದ ೧೫ ರೂ. ಬೆಲೆಯ ಭಂಗಾರದ ಮೊಹರುಗಳು ನಿರ್ಮಿಸಲ್ಪಡುವುವೆಂದೂ, ಬೆಳ್ಳಿಯ ಮತ್ತು ಚಿನ್ನದ ಯಾವುದೊಂದು ನಾಣ್ಯವನ್ನೇ ಆಗಲೀ ಯಾರೂ ಕರಗಿಸಲಾಗದೆಂದೂ, ತಪ್ಪಿ ನಡೆದವರಮೇಲೆ ಕಠಿನವಾದ ಚರ್ಯೆಯನ್ನು ಜರುಗಿಸಲು ಪೂರ್ಣ ಶ್ರದ್ಧೆ ತೆಗೆದುಕೊಳ್ಳಲ್ಪಡುವುವೆಂದೂ ತಿಳಿಯಪಡಿಸಿರುತ್ತಾರೆ.

ಸ್ವರಾಜ್ಯವಾದಿ ರಾಯಭಾರದವರನ್ನು ಸೀಮೆಗೆ ಹೋಗಗೊಡದೆ ತಡೆದುಬಿಟ್ಟುದರಿಂದ ಡಾ|| ನಾಯರನ್ನೂ ಸೀಮೆಗೆ ಹೋಗಗೊಡಿಸದ ತಡೆಯಬೇಕೆಂದು ಮದ್ರಾಸಿನ ಜನರು ಒಂದು ಸಭೆಯಲ್ಲಿ ನಿರ್ಧಾರಮಾಡಿ ಗೌರ್ನರಿಗೆ ಬಿನ್ನಯಿಸಿಕೊಂಡಿದ್ದರು. ಅದಕ್ಕೆ ಉತ್ತರವಾಗಿ ಸಭಾಸಮೇತರಾದ ಗೌರ್ನರವರು ಪ್ರಕಟಿಸಿಮಾಡಿರುವ ಪತ್ರದಲ್ಲಿ "ಡಾ|| ನಾಯರ್‌ರವರಿಗೆ ದೇಹಾರೋಗ್ಯವು ಕೆಟ್ಟಿದ್ದುದರಿಂದ ಅದರ ಸುಧಾರಣೆಯ ಸೂಚನಾದ ಸ್ವಕಾರ್ಯಕ್ಕಾಗಿ ಸೀಮೆಗೆ ಹೊರಡಲು ಕಳೆದ ಮಾರ್ಚಿ ತಾ|| ೧೧ ರಲ್ಲೇ ಅವರಿಗೆ ಪ್ರಯಾಣದ ಪತ್ರವು ಕೊಡಲ್ಪಟ್ಟಿದ್ದಿತು. ಅದನ್ನು ಹಿಂದೆಗೆಯಬೇಕೆಂದು ಕೇಳುವವರ ಕೋರಿಕೆಯನ್ನು ನಾವು ನಿರಾಕರಿಸುತ್ತೇವೆ" ಎಂದು ತಿಳಿಯಪಡಿಸಿದ್ದಾರೆ.

ಧರ್ಮಪ್ರಕಾಶ ಡಿ. ಬಸುಮಯ್ಯನವರ ಎ. ವಿ. ಸ್ಕೂಲಿನ ವಾರ್ಷಿಕೋತ್ಸವವು.

ಸುಖಾಗಮನ ಪದ್ಯಕದಂಬಂ.

ನಿನಗಾರೋಗ್ಯಮೆ ? ನಿನ್ನಯ ।
ಜನವೆಲ್ಲಂ ಸೊಗದೊಳಿರ್ಪುದೇಂ ? ಬೆಸನೆಲ್ಲಂ ॥
ಅನುವರಿದು ನಡೆಯುತಿರ್ಪುದೆ ? ।
ವಿನುತಗುಣಾ ! ರಾಮಲಿಂಗರೆಡ್ಡಿಯೆ, ಪೇಳ್ವೈ ? ॥ ೧ ॥

ನಲವಿಂ ಮನ್ನಿಸಿ ನಮ್ಮ ಬಿನ್ನಪಮನಿಂದೈತಂದೆಯೈ, ಮಾನ್ಯ ನೀಂ ।
ವಿಲಸದ್ಬಾಲರ ಭಾಗ್ಯದೇವತೆಯವೊಲ್ ಶ್ರೀರಾಮಲಿಂಗಾಭಿಧಾ ! ॥
ಭಳಿರೇ ! ಪಣ್ತುದು ನಮ್ಮ ಪೂರ್ವ ಸುಕೃತಂ ನೀವಾದೆವೈ ಧನ್ಯರುಂ ।
ಪಲಕಾಲಂ ಬಯಸಿರ್ದ ಬಯ್ಕೆಯದುವುಂ ಕೈಸಾರ್ದುದೇನೆಳ್ವೆವೈ ! ॥ ೨ ॥

ಮೆರೆವಗ್ರಪೀಠವೇರುತೆ ।
ಕರುಣೆಯುಮ್ಮೈ ಬುದ್ಧಿವಾದಮುಂ ವಿಬುಧವರಾ ॥
ಅರಿಯದ ತರಳರ್ ನಾವಿಂ ।
ದುರುಭಕ್ತಿಯಿನರಿಕೆಗೆಯ್ವುದಂ ಲಾಲಿಪುದೈ ॥ ೩ ॥

ವಿದ್ಯೆಯೆ ಸೌಖ್ಯಮಿತ್ರವುದು, ವಿದ್ಯೆಯೆ ಕೀರ್ತಿಯನೀವುದೈದೆ ಸ ।
ದ್ವಿದ್ಯೆಯೆ ಗೌರವಂಗುಡುವುದಾಂಪುಜಾಲಮನಿಕ್ಕಲಾರ್ಪುದುಂ ॥
ವಿದ್ಯೆಯೆ ದೈವಭಕ್ತಿಗುರುಸಾಧನಮುಂ ವರವಿದ್ಯೆಯೇ ಗಡಾ ।
ವಿದ್ಯೆಯೆ ಭಾವಿಸಲ್ ಧರಣಿಗೊಪ್ಪುವ ಕಾಮಿತಕಲ್ಪಭೂರುಹಂ ॥ ೪ ॥

ಅದರಿಂದಿವನೆಲ್ಲರ್ಗಂ ।
ಪದುಳದೆ ಕೈಗೊಳಿಸವೇಳ್ಕು ಮೆಂದಾದರದಿಂ ॥
ಸದಯಂ ಕೃಷ್ಣನೃಪೇಶಂ ।
ಮುದದಿಂ ಬೆಸಸಿರ್ಪನಲ್ತೆ ವಿದ್ಯಾಪ್ರೇಮಂ ॥ ೫ ॥

ತಿಳಿಯುತೆ ರಾಜರ ಚಿತ್ತವು ।
ನಲಸದೆ ಬಸುಮಯ್ಯನೈದೆ ವಿದ್ಯಾಗೃಹಮಂ ॥
ಸಲೆನಿರವಿಸುತಾಸ್ಥಾನದೆ ।
ತಳೆದಂ ಧರ್ಮಪ್ರಕಾಶನೆಂಬಾಬಿರುದಂ ॥ ೬ ॥

ವಿದ್ಯಾಪ್ರಚಾರ ಕಾರ್ಯಕೆ ।
ಹೃದ್ಯಂ ನೀನಾದೆಯದ್ದರಿಂ ಬಹುವಿಧಂ ।
ವಿದ್ಯೋತಮಾನ ಗುಣಗಣ ।
ವದ್ಯಂ ವರರಾಮಲಿಂಗರೆಡ್ಡಿ ಮಣಿಸೀ ॥ ೭ ॥

ಆರಾಜೋತ್ತಮನಾಜ್ಞೆಯ ।
ನೋರಂತಿರೆ ಶಿರದೆ ತಾಳ್ದು ನಡೆಯಿಸೆ ಶಕ್ತಂ ॥
ಧೀರಾಗ್ರಣಿ ನೀನೊರ್ವನೆ ।
ತೋರುವ ಸಾಕ್ಷಾತ್ಕೃತಸತ್ಯವಿದ್ಯಾನಿಪುಣಂ ॥ ೮ ॥

ಪಿಂದಣ ವರ್ಷದೆ ಕಲ್ತರ ।
ನಂದದೆ ಪರಿಕಿಸುತೆ ಕಂಡು ಮೊದಲಿಗರಂ ನೀಂ ॥
ಇಂದೈದೆ ಪಾರಿತೋಷಕ ।
ವೊಂದಿಪುದೈ ಬುದ್ಧಿವಾದವೀಯುತೆ ದಯೆಯಿಂ ॥ ೯ ॥

ಚಾಮುಂಡೇಶ್ವರಿಯೊಲವಿಂ ।
ಭೂಮಿಪ ಕೃಷ್ಣೇಂದ್ರಶಿಗೆ ಶುಭವಿಭವಮುಮಂ ॥
ಕಾಮಿತಮುಮನೀಗೋವುಗೆ ।
ರಾಮಂ ಶ್ರೀರಾಮಲಿಂಗರೆಡ್ಡಿಯನೆಂದುಂ ॥ ೧೦ ॥

N. SRIKANTA SASTRY,
Palace Pundit, Mysore.

ಸ್ವೀಕಾರ.

ಗುಬ್ಬಿ ತಾ॥ ಹೊಸಕೆರೆ ಹೊಸಮಠದ ಶ್ರೀ ಉಜ್ಜನಯ್ಯನವರ ಮನೆಯಲ್ಲಿ ನಡೆದ ಲಗ್ನದಲ್ಲಿ ೧ ರೂ., ಕೊಡಗು ಡಿ॥ ಕೊಡ್ಲಿಪೇಟೆಯ ಮ॥ ಕಡ್ಲೆ ಶಾಂತಮಲ್ಲಪ್ಪನವರ ಮಗಳ ಲಗ್ನದಲ್ಲಿ ೨ ರೂ., ಕೊಡ್ಲಿಪೇಟೆಯ ಮ॥ ಕಲ್ಲೂರು ಮಲ್ಲಶೆಟ್ಟಪ್ಪನವರ ಮಗಳ ಲಗ್ನದಲ್ಲಿ ವರನಕಡೆಯಿಂದ ಎಸಳೂರು ಕೊಚಳ್ಳಿ ಮಲ್ಲಪ್ಪಶೆಟ್ಟರಿಂದ ೨ ರೂ., ಕೊಡ್ಲಿಪೇಟೆಯಲ್ಲಿರುವ ಮ॥ ಚೆಟ್ಟಿದಪುರದ ಮಲ್ಲೇಶಪ್ಪನವರ ಮಗನ ದೀಕ್ಷೆಯಲ್ಲಿ ೧ ರೂ. ಈ ಪ್ರಕಾರ ಕೈ॥ ವೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ತೆಗೆಯಲ್ಪಟ್ಟ ರೂಪಾಯಿಗಳನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಪತ್ರವ್ಯವಹಾರ.

ದಾವಣಗೆರೆ.

ಚಿತ್ರದುರ್ಗ, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ವಾಸವಾಗಿರುವ ಮೈಸೂರು ಸೀಮೆಯವರಾದ ವೀರಶೈವ ಬಡ ವಿದ್ಯಾರ್ಥಿಗಳು ಅಂದರೆ ಇಂಗ್ಲೀಷ್ ಹೈಸ್ಕೂಲ್ ಮತ್ತು ಕಾಲೇಜಿನಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಸ್ಕಾಲರ್‌ಷಿಪ್ ದೊರೆಯುತ್ತದೆ. ಅಪ್ಲಿಕೇಷನ್ ಫಾರಂ ಶಿವಮೊಗ್ಗ ಫಂಡಿನ ಸೆಕ್ರೆಟರಿಯವರಲ್ಲಿಯೂ, ಚಿತ್ರದುರ್ಗದ ಪ್ಲೀಡರ್ ಸಿದ್ದನಂಜಪ್ಪನವರಲ್ಲಿಯೂ ದೊರೆಯುವುವು. ತೆಗೆದುಕೊಂಡು ಈ ತಿಂಗಳು ಆಖೈರು ತಾರೀಖಿನೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು.

2. ಚಿತ್ರದುರ್ಗ, ಶಿವಮೊಗ್ಗ, ಕಡೂರ್, ತುಮ್ಕೂರ್ ಈ ನಾಲ್ಕು ಡಿಸ್ಟ್ರಿಕ್ಟಿನ ವೀರಶೈವ ಬಡ ವಿದ್ಯಾರ್ಥಿಗಳು ದಾವಣಗೆರೆ ಅಪ್ಪರ್‌ಸೆಕೆಂಡರಿ ಕ್ಲಾಸಿನಲ್ಲಿ ಅಭ್ಯಾಸಮಾಡುವವರಿಗೆ ಪುಸ್ತಕಗಳಿಗೋಸ್ಕರ ಸ್ಕಾಲರ್‌ಷಿಪ್ ದೊರೆಯುತ್ತದೆ. ಅಪೇಕ್ಷೆಯುಳ್ಳವರು ಈ ತಿಂಗಳು ತಾ॥ 25 ರ ಒಳಗೆ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಬರೆಯತಕ್ಕದ್ದು.

3. ಅಕ್ಷರಗಳು ಸ್ಫುಟವಾಗಿದ್ದು ಸಂಪೂರ್ಣ ವಿಳಾಸ ಬರೆಯತಕ್ಕದ್ದು. ಫಾರಂನಲ್ಲಿರುವ ಹೆಡ್ಡಿಂಗ್ ತಪ್ಪ ಇಲ್ಲದಂತೆ ಬರೆಯುವುದು. ಸರಿಯಾಗಿ ಅರ್ಥವಾಗದಂತೆ ಬರೆಯಲ್ಪಡುವ ಅಪ್ಲಿಕೇಷನ್‌ಗಳು ಅಂಗೀಕರಿಸಲ್ಪಡುವುದಿಲ್ಲ.

ದಾವಣಗೆರೆ, ತಾ॥ 8—6—18. } ಸೆಕ್ರೆಟರಿ
ವೀರಶೈವ ವಿದ್ಯಾವರ್ಧಕ ಸಂಘದ ಫಂಡ್.

ಸಾಲವನ್ನು ತೀರಿಸದೆ ಇದ್ದವರನ್ನು ಸಿವಿಲ್‌ಜೈಲಿಗೆ ಕಳುಹಿಸುವ ಪದ್ಧತಿಯು ಇಂಗ್ಲೀಷ್‌ದೇಶದಲ್ಲಿಲ್ಲ. ಅದು ನಮ್ಮ ಭರತಖಂಡದಲ್ಲಿ ಬಹುಕಾಲಾರಭ್ಯ ಇರುವುದರಿಂದ ಸಾಲ ತೀರಿಸಲಾರದವರಿಗೆ ಬಹಳ ಅವಮಾನಕರವಾಗಿರುವುದಾದಕಾರಣ ಅದನ್ನು ತಪ್ಪಿಸಿಬಿಡಬೇಕೆಂದು ಅನೇಕ ಜನರು ಸರ್ಕಾರಕ್ಕೆ ಬಿನ್ನಯಿಸುತ್ತಿದ್ದರು. ಮದ್ರಾಸುಪ್ರಭುತ್ವದವರು ಈ ವಿಷಯದಲ್ಲಿ ವಿಚಾರಣೆಮಾಡಿ ಅಭಿಪ್ರಾಯಕೊಡುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ನಿಯಮಿಸಿದ್ದರು. ಅವರು ಕೆಲವು ಜಿಲ್ಲೆಗಳಲ್ಲಿ ನ್ಯಾಯಾಧಿಪತಿಗಳ ಮತ್ತೂ ಪ್ರಸಿದ್ಧವಕೀಲರ ವಾಙ್ಮೂಲಗಳನ್ನೂ ಮತ್ತೂ ಕೋರ್ಟುಗಳ ರಿಕಾರ್ಡುಗಳನ್ನೂ ತೆಗೆದುಕೊಂಡು ಪರಿಶೀಲಿಸಿ, ಗೌರ್ನಮೆಂಟಿಗೆ ೧ ವರದಿಯನ್ನು ಮಾಡಿದರು. ಅವರಮೇಲೆ ಸಿವಿಲ್‌ಜೈಲಿಗೆ ಕಳುಹಿಸುವ ಪದ್ಧತಿಯನ್ನು ನಿಲ್ಲಿಸುವುದು ಅನವಶ್ಯಕವೆಂದು ನಿರ್ಧರಿಸಿರುವರು.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳವರೂ, ಶ್ರೀ ಹಾವೇರಿ ಹುಕ್ಕೇರಿ ಮಠದ ಶ್ರೀಗಳವರೂ, ಶ್ರೀ ಕೆಳದಿ ಮಠದ ಶ್ರೀಗಳವರೂ ವಸೂಲ್ ಮಾಡಿದ ವಿವರ.

(1) ಹೊನ್ನಶೆಟ್ಟಿ ಚನ್ನಪ್ಪನವರು 500 ರೂ, (2) ಪುರಾಣದ ಸಿದ್ದರಾಮಯ್ಯನವರು 50 ರೂ, (3) ಮದನಭಾವಿ ರುದ್ರಪ್ಪನವರು 151 ರೂ, (4) ಗೊಜ್ಜನೂರು ಸಿದ್ದರಾಮಯ್ಯನವರು 51, (5) ಗುರುಶಾಂತಪ್ಪ ಶಾಸ್ತ್ರಿಗಳು 101, (6) ಪುರಾಣದ ನಂಜುಂಡಯ್ಯನವರು 101, (7) ದಲ್ಲಾಳಿ ವೀರಭದ್ರಪ್ಪನವರು 101, (8) ಹಲ್ಕಟ್ಟಿ ಗುರುಬಸವಪ್ಪನವರು 101, (9) ಪುರಾಣದ ಸಂಗಯ್ಯನವರು 101, (10) ಉಡುಚಾಣದ ಸಂಗನಬಸಪ್ಪನವರು 101, (11) ಹಂಚಿನಮನೆ ಸಣ್ಣಪ್ಪನವರು 101, (12) ದಲ್ಲಾಳಿ ಚನ್ನಬಸಪ್ಪನವರು 63, (13) ಹಳೆಪಟ್ಟಶೆಟ್ಟಿ ಹಾಲಪ್ಪನವರು 51, (14) ಅಮಟಿಕೊಪ್ಪದ ಬಸವಣ್ಣಪ್ಪನವರು 51, (15) ಹೊಳೆಯಪ್ಪನವರು 25, (16) ರಸ್ತಾಪುರಮಠ ಹಳ್ಳದ ಬಸಪ್ಪಯ್ಯನವರು 51, (17) ಚನ್ನಬಸಪ್ಪನವರು 25, (18) ತುಂಗಿಹಳ್ಳಿ ವೀರಪ್ಪನವರು 25, (19) ರಮಣೀ ಚನ್ನವೀರಪ್ಪನವರು 25, (20) ಅಮಟೀಕೊಪ್ಪದ ಶಿವಣ್ಣನವರು 21, (21) ತೆಂಕಲಕೊಂಡಿ ಬಸವಣ್ಣಪ್ಪನವರು 21, (22) ಅಂಗಡಿ ಬಸಪ್ಪನವರು 16, (23) ದೂಪೀಹಳ್ಳಿ ಚನ್ನಬಸಪ್ಪನವರು 15, (24) ವಸ್ತ್ರದ ಮುರಿಗಯ್ಯನವರು 15, (25) ಹರಗಲ್ಲಿ ದೇವಪ್ಪನವರು 15, (26) ಕೋರಿ ಮಲಕಪ್ಪನವರು 12, (27) ಅಮಟೀಕೊಪ್ಪದ ಗುರುಸಿದ್ದಪ್ಪನವರು 12, (28) ಅಂಗಡಿ ರಾಚಪ್ಪನವರು 12, (29) ಓರೆಮುರದ ಸಿದ್ದಯ್ಯನವರು 12, (30) ಮುಂಚಾಲಿ ಹೋಳಿ ಬಸಪ್ಪನವರು 11, (31) ಮಳಸೀ ಮುಪ್ಪಣ್ಣನವರು 11, (32) ಅಂಗಡಿ ವೀರಪ್ಪನವರು 11, (33) ನೇಮತಿ ವೀರಪ್ಪನವರು 10, (34) ಪಟ್ಟದ ವೀರಯ್ಯನವರು 9, (35) ಬಣ್ಣದ ನೂಲು ಬಸಪ್ಪನವರು 9, (36) ನಲುಮಲು ವಿರೂಪಾಕ್ಷಪ್ಪನವರು 9, (37) ಕಾನೂರು ಶಿವಲಿಂಗಪ್ಪನವರು 9, (38) ರಮಣೀ ತಮ್ಮಣ್ಣನವರು 9, (39) ಅಜ್ಜೀ ಮುರಗಪ್ಪನವರು 9, (40) ಆಯನೂರು ಬಸವಣ್ಣಪ್ಪನವರು 9, (41) ನೇಮತಿ ಹಾಲಪ್ಪನವರು 9, (42) ರಮಣೀ ಕೊಟ್ರಪ್ಪನವರು 8, (43) ಚಿನ್ನೂರು ಚನ್ನಬಸಪ್ಪನವರು 8, (44) ತಿಮ್ಮಣ್ಣನವರ ಚನ್ನಬಸಪ್ಪನವರು 6, (45) ಹರಿಹರದ ಸ್ವಾದೆಪ್ಪನವರು 6, (46) ಅಮಟೀಕೊಪ್ಪದ ಸ್ವಾದೆಪ್ಪನವರು 6, (47) ಹವಡೀ ರಾಚಪ್ಪನವರು 6, (48) ಪುರಾಣದ ಷಡಾಕ್ಷರಯ್ಯನವರು 6, (49) ಕೊರಡಿ ವೀರಪ್ಪನವರು 6, (50) ಅಂಗಡಿ ಹೋರಿ ಹೊಳೆಯಪ್ಪನವರು 6.5.0, (51) ಮಲ್ನಾಡ ಸಿದ್ದಲಿಂಗಮ್ಮನವರು 5, (52) ಸಕ್ರೆ ವೀರಬಸಪ್ಪನವರು 5, (53) ದುರ್ಗದ ಗುರುಶಾಂತಪ್ಪನವರು 5, (54) ಕೊರಡಿ ಸಿದ್ದಪ್ಪನವರು 5, (55) ಕುಂಬಾರ ಶಾಂತವೀರಪ್ಪನವರು 5, (56) ಹಂಚಿನಮನೆ ಕಲಿವೀರಪ್ಪನವರು 5, (57) ಕುಳಿನ ನೀಲಕಂಠಪ್ಪನವರು 5, (58) ಹಾನಗಲ್ ಚನ್ನಬಸಪ್ಪನವರು 5, (59) ಹರಿಹರದ ಮುರಿಗಪ್ಪನವರು 5, (60) ಧಾರ್ವಾಡದ ನಂಜುಂಡಪ್ಪನವರು 5, (61) ಹರಿಹರದ ಚನ್ನಬಸಪ್ಪನವರು 5, (62) ಪುರಾಣದ ಕಲ್ಯಾಣಮ್ಮನವರು 5, (63) ಬಳ್ಳಾರಿ ಹೊಳಬಸಪ್ಪನವರು 5.

ಜುಮ್ಲಾ 2164.5.0.

ಜಿ. ಎಂ. ಕಾಡಪ್ಪ, ಟ್ರೆಜರರ್,
ವೀರಶೈವ ವಿದ್ಯಾವರ್ಧಕ ಸಂಘ, ನಗರ ಡಿವಿಜನ್.

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲವಾದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದಸನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಹೋರೂಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೊಹರ್‌ಜಾನ್ ಸೀರೆ...	5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ...	3.0.0	ಜರ್ಮನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ	... 5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ,
27 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 34

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಅದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೩-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಿತ್ತಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮೆ ಜಡ್ಡು, ಗುದ್ದಪ್ಪನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯಿವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ತಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊಂಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
11 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

೧೯೧೮ ನೆಯ ಇಸವಿ ಜೂನ್ ತಾ॥ ೨೩ ರಿಂದ ೧೯೧೮ ನೆಯ ಜೂನ್ ತಾ॥ ೨೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಜ್ಯೇಷ್ಠ ಶು॥ ಚತುರ್ದಶಿಯಿಂದ ಜ್ಯೇಷ್ಠ ಬ॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು
23	ಭಾನು	ಚತು	23-46	ಜ್ಯೇಷ್ಠ	41-35	10
24	[1] ಸೋಮ	ಪೌರ್ಣ	23-42	ಮೂಲ	42-51	11
25	ಮಂಗಳ	ಪಾಡ್ಯ	22-22	ಪೂಷ	42-59	12
26	ಬುಧ	ಬಿದಿಗೆ	19-55	ಉಷ	41-58	13
27	ಗುರು	ತದಿಗೆ	16-20	ಶ್ರವಣ	40-2	14
28	ಶುಕ್ರ	ಚೌತಿ	11-50	ಧನಿಷ್ಠ	37-6	15
29	ಶನಿ	ಪಂಚ	6-42	ಶತಭಿಷ	33-37	16

(1) ಪೂರ್ಣಮಾಸಿ, ಸಾವಿತ್ರೀವ್ರತಂ, ಶ್ರೀರಂಗಪಟ್ಟಣ ತಿರುಪ್ಪಾವಾಡೆ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೀಲಾಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಶೀವ್ಯಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತಿ ಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜೂನ್ ತಾರೀಖು ೩೦ ನೆಯ ಭಾನುವಾರ. (ಸಂಚಿಕೆ ೨೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾರರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಸೂತ್ರೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ, ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ನಂದಿಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, 6 ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸುವ 15 ಬಹುಮಾನಗಳನ್ನು ಕೊಡುವೆವು:— ಆರ್ಟ್ ಬೀಸಣಿಗೆ 1, ಕಾಮಿಂತಿಗುಪ್ಪ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಚೀಲ ರಬ್ಬರು 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಪೋಮೇಡ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಬೈತಲ್ 1, ಕೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೋ.,
38 3, ಇರುಳಪ್ಪನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಕಾರಿಕೆ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 29

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜಿ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾಲ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಸ್. ಎ. ಇನ್ಸ್ಟಿಟ್ಯೂಟ್ ಆಫ್ ಸೈನ್ಸಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಫ್. ಆಫ್ ಸ್ಕಾಟಿಶ್ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಮಚಳಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು.—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಪಡಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗಾಗಿ ಬರೆದು ತರಿಸಿಕೊಳ್ಳಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಸಂಯೋನಿಧಿ.—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ.—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ.—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವೂ ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
13 ಆನಂದ ಬುಕ್‌ಡಿಪೊ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಶನ್ ಗ್ರಾಹಕರು ತ್ವರೆಮಾಡಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ೧ಬೀ. ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ೧ಬೀ- ಇಪ್ಪೆ. ೧೦೦ ಕ್ಕೆ ೧-೪-೦

೩. ಜೇನುತೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೀ. ಇಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ನಕಲಿ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
31 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

(೧) ರಾ॥ ಬ॥ ಮಲ್ಲಪ್ಪನವರ ಚರಿತ್ರೆ.—ಇದರಲ್ಲಿ ಮಲ್ಲಪ್ಪನವರ ಅತ್ಯಂತ ವಿಷಯಗಳೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವತಂತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ ಭಗವದ್ಗೀತೆಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅಪರೂಪವೆಂದು ಬೋಧಿಸಿ ಪ್ರಕಾಶಕರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೇ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣವಾದ ಕೈಸರನ ಚರಿತ್ರೆಯೂ, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

8 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜೂನ್ ತಾ|| ೩೦ ನೆಯ ಭಾನುವಾರ.

ಹಿಂದುಳಿದವರ ವಿಜ್ಞಾಪನೆ.

(ಭಾಗ ೧.)

ಹಿಂದುಳಿದ ಜನವರ್ಗಗಳ ಪ್ರತಿನಿಧಿಗಳು ತಮ್ಮ ಕಷ್ಟಸುಖಗಳನ್ನೂ ಇಷ್ಟಾರ್ಥಗಳನ್ನೂ ಮಹಾಪ್ರಭುಗಳ ಸನ್ನಿಧಿಯಲ್ಲಿ ಪ್ರತ್ಯಕ್ಷತಃ ಬಿನ್ನಯಿಸಿಕೊಳ್ಳುವುದಕ್ಕಾಗಿ ಅವಕಾಶವನ್ನು ಬೇಡಿಕೊಂಡಿರಲಾಗಿ, ಪ್ರಜಾರಂಜನೈಕ ಪರಾಯಣರಾದ ಶ್ರೀಮನ್ಮಹಾರಾಜರವರು ಅದಕ್ಕೊಪ್ಪಿ ಸೂಚಿಸಿದ್ದ ಕಾಲಕ್ಕೆ ಎಂದರೆ ಕಳೆದ ಸೋಮವಾರ ಮಧ್ಯಾಹ್ನ ೧ ಗಂಟೆಗೆ ಸರಿಯಾಗಿ ಅರಮನೆಯ ಕರಿಕಲ್ಲುತೊಟ್ಟಿಯಲ್ಲಿ ಮ|| ಗಳಾದ ರಾ|| ಸಾ|| ಚೆನ್ನಯ್ಯನವರು, ನವಾಬ್ ಗುಲಾಮ್ ಅಹಮ್ಮದ್ ಕಲಾಮಿಯವರು, ಎಂ. ಬಸವಯ್ಯ ಬಿ.ಎ.ಬಿ ಎಲ್. ರವರು, ಜನೋಪಕಾರಿ ದೊಡ್ಡಣ್ಣಶೆಟ್ಟರು, ಧರ್ಮಪ್ರಕಾಶ ಡಿ|| ಬನುಮಯ್ಯನವರು, ಅಡ್ವೋಕೇಟ್ ನಾರಾಯಣಶೆಟ್ಟರು, ಎಂ. ಸುಬ್ಬಯ್ಯ ಬಿ.ಎ. ಯವರು, ಸಾ|| ಜವರಯ್ಯನವರು, ಈ ೮ ಮಂದಿ ಪ್ರತಿನಿಧಿಗಳು ಸಿದ್ಧರಾಗಿ ರಾ|| ಸಾ|| ಚೆನ್ನಯ್ಯನವರ ಮುಖೇನ ತಮ್ಮ ವಿಜ್ಞಾಪನಪತ್ರವನ್ನು ಓದಿ ಸಮರ್ಪಿಸಿದರು. ಅದನ್ನು ಶ್ರೀಮನ್ಮಹಾರಾಜರವರು ಆದರದಿಂದ ಲಾಲಿಸಿ ಪ್ರತ್ಯುತ್ತರವನ್ನು ದಯಪಾಲಿಸಿದರು. ಅವೆರಡರ ಮುಖ್ಯಾಶಯಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಬೇರೆ ಕಡೆ ಮುದ್ರಿಸಿರುತ್ತೇವೆ.

ಶ್ರೀಮನ್ಮಹಾರಾಜರವರ ಪ್ರತ್ಯುತ್ತರದಲ್ಲಿ—"ನಿಮ್ಮ ಕಷ್ಟಗಳನ್ನು ನಾನು ಬಲ್ಲೆ. ನಿಮ್ಮ ಅಭಿಪ್ರಾಯಗಳು ಚೆನ್ನಾಗಿ ಗೊತ್ತಾಗಿರುತ್ತವೆ. ಅವುಗಳ ವಿಷಯವಾಗಿ ಚೆನ್ನಾಗಿ ವಿಚಾರಮಾಡಿ ಆದರಪೂರ್ವಕವಾದ ಏರ್ಪಾಟುಗಳನ್ನು ಮಾಡಲು ಪ್ರಯತ್ನಿಸುವೆವು" ಎಂಬ ಮೊದಲನೆ ಭಾಗವು ಈ ಕಾರ್ಯದಲ್ಲಿ ಪ್ರವೃತ್ತರಾದ ಮುಂದಾಳುಗಳಿಗೂ ಅವರ ಹಿಂಬಾಲಕರಿಗೂ ವಿಶೇಷ ಸಂತೃಪ್ತಿಕರವಾದುದೆಂಬುದಕ್ಕೆ ಸಂಶಯವಿಲ್ಲ. ಏಕೆಂದರೆ-ನಮ್ಮ ಕಷ್ಟಸುಖಗಳ ಮತ್ತೂ ಅಭಿಪ್ರಾಯಗಳ ಜ್ಞಾನವನ್ನು ಪಾಲಕರಿಗೆ ಉಂಟುಮಾಡಿಕೊಡುವುದೇ ನಮ್ಮ ಪ್ರಥಮಕರ್ತವ್ಯ. ಅದು ಅವರ ಮನವರಿಕೆಯಾದನಂತರ ಅದನ್ನು ನೆರವೇರಿಸುವುದು ಅವರ ಕರ್ತವ್ಯವು. ಅದನ್ನು ಆದರದಿಂದ ನೆರವೇರಿಸಿಕೊಡುವೆವೆಂದು ಪ್ರಭುಗಳು ವಾಗ್ದಾನವನ್ನೇ ಮಾಡಿರುವುದರಿಂದ ಅದು ಎಂದಿಗೂ ಹುಸಿಯಲಾರದು. ಮತ್ತೂ "ಹಿಂದೆಬಿದ್ದು ಹೋಗಿರುವ ತರಗತಿಗಳನ್ನು ವೃದ್ಧಿಗೆ ತರುವುದಕ್ಕಾಗಿ ನನ್ನ ಪ್ರಭುತ್ವದವರು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದಾರೆ. ಇನ್ನು ಮುಂದೆ ಅವರಭಿವೃದ್ಧಿಗಾಗಿ ಇನ್ನೂ ಹೆಚ್ಚಾದ ಪ್ರಯತ್ನಗಳು ಮಾಡಲ್ಪಡುವುವು" ಎಂಬುದಾಗಿ ಅಭಯದಾನವನ್ನು ಕೂಡ ಮಾಡಿರುತ್ತಾರೆ. ಇದರಿಂದ ಹಿಂದುಳಿದವರ ಉದ್ಧಾರದ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಚಿತ್ತವು ಎಷ್ಟು ದಯಾರ್ದ್ರವಾಗಿರುವುದೆಂಬುದು ಸುವ್ಯಕ್ತವಾಗಿದೆ. ಪ್ರಭುಚಿತ್ತಕ್ಕೆ ಈ ವಿಷಯವು ಇಷ್ಟು ಖಚಿತವಾಗಿ ತಟ್ಟುವಂತಾದುದು ಸಾಮಾನ್ಯ ಫಲವಲ್ಲ. ಅದುಕಾರಣ ಹಿಂದುಳಿದವರ ಉದ್ಧಾರಕ್ಕಾಗಿ ಯಾರು ಸ್ವಾರ್ಥತ್ಯಾಗಪೂರ್ವಕವಾಗಿ ಪಾಟುಪಡುತ್ತಲಿರುವರೋ ಅಂಥ ಮುಂದಾಳುಗಳೂ ಅವರ ಹಿಂಬಾಲಕರೂ ಸಹ ಮಾಡಿದ ಪ್ರಯತ್ನಗಳೆಲ್ಲಾ ಎಷ್ಟುಮಾತ್ರಕ್ಕೂ ಅರಣ್ಯರೋದನವಾಗಲಿಲ್ಲವೆಂಬುದನ್ನು ಕಂಡು ನಾವು ವಿಶೇಷವಾಗಿ ಸಂತೋಷಿಸುತ್ತೇವೆ. ಇದುವರೆಗಣ ಫಲಿತಾಂಶವು ಅವರುಗಳ ಉತ್ತರೋತ್ತರ ಪ್ರಯತ್ನವಿಶೇಷಗಳಿಗೆ ಉತ್ತೇಜಕವೂ ಆಯಿತೆಂದು ಎಣಿಸುತ್ತೇವೆ.

ವಿಜ್ಞಾಪನ ಪತ್ರದಲ್ಲಿ ಕಂಡ ಇತರ ಸಾಮಾನ್ಯ ವಿಷಯಗಳೆಲ್ಲಾ ಪ್ರಭುಗಳಿಗೆ ಮನದಟ್ಟಾಗಿ ಅವನ್ನು ಅವರು ಒಪ್ಪಿರುವುದರಿಂದ ಮುಖ್ಯವಾದ ೨ ವಿಷಯಗಳಿಗೆ ಅವರು ವಿಮರ್ಶಾಪೂರ್ವಕವಾದ ಉತ್ತರವನ್ನು ಅನುಗ್ರಹಿಸಿರುತ್ತಾರೆ. ಅವುಗಳಲ್ಲಿ ೧ ನೆಯದು ಸರ್ಕಾರದ ಅಧಿಕಾರಸ್ಥಾನಗಳಲ್ಲಿ ಸರ್ವಜನವರ್ಗಕ್ಕೂ ಪ್ರಾತಿನಿಧ್ಯವಿರುವಂತೆ ಮಾಡಬೇಕೆಂಬುದಾಗಿದ್ದಿತು. ಇದಕ್ಕೆ ಶ್ರೀಮನ್ಮಹಾರಾಜರವರು ಕೊಟ್ಟಿರುವ ಉತ್ತರವಾದರೂ ಅತ್ಯಂತ ವಿವೇಕಪೂರ್ವಕವಾಗಿಯೂ ನಿಷ್ಪಕ್ಷಪಾತವಾಗಿಯೂ ನ್ಯಾಯವನ್ನನುಸರಿಸಿಯೂ ಇರುತ್ತದೆ. ಸಂಸ್ಥಾನದ ಉದ್ಯೋಗಕ್ಕೆ ಎಲ್ಲ ಜನವರ್ಗಗಳೂ ಸೇರುವಂತೆ ಮಾಡಬೇಕಾದುದು ನ್ಯಾಯವೆಂದು ಅವರು ಘಂಟಾಘೋಷವಾಗಿ ಅಪ್ಪಣೆಮಾಡಿರುತ್ತಾರೆ. ಹಾಗೆ ಮಾಡಬೇಕೆಂದು ತಾವು ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡುತ್ತಿರುವೆವೆಂದೂ ಅಪ್ಪಣೆಕೊಡಿಸಿರುತ್ತಾರೆ. ತಮಗೆ ಎಲ್ಲಾ ಪ್ರಜೆಗಳೂ ಒಂದೇ. ಬ್ರಾಹ್ಮಣರು ಮುಂದಾಗಿ ವಿದ್ಯೆಯನ್ನು ಕಲಿತು ಹೆಚ್ಚು ಅಧಿಕಾರಗಳನ್ನು ಪಡೆದುಕೊಂಡರು. ಇತರರೂ ಹಾಗಾಗಿ ಮುಂದಕ್ಕೆ ಬಂದು ಸರ್ಕಾರದಧಿಕಾರಗಳನ್ನು ಪಡೆದುಕೊಳ್ಳಬಹುದು. ಹಾಗೆ ಇತರರೆಲ್ಲಾ ಆಗಬೇಕೆನ್ನುವುದಕ್ಕಾಗಿಯೇ ಅವರುಗಳಿಗೆ ವಿಶೇಷ ಪ್ರೋತ್ಸಾಹಾದಿಗಳನ್ನು ಮಾಡುತ್ತಲಿದ್ದೇವೆ. ಎಂಬುದಾಗಿ ಅಪ್ಪಣೆಕೊಡಿಸಿರುವುದು, ಹಿಂದುಳಿದ ಜನವರ್ಗಗಳಿಗೆಲ್ಲಾ ಅತ್ಯುತ್ತೇಜನವನ್ನು ಮಾಡತಕ್ಕ ಚಿರಸ್ಮರಣೀಯ ಸಂದೇಶವಾಗಿದೆ. "ಬ್ರಾಹ್ಮಣರಿಗೆ ಮಾತ್ರವೇ ಸರ್ಕಾರದಧಿಕಾರಗಳು ಜಹಗೀರು; ಇತರರೆಲ್ಲಾ ಅವರವರ ಅನೂಚಾನವಾದ ಕಸುಬುಗಳಲ್ಲೇ ಬಿದ್ದು ಕೊಳೆಯುತ್ತಿರಬೇಕು" ಎಂದು ವಾದಿಸುತ್ತಿದ್ದ ಸ್ವಾರ್ಥೈಕಸಾಧಕರ ಮಾಯಾವಚನ ಜಾಲಕ್ಕೆ ಇದು ಅಗ್ನಿಕಣವನ್ನು ಪ್ರಯೋಗಿಸಿದಂತಾಗಿದೆ. ಯಾವ ಉದ್ಯೋಗವನ್ನು ಯಾರು ಬೇಕಿದ್ದರೂ ಆಶ್ರಯಿಸಿ, ತಾವೂ ಕೃತಾರ್ಥರಾಗಿ ತಮ್ಮ ದೇಶವನ್ನೂ ಕೃತಾರ್ಥವನ್ನಾಗಿ ಮಾಡುವಂತಾಗಬೇಕೆಂಬುದೇ ಶ್ರೀಮನ್ಮಹಾರಾಜರವರ ಮುಖ್ಯಲಕ್ಷ್ಯವೆಂಬುದು ಇದರಿಂದ ಸ್ಪಷ್ಟವಾಗಿದೆ. ಹುಟ್ಟಿದಾಗಲೇ ಯಾವನೂ ಸರ್ವಜ್ಞನಾಗಿ ಬರುವುದಿಲ್ಲ. ಆಯಾ ಜನ್ಮದಲ್ಲೇ ಉಂಟಾದ ವಿದ್ಯಾದಿ ಸಂಸ್ಕರಣಗಳ ಫಲಗಳು ಆಯಾ ಜನ್ಮದಲ್ಲೇ ಅವರುಗಳಿಗೆ ಲಭಿಸುವುದಲ್ಲದೆ ಆ ಸಂಸ್ಕಾರಶಕ್ತಿಯು ಜನ್ಮಜನ್ಮಾಂತರಗಳಿಗೂ ವ್ಯಾಪಿಸಿ ಹೆಚ್ಚು ವಿಕಾಸಕ್ಕೆ ಅವಕಾಶಮಾಡಿಕೊಡುವುದು. ವಿದ್ಯಾಬುದ್ಧಿ ವಿವೇಕವಿಕಾಸಕ್ಕೆ ಅವಕಾಶವಿತ್ತರೆ ಅಗಸ ಹಜಾಮ ಕುಂಬಾರ ಹೊಲೆಯ ಮಾದಿಗರು ಮೊದಲಾದವರೆಲ್ಲಾ ಯಾವ ಉದ್ಯೋಗವನ್ನಾದರೂ ನಿರ್ವಹಿಸುವಷ್ಟು ಶಕ್ತರಾಗಬಲ್ಲರು. ಯಾರಯಾರ ಬುದ್ಧಿಯು ಯಾವಯಾವ ವಿಷಯದಲ್ಲಿ ಹೆಚ್ಚಾಗಿ ಪ್ರವರ್ತಿಸಬಲ್ಲುದೋ ಅದದರಲ್ಲಿ ಪ್ರವೇಶಿಸುವುದಕ್ಕೆ ಸರ್ವರಿಗೂ ಸ್ವಾತಂತ್ರ್ಯವಿರುವಂತೆ ಮಾಡುವುದೂ, ಶಕ್ತರಾಗಿ ಬಂದ ಅರ್ಹರನ್ನು ಪಕ್ಷಪಾತವಿಲ್ಲದಂತೆ ಪುರಸ್ಕರಿಸುವುದೂ ಸಹ ಪರಿಶುದ್ಧವಾದ ರಾಜಧರ್ಮವಾಗಿರುವುದು. ಇದೇ ನಮ್ಮ ಪ್ರಭುತ್ವದ ಕರ್ತವ್ಯವಾಗಿರುವುದೆಂದು ಮಹಾಸ್ವಾಮಿಯವರು ಅಪ್ಪಣೆಕೊಡಿಸಿರುವುದಕ್ಕಾಗಿ ಸಂತೋಷಿಸುವೆವು. ಪ್ರಭುಗಳು ಅಪ್ಪಣೆಕೊಡಿಸಿರುವಂತೆ ಅವರ ಅಸಾಧಾರಣ ಪ್ರೋತ್ಸಾಹದ ಸಹಾಯದಿಂದ ಸಕಲ ಪ್ರಜೆಗಳೂ ವಿದ್ಯಾವಂತರಾಗಿ ವಿಶೇಷ ಸಾಮರ್ಥ್ಯವನ್ನು ಪ್ರದರ್ಶಿಸುತ್ತ ಬಂದರೆ, ಇದುವರೆಗೆ ತ್ರಿಮತಸ್ಥ ಜನವರ್ಗದವರ ಪಾಲೇ ಆಗಿದ್ದ ಸರ್ಕಾರದ ಉದ್ಯೋಗಸ್ಥಾನಗಳ ವಿಶೇಷಭಾಗವು ಇತರರ ಪಾಲಿಗೂ ಬಂದೇ ಬರುವುದು. ಇದನ್ನು ಸಾಮಾನ್ಯಪ್ರಜೆಗಳೆಲ್ಲರೂ ಗಮನಿಸಿ ನಡೆಯುವವರಾಗಬೇಕು.

ಶ್ರೀಮನ್ಮಹಾರಾಜರವರ ಸನ್ನಿಧಿಗೆ ಅರ್ಪಿಸಲ್ಪಟ್ಟ ಹಿಂದುಳಿದ ಜನವರ್ಗಗಳವರ ವಿಜ್ಞಾಪನಪತ್ರಿಕೆ.

(ಇದು ಆಂಗ್ಲಭಾಷೆಯಲ್ಲಿ ವಿಸ್ತಾರವಾಗಿದೆ. ಇದರಭಿಪ್ರಾಯವನ್ನು ಸಂಕ್ಷೇಪಿಸಿ ಪ್ರಕಟಿಸಿರುತ್ತೇವೆ.)

ಪೂಜ್ಯರಾದ ಮಹಾಪ್ರಭುಗಳೇ,

ಸರ್ವ ಪ್ರಜೆಗಳನ್ನೂ ಹೆಚ್ಚುಕಡಿಮೆಯಿಲ್ಲದೆ ಸಮಾನದೃಷ್ಟಿಯಿಂದ ಕಾಣುವಂಥ ಶಾಸನವು ಏರ್ಪಡಬೇಕೆಂದು ಅಪೇಕ್ಷಿಸುವ ಜನವರ್ಗಗಳ ಪ್ರತಿನಿಧಿಗಳಾಗಿ ನಾವು ಈ ವಿಜ್ಞಾಪನಪತ್ರವನ್ನು ಸಮರ್ಪಿಸುತ್ತೇವೆ. ಮಹಾಸನ್ನಿಧಿಯಲ್ಲಿ ಇದರ ಸಮರ್ಪಣೆಗೆ ಅವಕಾಶವನ್ನಿತ್ತುದಕ್ಕಾಗಿ ಪೂರ್ಣ ಕೃತಜ್ಞರಾಗಿರುತ್ತೇವೆ.

ತಮ್ಮ ಪ್ರಜೆಗಳಲ್ಲಿ ಬಹುಭಾಗದವರು ಹಿಂದುಳಿದುಹೋಗಿರುವುದಕ್ಕೆ ಪ್ರಾಚೀನವಾದ ಮತ್ತೂ ನವೀನವಾದ ಎರಡುತೆರದ ಕಾರಣಗಳಿವೆ. ಪ್ರಾಚೀನ ಕಾರಣಗಳ ವಿಚಾರವು ಅನವಶ್ಯಕ ; ಪರಿಹಾರ್ಯವಾದ ನವೀನ ಕಾರಣಗಳೆಂದರೆ-ಈಗಣ ವಿದ್ಯಾಭ್ಯಾಸದ ಲೋಪ, ಮತ್ತೂ ಸರ್ಕಾರಿ ಉದ್ಯೋಗಸ್ಥಾನಗಳನ್ನು ಎಲ್ಲ ಪ್ರಜೆಗಳಿಗೂ ಸಮನಾಗಿ ಹಂಚದಿರುವುದು—ಇವುಗಳಾಗಿರುತ್ತವೆ. ವಿದ್ಯಾಭ್ಯಾಸದ ನ್ಯೂನತೆಗಳಾವುವೆಂದರೆ— ನಗರನಿವಾಸಿಗಳ ವಿದ್ಯಾಭ್ಯಾಸಕ್ಕೆ ಉಂಟುಮಾಡಿಕೊಟ್ಟಿರುವಷ್ಟು ಸೌಕರ್ಯಗಳನ್ನು ಗ್ರಾಮಾಂತರದ ಪ್ರಜೆಗಳಿಗೆ ಮಾಡಿಕೊಟ್ಟಿರುವುದಿಲ್ಲ. ಗ್ರಾಮಾಂತರಗಳಲ್ಲಿ ದೇಶಭಾಷೆಯೊಂದರಿಂದಲೇ ವಿದ್ಯಾಭ್ಯಾಸ ಮಾಡಿದವರು ಅಲ್ಲಿಂದ ನಗರಗಳಿಗೆ ಬಂದ ಕೂಡಲೇ ಹೈಸ್ಕೂಲು ತರಗತಿಗಳಿಗೆ ಸೇರಲವಕಾಶವಿಲ್ಲವಾಗಿರುವುದು. ಮತ್ತೂ ಅಶನವಸತಿ ಮೊದಲಾದುವುಗಳ ಅನುಕೂಲ್ಯವೂ ಇಲ್ಲ. ಸಂಸ್ಥಾನದ ಗ್ರಾಮಾಂತರಗಳ ಎಲ್ಲ ಶಾಲೆಗಳಲ್ಲೂ ಪಾಠಪ್ರವಚನಗಳು ಏಕರೂಪವಾಗಿರುವುದಿಲ್ಲ. ಸೆಕೆಂಡರಿ ಶಾಲೆಗಳು ಇರುವ ಕಡೆಯಲ್ಲೆಲ್ಲಾ ವಿದ್ಯಾರ್ಥಿಭವನಗಳಿಲ್ಲ. ಬಾಲವಿದ್ಯಾಭ್ಯಾಸವು ಉಚಿತವಾಗಿ ಮಾಡಲ್ಪಡುವ ಶಾಸನವು ಏರ್ಪಟ್ಟಿದ್ದರೂ ಗ್ರಾಮಾಂತರದ ಪ್ರಜೆಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಎಷ್ಟೋ ಧನವ್ಯಯವನ್ನು ಮಾಡಬೇಕಾಗಿರುತ್ತದೆ. ಉಚಿತ ವಿದ್ಯಾಭ್ಯಾಸ ಸೌಕರ್ಯವನ್ನು ಪಟ್ಟಣವಾಸಿಗಳು ಅನುಭವಿಸುತ್ತಾರೆ. ಉಚಿತವೆಂದು ಹೇಳಲ್ಪಡುವ ಬಾಲವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಗ್ರಾಮಸ್ಥರು ವಹಿಸಬೇಕಾಗಿರುತ್ತದೆ. ಅದುಕಾರಣ ವಿದ್ಯಾಭ್ಯಾಸ ಸೌಕರ್ಯವು ಎಲ್ಲ ಪ್ರಜೆಗಳಿಗೂ ಒಂದೇತೆರನಾಗಬೇಕು.

೧೯೧೮ ನೆ ವರ್ಷದ ಮ್ಯುನಿಸಿಪಲ್ ಲೋಕಲ್‌ಬೋರ್ಡು ಗ್ರಾಮಪಂಚಾಯತಿಗೆ ಸಂಬಂಧಪಟ್ಟ ಬಿಲ್ಲಿನ ಅಮೆಂಡ್‌ಮೆಂಟ್ ವಿಚಾರವಾಗಿ ನಿಯಮನಿರ್ಮಾಣ ಸಭೆಯಲ್ಲಿ ಮಾತು ಬಂದಾಗ ಕೋಮುವಾರು ಪ್ರತಿನಿಧಿತ್ವಕ್ಕೆ ಅವಕಾಶವಿರುವಂತೆ ಬಿಲ್ಲಿನಲ್ಲಿ ಅಮೆಂಡ್‌ಮೆಂಟ್ ಮಾಡಿ ಸರ್ವಪ್ರಜೆಗಳ ಹಕ್ಕುಬಾಧ್ಯತೆಗಳನ್ನೂ ಸಮನಾಗಿ ಕಾಣಬೇಕೆಂದು ಅನುದ್ಯೋಗಿಗಳ ಸಭಾಸದರಲ್ಲಿ ಮೂವರು ಶ್ರುತಪಡಿಸಲಾಗಿ ಇತರರೆಲ್ಲಾ ಪ್ರತಿಭಟಿಸಿದ ಕಾರಣ ಅದು ತಿರಸ್ಕೃತವಾಯಿತು. ಕೋಮುವಾರು ಪ್ರತಿನಿಧಿತ್ವವು ಈ ಬಿಲ್ಲಿನಲ್ಲಿ ಸಮಾವೇಶವಾಗದಿದ್ದರೆ ಈ ವಿಧಿಯು ಸರ್ವಾಂಗಪೂರ್ಣವಾಗುವುದಿಲ್ಲ. ಈಗಣ ಅಮೆಂಡ್‌ಮೆಂಟಿನಪ್ರಕಾರ ಹೆಚ್ಚು ಅಧಿಕಾರಗಳು ಈ ಬೋರ್ಡುಗಳಿಗೆ ಸಿಕ್ಕುವುದರಿಂದ ಎಲ್ಲ ಪ್ರಜೆಗಳ ಪ್ರಾತಿನಿಧ್ಯವೂ ಆ ಬೋರ್ಡುಗಳಲ್ಲಿ ಸಮಗ್ರವಾಗಿಲ್ಲದಿದ್ದರೆ ಆ ಅಧಿಕಾರವು ಸದ್ವಿನಿಯೋಗವಾಗುವುದಿಲ್ಲ. ಅದುಕಾರಣ ಕೋಮುವಾರು ಪ್ರತಿನಿಧಿತ್ವವನ್ನು ಕೊಡದಿದ್ದರೆ ಬೋರ್ಡುಗಳಿಗೆ ಹೆಚ್ಚು ಅಧಿಕಾರಗಳನ್ನು ಕೊಡಲಾಗದು.

ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಬೇಕಾದುದು ಯುಕ್ತವೆಂದು ಗೌರ್ನಮೆಂಟಿನವರು ಚರ್ಚೆಯಲ್ಲಿ ಒಪ್ಪಿಕೊಂಡರೂ ವಿಧಿಯಲ್ಲಿ ಅದನ್ನು ಸೇರಿಸಿಲ್ಲ. ಅನ್ಯಾವೆಡೆಯಲ್ಲೂ ಕಾಣವಿರುವಂಥ ಹಿಂದೂಮಹಮ್ಮದೀಯೈಕಮತ್ಯವು ನಮ್ಮ ಸಂಸ್ಥಾನದಲ್ಲಿದೆಯೆಂಬುದಕ್ಕೆ ಈ ನಮ್ಮ ಡೆಪ್ಯುಟೇಷನ್ನೇ ನಿದರ್ಶನವಾಗಿದೆ. ಆದರೆ ಇವರೀರ್ವರೂ ಬೇರೆಬೇರೆಯಾಗಿ ತಮ್ಮ ಹಕ್ಕುಬಾಧ್ಯತೆಗಳನ್ನು ಕೇಳಿಕೊಳ್ಳಲಿಲ್ಲವೆಂಬ ಕಾರಣದಿಂದ ಅವರವರ ಪ್ರಾರ್ಥನೆಗಳು ಉಪೇಕ್ಷಿಸಲ್ಪಡದೆ ತಪ್ಪಬಾರದು. ಬೋರ್ಡುಗಳಲ್ಲಿ $\frac{2}{3}$ ಭಾಗವು ಆರಿಸುವಿಕೆಯಿಂದಲೂ $\frac{1}{3}$ ಭಾಗವು ನಾಮಿನೇಷನ್ನಿಂದಲೂ ಪೂರ್ಣವಾಗುವುದರಿಂದ ನಾಮಿನೇಷನ್ನಿನ ಮೂಲಕ ಉಂಟಾಗುವ ಪ್ರಾತಿನಿಧ್ಯವು ಸಂಪೂರ್ಣವಾಗುವ ಸಂಭವವಿಲ್ಲ. ಈಗಿರುವ ಬೋರ್ಡುಗಳ ಸ್ಥಿತಿಯಲ್ಲಿ ಬೋರ್ಡುಗಳೊಳಗೆ ನಮ್ಮಗಳ ಮಾತೇ ನಡೆಯುವಹಾಗಿಲ್ಲ. ಪ್ರಜಾಪ್ರತಿನಿಧಿಸಭೆ, ನಿಯಮನಿರ್ಮಾಣಸಭೆ, ಅರ್ಥಸಾಧಕಸಭೆ, ಮ್ಯುನಿಸಿಪಲ್ ಲೋಕಲ್‌ಬೋರ್ಡುಗಳು ಮೊದಲಾದುವುಗಳಲ್ಲೆಲ್ಲಾ ಹಿಂದುಳಿದ ಜನವರ್ಗಗಳವರಿಗೆ ತಕ್ಕಷ್ಟು ಪ್ರಾತಿನಿಧ್ಯವಿಲ್ಲದಿರುವುದರಿಂದ ಅವರಭಿಪ್ರಾಯಗಳು ಜಯಶೀಲವಾಗುವುದಕ್ಕೆ ಮಾರ್ಗವೇ ಇಲ್ಲ. ಅವುಗಳೊಳಗೆಲ್ಲಾ ಇರುವ ಹಿಂದು ಜನವರ್ಗಪ್ರತಿನಿಧಿಗಳ ಅವಸ್ಥೆಯು ಅತ್ಯಂತ ಶೋಚನೀಯವಾಗಿದೆ. ಅ ಮಾತು ಸ್ವಲ್ಪವೂ ನಡೆಯುವುದಿಲ್ಲ. ಈಗಿರುವ ವಿಧಾನದಿಂದ ಸಂಸ್ಥಾ ಪ್ರಜಾವರ್ಗದಲ್ಲಿ ಐಕಮತ್ಯವು ರೂಢಮೂಲವಾಗುವುದಕ್ಕೆ ಅವಕಾಶ ವಾಗಿದೆ. ಕೋಮುವಾರು ಪ್ರತಿನಿಧಿತ್ವವು ಕೊಡಲ್ಪಟ್ಟರೆ ಎಲ್ಲರ ಮನಸ್ಸು ಸಮಾಧಾನವಾಗಿ ಐಕಮತ್ಯವು ಬಳೆಯಲು ಅವಕಾಶವಾಗುತ್ತದೆ. ಈ ಕೋ ಮುವಾರು ಪ್ರತಿನಿಧಿತ್ವ ತತ್ವಕ್ಕೆ ಕೆಲವರು ವಿರೋಧಿಗಳಾಗಿದ್ದಾರೆ. ಮ್ಯು ಲೋ|| ಅಮೆಂಡ್‌ಮೆಂಟ್ ಬಿಲ್ಲಿಗೆ ಖಾವಂದರವರು ಅನುಮೋದನೆ ಕೊಡ ಇದರ ಪರಿಶೀಲನೆಗಾಗಿ ಒಂದು ಕಮಿಟಿಯನ್ನೇರ್ಪಡಿಸಿ, ಅವರ ವರದಿಯನ್ನು ತರಿಸಿಕೊಂಡನಂತರ ಇದನ್ನು ಇತ್ಯರ್ಥಮಾಡಬೇಕೆಂದು ಪ್ರಾರ್ಥಿಸುತ್ತೇ

ಹಿಂದುಳಿದ ಜನವರ್ಗದ ಪ್ರತಿನಿಧಿಗಳ ವಿಜ್ಞಾಪನೆ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ

ಉತ್ತರ:—

"ನಮ್ಮ ಸಂಸ್ಥಾನದ ಪ್ರಮುಖ ಪ್ರಜಾವರ್ಗಗಳ ಪ್ರ ನಿಧಿಗಳನ್ನು ಸ್ವಾಗತಿಸುವುದಕ್ಕೆ ಅವಕಾಶವು ಸಿಕ್ಕಿದುದಕ್ಕಾ ನಾನು ಬಹಳ ಸಂತೋಷಿಸುತ್ತೇನೆ. ನಿಮ್ಮ ವಿಜ್ಞಾಪನಪತ್ರ ದಲ್ಲಿ ಕಂಡಿರುವ ವಿವರಣೆಗಳನ್ನು ವಿಮರ್ಶಿಸುವುದಕ್ಕೆ ನಾನ ಈಗ ಪ್ರಯತ್ನಿಸದೆ ಸಾಮಾನ್ಯಾಭಿಪ್ರಾಯಗಳನ್ನು ತಿಳಿಸ ತ್ತೇನೆ—ನಿಮ್ಮ ಕಷ್ಟಗಳನ್ನು ನಾನು ಬಲ್ಲೆನು. ನಿಮ್ಮ ಅ ಪ್ರಾಯಗಳೂ ಚೆನ್ನಾಗಿ ಗೊತ್ತಾಗಿರುತ್ತವೆ. ಅದುಕಾರ ಅವುಗಳ ವಿಷಯವಾಗಿ ಚೆನ್ನಾಗಿ ವಿಚಾರಮಾಡಿ ತಕ್ಕ ಏರ ಟುಗಳು ಜರುಗುವಂತೆ ಆದರಪೂರ್ವಕವಾಗಿ ಪ್ರಯತ್ನಿಸುವೆ ಸರ್ಕಾರದ ಉದ್ಯೋಗಗಳನ್ನು ಕುರಿತು ನೀವು ವಿಜ್ಞಾ ಕೊಂಡಿರುವ ಕಷ್ಟಗಳ ವಿಷಯವಾಗಿಯೂ ಎರಡು ಮಾ ಗಳನ್ನು ಹೇಳುತ್ತೇನೆ. ಏನೆಂದರೆ—ನನ್ನ ಸಂಸ್ಥಾನದ ಸೇ ಯಲ್ಲಿ ಎಲ್ಲ ತರಗತಿಯ ಜನರಿಗೂ ತಕ್ಕಷ್ಟು ಪ್ರಾತಿನಿಧ್ಯವಿ ವಂತೆ ಮಾಡಲು ಸಾಧ್ಯವಾದಮಟ್ಟಿಗೂ ನಾನು ಪ್ರಯತ್ನಿಸ ತ್ತಿರುವೆನು. ಇದುವರೆಗೂ ಬ್ರಾಹ್ಮಣರಿಗೇ ವಿಶೇಷವಾ ಉದ್ಯೋಗಸ್ಥಾನಗಳು ಕೊಡಲ್ಪಟ್ಟುದಕ್ಕೆ ಅನೇಕ ಕಾರಣ ವಿದ್ದುವು. ನೀವು ನ್ಯಾಯವಾಗಿ ಆಕ್ಷೇಪಿಸುವ ಈ ವ್ಯತ್ಯಾ ಸವೂ ಕಷ್ಟವೂ ಕಾಲಕ್ರಮವಾಗಿ ವಿದ್ಯೆಯು ಪ್ರಸರಿಸುತ್ತ ಬಂದಂತೆ ತಮ್ಮಷ್ಟಿಗೆ ತಾವೇ ತೊಲಗಿಹೋಗಬಲ್ಲುವು. ಅದ ಯಾವ ವರ್ಗದವರಾದರೂ ಸ್ವಯಂಕೃಷಿಯಿಂದ ಮುಂದಾ ವಿದ್ಯಾವಿಕಾಸವನ್ನು ಹೊಂದಿರುವುದಾಗಿದ್ದರೆ ಅವರನ್ನು ಶಿಕ್ಷಿ ಸಬೇಕೆಂಬುದು ನನ್ನ ಮತವಲ್ಲ. ಉಳಿದ ವರ್ಗದವರು ಎಷ್ಟು ರಾಜಭಕ್ತಿಯನ್ನು ಹೊಂದಿರುವರೋ ಬ್ರಾಹ್ಮಣರೂ ಅಷ್ಟು ಭಕ್ತಿಯನ್ನೇ ಹೊಂದಿದ್ದಾರೆ. ಅವರು ಇದುವರೆಗೆ ನನ್ನ ಸ ಸ್ಥಾನದಲ್ಲಿ ಅತ್ಯಂತ ಭಕ್ತಿಯುಕ್ತವಾದ ಅಭಿಪ್ರಾಯಗಳಿ ದಲೂ ಅತಿ ಸಾಮರ್ಥ್ಯದಿಂದಲೂ ಕೆಲಸಮಾಡಿಯೂ ಮಾ ತ್ರಲೂ ಇರುವರೆಂದು ನಾನು ನಂಬುತ್ತೇನೆ. ನನ್ನ ಸಂಸ್ಥಾನ ಅಭಿವೃದ್ಧಿಯ ನಿಮಿತ್ತವಾಗಿಯೂ ನನ್ನ ಮನೆತನದ ಅಭಿವೃ ನಿಮಿತ್ತವಾಗಿಯೂ ಅವರು ಇದುವರೆಗೂ ಮಾಡಿದ ಮತ್ತ ಮುಂದೆ ಮಾಡುವ ಕೆಲಸವನ್ನು ನಾನು ಮರೆಯಲಾರೆ. ನಾನ ಜನವರ್ಗಗಳವರೆಲ್ಲರಲ್ಲೂ ಉತ್ತಮ ಭಾವಗಳು ಹುಟ್ಟಿ ಎಲ್ಲರ ಏಕಮತ್ಯವುಳ್ಳವರಾಗಿರಬೇಕೆಂಬುದು ನನ್ನ ಉದ್ದೇಶವು. ಯ ರನ್ನೂ ಅಣಗಿಸದೆ ಎಲ್ಲರನ್ನೂ ಅಭಿವೃದ್ಧಿಗೆ ತರಬೇಕೆಂಬು ನನ್ನಭಿಮತವು. ಹಿಂದೆ ಬಿದ್ದುಹೋಗಿರುವ ತರಗತಿಗಳನ ವೃದ್ಧಿಗೆ ತರುವುದಕ್ಕಾಗಿ ನನ್ನ ಪ್ರಭುತ್ವದವರು ಸಾಧ್ಯವಾಗು ಮಟ್ಟಿಗೂ ಪ್ರಯತ್ನಿಸುತ್ತಿದ್ದಾರೆ. ಇನ್ನು ಮುಂದೆ ಅವರು ಅಭಿವೃದ್ಧಿಯನ್ನು ಕುರಿತು ಹಿಂದೆ ಮಾಡಿರುವ ಪ್ರಯತ್ನಗ ಗಿಂತಲೂ ಹೆಚ್ಚಾದ ಪ್ರಯತ್ನಗಳು ಮಾಡಲ್ಪಡುವುವು.

ಇನ್ನು ಸ್ಥಾನಿಕ ಸ್ವರಾಜ್ಯವಿಷಯಕವಾದ ಬಿಲ್ಲನ್ನು ಕು ತು ನಿಯುಕ್ತ ಸಭ್ಯರ ವಿಷಯವಾಗಿ ತಕ್ಕಷ್ಟು ಅಧಿಕಾರವ ಪ್ರಭುತ್ವದವರು ಇಟ್ಟುಕೊಂಡಿರುವರು. ತಕ್ಕಷ್ಟು ಪ್ರಾತಿನಿ ವನ್ನು ಸ್ಥಳೀಕ ಸ್ವಪಾಲನಸಂಘ ಮೊದಲಾದುವುಗಳಲ್ಲಿ ಹೊಂದ ಹೋಗಿರುವ ಜನವರ್ಗಗಳಿಗೆ ತಕ್ಕಷ್ಟು ಪ್ರಾತಿನಿಧ್ಯವು ಲಭಿಸ ಹಾಗೆ ಆ ಅಧಿಕಾರದ ಮೂಲಕ ಏರ್ಪಾಟುಮಾಡಲ್ಪಡುವುದ ಇದಕ್ಕಿಂತಹೆಚ್ಚು ಪ್ರಯತ್ನಗಳನ್ನು ಮಾಡುವುದಕ್ಕೆ ಸದ್ಯಃ ನಾ ಉದ್ದೇಶಿಸಿರುವುದಿಲ್ಲ. ಸ್ವಾಮಿಭಕ್ತಿಯಿಂದ ನೀವು ಇದನ್ನಂಗಿ ರಿಸಬೇಕು. ಪ್ರತ್ಯೇಕ ಪ್ರಾತಿನಿಧ್ಯವನ್ನು ಕುರಿತು ಮಹಮ್ಮ ಯರಿಗೆ ಬೇರೆ ಏರ್ಪಾಟು ಮಾಡಲ್ಪಡಬೇಕಾದ ಅವಶ್ಯಕತೆಯ ನೂ ಕಾಣುವುದಿಲ್ಲ. ಪಂಗಡಗಳ ಬೇರೆಬೇರೆ ಆರಿಸುವಿಕೆಗೆ ಮೊದಲೇ ಏರ್ಪಾಟು ಮಾಡಲ್ಪಟ್ಟಿದೆ. ಓಟು ಕೊಡುವ ಸಂಖ್ಯೆಯನ್ನು ಹೆಚ್ಚಿಸುವುದರಿಂದ ತಕ್ಕಷ್ಟು ಪ್ರಾತಿನಿಧ್ಯ ಕ್ರಮಕ್ರಮವಾಗಿ ಎಲ್ಲಾ ಪಂಗಡದವರಿಗೂ ಸಿಕ್ಕೇಸಿ ವುದು.

ಮಹಾಶಯರೇ! ಈ ಭೇದಾಭಿಪ್ರಾಯಗಳು ಪ್ರಜೆಗ ಎಂಥ ಕಲಹವನ್ನೂ ಉಂಟುಮಾಡಕೂಡದೆಂದು ನಾನು ಮತ ಮತ್ತೂ ಕೋರುತ್ತೇನೆ. ನಿಂನಿಮ್ಮ ಇಷ್ಟಾರ್ಥಸಾಧನೆಯಲ್ಲಿ ಪ್ರ ಗಳ ಐಕಮತ್ಯಕ್ಕೆ ಭಂಗಕರವಾದ ಪ್ರಯತ್ನಗಳನ್ನು ಯಾ ಮಾಡಲಾಗದು. ಬ್ರಾಹ್ಮಣರೂ ಕೂಡ ಉಳಿದವರೊಡನೆ ಭ ತೃಭಾವವನ್ನು ಅಭಿವೃದ್ಧಿಪಡಿಸಿಕೊಂಡು ನನ್ನನೆಯನ್ನು ತ ನನ್ನ ಮನೋಭೀಷ್ಟವನ್ನು ನೆರವೇರಿಸುವುದಕ್ಕೆ ಸಹಾಯಮ ಉಳಿದ ಜನವರ್ಗಗಳ ನಿಸರ್ಗವಾದ ಅಪೇಕ್ಷೆಗಳಿಗೆ ಯ ಆತಂಕವನ್ನೂ ಉಂಟುಮಾಡದೆ ಇರುವವರಾಗಲಿ ಎ ಕೋರುತ್ತೇನೆ!!"

ಒಳದೇಶದ ವೃತ್ತಾಂತಗಳು.

ಅರ್ಥಸಾಧಕಸಭೆಗಾಗಿ ರಾಜಧಾನಿಗೆ ಬಂದಿದ್ದ ಸಭಿಕರುಗಳು ಪುರಪ್ರಮುಖರು ಮೊದಲಾದವರಿಗೆಲ್ಲಾ ದಿವಾನರವರು ಕಳೆದ ಭಾನುವಾರ ದಿವ್ಯವಾದ ಔತಣವನ್ನು ಮಾಡಿಸಿ ಸತ್ಕರಿಸಿದರು.

ರಾಜಧಾನಿಯಲ್ಲಿ ಆಗಾಗ್ಗೆ ಮೋಡವಾಡಿ ಕೆಲ ಹನಿಗಳುದುರುವುದರ ಹೊರತು ಅನುಕೂಲವಾದ ಮಳೆಯಾಗಿಲ್ಲ. ಎದ್ದಿದ್ದ ಬೆಳೆಸೆಲ್ಲಾ ಹಾಳಾಗುತ್ತ ಬಂದಿದೆ. ಗ್ರಾಮಾಂತರದ ಪ್ರಜೆಗಳ ಅವಸ್ಥೆಯು ಬಹಳ ದೀನವಾಗಿದೆಯೆಂದು ಕೇಳುತ್ತೇವೆ.

ಬೆಳಗಾಂವಿಯಿಂದ ವಿಭಾಕರ ಎಂಬ ಹೆಸರಿನ ವಾರಪತ್ರಿಕೆಯು ಪ್ರತಿಸೋಮವಾರ ಪ್ರಕಟಗೊಳ್ಳಲು ಆರಂಭಿಸಿರುತ್ತದೆ. ಇದರ ಪ್ರಥಮ ಸಂಚಿಕೆಯನ್ನು ನಾವು ಆದರದಿಂದ ಅಂಗೀಕರಿಸಿರುತ್ತೇವೆ. ಇದು ರಾಜಕೀಯಾದಿ ಸರ್ವ ವಿಷಯಗಳನ್ನೂ ಹಿಂದುಳಿದವರ ಉದ್ಧಾರಕ ದೃಷ್ಟಿಯಿಂದ ಇಂಗ್ಲೀಷು ಕನ್ನಡ ಭಾಷೆಗಳಲ್ಲಿ ಲಿಖಿಸುವ ಉದಾರಮತದ ಪತ್ರವಾಗಿರುತ್ತದೆ. ಸ್ವದೇಶ ವಿದೇಶ ವಿಶೇಷ ವೃತ್ತಾಂತಗಳೂ ಯುದ್ಧವಾರ್ತಾವಿವರಣವೂ ಸಹ ಇದರಲ್ಲಿ ಪ್ರಕಟವಾಗುತ್ತವೆ. ಇದಕ್ಕೆ ಮ|| ಪಂಡಿತ ರಾಯಪ್ಪ ಚಿಕ್ಕೋಡಿ ಬಿ.ಎ., ಎಂಬ ನಮ್ಮ ಸಮಾಜಬಾಂಧವರು ಪ್ರಕಾಶಕರಾಗಿರುತ್ತಾರೆ. ರಾಯಲ್ ಆಕೃತಿಯ ಈ ಪತ್ರದ ವರ್ಷದವರ್ಗಣಿಯು ಅಂಚೆವೆಚ್ಚ ಸೇರಿ ೩ ರೂ. ಹಿಂದುಳಿದ ಜನವರ್ಗಗಳೇ ಹೆಚ್ಚಿಕೊಂಡಿರುವ ದೇಶದಲ್ಲಿ ಅವರ ಉದ್ಧಾರಮಾರ್ಗವನ್ನು ಸೂಚಿಸುವ, ಮತ್ತೂ ಅವರ ಅಭಿಪ್ರಾಯಗಳನ್ನು ಹೊರಹಾಕುವ ಇಂಥ ಪತ್ರಗಳ ಉದಯವೂ ಅವುಗಳನ್ನು ಪ್ರೋತ್ಸಾಹಿಸಿ ಸಲಹಿಕೊಂಡು ಹೋಗುವ ಪ್ರಜಾಕರ್ತವ್ಯವೂ ಹೆಚ್ಚುತ್ತ ಬಂದಂತಲ್ಲದೆ ನಿಜವಾದ ದೇಶೋದ್ಧಾರ ಮಾರ್ಗವು ಸ್ಥಾಪಿತವಾಗಲಾರದು.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ವೀರಶೈವ ಜನಸಂಖ್ಯೆಯು ಹೆಚ್ಚಾಗಿರುವ ತಾಲ್ಲೂಕುಗಳೊಳಗೆ ಹಿರಿಯೂರೇ ೧ನೆಯದಾಗಿದೆ. ಆದರೂ ಅಲ್ಲಿಯ ವೀರಶೈವ ಪ್ರಜೆಗಳು ಆಚಾರ ವ್ಯವಹಾರ ವಿದ್ಯಾವಿಕಾಸಾದಿಗಳಲ್ಲಿ ಬಹಳ ಹಿಂದುಳಿದಿರುವುದರಿಂದ ಅವರಲ್ಲಿ ಕರ್ತವ್ಯಜಾಗರೂಕತೆಯನ್ನುಂಟುಮಾಡುವ ಉದ್ದೇಶದಿಂದ ಅಲ್ಲಿಯ ಕೆಲ ಪ್ರಮುಖರು ಸೇರಿ ಮ|| ಜಿ. ಶಾಂತವೀರಪ್ಪ, ಬಿ ಎ. ಎಕನಾಮಿಕ್ ಸೂಪರಿಂಟೆಂಡೆಂಟರವರ ಅಧ್ಯಕ್ಷತೆಯಿಂದ ಬರುವ ಜುಲೈ ತಾ|| ೧೨-೧೩-೧೪ ರಲ್ಲಿ ಹಿರಿಯೂರಿನೊಳಗೆ ವೀರಶೈವರ ತಾಲ್ಲೂಕು ಕಾನ್ಫರೆನ್ಸನ್ನು ನಡೆಯಿಸಲು ನಿರ್ಧರಿಸಿರುತ್ತಾರೆಂದು ಕೇಳಿ ಸಂತೋಷಿಸುತ್ತೇವೆ. ಈ ಸಭೆಯೊಳಗೆ ಮಠಾಚಾರ್ಯರುಗಳ ಮಠಾಧಿಪತಿಗಳ ಕರ್ತವ್ಯ, ವಿದ್ಯಾಭಿವೃದ್ಧಿ, ಆಚಾರ ಸುಧಾರಣೆ, ಮತದ ಏಕಮತ್ಯ, ಕೃಷಿಶಿಲ್ಪವಾಣಿಜ್ಯಾದಿ ಉದ್ಯೋಗಗಳ ಸುಧಾರಣೆ, ವೀರಶೈವ ವಿದ್ಯಾರ್ಥಿನಿಲಯ ಸ್ಥಾಪನೆ ಇತ್ಯಾದಿ—ವಿಷಯಗಳೆಲ್ಲಾ ಚರ್ಚಿಸಲ್ಪಡುವುವು. ಈ ವಿಷಯವಾಗಿ ಯಾರು ಬೇಕಿದ್ದರೂ ಜುಲೈ ತಾ|| ೯ ರೊಳಗೆ ಉಪನ್ಯಾಸಗಳನ್ನು ಬರೆದು ಪಟೇಲ್ ಎಚ್. ಎಸ್. ಸಿದ್ದಮಲ್ಲಪ್ಪ, ಚೀಫ್ ಸೆಕ್ರೆಟರಿ, ಹಿರಿಯೂರು ಇವರ ಹೆಸರಿಗೆ ಕಳುಹಿಸಬಹುದು. ಸಭೆಗೆ ಹೋಗುವ ಪ್ರತಿನಿಧಿಗಳಿಗೆ ೨ ರೂ., ಪ್ರೇಕ್ಷಕರಿಗೆ ೧ ರೂ. ಪ್ರವೇಶಧನವು ಏರ್ಪಡಿಸಲ್ಪಟ್ಟಿದೆ. ಇದರ ಸಾಂಗವಾದ ಪ್ರಕಟನ ಪತ್ರಿಕೆಯನ್ನು ಮುಂದಣ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ಮ|| ಮನ್ನಾರ್ ಕೃಷ್ಣಶೆಟ್ಟರಿಗೆ ಶ್ರೀಮನ್ಮಹಾರಾಜರವರು "ವಣಿಗ್ರತ್ನ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದುದರಿಂದ ತಮ್ಮಗಳಿಗೆ ಉಂಟಾದ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ವೈಶ್ಯವರ್ಗದವರು ಮ|| ಶೆಟ್ಟರನ್ನು ಟವನ್‌ಹಾಲಿಗೆ ಬರಮಾಡಿಕೊಂಡು ಪೊಲೀಸ್ ಇ|| ಜನರಲ್ ಮಿ|| ಹಂಜಾಹುಸೇನ್ ಸಾಹೇಬರ ಅಧ್ಯಕ್ಷತೆಯಿಂದ ಗೌರವಿಸಿದರು. ಮ|| ಶೆಟ್ಟರ ಗುಣಾತಿಶಯದಿಂದ ಆಕರ್ಷಿತರಾಗಿರುವ ಪುರನಿವಾಸಿಗಳಲ್ಲಿ ಸಾವಿರಾರು ಜನರು ಸಂತೋಷದಿಂದ ಬಂದು ಈ ಸಮಾರಂಭದಲ್ಲಿ ಸಹಭಾಗಿಗಳಾಗಿದ್ದರು. ಸಂಸ್ಕೃತದಲ್ಲೂ ಕನ್ನಡದಲ್ಲೂ ಶೆಟ್ಟರ ಗುಣಾನುವಾದನಪರವಾದ ಮತ್ತೂ ಶ್ರೇಯಶ್ಚಿಂತನಪರವಾದ ಕವಿತೆಗಳ ಪಠನವೂ, ಮ|| ವಿದ್ವಾನ್ ಚಿಕ್ಕರಾಮರಾಯರ ಹಾಡುಗಾರಿಕೆಯೂ, ವೈ|| ಶಿ|| ಮ|| ಶೇಷಣ್ಣನವರ ವೀಣಾವಾದನವೂ, ಶಾಕುಂತಳ ಕರ್ನಾಟಕ ಸಭೆಯವರ ನಾಟಕಭಾಗ ಪ್ರದರ್ಶನವೂ ಮನೋಹರವಾಗಿ ನಡೆದುವು. ಮ|| ಕೃಷ್ಣಶೆಟ್ಟರವರ ಹಿರಿಯಂದಿರು ಕೈ|| ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದಲೂ ಅರಮನೆ ಸರಾಫ್ ಕೆಲಸದಲ್ಲಿ ಲಕ್ಷಾಂತರ ರೂ. ಗಳ ಸೊತ್ತುಗಳ ಉತ್ತರವಾದಿತ್ವವನ್ನುವಹಿಸಿ ರಾಜಭಕ್ತಿಯಿಂದ ನೆರವೇರಿಸಿಕೊಂಡು ಬಂದಿರುವುದನ್ನೂ, ತಮ್ಮ ತಂದೆಯವರ ಮತ್ತೂ ಅಣ್ಣಂದಿರನಂತರ ಮ|| ಕೃಷ್ಣಶೆಟ್ಟರು ಕಳೆದ ೩೨ ವರ್ಷಗಳಿಂದ ಆ ಕಾರ್ಯವನ್ನು ರಾಜಭಕ್ತಿಯಿಂದಲೂ ತ್ರಿಕರಣಶುದ್ಧಿಯಿಂದಲೂ ನೆರವೇರಿಸಿ ಪ್ರಭುಗಳ ಮೆಚ್ಚುಗೆಗೆ ಪಾತ್ರರಾಗಿರುವುದು ಮಾತ್ರವೇ ಅಲ್ಲದೆ ಧರ್ಮಬುದ್ಧಿಯಿಂದ ಸ್ವಜನ ವಿದ್ಯಾಭಿವೃದ್ಧಿಗಾಗಿ ೩೦ ಸಾವಿರ ರೂ. ಗಳ ವೆಚ್ಚದಿಂದ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸುತ್ತಿರುವುದನ್ನೂ, ಅದರಲ್ಲಿ ಬಡವೈಶ್ಯ ವಿದ್ಯಾರ್ಥಿಗಳ ಅಶನಕ್ಕೂ ಅವಕಾಶ ಮಾಡಲು ಸಂಕಲ್ಪಿಸಿರುವುದನ್ನೂ, ಇಂಥ ಸದ್ಗುಣಾಢ್ಯರಾದವರಿಗೆ ಶ್ರೀಮನ್ಮಹಾರಾಜರವರು ವೈಶ್ಯಜನವರ್ಗದವರಲ್ಲಿ ಯಾರಿಗೂ ದೊರೆಯದಿದ್ದಂಥ "ವಣಿಗ್ರತ್ನ" ಎಂಬ ಬಿರುದನ್ನು ಅನುಗ್ರಹಿಸಿದುದು ವೈಶ್ಯಮಂಡಲಿಗೇ ಭೂಷಣವೂ ಸಂತೋಷಪ್ರದವೂ ಆಗಿರುವುದನ್ನೂ ಕುರಿತು ಮ|| ಚಂಗಯ್ಯಶೆಟ್ಟರು, ಮ|| ಎಸ್. ವಿ. ಶೆಟ್ಟರು ಇಂಗ್ಲೀಷಿನಲ್ಲೂ, ಕನ್ನಡದಲ್ಲೂ, ತೆನುಗಿನಲ್ಲೂ ಮುದ್ರಿಸಿದ್ದ ಪತ್ರಿಕೆಗಳ ಮೂಲಕ ಓದಿ ಶ್ರುತಪಡಿಸಿದರು. ಸಭಾಧ್ಯಕ್ಷರೂ ಮಿ|| ಮಹಮ್ಮದ್ ಸೇಟರು ಮೊದಲಾದ ಕೆಲಮಂದಿ ಪುರಪ್ರಮುಖರೂ ಸಹ ಹೀಗೆಯೇ ಶೆಟ್ಟರ ಗುಣಕಥನವನ್ನು ಮಾಡಿ ಉಪನ್ಯಾಸ ಮಾಡಿದರು. ಇವೆಲ್ಲಕ್ಕೂ ಪ್ರತ್ಯುತ್ತರರೂಪವಾದ ಭಾಷಣವನ್ನು ಶೆಟ್ಟರು ಮಾಡುವಾಗ್ಗೆ, ನಾನು ಪ್ರಭುಗಳಿಗೆ ಮಾಡಿರುವ ಸೇವೆಯು ಅತ್ಯಲ್ಪವಾದುದೆಂದೂ ಆದರೂ ಅವರು ಅಂಥ ಬಿರುದನ್ನು ಅನುಗ್ರಹಿಸಿದುದು ಅವರ ಉದಾರ ಚಿತ್ತವನ್ನೂ ಕೃಪಾಪ್ರಭಾವವನ್ನೂ ವ್ಯಕ್ತಪಡಿಸತಕ್ಕುದಾಗಿರುವುದೆಂದೂ ಹೇಳಿ, ಪುರವಾಸಿಗಳೆಲ್ಲರೂ ತನ್ನನ್ನು ಇಷ್ಟು ಗೌರವಿಸಿ ಸಂತೋಷಿಸಿದುದಕ್ಕಾಗಿ ಕೃತಜ್ಞತಾವಂದನೆಯನ್ನರ್ಪಿಸಿದರು.

ಯುದ್ಧವಾರ್ತೆಯು.

ಪಶ್ಚಿಮರಂಗದಲ್ಲಿ ವಿಶೇಷ ವಾರ್ತೆಗಳೇನೂ ಇಲ್ಲ. ಶತ್ರುಗಳು ಇಟಲಿ ರಂಗದಲ್ಲಿ ತಮ್ಮ ಅವಸ್ಕಂದನವನ್ನು ಬಲಮಾಡಿದರೆ ಅಲ್ಲಿಂದ ಮಿತ್ರಮಂಡಲಿಗೆ ಸಹಾಯಸೈನ್ಯವು ಬರದಂತೆಯೂ, ಇಂಗ್ಲೀಷ್ ಫ್ರೆಂಚರು ತಮ್ಮ ಗಮನವನ್ನು ಇಟಲಿ ರಂಗಕ್ಕೆ ಕೊಡಬೇಕಾಗುವಂತೆಯೂ ಆಗುವುದೆಂದೂ, ಆಗ ಪಶ್ಚಿಮರಂಗದಲ್ಲಿ ಯಾವುದಾದರೊಂದು ಕಡೆಯಲ್ಲಿ ಮಿತ್ರಮಂಡಲಿ ಸೈನ್ಯವನ್ನು ಭೇದಿಸಿ ತಮ್ಮ ಇಷ್ಟಾರ್ಥವನ್ನು ಸಾಧಿಸಬೇಕೆಂದೂ ಜರ್ಮನರು ಯೋಚಿಸಿ, ಬಲವಾಗಿ ಇಟಲಿಯಮೇಲೆ ಸೈನ್ಯವನ್ನು ನುಗ್ಗಿಸುವಂತೆ ಮಾಡಿದರು. ಈ ಕೃತ್ಯದಲ್ಲಿ ಆಸ್ಟ್ರಿಯನ್ನರ ೬೨ ಡಿವಿಜನ್ನುಗಳ ಸೈನ್ಯವೂ ೩ ಸಾವಿರಕ್ಕೆ ಮೇಲೆಯೇ ಫಿರಂಗಿಗಳೂ ಉಪಯೋಗಿಸಲ್ಪಟ್ಟುವೆಂದು ಎಣಿಸಲ್ಪಟ್ಟಿವೆ. ಆದರೂ ಕಳೆದ ವರ್ಷದಂತೆ ಈ ಸಲ ಆಸ್ಟ್ರಿಯನ್ನರಿಗೆ ಫಲವೇನೂ ಆಗಲಿಲ್ಲ. ಇಟಲಿ ಮುಖ್ಯ ದಳಪತಿ ಕಡೋರ್ನಾರವರು ಪೂರ್ಣಸನ್ನದ್ಧರಾಗಿದ್ದರು. ಇಂಗ್ಲೀಷ್ ಫ್ರೆಂಚ್ ಸೈನ್ಯಗಳೂ ಅವರಿಗೆ ಚೆನ್ನಾಗಿ ನೆರವಾಗಿದ್ದುವು. ಆಸ್ಟ್ರಿಯನ್ನರಿಗಾದರೋ ಹೋದಸಲದಂತೆ ಜರ್ಮನರ ಸಹಾಯವು ವಿಶೇಷವಾಗಿರಲಿಲ್ಲ. ಮೊದಲು ನುಗ್ಗಿದ ರಭಸದಲ್ಲಿ ಅವರು ಪ್ಯಾವಿನದಿಯನ್ನು ಹಲವು ಕಡೆ ದಾಟಿ, ಮಾಂಟೆಲ್ಲೊ ಗುಡ್ಡದವರೆಗೆ ನುಗ್ಗಿ ಅದರಲ್ಲಿ ಮುಕ್ಕಾಲು ಭಾಗವನ್ನೂ ಹಿಡಿದರು. ಅಷ್ಟರಲ್ಲಿ ಮಿತ್ರಮಂಡಲಿ ಸೈನ್ಯಗಳು ವೀರಾವೇಶದಿಂದ ಪ್ರತಿಭಟಿಸಿ ಯುದ್ಧಮಾಡಿ ಶತ್ರುಗಳು ಹಿಡಿದಿದ್ದ ಸ್ಥಾನಗಳಿಂದ ಅವರನ್ನು ಬಿಡಿಸಿ ಓಡಿಸಿದುದಲ್ಲದೆ ಪ್ಯಾವಿನದಿಯಿಂದಾಚೆಗೂ ಅವರನ್ನು ಓಡಿಸಿಬಿಟ್ಟರು. ಈ ಸಂದರ್ಭಗಳಲ್ಲಿ ಶತ್ರುಗಳಲ್ಲಿದ್ದ ಅನೇಕಾನೇಕ ಫಿರಂಗಿಗಳೂ ಯುದ್ಧೋಪಕರಣಗಳೂ ೨೦ ಸಾವಿರದವರೆಗೆ ಸೈನಿಕರೂ ಇಟಲಿಯವರ ಹಸ್ತಗತವಾದುವು. ಕಳೆದ ವರ್ಷ ಇಟಲಿಯವರು ಕಳೆದುಕೊಂಡಿದ್ದ ಫಿರಂಗಿಗಳಲ್ಲಿ ಅರ್ಧಭಾಗದಷ್ಟು ಈಸಲ ಇಟಲಿಯವರ ವಶವಾಗಿರುವುವು. ಶತ್ರುಗಳ ಕಡೆ ಇದುವರೆಗೆ ೧೮೦೦೦೦ ಸೇನಾ ನಷ್ಟವಾಗಿದೆಯೆಂದು ಹೇಳಲ್ಪಟ್ಟಿದೆ. ಅವರ ರಿಜಿಮೆಂಟುಗಳಲ್ಲಿ ಕೆಲವು ಸಂಪೂರ್ಣವಾಗಿ ನಾಶವಾದುವೆಂದೂ ಗೊತ್ತಾಗುತ್ತದೆ. ಈಗ ಶತ್ರುಗಳು ಮಾಂಟೆಲ್ಲೋದಿಂದ ಹಿಡಿದು ಸಮುದ್ರದವರೆಗೂ ಹಿಮ್ಮೆಟ್ಟಿ ಓಡಿಹೋಗಿದ್ದಾರೆ. ಹೀಗೆ ಇಟಲಿಯವರು ಜಯಶೀಲರಾದುದು ಅವರ ದೇಶಕ್ಕೆಲ್ಲಾ ಮಹೋತ್ಸಾಹವನ್ನುಂಟುಮಾಡಿದೆ.

ಭರತಖಂಡದ ವೃತ್ತಾಂತಗಳು.

ದಿಲ್ಲಿ ಪಟ್ಟಣದಲ್ಲಿ ಸಂಸ್ಥಾನಾಧಿಪತಿಗಳ ಸಭೆಯು ಬರುವ ನವಂಬರ ತಾ|| ೭ ರಲ್ಲಿ ಕೂಡುವುದು.

ಸಿಂಧು ದೇಶದ ಸ್ತ್ರೀಯರುಗಳೇ ಯುದ್ಧದ ಸಾಲಕ್ಕಾಗಿ ೨|| ಲಕ್ಷ ರೂ. ಗಳನ್ನು ಕೊಟ್ಟಿರುವರು.

ಸರ್ ಸತ್ಯೇಂದ್ರಪ್ರಸನ್ನ ಸಿಂಹರಿಗೆ ಈಗತಾನೇ ಕೊಡಲ್ಪಟ್ಟಿರುವ ಕೆ.ಸಿ. ಎಂಬ ಬಿರುದು ಇದುವರೆಗೆ ಯಾವ ಭಾರತೀಯನಿಗೂ ಕೊಡಲ್ಪಟ್ಟಿದಿಲ್ಲವಂತೆ.

ಬೊಂಬಾಯಿ ಶಾಸನನಿರ್ಮಾಣ ಸಭೆಯಲ್ಲಿ ಆ|| ವಿ. ಜೆ. ಪಟೇಲರವರ ಸ್ಥಾನಕ್ಕೆ ರಾವ್ ಸಾಹೇಬ್ ಹರಿಲಾಲ್ ದೇಶೀಯ ಭಾಯಿ ದೇಸಾಯಿರವರು ಆರಿಸಲ್ಪಟ್ಟರು.

ಈಗ ಭರತಖಂಡದಲ್ಲಿ ೧ ರೂ. ನ ನೋಟುಗಳು ೪೫ ಲಕ್ಷದವರೆಗೂ ಚೆನ್ನಾಗಿ ಬಳಕೆಯಲ್ಲಿರುತ್ತವೆ. ೨|| ರೂ. ನ ನೋಟುಗಳೂ ಅಷ್ಟೇ ಬೆಲೆಯವು ವ್ಯವಹಾರಕ್ಕೆ ಬಂದಿರುತ್ತವೆ.

ಮಧ್ಯಪ್ರಾಂತವೊಂದರಲ್ಲೇ ಕಳೆದ ಮೇ ತಿಂಗಳಲ್ಲಿ ಸೈನ್ಯಕ್ಕೆ ೧೦೮೫ ಮಂದಿಗಳು ಸೇರಿದ್ದಾರೆ. ಆ ರಾಷ್ಟ್ರದಲ್ಲಿ ಮೇ ತಿಂಗಳ ಕಡೆಯವರೆಗೆ ಸೇರಿರುವ ಸೈನಿಕಭಟರ ಒಟ್ಟು ಸಂಖ್ಯೆ ೬೫೫೩.

ನಿರ್ಬಂಧನಿವಾಸ ಶಿಕ್ಷೆಯನ್ನು ಕುರಿತು ಆಲೋಚಿಸುವ ಸಂಘಕ್ಕೆ ನ್ಯಾಯಮೂರ್ತಿ ಬೀಚಿಕ್ರಾಫ್ಟ್‌ರವರೂ ಸರ್ ನಾರಾಯಣಚಂದ್ರವಾರ್ಕರವರೂ ಸಹ ಒಂದು ಸಂಘವಾಗಿ ಏರ್ಪಡಿಸಲ್ಪಟ್ಟಿದ್ದಾರೆ.

ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೆಗ್‌ರವರು ಬರೆದು ಯುದ್ಧಮಂತ್ರಿಮಂಡಲದವರಿಗೆ ಒಪ್ಪಿಸಿರುವ ಭಾರತ ರಾಜಕೀಯ ಸಂಸ್ಕರಣಗಳು ಒಟ್ಟಿನಲ್ಲಿ ಚೆನ್ನಾಗಿಯೇ ಇವೆಯೆಂದು ರಾಮ್ಸೆ ಮೆಕ್ಡಾನಲ್ಡ್ ರವರು ಸೀಮೆಯ ಲೇಬರ್ ಲೀಡರ್ ಪತ್ರಿಕೆಗೆ ಬರೆದಿರುತ್ತಾರೆ.

ಸೀಮೆಗೆ ಹೋಗಿರುವ ಪಾಟಿಯಾಲಾ ಮಹಾರಾಜರವರಿಗೆ ಕೊಡಲ್ಪಟ್ಟ ಕೆ.ಸಿ.ಬಿ.ಇ. ಬಿರುದಾಂಕನವನ್ನು ಚಕ್ರವರ್ತಿಯವರು ಸ್ವಹಸ್ತದಿಂದ ಅವರಿಗೆ ಅಲಂಕರಿಸಿದರು. ಮಹಾರಾಜರು ಆ ದಿನ ಚಕ್ರವರ್ತಿ ದಂಪತಿಗಳೊಡನೆ ಕುಳಿತು ಔತಣದೂಟವನ್ನು ಮಾಡಿದರು.

ಬರುವ ಜುಲೈ ತಾ|| ೨ ರಿಂದ ೧೦ ರವರೆಗೆ ನಡೆಯುವ ಜಗನ್ನಾಥ ಯಾತ್ರೆಗೆ ಹೋಗುವ ಜನರಿಗೆ ಹೊಗೆಬಂಡಿಗಳು ತಕ್ಕಷ್ಟು ದೊರೆಯಲಾರವಾದುದರಿಂದ ಯಾತ್ರಿಕರು ಬೇರೆ ಮಾರ್ಗಗಳಲ್ಲಿ ಹೋಗುವುದಕ್ಕೆ ಏರ್ಪಡಿಸಿಕೊಳ್ಳಬೇಕೆಂದು ರೈಲ್ವೆ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಆರ್. ದಾದಾಭಾಯಿಯವರ ಪತ್ನಿಯವರಾದ ದೇಶೀಭಾಯಿ ಜಹಂಗೀರ್ ಎಂ.ಡಿ.ಎಂ.ಆರ್.ಸಿ.ಪಿ. ಯವರು ಬೊಂಬಾಯಿ ವಿಶ್ವವಿದ್ಯಾಲಯದ ಗೌರವ ಸಭ್ಯೆಯರಾಗಿ ಆರಿಸಿಕೊಳ್ಳಲ್ಪಟ್ಟರು. ಭಾರತಮಹಿಳೆಯರಾರೂ ಇದುವರೆಗೆ ಇಂಥ ಪದವಿಯನ್ನೂ ಎಂ. ಡಿ. ಪಟ್ಟವನ್ನೂ ಪಡೆದುದಿಲ್ಲ.

ಸಂಯುಕ್ತರಾಷ್ಟ್ರಗಳ ಲೆ|| ಗೌರ್ನರಾದ ಮಿ|| ಜೆ. ಕ್ಯಾಂಪ್‌ಬೆಲ್ ಒ.ಬಿ.ಇ.;ಐ.ಸಿ.ಎಸ್. ರವರನ್ನು ಇಂಡ್ಯಾ ಸರ್ಕಾರದವರು ಆಹಾರ ಪದಾರ್ಥಗಳು ಮೊದಲಾದ ಜೀವಿತಾಧಾರ ವಸ್ತುಗಳ ಒದಗಿಸುವಿಕೆ, ಬೆಲೆ, ಅವಶ್ಯವಾದ ಪದಾರ್ಥಗಳನ್ನು ಲೋಹಮಾರ್ಗಗಳಮೂಲಕ ಸಾಗಿಸುವಿಕೆ ಮೊದಲಾದಂಶಗಳನ್ನು ವಿಚಾರಿಸುವ ಅಧಿಕಾರಿಯನ್ನಾಗಿ ನಿಯಮಿಸಿರುವರು. ಇವರ ಆಫೀಸು ಕಾನ್ಪೂರಿನಲ್ಲಿರುವುದು,

ಲಾಹೋರ್ ಪಟ್ಟಣದ ಒಂದು ಬೀದಿಯಲ್ಲಿ ಕಳೆದ ಭಾನುವಾರ ರಾತ್ರಿ ೮|| ಗಂಟೆ ಹೊತ್ತಿನಲ್ಲಿ ಒಂದು ಸಿಡಿಮದ್ದು ಬಿದ್ದು ಬಹಳ ರಭಸದಿಂದ ಹಾರಿತು. ಅದು ಒಂದು ಮಹಡಿ ಮೇಲಿನಿಂದ ಎಸೆಯಲ್ಪಟ್ಟಿರಬೇಕೆಂದು ಎಣಿಸಲ್ಪಟ್ಟಿದೆ. ಅದರ ಮಹಾ ಶಬ್ದದಿಂದ ಅಲ್ಲಿ ಹೋಗುತ್ತಿದ್ದ ಇಬ್ಬರು ಸೋಲ್ಜರುಗಳಲ್ಲಿ ಒಬ್ಬನಿಗೆ ಕಿವುಡುಂಟಾಗಿರುವುದು. ೨ ನೆಯವನಿಗೂ ಇನ್ನು ೫-೬ ಮಂದಿ ಹಿಂದೂಗಳಿಗೂ ಬಲವಾದ ಗಾಯಗಳಾಗಿರುವುವು. ಪೊಲೀಸರು ವಿಚಾರಣೆ ನಡೆಯುಸುತ್ತಿದ್ದಾರೆ.

ಬರುಬರುತ್ತ ಉಗ್ರಮತವಾದಿಗಳ ಕಠೋರತೆಯು ಹೆಚ್ಚುತ್ತಿರುವುದರಿಂದ ಮಿತವಾದಿ ನಾಯಕರು ಮರಳಿ ಅವರ ಸಂಬಂಧವನ್ನು ಕಳೆದುಕೊಳ್ಳುವುದೊಳ್ಳೆಯದೆಂದು ಆಲೋಚಿಸುತ್ತಿರುವಂತೆ ಕಾಣುತ್ತಿದೆ. ಮೊದಲು ಬೊಂಬಾಯಿ ಅಧಿಪತ್ಯದಲ್ಲಿ ಇದು ಪ್ರಬಲಿಸಿದ್ದಿತು. ಈಗ ಅದು ಬಂಗಾಳಾದಲ್ಲಿ ಪ್ರಬಲಿಸುವಂತಿದೆ. "ನೇಷನಲ್ ಲಿಬರಲ್ ಕ್ಲಬ್" ಎಂಬ ಹೆಸರಿನಿಂದ ಮಿತವಾದಿಗಳೇ ಸೇರಿ ಒಂದು ಸಂಘವನ್ನು ಹೊಸದಾಗಿ ಸ್ಥಾಪಿಸಿಕೊಂಡರು. ಇದಕ್ಕೆ ಸುರೇಂದ್ರನಾಥ ಬಾನರ್ಜಿಯವರೇ ಅಧ್ಯಕ್ಷರು.

ಸರ್ ಸುಬ್ರಹ್ಮಣ್ಯಯ್ಯರು ವೃದ್ಧರೂ ಆರೋಗ್ಯವಿಹೀನರೂ ಆಗಿರುವುದರಿಂದಲೂ ನ್ಯಾಯವಿಚಾರಣ ಶಾಖೆಯಲ್ಲಿ ಅವರು ಸಾಮ್ರಾಜ್ಯಕ್ಕೆ ದೊಡ್ಡ ಸೇವೆ ಮಾಡಿರುವುದರಿಂದಲೂ ಅವರಮೇಲೆ ಯಾವ ಚರ್ಯೆಯನ್ನೂ ನಡೆಯಿಸಬೇಕೆಂದಿರುವುದಿಲ್ಲವೆಂದೂ ಇನ್ನು ಮುಂದೆ ಇಂಥ ಪ್ರವರ್ತನವನ್ನು ಕಂಡರೆ ಸೈರಿಸುವುದಿಲ್ಲವೆಂದೂ ಸಹ ಇಂಡ್ಯಾ ಸರ್ಕಾರದವರು ಸುಬ್ರಹ್ಮಣ್ಯಯ್ಯರಿಗೆ ತಿಳಿಯಪಡಿಸಿರುವರೆಂದೂ ವೈಸ್ರಾಯರ ಆ ಅಭಿಪ್ರಾಯದ ಮೇಲೆ ನಾವೇನೂ ಪ್ರಯತ್ನಮಾಡುವುದಿಲ್ಲವೆಂದು ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಮ|| ಗಂಧಿಯವರೂ ಮತ್ತೆ ೧೨ ಮಂದಿ ಪ್ರಮುಖರೂ ಸಹ ಕೈರಾ ಜಿಲ್ಲೆಯ ಗ್ರಾಮಾಂತರಗಳಮೇಲೆಲ್ಲಾ ಸಂಚರಿಸುತ್ತ ಸೈನ್ಯಕ್ಕೆ ಜನರನ್ನು ಸೇರಿಸುವುದಕ್ಕಾಗಿ ಬಹಳ ಪ್ರೋತ್ಸಾಹವನ್ನು ಮಾಡುತ್ತಿದ್ದಾರೆ. ಪ್ರತಿಗ್ರಾಮಕ್ಕೆ ೨೦ ಮಂದಿಗೆ ಕಡಿಮೆಯಿಲ್ಲದೆ ಸೈನ್ಯಕ್ಕೆ ಸೇರಲು ಹೊರಡಬೇಕೆಂದೂ, ಸಾಮ್ರಾಜ್ಯದಲ್ಲಿ ಸಮಪಾಲು ಸ್ಥಾನ ನಮಗೆ ಬೇಕಾಗಿದ್ದರೆ ಆ ಸಾಮ್ರಾಜ್ಯರಕ್ಷಣಾರ್ಥವಾಗಿ ಹೋರಾಡಲು ನಾವು ಸಿದ್ಧರಾಗಿರಬೇಕೆಂದೂ, ಆಂಗ್ಲಸಾಮ್ರಾಜ್ಯವು ಅಳಿದುಹೋದರೆ ನಮ್ಮ ಆಶಾಭಾಗ್ಯಗಳೆಲ್ಲಾ ಅಳಿದುಹೋಗುವುವೆಂದೂ ಮೊದಲಾಗಿ ಬೋಧಿಸುತ್ತಿದ್ದಾರೆ.

ಅಧಿನಿವೇಶಗಳ ಮುಖ್ಯಮಂತ್ರಿಗಳಿಗೂ ಪ್ರತಿನಿಧಿಗಳಿಗೂ ಸಹ ಪಾರ್ಲಿಮೆಂಟಿನವರು ಔತಣ ಮಾಡಿಸಿದಾಗ ಈಗಣ ಯುದ್ಧವಿಷಯವನ್ನು ಕುರಿತು ಮುಖ್ಯಮಂತ್ರಿಯವರು ಮಾತನಾಡುವಾಗ್ಗೆ—ಆಂಗ್ಲದೇಶವು ಯುದ್ಧಾದಿಯಲ್ಲಿ ಒಂದು ಬಲ್ಗೇರಿಯಾ ದೇಶದ ಸೈನ್ಯದಷ್ಟು ಸೈನ್ಯವನ್ನು ಮಾತ್ರ ಹೊಂದಿದ್ದು ಈಗ ೭೦ ಲಕ್ಷ ಸೈನ್ಯವನ್ನು ಅಣಿಮಾಡಿಕೊಂಡಿರುವುದೆಂತಲೂ, ಅಧಿನಿವೇಶ ರಾಜ್ಯಗಳೆಲ್ಲಾ ವಿಶೇಷವಾದ ಸಹಾಯವನ್ನು ಮಾಡಿರುವುವೆಂತಲೂ ಹೇಳಿ, ಕಟ್ಟಕಡೆಗೆ ಭರತಖಂಡದ ವಿಷಯವನ್ನು ಪ್ರಸ್ತಾಪಿಸುವಾಗ್ಗೆ ಆ ದೇಶವು ಮನಃಪೂರ್ವಕವಾಗಿ ೧೦ ಲಕ್ಷ ಸೈನ್ಯವನ್ನು ಕೊಡಿಸಿ ರಣರಂಗಕ್ಕೆ ಕಳುಹಿಸಿಕೊಟ್ಟು ಏಷ್ಯಾಖಂಡದಲ್ಲಿ ಶತ್ರುವಿಜೃಂಭಣೆಗೆ ಅವಕಾಶವಿಲ್ಲದಂತೆ ಮಾಡಿರುವುದೆಂತಲೂ, ಇನ್ನೂ ೧೦ ಲಕ್ಷ ಸೈನ್ಯವನ್ನು ಅದು ಸನ್ನದ್ಧಮಾಡುತ್ತಿರುವುದೆಂತಲೂ ಹೇಳಿ ಭರತಖಂಡವು ಸಾಮ್ರಾಜ್ಯರಕ್ಷಣೆಗೆ ಎಷ್ಟು ಸಹಾಯಮಾಡುತ್ತಲಿದೆಯೆಂಬುದನ್ನು ವಿವರಿಸಿ ಕೊಂಡಾಡಿದರು.

ಈಗ ಬೊಂಬಾಯಿ ಟಂಕಸಾಲೆಯಲ್ಲಿ ಪ್ರತಿದಿನವೂ ಹೊಸದಾಗಿ ೧೦ ಲಕ್ಷ ರೂ. ಗಳನ್ನು ಎರಕವೆರೆಯುತ್ತಿದ್ದಾರೆ. ಅಲ್ಲದೆ ಸ್ಟ್ರೇಟ್ಸ್ ಸೆಟಲ್ಮೆಂಟಿಗಾಗಿ ಪ್ರತಿದಿನವೂ ೧ ಲಕ್ಷ ಬೆಳ್ಳಿ ನಾಣ್ಯಗಳನ್ನೂ ೩ ಲಕ್ಷದ ಆಣಾ ನಾಣ್ಯಗಳನ್ನೂ ಹುಯ್ದುಕೊಡುತ್ತಿದ್ದಾರೆ. ಚಿನ್ನದ ಮೊಹರಾಗಳು ಇದುವರೆಗೆ ದಿನಕ್ಕೆ ೩೦ ರಿಂದ ೪೦ ಸಾವಿರದವರೆಗೆ ಎರಕವೆರೆಯಲ್ಪಡುತ್ತಿದ್ದವು. ಇನ್ನು ಮುಂದೆ ದಿನಕ್ಕೆ ೫೦ ಸಾವಿರ ಮೊಹರಾಗಳು ಹುಯ್ಯಲ್ಪಡುವುವು. ಹೊರಗಣಿಂದ ಬೆಳ್ಳಿಯು ವಿಸ್ತಾರವಾಗಿ ಬರುತ್ತಿದೆ. ಜುಲೈ ತಿಂಗಳ ಕೊನೆಯೊಳಗಾಗಿ ೫ ಕೋಟಿ ರೂ. ಗಳ ಬೆಳ್ಳಿಯು ಹೊರಗಣಿಂದ ಬರುವುದು. ಕಳೆದ ಜನವರಿ ತಾ|| ೧ ರಿಂದ ಇದುವರೆಗೆ ೩ ಕೋಟಿ ರೂ. ಗಳೂ ೨೦ ಲಕ್ಷ ರೂ. ಗೆ ಸಮನಾದ ೩ ಕೋಟಿ ನಿಕಲ್ ನಾಣ್ಯಗಳೂ ಸಹ ಸ್ಟ್ರೇಟ್ ಸೆಟಲ್ಮೆಂಟಿಗಾಗಿಯೇ ಪ್ರತ್ಯೇಕವಾಗಿ ಹುಯ್ದು ಕೊಡಲ್ಪಟ್ಟಿವೆ. ಕಲ್ಕತ್ತಾ ಟಂಕಸಾಲೆಯಲ್ಲೂ ನಾಣ್ಯಗಳು ನಿರ್ಮಿತವಾಗುತ್ತಿವೆ. ಈಗ ಹೊಸದಾಗಿ ಎರಕವೆರೆಯಲ್ಪಟ್ಟಿರುವ ಭಂಗಾರದ ಮೊಹರಾಗಳಲ್ಲಿ ೬ ಲಕ್ಷದಷ್ಟು ಗೋದುವೆ ವ್ಯಾಪಾರದ ಸೌಕರ್ಯಾರ್ಥವಾಗಿ ಪಂಜಾಬಿಗೆ ಕಳುಹಿಸಲ್ಪಟ್ಟಿದೆ. ಇವುಗಳ ಮೇಲೆ ಒಂದು ಕಡೆಯಲ್ಲಿ ೫ ನೆ ಜಾರ್ಜ್ ಚಕ್ರವರ್ತಿಯೆಂಬ ಅಕ್ಷರಗಳೂ ಮಧ್ಯದಲ್ಲಿ ಚಕ್ರವರ್ತಿಯವರ ಮುಖಭಾವವೂ, ೨ ನೆ ಪಕ್ಕದಲ್ಲಿ "೧೫ ರೂ. ಇಂಡಿಯಾ, ೧೯೧೮" ಎಂಬುದಾಗಿಯೂ ಮುದ್ರಿಸಲ್ಪಟ್ಟಿದೆ. ಇನ್ನು ಮುಂದೆ ಭರತಖಂಡದಲ್ಲಿ ಚಿನ್ನದ ಬೆಳ್ಳಿಯ ನಾಣ್ಯಗಳು ಸಮೃದ್ಧವಾಗಿ ಬಳಕೆಗೆ ಬರುವುದರಲ್ಲಿ ಸಂಶಯವಿಲ್ಲ. ಆದರೆ ಅವುಗಳನ್ನು ಯಾರೂ ಕರಗಿಸಕೂಡದಾಗಿದೆ.

ಭಾರತೀಯರಿಗೆ ಸೈನಿಕೋದ್ಯೋಗಗಳನ್ನು ಕೊಡುವ ಕ್ರಮದ ವಿಷಯವಾಗಿ ಇಂಡ್ಯಾ ಸರ್ಕಾರದವರು ಸಾರ್ವಭೌಮರ ಅಪ್ಪಣೆಯೊಂದನ್ನು ಈಗತಾನೇ ಪ್ರಕಟಮಾಡಿದ್ದಾರೆ. ಸರ್ಕಾರದ ವಿಷಯವಾಗಿ ಉತ್ತಮ ಸೇನೆಯನ್ನು ಮಾಡಿದ ಕುಟುಂಬಕ್ಕೆ ಸೇರಿದವರಿಗೂ, ಮುಖ್ಯವಾಗಿ ಈ ಯುದ್ಧದಲ್ಲಿ ಸೈನಿಕರನ್ನು ಸೇರಿಸಿಕೊಟ್ಟವರಿಗೂ, ಸ್ವತಃ ಚೆನ್ನಾಗಿ ಯುದ್ಧಮಾಡಿ ಬಂದಿರುವ ಭಟರಿಗೂ, ಇದಕ್ಕೆ ಮುಂಚಿನ ಯುದ್ಧಗಳಲ್ಲಿ ಶ್ರೇಷ್ಠವಾಗಿ ಕೆಲಸಮಾಡಿ ಬಂದಿರುವವರಿಗೂ ಸಹ ಈ ಉದ್ಯೋಗಗಳು ಕೊಡಲ್ಪಡುವುವು. ಅವರ ವಯಃ ಪರಿಮಿತಿ, ವಿದ್ಯಾಭ್ಯಾಸ, ಮೊದಲಾದ ಲಕ್ಷಣಗಳೆಲ್ಲಾ ಆ ಅಪ್ಪಣೆಯಲ್ಲಿ ವಿವರಿಸಲ್ಪಟ್ಟಿರುವುದು. ಗೊತ್ತಾದ ಕಾಲದವರೆಗೆ ಇವರು ಅಭ್ಯಾಸಮಾಡಿ ಮುಗಿಸಿದಬಳಿಕ ಇವರುಗಳಿಗೆ ಭಾರತೀಯ ಸೈನ್ಯದಲ್ಲಿ ೨ ನೆ ಲೆಫ್ಟಿನೆಂಟ್ ಪದವಿಗಳು ಕೊಡಲ್ಪಡುವುವು. ಆ ದರ್ಜೆಯ ಆಂಗ್ಲ ಸೈನಿಕೋದ್ಯೋಗಿಗಿರುವಂಥ ಮರ್ಯಾದೆಗಳೆಲ್ಲಾ ಇವರಿಗೂ ಸಲ್ಲುವುವು. ಯುದ್ಧ ಮುಗಿದ ಬಳಿಕವೂ ಸೇನಾಶಾಖೆಯಲ್ಲೇ ಇರುವುದಕ್ಕೆ ಒಪ್ಪುವವರಿಗೂ ಚೆನ್ನಾಗಿ ಸಾಮರ್ಥ್ಯವನ್ನು ತೋರಿಸಿರುವವರಿಗೂ ಸಹ ಉದ್ಯೋಗಗಳು ಸ್ಥಿರವಾಗಿ ಕೊಡಲ್ಪಡುವುವು. ಹಾಗಿಲ್ಲದವರಿಗೆ ಬಹುಮಾನವನ್ನು ಕೊಟ್ಟು ಕಳುಹಿಸಿಬಿಡುವರು. ಆದರೆ ಯಾವ ಪದವಿಯಲ್ಲಿದ್ದು ಅವರು ಕೆಲಸವನ್ನು ಬಿಟ್ಟು ಹೋಗುವರೋ ಆ ಪದವಿಯಲ್ಲಿನ ಲಾಂಛನಗಳನ್ನೆಲ್ಲಾ ಜೀವಾಂತವಾಗಿ ಧರಿಸಿಕೊಳ್ಳುವುದಕ್ಕೆ ಅವರಿಗೆ ಅಧಿಕಾರವು ಕೊಡಲ್ಪಡುವುದು. ಇದಲ್ಲದೆ ಪ್ರತಿವರ್ಷವೂ ಸಾಂಡ್‌ಹರ್ಸ್ಟಿನ ಕಾಟೆಂಡ್ ಕಲಾಶಾಲೆಯಲ್ಲಿ ಯುದ್ಧಕಲೆಯನ್ನಭ್ಯಸಿಸುವುದಕ್ಕೆ ೧೦ ಮಂದಿ ಭಾರತೀಯರನ್ನು ಕಳುಹಿಸಿಕೊಡುವುದಕ್ಕೂ ಏರ್ಪಾಟಾಗಿರುವುದು. ವೈದ್ಯಪರೀಕ್ಷೆ ಪ್ರತ್ಯೇಕಪರೀಕ್ಷೆಯಲ್ಲುತ್ತೀರ್ಣರಾದವರನ್ನೇ ಇದಕ್ಕೆ ಸೇರಿಸಿಕೊಳ್ಳುವರು. ಅವರು ಬರುವ ಜುಲೈ ತಾ|| ೧ ಕ್ಕೆ ೧೭|| ಯಿಂದ ೨೦ ವಯಸ್ಸಿನೊಳಗೆ ಇರುವವರಾಗಿರಬೇಕು. ಅವರು ಓದುವುದಕ್ಕೆ ಫೀಯನ್ನು ಕೊಡಬೇಕಾದುದಿಲ್ಲ. ಪುಸ್ತಕಗಳು ಉಡುಗಳು ಮೇಲಿನ ವೆಚ್ಚ ಇವುಗಳಿಗಾಗಿ ಪ್ರತಿಯೊಬ್ಬರಿಗೂ ಅವರ ತಾಯ್ತಂದೆಗಳು ೬೩೫ ರೂ. ಗಳನ್ನು ಕೊಡಬೇಕಾಗುವುದು. ಇದರಮೇಲೆ ವರ್ಷಕ್ಕೆ ೫೦ ಪೌನುಗಳಿಗೆ ಮೀರದಂತೆ ಬೇರೆ ವೆಚ್ಚವೂ ಬೀಳುವುದು. ಅಲ್ಲಿಗೆ ಸೇರುವ ಭಾರತೀಯರೆಲ್ಲರೂ ಆಂಗ್ಲೇಯರಿಗೆ ಸಮನಾಗಿಯೇ ಕಾಣಲ್ಪಡುವರು. ಕ್ಲುಪ್ತಕಾಲದವರೆಗೆ ಅಲ್ಲಿ ಓದಿ ಉತ್ತೀರ್ಣರಾದವರಿಗೆ ಭಾರತೀಯ ಸೈನ್ಯದಲ್ಲಿ ಉನ್ನತೋದ್ಯೋಗಗಳು ಕೊಡಲ್ಪಡುವುದಕ್ಕೂ ಅವಕಾಶವು ಕಲ್ಪಿಸಲ್ಪಟ್ಟಿರುವುದು. ಈ ಅಪ್ಪಣೆಯಿಂದ ಭಾರತೀಯರು ಬಹುಕಾಲದಿಂದ ಅಪೇಕ್ಷಿಸುತ್ತಿದ್ದ ಒಂದಾನೊಂದು ಫಲವು ಸಿದ್ಧಿಸಿದಂತಾಯಿತು.

ವಿದೇಶ ವೃತ್ತಾಂತಗಳು.

ಸೈಬೇರಿಯಾದಲ್ಲಿ ಬೋಲ್ಷೆವಿಕ್ ಪ್ರಭುತ್ವವು ಕೊನೆಗಂಡುಹೋಗಿದೆ.

ಡೋಬ್ರುಜಾ ವಿಷಯವಾಗಿ ತುರ್ಕಿ ಬಲ್ಗೇರಿಯಾಗಳೊಳಗೆ ಪರಸ್ಪರ ಮನಸ್ತಾಪವು ಹೆಚ್ಚಿಕೊಂಡಿದೆಯೆಂದೂ ಅದನ್ನು ಶಮನಗೊಳಿಸಲು ಜರ್ಮನಿ ಆಸ್ಟ್ರಿಯಾ ಪ್ರಭುತ್ವದವರು ಪ್ರಯತ್ನಿಸಿರುವರೆಂದೂ ಸುದ್ದಿಯುಂಟಾಗಿದೆ.

ಮೇ ತಿಂಗಳೊಂದರಲ್ಲಿ ಫ್ರೆಂಚರೊಬ್ಬರೇ ಶತ್ರುಗಳ ೨೩೧ ವಿಮಾನಗಳನ್ನು ಕೆಡಹಿ, ೧೬೦ ವಿಮಾನಗಳನ್ನು ಕೆಲಸಕ್ಕೆ ಬಾರದಂತೆ ಮಾಡಿದರು. ೩೫ ಬೆಲೂನುಗಳನ್ನು ಧ್ವಂಸಮಾಡಿರುವರು. ಆ ತಿಂಗಳಲ್ಲಿ ಫ್ರೆಂಚರ ೬೦ ವಿಮಾನಗಳು ಶತ್ರುಗಳಿಂದ ಕೆಡಹಲ್ಪಟ್ಟು ೧೨ ಬಲಹೀನವಾಗಿ ಮಾಡಲ್ಪಟ್ಟುವು.

ಜರ್ಮನರು ಈಗ ಪಶ್ಚಿಮರಂಗದಲ್ಲಿ ೪ ಸಲ ಮಾಡಿದ ಅವಸ್ಕಂದನದಿಂದಲೂ ಅವರಕಡೆ ೫ ಲಕ್ಷ ಸೇನಾನಷ್ಟವಾಗಿರುವುದೆಂದು ಅವರ ದೇಶದ ಸಾಂಘಿಕ ಪ್ರಜೆಗಳೇ ಹೇಳುತ್ತಿದ್ದಾರೆ. ಮಾಂಟಿಡಿಯರ್ ರಂಗವೊಂದರಲ್ಲೇ ಅವರ ೮೦ ಸಹಸ್ರ ಜನರು ಸತ್ತರು, ಅಥವಾ ನಿರುಪಯೋಗಿಗಳಾದರು ಎಂದು ಪ್ರಕಟವಾಗಿದೆ.

ತುರ್ಕಿಯವರ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಒಂದು ಕಡೆ ಚುಟ್ಟಾ ಸೇದಿ ಹಾಕಿದ ಬೆಂಕಿಯು ಹೊತ್ತಿಕೊಂಡುದರಿಂದ ೨|| ಮೈಲಿಯಗಲಕ್ಕೆ ಬೆಂಕಿಯು ವ್ಯಾಪಿಸಿ, ೫೦೦೦ ಮನೆಗಳು ಭಸ್ಮವಾದುವೆಂದೂ, ೧೨ ಬೀದಿಗಳೂ ೧೦ ಮಸೀದಿಗಳೂ ಹಾಳಾದುವೆಂದೂ ೨ ಲಕ್ಷ ಮಂದಿಗಳು ಮನೆಮಠಗಳನ್ನು ಕಳೆದುಕೊಂಡು ಅಲೆಯುತ್ತಿರುವರೆಂದೂ ವಾರ್ತೆಯುಂಟಿದೆ.

೨ ತಿಂಗಳ ವೆಚ್ಚಕ್ಕಾಗಿ ೬೦ ಕೋಟಿ ಪೌನುಗಳನ್ನು ಸ್ಯಾಂಕ್ಷನ್ ಮಾಡಬೇಕೆಂದು ಬೋನರ್ಲಾರವರು ಕಳೆದ ಮಾರ್ಚಿ ತಾ|| ೭ ರಲ್ಲಿ ಪಾರ್ಲಿಮೆಂಟಿನ ಅಪ್ಪಣೆ ಪಡೆದಿದ್ದರು. ಆ ಹಣದಲ್ಲಿ ಯುದ್ಧವ್ಯಯಕ್ಕೆ ೪೮ ಕೋಟಿಯೂ ೨೦ ಲಕ್ಷ ಪೌನುಗಳ ವೆಚ್ಚವು ಆಗಬಹುದೆಂದು ನಿರೀಕ್ಷಿಸಿದ್ದರು. ಆದರೆ ಅದರಲ್ಲಿ ೯೫ ಲಕ್ಷ ಪೌನುಗಳು ಉಳಿದುವು. ಈಗ ಪುನಃ ೨ ತಿಂಗಳ ಕಾಲದ ವೆಚ್ಚಕ್ಕೆ ೫೦ ಕೋಟಿ ಪೌನುಗಳನ್ನು ಅಪ್ಪಣೆಮಾಡಬೇಕೆಂದು ಕೋರಿದ್ದಾರೆ.

ಆಸ್ಟ್ರಿಯಾದ ವಿಯನ್ನಾ ಪಟ್ಟಣದಲ್ಲಿ ಆಹಾರಾಭಾವದಿಂದ ಬಹಳ ಗದ್ದಲವುಂಟಾಗಿದೆ. ಆಯುಧ ವೈಮಾನ ನಿರ್ಮಾಣ ಯಂತ್ರಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದ ೧ ಲಕ್ಷ ಮಂದಿಗಳು ಕೆಲಸಬಿಟ್ಟು ನಿಂತಿದ್ದಾರೆ. ೫೦ ಸಾವಿರ ಪ್ರಜೆಗಳು ಅಂಗಡಿಗಳನ್ನು ಸೂರೆಮಾಡಿದರು. ಸಂಧಿಮಾಡಿಕೊಳ್ಳಿ, ತಿಂಡಿಯನ್ನು ಕೊಡಿ ಎಂದು ಕೂಗುತ್ತ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಪೋಲೀಸರು ಗುಂಪಿನವರಮೇಲೆ ಆಯುಧವನ್ನು ಪ್ರಯೋಗಿಸಿ ರಕ್ತವನ್ನು ಹಂದಾಡಿಸಿದರೆಂದು ಸುದ್ದಿ ಬಂದಿದೆ. ಸಾವಿರಾರು ವಾಗಿನ್ನುಗಳ ಉರಲುಗೆಡ್ಡೆಗಳನ್ನೂ ಬಟಾಣಿಯನ್ನೂ ಆಸ್ಟ್ರಿಯಾಕ್ಕೆ ಕಳುಹಿಸಿಕೊಡಲು ಹಂಗೇರಿಯಾದವರು ಒಪ್ಪಿಕೊಂಡಿರುವರಂತೆ.

ಜಪಾನ್ ಚಕ್ರವರ್ತಿಯವರಿಗೆ ನಮ್ಮ ಸಾರ್ವಭೌಮರವರು ಕೊಟ್ಟ ಫೀಲ್ಡ್ ಮಾರ್ಷಲ್ ಬಿರುದನ್ನು ಸಮರ್ಪಿಸುವುದಕ್ಕಾಗಿ ಪ್ರಿನ್ಸ್ ಆರ್ಥರ್ ಆಫ್ ಕನ್ನಾಟ್ ಪ್ರಭುಗಳು ಜಪಾನ್ ದೇಶಕ್ಕೆ ಹೋಗಿರುತ್ತಾರೆ. ಅಲ್ಲಿಯ ರಾಜಕುಟುಂಬದವರೂ ಪ್ರಜೆಗಳೂ ಸಹ ಇವರನ್ನು ವಿಶೇಷಾದರದಿಂದ ಸತ್ಕರಿಸುತ್ತಿದ್ದಾರೆ. ಅಲ್ಲಿಯ ವಿದೇಶಾಂಗ ಮಂತ್ರಿಯವರೂ ಮುಖ್ಯಮಂತ್ರಿಯವರೂ ಸಹ ಸ್ವಾಗತ ಭಾಷಣ ಮಾಡುವಾಗ ಹೀಗೆ ಆಂಗ್ಲ ರಾಜಬಂಧುಗಳು ಬಂದು ಹೋಗುವುದರಿಂದ ರಾಜಕೀಯ ಸಂಬಂಧವು ಇಂಗ್ಲೆಂಡ್ ಜಪಾನುಗಳ ಮಧ್ಯದಲ್ಲಿ ದೃಢವಾಗುವುದೆಂದೂ, ಉಭಯದೇಶಗಳ ಸ್ನೇಹಕ್ಕೆ ನ್ಯಾಯ ಶಾಂತಿಗಳೇ ಮೂಲಾಧಾರವೆಂದೂ, ಈ ಸಮಯದಲ್ಲಿ ಆಂಗ್ಲ ರಾಜಕುಟುಂಬದವರು ಬಂದುದು ಚಿರಸ್ಮರಣೀಯವಾದುದೆಂದೂ ಹೇಳಿದರು.

ಸಮಾರಾದಲ್ಲಿ ಬೋಲ್ಷಿವಿಕ್ ಪಕ್ಷವು ಕೊಲಗಿಸಲ್ಪಟ್ಟು "ಪೂರ್ವದ ರಷ್ಯಾ ಧ್ವಜಪಟವು ಅನೇಕ ಸ್ಥಲಗಳಲ್ಲಿ ಸ್ಥಾಪಿಸಲ್ಪಟ್ಟಿದೆ. ಸೈಬೀರಿಯಾದಲ್ಲಿ ಅಡ್ಮಿರಲ್ ಸೆಮಿನಾಫ್‌ರವರ ಸೈನ್ಯವು ಚೀನಾ ದೇಶದ ಎಲ್ಲೆಕಟ್ಟಿಗೆ ಆತುರವಾಗಿ ಓಡಿಹೋಯಿತು. ೩ ಸಾವಿರ ಮಂದಿ ಕಾಸಕ್ಕರು ತಮ್ಮ ನಾಯಕರನ್ನು ಕೊಂದು ಶತ್ರುಗಳ ಕಡೆಗೆ ಸೇರಿಕೊಂಡರು. ರೆಡ್‌ಗಾರ್ಡುಗಳು ಸೆಮಿನಾಫರ ಸೈನ್ಯವನ್ನು ವಿಚ್ಛಿನ್ನಮಾಡಿಬಿಡುತ್ತೇವೆನ್ನಲಾಗಿ ಬೋಲ್ಷಿವಿಕ್ಕರು ಚೀರ್ಜಿ-ಮಂಚೂರಿಯಾಗಳಿಗೆ ಮಧ್ಯದಲ್ಲಿರುವ ಲೋಹಮಾರ್ಗವನ್ನು ಆಕ್ರಮಿಸಿರುವರು. ಅದರ ಸಮೀಪದಲ್ಲಿರುವ ಎಲ್ಲೆಕಟ್ಟನ್ನು ಚೀನಾ ಸೇನೆಗಳು ಆಕ್ರಮಿಸಿರುವುವು. ಬೋಲ್ಷಿವಿಕ್ಕರು ತಾವಾಗಿ ಆ ಬಳಿಯಲ್ಲಿ ಯುದ್ಧವನ್ನಾರಂಭಿಸುವವರೆಗೂ ನೀವು ಯುದ್ಧವನ್ನು ಮಾಡಲಾಗದೆಂದು ಚೀನಾದ ಅಧಿಕಾರಿಗಳು ತಮ್ಮ ಸೈನಿಕರಿಗೆ ಆಜ್ಞಾಪಿಸಿರುವರು.

ಜರ್ಮನಿ ಕೈಸರ್‌ರವರ ಪಟ್ಟಾಭಿಷೇಕ ದಿನೋತ್ಸವವು ಪಶ್ಚಿಮರಂಗದಲ್ಲಿರುವ ಅವರ ಮುಖ್ಯ ಸೇನಾಶಿಬಿರದ ಬಳಿಯಲ್ಲಿಯೇ ನಡೆಯಿಸಲ್ಪಟ್ಟಿತು. ಆಗ ಮುಖ್ಯ ಮುಖ್ಯ ಸೇನಾನಿಗಳೆಲ್ಲಾ ಸೇರಿದ್ದರು. ಅನೇಕೋಪನ್ಯಾಸಗಳು ನಡೆದುವು. ವಾನ್ ಹಿಂಡನ್‌ಬರ್ಗ್‌ರವರು ಜರ್ಮನೀ ರಾಜಕುಮಾರರ ಪಕ್ಷದಿಂದ—"ಮರಣಪರ್ಯಂತವೂ ತಮ್ಮ ರಾಜಭಕ್ತಿ ವಿಶ್ವಾಸವು ಅಚಲವಾಗಿರುವುದೆಂದು ಹೇಳಿ ರಾಜಭಕ್ತಿಪ್ರಮಾಣವನ್ನು ಮಾಡಿದರು. ಮತ್ತೂ ಅಸಂಖ್ಯರಾದ ಶತ್ರುವರ್ಗದವರು ಸುತ್ತಲೂ ಮುತ್ತಿಕೊಂಡಿದ್ದರೂ ಜರ್ಮನ್ ಪ್ರಜೆಗಳೂ ಸೈನಿಕರೂ ತಮ್ಮ ದೇಶರಕ್ಷಣಾರ್ಥವಾಗಿ ಇಂಥ ಬಲವತ್ತರವಾಗಿ ಯಾವಾಗಲೂ ಯುದ್ಧಮಾಡಿದುದಿಲ್ಲ. ಅನನ್ಯಸಾಮಾನ್ಯವಾದ ಧೈರ್ಯಾತಿಶಯವುಳ್ಳ ತಮ್ಮ ಯುದ್ಧಾಧಿಪತಿಯ ದೆಸೆಯಿಂದಲೇ ಅವರುಗಳು ಹಾಗೆ ಯುದ್ಧಮಾಡಿದರು" ಎಂದು ಹೇಳಿ ತಮ್ಮ ಚಕ್ರವರ್ತಿಯನ್ನು ಕೊಂಡಾಡಿದರು. ಇದಕ್ಕೆ ಚಕ್ರವರ್ತಿಯವರು ಉತ್ತರವನ್ನು ಕೊಡುವಾಗ—"ಸ್ಥಿತಿಯು ಬಹಳ ವಿಷಮವಾಗಿ ಬಂದಾಗ್ಗೆ ದೈವವು ತಕ್ಕ ಮನುಷ್ಯಸಹಾಯವನ್ನಿತ್ತು ಕಾಪಾಡುವುದೆಂದು ನಾನು ಯಾವಾಗಲೂ ನಂಬಿಕೊಂಡಿರುವೆನು. ಆ ನನ್ನ ವಿಶ್ವಾಸವು ಈಗ ಫಲಿಸಿತು. ಪರಾತ್ಪರನಾದ ಭಗವಂತನು ಮಾರ್ಷಲ್ ಹಿಂಡನ್ಬರ್ಗರನ್ನೂ, ಲುಡೆಂಡಾರ್ಫರನ್ನೂ ಜರ್ಮನ್ ಸಾಮ್ರಾಜ್ಯರಕ್ಷಣೆಗಾಗಿ ಅನುಗ್ರಹಿಸಿದನು. ಈಗಣ ಯುದ್ಧವು ೨ ತೆರದ ಲಕ್ಷ್ಯದಿಂದ ನಡೆಯುತ್ತಿದೆ. ನ್ಯಾಯ, ಗೌರವ, ಸ್ವಾತಂತ್ರ್ಯ, ನೀತಿ-ಇವುಗಳನ್ನನುಸರಿಸಿರುವ ಜರ್ಮನರ ಲಕ್ಷ್ಯವೊಂದು. ಸ್ಯಾಕ್ಸನ್ ಜಾತಿಯ ಆಂಗ್ಲ ಜನರ ಧನಾಶಾ ಪರತೆಯ ರೂಪವಾದ ಲಕ್ಷ್ಯವೊಂದು. ಇವೆರಡರಲ್ಲಿ ಯಾವುದಾದರೊಂದು ವಿಜಯವನ್ನೈದಬೇಕು. ಜರ್ಮನ್ ಲಕ್ಷ್ಯವನ್ನನುಸರಿಸಿ ನಡೆದರೆ ನಾವೇ ಜಯಶೀಲರಾಗುವೆವು" ಎಂದು ಹೇಳಿರುವರು. ಜರ್ಮನರ ಬಂಡನಾಳವು ಜಗತ್ತಿಗೇ ಗೊತ್ತಾಗಿದ್ದರೂ ಆ ಜಗತ್ತನ್ನೆಲ್ಲಾ ವಂಚಿಸುವುದಕ್ಕೆ ಜರ್ಮನ್ ಚಕ್ರವರ್ತಿಯು ಆಡಿರುವ ಮಾತು ಯಾರಿಗೆತಾನೇ ಆಶ್ಚರ್ಯವನ್ನುಂಟುಮಾಡಲಾರದು? ಆದರೆ ಮಂತ್ರಿಗಳೂ, ಪ್ರಭುಗಳೂ ಒಬ್ಬರಿಗೊಬ್ಬರು ಸರಿಯಾಗಿಯೇ ದೊರೆವಿದ್ದಾರೆ. ಅವರುಗಳು ಒಬ್ಬರಿಗೊಬ್ಬರು ಹೊಗಳಿಕೊಂಡಿರುವುದನ್ನು ನೋಡಿದರೆ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಉಪಸಂಹಾರ ಭಾಷಣಮಾಡುವಾಗ ಅಧ್ಯಕ್ಷರು ಹೇಳಿರುವ "ಉಷ್ಟ್ರಾಣಾಂಚಗೃಹೇಲಗ್ನಂ ಗಾಯಕಾಸ್ಸಂತಿ ಗಾರ್ದಭಾಃ । ಅಹೋರೂಪಮಹೋರೂಪ ಮಹೋಧ್ವನಿರಹೋಧ್ವನಿಃ" ಎಂದರೆ ಒಂಟೆಗಳ ಮನೆಯಲ್ಲಿ ಮದುವೆಯಾಗುತ್ತಿರುವಾಗ್ಗೆ ಕತ್ತೆಗಳು ಗವಾಯಿಗಳಾಗಿ ಬಂದಿದ್ದುವು. ಅವು ಒಂಟೆಗಳ ರೂಪವನ್ನು ನೋಡಿ ಏನು ಲೋಕೋತ್ತರ ಸೌಂದರ್ಯ! ಎಂದು ಹೊಗಳುವುದಕ್ಕೆ ತೊಡಗಿದುವಂತೆ. ಒಂಟೆಗಳಾದರೂ ಆ ಕತ್ತೆಗಳ ಧ್ವನಿಯನ್ನು ಕುರಿತು ಎಂಥ ಇಂಪಾದ ಸ್ವರ! ಎಂದು ಹೊಗಳಿದುವಂತೆ. ಎಂಬೀ ಶ್ಲೋಕವು ಈ ಸಂದರ್ಭಕ್ಕೆ ಸರಿಯಾಗಿ ಅನ್ವಯಿಸುವುದೆಂದು ಕಾಣುತ್ತದೆ.

ಸಂಪದಭಿವೃದ್ಧಿ ಸಮಾಜ.

ವ್ಯವಸಾಯ ಕಮಿಟಿ.

ಬೆಂಗಳೂರು, ತಾರೀಖು 14-6-18.

ಸಂಸ್ಥಾನದಲ್ಲಿ ರೈತಾಪಿ ಜನಗಳು ಮತ್ತು ಇತರ ಖಾಸಗಿ ಜನರು ತಾವು ಸ್ವಂತವಾಗೇ ಆಗಲಿ ಅಥವ ಇತರರೊಂದಿಗೆ ಸೇರಿಯೇ ಆಗಲಿ ದನ, ಕುದುರೆ ಮತ್ತು ಟಗರುಗಳ ಅಭಿವೃದ್ಧಿ ಪಡಿಸುವ ಉದ್ಯೋಗವನ್ನು ಕೈಕೊಳ್ಳುವುದಕ್ಕೆ ಪ್ರೋತ್ಸಾಹಪಡಿಸಲು ಶ್ರೀಮನ್ ಮಹಾರಾಜಾ ಸರ್ಕಾರದವರು 1918 ನೇ ಇಸವಿಯ ಜೂನ್ ಮಾಹೆ 1 ನೇ ತಾರೀಖು 11730-41-A. & E. 12-17-11 ನೇ ನಂಬರು ತಮ್ಮ ಹುಕುಮಿನಲ್ಲಿ ಈ ಕೆಳಗೆ ಸಂಕ್ಷೇಪಿಸಿರುವ ರಿಯಾಯಿತಿಗಳನ್ನು ದಯಪಾಲಿಸಿರುತ್ತಾರೆ.

ಒಬ್ಬ ಆಸಾಮಿಯಾಗಲಿ ಅಥವಾ ಒಂದು ಸಂಘದವರಾಗಲಿ 'ಬೀಜಕ್ಕೋಸ್ಕರ' ಒಳ್ಳೆಯದಾದ ಹೋರಿ ಕೋಣ ಅಥವಾ ಕುದುರೆಯನ್ನು ಕೊಂಡು ಕಾಪಾಡಿದಲ್ಲಿ ಸದರಿ ಬೀಜದ ರಾಸಿನ ಪೋಷಣೆಗಾಗಿ ಸರ್ಕಾರದಿಂದ ಸಾಲಿಯಾನ 125 ರಿಂದ 150 ರೂಪಾಯಿಗಳವರೆಗಿನ ನಗದು ಸಹಾಯವು ದೊರೆಯುವುದು.

ಇಂಥಾ ಬೀಜದ ರಾಸುಗಳನ್ನು ತನ್ನ ಸ್ವಂತದ ದನಗಳನ್ನೂ ನೆರೆಹೊರೆಯವರ ದನಗಳನ್ನೂ ಅಭಿವೃದ್ಧಿ ಪಡಿಸಲು ಉಪಯೋಗಿಸಬೇಕು.

ಈ ರಾಸುಗಳನ್ನು ಸಿವಿಲ್ ವೆಟೆರಿನರಿ ಇಲಾಖಾ ಸೂಪರಿಂಟೆಂಡೆಂಟರವರು ಆಗಾಗ್ಗೆ ಬಂದು ಅಜಮಾಯಿಷಿ ಮಾಡಿ ಅವುಗಳ ಪೋಷಣೆಯ ವಿಚಾರದಲ್ಲಿ ತಕ್ಕ ತಿಳುವಳಿಕೆಯನ್ನು ಕೊಡುವರು.

ಸರ್ಕಾರಿ ಗ್ರಾಂಟನ್ನು ಪಡೆಯತಕ್ಕವರು ತಾವಿಟ್ಟಿರುವ ಬೀಜದ ರಾಸಿನ ಉಪಯೋಗವನ್ನು ತೋರಿಸುವ ಕೆಲವು ಲೆಕ್ಕಾಚಾರ ಪುಸ್ತಕಗಳನ್ನು ಇಡಬೇಕಾಗಿರುತ್ತದೆ.

ನಮ್ಮ ದೇಶವು ಉತ್ಕೃಷ್ಟವಾದ ದನಗಳಿಗೆ ಯಾವಾಗಲೂ ಹೆಸರುವಾಸಿಯಾದದ್ದು. ಆ ಮರ್ಯಾದೆಯನ್ನು ನಿರಂತರವಾಗಿ ಕಾಪಾಡಿಕೊಳ್ಳುವುದಕ್ಕೂ ಅಭಿವೃದ್ಧಿಪಡಿಸುವುದಕ್ಕೂ ಇದು ಅನುಕೂಲವಾದ ಕಾಲವಾಗಿದೆ.

ಈ ವಿಚಾರದಲ್ಲಿ ರಾಸುಗಳ ಮಾಲೀಕರು ದರಖಾಸ್ತನ್ನು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಸಾಹೇಬರವರಲ್ಲಿ ಬರೆದುಕೊಳ್ಳಬೇಕು.

ಹೆಚ್ಚು ತಪಸೀಲು ಬೇಕಾದಲ್ಲಿ ತಾಲ್ಲೂಕು ಕಛೇರಿಯಿಂದ ಇಸ್ತಿಹಾರುನಾಮೆಯ ಪ್ರತಿಯನ್ನು ಪಡೆಯಬಹುದು.

ನವರತ್ನ ರಾಮರಾವ್, ಸೆಕ್ರೆಟರಿ,
ವ್ಯವಸಾಯ ಕಮಿಟಿ.

ಶ್ರೀಮನ್ಮಹಾರಾಜರವರ ವರ್ಧಂತಿಯುತ್ಸವವು.

ಈ ಉತ್ಸವ ದಿನವಾದ ಕಳೆದ ತಾ|| ೨೦ ರಲ್ಲಿ ಸಂಸ್ಥಾನದ ಅನೇಕ ಸ್ಥಳಗಳಲ್ಲಿಯ ಬಾಲಕ ಬಾಲಿಕೆಯರುಗಳ ಪಾಠಶಾಲೆಗಳಲ್ಲಿ ನಡಿಸಲ್ಪಟ್ಟ ಸಂತೋಷೋತ್ಸವ ಸಂಬಂಧವಾಗಿ ಬಂದಿರುವ ಲೇಖನಗಳನ್ನೆಲ್ಲಾ ಈ ಪತ್ರಿಕೆಯಲ್ಲಿ ಮುದ್ರಿಸಲು ಸ್ಥಳಾಭಾವದಿಂದ ಅವಕಾಶವಾಗಲಿಲ್ಲವಾಗಿ ವಿಷಾದಿಸುತ್ತೇವೆ. ಪ್ರ.ಪ್ರ.

ಪತ್ರವ್ಯವಹಾರ.

ನಂಜನಗೂಡಿನಲ್ಲಿ ಏಷ್ಯಾಟಿಕ್ ಪೆಟ್ರೋಲಿಯಂ ಕಂಪೆನಿಯ ಏಜಂಟ್ ಮ|| ಪಾಪಣ್ಣನವರು ಸೀಮೆಯೆಣ್ಣೆಯನ್ನು (ಕೆಂಪೆಣ್ಣೆ) ಸೀಸೆ ಒಂದಕ್ಕೆ ೦—೧—೬ ಆಣೆಯಂತೆ ಮಾರುತ್ತಿರುತ್ತಾರೆ. ಕಳೆದ ಒಂದು ವಾರದಿಂದಲೂ ಬಹು ಜನರು ಬಹು ದೂರದಿಂದಲೂ ಜಾತ್ರೆಯಂತೆ ಗುಂಪುಗುಂಪಾಗಿ ಬಂದು ಬಹು ಸಂತೋಷದಿಂದ ಕೊಳ್ಳುತ್ತಿದ್ದಾರೆ. ಇವರ ಮೇಲುಪಂಕ್ತಿಯನ್ನು ಅನುಸರಿಸಿ ಧರ್ಮಾತ್ಮರಾದ ವರ್ತಕರಾರಾದರೂ ರಾಗಿ ಅಕ್ಕಿಯನ್ನು ರೂಪಾಯಿಗೆ ೧೬, ೮ ಸೇರುಗಳಂತೆ ಮಾರುವುದಾದರೆ ಬಡ ರೈತರಿಗೆ ತುಂಬಾ ಉಪಕಾರವಾದಂತಾಗುವುದು. ಒಬ್ಬ ಸ್ಥಳಿಕ.

ಹಿರಿಯೂರಿನಲ್ಲಿ ಅನಾಥ ವೀರಶೈವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಬೋರ್ಡಿಂಗ್ ಸ್ಥಾಪನೆ ಮಾಡುವುದಕ್ಕೆ ಅಲ್ಲಿನ ವೀರಶೈವ ಪ್ರಮುಖರು ಇಷ್ಟರಲ್ಲಿಯೇ ಒಂದು ತಾಲ್ಲೂಕು ಕಾನ್ಫರೆನ್ಸನ್ನು ನಡೆಯಿಸುತ್ತಾರೆಂತಲೂ ಈ ಬೋರ್ಡಿಂಗ್ ಸ್ಥಾಪನೆಗಾಗಿ ಹಿರಿಯೂರು ಪೇಟೆ ಪಟ್ಟಣಶೆಟ್ಟರ ಶ್ರೀಮತಿ ಸಿದ್ದಾಮಕ್ಕನವರು ಸಾವಿರಾರು ರೂಪಾಯಿ ಬೆಲೆಬಾಳುವ ಒಂದು ಕಟ್ಟಡವನ್ನೂ, ಕೆಲವು ಜನ ಶ್ರೀಮಂತರು ಚಂದಾ ದ್ರವ್ಯವನ್ನು ಕೊಡುವಂತೆಯೂ ವಾಗ್ದಾನಮಾಡಿರುವುದಾಗಿ ತಿಳಿಯುತ್ತದೆ. ಇವರಿಗೆ ಸನ್ಮಂಗಳವನ್ನು ಜಗದೀಶನು ಕೊಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ಓರ್ವ ಚಂದಾದಾರ.

ಸ್ವದೇಶಿ ಸೀರೆಗಳು.



ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇವೆ. 18 ಮೊಳ ಉದ್ದವೂ 2¼ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಹೋರಟಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೊಹರ್‌ಜಾನ್ ಸೀರೆ	... 5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ	... 3.0.0	ಜಪಾನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ	... 5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
28 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 35

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯಕರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಟುಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಜಡದರೋಗ, ಪಾಂಡುರೋಗ, ಗುಲ್ಮರೋಗ, ಮೂ[illegible]ರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅಂದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಚಿ ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೂರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಗೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
12 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡುತ್ತೆ.

೧೯೧೮ ನೆಯ ಇಸವಿ ಜೂನ್ ತಾ|| ೩೦ ರಿಂದ ೧೯೧೮ ನೆಯ ಜುಲೈ ತಾ|| ೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಜ್ಯೇಷ್ಠ ಬ|| ಷಷ್ಠಿಯಿಂದ ಜ್ಯೇಷ್ಠ ಬ|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು
30	ಭಾನು	ಷಷ್ಠಿ	1-3	ಉಪರಿ	54-6	17
1	ಸೋಮ	ಅಷ್ಟ	49-10	ಉಭಾ	25-33	18
2	ಮಂಗಳ	ನವಮಿ	42-58	ರೇವತಿ	21-19	19
3	ಬುಧ	ದಶಮಿ	36-35	ಅಶ್ವಿನಿ	17-17	20
4	ಗುರು	ಏಕಾದ	31-8	ಭರಣಿ	13-39	21
5	ಶುಕ್ರ	ದ್ವಾದ	26-18	ಕೃತ್ತಿಕೆ	10-36	22
6	ಶನಿ	ತ್ರಯೋ	22-20	ರೋಹಿಣಿ	8-19	23

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯತ್ವಜ್ಞ ನಕ್ಷತ್ರತೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ ಮಹಿಕಾರೋಪಿಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ಪಾಳಲಿತ ಸಾಧುಗ್ರ್ಯಾಲವಾಲಂವಲಂ ॥
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತಿ ಕಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦]
[ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಜುಲೈ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೨೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಮ್ನಾಯ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು [illegible] 15 [illegible]:— [illegible] 1, [illegible] 1, [illegible] 1, [illegible] 1, [illegible] 1, [illegible] 1, [illegible] 1, [illegible] 4, [illegible] 1, [illegible] 15 [illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಾರಾಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 30

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯನ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುವಾಸಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಮ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ರೋಡ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸದ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ತಲೆಯನೋವು, ಹೊಟ್ಟೆನೋವು ಪಿತ್ತಕೆಟ್ಟಿರುವ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿಷ್ಠಿತವಾ[illegible] ರೋಗಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. [illegible]

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಿಪ್ಪವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
14 ಆನಂದ ಬುಕ್‌ಡಿಪೋ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೀ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೀ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೀ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರಹ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
32 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ [illegible] ಈ

ಮೂರು ಪುಸ್ತಕಗಳು ಉಚಿತ!

೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅತ್ಯಂತ ವಿಷಯಗಳೆಲ್ಲಾ ವಿಸ್ತಾರವಾಗಿ ವಿವರಿಸುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—[illegible] ಪ್ರತಿಯೊಬ್ಬರೂ [illegible] ಆರೋಗ್ಯ, ಐಶ್ವರ್ಯ, [illegible] ಸಂಪಾದಿಸಿ ಸುಖದಿಂದ [illegible] ಕ್ರಯ ೮ ಆಣೆ.

(೩). [illegible]

(೪) [illegible]

೨ ತಿಂಗಳ ವೆಚ್ಚಕ್ಕಾಗಿ ೬೦ ಕೋಟಿ ಪೌನುಗಳನ್ನು ಸ್ಯಾಂಕ್ಷನ್ ಮಾಡಬೇಕೆಂದು ಬೋನರ್ಲಾರವರು ಕೇಳಿದ ಮಾರ್ಚಿ ತಾ|| ೭ ರಲ್ಲಿ ಪಾರ್ಲಿಮೆಂಟಿನ ಅಪ್ಪಣೆ ಪಡೆದಿದ್ದರು. ಆ ಹಣದಲ್ಲಿ ಯುದ್ಧವ್ಯಯಕ್ಕೆ ೪೮ ಕೋಟಿಯೂ ೨೦ ಲಕ್ಷ ಪೌನುಗಳ ವೆಚ್ಚವು ಆಗಬಹುದೆಂದು ನಿರೀಕ್ಷಿಸಿದ್ದರು. ಆದರೆ ಅದರಲ್ಲಿ ೯೫ ಲಕ್ಷ ಪೌನುಗಳು ಉಳಿದುವು. ಈಗ ಮತ್ತೆ ೨ ತಿಂಗಳ ಕಾಲದ ವೆಚ್ಚಕ್ಕೆ ೫೦ ಕೋಟಿ ಪೌನುಗಳನ್ನು ಅಪ್ಪಣೆಮಾಡಬೇಕೆಂದು ಕೋರಿದ್ದಾರೆ.

ಆಸ್ಟ್ರಿಯಾದ ವಿಯನ್ನಾ ಪಟ್ಟಣದಲ್ಲಿ ಆಹಾರಾಭಾವದಿಂದ ಬಹಳ ಗದ್ದಲವುಂಟಾಗಿದೆ. ಆಯುಧ ವೈಮಾನ ನಿರ್ಮಾಣ ಯಂತ್ರಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದ ೧ ಲಕ್ಷ ಮಂದಿಗಳು ಕೆಲಸಬಿಟ್ಟು ನಿಂತಿದ್ದಾರೆ. ೫೦ ಸಾವಿರ ಪ್ರಜೆಗಳು ಅಂಗಡಿಗಳನ್ನು ಸೂರೆಮಾಡಿದರು. ಸಂಧಿಮಾಡಿಕೊಳ್ಳಿ, ತಿಂಡಿಯನ್ನು ಕೊಡಿ ಎಂದು ಕೂಗುತ್ತ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಪೋಲೀಸರು ಗುಂಪಿನವರಮೇಲೆ ಆಯುಧವನ್ನು ಪ್ರಯೋಗಿಸಿ ರಕ್ತವನ್ನು ಹರಿದಾಡಿಸಿದರೆಂದು ಸುದ್ದಿ ಬಂದಿದೆ. ಸಾವಿರಾರು ವಾಗಿನ್ನುಗಳ ಉರುಳುಗೆಡ್ಡೆಗಳನ್ನೂ ಬಟಾಣಿಯನ್ನೂ ಆಸ್ಟ್ರಿಯಾಕ್ಕೆ ಕಳುಹಿಸಿಕೊಡಲು ಹಂಗೇರಿಯಾದವರು ಒಪ್ಪಿಕೊಂಡಿರುವರಂತೆ.

ಜಪಾನ್ ಚಕ್ರವರ್ತಿಯವರಿಗೆ ನಮ್ಮ ಸಾರ್ವಭೌಮರವರು ಕೊಟ್ಟ ಫೀಲ್ಡ್ ಮಾರ್ಷಲ್ ಬಿರುದನ್ನು ಸಮರ್ಪಿಸುವುದಕ್ಕಾಗಿ ಪ್ರಿನ್ಸ್‌ಕನ್ನಾಟ್ ಆರ್ಥರ್ ಪ್ರಭುಗಳು ಜಪಾನ್ ದೇಶಕ್ಕೆ ಹೋಗಿರುತ್ತಾರೆ. ಅಲ್ಲಿಯ ರಾಜಕುಟುಂಬದವರೂ ಪ್ರಜೆಗಳೂ ಸಹ ಇವರನ್ನು ವಿಶೇಷಾದರದಿಂದ ಸತ್ಕರಿಸುತ್ತಿದ್ದಾರೆ. ಅಲ್ಲಿಯ ವಿದೇಶಾಂಗ ಮಂತ್ರಿಯವರೂ ಮುಖ್ಯಮಂತ್ರಿಯವರೂ ಸಹ ಸ್ವಾಗತ ಭಾಷಣ ಮಾಡುವಾಗ್ಗೆ ಹೀಗೆ ಆಂಗ್ಲ ರಾಜಬಂಧುಗಳು ಬಂದು ಹೋಗುವುದರಿಂದ ರಾಜಕೀಯ ಸಂಬಂಧವು ಇಂಗ್ಲೆಂಡ್ ಜಪಾನುಗಳ ಮಧ್ಯದಲ್ಲಿ ದೃಢವಾಗುವುದೆಂದೂ, ಉಭಯದೇಶಗಳ ಸ್ನೇಹಕ್ಕೆ ನ್ಯಾಯ ಶಾಂತಿಗಳೇ ಮೂಲಭೂತವೆಂದೂ, ಈ ಸಮಯದಲ್ಲಿ ಆಂಗ್ಲ ರಾಜಕುಟುಂಬದವರು ಬಂದುದು ಚಿರಸ್ಮರಣೀಯವಾದುದೆಂದೂ ಹೇಳಿದರು.

ಸಮಾರಾದಲ್ಲಿ ಬೋಲ್ಷೆವಿಕ್ ಪ್ರಭುತ್ವವು ತೊಲಗಿಸಲ್ಪಟ್ಟು ಪೂರ್ವದ ರಷ್ಯಾ ಧ್ವಜಪಟವು ಅನೇಕ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿದೆ. ಸೈಬೀರಿಯಾದಲ್ಲಿ ಅಡ್ಮಿರಲ್ ಸೆಮಿನಾಫ್‌ರವರ ಸೈನ್ಯವು ಚೀನಾ ದೇಶದ ಎಲ್ಲೆಕಟ್ಟಿಗೆ ಆತುರವಾಗಿ ಓಡಿಹೋಯಿತು. ೪ ಸಾವಿರ ಮಂದಿ ಕಾಸಕ್ಕರು ತಮ್ಮ ನಾಯಕರನ್ನು ಕೊಂದು ಶತ್ರುಗಳ ಕಡೆಗೆ ಸೇರಿಕೊಂಡರು. ರೆಡ್‌ಗಾರ್ಡುಗಳು ಸೆಮಿನಾಫರ ಸೈನ್ಯವನ್ನು ಛಿನ್ನಭಿನ್ನಮಾಡಿಬಿಡುತ್ತೇವೆನ್ನಲಾಗಿ ಬೋಲ್ಷೆವಿಕ್ಕರು ಚೀಜೀನ್-ಮಂಚೂರಿಯಾಗಳಿಗೆ ಮಧ್ಯದಲ್ಲಿರುವ ಲೋಹಮಾರ್ಗವನ್ನು ಆಕ್ರಮಿಸಿರುವರು. ಅದರ ಸಮೀಪದಲ್ಲಿರುವ ಎಲ್ಲೆಕಟ್ಟನ್ನು ಚೀನಾ ಸೇನೆಗಳು ಆಕ್ರಮಿಸಿರುವುವು. ಬೋಲ್ಷೆವಿಕ್ಕರು ಕಾವಾಗಿ ಆ ಬಳಿಯಲ್ಲಿ ಯುದ್ಧವನ್ನಾರಂಭಿಸುವವರೆಗೂ ನೀವು ಯುದ್ಧವನ್ನು ಮಾಡಲಾಗದೆಂದು ಚೀನಾದ ಅಧಿಕಾರಿಗಳು ತಮ್ಮ ಸೈನಿಕರಿಗೆ ಅಜ್ಞಾಪಿಸಿರುವರು.

ಜರ್ಮನಿ ಕೈಸರ್‌ರವರ ಪಟ್ಟಾಭಿಷೇಕ ದಿನೋತ್ಸವವು ಪಶ್ಚಿಮರಂಗದಲ್ಲಿರುವ ಅವರ ಮುಖ್ಯ ಸೇನಾಶಿಬಿರದ ಬಳಿಯಲ್ಲಿಯೇ ನಡೆಯಿಸಲ್ಪಟ್ಟಿತು. ಆಗ ಮುಖ್ಯ ಮುಖ್ಯ ಸೇನಾನಿಗಳೆಲ್ಲಾ ಸೇರಿದ್ದರು. ಅನೇಕೋಪನ್ಯಾಸಗಳು ನಡೆದುವು. ವಾನ್ ಹಿಂಡನ್‌ಬರ್ಗರವರು ಜರ್ಮನೀ ರಾಜಕುಮಾರರ ಪಕ್ಷದಿಂದ—ಮರಣಪರ್ಯಂತವೂ ತಮ್ಮ ರಾಜಭಕ್ತಿ ವಿಶ್ವಾಸವು ಅಚಲವಾಗಿರುವುದೆಂದು ಹೇಳಿ ರಾಜಭಕ್ತಿಪ್ರಮಾಣವನ್ನು ಮಾಡಿದರು. ಮತ್ತೂ ಅಸಂಖ್ಯರಾದ ಶತ್ರುವರ್ಗದವರು ಸುತ್ತಲೂ ಮುತ್ತಿಕೊಂಡಿದ್ದರೂ ಜರ್ಮನ್ ಪ್ರಜೆಗಳೂ ಸೈನಿಕರೂ ತಮ್ಮ ದೇಶರಕ್ಷಣಾರ್ಥವಾಗಿ ಇಂಥ ಬಲವತ್ತರವಾಗಿ ಯಾವಾಗಲೂ ಯುದ್ಧಮಾಡಿದುದಿಲ್ಲ. ಅನನ್ಯಸಾಮಾನ್ಯವಾದ ಧೈರ್ಯಾತಿಶಯವುಳ್ಳ ತಮ್ಮ ಯುದ್ಧಾಧಿಪತಿಯ ದೆಸೆಯಿಂದಲೇ ಅವರುಗಳು ಹಾಗೆ ಯುದ್ಧಮಾಡಿದರು" ಎಂದು ಹೇಳಿ ತಮ್ಮ ಚಕ್ರವರ್ತಿಯನ್ನು ಕೊಂಡಾಡಿದರು. ಇದಕ್ಕೆ ಚಕ್ರವರ್ತಿಯವರು ಉತ್ತರವನ್ನು ಕೊಡುವಾಗ್ಗೆ— "ಸ್ಥಿತಿಯು ಬಹಳ ವಿಷಮವಾಗಿ ಬಂದಾಗ್ಗೆ ದೈವವು ತಕ್ಕ ಮನುಷ್ಯಸಹಾಯವನ್ನಿತ್ತು ಕಾಪಾಡುವುದೆಂದು ನಾನು ಯಾವಾಗಲೂ ನಂಬಿಕೊಂಡಿರುವೆನು. ಆ ನನ್ನ ವಿಶ್ವಾಸವು ಈಗ ಫಲಿಸಿತು. ಪರಾಕ್ರಮನಾದ ಭಗವಂತನು ಮಾರ್ಷಲ್ ಹಿಂಡನ್‌ಬರ್ಗರನ್ನೂ, ಲುಡೆಂಡಾರ್ಫರನ್ನೂ ಜರ್ಮನ್ ಸಾಮ್ರಾಜ್ಯರಕ್ಷಣೆಗಾಗಿ ಅನುಗ್ರಹಿಸಿದನು. ಈಗಣ ಯುದ್ಧವು ೨ ತೆರದ ಲಕ್ಷ್ಯದಿಂದ ನಡೆಯುತ್ತಿದೆ. ನ್ಯಾಯ, ಗೌರವ, ಸ್ವಾತಂತ್ರ್ಯ, ನೀತಿ-ಇವುಗಳನ್ನನುಸರಿಸಿರುವ ಜರ್ಮನರ ಲಕ್ಷ್ಯವೊಂದು. ಸ್ಯಾಕ್ಸನ್ ಜಾತಿಯು ಆಂಗ್ಲ ಜನರ ಧನಾರಾಧನೆಯ ರೂಪವಾದ ಲಕ್ಷ್ಯವೊಂದು. ಇವೆರಡರಲ್ಲಿ ಯಾವುದಾದರೊಂದು ವಿಜಯವನ್ನೈದಬೇಕು. [illegible] ಲಕ್ಷ್ಯವನ್ನನುಸರಿಸಿ ನಡೆದರೆ ನಾವೇ ಜಯಶೀಲರಾಗುವೆವು" ಎ[illegible]ರುವರು. ಜರ್ಮನರ ಬಂಡನಾಳವು ಜಗತ್ತಿಗೇ ಗೊತ್ತಾಗಿದ್ದರೂ ಆ ಜಗತ್ತನ್ನೆಲ್ಲಾ ವಂಚಿಸುವುದಕ್ಕೆ ಜರ್ಮನ್ ಚಕ್ರವರ್ತಿಯು ಆಡಿರುವ ಮಾತು ಯಾರಿಗೆತಾನೇ ಆಶ್ಚರ್ಯವನ್ನುಂಟುಮಾಡಲಾರದು? ಆದರೆ ಮಂತ್ರಿಗಳೂ, ಪ್ರಭುಗಳೂ ಒಬ್ಬರಿಗೊಬ್ಬರು ಸರಿಯಾಗಿಯೇ ದೊರೆವಿದ್ದಾರೆ. ಅವರುಗಳು ಒಬ್ಬರಿಗೊಬ್ಬರು ಹೊಗಳಿಕೊಂಡಿರುವುದನ್ನು ನೋಡಿದರೆ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಉಪಸಹಾರ ಭಾಷಣಮಾಡುವಾಗ್ಗೆ ಅಧ್ಯಕ್ಷರು ಹೇಳಿರುವ "ಉಷ್ಟ್ರಾಣಾಂಚಗೃಹೇಲಗ್ನಂ ಗಾಯಕಾಸ್ಸಂತಿಗಾರ್ದಭಾಃ | ಅಹೋರೂಪಮಹೋರೂಪ ಮಹೋಧ್ವನಿರಹೋಧ್ವನಿಃ" ಎಂದರೆ ಒಂಟೆಗಳ ಮನೆಯಲ್ಲಿ ಮದುವೆಯಾಗುತ್ತಿರುವಾಗ್ಗೆ ಕತ್ತೆಗಳು ಗವಾಯಿಗಳಾಗಿ ಬಂದಿದ್ದವು. ಅವು ಒಂಟೆಗಳ ರೂಪವನ್ನು ನೋಡಿ ಏನು ಲೋಕೋತ್ತರ ಸೌಂದರ್ಯ! ಎಂದು ಹೊಗಳುವುದಕ್ಕೆ ತೊಡಗಿದುವಂತೆ. ಒಂಟೆಗಳಾದರೊ ಆ ಕತ್ತೆಗಳ ಧ್ವನಿಯನ್ನು ಕುರಿತು ಎಂಥ ಇಂಪಾದ ಸ್ವರ! ಎಂದು ಹೊಗಳಿದುವಂತೆ. ಎಂಬೀ ಶ್ಲೋಕವು ಈ ಸಂದರ್ಭಕ್ಕೆ ಸರಿಯಾಗಿ ಅನ್ವಯಿಸುವುದೆಂದು ತೋರುತ್ತದೆ.

ಸಂಪದಭಿವೃದ್ಧಿ ಸಮಾಜ.

ವ್ಯವಸಾಯ ಕಮಿಟಿ.

ಬೆಂಗಳೂರು, ತಾರೀಖು 14-6-18.

ಸಂಸ್ಥಾನದಲ್ಲಿ ರೈತಾಪಿ ಜನಗಳು ಮತ್ತು ಇತರ ಖಾಸಗಿ ಜನರು ತಾವು ಸ್ವಂತವಾಗೇ ಆಗಲಿ ಅಥವ ಇತರರೊಂದಿಗೆ ಸೇರಿಯೇ ಆಗಲಿ ದನ, ಕುದುರೆ ಮತ್ತು ಟಗರುಗಳ ಅಭಿವೃದ್ಧಿಪಡಿಸುವ ಉದ್ಯೋಗವನ್ನು ಕೈಕೊಳ್ಳುವುದಕ್ಕೆ ಪ್ರೋತ್ಸಾಹಪಡಿಸಲು ಶ್ರೀಮನ್ ಮಹಾರಾಜಾ ಸರ್ಕಾರದವರು 1918 ನೇ ಇಸವಿಯ ಜೂನ್ ಮಾಹೆ 1 ನೇ ತಾರೀಖು 11730-41-A. & E. 12-17-11 ನೇ ನಂಬರು ತಮ್ಮ ಹುಕುಮಿನಲ್ಲಿ ಈ ಕೆಳಗೆ ಸಂಕ್ಷೇಪಿಸಿರುವ ರಿಯಾಯಿತಿಗಳನ್ನು ದಯಪಾಲಿಸಿರುತ್ತಾರೆ.

ಒಬ್ಬ ಆಸಾಮಿಯಾಗಲಿ ಅಥವಾ ಒಂದು ಸಂಘದವರಾಗಲಿ ಬೀಜಕ್ಕೋಸ್ಕರ ಒಳ್ಳೆಯದಾದ ಹೋರಿ ಕೋಣ ಅಥವಾ ಕುದುರೆಯನ್ನು ಕೊಂಡು ಕಾಪಾಡಿದಲ್ಲಿ ಸದರಿ ಬೀಜದ ರಾಸಿನ ಪೋಷಣೆಗಾಗಿ ಸರ್ಕಾರದಿಂದ ಸಾಲಿಯಾನ 125 ರಿಂದ 150 ರೂಪಾಯಿಗಳವರೆಗಿನ ನಗದು ಸಹಾಯವು ದೊರೆಯುವುದು.

ಇಂಥಾ ಬೀಜದ ರಾಸುಗಳನ್ನು ತನ್ನ ಸ್ವಂತದ ದನಗಳನ್ನೂ ನೆರೆಹೊರೆಯವರ ದನಗಳನ್ನೂ ಅಭಿವೃದ್ಧಿಪಡಿಸಲು ಉಪಯೋಗಿಸಬೇಕು.

ಈ ರಾಸುಗಳನ್ನು ಸಿವಿಲ್ ವೆಟರಿನರಿ ಇಲಾಖಾ ಸೂಪರಿಂಟೆಂಡೆಂಟರವರು ಆಗಾಗ್ಗೆ ಬಂದು ಅಜಮಾಯಿಷಿ ಮಾಡಿ ಅವುಗಳ ಪೋಷಣೆಯ ವಿಚಾರದಲ್ಲಿ ತಕ್ಕ ತಿಳುವಳಿಕೆಯನ್ನು ಕೊಡುವರು.

ಸರ್ಕಾರಿ ಗ್ರಾಂಟನ್ನು ಪಡೆಯತಕ್ಕವರು ತಾವಿಟ್ಟಿರುವ ಬೀಜದ ರಾಸಿನ ಉಪಯೋಗವನ್ನು ತೋರಿಸುವ ಕೆಲವು ಲೆಕ್ಕಾಚಾರ ಪುಸ್ತಕಗಳನ್ನು ಇಡಬೇಕಾಗಿರುತ್ತದೆ.

ನಮ್ಮ ದೇಶವು ಉತ್ಕೃಷ್ಟವಾದ ದನಗಳಿಗೆ ಯಾವಾಗಲೂ ಹೆಸರುವಾಸಿಯಾದದ್ದು. ಆ ಮರ್ಯಾದೆಯನ್ನು ನಿರಂತರವಾಗಿ ಕಾಪಾಡಿಕೊಳ್ಳುವುದಕ್ಕೂ ಅಭಿವೃದ್ಧಿಪಡಿಸುವುದಕ್ಕೂ ಇದು ಅನುಕೂಲವಾದ ಕಾಲವಾಗಿದೆ.

ಈ ವಿಚಾರದಲ್ಲಿ ರಾಸುಗಳ ಮಾಲೀಕರು ದರಖಾಸ್ತನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ಬರೆದುಕೊಳ್ಳಬೇಕು.

ಹೆಚ್ಚು ತಪಸೀಲು ಬೇಕಾದಲ್ಲಿ ತಾಲ್ಲೂಕು ಕಛೇರಿಯಿಂದ ಇಸ್ತಿಹಾರುನಾಮೆಯ ಪ್ರತಿಯನ್ನು ಪಡೆಯಬಹುದು.

ನವರತ್ನ ರಾಮರಾವ್, ಸೆಕ್ರೆಟರಿ,
ವ್ಯವಸಾಯ ಕಮಿಟಿ.

ಶ್ರೀಮನ್ಮಹಾರಾಜರವರ ವರ್ಧಂತಿಯುತ್ಸವವು.

ಈ ಉತ್ಸವ ದಿನವಾದ ಕಳೆದ ತಾ|| ೨೦ ರಲ್ಲಿ ಸಂಸ್ಥಾನದ ಅನೇಕ ಸ್ಥಳಗಳಲ್ಲಿಯ ಬಾಲಕ ಬಾಲಿಕೆಯರುಗಳ ಪಾಠಶಾಲೆಗಳಲ್ಲಿ ನಡಿಸಲ್ಪಟ್ಟ ಸಂತೋಷೋತ್ಸವ ಸಂಬಂಧವಾಗಿ ಬಂದಿರುವ ಲೇಖನಗಳನ್ನೆಲ್ಲಾ ಈ ಪತ್ರಿಕೆಯಲ್ಲಿ ಮುದ್ರಿಸಲು ಸ್ಥಳಾಭಾವದಿಂದ ಅವಕಾಶವಾಗಲಿಲ್ಲವಾಗಿ ವಿಷಾದಿಸುತ್ತೇವೆ. ಪ್ರ.ಪ್ರ.

ಪತ್ರವ್ಯವಹಾರ.

ನಂಜನಗೂಡಿನಲ್ಲಿ ಏಷ್ಯಾಟಿಕ್ ಪೆಟ್ರೋಲಿಯಂ ಕಂಪೆನಿಯ ಏಜಂಟ್ ಮ|| ಶಾಮಣ್ಣನವರು ಸೀಮೆಯೆಣ್ಣೆಯನ್ನು (ಕೆಂಪೆಣ್ಣೆ) ಸೀಸೆ ಒಂದಕ್ಕೆ ೦—೧—೬ ಆಣೆಯಂತೆ ಮಾರುತ್ತಿರುತ್ತಾರೆ. ಕಳೆದ ಒಂದು ವಾರದಿಂದಲೂ ಬಹು ಜನರು ಬಹು ದೂರದಿಂದಲೂ ಜಾತ್ರೆಯಂತೆ ಗುಂಪುಗುಂಪಾಗಿ ಬಂದು ಬಹು ಸಂತೋಷದಿಂದ ಕೊಳ್ಳುತ್ತಿದ್ದಾರೆ. ಇವರ ಮೇಲುಪಂಗ್ತಿಯನ್ನು ಅನುಸರಿಸಿ ಧರ್ಮಾತ್ಮರಾದ ವರ್ತಕರಾರಾದರೂ ರಾಗಿ ಅಕ್ಕಿಯನ್ನು ರೂಪಾಯಿಗೆ ೧೬, ೮ ಸೇರುಗಳಂತೆ ಮಾರುವುದಾದರೆ ಬಡ ರೈತರಿಗೆ ತುಂಬಾ ಉಪಕಾರವಾದಂತಾಗುವುದು. ಒಬ್ಬ ಸ್ಥಳಿಕ.

* * *

ಹಿರಿಯೂರಿನಲ್ಲಿ ಅನಾಥ ವೀರಶೈವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಬೋರ್ಡಿಂಗ್ ಸ್ಥಾಪನೆ ಮಾಡುವುದಕ್ಕೆ ಅಲ್ಲಿನ ವೀರಶೈವ ಪ್ರಮುಖರು ಇಷ್ಟರಲ್ಲಿಯೇ ಒಂದು ತಾಲ್ಲೂಕು ಕಾನ್ಫರೆನ್ಸನ್ನು ನಡೆಯಿಸುತ್ತಾರೆಂತಲೂ ಈ ಬೋರ್ಡಿಂಗ್ ಸ್ಥಾಪನೆಗಾಗಿ ಹಿರಿಯೂರು ಪೇಟೆ ಪಟ್ಟಣಶೆಟ್ಟರ ಶ್ರೀಮತಿ ಸಿದ್ದಾಮಕ್ಕನವರು ಸಾವಿರಾರು ರೂಪಾಯಿ ಬೆಲೆಬಾಳುವ ಒಂದು ಕಟ್ಟಡವನ್ನೂ, ಕೆಲವು ಜನ ಶ್ರೀಮಂತರು ಚಂದಾ ದ್ರವ್ಯವನ್ನು ಕೊಡುವಂತೆಯೂ ವಾಗ್ದಾನಮಾಡಿರುವುದಾಗಿ ತಿಳಿಯುತ್ತದೆ. ಇವರಿಗೆ ಸನ್ಮಂಗಳವನ್ನು ಜಗದೀಶನು ಕೊಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ಓರ್ವ ಚಂದಾದಾರ.

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲವದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಹೋರಾಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೊಹರ್‌ಜಾನ್ ಸೀರೆ ...	5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ ...	3.0.0	ಜಪಾನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ	... 5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
28 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 35

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಸೀತಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟ್ಯಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಟುಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಜಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಆಂಡಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಛಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಾವಿನ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಜೊತೆಗೆ ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆತಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
12 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಶನ್ ಕೊಡುತ್ತೆ.

೧೯೧೮ ನೆಯ ಇಸವಿ ಜೂನ್ ತಾ|| ೩೦ ರಿಂದ ೧೯೧೮ ನೆಯ ಜುಲೈ ತಾ|| ೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಜ್ಯೇಷ್ಠ ಬ|| ಷಷ್ಠಿಯಿಂದ ಜ್ಯೇಷ್ಠ ಬ|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು
30	ಭಾನು	ಷಷ್ಠಿ	1-3	ಪೂಭಾ	54-6	17
1	ಸೋಮ	ಅಷ್ಟ	49-10	ಉಭಾ	25-33	18
2	ಮಂಗಳ	ನವಮಿ	42-58	ರೇವತಿ	21-19	19
3	ಬುಧ	ದಶಮಿ	36-35	ಅಶ್ವಿನಿ	17-17	20
4	ಗುರು	ಏಕಾದ	31-8	ಭರಣಿ	13-39	21
5	ಶುಕ್ರ	ದ್ವಾದ	26-18	ಕೃತ್ತಿಕೆ	10-36	22
6	ಶನಿ	ತ್ರಯೋ	22-20	ರೋಹಿಣಿ	8-19	23

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತಿ ಶಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜುಲೈ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೨೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜಪಾನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಚಾಕ ರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೋ.,
[illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 30

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲಿಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವೂತುವಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ [illegible] ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿದ್ದಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಚಿಕಿತ್ಸೆಯು ದೊರೆಯುತ್ತದೆ. ಕ್ಯಾಟಲಾಗನ್ನು [illegible].

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
14 ಆನಂದ ಬುಕ್‌ಡಿಪೋ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರು ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
32 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3). ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಅಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣವಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ [illegible] ಈ ಪುಸ್ತಕದಲ್ಲಿ [illegible]. ಕ್ರಯ ೪ ಆಣೆ.

೫ ವಿಳಾಸ—ಎ. ಎ. [illegible]

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜುಲೈ ತಾ|| ೭ ನೆಯ ಭಾನುವಾರ.

ಹಿಂದುಳಿದವರ ವಿಜ್ಞಾಪನೆ.

(ಭಾಗ ೨.)

ವಿಜ್ಞಾಪನಪತ್ರದಲ್ಲಿ ಕಂಡಿದ್ದ ೨ ನೆ ಮುಖ್ಯ ವಿಷಯಕ್ಕೆ ಶ್ರೀಮನ್ಮಹಾರಾಜರವರು ಉತ್ತರವನ್ನು ಕೊಡುವುದರಲ್ಲಿ—"ಸ್ಥಳೀಯ ಸ್ವರಾಜ್ಯಸಂಘಗಳಿಗೆ ನಿಯುಕ್ತ ಸಭಿಕರನ್ನು ಸೇರಿಸುವ ವಿಷಯವಾಗಿ ತಕ್ಕಷ್ಟು ಅಧಿಕಾರವನ್ನು ಪ್ರಭುತ್ವದವರು ಇಟ್ಟುಕೊಂಡಿರುವುದರಿಂದ, ತಕ್ಕಷ್ಟು ಪ್ರಾತಿನಿಧ್ಯವು ಆ ಸಂಘಗಳಲ್ಲಿ ಯಾವ ಜನವರ್ಗದವರಿಗೆ ದೊರೆಯದೆಹೋಗಿರುವುದೋ ಅಂಥವರಿಗೆ ಲಭಿಸುವಹಾಗೆ ಮಾಡುವುದಕ್ಕೆ ಸರ್ಕಾರದವರು ತಮ್ಮ ಅಧಿಕಾರವನ್ನು ವಿನಿಯೋಗಿಸುವರು" ಎಂದು ಅಪ್ಪಣೆ ಮಾಡಿರುತ್ತಾರೆ. ನಾಮಿನೇಷನ್ನಿನ ಮೂಲಕ ಎಲ್ಲ ಜನವರ್ಗ ಪ್ರಾತಿನಿಧ್ಯವೂ ಲೋಕಲ್‌ಬೋರ್ಡು ಮೊದಲಾದ ಸಂಘಗಳಲ್ಲಿರುವಂತೆ ಮಾಡುವೆನೆಂಬುದು ಇದರಿಂದ ಸಿದ್ಧವಾಗುವುದು. ಈ ಉತ್ತರವು ಮಾತ್ರ ವಿಜ್ಞಾಪಕರಿಗೂ ಅವರ ಹಿಂಬಾಲಕರಿಗೂ ಅಷ್ಟು ತೃಪ್ತಿಕರವಾಗಿಲ್ಲ. ಏಕೆಂದರೆ ವಿಜ್ಞಾಪನಪತ್ರದಲ್ಲಿ ಪ್ರತ್ಯೇಕ ಪ್ರಾತಿನಿಧ್ಯತತ್ತ್ವದ ಆವಶ್ಯಕತೆಗೆ ಯಾವ ಯಾವ ಕಾರಣಗಳು ಸೂಚಿಸಲ್ಪಟ್ಟಿದ್ದುವೋ ಅವೆಲ್ಲವುಗಳಿಗೂ ಪರಿಹಾರವು ಈ ನಾಮಿನೇಷನ್ ವರದಿಂದ ಸಿದ್ಧವಾಗುವುದಿಲ್ಲ. ವಿಧಿಪ್ರಕಾರ ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಪ್ರಜೆಗಳಿಂದ ಆರಿಸಲ್ಪಡುವವರು ⅔ ಭಾಗವಾಗಿ, ನಾಮಿನೇಷನ್ನಿನ ಮೂಲಕ ಬರುವವರು ⅓ ಭಾಗದವರು ಮಾತ್ರವೇ ಆಗಿರುತ್ತಾರೆ. ಒಂದುವೇಳೆ ಈಗಣ ಅಪ್ಪಣೆಯ ಪ್ರಕಾರ ⅓ ಭಾಗದವರೆಲ್ಲಾ ಹಿಂದುಳಿದ ಜನವರ್ಗಗಳವರೇ ಬಂದರೂ ಅವರ ಸಂಖ್ಯೆಗಿಂತಲೂ ಪ್ರಜಾನಿಯುಕ್ತರಾಗಿ ಬರಬಹುದಾದ ಮುಂದಾದ ಜನವರ್ಗದವರ ಸಂಖ್ಯೆಯೇ ದ್ವಿಗುಣವಾದೀತು. ಸಾಲಸೋಲಗಳನ್ನು ಮಾಡುವುದೇ ಮೊದಲಾದ ವಿಶೇಷಾಧಿಕಾರಗಳನ್ನು ಹೊಂದಿರುವ ಈಗಿನ ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಎಲ್ಲ ಪ್ರಜೆಗಳೂ ತಮ್ಮೆಲ್ಲರ ಆವಶ್ಯಕತೆಗೆ ತಕ್ಕ ಕೆಲಸಗಳನ್ನು ಮಾಡಿಕೊಳ್ಳಲು ಅವಕಾಶ ಪಡೆಯದೆಹೋದರೆ, ಗಳಿಸುವವರು ಯಾರೋ ಆದರೆ ಬಳಸುವವರು ಯಾರೋ ಆದಂತಾಗುವುದು. "ತನ್ನ ಮನೆ, ತನ್ನ ಹಣ, ತನ್ನ ಆವಶ್ಯಕತೆಗೆ ತಕ್ಕ ವೆಚ್ಚವನ್ನು ತಾನು ಮಾಡಿಕೊಳ್ಳಬೇಕು" ಎಂಬ ಭಾವವು ಪ್ರತಿ ಪ್ರಜೆಗೂ ಇರುವಂತೆ ಮಾಡಬೇಕಾದುದು ಅವಶ್ಯಕವೂ ಧರ್ಮವೂ ಆಗಿರುವಾಗ, ಅದಕ್ಕೆ ತಕ್ಕ ವಿಧಿಯನ್ನು ಏರ್ಪಡಿಸದೆ ಹೋದರೆ ಅದರಿಂದಾಗುವ ದುಷ್ಪರಿಣಾಮಕ್ಕೆ ಪ್ರಭುತ್ವದವರೇ ಉತ್ತರವಾದಿಗಳಾಗುವರು. ರಾಜಕೀಯ ಕಾರ್ಯನಿರ್ವಾಹದಲ್ಲಿ ಸರ್ವ ಪ್ರಜೆಗಳನ್ನೂ ಪಳಗಿಸಿ, ಪ್ರಜೆಗಳ ಬುದ್ಧಿ ಶಕ್ತಿ ಸಾಹಸಗಳ ಅಂಗವನ್ನು ಬಲಪಡಿಸಿ, ಅದರ ಸಾಹಾಯ್ಯದಿಂದ ರಾಜ್ಯಕಾರ್ಯಭಾರವನ್ನು ಸುಲಲಿತಪಡಿಸಿಕೊಳ್ಳಬೇಕೆಂಬುದೇ ಪ್ರಭುತ್ವದವರ ಉದ್ದೇಶವಾಗಿ, ಅದಕ್ಕಾಗಿಯೇ ಮ್ಯು|| ಲೋ|| ಬೋರ್ಡುಗಳ ವಿಧಿಯ ಸಂಸ್ಕರಣವು ನೂತನವಾಗಿ ಮಾಡಲ್ಪಡುತ್ತಿರುವಾಗ ಉದ್ದೇಶಕ್ಕೆ ತಕ್ಕ ಕಾರ್ಯಾಚರಣೆಯೂ ಇಲ್ಲದೆಹೋದರೆ ಫಲಸಿದ್ಧಿಯಾಗುವುದು ಹೇಗೆ?

ಶ್ರೀಮನ್ಮಹಾರಾಜರವರ ಈಗಣ ಉತ್ತರದಿಂದ ಒಂದು ಅನರ್ಥವು ಮಾತ್ರ ದೂರವಾಯಿತೆಂದು ಎಣಿಸುತ್ತೇವೆ. ಏನೆಂದರೆ—ಮುಂದಾದ ಜನವರ್ಗಗಳವರು ಎಲೆಕ್ಷನ್ನಿನಲ್ಲಲ್ಲದೆ ನಾಮಿನೇಷನ್ನಿನಮೂಲಕವೂ ಮ್ಯು|| ಲೋ|| ಬೋರ್ಡು ಮೊದಲಾದುವುಗಳಿಗೆಲ್ಲಾ ಸಭಿಕರಾಗಿ ತರಲ್ಪಡುತ್ತಿದ್ದ ಇದುವರೆಗಣ ಘಾತಕ ಪದ್ಧತಿಯು ಮುಂದೆ ತಪ್ಪಿ, ಹಿಂದುಳಿದವರ ಪ್ರತಿನಿಧಿಗಳು ಎಲೆಕ್ಷನ್ನಿನಮೂಲಕ ಬಾರದೆ ತಪ್ಪಿಹೋದರೂ ನಾಮಿನೇಷನ್ನಿನಮೂಲಕವಾದರೂ ಬರಬಹುದಾಯಿತು. ಆದರೆ ಇದರಿಂದ ಉದ್ದಿಷ್ಟ ಫಲವು ಸಂಪೂರ್ಣವಾಗಿ ಸಿದ್ಧಿಸುವಹಾಗಿಲ್ಲವೆಂಬುದನ್ನು ಮೇಲೆಯೇ ತಿಳಿಯಿಸಿದ್ದೇವೆ. ಈ ನಾಮಿನೇಷನ್ನಿನಿಂದ ಬರತಕ್ಕವರೂ ಪ್ರಭುತ್ವದವರ ಬಾಲಬಡಿಯತಕ್ಕ ಅಥವಾ ಪರರ ದಾಕ್ಷಿಣ್ಯಕ್ಕೆ ದೇಹವನ್ನು ಮಾರಿಕೊಳ್ಳತಕ್ಕ ಜನರಂಥವರು ಆದರೆ, ದೊಡ್ಡದಾಗಿ ತೋರಿಸಲ್ಪಟ್ಟಿರುವ ಈ ನಾಮಿನೇಷನ್ನಿನ ವರವು ಆನೆನುಂಗಿದ ಬೇಲದಹಣ್ಣಿನಂತೆ ಆಕಾರಮಾತ್ರ ಫಲವಾಗಿ ನಿಂತುಕೊಳ್ಳುವುದು.

ಈ ಸಂಬಂಧವಾಗಿ ಶ್ರೀಮನ್ಮಹಾರಾಜರವರು ಉತ್ತರ ಕೊಡುವಾಗ್ಗೆ—ಓಟು ಕೊಡುವವರ ಸಂಖ್ಯೆಯನ್ನೂ ಆರಿಸಲ್ಪಡಲು ಅರ್ಹರಾದವರ ಸಂಖ್ಯೆಯನ್ನೂ ಹೆಚ್ಚಿಸುವುದಕ್ಕೆ ಅವಕಾಶ ಮಾಡಿರುವುದರಿಂದ, ನಿಮ್ಮೆಲ್ಲರಿಗೂ ಪ್ರತಿನಿಧಿಗಳಾಗಿ ಬರುವುದಕ್ಕೂ ಓಟನ್ನು ಕೊಡುವುದಕ್ಕೂ ವಿಶೇಷಾವಕಾಶವು ಸಿಕ್ಕಿರುತ್ತದೆ. ಅದರಿಂದ ನಿಂನಿಮ್ಮ ಪ್ರತಿನಿಧಿಗಳು ವಿಶೇಷವಾಗಿ ಬರುವಂತೆ ಮಾಡಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದು ವಾಸ್ತವವೇ ಸರಿ. ಆದರೆ ಈ ಮೂಲಕ ಫಲಸಿದ್ಧಿಯು ಸರ್ವಪ್ರಜೆಗಳಿಗೂ ಆಗಬೇಕಾದರೆ "ಚುನಾವಣೆಯ" ಕ್ರಮವು ನಿರ್ದುಷ್ಟವಾಗಿರಬೇಕು. ಅಧಿಕಾರಿಗಳ ದಾಕ್ಷಿಣ್ಯ ದರ್ಪಭೀತಿಗಳಿಗೆ ಲೇಶವೂ ಅವಕಾಶವಿಲ್ಲದಂತೆ "ಚುನಾವಣೆಯ" ಕ್ರಮವು ಜರುಗುವಂತಾಗಬೇಕು. ಇದಕ್ಕೆ ಕಟ್ಟುನಿಟ್ಟಾದ ಅಪ್ಪಣೆಯು ಪ್ರಭುತ್ವದವರಿಂದ ಮಾಡಲ್ಪಡಬೇಕು. ಈ ವಿಷಯದಲ್ಲಿ ಹಿಂದುಳಿದವರ ಮುಂದಾಳುಗಳು ತಕ್ಕ ವ್ಯವಸಾಯವನ್ನು ನಡೆಯಿಸುವಲ್ಲಿ ಎಚ್ಚರುಗೊಳ್ಳಬೇಕು.

ಶ್ರೀಮನ್ಮಹಾರಾಜರವರು ಈ ಮುಖ್ಯ ವಿಷಯಕ್ಕೆ ಉತ್ತರವನ್ನು ಕೊಟ್ಟಿರುವುದರಲ್ಲೂ ಕೂಡ ಈ ಭಾಗದಲ್ಲಿ ಮಾಡಲ್ಪಟ್ಟಿರುವ ಪ್ರಜೆಗಳ ಪ್ರಾರ್ಥನೆಯನ್ನೂ ಯುಕ್ತವೆಂದೇ ಒಪ್ಪಿಕೊಂಡಂತಾಗಿದೆ. ಈ ವ್ಯತ್ಯಾಸವು ಪರಿಹಾರ್ಯವಾದುದೆಂದೇ ಅವರಿಗೆ ಗೊತ್ತಾಗಿದೆ. ಆದರೆ ನಾಮಿನೇಷನ್ ಅಧಿಕಾರವಿನಿಯೋಗದಿಂದಲೂ, ಆರಿಸುವವರ ಮತ್ತೂ ಆರಿಸಲ್ಪಡುವವರ ಸಂಖ್ಯೆಯನ್ನು ಹೆಚ್ಚಿಸುವುದರಿಂದಲೂ ಸಹ ಆ ವ್ಯತ್ಯಾಸಲೋಪಗಳು ಪರಿಹೃತವಾಗುವುವೆಂದು ಅವರು ನಿರೀಕ್ಷಿಸಿಕೊಂಡಿದ್ದಾರೆ. ಆ ನಿರೀಕ್ಷಣೆಯಿಂದಲೇ "ಸದ್ಯಃ ಇದಕ್ಕಿಂತ ಹೆಚ್ಚಾಗಿ ಏನನ್ನು ಮಾಡಲೂ ನಾವು ಉದ್ದೇಶಿಸಿರುವುದಿಲ್ಲ" ಎಂದು ಅಪ್ಪಣೆಮಾಡಿರುತ್ತಾರೆ. ಕೆಲಕಾಲದವರೆಗೆ ಈ ಕ್ರಮವು ವ್ಯವಹಾರಕ್ಕೆ ಬಂದು, ಅದರಿಂದ ವಿಶಿಷ್ಟ ಫಲವೇನೂ ವ್ಯಕ್ತವಾಗದೆ ಹೋದರೆ, ಪೂರ್ವದ ಲೋಪದೋಷಗಳು ಪರಿಹೃತವಾಗಲಿಲ್ಲವೆಂದು ಕಂಡುಬಂದರೆ, ಆವಾಗಲಾದರೂ ಪ್ರತ್ಯೇಕ ಪ್ರಾತಿನಿಧ್ಯತತ್ತ್ವವನ್ನು ಅವರೇ ಅಂಗೀಕರಿಸುವರು. ಅಂಥ ಕಾಲವು ಬರದೆ ಹೋಗಲಾರದು.

ಸದ್ಯಃ ಪ್ರತ್ಯೇಕಪ್ರಾತಿನಿಧ್ಯ ಸಮಸ್ಯೆಯು ನಮ್ಮ ಮೈಸೂರುದೇಶದಲ್ಲಿ ಮಾತ್ರವೇ ತಲೆಯೆತ್ತಿಲ್ಲ; ಭರತಖಂಡದ ಎಲ್ಲ ಭಾಗಗಳಲ್ಲೂ ಇದು ಸುವ್ಯಕ್ತವಾಗಿದೆ. ಭವಿಷ್ಯ ರಾಜಕೀಯ ಸುಧಾರಣೆಯಲ್ಲಿ ಈ ತತ್ತ್ವವು ಅಂಗೀಕರಿಸಲ್ಪಡಬೇಕೆಂದು ಅನೇಕಾನೇಕ ಪ್ರಜೆಗಳೂ ಸಂಘಗಳೂ ಸಾಮ್ರಾಜ್ಯಸರ್ಕಾರದವರನ್ನು ಪ್ರಾರ್ಥಿಸಿರುತ್ತಾರೆ. ಆದರೆ ಇಂಡ್ಯಾ ಸರ್ಕಾರದವರು ಮೊನ್ನೆತಾನೇ ಪ್ರಕಟಿಸಿದ ಸ್ಥಳಿಕಸ್ವಪರಿಪಾಲನ ಸಂಘಸಂಬಂಧವಾದ ವಿಧಿಯ ನೂತನಸಂಸ್ಕರಣದಲ್ಲಿ ನಾಮಿನೇಷನ್ನಿನ ಮೂಲಕ ಪ್ರತ್ಯೇಕ ಜನವರ್ಗ ಪ್ರಾತಿನಿಧ್ಯಕ್ಕೆ ಎಡೆಯನ್ನು ಕೊಡುವ ಏರ್ಪಾಟನ್ನು ಮಾಡಿರುವುದರಿಂದಲೂ, ಇಷ್ಟರಲ್ಲೇ ಪ್ರಕಟವಾಗಬಹುದಾಗಿರುವ ಭಾರತ ರಾಜಕೀಯ ಸಂಸ್ಕರಣ ಪ್ರಣಾಳಿಕೆಯಲ್ಲಿ ಪ್ರತ್ಯೇಕಪ್ರಾತಿನಿಧ್ಯವು ಅನಂಗೀಕೃತವಾಗಿರುವುದೆಂದು ಸುದ್ದಿ ಹೊರಬೀಳುತ್ತಿರುವುದರಿಂದಲೂ ಸಹ ನಮ್ಮ ಪ್ರಭುತ್ವದವರೂ ಅದನ್ನೇ ಹಿಂಬಾಲಿಸಬೇಕೆಂದಿರುವಂತೆ ಕಾಣುತ್ತದೆ. ಪ್ರಭುಗಳ ಈ ತೆರದ ಉತ್ತರಕ್ಕೆ ಅದೂ ಒಂದು ಕಾರಣವಾಗಿರಬೇಕೆಂದೂಹಿಸಲವಕಾಶವಿದೆ. ಪ್ರತ್ಯೇಕ ಪ್ರಾತಿನಿಧ್ಯತತ್ತ್ವವು ಇಂಡ್ಯಾ ಪ್ರಭುತ್ವದಿಂದ ಅಂಗೀಕೃತವಾಗದೆ ಹೋಗುವ ಸಂದರ್ಭದಲ್ಲಿ ತತ್ಪ್ರಾಪ್ತಿಗಾಗಿ ಭರತಖಂಡದ ಸಾಮಾನ್ಯ ಪ್ರಜಾವರ್ಗವು ತಮ್ಮ ಸತ್ಕ್ರಮೋದ್ಯಮವನ್ನು ನಿಲ್ಲಿಸುವಹಾಗಿಲ್ಲ. ಭರತಖಂಡ ಪ್ರಭುತ್ವದಲ್ಲಿ ಈ ತತ್ತ್ವಕ್ಕೆ ಯಾವಾಗ ಅನುಮೋದನವು ಸಿಕ್ಕುವುದೋ ಆ ಉತ್ತರಕ್ಷಣದಲ್ಲೇ ನಮ್ಮ ಪ್ರಭುತ್ವದಿಂದಲೂ ಅಂಗೀಕರಿಸಲ್ಪಡುವುದೆಂಬುದಕ್ಕೆ ಸಂಶಯವಿಲ್ಲ. ಆದರೆ ಈ ವಿಷಯದಲ್ಲಿ ಭರತಖಂಡದ ಸರ್ಕಾರಕ್ಕೂ ಮೇಲುಪಂಕ್ತಿಯನ್ನು ಹಾಕಿಕೊಟ್ಟು ಚಿರಕೀರ್ತಿಪ್ರತಿಷ್ಠೆಗಳನ್ನು ಭರತಖಂಡದ ಸಂಸ್ಥಾನಗಳ ಮಧ್ಯದಲ್ಲೆಲ್ಲಾ ಪಡೆದುಕೊಳ್ಳಬಹುದಾಗಿದ್ದ ಸಂಧಿಯನ್ನು ಮಾತ್ರ ನಮ್ಮ ಸಂಸ್ಥಾನವು ಈಗಣ ಉತ್ತರದಿಂದ ಕಳೆದುಬಿಟ್ಟಂತಾಯಿತು.

"ಸ್ವಾಮಿಭಕ್ತಿಯಿಂದ ಇದನ್ನು ನೀವು ಅಂಗೀಕರಿಸಬೇಕು" ಎಂದು ಶ್ರೀಮನ್ಮಹಾರಾಜರವರು ತಮ್ಮ ಉತ್ತರದ ಕಡೆಯಲ್ಲಿ ಅಪ್ಪಣೆಕೊಡಿಸಿರುತ್ತಾರೆ. ಮೈಸೂರುದೇಶದ ಹಿಂದುಳಿದ ಜನವರ್ಗಗಳವರು ಭರತಖಂಡದ ತೀಕ್ಷ್ಣಸ್ವರಾಜ್ಯವಾದಿಗಳೇನೂ ಅಲ್ಲ; "ನಾವು ಕೇಳುವ ವರಗಳನ್ನು ಕೊಡದಿದ್ದರೆ ಅಥವಾ ಯತ್ಕಿಂಚಿತ್ತನ್ನು ಕೊಟ್ಟರೆ ನಾವು ಒಪ್ಪತಕ್ಕವರಲ್ಲ; ಸರ್ಕಾರಕ್ಕೆ ಸಹಾಯಮಾಡುವವರಲ್ಲ" ಎಂದು ಹೇಳುವ ತೆರದ ರಾಜಭಕ್ತಿಯು ಈ ದೇಶದ ಯಾವ ಹಿಂದುಳಿದ ಪ್ರಜೆಗಳ ಕನಸುಮನಸಿನಲ್ಲೂ ಸಹ ಇರುವುದಿಲ್ಲ. ಮತ್ತೂ ಸ್ವಾರ್ಥವನ್ನು ನಡೆಯಗೊಡುತ್ತಿದ್ದರೆ, ಹಾಗೆ ನಡೆಯಿಸಿಕೊಟ್ಟವರನ್ನು ಇಂದ್ರ ಚಂದ್ರ ಉಪೇಂದ್ರನೆಂದು ಹೊಗಳಿ ಹಾಡಿ ಹರಸುತ್ತಿರುವುದೂ, ಆ ಸ್ವಾರ್ಥಕ್ಕೆ ಲೇಶಮಾತ್ರ ಲೋಪಬಂದರೂ ಸ್ವರ್ಗವನ್ನೆಲ್ಲಾ ನರಕವೆಂದೂ, ದೇಶವೆಲ್ಲಾ ಹಾಳೆಂದೂ, ಲೋಕವನ್ನೆಲ್ಲಾ ತಲೆಕೆಳಗು ಮಾಡುವೆವೆಂದೂ ಬೊಗಳುವ ಮತ್ತೂ ಹೆದರಿಸುವ ಕಪಟರಾಜಭಕ್ತರೂ ಕೂಡ ಇವರಲ್ಲ; "ನಮ್ಮ ಅನುಗ್ರಹವು ಜಗದುದ್ಧಾರಕವು; ನಮ್ಮ ಆಗ್ರಹವು ಲೋಕವಿನಾಶಕವು" ಎಂದು ಬೆದರಿಸುವ ಧಾರ್ಷ್ಟ್ಯವೂ ಈ ಬಡಪಾಯಿಗಳಿಗಿರುವುದಿಲ್ಲ. "ಹೊಳೆಯತನಕ ಓಟ, ದಣಿಯತನಕ ದೂರು" ಎಂಬ ಗಾದೆಯಲ್ಲಿ ಕಂಡಿರುವಷ್ಟನ್ನು ಮಾತ್ರ ಇವರುಗಳು ಮಾಡಬಲ್ಲರು. ಅದನ್ನು ಅವರು ಮಾಡಿ ತೀರಿಸಿದರು. ಮುಂದಾದರೂ ಹಾಗೆಯೇ ಸಂಕಟವನ್ನೂ ಕಷ್ಟವನ್ನೂ ಸಹಿಸಿಕೊಳ್ಳಲಾಗದ ಸ್ಥಿತಿಯು ಬಂದಾಗ ಮತ್ತೂ ಮತ್ತೂ ತಮ್ಮನ್ನಾಳುವವರ ಸನ್ನಿಧಿಯಲ್ಲಿ ದೂರಿಟ್ಟುಕೊಳ್ಳಬಲ್ಲರು. ಇಂಥ ಪ್ರಜೆಗಳಿಗೇ "ನೀವು ಸ್ವಾಮಿಭಕ್ತಿಯಿಂದ ಇದನ್ನು ಅಂಗೀಕರಿಸಿರಿ" ಎಂದು ಮಹಾಸ್ವಾಮಿಯವರು ಅಪ್ಪಣೆಕೊಡಿಸಿರುವುದು "ಸಾದೆತ್ತಿಗೆ ಎರಡು ಹೊರೆ" ಯೆಂದಂತೆ ಆಗಿರುತ್ತದೆ. ಸ್ವಾಮಿಭಕ್ತಿಯು ಮುಂದಾಗಿಸಲ್ಪಟ್ಟಿರುವುದರಿಂದ ಮರುಮಾತಿಗೆ ಅವಕಾಶವಿಲ್ಲದಂತೆ ಬಾಯಿಕಟ್ಟಲ್ಪಟ್ಟಿದೆ. ನ್ಯಾಯಬಲಪ್ರೇರಿತವಾದ ಸಂಕಲ್ಪವು ಮಾತ್ರ ಶಾಂತವಾಗಲಿಲ್ಲ. ಇನ್ನು ಮಾಡುವುದೇನು? ಪ್ರಭುಗಳ ಚಿತ್ತ, ನಮ್ಮ ಭಾಗ್ಯ. ಅವರ ಅಭಯದಾನವೇ ನಮಗೆ ಕಾಮಧೇನು ಕಲ್ಪವೃಕ್ಷಗಳೆಂದು ಇವರುಗಳು ಹಿಂದೆಯೂ ನಂಬಿದ್ದರು; ಈಗಲೂ ನಂಬಿರುವರು; ಮುಂದೆಯೂ ನಂಬುವರು. ಸುಖದುಃಖಗಳು ಯಾರಿಗೂ ಶಾಶ್ವತವಲ್ಲ. ಅವರ ಕಷ್ಟಗಳಿಗೂ ಒಂದು ದಿನ ಅಳಿಗಾಲವು ಬಂದೇಬರುವುದು.

ಒಳದೇಶದ ವೃತ್ತಾಂತಗಳು.

ಬರುವ ತಾ|| ೧೧ ರಲ್ಲಿ ನಂಜನಗೂಡಿನಲ್ಲಿ ಶ್ರೀಕಂಠೇಶ್ವರನ ಗಿರಿಜಾಕಲ್ಯಾಣ ಮಹೋತ್ಸವವು ಜರುಗುವುದು.

ಮುನ್ಸೀಫ್ ಮ|| ಸತ್ಯಾಚಾರ್ಯರವರು ಸದ್ಯಃ ರಾಜಧಾನಿಯ ಸಬ್‌ಜಡ್ಜ್ ರವರಾಗಿ ನಿಯಮಿಸಲ್ಪಟ್ಟಿದ್ದಾರೆ.

ಶ್ರೀರಂಗಪಟ್ಟಣದ ಮ್ಯುನಿಸಿಪಾಲಿಟಿಗೆ ಅಲ್ಲಿಯ ಮೆಡಿಕಲ್ ಆಫೀಸರು ತಾತ್ಕಾಲಿಕ ವೈಸ್‌ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರು ಸಂಸ್ಥಾನದಲ್ಲೆಲ್ಲಾ ಕಳೆದ ತಾ|| ೨೧ ಕ್ಕೆ ಕೊನೆಯಾದ ವಾರದಲ್ಲಿ ಪ್ಲೇಗು ೯೦ ಮಂದಿಗೆ ಸೋಂಕಿ ೬೫ ಮಂದಿ ಸತ್ತಿದ್ದರೆ ಕಾಲರಾ ರೋಗವು ೩೪೮ ಮಂದಿಗೆ ಸೋಂಕಿ ೧೫೧ ಮಂದಿಗಳು ಸತ್ತಿರುತ್ತಾರೆ.

ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜ ಪ್ರೌಢಕಲಾಶಾಲೆಯಲ್ಲಿ ಎಂ.ಎ., ತರಗತಿಯ ಆಂಗ್ಲಭಾಷೆ, ಚರಿತ್ರೆ, ತತ್ತ್ವಜ್ಞಾನ ಮತ್ತೂ ಸಂಸ್ಕೃತಭಾಷೆಯ ಪಾಠಗಳು ಈ ಜುಲೈ ತಿಂಗಳಿಂದ ಆರಂಭಿಸಲ್ಪಟ್ಟಿರುವುವು.

ಚೀಫ್ ಕೋರ್ಟ್ ಕ್ಲರ್ಕಾಗಿದ್ದ ಮ|| ಬಿ. ರಾಮಣ್ಣ, ಬಿ.ಎ., ಬಿ.ಎಲ್., ರವರು ಮ|| ಬಿ. ಸತ್ಯಾಚಾರ್ಯರವರ ಸ್ಥಾನಕ್ಕೆ ಮೈಸೂರು ಫಸ್ಟ್ ಮುನ್ಸೀಫರಾಗಿ ಕೆಲಸ ಮಾಡಲು ಆಕ್ಟಿಂಗಾಗಿ ನಿಯಮಿಸಲ್ಪಟ್ಟಿದ್ದಾರೆ.

ವಿದ್ಯಾಭ್ಯಾಸ ಶಾಖಾ ಇನ್ಸ್|| ಜನರಲ್ಲಾದ ಮ|| ರಾಮಲಿಂಗರೆಡ್ಡಿಯವರೂ, ಆಕ್ಟಿಂಗ್ ಪೋಲೀಸ್ ಇನ್ಸ್|| ಜನರಲ್ಲಾದ ಮಿ|| ಮೀರ್ ಹಂಜಾ ಹುಸೇನ್ ಸಾಹೇಬರೂ ಸಹ ನಿಯಮನಿರ್ಮಾಣ ಸಭೆಯ ಸಭಿಕರಾಗಿ ಸೇರಿಸಿಕೊಳ್ಳಲ್ಪಟ್ಟಿದ್ದಾರೆ.

ರಾಜಧಾನಿಯ ವಾಣೀವಿಲಾಸ ವೈದ್ಯಾಲಯದಲ್ಲಿದ್ದ ಲೇಡಿ ಮೆಡಿಕಲ್ ಆಫೀಸರ್ ಅಯ್ಯಾಚನ್ನಾಳರವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೂ ಅಲ್ಲಿದ್ದ ಮೇರಿ ಜೆ. ವೈಲ್‌ರವರು ವಾಣೀವಿಲಾಸ ವೈದ್ಯಾಲಯಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ಗುರುರಾಯರ ಹತ್ಯದ ವ್ಯಾಜ್ಯದಲ್ಲಿ ಚೀಫ್‌ಕೋರ್ಟಿನಿಂದ ಮರಣದಂಡನೆ ವಿಧಿಸಲ್ಪಟ್ಟಿದ್ದ ಬುಡನ್, ಚೆನ್ನಬಸವ, ರಾಚಯ್ಯ ಎಂಬ ಮೂವರು ಅಪರಾಧಿಗಳೂ ಶ್ರೀಮನ್ಮಹಾರಾಜರವರ ಸನ್ನಿಧಿಗೆ ಅಪೀಲ್‌ಮಾಡಿಕೊಂಡಿರಲಾಗಿ, ಬುಡನ್ನನ ಶಿಕ್ಷೆಯು ಮಾತ್ರ ಸ್ಥಿರಗೊಳಿಸಲ್ಪಟ್ಟು ಉಳಿದಿಬ್ಬರೂ ಮರಣಾವಧಿ ಕಾರಾಗೃಹವಾಸಶಿಕ್ಷೆಯನುಭವಿಸುವಂತೆ ಅಪ್ಪಣೆಮಾಡಲ್ಪಟ್ಟರು.

ಆಕ್ಟಿಂಗ್ ಕೌನ್ಸಿಲರಾಗಿರುವ ಮ|| ಪಿ. ರಾಘವೇಂದ್ರರಾಯರು, ಫೈನಾನ್ಷಿಯಲ್ ಸೆಕ್ರೆಟರಿಯವರಾದ ದಿ|| ಬ|| ಜೆ. ಎಸ್. ಚಕ್ರವರ್ತಿಯವರು, ಚೀಫ್‌ಕೋರ್ಟು ಜಡ್ಜರಾಗಿರುವ ಮ|| ಕೆ. ಎಸ್. ಚಂದ್ರಶೇಖರಯ್ಯರ್‌ರವರು-ಇವರುಗಳು ರಾಜಸ್ಥಾನದಲ್ಲಿ ನಡುಕಟ್ಟಬೇಕಾದ ನಿರ್ಬಂಧಕ್ಕೆ ಒಳಗಾಗಿರಬೇಕಾದುದಿಲ್ಲವೆಂದು ಶ್ರೀಮನ್ಮಹಾರಾಜರು ಅಪ್ಪಣೆಮಾಡಿದ್ದಾರೆ.

ಶ್ರೀಮನ್ಮಹಾರಾಜರವರು ತಮ್ಮ ಪ್ರೈವೇಟ್ ಹುಜೂರು ಸೆಕ್ರೆಟರಿ ಮೊದಲಾದ ಪರಿವಾರದೊಡನೆ ಕಳೆದ ಬುಧವಾರ ರಾತ್ರಿ ೮ ಗಂಟೆಯಲ್ಲಿ ಮೈಸೂರು-ಅರಸೀಕೆರೆ ಲೋಹಮಾರ್ಗ ದ್ವಾರಾ ಉತ್ತರ ಹಿಂದೂಸ್ಥಾನದ ಕಡೆಗೆ ಪ್ರಯಾಣಮಾಡಿದರು. ಇವರ ಸಂಚಾರವು ೨ ತಿಂಗಳಕಾಲ ಜರುಗುವುದೆಂದು ಕೇಳುತ್ತೇವೆ. ಸಂಚಾರವನ್ನೆಲ್ಲಾ ಸುಖಕರವಾಗಿ ಮುಗಿಸಿಕೊಂಡು ದಯಮಾಡಿಸಲೆಂದು ಕೋರುವೆವು.

ಮೈಸೂರು ದೇಶದ ವಿದ್ವತ್ಪರೀಕ್ಷೆಗೆ ಕುಳಿತುಕೊಳ್ಳತಕ್ಕವರು ಬರೆದುಕೊಳ್ಳಬೇಕಾದ ವಿಜ್ಞಾಪನಪತ್ರದ ಮಾದರಿಯ ಫಾರಮು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟಿತವಾಗಿದೆ. ಇದರ ೪ ನೆ ಕಾಲಮ್ಮಿನಲ್ಲಿ - ತ್ರಿಮತಸ್ಥರಲ್ಲಿ ಯಾವಮತ? ಎಂದು ಕೇಳಲ್ಪಟ್ಟಿದೆ. ಇದರಿಂದ ತ್ರಿಮತಸ್ಥರ ಹೊರತು ಇನ್ನಾವ ಮತದವರೂ ಪರೀಕ್ಷೆಗೆ ಬರಲಾಗದೆಂದು ನಿಷೇಧಿಸಿದಹಾಗಾಯಿತಲ್ಲವೆ? ಇತರರಿಗೆ ಪ್ರವೇಶವಿಲ್ಲವೆ?" ಎಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ. ಪರೀಕ್ಷೆಯ ಬೋರ್ಡಿನವರು ಸ್ಪಷ್ಟಪಡಿಸಬೇಕು.

ಅ|| ಕಮಿಷನರುಗಳಾದ ಮ|| ಪಿ. ಮಹಾದೇವಯ್ಯ, ಬಿ.ಎ., ಬಿ.ಎಲ್., ರವರು ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯೇಟ್ಟಿನಿಂದ ರೆವಿನ್ಯೂ ಕಮಿಷನರಾಫೀಸಿಗೂ, ಮ|| ಟಿ. ಜಿ. ರಾಮಯ್ಯರ್, ಬಿ.ಎ., ಯವರು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ನಿನಿಂದ ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯೇಟ್ಟಿಗೂ, ಮಿ|| ಎ. ಕೆ. ಸಯ್ಯದ್ ತಾಜ್‌ಬಿರಾಕ್, ಬಿ.ಎ., ಯವರು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ನಿಗೂ, ಮ|| ಬಿ. ಎಸ್. ರಾಜೋಜಿರಾಯರು, ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿಯೂ, ಮ|| ಎಸ್. ನಾರಾಯಣರಾವ್, ಬಿ.ಎ., ಯವರು ದೊಡ್ಡಬಳ್ಳಾಪುರದ ಸಬ್ ಡಿವಿಜನ್ನಿಗೂ, ಮಿ|| ಎಂ. ಹಸೇನಲ್ಲಿಯವರು ಬೆಂಗಳೂರು ಸಿವಿಲ್ ಆಫೀಸರಾಗಿಯೂ, ಮಿ|| ಒಬೇದುಲ್ಲಾಯವರು ಗುಬ್ಬಿ ಸಬ್ ಡಿವಿಜನ್ನಿಗೂ, ಮ|| ಪಿ. ಎಸ್. ರಾಜಗೋಪಾಲಾಚಾರ್‌ರವರು ಪೋಲೀಸ್ ಶಾಖೆಗೂ, ಮ|| ಎಂ. ಪಿ. ವಿಶ್ವನಾಥರಾವ್‌ರವರು ಮಾಲೂರು ಸಬ್ ಡಿವಿಜನ್ನಿಗೂ, ಮ|| ಪಿ. ಜಜ್. ಕೃಷ್ಣರಾವ್ ಎಕ್ಸೈಜ್ ಶಾಖೆಗೂ, ಮ|| ಕೆ. ವಿ. ಅನಂತರಾಮನ್‌ರವರು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ನಿಗೂ, ಮ|| ಸಿ. ಬಿ. ಲಕ್ಷ್ಮಣರಾಯರು ಚಳ್ಳಕೆರೆ ಸಬ್ ಡಿವಿಜನ್ನಿಗೂ, ಮ|| ಟಿ. ವಿ. ಎ. ಈಶ್ವರನ್‌ರವರು ಪೋಲೀಸ್ ಶಾಖೆಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಳೆದ ತಿಂಗಳಲ್ಲಿ ನಡೆದ ನಿಯಮನಿರ್ಮಾಣ ಸಭೆಯ ಕಾಲದಲ್ಲಿ ದಿವಾನರವರು ಪ್ರಜೆಗಳನ್ನೆಲ್ಲಾ ಕುರಿತು—ಪ್ರಜೆಗಳು ಪಕ್ಷಪ್ರತಿಪಕ್ಷಗಳನ್ನು ಮಾಡಿಕೊಂಡು ಹೋರಾಡುವುದು ದೇಶಕ್ಷೇಮವಿಘಾತಕವಾದುದರಿಂದ ಅದನ್ನು ಬಿಟ್ಟುಬಿಡಬೇಕೆಂದೂ, ಈಗ ಬ್ರಾಹ್ಮಣರಲ್ಲಿ ೫-೬ ಮಂದಿ ವಿದ್ಯಾವಂತರಿದ್ದರೆ ಇತರರಲ್ಲಿ ಒಬ್ಬರಂತೆ ಇರುವರೆಂದೂ, ಇಂಥ ವ್ಯತ್ಯಾಸವನ್ನು ತಗ್ಗಿಸುವುದಕ್ಕೆ ನಾನು ಪ್ರಯತ್ನಿಸುವೆನೆಂದೂ, ಮುಂದಾಗಿರುವವರನ್ನು ಅಣಗಿಸದೆ ಹಿಂದಾದವರನ್ನು ಮುಂಬರಿಸುವುದಕ್ಕೆ ಪ್ರಭುತ್ವದವರಿಂದ ತಕ್ಕ ಪ್ರಯತ್ನವು ಮಾಡಲ್ಪಡುವುವೆಂದೂ, ತಕ್ಕಷ್ಟು ವಿದ್ಯಾವಂತರು ಇತರರಲ್ಲಿಲ್ಲದಿರುವುದರಿಂದ ಒಂದೇ ಜನವರ್ಗದವರು ಸರ್ಕಾರದಧಿಕಾರಗಳಲ್ಲಿ ಹೆಚ್ಚಾಗಿ ಸೇರುವಂತಾಗಿರುವುದರಿಂದ ತಾರತಮ್ಯವು ಕಾಣುತ್ತಿರುವುದೆಂದೂ, ಎಲ್ಲರೂ ಒಗ್ಗಟ್ಟಾಗಿ ಕೆಲಸಮಾಡುವುದು ದೇಶಕ್ಷೇಮಕ್ಕೆ ಅವಶ್ಯಕವಾದುದೆಂದೂ ಮೊದಲಾಗಿ ಉಪನ್ಯಾಸಮಾಡಿದರಂತೆ. ಇನ್ನುಮೇಲೆ ಪಕ್ಷಭೇದಗಳನ್ನು ಬಿಟ್ಟುಬಿಡುವೆವೆಂದು ಒಬ್ಬೊಬ್ಬ ಸಭಿಕರು ಉತ್ತರಕೊಟ್ಟರಂತೆ. ಜನಮೆಚ್ಚುಗೆಗೆ ಬಾಯ್ಮಾತಿನಲ್ಲಿ ಸೌಜನ್ಯವನ್ನು ತೋರಿಸುವುದಕ್ಕಿಂತಲೂ, ಅಸೂಯೆಯಿಂದ ಅಸೂಯೆ, ಪ್ರೀತಿಯಿಂದ ಪ್ರೀತಿ ಹುಟ್ಟುವುದೆಂಬುದನ್ನು ತಿಳಿದು ಸರ್ವರೂ ಮನಶ್ಶುದ್ಧಿಯಿಂದ ನಡೆಯಲು ಪ್ರಯತ್ನಿಸಿದರೇನೆಯೇ ಪ್ರಯೋಜನವಾದೀತು.

ಭರತಖಂಡದ ವೃತ್ತಾಂತಗಳು.

ಕಳೆದ ತಿಂಗಳು ತಾ|| ೨೮ ರವರೆಗೆ ೧೬೭೭೭೪೯೦೦ ರೂ. ಗಳು ಯುದ್ಧಋಣಕ್ಕಾಗಿ ಸೇರಿದ್ದುವು.

ಸರ್ ಎಸ್. ಪಿ. ಸಿನ್ಹ ಸಿ. ಬಿ. ಯವರು ಕಳೆದ ತಾ|| ೨೮ ರಲ್ಲಿ [illegible]

ಮಾಂಟೆಗ್‌ರವರ ಭಾರತರಾಜಕೀಯ ಸಂಸ್ಕರಣ ಪತ್ರಿಕೆಯು ನಾಳೆ ಸೋಮವಾರ ಈ ದೇಶದಲ್ಲಿ ಪ್ರಕಟಿಸಲ್ಪಡುವುವೆಂದು ತಂತೀವಾರ್ತೆಗಳು ಹೇಳುತ್ತಿವೆ.

ಸೀಮೆಗೆ ಹೋಗಿರುವ ಡಾ|| ನಾಯರು ಕೂಡ ಅಲ್ಲಿ ಯಾವ ರಾಜಕೀಯ ಚಳವಳಿಯನ್ನೂ ನಡೆಯಿಸುವುದಿಲ್ಲವೆಂದು ಹೊಣೆಯಪತ್ರವನ್ನು ಬರೆದುಕೊಟ್ಟಿದ್ದಾರಂತೆ.

ಬಂಗಾಳದ ಬಾಕರ್‌ಗಂಜ್ ಜಿಲ್ಲೆಯಲ್ಲಿ ಪದಾರ್ಥಗಳ ಬೆಲೆ ಹೆಚ್ಚಿರುವುದರಿಂದ ಕಳವು ಸುಲಿಗೆ ಮೊದಲಾದುವುಗಳು ಬಹಳ ಹೆಚ್ಚಿವೆ. ಕಳೆದ ೧ ಪಕ್ಷ ಕಾಲದೊಳಗೆ ೫ ಸುಲಿಗೆಗಳೂ, ೨ ಕನ್ನಕಳವೂ ನಡೆದಿವೆ.

ಶ್ರೀಮಾನ್ ಗಂಧಿಯವರ ಪ್ರಯತ್ನವಿಶೇಷದಿಂದ ಗುಜರಾತಿನಲ್ಲಿ ಸೈನ್ಯಕ್ಕೆ ಸೇರುವವರ ಸಂಖ್ಯೆಯು ವಿಶೇಷವಾಗಿರುತ್ತದೆ. ಏಪ್ರಿಲ್ ತಾ|| ೨೨ ರಿಂದ ಜೂನ್ ತಾ|| ೨೫ ರವರೆಗೆ ಕೈರಾಜಿಲ್ಲೆಯೊಂದರಲ್ಲೇ ೧೬೯೧ ಮಂದಿಗಳು ಸೇರಿದ್ದಾರೆ.

ಕಲ್ಕತ್ತಾದಲ್ಲಿ ಯೂರೋಪಿಯನ್ನರು, ಆಂಗ್ಲೋ ಇಂಡಿಯನ್ನರು, ಭಾರತೀಯರು ಮೊದಲಾದವರಿಗೆಲ್ಲಾ ವಿದ್ಯಾಭ್ಯಾಸ ಮಾಡಿಸುವುದಕ್ಕಾಗಿ ಒಬ್ಬ ಯೂರೋಪ್ಯ ಧಾರ್ಮಿಕರು ೧೦ ಲಕ್ಷ ರೂ. ಗಳನ್ನು ಕೊಟ್ಟಿರುವರೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಜೋಧಪುರದ ಮಹಾರಾಜರು ತಮ್ಮ ಸಂಸ್ಥಾನದ ಪ್ರಜೆಗಳಿಂದ ೧೪೬೦ ಮಂದಿಗಳನ್ನು ಆರಿಸಿ ೧ ಪಟಾಲಮ್ಮನ್ನು ಮಾಡಿ ಯುದ್ಧ ಮುಗಿಯುವವರೆಗೂ ಅವಕ್ಕೆ ಆಗುವ ವೆಚ್ಚವನ್ನೆಲ್ಲಾ ತಾವೇ ವಹಿಸಿ ರಣರಂಗಕ್ಕೆ ಕಳುಹಿಸಿಕೊಡಲು ವಾಗ್ದಾನಮಾಡಿದ್ದಾರೆ.

ತಲಚೇರಿಯ ಮ್ಯುನಿಸಿಪಲ್ ಆಫೀಸಿನ ಬಳಿಯಲ್ಲಿ ಕಿರಸಿನ್ ಎಣ್ಣೆಯನ್ನು ಅಗ್ಗವಾಗಿ ಮಾರಿಸುತ್ತಿರಲು ಪ್ರಜೆಗಳು ದೊಂಬಿಯಾಗಿ ಸೇರಿ ಅದನ್ನು ಕೊಂಡುಕೊಳ್ಳುವ ಒತ್ತಾಟದಲ್ಲಿ ಇಬ್ಬರು ಹುಡುಗಿಯರಿಗೆ ಸ್ಮೃತಿತಪ್ಪಿತು. ವರ್ಷದೊಳಗಣ ೪ ಕೂಸುಗಳು ಉಸುರುಕಟ್ಟಿ ಸತ್ತವು.

ಯೂರೋಪ್ಯರ ಮತ್ತು ಭಾರತೀಯರ ಮಧ್ಯದಲ್ಲಿ ಸ್ನೇಹವೃದ್ಧಿಯನ್ನು ಮಾಡುವ ಉದ್ದೇಶದಿಂದ ಮದ್ರಾಸಿನಲ್ಲಿ ಯೂನಿಯನ್ ಕ್ಲಬ್ ಎಂಬ ಹೆಸರಿನಿಂದ ಒಂದು ಸಂಘವು ಹೊಸದಾಗಿ ಕಳೆದವಾರ ಸ್ಥಾಪಿಸಲ್ಪಟ್ಟಿತು. ಇದರಲ್ಲಿ ಯಾರು ಬೇಕಿದ್ದರೂ ಸಭ್ಯರಾಗಿ ಸೇರಬಹುದು. ಇದು ರಾಜಕೀಯವಲ್ಲ.

ಮದ್ರಾಸು ಪಚ್ಚಪ್ಪ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದ ಮಿ|| ರೋಲೋರವರು ಮೈಸೂರು ಮಹಾರಾಜಾ ಕಲಾಶಾಲೆಯ ಆಂಗ್ಲಪಂಡಿತರಾಗಿ ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ. ಪಚ್ಚಪ್ಪ ಕಲಾಶಾಲೆಯ ಪ್ರಿನ್ಸಿಪಾಲ್ ಕೆಲಸಕ್ಕೆ ಪಾಟ್ನಾ ಗೌರ್ನ್‌ಮೆಂಟ್ ಕಲಾಶಾಲೆಯ ಇಂಗ್ಲೀಷ್ ಪ್ರೊಫೆಸರಾಗಿದ್ದ ಮಿ|| ಜೆ. ಆಂಡ್ರ್ಯೂಸ್ಮಿತ್ ಎಂ. ಎ. ರವರು ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ.

ಕೋರಾಬಟ್ಟೆ ಮತ್ತೂ ಒಗೆದ ಸಂದರಬಾಣಿಗಳು ಅಂಚುಕಟ್ಟಿದ ಪಂಚೆಗಳು ಇವುಗಳೆಲ್ಲಾ ಬೊಂಬಾಯಿ ಯಂತ್ರಾಲಯಗಳಲ್ಲೂ ವರ್ತಕರಲ್ಲೂ ಎಷ್ಟೆಷ್ಟು ನಿಂತಿವೆಯೋ ಅದರ ಲೆಕ್ಕವನ್ನೆಲ್ಲಾ ಎತ್ತಿಸಿ ಅವುಗಳನ್ನೆಲ್ಲಾ ತಮ್ಮ ವಶಪಡಿಸಿಕೊಂಡು ಒಂದು ನಿಗದಿಯಾದ ಬೆಲೆಯಿಂದ ಅವನ್ನು ಮಾರಿಸುವುದಕ್ಕೆ ಬೊಂಬಾಯಿ ಸರ್ಕಾರದವರು ಪ್ರಯತ್ನಿಸಿದ್ದಾರೆ. ಇಂಥ ಏರ್ಪಾಟನ್ನು ಬರ್ಮಾ ಸರ್ಕಾರದವರೂ ಮಾಡಿದ್ದಾರೆ.

ಬೊಂಬಾಯಿಯಲ್ಲಿ ಈಗ ಒಂದು ತೆರದ ಜ್ವರವು ವ್ಯಾಪಿಸಿದೆ. ಇದರಿಂದ ಪ್ರಾಣಾಪಾಯವೇನೂ ಇಲ್ಲ. ಬೆನ್ನಿನಲ್ಲಿ ನೋವೂ ಜ್ವರವೂ ಪ್ರಾಪ್ತವಾಗಿ ೪-೬ ದಿನ ರೋಗಿಯು ಏಳಲಾರದವನಾಗುವನು. ಅನೇಕಾನೇಕ ಕಾರ್ಖಾಲಯಗಳಲ್ಲಿ ಕೆಲಸಮಾಡುವ ಜನರು ಈ ರೋಗಗ್ರಸ್ತರಾಗಿ ನರಳುತ್ತಿರುವುದರಿಂದ ಕೆಲಸಗಳಿಗೇ ಅಡ್ಡಿಯಾಗುತ್ತಿದೆ. ಒಂದು ದೊಡ್ಡ ಮುದ್ರಣಾಲಯದಲ್ಲಿ ೩೦೦ ಜನರು ಒಂದೇ ಸಲ ಈ ರೋಗಕ್ಕೆ ಗುರಿಯಾಗಿರುವರು.

ಅಮೇರಿಕಾದಲ್ಲಿ ಎಣ್ಣೆಯ ಒದಗುವಿಕೆಯು ಕಡಿಮೆಯಾಗಿರುವುದರಿಂದ ಎಣ್ಣೆಬೀಜಗಳ ಆವಶ್ಯಕತೆ ಹೆಚ್ಚಾಗಿದೆ. ಎಲ್ಲ ರೈಲ್ವೆ ಕಂಪೆನಿಗಳವರೂ ತಮ್ಮ ಲೋಹಮಾರ್ಗಗಳ ಇಕ್ಕೆಲದಲ್ಲೂ ಹರಳುಗಿಡಗಳನ್ನು ಬೆಳೆಯಿಸಬೇಕೆಂದು ಅಲ್ಲಿ ರೈಲ್ವೆಕಂಪೆನಿಯವರು ಎಚ್ಚರಿಸಿರುವರಂತೆ. ಈಗ ಪೂರ್ವಬಂಗಾಳಾ ರೈಲ್ವೆಕಂಪೆನಿಯವರು ಈ ಪ್ರಯತ್ನವನ್ನು ಮಾಡುತ್ತಿದ್ದಾರೆ. ಬೊಂಬಾಯಿ ಅಧಿಪತ್ಯದವರು ತಮ್ಮಲ್ಲಿನ ರೈತರಿಗೆಲ್ಲಾ ಹರಳು ಬೆಳೆಯಿಡುವುದಕ್ಕೆ ಪ್ರೋತ್ಸಾಹಿಸುತ್ತಿದ್ದಾರೆ. ಈಗ ಹರಳೆಣ್ಣೆಗೆ ಬಂದಿರುವಷ್ಟು ಬೆಲೆಯು ಯಾವಾಗಲೂ ಬಂದಿರಲಿಲ್ಲ. ಪಾಳುಭೂಮಿಗಳಲ್ಲೂ ಹೊಲಗಳಲ್ಲೂ ಈ ಬೆಳೆಯನ್ನು ಬೆಳೆದರೆ ಸ್ವದೇಶದಲ್ಲೇ ಅಲ್ಲದೆ ಪರದೇಶದಲ್ಲೂ ಅದಕ್ಕೆ ಹೆಚ್ಚು ಬೆಲೆ ಬರುವುದು.

ಎಲೂರಿನಲ್ಲಿದ್ದ ಚಿಂತಾಶೇಷಯ್ಯ ಎಂಬ ಪಂಚಮಕುಲೋದ್ಭವರು ಮೃತರಾದರೆಂಬ ವಾರ್ತೆ ಬಂದಿದೆ. ಇವರು ತಮ್ಮ ಜನದ ಉದ್ಧಾರಕ್ಕಾಗಿ ಬಹಳ ಪಾಟುಪಡುತ್ತಿದ್ದರು. ತಮ್ಮ ಆಚಾರವ್ಯವಹಾರಗಳನ್ನು ಪರಿಶುದ್ಧವಾಗಿಟ್ಟುಕೊಂಡಿದ್ದುದಲ್ಲದೆ ತಮ್ಮ ಜನವರ್ಗದವರಿಗೆಲ್ಲಾ ಬೋಧಿಸಿ ಅಪೇಯಪಾನ ಅಭಕ್ಷ್ಯಭೋಜನಗಳನ್ನು ಬಿಡಿಸುತ್ತಿದ್ದರು. ೩೦ ವರ್ಷಕಾಲ ಉಪಾಧ್ಯಾಯವೃತ್ತಿಯಲ್ಲಿದ್ದರು. ಸಭೆಗಳಲ್ಲಿ ರಸವತ್ತಾಗಿ ಉಪನ್ಯಾಸ ಮಾಡುತ್ತಿದ್ದರು. ಸ್ಟೇಟ್‌ಸೆಕ್ರೆಟರಿಯವರು ಮದ್ರಾಸಿಗೆ ಬಂದಿದ್ದಾಗ ಆಂಧ್ರ ಮಹಾಜನ ಸಭಾಪ್ರತಿನಿಧಿಗಳಲ್ಲೊಬ್ಬರಾಗಿ ವಿಜ್ಞಾಪನ ಸಮರ್ಪಣೆಗೆ ಹೋಗಿದ್ದರು. ಇವರ ಪ್ರಯತ್ನವಿಶೇಷವನ್ನು ಕೇಳಿ ಸ್ಟೇಟ್‌ಸೆಕ್ರೆಟರಿಯವರು ಕೊಂಡಾಡಿದ್ದರು.

ಶ್ರೀಮಾನ್ ಬಾಲಗಂಗಾಧರ ತಿಲಕರು ಸರ್ ವಾಲಂಟೈನ್ ಚಿರೋಲರ ಮೇಲೆ ಮಾಡಿರುವ ವ್ಯಾಜ್ಯಸಂದರ್ಭದಲ್ಲಿ ಸೀಮೆಗೆ ಹೋಗಬೇಕಾಗಿರುವುದರಿಂದ ತಾವು ಯೂರೋಪಿನಲ್ಲಿರುವವರೆಗೂ ರಾಜಕೀಯಾಂದೋಳನವೇನನ್ನೂ ಮಾಡುವುದಿಲ್ಲವೆಂದೂ ವ್ಯಾಜ್ಯದ ಕೆಲಸವು ಮುಗಿದ ಕೂಡಲೇ ಭರತಖಂಡಕ್ಕೆ ಹಿಂದಿರುಗಿ ಬಂದುಬಿಡುವೆನೆಂದೂ ದಂಡಾಧಿಕಾರಿಗಳ ಬಳಿಯಲ್ಲಿ ಹೊಣೆಯ ನಿಬಂಧನಪತ್ರವನ್ನು ಬರೆದುಕೊಟ್ಟು ಸೀಮೆಗೆ ಹೋಗಿ ಬರುವುದಕ್ಕೆ ಅಪ್ಪಣೆಚೀಟಿಯನ್ನು ಪಡೆದುಕೊಂಡಿದ್ದಾರೆ. ಇದೇ ತೆರದ ನಿರ್ಬಂಧದಿಂದ ನಡೆದುಕೊಳ್ಳಲು ಹೊಣೆಯ ಪತ್ರವನ್ನು ಬರೆದುಕೊಟ್ಟು ಶ್ರೀಯುತ ವಿಪಿನಚಂದ್ರಪಾಲರೂ ಸಹ ಅಸ್ವಸ್ಥನಾಗಿರುವ ತಮ್ಮ ಚಿರಂಜೀವಿಯನ್ನು ನೋಡಿಕೊಂಡು ಬರಲು ಸೀಮೆಗೆ ಹೊರಡುವವರಾಗಿದ್ದಾರಂತೆ.

೨ ನೆ ಯುದ್ಧಋಣಕ್ಕೆ ಆರಂಭವಾಗಿ ೧ ತಿಂಗಳಾಯಿತು. ಇದೊಂದು ತಿಂಗಳಲ್ಲಿ ಭರತಖಂಡದಲ್ಲೆಲ್ಲಾ ೧೭೪೯೪೨೬೦೦ ರೂ. ಗಳ ಪತ್ರವು ಕೊಳ್ಳಲ್ಪಟ್ಟಿವೆ.

	ವಿವರ—
ಬಂಗಾಳಾ	೪೪೮೪೯೫೦೦
ಬೊಂಬಾಯಿ	೪೩೭೯೪೪೦೦
ಸಂಯುಕ್ತಪ್ರಾಂತ	೧೩೭೩೬೯೦೦
ಮದ್ರಾಸು	೧೧೯೫೪೫೦೦
ಪಂಜಾಬು	೮೫೫೫೬೦೦
ಬರ್ಮಾ	೪೮೪೦೬೦೦
ಮಧ್ಯಪ್ರಾಂತ	೩೩೩೧೩೦೦
ಬೇಹಾರು ಒರಿಸ್ಸಾ	೧೩೩೦೩೦೦
ಅಸ್ಸಾಮು	೩೦೪೬೦೦
ಇತರರಾಜ್ಯಗಳು	೫೬೨೫೦೦

ಮದ್ರಾಸಿನ ತಿರುವಲಿಕ್ಕೇಣಿಯಲ್ಲಿ ಹಿಂದೂ ಮಹಮ್ಮದೀಯರ ಮನೆಗಳು ವಿಶೇಷವಾಗಿರುವ ಕಡೆಯಲ್ಲಿ ಎಲ್ಲಮ್ಮನ ದೇವಾಲಯವಿದೆ. ಹಿಂದೂ ಮಹಮ್ಮದೀಯರ ಮನಸ್ಪರ್ಧೆಯಿಂದ ಕಳೆದ ೫ ವರ್ಷಗಳಿಂದಲೂ ಆ ದೇವರ ಉತ್ಸವವು ನಡೆದಿರಲಿಲ್ಲ. ಈ ವರ್ಷ ಪೋಲೀಸರ ಅಪ್ಪಣೆಯನ್ನು ಪಡೆದು ಉತ್ಸವವನ್ನಾರಂಭಿಸಿದರು. ಉತ್ಸವದ ಹಿಂದೆ ಕೆಲ ಯೂರೋಪಿಯನ್ ಪೋಲೀಸರೂ ರಿಜರ್ವ್ ಪೋಲೀಸರೂ ಕಾವಲಾಗಿ ಬರುತ್ತಿದ್ದರು. ಉತ್ಸವವು ಲಬ್ಬೆ ಮಸ್ಜಿದಿಯ ಬಳಿಗೆ ಬರುವಷ್ಟರಲ್ಲಿ ೨೦೦ ಮಂದಿ ಮಹಮ್ಮದೀಯರು ಸಂದಿಗೊಂದಿಗಳಿಂದ ಬಂದು ಕೆಟ್ಟ ಕೈಗುಳಗಳನ್ನಾಡುತ್ತ ನುಗ್ಗಿದರು. ಆ ಗುಂಪಿಗೆಲ್ಲಾ ಪ್ರಮುಖನಾದ ಮಹಮ್ಮದ್‌ಗೌಸ್ ಎಂಬುವವನು ಹಸೇನ್, ಹುಸೇನ್, ದೀನ್, ದೀನ್, ಮಾರೋ, ಮಾರೋ ಎಂದು ಕೂಗಿಕೊಳ್ಳುತ್ತ ಇತರರನ್ನು ಪ್ರೇರೇಪಿಸುತ್ತಿದ್ದನು. ಕೆಲ ತುರುಕರು ಹಿಂದೂಗಳಮೇಲೂ ಪೋಲೀಸರಮೇಲೂ ಕಲ್ಲುಗಳನ್ನು ಎಸೆದರು. ೩ ಮಂದಿ ಪೋಲೀಸರಿಗೂ ಒಬ್ಬ ಹಿಂದೂವಿಗೂ ಪೆಟ್ಟು ಬಲವಾಗಿ ತಗುಲಿತು. ಬಹು ಕಷ್ಟದಿಂದ ಪೋಲೀಸರು ಮುಖಂಡನನ್ನು ಹಿಡಿದು ಪೋಲೀಸು ಠಾಣಕ್ಕೆ ಸೇರಿಸಿದರು. ಬಳಿಕ ಉತ್ಸವವು ಸಾಂಗವಾಗಿ ಜರುಗಿತು. ಪೋಲೀಸರ ಕಾವಲಿಲ್ಲದಿದ್ದರೆ ಬಹಳ ಅನರ್ಥವಾಗುತ್ತಿದ್ದಿತಂತೆ. ಮುಖ್ಯಾಪರಾಧಿ ತುರುಕನು ವೆಲ್ಲೂರಿನವನಂತೆ. ವಿಚಾರಣೆಮಾಡಿ ಮ್ಯಾಜಿಸ್ಟ್ರೇಟರು ಅವನಿಗೆ ೩ ತಿಂಗಳ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ವಿದೇಶ ವೃತ್ತಾಂತಗಳು.

ರಷ್ಯಾದ ಕೆರೆನ್ಸ್ಕಿಯವರು ಲಂಡನ್ನಿನಿಂದ ಪ್ಯಾರಿಸ್ಸಿಗೆ ಹೋಗಿದ್ದಾರೆ.

ಆಸ್ಟ್ರಿಯನ್ನರೂ ಜರ್ಮನರೂ ಗ್ರೀಸಿನಮೇಲೆ ಯುದ್ಧವನ್ನು ಪ್ರಕಟಿಸಬೇಕೆಂದು ಬಲ್ಗೇರಿಯಾವು ಕೋರುತ್ತಿದೆಯಂತೆ.

ಪೂರ್ವದ ರಷ್ಯಾ ಚಕ್ರವರ್ತಿಯವರು ಕೊಲ್ಲಲ್ಪಟ್ಟರೆಂದು ಸುದ್ದಿ ಹುಟ್ಟಿದ್ದಿತು. ಈಚೆಗೆ ಅದು ಸುಳ್ಳೆಂದೂ, ಅವರ ಕುಟುಂಬದವರೆಲ್ಲಾ ಸ್ವಸ್ಥರಾಗಿರುವರೆಂದೂ ಗೊತ್ತಾಗಿರುತ್ತದೆ.

ಕಪ್ಪು ಸಮುದ್ರದಲ್ಲಿದ್ದ ರಷ್ಯನರ ಯುದ್ಧದ ಹಡಗುಗಳಲ್ಲಿ ಬಹುಭಾಗವನ್ನು ಜರ್ಮನರು ವಶಪಡಿಸಿಕೊಂಡರು. ಅವರ ಕೈಗೆ ಸಿಕ್ಕದಂತೆ ಕೆಲವನ್ನು ರಷ್ಯನರು ಮುಳುಗಿಸಿಬಿಟ್ಟರು. ಜರ್ಮನರ ದ್ರೋಹಾಚರಣೆಗಳು ರಷ್ಯನರ ಮನಸ್ಸನ್ನೆಲ್ಲಾ ದಿನದಿನಕ್ಕೆ ಕಲುಷಗೊಳಿಸುತ್ತಿವೆ.

ಅಮೇರಿಕನ್ನರು ಮಹಾವಿಸ್ತಾರವಾಗಿ ಯುದ್ಧಸನ್ನಾಹಮಾಡುತ್ತಿರುವುದನ್ನು ಕೇಳಿದರೆ ಜರ್ಮನರಿಗೆ ಇವರಿಂದಲೇ ಮೋಕ್ಷವಾಗುವುದು ಸಿದ್ಧವೆಂದು ಕಾಣುತ್ತದೆ. ಮಹಾಫಿರಂಗಿಗಳು ಮೊದಲಾದುವುಗಳ ನಿರ್ಮಾಣಕ್ಕಾಗಿಯೇ ಅಮೇರಿಕಾದವರು ೩೪೦ ಕೋಟಿ ಡಾಲರುಗಳನ್ನೂ, ಸೈನ್ಯದ ವೆಚ್ಚಕ್ಕಾಗಿ ೧೩೦೮೯೦೦೦೦೦೦ ಡಾಲರುಗಳನ್ನೂ ವೆಚ್ಚಮಾಡಲು ಅವರು ನಿರ್ಧರಿಸಿದ್ದಾರೆ.

ಕಳೆದ ಮೇ ತಿಂಗಳಲ್ಲಿ ಶತ್ರುಗಳಿಂದಲೂ ಇತರ ಕಾರಣಗಳಿಂದಲೂ ಇಂಗ್ಲೀಷರ ವ್ಯಾಪಾರಿ ಹಡಗುಗಳು ೩೩೪೭೫೪ ಟನ್ ಭಾರ ಹೊರುವಷ್ಟು ಹಡಗುಗಳು ಮುಳುಗಿಹೋಗಿವೆ. ಮಿತ್ರಮಂಡಲಿಯ ಮತ್ತೂ ತಟಸ್ಥ ರಾಷ್ಟ್ರದವರವು ೧೩೪೯೮೯ ಟನ್ನುಗಳನ್ನು ಹೊರುವಷ್ಟು ಹಡಗುಗಳು ಮುಳುಗಿಹೋಗಿವೆ. ೧೯೧೭ ನೇ ಮೇ ತಿಂಗಳಲ್ಲಿ ೬೩೦೪೩೬ ಟನ್ನುಗಳಷ್ಟು ಹಡಗು ಮುಳುಗಿಹೋಗಿದ್ದುವು.

ಕೆನಡಾದಿಂದ ಇಂಗ್ಲೆಂಡಿಗೆ ಬರುತ್ತಿದ್ದ ಲ್ಯಾಂಡೋವರ್‌ಕ್ಯಾಸಿಲ್ ಎಂಬ ವೈದ್ಯಶಾಲಾನೌಕೆಯನ್ನು ಜರ್ಮನರ ಸಬ್‌ಮೆರೀನು ಟಾರ್ಪೆಡೊ ಏಟಿನಿಂದ ಮುಳುಗಿಸಿತು. ಅದರಲ್ಲಿ ಸೈನಿಕರಾರೂ ಇರಲಿಲ್ಲ. ನಾವಿಕರು ವೈದ್ಯಶಾಖೆಯವರು ಪರಿಚಾರಿಣಿಯವರು ಇವರೆಲ್ಲಾ ೨೫೮ ಮಂದಿ ಇದ್ದರು. ಇವರಲ್ಲಿ ಬಹುಜನರು ದೋಣಿಗಳಲ್ಲಿ ಕುಳಿತು ಪ್ರಾಣವನ್ನುಳುಹಿಕೊಂಡರು. ಶತ್ರುಗಳು ಮಾಡಿದ ಈ ಕಿರಾತಕೃತ್ಯವು ಪ್ರಪಂಚದವರನ್ನೆಲ್ಲಾ ಮತ್ತಷ್ಟು ರೇಗಿಸಿರುತ್ತದೆ.

ಜರ್ಮನಿಯಲ್ಲಿ ಆಹಾರ್ಯವಸ್ತುಗಳ ದುರ್ಭಿಕ್ಷವುಂಟಾಗಿರುವುದರಿಂದ ಮನೆಗಳಲ್ಲಿರುವ ಕೋತಿಗಳು ನಾಯಿಗಳು ಮೊದಲಾದುವನ್ನೆಲ್ಲಾ ಕೊಂದು ತಿನ್ನುತ್ತಿರುವರಂತೆ. ಹಸುಗಳಿಗೆ ತಕ್ಕಷ್ಟು ಆಹಾರವನ್ನಿಡುವುದಕ್ಕೆ ಗತಿಯಿಲ್ಲವಾಗಿದೆ. ತಕ್ಕಷ್ಟು ಹಾಲನ್ನು ಕೊಡದಿರುವ ಹಸುಗಳನ್ನೂ ಬಡಕಲಾದ ಕುದುರೆಗಳನ್ನೂ ಕೊಂದು ತಿನ್ನುತ್ತಿರುವರಂತೆ. ಹಂದಿಗಳನ್ನು ಸಾಕುವುದು ಅಸಾಧ್ಯವಾಗಿದೆ. ಮನುಷ್ಯರ ಆಹಾರ್ಯವಸ್ತುಗಳಿಗೇ ಅಭಾವವಾಗಿರುವಾಗ ಇತರ ಪ್ರಾಣಿಗಳ ಪಾಡನ್ನು ಹೇಳಬೇಕೆ? ರುಮೇನಿಯಾದಲ್ಲೂ ಈ ವರ್ಷ ಬೆಳಸು ತಕ್ಕಷ್ಟು ಆಗಿಲ್ಲವಾದುದರಿಂದಲೂ, ರಷ್ಯಾದ ದುಸ್ಸ್ಥಿತಿಯಿಂದ ಅಲ್ಲಿಯ ಸಾಮಗ್ರಿಗಳೂ ಒದಗಲಾರದುದರಿಂದಲೂ ಜರ್ಮನರು ಚಿಂತಿಸುತ್ತಿದ್ದಾರೆ.

ಅಂಗಾರಕ ಗ್ರಹವು ಭೂಮಿಗೆ ಸಮೀಪವಾಗಿರುವುದರಿಂದ ಘನತಮವಾದ ದೂರದರ್ಶಕ ಯಂತ್ರದ ಸಹಾಯದಿಂದ ಆ ಗ್ರಹದೊಳಗಿರತಕ್ಕ ಪ್ರಾಣಿಗಳು ಅವರ ಕಾರ್ಯಗಳು ಮೊದಲಾದ ವಿಷಯಗಳನ್ನೆಲ್ಲಾ ತಿಳಿಯಲು ನಮ್ಮ ಭೂಮಂಡಲದ ಸಿದ್ಧಾಂತಿಗಳು ಪ್ರಯತ್ನಿಸುತ್ತಿದ್ದಾರೆ. ಸ್ಯಾನ್‌ಫ್ರಾನ್ಸಿಸ್ಕೊಪಟ್ಟಣದಲ್ಲಿ ೯ ಮೈಲಿಗಳ ಎತ್ತರವಾಗಿರುವ ವಿಲ್ಸನ್ ಬೆಟ್ಟದಮೇಲೆ ಒಂದು ನಕ್ಷತ್ರಶಾಲೆಯನ್ನು ಕಟ್ಟಿದ್ದಾರೆ. ಅದರಲ್ಲಿ ಒಂದು ಅಭೂತಪೂರ್ವವಾದ ದೂರದರ್ಶಕ ಯಂತ್ರವನ್ನು ಸ್ಥಾಪಿಸಿದ್ದಾರೆ. ಇದನ್ನು ನಿರ್ಮಿಸುವುದಕ್ಕೆ ೧೩ ವರ್ಷಗಳ ಹಿಂದೆ ಆರಂಭಿಸಿದರು. ಈ ಯಂತ್ರದ ಗಾಜು ೧೦೦ ಅಂಗುಲಗಳ ಮಂದವಾಗಿರುವುದು. ಇದನ್ನು ನಿರ್ಮಿಸುವುದಕ್ಕೆ ೧೩ ವರ್ಷಗಳು ಹಿಡಿದುವು. ಈ ಯಂತ್ರದ ಸಹಾಯದಿಂದ ಕುಜಗ್ರಹದಲ್ಲಿರುವ ಕಾಲ್ವೆ ಮೊದಲಾದುವುಗಳನ್ನೆಲ್ಲಾ ನೋಡಬಹುದಂತೆ. ಮತ್ತೂ ಆಕಾಶಮಂಡಲದಲ್ಲಿ ಇದುವರೆಗೆ ಕಾಣುತ್ತಿರುವವುಗಳಲ್ಲದೆ ಇನ್ನೂ ೧ ಕೋಟಿ ಸೂರ್ಯಗ್ರಹಗಳನ್ನು ಕಾಣಬಹುದಂತೆ. ಕುಜಮಂಡಲದಲ್ಲಿರತಕ್ಕ ಜನರು ಬೆಳಕಿನ ದೊಡ್ಡದೊಡ್ಡ ಕನ್ನಡಿಗಳ ಸಂಜ್ಞೆಯ ಮೂಲಕ ನಮ್ಮ ಮಂಡಲದವರೊಡನೆ ಮಾತನಾಡಲು ಪ್ರಯತ್ನಿಸುತ್ತಿರುವರಂತೆ.

ಈಗಣ ಯುದ್ಧದಲ್ಲಿ ಆಸ್ಟ್ರೇಲಿಯಾವು ಆಂಗ್ಲಸಾಮ್ರಾಜ್ಯಕ್ಕಾಗಿ ಮಾಡಿರುವ ಸಹಾಯವೂ ಸೇವೆಯೂ ಅದ್ಭುತವಾಗಿದೆ. ಆಸ್ಟ್ರೇಲಿಯಾದ ಜನಸಂಖ್ಯೆಯು ೫೦ ಲಕ್ಷಕ್ಕೂ ಕಡಿಮೆಯಾಗಿದ್ದರೂ ಅಲ್ಲಿಂದ 422600 ಮಂದಿ ಸೈನಿಕರು ಫ್ರಾನ್ಸು, ಈಜಿಪ್ಟು, ಪಾಲಸ್ಟೈನ್ ರಂಗಗಳಿಗೆ ಕಳುಹಿಸಿಕೊಡಲ್ಪಟ್ಟಿದ್ದಾರೆ. ಈ ಸೈನ್ಯದ ವೆಚ್ಚವನ್ನೆಲ್ಲಾ ೨ ವರ್ಷಗಳಿಂದಲೂ ಅವರೇ ವಹಿಸಿರುತ್ತಾರೆ. ಅವರ ನೌಕಾದಳವೆಲ್ಲವೂ ಸಾಮ್ರಾಜ್ಯಸೇವೆಗೇ ಅರ್ಪಿಸಲ್ಪಟ್ಟಿದೆ. ಇದುವರೆಗೆ ಅವರ ಸೈನ್ಯದಲ್ಲಿ ೪೮೦೬೪ ಮಂದಿಗಳು ರಣಾಂಗಣದಲ್ಲಿ ಮಡಿದಿರುವರು. ೧೩೩೦೦೦ ಮಂದಿಗಳಿಗೆ ಏಟುಗಳು ತಗುಲಿದುವು. ೩೨೭೪ ಮಂದಿಗಳು ಮಾತ್ರ ಶತ್ರುಗಳಿಗೆ ಸೆರೆಸಿಕ್ಕಿದರು. ಜೂನ್ ತಿಂಗಳ ಕಡೆಯವರೆಗೆ ಆಸ್ಟ್ರೇಲಿಯಾದವರು ೩೩ ಕೋಟಿ ಪೌನುಗಳ ಹಣವನ್ನು ಯುದ್ಧಾರ್ಥವಾಗಿ ವೆಚ್ಚಮಾಡಿದ್ದಾರೆ. ಅಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ೧೦೦ ಕ್ಕೆ ೮ ಮಂದಿಯಂತೆ ಸೈನ್ಯಕ್ಕೆ ಕಳುಹಿಕೊಟ್ಟಹಾಗಾಯಿತು. ಇದನ್ನು ನೋಡಲಾಗಿ ೩೩ ಕೋಟಿ ಪ್ರಜೆಯಿರುವ ಭರತಖಂಡವು ೨ ಕೋಟಿ ಸೈನ್ಯವನ್ನು ಸಹಾಯಮಾಡುವುದು ಕೂಡ ದೊಡ್ಡದಲ್ಲ. ಹೀಗಿರುವಾಗ ೧೦-೨೦ ಲಕ್ಷ ಸೈನ್ಯವನ್ನು ಒದಗಿಸುವುದು ಒಂದು ದೊಡ್ಡದೆ?

ರಷ್ಯಾ ಪ್ರಜಾಪ್ರಭುತ್ವ ಸ್ಥಾಪಕರಲ್ಲಿ ಒಬ್ಬರಾಗಿ ಅಘಟಿತಘಟನಾಸಾಮರ್ಥ್ಯವುಳ್ಳವರೆಂದು ಪ್ರಖ್ಯಾತರಾಗಿ ಮಿತ್ರಮಂಡಲಿಯ ಅಭಿಮಾನಕ್ಕೆ ಪಾತ್ರರಾಗಿದ್ದ ರಷ್ಯಾ ಕೆರೆನ್ಸ್ಕಿಯವರು ಬೋಲ್ಷೆವಿಕ್ಕರ ಪ್ರಾಬಲ್ಯದಿಂದ ಪರಾಭೂತರಾಗಿ, ಅವರ ನಿರ್ಬಂಧಕ್ಕೆ ಸಿಕ್ಕಿದ್ದು, ಕಡೆಗೆ ಸಂಹರಿಸಲ್ಪಟ್ಟರೆಂಬ ವಾರ್ತೆಗೂ ಭಾಜನರಾಗಿದ್ದು, ಕೆಲ ತಿಂಗಳಿಂದ ನಾಮಶ್ರವಣವೂ ಸಹ ಮಾಡಲ್ಪಡದಿದ್ದು ಈಗ ಅಕಸ್ಮಾತ್ತಾಗಿ ಲಂಡನ್ನಿಗೆ ಬಂದಿರುವರೆಂಬ ಸುದ್ದಿಯು ಆಶ್ಚರ್ಯಕರವಾಗಿರುವುದು. ಇವರು ಮಾಸ್ಕೋಪಟ್ಟಣದಿಂದ ಹೊರಟು ಸಾವಿರಾರು ಮೈಲಿಗಳ ದೂರ ಶತ್ರುಗಳಿಗೆ ಗೋಚರಿಸದಂತೆ ಲಂಡನ್ನಿಗೆ ಹೇಗೆ ಬಂದರೋ ಅದು ಇವರ ಅಸಾಧಾರಣ ಸಾಹಸಕ್ಕೆ ನಿದರ್ಶನವಾಗಿದೆ. ಇವರು ಲಂಡನ್‌ಪಟ್ಟಣದಲ್ಲಿ ಕಳೆದ ತಾ|| ೨೭ ರಲ್ಲಿ ಕೂಡಿದ್ದ ಆಂಗ್ಲಕಾರ್ಮಿಕವರ್ಗ ಮಹಾಸಭೆಗೆ ಬಂದಿದ್ದರು. ಸಭಿಕರು ಅವರಿಗೆ ಅತ್ಯಾದರಸಂತೋಷಗಳಿಂದ ಸ್ವಾಗತನಾಡಿದರು. ಕೆರೆನ್ಸ್ಕಿಯವರು ಅಲ್ಲಿ ಉಪನ್ಯಾಸ ಮಾಡುವಾಗ–ರಷ್ಯನ್ ಪ್ರಜಾಪ್ರಭುತ್ವದವರು ದೌರ್ಜನ್ಯಪ್ರಭುತ್ವವನ್ನು ಅಣಗಿಸುವುದಕ್ಕಾಗಿಯೇ ಹೋರಾಡುವರೆಂಬುದನ್ನು ಆಂಗ್ಲಪ್ರಜೆಗಳಿಗೂ ಲೋಕಪ್ರಜೆಗಳಿಗೂ ಪ್ರಕಟಪಡಿಸುವುದೇ ತಮ್ಮ ಕರ್ತವ್ಯವೆಂತಲೂ, ಯಾರಾದರೂ ರಷ್ಯನ್ ಪ್ರಜೆಗಳ ಏಕಮತ್ಯವನ್ನು ಧ್ವಂಸಮಾಡಬಹುದಾದರೂ ರಷ್ಯನ್ ಪ್ರಜೆಗಳನ್ನು ನಾಶಮಾಡಲಾರರೆಂತಲೂ, ಲೋಕಸ್ವಾತಂತ್ರ್ಯ ರಕ್ಷಣಾರ್ಥವಾಗಿ ಯುದ್ಧಮಾಡಲು ರಷ್ಯನರು ಬೇಗನೆ ಮಿತ್ರಮಂಡಲಿಯವರೊಡನೆ ಕೂಡುವುದು ನಿಶ್ಚಯವೆಂತಲೂ ಹೇಳಿದರು. ರಷ್ಯಾವಿಷಯವಾಗಿ ಮಿತ್ರಮಂಡಲಿಯವರೊಡನೆ ಮುಂದಣ ಸ್ಥಿತಿಗತಿಯನ್ನು ಕುರಿತು ಆಲೋಚಿಸುವುದಕ್ಕೇ ಇವರು ಇಷ್ಟು ಸಾಹಸದಿಂದ ಬಂದಿರಬೇಕು.

ಜರ್ಮನರ ಮುಖ್ಯಮಂತ್ರಿ ಕುಹಲ್ಮನ್‌ರವರು ತಮ್ಮ ರಾಜ್ಯಾಂಗ ಸಭೆಯಲ್ಲಿ ಕಳೆದವಾರ ಒಂದು ಉಪನ್ಯಾಸ ಮಾಡಿದರು. ಅದರಲ್ಲಿ ತಮ್ಮ ಅಸಮರ್ಥತೆಯನ್ನೂ ಜಯದಮೂಲಕ ಯುದ್ಧಪರಿಸಮಾಪ್ತಿಮಾಡುವುದು ಅಸಂಭವವೆಂಬುದನ್ನೂ ಅವರು ಚಾತುರ್ಯದ ನೀತಿಯಿಂದ ಆಡಿ ತೋರಿಸಿರುವರಲ್ಲದೆ ಸಂಧಿಯಾದರೆ ಸಾಕೆಂಬ ತಮ್ಮ ಅಭಿಪ್ರಾಯವನ್ನೂ ಸೂಚಿಸಿದ್ದಾರೆ. ಹೇಗೆಂದರೆ—"ಈ ಯುದ್ಧವು ಪ್ರಪಂಚಯುದ್ಧವಾಗಿದೆ. ನಮಗೆ ಜಯವು ವಿಶೇಷವಾಗಿ ಲಭಿಸುತ್ತಿದ್ದರೂ ಸಂಧಿಮಾಡಿಕೊಳ್ಳಬೇಕೆಂಬ ಭಾವವು ಶತ್ರುಗಳಲ್ಲಿಲ್ಲ ಕಾಣುವುದಿಲ್ಲ. ಜರ್ಮನರೇ ಸಂಧಿಸೂಚನೆಯನ್ನು ಹಿಂದೆ ಮಾಡಿದರು. ಪೋಪರಿಗೂ ಆ ವಿಷಯವಾಗಿ ಬರೆದಿದ್ದರು. ಜರ್ಮನರು ಪ್ರಪಂಚಾಧಿಕಾರವನ್ನು ಕೋರುತ್ತಿರುವರೆಂದು ಬಾಲ್ಫರ್ (ಆಂಗ್ಲವಿದೇಶಾಂಗಮಂತ್ರಿ) ರವರು ಹೇಳಿರುವರು. ಅದು ನಿಜವಲ್ಲ. ಅದು ಅಸಾಧ್ಯವೆಂಬುದಾಗಿ ನೆಪೋಲಿಯನ್ನನ ಯುದ್ಧದಿಂದಲೇ ಸ್ಪಷ್ಟವಾಗಿದೆ. ಯುದ್ಧಕ್ಕೆ ರಷ್ಯನರೇ ಕಾರಣಭೂತರು. ಫ್ರೆಂಚರೇ ಪ್ರೋತ್ಸಾಹಕರು. ಜರ್ಮನ್ ದೇಶದಲ್ಲೂ ಅಧಿನಿವೇಶನಗಳಲ್ಲೂ ಸ್ವಾತಂತ್ರ್ಯವನ್ನೂ ಬಲವನ್ನೂ ವ್ಯಾಪಾರವ್ಯಾಪ್ತಿಗಾಗಿ ಸಮುದ್ರಸ್ವಾತಂತ್ರ್ಯವನ್ನೂ ಜರ್ಮನರು ಅಪೇಕ್ಷಿಸಿದರು. ಇವು ಅವರಿಗೆ ಅತ್ಯವಶ್ಯಕವಾದುವುಗಳು. ಜರ್ಮನ್‌ಸಾಮ್ರಾಜ್ಯವೂ ಜರ್ಮನ್ ಮಿತ್ರರ ದೇಶಗಳೂ ಯುದ್ಧಕ್ಕೆ ಮುಂಚೆ ಹೇಗಿದ್ದುವೋ ಹಾಗೆಯೇ ಇರಬೇಕೆಂಬುದು ಸಂಧಿ ನಡೆಯುವುದಕ್ಕೆ ಮುಖ್ಯಾಂಶವಾಗಿದೆ. ಆದರೆ ಸಭೆಗಳಲ್ಲಿ ಪ್ರಸಂಗಮಾಡುವುದರಿಂದ ಸಂಧಿಯೆಂದಿಗೂ ಕುದುರುವುದಿಲ್ಲ. ಗೌರವವಾದ ಸಂಧಿಗೆ ಜರ್ಮನರು ಅಂಗೀಕರಿಸದೆ ಹೋಗುವುದಿಲ್ಲ. ಆದರೆ ಪರಸ್ಪರ ವಿಶ್ವಾಸವೂ ಉದಾರಭಾವವೂ ಮುಖ್ಯವಾಗಿರಬೇಕು. ನಮ್ಮ ಪ್ರಯತ್ನಗಳೆಲ್ಲಾ ಮೋಸವೆಂದೇ ನಮ್ಮ ಶತ್ರುಗಳು ತಿಳಿದುಕೊಳ್ಳುತ್ತಿರುವವರೆಗೂ ಸಂಧಿಯಾಗಲಾರದು. ಪರಸ್ಪರ ರಾಯಭಾರವು ನಡೆದಲ್ಲದೆ ಈ ಪ್ರಪಂಚ ಯುದ್ಧವು ಕೊನೆಮುಟ್ಟದು. ಕೇವಲ ಸೇನಾಪ್ರತಾಪ ವಿಜೃಂಭಣದಿಂದ ಪ್ರಯೋಜನವಿಲ್ಲ. ರಾಜನೀತಿಜ್ಞರು ಪರಸ್ಪರ ಕೂಡಿ ಮಾತನಾಡಬೇಕು" ಈ ಭಾಷಣವನ್ನು ಜರ್ಮನ್ ಕೈಜರರೂ ನೋಡಿ ಅದಕ್ಕೆ ಸಮ್ಮತಿಸಿದ್ದರಂತೆ. ಇದರಿಂದ ಜರ್ಮನರ ಸೈನಿಕದರ್ಪವು ಈಗ ಎಷ್ಟುಮಟ್ಟಿಗೆ ಅಡಗಿದೆಯೆಂಬುದು ವ್ಯಕ್ತವಾಗುತ್ತದೆ. ಈ ಉಪನ್ಯಾಸವನ್ನು ಕೇಳಿ ಜರ್ಮನ್ ಪ್ರಜೆಗಳು ಬಹಳ ಉದ್ರೇಕಗೊಂಡಿದ್ದಾರೆ. ಜರ್ಮನ್ ಪ್ರಭುತ್ವದವರು ಇದುವರೆಗೂ ತಮ್ಮ ಸೇನಾಬಲದಿಂದ ಪ್ರಪಂಚವನ್ನೇ ಗೆದ್ದುಬಿಡುವೆವೆಂದು ವಿಜೃಂಭಿಸುತ್ತ ತಮ್ಮ ಪ್ರಜೆಗಳಿಗೆ ನಂಬುಗೆ ಹುಟ್ಟಿಸುತ್ತಿದ್ದರು. ಆದರೂ ಪರಿಸ್ಥಿತಿಯು ಅವರಿಗೆ ಸಂಶಯವನ್ನೇ ಉಂಟುಮಾಡುತ್ತಿದ್ದಿತು. ಪಶ್ಚಿಮದಲ್ಲಿ ಜರ್ಮನರು ಇಷ್ಟಾರ್ಥವನ್ನು ಪಡೆಯಲಿಲ್ಲ. ಪೂರ್ವದಲ್ಲಿ ಆಸ್ಟ್ರಿಯನ್ನರು ಬಹಳ ನಷ್ಟಪಟ್ಟರು. ರಷ್ಯಾದ ಸ್ಥಿತಿಯು ಶಾಂತವಾಗಿಲ್ಲ. ಈ ವಿಷಮಸ್ಥಿತಿಯಲ್ಲೂ ಪ್ರಜೆಗಳನ್ನು ನಿಜಸ್ಥಿತಿಯಿಂದ ವಂಚಿಸುವುದು ಅಸಾಧ್ಯವೆಂದು ಜರ್ಮನ್ ಮಂತ್ರಿಯು ನಿಜಭಾವವನ್ನು ಈಗ ವ್ಯಕ್ತಪಡಿಸಿರುವರು. ಇದರಿಂದ ಇದುವರೆಗೂ ತಮ್ಮ ಪ್ರಭುತ್ವದವರು ತಮ್ಮನ್ನು ಎಷ್ಟು ವಂಚಿಸಿದರೆಂಬುದನ್ನು ಜರ್ಮನ್ ಪ್ರಜೆಗಳು ತಿಳಿದುಕೊಂಡರಾದೀತು.

ಯುದ್ಧವಾರ್ತೆಯು.

ಪಶ್ಚಿಮರಣರಂಗದಲ್ಲಿ ಜರ್ಮನರು ಇನ್ನೂ ಮಹಾಯುದ್ಧವನ್ನು ಮರಳಿ ಆರಂಭಿಸಿಲ್ಲ. ಇಂಗ್ಲೀಷ್ ಸೇನಾಪಙ್ಕ್ತಿಯ ಮುಂಗಡೆಯಲ್ಲೇ ಫ್ಲಾಂಡರ್ಸಿನಲ್ಲಿ ತಮ್ಮ ಸೇನೆಯ ಮುಕ್ಕಾಲು ಭಾಗವೆಲ್ಲಾ ಕೂಡಿಸಿ, ಸಾವಿರಾರು ಫಿರಂಗಿಗಳನ್ನು ಅಲ್ಲಿಗೆ ಸೇರಿಸುತ್ತಿರುವರೆಂದು ಗೊತ್ತಾಗಿರುವಕಾರಣ ಅಲ್ಲೇ ಕಡೆಯ ಮಹಾವಸ್ಕಂದನವನ್ನಾರಂಭಿಸಬಹುದೆಂದು ಪ್ರತೀಕ್ಷಣದಲ್ಲೂ ನಿರೀಕ್ಷಿಸಲ್ಪಡುತ್ತಿರುವುದು. ಕಳೆದ ವಾರ ಇಂಗ್ಲೀಷರೂ ಫ್ರೆಂಚರೂ ಅಮೇರಿಕನ್ನರೂ ಬೇರೆಬೇರೆ ಕಡೆಗಳಲ್ಲಿ ಅವಸ್ಕಂದನಗಳನ್ನು ನಡೆಯಿಸಿ, ಶತ್ರುಗಳನ್ನು ಕೆಲಕೆಲವೂರ ಹಿಮ್ಮೆಟ್ಟಿಸಿ, ತಾವು ಮುಂದಕ್ಕೆ ಸಾಗಿ, ಶತ್ರುಗಳ ಸಾವಿರಾರು ಸೈನಿಕರನ್ನೂ ಫಿರಂಗಿ ಮೊದಲಾದುವುಗಳನ್ನೂ ವಶಪಡಿಸಿಕೊಂಡು ತಮ್ಮ ಸೈನ್ಯಪಙ್ಕ್ತಿಗಳನ್ನು ಸುದೃಢಪಡಿಸಿಕೊಂಡಿದ್ದಾರೆ. ಅಮೇರಿಕನ್ನರ ಸೈನ್ಯವು ಈಗಲೂ ಪಶ್ಚಿಮರಣರಂಗಕ್ಕೆ ಪ್ರತಿದಿನವೂ ಬಂದಿಳಿಯುತ್ತಲೇ ಇದೆ. ಇದುವರೆಗೆ ಅವರ ೧೦ ಲಕ್ಷ ಸೈನ್ಯವು ಬಂದು ಸೇರಿದೆ. ಇಟಲಿರಂಗಕ್ಕೂ ಇವರ ೩೦ ಸಾವಿರದಷ್ಟು ಸೈನ್ಯವು ಹೋಗಿದೆ.

ಪತ್ರವ್ಯವಹಾರ.

ಶ್ರೀ ಜಯದೇವ ವೀರಶೈವ ಬೋರ್ಡಿಂಗ್, ದಾವಣಗೆರೆ.

ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ—

ಮೈಸೂರು ಶ್ರೀಮಾನ್ ಮಹಾರಾಜಾ ಸರ್ಕಾರವು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ದಾವಣಗೆರೆಯಲ್ಲಿ ಸನ್ ಮಜಕೂರು ಜೂನ್ ಮಾಹೆ ತಾರೀಖು ೪ ರ ಲಾಗಾಯ್ತು ಇಂಗ್ಲೀಷ್ ಹೈಸ್ಕೂಲನ್ನು ಸ್ಥಾಪನೆಮಾಡಿ ತತ್ಕಾಲಕ್ಕೆ ಇಂಗ್ಲೀಷ್ IV ನೆ ಫಾರಂ ಓಪನ್ ಮಾಡಿರುತ್ತಾರೆ. ಈ ಸ್ಕೂಲಿಗೆ ವಿದ್ಯಾಭ್ಯಾಸಕ್ಕಾಗಿ ಬರಲು ಅಪೇಕ್ಷಿಸುವ ವೀರಶೈವ ವಿದ್ಯಾರ್ಥಿಗಳಲ್ಲಿ ಬಡವರಿಗೆ ಮಾತ್ರ ಭೋಜನಕ್ಕೂ ವಸತಿಗೂ ಸಹ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಆಶೀರ್ವಾದಾಶ್ರಯಬಲದಿಂದ ಇಲ್ಲಿ ಫ್ರೀ ಬೋರ್ಡಿಂಗ್ ಸ್ಥಾಪಿತವಾಗುತ್ತೆ.

ಈ ಸ್ಕೂಲಿನ IV ನೆ ಫಾರಂನಲ್ಲಿ ವಿದ್ಯಾಭ್ಯಾಸಮಾಡಲು ಬರಬೇಕೆಂದಿರುವ ಬಡ ವಿದ್ಯಾರ್ಥಿಗಳು ಮೇಲ್ಕಂಡ [illegible] ಜೊತೆಗೆ [illegible]

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜುಲೈ ತಾ|| ೭ ನೆಯ ಭಾನುವಾರ.

ಹಿಂದುಳಿದವರ ವಿಜ್ಞಾಪನೆ.

(ಭಾಗ ೨.)

ವಿಜ್ಞಾಪನಪತ್ರದಲ್ಲಿ ಕಂಡಿದ್ದ ೨ ನೆ ಮುಖ್ಯವಿಷಯಕ್ಕೆ ಶ್ರೀಮನ್ಮಹಾರಾಜರವರು ಉತ್ತರವನ್ನು ಕೊಡುವುದರಲ್ಲಿ—"ಸ್ಥಳೀಯ ಸ್ವರಾಜ್ಯಸಂಘಗಳಿಗೆ ನಿಯುಕ್ತ ಸಭಿಕರನ್ನು ಸೇರಿಸುವ ವಿಷಯವಾಗಿ ತಕ್ಕಷ್ಟು ಅಧಿಕಾರವನ್ನು ಪ್ರಭುತ್ವದವರು ಇಟ್ಟುಕೊಂಡಿರುವುದರಿಂದ, ತಕ್ಕಷ್ಟು ಪ್ರಾತಿನಿಧ್ಯವು ಆ ಸಂಘಗಳಲ್ಲಿ ಯಾವ ಜನವರ್ಗದವರಿಗೆ ದೊರೆಯದೆಹೋಗಿರುವುದೋ ಅಂಥವರಿಗೆ ಲಭಿಸುವಹಾಗೆ ಮಾಡುವುದಕ್ಕೆ ಸರ್ಕಾರದವರು ತಮ್ಮ ಅಧಿಕಾರವನ್ನು ವಿನಿಯೋಗಿಸುವರು" ಎಂದು ಅಪ್ಪಣೆ ಮಾಡಿರುತ್ತಾರೆ. ನಾಮಿನೇಷನ್ನಿನ ಮೂಲಕ ಎಲ್ಲ ಜನವರ್ಗ ಪ್ರಾತಿನಿಧ್ಯವೂ ಲೋಕಲ್‌ಬೋರ್ಡು ಮೊದಲಾದ ಸಂಘಗಳಲ್ಲಿರುವಂತೆ ಮಾಡುವೆವೆಂಬುದು ಇದರಿಂದ ಸಿದ್ಧವಾಗುವುದು. ಈ ಉತ್ತರವು ಮಾತ್ರ ವಿಜ್ಞಾಪಕರಿಗೂ ಅವರ ಹಿಂಬಾಲಕರಿಗೂ ಅಷ್ಟು ತೃಪ್ತಿಕರವಾಗಿಲ್ಲ. ಏಕೆಂದರೆ ವಿಜ್ಞಾಪನಪತ್ರದಲ್ಲಿ ಪ್ರತ್ಯೇಕ ಪ್ರಾತಿನಿಧ್ಯತತ್ವದ ಅವಶ್ಯಕತೆಗೆ ಯಾವ ಯಾವ ಕಾರಣಗಳು ಸೂಚಿಸಲ್ಪಟ್ಟಿದ್ದುವೋ ಅವೆಲ್ಲವುಗಳಿಗೂ ಪರಿಹಾರವು ಈ ನಾಮಿನೇಷನ್ ವರದಿಂದ ಸಿದ್ಧವಾಗುವುದಿಲ್ಲ. ವಿಧಿಪ್ರಕಾರ ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಪ್ರಜೆಗಳಿಂದ ಆರಿಸಲ್ಪಡುವವರು ⅔ ಭಾಗವಾಗಿ, ನಾಮಿನೇಷನ್ನಿನ ಮೂಲಕ ಬರುವವರು ⅓ ಭಾಗದವರು ಮಾತ್ರವೇ ಆಗಿರುತ್ತಾರೆ. ಒಂದು ವೇಳೆ ಈಗಣ ಅಪ್ಪಣೆಯ ಪ್ರಕಾರ ⅓ ಭಾಗದವರೆಲ್ಲಾ ಹಿಂದುಳಿದ ಜನವರ್ಗಗಳವರೇ ಬಂದರೂ ಅವರ ಸಂಖ್ಯೆಗಿಂತಲೂ ಪ್ರಬಾಸಿಯುಕ್ತರಾಗಿ ಬರಬಹುದಾದ ಮುಂದಾದ ಜನವರ್ಗದವರ ಸಂಖ್ಯೆಯೇ ದ್ವಿಗುಣವಾದೀತು. ಸಾಲಸೋಲಗಳನ್ನು ಮಾಡುವುದೇ ಮೊದಲಾದ ವಿಶೇಷಾಧಿಕಾರಗಳನ್ನು ಹೊಂದಿರುವ ಈಗಣ ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಎಲ್ಲ ಪ್ರಜೆಗಳೂ ತಮ್ಮೆಲ್ಲರ ಅವಶ್ಯಕತೆಗೆ ತಕ್ಕ ಕೆಲಸಗಳನ್ನು ಮಾಡಿಕೊಳ್ಳಲು ಅವಕಾಶ ಪಡೆಯದೆಹೋದರೆ, ಗಳಿಸುವವರು ಯಾರೋ ಆದರೆ ಬಳಸುವವರು ಯಾರೋ ಆದಂತಾಗುವುದು. "ತನ್ನ ಮನೆ, ತನ್ನ ಹಣ, ತನ್ನ ಅವಶ್ಯಕತೆಗೆ ತಕ್ಕ ವೆಚ್ಚವನ್ನು ತಾನು ಮಾಡಿಕೊಳ್ಳಬೇಕು" ಎಂಬ ಭಾವವು ಪ್ರತಿ ಪ್ರಜೆಗೂ ಇರುವಂತೆ ಮಾಡಬೇಕಾದುದು ಅವಶ್ಯಕವೂ ಧರ್ಮವೂ ಆಗಿರುವಾಗ, ಅದಕ್ಕೆ ತಕ್ಕ ವಿಧಿಯನ್ನು ಏರ್ಪಡಿಸದೆ ಹೋದರೆ ಅದರಿಂದಾಗುವ ದುಷ್ಪರಿಣಾಮಕ್ಕೆ ಪ್ರಭುತ್ವದವರೇ ಉತ್ತರವಾದಿಗಳಾಗುವರು. ರಾಜಕೀಯ ಕಾರ್ಯನಿರ್ವಾಹದಲ್ಲಿ ಸರ್ವ ಪ್ರಜೆಗಳನ್ನೂ ಪಳಗಿಸಿ, ಪ್ರಜೆಗಳ ಬುದ್ಧಿ ಶಕ್ತಿ ಸಾಹಸಗಳ ಅಂಗವನ್ನು ಬಲಪಡಿಸಿ, ಅದರ ಸಾಹಾಯ್ಯದಿಂದ ರಾಜ್ಯಕಾರ್ಯಭಾರವನ್ನು ಸುಲಲಿತಪಡಿಸಿಕೊಳ್ಳಬೇಕೆಂಬುದೇ ಪ್ರಭುತ್ವದವರ ಉದ್ದೇಶವಾಗಿ, ಅದಕ್ಕಾಗಿಯೇ ಮ್ಯು|| ಲೋ|| ಬೋರ್ಡುಗಳ ವಿಧಿಯು ಸಂಸ್ಕರಣವು ನೂತನವಾಗಿ ಮಾಡಲ್ಪಡುತ್ತಿರುವಾಗ ಉದ್ದೇಶಕ್ಕೆ ತಕ್ಕ ಕಾರ್ಯಾಚರಣೆಯು ಇಲ್ಲದೆಹೋದರೆ ಫಲಸಿದ್ಧಿಯಾಗುವುದು ಹೇಗೆ?

ಶ್ರೀಮನ್ಮಹಾರಾಜರವರ ಈಗಣ ಉತ್ತರದಿಂದ ಒಂದು ಅನರ್ಥವು ಮಾತ್ರ ದೂರವಾಯಿತೆಂದು ಎಣಿಸುತ್ತೇವೆ. ಏನೆಂದರೆ—ಮುಂದಾದ ಜನವರ್ಗಗಳವರು ಎಲೆಕ್ಷನ್ನಿನಲ್ಲಲ್ಲದೆ ನಾಮಿನೇಷನ್ನಿನಮೂಲಕವೂ ಮ್ಯು|| ಲೋ|| ಬೋರ್ಡು ಮೊದಲಾದುವುಗಳಿಗೆಲ್ಲಾ ಸಭಿಕರಾಗಿ ತರಲ್ಪಡುತ್ತಿದ್ದ ಇದುವರೆಗಣ ಘಾತಕ ಪದ್ಧತಿಯು ಮುಂದೆ ತಪ್ಪಿ, ಹಿಂದುಳಿದವರ ಪ್ರತಿನಿಧಿಗಳು ಎಲೆಕ್ಷನ್ನಿನಮೂಲಕ ಬಾರದೆ ತಪ್ಪಿಹೋದರೂ ನಾಮಿನೇಷನ್ನಿನಮೂಲಕವಾದರೂ ಬರಬಹುದಾಯಿತು. ಆದರೆ ಇದರಿಂದ ಉದ್ದಿಷ್ಟ ಫಲವು ಸಂಪೂರ್ಣವಾಗಿ ಸಿದ್ಧಿಸುವಹಾಗಿಲ್ಲವೆಂಬುದನ್ನು ಮೇಲೆಯೇ ತಿಳಿಯಿಸಿದ್ದೇವೆ. ಈ ನಾಮಿನೇಷನ್ನಿನಿಂದ ಬರತಕ್ಕವರೂ ಪ್ರಭುತ್ವದವರ ಬಾಲಬಡಿಯತಕ್ಕ ಅಥವಾ ಪರರ ದಾಕ್ಷಿಣ್ಯಕ್ಕೆ ದೇಹವನ್ನು ಮಾರಿಕೊಳ್ಳತಕ್ಕ ಜನರಂಥವರು ಆದರೆ, ದೊಡ್ಡದಾಗಿ ತೋರಿಸಲ್ಪಟ್ಟಿರುವ ಈ ನಾಮಿನೇಷನ್ನಿನ ವರವು ಆನೆನುಂಗಿದ ಬೇಲದಹಣ್ಣಿನಂತೆ ಆಕಾರಮಾತ್ರ ಫಲವಾಗಿ ನಿಂತುಕೊಳ್ಳುವುದು.

ಈ ಸಂಬಂಧವಾಗಿ ಶ್ರೀಮನ್ಮಹಾರಾಜರವರು ಉತ್ತರ ಕೊಡುವಾಗ್ಗೆ—ಓಟು ಕೊಡುವವರ ಸಂಖ್ಯೆಯನ್ನೂ ಆರಿಸಲ್ಪಡಲು ಅರ್ಹರಾದವರ ಸಂಖ್ಯೆಯನ್ನೂ ಹೆಚ್ಚಿಸುವುದಕ್ಕೆ ಅವಕಾಶ ಮಾಡಿರುವುದರಿಂದ, ನಿಮ್ಮೆಲ್ಲರಿಗೂ ಪ್ರತಿನಿಧಿಗಳಾಗಿ ಬರುವುದಕ್ಕೂ ಓಟನ್ನು ಕೊಡುವುದಕ್ಕೂ ವಿಶೇಷಾವಕಾಶವು ಸಿಕ್ಕಿರುತ್ತದೆ. ಅದರಿಂದ ನಿಂನಿಮ್ಮ ಪ್ರತಿನಿಧಿಗಳು ವಿಶೇಷವಾಗಿ ಬರುವಂತೆ ಮಾಡಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದು ವಾಸ್ತವವೇ ಸರಿ. ಆದರೆ ಈ ಮೂಲಕ ಫಲಸಿದ್ಧಿಯು ಸರ್ವಪ್ರಜೆಗಳಿಗೂ ಆಗಬೇಕಾದರೆ "ಚುನಾವಣೆಯ" ಕ್ರಮವು ನಿರ್ದುಷ್ಟವಾಗಿರಬೇಕು. ಅಧಿಕಾರಿಗಳ ದಾಕ್ಷಿಣ್ಯ ದರ್ಪಭೀತಿಗಳಿಗೆ ಲೇಶವೂ ಅವಕಾಶವಿಲ್ಲದಂತೆ "ಚುನಾವಣೆಯ" ಕ್ರಮವು ಜರುಗುವಂತಾಗಬೇಕು. ಇದಕ್ಕೆ ಕಟ್ಟುನಿಟ್ಟಾದ ಅಪ್ಪಣೆಯು ಪ್ರಭುತ್ವದವರಿಂದ ಮಾಡಲ್ಪಡಬೇಕು. ಈ ವಿಷಯದಲ್ಲಿ ಹಿಂದುಳಿದವರ ಮುಂದಾಳುಗಳು ತಕ್ಕ ವ್ಯವಸಾಯವನ್ನು ನಡೆಯಿಸುವಲ್ಲಿ ಎಚ್ಚರುಗೊಳ್ಳಬೇಕು.

ಶ್ರೀಮನ್ಮಹಾರಾಜರವರು ಈ ಮುಖ್ಯ ವಿಷಯಕ್ಕೆ ಉತ್ತರವನ್ನು ಕೊಟ್ಟಿರುವುದರಲ್ಲೂ ಕೂಡ ಈ ಭಾಗದಲ್ಲಿ ಮಾಡಲ್ಪಟ್ಟಿರುವ ಪ್ರಜೆಗಳ ಪ್ರಾರ್ಥನೆಯನ್ನೂ ಯುಕ್ತವೆಂದೇ ಒಪ್ಪಿಕೊಂಡಂತಾಗಿದೆ. ಈ ವ್ಯತ್ಯಾಸವು ಪರಿಹಾರ್ಯವಾದುದೆಂದೇ ಅವರಿಗೆ ಗೊತ್ತಾಗಿದೆ. ಆದರೆ ನಾಮಿನೇಷನ್ ಅಧಿಕಾರವಿನಿಯೋಗದಿಂದಲೂ, ಆರಿಸುವವರ ಮತ್ತೂ ಆರಿಸಲ್ಪಡುವವರ ಸಂಖ್ಯೆಯನ್ನು ಹೆಚ್ಚಿಸುವುದರಿಂದಲೂ ಸಹ ಆ ವ್ಯತ್ಯಾಸಲೋಪಗಳು ಪರಿಹೃತವಾಗುವುವೆಂದು ಅವರು ನಿರೀಕ್ಷಿಸಿಕೊಂಡಿದ್ದಾರೆ. ಆ ನಿರೀಕ್ಷಣೆಯಿಂದಲೇ "ಸದ್ಯಃ ಇದಕ್ಕಿಂತ ಹೆಚ್ಚಾಗಿ ಏನನ್ನು ಮಾಡಲೂ ನಾವು ಉದ್ದೇಶಿಸಿರುವುದಿಲ್ಲ" ಎಂದು ಅಪ್ಪಣೆಮಾಡಿರುತ್ತಾರೆ. ಕೆಲಕಾಲದವರೆಗೆ ಈ ಕ್ರಮವು ವ್ಯವಹಾರಕ್ಕೆ ಬಂದು, ಅದರಿಂದ ವಿಶಿಷ್ಟ ಫಲವೇನೂ ವ್ಯಕ್ತವಾಗದೆ ಹೋದರೆ, ಪೂರ್ವದ ಲೋಪದೋಷಗಳು ಪರಿಹೃತವಾಗಲಿಲ್ಲವೆಂದು ಕಂಡುಬಂದರೆ, ಆವಾಗಲಾದರೂ ಪ್ರತ್ಯೇಕ ಪ್ರಾತಿನಿಧ್ಯತತ್ತ್ವವನ್ನು ಅವರೇ ಅಂಗೀಕರಿಸುವರು. ಅಂಥ ಕಾಲವು ಬರದೆ ಹೋಗಲಾರದು.

ಸದ್ಯಃ ಪ್ರತ್ಯೇಕಪ್ರಾತಿನಿಧ್ಯ ಸಮಸ್ಯೆಯು ನಮ್ಮ ಮೈಸೂರುದೇಶದಲ್ಲಿ ಮಾತ್ರವೇ ತಲೆಯೆತ್ತಿಲ್ಲ; ಭರತಖಂಡದ ಎಲ್ಲ ಭಾಗಗಳಲ್ಲೂ ಇದು ಸುವ್ಯಕ್ತವಾಗಿದೆ. ಭವಿತವ್ಯ ರಾಜಕೀಯ ಸುಧಾರಣೆಯಲ್ಲಿ ಈ ತತ್ತ್ವವು ಅಂಗೀಕರಿಸಲ್ಪಡಬೇಕೆಂದು ಅನೇಕಾನೇಕ ಪ್ರಜೆಗಳೂ ಸಂಘಗಳೂ ಸಾಮ್ರಾಜ್ಯಸರ್ಕಾರದವರನ್ನು ಪ್ರಾರ್ಥಿಸಿರುತ್ತಾರೆ. ಆದರೆ ಇಂಡ್ಯಾ ಸರ್ಕಾರದವರು ಮೊನ್ನೆತಾನೇ ಪ್ರಕಟಿಸಿದ ಸ್ಥಳಿಕಸ್ವಪರಿಪಾಲನ ಸಂಘಸಂಬಂಧವಾದ ವಿಧಿಯ ನೂತನಸಂಸ್ಕರಣದಲ್ಲಿ ನಾಮಿನೇಷನ್ನಿನ ಮೂಲಕ ಪ್ರತ್ಯೇಕ ಜನವರ್ಗ ಪ್ರಾತಿನಿಧ್ಯಕ್ಕೆ ಎಡೆಯನ್ನು ಕೊಡುವ ಏರ್ಪಾಟನ್ನು ಮಾಡಿರುವುದರಿಂದಲೂ, ಇಷ್ಟರಲ್ಲೇ ಪ್ರಕಟವಾಗಬಹುದಾಗಿರುವ ಭಾರತ ರಾಜಕೀಯ ಸಂಸ್ಕರಣ ಪ್ರಣಾಳಿಕೆಯಲ್ಲಿ ಪ್ರತ್ಯೇಕಪ್ರಾತಿನಿಧ್ಯವು ಅನಂಗೀಕೃತವಾಗಿರುವುದೆಂದು ಸುದ್ದಿ ಹೊರಬೀಳುತ್ತಿರುವುದರಿಂದಲೂ ಸಹ ನಮ್ಮ ಪ್ರಭುತ್ವದವರೂ ಅದನ್ನೇ ಹಿಂಬಾಲಿಸಬೇಕೆಂದಿರುವಂತೆ ಕಾಣುತ್ತದೆ. ಪ್ರಭುಗಳ ಈ ತೆರದ ಉತ್ತರಕ್ಕೆ ಅದೂ ಒಂದು ಕಾರಣವಾಗಿರಬೇಕೆಂದೂಹಿಸಲವಕಾಶವಿದೆ. ಪ್ರತ್ಯೇಕ ಪ್ರಾತಿನಿಧ್ಯತತ್ತ್ವವು ಇಂಡ್ಯಾ ಪ್ರಭುತ್ವದಿಂದ ಅಂಗೀಕೃತವಾಗದೆ ಹೋಗುವ ಸಂದರ್ಭದಲ್ಲಿ ತತ್ಪ್ರಾಪ್ತಿಗಾಗಿ ಭರತಖಂಡದ ಸಾಮಾನ್ಯ ಪ್ರಜಾವರ್ಗವು ತಮ್ಮ ಸತ್ಪ್ರಯತ್ನೋದ್ಯಮವನ್ನು ನಿಲ್ಲಿಸುವಹಾಗಿಲ್ಲ. ಭರತಖಂಡ ಪ್ರಭುತ್ವದಲ್ಲಿ ಈ ತತ್ತ್ವಕ್ಕೆ ಯಾವಾಗ ಅನುಮೋದನವು ಸಿಕ್ಕುವುದೋ ಆ ಉತ್ತರಕ್ಷಣದಲ್ಲೇ ನಮ್ಮ ಪ್ರಭುತ್ವದಿಂದಲೂ ಅಂಗೀಕರಿಸಲ್ಪಡುವುದೆಂಬುದಕ್ಕೆ ಸಂಶಯವಿಲ್ಲ. ಆದರೆ ಈ ವಿಷಯದಲ್ಲಿ ಭರತಖಂಡದ ಸರ್ಕಾರಕ್ಕೂ ಮೇಲುಪಂಕ್ತಿಯನ್ನು ಹಾಕಿಕೊಟ್ಟು ಚಿರಕೀರ್ತಿಪ್ರತಿಷ್ಠೆಗಳನ್ನು ಭರತಖಂಡದ ಸಂಸ್ಥಾನಗಳ ಮಧ್ಯದಲ್ಲೆಲ್ಲಾ ಪಡೆದುಕೊಳ್ಳಬಹುದಾಗಿದ್ದ ಸಂಧಿಯನ್ನು ಮಾತ್ರ ನಮ್ಮ ಸಂಸ್ಥಾನವು ಈಗಣ ಉತ್ತರದಿಂದ ಕಳೆದುಬಿಟ್ಟಂತಾಯಿತು.

"ಸ್ವಾಮಿಭಕ್ತಿಯಿಂದ ಇದನ್ನು ನೀವು ಅಂಗೀಕರಿಸಬೇಕು" ಎಂದು ಶ್ರೀಮನ್ಮಹಾರಾಜರವರು ತಮ್ಮ ಉತ್ತರದ ಕಡೆಯಲ್ಲಿ ಅಪ್ಪಣೆಕೊಡಿಸಿರುತ್ತಾರೆ. ಮೈಸೂರುದೇಶದ ಹಿಂದುಳಿದ ಜನವರ್ಗಗಳವರು ಭರತಖಂಡದ ತೀಕ್ಷ್ಣಸ್ವರಾಜ್ಯವಾದಿಗಳೇನೂ ಅಲ್ಲ; "ನಾವು ಕೇಳುವ ವರಗಳನ್ನು ಕೊಡದಿದ್ದರೆ ಅಥವಾ ಯತ್ಕಿಂಚಿತ್ತನ್ನು ಕೊಟ್ಟರೆ ನಾವು ಒಪ್ಪತಕ್ಕವರಲ್ಲ; ಸರ್ಕಾರಕ್ಕೆ ಸಹಾಯಮಾಡುವವರಲ್ಲ" ಎಂದು ಹೇಳುವ ತೆರದ ರಾಜಭಕ್ತಿಯು ಈ ದೇಶದ ಯಾವ ಹಿಂದುಳಿದ ಪ್ರಜೆಗಳ ಕನಸುಮನಸಿನಲ್ಲೂ ಸಹ ಇರುವುದಿಲ್ಲ. ಮತ್ತೂ ಸ್ವಾರ್ಥವನ್ನು ನಡೆಯಗೊಡುತ್ತಿದ್ದರೆ, ಹಾಗೆ ನಡೆಯಿಸಿಕೊಟ್ಟವರನ್ನು ಇಂದ್ರ ಚಂದ್ರ ಉಪೇಂದ್ರನೆಂದು ಹೊಗಳಿ ಹಾಡಿ ಹರಸುತ್ತಿರುವುದೂ, ಆ ಸ್ವಾರ್ಥಕ್ಕೆ ಲೇಶಮಾತ್ರ ಲೋಪಬಂದರೂ ಸ್ವರ್ಗವನ್ನೆಲ್ಲಾ ನರಕವೆಂದೂ, ದೇಶವೆಲ್ಲಾ ಹಾಳೆಂದೂ, ಲೋಕವನ್ನೆಲ್ಲಾ ತಲೆಕೆಳಗು ಮಾಡುವೆವೆಂದೂ ಬೊಗಳುವ ಮತ್ತೂ ಹೆದರಿಸುವ ಕಪಟರಾಜಭಕ್ತರೂ ಕೂಡ ಇವರಲ್ಲ; "ನಮ್ಮ ಅನುಗ್ರಹವು ಜಗದುದ್ಧಾರಕವು; ನಮ್ಮ ಆಗ್ರಹವು ಲೋಕವಿನಾಶಕವು" ಎಂದು ಬೆದರಿಸುವ ಧಾರ್ಷ್ಟ್ಯವೂ ಈ ಬಡಪಾಯಿಗಳಿಗಿರುವುದಿಲ್ಲ. "ಹೊಡೆಯುತನಕ ಓಟ, ದಣಿಯುತನಕ ದೂರು" ಎಂಬ ಗಾದೆಯಲ್ಲಿ ಕಂಡಿರುವಷ್ಟನ್ನು ಮಾತ್ರ ಇವರುಗಳು ಮಾಡಬಲ್ಲರು. ಅದನ್ನು ಅವರು ಮಾಡಿ ತೀರಿಸಿದರು. ಮುಂದಾದರೂ ಹಾಗೆಯೇ ಸಂಕಟವನ್ನೂ ಕಷ್ಟವನ್ನೂ ಸಹಿಸಿಕೊಳ್ಳಲಾಗದ ಸ್ಥಿತಿಯು ಬಂದಾಗ ಮತ್ತೂ ಮತ್ತೂ ತಮ್ಮನ್ನಾಳುವವರ ಸನ್ನಿಧಿಯಲ್ಲಿ ದೂರಿಟ್ಟುಕೊಳ್ಳಬಲ್ಲರು. ಇಂಥ ಪ್ರಜೆಗಳಿಗೇ "ನೀವು ಸ್ವಾಮಿಭಕ್ತಿಯಿಂದ ಇದನ್ನು ಅಂಗೀಕರಿಸಿರಿ" ಎಂದು ಮಹಾಸ್ವಾಮಿಯವರು ಅಪ್ಪಣೆಕೊಡಿಸಿರುವುದು "ಸಾದೆತ್ತಿಗೆ ಎರಡು ಹೇರು" ಎಂದಂತೆ ಆಗಿರುತ್ತದೆ. ಸ್ವಾಮಿಭಕ್ತಿಯು ಮುಂದಾಗಿಸಲ್ಪಟ್ಟಿರುವುದರಿಂದ ಮರುಮಾತಿಗೆ ಅವಕಾಶವಿಲ್ಲದಂತೆ ಬಾಯಿಕಟ್ಟಲ್ಪಟ್ಟಿದೆ. ನ್ಯಾಯಬಲಪ್ರೇರಿತವಾದ ಸಂಕಲ್ಪವು ಮಾತ್ರ ಶಾಂತವಾಗಲಿಲ್ಲ. ಇನ್ನು ಮಾಡುವುದೇನು? ಪ್ರಭುಗಳ ಚಿತ್ತ, ನಮ್ಮ ಭಾಗ್ಯ. ಅವರ ಅಭಯದಾನವೇ ನಮಗೆ ಕಾಮಧೇನು ಕಲ್ಪವೃಕ್ಷಗಳೆಂದು ಇವರುಗಳು ಹಿಂದೆಯೂ ನಂಬಿದ್ದರು; ಈಗಲೂ ನಂಬಿರುವರು; ಮುಂದೆಯೂ ನಂಬುವರು. ಸುಖದುಃಖಗಳು ಯಾರಿಗೂ ಶಾಶ್ವತವಲ್ಲ. ಅವರ ಕಷ್ಟಗಳಿಗೂ ಒಂದು ದಿನ ಆಳಿಗಾಲವು ಬಂದೇಬರುವುದು.

ಒಳದೇಶದ ವೃತ್ತಾಂತಗಳು.

ಬರುವ ತಾ|| ೧೧ ರಲ್ಲಿ ನಂಜನಗೂಡಿನಲ್ಲಿ ಶ್ರೀಕಂಠೇಶ್ವರನ ಗಿರಿಜಾಕಲ್ಯಾಣ ಮಹೋತ್ಸವವು ಜರುಗುವುದು.

ಮುನ್ಸೀಫ್ ಮ|| ಸತ್ಯಾಜಿರಾಯರವರು ಸದ್ಯಃ ರಾಜಧಾನಿಯ ಸಬ್‌ಜಡ್ಜ್ ರವರಾಗಿ ನಿಯಮಿಸಲ್ಪಟ್ಟಿದ್ದಾರೆ.

ಶ್ರೀರಂಗಪಟ್ಟಣದ ಮ್ಯುನ್ಸಿಪಾಲಿಟಿಗೆ ಅಲ್ಲಿಯ ಮೆಡಿಕಲ್ ಆಫೀಸರು ತಾತ್ಕಾಲಿಕ ವೈಸ್‌ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರು ಸಂಸ್ಥಾನದಲ್ಲೆಲ್ಲಾ ಕಳೆದ ತಾ|| ೨೧ ಕ್ಕೆ ಕೊನೆಯಾದ ವಾರದಲ್ಲಿ ಪ್ಲೇಗು ೯೦ ಮಂದಿಗೆ ಸೋಂಕಿ ೬೫ ಮಂದಿ ಸತ್ತಿದ್ದರೆ ಕಾಲರಾ ರೋಗವು ೨೪೮ ಮಂದಿಗೆ ಸೋಂಕಿ ೧೫೧ ಮಂದಿಗಳು ಸತ್ತಿರುತ್ತಾರೆ.

ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜ ಪ್ರೌಢಕಲಾಶಾಲೆಯಲ್ಲಿ ಎಂ.ಎ., ತರಗತಿಯ ಆಂಗ್ಲಭಾಷೆ, ಚರಿತ್ರೆ, ತತ್ತ್ವಜ್ಞಾನ ಮತ್ತೂ ಸಂಸ್ಕೃತಭಾಷೆಯ ಪಾಠಗಳು ಈ ಜುಲೈ ತಿಂಗಳಿಂದ ಆರಂಭಿಸಲ್ಪಟ್ಟಿರುವುವು.

ಚೀಫ್ ಕೋರ್ಟ್ ಕ್ಲರ್ಕಾಗಿದ್ದ ಮ|| ಬಿ. ರಾಮಣ್ಣ, ಬಿ.ಎ., ಬಿ.ಎಲ್., ರವರು ಮ|| ಬಿ. ಸತ್ಯಾಜಿರಾಯರವರ ಸ್ಥಾನಕ್ಕೆ ಮೈಸೂರು ಫಸ್ಟ್ ಮುನ್ಸೀಫರಾಗಿ ಕೆಲಸ ಮಾಡಲು ಆಕ್ಟಿಂಗಾಗಿ ನಿಯಮಿಸಲ್ಪಟ್ಟಿದ್ದಾರೆ.

ವಿದ್ಯಾಭ್ಯಾಸ ಶಾಖಾ ಇನ್|| ಜನರಲ್ಲಾದ ಮ|| ರಾಮಲಿಂಗರೆಡ್ಡಿಯವರೂ, ಆಕ್ಟಿಂಗ್ ಪೊಲೀಸ್ ಇನ್|| ಜನರಲ್ಲಾದ ಮಿ|| ವಿನಾರ್ ಹಂಜಾಹುಸೇನ್ ಸಾಹೇಬರೂ ಸಹ ನಿಯಮನಿರ್ಮಾಣ ಸಭೆಯ ಸಭಿಕರಾಗಿ ಸೇರಿಸಿಕೊಳ್ಳಲ್ಪಟ್ಟಿದ್ದಾರೆ.

ರಾಜಧಾನಿಯ ವಾಣೀವಿಲಾಸ ವೈದ್ಯಾಲಯದಲ್ಲಿದ್ದ ಲೇಡಿ ಮೆಡಿಕಲ್ ಆಫೀಸರ್ ಅಯ್ಯಾಚಮ್ಮಾಳರವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೂ ಅಲ್ಲಿದ್ದ ಮೇರಿ ಜೆ. ವೈಲ್‌ರವರು ವಾಣೀವಿಲಾಸ ವೈದ್ಯಾಲಯಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ಗುರುರಾಯರ ಹತ್ಯದ ವ್ಯಾಜ್ಯದಲ್ಲಿ ಚೀಫ್‌ಕೋರ್ಟಿನಿಂದ ಮರಣದಂಡನೆ ವಿಧಿಸಲ್ಪಟ್ಟಿದ್ದ ಬುಡನ್, ಚೆನ್ನಬಸವ, ರಾಚಯ್ಯ ಎಂಬ ಮೂವರು ಅಪರಾಧಿಗಳೂ ಶ್ರೀಮನ್ಮಹಾರಾಜರವರ ಸನ್ನಿಧಿಗೆ ಅಪೀಲ್ ಮಾಡಿಕೊಂಡಿರಲಾಗಿ, ಬುಡನ್ನಿನ ಶಿಕ್ಷೆಯು ಮಾತ್ರ ಸ್ಥಿರಗೊಳಿಸಲ್ಪಟ್ಟು ಉಳಿದಿಬ್ಬರೂ ಮರಣಾವಧಿ ಕಾರಾಗೃಹವಾಸಶಿಕ್ಷೆಯನುಭವಿಸುವಂತೆ ಅಪ್ಪಣೆಮಾಡಲ್ಪಟ್ಟರು.

ಆಕ್ಟಿಂಗ್ ಕೌನ್ಸಿಲರಾಗಿರುವ ಮ|| ಪಿ. ರಾಘವೇಂದ್ರರಾಯರು, ಫೈನಾನ್ಸಿಯಲ್ ಸೆಕ್ರೆಟರಿಯವರಾದ ದಿ|| ಬ|| ಜೆ. ಎಸ್. ಚಕ್ರವರ್ತಿಯವರು, ಚೀಫ್‌ಕೋರ್ಟ್ ಜಡ್ಜರಾಗಿರುವ ಮ|| ಕೆ. ಎಸ್. ಚಂದ್ರಶೇಖರಯ್ಯರ್‌ರವರು-ಇವರುಗಳು ರಾಜಾಸ್ಥಾನದಲ್ಲಿ ನಡುಕಟ್ಟಬೇಕಾದ ನಿರ್ಬಂಧಕ್ಕೆ ಒಳಗಾಗಿರಬೇಕಾದುದಿಲ್ಲವೆಂದು ಶ್ರೀಮನ್ಮಹಾರಾಜರು ಅಪ್ಪಣೆ ಮಾಡಿದ್ದಾರೆ.

ಶ್ರೀಮನ್ಮಹಾರಾಜರವರು ತಮ್ಮ ಪ್ರೈವೇಟ್ ಹುಜೂರು ಸೆಕ್ರಟರಿ ಮೊದಲಾದ ಪರಿವಾರದೊಡನೆ ಕಳೆದ ಬುಧವಾರ ರಾತ್ರಿ ೮ ಗಂಟೆಯಲ್ಲಿ ಮೈಸೂರು-ಅರಸೀಕೆರೆ ಲೋಹಮಾರ್ಗ ದ್ವಾರಾ ಉತ್ತರ ಹಿಂದೂಸ್ಥಾನದ ಕಡೆಗೆ ಪ್ರಯಾಣಮಾಡಿದರು. ಇವರ ಸಂಚಾರವು ೨ ತಿಂಗಳಕಾಲ ಜರುಗುವುದೆಂದು ಕೇಳುತ್ತೇವೆ. ಸಂಚಾರವನ್ನೆಲ್ಲಾ ಸುಖಕರವಾಗಿ ಮುಗಿಸಿಕೊಂಡು ದಯಮಾಡಿಸಲೆಂದು ಕೋರುವೆವು.

ಮೈಸೂರು ದೇಶದ ವಿದ್ವತ್ಪರೀಕ್ಷೆಗೆ ಕುಳಿತುಕೊಳ್ಳತಕ್ಕವರು ಬರೆದುಕೊಳ್ಳಬೇಕಾದ ವಿಜ್ಞಾಪನಪತ್ರದ ಮಾದರಿಯ ಫಾರಮು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟಿತವಾಗಿದೆ. ಇದರ ೪ ನೆ ಕಾಲಮ್ಮಿನಲ್ಲಿ "ತ್ರಿಮತಸ್ಥರಲ್ಲಿ ಯಾವಮತ? ಎಂದು ಕೇಳಲ್ಪಟ್ಟಿದೆ. ಇದರಿಂದ ತ್ರಿಮತಸ್ಥರ ಹೊರತು ಇನ್ನಾವ ಮತದವರೂ ಪರೀಕ್ಷೆಗೆ ಬರಲಾಗದೆಂದು ನಿಷೇಧಿಸಿದಹಾಗಾಯಿತಲ್ಲವೆ? ಇತರರಿಗೆ ಪ್ರವೇಶವಿಲ್ಲವೆ?" ಎಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ. ಪರೀಕ್ಷೆಯ ಬೋರ್ಡಿನವರು ಸ್ಪಷ್ಟಪಡಿಸಬೇಕು.

ಅ|| ಕಮಿಷನರುಗಳಾದ ಮ|| ಪಿ. ಮಹಾದೇವಯ್ಯ, ಬಿ.ಎ., ಬಿ.ಎಲ್., ರವರು ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟೆರಿಯೆಟ್ಟಿನಿಂದ ರೆವಿನ್ಯೂ ಕಮಿಷನರಾಫೀಸಿಗೂ, ಮ|| ಟಿ. ಜಿ. ರಾಮಯ್ಯರ್, ಬಿ.ಎ., ಯವರು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ನಿನಿಂದ ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟೆರಿಯಟ್ಟಿಗೂ, ಮಿ|| ಎ. ಕೆ. ಸಯ್ಯದ್ ತಾಜ್‌ಪೀರಾನ್, ಬಿ.ಎ., ಯವರು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ನಿಗೂ, ಮ|| ಬಿ. ಎಸ್. ರಾಜೋಜಿರಾಯರು, ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿಯೂ, ಮ|| ಎಸ್. ನಾರಾಯಣರಾವ್, ಬಿ.ಎ., ಯವರು ದೊಡ್ಡಬಳ್ಳಾಪುರದ ಸಬ್ ಡಿವಿಜನ್ನಿಗೂ, ಮಿ|| ಎಂ. ಹಸೇನಲ್ಲಿಯವರು ಬೆಂಗಳೂರು ಸಿವಿಲ್ ಆಫೀಸರಾಗಿಯೂ, ಮಿ|| ಒಬೇದುಲ್ಲಾಯವರು ಗುಬ್ಬಿ ಸಬ್ ಡಿವಿಜನ್ನಿಗೂ, ಮ|| ಪಿ. ಎಸ್. ರಾಜಗೋಪಾಲಾಚಾರ್‌ರವರು ಪೋಲೀಸ್ ಶಾಖೆಗೂ, ಮ|| ಎಂ. ಪಿ. ವಿಶ್ವನಾಥರಾವ್‌ರವರು ಮಾಲೂರು ಸಬ್ ಡಿವಿಜನ್ನಿಗೂ, ಮ|| ಪಿ. ಎಚ್. ಕೃಷ್ಣರಾವ್ ಎಕ್ಸೈಜ್ ಶಾಖೆಗೂ, ಮ|| ಕೆ. ವಿ. ಅನಂತರಾಮನ್‌ರವರು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ನಿಗೂ, ಮ|| ಸಿ. ಬಿ. ಲಕ್ಷ್ಮಣರಾಯರು ಚೆಳ್ಳಕೆರೆ ಸಬ್ ಡಿವಿಜನ್ನಿಗೂ, ಮ|| ಟಿ. ವಿ. ಎ. ಈಶ್ವರನ್‌ರವರು ಪೋಲೀಸ್ ಶಾಖೆಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಳೆದ ತಿಂಗಳಲ್ಲಿ ನಡೆದ ನಿಯಮನಿರ್ಮಾಣ ಸಭೆಯ ಕಾಲದಲ್ಲಿ ದಿವಾನರವರು ಪ್ರಜೆಗಳನ್ನೆಲ್ಲಾ ಕುರಿತು—"ಪ್ರಜೆಗಳು ಪಕ್ಷಪ್ರತಿಪಕ್ಷಗಳನ್ನು ಮಾಡಿಕೊಂಡು ಹೋರಾಡುವುದು ದೇಶಕ್ಷೇಮವಿಘಾತಕವಾದುದರಿಂದ ಅದನ್ನು ಬಿಟ್ಟುಬಿಡಬೇಕೆಂದೂ, ಈಗ ಬ್ರಾಹ್ಮಣರಲ್ಲಿ ೫-೬ ಮಂದಿ ವಿದ್ಯಾವಂತರಿದ್ದರೆ ಇತರರಲ್ಲಿ ಒಬ್ಬರಂತೆ ಇರುವರೆಂದೂ, ಇಂಥ ವ್ಯತ್ಯಾಸವನ್ನು ತಗ್ಗಿಸುವುದಕ್ಕೆ ನಾನು ಪ್ರಯತ್ನಿಸುವೆನೆಂದೂ, ಮುಂದಾಗಿರುವವರನ್ನು ಅಡಗಿಸದೆ ಹಿಂದಾದವರನ್ನು ಮುಂಬರಿಸುವುದಕ್ಕೆ ಪ್ರಭುತ್ವದವರಿಂದ ತಕ್ಕ ಪ್ರಯತ್ನವು ಮಾಡಲ್ಪಡುವುದೆಂದೂ, ತಕ್ಕಷ್ಟು ವಿದ್ಯಾವಂತರು ಇತರರಲ್ಲಿಲ್ಲದಿರುವುದರಿಂದ ಒಂದೇ ಜನವರ್ಗದವರು ಸರ್ಕಾರದಧಿಕಾರಗಳಲ್ಲಿ ಹೆಚ್ಚಾಗಿ ಸೇರುವಂತಾಗಿರುವುದರಿಂದ ತಾರತಮ್ಯವು ಕಾಣುತ್ತಿರುವುದೆಂದೂ, ಎಲ್ಲರೂ ಒಗ್ಗಟ್ಟಾಗಿ ಕೆಲಸಮಾಡುವುದು ದೇಶಕ್ಷೇಮಕ್ಕೆ ಅವಶ್ಯಕವಾದುದೆಂದೂ ಮೊದಲಾಗಿ ಉಪನ್ಯಾಸಮಾಡಿದರಂತೆ. ಇನ್ನುಮೇಲೆ ಪಕ್ಷಭೇದಗಳನ್ನು ಬಿಟ್ಟುಬಿಡುವೆವೆಂದು ಒಬ್ಬೊಬ್ಬ ಸಭಿಕರು ಉತ್ತರಕೊಟ್ಟರಂತೆ. ಜನಮೆಚ್ಚುಗೆಗೆ ಬಾಯ್ಮಾತಿನಲ್ಲಿ ಸೌಜನ್ಯವನ್ನು ತೋರಿಸುವುದಕ್ಕಿಂತಲೂ, ಅಸೂಯೆಯಿಂದ ಅಸೂಯೆ, ಪ್ರೀತಿಯಿಂದ ಪ್ರೀತಿ ಹುಟ್ಟುವುದೆಂಬುದನ್ನು ತಿಳಿದು ಸರ್ವರೂ ಮನಶ್ಶುದ್ಧಿಯಿಂದ ನಡೆಯಲು ಪ್ರಯತ್ನಿಸಿದರೇನೆಯೇ ಪ್ರಯೋಜನವಾದೀತು.

ಭರತಖಂಡದ ವೃತ್ತಾಂತಗಳು.

ಕಳೆದ ತಿಂಗಳು ತಾ|| ೨೮ ರವರೆಗೆ ೧೬.೭೭.೪೪೦೦೦ ರೂ. ಗಳು ಯುದ್ಧ ಋಣಕ್ಕಾಗಿ ಸೇರಿದ್ದುವು.

ಸರ್ ಎಸ್. ಪಿ. ಸಿನ್ಹ ಸಿ. ಬಿ. ಯವರು ಕಳೆದ ತಾ|| ೨೪ ರಲ್ಲಿ ಸಾರ್ವಭೌಮರವರ ಸಂಗಡ ಸಂಭಾಷಣೆಗಳನ್ನು ನಡೆಯಿಸಿದರು.

ಮಾಂಟೆಗ್‌ರವರ ಭಾರತರಾಜಕೀಯ ಸಂಸ್ಕರಣ ಪತ್ರಿಕೆಯು ನಾಳೆ ಸೋಮವಾರ ಈ ದೇಶದಲ್ಲಿ ಪ್ರಕಟಿಸಲ್ಪಡುವುವೆಂದು ತಂತೀವಾರ್ತೆಗಳು ಹೇಳುತ್ತಿವೆ.

ಸೀಮೆಗೆ ಹೋಗಿರುವ ಡಾ|| ನಾಯರು ಕೂಡ ಅಲ್ಲಿ ಯಾವ ರಾಜಕೀಯ ಚಳವಳಿಯನ್ನೂ ನಡೆಯಿಸುವುದಿಲ್ಲವೆಂದು ಹೊಣೆಯಪತ್ರವನ್ನು ಬರೆದುಕೊಟ್ಟಿದ್ದಾರಂತೆ.

ಬಂಗಾಳದ ಬಾಕರ್‌ಗಂಜ್ ಜಿಲ್ಲೆಯಲ್ಲಿ ಪದಾರ್ಥಗಳ ಬೆಲೆ ಹೆಚ್ಚಿರುವುದರಿಂದ ಕಳವು ಸುಲಿಗೆ ಮೊದಲಾದುವುಗಳು ಬಹಳ ಹೆಚ್ಚಿವೆ. ಕಳೆದ ೧ ಪಕ್ಷ ಕಾಲದೊಳಗೆ ೫ ಸುಲಿಗೆಗಳೂ, ೨ ಕನ್ನಕಳವೂ ನಡೆದಿವೆ.

ಶ್ರೀಮಾನ್ ಗಂಧಿಯವರ ಪ್ರಯತ್ನವಿಶೇಷದಿಂದ ಗುಜರಾತಿನಲ್ಲಿ ಸೈನ್ಯಕ್ಕೆ ಸೇರುವವರ ಸಂಖ್ಯೆಯು ವಿಶೇಷವಾಗಿರುತ್ತದೆ. ಏಪ್ರಿಲ್ ತಾ|| ೨೨ ರಿಂದ ಜೂನ್ ತಾ|| ೨೫ ರವರೆಗೆ ಕೈರಾಜಿಲ್ಲೆಯೊಂದರಲ್ಲೇ ೧೬೯೧ ಮಂದಿಗಳು ಸೇರಿದ್ದಾರೆ.

ಕಲ್ಕತ್ತಾದಲ್ಲಿ ಯೂರೋಪಿಯನ್ನರು, ಆಂಗ್ಲೋ ಇಂಡಿಯನ್ನರು, ಭಾರತೀಯರು ಮೊದಲಾದವರಿಗೆಲ್ಲಾ ವಿದ್ಯಾಭ್ಯಾಸ ಮಾಡಿಸುವುದಕ್ಕಾಗಿ ಒಬ್ಬ ಯೂರೋಪ್ಯ ಧಾರ್ಮಿಕರು ೧೦ ಲಕ್ಷ ರೂ. ಗಳನ್ನು ಕೊಟ್ಟಿರುವರೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಜೋಧಪುರದ ಮಹಾರಾಜರು ತಮ್ಮ ಸಂಸ್ಥಾನದ ಪ್ರಜೆಗಳಿಂದ ೧೩೬೦ ಮಂದಿಗಳನ್ನು ಆರಿಸಿ ೧ ಪಟಾಲಮ್ಮನ್ನು ಮಾಡಿ ಯುದ್ಧ ಮುಗಿಯುವವರೆಗೂ ಅದಕ್ಕೆ ಆಗುವ ವೆಚ್ಚವನ್ನೆಲ್ಲಾ ತಾವೇ ವಹಿಸಿ ರಣರಂಗಕ್ಕೆ ಕಳುಹಿಸಿಕೊಡಲು ವಾಗ್ದಾನಮಾಡಿದ್ದಾರೆ.

ತಲಚೇರಿಯ ಮ್ಯುನ್ಸಿಪಲ್ ಆಫೀಸಿನ ಬಳಿಯಲ್ಲಿ ಕಿರಸನ್ ಎಣ್ಣೆಯನ್ನು ಅಗ್ಗವಾಗಿ ಮಾರಿಸುತ್ತಿರಲು ಪ್ರಜೆಗಳು ದೊಂಬಿಯಾಗಿ ಸೇರಿ ಅದನ್ನು ಕೊಂಡುಕೊಳ್ಳುವ ಒತ್ತಾಟದಲ್ಲಿ ಇಬ್ಬರು ಹುಡುಗಿಯರಿಗೆ ಸ್ಮೃತಿತಪ್ಪಿತು. ವರ್ಷದೊಳಗಣ ೩ ಕೂಸುಗಳು ಉಸುರುಕಟ್ಟಿ ಸತ್ತವು.

ಯೂರೋಪ್ಯರ ಮತ್ತು ಭಾರತೀಯರ ಮಧ್ಯದಲ್ಲಿ ಸ್ನೇಹವೃದ್ಧಿಯನ್ನು ಮಾಡುವ ಉದ್ದೇಶದಿಂದ ಮದ್ರಾಸಿನಲ್ಲಿ ಯೂನಿಯನ್ ಕ್ಲಬ್ ಎಂಬ ಹೆಸರಿನಿಂದ ಒಂದು ಸಂಘವು ಹೊಸದಾಗಿ ಕಳೆದವಾರ ಸ್ಥಾಪಿಸಲ್ಪಟ್ಟಿತು. ಇದರಲ್ಲಿ ಯಾರು ಬೇಕಿದ್ದರೂ ಸಭ್ಯರಾಗಿ ಸೇರಬಹುದು. ಇದು ರಾಜಕೀಯವಲ್ಲ.

ಮದ್ರಾಸು ಪಚ್ಚೈಪ್ಪ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದ ಮಿ|| ರೋಲೋರವರು ಮೈಸೂರು ಮಹಾರಾಜಾ ಕಲಾಶಾಲೆಯ ಆಂಗ್ಲಪಂಡಿತರಾಗಿ ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ. ಪಚ್ಚೈಪ್ಪ ಕಲಾಶಾಲೆಯ ಪ್ರಿನ್ಸಿಪಾಲ್ ಕೆಲಸಕ್ಕೆ ಪಾಟ್ನಾ ಗೌರ್ನಮೆಂಟ್ ಕಲಾಶಾಲೆಯ ಇಂಗ್ಲೀಷ್ ಪ್ರೊಫೆಸರಾಗಿದ್ದ ಮಿ|| ಜೆ. ಆಂಡ್ರ್ಯೂಸ್ಮಿತ್ ಎಂ. ಎ. ರವರು ನಿಯಮಿಸಿಕೊಳ್ಳಲ್ಪಟ್ಟಿದ್ದಾರೆ.

ಕೋರಾಬಟ್ಟೆ ಮತ್ತೂ ಒಗೆದ ಸಂದರಬಾನಿಗಳು ಅಂಚುಕಟ್ಟಿದ ಪಂಚೆಗಳು ಇವುಗಳೆಲ್ಲಾ ಬೊಂಬಾಯಿ ಯಂತ್ರಾಲಯಗಳಲ್ಲೂ ವರ್ತಕರಲ್ಲೂ ಎಷ್ಟೆಷ್ಟು ನಿಂತಿವೆಯೋ ಅದರ ಲೆಕ್ಕವನ್ನೆಲ್ಲಾ ಎತ್ತಿಸಿ ಅವುಗಳನ್ನೆಲ್ಲಾ ತಮ್ಮ ವಶಪಡಿಸಿಕೊಂಡು ಒಂದು ನಿಗದಿಯಾದ ಬೆಲೆಯಿಂದ ಅವನ್ನು ಮಾರಿಸುವುದಕ್ಕೆ ಬೊಂಬಾಯಿ ಸರ್ಕಾರದವರು ಪ್ರಯತ್ನಿಸಿದ್ದಾರೆ. ಇಂಥ ಏರ್ಪಾಟನ್ನು ಬರ್ಮಾ ಸರ್ಕಾರದವರೂ ಮಾಡಿದ್ದಾರೆ.

ಬೊಂಬಾಯಿಯಲ್ಲಿ ಈಗ ಒಂದು ತೆರದ ಜ್ವರವು ವ್ಯಾಪಿಸಿದೆ. ಇದರಿಂದ ಪ್ರಾಣಾಪಾಯವೇನೂ ಇಲ್ಲ. ಬೆನ್ನಿನಲ್ಲಿ ನೋವೂ ಜ್ವರವೂ ಪ್ರಾಪ್ತವಾಗಿ ೪-೬ ದಿನ ರೋಗಿಯು ಏಳಲಾರದವನಾಗುವನು. ಅನೇಕಾನೇಕ ಕಾರ್ಖಾನೆಗಳಲ್ಲಿ ಕೆಲಸಮಾಡುವ ಜನರು ಈ ರೋಗಗ್ರಸ್ತರಾಗಿ ನರಳುತ್ತಿರುವುದರಿಂದ ಕೆಲಸಗಳಿಗೇ ಅಡ್ಡಿಯಾಗುತ್ತಿದೆ. ಒಂದು ದೊಡ್ಡ ಮುದ್ರಣಾಲಯದಲ್ಲಿ ೩೦೦ ಜನರು ಒಂದೇ ಸಲ ಈ ರೋಗಕ್ಕೆ ಗುರಿಯಾಗಿರುವರು.

ಅಮೇರಿಕಾದಲ್ಲಿ ಎಣ್ಣೆಯ ಒದಗುವಿಕೆಯು ಕಡಿಮೆಯಾಗಿರುವುದರಿಂದ ಎಣ್ಣೆಬೀಜಗಳ ಅವಶ್ಯಕತೆ ಹೆಚ್ಚಾಗಿದೆ. ಎಲ್ಲ ರೈಲ್ವೆ ಕಂಪೆನಿಗಳವರೂ ತಮ್ಮ ಲೋಹಮಾರ್ಗಗಳ ಇಕ್ಕೆಲದಲ್ಲೂ ಹರಳುಗಿಡಗಳನ್ನು ಬೆಳೆಯಿಸಬೇಕೆಂದು ಅಲ್ಲಿ ರೈಲ್ವೆಕಂಪೆನಿಯವರು ಎಚ್ಚರಿಸಿರುವರಂತೆ. ಈಗ ಪೂರ್ವಬಂಗಾಳಾ ರೈಲ್ವೆಕಂಪೆನಿಯವರು ಈ ಪ್ರಯತ್ನವನ್ನು ಮಾಡುತ್ತಿದ್ದಾರೆ. ಬೊಂಬಾಯಿ ಅಧಿಪತ್ಯದವರು ತಮ್ಮಲ್ಲಿನ ರೈತರಿಗೆಲ್ಲಾ ಹರಳು ಬೆಳೆಸಿಡುವುದಕ್ಕೆ ಪ್ರೋತ್ಸಾಹಿಸುತ್ತಿದ್ದಾರೆ. ಈಗ ಹರಳೆಣ್ಣೆಗೆ ಬಂದಿರುವಷ್ಟು ಬೆಲೆಯು ಯಾವಾಗಲೂ ಬಂದಿರಲಿಲ್ಲ. ಪಾಳುಭೂಮಿಗಳಲ್ಲೂ ಹೊಲಗಳಲ್ಲೂ ಈ ಬೆಳೆಯನ್ನು ಬೆಳದರೆ ಸ್ವದೇಶದಲ್ಲೇ ಅಲ್ಲದೆ ಪರದೇಶದಲ್ಲೂ ಅದಕ್ಕೆ ಹೆಚ್ಚು ಬೆಲೆ ಬರುವುದು.

ಏಲೂರಿನಲ್ಲಿದ್ದ ಚಿಂತಾಶೇಷಯ್ಯ ಎಂಬ ಪಂಚಮಕುಲೋದ್ಭವರು ಮೃತರಾದರೆಂಬ ವಾರ್ತೆ ಬಂದಿದೆ. ಇವರು ತಮ್ಮ ಜನರ ಉದ್ಧಾರಕ್ಕಾಗಿ ಬಹಳ ಪಾಟುಪಡುತ್ತಿದ್ದರು. ತಮ್ಮ ಆಚಾರವ್ಯವಹಾರಗಳನ್ನು ಪರಿಶುದ್ಧವಾಗಿಟ್ಟುಕೊಂಡಿದ್ದುದಲ್ಲದೆ ತಮ್ಮ ಜನವರ್ಗದವರಿಗೆಲ್ಲಾ ಬೋಧಿಸಿ ಅಪೇಯಪಾನ ಅಭಕ್ಷ್ಯಭೋಜನಗಳನ್ನು ಬಿಡಿಸುತ್ತಿದ್ದರು. ೩೦ ವರ್ಷಕಾಲ ಉಪಾಧ್ಯಾಯವೃತ್ತಿಯಲ್ಲಿದ್ದರು. ಸಭೆಗಳಲ್ಲಿ ರಸವತ್ತಾಗಿ ಉಪನ್ಯಾಸ ಮಾಡುತ್ತಿದ್ದರು. ಸ್ಟೇಟ್‌ಸೆಕ್ರೆಟರಿಯವರು ಮದ್ರಾಸಿಗೆ ಬಂದಿದ್ದಾಗ ಆಂಧ್ರಮಹಾಜನ ಸಭಾಪ್ರತಿನಿಧಿಗಳಲ್ಲೊಬ್ಬರಾಗಿ ವಿಜ್ಞಾಪನ ಸಮರ್ಪಣೆಗೆ ಹೋಗಿದ್ದರು. ಇವರ ಪ್ರಯತ್ನವಿಶೇಷವನ್ನು ಕೇಳಿ ಸ್ಟೇಟ್‌ಸೆಕ್ರೆಟರಿಯವರು ಕೊಂಡಾಡಿದ್ದರು.

ಶ್ರೀಮಾನ್ ಬಾಲಗಂಗಾಧರ ತಿಲಕರು ಸರ್ ವಾಲೆಂಟೈನ್ ಚಿರೋಲರ ಮೇಲೆ ಮಾಡಿರುವ ವ್ಯಾಜ್ಯಸಂದರ್ಭದಲ್ಲಿ ಸೀಮೆಗೆ ಹೋಗಬೇಕಾಗಿರುವುದರಿಂದ ತಾವು ಯೂರೋಪಿನಲ್ಲಿರುವವರೆಗೂ ರಾಜಕೀಯಾಂದೋಳನವೇನನ್ನೂ ಮಾಡುವುದಿಲ್ಲವೆಂದೂ ವ್ಯಾಜ್ಯದ ಕೆಲಸವು ಮುಗಿದ ಕೂಡಲೇ ಭರತಖಂಡಕ್ಕೆ ಹಿಂದಿರುಗಿ ಬಂದುಬಿಡುವೆನೆಂದೂ ದಂಡಾಧಿಕಾರಿಗಳ ಬಳಿಯಲ್ಲಿ ಹೊಣೆಯ ನಿಬಂಧನಪತ್ರವನ್ನು ಬರೆದುಕೊಟ್ಟು ಸೀಮೆಗೆ ಹೋಗಿ ಬರುವುದಕ್ಕೆ ಅಪ್ಪಣೆಚೀಟಿಯನ್ನು ಪಡೆದುಕೊಂಡಿದ್ದಾರೆ. ಇದೇ ತೆರದ ನಿರ್ಬಂಧದಿಂದ ನಡೆದುಕೊಳ್ಳಲು ಹೊಣೆಯ ಪತ್ರವನ್ನು ಬರೆದುಕೊಟ್ಟು ಶ್ರೀಯುತ ವಿಪಿನಚಂದ್ರಪಾಲರೂ ಸಹ ಅಸ್ವಸ್ಥನಾಗಿರುವ ತಮ್ಮ ಚಿರಂಜೀವಿಯನ್ನು ನೋಡಿಕೊಂಡು ಬರಲು ಸೀಮೆಗೆ ಹೊರಡುವವರಾಗಿದ್ದಾರಂತೆ.

೨ ನೆ ಯುದ್ಧಋಣಕ್ಕೆ ಆರಂಭವಾಗಿ ೧ ತಿಂಗಳಾಯಿತು. ಇದೊಂದು ತಿಂಗಳಲ್ಲಿ ಭರತಖಂಡದಲ್ಲೆಲ್ಲಾ ೧೭.೪೯೩೨೬೦೦ ರೂ. ಗಳ ಪತ್ರವು ಕೊಳ್ಳಲ್ಪಟ್ಟವೆ.

	ವಿವರ—
ಬಂಗಾಳಾ	೪೪೮೪೯೫೦೦
ಬೊಂಬಾಯಿ	೪೨೭೯೪೪೦೦
ಸಂಯುಕ್ತಪ್ರಾಂತ	೧೨೭೨೬೯೦೦
ಮದ್ರಾಸು	೧೧೯೫೩೫೦೦
ಪಂಜಾಬು	೮೫೫೫೬೦೦
ಬರ್ಮಾ	೪೮೩೦೬೦೦
ಮಧ್ಯಪ್ರಾಂತ	೨೨೨೧೨೦೦
ಬೀಹಾರು ಒರಿಸ್ಸಾ	೧೨೨೦೨೦೦
ಅಸ್ಸಾಮು	೨೦೪೬೦೦
ಇತರರಾಷ್ಟ್ರಗಳು	೫೬೬೫೦೦

ಮದ್ರಾಸಿನ ತಿರುವಲಕ್ಕೇಣಿಯಲ್ಲಿ ಹಿಂದೂ ಮಹಮ್ಮದೀಯರ ಮನೆಗಳು ವಿಶೇಷವಾಗಿರುವ ಕಡೆಯಲ್ಲಿ ಎಲ್ಲಮ್ಮನ ದೇವಾಲಯವಿದೆ. ಹಿಂದೂ-ಮಹಮ್ಮದೀಯರ ಮನಸ್ಪರ್ಧೆಯಿಂದ ಕಳೆದ ೫ ವರ್ಷಗಳಿಂದಲೂ ಆ ದೇವರ ಉತ್ಸವವು ನಡೆದಿರಲಿಲ್ಲ. ಈ ವರ್ಷ ಪೋಲೀಸರ ಅಪ್ಪಣೆಯನ್ನು ಪಡೆದು ಉತ್ಸವವನ್ನಾರಂಭಿಸಿದರು. ಉತ್ಸವದ ಹಿಂದೆ ಕೆಲ ಯೂರೋಪಿಯನ್ ಪೋಲೀಸರೂ ರಿಜರ್ವ್ ಪೋಲೀಸರೂ ಕಾವಲಾಗಿ ಬರುತ್ತಿದ್ದರು. ಉತ್ಸವವು ಲಬ್ಬೆ ಮಸ್ಜಿದಿಯ ಬಳಿಗೆ ಬರುವಷ್ಟರಲ್ಲಿ ೨೦೦ ಮಂದಿ ಮಹಮ್ಮದೀಯರು ಸಂದಿಗೊಂದಿಗಳಿಂದ ಬಂದು ಕಟ್ಟಿ ಬೈಗುಳಗಳನ್ನಾಡುತ್ತ ನುಗ್ಗಿದರು. ಆ ಗುಂಪಿಗೆಲ್ಲಾ ಪ್ರಮುಖನಾದ ಮಹಮ್ಮದ್‌ಗೌಸ್ ಎಂಬುವವನು ಹಸೇನ್, ಹುಸೇನ್, ದೀನ್, ದೀನ್, ಮಾರೋ, ಮಾರೋ ಎಂದು ಕೂಗಿಕೊಳ್ಳುತ್ತ ಇತರರನ್ನು ಪ್ರೇರೇಪಿಸುತ್ತಿದ್ದನು. ಕೆಲ ತುರುಕರು ಹಿಂದೂಗಳಮೇಲೂ ಪೋಲೀಸರಮೇಲೂ ಕಲ್ಲುಗಳನ್ನು ಎಸೆದರು. ೩ ಮಂದಿ ಪೋಲೀಸರಿಗೂ ಒಬ್ಬ ಹಿಂದೂವಿಗೂ ಪೆಟ್ಟು ಬಲವಾಗಿ ತಗುಲಿತು. ಬಹು ಕಷ್ಟದಿಂದ ಪೋಲೀಸರು ಮುಖಂಡನನ್ನು ಹಿಡಿದು ಪೋಲೀಸು ಠಾಣಕ್ಕೆ ಸೇರಿಸಿದರು. ಬಳಿಕ ಉತ್ಸವವು ಸಾಂಗವಾಗಿ ಜರುಗಿತು. ಪೋಲೀಸರ ಕಾವಲಿಲ್ಲದಿದ್ದರೆ ಬಹಳ ಅನರ್ಥವಾಗುತ್ತಿದ್ದಿತಂತೆ. ಮುಖ್ಯಾಪರಾಧಿ ತುರುಕನು ವೆಲ್ಲೂರಿನವನಂತೆ. ವಿಚಾರಣೆಮಾಡಿ ಮ್ಯಾಜಿಸ್ಟ್ರೇಟರು ಅವನಿಗೆ ೩ ತಿಂಗಳ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ವಿದೇಶ ವೃತ್ತಾಂತಗಳು.

ರಷ್ಯಾದ ಕೆರೆನ್ಸ್ಕಿಯವರು ಲಂಡನ್ನಿನಿಂದ ಪ್ಯಾರಿಸ್ಸಿಗೆ ಹೋಗಿದ್ದಾರೆ.

ಆಸ್ಟ್ರಿಯನ್ನರೂ ಜರ್ಮನರೂ ಗ್ರೀಸಿನಮೇಲೆ ಯುದ್ಧವನ್ನು ಪ್ರಕಟಿಸಬೇಕೆಂದು ಬಲ್ಗೇರಿಯಾವು ಕೋರುತ್ತಿದೆಯಂತೆ.

ಪೂರ್ವದ ರಷ್ಯಾ ಚಕ್ರವರ್ತಿಯವರು ಕೊಲ್ಲಲ್ಪಟ್ಟರೆಂದು ಸುದ್ದಿ ಹುಟ್ಟಿದ್ದಿತು. ಈಚೆಗೆ ಅದು ಸುಳ್ಳೆಂದೂ, ಅವರ ಕುಟುಂಬದವರೆಲ್ಲಾ ಸ್ವಸ್ಥರಾಗಿರುವರೆಂದೂ ಗೊತ್ತಾಗಿರುತ್ತದೆ.

ಕಪ್ಪು ಸಮುದ್ರದಲ್ಲಿದ್ದ ರಷ್ಯನರ ಯುದ್ಧದ ಹಡಗುಗಳಲ್ಲಿ ಬಹುಭಾಗವನ್ನು ಜರ್ಮನರು ವಶಪಡಿಸಿಕೊಂಡರು. ಅವರ ಕೈಗೆ ಸಿಕ್ಕದಂತೆ ಕೆಲವನ್ನು ರಷ್ಯನರು ಮುಳುಗಿಸಿಬಿಟ್ಟರು. ಜರ್ಮನರ ದ್ರೋಹಾಚರಣೆಗಳು ರಷ್ಯನರ ಮನಸ್ಸನ್ನೆಲ್ಲಾ ದಿನದಿನಕ್ಕೆ ಕಲುಷಗೊಳಿಸುತ್ತಿವೆ.

ಅಮೇರಿಕನ್ನರು ಮಹಾವಿಸ್ತಾರವಾಗಿ ಯುದ್ಧಸನ್ನಾಹವಮಾಡುತ್ತಿರುವುದನ್ನು ಕೇಳಿದರೆ ಜರ್ಮನರಿಗೆ ಇವರಿಂದಲೇ ಮೋಕ್ಷವಾಗುವುದು ಸಿದ್ಧವೆಂದು ಕಾಣುತ್ತದೆ. ಮಹಾಫಿರಂಗಿಗಳು ಮೊದಲಾದುವುಗಳ ನಿರ್ಮಾಣಕ್ಕಾಗಿಯೇ ಅಮೇರಿಕಾದವರು ೨೫೦ ಕೋಟಿ ಡಾಲರುಗಳನ್ನೂ, ಸೈನ್ಯದ ವೆಚ್ಚಕ್ಕಾಗಿ ೧೨೦೮೫೦೦೦೦೦೦ ಡಾಲರುಗಳನ್ನೂ ವೆಚ್ಚಮಾಡಲು ಅವರು ನಿರ್ಧರಿಸಿದ್ದಾರೆ.

ಕಳೆದ ಮೇ ತಿಂಗಳಲ್ಲಿ ಶತ್ರುಗಳಿಂದಲೂ ಇತರ ಕಾರಣಗಳಿಂದಲೂ ಇಂಗ್ಲೀಷರ ವ್ಯಾಪಾರಿ ಹಡಗುಗಳು ೨೨೪೬೩೫ ಟನ್ ಭಾರ ಹೊರುವಷ್ಟು ಹಡಗುಗಳು ಮುಳುಗಿಹೋಗಿವೆ. ಮಿತ್ರಮಂಡಲಿಯ ಮತ್ತೂ ತಟಸ್ಥ ರಾಷ್ಟ್ರದವರವು ೧೩೯೫೫೫ ಟನ್ನುಗಳನ್ನು ಹೊರುವಷ್ಟು ಹಡಗುಗಳು ಮುಳುಗಿಹೋಗಿವೆ. ೧೯೧೭ ನೇ ಮೇ ತಿಂಗಳಲ್ಲಿ ೬೩೦೩೩೬ ಟನ್ನುಗಳಷ್ಟು ಹಡಗು ಮುಳುಗಿಹೋಗಿದ್ದುವು.

ಕೆನಡಾದಿಂದ ಇಂಗ್ಲೆಂಡಿಗೆ ಬರುತ್ತಿದ್ದ ಲ್ಯಾಂಡೋವರ್‌ಕ್ಯಾಸಿಲ್ ಎಂಬ ವೈದ್ಯಶಾಲಾನೌಕೆಯನ್ನು ಜರ್ಮನರ ಸಬ್‌ಮೆರೀನು ಡಾರ್ಪೆಡೊ ಏಟಿನಿಂದ ಮುಳುಗಿಸಿತು. ಅದರಲ್ಲಿ ಸೈನಿಕರಾರೂ ಇರಲಿಲ್ಲ. ನಾವಿಕರು ವೈದ್ಯಶಾಖೆಯವರು ಪರಿಚಾರಿಣಿಯವರು ಇವರೆಲ್ಲಾ ೨೫೮ ಮಂದಿ ಇದ್ದರು. ಇವರಲ್ಲಿ ಬಹುಜನರು ದೋಣಿಗಳಲ್ಲಿ ಕುಳಿತು ಪ್ರಾಣವನ್ನುಳುಹಿಕೊಂಡರು. ಶತ್ರುಗಳು ಮಾಡಿದ ಈ ಕಿರಾತಕೃತ್ಯವು ಪ್ರಪಂಚದವರನ್ನೆಲ್ಲಾ ಮತ್ತಷ್ಟು ರೇಗಿಸಿರುತ್ತದೆ.

ಜರ್ಮನಿಯಲ್ಲಿ ಆಹಾರ್ಯವಸ್ತುಗಳ ದುರ್ಭಿಕ್ಷವುಂಟಾಗಿರುವುದರಿಂದ ಮನೆಗಳಲ್ಲಿರುವ ಕೋತಿಗಳು ನಾಯಿಗಳು ಮೊದಲಾದುವನ್ನೆಲ್ಲಾ ಕೊಂದು ತಿನ್ನುತ್ತಿರುವರಂತೆ. ಹಸುಗಳಿಗೆ ತಕ್ಕಷ್ಟು ಆಹಾರವನ್ನಿಡುವುದಕ್ಕೆ ಗತಿಯಿಲ್ಲವಾಗಿದೆ. ತಕ್ಕಷ್ಟು ಹಾಲನ್ನು ಕೊಡದಿರುವ ಹಸುಗಳನ್ನೂ ಬಡಕಲಾದ ಕುದುರೆಗಳನ್ನೂ ಕೊಂದು ತಿನ್ನುತ್ತಿರುವರಂತೆ. ಹಂದಿಗಳನ್ನು ಸಾಕುವುದು ಅಸಾಧ್ಯವಾಗಿದೆ. ಮನುಷ್ಯರ ಆಹಾರ್ಯವಸ್ತುಗಳಿಗೇ ಅಭಾವವಾಗಿರುವಾಗ ಇತರ ಪ್ರಾಣಿಗಳ ಪಾಡನ್ನು ಹೇಳಬೇಕೆ? ರುಮೇನಿಯಾದಲ್ಲೂ ಈ ವರ್ಷ ಬೆಳಸು ತಕ್ಕಷ್ಟು ಆಗಿಲ್ಲವಾದುದರಿಂದಲೂ, ರಷ್ಯಾದ ದುಸ್ಥಿತಿಯಿಂದ ಅಲ್ಲಿಯ ಸಾಮಗ್ರಿಗಳೂ ಒದಗಲಾರದುದರಿಂದಲೂ ಜರ್ಮನರು ಚಿಂತಿಸುತ್ತಿದ್ದಾರೆ.

ಅಂಗಾರಕ ಗ್ರಹವು ಭೂಮಿಗೆ ಸಮೀಪವಾಗಿರುವುದರಿಂದ ಘನತಮವಾದ ದೂರದರ್ಶಕ ಯಂತ್ರದ ಸಹಾಯದಿಂದ ಆ ಗ್ರಹದೊಳಗಿರತಕ್ಕ ಪ್ರಾಣಿಗಳು ಅವರ ಕಾರ್ಯಗಳು ಮೊದಲಾದ ವಿಷಯಗಳನ್ನೆಲ್ಲಾ ತಿಳಿಯಲು ನಮ್ಮ ಭೂಮಂಡಲದ ಸಿದ್ಧಾಂತಿಗಳು ಪ್ರಯತ್ನಿಸುತ್ತಿದ್ದಾರೆ. ಸ್ಯಾನ್‌ಫ್ರಾನ್ಸಿಸ್ಕೊಪಟ್ಟಣದಲ್ಲಿ ೯ ಮೈಲಿಗಳ ಎತ್ತರವಾಗಿರುವ ವಿಲ್ಸನ್ ಬೆಟ್ಟದಮೇಲೆ ಒಂದು ನಕ್ಷತ್ರಾಲಯವನ್ನು ಕಟ್ಟಿದ್ದಾರೆ. ಅದರಲ್ಲಿ ಒಂದು ಅಭೂತಪೂರ್ವವಾದ ದೂರದರ್ಶಕ ಯಂತ್ರವನ್ನು ಸ್ಥಾಪಿಸಿದ್ದಾರೆ. ಇದನ್ನು ನಿರ್ಮಿಸುವುದಕ್ಕೆ ೧೨ ವರ್ಷಗಳ ಹಿಂದೆ ಆರಂಭಿಸಿದರು. ಈ ಯಂತ್ರದ ಗಾಜು ೧೦೦ ಅಂಗುಲಗಳ ಮಂದವಾಗಿರುವುದು. ಇದನ್ನು ನಿರ್ಮಿಸುವುದಕ್ಕೆ ೧೨ ವರ್ಷಗಳು ಹಿಡಿದುವು. ಈ ಯಂತ್ರದ ಸಹಾಯದಿಂದ ಕುಜಗ್ರಹದಲ್ಲಿರುವ ಕಾಲ್ವೆ ಮೊದಲಾದುವುಗಳನ್ನೆಲ್ಲಾ ನೋಡಬಹುದಂತೆ. ಮತ್ತೂ ಆಕಾಶಮಂಡಲದಲ್ಲಿ ಇದುವರೆಗೆ ಕಾಣುತ್ತಿರುವವುಗಳಲ್ಲದೆ ಇನ್ನೂ ೧ ಕೋಟಿ ಸೂರ್ಯಗ್ರಹಗಳನ್ನು ಕಾಣಬಹುದಂತೆ. ಕುಜಮಂಡಲದಲ್ಲಿರತಕ್ಕ ಜನರು ಬೆಳಕಿನ ದೊಡ್ಡ ದೊಡ್ಡ ಕನ್ನಡಿಗಳ ಸಂಜ್ಞೆಯ ಮೂಲಕ ನಮ್ಮ ಮಂಡಲದವರೊಡನೆ ಮಾತನಾಡಲು ಪ್ರಯತ್ನಿಸುತ್ತಿರುವರಂತೆ.

ಈಗಣ ಯುದ್ಧದಲ್ಲಿ ಆಸ್ಟ್ರೇಲಿಯಾವು ಆಂಗ್ಲಸಾಮ್ರಾಜ್ಯಕ್ಕಾಗಿ ಮಾಡಿರುವ ಸಹಾಯವೂ ಸೇವೆಯೂ ಅದ್ಭುತವಾಗಿವೆ. ಆಸ್ಟ್ರೇಲಿಯಾದ ಜನಸಂಖ್ಯೆಯು ೫೦ ಲಕ್ಷಕ್ಕೂ ಕಡಿಮೆಯಾಗಿದ್ದರೂ ಅಲ್ಲಿಂದ ೩೨೨೬೦೦ ಮಂದಿ ಸೈನಿಕರು ಫ್ರಾನ್ಸು, ಈಜಿಪ್ಟ್, ಪಾಲೆಸ್ಟೈನ್ ರಂಗಗಳಿಗೆ ಕಳುಹಿಸಿಕೊಡಲ್ಪಟ್ಟಿದ್ದಾರೆ. ಈ ಸೈನ್ಯದ ವೆಚ್ಚವನ್ನೆಲ್ಲಾ ೨ ವರ್ಷಗಳಿಂದಲೂ ಅವರೇ ವಹಿಸಿರುತ್ತಾರೆ. ಅವರ ನೌಕಾದಳವೆಲ್ಲವೂ ಸಾಮ್ರಾಜ್ಯಸೇವೆಗೇ ಅರ್ಪಿಸಲ್ಪಟ್ಟಿದೆ. ಇದುವರೆಗೆ ಅವರ ಸೈನ್ಯದಲ್ಲಿ ೪೮೦೭೮ ಮಂದಿಗಳು ರಣಾಂಗಣದಲ್ಲಿ ಮಡಿದಿರುವರು. ೧೩೩೦೦೦ ಮಂದಿಗಳಿಗೆ ಏಟುಗಳು ತಗುಲಿದುವು. ೩೨೭೪ ಮಂದಿಗಳು ಮಾತ್ರ ಶತ್ರುಗಳಿಗೆ ಸೆರೆಸಿಕ್ಕಿದರು. ಜೂನ್ ತಿಂಗಳ ಕಡೆಯವರೆಗೆ ಆಸ್ಟ್ರೇಲಿಯಾದವರು ೨೨ ಕೋಟಿ ಪೌನುಗಳ ಹಣವನ್ನು ಯುದ್ಧಾರ್ಥವಾಗಿ ವೆಚ್ಚಮಾಡಿದ್ದಾರೆ. ಅಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ೧೦೦ ಕ್ಕೆ ೮ ಮಂದಿಯಂತೆ ಸೈನ್ಯಕ್ಕೆ ಕಳುಹಿಸಿಕೊಟ್ಟಹಾಗಾಯಿತು. ಇದನ್ನು ನೋಡಲಾಗಿ ೩೩ ಕೋಟಿ ಪ್ರಜೆಯುಳ್ಳ ಭರತಖಂಡವು ೨ ಕೋಟಿ ಸೈನ್ಯವನ್ನು ಸಹಾಯಮಾಡುವುದು ಕೂಡ ದೊಡ್ಡದಲ್ಲ. ಹೀಗಿರುವಾಗ ೧೦-೨೦ ಲಕ್ಷ ಸೈನ್ಯವನ್ನು ಒದಗಿಸುವುದು ಒಂದು ದೊಡ್ಡದೆ?

ರಷ್ಯಾ ಪ್ರಜಾಪ್ರಭುತ್ವ ಸ್ಥಾಪಕರಲ್ಲಿ ಒಬ್ಬರಾಗಿ ಅಘಟಿತಘಟನಾಸಾಮರ್ಥ್ಯವುಳ್ಳವರೆಂದು ಪ್ರಖ್ಯಾತರಾಗಿ ಮಿತ್ರಮಂಡಲಿಯ ಅಭಿಮಾನಕ್ಕೆ ಪಾತ್ರರಾಗಿದ್ದ ರಷ್ಯಾ ಕೆರೆನ್ಸ್ಕಿಯವರು ಬೋಲ್ಷೆವಿಕ್ಕರ ಪ್ರಾಬಲ್ಯದಿಂದ ಪರಾಭೂತರಾಗಿ, ಅವರ ನಿರ್ಬಂಧಕ್ಕೆ ಸಿಕ್ಕಿದ್ದು, ಕಡೆಗೆ ಸಂಹರಿಸಲ್ಪಟ್ಟರೆಂಬ ವಾರ್ತೆಗೂ ಭಾಜನರಾಗಿದ್ದು, ಕೆಲ ತಿಂಗಳಿಂದ ನಾಮಮಾತ್ರವಾಗೂ ಸಹ ಮಾಡಲ್ಪಡದಿದ್ದು ಈಗ ಅಕಸ್ಮಾತ್ತಾಗಿ ಲಂಡನ್ನಿಗೆ ಬಂದಿರುವರೆಂಬ ಸುದ್ದಿಯು ಆಶ್ಚರ್ಯಕರವಾಗಿರುವುದು. ಇವರು ಮಾಸ್ಕೋಪಟ್ಟಣದಿಂದ ಹೊರಟು ಸಾವಿರಾರು ಮೈಲಿಗಳ ದೂರ ಶತ್ರುಗಳಿಗೆ ಗೋಚರಿಸದಂತೆ ಲಂಡನ್ನಿಗೆ ಹೇಗೆ ಬಂದರೋ ಅದು ಇವರ ಅಸಾಧಾರಣ ಸಾಹಸಕ್ಕೆ ನಿದರ್ಶನವಾಗಿದೆ. ಇವರು ಲಂಡನ್ ಪಟ್ಟಣದಲ್ಲಿ ಕಳೆದ ತಾ|| ೨೬ ರಲ್ಲಿ ಕೂಡಿದ್ದ ಆಂಗ್ಲಕಾರ್ಮಿಕವರ್ಗ ಮಹಾಸಭೆಗೆ ಬಂದಿದ್ದರು. ಸಭಿಕರು ಅವರಿಗೆ ಅತ್ಯಾದರಸಂತೋಷಗಳಿಂದ ಸ್ವಾಗತಮಾಡಿದರು. ಕೆರೆನ್ಸ್ಕಿಯವರು ಅಲ್ಲಿ ಉಪನ್ಯಾಸ ಮಾಡುವಾಗ-ರಷ್ಯನ್ ಪ್ರಜಾಪ್ರಭುತ್ವದವರು ದೌರ್ಜನ್ಯಪ್ರಭುತ್ವವನ್ನು ಅಡಗಿಸುವುದಕ್ಕಾಗಿಯೇ ಹೋರಾಡುವರೆಂಬುದನ್ನು ಆಂಗ್ಲಪ್ರಜೆಗಳಿಗೂ ಲೋಕಪ್ರಜೆಗಳಿಗೂ ಪ್ರಕಟಪಡಿಸುವುದೇ ತಮ್ಮ ಕರ್ತವ್ಯವೆಂತಲೂ, ಯಾರಾದರೂ ರಷ್ಯನ್ ಪ್ರಜೆಗಳ ಏಕಮತ್ಯವನ್ನು ಧ್ವಂಸಮಾಡಬಹುದಾದರೂ ರಷ್ಯನ್ ಪ್ರಜೆಗಳನ್ನು ನಾಶಮಾಡಲಾರರೆಂತಲೂ, ಲೋಕಸ್ವಾತಂತ್ರ್ಯ ರಕ್ಷಣಾರ್ಥವಾಗಿ ಯುದ್ಧಮಾಡಲು ರಷ್ಯನರು ಬೇಗನೆ ಮಿತ್ರಮಂಡಲಿಯವರೊಡನೆ ಕೂಡುವುದು ನಿಶ್ಚಯವೆಂತಲೂ ಹೇಳಿದರು. ರಷ್ಯಾವಿಷಯವಾಗಿ ಮಿತ್ರಮಂಡಲಿಯವರೊಡನೆ ಮುಂದಣ ಸ್ಥಿತಿಗತಿಯನ್ನು ಕುರಿತು ಆಲೋಚಿಸುವುದಕ್ಕೇ ಇವರು ಇಷ್ಟು ಸಾಹಸದಿಂದ ಬಂದಿರಬೇಕು.

ಜರ್ಮನರ ಮುಖ್ಯಮಂತ್ರಿ ಕುಹಲ್ಮನ್‌ರವರು ತಮ್ಮ ರಾಜ್ಯಾಂಗ ಸಭೆಯಲ್ಲಿ ಕಳೆದವಾರ ಒಂದು ಉಪನ್ಯಾಸ ಮಾಡಿದರು. ಅದರಲ್ಲಿ ತಮ್ಮ ಅಸಮರ್ಥತೆಯನ್ನೂ ಜಯದಮೂಲಕ ಯುದ್ಧಪರಿಸಮಾಪ್ತಿಮಾಡುವುದು ಅಸಂಭವನೆಂಬುದನ್ನೂ ಅವರು ಜಾಣತದದ ಮಾತಿನಿಂದ ಆಡಿ ತೋರಿಸಿರುವರಲ್ಲದೆ ಸಂಧಿಯಾದರೆ ಸಾಕೆಂಬ ತಮ್ಮ ಅಭಿಪ್ರಾಯವನ್ನೂ ಸೂಚಿಸಿದ್ದಾರೆ. ಹೇಗೆಂದರೆ—"ಈ ಯುದ್ಧವು ಪ್ರಪಂಚಯುದ್ಧವಾಗಿದೆ. ನಮಗೆ ಜಯವು ವಿಶೇಷವಾಗಿ ಲಭಿಸುತ್ತಿದ್ದರೂ ಸಂಧಿಮಾಡಿಕೊಳ್ಳಬೇಕೆಂಬ ಭಾವವು ಶತ್ರುಗಳಲ್ಲಿ ಕಾಣುವುದಿಲ್ಲ. ಜರ್ಮನರೇ ಸಂಧಿಸೂಚನೆಯನ್ನು ಹಿಂದೆ ಮಾಡಿದರು. ಪೋಪರಿಗೂ ಆ ವಿಷಯವಾಗಿ ಬರೆದಿದ್ದರು. ಜರ್ಮನರು ಪ್ರಪಂಚಾಧಿಕಾರವನ್ನು ಕೋರುತ್ತಿರುವರೆಂದು ಬಾಲ್ಪರ್ (ಆಂಗ್ಲವಿದೇಶಾಂಗಮಂತ್ರಿ) ರವರು ಹೇಳಿರುವರು. ಅದು ನಿಜವಲ್ಲ. ಅದು ಅಸಾಧ್ಯವೆಂಬುದಾಗಿ ನೆಪೋಲಿಯನ್ನಿನ ಯುದ್ಧದಿಂದಲೇ ಸ್ಪಷ್ಟವಾಗಿದೆ. ಯುದ್ಧಕ್ಕೆ ರಷ್ಯನರೇ ಕಾರಣಭೂತರು. ಫ್ರೆಂಚರೇ ಪ್ರೋತ್ಸಾಹಕರು. ಜರ್ಮನ್ ದೇಶದಲ್ಲೂ ಅಧಿನಿವೇಶನಗಳಲ್ಲೂ ಸ್ವಾತಂತ್ರ್ಯವನ್ನೂ ಬಲವನ್ನೂ ವ್ಯಾಪಾರವ್ಯಾಪ್ತಿಗಾಗಿ ಸಮುದ್ರಸ್ವಾತಂತ್ರ್ಯವನ್ನೂ ಜರ್ಮನರು ಅಪೇಕ್ಷಿಸಿದರು. ಇವು ಅವರಿಗೆ ಅತ್ಯವಶ್ಯಕವಾದುವುಗಳು. ಜರ್ಮನ್‌ಸಾಮ್ರಾಜ್ಯವೂ ಜರ್ಮನ್ ಮಿತ್ರರ ದೇಶಗಳೂ ಯುದ್ಧಕ್ಕೆ ಮುಂಚೆ ಹೇಗಿದ್ದುವೋ ಹಾಗೆಯೇ ಇರಬೇಕೆಂಬುದು ಸಂಧಿ ನಡೆಯುವುದಕ್ಕೆ ಮುಖ್ಯಾಂಶವಾಗಿದೆ. ಆದರೆ ಸಭೆಗಳಲ್ಲಿ ಪ್ರಸಂಗಮಾಡುವುದರಿಂದ ಸಂಧಿಯೆಂದಿಗೂ ಕುದುರುವುದಿಲ್ಲ. ಗೌರವವಾದ ಸಂಧಿಗೆ ಜರ್ಮನರು ಅಂಗೀಕರಿಸದೆ ಹೋಗುವುದಿಲ್ಲ. ಆದರೆ ಪರಸ್ಪರ ವಿಶ್ವಾಸವೂ ಉದಾರಭಾವವೂ ಮುಖ್ಯವಾಗಿರಬೇಕು. ನಮ್ಮ ಪ್ರಯತ್ನಗಳೆಲ್ಲಾ ಮೋಸವೆಂದೇ ನಮ್ಮ ಶತ್ರುಗಳು ತಿಳಿದುಕೊಳ್ಳುತ್ತಿರುವವರೆಗೂ ಸಂಧಿಯಾಗಲಾರದು. ಪರಸ್ಪರ ರಾಯಭಾರವು ನಡೆದಲ್ಲದೆ ಈ ಪ್ರಪಂಚ ಯುದ್ಧವು ಕೊನೆಮುಟ್ಟದು. ಕೇವಲ ಸೇನಾಪ್ರತಾಪ ವಿಜೃಂಭಣದಿಂದ ಪ್ರಯೋಜನವಿಲ್ಲ. ರಾಜನೀತಿಜ್ಞರು ಪರಸ್ಪರ ಕೂಡಿ ಮಾತನಾಡಬೇಕು." ಈ ಭಾಷಣವನ್ನು ಜರ್ಮನ್ ಕೈಜರರೂ ನೋಡಿ ಅದಕ್ಕೆ ಸಮ್ಮತಿಸಿದ್ದರಂತೆ. ಇದರಿಂದ ಜರ್ಮನರ ಸೈನಿಕದರ್ಪವು ಈಗ ಎಷ್ಟು ಮಟ್ಟಿಗೆ ಅಡಗಿದೆಯೆಂಬುದು ವ್ಯಕ್ತವಾಗುತ್ತದೆ. ಈ ಉಪನ್ಯಾಸವನ್ನು ಕೇಳಿ ಜರ್ಮನ್ ಪ್ರಜೆಗಳು ಬಹಳ ಉದ್ರೇಕಗೊಂಡಿದ್ದಾರೆ. ಜರ್ಮನ್ ಪ್ರಭುತ್ವದವರು ಇದುವರೆಗೂ ತಮ್ಮ ಸೇನಾಬಲದಿಂದ ಪ್ರಪಂಚವನ್ನೇ ಗೆದ್ದುಬಿಡುವೆವೆಂದು ವಿಜೃಂಭಿಸುತ್ತ ತಮ್ಮ ಪ್ರಜೆಗಳಿಗೆ ನಂಬುಗೆ ಹುಟ್ಟಿಸುತ್ತಿದ್ದರು. ಆದರೂ ಪರಿಸ್ಥಿತಿಯು ಅವರಿಗೆ ಸಂಶಯವನ್ನೇ ಉಂಟುಮಾಡುತ್ತಿದ್ದಿತು. ಪಶ್ಚಿಮದಲ್ಲಿ ಜರ್ಮನರು ಇಷ್ಟಾರ್ಥವನ್ನು ಪಡೆಯಲಿಲ್ಲ. ಪೂರ್ವದಲ್ಲಿ ಆಸ್ಟ್ರಿಯನ್ನರು ಬಹಳ ನಷ್ಟಪಟ್ಟರು. ರಷ್ಯಾದ ಸ್ಥಿತಿಯು ಶಾಂತವಾಗಿಲ್ಲ. ಈ ವಿಷಮಸ್ಥಿತಿಯಲ್ಲೂ ಪ್ರಜೆಗಳನ್ನು ನಿಜಸ್ಥಿತಿಯಿಂದ ವಂಚಿಸುವುದು ಅಸಾಧ್ಯವೆಂದು ಜರ್ಮನ್ ಮಂತ್ರಿಯು ನಿಜಭಾವವನ್ನು ಈಗ ವ್ಯಕ್ತಪಡಿಸಿರುವರು. ಇದರಿಂದ ಇದುವರೆಗೂ ತಮ್ಮ ಪ್ರಭುತ್ವದವರು ತಮ್ಮನ್ನು ಎಷ್ಟು ವಂಚಿಸಿದರೆಂಬುದನ್ನು ಜರ್ಮನ್ ಪ್ರಜೆಗಳು ತಿಳಿದುಕೊಂಡರಾದೀತು.

ಯುದ್ಧವಾರ್ತೆಯು.

ಪಶ್ಚಿಮರಣರಂಗದಲ್ಲಿ ಜರ್ಮನರು ಇನ್ನೂ ಮಹಾಯುದ್ಧವನ್ನು ಮರಳಿ ಆರಂಭಿಸಿಲ್ಲ. ಇಂಗ್ಲೀಷ್ ಸೇನಾಪತ್ಯಯ ಮುಂಗಡೆಯಲ್ಲೇ ಫ್ಲಾಂಡರ್ಸಿನಲ್ಲಿ ತಮ್ಮ ಸೇನೆಯ ಮುಕ್ಕಾಲು ಭಾಗವೆಲ್ಲಾ ಕೂಡಿಸಿ, ಸಾವಿರಾರು ಫಿರಂಗಿಗಳನ್ನು ಅಲ್ಲಿಗೆ ಸೇರಿಸುತ್ತಿರುವರೆಂದು ಗೊತ್ತಾಗಿರುವಕಾರಣ ಅಲ್ಲೇ ಕಡೆಯ ಮಹಾಪಸ್ಕಂದನವನ್ನಾರಂಭಿಸಬಹುದೆಂದು ಪ್ರತಿಕ್ಷಣದಲ್ಲೂ ನಿರೀಕ್ಷಿಸಲ್ಪಡುತ್ತಿರುವುದು. ಕಳೆದ ವಾರ ಇಂಗ್ಲೀಷರೂ ಫ್ರೆಂಚರೂ ಅಮೇರಿಕನ್ನರೂ ಬೇರೆಬೇರೆ ಕಡೆಗಳಲ್ಲಿ ಅವಸ್ಕಂದನಗಳನ್ನು ನಡೆಯಿಸಿ, ಶತ್ರುಗಳನ್ನು ಕೆಲಕೆಲದೂರ ಹಿಮ್ಮೆಟ್ಟಿಸಿ, ತಾವು ಮುಂದಕ್ಕೆ ಸಾಗಿ, ಶತ್ರುಗಳ ಸಾವಿರಾರು ಸೈನಿಕರನ್ನೂ ಫಿರಂಗಿ ಮೊದಲಾದುವುಗಳನ್ನೂ ವಶಪಡಿಸಿಕೊಂಡು ತಮ್ಮ ಸೈನ್ಯಪಜ್ಞ್ತಿಗಳನ್ನು ಸುದೃಢಪಡಿಸಿಕೊಂಡಿದ್ದಾರೆ. ಅಮೇರಿಕನ್ನರ ಸೈನ್ಯವು ಈಗಲೂ ಪಶ್ಚಿಮರಣರಂಗಕ್ಕೆ ಪ್ರತಿದಿನವೂ ಬಂದಿಳಿಯುತ್ತಲೇ ಇದೆ. ಇದುವರೆಗೆ ಅವರ ೧೦ ಲಕ್ಷ ಸೈನ್ಯವು ಬಂದು ಸೇರಿದೆ. ಇಟಲಿ ರಂಗಕ್ಕೂ ಇವರ ೨೦ ಸಾವಿರದಷ್ಟು ಸೈನ್ಯವು ಹೋಗಿದೆ.

ಪತ್ರವ್ಯವಹಾರ.

ಶ್ರೀ ಜಯದೇವ ವೀರಶೈವ ಬೋರ್ಡಿಂಗ್, ದಾವಣಗೆರೆ.

ವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ—

ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರವು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ದಾವಣಗೆರೆಯಲ್ಲಿ ಸನ್ ಮಜಕೂರು ಜೂನ್ ಮಾಹೆ ತಾರೀಖು ೪ ರ ಲಾಗಾಯ್ತು ಇಂಗ್ಲೀಷ್ ಹೈಸ್ಕೂಲನ್ನು ಸ್ಥಾಪನೆಮಾಡಿ ತತ್ಕಾಲಕ್ಕೆ ಇಂಗ್ಲೀಷ್ IV ನೆ ಫಾರಂ ಓಪನ್ ಮಾಡಿರುತ್ತಾರೆ. ಈ ಸ್ಕೂಲಿಗೆ ವಿದ್ಯಾಭ್ಯಾಸಕ್ಕಾಗಿ ಬರಲು ಅಪೇಕ್ಷಿಸುವ ವೀರಶೈವ ವಿದ್ಯಾರ್ಥಿಗಳಲ್ಲಿ ಬಡವರಿಗೆ ಮಾತ್ರ ಭೋಜನಕ್ಕೂ ವಸತಿಗೂ ಸಹ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಆಶೀರ್ವಾದಾಶ್ರಯಬಲದಿಂದ ಅಲ್ಲಿ ಫ್ರೀ ಬೋರ್ಡಿಂಗ್ ಸ್ಥಾಪಿತವಾಗುತ್ತೆ.

ಈ ಸ್ಕೂಲಿನ IV ನೆ ಫಾರಂನಲ್ಲಿ ವಿದ್ಯಾಭ್ಯಾಸಮಾಡಲು ಬರಬೇಕೆಂದಿರುವಂಥ ಬಡ ವಿದ್ಯಾರ್ಥಿಗಳು ಮೇಲ್ಕಂಡ ತಾರೀಖಿನೊಳಗಾಗಿ ಇವರಡಿ ರುಜು ಮಾಡಿರುವವರ ಜೊತೆಗೆ ಅಪ್ಲಿಕೇಷನ್ ಕಳುಹಿಸತಕ್ಕದ್ದು.

ಬರತಕ್ಕ ವಿದ್ಯಾರ್ಥಿಗಳು ಇದರಡಿ ನಮೂದಿಸಿರುವ ನಿಯಮಗಳಿಗೆ ಒಳಪಟ್ಟವರಾಗಿರತಕ್ಕದ್ದು.—

(1) ಪ್ರತಿಯೊಬ್ಬ ವಿದ್ಯಾರ್ಥಿಯೂ ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. (2) ವಿದ್ಯಾರ್ಥಿಯು ಬಡವನಾಗಿರುತ್ತಾನೆಂಬುವಬಗ್ಗೆ ತನ್ನ ಸ್ಥಳೀಯ ಮುಖ್ಯಸ್ಥರಿಂದ ಸರ್ಟಿಫಿಕೇಟ್ ಪಡೆದು ಅಪ್ಲಿಕೇಷನ್ ಜೊತೆಯಲ್ಲಿ ಕಳುಹಿಸತಕ್ಕದ್ದು. (3) ಪ್ರತಿಯೊಬ್ಬ ವಿದ್ಯಾರ್ಥಿಯೂ ಬೋರ್ಡಿಂಗ್ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

ತಾ|| 18—5—1918 } O. CHANNABASAPPA,
ಪ್ರೆಸಿಡೆಂಟ್.

ಹಿರಿಯೂರು ತಾಲ್ಲೂಕು ಹೂವಿನಹೊಳೆ.

ತಾ|| ೩೧-೧-೧೮ ನೆ ಗುರುವಾರ ಶ್ರೀಮದ್ವೀರಶೈವ ಸಜ್ಜನ ಜನಗಳ ಪ್ರಥಮ ಸಮ್ಮೇಳನವು ಮ|| ರಾ|| ಸಾಹುಕಾರ್ ಕೋಡಿಹಳ್ಳಿ ಕರಿಬಸಪ್ಪನವರ ಅಧ್ಯಕ್ಷತೆಯಲ್ಲಿ ನಡಸಬೇಕೆಂದು ಆ ಮುಂಚೆ ಎಲ್ಲಾ ಕಡೆಗೂ ಆಹ್ವಾನಪತ್ರಿಕೆಗಳ ಮೂಲಕ ಪ್ರಚುರಪಡಿಸಿದಮೇರೆ ಸದರಿ ತಾಲ್ಲೂಕಿನಲ್ಲಿ ಎಲ್ಲಾ ಪ್ರಾಂತ್ಯದ ಮಹಾಜನಗಳು ೨೦೦ ರವರೆಗೆ ನೆರೆದಿದ್ದರು. ಸದರಿ ಮೀಟಿಂಗಿನಲ್ಲಿ ಶ್ರೀ ಶಿವಮೂರ್ತಿ ಸಿ. ಎಂ. ಗುರಪ್ಪಯ್ಯ, ಇಂಗ್ಲೀಷ್ ವಿದ್ಯಾರ್ಥಿ ಚಳ್ಳಕೆರೆ ತಾಲ್ಲೂಕು ಚನ್ನಾಪಟ್ಟಳ್ಳಿ ಇವರು ವಿದ್ಯಾಭ್ಯಾಸದ ವಿಷಯದಲ್ಲಿ ಬಹಳ ಸ್ವಾರಸ್ಯವಾಗಿಯೂ ಗಂಭೀರವಾಗಿಯೂ ಸರ್ವರಿಗೂ ಹೃದಯಂಗಮವಾಗುವಂತೆ ಭಾಷಣಮಾಡಿದರು. ಮತ್ತು ಶ್ರೀ ಸಿ. ವಿ. ಎಂ. ವೀರಣ್ಣಯ್ಯನವರು ವೇಣ್ಕಲ್‌ಗುಡ್ಡದಮಠ ಇವರು ಸಮಾಜ ಸುಧಾರಣೆಯಲ್ಲಿಯೂ ಅಶಾಸ್ತ್ರೀಯವಾದ ವೃದ್ಧಾಚಾರ ನಡವಳಿಕೆಯಲ್ಲಿ ಇರುವ ಅನೇಕ ಕೊರತೆಗಳನ್ನು ತೋರ್ಪಡಿಸಿ ಮುಂದೆ ಸುವ್ಯವಸ್ಥೆಯಿಂದ ಎಲ್ಲಾ ಕಾರ್ಯಗಳನ್ನು ಮಾಡತಕ್ಕ ವಿಷಯದಲ್ಲಿ ಶಾಸ್ತ್ರಸಮ್ಮತ ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರು. ಮತ್ತು ಶ್ರೀ ಸಿ. ವಿ. ಎಂ. ಅಡಿವಪ್ಪಯ್ಯ ವೇಣ್ಕಲ್ ಗುಡ್ಡದ ಮಠ ಇವರು ಏಕಮತ್ಯ ಸಮಾಜದ ಒಕ್ಕಟ್ಟಿನಿಂದುಂಟಾಗುವ ಮಹತ್ತರವಾದ ಫಲಗಳನ್ನೂ ದುಂದುವೆಚ್ಚಗಳಿಂದುಂಟಾಗುವ ಅಪಾರವಾದ ನಷ್ಟಗಳನ್ನೂ ಸರ್ವರಿಗೂ ತಿಳಿಯುವಂತೆ ಸರಸವಾಗಿ ಭಾಷಣವನ್ನು ಮಾಡಿದರು. ಮ|| ರಾ|| ಚಳ್ಳಕೆರೆ ತಾಲ್ಲೋಕು ಸಾಣಿಕೆರೆ ಚನ್ನವೀರಪ್ಪನವರು ಈ ಮತದಲ್ಲಿ ಈಗ ಹಾಲಿ ನಡೆಯುತಕ್ಕ ಲಗ್ನ-ಪ್ರಸ್ಥ ವಗ್ಗೈರೆ ಕಾರ್ಯಗಳಲ್ಲಿ ಅಸಂಬದ್ಧವಾದ ವೃದ್ಧಾಚಾರಗಳನ್ನು ತಪ್ಪಿಸಿ ವೇದೋಕ್ತವಾದ ಕಲಶಸ್ಥಾಪನಾ ಮೂಲಕ ವಿವಾಹಗಳನ್ನು ಮುಂದೆ ಜಾರಿಯಲ್ಲಿ ತರಬೇಕೆಂದು ಅನೇಕ ಉದಾಹರಣೆಗಳೊಂದಿಗೆ ಭಾಷಣವನ್ನು ಮಾಡಿದರು. ಈ ಎಲ್ಲಾ ಭಾಷಣವೂ ಪೂರೈಸಿದ ನಂತರ ಈ ಸಮ್ಮೇಳನವು ಪ್ರತಿ ವರ್ಷವೂ ಒಂದೊಂದು ಪ್ರಾಂತ್ಯದ ಮುಖ್ಯ ಸ್ಥಳಗಳಲ್ಲಿ ನಡಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಲ್ಪಟ್ಟಿತು. ಸಭಾ ಸಂಬಂಧವಾದ ಎಲ್ಲಾ ಹಣದ ಜವಾಬ್ದಾರರಾಗಿ ಮ|| ರಾ|| ಕೋಡಿಹಳ್ಳಿ ಸಾಹುಕಾರ್ ಕರಿಬಸಪ್ಪನವರನ್ನು ಟ್ರೆಜರರನ್ನಾಗಿಯೂ ಮ|| ರಾ|| ಬಬ್ಬೂರು ಸಾಹುಕಾರ್ ದೊಡ್ಡ ವಿರುಪಾಕ್ಷಪ್ಪನವರು, ಹಿರಿಯೂರು ತಳ್ವಾನ ಯರಗುಂಟಪ್ಪನವರು, ಹಿರಿಯೂರು ಎಲಿ ಬಸಪ್ಪನವರು, ಸಾಣಿಕೆರೆ ಚನ್ನವೀರಪ್ಪನವರು, ಸೊಂಡೇಕೆರೆ ಲಕ್ಕಿಹಳ್ಳಿ ಚನ್ನವೀರಪ್ಪನವರು, ಮದಕರಿನಾಯ್ಕನ ಕೋಟೆ ಪಟೇಲ್ ಸಂಗಪ್ಪನವರು, ಸೊಂಡೇಕೆರೆ ಹೊಸಮನೆ ವೀರಣ್ಣನವರು, ಯಮದಾಳು ಯರಗುಂಟಪ್ಪನವರು, ಕಂದಿಕೆರೆ ತಿಪ್ಪಯ್ಯನವರು) ಹೂವಿನ ಹೊಳೆ ಬಸಪ್ಪನವರು, ಮುಸುಗಲೋಟಿ ಕೆಂಚವೀರಪ್ಪನವರು, ಎಂಜಲಗೆರೆ ದಾನಪ್ಪನವರು, ಗೂಳ್ಯದ ಸಣ್ಣಪ್ಪನವರು, ಹೊಸಳ್ಳಿ ವೀರಪ್ಪನವರು, ರಂಗೇನಳ್ಳಿ ಬಿಯಣ್ಣನವರು, ಈ ಮೇರೆ ೧೩ ಜನ ಮೆಂಬರುಗಳಾಗಿಯೂ ಮ|| ರಾ|| ಕೋಡಿಹಳ್ಳಿ ಕೆ. ದೊಡ್ಡಬಸಪ್ಪನವರು ಗೂಳ್ಯದ ಸಿದ್ದೀರಪ್ಪನವರು ಈ ಉಭಯರನ್ನು ಸಭಾಕಾರ್ಯನಿರ್ವಾಹಕರನ್ನಾಗಿಯೂ, ಯರೇಹಳ್ಳಿ ಲಿಂಗಣ್ಣನವರು ಬೇಡರಳ್ಳಿ ಚಿಕ್ಕಬಸಪ್ಪನವರು ಇವರುಗಳನ್ನು ಸಭಾಚಾಲಕರನ್ನಾಗಿಯೂ ನೇಮಿಸಲ್ಪಟ್ಟಿತು. ಮುಂದಿನ ಸಭೆಯು ಹಿರಿಯೂರು ತಾಲ್ಲೂಕು ಸೊಂಡೇಕೆರೆ ಗ್ರಾಮದಲ್ಲಿ ನಡೆಯುವಂತೆ ಸರ್ವಾನುಮತದಿಂದ ನಿರ್ಧರಿಸಲ್ಪಟ್ಟು, ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ. ಇವರಿಗೆ ಶ್ರೇಯಃಪ್ರಾರ್ಥನೆಗಳಮೂಲಕ ವಂದನೆಯನ್ನರ್ಪಿಸಿ ಜಯನಮಃಪಾರ್ವತೀಪತೇ ಎಂಬ ಜಯಘೋಷದೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಹಾಂಸಭಾವಿ.

ಈ ಹಿರೇಕೆರೂರು ಪ್ರಾಂತದ ವೀರಶೈವರು ವಿದ್ಯೆ, ಒಕ್ಕಟ್ಟು ಮುಂತಾದ ವಿಷಯಗಳಲ್ಲಿ ಬಹು ಹಿಂದೆಬಿದ್ದಿರುವುದನ್ನು ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ದಾವಣಗೆರೆ ಶ್ರೀ ಮೃತ್ಯುಂಜಯಸ್ವಾಮಿಯವರು ಪರಾಂಬರಿಸಿ ಕಳೆದ ೨ ತಿಂಗಳುಗಳಿಂದಲೂ ಈ ಪ್ರಾಂತದ ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ಸಹ ಸಂಚರಿಸಿ ಭಕ್ತರಿಗೆ ಆಚಾರ, ಏಕಮತ್ಯ, ವಿದ್ಯೆ ಮೊದಲಾದ ವಿಷಯಗಳನ್ನು ಬೋಧಿಸಿ, ಹಿರೇಕೆರೂರು ಮೊದಲಾದ ಸ್ಥಳಗಳಲ್ಲಿ ಬಹುಕಾಲದಿಂದಿದ್ದ ಅನೈಕಮತ್ಯವನ್ನು ಹೋಗಲಾಡಿಸಿ ಭೋಗಾವಿ ಎಂಬ ಹಳ್ಳಿಯಲ್ಲಿ ಒಂದು ಕನ್ನಡ ಶಾಲೆಯನ್ನು ಸ್ಥಾಪಿಸಿ ಈ ಮಲೆನಾಡಿನಲ್ಲಿ ಈವರೆಗೂ ಯಾವ ಸ್ವಾಮಿಗಳೂ ಹೊಂದದಷ್ಟು ಘನತೆಯನ್ನೂ, ಕೀರ್ತಿಯನ್ನೂ ಸಂಪಾದಿಸಿ ಪ್ರಕಾಶಿಸುತ್ತಿರುವರು. ಈ ಸ್ವಾಮಿಗಳವರ ಪ್ರಭಾವದಿಂದಲೇ ಹಾಂಸಭಾವಿಯಲ್ಲಿ ಈ ತಿಂಗಳು ೧೯ ನೆಯ ತಾರೀಖಿನಿಂದ ನಾಲ್ಕು ದಿನಗಳವರೆಗೆ ವೀರಶೈವ ಸಭೆಯು ಕೂಡಿ ಅನೇಕ ಮಹತ್ವದ ಕಾರ್ಯಗಳಾದುವು.

ಈ ಸಭೆಗೆ ಶ್ರೀ ಮೃತ್ಯುಂಜಯಸ್ವಾಮಿಗಳವರು, ಹಾವೇರಿ ಶ್ರೀ ಪಂಚಾಕ್ಷರಸ್ವಾಮಿಗಳವರು, ಶಿರ್ಶಿ, ಚಿನ್ನಮುಳಗುಂದ ಗ್ರಾಮಗಳ ಶ್ರೀ ವಿರಕ್ತಮೂರ್ತಿಗಳೂ, ಅನೇಕ ಪಟ್ಟಾಧ್ಯಕ್ಷರುಗಳೂ, ವಿದ್ವಾಂಸರುಗಳೂ, ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ, ಮಾಮಲೇದಾರ ವೇ|| ಶಾಂತವೀರಸ್ವಾಮಿ ಒಡೆಯರ್, ಶ್ರೀಮಂತ ಕಾಟೇನಳ್ಳಿ ಮುರಿಗೆಪ್ಪನವರು, ಶ್ರೀಮಂತ ಹಿರೇಕೆರೂರು ಕುಬುಸದ ದೊಡ್ಡ ಅಡಿವೆಪ್ಪನವರು ಮೊದಲಾದ ದೊಡ್ಡಮನುಷ್ಯರು ಆಗಮಿಸಿದ್ದರಲ್ಲದೆ, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಂದಲೂ, ಶ್ರೀ ಅಥಣಿ ಸಿದ್ಧಲಿಂಗಸ್ವಾಮಿಗಳವರಿಂದಲೂ, ರಾ|| ಬ|| ಅರಟಾಳ ಸಾಹೇಬರವರಿಂದಲೂ, ಶ್ರೀಯುತ ಮೆಣಸಿನಕಾಯಿ ಸಾಹೇಬರವರಿಂದಲೂ, ಬೆಳಗಾಂವಿ ಗಿಲಗಂಚಿ ಅರಟಾಳ ಹೈಸ್ಕೂಲಿನ ಅಧ್ಯಾಪಕರಿಂದಲೂ, ಸಹಾನುಭೂತಿಯ ಮತ್ತು ಆಶೀರ್ವಾದದ ಪತ್ರಗಳು ಬರೆದಿದ್ದುವು.

ಮಾಮಲೇದಾರ ವೇ|| ಶಾಂತವೀರಸ್ವಾಮಿ ಒಡೆಯರ್ ಎಲ್. ಎ. ಜಿ. ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ವಿದ್ಯೆ, ಧರ್ಮ, ಸಮಾಜಸೇವೆ, ರಾಜನಿಷ್ಠೆ, ವ್ಯಾಪಾರ, ಒಕ್ಕಲತನ, ಏಕಮತ್ಯ, ರಿಕ್ರೂಟಿಂಗ್, ವಾರಲೋನ, ಮುಂತಾದ ವಿಷಯಗಳಮೇಲೆ ಅನೇಕ ವಿದ್ವಾಂಸರಿಂದ ಉತ್ಕೃಷ್ಟವಾದ ಉಪನ್ಯಾಸಗಳಾದುವು. ಇಲ್ಲಿ ಒಂದು ಇಂಗ್ಲೀಷ್ ಸ್ಕೂಲನ್ನು ಸ್ಥಾಪಿಸಬೇಕೆಂದು ನಿರ್ಧಾರವಾಗಿ ಅದಕ್ಕಾಗಿ ಫಂಡ್ ಕೂಡಿಸುವ ಕೆಲಸವು ನಡೆಯಿತು. ಶ್ರೀ ಸ್ವಾಮಿಗಳವರ ಕೃಪೆಯಿಂದಲೂ, ರಾ|| ಸಾ|| ಶಿವಮೂರ್ತಿಸ್ವಾಮಿ ಕಣಬರಗಿಮಠ, ವೇ|| ಬಸವಾರ್ಯ ಬೂದಿಹಾಳಮಠ, ಮ|| ರಾ|| ಮಂಜಪ್ಪ ಹರ್ಡೇಕರ್, ಮ|| ರಾ|| ಗುರುಸಿದ್ಧಪ್ಪ ಸಾಂಬ್ರಾಣಿ ಮುಂತಾದವರ ವಕ್ತೃತ್ವಬಲದಿಂದಲೂ, ಸಭಿಕರ ಉದಾರಬುದ್ಧಿಯಿಂದಲೂ, ಸಾಧಾರಣ ೪೦೦೦ ರೂ. ಚಂದಾ ಪಟ್ಟಿಯಾಯಿತು. ಸುಮಾರು ೮ ಎಕರೆ ಭೂಮಿಯು ಈ ಫಂಡಿಗೆ ಸೇರುವಂತಾಯಿತು. ಸಭೆಯಲ್ಲಿಯೇ ೨೦೦೦ ರೂ. ಗಳು ಕೂಡಿದುವು. ಉಳಿದ ಹಣವನ್ನು ಎತ್ತುವುದಕ್ಕೂ ಹೆಚ್ಚು ಹಣವನ್ನು ಕೂಡಿಸುವುದಕ್ಕೂ "ಹಾಂಸಭಾವಿ ವೀರಶೈವ ವಿದ್ಯಾವರ್ಧಕ ಸಂಘ" ಎಂಬ ಒಂದು ಸಂಘವನ್ನು ಸ್ಥಾಪಿಸಿ ಅದಕ್ಕೆ ಹಿರೇಕೆರೂರು ಶ್ರೀಯುತ ಕುಬಸದ ದೊಡ್ಡ ಅಡಿವೆಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿತು. ಇಲ್ಲಿ ಸ್ಥಾಪಿಸುವ ಈ ಇಂಗ್ಲೀಷ್ ಸ್ಕೂಲಿಗೆ "ಶ್ರೀ ಮೃತ್ಯುಂಜಯ ಇಂಗ್ಲೀಷ್ ಸ್ಕೂಲ್" ಎಂಬ ಹೆಸರನ್ನಿಡಬೇಕೆಂದು ಸಭಿಕರು ತೀರ್ಮಾನಿಸಿದರು. ವೇ|| ಬಸವಲಿಂಗಶಾಸ್ತ್ರಿಗಳವರು, ವೇ|| ನಂಜುಂಡಾರಾಧ್ಯರು ಅತ್ಯುತ್ತಮವಾಗಿ ಶಿವಕಥೆಗಳನ್ನು ಮಾಡಿದರು.

ಈ ಮಹತ್ಕಾರ್ಯವನ್ನು ನೆರವೇರಿಸಲು ಮ|| ರಾ|| ಹೋಳಿ ಬಸವಪ್ಪ ನ್ಯಾಸರಗಿ ಸಿದ್ದಾಪುರ ಇವರು ಮತ್ತು ಹಾಂಸಭಾವಿ ವೀರಶೈವರು, ಬ್ಯಾಡಗಿ ಪ್ರಮುಖರು ವಿಶೇಷವಾಗಿ ಸಾಹಸಪಟ್ಟದ್ದು ಅವರಿಗೆ ಬಹಳ ಭೂಷಣಾಸ್ಪದವಾದುದಾಗಿದೆ.

ಪ್ರೇಕ್ಷಕ.

೧ ನೇ ಹಿರಿಯೂರು ತಾಲ್ಲೂಕು ಶ್ರೀಮದ್ವೀರಶೈವ ಕಾನ್ಫರೆನ್ಸ್.

ಈ ಜಗತ್ತಿನಲ್ಲಿ ಅತ್ಯಂತ ಪವಿತ್ರವಾದ ಈ ವೀರಶೈವ ಮತವು ಕಾಲವೈಚಿತ್ರ್ಯದಿಂದಲೂ, ರಾಜ್ಯ ಬದಲಾವಣೆಯಿಂದಲೂ, ವಿದ್ಯಾಭಾವ ವಗ್ಗೈರೆ ದುಸ್ಥಿತಿಗಳಿಗೆ ಈಡಾಗಿ ಕೇವಲ ಹಿಂದುಳಿದಿರುವ ಕಾರಣ ಇದನ್ನು ತನ್ನ ಪೂರ್ವಸ್ಥಾನಕ್ಕೆ ತರಲು ಮತಾಭಿಮಾನಿಗಳಾದ ಮಹನೀಯರು ಮಹಾಸಭೆಗಳನ್ನು ನಡೆಯಿಸಿ ಅತ್ಯಂತ ಮಹತ್ತರ ವಿಚಾರಗಳನ್ನು ಪ್ರಚುರಪಡಿಸಿ ಧರ್ಮೋದ್ಧಾರಗೆಯ್ಯುತ್ತಿರುವುದು ಸರಿಯಷ್ಟೆ.

ಪ್ರತಿ ಪ್ರಾಂತ್ಯಗಳಲ್ಲಿಯೂ ಅಂಥಾ ಮಹಾಸಭೆಗಳನ್ನು ನಡೆಯಿಸಿಯಾಗಲಿ ಪ್ರತಿ ಮನುಷ್ಯನು ಮಹಾಸಭೆಯಲ್ಲಿ ಪ್ರವೇಶಿಸಿ ಸುಧಾರಣೆಗೊಳ್ಳುವುದಾಗಲಿ ಅಸಾಧ್ಯವಾಗಿ ತೋರುವುದರಿಂದ ಕೆಲವು ಮಹನೀಯರುಗಳು ಪ್ರಾಂತಿಕಸಭೆ, ಧರ್ಮೋತ್ತೇಜಕಸಭೆ, ಧರ್ಮೋಜ್ಜೀವಿನೀಸಭೆ, ಸದ್ಧರ್ಮಸಭೆ, ಹಿತೋಪದೇಶಕ ಸಂಘ, ಲೈಬ್ರರಿ, ವಾಚಕಾಲಯವೇ ಮೊದಲಾದ ನಾಮಾಂತರಗಳಿಂದ ಅಲ್ಲಲ್ಲಿ ಸಭೆಗಳನ್ನು ನೆರೆಯಿಸಿ ಸಮಾಜಧರ್ಮವನ್ನು ಸುಧಾರಿಸುತ್ತಾ ಇರುರುವುದು, ಫಂಡನ್ನು ಶೇಖರಿಸಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಸಿಪ್ ಕೊಡುವುದು, ಮುಂತಾದ ಕಾರಣಗಳಿಂದ ಮತಸುಧಾರಣೆಗೆಯ್ಯುತ್ತಿರುತ್ತಾರೆ.

ಈ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಹಿರಿಯೂರು ತಾಲ್ಲೂಕೇ ವೀರಶೈವ ಜನಸಾಂದ್ರತೆಯ ಎರಡನೇ ಸ್ಥಾನವಾಗಿದ್ದು ತಹಲ್‌ವರವಿಗೂ ಯಾವ ಸುಧಾರಣೆಯನ್ನೂ ಹೊಂದದೆ ಇರುವ ವಿಚಾರ ಇಲ್ಲಿನ ಮಹಾಜನರ ಮನಸ್ಸಿಗೆ ಬಂದು ೧೯೧೮ ನೇ ಇಸವಿ ಜುಲೈ ಮಾಹೆ ತಾ|| 12.13.14 ಈ ಮೂರು ದಿವಸಗಳಲ್ಲಿ ಈ ತಾಲ್ಲೂಕಿನ ಕಾನ್ಫರೆನ್ಸ್ ನಡೆಯಿಸಬೇಕಾಗಿ ನಿರ್ಧರಿಸಿರುತ್ತಾರೆ.

ಮ|| ರಾ|| ಜಿ. ಶಾಂತವೀರಪ್ಪನವರು, ಬಿ. ಎ., ಎಕನಾಮಿಕ್ ಸೂಪರಿಂಟೆಂಡೆಂಟ್, ತುಮಕೂರು ಇವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಪ್ರೇಮದಿಂದ ಒಪ್ಪಿಗೆಕೊಟ್ಟಿರುತ್ತಾರೆಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ.

ಈ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು.

೧. ವೀರಶೈವ ಜಗದ್ಗುರು ಸಿಂಹಾಸನಾಧಿಪತಿಗಳು ಮತ್ತು ಮಠಾಧಿಕಾರಿಗಳ ಕರ್ತವ್ಯ. ೨. ವೀರಶೈವ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿ. ೩. ವೈದಿಕ ವಿದ್ಯಾಭಾವ ಅದರ ಸುಧಾರಣೆಗಾಗಿ ಮಠಾಧಿಕಾರಿಗಳ ಕರ್ತವ್ಯ. ೪. ಕೈಗಾರಿಕೆ, ವ್ಯಾಪಾರ, ಒಕ್ಕಲತನ. ೫. ಆಗಮೋಕ್ತವಾಗಿ ಧರ್ಮಕಾರ್ಯಗಳು, ತತ್ಕಾರ್ಯಗಳಲ್ಲಿನ ದುಂದುವೆಚ್ಚಗಳು. ೬. ವೀರಶೈವ ಮತದ ನಿಜತತ್ವಗಳು. ೭. ಸಮಾಜದಲ್ಲಿನ ಭಿನ್ನಾಚರಣೆಯ ಏಕರೂಪತೆ, ಉತ್ಪನ್ನವಾದಿ ಲೋಪಗಳ ಸುಧಾರಣೆ. ೮. ವೀರಶೈವ ಮತೋತ್ಕರ್ಷ ಮತ್ತು ಅಪಕರ್ಷ ಇವುಗಳ ಕಾರಣ ಸುಧಾರಣೋಪಾಯಗಳು. ೯. ವೀರಶೈವ ಬೋರ್ಡಿಂಗ್ ಸ್ಥಾಪನೆ, ಅದರ ಸ್ಥಿರಜೀವಿತ ಮೊದಲಾದ ಏರ್ಪಾಟುಗಳು, ಧನ ಅಥವಾ ಧಾನ್ಯನಿಧಿ ಇದರ ಆವಶ್ಯಕತೆ.

ಈ ಒಂಭತ್ತು ವಿಷಯಗಳಮೇಲೆ ಸಯುಕ್ತಿಕವಾಗಿಯೂ, ಸಪ್ರಮಾಣವಾಗಿಯೂ, ಸಂಕ್ಷೇಪವಾಗಿಯೂ ಉಪನ್ಯಾಸಗಳನ್ನು ಬರೆದು ಕಳುಹಿಸತಕ್ಕವರು ತಾ|| 9-7-1918 ರೊಳಗಾಗಿ ಒಳ್ಳೇ ಕಾಗದದ ಒಂದೇ ಪಕ್ಕದಲ್ಲಿ ಸ್ಫುಟವಾಗಿ ಬರೆದು ಈ ಸಭೆಯ ಸೆಕ್ರೆಟರಿಗಳವರಿಗೆ ಕಳುಹಿಸತಕ್ಕದ್ದು.

ಈ ಸಭೆಗೆ ದಯಮಾಡಿಸತಕ್ಕ ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಸಹ ಬರುವವರ ಸಂಖ್ಯೆಯನ್ನು ತಾ|| 10-7-18 ರೊಳಗಾಗಿಯೇ ಸೆಕ್ರೆಟರಿಗಳವರಿಗೆ ತಿಳಿಸುವುದಲ್ಲದೆ ದಯವಿಟ್ಟು ತಮ್ಮ ಹಾಸಿಗೆ ಹಂಬಿಗೆಯನ್ನು ಸಹ ತೆಗೆದುಕೊಂಡು ಬರುವುದು.

ಈ ಸಭೆಯಲ್ಲಿ ಪ್ರತಿನಿಧಿಗಳು ೨ ರೂಪಾಯಿ ಪ್ರೇಕ್ಷಕರು ೧ ರೂಪಾಯಿ ಪ್ರವೇಶಧನವನ್ನು ಕೊಡಬೇಕಾಗುವುದು. ವಿದ್ಯಾರ್ಥಿಗಳಿಗೂ, ವಿರಕ್ತಸ್ವಾಮಿಗಳವರಿಗೂ, ಪಟ್ಟದಚರಮೂರ್ತಿಗಳವರಿಗೂ, ಶಾಸ್ತ್ರಿಮಂಡಲಿಯವರಿಗೂ ಫ್ರೀ ಟಿಕೆಟ್ಟುಗಳು ಕೊಡಲ್ಪಡುವುವು. ಭೋಜನಾದ್ಯುಪಚಾರಗಳು ಸರ್ವರಿಗೂ ನಡೆಯಿಸಲ್ಪಡುವುವು.

ವೀರಶೈವ ಮಹಿಳೆಯರ ಧರ್ಮಸುಧಾರಣೆಗಾಗಿ ಈ ಸಭೆಗೆ ಪ್ರತಿದಿನಗಳಲ್ಲಿಯೂ ಬರಬೇಕೆಂಬ ಮಹಿಳೆಯರಿಗೋಸ್ಕರ ಪ್ರತ್ಯೇಕ ಸ್ಥಳವು ಏರ್ಪಡಿಸಲ್ಪಡುವುದು.

ಈ ಗ್ರಾಮದ ಹವೆಯು ಒಳ್ಳೇ ರೀತಿಯಲ್ಲಿದ್ದು, ವಸತಿಯು ಸೊಂಪಾಗಿದೆ. ಮತಾಭಿಮಾನಿಗಳಾದ ಮಹನೀಯರು ದಯವಿಟ್ಟು ಸಭೆಯನ್ನು ಅಲಂಕರಿಸಿ ಧರ್ಮೋದ್ಧಾರಗೊಳಿಸಬೇಕಾಗಿ ಪ್ರಾರ್ಥನೆ. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಸ್ಕೂಲು ಮಾಸ್ತರುಗಳಿಂದ ಸರ್ಟಿಫಿಕೇಟ್ ಪಡೆದು ಬರತಕ್ಕದ್ದು.

(ಈ ಸ್ಥಳದಲ್ಲಿ ಸಭಾಚಾಲಕರ ಮತ್ತೂ ಸ್ವಾಗತ ಸತ್ಕಾರಕಸಂಘದ ಮೆಂಬರುಗಳ ಹಲವು ಹೆಸರುಗಳು ಕಾಣಿಸಲ್ಪಟ್ಟಿವೆ)

೧ ನೇ ಶ್ರೀಮದ್ವೀರಶೈವ ತಾಲ್ಲೂಕು ಕಾನ್ಫರೆನ್ಸು
ವ್ಯವಸ್ಥಾಪಕ ಕಮಿಟಿಯವರ ಅಪ್ಪಣೆಪ್ರಕಾರ
ಪಟೇಲ್ ಎಚ್. ಎಸ್. ಸಿದ್ದಮಲ್ಲಪ್ಪ,
ಚೀಫ್ ಸೆಕ್ರೆಟರಿ.

ಪ್ರಸಿದ್ಧವಾದ ಜಾನುವಾರುಗಳ ಕಾಲುವಡಕದ ಎಣ್ಣೆ.

ಇದು ಜಾನುವಾರುವಿಗೆ ಕಾಲುವಡಕ, ಬಾಯಿ ಹುಣ್ಣು ಇನ್ನೂ ಇತರ ವಿಧವಾದ ಘಾಯಗಳಿಗೆ ಶ್ರೇಷ್ಠವಾದ ವ್ರಣಹಾರಿ ಔಷಧ.

ಸೀಸೆ 1 ಕ್ಕೆ 1—0—0, 0—12—0, 0—6—0.

ವಿಳಾಸ:-ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ||

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲವದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದವನಕೋಡಿ ಸೀರೆ	ರೂ. 3-8.0
		ಬಾಲಾಮಣಿ ,,	... 4-0.0
ಹೋರೂಲು ಸೀರೆ	ರೂ. 11-0.0	ಮಧುರೆ ಬೂಟಾ ಸೀರೆ	... 4.0.0
ಗೊಹರ್‌ಜಾನ್ ಸೀರೆ	... 5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ	... 3.0.0	ಜಪಾನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ	... 5-0.0	ಕಾಲರು ಟ್ವಿಲ್ ಷರಟು	...1-12.0

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ,
29 ಸಾಹುಕಾರಪೇಟೆ, ಮದ್ರಾಸ್.

ಮಕ್ಕಳ ತಲೆ ಕಜ್ಜಿ ಎಣ್ಣೆ.

ಮಕ್ಕಳ ತಲೆಯಲ್ಲಿ ಕಜ್ಜಿಯಾಗಿ ಹೇನು ಹೆಚ್ಚಿ ನಿರ್ವಾಹವಿಲ್ಲದೆ ಕೂದಲು ತೆಗೆಯಬೇಕಾಗುತ್ತೆ. ಈ ಎಣ್ಣೆ ಒಂದುಸಾರಿ ಹಚ್ಚಿದಕೂಡಲೇ ಹೇನು ಉದುರಿ ಕಜ್ಜಿ ಮಾಯವಾಗುತ್ತೆ. ಸೀಸೆ 1 ಕ್ಕೆ 1—0—0.

ಪಂಚತಿಕ್ತ ಕಷಾಯ.

(ಇಂಡ್ಯಾ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಭಂಗಾರದ ಪದಕ ಹೊಂದಿದೆ)

ಎಂಥಾ ಕಠಿಣಜ್ವರಕ್ಕೂ 2 ದಿನದ ಉಪಯೋಗದಲ್ಲಿ ನಿಶ್ಶೇಷ ಗುಣ ಕೊಡುತ್ತೆ. ಸೀಸೆ 1 ಕ್ಕೆ 0—12—0, ಡಜನ್ 1 ಕ್ಕೆ 7—8—0.

ವಿಳಾಸ:-ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ||

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 36

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಜುಲೈ ತಾ|| ೭ ರಿಂದ ೧೯೧೮ ನೆಯ ಜುಲೈ ತಾ|| ೧೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಜ್ಯೇಷ್ಠ ಬ|| ಚತುರ್ದಶಿಯಿಂದ ಆಷಾಢ ಶು|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು
7	[1]ಭಾನು	ಚತು	19-16	ಮೃಗಶಿರೆ	6-54	24
8	[2]ಸೋಮ	ಅಮಾ	17-17	ಆರಿದ್ರೆ	6-32	25
9	ಮಂಗಳ	ಪಾಡ್ಯ	16-33	ಪುನರ್ವಸು	7-27	26
10	ಬುಧ	ಬಿದಿಗೆ	17-4	ಪುಷ್ಯ	9-34	27
11	ಗುರು	ತದಿಗೆ	8-51	ಆಶ್ಲೇಷ	12-53	28
12	ಶುಕ್ರ	ಚೌತಿ	21-47	ಮಖ	17-22	29
13	ಶನಿ	ಪಂಚ	25-45	ಪುಬ್ಬ	22-52	30

(1) ಅಮಾವಾಸ್ಯಾತಿಥಿ. (2) ಅಮಾಸೋಮವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲೀಶಿಕ್ಷೈಷಾ | ಘನಪಥಕೃತಾವತಾರಾ ಪತ್ರಜ್ಞನಕ್ಷತ್ರತೋಽಪರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೀಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶಿವನಾತೀಶಯಶಃಪ್ರಕಾಶವಿಫುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಶ್ರೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜುಲೈ ತಾರೀಖು ೧೪ ನೆಯ ಭಾನುವಾರ. (ಸಂಚಿಕೆ ೨೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಕಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೋ.,
30 ೩, ಇರುಳಪ್ಪನಬೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಾವಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 31

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯನ್‌ಸ್ಟೇಟ್, ಗೋವಾ, ಫಿಜೀ ಐಲೆಂಡ್ಸ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾವ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಸುಧಾನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
15 ಆನಂದ ಬುಕ್‌ಡಿಪೋ, ಮೈಸೂರು.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩ ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨ಆ.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ— ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಳ! ಚೆನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
33 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.



ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ
ಮೂರು ಪುಸ್ತಕಗಳು ಉಚಿತ!

೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ. ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಜರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

9 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜುಲೈ ತಾ|| ೧೪ ನೆಯ ಭಾನುವಾರ.

ಹಿಂದುಳಿದವರ ವಿಜ್ಞಾಪನೆ.

(ಭಾಗ ೩.)

ಶ್ರೀಮನ್ಮಹಾರಾಜರವರ ಉತ್ತರದಲ್ಲಿ ಕಂಡ ವಿಷಯಗಳೊಳಗೆ ಇನ್ನು ೧-೨ ನ್ನು ಮಾತ್ರ ಕುರಿತು ನಾವು ಪ್ರಸ್ತಾವಿಸಬೇಕಾಗಿರುವುದು. ಅವಾವುವೆಂದರೆ—"ಮ್ಯುನ್ಸಿಪಲ್ ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಮಹಮ್ಮದೀಯರಿಗೇ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವ ಶಾಸನವನ್ನೇರ್ಪಡಿಸಬೇಕಾದ ಆವಶ್ಯಕತೆಯೇನೂ ಕಾಣುವುದಿಲ್ಲ. ಸಂಘಗಳ ಬೇರೆ ಬೇರೆ ಆರಿಸುವಿಕೆಗೆ ಆಗಲೇ ಏರ್ಪಾಟುಮಾಡಲಾಗಿದೆ" ಎಂದು ಅಪ್ಪಣೆ ಕೊಡಲಾಗಿದೆಯಷ್ಟೆ. ಇದು ಮಹಮ್ಮದೀಯ ಪ್ರಜೆಗಳಿಗೆಲ್ಲಾ ನಿರುತ್ಸಾಹವನ್ನುಂಟುಮಾಡಿರುವುದೆಂಬುದಕ್ಕೆ ಸಂಶಯವಿಲ್ಲ. ಸಂಘಗಳ ಪ್ರತ್ಯೇಕವಾದ ಆರಿಸುವಿಕೆಗೆ ಈಗಲೇ ಅವಕಾಶವನ್ನುಂಟುಮಾಡಿರುವ ವಿಧಿ ಯಾವುದೋ ಗೊತ್ತಾಗಲಿಲ್ಲ. ಈ ವಾಕ್ಯದ ಅರ್ಥವು ನಮಗೆ ಸ್ಪಷ್ಟವಾಗಲಿಲ್ಲ. ಇಂಥ ಅವಕಾಶವಿರುತ್ತಿದ್ದರೆ ಈ ಡೆಪ್ಯುಟೇಷನ್ನಿಗೇ ಮಹಮ್ಮದೀಯರು ತಲೆಯಿಕ್ಕುತ್ತಿರಲಿಲ್ಲ. ಸಾಮಾನ್ಯವಾದ ಆರಿಸುವಿಕೆ (ಜನರಲ್ ಎಲೆಕ್ಷನ್) ಯೇ ಪ್ರತ್ಯೇಕವಾದ ಆರಿಸುವಿಕೆಗೆ ಅವಕಾಶವನ್ನೀಯುವುದೆಂಬುದು ಆ ವಾಕ್ಯದ ಅರ್ಥವಾಗಿದ್ದರೆ ಪ್ರತ್ಯೇಕ ಪ್ರಾತಿನಿಧ್ಯತತ್ತ್ವಕ್ಕೆ ಅದೆಂದಿಗೂ ಸರಿಹೋಗಲಾರದು. ಪ್ರಜಾಪ್ರತಿನಿಧಿ ಸಭೆಯಲ್ಲಿ ಆಯಾ ಸಂಘ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಕೊಟ್ಟಿರುವುದೇ ಈ ವಾಕ್ಯೋಪಯೋಗದ ಲಕ್ಷ್ಯವಾಗಿದ್ದರೆ ಅದು ಸಾಕಾಗಲಾರದು. ಆ ಅವಕಾಶವು ಮ್ಯು|| ಲೋ|| ಬೋರ್ಡು ಮೊದಲಾದುವುಗಳಿಗೆಲ್ಲಾ ಅನ್ವಯಿಸುವುದಿಲ್ಲ.

ಭರತಖಂಡದಲ್ಲಿ ಪ್ರತ್ಯೇಕ ಪ್ರಾತಿನಿಧ್ಯತತ್ವದ ಪ್ರಸ್ತಾವವು ಅಂಕುರಾರ್ಪಣಗೊಂಡುದು ಮಹಮ್ಮದೀಯರಿಂದಲೇ. ಅವರ ಪ್ರಾರ್ಥನೆಯು ಇಷ್ಟರೊಳಗೇ ಹಲವು ಮ್ಯು|| ಲೋ|| ಬೋರ್ಡುಗಳಲ್ಲಿ ಅಂಗೀಕೃತವಾಗಿರುವುದಲ್ಲದೆ ಭರತಖಂಡದ ರಾಷ್ಟ್ರೀಯ ಮಹಾಸಭೆಯವರೂ ಅವರ ಪ್ರತ್ಯೇಕ ಪ್ರಾತಿನಿಧ್ಯತತ್ತ್ವಕ್ಕೆ ಅನುಮೋದಿಸಿರುತ್ತಾರೆ. ಮತ್ತೂ ಈಗತಾನೇ ಪ್ರಕಟವಾಗಿರುವ ಮಾಂಟೆಗ್ ರಾಜಕೀಯ ನೂತನ ಸುಧಾರಣದಲ್ಲೂ ಮಹಮ್ಮದೀಯರ ಮತ್ತೂ ಸಿಕ್ ಪ್ರಜೆಗಳ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶವು ಕೊಡಲ್ಪಟ್ಟಿದೆ. ಹೀಗಿದ್ದರೂ ನಮ್ಮ ಸಂಸ್ಥಾನದಲ್ಲಿ ಮಹಮ್ಮದೀಯರ ಪ್ರತ್ಯೇಕ ಪ್ರಾತಿನಿಧ್ಯಕ್ಕೂ ಅವಕಾಶವಿಲ್ಲದೆಹೋಗುವುದೆಂದರೆ ಅನ್ಯಾಯವಲ್ಲವೆ? ಮ|| ಬಾನರ್ಜಿಯವರ ನಿಯಮನಿರ್ಮಾಣಸಭಾ ಭಾಷಣದಲ್ಲಿ ಕಂಡಿರುವಂತೆ ಉಳಿದ ಹಿಂದುಳಿದವರೊಡನೆ ಮಹಮ್ಮದೀಯರು ಕೂಡಿ ಪ್ರತ್ಯೇಕ ಪ್ರಾತಿನಿಧ್ಯಸ್ವಾಮ್ಯವನ್ನು ಕೇಳಿದುದೇ ಒಂದು ತಪ್ಪಾಗಿ, ಇವರೂ ಆ ವರದಾನಕ್ಕೆ ದೂರಮಾಡಲ್ಪಟ್ಟಿದ್ದರೆ ಅದು ತುಂಬಾ ವಿಷಾದಸ್ಥಾನವೇ ಸರಿ. ಪಕ್ಷಭೇದವನ್ನು ಮಾಡಬೇಕಾಗುತ್ತದೆಂದು ಇವರ ಸ್ವಾಮ್ಯಕ್ಕೂ ಗದಾಪ್ರಯೋಗವಾಗತಕ್ಕುದು ಇಷ್ಟವಾದುದಲ್ಲ. ತಮ್ಮ ಇಷ್ಟಾರ್ಥಪೂರಣವಾಗದೆ ತಮ್ಮ ಜತೆಯಲ್ಲಿ ಬಂದಿದ್ದ ಮಹಮ್ಮದೀಯ ಸೋದರರ ಇಷ್ಟಾರ್ಥಪೂರಣವಾಗಿದ್ದರೂ ಹಿಂದೂಗಳಿಗೆ ಅದು ಅಸಹನೆಯನ್ನೇನೂ ಉಂಟುಮಾಡುತ್ತಿರಲಿಲ್ಲ. ತಮ್ಮ ಜತೆಯ ಯಾರಿಗೆ ಫಲವಾಗಿದ್ದರೂ ಅದು ತಮಗಾದ ಫಲವೇ ಎಂದು ಭಾವಿಸಿ ಸ್ವಲ್ಪವಾದರೂ ಸಮಾಧಾನಪಡುತ್ತಿದ್ದರು. ಆದರೆ ತಮ್ಮ ಜತೆಯವರಿಗೆ ಫಲವಾಗದೆ ತಮಗೆ ಮಾತ್ರ ಫಲವಾಗಿದ್ದರೆ ಅದನ್ನು ಮಹಮ್ಮದೀಯ ಸೋದರರು ಮನಃಪೂರ್ವಕವಾಗಿ ಅಂಗೀಕರಿಸುತ್ತಿದ್ದರೋ ಇಲ್ಲವೋ ಅದನ್ನು ಹೇಳಲಾರೆವು. ಮುಂದಾದರೂ ಹಿಂದೂ ಮಹಮ್ಮದೀಯ ವರ್ಗಗಳೆರಡೂ ಇದುವರೆಗಿನಂತೆಯೇ ಪರಸ್ಪರ ವಿಶ್ವಾಸೈಕ್ಯಗಳಿಂದ ಪ್ರಯತ್ನಮಾಡುತ್ತಾ ಬಂದರೆ ಆ ಸಂಘಶಕ್ತಿಯು ಇಷ್ಟಾರ್ಥಪ್ರದವಾಗದೆ ಹೋಗುವುದಿಲ್ಲ.

ಶ್ರೀಮನ್ಮಹಾರಾಜರವರ ಉತ್ತರದಲ್ಲಿ ಮುಂಬರಿದ ಬ್ರಾಹ್ಮಣವರ್ಗದವರನ್ನು ಕುರಿತು ಕೆಲವು ಮಾತುಗಳು ಹೇಳಲ್ಪಟ್ಟಿರುವುವಷ್ಟೆ. "ನಮ್ಮ ಪ್ರಜೆಗಳಲ್ಲಿ ಉಳಿದ ಜನವರ್ಗಗಳವರು ಎಷ್ಟು ರಾಜಭಕ್ತಿಯನ್ನು ಹೊಂದಿರುವರೋ ಬ್ರಾಹ್ಮಣರೂ ಅಷ್ಟೇ ಭಕ್ತಿಯನ್ನು ಹೊಂದಿರುವರೆಂದು ನಾವು ನಂಬಿರುತ್ತೇವೆ" ಎಂಬುದು ಮೊದಲಾದ ಶ್ರೀಮನ್ಮಹಾರಾಜರ ಮಾತುಗಳನ್ನು ಉದಹರಿಸಿಕೊಂಡು ಕೆಲವು ಬ್ರಾಹ್ಮಣಪತ್ರಿಕೆಗಳು ಬಹಳ ಹಿಗ್ಗುತ್ತಲಿವೆ. ತಮ್ಮಲ್ಲಿ ನಿಸರ್ಗವಾದ ಗುಣವನ್ನೇ ಪ್ರಭುಗಳು ಎತ್ತಿ ಆಡಿದ್ದರೆ ಅದಕ್ಕಾಗಿ ಇಷ್ಟು ಉಬ್ಬೇರಲು ಕಾರಣವಿರುವುದಿಲ್ಲ. ತಾನು ಮಾಡಿದ ಚಿಂತನೆಯ ಫಲಿತಾರ್ಥದಲ್ಲಿ ಸಂಶಯಗೊಂಡಿದ್ದ ವಿದ್ಯಾರ್ಥಿಯು ಸುಮುಖನಾಗಿ ಬಂದ ಪರೀಕ್ಷಾಫಲಿತಾಂಶವನ್ನು ಕೇಳಿ ಪರಮಾನಂದಗೊಳ್ಳುವನೇ ಹೊರತು, ಕಷ್ಟಪಟ್ಟು ಓದಿ ತನ್ನ ಸಾಮರ್ಥ್ಯದಲ್ಲಿ ನಂಬುಗೆಯುಳ್ಳವನು ತನ್ನ ಕೃತಾರ್ಥತೆಯ ಸುದ್ದಿಯನ್ನು ಅಗಾಧವೆಂದು ಎಂದಿಗೂ ತಿಳಿಯಲಾರನು. ಸರ್ವಪ್ರಜೆಗಳನ್ನೂ ಸಮಸುಖದುಃಖರಾಗಿರುವಂತೆ ಮಾಡಬೇಕು ಸರ್ವರನ್ನೂ ಸಮಾನದೃಷ್ಟಿಯಿಂದ ಕಾಣಬೇಕು ಎಂದು ತ್ರಿಕರಣಪೂರ್ವಕವಾಗಿಯೂ ಪ್ರಯತ್ನಿಸುತ್ತಿರುವ ಶ್ರೀಮನ್ಮಹಾರಾಜರವರು ಇತರ ತಮ್ಮ ಪ್ರಜೆಗಳಂತೆಯೇ ಬ್ರಾಹ್ಮಣವರ್ಗದವರನ್ನೂ ರಾಜಭಕ್ತಿಸಂಪನ್ನರನ್ನಾಗಿ ನಂಬಿಕೊಂಡಿದ್ದೇವೆಂದು ಹೇಳಿರುವುದು ಅತಿಶಯೋಕ್ತಿಯಲ್ಲ. ಅದು ಅವರ ನಿರ್ಮಲ ಘನಚಿತ್ತದ ಬೆಳಕಾಗಿರುತ್ತದೆ. ನಂಬುವುದು ಅವರ ಕೆಲಸವಾದರೆ ಆ ನಂಬುಗೆಯನ್ನು ಸಾರ್ಥಕಪಡಿಸಿಕೊಳ್ಳುವುದು ಯಾರ ಕೆಲಸ?

ಶ್ರೀಮನ್ಮಹಾರಾಜರವರು ತಮ್ಮ ಅರಸುಮಕ್ಕಳುಗಳ ವಿದ್ಯಾಭಿವೃದ್ಧಿಗಾಗಿ ಪ್ರತ್ಯೇಕವಾದ ಏರ್ಪಾಟು ಮಾಡಿದುದನ್ನು ನೋಡಿ ಕೆಲವರು ಸೈರಿಸಲಾರದೆ, ಅದಕ್ಕೆ ಸ್ವಜನಪಕ್ಷಪಾತವನ್ನು ಮಾಡಿ ಕೆಟ್ಟುಹೋದ ಔರಂಗಜೇಬನ ಸಾಮ್ಯವನ್ನು ಕೊಟ್ಟು ತಮ್ಮ ಅಸಹನೆಯನ್ನು ತೋರ್ಪಡಿಸಿಕೊಂಡರು. ಹಿಂದೆ ಬಿದ್ದುಹೋಗಿರುವ ಪ್ರಜೆಗಳ ಉದ್ಧರಣಕ್ಕಾಗಿ ಪ್ರಭುಗಳು ತೋರಿಸಿದ ಕನಿಕರವನ್ನು ಕಂಡು ಅವರಿಗೆ "ಆಂಟಿಬ್ರಾಹಮಿನ್" ಎಂದು ನಾಮಕರಣ ಮಾಡುವುದಕ್ಕೂ ಕೆಲವರು ಹೇಸಲಿಲ್ಲ. ಯೂರೋಪಿನ ಮಹಾಯುದ್ಧವು ಪ್ರಾಪ್ತವಾದಕೂಡಲೇ ವೃತ್ತಪತ್ರಿಕೆಗಳಲ್ಲಿ ಜರ್ಮನರ ಜಯವನ್ನು ಕೇಳಿ ಹಿಗ್ಗುವುದಕ್ಕೂ, ಅವರಿಗೆ ಸುಸ್ವಾಗತಮಾಡುವುದಕ್ಕೂ ಹೇಸದವರು ಅನೇಕರು ತಲೆದೋರಿದರು. ೧೫೦ ವರ್ಷಾವಧಿಯ ತಮ್ಮ ಸದ್ಧರ್ಮಸಂಚಾಲನೆಯಿಂದ ಭರತಖಂಡವನ್ನು ಸರ್ವತೋಮುಖವಾಗಿ ಅಭಿವೃದ್ಧಿಗೆ ತಂದ ಆಂಗ್ಲ ಪ್ರಭುತ್ವದವರಿಗೆ ಯುದ್ಧಮೂಲಕವಾದ ವಿಷಮಸಂಧಿಯು ಪ್ರಾಪ್ತವಾದುದನ್ನು ತಿಳಿದುಕೊಂಡು ಅವರಮೇಲೆ ಬಾಯಿಗೆ ಬಂದಂತೆ ವಾಗ್ಬಾಣಗಳನ್ನು ಉಪಯೋಗಿಸಿ ಹೊಟ್ಟೆಕಿಚ್ಚನ್ನು ತೀರಿಸಿಕೊಳ್ಳುವುದಕ್ಕೂ, ದುಷ್ಟವಾದ ದ್ರೋಹಗಳನ್ನಾಚರಿಸುವುದಕ್ಕೂ, ಅಶ್ರೇಯಶ್ಚಿಂತನೆಯಮೂಲಕ ಸ್ವಾರ್ಥಲಾಭಮಾಡಿಕೊಳ್ಳುವುದಕ್ಕೂ ಕೂಡ ಹಲವರು ಸಿದ್ಧರಾದರು. ಈ ತೆರನಾದ ಕಪಟರಾಜಭಕ್ತಿಯು ನಮ್ಮ ದೇಶದಲ್ಲಿ ಯಾವಾಗಲೂ ಹರಡದಿರುವಂತೆ ನಮ್ಮ ಬ್ರಾಹ್ಮಣಸಹೋದರರು ಮಾಡಿಕೊಂಡರೇನೆಯೋ ನಮ್ಮ ಪ್ರಭುಗಳ ನಂಬುಗೆಯು ಸಾರ್ಥಕವಾದೀತು; ಅವರಿಗೂ ಹಿತವಾದೀತು. ಮುಖ್ಯವಾಗಿ ಶ್ರೀಮನ್ಮಹಾರಾಜರವರು ತಮ್ಮ ಉತ್ತರದ ಕೊನೆಯಲ್ಲಿ ಬ್ರಾಹ್ಮಣರು ಉಳಿದ ಜನವರ್ಗಗಳ ನಿಸರ್ಗವಾದ ಆಶೋತ್ತರಗಳಿಗೆ ಯಾವ ಆತಂಕವನ್ನೂ ಉಂಟುಮಾಡದೆ ಇರುವವರಾಗಬೇಕೆಂದು ಅಪ್ಪಣೆಕೊಡಿಸಿರುವ ರಾಜಾಜ್ಞೆಯೊಂದನ್ನು ಇವರುಗಳು ಭಂಗಪಡಿಸದೆ ನೆರವೇರಿಸಿಕೊಟ್ಟರೆ ಪ್ರಭುಗಳ ನಂಬುಗೆಯೆಲ್ಲವೂ ಸಾರ್ಥಕವಾಗುವುದಲ್ಲದೆ ದೇಶಕ್ಕೂ ಕ್ಷೇಮವಾದೀತು. "ಸತ್ಯಂ ದಾನಂ ಕ್ಷಮಾ ಶೀಲ ಮಾನೃಶಂಸ್ಯಂ ತಪೋ ಘೃಣಾ| ದೃಶ್ಯಂತೇ ಯತ್ರ ನಾಗೇಂದ್ರ ಸಬ್ರಾಹ್ಮಣ ಇತಿಸ್ಮೃತಃ" ಎಂಬ ಮಹಾಭಾರತ ವಾಕ್ಯದಲ್ಲಿ ಕಂಡಂತೆ ಬ್ರಾಹ್ಮಣ ಗುಣಧರ್ಮವನ್ನು ಅವರುಗಳು ರಕ್ಷಿಸಿಕೊಂಡಂತೆಯೂ ಆದೀತು.

ಭಾರತ ರಾಜಕೀಯ ಸಂಸ್ಕರಣಗಳು.

ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೆಗ್‌ರವರೂ ವೈಸ್‌ರಾಯಿ ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರೂ ಸಹ ಕೂಡಿ ನಿರ್ಣಯಿಸಿರುವ ರಾಜಕೀಯ ಸಂಸ್ಕರಣಗಳು ಕಳೆದ ಸೋಮವಾರ ಭರತಖಂಡದಲ್ಲಿ ಪ್ರಕಟಿಸಲ್ಪಟ್ಟಿರುತ್ತವೆ. ಇವೆಲ್ಲಾ ೧೭೭ ಪುಟಗಳುಳ್ಳ ೧ ದೊಡ್ಡ ಗ್ರಂಥವಷ್ಟಾಗಿದೆ. ಇದರಲ್ಲಿ ೨ ಭಾಗಗಳಿವೆ. ೮೮ ಪುಟಗಳುಳ್ಳ ಮೊದಲಭಾಗದಲ್ಲಿ ವಿಷಯವಿಮರ್ಶೆಯೂ, ೮೯ನೆ ಪುಟದಿಂದ ೧೫೫ ಪುಟಗಳವರೆಗೂ ೨ನೆ ಭಾಗದಲ್ಲಿ ನಾನಾಸೂಚನೆಗಳೂ ಉಪೋದ್ಘಾತವೂ ಇವೆ. ವಿಷಯಸೂಚನೆ, ತಾತ್ಕಾಲಿಕವಿಭಜನಸೂಚನೆ, ಮೊದಲಾದುವುಗಳನ್ನು ವಿವರಿಸುವ ಅನುಬಂಧಪುಟಗಳು ೧೨ ಸೇರಿವೆ. ಇಷ್ಟು ವಿಸ್ತಾರವಾಗಿರುವ ಸೂಚನಾಪತ್ರವನ್ನು ಸಿದ್ಧಮಾಡುವುದರಲ್ಲಿ ಇವರ ಕರ್ತೃಗಳ ಮೂಲಪುರುಷರಿಬ್ಬರೂ ಅವರ ಸಹಕಾರಿಗಳೂ ಪಟ್ಟ ಶ್ರಮಸಾಹಸಗಳು ಅಲ್ಪವಾಗಿರಲಾರವು. ಭರತಖಂಡದಲ್ಲಿ ಬಾಧ್ಯತಾಯುತ ಪರಿಪಾಲನವನ್ನು ಸ್ಥಾಪಿಸಿ ದೇಶವನ್ನು ಮುಂದಕ್ಕೆ ತರುವುದರಲ್ಲಿ ಆಂಗ್ಲ ಮಂತ್ರಿಮಂಡಲದವರಿಗೂ, ಸ್ಟೇಟ್‌ಸೆಕ್ರೆಟರಿಯವರಿಗೂ, ವೈಸ್ರಾಯರಿಗೂ ಇರುವ ಪ್ರೀತಿ ಭಾವನೆಗಳು ಇದುವರೆಗೇ ದೇಶೀಯರ ನಿದರ್ಶನಕ್ಕೆ ಬಂದಿರುತ್ತವೆ. ಈ ದೇಶದ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ತಿಳಿದು ತಕ್ಕ ರಾಜಕೀಯಸುಧಾರಣೆಗಳನ್ನು ಏರ್ಪಡಿಸುವುದಕ್ಕಾಗಿಯೇ ಸ್ಟೇಟ್‌ಸೆಕ್ರೆಟರಿ ಮಾಂಟೆಗ್‌ರವರನ್ನೂ ಇನ್ನು ಕೆಲ ಸಭಿಕರನ್ನೂ ಸಹ ಪಾರ್ಲಿಮೆಂಟಿನವರು ಭರತಖಂಡಕ್ಕೆ ಕಳುಹಿಸಿಕೊಟ್ಟಿದ್ದರು. ಅವರಮೇಲೆ ಈ ವಿಷಮಯುದ್ಧದ ಅಪಾಯಸಮಯದಲ್ಲೂ ಆ ಮಹನೀಯರುಗಳು ಭರತಖಂಡಕ್ಕೆ ಬಂದು ಇಲ್ಲಿಯ ಪ್ರಮುಖಸಂಘಗಳ ಮತ್ತೂ ಜನರ ಅಭಿಪ್ರಾಯಗಳನ್ನೆಲ್ಲಾ ವಿಜ್ಞಾಪನಪತ್ರಗಳಮೂಲಕವೂ ಪ್ರತ್ಯಕ್ಷಸಂಭಾಷಣಗಳಮೂಲಕವೂ ಅರಿತುದಲ್ಲದೆ ದೇಶದ ರಾಜ್ಯಾಧಿಕಾರನಿರ್ವಾಹಕರ ಅನುಭವವಿಶೇಷವನ್ನೂ ತಿಳಿದು ಸ್ವಪರಿಪಾಲನಸ್ಥಾಪನೆಗೆ ದಾರಿಹಾಕಿಕೊಡುವ ಸಂಸ್ಕರಣಗಳಾವುವೆಂಬುದನ್ನು ನಿರ್ಧರಿಸಿ, ಅವನ್ನೇ ಈ ನಿವೇದಿಕೆಯಲ್ಲಿ ವಿವರಿಸಿ ಇಂಗ್ಲಾಂಡ್ ಪ್ರಭುತ್ವದವರಿಗೆ ಸಮರ್ಪಿಸಿರುತ್ತಾರೆ. ಇದರಮೇಲೆ ಸಾಧಕಬಾಧಕಗಳನ್ನು ಕುರಿತು ಚರ್ಚಿಸಿ ಭಾರತೀಯರು ಅಭಿಪ್ರಾಯಕೊಡಬಹುದು. ಆ ಬಳಿಕ ಇದು ಪಾರ್ಲಿಮೆಂಟಿನ ಮುಂದೆ ವಿಮರ್ಶೆಗೆ ಹೋಗಿ ಒಪ್ಪಿಗೆ ಪಡೆದರೆ ವಿಧಿಯಾಗಿ ಏರ್ಪಡುವುದು. ಆದುಕಾರಣ ಈ ನಿವೇದಿಕೆಯಲ್ಲಿ ಕಂಡವೆಲ್ಲ ವಿಷಯಗಳೂ ಈಗನಂತೆಯೇ ವಿಧಿಯಾಗುವುವೆಂದಾಗಲೀ ಸಂಪೂರ್ಣವಾಗಿ ತಳ್ಳಿಹಾಕಲ್ಪಡುವುವೆಂದಾಗಲೀ ಹೇಳಲಾಗುವುದಿಲ್ಲ. ಅದರೂ ಬಲುಮಟ್ಟಿಗೆ ಇವು ಅಂಗೀಕರಿಸಲ್ಪಡುವುವೆಂಬುದಕ್ಕೆ ಸಂಶಯವಿಲ್ಲ. ಇನ್ನೊಂದು ಕಡೆಗೆ ವ್ಯವಧಾನಕೊಡುವುದಕ್ಕೆ ಲೇಶವೂ ಅವಕಾಶವಿಲ್ಲದಿರುವಂಥ ಈಗಣ ಯುದ್ಧದ ಬಿಕ್ಕಟ್ಟಿನ ಸಮಯದಲ್ಲೂ ಆಂಗ್ಲಪ್ರಭುತ್ವದವರು ಭರತಖಂಡದಮೇಲಣ ಹಿತಾಪೇಕ್ಷೆಯಿಂದ ಇಲ್ಲಿಯ ಪರಿಪಾಲನದಲ್ಲಿ ವಿಶೇಷ ಸುಧಾರಣೆಯನ್ನು ಕಾಲೋಚಿತವಾಗಿ ಮಾಡಬೇಕೆಂದು ತೋರಿಸುತ್ತಿರುವ ಶ್ರದ್ಧೆಗಾಗಿ ಭಾರತೀಯರೆಲ್ಲರೂ ಕೃತಜ್ಞರಾಗಿರಬೇಕಾಗಿರುವುದಲ್ಲದೆ, ಏಕಪಕ್ಷೀಯ ದೃಷ್ಟಿಯಿಂದಲೂ ಸ್ವಾರ್ಥೈಕಸಾಧನಮತಿಯಿಂದಲೂ ಈ ಸೂಚನೆಯಮೇಲೆ ಗುಣಾಗುಣ ವಿಮರ್ಶೆಯನ್ನು ಮಾಡದೆ ದೇಶಸ್ಥಿತಿ ಕಾಲಸ್ಥಿತಿ ಪ್ರಭುತ್ವಕೃತಜ್ಞತೆಗೆ ಮೊದಲಾದುವುಗಳೆಲ್ಲವನ್ನೂ ತಮ್ಮ ಕಣ್ಣಮುಂದಿಟ್ಟುಕೊಂಡು ವಿಮರ್ಶಿಸಿ ತಂತಮ್ಮ ಅಭಿಪ್ರಾಯಗಳನ್ನು ಕೊಡಬೇಕಾಗಿದೆ. ಈ ಕ್ಷಣದಲ್ಲಿ ಸಂಪೂರ್ಣಸ್ವಪರಿಪಾಲನವನ್ನು ನಮಗೆ ಕೊಡದಿದ್ದರೆ ನಾವು ಇದನ್ನು ಒಪ್ಪುವುದಿಲ್ಲವೆಂದು ಕೆಲವರು ಹೇಳಿಬಿಟ್ಟ ಮಾತ್ರಕ್ಕೇ ಇದರಮೇಲಣ ವಿಮರ್ಶೆಗೆ ಕೊಡಲ್ಪಟ್ಟ ಅಧಿಕಾರವನ್ನು ಅವರು ಸಾರ್ಥಕಪಡಿಸಿಕೊಂಡಂತಾಗುವುದಿಲ್ಲ; ಆಗತಕ್ಕ ಸುಧಾರಣೆಗಳು ನಿಂತೂ ಹೋಗುವುದಿಲ್ಲ. ಬರಿಯ ಹಠವಾದಿತನವನ್ನು ತೋರಿ ಪೆಡಸುಮಾಡಿಕೊಳ್ಳುವುದಕ್ಕಿಂತಲೂ ಅನುಕೂಲವಾದಷ್ಟನ್ನು ಅಂಗೀಕರಿಸಿ, ಅನನುಗ್ರಹೀತವಾಗದಿದ್ದುವನ್ನು ಮುಂದೆ ಪಡೆಯುವುದಕ್ಕೆ ತಕ್ಕ ಕ್ರಮದಿಂದ ಪಡೆದುಕೊಳ್ಳುವುದೇ ವಿಹಿತವಾದ ಮಾರ್ಗವಾಗಿರುತ್ತದೆ. ಹಾಗಲ್ಲದಿದ್ದರೆ "ಅಸಂತುಷ್ಟೋ ದ್ವಿಜೋನಷ್ಟಃ" ಎಂಬ ವಚನಾರ್ಥಕ್ಕೆ ಭಾಗಿಗಳಾದರೂ ಆಗಬಹುದು. ಈಗ ಸೂಚಿಸಲ್ಪಟ್ಟಿರುವ ವಿಧಾನಗಳೂ ಕೂಡ ಉದಾರಭಾವವುಳ್ಳವುಗಳಾಗಿಯೂ ಸ್ವಪರಿಪಾಲನಶಕ್ತಿಯನ್ನು ರೂಢಮೂಲಗೊಳಿಸುವುದಕ್ಕೆ ಹದಿಗಟ್ಟಿದಂತೆಯೂ ಇರುವುವೆಂಬುದಕ್ಕೆ ಸಂಶಯವಿಲ್ಲ. ನಿಷ್ಪಕ್ಷಮತಿಯಿಂದ ವಿಮರ್ಶೆಮಾಡಿರುವ ವಿದೇಶೀಯಾಂಗ್ಲ ಪತ್ರಿಕೆಗಳೂ, ನಮ್ಮ ದೇಶದ ರಾಜಕೀಯಾನುಭವವಿಶಿಷ್ಟರಾದ ಸರ್ ಸತ್ಯೇಂದ್ರಪ್ರಸನ್ನ ಸಿಂಹ, ಭೂಪೇಂದ್ರನಾಥ ಬಾಸು, ಶ್ರೀನಿವಾಸಶಾಸ್ತ್ರಿ, ಪರಾಂಜಪೆ ಮೊದಲಾದ ಮಹನೀಯರನೇಕರು ಹಿತಾಭಿಪ್ರಾಯವನ್ನೇ ಕೊಟ್ಟಿರುತ್ತಾರೆ. ತೀಕ್ಷ್ಣ ಸ್ವರಾಜ್ಯವಾದಿಗಳು ಮಾತ್ರ ಕಠಿನವಾಗಿ ಇದನ್ನು ತಿರಸ್ಕರಿಸುತ್ತಲೂ ನಿಂದಿಸುತ್ತಲೂ ಇದ್ದಾರೆ. ಅದರಂತೆ ಇದನ್ನು ಧಿಕ್ಕರಿಸಬೇಕೆಂದು ಪ್ರಜೆಗಳೆಲ್ಲರಿಗೂ ಬೋಧಿಸುತ್ತಲೂ ಇದ್ದಾರೆ. ಭರತಖಂಡಕ್ಕೆ ನಿಜವಾದ ಹಿತವಾಗಬೇಕಾಗಿದ್ದರೆ ಆಂಗ್ಲಛತ್ರಾಶ್ರಯದ ಮೂಲಕವಲ್ಲದೆ ಅನ್ಯಥಾ ಇಲ್ಲ. ಅದೂ ಕೂಡ ಆ ಪ್ರಭುತ್ವದ ಪ್ರೀತಿಔದಾರ್ಯಗಳಿಂದ ಸಿದ್ಧಿಸಬೇಕಲ್ಲದೆ ವಿರೋಧದಿಂದಲೂ ಬಲಾತ್ಕಾರದಿಂದಲೂ ಸಿದ್ಧಿಸಲಾರದು. ಈಗ ಕೊಡಲ್ಪಡಲಿಕ್ಕಿರುವ ವರದಾನಕ್ಕಾದರೂ ಭರತಖಂಡದ ವಿದ್ಯಾಧಿಕರ ವಾಕ್ಪೋರಾಟವೇನೂ ಕಾರಣವಲ್ಲ. ಸ್ವರಾಜ್ಯವೆಂದರೇನೆಂಬುದನ್ನು ಸ್ವಪ್ನದಲ್ಲೂ ಅರಿಯದಿರುವ ಜನವರ್ಗಗಳಿಂದಲೇ ಹೆಚ್ಚಾಗಿ ಹೊರಬಿದ್ದು ರಣರಂಗಕ್ಕೆ ಹೋಗಿ ಸಾಮ್ರಾಜ್ಯರಕ್ಷಣೆಗಾಗಿ ತಮ್ಮ ದೇಹಗಳನ್ನರ್ಪಿಸುವುದಕ್ಕೂ ಹಿಂದೆಗೆಯದಿರುವ ಭಾರತೀಯ ಭಟರ ರಾಜಭಕ್ತಿ ವಿನಯವಿಧೇಯತೆಗಳೇ ಮುಖ್ಯಕಾರಣವು. ಹೀಗೆನ್ನುವಾಗ ನಮಗೆ ಉತ್ತರೋತ್ತರ ವಿಶಿಷ್ಟಫಲಗಳಾವುವು ಬೇಕಾಗಿದ್ದರೂ ಇದೇ ತೆರದ ರಾಜಭಕ್ತಿ ವಿಶ್ವಾಸಗಳನ್ನು ನಾವು ಇನ್ನೂ ಅಧಿಕಾಧಿಕವಾಗಿ ಪ್ರದರ್ಶಿಸಿ ಆಂಗ್ಲಪ್ರಭುತ್ವದವರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ, ಅವರ ಉಚ್ಚಧರ್ಮಗಳೇ ಅವರ ಸಹಜಸ್ವಾತಂತ್ರ್ಯಧರ್ಮಪ್ರೀತಿಯೇ ಅವರ ಮನಸ್ಸನ್ನು ಚುಚ್ಚಿ ನಾವು ಕೇಳುವ ಸ್ವಾತಂತ್ರ್ಯವನ್ನು ಲಗುಬಗೆಯಿಂದ ಕೊಡುವಂತೆ ಮಾಡಿಸುವಹಾಗೆ ನಾವುಗಳು ನಡೆದುಕೊಳ್ಳಬೇಕಾಗಿದೆ. "ಕಾಂಗ್ರೆಸ್ ಸಭೆಯವರೂ, ಮುಸ್ಲಿಂಲೀಗಿನವರೂ ಕೋರಿರುವಂಥ ಪ್ರಾರ್ಥನೆಗಳನ್ನು ಕೊಡದಿದ್ದರೆ ನಾವು ಯುದ್ಧದ ಸಾಲಕ್ಕೆ ಹಣವನ್ನು ಕೊಡುವುದಿಲ್ಲ; ಸೈನ್ಯಕ್ಕೆ ಜನರನ್ನು ಸೇರಿಸುವುದಿಲ್ಲ" ಎಂದು ಮುಂತಾಗಿ ಕೆಲವು ಸ್ವರಾಜ್ಯವಾದಿಗಳು ಹೇಳುವುದಕ್ಕೂ ಹಾಗೆ ಮಾಡಲು ಇತರರನ್ನು ಪ್ರೇರಿಸುವುದಕ್ಕೂ ಅಲ್ಲಲ್ಲಿ ಉಜ್ಜುಗಿಸಿದ್ದಾರೆಂದು ಕೇಳುತ್ತೇವೆ. ಈ ರೀತಿಯು ರಾಜಾನುಗ್ರಹಕ್ಕೆ ಮಾರ್ಗಮಾಡ ದೇಶಕ್ಕೆ ಮತ್ತಷ್ಟು ವಿಘಾತವನ್ನು ತಂದಿಕ್ಕೀತಲ್ಲದೆ ಎಂದಿಗೂ ಸತ್ಫಲಪ್ರದವಾಗಲಾರದು. ಭರತಖಂಡದವರು ಎಷ್ಟೇ ಪಾಡುಪಟ್ಟು ೧೫೦ ಕೋಟಿ ರೂ. ಗಳನ್ನು ಕೊಡಿಸಿಕೊಟ್ಟರೂ ಅದು ಆಂಗ್ಲಪ್ರಭುತ್ವದವರ ೧೫ ದಿನಗಳ ಯುದ್ಧದ ವೆಚ್ಚಕ್ಕೂ ಸಾಕಾಗುವುದಿಲ್ಲ. ಹೀಗಿರುವಾಗ ಇದು ಯಾವ ಮಹಾಸಹಾಯ? ಇದರಲ್ಲಿ ಅವರಿಗಾಗುವ ಲಾಭಕ್ಕಿಂತಲೂ ನಮ್ಮ ಲಾಭವೇ ಹೆಚ್ಚಾಗಿರುವುದು. ನಡೆಯುವ ಮಹಾಪರ್ವದಲ್ಲಿ ನಮ್ಮದಷ್ಟು ಸಂಬಾರದ ಸಹಾಯವನ್ನು ಮಾಡಿ ಪರಿಣಾಮಫಲಕ್ಕೆ ನಾವೂ ಭಾಗಿಗಳಾಗಿ ನಿಂತುಕೊಳ್ಳುವುದು ಜಾಣತನವಲ್ಲವೆ?

ಈ ಸಂಸ್ಕರಣ ಸೂಚಿಕೆಯಲ್ಲಿ ಅನೇಕ ವಿಷಯಗಳು ತುಂಬಿರುವುವು. ಅವನ್ನೆಲ್ಲಾ ನಮ್ಮ ಚಿಕ್ಕ ಪತ್ರಿಕೆಯಲ್ಲಿ ವಿವರಿಸುವುದು ಸಾಧ್ಯವಲ್ಲ. ಆದರೂ ಮುಖ್ಯಮುಖ್ಯ ಭಾಗಗಳನ್ನು ಸಂಗ್ರಹಿಸಿ ಮುಂದೆ ಪ್ರಕಟಿಸುತ್ತೇವೆ. ಪ್ರತ್ಯೇಕ ಪ್ರಾತಿನಿಧ್ಯತತ್ವದ ವಿಷಯವಾಗಿ ಈ ಸಂಸ್ಕರಣದಲ್ಲಿ ಅನುವು ಕೊಡಲ್ಪಟ್ಟಿರುವುದಿಲ್ಲ. ಸ್ಥಾನಿಕ ಸ್ವಪರಿಪಾಲನ ಕ್ರಮವನ್ನು ಸಾಧ್ಯವಾದ ಮಟ್ಟಿಗೂ ಪ್ರಜೆಗಳಿಗೆ ಸಂಪೂರ್ಣ ವಶಮಾಡಬೇಕೆಂಬುದು ಉದ್ದೇಶವೆಂದು ಹೇಳಲ್ಪಟ್ಟು ಸಾಧ್ಯವಾದ ಸಾಧನಗಳೆಲ್ಲಾ ನಿರೂಪಿಸಲ್ಪಟ್ಟಿದ್ದರೂ, ಪ್ರತ್ಯೇಕ ಸಂಘ ಪ್ರಾತಿನಿಧ್ಯದ ಅನುಕೂಲ್ಯವನ್ನು ಮಹಮ್ಮದೀಯ ಸಿಕ್ ಜನರ ಹೊರತಾಗಿ ಉಳಿದವರಾರಿಗೂ ಕೊಟ್ಟಿರುವುದಿಲ್ಲ. ಆ ತತ್ತ್ವವು ಯುಕ್ತವಾದುದೆಂದು ಅವರಿಂದ ಭಾವಿಸಲ್ಪಟ್ಟಿತೆಂಬುದಕ್ಕೆ ಒಂದೆರಡು ಜನವರ್ಗಕ್ಕಾದರೂ ಪ್ರತ್ಯೇಕ ಪ್ರಾತಿನಿಧ್ಯದ ಸ್ವಾಮ್ಯವನ್ನು ಕೊಡಲು ಅಂಗೀಕರಿಸಿದುದೇ ನಿದರ್ಶನವಾಗಿದೆ. ಅವೆರಡು ಜನವರ್ಗಕ್ಕೇ ಅದನ್ನನುಗ್ರಹಿಸಬೇಕಾಗಿದ್ದರೆ ವಿಶಿಷ್ಟ ಕಾರಣಗಳಿಲ್ಲದೆ ಇಲ್ಲ. ಆ ವರ್ಗಗಳು ಯುದ್ಧಸಹಾಯ ವಿಷಯದಲ್ಲಿ ತೋರಿಸುತ್ತಿರುವ ಶ್ರದ್ಧೆಯೂ, ಅವರಲ್ಲಿರುವ ಐಕ್ಯದೃಢಪ್ರಯತ್ನಗಳೂ ಸಹ ಅದಕ್ಕೆ ಕಾರಣವು. ಅವರ ವರ್ತನವನ್ನನುಸರಿಸಿ ಭರತಖಂಡದ ಹಿಂದುಳಿದ ಹಿಂದೂ ಮಹಾಜನರೆಲ್ಲರೂ ತಮ್ಮ ಸಂಖ್ಯೆಗನುಗುಣವಾಗಿ ತಮ್ಮಲ್ಲಿ ಐಕ್ಯವೂ ನಿರ್ವಾಹಶಕ್ತಿಯೂ ಅರ್ಹತೆಯೂ ಕರ್ತೃತ್ವಶಕ್ತಿಯೂ ಎಷ್ಟಿರುವುವೆಂಬುದನ್ನು ತಮ್ಮ ಸಹಜ ರಾಜಭಕ್ತಿಯನ್ನು ಮುಂಬರಿಸಿಕೊಂಡು ಪ್ರಭುತ್ವದವರ ಕಣ್ಣುಗಳಿಗೆ ತಟ್ಟುವಂತೆ ಮಾಡಿದರೆ ಇವರ ಆಕಾಂಕ್ಷೆಗಳೂ ಫಲಿಸದೆ ಹೋಗಲಾರವು. ಪ್ರತ್ಯೇಕ ಪ್ರಾತಿನಿಧ್ಯತತ್ತ್ವದ ಅಭ್ಯುದಯವಾಗಿ ಇನ್ನೂ ಸ್ವಲ್ಪ ಕಾಲವಾಗಿರುವುದು. ಇಷ್ಟರೊಳಗಾಗಿ ಆ ಶಿಶುವು ಸಂತಾನವನ್ನೀಯುವ ಸ್ಥಿತಿಗೆ ಬರಲಿಲ್ಲವೆಂದು ಯಾರೂ ನಿರಾಶೆಯನ್ನೂ ವಿಷಾದವನ್ನೂ ಪಡಬೇಕಾದುದಿಲ್ಲ. ಕಾಲ ಕಳೆದಂತೆ ಆ ಶಿಶುವನ್ನು ಸರ್ವಾಂಗಪುಷ್ಟಿಗೊಳಿಸಲು ಹಿಂದುಳಿದ ಜನವರ್ಗಗಳವರೆಲ್ಲಾ ಅವಿಶ್ರಾಂತವಾದ ಎಚ್ಚರಿಕೆಯನ್ನು ಅದರ ವಿಷಯದಲ್ಲಿ ತೆಗೆದುಕೊಳ್ಳುತ್ತಿರಬೇಕು. ಸಮಯಸಿಕ್ಕಿದಾಗಲೆಲ್ಲಾ ಪ್ರತ್ಯೇಕ ಪ್ರಯತ್ನವನ್ನು ಅದಕ್ಕಾಗಿ ಮಾಡುತ್ತಿರಬೇಕು. ಪ್ರಕೃತದಲ್ಲಿ ಸೂಚಿತವಾಗಿರುವ ಸಂಸ್ಕರಣಪ್ರಣಾಳಿಕೆಯಲ್ಲಿ ೧-೨ ಜನವರ್ಗಗಳಿಗೆ ಮಾತ್ರ ಪ್ರತ್ಯೇಕ ಪ್ರಾತಿನಿಧ್ಯಸ್ವಾಮ್ಯಲಾಭಕ್ಕೆ ಅವಕಾಶವಿತ್ತು ಇತರ ಕೋಟ್ಯಂತರ ಜನರಿಗೆ ಅದರ ಲಾಭವನ್ನು ಮಾಡಿಕೊಡದೆ ಹೋಗುವುದರಿಂದ ರಾಜ್ಯಾಂಗದಲ್ಲಿ ತಮ್ಮಗಳ ಪಾಲುಗಾರಿಕೆಯು ಬಿದ್ದು ಬಹಳ ನಷ್ಟವಾಗುವ ಸಂಭವವಿರುವುದನ್ನು ವೈಸ್ರಾಯರಿಗೂ, ಇಂಡ್ಯಾ ಮಂತ್ರಿಯವರಿಗೂ ಪಾರ್ಲಿಮೆಂಟಿನವರಿಗೂ ಸಹ ಪ್ರಕಟಪಡಿಸಿಕೊಳ್ಳುವ ಪ್ರಯತ್ನವನ್ನು ಎಲ್ಲ ಕಡೆಯವರೂ ತಪ್ಪದೆ ಮಾಡಬೇಕು. ಏಕೆಂದರೆ ತಂತಮ್ಮ ಅಭಿಪ್ರಾಯಗಳನ್ನು ತಿಳಿಯಿಸುವುದಕ್ಕೇ ಈಗ ಪ್ರಭುತ್ವದವರು ನಮಗೆ ಅವಕಾಶವಿತ್ತಿರುವರು. ಅದನ್ನು ನಾವು ವ್ಯರ್ಥಪಡಿಸಿಕೊಂಡು ಕಾಲ ಮಿಂಚಿದಮೇಲೆ ಸಂಕಟಪಟ್ಟು ಹಂಬಲಿಸಿಕೊಂಡರೆ ಫಲವೇನು?

ವಾದ್ಯವಾದನ.

ರಾಜಧಾನಿಯ ವಿಜ್ಞಾರೋಡಿನ ಪಕ್ಕದಲ್ಲಿರುವ ಉದ್ಯಾನವನದಲ್ಲಿ ಅರಮನೆಯ ಹಿಂದೂಬ್ಯಾಂಡಿನವರ ಹಿಂದೂಸ್ಥಾನಿ ಕಾನ್ಸರ್ಟನ್ನು ಕೃತ್ತಾ ಹಬ್ಬದದಿನವೂ ಅದರ ಮರುದಿನವೂ ಸಹ ನಡೆಯಿಸುವುದಕ್ಕೆ ಏರ್ಪಡಿಸಿದ್ದುದಕ್ಕಾಗಿ ಶ್ರೀಮನ್ಮಹಾರಾಜರವರಿಗೂ ಅವರ ಅರಮನೆಯ ಅಧಿಕಾರಿಗಳಿಗೂ ಸಹ ಪುರಪ್ರಜೆಗಳು ವಿಶೇಷ ಕೃತಜ್ಞರಾಗಿರುವರು. ಅರಮನೆಯ ಸಂಗೀತ ವಿದ್ವಾಂಸರೇ ಸೇರಿ ಏರ್ಪಡಿಸಿರುವ ಕಾನ್ಸರ್ಟನ್ನು ಇದಕ್ಕೆ ಮುಂಚೆ ಪುರನಿವಾಸಿಗಳು ಕೇಳಿದ್ದರು. ಈ ನವೀನವಾದ ಕಾನ್ಸರ್ಟನ್ನು ಕೇಳಿ ಆನಂದಿಸುವುದಕ್ಕೆ ಇದೇ ಮೊದಲು. ಇದನ್ನು ಮಿ|| ಅಫೀಜ್‌ಖಾನ್ ಗವಾಯಿರವರೂ ಮ|| ಬ್ಯಾಂಡ್‌ಮ್ಯಾಸ್ಟರ್ ವೆಂಕಟಪ್ಪನವರೂ ಸೇರಿ ಕಳೆದ ನಾಲ್ಕೇ ತಿಂಗಳಲ್ಲಿ ಅಭ್ಯಾಸಮಾಡಿಸಿದರೆಂದು ಕೇಳುವುದಕ್ಕೆ ಸಂತೋಷವಾಗುತ್ತದೆ. ಇದರಲ್ಲಿ ಸೇರಿರುವವರೆಲ್ಲಾ ಸ್ವದೇಶೀಯ ವಾದ್ಯಗಾರರೇ. ಈ ಕಾನ್ಸರ್ಟಿನಲ್ಲಿ ೨ ವೀಣೆ, ೨ ಪಿಟೀಲು, ೨ ದಿಲ್ರುಬಾ, ೨ ಸಿತಾರು, ೧ ಸಾರಂಗಿ,

೧ ಆರ್ಮೋನಿಯಂ, ೧ ಓಬೋ, ೧ ತಬಲಾ ಇಷ್ಟು ವಾದ್ಯಗಳು ಸೇರಿರುತ್ತವೆ. ಹಿಂದೂಸ್ಥಾನಿ ಮಟ್ಟುಗಳು ಬಲು ಇಂಪಾಗಿ ಬಾಜಿಸಲ್ಪಡುತ್ತವೆ. ಜಮಾವಣೆಯು ಸೊಗಸಾಗಿದೆ. ಮಹಮ್ಮದೀಯರೇ ಅಲ್ಲದೆ ಸಾವಿರಾರುಮಂದಿ ಹಿಂದೂಗಳೂ ಸೇರಿ ಇದನ್ನು ಕೇಳಿ ಬಹಳ ಆನಂದಪಟ್ಟರು. ಬಯಲಿನಲ್ಲಲ್ಲದೆ ಆವರಣವುಳ್ಳ ಭವನಗಳಲ್ಲಿ ಈ ವಾದ್ಯವಾದನವು ನಡೆದರೆ ಜಮಾವಣೆಯು ಇನ್ನೂ ಚೆನ್ನಾಗಿ ಶ್ರಾವ್ಯವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಕೈ. ಚಾಮರಾಜೊಡೆಯರವರ ಕಾಲದಲ್ಲಿ ಕೈ|| ಬಸವಪ್ಪಾಜಿ ಅರಸಿನವರು ಹೊಸದಾಗಿ ಏರ್ಪಡಿಸಿದ ಹಿಂದೂಬ್ಯಾಂಡೇ ಬಹು ವಿಶೇಷವೆಂದು ಭಾವಿಸಲ್ಪಟ್ಟಿದ್ದಿತು. ಈಗಣ ನಮ್ಮ ಪ್ರಭುಗಳ ಕಾಲದಲ್ಲಿ ಸ್ವದೇಶದ ಬ್ಯಾಂಡು ನಾನಾಮುಖವಾದ ಅಭಿವೃದ್ಧಿಗೆ ತರಲ್ಪಟ್ಟಿದೆ. ಹೊರಗಣ ಸಿಕ್ ಗೂರ್ಖಾ ಮೊದಲಾದ ವಾದ್ಯಗಾರರು ನಮ್ಮ ಸೀಮೆಯ ಮೈಸೂರು ಬ್ಯಾಂಡಿನಲ್ಲಿ ಸೇರಿ ಸಮೃದ್ಧವಾದ ವೇತನವನ್ನು ಪಡೆದು, ಉತ್ತಮವಾದ ಶಿಕ್ಷಣವನ್ನು ಹೊಂದಿ ನಿಪುಣರಾಗಿ ಕಡೆಗೆ ಎಷ್ಟೋ ಜನರು ಸ್ವದೇಶಗಳಿಗೆ ಓಡಿಹೋದರು. ಈಗ ನಮ್ಮ ಮಹಾರಾಜರು ಸ್ವದೇಶದ ವಾದ್ಯಗಾರರನ್ನೇ ವಿಶೇಷವಾಗಿ ಸೇರಿಸಿ, ಅವರಿಗೆ ತಕ್ಕ ವಿದ್ಯಾಭ್ಯಾಸವನ್ನು ಕೊಡಿಸಿ, ಪ್ರೋತ್ಸಾಹಕರವಾದ ಸಂಬಳವನ್ನಿತ್ತು ಪರಿಪಾಲಿಸುತ್ತಿರುವರು. ಈ ಜನರೂ ಕೂಡ ವಿದ್ಯಾಭಿವೃದ್ಧಿಯಲ್ಲಿ ಕುತೂಹಲಗೊಂಡು ಅತ್ಯಾದರದಲ್ಲಿ ವ್ಯಗ್ರರಾಗಿರುವರು. ತಮ್ಮ ಜನರ ವಾದ್ಯವಿದ್ಯಾಭ್ಯಾಸಕ್ಕೇ ಪ್ರತ್ಯೇಕಶಾಲೆಯನ್ನೇರ್ಪಡಿಸಿಕೊಡಬೇಕೆಂದು ಇವರು ಕೇಳುತ್ತಿರುವರು. ನಮ್ಮ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸಶಾಖೆಯವರು ಈ ಉಚಿತವಾದ ಪ್ರಯತ್ನಕ್ಕೆ ಅವಲಂಬನೆಯನ್ನಿತ್ತರೆ ಮೈಸೂರುದೇಶದ ವಾದ್ಯಗಾರರು ದಕ್ಷಿಣದೇಶದಲ್ಲೆಲ್ಲಾ ಅಗ್ರೇಸರರೆಂಬ ಹೆಸರನ್ನು ಸ್ವಲ್ಪಕಾಲದಲ್ಲೇ ಸಂಪಾದಿಸಿಕೊಳ್ಳಬಲ್ಲರು. ಸಕಲ ವಿದ್ಯೆಗೂ ಅದ್ವಿತೀಯವಾದ ಪ್ರೋತ್ಸಾಹವನ್ನು ಮಾಡುತ್ತಿರುವ ನಮ್ಮ ಶ್ರೀಮನ್ಮಹಾರಾಜರ ಕಾಲದಲ್ಲಿ ಈ ಗಾನವಿದ್ಯೆಯೂ ಕೂಡ ವಿಜೃಂಭಿಸುವುದು ಯುಕ್ತವಾಗಿಯೇ ಇದೆ. ಸರ್ವವಿಧದಿಂದಲೂ ಪ್ರಜಾರಂಜನೆ ಮಾಡುವುದೇ ತಮ್ಮ ಪ್ರಥಮಕರ್ತವ್ಯವೆಂದು ತಿಳಿದಿರುವ ನಮ್ಮ ಪ್ರಭುಗಳು ಮಹಮ್ಮದೀಯರ ಹಬ್ಬದಲ್ಲಿ ಇಂಥ ವಾದ್ಯಶ್ರವಣಕ್ಕೆ ಏರ್ಪಡಿಸಿ ಪುರನಿವಾಸಿಗಳನ್ನು ಆನಂದಪಡಿಸಿದಂತೆ ಹಿಂದೂಗಳ ಮುಖ್ಯವಾದ ಹಬ್ಬಗಳಲ್ಲೂ ಹೀಗೆಯೇ ಏರ್ಪಡಿಸಿ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗದಿರಲಾರರೆಂದು ನಂಬುತ್ತೇವೆ.

ಯುದ್ಧವಾರ್ತೆಯು.

ಕಳೆದವಾರದಲ್ಲಿ ಬಂದಿರುವ ವಾರ್ತೆಗಳಿಂದಲೂ ಮಿತ್ರಮಂಡಲಿಯ ವಿಜಯವೇ ಹೆಚ್ಚಾಗಿರುವುದೆಂದು ವ್ಯಕ್ತವಾಗುತ್ತದೆ. ಜರ್ಮನರು ಮಹಾಪ್ರಸ್ಕಂದವನ್ನು ಇನ್ನೂ ಎಲ್ಲಿಯೂ ಆರಂಭಿಸಿಲ್ಲ. ಅವರು ಈ ಸಲ ಭೂಮಿಯಮೇಲೂ ಜಲದಮೇಲೂ ಒಂದೇಸಲ ಮಹಾಯುದ್ಧವನ್ನು ಹೂಡುವುದರಲ್ಲಿರುವರೆಂದು ಸುದ್ದಿ ಹುಟ್ಟಿದೆ. ನೋಡಬೇಕು. ಇದೇ ದೀಪದ ಅಂತ್ಯಾವಸ್ಥೆಯ ಮಹಾಪ್ರಕಾಶದಂತಿರಬೇಕು. ಜರ್ಮನರ ಹಿಂದಣ ಅವಸ್ಕಂದನವು ನಿಂತು ೧ ತಿಂಗಳಿಂದಲೂ ಮಿತ್ರಮಂಡಲಿಯವರು ಹಲವುಕಡೆಗಳಲ್ಲಿ ಸಾಧಾರಣ ಯುದ್ಧಗಳನ್ನು ನಡೆಯಿಸಿ ಮುಂದಕ್ಕೆ ಒತ್ತುತ್ತಲೂ ಸ್ಥಾನಾಕ್ರಮಣವನ್ನು ಮಾಡಿ ತಮ್ಮ ನೆಲೆಗಳನ್ನು ಸುದೃಢಪಡಿಸಿಕೊಳ್ಳುತ್ತಲೂ ಇದ್ದಾರೆ. ಅಮೇರಿಕಾಸೈನ್ಯವು ಫ್ರೆಂಚ್ ದಳದೊಡನೆಯೂ ಆಸ್ಟ್ರೇಲಿಯನ್ ದಳದೊಡನೆಯೂ ಸೇರಿ ದಿಗ್ವಿಜಯವನ್ನು ಮಾಡಿ ಶತ್ರುಗಳನ್ನು ಧ್ವಂಸಗೊಳಿಸುತ್ತಿದೆ. ಅಮೇರಿಕನ್ನರಿಗೆ ಜರ್ಮನರ ಮೇಲಿರುವ ಕೋಪವು ವರ್ಣನಾತೀತವಾಗಿದೆ. ಅವರು ಇದುವರೆಗೆ ಪಶ್ಚಿಮರಂಗಕ್ಕೆ ೧೦ ಲಕ್ಷ ಸೈನ್ಯವನ್ನು ಸೇರಿಸಿರುವರು. ಈ ವರ್ಷದ ಕೊನೆಯೊಳಗೆ ಇನ್ನೂ ೧೦ ಲಕ್ಷವನ್ನು ಸೇರಿಸುವರು. ಅಲ್ಲದೆ ಆಹಾರ್ಯಾದಿ ವಸ್ತುಗಳೂ ಯುದ್ಧೋಪಕರಣಗಳೂ ಅಪರಿಮಿತವಾಗಿ ಬಂದು ತುಂಬಿಯೂ ತುಂಬುತ್ತಲೂ ಇರುವುವು. ಅವರ ಜಲಸೇನೆಯೂ ಸನ್ನಹನಸಂಪೂರ್ಣವಾಗಿರುವುದು. ಮಿತ್ರಮಂಡಲಿಯ ಕಡೆ ಸೈನ್ಯಬಲವಿರುವುದೆನ್ನುವುದಕ್ಕೆ ಅಮೇರಿಕನ್ನರ ಸಹಾಯವು ದೊರೆದುದೇ ಮುಖ್ಯಚಿಹ್ನೆಯು. ಈ ಸಲದ ಯುದ್ಧದಲ್ಲಿ ಜರ್ಮನರು ಯಾವುದಾದರೂ ಮಹಾವಿಜಯವನ್ನು ಪಡೆಯದಿದ್ದರೆ ಅವರ ಅವತಾರಪೂರ್ತಿಯಾಗುವುದೇ ನಿಜ. ಮುಂದಣ ವಸಂತಾರಂಭದಲ್ಲಿ ಮಿತ್ರಮಂಡಲಿಯವರ ಬಲವು ಸಂಪೂರ್ಣವಾಗಿ ಅಭೇದ್ಯವಾಗುವುದಲ್ಲದೆ ಅಜೇಯವೂ ಆಗುವುದು. ಕಳೆದ ೧ ತಿಂಗಳೊಳಗೆ ಅವರು ಫ್ರಾನ್ಸ್ ರಣರಂಗಕ್ಕೆ ೨೭೬೩೭೨ ಮಂದಿ ಸೈನಿಕರನ್ನು ಸಾಗಿಸಿ ತಂದಿರುವರು. ಇಷ್ಟು ಸೈನಿಕರಲ್ಲಿ ೨೯೧ ಮಂದಿ ಮಾತ್ರವೇ ಸಮುದ್ರದಲ್ಲಿ ಮುಳುಗಿದರು. ಅಮೇರಿಕನ್ ದಳವನ್ನು ರಣರಂಗಕ್ಕೆ ತಲೆಯಿಕ್ಕದಂತೆಯೇ ತಮ್ಮ ಸಬ್‌ಮರೀನುಗಳು ಮಾಡುವುವೆಂದು ಜಂಭಕೊಚ್ಚುತ್ತಿದ್ದ ಜರ್ಮನ್ ಸೂರರು ಈಗ ಯಾವಮೂಲೆಯಲ್ಲಿರುವರೋ; ಕಳೆದವಾರ ಅಮೇರಿಕನ್ನರು ಫ್ರೆಂಚರೊಡನೆ ಕೂಡಿ ನಡೆಯಿಸಿದ ಯುದ್ಧದಲ್ಲಿ ವಾಕ್ಸ್, ಬೋಯಿಸ್‌ಡಿಲ್ಲಾವಾಕ್ಸ್ ಗ್ರಾಮಗಳನ್ನೂ ಅವುಗಳ ಸಮೀಪದ ಅಡವಿಯನ್ನೂ ವಶಪಡಿಸಿಕೊಂಡರು. ೧|| ಮೈಲಿಯಗಲಕ್ಕೆ ೧೦೦೦ ಗಜಗಳ ದೂರ ಅಮೇರಿಕನ್ನರು ಮುಂದುವರಿದರು. ಶತ್ರುಗಳಲ್ಲಿ ಬಹುಮಂದಿ ಸತ್ತರು. ಬೆಗಿಲ್ಪಿನಿಂದ ಕೂಡಿದ ಶತ್ರುಸೈನ್ಯವನ್ನು ಅಮೇರಿಕನ್ನರು ಸಂಪೂರ್ಣವಾಗಿ ನಾಶಮಾಡಿದರು. ೫೦೦ ಮಂದಿಯನ್ನು ಸೆರೆಹಿಡಿದರು. ಜೂನ್ ತಿಂಗಳಿಂದೀಚೆಗೆ ಅಮೇರಿಕನ್ನರು ೧೨೦೦ ಮಂದಿ ಜರ್ಮನರನ್ನು ಸೆರೆಹಿಡಿದಿರುವರು. ೬೦ ಯಂತ್ರದ ಫಿರಂಗಿಗಳನ್ನೂ ಕೆಲವು ಕಂದಕದ ಫಿರಂಗಿಗಳನ್ನೂ ಹಿಡಿದರು. ಆ ಸ್ಥಳದಲ್ಲಿ ಫ್ರೆಂಚರು ೨೦೪ ನಂ|| ಗುಡ್ಡವನ್ನು ಹಿಡಿದು ಅದರ ಮುಂದಕ್ಕೂ ನುಗ್ಗಿದರು. ಮತ್ತೆ ಎಯಿನ್ ಒಯಿಜೀನದಿಗಳ ಮಧ್ಯದಲ್ಲಿ ಮಹಾಯುದ್ಧಮಾಡಿ ಸೆಂಟ್‌ಪಿಡಿನಲ್ ಗ್ರಾಮವನ್ನೂ ಕೆಲ ಶತ್ರುಸೈನಿಕರನ್ನೂ ಸೆರೆಹಿಡಿದರು. ಇಂಗ್ಲೀಷ್ ಸೈನ್ಯಗಳೂ ಆಸ್ಟ್ರೇಲಿಯನ್ನರೂ ಅಮೇರಿಕನ್ನರೂ ಸಹ ಸೋಮುನದಿಯ ದಕ್ಷಿಣದಲ್ಲಿ ೩ ಮೈಲಿಯಗಲಕ್ಕೆ ನಡೆಯಿಸಿದ ಯುದ್ಧದಲ್ಲಿ ಬುಸ್ಸಿಕೆಂಟ್ರ್ ಹಾಮೆಲ್‌ಗ್ರಾಮವನ್ನೂ ಬಳಿಯಣ ಅಡವಿಗಳನ್ನೂ ಫಿರಂಗಿ ಮೊದಲಾದ ಅನೇಕ ಯುದ್ಧೋಪಕರಣಗಳನ್ನೂ ಸಾವಿರಕ್ಕೆ ಮೇಲ್ಪಟ್ಟು ಶತ್ರುಸೈನಿಕರನ್ನೂ ಸೆರೆಹಿಡಿದರು. ಫ್ರೆಂಚರು ದಕ್ಷಿಣದಲ್ಲಿ ಬೋಯಿಸ್ ಡೀಮಾನಿ, ಮೋಲಿನ್, ಸೋನ್‌ಟೋಮೆಂಟುಗಳನ್ನೂ ಆ ಬಳಿಯಣ ಬಯಲನ್ನೂ ಹಿಡಿದು ೧ ಮೈಲಿ ದೂರ ಮುಂದಕ್ಕೆ ಸಾಗಿದರು. ೩೫೦ ಸೈನಿಕರನ್ನೂ ಸೆರೆಹಿಡಿದರು. ಫ್ರೆಂಚರ ಈ ಎರಡುವಿಜಯಗಳಿಂದ ಶತ್ರುಸೇನೆಯ ಚಲನವಲನವನ್ನೆಲ್ಲಾ ತಿಳಿದುಕೊಳ್ಳಲು ಅನುಕೂಲವಾದ ಎತ್ತರದ ಪ್ರದೇಶವು ಅವರಿಗೆ ಸಿಕ್ಕಿದಂತಾಯಿತು. ಇಂಗ್ಲೀಷರ ಅಂಕರ್‌ನದಿ ಬಳಿಯಣ ವಿಜಯದಿಂದ ಕಳೆದ ವಸಂತ ಮಹಾಯುದ್ಧದಲ್ಲಿ ಶತ್ರುಗಳ ನುಗ್ಗಾಟದಿಂದ ಡೊಂಕನಾಗಿಹೋಗಿದ್ದ ಇಂಗ್ಲೀಷ್ ಸೇನಾಪಙ್ಕ್ತಿಯು ಮುಂದಕ್ಕೆ ಸಾಗಿ ವಿಲ್ಲರ್ಸ್‌ಬ್ರೆಟೋನೋ ಎತ್ತಿಕಟ್ಟಿನ ಕಂದಕಗಳನ್ನು ಸೇರಿ ಹಾಮೇಲಿನಿಂದ ಸೋಮುನದಿಯವರೆಗೆ ೪ ಮೈಲಿಯಗಲದ ಸೇನಾಮುಖವನ್ನು ಒಂದೇ ನೇರವಾಡಿಕೊಂಡು ದೃಢಪಡಿಸಿಕೊಂಡಂತಾಯಿತು. ಫ್ರೆಂಚರು ಅಟ್ರೆನ್‌ಸೇವಿಗೆ ಪಶ್ಚಿಮದಲ್ಲಿ ಮತ್ತೊಂದು ಯುದ್ಧವನ್ನು ಮಾಡಿ ಶತ್ರುಗಳನ್ನು ಸೋಲಿಸಿ ಮುಂದಕ್ಕೆ ಸಾಗಿದರು. ಶತ್ರುಗಳು ಪ್ರತಿಯುದ್ಧ ಮಾಡಲಾಗಿ ಅವನ್ನು ಸೋಲಿಸಿ, ಇನ್ನಷ್ಟುದೂರ ಮುಂದಕ್ಕೆ ಹೋದುದಲ್ಲದೆ ೧೦೬೬ ಮಂದಿ ಗಾಯಗೊಳ್ಳದ ಸೈನಿಕರನ್ನು ಸೆರೆಹಿಡಿದರು. ಈಚೆಗೆ ಫ್ರೆಂಚರು ಮಾಂಟ್‌ಡಿಡಿಯರ್ ಐಸ್‌ನದಿಗಳ ಮಧ್ಯದಲ್ಲಿ ಯುದ್ಧಹೂಡಿ ಶತ್ರುಸೇನಾಪಙ್ಕ್ತಿಗೆ ನುಗ್ಗಿ ಫೋರ್ಟೇನ್ನೋಸ್ ಬಯಲುಗಳನ್ನು ವಶಪಡಿಸಿಕೊಂಡರು. ಇದರಿಂದ ಆ ಬಳಿಯಲ್ಲಿ ಕೆಲಕಡೆ ಇವರು ೧ ಮೈಲಿಯಷ್ಟು ದೂರ ಮುಂದಕ್ಕೆ ನುಗ್ಗಿದಹಾಗಾಯಿತು. ೪೫೦ ಶತ್ರುಸೈನಿಕರನ್ನು ಸೆರೆಹಿಡಿದರು. ೨೦೪ ನೆ ನಂ|| ಗುಡ್ಡವೂ ಫ್ರೆಂಚರ ವಶವಾಗಿದೆ. ಜೂನ್ ತಾ|| ೧೫ ರಿಂದ ಜುಲೈ ತಾ|| ೧೦ ರವರೆಗೆ ಫ್ರೆಂಚರು ನಡೆಯಿಸಿದ ಯುದ್ಧಗಳಲ್ಲಿ ೫೪೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿದ್ದಾರೆ. ಅವರಲ್ಲಿ ೬೦ ಮಂದಿಗಳು ಸೈನಿಕೋದ್ಯೋಗಿಗಳು. ವಿಲ್ಲರ್ಸ್‌ಬ್ರೆಟೋ ಹಾಮೇಲ್ ಪ್ರಾಂತಗಳಲ್ಲಿ ಇಂಗ್ಲೀಷರು ನಡೆಯಿಸಿದ ಯುದ್ಧದಲ್ಲಿ ೧೫೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದರು. ಅವರಲ್ಲಿ ಉದ್ಯೋಗಿಗಳೇ ೪೦ ಮಂದಿಗಳಿರುವರು. ವಿಲ್ಲರ್ಸ್‌ಬ್ರೆಟೋನಿನ ಬಳಿಯಲ್ಲಿ ಯುದ್ಧವನ್ನಾರಂಭಿಸಿದ ೨ ಗಂಟೆ ಕಾಲದೊಳಗಾಗಿ ೪ ಮೈಲಿಯಷ್ಟು ರಂಗವನ್ನು ಇವರು ವಶಪಡಿಸಿಕೊಂಡರು. ಆಗ ಜರ್ಮನರ ೩ ದಳವನ್ನು ಸಂಪೂರ್ಣವಾಗಿ ನಾಶಮಾಡಿರುವರು. ಹೀಗೆ ಹಲವು ಕಡೆಗಳಲ್ಲಿ ಮಿತ್ರಮಂಡಲಿಗೇ ಜಯವು ವಿಶೇಷವಾಗಿ ಪ್ರಾಪ್ತವಾಗುತ್ತಲಿದೆ. ಇಟಲಿರಂಗದಲ್ಲಿ ಮಿತ್ರಮಂಡಲಿ ಸೈನ್ಯಸಹಾಯದಿಂದ ಆಸ್ಟ್ರಿಯನ್ನರಿಗೆ ಸಂಪೂರ್ಣವಾದ ಪರಾಜಯವು ಪ್ರಾಪ್ತವಾಗಿದೆ. ಜರ್ಮನರ ಲುಡೆಂಡಾರ್ಫ್ ಸೇನಾನಿಯು ಆ ರಂಗಕ್ಕೆ ಹೋಗಿ ಎಲ್ಲವನ್ನೂ ನೋಡಿಕೊಂಡು ಇಷ್ಟರಲ್ಲೇ ತಮ್ಮ ಜರ್ಮನ್ ಸೈನ್ಯವನ್ನು ಆಸ್ಟ್ರಿಯನ್ನರ ಸಹಾಯಕ್ಕೆ ಕಳುಹಿಸಿಕೊಟ್ಟು ಅವರು ಸೋತುಬಿಟ್ಟಿರುವ ಪ್ರದೇಶವನ್ನು ಮತ್ತೆ ಗೆದ್ದುಕೊಡುವುದಕ್ಕೆ ಅಭಯದಾನಮಾಡಿ ಬಂದಿರುವನಂತೆ. ಕಳೆದ ೩ ವಾರದಿಂದೀಚೆಗೆ ಇಟಲಿಯವರು ಶತ್ರುಗಳಕಡೆಯ ೨೮೩೩೪ ಮಂದಿ ಸೈನಿಕರನ್ನೂ ೬೩ ಫಿರಂಗಿಗಳನ್ನೂ ೬೫ ಕಂದಕದ ಫಿರಂಗಿಗಳನ್ನೂ ೧೨೩೪ ಯಂತ್ರದ ಫಿರಂಗಿಗಳನ್ನೂ ೩೭೦೦೫ ತುಪಾಕಿಗಳನ್ನೂ ೫ ಲಕ್ಷ ಕಾರ್ಟ್ರಿಜುಗಳನ್ನೂ ಸಾವಿರಾರು ಸೆಲ್ಲುಗಳನ್ನೂ ಅಪರಿಮಿತವಾದ ಇತರ ಯುದ್ಧೋಪಕರಣಗಳನ್ನೂ ವಶಪಡಿಸಿಕೊಂಡಿರುವುದಲ್ಲದೆ ಕಳೆದ ನವಂಬರಿನ ಯುದ್ಧದಲ್ಲಿ ತಾವು ಕಳೆದುಕೊಂಡಿದ್ದ ದೇಶಭಾಗದಲ್ಲಿ ಮುಕ್ಕಾಲುಭಾಗಕ್ಕಿಂತ ಹೆಚ್ಚಾಗಿಯೇ ಬಿಡಿಸಿಕೊಂಡರು. ವೆನಿಸ್‌ಪ್ರಾಂತದಿಂದ ಹಿಂದಕ್ಕೆ ೨೨ ಮೈಲಿಯವರೆಗೆ ಶತ್ರುಗಳನ್ನು ಓಡಿಸಿಬಿಟ್ಟರು. ಈಚೆಗೆ ಶತ್ರುಗಳು ಮುಂದಕ್ಕೆ ನುಗ್ಗಿಬರಲು ಕೆಲ ಪ್ರಯತ್ನಗಳನ್ನು ಮಾಡಿದರೂ ಇಟಲಿಯವರು ಅವನ್ನೆಲ್ಲಾ ವ್ಯರ್ಥಗೊಳಿಸುತ್ತಿರುವರು.

ಬಳಿದೇಶದ ವೃತ್ತಾಂತಗಳು.

ಬರುವ ಆಗಸ್ಟ್ ತಾ|| ೧ ರಿಂದ ೪ ದಿನಗಳ ಪರ್ಯಂತ ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರುಗಳ ಆರಿಸುವಿಕೆಯು ನಡೆಯುವುದು.

ಶ್ರೀಮನ್ಮಹಾರಾಜರವರು ಸ್ವದೇಶಕ್ಕೆ ದಯಮಾಡಿಸುವವರೆಗೂ ಶ್ರೀಮದ್ಯುವರಾಜರವರು ರಾಜ್ಯಕಾರ್ಯನಿರ್ವಾಹಮಾಡಲು ಏರ್ಪಾಟಾಗಿರುವುದು.

ಶಿವಮೊಗ್ಗೆಯಿಂದ ಅರಸಾಳುವರೆಗೆ ೨೬ ಮೈಲಿಗಳ ದೂರ ಲೋಹಮಾರ್ಗವನ್ನು ಸ್ಥಾಪಿಸುವುದಕ್ಕೆ ನಮ್ಮ ಪ್ರಭುತ್ವದವರಿಗೆ ಹಿಂದೂಸ್ಥಾನ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ.

ರಾಜಧಾನಿಯ ಮಂಡಿ-ಲಷ್ಕರ್ ಮೊಹಲ್ಲೆಗಳಲ್ಲಿ ಇಲಿಗಳು ಸಾಯುತ್ತಲೂ ಪ್ಲೇಗು ಮರಣಗಳಾಗುತ್ತಲೂ ಇವೆ. ಮ್ಯುನ್ಸಿಪಾಲಿಟಿಯವರೂ ಆರೋಗ್ಯಶಾಖೆಯವರೂ ಎಚ್ಚತ್ತು ಇನಾಕ್ಯುಲೇಷನ್ ಮೊದಲಾದುವುಗಳಿಗೆ ಏರ್ಪಡಿಸುವುದು ಆವಶ್ಯಕವಾಗಿದೆ.

ಶ್ರೀಮನ್ಮಹಾರಾಜರವರು ಕಳೆದ ತಾ|| ೯ ರಲ್ಲಿ ಕಾಶ್ಮೀರಸಂಸ್ಥಾನದ ರಾಜಧಾನಿಯಾದ ಶ್ರೀನಗರವನ್ನು ಸುಖವಾಗಿ ಸೇರಿದರೆಂದು ಕೇಳುತ್ತೇವೆ. ಅಲ್ಲಿ ಕೆಲದಿನವಿದ್ದು ಬಳಿಕ ದಿಲ್ಲಿ ಸಿಮ್ಲಾ ಪಟ್ಟಣಗಳಿಗೆ ದಯಮಾಡಿಸಿ, ವೈಸ್ರಾಯರ ಸಂದರ್ಶನವನ್ನು ಮಾಡಿಕೊಂಡು ಬರುವವರಾಗಿದ್ದಾರೆ.

ಮಳೆಯ ಅಭಾವವು ಜನಗಳಿಗೆ ಭೀತಿಯನ್ನು ಹೆಚ್ಚಿಸುತ್ತಿದೆ. ಧಾರಣೆಗಳು ಏರುವುದರಲ್ಲೇ ಇವೆ. ಬಡಬಗ್ಗರ ಕಷ್ಟಕ್ಕೆ ಪರಿಹಾರವೇನೋ ಕಾಣಲಿಲ್ಲ. ರಾಜಧಾನಿಯಲ್ಲಿ ಅಗ್ಗವಾಗಿ ಮಾರಿಸುವ ವಿಜೃಂಭಣೆಯು ೪ ದಿನಕ್ಕೇ ಮುಕ್ತಾಯವಾಯಿತು. ಸರ್ಕಾರದವರಾಗಲೀ ಮ್ಯುನ್ಸಿಪಾಲಿಟಿಯವರಾಗಲೀ ಪ್ರಜಾಪ್ರಮುಖರಾಗಲೀ ಮುಂಜಾಗ್ರತೆಯನ್ನು ವಹಿಸಿ ತಕ್ಕ ಏರ್ಪಾಟನ್ನು ಮಾಡದಿರುವುದು ಶೋಚನೀಯವಾಗಿದೆ. ಹಿಂದೆ ಯಾವಾಗಲೂ ಇಷ್ಟು ಔದಾಸೀನ್ಯವು ರಾಜಧಾನಿಯ ಮುನ್ಸಿಪಾಲಿಟಿಯಲ್ಲೂ ಪುರಪ್ರಮುಖರಲ್ಲೂ ಕಂಡುದಿಲ್ಲ.

ಭರತಖಂಡದ ವೃತ್ತಾಂತಗಳು.

ಜುಲೈ ತಾ|| ೧೫ ರವರೆಗೆ ಯುದ್ಧಋಣಕ್ಕೆ ಸೇರಿರುವ ಹಣವು ೧೮೫೩೨೫೦೦.

ವೈಸ್ರಾಯರು ಬರುವ ವರ್ಷರ್ತುವಿನಲ್ಲಿ ಭೂಪಾಲ ಮತ್ತೂ ಇಂದೂರು ಸಂಸ್ಥಾನಗಳಿಗೆ ಸಂದರ್ಶನವನ್ನು ಕೊಡುವವರಾಗಿದ್ದಾರೆ.

ದಿಲ್ಲಿಯಲ್ಲಿರುವ ಸ್ವರಾಜ್ಯವಾದಿಗಳ ಕಾರ್ಯಾಲಯವನ್ನು ಪೋಲೀಸರು ಪರಿಶೋಧಿಸಿ ಅಲ್ಲಿದ್ದ ಸಭಿಕರ ಹೆಸರುಗಳ ಪಟ್ಟಿಯನ್ನೂ ಪ್ರಮಾಣಪತ್ರಿಕೆಗಳನ್ನೂ ತೆಗೆದುಕೊಂಡು ಹೋದರು.

ಮಧ್ಯಪ್ರಾಂತದ ಸ್ವರಾಜ್ಯಸಂಘದ ಕಾರ್ಯದರ್ಶಿಯಾದ ನಾರಾಯಣ ಕಾಶೀನಾಥವೈದ್ಯ ಎಂಬುವರು ಪೀನಲ್‌ಕೋಡು ೧೨೪ ನೆ ಎ. ಶಾಸನದ ಪ್ರಕಾರ ಪೋಲೀಸರಿಂದ ಹಿಡಿಯಲ್ಪಟ್ಟಿದ್ದಾರೆ. ದಂಡಾಧಿಕಾರಿಯು ಅವರನ್ನು ಹೊಣೆಯಮೇಲೂ ಬಿಡಲಿಲ್ಲ.

ಪದಾರ್ಥಗಳ ಬೆಲೆ ಹೆಚ್ಚಿರುವ ಕಾರಣದಿಂದಲೇ ಬಂಗಾಳದಲ್ಲಿ ಕಳೆದ ಅಕ್ಟೋಬರ್ ತಿಂಗಳಿಂದ ಏಪ್ರಿಲ್ ತಿಂಗಳವರೆಗೆ ಅಂಗಡಿಗಳನ್ನು ಸೋಟ್ಟಿಕೊಂಡ ಕೇಸುಗಳು ೧೫೨, ಸುಲಿಗೆಕಳ್ಳತನಗಳು ೯೮, ಕನ್ನಕಳವುಗಳು ೪೨ ನಡೆದಿರುವುವೆಂದು ಬಂಗಾಳ ಗೌರ್ನರವರು ಹೇಳಿರುವರು.

ಸರ್ ಸತ್ಯೇಂದ್ರಪ್ರಸನ್ನ ಸಿಂಹ ಕೆ. ಸಿ. ಯವರಿಗೆ ಬೀಹಾರ್ ಒರಿಸ್ಸಾ ಪ್ರಾಂತದ ಲೆಪ್ಟನೆಂಟ್ ಗೌರ್ನರ ಪದವಿಯು ಕೊಡಲ್ಪಡುವುದರಲ್ಲಿದೆಯೆಂದು ಇಂಗ್ಲೀಷ್‌ಮನ್ ಪತ್ರಿಕೆಯು ಹೇಳುತ್ತದೆ. ಇದು ನಿಜವಾದರೆ ಭಾರತೀಯರು ಲೆ|| ಗೌರ್ನರ ಪದವಿಗೆ ತರಲ್ಪಡುವುದಕ್ಕೆ ಇದೇ ಪ್ರಥಮವೆನ್ನಬಹುದು.

ಮದ್ರಾಸಾಧಿಪತ್ಯದ ರಾಮಚಂದ್ರಪುರದ ತಾ|| ತಹಸೀಲ್ದಾರರೂ ಡಿಸ್ಟ್ರಿಕ್ಟ್ ಮುನಸೀಫರೂ ಸಹ ಅಲ್ಲಿಯ ಬಾರ್ ರೂಮಿನಲ್ಲಿ ವಕೀಲರನ್ನೆಲ್ಲಾ ಕೂಡಿಸಿ, ೨ ನೆ ಯುದ್ಧಋಣಕ್ಕೆ ಹಣವನ್ನು ಕೊಡುವುದವಶ್ಯಕವೆಂದು ಹಿತವಾದವನ್ನು ಹೇಳಲಾಗಿ, ಕಾಂಗ್ರೆಸ್‌ಲೀಗುಗಳು ಕೋರಿರುವ ವರಗಳನ್ನು ಕೊಟ್ಟಲ್ಲದೆ ನಮ್ಮಿಂದ ಲೇಶವೂ ಸಾಲ ಹುಟ್ಟುವುದಿಲ್ಲವೆಂದು ಉತ್ತರಕೊಟ್ಟರಂತೆ. "ಪರೀಕ್ಷಾಸಮಯೇ ಪ್ರಾಪ್ತೇ ಕಾಚಃ ಕಾಚೋ ಮಣಿರ್ಮಣಿಃ" ಎಂಬ ವಚನದಂತೆ ನಿಜರಾಜಭಕ್ತರ ತಿರುಳು ಈಗ ಹೊರಬೀಳುತ್ತಿದೆ.

ವಿಜಯನಗರದ ಮಹಾರಾಜರ ಹತ್ತಿರ ಕೆಲಸದಲ್ಲಿದ್ದ ಪಂಡಿತ ಸಾಲಗ್ರಾಂ ಎಂಬುವವನು ಬೊಂಬಾಯಿಯ ಮೆಹರಾಲಿ ಕಂಪೆನಿಯವರೊಡನೆ ಪತ್ರವ್ಯವಹಾರ ನಡೆಯಿಸಿ, ಮಹಾರಾಜರ ಕೆಲವು ನಗಗಳನ್ನು ಅಪಹರಿಸಿಕೊಂಡು ಹೋಗಿ, ಅವುಗಳಲ್ಲಿ ೩೪ ಮುತ್ತುಗಳನ್ನು ೫೫ ಸಾವಿರಕ್ಕೆ ಮಾರಿದನು. ಮದ್ರಾಸು ಪೋಲೀಸಿನವರು ಬೊಂಬಾಯಿ ಪೋಲೀಸರಿಗೆ ಸುದ್ದಿಕೊಡಲಾಗಿ ಅವರು ಕಳ್ಳನನ್ನು ಕೆಲ ನಗಗಳ ಸಮೇತ ಹಿಡಿದರು. ಅಪರಾಧಿಯು ಅಷ್ಟರೊಳಗೆ ಬೊಂಬಾಯಿ ಬ್ಯಾಂಕಿನಲ್ಲಿ ೨೩ ಸಾವಿರ ರೂ. ಗಳನ್ನು ತನ್ನ ಹೆಸರಮೇಲೆ ಹಾಕಿದ್ದನು. ಅವನು ವಿಚಾರಣಾರ್ಥವಾಗಿ ವಿಜಯನಗರಕ್ಕೆ ಹಿಡಿತರಲ್ಪಟ್ಟಿದ್ದಾನೆ.

ಡಾ|| ಸುಬ್ರಹ್ಮಣ್ಯಯ್ಯರವರು ನವೀನಭಾರತ ರಾಜಕೀಯ ಸಂಸ್ಕರಣಗಳನ್ನು ಕುರಿತು ಒಂದು ಲೇಖನವನ್ನು ಈಗತಾನೇ ಬರೆದಿದ್ದಾರೆ. ಅದರೊಳಗೆ "ಮಾಂಟೇಗ್, ಚೆಮ್ಸ್‌ಫರ್ಡ್ ಇವರುಗಳು ಸೂಚಿಸುವ ಸಂಸ್ಕರಣಗಳು ವಿದೇಶೀಯರುಗಳಾದುದರಿಂದ ಅವನ್ನು ನಾವು ಸಂಪೂರ್ಣವಾಗಿ ತತ್‌ಕ್ಷಣವೇ ತಿರಸ್ಕರಿಸಿಬಿಡಬೇಕು" ಎಂದು ಹೇಳಿರುತ್ತಾರೆ. ಅಯ್ಯರವರ ರೀತಿಯು ಇಡೀ ಮುಳುಗಿದವನಿಗೆ ಚಳಿಯೇನು? ಗಾಳಿಯೇನು? ಎಂಬ ಗಾಥೆಯ ಹಾಗಾಗಿರುವಂತೆ ಕಾಣುತ್ತದೆ. ಸ್ಟೇಟ್‌ಸೆಕ್ರೆಟರಿ ವೈಸ್ರಾಯರ ಸೂಚನೆಗಳು ವಿದೇಶೀಯವಾದಕಾರಣ ಅವನ್ನು ಅಂಗೀಕರಿಸಬಾರದೆನ್ನುವವರು ವಿದೇಶೀಯರಾದ ಆಂಗ್ಲರ ಪ್ರಭುತ್ವವನ್ನು ಕೂಡ ದ್ವೇಷಿಸಬೇಕೆಂದು ಬೋಧಿಸಿದಹಾಗಾಯಿತಷ್ಟೆ. ಉಗ್ರವಾದಿಗಳ ಪ್ರವರ್ತನೆಯು ಬರುಬರುತ್ತ ಇಷ್ಟು ವಿಕಾರವನ್ನೈದುತ್ತಲಿದೆ. ಪರಿಣಾಮವೇನೋ ನೋಡಬೇಕು.

ಬೀಹಾರು ಒರಿಸ್ಸಾ ಪ್ರಾಂತದಲ್ಲಿ ೧೧ ಸಾವಿರ ಜನರು ಬಲಾತ್ಕಾರ ಬಾಲವಿದ್ಯಾಭ್ಯಾಸಕ್ರಮವನ್ನು ನಮ್ಮ ರಾಷ್ಟ್ರದಲ್ಲಿ ವ್ಯವಹಾರಕ್ಕೆ ತರಲಾಗದೆಂದು ಪ್ರಭುತ್ವದವರಿಗೆ ವಿಜ್ಞಾಪನಪತ್ರವನ್ನು ಬರೆದುಕೊಂಡಿದ್ದಾರೆ. ಇದಕ್ಕೆ ರುಜು ಮಾಡಿರುವವರೊಳಗೆ ದರ್ಭಾಂಗ, ಹತ್ವಾರ್ ಮಹಾರಾಜರುಗಳೂ ಸೇರಿದ್ದಾರೆ. ಕಾಣಿಸಿರುವ ಕಾರಣಗಳೇನೆಂದರೆ—ಈ ಪದ್ಧತಿಯಿಂದ ಸರ್ಕಾರಕ್ಕೆ ವೆಚ್ಚಹೆಚ್ಚುವುದು, ಬೇಸಾಯಗಾರರು ಮೊದಲಾದವರ ವೃತ್ತಿಗೆ ಅವರ ಮಕ್ಕಳುಗಳ ಸಹಾಯವು ತಪ್ಪಿಹೋಗುವುದು, ಉತ್ತಮವರ್ಣೀಯರ ಜತೆಗೆ ನೀಚವರ್ಣದವರ ಮಕ್ಕಳೂ ಸಮನಾಗಿ ಕುಳಿತು ಓದಬೇಕಾಗುವುದು, ಗೋಷಾದ ಹೆಣ್ಣುಮಕ್ಕಳು ಅದನ್ನು ಬಿಟ್ಟುಬಿಡಬೇಕಾಗುವುದು ಇತ್ಯಾದಿ. ಇಂಥ ರೋಗವು ನಮ್ಮ ದೇಶೀಯರನ್ನು ಇನ್ನೂ ಬಿಡದಿರುವಾಗ ಈ ದೇಶಕ್ಕೆ ಸಂಪೂರ್ಣ ಸ್ವಪರಿಪಾಲನವನ್ನು ಕೊಟ್ಟರೆ ಗತಿಯೇನು?

ಸ್ಟೇಟ್‌ಸೆಕ್ರೆಟರಿಯವರ ಮತ್ತೂ ವೈಸ್ರಾಯರ ಭಾರತರಾಜಕೀಯ ಸಂಸ್ಕರಣ ಸೂಚನಾಪತ್ರದಮೇಲೆ ಅ|| ಬೆಸೆಂಟಮ್ಮನವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವುದರಲ್ಲಿ—"ಇದು ಬಹಳ ಸಂಕುಚಿತವಾದ ವಿಧಾನವಾಗಿದೆ. ಇದು ಭಾರತೀಯರನ್ನು ತೃಪ್ತಿಪಡಿಸಲಾರದು. ಇದರಲ್ಲಿ ಬಾಧ್ಯತಾಯುತ ಪರಿಪಾಲನವು ಇಷ್ಟುಕಾಲದೊಳಗೆ ಭರತಖಂಡಕ್ಕೆ ಕೊಡಲ್ಪಡುವುದೆಂಬ ನಿರ್ಣಯವೇ ಕಾಣಿಸಲ್ಪಟ್ಟಿಲ್ಲ. ಇಂಥ ಪ್ರಭುತ್ವವನ್ನು ನಾವು ಸಿದ್ಧಿಸುವೆವೆಂಬ ಅವರ ಆಶಯವೂ ಕೂಡ ಎಲ್ಲೂ ತಿಳಿಯಿಸಲ್ಪಟ್ಟಿಲ್ಲ. ಆದುಕಾರಣ ದೇಶದಲ್ಲಿ ಆಂದೋಳನವನ್ನು ತೀವ್ರತರವಾಗಿ ಹುಟ್ಟಿಸಿದಲ್ಲದೆ ನಿರಂಕುಶಾಧಿಕಾರವು ಕೊನೆಮುಟ್ಟುವುದಿಲ್ಲ. ಭರತಖಂಡವು ಅಪೇಕ್ಷಿಸುವ ಸ್ವಯಂನಿರ್ಣಯಸೂತ್ರವನ್ನೂ ಸ್ವಪರಿಪಾಲನವನ್ನೂ ಸಹ ಆಂಗ್ಲದೇಶವು ಅನುಗ್ರಹಿಸುವುದೂ ಅದನ್ನು ಭರತಖಂಡವು ಅಂಗೀಕರಿಸುವುದೂ ಕೂಡ ಅಗೌರವವು" ಎಂದು ತಿಳಿಯಿಸಿರುತ್ತಾರೆ.

ಭರತಖಂಡದಲ್ಲಿ ಬೈರಾಗಿ, ಗೋಸಾಯಿ ಮೊದಲಾದ ಹೆಸರಿನ ಸೋಂಬೇರಿಗಳಾದ ಮತ್ತೂ ಸರ್ವಾಂಗಪರಿಪುಷ್ಟಿಯುಳ್ಳ ಯಾಚಕರ ಸಂಖ್ಯೆಯು ೫೨ ಲಕ್ಷವಿರುವುದು. ಇವರುಗಳಿಗೆ ತಿಂಗಳಿಗೆ ತಲೆಯೊಂದಕ್ಕೆ ಹೊಟ್ಟೆಗಾಗಿ ೩ ರೂ. ವೆಚ್ಚವಾಗುವುದೆಂದು ಲೆಕ್ಕಹಾಕಿದರೂ ವರ್ಷಕ್ಕೆ ೧೮ ಕೋಟಿ ರೂ. ಗಳಾಗುವುವು. ದೇಶೀಯರು ಈ ಸೋಂಬೇರಿಗಳ ಜೀವನಾರ್ಥವಾಗಿ ಇಷ್ಟು ಹಣವನ್ನು ದಾನಧರ್ಮ ರೂಪದಿಂದ ಕಳೆದುಕೊಳ್ಳುತ್ತಿರುವರು. ಇವರಲ್ಲಿ ಅಂಗವಿಕಲರ ಹೊರತು ಉಳಿದ ೫೦ ಲಕ್ಷ ಮಂದಿ ಗಟ್ಟಿಮುಟ್ಟಾಗಿರುವವರನ್ನೆಲ್ಲಾ ಕಷ್ಟಾರ್ಜಿತದಿಂದ ಜೀವಿಸುವಂತೆ ಮಾಡಿದರೆ ದೇಶಕ್ಕೆ ಎಷ್ಟೋ ಫಲವಾಗುವುದಲ್ಲದೆ ಅನ್ಯಾಯವಾಗಿ ಹೋಗುತ್ತಿರುವ ಕೋಟ್ಯಂತರ ದ್ರವ್ಯದಿಂದ ದೇಶದ ಪರಿಶ್ರಮಾಭಿವೃದ್ಧಿಗೆ ಎಷ್ಟೋ ಸಹಾಯಮಾಡಬಹುದು. ಇದಕ್ಕಾಗಿ ಆವಶ್ಯಕವಾದ ಪ್ರಯತ್ನಗಳನ್ನು ಮಾಡಲು ಪಂಜಾಬಿನ ಹಿಂದೂಧರ್ಮಸಂಸ್ಕರಣ ಸಭೆಯ ಶ್ರೀಯುತ ರಾಯಿಸಿಹಾಲ್ ಚಂದ್‌ಬಹದೂರ್‌ರವರೇ ಮೊದಲಾದವರು ಪ್ರವರ್ತಿಸಿರುವುದು ವಿಶೇಷ ಸ್ತುತ್ಯವಾಗಿದೆ.

ನಮ್ಮ ಸಾರ್ವಭೌಮದಂಪತಿಗಳ ವಿವಾಹಮಹೋತ್ಸವವು ನಡೆದು ಕಳೆದ ತಾ|| ೫ ಕ್ಕೆ ೨೫ ವರ್ಷಗಳು ತುಂಬಿದುವು. ಆ ದಿನ ಸಾಮ್ರಾಜ್ಯದ ಹಲವುಕಡೆಗಳಲ್ಲಿ ಜ್ಞಾಪಕೋತ್ಸವವು ನಡೆಯಿತು. ಅದರಂತೆ ಸಿಮ್ಲಾಪಟ್ಟಣದಲ್ಲೂ ಜರುಗಿತು. ಆ ಸಂದರ್ಭದಲ್ಲಿ ವೈಸ್ರಾಯರ ಪತ್ನಿಯವರು ಒಂದು ತಂತ್ರೀವಾರ್ತೆಯನ್ನು ಚಕ್ರವರ್ತಿನಿಯವರ ಸನ್ನಿಧಿಗೆ ಕಳುಹಿಸಿ, "ಈಯುತ್ಸವ ಜ್ಞಾಪಕಾರ್ಥವಾಗಿ ಒಂದು ನಿಧಿಯನ್ನು ಭಾರತಮಹಿಳೆಯರು ನಿಮ್ಮ ಬಹುಮಾನಾರ್ಥವಾಗಿ ಸ್ಥಾಪಿಸಿ, ಅದನ್ನು ಯುದ್ಧದಲ್ಲಿ ಹತರಾದ ಭಾರತಭಟರ ಮಕ್ಕಳುಗಳ ವಿದ್ಯಾಭಿವೃದ್ಧಿಗಾಗಿ ಉಪಯೋಗಿಸಲು ತಮ್ಮಪ್ಪಣೆಯನ್ನು ಕೋರಿರುತ್ತಾರೆ" ಎಂದು ಶ್ರುತಪಡಿಸಿರಲು, ಅದಕ್ಕೆ ಮೇರಿ ಮಹಾರಾಜ್ಞಿಯವರು ಅನುಮತಿಯನ್ನು ಕೊಟ್ಟಿರುತ್ತಾರೆ. ಯುದ್ಧದಲ್ಲಿ ಮಡಿದ ಸೈನಿಕರ ಮಕ್ಕಳುಗಳ ಪ್ರಾರಂಭವಿದ್ಯಾಭ್ಯಾಸಕ್ಕೆ ತಗುಲುವ ವೆಚ್ಚವನ್ನೆಲ್ಲಾ ಸರ್ಕಾರದವರೇ ವಹಿಸುವುದಕ್ಕೆ ಇದಕ್ಕೆ ಮುಂಚೆಯೇ ಏರ್ಪಾಟಾಗಿದೆ. ಅವರುಗಳ ಉನ್ನತವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಾಗುವಂತೆ ಈ ಫಂಡಿನಿಂದ ಸಹಾಯವು ಉತ್ತರತ್ರ ಮಾಡಲ್ಪಡುವುದು. ಈಗಣ ಸಂಧಿಯನ್ನೂ ಮೇರಿ ಮಹಾರಾಜ್ಞಿಯವರಿಗೆ ಭಾರತೀಯರ ಮೇಲಿರುವ ಪ್ರೇಮವನ್ನೂ ಗಮನಿಸಿ ಎಲ್ಲ ತರಗತಿಯ ಭಾರತಮಹಿಳೆಯರೂ ಶಕ್ತಿವಂಚನೆಯಿಲ್ಲದೆ ಈ ಫಂಡಿಗೆ ಸಹಾಯಮಾಡಬೇಕೆಂದೂ, ಈ ಧನಸಹಾಯವು ಯುದ್ಧದಲ್ಲಿ ಮಡಿದ ಶೂರ ಸೈನಿಕರ ಗಂಡುಹೆಣ್ಣುಮಕ್ಕಳಿಗೆಲ್ಲಾ ಉಪಯೋಗಿಸಲ್ಪಡುವುದೆಂದೂ, ಸ್ವದೇಶಸಂಸ್ಥಾನದ ಸೈನಿಕರ ಮಕ್ಕಳಿಗೂ ಇದು ಅನ್ವಯಿಸುವುದೆಂದೂ, ಮೇರಿ ಮಹಾರಾಜ್ಞಿಯವರ ಹೆಸರಿನಮೇಲೆ ಏರ್ಪಡಿಸಲು ತಕ್ಕಂತೆ ಈ ಫಂಡನ್ನು ನಾವು ಕೂಡಿಸಬೇಕಾಗಿರುವುದೆಂದೂ ಸಹ ವೈಸ್ರಾಯರ ಪತ್ನಿಯವರು ಒಂದು ಪ್ರಕಟನವನ್ನು ಮಾಡಿ ಭಾರತಾಂಗನೆಯರ ಉದಾರಸಹಾಯವನ್ನು ಕೋರಿರುವರು.

ವಿದೇಶ ವೃತ್ತಾಂತಗಳು.

ತುರ್ಕಿಗೆ ವಾಹಿದುದ್ದೀನ್‌ರವರು ಸುಲ್ತಾನರಾಗಿ ಮಾಡಲ್ಪಟ್ಟರು.

ಜರ್ಮನಿ ಮಂತ್ರಿ ಕುಹಲ್ಮನ್‌ರವರು ರಾಜೀನಾಮೆ ಕೊಟ್ಟುದನ್ನು ಕೈಸರವರು ಅಂಗೀಕರಿಸಿದರು.

ತುರ್ಕಿಯ ಸುಲ್ತಾನರು ಗತಿಸಿಹೋದರೆಂದು ವಿಯನ್ನಾದ ಮಾರ್ಗವಾಗಿ ಬಂದ ಕಾನ್‌ಸ್ಟಾಂಟಿನೋಪಲ್ ತಂತ್ರೀವಾರ್ತೆಯಿಂದ ಗೊತ್ತಾಗುತ್ತದೆ.

ಜರ್ಮನರ ೫೦ ಸಾವಿರ ಸೈನಿಕರು ಫಿನ್ಲಂಡ್ ರಷ್ಯಾ ಎಲ್ಲೆಕಟ್ಟಿನಲ್ಲಿ ಕೂಡಿದ್ದು ಸರಹದ್ದನ್ನು ದಾಟಿ ಮುಂದಕ್ಕೆ ನುಗ್ಗಿರುವರೆಂಬ ವಾರ್ತೆ ಬಂದಿದೆ.

೩೬-೩ ಸಲ ವಿಮಾನಯುದ್ಧದಲ್ಲಿ ಜಯಶೀಲರಾಗಿದ್ದ ೧೪ ಮಂದಿ ಜರ್ಮನ್ ವೈಮಾನಿಕಪ್ರಮುಖರನ್ನು ಕಳೆದವಾರ ಮಿತ್ರಮಂಡಲಿಯವರು ಸೆರೆಹಿಡಿದಿರುವರು.

ಅಮೇರಿಕಾದವರು ಕಳೆದ ಜೂನ್ ತಿಂಗಳೊಂದರಲ್ಲೇ ೨೮೦೪೦೦ ಟನ್ನುಗಳ ಹಡಗುಗಳನ್ನು ಹೊಸದಾಗಿ ಕಟ್ಟಿರುವರು. ಜೂನಿಗೆ ಕಡೆಯಾದ ೧ ವರ್ಷ ಕಾಲದಲ್ಲಿ ಒಟ್ಟು ೧೦೪೪೫೭೦ ಟನ್ನುಗಳ ಹಡಗುಗಳನ್ನು ಕಟ್ಟಿರುವರು.

ಮೈಸೂರು ಸ್ಟಾರ್.

೧೯೧೮ ನೇಯ ಇಸವಿ ಜುಲೈ ತಾ॥ ೧೪ ನೇಯ ಭಾನುವಾರ.

ಹಿಂದುಳಿದವರ ವಿಜ್ಞಾಪನೆ.

(ಭಾಗ ೩.)

ಶ್ರೀಮನ್ಮಹಾರಾಜರವರ ಉತ್ತರದಲ್ಲಿ ಕಂಡ ವಿಷಯಗಳೊಳಗೆ ಇನ್ನು ೧-೨ ನ್ನು ಮಾತ್ರ ಕುರಿತು ನಾವು ಪ್ರಸ್ತಾಪಿಸಬೇಕಾಗಿರುವುದು. ಅವಾವುವೆಂದರೆ—"ಮ್ಯುನಿಸಿಪಲ್ ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಮಹಮ್ಮದೀಯರಿಗೇ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವ ಶಾಸನವನ್ನೇರ್ಪಡಿಸಬೇಕಾದ ಆವಶ್ಯಕತೆಯೇನೂ ಕಾಣುವುದಿಲ್ಲ. ಸಂಗಡಗಳ ಬೇರೆ ಬೇರೆ ಆರಿಸುವಿಕೆಗೆ ಆಗಲೇ ಏರ್ಪಾಟುಮಾಡಲಾಗಿದೆ" ಎಂದು ಅಪ್ಪಣೆ ಕೊಡಲಾಗಿದೆಯಷ್ಟೆ. ಇದು ಮಹಮ್ಮದೀಯ ಪ್ರಜೆಗಳಿಗೆಲ್ಲಾ ನಿರುತ್ಸಾಹವನ್ನುಂಟುಮಾಡಿದೆಯೆಂಬುದಕ್ಕೆ ಸಂಶಯವಿಲ್ಲ. ಸಂಗಡಗಳ ಪ್ರತ್ಯೇಕವಾದ ಆರಿಸುವಿಕೆಗೆ ಈಗಲೇ ಅವಕಾಶವನ್ನುಂಟುಮಾಡಿರುವ ವಿಧಿ ಯಾವುದೋ ಗೊತ್ತಾಗಲಿಲ್ಲ. ಈ ವಾಕ್ಯದ ಅರ್ಥವು ನಮಗೆ ಸ್ಪಷ್ಟವಾಗಲಿಲ್ಲ. ಇಂಥ ಅವಕಾಶವಿರುತ್ತಿದ್ದರೆ ಈ ಡೆಪ್ಯುಟೇಷನ್ನಿಗೇ ಮಹಮ್ಮದೀಯರು ತಲೆಯಿಕ್ಕುತ್ತಿರಲಿಲ್ಲ. ಸಾಮಾನ್ಯವಾದ ಆರಿಸುವಿಕೆ (ಜನರಲ್ ಎಲಕ್ಷನ್) ಯೇ ಪ್ರತ್ಯೇಕವಾದ ಆರಿಸುವಿಕೆಗೆ ಅವಕಾಶವನ್ನೀಯುವುದೆಂಬುದು ಆ ವಾಕ್ಯದ ಅರ್ಥವಾಗಿದ್ದರೆ ಪ್ರತ್ಯೇಕ ಪ್ರಾತಿನಿಧ್ಯತತ್ತ್ವಕ್ಕೆ ಅದೆಂದಿಗೂ ಸರಿಹೋಗಲಾರದು. ಪ್ರಜಾಪ್ರತಿನಿಧಿ ಸಭೆಯಲ್ಲಿ ಆಯಾ ಸಂಘ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಕೊಟ್ಟಿರುವುದೇ ಈ ವಾಕ್ಯೋಪಯೋಗದ ಲಕ್ಷ್ಯವಾಗಿದ್ದರೆ ಅದು ಸಾಕಾಗಲಾರದು. ಆ ಅವಕಾಶವು ಮ್ಯು॥ ಲೋ॥ ಬೋರ್ಡು ಮೊದಲಾದುವುಗಳಿಗೆಲ್ಲಾ ಅನ್ವಯಿಸುವುದಿಲ್ಲ.

ಭರತಖಂಡದಲ್ಲಿ ಪ್ರತ್ಯೇಕ ಪ್ರಾತಿನಿಧ್ಯತತ್ವದ ಪ್ರಸ್ತಾವವು ಅಂಕುರಾರ್ಪಣಗೊಂಡುದು ಮಹಮ್ಮದೀಯರಿಂದಲೇ. ಅವರ ಪ್ರಾರ್ಥನೆಯು ಇಷ್ಟರೊಳಗೇ ಹಲವು ಮ್ಯು॥ ಲೋ॥ ಬೋರ್ಡುಗಳಲ್ಲಿ ಅಂಗೀಕೃತವಾಗಿರುವುದಲ್ಲದೆ ಭರತಖಂಡದ ರಾಷ್ಟ್ರೀಯ ಮಹಾಸಭೆಯವರೂ ಅವರ ಪ್ರತ್ಯೇಕ ಪ್ರಾತಿನಿಧ್ಯತತ್ತ್ವಕ್ಕೆ ಅನುಮೋದಿಸಿರುತ್ತಾರೆ. ಮತ್ತೂ ಈಗತಾನೇ ಪ್ರಕಟವಾಗಿರುವ ಮಾಂಟೆಗ್ ರಾಜಕೀಯ ನೂತನ ಸುಧಾರಣದಲ್ಲೂ ಮಹಮ್ಮದೀಯರ ಮತ್ತೂ ಸಿಕ್ ಪ್ರಜೆಗಳ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶವು ಕೊಡಲ್ಪಟ್ಟಿದೆ. ಹೀಗಿದ್ದರೂ ನಮ್ಮ ಸಂಸ್ಥಾನದಲ್ಲಿ ಮಹಮ್ಮದೀಯರ ಪ್ರತ್ಯೇಕ ಪ್ರಾತಿನಿಧ್ಯಕ್ಕೂ ಅವಕಾಶವಿಲ್ಲದೆಹೋಗುವುದೆಂದರೆ ಅನ್ಯಾಯವಲ್ಲವೆ? ಮ॥ ಬಾನರ್ಜಿಯವರ ನಿಯಮನಿರ್ಮಾಣಸಭಾ ಭಾಷಣದಲ್ಲಿ ಕಂಡಿರುವಂತೆ ಉಳಿದ ಹಿಂದುಳಿದವರೊಡನೆ ಮಹಮ್ಮದೀಯರು ಕೂಡಿ ಪ್ರತ್ಯೇಕ ಪ್ರಾತಿನಿಧ್ಯಸ್ವಾಮ್ಯವನ್ನು ಕೇಳಿದುದೇ ಒಂದು ತಪ್ಪಾಗಿ, ಇವರೂ ಆ ವರದಾನಕ್ಕೆ ದೂರಮಾಡಲ್ಪಟ್ಟಿದ್ದರೆ ಅದು ತುಂಬಾ ವಿಷಾದಸ್ಥಾನವೇ ಸರಿ. ಪಕ್ಷಭೇದವನ್ನು ಮಾಡಬೇಕಾಗುತ್ತದೆಂದು ಇವರ ಸ್ವಾಮ್ಯಕ್ಕೂ ಗದಾಪ್ರಯೋಗವಾಗತಕ್ಕದು ಇಷ್ಟವಾದುದಲ್ಲ. ತಮ್ಮ ಇಷ್ಟಾರ್ಥಪೂರಣವಾಗದೆ ತಮ್ಮ ಜತೆಯಲ್ಲಿ ಬಂದಿದ್ದ ಮಹಮ್ಮದೀಯ ಸೋದರರ ಇಷ್ಟಾರ್ಥಪೂರಣವಾಗಿದ್ದರೂ ಹಿಂದೂಗಳಿಗೆ ಅದು ಅಸಹನೆಯನ್ನೇನೂ ಉಂಟುಮಾಡುತ್ತಿರಲಿಲ್ಲ. ತಮ್ಮ ಜತೆಯು ಯಾರಿಗೆ ಫಲವಾಗಿದ್ದರೂ ಅದು ತಮಗಾದ ಫಲವೇ ಎಂದು ಭಾವಿಸಿ ಸ್ವಲ್ಪವಾದರೂ ಸಮಾಧಾನಪಡುತ್ತಿದ್ದರು. ಆದರೆ ತಮ್ಮ ಜತೆಯವರಿಗೆ ಫಲವಾಗದೆ ತಮಗೆ ಮಾತ್ರ ಫಲವಾಗಿದ್ದರೆ ಅದನ್ನು ಮಹಮ್ಮದೀಯ ಸೋದರರು ಮನಃಪೂರ್ವಕವಾಗಿ ಅಂಗೀಕರಿಸುತ್ತಿದ್ದರೋ ಇಲ್ಲವೋ ಅದನ್ನು ಹೇಳಲಾರೆವು. ಮುಂದಾದರೂ ಹಿಂದೂ ಮಹಮ್ಮದೀಯ ವರ್ಗಗಳೆರಡೂ ಇದುವರೆಗಿನಂತೆಯೇ ಪರಸ್ಪರ ವಿಶ್ವಾಸೈಕ್ಯಗಳಿಂದ ಪ್ರಯತ್ನಮಾಡುತ್ತಾ ಬಂದರೆ ಆ ಸಂಘಶಕ್ತಿಯು ಇಷ್ಟಾರ್ಥಪ್ರದವಾಗದೆ ಹೋಗುವುದಿಲ್ಲ.

ಶ್ರೀಮನ್ಮಹಾರಾಜರವರ ಉತ್ತರದಲ್ಲಿ ಮುಂಬರಿದ ಬ್ರಾಹ್ಮಣವರ್ಗದವರನ್ನು ಕುರಿತು ಕೆಲವು ಮಾತುಗಳು ಹೇಳಲ್ಪಟ್ಟಿರುವುವಷ್ಟೆ. "ನಮ್ಮ ಪ್ರಜೆಗಳಲ್ಲಿ ಉಳಿದ ಜನವರ್ಗಗಳವರು ಎಷ್ಟು ರಾಜಭಕ್ತಿಯನ್ನು ಹೊಂದಿರುವರೋ ಬ್ರಾಹ್ಮಣರೂ ಅಷ್ಟೇ ಭಕ್ತಿಯನ್ನು ಹೊಂದಿರುವರೆಂದು ನಾವು ನಂಬಿರುತ್ತೇವೆ" ಎಂಬುದು ಮೊದಲಾದ ಶ್ರೀಮನ್ಮಹಾರಾಜರ ಮಾತುಗಳನ್ನು ಉದಹರಿಸಿಕೊಂಡು ಕೆಲವು ಬ್ರಾಹ್ಮಣಪತ್ರಿಕೆಗಳು ಬಹಳ ಹಿಗ್ಗುತ್ತಲಿವೆ. ತಮ್ಮಲ್ಲಿ ನಿಸರ್ಗವಾದ ಗುಣವನ್ನೇ ಪ್ರಭುಗಳು ಎತ್ತಿ ಆಡಿದ್ದರೆ ಅದಕ್ಕಾಗಿ ಇಷ್ಟು ಉಬ್ಬೇರಲು ಕಾರಣವಿರುವುದಿಲ್ಲ. ತಾನು ಮಾಡಿದ ಚಿಂತನೆಯ ಫಲಿತಾರ್ಥದಲ್ಲಿ ಸಂಶಯಗೊಂಡಿದ್ದ ವಿದ್ಯಾರ್ಥಿಯು ಸುಮುಖನಾಗಿ ಬಂದ ಪರೀಕ್ಷಾ ಫಲಿತಾಂಶವನ್ನು ಕೇಳಿ ಪರಮಾನಂದಗೊಳ್ಳುವನೇ ಹೊರತು, ಕಷ್ಟಪಟ್ಟು ಓದಿ ತನ್ನ ಸಾಮರ್ಥ್ಯದಲ್ಲಿ ನಂಬುಗೆಯುಳ್ಳವನು ತನ್ನ ಕೃತಾರ್ಥತೆಯ ಸುದ್ದಿಯನ್ನು ಅಗಾಧವೆಂದು ಎಂದಿಗೂ ತಿಳಿಯಲಾರನು. ಸರ್ವಪ್ರಜೆಗಳನ್ನೂ ಸಮಸುಖದುಃಖಿಗಳಾಗಿರುವಂತೆ ಮಾಡಬೇಕು ಸರ್ವರನ್ನೂ ಸಮಾನದೃಷ್ಟಿಯಿಂದ ಕಾಣಬೇಕು ಎಂದು ತ್ರಿಕರಣಪೂರ್ವಕವಾಗಿಯೂ ಪ್ರಯತ್ನಿಸುತ್ತಿರುವ ಶ್ರೀಮನ್ಮಹಾರಾಜರವರು ಇತರ ತಮ್ಮ ಪ್ರಜೆಗಳಂತೆಯೇ ಬ್ರಾಹ್ಮಣವರ್ಗದವರನ್ನೂ ರಾಜಭಕ್ತಿಸಂಪನ್ನರನ್ನಾಗಿ ನಂಬಿಕೊಂಡಿದ್ದೇವೆಂದು ಹೇಳಿರುವುದು ಅತಿಶಯೋಕ್ತಿಯಲ್ಲ. ಅದು ಅವರ ನಿರ್ಮಲ ಘನಚಿತ್ತದ ಬೆಳಕಾಗಿರುತ್ತದೆ. ನಂಬುವುದು ಅವರ ಕೆಲಸವಾದರೆ ಆ ನಂಬುಗೆಯನ್ನು ಸಾರ್ಥಕಪಡಿಸಿಕೊಳ್ಳುವುದು ಯಾರ ಕೆಲಸ?

ಶ್ರೀಮನ್ಮಹಾರಾಜರವರು ತಮ್ಮ ಅರಸುಮಕ್ಕಳುಗಳ ವಿದ್ಯಾಭಿವೃದ್ಧಿಗಾಗಿ ಪ್ರತ್ಯೇಕವಾದ ಏರ್ಪಾಟು ಮಾಡಿದುದನ್ನು ನೋಡಿ ಕೆಲವರು ಸೈರಿಸಲಾರದೆ, ಅದಕ್ಕೆ ಸ್ವಜನಪಕ್ಷಪಾತವನ್ನು ಮಾಡಿ ಕೆಟ್ಟುಹೋದ ಔರಂಗಜೇಬನ ಸಾಮ್ಯವನ್ನು ಕೊಟ್ಟು ತಮ್ಮ ಅಸಹನೆಯನ್ನು ತೋರ್ಪಡಿಸಿಕೊಂಡರು. ಹಿಂದೆ ಬಿದ್ದುಹೋಗಿರುವ ಪ್ರಜೆಗಳ ಉದ್ಧಾರಕ್ಕಾಗಿ ಪ್ರಭುಗಳು ತೋರಿಸಿದ ಕನಿಕರವನ್ನು ಕಂಡು ಅವರಿಗೆ "ಆಂಟಿಬ್ರಾಹಮಿನ್" ಎಂದು ನಾಮಕರಣ ಮಾಡುವುದಕ್ಕೂ ಕೆಲವರು ಹೇಸಲಿಲ್ಲ. ಯೂರೋಪಿನ ಮಹಾಯುದ್ಧವು ಪ್ರಾಪ್ತವಾದಕೂಡಲೇ ವೃತ್ತಪತ್ರಿಕೆಗಳಲ್ಲಿ ಜರ್ಮನರ ಜಯವನ್ನು ಕೇಳಿ ಹಿಗ್ಗುವುದಕ್ಕೂ, ಅವರಿಗೆ ಸುಖಾಗಮನಮಾಡುವುದಕ್ಕೂ ಹೇಸದವರು ಅನೇಕರು ತಲೆದೋರಿದರು. ೧೫೦ ವರ್ಷಾವಧಿಯ ತಮ್ಮ ಸದ್ಧರ್ಮ ಪರಿಪಾಲನೆಯಿಂದ ಭರತಖಂಡವನ್ನು ಸರ್ವತೋಮುಖವಾಗಿ ಅಭಿವೃದ್ಧಿಗೆ ತಂದ ಆಂಗ್ಲ ಪ್ರಭುತ್ವದವರಿಗೆ ಯುದ್ಧಮೂಲಕವಾದ ವಿಷಮಸಂಧಿಯು ಪ್ರಾಪ್ತವಾದುದನ್ನು ತಿಳಿದುಕೊಂಡು ಅವರಮೇಲೆ ಬಾಯಿಗೆ ಬಂದಂತೆ ವಾಗ್ಬಾಣಗಳನ್ನು ಉಪಯೋಗಿಸಿ ಕೊಟ್ಟಿ ಕೆಚ್ಚನ್ನು ತೀರಿಸಿಕೊಳ್ಳುವುದಕ್ಕೂ, ದುಷ್ಟವಾದ ದ್ರೋಹಗಳನ್ನಾಚರಿಸುವುದಕ್ಕೂ, ಅಶ್ರೇಯಶ್ಚಿಂತನೆಯಿಂದಲೂ ಲಕ ಸ್ವಾರ್ಥಲಾಭಮಾಡಿಕೊಳ್ಳುವುದಕ್ಕೂ ಕೂಡ ಹಲವರು ಸಿದ್ಧರಾದರು. ಈ ತೆರನಾದ ಕಪಟರಾಜಭಕ್ತಿಯು ನಮ್ಮ ದೇಶದಲ್ಲಿ ಯಾವಾಗಲೂ ತಲೆದೋರದಿರುವಂತೆ ನಮ್ಮ ಬ್ರಾಹ್ಮಣ ಸಹೋದರರು ಮಾಡಿಕೊಂಡರೇನೆಯೇ ನಮ್ಮ ಪ್ರಭುಗಳ ನಂಬುಗೆಯು ಸಾರ್ಥಕವಾದೀತು; ಅವರಿಗೂ ಹಿತವಾದೀತು. ಮುಖ್ಯವಾಗಿ ಶ್ರೀಮನ್ಮಹಾರಾಜರವರು ತಮ್ಮ ಉತ್ತರದ ಕೊನೆಯಲ್ಲಿ ಬ್ರಾಹ್ಮಣರು ಉಳಿದ ಜನವರ್ಗಗಳ ನಿಸರ್ಗವಾದ ಆಶೋತ್ತರಗಳಿಗೆ ಯಾವ ಆತಂಕವನ್ನೂ ಉಂಟುಮಾಡದೆ ಇರುವವರಾಗಬೇಕೆಂದು ಅಪ್ಪಣೆಕೊಡಿಸಿರುವ ರಾಜಾಜ್ಞೆಯೊಂದನ್ನು ಇವರುಗಳು ಭಂಗಪಡಿಸದೆ ನೆರವೇರಿಸಿಕೊಟ್ಟರೆ ಪ್ರಭುಗಳ ನಂಬುಗೆಯೆಲ್ಲವೂ ಸಾರ್ಥಕವಾಗುವುದಲ್ಲದೆ ದೇಶಕ್ಕೂ ಕ್ಷೇಮವಾದೀತು. "ಸತ್ಯಂ ದಾನಂ ಕ್ಷಮಾ ಶೀಲ ಮಾನೃಶಂಸ್ಯಂ ತಪೋ ಘೃಣಾ। ದೃಶ್ಯಂತೇ ಯತ್ರನಾಗೇಂದ್ರ ಸಬ್ರಾಹ್ಮಣ ಇತಿಸ್ಮೃತಃ" ಎಂಬ ಮಹಾಭಾರತ ವಾಕ್ಯದಲ್ಲಿ ಕಂಡಂತೆ ಬ್ರಾಹ್ಮಣ ಗುಣಧರ್ಮವನ್ನು ಅವರುಗಳು ರಕ್ಷಿಸಿಕೊಂಡಂತೆಯೂ ಆದೀತು.

ಭಾರತ ರಾಜಕೀಯ ಸಂಸ್ಕರಣಗಳು.

ಸ್ಟೇಟ್‌ಸೆಕ್ರೆಟರಿ ಮಿ॥ ಮಾಂಟೆಗ್‌ರವರೂ ವೈಸ್‌ರಾಯಿ ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರೂ ಸಹ ಕೂಡಿ ನಿರ್ಣಯಿಸಿರುವ ರಾಜಕೀಯ ಸಂಸ್ಕರಣಗಳು ಕಳೆದ ಸೋಮವಾರ ಭರತಖಂಡದಲ್ಲಿ ಪ್ರಕಟಿಸಲ್ಪಟ್ಟಿರುತ್ತವೆ. ಇವೆಲ್ಲಾ ೧೭೭ ಪುಟಗಳುಳ್ಳ ೧ ದೊಡ್ಡ ಗ್ರಂಥವಷ್ಟಾಗಿದೆ. ಇದರಲ್ಲಿ ೨ ಭಾಗಗಳಿವೆ. ೮೮ ಪುಟಗಳುಳ್ಳ ಮೊದಲಭಾಗದಲ್ಲಿ ವಿಷಯವಿಮರ್ಶೆಯೂ, ೮೯ನೆ ಪುಟದಿಂದ ೧೬೨ ಪುಟಗಳವರೆಗಣ ೨ನೆ ಭಾಗದಲ್ಲಿ ನಾನಾಸೂಚನೆಗಳೂ ಉಪೋದ್ಘಾತವೂ ಇವೆ. ವಿಷಯಸೂಚನೆ, ತಾತ್ಕಾಲಿಕವಿಭಜನಸೂಚನೆ, ಮೊದಲಾದುವುಗಳನ್ನು ವಿವರಿಸುವ ಅನುಬಂಧಪುಟಗಳು ೧೫ ಸೇರಿವೆ. ಇಷ್ಟು ವಿಸ್ತಾರವಾಗಿರುವ ಸೂಚನಾಪತ್ರವನ್ನು ಸಿದ್ಧಮಾಡುವುದರಲ್ಲಿ ಇದರ ಕರ್ತರಾದ ಮಹಾಪುರುಷರಿಬ್ಬರೂ ಅವರ ಸಹಕಾರಿಗಳೂ ಪಟ್ಟ ಶ್ರಮಸಾಹಸಗಳು ಅಲ್ಪವಾಗಿರಲಾರವು. ಭರತಖಂಡದಲ್ಲಿ ಬಾಧ್ಯತಾಯುತ ಪರಿಪಾಲನವನ್ನು ಸ್ಥಾಪಿಸಿ ದೇಶವನ್ನು ಮುಂದಕ್ಕೆ ತರುವುದರಲ್ಲಿ ಆಂಗ್ಲ ಮಂತ್ರಿಮಂಡಲದವರಿಗೂ, ಸ್ಟೇಟ್‌ಸೆಕ್ರೆಟರಿಯವರಿಗೂ, ವೈಸ್ರಾಯರಿಗೂ ಇರುವ ಪ್ರೀತ ಭಿಪ್ರಾಯಗಳು ಇದುವರೆಗೇ ದೇಶೀಯರ ನಿದರ್ಶನಕ್ಕೆ ಬಂದಿರುತ್ತವೆ. ಈ ದೇಶದ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ತಿಳಿದು ತಕ್ಕ ರಾಜಕೀಯಸುಧಾರಣೆಗಳನ್ನು ಏರ್ಪಡಿಸುವುದಕ್ಕಾಗಿಯೇ ಸ್ಟೇಟ್‌ಸೆಕ್ರೆಟರಿ ಮಾಂಟೆಗ್‌ರವರನ್ನೂ ಇನ್ನು ಕೆಲ ಸಭಿಕರನ್ನೂ ಸಹ ಪಾರ್ಲಿಮೆಂಟಿನವರು ಭರತಖಂಡಕ್ಕೆ ಕಳುಹಿಸಿಕೊಟ್ಟಿದ್ದರು. ಅವರಮೇಲೆ ಈ ವಿಷಮಯುದ್ಧದ ಅಪಾಯಸಮಯದಲ್ಲಿ ಆ ಮಹನೀಯರುಗಳು ಭರತಖಂಡಕ್ಕೆ ಬಂದು ಇಲ್ಲಿಯ ಪ್ರಮುಖಸಂಘಗಳ ಮತ್ತೂ ಜನರ ಅಭಿಪ್ರಾಯಗಳನ್ನೆಲ್ಲಾ ವಿಜ್ಞಾಪನಪತ್ರಗಳಮೂಲಕವೂ ಪ್ರತ್ಯಕ್ಷ ಸಂಭಾಷಣಗಳಮೂಲಕವೂ ಅರಿತುದಲ್ಲದೆ ದೇಶದ ರಾಷ್ಟ್ರಾಧಿಕಾರನಿರ್ವಾಹಕರ ಅನುಭವವಿಶೇಷವನ್ನೂ ತಿಳಿದು ಸ್ವಪರಿಪಾಲನಸ್ಥಾಪನೆಗೆ ದಾರಿಹಾಕಿಕೊಡುವ ಸಂಸ್ಕರಣಗಳಾವುವೆಂಬುದನ್ನು ನಿರ್ಧರಿಸಿ, ಅವನ್ನೇ ಈ ನಿವೇದಿಕೆಯಲ್ಲಿ ವಿವರಿಸಿ ಇಂಗ್ಲಾಂಡ್‌ಪ್ರಭುತ್ವದವರಿಗೆ ಸಮರ್ಪಿಸಿರುತ್ತಾರೆ. ಇದರಮೇಲೆ ಸಾಧಕಬಾಧಕಗಳನ್ನು ಕುರಿತು ಚರ್ಚಿಸಿ ಭಾರತೀಯರು ಅಭಿಪ್ರಾಯಕೊಡಬಹುದು. ಆ ಬಳಿಕ ಇದು ಪಾರ್ಲಿಮೆಂಟಿನ ಮುಂದೆ ವಿಮರ್ಶೆಗೆ ಹೋಗಿ ಒಪ್ಪಿಗೆ ಪಡೆದರೆ ವಿಧಿಯಾಗಿ ಏರ್ಪಡುವುದು. ಆದುಕಾರಣ ಈ ನಿವೇದಿಕೆಯಲ್ಲಿ ಕಂಡ ಎಲ್ಲ ವಿಷಯಗಳೂ ಈಗನಂತೆಯೇ ವಿಧಿಯಾಗುವುವೆಂದಾಗಲೀ ಸಂಪೂರ್ಣವಾಗಿ ತಳ್ಳಿಹಾಕಲ್ಪಡುವುವೆಂದಾಗಲೀ ಹೇಳಲಾಗುವುದಿಲ್ಲ. ಆದರೂ ಬಲುಮಟ್ಟಿಗೆ ಇವು ಅಂಗೀಕರಿಸಲ್ಪಡುವುವೆಂಬುದಕ್ಕೆ ಸಂಶಯವಿಲ್ಲ. ಇನ್ನೊಂದು ಕಡೆಗೆ ವ್ಯವಧಾನಕೊಡುವುದಕ್ಕೆ ಲೇಶವೂ ಅವಕಾಶವಿಲ್ಲದಿರುವಂಥ ಈಗಣ ಯುದ್ಧದ ಬಿಕ್ಕಟ್ಟಿನ ಸಮಯದಲ್ಲೂ ಆಂಗ್ಲಪ್ರಭುತ್ವದವರು ಭರತಖಂಡದಮೇಲಣ ಹಿತಾಪೇಕ್ಷೆಯಿಂದ ಇಲ್ಲಿಯ ಪರಿಪಾಲನದಲ್ಲಿ ವಿಶೇಷ ಸುಧಾರಣೆಯನ್ನು ಕಾಲೋಚಿತವಾಗಿ ಮಾಡಬೇಕೆಂದು ತೋರಿಸುತ್ತಿರುವ ಶ್ರದ್ಧೆಗಾಗಿ ಭಾರತೀಯರೆಲ್ಲರೂ ಕೃತಜ್ಞರಾಗಿರಬೇಕಾಗಿರುವುದಲ್ಲದೆ, ಏಕಪಕ್ಷೀಯ ದೃಷ್ಟಿಯಿಂದಲೂ ಸ್ವಾರ್ಥೈಕಸಾಧನಮತಿಯಿಂದಲೂ ಈ ಸೂಚನೆಯಮೇಲೆ ಗುಣಾಗುಣ ವಿಮರ್ಶೆಯನ್ನು ಮಾಡದೆ ದೇಶಸ್ಥಿತಿ ಕಾಲಸ್ಥಿತಿ ಪ್ರಭುತ್ವಕೃತಜ್ಞತೆಗೆ ಮೊದಲಾದುವುಗಳೆಲ್ಲವನ್ನೂ ತಮ್ಮ ಕಣ್ಣಮುಂದಿಟ್ಟುಕೊಂಡು ವಿಮರ್ಶಿಸಿ ತಂತಮ್ಮ ಅಭಿಪ್ರಾಯಗಳನ್ನು ಕೊಡಬೇಕಾಗಿದೆ. ಈ ಕಾಲದಲ್ಲಿ ಸಂಪೂರ್ಣಸ್ವಪರಿಪಾಲನವನ್ನು ನಮಗೆ ಕೊಡದಿದ್ದರೆ ನಾವು ಇದನ್ನು ಒಪ್ಪುವುದಿಲ್ಲವೆಂದು ಕೆಲವರು ಹೇಳಿಬಿಟ್ಟ ಮಾತ್ರಕ್ಕೇ ಇದರಮೇಲಣ ವಿಮರ್ಶೆಗೆ ಕೊಡಲ್ಪಟ್ಟ ಅಧಿಕಾರವನ್ನು ಅವರು ಸಾರ್ಥಕಪಡಿಸಿಕೊಂಡಂತಾಗುವುದಿಲ್ಲ; ಆಗತಕ್ಕ ಸುಧಾರಣೆಗಳು ನಿಂತೂ ಹೋಗುವುದಿಲ್ಲ. ಬರಿಯ ಹಠವಾದಿತನವನ್ನು ತೋರಿ ಪೆಡಸುಮಾಡಿಕೊಳ್ಳುವುದಕ್ಕಿಂತಲೂ ಅನುಕೂಲವಾದಷ್ಟನ್ನು ಅಂಗೀಕರಿಸಿ, ಅನುಗೃಹೀತವಾಗದಿದ್ದುದನ್ನು ಮುಂದೆ ಪಡೆಯುವುದಕ್ಕೆ ತಕ್ಕ ಕ್ರಮದಿಂದ ನಡೆದುಕೊಳ್ಳುವುದೇ ಹಿತವಾದ ಮಾರ್ಗವಾಗಿರುತ್ತದೆ. ಹಾಗಲ್ಲದಿದ್ದರೆ "ಅಸಂತುಷ್ಟೋ ದ್ವಿಜೋನಷ್ಟಃ" ಎಂಬ ವಚನಾರ್ಥಕ್ಕೆ ಭಾಗಿಗಳಾದರೂ ಆಗಬಹುದು. ಈಗ ಸೂಚಿಸಲ್ಪಟ್ಟಿರುವ ವಿಧಾನಗಳೂ ಕೂಡ ಉದಾರಭಾವಪೂರ್ಣವುಗಳಾಗಿಯೂ ಸ್ವಪರಿಪಾಲನಶಕ್ತಿಯನ್ನು ರೂಢಮೂಲಗೊಳಿಸುವುದಕ್ಕೆ ಹದಿಗಟ್ಟಿದಂತೆಯೂ ಇರುವುವೆಂಬುದಕ್ಕೆ ಸಂಶಯವಿಲ್ಲ. ನಿರ್ಮತ್ಸರಮತಿಯಿಂದ ವಿಮರ್ಶೆಮಾಡಿರುವ ವಿದೇಶೀಯಾಂಗ್ಲ ಪತ್ರಿಕೆಗಳೂ, ನಮ್ಮ ದೇಶದ ರಾಜಕೀಯಾನುಭವವಿಶಿಷ್ಟರಾದ ಸರ್ ಸತ್ಯೇಂದ್ರಪ್ರಸನ್ನ ಸಿಹ್ನ, ಭೂಪೇಂದ್ರನಾಥ ಬಾಸು, ಶ್ರೀನಿವಾಸಶಾಸ್ತ್ರಿ, ಪರಾಂಜಪೆ ಮೊದಲಾದ ಮಹನೀಯರನೇಕರು ವಿಹಿತಾಭಿಪ್ರಾಯವನ್ನೇ ಕೊಟ್ಟಿರುತ್ತಾರೆ. ತೀಕ್ಷ್ಣ ಸ್ವರಾಜ್ಯವಾದಿಗಳು ಮಾತ್ರ ಕಠಿನವಾಗಿ ಇದನ್ನು ತಿರಸ್ಕರಿಸುತ್ತಲೂ ನಿಂದಿಸುತ್ತಲೂ ಇದ್ದಾರೆ. ಅದರಂತೆ ಇದನ್ನು ಧಿಕ್ಕರಿಸಬೇಕೆಂದು ಪ್ರಜೆಗಳೆಲ್ಲರಿಗೂ ಬೋಧಿಸುತ್ತಲೂ ಇದ್ದಾರೆ. ಭರತಖಂಡಕ್ಕೆ ನಿಜವಾದ ಹಿತವಾಗಬೇಕಾಗಿದ್ದರೆ ಆಂಗ್ಲಛತ್ರಚ್ಛಾಯೆಯ ಮೂಲಕವಲ್ಲದೆ ಅನ್ಯಥಾ ಇಲ್ಲ. ಅದೂ ಕೂಡ ಆ ಪ್ರಭುತ್ವದ ಪ್ರೀತಿವಿಶ್ವಾಸಗಳಿಂದ ಸಿದ್ಧಿಸಬೇಕಲ್ಲದೆ ವಿರೋಧದಿಂದಲೂ ಬಲಾತ್ಕಾರದಿಂದಲೂ ಸಿದ್ಧಿಸಲಾರದು. ಈಗ ಕೊಡಲ್ಪಡಲಿಕ್ಕಿರುವ ವರದಾನಕ್ಕಾದರೂ ಭರತಖಂಡದ ವಿದ್ಯಾಧಿಕರ ವಾಕ್ಪೌರುಷವೇನೂ ಕಾರಣವಲ್ಲ. ಸ್ವರಾಜ್ಯವೆಂದರೇನೆಂಬುದನ್ನು ಸ್ವಪ್ನದಲ್ಲೂ ಅರಿಯದಿರುವ ಜನವರ್ಗಗಳಿಂದಲೇ ಹೆಚ್ಚಾಗಿ ಹೊರಬಿದ್ದು ರಣರಂಗಕ್ಕೆ ಹೋಗಿ ಸಾಮ್ರಾಜ್ಯರಕ್ಷಣೆಗಾಗಿ ತಮ್ಮ ದೇಹಗಳನ್ನರ್ಪಿಸುವುದಕ್ಕೂ ಹಿಂದೆಗೆಯದಿರುವ ಭಾರತೀಯ ಭಟರ ರಾಜಭಕ್ತಿ ವಿನಯವಿಧೇಯತೆಗಳೇ ಮುಖ್ಯಕಾರಣವು. ಹೀಗಿರುವಾಗ ನಮಗೆ ಉತ್ತರೋತ್ತರ ಇಷ್ಟಫಲಗಳಾವುವು ಬೇಕಾಗಿದ್ದರೂ ಇದೇ ತೆರದ ರಾಜಭಕ್ತಿ ವಿಶ್ವಾಸಗಳನ್ನು ನಾವು ಇನ್ನೂ ಅಧಿಕಾಧಿಕವಾಗಿ ಪ್ರದರ್ಶಿಸಿ ಆಂಗ್ಲಪ್ರಭುತ್ವದವರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ, ಅವರ ಉಚ್ಚಧರ್ಮಗಳೇ ಅವರ ಸಹಜಸ್ವಾತಂತ್ರ್ಯಧರ್ಮಪ್ರೀತಿಯೇ ಅವರ ಮನಸ್ಸನ್ನು ಚುಚ್ಚಿ ನಾವು ಕೇಳುವ ಸ್ವಾತಂತ್ರ್ಯವನ್ನು ಲಗುಬಗೆಯಿಂದ ಕೊಡುವಂತೆ ಮಾಡಿಸುವಹಾಗೆ ನಾವುಗಳು ನಡೆದುಕೊಳ್ಳಬೇಕಾಗಿದೆ. "ಕಾಂಗ್ರೆಸ್‌ಸಭೆಯವರೂ, ಮುಸ್ಲಿಂಲೀಗಿನವರೂ ಕೋರಿರುವಂಥ ಪ್ರಾರ್ಥನೆಗಳನ್ನು ಕೊಡದಿದ್ದರೆ ನಾವು ಯುದ್ಧದ ಸಾಲಕ್ಕೆ ಹಣವನ್ನು ಕೊಡುವುದಿಲ್ಲ; ಸೈನ್ಯಕ್ಕೆ ಜನರನ್ನು ಸೇರಿಸುವುದಿಲ್ಲ" ಎಂದು ಮುಂತಾಗಿ ಕೆಲವು ಸ್ವರಾಜ್ಯವಾದಿಗಳು ಹೇಳುವುದಕ್ಕೂ ಹಾಗೆ ಮಾಡಲು ಇತರರನ್ನು ಪ್ರೇರಿಸುವುದಕ್ಕೂ ಅಲ್ಲಲ್ಲಿ ಉಜ್ಜುಗಿಸಿದ್ದಾರೆಂದು ಕೇಳುತ್ತೇವೆ. ಈ ರೀತಿಯು ರಾಜಾಗ್ರಹಕ್ಕೆ ಮಾರ್ಗಮಾಡಿ ದೇಶಕ್ಕೆ ಮತ್ತಷ್ಟು ವಿಘಾತವನ್ನು ತಂದಿಕ್ಕೀತಲ್ಲದೆ ಎಂದಿಗೂ ಸತ್ಫಲಪ್ರದವಾಗಲಾರದು. ಭರತಖಂಡದವರು ಎಷ್ಟೋ ಪಾಡುಪಟ್ಟು ೧೫೦ ಕೋಟಿ ರೂ. ಗಳನ್ನು ಕೂಡಿಸಿಕೊಟ್ಟರೂ ಅದು ಆಂಗ್ಲಪ್ರಭುತ್ವದವರ ೧೫ ದಿನಗಳ ಯುದ್ಧದ ವೆಚ್ಚಕ್ಕೂ ಸಾಕಾಗುವುದಿಲ್ಲ. ಹೀಗಿರುವಾಗ ಇದು ಯಾವ ಮಹಾಸಹಾಯ? ಇದರಲ್ಲಿ ಅವರಿಗಾಗುವ ಲಾಭಕ್ಕಿಂತಲೂ ನಮ್ಮ ಲಾಭವೇ ಹೆಚ್ಚಾಗಿರುವುದು. ನಡೆಯುವ ಮಹಾಪರ್ವದಲ್ಲಿ ನಮ್ಮದಿಷ್ಟು ಸಂಬಾರದ ಸಹಾಯವನ್ನು ಮಾಡಿ ಪರಿಣಾಮಫಲಕ್ಕೆ ನಾವೂ ಭಾಗಿಗಳಾಗಿ ನಿಂತುಕೊಳ್ಳುವುದು ಜಾಣತನವಲ್ಲವೆ?

ಈ ಸಂಸ್ಕರಣ ಸೂಚಿಕೆಯಲ್ಲಿ ಅನೇಕ ವಿಷಯಗಳು ತುಂಬಿರುತ್ತವೆ. ಅವನ್ನೆಲ್ಲಾ ನಮ್ಮ ಚಿಕ್ಕ ಪತ್ರಿಕೆಯಲ್ಲಿ ವಿವರಿಸುವುದು ಸಾಧ್ಯವಲ್ಲ. ಆದರೂ ಮುಖ್ಯಮುಖ್ಯ ಭಾವಗಳನ್ನು ಸಂಗ್ರಹಿಸಿ ಮುಂದೆ ಪ್ರಕಟಿಸುತ್ತೇವೆ. ಪ್ರತ್ಯೇಕ ಪ್ರಾತಿನಿಧ್ಯತತ್ವದ ವಿಷಯವಾಗಿ ಈ ಸಂಸ್ಕರಣದಲ್ಲಿ ಅನುವು ಕೊಡಲ್ಪಟ್ಟಿರುವುದಿಲ್ಲ. ಸ್ಥಾನಿಕ ಸ್ವಪರಿಪಾಲನ ಕ್ರಮವನ್ನು ಸಾಧ್ಯವಾದ ಮಟ್ಟಿಗೂ ಪ್ರಜೆಗಳಿಗೆ ಸಂಪೂರ್ಣ ವಶಮಾಡಬೇಕೆಂಬುದು ಉದ್ದೇಶವೆಂದು ಹೇಳಲ್ಪಟ್ಟು ಸಾಧ್ಯವಾದ ಸಾಧನಗಳೆಲ್ಲಾ ನಿರೂಪಿಸಲ್ಪಟ್ಟಿದ್ದರೂ, ಪ್ರತ್ಯೇಕ ಸಂಘ ಪ್ರಾತಿನಿಧ್ಯದ ಅನುಕೂಲ್ಯವನ್ನು ಮಹಮ್ಮದೀಯ ಸಿಕ್ ಜನರ ಹೊರತಾಗಿ ಉಳಿದವರಾರಿಗೂ ಕೊಟ್ಟಿರುವುದಿಲ್ಲ. ಆ ತತ್ತ್ವವು ಯುಕ್ತವಾದುದೆಂದು ಅವರಿಂದ ಭಾವಿಸಲ್ಪಟ್ಟಿತೆಂಬುದಕ್ಕೆ ಒಂದೆರಡು ಜನವರ್ಗಕ್ಕಾದರೂ ಪ್ರತ್ಯೇಕ ಪ್ರಾತಿನಿಧ್ಯದ ಸ್ವಾಮ್ಯವನ್ನು ಕೊಡಲು ಅಂಗೀಕರಿಸಿದುದೇ ನಿದರ್ಶನವಾಗಿದೆ. ಆ ಎರಡು ಜನವರ್ಗಕ್ಕೇ ಅದನ್ನನುಗ್ರಹಿಸಬೇಕಾಗಿದ್ದರೆ ವಿಶಿಷ್ಟ ಕಾರಣಗಳಿಲ್ಲದೆ ಇಲ್ಲ. ಆ ವರ್ಗಗಳು ಯುದ್ಧಸಹಾಯ ವಿಷಯದಲ್ಲಿ ತೋರಿಸುತ್ತಿರುವ ಶ್ರದ್ಧೆಯೂ, ಅವರಲ್ಲಿರುವ ಐಕ್ಯದೃಢಪ್ರಯತ್ನಗಳೂ ಸಹ ಅದಕ್ಕೆ ಕಾರಣವು. ಅವರ ವರ್ತನವನ್ನನುಸರಿಸಿ ಭರತಖಂಡದ ಹಿಂದುಳಿದ ಹಿಂದೂ ಮಹಾಜನರೆಲ್ಲರೂ ತಮ್ಮ ಸಂಖ್ಯೆಗನುಗುಣವಾಗಿ ತಮ್ಮಲ್ಲಿ ಐಕ್ಯವೂ ನಿರ್ವಾಹಶಕ್ತಿಯೂ ಅರ್ಹತೆಯೂ ಕ್ಷಾತ್ರಶಕ್ತಿಯೂ ಎಷ್ಟಿರುವುವೆಂಬುದನ್ನು ತಮ್ಮ ಸಹಜ ರಾಜಭಕ್ತಿಯನ್ನು ಮುಂಬರಿಸಿಕೊಂಡು ಪ್ರಭುತ್ವದವರ ಕಣ್ಮನಗಳಿಗೆ ತಟ್ಟುವಂತೆ ಮಾಡಿದರೆ ಇವರ ಆಕಾಂಕ್ಷೆಗಳೂ ಫಲಿಸದೆ ಹೋಗಲಾರವು. ಪ್ರತ್ಯೇಕ ಪ್ರಾತಿನಿಧ್ಯತತ್ತ್ವದ ಅಭ್ಯುದಯವಾಗಿ ಇನ್ನೂ ಸ್ವಲ್ಪ ಕಾಲವಾಗಿರುವುದು. ಇಷ್ಟರೊಳಗಾಗಿ ಆ ಶಿಶುವು ಸಂತಾನವನ್ನೀಯುವ ಸ್ಥಿತಿಗೆ ಬರಲಿಲ್ಲವೆಂದು ಯಾರೂ ನಿರಾಶೆಯನ್ನೂ ವಿಷಾದವನ್ನೂ ಪಡಬೇಕಾದುದಿಲ್ಲ. ಕಾಲ ಕಳೆದಂತೆ ಆ ಶಿಶುವನ್ನು ಸರ್ವಾಂಗಪುಷ್ಟಿಗೊಳಿಸಲು ಹಿಂದುಳಿದ ಜನವರ್ಗಗಳವರೆಲ್ಲಾ ಅವಿಶ್ರಾಂತವಾದ ಎಚ್ಚರಿಕೆಯನ್ನು ಅದರ ವಿಷಯದಲ್ಲಿ ತೆಗೆದುಕೊಳ್ಳುತ್ತಿರಬೇಕು. ಸಮಯಸಿಕ್ಕಿದಾಗಲೆಲ್ಲಾ ಪ್ರತ್ಯೇಕ ಪ್ರಯತ್ನವನ್ನು ಅದಕ್ಕಾಗಿ ಮಾಡುತ್ತಿರಬೇಕು. ಪ್ರಕೃತದಲ್ಲಿ ಸೂಚಿತವಾಗಿರುವ ಸಂಸ್ಕರಣ ಪ್ರಣಾಳಿಕೆಯಲ್ಲಿ ೧-೨ ಜನವರ್ಗಗಳಿಗೆ ಮಾತ್ರ ಪ್ರತ್ಯೇಕ ಪ್ರಾತಿನಿಧ್ಯಸ್ವಾಮ್ಯಲಾಭಕ್ಕೆ ಅವಕಾಶವಿತ್ತು ಇತರ ಕೋಟ್ಯಂತರ ಜನರಿಗೆ ಅದರ ಲಾಭವನ್ನು ಮಾಡಿಕೊಡದೆ ಹೋಗುವುದರಿಂದ ರಾಜ್ಯಾಂಗದಲ್ಲಿ ತಮ್ಮಗಳ ಪಾಲುಗಾರಿಕೆಯು ಬಿದ್ದು ಬಹಳ ನಷ್ಟವಾಗುವ ಸಂಭವವಿರುವುದನ್ನು ವೈಸ್ರಾಯರಿಗೂ, ಇಂಡಿಯಾ ಮಂತ್ರಿಯವರಿಗೂ ಪಾರ್ಲಿಮೆಂಟಿನವರಿಗೂ ಸಹ ಪ್ರತಿಪಡಿಸಿಕೊಳ್ಳುವ ಪ್ರಯತ್ನವನ್ನು ಎಲ್ಲ ಕಡೆಯವರೂ ತಪ್ಪದೆ ಮಾಡಬೇಕು. ಏಕೆಂದರೆ ತಂತಮ್ಮ ಅಭಿಪ್ರಾಯಗಳನ್ನು ತಿಳಿಯಿಸುವುದಕ್ಕೇ ಈಗ ಪ್ರಭುತ್ವದವರು ನಮಗೆ ಅವಕಾಶವಿತ್ತಿರುವರು. ಅದನ್ನು ನಾವು ವ್ಯರ್ಥಪಡಿಸಿಕೊಂಡು ಕಾಲ ಮಿಂಚಿದಮೇಲೆ ಸಂಕಟಪಟ್ಟು ಹಂಬಲಿಸಿಕೊಂಡರೆ ಫಲವೇನು?

ವಾದ್ಯವಾದನ.

ರಾಜಧಾನಿಯ ವಿಜ್ಞರೋಡಿನ ಪಕ್ಕದಲ್ಲಿರುವ ಉದ್ಯಾನದಲ್ಲಿ ಅರಮನೆಯ ಹಿಂದೂಬ್ಯಾಂಡಿನವರ ಹಿಂದೂಸ್ಥಾನಿ ಕಾನ್ಸರ್ಟನ್ನು ಕುತ್ಬಾ ಹಬ್ಬದದಿನವೂ ಅದರ ಮರುದಿನವೂ ಸಹ ನಡೆಯಿಸುವುದಕ್ಕೆ ಏರ್ಪಡಿಸಿದ್ದುದಕ್ಕಾಗಿ ಶ್ರೀಮನ್ಮಹಾರಾಜರವರಿಗೂ ಅವರ ಅರಮನೆಯ ಅಧಿಕಾರಿಗಳಿಗೂ ಸಹ ಪುರಪ್ರಜೆಗಳು ವಿಶೇಷ ಕೃತಜ್ಞರಾಗಿರುವರು. ಅರಮನೆಯ ಸಂಗೀತ ವಿದ್ವಾಂಸರೇ ಸೇರಿ ಏರ್ಪಡಿಸಿರುವ ಕಾನ್ಸರ್ಟನ್ನು ಇದಕ್ಕೆ ಮುಂಚೆ ಪುರನಿವಾಸಿಗಳು ಕೇಳಿದ್ದರು. ಈ ನವೀನವಾದ ಕಾನ್ಸರ್ಟನ್ನು ಕೇಳಿ ಆನಂದಿಸುವುದಕ್ಕೆ ಇದೇ ಮೊದಲು. ಇದನ್ನು ಮಿ॥ ಅಫೀಜ್‌ಖಾನ್ ಗವಾಯಿರವರೂ ಮ॥ ಬ್ಯಾಂಡ್‌ಮ್ಯಾಸ್ಟರ್ ವೆಂಕಟಪ್ಪನವರೂ ಸೇರಿ ಕಳೆದ ನಾಲ್ಕೇ ತಿಂಗಳಲ್ಲಿ ಅಭ್ಯಾಸಮಾಡಿಸಿದರೆಂದು ಕೇಳುವುದಕ್ಕೆ ಸಂತೋಷವಾಗುತ್ತದೆ. ಇದರಲ್ಲಿ ಸೇರಿರುವವರೆಲ್ಲಾ ಸ್ವದೇಶೀಯ ವಾದ್ಯಗಾರರೇ. ಈ ಕಾನ್ಸರ್ಟಿನಲ್ಲಿ ೨ ವೀಣೆ, ೨ ಪಿಟೀಲು, ೨ ದಿಲ್ರುಬಾ, ೨ ಸಿತಾರು, ೧ ಸಾರಂಗಿ,

೧ ಆರ್ಮೋನಿಯಂ, ೧ ಓಬೋ, ೧ ತಬಲಾ ಇಷ್ಟು ವಾದ್ಯಗಳು ಸೇರಿರುತ್ತವೆ. ಹಿಂದೂಸ್ಥಾನಿ ಮಟ್ಟುಗಳು ಬಲು ಇಂಪಾಗಿ ಬಾಜಿಸಲ್ಪಡುತ್ತವೆ. ಜವಣಿಕೆಯು ಸೊಗಸಾಗಿದೆ. ಮಹಮ್ಮದೀಯರೇ ಅಲ್ಲದೆ ಸಾವಿರಾರುಮಂದಿ ಹಿಂದೂಗಳೂ ಸೇರಿ ಇದನ್ನು ಕೇಳಿ ಬಹಳ ಆನಂದಪಟ್ಟರು. ಬಯಲಿನಲ್ಲಲ್ಲದೆ ಆವರಣವುಳ್ಳ ಭವನಗಳಲ್ಲಿ ಈ ವಾದ್ಯವಾದನವು ನಡೆದರೆ ಜವಣಿಕೆಯು ಇನ್ನೂ ಚೆನ್ನಾಗಿ ಶ್ರಾವ್ಯವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಕೈ. ಚಾಮರಾಜೊಡೆಯರವರ ಕಾಲದಲ್ಲಿ ಕೈ॥ ಬಸವಪ್ಪಾಜಿ ಅರಸಿನವರು ಹೊಸದಾಗಿ ಏರ್ಪಡಿಸಿದ ಹಿಂದೂಬ್ಯಾಂಡೇ ಬಹು ವಿಶೇಷವೆಂದು ಭಾವಿಸಲ್ಪಟ್ಟಿದ್ದಿತು. ಈಗಣ ನಮ್ಮ ಪ್ರಭುಗಳ ಕಾಲದಲ್ಲಿ ಸ್ವದೇಶದ ಬ್ಯಾಂಡು ನಾನಾಮುಖವಾದ ಅಭಿವೃದ್ಧಿಗೆ ತರಲ್ಪಟ್ಟಿದೆ. ಹೊರಗಣ ಸಿಕ್ ಗೂರ್ಖಾ ಮೊದಲಾದ ವಾದ್ಯಗಾರರು ನಮ್ಮ ಸೀಮೆಯ ಮೈಸೂರು ಬ್ಯಾಂಡಿನಲ್ಲಿ ಸೇರಿ ಸಮೃದ್ಧವಾದ ವೇತನವನ್ನು ಪಡೆದು, ಉತ್ತಮವಾದ ಶಿಕ್ಷಣವನ್ನು ಹೊಂದಿ ನಿಪುಣರಾಗಿ ಕಡೆಗೆ ಎಷ್ಟೋ ಜನರು ಸ್ವದೇಶಗಳಿಗೆ ಓಡಿಹೋದರು. ಈಗ ನಮ್ಮ ಮಹಾರಾಜರು ಸ್ವದೇಶದ ವಾದ್ಯಗಾರರನ್ನೇ ವಿಶೇಷವಾಗಿ ಸೇರಿಸಿ, ಅವರಿಗೆ ತಕ್ಕ ವಿದ್ಯಾಭ್ಯಾಸವನ್ನು ಕೊಡಿಸಿ, ಪ್ರೋತ್ಸಾಹಕರವಾದ ಸಂಬಳವನ್ನಿತ್ತು ಪರಿಪಾಲಿಸುತ್ತಿರುವರು. ಈ ಜನರೂ ಕೂಡ ವಿದ್ಯಾಭಿವೃದ್ಧಿಯಲ್ಲಿ ಕುತೂಹಲಗೊಂಡು ಆತ್ಮೋದ್ಧಾರದಲ್ಲಿ ವ್ಯಗ್ರರಾಗಿರುವರು. ತಮ್ಮ ಜನರ ವಾದ್ಯವಿದ್ಯಾಭ್ಯಾಸಕ್ಕೇ ಪ್ರತ್ಯೇಕಶಾಲೆಯನ್ನೇರ್ಪಡಿಸಿಕೊಡಬೇಕೆಂದು ಇವರು ಕೇಳುತ್ತಿರುವರು. ನಮ್ಮ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸಶಾಖೆಯವರು ಈ ಉಚಿತವಾದ ಪ್ರಯತ್ನಕ್ಕೆ ಅವಲಂಬನೆಯನ್ನಿತ್ತರೆ ಮೈಸೂರುದೇಶದ ವಾದ್ಯಗಾರರು ದಕ್ಷಿಣದೇಶದಲ್ಲೆಲ್ಲಾ ಅಗ್ರೇಸರರೆಂಬ ಹೆಸರನ್ನು ಸ್ವಲ್ಪಕಾಲದಲ್ಲೇ ಸಂಪಾದಿಸಿಕೊಳ್ಳಬಲ್ಲರು. ಸಕಲ ವಿದ್ಯೆಗೂ ಅದ್ವಿತೀಯವಾದ ಪ್ರೋತ್ಸಾಹವನ್ನು ಮಾಡುತ್ತಿರುವ ನಮ್ಮ ಶ್ರೀಮನ್ಮಹಾರಾಜರ ಕಾಲದಲ್ಲಿ ಈ ಗಾನವಿದ್ಯೆಯೂ ಕೂಡ ವಿಜೃಂಭಿಸುವುದು ಯುಕ್ತವಾಗಿಯೇ ಇದೆ. ಸರ್ವವಿಧದಿಂದಲೂ ಪ್ರಜಾರಂಜನೆ ಮಾಡುವುದೇ ತಮ್ಮ ಪ್ರಥಮಕರ್ತವ್ಯವೆಂದು ತಿಳಿದಿರುವ ನಮ್ಮ ಪ್ರಭುಗಳು ಮಹಮ್ಮದೀಯರ ಹಬ್ಬದಲ್ಲಿ ಇಂಥ ವಾದ್ಯಶ್ರವಣಕ್ಕೆ ಏರ್ಪಡಿಸಿ ಪುರನಿವಾಸಿಗಳನ್ನು ಆನಂದಪಡಿಸಿದಂತೆ ಹಿಂದೂಗಳ ಮುಖ್ಯವಾದ ಹಬ್ಬಗಳಲ್ಲೂ ಹೀಗೆಯೇ ಏರ್ಪಡಿಸಿ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗದಿರಲಾರರೆಂದು ನಂಬುತ್ತೇವೆ.

ಯುದ್ಧವಾರ್ತೆಯು.

ಕಳೆದವಾರದಲ್ಲಿ ಬಂದಿರುವ ವಾರ್ತೆಗಳಿಂದಲೂ ಮಿತ್ರಮಂಡಲಿಯ ವಿಜಯವೇ ಹೆಚ್ಚಾಗಿರುವುದೆಂದು ವ್ಯಕ್ತವಾಗುತ್ತದೆ. ಜರ್ಮನರು ಮಹಾವಸ್ಕಂದನವನ್ನು ಇನ್ನೂ ಎಲ್ಲಿಯೂ ಆರಂಭಿಸಿಲ್ಲ. ಅವರು ಈ ಸಲ ಭೂಮಿಯ ಮೇಲೂ ಜಲದಮೇಲೂ ಒಂದೇಸಲ ಮಹಾಯುದ್ಧವನ್ನು ಹೂಡುವುದರಲ್ಲಿರುವರೆಂದು ಸುದ್ದಿ ಹುಟ್ಟಿದೆ. ನೋಡಬೇಕು. ಇದೇ ದೀಪದ ಅಂತ್ಯಾವಸ್ಥೆಯ ಮಹಾಪ್ರಕಾಶದಂತಿರಬೇಕು. ಜರ್ಮನರ ಹಿಂದಣ ಅವಸ್ಕಂದನವು ನಿಂತ ೧ ತಿಂಗಳಿಂದಲೂ ಮಿತ್ರಮಂಡಲಿಯವರು ಹಲವುಕಡೆಗಳಲ್ಲಿ ಸಾಧಾರಣ ಯುದ್ಧಗಳನ್ನು ನಡೆಯಿಸಿ ಮುಂದಕ್ಕೆ ಒತ್ತುತ್ತಲೂ ಸ್ಥಾನಾಕ್ರಮಣವನ್ನು ಮಾಡಿ ತಮ್ಮ ನೆಲೆಗಳನ್ನು ಸುದೃಢಪಡಿಸಿಕೊಳ್ಳುತ್ತಲೂ ಇದ್ದಾರೆ. ಅಮೇರಿಕನ್ಸೈನ್ಯವು ಫ್ರೆಂಚ್ ದಳದೊಡನೆಯೂ ಆಸ್ಟ್ರೇಲಿಯನ್ ದಳದೊಡನೆಯೂ ಸೇರಿ ದಿಗ್ವಿಜಯವನ್ನು ಮಾಡಿ ಶತ್ರುಗಳನ್ನು ಧ್ವಂಸಗೊಳಿಸುತ್ತಿದೆ. ಅಮೇರಿಕನ್ನರಿಗೆ ಜರ್ಮನರ ಮೇಲಿರುವ ಕೋಪವು ವರ್ಣನಾತೀತವಾಗಿದೆ. ಅವರು ಇದುವರೆಗೆ ಪಶ್ಚಿಮರಂಗಕ್ಕೆ ೧೦ ಲಕ್ಷ ಸೈನ್ಯವನ್ನು ಸೇರಿಸಿರುವರು. ಈ ವರ್ಷದ ಕೊನೆಯೊಳಗೆ ಇನ್ನು ೧೦ ಲಕ್ಷವನ್ನು ಸೇರಿಸುವರು. ಅಲ್ಲದೆ ಆಹಾರ್ಯಾದಿ ವಸ್ತುಗಳೂ ಯುದ್ಧೋಪಕರಣಗಳೂ ಅಪರಿಮಿತವಾಗಿ ಬಂದು ತುಂಬಿಯೂ ತುಂಬುತ್ತಲೂ ಇರುವುವು. ಅವರ ಜಲಸೇನೆಯೂ ಸನ್ನದ್ಧವಾಗಿ ಸಂಪೂರ್ಣವಾಗಿರುವುದು. ಮಿತ್ರಮಂಡಲಿಯ ಕಡೆ ಸೈನ್ಯಬಲವಿರುವುದನ್ನು ನೋಡಿದರೆ ಅಮೇರಿಕನ್ನರ ಸಹಾಯವು ದೊರೆದುದೇ ಮುಖ್ಯಚಿಹ್ನೆಯು. ಈ ಸಲದ ಯುದ್ಧದಲ್ಲಿ ಜರ್ಮನರು ಯಾವುದಾದರೂ ಮಹಾವಿಜಯವನ್ನು ಪಡೆಯದಿದ್ದರೆ ಅವರ ಅವತಾರಪೂರ್ತಿಯಾಗುವುದೇ ನಿಜ. ಮುಂದಣ ವರ್ಷಾರಂಭದಲ್ಲಿ ಮಿತ್ರಮಂಡಲಿಯವರ ಬಲವು ಸಂಪೂರ್ಣವಾಗಿ ಅಭೇದ್ಯವಾಗುವುದಲ್ಲದೆ ಅಜೇಯವೂ ಆಗುವುದು. ಕಳೆದ ೧ ತಿಂಗಳೊಳಗೆ ಅವರು ಫ್ರಾನ್ಸ್ ರಣರಂಗಕ್ಕೆ ೬೭೬೩೭೨ ಮಂದಿ ಸೈನಿಕರನ್ನು ಸಾಗಿಸಿ ತಂದಿರುವರು. ಇಷ್ಟು ಸೈನಿಕರಲ್ಲಿ ೨೯೧ ಮಂದಿ ಮಾತ್ರವೇ ಸಮುದ್ರದಲ್ಲಿ ಮುಳುಗಿದರು. ಅಮೇರಿಕನ್ ದಳವನ್ನು ರಣರಂಗಕ್ಕೆ ತಲೆಯಿಕ್ಕದಂತೆಯೇ ತಮ್ಮ ಸಬ್‌ಮೆರೀನುಗಳು ಮಾಡುವುವೆಂದು ಜಂಭಕೊಚ್ಚುತ್ತಿದ್ದ ಜರ್ಮನ್ ನೌಕರು ಈಗ ಯಾವಮೂಲೆಯಲ್ಲಿರುವರೋ! ಕಳೆದವಾರ ಅಮೇರಿಕನ್ನರು ಫ್ರೆಂಚರೊಡನೆ ಕೂಡಿ ನಡೆಯಿಸಿದ ಯುದ್ಧದಲ್ಲಿ ವಾಕ್ಸ್, ಬೋಯಿಸ್‌ಡಿಲ್ಲಾವಾಕು ಗ್ರಾಮಗಳನ್ನೂ ಅವುಗಳ ಸಮೀಪದ ಅಡವಿಯನ್ನೂ ವಶಪಡಿಸಿಕೊಂಡರು. ೧॥ ಮೈಲಿಯಗಲಕ್ಕೆ ೧೦೦೦ ಗಜಗಳ ದೂರ ಅಮೇರಿಕನ್ನರು ಮುಂದುವರಿದರು. ಶತ್ರುಗಳಲ್ಲಿ ಬಹುಮಂದಿ ಸತ್ತರು. ಬಿಗಿಪಟ್ಟಿನಿಂದ ಕಾದುವ ಶತ್ರುಸೈನ್ಯವನ್ನು ಅಮೇರಿಕನ್ನರು ಸಂಪೂರ್ಣವಾಗಿ ನಾಶಮಾಡಿದರು. ೫೦೦ ಮಂದಿಯನ್ನು ಸೆರೆಹಿಡಿದರು. ಜೂನ್ ತಿಂಗಳಿಂದೀಚೆಗೆ ಅಮೇರಿಕನ್ನರು ೧೨೦೦ ಮಂದಿ ಜರ್ಮನರನ್ನು ಸೆರೆಹಿಡಿದಿರುವರು. ೬೦ ಯಂತ್ರದ ಫಿರಂಗಿಗಳನ್ನೂ ಕೆಲವು ಕಂದಕದ ಫಿರಂಗಿಗಳನ್ನೂ ಹಿಡಿದರು. ಆ ಸ್ಥಳದಲ್ಲಿ ಫ್ರೆಂಚರು ೨೦೪ ನಂ॥ ಗುಡ್ಡವನ್ನು ಹಿಡಿದು ಅದರ ಮುಂದಕ್ಕೂ ನುಗ್ಗಿದರು. ಮತ್ತು ಎಯನ್ ಒಯಿಜ್ ನದಿಗಳ ಮಧ್ಯದಲ್ಲಿ ಮಹಾಯುದ್ಧಮಾಡಿ ಸೆಂಟ್‌ಪಿಯರ್ ಗ್ರಾಮವನ್ನೂ ಕೆಲ ಶತ್ರುಸೈನಿಕರನ್ನೂ ಸೆರೆಹಿಡಿದರು. ಇಂಗ್ಲೀಷ್ ಸೈನ್ಯಗಳೂ ಆಸ್ಟ್ರೇಲಿಯನ್ನರೂ ಅಮೇರಿಕನ್ನರೂ ಸಹ ಸೋಮುನದಿಯ ದಕ್ಷಿಣದಲ್ಲಿ ೩ ಮೈಲಿಯಗಲಕ್ಕೆ ನಡೆಯಿಸಿದ ಯುದ್ಧದಲ್ಲಿ ಬುಲ್ಲೆಕೋರ್ಟ್ ಹಾಮೆಲ್‌ಗ್ರಾಮವನ್ನೂ ಬಳಿಯಣ ಅಡವಿಗಳನ್ನೂ ಫಿರಂಗಿ ಮೊದಲಾದ ಅನೇಕ ಯುದ್ಧೋಪಕರಣಗಳನ್ನೂ ಸಾವಿರಕ್ಕೆ ಮೇಲ್ಪಟ್ಟು ಶತ್ರುಸೈನಿಕರನ್ನೂ ಸೆರೆಹಿಡಿದರು. ಫ್ರೆಂಚರು ದಕ್ಷಿಣದಲ್ಲಿ ಬೋಯಿಸ್ ಡೀವಾರಿ, ಮೋಲಿನ್, ಸೋರ್ಟೋ ಮೇಂಟುಗಳನ್ನೂ ಆ ಬಳಿಯಣ ಬಯಲನ್ನೂ ಹಿಡಿದು ॥ ಮೈಲಿ ದೂರ ಮುಂದಕ್ಕೆ ಸಾಗಿದರು. ೩೫೦ ಸೈನಿಕರನ್ನೂ ಸೆರೆಹಿಡಿದರು. ಫ್ರೆಂಚರ ಈ ಎರಡು ವಿಜಯಗಳಿಂದ ಶತ್ರುಸೇನೆಯ ಚಲನವಲನವನ್ನೆಲ್ಲಾ ತಿಳಿದುಕೊಳ್ಳಲು ಅನುಕೂಲವಾದ ಎತ್ತರದ ಪ್ರದೇಶವು ಅವರಿಗೆ ಸಿಕ್ಕಿದಂತಾಯಿತು. ಇಂಗ್ಲೀಷರ ಅಂಕರ್‌ನದಿ ಬಳಿಯಣ ವಿಜಯದಿಂದ ಕಳೆದ ವಸಂತ ಮಹಾಯುದ್ಧದಲ್ಲಿ ಶತ್ರುಗಳ ನುಗ್ಗಾಟದಿಂದ ಡೊಂಕನಾಗಿಹೋಗಿದ್ದ ಇಂಗ್ಲೀಷ್ ಸೇನಾಪಙ್ಕ್ತಿಯು ಮುಂದಕ್ಕೆ ಸಾಗಿ ವಿಲ್ಲರ್ಸ್‌ಬ್ರೆಟೋನೋ ಎಲ್ಬೆಟ್ಟಿನ ಕಂದಕಗಳನ್ನು ಸೇರಿ ಹಾಮೇಲಿನಿಂದ ಸೋಮುನದಿಯವರೆಗೆ ೪ ಮೈಲಿಯಗಲದ ಸೇನಾಮುಖವನ್ನು ಒಂದೇ ನೇರವಾಡಿಕೊಂಡು ದೃಢಪಡಿಸಿಕೊಂಡಂತಾಯಿತು. ಫ್ರೆಂಚರು ಅಲ್ಪ್ರೆಸೇವಿಗೆ ಪಶ್ಚಿಮದಲ್ಲಿ ವಿಚಿತ್ರವೊಂದು ಯುದ್ಧವನ್ನು ಮಾಡಿ ಶತ್ರುಗಳನ್ನು ಸೋಲಿಸಿ ಮುಂದಕ್ಕೆ ಸಾಗಿದರು. ಶತ್ರುಗಳು ಪ್ರತಿಯುದ್ಧ ಮಾಡಲಾಗಿ ಅವರನ್ನೂ ಸೋಲಿಸಿ, ಇನ್ನಷ್ಟು ದೂರ ಮುಂದಕ್ಕೆ ಹೋದುದಲ್ಲದೆ ೧೦೬೬ ಮಂದಿ ಗಾಯಗೊಳ್ಳದ ಸೈನಿಕರನ್ನು ಸೆರೆಹಿಡಿದರು. ಈಚೆಗೆ ಫ್ರೆಂಚರು ಮಾಂಟಿಡಿಡಿಯರ್ ಐಸ್‌ನದಿಗಳ ಮಧ್ಯದಲ್ಲಿ ಯುದ್ಧಮಾಡಿ ಶತ್ರುಸೇನಾಪಙ್ಕ್ತಿಗೆ ನುಗ್ಗಿ ಫೋರ್ಟಿನೊಲ್ಲ್ಸ್ ಬಯಲುಗಳನ್ನು ವಶಪಡಿಸಿಕೊಂಡರು. ಇದರಿಂದ ಆ ಬಳಿಯಲ್ಲಿ ಕೆಲಕಡೆ ಇವರು ೧ ಮೈಲಿಯಷ್ಟು ದೂರ ಮುಂದಕ್ಕೆ ನುಗ್ಗಿದಹಾಗಾಯಿತು. ೪೫೦ ಶತ್ರುಸೈನಿಕರನ್ನು ಸೆರೆಹಿಡಿದರು. ೨೦೪ ನೆ ನಂ॥ ಗುಡ್ಡವೂ ಫ್ರೆಂಚರ ವಶವಾಗಿದೆ. ಜೂನ್ ತಾ॥ ೧೫ ರಿಂದ ಜುಲೈ ತಾ॥ ೧೦ ರವರೆಗೆ ಫ್ರೆಂಚರು ನಡೆಯಿಸಿದ ಯುದ್ಧಗಳಲ್ಲಿ ೫೦೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿದ್ದಾರೆ. ಅವರಲ್ಲಿ ೬೦ ಮಂದಿಗಳು ಸೈನಿಕೋದ್ಯೋಗಿಗಳು. ವಿಲ್ಲರ್ಸ್‌ಬ್ರೆಟೋನೋ ಹಾಮೇಲ್‌ಪ್ರಾಂತಗಳಲ್ಲಿ ಇಂಗ್ಲೀಷರು ನಡೆಯಿಸಿದ ಯುದ್ಧದಲ್ಲಿ ೧೫೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದರು. ಅವರಲ್ಲಿ ಉದ್ಯೋಗಿಗಳೇ ೪೦ ಮಂದಿಗಳಿರುವರು. ವಿಲ್ಲರ್ಸ್‌ಬ್ರೆಟೋನಿನ ಬಳಿಯಲ್ಲಿ ಯುದ್ಧವನ್ನಾರಂಭಿಸಿದ ೨ ಗಂಟೆ ಕಾಲದೊಳಗಾಗಿ ೪ ಮೈಲಿಯಷ್ಟು ರಂಗವನ್ನು ಇವರು ವಶಪಡಿಸಿಕೊಂಡರು. ಆಗ ಜರ್ಮನರ ೩ ದಳವನ್ನು ಸಂಪೂರ್ಣವಾಗಿ ನಾಶಮಾಡಿರುವರು. ಹೀಗೆ ಹಲವು ಕಡೆಗಳಲ್ಲಿ ಮಿತ್ರಮಂಡಲಿಗೇ ಜಯವು ವಿಶೇಷವಾಗಿ ಪ್ರಾಪ್ತವಾಗುತ್ತಲಿದೆ. ಇಟಲಿರಂಗದಲ್ಲಿ ಮಿತ್ರಮಂಡಲಿ ಸೇನಾಸಹಾಯದಿಂದ ಆಸ್ಟ್ರಿಯನ್ನರಿಗೆ ಸಂಪೂರ್ಣವಾದ ಪರಾಜಯವು ಪ್ರಾಪ್ತವಾಗಿದೆ. ಜರ್ಮನರ ಲುಡೆಂಡಾರ್ಫ್ ಸೇನಾನಿಯು ಆ ರಂಗಕ್ಕೆ ಹೋಗಿ ಎಲ್ಲವನ್ನು ನೋಡಿಕೊಂಡು ಇಷ್ಟರಲ್ಲೇ ತಮ್ಮ ಜರ್ಮನ್ ಸೈನ್ಯವನ್ನು ಆಸ್ಟ್ರಿಯನ್ನರ ಸಹಾಯಕ್ಕೆ ಕಳುಹಿಸಿಕೊಟ್ಟು ಅವರು ಸೋತುಬಿಟ್ಟಿರುವ ಪ್ರದೇಶವನ್ನು ಮತ್ತೆ ಗೆದ್ದುಕೊಡುವುದಕ್ಕೆ ಅಭಯದಾನಮಾಡಿ ಬಂದಿರುವನಂತೆ. ಕಳೆದ ೩ ವಾರದಿಂದೀಚೆಗೆ ಇಟಲಿಯವರು ಶತ್ರುಗಳಕಡೆಯ ೨೪೦೫೪ ಮಂದಿ ಸೈನಿಕರನ್ನೂ ೬೩ ಫಿರಂಗಿಗಳನ್ನೂ ೬೫ ಕಂದಕದ ಫಿರಂಗಿಗಳನ್ನೂ ೧೨೩೪ ಯಂತ್ರದ ಫಿರಂಗಿಗಳನ್ನೂ ೩೭೦೦೦ ತುಪಾಕಿಗಳನ್ನೂ ೫ ಲಕ್ಷ ತೋಟಾಗಳನ್ನೂ ಸಾವಿರಾರು ಷೆಲ್ಲುಗಳನ್ನೂ ಅಪರಿಮಿತವಾದ ಇತರ ಯುದ್ಧೋಪಕರಣಗಳನ್ನೂ ವಶಪಡಿಸಿಕೊಂಡಿರುವುದಲ್ಲದೆ ಕಳೆದ ನವಂಬರ ಯುದ್ಧದಲ್ಲಿ ತಾವು ಕಳೆದುಕೊಂಡಿದ್ದ ದೇಶಭಾಗದಲ್ಲಿ ಮುಕ್ಕಾಲುಭಾಗಕ್ಕಿಂತ ಹೆಚ್ಚಾಗಿಯೇ ಬಿಡಿಸಿಕೊಂಡರು. ವೆನಿಸ್‌ಪ್ರಾಂತದಿಂದ ಹಿಂದಕ್ಕೆ ೩೨ ಮೈಲಿಯವರೆಗೆ ಶತ್ರುಗಳನ್ನು ಓಡಿಸಿಬಿಟ್ಟರು. ಈಚೆಗೆ ಶತ್ರುಗಳು ಮುಂದಕ್ಕೆ ನುಗ್ಗಿಬರಲು ಕೆಲ ಪ್ರಯತ್ನಗಳನ್ನು ಮಾಡಿದರೂ ಇಟಲಿಯವರು ಅವನ್ನೆಲ್ಲಾ ವ್ಯರ್ಥಗೊಳಿಸುತ್ತಿರುವರು.

ಒಳದೇಶದ ವೃತ್ತಾಂತಗಳು.

ಬರುವ ಆಗಸ್ಟ್ ತಾ॥ ೧ ರಿಂದ ೪ ದಿನಗಳ ಪರ್ಯಂತ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಆರಿಸುವಿಕೆಯು ನಡೆಯುವುದು.

ಶ್ರೀಮನ್ಮಹಾರಾಜರವರು ಸ್ವದೇಶಕ್ಕೆ ದಯಮಾಡಿಸುವವರೆಗೂ ಶ್ರೀಮದ್ಯುವರಾಜರವರು ರಾಜ್ಯಕಾರ್ಯನಿರ್ವಾಹವಾಡಲು ಏರ್ಪಾಟಾಗಿರುವುದು.

ಶಿವಮೊಗ್ಗದಿಂದ ಅರಸಾಳುವರೆಗೆ ೨೬ ಮೈಲಿಗಳ ದೂರ ಲೋಹಮಾರ್ಗವನ್ನು ಸ್ಥಾಪಿಸುವುದಕ್ಕೆ ನಮ್ಮ ಪ್ರಭುತ್ವದವರಿಗೆ ಹಿಂದೂಸ್ಥಾನ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ.

ರಾಜಧಾನಿಯ ಮಂಡಿ-ಲಷ್ಕರ್ ಮೊಹಲ್ಲಿಗಳಲ್ಲಿ ಇಲಿಗಳು ಸಾಯುತ್ತಲೂ ಪ್ಲೇಗು ಮರಣಗಳಾಗುತ್ತಲೂ ಇವೆ. ಮ್ಯುನಿಸಿಪಾಲಿಟಿಯವರೂ ಆರೋಗ್ಯಶಾಖೆಯವರೂ ಎಚ್ಚತ್ತು ಇನಾಕ್ಯುಲೇಷನ್ ಮೊದಲಾದುವುಗಳಿಗೆ ಏರ್ಪಡಿಸುವುದು ಆವಶ್ಯಕವಾಗಿದೆ.

ಶ್ರೀಮನ್ಮಹಾರಾಜರವರು ಕಳೆದ ತಾ॥ ೯ ರಲ್ಲಿ ಕಾಶ್ಮೀರಸಂಸ್ಥಾನದ ರಾಜಧಾನಿಯಾದ ಶ್ರೀನಗರವನ್ನು ಸುಖವಾಗಿ ಸೇರಿದರೆಂದು ಕೇಳುತ್ತೇವೆ. ಅಲ್ಲಿ ಕೆಲದಿನವಿದ್ದು ಬಳಿಕ ದಿಲ್ಲಿ ಸಿಮ್ಲಾ ಪಟ್ಟಣಗಳಿಗೆ ದಯಮಾಡಿಸಿ, ವೈಸ್ರಾಯರ ಸಂದರ್ಶನವನ್ನು ಮಾಡಿಕೊಂಡು ಬರುವವರಾಗಿದ್ದಾರೆ.

ಮಳೆಯ ಅಭಾವವು ಜನಗಳಿಗೆ ಭೀತಿಯನ್ನು ಹೆಚ್ಚಿಸುತ್ತಿದೆ. ಧಾರಣೆವಾಸಿಗಳು ಏರುವುದರಲ್ಲೇ ಇವೆ. ಬಡಬಗ್ಗರ ಕಷ್ಟಕ್ಕೆ ಪರಿಹಾರವೇನೋ ಕಾಣಲಿಲ್ಲ. ರಾಜಧಾನಿಯಲ್ಲಿ ಅಗ್ಗವಾಗಿ ಮಾರಿಸುವ ವಿಜೃಂಭಣೆಯು ೪ ದಿನಕ್ಕೇ ಮುಕ್ತಾಯವಾಯಿತು. ಸರ್ಕಾರದವರಾಗಲೀ ಮ್ಯುನಿಸಿಪಾಲಿಟಿಯವರಾಗಲೀ ಪ್ರಜಾಪ್ರಮುಖರಾಗಲೀ ಮುಕುವರ್ಜಿಯನ್ನು ವಹಿಸಿ ತಕ್ಕ ಏರ್ಪಾಟನ್ನು ಮಾಡದಿರುವುದು ಶೋಚನೀಯವಾಗಿದೆ. ಹಿಂದೆ ಯಾವಾಗಲೂ ಇಷ್ಟು ಔದಾಸೀನ್ಯವು ರಾಜಧಾನಿಯ ಮ್ಯುನಿಸಿಪಾಲಿಟಿಯಲ್ಲೂ ಪುರಪ್ರಮುಖರಲ್ಲೂ ಕಂಡುದಿಲ್ಲ.

ಭರತಖಂಡದ ವೃತ್ತಾಂತಗಳು.

ಜುಲೈ ತಾ॥ ೧೩ ರವರೆಗೆ ಯುದ್ಧಋಣಕ್ಕೆ ಸೇರಿರುವ ಹಣವು ೧೪೫೩೨೦೫೦೦.

ವೈಸ್ರಾಯರು ಬರುವ ವರ್ಷಋತುವಿನಲ್ಲಿ ಭೂಪಾಲ ಮತ್ತೂ ಇಂದೂರು ಸಂಸ್ಥಾನಗಳಿಗೆ ಸಂದರ್ಶನವನ್ನು ಕೊಡುವವರಾಗಿದ್ದಾರೆ.

ದಿಲ್ಲಿಯಲ್ಲಿರುವ ಸ್ವರಾಜ್ಯವಾದಿಗಳ ಕಾರ್ಯಾಲಯವನ್ನು ಪೊಲೀಸರು ಪರಿಶೋಧಿಸಿ ಅಲ್ಲಿದ್ದ ಸಭಿಕರ ಹೆಸರುಗಳ ಪಟ್ಟಿಯನ್ನೂ ಪ್ರಮಾಣಪತ್ರಿಕೆಗಳನ್ನೂ ತೆಗೆದುಕೊಂಡು ಹೋದರು.

ಮಧ್ಯಪ್ರಾಂತದ ಸ್ವರಾಜ್ಯಸಂಘದ ಕಾರ್ಯದರ್ಶಿಯಾದ ನಾರಾಯಣ ಕಾಶೀನಾಥವೈದ್ಯ ಎಂಬುವರು ಪೀನಲ್‌ಕೋಡು ೧೨೪ ನೆ ಎ. ಶಾಸನದ ಪ್ರಕಾರ ಪೊಲೀಸರಿಂದ ಹಿಡಿಯಲ್ಪಟ್ಟಿದ್ದಾರೆ. ದಂಡಾಧಿಕಾರಿಯು ಅವರನ್ನು ಹೊಣೆಯಮೇಲೂ ಬಿಡಲಿಲ್ಲ.

ಪದಾರ್ಥಗಳ ಬೆಲೆ ಹೆಚ್ಚಿರುವ ಕಾರಣದಿಂದಲೇ ಬಂಗಾಳದಲ್ಲಿ ಕಳೆದ ಅಕ್ಟೋಬರ್ ತಿಂಗಳಿಂದ ಏಪ್ರಿಲ್ ತಿಂಗಳವರೆಗೆ ಅಂಗಡಿಗಳನ್ನು ದೋಚಿಕೊಂಡ ಕೇಸುಗಳು ೧೫೨, ಸುಲಿಗೆಕಳ್ಳತನಗಳು ೯೮, ಕನ್ನಕಳವುಗಳು ೪೨ ನಡೆದಿರುವುವೆಂದು ಬಂಗಾಳಾ ಗೌರ್ನರವರು ಹೇಳಿರುವರು.

ಸರ್ ಸತ್ಯೇಂದ್ರಪ್ರಸನ್ನ ಸಿಹ್ನ ಕೆ. ಸಿ. ಯವರಿಗೆ ಬೀಹಾರ್ ಒರಿಸ್ಸಾ ಪ್ರಾಂತದ ಲೆಫ್ಟನೆಂಟ್ ಗೌರ್ನರ ಪದವಿಯು ಕೊಡಲ್ಪಡುವುದರಲ್ಲಿದೆಯೆಂದು ಇಂಗ್ಲೀಷ್‌ಮೆನ್ ಪತ್ರಿಕೆಯು ಹೇಳುತ್ತದೆ. ಇದು ನಿಜವಾದರೆ ಭಾರತೀಯರು ಲೆ॥ ಗೌರ್ನರ ಪದವಿಗೆ ತರಲ್ಪಡುವುದಕ್ಕೆ ಇದೇ ಪ್ರಥಮವೆನ್ನಬಹುದು.

ಮದ್ರಾಸಾಧಿಪತ್ಯದ ರಾಮಚಂದ್ರಪುರದ ತಾ॥ ತಹಸೀಲ್ದಾರರೂ ಡಿಸ್ಟ್ರಿಕ್ಟ್ ಮುನಸೀಫರೂ ಸಹ ಅಲ್ಲಿಯ ಬಾರ್ ರೂಮಿನಲ್ಲಿ ವಕೀಲರನ್ನೆಲ್ಲಾ ಕೂಡಿಸಿ, ೨ ನೆ ಯುದ್ಧಋಣಕ್ಕೆ ಹಣವನ್ನು ಕೊಡುವುದವಶ್ಯಕವೆಂದು ಹಿತವಾದವನ್ನು ಹೇಳಲಾಗಿ, ಕಾಂಗ್ರೆಸ್‌ಲೀಗುಗಳು ಕೋರಿರುವ ವರಗಳನ್ನು ಕೊಟ್ಟಲ್ಲದೆ ನಮ್ಮಿಂದ ಲೇಶವೂ ಸಾಲ ಹುಟ್ಟುವುದಿಲ್ಲವೆಂದು ಉತ್ತರಕೊಟ್ಟರಂತೆ. "ಪರೀಕ್ಷಾಸಮಯೇ ಪ್ರಾಪ್ತೇ ಕಾಚಃ ಕಾಚೋ ಮಣಿರ್ಮಣಿಃ" ಎಂಬ ವಚನದಂತೆ ನಿಜರಾಜಭಕ್ತರ ತಿರುಳು ಈಗ ಹೊರಬೀಳುತ್ತಿದೆ.

ವಿಜಯನಗರದ ಮಹಾರಾಜರ ಹತ್ತಿರ ಕೆಲಸದಲ್ಲಿದ್ದ ಪಂಡಿತ ಸಾಲಗ್ರಾಂ ಎಂಬುವವನು ಬೊಂಬಾಯಿಯ ಮೆಸರ್ಸ್ ಕಾಲಿ ಕಂಪೆನಿಯವರೊಡನೆ ಪತ್ರವ್ಯವಹಾರ ನಡೆಯಿಸಿ, ಮಹಾರಾಜರ ಕೆಲವು ನಗಗಳನ್ನು ಅಪಹರಿಸಿಕೊಂಡು ಹೋಗಿ, ಅವುಗಳಲ್ಲಿ ೩೪ ಮುತ್ತುಗಳನ್ನು ೫೫ ಸಾವಿರಕ್ಕೆ ಮಾರಿದನು. ಮದ್ರಾಸು ಪೊಲೀಸಿನವರು ಬೊಂಬಾಯಿ ಪೊಲೀಸರಿಗೆ ಸುದ್ದಿ ಕೊಡಲಾಗಿ ಅವರು ಕಳ್ಳನನ್ನು ಕೆಲ ನಗಗಳ ಸಮೇತ ಹಿಡಿದರು. ಅಪರಾಧಿಯು ಅಷ್ಟರೊಳಗೆ ಬೊಂಬಾಯಿ ಬ್ಯಾಂಕಿನಲ್ಲಿ ೨೩ ಸಾವಿರ ರೂ. ಗಳನ್ನು ತನ್ನ ಹೆಸರಮೇಲೆ ಹಾಕಿದ್ದನು. ಅವನು ವಿಚಾರಣಾರ್ಥವಾಗಿ ವಿಜಯನಗರಕ್ಕೆ ಹಿಡಿತರಲ್ಪಟ್ಟಿದ್ದಾನೆ.

ಡಾ॥ ಸುಬ್ರಹ್ಮಣ್ಯಯ್ಯರವರು ನವೀನಭಾರತ ರಾಜಕೀಯ ಸಂಸ್ಕರಣಗಳನ್ನು ಕುರಿತು ಒಂದು ಲೇಖನವನ್ನು ಈಗತಾನೇ ಬರೆದಿದ್ದಾರೆ. ಅದರೊಳಗೆ "ಮಾಂಟೆಗ್, ಚೆಮ್ಸ್‌ಫರ್ಡ್ ಇವರುಗಳು ಸೂಚಿಸುವ ಸಂಸ್ಕರಣಗಳು ವಿದೇಶೀಯರುಗಳಾದುದರಿಂದ ಅವನ್ನು ನಾವು ಸಂಪೂರ್ಣವಾಗಿ ತತ್‌ಕ್ಷಣವೇ ತಿರಸ್ಕರಿಸಿಬಿಡಬೇಕು" ಎಂದು ಹೇಳಿರುತ್ತಾರೆ. ಅಯ್ಯರವರ ರೀತಿಯು ಇದೇ ಮುಳುಗಿದವನಿಗೆ ಚಳಿಯೇನು? ಗಾಳಿಯೇನು? ಎಂಬ ಗಾಥೆಯ ಹಾಗಾಗಿರುವಂತೆ ಕಾಣುತ್ತದೆ. ಸ್ಟೇಟ್‌ಸೆಕ್ರೆಟರಿ ವೈಸ್ರಾಯರ ಸೂಚನೆಗಳು ವಿದೇಶೀಯವಾದಕಾರಣ ಅವನ್ನು ಅಂಗೀಕರಿಸಬಾರದೆನ್ನುವವರು ವಿದೇಶೀಯರಾದ ಆಂಗ್ಲರ ಪ್ರಭುತ್ವವನ್ನು ಕೂಡ ದ್ವೇಷಿಸಬೇಕೆಂದು ಬೋಧಿಸಿದಹಾಗಾಯಿತಷ್ಟೆ. ಉಗ್ರವಾದಿಗಳ ಪ್ರವರ್ತನೆಯು ಬರುಬರುತ್ತ ಇಷ್ಟು ವಿಕಾರವನ್ನೈದುತ್ತಲಿದೆ. ಪರಿಣಾಮವೇನೋ ನೋಡಬೇಕು.

ಬೀಹಾರು ಒರಿಸ್ಸಾ ಪ್ರಾಂತದಲ್ಲಿ ೧೧ ಸಾವಿರ ಜನರು ಬಲಾತ್ಕಾರ ಬಾಲವಿದ್ಯಾಭ್ಯಾಸಕ್ರಮವನ್ನು ನಮ್ಮ ರಾಷ್ಟ್ರದಲ್ಲಿ ವ್ಯವಹಾರಕ್ಕೆ ತರಲಾಗದೆಂದು ಪ್ರಭುತ್ವದವರಿಗೆ ವಿಜ್ಞಾಪನಪತ್ರವನ್ನು ಬರೆದುಕೊಂಡಿದ್ದಾರೆ. ಇದಕ್ಕೆ ರುಜು ಮಾಡಿರುವವರೊಳಗೆ ದರ್ಭಾಂಗ, ಹತ್ವಾರ್ ಮಹಾರಾಜರುಗಳೂ ಸೇರಿದ್ದಾರೆ. ಕಾಣಿಸಿರುವ ಕಾರಣಗಳೇನೆಂದರೆ—ಈ ಪದ್ಧತಿಯಿಂದ ಸರ್ಕಾರಕ್ಕೆ ವೆಚ್ಚ ಹೆಚ್ಚುವುದು. ಬೇಸಾಯಗಾರರು ಮೊದಲಾದವರ ವೃತ್ತಿಗೆ ಅವರ ಮಕ್ಕಳುಗಳ ಸಹಾಯವು ತಪ್ಪಿಹೋಗುವುದು, ಉತ್ತಮವರ್ಣೀಯರ ಜತೆಗೆ ನೀಚವರ್ಣದವರ ಮಕ್ಕಳೂ ಸಮನಾಗಿ ಕುಳಿತು ಓದಬೇಕಾಗುವುದು, ಗೋಷಾದ ಹೆಣ್ಣುಮಕ್ಕಳು ಅದನ್ನು ಬಿಟ್ಟುಬಿಡಬೇಕಾಗುವುದು ಇತ್ಯಾದಿ. ಇಂಥ ರೋಗವು ನಮ್ಮ ದೇಶೀಯರನ್ನು ಇನ್ನೂ ಬಿಡದಿರುವಾಗ ಈ ದೇಶಕ್ಕೆ ಸಂಪೂರ್ಣ ಸ್ವಪರಿಪಾಲನವನ್ನು ಕೊಟ್ಟರೆ ಗತಿಯೇನು?

ಸ್ಟೇಟ್‌ಸೆಕ್ರೆಟರಿಯವರ ಮತ್ತೂ ವೈಸ್ರಾಯರ ಭಾರತರಾಜಕೀಯ ಸಂಸ್ಕರಣ ಸೂಚನಾಪತ್ರದಮೇಲೆ ಮ॥ ಬೆಸೆಂಟಮ್ಮನವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವುದರಲ್ಲಿ—"ಇದು ಬಹಳ ಸಂಕುಚಿತವಾದ ವಿಧಾನವಾಗಿದೆ. ಇದು ಭಾರತೀಯರನ್ನು ತೃಪ್ತಿಪಡಿಸಲಾರದು. ಇದರಲ್ಲಿ ಬಾಧ್ಯತಾಯುತ ಪರಿಪಾಲನವು ಇಷ್ಟುಕಾಲದೊಳಗೆ ಭರತಖಂಡಕ್ಕೆ ಕೊಡಲ್ಪಡುವುದೆಂಬ ನಿರ್ಣಯವೇ ಕಾಣಿಸಲ್ಪಟ್ಟಿಲ್ಲ. ಇಂಥ ಪ್ರಭುತ್ವವನ್ನು ನಾವು ನಿರ್ಮಿಸುವೆವೆಂಬ ಅವರ ಆಶಯವೂ ಕೂಡ ಎಲ್ಲೂ ತಿಳಿಯಿಸಲ್ಪಟ್ಟಿಲ್ಲ. ಆದುಕಾರಣ ದೇಶದಲ್ಲಿ ಆಂದೋಳನವನ್ನು ತೀವ್ರತರವಾಗಿ ಹುಟ್ಟಿಸಿದಲ್ಲದೆ ನಿರಂಕುಶಾಧಿಕಾರವು ಕೊನೆಮುಟ್ಟುವುದಿಲ್ಲ. ಭರತಖಂಡವು ಅಪೇಕ್ಷಿಸುವ ಸ್ವಯಂನಿರ್ಣಯಸೂತ್ರವನ್ನೂ ಸ್ವಪರಿಪಾಲನವನ್ನೂ ಸಹ ಆಂಗ್ಲದೇಶವು ಅನುಗ್ರಹಿಸುವುದೂ ಅದನ್ನು ಭರತಖಂಡವು ಅಂಗೀಕರಿಸುವುದೂ ಕೂಡ ಅಗೌರವವು" ಎಂದು ತಿಳಿಯಿಸಿರುತ್ತಾರೆ.

ಭರತಖಂಡದಲ್ಲಿ ಬೈರಾಗಿ, ಗೋಸಾಯಿ ಮೊದಲಾದ ಹೆಸರಿನ-ಸೋಂಬೇರಿಗಳಾದ-ಮತ್ತೂ ಸರ್ವಾಂಗಪರಿಪುಷ್ಟಿಯುಳ್ಳ ಯಾಚಕರ ಸಂಖ್ಯೆಯು ೫೨ ಲಕ್ಷವಿರುವುದು. ಇವರುಗಳಿಗೆ ತಿಂಗಳಿಗೆ ತಲೆಯೊಂದಕ್ಕೆ ಹೊಟ್ಟೆಗಾಗಿ ೩ ರೂ. ವೆಚ್ಚವಾಗುವುದೆಂದು ಲೆಕ್ಕಹಾಕಿದರೂ ವರ್ಷಕ್ಕೆ ೧೮ ಕೋಟಿ ರೂ. ಗಳಾಗುವುವು. ದೇಶೀಯರು ಈ ಸೋಂಬೇರಿಗಳ ಜೀವನಾರ್ಥವಾಗಿ ಇಷ್ಟು ಹಣವನ್ನು ದಾನಧರ್ಮ ರೂಪದಿಂದ ಕಳೆದುಕೊಳ್ಳುತ್ತಿರುವರು. ಇವರಲ್ಲಿ ಅಂಗವಿಕಲರ ಹೊರತು ಉಳಿದ ೫೦ ಲಕ್ಷ ಮಂದಿ ಗಟ್ಟಿಮುಟ್ಟಾಗಿರುವವರನ್ನೆಲ್ಲಾ ಕಷ್ಟಾರ್ಜಿತದಿಂದ ಜೀವಿಸುವಂತೆ ಮಾಡಿದರೆ ದೇಶಕ್ಕೆ ಎಷ್ಟೋ ಫಲವಾಗುವುದಲ್ಲದೆ ಅನ್ಯಾಯವಾಗಿ ಹೋಗುತ್ತಿರುವ ಕೋಟ್ಯಂತರ ದ್ರವ್ಯದಿಂದ ದೇಶದ ಪರಿಶ್ರಮಾಭಿವೃದ್ಧಿಗೆ ಎಷ್ಟೋ ಸಹಾಯಮಾಡಬಹುದು. ಇದಕ್ಕಾಗಿ ಆವಶ್ಯಕವಾದ ಪ್ರಯತ್ನಗಳನ್ನು ಮಾಡಲು ಪಂಜಾಬಿನ-ಹಿಂದೂಧರ್ಮಸಂಸ್ಕರಣ ಸಭೆಯ ಶ್ರೀಯುತ ರಾಯಿಸಾಹೆಬ್ ಚಂದ್ ಬಹದೂರ್‌ರವರೇ ಮೊದಲಾದವರು ಪ್ರವರ್ತಿಸಿರುವುದು ವಿಶೇಷ ಸ್ತುತ್ಯವಾಗಿದೆ.

ನಮ್ಮ ಸಾರ್ವಭೌಮದಂಪತಿಗಳ ವಿವಾಹಮಹೋತ್ಸವವು ನಡೆದು ಕಳೆದ ತಾ॥ ೬ ಕ್ಕೆ ೨೫ ವರ್ಷಗಳು ತುಂಬಿದುವು. ಆ ದಿನ ಸಾಮ್ರಾಜ್ಯದ ಹಲವುಕಡೆಗಳಲ್ಲಿ ಜ್ಞಾಪಕೋತ್ಸವವು ನಡೆಯಿತು. ಅದರಂತೆ ಸಿಮ್ಲಾಪಟ್ಟಣದಲ್ಲೂ ಜರುಗಿತು. ಆ ಸಂದರ್ಭದಲ್ಲಿ ವೈಸ್ರಾಯರ ಪತ್ನಿಯವರು ಒಂದು ತಂತ್ರೀವಾರ್ತೆಯನ್ನು ಚಕ್ರವರ್ತಿನಿಯವರ ಸನ್ನಿಧಿಗೆ ಕಳುಹಿಸಿ, "ಈ ಉತ್ಸವಜ್ಞಾಪನಾರ್ಥವಾಗಿ ಒಂದು ನಿಧಿಯನ್ನು ಭಾರತಮಹಿಳೆಯರು ನಿಮ್ಮ ಬಹುಮಾನಾರ್ಥವಾಗಿ ಸ್ಥಾಪಿಸಿ, ಅದನ್ನು ಯುದ್ಧದಲ್ಲಿ ಹತರಾದ ಭಾರತಭಟರ ಮಕ್ಕಳುಗಳ ವಿದ್ಯಾಭಿವೃದ್ಧಿಗಾಗಿ ಉಪಯೋಗಿಸಲು ತಮ್ಮಪ್ಪಣೆಯನ್ನು ಕೋರಿರುತ್ತಾರೆ" ಎಂದು ಶ್ರುತಪಡಿಸಿರಲು, ಅದಕ್ಕೆ ಮೇರಿ ಮಹಾರಾಜ್ಞಿಯವರು ಅನುಮತಿಯನ್ನು ಕೊಟ್ಟಿರುತ್ತಾರೆ. ಯುದ್ಧದಲ್ಲಿ ಮಡಿದ ಸೈನಿಕರ ಮಕ್ಕಳುಗಳ ಪ್ರಾರಂಭವಿದ್ಯಾಭ್ಯಾಸಕ್ಕೆ ತಗುಲುವ ವೆಚ್ಚವನ್ನೆಲ್ಲಾ ಸರ್ಕಾರದವರೇ ವಹಿಸುವುದಕ್ಕೆ ಇದಕ್ಕೆ ಮುಂಚೆಯೇ ಏರ್ಪಾಟಾಗಿದೆ. ಅವರುಗಳ ಉನ್ನತವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಾಗುವಂತೆ ಈ ಫಂಡಿನಿಂದ ಸಹಾಯವು ಉತ್ತರಕ್ರಮಾಡಲ್ಪಡುವುದು. ಈಗಣ ಸಂಧಿಯನ್ನೂ ಮೇರಿ ಮಹಾರಾಜ್ಞಿಯವರಿಗೆ ಭಾರತೀಯರ ಮೇಲಿರುವ ಪ್ರೇಮವನ್ನೂ ಗಮನಿಸಿ ಎಲ್ಲ ತರಗತಿಯ ಭಾರತಮಹಿಳೆಯರೂ ಶಕ್ತಿವಂಚನೆಯಿಲ್ಲದೆ ಈ ಫಂಡಿಗೆ ಸಹಾಯಮಾಡಬೇಕೆಂದೂ, ಈ ಧನಸಹಾಯವು ಯುದ್ಧದಲ್ಲಿ ಮಡಿದ ಶೂರ ಸೈನಿಕರ ಗಂಡುಹೆಣ್ಣುಮಕ್ಕಳಿಗೆಲ್ಲಾ ಉಪಯೋಗಿಸಲ್ಪಡುವುದೆಂದೂ, ಸ್ವದೇಶಸಂಸ್ಥಾನದ ಸೈನಿಕರ ಮಕ್ಕಳಿಗೂ ಇದು ಅನ್ವಯಿಸುವುದೆಂದೂ, ಮೇರೀ ಮಹಾರಾಜ್ಞಿಯವರ ಹೆಸರಿನಮೇಲೆ ಏರ್ಪಡಿಸಲು ತಕ್ಕಂತೆ ಈ ಫಂಡನ್ನು ನಾವು ಕೂಡಿಸಬೇಕಾಗಿರುವುದೆಂದೂ ಸಹ ವೈಸ್ರಾಯರ ಪತ್ನಿಯವರು ಒಂದು ಪ್ರಕಟನವನ್ನು ಮಾಡಿ ಭಾರತಾಂಗನೆಯರ ಉದಾರಸಹಾಯವನ್ನು ಕೋರಿರುವರು.

ವಿದೇಶ ವೃತ್ತಾಂತಗಳು.

ತುರ್ಕಿಗೆ ವಾಹಿದುದೀನ್ರವರು ಹೊಸಸುಲ್ತಾನರಾಗಿ ಮಾಡಲ್ಪಟ್ಟರು.

ಜರ್ಮನಿ ಮಂತ್ರಿ ಕುಹಲ್ಮಾನ್‌ರವರು ರಾಜೀನಾಮೆ ಕೊಟ್ಟುದನ್ನು ಕೈಸರವರು ಅಂಗೀಕರಿಸಿದರು.

ತುರ್ಕಿಯ ಸುಲ್ತಾನರು ಗತಿಸಿಹೋದರೆಂದು ವಿಯನ್ನಾದ ಮಾರ್ಗವಾಗಿ ಬಂದ ಕಾನ್‌ಸ್ಟಾಂಟಿನೋಪಲ್ ತಂತ್ರೀವಾರ್ತೆಯಿಂದ ಗೊತ್ತಾಗುತ್ತದೆ.

ಜರ್ಮನರ ೫೦ ಸಾವಿರ ಸೈನಿಕರು ಫಿನ್ಲಂಡ್ ರಷ್ಯಾ ಎಲ್ಲೆಕಟ್ಟಿನಲ್ಲಿ ಕೂಡಿದ್ದು ಸರಹದ್ದನ್ನು ದಾಟಿ ಮುಂದಕ್ಕೆ ನುಗ್ಗಿರುವರೆಂಬ ವಾರ್ತೆ ಬಂದಿದೆ.

೩೬೩ ಸಲ ವಿಮಾನಯುದ್ಧದಲ್ಲಿ ಜಯಶೀಲರಾಗಿದ್ದ ೧೪ ಮಂದಿ ಜರ್ಮನ್ ವೈಮಾನಿಕಪ್ರಮುಖರನ್ನು ಕಳೆದವಾರ ಮಿತ್ರಮಂಡಲಿಯವರು ಸೆರೆಹಿಡಿದಿರುವರು.

ಅಮೇರಿಕಾದವರು ಕಳೆದ ಜೂನ್ ತಿಂಗಳೊಂದರಲ್ಲೇ ೨೮೦೦೦೦ ಟನ್ನುಗಳ ಹಡಗುಗಳನ್ನು ಹೊಸದಾಗಿ ಕಟ್ಟಿಸಿರುವರು. ಜೂನಿಗೆ ಕಡೆಯಾದ ೧ ವರ್ಷ ಕಾಲದಲ್ಲಿ ಒಟ್ಟು ೧೮೦೪೫೦೦ ಟನ್ನುಗಳ ಹಡಗುಗಳನ್ನು ಕಟ್ಟಿರುವರು.

ಇಂಗ್ಲೀಷರು ಕಳೆದ ಜೂನ್ ತಿಂಗಳೊಂದರಲ್ಲೇ ೨೮೦೪೧೦೦ ಟನ್ನುಗಳ ವ್ಯಾಪಾರಿ ಹಡಗುಗಳನ್ನು ನಿರ್ಮಿಸಿದ್ದಾರೆ. ಜೂನ್ ಕೊನೆಗೆ ಆದೆಯಾದ ೧ ವರ್ಷ ಕಾಲದಲ್ಲಿ ಒಟ್ಟು ೧೪೩೧೧೫೦ ಟನ್ನುಗಳ ಹಡಗುಗಳು ಹೊಸದಾಗಿ ಕಟ್ಟಲ್ಪಟ್ಟಿವೆ.

ಬರುಬರುತ್ತ ಇಂಗ್ಲೀಷ್ ಅಮೇರಿಕಾದೇಶಗಳ ಮೈತ್ರಿಯು ಬಹಳ ಗಾಢವಾಗುತ್ತಲಿದೆ. ಈಗ ಯುರೋಪಿನಲ್ಲಿ ಅಮೇರಿಕಾದವರ ೨೫೦ ಯುದ್ಧದ ಹಡಗುಗಳಿವೆ. ಅವುಗಳಲ್ಲಿ ೩೦೦೦ ಮಂದಿ ಸೈನಿಕೋದ್ಯೋಗಿಗಳೂ ೪೦ ಸಾವಿರ ಮಂದಿ ನೌಕಾಸೈನಿಕರೂ ಇದ್ದಾರೆ. ಈ ಹಡಗುಗಳೆಲ್ಲಾ ಬಿಳಿಯ ಕಡಲು ಮೊದಲುಗೊಂಡು ಅಡ್ರಿಯಾಟಿಕ್ ಸಮುದ್ರದವರೆಗೂ ಹರಡಿಕೊಂಡಿವೆ. ಈ ವರ್ಷ ಮುಗಿಯುವುದರೊಳಗಾಗಿ ಅಮೇರಿಕನ್ನರು ತಮ್ಮ ಯುದ್ಧದ ಹಡಗುಗಳನ್ನು ಮೊದಲಿಗಿಂತ ೩ ಪಾಲಷ್ಟು ಹೆಚ್ಚಿಸುವವರಾಗಿದ್ದಾರೆ. ಸಬ್‌ಮೆರೀನುಗಳನ್ನು ಧ್ವಂಸಮಾಡತಕ್ಕ ೧೫೦ ಹಡಗುಗಳು ಇಷ್ಟರಲ್ಲೇ ಬರುವುದರಲ್ಲಿವೆ.

ಸೈಬೇರಿಯಾದಲ್ಲಿ ಬೋಲ್ಷೆವಿಕ್ ಪ್ರಭುತ್ವಕ್ಕೆ ವಿರುದ್ಧವಾಗಿರುವ ೨ ಪ್ರಭುತ್ವಗಳು ತಮ್ಮ ಪೂರ್ವದ ರಾಜಧಾನಿಗಳಾಗಿದ್ದ ಹಾರ್ಬಿನ್, ಓಂಸ್ಕ್ ಪಟ್ಟಣಗಳೆರಡನ್ನೂ ಬಿಟ್ಟು ೨ ಪ್ರಭುತ್ವಗಳೂ ಒಂದಾಗಿ ಟೋಂಸ್ಕ್ ನಗರವನ್ನು ರಾಜಧಾನಿಯಾಗಿ ಮಾಡಿಕೊಂಡಿರುತ್ತವೆ. ಈ ಪ್ರಭುತ್ವಗಳ ಸೈನ್ಯದಲ್ಲಿ ವಿಶೇಷ ಭಾಗವಾಗಿರುವವರು ಜೆಕೋಸ್ಲೋವಕ್ಕರು. ಹೊರಗೆ ನಿಂತುಕೊಂಡಿರುವ ಕೆರೆನ್ಸ್ಕಿಯವರೇ ಇದಕ್ಕೆಲ್ಲಾ ಸೂತ್ರಧಾರರಾಗಿರುವರೆಂದು ಸುದ್ದಿಯಿದೆ. ಈ ಜೆಕೋಸ್ಲಾವಕ್ಕರನ್ನೆಲ್ಲಾ ನಿರಾಯುಧರನ್ನಾಗಿ ಮಾಡಿ ನಿಮಗೆ ಒಪ್ಪಿಸುತ್ತೇವೆಂದು ಬೋಲ್ಷೆವಿಕ್ಕರು ಜರ್ಮನರಿಗೆ ವಾಗ್ದಾನಮಾಡಿರುವರಂತೆ. ಈಗ ರಷ್ಯಾದಲ್ಲಿರುವ ಆಸ್ಟ್ರಿಯ ಜರ್ಮನ್ ಸೆರೆಯಾಳುಗಳೂ ಬೋಲ್ಷೆವಿಕ್ಕರೂ ಸಹ ಸೇರಿ ಜೆಕೋಸ್ಲಾವಕ್ಕರೊಡನೆ ಕಾದಾಡುತ್ತಿರುವರು. ಹಿಂದಿನ ರಷ್ಯಾಚಕ್ರವರ್ತಿಯವರ ಚಿಕ್ಕಪ್ಪಂದಿರಾದ ಗ್ರಾಂಡ್ ಡ್ಯೂಕ್ ಮೈಕೇಲ್ ಅಲಗ್ಸಾಂಡ್ರೋವಿಚ್ಚಿಯವರು ರಷ್ಯಾಚಕ್ರವರ್ತಿಯವರೆಂದು ಪ್ರಕಟಿಸಿಕೊಂಡು, ಜಕೋಸ್ಲಾವಕ್ ಕೋಸಕ್ ಸೇನೆಗಳ ಸಹಾಯದಿಂದ ಮಾಸ್ಕೋಪಟ್ಟಣದಮೇಲೆ ಸಾಗಿಹೋಗುತ್ತಿದ್ದಾರಂತೆ. ರಷ್ಯಾದಲ್ಲಿ ಬೋಲ್ಷೆವಿಕ್ಕರು ಜರ್ಮನರ ಮರುಳುಮಾತಿಗೆ ಬೆರಗಾಗಿ ಸಂಧಿಮಾಡಿಕೊಂಡು ದೇಶವನ್ನೆಲ್ಲಾ ಅಧಃಸ್ಥಿತಿಗೆ ತಂದುದರಿಂದ ಉಳಿದ ನಾನಾ ಪಕ್ಷಗಳೆಲ್ಲಾ ಈಗ ಒಂದಾಗಿ ಬೋಲ್ಷೆವಿಕ್ಕರನ್ನು ಹತಮಾಡಬೇಕೆಂದು ಪ್ರಯತ್ನಿಸುವ ಹಾಗೆ ಕಾಣುತ್ತದೆ. ದಕ್ಷಿಣ ರಷ್ಯಾರಾಷ್ಟ್ರಗಳಲ್ಲಿ ಸಾಂಘಾತಿಕ ಪರಿಪಾಲನಸ್ಥಾಪನೆಯ ಆಲೋಚನೆಯು ನಡೆಯುತ್ತಿದೆ.

ಜುಲೈ ೪ ನೆಯ ದಿನವು ಅಮೇರಿಕಾದವರಿಗೆ ಅತಿ ಪವಿತ್ರವಾದ ದಿನವು. ಆ ದಿನವೇ ಅಮೇರಿಕಾಧಿನಿವೇಶನಗಳು ಆಂಗ್ಲರಾಜ್ಯಾಧಿಕಾರಕ್ಕೆ ಪ್ರತಿಭಟಿಸಿ ಸ್ವಾತಂತ್ರ್ಯವನ್ನು ಸಾಧಿಸಿಕೊಂಡು ಪ್ರಕಟಿಸಿದುವು. ಅವು ಹಾಗೆ ಸ್ವಾತಂತ್ರ್ಯವನ್ನು ಪ್ರಕಟಿಸಿಕೊಂಡು ಕಳೆದ ೪ ನೆ ತಾರೀಖಿಗೆ ೧೪೨ ವರ್ಷಗಳು ತುಂಬಿದುವು. ಈ ೧೪೨ ವರ್ಷ ಕಾಲದಲ್ಲಿ ಅಮೇರಿಕಾವು ಸ್ವಾತಂತ್ರ್ಯದಿಂದ ಆರ್ಜಿಸಿಕೊಂಡಿರುವ ಗೌರವವು ಅದ್ವಿತೀಯವಾಗಿರುವುದು. ಅಮೇರಿಕಾ ಸಂಯುಕ್ತರಾಷ್ಟ್ರಗಳಲ್ಲಿ ವಿಕಾಸಗೊಂಡಿರುವ ಧರ್ಮಸ್ವಾತಂತ್ರ್ಯವು ಜಗತ್ತಿಗೇ ಪ್ರಮಾಣಭೂತವಾಗಿರುವುದು. ೧೪೨ ವರ್ಷಗಳ ಕೆಳಗೆ ಯಾವ ಮಾತೃದೇಶದೊಡನೆ ಅಮೇರಿಕಾವು ಪ್ರತಿಸ್ಪರ್ಧಿಯಾಗಿ ಹೋರಾಡುತ್ತಿದ್ದಿತೋ ಅದೇ ಮಾತೃದೇಶಕ್ಕೇ ಈಗ ಅದು ಪರಮಮಿತ್ರವೂ ಪರಮಸಹಾಯಕವೂ ಆಗಿ ನಿಂತು ಶತ್ರುಗಳಮೇಲೆ ಯುದ್ಧಮಾಡುತ್ತಿರುವುದೂ ಕೂಡ ಧರ್ಮಸ್ವಾತಂತ್ರ್ಯರಕ್ಷಣಕ್ಕಾಗಿಯೇ. ಈಗ ಅಮೇರಿಕಾ ಸಂಯುಕ್ತರಾಷ್ಟ್ರಗಳ ಪವಿತ್ರಧರ್ಮಾಚರಣೆಯು ಜಗತ್ತಿಗೇ ಗುರುಸ್ಥಾನದಲ್ಲಿ ನಿಂತುಕೊಂಡಿದೆ. ಕಾಲಮಹಿಮೆ ಹೀಗಿದೆ. ಕಳೆದ ೪ ನೆ ತಾರೀಖಿನ ದಿನ ಅಮೇರಿಕಾದಲ್ಲೂ ಮಿತ್ರರಾಷ್ಟ್ರಗಳಾದ ಇಂಗ್ಲೆಂಡು ಫ್ರಾನ್ಸು ಮೊದಲಾದ ದೇಶಗಳ ರಾಜಧಾನಿಗಳಲ್ಲೂ ಸಹ ಅಮೇರಿಕಾಸ್ವಾತಂತ್ರ್ಯ ವರ್ಧಂತ್ಯುತ್ಸವ ದಿನವು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅಮೇರಿಕಾ ಧ್ವಜಪಟವು ಲಂಡನ್ ಪಟ್ಟಣದ ಅರಮನೆ ಪಾರ್ಲಿಮೆಂಟುಭವನ ಮೊದಲಾದ ಮುಖ್ಯಮುಖ್ಯ ಸರ್ಕಾರಿ ಭವನಗಳಮೇಲೂ, ರಾಜವೀಧಿಗಳಲ್ಲೂ ಅಪರಿಮಿತವಾಗಿ ಕಟ್ಟಲ್ಪಟ್ಟಿದ್ದುವು. ಲಂಡನ್ನಿನ ಎಲ್ಲಾ ದೇವಾಲಯಗಳಲ್ಲೂ ಗಂಟೆಗಳು ಬಾರಿಸಲ್ಪಟ್ಟು ಪ್ರಾರ್ಥನೆಗಳು ನಡೆದುವು. ಸಭೆಗಳೂ ವ್ಯಾಯಾಮಪ್ರದರ್ಶನಗಳೂ ವಿಜೃಂಭಣೆಯಿಂದ ನಡೆದುವು. ಅಲ್ಲಿಗೆ ಚಕ್ರವರ್ತಿದಂಪತಿಗಳೂ ಹೋಗಿದ್ದರು. ಪ್ರಜೆಗಳೆಲ್ಲಾ ಸಣ್ಣಸಣ್ಣ ಅಮೇರಿಕನ್ ಧ್ವಜಪಟಗಳನ್ನು ಕೈಯಲ್ಲಿ ಹಿಡಿದುಕೊಂಡು ಬೀದಿಗಳಲ್ಲಿ ಉಲ್ಲಾಸದಿಂದ ತಿರುಗುತ್ತಿದ್ದರು. ಆ ದಿನ ಅಮೇರಿಕಾದವರು ತಮ್ಮ ೧೦೦ ಹೊಸ ಹಡಗುಗಳನ್ನು ಸಮುದ್ರಕ್ಕೆ ಇಳಿಸಿದರು.

ಸೆಂಟ್ರಲ್-ಪಬ್ಲಿಸಿಟಿ-ಬೋರ್ಡಿನಿಂದ ಬೆಂಗಳೂರಿನಲ್ಲಿರುವ ಕೊಡಗು ಚೀಫ್‌ಕಮಿಷನರವರಿಗೆ ಬಂದ ತಂತಿವರ್ತಮಾನ ನಂಬರು 210-ಪೊಲಿಕ್ಯಾಂ ಸಿಮ್ಲಾ-ತಾರೀಖು 21-6-1918.

ಪಾಟಿಯಾಲಾ ಮಹಾರಾಜರು ಲಂಡನ್ ಮೊಕ್ಕಾಮಿನಿಂದ 1918 ನೇ ಜೂನ್ 18 ನೇ ತಾರೀಖಿನಲ್ಲಿ ಯುದ್ಧವನ್ನು ಕುರಿತು ಇಂಗ್ಲೆಂಡಿನಲ್ಲಿ ತಮ್ಮ ಅಭಿಪ್ರಾಯವನ್ನು ಈ ಕೆಳಗಿನ ತಂತಿಯಲ್ಲಿ ಪಾಟಿಯಾಲಾ ಸಂಸ್ಥಾನದ ಫಾರಿನ್ ಸೆಕ್ರೆಟರಿಯವರಿಗೆ ತಿಳಿಸಿರುತ್ತಾರೆ.

ಪ್ರಾರಂಭ—ಇಂಡಿಯಾ ದೇಶವನ್ನು ಬಿಡುವುದಕ್ಕೆ ಪೂರ್ವ ಈ ಮಹಾಯುದ್ಧದ ಒಟ್ಟು ಸ್ಥಿತಿಯ ವಿಷಯದಲ್ಲಿ ಅನೇಕ ವದಂತಿಗಳು ಇದ್ದವನ್ನು ತಿಳಿದಿದ್ದೆನು. ಇಲ್ಲಿನ ಸ್ಥಿತಿಗತಿಗಳನ್ನು ಸ್ವಯಮವಾಗಿ ನೋಡಿ ತಿಳಿದುಕೊಳ್ಳುವುದಕ್ಕೆ ಭಾಗ್ಯವಶದಿಂದ ಅವಕಾಶ ದೊರೆಯಿತಾಗಿ, ನಮ್ಮ ದೇಶದ ಜನರಿಗೆ ನಮ್ಮ ಶತ್ರುಗಳ ವಿಷಯಕ್ಕೆ ನಾವು ಯಾವ ಸ್ಥಿತಿಯಲ್ಲಿರುವೆವೆಂಬುದರ ಅಭಿಪ್ರಾಯವನ್ನು ತಿಳಿಸಬೇಕೆಂದು ನನಗೆ ಕುತೂಹಲವಿರುತ್ತದೆ. ಫ್ರಾನ್ಸ್‌ದೇಶದಲ್ಲಿ ಪ್ಯಾರಿಸ್ ಪಟ್ಟಣವನ್ನು ಹಿಡಿಯಬೇಕೆಂದಿದ್ದ ಶತ್ರುಗಳ ಉದ್ದೇಶವನ್ನು ಮಿತ್ರಸಮುದಾಯದವರು ಭಂಗಪಡಿಸಿ ಅಸಂಖ್ಯಾತವಾದ ಜನಹಾನಿಯನ್ನು ಮಾಡಿದರು. ಬಹು ಸಂಖ್ಯೆಯ ಅಮೇರಿಕಾ ಸೈನಿಕರು ಈಗ ಬಂದಿರುವರು, ಮತ್ತು ಪ್ರತಿದಿನವೂ ಬರುತ್ತಲಿರುವರು. ನಮ್ಮ ವಿಸ್ತಾರವಾದ ಮೂಲಬಲವನ್ನು ಇನ್ನೂ ಮುಟ್ಟಲಿಲ್ಲ. ಈಗಿನ ಸ್ಥಿತಿಯಲ್ಲಿ ನಿರ್ಭಯವಾಗಿರಬಹುದು. ಆಸ್ಟ್ರಿಯಾ ಸೈನ್ಯವು ಶೂರರಾದ ಇಟಲಿ ಸೈನ್ಯವನ್ನು ಎದುರಿಸಿದ್ದು ಶುದ್ಧಾಂಗವಾಗಿ ವಿಫಲವಾಯಿತು. ಏಕೆಂದರೆ ಮೂರು ದಿನಗಳವರೆಗೂ ಘೋರವಾಗಿ ಯುದ್ಧಮಾಡಿದ ತರುವಾಯ ಲೆಕ್ಕಕ್ಕೆ ಬರುವ ರೀತಿಯಲ್ಲಿ ಯಾವುದನ್ನೂ ಅವರು ಸಾಧಿಸಲಿಲ್ಲ. ಮತ್ತು ಬಹು ಮಂದಿಯನ್ನು ಕೈದಿಗಳಾಗಿ ತೋಪುಗಳೊಡನೆ ಕಳೆದುಕೊಂಡರು. ದೇಶಭಾಷೆಯ ಅಥವಾ ಬೇರೆ ತರಹೆಯ ವೃತ್ತಾಂತಪತ್ರಿಕೆಗಳಲ್ಲಿ ಇದನ್ನು ಸಾಧ್ಯವಾದಷ್ಟು ವಿಸ್ತಾರವಾಗಿ ಪ್ರಚಾರಗೊಳಿಸಬೇಕೆಂದು ಅಪೇಕ್ಷಿಸಿದೆ.

ಎರಡನೆ ಯುದ್ಧದ ಸಾಲ.

ಮಹಾಶಯರೆ,

ಯೂರೋಪ್ ಖಂಡದಲ್ಲಿ ಈಗ ನಾಲ್ಕು ವರ್ಷಗಳಿಂದಲೂ ನಮ್ಮ ಸಾರ್ವಭೌಮರಮೇಲೆ ಶತ್ರುಗಳು ನಡೆಸುತ್ತಲಿರುವ ಘೋರವಾದ ಯುದ್ಧದ ವಿಷಯವು ಎಲ್ಲರಿಗೂ ತಿಳಿದಿರುವ ಅಂಶವಾಗಿರುತ್ತದೆ. ಬ್ರಿಟಿಷ್ ಚಕ್ರಾಧಿಪತ್ಯದವರೆಲ್ಲಾ ಈ ಯುದ್ಧಕ್ಕೆ ಒಂದು ಪಂಗಡದವರಾದ್ದರಿಂದ ಆ ಚಕ್ರಾಧಿಪತ್ಯಕ್ಕೆ ಒಳಪಟ್ಟದ್ದರಿಂದ ಈ ದೇಶದವರು ಆ ಪಂಗಡಕ್ಕೆ ಸೇರಿದವರೇ ಆಗಿರುತ್ತಾರೆ.

ಈ ಚಕ್ರಾಧಿಪತ್ಯದ ಇತರ ಭಾಗದ ಜನಗಳು ಈ ಯುದ್ಧಕ್ಕಾಗಿ ಎಷ್ಟು ಮಹತ್ಕಾರ್ಯವನ್ನು ಮಾಡುತ್ತಲಿದ್ದಾರೋ ಅಷ್ಟನ್ನು ಈ ದೇಶದವರು ಮಾಡುತ್ತಾರೆಯೋ ಎಂಬುದು ಯೋಚಿಸಬೇಕಾದ ವಿಷಯವಾಗಿರುತ್ತೆ. ಆ ದೇಶಗಳಲ್ಲಿ ಎಷ್ಟೋ ಜನರು ಯುದ್ಧದಲ್ಲಿ ಪ್ರಾಣಗಳನ್ನು ಒಪ್ಪಿಸಿರುತ್ತಾರೆ. ಮನೆಮನೆಗೂ ನೆಂಟರಿಷ್ಟರನ್ನು ಕಳೆದುಕೊಂಡು ದುಃಖಿಸುತ್ತಲಿದ್ದಾರೆ. ದ್ವಿಗುಣ, ತ್ರಿಗುಣವಷ್ಟು ತೆರಿಗೆಯುಗಳನ್ನು ಕೊಡುತ್ತಲಿದ್ದಾರೆ. ಕೆಲವು ದೇಶಗಳಲ್ಲಿ ಗಂಡಸರೆಲ್ಲರೂ ಸಿಪಾಯಿ ಕೆಲಸಕ್ಕೆ ಬರಬೇಕೆಂಬ ನಿರ್ಬಂಧವನ್ನು ಅಂಗೀಕರಿಸಿರುತ್ತಾರೆ. ಆಹಾರಪದಾರ್ಥಗಳು ದೊರೆಯದೆ ಆಹಾರವನ್ನೂ ಕೂಡ ಕಮ್ಮಿಮಾಡಿರುತ್ತಾರೆ.

ಈ ದೇಶದಿಂದಲೂ ಸೈನಿಕರು ಹೋಗಿ ವೀರಸ್ವರ್ಗವನ್ನು ಸೇರಿರುತ್ತಾರೆ. ಈಗೀಗ ಆಹಾರಪದಾರ್ಥಗಳು ತುಟ್ಟಿಯಾಗಿರುತ್ತವೆ. ಯುದ್ಧಕ್ಕಾಗಿ ಉಚಿತವಾಗಿಯೂ ಮೊದಲನೆ ವಾರ್‌ಲೋನಿಗೂ ಸಹ ಹಣವನ್ನು ವಿಶೇಷವಾಗಿಯೇ ಕೊಟ್ಟಿರುತ್ತಾರೆ. ಆದರೂ ಇತರರಡೆಯುವಷ್ಟು ಕಷ್ಟವನ್ನು ಈ ದೇಶದವರು ಅನುಭವಿಸಿಲ್ಲವೆಂದು ಹೇಳಲು ಏನೂ ಅಡ್ಡಿತೋರುವುದಿಲ್ಲ.

ಹೀಗಿರುವಲ್ಲಿ ಈ ಯುದ್ಧಕ್ಕಾಗಿ ಇಂಡಿಯಾ ಗೌರ್ನಮೆಂಟಿನವರು ಈಗ ಏರ್ಪಡಿಸಿರುವ ಎರಡನೆ ವಾರ್‌ಲೋನ್ ಎಂಬ ಸಾಲಕ್ಕೆ ಶಕ್ತಿಗೆ ಅನುಗುಣವಾಗಿ ಹಣವನ್ನು ಕೊಡಬೇಕಾದದ್ದು ಕರ್ತವ್ಯವಲ್ಲವೆ? ಈ ವಿಚಾರದಲ್ಲಿ ನಮ್ಮನ್ನು ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜಾ ರಾಜಾ ಸಾಹೆಬ್ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ. ಜಿ.ಸಿ.ಬಿ.ಇ. ಯವರು ಅಪ್ಪಣೆಕೊಡಿಸಿರುವ ಸಂದೇಶವು ಎಲ್ಲರಿಗೂ ವೇದ್ಯವಾಗಿರಬೇಕು. ಇದನ್ನು ಶಿರಸಾ ವಹಿಸಿ ಇದಕ್ಕೆ ಅನುಸಾರವಾಗಿ ನಡೆಯುವುದರಮೂಲಕ ರಾಜಭಕ್ತಿಯನ್ನು ಪ್ರಕಟಗೊಳಿಸುವುದು ಸಂಸ್ಥಾನದ ಎಲ್ಲಾ ಪ್ರಜೆಗಳ ಕೆಲಸವಾಗಿರುತ್ತೆ.

ತುಮಕೂರು ಡಿಸ್ಟ್ರಿಕ್ಟಿನಿಂದ 2 ಲಕ್ಷ ರೂಪಾಯಿಗಳನ್ನು ಈ ಸಾಲಕ್ಕಾಗಿ ಒದಗಿಸಬೇಕೆಂದು ಉದ್ದೇಶಿಸಿದೆ. ಈ ಮೊಬಲಗನ್ನು ಈ ಕೆಳಗೆ ವಿವರಿಸಿರುವಂತೆ ತಾಲ್ಲೂಕುವಾರ್ ಹಂಚಿರುತ್ತೆ.

1. ತುಂಕೂರು ಟವನ್	15000.	7. ಚಿಕ್ಕನಾಯ್ಕನಹಳ್ಳಿ ತಾ||	15000.
2. ತುಂಕೂರು ತಾ||	20000.	8. ಪಾವಗಡ ತಾ||	10000.
3. ಶಿರಾ ತಾ||	30000.	9. ಗುಬ್ಬಿ ತಾ||	20000.
4. ತಿಪ್ಟೂರು ತಾ||	30000.	10. ಹುಳ್ಯಕೆರೆ ಸಬ್ ತಾ||	10000.
5. ಮಧ್ಧಗಿರಿ ತಾ||	20000.	11. ಕೊರಟಗೆರೆ ಸಬ್ ತಾ||	10000.
6. ಕುಣಿಗಲ್ ತಾ||	20000.		

ಎಲ್ಲರೂ ಅವರ ಶಕ್ತಿಗೆ ಅನುಸಾರವಾಗಿ ಕೊಟ್ಟಲ್ಲಿ ಈ ಹಣ ಒದಗುವುದು ಅಸಾಧ್ಯವಲ್ಲ. ಧನವಂತರೇ ಕೊಡಬೇಕೆಂಬುವುದಿಲ್ಲ. ಬಡವರೂ ಕೂಡ ಕೊಡಬಹುದು. ಸ್ವಲ್ಪ ಮೊಬಲಗುಗಳು ಬಂದು ಒಟ್ಟಿನಲ್ಲಿ ಭಾರಿ ಮೊಬಲಗು ಆಗಬೇಕೆಂಬುವುದನ್ನು ಘನವನ್ನು ಹೊಂದಿದ ವೈಸ್ರಾಯವರು ಸೂಚಿಸಿರುತ್ತಾರೆ. ಜುಜ್ಜು ಮೊಬಲಗಾದ 7¾ ರೂಪಾಯಿ ಕೊಟ್ಟು 10 ರೂಪಾಯಿ ಸರ್ಟಿಫಿಕೇಟನ್ನು ಪೋಸ್ಟಾಫೀಸಿನಲ್ಲಿ ಪಡೆಯಬಹುದು. ಈರೀತಿ ಬಡವರೂ ಕೂಡ ಸಾಲವನ್ನು ಕೊಡಲು ಮಾರ್ಗವು ಏರ್ಪಟ್ಟಿರುತ್ತೆ.

ಜುಜ್ಜು ಮೊಬಲಗಿನಿಂದ ಪ್ರಯೋಜನವಿಲ್ಲವೆಂದು ಯೋಚಿಸತಕ್ಕದ್ದಲ್ಲ. "ಹನಿಗೂಡಿ ಹಳ್ಳ" ಎಂಬ ವಾರ್ತೆಯಿಲ್ಲವೆ? ಎಣಿಸಲು ಅಸಾಧ್ಯವಾದಷ್ಟು ಹಣವು ಈ ಯುದ್ಧದಲ್ಲಿ ಖರ್ಚಾಗುತ್ತಲಿದೆ. ಆ ಲೆಕ್ಕವನ್ನು ನೋಡಿದರೆ ಇಂಡಿಯಾ ಗೌರ್ನಮೆಂಟಿನವರು ಕೊಡುವ 150 ಕೋಟಿ ರೂಪಾಯಿಗಳೂ ಕೂಡ ಜುಜ್ಜು ಮೊಬಲಗೇ ಆಗುತ್ತದೆ. ಎಲ್ಲರೂ ತಮ್ಮ ತಮ್ಮ ಕರ್ತವ್ಯವೆಂದು ಕೊಡಬೇಕೇ ಹೊರತು ಜುಜ್ಜು ಮೊಬಲಗೆಂದು ಉದಾಸೀನರಾಗಬಾರದು.

ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಉಂಟಾಗಿರುವ ಈ ಅವಶ್ಯಕತೆಯು ಈ ದೇಶದ ಪ್ರಜೆಗಳಿಗೆ ರಾಜಭಕ್ತಿಯನ್ನು ತೋರ್ಪಡಿಸಲು ಸುಸಮಯವನ್ನು ಒದಗಿಸಿರುತ್ತೆಂದು ಶ್ರೀಮದಿಂಡಿಯಾ ಚಕ್ರವರ್ತಿಯವರು ಅಪ್ಪಣೆ ಕೊಡಿಸಿರುವುದನ್ನು ಎಲ್ಲರೂ ನೆನಪಿನಲ್ಲಿಟ್ಟುಕೊಂಡು ಈ ಸಾಲಕ್ಕೆ ಶಕ್ತ್ಯನುಗುಣವಾಗಿ ದ್ರವ್ಯವನ್ನು ಕೊಟ್ಟು ರಾಜಭಕ್ತಿಯನ್ನು ಕಾರ್ಯತಃ ವ್ಯಕ್ತಪಡಿಸಬೇಕೆಂಬುವುದೇ ಕೋರಿಕೆ.

A. SUBRAMANYA IYER,
ಪ್ರೆಸಿಡೆಂಟ್.
ತುಂಕೂರು ಡಿಸ್ಟ್ರಿಕ್ಟ್ ವಾರ್‌ಲೋನ್ ಕಮಿಟಿ.

ಪತ್ರವ್ಯವಹಾರ.

ಕಳೆದ ತಿಂಗಳಲ್ಲಿ ನಡೆದ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂತೋಷಾರ್ಥವಾಗಿ ಎಲ್ಲಾ ಬಾಲಕ ಬಾಲಿಕೆಯರ ಪಾಠಶಾಲೆಗಳಲ್ಲೂ ವಿನೋದವಾದ ಆಟಪಾಟಗಳನ್ನಾಡಿಸಿ ಗೆದ್ದವರಿಗೆ ಬಹುಮಾನಗಳೂ ಇತರರಿಗೆಲ್ಲಾ ಮಿಠಾಯಿ ಹಣ್ಣುಗಳೂ ಕೊಡಲ್ಪಟ್ಟುವಷ್ಟೆ. ಇದರಂತೆ ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲು ವಿದ್ಯಾರ್ಥಿಗಳಿಗೆ ಬಹುಮಾನ ವಿನಿಯೋಗ ಕಾಲದಲ್ಲಿ ಸ್ಕೂಲಿನ ಟ್ರಸ್ಟಿಗಳೂ, ಇತರ ದೊಡ್ಡ ಮನುಷ್ಯರುಗಳೂ ಬರಮಾಡಲ್ಪಟ್ಟಿದ್ದರು. ಮ|| ರಾ|| ಗಳಾದ ಅರಮನೆ ಕಂಟ್ರೋಲರ್ ರಾಮಕೃಷ್ಣರಾಯರೂ, ಅಂಬ್ಲೆ ಅಣ್ಣಯ್ಯಪಂಡಿತರೂ ಮತ್ತು ಕೆಲರೂ ಭಾಷಣಗಳನ್ನು ಮಾಡಿದಮೇಲೆ ಸ್ಕೂಲಿನ ಟ್ರಸ್ಟಿಗಳಲ್ಲೊಬ್ಬರಾದ ಅತ್ತಿಗೋಡು ಬಸಪ್ಪನವರು - ಇವರೆಗೆ ಮಾತನಾಡಿರುವ ದೊಡ್ಡ ಮನುಷ್ಯರುಗಳಿಗಿಂತಲೂ ವಿಶೇಷವಾಗಿ ಮಾತನಾಡಲು ಶಕ್ತನಲ್ಲವಾದರೂ ನಾನು ಶ್ರೀಮನ್ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಆಳ್ವಿಕೆಯನ್ನೂ, ಈಗಿನ ಮಹಾಸ್ವಾಮಿಯವರ ಆಳ್ವಿಕೆಯನ್ನೂ ನೋಡಿರುತ್ತೇನಾದುದರಿಂದ ನನಗೆ ತಿಳಿದ ಎರಡು ಮಾತುಗಳನ್ನಾಡುತ್ತೇನೆ. ಶ್ರೀಮನ್ ಮುಮ್ಮಡಿ ಕೃಷ್ಣರಾಜಭೂಪರವರು ಮಹಾದೈವಗುರುಭಕ್ತರಾಗಿದ್ದು ಜನೋಪಯುಕ್ತವಾದ ಅನೇಕ ಧರ್ಮಕಾರ್ಯಗಳನ್ನು ಮಾಡಿ ಅವುಗಳಲ್ಲಿ ಕೆಲವು ಸಂಪೂರ್ಣವಾಗಲಿಲ್ಲವಾಗಿ ಈಗ ಶ್ರೀಮನ್ ನಾಲ್ವಡಿ ಕೃಷ್ಣರಾಜಭೂಪರಾಗಿ ಅವತರಿಸಿ ಆ ಸಂಕಲ್ಪಗಳನ್ನೆಲ್ಲಾ ನೆರವೇರಿಸುತ್ತ ತಮ್ಮ ಪ್ರಜೆಗಳನ್ನೆಲ್ಲಾ ವಿದ್ಯಾವಿವೇಕ ಸಂಪನ್ನರನ್ನಾಗಿ ಮಾಡಲು ಅಹರ್ನಿಶಿಯಲ್ಲೂ ಸಾಟಿಯಿಡುತ್ತ ಜಗದ್ವಿಖ್ಯಾತರಾಗಿರುತ್ತಾರೆ - ಎಂದು ಮೊದಲಾಗಿ ಸ್ವಾರಸ್ಯವೂ ಕಾಲೋಚಿತವೂ ಆದ ಉಪನ್ಯಾಸವನ್ನು ಮಾಡಿದರು.

ಒಬ್ಬ ಪ್ರತ್ಯಕ್ಷದರ್ಶಿ.

ಪ್ರಸಿದ್ಧವಾದ ಜಾನುವಾರುಗಳ ಕಾಲುವೆಡಕದ ಎಣ್ಣೆ.

ಇದು ಜಾನುವಾರುಗಳಿಗೆ ಕಾಲುವಡಕು, ಬಾಯಿ ಹುಣ್ಣು ಇನ್ನೂ ಇತರ ವಿಧವಾದ ಘಾಯಗಳಿಗೆ ಶ್ರೇಷ್ಠವಾದ ಪ್ರಹಾರಿ ಔಷಧ. 2

ಸೀಸೆ 1 ಕ್ಕೆ 1—0—0, 0—12—0, 0—6—0.

ವಿಳಾಸ:-ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ||

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲವಾದದ್ದು. ಪ್ರತಿ ಸೀರೆಗೂ ಒಂದೊಂದು ಗಿಲ್ಟಿನ ರೋಜಾ ಹೂವು ಬಹುಮಾನ ಕೊಡುವೆವು.

ದವನಕೋಡಿ ಸೀರೆ	ರೂ. 3.8.0
ಬಾಲಾಮಣಿ ,,	... 4.0.0
ಹೋರಲು ಸೀರೆ	ರೂ. 11.0.0
ಗೋಪರ್‌ಜಾನ್ ಸೀರೆ	... 5.8.0
ಮಾವಿನಕಾಯಿ ಸೀರೆ	... 3.0.0
ಬನಾರಸ್ ಸೀರೆ	... 5.0.0
ಮಧುರೆ ಬೂಟಾ ಸೀರೆ	... 4.0.0
ಶಕುಂತಲ ಇಮಿಟೇಷನ್ ಸೀರೆ	5.8.0
ಜರಾಕ್ ರೇಷ್ಮೆ ಪಂಚೆ	... 2.8.0
ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
30 ಸಾಹುಕಾರಪೇಟೆ, ಮದ್ರಾಸ್.

ಮಕ್ಕಳ ತಲೆ ಕಜ್ಜಿ ಎಣ್ಣೆ.

ಮಕ್ಕಳ ತಲೆಯಲ್ಲಿ ಕಜ್ಜಿಯಾಗಿ ಹೇನು ಹೆಚ್ಚಿ ನಿರ್ವಾಹವಿಲ್ಲದೆ ಕೂದಲು ತೆಗೆಯಬೇಕಾಗುತ್ತೆ. ಈ ಎಣ್ಣೆ ಒಂದುಸಾರಿ ಹಚ್ಚಿದಕೂಡಲೇ ಹೇನು ಉದುರಿ ಕಜ್ಜಿ ಮಾಯವಾಗುತ್ತೆ. ಸೀಸೆ 1 ಕ್ಕೆ 1—0—0.

ಪಂಚತಿಕ್ತಕಷಾಯ. 2

(ಇಂಡ್ಯಾಗೌರ್ನಮೆಂಟಿನಲ್ಲಿ ರಿಜಿಸ್ಟರ್ಡು ಮಾಡಲ್ಪಟ್ಟು ಭಂಗಾರದ ಪದಕಹೊಂದಿದೆ)

ಎಂಥಾ ಕಠಿಣಜ್ವರಕ್ಕೂ 2 ದಿನದ ಉಪಯೋಗದಲ್ಲಿ ನಿಶ್ಚಯ ಗುಣ ಕೊಡುತ್ತೆ. ಸೀಸೆ 1 ಕ್ಕೆ 0-12-0. ಡಜನ್ 1 ಕ್ಕೆ 7-8-0.

ವಿಳಾಸ:-ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ||

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಪಸ. 37

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಜುಲೈ ತಾ|| ೧೪ ರಿಂದ ೧೯೧೮ ನೆಯ ಜುಲೈ ತಾ|| ೨೦ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಷಾಢ ಶು|| ಷಷ್ಠಿಯಿಂದ ಆಷಾಢ ಶು|| ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿ.ಕ
14	ಭಾನು	ಷಷ್ಠಿ	30-24	ಉಫ	29-2	31
15	ಸೋಮ	ಸಪ್ತ	35-34	ಹಸ್ತ	35-35	32
16	[1]ಮಂಗಳ	ಅಷ್ಟ	40-30	ಚಿತ್ತ	42-10	1
17	ಬುಧ	ನವಮಿ	45-4	ಸ್ವಾತಿ	48-14	2
18	ಗುರು	ದಶಮಿ	48-47	ವಿಶಾಖ	53-35	3
19	[2]ಶುಕ್ರ	ಏಕಾ	51-28	ಅನೂರಾಧ	57-46	4
20	[3]ಶನಿ	ದ್ವಾದ	52-47	ಜ್ಯೇಷ್ಠ	60	5

(1) ದಕ್ಷಿಣಾಯನ ಪುಣ್ಯಕಾಲ. (2) ಸರ್ವತ್ರ ಪ್ರಥಮೈಕಾದಶೀ, ಗೋಪದ್ಮವ್ರತಂ, ಚಾತುರ್ಮಾಸ್ಯವ್ರತಾರಂಭ, ಆಡಿ ಶುಕ್ರವಾರಂ. (3) ಶಯನದ್ವಾದಶಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವ ನಕ್ಷತ್ರಮೋಹರಾಜೀಯಾಶ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಭೃಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಲೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜುಲೈ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೨೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿವೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಥಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯನಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರಾಕ್‌ಬೀಸಣಿಗೆ 1, ಚಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಲಾಕರವಮು 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರಾಕ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
31 9, ಇಜುಳಪ್ಪನವೀಧಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೬—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಂದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 32

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಕೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ಪ್ಯಾ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಸನ್ನಿಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
16 ಆನಂದ ಬುಕ್‌ಡಿಪೊ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ:

೧. ಸುವಾಸಿತ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
34 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೇಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨). ಸ್ವತರ್ಕವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ"ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿಕ್ಷೇ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣವಾದ ಕೈಸರನ ಚರಿತ್ರೆ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ. ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಗಿವೆ. ಕ್ರಯ ೪ ಆಣೆ.

10 ವಿಳಾಸ—ಎಸ್. ಎಚ್. ಪಾಟೀಲ್ ದಾವಣಗೆರೆ.

ಇಂಗ್ಲೀಷರು ಕಳೆದ ಜೂನ್ ತಿಂಗಳೊಂದರಲ್ಲೇ ೨೮೦೪೦೦ ಟನ್ನುಗಳ ವ್ಯಾಪಾರಿ ಹಡಗುಗಳನ್ನು ನಿರ್ಮಿಸಿದ್ದಾರೆ. ಜೂನ್ ಕೊನೆಗೆ ಕಡೆಯಾದ ೧ ವರ್ಷ ಕಾಲದಲ್ಲಿ ಒಟ್ಟು ೧೪೩೧೧೫೦ ಟನ್ನುಗಳ ಹಡಗುಗಳು ಹೊಸದಾಗಿ ಕಟ್ಟಲ್ಪಟ್ಟಿವೆ.

ಬರುಬರುತ್ತ ಇಂಗ್ಲೀಷ್ ಅಮೇರಿಕಾದೇಶಗಳ ಮೈತ್ರಿಯು ಬಹಳ ಗಾಢವಾಗುತ್ತಲಿದೆ. ಈಗ ಯೂರೋಪಿನಲ್ಲಿ ಅಮೇರಿಕಾದವರ ೨೫೦ ಯುದ್ಧದ ಹಡಗುಗಳಿವೆ. ಅವುಗಳಲ್ಲಿ ೩೦೦೦ ಮಂದಿ ಸೈನಿಕೋದ್ಯೋಗಿಗಳೂ ೪೦ ಸಾವಿರ ಮಂದಿ ನೌಕಾಸೈನಿಕರೂ ಇದ್ದಾರೆ. ಈ ಹಡಗುಗಳೆಲ್ಲಾ ಬಳಿಯ ಕಡಲು ಮೊದಲುಗೊಂಡು ಅಡ್ರಿಯಾಟಿಕ್ ಸಮುದ್ರದವರೆಗೂ ಹರಡಿಕೊಂಡಿವೆ. ಈ ವರ್ಷ ಮುಗಿಯುವುದರೊಳಗಾಗಿ ಅಮೇರಿಕನ್ನರು ತಮ್ಮ ಯುದ್ಧದ ಹಡಗುಗಳನ್ನು ಮೊದಲಿಗಿಂತ ೩ ಪಾಲಷ್ಟು ಹೆಚ್ಚಿಸುವವರಾಗಿದ್ದಾರೆ. ಸಬ್‌ಮೆರೀನುಗಳನ್ನು ಧ್ವಂಸಮಾಡತಕ್ಕ ೧೫೦ ಹಡಗುಗಳು ಇಷ್ಟರಲ್ಲೇ ಬರುವುದರಲ್ಲಿವೆ.

ಸೈಬೇರಿಯಾದಲ್ಲಿ ಬೋಲ್ಷೆವಿಕ್ ಪ್ರಭುತ್ವಕ್ಕೆ ವಿರುದ್ಧವಾಗಿರುವ ೨ ಪ್ರಭುತ್ವಗಳು ತಮ್ಮ ಪೂರ್ವದ ರಾಜಧಾನಿಗಳಾಗಿದ್ದ ಹಾರ್ಬಿನ್, ಓಂಸ್ಕ್ ಪಟ್ಟಣಗಳೆರಡನ್ನೂ ಬಿಟ್ಟು ೨ ಪ್ರಭುತ್ವಗಳೂ ಒಂದಾಗಿ ಟೋಂಸ್ಕ್ ನಗರವನ್ನು ರಾಜಧಾನಿಯಾಗಿ ಮಾಡಿಕೊಂಡಿರುತ್ತವೆ. ಈ ಪ್ರಭುತ್ವಗಳ ಸೈನ್ಯದಲ್ಲಿ ವಿಶೇಷ ಭಾಗವಾಗಿರುವವರು ಜೆಕೋಸ್ಲೋವಕ್ಕರು. ಹೊರಗೆ ನಿಂತುಕೊಂಡಿರುವ ಕರೆನ್ಸ್ಕಿಯವರೇ ಇವಕ್ಕೆಲ್ಲಾ ಸೂತ್ರಧಾರರಾಗಿರುವರೆಂದು ಸುದ್ದಿಯಿದೆ. ಈ ಜೆಕೋಸ್ಲೋವಕ್ಕರನ್ನೆಲ್ಲಾ ನಿರಾಯುಧರನ್ನಾಗಿ ಮಾಡಿ ನಿಮಗೆ ಒಪ್ಪಿಸುತ್ತೇವೆಂದು ಬೋಲ್ಷೆವಿಕ್ಕರು ಜರ್ಮನರಿಗೆ ವಾಗ್ದಾನಮಾಡಿರುವರಂತೆ. ಈಗ ರಷ್ಯಾದಲ್ಲಿರುವ ಆಸ್ಟ್ರೀ ಜರ್ಮನ್ ಸೆರೆಯಾಳುಗಳೂ ಬೋಲ್ಷೆವಿಕ್ಕರೂ ಸಹ ಸೇರಿ ಜೆಕೋಸ್ಲೋವಕ್ಕರೊಡನೆ ಕಾದಾಡುತ್ತಿರುವರು. ಹಿಂದಣ ರಷ್ಯಾಚಕ್ರವರ್ತಿಯವರ ಚಿಕ್ಕಪ್ಪನವರಾದ ಗ್ರಾಂಡ್ ಡ್ಯೂಕ್ ಮೈಕೇಲ್ ಅಲಗ್ಸಾಂಡ್ರೋವಿಚ್ಚಿಯವರು ರಷ್ಯಾ ಚಕ್ರವರ್ತಿಯವರೆಂದು ಪ್ರಕಟಿಸಿಕೊಂಡು, ಜೆಕೋಸ್ಲೋವಕ್ ಕೋಸಕ್ ಸೇನೆಗಳ ಸಹಾಯದಿಂದ ಮಾಸ್ಕೋಪಟ್ಟಣದಮೇಲೆ ಸಾಗಿಹೋಗುತ್ತಿದ್ದಾರಂತೆ. ರಷ್ಯಾದಲ್ಲಿ ಬೋಲ್ಷೆವಿಕ್ಕರು ಜರ್ಮನರ ಮರುಳುಮಾತಿಗೆ ಬೆರಗಾಗಿ ಸಂಧಿಮಾಡಿಕೊಂಡು ದೇಶವನ್ನೆಲ್ಲಾ ಅಧಃಸ್ಥಿತಿಗೆ ತಂದುದರಿಂದ ಉಳಿದ ನಾನಾ ಪಕ್ಷಗಳೆಲ್ಲಾ ಈಗ ಒಂದಾಗಿ ಬೋಲ್ಷೆವಿಕ್ಕರನ್ನು ಹತಮಾಡಿಬಿಡಬೇಕೆಂದು ಪ್ರಯತ್ನಿಸಿರುವ ಹಾಗೆ ಕಾಣುತ್ತದೆ. ದಕ್ಷಿಣ ರಷ್ಯಾರಾಷ್ಟ್ರಗಳಲ್ಲಿ ಸಾಂಘಾತಿಕ ಪರಿಪಾಲನಸ್ಥಾಪನೆಯ ಆಲೋಚನೆಯು ನಡೆಯುತ್ತಿದೆ.

ಜುಲೈ ೪ ನೆಯ ದಿನವು ಅಮೇರಿಕಾದವರಿಗೆ ಅತಿ ಪವಿತ್ರವಾದ ದಿನವು. ಆ ದಿನವೇ ಅಮೇರಿಕಾಧಿನಿವೇಶಸ್ಥಾನಗಳು ಆಂಗ್ಲರಾಜ್ಯಾಧಿಕಾರಕ್ಕೆ ಪ್ರತಿಭಟಿಸಿ ಸ್ವಾತಂತ್ರ್ಯವನ್ನು ಸಾಧಿಸಿಕೊಂಡು ಪ್ರಕಟಿಸಿದುವು. ಅವು ಹಾಗೆ ಸ್ವಾತಂತ್ರ್ಯವನ್ನು ಪ್ರಕಟಿಸಿಕೊಂಡು ಕಳೆದ ೪ ನೆ ತಾರೀಖಿಗೆ ೧೪೦ ವರ್ಷಗಳು ತುಂಬಿದುವು. ಈ ೧೪೦ ವರ್ಷ ಕಾಲದಲ್ಲಿ ಅಮೇರಿಕಾವು ಸ್ವಾತಂತ್ರ್ಯದಿಂದ ಆರ್ಜಿಸಿಕೊಂಡಿರುವ ಗೌರವವು ಅದ್ವಿತೀಯವಾಗಿರುವುದು. ಅಮೇರಿಕಾ ಸಂಯುಕ್ತರಾಷ್ಟ್ರಗಳಲ್ಲಿ ವಿಕಾಸಗೊಂಡಿರುವ ಧರ್ಮಸ್ವಾತಂತ್ರ್ಯವು ಜಗತ್ತಿಗೇ ಪ್ರಮಾಣಭೂತವಾಗಿರುವುದು. ೧೪೦ ವರ್ಷಗಳ ಕೆಳಗೆ ಯಾವ ಮಾತೃದೇಶದೊಡನೆ ಅಮೇರಿಕಾವು ಪ್ರತಿಸ್ಪರ್ಧಿಯಾಗಿ ಹೋರಾಡುತ್ತಿದ್ದಿತೋ ಅದೇ ಮಾತೃದೇಶಕ್ಕೇ ಈಗ ಅದು ಪರಮಮಿತ್ರವೂ ಪರಮಸಹಾಯಕವೂ ಆಗಿ ನಿಂತು ಶತ್ರುಗಳಮೇಲೆ ಯುದ್ಧಮಾಡುತ್ತಿರುವುದೂ ಕೂಡ ಧರ್ಮಸ್ವಾತಂತ್ರ್ಯರಕ್ಷಣಕ್ಕಾಗಿಯೇ. ಈಗ ಅಮೇರಿಕಾ ಸಂಯುಕ್ತರಾಷ್ಟ್ರಗಳ ಪವಿತ್ರಧರ್ಮಾಚರಣೆಯು ಜಗತ್ತಿಗೇ ಗುರುಸ್ಥಾನದಲ್ಲಿ ನಿಂತುಕೊಂಡಿದೆ. ಕಾಲಮಹಿಮೆ ಹೀಗಿದೆ. ಕಳೆದ ೪ ನೆ ತಾರೀಖಿನದಿನ ಅಮೇರಿಕಾದಲ್ಲೂ ಮಿತ್ರರಾಷ್ಟ್ರಗಳಾದ ಇಂಗ್ಲೆಂಡು ಫ್ರಾನ್ಸು ಮೊದಲಾದ ದೇಶಗಳ ರಾಜಧಾನಿಗಳಲ್ಲೂ ಸಹ ಅಮೇರಿಕಾಸ್ವಾತಂತ್ರ್ಯ ವರ್ಧಂತ್ಯುತ್ಸವ ದಿನವು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅಮೇರಿಕಾ ಧ್ವಜಪಟವು ಲಂಡನ್ ಪಟ್ಟಣದ ಅರಮನೆ ಪಾರ್ಲಿಮೆಂಟುಭವನ ಮೊದಲಾದ ಮುಖ್ಯಮುಖ್ಯ ಸರ್ಕಾರಿ ಭವನಗಳಮೇಲೂ, ರಾಜವೀಥಿಗಳಲ್ಲೂ ಅಪರಿಮಿತವಾಗಿ ಕಟ್ಟಲ್ಪಟ್ಟಿದ್ದವು. ಲಂಡನ್ನಿನ ಎಲ್ಲಾ ದೇವಾಲಯಗಳಲ್ಲೂ ಗಂಟೆಗಳು ಬಾರಿಸಲ್ಪಟ್ಟು ಪ್ರಾರ್ಥನೆಗಳು ನಡೆದುವು. ಸಭೆಗಳೂ ವ್ಯಾಯಾಮಪ್ರದರ್ಶನಗಳೂ ವಿಜೃಂಭಣೆಯಿಂದ ನಡೆದುವು. ಅಲ್ಲಿಗೆ ಚಕ್ರವರ್ತಿದಂಪತಿಗಳೂ ಹೋಗಿದ್ದರು. ಪ್ರಜೆಗಳೆಲ್ಲಾ ಸಣ್ಣಸಣ್ಣ ಅಮೇರಿಕನ್ ಧ್ವಜಪಟಗಳನ್ನು ಕೈಯಲ್ಲಿ ಹಿಡಿದುಕೊಂಡು ಬೀದಿಗಳಲ್ಲಿ ಉಲ್ಲಾಸದಿಂದ ತಿರುಗುತ್ತಿದ್ದರು. ಆ ದಿನ ಅಮೇರಿಕಾದವರು ತಮ್ಮ ೧೦೦ ಹೊಸ ಹಡಗುಗಳನ್ನು ಸಮುದ್ರಕ್ಕೆ ಇಳಿಸಿದರು.

ಸೆಂಟ್ರಲ್-ಪಬ್ಲಿಸಿಟಿ-ಬೋರ್ಡಿನಿಂದ ಬೆಂಗಳೂರಲ್ಲಿ [illegible] ಕೊಡಗು ಚೀಫ್‌ಕಮಿಷನರವರಿಗೆ ಬಂದ ತಂತಿವರ್ತಮಾನ ನಂಬರು [illegible] ಪಿ.ಬಿ.ಕ್ಯಾಂಪ್ ಸಿಮ್ಲಾ-ತಾರೀಖು 21-6.1918.

ಪಾಟಿಯಾಲಾ ಮಹಾರಾಜರು ಲಂಡನ್ ಮೊಕ್ಕಾಮಿನಿಂದ 1918 ನೇ ಜೂನ್ 18 ನೇ ತಾರೀಖಿನಲ್ಲಿ ಯುದ್ಧವನ್ನು ಕುರಿತು ಇಂಗ್ಲೆಂಡಿನಲ್ಲಿ ತಮ್ಮ ಅಭಿಪ್ರಾಯವನ್ನು ಈ ಕೆಳಗಿನ ತಂತಿಯಲ್ಲಿ ಪಾಟಿಯಾಲಾ ಸಂಸ್ಥಾನದ ಫಾರಿನ್ ಸೆಕ್ರಿಟರಿಯವರಿಗೆ ವಿವರಿಸಿರುತ್ತಾರೆ.

ಪ್ರಾರಂಭ.—ಇಂಡಿಯಾ ದೇಶವನ್ನು ಬಿಡುವುದಕ್ಕೆ ಪೂರ್ವ ಈ ಮಹಾಯುದ್ಧದ ಒಟ್ಟು ಸ್ಥಿತಿಯ ವಿಷಯದಲ್ಲಿ ಅನೇಕ ವದಂತಿಗಳು ಇದ್ದದ್ದನ್ನು ತಿಳಿದಿದ್ದೆನು. ಇಲ್ಲಿನ ಸ್ಥಿತಿಗತಿಗಳನ್ನು ಸ್ವಯಮಾಗಿ ನೋಡಿ ತಿಳಿದುಕೊಳ್ಳುವುದಕ್ಕೆ ಭಾಗ್ಯವಶದಿಂದ ಅವಕಾಶ ದೊರೆಯಿತಾಗಿ ನಮ್ಮ ದೇಶದ ಜನರಿಗೆ ನಮ್ಮ ಶತ್ರುಗಳ ಎದುರಿಗೆ ನಾವು ಯಾವ ಸ್ಥಿತಿಯಲ್ಲಿರುವೆವೆಂಬುದರ ಅಭಿಪ್ರಾಯವನ್ನು ತಿಳಿಸಬೇಕೆಂದು ನನಗೆ ಕುತೂಹಲವಿರುತ್ತದೆ. ಫ್ರಾನ್ಸ್ ದೇಶದಲ್ಲಿ ಪ್ಯಾರಿಸ್ ಪಟ್ಟಣವನ್ನು ಹಿಡಿಯಬೇಕೆಂದಿದ್ದ ಶತ್ರುಗಳ ಉದ್ದೇಶವನ್ನು ಮಿತ್ರಸಮುದಾಯದವರು ಭಂಗಪಡಿಸಿ ಅಸಂಖ್ಯಾತವಾದ ಜನಹಾನಿಯನ್ನು ಮಾಡಿದರು. ಬಹು ಸಂಖ್ಯೆಯ ಅಮೇರಿಕಾ ಸೈನಿಕರು ಈಗ ಬಂದಿರುವರು, ಮತ್ತು ಪ್ರತಿದಿನವೂ ಬರುತ್ತಲಿರುವರು. ನಮ್ಮ ವಿಸ್ತಾರವಾದ ಮೂಲಬಲವನ್ನು ಇನ್ನೂ ಮುಟ್ಟಲಿಲ್ಲ. ಈಗಿನ ಸ್ಥಿತಿಯಲ್ಲಿ ನಿರ್ಭಯವಾಗಿರಬಹುದು. ಆಸ್ಟ್ರಿಯಾ ಸೈನ್ಯವು ಶೂರರಾದ ಇಟಲಿ ಸೈನ್ಯವನ್ನು ಎದುರಿಸಿದ್ದು ಶುದ್ಧಾಂಗವಾಗಿ ವಿಫಲವಾಯಿತು. ಏಕೆಂದರೆ ಮೂರು ದಿನಗಳವರೆಗೂ ಘೋರವಾಗಿ ಯುದ್ಧಮಾಡಿದ ತರುವಾಯ ಲೆಕ್ಕಕ್ಕೆ ಬರುವ ರೀತಿಯಲ್ಲಿ ಯಾವುದನ್ನೂ ಅವರು ಸಾಧಿಸಲಿಲ್ಲ. ಮತ್ತು ಬಹು ಮಂದಿಯನ್ನು ಕೈದಿಗಳಾಗಿ ತೋಪುಗಳೊಡನೆ ಕಳೆದುಕೊಂಡರು. ದೇಶಭಾಷೆಯ ಅಥವಾ ಬೇರೆ ತರಹೆಯ ವೃತ್ತಾಂತಪತ್ರಿಕೆಗಳಲ್ಲಿ ಇದನ್ನು ಸಾಧ್ಯವಾದಷ್ಟು ವಿಸ್ತಾರವಾಗಿ ಪ್ರಚಾರಗೊಳಿಸಬೇಕೆಂದು ಅಪೇಕ್ಷಿಸಿದೆ.

ಎರಡನೆ ಯುದ್ಧದ ಸಾಲ.

ಮಹಾಶಯರೆ,

ಯೂರೋಪ್ ಖಂಡದಲ್ಲಿ ಈಗ ನಾಲ್ಕು ವರ್ಷಗಳಿಂದಲೂ ನಮ್ಮ ಸಾರ್ವಭೌಮರಮೇಲೆ ಶತ್ರುಗಳು ನಡಿಸುತ್ತಲಿರುವ ಘೋರವಾದ ಯುದ್ಧದ ವಿಷಯವು ಎಲ್ಲರಿಗೂ ತಿಳಿದಿರುವ ಅಂಶವಾಗಿರುತ್ತದೆ. ಬ್ರಿಟಿಷ್ ಚಕ್ರಾಧಿಪತ್ಯದವರೆಲ್ಲಾ ಈ ಯುದ್ಧಕ್ಕೆ ಒಂದು ಪಂಗಡದವರಾದ್ದರಿಂದ ಆ ಚಕ್ರಾಧಿಪತ್ಯಕ್ಕೆ ಒಳಪಟ್ಟದ್ದರಿಂದ ಈ ದೇಶದವರು ಆ ಪಂಗಡಕ್ಕೆ ಸೇರಿದವರೇ ಆಗಿರುತ್ತಾರೆ.

ಈ ಚಕ್ರಾಧಿಪತ್ಯದ ಇತರ ಭಾಗದ ಜನಗಳು ಈ ಯುದ್ಧಕ್ಕಾಗಿ ಎಷ್ಟು ಮಹತ್ಕಾರ್ಯ ಮಾಡುತ್ತಲಿದ್ದಾರೋ ಅಷ್ಟನ್ನು ಈ ದೇಶದವರು ಮಾಡುತ್ತಾರೆಯೇ ಎಂಬುದು ಯೋಚಿಸಬೇಕಾದ ವಿಷಯವಾಗಿರುತ್ತೆ. ಆ ದೇಶಗಳಲ್ಲಿ ಎಷ್ಟೋ ಜನರು ಯುದ್ಧದಲ್ಲಿ ಪ್ರಾಣಗಳನ್ನು ಒಪ್ಪಿಸಿರುತ್ತಾರೆ. ಮನೆಮನೆಗೂ ನೆಂಟರಿಷ್ಟರನ್ನು ಕಳೆದುಕೊಂಡು ದುಃಖಿಸುತ್ತಲಿದ್ದಾರೆ. ದ್ವಿಗುಣ, ತ್ರಿಗುಣವನ್ನು ಕಂದಾಯಗಳನ್ನು ಕೊಡುತ್ತಲಿದ್ದಾರೆ. ಕೆಲವು ದೇಶಗಳಲ್ಲಿ ಗಂಡಸರೆಲ್ಲರೂ ಸಿಪಾಯಿ ಕೆಲಸಕ್ಕೆ ಬರಬೇಕೆಂಬ ನಿರ್ಬಂಧವನ್ನು ಅಂಗೀಕರಿಸಿರುತ್ತಾರೆ. ಆಹಾರಪದಾರ್ಥಗಳು ದೊರೆಯದೆ ಆಹಾರವನ್ನೂ ಕೂಡ ಕಮ್ಮಿಮಾಡಿರುತ್ತಾರೆ.

ಈ ದೇಶದಿಂದಲೂ ಸೈನಿಕರು ಹೋಗಿ ವೀರಸ್ವರ್ಗವನ್ನು ಸೇರಿರುತ್ತಾರೆ. ಈಚೆಗೆ ಆಹಾರಪದಾರ್ಥಗಳು ತುಟ್ಟಿಯಾಗಿರುತ್ತವೆ. ಯುದ್ಧಕ್ಕಾಗಿ ಉಚಿತವಾಗಿಯೂ ಮೊದಲನೆ ವಾರ್‌ಲೋನಿಗೂ ಸಹ ಹಣವನ್ನು ವಿಶೇಷವಾಗಿಯೇ ಕೊಟ್ಟಿರುತ್ತಾರೆ. ಆದರೂ ಇತರರಪಡುವಷ್ಟು ಕಷ್ಟವನ್ನು ಈ ದೇಶದವರು ಅನುಭವಿಸಿಲ್ಲವೆಂದು ಹೇಳಲು ಏನೂ ಅಡ್ಡಿಯಿರುವುದಿಲ್ಲ.

ಹೀಗಿರುವಲ್ಲಿ ಈ ಯುದ್ಧಕ್ಕಾಗಿ ಇಂಡಿಯಾ ಗೌರ್ನಮೆಂಟಿನವರು ಈಗ ಏರ್ಪಡಿಸಿರುವ ಎರಡನೆ ವಾರ್‌ಲೋನ್ ಎಂಬ ಸಾಲಕ್ಕೆ ಶಕ್ತಿಗೆ ಅನುಗುಣವಾಗಿ ಹಣವನ್ನು ಕೊಡಬೇಕಾದದ್ದು ಕರ್ತವ್ಯವಲ್ಲವೆ? ಈ ವಿಚಾರದಲ್ಲಿ ನಮ್ಮನ್ನು ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜಾ ರಾಜಾ ಸಾಹೆಬ್ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ. ಜಿ.ಸಿ.ಬಿ.ಇ. ಯವರು ಅಪ್ಪಣೆಕೊಡಿಸಿರುವ ಸಂದೇಶವು ಎಲ್ಲರಿಗೂ ವೇದ್ಯವಾಗಿರಬೇಕು. ಇದನ್ನು ಶಿರಸಾ ವಹಿಸಿ ಇದಕ್ಕೆ ಅನುಸಾರವಾಗಿ ನಡೆಯುವುದರಮೂಲಕ ರಾಜಭಕ್ತಿಯನ್ನು ಪ್ರಕಟಗೊಳಿಸುವುದು ಸಂಸ್ಥಾನದ ಎಲ್ಲಾ ಪ್ರಜೆಗಳ ಕೆಲಸವಾಗಿರುತ್ತೆ.

ತುಮಕೂರು ಡಿಸ್ಟ್ರಿಕ್ಟಿನಿಂದ 2 ಲಕ್ಷ ರೂಪಾಯಿಗಳನ್ನು ಈ ಸಾಲಕ್ಕಾಗಿ ಒದಗಿಸಬೇಕೆಂದು ಉದ್ದೇಶಿಸಿದೆ. ಈ ಮೊಬಲಗನ್ನು ಈ ಕೆಳಗೆ ವಿವರಿಸಿರುವಂತೆ ತಾಲ್ಲೂಕುವಾರ್ ಹಂಚಿರುತ್ತೆ.

1. ತುಮಕೂರು ಟೌನ್	15000.	7. ಚಿಕ್ಕನಾಯ್ಕನಹಳ್ಳಿ ತಾ॥	15000.
2. ತುಮಕೂರು ತಾ॥	20000.	8. ಪಾವಗಡ ತಾ॥	10000.
3. ಶಿರಾ ತಾ॥	30000.	9. ಗುಬ್ಬಿ ತಾ॥	20000.
4. ತಿಪ್ಟೂರು ತಾ॥	30000.	10. ಹುಳಿಯಾರು ಸಬ್ ತಾ॥	10000.
5. ಮದ್ದಗಿರಿ ತಾ॥	20000.	11. ಕೊರಟಗೆರೆ ಸಬ್ ತಾ॥	10000.
6. ಕುಣಿಗಲ್ ತಾ॥	20000.		

ಎಲ್ಲರೂ ಅವರ ಶಕ್ತಿಗೆ ಅನುಸಾರವಾಗಿ ಕೊಟ್ಟಲ್ಲಿ ಈ ಹಣ ಒದಗುವುದು ಅಸಾಧ್ಯವಲ್ಲ. ಧನವಂತರೇ ಕೊಡಬೇಕೆಂಬುವುದಿಲ್ಲ. ಬಡವರೂ ಕೂಡ ಕೊಡಬಹುದು. ಸ್ವಲ್ಪ ಮೊಬಲಗುಗಳು ಬಂದು ಒಟ್ಟಿನಲ್ಲಿ ಭಾರಿ ಮೊಬಲಗು ಆಗಬೇಕೆಂಬುವುದನ್ನು ಘನವನ್ನು ಹೊಂದಿದ ವೈಸ್ರಾಯರವರು ಸೂಚಿಸಿರುತ್ತಾರೆ. ಚಿಕ್ಕ ಮೊಬಲಗಾದ 7½ ರೂಪಾಯಿ ಕೊಟ್ಟು 10 ರೂಪಾಯಿ ಸರ್ಟಿಫಿಕೇಟನ್ನು ಪೋಸ್ಟಾಫೀಸಿನಲ್ಲಿ ಪಡೆಯಬಹುದು. ಈರೀತಿ ಬಡವರೂ ಕೂಡ ಸಾಲವನ್ನು ಕೊಡಲು ಮಾರ್ಗವು ಏರ್ಪಟ್ಟಿರುತ್ತೆ.

ಚಿಕ್ಕ ಮೊಬಲಗಿನಿಂದ ಪ್ರಯೋಜನವಿಲ್ಲವೆಂದು ಯೋಚಿಸತಕ್ಕದ್ದಲ್ಲ. "ಹನಿಗೂಡಿ ಹಳ್ಳ" ಎಂಬ ವಾರ್ತೆಯಿಲ್ಲವೆ? ಎಣಿಸಲು ಅಸಾಧ್ಯವಾದಷ್ಟು ಹಣವು ಈ ಯುದ್ಧದಲ್ಲಿ ಖರ್ಚಾಗುತ್ತಲಿದೆ. ಆ ಲೆಕ್ಕವನ್ನು ನೋಡಿದರೆ ಇಂಡಿಯಾ ಗೌರ್ನಮೆಂಟಿನವರು ಕೊಡುವ 150 ಕೋಟಿ ರೂಪಾಯಿಗಳೂ ಕೂಡ ಚಿಕ್ಕ ಮೊಬಲಗೇ ಆಗುತ್ತದೆ. ಎಲ್ಲರೂ ತಮ್ಮ ತಮ್ಮ ಕರ್ತವ್ಯವೆಂದು ಕೊಡಬೇಕೇ ಪರಂತು ಚಿಕ್ಕ ಮೊಬಲಗೆಂದು ಉದಾಸೀನರಾಗಬಾರದು.

ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಉಂಟಾಗಿರುವ ಈ ಅವಶ್ಯಕತೆಯು ಈ ದೇಶದ ಪ್ರಜೆಗಳಿಗೆ ರಾಜಭಕ್ತಿಯನ್ನು ತೋರ್ಪಡಿಸಲು ಸುಸಮಯವನ್ನು ಒದಗಿಸಿರುತ್ತೆಂದು ಶ್ರೀಮದಿಂಡಿಯಾ ಚಕ್ರವರ್ತಿಯವರು ಅಪ್ಪಣೆ ಕೊಡಿಸಿರುವುದನ್ನು ಎಲ್ಲರೂ ನೆನಪಿನಲ್ಲಿಟ್ಟುಕೊಂಡು ಈ ಸಾಲಕ್ಕೆ ಶಕ್ತ್ಯನುಗುಣವಾಗಿ ದ್ರವ್ಯವನ್ನು ಕೊಟ್ಟು ರಾಜಭಕ್ತಿಯನ್ನು ಕಾರ್ಯತಃ ವ್ಯಕ್ತಪಡಿಸಬೇಕೆಂಬುವುದೇ ಕೋರಿಕೆ.

A. SUBRAMANYA IYER,
ಪ್ರೆಸಿಡೆಂಟ್.
ತುಮಕೂರು ಡಿಸ್ಟ್ರಿಕ್ಟ್ ವಾರ್‌ಲೋನ್ ಕಮಿಟಿ.

ಪತ್ರವ್ಯವಹಾರ.

ಕಳೆದ ತಿಂಗಳಲ್ಲಿ ನಡೆದ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂತೋಷಾರ್ಥವಾಗಿ ಎಲ್ಲಾ ಬಾಲಕ ಬಾಲಿಕೆಯರ ಪಾಠಶಾಲೆಗಳಲ್ಲೂ ವಿನೋದವಾದ ಆಟಪಾಟಗಳನ್ನಾಡಿ ಗೆದ್ದವರಿಗೆ ಬಹುಮಾನಗಳೂ ಇತರರಿಗೆಲ್ಲಾ ಮಿಠಾಯಿ ಹಣ್ಣುಗಳೂ ಕೊಡಲ್ಪಟ್ಟುವಷ್ಟೆ. ಇದರಂತೆ ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲು ವಿದ್ಯಾರ್ಥಿಗಳಿಗೆ ಬಹುಮಾನ ವಿನಿಯೋಗ ಕಾಲದಲ್ಲಿ ಸ್ಕೂಲಿನ ಟ್ರಸ್ಟಿಗಳೂ, ಇತರ ದೊಡ್ಡಮನುಷ್ಯರುಗಳೂ ಬರಮಾಡಲ್ಪಟ್ಟಿದ್ದರು. ಮ॥ ರಾ॥ ಗಳಾದ ಅರಮನೆ ಕಂಟ್ರೋಲರ್ ರಾಮಕೃಷ್ಣರಾಯರೂ, ಅಂಬ್ಲೆ ಅಣ್ಣಯ್ಯಪಂಡಿತರೂ ಮತ್ತು ಕೆಲರೂ ಭಾಷಣಗಳನ್ನು ಮಾಡಿದಮೇಲೆ ಸ್ಕೂಲಿನ ಟ್ರಸ್ಟಿಗಳಲ್ಲೊಬ್ಬರಾದ ಅತ್ತಿಗೋಡು ಬಸಪ್ಪನವರು - ಇವರೆಗೆ ಮಾತನಾಡಿರುವ ದೊಡ್ಡಮನುಷ್ಯರುಗಳಿಗಿಂತಲೂ ವಿಶೇಷವಾಗಿ ಮಾತನಾಡಲು ಶಕ್ತನಲ್ಲವಾದರೂ ನಾನು ಶ್ರೀಮನ್ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಆಳ್ವಿಕೆಯನ್ನೂ ಈಗಣ ಮಹಾಸ್ವಾಮಿಯವರ ಆಳ್ವಿಕೆಯನ್ನೂ ನೋಡಿರುತ್ತೇನಾದುದರಿಂದ ನನಗೆ ತಿಳಿದ ಎರಡು ಮಾತುಗಳನ್ನಾಡುತ್ತೇನೆ. ಶ್ರೀಮನ್ ಮುಮ್ಮಡಿ ಕೃಷ್ಣರಾಜಭೂಪರವರು ಮಹಾದೈವಗುರುಭಕ್ತರಾಗಿದ್ದು ಜನೋಪಯುಕ್ತವಾದ ಅನೇಕ ಧರ್ಮಕಾರ್ಯಗಳನ್ನು ಮಾಡಿ ಅವುಗಳಲ್ಲಿ ಕೆಲವು ಸಂಪೂರ್ಣವಾಗಲಿಲ್ಲವಾಗಿ ಈಗ ಶ್ರೀಮನ್ ನಾಲ್ವಡಿ ಕೃಷ್ಣರಾಜಭೂಪರಾಗಿ ಅವತರಿಸಿ ಆ ಸತ್ಸಂಕಲ್ಪಗಳನ್ನೆಲ್ಲಾ ನೆರವೇರಿಸುತ್ತ ತಮ್ಮ ಪ್ರಜೆಗಳನ್ನೆಲ್ಲಾ ವಿದ್ಯಾವಿವೇಕ ಸಂಪನ್ನರನ್ನಾಗಿ ಮಾಡಲು ಅಹರ್ನಿಶಿಯಲ್ಲೂ ಶ್ರಮಿಸುತ್ತ ಜಗದ್ವಿಖ್ಯಾತರಾಗಿರುತ್ತಾರೆ - ಎಂದು ಮೊದಲಾಗಿ ಸ್ವಾರಸ್ಯವೂ ಕಾಲೋಚಿತವೂ ಆದುಪನ್ಯಾಸವನ್ನು ಮಾಡಿದರು. ಒಬ್ಬ ಪ್ರತ್ಯಕ್ಷದರ್ಶಿ.

ಪ್ರಸಿದ್ಧವಾದ ಜಾನುವಾರುಗಳ ಕಾಲುವಡಕದ ಎಣ್ಣೆ

ಇದು ಜಾನುವಾರುಗಳಿಗೆ ಕಾಲುವಡಕ, ಬಾಯಿ ಹುಣ್ಣು ಇನ್ನೂ ಇತರ ವಿಧವಾದ ಘಾಯಗಳಿಗೆ ಶ್ರೇಷ್ಠವಾದ ವ್ರಣಹಾರಿ ಔಷಧ. 2

ಸೀಸೆ 1 ಕ್ಕೆ 1—0—0, 0—12—0, 0—6—0.

ವಿಳಾಸ:—ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ॥

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇವೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲವಾದದ್ದು. ಪ್ರತಿ ಸೀರೆಗೂ ಒಂದೊಂದು ಗಿಲ್ಟಿನ ರೋಜಾ ಹೂವು ಬಹುಮಾನ ಕೊಡುವೆವು.

		ಮದನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಸೋರಮಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೋಪರ್‌ಜಾನ್ ಸೀರೆ	... 5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾನಿಕಾಯಿ ಸೀರೆ	... 3.0.0	ಜರಿನ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ	... 5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ಷಾಣೆ,
30 ಸಾಹುಕಾರಪೇಟೆ, ಮದ್ರಾಸ್.

ಮಕ್ಕಳ ತಲೆ ಕಜ್ಜಿ ಎಣ್ಣೆ.

ಮಕ್ಕಳ ತಲೆಯಲ್ಲಿ ಕಜ್ಜಿಯಾಗಿ ಹೇನು ಹೆಚ್ಚಿ ನಿರ್ವಾಹವಿಲ್ಲದೆ ಕೂದಲು ತೆಗೆಯಬೇಕಾಗುತ್ತೆ. ಈ ಎಣ್ಣೆ ಒಂದುಸಾರಿ ಹಚ್ಚಿದಕೂಡಲೇ ಹೇನು ಉದುರಿ ಕಜ್ಜಿ ಮಾಯವಾಗುತ್ತೆ. ಸೀಸೆ 1 ಕ್ಕೆ 1—0—0.

ಪಂಚತಿಕ್ತಕಷಾಯ. 2

(ಇಂಡಿಯಾ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಭಂಗಾರದ ಪದಕಹೊಂದಿದೆ)

ಎಂಥಾ ಕಠಿಣಜ್ವರಕ್ಕೂ 2 ದಿನದ ಉಪಯೋಗದಲ್ಲಿ ನಿಶ್ಶೇಷ ಗುಣ ಕೊಡುತ್ತೆ. ಸೀಸೆ 1 ಕ್ಕೆ 0–12–0. ಡಜನ್ 1 ಕ್ಕೆ 7–8–0.

ವಿಳಾಸ:–ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ॥

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 37

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾದಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

೧೯೧೮ ನೆಯ ಇಸವಿ ಜುಲೈ ತಾ॥ ೧೪ ರಿಂದ ೧೯೧೮ ನೆಯ ಜುಲೈ ತಾ॥ ೨೦ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಷಾಢ ಶು॥ ಷಷ್ಠಿಯಿಂದ ಆಷಾಢ ಶು॥ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿ.ಕ
14	ಭಾನು	ಷಷ್ಠಿ	30-24	ಉಫ	29.2	31
15	ಸೋಮ	ಸಪ್ತ	35-34	ಹಸ್ತ	35-35	32
16	[1] ಮಂಗಳ	ಅಷ್ಟ	40-30	ಚಿತ್ತ	42-10	1
17	ಬುಧ	ನವಮಿ	45-4	ಸ್ವಾತಿ	48-14	2
18	ಗುರು	ದಶಮಿ	48-47	ವಿಶಾಖ	53-35	3
19	[2] ಶುಕ್ರ	ಏಕಾ	51-28	ಅನೂರಾಧ	57-46	4
20	[3] ಶನಿ	ದ್ವಾದ	52-47	ಜ್ಯೇಷ್ಠ	60	5

(1) ದಕ್ಷಿಣಾಯನ ಪುಣ್ಯಕಾಲ. (2) ಸರ್ವತ್ರ ಪ್ರಥಮೈಕಾದಶೀ, ಗೋಪದ್ಮವ್ರತಂ, ಚಾತುರ್ಮಾಸ್ಯವ್ರತಾರಂಭ, ಆದಿ ಶುಕ್ರವಾರಂ. (3) ಶಯನದ್ವಾದಶಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀನ್ ಎಲಿಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವ ನಕ್ಷತ್ರಮೋಹರಾಜೀಯಾಸ್ ॥
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತಿ ಲಿಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಜುಲೈ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೨೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮುತ್ತಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆ ಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅತ್ತರದಾನಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
31 ೩, ಇರುಳಪ್ಪನವೀದಿ, ಮದರಾಸ್



ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹುಂಡಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 32

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲಿಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೫೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ಎಂ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಆರ್ಯವೈದ್ಯಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
16 ಆನಂದ ಬುಕ್‌ಡಿಪೋ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧. ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ. ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ನೋಡಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚೆನ್ನಾಗಿ ಲಕ್ಷವಿಟ್ಟಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
34 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

೧) ರಾ॥ ಬ॥ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅತ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨). ಸ್ವಕರ್ತವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಅಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಳ್ಳೆಯತನ. ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

10 ವಿಳಾಸ—ಎ. ಎ. ಹರೇಕಲ್ ದಾವಣಗೆರೆ.

ವಿಜ್ಞಾಪನೆ.

ಯುದ್ಧವು ಈಗಲೇ ಮುಗಿಯುವ ಚಿಹ್ನೆಯು ತೋರುವುದಿಲ್ಲ. ಪದಾರ್ಥಗಳ ಬೆಲೆಯೆಲ್ಲಾ ಹೆಚ್ಚಿರುವುದು ಸರ್ವರಿಗೂ ಗೊತ್ತೇ ಇದೆ. ತಥಾಪಿ ಹೊರಗಣಿಂದ ಬಂದಲ್ಲದೆ ಗತ್ಯಂತರವಿಲ್ಲದ ಕಾಗದದ ಬೆಲೆಯು. ಈಗ ೧ ಕ್ಕೆ ೫ ರಷ್ಟು ಏರಿಹೋಗಿದೆ. ಅಷ್ಟು ಕೊಟ್ಟರೂ ಬೇಕಾದ ಕಾಗದವು ಸಿಕ್ಕುವುದೇ ದುರ್ಲಭವಾಗಿದೆ. ಬೊಂಬಾಯಿ ಮದ್ರಾಸುಗಳಲ್ಲಿ ಅಷ್ಟೊ ಇಷ್ಟೊ ಸಿಕ್ಕಿದರೂ ಅಲ್ಲಿಂದ ಮೈಸೂರಿಗೆ ಬಂದು ಸೇರಲು ಹೊಗೆಬಂಡಿಗಳ ಕೊರತೆಯಿಂದ ಅನುಕೂಲವಿಲ್ಲವಾಗಿದೆ. ಈ ಕಾರಣದಿಂದಲೇ ವಿವರ್ಣವಾದ ಕಾಗದಗಳನ್ನು ನಾವು ಕಳೆದ ೩-೪ ಸಂಚಿಕೆಗಳಿಂದಲೂ ಉಪಯೋಗಿಸಿಕೊಳ್ಳಬೇಕಾಯಿತು. ಈ ಬೆಲೆ ಹೆಚ್ಚುಗೆಯಿಂದ ಪತ್ರಿಕಾ ಮುದ್ರಣದಲ್ಲಿ ನಮಗೆ ಬಂದೆರಡು ವರ್ಷಗಳಿಂದ ವಿಪರೀತವಾಗಿ ನಷ್ಟ ತಟ್ಟುತ್ತಿದ್ದರೂ ಕಟ್ಟಿಕೊಂಡ ಅಭಿಮಾನಕ್ಕಾಗಿ ಒದ್ದಾಡುತ್ತಿರಬೇಕಾಗಿದೆ. ಈ ವಿಷಮಸಮಯದಲ್ಲಿ ಅನೇಕ ಪತ್ರಿಕಾಕರ್ತರು ತಮ್ಮ ಪತ್ರಿಕೆಗಳ ವರ್ಗಣಿಯನ್ನು ನಿರ್ವಾಹವಿಲ್ಲದೆ ಹೆಚ್ಚಿಸಿದರು. ನಾವು ಹಾಗೆಮಾಡದೆ ಇದುವರೆಗೂ ಸೈರಿಸಿಕೊಂಡೆವು. ಈಗ ಬಹಳ ದುರ್ಭರವಾಗಿಬಂದಿರುವುದು. ಆದುಕಾರಣ ಇಂದಿನಿಂದ ವರ್ಗಣಿಯ ಹಣವನ್ನು ವರ್ಷ ೧ ಕ್ಕೆ ೧ ರೂ. ನಿಂದ ೧-೬-೦ ಗೆ ಹೆಚ್ಚಿಸಿರುತ್ತೇವೆ. ಪರಸ್ಥಳದವರು ಅಂಚೆವೆಚ್ಚ ಸೇರಿ ೨-೪-೦ ರೂ. ಗಳನ್ನು ಕೊಡಬೇಕಾಗುವುದು. ನಾವು ವರ್ಗಣಿಗಾಗಿ ಕಳುಹಿಸುವ ವಿ. ಪಿ. ಗಳನ್ನೆಲ್ಲಾ ಈ ಲೆಕ್ಕವನ್ನನುಸರಿಸಿಯೇ ಇನ್ನು ಮುಂದೆ ಕಳುಹಿಸುವೆವು. ಮನಿಯಾರ್ಡರ್ ದ್ವಾರಾ ಅವರಾಗಿ ವರ್ಗಣಿಯನ್ನು ಕಳುಹಿಸುವವರೂ ಈ ಲೆಕ್ಕವನ್ನೇ ಅನುಸರಿಸಬೇಕೆಂದು ಕೋರುತ್ತೇವೆ. ಭಾಷಾಭಿಮಾನಿಗಳೂ, ಮತಾಭಿಮಾನಿಗಳೂ, ದೇಶಾಭಿಮಾನಿಗಳೂ, ಪತ್ರಿಕಾಭಿಮಾನಿಗಳೂ ಸಹ ಈಗಣ ವಿಷಮಸ್ಥಿತಿಯ ಕಡೆಗೆ ಗಮನಿಸಿ, ಅಲ್ಪಮಾತ್ರವಾಗಿ ಚಂದಾ ಹೆಚ್ಚಿಸಿದರೂ ಇದುವರೆಗಣಂತೆಯೇ ಉದಾರಭಾವದಿಂದ ಪತ್ರಿಕೆಯನ್ನು ಪೋಷಿಸಿಕೊಂಡು ಹೋಗುವವರಾಗಬೇಕೆಂದು ಪ್ರಾರ್ಥನೆ.

ಪತ್ರಿಕರ್ತ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜುಲೈ ತಾ|| ೨೧ ನೆಯ ಭಾನುವಾರ.

ಮ್ಯುನಿಸಿಪಲ್ ಕೌನ್ಸಿಲರ ಆರಿಸುವಿಕೆಯು.

"Separate sections of inhabitants are already given social representation, and my hope is that with extended franchise and a larger scope for elections a large number will associate themselves with local administration and all communities on whose behalf you speak will be more largely represented."

("ಪಂಗಡಗಳ ಬೇರೆ ಬೇರೆ ಆರಿಸುವಿಕೆಗೆ ಈ ಮೊದಲೇ ಏರ್ಪಾಡು ಮಾಡಲ್ಪಟ್ಟಿದೆ. ಓಟು ಕೊಡುವವರ ಸಂಖ್ಯೆಯನ್ನು ಹೆಚ್ಚಿಸಿರುವುದರಿಂದ ಆರಿಸಲ್ಪಡುವುದಕ್ಕೆ ನಿಲ್ಲುವವರೂ ಹೆಚ್ಚುವರು. ತಕ್ಕಷ್ಟು ಪ್ರಾತಿನಿಧ್ಯವು ಕ್ರಮಕ್ರಮವಾಗಿ ನಿಮ್ಮ ಎಲ್ಲಾ ಪಂಗಡದವರಿಗೂ ಸಿಕ್ಕೇ ಸಿಕ್ಕುವುದು.")

ಈ ಮೇಲೆ ಕಂಡ ವಾಕ್ಯವು ಹಿಂದುಳಿದ ಜನವರ್ಗಗಳ ವಿಜ್ಞಾಪನ ಪತ್ರಕ್ಕೆ ಶ್ರೀಮನ್ಮಹಾರಾಜರು ಉತ್ತರ ಕೊಡುವ ಸಮಯದಲ್ಲಿ ಅಪ್ಪಣೆ ಕೊಡಿಸಿದುದಾಗಿರುತ್ತದೆ. ಇದರಿಂದ ನಿಮ್ಮ ಇಷ್ಟಬಂದವರಿಗೆ ನೀವು ಓಟುಗಳನ್ನು ಕೊಟ್ಟು ನಿಮಗೋಸ್ಕರ ಸರಿಯಾಗಿ ಕೆಲಸ ಮಾಡತಕ್ಕ ಪ್ರತಿನಿಧಿಗಳನ್ನು ನೀವು ಸ್ವಾತಂತ್ರ್ಯದಿಂದ ಆರಿಸಿಕೊಂಡು, ನಿಮ್ಮ ಎಲ್ಲಾ ಜನವರ್ಗಗಳಿಗೂ ಮ್ಯುನಿಸಿಪಲ್ ಸಂಘ ಮೊದಲಾದುವುಗಳಲ್ಲಿ ಪ್ರಾತಿನಿಧ್ಯವಿರುವಂತೆ ಮಾಡಿಕೊಳ್ಳುವಲ್ಲಿ ಅಡ್ಡಿಯಿಲ್ಲವೆಂದು ಹೇಳಿ ತಂತಮ್ಮ ಪ್ರಾತಿನಿಧ್ಯವನ್ನು ಕಾಪಾಡಿಕೊಳ್ಳುವ ಭಾರವನ್ನು ಪ್ರಜೆಗಳಿಗೇ ಅವರು ವಹಿಸಿಕೊಟ್ಟಿರುತ್ತಾರೆ. ಆದುಕಾರಣ ಅದನ್ನು ಸದುಪಯೋಗ ಮಾಡಿಕೊಂಡು ಸಾರ್ಥಕಪಡಿಸಿಕೊಳ್ಳುವ ಕರ್ತವ್ಯವು ಪ್ರಜೆಗಳಿಗೇ ಸೇರಿರುತ್ತದೆ. ಈಗ ರಾಜಧಾನಿಯ ಮ್ಯುನಿಸಿಪಲ್ ಸಂಘಕ್ಕೆ ಸಭ್ಯರನ್ನು ಹೊಸದಾಗಿ ಆರಿಸುವ ಕಾಲವು ಸಮೀಪಿಸಿದೆ. ಬರುವ ಆಗಸ್ಟ್ ತಾ|| ೧ ರಿಂದ ೪ ದಿನಗಳವರೆಗೆ ಈ ಕೆಲಸವು ನಡೆಯುವುದಾಗಿದೆ. ಈಗಾಗಲೇ ಹಾದಿಸ ಮುಂದೆ ಬೆಕ್ಕು ಸುಳಿದಾಡುವಂತೆ ನೆಂಬರುಗಳಾಗಬೇಕೆಂದಿರುವ ಉಮೇದುವಾರರುಗಳು ಓಟು ಕೊಡತಕ್ಕವರನ್ನು ಪರಮಮಿತ್ರರಂತೆ ಅನುಸರಿಸಲುಪಕ್ರಮಿಸಿರುತ್ತಾರೆ. ಇಂಥ ಸಮಯದಲ್ಲಿ ಪ್ರಜೆಗಳು ಎಚ್ಚರಿಕೆಯಿಂದ ನಡೆದುಕೊಳ್ಳುವುದು ಅತ್ಯವಶ್ಯಕ.

ಮ್ಯುನಿಸಿಪಾಲಿಟಿಯು ಆಯಾ ಊರಿನ ಕಾರ್ಯಭಾರವನ್ನು ನಿರ್ವಹಿಸುವ ರಾಜ್ಯಭಾರವಾಗಿರುತ್ತದೆ. ಊರಿನ ಆರೋಗ್ಯರಕ್ಷಣೆ, ಶುಚೀಕರಣ, ಬೆಳಕಿನ ಏರ್ಪಾಟು, ಮಾರ್ಗಶುದ್ಧಿ, ವೈದ್ಯಸಹಾಯ, ನೀರಿನ ಅನುಕೂಲ್ಯ—ಮೊದಲಾದ ಕಾರ್ಯಭಾರಗನ್ನು ನಿರ್ವಹಿಸುವುದಕ್ಕಾಗಿಯೇ ಅದು ಇರುವುದು. ಅದೆಲ್ಲಾ ಪುರಜನರ ಸ್ವಂತದ ಕೆಲಸವೇ ಹೊರತು ಬೇರೆಯಲ್ಲ. ಅದಕ್ಕಾಗಿಯೇ ಇದರ ವೆಚ್ಚಕ್ಕೆ ತಗಲುವ ಹಣವನ್ನು ಪ್ರಜೆಗಳು ಮನೆಗಂದಾಯ ದೀಪದ ಕಂದಾಯ ನೀರಿನ ಕಂದಾಯ ಗೇಟಿನ ಕಂದಾಯ ಉದ್ಯೋಗದ ಕಂದಾಯ ಸುಂಕ ಮೊದಲಾದುವುಗಳ ರೂಪದಿಂದ ಕೊಟ್ಟು ಒದಗಿಸುತ್ತಿರುವುದು. ಪುರಜನರೆಲ್ಲರೂ ಈ ಕಾರ್ಯಭಾರವನ್ನು ಏಮರ್ಶಾಪೂರ್ವಕವಾಗಿ ನಡೆಯಿಸುವುದು ಅಸಾಧ್ಯವಾದುದರಿಂದ ಅವರೆಲ್ಲರೂ ತಮಗೆ ಪ್ರತಿನಿಧಿತ್ವೇನ ಕೆಲವರನ್ನು ಆರಿಸಿಕೊಟ್ಟು ಅವರಿಂದ ತಮ್ಮ ಊರಕೆಲಸವನ್ನು ನಿರ್ವಾಹಮಾಡಿಸುವುದಕ್ಕಾಗಿಯೇ ಈ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯೆಂಬುದು ಏರ್ಪಟ್ಟಿದೆ.

ಈ ಕೌನ್ಸಿಲು ಪುರಜನರ ಪ್ರತಿನಿಧಿಯಾದುದರಿಂದ ಇದಕ್ಕೆ ಒಂದು ಜಾತಿ ಒಂದು ಕುಲ ಒಂದು ಮತವೆಂಬ ನಿರ್ದೇಶವೇನೂ ಇಲ್ಲ. ಊರು ಸರ್ವಸಾಮಾನ್ಯವಾಗಿರುವಂತೆ ಈ ಕೌನ್ಸಿಲೂ ಸರ್ವಸಾಮಾನ್ಯವಾಗಿರಬೇಕು. ಇದರ ಕಾರ್ಯಗಳು ನಿಷ್ಪಕ್ಷಪಾತವಾಗಿ ಸರ್ವಸಾಮಾನ್ಯವಾಗಿ ನಡೆಯುವಂತಿರಬೇಕು. ಈಗಳಾದರೊ ನಮ್ಮ ಪ್ರಭುತ್ವದವರು ಈ ಕೌನ್ಸಿಲುಗಳ ಅಧಿಕಾರ ಪರಿಮಿತಿಯನ್ನು ಹೆಚ್ಚಿಸಿಕೊಟ್ಟಿರುತ್ತಾರೆ. ಮತ್ತೂ ಇವನ್ನು ಸಂಪೂರ್ಣ ಪ್ರಜಾಸ್ವಾತಂತ್ರ್ಯಕ್ಕೇ ವಹಿಸಿ ನಿರ್ವಾಹಗೊಳ್ಳುವಂತೆ ಏರ್ಪಡಿಸಿರುತ್ತಾರೆ. ಇಷ್ಟು ವ್ಯಾಪಕತೆಯೂ ಸಾಮರ್ಥ್ಯವೂ ಅನುಗ್ರಹಿಸಲ್ಪಟ್ಟಿರುವ ಈ ಸಂಘಗಳು ಸರ್ವಪ್ರಜಾ ಪ್ರಾತಿನಿಧ್ಯವುಳ್ಳವುಗಳಾಗದಿದ್ದರೆ ಅವುಗಳ ಕಾರ್ಯಭಾಗವು ಸರ್ವಹಿತಂಕರವಾಗಿ ನಡೆಯಲು ಅವಕಾಶವಿರಲಾರದು. ಬಾಯ್ಮಾತಿನಲ್ಲಿ ಘನವೈರಾಗ್ಯವನ್ನು ತೋರಿಸುವ ಕಪಟಪ್ರಾಜ್ಞರುಗಳೇ ಹೆಚ್ಚಿರುವ ಈಗಣ ಕಾಲದಲ್ಲಿ ಕುಲ ಜಾತಿ ಮತಾಭಿಮಾನವು ಬಹು ಪಕ್ಷಪಾತಕ್ಕೆ ಅವಕಾಶವನ್ನುಂಟುಮಾಡುತ್ತಿರುವುದು. ಅದಕ್ಕೆಡೆಯಿಲ್ಲದಂತೆ ಸರ್ವರಿಗೂ ಸಮನಾದ ನ್ಯಾಯವೂ ನಿಷ್ಪಕ್ಷಪಾತ ಕಾರ್ಯಾಚರಣೆಯೂ ಈ ಸಂಘಗಳಿಂದ ಆಗಬೇಕಾಗಿದ್ದರೆ ಬೇರೆ ಬೇರೆ ಜನವರ್ಗಗಳ ಪ್ರತಿನಿಧಿಗಳೆಲ್ಲಾ ಇವುಗಳಲ್ಲಿ ಇದ್ದೇ ತೀರಬೇಕು. ಹಾಗಲ್ಲದೆ ಹೋಗಿರುವ ಕೌನ್ಸಿಲುಗಳಲ್ಲಿ ಎಷ್ಟು ಪಕ್ಷಪಾತವೂ ಪ್ರಜಾಪೀಡೆಯೂ ಉಂಟಾಗಿರುವುವೆಂಬುದನ್ನು ಇದುವರೆಗೆ ಸ್ವಾನುಭವದ ಮೂಲಕ ಅನೇಕರು ಕಂಡುಕೊಂಡಿದ್ದಾರೆ. ಅಂಥ ಅನರ್ಥವು ತಟ್ಟದಂತೆ ಮಾಡುವುದಕ್ಕೆ ಉಪಾಯವಾವುದೆಂದರೆ—ತಮ್ಮಗಳ ನಿಜವಾದ ಅಭಿಮತವನ್ನನುಸರಿಸಿ ಕಾರ್ಯಮಾಡತಕ್ಕವರಾರೋ ಅಂಥ ನಂಬುಗೆಗಾಸ್ಪದರಾದ ಜನರನ್ನೇ ತಮ್ಮ ಪ್ರತಿನಿಧಿಗಳನ್ನಾಗಿ ಆರಿಸುವುದಕ್ಕೆ ನಿರಾಕ್ಷಿಣ್ಯವಾಗಿ ನಿಂತುಕೊಂಡು, ಅಂಥವರಿಗೆ ಓಟು ಕೊಡುವುದೇ ಆಗಿರುತ್ತದೆ. ಇತರರು ಮನೆಬಾಗಿಲಿಗೆ ಬಂದು ಕೈಮುಗಿದ ಮಾತ್ರದಿಂದಲೇ ತಾವು ಕೃತಾರ್ಥರಾದೆವೆಂದು ತಿಳಿದು, ಅಂಥವರ ಬಾಹ್ಯೋಪಚಾರೋಕ್ತಿಗಳಿಗೆ ಮರುಳಾಗಿ, ದೂರದ ವಿಚಾರವಿಲ್ಲದೆ, ಸ್ವಾರ್ಥೈಕಪರರೂ ಆತ್ಮಪ್ರತಿಷ್ಠಾಕುತುಕರೂ ಆದ ಜನರಿಗೆ ದಾಕ್ಷಿಣ್ಯದಿಂದ ಓಟುಗಳನ್ನು ಕೊಟ್ಟುಬಿಟ್ಟರೆ ತಮ್ಮ ಕೈಹಗ್ಗವನ್ನು ಕೊಟ್ಟು ತಾವೇ ಕಟ್ಟುಹಾಕಿಸಿಕೊಳ್ಳಬೇಕಾಗುವುದು. ಓಟನ್ನು ಕೊಡಬೇಕಾದವರೆಲ್ಲರೂ ಇದನ್ನು ಅವಶ್ಯಕವಾಗಿ ಗಮನಿಸಬೇಕೆಂದು ಸೂಚಿಸುತ್ತೇವೆ. ಮತ್ತು ಸರ್ಕಾರದ ಘನೋದ್ದೇಶವನ್ನೂ ಶ್ರೇಷ್ಠವಾದ ಪೌರಕಾರ್ಯವನ್ನೂ ನೆರವೇರಿಸಲು ಶಕ್ತಿಯುಳ್ಳ ಬೇರೆಬೇರೆ ಜನವರ್ಗದ ಮುಂದಾಳುಗಳು ಈ ಕಾಲದಲ್ಲಿ ಕೌನ್ಸಿಲರಾಗಲು ಮುಂದೆನಿಂತುಕೊಳ್ಳುವುದು ಕೂಡ ಅವಶ್ಯಕವಾಗಿರುತ್ತದೆ. ಅಂಥವರು ಸೋಂಬೇರಿತನದಿಂದಲೋ ಔದಾಸೀನ್ಯದಿಂದಲೋ ಮುಂದಕ್ಕೆ ಬರದೆಹೋದರೆ ಸ್ವಾರ್ಥೈಕಸಾಧಕರೂ ಪ್ರತಿಷ್ಠಾಕಾಮಿಗಳೂ ಅಶಕ್ತರೂ ಸಹ ಕೌನ್ಸಿಲಿನಲ್ಲಿ ಹೆಚ್ಚಿ ಕಾರ್ಯಲೋಪ ನ್ಯಾಯಲೋಪಗಳಿಗೆ ಅವಕಾಶವಾಗಬಹುದು. ಆದುಕಾರಣ, ಪುರದ ಮಹಾಜನರು ಮೇಲೆ ವಿವರಿಸಿರುವ ಶ್ರೀಮನ್ಮಹಾರಾಜರವರ ಹಿತೋಪದೇಶವನ್ನು ಗಮನಿಸಿಯೂ, ಇದುವರೆಗಣ ಸ್ವಾನುಭವಗಳನ್ನು ಪರ್ಯಾಲೋಚಿಸಿಯೂ, ತಮ್ಮ ಸ್ಥಳಿಕ ಸರ್ಕಾರದ ಕಾರ್ಯಗಳು ನ್ಯಾಯಸಮ್ಮತವಾಗಿ ನಿಷ್ಪಕ್ಷಪಾತವಾಗಿ ನಡೆಯುವಂತೆ ಮಾಡುವುದಕ್ಕಾಗಿಯೂ ಸಹ ಎಲ್ಲಕ್ಕೂ ಹದಿಯಾಗಿರುವ ಕೌನ್ಸಿಲಿನ ನಿರ್ಮಾಣವನ್ನು ಸರ್ವಜನಾಂಗಪ್ರತಿನಿಧಿತ್ವದಿಂದ ಕೂಡಿ ಸಮರ್ಥವಾಗಿಯೂ ಪರಿಪುಷ್ಟವಾಗಿಯೂ ಇರುವಂತೆ ಮಾಡುವಲ್ಲಿ ಜಾಗರೂಕರಾಗಿರಬೇಕೆಂದು ಒತ್ತಿ ಹೇಳುವೆವು.

ಪ್ರತ್ಯೇಕ ಪ್ರಾತಿನಿಧ್ಯ, ಮತ್ತೂ ಸರ್ ವಾಲಂಟೈನ್ ಚಿರೋಲ್‌ರವರು.

ಈಗಣ ಮಾಂಟೆಗ್ ಚೆಲ್ಮ್ಸ್‌ಫರ್ಡ್ ರಾಜಕೀಯ ಸುಧಾರಣಾ ವಿಧಾನವು ಲಯನಲ್ ಕರ್ಟಿಸ್‌ರವರು ಇದಕ್ಕೆ ಮುಂಚೆಯೇ ಸೂಚಿಸಿದ್ದ ವಿಧಾನಗಳಿಗೆ ಅನುಗುಣವಾಗಿದೆಯೆಂದು ಭಾವಿಸಲ್ಪಡುತ್ತಿದೆ. ಹಿಂದೆ ಲಾರ್ಡ್ ಮಾರ್ಲೆ ಮಿಂಟೋ ಸಂಸ್ಕರಣಗಳು ಭರತಖಂಡಕ್ಕೆ ಕೊಡಲ್ಪಡುವಾಗ ಸರ್ ವಾಲಂಟೈನ್ ಚಿರೋಲರವರು ಅದಕ್ಕೆ ಮುಂಚೆ ಸೂಚಿಸಿದ್ದ ವಿಧಾನಗಳು ಅನುಸರಿಸಲ್ಪಟ್ಟಿದ್ದುವು. ಅಂಥ ಚಿರೋಲ್‌ರವರು ಈಗ ಈ ನೂತನ ಸಂಸ್ಕರಣ ವಿಧಾನವನ್ನು ನೋಡಿ ತಮ್ಮ ಅಭಿಪ್ರಾಯವನ್ನು ಟೈಮ್ಸ್ ಪತ್ರಿಕೆಗೆ ಬರೆದಿರುವುದರಲ್ಲಿ ಪ್ರತ್ಯೇಕಸಂಘ ಪ್ರಾತಿನಿಧ್ಯವನ್ನು ಕುರಿತು ಹೀಗೆ ಹೇಳಿರುತ್ತಾರೆ—"ಈ ನಿವೇದಿಕೆಯಲ್ಲಿ ಪ್ರತ್ಯೇಕಸಂಘ ಪ್ರಾತಿನಿಧ್ಯಕ್ಕೆ ಅನವಶ್ಯಕವಾದ ತಡೆಯು ಏರ್ಪಡಿಸಲ್ಪಟ್ಟಿದೆ. ಪ್ರತ್ಯೇಕಪ್ರಾತಿನಿಧ್ಯವು ಇಲ್ಲದೆ ಹೋದರೆ ಮದ್ರಾಸಿನಲ್ಲಿರುವ ಬ್ರಾಹ್ಮಣೇತರರಿಗೂ, ದಕ್ಷಿಣದಲ್ಲಿರುವ ಲಿಂಗಾಯತರಿಗೂ ಸಿಕ್ಕರಿಗೂ ನಿಯೋಜನಮೂಲಕವಾದ ಪ್ರಾತಿನಿಧ್ಯವು ಹೇಗೆ ಲಭಿಸುವುದೋ ನಾನು ಗ್ರಹಿಸಲಾರೆನು. ವಕೀಲರ ಸಂಖ್ಯೆಯೇ ಶಾಸನ ಸಭೆಯಲ್ಲಿ ಹೆಚ್ಚಾಗಿರುವುದರಿಂದ ಬೇಸಾಯಗಾರರಿಗೂ ಭೂಸ್ವಾಮಿಗಳಿಗೂ ಎಷ್ಟು ನಷ್ಟಕರವಾಗಿರುವುದೋ ಅದನ್ನು ವಿವರಿಸಬೇಕಾಗಿಲ್ಲ" ಎಂದು ಹೇಳಿರುತ್ತಾರೆ.

ಬಾಧ್ಯತಾಯುತಪರಿಪಾಲನ ಸೌಕರ್ಯವನ್ನು ಹೊರಲು ಸಕಲ ಪ್ರಜೆಗಳನ್ನೂ ಅನೆಮಾಡುವ ಉದ್ದೇಶದಿಂದಲೇ ಈಗಣ ಸಂಸ್ಕರಣಗಳು ತಾತ್ಕಾಲಿಕವಾಗಿ ಏರ್ಪಡಿಸಲ್ಪಟ್ಟಿವೆಯೆಂದು ತಮ್ಮ ನಿವೇದಿಕೆಯಲ್ಲಿ ಹೇಳಿಕೊಂಡಿರುವ ವೈಸ್ರಾಯರೂ ಸ್ಟೇಟ್ ಸೆಕ್ರೆಟರಿಯವರೂ ಸಹ ಈ ದೇಶದ ಮುಖ್ಯಾಲು ಮೂಲ [illegible] ಪ್ರಜೆಗಳೆಲ್ಲಾ ಪ್ರತ್ಯೇಕಪ್ರಾತಿನಿಧ್ಯ ಸೌಕರ್ಯಪ್ರಾಪ್ತಿಯಿಂತಲ್ಲದೆ ರಾಜಕೀಯಕಾರ್ಯಗಳಲ್ಲಿ ತಕ್ಕಷ್ಟು ಭಾಗವನ್ನು ಹೇಗೆ ಹೊಂದುವರೆಂಬುದನ್ನು ಯೋಚಿಸದೆ ಹೋಗಿರುವುದು ಆಶ್ಚರ್ಯವಾಗಿದೆ. ಪ್ರಾಂತಿಕ ಸರ್ಕಾರದವರೂ ಮತ್ತೂ ಹಿಂದುಳಿದ ಪ್ರಜಾವರ್ಗಗಳೂ ಸಹ ಈ ವಿಷಯದಲ್ಲಿ ತಕ್ಕ ತಿಳಿವಿಕೆಯನ್ನು ಮಂತ್ರಿಮಂಡಲಕ್ಕೂ ವೈಸ್ರಾಯರಿಗೂ ಸಹ ಕೊಡುವುದಕ್ಕೆ ತಕ್ಕ ದಾರಿಯಿಂದ ನಡೆದುಕೊಂಡರೆ ಫಲಿಸದೆ ಹೋಗಲಾರದು. ಇಂಥ ಫಲಪ್ರಾಪ್ತಿಗೆ ದೃಢಪ್ರಯತ್ನವೇ ಮುಖ್ಯ ಸಾಧನವೆಂಬುದನ್ನು ಯಾರೂ ಮರೆಯಬಾರದು. ಮತ್ತೂ ಭರತಖಂಡದ ಸ್ವರಾಜ್ಯವಾದಿಗಳು ಪ್ರತ್ಯೇಕಪ್ರಾತಿನಿಧ್ಯಕ್ಕೆ ತಮ್ಮ ಪ್ರತಿಕೂಲಭಾವವನ್ನು ಬಿಟ್ಟು, ತಮ್ಮ ಮೂಲೋದ್ದೇಶಕ್ಕೆ ಸರ್ವಪ್ರಜಾನುಮೋದನ ಸಾಹಾಯ್ಯವನ್ನು ಪಡೆದು ಭರತಖಂಡವೆಲ್ಲಾ ಐಕಕಂಠ್ಯದಿಂದ ಸ್ವರಾಜ್ಯಸಾಧನೋದ್ದೇಶದಲ್ಲಿ ನಿಮಗ್ನವಾಗುವಂತೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುವವರಾಗಬೇಕು. ಮಹಮ್ಮದೀಯರ ಪ್ರಾತಿನಿಧ್ಯಕ್ಕೆ ರಾಷ್ಟ್ರೀಯ ಮಹಾಸಭೆಯವರು ಒಪ್ಪಿದಂತೆ ಹಿಂದುಳಿದ ಜನವರ್ಗಗಳ ಪ್ರಾತಿನಿಧ್ಯಕ್ಕೂ ಒಪ್ಪಿದಲ್ಲದೆ ದ್ವೈಧೀಭಾವವು ನಿರ್ಮೂಲವಾಗಲಾರದು.

ಯುದ್ಧವಾರ್ತೆಯು.

ಕಳೆದ ವಾರದಲ್ಲೂ ಮಿತ್ರಮಂಡಲಿ ಸೈನ್ಯಗಳು ಹಲವು ಕಡೆಗಳಲ್ಲಿ ಶತ್ರುಸ್ಥಾನಗಳನ್ನು ವಶಪಡಿಸಿಕೊಂಡು ಮುಂದಕ್ಕೆ ಸಾಗಿವೆ. ಫ್ರೆಂಚರು ಎಯಿನೀ ನದಿಗೆ ದಕ್ಷಿಣದಲ್ಲಿ ಲಾಗ್ರಿಲ್ಲಿ ಬಯಲನ್ನೂ, ಸಾವಿಗ್ನಿಯ ಬಡಗಲಿನಲ್ಲಿರುವ ಕ್ವಾರೀಲನ್ನೂ ಅದರ ಮೂಡಲಿನ ಬಯಲನ್ನೂ, ಲಾಂಗ್‌ಪಾಂಟೇ ಗ್ರಾಮವನ್ನೂ, ಚಾವಾಚೇ ಹೊಲವನ್ನೂ, ಕಾರ್ಟೆಲ್, ಆಡರ್‌ಫಾರಂ ಮೊದಲಾದ ಬಲವತ್ಪ್ರದೇಶಗಳನ್ನೂ, ಸಾವಿರಾರು ಮಂದಿ ಶತ್ರುಸೈನಿಕರನ್ನೂ, ಅನೇಕ ಫಿರಂಗಿಗಳನ್ನೂ ವಶಪಡಿಸಿಕೊಂಡಿರುವರು. ಮಾಂಟಡಿಡಿಯರ್ ಪ್ರಾಂತವೊಂದರಲ್ಲೇ ಮೊನ್ನೆ ಶುಕ್ರವಾರ ನಡೆಯಿಸಿದ ಯುದ್ಧದಲ್ಲಿ ೬೮೦ ಯಂತ್ರದ ಫಿರಂಗಿಗಳನ್ನು ಹಿಡಿದಿರುವರು. ರೋವರೆಲ್ಲಿ ನೀರಭೂಮಿಯು ಇವರ ವಶವಾದುದರಿಂದ ಆ ಪ್ರಾಂತದಲ್ಲಿ ಶತ್ರುಸೈನ್ಯಗಳ ಚಲನವಲನವೆಲ್ಲಾ ಇವರಿಗೆ ಚೆನ್ನಾಗಿ ಕಾಣಲನುಕೂಲಿಸಿತು. ಇಂಗ್ಲೀಷ್ ಸೈನಿಕರು ಡಿಕ್‌ಬಸ್ಕ ಕೆರೆಯ ಬಳಿಯಲ್ಲಿ ಮುಂದಕ್ಕೆ ನುಗ್ಗಿದರು. ಈ ಕೆರೆಯು ವೈಪ್ರೆಸ್ಸಿಗೆ ೨|| ಮೈಲಿಗಳ ದೂರದಲ್ಲಿದೆ. ಇದನ್ನು ಜರ್ಮನರು ಈ ವರ್ಷದ ಯುದ್ಧದಲ್ಲಿ ಸ್ವಾಧೀನಪಡಿಸಿಕೊಂಡಿದ್ದರು. ಇದು ಕೇಮೇಲ್ ಗುಡ್ಡಕ್ಕೆ ಉತ್ತರದಲ್ಲೂ ಚೆರ್ಸ್ಟಬರ್ಗಿಗೆ ಈಶಾನ್ಯದಲ್ಲೂ ಇರುವುದರಿಂದ ಇದನ್ನು ಬಹು ಪ್ರಧಾನಸ್ಥಾನವನ್ನಾಗಿ ಶತ್ರುಗಳು ಗಣಿಸಿ ಸ್ವಾಧೀನದಲ್ಲಿಟ್ಟುಕೊಂಡಿದ್ದರು. ಇದನ್ನು ಇಂಗ್ಲೀಷರು ಕಳೆದವಾರ ಒಳ್ಳೆಯ ಸಾಹಸದಿಂದ ವಶಪಡಿಸಿಕೊಂಡರು. ಇದರಿಂದ ಫ್ಲಾಂಡರ್ಸಿನೊಳಗಣ ವೈಪ್ರೆಸ್ ರಂಗದಲ್ಲಿ ಶತ್ರುಗಳ ನುಗ್ಗಾಟಕ್ಕೆ ಎಷ್ಟೋ ಪ್ರತಿಬಂಧಕವಾಯಿತು.

ಶತ್ರುಗಳು ಕಳೆದ ತಾ|| ೧೫ ರಲ್ಲಿ ಮತ್ತೊಂದು ದೊಡ್ಡ ಅವಸ್ಕಂದನವನ್ನಾರಂಭಿಸಿರುವಂತೆ ಕಾಣುತ್ತದೆ. ಷಾಟೋತಿಯರಿಯಿಂದ ಹಿಡಿದು ಮೆಯಿರ್ಕಾಡಿನೊಸೆಗನ್ನಿನವರೆಗಣ ೬ ಮೈಲಿ ಅಗಲದ ಫ್ರೆಂಚ್ ಸೇನಾಪಙ್ಕ್ತಿಯ ಮುಂದೆ ಈ ಯುದ್ಧವನ್ನು ಹೂಡಿದ್ದಾರೆ. ಅದೇ ಕಾಲದಲ್ಲಿ ಷಾಂಪೆನ್ ರಂಗದಲ್ಲಿ ೨೫ ಮೈಲಿಯಗಲದ ಭಾಗದಲ್ಲಿ ಮತ್ತೊಂದು ಯುದ್ಧವನ್ನಾರಂಭಿಸಿದ್ದಾರೆ. ಈ ೨ನೆ ಅವಸ್ಕಂದನವು ರೀಮ್ಸ್ ಪಟ್ಟಣವನ್ನು ಹಿಡಿದುಕೊಳ್ಳುವುದಕ್ಕಾಗಿ ಹೂಡಲ್ಪಟ್ಟಿದೆ. ಮೊದಲು ನುಗ್ಗಿದ ರಭಸದಲ್ಲಿ ಅವರ ಪದ್ಧತಿಯಂತೆಯೇ ಫಿರಂಗಿಗಳನ್ನು ಬಲವಾಗಿ ಹೊಡೆದು, ಹಿಂದೆಯೇ ಅಪರಿಮಿತವಾಗಿ ಸೈನ್ಯವನ್ನು ನುಗ್ಗಿಸಿ, ಎಷ್ಟೋ ನಷ್ಟವನ್ನು ಹೊಂದಿ, ೫೦೦೦ ಗಜಗಳ ವಿಶಾಲವಾದ ಭೂಮಿಯನ್ನು ವಶಪಡಿಸಿಕೊಂಡು, ಮಾರ್ನ್ ನದಿಯ ಮೇಲಿರುವ ೨-೩ ಗ್ರಾಮಗಳನ್ನು ವಶಪಡಿಸಿಕೊಂಡಿದ್ದಾರೆ.

ಬಾಲ್ಕನ್ ರಂಗಕ್ಕೆ ಸೇರಿದ ಆಲ್ಬೇನಿಯಾದಲ್ಲಿ ಫ್ರೆಂಚ್ ಇಟಲಿ ಸೈನ್ಯಗಳು ಕಾಘಾಗುಂೞ, ಪ್ರೀರಿ ಬೋನಿಕಾ ಮೊದಲಾದ ಶಿಖರಗಳನ್ನು ವಶಪಡಿಸಿಕೊಂಡು ಆಸ್ಟ್ರಿಯನ್ ಸೈನಿಕರನ್ನು ಓಡಿಸಿಕೊಂಡು ಹೋಗುತ್ತಿದ್ದಾರೆ. ಸಮುದ್ರಕ್ಕೂ ಅಚ್ರಿಡಾಸರಸ್ಸಿಗೂ ಮಧ್ಯದಲ್ಲಿರುವ ೮೦ ಮೈಲಿಯಗಲದ ರಂಗದಲ್ಲಿ ಫ್ರೆಂಚ್ ಇಟಲಿ ಸೈನ್ಯಗಳು ಹೀಗೆ ಮುಂದಕ್ಕೆ ನುಗ್ಗುತ್ತಿವೆ. ಸಮುದ್ರತೀರದಲ್ಲಿರುವ ಇಂಗ್ಲಿಷ್ ಮೊನಿಟರುಗಳು ಇವರಿಗೆ ತುಂಬಾ ಸಹಾಯವಮಾಡುತ್ತಿವೆ. ಈ ಸೈನ್ಯಗಳು ಇಷ್ಟರಲ್ಲೇ ದುರಾಜೋವನ್ನು ವಶಪಡಿಸಿಕೊಳ್ಳುವುದರಲ್ಲಿರುತ್ತವೆ. ದಾರಿಯಲ್ಲಿ ಕೊಸ್ನಿಟ್ಸಾಬೆಟ್ಟ ಟೊಮೊರಿಕಾದಲ್ಲಿರುವ ಎಲ್ಲಾ ಗ್ರಾಮಗಳು, ಕಾಘಾಕ್ಲುಮಾ ಬೆಟ್ಟಗಳು ಮೊದಲಾದ ಅನೇಕಸ್ಥಳಗಳನ್ನು ಹಿಡಿದುಕೊಂಡಿರುವರು. ಆಸ್ಟ್ರಿಯನ್ನರು ಬಹು ನಷ್ಟಪಟ್ಟು, ತಮ್ಮ ಗ್ರಾಮಗಳಿಗೆ ತಾವೇ ಬೆಂಕಿಯಿಕ್ಕಿ, ಡಿಪೋಗಳನ್ನು ಧ್ವಂಸಮಾಡಿ ಓಡಿಹೋಗುತ್ತಿರುವರು. ಈ ರಂಗದಲ್ಲಿ ಮಿತ್ರಮಂಡಲಿಯವರು ಇದುವರೆಗೆ ೧೬೦೦ ಮಂದಿ ಶತ್ರುಸೈನಿಕರನ್ನೂ ೬ ಫಿರಂಗಿಗಳನ್ನೂ ಹಿಡಿದಿರುವರು.

ಇಟಲಿ ರಂಗದಲ್ಲಿಯೂ ಶತ್ರುಗಳು ಹಿಮ್ಮೆಟ್ಟುತ್ತಿದ್ದಾರೆ. ಒಂದೆರಡುಕಡೆ ಅವರು ಇಟಲಿಯವರ ಮೇಲೆ ನುಗ್ಗುವುದಕ್ಕೆ ಪ್ರಯತ್ನಿಸಿ ಸೋತು ಓಡಿಹೋದರು. ಜುಲೈ ತಾ|| ೬ ರಿಂದ ೧೨ ರೊಳಗಾಗಿ ಇಟಲಿಯವರು ೧೮೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿರುವರು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲೂ ಪಟ್ಟಣದಲ್ಲೂ ಇನ್‌ಫ್ಲುಯಂಜಾ ಎಂಬ ಜ್ವರರೋಗವು ಪ್ರಬಲಿಸಿದೆ.

ಹಾಸನಸಮಾಚಾರವೆಂಬ ಪಕ್ಷಪತ್ರಿಕೆಯ ೪ ಸಂಚಿಕೆಗಳನ್ನು ನಾವು ಆದರದಿಂದ ಸ್ವೀಕರಿಸಿದೆವು.

ಅಠಾರಾಕಚೇರಿಯ ಪೂರ್ವಭಾಗದ ಬಯಲಿನಲ್ಲಿ ಕಲೇಜಿಯೇಟ್ ಹೈಸ್ಕೂಲನ್ನು ಕಟ್ಟಲು ಏರ್ಪಾಟಾಗಿದೆ.

ಬೆಂಗಳೂರಿನಲ್ಲಿ ಕಟ್ಟಲ್ಪಡುವ ಶಾರದಾಸ್ತ್ರೀಸಮಾಜ ಭವನದ ಫಂಡಿಗೆ ಶ್ರೀಮದ್ಯುವರಾಜರವರು ೨೫೦ ರೂಪಾಯಿಗಳನ್ನು ಅನುಗ್ರಹಿಸಿದರು.

ಬರೋಡಾ ಮಹಾರಾಜರವರು ನೀಲಗಿರಿಯಿಂದ ರಾಜಧಾನಿಗೆ ಬಂದು ಖಾಸಬಂಗಲೆಯಲ್ಲಿಳಿದಿದ್ದು ಬೆಂಗಳೂರ ಮಾರ್ಗವಾಗಿ ತಮ್ಮ ದೇಶಕ್ಕೆ ಪ್ರಯಾಣ ಮಾಡಿದರು.

ಲಲಿತಾದ್ರಿಯ ಉತ್ತರಭಾಗದಲ್ಲಿ ಶ್ರೀಮನ್ಮಹಾರಾಜರವರ ಹೊಸ ಅರಮನೆಯನ್ನು ಕಟ್ಟಲಿಕ್ಕೆ ಆರಂಭವಾಗಿದೆ. ಇದಕ್ಕೆ ೧೫ ಲಕ್ಷ ರೂ ಗಳು ತಗಲುವುವೆಂದು ನಿರ್ಧರಿಸಲ್ಪಟ್ಟಿದೆ.

ಶ್ರೀಮನ್ಮಹಾರಾಜರವರು ದೇಶದಲ್ಲಿಲ್ಲದ ಕಾಲದಲ್ಲಿ ಶ್ರೀಮದ್ಯುವರಾಜರವರೇ ಮಹಾರಾಜರ ಕಾರ್ಯನಿರ್ವಾಹ ಮಾಡುವುದಕ್ಕೆ ಆಗಿರುವ ಏರ್ಪಾಟನ್ನು ಬೆಂಗಳೂರು ಕರ್ನಾಟಕ ಪತ್ರವು ಆಕ್ಷೇಪಿಸಿರುತ್ತದೆ.

ಭರತಖಂಡದ ಯಾವ ವಿಶ್ವವಿದ್ಯಾಲಯದಲ್ಲಿ ಬಿ. ಎ. ಪರೀಕ್ಷೆಯನ್ನು ಕೊಟ್ಟವರಾದರೂ ಮೈಸೂರು ವಿಶ್ವವಿದ್ಯಾಲಯದ ಎಂ. ಎ. ತರಗತಿಗೆ ಸೇರಿಸಲ್ಪಡುವರೆಂದು ತಮ್ಮ ಪ್ರಭುತ್ವದವರು ಪ್ರಕಟಿಸಿದ್ದಾರೆ.

ಮ|| ರಾಮಲಿಂಗರೆಡ್ಡಿ, ಎಂ. ಎ., ಯವರು ತಮ್ಮ ವಿದ್ಯಾಭ್ಯಾಸತಾಧ್ಯಕ್ಷ ಪದವಿಯನ್ನು ಬಿಟ್ಟು ಹೈದರಾಬಾದ್ ಸಂಸ್ಥಾನದ ಉದ್ಯೋಗಕ್ಕೆ ಹೋಗುವರೆಂದು ಮೊದಲಾಗಿ ವಿರೋಧಿಗಳು ಹುಟ್ಟಿಸಿರುವ ಸುದ್ದಿಗಳೆಲ್ಲಾ ನಿರಾಧಾರವೆಂದು ತಿಳಿಯುತ್ತೇವೆ.

ಹಿರಿಯೂರು ತಾ|| ವೀರಶೈವ ಮಹಾಸಭೆಯು ಗೊತ್ತಾಗಿದ್ದ ವೇಳೆಗೆ ವಿಜೃಂಭಣೆಯಿಂದ ನಡೆದು, ಆ ತಾಲ್ಲೂಕಿನ ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಸಹಾಯಮಾಡುವ ವಿದ್ಯಾರ್ಥಿನಿಲಯವೊಂದನ್ನು ಸ್ಥಾಪಿಸುವುದಕ್ಕಾಗಿ ಆ ತಾಲ್ಲೂಕಿನ ಮಹಾಜನರಿಂದ ೩೨೦೦೫ ರೂ. ಗಳ ಚಂದಾ ವಾಗ್ದಾನವಾಯಿತೆಂದು ಕೇಳಿ ಸಂತೋಷಿಸುತ್ತೇವೆ. ವಾಗ್ದಾನವಾದುದನ್ನು ಶೇಖರಿಸಲು ಮುಖಂಡರು ಕೂಡಲೇ ಪ್ರಯತ್ನಪಡಬೇಕು.

ರಾಜಧಾನಿಯಲ್ಲಿ ಬಿಸಿಲುಕಾಲದ ಲಕ್ಷಣಗಳೆಲ್ಲಾ ಸಂಪೂರ್ಣವಾಗಿದ್ದು ಕಳೆದ ಶುಕ್ರವಾರ ರಾತ್ರಿ ಒಳ್ಳೇ ಮಳೆಯಾಯಿತು. ಪ್ಲೇಗು ಹೆಚ್ಚುವಂತೆ ಕಾಣುತ್ತದೆ. ಈ ಸಲ ಇದರ ಹಾವಳಿಯು ಬಹಳ ತೀಕ್ಷ್ಣವಾಗಿದೆ. ಚಿಕಿತ್ಸೆಗೆ ಜಗ್ಗದೆ ಬಲು ಬೇಗನೆ ಸಾವನ್ನುಂಟುಮಾಡುತ್ತಿದೆ. ಲಷ್ಕರ್ ಮೊಹಲ್ಲಾದಲ್ಲಿ ೧ ದೇವಾಂಗದವರ ಮನೆಯೊಳಗೆ ೪ ಮರಣಗಳಾದುವು. ಇದರ ಜತೆಗೆ ಇನ್‌ಫ್ಲುಯೆನ್ಜಾ ಎಂಬ ಶೀತೋಷ್ಣಜ್ವರವೂ ಕಾಲುಹಾಕಿದೆ. ಆದರೆ ಈ ರೋಗದಿಂದ ಪ್ರಾಣಾಪಾಯವೇನೂ ಇಲ್ಲ.

ಭಾರತ ರಾಜಕೀಯ ಸಂಸ್ಕರಣಗಳು.

(ಮಾಂಟೆಗ್ ಚೆಲ್ಮ್ಸ್‌ಫರ್ಡ್‌ರವರ ಸೂಚನೆಗಳ ಮುಖ್ಯಾಭಿಪ್ರಾಯವು.)

೧. ಭರತಖಂಡದಮೇಲೆ ಪಾರ್ಲಿಮೆಂಟಿಗೂ ಸ್ಟೇಟ್‌ಸೆಕ್ರೆಟರಿಯವರಿಗೂ ಇರತಕ್ಕ ಅಧಿಕಾರವನ್ನು ತಗ್ಗಿಸಬೇಕು.

೨. ಸ್ಟೇಟ್‌ಸೆಕ್ರೆಟರಿಯ ಸಂಬಳವನ್ನು ಇಂಗ್ಲೆಂಡ್ ಪ್ರಭುತ್ವದವರೇ ಕೊಡಬೇಕು.

೩. ಭರತಖಂಡದ ವಿಷಯಗಳನ್ನು ಕುರಿತು ಆಲೋಚಿಸುವುದಕ್ಕಾಗಿ ಒಂದು ಪ್ರತ್ಯೇಕಸಂಘವನ್ನು ಸ್ಥಾಪಿಸಬೇಕೆಂದು ಕಾಮನ್ಸ್ ಸಭೆಯವರನ್ನು ಪ್ರಾರ್ಥಿಸಬೇಕು.

೪. ಸ್ಟೇಟ್‌ಸೆಕ್ರೆಟರಿ ಕೌನ್ಸಿಲಿನ ನಿರ್ಮಾಣವನ್ನೂ ಇಂಡಿಯಾ ಆಫೀಸ್ ಸಿಬ್ಬಂದಿಯನ್ನೂ ಪರೀಕ್ಷಿಸಿ ವರದಿಮಾಡುವುದಕ್ಕೆ ಒಂದು ಸಂಘವನ್ನೇರ್ಪಡಿಸಬೇಕು.

ಭರತಖಂಡದ ಪ್ರಭುತ್ವ.

೫. ಭರತಖಂಡದಲ್ಲಿ ಶಾಂತಿಯನ್ನೂ ಸುಪರಿಪಾಲನವನ್ನೂ ನೆಲೆಗೊಳಿಸುವುದಕ್ಕೆ ಭಾರತಪ್ರಭುತ್ವಕ್ಕೆ ಇರುವ ಬಾಧ್ಯತಾನಿರ್ವಹಣಕ್ಕೆ ಅವಶ್ಯಕವಾದ ವಿಷಯಗಳಲ್ಲಿ ಭರತಖಂಡಪ್ರಭುತ್ವದವರ ಅಧಿಕಾರವನ್ನು ಎಷ್ಟುಮಾತ್ರವೂ ತಗ್ಗಿಸಲಾರದು.

೬. ಭರತಖಂಡಕ್ಕೆ ಒಂದು ಪ್ರಿವಿಕೌನ್ಸಿಲನ್ನು ಸ್ಥಾಪಿಸಬೇಕು.

ಕಾರ್ಯನಿರ್ವಾಹಕ ಸಂಘ.

೭. ವೈಸ್ರಾಯರ ಕಾರ್ಯನಿರ್ವಾಹಕಸಭೆಯಲ್ಲಿರುವ ಭಾರತೀಯ ಸಭಿಕರ ಸಂಖ್ಯೆಯನ್ನು ಹೆಚ್ಚಿಸಬೇಕು.

೮. ಆ ಸಭೆಯ ಸಭಿಕರ ಈಗಣ ಶಾಸನದಲ್ಲಿ ಗೊತ್ತಾಗಿರುವಂಥ ಸಂಖ್ಯಾಪರಿಮಿತಿಯಾಗಲೀ ಅದರಲ್ಲಿ ಹೇಳಲ್ಪಟ್ಟಿರುವಂಥ ಯೋಗ್ಯತೆಗಳಾಗಲೀ ಇರಬೇಕಾದವಶ್ಯಕತೆಯಿಲ್ಲ.

೯. ಗ್ರೇಟ್‌ಬ್ರಿಟನ್ನಿನಲ್ಲಿರುವ ಪಾರ್ಲಿಮೆಂಟಿನ ಅಂಡರ್‌ಸೆಕ್ರೆಟರಿಯಂತಿರುವ ಒಂದು ಪದವಿಗೆ ಶಾಸನಸಭಾಸಭಿಕರಲ್ಲಿ ಕೆಲವರನ್ನು ನೇಮಿಸಬೇಕು.

ನಿಯಮನಿರ್ಮಾಣಸಭೆ.

೧೦. ಈಗಿರುವ ಸಾಮ್ರಾಜ್ಯಶಾಸನಸಭೆಯನ್ನು ತಪ್ಪಿಸಿ ಅದಕ್ಕೆ ಪ್ರತಿಯಾಗಿ ಸ್ಟೇಟ್‌ಕೌನ್ಸಿಲ್ ಎಂಬುದೊಂದನ್ನೂ, ಶಾಸನಸಭೆ (ಲೆಜಿಸ್ಲೇಟೀವ್ ಅಸೆಂಬ್ಲಿ) ಯೊಂದನ್ನೂ ಏರ್ಪಡಿಸಬೇಕು.

೧೧. ಸ್ಟೇಟ್‌ಕೌನ್ಸಿಲ್ಲಿಗೆ ಅಧ್ಯಕ್ಷರಾದ ವೈಸ್ರಾಯರೊಡನೆ ಮತ್ತೆ ೫೦ ಮಂದಿ ಸಭಿಕರಿರಬೇಕು. ಉಪಾಧ್ಯಕ್ಷನೊಬ್ಬನನ್ನು ನಿಯಮಿಸಿಕೊಳ್ಳುವುದಕ್ಕೆ ವೈಸ್ರಾಯರಿಗೆ ಅಧಿಕಾರವಿರಬೇಕು. ಈ ಸಭಿಕರಲ್ಲಿ ೨೧ ಮಂದಿಗಳು ಪ್ರಜೆಗಳಿಂದ ಆರಿಸಲ್ಪಟ್ಟವರಾಗಿಯೂ, ಉಳಿದ ೨೯ ಮಂದಿಗಳು ವೈಸ್ರಾಯರಿಂದ ನಿಯೋಜಿತರಾದವರಾಗಿಯೂ ಇರಬೇಕು. ಈ ನಿಯೋಜಿತ ಸಭಿಕರಲ್ಲಿ ೪ ಮಂದಿ ಅನಧಿಕಾರಿಗಳಾಗಿಯೂ ೨೫ ಮಂದಿಗೆ ಹೆಚ್ಚಿಲ್ಲದಷ್ಟು (ಇದರಲ್ಲಿ ಕಾರ್ಯನಿರ್ವಾಹಕ ಸಭಿಕರೂ ಇರುವರು.) ಸರ್ಕಾರಿ ಉದ್ಯೋಗಿಗಳಾಗಿಯೂ ಇರಬೇಕು. ಈ ಸಭಿಕರೆಲ್ಲರೂ ೫ ವರ್ಷಕಾಲ ಆ ಪದವಿಯಲ್ಲಿರಬೇಕು. ಈ ಸಭಾಸಭಿಕರಿಗೆ ಇರಬೇಕಾದ ಯೋಗ್ಯತಾಲಕ್ಷಣಗಳನ್ನು ಕುರಿತು ವೈಸ್ರಾಯರು ನಿಯಮವನ್ನೇರ್ಪಡಿಸಬೇಕು.

೧೨. ೨ ನೆ ಶಾಸನಸಭೆಯಲ್ಲಿ ಬಹುಶಃ ೧೦೦ ಮಂದಿ ಸಭಿಕರಿರಬೇಕು. ಅವರಲ್ಲಿ $\frac{2}{3}$ ಭಾಗದವರು ಪ್ರಜೆಗಳಿಂದ ಆರಿಸಲ್ಪಟ್ಟವರೂ $\frac{1}{3}$ ಭಾಗದವರು ಪ್ರಭುತ್ವದವರಿಂದ ನಿಯೋಜಿತರಾದವರೂ ಆಗಿರಬೇಕು. ಈ ನಿಯೋಜಿತರಲ್ಲಿ $\frac{1}{3}$ ಭಾಗದವರು ಸರ್ಕಾರಿ ಉದ್ಯೋಗಿಗಳಾಗಿರಬೇಕು. ಈ ಸಭೆಯ ಅಧ್ಯಕ್ಷನು ವೈಸ್ರಾಯರಿಂದ ಗೊತ್ತುಮಾಡಲ್ಪಟ್ಟವನಾಗಿರಬೇಕು.

೧೩. ಸ್ಟೇಟ್‌ಕೌನ್ಸಿಲ್ಲಿನ ಅಧಿಕಾರಿಸಭ್ಯರು ಶಾಸನಸಭಾಸಭಿಕರಾಗಿ ನಿಯೋಜಿಸಲ್ಪಡಬಹುದು.

೧೪. ಸ್ಟೇಟ್‌ಕೌನ್ಸಿಲನ್ನೇ ಆಗಲೀ ಶಾಸನಸಭೆಯನ್ನೇ ಆಗಲೀ ತೊಲಗಿಸಿಬಿಡುವುದಕ್ಕೆ ವೈಸ್ರಾಯರಿಗೆ ಅಧಿಕಾರವಿರಬೇಕು.

೧೫. ಶಾಸನಸಭೆಯ ಕಾರ್ಯವಿಧಾನಗಳು ಈ ಕೆಳಗೆ ಹೇಳುವಂತಿರಬೇಕು.

(ಎ) ಸರ್ಕಾರಿ ಬಿಲ್ಲುಗಳು—ಇವನ್ನು ಸಾಧಾರಣವಾಗಿ ಶಾಸನಸಭೆಯ ಮುಂದಿಟ್ಟು ಅಲ್ಲಿ ಅನುಮೋದಿತವಾದ ಬಳಿಕ ಸ್ಟೇಟ್ ಕೌನ್ಸಿಲ್ಲಿಗೆ ಕಳುಹಿಸಬೇಕು. ಶಾಸನಸಭೆಯವರು ಅನುಮೋದಿಸದಿರುವ ರೀತಿಯಲ್ಲಿ ಬಿಲ್ಲನ್ನು ಸ್ಟೇಟ್‌ಕೌನ್ಸಿಲಿನವರು ತಿದ್ದಿದ ಪಕ್ಷದಲ್ಲಿ ಅಂಥ ಸಂದರ್ಭದೊಳಗೆ ೨ ಸಭೆಗಳೂ ಕೂಡಿ ಆ ಬಿಲ್ಲನ್ನು ಚರ್ಚಿಸಬೇಕು. ಈ ತಿದ್ದುಪಾಟು ದೇಶದ ಸುಪರಿಪಾಲನೆಗೂ ಶಾಂತಿಗೂ ಅವಶ್ಯಕವಾದುದೆಂದು ವೈಸ್ರಾಯರೂ ಅವರ ಸಭೆಯೂ ಹೇಳುವುದಾದರೆ, ಶಾಸನಸಭೆಯು ಈ ತಿದ್ದುಪಾಟನ್ನು ನಿರಾಕರಿಸುವುದನ್ನೇ ಆಗಲೀ ಮತ್ತೆ ತಿದ್ದುವುದನ್ನೇ ಆಗಲೀ ಮಾಡಕೂಡದು. ಆದರೆ ಈ ಬಿಲ್ಲು ಪ್ರವೇಶಕಾಲದಲ್ಲೇ ತಿರಸ್ಕರಿಸಲ್ಪಟ್ಟರೆ, ಇದು ಮೇಲ್ಕಂಡ ನಿಯಮಗಳಿಗೆ ಅನುಗುಣವಾಗಿದೆಯೆಂದು ವೈಸ್ರಾಯರು ಒಪ್ಪಿಕೊಳ್ಳುವದಾದರೆ, ಆ ಬಿಲ್ಲನ್ನು ಸ್ಟೇಟ್‌ಕೌನ್ಸಿಲಿನ ವಿಚಾರಣೆಗೆ ಕಳುಹಿಸಬಹುದು. ಅತ್ಯವಸರವಾದ ಕಾರ್ಯಗಳಲ್ಲಿ ವೈಸ್ರಾಯರು ಇಂಥ ಬಿಲ್ಲನ್ನು ಮೊದಲೇ ಸ್ಟೇಟ್‌ಕೌನ್ಸಿಲಿನ ಮುಂದಿಟ್ಟು ಅದರ ಒಪ್ಪಿಗೆಯನ್ನು ಪಡೆದು, ಆ ವಿಷಯವನ್ನು ಶಾಸನಸಭೆಗೆ ತಿಳಿಯಪಡಿಸಬಹುದು.

(ಬಿ) ಖಾಸಗಿಬಿಲ್ಲುಗಳು—ಈ ಬಿಲ್ಲನ್ನು ಪ್ರತಿಪಾದಿಸತಕ್ಕವರು ಯಾವ ಸಭೆಯಲ್ಲಿರುವರೋ ಆ ಸಭೆಯಲ್ಲೇ ಇದನ್ನು ಪ್ರವೇಶಗೊಳಿಸಿ, ಆ ಸಭೆಯವರು ಅನುಮೋದಿಸಿದ ಬಳಿಕ ೨ ನೆ ಸಭೆಗೆ ಅದನ್ನು ಕಳುಹಿಸಬಹುದು. ಬಿಲ್ಲಿನ ವಿಷಯದಲ್ಲಿ ೨ ಸಭೆಗಳಿಗೂ ಅಭಿಪ್ರಾಯಭೇದವಿರುವ ಪಕ್ಷದಲ್ಲಿ ಈ ೨ ಸಭೆಗಳನ್ನೂ ಒಟ್ಟಿಗೆ ಕೂಡಿಸಿ ವಿಚಾರಪರಿಷ್ಕಾರವನ್ನು ಮಾಡಬಹುದು. ಈ ಬಿಲ್ಲು ಸುಪರಿಪಾಲನೆಗೆ ಭಂಗಕರವಾದುದೆಂದು ಪ್ರಭುತ್ವದವರಿಗೆ ತೋರಿದರೆ, ಇದು ಮೇಲ್ಪಟ್ಟ ವಿಧಾನಕ್ಕೆ ಅನುಗುಣವಾಗಿದೆಯೆಂದು ವೈಸ್ರಾಯರಿಗೆ ತಿಳಿಯಪಡಿಸಿ, ಅದನ್ನು ಮರಳಿ ಸ್ಟೇಟ್‌ಕೌನ್ಸಿಲಿನ ಮುಂದಿಡಬಹುದು. ಆ ಕೌನ್ಸಿಲಿನವರು ಏರ್ಪಡಿಸಿದ ವಿಧಾನದಿಂದ ಆ ಬಿಲ್ಲು ಶಾಸನವಾಗುವುದು.

೧೬. ಈ ತೀರ್ಮಾನಗಳೆಲ್ಲಾ ಸಲಹೆಗಳ ರೂಪವಾಗಿ ಮಾತ್ರವೇ ಇರಬೇಕು.

೧೭. ಈ ತೀರ್ಮಾನಗಳಲ್ಲಿ ಯಾವುದನ್ನಾದರೂ ಅಂಗೀಕರಿಸುವುದಕ್ಕಾಗಲೀ ತಿರಸ್ಕರಿಸುವುದಕ್ಕಾಗಲೀ ವೈಸ್ರಾಯರಿಗೂ ಆಂಗ್ಲಪ್ರಭುತ್ವಕ್ಕೂ ಅಧಿಕಾರವಿರಬೇಕು.

೧೮. ತಾತ್ಕಾಲಿಕ ಶಾಸನಗಳನ್ನು ನಿರ್ಮಾಣಮಾಡುವ ವಿಷಯದಲ್ಲಿ ಈಗ ವೈಸ್ರಾಯರಿಗೆ ಇರುವ ಅಧಿಕಾರವು ಮುಂದೆಯೂ ಇರಬೇಕು. ಶಾಸನಗಳನ್ನು ನಿರ್ಮಿಸಲು ವೈಸ್ರಾಯರಿಗೂ ಅವರ ಸಭೆಯವರಿಗೂ ಅಧಿಕಾರವಿರಬೇಕು.

೧೯. ಸ್ಟೇಟ್‌ಕೌನ್ಸಿಲಿನಲ್ಲಾಗಲೀ ಶಾಸನಸಭೆಯಲ್ಲಾಗಲೀ ಇರುವ ನಿಯೋಜಿತರಾದ ಅಧಿಕಾರಿಸಭ್ಯರು, ಸರ್ಕಾರದಿಂದ ಪ್ರತ್ಯೇಕವಾಗಿ ಕೋರಲ್ಪಡದಹೊರತು ಇತರ ವಿಷಯಗಳಲ್ಲೆಲ್ಲಾ ವಾಕ್ಸ್ವಾತಂತ್ರ್ಯವುಳ್ಳವರಾಗಿಯೂ, ತನ್ನ ಇಷ್ಟ ಬಂದಂತೆ ಓಟನ್ನು ಕೊಡಲು ಅಧಿಕಾರವುಳ್ಳವರಾಗಿಯೂ ಇರಬಹುದು.

೨೦. ಸ್ಟೇಟ್‌ಕೌನ್ಸಿಲ್ ಸಭ್ಯರಾಗಲೀ ಶಾಸನಸಭಾಸಭ್ಯರಾಗಲೀ ಉಪಪ್ರಶ್ನೆಗಳನ್ನೂ ಹಾಕಬಹುದು. ಆದರೆ ಪ್ರಜಾಕ್ಷೇಮಾರ್ಥವಾಗಿ ಯಾವುದಾದರೊಂದು ಪ್ರಶ್ನೆಯನ್ನು ಹಾಕಕೂಡದೆಂದು ವೈಸ್ರಾಯರು ತಿರಸ್ಕರಿಸಬಹುದು.

೨೧. ಸ್ಟೇಟ್‌ಕೌನ್ಸಿಲ್ಲಿನಲ್ಲಿಯೂ ಶಾಸನಸಭೆಯಲ್ಲಿಯೂ ಕಾರಕ್ರಮವನ್ನು ಜರುಗಿಸುವುದಕ್ಕೆ ಅವಶ್ಯಕವಾದ ನಿಯಮಗಳು ಮೊದಲು ವೈಸ್ರಾಯರ ಸಭೆಯವರಿಂದ ನಿರ್ಮಿಸಲ್ಪಡಬೇಕು. ವೈಸ್ರಾಯರು ಅಂಗೀಕರಿಸಿದರೆ ಶಾಸನಸಭೆಯೂ ಸ್ಟೇಟ್‌ಕೌನ್ಸಿಲೂ ಸಹ ಆ ನಿಯಮಗಳನ್ನು ತಿದ್ದಿಕೊಳ್ಳಬಹುದು. ಈ ತಿದ್ದುಪಾಟಿಗೆ ಸ್ಟೇಟ್‌ಸೆಕ್ರೆಟರಿಯವರಾಗಲೀ ಪಾರ್ಲಿಮೆಂಟ್ ಸಭೆಯವರಾಗಲೀ ಅನುಮತಿಸಬೇಕಾದ ಅವಶ್ಯಕತೆಯಿಲ್ಲ.

೨೨. ಎರಡು ಸಭೆಗಳ ಸಂಯುಕ್ತಸ್ಥಾಯಿಸಂಘಗಳು ಸಾಧ್ಯವಾದಷ್ಟು ಎಲ್ಲಪ್ರಭುತ್ವ ಶಾಖೆಗಳಲ್ಲೂ ಭಾಗಿಗಳಾಗಿ ಕೆಲಸಮಾಡುವಂತೆ ಆಗಬೇಕು. ಯಾವ ಶಾಖೆಯಲ್ಲಿ ಇವರು ಕಲೆತು ಕೆಲಸಮಾಡಬಹುದೋ ಅದನ್ನು ವೈಸ್ರಾಯರು ನಿರ್ಧರಿಸಬೇಕು. ಯಾವಯಾವ ವಿಷಯಗಳನ್ನು ಸ್ಥಾಯಿಸಂಘಕ್ಕೆ ತಿಳಿಯಪಡಿಸಬೇಕೆಂಬ ವಿಷಯವನ್ನು ಆಯಾ ಶಾಖಾಮುಖ್ಯಾಧಿಕಾರಿಯು ನಿರ್ಣಯಿಸಬೇಕು. ಈ ಸ್ಥಾಯಿಸಂಘಗಳ $\frac{2}{3}$ ಭಾಗದಷ್ಟು ಸಭ್ಯರನ್ನು ಶಾಸನಸಭೆಯ ಅನಧಿಕಾರಿಸಭ್ಯರು ಆರಿಸಬೇಕು. $\frac{1}{3}$ ಭಾಗದ ಸಭ್ಯರನ್ನು ವೈಸ್ರಾಯರ ಸಭೆಯವರು ಆರಿಸಬೇಕು.

೨೩. ಭರತಖಂಡದ ಸರ್ಕಾರದವರಿಂದ ಪ್ರಾಂತಿಕಪ್ರಭುತ್ವಗಳಮೇಲೆ ಇಡಲ್ಪಟ್ಟಿರುವ ಬಾಧ್ಯತೆಗೆ ಸರಿಹೋಗುವವರೆಗೆ ಶಾಸನನಿರ್ಮಾಣ, ಪರಿಪಾಲನೆ, ಆರ್ಥಿಕ-ಈ ವಿಷಯಗಳಲ್ಲೆಲ್ಲಾ ಪ್ರಾಂತಿಕಪ್ರಭುತ್ವಗಳಿಗೆ ಸಂಪೂರ್ಣಸ್ವಾತಂತ್ರ್ಯವು ಕೊಡಲ್ಪಡುವುದು.

೨೪. ಕೆಲಪರಿಪಾಲನ ವಿಷಯಗಳನ್ನು (ಪ್ರಜಾಪ್ರತಿನಿಧಿಗಳಿಗೆ) ಸಂಕ್ರಮಿತಗಳನ್ನಾಗಿ ಮಾಡಿ, ಕ್ರಮವಾಗಿ ಈ ವಿಧಾನವನ್ನು ಅಭಿವೃದ್ಧಿಪಡಿಸಿ, ಎಲ್ಲ ಶಾಖೆಗಳಲ್ಲೂ ಕಾಲಕ್ರಮದೊಳಗೆ ಸಂಪೂರ್ಣವಾದ ಬಾಧ್ಯತೆಯು ಪ್ರಜಾಪ್ರತಿನಿಧಿಗಳ ಪರವಾಗುವಂತೆ ಮಾಡಲ್ಪಡುವುದು. ಹಾಗೆ ಪ್ರಜಾಪ್ರತಿನಿಧಿಗಳ ವಶಮಾಡಲ್ಪಡುವ ಶಾಖೆಗಳು ಸಂಕ್ರಮಿತಶಾಖೆಗಳೆಂಬುದಾಗಿಯೂ, ಸರ್ಕಾರಿ ಅಧಿಕಾರಿಗಳ ವಶದಲ್ಲಿರುವ ಶಾಖೆಗಳು ಪ್ರಭುತ್ವಾಧೀನಶಾಖೆಗಳೆಂಬುದಾಗಿಯೂ ಕರೆಯಲ್ಪಡುವುವು.

ಪ್ರಾಂತಿಕಪರಿಪಾಲನೆಯು ಮತ್ತು ಕಾರ್ಯನಿರ್ವಾಹಕದ ವರ್ಗಗಳು.

೨೫. ಪ್ರಾಂತಿಕಪ್ರಭುತ್ವ ಕಾರ್ಯನಿರ್ವಾಹಕ ಸಂಘದಲ್ಲಿ ಗೌರ್ನರೂ, ಅವರ ಸಹಾಯಕವರ್ಗವೂ, ಶಾಸನಸಭೆಯ ಪ್ರಜಾನಿಯುಕ್ತ ಸಭ್ಯರಲ್ಲಿ ಗೌರ್ನರು ಆರಿಸಿಕೊಳ್ಳುವ ಒಬ್ಬರಿಬ್ಬರು ಅಥವಾ ಕೆಲವರು ಮಂತ್ರಿಗಳೂ, ಶಾಸನಸಭೆಯಲ್ಲಿ ಯಾವ ಶಾಖೆಗೂ ಸಂಬಂಧಿಸಿರದ ಕೆಲ ಸಭಿಕರುಗಳೂ ಸಹ ಸಭ್ಯರಾಗಿರುವರು.

೨೬. ಗೌರ್ನರ ಸಹಾಯಕವರ್ಗದಲ್ಲಿ (ಎಗ್ಜಿಕ್ಯುಟೀವ್ ಕೌನ್ಸಿಲ್) ಇಬ್ಬರು ಸಭ್ಯರಿರಬೇಕು. ಅವರಲ್ಲಿ ಒಬ್ಬನು ಭಾರತೀಯನಾಗಿರಬೇಕು.

೨೭. ಮಂತ್ರಿಗಳೆಂದು ಹೇಳಲ್ಪಡುವವರು ಶಾಸನಸಭಾನಿಯುಕ್ತಕಾಲದವರೆಗೆ ಕೆಲಸಮಾಡಬೇಕು. ಸಂಕ್ರಮಿತಶಾಖೆಗಳೆಂದು ಹೇಳಲ್ಪಟ್ಟಿರುವವುಗಳು ಈ ಮಂತ್ರಿಗಳಿಂದ ನಿರ್ವಹಿಸಲ್ಪಡತಕ್ಕವುಗಳು.

೨೮. ಅಧಿಕಸಭ್ಯರುಗಳನ್ನು ಗೌರ್ನರು ಉನ್ನತಾಧಿಕಾರಿವರ್ಗದಿಂದ ಆರಿಸಿ ನಿಯಮಿಸುವರು. ಇವರು ಗೌರ್ನರಿಗೆ ಸಲಹೆಯನ್ನು ಕೊಡುವುದಕ್ಕೂ ವಿವಿಧ ವಿಷಯಗಳನ್ನು ಆಲೋಚಿಸುವುದಕ್ಕೂ ಉಪಯೋಗಿಸಲ್ಪಡುವರು.

೨೯. ಮೇಲ್ಕಂಡ ರೀತಿಯಿಂದ ಏರ್ಪಡಿಸಲ್ಪಟ್ಟ ಪ್ರಭುತ್ವವರ್ಗದವರೆಲ್ಲಾ ಸೇರಿ ವಿಷಯಪರ್ಯಾಲೋಚನೆ ಮಾಡಬೇಕು. ಆದರೆ ಗೌರ್ನರು ತಮ್ಮ ಪ್ರಭುತ್ವವರ್ಗದೊಳಗಣ ಯಾವ ಶಾಖೆಯನ್ನಾದರೂ ಪ್ರತ್ಯೇಕವಾಗಿ ಕರೆದು ವಿಷಯಪರ್ಯಾಲೋಚನೆಯನ್ನು ಮಾಡಲೂ ಬಹುದು. ಪ್ರಭುತ್ವಕ್ಕೆ ಅಧೀನವಾದ ಯಾವುದೊಂದು ಶಾಖೆಯನ್ನು ಕುರಿತು ತೀರ್ಮಾನಮಾಡುವುದೂ, ಬಡ್ಜೆಟ್ಟಿನಲ್ಲಿ ಆಯಾ ಶಾಖೆಗಳಿಗೆ ಹಣವನ್ನು ಏರ್ಪಡಿಸುವ ವಿಷಯವೂ ಸಹ ಗೌರ್ನರ ಮತ್ತೂ ಅವರ ಸಹಾಯಕವರ್ಗದ ಅಧೀನಕ್ಕೆ ಹೊತ್ತ ಭಾರವಾಗಿರುವುದು.

೩೦. ಶಾಸನಸಭೆಯಲ್ಲಿರುವ ಕೆಲವು ಸಭ್ಯರನ್ನು ಗೌರ್ನರು ಆರಿಸಿಕೊಂಡು ಅವರಿಗೆ ಇಂಗ್ಲೆಂಡ್ ಪಾರ್ಲಿಮೆಂಟಿನ ಉಪಕಾರ್ಯದರ್ಶಿಗೆ ಸಮಾನವಾದ ಸ್ಥಾನವನ್ನು ಕೊಡುವುದಕ್ಕೆ ಅಧಿಕಾರವುಳ್ಳವರಾಗಿರಬೇಕು.

ಪ್ರಾಂತಿಕಶಾಸನ ಸಭೆಗಳು.

೩೧. ಪ್ರತಿಯೊಂದು ಪ್ರಾಂತದ ಶಾಸನಸಭೆಯಲ್ಲೂ ಪ್ರಜೆಗಳಿಂದ ಆರಿಸಲ್ಪಟ್ಟ ಸಭಿಕರ ಸಂಖ್ಯೆಯು ಹೆಚ್ಚಿಸಲ್ಪಡುವುದು. ಆ ಸಭೆಗಳಲ್ಲಿ ಸಾಧ್ಯವಾದಷ್ಟು ಹೆಚ್ಚಾದ ಚುನಾವಣೆಯ ಸ್ವಾತಂತ್ರ್ಯದಿಂದ ಪ್ರಜೆಗಳ ಮೂಲಕ ಆರಿಸಲ್ಪಟ್ಟ ಪ್ರತಿನಿಧಿಗಳೂ, ಪ್ರಭುತ್ವದವರಿಂದ ನಿಯಮಿಸಲ್ಪಟ್ಟ ಅಧಿಕಾರಾನಧಿಕಾರಸಭ್ಯರೂ, ಅಧಿಕಾರರೀತ್ಯಾ ಶಾಸನ ಸಭ್ಯರಾಗಿರತಕ್ಕವರೂ ಕೂಡ ಸಭಿಕರಾಗಿರುವರು. (ಮುಂದಣ ೩೩-೩೫ ಪ್ಯಾರಾಗಳಲ್ಲಿ ಹೇಳಲ್ಪಡುವ ವಿಚಾರಣಸಂಘದವರ ಸಲಹೆಯಮೇರೆ) ವೈಸ್ರಾಯರು ಸ್ಟೇಟ್‌ಸೆಕ್ರೆಟರಿಯವರ ಅನುಮತಿಯೊಡನೆ ಶಾಸನಸಭೆಯ ಸಂಘಟನವನ್ನೂ ಸಭಿಕರನ್ನಾರಿಸುವಲ್ಲಿ ಪ್ರಜೆಗಳಿಗೆ ಕೊಡಲ್ಪಡುವ ಅಧಿಕಾರವನ್ನೂ ನಿರ್ಣಯಿಸಿ ಪಾರ್ಲಿಮೆಂಟಿಗೆ ತಿಳಿಯಪಡಿಸುವರು.

೩೨. ಈ ಶಾಸನಸಭೆಗೆ ಗೌರ್ನರೇ ಅಧ್ಯಕ್ಷರು. ಉಪಾಧ್ಯಕ್ಷರನ್ನು ಏರ್ಪಡಿಸಿಕೊಳ್ಳುವ ಅಧಿಕಾರವು ಅವರಿಗೇ ಇರುವುದು.

೩೩. ಶಾಸನಸಭೆಯನ್ನು ತಡೆದು ನಿಲ್ಲಿಸಿಬಿಡುವುದಕ್ಕೂ ಗೌರ್ನರಿಗೆ ಅಧಿಕಾರವಿರುವುದು.

೩೪. ಬಡ್ಜೆಟ್ಟಿನ ವಿಷಯವಾಗಲ್ಲದೆ ಇತರ ವಿಷಯಕವಾದ ತೀರ್ಮಾನಗಳೆಲ್ಲಾ ಸಲಹೆಗಳಾಗಿ ಮಾತ್ರವೇ ಇರುವುವು.

೩೫. ಸರ್ಕಾರದಿಂದ ನಿಯೋಜಿತರಾದ ಅಧಿಕಾರಸಭಿಕರಿಗೆ ವಾಕ್ಸ್ವಾತಂತ್ರ್ಯವಿರುವುದು. ಪ್ರಭುತ್ವದವರು ಕೂಡದೆಂದು ಅಪ್ಪಣೆಮಾಡಿದರೇ ವಿನಾ ಓಟನ್ನು ಕೊಡುವುದಕ್ಕೂ ಅವರಿಗೆ ಅಧಿಕಾರವಿರುವುದು.

೩೬. ಯಾವ ಸಭಿಕನೇ ಆದರೂ ಒಂದಾನೊಂದು ವಿಷಯದಲ್ಲಿ ಉಪಪ್ರಶ್ನೆಗಳನ್ನು ಹಾಕಬಹುದು

೩೭. ಈ ಸಭೆಗಳ ಕಾರ್ಯಕ್ರಮವೆಲ್ಲಾ ಮೊದಲಿನಂತೆಯೇ ನಡೆಯುವುದು. ಆದರೆ ಗೌರ್ನರ ಅಂಗೀಕಾರದಮೇಲೆ ಸಭಾನಿಬಂಧನೆಗಳನ್ನು ಆ ಸಭೆಯ ಸಭಿಕರುಗಳು ಸಂಸ್ಕರಿಸಬಹುದು.

೩೮. ಈ ಶಾಸನಸಭೆಗಳಲ್ಲಿ ಪ್ರತಿಯೊಂದು ಶಾಖೆಗೇ ಆಗಲೀ ಕೆಲಕೆಲ ಶಾಖೆಗಳನ್ನು ಕೂಡಿಸಿ ಒಂದಾಗಿ ಮಾಡಿಯಾಗಲೀ ಸ್ಥಾಯಿಸಂಘಗಳು ಏರ್ಪಡಿಸಲ್ಪಡಬೇಕು. ಈ ಸ್ಥಾಯಿಸಂಘಗಳಲ್ಲಿ ಶಾಸನಸಭೆಗಳಿಂದ ಆರಿಸಲ್ಪಟ್ಟ ಸಭ್ಯರೂ, ಆಯಾ ಶಾಖೆಯ ಮುಖ್ಯಾಧಿಕಾರಿಗಳೂ, ಸಭಿಕರಾಗಿರುವುದಲ್ಲದೆ ಆ ಶಾಖೆಗೆ ಸಂಬಂಧಿಸಿದ ಯಾವನಾದರೊಬ್ಬ ಸಭ್ಯನೋ ಮಂತ್ರಿಯೋ ಅಧ್ಯಕ್ಷನಾಗಿರಬೇಕು.

೩೯. ಸಾಧಾರಣವಾಗಿ ಎಲ್ಲ ವಿಷಯಗಳಿಗೂ ಸಂಬಂಧಿಸಿದ ಶಾಸನಗಳೂ ಈ ಶಾಸನಸಭೆಗಳಿಂದ ಅನುಮೋದಿತವಾಗಿರಲೇಬೇಕು.

೪೦. ಆದರೆ ಗೌರ್ನರು ತಮ್ಮ ಪ್ರಾಂತದ ಅಥವಾ ಅದರ ಭಾಗದ ಶಾಂತಿಗೋಸ್ಕರವಾಗಿಯಾಗಲೀ ತಮ್ಮ ಬಾಧ್ಯತೆಯನ್ನು ನಿರ್ವಹಿಸಿಕೊಳ್ಳುವುದಕ್ಕೇ ಆಗಲೀ ಅಥವಾ ಸರ್ಕಾರಿಶಾಖೆಗೆ ಸಂಬಂಧಿಸಿದುದಕ್ಕೇ ಆಗಲೀ ಯಾವುದಾದರೊಂದು ಬಿಲ್ಲು ಅವಶ್ಯಕವೆಂದು ತೋರಿದರೆ ಅದನ್ನು ನಿರ್ಧರಿಸುವುದಕ್ಕೆ ಗೌರ್ನರಿಗೆ ಅಧಿಕಾರವಿರುವುದು. ಆ ನಿರ್ಧಾರದೊಡನೆ ಬಿಲ್ಲನ್ನು ಮುಂದಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸುವರು. ಬಳಿಕ ಅದು ಶಾಸನಸಭೆಗೆ ಬರುವುದು. ಅಲ್ಲಿ ಚರ್ಚೆಯಾದ ಬಳಿಕ ಅದನ್ನು ಒಂದು ದೊಡ್ಡ ಸಂಘದ ವಿಚಾರಣೆಗೆ ಒಳಪಡಿಸುವರು. ಆ ಬಿಲ್ಲನ್ನೂ ಅದರಮೇಲೆ ನಡೆದ ಚರ್ಚೆಯನ್ನೂ ಸಹ ಇಂಡಿಯಾ ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗಿದ್ದರೆ ಹಾಗೆ ಮಾಡಲು ಸಭಿಕರು ಕೋರಬಹುದು. ಇಂಡಿಯಾ ಸರ್ಕಾರದವರು ಅದರಮೇಲೆ ಮಾಡಿದ ತೀರ್ಮಾನವೇ ಕಡೆಯದಾಗಿರಬೇಕು.

೪೧. ಇಂಥ ಬಿಲ್ಲುಗಳನ್ನು ಕುರಿತು ಪರ್ಯಾಲೋಚಿಸಲು ಏರ್ಪಡುವ ಮಹಾಸಂಘಗಳಲ್ಲಿ ಶಾಸನಸಭೆಯ ಸಭಿಕರ ಸಂಖ್ಯೆಯು ೧೦೦ ಕ್ಕೆ ೪೦ ರಿಂದ ೫೦ ರವರೆಗೆ ಇರಬೇಕು. ಇವರಲ್ಲಿ ಕೆಲರನ್ನು ಶಾಸನಸಭಾಸಭಿಕರೂ ಕೆಲರನ್ನು ಪ್ರಭುತ್ವದವರೂ ನಿಯಮಿಸಬೇಕು. ಆ ಸಭೆಯ ಬಲವು ಅಧಿಕವಾಗಿರುವಂತೆ ಮಾಡುವುದಕ್ಕೆ ಗೌರ್ನರು (ತಮ್ಮ ಹೊರತು) ಕೆಲರನ್ನು ಸಭಿಕರನ್ನಾಗಿ ಸೇರಿಸಬಹುದು. ಆದರೆ ಹೀಗೆ ಗೌರ್ನರಿಂದ ನಿಯಮಿಸಲ್ಪಡುವ ಸಭಿಕರಲ್ಲಿ $\frac{2}{3}$ ಭಾಗಕ್ಕೆ ಮಿಗಿಲಾಗಿ ಅಧಿಕಾರಿಗಳಿರಕೂಡದು.

೪೨. ಈ ಮಹಾಸಂಘದವರಿಂದ ಬಿಲ್ಲು ವಿಚಾರಿಸಲ್ಪಟ್ಟು ತೀರ್ಮಾನಗೊಂಡ ಬಳಿಕ ಅದು ಶಾಸನಸಭೆಗೆ ವರದಿಮಾಡಲ್ಪಡುವುದು. ಆ ಸಭೆಯಲ್ಲಿ ಬಿಲ್ಲಿನ ವಿಷಯವಾಗಿ ಗೌರ್ನರ ಸಹಾಯಕವರ್ಗದ ಯಾವನಾದರೊಬ್ಬ ಸಭ್ಯನಿಂದ ಏನಾದರೂ ತಿದ್ದುಪಾಟು ಮಾಡಲ್ಪಡಬೇಕೆಂದು ಸೂಚಿಸಲ್ಪಟ್ಟರೆಯೇ ಹೊರತು ಉಳಿದ ಸಭಿಕರಿಗೆ ಅದರ ವಿಷಯವಾಗಿ ತಿದ್ದುಪಾಟನ್ನು ಸೂಚಿಸುವುದಕ್ಕೇ ಆಗಲೀ ತಿರಸ್ಕರಿಸುವುದಕ್ಕೇ ಆಗಲಿ ಅಧಿಕಾರವಿರುವುದಿಲ್ಲ. ಬಿಲ್ಲಿನ ಮುಖ್ಯ ವಿಷಯವಾಗಿ ಆಕ್ಷೇಪಣವಿದ್ದರೆ ತೀರ್ಮಾನದ ರೂಪವಾಗಿ ಶಾಸನಸಭಾಸಭ್ಯರು ಅದನ್ನು ಉಪಪಾದಿಸಬಹುದು. ಅಂಥ ತೀರ್ಮಾನವು ಬಿಲ್ಲಿನ ಜತೆಯಲ್ಲಿ ವೈಸ್ರಾಯರಿಗೂ ಸ್ಟೇಟ್‌ಸೆಕ್ರೆಟರಿಯವರಲ್ಲಿಗೂ ಕಳುಹಿಸಲ್ಪಡುವುದು.

೪೩. ಬಿಲ್ಲಿನ ವಿಷಯವು ಸರ್ಕಾರಿಯ ಶಾಖಾಪರಿಮಿತಿಯನ್ನು ಮೀರುವುದಾಗಿದ್ದರೆ ಗೌರ್ನರ ಸಹಾಯಕವರ್ಗದ ಸಭಿಕರಾರಾದರೂ, ಆ ಬಿಲ್ಲನ್ನುಪಪಾದಿಸಿದ ಕೂಡಲೇ ಅದನ್ನು ಪ್ರತಿಭಟಿಸಬಹುದು. ಅದರಮೇಲೆ ತಿದ್ದುಪಾಟನ್ನು ಹೇಳಿದರೆ ಅದನ್ನೂ ಪ್ರತಿಭಟಿಸಬಹುದು. ಆ ಬಳಿಕ ಬಿಲ್ಲನ್ನು ಸಭೆಯಲ್ಲಿ ಚರ್ಚಿಸಲು ಅವಕಾಶಕೊಡುವುದು ಅಥವಾ ತಿರಸ್ಕರಿಸಿಬಿಡುವುದು ಗೌರ್ನರ ಅಧಿಕಾರಕ್ಕೆ ಒಳಪಟ್ಟಿರುವುದು. ಶಾಸನಸಭೆಯವರು ಕೋರಿದರೆ ಬಿಲ್ಲನ್ನು ವಿಚಾರಕ ಮಹಾಸಂಘಕ್ಕೆ ಗೌರ್ನರವರು ಕಳುಹಿಸಿಕೊಡುವರು.

೪೪. ಪ್ರಾಂತಿಕವಿಷಯಗಳಿಗೆ ಸಂಬಂಧಿಸಿದ ಪ್ರತಿಯೊಂದು ಶಾಸನವೂ ಗೌರ್ನರಿಂದಲೂ ಗೌರ್ನರ್ ಜನರಲ್ಲರಿಂದಲೂ ಅನುಮತಿಹೊಂದಿಯೇ ತೀರಬೇಕು. ಸಾರ್ವಭೌಮರಿಗೆ ಇಷ್ಟವಾದರೆ ಆ ಶಾಸನವನ್ನು ತಿರಸ್ಕರಿಸಿಬಿಡಬಹುದು.

೪೫. ಒಂದು ಬಿಲ್ಲನ್ನು ಗೌರ್ನರು ತಿರಸ್ಕರಿಸಿಬಿಟ್ಟ ಬಳಿಕ ಅದರಮೇಲೆ ಏನಾದರೂ ತಿದ್ದುಪಾಟುಮಾಡಿ ಅದನ್ನೇ ಮರಳಿ ಉಪಪಾದಿಸುವುದಕ್ಕೆ ಗೌರ್ನರು ಅವಕಾಶಕೊಡಬಹುದು.

೪೬. ಪ್ರಾಂತಿಕ ಶಾಸನಗಳನ್ನು ವ್ಯವಹಾರಕ್ಕೆ ಬರದಂತೆ ತಡೆದಿಡಲು ಗೌರ್ನರ್ ಜನರಲ್ಲಿಗೆ ಅಧಿಕಾರವಿರಬೇಕು. (ಸಶೇಷ).

ಪತ್ರವ್ಯವಹಾರ.

ಮದ್ರಾಸು ಇಲಾಖೆಯ ಸಮಸ್ತ ವೀರಶೈವಮಹಾಶಯರಿಗೆ ತಿಳಿಸುವದೇನಂದರೆ—

ಬಳ್ಳಾರಿಯಲ್ಲಿ ಮದ್ರಾಸು ವೀರಶೈವ ವಿದ್ಯಾವರ್ಧಕಸಂಘವು ಸ್ಥಾಪಿಸಲ್ಪಟ್ಟಿರುವದು ಸರ್ವರಿಗೂ ತಿಳಿದ ವಿಷಯವೇ ಅದೆ. ಕಾರಣ ಇಂಗ್ಲೀಷ್ ಓದುವ ಬಡ ವಿದ್ಯಾರ್ಥಿಗಳಿಗೆ ೧ ನೇ ಫಾರಂನಿಂದ ವೇತನವು (ಸ್ಕಾಲರ್‌ಸಿಪು) ಕೊಡಲ್ಪಡುವದಲ್ಲದೆ ಊಟಕ್ಕಾಗಿ ಭೋಜನಶಾಲೆಯೊಂದು (ಹಾಸ್ಟಲು) ಬಳ್ಳಾರಿಯಲ್ಲಿ ಈ ಸಂಘದಿಂದ ಸ್ಥಾಪಿತವಾಗಿದೆ. ಆದುದರಿಂದ ವೀರಶೈವಮಹಾಜನರು ಬಾಲಕರನ್ನು ಪ್ರೋತ್ಸಾಹಪಡಿಸಿ ವಿದ್ಯಾಭ್ಯಾಸಕ್ಕೆ ಕಳುಹಿಸಿಕೊಡುವರೆಂದು ಕೋರುವೆವು. ಸಂಘದಿಂದ ಓದಲಪೇಕ್ಷಿಸುವವರು ಸೆಕ್ರೆಟರಿಗಳ ಕಡೆಗೆ ಅಪ್ಲಿಕೇಷನ್ ಕಳುಹಿಸತಕ್ಕದ್ದು. ಅಪ್ಲಿಕೇಷನ್ ಅಚ್ಚು ಫಾರಂಗಳು ಬೇಕಾದಲ್ಲಿ ಸೆಕ್ರೆಟರಿಗಳ ಕಡೆಯಿಂದ ತರಸಿಕೊಳ್ಳಬೇಕು. ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಸೆಕ್ರೆಟರಿಗಳ ಕಡೆಯಿಂದ ತಿಳಿದುಕೊಳ್ಳಬೇಕು.

ಹಾರವ ಕರಿಬಸಪ್ಪ, ಶಿವಲಿಂಗಬಸಪ್ಪ, ಸೆಕ್ರೆಟರಿಗಳು.

ಶ್ರೀ ಕ್ಷೇತ್ರ ಕಾಶಿಯಲ್ಲಿರುವ ವೀರಶೈವ ವಿದ್ಯಾರ್ಥಿಮಂದಿರದ ವಿದ್ಯಾರ್ಥಿಗಳಲ್ಲಿ ಕೆಳಗೆ ಬರೆದಿರುವವರು ಈ ವರ್ಷ ಆಯಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

(ಕಲಕತ್ತಾ ಯೂನಿವರ್ಸಿಟಿಯಲ್ಲಿ)

• ವೇದಾಂತತೀರ್ಥ • ಜಗದೀಶಶಾಸ್ತ್ರಿ ಹೊಳಲ್, (ಉತ್ತರತೀರ್ಥದಲ್ಲಿ)

ಗುರುಮೂರ್ತಿಶಾಸ್ತ್ರಿ ಕಜ್ಜ ೨. (ಕಾವ್ಯಮಧ್ಯಮದಲ್ಲಿ)

(ಬನಾರಸ್ ಗೌರ್ನಮೆಂಟ್ ಕಾಲೇಜಿನಲ್ಲಿ)

ಸಂಗಮೇಶ್ವರಶಾಸ್ತ್ರಿ ಸೋಲಾಪೂರ್. (ನ್ಯಾಯಮಧ್ಯಮದಲ್ಲಿ)

(ಕಾಶ್ಮೀ ಯೂನಿವರ್ಸಿಟಿಯಲ್ಲಿ)

• ಕಾವ್ಯತೀರ್ಥ • [illegible] ಶಾಸ್ತ್ರಿ ಮಮದಾಪೂರ. (ಸಾಂಖ್ಯಮಧ್ಯಮದಲ್ಲಿ)

ಸಂಗಮೇಶ್ವರಶಾಸ್ತ್ರಿ ಮುಸಗುಪ್ಪಿ. (ಕಾವ್ಯಮಧ್ಯಮಪಟ್ಟಿ)

ಕಾಶೀ,
ತಾ|| ೮-೭-೧೯೧೮.

ಮ್ಯಾನೇಜರ್,
ವೀ. ವಿ. ಮಂದಿರ.

ಚಿತ್ರದುರ್ಗದ ತಾ|| ಚುಕ್ಕಣ್ಣನಹಳ್ಳಿ.

ಈ ಗ್ರಾಮಕ್ಕೆ ಒಂದು ಮೈಲಿ ಫಾಸಲೆಯಲ್ಲಿರುವ ಗುಹೇಶ್ವರನ ಗುಡ್ಡದ ಮೇಲಿರುವ ದೇವಸ್ಥಾನವು ಶಿಥಿಲವಾಗಿ ಪುರಾತನವಾದ ಲಿಂಗವು ಭಿನ್ನವಾಗಿದ್ದುದರಿಂದ ಇದನ್ನು ಜೀರ್ಣೋದ್ಧಾರ ಮಾಡಬೇಕೆಂದು ಮ|| ರಾ|| ಕೊನ್ಚೇವು ಮಠದ ಉದ್ದಾನಪ್ಪಯ್ಯನವರೂ, ಈ ಗ್ರಾಮದ ಮ|| ರಾ|| ಪತ್ರಾರಿ ಚಂದ್ರಪ್ಪನವರೂ ಮುಖಂಡರಾಗಿ ವಹಿಸಿ ಮತಾಭಿಮಾನಿಗಳಾದ ಮಹಾಜನಗಳ ಸಹಾಯದಿಂದ ಡಿಟೋ ಗುಡ್ಡವನ್ನು ಸುತ್ತಲೂ ದಾರಿಯನ್ನು ಸರಿಪಡಿಸಿ ನೂತನ ಲಿಂಗಪ್ರತಿಷ್ಠೆ ಮಾಡಿಸಲು ಸಾವಿರಾರು ಜನರಿಗೆ ಸಂತರ್ಪಣೆ ವಗೈರೆ ನಡೆಯುವಂತೆ ಏರ್ಪಡಿಸಿ ಜ್ಯೇಷ್ಠ ಮಾಸದಲ್ಲಿ ಮುಹೂರ್ತವನ್ನು ನಿಶ್ಚಯಿಸಿ ಪ್ರಸಿದ್ಧಪತ್ರಿಕೆಗಳನ್ನು ಕಳುಹಿಸಿದಂತೆ ಆ ಕಾಲಕ್ಕೆ ನಡೆಯಲು ಕಾರಣಾಂತರದಿಂದ ಅಡಚಣೆಯಾಯಿತು. ಸದರಿ ಲಿಂಗಪ್ರತಿಷ್ಠಾ ಕಾರ್ಯವನ್ನು ಇದೇ ಸಂ|| ಶ್ರಾವಣ ಶು|| ೫ ಸೋಮವಾರ ನಡೆಸಲು ನಿಷ್ಕರ್ಷೆಯಾಗಿದೆ. ಆ ಕಾಲಕ್ಕೆ ಸರಿಯಾಗಿ ಮತಾಭಿಮಾನಿಗಳಾದ ಸಮಸ್ತಮಹಾಜನಗಳೂ ದಯಮಾಡಿಸಿ, ಭಗವತ್ಸೇವಾನಂದವನ್ನು ಹೊಂದಬೇಕಾಗಿ ಪ್ರಾರ್ಥನೆ. ಈ ಸೇವಾಕಾರ್ಯಕ್ಕೆ ಬರತಕ್ಕವರಿಗೆ ತಕ್ಕ ಸ್ಥಳ ವಸತಿ ವಗೈರೆ ಕಲ್ಪಿಸಿ, ಉಪಚರಿಸಲು ಸ್ವಾಗತಕಮಿಟಿಯು ಏರ್ಪಡಿಸಲ್ಪಟ್ಟಿರುತ್ತದೆ. ಇದರಂತೆ ದೈವಭಕ್ತಿಯಿಂದ ಗ್ರಾಮದಲ್ಲಿರುವ ಸಮಸ್ತರೂ ಈ ಕಾರ್ಯವನ್ನು ವಿಜೃಂಭಣೆಯಿಂದ ನೆರವೇರಿಸಲು ಉತ್ಸಾಹಪೂರ್ಣರಾಗಿರುತ್ತಾರೆ. ಭಕ್ತಾದರ್ಶಿಗಳು.

ನಲ್ಲೂರು ಎ. ಇ ಗರ್ಲ್ಸ್ ಸ್ಕೂಲಿನಲ್ಲಿ ತಾ|| 10-7-18 ರಲ್ಲಿ ನಡೆದ ಶ್ರೀ ಸರಸ್ವತೀಪೂಜಾ.

ಸ್ಕೂಲ್ ಕಟ್ಟಡವು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟು ಸ್ಕೂಲು ಹಾಲ್‍ನಲ್ಲಿ ಶ್ರೀಸರಸ್ವತೀ ಮತ್ತು ಶ್ರೀಮತ್ ಚಕ್ರವರ್ತಿಗಳ ಶ್ರೀಮನ್ಮಹಾರಾಜರವರ ಚಿತ್ರಪಟಗಳು ಅಲಂಕರಿಸಲ್ಪಟ್ಟು ಸುಮಾರು ಮಧ್ಯಾಹ್ನ 5 ಘಂಟೆಗೆ ಗ್ರಾಮದ ವಿದ್ಯಾಭಿಮಾನಿಗಳಿಂದಲೂ ಬಾಲಕ ಬಾಲಕಿಯರಿಂದಲೂ ಸುಮಾರು 300 ಜನರವರೆಗೂ ಸಭೆಗೆ ಸೇರಿದ್ದರು. ಈ ಸರಸ್ವತೀಪೂಜಾ ಗ್ರಾಮದ ಮ|| ರಾ|| ಸಾಹುಕಾರ್ ಚನ್ನವೀರಪ್ಪನವರ ಮಕ್ಕಳು ರುದ್ರಪ್ಪನವರು ತಮ್ಮ ಅಣ್ಣನವರ ಮಗಳು ಮಲ್ಲಮ್ಮನು ಪರೀಕ್ಷೆಯಲ್ಲಿ ಉತ್ತೀರ್ಣಳಾದುದಕ್ಕಾಗಿ ತಮ್ಮ ಸ್ವಂತ ಖರ್ಚಿನಿಂದ ಈ ದಿವಸ ಸಭೆಯನ್ನು ನಡೆಸಿದರು. ಈ ದಿನ ಮಧ್ಯಾಹ್ನ 5 ಘಂಟೆಗೆ ಸ್ಕೂಲು ಹಾಲ್‍ನಲ್ಲಿ ಸೇರಿದ ಎಲ್ಲರೂ ಶ್ರೀ ಸರಸ್ವತೀಪೂಜಾ ಮತ್ತು ಶ್ರೀ ಚಕ್ರವರ್ತಿಗಳವರ ಶ್ರೀಮತ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆದ ನಂತರ ಈ ಸ್ಕೂಲಿನ ಅಭಿವೃದ್ಧಿಗೆ ಅವಶ್ಯವಾದ ವಿಷಯಗಳಲ್ಲಿ ಮ|| ರಾ|| ಬಾಯ್ಸ್ ಸ್ಕೂಲು ಹೆಡ್ಮಾಸ್ತರರೂ ಮತ್ತು ಗರ್ಲ್ಸ್‍ಸ್ಕೂಲು ಹೆಡ್ಮಾಸ್ತರರವರೂ ಉಪನ್ಯಾಸ ಮಾಡಿದಮೇಲೆ ಸ್ಕೂಲಿಗೆ ಅವಶ್ಯಕವಾಗಿ ಬೇಕಾದ ಜವಾನಿ ವಿಚಾರದಲ್ಲಿ ಸರ್ಕಾರದವರ ವಿಚಾರವನ್ನು ಈ ಗರ್ಲ್ಸ್‍ಸ್ಕೂಲು ಅ|| ಮಾ|| ಕೆ. ರಂಗರಾಯರು ಹೇಳಿದಮೇಲೆ ಗ್ರಾಮದವರೇ ಒಬ್ಬ ಜವಾನನನ್ನು ಸದ್ಯ ಸ್ವಂತ ಲಾಗವಾಡಿನಿಂದ ನೌಕರರ್ ಮಾಡಿಕೊಳ್ಳುವುದು ಉತ್ತಮವೆಂತ ಗ್ರಾಮಸ್ಥರಿಗೆ ಕಂಡುಬಂದು ಸ್ಕೂಲಿಗೆ 100 ಜನ ಬಾಲಿಕೆರನ್ನು ಜವಾಬಣಿವಾಡಿ ಸರ್ಕಾರದಿಂದ ಜವಾನಿಯು ಮಂಜೂರಾಗುವವರೆಗೆ ಸುಮಾರು 6 ತಿಂಗಳವರೆಗೆ ಮಾಹೆಯಾನ 4 ರೂ. ನಂತೆ ಬೇಕಾಗುವ 24 ರೂ. ಗಳನ್ನು ಕೊಡುವುದಾಗಿ ವಾಗ್ದಾನಮಾಡಿದರು. ಕೊಡಲೇ ಮ|| ರಾ|| ರುದ್ರಪ್ಪನವರು ತಾವು 6 ರೂ. ಧರ್ಮಾರ್ಥವಾಗಿ ಕೊಟ್ಟರು. ಅಲ್ಲದೆ ತಾ|| 11-7-18 ರ ಲಾಗಾಯ್ತು ಜವಾನಿಯನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಒಪ್ಪಿದರು. ಈ ವಿಚಾರದಲ್ಲಿ ಸ್ಕೂಲ್ ಉಪಾಧ್ಯಾಯರುಗಳು ಇವರನ್ನು ಬಹುವಾಗಿ ವಂದಿಸಿದರು ಅನಂತರ ಎಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಹಂಚಿದನಂತರ ಬಾಲಬಾಲಕಿಯರಿಗೆ ತಿಂಡಿಯು ಹಂಚಲ್ಪಟ್ಟಿತು. ವಿದ್ಯಾಭಿಮಾನಿ.

ಬರುವ ಶ್ರಾವಣ ಶುದ್ಧ ಪ್ರತಿಪದದ ದಿವಸ ಶ್ರೀ ಅಂಕಲಗಿ ಅಡವಿ ಶಿವಯೋಗಿಗಳವರ ಪುರಾಣ ಶ್ರವಣವು ಒಂದು ತಿಂಗಳವರೆಗೆ ನಡೆದು ಶ್ರಾವಣ ವದ್ಯ ೧೦ ಶನಿವಾರ, ಆದಿತ್ಯವಾರ ಏಕಾದಶಿ ಅರವತ್ತುಮೂರು (೬೩) ಪುರಾತನ ಜನರ ಕೊಡುಬಿಕ್ಕೆ, ದ್ವಾದಶಿ ಸೋಮವಾರ ಕಡೆಯ ದಿವಸ ಪ್ರಾತಃಕಾಲ ಆರು ಘಂಟೆಗೆ ಪೂಜಾ ಪ್ರಾರಂಭವಾಗಿ ವಿಧಾನಪೂರ್ವಕವಾಗಿ ಸಮಾಪ್ತವಾಗುವದು. ಆದುದರಿಂದ ಯಾವತ್ತು ಭಕ್ತ ಜನರು ತಮ್ಮ ತಮ್ಮ ಕುಟುಂಬ ಪರಿವಾರ ಸಹಿತವಾಗಿ ಬಂದು ಶಿವಯೋಗಿಗಳ ದರ್ಶನಾದಿಗಳನ್ನು ಕೈಕೊಂಡು ಹೋಗಬೇಕು. ಶಿವಯೋಗಿಗಳ ಕಾರ್ಯ ಸಮಾಪ್ತಿಗೈದನಂತರ ವರ್ಷಕ್ಕೊಮ್ಮೆ ಐದು ದಿವಸ ಸಮಾರಂಭದಲ್ಲಿ ಶಿವಕೀರ್ತನೆ, ಗಾಯನ, ಆಟ ನೋಟ, ವಾದ್ಯ ಬಾರಿಸುವದು ನಡೆಯುವದು. ದಯಾಶೀಲರಾದ ಭಕ್ತ ಜನರು ಈ ಸಮಾರಂಭಕ್ಕೆ ಬರುವಾಗ್ಗೆ ಹಾಸಿಗೆ, ಸ್ವಲ್ಪ ಭಾಂಡೆ ತರಬೇಕು. ಯಾಕಂದರೆ ಇದು ದೊಡ್ಡ ಸಮಾರಂಭವಾದುದರಿಂದ ನಿಮಗೆ ತೋಯಬೀಳುವದು. ಈ ಸಮಾರಂಭವಾಗತಕ್ಕ ದಿವಸಗಳು ಮಳೆಗಾಲ ಇರುವದರಿಂದ ನಮ್ಮ ಮಠದ ಸುತ್ತಲೆ ಒಂದು ಮೈಲು ಅಂತರದಮೇಲೆ ಹತ್ತು ಹದಿನೈದು ಗ್ರಾಮಗಳು ಇರುವದರಿಂದ ಅಲ್ಲಿ ಉಳಿಯಲಿಕ್ಕೆ ಜಾಗದ ವ್ಯವಸ್ಥಾ ಮಾಡಿಸಿರುತ್ತೇವೆ. ಮಠದಲ್ಲಿ ನಿಮ್ಮ ನಿಯಮಲಿಂಗಾರ್ಚನಕ್ಕೂ, ಭೋಜನಕ್ಕೂ ಕೊರತೆ ಇಲ್ಲದಂತೆ ವ್ಯವಸ್ಥೆ ಮಾಡಿಸಿರುತ್ತೇವೆ. ಒಳಗಡೆ ಹುಬ್ಬಳ್ಳಿ ತಾಲೂಕ ಪೈಕಿ ಮಂಟೂರ ಗ್ರಾಮದಲ್ಲಿ ೭೭೦ ಅಘೋರಗಣಂಗಳ ಪೂಜೆಯನ್ನು ನಮ್ಮ ಗುರುಗಳು ಮಾಡಿಸಿದ್ದರು. ಆ ಕಾಲಕ್ಕೆ ಹಂಚರ, ದಾವಣಗೇರಿ, ರಾಣೇಬಿನ್ನೂರ, ಮೈಸೂರ, ಹಾವೇರಿ, ಬಳ್ಳಾರಿ, ಸೊಲ್ಲಾಪೂರ, ರಬಕವಿ, ಬನಟ್ಟಿ, ಅಥಣಿ, ಬಾಗಲಕೋಟಿ, ಹುಬ್ಬಳ್ಳಿ ವಗೈರೆ ಯಾವತ್ತು ಊರ ಭಕ್ತ ಜನರು ಆ ಸಮಾರಂಭದಲ್ಲಿ ಅನ್ನಸತ್ರ, ಜಂಗಮಾರಾಧನೆ ಮಾಡಿಸಿ ಕೀರ್ತಿ ಪಡೆದರು. ಮತ್ತು ಹೋದ ವರ್ಷ ಅಥಣಿಯಲ್ಲಿ ಗಚ್ಚಿನ ಮಠದ ಮುರಗೇಂದ್ರಸ್ವಾಮಿಗಳವರು ಪುರಾತನರ ಪೂಜಾ ಮಾಡಿಸಿದ ಕಾಲಕ್ಕೆ ಎಷ್ಟೋ ಭಕ್ತ ಜನರು ಅನ್ನಸತ್ರ, ಜಂಗಮಾರಾಧನೆಗಳನ್ನು ಐದು ದಿವಸ ಮಾಡಿಸಿ ಕೀರ್ತಿ ಪಡೆದರು. ಇದರಂತೆ ನಮ್ಮ ಅಂಕಲಗಿ ಮಠದಲ್ಲಿಯಾದರೂ ಮಾಡತಕ್ಕ ಭಕ್ತ ಜನರು ಮಾಡಿಸುವದಕ್ಕೆ ತಿಳಿಸಿದರೆ ಅದರಂತೆ ವ್ಯವಸ್ಥೆ ಮಾಡಲಾದೀತು. ಈ ಮಠದ ಸ್ವಾಭಿಮಾನಿಗಳಾದ ಭಕ್ತ ಜನರು ಎಷ್ಟೇ ಅಡಚಣೆಗಳಿದ್ದರೂ ಅವುಗಳನ್ನು ಬದಿಗಿಟ್ಟು ಈ ಸಮಾರಂಭಕ್ಕೆ ಅಗತ್ಯವಾಗಿ ಬರಬೇಕು. ಈ ಸಮಾರಂಭ ಆಗತಕ್ಕ ನಮ್ಮ ಮಠವು ಬೆಳಗಾವದ ಮುಂದೆ ಸುಳೆಭಾವಿ ಸ್ಟೇಶನಕ್ಕೆ ಒಂದು ಮೈಲು ಅಂತರದಲ್ಲಿರುವುದು. ಸದರಿ ಸ್ಟೇಶನಕ್ಕೆ ಇಳಿದು ಮಠಕ್ಕೆ ಬರಬಹುದು.

ವ್ಯವಸ್ಥಾಪಕರು.

ಗಂಗಾಧರರಾವ ದೇಶಪಾಂಡೆ, ನಾಗಯ್ಯಾ ಮಲ್ಲಯ್ಯಾ ಮಠದ, ಬಸವಂತಪ್ಪಾ ಗುತ್ತಿ, ಭೀಮಪ್ಪಾ ಸಿದ್ದಪ್ಪಾ ತೆರಣಿ, ಈರಯ್ಯಾ ರಾಚಯ್ಯಾ ಹಿರೇಮಠ, ಈಶ್ವರಪ್ಪಾ ದಾನಪ್ಪಾ ಶೆಟ್ಟರ, ಶಿವಲಿಂಗಪ್ಪಾ ಮಲ್ಲಪ್ಪಾ ಮಠದ, ಲಕ್ಷ್ಮಪ್ಪಾ ಮಾವಿನಕಟ್ಟಿ.

ಆದವಾನಿ ವೃತ್ತಾಂತ.

ಭೋಜರಾಜನಕಾಲವೂ—ಮೈಸೂರುದೇಶವೂ.

(ಶ್ರೀ ಕುಮಾರಸ್ವಾಮಿಶರ್ಮಣಾಂ ಪುನರಾಗಮನಂ)

ಶಿವಮೊಗ್ಗಾ ಡಿಸ್ಟ್ರಿಕ್ಟ್ ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು ಜವಳೀ ಅಂಗಡಿ ಹರಸೂರು ಹಿರೇಮಠದ ಶಿವಕುಮಾರಸ್ವಾಮಿ ಶರ್ಮರವರು ಈ ಹಿಂದೆ ಯಮ್ಮಿಗನೂರು. ಗುಡೆಕಲ್ಲಿಗೆ ದಯಮಾಡಿಸಿದ ಕಾಲದಲ್ಲಿ ವಿದ್ಯಾ ಎಂಬುವದನ್ನ ಕುರಿತು ವೈದಿಕವಂವಾಗಿಯೂ, ವೇದಾಂತವಿಚಾರವಾಗಿಯೂ, ಶಿವಾನುಭವಪರವಾಗಿಯೂ ಮಾಡಿದ ಉಪನ್ಯಾಸವನ್ನ ಮಾತ್ರ ಮೈಸೂರು ಸ್ಟಾರ್ ಪತ್ರಿಕಾಕರ್ತರು ತಮ್ಮ ಘನವಾದ ಪೇಪರಿನಲ್ಲಿ ಪ್ರಕಾರಮಾಡಿದ್ದನ್ನ ನೋಡಿದ್ದೆವು. ಸದರಿ ಸ್ವಾಮಿಗಳವರು ಜವಳೀ ಖರೀದಿಗಾಗಿ ಆದವಾನಿಗೆ ದಯಮಾಡಿಸಿರುವಾಗ ಇಲ್ಲಿಯ ಪ್ರಮುಖಜನರ ಪ್ರಾರ್ಥನೆಯ ಪ್ರಕಾರ ಉರುವುಕೊಂಡ ಕರಿವೃಷಭಸ್ವಾಮಿಗಳ ಚೌಕಿಮಠದಲ್ಲಿ ಉಪನ್ಯಾಸವನ್ನು ಮಾಡಿದರು. ಆವಾಗ್ಗೆ ಪಂಡಿತರುಗಳು, ಶಂಕರಾನಂದ ಭಾರತಿ, ಗುರುಶಂಕರಾನಂದ, ಗೋವಿಂದರಾಘವಯ್ಯ, ಚೌಕೀಮಠದ ಚನ್ನಬಸವಮರಿದೇವರು, ರೇವಯ್ಯನವರು, ರಾಯನಗೌಡರು, ಜಮ್ಮಾಪುರ ಕೊಮಾರಗೌಡರು, ವಿರೂಪಾಕ್ಷಗೌಡರು, ಸೋಮಪ್ಪನವರು, ಶಾಂತವೀರಯ್ಯನವರು, ಪಂಚಾಕ್ಷರಯ್ಯನವರು ದಯಮಾಡಿಸಿದ್ದರು. ಸಭೆಗೆ ಸೇರಿದ ಕಾಲದಲ್ಲಿ ಆವಾಗ ಪಣಪಾಲದ ಪಟೇಲ್ ಅಣ್ಣಾಜಿಗೌಡರವರು, ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಸ್ವಾಮಿಯ ಧಾನವನ್ನು ನೋಡೋಣಾಗಿತ್ತು. ಈಗ ಪ್ರತ್ಯಕ್ಷವಾಗಿಯೂ ಕಾರ್ಯತಃ ಸ್ವೋಪನ್ಯಾಸವನ್ನು ನಾವುಗಳೆಲ್ಲರೂ ಕಣ್ಣಾರೆ ಕಂಡೂ ಕೇಳುವಂತೆ ನಮ್ಮಗಳ ಸುದೈವದಿಂದ ದಯಮಾಡಿಸಿದ್ದು ಸಂತೋಷಪ್ರದವೇ ಸರಿ. ಇಂಥಾ ಮಹತ್ತರವಾದ ಸಭೆಗೂ ಶಿವಕುಮಾರಸ್ವಾಮಿ ಶರ್ಮಾ ಇವರು ಯಾವಜ್ಜೀವವೂ ನಮ್ಮ ಆಜೂಬಾಜೂ ನಡೆಯುವ ಸಭೆಗಳಿಗೆಲ್ಲಾ ಪ್ರೆಸಿಡೆಂಟರಾಗಿರಬೇಕೆಂತಲೂ ನೈಜಾಂ ಇಲಾಖಾ ಜಮ್ಮಾಪುರದ ರಾಯನಗೌಡ ಕುಲಕರ್ಣಿ ಇವರು ಒಪ್ಪಿದಕ್ಕೆ ಅಣ್ಣಾಜಿಗೌಡರೇ ಮೊದಲಾದ ಸರ್ವರೂ ಕೈಚಪ್ಪಾಳೆ ಮೂಲಕ ಅನುಮೋದನ ಕೊಟ್ಟರು. ನಂತರ ಸ್ವಾಮಿಗಳು ಅಪ್ಪಣೆಕೊಡಿಸಿದ್ದು ಏನಂದರೆ—ನನಗಿಂತಲೂ ವಿದ್ಯಾವಂತರೂ ಪಂಡಿತರೂ ಈ ಸಭೆಯಲ್ಲಿ ಅನೇಕರು ಇರುತ್ತಾರೆ. ಅಂಥಾ ಪಂಡಿತರನ್ನ ಚುನಾಯಿಸಿದರೆ ಚನ್ನಾಗಿತ್ತು. ಆದರೂ ನಿಮ್ಮ ಇಷ್ಟದಂತೆ ನಾನು ಇಂಥಾ ಪಂಡಿತಸಭೆಗೆ ಅರ್ಹತೆಯುಳ್ಳದಿದ್ದರೂ ನನ್ನ ಅಲ್ಪಮತಿಗೆ ತೋಚಿದಷ್ಟು ಉಪನ್ಯಾಸಿಸುತ್ತೇನೆ.

ಶ್ಲೋಕಗಳು.

ಅನ್ಯಾದಶಾನಾಂವರ್ಣಾನಾಂ ಶ್ರೇಷ್ಠೋ ಮಾಹೇಶ್ವರೋಜನಃ | ನವಿಶೇಷೋಸ್ತಿವರ್ಣಾನಾಂ ಸರ್ವಂಬ್ರಹ್ಮಮಿದಂಜಗತ್ | ಬ್ರಹ್ಮಣಾಪೂರ್ವಸೃಷ್ಟಂ ಹಿ ಕರ್ಮಭಿರ್ವರ್ಣತಾಂಗತಂ | ಬ್ರಾಹ್ಮಣಾಃಕ್ಷತ್ರಿಯೋವೈಶ್ಯ ಶೂದ್ರಶ್ಚ್ಯಾವಹಾರಕಃ | ಗೋಪಾಲಕಶ್ಶಿಲ್ಪಕಶ್ಚ ಸ್ವರ್ಣಕಾರಕುಲಾಲಕ್ | ತಂತುವಾಯಃಕ್ಷೌರಕಶ್ಚ | ರಜಕೋವಸ್ತ್ರಭೇದಕಃ | ಚರ್ಮಖಂಡನಜಾತಿಶ್ಚ ತಿಲಘಾತಕಲುಬ್ಧಕೌ | ಚಂಡಾಲಶ್ಚೈವಮಾತಂಗಾ | ವರ್ಣಾಶ್ಚಾಷ್ಟಾದಶಸ್ಮೃತಾಃ || ಪೂರ್ವಭೋಜರಾಜನ ಕಾಲದಲ್ಲಿ ರಾಜಧಾನಿಯಾದ ಧಾರಾನಗರಿಯಲ್ಲಿರತಕ್ಕ ಸಮಸ್ತವಾದ ಬ್ರಾಹ್ಮಣಮಾಹೇಶ್ವರಾದಿ ಚಾಂಡಾಲಪರ್ಯಂತರ ಇರತಕ್ಕ ಹದಿನೆಂಟು ಜಾತಿಯವರಿಗೆಲ್ಲಾ ತನ್ನ ಗೌರ್ನಮೆಂಟಿನಿಂದಲೇ ಅಶನವಸನಾದಿಗಳನ್ನು ಕೊಟ್ಟು ಬಲಾತ್ಕಾರ ವಿದ್ಯಾಭ್ಯಾಸದ ರೂಲ್ಸನ್ನ ಜಾರಿಗೆ ತಂದು ನನ್ನ ಸಂಸ್ಥಾನದಲ್ಲಿರತಕ್ಕ ಸಮಸ್ತವಾದ ಜಾತಿಯವರೂ ವೈದಿಕವಿದ್ಯೆಯಲ್ಲೇಯಾಗಲಿ ಅವೈದಿಕವಿದ್ಯೆಯಲ್ಲೇ ಆಗಲಿ ಪಂಡಿತರಾಗಿ ಯಾರು ಇರುವುದಿಲ್ಲವೋ ಅಂಥಾ ಪಾಮರರು ನನ್ನ ದೇಶದಿಂದ ಗಡೀಪಾರು ಮಾಡಬೇಕೆಂಬದಾಗಿ ನಿರ್ಬಂಧಾಜ್ಞೆ ಮಾಡಿದ್ದರು. ಈಗಲಾದರೋ ಮೈಸೂರು ಶ್ರೀಮನ್ಮಹಾರಾಜಾ ರಾಜಾಸಾಹೇಬ್ ಶ್ರೀ ಕೃಷ್ಣರಾಜವೊಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಜಿ. ಸಿ. ಬಿ. ಈ. ಯವರು ಈ ಸಂಸ್ಥಾನದಲ್ಲಿರತಕ್ಕ ದೌರ್ಭಾಗ್ಯವಂತರ ಬಾಲಕಯುವಕರಿಗೂ ಯೋಗ್ಯವಾಗಿ ಯಥೋಚಿತ ಅಶನವಸನಾದಿಗಳಿಗೆ ಸೌಕರ್ಯಗಳನ್ನ ಕಲ್ಪಿಸಿಕೊಟ್ಟು ಅಂಥಾ ಮಹೋಪಕಾರವನ್ನ ಚಿರಸ್ಮರಣೀಯವಾಗಿಯೂ ಆಚಂದ್ರಾರ್ಕಸ್ಥಾಯಿಯಾಗಿಯೂ ಸೌಕರ್ಯಗಳನ್ನ ನೆಲೆಗೊಳ್ಳುವಂತೆ ಮಾಡಿಸಬೇಕಾಗಿ ಪ್ರಾರ್ಥನೆ. ಹ್ಯಾಗಂದರೆ—ಬಾಲಕರ ತಂದೆ ತಾಯಿಗಳು ನಿರ್ಗತಿಕರಾಗಿ ಮನೆಮನೆಗೂ ಅಲೆದು ಬ್ರಹ್ಮಕಪಾಲವನ್ನು ಹಸ್ತದಲ್ಲಿ ಹಿಡಿದು ತಿರುಗುಂಡು ಇರುವಾಗ ತಮ್ಮ ತಮ್ಮ ಮಕ್ಕಳಿಗೆ ಒಟ್ಟೆಬರೆಗಳನ್ನು ಒದಗಿಸಿಕೊಂಡು ಜೀವನಮಾಡುವದೇ ದುರ್ಲಭವಾಗಿದ್ದರೂ ದುರ್ಭಿಕ್ಷದಲ್ಲಿ ಅಘಾಸಮಾಸ ಬಂದಂತಾಯ್ತೇ ಹೊರ್ತು ಮತ್ತೆ ಬೇರೆಯಿಲ್ಲ. ಅಲ್ಲದೆ ತಮ್ಮ ತಮ್ಮ ಮಕ್ಕಳಿಗೆ ಯಾವ ರೀತಿ ವಿದ್ಯಾರ್ಜನೆ ಮಾಡಿಸಬೇಕಾಗಿ ಬರುತ್ತೋ ಸರ್ವರೂ ವಿಚಾರಮಾಡತಕ್ಕದ್ದಾಗಿರುತ್ತೆ. ಈಗಲಾದರೊ ಭೋಜರಾಜನ ಕಾಲದಲ್ಲಿದ್ದಂತೆ ತಮ್ಮ ದೇಶವನ್ನ ಧಾರಾನಗರಿಯಂತೆಯೇ ಉದ್ಧಾರಮಾಡಬೇಕೆಂಬುವದು ಶ್ರೀಮನ್ಮಹಾರಾಜರವರ ಸರ್ವಜ್ಞದಿವ್ಯಚಿತ್ತದಲ್ಲಿ ಮೇಲ್ಕಂಡ ವಿಚಾರವಿದ್ದುದರಿಂದಲೇ ಇಂಥಾ ಉತ್ತಮಸ್ಥಿತಿಗೆ ಬಂದಿರುತ್ತೆ. ಗೌರ್ನಮೆಂಟಿನವರು ಇತಃಪರ ಸಹಾಯಮಾಡಿದರೆ ಮೈಸೂರು ಧಾರಾನಗರಿಯಂತೆಯೂ ಮಹಾರಾಜರು ಭೋಜರಾಜರಂತೆಯೂ ಮಹಾಮಹಾಕಾಳಿದಾಸ ಪ್ರಭೃತಿಗಳು ಹೇಗೆ ಜಗದ್ವಿಖ್ಯಾತವಾದ ಗ್ರಂಥಗಳಲ್ಲಿ ಬೆಗೆ ವರ್ಣಿಸುತ್ತಿದ್ದರೋ ಅದರಂತೆ ಮೈಸೂರುದೇಶವು ಮಾದರಿ ಸಂಸ್ಥಾನವೆಂಬುವ ಬಿರುದನ್ನ ತಗದುಕೊಳ್ಳುವ ವಿಷಯದಲ್ಲಿ ಘಂಟಾಘೋಷವಾಗಿ ಹೇಳುವಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ. ಇಂಥಾ ಬಲಾತ್ಕಾರ ವಿದ್ಯಾಭ್ಯಾಸದ ರೂಲ್ಸನ್ನ ಜಾರಿಗೆ ತಂದವರು ಶ್ರೀ ಸಯಾಜಿರಾವ್ ಗಾಯಕವಾಡ ಬರೋಡೆಯ ಮಹಾರಾಜರವರು ಮತ್ತೂ ಕೈ. ವಾ. ಗೋಪಾಲಕೃಷ್ಣ ಗೋಖಲೆಯವರು ತಮ್ಮ ಜೀವಮಾನವನ್ನೆಲ್ಲಾ ಪರೋಪಕಾರಕ್ಕಾಗಿ ವಿನಿಯೋಗಿಸಿ ನಮ್ಮ ಕಣ್ಣಿಗೆ ಅಂಥಾ ಮಹನೀಯರು ಕಾಣಿಸದೆಯಿದ್ದರೂ ಅವರ ಗ್ರಂಥಗಳೇ ಸರ್ವಜನವಿದಿತವಾಗಿರುತ್ತವೆ. ಹೀಗಿರುವಾಗ ಮದ್ರಾಸ್ ಗೌರ್ನಮೆಂಟಿನವರನ್ನ ಮೈಸೂರುದೇಶವು ಹೇಗೆ ವಿದ್ಯಾವಿಷಯವೇ ಮಾತ್ರವಲ್ಲದೆ ಸರ್ವವಿಷಯದಲ್ಲಿಯೂ ಮುಂದುವರಿದಿರುವದನ್ನ ದರ್ಪಣದಂತೆ ಪ್ರತಿಬಿಂಬಿಸಿರುವವನ್ನ ತೋರಿಸಿ ಪ್ರಾರ್ಥಿಸಬೇಕೆಂತಲೂ ಇಂಥಾ ಮೇಲ್ಕಂಡ ಸಲಕರಣೆಗಳನ್ನ ಮದ್ರಾಸ್ ಗೌರ್ನಮೆಂಟಿನ ಡಿಸ್ಟ್ರಿಕ್ಟ್‍ಬೋರ್ಡು ಮೆಂಬರುಗಳಿಗೆ ನಾವುಗಳೂ ಸಹ ಅನುಯಾಯಿಗಳಾಗಿ ಸೇರಿ ಕೆಲಸ ನಡಸತಕ್ಕದ್ದು ಯಥಾರ್ಥವೆಂತಲೂ ಸರ್ವರೂ ಒಪ್ಪಿಕೊಂಡು ಈಗ ನಡೆಯುತ್ತಿರುವ ಅತ್ಯುತ್ಕಟವಾದ ಯುದ್ಧದಲ್ಲಿ ನಮ್ಮನ್ನಾಳುವ ಸಾರ್ವಭೌಮ ಮಹಾರಾಜರಿಗೆ ಜಯವಾಗಲೆಂದು ಶಿವಕುಮಾರಸ್ವಾಮಿ ಶರ್ಮರವರು ಗದ್ದಿಗೆಸ್ವಾಮಿಗೆ ಕರ್ಪೂರಹಾರತಿ ಜಯಧ್ವನಿ ಮಾಡಿದಕೂಡಲೇ ಸರ್ವರೂ ಆಜ್ಞಾಪ್ರಕಾರ ಜಯನಾದವನ್ನು ಮಾಡಿದ ತರುವಾಯ ಸಭೆಯು ಮುಕ್ತಾಯವಾಯ್ತು.

ಪ್ರತ್ಯಕ್ಷದರ್ಶಿ.

ಪ್ರಸಿದ್ಧವಾದ ಜಾನುವಾರುಗಳ ಕಾಲುವೆಡಕದ ಎಣ್ಣೆ

ಇದು ಜಾನುವಾರುಗಳಿಗೆ ಕಾಲುವಡಕ, ಬಾಯಿ ಹುಣ್ಣು ಇನ್ನೂ ಇತರ ವಿಧವಾದ ಘಾಯಗಳಿಗೆ ಶ್ರೇಷ್ಠವಾದ ವ್ರಣಹಾರಿ ಔಷಧ. 3

ಸೀಸೆ 1 ಕ್ಕೆ 1—0—0, 0—12—0, 0—6—0.

ವಿಳಾಸ:-ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ||

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಹೋರೂಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೊಷರ್ ಜಾನ್ ಸೀರೆ	... 5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ	... 3.0.0	ಜರಾಕ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ	... 5.0.0	ಕಾಲರು ಟ್ವಿಲ್ ಷರಟು	... 1-12.0

ನಮ್ಮ ವಿಳಾಸ:— ಎ. ಎ. ಎಸ್. ಪಾಣಿ,
31 ಸಾಹುಕಾರಪೇಟೆ, ಮದ್ರಾಸ್.

ಮಕ್ಕಳ ತಲೆ ಕಜ್ಜಿ ಎಣ್ಣೆ.

ಮಕ್ಕಳ ತಲೆಯಲ್ಲಿ ಕಜ್ಜಿಯಾಗಿ ಹೇನು ಹೆಚ್ಚಿ ನಿರ್ವಾಹವಿಲ್ಲದೆ ಕೂದಲು ತೆಗೆಯಬೇಕಾಗುತ್ತೆ. ಈ ಎಣ್ಣೆ ಒಂದುಸಾರಿ ಹಚ್ಚಿದಕೂಡಲೇ ಹೇನು ಉಮರಿ ಕಜ್ಜಿ ಮಾಯವಾಗುತ್ತೆ. ಶೀಸೆ 1 ಕ್ಕೆ 1—0—0.

ಪಂಚತಿಕ್ತಕಷಾಯ. 3

(ಇಂಡ್ಯಾ ಗೌರ್ನಮೆಂಟಿನಲ್ಲಿ ರಿಜಿಸ್ಟರ್ಮಾಡಲ್ಪಟ್ಟು ಭಂಗಾರದ ಪದಕಹೊಂದಿದೆ)

ಎಂಥಾ ಕಠಿಣಜ್ವರಕ್ಕೂ 2 ದಿನದ ಉಪಯೋಗದಲ್ಲಿ ನಿಶ್ಶೇಷ ಗುಣಕೊಡುತ್ತೆ. ಸೀಸೆ 1 ಕ್ಕೆ 0-12-0, ಡಜನ್ 1 ಕ್ಕೆ 7-8-0.

ವಿಳಾಸ:-ಜ್ವರಾರಿ ಕಂಪೆನಿ, ತೀರ್ಥಹಳ್ಳಿ, ಶಿವಮೊಗ್ಗಾ ಡಿ||

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 38

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಸ್ಸಂಗದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಜುಲೈ ತಾ|| ೨೧ ರಿಂದ ೧೯೧೮ ನೆಯ ಜುಲೈ ತಾ|| ೨೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಷಾಢ ಶು|| ತ್ರಯೋದಶಿಯಿಂದ ಆಷಾಢ ಬ|| ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ
21	ಭಾನು	ತ್ರಯೋ	52-52	ಜ್ಯೇಷ್ಠ	0-9	6
22	ಸೋಮ	ಚತು	51-38	ಮೂಲ	1-47	7
23	ಮಂಗಳ	ಪೌರ್ಣ	49-14	ಪೂಷಾ	2-11	8
24	ಬುಧ	ಪಾಡ್ಯ	45-43	ಉಷಾ	1-27	9
25	¹ಗುರು	ಬಿದಿಗೆ	41-15	ಧನಿಷ್ಠ	57-32	10
26	ಶುಕ್ರ	ತದಿಗೆ	36-0	ಶತಭಿಷ	54-9	11
27	²ಶನಿ	ಚೌತಿ	30-19	ಪೂಭಾ	50-9	12

(1) ಮೇಲುಕೋಟೆಯಲ್ಲಿ ಮಹಾಭಿಷೇಕ, ಮತ್ತು ಕಲ್ಯಾಣೋತ್ಸವ. (2) ಸಂಕಷ್ಟಚತುರ್ಥಿ, ಆದಿಶುಕ್ರವಾರಂ.

ಮೈಸೂರ್: ವೈ. ತಿರುಮಲಯ್ಯಂಗಾರವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನವಭಕ್ತ್ಯಾವತಾರಾ ಪಕ್ಷಜ್ಞನಕ್ಷತ್ರಮನೋಹರರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತವಾಲಾಕುಲಂ | ಪ್ರೇಮಂಚೆತಿ ಲಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಜುಲೈ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೩೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ್ಕಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೭ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.



ಮದರಾಸು ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‍ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ೩೦ ದಿನ ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರಾಕ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಉತ್ತರಮುಖ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರಾಕ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
33 8, ಇರುಳಪ್ಪನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ವರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 33

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮೊತುಮಾತಿಗೂ ವೈದ್ಯರ ಸಮಯವನ್ನು ಕಾದು ಮರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಚ್. ವ್ಹಿ. ಇನ್ಸ್ಟಿಟ್ಯೂಟ್ ಆಫ್‍ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮತ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
17 ಆನಂದ ಬುಕ್‍ಡಿಪೋ, ಮೈಸೂರು.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ. ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩. ಜೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಎಲ್ಲಾ ರೋಗಗಳಿಗೆ ೧ಡ-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷ್ಯದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
35 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅತ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವರಶಾಸ್ತ್ರಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ. ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ • ಭಗವದ್ಗೀತೆ • ಯ ತರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅಪೂರ್ವವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣವಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ. ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

11 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ವಿಜ್ಞಾಪನೆ.

ಯುದ್ಧವು ಈಗಲೇ ಮುಗಿಯುವ ಚಿಹ್ನೆಯು ತೋರುವುದಿಲ್ಲ. ಪದಾರ್ಥಗಳ ಬೆಲೆಯೆಲ್ಲಾ ಹೆಚ್ಚಿರುವುದು ಸರ್ವರಿಗೂ ಗೊತ್ತೇ ಇದೆ. ತಥಾಪಿ ಹೊರಗಣಿಂದ ಬಂದಲ್ಲದೆ ಗತ್ಯಂತರವಿಲ್ಲದ ಕಾಗದದ ಬೆಲೆಯು ಈಗ ೧ ಕ್ಕೆ ೫ ರಷ್ಟು ಏರಿಹೋಗಿದೆ. ಅಷ್ಟು ಕೊಟ್ಟರೂ ಬೇಕಾದ ಕಾಗದವು ಸಿಕ್ಕುವುದೇ ದುರ್ಲಭವಾಗಿದೆ. ಬೊಂಬಾಯಿ ಮದ್ರಾಸುಗಳಲ್ಲಿ ಅಷ್ಟೂ ಇಷ್ಟೂ ಸಿಕ್ಕಿದರೂ ಅಲ್ಲಿಂದ ಮೈಸೂರಿಗೆ ಬಂದು ಸೇರಲು ಹೊಗೆಬಂಡಿಗಳ ಕೊರತೆಯಿಂದ ಅನುಕೂಲವಿಲ್ಲವಾಗಿದೆ. ಈ ಕಾರಣದಿಂದಲೇ ವಿವರ್ಣವಾದ ಕಾಗದಗಳನ್ನು ನಾವು ಕಳೆದ ೩-೪ ಸಂಚಿಕೆಗಳಿಂದಲೂ ಉಪಯೋಗಿಸಿಕೊಳ್ಳಬೇಕಾಯಿತು. ಈ ಬೆಲೆ ಹೆಚ್ಚುಗೆಯಿಂದ ಪತ್ರಿಕಾ ಮುದ್ರಣದಲ್ಲಿ ನಮಗೆ ಒಂದೆರಡು ವರ್ಷಗಳಿಂದ ವಿಪರೀತವಾಗಿ ನಷ್ಟ ತಟ್ಟುತ್ತಿದ್ದರೂ ಕೆಟ್ಟಕೊಂಡ ಅಭಿಮಾನಕ್ಕಾಗಿ ಒದ್ದಾಡುತ್ತಿರಬೇಕಾಗಿದೆ. ಈ ವಿಷಮಸಮಯದಲ್ಲಿ ಅನೇಕ ಪತ್ರಿಕಾಕರ್ತರು ತಮ್ಮ ಪತ್ರಿಕೆಗಳ ವರ್ಗಣಿಯನ್ನು ನಿರ್ವಾಹವಿಲ್ಲದೆ ಹೆಚ್ಚಿಸಿದರು. ನಾವು ಹಾಗೆಮಾಡದೆ ಇದುವರೆಗೂ ಸೈರಿಸಿಕೊಂಡೆವು. ಈಗ ಬಹಳ ದುರ್ಭರವಾಗಿಬಂದಿರುವುದು. ಅದುಕಾರಣ ಇಂದಿನಿಂದ ವರ್ಗಣೆಯ ಹಣವನ್ನು ವರ್ಷ ೧ ಕ್ಕೆ ೧ ರೂ. ನಿಂದ ೧-೬-೦ ಗೆ ಹೆಚ್ಚಿಸಿರುತ್ತೇವೆ. ಪರಸ್ಥಳದವರು ಅಂಚೆನೆಚ್ಚ ಸೇರಿ ೨-೪-೦ ರೂ. ಗಳನ್ನು ಕೊಡಬೇಕಾಗುವುದು. ನಾವು ವರ್ಗಣೆಗಾಗಿ ಕಳುಹಿಸುವ ವಿ. ಪಿ. ಗಳನ್ನೆಲ್ಲಾ ಈ ಲೆಕ್ಕವನ್ನನುಸರಿಸಿಯೇ ಇನ್ನು ಮುಂದೆ ಕಳುಹಿಸುವೆವು. ಮನಿಯಾರ್ಡರ್ ದ್ವಾರಾ ಅವರಾಗಿ ವರ್ಗಣಿಯನ್ನು ಕಳುಹಿಸುವವರೂ ಈ ಲೆಕ್ಕವನ್ನೇ ಅನುಸರಿಸಬೇಕೆಂದು ಕೋರುತ್ತೇವೆ. ಭಾಷಾಭಿಮಾನಿಗಳೂ, ಮತಾಭಿಮಾನಿಗಳೂ, ದೇಶಾಭಿಮಾನಿಗಳೂ, ಪತ್ರಿಕಾಭಿಮಾನಿಗಳೂ ಸಹ ಈಗಣ ವಿಷಮಸ್ಥಿತಿಯ ಕಡೆಗೆ ಗಮನಿಸಿ, ಅಲ್ಪಮಾತ್ರವಾಗಿ ಚಂದಾ ಹೆಚ್ಚಿಸಿದರೂ ಇದುವರೆಗಣಂತೆಯೇ ಉದಾರಭಾವದಿಂದ ಪತ್ರಿಕೆಯನ್ನು ಪೋಷಿಸಿಕೊಂಡು ಹೋಗುವವರಾಗಬೇಕೆಂದು ಪ್ರಾರ್ಥನೆ.

ಪತ್ರಿಕರ್ತ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಜುಲೈ ತಾ|| ೨೮ ನೆಯ ಭಾನುವಾರ.

ರಷ್ಯಾ ಚಕ್ರವರ್ತಿಯವರ ಕೊಲೆ.

ರಷ್ಯಾದೇಶದ ಸಾರ್ವಭೌಮರಾಗಿದ್ದು ಕಳೆದ ವರ್ಷ ತಮ್ಮ ಪ್ರಜೆಗಳಿಂದಲೇ ಕಾರಾಗೃಹವಾಸಕ್ಕೆ ಗುರಿಮಾಡಲ್ಪಟ್ಟಿದ್ದ ನಿಕೋಲಸ್ ಪ್ರಭುಗಳು ಕಳೆದ ತಾ|| ೧೬ ರಲ್ಲಿ ತುಪಾಕಿಯಿಂದ ಹೊಡೆದು ಕೊಲ್ಲಲ್ಪಟ್ಟರೆಂಬ ದಾರುಣವಾದ ವಾರ್ತೆಯು ಬಂದಿರುತ್ತದೆ. ರಷ್ಯಾದೇಶವು ವಿಸ್ತೀರ್ಣದಲ್ಲಿ ೮೭ ಲಕ್ಷ ಚದರಮೈಲಿಗಿಂತ ಹೆಚ್ಚಾಗಿದೆ. ಅಲ್ಲಿಯ ಜನಸಂಖ್ಯೆಯು ೧೭ ಕೋಟಿಯ ಮೇಲೆಯೇ ಇದೆ. ಆದರೂ ಅಲ್ಲಿಯ ಪರಿಪಾಲನಕ್ರಮವೇ ಆಗಲೀ ನಾನಾ ಪರಿಶ್ರಮಾಭ್ಯುದಯಗಳೇ ಆಗಲೀ ದೇಶದ ವೈಶಾಲ್ಯಕ್ಕೆ ತಕ್ಕಂತೆ ಇರುವುದಿಲ್ಲ. ಅಲ್ಲಿಯ ಪ್ರಭುತ್ವದ ನಿರಂಕುಶಪ್ರವರ್ತನವು ದೇಶದ ಪ್ರಜೆಗಳಿಗೆ ಕಷ್ಟನಷ್ಟದಾಯಕವಾದುದು. ಈ ಕಾರಣದಿಂದ ಆ ಮಹಾಸಾಮ್ರಾಜ್ಯವು ಹದಿಯು ಭದ್ರವಿಲ್ಲದ ಭವನದಂತೆ ಕುಸಿದು ಬಿದ್ದುಹೋಗುವುದರಲ್ಲಿದ್ದಿತು. ಯುದ್ಧಾರಂಭವಾದೀಚೆಗೆ ಅದಕ್ಕುಂಟಾದ ದುಸ್ಥಿತಿಗೆಲ್ಲಾ ಅದೇ ಕಾರಣವು.

ಈ ನಿಕೋಲಸ್ ಪ್ರಭುವು ನಮ್ಮ ಸಾರ್ವಭೌಮರಿಗೆ ಕೇವಲ ಸಮೀಪಸಂಬಂಧಿಯು. ಇಬ್ಬರೂ ಚಿಕ್ಕಮ್ಮ ದೊಡ್ಡಮ್ಮಂದಿರ ಮಕ್ಕಳು. ನಿಕೋಲಸ್ ಪ್ರಭುವಿಗೆ ವಿಕ್ಟೋರಿಯಾ ಮಹಾರಾಜ್ಞಿಯವರ ಮೊಮ್ಮಗಳನ್ನೇ ಕೊಟ್ಟು ಮದುವೆಯಾಗಿದ್ದಿತು. ಇವರಿಗೆ ಒಬ್ಬ ಮಗನೂ ೪ ಮಂದಿ ಹೆಣ್ಣುಮಕ್ಕಳೂ ಇರುವರು. ಇವರು ೧೮೬೮ ನೆ ವರ್ಷದಲ್ಲಿ ಹುಟ್ಟಿದವರಾದುದರಿಂದ ಅಂತ್ಯಕಾಲದಲ್ಲಿ ಇವರಿಗೆ ೫೦ ವಯಸ್ಸು. ೧೮೯೪ ನೆ ವರ್ಷದಲ್ಲಿ ಇವರು ಸಿಂಹಾಸನಾಸೀನರಾದರು. ಆ ಮಹೋತ್ಸವದ ಆಡಂಬರವನ್ನು ನೋಡಲು ಸೇರಿದ್ದ ಪ್ರಜೆಗಳಲ್ಲಿ ನೂಕಾಟದ ಗದ್ದಲದಲ್ಲಿ ಸಿಕ್ಕಿ ಸತ್ತವರೇ ೨೦೦೦ ಮಂದಿಗಳಾಗಿದ್ದರೆನ್ನುವಾಗ ಆ ಉತ್ಸವವೈಭವವು ಎಷ್ಟು ಘನತರವಾಗಿರಬಹುದು. ಇವರಿಗೆ ಕುಟುಂಬದ ಆಸ್ತಿಯಿಂದಲೇ ವರ್ಷಕ್ಕೆ ನೂರಾರು ಕೋಟಿಯ ವರಮಾನವಿದ್ದಿತು. ಇಂಥ ಮಹಾ ಸುಯೋಗವುಳ್ಳವರಾಗಿ ಚಕ್ರವರ್ತಿ ವಂಶದಲ್ಲಿ ಹುಟ್ಟಿ ಅಸಾಧಾರಣ ವೈಭವವನ್ನು ಪಡೆಯುತ್ತಿದ್ದವರು ಕಾರಾಗೃಹವಾಸಕ್ಕೂ ಕಡೆಗೆ ಹತ್ಯೆಗೂ ಗುರಿಯಾದುದನ್ನು ನೋಡಿದರೆ ಕೃತಕರ್ಮದ ಬಲವತ್ತರತೆಯು ಎಂಥವರಿಗೂ ಅಲಂಘ್ಯವೆಂಬುದು ನಿದರ್ಶನವಾಗುವುದು. ಈ ನಿಕೋಲಸ್‌ರವರು ಸ್ವಭಾವತಃ ಶಾಂತಪುರುಷರು, ನಿರ್ದಯಾತ್ಮರಲ್ಲ; ದೇಶಾಭಿಮಾನ ಪ್ರಜಾಭಿಮಾನಗಳಿಂದ ತುಂಬಿತುಳುಕುತ್ತಿದ್ದವರು. ಆದರೂ ಸ್ಥಿರಸಂಕಲ್ಪವಿರಲಿಲ್ಲ. ನಿರಂಕುಶತ್ವವು ಮಿಗಿಲಾಗಿದ್ದಿತು. ಇವರು ಪಟ್ಟಕ್ಕೆ ಬಂದ ಸ್ವಲ್ಪಕಾಲದೊಳಗೇ ರಷ್ಯಾ ಜಪಾನ್ ಯುದ್ಧವು ಹುಟ್ಟಿ, ರಷ್ಯಾಪ್ರತಿಷ್ಠೆಯಲ್ಲಿ ಒಂದು ಹಂತವು ಇಳಿದುಹೋಯಿತು. ಪಾಲನವೈಖರಿಯು ರಷ್ಯಾಪ್ರಜೆಗಳಿಗೆ ರಂಜಕವಾಗಿರಲಿಲ್ಲ. ಯೂರೋಪು ಮಹಾಯುದ್ಧವಾರಂಭವಾದಾಗ ಇವರು ಮಿತ್ರಮಂಡಲಿಯವರೊಡನೆ ಸೇರಿ ಕೆಲಸ ಮಾಡಿದರು. ಇವರ ಪತ್ನಿಯು (ಕೈಸರರ ಸಹೋದರಿಯಾದುದರಿಂದ) ಜರ್ಮನ್ ಪಕ್ಷಪಾತಿಯೆಂದು ಹೆಸರ್ಗೊಂಡಿದ್ದಳು. ಅದರಮೇಲೆ ಜರ್ಮನರು ಘೇರೆ ತಂತ್ರಮಾಡಿ ಪ್ರಜೆಗಳಲ್ಲೂ ಸೈನಿಕರಲ್ಲೂ ದುರ್ಬುದ್ಧಿಯನ್ನು ಹುಟ್ಟಿಸಿದರು. ಒಳೊಳಗೆ ಜರ್ಮನರೊಡನೆ ಸಂಧಿಪ್ರಯತ್ನವು ಇವರ ಪತ್ನಿಯ ಮೂಲಕ ನಡೆಯುತ್ತಿದ್ದುದು ಸೇನಾಪತಿಗಳಿಗೂ ದೇಶಾಭಿಮಾನಿಗಳಿಗೂ ಗೊತ್ತಾಯಿತು. ಅವರು ಸೈರಿಸಲಾರದೆ ಹೋದರು. ಕೆಟ್ಟ ಹೆಂಡತಿಯನ್ನು ತೊಲಗಬೇಕು ಇಲ್ಲವೆ ರಾಜ್ಯವನ್ನು ಪರಿತ್ಯಜಿಸಬೇಕು ಎಂದು ಚಕ್ರವರ್ತಿಗೆ ಅವರು ಸೂಚನೆ ಕೊಟ್ಟರು. ಹೆಂಡತಿ ಮಕ್ಕಳುಗಳಲ್ಲಿ ಅಸಾಧಾರಣಾನುರಾಗವುಳ್ಳವರಾಗಿದ್ದ ನಿಕೋಲಸ್ ಪ್ರಭುವು ರಾಜ್ಯವನ್ನಾದರೂ ಪರಿತ್ಯಾಗಮಾಡಲು ಉದಾರಮನಸ್ಸಿನಿಂದ ಒಪ್ಪಿದರೇ ಹೊರತು ಕುಟುಂಬವನ್ನು ಪರಿತ್ಯಜಿಸಲು ಅಂಗೀಕರಿಸಲಿಲ್ಲ. ಕಂಟಕಮಯವಾಗಿದ್ದ ರಾಜ್ಯಪದ ಭೋಗವನ್ನು ಅನುಭವಿಸುವುದರಲ್ಲಿ ಅವರಿಗೆ ಅಷ್ಟರಲ್ಲಿಯೇ ಬೇಸರು ಹುಟ್ಟಿಹೋಗಿದ್ದಿತು. ತಮ್ಮ ಕುಮಾರರಿಗೂ ಆ ಪದವಿಯು ಬೇಡವೆಂದು ತಿರಸ್ಕರಿಸಿಬಿಟ್ಟರು. ತಾವೂ ರಾಜ್ಯಪದವಿಯನ್ನು ನಿಶ್ಚಿಂತತೆಯಿಂದ ಪರಿತ್ಯಜಿಸಿಬಿಟ್ಟರು. ಆ ಬಳಿಕ ಅವರನ್ನೆಲ್ಲಾ ರಷ್ಯಾ ವಿಪ್ಲವಕಾರರು ಸೈಬೀರಿಯಾಕ್ಕೆ ಸಾಗಿಸಿ ಸೆರೆಯಲ್ಲಿಟ್ಟಿದ್ದರು. ಕಡೆಯಲ್ಲಿ ಇವರು ಎಕ್ಟೆಂಬರ್ಗ್ನಲ್ಲಿದ್ದರು. ಈಗ ರಷ್ಯಾದಲ್ಲಿ ಬೋಲ್ಷೆವಿಕ್ ಪ್ರಭುತ್ವವು ನಡೆಯುತ್ತಲೂ ಜಕೋಸ್ಲಾವಕ್ಕರು ವೃದ್ಧಿಗೆ ಬರುತ್ತಲೂ ಇರುವರಷ್ಟೆ. ಆ ಜಕೋಸ್ಲಾವಕ್ಕರು ಎಕ್ಟೆಂಬರ್ಗನ್ನು ಸಮೀಪಿಸುತ್ತಿದ್ದುದನ್ನು ಬೋಲ್ಷೆವಿಕ್ಕರು ತಿಳಿದು, ನಿಕೋಲಸ್‌ರವರನ್ನು ಅವರು ಬಿಡುಗಡೆ ಮಾಡಿ ಮತ್ತೆ ಚಕ್ರವರ್ತಿ ಪಟ್ಟಕ್ಕೆ ತರಬಹುದೆಂಬ ಶಂಕೆಯಿಂದ ಅದಕ್ಕೆ ಅವಕಾಶ ಕೊಡದಂತೆ ಮಾಡಬೇಕೆಂಬುದಾಗಿ ತುಪಾಕಿಯಿಂದ ಹೊಡೆದು ನಿಕೋಲಸ್‌ರವರನ್ನು ಕೊಂದುಬಿಟ್ಟರು. ರಾಜ್ಯಹೋದರೂ ಪ್ರಾಣಸಹಿತ ಬದುಕಿರುವುದಕ್ಕೂ ಅವಕಾಶವಿಲ್ಲದೆ ನಿಕೋಲಸ್ ಪ್ರಭುಗಳು ಇಂಥ ದುರ್ಮರಣಕ್ಕೆ ಈಡಾದುದನ್ನು ಕೇಳಿದರೆ ವಿಷಾದವಾಗುತ್ತದೆ. ಇವರಿಗೆ ಇಂಥ ಗತಿಯುಂಟಾದುದು ನ್ಯಾಯವೆ ಎಂದು ಕೆಲರೂ, ಅನ್ಯಾಯವೆಂದು ಕೆಲರೂ ಯೂರೋಪಿನಲ್ಲಿ ವಾದಿಸುತ್ತಿದ್ದಾರೆ. ಅವರು ಮಾಡಿದ ಅಪರಾಧದ ಸ್ವರೂಪವೇನೆಂಬುದನ್ನು ವಿಚಾರಣೆಯ ಮೂಲಕ ನಿರ್ಧರಿಸದೆ ಇಂಥ ಅತ್ಯಾಚಾರವು ನಡೆಯಿಸಲ್ಪಟ್ಟದು ಅನ್ಯಾಯವೆಂದೇ ಹೇಳಬೇಕಾಗುವುದು. ಅವರ ಆಳಿಕೆಯು ನಿರಂಕುಶವಾಗಿದ್ದರೆ ಪ್ರಭುತ್ವದಿಂದ ಅವರನ್ನು ಬಿಡುಗಡೆ ಮಾಡಿದುದೇ ತಕ್ಕ ಶಿಕ್ಷೆಯಾಗಿದ್ದಿತು. ಅದರ ಮೇಲೆ ಪ್ರಾಣವನ್ನೂ ಕಳೆದುದು ಅನ್ಯಾಯವಲ್ಲವೇ ? ಅವನತಿಗಾಗಿ ಶತಮುಖವಾಗಿರುವ ರಷ್ಯಾದಲ್ಲಿ ಈ ಕೊಲೆಯಿಂದ ಇನ್ನಾವಾವ ತೆರದ ಉಪದ್ರವಗಳೂ ವಿಕಾರಗಳೂ ಹುಟ್ಟುವುವೋ ನೋಡಬೇಕು.

ಯುದ್ಧವಾರ್ತೆಯು.

(ಸಂಕ್ಷೇಪದ ಸುದ್ದಿಗಳು.)

ಜರ್ಮನರು ಕಳೆದ ತಾ|| ೧೫ ರಲ್ಲಿ ಮತ್ತೊಂದು ಅವಸ್ಕಂದನವನ್ನು ೨ ಕಡೆ ಆರಂಭಿಸಿದರೆಂದು ಕಳೆದವಾರ ತಿಳಿಯಿಸಿದೆವಷ್ಟೆ. ಈ ಮುತ್ತಿಗೆಯನ್ನು ಅವರು ರೀಮ್ಸಿಗೆ ಆಗ್ನೇಯದಲ್ಲಿ ೨೦ ಮೈಲಿಯಗಲದ ಪ್ರದೇಶದಲ್ಲೂ, ರೀಮ್ಸಿಗೆ ನೈಋತ್ಯದಲ್ಲಿ ೨೫ ಮೈಲಿಯಗಲದ ಪ್ರದೇಶದಲ್ಲೂ ಸಹ ಆರಂಭಿಸಿದರು. ರೀಮ್ಸನ್ನು ಹಿಡಿದುಕೊಂಡು ಆ ಬಳಿಕ ಪಾರಿಸ್ಸಿನ ಮೇಲೆ ನುಗ್ಗುವುದಕ್ಕೆ ದಾರಿಮಾಡಿಕೊಳ್ಳಬೇಕೆಂಬುದೇ ಶತ್ರುಗಳ ಈ ಮುತ್ತಿಗೆಯ ಉದ್ದೇಶವಾಗಿದ್ದಿತು. ಪ್ಯಾರಿಸ್‌ಪಟ್ಟಣವು ರೀಮ್ಸಿಗೆ ೬೦ ಮೈಲಿಗಳ ದೂರದಲ್ಲಿದೆ. ಮಾಂಟಿಡಿಡಿಯರ್ ರಂಗದಲ್ಲಿ ಹಿಂದೆ ನಡೆಯಿಸಿದ ಸಾಹಸದಿಂದ ಫಲವಾಗದಿರಲು ಶತ್ರುಗಳು ಈ ಸ್ಥಲದಲ್ಲಿ ಮುತ್ತಿಗೆಗಾರಂಭಿಸಿದರು. ಆದರೆ ಹಿಂದೆ ಮಾರ್ಚಿ ತಿಂಗಳ ಯುದ್ಧದಲ್ಲಿ ಅವರು ಪಡೆದಷ್ಟು ಫಲವನ್ನು ಈ ಪ್ರಯತ್ನದಿಂದ ಪಡೆಯಲಾಗಲಿಲ್ಲ. ಶತ್ರುಗಳು ವಂಚಿಸಿ ಆಕಸ್ಮಾತ್ತಾಗಿ ನುಗ್ಗಿ ಯುದ್ಧ ಮಾಡುವ ಸಂಗತಿಯು ಮಿತ್ರಮಂಡಲಿಯವರಿಗೆ ಚೆನ್ನಾಗಿ ಗೊತ್ತಾಗಿರುವುದರಿಂದ ಜನರಲ್ ಫಾಕ್‌ರವರು ಮೈಯೆಲ್ಲಾ ಕಣ್ಣುಳ್ಳವರಾಗಿ ಯಾವ ಕಡೆಯಲ್ಲಿ ಯಾವಾಗ ಶತ್ರುಗಳು ನುಗ್ಗಿದರೂ ಪ್ರತಿಭಟಿಸಲು ಸಕಲ ಸೈನ್ಯವನ್ನೂ ಅಣಿಯಾಗಿರುವಂತೆ ಮಾಡಿಟ್ಟಿರುವರು. ಅಲ್ಲದೆ ಮಿತ್ರಮಂಡಲಿ ಸೈನಿಕರ ಧೈರ್ಯ, ಸಾಹಸಕೃತ್ಯಗಳಿಂದ ಶತ್ರುಗಳು ಯಾವೆಡೆಯಲ್ಲಿ ಫಿರಂಗಿಗಳನ್ನೂ ಸೈನ್ಯವನ್ನೂ ಕೂಡಿಸಿ ಯುದ್ಧವನ್ನು ಆರಂಭಿಸುವುದಕ್ಕಿರುವರೆಂಬುದನ್ನು ಮುಂದಾಗಿಯೇ ತಿಳಿದುಕೊಳ್ಳುವುದಕ್ಕೆ ಮಿತ್ರಮಂಡಲಿಯವರಿಗೆ ಅನುಕೂಲವಾಗಿರುವುದು. ಈ ಕಾರಣದಿಂದ ಶತ್ರುಗಳು ತಾ|| ೧೫ ರಲ್ಲಿ ಇಂಥಕಡೆಯೇ ನುಗ್ಗುವರೆಂಬುದು ಮಿತ್ರಮಂಡಲಿಗೆ ಮೊದಲೇ ಗೊತ್ತಾಗಿಹೋಗಿದ್ದುದರಿಂದ ಇವರು ಸರ್ವಸನ್ನಾಹದಿಂದಲೂ ನಿರೀಕ್ಷಿಸಿಕೊಂಡಿದ್ದರು. ಅದುದರಿಂದ ಶತ್ರುಗಳ ಮಹಾಪ್ರಯತ್ನವು ಪೂರ್ಣ ಫಲಪ್ರದವಾಗಲವಕಾಶವಿಲ್ಲದೆ ಹೋಯಿತು. ಫ್ರೆಂಚ್, ಅಮೇರಿಕನ್, ಇಟಲಿ ಸೈನ್ಯಗಳು ಬಹು ಸಾಮರ್ಥ್ಯದಿಂದ ಪ್ರತಿಭಟಿಸಿ ಯುದ್ಧ ಮಾಡಿದುದರಿಂದ ೧-೨ ದಿನಗಳೊಳಗೇ ಶತ್ರುಗಳ ನುಗ್ಗಾಟವು ಕಟ್ಟಾಗಿಹೋದುದಲ್ಲದೆ ೪-೫ ಮೈಲಿಗಳಿಗಿಂತ ಹೆಚ್ಚಾಗಿ ಯಾವೆಡೆಯಲ್ಲೂ ಮುಂದಕ್ಕೆ ನುಗ್ಗಲು ಶತ್ರುಗಳಿಗೆ ಸಾಧ್ಯವಾಗಲಿಲ್ಲ. ಮುತ್ತಿಗೆಯನ್ನಾರಂಭಿಸಿದ ದಿನವೇ ೧೨ ಮೈಲಿಗಳ ದೂರ ಮುಂದಕ್ಕೆ ನುಗ್ಗಿಹೋಗಬೇಕೆಂದು ಅವರ ನಿಶ್ಚಯವಾಗಿದ್ದಿತು. ೪-೫ ದಿನಗಳಾದರೂ ಅದರಲ್ಲಿ ಅರ್ಧ ದೂರ ನುಗ್ಗಿಹೋಗುವುದಕ್ಕೂ ಅವರ ಕೈಲಾಗಲಿಲ್ಲ. ರೀಮ್ಸಿಗೆ ದಕ್ಷಿಣದಲ್ಲಿ ಮಾರ್ನ ನದಿಯನ್ನು ನಾಲ್ಕಾರು ಕಡೆ ದಾಟಿ ಅದರ ದಕ್ಷಿಣದಲ್ಲಿರುವ ೩-೪ ಗ್ರಾಮಗಳನ್ನು ಆಕ್ರಮಿಸಿಕೊಂಡರು. ಈ ಸಂದರ್ಭದಲ್ಲಿ ಅಮೇರಿಕನ್ ಸೈನ್ಯವು ಜರ್ಮನರ ಮೇಲೆ ತೋರಿಸಿದ ಮಹಾಪರಾಕ್ರಮವು ವರ್ಣನಾತೀತವಾಗಿದ್ದಿತು. ಅದರಿಂದ ಜರ್ಮನರು ಹಿಮ್ಮೆಟ್ಟಿ ಮಾರ್ನ್ನದಿಯ ಬಲಪಕ್ಕಕ್ಕೆ ಓಡಿಹೋಗಬೇಕಾಯಿತು. ಅದರಿಂದ ಸಂಕಲ್ಪವೆಲ್ಲಾ ಭಂಗವಾಯಿತು. ಮತ್ತೂ ೧೫೦೦ ಮಂದಿ ಜರ್ಮನ್ ಸೈನಿಕರು ಅಮೇರಿಕನ್ನರ ಸೆರೆಯಾಳುಗಳಾದರು. ಅಲ್ಲದೆ ರೀಮ್ಸಿಗೆ ಪೂರ್ವಭಾಗದಲ್ಲಿ ಗೌರೆಂಡ್ ಎಂಬ ಸೇನಾನಿಯು ತೋರಿಸಿದ ಕೌಶಲ್ಯದಿಂದಲೂ ಆತನ ಸೈನ್ಯದ ಪರಾಕ್ರಮದಿಂದಲೂ ಜರ್ಮನರಿಗೆ ವಿಶೇಷ ನಷ್ಟವು ತಟ್ಟಿತು. ಅಮೇರಿಕನ್ನರ ಸಹಾಯದಿಂದ ಫ್ರೆಂಚರು ಹೀಗೆ ಶತ್ರುಗಳ ನುಗ್ಗಾಟವನ್ನು ತಡೆದು ಆತ್ಮರಕ್ಷಣೆಯನ್ನು ಮಾಡಿಕೊಂಡುದು ಮಾತ್ರವೇ ಅಲ್ಲದೆ, ಜರ್ಮನರ ಸಾಹಸಕ್ಕೆ ತಾವು ಮುಯ್ಯಾಗುವಂತೆ ತಾ|| ೧೮ ರಲ್ಲಿ ಬೆಳಗಿನಜಾವದಲ್ಲಿ ಆಕಸ್ಮಾತ್ತಾಗಿ ಯುದ್ಧವನ್ನಾರಂಭಿಸಿ ಜರ್ಮನರ ಸೈನ್ಯದಮೇಲೆ ಸಾಗಿಹೋದರು. ಈ ಯುದ್ಧವು ಸಿಸ್ಸೋನ್ ಮುಖದಲ್ಲಿ ಆರಂಭವಾಯಿತು. ಜರ್ಮನರ ಸೇನಾಪತಿಗಳು ಮೊದಲಾದವರೆಲ್ಲಾ ನಿರ್ಭಯವಾಗಿ ಶಿಬಿರದೊಳಗೆ ಮಲಗಿ ನಿದ್ರೆಹೋಗುತ್ತಿರುವಾಗ್ಗೆ ಫ್ರೆಂಚರು ಸದ್ದಿಲ್ಲದೆ ನುಗ್ಗಿ ಯಮದೂತರಂತೆ ಇದಿರಿಗೆ ಕಾಣಿಸಿಕೊಂಡರು. ಕೂಡಲೇ ತುಮುಲಯುದ್ಧಕ್ಕಾರಂಭವಾಯಿತು. ಶತ್ರುಗಳು ಕೆಲ ದಿನಗಳು ಸಾಹಸಪಟ್ಟರೂ ಪಡೆಯದಿದ್ದಷ್ಟು ಲಾಭವನ್ನು ಫ್ರೆಂಚರು ಅರೇಗಂಟೆಗಳ ಹೊತ್ತಿನ ಯುದ್ಧದಲ್ಲಿ ಪಡೆದುಕೊಂಡರು. ಎಂದರೆ ೩ ಮೈಲಿ ಮೊದಲುಗೊಂಡು ೯ ಮೈಲಿಗಳಷ್ಟು ದೂರ ಮುಂದಕ್ಕೆ ನುಗ್ಗಿಹೋದರು. ೨೦ ಗ್ರಾಮಗಳು ಇವರ ವಶವಾದುವು. ಅಲ್ಲದೆ ೪೦೦೦ ಮಂದಿ ಶತ್ರುಸೈನಿಕರನ್ನೂ ೩೦ ಫಿರಂಗಿಗಳನ್ನೂ ಅನೇಕ ಯುದ್ಧೋಪಕರಣಗಳನ್ನೂ ವಶಪಡಿಸಿಕೊಂಡರು. ಅದರಿಂದೀಚೆಗೆ ೩-೪ ದಿನಗಳವರೆಗೂ ಫ್ರೆಂಚರೂ ಅಮೇರಿಕನ್ನರೂ ನಡೆಯಿಸಿದ ಯುದ್ಧದಲ್ಲಿ ಶತ್ರುಗಳಿಗೆ ಪೂರ್ಣಪರಾಜಯವಾಯಿತು. ರೀಮ್ಸಿಗೆ ಪೂರ್ವದಲ್ಲಿ ಜರ್ಮನರು ಹಿಡಿದುಕೊಂಡಿದ್ದ ಪ್ರೂನೆಯೆಂಬ ಪಟ್ಟಣವೂ ಫ್ರೆಂಚರ ವಶವಾಯಿತು. ಈ ಜಯದಿಂದ ಫ್ರೆಂಚರು ಯುದ್ಧತಂತ್ರಕ್ಕೆ ಅತಿಪ್ರಾಮುಖ್ಯವುಳ್ಳದಾಗಿದ್ದ ಸ್ಥಲಗಳನ್ನು ವಶಪಡಿಸಿಕೊಂಡಂತಾಯಿತು. ಮತ್ತೂ ಶತ್ರುಗಳ ನುಗ್ಗಾಟವು ಕೊನೆಗಂಡಂತಾಯಿತು. ಇದರಿಂದ ರೀಮ್ಸಿನ ಪ್ರಮಾದಸ್ಥಿತಿಯೂ ತಪ್ಪಿತೆಂದು ಎಣಿಸಲ್ಪಡುತ್ತಿದೆ. ರೀಮ್ಸಿನ ಸುತ್ತಲೂ ೩-೪ ದಿನಗಳಿಂದ ನಡೆದ ಯುದ್ಧದಲ್ಲಿ ಜರ್ಮನರು ತಮ್ಮ ಹೊಸಸೈನ್ಯಗಳನ್ನು ತರಿಸಿ ಎಷ್ಟು ಪ್ರತಿಭಟಿಸಿದರೂ ಅವರ ಆಟವು ಸಾಗದೆ ಪೂರ್ಣವಾಗಿ ಪರಾಜಿತರಾಗಿರುವರು.

ಅವರು ತಾ|| ೧೫ ರಲ್ಲಿ ಮಾರ್ನ ನದಿಯನ್ನು ದಾಟಿ ದಕ್ಷಿಣದ ತೀರದಲ್ಲಿ ಎಷ್ಟೋ ಮುಂದಕ್ಕೆ ಬಂದಿದ್ದರಷ್ಟೆ. ಅದನ್ನೆಲ್ಲಾ ಕಳೆದುಕೊಂಡು ಹಿಂತಿರುಗಿ ಮಾರ್ನ ನದಿಯನ್ನೂ ದಾಟಿ ಆಚೆಗೆ ಉತ್ತರ ದಡದಲ್ಲಿ ಹೋಗಿ ಸೇರಿಕೊಂಡಿದ್ದಾರೆ. ಅಲ್ಲೂ ಅವರನ್ನು ಫ್ರೆಂಚರು ಉಳಿಯಗೊಟ್ಟಿಲ್ಲ. ಅಲ್ಲಿಂದಲೂ ಹಿಮ್ಮೆಟ್ಟಿಸುತ್ತಿದ್ದಾರೆ. ಇಟಲಿ ಸೈನಿಕರೂ ಅಮೇರಿಕನ್ನರೂ ಕೂಡ ಅಲ್ಲಿ ಯುದ್ಧ ಮಾಡುತ್ತಿದ್ದಾರೆ. ಸೋಯಿಜನ್ಸ್ ಪ್ರಾಂತದಲ್ಲಿ ನಡೆದ ಯುದ್ಧದೊಳಗೆ ಶತ್ರುಗಳಿಗೆ ಅಪರಿಮಿತ ನಷ್ಟವುಂಟಾಗಿದೆ. ಅದೊಂದು ಕಡೆಯಲ್ಲೇ ೭೦೦೦ ಮಂದಿ ಸೈನಿಕರನ್ನೂ ೩೦ ಫಿರಂಗಿಗಳನ್ನೂ ಫ್ರೆಂಚರು ಹಿಡಿದುಕೊಂಡಿದ್ದಾರೆ. ಇಷ್ಟರಲ್ಲೇ ಸೋಯಿಜನ್ಸೂ ನಮ್ಮವರ ವಶವಾಗುವುದರಲ್ಲಿದೆ.

ರೀಮ್ಸಿಗೆ ಪೂರ್ವದಲ್ಲಿರುವ ಪ್ರೂನೆ ಪಟ್ಟಣವು ತಾ|| ೧೮ ರಲ್ಲಿ ಮರಳಿ ಜರ್ಮನರ ವಶವಾಯಿತು. ಇನ್ನೂ ಆ ಬಳಿಯಲ್ಲಿ ಮಹಾಯುದ್ಧವು ನಡೆಯುತ್ತಿದೆ. ಎಯಿಸ್ನ ಮಾರ್ನ ನದಿಗಳ ಮಧ್ಯದಲ್ಲಿ ಫ್ರೆಂಚ್ ಅಮೇರಿಕನ್ ಸೈನ್ಯವು ಇನ್ನೂ ಮುಂದಕ್ಕೆ ಸಾಗುತ್ತಲೇ ಇದೆ. ಇಲ್ಲಿ ತಮಗಾದ ಅಪಜಯವನ್ನು ಜರ್ಮನರೇ ಒಪ್ಪಿಕೊಂಡಿದ್ದಾರೆ. ಅವರ ಎಡಗಡೆಯ ಸೈನ್ಯವು ಪ್ರಮಾದಸ್ಥಿತಿಯಲ್ಲಿದೆ. ರೀಮ್ಸ್ ಮಾರ್ನ ನದಿಗಳ ಮಧ್ಯದಲ್ಲಿ ಇಂಗ್ಲಿಷ್ ಫ್ರೆಂಚ್ ಸೈನ್ಯಗಳು ದೊಡ್ಡದಾಗಿ ಯುದ್ಧ ಮಾಡುತ್ತಿವೆ. ಜುಲೈ ತಾ|| ೧೭-೧೮ ಇವೆರಡು ದಿನಗಳ ಯುದ್ಧದಲ್ಲೇ ಮಿತ್ರಮಂಡಲಿಯವರು ಈ ರಂಗದಲ್ಲಿ ೨೦೦೦೦ ಶತ್ರುಸೈನಿಕರನ್ನೂ ೪೫೦ ಫಿರಂಗಿಗಳನ್ನೂ ವಶಪಡಿಸಿಕೊಂಡಿರುವರೆಂದು ಲೆಕ್ಕವಾಗಿದೆ. ಇವಲ್ಲದೆ ಶತ್ರುಗಳ ಕಡೆ ಮಡಿದವರೂ ಅಂಗವಿಕಲರಾದವರೂ ಎಲ್ಲಾ ಸೇರಿ ೧ ಲಕ್ಷದವರೆಗೆ ಸೇನಾನಷ್ಟವಾಗಿರುವುದೆಂದು ಎಣಿಸಲ್ಪಟ್ಟಿದೆ. ಈಚೆಗೂ ಯುದ್ಧನಡೆಯುತ್ತಿರುವುದರಲ್ಲಿ ಸಾವಿರಾರು ಮಂದಿಗಳು ಸೆರೆಸಿಕ್ಕುತ್ತಿದ್ದಾರೆ. ಫ್ರೆಂಚರು ಚಾಟೋತಿಯರಿ ಪಟ್ಟಣವನ್ನೂ ಹಿಡಿದರು. ಇನ್ನೂ ಮಿತ್ರಮಂಡಲಿಯವರಿಗೆ ಜಯವಾಗುತ್ತಲೇ ಇದೆ.

ರೀಮ್ಸಿನ ಬಳಿಯಿರುವ ತಮ್ಮ ಸೈನ್ಯಕ್ಕೆ ಶತ್ರುಗಳು ಸಾಮಗ್ರಿಗಳನ್ನೂ ಸೈನ್ಯವನ್ನೂ ಸಾಗಿಸಿ ಕಳುಹಿಸುತ್ತಿದ್ದ ಮುಖ್ಯಮಾರ್ಗದ ಮೇಲೆ ಈಗ ಫ್ರೆಂಚರು ಫಿರಂಗಿಗುಂಡುಗಳ ಮಳೆಯನ್ನು ಅವಿಚ್ಛಿನ್ನವಾಗಿ ಸುರಿಸುತ್ತಿದ್ದಾರೆ. ಮತ್ತೂ ಅಲ್ಲಿಯ ಲೋಹಮಾರ್ಗವನ್ನೂ ಹಲವುಕಡೆ ಮಿತ್ರಮಂಡಲಿಯವರು ಧ್ವಂಸಮಾಡಿಬಿಟ್ಟುದರಿಂದ ಎಯಿಸ್ನಿಗೆ ಉತ್ತರದಲ್ಲೂ ದಕ್ಷಿಣದಲ್ಲೂ ಇರುವ ಶತ್ರುಸೇನೆಗೆ ಪರಸ್ಪರ ಸಂಬಂಧವು ಕೆಟ್ಟುಹೋಗಿದೆ. ಇದು ಅಲ್ಲಿಯ ಶತ್ರುಸೈನ್ಯಕ್ಕೆ ತುಂಬಾ ಪ್ರಮಾದಕರವಾಗಿದೆ. ಈ ಯುದ್ಧವು ಈ ವರ್ಷದಲ್ಲಿ ನಡೆದ ಎಲ್ಲಾ ಯುದ್ಧಗಳಲ್ಲಿ ಮಾತ್ರವೇ ಅಲ್ಲದೆ ೧೯೧೫-೧೬-೧೭ ನೆ ವರ್ಷಗಳಲ್ಲಿ ನಡೆದಿರುವ ಎಲ್ಲಾ ಯುದ್ಧಗಳಿಗಿಂತಲೂ ಭಯಂಕರವಾದುದೆಂದೂ, ಪ್ರಮುಖವಾದುದೆಂದೂ ಎಣಿಸಲ್ಪಟ್ಟಿದೆ. ಯುದ್ಧಕಲಾಭಿಜ್ಞರು ಇದನ್ನು ೧೯೧೬ ವರ್ಷದ ಸೋಮು, ಅಂಕ್ರೆ ಮಹಾ ಯುದ್ಧಗಳೊಡನೆ ಹೋಲಿಸುತ್ತಿದ್ದಾರೆ. ಅಂತೂ ಇದರಿಂದ ಜರ್ಮನರ ವ್ಯೂಹವು ಬಲುಮಟ್ಟಿಗೆ ಭಂಗವಾಗಿರುವುದಲ್ಲದೆ ಅವರ ಹಮ್ಮೂ ಎಷ್ಟೋಮಟ್ಟಿಗೆ ಅಡಗಿರಬೇಕು. ಶತ್ರುಗಳ ಈ ಪರಾಜಯದಿಂದ ದಿನದಿನಕ್ಕೆ ಅವರ ಸೇನೆಯಲ್ಲಿ ಉಂಟಾಗುತ್ತಿರುವ ದುರ್ಬಲತೆಯು ವ್ಯಕ್ತವಾಗುತ್ತದೆ. ಶತ್ರುಗಳು ಈ ಯುದ್ಧದಲ್ಲಿ ೫೦ ಡಿವಿಜನ್ನುಗಳನ್ನು ನಿಯೋಗಿಸಿದರೆಂದು ಎಣಿಸಲ್ಪಟ್ಟಿದೆ. ಇದನ್ನು ಜರ್ಮನ್ ಯುವರಾಜರೇ ನಡೆಯಿಸುತ್ತಿದ್ದರು. ಅವರಿಗೆ ಇಂಥ ಅಪಜಯವೂ ಆಶಾಭಂಗವೂ ನಡೆದುದರಲ್ಲಿ ಇದು ೭ ನೆಯ ಸಲ. ಪಶ್ಚಿಮರಂಗದಲ್ಲಿ ಹೀಗೆ ಮಹಾಜಯವು ಪ್ರಾಪ್ತವಾದುದರಿಂದ ಅಮೇರಿಕಾದಲ್ಲಿ ಪ್ರಜೆಗಳು ಅತ್ಯುತ್ಸಾಹಗೊಂಡಿದ್ದಾರೆ. ಮಧ್ಯಾಹ್ನ ೧೫ ನಿಮಿಷಗಳವರೆಗೆ ದೇವಾಲಯಗಳಲ್ಲಿ ಗಂಟೆಗಳು ಬಾರಿಸಲ್ಪಟ್ಟುವು. ಆಸ್ಟ್ರೇಲಿಯಾ ಶಾಸನ ಸಭೆಯವರು ಆಂಗ್ಲಸಾರ್ವಭೌಮರನ್ನು ಕುರಿತು ಜಯಧ್ವನಿಯನ್ನು ಮಾಡಿದರು.

ಇಂಗ್ಲಿಷ್ ಸೇನಾರಂಗದಲ್ಲೂ ಕೂಡ ನಮ್ಮವರಿಗೆ ಜಯಪ್ರಾಪ್ತಿಯಾಗಿರುತ್ತದೆ. ಅಲ್ಲಿ ಆಂಗ್ಲಸೈನಿಕರು ಪರಿಶ್ರಮದಿಂದ ಮಾಡಿದ ಯುದ್ಧದ ಫಲವಾಗಿ ಅವರು ಮೆಟರನ್ ಎಂಬ ಗ್ರಾಮವನ್ನೂ ೪೫೩ ಮಂದಿ ಶತ್ರುಸೈನಿಕರನ್ನೂ ೧೦ ಕಂದಕದ ಫಿರಂಗಿಗಳನ್ನೂ ೫೦ ಮಿಷನ್ ಫಿರಂಗಿಗಳನ್ನೂ ವಶಪಡಿಸಿಕೊಂಡಿರುವರು. ಈ ಗ್ರಾಮವು ಯುದ್ಧಕಾರ್ಯಕ್ಕೆ ಪ್ರಾಮುಖ್ಯವುಳ್ಳದು. ಕಲೆ ಮಾರ್ಗದಲ್ಲಿ ಹಾಜಬ್ರೂಕಿನ ಸಮೀಪದಲ್ಲಿರುವುದು. ಇದನ್ನು ಶತ್ರುಗಳು ಹಿಂದೆ ಬಹಳ ನಷ್ಟಕಷ್ಟಪಟ್ಟು ಸಾಹಸದಿಂದ ವಶಪಡಿಸಿಕೊಂಡಿದ್ದರು. ಈಗ ಮರಳಿ ನಮ್ಮವರ ವಶವಾಯಿತು. ಈಚೆಗೆ ಈ ರಂಗದಲ್ಲಿ ನಮ್ಮವರು ಶತ್ರುಗಳನ್ನು ರೋಸಿಗ್ನಲ್ ಅಡವಿಯಿಂದಲೂ ಓಡಿಸಿರುವರು. ಜರ್ಮನರು ಈ ರಂಗಕ್ಕೆ ತಮ್ಮ ಸೈನಿಕರಲ್ಲಿ ಆಣಿಯಾಗಿರುವ ಯುವಕರನ್ನೇ ಆರಿಸಿ ಕಳುಹಿಸುತ್ತಿರುವರೆಂದು, ವಿಮಾನಗಳನ್ನೂ ಫಿರಂಗಿಗಳನ್ನೂ ಹೆಚ್ಚಾಗಿ ಕೂಡಿಸುತ್ತಿರುವರೆಂದೂ ವರ್ತಮಾನವಿದೆ. ಅದುಕಾರಣ ಬಹುಶಃ ಅವರು ಈ ಫ್ಲಾಂಡರ್ಸಿನಲ್ಲೂ ಮತ್ತೊಂದು ದೊಡ್ಡ ಅವಸ್ಕಂದನವನ್ನು ಆರಂಭಿಸಬಹುದಾಗಿರುವಂತೆ ಕಾಣುತ್ತದೆ. ಫೀಲ್ಡ್ ಮಾರ್ಷಲ್ ಹೇಗ್ ಸಾಹೇಬರವರು ಅದಕ್ಕೆ ತಕ್ಕ ಫಲವನ್ನು ಮಾಡಿಕೊಡಿಸಲು ವ್ಯಗ್ರರಾಗಿಯೇ ಇರುವರು. ಇಟಲಿ ರಂಗದಲ್ಲೂ ಶತ್ರುಗಳಿಗೆ ಸುಯೋಗವಿರುವುದಿಲ್ಲ. ಅಲ್ಲೂ ಆಸ್ಟ್ರಿಯನ್ನರು ಸೋತು ಓಡುತ್ತಲೇ ಇದ್ದಾರೆ. ಕಳೆದವಾರ ಇಟಲಿಯವರು ಆಡಮಲ್ಲೋವಿನ ಹತ್ತಿರ ಸಟ್ಟಿಲ್ ಗುಡ್ಡವನ್ನು ಆಕ್ರಮಿಸಿ ಆರೋಡಿ, ಕೆನಂಟೋಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿರುವರು.

ಒಳದೇಶದ ವೃತ್ತಾಂತಗಳು.

ಶ್ರೀಮಾನ್ ಬರೋಡಾ ಮಹಾರಾಜರವರು ಕಳೆದ ವಾರ ಬೆಂಗಳೂರಿನಲ್ಲಿ ಶ್ರೀಮನ್ಮಹಾರಾಜರವರ ಅತಿಥ್ಯದಲ್ಲಿದ್ದರು.

ರಾಜಧಾನಿಯ ಟೌನ್‌ಹಾಲಿನಲ್ಲಿ ಕಳೆದ ಸೋಮವಾರ ಸರ್ದಾರ್ ಎಂ. ಕಾಂತರಾಜ ಅರಸಿನವರ ಅಧ್ಯಕ್ಷತೆಯಿಂದ ಯುದ್ಧದ ೨ ನೆ ಸಾಲದ ಹಣವನ್ನು ಕೂಡಿಸುವ ಉದ್ದೇಶದಿಂದ ಸಭೆಗೂಡಿದ್ದಿತು. ಒಟ್ಟು ೩೨೫೦೦೦ ರೂ. ಗಳ ವರೆಗೆ ಕೂಡಿತು. ಇದರಲ್ಲಿ ಬಹುಭಾಗವು ರಾಜಬಂಧುವರ್ಗದವರದು.

ಪಂಡರಾಪುರವೆಂಬ ಕ್ಷೇತ್ರದಲ್ಲಿ ಕಾಲರಾ ಉಪದ್ರವವು ಪ್ರಾಪ್ತವಾಗಿದೆಯೆಂದು ತಿಳಿದುಬಂದಿದೆಯಾದುದರಿಂದ ಅಲ್ಲಿಯ ಯಾತ್ರೆಗೆ ಹೋಗುವುದು ಅಪಾಯಕರವಾದುದು; ಹಾಗೆ ಹೋಗಬೇಕೆಂದು ಏರ್ಪಡಿಸಿಕೊಂಡಿರುವವರು ಹೊರಡದಿರುವುದು ಒಳ್ಳೆಯದೆಂದು ಮೈಸೂರು ಹೆಲ್ತ್ ಆಫೀಸರು ತಿಳಿಸಿರುತ್ತಾರೆ.

ಡಾ|| ಸಿ.ಎಂ. ನಂಜಪ್ಪನವರು ಕೃಷ್ಣರಾಜ ಆಸ್ಪತ್ರೆಯ ಸರ್ಜನರಾಗಿ ಬಂದಬಳಿಕ ಅಲ್ಲಿಯ ಕೆಲಸಗಳು ಬಹಳ ಚೊಕ್ಕಟವಾಗಿಯೂ ನಿಯಮಿತವಾಗಿಯೂ ನಡೆಯಲು ಏರ್ಪಾಟಾಗಿರುವುದಲ್ಲದೆ ರೋಗಿಗಳ ಚಿಕಿತ್ಸೋಪಚಾರ ಮೊದಲಾದುವುಗಳೆಲ್ಲಾ ಬಹಳ ಸಮರ್ಪಕವಾಗಿ ನಡೆಯುತ್ತಿರುವುವೆಂದು ಪುರಜನರು ಸಂತೋಷಿಸುತ್ತಿದ್ದಾರೆ.

ರಾಜಧಾನಿಯಲ್ಲಿ ಕಳೆದ ಕುದ್ಬಾಹಬ್ಬದ ದಿವಸ ನಡೆದ ಅರಮನೆಯ ನೇಟಿವ್ ಬ್ಯಾಂಡ್ ಕಾನ್ಸರ್ಟು ಮಿ|| ಅಫೀಜ್‌ಖಾನ್ ಗವಾಯರವರಿಂದಲೂ ಬ್ಯಾಂಡ್‌ಮಾಸ್ಟರಿಂದಲೂ ಅಭ್ಯಾಸಮಾಡಿಸಲ್ಪಟ್ಟಿತೆಂದು ಕಳೆದ ತಾ|| ೧೪ ರ ಸ್ಟಾರಿನಲ್ಲಿ ಪ್ರಕಟಿತವಾಗಿದೆ. ಆದರೆ ಆ ಗವಾಯಿಯು ಮಿ|| ಅಫೀಜ್ ಖಾನರಲ್ಲ. ಮಿ|| ಮುನಿಸಿ ಅಲಿಜಾನ್‌ರವರೆಂದು ತಿಳಿಯಬಂದಿದೆ.

ರಿಕ್ರೂಟ್‌ಮೆಂಟ್ ಕೆಲಸಗಳಿಗಾಗಿ ಮೈಸೂರು ಸಂಸ್ಥಾನದಲ್ಲಿ ೩ ಡಿವಿಜನ್ನುಗಳು ಮಾಡಲ್ಪಟ್ಟು ಬೆಂಗಳೂರು-ಕೋಲಾರ-ತುಮಕೂರು ಡಿಸ್ಟ್ರಿಕ್ಟುಗಳುಳ್ಳ ಬೆಂಗಳೂರು ಡಿವಿಜನ್ನಿಗೆ ಮ|| ಎಫ್. ಎಸ್. ರಾಘವಾಚಾರರೂ, ಮೈಸೂರು ಹಾಸನ ಡಿಸ್ಟ್ರಿಕ್ಟುಗಳುಳ್ಳ ಮೈಸೂರು ಡಿವಿಜನ್ನಿಗೆ ಮಿ|| ಹೈದರಲ್ಲಿಖಾನರವರೂ, ಶಿವಮೊಗ್ಗ, ಕಡೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳುಳ್ಳ ಶಿವಮೊಗ್ಗ ಡಿವಿಜನ್ನಿಗೆ ಮ|| ಸಿ. ಲಕ್ಷ್ಮಣರಾವ್ ಬಿ.ಎ.ಬಿ.ಎಲ್. ರವರೂ ಡಿವಿಜನಲ್ ರಿಕ್ರೂಟಿಂಗ್ ಆಫೀಸರುಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಜುಲೈ ತಾ|| ೧೨ಕ್ಕೆ ಕಡೆಯಾದ ವಾರದಲ್ಲಿ ಸಂಸ್ಥಾನದಲ್ಲೆಲ್ಲಾ ಪ್ಲೇಗುರೋಗವು ೧೦೦ ಮಂದಿಗೆ ತಗುಲಿದುದರಲ್ಲಿ ೭೧ ಮಂದಿಗಳು ಸತ್ತಿರುವರು. ಕಲರಾ ರೋಗವು ಚಿತ್ರದುರ್ಗ ಡಿಸ್ಟ್ರಿಕ್ಟೊಂದರಲ್ಲೇ ವಿಶೇಷವಾಗಿದೆ. ಹಾಸನದಲ್ಲಿ ಬಹಳ ಸ್ವಲ್ಪವಾಗಿದೆ. ಉಳಿದ ಯಾವ ಡಿಸ್ಟ್ರಿಕ್ಟುಗಳಲ್ಲೂ ಇಲ್ಲ. ಆ ವಾರದಲ್ಲಿ ಸಂಸ್ಥಾನದಲ್ಲೆಲ್ಲಾ ೧೩೦ ಮಂದಿಗೆ ಕಾಲರಾ ತಗುಲಿದುದರಲ್ಲಿ ೭೩ ಮಂದಿಗಳು ಸತ್ತಿರುತ್ತಾರೆ. ಅದರೊಳಗೆ ಚಿತ್ರದುರ್ಗ ಡಿಸ್ಟ್ರಿಕ್ಟೊಂದರಲ್ಲೇ ೧೨೮ ಮಂದಿಗೆ ತಗುಲಿ ೭೧ ಮಂದಿಗಳು ಸತ್ತಿದ್ದಾರೆ.

ಭರತಖಂಡದ ವೃತ್ತಾಂತಗಳು.

ಭರತಖಂಡದ ೨ನೆ ಯುದ್ಧಹಣಕ್ಕೆ ಕಳೆದ ತಾ|| ೨೨ ರ ವರೆಗೆ ೨೧,೬೬,೪೪,೬೦೦ ರೂ. ಗಳು ಸೇರಿದ್ದುವು.

ಪಾಟಿಯಾಲಾ ಮಹಾರಾಜರನ್ನು ಲೂಧಿಯಾನಾ ಸಿಕ್‌ಪಟಾಲಮ್ಮಿಗೆ ಗೌರವ ಕರ್ನಲನ್ನಾಗಿ ಸಾರ್ವಭೌಮರು ಕಳೆದ ತಾ|| ೧೫ ರಲ್ಲಿ ನಿಯಮಿಸಿರುವರು.

ಕಳೆದ ತಾ|| ೧೧ ರಲ್ಲಿ ನಡೆದ ಜಗನ್ನಾಥದ ರಥೋತ್ಸವ ಕಾಲದಲ್ಲಿ ಜನರ ನುಗ್ಗಾಟವು ಹೆಚ್ಚಾಗಿ ೩ ಮಂದಿಗಳು ರಥದ ಗಾಲಿಗಳಿಗೆ ಸಿಕ್ಕಿ ಮೃತರಾದರು.

ಕಳೆದ ಜೂನ್ ತಿಂಗಳಲ್ಲಿ ಮದ್ರಾಸಾಧಿಪತ್ಯದ ಎಲ್ಲ ಜಿಲ್ಲೆಗಳಿಂದಲೂ ಸೈನಿಕರಾಗಿ ೩೬೫೨ ಮಂದಿಗಳೂ ಸೇನಾಸಹಾಯೋದ್ಯೋಗಗಳಿಗೆ ೨೮೧೧ ಮಂದಿಗಳೂ ಹೊಸದಾಗಿ ಸೇರಿರುತ್ತಾರೆ.

ಬರುವ ಆಗಸ್ಟ್ ತಿಂಗಳಲ್ಲಿ ಬೊಂಬಾಯಿಯೊಳಗೆ ತಾತ್ಕಾಲಿಕ ದೇಶೀಯ ಮಹಾಸಭೆಯು ಕೂಡುವುದರಲ್ಲಿದೆ. ಇದಕ್ಕೆ ಮಿತವಾದ ಪಕ್ಷದವರಾರೂ ಹೋಗಕೂಡದೆಂದು ನಿರ್ಧರಿಸಿಕೊಂಡಿರುವರು.

ಭಂಗಾರದ ಸವರನ್ನುಗಳನ್ನು ಎರಕವಿರೆಯುವುದಕ್ಕೆ ಬೇಕಾದ ಅಚ್ಚುಗಳು ಸೀಮೆಯಿಂದ ಬಂದುವು. ಸರಕಾರದವರು ಇಷ್ಟರಲ್ಲೇ ಈ ನಾಣ್ಯಗಳನ್ನು ಅಣಿಮಾಡಿ ವ್ಯವಹಾರಕ್ಕೆ ತರುವರೆಂದು ಪಯೋನಿಯರ್ ಪತ್ರಿಕೆಯು ಹೇಳುತ್ತದೆ.

ಜುಲೈ ತಿಂಗಳ ಮೊದಲಿನಿಂದೀಚೆಗೆ ಅಮೇರಿಕೆಯ ೩ ಹಡಗುಗಳು ಭರತಖಂಡಕ್ಕೆ ಬಹಳ ಬೆಳ್ಳಿಯನ್ನು ಸಾಗಿಸಿ ತಂದಿವೆ. ಒಟ್ಟು ೧೦ ಕೋಟಿ ರೂ. ಗಳನ್ನು ನಿರ್ಮಿಸಲು ಸಾಕಾಗುವಷ್ಟಿದೆ. ಇನ್ನೂ ಹೀಗೆಯೇ ಬಹಳ ಬೆಳ್ಳಿಯು ಬರುವುದರಲ್ಲಿದೆ.

ಮೊನ್ನೆವಾರ ಅಸ್ಸಾಮಿನಲ್ಲಿ ಆದ ಭೂಕಂಪದಿಂದ ಹಲವುಕಡೆ ಕಟ್ಟಡಗಳು ಯಂತ್ರಾಲಯಗಳು ಸೇತುಗಳು ಮೊದಲಾದುವು ಕುಸಿದು ಹಾಳಾಗಿರುವುದಲ್ಲದೆ ಕೆಲ ಪ್ರಾಣಹಾನಿಯೂ ಆಗಿದೆ. ಕೆಲ ಗ್ರಾಮಗಳಲ್ಲಿ ಒಂದು ಮನೆಯೂ ಉಳಿಯದಂತೆ ಹಾಳಾಗಿರುವುವು.

ಸಾರ್ವಭೌಮ ದಂಪತಿಗಳ ೨೫ ನೆ ವರ್ಷದ ವಿವಾಹವರ್ಧಂತ್ಯುತ್ಸವ ಸಮಯದಲ್ಲಿ ಬಹುಮಾನ ರೂಪವಾಗಿ ಜೋಧಪುರದ ಮಹಾರಾಜರು ೫ ಸಾವಿರ ಪೌನುಗಳನ್ನೂ ಬಿಕನೀರ್ ಮಹಾರಾಜರು ೧ ಸಾವಿರ ಪೌನುಗಳನ್ನೂ ಸಮರ್ಪಿಸಿದುದನ್ನು ಚಕ್ರವರ್ತಿ ದಂಪತಿಗಳು ಸ್ವೀಕರಿಸಿರುವರು.

ರಾಜಕೀಯ ಸಂಸ್ಕರಣ ನಿವೇದಿಕೆಯನ್ನು ಕುರಿತು ಶ್ರೀಯುತ ಗಂಧಿಯವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಅದರಲ್ಲಿ—"ಶ್ರಮಪಟ್ಟು ಅವರುಗಳು ಕಷ್ಟಸಾಧ್ಯವಾದ ಈ ಕಾರ್ಯವನ್ನು ಮಾಡಿರುವಾಗ ಅದನ್ನು ನಿರಾಕರಿಸುವುದು ದೇಶಕ್ಕೆ ಶ್ರೇಯಸ್ಕರವಲ್ಲ. ಆದರೆ ಅದರಲ್ಲಿ ಇನ್ನೂ ಬಹಳ ಸಂಸ್ಕರಿಸಬೇಕಾದ ವಿಷಯವಿದೆ". ಎಂದು ಹೇಳಿ, ದ್ವಿವಿಧಪರಿಪಾಲನಕ್ರಮ ಮೊದಲಾದ ಕೆಲವುಗಳ ದೋಷವನ್ನು ವಿವರಿಸಿ, ಕಟ್ಟಕಡೆಗೆ ಭರತಖಂಡದ ಭವಿಷ್ಯದ್ಯೋಗವೆಲ್ಲಾ ಯುದ್ಧಪರ್ಯವಸಾನವನ್ನನುಸರಿಸಿಕೊಂಡಿರುವ ಕಾರಣ ನಮ್ಮ ಸ್ವರಾಜ್ಯವಾದಿಗಳು ಸೈನ್ಯವನ್ನು ಪಶ್ಚಿಮರಂಗಕ್ಕೆ ಕಳುಹಿಸಿಕೊಟ್ಟು ಮಿತ್ರಮಂಡಲಿಗೆ ಜಯವುಂಟಾಗುವಂತೆ ಮಾಡಿದರೆ ಸ್ವರಾಜ್ಯಪ್ರದಾನವನ್ನು ತತ್‌ಕ್ಷಣವೇ ಪಡೆಯಲು ಅವಕಾಶವುಂಟಾಗುವುದು. ಆದುದರಿಂದ ಶರತ್ತುಗಳಾವುವನ್ನೂ ಕೋರದೆ ಯುದ್ಧರಂಗಕ್ಕೆ ನಮ್ಮ ಸ್ವರಾಜ್ಯವಾದಿಗಳು ಹೋಗಿ ಯುದ್ಧಮಾಡಬೇಕೆಂಬುದೇ ನನ್ನ ಹಿತೋಪದೇಶವು ಎಂದು ಹೇಳಿರುತ್ತಾರೆ.

ಭರತಖಂಡದ ರಾಜದ್ರೋಹವ್ಯಾಪನೆಯ ಮೂಲವನ್ನು ಕುರಿತು ವಿಚಾರಿಸುವುದಕ್ಕಾಗಿ ಸರ್ಕಾರದವರು ಒಂದು ಸಂಘವನ್ನೇರ್ಪಡಿಸಿದ್ದರು. ಇದರಲ್ಲಿ ಇಬ್ಬರು ಭಾರತೀಯ ನ್ಯಾಯಮೂರ್ತಿಗಳೂ ಇನ್ನು ಮೂವರು ಐರೋಪ್ಯಾಧಿಕಾರಿಗಳೂ ಸಭಿಕರಾಗಿದ್ದರು. ಇವರು ತಮ್ಮ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಅದರಲ್ಲಿ ಓದುವುದಕ್ಕೆ ಅನುಚಿತವಾದ ಭಾಗಗಳ ಹೊರತು ಉಳಿದ ಭಾಗವೆಲ್ಲಾ ಮುದ್ರಿಸಲ್ಪಟ್ಟಿದೆ. ಇದರ ವಿಷಯದಲ್ಲಿ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಇನ್ನುಮುಂದೆ ಕೊಡುವವರಾಗಿದ್ದಾರೆ. ಈ ವರದಿಯಲ್ಲಿ ಜರ್ಮನರು ಈ ದೇಶದಲ್ಲಿ ರಾಜದ್ರೋಹವನ್ನು ಹಬ್ಬಿಸುವುದಕ್ಕಾಗಿ ಮಾಡಿದ ಪ್ರಯತ್ನವೂ ಅವರ ಕಡೆಯ ಕೌಂಟ್ ಜಿಮ್ಮರ್‌ಮ್ಯಾನು ಮಾಡಿದ ಪ್ರೋತ್ಸಾಹವೂ, ಬಂಗಾಳದ ಅರಾಜಕರಿಗೆ ಅವರು ತುಪಾಕಿ ಮೊದಲಾದುವುಗಳನ್ನು ಕಳುಹಿಸಿಕೊಟ್ಟುದೂ, ಇವರಂತೆ ಅವರು ಅಮೇರಿಕಾದಲ್ಲೂ ಜಪಾನಿನಲ್ಲೂ ಅರಾಜಕವ್ಯಾಪನೆಗೆ ಮಾಡಿದ ಪ್ರಯತ್ನಗಳೂ, ಭರತಖಂಡದಲ್ಲಿ ರಾಜಭಕ್ತಿ ದೃಢವಾಗಿದ್ದುದರಿಂದಲೂ ಪ್ರಭುತ್ವದವರು ತೆಗೆದುಕೊಂಡ ಎಚ್ಚರಿಕೆಯಿಂದಲೂ ಶತ್ರುಗಳ ಆ ಕುಪ್ರಯತ್ನವೆಲ್ಲಾ ಸಾಗದೆಹೋದುದೂ ಸಹ ವಿವರಿಸಲ್ಪಟ್ಟಿರುವುದಲ್ಲದೆ, ಇಂಥ ದುಷ್ಪ್ರವ್ಯಾಪನೆಯ ನಿರೋಧಕ್ಕೆ ಕೆಲವುಪಾಯಗಳೂ ವಿವರಿಸಲ್ಪಟ್ಟಿವೆ. ೧೮೯೩ ನೆ ವರ್ಷದಿಂದ ಈ ದುಷ್ಪ್ರಯತ್ನಕ್ಕೆ ಅಂಕುರವಾಗಿ ೧೮೯೭ ರಲ್ಲಿ ಅದು ಕೊನೆಮುಟ್ಟಿತೆಂದೂ, ಇದರಲ್ಲಿ ವಿಶೇಷಾಂಗವಾಗಿದ್ದವರು ಬ್ರಾಹ್ಮಣರೆಂದೂ, ಅದರಲ್ಲೂ ಹೆಚ್ಚು ಮಂದಿ ಚಿತ್ಪಾವನ ಬ್ರಾಹ್ಮಣರೆಂದೂ, ತಿಲಕರು ಕ್ರಿಮಿನಲ್ ಕೋಡನ್ನು ಲಕ್ಷಿಸದೆಯೇ ಸ್ವಾತಂತ್ರ್ಯಾರ್ಥವಾಗಿ ದೇಶೀಯರೆಲ್ಲಾ ಪ್ರಯತ್ನಪಡಬೇಕೆಂದು ಬೋಧಿಸಿದುದರಿಂದ ಬೊಂಬಾಯಿ ಪ್ರಾಂತದಲ್ಲಿ ಅರಾಜಕವು ಹೆಚ್ಚಲು ಕಾರಣವಾಯಿತೆಂದೂ, ಬಂಗಾಳದಲ್ಲಿ ೧೯೧೦ ನೆ ವರ್ಷದಲ್ಲಿ ವೀರೇಂದ್ರಕುಮಾರನಿಂದ ಈ ಅರಾಜಕವು ಪ್ರಾರಂಭವಾಗಿ ಪ್ರಬಲಿಸಿತೆಂದೂ, ಆಂಗ್ಲಪರಿಪಾಲನವನ್ನೇ ತೊಲಗಿಸಿಬಿಡಬೇಕೆಂಬುದು ಅವರ ಸಂಕಲ್ಪವಾಗಿದ್ದಿತೆಂದೂ, ಅದಕ್ಕಾಗಿ ಆಂಗ್ಲೋದ್ಯೋಗಿಗಳನ್ನು ಕೊಲ್ಲುವುದು, ಸೈನಿಕರ ರಾಜಭಕ್ತಿಯನ್ನು ಕೆಡಿಸುವುದು, ಕಳವು ಸುಲಿಗೆಗಳನ್ನು ಮಾಡಿಸುವುದು—ಇತ್ಯಾದಿ ದುಷ್ಕೃತ್ಯಗಳೆಲ್ಲಾ ನಡೆಯಿಸಲ್ಪಟ್ಟವೆಂದೂ, ಪಂಜಾಬಿನಲ್ಲಿ ಗಾದರ್ ಉದ್ಯಮದಿಂದ ಬಹು ಭಯಂಕರವಾಗಿ ಎದ್ದ ಅನಾಹುತವೆಲ್ಲಾ ಶಾಸನಸಾಮರ್ಥ್ಯದಿಂದ ಅಡಗಿಹೋಯಿತೆಂದೂ, ವಿಪಿನಚಂದ್ರಪಾಲರ ಉಪನ್ಯಾಸಗಳಿಂದ ದಕ್ಷಿಣದೇಶದಲ್ಲಿ ಅರಾಜಕವು ತಲೆಯೆತ್ತಿ ಕೆಲ ತೊಂದರೆಗಳುಂಟಾಗಲವಕಾಶವಾಯಿತೆಂದೂ ಮೊದಲಾಗಿ ಬರೆಯಲ್ಪಟ್ಟಿದೆ. ಈ ವಿಚಾರಸಂಘಕ್ಕೆ ಸೀಮೆಯಿಂದ ಕರೆಯಿಸಲ್ಪಟ್ಟಿದ್ದ ಮಿ|| ರೌಲೆಟ್ ಎಂಬ ನ್ಯಾಯಮೂರ್ತಿಗಳು ಅಧ್ಯಕ್ಷರಾಗಿದ್ದುದರಿಂದ ಇದಕ್ಕೆ ರೌಲೆಟ್ ಕಮಿಷನ್ ಎಂದು ರೂಢಿಯುಂಟಾಗಿದೆ. ಈ ಸಂಘದ ವರದಿಯ ಮೇಲೆ ಸರ್ಕಾರದವರು ಏನುಮಾಡುವವರಾಗಿದ್ದಾರೋ ನೋಡಬೇಕು.

ವಿದೇಶ ವೃತ್ತಾಂತಗಳು.

ರಷ್ಯಾದ ಪೆಟ್ರೊಗ್ರೇಡ್ ಪಟ್ಟಣದಲ್ಲಿ ಕಲರಾ ರೋಗದಿಂದ ದಿನಕ್ಕೆ ೫೦೦ ಮಂದಿಗಳವರೆಗೆ ಸಾಯುತ್ತಿದ್ದಾರೆ.

೧೯೧೯ ನೇ ಜನವರಿ ತಾ|| ೧ ರೊಳಗಾಗಿ ಅಮೇರಿಕನ್ ಸೈನ್ಯವು ಫ್ರಾನ್ಸ್ ರಂಗದಲ್ಲಿ ೩೦ ಲಕ್ಷದವರೆಗೆ ಇರುವುದೆಂದು ಊಹಿಸಲ್ಪಟ್ಟಿದೆ.

ಅಮೇರಿಕಾದಿಂದ ವಿಮಾನದಲ್ಲಿ ಕುಳಿತು ಅಟ್ಲಾಂಟಿಕ್ ಸಾಗರವನ್ನು ದಾಟಿ ಯೂರೋಪು ಖಂಡಕ್ಕೆ ಬರಲು ಸಾಧ್ಯವೆ? ಅಲ್ಲವೆ? ಎಂಬುದನ್ನು ಪರೀಕ್ಷಿಸುವ ಪ್ರಯತ್ನವು ನಡೆಯುತ್ತಿದೆ.

ಕಳೆದ ಮೇ, ಜೂನ್ ಇವೆರಡು ತಿಂಗಳಲ್ಲೇ ಅಮೇರಿಕಾದಿಂದ ಯೂರೋಪಿಗೆ ೬,೪೦,೦೦೦ ಸೈನಿಕರು ಬಂದಿರುತ್ತಾರೆ. ಇವರಲ್ಲಿ ೩,೩೦,೦೦೦ ಸೈನಿಕರು ಇಂಗ್ಲೀಷ್ ಹಡಗುಗಳಲ್ಲಿ ಕುಳಿತು ಬಂದಿದ್ದಾರೆ. ಇನ್ನು ಮುಂದೆ ಇನ್ನೂ ಹೆಚ್ಚಾದ ಸೈನ್ಯವು ಬರುತ್ತದೆ.

ಮಾಸ್ಕೋ ಪಟ್ಟಣದಲ್ಲಿರುವ ತಮ್ಮ ರಾಯಭಾರಿಯ ರಕ್ಷಣೆಗಾಗಿ ಒಂದು ಪಟಾಲಮ್ಮನ್ನು ಕಳುಹಿಸಿಕೊಡುತ್ತೇವೆಂದು ಜರ್ಮನರು ತಿಳಿಯಿಸಿರಲಾಗಿ, ಅಲ್ಲಿಯ ಬೋಲ್ಷೆವಿಕ್ ಪ್ರಭುತ್ವದವರು—ನಾವೇ ನಂಬುಗೆಯಾದ ಸೈನ್ಯವನ್ನು ರಕ್ಷಣೆಗೆ ನಿಯಮಿಸುತ್ತೇವೆಂತಲೂ ನಿಮ್ಮ ಸೈನ್ಯವನ್ನು ಕಳುಹಿಸುವುದಕ್ಕೆ ನಾವು ಒಪ್ಪಲಾರೆವೆಂತಲೂ, ಈ ವಿಷಯದಲ್ಲಿ ನೀವು ಹಠಮಾಡಕೂಡದೆಂತಲೂ ಸಹ ಜರ್ಮನರಿಗೆ ಉತ್ತರವನ್ನು ಕೊಟ್ಟಿರುವರು.

ಇಂಗ್ಲೆಂಡಿನಲ್ಲಿ ಈಗ ೩ ಲಕ್ಷ ಮಂದಿ ಸ್ತ್ರೀಯರೂ, ೬೦ ಸಾವಿರ ಮಂದಿ ಸೈನಿಕರೂ, ೧೦ ಸಾವಿರ ಮಂದಿ ಜರ್ಮನ್ ಸೆರೆಯಾಳುಗಳೂ ಸಹ ಬೇಸಾಯದ ಕೆಲಸವನ್ನು ಮಾಡುತ್ತಿದ್ದಾರೆ. ಎಷ್ಟೋ ಲಕ್ಷಾಂತರ ಎಕರೆಗಳ ಭೂಮಿಯು ಹೊಸದಾಗಿ ವ್ಯವಸಾಯಕ್ಕೆ ಬಂದಿದೆ. ಕಳೆದ ವರ್ಷಕ್ಕಿಂತಲೂ ಈ ವರ್ಷದ ಬೆಳಸು ಬಹಳ ಹೆಚ್ಚಾಗಿದೆ. ಇಂಗ್ಲೆಂಡಿಗೆ ಆಹಾರವಸ್ತುಗಳನ್ನು ಅಮೇರಿಕಾದಿಂದ ತರಿಸಿಕೊಳ್ಳಬೇಕಾದ ಆವಶ್ಯಕತೆಯೇ ಇಲ್ಲವೆಂದು ಪಾರ್ಲಿಮೆಂಟಿನಲ್ಲಿ ಹೇಳಲ್ಪಟ್ಟಿರುವುದು.

ಜಪಾನರು ಸೈಬೀರಿಯಾದಲ್ಲಿ ಯುದ್ಧವನ್ನಾರಂಭಿಸುವ ವಿಷಯದಲ್ಲಿ ತಮ್ಮ ದೇಶದ ಪ್ರಮುಖರೊಡನೆಲ್ಲಾ ಆಲೋಚಿಸಿದರು. ಕಳೆದ ತಾ|| ೧೫ ರಲ್ಲಿ ಕೂಡಿದ್ದ ಜನೋಪಸಭೆಯಲ್ಲಿದ್ದ ರಾಜನೀತಿಜ್ಞರಾದ ಹಲಬರನೇಕರು ಜಕೋಸ್ಲಾವಕ್ಕರಿಗೆ ಜಪಾನರು ಸಹಾಯ ಮಾಡುವುದು ಅವಶ್ಯಕವೆಂದು ಅಭಿಪ್ರಾಯ ಕೊಟ್ಟರು. ಈ ಜಕೋಸ್ಲಾವಕ್ಕರಿಗೆ ಮಿತ್ರಮಂಡಲಿಯವರೆಲ್ಲಾ ಸಹಾಯಕರಾಗಿದ್ದಾರೆ. ಬೇಗನೆ ಅವರಿಗೆ ಅಮೇರಿಕಾದವರ ಸಹಾಯವೂ ಲಭಿಸುವುದು. ಜಪಾನ್ ಸರ್ಕಾರವೂ ತಮ್ಮ ಸೈನ್ಯವನ್ನು ಸೈಬೀರಿಯಾಕ್ಕೆ ಕಳುಹಿಸಲು ನಿಶ್ಚಯಿಸಿತು.

ಲಂಡನ್ನಿನಲ್ಲಿರುವ ಮಹಮ್ಮದೀಯ ಸಂಘದವರು ಸಾಮ್ರಾಜ್ಯಯುದ್ಧಸಭೆಗಾಗಿ ಹೋಗಿರುವ ಪಾಟಿಯಾಲಾ ಮಹಾರಾಜರಿಗೂ ಸರ್ ಎಸ್. ಪಿ. ಸಿಂಹರವರಿಗೂ ಸಹ ಒಂದು ಔತಣವನ್ನು ಮಾಡಿದರು. ಎಚ್. ಎಚ್. ಆಗಾಖಾನರು ಫ್ರಾನ್ಸಿನಲ್ಲಿದ್ದುದರಿಂದ ಈ ಸಮಾರಂಭಕ್ಕೆ ಅವರು ಬರಲಾಗಲಿಲ್ಲ. ಅವರ ಸ್ಥಾನದಲ್ಲಿ ಮಿ|| ಅಮೀರಾಲಿಯವರು ಅತಿಥಿಗಳನ್ನು ಸ್ವಾಗತಿಸಿದರು. ಅವರು ಭಾಷಣ ಮಾಡುವಾಗ್ಗೆ ಇಷ್ಟರಲ್ಲೇ ಭರತಖಂಡಕ್ಕೆ ದೊರೆಯಲಿಕ್ಕಿರುವ ಸಂಸ್ಕರಣಗಳ ಫಲವು ಲಭಿಸುವುದಕ್ಕೂ ದೂರ ಸಾಗುವುದಕ್ಕೂ ಅವುಗಳನ್ನು ನಿಧಾನವಾಗಿ ಪರ್ಯಾಲೋಚಿಸುವುದು ಸಾಹಸ ಶಕ್ತಿ ತ್ಯಾಗಶೀಲತೆ ಮೊದಲಾದ ಗುಣಗಳೇ ಕಾರಣಭೂತಗಳಾಗುವುವು ಎಂದು ಹೇಳಿದರು. ಸರ್ ಎಸ್. ಪಿ. ಸಿಂಹರವರು ಉತ್ತರ ಕೊಡುವಾಗ್ಗೆ ಭರತಖಂಡದ ರಾಜಕೀಯ ಸಾಂಘಿಕ ಆರ್ಥಿಕಾದ್ಯಭಿವೃದ್ಧಿಗಳಿಗೆಲ್ಲಾ ಹಿಂದೂಮಹಮ್ಮದೀಯರಿರ್ವರೂ ಒಗ್ಗಟ್ಟಿನಿಂದ ನಡೆಯುವುದೇ ಮೂಲವೆಂದು ಹೇಳಿದರು.

ಭಾರತ ರಾಜಕೀಯ ಸಂಸ್ಕರಣಗಳು.

(ಹಿಂದಣಶೇಷ)

೪೭. ಪ್ರಾಂತಿಕ ಸರ್ಕಾರಗಳ ಮತ್ತೂ ಇಂಡ್ಯಾ ಸರ್ಕಾರದ ಆದಾಯಗಳನ್ನು ಬೇರೆಬೇರೆ ಮಾಡಬೇಕು.

೪೮. ಪ್ರಾಂತಿಕ ಸರ್ಕಾರದ ಹುಟ್ಟುವಳಿಯಿಂದ ಇಂಡ್ಯಾ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಮೊಟ್ಟಮೊದಲು ಕೊಡಬೇಕಾದುದು ವಿಧಿಯಾಗಿರಬೇಕು.

೪೯. ಪ್ರಾಂತಿಕ ಸರ್ಕಾರಗಳಿಗೆ ತೆರಿಗೆ ಹಾಕುವುದಕ್ಕೂ, ಸಾಲ ತೆಗೆಯುವುದಕ್ಕೂ ಕೆಲ ಅಧಿಕಾರಗಳಿರಬೇಕು.

೫೦. ಬಜೆಟ್ಟನ್ನು ಶಾಸನಸಭೆಯ ಮುಂದಿಡಬೇಕು. ಗೌರ್ನರು ತಮ್ಮ ಕೈಯಲ್ಲಿ ಸ್ವಂತವಾಗಿ ಇಟ್ಟುಕೊಂಡಿರುವ ಶಾಖೆಗಳಿಗೆ ಸಂಬಂಧವಾಗಿ ಆಗುವ ಆಯ ವ್ಯಯಗಳನ್ನು ಶಾಸನಸಭೆಯವರು ಒಪ್ಪದೆ ಹೋದರೆ ಅದರಲ್ಲಿ ಕೆಲ ಭಾಗವನ್ನೇ ಆಗಲೀ ಸಂಪೂರ್ಣವಾಗಿಯೇ ಆಗಲೀ ಬಜೆಟ್ಟಿನಲ್ಲಿ ಮತ್ತೆ ಸೇರಿಸಲು ಗೌರ್ನರಿಗೆ ಅಧಿಕಾರವಿರಬೇಕು. ಹಾಗೆ ಮಾಡಲು ತಕ್ಕ ಕಾರಣವನ್ನು ಗೌರ್ನರು ತೋರಿಸಬೇಕು. ಇಂಥ ವಿಷಯದಲ್ಲಿ ಹೊರತು ಉಳಿದ ವಿಷಯಗಳಲ್ಲೆಲ್ಲಾ ಶಾಸನಸಭೆಯವರು ಮಾಡಿದ ತೀರ್ಮಾನದಂತೆಯೇ ಬಜೆಟ್ಟು ಏರ್ಪಡಬೇಕು.

ಸ್ಥಳೀಯ ಸ್ವಪರಿಪಾಲನ.

೫೧. ಸಾಧ್ಯವಾದಮಟ್ಟಿಗೂ ಸ್ಥಳೀಯ ಸ್ವಪರಿಪಾಲನವನ್ನು ಸಂಪೂರ್ಣವಾಗಿ ಪ್ರಜೆಗಳ ಅಧೀನಮಾಡಬೇಕು.

ಪ್ರಾಂತಿಕಶಾಸನಸಭೆಯ ತಿದ್ದುಪಾಟು.

೫೨. ನೂತನಶಾಸನ ಸಭೆಗಳು ಏರ್ಪಟ್ಟು ೫ ವರ್ಷಗಳಿಗೆ ಪ್ರಾಂತಿಕ ಸರ್ಕಾರದವರಾಗಲೀ, ಶಾಸನಸಭೆಯವರಾಗಲೀ, ಗೌರ್ನರಾಗಲೀ ತಮ್ಮ ಕೈಯಲ್ಲಿ ಸ್ವಂತವಾಗಿ ಇಟ್ಟುಕೊಂಡಿರುವ ಅಥವಾ ಪ್ರಜಾಪ್ರತಿನಿಧಿಗಳ ವಶದಲ್ಲಿರುವ ಶಾಖೆಗಳ ಪಟ್ಟಿಯಲ್ಲಿ ಹೆಚ್ಚು ಕಡಿಮೆ ಮಾಡಬೇಕಾಗಿದ್ದರೆ ಆ ವಿಷಯದಲ್ಲಿ ಪತ್ರವನ್ನು ಬರೆದುಕೊಂಡರೆ ಇಂಡ್ಯಾ ಸರ್ಕಾರದವರು ಸ್ಟೇಟ್‌ಸೆಕ್ರೆಟರಿಯವರ ಅನುಮತಿಯಮೇರೆಗೆ ಶಾಖೆಗಳ ಬದಲಾವಣೆಯನ್ನು ಮಾಡಬಹುದು. ಪ್ರಜಾಪ್ರತಿನಿಧಿಗಳ ಕೈಯಲ್ಲಿರುವ ಯಾವುದಾದರೂ ಶಾಖೆಯ ಕಾರ್ಯಗಳು ಸಮರ್ಪಕವಾಗಿ ನಡೆಯದೆ ಹೋದರೆ ಅದನ್ನು ಗೌರ್ನರ ಕೈಗೆ ಬದಲಾಯಿಸಬಹುದು. ಈ ಪ್ರಜಾಪ್ರತಿನಿಧಿ ಮಂತ್ರಿಗಳ ಸಂಬಳವನ್ನು ಇಂಡ್ಯಾ ಸರ್ಕಾರದವರು ಶಾಸನಸಭೆಯವರ ಓಟಿಗೆ ಪ್ರತಿವರ್ಷವೂ ಒಳಪಡಿಸಬಹುದು.

ಪ್ರಾರಂಭಕಾರ್ಯಕ್ರಮ.

ಇಂಗ್ಲೆಂಡಿನಿಂದ ಬರುವ ಒಬ್ಬ ಅಗ್ರಾಸನಾಧಿಪತಿಯನ್ನೂ, ಒಬ್ಬ ಸರ್ಕಾರಿ ಉದ್ಯೋಗಿಯನ್ನೂ, ಒಬ್ಬ ಅನಧಿಕಾರಿ ಭಾರತೀಯನನ್ನೂ ಹೊಂದಿರುವ ಒಂದು ಸಂಘವನ್ನೇರ್ಪಡಿಸಬೇಕು. ಈ ಸಂಘದವರು ಸರ್ಕಾರದ ಕೈಯಿಂದ ಯಾವ ಶಾಖೆಗಳನ್ನು ಪ್ರಜಾಪ್ರತಿನಿಧಿಮಂತ್ರಿಗಳಿಗೆ ವಹಿಸಿಕೊಡಬೇಕೆಂಬುದನ್ನು ನಿರ್ಧರಿಸುವರು. ಯಾವ ಪ್ರಾಂತದಲ್ಲಿ ಈ ಸಂಬಂಧವಾದ ವಿಚಾರಣೆ ನಡೆಯುತ್ತಿರುವುದೋ ಆ ಪ್ರಾಂತದಿಂದ ಈ ವಿಚಾರಕ ಸಂಘಕ್ಕಾಗಿ ಒಬ್ಬ ಉದ್ಯೋಗಿಯನ್ನೂ ಒಬ್ಬ ಅನಧಿಕಾರಿಭಾರತೀಯನನ್ನೂ ನಿಯಮಿಸಬೇಕು. ಇದಲ್ಲದೆ

೫೪. ಮತ್ತೊಂದು ಸಂಘವಿರಬೇಕು. ಇದಕ್ಕೂ ಇಂಗ್ಲೆಂಡಿನಿಂದ ಬರುವ ಒಬ್ಬ ಅಗ್ರಾಸನಾಧಿಪತಿಯೂ ಇಬ್ಬರು ಅಧಿಕಾರಿಗಳೂ, ಇಬ್ಬರು ಅನಧಿಕಾರಿಭಾರತೀಯರೂ ಸಭಿಕರಾಗಿರಬೇಕು. ಈ ಸಂಘದವರು ನಿಯಾಮಕಪ್ರದೇಶ, ನಿಯಾಮಕರಿಗೆ ಇರಬೇಕಾದ ಅರ್ಹತೆ, ಆಯಾ ಪ್ರಾಂತದ ಶಾಸನಸಭೆಗಳಿಗೆ ಪ್ರಜಾಪ್ರತಿನಿಧಿಗಳು ಎಷ್ಟೆಷ್ಟು ಮಂದಿ ಇರಬೇಕೆಂಬುದು, ಗೌರ್ನರ್ ಜನರಲ್ಲರ ಸಭೆಗೆ ಎಷ್ಟು ಮಂದಿ ಸಭಿಕರಿರಬೇಕೆಂಬುದು—ಈ ವಿಷಯಗಳನ್ನೆಲ್ಲಾ ನಿರ್ಣಯಿಸಬೇಕು. ಈ ವಿಚಾರಣೆಯು ಜರುಗುವಾಗ ಆಯಾ ಪ್ರಾಂತದಿಂದ ಒಬ್ಬ ಸರ್ಕಾರಿ ಉದ್ಯೋಗಿಯನ್ನೂ ಒಬ್ಬ ಅನಧಿಕಾರಿ ಭಾರತೀಯನನ್ನೂ ಈ ಸಂಘದವರು ಸಹಾಯಕ್ಕೆ ಕೊಡಬೇಕು.

೫೫. ಮೇಲೆ ವಿವರಿಸಿರುವ ೨ ಸಂಘಗಳೂ ಸೇರಿ ಅಭಿಪ್ರಾಯಗಳನ್ನು ಪರಸ್ಪರ ತಿಳಿಯಪಡಿಸಿಕೊಳ್ಳಬೇಕು.

ವಿಚಾರಕಸಂಘ.

೫೬. ಈ ಶಾಸನಸಭೆಗಳು ಏರ್ಪಟ್ಟು ೧೦ ವರ್ಷಗಳಾದ ಬಳಿಕ ಅವುಗಳ ಸ್ಥಿತಿಯು ಯಾವ ರೀತಿಯಲ್ಲಿರುವುದೋ ಅದನ್ನು ವಿಚಾರಿಸುವುದಕ್ಕೆ ಒಂದು ವಿಚಾರಕಸಂಘವನ್ನೇರ್ಪಡಿಸಬೇಕು. ಈ ಸಂಘದ ಸಭಿಕರ ಹೆಸರುಗಳನ್ನು ಪಾರ್ಲಿಮೆಂಟಿನವರ ಒಪ್ಪಿಗೆಗಾಗಿ ಕಳುಹಿಸಿಕೊಡಬೇಕು. ಇಂಥ ವಿಚಾರಕಸಂಘಗಳನ್ನೇ ಅಲ್ಲಿಂದಾಚೆಗೆ ಮರಳಿ ೧೨ ವರ್ಷಗಳೊಳಗೇ ಏರ್ಪಡಿಸುತ್ತಲಿರಬೇಕು.

ಸ್ವದೇಶೀಯ ಸಂಸ್ಥಾನಗಳು.

೫೭. ದೇಶೀಯಸಂಸ್ಥಾನಗಳ ಪ್ರಭುಗಳ ಸಭೆಯೊಂದನ್ನೇರ್ಪಡಿಸಬೇಕು.

೫೮. ಈ ಸಭೆಗೆ ಒಂದು ಸ್ಥಾಯಿಸಂಘವಿರಬೇಕು.

೫೯. ಸಂಸ್ಥಾನಾಧಿಪತಿಗಳಲ್ಲಿ ಒಬ್ಬರಿಗೊಬ್ಬರಿಗೇ ಆಗಲೀ, ಒಬ್ಬ ಸಂಸ್ಥಾನಾಧಿಪತಿಗೂ ಒಂದು ಪ್ರಾಂತಿಕಸರ್ಕಾರಕ್ಕೇ ಆಗಲೀ, ಅಥವಾ ಒಬ್ಬ ಸಂಸ್ಥಾನಾಧಿಪತಿಗೂ ಇಂಡ್ಯಾ ಸರ್ಕಾರಕ್ಕೂ ಆಗಲೀ ಯಾವುದಾದರೂ ವಿಷಯದಲ್ಲಿ ಕಲಹವು ಸಂಭವಿಸಿದರೆ ಆಗ ಮಧ್ಯಸ್ತಿಗೆ ಮಾಡುವುದಕ್ಕೆ ಒಂದು ಸಂಘವಿರಬೇಕು. ಆ ಸಂಘದಲ್ಲಿ ಒಬ್ಬ ಹೈಕೋರ್ಟು ಜಡ್ಜಿಯೂ, ೨ ಪಕ್ಷಗಳಿಗೂ ಒಬ್ಬೊಬ್ಬ ಪ್ರತಿನಿಧಿಯೂ ಸಹ ಸಭಿಕರಾಗಿರಬೇಕು. ಈ ಪ್ರತಿನಿಧಿಗಳನ್ನು ಗೌರ್ನರ್ ಜನರಲ್ಲರು ನಿಯಮಿಸಬೇಕು.

೬೦. ಒಬ್ಬ ಸಂಸ್ಥಾನಾಧಿಪತಿಯಿಂದ ಆತನ ಬಾಧ್ಯತೆಗಳಲ್ಲಾಗಲೀ ಗೌರವದಲ್ಲಾಗಲೀ, ಅಧಿಕಾರದಲ್ಲಾಗಲೀ ಯಾವುದನ್ನಾದರೂ ತೊಲಗಿಸಬೇಕಾಗಿದ್ದರೂ, ಒಬ್ಬ ಸಂಸ್ಥಾನಾಧಿಪತಿಯ ಸಂತತಿಯವರಿಗೆ ವಾರಸತ್ವವಿಲ್ಲದಂತೆ ಮಾಡಬೇಕಾದರೂ ಈ ವಿಷಯವನ್ನು ಕುರಿತು ವಿಚಾರಿಸಿ ಸಲಹೆ ಕೊಡುವುದಕ್ಕೆ ಒಬ್ಬ ಹೈಕೋರ್ಟು ಜಡ್ಜಿಯೂ ಇಬ್ಬರು ಸ್ವದೇಶೀಯಸಂಸ್ಥಾನಾಧಿಪತಿಗಳೂ, ಇಬ್ಬರು ಪ್ರಜಾಪ್ರಮುಖರೂ ಕೂಡಿರುವ ಒಂದು ಸಂಘವನ್ನು ಗೌರ್ನರ್ ಜನರಲ್ಲರು ನಿಯಮಿಸಬೇಕು.

೬೧. ತಮ್ಮ ದೇಶದ ಒಳ ಆಡಳಿತವನ್ನೆಲ್ಲಾ ಸ್ವತಂತ್ರವಾಗಿ ನಡೆಯಿಸಲು ಸರ್ವಾಧಿಕಾರವನ್ನು ಹೊಂದಿರುವ ಸಂಸ್ಥಾನಗಳ ಪ್ರಭುಗಳು ತಮ್ಮ ಪತ್ರವ್ಯವಹಾರಗಳನ್ನೆಲ್ಲಾ ಇಂಡ್ಯಾ ಸರ್ಕಾರದವರೊಡನೆಯೇ ನೇರವಾಗಿ ನಡೆಯಿಸಿಕೊಳ್ಳಬೇಕು.

೬೨. ಸ್ವದೇಶೀಯ ಸಂಸ್ಥಾನಗಳ ಸಂಬಂಧವು ಪ್ರಾಂತಿಕಶಾಸನಸಭೆಗಳಿಗೆ ಇಲ್ಲದಿರಬೇಕು.

೬೩. ಸಂಸ್ಥಾನಾಧಿಪತಿಗಳು ಪರಸ್ಪರ ಕಲೆತು ತಂತಮ್ಮ ವ್ಯವಹಾರಗಳನ್ನು ಚರ್ಚಿಸಿ ಪರಿಷ್ಕರಿಸಿಕೊಳ್ಳುವುದಕ್ಕಾಗಿ ಅವರುಗಳ ಒಂದು ಸಭೆಯೂ, ಕೌನ್ಸಿಲ್ ಆಫ್ ಸ್ಟೇಟ್ ಎಂಬ ಸಭೆಯೂ ಸಹ ಕೂಡುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಬೇಕು.

ಸರ್ಕಾರದುದ್ಯೋಗಗಳು.

೬೪. ಸರ್ಕಾರದುದ್ಯೋಗಗಳನ್ನು ವಿನಿಯೋಗಿಸುವ ವಿಷಯದಲ್ಲಿ ನಿಬಂಧನೆಗಳೊಳಗೆ ಕಂಡಿರುವ ಜಾತಿಭೇದಗಳನ್ನೆಲ್ಲಾ ತೊಲಗಿಸಿಬಿಡಬೇಕು.

೬೫. ಇಂಗ್ಲೆಂಡಿನಲ್ಲಿ ಉದ್ಯೋಗಿಗಳನ್ನು ಸೇರಿಸಿಕೊಳ್ಳುವ ಪದ್ಧತಿ ಮಾತ್ರವೇ ಅಲ್ಲದೆ ಭರತಖಂಡದಲ್ಲೂ ಆ ಉದ್ಯೋಗಗಳನ್ನು ಹಂಚುವುದಕ್ಕೆ ಪದ್ಧತಿಗಳನ್ನೇರ್ಪಡಿಸಬೇಕು.

೬೬. ಎಲ್ಲ ಶಾಖೆಗಳಲ್ಲೂ ಭರತಖಂಡದೊಳಗೆ ಕೊಡಲ್ಪಡುವ ಉದ್ಯೋಗಗಳನ್ನು ನೂರಕ್ಕೆ ಇಷ್ಟೆಂದು ಏರ್ಪಡಿಸಿಕೊಂಡು ಕ್ರಮಕ್ರಮವಾಗಿ ಅವುಗಳನ್ನು ವೃದ್ಧಿಪಡಿಸಿಕೊಂಡು ಹೋಗಬೇಕು.

೬೭. ಇಂಡಿಯನ್ ಸಿವಿಲ್ ಸರ್ವೀಸಿನಲ್ಲಿ ಸದ್ಯಃ ವರ್ಷಕ್ಕೆ ೧೦೦ಕ್ಕೆ 1½ ಯಂತೆ ಅಭಿವೃದ್ಧಿಗೊಳಿಸುತ್ತ ೧೦೦ ಕ್ಕೆ ೩೩ ಯಷ್ಟು ದೊಡ್ಡದೊಡ್ಡ ಉದ್ಯೋಗಸ್ಥಾನಗಳು ಭಾರತೀಯರಿಗೆ ಬರುವಂತಾಗುವವರೆಗೂ ಹೋಗಬೇಕು. ೧೦ ವರ್ಷಕ್ಕೊಂದುಸಲ ಮೇಲೆಹೇಳಿದ ಸಂಘದವರು ಮರಳಿ ಪುನರ್ವಿಮರ್ಶೆಯನ್ನು ಮಾಡುವವರೆಗೂ ಹೀಗೆ ಜರುಗುತ್ತಿರಬೇಕು.

೬೮. ಜೀವನದ ವೆಚ್ಚಗಳು ಬೆಳೆಯುತ್ತಿರುವ ಸಂದರ್ಭವನ್ನನುಸರಿಸಿಯೂ ತಕ್ಕ ಜನಗಳು ಉದ್ಯೋಗಗಳಿಗೆ ಬರುವಂತೆ ಮಾಡುವುದಕ್ಕೂ ಸಹ ಸಂಬಳಗಳು ಏರ್ಪಡಿಸಲ್ಪಡುವುವು. ಸಾಧಾರಣವಾಗಿ [illegible]

ವುದು. ಆ ಉದ್ಯೋಗದಲ್ಲಿ ಅತ್ಯಧಿಕವಾದ ಪದವಿಯು ಲಭಿಸುವವರೆಗೆ ಸಂಬಳವು ಹೆಚ್ಚಿಸಲ್ಪಡುವುದು. ಸಾಮಾನ್ಯವಾದ ಪಿಂಛನ್ನಿನ ಪರಮಾವಧಿಯು ೬೦೦೦ ರೂ. ಗಳಾಗಿರಬೇಕು. ನಾಣ್ಯದ ಬದಲಾವಣೆಯಲ್ಲಿ ರೂ. ಗೆ ೧ ಷಿಲ್ಲಿಂಗ್ ೪ ಪೆನ್ನಿಯಂತೆ ಕೊಡಲ್ಪಡುವುದು. ಉನ್ನತೋದ್ಯೋಗಗಳಿಗಾಗಿ ಪ್ರತ್ಯೇಕವಾದ ಪಿಂಛನ್ನಿರಬೇಕು. ಇಂಡಿಯನ್ ಸಿವಿಲ್‌ಸರ್ವೀಸ್ ಉದ್ಯೋಗಿಗಳಿಗೆ ಕೊಡಲ್ಪಡುವ ವಾರ್ಷಿಕವೇತನಗಳು ಸರ್ಕಾರದವರಿಂದ ನಿಯುಕ್ತವಾಗದಿರುವ ಹಣದಿಂದ ಕೊಡಲ್ಪಡುವುದು. ರಜಾಕ್ಕೆ ಸಂಬಂಧಪಟ್ಟ ನಿಬಂಧನೆಗಳು ಉದಾರಭಾವಯುಕ್ತವಾಗಿರುವಂತೆ ಮಾಡಲ್ಪಡುವುವು. ರಜಾದ ಕಾಲವನ್ನು ಕಡಿಮೆಮಾಡುವುದಲ್ಲದೆ ಅಂಥ ಕಾಲಕ್ಕೆ ಪೂರ್ಣವಾದ ಸಂಬಳವು ಕೊಡಲ್ಪಡುವಂತೆ ಮಾಡಬೇಕು.

೬೯. ಭರತಖಂಡದಲ್ಲೇ ನಿಯಮಿಸಲ್ಪಡುವ ಉದ್ಯೋಗಗಳಿಗೆ ಒಂದು ವಿಧವಾದ ಸಂಬಳದ ನಿರ್ಧಾರವೂ, ಯೂರೋಪಿನಿಂದ ಕರೆಯಿಸಲ್ಪಡುವ ಉದ್ಯೋಗಿಗಳಿಗಾಗಲೀ ಅಥವಾ ಅಲ್ಲಿನವರಷ್ಟು ವಿಶಿಷ್ಟಾರ್ಹತೆಯುಳ್ಳ ಭಾರತೀಯೋದ್ಯೋಗಿಗಳಿಗೇ ಆಗಲೀ ತಕ್ಕಷ್ಟು ಸಂಬಳವನ್ನು ಕೊಡಬೇಕು. ಯೂರೋಪಿನಲ್ಲಿ ನಿಯಮಿಸಲ್ಪಡುವ ಭಾರತೀಯೋದ್ಯೋಗಿಗಳ ವಿಷಯದಲ್ಲಿಯೂ ಇಂಥ ರೀತಿಯೇ ಅನುಸರಿಸಲ್ಪಡಬೇಕು.

ದಾವಣಗೆರೆ.

ಪದ್ಧತಿಯ ಪ್ರಕಾರ ಇಲ್ಲಿನ "ವೀರಶೈವ ಹಿತೋಪದೇಶಕಸಂಘ" ದ ಪರವಾಗಿ ಬರುವ ಶ್ರಾವಣಮಾಸದಲ್ಲಿ ಒಂದು ತಿಂಗಳು ಇಲ್ಲಿಯ ಶ್ರೀ ವಿರಕ್ತ ಮಠದಲ್ಲಿ ಉಪನ್ಯಾಸಗಳು ಜರುಗುವುದರಿಂದ ಉಪನ್ಯಾಸಕರು ತಮ್ಮ ಉಪನ್ಯಾಸಗಳನ್ನು ಮುಂಚಿತವಾಗಿಯೇ ಕೆಳಗಿನ ವಿಳಾಸಕ್ಕೆ ಸ್ಪಷ್ಟವಾಗಿ ಬರೆದು ಕಳುಹಿಸಬೇಕಾಗಿ ಕೋರಿಕೆ.

ದಾವಣಗೆರೆ, ತಾ|| 24-7-18. } ಕೆ. ಗುರುಶಾಂತಪ್ಪ,
ರಿಟೈರ್ಡ್ ಹೆಡ್‌ಮಾಸ್ಟರ್.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆ.

1. ವೀರಶೈವ ಬಡ ವಿದ್ಯಾರ್ಥಿಗಳು ಅಂದರೆ ಇಂಗ್ಲಿಷ್ ಹೈಸ್ಕೂಲು ಮತ್ತು ಕಾಲೇಜು ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಸ್ಕಾಲರ್‌ಷಿಪ್ ದೊರೆಯುತ್ತದೆಯಾದುದರಿಂದ ಇಷ್ಟವುಳ್ಳ ವಿದ್ಯಾರ್ಥಿಗಳು ಆಗಸ್ಟ್ ತಾ|| 24 ರೊಳಗಾಗಿ ಸೆಕ್ರೆಟರಿಯವರ ವಿಳಾಸಕ್ಕೆ ಅಪ್ಲಿಕೇಷನನ್ನು ಬರೆದುಕೊಳ್ಳತಕ್ಕದ್ದು. ಅಪ್ಲಿಕೇಷನ್ ಫಾರಂ ಫಂಡಿನ ಸೆಕ್ರೆಟರಿಯವರಲ್ಲಿ ದೊರೆಯುವುದು.

2. ಅಪ್ಲಿಕೇಷನ್ನಿನ ಜತೆಯಲ್ಲಿ ವಿದ್ಯಾರ್ಥಿಯು ಸಹಾಯವನ್ನು ಹೊಂದಲು ಅರ್ಹನೆಂಬ ಬಗ್ಗೆ ಆಯಾಯ ಶಾಲಾ ಮುಖ್ಯೋಪಾಧ್ಯಾಯರಿಂದಲೂ, ಸ್ಥಳೀಯ ದೊಡ್ಡ ಮನುಷ್ಯರೊಬ್ಬರಿಂದಲೂ ಒಂದೊಂದು ಸರ್ಟಿಫಿಕೇಟನ್ನು ತೆಗೆದುಕೊಂಡು ಕಳುಹಿಸತಕ್ಕದ್ದು.

Bangalore City, } **G. Paramasiviah, B.A., LL.B.,**
20-7-1918. } *Advocate and Hon. Secretary,*
The Mysore Lingayet
Education Fund Association.

ಪತ್ರವ್ಯವಹಾರ.

(ಹಿರಿಯೂರು ತಾ|| ವೀರಶೈವ ಮಹಾಸಭೆ)

ಮ|| ರಾ|| ಶ್ರೀ|| ಜಿ. ಶಾಂತವೀರಪ್ಪನವರು, ಬಿ. ಎ., ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟ್ ತುಮಕೂರು, ಇವರು ಒಂದನೆಯ ಹಿರಿಯೂರು ತಾಲ್ಲೂಕು ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಸನ್ 1918 ನೇ ಜುಲೈ ತಾರೀಖು 12 ರಲ್ಲು ಮಾಡಿದ ಭಾಷಣ:—

ಪರಮಪೂಜ್ಯರಾದ ಮಹಾಸ್ವಾಮಿಗಳೇ, ವೀರಶೈವ ಮತ ಬಾಂಧವರೇ,

ಶ್ರೀಮದ್ವೀರಶೈವ ಜಗತ್ತನ್ನು ಉದ್ಧರಿಸಲೋಸುಗ ಕಂಕಣಬದ್ಧರಾಗಿರ್ಪ ಚಿತ್ರದುರ್ಗದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಕೃಪಾವಿಶೇಷದಿಂದ ನಡೆಯುವುದಾಗಿರುವ ಈ ಮಹಾಸಭೆಯಲ್ಲಿ ನಾವು ನೆರೆದಿರುತ್ತೇವೆ. ವೀರಶೈವ ಮತಾಭಿವೃದ್ಧಿಯನ್ನು ಲಕ್ಷ್ಯವಾಗಿಟ್ಟುಕೊಂಡು ಮಹಾಸಭೆಗಳು ನಡೆಯುತ್ತಾ ಬಂದಿವೆ. ಅಂತಹ ಮಹಾಸಭೆಗಳಿಗೆ ಎಲ್ಲಾ ಪ್ರಾಂತಗಳಿಂದಲೂ ಜನರು ಹೋಗಿ ಪ್ರಯೋಜನವನ್ನು ಹೊಂದುವುದು ಅಸಾಧ್ಯವೆಂದು ಈ ಹಿರಿಯೂರು ಪ್ರಾಂತದ ಮಹನೀಯರಾದ ನೀವು ಪರಿಭಾವಿಸಿ, ಈ ತರದ ಪ್ರಾಂತಿಕ ಸಭೆಗಳನ್ನು ಏರ್ಪಡಿಸುವುದಕ್ಕೆ ಮಾರ್ಗದರ್ಶಕರಾಗಿ ನಿಂತಿರುವುದು ಬಹಳ ಸ್ತೋತ್ರಾರ್ಹವಾಗಿದೆ. ಈ ರೂಪದಲ್ಲಿ ಮಾಡತಕ್ಕ ಮತಸೇವೆಯ ಶೃಂಖಲಾಭಕ್ಕೆ ನೀವೇ ಪ್ರಥಮ ಭಾಗಸ್ಥರಾಗಿರುತ್ತೀರಿ. ಈ ವಿಶೇಷ ಕಾರ್ಯದಲ್ಲಿ ಇತರ ಎಲ್ಲಾ ಊರುಗಳನ್ನು ನಿಮ್ಮ ಊರು ಮೀರಿಸಿರುವುದರಿಂದ ಇದನ್ನು ಹಿರಿಯೂರೆಂದು ಹೇಳುವುದು ಸಹಜವಾಗಿ ಒಪ್ಪುತ್ತದೆ. ಶ್ರೀ ಜಗದ್ಗುರು ಮಹಾಸ್ವಾಮಿಗಳ ಕೃಪಾವಲಂಬನವು ಇದಕ್ಕೆ ಇರುವುದರಿಂದ ಈ ಸಭಾಕಾರ್ಯಗಳು ಸಮರ್ಪಕವಾಗಿ ನಡೆದು ಇದರ ಸದುದ್ದೇಶವು ಕಾರ್ಯರೂಪದಲ್ಲಿ ನೆರವೇರುವುದೆಂದು ನಂಬಿರುತ್ತೇನೆ.

ಮಹಾಸಭೆಯೆಂದರೆ ಸಾಧಾರಣವಾದುದಲ್ಲ. ಇದು ಈ ಪ್ರಾಂತದ ಅಶೇಷ ವೀರಶೈವ ಸಮಾಜದ ಮುಖವೆಂದು ಹೇಳುವುದರಲ್ಲಿ ಯಾವ ಅತ್ಯುಕ್ತಿಯೂ ಇರಲಾರದು. ಇದರ ಸಂದರ್ಶನವೆಂದರೆ ಒಟ್ಟು ಈ ಸಮಾಜದ ಸಂದರ್ಶನವೆಂತಲೇ ಹೇಳಬಹುದು. ಇಂತಹ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವುದಕ್ಕೆ ನನಗಿಂತ ಹೆಚ್ಚಾದ ಯೋಗ್ಯತೆಯುಳ್ಳವರು ಅನೇಕಮಂದಿ ಇರುತ್ತಾರೆ. ಈ ಸಭೆಯ ಸ್ವಾಗತ ಸಂಘದವರು ನನ್ನನ್ನು ಇದಕ್ಕೆ ಅಧ್ಯಕ್ಷನಾಗಬೇಕೆಂದು ಕೇಳಿದುದನ್ನೇ ನನ್ನ ಸಮಾಜದ ಆಜ್ಞೆಯೆಂದು ನಾನು ಭಾವಿಸಿ, ನನ್ನ ಶಕ್ತಿಯು ಮಿತವಾದುದಾದರೂ, ಯಥಾಮತಿಯಾಗಿ ಈ ಕಾರ್ಯವನ್ನು ನಡೆಸುವುದರ ರೂಪದಲ್ಲಿ ಮತಸೇವೆಯನ್ನು ಮಾಡಿ ಧನ್ಯನಾಗಬೇಕೆಂದು ಅಂಗೀಕರಿಸಿದೆನು. ಈ ಸಭೆಗೆ ಕಾರಣಭೂತರಾದ ಈ ಪ್ರಾಂತದ ನನ್ನ ಸಹೋದರರು ನನಗೆ ಪ್ರೀತಿಪೂರ್ವಕವಾಗಿ ಕೊಟ್ಟಿರುವ ಈ ಮರ್ಯಾದೆಗೋಸ್ಕರ ಅವರನ್ನೆಲ್ಲಾ ಆತ್ಮೀಯವಾಗಿ ವಂದಿಸುತ್ತೇನೆ.

ಪ್ರಪಂಚದ ಚರಿತ್ರೆಯನ್ನು ಆದಿಯಿಂದಲೂ ನೋಡುತ್ತಾ ಬಂದರೆ, ಕಾಲಸ್ಥಿತಿ ಅಂದರೆ ಜನರ ಸ್ಥಿತಿಗತಿಗಳು ಒಂದೇ ಸಮನಾಗಿಲ್ಲದೆ ಕಾರ್ಯಕಾರಣನ್ಯಾಯವನ್ನನುಸರಿಸಿ ಬದಲಾಯಿಸುತ್ತಲೇ ಬಂದಿರುತ್ತವೆ. ಈ ಕಾಲವನ್ನು ಮಹಾಸಭೆಗಳ ಕಾಲವೆಂದು ಹೇಳಬಹುದು. ಎಲ್ಲಿ ನೋಡಿದರೂ ಕಾನ್ಫರೆನ್ಸುಗಳೂ, ಕಮಿಟಿಗಳೂ, ಮೀಟಿಂಗುಗಳೂ ಸೇರುತ್ತಲೇ ಇವೆ. ಮತಕಾರ್ಯಗಳನ್ನು ಸಾಧಿಸುವುದಕ್ಕೆ ಸಮಸ್ತರೂ ಸಮುದಾಯತ್ವೇನ ಸೇರಿ ಕೆಲಸಮಾಡುವವರಾಗಬೇಕು. ಈ ರೀತಿ ಎಲ್ಲರೂ ಒಂದು ಕಡೆ ಸೇರಿ ಉದ್ದಿಷ್ಟಕಾರ್ಯನಿರ್ವಾಹದ ಸಾಧಕ ಬಾಧಕಗಳನ್ನು ಕುರಿತು ಚರ್ಚಿಸಿ ತಕ್ಕ ನಿರ್ಧಾರಗಳನ್ನು ಮಾಡುವುದೇ ಮಹಾಸಭೆ ಎನಿಸಿಕೊಳ್ಳುತ್ತದೆ. ವೀರಶೈವರಾದ ನಮ್ಮ ಹಾಲ್ಯಾಲದ ಸ್ಥಿತಿಯು ಮೊದಲಿನಂತೆ ಈಗ ಇರುವುದಿಲ್ಲ. ಅತ್ಯುನ್ನತ ಸ್ಥಿತಿಯಲ್ಲಿದ್ದ ಈ ಮತವು ಈಗ ಅಧೋಗತಿಯನ್ನೈದುತ್ತಿರುವುದು ಎಲ್ಲರಿಗೂ ಪರಿತಾಪಕರವಾದ ಸಂಗತಿಯಾಗಿದೆ. ಇದಕ್ಕೆ ನಾವು ತಕ್ಕ ಪರಿಹಾರವನ್ನು ಕಲ್ಪಿಸಿಕೊಳ್ಳದಿದ್ದರೆ ಕ್ರಮೇಣ ಇನ್ನೂ ಹೀನಸ್ಥಿತಿಗೆ ಬಂದು, ಕಡೆಗೆ ಈ ಮತವು ನಾಮಾವಶೇಷದಲ್ಲಿ ನಿಲ್ಲಬಹುದೆಂಬ ಭಯವು ತೋರುತ್ತದೆ. ಈ ಪರಿಹಾರ ಕಲ್ಪನೆಗೆ ಇಂತಹ ಮಹಾಸಭೆಗಳೇ ಸಾಧಕವಾದವುಗಳು.

ಶ್ರೀಮತ್ಪರಶಿವನ ಸದ್ಯೋಜಾತಾದಿ ಪಂಚಮುಖದಿಂದ ಉತ್ಪನ್ನರಾದ ಪಂಚಾಚಾರ್ಯರೇ ಜಗತ್ತನ್ನು ಉದ್ಧರಿಸುವುದಕ್ಕಾಗಿ ಪಂಚಪೀಠಗಳನ್ನು ಸ್ಥಾಪಿಸಿರುತ್ತಾರೆ. ಈ ಪೀಠಕ್ಕೇ ರಂಭಾಪುರಿ ಮೊದಲಾದ ಸಿಂಹಾಸನಾಧೀಶ್ವರರು. ಇವರ ಮತ್ತು ಇವರ ಸೋಪಾನುವರ್ತಿಗಳಾದ ಮಠಸ್ಥರ ಕರ್ತವ್ಯವು ಧರ್ಮಸಂಸ್ಥಾಪನೆಯೇ. ಅಂದರೆ ಇವರು ತಮ್ಮ ಶಿಷ್ಯಕೋಟಿಗೆ ಧರ್ಮೋಪದೇಶವನ್ನು ಗೈಯುತ್ತಾ ಅವರು ಸನ್ಮಾರ್ಗ ಪ್ರವೃತ್ತರಾಗಿ ಸುಖದಿಂದ ಇಹಲೋಕದಲ್ಲಿ ಬಾಳಿ ಪರಲೋಕದಲ್ಲಿ ಸದ್ಗತಿಯನ್ನು ಹೊಂದುವಂತೆ ಎಲ್ಲಾ ವಿಧದಲ್ಲಿಯೂ ಅವರಿಗೆ ಯೋಗ್ಯತೆಯನ್ನುಂಟುಮಾಡಿಕೊಡುವುದೇ ಅವರ ಮುಖ್ಯ ಕರ್ತವ್ಯವಾಗಿದೆ. ಮತದ ವಿಶಿಷ್ಟ ಶಿಷ್ಟಾರಕ್ಷಣೆಯು ಇವರ ಕೈಯಲ್ಲಿದೆ. ಇವರಿಂದಲೂ ಪೂಜ್ಯತೆಯನ್ನು ಹೊಂದಿ ಗುರೂತ್ತಮರಾಗಿರುವವರೇ ಜಗದ್ಗುರುಗಳೆಂಬ ವ್ಯವಹಾರ ನಾಮದಿಂದಲೂ, ಸ್ವಸ್ವರೂಪ ಜ್ಞಾನಸಿದ್ಧಿಯಿಂದ ಮಾಯಾ ಮೋಹಗಳಿಂದ ಕೂಡಿದ ಜಗದ್ರಂಜನೆಯನ್ನು ನಿರಾಕರಿಸಿ ಬಿಟ್ಟದ್ದರಿಂದ ನಿರಂಜನ ನಾಮದಿಂದಲೂ, ಆತ್ಮಸಾಕ್ಷಾತ್ಕಾರದಿಂದ ವರ್ಣಾಶ್ರಮಗಳನ್ನುಳಿದು, ಅತಿವರ್ಣಾಶ್ರಮಿಗಳೆಂಬ ನಾಮದಿಂದಲೂ, ಜನನ ಮರಣಾತ್ಮಕವಾದ ಭವದ ಭಯದಿಂದ ಬಿಡಲ್ಪಟ್ಟು ನಿರಾಭಾರಿ ಎಂಬ ನಾಮದಿಂದಲೂ, ಷಟ್ಸ್ಥಲ ಜ್ಞಾನವುಳ್ಳವರಾಗಿ ಷಟ್ಸ್ಥಲ ಬ್ರಹ್ಮಿಗಳೆಂಬ ನಾಮದಿಂದಲೂ ಪ್ರಸಿದ್ಧರಾಗಿರುವವರೇ ಚಿನ್ಮೂಲಾದ್ರಿ (ಚಿತ್ರದುರ್ಗ) ಮೊದಲಾದ ಶೂನ್ಯಸಿಂಹಾಸನದಲ್ಲಿ ಮಂಡಿಸಿರುವ ಗುರುವರ್ಯರಾಗಿರುತ್ತಾರೆ. ಮತಧರ್ಮಗಳು ಮಲಿನತೆಯನ್ನು ಹೊಂದದೆ ಇರಲಿ ಎಂಬ ತಾತ್ಪರ್ಯದಿಂದ ಪೂರ್ವಾಚಾರ್ಯರು ತಮ್ಮ ತಮ್ಮ ಶಾಖಾ ಉಪಶಾಖಾ ಮಠಗಳನ್ನು ಬಹುಕಡೆ ನಿರ್ಮಿಸಿರುತ್ತಾರೆ. ಸಮಸ್ತ ಮಠಗಳ ಉತ್ಪತ್ತಿ ಕಾರಣವು ಧರ್ಮಸಂಸ್ಥಾಪನೆ ಎಂಬ ಒಂದೇ ಕೇಂದ್ರದ ಕಡೆಗೆ ತಿರುಗುತ್ತದೆ. ಆದಕಾರಣ ಬೇರೆ ಬೇರೆ ಮುಖ್ಯ ಮಠಗಳಿಗೆ ಇರಬಹುದಾದ ಭಿನ್ನಭೇದ ಸಂಬಂಧಗಳು ಇತ್ಕಾಲದಲ್ಲಿ ಆಲೋಚನೆಗೆ ಅರ್ಹವಾದವುಗಳಲ್ಲ. ಎಲ್ಲವೂ ತಮ್ಮ ಕರ್ತವ್ಯ ರಕ್ಷಣೆಯನ್ನು ಮಾಡಿಕೊಳ್ಳುವುದರಲ್ಲಿ ದಕ್ಷತೆಯನ್ನೂ ಔದಾರ್ಯವನ್ನೂ ತೋರಿಸುತ್ತಾ ಬಂದರೆ ನಮ್ಮ ಮತದ ಪ್ರಭಾವವು ಪೂರ್ವದಂತೆ ಉನ್ನತಿಯನ್ನೈದುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಅಧಿಕಾರವಿರುವ ಕಡೆ ಜವಾಬ್ದಾರಿಯು ಇದ್ದೇ ತೀರಬೇಕು. ಮಠದ ಮೇಲಣ ಅಧಿಕಾರವುಳ್ಳವರಾಗಿರುವ ಗುರುಗಳೆಂಬುವರು ತಮ್ಮ ಜವಾಬ್ದಾರಿಯೇನೆಂದು ಅದನ್ನು ನಿರ್ವಹಿಸಲು ಶಕ್ತರಾಗಿರಬೇಕು. ಇದಕ್ಕೆ ವಿದ್ಯಾಬಲವು ಅಗತ್ಯವಾದದ್ದು. ಈಗ ನಮ್ಮಲ್ಲಿರುವ ಅನೇಕ ಮಂದಿ ಗುರುಗಳಲ್ಲಿ ಕೇವಲ ಎಷ್ಟು ಮಂದಿ ವಿದ್ಯಾವಂತರಾಗಿದ್ದಾರೆಂಬುವುದು ತಮ್ಮೆಲ್ಲರಿಗೂ ತಿಳಿದ ಅಂಶವೇ ಆಗಿದೆ. ಈ ಪರಿತಾಪಕರವಾದ ಸಂಗತಿಯನ್ನು ವರ್ಣಿಸಿ ಹೇಳುವುದಕ್ಕೆ ನನಗೆ ದುಃಖವಾಗುತ್ತದೆ. ವಿದ್ಯಾಸಂಪತ್ತಿಲ್ಲದೆ ಅನರ್ಹರಾದವರನ್ನು ಗುರುಪದವಿಗೆ ತರುವುದರಿಂದ "ಯಥಾಗುರು ಸ್ತಥಾಶಿಷ್ಯಃ" ಎಂಬಂತೆ ಭಕ್ತರ ಧರ್ಮವೂ ನಾಶವಾಗುತ್ತಾ ಮಠದ ಪ್ರಾಶಸ್ತ್ಯವೂ ಕಡಿಮೆಯಾಗುವುದು ಆಶ್ಚರ್ಯವಲ್ಲ. ಆದಕಾರಣ ಶಿವಯೋಗಮಂದಿರದಂಥಾ ಶಿಕ್ಷಣಶಾಲೆಗಳು ನಮ್ಮ ದೇಶದಲ್ಲಿ ಸ್ಥಾಪಿಸಲ್ಪಟ್ಟು ಅಲ್ಲಿ ಸತ್ಕುಲ ಪ್ರಸೂತರಾದವರನ್ನು ಆರಿಸಿ ಮತಶಾಸ್ತ್ರಗಳಲ್ಲಿ ಪಾರಂಗತರಾಗುವಂತೆ ಏರ್ಪಾಡುಗಳಾಗಬೇಕು. ಮುಖ್ಯ ಪೀಠಸ್ಥರು ಗಮನಕೊಡದ ಹೊರತು ಈ ಮಹತ್ಕಾರ್ಯವು ನೆರವೇರಲಾರದು. ಆದಕಾರಣ ಈ ಸಭೆಯ ಕಡೆಯಿಂದ ಈ ವಿಷಯದಲ್ಲಿ ಆರಾವಾಗಿ ಸಿಂಹಾಸನಾಧೀಶ್ವರರಿಗೆ ವಿನಂತಿಯು ಮಾಡಲ್ಪಡಬೇಕು.

೨. ವೀರಶೈವ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿ.

ಈ ವಿಷಯವಾದರೋ ಇನ್ನೂ ವಿಷಾದಕರವಾದುದು. ನಮ್ಮಲ್ಲಿ ನೂರಕ್ಕೆ ೪-೫ ಮಂದಿ ಮಾತ್ರ ಓದು ಬರಹವನ್ನು ಕಲಿತಿರುತ್ತಾರೆಯೆಂದರೆ ಯಾರ ಮನಸ್ಸಿಗೆ ತಾನೇ ಸಂಕಟ ಉಂಟಾಗುವುದಿಲ್ಲ? ವಿದ್ಯೆಯ ಅವಶ್ಯಕತೆಯನ್ನು ಕುರಿತು ದೀರ್ಘವಾದ ಉಪನ್ಯಾಸವನ್ನು ಮಾಡಬೇಕಾದ ಅಗತ್ಯವಿರುವುದಿಲ್ಲ. ವಿದ್ಯಾ ಪ್ರಯೋಜನಗಳನ್ನು ಎಲ್ಲರೂ ತಿಳಿದವರೇ ಆಗಿರುತ್ತಾರೆ. ನಮ್ಮ ಮತವು ಇಷ್ಟು ಹೀನಸ್ಥಿತಿಯಲ್ಲಿರುವುದಕ್ಕೆ ನಮ್ಮಲ್ಲಿ ವಿದ್ಯೆಯು ಇಲ್ಲದಿರುವುದೇ ಕಾರಣವೆಂದು ಎಲ್ಲರೂ ಒಪ್ಪುತ್ತಾರೆ. ಆದಕಾರಣ ಯಾವುದರ ಅಭಾವದಿಂದ ನಾವು ಈ ಅಧೋಗತಿಗೆ ಇಳಿಯುತ್ತಿದ್ದೇವೆಯೋ, ಅದರ ಸಮೃದ್ಧಿಯಿಂದ ಊರ್ಧ್ವಗತಿಯನ್ನು ಪಡೆಬೇಕಾಗಿದೆ. ಹಿಂದೆ ವೀರಶೈವರಲ್ಲಿ ಎಷ್ಟು ಮಂದಿ ವಿದ್ವಾಂಸರೂ, ಕವೀಶ್ವರರೂ, ವಾಗ್ಮಿಗಳೂ ಇರಲಿಲ್ಲ? ಸಂಸ್ಕೃತ ಕರ್ಣಾಟಕ ಭಾಷೆಗಳಲ್ಲಿ ಅನೇಕ ಮಂದಿ ವೀರಶೈವರು ಅನೇಕ ಗ್ರಂಥಗಳನ್ನು ರಚಿಸಿ, ಈ ಮತದ ಸ್ವರೂಪವು ಪೂರ್ವದಲ್ಲಿ ಹೇಗಿತ್ತೆಂಬುದಕ್ಕೆ ಸಾಕ್ಷಿಗಳಾಗಿರುತ್ತಾರೆ.

ವಿದ್ಯಾಭ್ಯಾಸದಿಂದ ಮನುಷ್ಯನ ಜ್ಞಾನಕಮಲವು ಚೆನ್ನಾಗಿ ವಿಕಸಿತವಾಗಿ ಆತನಲ್ಲಿ ವಿವೇಚನಾಶಕ್ತಿಯು ಹುಟ್ಟುತ್ತದೆ. ಕರ್ತವ್ಯಾಕರ್ತವ್ಯಗಳ ವಿಚಾರವು ಬರುತ್ತದೆ. ಆತನು ಯಾವ ಕೆಲಸದಲ್ಲಿ ಕೈಹಾಕಿದರೂ ಅದನ್ನು ಸರ್ವ ಸಮರ್ಪಕವಾಗಿ ಮಾಡಬಲ್ಲವನಾಗುತ್ತಾನೆ. ಅಭಿವೃದ್ಧಿಯ ರಹಸ್ಯವೆಲ್ಲವೂ ಇದರಲ್ಲಿಯೇ ಅಡಗಿದೆ. ಈಗ ಮುಂದುವರಿದು ಬರುತ್ತಿರುವ ಯಾವ ಜನಾಂಗವನ್ನು ನಾವು ನೋಡಿದರೂ ಅದಕ್ಕೆ ಮೂಲಕಾರಣವು ಅವರಲ್ಲಿರುವ ಅಸಾಧಾರಣವಾದ ವಿದ್ಯೆಯೇ ಎಂಬುದು ಗೊತ್ತಾಗುತ್ತದೆ. ಆದಕಾರಣ ನಮ್ಮಲ್ಲಿ ವಿದ್ಯಾಭ್ಯಾಸವು ವಿಶೇಷವಾಗಿ ಹರಡುವಂತೆ ತಕ್ಕ ಏರ್ಪಾಡುಗಳನ್ನು ಮಾಡುವುದು ನಮ್ಮಗಳ ಪ್ರಥಮ ಕರ್ತವ್ಯವಾಗಬೇಕು.

ಪುರುಷರು ಮಾತ್ರ ವಿದ್ಯಾವಂತರಾದರೆ ಸಾಲದು. ಸ್ತ್ರೀಯರೂ ಸಹ ವಿದ್ಯಾವತಿಯರಾಗಬೇಕು. ವಿದ್ಯಾರ್ಜನೆಗೆ ಸಾಧಕವಾದ ಕರಣೇಂದ್ರಿಯಗಳನ್ನು ದೇವರು ಸ್ತ್ರೀ ಪುರುಷರಿಬ್ಬರಿಗೂ ಸಮನಾಗಿಯೇ ಕೊಟ್ಟಿರುತ್ತಾನೆ. ಇಹಲೋಕದ ಸೃಷ್ಟಿಯಲ್ಲಿ ಶ್ರೇಷ್ಠತಮವೆನಿಸುವ ಮಾನವ ಜನ್ಮದಲ್ಲಿ ಪುರುಷನೊಬ್ಬನೇ ಸೇರುವುದಿಲ್ಲ. ಪುರುಷನು ಅರ್ಧಶರೀರವೆಂತಲೂ, ಸ್ತ್ರೀಯೂ ಸೇರಿ ಪೂರ್ಣ ಶರೀರವೆಂತಲೂ ಹೇಳುತ್ತಾರೆ. ಜನ್ಮಶ್ರೇಷ್ಠತೆಗೆ ಆಧಾರವಾಗಿರುವ ಜ್ಞಾನವೆಂಬ ರತ್ನವು ಏಕಪ್ರಕಾರವಾಗಿ ಉಭಯರಲ್ಲಿಯೂ ಮೊದಲು ಸಂಕುಚಿತಾವಸ್ಥೆಯಲ್ಲಿರುತ್ತದೆ. ಇದಕ್ಕೆ ವಿದ್ಯಾಭ್ಯಾಸವೆಂಬ ಸಾಣೆಯನ್ನು ಕೊಟ್ಟ ಹೊರತು ರಂಜನೆಯುಂಟಾಗುವುದಿಲ್ಲ. ಸ್ತ್ರೀ ಪುರುಷರು ಸಂಸಾರವೆಂಬ ರಥಕ್ಕೆ ಹೂಡಿದ ಎರಡು ಕುದುರೆಗಳೆಂದು ಒಬ್ಬ ವಿದ್ವಾಂಸನು ಹೇಳುತ್ತಾನೆ. ಒಂದು ಕುದುರೆಯು ಸುಶಿಕ್ಷಿತವಾಗಿದ್ದು ಇನ್ನೊಂದು ಶಿಕ್ಷಣವನ್ನು ಹೊಂದದೇ ಇದ್ದರೆ ರಥವು ಕ್ರಮವಾಗಿ ಸಾಗಲಾರದು. ಒಂದು ಹಳ್ಳಕ್ಕೆ ಎಳೆದರೆ, ಇನ್ನೊಂದು ದಿಣ್ಣೆಗೆ ಎಳೆಯುವುದು. ಅಂದರೆ ಗಂಡನು ವಿದ್ಯಾವಂತನಾಗಿದ್ದು ಹೆಂಡತಿ ವಿದ್ಯಾಹೀನೆಯಾಗಿದ್ದರೆ ಆ ಸಂಸಾರವು ಸರಿಯಾಗಿ ನಡೆಯುವುದಿಲ್ಲ. ನಮ್ಮಲ್ಲಿ ಈಗ ಆಗಬೇಕಾಗಿರುವ ಸಮಾಜಸುಧಾರಣೆಗೆ ಮನೆಯಲ್ಲಿ ಹೆಂಗಸರ ಅವಲಂಬನವು ಅಗತ್ಯವಾಗಿ ಬೇಕು. ಅವರು ವಿದ್ಯಾವತಿಯರಾಗದ ಹೊರತು ಸಮಾಜವೆಂದರೇನು? ಸುಧಾರಣೆ ಎಂದರೇನು? ಎಂಬ ವಿಷಯಗಳು ಅವರ ತಲೆಗೆ ಹತ್ತುವುದೇ ಇಲ್ಲ. ಅಲ್ಲದೆ ಗೃಹಕೃತ್ಯನಿರ್ವಾಹ, ಮಕ್ಕಳ ಪೋಷಣೆ, ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ಬೆಳೆಸುವುದು, ಮೊದಲಾದ ಮುಖ್ಯಕಾರ್ಯಗಳೆಲ್ಲಾ ಹೆಂಗಸರ ಮೇಲೆಯೇ ಬಿದ್ದಿರುತ್ತವೆ. ಇವುಗಳ ನಿರ್ವಾಹಕ್ಕೆ ವಿದ್ಯೆಯು ಅವಶ್ಯಕವಾಗಿ ಬೇಕು. ಆದಕಾರಣ ನಮ್ಮಲ್ಲಿ ಸ್ತ್ರೀ ವಿದ್ಯಾಭ್ಯಾಸವು ಸರ್ವತ್ರ ಹರಡುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ.

ನಮ್ಮ ದಯಾಳು ಸರ್ಕಾರದವರು ಸಹ ಈಚೆಗೆ ವಿದ್ಯಾಭಿವೃದ್ಧಿಗಾಗಿ ಅನೇಕಾನೇಕ ಏರ್ಪಾಡುಗಳನ್ನು ಮಾಡುತ್ತಾ ಅಪರಿಮಿತವಾಗಿ ದ್ರವ್ಯವನ್ನು ವಿನಿಯೋಗಿಸುತ್ತಾ ಇರುವುದು ತಮಗೆ ತಿಳಿದ ಅಂಶವೇ ಆಗಿದೆ. ಸಾಧಾರಣವಾಗಿ ಪ್ರತಿಯೊಂದು ಗ್ರಾಮದಲ್ಲೂ ಶಾಲೆಶಾಲೆಗಳಿರುತ್ತವೆ. ಇವುಗಳಲ್ಲಿ ನಮ್ಮ ಬಾಲಕ ಬಾಲಿಕೆಯರು ಪ್ರಥಮ ಶಿಕ್ಷೆಯನ್ನು ಹೊಂದಬಹುದು. ಅಲ್ಲಿಂದ ಮುಂದಣ ವಿದ್ಯಾಭ್ಯಾಸಕ್ಕೆ ಸಹಾಯಾರ್ಥವಾಗಿ ವೇತನಗಳು ಕಲ್ಪಿಸಲ್ಪಟ್ಟಿವೆ. ಈ ಸಹಾಯವು ಸಾಕಾದಷ್ಟು ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಕಡೆಯಿಂದ ಹೆಚ್ಚಾದ ಪ್ರೋತ್ಸಾಹವನ್ನೂ ಸಹಾಯವನ್ನೂ ವಿದ್ಯಾರ್ಥಿಗಳಿಗೆ ಒದಗಿಸುವಂತೆ ಏರ್ಪಾಡುಗಳು ಆಗಬೇಕು.

(ಸಶೇಷ).

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುವು. ಪ್ರತಿಯೊಬ್ಬರೂ ಉಡಲು ಅನುಕೂಲವಾದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದವನಕೋಡಿ ಸೀರೆ	ರೂ. 3.8.0
		ಬಾಳಾಮಣಿ ,,	... 4.0.0
ಹೋರೂಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೊಪರ್‌ಜಾನ್ ಸೀರೆ ...	5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ ...	3.0.0	ಜರಾಕ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ ...	5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ,
32 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 39

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಶೀತಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿಶೀಘ್ರವಾಗಿ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಜುಲೈ ತಾ|| ೨೮ ರಿಂದ ೧೯೧೮ ನೆಯ ಆಗಸ್ಟ್ ತಾ|| ೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಲಯುಕ್ತಿನಾಮ ಸಂವತ್ಸರದ ಆಷಾಢ ಬ|| ಪಂಚಮಿಯಿಂದ ಆಷಾಢ ಬ|| ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕ
28	[1] ಭಾನು	ಪಂಚ	24-11	ಉಭಾ	47-0	13
29	[2] ಸೋಮ	ಷಷ್ಠಿ	18-1	ರೇವತಿ	41-41	14
30	ಮಂಗಳ	ಸಪ್ತ	11-51	ಅಶ್ವಿನಿ	37-36	15
31	[3] ಬುಧ	ಅಷ್ಟ	5-57	ಭರಣಿ	33-48	16
1	ಗುರು	ನವ	0-30	ಉಪರಿ	54-43	17
2	[4] ಶುಕ್ರ	ಏಕಾ	51-7	ರೋಹಿಣಿ	28-7	18
3	[5] ಶನಿ	ದ್ವಾದ	48-2	ಮೃಗಶಿರ	26-29	19

(1) ಟೀಕಾಚಾರ್ಯ ಪುಣ್ಯದಿನ, ಮೇ|| ಕೃಷ್ಣರಾಜಮುಡೀ ಉತ್ಸವ. (2) ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವ. (3) ಮೇಲುಕೋಟೆಯಲ್ಲಿ ಕೃಷ್ಣರಾಜಮುಡೀ ರಥ. (4) ಸ್ಮಾರ್ತಾನಾಮೇಕಾದಶೀ, ಅಧಿಶುಕ್ರವಾರ, ಪದಿನಟ್ಟಾಂಪೆರುಕ್. (5) ಶ್ರೀ ವೈಷ್ಣವಾನಾಂ ಮಾಧ್ವಾನಾಂಚೈಕಾದಶೀ.

ಮೈಸೂರ್: ವೈ. ತಿರುಮಲಯ್ಯಂಗಾರವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಬಸವ ಸಮಿತಿ ಪುಸ್ತಕ ಭಂಡಾರ ಬೆಂಗಳೂರು

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾಂ ಪರಮಧಿಗತರಾಜಮಂಡಲಚಿಹ್ನಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋತ್ರೋನ್ಮೂಭಿಃಪ್ರಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ
ನೀವಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ ಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸಹ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸೆ ೧೯೧೮ ನೇಯ ಇಸವಿ ಆಗಸ್ಟ್ ತಾರೀಖು ೪ ನೇಯ ಭಾನುವಾರ. (ಸಂಚಿಕೆ ೩೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಅಷ್ಟಾವರಣ, ಶರಣಪಸುಗೆ, ಸಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಅಡಕವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಸತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿವೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರಾಕ್ ಬೀಸಣಿಗೆ 1, ಶಾಮಂತಿಗೆಹೂವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಉಪರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ತೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರಾಕ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
33 ೩, ಇರುಳಪ್ಪನಬೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ರತ್ನತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶಲಾಕ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಭಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೩—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 34

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ ಬರ್ಮಾ, ಸಿಲೋನ್, ಮಲೆಯನ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಸಾರ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಶಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಮ್. ಡಿ. ಇನ್ಸ್ಟಿಟ್ಯೂಟ್ ಆಫ್ ಸೈನ್ಸಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ ಎಗಿಯಂ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು.—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
18 ಆನಂದ ಬುಕ್‌ಡಿಪೋ, ಮೈಸೂರು.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ.೧ಬೀ. ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ.೧ಬೀ. ಕ್ವಿಪ್ಪೆ. ೧೦೦ ಕ್ಕೆ ೧-೪-೦

೩ ಹೇನುಕೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೀ. ಕ್ವಿಪ್ಪೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ಕೊಲಿಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾ ರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆಯುರ್ವೇದಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಬಾರದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚೆನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
36 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.



ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ,
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ

(೨) ಸ್ವಕರ್ತವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಆಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣವಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

12 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ವುದು. ಆ ಉದ್ಯೋಗದಲ್ಲಿ ಅತ್ಯಧಿಕವಾದ ಪದವಿಯು ಲಭಿಸುವುದಕ್ಕೆ ಸಂಬಳವು ಹೆಚ್ಚಿಸಲ್ಪಡುವುದು. ಸಾಮಾನ್ಯವಾದ ಪಿಂಛನ್ನಿನ ಪರಮಾವಧಿಯು ೬೦೦೦ ರೂ. ಗಳಾಗಿರಬೇಕು. ನಾಣ್ಯದ ಬದಲಾವಣೆಯಲ್ಲಿ ರೂ. ಗೆ ೧ ಷಿಲ್ಲಿಂಗ್ ೪ ಪೆನ್ನಿಯಂತೆ ಕೊಡಲ್ಪಡುವುದು. ಉನ್ನತೋದ್ಯೋಗಗಳಿಗಾಗಿ ಪ್ರತ್ಯೇಕವಾದ ಪಿಂಛನ್ನಿರಬೇಕು. ಇಂಡಿಯನ್ ಸಿವಿಲ್ ಸರ್ವೀಸ್ ಉದ್ಯೋಗಿಗಳಿಗೆ ಕೊಡಲ್ಪಡುವ ವಾರ್ಷಿಕವೇತನಗಳು ಸರ್ಕಾರದವರಿಂದ ನಿಯುಕ್ತವಾಗಿರುವ ಹಣದಿಂದ ಕೊಡಲ್ಪಡುವುವು. ರಜಾಕ್ಕೆ ಸಂಬಂಧಪಟ್ಟ ನಿಬಂಧನೆಗಳು ಉದಾರಭಾವಯುಕ್ತವಾಗಿರುವಂತೆ ಮಾಡಲ್ಪಡುವುವು. ರಜಾದ ಕಾಲವನ್ನು ಕಡಿಮೆಮಾಡುವುದಲ್ಲದೆ ಅಂಥ ಕಾಲಕ್ಕೆ ಪೂರ್ಣವಾದ ಸಂಬಳವು ಕೊಡಲ್ಪಡುವಂತೆ ಮಾಡಬೇಕು.

೬೯. ಭರತಖಂಡದಲ್ಲೇ ನಿಯಮಿಸಲ್ಪಡುವ ಉದ್ಯೋಗಗಳಿಗೆ ಒಂದು ವಿಧವಾದ ಸಂಬಳದ ನಿರ್ಪಾಟೂ, ಯೂರೋಪಿನಿಂದ ಕರೆಯಿಸಲ್ಪಡುವ ಉದ್ಯೋಗಗಳಿಗಾಗಲೀ ಅಥವಾ ಅಲ್ಲಿನವರಷ್ಟು ವಿಶಿಷ್ಟಾರ್ಹತೆಯುಳ್ಳ ಭಾರತೀಯೋದ್ಯೋಗಿಗಳಿಗೇ ಆಗಲೀ ತಕ್ಕಷ್ಟು ಸಂಬಳವನ್ನು ಕೊಡಬೇಕು. ಯೂರೋಪಿನಲ್ಲಿ ನಿಯಮಿಸಲ್ಪಡುವ ಭಾರತೀಯೋದ್ಯೋಗಿಗಳ ವಿಷಯದಲ್ಲಿಯೂ ಇಂಥ ರೀತಿಯೇ ಅನುಸರಿಸಲ್ಪಡಬೇಕು.

ದಾವಣಗೆರೆ.

ಪದ್ಧತಿಯ ಪ್ರಕಾರ ಇಲ್ಲಿನ "ವೀರಶೈವ ಹಿತೋಪದೇಶಕಸಂಘ" ದ ಪರವಾಗಿ ಬರುವ ಶ್ರಾವಣಮಾಸದಲ್ಲಿ ಒಂದು ತಿಂಗಳು ಇಲ್ಲಿಯ ಶ್ರೀ ವಿರಕ್ತ ಮಠದಲ್ಲಿ ಉಪನ್ಯಾಸಗಳು ಜರುಗುವುದರಿಂದ ಉಪನ್ಯಾಸಕರು ತಮ್ಮ ಉಪನ್ಯಾಸಗಳನ್ನು ಮುಂಚಿತವಾಗಿಯೇ ಕೆಳಗಿನ ವಿಳಾಸಕ್ಕೆ ಸ್ಪಷ್ಟವಾಗಿ ಬರೆದು ಕಳುಹಿಸಬೇಕಾಗಿ ಕೋರಿಕೆ.

ದಾವಣಗೆರೆ, ತಾ|| 24.7.18. } ಕೆ. ಗುರುಶಾಂತಪ್ಪ,
ರಿಟೈರ್ಡ್ ಹೆಡ್‌ಮಾಸ್ಟರ್.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆ.

1. ವೀರಶೈವ ಬಡ ವಿದ್ಯಾರ್ಥಿಗಳು ಅಂದರೆ ಇಂಗ್ಲಿಷ್ ಹೈಸ್ಕೂಲು ಮತ್ತು ಕಾಲೇಜು ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಸ್ಕಾಲರ್‌ಷಿಪ್ ದೊರೆಯುತ್ತದೆಯಾದುದರಿಂದ ಇಷ್ಟವುಳ್ಳ ವಿದ್ಯಾರ್ಥಿಗಳು ಆಗಸ್ಟ್ ತಾ|| 24 ರೊಳಗಾಗಿ ಸೆಕ್ರೆಟರಿಯವರ ವಿಳಾಸಕ್ಕೆ ಅಪ್ಲಿಕೇಷನನ್ನು ಬರೆದುಕೊಳ್ಳತಕ್ಕದ್ದು. ಅಪ್ಲಿಕೇಷನ್ ಫಾರಂ ಫಂಡಿನ ಸೆಕ್ರೆಟರಿಯವರಲ್ಲಿ ದೊರೆಯುವುದು.

2. ಅಪ್ಲಿಕೇಷನ್ನಿನ ಜತೆಯಲ್ಲಿ ವಿದ್ಯಾರ್ಥಿಯು ಸಹಾಯವನ್ನು ಹೊಂದಲು ಅರ್ಹನೆಂಬ ಬಗ್ಗೆ ಆಯಾಯ ಶಾಲಾ ಮುಖ್ಯೋಪಾಧ್ಯಾಯರಿಂದಲೂ, ಸ್ಥಳೀಯ ದೊಡ್ಡ ಮನುಷ್ಯರೊಬ್ಬರಿಂದಲೂ ಒಂದೊಂದು ಸರ್ಟಿಫಿಕೇಟನ್ನು ತೆಗೆದುಕೊಂಡು ಕಳುಹಿಸತಕ್ಕದ್ದು.

Bangalore City, } **G. Paramasiviah, B.A., LL.B.,**
20-7-1918. } *Advocate and Hon. Secretary,*
The Mysore Lingayet
Education Fund Association.

ಪತ್ರವ್ಯವಹಾರ.

(ಹಿರಿಯೂರು ತಾ|| ವೀರಶೈವ ಮಹಾಸಭೆ)

ಮ|| ರಾ|| ಶ್ರೀ|| ಜಿ. ಶಾಂತವೀರಪ್ಪನವರು, ಬಿ. ಎ., ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟ್ ತುಮಕೂರು, ಇವರು ಒಂದನೆಯ ಹಿರಿಯೂರು ತಾಲ್ಲೂಕು ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಸನ್ 1918 ನೇ ಜುಲೈ ತಾರೀಖು 12 ರಲ್ಲು ಮಾಡಿದ ಭಾಷಣ:—

ಪರಮಪೂಜ್ಯರಾದ ಮಹಾಸ್ವಾಮಿಗಳೇ, ವೀರಶೈವ ಮತ ಬಾಂಧವರೇ,

ಶ್ರೀಮದ್ವೀರಶೈವ ಜಗತ್ತನ್ನು ಉದ್ಧರಿಸಲೋಸುಗ ಕಂಕಣಬದ್ಧರಾಗಿರ್ಪ ಚಿತ್ರದುರ್ಗದ ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಕೃಪಾವಿಶೇಷದಿಂದ ನಡೆಯುವುದಾಗಿರುವ ಈ ಮಹಾಸಭೆಯಲ್ಲಿ ನಾವು ನೆರೆದಿರುತ್ತೇವೆ. ವೀರಶೈವ ಮತಾಭಿವೃದ್ಧಿಯನ್ನು ಲಕ್ಷ್ಯವಾಗಿಟ್ಟುಕೊಂಡು ಮಹಾಸಭೆಗಳು ನಡೆಯುತ್ತಾ ಬಂದಿವೆ. ಅಂತಹ ಮಹಾಸಭೆಗಳಿಗೆ ಎಲ್ಲಾ ಪ್ರಾಂತಗಳಿಂದಲೂ ಜನರು ಹೋಗಿ ಪ್ರಯೋಜನವನ್ನು ಹೊಂದುವುದು ಅಸಾಧ್ಯವೆಂದು ಈ ಹಿರಿಯೂರು ಪ್ರಾಂತದ ಮಹನೀಯರಾದ ನೀವು ಸಂಭಾವಿಸಿ, ಈ ತರದ ಪ್ರಾಂತಿಕ ಸಭೆಗಳನ್ನು ಏರ್ಪಡಿಸುವುದಕ್ಕೆ ಮಾರ್ಗದರ್ಶಕರಾಗಿ ನಿಂತಿರುವುದು ಬಹಳ ಸ್ತೋತ್ರಾರ್ಹವಾಗಿದೆ. ಈ ರೂಪದಲ್ಲಿ ಮಾಡತಕ್ಕ ಮತಸೇವೆಯ ಪುಣ್ಯಲಾಭಕ್ಕೆ ನೀವೇ ಪ್ರಥಮ ಭಾಗಸ್ಥರಾಗಿರುತ್ತೀರಿ. ಈ ವಿಶೇಷ ಕಾರ್ಯದಲ್ಲಿ ಇತರ ಎಲ್ಲಾ ಊರುಗಳನ್ನು ನಿಮ್ಮ ಊರು ಮೀರಿಸಿರುವುದರಿಂದ ಇದನ್ನು ಹಿರಿಯೂರೆಂದು ಹೇಳುವುದು ಸಹಜವಾಗಿ ಒಪ್ಪುತ್ತದೆ. ಶ್ರೀ ಜಗದ್ಗುರು ಮಹಾಸ್ವಾಮಿಗಳ ಕೃಪಾವಲಂಬನವು ಇದಕ್ಕೆ ಇರುವುದರಿಂದ ಈ ಸಭಾಕಾರ್ಯಗಳು ಸಮರ್ಪಕವಾಗಿ ನಡೆದು ಇದರ ಸದುದ್ದೇಶವು ಕಾರ್ಯರೂಪದಲ್ಲಿ ನೆರವೇರುವುದೆಂದು ನಂಬಿರುತ್ತೇನೆ.

ಮಹಾಸಭೆಯೆಂದರೆ ಸಾಧಾರಣವಾದುದಲ್ಲ. ಇದು ಈ ಪ್ರಾಂತದ ಅಶೇಷ ವೀರಶೈವ ಸಮಾಜದ ಮುಖವೆಂದು ಹೇಳುವುದರಲ್ಲಿ ಯಾವ ಅತ್ಯುಕ್ತಿಯೂ ಇರಲಾರದು. ಇದರ ಸಂದರ್ಶನವೆಂದರೆ ಒಟ್ಟು ಈ ಸಮಾಜದ ಸಂದರ್ಶನವಂತಲೇ ಹೇಳಬಹುದು. ಇಂತಹ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವುದಕ್ಕೆ ನನಗಿಂತ ಹೆಚ್ಚಾದ ಯೋಗ್ಯತೆಯುಳ್ಳವರು ಅನೇಕಮಂದಿ ಇರುತ್ತಾರೆ. ಈ ಸಭೆಯ ಸ್ವಾಗತ ಸಂಘದವರು ನನ್ನನ್ನು ಇದಕ್ಕೆ ಅಧ್ಯಕ್ಷನಾಗಬೇಕೆಂದು ಕೇಳಿದುದನ್ನೇ ನನ್ನ ಸಮಾಜದ ಆಜ್ಞೆಯೆಂದು ನಾನು ಭಾವಿಸಿ, ನನ್ನ ಶಕ್ತಿಯು ಮಿತವಾದುದಾದರೂ, ಯಥಾಮತಿಯಾಗಿ ಈ ಕಾರ್ಯವನ್ನು ನಡೆಸುವುದರ ರೂಪದಲ್ಲಿ ಮತಸೇವೆಯನ್ನು ಮಾಡಿ ಧನ್ಯನಾಗಬೇಕೆಂದು ಅಂಗೀಕರಿಸಿದೆನು. ಈ ಸಭೆಗೆ ಕಾರಣಭೂತರಾದ ಈ ಪ್ರಾಂತದ ನನ್ನ ಸಹೋದರರು ನನಗೆ ಪ್ರೀತಿಪೂರ್ವಕವಾಗಿ ಕೊಟ್ಟಿರುವ ಈ ಮರ್ಯಾದೆಗೋಸ್ಕರ ಅವರನ್ನೆಲ್ಲಾ ಆತ್ಮೀಯವಾಗಿ ವಂದಿಸುತ್ತೇನೆ.

ಪ್ರಪಂಚದ ಚರಿತ್ರೆಯನ್ನು ಆದಿಯಿಂದಲೂ ನೋಡುತ್ತಾ ಬಂದರೆ, ಕಾಲಸ್ಥಿತಿ ಅಂದರೆ ಜನರ ಸ್ಥಿತಿಗತಿಗಳು ಒಂದೇ ಸಮನಾಗಿಲ್ಲದೆ ಕಾರ್ಯಕಾರಣನ್ಯಾಯವನ್ನನುಸರಿಸಿ ಬದಲಾಯಿಸುತ್ತಲೇ ಬಂದಿರುತ್ತವೆ. ಈ ಕಾಲವನ್ನು ಮಹಾಸಭೆಗಳ ಕಾಲವೆಂದು ಹೇಳಬಹುದು. ಎಲ್ಲಿ ನೋಡಿದರೂ ಕಾನ್ಫರೆನ್ಸುಗಳೂ, ಕಮಿಟಿಗಳೂ, ಮೀಟಿಂಗುಗಳೂ ಸೇರುತ್ತಲೇ ಇವೆ. ಮಹತ್ಕಾರ್ಯಗಳನ್ನು ಸಾಧಿಸುವುದಕ್ಕೆ ಸಮಸ್ತರೂ ಸಮುದಾಯತ್ವೇನ ಸೇರಿ ಕೆಲಸಮಾಡುವವರಾಗಬೇಕು. ಈ ರೀತಿ ಎಲ್ಲರೂ ಒಂದು ಕಡೆ ಸೇರಿ ಉದ್ದಿಷ್ಟಕಾರ್ಯನಿರ್ವಾಹದ ಸಾಧಕ ಬಾಧಕಗಳನ್ನು ಕುರಿತು ಚರ್ಚಿಸಿ ತಕ್ಕ ನಿರ್ಧಾರಗಳನ್ನು ಮಾಡುವುದೇ ಮಹಾಸಭೆ ಎನಿಸಿಕೊಳ್ಳುತ್ತದೆ. ವೀರಶೈವರಾದ ನಮ್ಮ ಸಾಮ್ಪ್ರತ ಸ್ಥಿತಿಯು ಮೊದಲಿದ್ದಂತೆ ಈಗ ಇರುವುದಿಲ್ಲ. ಅತ್ಯುನ್ನತ ಸ್ಥಿತಿಯಲ್ಲಿದ್ದ ಈ ಮತವು ಈಗ ಅಧೋಗತಿಯನ್ನೈದುತ್ತಿರುವುದು ಎಲ್ಲರಿಗೂ ಪರಿತಾಪಕರವಾದ ಸಂಗತಿಯಾಗಿದೆ. ಇದಕ್ಕೆ ನಾವು ತಕ್ಕ ಪರಿಹಾರವನ್ನು ಕಲ್ಪಿಸಿಕೊಳ್ಳದಿದ್ದರೆ ಕ್ರಮೇಣ ಇನ್ನೂ ಹೀನಸ್ಥಿತಿಗೆ ಬಂದು, ಕಡೆಗೆ ಈ ಮತವು ನಾಮಾವಶೇಷದಲ್ಲಿ ನಿಲ್ಲಬಹುದೆಂಬ ಭಯವು ತೋರುತ್ತದೆ. ಈ ಪರಿಹಾರ ಕಲ್ಪನೆಗೆ ಇಂತಹ ಮಹಾಸಭೆಗಳೇ ಸಾಧಕವಾದವುಗಳು.

ಶ್ರೀಮತ್ಸ್ವರ್ಗದ ಸದ್ಯೋಜಾತಾದಿ ಪಂಚಮುಖದಿಂದ ಉತ್ಪನ್ನರಾದ ಪಂಚಾಚಾರ್ಯರೇ ಜಗತ್ತನ್ನು ಉದ್ಧರಿಸುವುದಕ್ಕಾಗಿ ಪಂಚಪೀಠಗಳನ್ನು ಸ್ಥಾಪಿಸಿರುತ್ತಾರೆ. ಈ ಪೀಠಸ್ಥರೇ ರಂಭಾಪುರಿ ಮೊದಲಾದ ಸಿಂಹಾಸನಾಧೀಶ್ವರರು. ಇವರ ಮತ್ತು ಇವರ ಸೂತ್ರಾನುವರ್ತಿಗಳಾದ ಮಠಸ್ಥರ ಕರ್ತವ್ಯವು ಧರ್ಮಸಂಸ್ಥಾಪನೆಯೇ. ಅಂದರೆ ಇವರು ತಮ್ಮ ಶಿಷ್ಯಕೋಟಿಗೆ ಧರ್ಮೋಪದೇಶವನ್ನು ಗೈಯುತ್ತಾ ಅವರು ಸನ್ಮಾರ್ಗ ಪ್ರವೃತ್ತರಾಗಿ ಸುಖದಿಂದ ಇಹಲೋಕದಲ್ಲಿ ಬಾಳಿ ಪರಲೋಕದಲ್ಲಿ ಸದ್ಗತಿಯನ್ನು ಹೊಂದುವಂತೆ ಎಲ್ಲಾ ವಿಧದಲ್ಲಿಯೂ ಅವರಿಗೆ ಯೋಗ್ಯತೆಯನ್ನುಂಟುಮಾಡಿಕೊಡುವುದೇ ಅವರ ಮುಖ್ಯ ಕರ್ತವ್ಯವಾಗಿದೆ. ಮತದ ವಿಶಿಷ್ಟ ಶಿಕ್ಷಾರಕ್ಷಣೆಯು ಇವರ ಕೈಯಲ್ಲಿದೆ. ಇವರಿಂದಲೂ ಪೂಜ್ಯತೆಯನ್ನು ಹೊಂದಿ ಗುರೂತ್ತಮರಾಗಿರುವವರೇ ಜಗದ್ಗುರುಗಳೆಂಬ ವ್ಯವಹಾರ ನಾಮದಿಂದಲೂ, ಸ್ವಸ್ವರೂಪ ಜ್ಞಾನಸಿದ್ಧಿಯಿಂದ ಮಾಯಾ ಮೋಹಗಳಿಂದ ಕೂಡಿದ ಜಗದ್ರಂಜನೆಯನ್ನು ನಿರಾಕರಿಸಿ ಬಿಟ್ಟಿದ್ದರಿಂದ ನಿರಂಜನ ನಾಮದಿಂದಲೂ, ಆತ್ಮಸಾಕ್ಷಾತ್ಕಾರದಿಂದ ವರ್ಣಾಶ್ರಮಗಳನ್ನು ಮೀರಿ, ಅತಿವರ್ಣಾಶ್ರಮಿಗಳೆಂಬ ನಾಮದಿಂದಲೂ, ಜನನ ಮರಣಾತ್ಮಕವಾದ ಭವದ ಭಯದಿಂದ ಬಿಡಲ್ಪಟ್ಟು ನಿರಾಭಾರಿ ಎಂಬ ನಾಮದಿಂದಲೂ, ಷಟ್ಸ್ಥಲ ಜ್ಞಾನಪೂರ್ಣರಾಗಿ ಷಟ್ಸ್ಥಲ ಬ್ರಹ್ಮಿಗಳೆಂಬ ನಾಮದಿಂದಲೂ ಪ್ರಸಿದ್ಧರಾಗಿರುವವರೇ ಚಿನ್ಮೂಲಾದ್ರಿ (ಚಿತ್ರದುರ್ಗ) ಮೊದಲಾದ ಶೂನ್ಯಸಿಂಹಾಸನದಲ್ಲಿ ಮಂಡಿಸಿರುವ ಗುರುವರ್ಯರಾಗಿರುತ್ತಾರೆ. ಮತಧರ್ಮಗಳು ಮಲಿನತೆಯನ್ನು ಹೊಂದದೆ ಇರಲಿ ಎಂಬ ತಾತ್ಪರ್ಯದಿಂದ ಪೂರ್ವಾಚಾರ್ಯರು ತಮ್ಮ ತಮ್ಮ ಶಾಖಾ ಉಪಶಾಖಾ ಮಠಗಳನ್ನು ಬಹು ಕಡೆ ನಿರ್ಮಿಸಿರುತ್ತಾರೆ. ಸಮಸ್ತ ಮಠಗಳ ಉತ್ಪತ್ತಿ ಕಾರಣವು ಧರ್ಮಸಂಸ್ಥಾಪನೆ ಎಂಬ ಒಂದೇ ಕೇಂದ್ರದ ಕಡೆಗೆ ತಿರುಗುತ್ತದೆ. ಆದ್ದರಿಂದ ಬೇರೆ ಬೇರೆ ಮುಖ್ಯ ಮಠಗಳಿಗೆ ಇರಬಹುದಾದ ಭಿನ್ನಭೇದ ಸಂಬಂಧಗಳು ಇತ್ತಾಲದಲ್ಲಿ ಆಲೋಚನೆಗೆ ಅರ್ಹವಾದವುಗಳಲ್ಲ. ಎಲ್ಲವೂ ತಮ್ಮ ಕರ್ತವ್ಯ ರಕ್ಷಣೆಯನ್ನು ಮಾಡಿಕೊಳ್ಳುವುದರಲ್ಲಿ ದಕ್ಷತೆಯನ್ನೂ ಔದಾರ್ಯವನ್ನೂ ತೋರಿಸುತ್ತಾ ಬಂದರೆ ನಮ್ಮ ಮತದ ಪ್ರಭಾವವು ಪೂರ್ವದಂತೆ ಉನ್ನತಿಯನ್ನೈದುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಅಧಿಕಾರವಿರುವ ಕಡೆ ಜವಾಬ್ದಾರಿಯು ಇದ್ದೇ ತೀರಬೇಕು. ಮಠದ ಮೇಲಣ ಅಧಿಕಾರವುಳ್ಳವರಾಗಿರುವ ಗುರುಗಳೆಂಬುವರು ತಮ್ಮ ಜವಾಬ್ದಾರಿಯೇನೆಂದು ಅದನ್ನು ನಿರ್ವಹಿಸಲು ಶಕ್ತರಾಗಿರಬೇಕು. ಇದಕ್ಕೆ ವಿದ್ಯಾಬಲವು ಅಗತ್ಯವಾದದ್ದು. ಈಗ ನಮ್ಮಲ್ಲಿರುವ ಅನೇಕ ಮಂದಿ ಗುರುಗಳಲ್ಲಿ ಶೇಕಡ ಎಷ್ಟು ಮಂದಿ ವಿದ್ಯಾವಂತರಾಗಿದ್ದಾರೆಂಬುವುದು ನಮ್ಮೆಲ್ಲರಿಗೂ ತಿಳಿದ ಅಂಶವೇ ಆಗಿದೆ. ಈ ಪರಿತಾಪಕರವಾದ ಸಂಗತಿಯನ್ನು ವರ್ಣಿಸಿ ಹೇಳುವುದಕ್ಕೆ ನನಗೆ ದುಃಖವಾಗುತ್ತದೆ. ವಿದ್ಯಾಸಂಪತ್ತಿಲ್ಲದೆ ಅನರ್ಹರಾದವರನ್ನು ಗುರುಪದವಿಗೆ ತರುವುದರಿಂದ "ಯಥಾಗುರು ಸ್ತಥಾಶಿಷ್ಯಃ" ಎಂಬಂತೆ ಭಕ್ತರ ಧರ್ಮವೂ ನಾಶವಾಗುತ್ತಾ ಮತದ ಪ್ರಾಶಸ್ತ್ಯವೂ ಕಡಿಮೆಯಾಗುವುದು ಆಶ್ಚರ್ಯವಲ್ಲ. ಆದಕಾರಣ ಶಿವಯೋಗಮಂದಿರದಂಥಾ ಶಿಕ್ಷಣಶಾಲೆಗಳು ನಮ್ಮ ದೇಶದಲ್ಲಿ ಸ್ಥಾಪಿಸಲ್ಪಟ್ಟು ಅಲ್ಲಿ ಸತ್ಕುಲ ಪ್ರಸೂತರಾದವರನ್ನು ಆರಿಸಿ ಮತಶಾಸ್ತ್ರಗಳಲ್ಲಿ ಪಾರಂಗತರಾಗುವಂತೆ ಏರ್ಪಾಡುಗಳನ್ನು ಮಾಡಬೇಕು. ಮುಖ್ಯ ಪೀಠಸ್ಥರು ಗಮನಕೊಡದ ಹೊರತು ಈ ಮಹತ್ಕಾರ್ಯವು ನೆರವೇರಲಾರದು. ಆದಕಾರಣ ಈ ಸಭೆಯ ಕಡೆಯಿಂದ ಈ ವಿಷಯದಲ್ಲಿ ಶೀಘ್ರವಾಗಿ ಸಿಂಹಾಸನಾಧೀಶ್ವರರಿಗೆ ವಿನಂತಿಯು ಮಾಡಲ್ಪಡಬೇಕು.

೨. ವೀರಶೈವ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿ.

ಈ ವಿಷಯವಾದರೋ ಇನ್ನೂ ವಿಷಾದಕರವಾದುದು. ನಮ್ಮಲ್ಲಿ ನೂರಕ್ಕೆ ೪-೫ ಮಂದಿ ಮಾತ್ರ ಓದು ಬರಹವನ್ನು ಕಲಿತಿರುತ್ತಾರೆಯೆಂದರೆ ಯಾರ ಮನಸ್ಸಿಗೆ ತಾನೇ ಸಂಕಟ ಉಂಟಾಗುವುದಿಲ್ಲ? ವಿದ್ಯೆಯ ಆವಶ್ಯಕತೆಯನ್ನು ಕುರಿತು ದೀರ್ಘವಾದ ಉಪನ್ಯಾಸವನ್ನು ಮಾಡಬೇಕಾದ ಅಗತ್ಯವಿರುವುದಿಲ್ಲ. ವಿದ್ಯಾ ಪ್ರಯೋಜನಗಳನ್ನು ಎಲ್ಲರೂ ತಿಳಿದವರೇ ಆಗಿರುತ್ತಾರೆ. ನಮ್ಮ ಮತವು ಇಷ್ಟು ಹೀನಸ್ಥಿತಿಯಲ್ಲಿರುವುದಕ್ಕೆ ನಮ್ಮಲ್ಲಿ ವಿದ್ಯೆಯು ಇಲ್ಲದಿರುವುದೇ ಕಾರಣವೆಂದು ಎಲ್ಲರೂ ಒಪ್ಪುತ್ತಾರೆ. ಆದಕಾರಣ ಯಾವುದರ ಅಭಾವದಿಂದ ನಾವು ಈ ಅಧೋಗತಿಗೆ ಇಳಿಯುತ್ತಿದ್ದೇವೆಯೋ, ಅದರ ಸಮೃದ್ಧಿಯಿಂದ ಊರ್ಧ್ವಗತಿಯನ್ನು ಪಡೆಯಬೇಕಾಗಿದೆ. ಹಿಂದೆ ವೀರಶೈವರಲ್ಲಿ ಎಷ್ಟು ಮಂದಿ ವಿದ್ವಾಂಸರೂ, ಕವೀಶ್ವರರೂ, ವಾಗ್ಮಿಗಳೂ ಇರಲಿಲ್ಲ? ಸಂಸ್ಕೃತ ಕರ್ಣಾಟಕ ಭಾಷೆಗಳಲ್ಲಿ ಅನೇಕ ಮಂದಿ ವೀರಶೈವರು ಅನೇಕ ಗ್ರಂಥಗಳನ್ನು ರಚಿಸಿ, ಈ ಮತದ ಸ್ವರೂಪವು ಪೂರ್ವದಲ್ಲಿ ಹೇಗಿತ್ತೆಂಬುವದಕ್ಕೆ ಸಾಕ್ಷಿಗಳಾಗಿರುತ್ತಾರೆ.

ವಿದ್ಯಾಭ್ಯಾಸದಿಂದ ಮನುಷ್ಯನ ಜ್ಞಾನಕಮಲವು ಚೆನ್ನಾಗಿ ವಿಕಸಿತವಾಗಿ ಆತನಲ್ಲಿ ವಿವೇಚನಾಶಕ್ತಿಯು ಹುಟ್ಟುತ್ತದೆ. ಕರ್ತವ್ಯಾಕರ್ತವ್ಯಗಳ ವಿಚಾರವು ಬರುತ್ತದೆ. ಆತನು ಯಾವ ಕೆಲಸದಲ್ಲಿ ಕೈಹಾಕಿದರೂ ಅದನ್ನು ಸರ್ವ ಸಮರ್ಪಕವಾಗಿ ಮಾಡಬಲ್ಲವನಾಗುತ್ತಾನೆ. ಅಭಿವೃದ್ಧಿಯ ರಹಸ್ಯವೆಲ್ಲವೂ ಇದರಲ್ಲಿಯೇ ಅಡಗಿದೆ. ಈಗ ಮುಂದುವರಿದು ಬರುತ್ತಿರುವ ಯಾವ ಜನಾಂಗವನ್ನು ನಾವು ನೋಡಿದರೂ ಅದಕ್ಕೆ ಮೂಲಕಾರಣವು ಅವರಲ್ಲಿರುವ ಅಸಾಧಾರಣವಾದ ವಿದ್ಯೆಯೇ ಎಂಬುದು ಗೊತ್ತಾಗುತ್ತದೆ. ಆದಕಾರಣ ನಮ್ಮಲ್ಲಿ ವಿದ್ಯಾಭ್ಯಾಸವು ವಿಶೇಷವಾಗಿ ಹರಡುವಂತೆ ತಕ್ಕ ಏರ್ಪಾಡುಗಳನ್ನು ಮಾಡುವುದು ನಮ್ಮಗಳ ಪ್ರಥಮ ಕರ್ತವ್ಯವಾಗಬೇಕು.

ಪುರುಷರು ಮಾತ್ರ ವಿದ್ಯಾವಂತರಾದರೆ ಸಾಲದು. ಸ್ತ್ರೀಯರೂ ಸಹ ವಿದ್ಯಾವತಿಯರಾಗಬೇಕು. ವಿದ್ಯಾರ್ಜನೆಗೆ ಸಾಧಕವಾದ ಕರಣೇಂದ್ರಿಯಗಳನ್ನು ದೇವರು ಸ್ತ್ರೀ ಪುರುಷರಿಬ್ಬರಿಗೂ ಸಮನಾಗಿಯೇ ಕೊಟ್ಟಿರುತ್ತಾನೆ. ಇಹಲೋಕದ ಸೃಷ್ಟಿಯಲ್ಲಿ ಶ್ರೇಷ್ಠತಮವೆನಿಸುವ ಮಾನವ ಜನ್ಮದಲ್ಲಿ ಪುರುಷನೊಬ್ಬನೇ ಸೇರುವುದಿಲ್ಲ. ಪುರುಷನು ಅರ್ಧಶರೀರವೆಂತಲೂ, ಸ್ತ್ರೀಯೂ ಸೇರಿ ಪೂರ್ಣ ಶರೀರವೆಂತಲೂ ಹೇಳುತ್ತಾರೆ. ಜನ್ಮಶ್ರೇಷ್ಠತೆಗೆ ಆಧಾರವಾಗಿರುವ ಜ್ಞಾನವೆಂಬ ರತ್ನವು ಏಕಪ್ರಕಾರವಾಗಿ ಉಭಯರಲ್ಲಿಯೂ ಮೊದಲು ಸಂಕುಚಿತಾವಸ್ಥೆಯಲ್ಲಿರುತ್ತದೆ. ಇದಕ್ಕೆ ವಿದ್ಯಾಭ್ಯಾಸವೆಂಬ ಸಾಣೆಯನ್ನು ಕೊಟ್ಟ ಹೊರತು ರಂಜನೆಯುಂಟಾಗುವುದಿಲ್ಲ. ಸ್ತ್ರೀ ಪುರುಷರು ಸಂಸಾರವೆಂಬ ರಥಕ್ಕೆ ಹೂಡಿದ ಎರಡು ಕುದುರೆಗಳೆಂದು ಒಬ್ಬ ವಿದ್ವಾಂಸನು ಹೇಳುತ್ತಾನೆ. ಒಂದು ಕುದುರೆಯು ಸುಶಿಕ್ಷಿತವಾಗಿದ್ದು ಇನ್ನೊಂದು ಶಿಕ್ಷಣವನ್ನು ಹೊಂದದೇ ಇದ್ದರೆ ರಥವು ಕ್ರಮವಾಗಿ ಸಾಗಲಾರದು. ಒಂದು ಹಳ್ಳಕ್ಕೆ ಎಳೆದರೆ, ಇನ್ನೊಂದು ದಿಣ್ಣೆಗೆ ಎಳೆಯುವುದು. ಅಂದರೆ ಗಂಡನು ವಿದ್ಯಾವಂತನಾಗಿದ್ದು ಹೆಂಡತಿ ವಿದ್ಯಾಹೀನೆಯಾಗಿದ್ದರೆ ಆ ಸಂಸಾರವು ಸರಿಯಾಗಿ ನಡೆಯುವುದಿಲ್ಲ. ನಮ್ಮಲ್ಲಿ ಈಗ ಆಗಬೇಕಾಗಿರುವ ಸಮಾಜಸುಧಾರಣೆಗೆ ಮನೆಯಲ್ಲಿ ಹೆಂಗಸರ ಅವಲಂಬನವು ಅಗತ್ಯವಾಗಿ ಬೇಕು. ಅವರು ವಿದ್ಯಾವತಿಯರಾಗದ ಹೊರತು ಸಮಾಜವೆಂದರೇನು? ಸುಧಾರಣೆ ಎಂದರೇನು? ಎಂಬ ವಿಷಯಗಳು ಅವರ ತಲೆಗೆ ಹತ್ತುವುದೇ ಇಲ್ಲ. ಅದಲ್ಲದೆ ಗೃಹಕೃತ್ಯನಿರ್ವಾಹ, ಮಕ್ಕಳ ಪೋಷಣೆ, ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ಬೆಳೆಸುವುದು, ಕೊಡತಕ್ಕ ಮುಖ್ಯಭಾಗಗಳೆಲ್ಲಾ ಹೆಂಗಸರ ಮೇಲೆಯೇ ಬಿದ್ದಿರುತ್ತವೆ. ಇವುಗಳ ನಿರ್ವಾಹಕ್ಕೆ ವಿದ್ಯೆಯು ಆವಶ್ಯಕವಾಗಿ ಬೇಕು. ಆದಕಾರಣ ನಮ್ಮಲ್ಲಿ ಸ್ತ್ರೀ ವಿದ್ಯಾಭ್ಯಾಸವು ಸರ್ವತ್ರ ಹರಡುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ.

ನಮ್ಮ ದಯಾಳು ಸರ್ಕಾರದವರು ಸಹ ಈಚೆಗೆ ವಿದ್ಯಾಭಿವೃದ್ಧಿಗಾಗಿ ಅನೇಕಾನೇಕ ಏರ್ಪಾಡುಗಳನ್ನು ಮಾಡುತ್ತಾ ಅಪರಿಮಿತವಾಗಿ ದ್ರವ್ಯವನ್ನು ವಿನಿಯೋಗಿಸುತ್ತಾ ಇರುವುದು ತಮಗೆ ತಿಳಿದ ಅಂಶವೇ ಆಗಿದೆ. ಸಾಧಾರಣವಾಗಿ ಪ್ರತಿಯೊಂದು ಗ್ರಾಮದಲ್ಲೂ ಶಾಲೆಗಳಿರುತ್ತವೆ. ಇವುಗಳಲ್ಲಿ ನಮ್ಮ ಬಾಲಕ ಬಾಲಕಿಯರು ಪ್ರಥಮ ಶಿಕ್ಷೆಯನ್ನು ಹೊಂದಬಹುದು. ಅಲ್ಲಿಂದ ಮುಂದಣ ವಿದ್ಯಾಭ್ಯಾಸಕ್ಕೆ ಸಹಾಯಾರ್ಥವಾಗಿ ವೇತನಗಳು ಕಲ್ಪಿಸಲ್ಪಟ್ಟಿವೆ. ಈ ಸಹಾಯವು ಸಾಕಾದಷ್ಟು ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಕಡೆಯಿಂದ ಹೆಚ್ಚಾದ ಪ್ರೋತ್ಸಾಹವನ್ನೂ ಸಹಾಯವನ್ನೂ ವಿದ್ಯಾರ್ಥಿಗಳಿಗೆ ಒದಗಿಸುವಂತೆ ಏರ್ಪಾಡುಗಳು ಆಗಬೇಕು.

(ಸಶೇಷ).

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುವು. ಪ್ರತಿಯೊಬ್ಬರೂ ಉಡಲು ಅನುಕೂಲದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ಪವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಹೋರಾಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೋಷರ್‌ಜಾನ್ ಸೀರೆ ...	5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ ...	3.0.0	ಜನಾನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ ...	5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ,
32 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪಿರತ. 39

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿಶೀಘ್ರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಹಸ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಮಶೂಲ ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಜುಲೈ ತಾ|| ೨೮ ರಿಂದ ೧೯೧೮ ನೆಯ ಆಗಸ್ಟ್ ತಾ|| ೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೧ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಷಾಢ ಬ|| ಪಂಚಮಿಯಿಂದ ಆಷಾಢ ಬ|| ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ
28	[1] ಭಾನು	ಪಂಚ	24-11	ಉಭಾ	47-0	13
29	[2] ಸೋಮ	ಷಷ್ಠಿ	18-1	ರೇವತಿ	41-41	14
30	ಮಂಗಳ	ಸಪ್ತ	11-51	ಅಶ್ವಿನಿ	37-36	15
31	[3] ಬುಧ	ಅಷ್ಟ	5-57	ಭರಣಿ	33-48	16
1	ಗುರು	ನವ	0-30	ಉಪರಿ	54-43	17
2	[4] ಶುಕ್ರ	ಏಕಾ	51-7	ರೋಹಿಣಿ	28-7	18
3	[5] ಶನಿ	ದ್ವಾದ	48-2	ಮೃಗಶಿರ	26-29	19

(1) ಟೀಕಾಚಾರ್ಯ ಪುಣ್ಯದಿನ, ಮೇ|| ಕೃಷ್ಣರಾಜಮುಡೀ ಉತ್ಸವಃ. (2) ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವಃ. (3) ಮೇಲುಕೋಟೆಯಲ್ಲಿ ಕೃಷ್ಣರಾಜಮುಡೀ ರಥಃ. (4) ಸ್ಮಾರ್ತಾನಾಮೇಕಾದಶೀ, ಆಡಿಶುಕ್ರವಾರಂ, ಪದಿನಟ್ಟಾಂಪೆರಕ್. (5) ಶ್ರೀ ವೈಷ್ಣವಾನಾಂ ಮಾಧ್ವಾನಾಂಚೈಕಾದಶೀ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಫ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರಾಮ್ಯಾಲವಾಲಂವಲಂ
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತಿ ಕೆಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಆಗಸ್ಟ್ ತಾರೀಖು ೪ ನೆಯ ಭಾನುವಾರ. (ಸಂಚಿಕೆ ೩೧

[illegible] ಪುಸ್ತಕ ಭಂಡಾರ ಬಸವ ಸಮಿತಿ ಬೆಂಗಳೂರು

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಲಾಂಛನಧಾರಣ, ಶರಣಪಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಪಕಳ ೨ ಆಣೆ; ಪಂಚರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಷಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಉಡ್ಡಿಕೆ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
33 3, ಇರುಳಪ್ಪನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ರತ್ನತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗದಾಂಕುಶಶತಕಂ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವೃತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಸಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 34

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜಿ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗರೇ ಒಂದೇಸಾರಿ ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತಕುಮಾರಿಗೂ ವೈದ್ಯರ ಸಮಯವನ್ನು ಕಾದು ಕೊರಗುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಸಾರ್ಣವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಷೋಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾನ್ನಕವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಮಶೂಲ ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಮಶೂಲ ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಮಶೂಲ ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆರೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಫಿಸಿಸ್ಟ್ ಎಗಿಯಂ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ನಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟೆಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಹಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವತ್ತನ್ನೂ ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:— ಎ. ಸಚ್ಚಿದಾನಂದ ಜೋಯಿಸ್,
18 ಆನಂದ ಬುಕ್‌ಡಿಪೋ, ಮೈಸೂರು.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾಗುವವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚಾರೋಗಗಳನ್ನೇ [illegible] ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದವರೆಲ್ಲ [illegible] ೧೦೦ ಕ್ಕೆ ೧-೪-೦

೩ ಹೇನುತೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ [illegible] ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ ತೊಲೆಗೆ-೧೨ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಎಲ್ಲಾ ರೋಗಗಳಿಗೆ [illegible]

ಇವುಗಳಲ್ಲದೆ ಆಯುರ್ವೇದಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಬಾರದು. ಸಕಲ ಔಷಧಗಳನ್ನು ಕೊಂಡು ನೋಡಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
36 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಕೆಳಗಿನ ನಾಲ್ಕು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡವರಿಗೆ
ಸುಖ, ಸಂಪತ್ತು, ವೀರಶೈವಮತದ ಸನಾತನತ್ವ ಈ

ಮೂರು ಪುಸ್ತಕಗಳು ಉಚಿತ!

(೧) ರಾ|| ಬ|| ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

(೨) ಸ್ವಕರ್ತವ್ಯಸಿದ್ಧಾಂತ—ಬಾಲ್ಯಾದಿ ಎಲ್ಲಾ ಅವಸ್ಥೆಗಳಲ್ಲಿಯೂ ಪ್ರತಿಯೊಬ್ಬರೂ ಹೇಗೆವರ್ತಿಸಿ ಆರೋಗ್ಯ, ಐಶ್ವರ್ಯ, ಜ್ಞಾನಾದಿಗಳನ್ನು ಸಂಪಾದಿಸಿ ಸುಖದಿಂದ ದೀರ್ಘಕಾಲ ಜೀವಿಸಬೇಕೆಂಬುದನ್ನು ಈ ಪುಸ್ತಕವು ಚೆನ್ನಾಗಿ ತಿಳಿಸುತ್ತದೆ. ಕ್ರಯ ೮ ಆಣೆ.

(3) ಬುದ್ಧಿಯಮಾತು—ಯುವಕರನ್ನು ಒಳ್ಳೆಯದಾರಿಗೆ ತರಲು ಅವರಿಗೆ "ಭಗವದ್ಗೀತೆ" ಯ ತೆರದಲ್ಲಿರುವ ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಅತಿವಿರಳವೆಂದು ಬೋಧಿನೀ ಪತ್ರಿಕಾಕರ್ತರು ಹೇಳಿದ್ದಾರೆ. ಕ್ರಯ ೪ ಆಣೆ.

(೪) ಅಧುನಿಕ ಜರ್ಮನಿ—ಕನ್ನಡದಲ್ಲಿ ಇದೇ ಮೊದಲನೆಯ ಪುಸ್ತಕ. ಈಗಿನ ಘೋರಯುದ್ಧಕ್ಕೆ ಕಾರಣನಾದ ಕೈಸರನ ಸಚಿತ್ರ ಚರಿತ್ರೆಯು, ಜರ್ಮನಿಯ ವಿದ್ಯೆ, ಒಕ್ಕಲತನ, ವ್ಯಾಪಾರ, ಕೈಗಾರಿಕೆ, ರಾಷ್ಟ್ರೀಯ ಸಾಮರ್ಥ್ಯ, ಸಂಘಶಕ್ತಿ ಮೊದಲಾದ ವಿಷಯಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ಕ್ರಯ ೪ ಆಣೆ.

12 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ವಿಜ್ಞಾಪನೆ.

ಯುದ್ಧವು ಈಗಲೇ ಮುಗಿಯುವ ಚಿಹ್ನೆಯು ತೋರುವುದಿಲ್ಲ. ಪದಾರ್ಥಗಳ ಬೆಲೆಯೆಲ್ಲಾ ಹೆಚ್ಚಿರುವುದು ಸರ್ವರಿಗೂ ಗೊತ್ತೇ ಇದೆ. ಪರಸ್ಥಳ ಹೊರಗಣಿಂದ ಬಂದಲ್ಲದೆ ಗತ್ಯಂತರವಿಲ್ಲದ ಕಾಗದದ ಬೆಲೆಯು ಈಗ ೧ ಕ್ಕೆ ೭ ರಷ್ಟು ಏರಿಹೋಗಿದೆ. ಅಷ್ಟು ಕೊಟ್ಟರೂ ಬೇಕಾದ ಕಾಗದವು ಸಿಕ್ಕುವುದೇ ದುರ್ಲಭವಾಗಿದೆ. ಬೊಂಬಾಯಿ ಮದ್ರಾಸುಗಳಲ್ಲಿ ಅಷ್ಟೊ ಇಷ್ಟೊ ಸಿಕ್ಕಿದರೂ ಅಲ್ಲಿಂದ ಮೈಸೂರಿಗೆ ಬಂದು ಸೇರಲು ಹೊಗೆಬಂಡಿಗಳ ಕೊರತೆಯಿಂದ ಅನುಕೂಲವಿಲ್ಲವಾಗಿದೆ. ಈ ಕಾರಣದಿಂದಲೇ ವಿವರ್ಣವಾದ ಕಾಗದಗಳನ್ನು ನಾವು ಕಳೆದ ೩-೪ ಸಂಚಿಕೆಗಳಿಂದಲೂ ಉಪಯೋಗಿಸಿಕೊಳ್ಳಬೇಕಾಯಿತು. ಈ ಬೆಲೆ ಹೆಚ್ಚುಗೆಯಿಂದ ಪತ್ರಿಕಾ ಮುದ್ರಣದಲ್ಲಿ ಸುಮಾರು ಒಂದೆರಡು ವರ್ಷಗಳಿಂದ ವಿಪರೀತವಾಗಿ ನಷ್ಟ ತಟ್ಟುತ್ತಿದ್ದರೂ ಕಟ್ಟಿಕೊಂಡ ಅಭಿಮಾನಕ್ಕಾಗಿ ಸಹಿಸುತ್ತಿರಬೇಕಾಗಿದೆ. ಈ ವಿಷಮಸಮಯದಲ್ಲಿ ಅನೇಕ ಪತ್ರಿಕಾಕರ್ತರು ತಮ್ಮ ಪತ್ರಿಕೆಗಳ ವರ್ಗಣಿಯನ್ನು ನಿರ್ದಾಕ್ಷಿಣ್ಯವಾಗಿ ಹೆಚ್ಚಿಸಿದರು. ನಾವು ಹಾಗೆಮಾಡದೆ ಇದುವರೆಗೂ ಸೈರಿಸಿಕೊಂಡೆವು. ಈಗ ಬಹಳ ದುರ್ಭರವಾಗಿಬಂದಿರುವುದು. ಆದುಕಾರಣ ಇಂದಿನಿಂದ ವರ್ಗಣಿಯ ದರವನ್ನು ವರ್ಷ ೧ ಕ್ಕೆ ೧ ರೂ ನಿಂದ ೧-೬-೦ ಗೆ ಹೆಚ್ಚಿಸಿರುತ್ತೇವೆ. ಪರಸ್ಥಳದವರು ಅಂಚೆವೆಚ್ಚ ಸೇರಿ ೨-೪-೦ ರೂ. ಗಳನ್ನು ಕೊಡಬೇಕಾಗುವುದು. ನಾವು ವರ್ಗಣಿಗಾಗಿ ಕಳುಹಿಸುವ ವಿ. ಪಿ. ಗಳನ್ನೆಲ್ಲಾ ಈ ಲೆಕ್ಕವನ್ನನುಸರಿಸಿಯೇ ಇನ್ನು ಮುಂದೆ ಕಳುಹಿಸುವೆವು. ಮನಿಯಾರ್ಡರ್ ದ್ವಾರಾ ಅವರಾಗಿ ವರ್ಗಣಿಯನ್ನು ಕಳುಹಿಸುವವರೂ ಈ ಲೆಕ್ಕವನ್ನೇ ಅನುಸರಿಸಬೇಕೆಂದು ಕೋರುತ್ತೇವೆ. ಭೂಸ್ವಾಮಿಗಳೂ, ಮಠಾಧಿಪತಿಗಳೂ, ದೇಶಾಭಿಮಾನಿಗಳೂ, ಪತ್ರಿಕಾಭಿಮಾನಿಗಳೂ ಸಹ ಈಗಣ ವಿಷಮಸ್ಥಿತಿಯ ಕಡೆಗೆ ಗಮನಿಸಿ, ಅಲ್ಪಮಾತ್ರವಾಗಿ ಹಣ ಹೆಚ್ಚಿಸಿದರೂ ಇದುವರೆಗಿನಂತೆಯೇ ಉದಾರಭಾವದಿಂದ ಪತ್ರಿಕೆಯನ್ನು ಪೋಷಿಸಿಕೊಂಡು ಹೋಗುವವರಾಗಬೇಕೆಂದು ಪ್ರಾರ್ಥನೆ.

ಪತ್ರಿಕರ್ತ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಆಗಸ್ಟ್ ತಾ|| ೪ ನೆಯ ಭಾನುವಾರ.

ಯುದ್ಧಕ್ಕೆ ನಾಲ್ಕುವರ್ಷ ತುಂಬಿತು.

ಅಭೂತಪೂರ್ವವಾದ ಮಹಾಯುದ್ಧವು ಆರಂಭಿಸಿ ಇಂದಿಗೆ ನಾಲ್ಕು ವರ್ಷಗಳು ತುಂಬಿದುವು. ಆದರೂ ಪ್ರಳಯಹೇತುವಾದ ಆ ಯುದ್ಧವು ಇನ್ನೂ ಮುಗಿಯಲಿಲ್ಲ. ಜಗತ್ತಿಗೆ ಶಾಂತಿಯುಂಟಾಗಲಿಲ್ಲ. ಹೇಗಾದರೂ ಇದನ್ನು ಕೊನೆಗಾಣಿಸಿ ಲೋಕವನ್ನು ಈ ಮಹಾವಿಪತ್ತಿನಿಂದ ಸಂರಕ್ಷಿಸಬೇಕೆಂದು ಪ್ರಪಂಚದವರೆಲ್ಲರೂ ಈ ದಿವಸ ಪ್ರಾರ್ಥನೆಯ ಮೂಲಕ ಜಗದೀಶನಲ್ಲಿ ಮೊರೆಯಿಟ್ಟುಕೊಳ್ಳುವುದು ಯುಕ್ತವಾಗಿರುವುದು. ದಯಾಮಯನಾದ ಭಗವಂತನು ಕೃಪೆಮಾಡಿದರೆ ಮುಂದಣ ಇಂಥ ಕಾಲ ಬರುವುದರೊಳಗೆ ಯುದ್ಧದ ಸುದ್ದಿಯೇ ಇಲ್ಲದೆ ಶಾಂತಿಸಮಾಧಾನಗಳು ನಲಿದಾಡುವುದು ಅಸದಳವಲ್ಲ. ಈ ಕಾರಣದಿಂದಲೇ ನಮ್ಮ ಸಾರ್ವಭೌಮರು ಈ ದಿನ ತಮ್ಮ ಸಾಮ್ರಾಜ್ಯದಲ್ಲಿ ಯುದ್ಧಶಾಂತಿಗೋಸ್ಕರ ಭಗವತ್ಪ್ರಾರ್ಥನೆ ಮಾಡಲು ಏರ್ಪಡಿಸಿರುವರು. ಆಸ್ತಿಕಪ್ರಪಂಚವೆಲ್ಲವೂ ಈ ಕರ್ತವ್ಯವನ್ನು ನೆರವೇರಿಸುವುದೆಂಬುದಕ್ಕೆ ಲೇಶವೂ ಸಂಶಯವಿಲ್ಲ. ಸತ್ಯಧರ್ಮಗಳಿಗೆ ಪರಿಣಾಮದಲ್ಲಿ ಜಯವುಂಟೆಂಬುದಕ್ಕೆ ಪುರಾಣೇತಿಹಾಸಗಳಲ್ಲಿ ಅನೇಕೋದಾಹರಣೆಗಳು ಸಿಕ್ಕುವುವು. ಈಗಣ ಯುದ್ಧದಲ್ಲಿ ಅದಕ್ಕೆ ವ್ಯತಿರಿಕ್ತವಾದ ಫಲವು ಸಿದ್ಧಿಸುವುದಕ್ಕೆ ಕಾರಣವಿಲ್ಲ. ಈಗಣ ಯುದ್ಧವನ್ನು ಮಿತ್ರಮಂಡಲಿಯವರು ತೀಟೆಯ ಮೂಲಕ ತಾವಾಗಿ ಹೂಡಲಿಲ್ಲ. ಪರದೇಶಾಕ್ರಮಣ ದುರಾಶೆಯಿಂದ ಜರ್ಮನರೇ ಇದನ್ನು ಹೂಡಿದವರು. ಶತ್ರುಗಳ ದುರಾಶೆ ಮೊದಲಾದ ದೌಷ್ಟ್ಯಗಳಿಂದ ಸಣ್ಣಪುಟ್ಟ ಸಂಸ್ಥಾನಗಳೆಲ್ಲಾ ಸ್ವಾತಂತ್ರ್ಯವನ್ನು ಕಳೆದುಕೊಂಡು ಹಾಳಾಗುವಂತಾದುದರಿಂದ, ಅವನ್ನು ರಕ್ಷಿಸಿ ಜರ್ಮನರ ಲೋಕಕಂಟಕತ್ವವನ್ನು ಕೊಡೆದುಬಿಡುವುದಕ್ಕಾಗಿ ಇಂಗ್ಲೀಷರು, ಜಪಾನರು, ಅಮೇರಿಕನ್ನರು ಮೊದಲಾದ ದೊಡ್ಡದೊಡ್ಡ ರಾಷ್ಟ್ರಗಳೆಲ್ಲಾ ಜರ್ಮನಿಗೆ ಪ್ರತಿಭಟಿಸಿ ನಿಂತಿರುವುವು. ಆದುಕಾರಣ, ಪರದುಃಖವಿಮೋಚನ ವಿಪನ್ನರಕ್ಷಣ ಲೋಕಸ್ವಾತಂತ್ರ್ಯಪಾಲನರೂಪಸದ್ಧರ್ಮದ ಉದ್ಧಾರಕ್ಕಾಗಿಯೇ ಮಿತ್ರಮಂಡಲಿ ರಾಷ್ಟ್ರಗಳೆಲ್ಲವೂ ಸರ್ವಪರಿತ್ಯಾಗಕ್ಕೂ ಹಿಂಜರಿಯದೆ ಯುದ್ಧಮಾಡುತ್ತಿರುವುವು. ಅಧರ್ಮಕ್ಕೆ ಆದಿಯಲ್ಲಿ ಜಯವು ತೋರುವುದು ಸ್ವಭಾವವಾಗಿರುವಂತೆ ಜರ್ಮನರು ಇದುವರೆಗೆ ತಮ್ಮ ನೆರೆಹೊರೆಯ ಸಣ್ಣಪುಟ್ಟ ರಾಜ್ಯಗಳನ್ನು ಧ್ವಂಸಮಾಡಿ ಜಯವಿಜೃಂಭಣೆಯನ್ನು ಮಾಡಿಕೊಂಡರು. ಬೆಲ್ಜಿಯಂ ಸರ್ವಿಯಾ ರುಮೇನಿಯಾಗಳನ್ನು ಹುರಿದು ಮುಕ್ಕಿದರು. ರಷ್ಯಾವನ್ನು ಒಡೆದ ಅಳಗೆಯ ಚೂರುಗಳಂತೆ ಮಾಡಿಟ್ಟರು. ಇಷ್ಟೆಲ್ಲಾ ಆದಬಳಿಕ ಪ್ಯಾರಿಸ್‌ಪ್ರಾಪ್ತಿ ಇಂಗ್ಲೆಂಡ್ ಅಭಿಯೋಗಗಳ ರೂಪವಾದ ತಮ್ಮ ಮುಖ್ಯ ಕಾಮಿತಾರ್ಥವನ್ನು ಸಾಧಿಸುವುದಕ್ಕೆ ಸರ್ವಸನ್ನಾಹವನ್ನೂ ಈಗ ಮಾಡುತ್ತಿರುವರು. ಇದುವರೆಗೆ ತಾವು ಹಾಳುಗೆಡವಿದ ದೇಶಗಳಿಂದ ಅಪರಿಮಿತವಾದ ಧನಕನಕ ಧಾನ್ಯಾದಿ ಸಂಪತ್ತನ್ನು ಸೂರೆಮಾಡಿ ಜರ್ಮನರು ತಮ್ಮ ದಗ್ಧೋದರವನ್ನು ತುಂಬಿಸಿಕೊಂಡರು. ಆ ರುಚಿಯು ನೆತ್ತಿಗೇರಿರುವುದರಿಂದಲೂ, ೧೮೭೧ ರಲ್ಲಿ ನಡೆದ ಫ್ರಾಂಕೊ ಜರ್ಮನ್ ಯುದ್ಧದಲ್ಲಿ ಜರ್ಮನರು ಫ್ರಾನ್ಸಿನಿಂದ ಮಹಾಲಾಭವನ್ನು ಹೊಂದಿದ ರುಚಿಯಿಂದಲೂ ಮರಳಿ ಫ್ರಾನ್ಸಿನ ಮೇಲೆ ಅವರು ಕಣ್ಣಿಟ್ಟಿರುವುದು ಆಶ್ಚರ್ಯವೇನೂ ಅಲ್ಲ. ಆದರೆ ಈ ಪ್ರಯತ್ನದಲ್ಲಿ ತೊಡಗಿ ಜರ್ಮನರು ೪ ವರ್ಷಗಳಿಂದಲೂ ನಾನಾ ತಂತ್ರಗಳನ್ನು ಮಾಡಿದರೂ ಸಾಹಸವನ್ನೆಸಗಿದರೂ ಮಿತ್ರಮಂಡಲಿಯ ಅಸಾಧಾರಣ ಯತ್ನದಿಂದಲೂ ಧೈರ್ಯಶೌರ್ಯ ಸಾಹಸಗಳಿಂದಲೂ ಅವರ ಇಷ್ಟಾರ್ಥವು ಇನ್ನೂ ಕೈಗೂಡಲಿಲ್ಲ. ಮುಂದಾದರೂ ಅದು ಕೊನೆಮುಟ್ಟುವ ಸಂಭವವು ಕಾಣುವುದಿಲ್ಲ.

ಕಳೆದ ೧ ಪಕ್ಷದಿಂದ ಬರುತ್ತಿರುವ ಯುದ್ಧವಾರ್ತೆಗಳನ್ನು ನೋಡಲಾಗಿ ಮಿತ್ರಮಂಡಲಿಯ ಪರಿಣಾಮವಿಜಯದ ಶುಭಚಿಹ್ನೆಗಳಿಗೆ ಆರಂಭವಾಯಿತೆಂದೇ ಕಾಣುತ್ತಿರುವುದು. ಇದು ಮಿತ್ರಪ್ರಪಂಚಕ್ಕೆಲ್ಲಾ ಸಂತೋಷಪ್ರದವಾಗಿರುವುದು. ಜರ್ಮನರಿಗೆ ಪ್ಯಾರಿಸ್ಸಿನ ಆಶೆಯನ್ನು ಬಿಟ್ಟೇಬಿಡಬೇಕಾದ ಅವಸ್ಥೆಯು ಒದಗಿದುದು ಹಾಗಿರಲಿ; ಅವರಿಗೆ ಆತ್ಮರಕ್ಷಣೆಯೇ ದುರ್ಭರವಾಗುವ ಸ್ಥಿತಿಯು ಬರುವುದರಲ್ಲಿದೆಯೆಂತಲೂ ತೋರುವುದು. ಮೊಟ್ಟಮೊದಲು ಜರ್ಮನರು ಪ್ಯಾರಿಸ್ಸಿಗೆ ನುಗ್ಗಬೇಕೆಂದು ೧೯೧೪ ನೆ ವರ್ಷದಲ್ಲಿ ಉತ್ತರದ ಕಡೆಯಿಂದ ಸಾಗಿ ಆ ಪಟ್ಟಣಕ್ಕೆ ೧೭ ಮೈಲಿಗಳ ಸಮೀಪದವರೆಗೆ ಬಂದರು. ಆಗ ಫ್ರೆಂಚ್ ಸೇನಾಧ್ಯಕ್ಷರಾಗಿದ್ದ ಜನರಲ್ ಜೋಫರ್‌ರವರ ಸಾಹಸದಿಂದ ಜರ್ಮನರ ಪುರೋಗಮನಕ್ಕೆ ಮಾರ್ನೆನದಿಯ ಹತ್ತಿರ ತಡೆಯುಂಟಾಗಿ ಪ್ಯಾರಿಸ್ಸು ರಕ್ಷಿಸಲ್ಪಟ್ಟಿತು. ಆ ದಾರಿಯನ್ನು ಬಿಟ್ಟು ವರ್ಡನ್ನಿನ ಕಡೆಯಿಂದ ಪ್ಯಾರಿಸ್ಸಿಗೆ ನುಗ್ಗುವುದಕ್ಕೆ ೧೯೧೬ ರಲ್ಲಿ ಮತ್ತೊಂದು ಸಲ ಜರ್ಮನ್ ಯುವರಾಜನು ಅಪಾರ ಸಾಹಸವನ್ನು ಮಾಡಿ, ಕಡೆಗೆ ವಿಪರೀತ ನಷ್ಟದೊಡನೆ ಆತನೂ ಹಿಮ್ಮೆಟ್ಟಬೇಕಾಯಿತು. ಈಗ ಜರ್ಮನರು ಪೂರ್ವದಿಕ್ಕಿನರಂಗದ ತಮ್ಮ ಯುದ್ಧಕಾರ್ಯಗಳನ್ನೆಲ್ಲಾ ಕೊನೆಮುಟ್ಟಿಸಿಕೊಂಡು ಆ ರಂಗದ ಸೈನ್ಯಗಳನ್ನೆಲ್ಲಾ ಈ ಪಶ್ಚಿಮರಂಗಕ್ಕೆ ಸೇರಿಸಿ ಪ್ಯಾರಿಸ್ಸನ್ನು ಹಿಡಿದೇ ತೀರಬೇಕೆಂದು ದೃಢಸಂಕಲ್ಪರಾಗಿ ಮತ್ತೆ ಮಾರ್ನೆನದಿಯ ಮುಖದಲ್ಲೇ ಪ್ರಯತ್ನಿಸಿದರು. ಈ ಸಲ ಮಾಡಿದ ೫ನೆ ಪ್ರಯತ್ನದಲ್ಲಿ ಅವರು ೩-೪ ಅವಸ್ಕಂದನಗಳನ್ನು ಸಾಗಿಸಿ ಓಯಿಸ್, ಎಯಿನ್ ನದಿಗಳನ್ನು ದಾಟಿ ಮಿತ್ರಮಂಡಲಿ ಸೈನ್ಯಗಳನ್ನು ಹಿಂದಕ್ಕೆ ನೂಕಿ, ಹಾಗೂ ಹೀಗೂ ರೀಮ್ಸಿನ ದಕ್ಷಿಣಭಾಗದವರೆಗೆ ಬಂದು ಸೇರಿದರು. ಹೇಗೂ ೮೦೦ ಮೈಲಿಯಗಲದ ಪ್ರದೇಶವು ಅವರ ಸ್ವಾಧೀನವಾಯಿತು. ಕೊನೆಯ ೫ನೆಯ ಅವಸ್ಕಂದನದಲ್ಲಿ ಅವರು ಮಾರ್ನೆನದಿಯನ್ನೂ ಕೂಡ ದಾಟಿ ಅದರಿಂದೀಚೆಗೆ ೪-೫ ಮೈಲಿಗಳ ದೂರ ನುಗ್ಗಿಬಂದರು. ಅಲ್ಲಿಗೆ ಅವರ ವಿಜಯಯೋಗವು ಕೊನೆಗಂಡಿತು. ಅಲ್ಲಿ ಫ್ರೆಂಚ್ ಅಮೇರಿಕನ್ ಸೈನ್ಯಗಳಿಂದೂ ಮಹಾ ರಭಸದಿಂದ ಶತ್ರುಗಳನ್ನು ತಡೆದುದಲ್ಲದೆ ಬೇರೆಕಡೆಯಿಂದ ಅವರ ಮೇಲೆ ಅವಸ್ಕಂದನವನ್ನಾರಂಭಿಸಿ ಹಿಮ್ಮೆಟ್ಟಿಸುವುದಕ್ಕೆ ಮೊದಲು ಮಾಡಿದರು. ಅಲ್ಲಿಂದ ಹಿಂಗಾಲು ತೆಗೆದ ಜರ್ಮನರಿಗೆ ಇನ್ನೂ ನಿಲ್ಲುವುದಕ್ಕೆ ಅವಕಾಶವನ್ನು ಮಿತ್ರಮಂಡಲಿ ಕೊಟ್ಟಿಲ್ಲ. ಜರ್ಮನರು ಮಾರ್ನೆನದಿಯನ್ನು ಬಿಟ್ಟು ಹಿಂದಕ್ಕೋಡಿದುದಲ್ಲದೆ ಅದರಾಚೆಗಿರುವ ಅರ್ಕ್ ನದಿಯನ್ನೂ ದಾಟಿ ಓಡಿಹೋಗಿರುವರು. ಅಮೇರಿಕನ್ ಫ್ರೆಂಚ್ ದಳವು ಬೆನ್ನಟ್ಟಿ ಓಡಿಸಿಕೊಂಡು ಹೋಗುತ್ತಿರುವುವು. ಇದರಿಂದ ಜುಲೈ ತಿಂಗಳಲ್ಲಿ ಅವರು ಜಯಿಸಿದ್ದ ಪ್ರದೇಶಗಳನ್ನೆಲ್ಲಾ ಸಂಪೂರ್ಣವಾಗಿ ಕಳೆದುಕೊಂಡುದಲ್ಲದೆ ಮೇ ತಾ|| ೨೭ ರಲ್ಲಿ ಅವರು ಆಕ್ರಮಿಸಿದ್ದ ಸ್ಥಾನಗಳಲ್ಲಿ ಕೆಲವನ್ನೂ ಕಳೆದುಕೊಳ್ಳಬೇಕಾಯಿತು. ೯೦ ಗ್ರಾಮಗಳೂ ಮುಖ್ಯವಾದ ಲೋಹಮಾರ್ಗಗಳೂ ದುರ್ಗಮವಾದ ಅಡವಿಗಳೂ ಗುಡ್ಡಗಳೂ ಸಹ ಮಿತ್ರಮಂಡಲಿಯ ವಶವಾದುವು. ಈ ಸಂದರ್ಭದಲ್ಲಿ ಪ್ಯಾರಿಸ್ಸಿನ ಕಡೆಗೆ ಸಾಗುವುದಕ್ಕೆ ಅತಿ ಮುಖ್ಯ ರಕ್ಷಣಸ್ಥಾನಗಳಾಗಿದ್ದ ಶಾಟೋಥಿಯೆರಿ, ಸೋಯಿಸನ್ಸ್ ಎಂಬ ಪಟ್ಟಣಗಳಲ್ಲಿ ಮೊದಲನೆಯದನ್ನು ಜರ್ಮನರು ಕಳೆದುಕೊಂಡರು. ೨ ನೆಯದೂ ಇಷ್ಟರಲ್ಲೇ ಮಿತ್ರಮಂಡಲಿ ಹಸ್ತಗತವಾಗುವುದರಲ್ಲಿದೆ. ಇದು ಕಳೆದುಹೋಗಿಬಿಟ್ಟರೆ ಇನ್ನುಮುಂದೆ ಈ ದಿಕ್ಕಿನಿಂದ ಪ್ಯಾರಿಸ್ಸಿಗೆ ನುಗ್ಗುವ ಆಸೆಯೇ ಶತ್ರುಗಳಿಗೆ ಉಳಿಯುವುದಿಲ್ಲ. ಇದುವರೆಗೆ ಈ ಪ್ರಾಂತದ ಯುದ್ಧದಲ್ಲಿ ಶತ್ರುಗಳ ೨೫ ಸಾವಿರ ಸೈನಿಕರು ಸೆರೆಸಿಕ್ಕಿಹೋಗಿರುವುದಲ್ಲದೆ ೫೦೦ ರ ವರೆಗೆ ಫಿರಂಗಿಗಳನ್ನೂ ಕಳೆದುಕೊಂಡಿದ್ದಾರೆ. ಅವರಿಗೆ ಒಟ್ಟು ಸೇನಾನಷ್ಟವು ೨ ಲಕ್ಷಕ್ಕೆ ಏರಿಹೋಗಿರುವುದೆಂದು ಎಣಿಸಲ್ಪಟ್ಟಿದೆ. ಅಲ್ಲದೆ ಅವರ ಕಡೆಯ ಅಣಿಯಾದ ಉತ್ತಮತರಗತಿಯ ಸೈನ್ಯಗಳೆಲ್ಲಾ ಇದುವರೆಗೇ ಕಾದಾಡಿ ಲಯವಾಗಿ ಹೋಗಿರುವ ಕಾರಣ ಈಗ ಕಾಳಗ ಮಾಡತಕ್ಕ ಅವರ ಸೈನ್ಯವೆಲ್ಲಾ ೨ ನೆ ತರಗತಿಯವುಗಳಾಗಿರುತ್ತವೆ. ಕಾದಿಟ್ಟ ಸೈನ್ಯಗಳೂ ಕೂಡ ಅವರಿಂದ ಉಪಯೋಗಿಸಲ್ಪಟ್ಟುಹೋಗಿರುವ ಕಾರಣ ನೂತನವಾಗಿ ಸಮುದ್ರತರಂಗದಂತೆ ಪ್ರತಿದಿನವೂ ಬಂದು ಇಳಿಯುತ್ತಿರುವ ಅಮೇರಿಕಾ ಸೈನ್ಯದ ಮುಂದೆ ಇನ್ನುಮೇಲೆ ಜರ್ಮನರು ಎದೆಗೊಟ್ಟು ಕಾಯುವುದು ಸುಲಭವಾಗಿಲ್ಲ. ಆದರೂ ಜರ್ಮನರು ಸಂಪೂರ್ಣವಾಗಿ ಯುದ್ಧಾಂಗಣವನ್ನೇ ಬಿಟ್ಟು ಪಲಾಯಿತರಾಗುವರೆಂದು ಹೇಳಲಾಗುವುದಿಲ್ಲ. ಇನ್ನೂ ಕೆಲ ಯುದ್ಧಗಳನ್ನು ಅವರು ಸಾಗಿಸದೆ ಬಿಡರು. ಇಂಗ್ಲಿಷ್ ಸೇನಾಪಂಕ್ತಿಯ ಮುಂದೆ ಅವರು ಫ್ಲಾಂಡರ್ಸ್ಸಿನಲ್ಲಿ ಯುದ್ಧವನ್ನು ಹೂಡುತ್ತಾರೋ ಇಲ್ಲವೋ ಹೇಳಲಾಗುವುದಿಲ್ಲ. ಒಂದುವೇಳೆ ಹೂಡಿದರೂ ಫಲಸಿದ್ಧಿಯಾಗಲಾರದು. ದಿನದಿನಕ್ಕೆ ಶತ್ರುಗಳ ಸೇನಾಬಲವು ಅಶಕ್ತವಾಗುತ್ತಿದೆಯೆಂಬುದಕ್ಕೆ ಯುದ್ಧಪರಿಣಾಮವೇ ನಿದರ್ಶನವಾಗಿದೆ. ಮಿತ್ರಮಂಡಲಿಯ ಬಲವಾದರೋ ಕ್ರಮೇಣ ಹೆಚ್ಚುತ್ತಿದೆ. ಈ ವರ್ಷ ಮುಗಿದು ೧೯೧೯ ನೆ ವರ್ಷ ಬರುವುದರೊಳಗಾಗಿ ಮಿತ್ರಮಂಡಲಿ ಸೇನಾಬಲವು ಅತ್ಯಧಿಕವಾಗುವುದು. ಆಗ ಜರ್ಮನರ ಗತಿ ಏನಾಗಿಹೋಗುವುದೋ!

ಅತ್ತ ಪೂರ್ವದ ಕಡೆ ರಷ್ಯಾದ ಸ್ಥಿತಿಯನ್ನು ಗಮನಿಸಿದರೆ ಅಲ್ಲೂ ಜರ್ಮನರ ತಂತ್ರವೆಲ್ಲಾ ತಲೆಕೆಳಗಾಗುವಂತೆ ಕಾಣುತ್ತಿದೆ. ಅಲ್ಲಿಗೂ ಜರ್ಮನರು ಮರಳಿ ಸೈನ್ಯವನ್ನು ಕಳುಹಿಸಬೇಕಾದ ಹೊತ್ತು ಬರುವಂತಿದೆ. ಜಪಾನರು ಸೈಬೇರಿಯಾದಲ್ಲಿ ಶಸ್ತ್ರಾಸ್ತ್ರಧಾರಣ ಮಾಡಿ ನಿಂತಿದ್ದಾರೆ. ಇಟಲಿ ರಂಗದಲ್ಲಿ ಆಸ್ಟ್ರಿಯನ್ನರು ಸೋತು ಕೈಕಾಲುಬಿಟ್ಟು ನಿಂತಿದ್ದಾರೆ. ಅವರಿಗೆ ಸಹಾಯಮಾಡಿ ಜಯಸಂಪಾದನೆಮಾಡಿಕೊಡುವ ಶಕ್ತಿಯು ಜರ್ಮನಿಗೆ ಈಗ ಇರುವುದಿಲ್ಲ. ತುರ್ಕಿ ಬಲ್ಗೇರಿಯಗಳು ಜರ್ಮನರ ಸಹಾಯವನ್ನು ಕೋರದೆ ತಂತಮ್ಮ ಪಾಲನೆಯನ್ನು ತಾವೇ ಮಾಡಿಕೊಳ್ಳಬೇಕಾದ ಅವಸ್ಥೆಯು ಅವಕ್ಕೆ ಪ್ರಾಪ್ತವಾಗಿದೆ. ಆಸ್ಟ್ರಿಯಾ ರಾಜ್ಯಾಂಗ ಸಭೆಯಲ್ಲಿ ಕೌಂಟ್ ಸೆಜರ್ನಿನ್‌ರವರು ಭಾಷಣಮಾಡುವಾಗ್ಗೆ “ಜರ್ಮನರು ಪರರಾಜ್ಯಾಕಾಂಕ್ಷೆಯಿಂದ ಇನ್ನೂ ಯುದ್ಧವನ್ನೇ ಸಾಗಿಸುವುದಾದರೆ ಆಸ್ಟ್ರಿಯಾವು ಇನ್ನು ಜರ್ಮನಿಯ ಜತೆಯನ್ನು ಬಿಟ್ಟುಬಿಡುವುದು” ಎಂದು ನುಡಿದಿರುತ್ತಾರೆ. ಇದನ್ನು ನೋಡಲಾಗಿ ಅವರಿಗೂ ಯುದ್ಧದಲ್ಲಿ ಎಷ್ಟು ಬೇಸರುಹುಟ್ಟಿದೆಯೆಂಬುದು ಗೊತ್ತಾಗುವುದು. ಅಲ್ಲದೆ ಅವರ ರಾಜ್ಯದ ಕ್ಷಾಮಾದಿ ದುಸ್ಥಿತಿಗಳ ಕಾರಣದಿಂದಲೂ ಅವರಲ್ಲಿ ಯುದ್ಧವನ್ನು ಸಾಗಿಸುವ ಹುರುಪು ಉಳಿದಿರುವುದಿಲ್ಲ. ಜರ್ಮನಿ-ಮಿತ್ರಮಂಡಲಿಗಳಿಗೆ ಇರುವಷ್ಟು ವೈರಭಾವವು ಆಸ್ಟ್ರಿಯನ್ನರೊಡನೆ ಇರುವುದಿಲ್ಲ. ಆಸ್ಟ್ರಿಯಾವು ಜರ್ಮನಿಯ ಜತೆಯನ್ನು ಬಿಟ್ಟು ಪ್ರತ್ಯೇಕ ಸಂಧಿ ಮಾಡಿಕೊಂಡುಬಿಟ್ಟರೆ ಜರ್ಮನಿಯ ಅವಸ್ಥೆಯೇನಾಗುವುದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಇದೇ ಭೀತಿಯನ್ನು ಜರ್ಮನಿಗೆ ತೋರಿಸಿ ಆಸ್ಟ್ರಿಯನ್ನರು ಮಿತ್ರಮಂಡಲಿಗೂ ಜರ್ಮನಿಗೂ ಮಧ್ಯಸ್ಥಗಾರರಾಗಿ ನಿಂತು ಸಂಧಿಯನ್ನು ಮಾಡಿಸಿಬಿಟ್ಟರೆ ಯುದ್ಧವು ಬೇಗನೆ ಶಾಂತವಾಗಿಹೋದೀತು. ಇಂಥ ಪರಿಣಾಮವನ್ನುಂಟುಮಾಡಿದ ಕೀರ್ತಿಯು ಅವರ ಪಾಲಿಗೆ ಉಳಿಯುವುದು. ಅವರ ಮಾತನ್ನು ಜರ್ಮನರು ಕೇಳದೆಹೋದರೆ ಮುಂದಣ ವರ್ಷದಲ್ಲಿ ಸಂಪೂರ್ಣ ಪರಾಜಯವನ್ನು ಹೊಂದಿ ಮಿತ್ರಮಂಡಲಿಯವರು ಹೇಳಿದ ಸಂಧಿನಿಬಂಧನೆಗಳಿಗೆ ತಲೆ ಬಾಗಬೇಕಾದ ಸ್ಥಿತಿಯು ಅವರಿಗೆ ಪ್ರಾಪ್ತವಾಗದೆ ಹೋಗಲಾರದು. ಅಂತು ಯಾವ ರೀತಿಯಿಂದಲಾದರೂ ಈ ಮುಂದಣ ೫ನೆಯ ವರ್ಷದಲ್ಲಿ ಯುದ್ಧಕ್ಕೆ ಅಂತ್ಯವುಂಟಾಗುವ ಮಾರ್ಗವನ್ನು ಜಗದೀಶನು ಒದಗಿಸಿ ಲೋಕಸಂರಕ್ಷಣೆಯನ್ನು ಮಾಡಲೆಂದು ನಮ್ಮ ವಾಚಕರೆಲ್ಲರೂ ಈ ಯುದ್ಧವರ್ಷಾದಿಸಂಧಿರೂಪವಾದ ಮಹಾಪರ್ವಕಾಲದಲ್ಲಿ ಭಗವತ್ಪ್ರಾರ್ಥನೆಯನ್ನು ಮಾಡುವವರಾಗಲೆಂದೂ, ಪುರುಷಯತ್ನರೂಪವಾದ ಜನಧನಸಹಾಯವನ್ನು ಯುದ್ಧಕ್ಕೆ ಒದಗಿಸಿಕೊಡಲು ತತ್ಪರರಾಗಲೆಂದೂ ಶ್ರುತಪಡಿಸುವೆವು.

ಒಳದೇಶದ ವೃತ್ತಾಂತಗಳು.

ಮ|| ಬಾನರ್ಜಿಯವರು ಕೆಲಸದಮೇಲೆ ಬಂದಬಳಿಕ ಮ|| ಪಿ. ರಾಘವೇಂದ್ರರಾಯರು ೩ ನೆ ಕೌನ್ಸಿಲರಾಗಿರಲು ನಿಯಮಿಸಲ್ಪಟ್ಟಿದ್ದಾರೆ.

ಪ್ರತ್ಯೇಕಪ್ರಾತಿನಿಧ್ಯಕ್ಕೆ ತಡೆಗಟ್ಟುಹಾಕುವುದು; ಅವರವರಿಗೆ ಬೇಕಾದವರಿಗೆ ಅವರುಗಳು ಓಟುಕೊಡುತ್ತಿದ್ದರೆ ಅದಕ್ಕೆ ಜಾತಿದ್ವೇಷವೆಂದು ಹೆಸರಿಡುವುದು, ಇದಲ್ಲವೆ ಸ್ವಾರ್ಥಸಾಧನತಂತ್ರ?

ರಾಜಧಾನಿಯಲ್ಲಿ ಇನ್‌ಫ್ಲುಯಂಜಾ ರೋಗದ ಹಾವಳಿಯು ಪ್ರಬಲವಾಗಿದೆ. ಪ್ಲೇಗಿನ ಜತೆಗೆ ಇದೂ ತಲೆಹಾಕಿರುವುದರಿಂದ ಜನರು ತತ್ತರಿಸುತ್ತಿದ್ದಾರೆ. ಪ್ಲೇಗಿನ ಹಾವಳಿಯು ಸಾಮಾನ್ಯವಾಗಿದೆ.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರನ್ನು ಆರಿಸುವಿಕೆಯ ಕೆಲಸವು ಈದಿನಕ್ಕೆ ಮುಗಿಯುವುದು. ನಾಳೆಯ ದಿನ ಯಾರು ಯಾರಿಗೆ ಎಷ್ಟೆಷ್ಟು ಓಟುಗಳು ಬಂದಿವೆಯೆಂಬುದು ಗೊತ್ತುಮಾಡಲ್ಪಡುವುದು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರಾಗಿದ್ದ ಮ|| ಕೆ. ಸಿದ್ಧರಾಮಪ್ಪನವರು ಚಿತ್ರದುರ್ಗ ಡಿ|| ಗೂ, ಅಲ್ಲಿದ್ದ ಮ|| ಎನ್. ಸುಬ್ಬರಾಯರು ಶಿವಮೊಗ್ಗಾ ಡಿ|| ಗೂ ವರ್ಗಮಾಡಲ್ಪಟ್ಟಿದ್ದಾರೆ.

ಅಧಿಕಾರ ರಹಸ್ಯರಕ್ಷಣ ವಿಷಯವಾದ ಶಾಸನವನ್ನೇರ್ಪಡಿಸುವುದಕ್ಕೆ ನಮ್ಮ ಸರ್ಕಾರದವರು ಯೋಚಿಸಿದ್ದಾರೆ. ಮುಂದಣ ತಿಂಗಳಲ್ಲಿ ನಡೆಯುವ ಶಾಸನ ನಿರ್ಮಾಣಸಭೆಯಲ್ಲಿ ಈ ವಿಷಯವು ಚರ್ಚಿಸಲ್ಪಡುವುದೆಂದು ಪ್ರಕಟವಾಗಿದೆ.

ಬರುವ ೧೦-೧೧ ನೇ ತಾರೀಖುಗಳಲ್ಲಿ ರಾಜಧಾನಿಯ ಟೌನ್‌ಹಾಲು ಭವನದಲ್ಲೂ ಆವರಣದಲ್ಲೂ ಫಲಪುಷ್ಪ ಪ್ರದರ್ಶನವು ನಡೆಯುವುದು. ಮೊದಲ ದಿನ ಪ್ರವೇಶಧನವು ದೊಡ್ಡವರಿಗೆ ೮ ಆಣೆ, ಮಕ್ಕಳಿಗೆ ೨ ಆಣೆ. ಮರುದಿನ ೪ ಆಣೆ, ೧ ಆಣೆ. ೨ನೇ ದಿನ ಬೆಳಗ್ಗೆ ಹೆಂಗುಸರು ನೋಟಕ್ಕೆ ಹೋಗಬಹುದು.

ಸಂಸ್ಥಾನದೊಳಗೆಲ್ಲಾ ಕಳೆದ ಜುಲೈ ತಾ|| ೧೯ ಕ್ಕೆ ಕಡೆಯಾದ ವಾರದಲ್ಲಿ ೧೯೮ ಮಂದಿಗೆ ಪ್ಲೇಗು ತಗುಲಿ ೧೩೩ ಮಂದಿಗಳು ಸತ್ತಿರುತ್ತಾರೆ. ಕಾಲರಾ ವ್ಯಾಧಿಯು ಬಹಳ ಕಡಿಮೆಯಾಗಿದೆ. ಆ ವಾರದಲ್ಲಿ ೨೦ ಮಂದಿಗೆ ತಗುಲಿ ೧೨ ಮಂದಿ ಸತ್ತಿರುತ್ತಾರೆ.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯು ಗುರುವಾರದಿಂದ ಆರಂಭವಾಗಿ ಇಂದಿನ ಸಾಯಂಕಾಲಕ್ಕೆ ಮುಗಿಯುವುದರಲ್ಲಿದೆ. ಈಸಲದ ಆರಿಸುವಿಕೆಯಲ್ಲಿ ಕೌನ್ಸಿಲರಾಗಬೇಕೆನ್ನುವವರ ಪ್ರಯತ್ನಗಳು ವಿಶೇಷವಾಗಿದ್ದುವು. ಜಯಾಪಜಯಗಳು ನಾಳೆ ಗೊತ್ತಾಗುವುದು.

ನಮ್ಮ ಸಂಸ್ಥಾನದೊಳಗೆಲ್ಲಾ ಕಳೆದ ಜುಲೈ ತಾ|| ೨೦ ರ ವರೆಗೆ ಸೈನ್ಯಕ್ಕೆ ೨೫೭೩ ಮಂದಿಗಳು ಸೇರಿದ್ದಾರೆ. ಇವರಲ್ಲಿ ಕ್ರೈಸ್ತರು ೧೬೫ ಮಂದಿ, ಮಹಮ್ಮದೀಯರು ೬೧೫ ಬ್ರಾಹ್ಮಣರು ೩೮ ರಜಪುತ್ರರು ೬೫ ಮರಾಟಿಯವರು ೨೨೫ ಪಂಚಮರು ೨೬೮ ಒಕ್ಕಲಿಗರು ೨೨೨ ಲಿಂಗಾಯತರು ೬೮ ಇತರ ಹಿಂದುಗಳು ೮೮೭.

ವೃತ್ತಾಂತರತ್ನಾಕರ ಎಂಬ ವಾರಪತ್ರಿಕೆಯ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿದೆವು. ಇದು ಚಿತ್ರದುರ್ಗ ಡಿಸ್ಟ್ರಿಕ್ಟ್ ಅರ್ಥಸಾಧಕ ಸಂಘದ ಆಶ್ರಯದಿಂದ ಪ್ರಕಟಿಸಲ್ಪಡುವ ಪತ್ರಿಕೆ. ಇದರಲ್ಲಿ ಡಿಸ್ಟ್ರಿಕ್ಟಿನ ಮುಖ್ಯ ವಿಷಯಗಳೂ ಸೈನ್ಯಕ್ಕೆ ಜನರನ್ನು ಸೇರಿಸಲು ಪ್ರೋತ್ಸಾಹಿಸುವ ವಿಷಯಗಳೂ ಹೆಚ್ಚಾಗಿವೆ. ಇದರ ಚಂದಾ ೨-೧೩-೦.

ಈಸಲದ ರಾಜಧಾನಿ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಗೆ ನಡೆದ ಏರ್ಪಾಡುಗಳಲ್ಲಿ ಕೆಲವು ನ್ಯೂನತೆಗಳುಂಟಾಗಿರುವ ಹಾಗೆ ನಮ್ಮ ತಿಳುವಳಿಕೆಗೆ ಬಂದಿದೆ. ಹಲವುಮಂದಿ ಓಟರುಗಳಿಗೆ ಮ್ಯುನ್ಸಿಪಾಲಿಟಿಯಿಂದ ನೋಟೀಸೇ ಹೋಗಿಲ್ಲ. ಮತ್ತೊಂದು ಮೊಹಲ್ಲೆಯಲ್ಲಿ ಸಂಬಂಧವಿಲ್ಲದ ಕೆಲ ಜನರಿಗೆ ಬೇರೆ ಮೊಹಲ್ಲೆಯ ಕೌನ್ಸಿಲರುಗಳಿಗೆ ಓಟುಕೊಡಲು ನೋಟೀಸು ಹೋಗಿದ್ದಿತು.

ಜವರಯ್ಯ ಎಂಬ ಸಜ್ಜನನು ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರಾಗಬೇಕೆಂದು ಮ್ಯುನ್ಸಿಪಾಲಿಟಿಗೆ ಅರ್ಜಿಯನ್ನು ಬರೆದುಕೊಂಡಿರಲು ಆತನು ಮ್ಯುನ್ಸಿಪಲ್ ಕಂಟ್ರಾಕ್ಟರಾಗಿರುವುದರಿಂದ ಕೌನ್ಸಿಲರಾಗಿ ಬರುವುದಕ್ಕೆ ಅವಕಾಶವಿಲ್ಲವೆಂದು ತಿರಸ್ಕರಿಸಲ್ಪಟ್ಟನಂತೆ. ಹಿಂದೆ ಒಂದುಸಲ ಈತನೇ ಹೀಗೆ ಉದ್ಯುಕ್ತನಾಗಿರಲು, ಆ ವರ್ಷದ ಮೊಹತರ್ಫಾಕಂದಾಯವನ್ನೆಲ್ಲಾ ಸಲ್ಲಿಸಿರಲಿಲ್ಲವೆಂಬ ಕಾರಣದಿಂದ ತಳ್ಳಲ್ಪಟ್ಟಿದ್ದನು. ಕಂಟ್ರಾಕ್ಟರಾದವನು ಕೌನ್ಸಿಲರಾಗಲು ಅವಕಾಶವಿಲ್ಲದಿದ್ದರೆ, ವಿಧಿಪ್ರಕಾರ ಕ್ರಿಮಿನಲ್ ಶಿಕ್ಷೆಯನ್ನನುಭವಿಸಿದ ಮನುಷ್ಯನು ಒಂದಾನೊಂದು ಮ್ಯುನ್ಸಿಪಾಲಿಟಿಯ ವೈಸ್ ಪ್ರೆಸಿಡೆಂಟಾಗಲು ಅರ್ಹನಾಗಿರಬಹುದೆ?

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರ ಚುನಾವಣೆಕಾಲದಲ್ಲಿ ಜಾತಿದ್ವೇಷಗಳಿಗೆ ಅವಕಾಶಕೊಡಲ್ಪಟ್ಟಿತೆಂದೂ ಅದು ಸರಿಯಲ್ಲವೆಂದೂ ಎಲ್ಲರೂ ಗುಣೈಕಪಕ್ಷಪಾತಿಗಳಾಗಿರಬೇಕೆಂದೂ ಸಂಪದಭ್ಯುದಯವು ಹೇಳಿರುತ್ತದೆ. ಹೀಗೆ ಹಿತಬೋಧೆಮಾಡುವ ಸಂಪದಭ್ಯುದಯವೇ ಮ್ಯುನ್ಸಿಪಲ್ ಕೌನ್ಸಿಲುಗಳಿಗೆ ಉಮೇದುವಾರರಾಗಿರುವವರ ಗುಣಶ್ಲಾಘನೆಯನ್ನು ಮಾಡುವಾಗ್ಗೆ ಬ್ರಾಹ್ಮಣರುಗಳ ಹೆಸರನ್ನೂ ಅವರ ಮಹತ್ವಗಳನ್ನೂ ಮಾತ್ರ ವರ್ಣಿಸಿಬಿಟ್ಟು ಇತರರಲ್ಲಿ ಯಾರೊಬ್ಬರ ಹೆಸರನ್ನೂ ಎತ್ತದೆಯೇ ಹೋಗಿರುತ್ತದೆ. ಇತರ ಕ್ಯಾಂಡಿಡೇಟುಗಳಾರಲ್ಲೂ ಕೌನ್ಸಿಲರಾಗುವುದಕ್ಕೆ ತಕ್ಕ ಗುಣಗಳು ಇಲ್ಲವೇ ಇಲ್ಲವೆಂಬುದೇ ಇದರ ಭಾವವಾಗಿರಬೇಕು.

ಇದೇ ತಿಂಗಳು ತಾ|| ೧೧ರಿಂದ ಮೈಸೂರು ಅರಸೀಕೆರೆ ಲೋಹಮಾರ್ಗದಲ್ಲಿ ತಿರುಗುವ ಹೊಗೆ ಬಂಡಿಗಳ ಕಾಲವು ಸ್ವಲ್ಪ ವ್ಯತ್ಯಾಸಮಾಡಲ್ಪಟ್ಟಿದೆ. ಅದರಪ್ರಕಾರ ಮೈಸೂರಿನಿಂದ ಮಧ್ಯಾಹ್ನ ೨-೨೦ಕ್ಕೆ ಹೊರಟ ಬಂಡಿಯು ಹೊಳೆನರಸೀಪುರಕ್ಕೆ ೬-೩೨ ಕ್ಕೂ ಅರಸೀಕೆರೆಗೆ ರಾತ್ರಿ ೧೦-೩೦ ಕ್ಕೂ ಸೇರುವುದು. ಅರಸೀಕೆರೆಯಿಂದ ಬೆಳಗಿನ ಜಾವ ೫-೧೫ ಕ್ಕೆ ಹೊರಟ ಬಂಡಿಯು ಹೊಳೆನರಸೀಪುರಕ್ಕೆ ೯-೨೨ ಕ್ಕೂ ಮೈಸೂರಿಗೆ ೧-೩೦ ಕ್ಕೂ ಬಂದು ಸೇರುವುದು. ಇದರಿಂದ ಪ್ರಯಾಣಕಾಲವು ಅತ್ಯಂತವಾಗಿ ||| ಗಂಟೆಯಷ್ಟು ಹೆಚ್ಚುವಂತಾಯಿತು. ಮೈಸೂರ ಕಡೆಯಿಂದ ಬೆಳಗಿನ ಬಂಡಿಯೊಂದನ್ನೂ ಅರಸೀಕೆರೆಯಿಂದ ಮಧ್ಯಾಹ್ನದ ಬಂಡಿಯೊಂದನ್ನೂ ಹೆಚ್ಚಿಗೆ ಬಿಡುವಂತಾದರೆ ಪ್ರಯಾಣಿಕರಿಗೆ ಅನುಕೂಲವಾದೀತು.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯ ಸಮಯದಲ್ಲಿ ಮ್ಯು|| ಅಧಿಕಾರಿಗಳು ಓಟರುಗಳ ವಿಷಯದಲ್ಲಿ ತೋರಿಸಿದ ಔದಾಸೀನ್ಯವು ಬಹಳ ಅಗೌರವಕರವಾಗಿತ್ತೆಂದು ಒಬ್ಬ ವಾರ್ತಾದಾರರು ಬರೆದಿರುತ್ತಾರೆ. ಮಾಡಿದ್ದ ಏರ್ಪಾಟುಗಳು ಸ್ವಲ್ಪವೂ ಸಮರ್ಪಕವಾಗಿರಲಿಲ್ಲ. ಬಂದ ಓಟರುಗಳಿಗೆ ಕುಳಿತುಕೊಳ್ಳುವುದಕ್ಕೆ ಬೆಂಚುಗಳೂ ಕೂಡ ಹಾಕಲ್ಪಟ್ಟಿರಲಿಲ್ಲ. ಸಂತೆಯು ಕೂಡಿದಂತೆ ಕಾಣುತ್ತಿತ್ತು. ಅದರ ಮೇಲೆ ಒಬ್ಬ ಕೌನ್ಸಿಲರ್ ದೊಡ್ಡ ಮನುಷ್ಯರಂತು ಇವರನ್ನೆಲ್ಲಾ ಹೊರಕ್ಕೆ ಕಳುಹಿಸಿಬಿಡಿ ಎಂದು ಇಂಗ್ಲೀಷಿನಲ್ಲಿ ವೈಸ್ ಪ್ರೆಸಿಡೆಂಟರಿಗೆ ಹೇಳಿ ಓಟರುಗಳ ಗೌರವವನ್ನು ಇನ್ನಷ್ಟು ಉಳಿಸಿದರು! ಮಂಡಿಪೇಟೆ ಪೋಲೀಸ್ ಸ್ಟೇಷನ್ನಿನಲ್ಲಿ ನೆಟ್ಟಗೆ ೪ ಮಂದಿ ಕುಳಿತುಕೊಳ್ಳುವುದಕ್ಕೂ ಸ್ಥಳವಿಲ್ಲದಿರುವಲ್ಲಿ ಅಲ್ಲಿ ಕೌನ್ಸಿಲರ್ ಚುನಾವಣೆಗೆ ಏರ್ಪಾಡುಮಾಡಿದ್ದವರ ವಿವೇಕವನ್ನು ಎಷ್ಟು ಕೊಂಡಾಡಿದರೂ ತೀರದು. ಓಟರಾಗಿ ಹೋಗಿದ್ದ ಜನರೆಲ್ಲಾ ಬೀದಿಯಲ್ಲೇ ನಿಂತು ಕುಳಿತು ಬರಬೇಕಾಯಿತು ಎಂದು ಮೊದಲಾಗಿ ಈ ಲೇಖಕರು ವರ್ಣಿಸಿರುತ್ತಾರೆ. ಪುರಪಾಲಕ ಸಂಘದವರು ತಮ್ಮ ಪುರಪ್ರಮುಖರ ವಿಷಯದಲ್ಲೇ ಇಷ್ಟು ಅಶ್ರದ್ಧೆಯಿಂದ ನಡೆದುಕೊಳ್ಳುವುದಾದರೆ ಇತರ ವಿಷಯಗಳಲ್ಲಿ ಅವರ ಕರ್ತವ್ಯಲೋಪಗಳು ಸಾಮಾನ್ಯವಾಗಿರಲಾರವು.

ಭರತಖಂಡದ ವೃತ್ತಾಂತಗಳು.

ಜುಲೈ ತಿಂಗಳ ಕಡೆಯವರೆಗೆ ಯುದ್ಧಸಹಾಯಕ್ಕೆ ಕೊಡಿರುವುದು ೨೩,೦೩,೫೯,೩೦೦ ರೂ. ಗಳು.

ಮಹಾನವಮಿಯ ಸಮಯಕ್ಕೆ ಬೊಂಬಾಯಿಯಲ್ಲಿ ಕೂಡುವುದಕ್ಕಿರುವ ಪ್ರತ್ಯೇಕರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಯನ್ನು ನಾನು ವಹಿಸಲಾರೆನೆಂದು ಮಹಮ್ಮದಾಬಾದ್ ರಾಜಾಸಾಹೇಬರು ತಿಳಿಯಪಡಿಸಿರುವರಂತೆ.

ನೂತನ ರಾಜಕೀಯ ಸಂಸ್ಕರಣಗಳನ್ನು ಪ್ರಜೆಗಳು ಅಂಗೀಕರಿಸದೆ ತಿರಸ್ಕರಿಸಿಬಿಟ್ಟರೆ ಬಹಳ ಅನರ್ಥವಾಗುವುದೆಂದು ಲಂಡನ್ ಪಟ್ಟಣದಿಂದ ಮಿ|| ಪೋಲಕ್‌ರವರು ಶ್ರೀಮಾನ್ ಗಂಧಿಯವರಿಗೆ ತಂತಿಯ ಮೂಲಕ ತಿಳಿಯಪಡಿಸಿರುತ್ತಾರೆ.

ಅಸ್ಸಾಮಿನಲ್ಲಿ ಕಳೆದ ತಿಂಗಳು ಭೂಕಂಪನವಾಯಿತಷ್ಟೆ. ಅದರಿಂದೀಚೆಗೆ ಅಲ್ಲಿನ ಸಿಲ್ಹೆಟ್ ಜಿಲ್ಲೆಯಲ್ಲಿ ಮಳೆಯು ವಿಶೇಷವಾಗಿ ಸುರಿಯುತ್ತಿದೆ. ನದಿಗಳಲ್ಲಿ ವಿಪರೀತ ಪ್ರವಾಹ ಬಂದು ದೇಶವೆಲ್ಲಾ ಜಲಮಯವಾಗಿದೆ. ಪ್ರಜೆಗಳಲ್ಲಿ ೧೦೦ಕ್ಕೆ ೬೦ ಮಂದಿಗಳು ಜ್ವರಪೀಡಿತರಾಗಿದ್ದಾರೆ.

ಕಲ್ಕತ್ತಾದಲ್ಲಿ ಈಗ ೧ ವಾರಕ್ಕೆ ಎಲ್ಲಾ ಕಾರಣದಿಂದಲೂ ೯೦೦ ರ ಮೇಲೆಯೇ ಮರಣಗಳಾಗುತ್ತಿವೆ. ೧೯೧೫ ನೆ ವರ್ಷದೀಚೆಗೆ ಪ್ಲೇಗು ಕಾಲರಾ ವ್ಯಾಪಿಸಿದ್ದಾಗಲೂ ಅಲ್ಲಿಯ ಮರಣ ಸಂಖ್ಯೆಯು ವಾರಕ್ಕೆ ೩೦೦ ಗಿಂತ ಹೆಚ್ಚಿರಲಿಲ್ಲವಂತೆ. ಈಗಣ ಹೆಚ್ಚುವಿಕೆಗೆ ಇನ್‌ಫ್ಲುಯಂಜಾ ಜ್ವರವೇ ಕಾರಣವೆಂದು ಹೇಳಲ್ಪಟ್ಟಿದೆ.

ಮದ್ರಾಸಿನಲ್ಲಿ ಈಗ ಮರಣಸಂಖ್ಯೆ ಹೆಚ್ಚಾಗಿದೆ. ೧೦೦೦ ಜನಕ್ಕೆ ೬೨ ರಂತೆ ಸಾವುಗಳಾಗುತ್ತಿವೆ. ಹಗಲು ಬಹಳ ಬಿಸಿಲೂ, ರಾತ್ರಿಹೊತ್ತು ಶೀತದ ಗಾಳಿ ಬೀಸುತ್ತಿರುವುದೂ ಆಹಾರ ವಸ್ತುಗಳ ದುರ್ಭಿಕ್ಷವೂ ಸಹ ಜನರಲ್ಲಿ ಅನಾರೋಗ್ಯವನ್ನು ಹೆಚ್ಚಿಸಿ ಮರಣ ಸಂಖ್ಯೆಯನ್ನು ವೃದ್ಧಿಗೊಳಿಸಿರುವುದೆಂದು ಗೊತ್ತಾಗುತ್ತದೆ.

ಈಗ ಎಲ್ಲೆಲ್ಲೂ ವ್ಯಾಪಿಸಿರುವ ಇನ್‌ಫ್ಲುಯಂಜಾ ಜ್ವರದಿಂದ ಕೆಲಕಡೆ ಅನೇಕ ಮರಣಗಳು ಸಂಭವಿಸಿರುತ್ತವೆ. ಕಲ್ಕತ್ತಾದಲ್ಲಿ ೩-೪ ನೂರು ಜನರು ಇದರಿಂದ ಸತ್ತಿರುತ್ತಾರೆ. ಮದ್ರಾಸಿನಲ್ಲೂ ಇದು ಅನುಭವಕ್ಕೆ ಬಂದಿದೆ. ಕರಾಚಿಯಲ್ಲಿ ೧೨ ಮಂದಿ ಸತ್ತಿದ್ದಾರೆ. ಜ್ವರಬಿಟ್ಟ ಬಳಿಕವೂ ಕೆಲಕಾಲದವರೆಗೆ ರೋಗಿಯು ಪಥ್ಯವಾಗಿರುವುದು ಬಹಳ ಅವಶ್ಯವಾಗಿದೆ.

೧೨ ಮಾತುಗಳಿಗೆ ೮ ಆಣೆಯಂತೆ ಅದಕ್ಕಿಂತ ಹೆಚ್ಚಿನ ಪ್ರತಿಮಾತಿಗೂ ಅರ್ಧಾಣೆಯಂತೆಯೂ ಇದ್ದ ತಂತ್ರೀವಾರ್ತೆಯ ಛಾರ್ಜು ಬರುವ ಸೆಪ್ಟೆಂಬರ್ ತಿಂಗಳಿಂದ ೧೨ ಮಾತುಗಳಿಗೆ ೧೨ ಆಣೆಯಂತೆಯೂ ಬಳಿಕ ಪ್ರತಿಮಾತಿಗೂ ೧ ಆಣೆಯಂತೆಯೂ ಹೆಚ್ಚಿಸಲ್ಪಡುವುದು. ಎಕ್ಸ್‌ಪ್ರೆಸ್ ತಂತ್ರೀವಾರ್ತೆಗಳಿಗೆ ೧|| ರೂ. ಬಳಿಕ ಪ್ರತಿಮಾತಿಗೂ ೨ ಆಣೆ ಕೊಡಬೇಕಾಗುವುದು.

ಟಾಟಾ ಕಂಪೆನಿಯವರು ಸ್ಥಾಪಿಸಿರುವ ಲೋಹದ ಯಂತ್ರಾಲಯವನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವುದಕ್ಕಾಗಿ ಬೇಹಾರ್ ಒರಿಸ್ಸಾ ಪ್ರಾಂತ್ಯದಲ್ಲಿ ಇನ್ನು ಕೆಲವು ಭೂಮಿಗಳನ್ನು ಕೊಡುವುದಕ್ಕೆ ಸ್ಟೇಟ್ ಸೆಕ್ರೆಟರಿಯವರು ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಈ ಸ್ಥಳವು ಟಾಟಾ ಕಂಪೆನಿಯವರ ವಶವಾದ ನಂತರ ೧೦ ವರ್ಷಗಳೊಳಗಾಗಿ ಆ ಪ್ರದೇಶದೊಳಗೆ ಕೂಲಿಗಾರರಿಗೆ ಮನೆಕಟ್ಟುವುದೇ ಮೊದಲಾದ ಕೆಲಸಗಳಿಗಾಗಿ ಕಂಪೆನಿಯವರು ೩ ಕೋಟಿ ರೂ. ಗಳ ವ್ಯಯವನ್ನು ಮಾಡಲು ಒಪ್ಪಿರುತ್ತಾರೆ.

ಹಿಂದೆ ಸ್ಟೇಟ್‌ಸೆಕ್ರೆಟರಿಯವರಾಗಿದ್ದ ಲಾರ್ಡ್‌ಮಾರ್ಲೆಯವರು ಲಂಡನ್ ಪಟ್ಟಣದ ನೇಷನಲ್ ಲಿಬರಲ್ ಕ್ಲಬ್ಬಿನಲ್ಲಿ ಮಾತನಾಡುವಾಗ್ಗೆ—ಭರತಖಂಡದ ನೂತನ ರಾಜಕೀಯ ಸಂಸ್ಕರಣವು ಇದುವರೆಗಣ ಸಂಸ್ಕರಣಗಳೆಲ್ಲಕ್ಕಿಂತಲೂ ಪ್ರಶಸ್ತವಾಗಿವೆಯೆಂದೂ, ಅದು ತಮ್ಮ ಸಂಸ್ಕರಣದ ಚಿಗುರೇ ಆಗಿರುವುದೆಂದೂ ಹೇಳಿದರು. ಅದಕ್ಕೆ ಮಿ|| ಮಾಂಟೆಗ್‌ರವರು ಉತ್ತರಕೊಡುವಾಗ್ಗೆ—ತಾವು ಗ್ರಂಥರೂಪದಲ್ಲಿ ಮಾಡಿದ್ದ ಬೋಧೆಯನ್ನೇ ನಾನು ಕ್ರಿಯಾರೂಪದಲ್ಲಿ ಮಾಡಿರುವೆನೆಂದು ಹೇಳಿ ತನ್ನ ಗುರುಗಳಾದ ಮಾರ್ಲೆಯವರನ್ನು ಸಂತೋಷಪಡಿಸಿದರು.

ಹೇಗೆ ನಡೆದರೂ ವಕ್ರದೃಷ್ಟಿಯಿಂದಲೇ ವಿಮರ್ಶಿಸಬೇಕೆಂದಿರುವ ಕೆಲ ಉಗ್ರಪಕ್ಷ ಪ್ರಮುಖರ ಮತ್ತು ಅವರ ಕೆಲ ಹಿಂಬಾಲಕರ ಹೊರತು ಭರತಖಂಡದ ದೂರದೃಷ್ಟಿಯುಳ್ಳ ರಾಜನೀತಿಜ್ಞರೆಲ್ಲರೂ ಮಾಂಟೆಗ್ ಚೆಲ್ಮ್ಸ್‌ಫರ್ಡ್ ರಾಜಕೀಯ ಸುಧಾರಣೆಗಳನ್ನು ಅನುಮೋದಿಸಿಯೇ ಇರುತ್ತಾರೆ. ಬಂಗಾಳದ ಪ್ರಮುಖರೆಲ್ಲರೂ ಇದಕ್ಕೆ ಮುಂಚೆಯೇ ತಮ್ಮಭಿಪ್ರಾಯವನ್ನು ಪ್ರಕಟಿಸಿದ್ದರು. ಕಳೆದವಾರ ಬೊಂಬಾಯಿ ಮದ್ರಾಸು ಪ್ರಮುಖರೂ ಹಾಗೆಯೇ ಪ್ರಕಟಿಸಿರುತ್ತಾರೆ. ಬೊಂಬಾಯಿಯ ದಿನ್ಷಾವಾಚಾ, ಚಿಮನ್‌ಲಾಲ್, ಸೆಟಲ್ವಾಡ್, ಸರ್ ನಾರಾಯಣಚಂದ್ರಾವರ್ಕರ್ ಮೊದಲಾದನೇಕರು—“ಇದರಲ್ಲಿ ಸ್ವಲ್ಪ ತಿದ್ದುಪಡಿಮಾಡಬೇಕಾದುದು ಮಾತ್ರ ಇರುವುದು, ಆದರೆ ಒಟ್ಟಿನಲ್ಲಿ ಇದು ಅಭಿವೃದ್ಧಿಸೂಚಕವಾಗಿದೆ. ಬಾಧ್ಯತಾಯುತಪರಿಪಾಲನಪ್ರಾಪ್ತಿಗೆ ಇದು ಸಾಧಕವಾಗಿದೆ. ಈಗ ಕೊಡಲ್ಪಟ್ಟಿರುವವು ಪ್ರಾರಂಭದಶೆಯಲ್ಲಿ ಅಲ್ಪಮಾತ್ರವಾಗಿರುವುದಿಲ್ಲ. ೧೦ ವರ್ಷಗಳ ಕಾಲ ಇದರಂತೆ ಕೆಲಸ ನಡೆದರೆ ದೇಶದಲ್ಲಿ ಬಾಧ್ಯತಾಯುತ ಪರಿಪಾಲನವನ್ನೇರ್ಪಡಿಸಲು ಅನುಕೂಲವಾಗುವಂತೆ ಉದಾರಭಾವದಿಂದ ಈ ಸೂಚನೆಗಳು ಮಾಡಲ್ಪಟ್ಟಿವೆ. ಕಾಂಗ್ರೆಸ್‌ಲೀಗು ವಿಧಾನಗಳಲ್ಲಿ ಬಾಧ್ಯತಾಯುತ ಪ್ರಭುತ್ವಕ್ಕೆ ಪ್ರಾರಂಭಸೂಚನೆಗಳು ಇಲ್ಲವೇ ಇಲ್ಲ. ಅಂಥವುಗಳೂ ಕೂಡ ಈ ಸೂಚನೆಯಲ್ಲಿ ಸೇರಿಸಲ್ಪಟ್ಟಿವೆ. ಮತ್ತೂ ಆ ಕಾಂಗ್ರೆಸ್‌ಲೀಗಿನವರು ಸೂಚಿಸಿರುವ ಅನೇಕ ವಿಷಯಗಳೂ ಇದರಲ್ಲಿವೆ. ಇಂಥ ಸೂಚನೆಯನ್ನು ಮಾಡಿದವರುಗಳಿಗೆ ಭಾರತೀಯರು ಕೃತಜ್ಞರಾಗಿರಬೇಕಾಗಿದೆ” ಎಂದು ಹೇಳಿ, ಸೂಚನೆಯಲ್ಲಿ ಮಾಡಬೇಕಾದ ತಿದ್ದುಪಾಟನ್ನು ಸೂಚಿಸುವುದರಲ್ಲಿ—ಅಧಿನಿವೇಶಗಳಿಗೆ ಸಮಾನವಾದ ಅರ್ಥಿಕ ಸ್ವಾತಂತ್ರ್ಯವನ್ನು ಭರತಖಂಡಕ್ಕೆ ಕೊಡಬೇಕು. ಶಾಸನ ನಿರ್ಮಾಣಸಭೆಯಲ್ಲಿ ೨ನೆ ಸಭೆಯ ಏರ್ಪಾಡು ಅಸಮಂಜಸವಾದುದು. ಅದಕ್ಕೆ ಪ್ರತಿಯಾಗಿ ಗ್ರಾಂಡ್ ಕಮಿಟಿಯನ್ನೇ ಏರ್ಪಡಿಸಬಹುದು. ಸ್ಟೇಟ್‌ಕೌನ್ಸಿಲನ್ನು ಶಾಶ್ವತಪಡಿಸಕೂಡದು ಎಂಬುದೇ ಮೊದಲಾದುವುಗಳನ್ನು ಸೂಚಿಸಿರುತ್ತಾರೆ. ಮದ್ರಾಸಿನ ಪ್ರಮುಖರಾದ ಸರ್ ಶಿವಸ್ವಾಮಯ್ಯರು ಗೋವಿಂದರಾಘವಯ್ಯರು ಕೆ. ಶ್ರೀನಿವಾಸಯ್ಯಂಗಾರರೇ ಮೊದಲಾದ ಅನೇಕರು ಈ ನೂತನ ಸಂಸ್ಕರಣಗಳನ್ನು ನಿರಾಕರಿಸುವುದು ಅನುಚಿತವೆಂತಲೂ, ಅದನ್ನು ಸ್ವೀಕರಿಸಿ ಅವುಗಳಲ್ಲಿ ಮಾಡಬೇಕಾದ ಸುಧಾರಣೆಗಳನ್ನು ಮಾಡಿಸುವುದಕ್ಕೆ ಪ್ರಯತ್ನಿಸುವುದು ಉತ್ತಮವಾದ ದಾರಿಯೆಂತಲೂ ಹೇಳಿ, ಮಾಡಬೇಕಾದ ಸುಧಾರಣೆಗಳ ದಿಗ್ದರ್ಶನವನ್ನು ಮಾಡಿರುತ್ತಾರೆ. ಪಂಜಾಬಿನ ಮಹಮ್ಮದೀಯ ಸಂಘದವರು ಇದರ ಶಾಸನಸಭೆಯ ಏರ್ಪಾಟುಗಳು ಚೆನ್ನಾಗಿವೆಯೆಂದು ಶ್ಲಾಘಿಸಿ, ಆ ಸಭೆಯ ಅಧ್ಯಕ್ಷತೆಯು ಗೌರ್ನರಿಗಿರಬಾರದೆಂತಲೂ, ಪಂಜಾಬಿನ ಮಹಮ್ಮದೀಯರಿಗೂ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂತಲೂ, ಮಹಮ್ಮದೀಯರು ಕೆಲರೂ ಸಿಕ್ಕರು ಕೆಲರೂ ಹಿಂದುಗಳು ಕೆಲರೂ ಅಲ್ಲಿ ಪ್ರತಿನಿಧಿತ್ವೇನ ಇರುವಂತಾಗಬೇಕೆಂತಲೂ ಸೂಚಿಸಿರುತ್ತಾರೆ.

ವಿದೇಶ ವೃತ್ತಾಂತಗಳು.

ಅಮೇರಿಕಾದಿಂದ ಪ್ರತಿತಿಂಗಳಲ್ಲೂ ೩ ಲಕ್ಷದಷ್ಟು ಸೈನ್ಯವು ರಣರಂಗಕ್ಕೆ ಬರುತ್ತಿರುವುದು.

ಈಗ ಅಮೇರಿಕಾದ ನೌಕಾದಳದಲ್ಲಿ ಸೈನಿಕರೂ ಉದ್ಯೋಗಿಗಳೂ ಸಹ ಸೇರಿ ೫೦೩೭೯೨ ಮಂದಿಗಳಿದ್ದಾರೆ.

ಕೆಲವಾರಗಳ ಹಿಂದೆಯೇ ವ್ಲಾಡಿವೋಸ್ಟಾಕಿನಲ್ಲಿಳಿದಿರುವ ಜಪಾನ್ ಸೈನ್ಯವು ಈಗ ಜೆಕೋಸ್ಲಾವಕ್ಕರಿಗೆ ಸಹಾಯಮಾಡುತ್ತಲಿದೆಯೆಂದು ವಾರ್ತೆ ಬಂದಿದೆ.

ಫಿನ್ಲಂಡಿನಲ್ಲಿ ರಾಜಪರಿಪಾಲನೆಗೊಪ್ಪಿಕೊಳ್ಳದಿದ್ದರೆ ನಮ್ಮ ಮಿಲಿಟರಿ ಗೌರ್ನರಧಿಕಾರಕ್ಕೆ ಒಳಪಡಬೇಕೆಂದು ಜರ್ಮನರು ಫಿನ್ಲೆಂಡ್ ರಾಜ್ಯಾಂಗ ಸಭೆಯವರಿಗೆ ಅಂತ್ಯಲೇಖನವನ್ನು ಬರೆದಿದ್ದಾರೆ.

ಉಕ್ರೇನಿಯದಲ್ಲಿ ಬೇಸಾಯಗಾರರಾದ ೭೫ ಸಾವಿರ ಮಂದಿಗಳು ಆಯುಧಸಮೇತರಾಗಿ ಚೆನ್ನಾಗಿ ರಣಶಿಕ್ಷೆಯನ್ನು ಹೊಂದಿ ಜರ್ಮನರಮೇಲೆ ಸಾಗಿಹೋಗುತ್ತಿದ್ದಾರೆ. ಜರ್ಮನರು ಆ ಪ್ರಾಂತವನ್ನು ಬಿಟ್ಟು ಕೀವಿಗೆ ಹೊರಡುತ್ತಿದ್ದಾರೆ.

ಈಗ ಫ್ರಾನ್ಸಿನಲ್ಲಿ ಅಮೇರಿಕನ್ನರ ಸೈನ್ಯವು ೧೨|| ಲಕ್ಷ ಕೂಡಿದೆ. ಜುಲೈ ತಿಂಗಳಲ್ಲಿ ೩ ಲಕ್ಷವು ಅಮೇರಿಕದಿಂದ ಕಳುಹಿಸಲ್ಪಟ್ಟಿದೆ. ಪಶ್ಚಿಮರಂಗದಲ್ಲಿದ್ದ ಅಮೇರಿಕನ್ ಸೈನ್ಯದಲ್ಲಿ ಸ್ವಲ್ಪಭಾಗವು ಇಟಲಿ ರಂಗಕ್ಕೂ ಕಳುಹಿಸಲ್ಪಟ್ಟಿದೆ. ಇಟಲಿಯವರು ಈ ಸೈನಿಕರನ್ನು ಬಹು ಪ್ರತಿಗೌರವದಿಂದ ಆದರಿಸುತ್ತಿದ್ದಾರೆ.

ಕಳೆದ ಜುಲೈ ತಿಂಗಳು ತಾ|| ೧೫ ರಿಂದಲೂ ಶತ್ರುಗಳು ಮಿತ್ರಮಂಡಲಿಯ ಮೇಲೆ ಪಶ್ಚಿಮರಂಗದಲ್ಲಿ ಯುದ್ಧಮಾಡುವುದಕ್ಕೆ ತಮ್ಮ ೬೦-೭೦ ಡಿವಿಜನ್ (ಎಂದರೆ ತಮ್ಮ ಒಟ್ಟು ಸೈನ್ಯದಲ್ಲಿ ⅓ ಭಾಗದಷ್ಟು ಸೈನ್ಯಗಳನ್ನು ಬಿಟ್ಟಿದ್ದರು. ಅದೊಂದು ವಾರದ ಯುದ್ಧದಲ್ಲಿ ಅವರ ಕಡೆ ೧೮೦೦೦೦ ಸೈನ್ಯವು ನಷ್ಟವಾಗಿರುವುದೆಂದು ಎಣಿಸಲ್ಪಟ್ಟಿದೆ.

ಸೈಬೀರಿಯಾದಲ್ಲಿ ಜೆಕೋಸ್ಲಾವಕ್ಕರಿಗೆ ಸಹಾಯಮಾಡುವುದಕ್ಕೆ ಜಪಾನರು ಅಮೇರಿಕನ್ನರ ಸೂಚನೆಯ ಮೇರೆ ಒಪ್ಪಿಕೊಂಡರು. ಇನ್ನು ರಷ್ಯಾದಲ್ಲಿ ಜರ್ಮನರು ಹೊಂದಬೇಕೆಂದಿದ್ದ ಲಾಭಕ್ಕೆಲ್ಲಾ ಎಷ್ಟೋ ತಡೆಯಾಗುವದೆಂಬುದಕ್ಕೆ ಸಂಶಯವಿಲ್ಲ. ಜರ್ಮನರು ಇದುವರೆಗೆ ಮಾಡಿದ ಸಾಹಸವೆಲ್ಲಾ ವ್ಯರ್ಥವಾದರೂ ಆಗಬಹುದು. ಜರ್ಮನರು ರಷ್ಯಾದ ಬೊಲ್ಶೆವಿಕ್ಕರಿಗೆ ಸಹಾಯಮಾಡುತ್ತಿದ್ದಾರೆ. ಮುಂದೆ ರಷ್ಯಾದ ಸ್ಥಿತಿಗತಿಯು ಇನ್ನಾವ ರೂಪಕ್ಕೆ ಬರುವುದೋ ನೋಡಬೇಕು.

ಮರ್ಮನ್ ಸಮುದ್ರತೀರಪ್ರಾಂತ್ಯದಲ್ಲಿ ಮಿತ್ರಮಂಡಲಿಯವರು ತಮ್ಮ ಸೈನ್ಯವನ್ನಿಳಿಸಿರುವರಷ್ಟೆ. ಈ ದೇಶಭಾಗದಲ್ಲಿ ಯತ್ಕಿಂಚಿತ್ತನ್ನಾದರೂ ಆಕ್ರಮಿಸುವುದು ತಮ್ಮ ಉದ್ದೇಶವಲ್ಲವೆಂದು ಇವರು ಪ್ರಕಟಿಸಿದ್ದಾರೆ. ಸಂಯುಕ್ತ ರಷ್ಯಾ ಮಹಾದೇಶದ ಏಕತ್ವವನ್ನು ಕಾಪಾಡುವುದೇ ತಮ್ಮ ಮುಖ್ಯೋದ್ದೇಶವೆಂದು ಹೇಳಿರುತ್ತಾರೆ. ಅಲ್ಲಿರುವ ರಷ್ಯಾ ಸೈನ್ಯಕ್ಕೆ ಇವರೇ ಶಿಕ್ಷಣವನ್ನು ಕೊಡುವರು. ಅಲ್ಲಿಯ ಅಂತರ್ದೇಶವ್ಯವಹಾರದಲ್ಲಿ ಮಿತ್ರಮಂಡಲಿಯವರು ಕೈಹಾಕುವುದಿಲ್ಲ.

— ಕಳೆದ ಮೇ ತಿಂಗಳು ತಾ|| ೧೫ ರಿಂದಲೂ ಅಮೇರಿಕಾದಲ್ಲಿ ನ್ಯೂಯಾರ್ಕ್‌ಪಟ್ಟಣ ವಾಷಿಂಗ್ಟನ್ ಪಟ್ಟಣಗಳ ಮಧ್ಯದಲ್ಲಿ ಅಂಚೆಯು ಆಕಾಶವಿಮಾನಗಳ ಮೂಲಕ ಸಾಗಿಸಲ್ಪಡುತ್ತಿದೆ. ಆವೆರಡು ಪಟ್ಟಣಗಳಿಗೂ ಮಧ್ಯದಲ್ಲಿ ೨೨೦ ಮೈಲಿಗಳ ದೂರವಿದೆ. ಯುದ್ಧಮುಗಿದ ಬಳಿಕ ಲಂಡನ್ ಪ್ಯಾರಿಸ್ಸು ಪಟ್ಟಣಗಳಿಗೂ, ಪ್ಯಾರಿಸ್-ರೋಮ್ ಪಟ್ಟಣಗಳಿಗೂ, ಬರ್ಲಿನ್-ಕಾನ್‌ಸ್ಟಾಂಟಿನೋಪಲ್ಲುಗಳಿಗೂ ಹೀಗೆಯೇ ಅಂಚೆಯನ್ನು ಸಾಗಿಸುವ ಏರ್ಪಾಟು ಮಾಡಲ್ಪಡಬಹುದೆಂದು ಊಹಿಸುತ್ತಿದ್ದಾರೆ.

ಕಳೆದ ಜೂನ್ ತಿಂಗಳಲ್ಲಿ ಜರ್ಮನರ ಸಬ್‌ಮೆರೀನುಗಳಿಂದ ಮಿತ್ರಮಂಡಲಿಯವರ ೨೭೫೮೮೨ ಟನ್ನುಗಳ ಭಾರ ಹೊರುವಷ್ಟು ಹಡಗುಗಳು ಮುಳುಗಿಸಲ್ಪಟ್ಟಿವೆ. ಇದು ಮೇ ತಿಂಗಳಿಗಿಂತ ೮೧೮೦೫ ಟನ್ನುಗಳಷ್ಟೂ, ಏಪ್ರಿಲ್ ತಿಂಗಳಿಗಿಂತಲೂ ೩೭೭೮೬ ಟನ್ನುಗಳಷ್ಟೂ ಕಡಿಮೆ. ಕಳೆದ ವರ್ಷದ ಜೂನ್ ತಿಂಗಳಲ್ಲಿ ೪೩೭೯೬೨ ಟನ್ನುಗಳಷ್ಟು ಹಡಗುಗಳು ಮುಳುಗಿಸಲ್ಪಟ್ಟಿದ್ದುವು. ಈ ವಿವರಣದಿಂದ ಶತ್ರುಗಳ ಸಬ್‌ಮೆರೀನು ಹಾವಳಿಯು ಈಗ ಎಷ್ಟು ತಗ್ಗಿಹೋಗಿದೆಯೆಂಬುದು ವ್ಯಕ್ತವಾಗುತ್ತದೆ.

ರಷ್ಯಾ ಚಕ್ರವರ್ತಿಯವರ ಹತ್ಯೆಯ ಸಂಬಂಧವಾಗಿ ತಮ್ಮ ರಾಜಾಸ್ಥಾನದವರೆಲ್ಲರೂ ೪ ವಾರಗಳವರೆಗೆ ದುಃಖಸೂಚಕ ಚಿಹ್ನೆಯನ್ನು ಧರಿಸಿರಬೇಕೆಂದು ನಮ್ಮ ಸಾರ್ವಭೌಮರು ಅಪ್ಪಣೆಮಾಡಿದ್ದಾರೆ. ಲಂಡನ್ ಪಟ್ಟಣದಲ್ಲಿರುವ ರಷ್ಯನ್ ಚರ್ಚಿನಲ್ಲಿ ಜಾರ್‌ರವರ ಆತ್ಮಶಾಂತಿಯನ್ನು ಕುರಿತು ದೀನತಾಪ್ರಾರ್ಥನೆ ನಡೆಯಿಸಲ್ಪಟ್ಟಾಗ್ಗೆ ನಮ್ಮ ಸಾರ್ವಭೌಮ ದಂಪತಿಗಳು, ಮಹಾಮಾತೃಶ್ರೀ ಅಲೆಗ್ಸಾಂಡ್ರಿಯಾರವರು, ಕನ್ನಾಟ್ ಪ್ರಭುಗಳು, ರಷ್ಯಾದ ರಾಜಕುಮಾರರಾದ ಗ್ರಾಂಡ್‌ಡ್ಯೂಕ್‌ಜಾರ್ಜ್‌ರವರು ಮೊದಲಾದವರು ಹೋಗಿದ್ದರು.

ಈಗ ಸೈಬೀರಿಯಾ ಪ್ರಭುತ್ವದಲ್ಲಿ ಬಹಳ ಮಾರ್ಪಾಟಾಗಿದೆ. ಉಸುರಿ ಕಾಸಕ್ ಜನರು ಜೆಕೋಸ್ಲಾವಕ್ಕರೊಡನೆ ಸೇರಿದರು. ಇವರುಗಳ ಪೂರ್ವಸೈನ್ಯವು ಈಗ ಇರ್ಕುಟಿಸ್ಕಿನಮೇಲೆ ಸಾಗಿಹೋಗುತ್ತಿದೆಯಂತೆ. ಸೈಬೇರಿಯಾವು ಸ್ವಾತಂತ್ರ್ಯವನ್ನು ಪ್ರಕಟಿಸಿದೆ. ಬೊಲ್ಶೆವಿಕ್ಕರ ರಾಜಾಜ್ಞೆಯನ್ನೆಲ್ಲಾ ತಿರಸ್ಕರಿಸಿಬಿಟ್ಟಿದೆ. ಸೈಬೀರಿಯಾದಲ್ಲಿ ಜರ್ಮನರೂ ಆಸ್ಟ್ರಿಯನ್ನರೂ ಯುದ್ಧವನ್ನು ಮಾಡಬೇಕೆಂತಲೂ ಪ್ರತಾಪವನ್ನು ತೋರಿಸಿದವರಿಗೆ ಬಹುಮಾನವು ಕೊಡಲ್ಪಡುವುದೆಂತಲೂ ಜರ್ಮನ್ ಚಕ್ರವರ್ತಿಯು ಮಾಡಿದ್ದ ಒಂದು ಆಜ್ಞೆಯು ಜರ್ಮನ್ ಆಸ್ಟ್ರಿಯಾ ಸೆರೆಯಾಳುಗಳ ವಶದಲ್ಲಿದ್ದು ಸಿಕ್ಕಿರುವುದು. ಜೆಕೋಸ್ಲಾವಕ್ಕರ ಪ್ರಾಬಲ್ಯವು ರಷ್ಯಾದಲ್ಲಿ ಹೆಚ್ಚುತ್ತಿದೆ. ಇವರ ಕಡೆಯ ಸೈನ್ಯವು ಬೊಲ್ಶೆವಿಕ್ ಮತ್ತು ಸೋವಿಯಟ್ ಪಕ್ಷದ ಸೈನ್ಯವನ್ನು ಒತ್ತರಿಸಿಕೊಂಡು ನುಗ್ಗಿಹೋಗಿ ಪುರಗ್ರಾಮಗಳನ್ನು ವಶಪಡಿಸಿಕೊಳ್ಳುತ್ತಿದೆ.

ಇಂಗ್ಲೀಷರು ಹೊಸದಾಗಿ ಹಿಡಿದುಕೊಂಡ ಮೆಸಪೊಟೋಮಿಯಾ ದೇಶದ ಈಗಣ ಪರಿಪಾಲನ ಪದ್ಧತಿಯು ಪೂರ್ವದ ತುರ್ಕಿ ಪರಿಪಾಲನೆಗಿಂತ ಪ್ರಜೆಗಳಿಗೆ ಎಷ್ಟೋ ಹಿತಕರವಾಗಿಯೂ ರಂಜಕವಾಗಿಯೂ ಪರಿಣಮಿಸಿದೆ. ಅಲ್ಲಿ ನಮ್ಮ ಸರ್ಕಾರದವರೂ ಅಲ್ಲಿಯ ಮ್ಯುನ್ಸಿಪಾಲಿಟಿಗಳವರೂ ಅನೇಕ ನೂತನ ಪಾಠಶಾಲೆಗಳನ್ನು ಸ್ಥಾಪಿಸಿ ನಡೆಯಿಸುತ್ತಿದ್ದಾರೆ. ಉಪಾಧ್ಯಾಯರು ಮೊದಲಿನಷ್ಟು ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದರಲ್ಲಿದ್ದಾರೆ. ಪ್ರಜೆಗಳು ವಿದ್ಯಾಭ್ಯಾಸದಲ್ಲಿ ಕುತೂಹಲವುಳ್ಳವರಾಗಿದ್ದಾರೆ. ಹಾಳುಬಿದ್ದಿದ್ದ ಎಷ್ಟೋ ಭೂಮಿಗಳು ಈಗ ಸಾಗುವಳಿಗೆ ತರಲ್ಪಟ್ಟಿವೆ. ಕುದುರೆಗಳು ಯಂತ್ರಗಳು ಮೊದಲಾದುವುಗಳನ್ನೆಲ್ಲಾ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದಾರೆ. ನದಿಗಳ ಮೂಲಕವಾಗಿಯೂ ಮಾರ್ಗಸಂರಕ್ಷಣೆಯ ಮೂಲಕವಾಗಿಯೂ ವ್ಯಾಪಾರವು ವೃದ್ಧಿಹೊಂದುತ್ತಿದೆ. ಪದಾರ್ಥಗಳ ಬೆಲೆಯು ಇಳಿದಿದೆ. ಮಗ್ಗುಲ ತುರ್ಕಿ ಪರಿಪಾಲಿತ ದೇಶಗಳ ಸ್ಥಿತಿಗತಿಗಳನ್ನೂ ತಮ್ಮ ಈಗಣ ಸ್ಥಿತಿಗತಿಗಳನ್ನೂ ನೋಡಿಕೊಂಡು ಮೆಸಪೊಟೋಮಿಯಾ ಪ್ರಜೆಗಳು ಬಹಳ ಸಂತೋಷಪಟ್ಟುಕೊಂಡಿದ್ದಾರೆ.

ಸಾಮ್ರಾಜ್ಯಯುದ್ಧ ಮಹಾಸಭೆಗಾಗಿ ಸೀಮೆಯಲ್ಲಿ ಕೂಡಿದ್ದ ಪ್ರತಿನಿಧಿಗಳೆಲ್ಲಾ ಸ್ವದೇಶಕ್ಕೆ ಹಿಂದಿರುಗುವುದಕ್ಕೆ ಮುಂಚೆ ಚಕ್ರವರ್ತಿಯವರ ಸಂದರ್ಶನವನ್ನು ಮಾಡಿ ತಮ್ಮ ರಾಜಭಕ್ತಿಯನ್ನು ನಿವೇದಿಸಿ ಅವರಪ್ಪಣೆಯನ್ನು ಪಡೆದು ಬರುವುದಕ್ಕಾಗಿ ಬಕಿಂಗ್‌ಹ್ಯಾಂ ಅರಮನೆಗೆ ಹೋಗಿದ್ದರು. ಸಾರ್ವಭೌಮರು ಅವರುಗಳ ವಿಜ್ಞಾಪನಪತ್ರವನ್ನು ಆದರದಿಂದ ಅಂಗೀಕರಿಸಿ ಉತ್ತರವನ್ನು ಕೊಡುವಾಗ್ಗೆ—ಅಭೂತಪೂರ್ವವಾದ ಈ ವಿಷಮಸಮಯದಲ್ಲಿ ಅಂಗ್ಲಾಧಿನಿವೇಶನ ರಾಜ್ಯಪ್ರತಿನಿಧಿಗಳೂ ಭರತಖಂಡ ಪ್ರತಿನಿಧಿಗಳೂ ಸಹ ಇಲ್ಲಿಗೆ ಬಂದು ಸೇರುತ್ತಿರುವುದು ಬಹಳ ಪ್ರೋತ್ಸಾಹಕರವಾಗಿರುವುದೆಂದೂ, ಮುಖ್ಯಮುಖ್ಯ ವಿಷಯಗಳನ್ನೆಲ್ಲಾ ಕುರಿತು ನೀವುಗಳೆಲ್ಲಾ ಚರ್ಚಿಸಿದುದನ್ನು ನಾನು ಉತ್ಸಾಹದಿಂದ ಕೇಳುತ್ತಿದ್ದೆನೆಂದೂ, ನಿಮ್ಮಗಳ ಈ ವಿಧವಾದ ಪ್ರಯತ್ನವೂ ಸ್ವಾರ್ಥಪರಿತ್ಯಾಗವೂ ಸಾಮ್ರಾಜ್ಯರಕ್ಷಣೆಗಾಗಿ ಮಾಡುತ್ತಿರುವ ಸಾಹಸಗಳೂ ಸಹ ಕೊನೆಯ ಸಂಪೂರ್ಣವಿಜಯಕ್ಕೆ ಸಾಧಕವಾದುವೆಂದೂ, ಯುದ್ಧ ಮುಗಿದ ಬಳಿಕ ಸಮುದ್ರದಾಚೆ ಇರುವ ಅಧಿನಿವೇಶನ ರಾಜ್ಯಗಳಿಗೆಲ್ಲಾ ನಮ್ಮ ಯುವರಾಜರು ಸಂದರ್ಶನವನ್ನೀಯುವವರಾಗಿದ್ದಾರೆಂದೂ, ಸಂಪೂರ್ಣವಿಜಯದ್ವಾರಾ ಸಾಮ್ರಾಜ್ಯ ರಕ್ಷಣೆಗಾಗಿ ನೀವುಗಳೆಲ್ಲಾ ಬದ್ಧಕಂಕಣರಾಗಿರುವುದು ಲೋಕಕ್ಕೆಲ್ಲಾ ಆಶ್ಚರ್ಯಕರವಾಗಿಯೂ ನನಗೆ ಹೆಮ್ಮೆಗೊಳಿಸತಕ್ಕುದಾಗಿಯೂ ಇರುವುದೆಂದೂ, ಏಕಮತ್ಯವೆಂಬ ದೃಢತರವಾದ ಹದಿಯಮೇಲೆ ಸ್ಥಾಪಿತವಾಗಿರುವ ಅಂಗ್ಲಸಾಮ್ರಾಜ್ಯಭವನವನ್ನು ಯಾವ ವಿಧವಾದ ಬಿರುಗಾಳಿಯೂ ಉರುಳಿಸಲಾರದೆಂದೂ, ಇನ್ನೊಂದುಸಲ ಯುದ್ಧಸಭೆಯು ಜರುಗುವುದರೊಳಗಾಗಿ ನ್ಯಾಯಸ್ವಾತಂತ್ರ್ಯರಕ್ಷಣೆಗಾಗಿ ಮಾಡಲ್ಪಡುತ್ತಿರುವ ನಮ್ಮ ಯುದ್ಧಾಶಯವು ಜಯಶಾಲಿಯಾಗುವಂತೆ ಜಗದೀಶನನ್ನು ಪ್ರಾರ್ಥಿಸುವೆನೆಂದೂ ಅಪ್ಪಣೆಕೊಡಿಸಿ ಸ್ವದೇಶಗಳಿಗೆ ತೆರಳಲು ಪ್ರತಿನಿಧಿಗಳಿಗೆಲ್ಲಾ ಉತ್ತರವಿತ್ತರು.

ಮಳೆಯ ಯೋಗ.

ಈಗ ನಡೆಯುವ ಘೋರಯುದ್ಧದ ಮೂಲಕ ಧಾನ್ಯದ ಬೆಲೆಯು ಒಂದಕ್ಕೆ ನಾಲ್ಕರಷ್ಟಾಗಿರುತ್ತದೆ. ಸಾಲದ್ದಕ್ಕೆ ಈ ಮಾಸದಲ್ಲಿ ಇಲ್ಲಿಯವರೆಗೂ ಸಸ್ಯಾನುಕೂಲವೃಷ್ಟಿಯಾಗದ್ದರಿಂದ ಬಹು ಜನರು ಕಷ್ಟಪಡುತ್ತಿರುವರು. ಇದೇ ಪ್ರಕಾರ ಮುಂದೆಯೂ ಅನಾವೃಷ್ಟಿಯಾಗಿ ದುರ್ಭಿಕ್ಷ ಎಲ್ಲಾಗುವುದೋ ಎಂದು ಶ್ರೀಮಂತರೂ ದರಿದ್ರರೂ ಕೂಡಿಯೇ ಹೃದ್ರೋಗ ಹಚ್ಚಿಕೊಂಡಿರುವರು. ಅಂಥವರಿಗೆ ನಾವು ಈ ಮೂಲಕ ತಿಳುಹಿಸುವದೇನಂದರೆ— ಇದೇ ಆಷಾಢಕೃಷ್ಣ ೯ ಗುರುವಾರದಲ್ಲಿ ಶುಕ್ರನು ಮೀನನವಾಂಶಕ್ಕೆ ಬರುತ್ತಾನೆ. ಅದೇ ದಿವಸ ಮಧ್ಯಾಹ್ನದ ತರುವಾಯ ಚಂದ್ರನೂ ಮೀನನವಾಂಶಕ್ಕೆ ಬರುವನು. “ವೃಷಕರ್ಕಝಷಾಂಶಸ್ಥೋ ಬಹುವೃಷ್ಟಿಂ ಸಿತಾಕರೋ || ಕುರುತೇ ಜಲಭೇ ಶುಕ್ರ ಕರ್ಕಮೀನನಿಜಾಂಶಗಃ” ಎಂಬುವ ಪ್ರಮಾಣಾನುಸಾರವಾಗಿ ೯ ಗುರುವಾರದಿಂದ ಅತಿ ವೃಷ್ಟಿಯಾಗುವ ಯೋಗವದೆ. ಆದಾಗ್ಯೂ ಮೀನನವಾಂಶಕ್ಕೆ ಕುಜನು ಸಂಪೂರ್ಣ ದೃಷ್ಟಿಯಿಂದ ಈಕ್ಷಿಸುವದರಿಂದ ಅತಿವೃಷ್ಟಿಯಾಗದೆ ಸಸ್ಯಾನುಕೂಲವಾದ ವೃಷ್ಟಿಯಾಗುವದೆಂದು ನಿಶ್ಚಯವಾಗಿ ಹೇಳುತ್ತೇವೆ. ಮುಂದೆ ಶ್ರಾವಣದಲ್ಲಿ ಕುಜನ ವಿನಾ ಎಲ್ಲಾ ಗ್ರಹಗಳೂ ಸೌಮ್ಯಾಮೃತ ಜಲನಾಡಿಗಳಲ್ಲಿ ವಿಹರಿಸುವದರಿಂದ ಸುವೃಷ್ಟಿಯಾಗುವುದು. ಈ ಮೂಲಕ ದೇಶಕ್ಷೇಮವಾಗುವುದು.

ಮಹಾಗಾಂವ್ ಸಿದ್ಧಾಂತಿಗಳು.

ವಿಜ್ಞಾಪನೆ.

ಯುದ್ಧವು ಈಗಲೇ ಮುಗಿಯುವ ಚಿಹ್ನೆಯು ತೋರುವುದಿಲ್ಲ. ಪದಾರ್ಥಗಳ ಬೆಲೆಯೆಲ್ಲಾ ಹೆಚ್ಚಿರುವುದು ಸರ್ವರಿಗೂ ಗೊತ್ತೇ ಇದೆ. ತಥಾಪಿ ಹೊರಗಿನಿಂದ ಬಂದಲ್ಲದೆ ಗತ್ಯಂತರವಿಲ್ಲದ ಕಾಗದದ ಬೆಲೆಯು ಈಗ ೧ ಕ್ಕೆ ೬ ರಷ್ಟು ಏರಿಹೋಗಿದೆ. ಅಷ್ಟು ಕೊಟ್ಟರೂ ಬೇಕಾದ ಕಾಗದವು ಸಿಕ್ಕುವುದೇ ದುರ್ಲಭವಾಗಿದೆ. ಬೊಂಬಾಯಿ ಮದ್ರಾಸುಗಳಲ್ಲಿ ಅಷ್ಟೊ ಇಷ್ಟೊ ಸಿಕ್ಕಿದರೂ ಅಲ್ಲಿಂದ ಮೈಸೂರಿಗೆ ಬಂದು ಸೇರಲು ಹೊಗೆಬಂಡಿಗಳ ಕೊರತೆಯಿಂದ ಅನುಕೂಲವಿಲ್ಲವಾಗಿದೆ. ಈ ಕಾರಣದಿಂದಲೇ ವಿವರ್ಣವಾದ ಕಾಗದಗಳನ್ನು ನಾವು ಕಳೆದ ೩-೪ ಸಂಚಿಕೆಗಳಿಂದಲೂ ಉಪಯೋಗಿಸಿಕೊಳ್ಳಬೇಕಾಯಿತು. ಈ ಬೆಲೆ ಹೆಚ್ಚುಗೆಯಿಂದ ಪತ್ರಿಕಾ ಮುದ್ರಣದಲ್ಲಿ ನಮಗೆ ಒಂದೆರಡು ವರ್ಷಗಳಿಂದ ವಿಪರೀತವಾಗಿ ನಷ್ಟ ತಟ್ಟುತ್ತಿದ್ದರೂ ಕಟ್ಟಿಕೊಂಡ ಅಭಿಮಾನಕ್ಕಾಗಿ ಒದ್ದಾಡುತ್ತಿರಬೇಕಾಗಿದೆ. ಈ ವಿಷಮಸಮಯದಲ್ಲಿ ಅನೇಕ ಪತ್ರಿಕಾಕರ್ತರು ತಮ್ಮ ಪತ್ರಿಕೆಗಳ ವರ್ಗಣಿಯನ್ನು ನಿರ್ವಾಹವಿಲ್ಲದೆ ಹೆಚ್ಚಿಸಿದರು. ನಾವು ಹಾಗೇನೂ ಹದೆ ಇದುವರೆಗೂ ಸೈರಿಸಿಕೊಂಡೆವು. ಈಗ ಬಹಳ ದುರ್ಭರವಾಗಿಬಿಂದಿರುವುದು. ಆದುಕಾರಣ ಇಂದಿನಿಂದ ವರ್ಗಣಿಯ ಹಣವನ್ನು ವರ್ಷ ೧ ಕ್ಕೆ ೧ ರೂ ನಿಂದ ೧-೬-೦ ಗೆ ಹೆಚ್ಚಿಸಿರುತ್ತೇವೆ. ಪರಸ್ಥಳದವರು ಅಂಚೆವೆಚ್ಚ ಸೇರಿ ೨-೪-೦ ರೂ. ಗಳನ್ನು ಕೊಡಬೇಕಾಗುವುದು. ನಾವು ವರ್ಗಣಿಗಾಗಿ ಕಳುಹಿಸುವ ವಿ. ಪಿ. ಗಳನ್ನೆಲ್ಲಾ ಈ ಲೆಕ್ಕವನ್ನನುಸರಿಸಿಯೇ ಇನ್ನು ಮುಂದೆ ಕಳುಹಿಸುವೆವು. ಮನಿಯಾರ್ಡರ್ ದ್ವಾರಾ ಅವರಾಗಿ ವರ್ಗಣಿಯನ್ನು ಕಳುಹಿಸುವವರೂ ಈ ಲೆಕ್ಕವನ್ನೇ ಅನುಸರಿಸಬೇಕೆಂದು ಕೋರುತ್ತೇವೆ. ಭಾಷಾಭಿಮಾನಿಗಳೂ, ಮತಾಭಿಮಾನಿಗಳೂ, ದೇಶಾಭಿಮಾನಿಗಳೂ, ಪತ್ರಿಕಾಭಿಮಾನಿಗಳೂ ಸಹ ಈಗಣ ವಿಷಮಸ್ಥಿತಿಯ ಕಡೆಗೆ ಗಮನಿಸಿ, ಅಲ್ಪಮಾತ್ರವಾಗಿ ಚಂದಾ ಹೆಚ್ಚಿಸಿದರೂ ಇದುವರೆಗಿನಂತೆಯೇ ಉದಾರಭಾವದಿಂದ ಪತ್ರಿಕೆಯನ್ನು ಪೋಷಿಸಿಕೊಂಡು ಹೋಗುವವರಾಗಬೇಕೆಂದು ಪ್ರಾರ್ಥನೆ. ಪತ್ರಿಕರ್ತ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಆಗಸ್ಟ್ ತಾ|| ೪ ನೆಯ ಭಾನುವಾರ.

ಯುದ್ಧಕ್ಕೆ ನಾಲ್ಕು ವರ್ಷ ತುಂಬಿತು.

ಅಭೂತಪೂರ್ವವಾದ ಮಹಾಯುದ್ಧವು ಆರಂಭಿಸಿ ಇಂದಿಗೆ ನಾಲ್ಕು ವರ್ಷಗಳು ತುಂಬಿದುವು. ಆದರೂ ಪ್ರಳಯಹೇತುವಾದ ಆ ಯುದ್ಧವು ಇನ್ನೂ ಮುಗಿಯಲಿಲ್ಲ. ಜಗತ್ತಿಗೆ ಶಾಂತಿಯುಂಟಾಗಲಿಲ್ಲ. ಹೇಗಾದರೂ ಇದನ್ನು ಕೊನೆಗಾಣಿಸಿ ಲೋಕವನ್ನು ಈ ಮಹಾವಿಪತ್ತಿನಿಂದ ಸಂರಕ್ಷಿಸಬೇಕೆಂದು ಪ್ರಪಂಚದವರೆಲ್ಲರೂ ಈ ದಿವಸ ಪ್ರಾರ್ಥನೆಯ ಮೂಲಕ ಜಗದೀಶನಲ್ಲಿ ಮೊರೆಯಿಟ್ಟುಕೊಳ್ಳುವುದು ಯುಕ್ತವಾಗಿರುವುದು. ದಯಾಮಯನಾದ ಭಗವಂತನು ಕೃಪೆಮಾಡಿದರೆ ಮುಂದಣ ಇಂಥ ಕಾಲ ಬರುವುದರೊಳಗೆ ಯುದ್ಧದ ಸುದ್ದಿಯೇ ಇಲ್ಲದೆ ಶಾಂತಿಸಮಾಧಾನಗಳು ನಲಿದಾಡುವುದು ಅಸದಳವಲ್ಲ. ಈ ಕಾರಣದಿಂದಲೇ ನಮ್ಮ ಸಾರ್ವಭೌಮರು ಈ ದಿನ ತಮ್ಮ ಸಾಮ್ರಾಜ್ಯದಲ್ಲಿ ಯುದ್ಧಶಾಂತಿಗೋಸ್ಕರ ಭಗವತ್ಪ್ರಾರ್ಥನೆ ಮಾಡಲು ಏರ್ಪಡಿಸಿರುವರು. ಆಸ್ತಿಕಪ್ರಪಂಚವೆಲ್ಲವೂ ಈ ಕರ್ತವ್ಯವನ್ನು ನೆರವೇರಿಸುವುದೆಂಬುದಕ್ಕೆ ಲೇಶವೂ ಸಂಶಯವಿಲ್ಲ. ಸತ್ಯಧರ್ಮಗಳಿಗೆ ಪರಿಣಾಮದಲ್ಲಿ ಜಯವುಂಟೆಂಬುದಕ್ಕೆ ಪುರಾಣೇತಿಹಾಸಗಳಲ್ಲಿ ಅನೇಕೋದಾಹರಣೆಗಳು ಸಿಕ್ಕುವುವು. ಈಗಣ ಯುದ್ಧದಲ್ಲಿ ಅದಕ್ಕೆ ವ್ಯತಿರಿಕ್ತವಾದ ಫಲವು ಸಿದ್ಧಿಸುವುದಕ್ಕೆ ಕಾರಣವಿಲ್ಲ. ಈಗಣ ಯುದ್ಧವನ್ನು ಮಿತ್ರಮಂಡಲಿಯವರು ತೀಟೆಯ ಮೂಲಕ ತಾವಾಗಿ ಹೂಡಲಿಲ್ಲ. ಪರದೇಶಾಕ್ರಮಣ ದುರಾಶೆಯಿಂದ ಜರ್ಮನರೇ ಇದನ್ನು ಹೂಡಿದವರು. ಶತ್ರುಗಳ ದುರಾಶೆ ಮೊದಲಾದ ದೌಷ್ಟ್ಯಗಳಿಂದ ಸಣ್ಣಪುಟ್ಟ ಸಂಸ್ಥಾನಗಳೆಲ್ಲಾ ಸ್ವಾತಂತ್ರ್ಯವನ್ನು ಕಳೆದುಕೊಂಡು ಹಾಳಾಗುವಂತಾದುದರಿಂದ, ಅವನ್ನು ರಕ್ಷಿಸಿ ಜರ್ಮನರ ಲೋಕಕಂಟಕತ್ವವನ್ನು ಕೊಡೆದುಬಿಡುವುದಕ್ಕಾಗಿ ಇಂಗ್ಲಿಷರು, ಜಪಾನರು, ಅಮೇರಿಕನ್ನರು ಮೊದಲಾದ ದೊಡ್ಡದೊಡ್ಡ ರಾಷ್ಟ್ರಗಳೆಲ್ಲಾ ಜರ್ಮನಿಗೆ ಪ್ರತಿಭಟಿಸಿ ನಿಂತಿರುವುವು. ಆದುಕಾರಣ, ಪರದುಃಖವಿಮೋಚನ ವಿಪನ್ನರಕ್ಷಣ ಲೋಕಸ್ವಾತಂತ್ರ್ಯಪಾಲನರೂಪಸದ್ಧರ್ಮದ ಉದ್ಧಾರಕ್ಕಾಗಿಯೇ ಮಿತ್ರಮಂಡಲಿ ರಾಷ್ಟ್ರಗಳೆಲ್ಲವೂ ಸರ್ವಪರಿತ್ಯಾಗಕ್ಕೂ ಹಿಂಜರಿಯದೆ ಯುದ್ಧಮಾಡುತ್ತಿರುವುವು. ಅಧರ್ಮಕ್ಕೆ ಆದಿಯಲ್ಲಿ ಜಯವು ತೋರುವುದು ಸ್ವಭಾವವಾಗಿರುವಂತೆ ಜರ್ಮನರು ಇದುವರೆಗೆ ತಮ್ಮ ನೆರೆಹೊರೆಯ ಸಣ್ಣಪುಟ್ಟ ರಾಜ್ಯಗಳನ್ನು ಧ್ವಂಸಮಾಡಿ ಜಯವಿಜೃಂಭಣೆಯನ್ನು ಮಾಡಿಕೊಂಡರು. ಬೆಲ್ಜಿಯಂ ಸರ್ವಿಯಾ ರುಮೇನಿಯಾಗಳನ್ನು ಹುರಿದು ಮುಕ್ಕಿದರು. ರಷ್ಯಾವನ್ನು ಒಡೆದ ಅಳಗೆಯ ಚೂರುಕುಗಳಂತೆ ಮಾಡಿಟ್ಟರು. ಇಷ್ಟೆಲ್ಲಾ ಆದಬಳಿಕ ಪ್ಯಾರಿಸ್‌ಪ್ರಾಪ್ತಿ ಇಂಗ್ಲೆಂಡ್ ಅಭಿಯೋಗಗಳ ರೂಪವಾದ ತಮ್ಮ ಮುಖ್ಯ ಕಾಮಿತಾರ್ಥವನ್ನು ಸಾಧಿಸುವುದಕ್ಕೆ ಸರ್ವಸನ್ನಾಹವನ್ನೂ ಈಗ ಮಾಡುತ್ತಿರುವರು. ಇದುವರೆಗೆ ತಾವು ಹಾಳುಗೆಡವಿದ ದೇಶಗಳಿಂದ ಅಪರಿಮಿತವಾದ ಧನಕನಕ ಧಾನ್ಯಾದಿ ಸಂಪತ್ತನ್ನು ಸೂರೆಮಾಡಿ ಜರ್ಮನರು ತಮ್ಮ ದಗ್ಧೋದರವನ್ನು ತುಂಬಿಸಿಕೊಂಡರು. ಆ ರುಚಿಯು ನತ್ತಿಗೇರಿರುವುದರಿಂದಲೂ, ೧೮೭೦ ರಲ್ಲಿ ನಡೆದ ಫ್ರಾಂಕೊ ಜರ್ಮನ್ ಯುದ್ಧದಲ್ಲಿ ಜರ್ಮನರು ಫ್ರಾನ್ಸಿನಿಂದ ಮಹಾಲಾಭವನ್ನು ಹೊಂದಿದ ರುಚಿಯಿಂದಲೂ ಮರಳಿ ಫ್ರಾನ್ಸಿನ ಮೇಲೆ ಅವರು ಕಣ್ಣಿಟ್ಟಿರುವುದು ಆಶ್ಚರ್ಯವೇನೂ ಅಲ್ಲ. ಆದರೆ ಈ ಪ್ರಯತ್ನದಲ್ಲಿ ತೊಡಗಿ ಜರ್ಮನರು ೪ ವರ್ಷಗಳಿಂದಲೂ ನಾನಾ ತಂತ್ರಗಳನ್ನು ಮಾಡಿದರೂ ಸಾಹಸವನ್ನೆಸಗಿದರೂ ಮಿತ್ರಮಂಡಲಿಯ ಅಸಾಧಾರಣ ಯತ್ನದಿಂದಲೂ ಧೈರ್ಯಶೌರ್ಯ ಸಾಹಸಗಳಿಂದಲೂ ಅವರ ಇಷ್ಟಾರ್ಥವು ಇನ್ನೂ ಕೊನೆಗೂಡಲಿಲ್ಲ. ಮುಂದಾದರೂ ಅದು ಕೊನೆಮುಟ್ಟುವ ಸಂಭವವು ಕಾಣುವುದಿಲ್ಲ.

ಕಳೆದ ೧ ಪಕ್ಷದಿಂದ ಬರುತ್ತಿರುವ ಯುದ್ಧವಾರ್ತೆಗಳನ್ನು ನೋಡಲಾಗಿ ಮಿತ್ರಮಂಡಲಿಯ ಪರಿಣಾಮವಿಜಯದ ಶುಭಚಿಹ್ನೆಗಳಿಗೆ ಆರಂಭವಾಯಿತೆಂದೇ ಕಾಣುತ್ತಿರುವುದು. ಇದು ಮಿತ್ರಪ್ರಪಂಚಕ್ಕೆಲ್ಲಾ ಸಂತೋಷಪ್ರದವಾಗಿರುವುದು. ಜರ್ಮನರಿಗೆ ಪ್ಯಾರಿಸ್ಸಿನ ಆಶೆಯನ್ನು ಬಿಟ್ಟೇಬಿಡಬೇಕಾದ ಅವಸ್ಥೆಯು ಒದಗಿದುದು ಹಾಗಿರಲಿ; ಅವರಿಗೆ ಆತ್ಮರಕ್ಷಣೆಯೇ ದುರ್ಭರವಾಗುವ ಸ್ಥಿತಿಯು ಬರುವುದರಲ್ಲಿದೆಯೆಂತಲೂ ತೋರುವುದು. ಮೊಟ್ಟಮೊದಲು ಜರ್ಮನರು ಪ್ಯಾರಿಸ್ಸಿಗೆ ನುಗ್ಗಬೇಕೆಂದು ೧೯೧೪ ನೆ ವರ್ಷದಲ್ಲಿ ಉತ್ತರದ ಕಡೆಯಿಂದ ಸಾಗಿ ಆ ಪಟ್ಟಣಕ್ಕೆ ೧೬ ಮೈಲಿಗಳ ಸಮೀಪದವರೆಗೆ ಬಂದರು. ಆಗ ಫ್ರೆಂಚ್ ಸೇನಾಧ್ಯಕ್ಷರಾಗಿದ್ದ ಜನರಲ್ ಜೋಫರ್‌ರವರ ಸಾಹಸದಿಂದ ಜರ್ಮನರ ಪುರೋಗಮನಕ್ಕೆ ಮಾರ್ನೆನದಿಯ ಹತ್ತಿರ ತಡೆಯುಂಟಾಗಿ ಪ್ಯಾರಿಸ್ಸು ರಕ್ಷಿಸಲ್ಪಟ್ಟಿತು. ಆ ದಾರಿಯನ್ನು ಬಿಟ್ಟು ವರ್ಡನ್ನಿನಕಡೆಯಿಂದ ಪ್ಯಾರಿಸ್ಸಿಗೆ ನುಗ್ಗುವುದಕ್ಕೆ ೧೯೧೬ ರಲ್ಲಿ ಮತ್ತೊಂದು ಸಲ ಜರ್ಮನ್ ಯುವರಾಜನು ಅಪಾರ ಸಾಹಸವನ್ನು ಮಾಡಿ, ಕಡೆಗೆ ವಿಪರೀತ ನಷ್ಟದೊಡನೆ ಆತನೂ ಹಿಮ್ಮೆಟ್ಟಬೇಕಾಯಿತು. ಈಗ ಜರ್ಮನರು ಪೂರ್ವದಿಕ್ಕಿನರಂಗದ ತಮ್ಮ ಯುದ್ಧಕಾರ್ಯಗಳನ್ನೆಲ್ಲಾ ಕೊನೆಮುಟ್ಟಿಸಿಕೊಂಡು ಆ ರಂಗದ ಸೈನ್ಯಗಳನ್ನೆಲ್ಲಾ ಈ ಪಶ್ಚಿಮರಂಗಕ್ಕೆ ಸೇರಿಸಿ ಪ್ಯಾರಿಸ್ಸನ್ನು ಹಿಡಿದೇ ತೀರಬೇಕೆಂದು ದೃಢಸಂಕಲ್ಪರಾಗಿ ಮತ್ತೆ ಮಾರ್ನೆನದಿಯ ಮುಖದಲ್ಲೇ ಪ್ರಯತ್ನಿಸಿದರು. ಈ ಸಲ ಮಾಡಿದ ಈ ೫ನೆ ಪ್ರಯತ್ನದಲ್ಲಿ ಅವರು ೩-೪ ಅವಸ್ಕಂದನಗಳನ್ನು ಸಾಗಿಸಿ ಓಯಿ, ಎಯ್ಸನ್ ನದಿಗಳನ್ನು ದಾಟಿ ಮಿತ್ರಮಂಡಲಿ ಸೈನ್ಯಗಳನ್ನು ಹಿಂದಕ್ಕೆ ನೂಕಿ, ಹಾಗೂ ಹೀಗೂ ರೀಮ್ಸಿನ ದಕ್ಷಿಣಭಾಗದವರೆಗೆ ಬಂದು ಸೇರಿದರು. ಹೇಗೂ ೮೦೦ ಮೈಲಿಯಗಲದ ಪ್ರದೇಶವು ಅವರ ಸ್ವಾಧೀನವಾಯಿತು. ಕೊನೆಯ ೫ನೆಯ ಅವಸ್ಕಂದನದಲ್ಲಿ ಅವರು ಮಾರ್ನೆನದಿಯನ್ನೂ ಕೂಡ ದಾಟಿ ಅದರಿಂದೀಚೆಗೆ ೪-೫ ಮೈಲಿಗಳ ದೂರ ನುಗ್ಗಿಬಂದರು. ಅಲ್ಲಿಗೆ ಅವರ ವಿಜಯಯೋಗವು ಕೊನೆಗಂಡಿತು. ಅಲ್ಲಿ ಫ್ರೆಂಚ್ ಅಮೇರಿಕನ್ ಸೈನ್ಯಗಳಿಂದೂ ಮಹಾ ರಭಸದಿಂದ ಶತ್ರುಗಳನ್ನು ತಡೆದುದಲ್ಲದೆ ಬೇರೆಕಡೆಯಿಂದ ಅವರ ಮೇಲೆ ಅವಸ್ಕಂದನವನ್ನಾರಂಭಿಸಿ ಹಿಮ್ಮೆಟ್ಟಿಸುವುದಕ್ಕೆ ಮೊದಲು ಮಾಡಿದರು. ಅಲ್ಲಿಂದ ಹಿಂಗಾಲು ಕಿತ್ತ ಜರ್ಮನರಿಗೆ ಇನ್ನೂ ನಿಲ್ಲುವುದಕ್ಕೆ ಅವಕಾಶವನ್ನು ಮಿತ್ರಮಂಡಲಿ ಕೊಟ್ಟಿಲ್ಲ. ಜರ್ಮನರು ಮಾರ್ನೆನದಿಯನ್ನು ಬಿಟ್ಟು ಹಿಂದಕ್ಕೋಡಿದುದಲ್ಲದೆ ಅದರಾಚೆಗಿರುವ ಅರ್ಕ್ ನದಿಯನ್ನೂ ದಾಟಿ ಓಡಿಹೋಗಿರುವರು. ಅಮೇರಿಕನ್ ಫ್ರೆಂಚ್ ದಳವು ಬೆನ್ನಂಟಿ ಓಡಿಸಿಕೊಂಡು ಹೋಗುತ್ತಿರುವುವು. ಇದರಿಂದ ಜುಲೈ ತಿಂಗಳಲ್ಲಿ ಅವರು ಜಯಿಸಿದ್ದ ಪ್ರದೇಶಗಳನ್ನೆಲ್ಲಾ ಸಂಪೂರ್ಣವಾಗಿ ಕಳೆದುಕೊಂಡುದಲ್ಲದೆ ಮೇ ತಾ|| ೨೭ ರಲ್ಲಿ ಅವರು ಆಕ್ರಮಿಸಿದ್ದ ಸ್ಥಾನಗಳಲ್ಲಿ ಕೆಲವನ್ನೂ ಕಳೆದುಕೊಳ್ಳಬೇಕಾಯಿತು. ೪೦ ಗ್ರಾಮಗಳೂ ಮುಖ್ಯವಾದ ಲೋಹಮಾರ್ಗಗಳೂ ದುರ್ಗಮವಾದ ಅಡವಿಗಳೂ ಗುಡ್ಡಗಳೂ ಸಹ ಮಿತ್ರಮಂಡಲಿಯ ವಶವಾದುವು. ಈ ಸಂದರ್ಭದಲ್ಲಿ ಪ್ಯಾರಿಸ್ಸಿನ ಕಡೆಗೆ ಸಾಗುವುದಕ್ಕೆ ಅತಿ ಮುಖ್ಯ ರಕ್ಷಣಸ್ಥಾನಗಳಾಗಿದ್ದ ಷಾಟೋಥಿಯೆರಿ, ಸೋಯಿಸನ್ಸ್ ಎಂಬ ಪಟ್ಟಣಗಳಲ್ಲಿ ಮೊದಲನೆಯದನ್ನು ಜರ್ಮನರು ಕಳೆದುಕೊಂಡರು. ೨ ನೆಯದೂ ಇಷ್ಟರಲ್ಲೇ ಮಿತ್ರಮಂಡಲಿ ಹಸ್ತಗತವಾಗುವುದರಲ್ಲಿದೆ. ಇದು ಕಳೆದುಹೋಗಿಬಿಟ್ಟರೆ ಇನ್ನುಮುಂದೆ ಈ ದಿಕ್ಕಿನಿಂದ ಪ್ಯಾರಿಸ್ಸಿಗೆ ನುಗ್ಗುವ ಆಸೆಯೇ ಶತ್ರುಗಳಿಗೆ ಉಳಿಯುವುದಿಲ್ಲ. ಇದುವರೆಗೆ ಈ ಪ್ರಾಂತದ ಯುದ್ಧದಲ್ಲಿ ಶತ್ರುಗಳ ೨೫ ಸಾವಿರ ಸೈನಿಕರು ಸೆರೆಸಿಕ್ಕಿಹೋಗಿರುವುದಲ್ಲದೆ ೫೦೦ ರ ವರೆಗೆ ಫಿರಂಗಿಗಳನ್ನೂ ಕಳೆದುಕೊಂಡಿದ್ದಾರೆ. ಅವರಿಗೆ ಒಟ್ಟು ಸೇನಾನಷ್ಟವು ೨ ಲಕ್ಷಕ್ಕೆ ಏರಿಹೋಗಿರುವುದೆಂದು ಎಣಿಸಲ್ಪಟ್ಟಿದೆ. ಅಲ್ಲದೆ ಅವರ ಕಡೆಯ ಆಣೆಯಾದ ಉತ್ತಮತರಗತಿಯ ಸೈನ್ಯಗಳೆಲ್ಲಾ ಇದುವರೆಗೇ ಕಾದಾಡಿ ಲಯವಾಗಿ ಹೋಗಿರುವ ಕಾರಣ ಈಗ ಕಾಳಗ ಮಾಡತಕ್ಕ ಅವರ ಸೈನ್ಯವೆಲ್ಲಾ ೨ ನೆ ತರಗತಿಯವುಗಳಾಗಿರುತ್ತವೆ. ಕಾದಿಟ್ಟ ಸೈನ್ಯಗಳೂ ಕೂಡ ಅವರಿಂದ ಉಪಯೋಗಿಸಲ್ಪಟ್ಟು ಹೋಗಿರುವ ಕಾರಣ ನೂತನವಾಗಿ ಸಮುದ್ರತರಂಗದಂತೆ ಪ್ರತಿದಿನವೂ ಬಂದು ಇಳಿಯುತ್ತಿರುವ ಅಮೇರಿಕಾ ಸೈನ್ಯದ ಮುಂದೆ ಇನ್ನುಮೇಲೆ ಜರ್ಮನರು ಎದೆಗೊಟ್ಟು ಕಾಯುವುದು ಸುಲಭವಾಗಿಲ್ಲ. ಆದರೂ ಜರ್ಮನರು ಸಂಪೂರ್ಣವಾಗಿ ಯುದ್ಧಾಂಗಣವನ್ನೇ ಬಿಟ್ಟು ಪಲಾಯಿತರಾಗುವರೆಂದು ಹೇಳಲಾಗುವುದಿಲ್ಲ. ಇನ್ನೂ ಕೆಲ ಯುದ್ಧಗಳನ್ನು ಅವರು ಸಾಗಿಸದೆ ಬಿಡರು. ಇಂಗ್ಲಿಷ್ ಸೇನಾಪಂಕ್ತಿಯ ಮುಂದೆ ಅವರು ಫ್ಲಾಂಡರ್ಸಿನಲ್ಲಿ ಯುದ್ಧವನ್ನು ಹೂಡುತ್ತಾರೋ ಇಲ್ಲವೋ ಹೇಳಲಾಗುವುದಿಲ್ಲ. ಒಂದುವೇಳೆ ಹೂಡಿದರೂ ಫಲಸಿದ್ಧಿಯಾಗಲಾರದು. ದಿನದಿನಕ್ಕೆ ಶತ್ರುಗಳ ಸೇನಾಬಲವು ಅಶಕ್ತವಾಗುತ್ತಿದೆಯೆಂಬುದಕ್ಕೆ ಯುದ್ಧಪರಿಣಾಮವೇ ನಿದರ್ಶನವಾಗಿದೆ. ಮಿತ್ರಮಂಡಲಿಯ ಬಲವಾದರೊ ಕ್ರಮೇಣ ಹೆಚ್ಚುತ್ತಿದೆ. ಈ ವರ್ಷ ಮುಗಿದು ೧೯೧೯ ನೆ ವರ್ಷ ಬರುವುದರೊಳಗಾಗಿ ಮಿತ್ರಮಂಡಲಿ ಸೇನಾಬಲವು ಅತ್ಯಧಿಕವಾಗುವುದು. ಆಗ ಜರ್ಮನರ ಗತಿ ಏನಾಗಿಹೋಗುವುದೋ!

ಅತ್ತ ಪೂರ್ವದ ಕಡೆ ರಷ್ಯಾದ ಸ್ಥಿತಿಯನ್ನು ಗಮನಿಸಿದರೆ ಅಲ್ಲೂ ಜರ್ಮನರ ತಂತ್ರವೆಲ್ಲಾ ತಲೆಕೆಳಗಾಗುವಂತೆ ಕಾಣುತ್ತಿದೆ. ಅಲ್ಲಿಗೂ ಜರ್ಮನರು ಮರಳಿ ಸೈನ್ಯವನ್ನು ಕಳುಹಿಸಬೇಕಾದ ಹೊತ್ತು ಬರುವಂತಿದೆ. ಜಪಾನರು ಸೈಬೀರಿಯಾದಲ್ಲಿ ಶಸ್ತ್ರಾಸ್ತ್ರಧಾರಣ ಮಾಡಿ ನಿಂತಿದ್ದಾರೆ. ಇಟಲಿ ರಂಗದಲ್ಲಿ ಆಸ್ಟ್ರಿಯನ್ನರು ಸೋತು ಕೈಕಾಲುಬಿಟ್ಟು ನಿಂತಿದ್ದಾರೆ. ಅವರಿಗೆ ಸಹಾಯಮಾಡಿ ಜಯಸಂಪಾದನೆಮಾಡಿಕೊಡುವ ಶಕ್ತಿಯು ಜರ್ಮನಿಗೆ ಈಗ ಇರುವುದಿಲ್ಲ. ತುರ್ಕಿ ಬಲ್ಗೇರಿಯಗಳು ಜರ್ಮನರ ಸಹಾಯವನ್ನು ಕೋರದೆ ತಂತಮ್ಮ ಪಾಲನೆಯನ್ನು ತಾವೇ ಮಾಡಿಕೊಳ್ಳಬೇಕಾದ ಅವಸ್ಥೆಯು ಅವಕ್ಕೆ ಪ್ರಾಪ್ತವಾಗಿದೆ. ಆಸ್ಟ್ರಿಯಾ ರಾಜ್ಯಾಂಗ ಸಭೆಯಲ್ಲಿ ಕೌಂಟ್ ಸೆಜರ್ನಿನ್‌ರವರು ಭಾಷಣಮಾಡುವಾಗ್ಗೆ "ಜರ್ಮನರು ಪರರಾಜ್ಯಾಕಾಂಕ್ಷೆಯಿಂದ ಇನ್ನೂ ಯುದ್ಧವನ್ನೇ ಸಾಗಿಸುವುದಾದರೆ ಆಸ್ಟ್ರಿಯಾವು ಇನ್ನು ಜರ್ಮನಿಯ ಜತೆಯನ್ನು ಬಿಟ್ಟುಬಿಡುವುದು" ಎಂದು ನುಡಿದಿರುತ್ತಾರೆ. ಇದನ್ನು ನೋಡಲಾಗಿ ಅವರಿಗೂ ಯುದ್ಧದಲ್ಲಿ ಎಷ್ಟು ಬೇಸರುಹುಟ್ಟಿದೆಯೆಂಬುದು ಗೊತ್ತಾಗುವುದು. ಅಲ್ಲದೆ ಅವರ ರಾಜ್ಯದ ಕ್ಷಾಮಾದಿ ದುಸ್ಥಿತಿಗಳ ಕಾರಣದಿಂದಲೂ ಅವರಲ್ಲಿ ಯುದ್ಧವನ್ನು ಸಾಗಿಸುವ ಹುರುಪು ಉಳಿದಿರುವುದಿಲ್ಲ. ಜರ್ಮನಿ-ಮಿತ್ರಮಂಡಲಿಗಳಿಗೆ ಇರುವಷ್ಟು ವೈರಭಾವವು ಆಸ್ಟ್ರಿಯನ್ನರೊಡನೆ ಇರುವುದಿಲ್ಲ. ಆಸ್ಟ್ರಿಯಾವು ಜರ್ಮನಿಯ ಜತೆಯನ್ನು ಬಿಟ್ಟು ಪ್ರತ್ಯೇಕ ಸಂಧಿ ಮಾಡಿಕೊಂಡುಬಿಟ್ಟರೆ ಜರ್ಮನಿಯ ಅವಸ್ಥೆಯೇನಾಗುವುದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಇದೇ ಭೀತಿಯನ್ನು ಜರ್ಮನಿಗೆ ತೋರಿಸಿ ಆಸ್ಟ್ರಿಯನ್ನರು ಮಿತ್ರಮಂಡಲಿಗೂ ಜರ್ಮನಿಗೂ ಮಧ್ಯಸ್ಥಗಾರರಾಗಿ ನಿಂತು ಸಂಧಿಯನ್ನು ಮಾಡಿಸಿಬಿಟ್ಟರೆ ಯುದ್ಧವು ಬೇಗನೆ ಶಾಂತವಾಗಿಹೋದೀತು. ಇಂಥ ಪರಿಣಾಮವನ್ನುಂಟುಮಾಡಿದ ಕೀರ್ತಿಯು ಅವರ ಪಾಲಿಗೆ ಉಳಿಯುವುದು. ಅವರ ಮಾತನ್ನು ಜರ್ಮನರು ಕೇಳದೆಹೋದರೆ ಮುಂದಣ ವರ್ಷದಲ್ಲಿ ಸಂಪೂರ್ಣ ಪರಾಜಯವನ್ನು ಹೊಂದಿ ಮಿತ್ರಮಂಡಲಿಯವರು ಹೇಳಿದ ಸಂಧಿನಿಬಂಧನೆಗಳಿಗೆ ತಲೆ ಬಾಗಬೇಕಾದ ಸ್ಥಿತಿಯು ಅವರಿಗೆ ಪ್ರಾಪ್ತವಾಗದೆ ಹೋಗಲಾರದು. ಅಂತು ಯಾವ ರೀತಿಯಿಂದಲಾದರೂ ಈ ಮುಂದಣ ೫ನೆಯ ವರ್ಷದಲ್ಲಿ ಯುದ್ಧಕ್ಕೆ ಅಂತ್ಯವುಂಟಾಗುವ ಮಾರ್ಗವನ್ನು ಜಗದೀಶನು ಒದಗಿಸಿ ಲೋಕಸಂರಕ್ಷಣೆಯನ್ನು ಮಾಡಲೆಂದು ನಮ್ಮ ವಾಚಕರೆಲ್ಲರೂ ಈ ಯುದ್ಧವರ್ಷಾದಿಸಂಧಿರೂಪವಾದ ಮಹಾಪರ್ವಕಾಲದಲ್ಲಿ ಭಗವತ್ಪ್ರಾರ್ಥನೆಯನ್ನು ಮಾಡುವವರಾಗಲೆಂದೂ, ಪುರುಷಯತ್ನರೂಪವಾದ ಜನಧನಸಹಾಯವನ್ನು ಯುದ್ಧಕ್ಕೆ ಒದಗಿಸಿಕೊಡಲು ತತ್ಪರರಾಗಲೆಂದೂ ಶ್ರುತಪಡಿಸುವೆವು.

ಒಳದೇಶದ ವೃತ್ತಾಂತಗಳು.

ಮ|| ಬಾನರ್ಜಿಯವರು ಕೆಲಸದಮೇಲೆ ಬಂದಬಳಿಕ ಮ|| ವಿ. ರಾಘವೇಂದ್ರರಾಯರು ೩ ನೆ ಕೌನ್ಸಿಲರಾಗಿರಲು ನಿಯಮಿಸಲ್ಪಟ್ಟಿದ್ದಾರೆ.

ಪ್ರತ್ಯೇಕಪ್ರಾತಿನಿಧ್ಯಕ್ಕೆ ತಡೆಗಟ್ಟುಹಾಕುವುದು; ಅವರವರಿಗೆ ಬೇಕಾದವರಿಗೆ ಅವರುಗಳು ಓಟುಕೊಡುತ್ತಿದ್ದರೆ ಅದಕ್ಕೆ ಜಾತಿದ್ವೇಷವೆಂದು ಹೆಸರಿಡುವುದು, ಇದಲ್ಲವೆ ಸ್ವಾರ್ಥಸಾಧನತಂತ್ರ?

ರಾಜಧಾನಿಯಲ್ಲಿ ಇನ್‌ಫ್ಲುಯಂಜಾ ರೋಗದ ಹಾವಳಿಯು ಪ್ರಬಲವಾಗಿದೆ. ಪ್ಲೇಗಿನ ಜತೆಗೆ ಇದೂ ತಲೆಹಾಕಿರುವುದರಿಂದ ಜನರು ತತ್ತರಿಸುತ್ತಿದ್ದಾರೆ. ಪ್ಲೇಗಿನ ಹಾವಳಿಯು ಸಾಮಾನ್ಯವಾಗಿದೆ.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರನ್ನು ಆರಿಸುವಿಕೆಯ ಕೆಲಸವು ಈದಿನಕ್ಕೆ ಮುಗಿಯುವುದು. ನಾಳೆಯ ದಿನ ಯಾರು ಯಾರಿಗೆ ಎಷ್ಟೆಷ್ಟು ಓಟುಗಳು ಬಂದಿವೆಯೆಂಬುದು ಗೊತ್ತುಮಾಡಲ್ಪಡುವುದು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರಾಗಿದ್ದ ಮ|| ಕೆ. ಸಿದ್ಧರಾಮಪ್ಪನವರು ಚಿತ್ರದುರ್ಗ ಡಿ|| ಗೂ, ಅಲ್ಲಿದ್ದ ಮ|| ಎಸ್. ಸುಬ್ಬರಾಯರು ಶಿವಮೊಗ್ಗಾ ಡಿ|| ಗೂ ವರ್ಗಮಾಡಲ್ಪಟ್ಟಿದ್ದಾರೆ.

ಅಧಿಕಾರ ರಹಸ್ಯರಕ್ಷಣ ವಿಷಯವಾದ ಶಾಸನವನ್ನೇರ್ಪಡಿಸುವುದಕ್ಕೆ ನಮ್ಮ ಸರ್ಕಾರದವರು ಯೋಚಿಸಿದ್ದಾರೆ. ಮುಂದಣ ತಿಂಗಳಲ್ಲಿ ನಡೆಯುವ ಶಾಸನ ನಿರ್ಮಾಣಸಭೆಯಲ್ಲಿ ಈ ವಿಷಯವು ಚರ್ಚಿಸಲ್ಪಡುವುದೆಂದು ಪ್ರಕಟವಾಗಿದೆ.

ಬರುವ ೧೦-೧೧ ನೇ ತಾರೀಖುಗಳಲ್ಲಿ ರಾಜಧಾನಿಯ ಟವನ್‌ಹಾಲು ಭವನದಲ್ಲೂ ಆವರಣದಲ್ಲೂ ಫಲಪುಷ್ಪ ಪ್ರದರ್ಶನವು ನಡೆಯುವುದು. ಮೊದಲ ದಿನ ಪ್ರವೇಶಧನವು ದೊಡ್ಡವರಿಗೆ ೮ ಆಣೆ, ಮಕ್ಕಳಿಗೆ ೨ ಆಣೆ. ಮರುದಿನ ೪ ಆಣೆ, ೧ ಆಣೆ. ೨ನೇ ದಿನ ಬೆಳಗ್ಗೆ ಹೆಂಗುಸರು ನೋಟಕ್ಕೆ ಹೋಗಬಹುದು.

ಸಂಸ್ಥಾನದೊಳಗೆಲ್ಲಾ ಕಳೆದ ಜುಲೈ ತಾ|| ೧೯ ಕ್ಕೆ ಕಡೆಯಾದ ವಾರದಲ್ಲಿ ೧೯೮ ಮಂದಿಗೆ ಪ್ಲೇಗು ತಗುಲಿ ೧೩೩ ಮಂದಿಗಳು ಸತ್ತಿರುತ್ತಾರೆ. ಕಾಲರಾ ವ್ಯಾಧಿಯು ಬಹಳ ಕಡಿಮೆಯಾಗಿದೆ. ಆ ವಾರದಲ್ಲಿ ೨೦ ಮಂದಿಗೆ ತಗುಲಿ ೧೨ ಮಂದಿ ಸತ್ತಿರುತ್ತಾರೆ.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯು ಗುರುವಾರದಿಂದ ಆರಂಭವಾಗಿ ಇಂದಿನ ಸಾಯಂಕಾಲಕ್ಕೆ ಮುಗಿಯುವುದರಲ್ಲಿದೆ. ಈಸಲದ ಆರಿಸುವಿಕೆಯಲ್ಲಿ ಕೌನ್ಸಿಲರಾಗಬೇಕೆನ್ನುವವರ ಪ್ರಯತ್ನಗಳು ವಿಶೇಷವಾಗಿದ್ದುವು. ಜಯಾಪಜಯಗಳು ನಾಳೆ ಗೊತ್ತಾಗುವುದು.

ನಮ್ಮ ಸಂಸ್ಥಾನದೊಳಗೆಲ್ಲಾ ಕಳೆದ ಜುಲೈ ತಾ|| ೨೦ ರ ವರೆಗೆ ಸೈನ್ಯಕ್ಕೆ ೨೫೭೩ ಮಂದಿಗಳು ಸೇರಿದ್ದಾರೆ. ಇವರಲ್ಲಿ ಕ್ರೈಸ್ತರು ೧೭೫ ಮಂದಿ, ಮಹಮ್ಮದೀಯರು ೬೧೫ ಬ್ರಾಹ್ಮಣರು ೩೮ ರಜಪುತ್ರರು ೬೫ ಮರಾಟಿಯವರು ೨೨೫ ಪಂಚಮರು ೨೬೮ ಒಕ್ಕಲಿಗರು ೨೨೨ ಲಿಂಗಾಯತರು ೬೮ ಇತರ ಹಿಂದುಗಳು ೮೫೭.

ವೃತ್ತಾಂತರತ್ನಾಕರ ಎಂಬ ವಾರಪತ್ರಿಕೆಯ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿದೆವು. ಇದು ಚಿತ್ರದುರ್ಗ ಡಿಸ್ಟ್ರಿಕ್ಟ್ ಆರ್ಯಸಾಧಕ ಸಂಘದ ಆಶ್ರಯದಿಂದ ಪ್ರಕಟಿಸಲ್ಪಡುವ ಪತ್ರಿಕೆ. ಇದರಲ್ಲಿ ಡಿಸ್ಟ್ರಿಕ್ಟಿನ

ಮುಖ್ಯ ವಿಷಯಗಳೂ ಸೈನ್ಯಕ್ಕೆ ಜನರನ್ನು ಸೇರಿಸಲು ಪ್ರೋತ್ಸಾಹಿಸುವ ವಿಷಯಗಳೂ ಹೆಚ್ಚಾಗಿವೆ. ಇದರ ಚಂದಾ ೨-೧೩-೦.

ಈಸಲದ ರಾಜಧಾನಿ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಗೆ ನಡೆದ ಏರ್ಪಾಡುಗಳಲ್ಲಿ ಕೆಲವು ನ್ಯೂನತೆಗಳುಂಟಾಗಿರುವ ಹಾಗೆ ನಮ್ಮ ತಿಳುವಳಿಕೆಗೆ ಬಂದಿದೆ. ಹಲವುಮಂದಿ ಓಟರುಗಳಿಗೆ ಮ್ಯುನ್ಸಿಪಾಲಿಟಿಯಿಂದ ನೋಟೀಸೇ ಹೋಗಿಲ್ಲ. ಮತ್ತೊಂದು ಮೊಹಲ್ಲೆಯಲ್ಲಿ ಸಂಬಂಧವಿಲ್ಲದ ಕೆಲ ಜನರಿಗೆ ಬೇರೆ ಮೊಹಲ್ಲೆಯ ಕೌನ್ಸಿಲರುಗಳಿಗೆ ಓಟುಕೊಡಲು ನೋಟೀಸು ಹೋಗಿದ್ದಿತು.

ಜನರಯ್ಯ ಎಂಬ ಪಂಚಮನು ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರಾಗಬೇಕೆಂದು ಮ್ಯುನ್ಸಿಪಾಲಿಟಿಗೆ ಅರ್ಜಿಯನ್ನು ಬರೆದುಕೊಂಡಿರಲು ಆತನು ಮ್ಯುನ್ಸಿಪಲ್ ಕಂಟ್ರಾಕ್ಟರಾಗಿರುವುದರಿಂದ ಕೌನ್ಸಿಲರಾಗಿ ಬರುವುದಕ್ಕೆ ಅವಕಾಶವಿಲ್ಲವೆಂದು ತಿರಸ್ಕರಿಸಲ್ಪಟ್ಟನಂತೆ. ಹಿಂದೆ ಒಂದುಸಲ ಈತನೇ ಹೀಗೆ ಉದ್ಯುಕ್ತನಾಗಿರಲು, ಆ ವರ್ಷದ ಮೊಹತರ್ಪಾ ಕಂದಾಯವನ್ನೆಲ್ಲಾ ಸಲ್ಲಿಸಿರಲಿಲ್ಲವೆಂಬ ಕಾರಣದಿಂದ ತಳ್ಳಿಹಾಕಲ್ಪಟ್ಟಿದ್ದನು. ಕಂಟ್ರಾಕ್ಟರಾದವನು ಕೌನ್ಸಿಲರಾಗಲು ಅವಕಾಶವಿಲ್ಲದಿದ್ದರೆ, ವಿಧಿಪ್ರಕಾರ ಕ್ರಿಮಿನಲ್ ಶಿಕ್ಷೆಯನ್ನನುಭವಿಸಿದ ಮನುಷ್ಯನು ಒಂದಾನೊಂದು ಮ್ಯುನ್ಸಿಪಾಲಿಟಿಯ ವೈಸ್ ಪ್ರೆಸಿಡೆಂಟಾಗಲು ಅರ್ಹನಾಗಿರಬಹುದೆ?

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರ ಚುನಾವಣೆಕಾಲದಲ್ಲಿ ಜಾತಿದ್ವೇಷಗಳಿಗೆ ಅವಕಾಶಕೊಡಲ್ಪಟ್ಟಿತೆಂದೂ ಅದು ಸರಿಯಲ್ಲವೆಂದೂ ಎಲ್ಲರೂ ಗುಣೈಕಪಕ್ಷಪಾತಿಗಳಾಗಿರಬೇಕೆಂದೂ ಸಂಪದಭ್ಯುದಯವು ಹೇಳಿರುತ್ತದೆ. ಹೀಗೆ ಹಿತಬೋಧೆಮಾಡುವ ಸಂಪದಭ್ಯುದಯವೇ ಮ್ಯುನ್ಸಿಪಲ್ ಕೌನ್ಸಿಲುತನಕ್ಕೆ ಉಮೇದುವಾರರಾಗಿರುವವರ ಗುಣಶ್ಲಾಘನೆಯನ್ನು ಮಾಡುವಾಗ್ಗೆ ಬ್ರಾಹ್ಮಣರುಗಳ ಹೆಸರನ್ನೂ ಅವರ ಮಹತ್ವಗಳನ್ನೂ ಮಾತ್ರ ವರ್ಣಿಸಿಬಿಟ್ಟು ಇತರರಲ್ಲಿ ಯಾರೊಬ್ಬರ ಹೆಸರನ್ನೂ ಎತ್ತದೆಯೇ ಹೋಗಿರುತ್ತದೆ. ಇತರ ಕ್ಯಾಂಡಿಡೇಟುಗಳಾದರೂ ಕೌನ್ಸಿಲರಾಗುವುದಕ್ಕೆ ತಕ್ಕ ಗುಣಗಳು ಇಲ್ಲವೇ ಇಲ್ಲವೆಂಬುದೇ ಇದರ ಭಾವವಾಗಿರಬೇಕು.

ಇದೇ ತಿಂಗಳು ತಾ|| ೧ರಿಂದ ಮೈಸೂರು ಅರಸೀಕೆರೆ ಲೋಹಮಾರ್ಗದಲ್ಲಿ ತಿರುಗುವ ಹೊಗೆ ಬಂಡಿಗಳ ಕಾಲವು ಸ್ವಲ್ಪ ವ್ಯತ್ಯಾಸಮಾಡಲ್ಪಟ್ಟಿದೆ. ಆದರಪ್ರಕಾರ ಮೈಸೂರಿನಿಂದ ಮಧ್ಯಾಹ್ನ ೨-೨೦ಕ್ಕೆ ಹೊರಟ ಬಂಡಿಯು ಹೊಳೆನರಸೀಪುರಕ್ಕೆ ೬-೩೩ಕ್ಕೂ ಅರಸೀಕೆರೆಗೆ ರಾತ್ರಿ ೧೦-೩೦ ಕ್ಕೂ ಸೇರುವುದು. ಅರಸೀಕೆರೆಯಿಂದ ಬೆಳಗಿನ ಜಾವ ೫-೧೫ ಕ್ಕೆ ಹೊರಟ ಬಂಡಿಯು ಹೊಳೆನರಸೀಪುರಕ್ಕೆ ೯-೨೨ ಕ್ಕೂ ಮೈಸೂರಿಗೆ ೧-೩೦ ಕ್ಕೂ ಬಂದು ಸೇರುವುದು. ಇದರಿಂದ ಪ್ರಯಾಣಕಾಲವು ಅತ್ಯಂತವಾಗಿ ||| ಗಂಟೆಯಷ್ಟು ಹೆಚ್ಚಿದಂತಾಯಿತು. ಮೈಸೂರ ಕಡೆಯಿಂದ ಬೆಳಗಿನ ಬಂಡಿಯೊಂದನ್ನೂ ಅರಸೀಕೆರೆಯಿಂದ ಮಧ್ಯಾಹ್ನದ ಬಂಡಿಯೊಂದನ್ನೂ ಹೆಚ್ಚಿಗೆ ಬಿಡುವಂತಾದರೆ ಪ್ರಯಾಣಿಕರಿಗೆ ಅನುಕೂಲವಾದೀತು.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯ ಸಮಯದಲ್ಲಿ ಮ್ಯು|| ಅಧಿಕಾರಿಗಳು ಓಟರುಗಳ ವಿಷಯದಲ್ಲಿ ತೋರಿಸಿದ ಔದಾಸೀನ್ಯವು ಬಹಳ ಅಗೌರವಕರವಾಗಿತ್ತೆಂದು ಒಬ್ಬ ವಾರ್ತಾದಾರರು ಬರೆದಿರುತ್ತಾರೆ. ಮಾಡಿದ್ದ ಏರ್ಪಾಟುಗಳು ಸ್ವಲ್ಪವೂ ಸಮರ್ಪಕವಾಗಿರಲಿಲ್ಲ. ಬಂದ ಓಟರುಗಳಿಗೆ ಕುಳಿತುಕೊಳ್ಳುವುದಕ್ಕೆ ಬೆಂಚುಗಳೂ ಕೂಡ ಹಾಕಲ್ಪಟ್ಟಿರಲಿಲ್ಲ. ಸಂತೆಯು ಕೂಡಿದಂತೆ ಕಾಣುತ್ತಿತ್ತು. ಅದರ ಮೇಲೆ ಒಬ್ಬ ಕೌನ್ಸಿಲರ್ ದೊಡ್ಡ ಮನುಷ್ಯರಂತು ಇವರನ್ನೆಲ್ಲಾ ಹೊರಕ್ಕೆ ಕಳುಹಿಸಿಬಿಡಿ ಎಂದು ಇಂಗ್ಲೀಷಿನಲ್ಲಿ ವೈಸ್ ಪ್ರೆಸಿಡೆಂಟರಿಗೆ ಹೇಳಿ ಓಟರುಗಳ ಗೌರವವನ್ನು ಇನ್ನಷ್ಟು ಉಳಿಸಿದರು! ಮಂಡಿಪೇಟೆ ಪೊಲೀಸ್ ಸ್ಟೇಷನ್ನಿನಲ್ಲಿ ಸಿಟ್ಟಿಗೆ ೪ ಮಂದಿ ಕುಳಿತುಕೊಳ್ಳುವುದಕ್ಕೂ ಸ್ಥಳವಿಲ್ಲದಿರುವಲ್ಲಿ ಅಲ್ಲಿ ಕೌನ್ಸಿಲರ್ ಚುನಾವಣೆಗೆ ಏರ್ಪಾಡುಮಾಡಿದ್ದವರ ವಿವೇಕವನ್ನು ಎಷ್ಟು ಕೊಂಡಾಡಿದರೂ ತೀರದು. ಓಟರಾಗಿ ಹೋಗಿದ್ದ ಜನರೆಲ್ಲಾ ಬೀದಿಯಲ್ಲೇ ನಿಂತು ಕುಳಿತಿದ್ದು ಬರಬೇಕಾಯಿತು ಎಂದು ಮೊದಲಾಗಿ ಈ ಲೇಖಕರು ವರ್ಣಿಸಿರುತ್ತಾರೆ. ಪುರಪಾಲಕ ಸಂಘದವರು ತಮ್ಮ ಪುರಪ್ರಮುಖರ ವಿಷಯದಲ್ಲೇ ಇಷ್ಟು ಅಶ್ರದ್ಧೆಯಿಂದ ನಡೆದುಕೊಳ್ಳುವುದಾದರೆ ಇತರ ವಿಷಯಗಳಲ್ಲಿ ಅವರ ಕರ್ತವ್ಯಲೋಪಗಳು ಸಾಮಾನ್ಯವಾಗಿರಲಾರವು.

ಭರತಖಂಡದ ವೃತ್ತಾಂತಗಳು.

ಜುಲೈ ತಿಂಗಳ ಕಡೆಯವರೆಗೆ ಯುದ್ಧಸಾಲಕ್ಕೆ ಕೊಡಿರುವುದು ೨೩,೦೩,೫೯,೩೦೦ ರೂ. ಗಳು.

ಮಹಾನವಮಿಯ ಸಮಯಕ್ಕೆ ಬೊಂಬಾಯಿಯಲ್ಲಿ ಕೂಡುವುದಕ್ಕಿರುವ ಪ್ರತ್ಯೇಕರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಯನ್ನು ನಾನು ವಹಿಸಲಾರೆನೆಂದು ಮಹಮ್ಮದಾಬಾದ್ ರಾಜಾಸಾಹೇಬರು ತಿಳಿಯಪಡಿಸಿರುವರಂತೆ.

ನೂತನ ರಾಜಕೀಯ ಸಂಸ್ಕರಣಗಳನ್ನು ಪ್ರಜೆಗಳು ಅಂಗೀಕರಿಸದೆ ತಿರಸ್ಕರಿಸಿಬಿಟ್ಟರೆ ಬಹಳ ಅನರ್ಥವಾಗುವುದೆಂದು ಲಂಡನ್ ಪಟ್ಟಣದಿಂದ ಮಿ|| ಪೋಲಕ್‌ರವರು ಶ್ರೀಮಾನ್ ಗಂಧಿಯವರಿಗೆ ತಂತಿಯ ಮೂಲಕ ತಿಳಿಯಪಡಿಸಿರುತ್ತಾರೆ.

ಅಸ್ಸಾಮಿನಲ್ಲಿ ಕಳೆದ ತಿಂಗಳು ಭೂಕಂಪನವಾಯಿತಷ್ಟೆ. ಅದರಿಂದೀಚೆಗೆ ಅಲ್ಲಿನ ಸಿಲ್ಹೆಟ್ ಜಿಲ್ಲೆಯಲ್ಲಿ ಮಳೆಯು ವಿಶೇಷವಾಗಿ ಸುರಿಯುತ್ತಿದೆ. ನದಿಗಳಲ್ಲಿ ವಿಪರೀತ ಪ್ರವಾಹ ಬಂದು ದೇಶವೆಲ್ಲಾ ಜಲಮಯವಾಗಿದೆ. ಪ್ರಜೆಗಳಲ್ಲಿ ೧೦೦ಕ್ಕೆ ೬೦ ಮಂದಿಗಳು ಜ್ವರಪೀಡಿತರಾಗಿದ್ದಾರೆ.

ಕಲ್ಕತ್ತಾದಲ್ಲಿ ಈಗ ೧ ವಾರಕ್ಕೆ ಎಲ್ಲಾ ಕಾರಣದಿಂದಲೂ ೯೦೦ ರ ಮೇಲೆಯೇ ಮರಣಗಳಾಗುತ್ತಿವೆ. ೧೯೧೫ ನೆ ವರ್ಷದೀಚೆಗೆ ಪ್ಲೇಗು ಕಾಲರಾ ವ್ಯಾಪಿಸಿದ್ದಾಗಲೂ ಅಲ್ಲಿಯ ಮರಣ ಸಂಖ್ಯೆಯು ವಾರಕ್ಕೆ ೩೦೦ ಗಿಂತ ಹೆಚ್ಚಿರಲಿಲ್ಲವಂತೆ. ಈಗಣ ಹೆಚ್ಚುವಿಕೆಗೆ ಇನ್‌ಫ್ಲುಯಂಜಾ ಜ್ವರವೇ ಕಾರಣವೆಂದು ಹೇಳಲ್ಪಟ್ಟಿದೆ.

ಮದ್ರಾಸಿನಲ್ಲಿ ಈಗ ಮರಣಸಂಖ್ಯೆ ಹೆಚ್ಚಾಗಿದೆ. ೧೦೦೦ ಜನಕ್ಕೆ ೬೨ ರಂತೆ ಸಾವುಗಳಾಗುತ್ತಿವೆ. ಹಗಲು ಬಹಳ ಬಿಸಿಲೂ, ರಾತ್ರಿಹೊತ್ತು ಶೀತದ ಗಾಳಿ ಬೀಸುತ್ತಿರುವುದೂ ಆಹಾರ ವಸ್ತುಗಳ ದುರ್ಭಿಕ್ಷವೂ ಸಹ ಜನರಲ್ಲಿ ಅನಾರೋಗ್ಯವನ್ನು ಹೆಚ್ಚಿಸಿ ಮರಣ ಸಂಖ್ಯೆಯನ್ನು ವೃದ್ಧಿಗೊಳಿಸಿರುವುದೆಂದು ಗೊತ್ತಾಗುತ್ತದೆ.

ಈಗ ಎಲ್ಲೆಲ್ಲೂ ವ್ಯಾಪಿಸಿರುವ ಇನ್‌ಫ್ಲುಯಂಜಾ ಜ್ವರದಿಂದ ಕೆಲಕಡೆ ಅನೇಕ ಮರಣಗಳು ಸಂಭವಿಸಿರುತ್ತವೆ. ಕಲ್ಕತ್ತಾದಲ್ಲಿ ೩-೪ ನೂರು ಜನರು ಇದರಿಂದ ಸತ್ತಿರುತ್ತಾರೆ. ಮದ್ರಾಸಿನಲ್ಲೂ ಇದು ಅನುಭವಕ್ಕೆ ಬಂದಿದೆ. ಕರಾಚಿಯಲ್ಲಿ ೧೨ ಮಂದಿ ಸತ್ತಿದ್ದಾರೆ. ಜ್ವರಬಿಟ್ಟ ಬಳಿಕವೂ ಕೆಲ ಕಾಲದವರೆಗೆ ರೋಗಿಯು ಪಥ್ಯವಾಗಿರುವುದು ಬಹಳ ಅವಶ್ಯವಾಗಿದೆ.

೧೨ ಮಾತುಗಳಿಗೆ ೮ ಆಣೆಯಂತೆ ಅದಕ್ಕಿಂತ ಹೆಚ್ಚಿನ ಪ್ರತಿಮಾತಿಗೂ ಅರ್ಧಾಣೆಯಂತೆಯೂ ಇದ್ದ ತಂತ್ರೀವಾರ್ತೆಯ ಛಾರ್ಜು ಬರುವ ಸೆಪ್ಟಂಬರ್ ತಿಂಗಳಿಂದ ೧೨ ಮಾತುಗಳಿಗೆ ೧೨ ಆಣೆಯಂತೆಯೂ ಬಳಿಕ ಪ್ರತಿಮಾತಿಗೂ ೧ ಆಣೆಯಂತೆಯೂ ಹೆಚ್ಚಿಸಲ್ಪಡುವುದು. ಎಕ್ಸ್‌ಪ್ರೆಸ್ ತಂತ್ರೀವಾರ್ತೆಗಳಿಗೆ ೧|| ರೂ. ಬಳಿಕ ಪ್ರತಿಮಾತಿಗೂ ೨ ಆಣೆ ಕೊಡಬೇಕಾಗುವುದು.

ತಾತಾ ಕಂಪೆನಿಯವರು ಸ್ಥಾಪಿಸಿರುವ ಲೋಹದ ಯಂತ್ರಾಲಯವನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವುದಕ್ಕಾಗಿ ಬೀಹಾರ್ ಒರಿಸ್ಸಾ ಪ್ರಾಂತ್ಯದಲ್ಲಿ ಇನ್ನು ಕೆಲವು ಭೂಮಿಗಳನ್ನು ಕೊಡುವುದಕ್ಕೆ ಸ್ಟೇಟ್ ಸೆಕ್ರೆಟರಿಯವರು ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಈ ಸ್ಥಳವು ತಾತಾ ಕಂಪೆನಿಯವರ ವಶವಾದ ನಂತರ ೧೦ ವರ್ಷಗಳೊಳಗಾಗಿ ಆ ಪ್ರದೇಶದೊಳಗೆ ಕೂಲಿಗಾರರಿಗೆ ಮನೆಕಟ್ಟುವುದೇ ಮೊದಲಾದ ಕೆಲಸಗಳಿಗಾಗಿ ಕಂಪೆನಿಯವರು ೩ ಕೋಟಿ ರೂ. ಗಳ ವ್ಯಯವನ್ನು ಮಾಡಲು ಒಪ್ಪಿರುತ್ತಾರೆ.

ಹಿಂದೆ ಸ್ಟೇಟ್‌ಸೆಕ್ರೆಟರಿಯವರಾಗಿದ್ದ ಲಾರ್ಡ್‌ಮಾರ್ಲೆಯವರು ಲಂಡನ್ ಪಟ್ಟಣದ ನೇಷನಲ್ ಲಿಬರಲ್ ಕ್ಲಬ್ಬಿನಲ್ಲಿ ಮಾತನಾಡುವಾಗ್ಗೆ—ಭರತಖಂಡದ ನೂತನ ರಾಜಕೀಯ ಸಂಸ್ಕರಣವು ಇದುವರೆಗಣ ಸಂಸ್ಕರಣಗಳೆಲ್ಲಕ್ಕಿಂತಲೂ ಪ್ರಶಸ್ತವಾಗಿದೆಯೆಂದೂ, ಅದು ತಮ್ಮ ಸಂಸ್ಕರಣದ ಚಿಗುರೇ ಆಗಿರುವುದೆಂದೂ ಹೇಳಿದರು. ಅದಕ್ಕೆ ಮಿ|| ಮಾಂಟೆಗೋರವರು ಉತ್ತರಕೊಡುವಾಗ್ಗೆ—ತಾವು ಗ್ರಂಥರೂಪದಲ್ಲಿ ಮಾಡಿದ್ದ ಬೋಧೆಯನ್ನೇ ನಾನು ಕ್ರಿಯಾರೂಪದಲ್ಲಿ ಮಾಡಿರುವೆನೆಂದು ಹೇಳಿ ತಮ್ಮ ಗುರುಗಳಾದ ಮಾರ್ಲೆಯವರನ್ನು ಸಂತೋಷಪಡಿಸಿದರು.

ಹೇಗೆ ನಡೆದರೂ ವಕ್ರದೃಷ್ಟಿಯುಂಡಲೇ ವಿಮರ್ಶಿಸಬೇಕೆಂದಿರುವ ಕೆಲ ಉಗ್ರಪಕ್ಷ ಪ್ರಮುಖರ ಮತ್ತು ಅವರ ಕೆಲ ಹಿಂಬಾಲಕರ ಹೊರತು ಭರತಖಂಡದ ದೂರದೃಷ್ಟಿಯುಳ್ಳ ರಾಜನೀತಿಜ್ಞರೆಲ್ಲರೂ ಮಾಂಟೆಗ್ ಚೆಲ್ಮ್ಸ್‌ಫರ್ಡ್ ರಾಜಕೀಯ ಸುಧಾರಣೆಗಳನ್ನು ಅನುಮೋದಿಸಿಯೇ ಇರುತ್ತಾರೆ. ಬಂಗಾಳದ ಪ್ರಮುಖರೆಲ್ಲರೂ ಇದಕ್ಕೆ ಮುಂಚೆಯೇ ತಮ್ಮಭಿಪ್ರಾಯವನ್ನು ಪ್ರಕಟಿಸಿದ್ದರು. ಕಳೆದವಾರ ಬೊಂಬಾಯಿ ಮದ್ರಾಸು ಪ್ರಮುಖರೂ ಹಾಗೆಯೇ ಪ್ರಕಟಿಸಿರುತ್ತಾರೆ. ಬೊಂಬಾಯಿಯ ದಿನ್ಷಾ ವಾಚಾ, ಚಿಮನ್‌ಲಾಲ್, ಸೆಟಲ್ವಾಡ್, ಸರ್ ನಾರಾಯಣಚಂದ್ರಾವರ್ಕರೇ ಮೊದಲಾದವರು—"ಇದರಲ್ಲಿ ಸ್ವಲ್ಪ ತಿದ್ದುಪಡಿಮಾಡಬೇಕಾದುದು ಮಾತ್ರ ಇರುವುದು, ಆದರೆ ಒಟ್ಟಿನಲ್ಲಿ ಇದು ಅಭಿವೃದ್ಧಿ ಸೂಚಕವಾಗಿದೆ. ಬಾಧ್ಯತಾಯುತಪರಿಪಾಲನಪ್ರಾಪ್ತಿಗೆ ಇವು ಸಾಧಕವಾಗಿವೆ. ಈಗ ಕೊಡಲ್ಪಟ್ಟಿರುವವು ಪ್ರಾರಂಭದೆಶೆಯಲ್ಲಿ ಅಲ್ಪಮಾತ್ರವಾಗಿರುವುದಿಲ್ಲ. ೧೦ ವರ್ಷಗಳಕಾಲ ಇದರಂತೆ ಕೆಲಸ ನಡೆದರೆ ದೇಶದಲ್ಲಿ ಬಾಧ್ಯತಾಯುತ ಪರಿಪಾಲನವನ್ನೇರ್ಪಡಿಸಲು ಅನುಕೂಲವಾಗುವಂತೆ ಉದಾರಭಾವದಿಂದ ಈ ಸೂಚನೆಗಳು ಮಾಡಲ್ಪಟ್ಟಿವೆ. ಕಾಂಗ್ರೆಸ್‌ಲೀಗು ವಿಧಾನಗಳಲ್ಲಿ ಬಾಧ್ಯತಾಯುತ ಪ್ರಭುತ್ವಕ್ಕೆ ಪ್ರಾರಂಭಸೂಚನೆಗಳು ಇಲ್ಲವೇ ಇಲ್ಲ. ಅಂಥವುಗಳೂ ಕೂಡ ಈ ಸೂಚನೆಯಲ್ಲಿ ಸೇರಿಸಲ್ಪಟ್ಟಿವೆ. ಮತ್ತೂ ಆ ಕಾಂಗ್ರೆಸ್‌ಲೀಗಿನವರು ಸೂಚಿಸಿರುವ ಅನೇಕ ವಿಷಯಗಳೂ ಇದರಲ್ಲಿವೆ. ಇಂಥ ಸೂಚನೆಯನ್ನು ಮಾಡಿದವರುಗಳಿಗೆ ಭಾರತೀಯರು ಕೃತಜ್ಞರಾಗಿರಬೇಕಾಗಿದೆ" ಎಂದು ಹೇಳಿ, ಸೂಚನೆಯಲ್ಲಿ ಮಾಡಬೇಕಾದ ತಿದ್ದುಪಾಟನ್ನು ಸೂಚಿಸುವುದರಲ್ಲಿ—ಅಧಿನಿವೇಶಗಳಿಗೆ ಸಮಾನವಾದ ಆರ್ಥಿಕ ಸ್ವಾತಂತ್ರ್ಯವನ್ನು ಭರತಖಂಡಕ್ಕೆ ಕೊಡಬೇಕು. ಶಾಸನ ನಿರ್ಮಾಣಸಭೆಯಲ್ಲಿ ೨ನೆ ಸಭೆಯ ಏರ್ಪಾಡು ಅಸಮಂಜಸವಾದುದು. ಅದಕ್ಕೆ ಪ್ರತಿಯಾಗಿ ಗ್ರಾಂಡ್ ಕಮಿಟಿಯನ್ನೇ ಏರ್ಪಡಿಸಬಹುದು. ಸ್ಟೇಟ್ ಕೌನ್ಸಿಲನ್ನು ಶಾಶ್ವತಪಡಿಸಕೂಡದು ಎಂಬುದೇ ಮೊದಲಾದುವುಗಳನ್ನು ಸೂಚಿಸಿರುತ್ತಾರೆ. ಮದ್ರಾಸಿನ ಪ್ರಮುಖರಾದ ಸರ್ ಶಿವಸ್ವಾಮಯ್ಯರು ಗೋವಿಂದರಾಘವಯ್ಯರು ಕೆ. ಶ್ರೀನಿವಾಸಯ್ಯಂಗಾರರೇ ಮೊದಲಾದ ಅನೇಕರು ಈ ನೂತನ ಸಂಸ್ಕರಣಗಳನ್ನು ನಿರಾಕರಿಸುವುದು ಅನುಚಿತವೆಂತಲೂ, ಅದನ್ನು ಸ್ವೀಕರಿಸಿ ಅವುಗಳಲ್ಲಿ ಮಾಡಬೇಕಾದ ಸುಧಾರಣೆಗಳನ್ನು ಮಾಡಿಸುವುದಕ್ಕೆ ಪ್ರಯತ್ನಿಸುವುದು ಉತ್ತಮವಾದ ದಾರಿಯೆಂತಲೂ ಹೇಳಿ, ಮಾಡಬೇಕಾದ ಸುಧಾರಣೆಗಳ ದಿಗ್ದರ್ಶನವನ್ನು ಮಾಡಿರುತ್ತಾರೆ. ಪಂಜಾಬಿನ ಮಹಮ್ಮದೀಯ ಸಂಘದವರು ಇವರ ಶಾಸನಸಭೆಯ ಏರ್ಪಾಟುಗಳು ಚೆನ್ನಾಗಿವೆಯೆಂದು ಶ್ಲಾಘಿಸಿ, ಆ ಸಭೆಯ ಅಧ್ಯಕ್ಷತೆಯು ಗೌರ್ನರಿಗಿರಬಾರದೆಂತಲೂ, ಪಂಜಾಬಿನ ಮಹಮ್ಮದೀಯರಿಗೂ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂತಲೂ, ಮಹಮ್ಮದೀಯರು ಕೆಲರೂ ಸಿಕ್ಕರು ಕೆಲರೂ ಹಿಂದುಗಳು ಕೆಲರೂ ಅಲ್ಲಿ ಪ್ರತಿನಿಧಿತ್ವೀನ ಇರುವಂತಾಗಬೇಕೆಂತಲೂ ಸೂಚಿಸಿರುತ್ತಾರೆ.

ವಿದೇಶ ವೃತ್ತಾಂತಗಳು.

ಅಮೇರಿಕಾದಿಂದ ಪ್ರತಿತಿಂಗಳಲ್ಲೂ ೩ ಲಕ್ಷದಷ್ಟು ಸೈನ್ಯವು ರಣರಂಗಕ್ಕೆ ಬರುತ್ತಿರುವುದು.

ಈಗ ಅಮೇರಿಕಾದ ನೌಕಾದಳದಲ್ಲಿ ಸೈನಿಕರೂ ಉದ್ಯೋಗಿಗಳೂ ಸಹ ಸೇರಿ ೫೦೩೭೯೨ ಮಂದಿಗಳಿದ್ದಾರೆ.

ಕೆಲವಾರಗಳ ಹಿಂದೆಯೇ ವ್ಲಾಡಿವೋಸ್ಟಾಕಿನಲ್ಲಿಳಿದಿರುವ ಜಪಾನ್ ಸೈನ್ಯವು ಈಗ ಜೆಕೋಸ್ಲಾವಕ್ಕರಿಗೆ ಸಹಾಯಮಾಡುತ್ತಲಿದೆಯೆಂದು ವಾರ್ತೆ ಬಂದಿದೆ.

ಫಿನ್ಲಂಡಿನಲ್ಲಿ ರಾಜಪರಿಪಾಲನೆಗೊಪ್ಪಿಕೊಳ್ಳದಿದ್ದರೆ ನಮ್ಮ ಮಿಲಿಟರಿ ಗೌರ್ನರಧಿಕಾರಕ್ಕೆ ಒಳಪಡಬೇಕೆಂದು ಜರ್ಮನರು ಫಿನ್ಲಂಡ್ ರಾಜ್ಯಾಂಗ ಸಭೆಯವರಿಗೆ ಅಂತ್ಯಲೇಖನವನ್ನು ಬರೆದಿದ್ದಾರೆ.

ಉಕ್ರೇನಿಯಾದಲ್ಲಿ ಬೇಸಾಯಗಾರರಾದ ೬೫ ಸಾವಿರ ಮಂದಿಗಳು ಆಯುಧಸಮೇತರಾಗಿ ಚೆನ್ನಾಗಿ ರಣಶಿಕ್ಷೆಯನ್ನು ಹೊಂದಿ ಜರ್ಮನರಮೇಲೆ ಸಾಗಿಹೋಗುತ್ತಿದ್ದಾರೆ. ಜರ್ಮನರು ಆ ಪ್ರಾಂತವನ್ನು ಬಿಟ್ಟು ಕೀವಿಗೆ ಹೊರಡುತ್ತಿದ್ದಾರೆ.

ಈಗ ಫ್ರಾನ್ಸಿನಲ್ಲಿ ಅಮೇರಿಕನ್ನರ ಸೈನ್ಯವು ೧೨|| ಲಕ್ಷ ಕೂಡಿದೆ. ಜುಲೈ ತಿಂಗಳಲ್ಲಿ ೩ ಲಕ್ಷವು ಅಮೇರಿಕದಿಂದ ಕಳುಹಿಸಲ್ಪಟ್ಟಿದೆ. ಪಶ್ಚಿಮರಂಗದಲ್ಲಿದ್ದ ಅಮೇರಿಕನ್ ಸೈನ್ಯದಲ್ಲಿ ಸ್ವಲ್ಪಭಾಗವು ಇಟಲಿ ರಂಗಕ್ಕೂ ಕಳುಹಿಸಲ್ಪಟ್ಟಿದೆ. ಇಟಲಿಯವರು ಈ ಸೈನಿಕರನ್ನು ಬಹು ಪ್ರತಿಗೌರವದಿಂದ ಆದರಿಸುತ್ತಿದ್ದಾರೆ.

ಕಳೆದ ಜುಲೈ ತಿಂಗಳು ತಾ|| ೧೫ ರಿಂದಲೂ ಶತ್ರುಗಳು ಮಿತ್ರಮಂಡಲಿಯ ಮೇಲೆ ಪಶ್ಚಿಮರಂಗದಲ್ಲಿ ಯುದ್ಧಮಾಡುವುದಕ್ಕೆ ತಮ್ಮ ೬೦-೭೦ ಡಿವಿಜನ್ (ಎಂದರೆ ತಮ್ಮ ಒಟ್ಟು ಸೈನ್ಯದಲ್ಲಿ ⅓ ಭಾಗದಷ್ಟು ಸೈನ್ಯಗಳನ್ನು ಬಿಟ್ಟಿದ್ದರು. ಆಮೊಂದು ವಾರದ ಯುದ್ಧದಲ್ಲಿ ಅವರ ಕಡೆ ೧೮೦೦೦೦ ಸೈನ್ಯವು ನಷ್ಟವಾಗಿರುವುದೆಂದು ಎಣಿಸಲ್ಪಟ್ಟಿದೆ.

ಸೈಬೀರಿಯಾದಲ್ಲಿ ಜೆಕೋಸ್ಲಾವಕ್ಕರಿಗೆ ಸಹಾಯಮಾಡುವುದಕ್ಕೆ ಜಪಾನರು ಅಮೇರಿಕನ್ನರ ಸೂಚನೆಯ ಮೇರೆ ಒಪ್ಪಿಕೊಂಡರು. ಇನ್ನು ರಷ್ಯಾದಲ್ಲಿ ಜರ್ಮನರು ಹೊಂದಬೇಕೆಂದಿದ್ದ ಲಾಭಕ್ಕೆಲ್ಲಾ ಎಷ್ಟೋ ತಡೆಯಾಗುವುದೆಂಬುದಕ್ಕೆ ಸಂಶಯವಿಲ್ಲ. ಜರ್ಮನರು ಇದುವರೆಗೆ ಮಾಡಿದ ಸಾಹಸವೆಲ್ಲಾ ವ್ಯರ್ಥವಾದರೂ ಆಗಬಹುದು. ಜರ್ಮನರು ರಷ್ಯಾದ ಬೊಲ್ಷೆವಿಕ್ಕರಿಗೆ ಸಹಾಯಮಾಡುತ್ತಿದ್ದಾರೆ. ಮುಂದೆ ರಷ್ಯಾದ ಸ್ಥಿತಿಗತಿಯು ಇನ್ನಾವ ರೂಪಕ್ಕೆ ಬರುವುದೋ ನೋಡಬೇಕು.

ಮರ್ಮನ್ ಸಮುದ್ರತೀರಪ್ರಾಂತ್ಯದಲ್ಲಿ ಮಿತ್ರಮಂಡಲಿಯವರು ತಮ್ಮ ಸೈನ್ಯವನ್ನಿಳಿಸಿರುವರಷ್ಟೆ. ಈ ದೇಶಭಾಗದಲ್ಲಿ ಯತ್ಕಿಂಚಿತ್ತನ್ನಾದರೂ ಆಕ್ರಮಿಸುವುದು ತಮ್ಮ ಉದ್ದೇಶವಲ್ಲವೆಂದು ಇವರು ಪ್ರಕಟಿಸಿದ್ದಾರೆ. ಸಂಯುಕ್ತ ರಷ್ಯಾ ಮಹಾದೇಶದ ಏಕತ್ವವನ್ನು ಕಾಪಾಡುವುದೇ ತಮ್ಮ ಮುಖ್ಯೋದ್ದೇಶವೆಂದು ಹೇಳಿರುತ್ತಾರೆ. ಅಲ್ಲಿರುವ ರಷ್ಯಾ ಸೈನ್ಯಕ್ಕೆ ಇವರೇ ಶಿಕ್ಷಣವನ್ನು ಕೊಡುವರು. ಅಲ್ಲಿಯ ಅಂತರ್ದೇಶವ್ಯವಹಾರದಲ್ಲಿ ಮಿತ್ರಮಂಡಲಿಯವರು ಕೈಹಾಕುವುದಿಲ್ಲ.

ಕಳೆದ ಮೇ ತಿಂಗಳು ತಾ|| ೧೫ ರಿಂದಲೂ ಅಮೇರಿಕಾದಲ್ಲಿ ನ್ಯೂಯಾರ್ಕ್ ಪಟ್ಟಣ ವಾಷಿಂಗ್ಟನ್ ಪಟ್ಟಣಗಳ ಮಧ್ಯದಲ್ಲಿ ಅಂಚೆಯು ಆಕಾಶವಿಮಾನಗಳ ಮೂಲಕ ಸಾಗಿಸಲ್ಪಡುತ್ತಿದೆ. ಆ ಎರಡು ಪಟ್ಟಣಗಳಿಗೂ ಮಧ್ಯದಲ್ಲಿ ೨೨೦ ಮೈಲಿಗಳ ದೂರವಿದೆ. ಯುದ್ಧಮುಗಿದ ಬಳಿಕ ಲಂಡನ್ ಪ್ಯಾರಿಸ್ಸು ಪಟ್ಟಣಗಳಿಗೂ, ಪ್ಯಾರಿಸ್-ರೋಮ್ ಪಟ್ಟಣಗಳಿಗೂ, ಬರ್ಲಿನ್-ಕಾನ್‌ಸ್ಟಾಂಟಿನೋಪಲ್ಲುಗಳಿಗೂ ಹೀಗೆಯೇ ಅಂಚೆಯನ್ನು ಸಾಗಿಸುವ ಏರ್ಪಾಟು ಮಾಡಲ್ಪಡಬಹುದೆಂದು ಊಹಿಸುತ್ತಿದ್ದಾರೆ.

ಕಳೆದ ಜೂನ್ ತಿಂಗಳಲ್ಲಿ ಜರ್ಮನರ ಸಬ್‌ಮೆರೀನುಗಳಿಂದ ಮಿತ್ರಮಂಡಲಿಯವರ ೨೭೫೬೨೯ ಟನ್ನುಗಳ ಭಾರ ಹೊರುವಷ್ಟು ಹಡಗುಗಳು ಮುಳುಗಿಸಲ್ಪಟ್ಟಿವೆ. ಇದು ಮೇ ತಿಂಗಳಿಗಿಂತ ೮೧೮೦೫ ಟನ್ನುಗಳಷ್ಟೂ, ಏಪ್ರಿಲ್ ತಿಂಗಳಿಗಿಂತಲೂ ೩೭೭೮೬ ಟನ್ನುಗಳಷ್ಟೂ ಕಡಿಮೆ. ಕಳೆದ ವರ್ಷದ ಜೂನ್ ತಿಂಗಳಲ್ಲಿ ೪೩೩೭೯೨ ಟನ್ನುಗಳಷ್ಟು ಹಡಗುಗಳು ಮುಳುಗಿಸಲ್ಪಟ್ಟಿದ್ದುವು. ಈ ವಿವರಣದಿಂದ ಶತ್ರುಗಳ ಸಬ್‌ಮೆರೀನು ಹಾವಳಿಯು ಈಗ ಎಷ್ಟು ತಗ್ಗಿಹೋಗಿದೆಯೆಂಬುದು ವ್ಯಕ್ತವಾಗುತ್ತದೆ.

ರಷ್ಯಾ ಚಕ್ರವರ್ತಿಯವರ ಹತ್ಯೆಯ ಸಂಬಂಧವಾಗಿ ತಮ್ಮ ರಾಜಾಸ್ಥಾನದವರೆಲ್ಲರೂ ೪ ವಾರಗಳವರೆಗೆ ದುಃಖ ಸೂಚಕ ಚಿಹ್ನೆಯನ್ನು ಧರಿಸಿರಬೇಕೆಂದು ನಮ್ಮ ಸಾರ್ವಭೌಮರು ಅಪ್ಪಣೆಮಾಡಿದ್ದಾರೆ. ಲಂಡನ್ ಪಟ್ಟಣದಲ್ಲಿರುವ ರಷ್ಯನ್ ಚರ್ಚಿನಲ್ಲಿ ಜಾರ್‌ರವರ ಆತ್ಮಶಾಂತಿಯನ್ನು ಕುರಿತು ದೇವತಾಪ್ರಾರ್ಥನೆ ನಡೆಯಿಸಲ್ಪಟ್ಟಾಗ್ಗೆ ನಮ್ಮ ಸಾರ್ವಭೌಮ ದಂಪತಿಗಳು, ಮಹಾಮಾತೃಶ್ರೀ ಅಲೆಗ್ಸಾಂಡ್ರಿಯಾರವರು, ಕನ್ನಾಟ್ ಪ್ರಭುಗಳು, ರಷ್ಯಾದ ರಾಜಕುಮಾರರಾದ ಗ್ರಾಂಡ್‌ಡ್ಯೂಕ್‌ಜಾರ್ಜಿರವರು ಮೊದಲಾದವರು ಹೋಗಿದ್ದರು.

ಈಗ ಸೈಬೀರಿಯಾ ಪ್ರಭುತ್ವದಲ್ಲಿ ಬಹಳ ಮಾರ್ಪಾಟುಂಟಾಗಿದೆ. ಉಸುರಿಸ್ಕ್ ಕಾಸಕ್ ಜನರು ಜೆಕೋಸ್ಲಾವಕ್ಕರೊಡನೆ ಸೇರಿದರು. ಇವರುಗಳ ಪೂರ್ವಸೈನ್ಯವು ಈಗ ಇರ್ಕುಟಸ್ಕಾನಮೇಲೆ ಸಾಗಿಹೋಗುತ್ತಿದೆಯಂತೆ. ಸೈಬೀರಿಯಾವು ಸ್ವಾತಂತ್ರ್ಯವನ್ನು ಪ್ರಕಟಿಸಿದೆ. ಬೊಲ್ಷೆವಿಕ್ಕರ ರಾಜಾಜ್ಞೆಯನ್ನೆಲ್ಲಾ ತಿರಸ್ಕರಿಸಿಬಿಟ್ಟಿದೆ. ಸೈಬೀರಿಯಾದಲ್ಲಿ ಜರ್ಮನರೂ ಆಸ್ಟ್ರಿಯನ್ನರೂ ಯುದ್ಧವನ್ನು ಮಾಡಬೇಕೆಂತಲೂ ಪ್ರತಾಪವನ್ನು ತೋರಿಸಿದವರಿಗೆ ಬಹುಮಾನವು ಕೊಡಲ್ಪಡುವುದೆಂತಲೂ ಜರ್ಮನ್ ಚಕ್ರವರ್ತಿಯು ಮಾಡಿದ್ದ ಒಂದು ಆಜ್ಞೆಯು ಜರ್ಮನ್ ಆಸ್ಟ್ರಿಯಾ ಸೆರೆಯಾಳುಗಳ ವಶದಲ್ಲಿದ್ದು ಸಿಕ್ಕಿರುವುದು. ಜೆಕೋಸ್ಲಾವಕ್ಕರ ಪ್ರಾಬಲ್ಯವು ರಷ್ಯಾದಲ್ಲಿ ಹೆಚ್ಚುತ್ತಿದೆ. ಇವರ ಕಡೆಯ ಸೈನ್ಯವು ಬೊಲ್ಷೆವಿಕ್ ಮತ್ತು ಸೋವಿಯಟ್ ಪಕ್ಷದ ಸೈನ್ಯವನ್ನು ಒತ್ತರಿಸಿಕೊಂಡು ನುಗ್ಗಿಹೋಗಿ ಪುರಗ್ರಾಮಗಳನ್ನು ವಶಪಡಿಸಿಕೊಳ್ಳುತ್ತಿದೆ.

ಇಂಗ್ಲೀಷರು ಹೊಸದಾಗಿ ಹಿಡಿದುಕೊಂಡ ಮೆಸಪೊಟೋಮಿಯಾ ದೇಶದ ಈಗಣ ಪರಿಪಾಲನ ಪದ್ಧತಿಯು ಪೂರ್ವದ ತುರ್ಕಿ ಪರಿಪಾಲನೆಗಿಂತ ಪ್ರಜೆಗಳಿಗೆ ಎಷ್ಟೋ ಹಿತಕರವಾಗಿಯೂ ರಂಜಕವಾಗಿಯೂ ಪರಿಣಮಿಸಿದೆ. ಅಲ್ಲಿ ನಮ್ಮ ಸರ್ಕಾರದವರೂ ಅಲ್ಲಿಯ ಮ್ಯುನ್ಸಿಪಾಲಿಟಿಗಳವರೂ ಅನೇಕ ನೂತನ ಪಾಠಶಾಲೆಗಳನ್ನು ಸ್ಥಾಪಿಸಿ ನಡೆಯಿಸುತ್ತಿದ್ದಾರೆ. ಉಪಾಧ್ಯಾಯರು ದೊರೆದಷ್ಟೂ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದರಲ್ಲಿದ್ದಾರೆ. ಪ್ರಜೆಗಳು ವಿದ್ಯಾಭ್ಯಾಸದಲ್ಲಿ ಕುತೂಹಲವುಳ್ಳವರಾಗಿದ್ದಾರೆ. ಹಾಳುಬಿದ್ದಿದ್ದ ಎಷ್ಟೋ ಭೂಮಿಗಳು ಈಗ ಸಾಗುವಳಿಗೆ ತರಲ್ಪಟ್ಟಿವೆ. ಕುದುರೆಗಳು ಯಂತ್ರಗಳು ಮೊದಲಾದುವುಗಳನ್ನೆಲ್ಲಾ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದಾರೆ. ನದಿಗಳ ಮೂಲಕವಾಗಿಯೂ ಮಾರ್ಗಸಂರಕ್ಷಣೆಯ ಮೂಲಕವಾಗಿಯೂ ವ್ಯಾಪಾರವು ವೃದ್ಧಿಹೊಂದುತ್ತಿದೆ. ಪದಾರ್ಥಗಳ ಬೆಲೆಯು ಇಳಿದಿದೆ. ಮುಗ್ಗಲ ತುರ್ಕಿ ಪರಿಪಾಲಿತ ದೇಶಗಳ ಸ್ಥಿತಿಗತಿಗಳನ್ನೂ ತಮ್ಮ ಈಗಣ ಸ್ಥಿತಿಗತಿಗಳನ್ನೂ ನೋಡಿಕೊಂಡು ಮೆಸಪೊಟೋಮಿಯಾ ಪ್ರಜೆಗಳು ಬಹಳ ಸಂತೋಷಪಟ್ಟುಕೊಂಡಿದ್ದಾರೆ.

ಸಾಮ್ರಾಜ್ಯಯುದ್ಧ ಮಹಾಸಭೆಗಾಗಿ ಸೀಮೆಯಲ್ಲಿ ಕೂಡಿದ್ದ ಪ್ರತಿನಿಧಿಗಳೆಲ್ಲಾ ಸ್ವದೇಶಕ್ಕೆ ಹಿಂದಿರುಗುವುದಕ್ಕೆ ಮುಂಚೆ ಚಕ್ರವರ್ತಿಯವರ ಸಂದರ್ಶನವನ್ನು ಮಾಡಿ ತಮ್ಮ ರಾಜಭಕ್ತಿಯನ್ನು ನಿವೇದಿಸಿ ಅವರಪ್ಪಣೆಯನ್ನು ಪಡೆದು ಬರುವುದಕ್ಕಾಗಿ ಬಕಿಂಗ್‌ಹ್ಯಾಂ ಅರಮನೆಗೆ ಹೋಗಿದ್ದರು. ಸಾರ್ವಭೌಮರು ಅವರುಗಳ ವಿಜ್ಞಾಪನಪತ್ರವನ್ನು ಆದರದಿಂದ ಅಂಗೀಕರಿಸಿ ಉತ್ತರವನ್ನು ಕೊಡುವಾಗ್ಗೆ—ಅಭೂತಪೂರ್ವವಾದ ಈ ವಿಷಮಸಮಯದಲ್ಲಿ ಆಂಗ್ಲಾಧಿನಿವೇಶನ ರಾಜ್ಯಪ್ರತಿನಿಧಿಗಳೂ ಭರತಖಂಡ ಪ್ರತಿನಿಧಿಗಳೂ ಸಹ ಇಲ್ಲಿಗೆ ಬಂದು ಸೇರುತ್ತಿರುವುದು ಬಹಳ ಪ್ರೋತ್ಸಾಹಕರವಾಗಿರುವುದೆಂದೂ, ಮುಖ್ಯಮುಖ್ಯ ವಿಷಯಗಳನ್ನೆಲ್ಲಾ ಕುರಿತು ನೀವುಗಳೆಲ್ಲಾ ಚರ್ಚಿಸಿದುದನ್ನು ನಾನು ಉತ್ಸಾಹದಿಂದ ಕೇಳುತ್ತಿದ್ದೆನೆಂದೂ, ನಿಮ್ಮುಗಳ ಈ ವಿಧವಾದ ಪ್ರಯತ್ನವೂ ಸ್ವಾರ್ಥಪರಿತ್ಯಾಗವೂ ಸಾಮ್ರಾಜ್ಯರಕ್ಷಣೆಗಾಗಿ ಮಾಡುತ್ತಿರುವ ಸಾಹಸಗಳೂ ಸಹ ಕೊನೆಯ ಸಂಪೂರ್ಣವಿಜಯಕ್ಕೆ ಸಾಧಕವಾದುವೆಂದೂ, ಯುದ್ಧ ಮುಗಿದ ಬಳಿಕ ಸಮುದ್ರದಾಚೆ ಇರುವ ಅಧಿನಿವೇಶನ ರಾಜ್ಯಗಳಿಗೆಲ್ಲಾ ನಮ್ಮ ಯುವರಾಜರು ಸಂದರ್ಶನವನ್ನೀಯುವವರಾಗಿದ್ದಾರೆಂದೂ, ಸಂಪೂರ್ಣವಿಜಯದ್ವಾರಾ ಸಾಮ್ರಾಜ್ಯ ರಕ್ಷಣೆಗಾಗಿ ನೀವುಗಳೆಲ್ಲಾ ಬದ್ಧಕಂಕಣರಾಗಿರುವುದು ಲೋಕಕ್ಕೆಲ್ಲಾ ಆಶ್ಚರ್ಯಕರವಾಗಿಯೂ ನಮಗೆ ಹೆಮ್ಮೆಗೊಳಿಸತಕ್ಕುದಾಗಿಯೂ ಇರುವುದೆಂದೂ, ಏಕಮತ್ಯವೆಂಬ ದೃಢತರವಾದ ಹದಿಯಮೇಲೆ ಸ್ಥಾಪಿತವಾಗಿರುವ ಆಂಗ್ಲಸಾಮ್ರಾಜ್ಯಭವನವನ್ನು ಯಾವ ವಿಧವಾದ ಬಿರುಗಾಳಿಯೂ ಉರುಳಿಸಲಾರದೆಂದೂ, ಇನ್ನೊಂದುಸಲ ಯುದ್ಧಸಭೆಯು ಜರುಗುವುದರೊಳಗಾಗಿ ನ್ಯಾಯಸ್ವಾತಂತ್ರ್ಯರಕ್ಷಣೆಗಾಗಿ ಮಾಡಲ್ಪಡುತ್ತಿರುವ ನಮ್ಮ ಯುದ್ಧಾಶಯವು ಜಯಶಾಲಿಯಾಗುವಂತೆ ಜಗದೀಶನನ್ನು ಪ್ರಾರ್ಥಿಸುವೆನೆಂದೂ ಅಪ್ಪಣೆಕೊಡಿಸಿ ಸ್ವದೇಶಗಳಿಗೆ ತೆರಳಲು ಪ್ರತಿನಿಧಿಗಳಿಗೆಲ್ಲಾ ಉತ್ತರವಿತ್ತರು.

ಮಳೆಯ ಯೋಗ.

ಈಗ ನಡೆಯುವ ಘೋರಯುದ್ಧದ ಮೂಲಕಧಾನ್ಯದ ಬೆಲೆಯು ಒಂದಕ್ಕೆ ನಾಲ್ಕರಷ್ಟಾಗಿರುತ್ತದೆ. ಸಾಲದ್ದಕ್ಕೆ ಈ ಮಾಸದಲ್ಲಿ ಇಲ್ಲಿಯವರೆಗೂ ಸಸ್ಯಾನುಕೂಲವೃಷ್ಟಿಯಾಗದ್ದರಿಂದ ಬಹು ಜನರು ಕಷ್ಟಪಡುತ್ತಿರುವರು. ಇದೇ ಪ್ರಕಾರ ಮುಂದೆಯೂ ಅನಾವೃಷ್ಟಿಯಾಗಿ ದುರ್ಭಿಕ್ಷ ಎಲ್ಲಾಗುವುದೋ ಎಂದು ಶ್ರೀಮಂತರೂ ದರಿದ್ರರೂ ಕೊಡಿಯೇತ್ಯದ್ಯೋಗ ಹಚ್ಚಿಕೊಂಡಿರುವರು. ಅಂಥವರಿಗೆ ನಾವು ಈ ಮೂಲಕ ತಿಳುಹಿಸುವದೇನಂದರೆ—ಇದೇ ಆಷಾಢಕೃಷ್ಣ ೯ ಗುರುವಾರದಲ್ಲಿ ಶುಕ್ರನು ವಿಮಾನವಾಂಶಕ್ಕೆ ಬರುತ್ತಾನೆ. ಅದೇ ದಿವಸ ಮಧ್ಯಾಹ್ನದ ತರುವಾಯ ಚಂದ್ರನೂ ವಿಮಾನವಾಂಶಕ್ಕೆ ಬರುವನು. "ವೃಷಕರ್ಕಝಷಾಂಶಸ್ಥೋ ಬಹುವೃಷ್ಟಿಂ ಸಿತಾಕರಃ || ಕುರುತೇಜಲಭೇಶುಕ್ರ ಕರ್ಕವಿಮಾನಸಿಜಾಂಶಗಃ" ಎಂಬುವ ಪ್ರಮಾಣಾನುಸಾರವಾಗಿ ೯ ಗುರುವಾರದಿಂದ ಅತಿ ವೃಷ್ಟಿಯಾಗುವ ಯೋಗವಿದೆ. ಆದಾಗ್ಯೂ ವಿಮಾನವಾಂಶಕ್ಕೆ ಕುಜನು ಸಂಪೂರ್ಣ ದೃಷ್ಟಿಯಿಂದ ಈಕ್ಷಿಸುವದರಿಂದ ಅತಿವೃಷ್ಟಿಯಾಗದೆ ಸಸ್ಯಾನುಕೂಲವಾದ ವೃಷ್ಟಿಯಾಗುವದೆಂದು ನಿಶ್ಚಯವಾಗಿ ಹೇಳುತ್ತೇವೆ. ಮುಂದೆ ಶ್ರಾವಣದಲ್ಲಿ ಕುಜನ ವಿನಾ ಎಲ್ಲಾ ಗ್ರಹಗಳೂ ಸೌಮ್ಯಾಮೃತ ಜಲನಾಡಿಗಳಲ್ಲಿ ವಿಹರಿಸುವುದರಿಂದ ಸುವೃಷ್ಟಿಯಾಗುವುದು. ಈ ಮೂಲಕ ದೇಶಕ್ಷೇಮವಾಗುವುದು.

ಮಹಾಗಾಂವ್ ಸಿದ್ಧಾಂತಿಗಳು.

ಪತ್ರವ್ಯವಹಾರ.

[ಕಳೆದವಾರದ ಶೇಷ.]

(ಹಿರಿಯೂರು ತಾ|| ವೀರಶೈವ ಮಹಾಸಭೆ)

ಅಧ್ಯಕ್ಷರ ಭಾಷಣ.

೩. ವೈದಿಕ ವಿದ್ಯಾಭ್ಯಾಸ, ಅದರ ಸುಧಾರಣೆಗಾಗಿ ಮಠಾಧಿಕಾರಿಗಳ ಕರ್ತವ್ಯ.

ಗೃಹಸ್ಥಾಶ್ರಮದಲ್ಲಿ ನಡೆಸಬೇಕಾದ ಷೋಡಶ ಕರ್ಮಗಳ ವಿಧಾನಗಳನ್ನು ಬೋಧಿಸುವ ವಿದ್ಯೆಗೆ ರೂಢಿಯಲ್ಲಿ ವೈದಿಕ ವಿದ್ಯೆಯೆಂದು ಹೇಳುತ್ತಾರೆ. ಇವನ್ನು ಕಲಿತವರಿಗೆ ವೈದಿಕರೆಂದೂ, ಪುರೋಹಿತರೆಂದೂ ಹೆಸರು. ನಮ್ಮಲ್ಲಿ ನಡೆಯಬೇಕಾದ ಷೋಡಶಕರ್ಮಾದಿಗಳನ್ನೆಲ್ಲಾ ಇವರೇ ಬಂದು ನಡೆಸಬೇಕು. ಇವರೂ ನಮ್ಮಲ್ಲಿ ಸಾಕಾದಷ್ಟು ಮಂದಿ ಇಲ್ಲದೆ ಇರುವುದರಿಂದ ಈ ಕಾರ್ಯಗಳು ಒಂದೊಂದು ಕಡೆ ಒಂದೊಂದು ವಿಧವಾಗಿ ಅಶಾಸ್ತ್ರೀಯವಾದ ರೀತಿಯಿಂದ ನಡೆಯುತ್ತಾ ಇವೆ. ಇದು ಪರಮತೀಯರ ದೃಷ್ಟಿಯಲ್ಲಿ ಹಾಸ್ಯಾಸ್ಪದವಾಗಿದೆ. ಈ ಕಡೆಗೆ ಲಕ್ಷ್ಯವಿಡಬೇಕಾದದ್ದು ಮಠಾಧಿಪತಿಗಳ ಕರ್ತವ್ಯವಾಗಿದೆ. ವಿಧಿವತ್ತಾಗಿ ಎಲ್ಲಾ ಕಾರ್ಯಗಳೂ ನಡೆಯಬೇಕೆಂಬ ಅಪೇಕ್ಷೆಯನ್ನು ಇತರು ಮಠದ ವೈದಿಕರ ಅಭಾವವು ತೋರದ ರೀತಿ ಅಲ್ಲಲ್ಲಿ ಪಾಠಶಾಲೆಗಳನ್ನು ಏರ್ಪಡಿಸಬೇಕು.

೪. ಕೈಗಾರಿಕೆ, ವ್ಯಾಪಾರ, ಒಕ್ಕಲತನ.

ದೇಶೋನ್ನತಿಗೆ ಮೂಲಕಾರಣಗಳಾದವುಗಳು ಇವೇ. ನಮ್ಮ ದೇಶದಲ್ಲಿ ಬಹುಮಂದಿಯ ಜೀವನವು ಒಕ್ಕಲತನವೇ ಆಗಿದೆ. ಆದರೆ ಇದರ ಕ್ರಮವು ಸುಧಾರಣೆಹೊಂದಿಲ್ಲವಾದ್ದರಿಂದ ಕಷ್ಟಕ್ಕೆ ತಕ್ಕಷ್ಟು ಫಲವು ರೈತರಿಗೆ ದೊರೆಯುತ್ತಾ ಇಲ್ಲ. ಅಮೇರಿಕಾ ಮೊದಲಾದ ದೇಶಗಳಲ್ಲಿರುವ ವ್ಯವಸಾಯ ಕ್ರಮಕ್ಕೂ, ಇಲ್ಲಿನ ಕ್ರಮಕ್ಕೂ ಹೋಲಿಸಿನೋಡಿದರೆ ಅಜಗಜ ವ್ಯತ್ಯಾಸವು ತೋರುವುದು. ನಮ್ಮ ದೇಶದ ವ್ಯವಸಾಯಕ್ರಮವು ಸುಧಾರಣೆಗೊಳ್ಳಬೇಕು.

ಕೈಗಾರಿಕೆ ವ್ಯಾಪಾರಗಳನ್ನು ವ್ಯವಸಾಯದ ತರುವಾಯವೆಂದೇ ಹೇಳಬೇಕು. ಈ ಮೂರೂ ಪರಸ್ಪರ ಸಹಕಾರಿಗಳಾಗಿವೆ. ವ್ಯಾಪಾರ ಕೈಗಾರಿಕೆಗಳು ಮೊದಲು ನಡೆಯುತ್ತಿದ್ದ ರೀತಿಗೂ, ಈಗ ನಡೆಯುವುದಕ್ಕೂ ಬಹಳ ಅಂತರವುಂಟು. ಮೊದಲು ಸಾಧಾರಣವಾಗಿ ಕೈಗಾರಿಕೆಗಳೆಲ್ಲಾ ಕೈಕೆಲಸಗಳಿಂದಲೇ ನಡೆಯುತ್ತಿದ್ದುವು. ಈಗ ಇವಕ್ಕೆ ಯಂತ್ರಾದಿಗಳ ಸಂಬಂಧವು ಕಲ್ಪಿಸಲ್ಪಟ್ಟು ಬಹಳ ಸುಧಾರಣೆಗೊಂಡಿದೆ. ಯಾವ ದೇಶದಲ್ಲಿ ಕೈಗಾರಿಕೆಗಳು ಹೆಚ್ಚಾಗಿ ನಡೆಯುತ್ತವೆಯೋ ಆ ದೇಶದಲ್ಲಿ ವ್ಯಾಪಾರವು ಹೆಚ್ಚಾಗಿ ನಡೆಯಬೇಕು. ತನ್ಮೂಲಕ ದೇಶದ ಸಂಪತ್ತು ಅಭಿವೃದ್ಧಿಯಾಗುವುದು. ನಮಗೆ ನಮ್ಮ ಕೃಷಿಕಲೆಗಳಿಗೆ ಬೇಕಾಗುವ ಪದಾರ್ಥಗಳನ್ನು ನಾವೇ ತಯಾರಿಸಿಕೊಂಡು ಮಾರಿದರೆ ಅವುಗಳ ಲಾಭವು ನಮಗೇ ಸೇರುವುದು. ಈಗ ಇದೆಲ್ಲಾ ಅನ್ಯದೇಶೀಯರ ಪಾಲಾಗುತ್ತಾ ಬಂದಿದೆ. ಉದಾಹರಣಾರ್ಥವಾಗಿ ಹತ್ತಿಯನ್ನು ಅನ್ಯದೇಶಕ್ಕೆ ಕಳುಹಿಸಿ, ಅದರಿಂದ ತಯಾರಾದ ಬಟ್ಟೆಯನ್ನು ಅವರಿಂದ ಕೊಂಡುಕೊಳ್ಳುತ್ತಾ ಇದ್ದೇವೆ. ಅದೇ ಬಟ್ಟೆಯನ್ನು ಇಲ್ಲಿಯೇ ನೇಯುವಂತೆ ತಕ್ಕ ಯಂತ್ರಗಳನ್ನಿಟ್ಟು ನಾವೇ ನಡೆಸಿದರೆ ನಮಗೆ ಆದಾಯವು ಬರುವುದು. ಹೀಗೆಯೇ ರೇಷ್ಮೆ ಉಣ್ಣೆಯ ವಸ್ತ್ರಗಳು, ಚಾಕು, ಕತ್ತರಿ, ಛತ್ರಿ, ಸಾಬೂನು, ದೀಪದಕಡ್ಡಿ, ಕಾಗದ ಮುಂತಾದ ಎಲ್ಲಾ ಸರಕುಗಳನ್ನೂ ನಾವೇ ತಯಾರಿಸಿಕೊಳ್ಳುವುದು ನಮಗೆ ಅಸಾಧ್ಯವಾದ್ದಲ್ಲ. ಜಾಯಿಂಟ್ ಸ್ಟಾಕ್ ಕಂಪೆನಿ ರಚಿಸಿ ಮಾರಿಗೆ ಷೇರುಗಳ ಮೂಲಕ ಬಂದ ನಾಣ್ಯವನ್ನು ಭಾರಿಯಾಗಿ ಕೂಡಿಸಿ, ಕರ್ಖಾನೆಗಳನ್ನು ಸ್ಥಾಪಿಸುತ್ತಾ ಬಂದರೆ ದಿನಕ್ರಮೇಣ ಇವುಗಳನ್ನೆಲ್ಲಾ ನಾವು ಸಾಧಿಸಿಕೊಳ್ಳಬಹುದು. ಬರೀ ವ್ಯವಸಾಯವನ್ನೇ ನಂಬಿಕೊಂಡಿರುವುದು ವಿವೇಕವಲ್ಲ. ಮಳೆಗಳು ಸರಿಯಾಗಿ ನಡೆಸುತ್ತವೆಂಬ ಭರವಸೆಯು ಈಗಿನ ಕಾಲದಲ್ಲಿ ಕಡಿಮೆಯಾಗುತ್ತಾ ಬರುತ್ತಿದೆ. ಬೇಸಾಯದ ಮೇಲೆಯೇ ಭರವಸೆಯನ್ನಿಟ್ಟುಕೊಂಡಿರುವ ರೈತನು ಮಳೆಯಿಲ್ಲದಾಗ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗುವನು. ತನ್ನ ಕಸುಬಿನ ಜೊತೆಗೆ ಯಾವುದಾದರೂ ಕೈಗಾರಿಕೆಯನ್ನು ಇಟ್ಟುಕೊಂಡಿದ್ದರೆ, ಒಂದಿಲ್ಲದಿದ್ದರೆ ಒಂದರಲ್ಲಿ ಜೀವನವು ನಡೆಯುವುದು. ವ್ಯಾಪಾರದ ವಿಷಯದಲ್ಲೂ ಸಣ್ಣ ಪುಟ್ಟ ವ್ಯಾಪಾರಗಳಿಂದ ದೇಶವು ಉನ್ನತಸ್ಥಿತಿಗೆ ಬರಲಾರದು. ಅನ್ಯದೇಶಗಳ ಸಂಗಡ ಭಾರಿವ್ಯಾಪಾರಗಳು ನಡೆಯುವಂತೆ ಕಂಪೆನಿಗಳು ಸ್ಥಾಪಿತವಾಗಬೇಕು. ಈ ರೀತಿ ವ್ಯಾಪಾರ, ಕೈಗಾರಿಕೆ, ಒಕ್ಕಲತನಗಳನ್ನು ಸಾಂಪ್ರತ ಕಾಲಕ್ಕೆ ತಕ್ಕದಾಗಿ ನಮ್ಮವರು ಏರ್ಪಡಿಸಿಕೊಂಡರೆ ನಮ್ಮಲ್ಲಿ ಬಡತನವು ತೊಲಗಿಹೋಗುವುದರಲ್ಲಿ ಸಂಶಯವಿಲ್ಲ. (ಸಶೇಷ).

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಸ್ಥೆಗೆ ಚಂದಾ ಕೊಟ್ಟ ಮಹನೀಯರುಗಳ ಪಟ್ಟಿ.

ಇಲ್ಲಿಯವರೆಗೆ ಪ್ರಚುರವಾಗಿರುವ ಮೊಬಲಗು 14,696-4-3.

ಮ|| ಗಳಾದ ನಗರದ ಚನ್ನಬಸವಣ್ಣಪ್ಪನವರು 100 ರೂ., ಶಿವಮೊಗ್ಗ ಕೈದಿಕೊಪ್ಪ ಪಾ. ವೀರಪ್ಪನವರು 8 ರೂ., ಬುದ್ಧಿವಂತ ಮಲ್ಲಪ್ಪನವರು 8 ರೂ., ಸಂತೆ ಕಡೂರು ವೀರಪ್ಪನವರು 8 ರೂ., ಮರಿಯಪ್ಪನವರ ಹೆಂಡತಿ ಚನ್ನಮ್ಮನವರು 4 ರೂ., ಅವಲಕ್ಕಿ ಶಿವರುದ್ರಪ್ಪನವರು 5 ರೂ., ಗುರುಸಂಗಾರ್ಯರು 8 ಆಣೆ, ಹೊನ್ನಾಳಿ ತಾಲ್ಲೂಕು ಬೀರಗಹಳ್ಳಿ ಸ್ಕೂಲು ಮಾಸ್ಟರ್ ಮಲ್ಲಪ್ಪನವರು 25 ರೂ., ಶಿಕಾರಿಪುರದ ಜೊನ್ನಪ್ಪನವರ ಚನ್ನಪ್ಪನವರು 500 ರೂ., ಪುರಾಣದ ಸಿದ್ಧರಾಮಯ್ಯನವರು, ಶಿಕಾರಿಪುರ 50 ರೂ., ಶಿಕಾರಿಪುರದ ಮದವಣ್ಣನ ರುದ್ರಪ್ಪನವರು 151 ರೂ., ಶಿಕಾರಿಪುರದ ಗೊತ್ತನವರ ಸಿದ್ಧರಾಮಪ್ಪನವರು 51 ರೂ., ಶಿಕಾರಿಪುರದ ಗುರುಶಾಂತಪ್ಪಶಾಸ್ತ್ರಿಗಳವರು 101 ರೂ., ಶಿಕಾರಿಪುರದ ನಂಜುಂಡಯ್ಯನವರು 101 ರೂ., ಶಿಕಾರಿಪುರದ ಪಲ್ಲಾಳಿ ವೀರಬಸಪ್ಪನವರು 101 ರೂ., ಶಿಕಾರಿಪುರದ ಹುಲಕಟ್ಟೆ ಗುರುಬಸಪ್ಪನವರು 101 ರೂ., ಶಿಕಾರಿಪುರದ ಹುಲಕಟ್ಟೆ ಗುರುಬಸಪ್ಪನವರು 101 ರೂ., ಶಿಕಾರಿಪುರದ ಪುರಾಣದ ಸಂಗಯ್ಯನವರು 101 ರೂ., ಶಿಕಾರಿಪುರದ ಉಡುತಡಿಯ ಸಂಗಬಸಯ್ಯನವರು 101 ರೂ., ಶಿಕಾರಿಪುರದ ಹಂಚಿನಮನೆ ಸಣ್ಣಪ್ಪನವರು 101 ರೂ., ಶಿಕಾರಿಪುರದ ದಲ್ಲಾಳಿ ಚನ್ನಪ್ಪನವರು 63 ರೂ., ಶಿಕಾರಿಪುರದ ಹುಲಿಕಟ್ಟಿನ ಸೆಟ್ಟಿ ಹಾಲಪ್ಪನವರು 51 ರೂ., ಶಿಕಾರಿಪುರದ ಅಮಟಿಕೊಪ್ಪದ ಬಸವಣ್ಯಪ್ಪನವರು 51 ರೂ., ಶಿಕಾರಿಪುರದ ಹೊಳೆಯಪ್ಪನವರು 25 ರೂ., ಶಿಕಾರಿಪುರದ ರಸ್ತಾಪುರದ ಮಠದ ಬಸಪ್ಪಯ್ಯನವರು 51 ರೂ., ಶಿಕಾರಿಪುರದ ಚನ್ನಬಸಪ್ಪನವರು 25 ರೂ., ಶಿಕಾರಿಪುರದ ಮಳಿಹಳ್ಳಿ ವೀರಪ್ಪನವರು 25 ರೂ., ಶಿಕಾರಿಪುರದ ರಮನ ಚನವೀರಪ್ಪನವರು 25 ರೂ., ಶಿಕಾರಿಪುರದ ಅಮಟಿಕೊಪ್ಪದ ಅಣ್ಣಪ್ಪನವರು 21 ರೂ., ಶಿಕಾರಿಪುರದ ತೆಂಕಲಕೋಟಿ ಬಸವಣ್ಯಪ್ಪನವರು 21 ರೂ., ಶಿಕಾರಿಪುರದ ಅಂಗಡಿ ಬಸಪ್ಪನವರು 16 ರೂ., ಶಿಕಾರಿಪುರದ ದೊಡಿಹಳ್ಳಿ ಚನ್ನಬಸಪ್ಪನವರು 15 ರೂ., ಶಿಕಾರಿಪುರದ ವಸ್ತ್ರದ ಮರುಳಯ್ಯನವರು 15 ರೂ., ಶಿಕಾರಿಪುರದ ಹರಗಿನ ರೇವಪ್ಪನವರು 16 ರೂ., ಕೊರ ಮಲಕಪ್ಪನವರು 12 ರೂ., ಶಿಕಾರಿಪುರದ ಅಮಟಿಕೊಪ್ಪದ ಗುರುಸಿದ್ಧಪ್ಪನವರು 12 ರೂ., ಶಿಕಾರಿಪುರದ ಅಂಗಡಿ ರಾಚಪ್ಪನವರು 12 ರೂ., ಶಿಕಾರಿಪುರದ ಹಿರೇಮಠದ ಸಿದ್ಧಯ್ಯನವರು 12 ರೂ., ಶಿಕಾರಿಪುರದ ಮಂಚಾಲೆ ಹೊಳೆಬಸಪ್ಪನವರು 11 ರೂ., ಶಿಕಾರಿಪುರದ ದೊಳೆ ಮುತ್ತಣ್ಣನವರು 11 ರೂ., ಶಿಕಾರಿಪುರದ ಅಂಗಡಿ ವೀರಪ್ಪನವರು 11 ರೂ., ಶಿಕಾರಿಪುರದ ನೇಮತಿ ವೀರಪ್ಪನವರು 10 ರೂ., ಶಿಕಾರಿಪುರದ ಪಟ್ಟದ ವೀರಯ್ಯನವರು 9 ರೂ., ಬಣ್ಣದಸೂಲು ಚನ್ನಪ್ಪನವರು 9 ರೂ., ನಲುವಗಲು ಏಕಾಕ್ಷರಪ್ಪನವರು 9 ರೂ., ಕಾನೂರು ಶಿವಲಿಂಗಪ್ಪನವರು 9 ರೂ., ರಮಣೀಕಮ್ಮಣ್ಣನವರು 9 ರೂ., ಆಚಾಪುರಗೆಪ್ಪನವರು 9 ರೂ., ಆಯನೂರು ಬಸವಣ್ಣೆಪ್ಪನವರು 9 ರೂ., ನೇಮತಿ ಹಾಲಪ್ಪನವರು 9 ರೂ., ರಮಣಿಕೊಟ್ರಪ್ಪನವರು 8 ರೂ., ಬೆನ್ನೂರ ಚನ್ನಬಸಪ್ಪನವರು 8 ರೂ., ತಿಮ್ಮಣ್ಣನವರ ಚನ್ನಪ್ಪನವರು 6 ರೂ., ಹುಹುಂದ ಸ್ವಾದಪ್ಪನವರು 6 ರೂ., ಅಮಟಿಕೊಪ್ಪದ ರುದ್ರಪ್ಪನವರು 6 ರೂ., ಹದಡಿ ರಾಚಪ್ಪನವರು 6 ರೂ., ಪುರಾಣದ ಷಡಾಕ್ಷರಯ್ಯನವರು 6 ರೂ., ಕೊರಡಿ ವೀರಪ್ಪನವರು 6 ರೂ., ಅಂಗಡಿ ಹೊರಿಹೊಳೆಯಪ್ಪನವರು 6 ರೂ. 5 ಆ., ಮಲ್ಲಾಡ ಸಿದ್ಧಲಿಂಗಮ್ಮನವರು 5 ರೂ., ಸಕ್ಕರೆ ವೀರಬಸಪ್ಪನವರು 5 ರೂ., ದುರ್ಗದ ಗುರುಶಾಂತಪ್ಪನವರು 5 ರೂ., ಕೊರಡಿಸಿದ್ದಪ್ಪನವರು 5 ರೂ., ಚುಂಚಾರ ಶಾಂತವೀರಪ್ಪನವರು 5 ರೂ., ಹಂಚಿನಮನೆ ಕಲವೀರಪ್ಪನವರು 5 ರೂ., ಕುಳೆನ ನೀಲಕಂಠಪ್ಪನವರು 5 ರೂ., ಬಾಸಗಲು ಚನಬಸಪ್ಪನವರು 5 ರೂ., ಹಂಚರದ ಮುರಿಗೆಪ್ಪನವರು 5 ರೂ., ಧಾರ್ವಾಡದ ನಂಜುಂಡಪ್ಪನವರು 5 ರೂ., ಹುಂಚದ ಚನ್ನಬಸಪ್ಪನವರು 5 ರೂ., ಪುರಾಣದ ಕಲ್ಯಾಣಮ್ಮನವರು 5 ರೂ., ಬಳ್ಳಾರಿಹೊಳೆಬಸಪ್ಪನವರು 5 ರೂ., ನ್ಯಾಮತಿ ರೇವಣಸಿದ್ಧಯ್ಯನವರು ಲಗ್ನದಬಾಬ್ತು 11 ರೂ., ಕುಂಬಳೂರು ಚನ್ನಬಸಲಿಂಗಪ್ಪನವರು 52 ರೂ., ಡಿ. ಕೆಂಚಿಸಿದ್ದಲಿಂಗಪ್ಪನವರು 25 ರೂ., ಸಿದ್ದನಾಪಟೇಲ ಇವರು 25 ರೂ., ಬೆನಕನಹಳ್ಳಿ ಸಿದ್ಧಲಿಂಗಪ್ಪನವರು 25 ರೂ., ಕೊಟ್ಟದ ಹೊಳೆಯಪ್ಪನವರು 51 ರೂ., ಕರಿಸಂಗಪ್ಪನ ಲಿಂಗಪ್ಪನವರು 21 ರೂ., ಕಡೂರ ಬಸಲಿಂಗಪ್ಪನವರು 10 ರೂ., ಕಟ್ಟಿಹಾಲಪ್ಪನವರು 6 ರೂ., ಗೌಡರ ಅಂಕಲಪ್ಪನವರು 10 ರೂ., ಕುಂಬಾರ ಪಾ|| ಶಿವಪ್ಪನವರು 50 ರೂ., ವಾಡದಬಸಪ್ಪನವರು 20 ರೂ., ಹಿರೇಮಠದ ಶ್ರೀ ಸಿದ್ಧಲಿಂಗಯ್ಯನವರು 20 ರೂ., ನ್ಯಾಮತಿ ರೇವಣಸಿದ್ಧಯ್ಯನವರು 250 ರೂ., (ರುಸುಂ ಬಾಬ್ತು) ನಲ್ಲೂರಪಟೇಲ ಬಿ. ಹಾಲಪ್ಪನವರು ರುದ್ರಪ್ಪನವರು ಶಿವಮೊಗ್ಗಾ 101 ರೂ., ದುಮ್ಮಿ ಪಂಚಾಕ್ಷರಪ್ಪನವರು ಶಿವಮೊಗ್ಗಾ 51 ರೂ., ರೇವಣಸಿದ್ಧಯ್ಯನವರು ಮಂಡಿ ಶಿವಮೊಗ್ಗಾ 34 ರೂ., ಈರಹಾಲಪ್ಪ-ಶಿವಲಿಂಗಪ್ಪನವರು 10 ರೂ., ನಂಜುಂಡಪ್ಪನವರು-ಕೊಪ್ಪದ ಹೊಳೆಯಪ್ಪನವರು ಲಗ್ನದಲ್ಲಿ 2 ರೂ., ವೀರಪ್ಪ-ಸುಬ್ರಾಯಣಾರ್ಯರ ಮಂಡಿ ರುಸುಂಬಾಬ್ತು 10 ರೂ., ಕಾಡಪ್ಪನವರು ಲಗ್ನದಬಾಬ್ತು 5 ರೂ., ಕೈಲಾಸದ ಮಹಾದೇವಪ್ಪನವರು ಲಗ್ನದಲ್ಲಿ 8 ರೂ., ಅಜ್ಜಕ್ಕಳ ನಾಗಪ್ಪನವರು ಲಗ್ನದಲ್ಲಿ 8 ರೂ., ಅಜ್ಜಕ್ಕಳ ಮಹಾದೇವಪ್ಪನವರು 8 ರೂ., ಬೆಳಗುತ್ತಿ ಲಿಂಗಪ್ಪನವರಿಂದ ಲಗ್ನದ-ಧಾನ್ಯಗಳ ಬಾಬ್ತು 11 ರೂ., ಮೈಸೂರ ಬ್ಯಾಂಕಿನಲ್ಲಿದ್ದ ಕರೆಂಟ ಡಿಪಾಜಿಟ್ಟಿನ ಬಡ್ಡಿ ೩-೪-೦., ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ಸೆಕ್ರೆಟರಿಯವರ ಹೆಸರಿನಲ್ಲಿದ್ದ ಠೇವಣಿಯ ಬಡ್ಡಿ 31.3.4. ಒಟ್ಟು ಜುಮ್ಲಾ 17,907—8—7.

ತಾ|| 25-7-18.

ಹನಸವಾಡಿ ಶಡಲ ಬಸವಪ್ಪ,
ಸೆಕ್ರೆಟರಿ.
ನ್ಯ|| ಡಿ|| ವಿ|| ವಿ|| ಸಂಸ್ಥೆ, ಶಿವಮೊಗ್ಗ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಜಿಸ್ಟರ ಮಾಡಿದ

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಮಕ್ಕಳಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧ ಮಾಡಿದೆನು. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿನಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅರುಚಿ, ಅಪ್ಪಲಿಸ, ಅಜೀರ್ಣ, ಹೊಟ್ಟೆಶೂಲಿ, ಮೂತ್ರಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ, ಜಡ್ಡು, ಗುದ್ದೆವ್ರಣದಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು, ಇಸಬು, ಛಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೃದ್ಧರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆವಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗಬೇಕೆಂದು ಹಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಕ್ಕ ಐದು ಆಣೆ ತೊಲದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತಿದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ ಹೆಡ್ ಆಫೀಸ
13 ಮುಕ್ಕಾಮು ಶಹಪೂರ, ಬೆಳಗಾಂವ.

ಒಂದುಕಾಲು ಶೇರ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೇ.

ಸ್ವದೇಶಿ ಸೀರೆಗಳು.



ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿವೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇವೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುವು. ಪ್ರತಿಯೊಬ್ಬರೂ ಉಡಲು ಅನುಕೂಲವಾದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಹೋರಲು ಸೀರೆ	ರೂ. 11.0.0	ಮಧುರೆ ಬುಟಾ ಸೀರೆ	... 4.0.0
ಗೋಪರ್ ಜಾನ್ ಸೀರೆ	... 5.8.0	ಕಲಕಂಚಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ	... 3.0.0	ಜವಾಕ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ	... 5.0.0	ಕಾಲುಮ ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ,
33 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 40

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಆಗಸ್ಟ್ ತಾ|| ೪ ರಿಂದ ೧೯೧೮ ನೆಯ ಆಗಸ್ಟ್ ತಾ|| ೧೦ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಷಾಢ ಬ|| ತ್ರಯೋದಶಿಯಿಂದ ಶ್ರಾವಣ ಶು|| ಚತುರ್ಥಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ
4	[1] ಭಾನು	ತ್ರ	45-57	ಆರಿದ್ರಾ	25-52	20
5	[2] ಸೋಮ	ಚತು	45-13	ಪುನರ್ವಸು	26-23	21
6	[3] ಮಂಗಳ	ಅಮಾ	45-36	ಪುಷ್ಯ	28-9	22
7	ಬುಧ	ಪಾಡ್ಯ	47-19	ಆಶ್ಲೇಷ	31-15	23
8	ಗುರು	ಬಿದಿಗೆ	50-15	ಮಘಾ	35-26	24
9	[4] ಶುಕ್ರ	ತದಿಗೆ	54-9	ಪುಬ್ಬಾ	40-42	25
10	[5] ಶನಿ	ಚೌತಿ	58-57	ಉಬ್ಬಾ	46-48	26

1. ಪ್ರದೋಷ. 2. ಮಾಸಶಿವರಾತ್ರಿ. 3. ಸರ್ವತ್ರಭೀಮಾವಾಸ್ಯಾ. 4. ಸಂಪದ್ಗೌರೀವ್ರತಂ. 5. ಶ್ರಾವಣಶನಿವಾರಂ, ನಾಗರಚೌತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿತಶೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ಸಜ್ಞನಕ್ಷತ್ರವೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಹಲಾಲೋಲಂಸುಧೀಪುಂಗವ | ಸ್ತೋತವಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತನಾಲಾಕುಲಂ | ಪ್ರೇಮಂಬೆತಿ ಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಆಗಸ್ಟ್ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೩೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ಶಕ್ತಿಪ್ರಕಾಶಿಕಾ ೬ ಆಣೆ; ಸಟೀಕ ಕಠಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಶತಕಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಕಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಸಾತಿ ರವುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೋ.,
34 ೩, ಇರುಳಪ್ಪನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳ್.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚಂದ್ರ	೦—೫—೦
ಹಂದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 35

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲಿಯಸ್ಟೇಟ್, ಗೋವಾ, ಫಿಜಿ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ್ಯಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಂಶವಾಹಿತರ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾಲ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ಕೊಂಡುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನತಪ್ಪಿನ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ.—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕಉದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ.—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ.—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವೂ ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
19 ಆನಂದ ಬುಕ್‌ಡಿಪೊ, ಮೈಸೂರು.

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪೈ. ೧೦೦ ಕ್ಕೆ ೧-೪-೦

೩ ಹೊಟ್ಟೆಹುಳ ನಾಶಕ ಚೂರ್ಣ—ಕರುಳಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ ೧ರೂ.

೫. ಬಹುಜೀವನ ಚೂರ್ಣ—ದನಗಳಿಗಾಗುವ ಯಲ್ಲಾ ರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಬಾರದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
37 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 41

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಪತ್ರವ್ಯವಹಾರ.

[ಕಳೆದವಾರದ ಶೇಷು.]

(ಹಿರಿಯೂರು ತಾ|| ವೀರಶೈವ ಮಹಾಸಭೆ)

ಅಧ್ಯಕ್ಷರ ಭಾಷಣ.

೩. ವೈದಿಕ ವಿದ್ಯಾಭಾವ. ಅದರ ಸುಧಾರಣೆಗಾಗಿ ಮಠಾಧಿಕಾರಿಗಳ ಕರ್ತವ್ಯ.

ಗೃಹಸ್ಥಾಶ್ರಮದಲ್ಲಿ ನಡೆಸಬೇಕಾದ ಷೋಡಶ ಕರ್ಮಗಳ ವಿಧಾನಗಳನ್ನು ಬೋಧಿಸುವ ವಿದ್ಯೆಗೆ ರೂಢಿಯಲ್ಲಿ ವೈದಿಕ ವಿದ್ಯೆಯೆಂದು ಹೇಳುತ್ತಾರೆ. ಇವನ್ನು ಕಲಿತವರಿಗೆ ವೈದಿಕರೆಂದೂ, ಪುರೋಹಿತರೆಂದೂ ಹೆಸರು. ನಮ್ಮಲ್ಲಿ ನಡೆಯಬೇಕಾದ ಜನ್ಮಾದಿಗಳನ್ನೆಲ್ಲಾ ಇವರೇ ಬಂದು ನಡೆಸಬೇಕು. ಇತರರೂ ನಮ್ಮಲ್ಲಿ ಸಾಕಾದಷ್ಟು ಮಂದಿ ಇಲ್ಲದೆ ಇರುವುದರಿಂದ ಈ ಕಾರ್ಯಗಳು ಒಬ್ಬೊಂದು ಕಡೆ ಒಂದೊಂದು ವಿಧವಾಗಿ ಅಶಾಸ್ತ್ರೀಯವಾದ ರೀತಿಯಿಂದ ನಡೆಯುತ್ತಾ ಇದೆ. ಇದು ಪರಿಶೀಲಿಸುವವರ ದೃಷ್ಟಿಯಲ್ಲಿ ಹಾಸ್ಯಾಸ್ಪದವಾಗಿದೆ. ಈ ಕಡೆಗೆ ಲಕ್ಷ್ಯವಿಡಬೇಕಾದದ್ದು ಮಠಾಧಿಪತಿಗಳ ಕರ್ತವ್ಯವಾಗಿದೆ. ವಿಧಿಪೂರ್ವಕವಾಗಿ ಎಲ್ಲಾ ಕಾರ್ಯಗಳೂ ನಡೆಯಬೇಕೆಂಬ ಅಭಿಪ್ರಾಯವನ್ನು ಇವರು ಮನಸ್ಸಿಗೆ ತಂದು ವೈದಿಕರ ಅಭಾವವನ್ನು ತೊಲಗಿಸುವ ರೀತಿ ಅಲ್ಲಲ್ಲಿ ಪಾಠಶಾಲೆಗಳನ್ನು ಏರ್ಪಡಿಸಬೇಕು.

೪. ಕೈಗಾರಿಕೆ, ವ್ಯಾಪಾರ, ಒಕ್ಕಲತನ.

ದೇಶೋನ್ನತಿಗೆ ಮೂಲಕಾರಣವಾಗಿರುವುದುಗಳು ಇವೇ. ನಮ್ಮ ದೇಶದಲ್ಲಿ ಬಹುಮಂದಿಯ ಜೀವನವು ಒಕ್ಕಲತನವೇ ಆಗಿದೆ. ಆದರೆ ಇದರ ಕ್ರಮವು ಸುಧಾರಣೆಗೊಂಡಿಲ್ಲವಾದ್ದರಿಂದ ಶ್ರಮಕ್ಕೆ ತಕ್ಕಷ್ಟು ಫಲವು ರೈತರಿಗೆ ದೊರೆಯುತ್ತಾ ಇಲ್ಲ. ಅಮೇರಿಕಾ ಮೊದಲಾದ ದೇಶಗಳಲ್ಲಿರುವ ವ್ಯವಸಾಯ ಕ್ರಮಕ್ಕೂ, ಇಲ್ಲಿನ ಕ್ರಮಕ್ಕೂ ಹೋಲಿಸಿನೋಡಿದರೆ ಅಜಗಜ ವ್ಯತ್ಯಾಸವು ತೋರುವುದು. ನಮ್ಮ ದೇಶದ ವ್ಯವಸಾಯಕ್ರಮವು ಸುಧಾರಣೆಗೊಳ್ಳಬೇಕು.

ಕೈಗಾರಿಕೆ ವ್ಯಾಪಾರಗಳನ್ನು ವ್ಯವಸಾಯದ ಜತೆಯಾಗಿಯೇ ಹೇಳಬೇಕು. ಈ ಮೂರೂ ಪರಸ್ಪರ ಸಹಕಾರಿಗಳಾಗಿವೆ. ವ್ಯಾಪಾರ ಕೈಗಾರಿಕೆಗಳು ಮೊದಲು ನಡೆಯುತ್ತಿದ್ದ ರೀತಿಗೂ, ಈಗ ನಡೆಯುವುದಕ್ಕೂ ಬಹಳ ಅಂತರವುಂಟು. ಮೊದಲು ಸಾಧಾರಣವಾಗಿ ಕೈಗಾರಿಕೆಗಳೆಲ್ಲಾ ಕೈಕೆಲಸಗಳಿಂದಲೇ ನಡೆಯುತ್ತಿದ್ದವು. ಈಗ ಇವಕ್ಕೆ ಯಂತ್ರಾದಿಗಳ ಸಂಬಂಧವು ಕಲ್ಪಿಸಲ್ಪಟ್ಟು ಬಹಳ ಸುಧಾರಣೆಗೊಂಡಿದೆ. ಯಾವ ದೇಶದಲ್ಲಿ ಕೈಗಾರಿಕೆಗಳು ಹೆಚ್ಚಾಗಿ ನಡೆಯುತ್ತವೆಯೋ ಆ ದೇಶದಲ್ಲಿ ವ್ಯಾಪಾರವು ಹೆಚ್ಚಾಗಿ ನಡೆಯಬೇಕು. ತನ್ಮೂಲಕ ದೇಶದ ಸಂಪತ್ತು ಅಭಿವೃದ್ಧಿಯಾಗುವುದು. ನಮ್ಮ ನಮ್ಮ ಉಪಯೋಗಕ್ಕೆ ಬೇಕಾಗುವ ಪದಾರ್ಥಗಳನ್ನು ನಾವೇ ತಯಾರಿಸಿಕೊಂಡು ಮಾರಿದರೆ ಇವುಗಳ ಲಾಭವು ನಮಗೇ ಸೇರುವುದು. ಈಗ ಇದೆಲ್ಲಾ ಅನ್ಯದೇಶೀಯರ ಪಾಲಾಗುತ್ತಾ ಬಂದಿದೆ. ಉದಾಹರಣಾರ್ಥವಾಗಿ ಹತ್ತಿಯನ್ನು ಅನ್ಯದೇಶಕ್ಕೆ ಕಳುಹಿಸಿ, ಅದರಿಂದ ತಯಾರಾದ ಬಟ್ಟೆಯನ್ನು ಅವರಿಂದ ಕೊಂಡುಕೊಳ್ಳುತ್ತಾ ಇದ್ದೇವೆ. ಅದೇ ಬಟ್ಟೆಯನ್ನು ಇಲ್ಲಿಯೇ ನೇಯುವಂತೆ ತಕ್ಕ ಯಂತ್ರಗಳನ್ನಿಟ್ಟು ನಾವೇ ನಡೆಸಿದರೆ ನಮಗೆ ಆದಾಯವು ಬರುವುದು. ಹೀಗೆಯೇ ರೇಷ್ಮೆ ಉಣ್ಣೆಯ ವಸ್ತ್ರಗಳು, ಚಾಕು, ಕತ್ತರಿ, ಚಿತ್ರ, ಸಾಬೂನು, ದೀಪದಕಡ್ಡಿ, ಕಾಗದ ಮುಂತಾದ ಎಲ್ಲಾ ಸರಕುಗಳನ್ನೂ ನಾವೇ ತಯಾರಿಸಿಕೊಳ್ಳುವುದು ನಮಗೆ ಅಸಾಧ್ಯವಾದ್ದಲ್ಲ. ಜಾಯಿಂಟ್ ಸ್ಟಾಕ್ ಕಂಪೆನಿ ರೂಲ್ಸ್ ಮೇರೆಗೆ ಷೇರುಗಳ ಮೂಲಕ ಬಂಡವಾಳವನ್ನು ಭಾರಿಯಾಗಿ ಕೂಡಿಸಿ, ಕಾರ್ಖಾನೆಗಳನ್ನು ಸ್ಥಾಪಿಸುತ್ತಾ ಬಂದರೆ ಕ್ರಮೇಣ ಇವುಗಳನ್ನೆಲ್ಲಾ ನಾವು ಸಾಧಿಸಿಕೊಳ್ಳಬಹುದು. ಬರೀ ವ್ಯವಸಾಯವನ್ನೇ ನಂಬಿಕೊಂಡಿರುವುದು ವಿವೇಕವಲ್ಲ. ಮಳೆಗಳು ಸರಿಯಾಗಿ ನಡೆಸುತ್ತವೆಂಬ ಭರವಸೆಯು ಈಗಿನ ಕಾಲದಲ್ಲಿ ಕಡಿಮೆಯಾಗುತ್ತಾ ಬರುತ್ತಿದೆ. ಬೇಸಾಯದ ಮೇಲೆಯೇ ಭರವಸೆಯನ್ನಿಟ್ಟುಕೊಂಡಿರುವ ರೈತನು ಮಳೆಯಿಲ್ಲದಾಗ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗುವನು. ತನ್ನ ಕಸುಬಿನ ಜೊತೆಗೆ ಯಾವುದಾದರೂ ಕೈಗಾರಿಕೆಯನ್ನು ಇಟ್ಟುಕೊಂಡಿದ್ದರೆ, ಒಂದಿಲ್ಲದಿದ್ದರೆ ಒಂದರಲ್ಲಿ ಜೀವನವು ನಡೆಯುವುದು. ವ್ಯಾಪಾರದ ವಿಷಯದಲ್ಲೂ ಸಣ್ಣ ಪುಟ್ಟ ವ್ಯಾಪಾರಗಳಿಂದ ದೇಶವು ಉನ್ನತಸ್ಥಿತಿಗೆ ಬರಲಾರದು. ಅನ್ಯದೇಶಗಳ ಸಂಗಡ ಭಾರೀವ್ಯಾಪಾರಗಳು ನಡೆಯುವಂತೆ ಕಂಪೆನಿಗಳು ಸ್ಥಾಪಿತವಾಗಬೇಕು. ಈ ರೀತಿ ವ್ಯಾಪಾರ, ಕೈಗಾರಿಕೆ, ಒಕ್ಕಲತನಗಳನ್ನು ಸಾಂಪ್ರತ ಕಾಲಕ್ಕೆ ತಕ್ಕಹಾಗೆ ನಮ್ಮವರು ಏರ್ಪಡಿಸಿಕೊಂಡರೆ ನಮ್ಮಲ್ಲಿ ಬಡತನವು ತೊಲಗಿಹೋಗುವುದರಲ್ಲಿ ಸಂದೇಹವಿಲ್ಲ. (ಶೇಷ).

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ [illegible] ಕ್ಕೆ ಚಂದಾ ಕೊಟ್ಟ ಮಹನೀಯರುಗಳ ಪಟ್ಟಿ.

ಇಲ್ಲಿಯವರೆಗೆ ಪ್ರಚುರವಾಗಿರುವ ಮೊಬಲಗು 14,696-4-3.

ಮ|| ನಗರದ ಸಗರದ ಚೆನ್ನಬಸವಣ್ಣಪ್ಪನವರು 100 ರೂ., ಶಿವಮೊಗ್ಗ ಕೈದೋಟ್ಟಿ ಶಾ. ವೀರಪ್ಪನವರು 8 ರೂ., ಬುದ್ಧಿವಂತ ಮಲ್ಲಪ್ಪನವರು 8 ರೂ., ಸಂತೆ ಕಡೂರು ವೀರಪ್ಪನವರು 8 ರೂ. ಮುರಿಯಪ್ಪನವರ ಹೆಂಡತಿ ಚೆನ್ನಮ್ಮನವರು 4 ರೂ., ಅವಲಕ್ಕಿ ಶಿವರುದ್ರಪ್ಪನವರು 5 ರೂ., ಗುರುಸಂಗಾರ್ಯರು 8 ಆಣೆ, ಹೊನ್ನಾಳಿ ತಾಲ್ಲೂಕು ಬೇಲಿಮಲ್ಲೂರು ಸ್ಕೂಲು ಮಾಸ್ಟರ್ ಮಲ್ಲಪ್ಪನವರು 25 ರೂ., ಶಿಕಾರಿಪುರದ ಜೋನ್ನಪ್ಪನವರ ಚನ್ನಪ್ಪನವರು 500 ರೂ., ಪುರಾಣದ ಸಿದ್ದರಾಮಯ್ಯನವರು, ಶಿಕಾರಿಪುರ 50 ರೂ., ಶಿಕಾರಿಪುರದ ಮದನಭಾವಿ ರುದ್ರಪ್ಪನವರು 151 ರೂ., ಶಿಕಾರಿಪುರದ ಗೊಜ್ಜನವರ ಸಿದ್ದಾಮಪ್ಪನವರು 51 ರೂ., ಶಿಕಾರಿಪುರದ ಗುರುಶಾಂತಪ್ಪ ಶಾಸ್ತ್ರಿಗಳವರು 101 ರೂ., ಶಿಕಾರಿಪುರದ ನಂಜುಂಡಯ್ಯನವರು 101 ರೂ., ಶಿಕಾರಿಪುರದ ಬಳ್ಳಾರಿ ವೀರಬಸಪ್ಪನವರು 101 ರೂ., ಶಿಕಾರಿಪುರದ ಹಲಕಟ್ಟಿ ಗುರುಬಸಪ್ಪನವರು 101 ರೂ., ಶಿಕಾರಿಪುರದ ಹಲಕಟ್ಟಿ ಗುರುಬಸಪ್ಪನವರು 101 ರೂ., ಶಿಕಾರಿಪುರದ ಪುರಾಣದ ಸಂಗಪ್ಪನವರು 101 ರೂ., ಶಿಕಾರಿಪುರದ ಉಡುತಡಿಯ ಸಂಗಬಸಯ್ಯನವರು 101 ರೂ., ಶಿಕಾರಿಪುರದ ಹಂಚಿನಮನೆ ಸಣ್ಣಣ್ಣನವರು 101 ರೂ., ಶಿಕಾರಿಪುರದ ದಲ್ಲಾಳಿ ಚನ್ನಪ್ಪನವರು 63 ರೂ., ಶಿಕಾರಿಪುರದ ಹುಳೇಟ್ಟಿನ ಶೆಟ್ಟಿ ಹಾಲಪ್ಪನವರು 51 ರೂ., ಶಿಕಾರಿಪುರದ ಅಮಟಿಕೊಪ್ಪದ ಬಸವಣ್ಣೆಪ್ಪನವರು 51 ರೂ., ಶಿಕಾರಿಪುರದ ಹೊಳೆಯಪ್ಪನವರು 25 ರೂ., ಶಿಕಾರಿಪುರದ ರಸ್ತಾಪುರದ ಮಠದ ಬಸಪ್ಪಯ್ಯನವರು 51 ರೂ., ಶಿಕಾರಿಪುರದ ಚನ್ನಬಸಪ್ಪನವರು 25 ರೂ., ಶಿಕಾರಿಪುರದ ಮಾಳಿಹಳ್ಳಿ ವೀರಪ್ಪನವರು 25 ರೂ., ಶಿಕಾರಿಪುರದ ರಮನ ಚನವೀರಪ್ಪನವರು 25 ರೂ., ಶಿಕಾರಿಪುರದ ಅಮಟಿಕೊಪ್ಪದ ಅಪ್ಪಣ್ಣಪ್ಪನವರು 21 ರೂ., ಶಿಕಾರಿಪುರದ ತಂಕಲಕೊಟ ಬಸವಣ್ಣೆಪ್ಪನವರು 21 ರೂ., ಶಿಕಾರಿಪುರದ ಅಂಗಡಿ ಬಸಪ್ಪನವರು 16 ರೂ., ಶಿಕಾರಿಪುರದ ದೊಡಿಹಳ್ಳಿ ಚನ್ನಬಸಪ್ಪನವರು 15 ರೂ., ಶಿಕಾರಿಪುರದ ವಸ್ತ್ರದ ಮುರುಗಯ್ಯನವರು 15 ರೂ., ಶಿಕಾರಿಪುರದ ಹರಗಲ್ಲ ರೇವಪ್ಪನವರು 15 ರೂ., ಕೋರಿ ಮಲಕಪ್ಪನವರು 12 ರೂ., ಶಿಕಾರಿಪುರದ ಅಮಟಿಕೊಪ್ಪದ ಗುರುಸಿದ್ದಪ್ಪನವರು 12 ರೂ., ಶಿಕಾರಿಪುರದ ಅಂಗಡಿ ರಾಚಪ್ಪನವರು 12 ರೂ., ಶಿಕಾರಿಪುರದ ಹಿರೇಮಠದ ಸಿದ್ದಯ್ಯನವರು 12 ರೂ., ಶಿಕಾರಿಪುರದ ಮಂಚಾಲೆ ಹೊಳೆಬಸಪ್ಪನವರು 11 ರೂ., ಶಿಕಾರಿಪುರದ ರೊಳಗಿ ಮುಕ್ಕಣ್ಣನವರು 11 ರೂ., ಶಿಕಾರಿಪುರದ ಅಂಗಡಿ ವೀರಪ್ಪನವರು 11 ರೂ., ಶಿಕಾರಿಪುರದ ನೇಮತಿ ವೀರಪ್ಪನವರು 10 ರೂ., ಶಿಕಾರಿಪುರದ ಪಟ್ಟದ ವೀರಯ್ಯನವರು 9 ರೂ., ಒಣ್ಣಾವನೂಲು ಚನ್ನಪ್ಪನವರು 9 ರೂ., ನಲುನುಲು ವಿರೂಪಾಕ್ಷಪ್ಪನವರು 9 ರೂ., ಕಾನೂರು ಶಿವಲಿಂಗಪ್ಪನವರು 9 ರೂ., ರಮನಿಕಮ್ಮಣ್ಣನವರು 9 ರೂ., ಅಜಜಿಮುರುಗೆಪ್ಪನವರು 9 ರೂ., ಆಯನೂರು ಬಸವಣ್ಣೆಪ್ಪನವರು 9 ರೂ., ನೇಮತಿ ಹಾಲಪ್ಪನವರು 9 ರೂ., ರಮನಿಕೊಟ್ರಪ್ಪನವರು 8 ರೂ., ಬೆನ್ನೂರ ಚನ್ನಬಸಪ್ಪನವರು 8 ರೂ., ತಿಮ್ಮಣ್ಣನವರ ಚನ್ನಪ್ಪನವರು 6 ರೂ., ಹುಂಚದ ಸ್ವಾದಪ್ಪನವರು 6 ರೂ., ಅಮಟಿಕೊಪ್ಪದ ರುದ್ರಪ್ಪನವರು 6 ರೂ., ಹದಡಿ ರಾಚಪ್ಪನವರು 6 ರೂ., ಪುರಾಣದ ಷಡಾಕ್ಷರಯ್ಯನವರು 6 ರೂ., ಕೊರಡಿ ವೀರಪ್ಪನವರು 6 ರೂ., ಅಂಗಡಿ ಹೋರಿಹೊಳೆಯಪ್ಪನವರು 6 ರೂ. 5 ಆ., ಮುಲ್ಲಾಡ ಶಿವಲಿಂಗಮ್ಮನವರು 5 ರೂ., ಸಕ್ಕರೆ ವೀರಬಸಪ್ಪನವರು 5 ರೂ., ಮುಗಳದ ಗುರುಶಾಂತಪ್ಪನವರು 5 ರೂ., ಕೊರಡಿಸಿದ್ದಪ್ಪನವರು 5 ರೂ., ಚಾಭಾರ ಶಾಂತವೀರಪ್ಪನವರು 5 ರೂ., ಹಂಚಿನಮನೆ ಕಲವೀರಪ್ಪನವರು 5 ರೂ., ಕುಳೆನ ನೀಲಕಂಠಪ್ಪನವರು 5 ರೂ., ಜಾನಗಲ್ಲು ಚನ್ನಬಸಪ್ಪನವರು 5 ರೂ., ಹಂಚದ ಮುರಿಗೆಪ್ಪನವರು 5 ರೂ., ಧಾರವಾಡದ ನಂಜುಂಡಪ್ಪನವರು 5 ರೂ., ಹುಂಚದ ಚನ್ನಬಸಪ್ಪನವರು 5 ರೂ., ಪುರಾಣದ ಕಲ್ಯಾಣಮ್ಮನವರು 5 ರೂ., ಬಳ್ಳಾರಿಹೊಳೆಬಸಪ್ಪನವರು 5 ರೂ., ನ್ಯಾಮತಿ ರೇವಣಸಿದ್ದಯ್ಯನವರು ಲಗ್ನದಬಾಬ್ತು 41 ರೂ., ಕುಂಬಳೂರು ಚನ್ನಬಸಲಿಂಗಪ್ಪನವರು 52 ರೂ., ಡಿ. ಕೆಂಚಸಿದ್ದಲಿಂಗಪ್ಪನವರು 25 ರೂ., ಸಿದ್ದಪ್ಪಪಟೇಲ ಇವರು 25 ರೂ., ಬೆನಕನಹಳ್ಳಿ ಸಿದ್ದಲಿಂಗಪ್ಪನವರು 25 ರೂ., ಕೂಟ್ನದ ಹೊಳೆಯಪ್ಪನವರು 51 ರೂ., ಕರಿಸಂಗಪ್ಪನ ಲಿಂಗಪ್ಪನವರು 21 ರೂ., ಕಡೂರ ಬಸಲಿಂಗಪ್ಪನವರು 10 ರೂ., ಕಟ್ಟಿಹಾಲಪ್ಪನವರು 6 ರೂ., ಗೌಡರ ಅಂಕಲಪ್ಪನವರು 10 ರೂ., ಕುಂಬಾರ ಶಾ|| ಶಿವಪ್ಪನವರು 50 ರೂ., ವಾಡಲಬಸಪ್ಪನವರು 20 ರೂ., ಹಿರೇಮಠದ ಶ್ರೀ ಸಿದ್ದಲಿಂಗಯ್ಯನವರು 20 ರೂ., ನ್ಯಾಮತಿ ರೇವಣಸಿದ್ದಯ್ಯನವರು 250 ರೂ., (ರುಸುಂ ಬಾಬ್ತು) ನಲ್ಲೂರ ಪಟೇಲ ಬಿ. ಹಾಲಪ್ಪನವರು ರುದ್ರಪ್ಪನವರು ಶಿವಯೋಗ 101 ರೂ., ದುಮ್ಮಿ ಪಂಚಾಕ್ಷರಪ್ಪನವರು ಶಿವಯೋಗ 51 ರೂ., ರೇವಣಸಿದ್ದಯ್ಯನವರು ಮಂಡಿ ಶಿವಯೋಗ 31 ರೂ., ಕೋರಿಹಾಲಪ್ಪ-ಶಿವಲಿಂಗಪ್ಪನವರು 10 ರೂ., ನಂಜುಂಡಪ್ಪನವರು-ಕೊಪ್ಪದ ಹೊಳೆಯಪ್ಪನವರು ಲಗ್ನದಲ್ಲಿ 2 ರೂ., ವೀರಪ್ಪ-ಸುಬ್ರಾಯನಾಯ್ಕರ ಮಂಡಿ ರುಸುಂಬಾಬ್ತು 10 ರೂ., ಕಾಡಪ್ಪನವರು ಲಗ್ನದಬಾಬ್ತು 5 ರೂ., ಕೈಲಾಸದ ಮಹಾದೇವಪ್ಪನವರು ಲಗ್ನದಲ್ಲಿ 8 ರೂ., ಅಜ್ಜಕ್ಕಳ ನಾಗಪ್ಪನವರು ಲಗ್ನದಲ್ಲಿ 8 ರೂ., ಅಜ್ಜಕ್ಕಳ ಮಹಾದೇವಪ್ಪನವರು 8 ರೂ., ಬೆಳಗುತ್ತಿ ಲಿಂಗಪ್ಪನವರಿಂದ ಲಗ್ನದ-ಧಾನ್ಯಗಳ ಬಾಬ್ತು 11 ರೂ., ಮೈಸೂರ ಬ್ಯಾಂಕಿನಲ್ಲಿದ್ದ ಕರೆಂಟ ಡಿಪಾಜಿಟ್ಟಿನ ಬಡ್ಡಿ ೩-೪-೦., ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ಸೆಕ್ರಿಟರಿಯವರ ಹೆಸರಿನಲ್ಲಿದ್ದ ಮೊಬಲಗಿನ ಬಡ್ಡಿ 31.3.4. ಒಟ್ಟು ಜುಮ್ಲಾ 17,907—8—7.

ತಾ|| 25-7-18.

ಹನಸವಾಡಿಕಡಲ ಬಸವಪ್ಪ,
ಸೆಕ್ರಿಟರಿ.
ನ|| ಡಿ|| ವಿ|| ವಿ|| ಸಂಘ, ಶಿವಮೊಗ್ಗ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೯೬೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಜಿಸ್ಟರ ಮಾಡಿದ

ಅರ್ಕುಶಫಾ ಅಂದರೆ ಅರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೆನು. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕಾಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿನಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಸಂಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡಚರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಪಸ್ಮಾರ, ಅರ್ಧಲಿಸಿ, ಅಜೀರ್ಣ, ಹೊಟ್ಟೆಶೂಲೆ, ಮೈಶೂಲೆ, ಅರದಲೆಶೂಲೆ, ನಡಶೂಲೆ, ವಾತಶೂಲೆ, ರಕ್ತಪಿತ್ತ, ಗುದ್ದವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಭ್ರಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲೆ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅಂದಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನು ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಅರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗಬೇಕೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ತೋರಿದರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ನೋಟಿಸ ಸಿಗುವದು. ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಮಹೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ ಹೆಡ್ ಆಫೀಸ
13 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೬ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಸ್ವದೇಶಿ ಸೀರೆಗಳು.

ಈ ಕೆಳಗೆ ಬಾಚಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇವೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುವು. ಪ್ರತಿಯೊಬ್ಬರೂ ಉಡಲು ಅನುಕೂಲವಿದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ದನದಕೋಡಿ ಸೀರೆ	ರೂ. 3-8-0
		ಬಾಲಾಮಣಿ ,,	... 4-0-0
ಹೋರೂಲು ಸೀರೆ	ರೂ. 11-0-0	ಮಧುರೆ ಬುಟಾ ಸೀರೆ	... 4-0-0
ಗೊಸರ್‌ಜಾನ್ ಸೀರೆ	... 5-8-0	ಕಕಂಡಳ ಇಮಿಟೇಷನ್ ಸೀರೆ	5-8-0
ಮಾಪಿನಸಾಯಿ ಸೀರೆ	... 3-0-0	ಜಪಾನ್ ರೇಷ್ಮೆ ಪಂಚೆ	... 2-8-0
ಬನಾರಸ್ ಸೀರೆ	... 5-0-0	ಕಾಲರು ಟ್ವಿಲ್ ಷರಟು	... 1-12-0

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
33 ಸಾಹುಕಾರಪೇಟೆ, ಮದ್ರಾಸ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 40

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಕಾರವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟುರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಹಸ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೩-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೮ ನೆಯ ಇಸವಿ ಆಗಸ್ಟ್ ತಾ|| ೪ ರಿಂದ ೧೯೧೮ ನೆಯ ಆಗಸ್ಟ್ ತಾ|| ೧೦ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಷಾಢ ಬ|| ತ್ರಯೋದಶಿಯಿಂದ ಶ್ರಾವಣ ಶು|| ಚತುರ್ಥಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ
4	[1] ಭಾನು	ತ್ರ	45-57	ಆರಿದ್ರಾ	25-52	20
5	[2] ಸೋಮ	ಚತು	45-13	ಪುನರ್ವಸು	26-23	21
6	[3] ಮಂಗಳ	ಅಮಾ	45-36	ಪುಷ್ಯ	28-9	22
7	ಬುಧ	ಪಾಡ್ಯ	47-19	ಆಶ್ಲೇಷ	31-15	23
8	ಗುರು	ಬಿದಿಗೆ	50-15	ಮಖಾ	35-26	24
9	[4] ಶುಕ್ರ	ತದಿಗೆ	54-9	ಪುಭಾ	40-42	25
10	[5] ಶನಿ	ಚೌತಿ	58-57	ಉಭಾ	46-48	26

1. ಪ್ರದೋಷ. 2. ಮಾಸಶಿವರಾತ್ರಿ. 3 ಸರ್ವತ್ರಭೀಮಾವಾಸ್ಯಾ. 4. ಸಂಪದ್ಗೌರೀವ್ರತಂ. 5. ಶ್ರಾವಣಶನಿವಾರಂ, ನಾಗರಚೌತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿತೂರಭೂರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಭೌನಪಥಕೃತಾವತಾರಾ ಪತ್ರಜ್ಞ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಸುಕಲಾಲೋಲಂಸುಧೀಭೃಂಗನ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀನಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತಿ ಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸ ೧೯೧೮ ನೆಯ ಇಸವಿ ಆಗಸ್ಟ್ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೩೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚಶಿರಂಗಳಲಿ ಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕ್ಷೋಣೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಶಿನಾಥಶತಕ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು

MADRAS
MAIL
WATCH
WITH 15
PRESENTS

ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅದ್ದಿಕೆ 1, ಗಡಿಯಾರದ ಉಡರಬುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
34 ೨, ಇರುಳಪ್ಪನವೀದಿ, ಮದರಾಸ್

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಷಟ್‌ಸ್ಥಲ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಕಾಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರದಾಸ	೦—೪—೦
ವ್ರತಪಂಚಕ	೦—೩—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಸಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 35

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜಿ ಐಲೆಂಡ್, ಈಸ್ಟ್‌ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಹೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತಜಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಜ್ವರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ಕೊಂಡುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತನ್ನ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇವೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವನ್ನಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦,

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
19 ಆನಂದ ಬುಕ್‌ಡಿಪೋ, ಮೈಸೂರು.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಅತಿ ಸುಲಭ ಬೆಲೆ?

ಅತ್ಯಂತ ಗುಣಕಾರಿಯಾದ ಶಾಸ್ತ್ರೋಕ್ತ ಔಷಧಗಳು ನಮ್ಮಲ್ಲೇ ದೊರಕುತ್ತವೆ. ಏಜಂಟರಾದವರಿಗೆ ಭರಪೂರ ಕಮಿಷನ್ ಗ್ರಾಹಕರು ತ್ವರೆಮಾಡಿರಿ!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಯೆ. ೧೦೦ ಕ್ಕೆ ೧-೪-೦

೩. ಹೊಟ್ಟೆಯ ನಾಶಕ ಚೂರ್ಣ—ಕೊಡಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಯೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲತರದ ಜಂತುಗಳು ಒಂದೇಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ-೧೨೦.

೫. ಪಕ್ವಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ. ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಬಾರದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷ್ಯದಲ್ಲಿಡಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
37 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 41

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಕಾರವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟುರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಹಸ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೩-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ವಿಜ್ಞಾಪನೆ.

ಯುದ್ಧವು ಈಗಲೇ ಮುಗಿಯುವ ಚಿಹ್ನೆಯು ತೋರುವುದಿಲ್ಲ. ಪದಾರ್ಥಗಳ ಬೆಲೆಯೆಲ್ಲಾ ಹೆಚ್ಚಿರುವುದು ಸರ್ವರಿಗೂ ಗೊತ್ತೇ ಇದೆ. ತತ್ರಾಪಿ ಹೊರಗಣಿಂದ ಬಂದಲ್ಲದೆ ಗತ್ಯಂತರವಿಲ್ಲದ ಕಾಗದದ ಬೆಲೆಯು ಈಗ ೧ ಕ್ಕೆ ೭ ರಷ್ಟು ಏರಿಹೋಗಿದೆ. ಅಷ್ಟು ಕೊಟ್ಟರೂ ಬೇಕಾದ ಕಾಗದವು ಸಿಕ್ಕುವುದೇ ದುರ್ಲಭವಾಗಿದೆ. ಬೊಂಬಾಯಿ ಮದ್ರಾಸುಗಳಲ್ಲಿ ಅಷ್ಟೂ ಇಷ್ಟೂ ಸಿಕ್ಕಿದರೂ ಅಲ್ಲಿಂದ ಮೈಸೂರಿಗೆ ಬಂದು ಸೇರಲು ಹೊಗೆಬಂಡಿಗಳ ಕೊರತೆಯಿಂದ ಅನುಕೂಲವಿಲ್ಲವಾಗಿದೆ. ಈ ಕಾರಣದಿಂದಲೇ ವಿವರ್ಣವಾದ ಕಾಗದಗಳನ್ನು ನಾವು ಕಳೆದ ೩-೪ ಸಂಚಿಕೆಗಳಿಂದಲೂ ಉಪಯೋಗಿಸಿಕೊಳ್ಳಬೇಕಾಯಿತು. ಈ ಬೆಲೆ ಹೆಚ್ಚುಗೆಯಿಂದ ಪತ್ರಿಕಾ ಮುದ್ರಣದಲ್ಲಿ ನಮಗೆ ಎರಡು ವರ್ಷಗಳಿಂದ ವಿಪರೀತವಾಗಿ ನಷ್ಟ ತಟ್ಟುತ್ತಿದ್ದರೂ ಕಟ್ಟಿಕೊಂಡ ಅಭಿಮಾನಕ್ಕಾಗಿ ಏಗಾಡುತ್ತಿರಬೇಕಾಗಿದೆ. ಈ ವಿಷಮಸಮಯದಲ್ಲಿ ಅನೇಕ ಪತ್ರಿಕಾಕರ್ತರು ತಮ್ಮ ಪತ್ರಿಕೆಗಳ ವರ್ಗಣಿಯನ್ನು ನಿರ್ವಾಹವಿಲ್ಲದೆ ಹೆಚ್ಚಿಸಿದರು. ನಾವು ಹಾಗೆಮಾಡದೆ ಇದುವರೆಗೂ ಸೈರಿಸಿಕೊಂಡೆವು. ಈಗ ಬಹಳ ದುರ್ಭರವಾಗಿಬಂದಿರುವುದು. ಆದುಕಾರಣ ಇಂದಿನಿಂದ ವರ್ಗಣಿಯ ಹಣವನ್ನು ವರ್ಷ ೧ ಕ್ಕೆ ೧ ರೂ. ನಿಂದ ೧-೭-೦ ಗೆ ಹೆಚ್ಚಿಸಿರುತ್ತೇವೆ. ಪರಸ್ಥಳದವರು ಅಂಚೆವೆಚ್ಚ ಸೇರಿ ೨-೪-೦ ರೂ. ಗಳನ್ನು ಕೊಡಬೇಕಾಗುವುದು. ನಾವು ವರ್ಗಣಿಗಾಗಿ ಕಳುಹಿಸುವ ವಿ. ಪಿ. ಗಳನ್ನೆಲ್ಲಾ ಈ ಲೆಕ್ಕವನ್ನನುಸರಿಸಿಯೇ ಇನ್ನುಮುಂದೆ ಕಳುಹಿಸುವೆವು. ಮನಿಯಾರ್ಡರ್ ದ್ವಾರಾ ಅವರಾಗಿ ವರ್ಗಣಿಯನ್ನು ಕಳುಹಿಸುವವರೂ ಈ ಲೆಕ್ಕವನ್ನೇ ಅನುಸರಿಸಬೇಕೆಂದು ಕೋರುತ್ತೇವೆ. ಭಾಷಾಭಿಮಾನಿಗಳೂ, ಮತಾಭಿಮಾನಿಗಳೂ, ದೇಶಾಭಿಮಾನಿಗಳೂ, ಪತ್ರಿಕಾಭಿಮಾನಿಗಳೂ ಸಹ ಈಗಣ ವಿಷಮಸ್ಥಿತಿಯ ಕಡೆಗೆ ಗಮನಿಸಿ, ಅಲ್ಪಮಾತ್ರವಾಗಿ ಚಂದಾ ಹೆಚ್ಚಿಸಿದರೂ ಇದುವರೆಗಿನಂತೆಯೇ ಉದಾರಭಾವದಿಂದ ಪತ್ರಿಕೆಯನ್ನು ಪೋಷಿಸಿಕೊಂಡು ಹೋಗುವವರಾಗಬೇಕೆಂದು ಪ್ರಾರ್ಥನೆ. ಪತ್ರಿಕರ್ತ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಅಗಸ್ಟ ತಾ|| ೧೧ ನೆಯ ಭಾನುವಾರ.

ಈ ನಡೆಗಳು ಸ್ವರಾಜ್ಯಸಾಧನಕ್ಕೆ ಅನುಕೂಲಗಳೆ ?

ಏಕಮತ್ಯವೇ ಇಷ್ಟಾರ್ಥಸಿದ್ಧಿಗೆ ಪರಮಸಾಧನವೆಂಬುದು ಸರ್ವವಿಶ್ರುತವು. ಭರತಖಂಡದ ಸ್ವರಾಜ್ಯಸಾಧನೆಗಾದರೂ ಅದಿಲ್ಲದೆ ಆಗಲಾರದು. ಪ್ರತ್ಯೇಕ ಸಂಘಪ್ರಾತಿನಿಧ್ಯವನ್ನು ಒಪ್ಪದೆ ಹೋಗಿದ್ದ ಸ್ವರಾಜ್ಯವಾದಿಗಳೂ ಕೂಡ ಮೆಲ್ಲಮೆಲ್ಲನೆ ಸಂಘಪ್ರಾತಿನಿಧ್ಯತತ್ವಕ್ಕೆ ಅನುಮೋದನೆಯನ್ನಿತ್ತು ಪ್ರಜೆಗಳ ಅನೈಕಮತ್ಯವನ್ನು ಹೋಗಲಾಡಿಸಿ ಏಕಮತ್ಯಬಲದ ಮೂಲಕ ಸ್ವರಾಜ್ಯಸಾಧನವನ್ನು ಮಾಡಲು ಯತ್ನಿಸುತ್ತಿರುವರು. ಭರತಖಂಡದಲ್ಲಿ ಬಹು ದೊಡ್ಡಜನಸಂಖ್ಯೆ (೯ ಕೋಟಿ) ಯುಳ್ಳದಾಗಿ ಮಹಾನಿಮ್ನಗರ್ತದಲ್ಲಿ ಬಿದ್ದಿರುವ ಪಂಚಮ ಜನವರ್ಗವನ್ನು ವಿದ್ಯಾಬುದ್ಧಿ ವಿಕಾಸಾದಿಗಳ ಮೂಲಕ ಉದ್ಧರಿಸಬೇಕೆಂದು ದೇಶಾಭಿಮಾನಿಗಳನೇಕರು ಪ್ರಯತ್ನಿಸುತ್ತಿರುವರು. ಹಿಂದೆ ಬಿದ್ದಿರುವ ಜನರನ್ನು ಸಮಾನಸ್ಥಿತಿಗೆ ತಂದುಕೊಳ್ಳದಿದ್ದರೆ ಭರತಖಂಡಕ್ಕೆ ಮೋಕ್ಷವಿಲ್ಲವೆಂಬುದು ಸಿದ್ಧಾಂತವಾಗಿರುವ[illegible]. ದೂರದೃಷ್ಟಿಯುಳ್ಳವರುಗಳಿಗೆ ಈ ತತ್ವಗಳೆಲ್ಲಾ ಮಾನ್ಯವಾಗಿಯೂ ಆಚರಣೀಯವಾಗಿಯೂ ತೋರುತ್ತಿದ್ದರೂ, ಅಸೂಯಾಳುಗಳೂ ಪರೋತ್ಕರ್ಷಾಸಹಿಷ್ಣುಗಳೂ ಸ್ವಾರ್ಥೈಕಧುರಂಧರರೂ ಜಾತಿಮಾತ್ಸರ್ಯಪಿಶಾಚಾವಿಷ್ಟರೂ ಆದ ಕೆಲಕೆಲರಿಗೆಮಾತ್ರ ಈ ಉದಾರತತ್ವಗಳು ಸೇರುತ್ತಲಿಲ್ಲ. ಇಂಥವರಿಂದಲೇ ಹಿಂದೆ ಭರತಖಂಡಕ್ಕೆ ಅಪರಿಮಿತಾನರ್ಥ ಪರಂಪರೆಗಳು ತಟ್ಟಿದುವು. ಅವರ ಸಂಕುಚಿತಬುದ್ಧಿಯ ಅಂಧತೆಗೆ ದೇಶಹಿತವೆಂಬ ಸೂರ್ಯತೇಜಸ್ಸು ಗೋಚರಿಸುವುದೇ ಇಲ್ಲ. ಇಂಥ ಜನರ ಪಾರುಪತ್ಯವು ಎಲ್ಲಿಯವರೆಗೆ ರಾಷ್ಟ್ರದಲ್ಲಿ ಹೆಚ್ಚಿರುವುದೋ ಅಲ್ಲಿಯವರೆಗೆ ಸ್ವರಾಜ್ಯನಿರ್ವಾಹಶಕ್ತಿಯು ದೇಶಕ್ಕೆ ಬರುವುದಿಲ್ಲವೆಂದು ಧೀಮಂತರು ಹೇಳುವ ಮಾತು ಸುಳ್ಳಲ್ಲ.

ಭರತಖಂಡವು ಸ್ವರಾಜ್ಯಸಾಧನೆಗಾಗಿ ತಹತಹಪಡುತ್ತಿರುವ ಈಗಣ ಸಮಯದಲ್ಲಿ—ಸ್ವರಾಜ್ಯಪಾಲನೆಗೆ ಭರತಖಂಡವು ಸಮರ್ಥವಾಗಿದೆಯೆಂದು ವಿದ್ಯಾಧಿಕರು ಹೇಳಿಕೊಳ್ಳುತ್ತಿರುವ ಕಾಲದಲ್ಲಿ—ಮುಂದಾದ ಜನವರ್ಗಗಳವರು ಹಿಂದಾದವರಲ್ಲೆಲ್ಲಾ ಸಾನುಭೂತಿಯನ್ನು ತೋರಿಸಿ ಒಟ್ಟುಗೂಡಿಸಿಕೊಂಡು ಸಂಘಶಕ್ತಿಯಿಂದ ಪುರುಷಾರ್ಥಸಾಧನವನ್ನು ಮಾಡಿಕೊಳ್ಳಬೇಕಾಗಿರುವ ಸಂದರ್ಭದಲ್ಲಿ—ವಿದ್ಯಾಧಿಕರೆಂದು ಹೇಳಿಸಿಕೊಳ್ಳುತ್ತಿರುವ ಕೆಲ ನಾಗರಿಕಜನರೇ ಜಾತಿ ಕುಲದ ದುರಭಿಮಾನದ ಮೂಲಕ ಮೂಢರಂತೆ ನಡೆದು ಪರಸ್ಪರ ದ್ವೇಷವನ್ನು ಹೆಚ್ಚಿಸಿ ಕಾರ್ಯವಿಘಾತ ಮಾಡಿಕೊಳ್ಳುವುದು ಅನ್ಯಾಯವಲ್ಲವೆ? ಧಾರವಾಡದ ಈಗಣ ಮ್ಯುನಿಸಿಪಲ್ ಬೋರ್ಡಿನಲ್ಲಿ ವೀರಶೈವ ಜನವರ್ಗದವರ ಸಂಖ್ಯೆಯೇ ಹೆಚ್ಚಾಗಿದ್ದು, ಅವರಲ್ಲಿನ ಒಬ್ಬರು ಪ್ರೆಸಿಡೆಂಟರಾಗಿದ್ದು ಮ್ಯುನಿಸಿಪಾಲಿಟಿಯ ಮುಖ್ಯ ಸೂತ್ರವೆಲ್ಲಾ ಆ ಜನವರ್ಗದವರ ಹಸ್ತಗತವೇ ಆಗಿರುವುದು. ಪರರ ಕೈಗೆ ಇಷ್ಟುಮಾತ್ರದ ಅಧಿಕಾರಗಳು ಹೋಗಿರುವುದನ್ನೂ ನೋಡಿ ಸೈರಿಸಲಾರದ ಅಲ್ಲಿಯ ಮುಂದಾದ ವಿದ್ಯಾಧಿಕ ಜನವರ್ಗದವರು ಏನಾದರೊಂದು ರೀತಿಯಿಂದ ಆ ಮ್ಯುನ್ಸಿಪಲ್ ಕಾರ್ಯಭಾರದಲ್ಲಿ ಕುಂದನ್ನಾರೋಪಿಸಿ, ಪರರಿಗೆ ಅಧಿಕಾರನಿರ್ವಾಹ ಶಕ್ತಿಯಿಲ್ಲವೆಂಬ ಅಪಪ್ರಥೆಯನ್ನು ಹುಟ್ಟಿಸಬೇಕೆಂದು ಅಲ್ಲಸಲ್ಲದ ಕುತಂತ್ರಗಳನ್ನೆಲ್ಲಾ ಮಾಡುತ್ತಿರುವರು. ಹಿಂದೆ ಶಾಲೋಪಾಧ್ಯಾಯರುಗಳ ಸಂಪನ್ನು ಮಾಡಿಸಿ ಕಡೆಗೆ ಅದರಿಂದ ಕಾರ್ಯಸಾಫಲ್ಯವೇನನ್ನೂ ಹೊಂದದೆ ಕುಳಿತರು. ಈಗ ಮತ್ತೊಂದು ಸಲ ಒಂದು ಮೀಟಿಂಗಿನಲ್ಲಿ ನ್ಯಾಯವಿರುದ್ಧವಾದ ನಡೆಯನ್ನು ತಾವೇ ನಡೆಯಿಸಿ, ಮುಖ ಸುಗಟ್ಟಿಕೊಂಡು ಸಭೆಯಿಂದ ಎದ್ದುಹೋಗಿ, ಮ್ಯುನ್ಸಿಪಲ್ ಅಧಿಕಾರಿಗಳ ಕಾರ್ಯಪ್ರವರ್ತನೆಯ ಮೇಲೆ ಕೆಟ್ಟ ದೂರುಗಳನ್ನು ವೃತ್ತಪತ್ರಿಕೆಗಳ ಮೂಲಕ ಹಬ್ಬಿಸಿ, ಕಡೆಗೆ ಜಿಲ್ಲಾ ಕಲೆಕ್ಟರರ ಕಿವಿಗೂ ಬೀಳುವಂತೆ ಮಾಡಿದರು. ಅದರ ಮೇಲೆ ಕಲೆಕ್ಟರು ಪ್ರವರ್ತಿಸಿ ಸಂಗತಿಗಳನ್ನೆಲ್ಲಾ ಆದ್ಯಂತವಾಗಿ ವಿಚಾರಿಸುವಲ್ಲಿ ಮ್ಯುನಿಸಿಪಲ್ ಅಧಿಕಾರಿಗಳ ಕೃತ್ಯವು ನ್ಯಾಯವಾದುದೆಂದೂ, ವಿರುದ್ಧವಾಗಿ ನಡೆಯಿಸಿದವರ ಪ್ರಯತ್ನಗಳೆಲ್ಲಾ ಅನ್ಯಾಯವೆಂದೂ ಸಿದ್ಧವಾಯಿತು. ಹೀಗೆ ಪರರ ಯತ್ಕಿಂಚಿದುತ್ಕರ್ಷವನ್ನೂ ವಿದ್ಯಾಧಿಕ ಜನರು ಸೈರಿಸದೆಹೋದಮೇಲೆ ಪರಸ್ಪರ ಸಾನುಭೂತಿಗಳು ಹುಟ್ಟುವುದು ಹೇಗೆ? ಮತ ಜಾತಿ ಪ್ರಯುಕ್ತ ಮಾತ್ಸರ್ಯಗಳು ಅಳಿದುಹೋಗುವುದು ಹೇಗೆ? ಸ್ವರಾಜ್ಯ ಸಾಧಕರ ಯತ್ನಗಳನ್ನು ಕಂಡು ಬೆದರದಿರುವುದು ಹೇಗೆ? ಇಂಥ ಉದಾಹರಣೆಗಳನ್ನು ಪರಂಪರೆಯಾಗಿ ಕೊಡಬೇಕೆಂದರೂ ಸಿಕ್ಕುತ್ತಿರುವುವು. ಸದ್ಯಃ ಸೇಲಂ ಮ್ಯು|| ಕೌನ್ಸಿಲಿನಲ್ಲಿ ಈಗತಾನೇ ನಡೆದ ಮತ್ತೊಂದು ಉದಾಹರಣೆಯನ್ನು ಮಾತ್ರ ಕೊಟ್ಟು ಈ ಲೇಖನವನ್ನು ಮುಗಿಸುತ್ತೇವೆ.

ಸೇಲಮ್ಮಿನಲ್ಲಿ ಕುಡಿಯುವ ನೀರಿನ ನಲ್ಲಿಗಳ ಕೆಲಸಕ್ಕೆ ನಿಯುಕ್ತರಾಗಿರುವ ೫ ಮಂದಿ ಕೆಲಸಗಾರರಲ್ಲಿ ಇಬ್ಬರು ಪಂಚಮರಿರುವರು. ಇವರು ೭ ವರ್ಷಗಳಿಂದಲೂ ಆ ಉದ್ಯೋಗದಲ್ಲಿರುವರು. ಇವರಿಬ್ಬರಲ್ಲಿ ಒಬ್ಬನು ನಲ್ಲಿಗಳ ಬಾಯಿಗೆ ತಿರುಪನ್ನು ಹಾಕುವುದೇ ಮೊದಲಾದ ಕೆಲಸವನ್ನು ಮಾಡುತ್ತಿರುವನು. ಇವನು ಆ ಊರಿನ ೨ ನೆ ಅಗ್ರಹಾರದ ವಾರ್ಡಿನಕೆಲಸಕ್ಕೆ ವರ್ಗಾಯಿಸಲ್ಪಟ್ಟನು. ಕೂಡಲೇ ಆ ಅಗ್ರಹಾರದ ಬ್ರಾಹ್ಮಣರುಗಳು ಆಗ್ರಹಪರವಶರಾಗಿ ಮ್ಯುನ್ಸಿಪಾಲಿಟಿಗೆ ವಿಜ್ಞಾಪನಪತ್ರವನ್ನು ಬರೆದುಕೊಂಡು, ಆತನನ್ನು ತಮ್ಮ ವಾರ್ಡಿನ ಕೆಲಸಕ್ಕೆ ಹಾಕಿದರೆ ತಾವು ಸೈರಿಸುವುದಿಲ್ಲವೆಂದು ತಿಳಿಯಿಸಿದರು. ಆ ವಿಜ್ಞಾಪನಪತ್ರವು ಕೌನ್ಸಿಲಿನ ವಿಮರ್ಶೆಗೆ ಬಂದಾಗ ಬ್ರಾಹ್ಮಣರಾಗಿದ್ದ ೮ ಮಂದಿ ಸಭಿಕರು ಅದಕ್ಕೆ ಅನುಕೂಲವಾಗಿಯೇ ಸಮ್ಮತಿಯನ್ನಿತ್ತರು. ೯ ಮಂದಿ ಬೇರೆ ಸಭಿಕರು ಅದಕ್ಕೆ ವಿರುದ್ಧವಾಗಿ ಅಭಿಪ್ರಾಯ ಕೊಟ್ಟುದರಿಂದ ವಿಜ್ಞಾಪನಪತ್ರವು ತಿರಸ್ಕೃತವಾಗಿ ಹೋಯಿತು. ಬೇರೆಬೇರೆ ಜನವರ್ಗಗಳ ಪ್ರತಿನಿಧಿಗಳು ಇಂಥ ಕೌನ್ಸಿಲುಗಳಲ್ಲಿ ಇರುವುದರಿಂದ ಎಷ್ಟು ಪ್ರಯೋಜನವೆಂಬುದು ಅದರಿಂದ ಸಿದ್ಧವಾಯಿತು. ಇಲ್ಲಿ ವಿಚಾರಾರ್ಹವಿಷಯವಾವುದೆಂದರೆ—ಮದ್ಯಪಾಯಿಯಲ್ಲಿ ಸಂಧ್ಯಾವಂದನ ದೋಷವನ್ನೆಣಿಸಿದಂತೆ ಕೊಳಾಯಿ ನೀರನ್ನುಪಯೋಗಿಸುವವರು ನಲ್ಲಿಗೆ ಪಂಚಮನ ಸ್ಪರ್ಶವಾಗಬಾರದೆಂದು ಹೇಳುವುದರಲ್ಲಿ ಯುಕ್ತಿಯೇನಿರುವುದು? ನಲ್ಲಿಯ ನೀರಿನ ಉಪಯೋಗವೇ ಸದಾಚಾರಕ್ಕೆ ವಿರುದ್ಧವಾಗಿದೆ. ಆ ನಲ್ಲಿಗಳು ಯಾವ ಖಂಡದಲ್ಲಿಯೋ ಯಾವ ಯಂತ್ರಾಲಯಗಳಲ್ಲಿಯೋ ಯಾವ ಯಾವ ಜಾತಿಯ ಜನರಿಂದಲೋ ಮುಟ್ಟಿ ನಿರ್ಮಿತವಾಗಿ ಬಂದುವು. ಅಂಥ ಹೊಲೆಗಲಿಸಿ ಬಂದುವುಗಳನ್ನು ಮನೆಗಳಿಗಿಡಿಸಿಕೊಳ್ಳುವಾಗ ಯಾರೊಬ್ಬರೂ ಅವನ್ನು ಶಾಸ್ತ್ರೀಯ ಮರ್ಯಾದೆಯಿಂದ ಶುದ್ಧಿಮಾಡಿಸಿಕೊಳ್ಳುವುದಿಲ್ಲ. ಕೆಲವು ಮನೆಗಳಿಗೆ ಬಚ್ಚಲದ್ವಾರದಿಂದಲೇ ಅವು ಬಂದಿರುತ್ತವೆ. ಅವುಗಳಿಂದ ಬಂದ ನೀರೇ ಮಡಿಮೈಲಿಗೆಗೂ ದೇವತಾರ್ಚನೆಗೂ ಉಪಯೋಗವಾಗುತ್ತವೆ. ಹೀಗಿರುವಾಗ ಪರದೇಶದ ಹೊಲೆಯರು ಮುಟ್ಟಿ ಮಾಡಿದ್ದರೂ ಬಾಧಕವಲ್ಲ; ಅಂಥ ನಲ್ಲಿಗಳನ್ನು ನಮ್ಮ ದೇಶದ ಹೊಲೆಯರು ಮುಟ್ಟಿ ಕೆಲಸಮಾಡಿದರೆ ಅಪವಿತ್ರವಾಗುವುದೆಂದು ಭಾವಿಸುವುದರಲ್ಲಿ ಔಚಿತ್ಯವೇನಿರುವುದು? ಇದು ವೃಥಾ ಡಾಂಭಿಕದುರಭಿಮಾನವೇ ಅಲ್ಲದೆ ನಿಜವಾದ ಆಚಾರಾಭಿಮಾನವೆನಿಸುವುದಿಲ್ಲ. ಇಂಥ ವಿಷಯಗಳಿಗೆ ನಾಗರಿಕರಾದ ಮ್ಯು|| ಕೌನ್ಸಿಲರುಗಳು ವಹಿಸಿಕೊಳ್ಳುತ್ತ ಬಂದರೆ ಜಾತಿಮಾತ್ಸರ್ಯಗಳಿಗೆ ಮತ್ತಷ್ಟು ಪುಟಕೊಟ್ಟಂತಾಗುವುದಲ್ಲದೆ ಯೂರೋಪ್ಯರು ಹೇಳುತ್ತಿರುವಂತೆ ಭಾರತೀಯರಲ್ಲಿ ಸ್ವರಾಜ್ಯನಿರ್ವಾಹಯೋಗ್ಯತೆಯು ಇನ್ನೂ ಬಂದಿಲ್ಲವೆಂಬುದನ್ನು ನಿದರ್ಶನಪಡಿಸಿಕೊಟ್ಟಂತೆಯೂ ಆಗುವುದಲ್ಲವೆ ?

ರಾಜಧಾನಿಯ ಮ್ಯು|| ಕೌನ್ಸಿಲರುಗಳು.

ಹೊಸದಾಗಿ ನಡೆದ ಕೌನ್ಸಿಲರ ಆರಿಸುವಿಕೆಯ ಫಲಿತಾಂಶವು ಕಳೆದ ಸೋಮವಾರ ವ್ಯಕ್ತವಾಯಿತು. ಲಷ್ಕರ್‌ಮೊಹಲ್ಲಾಕ್ಕೆ ಬೇಕಾದ ೪ ಕೌನ್ಸಿಲರುಗಳಸ್ಥಾನಕ್ಕೆ ಮ|| ಗಳಾದ (೧) ಅಡ್ವೋಕೇಟ್ ಕೆ. ಚಂದ್ರಶೇಖರಯ್ಯನವರು, (೨) ಅನಂತರಾಜಯ್ಯನವರು, (೩) ಮಹಮ್ಮದ್‌ಸೇಟರು, (೪) ಕೆಬ್ಬಾಜಿರಾಯರು, (೫) ಪುರುಷೋತ್ತಮಾನಂದಗಿರಿ ಬಾವಾಜಿಯವರು, (೬) ಧನಕೋಟಿಶೆಟ್ಟರು, (೭) ಶಾ|| ಸುಬ್ಬಾಯಶೆಟ್ಟರು ನಿಂತಿರಲು, ೩, ೨, ೬, ೪ ನೆಯವರು ಹೆಚ್ಚು ಓಟುಗಳನ್ನು ಪಡೆದು ಕೃತಾರ್ಥರಾದರು. ಮಂಡಿಮೊಹಲ್ಲಿಗೆ ಬೇಕಾದ ೩ ಮಂದಿಗೆ ಮ|| ಗಳಾದ (೧) ಎಂ. ನಾದಪ್ಪನವರು, (೨) ಅಜೀಜ್‌ಪಾಷಾರವರು, (೩) ಹಾರ್ಡೇಕರ್‌ರವರು, (೪) ಆರ್. ರಂಗಯ್ಯನವರು, (೫) ಬಲರಾಮ್‌ಸಿಂಗರವರು, (೬) ಟಿ. ಎಲ್. ಉಪಾಧ್ಯಾಯರು ನಿಂತಿರಲು, ೧, ೨, ೪ ನೆಯವರು ಕೃತಾರ್ಥರಾದರು. ನಜರ್ಬಾದು ಮೊಹಲ್ಲಿಗೆ ಬೇಕಾದ ಒಬ್ಬರಿಗೆ ಮ|| ತಿರುವೆಂಗಡಮೊದಲಿಯಾರೊಬ್ಬರರೇ ನಿಂತಿರಲು ಎಲ್ಲ ಓಟುಗಳೂ ಅವರಿಗೇ ಬಂದು ಅವರು ಕೃತಾರ್ಥರಾದರು. ಕೋಟೆ ಮೊಹಲ್ಲಿಗೆ ಬೇಕಾದ ಒಬ್ಬರಿಗೆ ಮ|| ಗಳಾದ (೧) ಕೃಷ್ಣಪ್ಪಾಜಿ ಅರಸರು, (೨) ಎಂ. ನಾರಾಯಣಸ್ವಾಮಿಯವರು, (೩) ಟಿ. ಕೃಷ್ಣರಾವ್‌ರವರು ನಿಂತಿರಲು, ೨ ನೆಯವರು ಕೃತಾರ್ಥರಾದರು. ದೇವರಾಜಮೊಹಲ್ಲಿಗೆ ಬೇಕಾದ ಮೂರು ಮಂದಿಗೆ ಮ|| ಗಳಾದ (೧) ಎ. ಸುಬ್ಬಣ್ಣನವರು (೨) ಎಂ. ಎಚ್ ರಂಗಯ್ಯಂಗಾರರು, (೩) ಡಿ. ಬಸವಯ್ಯನವರು, (೪) ಸಿ. ನಂಜಪ್ಪನವರು, (೫) ಟಿ. ಆದಿನಾರಾಯಣಶೆಟ್ಟರು, (೬) ದೊಡ್ಡಮಲ್ಲಯ್ಯನವರು, (೭) ಟಿ. ಎಸ್. ಅಲ್ಲಿಖಾನರು, (೮) ಡಿ. ವಿ. ರಂಗಸ್ವಾಮಯ್ಯಂಗಾರರು ನಿಂತಿರಲು, ೧, ೨, ೩ ನೆಯವರು ಕೃತಾರ್ಥರಾದರು. ಕೃಷ್ಣರಾಜಮೊಹಲ್ಲಿಗೆ ಬೇಕಾದ ೪ ಮಂದಿಗೆ ಮ|| ಗಳಾದ (೧) ಟಿ. ಎಂ. ಸಿದ್ದಪ್ಪನವರು, (೨) ಸಿ. ನರಸಿಹ್ಮಯ್ಯನವರು, (೩) ಎಂ. ಎಸ್. ಕೃಷ್ಣಸ್ವಾಮಿರಾಯರು, (೪) ಎಕ್! ದೇಶಿಕಾಚಾರರು, (೫) ಎಂ. ಎಲ್. ವಾಸುದೇವಯ್ಯನವರು, (೬) ಚಿಟ್ಟಪ್ಪ ಸಿದ್ದಪ್ಪನವರು ನಿಂತಿರಲು, ೫, ೪, ೨, ೬ ನೆಯವರು ಕೃತಾರ್ಥರಾದರು. ಚಾಮರಾಜಮೊಹಲ್ಲಿಗೆ ಬೇಕಾದ ೪ ಮಂದಿಗೆ ಮ|| ಗಳಾದ (೧) ಎಂ. ವೆಂಕಟಕೃಷ್ಣಯ್ಯನವರು, (೨) ಎ. ಕೃಷ್ಣರಾಯರು, (೩) ಬಿ. ಆರ್. ಕೃಷ್ಣಮಾಚಾರರು, (೪) ಎಚ್. ರಂಗಸ್ವಾಮ್ಯಂಗಾರರು, (೫) ಎ. ವಿ. ವೆಂಕಟರಾವ್‌ರವರು, (೬) ಎಂ. ಶ್ರೀನಿವಾಸರಾಯರು, (೭) ಎಂ. ಎಸ್. ಕೃಷ್ಣರಾವ್‌ರವರು ನಿಂತಿರಲು, ೧, ೭, ೨, ೩ ನೆಯವರು ಕೃತಾರ್ಥರಾದರು. ಈಗ ಆರಿಸಲ್ಪಟ್ಟು ಕೃತಾರ್ಥರಾಗಿರುವವರೆಲ್ಲಾ ಇನ್ನು ೩ ವರ್ಷಗಳವರೆಗೆ ಕೌನ್ಸಿಲರಾಗಿರುವರು. ಇವರುಗಳನ್ನೆಲ್ಲಾ ನಾವು ಈ ಮೂಲಕ ಅಭಿನಂದಿಸುವುದಲ್ಲದೆ ಪುರಕಾರ್ಯನಿರ್ವಾಹದಲ್ಲಿ ನಿರ್ದಾಕ್ಷಿಣ್ಯವಾಗಿಯೂ ಸಮದೃಷ್ಟಿಯಿಂದಲೂ ಪ್ರವರ್ತಿಸಿ, ಚಟುವಟಿಕೆಯಿಂದ ಕೆಲಸಮಾಡಿ, ಮುಂದಿನ ಸಲಕ್ಕೆ ತಾವು ಪ್ರಯತ್ನಿಸದಿದ್ದರೂ ಉಪಕೃತರಾಗಿರುವ ಪ್ರಜೆಗಳು ತಾವುತಾವಾಗಿಯೇ ಮುಂದಾಗಿ ಬಂದು ತಮಗೆಳಿಗೆ ಓಟನ್ನು ಕೊಡುವಂತೆ ಮಾಡಿಕೊಳ್ಳುವವರಾಗಲೆಂದು ಸೂಚಿಸುವೆವು. ಈ ಕೌನ್ಸಿಲರುಗಳಲ್ಲದೆ ಇನ್ನು ೧೦ ಮಂದಿಗಳನ್ನು ಸರ್ಕಾರದವರು ನಾಮಿನೇಷನ್ ಮಾಡುವರು. ಅವರಲ್ಲಿ ೪ ಮಂದಿಗಳು ಸರ್ಕಾರದ ಸ್ಥಳಿಕೋದ್ಯೋಗಿಗಳಾಗಿರುತ್ತಾರೆ. ಇನ್ನಾರು ಮಂದಿಗಳು ಪ್ರಜಾವರ್ಗಗಳಿಂದ ಆರಿಸಿಕೊಳ್ಳಲ್ಪಟ್ಟವರಾಗಬೇಕು. ಶ್ರೀಮನ್ಮಹಾರಾಜರವರು ಅಪ್ಪಣೆಕೊಟ್ಟಿರುವಂತೆಯೂ ಅವರ ಪ್ರಭುತ್ವದವರ ಉದ್ದೇಶಕ್ಕೆ ತಕ್ಕಂತೆಯೂ ಬೇರೆಬೇರೆ ಪ್ರಮುಖಪ್ರಜಾವರ್ಗಗಳಲ್ಲಿ ಯಾರಿಗೆ ತಕ್ಕಷ್ಟು ಪ್ರಾತಿನಿಧ್ಯವು ಎಲಕ್ಷನ್ನಿನ ಮೂಲಕ ದೊರೆತಿಲ್ಲವೋ ಅಂಥ ಜನವರ್ಗದವರಿಗೆ ಕೊಡಲ್ಪಡಬೇಕು. ಸಂಸ್ಥಾನದ ಉಳಿದ ಕಡೆಯಲ್ಲಿ ಈಗ ಹೊಸದಾಗಿ ನಡೆದಿರುವ ನಾಮಿನೇಷನ್ನಿನಲ್ಲಿಯೂ ಇದೇ ಪದ್ಧತಿಯೇ ಕಂಡುಬಂದಿದೆ. ರಾಜಧಾನಿಯಲ್ಲೂ ಅದೇ ರೀತಿಯು ಅನುಸರಿಸಲ್ಪಡುತ್ತದೆಂಬುದಕ್ಕೆ ಸಂಶಯವಿಲ್ಲ. ಆ ಸಂದರ್ಭದಲ್ಲಿ ಮಿ|| ಹರ್ಡೇಕರ್‌ರವರೂ, ಮ|| ಅಡ್ವೋಕೇಟ್ ಎಂ. ಎಚ್. ಸುಬ್ಬಣ್ಣನವರೂ ಸಹ ಅಧಿಕಾರಿಗಳಿಂದ ಮರೆಯಲ್ಪಡಲಾರರೆಂದು ನಂಬುತ್ತೇವೆ.

ಕಳೆದ ತಾ|| ೪ ರಲ್ಲಿ ಮ|| ಜಿ. ಕೆ. ರುದ್ರಪ್ಪನವರು ಬೀರೂರಿಗೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿಯ ವೀರಶೈವ ಪ್ರಮುಖರೆಲ್ಲಾ ಸಭೆಸೇರಿ ೯ ನೆ ವೀರಶೈವ ಮಹಾಸಭೆಯನ್ನು ತಮ್ಮ ಊರಲ್ಲಿ ಬರುವ ಡಿಸೆಂಬರ್ ತಿಂಗಳಲ್ಲಿ ನಡೆಯಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಈಗಿನಿಂದಲೂ ಮಾಡಲು ನಿರ್ಧರಿಸಿದರೆಂದು ಕೇಳುತ್ತೇವೆ. ಅವಸರದಲ್ಲಿ ಕಾರ್ಯಾರಂಭಮಾಡಿ ನ್ಯೂನತೆಯುಂಟುಮಾಡಿಕೊಳ್ಳುವುದಕ್ಕಿಂತ ಈಗಿನಿಂದ ಯತ್ನಿಸುವುದು ಉಚಿತವೇ ಸರಿ.

ಅಮೇರಿಕನ್ನರ ಅಸಮಸಹಾಯ.

ಅಮೇರಿಕನ್ನರು ಮಿತ್ರಮಂಡಲಿಯ ಕಡೆಗೆ ಒಲಿದು ಸಹಾಯಕ್ಕೆ ನಿಂತುದರಿಂದ ಯುದ್ಧದ ಸ್ಥಿತಿಯೇ ವಿಲಕ್ಷಣವಾದುದನ್ನು ಜಗತ್ತೇ ಕಂಡಿರುತ್ತದೆ. ಅವರು ಇತ್ತ ಒಲಿಯದಿದ್ದರೂ ಜರ್ಮನರ ಕಡೆಗೆ ಸೇರಿದ್ದರೂ ಇಷ್ಟುಹೊತ್ತಿಗೆ ಯೂರೋಪುಖಂಡದ ಭೂಚಿತ್ರವು ಯಾವಯಾವ ರೀತಿಯಿಂದಲೋ ಪರಿಣಮಿಸಿ ಹೋಗುತ್ತಿದ್ದಿತು. ಯುದ್ಧಾರಂಭಕ್ಕೆ ಮುಂಚೆ ಅಮೇರಿಕನ್ನರಿಗೆ ಇಂಗ್ಲೀಷರೂ ಒಂದೇ, ಜರ್ಮನರೂ ಒಂದೇ ಆಗಿದ್ದರು. ಒಂದು ತೆರದಲ್ಲಿ ನೋಡಿದರೆ ಜರ್ಮನರ ಸಂಬಂಧವೇ ಅವರಿಗೆ ವಿಶೇಷವಾಗಿದ್ದಿತು. ಅಮೇರಿಕಾದ ಸಂಯುಕ್ತರಾಷ್ಟ್ರದಲ್ಲಿ ಜರ್ಮನ್ ಪ್ರಜೆಗಳ ವಸತಿಯೇ ವಿಶೇಷವಾಗಿದ್ದಿತು. ಆ ಕಾರಣದಿಂದ ಅಲ್ಲಿಯ ಪ್ರಭುತ್ವದ ಒಲವಾದರೂ ಅತ್ತಕಡೆಗೇ ಹೆಚ್ಚಾಗಿದ್ದಿತೆಂದು ಹೇಳಿದರೂ ಹೇಳಬಹುದು. ಇದಲ್ಲದೆ ಅಮೇರಿಕನ್ನರು ಇಂಗ್ಲೀಷರಿಂದ ಒಡೆದುಕೊಂಡು ಹೋಗಿ ಕಾದಾಡಿ ವೈಮನಸ್ಯದಿಂದಲೂ ಹಠದಿಂದಲೂ ತಮ್ಮ ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸಿಕೊಂಡು ಮುಂದಕ್ಕೆ ಬಂದವರು. ಇಂಥ ಪರಿಸ್ಥಿತಿಯು ಅಮೇರಿಕಾ ಜರ್ಮನ್ನುಗಳ ಮಧ್ಯದಲ್ಲಿರುವುದಿಲ್ಲ. ಯಾವ ೧೯೧೪ ನೆ ವರ್ಷದ ಅಗಸ್ಟ್ ತಾ|| ೩ ನೆಯ ದಿನದಲ್ಲಿ ಜರ್ಮನರು ಯುದ್ಧಪ್ರಕಟನೆಯನ್ನು ಮಾಡಿದರೋ ಅಂದಿನಿಂದಲೂ ಜರ್ಮನರ ಪ್ರವರ್ತನೆಯ ಪ್ರತಿಯೊಂದು ಸೂಕ್ಷ್ಮಾಂಶವನ್ನೂ ಅಮೇರಿಕನ್ನರು ಲಕ್ಷ್ಯಪೂರ್ವಕವಾಗಿ ಪರಿಶೋಧಿಸುತ್ತ ಬಂದರು. ಅದರಂತೆಯೇ ಮಿತ್ರಮಂಡಲಿಯವರ ಪ್ರವರ್ತನೆಯನ್ನೂ ಗಮನಿಸುತ್ತ ಬಂದರು. ಇಬ್ಬರ ಧರ್ಮಗಳನ್ನೂ ತೂಗಿ ನೋಡುತ್ತ ಬಂದಂತೆಲ್ಲಾ ಜರ್ಮನರ ಅತ್ಯಾಚಾರ ದುಶ್ಶೀಲ ದುರಾಗಳಾದಿಗಳ ಭಾರವು ಜಗತ್ತಿಗೆ ದುರ್ಭರವಾದುದೆಂಬ ಸಂಗತಿಯು ನಿಸ್ಸಂಶಯವಾಗಿ ಅಮೇರಿಕನ್ನರಿಗೆ ಗೋಚರಿಸಿತು. ಸತ್ಯ ನ್ಯಾಯ ಶಾಂತಿಧರ್ಮಗಳ ಹದಿಗಟ್ಟನಮೇಲೆಯೇ ತಮ್ಮ ರಾಜ್ಯಪತಾಕೆಯನ್ನು ನಿಲ್ಲಿಸಿಕೊಂಡಿರುವ ಅಮೇರಿಕನ್ನರಿಗೆ ಜರ್ಮನರ ಲೋಕಾಕ್ರಮಣ ದುರಾಶಾದಿ ದುರ್ಧರ್ಮಗಳ ವ್ಯಾಪನೆಯು ಸೈರಣೆಯನ್ನುಂಟುಮಾಡಲಿಲ್ಲ. ಅದನ್ನಡಗಿಸದಿದ್ದರೆ ಲೋಕಕ್ಕೆ ಶಾಂತಿಯುಂಟಾಗುವುದಿಲ್ಲವೆಂಬುದನ್ನು ಖಂಡಿತವಾಗಿ ತಿಳಿದುಕೊಂಡರು. ಈ ಸಿದ್ಧಾಂತವನ್ನು ಅವರು ದುಡುಕಿನಿಂದ ಮಾಡಲಿಲ್ಲ. ೨-೩ ವರ್ಷಗಳಕಾಲ ಯುದ್ಧ ನಡೆಯುವವರೆಗೂ ಅವರು ದೂರದಲ್ಲಿ ನಿಂತೇ ನೋಡುತ್ತಲಿದ್ದರು. ಬಳಿಕ ಸಾಮೋಪಾಯದಿಂದ ಹೇಳಬೇಕಾದುದನ್ನು ಹೇಳಿ ಜರ್ಮನಿಗೆ ಬುದ್ಧಿ ಕಲಿಸುವುದಕ್ಕೂ ಪ್ರಯತ್ನಿಸಿದರು. ರೋಗಿಗೆ ಅಮೃತವೂ ವಿಷವಾಗುವಂತೆ ಧರ್ಮಾತ್ಮರಾದ ಅಮೇರಿಕನ್ನರ ಹಿತೋಪದೇಶವು ಜರ್ಮನಿಗೆ ಪಥ್ಯವಾಗಲಿಲ್ಲ. ಕಡೆಗೆ ಅಮೇರಿಕನ್ನರು ಸತ್ಯಧರ್ಮರಕ್ಷಣೆಯ ಮೂಲಕ ಜಗತ್ತಿನಲ್ಲಿ ಶಾಂತಿ ಸ್ವಾತಂತ್ರ್ಯಸ್ಥಾಪನೆಯನ್ನು ಮಾಡುವುದೇ ಸರಿಯೆಂದು ನಿಶ್ಚಯಿಸಿ, ತಮ್ಮ ಸರ್ವನಾಶವಾದರೂ ಚಿಂತೆಯಿಲ್ಲವೆಂದು ಹಠತೊಟ್ಟು ಯುದ್ಧಕ್ಕೆ ದುಮ್ಮಿಕ್ಕಿದರು. ಈ ಯುದ್ಧದಲ್ಲಿ ಅವರಿಗೆ ಅಗಣಿತವಾದ ಜನಧನಾದಿಹಾನಿಗಳಾಗುವುದು ಸಿದ್ಧ. ಆದರೆ ಅವರಿಗೆ ಈ ಯುದ್ಧದಿಂದ ಪ್ರಾಪ್ತವಾಗುವ ಸ್ವಲಾಭವು ಲೇಶವೂ ಇರುವುದಿಲ್ಲ. ಜಗದ್ರಕ್ಷಣವು ಸ್ವಲಾಭಕ್ಕಿಂತ ಕೋಟಿಭಾಗ ಮಿಗಿಲಾದುದೆಂದು ಅವರು ತಿಳಿದರು. ಸತ್ಯಧರ್ಮಗಳು ಯಾರ ನಡೆನುಡಿಗಳಲ್ಲಿದ್ದುವೋ ಆ ಮಿತ್ರಮಂಡಲಿ ಪಕ್ಷಕ್ಕೆ ಅವರು ಸೇರಿದರು. "ಯತೋಧರ್ಮಸ್ತತೋಜಯಃ" ಎಂಬಂತೆ ಈಗ ಧರ್ಮಕ್ಕೆ ಜಯವು ಲಭಿಸುವ ಕಾಲವು ಪ್ರಾಪ್ತವಾಗಿರುವುದು. ಅಮೇರಿಕನ್ನರಿಂದ ಮಿತ್ರಮಂಡಲಿಗೆ ಎಷ್ಟು ಸಹಾಯವಾಗುತ್ತದೆಯೆಂಬುದನ್ನು ಅಲ್ಲಿಯ ಸಂಯುಕ್ತರಾಷ್ಟ್ರಗಳಿಂದ ಇಂಗ್ಲೆಂಡಿಗೆ ಈಗತಾನೇ ಬಂದಿರುವ ೯ ಮಂದಿ ಕಾಂಗ್ರೆಸ್ ಸಭಿಕರು ಪ್ರಕಟಿಸಿರುವರು. ಅವರ ಹೇಳಿಕೆಯೇನೆಂದರೆ— ಸಂಪೂರ್ಣಜಯವು ಪ್ರಾಪ್ತವಾಗುವವರೆಗೂ ಅಮೇರಿಕಾದವರು ತಾವು ಹಿಡಿದ ಪ್ರಯತ್ನವನ್ನು ಬಿಡುವವರಲ್ಲ. ಸೈನ್ಯಕ್ಕೆ ಸೇರಲರ್ಹರಾದ ಪ್ರಜೆಗಳ ಸಂಖ್ಯೆಯು ಅಲ್ಲಿ ೨ ಕೋಟಿಯಿರುವುದು. ಪ್ರತಿವರ್ಷವೂ ೧೦ ಲಕ್ಷ ಮಂದಿಗೆ ೨೧ ನೆ ವಯಸ್ಸು ಪ್ರಾಪ್ತವಾಗುತ್ತಿರುವುದು. ಅಮೇರಿಕಾದಲ್ಲಿ ಸಸ್ಯಸಮೃದ್ಧಿಯು ವಿಶೇಷವಾಗಿದೆ. ಅವರು ಸಾಮಗ್ರಿಗಳನ್ನು ತಮ್ಮ ದೇಶಕ್ಕೇ ಅಲ್ಲದೆ ಫ್ರಾನ್ಸು, ಇಂಗ್ಲೆಂಡು, ಇಟಲಿದೇಶಗಳಿಗೂ ಕೂಡ ಕಳುಹಿಸಿಕೊಡಬಲರು. ಮುಂಬರುವ ಅಕ್ಟೋಬರ್ ತಿಂಗಳೊಳಗಾಗಿ ೨೦ ಲಕ್ಷ ಮಂದಿ ಅಮೇರಿಕನ್ ಸೈನಿಕರು ಫ್ರಾನ್ಸಿಗೆ ಬಂದು ಸೇರುವರು. ಈಗ ಮತ್ತೆ ೧೫ ಲಕ್ಷ ಮಂದಿಗಳು ಅಮೇರಿಕಾದಲ್ಲಿ ಯುದ್ಧಶಿಕ್ಷಣವನ್ನು ಹೊಂದುತ್ತಿರುವರು. ಅವರೆಲ್ಲರೂ ೨೧ ರಿಂದ ೩೦ ರೊಳಗಣ ವಯಸ್ಸಿನವರು. ಪ್ರತಿದಿನವೂ ಅಲ್ಲಿಂದ ೧೦ ಸಾವಿರ ಸೈನಿಕರು ರಣರಂಗಕ್ಕೆ ಹೊರಟುಬರುತ್ತಿದ್ದಾರೆ. ಪ್ರತಿವಾರವೂ ಅಮೇರಿಕಾದಲ್ಲಿ ೫೫ ಸಾವಿರ ತುಪಾಕಿಗಳೂ ೫ ಸಾವಿರ ಯಂತ್ರದ ಫಿರಂಗಿಗಳೂ, ನಿರ್ಮಿಸಲ್ಪಡುತ್ತಿವೆ. ದಿನವೊಂದಕ್ಕೆ 706000 ಗುಂಡುಗಳು ನಿರ್ಮಿಸಲ್ಪಡುತ್ತಿವೆ. ಇದಲ್ಲದೆ ಹೊಸಹೊಸತರದ ಯುದ್ಧೋಪಕರಣಗಳನ್ನು ಅನೇಕವಾಗಿ ರಚಿಸುತ್ತಿದ್ದಾರೆ. ೨೫ ಸಾವಿರ ವಿಮಾನಗಳು ಸಿದ್ಧವಾಗುತ್ತಿವೆ. ವೈಮಾನಿಕ ಸೈನ್ಯದಲ್ಲಿ ೧ ಲಕ್ಷ ಮಂದಿ ಸೈನಿಕರಿದ್ದಾರೆ. ದೊಡ್ಡ ವಿಮಾನಗಳು ಆಟ್ಲಾಂಟಿಕ್ ಸಮುದ್ರವನ್ನು ೨೦ ಗಂಟೆ ಕಾಲದೊಳಗಾಗಿ ದಾಟಬಲ್ಲುವು. ೫೦೦ ಯುದ್ಧವಿಮಾನಗಳು ಇಷ್ಟರೊಳಗೇ ರಣರಂಗಕ್ಕೆ ಕಳುಹಿಸಿಕೊಡಲ್ಪಟ್ಟಿವೆ. ಈಗ ವಾರವೊಂದಕ್ಕೆ ೮೦ ರಂತೆ ವಿಮಾನಗಳು ಅಣಿಯಾಗುತ್ತಿವೆ" ಇತ್ಯಾದಿ. ಈ ಮೇಲೆ ಕಂಡ ವಿವರದಲ್ಲಿ ಸೇನಾಪರಿಮಿತಿಯು ಮಾತ್ರ ಹೇಳಲ್ಪಟ್ಟಿದೆ. ಅಮೇರಿಕಾದಿಂದ ಒದಗಿಸಲ್ಪಡುತ್ತಿರುವ ದ್ರವ್ಯದ ಆಹಾರ್ಯವಸ್ತುಗಳ ಮತ್ತು ಇತರೋಪಕರಣಗಳ ಪರಿಮಿತಿಯೇ ಇರುವುದಿಲ್ಲ. ಕುದುರೆಗಳೇ ಇದುವರೆಗೆ ೨೦ ಲಕ್ಷದಷ್ಟು ರಣರಂಗಕ್ಕೆ ಸಾಗಿಬಂದಿರುತ್ತವೆ. ಇಷ್ಟೆಲ್ಲಾ ಸಹಾಯವು ಮಿತ್ರಮಂಡಲಿಗೆ ಆಗುತ್ತಿರುವಾಗ, ದೈವಬಲದಂತೆ ಧರ್ಮಬಲವೂ ಮಿತ್ರಮಂಡಲಿಗೆ ಇರುತ್ತಿರುವಾಗ, ಅವರಿಗೆ ಪರಿಣಾಮವಿಜಯವಾಗುವುದರಲ್ಲಿ ಲೇಶವಾದರೂ ಸಂಶಯವುಂಟೆ ? ಎಂದಿಗೂ ಇಲ್ಲ. ವಿಚಾರಮಾಡಿ ನೋಡಿದರೆ ಇಂಗ್ಲಿಷರಿಗೂ ಅಮೇರಿಕನ್ನರಿಗೂ ಇಲ್ಲದಿರುವ ಸಂದರ್ಭಗಳೆಲ್ಲಾ ಭರತಖಂಡಕ್ಕೂ ಆಂಗ್ಲಸಾಮ್ರಾಜ್ಯಕ್ಕೂ ಇರುತ್ತಿದೆ. ಆಂಗ್ಲಸಾಮ್ರಾಜ್ಯರಕ್ಷಣೆಯೇ ನಮ್ಮ ರಕ್ಷಣೆಯಾಗಿರುತ್ತದೆ. ಇವರಮೇಲೆ ಸ್ವತಃ ಭರತಖಂಡಕ್ಕೇ ಶತ್ರುಗಳ ಭಯವು ಪ್ರಾಪ್ತವಾಗುವಂತಿರುತ್ತದೆ. ಇಷ್ಟೆಲ್ಲಾ ಇರುವಾಗ ನಾವು ೩೩ ಕೋಟಿ ಪ್ರಜಾಸಂಖ್ಯೆಯುಳ್ಳ ದೇಶದ ಪ್ರಜೆಗಳಾದ ಭಾರತೀಯರು ಎಷ್ಟುಮಟ್ಟಿಗೆ ಈಗಣ ಯುದ್ಧಕ್ಕೆ ಜನಸಹಾಯ ಧನಸಹಾಯಗಳನ್ನು ಮಾಡಿ ಮಿತ್ರಮಂಡಲಿಗೆ ಜಯವು ಲಭಿಸುವಹಾಗೆ ಮಾಡಬೇಕಾಗಿದೆಯೆಂಬುದನ್ನು ವಾಚಕರೇ ಪರ್ಯಾಲೋಚಿಸಬೇಕು.

ಜರ್ಮನಿಯಲ್ಲಿ ಬಹುಭಾರ್ಯಾತ್ವವ್ಯಾಪನೆ.

ಪಶ್ಚಿಮದೇಶೀಯರು ಬಹುಪತ್ನೀಸ್ವೀಕರಣಧರ್ಮಕ್ಕೆ ವಿಮುಖರು. ಕೆಲ ದೇಶಗಳಲ್ಲಿ ಅದನ್ನು ಶಾಸನದ ಮೂಲಕವೇ ನಿರೋಧಿಸಿದ್ದಾರೆ. ಈಗಣ ಯುದ್ಧದಲ್ಲಿ ಪುರುಷಕುಲಕ್ಕೇ ವಿನಾಶ ತಪ್ಪಿ ಸ್ತ್ರೀಜಾತಿ ಸಂಖ್ಯೆಯು ಹೆಚ್ಚಿರುವುದೆಂದು ಕಡೆಯಾದರೆ, ಸಂತತಿವೃದ್ಧಿಗೆ ದಾರಿಯು ಕಡಿಮೆಯಾಗಿ ಪ್ರಜಾಸಂಖ್ಯೆಯು ಕ್ಷೀಣಿಸಿಹೋಗುತ್ತಿರುವುದರಿಂದ ಯೂರೋಪುಖಂಡದವರಿಗೆಲ್ಲಾ ಇದೊಂದು ದೊಡ್ಡ ಚಿಂತೆ ಹತ್ತಿರುವುದು. ಕುಲಗೌರವವಾದಿಗಳೊಂದನ್ನೂ ನೋಡದೆ ಪುರುಷಸಂಗಕ್ಕವಕಾಶವು ಸ್ತ್ರೀಯರಿಗೆ ಸಿಕ್ಕಿದರೆ ಸಾಕೆನ್ನುವ ಅವಸ್ಥೆಯು ಪ್ರಾಪ್ತವಾಗಿರುವುದು. ಈ ಕಾರಣದಿಂದ ಜರ್ಮನಿಯಲ್ಲಿ ಈಗಾಗಲೇ ಬಹುಪತ್ನೀಸ್ವೀಕರಣ ಧರ್ಮವು ತಲೆಯೆತ್ತಿ ಬೆಳೆಯುತ್ತಿರುವುದೆಂದು ಸುದ್ದಿ ಬರುತ್ತಿರುವುದು. ಸರ್ಕಾರದವರೂ ಇದಕ್ಕೆ ಒಂದು ತೆರದಲ್ಲಿ ಪ್ರೋತ್ಸಾಹವನ್ನೇ ಕಲ್ಪಿಸುತ್ತಿರುವಂತೆ ಕಾಣುತ್ತದೆ. ಅಲ್ಲಿ ಗಂಡು ಹೆಣ್ಣುಗಳಿಗೆ ಮದುವೆಮಾಡಿಸುವ ಸಂಘಗಳೇ ಕೆಲವು ಏರ್ಪಟ್ಟಿವೆ. ಅಲ್ಲಿಯ ಸ್ತ್ರೀಯರಿಗೆ ಬೇಕಾಗುವಷ್ಟು ಗಂಡುಸರು ಸುಲಭವಾಗಿ ದೊರೆಯದಿರುವುದರಿಂದ ಈ ಸಂಘಗಳು ಒಬ್ಬೊಬ್ಬ ಗಂಡುಸಿಗೆ ಎರಡೆರಡು ಮೂರು ಹೆಂಗುಸರನ್ನು ಮದುವೆಮಾಡಿ, ಅದರ ಮೂಲಕ ಕಮಿಷನ್ ಪಡೆದು ಹೇರಳವಾಗಿ ಧನಾರ್ಜನೆ ಮಾಡುತ್ತಿವೆ. ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಈಗ ಗಂಡುಸರ ಕ್ಷಾಮವು ಬಂದು, ಮದುವಣಿಗರಿಗಾಗಿ ಸ್ತ್ರೀಯರು ಪೋಟಾಪೋಟಿಯನ್ನು ಮಾಡುತ್ತಿದ್ದಾರೆ. ಶ್ರೀಮಂತರ ಮನೆಯ ಹೆಣ್ಣುಮಕ್ಕಳು ಎಂಥ ರಿಕ್ತನಾದರೂ ಆಗಲೀ ಕುರೂಪಿಯಾದರೂ ಆಗಲೀ, ಅಪರಾಧಿಯಾದರೂ ಆಗಿರಲಿ, ಶಿಕ್ಷಿತನಾಗಿದ್ದವನಾದರೂ ಆಗಲೀ, ಗಂಡನಾಗಿ ಬಂದು ಸೇರಿದರೆ ಸಾಕೆಂದು ಹಂಬಲಿಸುತ್ತಿರುವರಂತೆ! ಒಬ್ಬ ಗಂಡುಸು ಇಬ್ಬರು ಮೂವರು ಹೆಂಗುಸರನ್ನು ಮದುವೆಯಾದನೆಂದು ತಿಳಿದುಬಂದರೂ ಅಧಿಕಾರಿಗಳು ಕೇಳಿದರೂ ಕೇಳದವರಂತೆ ಇದ್ದುಬಿಡುತ್ತಿರುವರು. ಪ್ರಜೆಗಳ ಬಹುಪತ್ನೀಸ್ವೀಕರಣದ ವಿಷಯದಲ್ಲಿ ಜರ್ಮನಿ ಚಕ್ರವರ್ತಿಯೂ ಕೂಡ ಅಂತರಂಗದಲ್ಲಿ ವಿರೋಧಿಸದಿರುವಂಥ ಅವಸ್ಥೆಗೆ ಗುರಿಯಾಗಿದ್ದಾರೆ. ನಾನಾ ಅಪರಾಧಗಳನ್ನೂ ಶಿಕ್ಷೆಯನ್ನೂ ಅನುಭವಿಸಿ ಕೋತಿಗಳಂತೆ ತಿರುಗಿಕೊಂಡು ಸೈನ್ಯಕ್ಕೆ ಸೇರಲು ಅರ್ಹತೆಯಿಲ್ಲದ ೩ ಸಾವಿರ ಮಂದಿಗಳಿಗೆ ವಿವಾಹಸಂಘಗಳವರು ಹೆಣ್ಣುಗಳನ್ನು ಕೂಡಿಸಿ ಮೊನ್ನೆತಾನೇ ವಿವಾಹಮಾಡಿಕೊಟ್ಟರಂತೆ! ಯೂರೋಪುಖಂಡವು ಅನುಭವಿಸುತ್ತಿರುವ ಅನರ್ಥಕೋಟಿಗಳಲ್ಲಿ ಇದೂ ಒಂದಾಗಿರುತ್ತದೆ. ಇವನ್ನೆಲ್ಲಾ ಕಣ್ಣಿಂದ ನೋಡುತ್ತಿದ್ದರೂ ಯುದ್ಧವನ್ನು ವಿರಮಿಸಬೇಕೆಂಬ ಬುದ್ಧಿಯು ಯುದ್ಧಮೂಲಭೂತರಿಗೆ ಇನ್ನೂ ಉಂಟಾಗದಿರುವುದನ್ನು ನೋಡಿದರೆ ವಿಷಾದವೂ ಆಶ್ಚರ್ಯವೂ ಉಂಟಾಗುತ್ತದೆ. ಭಗವನ್ಮಾಯಾ ಪ್ರಭಾವವು ಬಲವತ್ತರವು.

ಯುದ್ಧವಾರ್ತೆಯು.

ಪಶ್ಚಿಮರಂಗದಲ್ಲಿ ಶತ್ರುಗಳು ನೂತನಸೈನ್ಯಗಳನ್ನು ತಂದು ಎಷ್ಟು ಪ್ರತಿಯುದ್ಧವನ್ನು ಮಾಡುತ್ತಿದ್ದರೂ ಮಿತ್ರಮಂಡಲಿಯವರ ಪುರೋಗಮನವನ್ನು ತಡೆಯುವುದಕ್ಕೆ ಅವರಿಂದಾಗಿಲ್ಲ. ಕಳೆದವಾರದಲ್ಲೂ ಪಶ್ಚಿಮರಂಗದಲ್ಲಿ ಫ್ರೆಂಚ್ ಅಮೇರಿಕನ್ ಇಂಗ್ಲೀಷ್‌ಸೈನ್ಯಗಳು ಹಲವುಕಡೆ ಮುಂಬರಿದಿದ್ದಾರೆ. ಸಾಯಿಜನ್ಸ್ ಪಟ್ಟಣವು ಫ್ರೆಂಚರ ವಶವಾಯಿತು. ಇದರಿಂದ ಆಯಿಜನದಿಗೆ ದಕ್ಷಿಣದಲ್ಲಿ ಶತ್ರುಗಳ ಗಮನಾಗಮನವು ಸಂಪೂರ್ಣವಾಗಿ ಕಟ್ಟಾಯಿತು. ಯುದ್ಧಕಾರ್ಯಕ್ಕೆ ಬಹು ಪ್ರಮುಖವಾದ ಸ್ಥಾನವು ವಶವಾದಂತಾಯಿತು. ಬಳಿಕ ಸಾಯಿಜನ್ಸಿಗೆ ಪೂರ್ವದಲ್ಲಿ ಮಿತ್ರಮಂಡಲಿಯವರು ನುಗ್ಗಿ ವೆಸ್ಲಿ ಎಯಿಜನದಿಗಳ ಸಂಗಮಸ್ಥಾನದವರೆಗಣ ನದಿಯ ದಕ್ಷಿಣತೀರವನ್ನೆಲ್ಲಾ ಆಕ್ರಮಿಸಿದರು. ಅಲ್ಲಿ ಸಾಯಿಜನ್ಸಿಗೆ ೧೭ ಮೈಲಿಗಳ ದೂರದಲ್ಲಿದ್ದ ಫಿಸ್‌ಮಸ್ ಪಟ್ಟಣವನ್ನು ಹಿಡಿದರು. ಅಲ್ಲಿಯ ಮಿತ್ರಮಂಡಲಿ ಸ್ಥಾನವು ಚಾಂಪೇನಿವರೆಗೂ ವ್ಯಾಪಿಸಿದುದರಿಂದ ೧೦ ಮೈಲಿಗಳಗಲಕ್ಕೆ ಮುಂಬರಿದಂತಾಯಿತು. ಅಲ್ಲಿಂದ ಈ ಸೈನ್ಯದ ಕವಲು ರೀಮ್ಸಿನವರೆಗೆ ಹೋಗಿ ಸೇರಿತು. ಇಷ್ಟೆಲ್ಲಾ ಆಕ್ರಮಣವನ್ನು ಮಿತ್ರಮಂಡಲಿ ಸೈನಿಕರು ಬಹು ವೇಗಗತಿಯಿಂದಲೂ ಸಾಹಸಚಾತುರ್ಯಗಳಿಂದಲೂ ಮಾಡಿರುವರು. ಇದಲ್ಲದೆ ಅಲ್ಬರ್ಟಿಗೆ ಉತ್ತರದಲ್ಲೂ ಅಂಕರ್ ನದಿಗೆ ಪಶ್ಚಿಮದಲ್ಲೂ ಶತ್ರುಗಳು ಹಿಮ್ಮೆಟ್ಟಿಹೋಗುತ್ತಿದ್ದಾರೆ. ಅಮಿಯನ್ಸಿಗೆ ಆಗ್ನೇಯದಲ್ಲೂ ಶತ್ರುಗಳು ೧೧ ಮೈಲಿಯಗಲದ ಕೆಲ ಪ್ರದೇಶಗಳಲ್ಲಿ ಹಿಮ್ಮೆಟ್ಟಿದರು. ವೆಸ್ಲಿ ನದಿಯನ್ನು ದಾಟಿ ತಲೆತಪ್ಪಿಸಿಕೊಳ್ಳುವುದು ಶತ್ರುಗಳಿಗೆ ದುರ್ಭರವಾಯಿತು. ಫ್ರೆಂಚ್ ಅಮೇರಿಕನ್ ಸೈನ್ಯಗಳು ವೆಸ್ಲಿನದಿಯನ್ನೂ ದಾಟಿ ಉತ್ತರದಲ್ಲಿ ನೆಲಸಿರುವುವು. ದಕ್ಷಿಣತೀರದಲ್ಲಿ ಮಿತ್ರಮಂಡಲಿಯವರ ಫಿರಂಗಿದಳವು ಬಹು ಸಾಂದ್ರವಾಗಿದೆ. ಈ ರಂಗದಲ್ಲಿ ಶತ್ರುಗಳು ಹಿಮ್ಮೆಟ್ಟುವುದಕ್ಕೆ ಮೊದಲಾದದಿನದಿಂದ ಕಳೆದವಾರದವರೆಗೆ ಜರ್ಮನಿ ಯುವರಾಜನ ಸೈನ್ಯವು ಬಹುತಃ ೨೦ ಮೈಲಿಗಳ ದೂರ ಹಿಂಜರಿದುಹೋಗಿರುವುದು. ಅವರ ಕಡೆಯ ೪೦ ಸಾವಿರ ಸೈನ್ಯವನ್ನು ಮಿತ್ರಮಂಡಲಿಯವರು ಸೆರೆಹಿಡಿದಿರುವರು. ಈಗ ಜರ್ಮನರ ಸೈನ್ಯವು ಸಾಯಿಜನ್ಸಿಗೂ ರೀಮ್ಸಿಗೂ ಮಧ್ಯದಲ್ಲಿದೆ. ರೀಮ್ಸಿಗೆ ೩ ಪಕ್ಕದಲ್ಲೂ ಇನ್ನೂ ಶತ್ರುಸೈನ್ಯವಿದೆ. ಶತ್ರುಗಳು ಎಯಿಜನದಿಗೆ ಉತ್ತರಕಡೆಯಿಂದ ಪಲಾಯಿತರಾಗುವ ಸೂಚನೆಗಳು ಕಾಣುತ್ತಿವೆ.

ರಷ್ಯಾ.—ಜೆಕೋಸ್ಲಾವಕ್ಕರು ಇಕಾಟೆರಿಂಬರ್ಗ್ ಪಟ್ಟಣವನ್ನು ವಶಪಡಿಸಿಕೊಂಡರು. ರಷ್ಯಾದ ಮುಖ್ಯಸ್ಥಳಗಳಲ್ಲೆಲ್ಲಾ ಕ್ಷಾಮದ ಉಪದ್ರವವು ಹೆಚ್ಚಾಗಿದೆ. ಪೆಟ್ರೋಗ್ರೇಡ್ ಮಾಸ್ಕೋ ಪಟ್ಟಣಗಳಲ್ಲಿ ೩-೪ ದಿನ ಪ್ರಜೆಗಳಿಗೆ ರೊಟ್ಟಿಯೇ ಸಿಕ್ಕಲಿಲ್ಲ. ರಷ್ಯಾದ ಸೋಷಿಯಲಿಸ್ಟ್ ಪಕ್ಷದ ಯುವಕನೊಬ್ಬನು ಜರ್ಮನಿಯ ಮಿಲಿಟರಿ ಗೌರ್ನರಾದ ವಾನ್-ಎಚ್-ಹಾರನ್ನನ್ನೂ ಅವನ ಸೆಕ್ರೆಟರಿಯನ್ನೂ ಸಹ ಬೀದಿಯಲ್ಲಿ ಸಿಡಿಮದ್ದನ್ನು ಹಾಕಿ ಕೊಂದನು.

ರಷ್ಯಾದ ರಾಜಪಕ್ಷವಾದಿಗಳು ಕೀವ್ ಪಟ್ಟಣದಲ್ಲಿ ಒಂದು ಮಹಾಸಭೆಯನ್ನು ಸೇರಿಸಿ, ರಷ್ಯಾ ಸಾಮ್ರಾಜ್ಯವನ್ನು ಮರಳಿ ಸ್ಥಾಪಿಸುವುದು ಉಚಿತವೋ ಅನುಚಿತವೋ ಎಂಬುದನ್ನು ಕುರಿತು ಚರ್ಚಿಸಿದರು. ಉಕ್ರೇನಿಯನ್ ಮಂಡಲದ ಎಲ್ಲ ಪಟ್ಟಣಗಳಲ್ಲೂ ಗ್ರಾಂಡ್‌ಡ್ಯೂಕ್‌ನಿಕೋಲಸ್ಸರೊಡನೆ ರಾಜ್ಯಭಾರವನ್ನು ಜರುಗಿಸಬೇಕೆಂದು ನಿರ್ಧರಿಸಿದರು. ಜೆಕೋಸ್ಲಾವಕ್ಕರು ಈಗ ಮಾಸ್ಕೋ ಪಟ್ಟಣವನ್ನು ಆಕ್ರಮಿಸುವುದರಲ್ಲಿದ್ದಾರೆ. ಉರಲ್ಸಿನ ಹತ್ತಿರ ೫೦-೬೦ ಸಾವಿರ ಮಂದಿ ಜೆಕೋಸ್ಲಾವಕ್ಕರೂ ೧೫ ಸಾವಿರ ಮಂದಿ ಕೋಸಕ್ಕರೂ ಕೂಡಿದ್ದಾರೆ. ಮರ್ಮಾನ್ಸಿನಲ್ಲಿರುವ ಮಿತ್ರಮಂಡಲಿ ಸೈನ್ಯಕ್ಕೆ ಅಲ್ಲಿನ ಜೆಕೋಸ್ಲಾವಕ್ಕರು ಬಹಳ ಸಹಾಯಮಾಡುತ್ತಿರುವರು. ಇದು ಅಲ್ಲಿನ ರಷ್ಯಾ ಪ್ರಭುತ್ವದವರಿಗೆ ಸೈರಿಸದು. ಉಕ್ರೇನಿಯಾ ಪ್ರಭುತ್ವದವರು ಬೆಸ್ಸರೇಬಿಯಾವನ್ನು ರುಮೇನಿಯಾದವರಿಗೆ ಕೊಟ್ಟು ವ್ಯಾಪಾರಸೌಕರ್ಯವನ್ನು ಹೊಂದುವುದಕ್ಕೆ ಒಪ್ಪಿಕೊಂಡರು. ಇಂಗ್ಲಿಷ್ ಫ್ರೆಂಚ್ ಅಮೇರಿಕಾ ಇಟಲಿ ರಾಯಭಾರಿಗಳು ಮರ್ಮಾನ್ಸಿಗೆ ಹೋಗಿ ಸೇರಿರುವರು. ಅಲ್ಲಿಂದ ಅವರು ಮಾಸ್ಕೋವಿಗೆ ಹೋಗುವುದರಲ್ಲಿದ್ದಾರೆ.

ಭರತಖಂಡದ ವೃತ್ತಾಂತಗಳು.

ಕಾನ್ಪುರಿನಲ್ಲಿ ಮೊದಲನೆಸಲದ ಯುದ್ಧಋಣಕ್ಕೆ ೧ ಕೋಟಿ ರೂ. ಗಳು ಕೂಡಿದ್ದುವು. ಈ ಸಲ ೮೮ ಲಕ್ಷ ರೂ. ಗಳು ಕೂಡಿರುತ್ತವೆ.

ಮದರಾಸಿನಲ್ಲಿ ಇನ್‌ಫ್ಲುಯಂಜಾ ಜ್ವರದಿಂದಲೇ ವಾರಕ್ಕೆ ೨೦-೩೦ ಮರಣಗಳಾಗುತ್ತಿವೆ. ಎಲ್ಲ ಕಾರಣಗಳಿಂದಲೂ ಆಗತಕ್ಕ ಮರಣಸಂಖ್ಯೆಯು ವಾರಕ್ಕೆ ೩೫೦ ಕ್ಕೆ ಕಡಿಮೆಯಿಲ್ಲವಾಗಿದೆ.

೨ ನೆ ಯುದ್ಧಋಣವು ಆರಂಭವಾಗಿ ಕಳೆದ ತಾ|| ೩ ಕ್ಕೆ ೨ ತಿಂಗಳಾಯಿತು. ಈ ಕಾಲದಲ್ಲಿ ಕೂಡಿರುವ ಹಣ ೨೪೮೭೧೦೬೦೦ ರೂ. ಗಳಾಗಿರುತ್ತವೆ. ತಾ|| ೬ ರಲ್ಲಿ ಇದು ೨೫ ಕೋಟಿಗೆ ಮಿಂಚಿತು.

ಡಾ|| ನಾಯರ್‌ರವರು ಕಳೆದ ತಾ|| ೧ ರಲ್ಲಿ ಪಾರ್ಲಿಮೆಂಟ್ ಸಭಿಕರ ಸಭೆಯ ಮುಂದೆ ಭಾರತನೂತನ ರಾಜಕೀಯ ಸಂಸ್ಕರಣ ವಿಷಯವಾಗಿ ಆಕ್ಷೇಪಿಸಿ ಉಪನ್ಯಾಸ ಮಾಡುವಾಗ್ಗೆ ಪ್ರತ್ಯೇಕಸಂಘಪ್ರಾತಿನಿಧ್ಯದ ಅವಶ್ಯಕತೆಯನ್ನು ಬಹುವಿಧ ಕಾರಣಗಳಿಂದ ಸಮರ್ಥನಮಾಡಿದರು.

ತಾತ್ಕಾಲಿಕ ದೇಶೀಯ ಮಹಾಸಭೆಯು ಇದೇ ತಿಂಗಳು ತಾ|| ೨೯-೩೦-೩೧ ರಲ್ಲಿ ಬೊಂಬಾಯಿಯೊಳಗೆ ನಡೆಯುವಂತೆ ನಿಷ್ಕರ್ಷಿಸಲ್ಪಟ್ಟಿದೆ. ಇದಕ್ಕೆ ಮಿ|| ಹಸನ್ ಇಮಾಂರವರು ಅಧ್ಯಕ್ಷರಾಗುವರು. ಆ|| ಬ್ಯಾರಿಸ್ಟರ್ ಸರ್ ದಿನ್ಶಾ ಮಾಣಿಕ್ಜಿ ಪೆಟಿಟ್‌ರವರು ಸ್ವಾಗತಸಂಘಾಧ್ಯಕ್ಷರಾಗಿರುವರು. ಈ ಸಭೆಯು ನೆರೆದಮೇಲೆ ಮುಸ್ಲಿಂಲೀಗ್ ಸಭೆಯೂ ಜರುಗುವುದು.

ಸೀಮೆಗೆ ಹೋಗಿರುವ ಡಾಕ್ಟರ್ ನಾಯರ್‌ರವರಿಗೆ ಭಾರತರಾಜ್ಯಾಂಗಸಂಸ್ಕರಣವನ್ನು ಕುರಿತು ಇಂಗ್ಲೆಂಡಿನಲ್ಲಿ ಮಾತನಾಡಕೂಡದೆಂದು ಮಾಡಲ್ಪಟ್ಟಿದ್ದ ನಿರ್ಬಂಧವು ತಪ್ಪಿಸಲ್ಪಟ್ಟಿದೆ. ತಿಲಕರು ಸೀಮೆಗೆ ಹೋದಮೇಲೆ ಅವರೂ ಕೂಡ ನಾಯರರಂತೆಯೇ ರಾಜಕೀಯಸಂಸ್ಕರಣ ವಿಷಯವಾಗಿ ನಿರ್ಬಂಧವಿಲ್ಲದೆ ಮಾತನಾಡುವ ವಿಷಯವಾಗಿ ಆಲೋಚಿಸಲ್ಪಡುವುದೆಂದು ಆ|| ಸ್ಟೇಟ್‌ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ.

ಮಾಂಟೆಗ್ ಚೆಲ್ಮ್ಸ್‌ಫರ್ಡ್ ರಾಜಕೀಯಸುಧಾರಣ ಸೂಚನೆಗಳಮೇಲೆ ಮದ್ರಾಸ್ ರಾಷ್ಟ್ರೀಯಸಂಘದವರು ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿರುವುದರಲ್ಲಿ—"ರಿಪೋರ್ಟಿನೊಳಗೆ ಪ್ರತ್ಯೇಕಸಂಘ ಪ್ರಾತಿನಿಧ್ಯವು ತಿರಸ್ಕರಿಸಲ್ಪಟ್ಟಿದೆ. ಆದರೆ ಅದಕ್ಕೆ ಕೊಟ್ಟಿರುವ ಕಾರಣಗಳು ತೃಪ್ತಿಕರವಾಗಿಲ್ಲ. ಈ ಮದ್ರಾಸು ಅಧಿಪತ್ಯಕ್ಕಾದರೂ ಪ್ರತ್ಯೇಕಸಂಘ ಪ್ರಾತಿನಿಧ್ಯವನ್ನು ಕೊಡಬೇಕಾದುದು ಅವಶ್ಯಕವು" ಎಂಬ ಸೂಚನೆಯೂ ಒಂದಾಗಿರುತ್ತದೆ.

ಪಂಜಾಬಿನ ಗುಜರಾನ್ವಾಲಾದಲ್ಲಿ ಕಳೆದವರ್ಷ ಸೈನ್ಯಕ್ಕೆ ೩೩೮೮ ಮಂದಿ ಸೇರಿದ್ದರು. ಈ ವರ್ಷ ೮೫೦೦ ಮಂದಿ ಸೇರಿದರು. ಒಟ್ಟು ೧೧೭೬೫ ಮಂದಿ ಸೇರಿದಂತಾಯಿತು. ಇದರಿಂದ ಆ ದೇಶದಲ್ಲಿ ಸೈನ್ಯಕ್ಕೆ ಸೇರಲು ಅರ್ಹವಾದ ವಯಸ್ಸುಳ್ಳ ಪುರುಷರೊಳಗೆ ೧೪ ಮಂದಿಗೆ ಒಬ್ಬೊಬ್ಬರಂತೆ ಸೇರಿದಹಾಗಾಯಿತು. ಇಂಥ ಸ್ಥಿತಿಯುಂಟಾಗುವುದಕ್ಕೆ ಆ ಜಿಲ್ಲೆಯ ಪ್ರಜಾಪ್ರಮುಖರು ಮಾಡಿದ ಪ್ರೋತ್ಸಾಹವಿಶೇಷವೇ ಕಾರಣವೆಂದು ಗೊತ್ತಾಗುತ್ತದೆ.

೫ ನೆ ವರ್ಷದ ಯುದ್ಧ ವರ್ಧಂತಿದಿನವಾದ ಕಳೆದ ಭಾನುವಾರ ಭರತಖಂಡದ ಮುಖ್ಯಮುಖ್ಯ ಸ್ಥಳಗಳಲ್ಲೆಲ್ಲಾ ಎಲ್ಲಮತದವರ ದೇವಾಲಯಗಳಲ್ಲೂ ಮಿತ್ರಮಂಡಲಿಜಯವನ್ನೂ ಯುದ್ಧಸಮಾಪ್ತಿಯನ್ನೂ ಕೋರಿ ಪ್ರಾರ್ಥನೆಗಳು ನಡೆದಿರುವುವು. ಸೀಮೆಯಲ್ಲಿ ಚಕ್ರವರ್ತಿ ದಂಪತಿಗಳು ಪಾರ್ಲಿಮೆಂಟ್ ಸಭಿಕರು ಮಂತ್ರಿಮಂಡಲದವರು ಮೊದಲಾದವರೆಲ್ಲಾ ಅಟ್ಟಹಾಸದಿಂದ ಬೀದಿಯಲ್ಲಿ ಉತ್ಸವಗೊಂಡು ದೇವಾಲಯಕ್ಕೆ ಹೋಗಿ ಪ್ರಾರ್ಥನೆಯನ್ನು ಸಲ್ಲಿಸಿದರು.

ಮ|| ಸೇಲಂ ವಿಜಯರಾಘವಾಚಾರ್ಯರ ಅಧ್ಯಕ್ಷತೆಯಿಂದ ಮದ್ರಾಸಿನ ರಾಷ್ಟ್ರೀಯ ತಾತ್ಕಾಲಿಕಸಭೆಯು ಕೂಡಿ ಮಾಂಟೆಗ್ ಚೆಲ್ಮ್ಸ್‌ಫರ್ಡ್ ಸುಧಾರಣೆಯ ವಿಷಯದಲ್ಲಿ ತಮ್ಮಭಿಪ್ರಾಯವನ್ನು ತಿಳಿಯಪಡಿಸಿತು. ಕಾಂಗ್ರೆಸ್‌ಲೀಗಿನವರು ಕೋರಿರುವಂಥ ಸಂಸ್ಕರಣಗಳೇ ಭರತಖಂಡಕ್ಕೆ ಕೊಡಲ್ಪಡಬೇಕೆಂದೂ, ಆಂಗ್ಲಸಾರ್ವಭೌಮರ ಅಧಿಪತ್ಯಕ್ಕೊಳಪಟ್ಟ ಸಂಪೂರ್ಣಸ್ವರಾಜ್ಯವು ಭರತಖಂಡಕ್ಕೆ ಒದಗುವಂಥ ಸಂಸ್ಕರಣವು ಆಗಬೇಕೆಂದೂ ಮೊದಲಾಗಿ ನಿರ್ಧಾರಗಳಾದುವು.

ನಮ್ಮ ವೈಸ್ರಾಯರು ಈಗ ಮಧ್ಯಭರತಖಂಡ ಸಂಸ್ಥಾನಗಳಲ್ಲಿ ಸಂಚರಿಸುತ್ತಿದ್ದಾರೆ. ಕಳೆದವಾರ ಅವರು ಭೂಪಾಲಸಂಸ್ಥಾನಕ್ಕೆ ಹೋಗಿದ್ದರು. ಅಲ್ಲಿ ನಡೆದ ದರಬಾರಿನಲ್ಲಿ ವೈಸ್ರಾಯರು ಬೇಗಂರವರ ರಾಜ್ಯಭಾರ ನಿರ್ವಾಹನೈಪುಣ್ಯವನ್ನೂ ಯುದ್ಧಕಾರ್ಯದಲ್ಲಿ ಅವರು ಮಾಡಿದ ಅಮೋಘ ಸಹಾಯಗಳನ್ನೂ ಕೊಂಡಾಡಿದರು. ಇದುವರೆಗೆ ಬೇಗಂರವರು ಮಾಡಿರುವ ಸೇನೆ ಹಣ ಮೊದಲಾದುವುಗಳ ಸಹಾಯವೇ ಅಲ್ಲದೆ ಮುಂದೆ ಯುದ್ಧ ಮುಗಿಯುವವರೆಗೂ ವರ್ಷಕ್ಕೆ ೫೦ ಸಾವಿರದಂತೆ ಸಹಾಯಮಾಡುತ್ತೇನೆಂದು ವಾಗ್ದಾನ ಮಾಡಿದರು.

ಕಳೆದ ಜೂನ್ ತಾ|| ೨೨ ರಲ್ಲಿ ಪುಣೆಯೊಳಗೆ ಶ್ರೀಮಾನ್ ತಿಲಕರು ಒಂದು ಉಪನ್ಯಾಸ ಮಾಡುವಾಗ್ಗೆ ಸೈನ್ಯಕ್ಕೆ ಸೇರುವ ಜನರನ್ನು ನಿರುತ್ಸಾಹಪಡಿಸುವ ಮಾತುಗಳನ್ನು ಉಪಯೋಗಿಸಿದರೆಂಬ ಕಾರಣದಿಂದ ಅವನ್ನು ಮುಂದೆ ಪುನಾ ಜಿಲ್ಲೆಯಲ್ಲೆಲ್ಲೂ ಅವರು ಜಿಲ್ಲಾ ಮ್ಯಾಜಿಸ್ಟ್ರೇಟರ ಅಥವಾ ಪೋಲೀಸ್ ಕಮಿಷನರ ಅನುಮತಿಯಿಲ್ಲದೆ ಉಪನ್ಯಾಸ ಮಾಡಕೂಡದೆಂದೂ, ಬೊಂಬಾಯಿಯಲ್ಲಿ ಕೂಡ ಪ್ರತ್ಯೇಕ ರಾಷ್ಟ್ರೀಯಸಭೆಯಲ್ಲೂ ಅವರು ರಾಜಕೀಯ ಸಂಸ್ಕರಣಗಳನ್ನು ಕುರಿತು ಮಾತನಾಡಬಹುದಲ್ಲದೆ ಇತರವಿಷಯವನ್ನೆತ್ತಕೂಡದೆಂದೂ ಪುನಾ ಜಿಲ್ಲಾ ಮೇಜಿಸ್ಟ್ರೇಟರು ತಿಲಕರಿಗೆ ಲಿಖಿತಮೂಲಕವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಅಂಥ ಮಾತುಗಳನ್ನಾಡಲಿಲ್ಲವೆಂದು ತಿಲಕರು ಪ್ರಕಟಿಸಿದ್ದಾರೆ.

ಮದ್ರಾಸಿನಲ್ಲಿ ಕುಡಿಯುವ ನೀರನ್ನು ಬಹು ದೂರದಿಂದ ಸಾಗಿಸಿ ತಂದು ಶುದ್ಧಿಮಾಡಿ ನಲ್ಲಿಗಳ ಮೂಲಕ ಒದಗಿಸುತ್ತಿದ್ದಾರೆ. ಅಲ್ಲಿ ಮೀಟರುಗಳನ್ನಿಟ್ಟಿರುವುದಿಲ್ಲ. ಇದರಿಂದ ನೀರಿನ ಉಪಯೋಗದಲ್ಲಿ ಮಿತಿಯನ್ನು ತೋರಿಸದೆ ಜನರು ಅಶ್ರದ್ಧೆಮಾಡುತ್ತಿದ್ದುದರಿಂದ, ಶುದ್ಧವಾದ ನೀರನ್ನು ಎಷ್ಟು ಒದಗಿಸಿದರೂ ಸಾಲದೆಹೋಗುತ್ತಿದ್ದುದರಿಂದ ಕೆಲ ಸಮಯದಲ್ಲಿ ಶುದ್ಧಿಮಾಡದ ನೀರನ್ನೂ ಕೂಡ ನಲ್ಲಿಗಳಿಗೆ ಬಿಡಬೇಕಾಗಿ ಬರುತ್ತಿರುವುದು. ಈ ಅಶುದ್ಧಜಲಪಾನದಿಂದ ಪುರಜನರ ಆರೋಗ್ಯಕ್ಕೆ ಭಂಗಬರುವಂತಾಯಿತು. ಈಗ ಆ ಪಟ್ಟಣದಲ್ಲಿ ಆಗುತ್ತಿರುವ ಹೆಚ್ಚು ಮರಣಗಳಿಗೆ ಇದೂ ಒಂದು ಕಾರಣವೆಂದು ನಿರ್ಧರಿಸಲ್ಪಟ್ಟಿದೆ. ಆದುಕಾರಣ ಇನ್ನುಮೇಲೆ ಅಶುದ್ಧವಾದ ನೀರನ್ನು ಬಿಡದೆಯೇ ಇರುವಂತೆ ಮಾಡುವುದಕ್ಕೂ ಪ್ರತಿಮನೆಯವರೂ ಮಿತವಾಗಿ ನೀರನ್ನುಪಯೋಗಿಸುವಂತೆ ಮಾಡುವುದಕ್ಕೂ ಸಹ ಪ್ರತಿಮನೆಯ ನಲ್ಲಿಗೂ ಮೀಟರನ್ನಿಡುವುದಕ್ಕೆ ಅಲ್ಲಿಯ ಮ್ಯುನ್ಸಿಪಾಲಿಟಿಯವರು ನಿರ್ಧರಿಸಿ ಕೆಲಸವನ್ನು ಸಾಗಿಸುತ್ತಿದ್ದಾರೆ. ನಮ್ಮ ಮೈಸೂರು ಬೆಂಗಳೂರುಗಳಲ್ಲೂ ಮೀಟರನ್ನಿಟ್ಟಬಳಿಕವೇ ಮನೆಮನೆಯವರು ತೋಟ ಮೊದಲಾದುವುಗಳಿಗೆಲ್ಲಾ ವಿಪರೀತವಾಗಿ ನೀರನ್ನು ತಿರುಗಿಸಿಕೊಳ್ಳುತ್ತಿದ್ದುದು ತಪ್ಪಿತು.

ಬೊಂಬಾಯಿ ಅಧಿಪತ್ಯದಲ್ಲಿರುವ ಹಿಂದುಳಿದ ಜನವರ್ಗಗಳ ಜನರು ಆ|| ನಾಯಕರವರ ಅಧ್ಯಕ್ಷತೆಯಿಂದ ಸಭೆಗೂಡಿ ಮಾಂಟೆಗ್ ಚೆಲ್ಮ್ಸ್‌ಫರ್ಡ್‌ರವರ ರಾಜಕೀಯ ಸಂಸ್ಕರಣಗಳ ವಿಷಯದಲ್ಲಿ ತಮ್ಮ ವಿಜ್ಞಾಪನೆಯನ್ನು ಬರೆದುಕೊಂಡರು. ಇದರಲ್ಲಿ ಸಂಘಪ್ರಾತಿನಿಧ್ಯವು ಅವಶ್ಯಕವಾಗಿರಬೇಕೆಂಬ ವಿಷಯವು ಮುಖ್ಯವಾಗಿದ್ದಿತು. ಪ್ರತ್ಯೇಕ ಪ್ರಾತಿನಿಧ್ಯವಿಲ್ಲದಿದ್ದರೆ ಹಿಂದುಳಿದ ಜನವರ್ಗಗಳೂ ನಿಮ್ನಜಾತಿಯವರೂ ಅಭಿವೃದ್ಧಿಗೊಳ್ಳುವುದಕ್ಕೆ ಅವಕಾಶವಿಲ್ಲದೆ ಹೋಗುವುದೆಂತಲೂ ಹಿಂದೂ ಸಮುದಾಯದಲ್ಲಿರುವಷ್ಟು ಪ್ರತ್ಯೇಕವರ್ಗಗಳು ಪ್ರಪಂಚದ ಮತ್ತಾವ ಜನಾಂಗದಲ್ಲೂ ಇರುವುದಿಲ್ಲವೆಂತಲೂ, ಸಂಘಪ್ರಾತಿನಿಧ್ಯವನ್ನನುಗ್ರಹಿಸಿದರೆ ಹಿಂದೂಜಾತೀಯತೆಗೆ ಭಂಗಬರುವುದೆಂದು ಹೇಳುವುದು ಸರಿಯಲ್ಲವೆಂತಲೂ ಅದರಲ್ಲಿ ತಿಳಿಸಲ್ಪಟ್ಟಿದೆ.

ಮೊನ್ನೆ ವಾರದಲ್ಲಿ ಬೊಂಬಾಯಿಯ ಶಾಸನನಿರ್ಮಾಣಸಭೆಯು ಕೂಡಿದ್ದಾಗ್ಗೆ ಆಯವ್ಯಯಪತ್ರಿಕೆಯನ್ನು ಚರ್ಚಿಸುವ ಸಂದರ್ಭದಲ್ಲಿ ಆ|| ಮನಮೋಹನದಾಸ್ ರಾಮಜಿಯವರು-ಗೌರ್ನರವರ ಬ್ಯಾಂಡಿನವರಿಗಾಗಿ ವರ್ಷಕ್ಕೆ ೫೦ ಸಾವಿರ, ಗೌರ್ನರ ತೋಟಕ್ಕೆ ೨೫ ಸಾವಿರ, ಅದರಲ್ಲಿ ತೋಟದ ಮಾಲಿಯಾದ ಯೂರೋಪ್ಯನ ಸಂಬಳ ೪೬೨೦ ರೂ. ಗೌರ್ನರ ದೇಶಸಂಚಾರಕ್ಕೆ ೨೪ ಸಾವಿರ ರೂ. ವೆಚ್ಚವಾಗುತ್ತದೆ. ಮಿತವ್ಯಯ, ಮಿತವ್ಯಯವೆಂದು ಬೋಧಮಾಡುವ ಸರ್ಕಾರದವರು ಈ ದುಂದುವೆಚ್ಚವನ್ನು ತಪ್ಪಿಸಲಾಗದೆ? ಎಂದು ಕೇಳಿದರು. ಅದಕ್ಕೆ ಗೌರ್ನರವರು ಸ್ವಲ್ಪ ಆಗ್ರಹಗೊಂಡು, ಈ ವಿಷಯವಾಗಿ ನನ್ನೊಡನೆ ರಹಸ್ಯವಾಗಿ ಮಾತನಾಡಬಾರದಾಗಿತ್ತೆ ? ಸಭೆಗೆ ಈ ವಿಷಯವನ್ನು ಏತಕ್ಕೆ ಎಳೆದು ತರಬೇಕಾಗಿತ್ತು ? ಎಂದು ಹೇಳಿದುದಲ್ಲದೆ, ಈ ಬ್ಯಾಂಡು ಯುದ್ಧದಲ್ಲಿ ಗಾಯಗೊಂಡು ಬಂದ ಸೈನಿಕರ ವಾಸಗೃಹದ ಹತ್ತಿರ ಬಾಜಿಸಲ್ಪಡಲು ಉಪಯೋಗಿಸಲ್ಪಡುತ್ತಿದೆ. ನರಳುತ್ತಲಿರುವ ಸೈನಿಕರಿಗೆ ಇದು ಹಿತಕರವಲ್ಲವೆ ? ಎಂದು ಪ್ರಶ್ನೆಮಾಡಿ ಆ ವಿಷಯವನ್ನು ದಾಟಿಸಿದರು. ತೋಟದ ಮಾಲಿಯ ಏರ್ಪಾಟು ತಾವು ಬರುವುದಕ್ಕೆ ಮುಂಚೆಯೇ ಆಗಿದ್ದಿತೆಂದು ಹೇಳಿ ಅದನ್ನೂ ದಾಟಿಸಿದರು. ದೇಶಸಂಚಾರವನ್ನು ನಿಲ್ಲಿಸಿಬಿಡಬೇಕಾದರೆ ನನಗೆ ಸಂತೋಷವೇ. ಆದರೆ ಹಾಗೆ ಮಾಡಿಬಿಟ್ಟರೆ ದೇಶದ ಸ್ಥಿತಿಗತಿಯನ್ನು ಪ್ರತ್ಯಕ್ಷವಾಗಿ ತಿಳಿಯುವುದಕ್ಕೆ ಅವಕಾಶ ತಪ್ಪುವುದು. ಹಾಗೆ ಮಾಡಬಹುದೆ ? ಎಂದು ಕೇಳಿದರು. ಮಹಾಬಲೇಶ್ವರಕ್ಕೆ ವರ್ಷಕ್ಕೆರಡು ಸಲ ಹೋಗುವ ಪದ್ಧತಿಯನ್ನು ತಪ್ಪಿಸಬಾರದೆ ? ಇದು ವೃಥಾ ವ್ಯಯಾಸ್ಪದವೆಂದು ಆ|| ಪರಾಂಜಪೆಯವರು ಪ್ರಶ್ನೆಮಾಡಲು, ಒಂದು ಸಲದ ಪ್ರಯಾಣವನ್ನು ತಾವು ತಪ್ಪಿಸಿಬಿಡುವುದಕ್ಕೆ ಒಪ್ಪಿಕೊಂಡುದಲ್ಲದೆ ತಮ್ಮ ಮುಂದಣ ಗೌರ್ನರ ವಿಷಯವಾಗಿ ಇದು ಅನ್ವಯಿಸಲಾರದೆಂದು ಹೇಳಿದರು.

ವಿದೇಶ ವೃತ್ತಾಂತಗಳು.

ಕಳೆದ ಜುಲೈ ತಿಂಗಳಲ್ಲಿ ೩ ಲಕ್ಷ ಅಮೇರಿಕನ್ ಸೈನ್ಯವು ರಣರಂಗಕ್ಕೆ ಬಂದಿಳಿದಿರುತ್ತದೆ. ಜುಲೈ ಕೊನೆಯವರೆಗೆ ೧೩ ಲಕ್ಷ ಅಮೇರಿಕನ್ ಸೈನ್ಯವು ರಣರಂಗಕ್ಕೆ ಕಳುಹಿಸಲ್ಪಟ್ಟಿರುವುದು.

ಸ್ಪೆಯಿನ್ ಪ್ರಭುವಿನ ಅಭಿಪ್ರಾಯ ಪ್ರಕಾರಕ್ಕೆ ಅಲ್ಲಿಯ ಮಂತ್ರಿಮಂಡಲದವರು ರಷ್ಯಾದ ಪೂರ್ವದ ಜಾರ್‌ರವರ ಪತ್ನೀಪುತ್ರರುಗಳನ್ನು ತಮ್ಮ ದೇಶಕ್ಕೆ ಕಳುಹಿಸಿಕೊಡಬೇಕೆಂದು ರಷ್ಯಾಪ್ರಭುತ್ವದವರನ್ನು ಕೋರಿದ್ದಾರೆ.

ಜುಲೈತಿಂಗಳೊಂದರಲ್ಲೇ ಮಿತ್ರಮಂಡಲಿಯವರು ಶತ್ರುಗಳ ೧೧೭೪ ವಿಮಾನಗಳನ್ನು ಕೆಡವಿ ಹಾಳ್ಮಾಡಿರುವರು. ಅವುಗಳಲ್ಲಿ ಇಂಗ್ಲೀಷರು ಕೆಡವಿದುವುಗಳೇ ೪೧೦. ಆ ಕಾಲದಲ್ಲಿ ಇಂಗ್ಲೀಷರ ೧೧೭ ವಿಮಾನಗಳು ನಷ್ಟವಾಗಿವೆ.

ಸೀಮೆಯಲ್ಲಿರುವ ಪಾಟಿಯಾಲಾ ಮಹಾರಾಜರು ಲೆ|| ಕರ್ನಲ್ ಸರ್ದಾರ್ ಜೋಗೇಂದ್ರಸಿಂಗರೇ ಮೊದಲಾದವರೊಡನೆ ಪಶ್ಚಿಮರಣರಂಗಕ್ಕೆ ಹೋಗಿ ಸ್ಥಿತಿಗತಿಗಳನ್ನು ಪರಿಶೀಲಿಸಿ ಬಹಳ ಸಂತೋಷಪಟ್ಟಿದ್ದಲ್ಲದೆ ಮಾರ್ಷಲ್‌ಹೇಗ್ ಮೊದಲಾದ ಸೇನಾಪತಿಗಳೊಡನೆ ಕುಳಿತು ಭೋಜನಮಾಡಿ ಬಂದರು.

ಗಾಯಗೊಂಡ ಸೈನಿಕರು ೬೦೦ ಮಂದಿಗಳನ್ನು ಫ್ರಾನ್ಸಿನಿಂದ ಸಾಗಿಸಿಕೊಂಡು ಹೋಗುತ್ತಿದ್ದ ವರೀಲ್ಲಾ ಎಂಬ ಆಂಬ್ಯುಲೆನ್ಸ್ ಹಡಗನ್ನು ತಾ|| ೩ ರ ರಾತ್ರಿಯಲ್ಲಿ ಇಂಗ್ಲೆಂಡ್ ತೀರದ ಹತ್ತಿರ ಶತ್ರುಗಳು ಟಾರ್ಪೆಡೋ ಏಟಿನಿಂದ ಮುಳುಗಿಸಿದರು. ೭ ಮಂದಿ ನಾವಿಕರೂ ೧೧೬ ಮಂದಿ ರೋಗಿಗಳೂ ಸಮುದ್ರದ ಪಾಲಾದರು.

ಬಲ್ಗೇರಿಯಾದಲ್ಲಿ ಪ್ರಜಾಪ್ರಭುಗಳ ಮಧ್ಯೆ ಅಸಮಾಧಾನವು ದಿನದಿನಕ್ಕೆ ಹೆಚ್ಚುತ್ತಿದೆ. ಅಲ್ಲಿಯ ಫರ್ಡಿನಾಂಡ್ ರಾಜನೂ ಅವನ ಇಬ್ಬರು ಮಕ್ಕಳೂ ಸಹ ದೇಶವನ್ನು ಬಿಟ್ಟುಹೋಗಿರುವರು. ರಾಜಕುಟುಂಬದವರಾರೂ ರಾಜಧಾನಿಯಲ್ಲಿಲ್ಲ. ಬಹುಮಂದಿ ಜರ್ಮನ್ ಆಸ್ಟ್ರಿಯನ್ ಉದ್ಯೋಗಿಗಳೂ ಕೂಡ ದೇಶವನ್ನು ಬಿಟ್ಟುಹೋಗಿರುವರು.

ಯುದ್ಧಾರಂಭವಾದ ೧೯೧೪ ನೆ ವರ್ಷದ ಅಗಸ್ಟ್ ತಿಂಗಳಲ್ಲಿ ಇಂಗ್ಲೀಷರ ಹತ್ತಿರ ೪೦ ಲಕ್ಷ ಟನ್ನುಗಳ ಭಾರವಾಹಕಗಳಾದ ನೌಕಾಬಲವಿದ್ದಿತು. ಈಗ ಅವರ ಹತ್ತಿರ ೬೦ ಲಕ್ಷ ಟನ್ನುಗಳಿಗೆ ಮೀರಿದ ನೌಕಾಬಲವಿದೆ. ಅದರಲ್ಲಿರುವ ಸೈನಿಕರ ಸಂಖ್ಯೆಯು ೧೯೧೪ ರಲ್ಲಿ ೧೪೫೦೦೦ ಆಗಿದ್ದಿತು. ಈಗ ೪೨೦೦೦೦ ಆಗಿದೆ. ಇವುಗಳಲ್ಲಿ ೫೬೭ ಹಡಗುಗಳು ಬೇರೆಬೇರೆ ರಂಗಗಳಿಗೆ ಸೈನ್ಯಗಳನ್ನೂ ಸಾಮಗ್ರಿಗಳನ್ನೂ ಸಾಗಿಸಲು ಉಪಯೋಗಿಸಲ್ಪಡುತ್ತಿವೆ.

೫ ನೆ ವರ್ಷದ ಯುದ್ಧಾರಂಭಕಾಲದಲ್ಲಿ ಕೈಸರ್‌ರವರು ಕೊಟ್ಟಿರುವ ಪ್ರಕಟನಪತ್ರದಲ್ಲಿ—ಇದುವರೆಗಿನ ೪ ವರ್ಷಗಳ ಯುದ್ಧವನ್ನೂ ಜರ್ಮನರು

ದೈವಾಜ್ಞೆಗನುಸಾರ ಶ್ಲಾಘನೀಯವಾಗಿ ನೆರವೇರಿಸಿರುವರು. ನಾವು ಸಂಧಿಗಾಗಿ ಪ್ರಯತ್ನಿಸಿದರೂ ನಮ್ಮ ಶತ್ರುಗಳು ಅದಕ್ಕೊಪ್ಪಲಿಲ್ಲ. ಅವರು ಜರ್ಮನಿಯಮೇಲೆ ಇಲ್ಲದ ನಿಂದೆಯನ್ನು ಹೊರಿಸಿ ನಮ್ಮ ದೇಶವನ್ನು ನಾಶಗೊಳಿಸಬೇಕೆಂದಿದ್ದಾರೆ. ಅದಕ್ಕಾಗಿ ನಾವು ಯುದ್ಧವನ್ನು ಸಾಗಿಸಿಯೇ ತೀರಬೇಕಾಗಿದೆ ಎಂದು ಹೇಳಿದ್ದಾರೆ. ಈ ೫ ನೆಯ ವರ್ಷದ ಯುದ್ಧವನ್ನು ಸಾಗಿಸುವುದಕ್ಕೆ ನಾವು ಬಾಧ್ಯರಲ್ಲ. ನಮ್ಮ ಶತ್ರುಗಳೇ ಕಾರಣಭೂತರು ಎಂದು ಬವೇರಿಯಾ ಪ್ರಭುವು ಪ್ರಕಟಿಸಿದ್ದಾರೆ.

ಇಂಗ್ಲೀಷರು ಕಳೆದ ಅಕ್ಟೋಬರ್ ತಿಂಗಳಿಂದ ಜುಲೈ ತಾ|| ೨೭ ರವರೆಗೆ ಯುದ್ಧದ ಸಾಲದ ಪತ್ರಗಳನ್ನು ಮಾರುವುದರ ಮೂಲಕ ೧೦೨೮೦೦೦೦೦೦ ಪೌನುಗಳನ್ನು ಸಂಪಾದಿಸಿರುತ್ತಾರೆ. ಈಗ ೭೦ ಕೋಟಿ ಪೌನುಗಳ ಸಾಲಮಾಡುವುದಕ್ಕೆ ಪಾರ್ಲಿಮೆಂಟಿನ ಅಪ್ಪಣೆಯನ್ನು ಪಡೆದಿರುತ್ತಾರೆ. ಮಿತ್ರಮಂಡಲಿ ದೇಶಗಳಿಗೆ ಇಂಗ್ಲೀಷರು ಕೊಟ್ಟಿರುವ ಸಾಲವು ಈ ಕೆಳಗೆ ಕಂಡಂತೆ ಇರುತ್ತದೆ. ರಷ್ಯಾದವರಿಂದ ಬರಬೇಕಾದುದು ೫೬೮೦ ಲಕ್ಷ ಪೌನು, ಫ್ರಾನ್ಸಿನಿಂದ ೪೦೨೦ ಲಕ್ಷ ಪೌ||, ಇಟಲಿಯಿಂದ ೩೧೩೪ ಲಕ್ಷ ಪೌ||, ಇತರ ಮಿತ್ರಮಂಡಲಿದೇಶಗಳಿಂದ ೧೧೯೦ ಲಕ್ಷ ಪೌ||. ಒಟ್ಟು ೧೩೪೮೨೦೦೦೦೦೦ ಪೌನುಗಳು ಬರಬೇಕಾಗಿವೆ.

ಪತ್ರವ್ಯವಹಾರ.

ಅಭಿಮಾನದ ಸುಗ್ಗಿ.

ಹಿರಿಯೂರಿನ ೧ ನೆ ವೀರಶೈವ ಕಾನ್‌ಫರೆನ್ಸಿಗಾಗಿ ದಯಮಾಡಿಸಿದ್ದ ಚಿತ್ರದುರ್ಗ ಬೃಹನ್ಮಠದ ನಿರಂಜನ ಜಗದ್ಗುರು ಮಹಾಸ್ವಾಮಿಗಳ ಖಾಸಾ ಚರಪಟ್ಟರಾದ ಶ್ರೀ ಪಂಚಾಕ್ಷರಸ್ವಾಮಿಗಳೂ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳೂ ಸಂಸ್ಥಾನಕ್ಕೆ ಹಿಂಬಾಗಿ ತಾ|| ೧೫-೭-೧೮ ನೆ ಸಾಯಂಕಾಲ ಹೊರಟು ಮೇಟಿಕುರಿಕೆ ಹಿತೋಪದೇಶಕ ಸಂಘದವರಿಂದ ಏರ್ಪಡಿಸಿದ್ದ ಸೇವಾಸತ್ಕಾರಗಳನ್ನು ಕೈಕೊಂಡು ಚಿಕ್ಕದಾದ ಸಭೆ ಸೇರಿಸಿ, ಮತಧರ್ಮಾಚಾರಗಳನ್ನು ಕುರಿತು ಬೋಧಿಸಿ, ಸಮಾಜಸೇವಾ ಮಹತ್ವವು ಸರ್ವರಿಗೂ ಹೃದಯಂಗಮವಾಗುವಂತೆ ಮಾಡಿ ಬೋರ್ಡಿಂಗಿಗಾಗಿ ಚಂದಾ ಮತ್ತು ಮುಷ್ಟಿಫಂಡನ್ನು ಸ್ಥಾಪಿಸಿ, ತಾ|| ೧೬ ನೆ ಬೆಳಗ್ಗೆ ಉತ್ಸವಾದಿ ಮನ್ನಣೆಗಳಿಂದ ಹೊರಟು, ಆ ದಿನದ ರಾತ್ರಿ ೧೦ ಗಂಟೆಯೊಳಗಾಗಿ ಗನ್ನಾಯ್ಕನಹಳ್ಳಿ, ಗಿಡ್ಡಬನಹಳ್ಳಿ, ಗೂಯಿಲಾಳು ಈ ಗ್ರಾಮಗಳ ಭಕ್ತಜನರು ಶ್ರೀ|| ಸ್ವಾಮಿಯವರುಗಳಿಗೆ ಆಚರಿಸಿದ ಉತ್ಸವಾದಿ ಸತ್ಕಾರ್ಯಗಳನ್ನು ಅಲ್ಲಲ್ಲಿಗೆ ಅಂಗೀಕರಿಸಿ, ಆಬಾಲವೃದ್ಧರಾದಿಯಾಗಿ ಸಮಸ್ತರನ್ನೂ ಅನುಗ್ರಹಿಸಿ ಕೃತಾರ್ಥರನ್ನು ಮಾಡಿ, ಪ್ರತಿ ಗ್ರಾಮದಲ್ಲಿಯೂ ಮುಷ್ಟಿಫಂಡನ್ನು ಏರ್ಪಡಿಸಿ ಆ ಒಂದೇ ಒಂದು ದಿವಸದೊಳಗಾಗಿ ೬೩೮೧ ರೂಪಾಯಿ ಚಂದಾ ಅಂದಾಜು ಸುಮಾರು ವರ್ಷ ೧ಕ್ಕೆ ಎರಡುಸಾವಿರ ಸೇರು ಧಾನ್ಯ ಜಮಾಯಿಸುವ ಮುಷ್ಟಿಫಂಡನ್ನೂ ಸಹ ಗೊತ್ತುಪಡಿಸಿ, ಆ ರಾತ್ರಿ ಹತ್ತುಗಂಟೆಗೆ ಗೂಲಾಳು ಭಕ್ತರ ಪ್ರಾರ್ಥನೆಯಂತೆ ಶಿವಾರ್ಚನೆಯನ್ನು ತೀರಿಸಿಕೊಂಡು ಮುಂದಕ್ಕೆ ದಯಮಾಡಿಸಿದರು. ಈ ಕಾರ್ಯದಲ್ಲಿ ಶ್ರೀ ಸ್ವಾಮಿಯವರುಗಳಿಗೂ ಭಕ್ತಜನರಿಗೂ ಉತ್ಸಾಹ ಪ್ರೋತ್ಸಾಹಗಳನ್ನು ಕೊಟ್ಟು ಅನಿಶ್ಚಿತಕಾಲದಲ್ಲಿಯೂ ಅನಮಸಾಹಸದಿಂದ ಸಕಲ ಕಾರ್ಯನಿರ್ವಾಹವನ್ನು ಗೈಯುತ್ತಿದ್ದ ಸ್ವಾಗತ ಸಂಘಾಧ್ಯಕ್ಷರಾದ ಡಿ. ಯಂ. ಚನ್ನವೀರಯ್ಯನವರ ಕುತೂಹಲ ಉತ್ಸಾಹಗಳನ್ನು ವರ್ಣಿಸಲು ಅಸಾಧ್ಯವಾಗಿತ್ತು.

ಹಿಂದೆ ಪಂಜಾಬ್ ದೇಶದಲ್ಲಿ ಅಲಿಘರ್ ಎಂಬ ಪಟ್ಟಣದಲ್ಲಿ ಮಹಮ್ಮದೀಯ ಕಾಲೇಜಿನ ಸ್ಥಾಪನೆ ವಿಷಯಕ್ಕೆ ಸರ್. ಸಯ್ಯದ್ ಅಹಮದ್ ಸಾಹೇಬರೆನ್ನುವ ಮಹನೀಯರು ತನ್ನ ದೇಹಪ್ರಾಣಗಳನ್ನೂ ಲಕ್ಷ್ಯವಿಡದೆ ಅಸಾಧಾರಣವಾದ ಪ್ರಯತ್ನಗಳನ್ನು ಮಾಡಿ ಕೊನೆಗೆ ತನ್ನ ತಲೆಯನ್ನೇ ಮಾರಿ ಧನ ಸಂಚಯ ಮಾಡಿಟ್ಟಿರುವರೆಂಬುದು ಸರ್ವವಿಶ್ರುತವು. ಈಗ ವೀರಶೈವ "ಬೋರ್ಡಿಂಗ್" ಪ್ರೆಸಿಡೆಂಟ್ ಡಿ ಯಂ. ಚನ್ನವೀರಯ್ಯನವರು ತಮ್ಮ ಸಮಸ್ತ ಕಾರ್ಯಗಳನ್ನೂ ತೊರೆದು ಅಹೋರಾತ್ರಿಯಲ್ಲಿಯೂ ಫಂಡನ್ನು ಕೂಡಿಸುವ ಜಪವನ್ನೇ ಮಾಡುತ್ತಿರುವುದು ಪ್ರಶಂಸನೀಯವಾಗಿರುತ್ತದೆ. ಈ ಕಾರ್ಯಕ್ಕೆ ಕೇವಲ ಧರ್ಮಬೋಧಕರಂತೆ ಅಹೋರಾತ್ರಿಯೂ ಮತಸಂಬಂಧ ಮಹತ್ವವನ್ನು ಜನರಿಗೆ ಬೋಧಿಸುತ್ತಲೂ ತಾವು ಶ್ರೀಮಂತರಾಗಿದ್ದರೂ ತಮ್ಮ ಕಾರ್ಯಗಳನ್ನು ಗಣಿಸದೆ, ಪಡುತ್ತಿರುವ ಶ್ರಮಪ್ರಯತ್ನಗಳನ್ನು ನೋಡಿದರೆ ಹಿರಿಯೂರು ತಾಲೂಕಿನ ಧರ್ಮಸುಧಾರಣೆ ಬಗ್ಗೆ ಶ್ರೀಮತ್ಪರಶಿವನೇ ಇವರ ಹೃದಯದಲ್ಲಿ ನೆಲಸಿ ಪ್ರೇರಿಸುತ್ತಿರುವಂತೆ ತೋರುವುದು. ಇಂಥ ಮಹನೀಯರ ಸಂಖ್ಯೆಯು ನಮ್ಮ ಸಮಾಜದಲ್ಲಿ ಹೆಚ್ಚಲಿ. ಇಂಥ ಮಹನೀಯರಿಗೆ ಆಯುರಾರೋಗ್ಯವನ್ನೂ ಇವರ ಪ್ರಯತ್ನಗಳಿಗೆ ಸಹಾಯಕರಾಗಿರುವ ಬೋರ್ಡಿಂಗ್ ಕಮಿಟಿ ಮೆಂಬರುಗಳಿಗೂ ಮತ್ತು ಇವರಿಗೆ ಉತ್ಸಾ[illegible]ದ ಸಹಾಯಮಾಡುವ ಸಮಾಜಬಾಂಧವರಿಗೂ ಶ್ರೀಮಜ್ಜಗದ್ಗುರು [illegible] ಮಹಾಚಾರ್ಯರು ಸಂಪೂರ್ಣ ಕೃಪೆಯನ್ನನುಗ್ರಹಿಸಿ ಉದ್ಧರಿಸಬೇಕಾಗಿ ಕೋರುವ

ಸಮಾಜಬಂಧುಗಳು.
ಆರ್. ಸಿದ್ದಯ್ಯ, ಜಿ. ಲಿಂಗಯ್ಯ.

(ಹಿರಿಯೂರು ತಾ|| ವೀರಶೈವ ಮಹಾಸಭೆ)

ಅಧ್ಯಕ್ಷರ ಭಾಷಣ.

(ಹಿಂದಿನಶೇಷ)

೫ ಆಗಮೋಕ್ತವಾಗಿ ಧರ್ಮಕಾರ್ಯಗಳು, ದುಂದುವೆಚ್ಚಗಳು.

ಗೃಹಸ್ಥನಾಗಿರುವವನು ತನ್ನ ಧರ್ಮರಕ್ಷಣೆಗಾಗಿ ಅನೇಕ ಕಾರ್ಯಗಳನ್ನು ಅನಿವಾರ್ಯವಾಗಿ ಮಾಡಲೇಬೇಕಾಗುವುದು. ಜಾತಕರ್ಮ ಲಿಂಗಧಾರಣ ದೀಕ್ಷಾಸಂಸ್ಕಾರ ವಿವಾಹ ಮೊದಲಾದವುಗಳು ಅವಶ್ಯಕವಾಗಿ ನಡೆಯಬೇಕಾದವುಗಳು. ಇವುಗಳ ವಿಧಾನವೆಲ್ಲಾ ವಿಧ್ಯುಕ್ತವಾಗಿರುವವು. ಕೇವಲ ಬಡವರಿಂದಲೂ ನಡೆಸಲ್ಪಡುವುದಕ್ಕೆ ಸಾಧ್ಯವಾಗುವ ರೀತಿ ವಿಧಿಗಳನ್ನೆಲ್ಲಾ ಪರಿಶೋಧಿಸಿ ಸುಲಭಮಾರ್ಗಗಳನ್ನು ಪೂರ್ವಾಚಾರ್ಯರೇ ಕಲ್ಪಿಸಿಕೊಟ್ಟಿರುತ್ತಾರೆ. ಇಂಥಾದ್ದರಲ್ಲಿ ನಮ್ಮವರು ವಿವೇಕವಿಲ್ಲದೆ ದುಂದುವೆಚ್ಚವನ್ನು ಮಾಡುತ್ತಾ ಬಡತನವನ್ನು ತಂದುಕೊಂಡು ನರಳುತ್ತಾ ಇರುವುದು ಶೋಚನೀಯವಾಗಿದೆ. ಕೆಲವರು ಇಂತಹ ಸಂದರ್ಭಗಳಲ್ಲಿ ತಮ್ಮ ಆಟ್ಟಹಾಸವನ್ನು ಸಾಹುಕಾರಿಕೆಯನ್ನೂ ತೋರಿಸುವುದಕ್ಕಾಗಿ ಸಾಲಸೋಲಗಳನ್ನು ಮಾಡಿ ಮನೆಮಠಗಳನ್ನೆಲ್ಲಾ ಕಳೆದುಕೊಂಡು ಜೀವನಕ್ಕೂ ಮಾರ್ಗವಿಲ್ಲದೆ ಕಷ್ಟಪಡುತ್ತಿರುವುದನ್ನು ಅನೇಕವಾಗಿ ನೋಡಬಹುದು. ಇವೆಲ್ಲ ನಮ್ಮ ಸ್ವಯಂಕೃತಾಪರಾಧವೇ ಹೊರತು ಮತ್ತೆ ಬೇರೆ ಅಲ್ಲ. ಇಂತಹ ವಿಶೇಷಕಾಲಗಳಲ್ಲಿ ತಾವು ಹೆಚ್ಚಾಗಿ ಹಣವನ್ನು ಖರ್ಚುಮಾಡದಿರುವುದು ತಮಗೆ ದೊಡ್ಡ ಅವಮಾನವೆಂತ ತಿಳಿದಿರುವ ಮೂರ್ಖಶಿರೋಮಣಿಗಳೂ ಇರುತ್ತಾರೆ. ಐಶ್ವರ್ಯವಂತರು ಒಂದುವೇಳೆ ಹೆಚ್ಚಾಗಿ ಖರ್ಚುಮಾಡಬಹುದಾದರೂ ಬಡವರೂ ತಾವು ಇವರಂತೆಯೇ ಮಾಡದಿದ್ದರೆ ತಮ್ಮ ಬಡತನವು ಹೊರಬೀಳುವುದೆಂದು ಮುಂದಣ ದೃಷ್ಟಿಯಿಲ್ಲದೆ ಸಡಗರದಿಂದ ಸಾಲಮಾಡುವರು. ಆದಕಾರಣ ಅನುಕೂಲಸ್ಥರು ಸಹ ಬಹಳ ಕಡಿಮೆ ಖರ್ಚುಗಳಿಂದ ಈ ಕಾರ್ಯಗಳನ್ನು ಮೊದಲುಮಾಡುತ್ತಾ ಬರಬೇಕು. ಅನಂತರ ಯಾವ ಶಂಕೆಯೂ ಇಲ್ಲದೆ ಬಡವರು ಅವರನ್ನು ಹಿಂಬಾಲಿಸುವರು.

೬. ವೀರಶೈವ ಬೋರ್ಡಿಂಗ್ ಹೌಸ್ [illegible] ಮೊದಲಾದ ವಿದ್ಯಾಸಂಸ್ಥೆಗಳು, [illegible] ಅವುಗಳ ಅವಶ್ಯಕತೆ.

ನಮ್ಮಲ್ಲಿ ವಿದ್ಯಾಭ್ಯಾಸದ ಅಭಿವೃದ್ಧಿಯ ಹೀನಸ್ಥಿತಿಯನ್ನು ಕಳೆದುಕೊಳ್ಳುವುದಕ್ಕೆ ವಿದ್ಯೆಯನ್ನು ಹೆಚ್ಚಿಸಿಕೊಳ್ಳಬೇಕಾದುದು ಅಗತ್ಯವೆಂಬ ಅಂಶವನ್ನು ಮೊದಲೇ [illegible]. ಇದಕ್ಕೆ ಹೆಚ್ಚಾದ ಉತ್ತೇಜನವೂ ಸಹಾಯವೂ ಅವಶ್ಯಕ. ಬೆಂಗಳೂರಿನಲ್ಲಿ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ಧರ್ಮಛತ್ರವನ್ನು ಕಟ್ಟಿಸಿ ಕೆಲವು ಮಂದಿ ವೀರಶೈವ ವಿದ್ಯಾರ್ಥಿಗಳಿಗೆ ಅಶನದ ಏರ್ಪಾಡು ಮಾಡಿಕೊಟ್ಟಿರುವುದರಿಂದ ಹೈಸ್ಕೂಲು ಕಾಲೇಜು ತರಗತಿಗಳಲ್ಲಿ ನಮ್ಮವರು ಓದುತ್ತಿರುವುದನ್ನು ನಾವು ನೋಡಬಹುದಾಗಿದೆ. ಈ ಸಹಾಯದಲ್ಲಿ ಭೋಜನದ ಸಹಾಯವು ಇಲ್ಲದಿದ್ದ ಪಕ್ಷದಲ್ಲಿ ಇಷ್ಟು ಮಂದಿ ವೀರಶೈವ ಬಾಲಕರು ವಿದ್ಯಾಭ್ಯಾಸವನ್ನು ಎಂದಿಗೂ ಹಿಡಿಯುತ್ತಿರಲಿಲ್ಲ. ಅದರಂತೆಯೇ ಪ್ರತಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿಯೂ ಬೋರ್ಡಿಂಗ್ ಸ್ಥಾಪನೆಯಾದರೆ ಆಯಾ ಪ್ರಾಂತ್ಯದ ಬಾಲಕರಿಗೆ ಎಷ್ಟೋ ಸಹಾಯವಾಗುವುದು. ಪ್ರತಿ ತಾಲ್ಲೂಕ್ ಟೌನುಗಳಲ್ಲಿಯೂ ಎ ವಿ. ಸ್ಕೂಲುಗಳಿರುತ್ತವೆ. ಅಲ್ಲಿನ ಮಿಡಲ್ ಸ್ಕೂಲ್ ಅಂತಸ್ತಿನವರೆಗೆ ಹೆಚ್ಚು ಕಷ್ಟವಿಲ್ಲದೆ ವಿದ್ಯಾಭ್ಯಾಸವು ಜರುಗುವುದು. ಅಲ್ಲಿಂದ ಮುಂದಣ ವಿದ್ಯೆಗೆ ಸಹಾಯವು ದೊರೆಯದ ಪಕ್ಷದಲ್ಲಿ ಏನೂ ಆಗುವುದಿಲ್ಲ. ಶ್ರೀಮನ್ ಜಗದ್ಗುರುಗಳವರ ಪ್ರಯತ್ನವಿಶೇಷದಿಂದ ಈಗ ದಾವಣಗೆರೆಯಲ್ಲಿ ಒಂದು ಬೋರ್ಡಿಂಗ್ ಸ್ಥಾಪನೆಯಾಗಿರುವುದು. ಅಲ್ಲಿ ಸರ್ಕಾರದವರು ಹೈಸ್ಕೂಲ್ ಸ್ಥಾಪಿಸಿರುವುದು ಬಹಳಮಟ್ಟಿಗೆ ನಮ್ಮವರಿಗೆ ಅನುಕೂಲವಾಯಿತೆಂದು ಹೇಳುವುದರಲ್ಲಿ ಸಂಶಯವಿಲ್ಲ.

ಬೋರ್ಡಿಂಗುಗಳು ಸ್ಥಿರವಾಗಿ ನಡೆಯುವುದಕ್ಕೆ ಅಪಾರವಾದ ಧನರಾಶಿಯನ್ನು [illegible]. ಧನಿಕರೂ ಮಠಾಧಿಪತಿಗಳೂ ಆಗಿರುವ ಪುಣ್ಯಾತ್ಮರು ಉದಾರಾಶ್ರಯವನ್ನು ಕೊಟ್ಟರೆ ಇದು ಅಸಾಧ್ಯವಾದ ಕೆಲಸವೆಂದು ಹೇಳುವುದಕ್ಕಾಗುವುದಿಲ್ಲ. ಧಾನ್ಯನಿಧಿಯ ಏರ್ಪಾಡೂ ಸಹ ಉತ್ತಮವಾದುದೇ ಸರಿ. ಆಯಾ ಸ್ಥಳದ ಮಹನೀಯರು ವರ್ಷೇವರ್ಷೇ ತಾವು ಕೊಡತಕ್ಕ ಧಾನ್ಯವನ್ನು ನಿಗದಿಮಾಡಿ, ಅದರ ವಸೂಲಿ ವಿನಿಯೋಗ ಮೊದಲಾದ ಕಾರ್ಯಗಳಿಗೆ ಕ್ರಮವಾದ ಏರ್ಪಾಡನ್ನು ಇಟ್ಟು, ಮಠದ ಕೆಲಸವನ್ನೇ ತಮ್ಮ ಸ್ವಂತ ಕೆಲಸವೆಂದು ಭಾವಿಸಿ ಸ್ವಾರ್ಥತ್ಯಾಗವನ್ನು ಬಿಟ್ಟಿರುವ ಮಹಾಶಯರು ಈ ಭಾಗದಲ್ಲಿ ಕೆಲಸ ಮಾಡಲಿಕ್ಕೆ ಒಪ್ಪಿಕೊಳ್ಳುವ ಪಕ್ಷದಲ್ಲಿ ಇದೂ ಸಾಧ್ಯವಾಗುವುದರಲ್ಲಿ ಅನುಮಾನ ತೋರುವುದಿಲ್ಲ. ಮುಖ್ಯ ಯಾವುದಾದರೂ ವಿಧದಲ್ಲಿ ವಿದ್ಯಾಶಾಲೆಗಳು ಅಗತ್ಯವಾಗಿ ನಡೆಯದ ಹೊರತು ನಾವು ಮುಂದಕ್ಕೆ ಬರುವುದಿಲ್ಲ. ನಾವು ಒಂದು ಗುಂಪಾಗಿ ನಿಲ್ಲುವುದಿಲ್ಲ. ನಮ್ಮ ಹೆಸರು ಮರೆಯಲ್ಪಡುವುದು. ನಾವು ಅವಮಾನಕ್ಕೆ ಗುರಿಯಾಗುವೆವು. ವೀರಶೈವರ ಒಂದೊಂದು ಮನೆಯವರೂ ಈ ಸೌಕರ್ಯಕ್ಕಾಗಿ ತಮ್ಮತಮ್ಮ ಯೋಗ್ಯತಾನುಸಾರವಾಗಿ ಸಹಾಯಮಾಡಿದಹೊರತು ವೀರಶೈವರೆಂಬ ಹೆಸರಿಗೆ ಅರ್ಹರಾಗುವುದಿಲ್ಲ. ನೂರಕ್ಕೆ ತೊಂಭತ್ತರಂತೆ ವಿದ್ಯಾವಂತರಾದರೆ ಈ ಲೋಕದ ಇತರ ಸೌಕರ್ಯಗಳು ತಾವಾಗಿಯೇ ದೊರೆಯುವವು.

೭. ಮಹಾಸ್ವಾಮಿಗಳೇ, ಮಹನೀಯರೇ, ಈ ಭಾಷಣವನ್ನು ಮುಗಿಸುವುದಕ್ಕಿಂತ ಮುಂಚಿತವಾಗಿ ನಾನು ಹೇಳಬೇಕಾದ ಇನ್ನೊಂದು ಮುಖ್ಯ ಸಂಗತಿ ಇರುವುದು. ಇದಕ್ಕೆ ಎಲ್ಲರೂ ಅಗತ್ಯವಾಗಿ ಗಮನಕೊಡಬೇಕಾಗಿದೆ. ಕ್ರೂರಾತ್ಮರಾದ ಜರ್ಮನರು ಈಗ ನಡೆಸುತ್ತಿರುವ ಘೋರವಾದ ಯುದ್ಧದಿಂದ ಪ್ರಪಂಚದ ನೆಮ್ಮದಿಗೆ ಭಂಗವುಂಟಾಗಿ ಇದರ ತಾಪವು ಎಲ್ಲಾ ಕಡೆಗೂ ವ್ಯಾಪಿಸುತ್ತಾ ಇದೆ. ಅಧರ್ಮಿಗಳಾದ ಇವರ ಬಲವನ್ನು ಸಂಪೂರ್ಣವಾಗಿ ಅಡಗಿಸಿಬಿಟ್ಟು ತಿರಿಗಿ ಇಂಥಾ ಯುದ್ಧಾಗ್ನಿಯು ಪ್ರಪಂಚದಲ್ಲಿ ಹತ್ತಬೇಯದಂತೆ ಮಾಡಬೇಕೆಂದು ಮಿತ್ರಮಂಡಲಿಯವರು ದೃಢಸಂಕಲ್ಪ ಮಾಡಿರುತ್ತಾರೆ. ಧರ್ಮಸಂಸ್ಥಾಪನೆಗೂ ಸ್ವಾತಂತ್ರ್ಯಕ್ಕೂ ದೇಶಾಭಿವೃದ್ಧಿಗೂ ವಿರೋಧವಾಗಿ ಪರಿಣಮಿಸಿರುವ ಈ ಯುದ್ಧದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಇಂಡಿಯಾ ಸರ್ಕಾರದವರು ತಮ್ಮ ಕೈಲಾದಮಟ್ಟಿಗೂ ಧನಸಹಾಯವನ್ನೂ ಜನಸಹಾಯವನ್ನೂ ಮಾಡಿಯೂ ಇನ್ನೂ ಮಾಡುತ್ತಲೂ ಇರುವುದರಲ್ಲಿ ಲಭ್ಯವಾಗಿರುವ ಕೀರ್ತಿಪ್ರತಿಷ್ಠೆಗಳಿಗೆ ನಾವೂ ಬಾಧ್ಯರಾಗಿರುತ್ತೇವೆ. ನಮ್ಮನ್ನಾಳುವ ನಮ್ಮ ಪ್ರಿಯತಮರಾದ ಶ್ರೀಮನ್ಮೈಸೂರು ಮಹಾರಾಜರವರು ಈ ವಿಷಯದಲ್ಲಿ ತೋರಿಸಿರುವ ಔದಾರ್ಯದ ಗೌರವಕ್ಕೂ ನಾವು ಭಾಗಿಗಳಾಗಿರುತ್ತೇವೆ. ಮೈಸೂರು ಸಿಪಾಯಿಗಳು ರಣಭೂಮಿಯಲ್ಲಿ ತೋರಿಸಿರುವ ಸ್ಥೈರ್ಯ, ಧೈರ್ಯ ಪರಾಕ್ರಮಾದಿಗಳಿಂದ ನಮ್ಮ ದೇಶಕ್ಕೇನೇ ಒಳ್ಳೇ ಹೆಸರು ಬಂದಿರುತ್ತದೆ. ಅದರಲ್ಲೂ ಸೈನ್ಯಕ್ಕೆ ಜನರನ್ನು ಸೇರಿಸಿಕೊಳ್ಳುವ ಸಂದರ್ಭದಲ್ಲಿ ವೀರಶೈವರೂ ಮುಂದುವರಿದು ಹೋಗುತ್ತಿರುವ ವಾರ್ತೆಯು ನಮ್ಮಗಳಿಗೆಲ್ಲಾ ಸಂತೋಷವನ್ನುಂಟುಮಾಡಿರುತ್ತದೆ. ನಮ್ಮ ಪೂರ್ವಚರಿತ್ರೆಯನ್ನು ಪರಿಶೀಲಿಸಿ ನೋಡಿದರೆ ಯುದ್ಧಾಭಿನಿವೇಶಗಳಲ್ಲಿ ವೀರಶೈವರು ಎಂದೂ ಹಿಂದುಳಿದವರಲ್ಲ. ಮುಖ್ಯವಾಗಿ ನಮ್ಮ ಮಿತ್ರಮಂಡಲಿಯವರಿಗೆ ನಮ್ಮಿಂದಾದಮಟ್ಟಿಗೂ ಧನಸಹಾಯವನ್ನೂ ಜನಸಹಾಯವನ್ನೂ ಮಾಡುವುದಕ್ಕಿಂತ ಹೆಚ್ಚಿನ ರಾಜಭಕ್ತಿಪ್ರದರ್ಶನವು ಯಾವುದೂ ಇರುವುದಿಲ್ಲ. ಧನಸಹಾಯವೆಂದರೆ "ಇಂಡಿಯನ್ ವಾರ್‌ಲೋನ್" ಎಂಬ ಸಾಲರೂಪವಾದದ್ದಾಗಿಯೇ ಇದೆ. ಇದಕ್ಕೆ ಧಾರಾಳವಾದ ಬಡ್ಡಿಯು ಕೊಡಲ್ಪಡುವುದು. ಹಣವುಳ್ಳವರು ಹೆಚ್ಚಿನ ಆದಾಯವನ್ನು ಸಂಪಾದಿಸುವುದಕ್ಕೂ ಈ ಮೂಲಕ ದೇಶಸೇವೆಯನ್ನು ಮಾಡುವುದಕ್ಕೂ ಒದಗಿರುವ ಈ ಒಳ್ಳೇ ಅವಕಾಶವನ್ನು ಕಳೆದುಕೊಳ್ಳಬಾರದು. ಈ ಘೋರಯುದ್ಧವು ಜಾಗ್ರತೆಯಾಗಿ ಮುಗಿದು ನಮ್ಮ ಮಿತ್ರಮಂಡಲಿಯವರಿಗೆ ಜಯವುಂಟಾಗುವಂತೆ ಶ್ರೀ ಪರಮೇಶ್ವರನನ್ನು ಪ್ರಾರ್ಥಿಸಿ ಈ ಭಾಷಣವನ್ನು ಮುಗಿಸುತ್ತೇನೆ.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
14 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಶೇರ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲವಾದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ಪವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಮೋರಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೋಹರ್‌ಜಾನ್ ಸೀರೆ...	5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ...	3.0.0	ಜಪಾನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ ...	5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ,
34 ಸಾಹುಕಾರಪೇಟೆ, ಮದ್ರಾಸ್.

೧೯೧೮ ನೆಯ ಇಸವಿ ಅಗಸ್ಟ್ ತಾ|| ೧೧ ರಿಂದ ೧೯೧೮ ನೆಯ ಅಗಸ್ಟ್ ತಾ|| ೧೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಶ್ರಾವಣ ಶು|| ಪಂಚಮಿಯಿಂದ ಶ್ರಾವಣ ಶು|| ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ
11	[1] ಭಾನು	ಪಂಚ	60	ಹಸ್ತ	52-52	27
12	ಸೋಮ	ಪಂಚ	4-16	ಚಿತ್ತ	59-26	28
13	[2] ಮಂಗಳ	ಷಷ್ಠಿ	9-15	ಸ್ವಾತಿ	60	29
14	ಬುಧ	ಸಪ್ತ	13-46	ಸ್ವಾತಿ	6-0	30
15	ಗುರು	ಅಷ್ಟ	17-30	ವಿಶಾಖ	11-23	31
16	[3] ಶುಕ್ರ	ನವ	20-11	ಅನೂರಾ	15-44	32
17	[4] ಶನಿ	ದಶಮಿ	21-39	ಜ್ಯೇಷ್ಠ	18-56	1

(1) ಗರುಡಪಂಚಮಿ. (2) ಮಂಗಳಗೌರೀವ್ರತಂ. (3) ವರಮಹಾಲಕ್ಷ್ಮೀವ್ರತಂ, ಆದಿಶುಕ್ರವಾರ. (4) ಸೌರೀಣ್ಯಾಶೂನ್ಯತಿಥಿಃ, ವಿಷ್ಣುಪದಪುಣ್ಯಕಾಲಃ, ಶ್ರಾವಣಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಳಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂ ವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮ್ಣಂಚಿತ ಲೀಯಂಸದಾಪೂರಿಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) · ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಅಗಸ್ಟ್ ತಾರೀಖು ೧೮ ನೆಯ ಭಾನುವಾರ. (ಸಂಚಿಕೆ ೩೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸವಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ, ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯನಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ಬಂಗಾರದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈಪಸ್ತ 1, ರೋಲ್ಡ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
36 ೩, ಇರುಳಪ್ಪನವೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
15 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಶೇರ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಷಯವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
20 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 42

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಸ್ವದೇಶಿ ಸೀರೆಗಳು.

ಈ ಕೆಳಗೆ ಕಾಣಿಸಿರುವ ಸೀರೆಗಳನ್ನು ಬಹು ನಾಜೂಕಾದ ನೂಲಿನಿಂದ ತಯಾರಿಸಿದೆ. ನೋಡುವುದಕ್ಕೆ ಚೆನ್ನಾಗಿಯೂ ಸೌಂದರ್ಯವಾಗಿಯೂ ಇದೆ. 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವುದು. ಪ್ರತಿಯೊಬ್ಬರೂ ಉಡಲು ಅನುಕೂಲವಾದದ್ದು. ಪ್ರತಿ ಸೀರೆಗೂ ಒಂದೊಂದು ಗಿಲೀಟಿನ ರೋಜಾ ಹೂವು ಬಹುಮಾನ ಕೊಡುವೆವು.

		ಪವನಕೋಡಿ ಸೀರೆ	ರೂ. 3.8.0
		ಬಾಲಾಮಣಿ ,,	... 4.0.0
ಮೋರಲು ಸೀರೆ	ರೂ. 11.0.0	ಮಧುರೆ ಬೂಟಾ ಸೀರೆ	... 4.0.0
ಗೊಹರ್‌ಜಾನ್ ಸೀರೆ...	5.8.0	ಶಕುಂತಲ ಇಮಿಟೇಷನ್ ಸೀರೆ	5.8.0
ಮಾವಿನಕಾಯಿ ಸೀರೆ...	3.0.0	ಜಪಾನ್ ರೇಷ್ಮೆ ಪಂಚೆ	... 2.8.0
ಬನಾರಸ್ ಸೀರೆ ...	5.0.0	ಕಾಲರು ಟ್ವಿಲ್ ಷರಟು	... 1.12.0

ನಮ್ಮ ವಿಳಾಸ:— ವಿ. ಎ. ಎಸ್. ವಾಣಿ,
35 ಸಾಹುಕಾರಪೇಟೆ, ಮದ್ರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಸಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ವಿಜ್ಞಾಪನೆ.

ಯುದ್ಧವು ಈಗಲೇ ಮುಗಿಯುವ ಚಿನ್ಹೆಯು ತೋರುವುದಿಲ್ಲ. ಪದಾರ್ಥಗಳ ಬೆಲೆಯೆಲ್ಲಾ ಹೆಚ್ಚಿರುವುದು ಸರ್ವರಿಗೂ ಗೊತ್ತೇ ಇದೆ. ತಥಾಪಿ ಹೊರಗಣಿಂದ ಬಂದಲ್ಲದೆ ಗತ್ಯಂತರವಿಲ್ಲದ ಕಾಗದದ ಬೆಲೆಯು ಈಗ ೧ ಕ್ಕೆ ೭ ರಷ್ಟು ಏರಿಹೋಗಿದೆ. ಅಷ್ಟು ಕೊಟ್ಟರೂ ಬೇಕಾದ ಕಾಗದವು ಸಿಕ್ಕುವುದೇ ದುರ್ಲಭವಾಗಿದೆ. ಬೊಂಬಾಯಿ ಮದ್ರಾಸುಗಳಲ್ಲಿ ಅಷ್ಟೋ ಇಷ್ಟೋ ಸಿಕ್ಕಿದರೂ ಅಲ್ಲಿಂದ ಮೈಸೂರಿಗೆ ಬಂದು ಸೇರಲು ಹೊಗೆಬಂಡಿಗಳ ಕೊರತೆಯಿಂದ ಅನುಕೂಲವಿಲ್ಲವಾಗಿದೆ. ಈ ಕಾರಣದಿಂದಲೇ ವಿವರ್ಣವಾದ ಕಾಗದಗಳನ್ನು ನಾವು ಕಳೆದ ೩-೪ ಸಂಚಿಕೆಗಳಿಂದಲೂ ಉಪಯೋಗಿಸಿಕೊಳ್ಳಬೇಕಾಯಿತು. ಈ ಬೆಲೆ ಹೆಚ್ಚುಗೆಯಿಂದ ಪತ್ರಿಕಾ ಮುದ್ರಣದಲ್ಲಿ ನಮಗೆ ಒಂದೆರಡು ವರ್ಷಗಳಿಂದ ವಿಪರೀತವಾಗಿ ನಷ್ಟ ತಟ್ಟುತ್ತಿದ್ದರೂ ಕಟ್ಟಿಕೊಂಡ ಅಭಿಮಾನಕ್ಕಾಗಿ ಒದ್ದಾಡುತ್ತಿರಬೇಕಾಗಿದೆ. ಈ ವಿಷಮಸಮಯದಲ್ಲಿ ಅನೇಕ ಪತ್ರಿಕಾಕರ್ತರು ತಮ್ಮ ಪತ್ರಿಕೆಗಳ ವರ್ಗಣಿಯನ್ನು ನಿರ್ವಾಹವಿಲ್ಲದೆ ಹೆಚ್ಚಿಸಿದರು. ನಾವು ಹಾಗೆಮಾಡದೆ ಇದುವರೆಗೂ ಸೈರಿಸಿಕೊಂಡೆವು. ಈಗ ಬಹಳ ದುರ್ಭರವಾಗಿಬಂದಿರುವುದು. ಅದುಕಾರಣ ಇಂದಿನಿಂದ ವರ್ಗಣೆಯ ಹಣವನ್ನು ವರ್ಷ ೧ ಕ್ಕೆ ೧ ರೂ. ನಿಂದ ೧-೬-೦ ಗೆ ಹೆಚ್ಚಿಸಿರುತ್ತೇವೆ. ಪರಸ್ಥಳದವರು ಅಂಚೆವೆಚ್ಚ ಸೇರಿ ೨-೪-೦ ರೂ. ಗಳನ್ನು ಕೊಡಬೇಕಾಗುವುದು. ನಾವು ವರ್ಗಣೆಗಾಗಿ ಕಳುಹಿಸುವ ವಿ. ಪಿ. ಗಳನ್ನೆಲ್ಲಾ ಈ ಲೆಕ್ಕವನ್ನನುಸರಿಸಿಯೇ ಇನ್ನು ಮುಂದೆ ಕಳುಹಿಸುವೆವು. ಮನಿಯಾರ್ಡರ್ ದ್ವಾರಾ ಅವರಾಗಿ ವರ್ಗಣೆಯನ್ನು ಕಳುಹಿಸುವವರೂ ಈ ಲೆಕ್ಕವನ್ನೇ ಅನುಸರಿಸಬೇಕೆಂದು ಕೋರುತ್ತೇವೆ. ಭಾಷಾಭಿಮಾನಿಗಳೂ, ಮತಾಭಿಮಾನಿಗಳೂ, ದೇಶಾಭಿಮಾನಿಗಳೂ, ಪತ್ರಿಕಾಭಿಮಾನಿಗಳೂ ಸಹ ಈಗಣ ವಿಷಮಸ್ಥಿತಿಯ ಕಡೆಗೆ ಗಮನಿಸಿ, ಅಲ್ಪಮಾತ್ರವಾಗಿ ಚಂದಾ ಹೆಚ್ಚಿಸಿದರೂ ಇದುವರೆಗಣಂತೆಯೇ ಉದಾರಭಾವದಿಂದ ಪತ್ರಿಕೆಯನ್ನು ಪೋಷಿಸಿಕೊಂಡು ಹೋಗುವವರಾಗಬೇಕೆಂದು ಪ್ರಾರ್ಥನೆ.

ಪತ್ರಕರ್ತ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಆಗಸ್ಟ್ ತಾ|| ೧೮ ನೆಯ ಭಾನುವಾರ.

ಪ್ರತ್ಯೇಕಸಂಘಪ್ರಾತಿನಿಧ್ಯ.

ಸ್ಟೇಟ್‌ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ತಮ್ಮ ನೂತನಭಾರತ ರಾಜಕೀಯ ಸಂಸ್ಕರಣ ನಿವೇದಿಕೆಯಮೇಲೆ ವ್ಯಾಖ್ಯಾನಮಾಡುವ ಸಂದರ್ಭದಲ್ಲಿ ಪ್ರತ್ಯೇಕಪ್ರಾತಿನಿಧ್ಯಸಂಬಂಧವಾಗಿಯೂ ಸ್ವಲ್ಪ ಮಾತನಾಡಿದರು. ಈ ವಿಷಯವಾಗಿ ತಮ್ಮ ನಿವೇದಿಕೆಯಲ್ಲಿ ಹೇಳಿರುವ ಮಾತುಗಳಲ್ಲಿ ಲೇಶಮಾತ್ರವನ್ನೂ ಹಿಂದೆಗೆದುಕೊಳ್ಳಲಾಗುವುದಿಲ್ಲವೆಂದು ಅವರು ಹೇಳಿರುತ್ತಾರೆ. ಪ್ರಜೆಗಳಲ್ಲಿ ಪರಸ್ಪರ ಸಮಾನ ಯೋಗಕ್ಷೇಮಚಿಂತೆಯು ಪ್ರಬಲಿಸುವಂತೆಯೂ ಜಾತಿವೈಷಮ್ಯವು ತೊಲಗಿಹೋಗುವಂತೆಯೂ ಮಾಡಬೇಕಾದರೆ ಪ್ರತ್ಯೇಕ ಪ್ರಾತಿನಿಧ್ಯತತ್ವದಿಂದ ಆಗುವುದಿಲ್ಲವಂತೆ! ಸಂಘಪ್ರಾತಿನಿಧ್ಯವನ್ನು ಬಲವಾಗಿ ಸ್ಥಾಪಿಸಿದರೆ ಆಂಗ್ಲಪ್ರಭುತ್ವದವರು ಭರತಖಂಡದ ಪ್ರಜೆಗಳನ್ನು ಪಾಲಿಸುವುದಕ್ಕೆ ಭೇದೋಪಾಯವನ್ನವಲಂಬಿಸಿದರೆಂಬ ಅಪವಾದ ಬರುವುದಂತೆ! ಇದೇ ಅವರ ವಾದವು. ಇದರಮೇಲೆ ಸರ್ವಸಂಘಗಳಿಗೂ ಪ್ರಾತಿನಿಧ್ಯವಿದ್ದೇತೀರಬೇಕೆಂದು ವಾದಿಸುವವರು ಮುಂದೆ ಭರತಖಂಡದಲ್ಲಿ ಏರ್ಪಡಿಸಲ್ಪಡುವ ಕಮಿಟಿಗಳ ಮುಂದೆ ತಮ್ಮ ಅಭಿಪ್ರಾಯಗಳನ್ನು ತಿಳಿಯಿಸಿಕೊಳ್ಳಬಹುದೆಂತಲೂ ಕಡೆಗೆ ಹೇಳಿರುತ್ತಾರೆ. ಏತೇನ ಮಿ|| ಮಾಂಟೊಗ್‌ರವರಿಗೆ ಪ್ರತ್ಯೇಕ ಪ್ರಾತಿನಿಧ್ಯತತ್ತ್ವದ ವಿಷಯದಲ್ಲಿ ಸಂಪೂರ್ಣವಾಗಿ ಅನಂಗೀಕಾರವೇ ಇರುವುದೆಂದು ವ್ಯಕ್ತವಾಗಿರುವುದು. ನಮ್ಮ ವೈಸ್ರಾಯರ ಅಭಿಪ್ರಾಯವು ಕೂಡ ಬಹುಶಃ ಹೀಗೆಯೇ ಇದ್ದಿರಬಹುದು.

ಪ್ರತ್ಯೇಕಪ್ರಾತಿನಿಧ್ಯಾನಂಗೀಕಾರಕ್ಕೆ ಇವರು ಹೇಳುವ ಕಾರಣವು ಆಭಾಸವಾಗಿದೆಯೇಹೊರತು ಸಮಂಜಸವಾಗಿಲ್ಲ. ಪ್ರತ್ಯೇಕಸಂಘಪ್ರಾತಿನಿಧ್ಯಕ್ಕವಕಾಶವಿತ್ತರೆ ಭೇದೋಪಾಯದಿಂದ ರಾಜ್ಯಭಾರಮಾಡುವರೆಂಬ ಅಪಪ್ರಥೆಯು ತಮಗೆ ಬರುವುದೆಂದು ಹೇಳುವ ಸರ್ಕಾರದವರು ಮಹಮ್ಮದೀಯರಿಗೂ ಸಿಕ್ಕರಿಗೂ ಪ್ರತ್ಯೇಕಪ್ರಾತಿನಿಧ್ಯವನ್ನು ಹೇಗೆ ಕೊಟ್ಟರು? ಅದರಿಂದ ಇವರಿಗೆ ಅಪಪ್ರಥೆಯು ಬರುವುದಿಲ್ಲವೊ? ಮಹಮ್ಮದೀಯರಿಗೆ ಪ್ರತ್ಯೇಕಪ್ರಾತಿನಿಧ್ಯವನ್ನು ಕೊಟ್ಟು ೮-೧೦ ವರ್ಷಗಳಾಗಿದ್ದರೂ ಅವರಿಗೂ ಹಿಂದುಗಳಿಗೂ ಪರಸ್ಪರ ಯೋಗಕ್ಷೇಮಚಿಂತೆಯಲ್ಲಿ ಕೊರತೆಯಾಗಲೀ ವೈರವಾಗಲೀ ಏನೂ ಬಂದಿಲ್ಲವಷ್ಟೆ. ಮಹಮ್ಮದೀಯರಿಗೆ ಪ್ರತ್ಯೇಕಪ್ರಾತಿನಿಧ್ಯಪ್ರದಾನ ಮಾಡಿದುದರಿಂದ ಅವರಲ್ಲಿ ಮೊದಲಿದ್ದ ಅಸಮಾಧಾನವೂ ಕೂಡ ತಪ್ಪಿ ಉಭಯಜನವರ್ಗದ ಮಧ್ಯದಲ್ಲಿ ಮೈತ್ರಿಯೇ ವೃದ್ಧಿಯಾಗುತ್ತಿದೆಯಲ್ಲವೆ? ಈ ದೃಷ್ಟಾಂತವನ್ನು ಅನುಸರಿಸಿ ಹಿಂದೂಮತದ ಹಿಂದುಳಿದ ಜನವರ್ಗಗಳಿಗೂ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದು ಅವಶ್ಯಕವೇ ಆಗಿರುವುದಲ್ಲವೆ?

ನಿನ್ನೆತಾನೇ ಸರ್ ವಾಲಂಟೈನ್ ಚಿರೋಲ್‌ರವರು ಲಂಡನ್ ಟೈಮ್ಸ್ ಪತ್ರಿಕೆಗೆ ಬರೆದಿರುವ ಒಂದು ಲೇಖನದಲ್ಲಿ "ಪ್ರತ್ಯೇಕಸಂಘಪ್ರಾತಿನಿಧ್ಯದಿಂದ ಉಂಟಾಗತಕ್ಕ ನಷ್ಟಗಳನ್ನು ಕುರಿತು ಮಾಂಟೊಗ್‌ಸಂಸ್ಕರಣ ನಿವೇದಿಕೆಯಲ್ಲಿ ಬರೆಯಲ್ಪಟ್ಟಿರುವ ವಿಷಯಗಳೆಲ್ಲಾ ಅತಿಶಯೋಕ್ತಿಯಾಗಿ ಕಾಣಬರುತ್ತಿವೆ. ಹಿಂದುಳಿದಿರುವ ಜನವರ್ಗಗಳಿಗೆ ತಕ್ಕಷ್ಟು ಪ್ರಾತಿನಿಧ್ಯವು ರಾಜ್ಯಾಂಗದಲ್ಲಿ ಉಂಟಾಗುವುದಕ್ಕೆ ಬೇರೆ ಮಾರ್ಗಗಳೇ ಇದರಲ್ಲಿ ಸೂಚಿಸಲ್ಪಟ್ಟಿರುವುದಿಲ್ಲ. ಅತ್ಯಧಿಕಸಾಮರ್ಥ್ಯವುಳ್ಳ ಮಹಮ್ಮದೀಯರಿಗೇ ಪ್ರತ್ಯೇಕಪ್ರಾತಿನಿಧ್ಯವು ಕೊಡಲ್ಪಟ್ಟಿರುವಾಗ ಅವರಿಗಿಂತ ಬಹಳ ದುರ್ಬಲರಾಗಿರುವವರಿಗೆ ಪ್ರತ್ಯೇಕಪ್ರಾತಿನಿಧ್ಯವನ್ನು ಕೊಡದಿರುವುದು ಅನುಚಿತವು. ಭರತಖಂಡದಲ್ಲಿರುವ ರಾಜಕೀಯ ವಿಷಯಜ್ಞರಿಗೆ ಸಮನಾಗಿಯೇ ಅಲ್ಲಿರುವ ಹಿಂದುಳಿದ ಜನಗಳ ವಿಷಯದಲ್ಲಿಯೂ ಆಂಗ್ಲದೇಶದ ಪ್ರಜಾಸತ್ತಾತ್ಮಕವಾದಿಗಳು ಸಾನುಭೂತಿಯನ್ನು ತೋರಿಸಬೇಕು. ಈಗ ನಿವೇದಿಕೆಯಲ್ಲಿ ಸೂಚಿಸಲ್ಪಟ್ಟಿರುವ ಏರ್ಪಾಟು ಪಕ್ಷಪಾತಯುಕ್ತವಾಗಿದೆಯೆಂಬ ಭಾವವು ಹಿಂದುಳಿದ ಜನವರ್ಗಗಳಿಗೆಲ್ಲಾ ಉಂಟಾಗುವುದು ನಿಜ. ಹಾಗಾದರೆ ಮುಂದೆ ಭರತಖಂಡದಲ್ಲಿ ಸ್ವಪರಿಪಾಲನಾಭಿವೃದ್ಧಿಗೆ ಬಹಳ ಭಂಗಬರುವುದು" ಎಂದು ಖಂಡಿತವಾಗಿ ಬರೆದಿರುತ್ತಾರೆ.

ಭರತಖಂಡದ ಪ್ರಾಚೀನಚರಿತ್ರವನ್ನೂ ಈಗಣ ಸ್ಥಿತಿಗತಿಗಳನ್ನೂ ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದವರಿಗೆಲ್ಲಾ ಚಿರೋಲ್‌ರವರ ಅಭಿಪ್ರಾಯವು ಸಾಧುವಾದುದೆಂದು ತೋರದೆ ಹೋಗಲಾರದು. ಭರತಖಂಡದಲ್ಲಿ ಜಾತಿ ಮತಗಳನ್ನೆಲ್ಲಾ ಒಂದುಮಾಡುವುದು ಸಾಧ್ಯವೆಂದು ಕೆಲವರು ಸ್ವದೇಶೀಯರೂ ವಿದೇಶೀಯರೂ ಸಹ ಭ್ರಮಿಸಿರುವರು. ಸಮುದ್ರವೆಲ್ಲಾ ಒಂದಾನೊಂದು ಕಾಲಕ್ಕೆ ಮಧುವಾಗುವುದೆಂದೂ, ಆಗ ಅದನ್ನು ಕುಡಿದು ತೃಪ್ತನಾಗುವೆನೆಂದೂ ದಡದಲ್ಲಿ ಕಾದು ಕುಳಿತವನ ಅವಸ್ಥೆಗೆ ಇವರ ನಿರೀಕ್ಷಣೆಯು ಸಮನಾಗಿರುವುದು. ನಮ್ಮ ದೇಶದ ಸಂಘಸಂಸ್ಕಾರಕರಿಗೆ ಈ ಭ್ರಮೆಯು ಬಲವಾಗಿದೆ. ಕ್ರೈಸ್ತಪಾದರಿಗಳಿಗೂ ಕೂಡ ಈ ಆಸೆಯು ಬಲವಾಗಿದೆ. ಹಿಂದೂಸಮಾಜದ ಮತ ಜಾತಿಗಳು ಜೀರ್ಣೋದ್ಧಾರಗೊಂಡು ಪ್ರಬಲಿಸುತ್ತ ಬರುವ ವಿಷಯದ ಶ್ರವಣವು ಇವರುಗಳಿಗೆಲ್ಲಾ ತಲೆನೋವನ್ನುಂಟುಮಾಡುತ್ತದೆ. ಸದ್ಯದ ಪ್ರತ್ಯೇಕಪ್ರಾತಿನಿಧ್ಯಸಮಸ್ಯೆಯೂ ಕೂಡ ಕುಲಜಾತ್ಯಾದಿವರ್ಗಗಳ ದೃಢಪ್ರತಿಷ್ಠೆಗೆ ಎಲ್ಲಿ ಸಾಧನವಾಗುವುದೋ ಎಂದು ಈ ಜನರುಗಳು ದಿಗಿಲುಬಿದ್ದು, ಆ ತತ್ತ್ವದ ಅಂಕುರಕ್ಕೇ ದಾರಿ ಕೊಡಬಾರದೆಂದು ಅದರ ಮೇಲೆ ಅಲ್ಲದ ಸಲ್ಲದ ಬಲ್ಲಿಜವಾದ ದೋಷಗಳನ್ನಾರೋಪಿಸಿ ಹೇತ್ವಾಭಾಸಗಳಿಂದ ಖಂಡಿಸುವುದಕ್ಕೆ ಪ್ರವರ್ತಿಸಿದ್ದಾರೆ. ಇದರಮೇಲೆ ಹಿಂದಾಗಿರುವ ಜನವರ್ಗದವರ ಪ್ರತ್ಯೇಕಪ್ರಾತಿನಿಧ್ಯತತ್ತ್ವಕ್ಕೆ ಅವಕಾಶವಾದರೆ ತಮ್ಮ ಬಾಹುಳ್ಯವೂ ಆಧಿಕ್ಯವೂ ಎಲ್ಲಿ ತಪ್ಪಿಹೋಗುವುದೋ ಎಂಬ ಭೀತಿಯು ಈ ದೇಶದ ಮುಂದಾಳುಗಳಿಗೆ ಬಲವಾಗಿದೆ. ಇಂಥವರುಗಳೆಲ್ಲಾ ಬಾಯಿ ಮುಂದಾದವರಾಗಿರುವುದರಿಂದ ಇವರ ಕೂಗೇ ದಿಗಂತಗಳಲ್ಲೆಲ್ಲಾ ಭೋರ್ಗರೆಯುತ್ತಿದೆ. ಹಿಂದುಳಿದ ಜನವರ್ಗಗಳಲ್ಲಿ ತಿಳಿದವರೇ ಕಡಿಮೆ. ಆ ದುರ್ಬಲರ ಸಣ್ಣ ದನಿಯು ಪ್ರಬಲರ ಅಬ್ಬರದ ಮುಂದೆ ಕೇಳಿಸುವಹಾಗೆಯೇ ಇಲ್ಲ. ಈಗಣ ಕಾಲವೋ ಬಾಯಿಬಲ್ಲವನು ಬರದಲ್ಲಿ ಗೆದ್ದನೆಂಬ ಗಾಥೆಯನ್ನು ಸಾರ್ಥಕಪಡಿಸುತ್ತಿದೆ. ಇದರಮೇಲೆ ನೂತನ ಸಂಸ್ಕರಣ ನಿವೇದಿಕೆಯನ್ನು ನಿರ್ಮಿಸಿದವರಿಗೆ ತಮ್ಮ ಪ್ರಯತ್ನಕ್ಕೆ ಯಶಸ್ಸನ್ನು ತಂದುಕೊಳ್ಳುವ ದೃಷ್ಟಿಯೇ ವಿಶೇಷವಾಗಿರುವುದರಿಂದ, ಪ್ರತ್ಯೇಕಪ್ರಾತಿನಿಧ್ಯಕ್ಕೆ ಒಲಿಯದಿರುವ ಈ ದೇಶದ ರಾಜಕೀಯಜ್ಞರ ಮನಸ್ಸನ್ನು ತಮ್ಮ ನಿವೇದಿಕೆಯ ಕಡೆಗೆ ಆಕರ್ಷಿಸಿಕೊಳ್ಳುವುದಕ್ಕಾಗಿ ಅವರುಗಳ ದಾಕ್ಷಿಣ್ಯದಮೇಲೆ ಈ ಸಂಘಪ್ರಾತಿನಿಧ್ಯತತ್ತ್ವಕ್ಕೆ ಅನಭಿಮತವನ್ನು ವ್ಯಕ್ತಪಡಿಸುತ್ತಿರಬೇಕೆಂದು ಊಹಿಸಬೇಕಾಗುತ್ತದೆ. ಮೊದಲೇ ನಿವೇದಿಕೆಯ ವರಗಳಲ್ಲಿ ತೃಪ್ತಿಯಿಲ್ಲದವರು ಪ್ರತ್ಯೇಕಪ್ರಾತಿನಿಧ್ಯದ ನಿಯೋಜನೆವನ್ನು ಆ ನಿವೇದಿಕೆಯಲ್ಲಿ ಕಂಡುಬಿಟ್ಟಿದ್ದರೆ ಇನ್ನಷ್ಟು ಉದ್ವಿಗ್ನರಾಗಿ ಗಲಾಟೆಯನ್ನು ಹೆಚ್ಚಿಸಬಹುದೆಂಬ ದಿಗಿಲು, ಈ ಸಂಸ್ಕರಣನಿರ್ಮಾತೃಗಳಿಗೂ ಇದ್ದಿರಬೇಕೆಂದು ಕಾಣುತ್ತದೆ. ಹೇಗಾದರೂ ಇರಲಿ; ಸ್ಟೇಟ್ ಸೆಕ್ರೆಟರಿಯವರ ಕೆಲಸವೇನೋ ಆಯಿತು. ಆದರೆ ಅವರ ನಿವೇದಿಕೆಯ ಸೂಚನೆಗಳೆಲ್ಲಾ ಸಮಗ್ರವಾಗಿ ಶಾಸನವಾಗುವಂತೇನೂ ಇಲ್ಲ. ಅದರಲ್ಲಿ ಬಹು ಭಾಗವು ವ್ಯತ್ಯಸ್ತಮಾಡಲ್ಪಡಬೇಕಾಗಿರುವಂತೆಯೇ ತೋರುತ್ತದೆ. ಪಾರ್ಲಿಮೆಂಟಿನ ಮುಂದೆ ಈ ನಿವೇದಿಕೆಯು ಬಂದು ಶಾಸನವಾಗುವುದರೊಳಗಾಗಿ ಪ್ರತ್ಯೇಕಪ್ರಾತಿನಿಧ್ಯಪ್ರದಾನದ ಅವಶ್ಯಕತೆಯನ್ನು ಆಂಗ್ಲದೇಶದ ಮಹಾಜನರ ಮತ್ತೂ ಮಂತ್ರಿಮಂಡಲದವರ ಗಮನಕ್ಕೆ ಬರುವಂತೆ ಡಾ|| ನಾಯರ್‌ರವರಂಥ ಇನ್ನು ಕೆಲರು ಸೀಮೆಯಲ್ಲಿ ದೃಢತರವಾಗಿ ಪ್ರಯತ್ನಿಸುವವರಾದರೆ, ಇಲ್ಲಿ ಏರ್ಪಡುವ ಕಮಿಟಿಗಳ ಮುಂದೆ ಈ ದೇಶದ ಹಿಂದುಳಿದ ಜನವರ್ಗಗಳು ಬಲವತ್ತರವಾಗಿ ತಮ್ಮ ಇಷ್ಟಗಳನ್ನು ಅರುಹಿಕೊಂಡರೆ, ಈ ದುರ್ಬಲರ ದೂರು ದೈವಸಹಾಯದಿಂದ ಸಫಲವಾಗದೆ ಎಂದಿಗೂ ಹೋಗಲಾರದು.

ರಾಜಕೀಯ ದ್ವಿಪಕ್ಷ.

ತುರುಷ್ಕ ಸಾಮ್ರಾಜ್ಯವನ್ನುದ್ಧಾರಮಾಡುತ್ತೇವೆಂದು ತುರ್ಕಿಯಲ್ಲಿ ಯುವತುರುಷ್ಕ ಸಂಘವು ತಲೆಯೆತ್ತಿದಂತೆಯೂ ರಷ್ಯಾದಲ್ಲಿ, ಪ್ರಜಾಸತ್ತಾತ್ಮಕ ಪಾಲನೆಯನ್ನು ಸ್ಥಾಪಿಸಿ ರಷ್ಯಾವನ್ನು ಭೂಸ್ವರ್ಗವನ್ನಾಗಿ ಮಾಡುತ್ತೇವೆಂದು ಬೋಲ್ಷೆವಿಕ್ಕರು ಪ್ರಯತ್ನಿಸಿದಂತೆಯೂ, ಭರತಖಂಡದಲ್ಲಿ ಒಂದು ಪಕ್ಷದವರು ಈಗ ಅತಿಶಯವಾಗಿ ವಿಜೃಂಭಿಸುತ್ತಿದ್ದಾರೆ. ತತ್‌ಕ್ಷಣ ಸ್ವರಾಜ್ಯಪ್ರಾಪ್ತಿಯಿಂದ ಭರತಖಂಡವನ್ನು ಸುವರ್ಣಖಂಡವನ್ನಾಗಿ ಮಾಡುತ್ತೇವೆಂಬುದೇ ಇವರ ವಾದ. ಇವರ ವಾದಕ್ಕೆ ತಾಳವನ್ನು ಹಾಕದಿದ್ದವರು ಎಂಥ ಮಹನೀಯರಾಗಿದ್ದರೂ ಅವರು ಪತಿತರೇ ಮತ್ತೂ ಪಾಮರರೇ. ಮಾಂಟೊಗ್ ಚೆಲ್ಮ್ಸ್‌ಫರ್ಡ್ ಸಂಸ್ಕರಣಗಳನ್ನೆಲ್ಲಾ ಅನುಮೋದಿಸದೆ ತಿರಸ್ಕರಿಸಿಬಿಡಬೇಕೆಂಬುದೇ ಇವರ ಹಠ. ಸಂಸ್ಕರಣದಲ್ಲಿ ನಮಗೆ ಅನುಕೂಲವಾಗಿರುವಷ್ಟನ್ನು ಅಂಗೀಕರಿಸಿ ಉಳಿದುದನ್ನು ಮುಂದೆ ಪಡೆಯುವುದಕ್ಕೆ ಪ್ರಯತ್ನಿಸುವಣವೆಂದು ಹೇಳುವವರೆಲ್ಲಾ ಇವರ ಪಾಲಿಗೆ ಅಧಮರೂ ನಪುಂಸಕರೂ ಆಗುತ್ತಾರೆ. ಅಂಥವರನ್ನೆಲ್ಲಾ ಸರ್ಕಾರದ ಬಾಲ ಬಡಿಯುವವರು, ಅಧಿಕಾರ ಮರ್ಯಾದೆಗಳ ಆಶೆಗೆ ಸಾಯುವವರು, ದೇಶದ್ರೋಹಿಗಳು ಎಂದು ಗಳಹುವುದೇ ಇವರ ಕಾಯಕ. ತಮ್ಮ ಇಷ್ಟಾರ್ಥಸಿದ್ಧಿಗಾಗಿ ಅವ್ಯಾಹತವಾದ ಆಂದೋಳನವನ್ನು ನಡೆಯಿಸುವುದು ಇವರ ಮುಖ್ಯ ಸಂಕಲ್ಪ. ಮಿ|| ಮಾಂಟೊಗ್‌ರವರು ನಿನ್ನೆತಾನೇ ಪಾರ್ಲಿಮೆಂಟಿನಲ್ಲಿ ಸಂಸ್ಕರಣವಿಷಯವಾಗಿ ಭಾಷಣಮಾಡುವಾಗ್ಗೆ—ಭಯೋತ್ಪಾತವನ್ನುಂಟುಮಾಡುವುದಕ್ಕಾಗಿ ಆಂದೋಳನವನ್ನು ಮಾಡಿದರೆ ಅದರಿಂದ ಸ್ವಾತಂತ್ರ್ಯಕ್ಕೆ ಮತ್ತಷ್ಟು ಭಂಗಬರುವುದೆಂತಲೂ, ಉಂಟಾಗುತ್ತಿದ್ದ ಅಭಿವೃದ್ಧಿಗೂ ಭಂಗಬರುವುದೆಂತಲೂ, ಸುಮುಖತ್ವವೆಲ್ಲಾ ವಿಮುಖತ್ವವಾಗಿ ಮಾರ್ಪಡುವುದೆಂತಲೂ ಕಡೆಗೆ ದುಸ್ಥಿತಿಯು ಪ್ರಾಪ್ತವಾಗುವುದೆಂತಲೂ ಎಚ್ಚರಿಕೆಯನ್ನು ಹೇಳಿರುವ ಪ್ರಕಾರ, ಈ ಉಗ್ರವಾದಿಗಳ ಕಠಿನಮಾರ್ಗಪ್ರವರ್ತನವೂ ಹಠಮಾರಿತನವೂ ಉಗ್ರವಾದವೂ ಪರಿಣಾಮದಲ್ಲಿ ದೇಶಾನರ್ಥದಾಯಕವಾದೀತೇ ಹೊರತು ಹಿತಪ್ರದವಾಗುವುದಿಲ್ಲವೆಂಬುದನ್ನು ಭರತಖಂಡದ ಹಿತಚಿಂತಕರೂ ಜ್ಞಾನವಯೋವೃದ್ಧರೂ ಆದ ಅನೇಕ ಮಹನೀಯರು ತಿಳಿದು, ಸಾಮೋಪಾಯದಿಂದ ಎಷ್ಟೋ ಪರಿಯಾಗಿ ಹೇಳಿ ಇವರೆಲ್ಲಾ ಶಾಂತಿಗೊಂಡಾರೆಂದು ಯೋಚಿಸಿದರು. ಅದೆಲ್ಲಾ ನಿಷ್ಫಲವಾಯಿತು. ಇವರ ಉದ್ದಂಡತನಕ್ಕೆ ಮೇರೆಯಿಲ್ಲವಾಯಿತು. ಕಡೆಗೆ ಇವರನ್ನೆಲ್ಲಾ ಹುರಿದುಂಬಿಸಿದ ಇವರ ಉಸ್ತಾದಿಯಾದ ಆನಿಬೆಸೆಂಟಮ್ಮನವರಿಗೇ ಇವರು ಅಡ್ಡಗಾಲು ಕೊಡುವುದಕ್ಕೂ ಹಿಂಜರಿಯಲಿಲ್ಲ. ಅದರ ಮೇಲೆ ಉಪಾಯಾಂತರವನ್ನು ಕಾಣದೆ, ಈ ದುಡುಕಿನ ಜನರ ಸಂಸರ್ಗದಿಂದ ದೂರವಾಗಿ ನಿಲ್ಲುವುದೇ ಕರ್ತವ್ಯವೆಂದು ಮಿತವಾದಿಪಕ್ಷದವರು ನಿರ್ಧರಿಸಿರುವರು. ಮಿತವಾದಿ ಪಕ್ಷದ ಕಲ್ಕತ್ತಾ ಇಂಡಿಯನ್ ಅಸೋಸಿಯೇಷನ್ನಿನ ಸ್ಥಾಯಿಸಂಘದವರು ಕಳೆದವಾರ ಸಭೆಗೂಡಿದ್ದು "ಭರತಖಂಡಕ್ಕೆ ಕ್ರಮಕ್ರಮವಾಗಿ ಬಾಧ್ಯತಾಯುಕ್ತ ಪರಿಪಾಲನವು ಲಭಿಸಬೇಕೇ ಹೊರತು ತತ್‌ಕ್ಷಣ ಸ್ವರಾಜ್ಯದಿಂದ ಲಾಭವಿಲ್ಲ. ಈಗಣ ಮಾಂಟೊಗ್ ಸಂಸ್ಕರಣವು ಅಂಗೀಕಾರಾರ್ಹವಾಗಿದೆ. ಆದರೆ ಆನಿಬೆಸೆಂಟಮ್ಮನವರ ಪ್ರಕಟನೆಯೂ, ಮದ್ರಾಸು ಬಂಗಾಳಾ ಮೊದಲಾದ ಕಡೆಯ ಪ್ರತ್ಯೇಕ ದೇಶೀಯ ಮಹಾಸಭೆಗಳ ತೀರ್ಮಾನಗಳೆಲ್ಲಾ ಸಂಸ್ಕರಣಗಳಿಗೆ ವಿರೋಧಭಾವವನ್ನೇ ಸೂಚಿಸುತ್ತಿವೆ. ಇವರುಗಳೆಲ್ಲಾ ಮುಂದೆ ಬೊಂಬಾಯಿಯಲ್ಲಿ ಕೂಡಿಸುವುದಕ್ಕಿರುವ ಪ್ರತ್ಯೇಕ ದೇಶೀಯಮಹಾಸಭೆಯಲ್ಲಿ ಅವರುಗಳ ಪಾರುಪತ್ಯವೇ ಹೆಚ್ಚಾಗಿದ್ದೀತು. ಇಂಥವರ ಉದ್ದೇಶದ ಸಭೆಗೆ ನಾವುಗಳು ಹೋಗಲಾರದವರಾಗಿರುವುದಕ್ಕೆ ಚಿಂತಿಸುತ್ತೇವೆ. ಮತ್ತೂ ದಿನಕ್ರಮೇಣ ಭರತಖಂಡಕ್ಕೆ ಬಾಧ್ಯತಾಯುಕ್ತ ಪರಿಪಾಲನವು ಲಭಿಸಬೇಕೆಂದು ಕೋರುವವರಾರೂ ಆ ಸಭೆಗೆ ಹೋಗತಕ್ಕುದಲ್ಲವೆಂದು ಸೂಚಿಸುತ್ತೇವೆ" ಎಂದು ತೀರ್ಮಾನಿಸಿದರು. ಮತ್ತೂ ಅಲ್ಲಿಯ ನೇಷನಲ್ ಲಿಬರಲ್ ಲೀಗಿನ ಸ್ಥಾಯಿಸಂಘದವರೂ ಕೂಡ ಹೀಗೆಯೇ ಸಭೆಗೂಡಿದ್ದು, ಲೀಗಿನ ಸಭಿಕರಾರೂ ಪ್ರತ್ಯೇಕ ರಾಷ್ಟ್ರೀಯ ಸಭೆಗೆ ಹೋಗಕೂಡದೆಂದು ತೀರ್ಮಾನಿಸಿದರು. ರಾಜಕೀಯವಿಜ್ಞಾನಧುರಂಧರರೂ, ಲಕ್ನೋವಿನಲ್ಲಿ ಕೂಡಿದ್ದ ರಾಷ್ಟ್ರೀಯ ಮಹಾಸಭೆಗೆ ಅಧ್ಯಕ್ಷರಾಗಿದ್ದವರೂ ಆದ ಬಾಬು ಅಂಬಿಕಾಚರಣಮಜುಂದಾರರವರು ಬೊಂಬಾಯಿಯಲ್ಲಿ ಕೂಡುವ ಪ್ರತ್ಯೇಕ ರಾಷ್ಟ್ರೀಯ ಸಭೆಯವರು ನೂತನ ರಾಜಕೀಯಸಂಸ್ಕರಣಗಳನ್ನು ತಿರಸ್ಕರಿಸುತ್ತಾರಾದಕಾರಣ ನಾನು ಆ ಸಭೆಗೆ ಹೋಗುವುದಿಲ್ಲವೆಂದು ಪ್ರಕಟಿಸಿದ್ದಾರೆ. ಬೊಂಬಾಯಿಯ ಸರ್ ದಿನ್ಶಾ ವಾಚಾರವರು ಒಂದು ಲೇಖನವನ್ನು ಪ್ರಕಟಮಾಡಿ, ಈ ದೇಶದ ಅತಿವಾದಿಗಳು ಮಾಂಟೊಗ್ ಸಂಸ್ಕರಣವನ್ನು ತಿರಸ್ಕರಿಸಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ. ಅವರೇ ಪ್ರತ್ಯೇಕ ರಾಷ್ಟ್ರೀಯ ಸಭೆಯ ಪ್ರಾಚಾಪತ್ಯವನ್ನು ವಹಿಸಿಕೊಂಡಿದ್ದಾರೆ. ಇಂಗ್ಲೆಂಡಿನಲ್ಲಿರುವ ಇಂಡೋ ಬ್ರಿಟಿಷ್ ಸಂಘದವರೂ ಕೂಡ ಮಾಂಟೊಗ್ ಸಂಸ್ಕರಣಕ್ಕೆ ವಿರೋಧಿಗಳಾಗಿದ್ದಾರೆ. ಅದುಕಾರಣ ಭರತಖಂಡದ ಕ್ಷೇಮವನ್ನು ಕೋರುವ ಮಿತವಾದಿಗಳೆಲ್ಲಾ ಪ್ರತ್ಯೇಕವಾಗಿ ಕಾಂಗ್ರೆಸನ್ನು ಜರುಗಿಸುವುದು ಅವಶ್ಯಕವಾಗಿದೆ. ಆ ಸಭೆಯು ಯಾವಾಗ ಎಲ್ಲಿ ಜರುಗಿಸಲ್ಪಡುವುದೆಂಬ ವಿಷಯವು ಮುಂದೆ ತಿಳಿಯಿಸಲ್ಪಡುವುದು ಎಂದು ಬರೆದಿರುತ್ತಾರೆ. ಮಿತವಾದಿಗಳ ಈ ವರ್ತನವನ್ನೆಲ್ಲಾ ನೋಡಿ ಉಗ್ರವಾದಿಗಳು ಮತ್ತಷ್ಟು ರೇಗುತ್ತಿದ್ದಾರೆ. ವಾಚಾಮಗೋಚರವಾಗಿ ಅವರನ್ನು ನಿಂದಿಸುತ್ತಿದ್ದಾರೆ. ಲಕ್ನೋಸಭೆಯಿಂದೀಚೆಗೆ ಒಮ್ಮುಖವಾಗಿದ್ದ ರಾಷ್ಟ್ರಭಕ್ತರ ಗುಂಪು ಮತ್ತೆ ಇತ್ತಂಡವಾಗಿರುತ್ತದೆ. ಒಂದುಕಡೆ ಪ್ರಭುತ್ವದವರಲ್ಲಿ ವಿರೋಧವನ್ನು ಹೆಚ್ಚಿಸಿಕೊಳ್ಳುತ್ತ, ಮತ್ತೊಂದುಕಡೆ ದೇಶದ ಸಾಮಾನ್ಯ ಪ್ರಜಾವರ್ಗದ ಸಾನುಭೂತಿಯನ್ನು ಪಡೆದುಕೊಳ್ಳದೆ, ಬೇರೊಂದುಕಡೆ ಹಳಬರೂ ಅನುಭವಿಗಳೂ ದೂರಾಲೋಚನಪರರೂ ಆದ ಮಿತವಾದಿ ದೇಶಾಭಿಮಾನಿಗಳ ಹಿತೋಪದೇಶವನ್ನು ಗಮನಿಸದೆ, ಪಳಗದ ಕುದುರೆಯಂತೆ ಹಳ್ಳಕೊಟ್ಟಗಳೊಂದನ್ನೂ ನೋಡದೆ ನುಗ್ಗುತ್ತಿರುವ ಉಗ್ರಪಕ್ಷೀಯರು ಎಲ್ಲಿ ಸ್ವಘಾತವನ್ನು ಮಾಡಿಕೊಂಡು ದೇಶಹಿತಕ್ಕೂ ವಿಘಾತವನ್ನುಂಟುಮಾಡುವರೋ ಎಂದು ದೇಶಾಭಿಮಾನಿಗಳು ಚಿಂತಿಸುತ್ತಾರೆ. ಆದರೆ ಅಲ್ಪಸಂಖ್ಯಾಕರಾದ ಈ ದುಡುಕುಗಾರರ ಬಿರುನುಡಿಗಳೂ ಕ್ಷುದ್ರಪ್ರಯತ್ನಗಳೂ ಸಹ ಭರತಖಂಡದ ಸ್ಥಿತಿಗತಿಗಳನ್ನು ಸಮಗ್ರವಾಗಿ ಪರಿಶೀಲಿಸಬಲ್ಲ ಸಾಮ್ರಾಜ್ಯಪ್ರಭುತ್ವದವರ ಉತ್ತಮ ಸಂಕಲ್ಪಕ್ಕೆ ಯಾವ ಭಂಗವನ್ನೂ ಉಂಟುಮಾಡುವಷ್ಟು ಶಕ್ತವಾಗಲಾರವೆಂದೂ, ಅದುಕಾರಣ ಸಕ್ರಮವಾಗಿ ನಡೆಯುವ ರಾಜಕೀಯೋನ್ನತಿಗೆ ಯಾವಚ್ಯುತಿಯೂ ಉಂಟಾಗಲಾರದೆಂದೂ ಹೇಳಬಹುದಾಗಿದೆ.

ಸರ್ಕಾರದವರಿಂದ ಒಂದಾನೊಂದು ತಪ್ಪಿತಕ್ಕಾಗಿ ಯಾವುದಾದರೊಂದು ತೆರದ ಶಿಕ್ಷೆಗೆಗುರಿಮಾಡಲ್ಪಟ್ಟವರ ವಿಷಯವಾಗಿ ಪ್ರಜೆಗಳು ಕೂಡ ಅನಾದರಣೆಯನ್ನು ತೋರಿಸುತ್ತ ಬಂದರೆ ದುಷ್ಟನಿಗ್ರಹಕ್ಕೆ ದೇಶವು ಸಹಾಯಮಾಡಿದಂತಾಗುತ್ತದೆ. ಅದನ್ನು ಬಿಟ್ಟು ಸರ್ಕಾರದವರು ದಂಡಿಸಿದವರನ್ನೆಲ್ಲಾ ಪ್ರಜೆಗಳು ಮನ್ನಿಸುತ್ತ ಬಂದರೆ ಅದು ದುಷ್ಟರಕ್ಷಣೆಗೆ ಸಹಾಯಮಾಡಿದಂತಾಗುವುದಲ್ಲದೆ ರಾಜಭಕ್ತಿಗೂ ದೂರವೆನಿಸಿಕೊಳ್ಳುವುದು. ಮತ್ತೂ ಆ ಪದ್ಧತಿಯಿಂದ ರಾಜದ್ರೋಹಾದಿ ದೋಷಗಳಿಗೆ ಪ್ರೋತ್ಸಾಹವಾಗಿ ದೇಶಾಂಪಶ್ಯಕ್ಕೆ ಸಾಧನವೂ ಆಗುವುದು. ಭರತಖಂಡದಲ್ಲಿ ಇತ್ತೀಚೆಗೆ ಇಂಥ ಅವಿನೀತಕೃತ್ಯಗಳಿಗೆ ಪರೋಕ್ಷಾಪರೋಕ್ಷವಾಗಿ ಸಾನುಭೂತಿಯು ತೋರಿಸಲ್ಪಡುತ್ತಿರುವುದು ಪರಮಾಶ್ಚರ್ಯವಾಗಿರುತ್ತದೆ. ಬಂಗಾಳಾ ಗವರ್ನರಾದ ರೊನಾಲ್ಡ್‌ಷೇ ಪ್ರಭುಗಳಿಗೆ ಮೊನ್ನೆತಾನೇ ಮೈಮನ್‌ಸಿಂಗ್ ಪ್ರಜಾಸಂಘದವರು ಒಂದು ಸನ್ಮಾನ ಪತ್ರವನ್ನು ಸಮರ್ಪಿಸಿದಾಗ ಗೌರ್ನರವರು ಪ್ರತ್ಯುತ್ತರವನ್ನು ಕೊಡುವಾಗ್ಗೆ ಈ ಸಂಬಂಧವಾಗಿ ಸ್ವಲ್ಪ ಮಾತನಾಡಿದರು. ಹೇಗೆಂದರೆ—"ದೇಶದಲ್ಲಿ ವಿಪ್ಲವವನ್ನು ಮಾಡತಕ್ಕ ಜನರ ವಿಷಯದಲ್ಲಿ ಇತರ ಪ್ರಜೆಗಳು ಸಾನುಭೂತಿಯನ್ನು ಹೊಂದಿರುವರೆಂಬ ಭಾವವು ಅವರಿಗೆ ಉಂಟಾಗದಿರುವಂತೆ ನೀವುಗಳು ನಡೆದುಕೊಂಡರೆ ಎಷ್ಟೋ ಫಲವಾಗುವುದು. ಒಂದು ಉದಾಹರಣೆಯನ್ನು ಹೇಳುತ್ತೇನೆ ಕೇಳಿರಿ—ನಿರ್ಬಂಧವಾಸಕ್ಕೆ ಗುರಿಮಾಡಲ್ಪಟ್ಟಿದ್ದವನೊಬ್ಬನನ್ನು ಬಿಡುಗಡೆ ಮಾಡುವುದಕ್ಕಾಗಿ ಈಗತಾನೇ ಪರ್ಯಾಲೋಚನ ನಡೆದು, ಅವನು ಇದುವರೆಗೆ ಅನುಭವಿಸಿದ ಶಿಕ್ಷೆಯಿಂದ ಪಶ್ಚಾತ್ತಾಪಗೊಂಡಿರುವನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ನಿಶ್ಚಯಿಸಲ್ಪಟ್ಟಿತು. ಅವನ ಬಂಧುವೊಬ್ಬನು ಅವನ ಬಳಿಗೆ ಹೋಗಿ ಮಾತಾಡುವಲ್ಲಿ—'ನೀನು ಗುಟ್ಟನ್ನು ಹೊರಪಡಿಸ

[illegible] ತಿಳಿಯಿಸಿಬಿಟ್ಟುದಕ್ಕಾಗಿ ಚಿಂತೆಪಡುತ್ತೇನೆ. ನನ್ನ ದೇಶೀಯರು ನಮ್ಮಂಥವರ ವಿಷಯದಲ್ಲಿ ಸಾನುಭೂತಿಯನ್ನು ಹೊಂದಿರುವರೆಂಬ ವಿಷಯವನ್ನು ನಾನು ತಿಳಿಯದೆ ಹಾಗೆ ಮಾಡಿದೆನು. ಪತ್ರಿಕೆಗಳಲ್ಲಿ ಈಗ ಪ್ರಕಟಿತವಾಗಿರುವ ವಿಷಯಗಳನ್ನು ನೋಡಲಾಗಿ ನನ್ನ ಸಂಶಯವು ತೀರಿತು. ನಾವು ಮಾಡಿದ ಕೆಲಸಕ್ಕೆ ದೇಶದ ಪ್ರಜೆಗಳೆಲ್ಲಾ ಸಂತೋಷಿಸಿದರು. ಅದರಿಂದಲೇ ಪತ್ರಿಕಾಧಿಪತಿಗಳೂ ಪ್ರಜಾನಾಯಕರೂ ಸಹ ನಮ್ಮ ಪಕ್ಷವನ್ನು ವಹಿಸಿ ದೇಶರಕ್ಷಕ ಶಾಸನವನ್ನು ತೆಗೆದುಹಾಕಿಸಿಬಿಡುವುದಕ್ಕಾಗಿ ವಿಶ್ವಪ್ರಯತ್ನವನ್ನು ಮಾಡುತ್ತಿರುವರು' ಎಂದು ಹೇಳಿರುವನು. ಅವನು ಮೊದಮೊದಲು ಪಶ್ಚಾತ್ತಾಪಗೊಂಡಿದ್ದನು. ಬಳಿಕ ವೃತ್ತಪತ್ರಿಕೆಗಳ ಲೇಖನವನ್ನು ನೋಡಿ ಬಿಗಿತುಗೊಂಡನು. ಕೆಲ ಪತ್ರಿಕೆಗಳು ದೂರದೃಷ್ಟಿಯಿಲ್ಲದೆ ಹೀಗೆ ಬರೆದು ಮಹಾನರ್ಥವನ್ನು ಮಾಡುತ್ತಿವೆ" ಎಂದು ಹೇಳಿರುವರು. ಆಂಗ್ಲಸರ್ಕಾರದಮೇಲಣ ದ್ವೇಷದಿಂದ ಶಿಕ್ಷಿತರನ್ನೂ ಮತ್ತೂ ರಾಜದ್ರೋಹಿಗಳನ್ನೂ ಬೆನ್ನಿಗೆ ಹಾಕಿಕೊಂಡು ವಾದೋಪವಾದಗಳನ್ನು ಸಲ್ಲಿಸುತ್ತ ದೇಶಾನರ್ಥವನ್ನು ಹೆಚ್ಚಿಸುತ್ತಿರುವ ಜನರಿಗೂ ವೃತ್ತಪತ್ರಿಕೆಗಳಿಗೂ ಈ ದೃಷ್ಟಾಂತದಿಂದ ಬುದ್ಧಿ ಬಂದೀತೆ?

ಯುದ್ಧವಾರ್ತೆಯು.

ಕಳೆದವಾರದಲ್ಲೂ ಮಿತ್ರಮಂಡಲಿಯವರು ಪುರೋಗಮನವನ್ನು ಮಾಡಿ ಜಯಶೀಲರಾದರೆಂಬ ಸಂತೋಷಕರವಾರ್ತೆಗಳು ವಿಶೇಷವಾಗಿ ಬಂದಿವೆ. ಕೆಲಕಡೆ ಮಿತ್ರಮಂಡಲಿಯವರು ಬಹಳ ವೇಗವಾಗಿಯೂ ಕೆಲಕಡೆ ಮಂದಗತಿಯಿಂದಲೂ ಸಾಗುತ್ತಿದ್ದಾರೆ. ಅಮಿಯನ್ಸಿನ ಪೂರ್ವದಲ್ಲಿ ಜರ್ಮನರು ಸಂಪೂರ್ಣವಾಗಿ ಓಡಿಸಲ್ಪಟ್ಟರು. ಆ ರಂಗದಲ್ಲಿ ೩ ದಿನಗಳೊಳಗೆ ಮಿತ್ರಮಂಡಲಿಯವರು ೨೪ ಸಾವಿರ ಶತ್ರುಸೈನಿಕರನ್ನು ಸೆರೆ ಹಿಡಿದರು. ಅಮಿಯನ್ಸಿಗೆ ಆಗ್ನೇಯದಿಕ್ಕಿನಲ್ಲಿ ೨೨ ಮೈಲಿಗಳ ದೂರದಲ್ಲಿರುವ ಲೋಹಮಾರ್ಗದ ಮುಖ್ಯವಾದ ಕೂಡುದಾಣವಾದ ಚಾಲ್‌ನೆಸ್ಸನ್ನು ಮಿತ್ರಮಂಡಲಿಯವರು ಹಿಡಿದರು. ಮತ್ತೂ ಇದರಂತೆಯೇ ಅತಿಮುಖ್ಯಸ್ಥಾನವಾದ ಮಾಂಟಿಡಿಡಿಯರ್ ಪಟ್ಟಣವೂ ಕೂಡ ಶತ್ರುಗಳ ಕೈತಪ್ಪಿಹೋಯಿತು. ಅದರಿಂದಾಚೆಗೂ ಈಗ ಫ್ರೆಂಚರು ನುಗ್ಗಿಹೋಗಿದ್ದಾರೆ. ಡರ್ಕ್‌ಕೋರ್ಟ್, ಬೆವಿಕ್‌ಕೋರ್ಟ್ ಎಂಬ ಪಟ್ಟಣಗಳಿಗೆ ಮಧ್ಯದಲ್ಲಿರುವ ಪ್ರದೇಶವೆಲ್ಲಾ ನಮ್ಮವರ ವಶವಾಯಿತು. ಈ ರಂಗದಲ್ಲಿ ಫ್ರೆಂಚರು ೩ ದಿನಗಳೊಳಗೆ ೧೩ ಮೈಲಿಗಳದೂರ ಮುಂದಕ್ಕೆ ಸಾಗಿಹೋಗಿರುವರು. ಚಾಲ್‌ನೆಸ್ಸನ್ನು ವಶಪಡಿಸಿಕೊಳ್ಳುವಾಗ ಕೆನಡಾದ ಮತ್ತೂ ಅಮೇರಿಕಾದ ಸೈನ್ಯಗಳು ತೋರಿಸಿದ ಪರಾಕ್ರಮವು ಅತ್ಯದ್ಭುತವಾಗಿದ್ದಿತು. ಈಚೆಗೆ ದೊಡ್ಡ ರಾಯ ಎಂಬ ಪಟ್ಟಣವೂ ಮಿತ್ರಮಂಡಲಿಯವರ ವಶವಾಗುವುದರಲ್ಲಿದೆಯೆಂಬ ವಾರ್ತೆ ಬಂದಿದೆ. ಇದುವರೆಗಣ ನಮ್ಮವರ ಜಯದಿಂದ ಮಿತ್ರಮಂಡಲಿ ಸೇನಾಪಂಕ್ತಿಯು ೧೯೧೬ನೆ ವರ್ಷದಲ್ಲಿ ಯಾವ ರೇಖೆಯಲ್ಲಿದ್ದಿತೋ ಅದರ ಮುಂದಕ್ಕೂ ಸಹ ನುಗ್ಗಿಹೋದಂತಾಯಿತು. ಮಿತ್ರಮಂಡಲಿಯವರು ಶತ್ರುಗಳಮೇಲೆ ನುಗ್ಗುವುದಕ್ಕಾರಂಭಿಸಿ ಇನ್ನೂ ೧ ತಿಂಗಳು ತುಂಬದಿದ್ದರೂ ಇಷ್ಟರೊಳಗಾಗಿ ೮೦ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಶತ್ರುಸೈನಿಕರನ್ನೂ ೧,೨೦೦ ಫಿರಂಗಿಗಳನ್ನೂ ನಮ್ಮವರು ಹಿಡಿದುಕೊಂಡಿರುವರು. ೧ ತಿಂಗಳಿಂದೀಚೆಗೆ ಶತ್ರುಗಳಕಡೆ ರಣದಲ್ಲಿ ಮಡಿದವರು ಸೆರೆಯಾದವರು ಅಂಗಹೀನರಾದವರುಗಳೆಲ್ಲಾ ಸೇರಿ ೩,೬೦,೦೦೦ ಮಂದಿಗಳು ನಷ್ಟವಾಗಿರುವರೆಂದು ಲೆಕ್ಕಹಾಕಲ್ಪಟ್ಟಿದೆ. ಫ್ರೆಂಚರು ಕಳೆದವಾರ ಲಾಸಿಗ್ನಿಬೆಟ್ಟದ ಬಳಿಯಲ್ಲಿ ಮಾಡಿದ ಯುದ್ಧಕಾಲದಲ್ಲಿ ಶತ್ರುಗಳ ೬೦ ಫಿರಂಗಿಗಳನ್ನೂ ೩ ಸಾವಿರ ಸೈನಿಕರನ್ನೂ ಹಿಡಿದಿದ್ದಾರೆ. ಮಾಂಟಿಡಿಡಿಯರ್, ಮಾಲಕ್‌ಕೋರ್ಟುಗಳ ಮಧ್ಯದಲ್ಲಿ ನಡೆಯಿಸಿದ ಯುದ್ಧದಲ್ಲಿ ಮಿತ್ರಮಂಡಲಿಯವರು ಶತ್ರುಗಳ ಕಡೆಯ ೧೧೦ ಫಿರಂಗಿಗಳನ್ನೂ ೭,೦೦೦ ಮಂದಿ ಸೈನಿಕರನ್ನೂ ವಶಪಡಿಸಿಕೊಂಡರು. ಒಂದುಕಡೆ ಅಮಿಯನ್ಸಿಗೆ ಇದಿರಿನಲ್ಲಿ ಬಹು ಸ್ವಲ್ಪಕಾಲದೊಳಗೆ ೭ ಮೈಲಿದೂರ ಮುಂದಕ್ಕೆ ನುಗ್ಗಿಹೋಗಿ ಬಹು ಮುಖ್ಯವಾದ ಪ್ರದೇಶವೊಂದನ್ನು ಸ್ವಾಧೀನಪಡಿಸಿಕೊಂಡರು. ಫ್ರೆಂಚರು ಚಿಪಿಲ್ಲಿ, ಮಾಲಂ ಕೋರ್ಟುಗಳ ಮಧ್ಯದಲ್ಲಿ ತೀಕ್ಷ್ಣಯುದ್ಧವನ್ನು ಮಾಡಿ ೧೪ ಸಾವಿರ ಶತ್ರುಸೈನಿಕರನ್ನು ಸೆರೆಹಿಡಿದಿರುವರು. ಇದುವರೆಗೆ ಮಿತ್ರಮಂಡಲಿಯವರಿಗೆ ದೊರೆವಿರುವ ಶತ್ರುಗಳ ಯುದ್ಧೋಪಕರಣಗಳಿಗೆ ಪರಿಮಿತಿಯೇ ಇಲ್ಲವಾಗಿದೆ. ಜರ್ಮನರ ನಷ್ಟಕಷ್ಟಗಳೂ ಪರಾಭವವೂ ಅತ್ಯಧಿಕವಾಗಿವೆ. ಅವರು ಹೊಸಹೊಸ ಸೇನೆಗಳನ್ನು ತಂದೊಡ್ಡಿದರೂ ಮಿತ್ರಮಂಡಲಿಯವರ ನುಗ್ಗಾಟವನ್ನು ತಡೆಯಲಾರದವರಾಗಿದ್ದಾರೆ. ಮಾರ್ಗಗಳನ್ನು ಧ್ವಂಸಮಾಡಿ ಸೇತುಗಳನ್ನು ಕೆಡವಿ, ಪುರಗ್ರಾಮಗಳಿಗೆ ಬೆಂಕಿಯಿಕ್ಕಿ ಸಾಧ್ಯವಾದಷ್ಟು ಸಾಮಗ್ರಿಗಳನ್ನು ಸಾಗಿಸಿಕೊಂಡು ಅಸಾಧ್ಯವಾದುವುಗಳನ್ನೆಲ್ಲಾ ಅಲ್ಲಲ್ಲೇ ಬಿಟ್ಟುಬಿಟ್ಟು ಓಡುತ್ತಿದ್ದಾರೆ. ಆಂಗ್ಲಸಾರ್ವಭೌಮರು ಕಳೆದವಾರವೆಲ್ಲಾ ಫ್ರಾನ್ಸ್ ರಂಗದಲ್ಲಿ ಹಲವುಕಡೆ ಸಂಚರಿಸಿ, ಯುದ್ಧರೀತಿಗಳನ್ನು ಅವಲೋಕಿಸಿ, ಬೆಲ್ಜಿಯಂ ರಾಜದಂಪತಿಗಳೊಡನೆ ಭೋಜನಮಾಡಿ, ಇಂಗ್ಲೀಷ್ ಫ್ರೆಂಚ್ ಅಮೇರಿಕಾ ಮುಖ್ಯ ದಳಪತಿಗಳೊಡನೆ ಸಂಭಾಷಿಸಿಕೊಂಡು ಮರಳಿ ಲಂಡನ್ ಪಟ್ಟಣಕ್ಕೆ ಹೋಗಿ ಸೇರಿದರು. ರಷ್ಯಾದೇಶಕ್ಕೆ ಹೋಗಿ ಇಳಿದಿರುವ ಇಂಗ್ಲೀಷರು ವ್ಲಾಡಿವಾಸ್ಟಾಕು, ಮರ್ಮನಸ್ಕು, ಆರ್ಕೇಂಜಲುಗಳಲ್ಲಿ ರಷ್ಯಾ ಪ್ರಜೆಗಳನ್ನು ಕುರಿತು ತಮ್ಮ ಸಂಕಲ್ಪವನ್ನು ಹೀಗೆ ಪ್ರಕಟಿಸಿರುತ್ತಾರೆ. "ಜರ್ಮನರನ್ನು ನಾವು ತಡೆಯುವುದು ಮಾತ್ರವೇ ಅಲ್ಲದೆ ನಷ್ಟಪಟ್ಟು ಶ್ರಮವನ್ನನುಭವಿಸುತ್ತಿರುವ ರಷ್ಯಾದವರಿಗೆ ದ್ರವ್ಯಸೌಕರ್ಯವನ್ನು ಕೂಡ ಒದಗಿಸಬೇಕೆಂದಿದ್ದೇವೆ. ನಾವು ಇದುವರೆಗೆ ಕೆಲ ಸಾಮಗ್ರಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ಇನ್ನೂ ಕಳುಹಿಸಿಕೊಡುತ್ತೇವೆ. ನಿಮ್ಮ ದೇಶದಲ್ಲಿ ಬೇಸಾಯವನ್ನೂ ಕೈಗಾರಿಕೆಯನ್ನೂ ಅಭಿವೃದ್ಧಿಗೊಳಿಸಬೇಕೆಂದು ಕೋರುತ್ತೇವೆ. ಆದರೆ ಹಾಗೆ ವೃದ್ಧಿಯಾದುವುಗಳನ್ನು ನಾವು ಉಪಯೋಗಿಸಿಕೊಳ್ಳಲು ಅಪೇಕ್ಷಿಸುವುದಿಲ್ಲ. ನಿಮಗೆ ಬೇಕಾದ ವಸ್ತುಗಳನ್ನು ಇತರ ದೇಶಗಳಿಂದ ತರಿಸಿಕೊಳ್ಳುವುದಕ್ಕೂ ನಿಮ್ಮ ದೇಶದ ಸರಕುಗಳನ್ನು ಇತರ ದೇಶಗಳಿಗೆ ಕಳುಹಿಸಿಕೊಡುವುದಕ್ಕೂ ಸ್ವಾತಂತ್ರ್ಯವನ್ನು ಪಡೆದಿರುವ ದೇಶಗಳಿಗೆ ಸಮನಾಗಿರುವ ಗೌರವಸ್ಥಾನವನ್ನು ನಿಮಗೆ ಕೊಡುವುದಕ್ಕೆ ಪ್ರಯತ್ನಿಸುತ್ತೇವೆ. ರಷ್ಯಾದೇಶವನ್ನು ಬಲಿಷ್ಠವನ್ನಾಗಿಯೂ ಸ್ವಾತಂತ್ರ್ಯಯುಕ್ತವನ್ನಾಗಿಯೂ ಮಾಡಿ, ದೇಶೀಯರು ತಮ್ಮ ದೇಶವನ್ನು ಅಭಿವೃದ್ಧಿಗೊಳಿಸುವುದನ್ನು ನಾವು ದೂರದಲ್ಲಿ ನಿಂತು ನೋಡುವವರಾಗಿದ್ದೇವೆ."

ಹಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರ ಸ್ವಾರಿಯು ಪರಿವಾರದೊಡನೆ ನೆನ್ನೆಯದಿನ ಬೆಂಗಳೂರಿಗೆ ಚಿತ್ತೈಸಿತು.

ಮದ್ರಾಸ್ ಗೌರ್ನರಾದ ಲಾರ್ಡ್ ಪೆಂಟ್ಲೆಂಡ್‌ರವರು ಬರುವ ತಾ|| ೨೪ ಕ್ಕೆ ಬೆಂಗಳೂರಿಗೆ ಬಂದು ಬ್ರಿಟಿಷ್ ರೆಸಿಡೆಂಟರ ಆತಿಥ್ಯದಲ್ಲಿರುವರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಿಂದ ಪ್ರಜಾಪ್ರತಿನಿಧಿಸಭೆಗೆ ಮ|| ಗಳಾದ ಮಹಮ್ಮದ್‌ಸೇಟರು, ಎಂ. ವೆಂಕಟಕೃಷ್ಣಯ್ಯನವರು, ಎ. ಕೃಷ್ಣರಾಯರು, ಎಚ್. ದೇಶಿಕಾಚಾರ್ಯರು ಸಹ ಸಭಿಕರುಗಳಾಗಿ ಆರಿಸಲ್ಪಟ್ಟರು.

ನಮ್ಮ ಸಂಸ್ಥಾನದಿಂದ ಲೋಹಮಾರ್ಗಗಳ ಮೂಲಕ ಹೊರಕ್ಕೆ ಹೋಗತಕ್ಕ ಅಕ್ಕಿ, ರಾಗಿ, ಜೋಳವನ್ನು ಸಾಗಿಸತಕ್ಕವರು ಸಿವಿಲ್ ಸಪ್ಲೈ ಡೈರೆಕ್ಟರಿಂದಲೂ, ಬಂಡಿದಾರಿಗಳ ಮೂಲಕ ಸಾಗಿಸತಕ್ಕವರು ಆಯಾ ಡಿ|| ಕಮಿಷನರಿಂದಲೂ ಅಪ್ಪಣೆಚೀಟಿ ಪಡೆಯಬೇಕೆಂದು ಸರ್ಕಾರದವರು ವಿಧಿಸಿದ್ದಾರೆ.

ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲರುಗಳ ಸಂಖ್ಯೆಯನ್ನು ಹೆಚ್ಚಿಸಿದುದರಮೇಲೆ ಹೊಸದಾಗಿ ಆರಿಸಲ್ಪಟ್ಟ 3 ಮೆಂಬರುಗಳಲ್ಲಿ ದೊಡ್ಡಪೇಟೆಯ ಗಂದಿಗೆಯಂಗಡಿ ಮ|| ವಾಪಣ್ಣನವರ ಕುಮಾರರಾದ ಮುನಿಬಸಪ್ಪನವರೊಬ್ಬರಾಗಿರುತ್ತಾರೆಂದು ತಿಳುಹಲು ಸಂತೋಷವಾಗುತ್ತದೆ. ಮತ್ತೂ ಬರುವ ಸೆಪ್ಟಂಬರ್ ತಿಂಗಳಲ್ಲಿ ನಡಿಯುವ ಹೊಸ ಚುನಾವಣೆಯಲ್ಲೂ ಉತ್ತೀರ್ಣರಾಗುವರೆಂದು ನಿರೀಕ್ಷಿಸುತ್ತೇವೆ.

ಕ್ಲೋಸ್‌ಪೇಟೆ ಸಬ್ ತಾಲ್ಲೂಕಿಗೆ ಸೇರಿದ ವಡವಟ್ಟಿ ಗ್ರಾಮದಲ್ಲಿ ಈ ಆಗಸ್ಟ್ ತಾ|| ೨೯ ರಿಂದ ಪ್ರತಿ ಗುರುವಾರವೂ ಸಂತೆ ನಡೆಯುವಂತೆ ಡಿ|| ಅಮಲ್ದಾರ್ ಮ|| ಶಂಕ್ರಪ್ಪನವರು ಸರ್ಕಾರದಪ್ಪಣೆಯನ್ನು ಪಡೆದು ಏರ್ಪಡಿಸಿರುತ್ತಾರೆ. ಇದರಿಂದ ಮಾಗಡಿ, ಚನ್ನಪಟ್ಟಣ, ಕ್ಲೋಸ್‌ಪೇಟೆ ತಾಲ್ಲೂಕುಗಳ ವರ್ತಕರ ವ್ಯಾಪಾರಕ್ಕೂ, ನೆರೆಹೊರೆ ಗ್ರಾಮಸ್ಥರಿಗೆ ದಿನಸಿ ದೊರಕುವುದಕ್ಕೂ ಬಹಳ ಅನುಕೂಲವಾಯಿತು.

ಶ್ರೀಮನ್ಮಹಾರಾಜಾ ಸಾಹೇಬ ಬಹದ್ದೂರರವರ ಸ್ವಾರಿಯು 19-7-18 ರವರೆಗೆ ಕಾಶ್ಮೀರ ರಾಜಧಾನಿಯಾದ ಶ್ರೀನಗರದಲ್ಲಿದ್ದು 20-7-18 ರಲ್ಲಿ ಗುಲ್ಮರ್ಗಿಗೆ ದಯಮಾಡಿಸಿ 9-8-18 ರವರೆಗೆ ಅಲ್ಲೇ ಮೊಕ್ಕಾಂಮಾಡಿ 10-8-18 ರಲ್ಲಿ ಶ್ರೀನಗರಕ್ಕೆ ಹಿಂದಿರುಗಿ ವಾಪಸು ಚಿತ್ತೈಸುತ್ತದೆ. 11-8-18 ರಿಂದ 27-8-18 ರವರೆಗೆ ಅಚ್ಚಬಲ್, ಪಲಹಂ ಮತ್ತು ಇತರ ಸ್ಥಳಗಳಿಗೆ ದಯಮಾಡಿಸಿ 28-8-18 ರಲ್ಲಿ ಶ್ರೀನಗರಕ್ಕೆ ಹಿಂದಿರುಗಿ ಚಿತ್ತೈಸಿ, ಅಲ್ಲೇ 2-9-18 ರವರೆಗೆ ಮೊಕ್ಕಾಂಮಾಡಿ 3-9-18 ರಲ್ಲಿ ಶ್ರೀನಗರದಿಂದ ಸ್ವಾರಿ ಬೆಳೆದು ಪೆಷಾವರ್, ಪೇವರ್, ಲಾಹೋರ್, ಅಮೃತಸರ್, ಡಿಲ್ಲಿ, ಆಗ್ರಾ ಮಾರ್ಗವಾಗಿ 15-9-18 ರ ಪ್ರಾತಃಕಾಲ ಮೈಸೂರಿಗೆ ಚಿತ್ತೈಸುತ್ತದೆಯೆಂದು ಸದ್ಯದಲ್ಲಿ ಮಹಾಸ್ವಾಮಿಯವರ ಸಂಚಾರಕ್ರಮವು ಗೊತ್ತಾಗಿರುತ್ತದೆ.

ಶ್ರೀಮನ್ಮಹಾರಾಜರವರು ಹಿಂದುಳಿದ ಜನವರ್ಗಗಳ ಪ್ರತಿನಿಧಿಗಳ ವಿಜ್ಞಾಪನೆಗೆ ಉತ್ತರಕೊಡುವ ಸಂದರ್ಭದಲ್ಲಿ ಅವರ ಕಷ್ಟಸುಖಗಳೆಲ್ಲಾ ತಮಗೆ ಗೊತ್ತಾಗಿರುವುವೆಂದೂ ಅವುಗಳ ನಿವಾರಣೆಗೆ ತಕ್ಕ ಏರ್ಪಾಟು ಮಾಡಲ್ಪಡುವುವೆಂದೂ ಅಭಯದಾನಮಾಡಿದ್ದರು. ಅದನ್ನು ಸಫಲಗೊಳಿಸುವುದಕ್ಕೆ ಈಗ ಒಂದು ಪ್ರಯತ್ನವು ಪ್ರತ್ಯಕ್ಷವಾಗಿ ನಡೆದಿದೆಯೆಂದು ಕೇಳಿ ಸಂತೋಷಿಸುತ್ತೇವೆ. ಅದೇನೆಂದರೆ—ಹಿಂದುಳಿದ ಪ್ರಜಾವರ್ಗಗಳ ಜನರನ್ನು ಸಂಸ್ಥಾನದ ನಾನಾಶಾಖೆಯ ಉದ್ಯೋಗಸ್ಥಾನಗಳಲ್ಲಿ ಅಧಿಕವಾಗಿ ಸೇರಿಸುವ ವಿಷಯವಾಗಿ ತಕ್ಕ ಆಲೋಚನೆಯನ್ನು ಮಾಡುವುದಕ್ಕಾಗಿ ಇಷ್ಟರಲ್ಲೇ ಒಂದು ಸಂಘವನ್ನು ನಮ್ಮ ಸರ್ಕಾರದವರು ಏರ್ಪಡಿಸುವುದರಲ್ಲಿದ್ದಾರೆ. ಇದು ಸಂಸ್ಥಾನದ ಮುಕ್ಕಾಲುಮೂರುವೀಸಪಾಲು ಪ್ರಜೆಗಳಿಗೆಲ್ಲಾ ಪ್ರಯೋಜಕವೂ ಸಂತೋಷದಾಯಕವೂ ಆಗುವುದೆಂಬುದಕ್ಕೆ ಸಂಶಯವಿಲ್ಲ. ಈ ಸಂಘಕ್ಕೆ ಚೀಫ್‌ಜಡ್ಜಿ ಸರ್ ಲೆಸ್ಲಿ ಮಿಲ್ಲರ್‌ರವರು ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿರುವರೆಂದೂ, ಸಂಘದಲ್ಲಿ ೧೦ ಮಂದಿ ಸಭಿಕರಿರುವರೆಂದೂ, ಅವರಲ್ಲಿ ಅನಧಿಕಾರಿಗಳೇ ಹೆಚ್ಚಾಗಿರುವರೆಂದೂ ಕೇಳುತ್ತೇವೆ.

ಭರತಖಂಡದ ವೃತ್ತಾಂತಗಳು.

೨ನೆ ಯುದ್ಧಋಣಕ್ಕೆ ಕಳೆದ ತಾ|| ೧೪ ರವರೆಗೆ ೨೭೨೩೭೬೯೦೦ ರೂ. ಗಳು ಕೂಡಿದ್ದುವು.

ಭರತಖಂಡದಿಂದ ಇದುವರೆಗೆ ೧೨|| ಲಕ್ಷ ಸೈನ್ಯವು ರಣರಂಗಕ್ಕೆ ಹೋಗಿ ಸಹಾಯಮಾಡಿರುತ್ತದೆಂದು ಮುಖ್ಯ ಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ.

ತಾತಾ ಕೈಗಾರಿಕೆ ಬ್ಯಾಂಕಿನ ಶಾಖೆಯು ಬರ್ಮಾದಲ್ಲಿ ಸ್ಥಾಪಿಸಲ್ಪಡುವುದಕ್ಕಿದೆ. ಇವರು ಅಲ್ಲಿ ಚರ್ಮದ ವ್ಯಾಪಾರ, ಮರದ ವ್ಯಾಪಾರ, ತೆರೆ ದೋಣಿಗಳನ್ನು ಕಟ್ಟುವ ಕೆಲಸ ಇತ್ಯಾದಿಗಳನ್ನು ನಡೆಯಿಸುವರು.

ಬಂಗಾಳಾ, ಮಧ್ಯಪ್ರಾಂತ, ಸಂಯುಕ್ತಪ್ರಾಂತ, ಪಂಜಾಬು ಮೊದಲಾದ ಕಡೆಯ ರಾಷ್ಟ್ರೀಯ ಕಾಂಗ್ರೆಸ್ ಸಭೆಯವರುಗಳು ಬೇರೆಬೇರೆ ಸಭೆಸೇರಿ ಈಗಣ ರಾಜಕೀಯ ಸಂಸ್ಕರಣ ವಿಷಯವಾಗಿ ತಮ್ಮ ವಿರುದ್ಧಾಭಿಪ್ರಾಯಗಳನ್ನೂ, ಅದರಲ್ಲಿ ಮಾಡಲ್ಪಡಬೇಕಾಗಿರುವ ಸಂಸ್ಕರಣಗಳನ್ನೂ ಸೂಚಿಸಿ ತೀರ್ಮಾನಗಳನ್ನು ಮಾಡಿರುವರು. ಬಂಗಾಳಾ ರಾಷ್ಟ್ರೀಯ ಕಾಂಗ್ರೆಸ್‌ಸಭೆಯವರು ಮುಂದಣ ಡಿಸೆಂಬರ್ ತಿಂಗಳಲ್ಲಿ ದಿಲ್ಲಿಯಲ್ಲಿ ಕೂಡುವ ದೇಶೀಯಮಹಾಸಭೆಗೆ ಬಾಲಗಂಗಾಧರ ತಿಲಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಒಂದು ತೀರ್ಮಾನವನ್ನು ಮಾಡಿದರು.

ಬೊಂಬಾಯಿಯಲ್ಲಿ ಕೂಡುವ ಪ್ರತ್ಯೇಕ ಕಾಂಗ್ರೆಸ್‌ಸಭೆಯ ಸತ್ಕಾರಕಸಂಘದ ಅಧ್ಯಕ್ಷತೆಗೆ ಸರ್ ದಿನ್ಶಾ ಪೆಟಿಟ್‌ರವರು ಒಪ್ಪಿಕೊಂಡಿದ್ದರಷ್ಟೆ. "ಆ ಸಭೆಗೆ ಮಿತಾಮಿತವಾದಿಗಳೆಲ್ಲಾ ಒಟ್ಟಿಗೆ ಸೇರುತ್ತಾರೆಂದು ತಿಳಿದು ಸನ್ಮಾನಸಭಾಧ್ಯಕ್ಷತೆಗೆ ನಾನು ಒಪ್ಪಿಕೊಂಡಿದ್ದೆ. ಆದರೆ ಸರ್ ದಿನ್ಶಾ ವಾಚಾರವರೇ ಮೊದಲಾದವರು ಈ ಸಭೆಗೆ ಬರುವುದಿಲ್ಲವೆಂದು ತಿಳಿಯಿಸಿರುವ ಕಾರಣ ನಾನು ಅಧ್ಯಕ್ಷತೆಗೆ ಒಪ್ಪಲಾರೆನು" ಎಂದು ಪೆಟಿಟ್‌ರವರು ಸತ್ಕಾರಕ ಸಂಘದವರಿಗೆ ಲಿಖಿತಮೂಲಕ ತಿಳಿಯಿಸಿಬಿಟ್ಟರು. ಈಗ ಆ ಸ್ಥಾನಕ್ಕೆ ಆ|| ವಿ. ಜೆ. ಪಟೇಲರವರನ್ನು ನಿಯಮಿಸಿಕೊಂಡಿರುವರು.

ವೈಸ್ರಾಯರು ಕಳೆದ ತಾ|| ೭ ರಲ್ಲಿ ಇಂದೂರು ಸಂಸ್ಥಾನಕ್ಕೆ ದಯೆಮಾಡಿಸಿದ್ದಾಗ್ಗೆ ಅಲ್ಲಿಯ ಮಹಾರಾಜಾ ಶಿವಾಜಿರಾವ್ ಹೈಸ್ಕೂಲನ್ನು ತೆರೆಯುವ ಮಹೋತ್ಸವವನ್ನು ಜರುಗಿಸಿದರು. ಆಗ ಅವರು ಇಂದೂರು ಸಂಸ್ಥಾನದ ಈಗಣ ಪ್ರಭುಗಳು ಸಂಸ್ಥಾನದ ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ ಮಾಡುತ್ತಿರುವ ಪ್ರಯತ್ನಗಳನ್ನು ಕೊಂಡಾಡಿ, ಭರತಖಂಡದಲ್ಲಿ ವಿದ್ಯಾಭಿವೃದ್ಧಿಯು ಬಹಳಮಟ್ಟಿಗೆ ಹೆಚ್ಚಬೇಕಾಗಿದೆಯೆಂದು ಕೋರುವ ನಾನು ಒಂದು ಮುಖ್ಯ ವಿಷಯವನ್ನು ಸೂಚಿಸುತ್ತೇನೆಂದು ಹೇಳಿದ ಮಾತು ವಿದ್ಯಾಭಿವೃದ್ಧಿಯಲ್ಲಿ ನಿರತರಾದವರೆಲ್ಲರಿಗೂ ಗಮನೀಯವಾಗಿರುವುದು. ಅದೇನೆಂದರೆ—"ಎಷ್ಟು ಹಣವನ್ನು ವೆಚ್ಚಮಾಡಿ ಪಾಠಶಾಲಾ ಭವನಗಳನ್ನು ಕಟ್ಟಿಸಿದರೂ, ಎಷ್ಟು ನಿರ್ಬಂಧಮಾಡಿ ಪಾಠಶಾಲೆಗಳಿಗೆ ಬಾಲಕರನ್ನು ಕಳುಹಿಸಿದರೂ, ಬೋಧಿಸತಕ್ಕ ಉಪಾಧ್ಯಾಯರು ಸಮರ್ಥರಲ್ಲದವರಾಗಿದ್ದರೆ ಎಲ್ಲವೂ ವ್ಯರ್ಥವು. ಅದುಕಾರಣ ಉತ್ತಮರಾದ ಉಪಾಧ್ಯಾಯರನ್ನು ಮೊದಲು ಅಣಿಮಾಡಬೇಕು. ಬಿ.ಎ. ಎಂ.ಎ. ಪರೀಕ್ಷೆಗಳನ್ನು ಕೊಟ್ಟಿದ್ದ ಮಾತ್ರದಿಂದಲೇ ಲಾಭವಿಲ್ಲ. ವಿದ್ಯೆಯನ್ನು ಕಲಿಸಿಕೊಡುವ ವಿಧಾನವು ಉಪಾಧ್ಯಾಯರಿಗೆ ಚೆನ್ನಾಗಿ ತಿಳಿದಿರಬೇಕು. ಭರತಖಂಡದ ಚರಿತ್ರದಲ್ಲಿ ಉಪಾಧ್ಯಾಯಸ್ಥಾನವು ಬಹಳ ಘನತರವಾದುದು. ಪ್ರಾಚೀನಕಾಲದಲ್ಲಿ ಗುರುಗಳು ಅಧಿಕಭಕ್ತಿಗೆ ಪಾತ್ರರಾಗಿದ್ದರು. ಈಗ ತಕ್ಕ ಸಂಬಳವನ್ನೋ ಬಹುಮಾನವನ್ನೋ ಕೊಡದೆ ಇದ್ದರೆ ಸಮರ್ಥರಾದ ಶಿಕ್ಷಕರು ದೊರೆಯುವುದಿಲ್ಲ."

ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೊಗ್‌ರವರು ಪಾರ್ಲಿಮೆಂಟಿನಲ್ಲಿ ಭರತಖಂಡದ ಆಯವ್ಯಯ ಪತ್ರವನ್ನು ಕುರಿತು ಉಪನ್ಯಾಸಮಾಡುವ ಸಂದರ್ಭದಲ್ಲಿ ಯುದ್ಧಕ್ಕಾಗಿ ಭರತಖಂಡದಿಂದ ಮಾಡಲ್ಪಟ್ಟಿರುವ ಸಹಾಯವನ್ನು ಸಂಪೂರ್ಣವಾಗಿ ಕೊಂಡಾಡಿದರು. ಅದರಲ್ಲಿ ಕೆಲ ಮುಖ್ಯಾಂಶಗಳೇನೆಂದರೆ—"ಭರತಖಂಡವು ದಾನಮಾಡಿರುವ ೧೫೦ ಕೋಟಿ ರೂ. ಗಳಲ್ಲಿ ಇದುವರೆಗೆ ೫೩,೦೦,೦೦,೦೦೦ ರೂ. ಗಳನ್ನು ಕೊಡಿಸಿಕೊಟ್ಟಿದೆ. ಗೋಧುವೆ, ಟೀ, ಗೋಣಿನಾರು, ಉಣ್ಣೆ, ಚರ್ಮ, ಖನಿಜವಸ್ತುಗಳು ಮೊದಲಾದ ಸಾಮಗ್ರಿಗಳನ್ನು ವಿಶೇಷವಾಗಿ ಕಳುಹಿಸಿಕೊಟ್ಟು ಕೊಡುತ್ತಲೂ ಇದೆ. ಭರತಖಂಡದ ಸೈನ್ಯವು ಯುದ್ಧಾರಂಭವರ್ಷದಲ್ಲಿ ಪಶ್ಚಿಮರಂಗಕ್ಕೆ ಬಂದು ಅತ್ಯುತ್ತಮವಾದ ಕಾರ್ಯವನ್ನು ಮಾಡಿತು. ಈಗಲೂ ಮೆಸಪೊಟೋಮಿಯಾ, ಪಾಲಸ್ತೈನ್, ಪೂರ್ವಾಫ್ರಿಕಾ ರಂಗಗಳಲ್ಲಿ ಅಮೋಘವಾದ ಕಾರ್ಯಗಳನ್ನು ಮಾಡುತ್ತಿವೆ. ಆ ದೇಶದಲ್ಲಿ ಸೈನ್ಯಕ್ಕೆ ಹೊಸದಾಗಿ ಜನರನ್ನು ಸೇರಿಸುವ ಕೆಲಸವು ತೃಪ್ತಿಕರವಾಗಿ ನಡೆಯುತ್ತಿದೆ. ಜೂನ್ ತಿಂಗಳೊಂದರಲ್ಲೇ ೧೫ ಸಾವಿರ ಜನರು ಕೂಡಿದ್ದಾರೆ. ಭರತಖಂಡದಿಂದ ೭೦೦ ಮೈಲಿಗಳಿಗಾಗುವಷ್ಟು ಲೋಹಮಾರ್ಗದ ಕಂಬಿಗಳೂ, ೨೦೦ ಇಂಜನ್ನುಗಳೂ, ೬೦೦೦ ಬಂಡಿಗಳೂ ಬೇರೆಬೇರೆ ರಂಗಕ್ಕೆ ಕಳುಹಿಸಿಕೊಡಲ್ಪಟ್ಟಿವೆ. ಮೆಸಪೊಟೋಮಿಯಾ ಪಾಲಸ್ತೀನುಗಳಲ್ಲಿ ಭರತಖಂಡದಿಂದ ಬಂದ ಸಾಮಗ್ರಿಗಳಿಂದಲೇ ಲೋಹಮಾರ್ಗವನ್ನು ಹಾಕಿರುವುದಲ್ಲದೆ ಆ ಮಾರ್ಗಗಳಮೇಲೆ ಈಗ ಭಾರತೀಯೋದ್ಯೋಗಿಗಳೇ ಕೆಲಸಮಾಡುತ್ತಿದ್ದಾರೆ. ಯೂಫ್ರಟಿಸ್ ಟೈಗ್ರೀಸ್ ನದಿಗಳ ಮೇಲೆ ಈಗ ತಿರುಗಾಡುತ್ತಿರುವ ನಾವೆಗಳೆಲ್ಲಾ ಭರತಖಂಡದ ಹೊಳೆಗಳ ನಾವೆಗಳೇ ಆಗಿರುತ್ತವೆ. ಬಸಾರಾ, ಬಾಗ್ದಾದು ಪಟ್ಟಣಗಳಲ್ಲಿ ಸಾಮಾನುಗಳನ್ನು ಇಳಿಯಿಸುತ್ತಿರುವ ಯಂತ್ರಗಳೆಲ್ಲಾ ಭರತಖಂಡದವೇ, ಅಲ್ಲದೆ ಮೆಸಪಟೋಮಿಯಾಕ್ಕೆ ತರಲ್ಪಟ್ಟಿರುವ ವ್ಯವಸಾಯದ ಉಪಕರಣಗಳೆಲ್ಲವೂ ಭರತಖಂಡದವುಗಳೇ" ಎಂದು ಹೇಳಿದರು. ಬಳಿಕ ತಮ್ಮ ನೂತನ ಸಂಸ್ಕರಣ ವಿಷಯವಾಗಿ ದೀರ್ಘವಾಗಿ ವ್ಯಾಖ್ಯಾನಮಾಡಿ, ತಮ್ಮ ಪ್ರತಿಯೊಂದು ಸೂಚನೆಯನ್ನೂ ಸಮರ್ಥನಮಾಡಿ ತೋರಿಸಿ, ಇವುಗಳಲ್ಲಿ ವ್ಯತ್ಯಾಸಮಾಡಬೇಕಾದುದು ಯಾವುದೂ ಇಲ್ಲವೆಂದು ನಾನು ಹೇಳುವುದಿಲ್ಲವೆಂತಲೂ, ಇದನ್ನು ಚೆನ್ನಾಗಿ ಆಲೋಚಿಸಿ ಪರಿಶೀಲಿಸಬೇಕೆಂತಲೂ, ಅದಕ್ಕಾಗಿ ಪಾರ್ಲಿಮೆಂಟಿನವರು ಯುದ್ಧಮುಗಿಯುವವರೆಗೂ ಇದನ್ನು ಹಾಗೇ ನಿಲ್ಲಿಸಿಕೊಂಡಿರಬೇಕೆಂತಲೂ ಕೋರಿದರು.

ವಿದೇಶ ವೃತ್ತಾಂತಗಳು.

ಅಮೇರಿಕಾದ ಪ್ರೆಸಿಡೆಂಟ್ ವಿಲ್ಸನ್‌ರವರು ಇಷ್ಟರಲ್ಲೇ ಇಂಗ್ಲೆಂಡಿಗೆ ಬರುವವರಾಗಿದ್ದಾರೆ.

ಇದುವರೆಗೆ ಶತ್ರುಗಳ ೧೫೦ ಸಬ್‌ಮೆರೀನುಗಳು ಮಿತ್ರಮಂಡಲಿಯವರಿಂದ ಮುಳುಗಿಸಲ್ಪಟ್ಟಿವೆ.

ಅಮೇರಿಕಾ ನೌಕಾನಿರ್ಮಾಣಶಾಖೆಯವರು ಕಳೆದ ಜುಲೈ ತಿಂಗಳಲ್ಲಿ ೧೨೩ ಹೊಸಹಡಗುಗಳನ್ನು ಸಮುದ್ರಕ್ಕೆ ತೇಲಬಿಟ್ಟರು.

ಸಯಾಂದೇಶಸೈನ್ಯವು ಫ್ರಾನ್ಸ್‌ದೇಶಕ್ಕೆ ಹೋಗಿ ಮುಟ್ಟಿತು. ಮಾರ್ಸೇಲ್ಸ್ ಪಟ್ಟಣದಲ್ಲಿ ಪ್ರಜೆಗಳು ಅವರಿಗೆ ಅತ್ಯಾದರದಿಂದ ಸ್ವಾಗತಮಾಡಿದರು.

ಅಮೇರಿಕನ್ ಸೈನ್ಯವೂ ಸೇರಿ ಈಗ ಮಿತ್ರಮಂಡಲಿಯ ಹತ್ತಿರ ೧|| ಕೋಟಿ ಸೈನ್ಯವಿದೆ. ಇಂಗ್ಲೀಷ್ ಅಧಿನಿವೇಶನಗಳ ಸೈನ್ಯವು ಬೇರೆ ೧೦ ಲಕ್ಷವು ಸೇರಿದೆ.

ಜಪಾನ್‌ಸೈನ್ಯವು ಯುದ್ಧದ ಹಡಗುಗಳ ಸಹಾಯದಿಂದ ರಷ್ಯಾದ ವ್ಲಾಡಿವಾಸ್ಟಾಕ್ ರೇವೆಯಲ್ಲಿಳಿಯುತ್ತಿದೆ. ಅಲ್ಲಿದ್ದ ಹಲವು ಮಂದಿ ಜರ್ಮನರನ್ನು ಇವರು ಹಿಡಿದಿದ್ದಾರೆ.

ಫ್ರಾನ್ಸಿನಲ್ಲಿ ೩೦-೪೦ ಲಕ್ಷ ಅಮೇರಿಕನ್ ಸೈನ್ಯವಿರುವಂತೆ ಮಾಡುವುದಕ್ಕಾಗಿ ಅಮೇರಿಕಾದವರು ಹೊಸದಾಗಿ ಸೈನಿಕಸೇವಾಶಾಸನವೊಂದನ್ನು ತಮ್ಮ ದೇಶದಲ್ಲಿ ಕಲ್ಪಿಸುವವರಾಗಿದ್ದಾರೆ.

ಜರ್ಮನರು ತಮ್ಮ ಪಶ್ಚಿಮರಂಗದ ಸೈನ್ಯದಲ್ಲಿ ಕೆಲ ಭಾಗವನ್ನು ರಷ್ಯಾಕ್ಕೆ ಸಾಗಿಸಬೇಕಾಗಿ ಬಂದುದರಿಂದ ಅವರು ಪಶ್ಚಿಮರಂಗದಲ್ಲಿ ಸೋಲಬೇಕಾಯಿತೆಂದು ಅವರ ದೇಶದ ಕೆಲ ಪತ್ರಿಕೆಗಳು ಹೇಳಿಕೊಂಡಿವೆ.

ಜರ್ಮನರು ಎಸ್ಸೆನ್ನಿನಲ್ಲಿ ಫಿರಂಗಿಗಳನ್ನು ನಿರ್ಮಿಸುವುದಕ್ಕೆ ಸ್ಥಾಪಿಸಿರುವ ಕ್ರುಪ್ ಕರ್ಮಾಗಾರದಂಥ ಪ್ರಬಲಯಂತ್ರಾಗಾರವೊಂದನ್ನು ಫ್ರಾನ್ಸಿನಲ್ಲಿ ೩ ಕೋಟಿ ಡಾಲರುಗಳ ಬಂಡವಾಳದಿಂದ ಸ್ಥಾಪಿಸಲು ಏರ್ಪಾಟೆಲ್ಲಾ ನಡೆದು ಮುಗಿದಿರುತ್ತದೆ.

ಇಂಗ್ಲೀಷರ ಹತ್ತಿರ ಯುದ್ಧಾರಂಭಕಾಲದಲ್ಲಿ ೨೫ ಲಕ್ಷ ಟನ್ ಹಡಗುಗಳಿದ್ದುವು. ಈಗ ೪೦ ಲಕ್ಷ ಟನ್ ಹಡಗುಗಳಿವೆ. ಅವರ ವ್ಯಾಪಾರಿ ಹಡಗುಗಳಲ್ಲೂ ಯುದ್ಧದ ಹಡಗುಗಳಲ್ಲೂ ಈಗ ೧೫ ಲಕ್ಷ ಮಂದಿ ಸೈನಿಕರೂ ಕೆಲಸಗಾರರೂ ಇದ್ದಾರೆ.

ಜರ್ಮನರಿಗೆ ಈಗ ಉಂಟಾಗುತ್ತಿರುವ ಅಪಜಯದಿಂದ ಆ ದೇಶೀಯರಲ್ಲಿ ಒಂದುತೆರದ ಕಳವಳವು ಹೆಚ್ಚಿಕೊಂಡಿದೆ. ಪ್ರಭುತ್ವದವರು ಸುಳ್ಳಾದ ಪ್ರಕಟನೆಗಳನ್ನು ಮಾಡಿ ಪ್ರಜೆಗಳಿಗೆ ಧೈರ್ಯವುಂಟುಮಾಡುತ್ತಿದ್ದಾರೆ. ಮಾರ್ನೆನದಿ ಹತ್ತಿರ ತಮಗುಂಟಾದ ಮಹಾಪಜಯದ ಸುದ್ದಿಯನ್ನು ಜರ್ಮನರು ಪ್ಲಾಂಡರ್ಸಿನಲ್ಲಿರುವ ತಮ್ಮ ಸೈನಿಕರಿಗೆ ಗೊತ್ತುಪಡಿಸಲೇ ಇಲ್ಲ. ಆದರೆ ಈಗೀಗ ಆ ಸೈನಿಕರಿಗೆ ತಮ್ಮ ಕಡೆಯ ೬೦೦೦೦ ಸೈನಿಕರನ್ನೂ ೮೦೦ ಫಿರಂಗಿಗಳನ್ನೂ ಮಿತ್ರಮಂಡಲಿಯವರು ವಶಪಡಿಸಿಕೊಂಡರೆಂಬ ಸುದ್ದಿಯು ಗೊತ್ತಾಗಿದೆ.

ಈಗಣ ಪಶ್ಚಿಮರಂಗದ ಯುದ್ಧದಲ್ಲಿ ಕೆನಡಾರಾಷ್ಟ್ರದ ಸೈನಿಕರು ಅದ್ಭುತಪರಾಕ್ರಮವನ್ನು ತೋರಿಸಿದ್ದಾರೆ. ಅವರು ೭೦೦೦ ಮಂದಿ ಶತ್ರುಸೈನಿಕರನ್ನೂ ೧೦೦ ಫಿರಂಗಿಗಳನ್ನೂ ಹಿಡಿದುಕೊಂಡಿದ್ದಾರೆ. ಅಮೇರಿಕನ್ ಸೇನಾಪರಾಕ್ರಮವು ಕೂಡ ವಿಶೇಷ ಪ್ರಶಂಸಾಪಾತ್ರವಾಗಿದೆ. ಜನರಲ್ ಮೂಂಜಿನ್‌ರವರ ಕೈಕೆಳಗೆ ನಡೆಯಿಸಲ್ಪಡುತ್ತಿದ್ದ ೩ ನೆ ಅಮೇರಿಕನ್‌ಸೈನ್ಯವು ಮೊನ್ನೆಯುದ್ಧದಲ್ಲಿ ಶತ್ರುಗಳ ಕಡೆಯ ೭೦೦೦ ಮಂದಿಗೆ ಮಿಗಿಲಾದಷ್ಟು ಸೈನಿಕರನ್ನೂ ೯೧ ಫಿರಂಗಿಗಳನ್ನೂ ಬಹಳ ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡು ೭ ಮೈಲಿಯ ದೂರ ಮುಂದಕ್ಕೆ ಸಾಗಿ ಶತ್ರುಸ್ಥಳಗಳನ್ನು ವಶಪಡಿಸಿಕೊಂಡಿದೆ.

ಪಾರ್ಲಿಮೆಂಟಿನಲ್ಲಿ ಮುಖ್ಯಮಂತ್ರಿಯವರು ಮಾತನಾಡುತ್ತ ರಷ್ಯಾದ ಈಗಣ ಸ್ಥಿತಿಯನ್ನು ಕುರಿತು ಹೀಗೆ ಹೇಳಿದರು—ನಾವು ರಷ್ಯಾದ ವಿಷಯವಾಗಿ ವಿರೋಧಭಾವವುಳ್ಳವರಲ್ಲ. ಈಗ ಅಲ್ಲಿ ಊರಿಗೊಂದು ಪ್ರಭುತ್ವವಾಗಿದೆ. ರಷ್ಯಾದವರಿಗೆ ಜರ್ಮನರ ಆಧಿಪತ್ಯದ ವಿಷಯದಲ್ಲಿ ವಿಮುಖತೆಯುಂಟಾಗಿದೆಯೆಂತಲೂ, ಮಿತ್ರಮಂಡಲಿ ಸಹಾಯವನ್ನು ಅವರು ಹೆಚ್ಚಾಗಿ ಕೋರುತ್ತಿರುವರೆಂತಲೂ ಈಗಣ ವಿಷಯಗಳಿಂದ ಸ್ಪಷ್ಟವಾಗುತ್ತದೆ. ಅವರು ಉದ್ಧಾರಗೊಳ್ಳುವುದಕ್ಕೆ ನಮ್ಮ ಕೈಲಾಗುವಷ್ಟು ಸಹಾಯವನ್ನು ನಾವು ಮುಖ್ಯವಾಗಿ ಮಾಡಬೇಕಾಗಿದೆ. ಅಲ್ಲಿ ಜೆಕೋಸ್ಲಾವಕ್ಕರ ಪ್ರಯತ್ನವು ಬಹಳ ಮುಖ್ಯವಾದುದು. ಅವರು ಪಶ್ಚಿಮರಣರಂಗಕ್ಕೆ ಬಂದು ಮಿತ್ರಮಂಡಲಿಯವರೊಡನೆ ಸೇರಿ ಶತ್ರುಗಳಮೇಲೆ ಯುದ್ಧಮಾಡಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಅವರಪೇಕ್ಷೆಯಂತೆಯೇ ಅವರನ್ನು ಕರೆತರುವುದಕ್ಕಾಗಿ ನಾವು ವ್ಲಾಡಿವಾಸ್ಟಕ್ಕಿಗೆ ಹಡಗುಗಳನ್ನು ಕಳುಹಿಸಿದೆವು. ಆದರೆ ಜರ್ಮನರ ಅಪ್ಪಣೆಮೇರೆಗೆ ರಷ್ಯಾದ ಬೋಲ್ಷೆವಿಕ್ಕರು ಜೆಕೋಸ್ಲಾವಕ್ಕರನ್ನು ಅಲ್ಲಿಂದ ಇಲ್ಲಿಗೆ ಬರದಂತೆ ತಡೆಯುತ್ತಿದ್ದಾರೆ. ಜೆಕೋಸ್ಲಾವಕ್ಕರನ್ನು ಕಾಪಾಡುವುದಕ್ಕಾಗಿ ಜಪಾನರೊಡನೆ ಕೂಡಿ ವ್ಲಾಡಿವಾಸ್ಟಕ್ಕಿಗೆ ಸೈನ್ಯವನ್ನು ಕಳುಹಿಸುವ ವಿಷಯವಾಗಿ ಸ್ವಲ್ಪ ದೂರುಬಂದಿದೆ.

ನಿಂಬೆಯ ಹಣ್ಣು.

ಮ॥ ಎಚ್. ವಿ. ಕೃಷ್ಣಮೂರ್ತಿರಾಯರಿಂದ.

ನಮ್ಮ ದೇಶದಲ್ಲಿ ನಿಂಬೆಯ ಹಣ್ಣನ್ನು ಅರಿಯದವರು ವಿರಳ. ಹಬ್ಬ ಹರಿದಿನಗಳಲ್ಲಿ ಆಹಾರಪದಾರ್ಥಗಳಿಗೆ ರುಚಿಯನ್ನುಂಟುಮಾಡುವುದಕ್ಕಾಗಿ ಇದನ್ನುಪಯೋಗಿಸುವರು. ದೇವಾಲಯದಲ್ಲಿ ದೇವರ ಪಂಚಾಂಗಿಯನ್ನು ತೊಳೆಯಲು ಇದು ಬೇಕೇಬೇಕು. ಕೆಲವು ಔಷಧಗಳಿಗೆ ಇದು ಅತ್ಯವಶ್ಯವೆಂದು ದೇಶೀಯ ಪಂಡಿತರು ಹೇಳುವರು. ಹೀಗೆ ಈ ನಿಂಬೆಯ ಹಣ್ಣು ನಮ್ಮ ನಿತ್ಯವ್ಯವಹಾರ ಸಾಮಗ್ರಿಗಳಲ್ಲಿ ಅತ್ಯಂತ ಉಪಯೋಗಕರವಾದ ವಸ್ತುವಾಗಿದೆ. ಶೀತವಾದ ಸ್ಥಳದಲ್ಲಿ ಅಥವಾ ತಣ್ಣೀರಿನಲ್ಲಿಟ್ಟಲ್ಲಿ ಹಣ್ಣು ಕೆಡುವುದಿಲ್ಲ. ರಸವೂ ಬರೀ ಹಣ್ಣನ್ನು ಹಿಂಡಿದರೆ ಬರುವುದರ ಎರಡರಷ್ಟು ಬರುತ್ತದೆ. ಬಟ್ಟೆಗಳನ್ನು ಒಟ್ಟೆಮಾಡಿ ಅದರಲ್ಲಿ ನಿಂಬೆಯ ಹೋಳುಗಳನ್ನಿಟ್ಟು ಒಗೆದರೆ ಶುಭ್ರವಾಗುವುವು. ಒಂದು ಹೋಳನ್ನು ಹಿಂಡಿ ರಸದಲ್ಲಿ ಸಾಬೂನನ್ನು ಬೆರಸಿ ಸ್ನಾನಮಾಡುವಾಗ ಮೈ ಉಜ್ಜಿಕೊಂಡರೆ ಸ್ನಾನಮಾಡಿದಮೇಲೆ ಮೈಕಾಂತಿ ಹೆಚ್ಚುವುದಲ್ಲದೆ ಆಲಸ್ಯ ಸೋಮಾರಿತನ ಇವು ತೊಲಗುವುವು. ಉಪ್ಪನ್ನು ಬೆರಸಿದ ಹೋಳಿನಿಂದ ಒರಸಿದರೆ ಬಟ್ಟೆಯ ಮಸಿಕರೆ ಹೋಗುವುದು. ನಂಟಿಲಹುಣ್ಣಿಗೆ ಜೇನುತುಪ್ಪದಲ್ಲಿ ಮಿಶ್ರಮಾಡಿ ಸೇವನೆಮಾಡಿದರೆ ಗುಣವಾಗುವುದು. ಕೆಲವು ಹೋಳುಗಳ ರಸದೊಡನೆ ಅರ್ಧಸೇರು ಪ್ರೊಬೂಷನ್ನು ಬೆರಸಿ ಶೋಧಿಸಿ, ರೇಷ್ಮೆವಸ್ತ್ರಗಳಾಗಲೀ ಇತರ ವಸ್ತ್ರಗಳಾಗಲೀ ಕರೆಯಾದರೆ ಈ ಮಿಶ್ರಣದಿಂದ ತೊಳೆಯಬಹುದು.

ಕಾಲರಾ ರೋಗ ಬೀಜಗಳನ್ನು ನಾಶಮಾಡತಕ್ಕ ಶಕ್ತಿಯು ಈ ರಸದಲ್ಲಿದೆ. ನೀರನ್ನು ಶೋಧಿಸುವುದಕ್ಕೆ ಇದೊಂದು ಶೋಧಕವಸ್ತುವಾಗಿದೆ. ಗ್ರಾಮಾಂತರಗಳಲ್ಲಿ ಶುದ್ಧಿಮಾಡಿಕೊಳ್ಳಬಹುದು. ಈ ರಸದಿಂದ ಮಲೇರಿಯಾ ಕಾಲರಾ ಜ್ವರಗಳಲ್ಲಿ ಬಹಳ ಪ್ರಯೋಜನವುಂಟು. ಅ. ಪ.

ಪತ್ರವ್ಯವಹಾರ.

ಮಂಜ್ರಾಬಾದ್ ತಾಲ್ಲೂಕು ದೋಣಿಗಾಲ್.

ಅಭೂತಪೂರ್ವವಾದ ಮಹಾಯುದ್ಧವು ಆರಂಭವಾಗಿ 1918 ನೆ ಆಗಸ್ಟು ತಾರೀಖು 4 ನೇ ಭಾನುವಾರಕ್ಕೆ ನಾಲ್ಕು ವರ್ಷಗಳು ತುಂಬಿದವು. ಆದರೂ ಇದುವರೆಗೆ ಪ್ರಳಯಮಯವಾದ ಆ ಯುದ್ಧವು ಮುಗಿಯಲಿಲ್ಲ. ಆದ್ದರಿಂದ ಈ ಮಹಾವಿಪತ್ತಿನಿಂದ ಸಂರಕ್ಷಿಸಬೇಕೆಂದು ಪ್ರಪಂಚದವರೆಲ್ಲರೂ ಈ ದಿವಸ ಪ್ರಾರ್ಥನೆಯ ಮೂಲಕ ಜಗದೀಶನಲ್ಲಿ ಮೊರೆಯಿಟ್ಟುಕೊಳ್ಳುವುದು ಉತ್ತಮವಾಗಿರುವುದು. ಈ ಕಾರಣದಿಂದಲೇ ನಮ್ಮ ಸಾರ್ವಭೌಮರು ಈ ದಿನ ತಮ್ಮ ಸಾಮ್ರಾಜ್ಯದಲ್ಲಿ ಯುದ್ಧಶಾಂತಿಗೋಸ್ಕರ ಭಗವತ್ಪ್ರಾರ್ಥನೆ ಮಾಡಲು ಏರ್ಪಡಿಸಿರುವರು. ಆದ್ದರಿಂದ ಲೋಕಾಭಿಮಾನಿಗಳೂ ಮತ್ತು ದಯಾಪರರೂ ಆದ ಮ॥ ರಾ॥ ದೋಣಿಗಾಲ್ ಕಾಫಿಪ್ಲಾಂಟರ್ ಡಿ. ಶಾಂತಮಲ್ಲೇಗೌಡರೂ ಮ॥ ರಾ॥ ಡಿಸ್ಟ್ರಿಕ್ಟು ಬೋರ್ಡ್ ಡಿಸ್ಟ್ರಿಕ್ಟು ಕಮಿಟಿ ಪ್ರಜಾಪ್ರತಿನಿಧಿ ಸಭಾಮೆಂಬರಾದ ಡಿ. ನಂಜೇಗೌಡರೂ ಸಹ ಒಂದು ಸಭೆಯನ್ನು ನಡಿಸಿ ಕೊಡಗುದೇಶದ ಮ್ಯಾಜಿಕ್ ಬಾಪು ಸಾ॥ ರಿಂದ ಆಶ್ಚರ್ಯಕರವಾದ ಯಕ್ಷಿಣಿ ಮುಂತಾದ ವಿನೋದಗಳಿಂದ ಜನರನ್ನು ಸಂತೋಷಪಡಿಸಿ, ಯುದ್ಧವಿಚಾರದಲ್ಲಿ ಜನ, ಧನ, ಸಹಾಯಮಾಡುವುದು ಮುಖ್ಯಕರ್ತವ್ಯವೆಂಬುದಕ್ಕನುಸಾರವಾಗಿ ಒಂದು ಉಪನ್ಯಾಸಮಾಡಿ ಶ್ರೀ ಬಸವೇಶ್ವರಸ್ವಾಮಿಗೆ ಮಹಾಪೂಜೆ ಮಂಗಳಾರತಿಯಿಂದ ನಮ್ಮ ಸಾರ್ವಭೌಮರಿಗೆ ದಿಗ್ವಿಜಯದೊಡನೆ ಪ್ರಜಾರಕ್ಷಣ ಲೋಕಸ್ವಾತಂತ್ರ್ಯಪಾಲನ ಸದ್ಧರ್ಮ ಉದ್ಧಾರಕ್ಕಾಗಿ ಘೋರಯುದ್ಧವು ಸಮಾಧಾನವಾಗಲೆಂದು ಸರ್ವರೂ ಏಕವಾಕ್ಯತೆಯಿಂದ ಸರ್ವಶಕ್ತನಾದ ಜಗದೀಶನನ್ನು ಪ್ರಾರ್ಥಿಸಲಾಯ್ತು. ಘನವನ್ನೈದಿದ ಸಾರ್ವಭೌಮರಿಗೂ, ನಮ್ಮನ್ನಾಳುವ ಶ್ರೀಮನ್ ಮಹಾರಾಜರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., ಜಿ.ಬಿ.ಇ., ಯವರಿಗೂ, ಸಚಿವ ಶಿರೋಮಣಿಗಳಿಗೂ ಮಂಗಳವಾಗಲೆಂದು ಪ್ರಾರ್ಥಿಸುತ್ತಾ ಸಭಾ ಬರಖಾಸ್ತಾಯಿತು. ಮೇಲ್ಕಂಡ ಸಹೋದರರೀರ್ವರೂ ಧರ್ಮನಿರತರಾಗಿಯೂ ಇಂಥಾ ಸಂತೋಷಕೂಟವನ್ನು ಆಗಾಗ್ಗೆ ನಡಿಸಿ, ಜನರ ಮನಸ್ಸಂತೋಷಪಡಿಸುತ್ತಿರುವುದು ಬಹಳ ಶ್ಲಾಘನೀಯವಾಗಿದೆ.

ಪ್ರತ್ಯಕ್ಷದರ್ಶಿ.

ಗೋರೀಬಿದನೂರು ತಾಲ್ಲೂಕು ಹಲಕೂರು.

ತಾ॥ 5.8.1918 ರಲ್ಲಿ ಇಲ್ಲಿನ ಅಲಕಪುರಿ ಶ್ರೀ ಸೋಮೇಶ್ವರಸ್ವಾಮಿ ಪರಸ್ಪರ ಸಹಾಯಕಸಂಘದ ಎರಡನೇ ವರ್ಷದ ಜನರಲ್ ಮೀಟಿಂಗು ಮ॥ ರಾ॥ ಚಿಕ್ಕಬಳ್ಳಾಪುರದ ಸರ್ಕಲ್ ಕೊ॥ ಆ॥ ಸೊ॥ ಇನ್ಸ್ಪೆಕ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 100 ಜನ ಮೆಂಬರುಗಳೂ, 200 ಜನಗಳವರೆಗೆ ಪ್ರೇಕ್ಷಕರೂ, ಅಂತು 300 ಜನಗಳವರೆಗೆ ನೆರೆದಿದ್ದರು. ಈ ಸೊಸೈಟಿಯು 138 ಮೆಂಬರುಗಳಿಂದ 10 ರೂ. ನ 570 ಷೇರುಗಳು ದಾಖಲಾಗಿ 15 ಮೆಂಬರುಗಳಿಂದ 67 ಷೇರು ಪೂರಾ ವೊಬಲಗು ಬಂದಿದೆ. ಆಸ್ತಿ 3641-14-9 ಪೈ ಇದೆ. ಉತ್ತಮವಾದ ಉದ್ದೇಶಗಳಿಗೆ ಸಾಲಗಳು ಕೊಡಲ್ಪಟ್ಟಿವೆ. ಪಂಚಮರೂ, ಹೆಂಗಸರೂ ಕೂಡ ಇದಕ್ಕೆ ಮೆಂಬರುಗಳಾಗಿರುವರು. 12 ಗ್ರಾಮಗಳು ಈ ಸಂಘದ ಆಡಳಿತಕ್ಕೆ ಒಳಪಟ್ಟಿವೆ. ಎಲ್ಲಾ ಗ್ರಾಮಗಳಿಂದಲೂ ಮೆಂಬರುಗಳು ಬಂದಿದ್ದರು. ಅನುಕೂಲವಾದ ಚರ್ಚೆಗಳು ಶಾಂತಭಾವದಿಂದ ಚರ್ಚಿಸಲ್ಪಟ್ಟುವು. ಧರ್ಮಸಂಸ್ಥಾಪನೆಗಾಗಿ ಘೋರಯುದ್ಧದಲ್ಲಿ ತೊಡಗಿರುವ ನಮ್ಮ ಶ್ರೀಮತ್ ಚಕ್ರವರ್ತಿಗಳವರ ಸೈನ್ಯದ ಸಹಾಯಕ್ಕಾಗಿ ನಮ್ಮನ್ನಾಳುವ ಶ್ರೀಮತ್ ಮಹಾರಾಜರವರ ಘನವಾದ ಸಂದೇಶವನ್ನು ಅರಿಕೆಮಾಡಿ, ನಮ್ಮಗಳ ಶಕ್ತ್ಯನುಸಾರ ಸಹಾಯಕರಾಗುವದು ನಮ್ಮ ಕರ್ತವ್ಯವೆಂದು ಈ ಸಂಘದ ಪ್ರೆಸಿಡೆಂಟರಾದ ಮ॥ ರಾ॥ ರಾ॥ ವೆಂಕಟರಮಣಯ್ಯನವರು ಉಪನ್ಯಾಸದ ಮೂಲಕ ಸರ್ವರಿಗೂ ವ್ಯಕ್ತಪಡಿಸಲು, ಸರ್ವರೂ ಆನಂದದಿಂದ ಅನುಮೋದಿಸಿ, ತಮ್ಮಗಳ ರಿಕ್ತದಶೆಗಾಗಿ ನೊಂದುಕೊಂಡು ಕರ್ತವ್ಯವನ್ನಾಲೋಚಿಸಿ, ಹಾಲಿ ಈಕ್ವಿಟೀಷನ್ ಫಂಡಿನಲ್ಲಿರುವ ವೊಬಲಗು ಪೈಕಿ 20 ರೂ. ಗಳ 2 ಸಾಲದ ಪತ್ರಗಳನ್ನು ಕೊಂಡುಕೊಳ್ಳಬೇಕೆಂದು ತೀರ್ಮಾನಿಸಿದುದು ಸಂತೋಷದ ವಿಷಯ.

ಇದೇ ಮೇಲುಪಂಕ್ತಿಯನ್ನೇ ಇತರ ಸಂಘದವರೂ ಅನುಸರಿಸುವರೆಂದು ನಂಬುತ್ತೇನೆ. ಬಳಿಕ ಶ್ರೀಮತ್ ಮಹಾರಾಜರವರ ಯುವರಾಜರವರ ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಗಳೊಡನೆ ಸರ್ವಾಂತರ್ಯಾಮಿಯಾದ ಭಗವಂತನಿಗೆ ವಂದನೆಗಳನ್ನರ್ಪಿಸಿ, ಸಭೆಯು ಮುಕ್ತಾಯವಾಯಿತು.

ಓರ್ವ ಪ್ರೇಕ್ಷಕ.

ಚನ್ನಗಿರಿ ತಾಲ್ಲೂಕು ಕ್ಯಾವನಗೆ.

ಚನ್ನಗಿರಿ ತಾಲ್ಲೂಕು ಕ್ಯಾವನಗೆ ಮೊಕ್ಕಾಂನಲ್ಲಿ ಶ್ರೀಮಚ್ಛೈಲಾದ್ರಿ ಬೃಹನ್ಮಠ ಸಂಸ್ಥಾನವು ಏರ್ಪಡಿಸಿದ ವಿವರವು:—

ತಾ॥ 8-7-1918 ರ ಲಾಗಾಯ್ತು 17-7-1918 ರವರೆಗೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಸೋಮಲಾಪುರದ ಮೊಕ್ಕಾಮಿನಿಂದ ಈ ಗ್ರಾಮಕ್ಕೆ ಆಡಬಾಬು ಸಹಿತ ಸಕಲ ವಿಜೃಂಭಣೆಯಿಂದ ಬಿಜಯಂಗೈಸಿ, ತಾರೀಖು 17.7.1918 ರವರೆಗೆ ಮೊಕ್ಕಾಂ ಮಾಡಿ ಆ ವೇಳೆಗಾಗಿ ಭಕ್ತಾದಿಗಳಿಂದ ಕಪ್ಪ, ಕಾಣಿಕೆ, ಬಿನ್ನಹ ವಗೈರೆ ಸ್ವೀಕರಿಸಿದುದಲ್ಲದೆ ಸದರೀ ಗ್ರಾಮದಲ್ಲಿ ಶಿಥಿಲವಾಗಿರುವ ಶ್ರೀ ವಿರಕ್ತಮಠವನ್ನು ಜೀರ್ಣೋದ್ಧಾರಮಾಡುವುದಕ್ಕಾಗಿ ಗ್ರಾಮದ ಕೆಲವು ಮುಖಂಡರುಗಳಿಂದ ಚಂದಾ ವಸೂಲುಮಾಡಿದುದಲ್ಲದೆ ಸನ್ನಿಧಿಯಿಂದಲೂ ಹಣ ಸ್ಯಾಂಕ್ಷನ್ ಮಾಡಿ ಸದರೀ ಮಠವನ್ನು ಕಟ್ಟುವುದಕ್ಕೋಸ್ಕರ ಕೆಲವು ಮುಖಂಡ ಜನಗಳ ಸುಪರ್ದು ಹಣಕೊಟ್ಟು, ಸದರೀ ನಿವೇಶನದಲ್ಲಿ ಇಷ್ಟೇ ಕಟ್ಟತಕ್ಕದೆಂಬು ಅಪ್ಪಣೆಮಾಡಿಸಿದುದಲ್ಲದೆ ತಾ॥ 16.7.1918 ನೇ ಸಾಯಂಕಾಲ ಸಮಸ್ತ ಬಿರುದಾವಳಿಗಳೊಡನೆ ವಿಜೃಂಭಣೆಯಿಂದ ಮಹಾಸನ್ನಿಧಿಯು ಬಿಜಯಂಗೈಸಿ, ಮ॥ ರಾ॥ ಸಾಹುಕಾರ್ ಚನ್ನಪ್ಪನವರ ಸ್ವಗೃಹದಲ್ಲಿ ಏರ್ಪಡಿಸಿದ್ದ ಸದರನ್ನು ಅಲಂಕರಿಸಿ, ಆಗಮಿಸಿದ ಮಹಾಸಭಿಕರ ಮನಸ್ಸಂತೋಷಪಡಿಸಿ, ಈ ಗ್ರಾಮದ ಹಾಲುಮತದವರು, ಕಳವಾಡರು, ಮಡಿವಾಳರು, ಈಡಿಗರು, ಮುಸಲ್ಮಾನರು ಮುಂತಾದ ಭಕ್ತಾದಿಗಳಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿ ಸಂತೋಷಭರಿತರಾದರು. ಮಹಾಸನ್ನಿಧಿಯು ಇಲ್ಲಿಗೆ ದಯಮಾಡಿಸಿದಲಾಗಾಯ್ತು ಈವರೆಗೆ ಯಾವ ನ್ಯೂನತೆಯೂ ಬಾರದಂತೆ ನಡಿಸಿದ ಏರ್ಪಾಡಿನಿಂದಲೋ, ಸನ್ನಿಧಿಯ ಕೃಪಾದೃಷ್ಟಿಯಿಂದಲೋ, ಅಥವಾ ಮತ್ಯಾವ ಕಾರಣದಿಂದಲೋ ಈ ದಿವಸ ನಡೆಸಿದ ಮಹೋತ್ಸವವು ದಸರಾದಲ್ಲಿ ನಡೆವ ಉತ್ಸವದಂತೆಯೇ ಸಕಲ ವಿಜೃಂಭಣೆಯಿಂದ ನೆರವೇರಲೋಸುಗ 3 ಘಂಟೆಯ ಕಾಲದೊಳಗೇ ಎಲ್ಲಾ ಏರ್ಪಾಡುಗಳನ್ನೂ ಸಜ್ಜುಗೊಳಿಸಿ, ಶ್ರೀ ಜಗದ್ಗುರುಗಳವರ ದಿಗ್ವಿಜಯೋತ್ಸವವನ್ನು ನೆರವೇರಿಸಿದುದಕ್ಕಾಗಿ ಮ॥ ರಾ॥ ಸಾಹುಕಾರ್ ಚನ್ನಪ್ಪನವರಿಗೆ "ಬಹದ್ದೂರ್" ಎಂಬುದನ್ನು ಆಶೀರ್ವಾದ ಮಾಡಿರುವುದಾಗಿ ಮಹಾಸನ್ನಿಧಿಯೇ ನೆರೆದಿರುವ ಮಹಾಸಭಿಕರಿಗೆಲ್ಲಾ ಅಪ್ಪಣೆಕೊಡಿಸಿದ ನಂತರ ಸಭಿಕರಿಗೆಲ್ಲಾ ಫಲ, ಪುಷ್ಪ ತಾಂಬೂಲಾದಿಗಳನ್ನು ಸಮರ್ಪಿಸಿ, ಸಭೆಯನ್ನು ಬರಖಾಸ್ತು ಮಾಡಲಾಯಿತು.

ಪ್ರತ್ಯಕ್ಷದರ್ಶಿ.

ಸೊರಬ ತಾಲ್ಲೋಕ್ ಜಡೇದ ವಿರಕ್ತಮಠದ ಶ್ರೀಗುರುಸಿದ್ಧವೃಷಭೇಂದ್ರ ಸ್ವಾಮಿಗಳವರ ಆಂಗ್ಲೋ ಸಂಸ್ಕೃತ ಪಾಠಶಾಲಾ.

"ಉದಾರಚರಿತಾನಾಂತು ವಸುಧೈವಕುಟುಂಬಕಂ" ಎಂಬ ವಚನಕ್ಕನುಸಾರವಾಗಿ ಪರಾರ್ಥಕ್ಕಾಗಿ ಕೆಲಸಮಾಡುವುದೇ ಮನುಷ್ಯನ ಮುಖ್ಯ ಕರ್ತವ್ಯವೆಂದು ಭಾವಿಸಿ ಕೇವಲ ಬಾಲ್ಯದಿಂದಲೂ ದೇಶಸೇವೆ ಸಂಘಸೇವೆ ಮೊದಲಾದ ಕೆಲಸಗಳಲ್ಲಿಯೇ ನಿರತರಾಗಿರುವ ನಮ್ಮ ವಿರಕ್ತಮಠದ ಸರ್ವಾಧಿಕಾರಿಗಳಾದ ಶ್ರೀ॥ ಚನ್ನವೀರಯ್ಯನವರು ಈ ಮಠದ ಪುರೋಭಿವೃದ್ಧಿ ವಿಷಯದಲ್ಲಿ ಅನೇಕಾನೇಕ ಏರ್ಪಾಡುಗಳನ್ನು ಮಾಡಿದರು. ಗುರುಗಳ ಹೆಸರಿನಲ್ಲಿ ಪಾಠಶಾಲೆಯೊಂದನ್ನು ಮಠದಲ್ಲಿ ಸ್ಥಾಪಿಸಬೇಕೆಂಬ ಉದ್ದೇಶವು ಬಹಳ ದಿನಗಳಿಂದ ಇವರ ಮನಸ್ಸಿನಲ್ಲಿತ್ತು. ಆದರೆ ಈಗಿನ ಎಷ್ಟೋ ಪಾಠಶಾಲೆಗಳಲ್ಲಿ 6.7 ವರ್ಷಗಳ ಕಾಲ ಅಭ್ಯಾಸಮಾಡಿದ ವಿದ್ಯಾರ್ಥಿಗಳ ವಿದ್ಯೆಯೂ ಕೂಡ ಅಂತ್ಯದಲ್ಲಿ ಫಲಕಾರಿಯಾಗದೆ ಹೋಗುತ್ತಿರುವಂತೆ ಇಲ್ಲಿಯೂ ಆದೀತೆಂಬ ಹೆದರಿಕೆಯಿಂದಲೋ, ಅಥವಾ ಅವರ ಮನಸ್ಸಿಗೆ ಒಪ್ಪುವ ಉಪಾಧ್ಯಾಯರು ಸಿಕ್ಕದ್ದರಿಂದಲೋ ಅಥವ ಸಂಘದವರು ಸರಿಯಾದ ಉತ್ತೇಜನಕೊಡದೆ ಇದ್ದದ್ದರಿಂದಲೋ ಯಾವ ಕಾರಣದಿಂದಲೋ ಈಗ 2.3 ವರ್ಷಗಳಿಂದ ಪಾಠಶಾಲಾ ಸ್ಥಾಪನ ವಿಷಯದಲ್ಲಿ ಬಹಿರಂಗದಲ್ಲಿ ಮಾತ್ರ ಉದಾಸೀನರಾಗಿಯೇ ಇದ್ದು ವೀರಶೈವಮತದ ಉತ್ಕರ್ಷತ್ವ, ಮಹತ್ವ, ವೀರಶೈವರ ನಿಜವಾದ ಕರ್ತವ್ಯ ಮೊದಲಾದ ಸಂಗತಿಗಳನ್ನೂ ವೀರಶೈವಾಚಾರವು ಎಷ್ಟೋ ಕಡೆಗಳಲ್ಲಿ ಬಹಳ ಮಟ್ಟಿಗೆ ಲೋಪವಾಗುತ್ತಾ ಇರುವದಕ್ಕೆ ವಿದ್ಯಾಭ್ಯಾಸದ ನ್ಯೂನತೆಯೆ ಕಾರಣವೆಂಬ ವಿಷಯಗಳನ್ನೂ ಕೇವಲ ದಡ್ಡರಿಗೂ ಸಹ ಮನಸ್ಸಿಗೆ ಹತ್ತುವಂತೆ ಅಲ್ಲಲ್ಲಿ ಉಪದೇಶಿಸುತ್ತಾ ಬಂದರು. ಬರಬರುತ್ತಾ ಈ ಪ್ರಾಂತದ ಜನಗಳಿಗೆ ಪಾಠಶಾಲಾ ಸ್ಥಾಪನೆಯು ಅತ್ಯವಶ್ಯಕ ಕಂಡುಬಂದು ಆ ವಿಷಯದಲ್ಲಿ ಅವರ ಉತ್ತೇಜನವು ಸಹ ಬಹಳವಾಯ್ತು. ಈ ಸಮಯಕ್ಕೆ ಸರಿಯಾಗಿ ವೇದ, ಜ್ಯೋತಿಷ, ವೈದಿಕಕರ್ಮ, ಪ್ರಯೋಗ, ಇಂಗ್ಲೀಷ್ ಈ ವಿದ್ಯೆಗಳಲ್ಲಿ ಸುಶಿಕ್ಷಣವನ್ನು ಪಡೆದ ಶಾಸ್ತ್ರಿಗಳೊಬ್ಬರು ಇವರಿಗೆ ದೊರೆತರು ಈ ಸಮಯದಲ್ಲಿ ಸುಮ್ಮನಿರುವದು ಅನುಚಿತವೆಂದು ನಮ್ಮ ಮ॥ ರಾ॥ ಚನ್ನವೀರಯ್ಯನವರು 1918 ನೇ ಮಾರ್ಚಿ ತಾ॥ 20 ರಲ್ಲಿ ಪಾಠಶಾಲೆಯನ್ನು ಸ್ಥಾಪನೆಮಾಡಿದರು. ನಾಲಿಗೆ ಗ್ರಾಮದ ಪಟೇಲ್ ಮ॥ ರಾ॥ ವಿರುಪಾಕ್ಷಗೌಡರು ಪಾಠಶಾಲೆಗೆ ಪ್ರೆಸಿಡೆಂಟರಾಗಿಯೂ, ಜಡೇದಕೋಟೆ ಕಸಬಾ ಮಠದ ಕಂಬಸವಯ್ಯನವರು, ಜಗಟೂರು ಸುರಗಿ ಮಠದ ಬಸವಂತಯ್ಯನವರು, ಮ॥ ರಾ॥ ಜಡೇದ ಪಟೇಲ್ ಈರಪ್ಪಗೌಡರು, ಮ॥ ರಾ॥ ತುಮರಿಕೊಪ್ಪದ ರುದ್ರಪ್ಪಗೌಡರು ಇವರುಗಳು ಕಮಿಟಿ ಮೆಂಬರುಗಳಾಗಿಯೂ ಏರ್ಪಡಿಸಲ್ಪಟ್ಟರು. ಪಾಠಶಾಲೆಯಲ್ಲಿ [illegible] ಜ್ಯೋತಿಷ, ವೇದ, ವೈದಿಕಕರ್ಮಪ್ರಯೋಗ, ಮತ್ತು ಇಂಗ್ಲೀಷ 1, 2, 3, 4 ನೇ ತರಗತಿಯ ಪಾಠಗಳು ಸಹ ನಡೆಯುತ್ತಾ ಇರುತ್ತವೆ. ಜಯಾಯ ಶಾಸ್ತ್ರಗಳಲ್ಲಿ ನೈಪುಣ್ಯವನ್ನು ಹೊಂದಿದ ಬೇರೆ ಬೇರೆ 4-6 ಮಂದಿ ಉಪಾಧ್ಯಾಯರಿಂದ ನಡೆಸಲ್ಪಡಬೇಕಾದ ಅಭ್ಯಾಸಗಳನ್ನು ಶಾಸ್ತ್ರಿಗಳೊಬ್ಬರೇ ಸ್ವಲ್ಪವೂ ನ್ಯೂನತೆ ಇಲ್ಲದಂತೆ ಸಾಗಿಸಿಕೊಂಡು ಹೋಗುತ್ತಿರುವದು ಗುರುಕೃಪಾಮಹಿಮೆಯೇಹೊರ್ತು ಈ ವಿಷಯದಲ್ಲಿ ಶಾಸ್ತ್ರಿಗಳ ವಿದ್ವತ್ತೂ, ಸಾಹಸವೂ, ಚತುರತೆಯೂ, ಶ್ಲಾಘನೀಯವಲ್ಲ. ಈಗ ಈ ಪ್ರಾಂತದಲ್ಲಿ ಎಲ್ಲಾ ವೀರಶೈವ ಗೃಹಸ್ಥರ ಮನೆಗಳಲ್ಲಿ ನಡೆಯಬೇಕಾದ ವೈದಿಕಕರ್ಮಗಳನ್ನು ಪಾಠಶಾಲೆಯ ವಿದ್ಯಾರ್ಥಿಗಳಿಂದಲೇ ಏನೂ ಲೋಪವಿಲ್ಲದೆ ಯಥಾವಿಧಿಯಾಗಿ ನಡೆಸಲ್ಪಡುತ್ತಿರುತ್ತವೆ. ಪಾಠಶಾಲೆಯು ಪ್ರಾರಂಭವಾಗಿ 4.5 ತಿಂಗಳುಗಳು ಮಾತ್ರ ಆಗಿದ್ದು ಇಷ್ಟು ಅಲ್ಪಕಾಲದಲ್ಲಿ ಇಂಥ ಸುಶಿಕ್ಷಣವನ್ನು ನಡೆಸಿರುವುದು ಬಹಳ ಆಶ್ಚರ್ಯವಾಗಿರುತ್ತದೆ. ಪಾಠಶಾಲೆಗೆ ಸದ್ಯದಲ್ಲಿ ಸ್ವಲ್ಪ ಬಡತನವಿರುವುದರಿಂದ ಉಪಾಧ್ಯಾಯರ ಉಪಕಾರವನ್ನು ಭರ್ತಿಮಾಡಲಿಕ್ಕೆ ವಿದ್ಯಾರ್ಥಿಗಳಿಂದ ಪ್ರತಿತಿಂಗಳಲ್ಲಿ ಫೀಜು ವಸೂಲ್ಮಾಡಲ್ಪಡುತ್ತಾ ಇರುತ್ತಿರುವುದಿಷ್ಟೇ ಹೊರ್ತು ಪರಸ್ಥಳದಿಂದ ಬಂದಿರತಕ್ಕ ವಿದ್ಯಾರ್ಥಿಗಳ ಊಟ, ಉಪಚಾರ, ವಾಸ ಮೊದಲಾದ ಅವರ ಎಲ್ಲಾ ದೇಖರೇಖಿ ಬಗ್ಗೆ ಥಲೋ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಮ॥ ರಾ॥ ಚನವೀರಯ್ಯನವರು ಪಾಠಶಾಲೆಯ ಎಲ್ಲಾ ಭಾರವನ್ನು ವಹಿಸಿಕೊಂಡು ತಾಳ್ಮೆಯಿಂದಲೂ, ಧೈರ್ಯದಿಂದಲೂ, ಉತ್ಸಾಹದಿಂದಲೂ ಎಷ್ಟರಮಟ್ಟಿಗೆ ಕೆಲಸಮಾಡುತ್ತಿರುತ್ತಾರೆಂಬ ವಿಷಯದಲ್ಲಿ ಎಷ್ಟು ಬರವಣಿಗೆ ಬರೆದರೂ ತೀರುವಂತಿಲ್ಲ. ದುಸ್ಸಹವಾದ ದೀರ್ಘಜಾಡ್ಯವನ್ನು ಅನುಭವಿಸುತ್ತಿರುವ ಮನುಷ್ಯನ ಮನೆಯ ಅಂಗಳದಲ್ಲಿ ಸಂಜೀವನ ಮೂಲಿಕೆಯು ಹುಟ್ಟಿ ಮೊಳಕೆಯಾಗುತ್ತಿರುವಂತೆ ದೊಡ್ಡ ಜನಾಂಗವನ್ನು ಸುಧಾರಿಸುವುದಕ್ಕೆ ತರಲು ಅರ್ಹತೆಯನ್ನು ಹೊಂದಬಹುದಾದ ಪಾಠಶಾಲೆಯ ಪೋಷಣೆಯ ವಿಷಯದಲ್ಲಿ ದೇಶಾಭಿಮಾನಿಗಳಾದ ಮಹನೀಯರ ಉತ್ತೇಜನವೂ, ಸಹಾಯವೂ ಅತ್ಯವಶ್ಯವಿರುತ್ತದೆ.

ಒಬ್ಬ ವೀರಶೈವ.

ಕಲ್ಕತ್ತಾ ಮ್ಯುನ್ಸಿಪಾಲಿಟಿಯ ಕಳೆದ ವರ್ಷದ ಆದಾಯವು 12550000 ರೂ. ಗಳು ವೆಚ್ಚ ಕಳೆದು ಉಳಿದುದ್ದು ೫೦ ಲಕ್ಷ. ಅಲ್ಲಿಯ ಆರೋಗ್ಯಸ್ಥಿತಿಯು ಸಮರ್ಪಕವಾಗಿಯೂ ಮರಣಸಂಖ್ಯೆಯು ಕಡಿಮೆಯಾಗಿಯೂ ಇದೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 36

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹಳುವಾತಿಗೂ ವೈದ್ಯರ ಸಮಯವನ್ನು ಕಾದು ನೋರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೮೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೪ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್ ಮೈ ಇನ್ಸ್ಟಿಟ್ಯೂಟ್ ಅಫ್ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಆಗಸ್ಟ್ ತಾ॥ ೧೮ ರಿಂದ ೧೯೧೮ ನೆಯ ಆಗಸ್ಟ್ ತಾ॥ ೨೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಶ್ರಾವಣ ಶು॥ ಏಕಾದಶಿಯಿಂದ ಶ್ರಾವಣ ಬ॥ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಶಿಷ್ಟ
18	[1]ಭಾನು	ಏಕಾ	21-51	ಮೂಲ	20-51	2
19	[2]ಸೋಮ	ದ್ವಾದ	21-36	ಪೂಷಾ	21-31	3
20	[3]ಮಂಗಳ	ತ್ರಯೋ	18-27	ಉಷಾ	21-2	4
21	[4]ಬುಧ	ಚತು	15-0	ಶ್ರವಣ	19-31	5
22	[5]ಗುರು	ಪೌರ್ಣ	10-39	ಧನಿಷ್ಠ	17-4	6
23	ಶುಕ್ರ	ಪಾಡ್ಯ	5-48	ಶತಭಿಷ	13-49	7
24	[6]ಶನಿ	ಬಿದಿಗೆ	0-16	ಪೂಭಾ	10-10	8

(1) ಏಕಾದಶೀತಿಥಿಃ, ಸರ್ವತ್ರೈಕಾದಶೀ. (2) ಪ್ರದೋಷಃ, ದಧಿವ್ರತಾರಂಭಃ. (3) ಮಂಗಳಗೌರೀವ್ರತಂ, (4) ಯಜುರುಪಾಕರ್ಮ, ಸರ್ವತ್ರ ಋಗುಪಾಕರ್ಮ, ಹಯಗ್ರೀವಜಯಂತೀ. (5) ಗಾಯತ್ರೀಜಪಃ. (6) ರಾಘವೇಂದ್ರಸ್ವಾಮಿಗಳ ಪುಣ್ಯದಿನ, ಶ್ರಾವಣಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲಿಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲೀಹಿಕ್ಸಾ | ಘನಪಕ್ಷಶ್ಶಾವಶಾರಾ ಪಕ್ಷಜ್ಞ ನಕ್ಷತ್ರನೋಪರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಳಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚೈತ ಲಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಆಗಸ್ಟ್ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೩೪

REGISTERED NO. M. 124.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ಇದರಲ್ಲಿ ಉಕ್ತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಶರಣಸತಿಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣಾರಾಧ್ಯರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸಿಂಗಿರಾಜಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕಾಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, 5 ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಥಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಯಾಸ್ಕೆಟ್ ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸವಾಗುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—

MADRAS
MAIL
WATCH
WITH 15
PRESENTS

ಜರಾಕ್ ಬೀಸಣಿಗೆ 1, ಕಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಆತ ರವುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರಾಕ್ ಸೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
36 8, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಮಕ್ಕಳಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಜಲೋದರರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಆಂದರೆಶೂಲಿ, ನಡಶೂಲಿ, ವಾತಶೂಲಿ, ರಕ್ತಪಿತ್ತ, ಗುಪ್ತವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯಿವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣವಾದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಸೇರಿನ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ತೋರಿದರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
16 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಸೇರಿನ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಸುಬೋಧಿನಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮತ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೦—೧೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಜಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
21 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 43

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶೀಘ್ರಪತನ, ಸ್ವಪ್ನಸ್ಖಲನ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಸೂಕಿ) ಗುಪ್ತಪ್ರದೇಶದಮೇಲೆ ಹುಟ್ಟುವ ಎಲ್ಲಾ ತರಹದ ಚಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಟಿಕೆಟ್ ಜೊತೆಯಲ್ಲಿ ಕಳುಹಿಸಲ್ಪಡುವದು.
ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
36 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶಶಾಲಾ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಆಗಸ್ಟ್ ತಾ|| ೨೫ ನೆಯ ಭಾನುವಾರ.

ಸಂಪದಭ್ಯುದಯ ಪ್ರಯತ್ನ.

ನಮ್ಮ ಪ್ರಭುತ್ವದವರು ದೇಶದ ಸಂಪದಭ್ಯುದಯಕ್ಕಾಗಿ ಮಾಡುತ್ತೇವೆಂಬ ಪ್ರಯತ್ನದಲ್ಲಿ ಕಾಣುವಷ್ಟು ವಿಜೃಂಭಣೆಯು ಫಲೋದಯದಲ್ಲಿ ಕಾಣುತ್ತಲಿಲ್ಲ. ಅದರ ವ್ಯಾಜದಿಂದ ಆಗುತ್ತಿರುವ ವ್ಯಯಾಧಿಕ್ಯವು ವಿಪರೀತವಾಗಿದೆ. ತಕ್ಕಷ್ಟು ಫಲವು ಕಾಣುವ ಸೂಚನೆಯಾದರೂ ಇದ್ದರೆ ಆಗುತ್ತಿರುವ ವೆಚ್ಚಕ್ಕಾಗಿ ದೇಶಾಭಿಮಾನಿಗಳು ಚಿಂತಿಸಲಾರರು. ಡಿಸ್ಟ್ರಿಕ್ಟು ಕಮಿಟಿಗಳು ಡಿಸ್ಟ್ರಿಕ್ಟಿಗೊಂದೊಂದರಂತೆ ವೃತ್ತಪತ್ರಿಕೆಗಳನ್ನು ಹೊರಡಿಸಿಕೊಂಡಿರುವುದರಿಂದ ಅವುಗಳು ವಂದಿಮಾಗಧರಂತೆ ಪ್ರಭುತ್ವದವರ ಅರ್ಥಸಾಧಕಯತ್ನಗಳನ್ನು ಮಾತ್ರ ಎರಡು ಹೊತ್ತೂ ಹೊಗಳುತ್ತಿರುತ್ತವೆ. ಪರದೇಶದಿಂದ ಅವಶ್ಯಕಸಾಮಗ್ರಿಗಳು ಈ ದೇಶಕ್ಕೆ ಬರದಿರುವ ಇಂಥ ಸಮಯದಲ್ಲಿ ಅತ್ಯವಶ್ಯಕಗಳಾದ ಸಾಮಗ್ರಿಗಳನ್ನು ನಿರ್ಮಿಸಿ ಮಾರಾಟಮಾಡುವಂಥ ಪ್ರಬಲಯಂತ್ರಾಗಾರಗಳಾವುವಾದರೂ ನಮ್ಮ ಅರ್ಥಸಾಧಕ ಸಮಾಜದವರ ಯತ್ನದಿಂದ ಸ್ಥಾಪಿಸಲ್ಪಟ್ಟಿದ್ದರೆ ದೇಶಕ್ಕೆ ಅವು ವಿಶೇಷ ಪ್ರಯೋಜನವನ್ನುಂಟುಮಾಡಬಹುದಾಗಿದ್ದಿತು. ಅಂಥ ಘನತರಸ್ಥಾಪನೆಯಾವುದೂ ಇದುವರೆಗೂ ಆಗಲಿಲ್ಲ. ಮಿ|| ಚಾಟರ್ಟನ್‌ರವರು ಮಾಡಿದ ಯತ್ನಗಳಿಂದ ಕಬ್ಬಿನಗಾಣದ ಸಕ್ಕರೆಯನಿರ್ಮಾಣದ ಯಂತ್ರಗಳ ಸ್ಥಾಪನೆಗೆ ವಿಶೇಷ ಧನವ್ಯಯವಾಯಿತೇ ಹೊರತು ತಕ್ಕ ಫಲವು ಕಂಡುಬಂದಿಲ್ಲ. ಗಂಧದ ಎಣ್ಣೆಯ ಕಾರ್ಯಾಲಯವೊಂದು ಫಲಪ್ರದವಾಗಿ ಹೇಳಲ್ಪಡುತ್ತಿದೆ. ಗಂಧದ ಮರದ ಬೆಲೆಯನ್ನು ಕಳೆದರೆ ಅದರಲ್ಲಿ ಬರುವ ಆದಾಯವೂ ಅಷ್ಟೇನೂ ವಿಶೇಷವಾಗಿ ಕಾಣಬರುವುದಿಲ್ಲ. ಮತ್ತೂ ಆ ಎಣ್ಣೆಯು ಪ್ರಜೆಗಳ ನಿತ್ಯೋಪಯೋಗ್ಯವಸ್ತುವೇನೂ ಅಲ್ಲ. ಅದರಲ್ಲಿ ಬರುವ ಅಷ್ಟೂ ಇಷ್ಟು ಲಾಭವಾದರೂ ಸರ್ಕಾರದ ಬೊಕ್ಕಸಕ್ಕೆ ಸೇರುವುದೇ ಹೊರತು ಆ ಕಾರ್ಯಾಲಯಸ್ಥಾಪನೆಯಿಂದ ಪ್ರಜೆಗಳಿಗೆ ಯಾವ ಅನುಕೂಲ್ಯವಾಗಲೀ ಲಾಭವಾಗಲೀ ಆಗಿರುವುದಿಲ್ಲ. ಇನ್ನು ಯುದ್ಧಕಾಲವಾದುದರಿಂದ ಯಂತ್ರಸಾಮಗ್ರಿಗಳನ್ನು ವಿದೇಶಗಳಿಂದ ತರಿಸಲವಕಾಶವಿಲ್ಲವೆಂದೂ, ಇಲ್ಲದಿದ್ದರೆ ಇಷ್ಟುಹೊತ್ತಿಗೆ ಎಷ್ಟೋ ಯಂತ್ರಾಲಯಸ್ಥಾಪನೆಗಳನ್ನು ಮಾಡಿಬಿಡುತ್ತಿದ್ದೆವೆಂದೂ ನಮ್ಮ ಸಂಪದಭ್ಯುದಯ ಸಾಧಕಪಕ್ಷದವರು ಪದೇಪದೇ ಹೇಳುತ್ತಲಿರುವುದುಂಟು. ಇದರಲ್ಲಿ ಸ್ವಲ್ಪಮಟ್ಟಿಗೆ ಸತ್ಯಾಂಶವಿಲ್ಲದೆ ಇಲ್ಲ. ಆದರೂ ಸಾಹಸಪಟ್ಟಿದ್ದರೆ ಬೇರೆ ವಿಧದಲ್ಲಿ ಕಾರ್ಯಸಾಧನೆ ಮಾಡಲಾಗದೆ ಇರುತ್ತಿರಲಿಲ್ಲವೆಂದು ನಮಗೆ ತೋರುವುದು. ದೀಪದಕಡ್ಡಿ ಪೆಟ್ಟಿಗೆಗಳು ನಿತ್ಯೋಪಯೋಗ್ಯವಸ್ತುಗಳಲ್ಲಿ ಅತಿ ಪ್ರಮುಖವಾದುವುಗಳಷ್ಟೆ. ಈಗ ಇದರ ಬೆಲೆಯು ೧ ಕ್ಕೆ ಮೂರಾಗಿರುವುದನ್ನು ಎಲ್ಲರೂ ಬಲ್ಲರು. ಇದರ ನಿರ್ಮಾಣಕ್ಕೆ ತಕ್ಕ ಮರಗಳು ನಮ್ಮ ದೇಶದ ಕಾಡುಗಳಲ್ಲೇ ದೊರೆಯುವುವೆಂಬುದು ಸಿದ್ಧವಾಗಿದೆ ನಮ್ಮ ರಾಜಧಾನಿಯಲ್ಲೇ ಮ|| ಕೃಷ್ಣಮೂರ್ತಿಯವರು ಈ ಕಾರ್ಯದಲ್ಲಿ ಸ್ವಲ್ಪದೂರ ಶ್ರಮಪಟ್ಟು ಕೃತಾರ್ಥತೆಯನ್ನು ಹೊಂದಿ ಅದನ್ನು ಅಭಿವೃದ್ಧಿಪಡಿಸುವುದರಲ್ಲೂ ಇದ್ದಾರೆ. ಇಂಥವರ ಸಹಾಯವನ್ನು ತೆಗೆದುಕೊಂಡು, ಅವಶ್ಯಕವಾದರೆ ಮತ್ತೆ ಒಬ್ಬಿಬ್ಬ ನಿಪುಣರನ್ನೂ ಒದಗಿಸಿಕೊಂಡು, ದೊಡ್ಡ ಪರಿಮಾಣದಿಂದ ಅದರ ಯಂತ್ರಾಗಾರವನ್ನು ಸ್ಥಾಪಿಸಬಾರದೇಕೆ? ಸಿಲೋನ್ ದ್ವೀಪದಲ್ಲಿ ಈ [illegible] ದೀಪದಕಡ್ಡಿಯ ಕೈಗಾರಿಕೆಗೆ ಆರಂಭಿಸಿ ಸ್ವಲ್ಪಕಾಲವಾಗಿದ್ದರೂ ಮೊನ್ನೆತಾನೇ ಅವರು ಅದರ ಯಂತ್ರಸಾಮಗ್ರಿಗಳನ್ನು ಪಶ್ಚಿಮದೇಶಗಳಿಂದ ತರಿಸಿಕೊಳ್ಳಲು ಸಾಧ್ಯವಿಲ್ಲದೆ ಹೋಗಲು, ಜಪಾನ್ ದೇಶದಿಂದ ತರಿಸಿಕೊಂಡು ಸ್ಥಾಪಿಸಿರುವರು. ಕಡ್ಡಿಗೆ ಅನುಕೂಲವಾಗತಕ್ಕ ಮರವು ಯಾವುದೂ ಸಿಲೋನ್ ದ್ವೀಪದಲ್ಲಿ ದೊರೆಯದಿದ್ದರೂ ಅವರು ಮರವನ್ನೂ ಕೂಡ ಜಪಾನಿನಿಂದಲೇ ತರಿಸಿಕೊಂಡು ದೀಪದಕಡ್ಡಿಗಳನ್ನು ನಿರ್ಮಿಸಲು ಸಾಹಸಪಟ್ಟಿರುವರು. ಹೀಗೆ ಮಾಡಿದರೂ ಜಪಾನು ಮೊದಲಾದ ವಿದೇಶಗಳಿಂದ ತರಿಸಿಕೊಳ್ಳುತ್ತಿದ್ದ ಪೆಟ್ಟಿಗೆಗಳಿಗಿಂತಲೂ ಅಗ್ಗವಾದ ಬೆಲೆಗೆ ಸಿಲೋನಿನಲ್ಲಿ ನಿರ್ಮಿತವಾಗುವ ಪೆಟ್ಟಿಗೆಗಳು ಸಿಕ್ಕುವುವಂತೆ. ಇಂಥ ಕರ್ಮಾಗಾರಸ್ಥಾಪನೆಯಿಂದ ದೇಶಕ್ಕೆ ಎಷ್ಟು ಪ್ರಯೋಜನವಾಗುವುದು! ನಮ್ಮ ದೇಶದಲ್ಲಿ ಮರಗಳಿಗೆ ಅಭಾವವಿಲ್ಲ. ಯಂತ್ರಗಳನ್ನು ಮಾತ್ರ ತರಿಸಿಕೊಳ್ಳಬೇಕಾಗಿರುವುದು. ಸಿಲೋನಿನವರಂತೆ ನಾವೂ ಕೂಡ ಜಪಾನಿನಿಂದ ಯಂತ್ರಸಾಮಗ್ರಿಗಳನ್ನೇಕೆ ತರಿಸಿಕೊಳ್ಳಬಾರದು?

ಇದಲ್ಲದೆ ಜಪಾನಿಗೆ ಹೋಗಿ ಬಂದವರು ಈಗ ನಮ್ಮಲ್ಲಿ ಅನೇಕರಿದ್ದಾರೆ. ಅಲ್ಲಿ ಮನೆಮನೆಗೂ ಕೈಗಾರಿಕೆಯಿಂದ ಕಾಗದವನ್ನು ನಿರ್ಮಿಸುವ ರೂಢಿಯುಂಟೆಂದು ಅವರುಗಳು ಹೇಳುತ್ತಾರೆ. ನಮ್ಮ ಮನೆಗೈಗಾರಿಕೆಯ ಶಾಖೆಯವರು ಅತ್ಯುಪಯೋಗಕರವೂ ಅವಶ್ಯಕವೂ ಆದ ಆ ಪರಿಶ್ರಮವನ್ನು ಈ ದೇಶದಲ್ಲಿಯೂ ಏಕೆ ಕಲಿಸಿಕೊಡಬಾರದು? ಕಾಗದದ ಕ್ಷಾಮವು ಈಗ ಎಲ್ಲಕ್ಕಿಂತಲೂ ಹೆಚ್ಚಾಗಿರುವುದಷ್ಟೆ. ಅದಕ್ಕೆ ಯಾವಾಗಲೂ ಬೇಕಾದಷ್ಟು "ಗಿರಾಕಿ" ಇರುವುದಷ್ಟೆ. ಉತ್ತಮವಾದ ಕಾಗದವನ್ನು ನಿರ್ಮಿಸಲು ಸಾಧಕವಾದ ಅಪಕ್ವಸಾಮಗ್ರಿಗಳು ನಮ್ಮಲ್ಲಿ ದೊರೆಯದಿದ್ದರೂ, ಮಧ್ಯಸ್ಥವಾದ ಕಾಗದಗಳ ನಿರ್ಮಾಣಕ್ಕಾದರೂ ಅವಶ್ಯಕವಾದ ಯಂತ್ರಸಾಮಗ್ರಿಗಳನ್ನು ಜಪಾನಿನಿಂದ ತರಿಸಿಕೊಂಡು ಪ್ರತಿಷ್ಠಿಸುವುದು ಅವಶ್ಯಕವಲ್ಲವೆ? ಕಾಗದದ ವಿಷಯವೂ ಹಾಗಿರಲಿ. ಪುಸ್ತಕಗಳ ಅಟ್ಟೆ ಮೊದಲಾದುವುಗಳಿಗೆ ಉಪಯೋಗಿಸತಕ್ಕ ರಟ್ಟುಗಳಿಗೆ ಈಗ ಎಷ್ಟು ದುರ್ಭಿಕ್ಷವುಂಟಾಗಿದೆ ನೋಡಿ. ೭ ರೂ. ಗೆ ಹಂಡ್ರೆಡ್‌ವೇಟಿನಂತೆ ದೊರೆಯುತ್ತಿದ್ದ ಆ ರಟ್ಟುಗಳಿಗೆ ಈಗ ೨೭ ರೂ. ಬೆಲೆಯಾಗಿದೆಯಲ್ಲ! ಇದರ ನಿರ್ಮಾಣಕ್ಕೆ ಅವಶ್ಯಕವಾದ ಮೂಲವಸ್ತುಗಳಿಗೇನೂ ಕಡಿಮೆಯಿಲ್ಲವಷ್ಟೆ. ಇದಕ್ಕೆ ಅವಶ್ಯಕವಾದ ಯಂತ್ರಸಾಮಗ್ರಿಗಳನ್ನು ಒದಗಿಸಿಕೊಂಡು ಕಾರ್ಯಾರಂಭಮಾಡಿದರೂ ಎಷ್ಟೋ ಲಾಭಬರುವುದಲ್ಲವೆ? ದೇಶೀಯರಿಗೂ ಅದರಿಂದ ಉಪಯೋಗವಾಗುವುದಲ್ಲವೆ? ಬರಿಯ ರಿಪೋರ್ಟುಗಳ ರಚನೆಯಿಂದಲೂ ವಿಜೃಂಭಣೆಯಿಂದಲೂ ಕಾಲಯಾಪನೆ ಮಾಡುವುದಕ್ಕಿಂತಲೂ ಇಂಥ ಅತ್ಯವಶ್ಯಕ ಪ್ರಯತ್ನಸ್ಥಾಪನೆಗಳು ಕೆಲವನ್ನು ಮಾಡುವುದರಿಂದ ದೇಶಕ್ಕೆ ಪ್ರಯೋಜನವನ್ನೂ, ವೆಚ್ಚಮಾಡುತ್ತಿರುವ ಹಣಕ್ಕೆ ಸಾರ್ಥಕತೆಯನ್ನೂ, ದೇಶಾಭಿಮಾನಿಗಳ ಗೊಣಗುಟ್ಟಾಟಕ್ಕೆ ನಿರವಕಾಶವನ್ನೂ ಉಂಟುಮಾಡುವಲ್ಲಿ ನಮ್ಮ ಸಂಪದಭ್ಯುದಯ ಶಾಖೆಯವರು ಅವಶ್ಯಕವಾಗಿ ಗಮನವಿಡುವವರಾಗಲೆಂದು ಕೋರುವೆವು.

ಯುದ್ಧವಾರ್ತೆಯು.

ಪಶ್ಚಿಮರಂಗದಲ್ಲಿ ಮಿತ್ರಮಂಡಲಿಯವರು ಮುಂದಕ್ಕೆ ನುಗ್ಗಿ ಹೋಗುವುದು ಇನ್ನೂ ಸಾಗುತ್ತಲೇ ಇದೆ. ಶತ್ರುಗಳ ಕಡೆಯ ಸೈನಿಕರು ಸಾವಿರಗಟ್ಟಲೆ ಸೆರೆಸಿಕ್ಕುತ್ತಲೇ ಇದ್ದಾರೆ. ಈಗ ನಮ್ಮವರು ರಾಯಿಪಟ್ಟಣವನ್ನು ಸಮೀಪಿಸಿ ಕೆಲವು ಭಾಗವನ್ನು ಆಕ್ರಮಿಸಿದ್ದಾರೆ. ಅಲ್ಲಿಯ ನಿಲ್ದಾಣವು ನಮ್ಮವರಿಂದ ಹಿಡಿಯಲ್ಪಟ್ಟಿದೆ. ಇವರ ಬಳಿಯಲ್ಲೂ, ಲಾಸಿಗ್ನಿ, ಒಯಿಸಿ ಪ್ರಾಂತದಲ್ಲೂ ಜರ್ಮನರು ಫ್ರೆಂಚರ ಮತ್ತು ಅಮೇರಿಕನ್ ಇಂಗ್ಲಿಷ್ ಸೈನ್ಯಗಳ ನುಗ್ಗಾಟವನ್ನು ತಡೆಯಬೇಕೆಂದು ಬಹು ಸಾಹಸಪಡುತ್ತಿದ್ದಾರೆ. ಆದರೆ ಅವರಿಗೆ ಅಷ್ಟೂ ಸೇನಾನಷ್ಟವಾಗುತ್ತಿದೆಯೇ ಹೊರತು ಫಲವು ವಿಶೇಷವಾಗಿ ಆಗುತ್ತಲಿಲ್ಲ. ಲಾಸಿಗ್ನಿಗೆ ಆಗ್ನೇಯದಿಕ್ಕಿನಲ್ಲಿರುವ ಗುರಿಯರ್ನ್ ಗ್ರಾಮವನ್ನು ಫ್ರೆಂಚರು ಹಿಡಿದರು. ಈ ಮಾರ್ಗದಿಂದಲೇ ಶತ್ರುಗಳು ರಾಯಿಪಟ್ಟಣಕ್ಕೆ ಸೈನಾದಿಗಳನ್ನು ಸಾಗಿಸುತ್ತಿದ್ದರು. ಇದನ್ನು ಶತ್ರುಗಳು ಕಳೆದುಕೊಂಡುದರಿಂದ ಅವರಿಗೆ ತುಂಬಾ ನಷ್ಟವಾಯಿತು. ಫ್ರೆಂಚರು ರಾಯಿಯ ಸಮೀಪಕ್ಕೆ ಸಾಗಿದುದಲ್ಲದೆ ಪೋಯಾರ್ಟ ಎಂಬ ಗ್ರಾಮವನ್ನು ಹಿಡಿದರು. ವೈಪ್ರೆಸ್ ರಂಗದಲ್ಲಿ ಇಂಗ್ಲೀಷರು ಸ್ವಲ್ಪಸ್ವಲ್ಪ ಮುಂದಕ್ಕೆ ಸಾಗಿ ಶತ್ರುಸ್ಥಾನಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಫ್ರೆಂಚರು ರಿಬೆಕೋರ್ಟ ಎಂಬ ಪುರವನ್ನು ಒಳ್ಳೆಯ ಪರಾಕ್ರಮದಿಂದ ವಶಪಡಿಸಿಕೊಂಡರು. ಇದರಿಂದ ಮಿತ್ರಮಂಡಲಿಯು ೧೯೧೬ ನೆ ವರ್ಷದಲ್ಲಿ ನೆಲಸಿದ್ದ ತಮ್ಮ ಪೂರ್ವಸ್ಥಾನಕ್ಕೆ ಹೋಗಿ ಸೇರಲನುಕೂಲವಾಯಿತು. ಈ ಸ್ಥಲವು ನಾಯರ್ನ್ ಪಟ್ಟಣಕ್ಕೆ ೧೧ ಮೈಲಿಗಳ ದೂರದಲ್ಲಿದೆ. ಇಲ್ಲಿ ನೆಲಸಿರುವ ಮಿತ್ರಮಂಡಲಿ ಸೈನ್ಯವು ಈಗ ಮುಂಬರಿದು ನಾಯನ್ನಿನಕಡೆಗೂ ಲಾಸಿಗ್ನಿಯಕಡೆಗೂ ಸಾಗುತ್ತಿದೆ. ಇಷ್ಟರಲ್ಲೇ ಲಾಸಿಗ್ನಿಪಟ್ಟಣವು ಫ್ರೆಂಚರ ವಶವಾಗುವುದರಲ್ಲಿದೆ. ಬಾಪಾಮಿಗೆ ಪಶ್ಚಿಮದಲ್ಲಿದ್ದ ತಮ್ಮ ಪ್ರದೇಶವನ್ನೆಲ್ಲಾ ಶತ್ರುಗಳು ಬಿಟ್ಟು ಹೋದರು. ಲಾಸಿಗ್ನಿಬಳಿಯ ಬೆಟ್ಟಗಾಡುಗಳಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಜರ್ಮನರು ಬಹು ಸಾಮಗ್ರಿಗಳನ್ನೂ ಸೈನ್ಯವನ್ನೂ ಕಳೆದುಕೊಂಡರು. ಲಾಸಿಗ್ನಿ ಬೆಟ್ಟಗಳಿಗೂ ಸಾಯಿಜನ್ಸಿಗೂ ಮಧ್ಯದಲ್ಲಿ ಜನರಲ್ ಮಾಂಜನ್‌ರವರ ಸೈನ್ಯವು ತೋರಿಸಿದ ಅಪಾರ ಪರಾಕ್ರಮದಿಂದ ನೋಪಿಯರ್ನ್ ವಿಂಗರ್ ಎಂಬ ಸ್ಥಾನವೂ, ಒಂದು ಪರ್ವತಪೀಠಭೂಮಿಯೂ ೧೭೦೦ ಮಂದಿ ಶತ್ರುಸೈನಿಕರೂ ಸಹ ನಮ್ಮವರ ವಶವಾದುವು. ಈ ಜಯದಿಂದ ಆಯಿಸ್‌ನದಿಯ ಪಡುವಮೇಲಿರುವ ಎಲ್ಲಾ ಸ್ಥಾನಗಳಿಗೂ ಮೂಲಭೂತವಾದ ಉನ್ನತಪ್ರದೇಶವೆಲ್ಲವೂ ಜನರಲ್ ಮಾಂಜನ್‌ರವರ ಅಧೀನವಾದಂತಾಯಿತು. ಎಯಿಸಿ ಪ್ರಾಂತದಲ್ಲಿರುವ ಶತ್ರುಸ್ಥಾನಗಳ ಮೇಲೆಲ್ಲಾ ಫಿರಂಗಿಗುಂಡುಗಳ ಮಳೆಸೂಸಲು ಬಹಳ ಅನುಕೂಲವಾದುದರಿಂದ ಶತ್ರುಗಳಿಗೆ ಅಲ್ಲಿ ನಿಲುಗಡೆಗೇ ಅವಕಾಶವಿಲ್ಲದಂತಾಗಿದೆ. ಎಯಿಸಿ-ಆಯಿಸ್‌ನದಿಗಳ ಮಧ್ಯದಲ್ಲಿರುವ ಫ್ರೆಂಚ್ ಸೇನೆಯು ಪುರೋಗಮನಕ್ಕೆ ಆರಂಭಿಸಿಬಿಟ್ಟರೆ ಶತ್ರುಗಳಿಗೆ ಸಂಪೂರ್ಣ ವಿಪನ್ನಾವಸ್ಥೆಯು ಪ್ರಾಪ್ತವಾಗುತ್ತದೆ. ಲಾಸಿಗ್ನಿ ಗ್ರಾಮವು ಇನ್ನೂ ಶತ್ರುಗಳ ವಶದಲ್ಲಿದ್ದರೂ ಅದರ ದಕ್ಷಿಣದಲ್ಲಿರುವ ಗುಡ್ಡದ ಮೇಲಣ ಸ್ಥಾನವೆಲ್ಲಾ ಫ್ರೆಂಚರ ವಶವಾಗಿದೆ. ಮಾಸಿಪ್ ಗ್ರಾಮವೆಲ್ಲಾ ಇವರ ವಶವಾಗಿದೆ. ಇಂಗ್ಲೀಷರ ೪ ನೆ ಸೈನ್ಯವೂ ಫ್ರೆಂಚರ ೧-೩ ನೆ ಸೈನ್ಯಗಳೂ ಸೇರಿ ೩೪ ಸಾವಿರ ಶತ್ರುಸೈನಿಕರನ್ನೂ ೬೦೦-೭೦೦ ಫಿರಂಗಿಗಳನ್ನೂ ಹಿಡಿದಿರುತ್ತವೆ. ಇವುಗಳಲ್ಲಿ ಇಂಗ್ಲೀಷರು ಹಿಡಿದುವೇ ೪೫೦ ಫಿರಂಗಿಗಳಾಗಿರುತ್ತವೆ. ಈ ಆಗಸ್ಟ್ ತಾ|| ೮ ರಿಂದೀಚೆಗೆ ಜರ್ಮನರಿಗೆ ಪ್ರಾಪ್ತವಾದಷ್ಟು ನಷ್ಟವು ಮಿತ್ರಮಂಡಲಿಯವರಿಗೆ ಇದುವರೆಗೆ ಯಾವ ಯುದ್ಧದಲ್ಲೂ ಸಂಭವಿಸಿರುವುದಿಲ್ಲ. ಲಿಸ್‌ಪ್ರಾಂತದಲ್ಲಿ ೯ ಮೈಲಿಯಗಲದ ಪ್ರದೇಶದಲ್ಲಿ ೨ ಮೈಲಿಗಳ ದೂರ ಶತ್ರುಗಳು ಹಿಮ್ಮೆಟ್ಟಿಹೋದರು. ಆಲ್ಬರ್ಟಿಗೆ ಉತ್ತರದಲ್ಲೂ ಸರ್ಪಿಪ್ರಾಂತದಲ್ಲೂ ಆಂಟ್ರ್ಪಿನ ಹಿಂಗಡೆಯೂ ಅವರು ದಿನದಿನಕ್ಕೂ ಹಿಮ್ಮೆಟ್ಟುತ್ತಲೇ ಇದ್ದಾರೆ. ಅವರಿಗೆ ಆತ್ಮರಕ್ಷಣೆಯೇ ದುರ್ಭರವಾಗಿದೆ. ರಿಬೇಕೋರ್ಟು ಹತ್ತಿರ ಯುದ್ಧ ನಡೆದುದರಲ್ಲಿ ಫೂಸಿ ಇರ್ಮಾಂಟ್ ಎಂಬ ಸ್ಥಲಗಳು ನಮ್ಮವರ ವಶವಾದುವು. ಡಾಮ್ರಿ ಹತ್ತಿರ ಕೆನಡಾ ದೇಶದ ಸೈನ್ಯಗಳು ತೋರಿಸಿದ ಪರಾಕ್ರಮದಿಂದ ೧೩೫೦ ಮಂದಿ ಶತ್ರುಸೈನಿಕರು ಹತರಾಗಿ ಇಲ್ಲವೆ ಗಾಯಗೊಂಡು ೨೫೦ ಮಂದಿ ಶತ್ರುಗಳು ಸೆರೆಸಿಕ್ಕಿದರು. ಫ್ರೆಂಚರು ಮತ್ತೊಂದು ಮಹಾವಸ್ಕಂದನಕ್ಕೆ ಸರ್ವಸನ್ನಾಹವನ್ನು ಮಾಡಿಕೊಳ್ಳುತ್ತಿದ್ದಾರೆ. ಶತ್ರುಗಳ ಸೇನಾಪಙ್ಕ್ತಿಯನ್ನು ಭೇದಿಸಿಕೊಂಡು ನುಗ್ಗುವುದು ಇವರ ಉದ್ದೇಶವಾಗಿಲ್ಲ. ಸಾಧ್ಯವಾದಷ್ಟೂ ಶತ್ರುಬಲವನ್ನು ಧ್ವಂಸಮಾಡಿ ಅವರನ್ನು ಕಿಗ್ಗೆಮಾಡಿ ತುಳ್ಳಿರಿಸಬೇಕೆಂಬುದೇ ಇವರ ಸಂಕಲ್ಪವಾಗಿದೆ. ಜನರಲ್ ಫಾಕ್‌ರವರು ಅಂಥ ಪ್ರಯತ್ನಗಳನ್ನೇ ಈಗ ಮಾಡುತ್ತ ಸಫಲರಾಗುತ್ತಿದ್ದಾರೆ. ಜರ್ಮನರಿಗೆ ಮೂಲಬಲವು ಕಡಿಮೆಯಾಗಿಹೋಗಿದೆ. ನವೀನ ಸೈನ್ಯವನ್ನು ಸೇರಿಸುವುದು ಅಸಾಧ್ಯವಾಗಿದೆ. ಅವರು ಬಲ್ಗೇರಿಯಾ ಆಸ್ಟ್ರಿಯದವರ ಸೇನಾಸಹಾಯವನ್ನು ಕೋರಿಕೊಳ್ಳುತ್ತಿದ್ದಾರೆ. ಅವರು ಬಂದು ಕೊಡುವುದು ಕಂಡೇಯಿದೆ. ಜರ್ಮನರು ಈಗಣ ತಮ್ಮ ಅಪಜಯಕ್ಕೆ ಕಾರಣಭೂತರಾದ ಸೇನಾಪತಿಗಳನ್ನು ತೆಗೆದು ಅವರ ಸ್ಥಾನಕ್ಕೆ ಹೊಸಬರನ್ನು ನಿಯೋಗಿಸಿದ್ದಾರೆ. ಲುಡಂಡಾರ್ಫರ ಸರ್ವಯಜಮಾನ್ಯದಿಂದ ಅವರು ಮುಂದೆ ಪಶ್ಚಿಮರಂಗದ ಯುದ್ಧವನ್ನು ಸಾಗಿಸುವರಂತೆ.

ಒಳದೇಶದ ವೃತ್ತಾಂತಗಳು.

ಮೈಸೂರಿಗಿಂತ ಈಗ ಬೆಂಗಳೂರಿನಲ್ಲೇ ಪ್ಲೇಗಿನ ಮರಣಗಳು ಹೆಚ್ಚಾಗಿವೆ.

ಶ್ರೀಮನ್ಮಹಾರಾಜರವರು ತಮ್ಮ ಸಂಚಾರವನ್ನೆಲ್ಲಾ ಮುಗಿಸಿಕೊಂಡು ಮುಂದಣ ತಿಂಗಳು ತಾ|| ೧೫ ಕ್ಕೆ ಸಂಸ್ಥಾನವನ್ನು ಸೇರುವವರಾಗಿದ್ದಾರೆ.

೨ ನೆ ಕೌನ್ಸಿಲರಾದ ಮಿ|| ಬಾನರ್ಜಿಯವರು ರಜಾವನ್ನು ಮುಗಿಸಿಕೊಂಡು ತಾ|| ೮ ರಲ್ಲಿ ಬೆಂಗಳೂರಿಗೆ ಬಂದರು.

ಹಾಸನದಲ್ಲಿ ಪುಸ್ತಕ ಭಂಡಾಗಾರ ಸ್ಥಾಪನೆಗಾಗಿ ೩೦೦೦, ಅಲ್ಲಿಯ ಸತ್ರವನ್ನು ಹೊಸದಾಗಿ ಕಟ್ಟುವುದಕ್ಕೆ ೯೦೦೦ ರೂಗಳನ್ನು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಬೆಂಗಳೂರು ಮೈಸೂರುಗಳ ಮ್ಯುನಿಸಿಪಾಲಿಟಿಗಳಿಗೆ ಅಲ್ಲಲ್ಲಿಯ ಕೌನ್ಸಿಲರುಗಳಲ್ಲೇ ಆರಿಸಲ್ಪಟ್ಟ ಅನಧಿಕಾರಿ ವೈಸ್‌ಪ್ರೆಸಿಡೆಂಟರು ಇಷ್ಟರಲ್ಲೇ ಏರ್ಪಡಬೇಕಾಗಿರುವುದು.

ಬೆಂಗಳೂರು ಮ್ಯುನಿಸಿಪಲ್ ಪ್ರೆಸಿಡೆಂಟರಾಗಿರುವ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಅಲ್ಲಿ ಹೊಸದಾಗಿ ಸ್ಥಾಪಿಸಲ್ಪಡಲಿಕ್ಕಿರುವ ಟ್ರಸ್ಟ್‌ಬೋರ್ಡಿನ ಚೇರ್ಮನ್ನರಾಗಿ ಮಾಡಲ್ಪಡುವುದರಲ್ಲಿದ್ದಾರೆಂದು ಕೇಳುತ್ತೇವೆ.

ಶ್ರೀಮದ್ಯುವರಾಜರವರೂ ಶ್ರೀಮನ್ಮಹಾಮಾತೃಶ್ರೀಯವರೇ ಮೊದಲಾದ ರಾಣಿವಾಸದವರೂ ಸಹ ಬೆಂಗಳೂರಿಗೆ ದಯಮಾಡಿಸಿರುವರು. ಗೌರೀಗಣೇಶನ ಹಬ್ಬವನ್ನು ಆ ಊರಿನಲ್ಲೇ ನೆರವೇರಿಸುವರೆಂದು ಕೇಳುತ್ತೇವೆ.

ನಂಜನಗೂಡು ಮುನ್ಸೀಫರಾದ ಮ|| ಬ್ಯಾರಿಸ್ಟರ್ ನಾಗಭೂಷಣರಾಯರು ೧ ತಿಂಗಳ ರಜಾಪಡೆದುಕೊಂಡಿರುವುದರಿಂದ ಮ|| ಎ. ಸುಂದರರಾಜಾರಾವ್ ಬಿ.ಎ.,ಬಿ.ಎಲ್. ರವರು ಅಲ್ಲಿಯ ಮುನ್ಸೀಫರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಕಳೆದ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾವಂತರಿಗೆ ಪಟ್ಟಾಂಕನವನ್ನು ಕೊಡುವ ಪ್ರಥಮ ಸಭೆಯು ಬರುವ ಆಕ್ಟೋಬರ್ ತಾ|| ೧೯ ರಲ್ಲಿ ನಡೆಯುವುದು. ವಿದ್ಯಾಪೀಠದ ಅಧ್ಯಕ್ಷರಾದ ಶ್ರೀಮನ್ಮಹಾರಾಜರವರೇ ಅದಿನ ಅಗ್ರಾಸನಾಸೀನರಾಗುವರು.

ನಮ್ಮ ಸಂಸ್ಥಾನಗಳಲ್ಲಿ ಸೈನ್ಯಕ್ಕೆ ಹೊಸದಾಗಿ ಜನರನ್ನು ಸೇರಿಸಿಕೊಳ್ಳುವುದಕ್ಕೆ ೧೯೧೭ ನೆ ಸೆಪ್ಟಂಬರ್ ತಿಂಗಳಿಂದಾರಂಭವಾಯಿತು. ಅಲ್ಲಿಂದ ಆಗಸ್ಟ್ ತಾ|| ೧೭ ರ ವರೆಗೆ ೩೦೬೯ ಮಂದಿ ಸೇರಿರುವರು. ಇವರಲ್ಲಿ ಸೈನ್ಯಕ್ಕೆ ಸೇರಲು ತಕ್ಕ ಅರ್ಹತೆಯಿಲ್ಲದವರೆಂದು ನಿರಾಕರಿಸಲ್ಪಟ್ಟವರು ೬೫೦ ಮಂದಿಗಳು.

ಮಳೆಯಿಲ್ಲದೆ ಬೆಳೆಯ ಸ್ಥಿತಿಯು ಬಹಳ ಭಯಂಕರವಾಗಿದೆ. ಜೋಳದ ಪೈರು ಹಲವುಕಡೆ ಹಾಳಾಯಿತು. ಈಗ ರಾಗಿ ಬಿತ್ತನೆಯನ್ನು ಅನೇಕರು ಮಾಡಿಯೇ ಇಲ್ಲ. ಕೆಲವುಕಡೆ ಮಾತ್ರ ಸಾಧಾರಣವಾಗಿ ಮಳೆಯಾದ ಸುದ್ದಿ ಬಂದಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಮಳೆಬೆಳೆಯ ಸ್ಥಿತಿಯು ಈಚೆಗೆ ಸ್ವಲ್ಪ ಅನುಕೂಲವಾಗಿದೆ.

ಧಾರವಾಡದ ಕಡೆಯೂ ಮಳೆಯ ಚಿಂತೆ ತಪ್ಪಿಲ್ಲ. ರೂಪಾಯಿಗೆ ಜೋಳವು ೩ ಸೇರು. ಅಕ್ಕಿ ೨ ಸೇರು. ಬೆಲ್ಲ ಸೇರಿಗೆ ೭ ಆಣೆಯಾಗಿದೆಯೆಂಬುದನ್ನು ಕೇಳಿದರೆ ಅಲ್ಲಿಯವರಿಗಿಂತಲೂ ನಮ್ಮ ದೇಶೀಯರೇ ಧನ್ಯವಂತರೆಂದು ಹೇಳಬೇಕಾಗುತ್ತದೆ. ಧಾರವಾಡದ ಕಡೆಯ ಸೇರು ನಮ್ಮ ಸೇರಿಗೆ ೧ಕ್ಕೆ ೧||| ರಷ್ಟು ದೊಡ್ಡದು.

ನವಸೈನಿಕ ಪತ್ರಿಕೆಯ ೨ ನೆಯ ಸಂಚಿಕೆಯು ನಮ್ಮ ಹಸ್ತಗತವಾಯಿತು. ಇದರಲ್ಲಿ ಉತ್ಸಾಹಜನಕಗಳಾದ ಕೆಲ ಲೇಖನಗಳೂ ಆಕರ್ಷಕವಾದ ಭಾವಚಿತ್ರಗಳೂ ಕೆಲವಿವೆ. ನಮ್ಮ ದೇಶದಿಂದ ರಣರಂಗಕ್ಕೆ ಹೋಗಿಯೂ ಹೋಗಲು ಸಿದ್ಧರಾಗಿಯೂ ಇರುವ ಅನೇಕ ವೀರರ ಭಾವಚಿತ್ರಗಳೂ, ಚಕ್ರವರ್ತಿಯವರ ಮತ್ತು ನಮ್ಮ ಶ್ರೀಮನ್ಮಹಾರಾಜ ಸೋದರರ ಲೆ|| ಕರ್ನಲ್ ದೇಶರಾಜಅರಸರೇ ಮೊದಲಾದವರ ಭಾವಚಿತ್ರಗಳೂ ಬಹು ಸುಂದರವಾಗಿವೆ.

ನಮ್ಮ ಸರ್ಕಾರದಿಂದ ಇದುವರೆಗೆ ಯುದ್ಧದ ಸಹಾಯಕ್ಕಾಗಿ ಕೊಟ್ಟಿರುವ ಹಣ ೬೬ ಲಕ್ಷ. ಅದರ ರಿಲೀಫ್ ಫಂಡಿಗೆ ೨ ಲಕ್ಷ. ಸಾಲವಾಗಿ ಕೊಟ್ಟಿರುವುದು ೭೫,೫೪,೪೦೦ ರೂ. ಪ್ರಜೆಗಳಿಂದ ಸಾಲವಾಗಿ ಕೊಡಲ್ಪಟ್ಟಿರುವುದು ೯೭,೧೮,೨೭೨ ರೂ. ಇದಲ್ಲದೆ ಭರತಖಂಡದ ರಿಲೀಫ್ ಫಂಡಿಗೆ ೧,೧೨,೦೩೮ ರೂ. ಗಳು ಬೇರೆ ಕೊಟ್ಟಿರುವರು. ಮತ್ತು ನಮ್ಮ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಸಹಾಯಕ್ಕೆ ೬೭,೨೭೫ ರೂ. ಕೊಡಲ್ಪಟ್ಟಿರುವುದು.

ಅಮಲ್ದಾರರುಗಳಾದ ಮ|| ಎಚ್. ಪಿ. ಗಂಗಾಧರಪ್ಪನವರು ನಗರದಿಂದ ಕಾನಕಾನಹಳ್ಳಿಗೂ, ಮ|| ಬಿ. ಭಗವಂತರಾವ್‌ರವರು ಹಾಸನ ಡಿಸ್ಟ್ರಿಕ್ಟ್ ಆಫೀಸಿನಿಂದ ನಗರ ತಾಲ್ಲೂಕ್ ಅಮಲ್ದಾರಿಗೂ, ಮ|| ಜೆ. ಸಂತಾನಮಯ್ಯಂಗಾರರು ಮಂಜರಾಬಾದಿನಿಂದ ಗೋರಿಬಿದನೂರಿಗೂ, ಚಿತ್ರದುರ್ಗ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಕೆ. ಸಿ. ಸುಬ್ರಾಯರ್‌ರವರು ಮಂಜರಾಬಾದ್ ತಾ|| ಅಮಲ್ದಾರಿಗೂ, ಮ|| ಕೆ. ಕೇಶವಾಚಾರ್ ಬಿ.ಎ., ಬಿ.ಎಲ್. ರವರು ಬೆಂಗಳೂರು ತಾ|| ಅಮಲ್ದಾರಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಚೀಫ್‌ಕೋರ್ಟಿನ ಜಡ್ಜರಾದ ಮ|| ಪರಮಶಿವಯ್ಯರ್‌ರವರು ಬರುವ ಅಕ್ಟೋಬರ್ ತಿಂಗಳಲ್ಲಿ ಕೆಲಸದಿಂದ ನಿವೃತ್ತರಾಗುವ ಕಾರಣ ಸೀನಿಯರ್ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರಾದ ಮಿ|| ಆರ್. ಬಿ. ಪ್ಲಮರ್‌ರವರು ಚೀಫ್‌ಕೋರ್ಟ ಜಡ್ಜರಾಗಿ ಹೋಗುವರೆಂದೂ ಮ|| ನಾಗಪ್ಪನವರು ಸೀನಿಯರ್ ಸೆಷನ್ ಜಡ್ಜರಾಗಿ ಮೈಸೂರಿಗೂ, ಇಲ್ಲಿರುವ ಮ|| ಸುಬ್ಬಣ್ಣನವರು ಬೆಂಗಳೂರಿಗೂ ವರ್ಗಾಯಿಸಲ್ಪಡುವರೆಂದೂ, ಚೀಫ್‌ಕೋರ್ಟ ರಿಜಿಸ್ಟ್ರಾರರಾದ ಮ|| ಎನ್. ಟಿ. ಗೋಪಾಲಯ್ಯಂಗಾರರು ಕಡೇ ತರಗತಿಯ ಡಿಸ್ಟ್ರಿಕ್ಟ್ ಜಡ್ಜರಾಗಿ ನಿಯಮಿಸಲ್ಪಟ್ಟು ಶಿವಮೊಗ್ಗೆಗೆ ವರ್ಗಾಯಿಸಲ್ಪಡುವರೆಂದೂ ವರ್ತಮಾನವಿದೆ.

ಧಾರವಾಡದಿಂದ ಪ್ರಭಾತ ಎಂಬ ಹೆಸರಿನಿಂದ ಹೊರಡುತ್ತಿರುವ ಮಾಸಪತ್ರದ ಪ್ರಥಮ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದೆವು. ಆಧುನಿಕ ಕವಿಗಳ ಕೃತಿಗಳಿಗೆ ಅವಲಂಬನವನ್ನಿತ್ತು ಪ್ರಕಾಶಕ್ಕೆ ತಂದು ಕಾವ್ಯಪ್ರಪಂಚಕ್ಕೆ ಪ್ರೋತ್ಸಾಹವನ್ನೀಯಬೇಕೆಂಬ ಪತ್ರಕರ್ತರ ಉದ್ದೇಶವು ಕನ್ನಡಿಗರೆಲ್ಲರ ಅಭಿನಂದನೆಗೂ ಪಾತ್ರವಾಗಿದೆ. ಇದರ ವರ್ಷದ ಚಂದಾ ಅಂಚೆವೆಚ್ಚ ಸೇರಿ ೨ ರೂ. ಈ ಪ್ರಥಮ ಸಂಚಿಕೆಯಲ್ಲಿ ಬಂದಿರುವ ಕವಿತೆಗಳಲ್ಲಿ ಕೆಲವು ಲಕ್ಷಣದೂರವಾಗಿವೆ. ಛಂದೋಲಕ್ಷಣ ನಿಯಮಗಳನ್ನನುಸರಿಸಲಾರದ ಕಷ್ಟದಿಂದ ಅವನ್ನೆಲ್ಲಾ ಮೀರಿ ಮನಸ್ಸಿಗೆ ಬಂದಂತೆ ಕವಿತೆಯನ್ನು ಬರೆಯುವುದೂ, ಅವುಗಳಿಗೆ ಪ್ರೋತ್ಸಾಹವೀಯುವುದೂ ಕೂಡ ಭಾಷೋದ್ಧಾರವಾಗುವುದಿಲ್ಲ. ದುರ್ನೀತಿ ದುರಾಚಾರಗಳಿಗೆ ಕೊಡಲ್ಪಡುವ ಪ್ರೋತ್ಸಾಹದಿಂದ ಸಂಘವಿನಾಶವಾಗುವಹಾಗೆ ದುಷ್ಕಾವ್ಯ ಪ್ರೋತ್ಸಾಹದಿಂದ ವಾಙ್ಮಯಕ್ಕೆ ವಿಘಾತವುಂಟಾಗುವುದು ಸಿದ್ಧ. ಪತ್ರಕರ್ತರು ಈ ವಿಷಯಕ್ಕೆ ತಕ್ಕ ಅವಧಾನವಿತ್ತರೆ ಅವರ ಸದುದ್ದೇಶವು ಸಫಲವಾಗುವುದು.

ಪ್ರತಿವರ್ಷದಲ್ಲೂ ನಡೆಯುವ ಮಹಾನವಮಿ, ವರ್ಧಂತ್ಯುತ್ಸವ ಕಾಲಗಳಲ್ಲಿ ರಾಜಧಾನಿಗೆ ಬರುವ ಸರ್ಕಾರದ ಉದ್ಯೋಗಿಗಳು ಮೊದಲಾದ ಅತಿಥಿಗಳ ಬಿಡಾರಕ್ಕೆ ಮರಿಮಲ್ಲಪ್ಪನವರ ಶಾಲಾಭವನವನ್ನು ತೆರವುಮಾಡಿಕೊಡುತ್ತಿದ್ದುದರಿಂದ ಸರ್ಕಾರದ ರಜಾದಿನಗಳಿಗಿಂತಲೂ ಹೆಚ್ಚುಕಾಲ ಆ ಕಟ್ಟಡದಲ್ಲಿ ವಿದ್ಯಾಭ್ಯಾಸಕ್ಕವಕಾಶವಿಲ್ಲದೆಯೂ, ಅಂಥ ಕಾಲದಲ್ಲೂ ವಿದ್ಯಾರ್ಥಿಗಳು ಫೀಯನ್ನು ಕೊಟ್ಟುಕೊಂಡೂ ಅಭ್ಯಾಸತಪ್ಪಿಯೂ ಕಷ್ಟನಷ್ಟವನ್ನನುಭವಿಸುತ್ತಿದ್ದರು. ಈ ಅನ್ಯಾಯವನ್ನು ತಪ್ಪಿಸುವ ಪ್ರಯತ್ನವನ್ನು ಟ್ರಸ್ಟಿಗಳು

ಈಗ ಮಾಡಿ, ಇತಃಪರಃ ಪಾಠಶಾಲೆಯ ಕಟ್ಟಡವನ್ನು ಅತಿಥಿಗಳ ಬಿಡಾರಕ್ಕೆ ಉಪಯೋಗಿಸಿಕೊಳ್ಳದೆ ಬೇರೆ ಏರ್ಪಾಟನ್ನು ಮಾಡಿಕೊಳ್ಳಬೇಕೆಂದು ಸರ್ಕಾರಕ್ಕೆ ಶೃತಪಡಿಸಿಕೊಂಡಿರುವುದಾಗಿ ಕೇಳುತ್ತೇವೆ. ಟ್ರಸ್ಟಿಗಳು ಮರಿಮಲ್ಲಪ್ಪನವರ ಶಾಲೆಯ ಸುವ್ಯವಸ್ಥೆಗೆ ಈಗ ಇಷ್ಟುಮಟ್ಟಿಗೆ ಮುತುವರ್ಜಿ ವಹಿಸುತ್ತಿರುವುದನ್ನು ಕಂಡು ಸಂತೋಷಿಸುತ್ತೇವೆ. ಟ್ರಸ್ಟಿಗಳ ಈ ನ್ಯಾಯವಾದ ಪ್ರಾರ್ಥನೆಯನ್ನು ಗೌರ್ನಮೆಂಟಿನವರು ನೆರವೇರಿಸಿಕೊಡದೆ ಹೋಗಲಾರರೆಂದು ನಂಬುತ್ತೇವೆ.

ತಾ|| ೨೦ ರಲ್ಲಿ ಬಳ್ಳಾರಿಗೆ ಹೋಗಿದ್ದ ಮದ್ರಾಸ್ ಗೌರ್ನರಾದ ಲಾರ್ಡ್ ಪೆಂಟ್ಲೆಂಡರವರು ಅನಂತಪುರದ ಮಾರ್ಗವಾಗಿ ನಿನ್ನೆದಿನ ಬೆಂಗಳೂರಿಗೆ ಸ್ಪೆಷಲ್ ಟ್ರೇನಿನಲ್ಲಿ ಬಂದು, ರೆಸಿಡೆಂಟರ ಆತಿಥ್ಯದಲ್ಲಿರುವರು. ಆಕೂಡಲೇ ಹೊಸೂರಿಗೆ ಹೋಗಿ ಅಲ್ಲಿ ಶ್ರೀಮದ್ಯುವರಾಜರ ಆತಿಥ್ಯವನ್ನು ಸ್ವೀಕರಿಸಿ ಅದಿನವೇ ಬೆಂಗಳೂರಿಗೆ ಹಿಂದಿರುಗಿ ಬರುವರು. ಆ ಸಾಯಂಕಾಲ ಅವರಿಗೆ ಔತಣವಾಗುವುದು. ತಾ|| ೨೫ ರಲ್ಲಿ ರೆಸಿಡೆಂಟರೊಡನೆ ಕುಣಿಗಲಿಗೆ ಹೋಗಿ ಕುದುರೆಗಳ ರಕ್ಷಣಾಲಯವನ್ನು ನೋಡಿಕೊಂಡು ಅದಿನವೇ ಬೆಂಗಳೂರಿಗೆ ಬಂದು ಆ ಸಾಯಂಕಾಲ ಕ್ರೈಸ್ತ ದೇವಾಲಯಕ್ಕೆ ಹೋಗಿ ಪ್ರಾರ್ಥನೆಯನ್ನು ಮಾಡುವರು. ತಾ|| ೨೬ ನೆ ಸೋಮವಾರ ಬೆಂಗಳೂರಿನಲ್ಲಿರುವ ಸೈನ್ಯದ ಕವಾಯಿತ್ತನ್ನು ಪರಾಂಬರಿಸಿ ಅಲ್ಲಿಯ ಸೈನ್ಯಾಧಿಪತಿಗಳೊಡನೆ ಪ್ರಾತಃಕಾಲ ಭೋಜನವನ್ನು ತೀರಿಸಿ, ಆಸಾಯಂಕಾಲ ಸೈನಿಕರ ವಿನೋದಸ್ಥಾನ ಮೊದಲಾದವುಗಳನ್ನು ಅವಲೋಕಿಸುವರು. ಈಮಧ್ಯೆ ಊರಿನಲ್ಲಿ ನೋಡತಕ್ಕ ಸ್ಥಲಗಳನ್ನೆಲ್ಲಾ ನೋಡಿಬರುವರು. ಆರಾತ್ರಿ ಮರಳಿ ಔತಣವಾಗುವುದು. ಅದಾದಕೂಡಲೇ ಸಪರಿವಾರರಾಗಿ ಸ್ಪೆಷಲ್ ಟ್ರೇನಿನಲ್ಲಿ ೧೦ ಗಂಟೆಗೆ ಬೆಂಗಳೂರನ್ನು ಬಿಟ್ಟು ಮಧುರೆಗೆ ಪ್ರಯಾಣಮಾಡುವರು.

ಮರಿಮಲ್ಲಪ್ಪನವರ ಧರ್ಮದ ಟ್ರಸ್ಟಿಯಲ್ಲಿ ಈಗ ವೀರಶೈವರು ೫ ಮಂದಿಗಳಿದ್ದಾರೆ. ಇತರರು ೫ ಮಂದಿ ಇದ್ದಾರೆ. ಆ ಧರ್ಮದ ಪಾಠಶಾಲೆಯಲ್ಲಿ ವೀರಶೈವ ವಿದ್ಯಾರ್ಥಿಗಳು ಬಹಳ ಕಡಿಮೆಯಾಗಿ ಬ್ರಾಹ್ಮಣ ವಿದ್ಯಾರ್ಥಿಗಳೇ ಬಹಳ ಹೆಚ್ಚಾಗಿರುವುದರಿಂದ ಟ್ರಸ್ಟಿಯಲ್ಲಿರುವ ವೀರಶೈವ ಸಭಿಕರ ಸಂಖ್ಯೆಯನ್ನು ತಗ್ಗಿಸಿ ಇತರರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ನೂರಾರು ಮಂದಿ ಮರಿಮಲ್ಲಪ್ಪ ಸ್ಕೂಲು ಬ್ರಾಹ್ಮಣ ವಿದ್ಯಾರ್ಥಿಗಳು ಮೈಸೂರು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿಗೆ ಒಬ್ಬ ಅಡ್ವೋಕೇಟರ ಮೂಲಕ ಅರ್ಜಿಯನ್ನು ಹಾಕಿಕೊಂಡಿದ್ದರು. ಹೀಗೆ ಹುಡುಗರನ್ನು ಮುಂದಿಟ್ಟು, ತಮ್ಮ ನಿರಂಕುಶಕಾರ್ಯಭಾರಕ್ಕೆ ಇದೊಂದು ಸಹಾಯಕಮಾರ್ಗವನ್ನು ಕಲ್ಪಿಸಿಕೊಳ್ಳಬೇಕೆಂದು ಪ್ರೇರೇಪಿಸಿದವರಿಗೆ ಟ್ರಸ್ಟಿಗಳ ಏರ್ಪಾಡು ಶಾಲಾವಿದ್ಯಾರ್ಥಿಗಳ ಜಾತಿವಿಭಾಗ ಸಂಖ್ಯಾದಿಗಳನ್ನು ಅನುಸರಿಸಿರುತ್ತದೆ ಅಥವಾ ಇಲ್ಲವೆಂಬುದು ಗೊತ್ತಾಗದೆ ಹೋಯಿತೆ? ಅವರುಗಳು ಕೈತೋರಿಸಿ ಅವಲಕ್ಷಣವೆನಿಸಿಕೊಂಡಂತೆ ಕೋರ್ಟಿನ ತೀರ್ಮಾನವನ್ನು ಪಡೆದರೆಂದು ಕೇಳಿ ವಿಷಾದಿಸುತ್ತೇವೆ. ಕೋಮುವಾರು ಪ್ರಾತಿನಿಧ್ಯಕ್ಕೆ ಒಪ್ಪದ ಬ್ರಾಹ್ಮಣರು ಈ ಪ್ರಾತಿನಿಧ್ಯವಿಭಾಗಕ್ಕೆ ಹೇಗೆ ಪ್ರಯತ್ನಿಸಿದರು? ಇದು ಸ್ವಾರ್ಥವಾದುದರಿಂದ ಇದರ ನ್ಯಾಯವೇ ಬೇರೆಯಾಗಿರಬಹುದು!

ಸಿದ್ಧಘಟ್ಟ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದ ನಾಗಪ್ಪ ಎಂಬ ಒಬ್ಬ ಸೇಂದಿ ಕಂಟ್ರಾಕ್ಟರು ಸೇಂದಿ ಹರಾಜಿಗಾಗಿ ಸಿದ್ಧಘಟ್ಟಕ್ಕೆ ಕುದುರೆಸ್ವಾರಿ ಮಾಡಿಕೊಂಡು ಹೋಗುತ್ತಿರುವಾಗ್ಗೆ ಒಂದು ಕಾಡಿನಲ್ಲಿ ಯಾರೋ ಅವನನ್ನು ಅಡ್ಡಗಟ್ಟಿ ಕುದುರೆಯ ಮೇಲಿನಿಂದ ಕೆಳಕ್ಕೆಳದು ಒಂದು ಮಚ್ಚುಕತ್ತಿಯಿಂದ ಅವನ ಕತ್ತನ್ನು ಕತ್ತರಿಸಿಹಾಕಿಬಿಟ್ಟರು. ಇವನ ಹೆಂಡತಿಯು ಗಂಡನು ಮನೆಗೆ ಹಿಂದಿರುಗಿ ಬಾರದೆ ಹೋದುದರಮೇಲೆ ಕಳವಳಪಡುತ್ತ ವಿಚಾರಿಸುತ್ತಿರುವಲ್ಲಿ ಗಂಡನು ಕುಳಿತಿದ್ದ ಕುದುರೆಯು ಚಿಂತಾಮಣಿ ತಾ|| ಗುಂಜೂರು ಗ್ರಾಮದ ದೊಡ್ಡಿಯಲ್ಲಿ ಕೂಡಲ್ಪಟ್ಟಿತ್ತೆಂದು ತಿಳಿದು ಕೂಡಲೆ ಪೋಲೀಸಿಗೆ ತಿಳಿಸಿದಳು. ಅವರು ಹುಡುಕಲು ಹೊರಟು ಒಂದು ಕಾಡಿನಲ್ಲಿ ಶಿರವಿಲ್ಲದ ಮುಂಡವು ಬಿದ್ದು ಕೊಳೆಯುತ್ತಿದ್ದುದನ್ನು ಕಂಡು ಕೊಲೆಪಾತಕನನ್ನು ಕಂಡುಹಿಡಿಯಯತ್ನಿಸಿ ಬೆಂಗಳೂರು ಡಿ|| ಹೊಸಕೋಟೆಯಲ್ಲಿ ವೆಂಕಟರಾಯಪ್ಪ ಎಂಬುವನನ್ನು ಸೆರೆಹಿಡಿದಿರುವರು. ಈ ವೆಂಕಟರಾಯಪ್ಪನು ಒಂದು ರಾತ್ರಿಯಲ್ಲಿ ೩ ಕೊಲೆಯನ್ನೂ, ಮಾಲೂರಿನಲ್ಲಿ ೨ ಕೊಲೆಗಳನ್ನೂ ಅಂತು ೫ ಕೊಲೆಗಳನ್ನು ಮಾಡಿರುತ್ತಾನಂತೆ. ಬೆಂಗಳೂರು ಮತ್ತು ಕೋಲಾರ ಡಿ|| ಗಳ ಪೋಲೀಸಿನವರು ಬಹಳ ಶ್ರದ್ಧೆಯಿಂದ ವಿಚಾರಣೆಯನ್ನು ನಡಿಸುತ್ತಿರುವರು. ಈವರೆಗೆ ಸಿಕ್ಕಿರುವ ಜನರು ಅಪರಾಧವನ್ನು ಒಪ್ಪಿಕೊಂಡಿರುವರಂತೆ.

ಬಟ್ಟೆಬರೆಗಳು ಈಗಲೇ ಬಲು ತಗ್ಗಾಗಿವೆ. ಹೊಗೆಬಂಡಿಗಳ ಕೊರತೆಯಿಂದಲೂ ಬೊಂಬಾಯಿ ಮದ್ರಾಸುಗಳ ಕಡೆಯಿಂದ ಬಟ್ಟೆ ಸರಕುಗಳು ಬರುವುದು ಕ್ಷೀಣಿಸಿರುವುದರಿಂದಲೂ ಇನ್ನೂ ಅವುಗಳ ಬೆಲೆಯು ಹೆಚ್ಚುವ ಸಂಭವವಿದೆ. ನೂಲಿನ ಬೆಲೆಯು ಹೆಚ್ಚಿಹೋಗಿರುವುದರಿಂದ ಸ್ವದೇಶದ ಬಟ್ಟೆಗಳ ನಿರ್ಮಾಣವೂ ಕಡಿಮೆಯಾಗಿ ಹೋಗಿದೆ. ಹೀಗಿರುತ್ತಿರುವಾಗ ರಾಜಧಾನಿಯಲ್ಲಿ ಕಳೆದ ಒಂದೆರಡು ವಾರಗಳಿಂದ ಇಲ್ಲಿಯ ಮುಲ್ತಾನಿ ಸೇಟರುಗಳು ಅಂಗಡಿ ಅಂಗಡಿಗಳಿಗೆ ಹೋಗಿ ಇರುವ ಬಟ್ಟೆಗಳನ್ನೆಲ್ಲಾ ಥಾನಿಗೆ ಒಂದೆರಡು ರೂ. ಗಳ ಲಾಭವನ್ನಾದರೂ ಕೊಟ್ಟು ದಾಸ್ತಾನು ಮಾಡುತ್ತಿರುವರಂತೆ. ಬಹುಶಃ ಬೊಂಬಾಯಿ ಮದ್ರಾಸುಗಳ ಸ್ಥಿತಿಯನ್ನು ಅರಿತೇ ಇವರು ಹೀಗೆ ಮಾಡುತ್ತಿರಬಹುದು. ನಿರ್ಘೃಣರೂ ಪರದೇಶೀಯರೂ ಆದ ಈ ಜನರು ಸ್ವಾರ್ಥೈಕದೃಷ್ಟಿಯಿಂದ ಹೀಗೆ ಮಾಡುವುದರಿಂದ ಮುಂದೆ ಬಟ್ಟೆಬರೆಗಳ ಬೆಲೆಯು ಬಲು ಹೆಚ್ಚಿಹೋಗಿ ಬಡವರು ದಿಗಂಬರರಾಗಿರಬೇಕಾದ ಸ್ಥಿತಿಯೇ ಬರಬಹುದು. ಇದು ಅನ್ಯಾಯವೆನ್ನುವಷ್ಟು ಪಾಪಭೀತಿಯು ಆತಾಪರರಿಗೆ ಇಲ್ಲದೆ ಹೋದಾಗ ಸ್ಥಲಾಧಿಕಾರಿಗಳಾಗಲೀ, ಸಿವಿಲ್ ಸಪ್ಲೈ ಡೈರೆಕ್ಟರುಗಳಾಗಲೀ ಇಂಥ ವಿಷಯದಲ್ಲಿ ಪ್ರವರ್ತಿಸಿ ನಯ ಭಯಗಳಿಂದ ಇಂಥವರ ಪ್ರವರ್ತನವನ್ನು ನಿಲ್ಲಿಸದಿದ್ದರೆ ಅನರ್ಥವಾಗುವುದು.

ಭರತಖಂಡದ ವೃತ್ತಾಂತಗಳು.

ಲಕ್ನೋ ಮೊದಲಾದ ಉತ್ತರ ಹಿಂದೂಸ್ಥಾನದಲ್ಲಿ ಮಳೆಯು ಚೆನ್ನಾಗಿ ಆಗುತ್ತಿದೆ.

ಮದ್ರಾಸ್ ಸೈದಾಪೇಟೆಯಲ್ಲಿ ಕಲರಾರೋಗವು ಹುಟ್ಟಿ ಪಟ್ಟಣಕ್ಕೂ ವ್ಯಾಪಿಸುತ್ತಿರುವುದು.

ಭರತಖಂಡದ ಸ್ವದೇಶೀಯ ಸಂಸ್ಥಾನಗಳಿಂದೆಲ್ಲಾ ಕಳೆದ ೬ ತಿಂಗಳ ಕಾಲದಲ್ಲಿ ೨೧೨೫೨ ಮಂದಿಗಳು ಸೈನ್ಯಕ್ಕೆ ಹೊಸದಾಗಿ ಸೇರಿದ್ದಾರೆ.

ಮದ್ರಾಸಿನ ಮಿತವಾದಿಗಳೆಂಬುವವರು ಕೆಲವರು ಬೊಂಬಾಯಿಯಲ್ಲಿ ಕೂಡುವ ರಾಷ್ಟ್ರೀಯಸಭೆಗೇ ಹೋಗುವುದಾಗಿ ತಿಳಿಯಿಸಿಕೊಂಡಿರುವರಂತೆ.

ಬೊಂಬಾಯಿಯಲ್ಲಿ ಪ್ರತ್ಯೇಕದೇಶೀಯಸಭೆಯು ನಡೆದ ಬಳಿಕ ತಾ|| ೩೦ ರಲ್ಲಿ ಪತ್ರಿಕಾಶಾಸನವನ್ನು ಕುರಿತು ಚರ್ಚಿಸುವುದಕ್ಕಾಗಿ ಪತ್ರಿಕಾಧಿಪತಿಗಳ ಸಭೆಯೊಂದು ನಡೆಯಲು ಏರ್ಪಾಟಾಗಿದೆ.

ಭಾರತೀಯರ ಅಂತರ್ಜಾತಿಗಳಲ್ಲಿ ಪರಸ್ಪರ ವಿವಾಹಸಂಬಂಧವನ್ನು ಬೆಳಸಿದರೆ ಅಂಗೀಕಾರಾರ್ಹವಾಗುವಂಥ ವಿಧಿಯೊಂದನ್ನು ಕಲ್ಪಿಸುವ ವಿಷಯವನ್ನು ಸಾಮ್ರಾಜ್ಯಶಾಸನಸಭೆಯ ಮುಂದಿಡುವುದಕ್ಕೆ ಆ|| ಪಟೇಲ್‌ರವರಿಗೆ ಸರ್ಕಾರದನುಮತಿಯು ದೊರೆದಿರುವುದು.

ಪಂಜಾಬು ಪ್ರಾಂತದ ದೇಶೀಯಸಭಾಸಂಘದವರು ಸಭೆಕೂಡಿ ಮಿತವಾದಿಗಳ ಪ್ರತ್ಯೇಕ ಸಭಾಪ್ರಯತ್ನವನ್ನು ಖಂಡಿಸುವ ತೀರ್ಮಾನವನ್ನು ಮಾಡಿದುದಲ್ಲದೆ, ಸರ್ವಪಕ್ಷದವರೂ ಸೇರಿ ಪ್ರತ್ಯೇಕ ದೇಶೀಯಮಹಾಸಭೆಯನ್ನು ನೆರವೇರಿಸುವುದೇ ಅವಶ್ಯಕವೆಂದು ನಿರ್ಧರಿಸಿದರು.

ಕಳೆದ ಪಕ್ಷದಲ್ಲಿ ಮಿತ್ರಮಂಡಲಿಯವರಿಗೆ ಅಮಿಯನ್ಸ್ ಮೊದಲಾದ ರಂಗದಲ್ಲಿ ಉಂಟಾದ ಮಹಾವಿಜಯಕ್ಕಾಗಿ ಬೊಂಬಾಯಿಪಟ್ಟಣದಲ್ಲಿ ಕಳೆದ ತಾ|| ೧೭ ರಲ್ಲಿ ಸಂತೋಷೋತ್ಸವಗಳು ನಡೆಯಿಸಲ್ಪಟ್ಟುವು. ದೊಡ್ಡದೊಡ್ಡ ಕಟ್ಟಡಗಳಮೇಲೆ ರಾಜಪತಾಕೆಗಳನ್ನು ಎತ್ತಿಕಟ್ಟಿ ದೇವಾಲಯಗಳಲ್ಲಿ ಪ್ರಾರ್ಥನೆಗಳು ಮಾಡಲ್ಪಟ್ಟುವು.

ಭರತಖಂಡದ ಬೇರೆಬೇರೆ ಪ್ರಾಂತಗಳಲ್ಲಿರುವ ಮಿತವಾದಿ ಪ್ರಮುಖರುಗಳು ಕಲಕತ್ತಾ ನಗರದಲ್ಲಿ ಸರ್. ನಾರಾಯಣಚಂದ್ರವಾರ್ಕರ್‌ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿ, ತಾವುಗಳಾರೂ ಬೊಂಬಾಯಿಯ ಪ್ರತ್ಯೇಕದೇಶೀಯಮಹಾಸಭೆಗೆ ಹೋಗಕೂಡದೆಂದೂ, ಮಿತವಾದಿ ಸಭೆಯನ್ನು ಪ್ರತ್ಯೇಕವಾಗಿ ಕೂಡಿಸಬೇಕೆಂದೂ ನಿರ್ಧರಿಸಿದರು.

ಕಳೆದ ವರ್ಷ ಭರತಖಂಡದಲ್ಲೆಲ್ಲಾ ಸರ್ಪದಷ್ಟರಾಗಿ ೨೪ ಸಾವಿರ ಜನರೂ, ವನ್ಯಮೃಗಗಳಿಂದ ೨ ಸಾವಿರ ಮಂದಿಗಳೂ, ಸತ್ತಿರುವರು. ಪ್ರಜೆಗಳು ೭೪೦೦೦ ಹಾವುಗಳನ್ನೂ, ೧೩೦೦ ಹುಲಿಗಳನ್ನೂ, ೬೦೦೦ ಚಿರತೆಗಳನ್ನೂ, ೨೦೦೦ ಕಾಡುಹಂದಿಗಳನ್ನೂ, ೧೦೦೦ ತೋಳಗಳನ್ನೂ ಕೊಂದು ಸರ್ಕಾರದಿಂದ ಬಹುಮಾನ ಪಡೆದಿದ್ದಾರೆ.

ಬರುವ ಪ್ರತ್ಯೇಕದೇಶೀಯಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವುದಕ್ಕಿರುವ ಮಿ|| ಹಸನ್ ಇಮಾಂರವರು ಹೊಗೆಬಂಡಿಯಲ್ಲಿ ಪ್ರಯಾಣಮಾಡುತ್ತಿರುವಾಗ ರಾತ್ರಿಹೊತ್ತು ಮಲಗಿರಲು, ಆ|| ಕ್ಲಯಿಟನ್ ಎಂಬ ಯೂರೋಪ್ಯಾಧಿಕಾರಿಯು ಅವರ ದೇಹದಮೇಲೆ ಹೋಗಿ ತುಳಿತುಕೊಂಡು ಅವಮಾನಪಡಿಸಿದ್ದರು. ಆ ಅಧಿಕಾರಿಯನ್ನು ಬೀಹಾರ್ ಸರ್ಕಾರದವರು ಕೆಲಸದಿಂದ ನಿವೃತ್ತಿಗೊಳಿಸಿಬಿಟ್ಟರೆಂದು ಪ್ರಕಟವಾಗಿದೆ.

ಮಧುರೆಯಲ್ಲಿರತಕ್ಕ ಒಂದು ನೆಯ್ಗೆ ಯಂತ್ರಾಗಾರದ ಕೆಲಸಗಾರರಲ್ಲಿ ೫ ಸಾವಿರ ಮಂದಿ ಕೆಲಸಕ್ಕೆ ಹೋಗದೆ ಮುಷ್ಕರಹಿಡಿದು ನಿಂತುಬಿಟ್ಟಿದ್ದರು. ಇವರು ಹೀಗೆ ಮಾಡುವುದಕ್ಕೆ ರಾಜಕೀಯ ವಾದಿಗಳು ಮಾಡಿದ ದುರ್ಬೋಧನೆಯೇ ಕಾರಣವಾಗಿದ್ದಿತೆಂದು ಆಚೆಗೆ ಹೊರಬಿಟ್ಟಿತು. ಈಗ ಕೂಲಿಕಾರರೆಲ್ಲಾ ತಾವು ದುರ್ಬೋಧನೆಗೆ ಒಳಪಟ್ಟು ಹಾಗೆ ಮಾಡಿದುದನ್ನು ಹೇಳಿಕೊಂಡು ಕೆಲಸಕ್ಕೆ ಬಂದು ಸೇರಿಕೊಂಡಿರುತ್ತಾರೆ.

ಭರತಖಂಡದ ರೈಲ್ವೆ ಕಂಪೆನಿಗಳವರು ಕಳೆದ ವರ್ಷಕ್ಕಿಂತಲೂ ಈ ವರ್ಷ ಪ್ರಯಾಣಿಕರ ಮತ್ತು ಸಾಮಾನಿನ ಬಂಡಿಗಳ ತಿರುಗಾಟವನ್ನು ಕಡಿಮೆಮಾಡಿದರೂ ವರಮಾನ ಮಾತ್ರ ಕಳೆದ ವರ್ಷದ ಮೊದಲನೆ ೪ ತಿಂಗಳಿಗಿಂತ ಈ ವರ್ಷದ ಮೊದಲನೆ ೪ ತಿಂಗಳ ಕಾಲದಲ್ಲಿ ೧೬೯೨೩೧೯೩ ರೂಗಳಷ್ಟು ಅಧಿಕವಾಗಿಯೇ ಇದೆ. ಬಂಡಿಗಳ ಸಂಖ್ಯೆ ಕಡಿಮೆಯಾದರೂ ಬಾಡಿಗೆಗಳ ದರವನ್ನು ಹೆಚ್ಚಿಸಿರುವುದರಿಂದ ರೈಲ್ವೆ ಕಂಪೆನಿಯವರಿಗೂ ಈಗಣ ಯುದ್ಧದ ವ್ಯಾಜವು ಲಾಭವನ್ನೇ ಒದಗಿಸಿಕೊಟ್ಟಿರುವುದು.

ಹೊಸದಾಗಿ ವ್ಯವಹಾರಕ್ಕೆ ಬಂದಿರುವ ೧ ರೂ. ೨|| ರೂ. ನ ನೋಟುಗಳು ಮಾಸಿಹೋಗಿದ್ದರೂ, ಹರಿದುಹೋಗಿದ್ದರೂ ಅವನ್ನು ಕೊಡ ತೆಗೆದುಕೊಳ್ಳುವಾಗ ಬಹಳ ಅಡ್ಡಿಗಳೂ ತಂಟೆಗಳೂ ಉಂಟಾಗುತ್ತಲಿವೆಯಷ್ಟೆ. ಈ ಸಂದರ್ಭದಲ್ಲಿ ಪ್ರಜೆಗಳಿಗೆ ಉಂಟಾಗುವ ತೊಂದರೆಗಳನ್ನು ತಪ್ಪಿಸುವುದಕ್ಕಾಗಿ ಮದ್ರಾಸು ಸರ್ಕಾರದವರು ಒಂದು ಅಪ್ಪಣೆ ಮಾಡಿದ್ದಾರೆ. ಹೇಗೆಂದರೆ—ಹರಿದು ಚಿಂದಿಯಾಗಿರುವ ಅಥವಾ ಬಹಳ ಮಾಸಿ ನಲುಗಿಹೋಗಿರುವ ನೋಟುಗಳನ್ನು ಯಾರೇ ಆಗಲೀ ಸರ್ಕಾರಿ ಖಜಾನೆಗಳಿಗೂ, ಬ್ಯಾಂಕುಗಳಿಗೂ, ಅಂಚೆಮನೆಗಳಿಗೂ ತೆಗೆದುಕೊಂಡು ಹೋಗಿ ಕೊಟ್ಟರೆ ಅವಕ್ಕೆ ಪ್ರತಿಯಾಗಿ ಹೊಸ ನೋಟುಗಳನ್ನು ಕೊಡಬೇಕೆಂದು ಅಪ್ಪಣೆ ಮಾಡಿದ್ದಾರೆ.

ಬೊಂಬಾಯಿಯ ರಿಪನ್‌ಕ್ಲಬ್ಬಿನಲ್ಲಿ ಸ್ಥಾಪಿತವಾಗಿರುವ ಸರ್ ಫಿರೋಜ್‌ಷಹಾ ಮೇಥಾರವರ ಶಿಲಾವಿಗ್ರಹವನ್ನು ಸರ್ ಜೇಂಸೆಟ್ಜಿ ಜೀಜಭಾಯಿಯವರು ಪ್ರಕಾಶಪಡಿಸಿದರು. ಆಗ ಅವರು ಮಾಡಿದ ಉಪನ್ಯಾಸದಲ್ಲಿ ಮೇಥಾರವರ ಗುಣಾತಿಶಯಗಳನ್ನು ಪ್ರಶಂಸೆಮಾಡುವಾಗ "ಆ ಮಹಾಸಮರ್ಥನಾದ ಪ್ರಜಾನಾಯಕನು ಈಗ ನಮ್ಮಗಳ ಮಧ್ಯದಲ್ಲಿಲ್ಲದಿರುವುದರ ಲೋಪವು ಈಗ ನಮಗೆ ಸ್ಪಷ್ಟವಾಗುತ್ತಿದೆ. ಆತನ ಮಹಾಶಕ್ತಿಯು ಈಗ ಚೆನ್ನಾಗಿ ವ್ಯಕ್ತವಾಗುತ್ತಿರುವುದು" ಎಂದು ಹೇಳಿದರು. ಇದು ಒಪ್ಪತಕ್ಕ ಮಾತೇ ಸಂ. ಮೇಥಾ, ಗೋಖಲೆಯವರಂಥ ಉದಾರಪುರುಷರು ಕಣ್ಮರೆಯಾದುದರಿಂದಲೇ ಸಿಂಹನ ಗುಹೆಯಂತಿದ್ದ ರಾಷ್ಟ್ರೀಯಮಹಾಸಭೆ ಮೊದಲಾದುವುಗಳೆಲ್ಲಾ ಈಗ ತೀವ್ರವಾದಿಗಳ ಪಾರುಪತ್ಯದಿಂದ ನರಿ ತೋಳಗಳ ಐಕ್ಯಯಾದಂತೆ ಪರಿಣಮಿಸಿರುತ್ತವೆ.

ವಿದೇಶ ವೃತ್ತಾಂತಗಳು.

ಸೈಬೇರಿಯಾಕ್ಕೆ ಈಗ ಇಂಗ್ಲೀಷ್ ಜಪಾನ್ ರಾಯಭಾರಿಗಳು ಹೋಗಿ ನೆಲಸಿರುತ್ತಾರೆ.

ಜರ್ಮನರು ಫಿನ್ಲಂಡಿನಲ್ಲಿ ಕ್ರಾನ್‌ಸ್ಟಾಟ್ ಪಟ್ಟಣವನ್ನು ಆಕ್ರಮಿಸಿಕೊಂಡಿರುವರೆಂದು ಸುದ್ದಿಹುಟ್ಟಿದೆ.

ಬಲ್ಗೇರಿಯಾದಲ್ಲಿ ಪ್ರಜಾಸತ್ತಾತ್ಮಕಪರಿಪಾಲನಸ್ಥಾಪನಪ್ರಯತ್ನವು ಸಾಗುತ್ತಿದೆಯೆಂದು ಜರ್ಮನ್ ಪತ್ರಿಕೆಗಳು ಹೇಳುತ್ತಿವೆ.

ಇಂಗ್ಲೀಷರ ೨ ಯುದ್ಧದ ಹಡಗುಗಳು ಮದ್ದಿನಸುರಂಗಕ್ಕೆ ಬಡಿದು ಒಡೆದು ಮುಳುಗಿಹೋದುವು. ೨೬ ಮಂದಿ ಸತ್ತರು.

ಇಂಗ್ಲೀಷರು ರಷ್ಯಾದ ಜಕೋಸ್ಲಾವಕ್ಕರನ್ನು ಅಂಗೀಕರಿಸಿದುದನ್ನು ಆಸ್ಟ್ರಿಯಾದವರು ನಿರಾಕರಿಸಿ, ಜಕೋಸ್ಲಾವಕ್ಕರ ಸೈನಿಕರನ್ನೆಲ್ಲಾ ದೇಶದ್ರೋಹಿಗಳನ್ನಾಗಿ ತಿಳಿಯಬೇಕೆಂಬುದಾಗಿ ಪ್ರಕಟಿಸಿದ್ದಾರೆ.

ಇಂಗ್ಲೀಷರು ಏರ್ಪಡಿಸಿರುವ ಜಾತೀಯ ಯುದ್ಧಹಣಪತ್ರಗಳ ಮೂಲಕ ಸೀಮೆಯೊಳಗೆ ಇದುವರೆಗೆ ೧೧೦೦೦೦೦೦೦೦ ಪೌನುಗಳು ಎಂದರೆ ೧೬೫೦೦೦೦೦೦೦೦ ರೂ. ಗಳು ಕೂಡಿರುತ್ತವೆ.

ಅಮೇರಿಕಾದಲ್ಲಿ ಕಳೆದ ಜೂನ್ ತಾ|| ೫ ಕ್ಕೆ ೨೧ ನೆ ವಯಸ್ಸಿಗೆ ಬಂದ ತರುಣರನ್ನೆಲ್ಲಾ ಸೈನ್ಯದಲ್ಲಿ ಸೇರಿಸಿಕೊಳ್ಳಲು ಅಮೇರಿಕಾದಧಿಕಾರಿಗಳು ಅಪ್ಪಣೆಮಾಡಿದರು. ಆ ವಯಸ್ಸಿನವರೇ ಈ ವರ್ಷ ೧|| ಲಕ್ಷ ಮಂದಿಗಳು ದೊರೆಯುವರು.

ಕಳೆದ ೧|| ತಿಂಗಳಿಂದೀಚೆಗೆ ಮಿತ್ರಮಂಡಲಿಯವರು ಮಾಡಿದ ಮುತ್ತಿಗೆಗಳಲ್ಲಿ ಶತ್ರುಗಳ ಕಡೆಯ ೮೦ ಸಾವಿರ ಮಂದಿ ಸೈನಿಕರೂ ೧೫೦೦ ದೊಡ್ಡ ಫಿರಂಗಿಗಳೂ ೧೦೦೦೦ ಸಣ್ಣ ಫಿರಂಗಿಗಳೂ ಸಹ ಮಿತ್ರಮಂಡಲಿಯವರ ವಶವಾಗಿವೆ.

ಫಿನ್ಲಂಡಿನಲ್ಲಿ ಏಕರಾಜಪರಿಪಾಲನವನ್ನೇರ್ಪಡಿಸುವ ವಿಷಯವು ಅಲ್ಲಿಯ ರಾಜಾಂಗಸಭೆಯಲ್ಲಿ ಚರ್ಚಿತವಾಗಿ ಬಹುಮಂದಿ ಸಭಿಕರು ಅದನ್ನೇ ಅನುಮೋದಿಸಿದ ಕಾರಣ, ಒಬ್ಬ ರಾಜನನ್ನು ನಿಯಮಿಸಿಕೊಳ್ಳುವುದಕ್ಕೆ ಏರ್ಪಾಟುಗಳು ನಡೆಯುತ್ತಿವೆ.

ಅಮೇರಿಕಾದಲ್ಲಿ ಇದುವರೆಗೆ ನಿರ್ಮಿತವಾಗಿರುವ ಫಿರಂಗಿಗಳು ಯುದ್ಧ ಮುಗಿಯುವವರೆಗೂ ಸಾಕಾಗುವಷ್ಟಾಗಿರುವುದರಿಂದ ಮುಂದಣ ವರ್ಷದಲ್ಲಿ ಎಂದಿನಂತೆ ಫಿರಂಗಿಗಳ ನಿರ್ಮಾಣಮಾಡುವುದನ್ನು ತಗ್ಗಿಸುವುದಕ್ಕೆ ಅಲ್ಲಿಯ ಲೋಹಪರಿಶ್ರಮಸಂಘಾಧಿಕಾರಿಗಳು ನಿರ್ಧರಿಸಿರುವರು.

ರಷ್ಯಾದಲ್ಲಿ ಜಕೋಸ್ಲಾವಕ್ಕರಿಗೇ ಪ್ರತ್ಯೇಕರಾಷ್ಟ್ರವನ್ನು ಕಲ್ಪಿಸಿಕೊಡುವುದಕ್ಕೆ ಇಂಗ್ಲೀಷರು ಪ್ರಯತ್ನಿಸಿದ್ದಾರೆ. ಇದರ ಎಲ್ಲೆಕಟ್ಟುಗಳು ಇನ್ನೂ ನಿರ್ಧರಿಸಲ್ಪಟ್ಟಿಲ್ಲ. ಈ ಏರ್ಪಾಟಿನಿಂದ ಜರ್ಮನರು ಪೂರ್ವರಷ್ಯಾದಲ್ಲಿ ಮುಂಬರಿದು ನುಗ್ಗುವುದಕ್ಕೆ ತಡೆಯುಂಟಾಗುವುದೆಂದು ಎಣಿಸಲ್ಪಟ್ಟಿದೆ.

ಜರ್ಮನಿಯ ಸೈನ್ಯದಲ್ಲಿ ಕಳೆದ ಮಾರ್ಚಿ ತಿಂಗಳ ಮುತ್ತಿಗೆಗೆ ಮುಂಚೆ ಅವರ ೬೦ ಲಕ್ಷ ಮಂದಿಗಳು ನಷ್ಟವಾಗಿದ್ದರು. ಆ ಸಂಖ್ಯೆಯಲ್ಲಿ ಸತ್ತವರೇ ೧೪ ಲಕ್ಷ ಮಂದಿಗಳು. ಮಾರ್ಚಿ ತಾ|| ೧೭ ರಿಂದ ಜೂನ್ ತಾ|| ೧೭ ರವರೆಗೆ ೧೨೦೦೦೦ ಮಂದಿಗಳು ಅವರ ಸೈನ್ಯದಲ್ಲಿ ಸತ್ತಿರುವರು.

ಪಶ್ಚಿಮರಂಗದಲ್ಲಿ ಜರ್ಮನ್ ಸೈನ್ಯಕ್ಕೆ ಉಂಟಾಗುತ್ತಿರುವ ಅಪಜಯಪರಂಪರೆಯನ್ನು ಕೇಳಿ ಜರ್ಮನಿ ಪ್ರಜೆಗಳು ಕಳವಳಗೊಂಡು ಹಾಹಾಕಾರಪಡುತ್ತಿರುವರೆಂದು ಜರ್ಮನ್ ಪತ್ರಿಕೆಗಳು ಹೇಳುತ್ತಿವೆ. ಅಧಿಕಾರಿಗಳು ಪ್ರಜೆಗಳನ್ನು ಸಮಾಧಾನಪಡಿಸುವುದಕ್ಕೆ ಸುಳ್ಳುಸುಳ್ಳು ಸುದ್ದಿಗಳನ್ನು ಬರೆದು ಪ್ರಕಟಿಸಿ ಶಾಪತ್ರಯಪಡುತ್ತಿದ್ದಾರೆ.

ಫ್ರೆಂಚರ ಡ್ಯೂಪೆಟಿಟ್‌ತೋರ್ಡಾ ಎಂಬ ಕ್ರೂಜರ್ ಜಾತಿಯ ಯುದ್ಧದಹಡಗು ಅಟ್ಲಾಂಟಿಕ್ ಸಮುದ್ರದಲ್ಲಿ ಅಮೇರಿಕೆಯ ಕ್ರೂಜರುಗಳೊಡನೆ ಸೇರಿ ಕಾವಲುಮಾಡುತ್ತಿದ್ದಿತು. ಅದಕ್ಕೆ ಕಳೆದ ತಾ|| ೭ ರಲ್ಲಿ ಶತ್ರುಗಳ ಟಾರ್ಪೆಡೋ ಬಡಿದುದರಿಂದ ಒಡೆದು ಮುಳುಗಿತು. ಒಳಗಿದ್ದವರಲ್ಲಿ ೧೩ ಮಂದಿ ಮಾತ್ರ ಸತ್ತರು. ಉಳಿದವರನ್ನೆಲ್ಲಾ ಅಮೇರಿಕಾದ ಹಡಗಿನವರು ಕಾಪಾಡಿದರು.

ಜರ್ಮನ್ ಚಕ್ರವರ್ತಿಯ ರೂಪ್ರೆಟಿಕ್ ರಾಜಕುಮಾರನು ಕಳೆದ ಸೋಮ್ಮೆಪ್ರಾಂತದ ಯುದ್ಧದಲ್ಲಿ ಮಹಾಪರಾಜಯವನ್ನು ಹೊಂದಿದುದರಿಂದ ಅವನ ವಿಷಯದಲ್ಲಿ ಜರ್ಮನೀ ಪ್ರಜೆಗಳ ವಿಶ್ವಾಸವೆಲ್ಲಾ ಕಡಿಮೆಯಾಯಿತು. ಆತನ ವಶದಲ್ಲಿದ್ದ ಸೈನ್ಯವನ್ನೆಲ್ಲಾ ಕಸುಕೊಂಡು ಈಗ ವಾನ್‌ಬೋಯಿನ್ ಎಂಬ ಸೇನಾಪತಿಯ ವಶಕ್ಕೆ ಕೊಟ್ಟಿರುವರು. ರಾಜಕುಮಾರನು ಈಗ ಮ್ಯೂನಿಚ್ ಪಟ್ಟಣಕ್ಕೆ ಹೋಗಿ ವಿಶ್ರಾಂತಿಯನ್ನು ತೆಗೆದುಕೊಂಡಿರುವನು.

ಕಳೆದ ೧೮೬೮ನೆ ವರ್ಷದಾರಭ್ಯ ಇದುವರೆಗೆ ಯಾವ ವರ್ಷದಲ್ಲೂ ಆಗದೆ ಇದ್ದಷ್ಟು ಬೆಳಸು ಈವರ್ಷ ಇಂಗ್ಲಂಡಿನಲ್ಲಿ ಬೆಳೆದಿರುವುದು. ಇನ್ನೂ ಅನೇಕ ಲಕ್ಷ ಎಕರೆಯ ಭೂಮಿಯು ವ್ಯವಸಾಯ ಮಾಡಲ್ಪಡುವುದರಲ್ಲಿದೆ. ಯುದ್ಧದಲ್ಲಿ ಶತ್ರುಗಳ ಸಬ್‌ಮೆರೀನಿನ ಹಾವಳಿಯು ಧಾನ್ಯಾದಿಗಳಿಗಾಗಿ ಪರದೇಶದ ದಾರಿಯನ್ನು ನೋಡದೆ ಸ್ವತಂತ್ರವಾಗಿ ಜೀವಿಸಬಹುದಾದ ಸ್ಥಿತಿಯನ್ನು ಇಂಗ್ಲಂಡಿನವರಿಗೆ ಒದಗಿಸಿಕೊಟ್ಟು ಒಂದು ತೆರದಲ್ಲಿ ಉಪಕರಿಸಿದಂತೆಯೇ ಆಯಿತು.

ರಷ್ಯಾದ ಜಕೋಸ್ಲಾವಕ್ಕರನ್ನು ಮಿತ್ರಮಂಡಲಿ ಜಾತಿಗೆ ಸೇರಿದವರೆಂದು ಆಂಗ್ಲದೇಶವು ಅಂಗೀಕರಿಸಿ, ಮೂರು ಜಕೋಸ್ಲಾವಕ್ ಸೈನ್ಯಗಳನ್ನು, ಆಸ್ಟ್ರಿಯಾ ಹಂಗೇರಿ ಜರ್ಮನಿಗಳೊಡನೆ ಯುದ್ಧಮಾಡುತ್ತಿರುವ ಮಿತ್ರಮಂಡಲಿ ಸೈನ್ಯಗಳೆಂದು ಅಂಗೀಕರಿಸಿರುತ್ತದೆ. ಈಗಣ ಜಕೋಸ್ಲಾವಕ್ ಜಾತೀಯಸಭೆಯು ಮುಂದಣ ಜಕೋಸ್ಲಾವಕ್ ಪ್ರಭುತ್ವವೆಂಬುದಾಗಿ ಭಾವಿಸಲ್ಪಟ್ಟಿದೆ. ಈಗಣ ಆ ಸೈನ್ಯಕ್ಕೆಲ್ಲಾ ಆ ಸಭೆಯೇ ಸರ್ವಾಧಿಕಾರವನ್ನು ವಹಿಸಿರುವುದಕ್ಕೆ ಇಂಗ್ಲೀಷರು ಒಪ್ಪಿದ್ದಾರೆ.

ಸ್ಪೆಯಿನ್ ದೇಶದ ಹಡಗುಗಳೆಷ್ಟನ್ನು ಜರ್ಮನರು ನಾಶಪಡಿಸುವರೋ ತಮ್ಮ ದೇಶದ ಎಲ್ಲೆಯಲ್ಲಿ ನಿಂತಿರುವ ಅಷ್ಟು ಜರ್ಮನ್ ಹಡಗುಗಳನ್ನು ತಾವು ವಶಪಡಿಸಿಕೊಳ್ಳುತ್ತೇವೆಂದು ಸ್ಪೆಯಿನ್ ಪ್ರಭುತ್ವದವರು ಜರ್ಮನಿ ಸರ್ಕಾರಕ್ಕೆ ತಿಳಿಯಿಸಿರುವುದು ದರ್ಪದಿಂದ ಕೂಡಿದ ಅಂತ್ಯಸಂದೇಶರೂಪವಾಗಿರುತ್ತದೆ. ಆದರೂ ಸ್ಪೆಯಿನ್ ವಿದೇಶಾಂಗಮಂತ್ರಿಯು ತಾವೇನೂ ಜರ್ಮನಿಯಮೇಲೆ ಅಂತ್ಯಸಂದೇಶವನ್ನು ಕಳುಹಿಸಿಲ್ಲವೆಂದೂ ಯಾವಾಗಲೂ ತಟಸ್ಥರಾಗಿರುವುದೇ ತಮ್ಮ ಉದ್ದೇಶವೆಂದೂ ಪ್ರಕಟಿಸಿದ್ದಾರೆ.

ಪೋಲಂಡಿನ ಆಳ್ವಿಕೆಯ ಅಧಿಕಾರವು ಜರ್ಮನರ ವಶವಾಗುವುದೆಂಬ ಕಾರಣದಿಂದ ಜರ್ಮನರಮೇಲೆ ಆಸ್ಟ್ರಿಯನ್ನರಿಗೆ ಅಸಮಾಧಾನ ಹುಟ್ಟಿದ್ದಿತು. ಅವರವರಲ್ಲಿ ವಿರೋಧವೂ ಹುಟ್ಟಿ ಆಸ್ಟ್ರಿಯನ್ನರು ಮಿತ್ರಮಂಡಲಿಯವರೊಡನೆ ಪ್ರತ್ಯೇಕ ಸಂಧಿಯನ್ನು ಮಾಡಿಕೊಳ್ಳಬಹುದೆಂಬ ಸೂಚನೆಗಳೂ ಇದ್ದುವು. ಜರ್ಮನರಿಗೆ ಈಗ ಆಗುತ್ತಿರುವ ಪರಾಭವದ ಜತೆಗೆ ಆಸ್ಟ್ರಿಯನ್ನರ ಸಹಾಯವೂ ತಪ್ಪಿಹೋಗಿದ್ದರೆ ಅವರ ಪಾಡು ಅತ್ಯಂತ ಶೋಚನೀಯವಾಗುತ್ತಿತ್ತೆಂಬುದಕ್ಕೆ ಸಂಶಯವಿಲ್ಲ. ಇದನ್ನೆಲ್ಲಾ ಪರಿಭಾವಿಸಿಯೇ ಕೈಜರರು ಆಸ್ಟ್ರಿಯಾ ಚಕ್ರವರ್ತಿಯನ್ನೂ, ಬಲ್ಗೇರಿಯಾ ಯುವರಾಜರನ್ನೂ, ಪೋಲಂಡಿನ ರೀಜನ್ಸಿ ಸಭಿಕರನ್ನೂ, ಜರ್ಮನಿಯ ಮುಖ್ಯ ಮಂತ್ರಿಗಳನ್ನೂ, ಪ್ರಮುಖ ಸೇನಾಪತಿಗಳನ್ನೂ ಸಹ ಸೇನೆಯ ಮುಖ್ಯ ಶಿಬಿರಕ್ಕೆ ಬರಮಾಡಿಕೊಂಡು ಪ್ರಮುಖ ವಿಷಯಗಳನ್ನು ಕುರಿತು ಆಲೋಚಿಸಿದರು. ಆಸ್ಟ್ರಿಯಾ ಬಲ್ಗೇರಿಯಾ ಸೈನ್ಯಗಳನ್ನು ಫ್ರಾನ್ಸ್ ರಂಗಕ್ಕೆ ಸಹಾಯವಾಗಿ ಕಳುಹಿಸಿಕೊಡುವ ವಿಷಯವೂ, ಎಲ್ಲ ರಂಗಗಳ ಯುದ್ಧಕಾರ್ಯವೂ ತಮ್ಮ ಮಿತ್ರಕೋಟಿರಾಷ್ಟ್ರಗಳ ಐಕ್ಯದಿಂದಲೇ ಸಾಗಬೇಕೆಂಬ ವಿಷಯವೂ, ಪೋಲಂಡಿನ ಸಿಂಹಾಸನಕ್ಕೆ ಆಸ್ಟ್ರಿಯಾದ ಒಬ್ಬ ಆರ್ಚ್‌ಡ್ಯೂಕನ್ನು ಆರಿಸಿ ನಿಯಮಿಸುವ ವಿಷಯವೂ ಇತ್ಯರ್ಥವಾದುವೆಂದು ಒಂದು ಜರ್ಮನ್ ಪತ್ರಿಕೆಯು ಹೇಳಿರುತ್ತದೆ.

ಜಪಾನಿನಲ್ಲಿ ಅಕ್ಕಿಯ ವ್ಯಾಪಾರಿಗಳು ಲಾಭದ ಆಸೆಯಿಂದ ಅಕ್ಕಿಯ ಬೆಲೆಯನ್ನು ಹೆಚ್ಚಿಸಿಬಿಟ್ಟಿರುವರು. ಬಡಬಗ್ಗರು ಅದನ್ನು ಸೈರಿಸಲಾರದೆ ಅಂಗಡಿಗಳನ್ನೂ ಅಕ್ಕಿಯಂತ್ರಾಲಯಗಳನ್ನೂ ನುಗ್ಗಿ ಸೂರೆಮಾಡಲುಪಕ್ರಮಿಸಿರುವರು. ಈ ಕಾರಣದಿಂದ ಒಸಾಕಾಪಟ್ಟಣದಲ್ಲಿರುವ ಅಕ್ಕಿಯ ಮಳಿಗೆಗಳೆಲ್ಲವೂ ಮುಚ್ಚಲ್ಪಟ್ಟಿವೆ. ಯಂತ್ರಾಲಯಗಳಿಗೆ ನುಗ್ಗಿದ್ದವರನ್ನು ಪೋಲೀಸರು ಹಿಡಿದು ಬಂಧನದಲ್ಲಿ ಹಾಕಿದರು. ಅವರನ್ನು ಬಿಡಿಸಿಕೊಳ್ಳುವುದಕ್ಕಾಗಿ ೨೦೦೦ ಮಂದಿ ಸಾಯುಧರಾದ ಪ್ರಜೆಗಳು ಪೋಲೀಸು ಠಾಣವನ್ನು ಮುತ್ತಿದರು. ಪೋಲೀಸರು ಕತ್ತಿಯನ್ನುಪಯೋಗಿಸಿ ಗುಂಪನ್ನು ಚದರಿಸಿದರು. ೧೦೦ ಮಂದಿಗಳನ್ನು ಸೆರೆಹಿಡಿದರು. ಅಂಥ ಗುಂಪಿನವರನ್ನು ಚದರಿಸುವುದಕ್ಕಾಗಿ ಸೈನ್ಯ ಕಳುಹಿಸಲ್ಪಟ್ಟಿರುವುದು. ಎಲ್ಲಾ ಮುಖ್ಯ ಪಟ್ಟಣಗಳಲ್ಲೂ ಅಕ್ಕಿಯ ಬೆಲೆಯ ಸಂಬಂಧವಾಗಿ ಹೀಗೆಯೇ ಪ್ರಜೆಗಳ ದೊಂಬಿಯಾಗಿದೆ. ಹಲವುಕಡೆ ಸೈನಿಕರು ತುಪಾಕಿಯನ್ನುಪಯೋಗಿಸಿ, ಗದ್ದಲವನ್ನು ಅಡಗಿಸುತ್ತಿದ್ದಾರೆ. ಪೋಲೀಸರು ನದೀ ಸೇತುಗಳನ್ನೂ ಉದ್ಯಾನಗಳನ್ನೂ ಮಂತ್ರಿಗಳ ಮನೆಗಳನ್ನೂ ಕಾವಲುಮಾಡುತ್ತಿದ್ದಾರೆ. ಅಕ್ಕಿಯ ಅಭಾವದಿಂದ ಶ್ರಮಪಡುತ್ತಿರುವ ಪ್ರಜೆಗಳ ಸಹಾಯಾರ್ಥವಾಗಿ ಜಪಾನ್ ಚಕ್ರವರ್ತಿಗಳು ೩೦ ಲಕ್ಷ ಎನ್ನುಗಳನ್ನು ದಾನಮಾಡಿದರು. ಮಂತ್ರಿವರ್ಗದವರೆಲ್ಲಾ ಪ್ರತ್ಯೇಕ ೧ ಕೋಟಿ ಎನ್ನುಗಳನ್ನು ಕೊಡುವವರಾಗಿದ್ದಾರೆ.

ಹೂತಿಟ್ಟ ಖಡ್ಗ.

ಇದೇ, ಒಬ್ಬ ಮನುಷ್ಯನು ತನ್ನ ಖಡ್ಗವನ್ನು ಭದ್ರಪಡಿಸುವುದಕ್ಕಾಗಿ ಅದನ್ನು ಹೂತಿಟ್ಟ ಕಥೆಯು.

"ಈ ಖಡ್ಗವು ಕಳ್ಳಕಾಕರ ದೆಸೆಯಿಂದ ತನ್ನನ್ನು ಕಾಪಾಡಿಕೊಳ್ಳುವುದಕ್ಕೆ ನಮ್ಮಪ್ಪನಿಗೂ ಅವರಪ್ಪನಿಗೂ ಸಹಾಯಕವಾಗಿತ್ತು; ಇದು ಬಹು ಅಮೌಲ್ಯವಾದ ವಸ್ತು, ಇದನ್ನು ಚೆನ್ನಾಗಿ ಕಾಪಾಡಬೇಕು" ಎಂದು ಅಂದುಕೊಂಡು ಅವನು ಅದನ್ನು ಹೂತಿಟ್ಟನು.

ಈ ಸಂಗತಿಯನ್ನು ಹೇಗೆಯೋ ಒಬ್ಬ ಪ್ರಸಿದ್ಧ ದಂಗೆಖೋರನು ತಿಳಿದು "ಈಗ ನನಗೆ ಅವಕಾಶ ದೊರೆಯಿತು" ಎಂದು ಅಂದುಕೊಂಡು ಹೊರಟು, ನಿರಾಯುಧನಾದ ಆ ಮನುಷ್ಯನ ಮೇಲೆ ಬಿದ್ದು, ಅವನ ಮನೆಯ ಹೆಂಗಸರನ್ನೂ ಅವನ ಆಸ್ತಿಯನ್ನೂ ಕಸುಕೊಂಡು ಅವನನ್ನು ಗುಲಾಮನನ್ನಾಗಿ ಮಾಡಿಕೊಂಡನು.

ಹೂತಿಟ್ಟ ಖಡ್ಗವು ಅವನಿಗೆ ಸಿಕ್ಕಿತೋ ಅಥವಾ ಅದು ಭೂಮಿಯಲ್ಲಿಯೇ ಹೂತುಬಿದ್ದಿದ್ದಿತೋ ಎಂಬ ಅಂಶವು ಹೇಗೆಯಾದರೂ ಇರಲಿ; ಆ ಖಡ್ಗವೇನೋ ಅದರ ಮಾಲೀಕನಿಗೆ ಆ ಮೇಲೆ ಉಪಯೋಗಕರವಾಗಿರಲಿಲ್ಲ.

ಇದೇ ಒಂದು ದೃಷ್ಟಾಂತರೂಪವಾದ ಕಥೆಯು. ಈಗಿನ ಯುದ್ಧವು ಉಪಪತ್ತಿಗಳಿಗೆ ಸಂಬಂಧಪಟ್ಟ ಯುದ್ಧವಾಗಿರುತ್ತದೆ. ವಿಶೇಷ ನಾಗರಿಕತೆಯಿಲ್ಲದ ಪೂರ್ವಕಾಲದಲ್ಲಿ ಪ್ರತಿಯೊಬ್ಬನಿಗೂ, ಶತ್ರು ಯಾರಾದರೂ ಇದ್ದರೆ, ಆಯುಧವಿಲ್ಲದೆ ಆ ಶತ್ರುವಿನ ದೆಸೆಯಿಂದ ತನ್ನನ್ನು ರಕ್ಷಿಸಿಕೊಳ್ಳಲಿಕ್ಕೆ ಆಗುತ್ತಿರಲಿಲ್ಲ.

ಈ ಕಾಲದಲ್ಲಿ ಜನರು ಶಸ್ತ್ರಗಳಿಂದ ಮಾತ್ರವೇ ಹೊಡೆದಾಡುವುದಿಲ್ಲ, ಆದರೆ ತಾವು ಸಂಪಾದಿಸಿರುವ ವಸ್ತುಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ತಮ್ಮ ಸರ್ವಸ್ವವನ್ನು ಪರಿತ್ಯಾಗಮಾಡಿಯಾದರೂ ಹೊಡೆದಾಡುವವರಾಗಿದ್ದಾರೆ. ಧನಸಹಾಯವೇ ಪ್ರಜೆಗಳಿಗೆ ಒಂದು ಖಡ್ಗವಾಗಿರುತ್ತದೆ. ಇಂಥಾ ಖಡ್ಗವನ್ನು ಮರೆಮಾಡುವ ಜನರ ಗತಿ ಏನಾಗುವುದು?

ಮೇಲಿನ ಕಥೆಯಲ್ಲಿ ತಂದ ಮನುಷ್ಯನಿಗೆ ಆದ ಗತಿಯೇ ಉಂಟಾಗುವುದು.

ಆತನ ತಂದೆಯು ತನ್ನ ಪ್ರಾಣವನ್ನೂ, ತನ್ನ ಸ್ವಾತಂತ್ರ್ಯವನ್ನೂ, ಮತ್ತು ತನಗೆ ಸೇರಿದ ವಸ್ತುಗಳನ್ನೂ ಕಾಪಾಡಿಕೊಳ್ಳುವುದಕ್ಕಾಗಿ ತನ್ನ ಆಯುಧವನ್ನು ಉಪಯೋಗಿಸುತ್ತಿದ್ದನು. ಕೊನೆಯವರೆಗೂ ಅದರ ಉಪಯೋಗವು ನಿರರ್ಥಕವಾಗಿರಲಿಲ್ಲ, ಆದರೆ ಅದನ್ನು ಉಪಯೋಗಿಸುತ್ತಿದ್ದುದರಿಂದ ಅದರ ಪ್ರಯೋಜನವು ಮತ್ತಷ್ಟು ಹೆಚ್ಚುತ್ತಿತ್ತು. ಆತನು ಅದನ್ನು ತನ್ನ ಮಗನಿಗೆ ಕೊಡುವಾಗ ಅದು ಬಹು ಪ್ರಯೋಜನಕರವಾಗಿತ್ತು.

ಹಣವೇ ನಮ್ಮ ಖಡ್ಗವು. ಇದನ್ನು ನಮ್ಮ ಶತ್ರುಗಳನ್ನು ಉಪಯೋಗಿಸುವುದಕ್ಕೋಸ್ಕರ ಉಪಯೋಗಿಸೋಣ. ಆ ಶತ್ರುಗಳಾದರೋ ಬೆಲ್ಜಿಯಂ, ಸರ್ವಿಯಾದೇಶಗಳಂತಹ ಸಣ್ಣಸಣ್ಣ ದೇಶಗಳನ್ನು ಕಸುಕೊಂಡು, ಅಲ್ಲಿನವರನ್ನು ಗುಲಾಮರನ್ನಾಗಿ ಮಾಡಿ, ಅವರ ಹೆಂಗಸರನ್ನು ಕೆಡಿಸಿ, ಅವರ ಜಮೀನುಗಳನ್ನು ಹಾಳುಮಾಡಿದಂತೆಯೇ ಸಾಧ್ಯವಾದರೆ ನಮ್ಮ ಸ್ವತ್ತುಗಳನ್ನೂ ಕಸುಕೊಂಡು ನಮ್ಮನ್ನೂ ಗುಲಾಮರನ್ನಾಗಿ ಮಾಡುವರು. ಆದುದರಿಂದ ನಮ್ಮ ಸ್ವಾತಂತ್ರ್ಯಗಳು ಸುರಕ್ಷಿತವಾಗಿ ದೃಢಪಟ್ಟಾಗ ನಾವು ಸಾಲ ಕೊಟ್ಟದುದಕ್ಕಿಂತಲೂ ಬಹಳ ಹೆಚ್ಚಾಗಿ ನಮ್ಮ ಹಣವನ್ನು ವಾಪಸ್ ಪಡೆಯಬೇಕೆಂಬುದಾಗಿ ತಿಳಿದು ನಮ್ಮ ಖಡ್ಗರೂಪವಾದ ಹಣವನ್ನು ನಮ್ಮ ಸರ್ಕಾರದವರಿಗೆ ಸಾಲವಾಗಿ ಕೊಡುವುದೇ ಅತಿ ಮುಖ್ಯವಾದ ಮತ್ತು ಪರಮಪ್ರಯೋಜನಕರವಾದ ಕೆಲಸವಾಗಿರುತ್ತದೆ

ಪತ್ರವ್ಯವಹಾರ.

ಅಶೇಷವೀರಶೈವ ಮಹಾಜನಕ್ಕೆ ಅತಿವಿನಯದಿಂದರಿಕೆ ಮಾಡಿಕೊಳ್ಳುವದೇನಂದರೆ:—

ದಾವಣಗೆರೆಯಲ್ಲಿ 1917 ನೆ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆದ 8 ನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ 9 ನೆಯ ಶ್ರೀಮದ್ವೀರಶೈವ ಮಹಾಸಭೆಯನ್ನು 1918 ನೆ ಇಸವಿ ಡಿಸಂಬರ್ ತಿಂಗಳಲ್ಲಿ ಬೀರೂರಲ್ಲಿ ನಡೆಸುವಂತೆ ಕೆಲವು ಮಹಾಶಯರ ಅಪೇಕ್ಷೆಯಂತೆ ನಿರ್ಧರವಾಗಿರುವ ಪ್ರಕಾರ ಬೀರೂರಿನ ಮಹಾಜನರು ತಾ॥ 4-8-1918 ರಲ್ಲಿ ಸಭೆಸೇರಿ "ಮಹಾಸಭಾ ಅಧ್ಯಕ್ಷರ ಚುನಾವಣೆ, ಮಹಾಸಭೆಯಲ್ಲಿ ಚರ್ಚಿಸತಕ್ಕ ಮತ್ತು ನಿರ್ಧರಿಸತಕ್ಕ ವಿಷಯಗಳು ಮುಂತಾದ ಎಲ್ಲಾ ವಿಚಾರಗಳನ್ನು ನಿಬಂಧನೆಮಾಡುವ ಉದ್ದಿಶ್ಯ ತಾ॥ 22.9.1918 ನೆ ಭಾನುವಾರ ಪ್ರಾತಃಕಾಲ 8 ಘಂಟೆಗೆ ಬೀರೂರಲ್ಲಿ ವೀರಶೈವ ಮಹಾಜನರ ಸಭೆಯನ್ನು ನೆರೆಯಿಸಬೇಕೆಂದು" ತೀರ್ಮಾನ ಮಾಡಲ್ಪಟ್ಟಿದೆ.

ತಾವು ಆ ಕಾಲಕ್ಕೆ ದಯವಿಟ್ಟು ದಯಮಾಡಿಸಿ, ನಾವು ಕೈಗೊಂಡಿರುವ ಮಹತ್ಕಾರ್ಯವು ಸುಲಲಿತವಾಗಿ ನಡೆಯುವುದಕ್ಕೆ ತಮ್ಮ ಸಲಹೆಗಳನ್ನು ಕೊಡಬೇಕಾಗಿ ಪ್ರಾರ್ಥನೆ.

ತಮ್ಮ ಕ್ಷೇಮಾಭಿಲಾಷಿಗಳಾದ

(1) ಶಾಸ್ತ್ರಿ ಚೆಂ. ವೀರಪ್ಪಯ್ಯ, (2) ಯಂ॥ ನ॥ ಶಾಂತಪ್ಪಶೆಟ್ಟಿ, (3) ಎಸ್. ಪರ್ವತಪ್ಪಯ್ಯ, (4) ಮಾಸ್ಟರ್. ಎಂ. ಶಿವಲಿಂಗಪ್ಪಯ್ಯ, (5) ಮಠದ ಪುಟ್ಟಯ್ಯ, (6) ಸೂಳಿಗೆ ದೊಡ್ಡಮರುಳಯ್ಯ, (7) ಎಮ್. ವಿ. ಮರುಳಸಿದ್ದಯ್ಯ, (8) ದೊಡ್ಡಮನೆ ಮರಿಯಪ್ಪ ಬಸಪ್ಪ, (9) ದೊಡ್ಡಮನೆ ಹಾಲಪ್ಪ, (10) ಕೋಡಿಹಳ್ಳಿ ಮಲ್ಲಯ್ಯ, (11) ಗಡಿಗೆ ಮುದ್ದಪ್ಪ ಚಿಕ್ಕೀರಪ್ಪ, (12) ಕಡೂರು ಸಿದ್ದಪ್ಪ, (13) ದೊಡ್ಡಮನೆ ಸಣ್ಣನಂಜಪ್ಪ, (14) ಪಟೇಲ್ ನಂಜಪ್ಪ, (15) ಬೊಮ್ಮಜ್ಜಿ ನಂಜಪ್ಪ, (16) ಕೆ. ನಂಜಪ್ಪಗೌಡ, (17) ಸಿಂಗಲಾಪುರದ ಮಹದೇವಪ್ಪ, (18) ಕೋಟೆಯಯ್ಯನವರ ಕೋಟೆಪ್ಪ, (19) ಚಿಂದಯ್ಯನವರ ರುದ್ರಪ್ಪ, (20) ಗುರುಸಿದ್ದಣ್ಣನವರ ಗಂಗಣ್ಣ.

ಚಿತ್ರದುರ್ಗದ ತಾಲ್ಲೂಕು ಚಿಕ್ಕಣ್ಣನಹಳ್ಳಿ ಗುಹೇಶ್ವರಪ್ರತಿಷ್ಠೆ.

ಈ ಗ್ರಾಮದ ಬಳಿ ಇರುವ ಗುಹೇಶ್ವರನ ಗುಡ್ಡದಮೇಲೆ ಇದ್ದ ಶ್ರೀ ಗುಹೇಶ್ವರ ಲಿಂಗವನ್ನು ಯಾರೋ ಸ್ಥಾನಚ್ಯುತಿಯನ್ನು ಮಾಡಿದ್ದುದರಿಂದ ಅದನ್ನು ಜೀರ್ಣೋದ್ಧಾರಮಾಡಬೇಕೆಂಬ ಸದುದ್ದೇಶದಿಂದ ಕೊಕ್ಕರೆಬೇವಿನ ವೀರಭಿಕ್ಷಾವರ್ತಿಮಠದ ಉದ್ದಾನಪ್ಪಯ್ಯನವರು ಎರಡುವರ್ಷಗಳಿಂದಲೂ ಪ್ರಯತ್ನಪಟ್ಟು ಈ ಗ್ರಾಮದ ಮುಖಂಡ ಜನಗಳಲ್ಲಿ ಆಲೋಚಿಸಿ, ಕಾರ್ಯದರ್ಶಿಗಳು ಸತ್ಕಾರಕಸಂಘದವರೇ ಮೊದಲಾದವರನ್ನು ಏರ್ಪಡಿಸಿ, ಎಲ್ಲರೂ 4.5 ದಿವಸಗಳಿಗೆ ಮುಂಚೆಯೇ ಇಲ್ಲಿಗೆ ಬಂದು ಎಲ್ಲಾ ಸಾಮಗ್ರಿಗಳನ್ನು ಅಣಿಮಾಡಿಕೊಂಡು 11 ನೇ ಭಾನುವಾರ ಸಾಮಾನುಗಳ ಸಮೇತ ಗುಡ್ಡದಮೇಲಕ್ಕೆ ಹೋಗಿ ಸೇರಿದರು. ಈ ಕಾರ್ಯಕ್ಕೆ ವೇ॥ ಮಾಡನಾಯ್ಕನಹಳ್ಳಿ ಸಾರಂಗಮಠದ ಸಾರಂಗಪ್ಪಯ್ಯನವರು, ವೇ॥ ಹಿರಿಯೂರು ಗುರುಹಾಮಠದ ಸಿದ್ಧಲಿಂಗಪ್ಪಯ್ಯನವರು, ಕೊಕ್ಕರೆಬೇವು [illegible], ಅಂಚೀಕೆರೆ ಮಠದ ಗುರುಬಸವಯ್ಯನವರು, ರೇಣುಕಾಪುರದಮಠದ [illegible]ಯ್ಯನವರು, ಹುಣಸೇಕಟ್ಟೆ ಮಠದ ಚನ್ನಬಸವಯ್ಯನವರು, ಜೋನೆಹಳ್ಳಿ ಮಠದ ತಿಪ್ಪೆಸ್ವಾಮಿಯವರು, ಕಲ್ಲೇದೇವರಪುರದ ಮಠದ ಶ್ರೀ ಅರಸಪ್ಪದೇವಸ್ವಾಮಿಗಳು, ಚಿತ್ರದುರ್ಗದ ಉಜ್ಜನಿಮಠದ ಪಟ್ಟದಸ್ವಾಮಿಗಳು, ಜಗಳೂರು ಸಾ॥ ಮಹಲಿಂಗಪ್ಪನವರು ದಯಮಾಡಿಸಿದ್ದರು. ವಿಧ್ಯುಕ್ತವಾಗಿ ಎಲ್ಲಾ ಕಾರ್ಯಗಳೂ ಆಗಮಿಕರಾದ ಅರಸೀಕೆರೆ ಮಠದ ಗುರುಬಸವಯ್ಯನವರು, ಆರ್. ಎಂ. ಚಂದ್ರಶೇಖರಯ್ಯನವರು, ಚನ್ನಬಸವಯ್ಯನವರು, ಬಿ. ಎಂ. ದೊಡ್ಡಪ್ಪಯ್ಯನವರು, ರಡ್ಡಿಹಳ್ಳಿ ಮಠದ ತಿಪ್ಪಯ್ಯನವರು ಇವರುಗಳಿಂದ ಮಾಡಿಸಲ್ಪಟ್ಟಿತು. ಅನಂತರ ಶ್ರೀ ರುದ್ರಾಧ್ಯಾಯದ ಮಹಾಭಿಷೇಕವೂ, ಮಂಗಳಾರತಿಯೂ ಸಹ ತಾರೀಖು 12 ನೇ ಸೋಮವಾರ ಮಧ್ಯಾನ್ಹಕ್ಕೆ ನೆರವೇರಿಸಲ್ಪಟ್ಟು ಸಾಂಗಗೊಳಿಸಿದರು. ಸುತ್ತಮುತ್ತಿನ ಗ್ರಾಮಾಂತರಗಳಿಂದ ಅನೇಕ ಜನಗಳು ತಂಡತಂಡವಾಗಿ ಬಂದು ಗುಡ್ಡದಮೇಲಕ್ಕೆ ಸೇರುತ್ತಿದ್ದರು. ಚಿಪ್ಪಿನಕೆರೆ ಸೂರೇನಹಳ್ಳಿ ವಗೈರೆ ಗ್ರಾಮಗಳವರು ತಮ್ಮ ಗ್ರಾಮಗಳ ದೇವರುಗಳ ಸಮೇತವಾಗಿ ಬಂದಿದ್ದರು. ಗುಡ್ಡದಕೆಳಗೆ ಸಮಾಪದ ದೇಶದಲ್ಲಿ ವಿಶಾಲವಾಗಿ ಹಾಕಿ ಶೃಂಗರಿಸಿದ್ದ ಚಪ್ಪರದಲ್ಲಿ ದಿವ್ಯವಾದ ಭೋಜನದೇರ್ಪಾಟುಮಾಡಲ್ಪಟ್ಟು 12 ನೇ ಸೋಮವಾರ ಮಧ್ಯಾನ್ಹದಿಂದ ಸುಮಾರು 4.5 ಸಾವಿರ ಜನಗಳಿಗೆ ಮೇಲ್ಪಟ್ಟು ಭೂರಿಸಂತರ್ಪಣೆಯೂ ಎಲ್ಲಾ ಕೋಮಿನವರಿಗೂ ಮಾಡಲ್ಪಟ್ಟಿತು. ಕಾರ್ಯನಿರ್ವಾಹಕಸಂಘದ ಮ॥ ರಾ॥ ಶಾಸ್ತ್ರಿ ಚಂದ್ರಪ್ಪನವರು ಗೊಂಚಿಕಾರ ದೊಡ್ಡತಿಲಂ ತಿಪ್ಪಯ್ಯನವರು, ಗೌಂ॥ ಮಂಡಿ ಲಿಂಗಪ್ಪನವರು, ಗೌ॥ ಸಣ್ಣತಿಪ್ಪಯ್ಯನವರು, ಮ॥ ರಾ॥ ಗೌ॥ ಸಣ್ಣಲಿಂಗಪ್ಪನವರು, ಮ॥ ರಾ॥ ಕೊಕ್ಕರೆಬೇವಿನ ಗೌಂ॥ ಕೊಂಚಿತಿಪ್ಪಯ್ಯನವರು, ಮ॥ ರಾ॥ ಗೌ॥ ರುದ್ರಪ್ಪನವರು, ಮ॥ ರಾ॥ ಕಾಮರಡ್ಡಿ ರುದ್ರಪ್ಪನವರು, ಮ॥ ರಾ॥ ಸೇಟೀ [illegible], ಕೆ. ತಾಳಕೆರೆಯಪ್ಪನವರು, ಮ॥ ರಾ॥ ಸೂರೇನಹಳ್ಳಿ ಗೌ॥ ದೇಮಪ್ಪನವರು, ಆಲೂರು ಸಾ॥ ಕೋಡದ ವೀರಣ್ಣನವರು ವಗೈರೇರು 2.3 ತಿಂಗಳಿಂದಲೂ ಸ್ವಂತ ಕಾರ್ಯಗಳನ್ನು ಬಿಟ್ಟು ದಿವಾರಾತ್ರಿಗಳಲ್ಲಿಯೂ ಅವಿಶ್ರಾಂತ ಶ್ರಮಪಟ್ಟು ಅರಣ್ಯದಲ್ಲಿ ಅದರೊಳಗೆ ಎತ್ತರವಾದ ಗುಡ್ಡದಮೇಲೆ ನಡೆಯಬೇಕಾಗಿದ್ದ ಈ ಕಾರ್ಯವನ್ನು ಸಾಂಗೋಪಾಂಗವಾಗಿ ನೆರವೇರಿಸಿ, ಇಹಪರಗಳಲ್ಲಿ ಪುಣ್ಯಕೀರ್ತಿಗಳನ್ನು ಪಡೆದರು. ಈ ಮಹಾಕಾರ್ಯಕ್ಕೆ ಎಷ್ಟೋ ವಿಘ್ನಗಳು ಬಂದಾಗ್ಯೂ ವೇ॥ ಉದ್ದಾನಪ್ಪಯ್ಯನವರು, ಕಾರ್ಯನಿರ್ವಾಹಕ ಸಂಘದವರು ಸಹ ಎದೆಗೆಡದೆ ಕಾರ್ಯವನ್ನು ಕೊನೆಗಾಣಿಸಿರುವದರಿಂದ ಇವರೆಲ್ಲರಿಗೂ ಪರಮಾತ್ಮನಾದ ಶ್ರೀ ಗುಹೇಶ್ವರನು ನಿತ್ಯಾಯುರಾರೋಗ್ಯಭಾಗ್ಯಗಳನ್ನಿತ್ತು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ,

ಓರ್ವ ಪ್ರತ್ಯಕ್ಷದರ್ಶಿ.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕಸಂಘಕ್ಕೆ ಚಂದಾ ಕೊಟ್ಟ ಮಹನೀಯರುಗಳ ಪಟ್ಟಿ.

(ಇದುವರೆಗೆ ಉತ್ಪತ್ತಿಯಾಗಿರುವುದು ರೂ. 17907-8-7).

ಮ॥ ರಾ॥ ಬೆಳಗುತ್ತಿ ಲಿಂಗಪ್ಪನವರು 11.0.0 ರೂಪಾಯಿ. ಮ॥ ವೀರಾಪುರ ಗಾಜನೂರು ಗ್ರಾಮದಲ್ಲಿ ವಸೂಲ್‌ಮಾಡಿದ ಬಾಬ್ತು ಮತ್ತು ಲಗ್ನದ ಬಾಬತು 8-12-0. ಮ॥ ಶಿರಾಳಕೊಪ್ಪದ ಸಿದ್ದಬಸಪ್ಪನವರು 140.0.0. ಮ॥ ಚನ್ನಗಿರಿ ಕೋರಿ ದೊಡ್ಡ ಕೊಟ್ರಪ್ಪನವರು 25.0.0. ಮ॥ ಡಿಟೊ ಸಣ್ಣಕೊಟ್ರಪ್ಪನವರು 22.0.0. ಮ॥ ನಗರದ ಬಸವಣ್ಣಪ್ಪನವರು ಶಿವಮೊಗ್ಗ 50.0.0. ಮಳ್ಳಕೆರೆಯಲ್ಲಿ ವಸೂಲಾದ ಧಾನ್ಯದ ಬಾಬ್ತು ಮಲ್ಲಪ್ಪನವರ ಕಡೆಯಿಂದ 2.0.0. ಮ॥ ಸ್ಕೂಲುಮಾಸ್ಟರ್ ಪ್ರಭಯ್ಯನವರು ನೇಮತಿ 25.0.0. ಮ॥ ಎಲುಬುರಾಗಿ ವಿರುಪಯ್ಯನವರ ನೇಮತಿ 50.0.0. ಮ॥ ರಬ್ಬಳ್ಳಿಗೆ ವೀರಬಸಪ್ಪನವರು ಡಿಟೊ 21.0.0. ಮ॥ ಕುಂಸಿ ಬಸಪ್ಪನವರು ಡಿಟೊ 21.0.0. ಮ॥ ಸೀಗೆ ಹಾಲಪ್ಪನವರು ಡಿಟೊ 15.0.0. ಮ॥ ನವಿಲೆ ಹಂಪಣ್ಣನವರು ಡಿಟೊ 30.0.0. ಮ॥ ಸೊಂಡೂರು ಚನ್ನಬಸಪ್ಪನವರು ಡಿಟೊ 6.0.0. ಮ॥ ಹೊಳೆಹೊನ್ನೂರು ಗುರುಶಾಂತಪ್ಪನವರು ಡಿಟೊ 5.0.0. ಮ॥ ಗಿಡ್ಡಣ್ಣಯ್ಯನ ಚನ್ನಬಸಪ್ಪನವರು ಡಿಟೊ 5.0.0. ಮ॥ ಹರದನಹಳ್ಳಿ ಕಲ್ಲಪ್ಪನವರು ಡಿಟೊ 5.0.0. ಮ॥ ವೀರಪ್ಪಯ್ಯನವರಿಂದ ಲಗ್ನಗಳ ಬಾಬ್ತು 14.0.0. ಮ॥ ಜೀಂಗೆ ವೀರಭದ್ರಪ್ಪನವರು ಡಿಟೊ 900.0.0. ಮ॥ ಮೆರವಣಿಗೆ ಗುರುಶಾಂತಪ್ಪನವರು ಡಿಟೊ 45.0.0. ಮ॥ ಡಿಟೊ ಸಂಗಪ್ಪನವರು 51.0.0. ಮ॥ ದೊಡ್ಡೆತ್ತಿನಹಳ್ಳಿ ಚನ್ನಬಸಪ್ಪನವರು ಡಿಟೊ 51.0.0. ಮ॥ ಹವಳದ ಬಸವಣ್ಣಪ್ಪನವರು ಡಿಟೊ 5.0.0. ಮ॥ ಹಳ್ಳೂರು ವೀರಪ್ಪನವರು ಡಿಟೊ 5.0.0. ಮ॥ ಕವಿ ಹಾಲಪ್ಪನವರು ಡಿಟೊ 12.0.0. ಮ॥ ಹಳ್ಳೂರು ಚನ್ನಬಸಪ್ಪನವರು ಡಿಟೊ 12.0.0. ಮ॥ ಹುತರದ ಮಹಲಿಂಗಪ್ಪನವ ಡಿ. 11.0.0. ಮ॥ ಹಳ್ಳೂರು ಶಿವಲಿಂಗಪ್ಪನವರು 21.0.0. ಮ॥ ಕೋರಿ ಮಾವಿನಹೊಳೆಯಪ್ಪನವರು 18.0.0. ಮ॥ ಹರಪನಹಳ್ಳಿ ವೀರಪ್ಪನವರು 15.0.0. ಮ॥ ಚನ್ನಹಳ್ಳಿ ದೊಡ್ಡಲಿಂಗಪ್ಪನವರು 11-0.0. ಮ॥ ಡಿಟೊ ಗುರುಬಸಪ್ಪನವರು 11.0.0. ಮ॥ ಸೋಂಡೂರು ಸಿದ್ದಪ್ಪನವರು 6.0.0. ಮ॥ ಕೆಂಚಿಗೊಂಡನಹಳ್ಳಿ ಚನ್ನಪ್ಪನವರು 151.0.0 ಮ॥ ಡಿಟೊ ನಾಗಪ್ಪನವರು 6.0.0. ಮ॥ ಹಳ್ಳೂರು ಗೂಳಪ್ಪನವರ ಮಲ್ಲಪ್ಪನವರು 501.0.0. ಮ॥ ಹೊನ್ನಾಳಿ ತಾಲ್ಲೂಕು ತೋಗರೇರಿ ಪಟೇಲ್ ಬಸಪ್ಪನವರು 8.0.0. ಮ॥ ಜವಳಿ ರಾಚಪ್ಪನವರು 10.0.0. ಮ॥ ಕುಪ್ಪಸದ ಶಿವಪ್ಪನವರು 10.0.0. ಮ॥ ಬಸವನಕಟ್ಟೆ ಶಿವಲಿಂಗಯ್ಯನವರು 25.0.0. ಮ॥ ಮಹಾಂತನಮಠದ ಬಸವಣ್ಣಯ್ಯನವರು 5.0.0. ಮ॥ ವಿನಳೂರು ಮುರಿಗಯ್ಯನವರು 10.0.0. ಮ॥ ಗಾಳಿಗದ್ದಿಗಪ್ಪನವರು 5.0.0. ಮ॥ ಮೋಡ್ಲೇರಿ ನಾಗಪ್ಪನವರು 5.0.0 ಮ॥ ತಿಪ್ಪಣ್ಣನವರ ಗದ್ದಿಗಪ್ಪನವರು 5.0.0. ಮ॥ ಆನಗರ್ ಗುರುಪಾದಯ್ಯನವರು 5.0.0. ಮ॥ ಹದ್ದರಳ್ಳಿ ರುದ್ರಪ್ಪನವರು 5.0.0. ಮ॥ ಕೊಟ್ಟೂರ ಶೆಟ್ರಿ ಹಾಲಪ್ಪನವರು 5.0.0 ಮ॥ ಸೇಗಳೂರು ಬಸಟಪ್ಪನವರು 10.0.0 ರೂ. ಜುಮ್ಲಾ 20303-4-7 ರೂ.

ಜಿ. ಯಂ. ಕಾಡಪ್ಪ, ಟ್ರೆಜರರ್.

ರಾ॥ ಬ॥ ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ಆ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

1 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 37

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾಸಿಮಾಡಿಗೂ ವೈದ್ಯರ ಸಮಯವನ್ನು ಕಾದು ನೋಡಿಯದುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯಕರವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ಕೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೮೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ಎಮ್. ಇನ್‌ಸ್ಟಿಟ್ಯೂಟ್ ಆಫ್‌ಸ್ಕೆನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟು ಎಗಿಯಂ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಆಗಸ್ಟ್ ತಾ॥ ೨೫ ರಿಂದ ೧೯೧೮ ನೆಯ ಆಗಸ್ಟ್ ತಾ॥ ೩೧ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಶ್ರಾವಣ ಬ॥ ಚೌತಿಯಿಂದ ಶ್ರಾವಣ ಬ॥ ದಶಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತಿಹ್ಯ
25	ಭಾನು	ಚೌತಿ	48-12	ಉಭಾ	6-6	9
26	ಸೋಮ	ಪಂಚ	42-0	ರೇವತಿ	1-54	10
27	1 ಮಂಗಳ	ಷಷ್ಠಿ	36-3	ಭರಣಿ	53-48	11
28	2 ಬುಧ	ಸಪ್ತ	30-38	ಕೃತ್ತಿಕ	50-31	12
29	3 ಗುರು	ಅಷ್ಟ	25-45	ರೋಹಿಣಿ	47-40	13
30	ಶುಕ್ರ	ನವ	21-43	ಮೃಗಶಿರ	45-44	14
31	4 ಶನಿ	ದಶ	18-35	ಆರಿದ್ರಾ	44-53	15

(1) ಮಂಗಳಗೌರೀವ್ರತಂ, ಶ್ರೀ ಪ್ರಸನ್ನ ಕೃಷ್ಣಸ್ವಾಮಿ ರಥಃ. (2) ಜನ್ಮಾಷ್ಟಮಿ, ದಶಫಲವ್ರತಂ. (3) ಅಷ್ಟಮಿಸಾಥಿ, ಸರ್ವತ್ರ ಶ್ರೀ ಕೃಷ್ಣಜಯಂತೀ. (4) ಶ್ರಾವಣಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನವಕೃತಾವತಾರಾ ಪಕ್ಷಜನಕೃತ್ರವೋಹರಾಜೇಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಾಭೀಷ್ಟಪದೇಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ಗ ೧೯೧೮ ನೆಯ ಇಸವಿ ಸೆಪ್ಟೆಂಬರ್ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೩೫

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಖಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರಾರ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಜಾತ ರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರಾರ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
37 9, ತಿರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಪಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಶಿವಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲಿಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ಯನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಛಾಯಾವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಯೊಂಟರೆ ಪರತ ತಕ್ಕೊಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ ಹೆಡ್ ಆಫೀಸ
17 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಶೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹಿತ ೪—೦—೦.

ಸತ್ಕೃತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ನೀತಿಬೋಧಕವಾದ ಕಥೆಗಳು. ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶೇಷವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
22 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 44

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
37 3. ತಿರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶರವಾದಿ ಗಣಾಂಕುಶತಾರಾ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಹೂತಿಟ್ಟ ಖಡ್ಗ.

ಇದೇ, ಒಬ್ಬ ಮನುಷ್ಯನು ತನ್ನ ಖಡ್ಗವನ್ನು ಭದ್ರಪಡಿಸುವುದಕ್ಕಾಗಿ ಅದನ್ನು ಹೂತಿಟ್ಟ ಕಥೆಯು.

"ಈ ಖಡ್ಗವು ಕಳ್ಳಕಾಕರ ಕೈಯಿಂದ ತನ್ನನ್ನು ಕಾಪಾಡಿಕೊಳ್ಳುವುದಕ್ಕೆ ನಮ್ಮಪ್ಪನಿಗೂ ಅವರಪ್ಪನಿಗೂ ಸಹಾಯಕವಾಗಿತ್ತು; ಇದು ಬಹು ಅಮೌಲ್ಯವಾದ ವಸ್ತು, ಇದನ್ನು ಚೆನ್ನಾಗಿ ಕಾಪಾಡಬೇಕು" ಎಂದು ಅಂದುಕೊಂಡು ಅವನು ಅದನ್ನು ಹೂತಿಟ್ಟನು.

ಈ ಸಂಗತಿಯನ್ನು ಹೇಗೆಯೋ ಒಬ್ಬ ಪ್ರಸಿದ್ಧ ದಂಗೆಕೋರನು ತಿಳಿದು "ಈಗ ನನಗೆ ಅವಕಾಶ ದೊರೆಯಿತು" ಎಂದು ಅಂದುಕೊಂಡು ಹೊರಟು, ನಿರಾಯುಧನಾದ ಆ ಮನುಷ್ಯನ ಮೇಲೆ ಬಿದ್ದು, ಅವನ ಮನೆಯ ಹೆಂಗಸರನ್ನೂ ಅವನ ಆಸ್ತಿಯನ್ನೂ ಕಸುಕೊಂಡು ಅವನನ್ನು ಗುಲಾಮನನ್ನಾಗಿ ಮಾಡಿಕೊಂಡನು.

ಹೂತಿಟ್ಟ ಖಡ್ಗವು ಅವನಿಗೆ ಸಿಕ್ಕಿತೋ ಅಥವಾ ಅದು ಭೂಮಿಯಲ್ಲಿಯೇ ಹೂತುಬಿದ್ದಿತ್ತೋ ಎಂಬ ಅಂಶವು ಹೇಗೆಯಾದರೂ ಇರಲಿ; ಆ ಖಡ್ಗವೇನೋ ಅದರ ಮಾಲೀಕನಿಗೆ ಆ ವೇಳೆ ಉಪಯೋಗಕರವಾಗಿರಲಿಲ್ಲ.

ಇದೇ ಒಂದು ದೃಷ್ಟಾಂತರೂಪವಾದ ಕಥೆಯು. ಈಗಿನ ಯುದ್ಧವು ಉಪಪತ್ತಿಗಳಿಗೆ ಸಂಬಂಧಪಟ್ಟ ಯುದ್ಧವಾಗಿರುತ್ತದೆ. ವಿಶೇಷ ನಾಗರಿಕತೆಯಿಲ್ಲದ ಪೂರ್ವಕಾಲದಲ್ಲಿ ಪ್ರತಿಯೊಬ್ಬನಿಗೂ, ಶತ್ರು ಯಾರಾದರೂ ಇದ್ದರೆ, ಆಯುಧವಿಲ್ಲದೆ ಆ ಶತ್ರುವಿನ ಕೈಯಿಂದ ತನ್ನನ್ನು ರಕ್ಷಿಸಿಕೊಳ್ಳಲಿಕ್ಕೆ ಆಗುತ್ತಿರಲಿಲ್ಲ.

ಈ ಕಾಲದಲ್ಲಿ ಜನರು ಕತ್ತಿಗಳಿಂದ ಮಾತ್ರವೇ ಹೊಡೆದಾಡುವುದಿಲ್ಲ. ಅವರೆ ತಾವು ಸಂಪಾದಿಸಿರುವ ವಸ್ತುಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ತಮ್ಮ ಸರ್ವಸ್ವವನ್ನೂ ಪರಿತ್ಯಾಗಮಾಡಿಯಾದರೂ ಹೊಡೆದಾಡುವವರಾಗಿದ್ದಾರೆ. ಧನವೇ ಸಹಾಯವೇ ಪ್ರಜೆಗಳಿಗೆ ಒಂದು ಖಡ್ಗವಾಗಿರುತ್ತದೆ. ಇಂಥಾ ಖಡ್ಗವನ್ನು ಮರೆಮಾಡುವ ಜನರ ಗತಿ ಏನಾಗುವುದು?

ಮೇಲಿನ ಕಥೆಯಲ್ಲಿ ಕಂಡ ಮನುಷ್ಯನಿಗೆ ಆದ ಗತಿಯೇ ಉಂಟಾಗುವುದು.

ಆತನ ತಂದೆಯು ತನ್ನ ಪ್ರಾಣವನ್ನೂ, ತನ್ನ ಸ್ವಾತಂತ್ರ್ಯವನ್ನೂ, ಮತ್ತು ತನಗೆ ಸೇರಿದ ವಸ್ತುಗಳನ್ನೂ ಕಾಪಾಡಿಕೊಳ್ಳುವುದಕ್ಕಾಗಿ ತನ್ನ ಆಯುಧವನ್ನು ಉಪಯೋಗಿಸುತ್ತಿದ್ದನು. ಕೊನೆಯವರೆಗೂ ಅದರ ಉಪಯೋಗವು ನಿರರ್ಥಕವಾಗಿರಲಿಲ್ಲ, ಅದರೆ ಅದನ್ನು ಉಪಯೋಗಿಸುತ್ತಿದ್ದುದರಿಂದ ಅದರ ಪ್ರಯೋಜನವು ಮತ್ತಷ್ಟು ಹೆಚ್ಚುತ್ತಿತ್ತು. ಆತನು ಅದನ್ನು ತನ್ನ ಮಗನಿಗೆ ಕೊಡುವಾಗ ಅದು ಬಹು ಪ್ರಯೋಜನಕರವಾಗಿತ್ತು.

ಹಣವೇ ನಮ್ಮ ಖಡ್ಗವು. ಇದನ್ನು ನಮ್ಮ ಶತ್ರುಗಳನ್ನು ಉಪಯೋಗಿಸುವುದಕ್ಕೋಸ್ಕರ ಉಪಯೋಗಿಸೋಣ. ಆ ಶತ್ರುಗಳಾದರೋ ಬೆಲ್ಜಿಯಂ, ಸರ್ವಿಯಾದೇಶಗಳಂತಹ ಸಣ್ಣಸಣ್ಣ ದೇಶಗಳನ್ನು ಕಸುಕೊಂಡು, ಅಲ್ಲಿನವರನ್ನು ಗುಲಾಮರನ್ನಾಗಿ ಮಾಡಿ, ಅವರ ಹೆಂಗಸರನ್ನು ಕೆಡಿಸಿ, ಅವರ ಜಮೀನುಗಳನ್ನು ಹಾಳುಮಾಡಿದಂತೆಯೇ ಸಾಧ್ಯವಾದರೆ ನಮ್ಮ ಸ್ವತ್ತುಗಳನ್ನೂ ಕಸುಕೊಂಡು ನಮ್ಮನ್ನೂ ಗುಲಾಮರನ್ನಾಗಿ ಮಾಡುವರು. ಆದುದರಿಂದ ನಮ್ಮ ಸ್ವಾತಂತ್ರ್ಯಗಳು ಸುರಕ್ಷಿತವಾಗಿ ದೃಢಪಟ್ಟಾಗ ನಾವು ಸಾಲ ಕೊಟ್ಟುದಕ್ಕಿಂತಲೂ ಬಹಳ ಹೆಚ್ಚಾಗಿ ನಮ್ಮ ಹಣವನ್ನು ವಾಪಸ್ ಪಡೆಯಬೇಕೆಂಬುದಾಗಿ ತಿಳಿದು ನಮ್ಮ ಖಡ್ಗರೂಪವಾದ ಹಣವನ್ನು ನಮ್ಮ ಸರ್ಕಾರದವರಿಗೆ ಸಾಲವಾಗಿ ಕೊಡುವುದೇ ಅತಿ ಮುಖ್ಯವಾದ ಮತ್ತು ಪರಮಪ್ರಯೋಜನಕರವಾದ ಕೆಲಸವಾಗಿರುತ್ತದೆ.

ಪತ್ರವ್ಯವಹಾರ.

ಅಶೇಷವೀರಶೈವ ಮಹಾಜನಕ್ಕೆ ಅತಿವಿನಯದಿಂದರಿಕೆ ಮಾಡಿಕೊಳ್ಳುವದೇನಂದರೆ:—

ದಾವಣಗೆರೆಯಲ್ಲಿ 1917 ನೆ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆದ 8 ನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ 9 ನೆಯ ಶ್ರೀಮದ್ವೀರಶೈವ ಮಹಾಸಭೆಯನ್ನು 1918 ನೆ ಇಸವಿ ಡಿಸೆಂಬರ್ ತಿಂಗಳಲ್ಲಿ ಬೀರೂರಲ್ಲಿ ನಡೆಸುವಂತೆ ಕೆಲವು ಮಹಾಶಯರ ಅಪೇಕ್ಷೆಯಂತೆ [illegible] ಪ್ರಕಾರ ಬೀರೂರಿನ ಮಹಾಜನರು ತಾ|| 4-8-1918 ರಲ್ಲಿ [illegible] "ಮಹಾಸಭಾ ಅಧ್ಯಕ್ಷರ ಚುನಾವಣೆ, ಮಹಾಸಭೆಯಲ್ಲಿ [illegible] ಮತ್ತು ನಿರ್ಧರಿಸತಕ್ಕ ವಿಷಯಗಳು ಮುಂತಾದ ಎಲ್ಲಾ ವಿಚಾರಗಳನ್ನು ನಿಬಂಧನೆಮಾಡುವ ಉದ್ದಿಶ್ಯ ತಾ|| 22-9-1918 ನೆ ಭಾನುವಾರ ಪ್ರಾತಃಕಾಲ 8 ಘಂಟೆಗೆ ಬೀರೂರಲ್ಲಿ ವೀರಶೈವ ಮಹಾಜನರ ಸಭೆಯನ್ನು ನೆರೆಯಿಸಬೇಕೆಂದು" ತೀರ್ಮಾನ ಮಾಡಲ್ಪಟ್ಟಿದೆ.

ತಾವು ಆ ಕಾಲಕ್ಕೆ ದಯಮಾಡಿ, ನಾವು ಕೈಗೊಂಡಿರುವ ಮಹತ್ಕಾರ್ಯವು ಸುಲಲಿತವಾಗಿ ನಡೆಯುವುದಕ್ಕೆ ತಮ್ಮ ಸಲಹೆಗಳನ್ನು ಕೊಡಬೇಕಾಗಿ ಪ್ರಾರ್ಥನೆ.

ತಮ್ಮ ಕೃಪಾಭಿಲಾಷಿಗಳಾದ

(1) ಪತ್ರೆ ಚಂ. ವೀರಪ್ಪಯ್ಯ, (2) ಯಂ|| ನ|| ಶಾಂತಪ್ಪಶೆಟ್ಟಿ, (3) ಎಸ್. ಪರ್ವತಪ್ಪಯ್ಯ, (4) ಯಜ್. ಎಂ. ಶಿವಲಿಂಗಪ್ಪಯ್ಯ, (5) ಮಠದ ಪುಟ್ಟಯ್ಯ, (6) ಮಾಗೆ ದೊಡ್ಡಮರುಳಯ್ಯ, (7) ಎಮ್. ವಿ. ಮರುಳುಸಿದ್ದಯ್ಯ, (8) ದೊಡ್ಡಮನೆ ಮರಿಯಪ್ಪ ಬಸಪ್ಪ, (9) ದೊಡ್ಡಮನೆ ಹಾಲಪ್ಪ, (10) ಕೋಡಿಹಳ್ಳಿ ಮಲ್ಲಯ್ಯ, (11) ಗಡಿಗೆ ಮುದ್ದಪ್ಪ ಚಿಕ್ಕೀರಪ್ಪ, (12) ಕಡೂರು ಸಿದ್ದಪ್ಪ, (13) ದೊಡ್ಡಮನೆ ಸಣ್ಣನಂಜಪ್ಪ, (14) ಪಟೇಲ್ ನಂಜಪ್ಪ, (15) ಬೊಮ್ಮಜ್ಜಿ ನಂಜಪ್ಪ, (16) ಕೆ. ನಂಜಪ್ಪಗೌಡ, (17) ಸಿಂಗಲಾಪುರದ ಮಹದೇವಪ್ಪ, (18) ಕೋಟೆಯಯ್ಯನವರ ತೋಟದಪ್ಪ, (19) ಚಿಂದಯ್ಯನವರ ರುದ್ರಪ್ಪ, (20) ಗುರುಸಿದ್ದಣ್ಣನವರ ಗಂಗಣ್ಣ.

ಚಿತ್ರದುರ್ಗದ ತಾಲ್ಲೂಕು ಚಿಕ್ಕಣ್ಣನಹಳ್ಳಿ ಗುಹೇಶ್ವರಪ್ರತಿಷ್ಠೆ.

ಈ ಗ್ರಾಮದ ಬಳಿ ಇರುವ ಗುಹೇಶ್ವರನ ಗುಡ್ಡದಮೇಲೆ ಇದ್ದ ಶ್ರೀ ಗುಹೇಶ್ವರ ಲಿಂಗವನ್ನು ಯಾರೋ ಸ್ಥಾನಚ್ಯುತಿಯನ್ನು ಮಾಡಿದ್ದುದರಿಂದ ಅದನ್ನು ಜೀರ್ಣೋದ್ಧಾರಮಾಡಬೇಕೆಂಬ ಸದುದ್ದೇಶದಿಂದ ಕರ್ಜ್ ಬೇವಿನ ವೀರಭಿಕ್ಷಾವರ್ತಿಮಠದ ಉದ್ದಾನಪ್ಪಯ್ಯನವರು ಎರಡುವರ್ಷಗಳಿಂದಲೂ ಪ್ರಯತ್ನಪಟ್ಟು ಈ ಗ್ರಾಮದ ಮುಖಂಡ ಜನಗಳಲ್ಲಿ ಆಲೋಚಿಸಿ, ಕಾರ್ಯದರ್ಶಿಗಳು ಸತ್ಕಾರಕಸಂಘದವರೇ ಮೊದಲಾದವರನ್ನು ಏರ್ಪಡಿಸಿ, ಎಲ್ಲರೂ 4-5 ದಿವಸಗಳಿಗೆ ಮುಂಚೆಯೇ ಇಲ್ಲಿಗೆ ಬಂದು ಎಲ್ಲಾ ಸಾಮಗ್ರಿಗಳನ್ನು ಅಣಿಮಾಡಿಕೊಂಡು 11 ನೇ ಭಾನುವಾರ ಸಾಮಾನುಗಳ ಸಮೇತ ಗುಡ್ಡದಮೇಲಕ್ಕೆ ಹೋಗಿ ಸೇರಿದರು. ಈ ಕಾರ್ಯಕ್ಕೆ ವೇ|| ಮಾಡನಾಯ್ಕನಹಳ್ಳಿ ಸಾರಂಗಮಠದ ಸಾರಂಗಪ್ಪಯ್ಯನವರು, ವೇ|| ಹಿರಿಯೂರು ಗುರುಜಂಗಮಠದ ಸಿದ್ದಲಿಂಗಪ್ಪಯ್ಯನವರು, ಕೋಟೆ ಚಿಕ್ಕ ಸ್ಕೂಲ್ ಮಾಸ್ತರರು, ಆಂತೀಕೆರೆ ಮಠದ ಗುರುಬಸವಯ್ಯನವರು, [illegible] ಚಂದ್ರಶೇಖರಯ್ಯನವರು, ಹುಣಸೇಕಟ್ಟೆ ಮಠದ ಚನ್ನಬಸವಯ್ಯನವರು, ಬೋಸೆಹಳ್ಳಿ ಮಠದ ತಿಪ್ಪೆಸ್ವಾಮಿಯವರು, ಕಲ್ಲೇದೇವರಪುರದ ಮಠದ ಶ್ರೀ ಚರಪಟ್ಟದಸ್ವಾಮಿಗಳು, ಚಿತ್ರದುರ್ಗದ ಉಜ್ಜನಿಮಠದ ಪಟ್ಟದಸ್ವಾಮಿಗಳು, ಜಗಲೂರು ಸಾ|| ಮಹಲಿಂಗಪ್ಪನವರು ದಯಮಾಡಿಸಿದ್ದರು. ವಿಧ್ಯುಕ್ತವಾಗಿ ಎಲ್ಲಾ ಕಾರ್ಯಗಳೂ ಆಗಮಿಕರಾದ ಆರಸೀಕೆರೆ ಮಠದ ಗುರುಬಸವಯ್ಯನವರು, ಆರ್. ಎಂ. ಚಂದ್ರಶೇಖರಯ್ಯನವರು, ಚನ್ನಬಸವಯ್ಯನವರು, ವಿ. ಎಂ. ದೊಡ್ಡಪ್ಪಯ್ಯನವರು, ರಡ್ಡಿಹಳ್ಳಿ ಮಠದ ತಿಪ್ಪಯ್ಯನವರು ಇವರುಗಳಿಂದ ಮಾಡಿಸಲ್ಪಟ್ಟಿತು. ಅನಂತರ ಶ್ರೀ ರುದ್ರಾಧ್ಯಯನ ಮಹಾಭಿಷೇಕವೂ, ಮಂಗಳಾರತಿಯೂ ಸಹ ತಾರೀಖು 12 ನೇ ಸೋಮವಾರ ಮಧ್ಯಾಹ್ನಕ್ಕೆ ನೆರವೇರಿಸಲ್ಪಟ್ಟು ಸಾಂಗಗೊಳಿಸಿದರು. ಸುತ್ತಮುತ್ತಿನ ಗ್ರಾಮಾಂತರಗಳಿಂದ ಅನೇಕ ಜನಗಳು ತಂಡತಂಡವಾಗಿ ಬಂದು ಗುಡ್ಡದಮೇಲಕ್ಕೆ ಸೇರುತ್ತಿದ್ದರು. ಚಿಪ್ಪಿನಕೆರೆ ಸೂರೇನಹಳ್ಳಿ ವಗೈರೆ ಗ್ರಾಮಗಳವರು ತಮ್ಮ ಗ್ರಾಮಗಳ ದೇವರುಗಳ ಸಮೇತವಾಗಿ ಬಂದಿದ್ದರು. ಗುಡ್ಡದಕೆಳಗೆ ಸಮಪ್ರದೇಶದಲ್ಲಿ ವಿಶಾಲವಾಗಿ ಹಾಕಿ ಶೃಂಗರಿಸಿದ್ದ ಚಪ್ಪರದಲ್ಲಿ ದಿವ್ಯವಾದ ಭೋಜನದೇರ್ಪಾಟುಮಾಡಲ್ಪಟ್ಟು 12 ನೇ ಸೋಮವಾರ ಮಧ್ಯಾಹ್ನದಿಂದ ಸುಮಾರು 1.5 ಸಾವಿರ ಜನಗಳಿಗೆ ಮೇಲ್ಪಟ್ಟು ಭೂರಿಸಂತರ್ಪಣೆಯೂ ಎಲ್ಲಾ ಕೋಮಿನವರಿಗೂ ಮಾಡಲ್ಪಟ್ಟಿತು. ಕಾರ್ಯನಿರ್ವಾಹಕಸಂಘದ ಮ|| ರಾ|| ಪತ್ರಾರಿ ಚಂದ್ರಪ್ಪನವರು ಗೊಂಚಿಕಾರ ದೊಡ್ಡತಿಲಂ ತಿಪ್ಪಯ್ಯನವರು, ಗೊಂ|| ಮಂಡಿ ಲಿಂಗಪ್ಪನವರು, ಗೌ|| ಸಣ್ಣತಿಪ್ಪಯ್ಯನವರು, ಮ|| ರಾ|| ಗೌ|| ಸಣ್ಣಲಿಂಗಪ್ಪನವರು, ಮ|| ರಾ|| ಕರ್ಜ್ ಬೇವಿನ ಗೊಂ|| ಕೊಂಚಿತಿಪ್ಪಯ್ಯನವರು, ಮ|| ರಾ|| ಗೌ|| ರುದ್ರಪ್ಪನವರು, ಮ|| ರಾ|| ಕಾಮಶೆಟ್ಟಿ ರುದ್ರಪ್ಪನವರು, ಮ|| ರಾ|| ಸೇಟೀ ವ್ಹಣಕ್ಕರು, ಕೆ. ತಾಳಕೆರೆಯಪ್ಪನವರು, ಮ|| ರಾ|| ಸೂರೇನಹಳ್ಳಿ ಗೌ|| ದೇವಪ್ಪನವರು, ಆಲೂರು ಸಾ|| ಕೊಡದ ವೀರಣ್ಣನವರು ವಗೈರೆರು 2-3 ತಿಂಗಳಿಂದಲೂ ಸ್ವಂತ ಕಾರ್ಯಗಳನ್ನು ಬಿಟ್ಟು ದಿವಾರಾತ್ರಿಗಳಲ್ಲಿಯೂ ಅವಿಶ್ರಾಂತ ಶ್ರಮಪಟ್ಟು ಅಂತ್ಯದಲ್ಲಿ ಅದರೊಳಗೆ ಎತ್ತರವಾದ ಗುಡ್ಡದಮೇಲೆ ನಡೆಯಬೇಕಾಗಿದ್ದ ಈ ಕಾರ್ಯವನ್ನು ಸಾಂಗೋಪಾಂಗವಾಗಿ ನೆರವೇರಿಸಿ, ಇಹಪರಗಳಲ್ಲಿ ಪುಣ್ಯಕೀರ್ತಿಗಳನ್ನು ಪಡೆದರು. ಈ ಮಹಾಕಾರ್ಯಕ್ಕೆ ಎಷ್ಟೋ ವಿಘ್ನಗಳು ಬಂದಾಗ್ಯೂ ವೇ|| ಉದ್ದಾನಪ್ಪಯ್ಯನವರು, ಕಾರ್ಯನಿರ್ವಾಹಕಸಂಘದವರು ಸಹ ಎದೆಗೆಡದೆ ಕಾರ್ಯವನ್ನು ಕೊನೆಗಾಣಿಸಿರುವದರಿಂದ ಇವರೆಲ್ಲರಿಗೂ ಪರಮಾತ್ಮನಾದ ಶ್ರೀ ಗುಹೇಶ್ವರನು ನಿತ್ಯಾಯುರಾರೋಗ್ಯಭಾಗ್ಯಗಳನ್ನಿತ್ತು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ,

ಓರ್ವ ಪ್ರತ್ಯಕ್ಷದರ್ಶಿ.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕಸಂಘಕ್ಕೆ ಚಂದಾ ಕೊಟ್ಟ ಮಹನೀಯರುಗಳ ಪಟ್ಟಿ.

(ಇದುವರೆಗೆ ಉತ್ಪತ್ತಿಯಾಗಿರುವುದು ರೂ. 17907-8-7).

ಮ|| ರಾ|| ಬೆಳಗುತ್ತಿ ಲಿಂಗಪ್ಪನವರು 11-0-0 ರೂಪಾಯಿ. ಮ|| ವೀರಾಪುರ ಗಾಜನೂರು ಗ್ರಾಮದಲ್ಲಿ ವಸೂಲ್‌ಮಾಡಿದ ಬಾಬ್ತು ಮತ್ತು ಲಗ್ನದ ಬಾಬತು 8-12-0. ಮ|| ಶಿರಾಳಕೊಪ್ಪದ ಸಿದ್ದಬಸಪ್ಪನವರು 140-0-0. ಮ|| ಚನ್ನಗಿರಿ ಕೋರಿ ದೊಡ್ಡ ಕೊಟ್ರಪ್ಪನವರು 25-0-0. ಮ|| ಡಿಟೊ ಸಣ್ಣಕೊಟ್ರಪ್ಪನವರು 22-0-0. ಮ|| ನಗರದ ಬಸವಣ್ಣಪ್ಪನವರು ಶಿವಮೊಗ್ಗ 50-0-0. ಮಳ್ಳಕೆರೆಯಲ್ಲಿ ವಸೂಲಾದ ಧಾನ್ಯದ ಬಾಬ್ತು ಮಲ್ಲಪ್ಪನವರ ಕಡೆಯಿಂದ 2-0-0. ಮ|| ಸ್ಕೂಲುಮಾಸ್ಟರ್ ಪ್ರಭಯ್ಯನವರು ನೇಮತಿ 25-0-0. ಮ|| ಎಲುಬುರಾಗಿ ವಿರುಪಯ್ಯನವರ ನೇಮತಿ 50-0-0. ಮ|| ರಬ್ಬಳ್ಳಿಗೆ ವೀರಬಸಪ್ಪನವರು ಡಿಟೊ 21-0-0. ಮ|| ಕುಂಶಿ ಬಸಪ್ಪನವರು ಡಿಟೊ 21-0-0. ಮ|| ಸೀಗೆ ಹಾಲಪ್ಪನವರು ಡಿಟೊ 15-0-0. ಮ|| ನವಿಲೆ ಹಂಪಣ್ಣನವರು ಡಿಟೊ 30-0-0. ಮ|| ಸೊಂಡೂರು ಚನ್ನಬಸಪ್ಪನವರು ಡಿಟೊ 6-0-0. ಮ|| ಹೊಳೆಹೊನ್ನೂರು ಗುರುಶಾಂತಪ್ಪನವರು ಡಿಟೊ 5-0-0. ಮ|| ಗಿಡ್ಡಣ್ಣಯ್ಯನ ಚನ್ನಬಸಪ್ಪನವರು ಡಿಟೊ 5-0-0. ಮ|| ಹರದನಹಳ್ಳಿ ಕಲ್ಲಪ್ಪನವರು ಡಿಟೊ 5-0-0. ಮ|| ವೀರಪ್ಪಯ್ಯನವರಿಂದ ಲಗ್ನಗಳ ಬಾಬ್ತು 14-0-0. ಮ|| ಜೀರಿಗೆ ವೀರಭದ್ರಪ್ಪನವರು ಡಿಟೊ 900-0-0. ಮ|| ಮೆರವಣಿಗೆ ಗುರುಶಾಂತಪ್ಪನವರು ಡಿಟೊ 45-0-0. ಮ|| ಡಿಟೊ ಸಂಗಪ್ಪನವರು 51-0-0. ಮ|| ದೊಡ್ಡತ್ತಿನಹಳ್ಳಿ ಚನ್ನಬಸಪ್ಪನವರು ಡಿಟೊ 51-0-0. ಮ|| ಹವಳದ ಬಸವಣ್ಣಪ್ಪನವರು ಡಿಟೊ 5-0-0. ಮ|| ಹಳ್ಳೂರು ವೀರಪ್ಪನವರು ಡಿಟೊ 5-0-0. ಮ|| ಕವಿ ಹಾಲಪ್ಪನವರು ಡಿಟೊ 12-0-0. ಮ|| ಹಳ್ಳೂರು ಚನ್ನಬಸಪ್ಪನವರು ಡಿಟೊ 12-0-0. ಮ|| ಹುಹರದ ಮಹಲಿಂಗಪ್ಪನವು ಡಿ. 11-0-0. ಮ|| ಹಳ್ಳೂರು ಶಿವಲಿಂಗಪ್ಪನವರು 21-0-0. ಮ|| ಕೋರಿ ಮಾವಿನಹೊಳೆಯಪ್ಪನವರು 18-0-0. ಮ|| ಹರದನಹಳ್ಳಿ ವೀರಪ್ಪನವರು 15-0-0. ಮ|| ಚನ್ನಹಳ್ಳಿ ದೊಡ್ಡಲಿಂಗಪ್ಪನವರು 11-0-0. ಮ|| ಡಿಟೊ ಗುರುಬಸಪ್ಪನವರು 11-0-0. ಮ|| ಸೊಂಡೂರು ಸಿದ್ದಪ್ಪನವರು 6-0-0. ಮ|| ಕೆಂಚಿಗೊಂಡನಹಳ್ಳಿ ಚನ್ನಪ್ಪನವರು 151-0-0. ಮ|| ಡಿಟೊ ನಾಗಪ್ಪನವರು 6-0-0. ಮ|| ಹಳ್ಳೂರು ಗೂಳಪ್ಪನವರ ಮಲ್ಲಪ್ಪನವರು 501-0-0. ಮ|| ಹೊನ್ನಾಳಿ ತಾಲ್ಲೋಕು ತೋಗರೇರಿ ಪಟೇಲ್ ಬಸಪ್ಪನವರು 8-0-0. ಮ|| ಜಂಗಿ ರಾಚಪ್ಪನವರು 10-0-0. ಮ|| ಕುಪ್ಪಸದ ಶಿವಪ್ಪನವರು 10-0-0. ಮ|| ಬಸವನಕಟ್ಟೆ ಶಿವಲಿಂಗಯ್ಯನವರು 25-0-0. ಮ|| ಮಹಂತನಮಠದ ಬಸವಣ್ಣಯ್ಯನವರು 5-0-0. ಮ|| ವಿನಳೂರು ಮುರಿಗಯ್ಯನವರು 10-0-0. ಮ|| ಗಾಳಿಗದ್ದಿಗಪ್ಪನವರು 5-0-0. ಮ|| ಮೋಡ್ಲೇರಿ ನಾಗಪ್ಪನವರು 5-0-0. ಮ|| ತಿಪ್ಪಣ್ಣನವರ ಗದ್ದಿಗಪ್ಪನವರು 5-0-0. ಮ|| ಆನಗರ್ ಗುರುಪಾದಯ್ಯನವರು 5-0-0. ಮ|| ಹದ್ದರಳ್ಳಿ ರುದ್ರಪ್ಪನವರು 5-0-0. ಮ|| ಕೊಟ್ರೂರ ಶೆಟ್ರಿ ಹಾಲಪ್ಪನವರು 5-0-0. ಮ|| ಸೇಗಳೂರು ಬಸೆಟಪ್ಪನವರು 10-0-0 ರೂ. ಜುಮ್ಲ 20303-4-7 ರೂ.

ಜಿ. ಯಂ. ಕಾಡಪ್ಪ, ಟ್ರೆಜರರ್.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

1 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 37

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕುಮಾಕಿಗೂ ವೈದ್ಯರ ಸಮಯವನ್ನು ಕಾದು ನೋಡಿಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೫ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಫ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿದೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಆಗಸ್ಟ್ ತಾ|| ೨೫ ರಿಂದ ೧೯೧೮ ನೆಯ ಆಗಸ್ಟ್ ತಾ|| ೩೧ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಶ್ರಾವಣ ಬ|| ಚೌತಿಯಿಂದ ಶ್ರಾವಣ ಬ|| ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ
25	ಭಾನು	ಚೌತಿ	48-12	ಉಭಾ	6-6	9
26	ಸೋಮ	ಪಂಚ	42-0	ರೇವತಿ	1-54	10
27	[1]ಮಂಗಳ	ಷಷ್ಠಿ	36-3	ಭರಣಿ	53-48	11
28	[2]ಬುಧ	ಸಪ್ತ	30-38	ಕೃತ್ತಿಕೆ	50-31	12
29	[3]ಗುರು	ಅಷ್ಟ	25-45	ರೋಹಿಣಿ	47-40	13
30	ಶುಕ್ರ	ನವ	21-43	ಮೃಗಶಿರ	45-44	14
31	[4]ಶನಿ	ದಶ	18-35	ಆರಿದ್ರಾ	44-53	15

(1) ಮಂಗಳಗೌರೀವ್ರತಂ, ಶ್ರೀ ಪ್ರಸನ್ನ ಕೃಷ್ಣಸ್ವಾಮಿ ರಥಃ. (2) ಜನ್ಮಾಷ್ಟಮಿ, ದಶಫಲವ್ರತಂ. (3) ಅಷ್ಟಮೀತಿಥಿ, ಸರ್ವತ್ರ ಶ್ರೀ ಕೃಷ್ಣಜಯಂತೀ. (4) ಶ್ರಾವಣಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಳಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಸೆಪ್ಟೆಂಬರ್ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೩೫

REGISTERED NO. M. 124.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ, ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ, ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅಲ್ಪತ ರವುಖ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
37 ೫, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಪಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇಸ್ತಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮ್ಯಶೂಲಿ, ಆರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ, ಜಡ್ಡು, ಗುದ್ದಪ್ಪನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಭಾಯಿವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆತಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
17 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹಿತ ೪—೦—೦.

ಸತ್ಕಥಾಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ನೀತಿಬೋಧಕವಾದ ಕಥೆಗಳು. ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
22 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 44

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶೀಘ್ರ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ. ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
37 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೩—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಸೆಪ್ಟಂಬರ್ ತಾ|| ೧ ನೆಯ ಭಾನುವಾರ.

ಮರಿಮಲ್ಲಪ್ಪನವರ ಹೈಸ್ಕೂಲು ಹೆಡ್ಮಾಸ್ಟರು.

ಕೈ|| ಮರಿಮಲ್ಲಪ್ಪನವರ ಧರ್ಮಕಾರ್ಯದ ವಿಚಾರಣಕರ್ತೃಗಳು ಆ ಪಾಠಶಾಲೆಯ ಅಭ್ಯುದಯವನ್ನೇ ಮುಖ್ಯವಾದ ಗುರಿಯಾಗಿಟ್ಟುಕೊಂಡು, ಮ|| ವೆಂಕಟಕೃಷ್ಣಯ್ಯನವರನ್ನು ಅದರ ಹೆಡ್ಮಾಸ್ಟರ್‌ತನದಿಂದ ವಿಮೋಚನಗೊಳಿಸಿ, ಗೌರ್ನಮೆಂಟಿನವರು ಒಪ್ಪತಕ್ಕ ಬಿ. ಎ., ಎಲ್. ಟಿ., ಪದವೀಧರನಾದ ಒಬ್ಬ ಸಮರ್ಥೋಪಾಧ್ಯಾಯನನ್ನು ಆ ಪದವಿಗೆ ತರಬೇಕೆಂದು ಏಕಕಂಠ್ಯದಿಂದ ನಿರ್ಧರಿಸಿ, ಕೆಲಸವನ್ನು ಬಿಡುವುದಕ್ಕಾಗಿ ಮ|| ವೆಂಕಟಕೃಷ್ಣಯ್ಯನವರಿಗೆ ೩ ತಿಂಗಳ ಅವಧಿಯನ್ನು ಕಾಣಿಸಿ ನೋಟೀಸನ್ನು ಕಳುಹಿಸಿದ್ದರಷ್ಟೆ. ವಿದ್ಯಾಭ್ಯಾಸದ ಶಾಖೆಯವರು ಅದಕ್ಕೆ ತಕ್ಕವರೊಬ್ಬರನ್ನು ಕಳುಹಿಸಿಕೊಡುವುದಕ್ಕೆ ಸಮ್ಮತಿಸಿ, ಗೊತ್ತುಮಾಡಿಕೊಟ್ಟಿರುವರು. ಅದರ ಪ್ರಕಾರ ನಿನ್ನೆ ಮ|| ವೆಂಕಟಕೃಷ್ಣಯ್ಯನವರು ತಮ್ಮ ದೀರ್ಘಕಾಲಾನುಭವದ ಪದವಿಯನ್ನು ಬಿಡುವುದೂ ಇಂದೋ ನಾಳೆಯೋ ಹೊಸಬರು ಬಂದು ಆ ಅಧಿಕಾರವನ್ನು ವಹಿಸುವುದೂ ನಡೆಯಬೇಕಾದುದಾಗಿದ್ದುವು.

ಮರಿಮಲ್ಲಪ್ಪನವರ ಧರ್ಮಪಾಠಶಾಲೆಯ ಅಭ್ಯುದಯವನ್ನು ಕೋರುವವರಲ್ಲಿ ತಾವೂ ಒಬ್ಬರಾಗಿದ್ದರೆ ಮ|| ವೆಂಕಟಕೃಷ್ಣಯ್ಯನವರು ೭೨ ವರ್ಷ ವಯಸ್ಸು ತುಂಬಿದ ತಮ್ಮ ಮುದಿತನದಲ್ಲಿ, ದೇಶಸೇವೆಯ ನಾನಾ ಕಾರ್ಯಕಲಾಪಗಳ ಜತೆಗೆ ಈ ಶಾಲಾ ಮುಖ್ಯೋಪಾಧ್ಯಾಯತ್ವ ಭಾರವನ್ನೂ ನಿರಾಕ್ಷೇಪವಾಗಿ ನಿರ್ವಹಿಸಿಕೊಂಡು ಹೋಗುವುದು ತಮಗೆ ಅಸಾಧ್ಯವೆಂದು ಅರಿತು, ನಿಸ್ಪೃಹತೆಯಿಂದ ಅವರೇ ರಾಜೀನಾಮೆಯನ್ನು ಕೊಟ್ಟುಬಿಟ್ಟಿದ್ದರೆ, ಅವರ ಗೌರವಕ್ಕೂ ವಯಸ್ಸಿಗೂ ಭೂಷಣವಾಗಿ ಇದು ಉತ್ತಮ ಪಕ್ಷವೆನಿಸಿಕೊಳ್ಳುತ್ತಿದ್ದಿತು. ಟ್ರಸ್ಟಿಗಳು ನಿರ್ಧರಿಸಿದ ಮೇಲಾದರೂ ೩ ತಿಂಗಳ ಕಾಲಾವಧಿಯನ್ನೂ ಕೂಡ ಅಪೇಕ್ಷಿಸದೆ ಕೆಲಸವನ್ನು ಬಿಟ್ಟುಬಿಟ್ಟಿದ್ದರೆ ಮಧ್ಯಮಪಕ್ಷವಾಗುತ್ತಿದ್ದಿತು. ಕೊಟ್ಟ ಕಾಲಾವಧಿಯು ಮುಗಿದರೂ ಬಿಡದಿದ್ದರೆ ಅದು ಎಂತಹ ಪಕ್ಷವಾಗುವುದೆಂಬುದನ್ನು ಒಡೆದು ಹೇಳಬೇಕಾಗಿರುವುದಿಲ್ಲ. ಅವರು ಪಾಠಶಾಲೆಯ ಸಂಬಂಧವನ್ನು ಬಿಟ್ಟುಬಿಟ್ಟಿದ್ದರೆ ಈ ಸಂಬಂಧವಾಗಿ ಹುಟ್ಟಿರುವ ಕಥೆಯೆಲ್ಲಾ ಇಲ್ಲಿಗೆ ಮುಗಿದುಹೋಗುತ್ತಿದ್ದಿತು. ಆದರೆ ಇದಕ್ಕೆ ಈ ಮಧ್ಯೆ ಅನೇಕ ಉಪಕಥೆಗಳು ಹುಟ್ಟಿರುವುದರಿಂದ ಮುಖ್ಯ ಕಥೆಯು ಇನ್ನೂ ಕೊನೆಮುಟ್ಟಿಲ್ಲ. ಆ ಉಪಕಥೆಗಳ ಪರಂಪರೆಯೇನೆಂದರೆ—ಇದೇ ಹೆಡ್ಮಾಸ್ಟರೇ ಸ್ಕೂಲಿಗೆ ಇರಬೇಕೆಂಬ ಮಹಜರುಗಳು ನೂರಾರು ಮಂದಿಯ ರುಜುವಿನಿಂದ ಟ್ರಸ್ಟ್‌ಕಮಿಟಿಗೂ ಡಿಸ್ಟ್ರಿಕ್ಟ್ ಜಡ್ಜರಿಗೂ ಬರೆಯಲ್ಪಟ್ಟಿದ್ದುದು ಮೊದಲನೆಯದು.

ವಿದ್ಯೆಗೆ ದುರ್ಭಿಕ್ಷವಿಲ್ಲದ ಈಗಿನ ಕಾಲದಲ್ಲಿ ಇಂಥ ಮುದಿಕರಿಂದ ಕೆಲಸಮಾಡಿಸಿಕೊಳ್ಳಬೇಕಾದ ಅವಶ್ಯಕತೆಯೇನೂ ಇಲ್ಲವೆಂಬ ಕಾರಣದಿಂದಲೂ, ಇವರಿಗಿಂತ ಹೆಚ್ಚು ಯೋಗ್ಯತೆಯುಳ್ಳವರನ್ನು ಇನ್ನೂ ಕಡಿಮೆಯ ಸಂಬಳದ ಮೇಲೆಯೇ ನಿಯಮಿಸಿಕೊಳ್ಳುವುದು ಸಾಧ್ಯವಾಗಿರುವುದರಿಂದಲೂ ಟ್ರಸ್ಟಿಗಳು ದೂರದೃಷ್ಟಿಯಿಂದ ತಾವು ಮುಂಚೆಯೇ ಮಾಡಿರುವ ನಿರ್ಧಾರವನ್ನು ಆ ಪರಪ್ರೇರಣೆಯ ಮಹಜರುಗಳ ತಡೆಯಿಂದ ಬದಲಾಯಿಸಿಕೊಳ್ಳಬೇಕಾಗಿಲ್ಲವೆಂದೋ ಏನೋ ಅವನ್ನು ತಳ್ಳುಪಡಿ ಮಾಡಿದರು. ಅದರ ಮೇಲೆ ಡಿಸ್ಟ್ರಿಕ್ಟ್ ಜಡ್ಜರೂ ತಾವು ಪ್ರವೇಶಿಸಬೇಕಾದುದಿಲ್ಲವೆಂದು ಅಭಿಪ್ರಾಯಪಟ್ಟು ಮೂಲೆಗೆ ಹಾಕಿದರೆಂದು ಕೇಳಿದೆವು. ಇದು ಮುಗಿದ, [illegible] ತಿಂಗಳ ಗಡುಬದಲ್ಲಿ ಇನ್ನು ೧೫ ದಿನಗಳು ಮಾತ್ರ [illegible]ಗ್ಗೆ ಗೌರ್ನಮೆಂಟಿನಿಂದ ಟ್ರಸ್ಟ್‌ಬೋರ್ಡಿಗೆ ಒಂದು ಡಿ. ಓ. ಬಂದಿತಂತೆ. ಅದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ. ಈ ಡಿ. ಓ. ಅವತರಣವು ಮ|| ವೆಂಕಟಕೃಷ್ಣಯ್ಯನವರ ಬಿಡುಗಡೆಗೆ ಇನ್ನಷ್ಟು ಕಾಲಾವಧಿಯನ್ನು ಸೂಚಿಸತಕ್ಕುದಾಗಿದ್ದಿತೋ ಅಥವಾ ಸಂಪೂರ್ಣವಾಗಿ ನಿಷೇಧಿಸತಕ್ಕುದಾಗಿದ್ದಿತೋ ಗೊತ್ತಾಗಲಿಲ್ಲ. ಅದರ ಮೇಲೆ ಟ್ರಸ್ಟಿಗಳ ಮೀಟಿಂಗಿನಲ್ಲಿ ಹೆಚ್ಚು ಜನರ ಅಭಿಪ್ರಾಯವು ಅವರ ಪೂರ್ವದ ನಿರ್ಧಾರಕ್ಕೇ ಪರಿಪೋಷಕವಾಗಿ ಪರಿಣಮಿಸಿತು. ಇದು ಮುಗಿದ ಬಳಿಕ ಡಿಸ್ಟ್ರಿಕ್ಟ್ ಜಡ್ಜರ ಒಂದು ಅಪ್ಪಣೆಯು ಅವತರಿಸಿತು. ಅದರಲ್ಲಿ ಗೌರ್ನಮೆಂಟಿನವರ ಡಿ. ಓ. ಆಧಾರವನ್ನುದಹರಿಸಿ, ಟ್ರಸ್ಟಿಗಳಲ್ಲಿ ಕೆಲರು ಅದಕ್ಕವಲಂಬನೆಯಿತ್ತುದನ್ನು ನಿರೂಪಿಸಿ, ತಾವು ಈ ಸಂಬಂಧದ ರಿಕಾರ್ಡುಗಳನ್ನೆಲ್ಲಾ ಅವಲೋಕಿಸದಿದ್ದರೂ, ಟ್ರಸ್ಟಿಗಳು ಬಹುಮತದಿಂದ ಮಾಡಿರುವ ನಿರ್ಧಾರದಂತೆ ಕಾರ್ಯವು ಜರುಗುವುದನ್ನು ತಡೆದಿಡಬೇಕೆಂಬುದಾಗಿ ತಿಳಿಯಪಡಿಸಿರುವರೆಂದು ಕೇಳುತ್ತೇವೆ. ಇದನ್ನು ಕುರಿತು ಪರ್ಯಾಲೋಚಿಸುವುದಕ್ಕೆ ಕಳೆದ ತಾ|| ೨೯ರಲ್ಲಿ ಕಮಿಟಿ ಮೀಟಿಂಗು ನಡೆದಿತು. ಚರ್ಚೆಯಾದ ಬಳಿಕ ಡಿಕ್ರಿಯಲ್ಲಿ ಕಂಡಿರುವಂತೆ ಟ್ರಸ್ಟಿಗಳಿಗೆ ಇರುವ ಅಧಿಕಾರದ ಮೂಲಕ ಸ್ಕೂಲು ಹೆಡ್ಮಾಸ್ಟರನ್ನು ನಿಯಮಿಸುವ ವಿಷಯದಲ್ಲಿ ತಾವು ಮಾಡಿರುವ ನಿರ್ಧಾರದ ಮೇಲೆ ಡಿಸ್ಟ್ರಿಕ್ಟ್ ಜಡ್ಜರು ಪ್ರವೇಶಿಸಿ ಅದರ ತಡೆಗಾಗಿ ಕೊಟ್ಟಿರುವ ಅಭಿಪ್ರಾಯವನ್ನು ಅವರು ಹಿಂದಿರುಗಿಸಿಕೊಳ್ಳಬೇಕಾಗಿ ಕೃತಪಡಿಸಬೇಕೆಂದು ಟ್ರಸ್ಟಿಗಳಲ್ಲಿ ಹೆಚ್ಚು ಜನರು ಎಂದರೆ—ಪ್ರೆಸಿಡೆಂಟ್ ಮಿ|| ಡೆನ್ಹಾಂರವರು, ಮ|| ಗಳಾದ ರಾ|| ಬ|| ಎ. ನರಸಿಂಹಯ್ಯಂಗಾರರು, ಲೋಕಹಿತೈಷಿ ನಂಜುಂಡರಾಜ ಅರಸಿನವರು, ಡಾಕ್ಟರ್ ಕೃಷ್ಣಸ್ವಾಮಯ್ಯರ್‌ರವರು, ಎಚ್. ಆರ್. ಕರಿಬಸವಶಾಸ್ತ್ರಿಗಳು, ಎಚ್. ಬಸವಪ್ಪನವರು—ಈ ೭ ಮಂದಿಗಳೂ ಅಭಿಪ್ರಾಯ ಕೊಟ್ಟರೆಂದೂ, ಅದಕ್ಕೆ ವಿರುದ್ಧವಾಗಿ ಡಿಸ್ಟ್ರಿಕ್ಟ್ ಜಡ್ಜರ ಅಪ್ಪಣೆಯನ್ನೇ ಅನುಸರಿಸಬೇಕೆಂದು ಟ್ರಸ್ಟ್‌ಬೋರ್ಡಿನ ಗೌರವಕಾರ್ಯದರ್ಶಿಗಳಾದ ಮ|| ಕೆ. ಚಂದ್ರಶೇಖರಯ್ಯನವರೂ, ಮ|| ಗಳಾದ ಎ. ರಾಮಣ್ಣನವರೂ, ಲಿಂಗಪ್ಪಯ್ಯನವರೂ ಸಹ ಅಭಿಪ್ರಾಯ ಪಟ್ಟರೆಂದೂ ಕೇಳುತ್ತೇವೆ. ಟ್ರಸ್ಟಿಗಳೊಳಗೆ ಮ|| ಮೊ|| ಬಸವಲಿಂಗಪ್ಪನವರೂ ಮ|| ಅತ್ತಿಗೋಡು ಬಸವಪ್ಪನವರೂ ಸಹ ಆ ದಿನ ಬಂದಿರಲಿಲ್ಲ. ಈ ನಿರ್ಧಾರದ ಮೇಲೆ ಡಿಸ್ಟ್ರಿಕ್ಟ್ ಜಡ್ಜರು ಹೇಗೆ ಅಭಿಪ್ರಾಯ ಕೊಡುವರೋ ನೋಡಬೇಕು.

ಈ ಟ್ರಸ್ಟಿಯ ಸಂಬಂಧವಾಗಿ ಹಿಂದೆ ಹುಟ್ಟಿರುವ ಡಿಕ್ರಿಯನ್ನೂ ಈ ಧರ್ಮಕಾರ್ಯನಿರ್ವಾಹಕ್ರಮದ ವಿಷಯವಾಗಿ ಹುಟ್ಟಿರುವ ವಿಧಿಗಳನ್ನೂ ಪರಿಶೀಲಿಸಲಾಗಿ, ಪಾಠಶಾಲೆಯ ಸುವ್ಯವಸ್ಥೆಗಾಗಿ ಯಾವ ಏರ್ಪಾಟನ್ನು ಮಾಡುವುದಕ್ಕೂ ಸಂಪೂರ್ಣವಾದ ಅಧಿಕಾರವು ಟ್ರಸ್ಟಿಗಳಿಗೇ ಇರುತ್ತದೆ. ವರ್ಷದ ಲೆಕ್ಕಪತ್ರ ಮೊದಲಾದುವುಗಳ ಮೇಲ್ವಿಚಾರಣೆಯು ಮಾತ್ರ ಡಿಸ್ಟ್ರಿಕ್ಟ್ ಜಡ್ಜರಿಗೆ ಸಂಬಂಧಪಟ್ಟಿರುತ್ತದೆ. ಗೌರ್ನಮೆಂಟಿನವರಿಗಂತೂ ಈ ಶಾಲೆಯ ಉಪಾಧ್ಯಾಯ ನಿಯಮನ ವಿಷಯದಲ್ಲಿ ಪ್ರವೇಶಿಸುವುದಕ್ಕೆ ಯಾವ ಆಧಾರವೂ ಕಾರಣವೂ ಇರುವುದೋ ಗೋಚರವಾಗಲಿಲ್ಲ. ಸ್ಕೂಲನ್ನು ಉತ್ತಮಸ್ಥಿತಿಗೆ ತರುವ ಸದುದ್ದೇಶದಿಂದ ತಮಗಿರುವ ಅಧಿಕಾರವನ್ನು ದುರ್ವಿನಿಯೋಗಪಡಿಸದೆ ನ್ಯಾಯವಾದ ಕ್ರಮದಲ್ಲಿ ಅನುಷ್ಠಾನಕ್ಕೆ ತರಲು ಟ್ರಸ್ಟಿಗಳೆಲ್ಲರೂ ಮಾಡಿದ ನಿರ್ಧಾರವನ್ನು ಕಡೆಯವರೆಗೂ ಕಾಪಾಡಿಕೊಳ್ಳುವುದು ಅವರುಗಳಿಗೆ ಕರ್ತವ್ಯವಾಗಿರುವುದು. ಯಾವ ಕಾರಣದಿಂದಲೋ ಒಬ್ಬಿಬ್ಬರು ರೂಪಾಂತರಗೊಂಡರೂ ಇತರರೆಲ್ಲರೂ ಇದನ್ನು ಗಮನಿಸಿ ದೃಢಚಿತ್ತರಾಗಿರುವುದು ಅಭಿನಂದನೀಯವು. ಡಿಸ್ಟ್ರಿಕ್ಟ್ ಜಡ್ಜರು ಗೌರ್ನಮೆಂಟ್ ಡಿ. ಓ. ಸುದ್ದಿಯನ್ನು ಕೇಳಿದ ಮಾತ್ರದಿಂದಲೇ ಅದನ್ನೂ ಇತರ ರಿಕಾರ್ಡುಗಳನ್ನೂ ಕೂಡ ತಾವು ಪರಾಮರಿಸದೆಯೇ, ಟ್ರಸ್ಟಿಗಳು ವಿಷಯವಿಮರ್ಶೆಮಾಡಿ ಗೊತ್ತುಮಾಡಿದ್ದ ನಿರ್ಣಯವನ್ನು ಹುಲ್ಲಿಗಿಂತ ಕಡೆಯಾಗಿ ಗಣಿಸಿ, ನಿಲ್ಲಿಸಿಬಿಡಬೇಕೆಂದು ಏಕಾಏಕಿ ಅಪ್ಪಣೆ ಮಾಡಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಟ್ರಸ್ಟ್‌ಕಮಿಟಿಯವರ ನಿರ್ಧಾರವನ್ನು ಡಿಸ್ಟ್ರಿಕ್ಟ್ ಜಡ್ಜರವರ ಬಳಿಗೆ ಈಮಧ್ಯೆ ಕಳುಹಿಸಿಕೊಡಬೇಕಾದ ಅವಶ್ಯಕತೆ ತಾನೇ ಏನಿದ್ದಿತು? ಸುಸೂತ್ರವಾಗಿ ನಡೆದುಹೋಗುತ್ತಿದ್ದ ಕಾರ್ಯಕ್ಕೆ ರಗಳೆಯನ್ನು ತಂದಿಕ್ಕುವುದಕ್ಕೇ ಈ ಮೋಳೆಗಳೆಲ್ಲಾ ಕಲ್ಪಿಸಲ್ಪಟ್ಟಿರಬೇಕೆಂದು ವಿಚಾರಪರರಿಗೆಲ್ಲಾ ತೋರದೆ ಇರಲಾರದು. ಹೇಳಿ ಕೇಳುವವರಾರೂ ಇಲ್ಲದಂಥ ಸ್ಥಿತಿಯಲ್ಲಿ ಮೊಗಲೈ ದರ್ಬಾರಿನಿಂದ ಈ ಧರ್ಮಕಾರ್ಯವು ನಡೆದುಹೋಗುತ್ತಿದ್ದಾಗಲೂ, ಟ್ರಸ್ಟ್‌ಕಮಿಟಿಯು ಗಾಢನಿದ್ರೆಯಲ್ಲಿ ಜೀವಚ್ಛವದಂತೆ ಇದ್ದಾಗಲೂ, ನಡೆದಿರುವ ನ್ಯೂನಾತಿರೇಕಗಳ ಪರಿಹಾರಕ್ಕೆ ಮೇಲ್ವಿಚಾರಣಾಕರ್ತರಾದ ಯಾವ ಡಿಸ್ಟ್ರಿಕ್ಟ್ ಜಡ್ಜರೇ ಆಗಲೀ ಗ್ರಾಂಟನ್ನು ಕೊಡುತ್ತಿರುವ ಗೌರ್ನಮೆಂಟಿನವರೇ ಆಗಲೀ ಪ್ರವರ್ತಿಸಲೇ ಇಲ್ಲ. ಟ್ರಸ್ಟ್ ಕಮಿಟಿಯು ಚೈತನ್ಯಗೊಂಡು ಸ್ಕೂಲನ್ನು ಉತ್ತಮಸ್ಥಿತಿಗೆ ತರಬೇಕೆಂದು ಪ್ರಯತ್ನಿಸಿದಾಗ, ಡಿಸ್ಟ್ರಿಕ್ಟ್ ಕೋರ್ಟೂ ಗೌರ್ನಮೆಂಟೂ ಸಹ ಅದಕ್ಕೆ ಮತ್ತಷ್ಟು ಉತ್ತೇಜನವನ್ನೂ ಸಹಾಯವನ್ನೂ ಕೊಡುವುದನ್ನು ಬಿಟ್ಟು, ಹೀಗೆ ಕಾಲಯಾಪನೆಗೆ ದಾರಿಮಾಡಿ "ಬೀಸಿದ ದೊಣ್ಣೆಯೇಟು ತಪ್ಪಿದರೆ ಸಾವಿರ ವರ್ಷದಾಯುಸ್ಸು" ಎಂಬ ಗಾಥೆಯಂತೆ ಪೂರ್ವದ ಮೊಗಲಾಯಿಯೇ ನಡೆದುಹೋಗುವುದಕ್ಕೆ ಸಹಾಯಮಾಡುವುದು ಧರ್ಮವೆ? ಹಿಂದೆ ಯಾವುದೋ ಒಂದು ಸಂದರ್ಭದಲ್ಲಿ ವಿದ್ಯಾಭ್ಯಾಸ ಶಾಖಾಧಿಕಾರಿಗಳು ಡಿ. ಓ. ವನ್ನು ಬರೆದಿದ್ದರೆಂಬ ಸುದ್ದಿಯನ್ನು ಎತ್ತಿಕೊಂಡು ಸಾಧ್ವೀ ಸಂಪದಭ್ಯುದಯಗಳು ಆಗ್ರಹದಿಂದ ವಾಚಾಮಗೋಚರವಾಗಿ ಖಂಡಿಸಿ ನಿಂದಿಸಿದ್ದುವು. ಈಗ ಗೌರ್ನಮೆಂಟಿನಿಂದಲೇ ಬಂದಿರುವ ಡಿ. ಓ. ಮಾತ್ರ ಆ ಪತ್ರಿಕೆಗಳಿಗೆ ಆಪ್ಯಾಯಮಾನವಾಗಿರಬಹುದೋ ಏನೋ! ಅದರಿಂದಲೇ ಅವು ತೆಪ್ಪಗಿವೆ.

ಆಗಸ್ಟ್ ತಾ|| ೩೧ಕ್ಕೆ ಮ|| ವೆಂಕಟಕೃಷ್ಣಯ್ಯನವರು ಹೆಡ್ಮಾಸ್ಟರ್ ಗಿರಿಯನ್ನು ೨ನೆ ಅ|| ಮಾಸ್ಟರ್ ಮ|| ನರಸಿಂಹಮೂರ್ತಿಯವರಿಗೆ ಒಪ್ಪಿಸಿ ನಿವೃತ್ತರಾಗಬೇಕೆಂದೂ, ಸೆಪ್ಟಂಬರ್ ತಾ|| ೧ರಲ್ಲೋ ಅಥವಾ ಆ ತರುಣದಲ್ಲಿಯೋ ಗೌರ್ನಮೆಂಟಿನಿಂದ ನಿಯಮಿತರಾಗಿ ಬರುವವರಿಗೆ ಅ|| ಛಾರ್ಜನ್ನು ನರಸಿಂಹಮೂರ್ತಿಯವರು ಒಪ್ಪಿಸಿಕೊಡಬೇಕೆಂದೂ ಟ್ರಸ್ಟಿಗಳು ಏಕಕಂಠ್ಯದಿಂದ ನಿರ್ಣಯಿಸಿ, ಆ ಸಂಗತಿಯನ್ನು ಮ|| ವೆಂಕಟಕೃಷ್ಣಯ್ಯನವರಿಗೂ, ತಿಳಿಯಪಡಿಸಿರುವರು. ಟ್ರಸ್ಟ್‌ಬೋರ್ಡಿಗೂ ಡಿಸ್ಟ್ರಿಕ್ಟ್ ಜಡ್ಜರು ಮತ್ತೂ ಗೌರ್ನಮೆಂಟಿಗೂ ಮಧ್ಯೆ ಈ ಸಂಬಂಧವಾದ ವಾದೋಪವಾದಗಳು ನಡೆಯುತ್ತಿದ್ದರೂ, ಮ|| ವೆಂಕಟಕೃಷ್ಣಯ್ಯನವರು ಟ್ರಸ್ಟ್‌ಬೋರ್ಡಿನ ಅಭಿಪ್ರಾಯದಂತೆ ನಡೆದುಕೊಳ್ಳಲು ಬದ್ಧರು. ಅವರಲ್ಲಿ ನಿಸ್ಪೃಹತೆಯಿರುವುದಾದರೆ ಅವರು ಟ್ರಸ್ಟ್‌ಬೋರ್ಡಿನ ಅಪ್ಪಣೆಯಂತೆ ನಡೆದುಕೊಂಡು ಬಿಟ್ಟರೆ ಈ ಕಥೆಗೆ ಪರಿಸಮಾಪ್ತಿಯನ್ನು ಮಾಡಿದ ಗೌರವವು ಅವರ ಭಾಗಕ್ಕೆ ಉಳಿಯುವುದು. ೭೨ ವರ್ಷ ತುಂಬಿದ ಓಬಿರಾಯನ ಕಾಲದ ಉಪಾಧ್ಯಾಯರಿಂದ ಒಂದು ದೊಡ್ಡ ಹೈಸ್ಕೂಲಿನ ಮುಖ್ಯೋಪಾಧ್ಯಾಯತ್ವವನ್ನು ಈಗಣ ಕಾಲದಲ್ಲಿ ಸಾಗಿಸಿಕೊಂಡು ಹೋಗುವುದು ನ್ಯಾಯವೆಂದು ಗೌರ್ನಮೆಂಟಿನವರೇ ಆಗಲೀ ಡಿಸ್ಟ್ರಿಕ್ಟ್ ಜಡ್ಜರೇ ಆಗಲೀ ಎಂದಿಗೂ ಒಪ್ಪಲಾರರು. ಮ|| ವೆಂಕಟಕೃಷ್ಣಯ್ಯನವರ ಮೇಲೆ ಅವರಿಗೆ ಅಭಿಮಾನವಿರುವ ಪಕ್ಷದಲ್ಲಿ ಕನಕಾಭಿಷೇಕ ಮಾಡಿಕೊಳ್ಳಲಿ, ಯಾರಿಗೂ ಅಸಮಾಧಾನಪಡುವುದಕ್ಕೆ ಕಾರಣವಿರುವುದಿಲ್ಲ. ಅದು ಕಾರಣ, ಗೌರ್ನಮೆಂಟಿನವರೂ, ಡಿಸ್ಟ್ರಿಕ್ಟ್ ಜಡ್ಜರೂ, ಇತರ ಮಹಾಜನರೂ ಸಹ ಟ್ರಸ್ಟಿಗಳು ಮಾಡಿರುವ ಉತ್ತಮವಾದ ಏರ್ಪಾಟು ಬೇಗನೆ ವ್ಯವಹಾರಕ್ಕೆ ಬರಲು ದಾರಿಮಾಡಿಕೊಟ್ಟು, ಸ್ಕೂಲಿನ ಕೆಲಸಗಳು ಸಮರ್ಪಕವಾಗಿ ನಡೆಯುವಂತೆಯೂ ಈ ಧರ್ಮದ್ರವ್ಯವೂ ಮತ್ತು ಸರ್ಕಾರದಿಂದ ಇದಕ್ಕೆ ಸಲ್ಲುವ ಸಹಾಯದ್ರವ್ಯವೂ ಸಾರ್ಥಕವಾಗುವಂತೆಯೂ ಮಾಡುವವರಾಗಲೆಂದು ಕೋರುವೆವು.

ಯುದ್ಧವಾರ್ತೆಯು.

ಪಶ್ಚಿಮರಂಗದಲ್ಲಿ ಮಿತ್ರಮಂಡಲಿಯವರು ಕಳೆದ ವಾರದಲ್ಲೂ ಕೆಲವು ಮುಖ್ಯವಾದ ಜಯಗಳನ್ನು ಪಡೆದಿರುತ್ತಾರೆ. ಜನರಲ್ ಮಾಂಜಿನ್‌ರವರ ಸೇನೆಯು ನುಗ್ಗಾಟವು ಶತ್ರುಗಳಿಗೆ ಪ್ರಾಣಸಂಕಟವನ್ನುಂಟುಮಾಡಿದೆ. ಇವರ ಸೈನ್ಯದ ರಭಸವನ್ನು ತಡೆಯುವುದಕ್ಕೆ ಜರ್ಮನರು ಮಾಂಟ್ ಕೆಮ್ಮೇಲನ್ನು ಹಿಡಿದುಕೊಂಡು ಹೆಸರಾಗಿದ್ದ ತಮ್ಮ ಸೈನಿಕರನ್ನು ಬಹುದೂರದಿಂದ ಎಂದರೆ ಸಾಯಿಜನ್ಸ್ ರಂಗದಿಂದ ಇಲ್ಲಿಗೆ ಕರೆತರಿಸಿದರು. ಇದರಿಂದಲೂ ಫಲವಾಗಲಿಲ್ಲ. ಯುದ್ಧಾರಂಭವಾದ ೩ ಗಂಟೆಯೊಳಗಾಗಿ ಫ್ರೆಂಚ್ ದಳವು ೨|| ಮೈಲಿಗಳ ಮುಂದಕ್ಕೆ ನುಗ್ಗಿಹೋಯಿತು. ಇದರಿಂದ ಕಟ್ಲೆಟಾಫೋನ್ಟ ಎಂಬ ಗ್ರಾಮಗಳು ವಶವಾದುವು. ಮತ್ತೂ ಶತ್ರುಗಳ ೨೮೦೦ ಮಂದಿ ಸೈನಿಕರು ಸೆರೆಸಿಕ್ಕಿದರು. ಅಲ್ಲಿಂದಾಚೆಗೂ ಈಗ ನುಗ್ಗಿಹೋಗಿ ಒಂದು ಪರ್ವತಸೀಠಭೂಮಿಯನ್ನೂ ಹಿಡಿದು ಸಾಗುತ್ತಿರುವರು. ಈ ಯುದ್ಧದಲ್ಲಿ ಫ್ರೆಂಚರ ಫಿರಂಗಿಗಳಾಟವೇನೂ ಸಾಗಲಿಲ್ಲ. ಮತ್ತೂ ಅವರ ವೈಮಾನಿಕದಳದ ಸಾಹಸವೂ ಕೂಡ ವ್ಯಕ್ತವಾಗಲಿಲ್ಲ. ಜನರಲ್ ಮಾಂಜಿನ್‌ರವರ ಪುರೋಗಮನವು ಇನ್ನೂ ಸ್ವಲ್ಪಕಾಲ ಹೀಗೆಯೇ ಸಾಗಿದರೆ ಶತ್ರುಗಳು ಚೆಮಿಂಡೇಸ್ ದೆಮ್ಸ್ ದೇಶಪಜ್ಞಿಗೆ ಹೋಗಿ ಸೇರಿಕೊಳ್ಳಬೇಕಾಗುವುದು. ಈಗಲೇ ಅವರು ಕೆಲಕಡೆ ಕಂದಕಗಳನ್ನು ತೋಡಿ ಹೋಗಿ ಹೊಕ್ಕಿಕೊಂಡು ಆತ್ಮರಕ್ಷಣೆಯ ಯುದ್ಧಗಳನ್ನು ಮಾಡುತ್ತಿದ್ದಾರೆ. ಆದರೇನು? ಮಿತ್ರಮಂಡಲಿಯವರು ಅಲ್ಲಿ ಅವರನ್ನು ಉಳಿಯಗೊಡುವ ಹಾಗಿಲ್ಲ. ಬಲದಲ್ಲಿ ಸೇರಿದ ಹೆಗ್ಗಣಗಳನ್ನು ಬಾಯಿಗೆ ಬೆಂಕಿಹೊಗೆಯನ್ನಿಕ್ಕಿ ಕೊಲ್ಲುವಂತೆಯೂ ಹೊರಹೊರಡಿಸುವಂತೆಯೂ ಕಂದಕಗಳಿಂದ ಶತ್ರುಗಳನ್ನು ಹೊರಹೊರಡಿಸಲು ಬೇಕಾದಷ್ಟು ತಂತ್ರಗಳನ್ನು ಮಿತ್ರಮಂಡಲಿಯವರು ಮಾಡುತ್ತಿರುವರು. ಲಾಸಗ್ನಿ, ಡ್ರೆಸ್ಲಿ ಕೋರು ರಂಗಗಳಲ್ಲಿ ಆಯಿಸ್-ಏಯಿಲ್ಟ ನದಿಗಳ ಮಧ್ಯದಲ್ಲಿ ಯುದ್ಧ ನಡೆದು ಫ್ರೆಂಚರು ವಾಸ್ಸೆಟ್ಸ್ ಎಂಬ ಗ್ರಾಮವನ್ನು ಹಿಡಿದರು. ಈಚೆಗೆ ರಾಯಿ, ಚಾಲ್ನೆಸ್, ಪ್ರೆಸ್ನೋಯಿ ಮೊದಲಾದ ಮುಖ್ಯಸ್ಥಾನಗಳು ಮಿತ್ರಮಂಡಲಿಯವರ ವಶವಾದುವೆಂದು ವಾರ್ತೆ ಬಂದಿದೆ. ಶತ್ರುಗಳು ಬೆಲ್ಜಿಯಂದೇಶದ ಆಂಟ್ವರ್ಪ್ ಪಟ್ಟಣದಿಂದ ಲೀಜ್ ಪಟ್ಟಣದವರೆಗೆ ಸಿಮೆಂಟ್ ಪೀಪಾಯಿಗಳು ಲೋಹದ ತಗಡುಗಳು ಮೊದಲಾದ ಸಾಧನಗಳ ಸಹಾಯದಿಂದ ರಕ್ಷಕಪಜ್ಞಿಗಳನ್ನು (ದುರ್ಗಗಳನ್ನು) ಏರ್ಪಡಿಸುತ್ತಿದ್ದಾರೆ. ಜರ್ಮನಿ ಯುವರಾಜನೂ, ಪ್ರಿನ್ಸ್‌ರೂಪ್ರೆಕ್ಟೂ ಕೂಡ ಜರ್ಮನಿಗೆ ಹೊರಟುಹೋದರು. ಅವರ ಸ್ಥಾನಕ್ಕೆ ಹೊಸ ದಳಪತಿಗಳು ನಿಯಮಿಸಲ್ಪಟ್ಟಿದ್ದಾರೆ. ಈಚೆಗೆ ಫ್ರೆಂಚರು ಮತ್ತೆ ೪-೫ ಮೈಲಿಗಳದೂರ ಮುಂದಕ್ಕೆ ಸಾಗಿ ಸಿಂಪಿಗ್ನಿ, ಪಾಂಟೋಯಿಚ್, ಲಾಪೋಮರೆಬೋಪ್ರೈಗ್ನೀಸ್, ಲೊಂಬಾರ್ಟ, ಬ್ಲಿರೇಯಿಕೋರ್ಟ, ಮಿಯಾಫೂರ್ನಿಕ, ಟಾರ್ಟಿಯಸ್, ಕೆಯಿಸಲಾಂಮೆಂಟ್, ಓಸ್ಲಿ, ಕೋರ್ಟ, ಕಾರ್ಲಿಮಾಂಟ್, ಕಟ್ಸ್ ಮೊದಲಾದ ಗ್ರಾಮಗಳನೇಕವನ್ನು ವಶಪಡಿಸಿಕೊಂಡುದಲ್ಲದೆ ೮ ಸಾವಿರ ಮಂದಿ ಶತ್ರುಸೈನಿಕರನ್ನು ಸೆರೆ ಹಿಡಿದರು. ಆಗಸ್ಟ್ ತಾ|| ೧೯ ರಿಂದ ೨೦ ನೆ ಕಡೆಯವರೆಗೆ ೧೦,೦೦೦ ಮಂದಿಗಿಂತಲೂ ಹೆಚ್ಚಾಗಿಯೇ ಶತ್ರುಸೈನಿಕರನ್ನು ನಾವು ಸೆರೆ ಹಿಡಿದಿರುವೆವೆಂದು ಫ್ರೆಂಚರು ಪ್ರಕಟಿಸಿರುವರು. ಫ್ರೆಂಚ್ ಸೈನ್ಯವು ಲಾಸಗ್ನಿಯ ಪೂರ್ವಕ್ಕೆ ಬಂದು ತಾಕಿ ಅಲ್ಲಿರುವ ಲಸ್ಸಿಮಾಂಟನ್ನು ವಶಪಡಿಸಿಕೊಂಡಿತು. ಲಾಸಗ್ನಿಗೆ ಪೂರ್ವದಲ್ಲಿ ಹೋದ ಸೈನ್ಯವು ಡಿವಿಯಟ್ಟನ್ನು ಸೇರಿತು. ಕಾರ್ಲಿಪಾಂಟ್ ಅಡವಿಯಲ್ಲಿ ಮಾನ್ಗಿನ್‌ರವರ ಸೈನ್ಯವು ಮುಂದಕ್ಕೆ ಸಾಗಿ ಮಾಂಟಿಪೊಯಿಜಿಯನ್ನು ವಶಮಾಡಿಕೊಂಡಿತು. ಪೋಮುರೇವು ಫ್ರೆಂಚರ ವಶವಾಯಿತು. ಇವರು ಓಯಿಜಿಯನ್ನು ಸೇರಿದರು. ಮತ್ತು ಲಾವಿಪುರವನ್ನು ಆಕ್ರಮಿಸಿ, ೧೬೦೦ ಶತ್ರುಸೈನಿಕರನ್ನು ಸೆರೆಹಿಡಿದರು. ಲಾಸಗ್ನಿಯೂ ಇವರ ವಶವಾಯಿತು.

ಈ ಪಶ್ಚಿಮರಂಗದಲ್ಲಿ ಮಿತ್ರಮಂಡಲಿಯವರಿಂದೆಲ್ಲಾ ಕಳೆದ ತಾ|| ೨೧ ರಿಂದ ೨೪ ರ ವರೆಗೆ ೪೮,೦೦೦ ಮಂದಿ ಶತ್ರುಸೈನಿಕರು ಸೆರೆಹಿಡಿಯಲ್ಪಟ್ಟಿದ್ದಾರೆ. ಕಳೆದೊಂದು ಪಕ್ಷದಲ್ಲಿ ಮಿತ್ರಮಂಡಲಿಯವರು ಶತ್ರುಗಳ ೩೨೮ ವಿಮಾನಗಳನ್ನು ಹೊಡೆದು ಮುರಿದುಹಾಕಿ, ೧೩೪ ನ್ನು ಕೆಲಸಕ್ಕೆ ಬಾರದಂತೆಮಾಡಿ, ೨೧ ಆಕಾಶಬುಟ್ಟಿಗಳನ್ನು ಸುಟ್ಟುಹಾಕಿದ್ದಾರೆ. ಅಮೇರಿಕನ್ನರ ೫ ಲಕ್ಷ ಸೈನ್ಯವು ಒಂದಾನೊಂದು ಕಡೆಯಲ್ಲಿ ಕೂಡಿ ಯಾವ ಗಳಿಗೆಯಲ್ಲೋ ಯಾವ ಸ್ಥಲದಲ್ಲೋ ಶತ್ರುಗಳ ಮೇಲೆ ನುಗ್ಗಲು ಹವಣಿಸುತ್ತಿದ್ದಾರೆ. ಆಗ ಏನಾಗುವುದೋ ಎಂದು ಶತ್ರುಗಳು ದಿಗಿಲುಬಿದ್ದಿದ್ದಾರೆ. ಕಳೆದವಾರದಲ್ಲಿ ಮಿತ್ರಮಂಡಲಿಯವರು ಎಲ್ಲೆಲ್ಲೂ ಪಡೆದಿರುವ ಜಯವು ಬಹು ಪ್ರಶಂಸಾಪಾತ್ರವಾಗಿರುತ್ತದೆ. ಜುಲೈ ತಾ|| ೧೫ ರಿಂದ ಆಗಸ್ಟ್ ೨೫ ರ ವರೆಗೆ ಮಿತ್ರಮಂಡಲಿ ಸೈನ್ಯಗಳವರೆಲ್ಲಾ ಸೆರೆಹಿಡಿದಿರುವ ಶತ್ರುಸೈನಿಕರ ಸಂಖ್ಯೆಯು ೧ ಲಕ್ಷವೆಂದು ಲೆಕ್ಕವಾಗಿದೆ. ಫ್ರೆಂಚರು ರಾಯಿ ಪಟ್ಟಣವನ್ನು ವಶಮಾಡಿಕೊಂಡರೆಂದು ೨೮ ನೆ ತಾರೀಖಿನ ಲಂಡನ್ ತಂತ್ರೀ ವಾರ್ತೆಯು ಹೇಳಿರುತ್ತದೆ.

ಆಂಗ್ಲ ಸೇನಾಮುಖದಲ್ಲಿ ಯುದ್ಧವು ಭೀಕರವಾಗಿ ನಡೆಯುತ್ತಿರುವುದು. ಶತ್ರುಗಳು ಅಲ್ಲಿಯೂ ಹಲವುಕಡೆ ಬೆನ್ನುತೋರಿಸಿ ಓಡಿಹೋಗುತ್ತಿರುವರು. ಹಾಗೆ ಓಡುತ್ತಿರುವ ಶತ್ರುಸೈನ್ಯದಮೇಲೂ ನಮ್ಮವರು ಗುಂಡುಗಳನ್ನು ಪ್ರಯೋಗಿಸಿ ಬಹು ನಷ್ಟಗೊಳಿಸುತ್ತಿರುವರು. ಪ್ಯಾಬರ್ಕಿನ ಹತ್ತಿರ ಇದ್ದ ಶತ್ರುಸ್ಥಾನಗಳನ್ನೆಲ್ಲಾ ಇಂಗ್ಲೀಷರು ವಶಪಡಿಸಿಕೊಂಡರು. ಆಗಸ್ಟ್ ತಾ|| ೧೮ರಲ್ಲಿ ಶತ್ರುಗಳು ಮೆರ್ವಿಲ್ಲಿಯನ್ನು ಬಿಟ್ಟು ಓಡುವುದಕ್ಕಾರಂಭಿಸಿದೀಚೆಗೆ ಇಂಗ್ಲೀಷರು ಅವರ ಕಡೆಯ ೬೦೦೦ ಮಂದಿ ಸೈನಿಕರನ್ನು ಸೆರೆ ಹಿಡಿದಿರುವರು. ಮತ್ತೂ ಇವರು ಲಿಪೋಸ್ಟ್ರಿ, ಮೆರ್ವಿಲ್ಲಿ, ವಿಯರ್, ಹಾಂಕ್, ಲಾಕೋರೋಣಾ, ಕೋರುಸೆಲ್ಲೀ, ಯಾಚಿಯಟ್, ಲೀಪೆಟಟ್ ಮೊದಲಾದ ಅನೇಕ ಸ್ಥಲಗಳನ್ನು ವಶಪಡಿಸಿಕೊಂಡಿರುವರು. ಮತ್ತೂ ಅನೇಕ ಫಿರಂಗಿಗಳೂ ಅಪರಿಮಿತವಾದ ಯುದ್ಧಸಾಮಗ್ರಿಗಳೂ ಇವರಿಗೆ ಸಿಕ್ಕಿರುವುವು. ಈ ಸಂದರ್ಭದಲ್ಲಿ ಇಂಗ್ಲೀಷರ ದಳಪತಿ ಜನರಲ್ ಬಿಂಗ್‌ರವರು ತೋರಿಸಿದ ಯುದ್ಧಕೌಶಲ್ಯಕ್ಕೂ ಯುಕ್ತಿಗೂ ಜರ್ಮನರು ಬೆರಗಾಗಿರುವರು. ಇಂಗ್ಲೀಷರ ಕಾಲ್ಬಲವೂ, ಅವರ ಟಾಂಕ್‌ಬಂಡಿಗಳೂ ತೋರಿಸಿದ ಪರಾಕ್ರಮದಿಂದ ತಮಗೆ ಅಧಿಕವಾದ ನಷ್ಟವುಂಟಾಯಿತೆಂದು ಶತ್ರುಗಳೇ ಒಪ್ಪಿಕೊಂಡಿರುವರು. ತಾ|| ೨೧ ರಲ್ಲಿ ಇಂಗ್ಲೀಷ್‌ಸೈನಿಕರೂ ನ್ಯೂಜಿಲೆಂಡ್ ಸೈನಿಕರೂ ಸೇರಿ ಟಾಂಕುಬಂಡಿಗಳೊಡನೆ ಕೂಡಿ ಅಂಕರ್ ನದಿಯಿಂದ ಮೋಯರ್ಕ್ವೆಲ್ಲಿ ಪ್ರಾಂತದವರೆಗೆ ೧೦ ಮೈಲಿಗಳಗಲದ ರಣರಂಗದಲ್ಲಿ ಯುದ್ಧವನ್ನು ಹೂಡಿ ಜಯಶಾಲಿಗಳಾಗಿ ಬೋಕೋರ್ಟ್‌ಸರ್, ಅಂಕರ್, ಪ್ಯೂಸಾಮಾಂಟ್, ಬಕಾಯಿ, ಅಚ್ಲೀಯಿಚ್ಚಚೀಸ್, ಎಲ್ಲೀ, ಮೋರ್ಟವೆಲ್ಲಿ ಎಂಬ ಗ್ರಾಮಗಳನ್ನೂ ಪುರಗಳನ್ನೂ ಹಿಡಿದು, ಅಲ್ಬರ್ಟ, ಅರ್ರಾಸ್ ಲೋಹಮಾರ್ಗದ ಸಮೀಪಕ್ಕೆ ಸೇರಿದುವು. ಅದು ಶತ್ರುಗಳಿಗೆ ಮುಖ್ಯಸ್ಥಾನವು. ಅವರು ಅಲ್ಲಿ ಫಿರಂಗಿಗಳನ್ನು ವಿಶೇಷವಾಗಿ ಸೇರಿಸಿಟ್ಟಿದ್ದರು. ಇಂಗ್ಲೀಷರು ದೊಡ್ಡ ಫಿರಂಗಿಗಳನ್ನುಪಯೋಗಿಸಿ ಅವುಗಳನ್ನು ನಾಶಗೊಳಿಸಿದರು. ಇಂಗ್ಲೀಷರ ಕಡೆಯ ಕಾಲ್ಬಲವೂ ಟಾಂಕು ಬಂಡಿಗಳೂ ಸಹ ಲೋಹಮಾರ್ಗವನ್ನು ದಾಟಿಹೋದುವು. ಬಳಿಕ ಅಲ್ಬರ್ಟ ಪಟ್ಟಣವನ್ನೂ ಸ್ವಾಧೀನಪಡಿಸಿಕೊಂಡುವು. ಕೆಲಕಡೆ ಶತ್ರುಗಳು ಬಹು ಭಯಂಕರವಾಗಿ ಪ್ರತಿಭಟಿಸಿದರು. ಪಟ್ಟಣದೊಳಗೂ ಸ್ವಲ್ಪಹೊತ್ತು ಎರಡು ಪಕ್ಷಕ್ಕೂ ಯುದ್ಧ ನಡೆಯಿತು. ಕಡೆಗೆ ಇಂಗ್ಲೀಷ್ ಸೈನ್ಯಗಳು ಶತ್ರುಗಳನ್ನು ಸೋಲಿಸಿ ಓಡಿಸಿ, ತಮ್ಮ ವಿಜಯಧ್ವಜವನ್ನು ನಟ್ಟು ಅಲ್ಬರ್ಟ ಪಟ್ಟಣವನ್ನು ವಶಪಡಿಸಿಕೊಂಡು ಜಯಧ್ವನಿ ಮಾಡಿದುವು. ಅಲ್ಲಿ ೧೪೦೦ ಮಂದಿ ಶತ್ರುಸೈನಿಕರನ್ನೂ ಕೆಲವು ಫಿರಂಗಿಗಳನ್ನೂ ವಶಪಡಿಸಿಕೊಂಡರು. ಈಚೆಗೆ ಇಂಗ್ಲೀಷರು ಅಂಕರ್‌ನದಿಗೆ ಎಡದಡದಮೇಲೆ ಬೊಕೋರ್ಟಿಗೆ ದಕ್ಷಿಣದಲ್ಲಿ ಮುಂದಕ್ಕೆ ಸಾಗುತ್ತಿದ್ದಾರೆ. ಅಂಕರ್‌ನದಿಗೆ ಉತ್ತರದಲ್ಲಿ ಶತ್ರುಗಳು ಪ್ರತಿಯುದ್ಧವನ್ನು ಮಾಡಿ ಇಂಗ್ಲೀಷ್ ಸೇನಾಪಙ್ಕ್ತಿಗೆ ನುಗ್ಗಿ ಸ್ವಲ್ಪ ಹಿಮ್ಮೆಟ್ಟಿಸಿದ್ದರು. ಆದರೆ ಮರಳಿ ಇಂಗ್ಲೀಷರು ಶತ್ರುಗಳನ್ನು ಹಿಮ್ಮೆಟ್ಟಿಸಿ ಜಯಶೀಲರಾಗಿ ತಮ್ಮ ಸ್ಥಾನಗಳನ್ನೆಲ್ಲಾ ಬಲಪಡಿಸಿಕೊಂಡು ಅಲ್ಲಿ ೨೦೦ ಮಂದಿ ಶತ್ರುಗಳನ್ನು ಸೆರೆ ಹಿಡಿದರು. ಒಟ್ಟಿಗೆ ಆ ರಂಗದಲ್ಲೆಲ್ಲಾ ಆ ವಾರದೊಳಗೆ ಇಂಗ್ಲೀಷರು ೫೦೦೦ ಮಂದಿ ಶತ್ರುಸೈನಿಕರನ್ನು ಸೆರೆ ಹಿಡಿದಿರುವರು. ಮಿರಾರಾಮಾಂಟು ಹೊರತು ಆ ಬಳಿಯಣ ಲೋಹಮಾರ್ಗವನ್ನೆಲ್ಲಾ ಆಕ್ರಮಿಸಿದರು. ಎಫಿಯಟ್ ಲಾಗ್ರಾಂಡಿ ಪ್ರಾಂತದಲ್ಲಿ ಶತ್ರುಬಲವು ಅಧಿಕವಾಗಿದ್ದುದರಿಂದ ಇಂಗ್ಲೀಷರು ಸ್ವಲ್ಪ ಹಿಂದೆಗೆದರು. ಮಿರಾರಮಾಂಟ್-ಪೂಸ್ಯೂರುಗಳ ಮಧ್ಯದಲ್ಲಿ ಪ್ರಬಲಯುದ್ಧ ನಡೆದು ಕಟ್ಟಕಡೆಗೆ ಆ ಸ್ಥಾನವು ನಮ್ಮವರ ವಶವಾಯಿತು. ಶತ್ರುಗಳು ಪ್ರತಿಯುದ್ಧ ಮಾಡಲಾರದೆ ಹೋದರು. ಅಲ್ಬರ್ಟ್‌ಪ್ರಾಂತದ ಆ ಯುದ್ಧದಲ್ಲಿ ೧೪ ಸಾವಿರ ಶತ್ರುಸೈನಿಕರು ಸೆರೆ ಸಿಕ್ಕಿದರು. ಕೆಲವು ದೊಡ್ಡ ಫಿರಂಗಿಗಳೂ ಅನೇಕ ಸಣ್ಣ ಫಿರಂಗಿಗಳೂ ಕೂಡ ಸಿಕ್ಕಿರುವುವು. ಮತ್ತೂ ಬಾಪಾಮಿನ ಸಮೀಪಕ್ಕೆ ಪಶ್ಚಿಮದಲ್ಲಿ ಶತ್ರುಗಳಿಗೆ ಮುಖ್ಯಸ್ಥಾನವಾಗಿದ್ದ ಬ್ರೇನ್ ಪಟ್ಟಣವನ್ನೂ ಒರ್ವಿಲರ್ಸ ಎಂಬ ಸ್ಥಾನವನ್ನೂ ಸಹ ಹಿಡಿದು ಶೀಘ್ರಾಲಿಗೆ ಮುತ್ತಿಗೆ ಹಾಕಿದರು. ಅದೂ ಮಿರಾರಮಾಂಟೂ ವಶವಾದುವು. ಅಲ್ಲಿ ೨ ಸಾವಿರ ಶತ್ರುಸೈನಿಕರು ಸೆರೆಸಿಕ್ಕಿದರು. ಇಂಗ್ಲೀಷ್ ಸೈನ್ಯವು ಬಳಿಕ ಬಾಪಾಂ ಪಟ್ಟಣವನ್ನು ಕುರಿತು ಹೊರಟಿತು. ಅದರ ಬಳಿಯಣ ಗೊಮ್ಮಿಕೋರ್ಟ ಎಂಬ ಪಟ್ಟಣವು ಇವರ ವಶವಾಯಿತು. ಬಾಪಾಮಿಗೆ ಉತ್ತರದಲ್ಲಿರುವ ಬೈಲಿಯಲ್ ಪಟ್ಟಣವೂ ನಮ್ಮವರ ವಶವಾಗುವುದರಲ್ಲಿದೆ. ಹೀಗೆ ಬಾಪಾಮಿಗೆ ಎಲ್ಲಕಡೆಯಿಂದಲೂ ಇಂಗ್ಲೀಷ್ ಸೈನ್ಯವು ಒತ್ತರಿಸಿಕೊಂಡು ಹೋಗಿ ಕೆಲಸೈನ್ಯವು ಪುರಪ್ರವೇಶವನ್ನೂ ಮಾಡಿದೆ. ಅಲ್ಲಿದ್ದ ಜರ್ಮನರು ಪ್ರಬಲವಾಗಿ ಇದಿರಿಸುತ್ತಾ ಅನೇಕರು ಮಡಿದಿರುವರು. ಕೆಲರು ಸೆರೆ ಸಿಕ್ಕಿರುವರು. ಅಂತೂ ಅದು ಇನ್ನೂ ಪೂರ್ಣವಾಗಿ ವಶವಾಗಿಲ್ಲ. ಇಂಗ್ಲೀಷರು ಆಗಸ್ಟ್ ತಾ|| ೨೧ ರಿಂದ ೨೫ ರವರೆಗೆ ಮಾಡಿದ ಮಹಾಪ್ರಬಲ ಯುದ್ಧದಲ್ಲಿ ಅವರು ಪಡೆದ ಜಯವು ಶ್ಲಾಘನೀಯವಾಗಿದೆ. ೧೯೧೬ನೆ ವರ್ಷದಲ್ಲಿ ೪ ತಿಂಗಳಕಾಲ ಯುದ್ಧಮಾಡಿ ೪೦ ಚದರಮೈಲಿ ಸ್ಥಲವನ್ನು ವಶಪಡಿಸಿಕೊಂಡಿದ್ದರು. ಈ ನಾಲ್ಕು ದಿನಗಳ ಕಾಲದಲ್ಲಿ ೧೧೬ ಚದರ ಮೈಲಿಗಳ ಪ್ರದೇಶವನ್ನು ಹಿಡಿದಿರುವರು, ಮತ್ತೂ ೨೦ ಸಾವಿರ ಶತ್ರುಸೈನಿಕರನ್ನೂ ಸೆರೆಹಿಡಿದಿರುವರು. ಈ ಲಾಭಕ್ಕಾಗಿ ಅವರ ಕಡೆ ಸತ್ತಿರುವ ಸೈನಿಕರ ಸಂಖ್ಯೆಯು ೨೦೫೦೦ ಆಗಿರುತ್ತದೆ.

ಒಳದೇಶದ ವೃತ್ತಾಂತಗಳು.

ನಮ್ಮ ಬ್ರಿಟಿಷ್ ರೆಸಿಡೆಂಟರು ತಾ|| ೨೯ ರ ರಾತ್ರಿ ಸಿಮ್ಲಾಕ್ಕೆ ಪ್ರಯಾಣ ಮಾಡಿದರು.

ಬೆಂಗಳೂರಿನಲ್ಲಿ ಒಂದು ಮಾರ್ವಾಡಿ ಹೆಣ್ಣುಮಗುವನ್ನು ನಗದಾಸೆಗಾಗಿ ಕೊಂದಿದ್ದ ನಾಗ ಎಂಬುವನಿಗೂ ಯಶೋದಾಬಾಯಿಯೆಂಬುವಳಿಗೂ ಕೂಡ ಮರಣದಂಡನೆ ವಿಧಿಸಲ್ಪಟ್ಟಿತು. ಈಗ ಯಶೋದಾಬಾಯಿಯು ತಾನು ಬ್ರಿಟಿಷ್ ಇಂಡ್ಯಾದೇಶದವಳಾದುದರಿಂದ ತನ್ನನ್ನು ಮದ್ರಾಸು ಹೈಕೋರ್ಟಿನವರು ವಿಚಾರಣೆಮಾಡಬೇಕೆಂದು ಬ್ರಿಟಿಷ್ ರೆಸಿಡೆಂಟರಲ್ಲಿ ಅಪೀಲುಮಾಡಿಕೊಂಡಿದ್ದಾಳೆ.

ನವರಾತ್ರಿಯು ಕಳೆದ ಬಳಿಕ ನವಂಬರ್ ತಿಂಗಳಲ್ಲಿ ನಮ್ಮ ದಿವಾನರವರು ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆಂತಲೂ ಅವರು ಬರುವವರೆಗೆ ಎಂದರೆ ೬ ತಿಂಗಳ ಕಾಲ ಮಂತ್ರಿಪದವಿಯನ್ನು ೧ ನೆ ಕೌನ್ಸಿಲರಾದ ಸರ್ದಾರ್ ಎಂ. ಕಾಂತರಾಜ ಅರಸ್ ಸಿ. ಎಸ್. ಐ. ರವರು ವಹಿಸಿರುವರೆಂದೂ ಸುದ್ದಿಯುಂಟಾಗಿದೆ. ಇದು ನಿಜವಾಗುವ ಪಕ್ಷಕ್ಕೆ ರಾಜ್ಯಕಾರ್ಯಕ್ಕಾಗಿ ನಮ್ಮ ಸಂಸ್ಥಾನದಿಂದ ಸೀಮೆಗೆ ಪ್ರಯಾಣಮಾಡಿದ ಮಂತ್ರಿವರ್ಯರಲ್ಲಿ ಸರ್ ವಿಶ್ವೇಶ್ವರಯ್ಯನವರೇ ಮೊದಲನೆಯವರಾಗುವರು.

ಮ|| ರಾ|| ಗಳಾದ ಎಚ್. ನಂಜುಂಡರಾಜ ಅರಸಿನವರು, ಸರದಾರ್ ಗೋಪಾಲಕೃಷ್ಣ ಅರಸಿನವರು, ಅಡ್ವೋಕೇಟ್ ಎಂ. ಎಚ್. ಸುಬ್ಬಣ್ಣ, ಬಿ.ಎ., ಎಲ್‌ಎಲ್‌ಬಿ., ಯವರು, ಅರಮನೆ ಕಂಟ್ರೋಲರ್ ಬಿ. ರಾಮಕೃಷ್ಣರಾಯರು, ಅಪ್ಪಯ್ಯಪಂಡಿತರು, ಮಹಮ್ಮದ್‌ಜಾಫರ್ ಸಾಹೇಬರವರು, ಅಕ್ಕಿಮಂಡಿ ಸಿ. ದೊಡ್ಡಯ್ಯನವರು, ರೆವರೆಂಡ್ ಎಚ್. ಸ್ಪೆನ್ಸರ್‌ರವರು ಮತ್ತು ಫಾದರ್ ಡೆಸ್ಪೆಚೆಸ್‌ರವರು ಸಹ ಮೈಸೂರು ಮ್ಯುನಿಸಿಪಲ್ ಕೌನ್ಸಿಲರಾಗಿ ಸರ್ಕಾರದವರಿಂದ ನಾಮಿನೇಟ್ ಮಾಡಲ್ಪಟ್ಟಿರುತ್ತಾರೆ.

ಕರ್ನಾಟಕ ಭಾಷಾಭಿವೃದ್ಧಿ ಸಂಘವೆಂಬ ಹೆಸರಿನಿಂದ ಶಿವಮೊಗ್ಗದಲ್ಲಿ ಒಂದು ದೇಶಭಾಷೋದ್ಧಾರ ಯತ್ನವು ಕೆಲ ಅಭಿಮಾನಿಗಳಿಂದ ನೂತನವಾಗಿ ಅಂಕುರಿಸಿದೆ. ಪ್ರಾಚೀನ ಗ್ರಂಥಗಳನ್ನು ಶೇಖರಿಸುವುದು, ನೂತನವಾಗಿ ದೇಶಭಾಷಾ ಗ್ರಂಥಗಳನ್ನು ರಚಿಸಿ ಪ್ರಕಾಶಪಡಿಸುವುದು, ಭಾಷಾಭಿವೃದ್ಧಿಗೆ ಸಾಧಕವಾದ ಇತರ ಪ್ರಯತ್ನಗಳನ್ನು ಮಾಡುವುದೇ ಸಂಘದ ಉದ್ದೇಶವಾಗಿದೆ. ಸ್ತುತ್ಯವಾದ ಈ ಪ್ರಯತ್ನವು ದೃಢನಿಷ್ಠೆಯಿಂದಲೂ ದೇಶೀಯರ ಮತ್ತು ವಿದ್ಯಾವಂತರ ಬೆಂಬಲದಿಂದಲೂ ಫಲಿಸಲೆಂದು ಕೋರುವೆವು.

ಮದ್ರಾಸು ಗೌರ್ನರವರು ಗೊತ್ತಾಗಿದ್ದ ಮೇರೆಗೆ ಕಳೆದ ತಾ|| ೨೪ರಲ್ಲಿ ಬೆಂಗಳೂರಿಗೆ ಗುಂತಕಲ್ಲು ಮಾರ್ಗವಾಗಿ ಬಂದರು. ನಿಲ್ದಾಣದ ಬಳಿಯಲ್ಲಿ ಮ್ಯು|| ಪ್ರೆಸಿಡೆಂಟ್ ದಿ|| ಬ|| ಪುಟ್ಟಣ್ಣಶೆಟ್ಟರು, ಗೌರ್ನಮೆಂಟ್ ಜನರಲ್ ಸೆಕ್ರೆಟರಿ ಮ|| ಸಿ. ಎಸ್. ಬಾಲಸುಂದರಂ ಅಯ್ಯರು ಮೊದಲಾದವರು ಇದಿರ್ಗೊಂಡು ಮರ್ಯಾದಿಸಿದರು. ಕುಣಿಗಲಿಗೂ ಶಿವಸಮುದ್ರಕ್ಕೂ ಹೋಗಿ ನೋಡಬೇಕಾದುದನ್ನೆಲ್ಲಾ ನೋಡಿಕೊಂಡು ನಮ್ಮ ದಿವಾನರು ಕೊಟ್ಟ ಟೀಪಾರ್ಟಿಯನ್ನೂ, ಬ್ರಿಟಿಷ್ ರೆಸಿಡೆಂಟರ ಔತಣದ ಮರ್ಯಾದೆಯನ್ನೂ, ಶ್ರೀಮದ್ಯುವರಾಜರವರ ಆತಿಥ್ಯವನ್ನೂ ಸ್ವೀಕರಿಸಿ ಮದ್ರಾಸಿಗೆ ದಯಮಾಡಿಸಿದರು.

ಸರ್ಕಾರದುದ್ಯೋಗಸ್ಥಾನಗಳಲ್ಲಿ ಹಿಂದುಳಿದ ಜನವರ್ಗಗಳವರನ್ನು ಉಚಿತಾನುಸಾರ ಸೇರಿಸುವುದೇ ಮೊದಲಾದ ಕಾರ್ಯವನ್ನು ನೆರವೇರಿಸುವ ವಿಷಯದಲ್ಲಿ ಅಭಿಪ್ರಾಯನಿವೇದನಕ್ಕಾಗಿ ಚೀಫ್‌ಜಡ್ಜರ ಅಧ್ಯಕ್ಷತೆಯಿಂದ ಗೊತ್ತುಮಾಡಲ್ಪಟ್ಟಿರುವ ಸಂಘದಲ್ಲಿ ೧೦ ಮಂದಿ ಸಭಿಕರಿಲ್ಲವೆಂದೂ, ದಿ|| ಬ|| ಸಿ. ಶ್ರೀಕಂಠೇಶ್ವರಯ್ಯರ್‌ರವರು ರಾ|| ಬ|| ಎಂ. ಸಿ. ರಂಗಯ್ಯಂಗಾರರು ರಾ|| ಬ|| ಮುತ್ತಣ್ಣನವರು, ರಾ|| ಸಾ|| ಚೆನ್ನಯ್ಯನವರು, ಮಿ|| ಗುಲಾಂ ಮಹಮ್ಮದ್ ಕಲಾಮಿಯವರು, ಮ|| ಎಂ. ಬಸವಯ್ಯನವರು—ಈ ೬ ಮಂದಿಗಳು ಸಭಿಕರಾಗಿರುವರೆಂದೂ, ಈ ಸಂಘದ ಪ್ರಥಮಸಂಮೇಳನವು ಬರುವ ತಾ|| ೩ ರಲ್ಲಿ ನಡೆಯುವುದೆಂದೂ ಕೇಳುತ್ತೇವೆ.

ಈ ವರ್ಷದಲ್ಲಿ ಮೈಸೂರು ದೇಶದ ಹಿಂದುಳಿದ ಜನವರ್ಗಗಳಿಗೆ ಕೊಡಲ್ಪಡುವ ವಿದ್ಯಾರ್ಥಿ ವೇತನಗಳಲ್ಲಿ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಗೋದತಕ್ಕ ವಿದ್ಯಾರ್ಥಿಗಳಿಗೆ ೧೦ ರೂ.ನ ೬೦ ವೇತನಗಳು ಜುಲೈ ತಾ|| ೧ ರಿಂದ ಕೊಡಲ್ಪಡುವುವು. ಇವುಗಳಲ್ಲಿ ವೀರಶೈವರಿಗೆ ೧೮, ಮಹಮ್ಮದೀಯರಿಗೆ ೧೨, ಬಣಜಿಗರಿಗೆ ೬, ಒಕ್ಕಲಿಗರಿಗೆ ೫, ಕ್ಷತ್ರಿಯರಿಗೆ ೩, ಕುರುಬರಿಗೆ ೩, ಮೊದಲಿಯಾರರಿಗೆ ೨, ಸಾತಾನಿಗಳಿಗೆ ೨, ಕ್ರೈಸ್ತರಿಗೆ ೨, ಕುಂಚಿಗರು, ಗಾಣಿಗರು, ಗೊಲ್ಲರು, ಅಕ್ಕಸಾಲಿಗರು, ಜೈನರು, ಕುರಣಿಗರು, ಮಹಾರಾಷ್ಟ್ರರು, ನಗರ್ತರು, ನಾಯಿಡುಗಳು, ನೇಯಿಯವರು, ಪಿಳ್ಳೆಗಳು, ಪಾರ್ಶಿಯವರು, ತಿಗಳರು, ಇವರಿಗೆಲ್ಲಾ ಒಂದೊಂದರಂತೆ.

ನೂತನವಿಧಿಯ ಪ್ರಕಾರ ಬೆಂಗಳೂರು ಮ್ಯುನ್ಸಿಪಲ್ ಕೌನ್ಸಿಲ್ಲಿನ ವೈಸ್‌ಪ್ರೆಸಿಡೆಂಟ್ ಗಿರಿಗೆ ಅನುದ್ಯೋಗಿಕಸಭಾಸದರನ್ನು ಕೌನ್ಸಿಲರೇ ಓಟುಗಳನ್ನು ಕೊಟ್ಟು ಆರಿಸಿದುದರಲ್ಲಿ ಮಿ|| ಅಬ್ಬಾಸ್‌ಖಾನರವರಿಗೆ ಹೆಚ್ಚು ಓಟುಗಳು ಬಂದುದರಿಂದ ಅವರು ವೈಸ್‌ಪ್ರೆಸಿಡೆಂಟರಾದರು. ಆದರೆ ಆ ಪಟ್ಟಣಕ್ಕೆ ಹೊಸದಾಗಿ ಕೌನ್ಸಿಲರುಗಳನ್ನು ಆರಿಸುವ ಕಾಲವು ಈಗಲೇ ಸಮೀಪವಾಗಿದೆ. ೨-೩ ದಿನಗಳಲ್ಲಿ ಕಾರ್ಯಾರಂಭವಾಗುತ್ತದೆ. ಹೊಸ ಕೌನ್ಸಿಲು ನಿರ್ಮಿತವಾದಬಳಿಕ ಮರಳಿ ವೈಸ್‌ಪ್ರೆಸಿಡೆಂಟರ ಆರಿಸುವಿಕೆಯು ನಡೆಯಬೇಕಾಗಿರುವುದರಿಂದ ಮಿ|| ಅಬ್ಬಾಸ್‌ಖಾನರ ವೈಸ್‌ಪ್ರೆಸಿಡೆಂಟ್ ಗಿರಿಯ ಭೋಗವು ೧-೨ ತಿಂಗಳು ಮಾತ್ರವೇ ಆಗಿದೆ. ಮುಂದೆಯೂ ಇವರು ಒಂದುವೇಳೆ ಕೌನ್ಸಿಲರಾಗಿ ಬಂದು ಆಗಣ ಆರಿಸುವಿಕೆಯಲ್ಲೂ ಇವರಿಗೇ ಜಯವಾಗುವುದಾದರೆ ಅಭಾಸವೇನೂ ಇಲ್ಲ. ಸ್ವಲ್ಪ ಕಾಲಿಕವೆಂಬ ಕಾರಣದಿಂದಲೇ ಈ ಕೆಲಸಕ್ಕೆ ಉಮೇದುವಾರರುಗಳು ಈ ಸಲ ಕಡಿಮೆಯಾಗಿದ್ದರೋ ಏನೋ! ಜನರಲ್ ಎಲೆಕ್ಷನ್ ಆದ ಬಳಿಕವೇ ಈ ಹೊಸ ಏರ್ಪಾಟು ನಡೆಯುವಂತೆ ಗೌರ್ನಮೆಂಟಿನವರು ಏರ್ಪಡಿಸಿದ್ದರೆ ಚೆನ್ನಾಗಿತ್ತು.

“ ಮ|| ವೆಂಕಟಕೃಷ್ಣಯ್ಯನವರು ಮರಿಮಲ್ಲಪ್ಪನವರ ಸ್ಕೂಲಿನ ಹೆಡ್ಮಾಸ್ಟರ್ ಗಿರಿಯನ್ನು ಬಿಟ್ಟುಬಿಟ್ಟರೆ ಸ್ಕೂಲೇ ಹಾಳೆಕೆಳಗಾಗುವುದೆಂದು ಕೆಲವರು ಬೊಬ್ಬೆಹಾಕುತ್ತಿದ್ದಾರೆ. ಶಾಲೆಯ ವಿದ್ಯಾರ್ಥಿಗಳೆಲ್ಲಾ ಬಿಟ್ಟುಬಿಡುವರೆಂದು ಕೆಲವರು ಬೆದರಿಸುತ್ತಿದ್ದಾರೆ. ಸ್ಕೂಲಿನ ಸುತ್ತುಮುತ್ತಣ ಗೋಡೆಗಳ ಮೇಲೆ ಕೆಲವರು “ ಮುಂದೆ ಬರುವ ಹೆಡ್ಮಾಸ್ಟರಿಗೆ ಅನಾಹುತಗಳು ಕಾದುಕೊಂಡಿವೆ ” ಎಂಬರ್ಥದ ಪ್ರಕಟನಪತ್ರಗಳನ್ನು ಅಂಟಿಸಿದ್ದಾರೆ. ಈ ದಾರ್ಷ್ಟ್ಯವನ್ನೆಲ್ಲಾ ನೋಡಿದರೆ, ಮ|| ವೆಂಕಟಕೃಷ್ಣಯ್ಯನವರಿಗೆ ಜೀವಾಂತವಾಗಿ ಮರಿಮಲ್ಲಪ್ಪನವರ ಸ್ಕೂಲಿನ ಅಧಿಪತ್ಯವಿರುವಂತೆ ಮಾಡಬೇಕೆಂಬ ಕಕಲಾತಿಯು ಕೆಲರಿಗೆ ಎಷ್ಟು ಪ್ರಬಲವಾಗಿದೆಯೆನ್ನುವುದು ಗೊತ್ತಾಗುತ್ತದೆ. ಪಾಪ! ಇವರೇಕೆ ಸಂಕಟಪಡಬೇಕು? ಮರಿಮಲ್ಲಪ್ಪಜೂಬಿಲಿ ಟ್ರಸ್ಟಿಗಳು “ದುರ್ಜನಾಸ್ತೃಪ್ಯಂತು” ಎಂದು ಉದಾರಚಿತ್ತವನ್ನು ತೋರಿಸಿಯಾದರೂ ಅಥವಾ ಸಾಧ್ವೀ ಸಂಪದಭ್ಯುದಯಗಳ ಸ್ತುತಿನಿಂದೆಗಳಿಗೆ ಹಿಗ್ಗಿ ಬೆದರಿಯಾದರೂ ಇನ್ನು ಕೆಲಕಾಲ ಎಕ್ಸ್‌ಟೆನ್ಷನ್ನನ್ನು ಕೊಡಿಸಲು ಪುನರಾಲೋಚನೆ ಮಾಡಬಾರದೇ?” ಎಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.

ಇಂಗ್ಲೀಷ್ ವೈದ್ಯಶಾಸ್ತ್ರವನ್ನು ಕಲಿತು ಪರೀಕ್ಷೆಕೊಟ್ಟು ಡಿಗ್ರಿಯನ್ನು ಪಡೆದು ಸಂಸ್ಕೃತಭಾಷಾ ಪರಿಚಯವುಳ್ಳವರು ಕಲ್ಕತ್ತೆಗೆ ಹೋಗಿ ೩ ವರ್ಷಗಳ ಕಾಲ ಹಿಂದೂವೈದ್ಯವನ್ನಭ್ಯಸಿಸುವುದಾದರೆ ಅಂಥವನೊಬ್ಬನಿಗೂ, ಅದೇ ಯೋಗ್ಯತೆಯುಳ್ಳ ಅರಬಿಕ್ ಭಾಷಾ ಪರಿಚಯವಿರುವ ಮತ್ತೊಬ್ಬನು ದಿಲ್ಲಿಗೆ ಹೋಗಿ ೫ ವರ್ಷ ಕಾಲ ಯುನಾನಿ ವೈದ್ಯವನ್ನು ಕಲಿಯುವುದಾದರೆ ಅಂಥವನಿಗೂ ಸಹ ತಿಂಗಳೊಂದಕ್ಕೆ ೭೫ ರೂ. ಗಳ ಮೇರೆ ವಿದ್ಯಾರ್ಥಿವೇತನವನ್ನು ಕೊಡುವುದಕ್ಕೂ, ಮತ್ತೂ ಹಿಂದೂ ವೈದ್ಯಪಂಡಿತ ಪರೀಕ್ಷೆಯನ್ನು ಕೊಟ್ಟವರೊಬ್ಬರೂ, ಯುನಾನಿ ಪಂಡಿತಪರೀಕ್ಷೆಯನ್ನು ಕೊಟ್ಟಿರುವವರೊಬ್ಬರೂ ಸಹ ಮದ್ರಾಸಿಗೋ ಬೊಂಬಾಯಿಗೋ ಹೋಗಿ ಎಂ. ಬಿ. ಸಿ. ಎಂ. ಅಥವಾ ಎಲ್.ಎಂ.ಎಸ್. ಪರೀಕ್ಷೆಗೆ ಓದಲು ತಕ್ಕ ಆಂಗ್ಲಭಾಷಾ ಯೋಗ್ಯತೆಯನ್ನು ಪಡೆದುಕೊಂಡಿದ್ದು ಬಂದರೆ ಅವರಿಗೆ ತಲಾ ತಿಂಗಳೊಂದಕ್ಕೆ ೫೦ ರೂ. ನಂತೆ ವಿದ್ಯಾರ್ಥಿವೇತನವನ್ನು ಕೊಡುವುದಕ್ಕೂ ನಮ್ಮ ಸರ್ಕಾರದವರು ಅಪ್ಪಣೆಮಾಡಿರುವರು. ತ್ರಿವಿಧ ವೈದ್ಯಜ್ಞಾನವುಳ್ಳ ವೈದ್ಯರನ್ನು ಅಭಿವೃದ್ಧಿಪಡಿಸುವ ಮೂಲಕ ಹಿಂದೂ ಯುನಾನಿ ಇಂಗ್ಲೀಷ್ ವೈದ್ಯಗಳೆಲ್ಲಕ್ಕೂ ಪ್ರೋತ್ಸಾಹ ಮಾಡುವುದೇ ನಮ್ಮ ಸರ್ಕಾರದ ಉದ್ದೇಶವೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಮದರಾಸು ಮ್ಯುನ್ಸಿಪಾಲಿಟಿಯವರು ೨೫ ಸಾವಿರ ರೂ. ಬಂಡವಾಳವನ್ನು ಕೊಟ್ಟು ಅಕ್ಕಿ, ಬಟ್ಟೆ, ಎಣ್ಣೆ, ತುಪ್ಪ, ಉಪ್ಪು ಮೊದಲಾದ ನಿತ್ಯೋಪಯೋಗ್ಯ ವಸ್ತುಗಳನ್ನು ಅಸಲು ಬೆಲೆಗೆ ಮಾರಿಸುವುದಕ್ಕೆ ಅಂಗಡಿಯೊಂದನ್ನೇರ್ಪಡಿಸಿರುತ್ತಾರೆ. ವಾರಕ್ಕೆರಡು ದಿನಗಳು ಮಾತ್ರ ಈ ಅಂಗಡಿಯನ್ನು ತೆರೆದಿರುವಂತೆಯೂ ಬಡವರಿಗೆ ಮಾತ್ರ ೧ ಸಲಕ್ಕೆ ೩ ರೂ. ಗಳಿಗೆ ಹೆಚ್ಚಿಲ್ಲದಷ್ಟು ಪದಾರ್ಥಗಳನ್ನು ಮಾರುವಂತೆಯೂ ಏರ್ಪಡಿಸಿರುತ್ತಾರೆ. ನಮ್ಮ ಸಂಸ್ಥಾನದಲ್ಲಿ ಸರ್ಕಾರದುದ್ಯೋಗಿಗಳ ಸೌಕರ್ಯಕ್ಕಾಗಿ ಆಲೋಚನೆಯನ್ನು ಕೊಡಲು ಇರುವಷ್ಟು ಜಾಗರೂಕತೆಯೂ ಕನಿಕರವೂ ಬಡ ಪ್ರಜೆಗಳ ಪ್ರಾಣರಕ್ಷಣೆ ಕಷ್ಟನಿವಾರಣೆಯ ವಿಷಯದಲ್ಲಿ ಇರುವುದಿಲ್ಲವೆಂದು ಹೇಳುವುದಕ್ಕೆ ವಿಷಾದವಾಗುತ್ತದೆ. ಸಿವಿಲ್ ಸಪ್ಲೈ ಡೈರೆಕ್ಟರುಗಳ ನಿಯಮನವನ್ನೇನೋ ಮಾಡಿದುದರಿಂದ ಪ್ರಕಟನ ವಿಜೃಂಭಣೆಯಾಯಿತು. ಆದರೆ ಬಡ ಪ್ರಜೆಗಳಿಗೆ ತಗ್ಗು ಬೆಲೆಗಳಿಂದ ಪ್ರಾಪ್ತವಾಗಿರುವ ಕಷ್ಟಗಳಿಗೆ ಸರಿಯಾದ ಪರಿಹಾರವು ನಡೆದಿರುವುದಿಲ್ಲ. ಮಳೆ ಬೆಳೆಗಳ ಸ್ಥಿತಿಯು ಭೀಕರವಾಗಿಯೇ ಇದೆ. ಮದ್ರಾಸು ಮ್ಯುನ್ಸಿಪಾಲಿಟಿಯವರು ತಮ್ಮ ಪ್ರಜೆಗಳಮೇಲೆ ತೋರಿಸಿದಷ್ಟು ಭೂತದಯೆಯನ್ನಾದರೂ ನಮ್ಮ ದೇಶದ ಬೆಂಗಳೂರು ಮೈಸೂರು ಮೊದಲಾದ ಮ್ಯುನ್ಸಿಪಾಲಿಟಿಗಳ ಧುರಂಧರರು ತೋರಿಸಬಾರದೇ?

ಭರತಖಂಡದ ವೃತ್ತಾಂತಗಳು.

ಕಳೆದ ತಾ|| ೨೪ ರವರೆಗೆ ೩೧ ಕೋಟಿಯಮೇಲೆಯೇ ೨ ನೆ ಯುದ್ಧಋಣ ಪತ್ರಗಳು ಮಾರಲ್ಪಟ್ಟಿದ್ದುವು.

ಲಾಹೋರ್ ಪಟ್ಟಣದಲ್ಲಿ ಕಳೆದ ತಾ|| ೨೨ ರಲ್ಲಿ ೮ ಗಂಟೆ ಕಾಲದೊಳಗಾಗಿ ೪ ಅಂಗುಲದ ಮಳೆಯಾಗಿದೆ.

ಕೈರಾಜಿಲ್ಲೆಯಲ್ಲಿ ಬಡಬಗ್ಗರು ಅಕ್ಕಿ ಅಂಗಡಿಗಳನ್ನು ಸೂರೆಮಾಡುವುದು ಹೆಚ್ಚಿದಕಾರಣ ಧಾನ್ಯದ ವರ್ತಕರು ಅಂಗಡಿಗಳನ್ನೇ ಮುಚ್ಚಿಬಿಟ್ಟಿರುವರು.

ಸೀಮೆಯಲ್ಲಿ ಆಗಾಗ್ಗೆ ಕೂಡುವ ಸಾಮ್ರಾಜ್ಯಯುದ್ಧಮಂತ್ರಿಸಭೆಯಲ್ಲಿ ಭರತಖಂಡದ ಪಕ್ಷವಾಗಿ ಸ್ಟೇಟ್‌ಸೆಕ್ರೆಟರಿಯವರು ಪ್ರತಿನಿಧಿಗಳಾಗಿರುವಂತೆ ಗೊತ್ತುಮಾಡಲ್ಪಟ್ಟಿದೆಯೆಂದು ತಿಳಿಯಬರುತ್ತದೆ. ಆದರೆ ಇದು ಸರ್ಕಾರಿಯಾಗಿ ಇನ್ನೂ ಪ್ರಕಟಗೊಂಡಿಲ್ಲ.

ಬೊಂಬಾಯಿಯಲ್ಲಿ ನಡೆಯುವ ಪ್ರತ್ಯೇಕದೇಶೀಯ ಮಹಾಸಭೆಗೆ ಹಿಂದೂದೇಶಸೇವಕ ಸಂಘದ ಸಭಿಕರಾರೂ ಹೋಗಬಾರದೆಂದೂ, ಮಿತವಾದಿಗಳು ನಡೆಯಿಸುವ ಸಭೆಗೆ ಹೋಗಬೇಕೆಂದೂ, ಮಿತವಾದಿಗಳ ಸತ್ಕ್ರಮವಿಧಾನವು ಅನುಸರಣೀಯವೇ ಹೊರತು ಹಾನಿಕರವಾದ ಅನ್ಯವಿಧಾನವನ್ನಂಗೀಕರಿಸಲಾಗದೆಂದೂ ಸೇವಕಸಂಘದ ಪ್ರಮುಖರು ನಿರ್ಧರಿಸಿರುವರೆಂದು ದೇಶಸೇವಕಸಂಘಪತ್ರಿಕೆಯು ತಿಳಿಸಿರುತ್ತದೆ.

ಬೇರಾರು ದೇಶೀಯಸಭೆಗೆ ಸೇರಿದ ಮಿ|| ಗಳಾದ ಆರ್. ಎನ್. ಮುಧೋಳ್ಕರ್ ಮೊದಲಾದ ಕೆಲವರು ಸರ್ ದಿನ್ಶಾ ವಾಚಾರವರಿಗೆ ಒಂದು ಪತ್ರವನ್ನು ಬರೆದು ನಾವು ಮಾಂಟೆಗ್ ಸಂಸ್ಕರಣವನ್ನು ಅನುಮೋದಿಸುತ್ತೇವೆ. ಅದರಲ್ಲಿ ಕೆಲಕಡೆ ಸಂಸ್ಕರಿಸಬೇಕಾದುದಿದ್ದರೂ ಒಟ್ಟಿನಲ್ಲಿ ಪುರೋಭಿವೃದ್ಧಿಕರವಾಗಿಯೇ ಇದೆ. ಮಿತವಾದಿಗಳ ಪ್ರತ್ಯೇಕಸಭೆ ಕೂಡುವುದನ್ನು ನಾವು ಒಪ್ಪುತ್ತೇವೆ ಎಂದು ತಿಳಿಯಪಡಿಸಿರುತ್ತಾರೆ.

ಉಗ್ರವಾದಿಗಳು ಮಿತವಾದಿಗಳ ಪ್ರತ್ಯೇಕಪ್ರಯತ್ನವನ್ನು ವಾಚಾಮಗೋಚರವಾಗಿ ನಿಂದಿಸುತ್ತ, ತಮ್ಮ ಕೂಟಕ್ಕೇ ಅವರನ್ನು ಕೂಡಿಸಿ ತಮ್ಮ ಬಾಯೀ ಭರತಖಂಡದ ಬಾಯೆನ್ನಿಸಬೇಕೆಂದು ಬಹಳ ತಂತ್ರವನ್ನು ನಡೆಯಿಸುತ್ತಿದ್ದಾರೆ. ಆದರೆ ಸೂರತ್ತಿನ ಸಭೆಯ ಕಥೆಯನ್ನು ನೆನಸಿಕೊಂಡು ಮಿತವಾದಿಗಳಾದ ದೇಶಹಿತಚಿಂತಕರೆಲ್ಲರೂ ಇವರುಗಳಿಗೆ ಕೋಟಿನಾರು ದೂರವಾಗಿರುವುದೇ ಶ್ರೇಯಸ್ಕರವೆಂದು ನಿರ್ಧರಿಸಿರುತ್ತಾರೆ.

ಭರತಖಂಡದಲ್ಲಿ ಈಗ ಮಿತವಾದಿಗಳು ಪ್ರತ್ಯೇಕ ಸಭೆಕೂಡಿಸುವುದನ್ನು ಲಂಡನ್ ಟೈಮ್ಸ್ ಪತ್ರಿಕೆಯು ಮೆಚ್ಚಿಕೊಂಡಿರುವುದಲ್ಲದೆ, ಮಿತವಾದಿಗಳು ಎಚ್ಚರಗೊಂಡು ಚುರುಕಿನಿಂದ ಕೆಲಸಮಾಡದಿದ್ದರೆ ಪುರಗ್ರಾಮಾದಿಗಳಲ್ಲಿರುವ ಓಟರುಗಳೆಲ್ಲರೂ ಉಗ್ರವಾದಿಗಳ ಅಧೀನವೇ ಆಗುವರೆಂದೂ, ಈ ಅನರ್ಥನಿವಾರಣೆಗಾಗಿಯೇ ಸರ್ ವಾಲಂಟೈನ್ ಚಿರೋಲರೇ ಮೊದಲಾದವರು ಪ್ರತ್ಯೇಕಸಂಘ ಪ್ರಾತಿನಿಧ್ಯವನ್ನು ಕುರಿತು ಪತ್ರಿಕೆಗಳಿಗೆ ವಿಶೇಷವಾಗಿ ಬರೆಯುತ್ತಿರುವರೆಂದೂ ಅಗ್ರಲೇಖನವನ್ನು ಬರೆದಿರುವುದು.

ಭರತಖಂಡದಲ್ಲಿ ಆಹಾರ್ಯಪದಾರ್ಥಗಳಿಗೆ ಉಂಟಾಗಿರುವ ಕೊರತೆ ನಿವಾರಣೋಪಾಯ ಇವುಗಳನ್ನು ಕುರಿತು ಆಲೋಚಿಸುವುದಕ್ಕಾಗಿ ನಾಗಪುರದಲ್ಲಿ ಇದಕ್ಕಾಗಿ ಪ್ರಭುತ್ವದವರಿಂದ ನಿಯುಕ್ತರಾಗಿರುವ ಸಭಿಕರು ಕೂಡಿದ್ದರು. ಅವರು ಚರ್ಚಿಸಿದ ವಿಷಯಗಳಲ್ಲಿ ಯಾವ ರಾಷ್ಟ್ರದಲ್ಲಿ ಆಹಾರ್ಯವಸ್ತುಗಳಿಗೆ ಕೊರತೆಯುಂಟಾಗಿರುವುದೋ ಅಲ್ಲಿಗೆ ಮೊದಲು ಉಳಿದ ಕಡೆಗಳಿಂದ ಸಾಮಗ್ರಿಗಳನ್ನು ಸಾಗಿಸುವುದಕ್ಕೆ ಏರ್ಪಡಿಸಬೇಕೆಂಬ ವಿಷಯವೂ ಒಂದಾಗಿದ್ದಿತು. ಸಂಯುಕ್ತಪ್ರಾಂತಗಳಲ್ಲೂ ರಾಜಪುತ್ರಸ್ಥಾನದ ಎಲ್ಲ ಭಾಗದಲ್ಲೂ, ಮಧ್ಯಪ್ರಾಂತದ ಕೆಲ ಭಾಗಗಳಲ್ಲೂ, ಬೊಂಬಾಯಿ ಅಧಿಪತ್ಯದ ಉತ್ತರಭಾಗದಲ್ಲೂ, ಹೈದರಾಬಾದ್ ದಕ್ಷಿಣದಲ್ಲೂ ಮದ್ರಾಸು ಅಧಿಪತ್ಯದಲ್ಲಿ ಕೆಲ ಕಡೆಯೂ ಆಹಾರ್ಯವಸ್ತುಗಳಿಗೆ ಕೊರತೆಯುಂಟಾಗಿರುವುದರಿಂದ ಅಲ್ಲಿಗೆಲ್ಲಾ ಆಹಾರ್ಯಪದಾರ್ಥಗಳನ್ನು ಅವಶ್ಯಕವಾಗಿ ಸಾಗಿಸಿಕೊಡಬೇಕಾಗಿದೆಯೆಂದೂ, ಬಂಗಾಳಾ, ಬಿಹಾರು, ಒರಿಸ್ಸಾ, ಮಧ್ಯಪ್ರಾಂತ ಇವುಗಳಲ್ಲಿ ಆಹಾರ್ಯವಸ್ತುಗಳು ನಿಂತಿರುವುವೆಂದೂ ವರದಿಯು ಓದಲ್ಪಟ್ಟಿತು.

ಯುದ್ಧಾರಂಭವಾದಮೇಲೆ ಜರ್ಮನಿಯ ರಾಸಾಯನಿಕ ಪರಿಶೋಧನಸಿದ್ಧವಾದ ರಂಗುಗಳು ನಮ್ಮ ದೇಶಕ್ಕೆ ಬರುವುದು ನಿಂತುಹೋಗಿ ಬಣ್ಣದ ಬೆಲೆಯು ಮಿತಿಮೀರಿಹೋಯಿತಷ್ಟೆ. ಈಚೆಗೆ ಇಂಗ್ಲೆಂಡಿನವರು ರಂಗುಗಳ ನಿರ್ಮಾಣಕ್ಕಾಗಿ ಪ್ರಯತ್ನಿಸಿ ಬಲುಮಟ್ಟಿಗೆ ಅದರಲ್ಲಿ ಫಲಸಿದ್ಧಿಯನ್ನು ಹೊಂದಿರುವರು. ಅವರಿಂದ ನಿರ್ಮಿತವಾಗಿರುವ ಕೆಂಪುರಂಗು ಭರತಖಂಡಕ್ಕೂ ಕೂಡ ಬಂದಿರುವುದು. ಮದರಾಸು ಅಧಿಪತ್ಯದ ನಾನಾಜಿಲ್ಲೆಗಳಿಗೆ ಬೆಸ್ಟ್ ಅಂಡ್ಕೊಯವರು ಅದನ್ನು ಒದಗಿಸುತ್ತಿರುವರು. ಸದ್ಯಃ ಇದನ್ನು ಚಿಲ್ಲರೆಮಾರಾಟಕ್ಕೆ ಕೊಡದೆ ವರ್ತಕಸಂಘದವರ ನಿಬಂಧನೆಪ್ರಕಾರ ರಂಗನ್ನುಪಯೋಗಿಸುವವರಿಗೆ ಮಾತ್ರವೇ ಕೊಡುತ್ತಿರುವರು. ಅವರು ಪೌನು ೧ ಕ್ಕೆ ೨-೧೦ ಯಂತೆ ಮಾರುತ್ತಿರುವರು. ಈ ರಂಗಿನ ವ್ಯಾಪಾರಕ್ಕಾಗಿ ಮಧುರೆ, ಅರುಪ್ಪುಕೋಟೆ, ಸೇಲಂ, ಕುಂಭಕೋಣ, ಮದರಾಸು, ಕಂಚಿ, ವಿಜಯನಗರ, ಕಾಕಿನಾಡ, ಮಚಲೀಪಟ್ಟಣ, ಗುಂಟೂರು, ಪ್ರೊದ್ದುಟೂರು, ಆದವಾನಿ, ವಾನಿಯಂಬಾಡಿ, ಚಿರಾಲ, ತಿರುನಲ್ವೇಲಿ ಇಷ್ಟು ಕಡೆ ಸಂಘಗಳು ಸ್ಥಾಪಿಸಲ್ಪಟ್ಟಿವೆ. ಈ ಮೇಲೆ ಕಂಡ ಸ್ಥಲಗಳಲ್ಲೆಲ್ಲಾ ಜವಳಿಯ ನೆಯ್ಗೆಯು ವಿಶೇಷವಾಗಿ ಆಗುತ್ತಿದೆ. ರಂಗು ಸಮೃದ್ಧಿಯಾಗಿ ಒದಗುತ್ತ ಅದರ ಬೆಲೆಯು ತಗ್ಗಿದರೆ ಸೀರೆ ಪಂಚೆ ಮೊದಲಾದ ಸ್ವದೇಶದ ಜವಳಿಯ ಬೆಲೆಯೂ ಸ್ವಲ್ಪ ಇಳಿಯಬಹುದು. ಆದರೆ ನೂಲಿನಬೆಲೆಯೂ ಇಳಿದಹೊರತು ಪೂರ್ವದಬೆಲೆಗೆ ವಸ್ತುಗಳು ಸಿಕ್ಕುವುದು ದುರ್ಲಭ.

ಕಳೆದ ತಾ|| ೨೧ ರಲ್ಲಿ ಬೊಂಬಾಯಿಪಟ್ಟಣದೊಳಗೆ ಸರ್ ದಿನ್ಶಾ ವಾಚಾರವರ ಅಧ್ಯಕ್ಷತೆಯಿಂದ ಬೊಂಬಾಯಿಪ್ರಾಂತದ ಮಿತವಾದಿಗಳ ಸಭೆಯು ಜರುಗಿತು. ಅ|| ಸೆಟಲ್ವಾಡ್, ಪರೇಖ್, ಸರ್ ದೊರಾಬ್ಜಿ ತಾತಾ, ಸರ್ ಜೇಂಸೆಟ್ಜಿ ಜೀಜಿಭಾಯಿ, ಸರ್ ವಿಠಲದಾಸ ಥಾಕರ್ಸೆ, ಸರ್ ಬಾಲಚಂದ್ರಕೃಷ್ಣ, ಸರ್ ಹಾರ್ಮಸ್ಜಿ ವಾಡಿಯಾ, ಸರ್ ಮಹಾದೇವಚೌಬಳ, ರಹಿಮತುಲ್ಲಾ ಕರೀಂಭಾಯಿ, ಲಲ್ಲೂಭಾಯಿ ಶಾಮಲದಾಸ್, ಅ|| ಶ್ರೀನಿವಾಸಶಾಸ್ತ್ರಿಗಳೇ ಮೊದಲಾದನೇಕ ಪ್ರಮುಖರು ಸಭೆಗೆ ಬಂದಿದ್ದರು. ಮತ್ತೂ ಸಭಾಕಾಲಕ್ಕೆ ಬರಲನುಕೂಲವಾಗದೆ ಇದ್ದವರನೇಕರೂ ಸಭಾಕಾರ್ಯದಲ್ಲಿ ತಮ್ಮ ಸಾನುಭೂತಿಯನ್ನು ಪ್ರದರ್ಶಿಸಿ ಪತ್ರಗಳನ್ನು ಬರೆದಿದ್ದರು. ಯಾವದ್ಭಾರತ ಮಿತವಾದಿ ಸಭೆಯೊಂದನ್ನು ನೆರೆಯಿಸುವುದಕ್ಕೆ ಸಭಿಕರು ನಿಶ್ಚಯಿಸಿದರು. ಸತ್ಕಾರಕ ಸಂಘಾಧ್ಯಕ್ಷತೆಯು ಸರ್ ವಾಚಾರವರಿಗೆ ವಹಿಸಲ್ಪಟ್ಟಿತು. ಸರ್ ಗಳಾದ ಚಂದ್ರಾವರ್ಕರ್, ಚೌಬಳ, ಜೀಜೀಭಾಯಿ, ಬಾಲಚಂದ್ರಕೃಷ್ಣ, ಹಾರಮಸ್ಜಿ ವಾಡಿಯಾ, ಸೆಟಲ್ವಾಡ್, ಪರೇಖ್, ಶ್ರೀನಿವಾಸಶಾಸ್ತ್ರಿ, ಜೇಂಬರ್ಸ ಇವರುಗಳು ಉಪಾಧ್ಯಕ್ಷರಾಗಿ ಮಾಡಲ್ಪಟ್ಟರು. ಸಮರ್ಥರವರು ಜನರಲ್ ಸೆಕ್ರೆಟರಿಯಾಗಿಯೂ ಇನ್ನು ೫ ಮಂದಿಗಳು ಸಹಾಯಕ ಕಾರ್ಯದರ್ಶಿಗಳಾಗಿಯೂ ಮಾಡಲ್ಪಟ್ಟು, ಒಂದು ಕಾರ್ಯನಿರ್ವಾಹಕಸಂಘವು ಏರ್ಪಡಿಸಲ್ಪಟ್ಟಿತು. ಕರೆಯಲ್ಪಟ್ಟವರು ಮಾತ್ರ ಸಭೆಗೆ ಬರಬೇಕೆಂದೂ ಅಂಥವರು ೧೦ ರೂ. ಪ್ರವೇಶಧನವನ್ನೂ ಸನ್ಮಾನಸಂಘ ಸಭಿಕರು ೩೦ ರೂ. ಗಳನ್ನೂ ಕೊಡಬೇಕೆಂದೂ ನಿರ್ಧಾರವಾಯಿತು. ಸಭಾಧ್ಯಕ್ಷತೆಯನ್ನು ವಹಿಸಲು ಸುರೇಂದ್ರನಾಥ ಬಾನರ್ಜಿಯವರನ್ನು ಪ್ರಾರ್ಥಿಸಬೇಕೆಂದು ನಿರ್ಧಾರವಾಯಿತು. ಸಭಾಕಾಲವು ಮಾತ್ರ ಇನ್ನೂ ಗೊತ್ತಾಗಿಲ್ಲ. ಮುಂದೆ ತಿಳಿಯಿಸಲ್ಪಡುವುದು.

ಪತ್ರವ್ಯವಹಾರ.

ಶಿವೈಕ್ಯ ಕಬ್ಬೂರು ಲಿಂಗಪ್ಪ ಶರಣರು.

ಈ ಶಿರಾಳಕೊಪ್ಪ ಪ್ರಾಂತದಲ್ಲಿ ಪ್ರಸಿದ್ಧರಾಗಿಯೂ ಪ್ರಮಥರ ಆಚರಣೆಯ ಬಳಿ ವಿಡಿದಾಚರಿಸುವವರಾಗಿಯೂ ಶಿವಾನುಭವ ಶಾಸ್ತ್ರನಿಪುಣರಾಗಿಯೂ ವಯಸ್ಕರಾಗಿಯೂ, ಅನೇಕಜನ ವಿರಕ್ತಸ್ವಾಮಿಗಳಿಗೆ ಶಾಸ್ತ್ರದ ಮರ್ಮವನ್ನು ತಿಳಿಸಿದವರಾಗಿಯೂ, ಲೌಕಿಕಧರ್ಮ ಪಾರಮಾರ್ಥಿಕಗಳೆರಡನ್ನೂ ಲೋಪವಿಲ್ಲದಂತೆ ನಡೆಸಿದವರಾಗಿಯೂ, ಶಿವಯೋಗಮಂದಿರದಲ್ಲಿನ ಸಾಧಕರಿಗೆ ಅನೇಕ ವಿಷಯಗಳಲ್ಲಿ ಮಾರ್ಗದರ್ಶಿಗಳಾಗಿಯೂ ಇದ್ದು ಅನೇಕ ಸ್ವಾಮಿಗಳವರಿಂದ ನಿಜವಾದ ಶರಣರೆಂದು ಭಾವಿಸಲ್ಪಟ್ಟವರಾದ ಕಬ್ಬೂರು ಲಿಂಗಪ್ಪನವರು ಕಾಳಯುಕ್ತಿ ಸಂ|| ರದ ಜ್ಯೇಷ್ಠ ಶು ೧೦ ಮಂಗಳವಾರ ಸುಮಾರು ೭೫ ನೆಯ ವಯಸ್ಸಿನಲ್ಲಿ ಶಿವೈಕ್ಯರಾದರು. ಅವರ ಸಾತ್ವಿಕ ಪ್ರಭಾವವು • ಕೈ

"ಯಾಽದ್ಧಿಸ್ತಸ್ಯೈಭವತಿ ಮಹತಾಂನೋಪಕರಣೇ" ಎಂಬ ಪ್ರಮಾಣಕ್ಕನುಸಾರವಾಗಿತ್ತು. ಉದಾಹರಣೆಗಾಗಿ ಇವರನ್ನು ದ್ವೇಷಿಸಿ ದೂಷಿಸಿದವರೊಬ್ಬರಿಗೆ ಹುಚ್ಚು ಹಿಡಿದು ವ್ಯಥೆಪಡುವಂತಾಗಿದೆ. ಮಹಾತ್ಮರು ಶಿವೈಕ್ಯರಾದಾಗ ದೊಡ್ಡನಕ್ಷತ್ರವು ಪತನವಾಗುವ ಪದ್ಧತಿಯಂತೆ, ಇವರು ಶಿವೈಕ್ಯರಾಗುವ ದಿನದ ಪೂರ್ವದಿನದ ಸಾಯಂಕಾಲ ಒಂದು ದೊಡ್ಡ ನಕ್ಷತ್ರವು ವಿಶೇಷ ತೇಜಸ್ಸಿನಿಂದ ಈ ಪ್ರಾಂತವೆಲ್ಲಾ ಬೆಳಕನ್ನು ತೋರಿಸಿ ಪತನವಾಯಿತು. ಇವರು ಶಿವಾಧೀನರಾಗುವಾಗ ಎಚ್ಚರದಿಂದಿದ್ದು ಗೋಣಿಬೀಡು ಶ್ರೀ|| ಸ್ವಾಮಿಗಳವರ ಸನ್ನಿಧಿಯಲ್ಲಿ "ಶಿವಶಿವ" ಎಂಬ ನಾಮೋಚ್ಚರಣೆಯಿಂದಲೇ ಶಿವೈಕ್ಯರಾದರು. ಇವರು ಲಿಂಗನಾಯಕನಹಳ್ಳಿ ಚನ್ನವೀರಸ್ವಾಮಿಗಳ ಕರಕಂಜಾತರಾಗಿಯೂ, ಮೈಲಾರ ಬಸವಪ್ಪನವರ ಸಹಪಾಠಿಗಳಾಗಿಯೂ ಇದ್ದು ಸೊರಬದ ಶ್ರೀ ರುದ್ರಮುನಿಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದವರಾಗಿದ್ದರು. ಪರಮ ಚನ್ನವೀರಸ್ವಾಮಿಗಳವರ ಶುದ್ಧ ಸಂಪ್ರದಾಯವು ಇವರಲ್ಲಿ ಪ್ರತ್ಯಕ್ಷವಾಗಿ ತೋರುತ್ತಲಿತ್ತು. ಇವರು ಪರಸ್ಥಳಕ್ಕೆ ವಿಶೇಷ ಸಂಚಾರಮಾಡದೆ ಈ ಪ್ರಾಂತ್ಯದಲ್ಲಿಯೇ ಮತವಿಷಯಗಳನ್ನು ತಿಳಿದುಕೊಂಡು ಕ್ರಿಯಾನಿಷ್ಠರಿಗೆ ಅಂತ್ಯಕಾಲದಲ್ಲಿಯೂ ಕ್ರಿಯಾಚರಣೆ ಸರಿಯಾಗಿ ನಡೆವುದೆಂಬುದಕ್ಕೆ ಉದಾಹರಣೆಯಾಗಿದ್ದರು. ಇವರು ಪ್ರಭುದೇವರು ಅನಿಮಿಷಾರ್ಯರಿಗೆ ಅನುಗ್ರಹಿಸಿದ ಕ್ಷೇತ್ರದಲ್ಲಿ ಆಗಾಗ ಶಿವಾನುಭವವನ್ನು ಧ್ಯಾನಿಸಿಕೊಂಡವರಾಗಿದ್ದರು. ಮತ್ತು ಇವರು ಶಿವೈಕ್ಯರಾಗುವುದಕ್ಕೆ ಒಂದು ದಿವಸ ಮುಂಚಿತವಾಗಿಯೇ ಲೌಕಿಕದ ಮಾತುಗಳನ್ನು ಮುಗಿಸಿಬಿಟ್ಟು ಶಿವೈಕ್ಯರಾಗುವ ದಿನವೆಲ್ಲಾ ಅಂದರೆ ಪ್ರಾತಃಕಾಲದಿಂದ ಮಧ್ಯಾಹ್ನ ೪ ಘಂಟೆಯವರೆಗೂ ಶಿವಾನುಭವಪ್ರಸಂಗದಲ್ಲಿಯೇ ಮಗ್ನರಾಗಿದ್ದರು. ಮರಣಸೂಚನೆಯು ಇವರಿಗೆ ತಿಳಿದಿತ್ತು. ಕಡೆಯದಿವಸ ಇವರು ಅಪ್ಪಣೆಕೊಡಿಸಿದ ವಾಕ್ಯಗಳಲ್ಲಿ "ಶಿವಾನುಭವವನ್ನು ಪ್ರತಿಪಾದಿಸತಕ್ಕ ಶಾಲೆಗಳು ಅಲ್ಲಲ್ಲಿ ಮುಖ್ಯವಾದ ಸಿಂಹಾಸನಪೀಠವಿರುವ ಸ್ಥಳಗಳಲ್ಲಿ ಏರ್ಪಾಡಾಗಬೇಕು. ಶಿವಾನುಭವಶಾಸ್ತ್ರದಲ್ಲಿ ಪರೀಕ್ಷೆ ಕೊಟ್ಟವರಿಗೆ ಮಾತ್ರ ಅಪ್ಪಣೆಕೊಡುವುದನ್ನು ಪೂರ್ವಪದ್ಧತಿಯಂತೆ ಜಾರಿಗೆ ತರಬೇಕು." ಎಂಬಿವುಗಳೇ ಮುಖ್ಯವಾಗಿ ಇದ್ದುವು. ಇವರು ಶಿವಸಾನ್ನಿಧ್ಯವಂ ಸೇರಿದರೆಂದು ಸಹಜವಾಗಿ ಸಂತೋಷಪಡುವುದಾದರೂ ಇವರ ಅಗಲುವಿಕೆಯಿಂದ ಸಮಾಜಕ್ಕೆ ಎಷ್ಟು ನಷ್ಟವೆಂಬುವನ್ನು ಹೇಳತೀರದು. ಒಬ್ಬ ಸುದ್ದಿಗಾರ.

ಚನ್ನಗಿರಿ ತಾಲ್ಲೂಕು ತ್ಯಾವಣಿಗೆ.

ಈ ವರ್ಷ ಇದುವರೆಗೂ ಮಳೆಯು ಸರಿಯಾಗಿ ನಡೆಸದೆ ಬೀಜ ಪೇರಾವ್ ಮಾಡಲು ಅನುಕೂಲವಾದಷ್ಟು ಹದ ಸಹ ಇಲ್ಲದೆ ರೈತರು ಆಕಾಶವನ್ನೇ ಇದಿರುನೋಡುತ್ತಿರುವರು. ಈ ಹಿಂದೆ ಬೆಳೆದ ಅಲ್ಪ ಸ್ವಲ್ಪ ಕಾಳನ್ನು ಮುಂದಿನಕಾಲ ನಿರೀಕ್ಷಿಸುವಷ್ಟು ತಾಳ್ಮೆಯಿಲ್ಲದೆ ಹೆಚ್ಚು ಬೆಲೆ ಬರುವದೆಂಬಾಸೆಯಿಂದ ಇದ್ದ ದವಸವನ್ನೆಲ್ಲಾ ಮಾರಾಟಮಾಡಿ ಈ ಕಾಲದಲ್ಲಿ ತಾರಮ್ಮಯ್ಯನಾಡುವ ಕಾಲವು ಪ್ರಾಪ್ತವಾಗಿದೆ. ಯಾಕೆಂದರೆ-ಈಗ ಧಾರಣೆವಾಸಿಗಳು ದಿನದಿನವೂ ವಿಷವೇರಿದಂತೆ ಏರುತ್ತಾ ಅಕ್ಕಿ ರೂ. 1 ಕ್ಕೆ 4.5 ಸೇರು. ಜೋಳ 6-7 ಸೇರು. ರಾಗಿ 10-12 ಸೇರು ಈ ರೀತಿ ಮಾರಾಟವಾಗುತ್ತಾ ಅದು ಕೂಡ ಸಾಕಾಗುವಷ್ಟು ಸಿಕ್ಕುವಂತಿಲ್ಲ. ಹೀಗಿರುವಲ್ಲಿ ಬಡವರು ಜೀವನಮಾಡುವದೇ ಕಷ್ಟವಾಗಿ ಪರಿಣಮಿಸಿದೆ. ಉಪಪನ್ನರಾದವರು ಹೇಗಾದರೂ ಮಾಡಿ ತಮ್ಮ ಜೀವನವನ್ನು ಕಾಪಾಡಿಕೊಳ್ಳುವರು. ಈ ರೀತಿ ಧಾರಣೆವಾಸಿಗಳಿಂದ ಈ ಕಾಲವು ಕ್ಷಾಮಕಾಲವೆಂದೇ ಹೇಳಬೇಕಾಗಿದೆ. ಹೊಟ್ಟೆಯಪಾಡೇ ಈ ರೀತಿ ಇರುವಲ್ಲಿ ಬಟ್ಟೆಯ ಧಾರಣೆಯಂತೂ ಹೇಳತೀರದು. ಒಟ್ಟಿನಮೇಲೆ ಈವರೆಗೂ ಸರಿಯಾಗಿ ಮಳೆ ನಡೆಸದೆ ಇರುವದರಿಂದ ಬಡವರಿಗೆ ಕೂಲಿ ಸಹ ಸಿಕ್ಕುವದು ದುರ್ಲಭವಾಗಿದೆ. ಈ ಕಾರಣಗಳಿಂದ ಈ ಗ್ರಾಮದಲ್ಲಿ ಅನೇಕ ಬಡಜನಗಳು ಅನ್ನಬಟ್ಟೆಗಿಲ್ಲದೆ ಒಂದು ದಿವಸ ಎಲ್ಲರೂ ಏಕೀಭವಿಸಿ, ಗ್ರಾಮದ ಪಟೇಲರ ಮತ್ತು ಗ್ರಾಮಪ್ರಮುಖರ ಮುಂದೆ ತಮ್ಮ ಈ ದುರವಸ್ಥೆಯ ಗೋಳಾಟವನ್ನು ಹೇಳಿಕೊಂಡರು. ಆಗ ಈ ಬಡಜನಗಳ ಗೋಳಾಟವನ್ನು ನೋಡಿ ಸಹಿಸಲಾರದೆ ಈ ತ್ಯಾವಣಿಗೆ ಗ್ರಾಮದ ಮಹನೀಯರಾದ ಮ|| ರಾ|| ಯಜಮಾನ್ ಗುಡದಪ್ಪನವರು, ಮ|| ಯ|| ನಲ್ಲೂರು ವೀರಪ್ಪನವರು, ಮ|| ಅಕ್ಕಮ್ಮನವರ ಗುರುಸಿದ್ದಪ್ಪನವರು, ಮ|| ಆನೆಕೊಂಡದ ಸಿದ್ಧಲಿಂಗಪ್ಪನವರು, ಮ|| ಅಕ್ಕಮ್ಮನವರ ಹಾಲಪ್ಪನವರು, ಮ|| ಹರಿಯಪ್ಪನ ಕೆಂಚಪ್ಪನವರು, ಮ|| ಕಾಡವೀರಪ್ಪನವರು, ಮ|| ಕಾಡಸಿದ್ದಪ್ಪನವರು, ಮ|| ಹಡಪದ ವೀರಪ್ಪನವರು, ಮ|| ಶುಂಠಿ ವೀರಪ್ಪನವರು, ಮ|| ಕುರುಬರ ಮಂಟಪ್ಪನವರು, ಮ|| ಕುರುಬರ ಹೊನ್ನಪ್ಪ ಹಾವಳಪ್ಪನವರು, ಮ|| ಈಡಿಗರ ರಂಗಪ್ಪನವರು, ಮ|| ಪಟೇಲ್ ನಂಜಪ್ಪನವರು, ಮ|| ಪಟೇಲ್ ಮಹದೇವಪ್ಪನವರು ಸಹ ಆಸಕ್ತರಪಟ್ಟು ಕೂಡಲೆ ಗ್ರಾಮದಲ್ಲಿ ಕಾಳುದಾ[illegible] ಪುಣ್ಯಾತ್ಮರನ್ನು ಕರೆಸಿ ಎಲ್ಲರೂ ಒಂದಾಗಿ, ಇಂಥಾ ಕಷ್ಟಕಾಲದಲ್ಲಿ [illegible] ಕೈಲಾದಮಟ್ಟಿಗೆ ಸಹಾಯಮಾಡಬೇಕಾಗಿ ನಿರ್ಧರಿಸಿ, ಕಂಡುಗ 1 ರ 200 ಸೇರಿನ ಬಾಬ್ತು 5-6 ಕಂಡುಗ ಕಾಳನ್ನು ಒಟ್ಟುಗೂಡಿಸಿ (ಮುಂದೆ ದೇವತಾನುಗ್ರಹದಿಂದ ಮಳೆ, ಬೆಳೆ ನಡಿಸಿದ ಸುಭಿಕ್ಷಕಾಲದಲ್ಲಿ ಇದನ್ನು ಕೊಡಿ ಎಂತ ಹೇಳಿ) ಆ ಬಡಜನಗಳಿಗೆಲ್ಲಾ ಕೊಟ್ಟು ಅವರ ಜೀವನವನ್ನು ಕಾಪಾಡಿದರು. ಈ ರೀತಿ ಇಂಥಾ ದುಬಾರಿ ಧಾರಣೆ ಕಾಲದಲ್ಲಿ ಮೇಲೆ ಕಂಡ ಮಹನೀಯರು ಧನಾಪೇಕ್ಷೆಯನ್ನು ಮಾಡದೆ ಧಾನ್ಯವನ್ನು ಬಡಜನಗಳಿಗೆ ಕೊಟ್ಟು ಕಾಪಾಡಿದ್ದು ಬಹಳ ಶ್ಲಾಘನೀಯವಾಗಿದೆ. ಆದರೆ ಬಡಜನಗಳಿಗಿಂತಲೂ ಬಡಜಾನುವಾರುಗಳ ಗತಿ ಹೇಳತೀರದು. ಇಂಥಾ ಕಾಲದಲ್ಲಿ ಭಗವಂತನು ಅಂಥಾ ಮೂಕಪ್ರಾಣಿಗಳಾದ ಜಾನುವಾರುಗಳ ಮೇಲಾದರೂ ದಯೆಗೊಂಡು ಮಳೆ, ಬೆಳೆಗಳನ್ನು ಸರಿಯಾಗಿ ನಡೆಯಿಸುವಂತೆ ಮಾಡಿ ಈ ರೀತಿಯಾಗಿ ಎಲ್ಲೆಲ್ಲಿಯೂ ಪ್ರಾಪ್ತವಾಗಿರುವ ಈ ಕ್ಷಾಮಸೂಚನೆಯನ್ನು ನಿವಾರಣೆಮಾಡಿ ಕಾಪಾಡಲಿ ಎಂದು ಹಾರೈಸುತ್ತಿರುವ, ಜನಾಭಿಮಾನಿ.

ಪ್ರೇಕ್ಷಣೀಯಸ್ಥಾನಗಳು.

ನಾನು ನಮ್ಮ ದೇಶದಿಂದ ಉತ್ತರ ಹಿಂದೂಸ್ಥಾನದ ಯಾತ್ರೆಯನ್ನು ಮುಗಿಸಿಕೊಂಡು ಬರಬೇಕೆಂಬ ಹೇತುವಿನಿಂದ ಫೆಬ್ರವರಿ ತಿಂಗಳಲ್ಲಿ ಹೊರಟು ಮುಂಬಯಿ, ಕಲಕತ್ತಾ, ದಿಲ್ಲಿ, ಆಗ್ರಾ, ಕಾಶಿ, ಪ್ರಯಾಗ, ಹರದ್ವಾರ ಮೊದಲಾದ ಸುಪ್ರಸಿದ್ಧ ಸ್ಥಾನಗಳನ್ನು ನೋಡಿ ನೇತ್ರಗಳನ್ನು ಸಫಲಮಾಡಿಕೊಂಡೆನೆಂದು ಹೇಳುವದರಲ್ಲಿ ಏನೂ ಸಂಶಯವಿಲ್ಲವು. ಮುಂಬಯಿಯಲ್ಲಿ ರಾಣೀಬಗೀಚ, ಹೆಡ್ ಪೋಷ್ಟ ಆಫೀಸ, ಟೌನಹಾಲ, ಬೋರಿಬಂದರಸ್ಟೇಶನ್ನ, ಅಪೋಲೋಬಂದರ, ಕುಲಾಬಾದೀಪಸ್ತಂಭ, ಟಂಕಶಾಲಾ ಮೊದಲಾದ ಸ್ಥಾನಗಳೂ, ಕಲಕತ್ತೆಯಲ್ಲಿ ಹೌರಾಸ್ಟೇಶನ್ನ, ಚಿಡಿಯಾಖಾನ, ಪದಾರ್ಥಸಂಗ್ರಹಾಲಯ, ಪಾರ್ಶ್ವನಾಥಮಂದಿರ, ಹೈಕೋರ್ಟ, ಕಾಲೀದೇವೀ ಮೊದಲಾದ ಸ್ಥಾನಗಳೂ, ದಿಲ್ಲಿಯಲ್ಲಿ ಚಾಂದನೀಚೌಕ, ಕುತುಬ್‌ಮಿನಾರ, ರಾಜಪಟ್ಟಾಭಿಷೇಕ ಮಂದಿರ ಮೊದಲಾದ ಸ್ಥಾನಗಳೂ, ಆಗ್ರಾದಲ್ಲಿ ಇಡೀ ಸೃಷ್ಟಿಯೊಳಗೆ ಸುಂದರವಾದ ತಾಜಮಹಾಲವೆಂಬ ಪ್ರಸಿದ್ಧಸ್ಥಾನವೂ, ಕಾಶಿಯಲ್ಲಿ ವಿಶ್ವನಾಥಮಂದಿರ ಅನ್ನಪೂರ್ಣಾಮಂದಿರ ವಿಶ್ವಾರಾಧ್ಯಮಹಾಸಂಸ್ಥಾನ (ಜಂಗಮವಾಡಿಮಠ) ಸಂಸ್ಕೃತಕಾಲೇಜ ಹಿಂದೂಕಾಲೇಜ ಗಂಗಾನದಿಯ ಪೂಲು ಇವೇ ಮೊದಲಾದ ಸ್ಥಾನಗಳೂ, ಪ್ರಯಾಗದಲ್ಲಿ ಕಿಲ್ಲೆ, ಗಂಗಾಯಮುನಾನದಿಯ ಸಂಗಮ, ಹೈಕೋರ್ಟ, ಇಂಡಿಯನ್‌ಪ್ರೆಸ್ಸ ಮೊದಲಾದ ಸ್ಥಾನಗಳೂ, ಹರದ್ವಾರದಲ್ಲಿ ಋಷಿಕುಲ, ಗುರುಕುಲ, ಗಂಗಾ ಮೊದಲಾದ ಸ್ಥಾನಗಳೂ ನೋಡಲು ಅತ್ಯಂತ ರಮಣೀಯಗಳಾಗಿರುತ್ತವೆ. ಇವುಗಳನ್ನು ನೋಡಿದ ಮನುಷ್ಯನ ಜನ್ಮವೇ ಭೂತಲದಲ್ಲಿ ಹುಟ್ಟಿದ್ದಕ್ಕೆ ಸಾರ್ಥಕವೆಂದು ತಿಳಿಯುತ್ತೇನೆ. ಈ ಸ್ಥಾನಗಳ ವರ್ಣನವನ್ನು ಮಾಡಲಿಕ್ಕೆ ನನ್ನ ಸೊಟ್ಟಲೇಖನಿಯು ಎಂದೂ ಸಮರ್ಥವಾಗಲಾರದು. ಆದರೂ ಆಯೆಲ್ಲಸ್ಥಾನಗಳ ವರ್ಣನದ ರಗಳೆಯಲ್ಲಿ ಬಿದ್ದು ಉದ್ದವಾಗಿ ಲೇಖನವನ್ನು ಬೆಳೆಸದೆ ಪ್ರಸ್ತುತದಲ್ಲಿ ನನ್ನ ಮನಸ್ಸನ್ನು ಆನಂದಾಬ್ಧಿಯಲ್ಲಿ ಮುಳುಗಿಸಿದ ಒಂದು ಪವಿತ್ರಸ್ಥಾನದ ವರ್ಣನವನ್ನು ಅಲ್ಪರೀತಿಯಿಂದ ಮಾಡಿ ಈ ಲೇಖನವನ್ನು ಮುಗಿಸುತ್ತೇನೆ. ವಾಚಕರೇ! ಆಸ್ಥಾನವಾವುದೆಂದರೆ "ಶ್ರೀಮತ್ಪರಮಪವಿತ್ರ ಕಾಶೀಕ್ಷೇತ್ರಾಂತರ್ಗತ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನವು" ಈ ಪರಮಪವಿತ್ರಸ್ಥಾನದ ಕಾಲನಿರ್ಣಯವನ್ನು ಮಾಡಲಿಕ್ಕೆ ಸುರರೇ ಸಮರ್ಥರಾಗುವದಿಲ್ಲವೆಂದಮೇಲೆ ಅಲ್ಪಮತಿಯಾದ ಈ ನರನ ಪಾಡೆಲ್ಲಿ? ಪರಮೇಶ್ವರನ ಈಶಾನಮುಖದಿಂದ ಜನಿಸಿದ ವಿಶ್ವಕರ್ಣ ಗಣಾಧೀಶ್ವರರು ಬೇರೆ ಬೇರೆ ಯುಗಗಳಲ್ಲಿ ಬೇರೆಬೇರೆ ಹೆಸರುಗಳಿಂದ ಈ ಭೂಮಿಯಲ್ಲಿ ಅವತರಿಸಿ ಆ ಮೂಲಕ ವೀರಶೈವ ಮತವನ್ನು ಸ್ಥಾಪಿಸಿ, ಕಾಶಿಯಲ್ಲಿ ಪೀಠವನ್ನು ಸ್ಥಾಪಿಸಿದರೆಂದು ಆಗಮಗಳು ಸಾರುತ್ತವೆ. ಅದರಂತೆ ಕಲಿಯುಗದಲ್ಲಿ ಆ ಗಣಾಧೀಶ್ವರರೇ ವಿಶ್ವಾರಾಧ್ಯರೆಂಬ ಹೆಸರಿನಿಂದ ಅವತರಿಸಿ ಪೀಠವನ್ನು ಸ್ಥಾಪಿಸಿದರು. ಸದ್ಯದಲ್ಲಿರತಕ್ಕ ಆ ಪೀಠವನ್ನು ಭೂಗರ್ಭಶಾಸ್ತ್ರಜ್ಞರು ಪರಿಶೀಲಿಸಿ ನೋಡಿದರೆ ನಾಲ್ಕುಸಾವಿರ ವರ್ಷಗಳ ಈಚಿನದೆಂದು ಹೇಳಲು ಯಾರೂ ಸಮರ್ಥರಾಗಲಾರರು. ಆ ಪೀಠದಲ್ಲಿ ಪ್ರವೇಶಿಸಿದ್ದಾದರೆ ಕೇವಲ ಕೈಲಾಸದಲ್ಲಿಯೇ ಹೋದಂತಾಗುತ್ತದೆ. ಈ ಕೈಲಾಸವನ್ನು ಬಿಟ್ಟು ಬೇರೊಂದುಕೈಲಾಸವಿಲ್ಲೆಂದು ಪ್ರತಿಯೊಬ್ಬ ಮನುಷ್ಯನಿಗೆ ನಿಶ್ಚಯಾತ್ಮಕ ಜ್ಞಾನವಾಗುತ್ತದೆ. ಎಂಥ ಕಠೋರನಾಸ್ತಿಕನಿದ್ದರೂ ಆ ಸ್ಥಾನವನ್ನು ನೋಡಿದಕೂಡಲೇ ತನ್ನಲ್ಲಿರತಕ್ಕ ನಾಸ್ತಿಕಧರ್ಮವನ್ನು ಬಿಟ್ಟು ಆಸ್ತಿಕಧರ್ಮವನ್ನು ಸ್ವೀಕರಿಸಿಯೇ ಹೋಗುತ್ತಾನೆಂದು ಹೇಳಲು ಏನೂ ಅಭ್ಯಂತರವಿಲ್ಲ. ಈ ಸಂಸಾರದಿಂದ ಮುಕ್ತನಾಗಬೇಕೆಂದು ಇಚ್ಛೆಯುಳ್ಳ ಸದ್ಭಕ್ತನಿಗೆ ಆ ಪೀಠದರ್ಶನೋಪಾಯದಹೊರತು ಬೇರೊಂದುಪಾಯವಿಲ್ಲವೆಂದು ನನಗಂತೂ ನಿಶ್ಚಯವಾಗಿ ತೋರುತ್ತದೆ. ಆ ಪವಿತ್ರಸ್ಥಾನದ ಹೆಸರಾದರೂ "ಕೈಲಾಸಮಂಟಪ" ವೆಂದೇ ಇರುತ್ತದೆ. ವಾಚಕರೇ, ಹೆಸರು ನಿಜವು! ನಿಜವು!! ಆ ಪೀಠದ ಹಿಂಭಾಗದಲ್ಲಿ ಆ ಪೀಠದ ಮೊದಲನೆಯ ಅಧಿಪತ್ಯವನ್ನು ಗ್ರಹಿಸಿದ ಶಿವಾಚಾರ್ಯರ ಸಮಾಧಿಯ ಸ್ಥಾನವಿರುತ್ತದೆ. ಆ ಸ್ಥಾನಕ್ಕಾದರೂ ಶಿವಲೋಕವೇ ಎಂದು ಅನ್ನಲಿಕ್ಕೆ ಏನೂ ಸಂಶಯವಿಲ್ಲ. ಆ ಸ್ಥಾನದ ಮಹಿಮೆಯು ಅತ್ಯಗಾಧವಾದದ್ದಿರುತ್ತದೆ. ಆ ಮಠಕ್ಕೆ ಜಯನಂದದೇವ, ಜಯರುದ್ರದೇವ, ಕೃಷ್ಣರಾಜ ಮೊದಲಾದ ಹಿಂದೂರಾಜರೂ, ಹಾಗೂ ಅಕಬರ, ಜಹಾಂಗೀರ, ಹುಮಾಯೂನ, ಔರಂಗಜೇಬ ಮೊದಲಾದ ಮುಸಲ್ಮಾನ ರಾಜರೂ ಕೊಟ್ಟ ದಾನಶಾಸನಗಳು ೩೦-೪೦ ರವರೆಗೆ ಇರುತ್ತವೆ. ಇವೆಲ್ಲವುಗಳಲ್ಲಿ ಅತ್ಯಂತ ಪ್ರಾಚೀನವಾದ ದಾನಶಾಸನವೆಂದರೆ ಜಯನಂದದೇವನದಿರುತ್ತದೆ. ಈ ಶಾಸನವು ೧೩೪೪ ವರ್ಷಗಳ ಪೂರ್ವಕಾಲದ್ದಿರುತ್ತದೆ. ಇವೇ ಮೊದಲಾದ ಪ್ರಾಚೀನದಾನಶಾಸನಗಳು ಇಲ್ಲಿಯವರೆಗೆ ಇದ್ದದ್ದನ್ನು ನೋಡಲಾಗಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪ್ರಭಾವವೇ ಮೂಲಕಾರಣವೆನ್ನಬೇಕಾಗುತ್ತದೆ. ಈ ಸ್ಥಾನಗಳಿಗಿಂತಲೂ ಮತ್ತೆರಡು ಗುಹಾಸ್ಥಾನಗಳು ಅತ್ಯಂತ ಮನೋಹರಗಳಾಗಿಯೂ ಅಗಾಧಮಹಿಮೆಯುಳ್ಳವುಗಳಾಗಿಯೂ ಪಾಪಿಜನರ ದೃಷ್ಟಿಗಳಿಗೆ ಬೀಳದವುಗಳಾಗಿಯೂ ಮಹಾಮಹಾ ಯೋಗಿಯೋಗಿನಿಯರಿಂದ ಸೇವ್ಯಗಳಾಗಿಯೂ ಇರುವವೆಂದು ಪ್ರಸಿದ್ಧವಾದ ಗಾಥಾ ಇರುತ್ತದೆ. ಆ ಪವಿತ್ರ ಗುಹಾಶ್ರಮಗಳು ಪೂರ್ವಕ್ಕೊಂದು ಪಶ್ಚಿಮಕ್ಕೊಂದು ಹೀಗೆ ಇರುತ್ತವೆ. ಈ ಆಶ್ರಮಗಳು ಕ್ರಮದಿಂದ ಶಿವಗಂಗಾಶ್ರಮ ಶಿವಗಂಗೇಶ್ವರಾಶ್ರಮಗಳೆಂಬ ಪುಣ್ಯಾಭಿಧಾನಗಳಿಂದ ಬಹುಕಾಲದಿಂದ ಮೆರೆಯುತ್ತಿರುವವು. ಇವೆರಡರಲ್ಲಿ ಶಿವಗಂಗಾಶ್ರಮವೇ ಹೋಗಲು ಬಹು ಪ್ರಯಾಸವುಳ್ಳದ್ದಾಗಿರುತ್ತದೆ. ಈ ಗುಹೆಗಳಲ್ಲಿ ಹೋಗಲಿಕ್ಕೆ ಮಾರ್ಗಗಳಾದರೂ ಉಂಟು. ನಮ್ಮಂಥವರು ನೋಡಬೇಕೆಂಬ ಹೇತುವಿನಿಂದ ಮಹತ್ತರವಾದ ಪ್ರಕಾಶವನ್ನು ಧರಿಸಿಕೊಂಡು ಒಳ್ಳೇ ಧೈರ್ಯದಿಂದಲೂ ಶೌರ್ಯದಿಂದಲೂ ಹೋದದ್ದಾದರೆ ಅರ್ಧದಾರಿಯವರೆಗೆ ಹೋಗುವದರೊಳಗಾಗಿ ನಮ್ಮಲ್ಲಿದ್ದ ಪ್ರಕಾಶವೇ ನಂದಿಹೋಗುವದು. ಅಂಥ ಪವಿತ್ರಸ್ಥಾನದ ದರ್ಶನವಾಗಬೇಕಾದರೆ ನಮ್ಮಂಥ ಪಾಪಿಗಳ ಹಾಗೂ, ಕೃತ್ರಿಮಪ್ರಕಾಶದ ಸಾಮರ್ಥ್ಯಕ್ಕೆ ಅಳವೇ? ಜ್ಞಾನಿಗಳ ಹಾಗೂ ಜ್ಞಾನಪ್ರಕಾಶದ ಸಾಮರ್ಥ್ಯಕ್ಕೆ ಸಾಧ್ಯವು. ಆ ಗುಹೆಯಲ್ಲಿ ಶಮದಮಾದಿಗುಣಗಳಿಗೆ ಸದನಸ್ವರೂಪರೂ ಕಾಮಕ್ರೋಧಾದಿಗಳನ್ನು ದೂರಮಾಡಿದವರೂ ಸಾಕ್ಷಾತ್ ಪರಶಿವಾವತಾರಿಗಳೂ ಆದ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠಾಧೀಶ ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಆಗಾಗ್ಗೆ ತಮ್ಮ ಅತ್ಯಗಾಧವಾದ ಜ್ಞಾನಜ್ಯೋತಿಯಿಂದ ಪ್ರವೇಶಿಸಿ, ಲಿಂಗಾನಂದವನ್ನನುಭವಿಸುವರೆಂದು ಅಲ್ಲಿಯವರು ಹೇಳುತ್ತಾರೆ. ವಾಚಕರೇ, ಸರ್ವರಿಗೂ ಅತ್ಯಂತ ಭಯದಾಯಕವಾದ ಆ ಗವಿಯಲ್ಲಿ ಪ್ರವೇಶಿಸಿ ತಮ್ಮ ಜ್ಞಾನಪ್ರಕಾಶವನ್ನು ಹೊರಗೆಡುಹುವಂಥ ಆ ಪೂಜ್ಯಪಾದ ಮಹಾನುಭಾವರನ್ನು ಎಷ್ಟು ಬಣ್ಣಿಸಿದರೂ ಅಲ್ಪವೇ ಸರಿ. ಇಂಥಿಂಥ ಮಹಾಜ್ಯೋತಿಗಳ ಪ್ರಭಾವದಿಂದಲೇ ನಾವೆಲ್ಲರೂ ಈ ಸಂಸಾರಯಾತ್ರೆಯನ್ನು ಸುಖರೂಪವಾಗಿ ತೀರಿಸಿಕೊಂಡು ತೆರಳುತ್ತೇವೆ. ಪೂರ್ವದಲ್ಲಿ ಆ ಗವಿಯೊಳಗೆ ಕೆಲಕೆಲವು ಮಹಿಮರು ನಿರಾಯಾಸದಿಂದ ಪ್ರವೇಶಿಸಿ ಯೋಗಸುಖವನ್ನು ಅನುಭವಿಸುತ್ತಿದ್ದರೆಂದು ದಂತಕಥೆಯುಂಟು. ಆಗಿನ ಕಾಲಕ್ಕೆ ಅತಿ ಸುಗಮವಾದ ಗುಹಾಪ್ರವೇಶವು ಕಲಿಕಾಲದ ಮಹಿಮೆಯಿಂದಲೋ ಏನೋ ಈಗ ಅತ್ಯಂತ ದುರ್ಗಮವಾಗಿರುತ್ತದೆ. ಆದರೂ ಈಗ ಆರು ವರ್ಷಗಳ ಪೂರ್ವದಲ್ಲಿ ನಾಗಪುರದ ಲಿಂಗಭಕ್ತನೆಂದು ಪ್ರಸಿದ್ಧಿಯನ್ನು ಪಡೆದ ಒಬ್ಬ ಯೋಗಿವರ್ಯನು ಮಠದಲ್ಲಿ ಬಂದಿದ್ದು ಆ ದುಸ್ತರವಾದ ಗವಿಯಲ್ಲಿ ತನ್ನ ಯೋಗಪ್ರಭಾವದಿಂದ ಪ್ರವೇಶಿಸಿ ಯೋಗನಿದ್ರಾನಂದವನ್ನು ಅನುಭವಿಸುತ್ತಿದ್ದನೆಂದು ಕಿಂವದಂತಿಯುಂಟು. ಈ ಯೋಗಿಗಳ ದರ್ಶನದಿಂದ ಮುಕ್ತಿಯು ಕರತಲಾಮಲಕದಂತೆ ಆಚರಿಸುವದೆಂದು ಹೇಳುವದರಲ್ಲಿ ಏನು ಸಂಶಯವು? ಆ ಯೋಗಿಗಳು ಈಗ ಎಲ್ಲಿಯೋ ಮಾಯವಾಗಿ ಹೋಗಿರುವರು. ಪುಣ್ಯವನ್ನು ಸಂಪಾದನಮಾಡಬೇಕೆಂಬ ಸಮುದ್ದೇಶದಿಂದ ಕಾಶೀಯಾತ್ರೆಯನ್ನು ಮಾಡುತ್ತಿರುವ ಸರ್ವಜನಾಂಗದವರೂ ಈ ಮುಖ್ಯಸ್ಥಾನಗಳನ್ನು ನೋಡಿಕೊಂಡು ಪುಣ್ಯದ ನಿಧಿಯನ್ನೇ ತಮ್ಮ ಸಂಗಡ ತೆಗೆದುಕೊಂಡು ಬರುವರೆಂಬದಾಗಿ ಪೂರ್ಣ ಆಶಿಸುತ್ತೇನೆ. ವಾಚಕರೇ, ಈ ಸ್ಥಾನಗಳನ್ನು ಪರಿಶೀಲಿಸಿ ನೋಡಿದವನೇ ಧನ್ಯನು! ಅವನೇ ಮುಕ್ತನು!! ಕೆ. ಎಸ್. ಅಂಗಡಿ. ಮಸೂರ.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

3 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಒಂದಾವರ್ತಿ ಪರೀಕ್ಷಿಸಿ ನೋಡಿರಿ. 38

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ! ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ. ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡುತ್ತೇವೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಸೆಪ್ಟಂಬರ್ ತಾ|| ೧ ರಿಂದ ೧೯೧೯ ನೆಯ ಸೆಪ್ಟಂಬರ್ ತಾ|| ೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೧ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಶ್ರಾವಣ ಬ|| ಏಕಾದಶಿಯಿಂದ ಭಾದ್ರಪದ ಶು|| ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಇಷ್ಟ
1	[1] ಭಾನು	ಏಕಾ	16-36	ಪುನ	45-12	16
2	ಸೋಮ	ದ್ವಾದ	15-47	ಪುಷ್ಯ	46-38	17
3	[2] ಮಂಗಳ	ತ್ರಯೋ	16-12	ಆಶ್ಲೇ	49-20	18
4	[3] ಬುಧ	ಚತು	17-55	ಮಘಾ	53-16	19
5	[4] ಗುರು	ಅಮಾ	20-48	ಪೂಫ	58-12	20
6	ಶುಕ್ರ	ಪಾಡ್ಯ	24-42	ಉಫ	60	21
7	[5] ಶನಿ	ಬಿದಿಗೆ	29-36	ಉಫ	4-36	22

(1) ದ್ವಾದಶೀ ತಿಥಿ, ಸರ್ವತ್ರೈಕಾದಶೀ. (2) ಮಾಸಶಿವರಾತ್ರಿ, ಮಂಗಳಗೌರೀವ್ರತಂ. (3) ಅಮಾವಾಸ್ಯಾ ತಿಥಿ, (ಪಾಕ್ಷಿಕಚತುರ್ದಶೀತಿಥಿ) (4) (ಪಾಕ್ಷಿಕಾ ಅಮಾವಾಸ್ಯಾತಿಥಿ). (5) ಕಲ್ಕ್ಯಜಯಂತಿ ಸಾಮಗೋಪಾಕರ್ಮ.

ಮೈಸೂರ್: ಶ್ರೀ. [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124. REGISTERED NO M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೀಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಲಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಸೆಪ್ಟಂಬರ್ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೩೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಜೇಬ ರುಮಾಲು 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ಪಿ. ಎ. ಕೃಷ್ಣ ಅಂಡ್ ಕೋ.,
30 3, ಇರುಳಪ್ಪನವೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
18 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
23 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 45

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಟ್ ಅಂಡ್ ಕೊ,
38 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಹಾರ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲಬಿನ್ನಹ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಸೂಚನೆ.

☛ ಪದ್ಧತಿಯ ಪ್ರಕಾರ ಗಣೇಶನ ಹಬ್ಬದುದ್ದೇಶದಿಂದ ಇದೇ ಸೆಪ್ಟಂಬರ್ ತಾರೀಖು ೧೫ ನೆಯ "ಮೈಸೂರ್ ಸ್ಟಾರ್" ಸಂಚಿಕೆಯು ಹೊರಡುವುದಿಲ್ಲವು.

ಮೈಸೂರು ಸ್ಟಾರ್.

೧೯೧೮ ನೆಯ ಇಸವಿ ಸೆಪ್ಟಂಬರ್ ತಾ|| ೮ ನೆಯ ಭಾನುವಾರ.

ಬಟ್ಟೆಯ ಬರ.

ಯೂರೋಪುಖಂಡದಲ್ಲಿ ಯುದ್ಧದ ಬೇಗೆಯಿಂದ ಜನರು ಸಂತಪ್ತರಾಗಿದ್ದಾರೆ. ನಮ್ಮದೇಶದವರು ಮಳೆಬೆಳೆಗಳಿಲ್ಲದೆಯೂ ಹಿಟ್ಟುಬಟ್ಟೆಗಳಿಲ್ಲದೆಯೂ ಸಂತಾಪ ಪಡುತ್ತಿದ್ದಾರೆ. ಹಿಂದಣ ಧಾತು ಈಶ್ವರ ಸಂವತ್ಸರಗಳ ಕ್ಷಾಮದ ಸ್ಥಿತಿಗಿಂತಲೂ ಈಗಣ ಸ್ಥಿತಿಯು ಭೀಕರವಾಗಿದೆ. ಆಗ ಆಹಾರ್ಯವಸ್ತುಗಳಿಗೆ ಮಾತ್ರ ಕ್ಷಾಮವಾಗಿದ್ದಿತು. ಈಗ ದವಸಗಳ ಜತೆಗೆ ಬಟ್ಟೆಬರೆ ಮೊದಲಾದ ಸಕಲಪದಾರ್ಥಗಳಿಗೂ ಕ್ಷಾಮಬಂದಿದೆ. ಪ್ರಜೆಗಳಿಗೆ ಮುಖ್ಯವಾಗಿ ಬೇಕಾದುವುಗಳೊಳಗೆ ಮೊದಲನೆಯದು ಆಹಾರ; ೨ ನೆಯದು ಹೊದಿಕೆ. ಇವೆರಡಕ್ಕೂ ಈಗ ತುಂಬಾ ದುರ್ಭಿಕ್ಷಬಂದು ಎಲ್ಲಕಡೆಯಿಂದಲೂ ಹಾಹಾಕಾರಗಳು ಕೇಳಬರುತ್ತಿವೆ. ರೂ. ಗೆ ೫ ಸೇರು ಜೋಳ ಮಾರುವುದನ್ನು ಯಾವಾಗಲೂ ಕೇಳಿದ್ದುದಿಲ್ಲ. ಈಗಣ ಬಟ್ಟೆಬರೆಗಳ ಬೆಲೆಯ ಹೆಚ್ಚುಗೆಯು ಎಂದೂ ಸಂಭವಿಸಿದುದಿಲ್ಲ. ಬಂಗಾಳಾದಲ್ಲಿ ಬಡಕುಟುಂಬಿಗಳು ನಗ್ನಾಂಗರಾಗಿಯೇ ಮನೆಗಳಲ್ಲಿ ವಾಸಮಾಡುತ್ತಿರುವರೆಂದೂ, ಗೋಣಿತಾಟುಗಳಿಂದಲೂ ಹರಕು ಚಿಂದಿಗಳಿಂದಲೂ ಮಾನವನ್ನು ಕಾಪಾಡಿಕೊಳ್ಳುತ್ತಿರುವರೆಂದೂ, ಹಲವರು ಈ ಕಷ್ಟವನ್ನು ಸೈರಿಸಲಾರದೆ ಪ್ರಾಣವನ್ನೇ ಕಳೆದುಕೊಂಡರೆಂದೂ ಕೇಳಿದರೆ ಯಾರಿಗೆತಾನೇ ಎದೆಯು ಬಿರಿಯುವುದಿಲ್ಲ? ಮದ್ರಾಸಾಧಿಪತ್ಯದಲ್ಲಿ ಕೆಲವುಕಡೆ ಅಂಗಡಿಗಳ ಸೂರೆಗಳು ಆರಂಭವಾಗಿರುತ್ತವೆ. ಪ್ರಜೆಗಳಿಗೆ ಈಗಣ ಕ್ಷಾಮವು ಬಹಳ ದುರ್ಭರವಾಗಿರುವುದೆಂಬುದರಲ್ಲಿ ಲೇಶವೂ ಸಂಶಯವಿಲ್ಲ. ಇಂಥ ಸ್ಥಿತಿಯಲ್ಲೂ ಕ್ಷಾಮನಿವಾರಣೆಯ ಕಾರ್ಯಗಳನ್ನು ಪ್ರಭುತ್ವದವರು ಆರಂಭಿಸದಿದ್ದರೆ ಅವರು ದೈವಾಗ್ರಹ ಲೋಕಾಗ್ರಹಗಳೆರಡಕ್ಕೂ ಪಾತ್ರರಾಗಬೇಕಾಗುವುದರಲ್ಲಿ ಸಂದೇಹವೇ ಇಲ್ಲ.

ಕಳೆದ ಸಲ ಸಾಮ್ರಾಜ್ಯ ನಿರ್ಮಾಣಸಭೆಯು ಕೂಡಿದ್ದಾಗ ಈ ದೇಶದ ದಾರಣೆವಾಸಿಗಳ ವಿಷಯದಲ್ಲಿ ತಕ್ಕ ಏರ್ಪಾಟನ್ನು ಮಾಡಿ ಪ್ರಜೆಗಳ ತೊಂದರೆಯನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡಲ್ಪಡುವುದೆಂದು ವೈಸ್ರಾಯರು ಅಪ್ಪಣೆ ಕೊಡಿಸಿದ್ದರು. ಅದರಂತೆ ಎಲ್ಲ ಪ್ರಾಂತಗಳಲ್ಲೂ ಈ ವಿಷಯ ನಿರ್ಧಾರಣಕ್ಕಾಗಿ ಪ್ರತ್ಯೇಕಾಧಿಕಾರಿಗಳನ್ನೇ ನಿಯಮಿಸಿ ಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ಆದರೆ ಅವರುಗಳ ಕಾರ್ಯವು ಮಂದವಾಗಿದೆ. ಅವು ಚುರುಕಾಗಿ ನಡೆದು ಪ್ರಜೆಗಳ ಕಷ್ಟವನ್ನು ನೀಗಿಸುವ ಸಹಾಯವನ್ನು ಆದಷ್ಟು ಬೇಗನೆ ಮಾಡಬೇಕಾಗಿದೆ.

ಇಂಡ್ಯಾ ಸರ್ಕಾರದವರು ಬಟ್ಟೆಬರೆಗಳ ಬೆಲೆಯ ನಿಗದಿ ಮಾಡುವ ವಿಷಯದಲ್ಲಿ ಹೇಗೆ ಪ್ರವರ್ತಿಸಬಹುದೆಂಬುದನ್ನು ನಿರ್ಧರಿಸಿ ವರದಿ ಮಾಡುವುದಕ್ಕಾಗಿ ಕಳೆದ ಮಾರ್ಚಿ ತಿಂಗಳಲ್ಲಿ ಒಂದು ಸಂಘ[illegible]ದ್ದರು. ಅದರಲ್ಲಿ ಹತ್ತಿಯ ಸರಕುಗಳ ವ್ಯಾಪಾರದ[illegible] ಅನುಭವವುಳ್ಳವರನ್ನೇ ಸೇರಿಸಿದ್ದರು. ಅವರು ಚೆನ್ನಾಗಿ ವಿಮರ್ಶೆಮಾಡಿ, ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ಕೊಟ್ಟಿರುತ್ತಾರೆ. ಅದನ್ನೆಲ್ಲಾ ಪರ್ಯಾಲೋಚಿಸಿ ಇಂಡ್ಯಾ ಸರ್ಕಾರದವರು ಈಗ ಒಂದು ಪ್ರಕಟನೆಯನ್ನು ಮಾಡಿರುತ್ತಾರೆ. ಅದರಲ್ಲಿ ವ್ಯಕ್ತವಾಗಿರುವುದೇನೆಂದರೆ—ಸ್ವದೇಶ ಯಂತ್ರಾಲಯಗಳಲ್ಲಿ ನಿರ್ಮಿತವಾಗುವ ಎಲ್ಲತೆರದ ಬಟ್ಟೆಗಳ ಬೆಲೆಯನ್ನೂ ನಿರ್ಧರಿಸುವುದು ಅಸಾಧ್ಯವಾದುದರಿಂದ, ಮುಖ್ಯವಾಗಿ ಬಡಬಗ್ಗರು ಉಪಯೋಗಿಸುವ ಪಂಚೆಗಳು ದುಪ್ಪಟಿಗಳು ಸೀರೆಗಳು ಸಂದರಖಾನೆಗಳು ಮೊದಲಾದ ಸಾಮಾನ್ಯ ಜಾತಿಯ ಬಟ್ಟೆಗಳ ಬೆಲೆಯನ್ನುಮಾತ್ರ ವಿಪರೀತವಾಗಗೊಡದಂತೆ ನಿರ್ಧರಿಸಬಹುದಾಗಿದೆಯಾದಕಾರಣ ಹಾಗೆ ಮಾಡಲಾಗುವುದೆಂದು ತಿಳಿಯಿಸಿರುತ್ತಾರೆ. ಇದಕ್ಕಾಗಿ ಪ್ರಭುತ್ವದವರಿಂದ ನಿಯಮಿಸಲ್ಪಡುವ ಕಂಟ್ರೋಲರ್ ಎಂಬ ಅಧಿಕಾರಿಯು ಆಯಾ ನೆಯ್ಗೆ ಯಂತ್ರಾಲಯಾಧಿಪತಿಗಳೊಡನೆ ಆಲೋಚಿಸಿ, ದೇಶದ ಸಾಮಾನ್ಯ ಪ್ರಜೆಗಳ ಉಪಯೋಗಕ್ಕೆ ಅತ್ಯವಶ್ಯಕವಾದ ಬಟ್ಟೆಗಳನ್ನೇ ಹೇರಳವಾಗಿ ನೆಯ್ಯುವುದಕ್ಕೆ ಏರ್ಪಡಿಸುವುದಲ್ಲದೆ, ಅವುಗಳ ನಿರ್ಮಾಣಕ್ಕೆ ತಗಲುವ ಬೆಲೆ ಮತ್ತು ಅವುಗಳ ಮೇಲೆ ಮಿತವಾದ ಲಾಭ ಇವಿಷ್ಟು ಗಿಟ್ಟುವಂತೆ ತಕ್ಕ ಬೆಲೆಯನ್ನು ಗೊತ್ತುಮಾಡುವರು. ಆ ಬೆಲೆಗೆ ಸರ್ಕಾರದವರೂ ಬಟ್ಟೆಗಳನ್ನು ತೆಗೆದು, ಕೊಂಡ ಬೆಲೆಗೇ ತಮ್ಮ ಅಂಗಡಿಗಳ ಮೂಲಕ ಮಾರಿಸುವರು, ಅಥವಾ ಅವರಿಂದ ನಿರ್ಣೀತವಾಗುವ ಬೆಲೆಗೆ ಯಾರು ಮಾರುವುದಕ್ಕೆ ಒಪ್ಪುವರೋ ಅವರಿಂದಲೂ ಮಾರಿಸುವರು. ಇಂಡ್ಯಾ ಸರ್ಕಾರದವರು ಇಂಥ ಏರ್ಪಾಟನ್ನು ಮಾಡಿದುದಕ್ಕಾಗಿ ಬಡಬಗ್ಗರ ಕೃತಜ್ಞತೆಗೆಲ್ಲಾ ಅವರು ವಿಶೇಷವಾಗಿ ಪಾತ್ರರು.

ಯುದ್ಧದ ಕಾರಣದಿಂದ ವಿದೇಶದ ಬಟ್ಟೆಬರೆಗಳು ಎದುವರೆಗೂ ನಮ್ಮದೇಶಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೂ ಸ್ವದೇಶದ ನೆಯ್ಗೆ ಯಂತ್ರಾಲಯಗಳೇ ವಿಶೇಷವಾಗಿ ದೇಶಕ್ಕೆ ಬೇಕಾದ ಬಟ್ಟೆಗಳನ್ನು ಒದಗಿಸಬೇಕಾಗಿದೆ. ಆ ಯಂತ್ರಾಲಯಾಧಿಪತಿಗಳೆಲ್ಲಾ ವಿಶೇಷಲಾಭಾಪೇಕ್ಷೆಯನ್ನಿಟ್ಟುಕೊಳ್ಳದೆ ಸರ್ಕಾರದ ಸದುದ್ದೇಶಕ್ಕೆ ಸಹಾಯಕರಾಗಿ ಕೆಲಸಮಾಡುತ್ತಾ ಬಂದರೆ ಬಟ್ಟೆಯ ಕ್ಷಾಮಬಾಧೆಯು ಪ್ರಜೆಗಳಿಗೆ ಸ್ವಲ್ಪ ಕಡಿಮೆಯಾಗಬಹುದು. ಭರತಖಂಡದಲ್ಲಿ ಕಳೆದವರ್ಷ ಎಲ್ಲ ಯಂತ್ರಾಲಯಗಳಲ್ಲೂ ೧೬೭ ಕೋಟಿ ಗಜಗಳಷ್ಟು ಬಟ್ಟೆಯು ನಿರ್ಮಿತವಾಗಿದೆ. ಇದರಮೇಲೆ ಯೂರೋಪಿನಿಂದಲೂ ಜಪಾನಿನಿಂದಲೂ ಕೂಡ ಕೋಟ್ಯಂತರ ಗಜಗಳ ಬಟ್ಟೆಯು ಬಂದಿದೆ. ಕಳೆದ ೨-೩ ವರ್ಷಗಳಿಂದ ಜಪಾನಿನಿಂದ ಬರುವ ಬಟ್ಟೆಯು ೧ಕ್ಕೆ ೭ ರಷ್ಟು ಹೆಚ್ಚಿಹೋಗಿದೆ. ಇಷ್ಟಾದರೂ ಈ ದೇಶಕ್ಕೆ ಸಾಕಾಗುವಷ್ಟು ಬಟ್ಟೆಯು ಒದಗುತ್ತಿಲ್ಲ. ಆದುದರಿಂದಲೇ ಬಟ್ಟೆಯ ಬೆಲೆಯು ಹೆಚ್ಚಿಹೋಗಿದೆ. ಯಂತ್ರದ ಮಗ್ಗಗಳ ಸಂಖ್ಯೆಯನ್ನು ಇನ್ನೂ ಅಧಿಕವಾಗಿ ಹೆಚ್ಚಿಸಿ, ಮನೆಮಗ್ಗಗಳ ಸಂಖ್ಯೆಯನ್ನೂ ವಿಪರೀತವಾಗಿ ವೃದ್ಧಿಗೊಳಿಸುತ್ತ ಬಂದರೆ ಮಾತ್ರ ಬಟ್ಟೆಯ ಬರವೂ ಬೆಲೆಯ ಹೆಚ್ಚುವಿಕೆಯೂ ತಗ್ಗಬಹುದೆಂದು ಕಾಣುತ್ತದೆ. ಅಲ್ಲದೆ ಯಂತ್ರದ ರಾಟೆಗಳು ನಮ್ಮದೇಶದಲ್ಲಿ ಹೆಚ್ಚಿಕೊಂಡ ಬಳಿಕ ಮನೆಮನೆಗಳಲ್ಲಿದ್ದ ಕೈರಾಟೆಗಳು ನಿರ್ನಾಮವಾಗಿ ಹೋಗಿರುತ್ತವೆ. ಹತ್ತಿಯಿಂದ ೮೦ನೆ ನಂ. ನೂಲಿನವರೆಗೂ ನಿರ್ಮಿಸಬಲ್ಲ ಕೆಲಸಗಾರರು ನಮ್ಮದೇಶದಲ್ಲಿದ್ದರು. ಈಗಣ ಮನೆಕೈಗಾರಿಕೆಯ ಶಾಖೆಯವರು ಈ ಭಾಗಕ್ಕೆ ವಿಶೇಷ ಗಮನಕೊಟ್ಟು ರಾಟೆ ಕೆಲಸವನ್ನು ವಿಶೇಷವಾಗಿ ಜನರಿಗೆ ಕಲಿಸಿಕೊಟ್ಟು, ಸರ್ವಜನಾಂಗದವರೂ ಹತ್ತಿಯಿಂದ ತಮ್ಮತಮ್ಮ ಮನೆಗಳಲ್ಲಿ ನೂಲನ್ನು ನಿರ್ಮಿಸುವಂತೆ ಏರ್ಪಡಿಸುವುದಾದರೆ ನೂಲಿಗೆ ಈಗ ಹೆಚ್ಚಿಕೊಂಡಿರುವ ಬೆಲೆಯು ತಗ್ಗಿ, ಅವುಗಳಿಂದ ನಿರ್ಮಿತವಾಗುವ ಬಟ್ಟೆಗಳ ಬೆಲೆಯೂ ತಗ್ಗಬಹುದಾಗಿದೆ. ಮನೆಕೈಗಾರಿಕೆಯ ಶಾಖೆಯವರು ಭೋಗ್ಯವಸ್ತುಗಳ ನಿರ್ಮಾಣಕ್ಕೇ ವಿಶೇಷ ಗಮನಕೊಟ್ಟು, ಈ ಶಾಖೆಗಾಗಿ ವ್ಯಯಮಾಡುವ ಹಣವನ್ನೂ ಜನಗಳು ಅವುಗಳ ಅಭ್ಯಾಸಕ್ಕೆ ಉಪಯೋಗಿಸುವ ಕಾಲವನ್ನೂ ಸಂಪೂರ್ಣ ಫಲವಾಗದಿರುವಂತೆ ಮಾಡುತ್ತಿರುವುದಕ್ಕೆ ಪ್ರತಿಯಾಗಿ, ವ್ಯವಸಾಯವು ಧಾನ್ಯಸಮೃದ್ಧಿಗೆ ಸಾಧಕವಾಗಿರುವ ಕಾರಣ ಅದು ಹೇಗೆ ಪ್ರೋತ್ಸಾಹಿಸಲ್ಪಡುತ್ತಿದೆಯೋ ಅದರಂತೆಯೇ ಉಡುಪಿಗೆ ಅತ್ಯವಶ್ಯಕವಾದ ನೆಯ್ಗೆಯ ವ್ಯಾಪಕತೆಗೆ ಮುಖ್ಯಸಾಧನವಾದ ನೂಲಿನ ನಿರ್ಮಾಣಕ್ಕೆ ಹೆಚ್ಚು ಅನುಕೂಲ್ಯವನ್ನೂ ಪ್ರೋತ್ಸಾಹವನ್ನೂ ಕಲ್ಪಿಸುವುದೂ ಅವಶ್ಯಕವಾಗಿರುವುದು. ಅಂತೂ ಇಂಡ್ಯಾ ಸರ್ಕಾರದವರು ಬಟ್ಟೆಬರೆಗಳ ಬೆಲೆಯ ನಿಗದಿಗಾಗಿ ಈಗ ತೆಗೆದುಕೊಂಡ ಶ್ರದ್ಧೆಯಿಂದ ತಕ್ಕಮಟ್ಟಿಗಾದರೂ ಬಡಬಗ್ಗರಿಗೆ ಉಪಯೋಗವಾಗುತ್ತದೆಂಬುದಕ್ಕೆ ಸಂಶಯವಿಲ್ಲ. ಈ ಸುದ್ದಿಯು ಪ್ರಕಟವಾದೀಚೆಗೆ ಪೇಟೆಗಳಲ್ಲಿ ಬಟ್ಟೆಬೆಲೆಯು ಸ್ವಲ್ಪ ಮಂಕಾಗುವುದಕ್ಕೆ ಆರಂಭವಾಗಿರುವುದು ಶುಭಚಿಹ್ನೆಯಾಗಿದೆ.

ಸೀಸದಕಡ್ಡಿಯ ಪರಿಶ್ರಮ.

ಸೀಸದಕಡ್ಡಿಗಳನ್ನು ನಿರ್ಮಿಸುವ ಒಂದು ಯಂತ್ರಾಲಯವನ್ನು ಮದ್ರಾಸು ಪ್ರಭುತ್ವದವರು ಸ್ಥಾಪಿಸಿ, ಮೂರು ವರ್ಷಗಳಿಂದಲೂ ನಡೆಯಿಸಿಕೊಂಡು ಬಂದರು. ಅದು ಈಗ ಸುಸ್ಥಿತಿಯಲ್ಲಿರುವುದನ್ನು ಕಂಡು ಅದನ್ನು ಪ್ರಜಾಧೀನಗೊಳಿಸಿ ಅದರ ಲಾಭವನ್ನು ಪ್ರಜೆಗಳು ಹೊಂದುವಂತೆ ಮಾಡಬೇಕೆಂದು ಆ ಸರ್ಕಾರದವರು ಪ್ರಯತ್ನಪಟ್ಟಿರುವುದು ಶ್ಲಾಘನೀಯವಾಗಿರುತ್ತದೆ. ಅದರಲ್ಲಿ ನಿರ್ಮಿತವಾದ ಸೀಸದ ಕಡ್ಡಿಗಳನ್ನು ೧೯೧೭ನೆ ಆಗಸ್ಟ್ ತಿಂಗಳಿಂದ ಮಾರುವುದಕ್ಕಾರಂಭಿಸಿದರು. ಕಳೆದ ಮಾರ್ಚಿ ತಿಂಗಳ ಕೊನೆಯವರೆಗೆ ಎಂದರೆ ೮ ತಿಂಗಳ ಕಾಲದಲ್ಲಿ ವೆಚ್ಚ ಕಳೆದು ೫೮೭೧ ರೂ. ಗಳ ಲಾಭವು ಬಂದಿರುವುದು. ಇದಕ್ಕೆ ಹಾಕಿರುವ ಮೂಲಧನವು ೫೦,೦೦೦ ರೂ. ಗಳಾಗಿರುವ ಕಾರಣ, ಬಂಡವಾಳದ ಮೇಲೆ ನೂರಕ್ಕೆ ೨೦ ಕ್ಕಿಂತ ಹೆಚ್ಚಾಗಿಯೇ ಲಾಭವು ಬಂದಂತಾಯಿತು. ಮೇಲೆ ಕಂಡ ೮ ತಿಂಗಳ ಕಾಲದಲ್ಲಿ ೭೫೯೯ ಗ್ರೋಸು ಸೀಸದಕಡ್ಡಿಗಳು ಅಲ್ಲಿ ನಿರ್ಮಿತವಾದುವು. ಇದುವರೆಗೆ ಆ ಯಂತ್ರಾಲಯದ ಕೆಲಸದಲ್ಲಿ ನುರಿತಿರುವ ಜನರು ಆ ಪರಿಶ್ರಮದಲ್ಲಿ ಚೆನ್ನಾಗಿ ಕೌಶಲವನ್ನು ಪಡೆದಿದ್ದಾರೆ. ಅಲ್ಲಿ ಕಾಪಿಂಗ್ ಸೀಸದಕಡ್ಡಿ ಮೊದಲಾದ ಎಲ್ಲ ತೆರದುವುಗಳೂ ನಿರ್ಮಿತವಾಗುತ್ತವೆ. ರಂಗಿನ ಸೀಸದಕಡ್ಡಿಗಳನ್ನು ನಿರ್ಮಿಸುವುದಕ್ಕೆ ಪ್ರಯತ್ನಗಳು ಮಾಡಲ್ಪಟ್ಟಿವೆ. ಹೀಗೆ ಫಲೋನ್ಮುಖವಾಗಿರುವ ಈ ಪರಿಶ್ರಮವನ್ನು ಇನ್ನೂ ಅಭಿವೃದ್ಧಿಗೆ ತರಲಪೇಕ್ಷಿಸುವ ಮತ್ತೂ ಅದಕ್ಕೆ ಸಮರ್ಥರಾಗಿರುವ ತಮ್ಮ ಅಧಿಪತ್ಯದ ಯಾರಿಗಾದರೂ ಅದನ್ನು ಮಾರಿಬಿಡಬೇಕೆಂದು ಮದ್ರಾಸು ಸರ್ಕಾರದವರು ನಿರ್ಣಯಿಸಿದ್ದಾರೆ. ಕಾರ್ಯವನ್ನು ಹದಕ್ಕೆ ತಂದು ಫಲೋನ್ಮುಖವಾದಾಗ ಅದನ್ನು ಪ್ರಜೆಗಳಿಗೆ ವಹಿಸಿಕೊಡುವ ಏರ್ಪಾಟಿನಿಂದ, ಪರಿಶ್ರಮಗಳೆಂದರೆ ನಷ್ಟವಾಗಬಹುದೆಂದು ಹೆದರಿ ಹಿಂದೆಗೆಯುತ್ತಿರುವ ಧನಿಕರುಗಳಿಗೆ ಧೈರ್ಯಹುಟ್ಟಲು ಮಾರ್ಗವಾಗುವುದು. ಇನ್ನುಮುಂದೆ ಯಾರಾದರೂ ಧನಿಕರು ಆ ಯಂತ್ರಪರಿಕರಗಳನ್ನು ಕೊಂಡು ಸ್ವತಂತ್ರವಾಗಿ ನಡೆಯಿಸುತ್ತ ಬಂದರೆ ಅನುಕೂಲವಾದ ಲಾಭವು ಗಿಟ್ಟುವುದೆಂಬುದಕ್ಕೆ ಸಂಶಯವಿಲ್ಲ. ಜರ್ಮನಿ ಆಸ್ಟ್ರಿಯಾ ದೇಶಗಳ ಉತ್ತಮವಾದ ಸೀಸದಕಡ್ಡಿಗಳು ನಮ್ಮಲ್ಲಿಗೆ ಬರುವುದು ನಿಂತುಹೋದಬಳಿಕ ಜಪಾನ್ ದೇಶದ ಒರಟೊರಟಾದ ಸೀಸದಕಡ್ಡಿಗಳು ನಮ್ಮ ದೇಶದ ಎಲ್ಲ ಕಡೆಗೂ ಹರಡಿಕೊಂಡಿವೆ. ಗತಿಯಿಲ್ಲದುದರಿಂದ ಹೆಚ್ಚು ಬೆಲೆಯನ್ನಾದರೂ ಕೊಟ್ಟು ಜನರು ಅವನ್ನೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಮದ್ರಾಸಿನ ಮೇಲೆಕಂಡ ಯಂತ್ರಾಲಯದ ಕಡ್ಡಿಗಳು ಜಪಾನ್‌ದೇಶದ ಸೀಸಕಡ್ಡಿಗಳಿಗಿಂತಲೂ ಮೃದುವಾಗಿಯೂ ಚೆನ್ನಾಗಿ ಹತ್ತತಕ್ಕುವಾಗಿಯೂ ಬೆಲೆಯಲ್ಲಿ ಸುಲಭವಾಗಿಯೂ ಇರುತ್ತವೆಯಂತೆ.

ನಮ್ಮ ದೇಶದ ಸಂಪದಭ್ಯುದಯ ಸಮಾಜದ ಕೈಗಾರಿಕೆಯ ಶಾಖೆಯವರು ಈ ಯಂತ್ರಗಾರಿಕೆಯ ಕೆಲಸವನ್ನು ನಮ್ಮ ದೇಶದಲ್ಲೂ ಆರಂಭಿಸಲು ಸುಕೂಲವೋ ಹೇಗೆಂಬುದನ್ನು ಆಲೋಚಿಸಿ ಪ್ರಯತ್ನಿಸಬಹುದಾಗಿದೆ. ಅದಕ್ಕೆ ಬೇಕಾದ ಮರಗಳು ನಮ್ಮ ಕಾಡುಗಳಲ್ಲಿ ಸಿಕ್ಕುವುವೆಂಬುದು ವಸ್ತುಪ್ರದರ್ಶನಶಾಲೆಯಲ್ಲಿಡಲ್ಪಟ್ಟಿದ್ದ ಮಾದರಿಗಳಿಂದ ವ್ಯಕ್ತವಾಗಿರುತ್ತದೆ. ಅದಕ್ಕೆ ಬೇಕಾದ ಸೀಸವನ್ನು ಮದ್ರಾಸು ಕಾರ್ಖಾನೆಯವರು ಹೇಗೆ ಒದಗಿಸಿಕೊಳ್ಳುತ್ತಿರುವರೋ ಅದರಂತೆ ಇವರೂ ಮಾಡುವುದಾದರೆ ಈ ಪ್ರಯತ್ನವು ಲಾಭಕರವಾಗಿಯೂ ಶಾಶ್ವತವಾಗಿಯೂ ಜರುಗಬಹುದು. ಈ ವಿಷಯವನ್ನು ಪರಿಶ್ರಮ ಶಾಖೆಯವರು ಗಮನಿಸಬೇಕೆಂದು ಸೂಚಿಸುತ್ತೇವೆ.

ಮ್ಯು|| ಕೌನ್ಸಿಲರುಗಳು.

ಹಿಂದುಳಿದ ಜನವರ್ಗಗಳವರ ವಿಜ್ಞಾಪನಪತ್ರಿಕೆಗೆ ಶ್ರೀಮನ್ಮಹಾರಾಜರವರು ಉತ್ತರವನ್ನು ಕೊಡುವಾಗ್ಗೆ ಪ್ರತ್ಯೇಕ ಜನವರ್ಗಗಳ ಪ್ರಾತಿನಿಧ್ಯವನ್ನು ಕೊಡುವುದು ಅಸಾಧ್ಯವಾದರೂ ಲೋಕಲ್‌ಬೋರ್ಡು ಮೊದಲಾದುವುಗಳಲ್ಲೆಲ್ಲಾ ಎಲ್ಲ ಜನವರ್ಗಪ್ರಾತಿನಿಧ್ಯವೂ ಬರುವಂತೆ ಅವರವರುಗಳು ತಮ್ಮತಮ್ಮವರಿಗೆ ಓಟುಗಳನ್ನು ಕೊಟ್ಟುಕೊಳ್ಳಬಹುದೆಂದೂ, ಒಂದು ವೇಳೆ ಯಾವ ಜನವರ್ಗದವರಿಗೆ ಪ್ರಾತಿನಿಧ್ಯವು ತಪ್ಪಿಹೋಗುವುದೋ ಅಂಥವರಿಗೆ ಪ್ರಾತಿನಿಧ್ಯವನ್ನು ಸರ್ಕಾರದವರು ನಾಮಿನೇಷನ್ನಿನಮೂಲಕ ಉಂಟುಮಾಡಿಕೊಡುವರೆಂದೂ ಅಪ್ಪಣೆಕೊಡಿಸಿದ್ದರಷ್ಟೆ. ಸಂಸ್ಥಾನದಲ್ಲಿ ಈ ವರ್ಷ ಹೊಸದಾಗಿ ನಡೆದಿರುವ ಮ್ಯು|| ಬೋರ್ಡು ಮೊದಲಾದುವುಗಳ ಸಭಿಕರ ಆರಿಸುವಿಕೆಯಲ್ಲಿ ನಾಮಿನೇಷನ್ನಿನಲ್ಲೂ ಮೇಲೆ ಕಂಡ ಅಪ್ಪಣೆಯ ಫಲಿತಾರ್ಥವು ಚೆನ್ನಾಗಿ ವ್ಯಕ್ತವಾಗಿರುತ್ತದೆ. ಇದಕ್ಕಾಗಿ ನಾವು ಸಂತೋಷಿಸುತ್ತೇವೆ. ಪ್ರತಿ ಜನವರ್ಗಕ್ಕೂ ಪ್ರಾತಿನಿಧ್ಯವನ್ನು ಕೊಡುವುದು ಅಸಾಧ್ಯವೆಂದು ಹೇಳಲ್ಪಡುತ್ತಿದ್ದರೂ ಅದು ಇರಬೇಕಾದುದು ಯುಕ್ತವೆಂದು ಶ್ರೀಮನ್ಮಹಾರಾಜರ ಅಪ್ಪಣೆಯಿಂದಲೂ, ಈಗ ನಡೆದಿರುವ ಏರ್ಪಾಟಿನಿಂದಲೂ ಸುವ್ಯಕ್ತವಾಗಿರುತ್ತದೆ. ಎಲ್ಲ ಜನವರ್ಗಗಳೂ ಬೋರ್ಡುಗಳ ಮೂಲಕ ದೇಶಹಿತವನ್ನು ಸಾಧಿಸಿಕೊಳ್ಳುವುದಕ್ಕೆ ತಮ್ಮ ನಂಬುಗೆಗೆ ಪಾತ್ರರಾರೋ ಅಂಥವರನ್ನು ಗೊತ್ತುಮಾಡಿಕೊಂಡು, ಅಂಥವರುಗಳಿಗೇ ತಮ್ಮ ಓಟುಗಳನ್ನು ಕೊಟ್ಟುಕೊಳ್ಳಬೇಕೆನ್ನುವಷ್ಟು ಎಚ್ಚರುಗೊಂಡು ಕೆಲಸಮಾಡುತ್ತ ಬಂದರೆ, ಪ್ರತ್ಯೇಕಪ್ರಾತಿನಿಧ್ಯಕ್ಕಾಗಿ ಪ್ರತ್ಯೇಕಪ್ರಾರ್ಥನೆಗಳನ್ನು ಮಾಡಬೇಕಾದ ಅವಶ್ಯಕತೆಯೇ ತಪ್ಪಿಹೋಗುವುದು.

ಈ ಸಲ ರಾಜಧಾನಿಯಲ್ಲಿ ನಡೆದ ಮ್ಯುನ್ಸಿಪಲ್ ಕೌನ್ಸಿಲರ ಆರಿಸುವಿಕೆಯೂ, ಮತ್ತೂ ಸರ್ಕಾರದಿಂದ ನಡೆಯಿಸಲ್ಪಟ್ಟಿರುವ ನಾಮಿನೇಷನ್ನೂ ಕೂಡ ದೇಶದ ಎಲ್ಲ ಮ್ಯುನ್ಸಿಪಾಲಿಟಿಗಳಿಗೂ ಮೇಲುಪಂಕ್ತಿಯಾಗಿದೆಯೆಂದು ನಾವು ಎಣಿಸುತ್ತೇವೆ. ಪ್ರಜೆಗಳ ಆರಿಸುವಿಕೆಯಿಂದ ಯಾವ ಪ್ರಮುಖಜನವರ್ಗಕ್ಕೆ ತಕ್ಕಷ್ಟು ಪ್ರಾತಿನಿಧ್ಯವಿಲ್ಲದೆ ಹೋಗಿದ್ದಿತೋ ಅದನ್ನು ಗೊತ್ತುಮಾಡಿ, ಅಂಥ ಲೋಪವನ್ನು ನಾಮಿನೇಷನ್ನಿನ ಮೂಲಕ ಪರಿಹರಿಸಿಕೊಡುವುದರಲ್ಲಿ ಅಧಿಕಾರಿಗಳು ತೋರಿಸಿದ ನಿಷ್ಪಕ್ಷಪಾತಮತಿಯು ಶ್ಲಾಘನೀಯವಾಗಿದೆ. ಇಷ್ಟುದಿವಸವೂ ಚುನಾವಣೆಯಲ್ಲೂ ನಾಮಿನೇಷನ್ನಿನಲ್ಲೂ ಕೂಡ ಒಂದೇ ಒಂದು ಜನವರ್ಗದ ಪ್ರಜೆಗಳೇ ವಿಶೇಷವಾಗಿ ಬರುತ್ತಿದ್ದರು. ಈ ಸಲ ಅದು ಬಲುಮಟ್ಟಿಗೆ ತಪ್ಪಿದೆ. ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲ್ಲಿಗೆ ೨ ತೆರದಿಂದಲೂ ಏರ್ಪಟ್ಟ ಸಭಿಕರುಗಳಲ್ಲಿ ಮಹಮ್ಮದೀಯರಲ್ಲಿ ೩, ಅರಸುಗಳಲ್ಲಿ ೨, ಒಕ್ಕಲಿಗರಲ್ಲಿ ೨, ವೀರಶೈವರಲ್ಲಿ ೨, ವೈಶ್ಯರಲ್ಲಿ ೧, ಕುರುಬರಲ್ಲಿ ೧, ಜೈನರಲ್ಲಿ ೧, ಕುಂಚಟಿಗರಲ್ಲಿ ೧, ಕ್ರೈಸ್ತರಲ್ಲಿ ೨, ದರ್ಜಿಯವರಲ್ಲಿ ೧, ದೇವಾಂಗದವರಲ್ಲಿ ೧, ಮೊದಲಿಯಾರರಲ್ಲಿ ೧, ಅರುವತ್ತೊಕ್ಕಲು ಶೆಟ್ಟರಲ್ಲಿ ೧, ತ್ರಿಮಸ್ಥರಲ್ಲಿ ೧೦ ಮಂದಿಗಳು ಬಂದಿರುವರು. ಪ್ರಮುಖಜನವರ್ಗಗಳ ಪ್ರತಿನಿಧಿಗಳಲ್ಲಿ ಬಹುಭಾಗವು ಈ ಕೌನ್ಸಿಲ್ಲಿನಲ್ಲಿ ಸೇರಿದಂತಾಯಿತು. ಇಂಥ ಸ್ಥಿತಿಯೇ ಬೆಂಗಳೂರಿನಲ್ಲೂ ಈಗಣ ಹೊಸಕೌನ್ಸಿಲ್ ನಿರ್ಮಾಣದಲ್ಲಿ ಉಂಟಾದೀತೆಂಬುದಕ್ಕೆ ಸಂಶಯವಿಲ್ಲ. ಸರ್ವಪ್ರಜಾವರ್ಗದವರೂ ಸ್ಥಳಿಕ ಸ್ವರಾಜ್ಯಕಾರ್ಯವನ್ನು ನಿರ್ವಾಹಮಾಡುವುದರಲ್ಲಿ ಮುಖವರ್ಜಿಯಿಂದ ಪ್ರಯತ್ನಪಟ್ಟು, ಸಾಮರ್ಥ್ಯವನ್ನು ವ್ಯಕ್ತಪಡಿಸಿ, ಉಳಿದ ರಾಜಕಾರ್ಯನಿರ್ವಾಹಕ್ಕೂ ಅರ್ಹರೆನಿಸಿಕೊಂಡು, ದೇಶಕ್ಷೇಮಲಾಭವನ್ನು ಸರ್ವರೂ ಸಮನಾಗಿ ಹೊಂದುವುದಕ್ಕೆ ದಾರಿಮಾಡುವವರಾಗಲೆಂದು ಕೋರುವೆವು.

ಯುದ್ಧವಾರ್ತೆಯು.

ಪಶ್ಚಿಮ ರಣರಂಗದಲ್ಲಿ ನಮ್ಮವರ ವಿಜಯ ಪರಂಪರೆಯು ಇನ್ನೂ ನಡೆಯುತ್ತಲೇ ಇದೆ. ಬಾಪಾಂ ಎಂಬ ಮುಖ್ಯ ದುರ್ಗಪಟ್ಟಣವನ್ನು ನಮ್ಮವರ ಹಸ್ತದಿಂದ ಶತ್ರುಗಳು ಕಿತ್ತುಕೊಂಡಿದ್ದರು. ಆದರೆ ಮರಳಿ ಅದು ನಮ್ಮವರಿಗೆ ಸಂಪೂರ್ಣವಾಗಿ ವಶವಾಯಿತು. ಬಳಿಕ ಅದರಂತೆಯೇ ಮುಖ್ಯಸ್ಥಲವಾಗಿದ್ದ ಪೆರೋನಿಪಟ್ಟಣವೂ ನಮ್ಮವರ ವಶವಾಯಿತು. ಈಚೆಗೆ ಲೆನ್ಸ ಪಟ್ಟಣವೂ ಕೂಡ ವಶವಾದ ಸುದ್ದಿಯು ಬಂದಿದೆ. ಇವೆಲ್ಲಾ ಒಂದಕ್ಕಿಂತ ಒಂದು ಮಹತ್ತರವಾದ ಸ್ಥಳಗಳು. ಲೋಹಮಾರ್ಗಗಳ ಕೂಡು ದಾಣಗಳು ಬಲವತ್ತರವಾದ ದುರ್ಗಗಳಿಂದ ರಕ್ಷಿತವಾಗಿದ್ದುವುಗಳು. ಈ ಮುಖ್ಯ ಪಟ್ಟಣಗಳೇ ಅಲ್ಲದೆ ಅವುಗಳ ಸುತ್ತುಮುತ್ತಣ ನೂರಾರು ಗ್ರಾಮಗಳನ್ನೂ ಕಾಡುಗಳನ್ನೂ ಗುಡ್ಡಗಳನ್ನೂ ಸಹ ನಮ್ಮವರು ವಶಪಡಿಸಿಕೊಂಡಿರುವರು. ಕಳೆದವಾರ ಕನಿಷ್ಠ ಪಕ್ಷ ೩೦ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಶತ್ರುಸೈನಿಕರನ್ನು ನಮ್ಮವರು ಸೆರೆಹಿಡಿದಿರುವರು. ಲೆನ್ಸಿನ ಬಳಿಯಣ ಯುದ್ಧದಲ್ಲಿ ತಾ|| ೨ನೆ ದಿನವೊಂದರಲ್ಲೇ ಬಹುಶಃ ೧೦ ಸಾವಿರ ಮಂದಿಗಳನ್ನು ಸೆರೆಹಿಡಿದಿದ್ದಾರೆ. ಉತ್ತರದಲ್ಲಿರುವ ವೈಪ್ರ್ಸ್ಸಿನಿಂದ ಹಿಡಿದು ದಕ್ಷಿಣದಲ್ಲಿರುವ ರೀಮ್ಸ್ ಪಟ್ಟಣದ ವರೆಗಣ ಸೇನಾಪಂಕ್ತಿ ಯುದ್ಧಕ್ಕೂ ಮಿತ್ರಮಂಡಲಿಯವರ ಪುರೋಗಮನವು ಅವಿಚ್ಛಿನ್ನವಾಗಿ ಸಾಗುತ್ತಲೇ ಇದೆ. ಕಳೆದ ಮಾರ್ಚಿ ಏಪ್ರಿಲ್ ತಿಂಗಳುಗಳ ಮಹಾಯುದ್ಧದಲ್ಲಿ ಶತ್ರುಗಳು ಹಿಡಿದುಕೊಂಡಿದ್ದ ಪುರಗ್ರಾಮಗಳೆಲ್ಲಾ ನಮ್ಮವರ ವಶವಾಯಿತೆಂತಲೇ ಹೇಳಬಹುದಾಗಿದೆ. ಈಗ ನಮ್ಮವರು ಹಿಂಡನ್ಬರ್ಗ್ ಪಙ್ತಿಗೆ ನುಗ್ಗುತ್ತಿದ್ದಾರೆ. ಡ್ರೋಕೋರ್ಟ್ ಕ್ವೇಂಟ್ ಪಙ್ತಿಯು ೬ ಮೈಲಿಯಗಲಕ್ಕೆ ಭೇದಿಸಲ್ಪಟ್ಟಿದೆ. ಮೌಂಟ್ ಕೆಮ್ಮೇಲನ್ನು ಮರಳಿ ನಮ್ಮವರು ಸ್ವಾಧೀನಪಡಿಸಿಕೊಂಡರು. ಗಿವೆಂಚಿ, ಲೀಸು, ಲಾಬಾಸಿಗಳ ಪೂರ್ವದಲ್ಲೂ ಉತ್ತರದಲ್ಲೂ ಇಂಗ್ಲೀಷ್ ಸೈನ್ಯವು ನುಗ್ಗುತ್ತಿದೆ. ಫ್ರೆಂಚರು ದಕ್ಷಿಣದಲ್ಲಿ ವೆರ್ನಿ, ಸೆರ್ನಿ ಮೊದಲಾದ ಸ್ಥಳಗಳನ್ನು ಹಿಡಿದುಕೊಂಡು ಮುಂದಕ್ಕೆ ನುಗ್ಗುತ್ತಿದ್ದಾರೆ. ಇಂಗ್ಲೀಷರೂ ಫ್ರೆಂಚರೂ ತಮ್ಮ ಬಲಾಧಿಕ್ಯದಿಂದ ನಮ್ಮನ್ನು ಅರ್ರಾಸು ಕಾಂಬ್ರೈ ಮಾರ್ಗಗಳ ಪಕ್ಕದಲ್ಲೂ, ಎಯಿಲೆಟ್ಟೆ ಪ್ರಾಂತದಲ್ಲೂ ಹಿಂದಕ್ಕೆ ನೂಕಿದರೆಂದು ಶತ್ರುಗಳೇ ಪ್ರಕಟಿಸಿಕೊಂಡಿದ್ದಾರೆ. ಸೆಂಟ್‌ಕ್ವಿಟನ್ನಿನ ಹತ್ತಿರ ಶತ್ರುಗಳು ೧೦ ಸಲ ಮಾಡಿದ ಪ್ರತಿಯುದ್ಧವನ್ನು ಆಸ್ಟ್ರೇಲಿಯನ್ ಸೈನಿಕರು ಮಹಾವೀರಾವೇಶದಿಂದ ಧ್ವಂಸಗೊಳಿಸಿ ಮಿತಿಯಿಲ್ಲದಷ್ಟು ಶತ್ರುಗಳ ಹೆಣದ ರಾಶಿಯನ್ನು ಗುಡ್ಡೆಗೆಡಹಿ ಸೆಂಟ್‌ಕ್ವಿಟನ್ನಿನಲ್ಲಿ ಸ್ವಲ್ಪಭಾಗವನ್ನು ಹಿಡಿದಿರುವರು. ಅಲ್ಲಿ ಜನರಲ್ ಮಾಂಜಿನ್‌ರವರ ಸೈನ್ಯಕ್ಕೂ ಶತ್ರುಗಳ ೧೭ ತರಗತಿಯ ಪ್ರಮುಖ ಸೈನ್ಯಗಳಿಗೂ ಈಗ ಕಾದುಕಾಳಗವಾಗುತ್ತಲಿದೆ. ಈ ರಂಗದಲ್ಲಿ ಶತ್ರುಗಳಿಗೆ ಇದೇ ಮುಖ್ಯಸ್ಥಾನವು. ಇದನ್ನು ಬಿಡದೆ ಕಾಪಾಡಿಕೊಳ್ಳಲಿಕ್ಕಾಗಿ ಜರ್ಮನ್ ಸೇನಾನಿಗಳು ಪ್ರಬಲ ಪ್ರಯತ್ನಮಾಡಿದ್ದಾರೆ. ಈ ಸ್ಥಳದ ಪರ್ಯವಸಾನವು ಹೇಗಾಗುವುದೋ ಅದರಮೇಲೆ ಮುಂದಣ ಜಯಾಪಜಯಗಳು ಗೊತ್ತಾಗುವಂತಿರುವುವು. ಈಬಳಿಯಲ್ಲೇ ಶತ್ರುಗಳು ಮಹತ್ತರವಾದ ಪ್ರತಿಯುದ್ಧವನ್ನು ಮಾಡಿ ಮಿತ್ರಮಂಡಲಿ ಸೈನ್ಯವನ್ನು ಎಲ್ಲಾ ಪಕ್ಕದಲ್ಲೂ ಸುತ್ತುವರಿಯಬೇಕೆಂದಿರುವರೆಂದು ಹೇಳಿಕೊಳ್ಳುತ್ತಾರೆ. ಆದರೆ ಜನರಲ್ ಫಾಕ್‌ಮಾಂಜಿನ್ ಮೊದಲಾದ ಸೇನಾಪತಿಗಳ ಪ್ರತಿಭೆಯು ಶತ್ರುಗಳ ಉದ್ದೇಶವನ್ನು ಎಂದಿಗೂ ಸಾಗಗೊಳಿಸಲಾರದು.

ಇಂಗ್ಲೀಷರ ೩ನೆ ಪಟಾಲವೊಂದೇ ಕಳೆದ ಆಗಸ್ಟ್ ತಾ|| ೨೧ ರಿಂದ ಆ ತಿಂಗಳ ಕೊನೆಯವರೆಗೆ ಶತ್ರುಗಳ ಕಡೆಯ ೧೦೦ ಫಿರಂಗಿಗಳನ್ನೂ ೧೫ ಸಾವಿರ ಮಂದಿ ಶತ್ರುಸೈನಿಕರನ್ನೂ, ಅವರ ೧೫ನೆ ಪಟಾಲವು ಆಗಸ್ಟ್ ತಾ|| ೨೬ ರಿಂದ ಕೊನೆಯವರೆಗೆ ೨೬ ಫಿರಂಗಿಗಳನ್ನೂ, ೮ ಸಾವಿರ ಮಂದಿ ಶತ್ರುಸೈನಿಕರನ್ನೂ ಹಿಡಿದುಕೊಂಡಿರುವರು. ಫ್ರೆಂಚ್‌ಸೈನಿಕರುಗಳೇ ಜುಲೈ ತಾ|| ೧೫ ರಿಂದ ಆಗಸ್ಟ್ ತಾ|| ೩೧ ರವರೆಗೆ ೭೫೫೦೦ ಮಂದಿ ಶತ್ರುಸೈನಿಕರನ್ನೂ ೭೦೦ ಫಿರಂಗಿಗಳನ್ನೂ ಹಿಡಿದುಕೊಂಡಿರುವರು. ಮಿತ್ರಮಂಡಲಿಯವರೆಲ್ಲಾ ಜುಲೈ ತಾ|| ೧೫ ರಿಂದ ಆಗಸ್ಟ್ ತಾ|| ೩೧ ರ ವರೆಗೆ ೧೨೮೩೦೦ ಮಂದಿ ಶತ್ರುಸೈನಿಕರನ್ನೂ (ಇವರಲ್ಲಿ ೨೬೭೪ ಮಂದಿ ಸೈನಿಕೋದ್ಯೋಗಿಗಳು) ೨೦೬೯ ದೊಡ್ಡ ಫಿರಂಗಿಗಳನ್ನೂ, ೧೭೩೪ ಗಣೆಗಳನ್ನೊಡೆಯುವ ದೊಡ್ಡ ಗುಂಡುಗಳನ್ನೂ, ೧೩೭೮೩ ಯಂತ್ರದ ಫಿರಂಗಿಗಳನ್ನೂ, ಅಪರಿಮಿತವಾದ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ವಶಪಡಿಸಿಕೊಂಡಿರುವರು. ಜರ್ಮನ್ ಜನರಲ್ಲುಗಳು ಈಗ ತಮಗುಂಟಾಗುತ್ತಿರುವ ಪರಾಭವವನ್ನು ಮುಚ್ಚಿಕೊಳ್ಳುವುದಕ್ಕಾಗಿ ಬಹಳ ಪ್ರಯತ್ನಪಡುತ್ತಿದ್ದಾರೆ. ಸಡಿಲಕೊಟ್ಟು ಶತ್ರುಗಳನ್ನು ಘೋರಾರಣ್ಯಕ್ಕೆ ಬರಮಾಡಿಕೊಂಡು ವಿನಾಶಗೊಳಿಸುವುದಕ್ಕಾಗಿಯೇ ನಾವು ಹಿಂದೆಗೆದುಹೋಗುತ್ತಿರುವೆವೆಂದು ಹೇಳಿಕೊಳ್ಳುತ್ತಿರುವರು. ಮತ್ತು ಜನರಲ್ ಫಾಕ್‌ರವರಿಗೆ ಇರುವಷ್ಟು ಸೇನಾಸಂಪತ್ತಿಯು ನಮಗಿದ್ದರೆ ಇಷ್ಟುಹೊತ್ತಿಗೆ ನಾವು ಪ್ಯಾರಿಸ್ ಪಟ್ಟಣವನ್ನು ಮಾತ್ರವೇ ಅಲ್ಲದೆ ಪ್ರಪಂಚವನ್ನೆಲ್ಲಾ ಸ್ವಾಧೀನಪಡಿಸಿಕೊಂಡುಬಿಡುತ್ತಿದ್ದೆವೆಂದು ಹೇಳಿಕೊಳ್ಳುತ್ತಿರುವರು. ಮಾರ್ಚಿತಿಂಗಳಿಂದೀಚೆಗೆ ಶತ್ರುಗಳ ಕಡೆ ೫ ಲಕ್ಷ ಮಂದಿ ಸೈನಿಕರು ನಷ್ಟವಾಗಿರುವರೆಂದು ಎಣಿಸಲ್ಪಟ್ಟಿದೆ. ರಷ್ಯಾದಲ್ಲಿರುವ ತಮ್ಮ ಸೈನಿಕರನ್ನು ಈ ರಂಗಕ್ಕೆ ತರಲು ಜರ್ಮನರು ಪ್ರಯತ್ನಿಸಿರುವರು. ೨ ಪಟಾಲಮ್ಮುಗಳು ಅದಕ್ಕೆ ಒಪ್ಪದೆ ಸೇನಾಪತಿಯ ಅಪ್ಪಣೆಯನ್ನು ತಿರಸ್ಕರಿಸಲು ೧೩೦ ಮಂದಿಯನ್ನು ಗುಂಡಿನಿಂದ ಸುಟ್ಟರು. ಕ್ರೂಪ್ ಯಂತ್ರಾಗಾರದಲ್ಲಿ ಕೆಲಸಮಾಡುವವರಲ್ಲಿ ೩೦ ಸಾವಿರ ಮಂದಿಯನ್ನು ಶತ್ರುಗಳು ರಣರಂಗಕ್ಕೆ ತಂದಿರುವರು. ಕೆಲ ಆಸ್ಟ್ರಿಯಾ ಸೈನ್ಯವೂ ಇಲ್ಲಿಗೆ ಬಂದಿರುವುದಂತೆ.

ರಷ್ಯಾ—ರಷ್ಯಾದಲ್ಲಿ ಬೊಲ್ಷೆವಿಕ್ ಪ್ರಭುತ್ವದ ಮುಖಂಡನಾದ ಲೆನಿನ್ನನ ಪ್ರಾಣವನ್ನು ತೆಗೆಯಬೇಕೆಂದು ಇಬ್ಬರು ಕೊಲೆಹೆಂಗಸರು ಮಾಸ್ಕೋ ಪಟ್ಟಣದಲ್ಲಿ ಅವರ ಮೇಲೆ ತುಪಾಕಿಗುಂಡುಗಳನ್ನು ೩ ಸಲ ಹೊಡೆದರು. ಅವರು ಮಡಿದರು. ಜನರಲ್ ಬ್ರುಸಿಲಾಫರು ಕಪಟಾಲೋಚನೆ ಮಾಡಿದರೆಂಬ ಅಪರಾಧದಿಂದ ಸೆರೆಯಿಡಲ್ಪಟ್ಟಿದ್ದಾರೆ. ರಷ್ಯಾದ ದೇಶೀಯ ಕಾರ್ಯಾಂಗಮಂತ್ರಿಯಾದ ಎಂ. ಯುರಿಟಸ್ಕಿಯವರು ಕೊಲ್ಲಲ್ಪಟ್ಟರು. ಹಂತಕರು ಸೆರೆಯಲ್ಲಿಡಲ್ಪಟ್ಟಿದ್ದಾರೆ. ಸೈಬೀರಿಯಾದಲ್ಲಿ ಜಪಾನರಿಗೂ ಬೊಲ್ಷೆವಿಕ್ ಪಕ್ಷದವರಿಗೂ ಯುದ್ಧವು ನಡೆಯುತ್ತದೆ.

ಒಳದೇಶದ ವೃತ್ತಾಂತಗಳು.

ಬರುವ ತಾ|| ೧೭ ರಲ್ಲಿ ನಿಯಮನಿರ್ಮಾಣಸಭೆಯು ಬೆಂಗಳೂರಿನಲ್ಲಿ ಕೂಡುವುದು.

ಶ್ರೀಮದ್ಯುವರಾಜರ ಸ್ವಾರಿಯು ಬೆಂಗಳೂರಿಂದ ರಾಜಧಾನಿಗೆ ಕಳೆದ ಸೋಮವಾರ ದಯಮಾಡಿಸಿದೆ.

ಶ್ರೀಮನ್ಮಹಾರಾಜರ ಸ್ವಾರಿಯು ಈ ತಿಂಗಳು ತಾ|| ೨೬ ಕ್ಕೆ ಸ್ವದೇಶಕ್ಕೆ ಚಿತ್ತೈಸುವುದೆಂದು ಪ್ರಕಟವಾಗಿದೆ.

ಪಕ್ಷಪತ್ರಿಕೆಯಾಗಿದ್ದ ಬೆಂಗಳೂರು ಡಿಸ್ಟ್ರಿಕ್ಟ್ ಪತ್ರಿಕೆಯು ವಾರಪತ್ರಿಕೆಯಾಗಿ ಮಾಡಲ್ಪಟ್ಟು ಪ್ರತಿ ಶನಿವಾರವೂ ಪ್ರಕಟಗೊಳ್ಳಲಾರಂಭಿಸಿದೆ.

ಬೆಂಗಳೂರಿನಲ್ಲಿ ಶ್ಯಾನುಭೋಗರ ಮಹಾಸಭೆಯು ಶ್ರೀರಂಗಪಟ್ಟಣದ ಅಡ್ವೋಕೇಟ್ ಮ|| ಬಿ. ನರಸಿಂಗರಾಯರ ಅಧ್ಯಕ್ಷತೆಯಿಂದ ಕಳೆದ ಶನಿವಾರ ಭಾನುವಾರ ಈ ಎರಡು ದಿನಗಳಲ್ಲಿ ನಡೆದಿತು.

ರಾಜಧಾನಿಯ ಹೊಸ ಮ್ಯುನ್ಸಿಪಲ್ ಕೌನ್ಸಿಲರುಗಳ ಕೂಟವು ಕಳೆದ ತಾ|| ೪ರಲ್ಲಿ ನೆರೆದಿದ್ದಿತು. ಮ್ಯಾನೇಜಿಂಗ್ ಕಮಿಟಿ, ಆಡಿಟ್ ಕಮಿಟಿ, ವಿದ್ಯಾಭ್ಯಾಸದ ಕಮಿಟಿ ಮೊದಲಾದುವುಗಳಿಗೆ ಹೊಸದಾಗಿ ಸಭಿಕರು ಆರಿಸಲ್ಪಟ್ಟರು. ಕೌನ್ಸಿಲರಲ್ಲೇ ಒಬ್ಬರನ್ನು ವೈಸ್‌ಪ್ರೆಸಿಡೆಂಟರನ್ನಾಗಿ ಆರಿಸುವಿಕೆಗಾಗಿ ಬರುವ ತಾ|| ೨೧ನೆಯ ದಿನ ಮರಳಿ ಮೀಟಿಂಗ್ ನಡೆಯಲು ನಿರ್ಧರಿಸಲ್ಪಟ್ಟಿತು.

ದೊಂಬರು ತಮ್ಮ ಆಟಗಳಿಗಾಗಿ - ದೊಗ್ಗಹಳ್ಳಿ ಹೊನ್ನೇಗೌಡ ಎಂಬ ಹೆಸರಿನ ಬಟ್ಟೆಗೊಂಬೆಯೊಂದನ್ನು ಕಲ್ಪಿಸಿಕೊಂಡಿರುವುದುಂಟಷ್ಟೆ. ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳು ತಮ್ಮ ನಾಟಕಕ್ಕೆ ಅಂಥ ಪಾತ್ರವೊಂದನ್ನು ಕಲ್ಪಿಸಿ ಮೆರೆಯಿಸುತ್ತಿವೆ. ಈ ಪಾತ್ರವು ಹಿಂದೆ ರಡ್ಡಿಸಾಹೇಬರ ಎಂಟ್ರೆಂಚ್‌ಮೆಂಟಿಗೆ ಅಡ್ಡಿಯನ್ನು ಕಲ್ಪಿಸುವುದಕ್ಕಾಗಿ ಒಂದು ಮಹಜರನ್ನು ನಿರ್ಮಿಸಲು ಬಹು ಸಾಹಸಮಾಡಿತ್ತು. ಈಗ ಮ|| ವೆಂಕಟಕೃಷ್ಣಯ್ಯನವರಿಗೆ ಚಿರಕಾಲ ಹೆಡ್ಮಾಸ್ಟರ್ ಪದವಿಯ ಭೋಗವನ್ನು ಬೆಳಸಿಕೊಡುವುದಕ್ಕಾಗಿ ಅಂಗಡಿ ಅಂಗಡಿಗೂ ಮನೆ ಮನೆಗೂ ತಿರುಗಿ ಹಲ್ಕಿರಿದು ಒಂದು ಮಹಜರನ್ನು ನಿರ್ಮಿಸುತ್ತಿರುವುದೆಂದು ಕೇಳುತ್ತೇವೆ. ಪೂರ್ವಪ್ರಯತ್ನದ ಫಲವೇ ಇದಕ್ಕೂ ಆಗುವುದರಲ್ಲಿ ಸಂಶಯವಿಲ್ಲ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಳೆಯು ಆಗದೆ ಹಾಹಾಕಾರವನ್ನು ಹುಟ್ಟಿಸಿದೆ. ಜೋಳದ ಬೆಳಸು ಹೋಯಿತು. ರಾಗಿ ಪೈರನ್ನು ಬಿತ್ತುವುದಕ್ಕೂ ಹಲವುಕಡೆ ಯತ್ನವಿಲ್ಲ. ರಾಗಿಯು ಪಲ್ಲಾ ೧ಕ್ಕೆ ೧೨ ರೂ. ವರೆಗೂ ಜೋಳವು ೨೫ ರೂ.ವರೆಗೂ ಮಾರಲ್ಪಡುತ್ತಿದೆ. ದನಕರುಗಳ ಅವಸ್ಥೆಯು ಅತಿ ಶೋಚನೀಯವಾಗಿದೆ. ಬೆಣ್ಣೆಯು ರೂ.ಗೆ ೨| ಸೇರು ಮಾರುತ್ತಿದೆ. ತುಪ್ಪದ ಬೆಲೆ ಮಣಕ್ಕೆ ೨೬ ರೂ. ಆಗಿದೆ. ಬಟ್ಟೆಬರೆಗಳ ಬೆಲೆಯನ್ನಂತೂ ಹೇಳಲೇಬೇಕಾಗಿಲ್ಲ. ಒಟ್ಟಿನಲ್ಲಿ ಸ್ಥಿತಿಯು ಕ್ಷಾಮಕಾಲವನ್ನು ಮೀರಿಸಿದೆ. ಸರ್ಕಾರದವರು ಪ್ರಜೆಗಳಿಗೆ ಧೈರ್ಯವನ್ನು ಕೊಡಬೇಕಾದ ಕಾಲವು ಸನ್ನಿಹಿತವಾಗಿದೆ. ಇರುವೆಯ ನಡೆಯಂತೆ ಅವರು ಮಂದಗತಿಯಿಂದ ನಡೆಯಿಸುವ ಏರ್ಪಾಟುಗಳು ಸಮಾಧಾನಕರವಾಗಿಲ್ಲ.

ಶ್ರೀಮಚ್ಚಕ್ರವರ್ತಿ ದಂಪತಿಗಳ ವಿವಾಹದ ೨೫ನೆ ವರ್ಷ ವರ್ಧಂತ್ಯುತ್ಸವ ಜ್ಞಾಪಕಾರ್ಥವಾಗಿ ಭರತಖಂಡದ ನಾರೀಮಣಿಯರಿಂದೆಲ್ಲಾ ಒಂದು ಧನನಿಧಿಯು ಕೂಡಿಸಲ್ಪಡುತ್ತಿದೆಯಷ್ಟೆ. ನಮ್ಮ ಸಂಸ್ಥಾನದಲ್ಲೂ ಈ ಪ್ರಯತ್ನವು ಅಲ್ಲಲ್ಲಿ ನಡೆಯುತ್ತಿದೆ. ಬೆಂಗಳೂರಿನ ಮಹಿಳಾಮಣಿಯರು ಮ|| ರಾಜಕುಮಾರ ಬಾನರ್ಜಿಯವರ ಧರ್ಮಪತ್ನಿಯವರ ಅಧ್ಯಕ್ಷತೆಯಿಂದ ಸಭೆಗೂಡಿದ್ದು, ಈ ಫಂಡಿನಿಂದ ಯುದ್ಧದಲ್ಲಿ ಮಡಿದವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯಮಾಡಲ್ಪಡುವ ಏರ್ಪಾಟು ವೈಸ್ರಾಯರ ಪತ್ನಿಯವರಿಂದ ಮಾಡಲ್ಪಟ್ಟಿರುವುದನ್ನು ಸಭೆಯಲ್ಲಿ ವಿಶದಪಡಿಸಿ, ಚಂದಾ ಎತ್ತುವುದಕ್ಕಾಗಿ ಒಂದು ಸಂಘವನ್ನು ಏರ್ಪಡಿಸಿದರು. ಸಭೆಯಲ್ಲೇ ೪ ಸಾವಿರ ರೂ. ಗಳವರೆಗೆ ಪಟ್ಟಿಯಾಯಿತು. ಈ ಫಂಡಿಗೆ ನಮ್ಮ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರು ೧೦,೦೦೦ ರೂ., ಯುವಮಹಾರಾಜ್ಞಿಯವರು ೨೦೦೦ ರೂ., ಪ್ರಥಮ ಮಹಾರಾಜಕುಮಾರ್ತಿಯವರು ೧೦೦೦ ರೂ.ಗಳನ್ನು ಕೊಟ್ಟಿರುತ್ತಾರೆ.

ಭರತಖಂಡದ ವೃತ್ತಾಂತಗಳು.

ಮಾರ್ವಾರ್ ದೇಶದಲ್ಲಿ ವಿಪರೀತ ವೃಷ್ಟಿಯಿಂದ ಕೆಲಕಡೆ ಲೋಹಮಾರ್ಗವು ಕಿತ್ತುಹೋಗಿ ಬಂಡಿಗಳ ತಿರುಗಾಟಕ್ಕೆ ಅಡ್ಡಿಯಾಗಿದೆ.

ಬೆಲೆ ಹೆಚ್ಚುಗೆಯನ್ನು ತಾಳಲಾರದೆ ಬಡಬಗ್ಗರು ವಿಶಾಖಪಟ್ಟಣದಲ್ಲಿ ಧಾನ್ಯದ ಮತ್ತು ಬಟ್ಟೆಬರೆಯ ಅಂಗಡಿಗಳಿಗೆ ನುಗ್ಗಿ ಸೂರೆಮಾಡಿ, ಈಗ ಸೆರೆಯಲ್ಲಿಡಲ್ಪಟ್ಟಿದ್ದಾರೆ.

ಭರತಖಂಡದಲ್ಲಿ ನಾಣ್ಯಗಳನ್ನು ಮುದ್ರಿಸುವುದಕ್ಕಾಗಿ ಅಮೇರಿಕಾದಿಂದ ಬೆಳ್ಳಿ ಬರುವುದು ತಡವಾಗಲಾಗಿ ಅಷ್ಟರೊಳಗೆ ಹೈದರಾಬಾದು ನಿಜಾಂರವರು ೫ ಲಕ್ಷ ರೂ.ನ ಬೆಳ್ಳಿಯನ್ನು ಭರತಖಂಡದ ಸರ್ಕಾರದವರಿಗೆ ಕೊಟ್ಟಿದ್ದರು.

ಬೊಂಬಾಯಿಯಲ್ಲಿ ಪ್ರತ್ಯೇಕ ರಾಷ್ಟ್ರೀಯಸಭೆಯು ಕಳೆದ ತಾ|| ೨೮ರಲ್ಲಿ ಆರಂಭಿಸಲ್ಪಡಬೇಕಾಗಿದ್ದಿತಷ್ಟೆ. ಮಿತವಾದಿಗಳನ್ನು ತಮ್ಮ ಯತ್ನದಲ್ಲಿ ಕೂಡಿಸಬೇಕೆಂಬುದ್ದೇಶದಿಂದ ಅ|| ಮದನಮೋಹನಮಾಳವೀಯರವರೇ ಮೊದಲಾದವರು ಪ್ರಯತ್ನಿಸಿ ಕಡೆಗೆ ವಿಫಲರಾದರು. ಇದರಿಂದ ಸಭಾಕಾಲವನ್ನು ಒಂದುದಿನ ತಡಮಾಡಿದ್ದು ತಾ|| ೨೯ರಿಂದ ೩ ದಿವಸ ನಡೆಯಿಸಿದರು.

ಸಾಮ್ರಾಜ್ಯಶಾಸನಸಭೆಯು ಕಳೆದ ತಾ|| ೪ರಲ್ಲಿ ದಿಲ್ಲಿಯಲ್ಲಿ ಕೂಡಿದ್ದಿತು. ವೈಸ್ರಾಯರು ತಮ್ಮ ಆರಂಭೋಪನ್ಯಾಸದಲ್ಲಿ ಬಹು ವಿಷಯಗಳನ್ನು ಪ್ರತಿಪಾದಿಸಿದರು. ಸೈನ್ಯಕ್ಕೆ ಕಳೆದ ಮೇ, ಜೂನ್, ಜುಲೈ ತಿಂಗಳುಗಳಲ್ಲಿ ೯೭ ಸಾವಿರ ಜನರೂ, ಸೇನಾಸಂಬಂಧವಾದ ಇತರ ಕಾರ್ಯಗಳಿಗೆ ೫೫ ಸಾವಿರ ಜನರೂ ಸೇರಿರುವರೆಂದೂ, ಧನಸಹಾಯವು ಮಾತ್ರ ಇನ್ನೂ ಹೆಚ್ಚಾಗಿ ಆಗಬೇಕಾಗಿರುವುದೆಂದೂ ಹೇಳಿದರು. ನೂತನ ರಾಜಕೀಯ ಸಂಸ್ಕರಣಗಳನ್ನು ಮಾತ್ರ ಚಾಚೂನ್ಯತ್ಯಾಸವಾಗದಂತೆ ಪ್ರಜೆಗಳು ಒಪ್ಪಿಕೊಳ್ಳಬೇಕೆಂದು ಹೇಳಿದರು.

ಬಂಗಾಳದಲ್ಲಿ ಬಟ್ಟೆಗಳ ಬೆಲೆಯು ಮಿತಿಮೀರಿ ಹೆಚ್ಚಿ, ಅದಕ್ಕೆ ದುರ್ಭಿಕ್ಷಬಂದಿರುವುದರಿಂದ ಬಡಬಗ್ಗರೂ ಭಿಕ್ಷುಕರೂ ಗೋಣಿತಾಟುಗಳನ್ನೂ, ಬೀದಿಯಲ್ಲಿ ಬಿಸುಡಿರುವ ಚಿಂದಿಗಳನ್ನೂ, ಸೊಳ್ಳೆತೆರೆಗಳ ಹರಕುಗಳನ್ನೂ ಆರಿಸಿ ನಡುವಿಗೆ ಸುತ್ತಿಕೊಂಡು ಮಾನವನ್ನು ಕಾಪಾಡಿಕೊಳ್ಳುತ್ತಿರುವರಂತೆ. ಕೆಲವರು ಆತ್ಮಹತ್ಯವನ್ನೂ ಮಾಡಿಕೊಂಡಿರುವರು. ಅನೇಕ ಕುಟುಂಬಗಳಲ್ಲಿ ಒಂದೆರಡು ಬಟ್ಟೆಗಳು ಮಾತ್ರವೇ ಇರುವುದರಿಂದ ಹೊರಕ್ಕೆ ಹೋಗಬೇಕಾದ ಒಬ್ಬನು ಅವನ್ನು ಧರಿಸಿಕೊಂಡುಹೋಗಿದ್ದು ಬಂದಬಳಿಕ ಮತ್ತೊಬ್ಬನು ಆ ಬಟ್ಟೆಯನ್ನೇ ತಾನು ಧರಿಸಿಕೊಂಡು ಹೋಗುತ್ತಿರುವರಂತೆ. ಬಡ ಹೆಂಗುಸರುಗಳು ಕೆಲವು ಮನೆಯಲ್ಲಿ ಕತ್ತಲೆಕೋಣೆಗಳಲ್ಲಿ ಬತ್ತಲೆಯಾಗಿಯೇ ಕಾಲಯಾಪನೆ ಮಾಡುತ್ತಿರುವರಂತೆ. ಇಂಥ ಭೀಕರ ವಸ್ತ್ರಕ್ಷಾಮವು ಭರತಖಂಡದಲ್ಲಿ ಹಿಂದೆ ಎಂದಿಗೂ ಬಂದಿರಲಾರದು!

ಬೊಂಬಾಯಿ ಟಂಕಸಾಲೆಯಲ್ಲಿ ವಿಕ್ಟೋರಿಯಾರಾಣಿ ಮಾರ್ಕಿನ, ಎಡ್ವರ್ಡ್ ಮಾರ್ಕಿನ, ಜಾರ್ಜ್ ಮಾರ್ಕಿನ ಮತ್ತು ಜಾರ್ಜ್‌ಮೊಹರ್ ಎಂಬ ಹೆಸರುಳ್ಳ ನಾಲ್ಕು ತೆರದ ಸವರನ್ನುಗಳು ಮುದ್ರಿತವಾಗಿ ಈ ತಿಂಗಳು ತಾ|| ೧೬ ರಿಂದ ವ್ಯವಹಾರಕ್ಕೆ ತರಲ್ಪಟ್ಟಿರುವುವು. ಇದಕ್ಕೆ ಉಪಯುಕ್ತವಾಗಿರುವ ಭಂಗಾರವೆಲ್ಲಾ ಪೂರ್ವದಲ್ಲಿ ಆಯಾ ಸವರನ್ನುಗಳಿಗಿದ್ದಂತೆಯೇ ಇರುವುದು. ಆದರೂ ಇವುಗಳಿಗೆಲ್ಲಾ ಒಂದೇ ವಿಧದ ಎಂದರೆ ೧೫ ರೂ. ಬೆಲೆಯೇ ನಿರ್ಣಯಿಸಲ್ಪಟ್ಟಿರುವುದು. ಹೆಚ್ಚುಬೆಲೆಗೆ ಅವನ್ನು ಮಾರುವವರು ಶಿಕ್ಷಿಸಲ್ಪಡುವರು ಎಂದು ಇಂಡ್ಯಾಸರ್ಕಾರದವರು ಪ್ರಕಟಿಸಿದ್ದಾರೆ. ಇವನ್ನು ನಾಣ್ಯವಾಗಿ ೧೫ ರೂ.ಗಳಿಗೆ ಪ್ರತಿಯಾಗಿ ಉಪಯೋಗಿಸುತ್ತಿರಬೇಕೇ ಹೊರತು ಕರಗಿಸುವುದೇ ಮೊದಲಾದ ಯಾವ ತೆರದಿಂದಲೂ ರೂಪಾಂತರ ಮಾಡಕೂಡದೆಂಬ ವಿಧಿಯನ್ನು ಈ ಮೊದಲೇ ಅವರು ಪ್ರಕಟಿಸಿರುವರು.

ಕಲ್ಕತ್ತಾದಲ್ಲಿ ಪೊಲೀಸ್‌ಸೂಪರಿಂಟೆಂಡೆಂಟರು ಕಳೆದ ಜೂನ್ ತಾ|| ೧೫ ರಲ್ಲಿ ಕೆಲರಮೇಲೆ ಸಂಶಯದಿಂದ ಕಲಕ್‌ಬಜಾರಿನಲ್ಲಿರುವ ಒಂದು ಮನೆಯನ್ನು ಪರಿಶೋಧಿಸುವುದಕ್ಕಾಗಿ ಪೊಲೀಸರನ್ನು ಮನೆಯಸುತ್ತ ನಿಲ್ಲಿಸಿದರು. ಒಳಗಿದ್ದವರಲ್ಲಿ ಇಬ್ಬರು ಪೊಲೀಸರಮೇಲೆ ತುಪಾಕಿಗುಂಡನ್ನು ಪ್ರಯೋಗಿಸಿದರು. ಇವರು ಅವರಮೇಲೆ ಗುಂಡುಗಳನ್ನು ಪ್ರಯೋಗಿಸಿದರು. ಇದರಿಂದ ಒಳಗಿದ್ದ ಅರಾಜಕರಿಬ್ಬರಿಗೂ ಏಟು ತಗುಲಿತು. ಅವರಲ್ಲೊಬ್ಬನು ಸತ್ತನು. ಪೊಲೀಸರಲ್ಲೂ ಒಬ್ಬನು ಸತ್ತನು. ಮನೆಯಲ್ಲಿದ್ದವರಲ್ಲಿ ಹರಿಚೈತನ್ಯನೆಂಬುವನು ಹಿಡಿಯಲ್ಪಟ್ಟನು. ಇನ್ನೊಬ್ಬನು ಸಿಕ್ಕಿಬಿದ್ದನು. ಈ ಅಪರಾಧಿಗಳು ದಂಡಾಧಿಕಾರಿಯವರಿಗೆ ವಿಚಾರಣೆಗೆ ಗುರಿಮಾಡಲ್ಪಟ್ಟರು. ಇವರು ಜನರನ್ನೂ ಆಯುಧಗಳನ್ನೂ ಕೂಡಿಸಿಕೊಂಡು ಆಂಗ್ಲಪ್ರಭುತ್ವದವರಮೇಲೆ ಯುದ್ಧವನ್ನು ಮಾಡಬೇಕೆಂದು ಉದ್ದೇಶಿಸಿದ್ದರೆಂಬುದಾಗಿ ಪಬ್ಲಿಕ್ ಪ್ರಾಸಿಕ್ಯೂಟರು ಅವರಮೇಲಿರುವ ದೋಷವನ್ನು ನಿವೇದಿಸಿದರು. ಈ ಅಪರಾಧಿಗಳಿದ್ದ ಮನೆಯಲ್ಲಿ ಮೂರು ಪಿಸ್ತೋಲುಗಳೂ ಸ್ವಲ್ಪ ಮದ್ದೂ ಸಿಕ್ಕಿರುವುವು. ಅಪರಾಧಿಗಳು ನಾವು ನಿರಪರಾಧಿಗಳೆಂದು ಹೇಳಿಕೊಂಡರು. ವಿಚಾರಣೆ ನಡೆದುದರಲ್ಲಿ ಅವರುಗಳಮೇಲೆ ಅಪರಾಧವು ಸ್ಥಿರಗೊಂಡಿದೆ.

ವಿದೇಶ ವೃತ್ತಾಂತಗಳು.

ಸ್ತ್ರೀಯರು ಕರ್ಮಾಗಾರಗಳಲ್ಲಿ ಕೆಲಸಮಾಡುವುದಕ್ಕೆ ಸೇರಿ ಅಲ್ಲಿರುವ ಪುರುಷರನ್ನೆಲ್ಲಾ ಯುದ್ಧರಂಗಕ್ಕೆ ಕಳುಹಿಸಿಕೊಡಬೇಕೆಂದು ಜರ್ಮನಿ ಪತ್ರಿಕೆಗಳು ತಮ್ಮ ದೇಶದ ಸ್ತ್ರೀಯರನ್ನು ಪ್ರಾರ್ಥಿಸುತ್ತಿವೆ. ಇದರಮೇಲೆ ಇದುವರೆಗೆ ೧೫೦೦೦ ಮಂದಿ ಸ್ತ್ರೀಯರು ಅಂಥ ಕೆಲಸಗಳಿಗೆ ಹೋಗಿ ಸೇರಿರುತ್ತಾರೆ.

ಯುದ್ಧ ನಿಂತಬಳಿಕ ಜರ್ಮನ್ ಚಕ್ರವರ್ತಿಯ ಮೇಲೆ ತಿರುಗಿಬಿದ್ದು ಗದ್ದಲವನ್ನೆಬ್ಬಿಸಬೇಕೆಂದು ಜರ್ಮನ್ ಸೈನಿಕರನೇಕರು ಪ್ರಯತ್ನಿಸಿ, ಬಹಿರಂಗವಾಗಿಯೇ ಆ ಮಾತುಗಳನ್ನಾಡುತ್ತಿದ್ದರೆಂಬ ಸಂಗತಿಯು ಹೊರಬಿದ್ದುದರ ಮೇಲೆ ಪ್ರಭುತ್ವದವರು ರಜಾದಮೇಲಿದ್ದ ಸೈನಿಕರುಗಳಲ್ಲಿದ್ದ ಆಯುಧಗಳನ್ನೆಲ್ಲಾ ವಶಪಡಿಸಿಕೊಳ್ಳಲು ಅಪ್ಪಣೆಮಾಡಿರುವರಂತೆ.

"ಸೇನಾಬಲದಿಂದ ನಮಗೆ ವಿಜಯವು ಪ್ರಾಪ್ತವಾಗುವ ಹಾಗಿಲ್ಲ. ನಮ್ಮ ಸೇನಾಧಿಪತಿಗಳು ನಮಗೆ ಜಯವಾಗುವುದೆಂದು ಬೋಧಿಸಿ ಭ್ರಾಂತಿಪಡಿಸಿದರು. ತಮ್ಮ ನಷ್ಟವನ್ನು ಸರಿಮಾಡಿಕೊಳ್ಳುವುದಕ್ಕಾಗಿ ಆಸ್ಟ್ರಿಯಾ, ತುರ್ಕಿ ಸೈನ್ಯಗಳನ್ನು ಪಶ್ಚಿಮರಂಗಕ್ಕೆ ಬರಮಾಡಿಕೊಳ್ಳಲು ಜರ್ಮನರು ಪ್ರಯತ್ನಿಸುತ್ತಿದ್ದಾರೆ" ಎಂದು ಜರ್ಮನಿ ಪತ್ರಿಕೆಗಳು ಸಂತಾಪಪಟ್ಟು ಬರೆದುಕೊಳ್ಳುತ್ತಿವೆ.

ಒಂದು ಡಚ್ ಹಡಗು ಬೆಲ್ಜಿಯಂ ಸಹಾಯಕ ಸಂಘಕ್ಕಾಗಿ ಧಾನ್ಯವನ್ನೂ ಹಿಟ್ಟನ್ನೂ ರಾಟರ್ಡಾಮಿಗೆ ಸಾಗಿಸುತ್ತಿರುವಾಗ, ಅದರ ಮೇಲೆ ಪ್ರತ್ಯೇಕವಾಗಿ ಇಂಥ ಹಡಗೆಂಬ ಗುರ್ತು ಚೆನ್ನಾಗಿ ಕಾಣುತ್ತಿದ್ದರೂ ಜರ್ಮನರ ಸಬ್‌ಮೆರೀನು ಫಿರಂಗಿ ಗುಂಡುಗಳನ್ನು ಹೊಡೆದು ಮುಳುಗಿಸಿಬಿಟ್ಟಿತು. ಗಾಯ ತಗುಲಿದ್ದವರೂ ಸೇರಿ ೨೧ ಮಂದಿ ರಕ್ಷಿಸಲ್ಪಟ್ಟರು. ಬದುಕಿದ್ದವರನ್ನು ರಕ್ಷಿಸುವುದಕ್ಕೂ ಕೂಡ ಜರ್ಮನರ ದೋಣಿಯು ಪ್ರಯತ್ನಿಸದೆ ಹೊರಟುಹೋಯಿತು.

ಅಲ್ಕೋಹಾಲಿಗೆ ಸಂಬಂಧಪಟ್ಟ ಸಾರಾಯಗಳನ್ನು ಬರುವ ವರ್ಷದ ಜುಲೈ ತಿಂಗಳಿಂದ ತಮ್ಮ ರಾಷ್ಟ್ರದಲ್ಲಿ ಯಾರೂ ಮಾರಕೂಡದೆಂಬ ವಿಷಯದ ಶಾಸನವೊಂದನ್ನು ಅಮೇರಿಕಾದೇಶದ ರಾಜ್ಯಾಂಗಸಭೆಯವರು ಮಾಡಿರುತ್ತಾರೆ. ವಿದೇಶದವರು ಮದ್ಯಪಾನಗಳಿಗೆ ಹೀಗೆ ನಾನಾವಿಧದ ಕಾನೂನು ಪ್ರತಿಬಂಧಗಳನ್ನು ಕಲ್ಪಿಸುತ್ತಿರುವಾಗ ಅನಾದಿಯಿಂದಲೂ ಶಾಸ್ತ್ರಮೂಲಕ ಮದ್ಯಪಾನನಿಷೇಧವನ್ನು ಹೊಂದಿರುವ ಭರತಖಂಡದಲ್ಲಿ ಮಾತ್ರ ಸುರಾದೇವತೆಯು ಅಖಂಡಸಾಮ್ರಾಜ್ಯವನ್ನು ಮಾಡುತ್ತಿರುವುದು ಎಷ್ಟು ನ್ಯಾಯ!

ಜರ್ಮನರು ಈಗ ಹೊಸದೊಂದುತೆರದ ವಿಮಾನಗಳನ್ನು ಕಂಡುಹಿಡಿದಿದ್ದಾರೆ. ಇವಕ್ಕೆ ತುಂಬಾ ಲೋಹಕವಚವುಂಟು. ಇದರ ಆಕೃತಿಯು ವಿಮಾನದಂತೆಯೇ ಇದೆ. ದೊಡ್ಡ ಫಿರಂಗಿಗುಂಡುಗಳೂ ಕೂಡ ಅವನ್ನು ಭೇದಿಸಲಾರವು. ಈ ಕವಚಗಳು ಭಾರವಾಗಿರುವುದರಿಂದ ವಿಮಾನಗಳು ವೇಗವಾಗಿ ಹೋಗಲಾರವು. ಸಿಡಿಮದ್ದುಗಳನ್ನು ಹಾಕುವ ಕೆಲಸಕ್ಕೆ ಇವು ಚೆನ್ನಾಗಿ ಉಪಯೋಗಿಸುವುವು. ಇದನ್ನು ನಡೆಯಿಸುವವರನ್ನು ಕೊಂದಲ್ಲದೆ ಇವು ವಶವಾಗಲಾರವು. ಗುಂಡುಗಳನ್ನು ಹೊಡೆದು ಇವುಗಳನ್ನು ಮುರಿಯಲಾಗುವುದಿಲ್ಲ.

ತುರ್ಕಿಯವರ ಕ್ರೌರ್ಯಕೃತ್ಯವನ್ನು ತಾಳಿಕೊಳ್ಳಲಾರದೆ ಅರ್ಮೀನಿಯದ ಪ್ರಜೆಗಳು ಪಾರಸೀಕದೇಶಕ್ಕೆ ಓಡಿಹೋದರು. ಅವರ ಶಕ್ತಿಯಿದ್ದಮಟ್ಟಿಗೂ ತುರುಕರೊಡನೆ ಪ್ರತಿಭಟಿಸಿ ಕಾದಾಡಿದರು. ಆದರೂ ತಕ್ಕಷ್ಟು ಮದ್ದುಗುಂಡಿನ ಸಹಾಯವಿಲ್ಲದುದರಿಂದ ಪಲಾಯನಗೊಳ್ಳಬೇಕಾಯಿತು. ತಾ|| ೧೯ ರಲ್ಲಿ ವಾನ್ ಪಟ್ಟಣದಿಂದ ಹಮದಾನಿಗೆ ೨ ಸಾವಿರ ಮಂದಿ ಅರ್ಮೀನಿಯನ್ನರು ಓಡಿಹೋದರು. ಮಿಕ್ಕವರನ್ನು ರಕ್ಷಿಸುವುದಕ್ಕಾಗಿ ಅವರ ಶ್ರೇಯೋಭಿಲಾಷಿಗಳೆಲ್ಲಾ ಧನಸಹಾಯವನ್ನು ಮಾಡಬೇಕೆಂಬುದಾಗಿ ಬ್ರಿಟಿಷ್ ಕಾನ್ಸಲ್ ಜನರಲ್‌ರವರು ಪ್ರಾರ್ಥಿಸಿರುತ್ತಾರೆ.

ಜರ್ಮನರಿಗೆ ಪಶ್ಚಿಮರಂಗದಲ್ಲಿ ತಮ್ಮ ಪಂಕ್ತಿಯನ್ನೆಲ್ಲಾ ದೃಢಪಡಿಸಿ ನಿಲ್ಲಿಸಿಕೊಳ್ಳುವುದಕ್ಕೆ ಸೇನೆಯು ಸಾಲದು. ರಷ್ಯಾದಲ್ಲಿ ಮತ್ತೆ ತೊಂದರೆಗಳು ಕಾಣಿಸಿಕೊಂಡಿರುವುದರಿಂದ ಆಸ್ಟ್ರಿಯಾ ತುರ್ಕಿ ದೇಶಗಳವರು ಫ್ರಾನ್ಸಿಗೆ ಸೈನ್ಯಗಳನ್ನು ಕಳುಹಿಸಿಕೊಡುವುದಕ್ಕೆ ಒಪ್ಪುವುದಿಲ್ಲ. ಫ್ರಾನ್ಸಿನಲ್ಲಿ ತಕ್ಕಷ್ಟು ಸೈನ್ಯವಿಲ್ಲದುದರಿಂದ ಜರ್ಮನರು ಎಲ್ಲಿ ಹೇಗೆ ಪಲಾಯನಮಾಡಬೇಕೆಂಬುದನ್ನು ಯೋಚಿಸಿ ಅದರೇರ್ಪಾಟಿನಲ್ಲಿದ್ದಾರೆ. ಅವರಿಗೆ ತಕ್ಕಷ್ಟು ಲೋಹ ಸಾಮಗ್ರಿಗಳು ಇಲ್ಲದಿರುವುದರಿಂದ ಫಿರಂಗಿಗಳು ಸಮೃದ್ಧವಾಗಿಲ್ಲ. ಇದಕ್ಕಾಗಿ ಅವರು ಬಹಳ ಚಿಂತಿಸುತ್ತಿದ್ದಾರೆ.

ಜರ್ಮನರು ಫಿನ್ಲಾಂಡಿನಲ್ಲಿ ಅತ್ಯಂತ ದುರಾಗತವನ್ನು ನಡೆಯಿಸುತ್ತಿದ್ದಾರೆ. ಏಕರಾಜಪರಿಪಾಲನಶಾಸನವನ್ನು ಅಲ್ಲಿಯ ಪ್ರಜಾಪ್ರಮುಖರು ಒಪ್ಪುವಂತೆ ಮಾಡುವುದಕ್ಕೆ ಅನೇಕ ಕುತಂತ್ರಗಳನ್ನು ನಡೆಯಿಸಿದರು. ಅಲ್ಲಿಯ ೧೦ ಸಹಸ್ರ ಪ್ರಜೆಗಳನ್ನು ವೈಟ್‌ಗಾರ್ಡುಗಳು ತುಪಾಕಿಯಿಂದ ಹೊಡೆದು ಕೊಂದಿರುವರು. ಸತ್ತವರಲ್ಲಿ ಹಲವರು ನಿರಪರಾಧಿಗಳು. ಇಷ್ಟೇ ಅಲ್ಲದೆ ಇನ್ನು ೨೦ ಸಾವಿರ ಜನರನ್ನು ಸೆರೆಯಲ್ಲಿಟ್ಟಿರುವರು. ಪ್ರಜೆಗಳು ಬಹಳ ಹೀನವಾಗಿ ಕಾಣಲ್ಪಡುತ್ತಿದ್ದಾರೆ. ಇವರು ಅಲ್ಲಿಗೆ ರಾಜನನ್ನಾಗಿ ಏರ್ಪಡಿಸಬೇಕೆಂದಿದ್ದ ಡ್ಯೂಕ್ ಅಡಾಲ್ಫ್ ಫ್ರೆಡರಿಕ್‌ರವರು ತಮಗೆ ಆ ಪದವಿಯು ಬೇಡವೆಂದು ನಿರಾಕರಿಸಿಬಿಟ್ಟರಂತೆ.

ತಮ್ಮದೇಶದ ಪ್ರಜೆಗಳಲ್ಲಿ ಹುಟ್ಟಿರುವ ಅಧೈರ್ಯವನ್ನು ಶಮನಗೊಳಿಸುವುದಕ್ಕಾಗಿ ಜರ್ಮನಿಯವರು ನಾನಾಪ್ರಯತ್ನಗಳನ್ನು ಮಾಡುತ್ತಿರುವರು. ಅವುಗಳೊಳಗೆ ಭರತಖಂಡವು ಜರ್ಮನಿಯ ಸಾಮಂತರಾಜ್ಯಕೋಟಿಗೆ ಸೇರಿಸಲ್ಪಡುವುದೆಂದು ವೃತ್ತಪತ್ರಿಕೆಗಳಲ್ಲಿ ಮಾಡುತ್ತಿರುವ ಪ್ರಕಟನವೂ ಒಂದಾಗಿರುತ್ತದೆ. ಭಾರತೀಯರಿಗೆ ಸಹಾಯವನ್ನು ಮಾಡುವುದಕ್ಕೆ ಇದಕ್ಕಿಂತ ಉತ್ತಮವಾದ ಸಮಯವು ಜರ್ಮನರಿಗೆ ಸಿಕ್ಕುವುದಿಲ್ಲವೆಂದು ಅಲ್ಲಿಯ ಒಂದು ಪೂರ್ವಾಚಾರ ಪರಾಯಣ ಪತ್ರಿಕೆಯೂ, ಸೌಕರ್ಯಗಳಿಲ್ಲದೆ ತೊಂದರೆಪಡುತ್ತಿರುವ ಭಾರತೀಯರಿಗೆ ಸಾನುಭೂತಿಯನ್ನು ಅವಶ್ಯಕವಾಗಿ ತೋರಿಸಬೇಕೆಂದು ಮತ್ತೊಂದು ಪತ್ರಿಕೆಯೂ ಬರೆದಿರುತ್ತವೆ. ಇದರಿಂದೆಲ್ಲಾ ಜರ್ಮನಿಗೂ ಭರತಖಂಡಕ್ಕೂ ಯುದ್ಧಸಂಬಂಧವಾದ ಮೈತ್ರಿಯಿರುವುದೆಂದು ತೋರ್ಪಡಿಸಿಕೊಳ್ಳುವುದಕ್ಕೆ ಜರ್ಮನಿಯು ಪ್ರಯತ್ನಪಟ್ಟಿರುವಂತೆ ಕಾಣುವುದಿಲ್ಲವೆ?

ಲಂಡನ್ ಪಟ್ಟಣದ ಸಾವಿರಾರು ಮಂದಿ ಪೊಲೀಸರು ತಮ್ಮ ಸಂಬಳವನ್ನು ಹೆಚ್ಚಿಸಿಕೊಡಬೇಕೆಂದು ಮುಷ್ಕರಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ಒಂದುದಿನ ಪೊಲೀಸರ ಕಾವಲೇ ಇಲ್ಲವಾಯಿತು. ಹೀಗೆ ಸಂಭವಿಸಿದುದು ಲಂಡನ್ ಪಟ್ಟಣದ ಚರಿತ್ರದಲ್ಲಿ ಇದೇ ಮೊದಲು. ಆದರೂ ಆ ಪೊಲೀಸರು ತಮ್ಮ ಮುಷ್ಕರಕಾಲದಲ್ಲಿ ಶತ್ರುಗಳ ವೈಮಾನಿಕೋಪದ್ರವಗಳೇನಾದರೂ ಸಂಭವಿಸಿದರೆ ತಾವು ಕೂಡಲೇ ಕೆಲಸಕ್ಕೆ ಬರುವೆವೆಂದು ತಿಳಿಯಪಡಿಸಿದ್ದುದು ಅವರ ಸೌಜನ್ಯಕ್ಕೂ ದೇಶಾಭಿಮಾನಕ್ಕೂ ಘನತೆಗೂ ನಿದರ್ಶಕವಾಗಿದ್ದಿತು. ಪ್ರಭುತ್ವದವರು ಆ ದಿನ ಜನಸಂಮರ್ದವು ಹೆಚ್ಚಾಗಿರುವಕಡೆ ಸ್ಪೆಷಲ್ ಪೊಲೀಸರ ಕಾವಲನ್ನು ಇಡಿಸಿದ್ದರು. ಮರುದಿನ ಮುಖ್ಯಮಂತ್ರಿಯವರೂ ಜನರಲ್‌ಸ್ಮಟ್ಸ್‌ರವರೂ ಪೊಲೀಸುಸಂಘದ ಪ್ರಮುಖರೊಡನೆ ಮಾತನಾಡಿದರು. ಮತ್ತೂ ಅವರ ಸಂಬಳವನ್ನು ವಾರಕ್ಕೆ ೧೩ ಶಿಲಿಂಗಿನಷ್ಟು ಹೆಚ್ಚಿಸಿಕೊಡುವುದಕ್ಕೆ ಸರ್ಕಾರದವರು ಒಪ್ಪಿದುದರಿಂದ ಎಲ್ಲವೂ ಶಾಂತವಾಗಿ ಎಂದಿನಂತೆ ಪೊಲೀಸರು ಕೆಲಸದಮೇಲೆ ಹೋದರು.

ಪತ್ರವ್ಯವಹಾರ.

ನ್ಯಾಮತಿ.

ಈ ಗ್ರಾಮಸ್ಥರು ಈ ಕೆಳಗೆ ರುಜುಹಾಕಿರುವವರು ವಿಜ್ಞಾಪಿಸಿಕೊಳ್ಳುವುದೇನೆಂದರೆ—ಇದುವರೆಗೂ ಮಳೆಯಿಲ್ಲ. ಯಾವಪೈರನ್ನೂ ಬಿತ್ತಿಲ್ಲ. ಕಾಲಸ್ಥಿತಿಯು ದಿನೇದಿನೇ ಭೀಕರವಾಗಿ ಜೀನಸಿಧಾರಣೆ ಹೆಚ್ಚುತ್ತಲೇ ಇದೆ. ಇದರಿಂದ ಬಡಜನಗಳು ಮಳೆ ಯಾವಾಗಬರುವುದೋ ಎಂದು ಮುಗಿಲನ್ನು ನೋಡುತ್ತಾ ಇರುತ್ತಾರೆ. ಬೆಲೆಗೆ ತೆಗೆದುಕೊಳ್ಳಬೇಕೆಂದರೆ ಆಹಾರಪದಾರ್ಥಗಳನ್ನು ಯಾರೊಬ್ಬರೂ ಕೊಡದೆ ಇರತಕ್ಕ ಸಮಯದಲ್ಲಿ ಈ ನ್ಯಾಮತಿ ಟವನ್ ವಾಸಸ್ಥರಾದ ಜೀರಿಗೆ ಮುರಿಗೆಪ್ಪನವರ ಮಕ್ಕಳು ವೀರಭದ್ರಪ್ಪನವರು ಭಗವಂತನ ಪ್ರೇರಣೆಯಿಂದ ಧರ್ಮಕಾರ್ಯಮಾಡಲು ಉಪಕ್ರಮಿಸಿದರು. ಅಗಸ್ಟ್ ತಾ|| 9-16-23-30 ಈ ಶುಕ್ರವಾರಗಳಲ್ಲಿ ಈ ಟವನ್ ಸಂತೆಯಲ್ಲಿ ಬರತಕ್ಕ ಬಡಬಗ್ಗರಿಗೆ ಮಾತ್ರ ತಾವು ಕೊಂಡ ಧಾರಣೆಗೆ ಜೋಳ ರಾಗಿಗಳನ್ನು ರೂ. ೧ ಕ್ಕೆ ೧ ಸೇರು ಜಾಸ್ತಿಯಾಗಿಯೂ, ಅಕ್ಕಿಯನ್ನು ರೂ. ೧ ಕ್ಕೆ ೧ ಪಾವು ಜಾಸ್ತಿಯಾಗಿಯೂ ಮಾರಾಟಮಾಡುತ್ತ ಈಗ ೧ ತಿಂಗಳಿಂದಲೂ ದವಸಧಾನ್ಯಗಳನ್ನು ಪ್ರತಿದಿನವೂ ಗ್ರಾಮಾಂತರಗಳಲ್ಲಿ ಹುಡುಕಿ ಕಷ್ಟಪಟ್ಟು ತಂದು ತಮಗೆ ಎಷ್ಟು ಕಷ್ಟನಷ್ಟವಾದರೂ ಲಕ್ಷಿಸದೆ ಈ ಬಡಪಾಯಿಗಳಿಗೆ ಕೊಟ್ಟು ತಮಗೆ ಪುಣ್ಯಬರಬೇಕೆಂಬುವುದೇ ಇವರ ಅಪೇಕ್ಷೆಯಾಗಿದೆ. ಈ ವೀರಭದ್ರಪ್ಪನವರು ಈ ಹಿಂದೆ ದಾವಣಗೆರೆಯಲ್ಲಿ ನಡೆದ ವೀರಶೈವ ಸಭಾದಲ್ಲಿ ಸಭಾಪುರೋಭಿವೃದ್ಧಿಗಾಗಿ ಒಂದು ಸಾವಿರ ರೂಪಾಯಿಗಳನ್ನೂ, ಶಿವಮೊಗ್ಗದಲ್ಲಿ ಸ್ಥಾಪನೆಯಾದ ನಗರಡಿವಿಜನ್ ವೀರಶೈವ ಸ್ಟೂಡೆಂಟ್ಸ್ ಹೋಮಿಗಾಗಿ ಒಂದು ಸಾವಿರ ರೂ. ಗಳನ್ನೂ ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ. ಇವರು ಇನ್ನೂ ಕೆಲವು ದಿವಸ ಈ ಟವನ್ ಸಂತೆಯಲ್ಲಿ ಇದೇ ರೀತಿ ಬಡವರಿಗೆ ಆಹಾರಪದಾರ್ಥಗಳನ್ನು ಕೊಡತಕ್ಕವರಾಗಿರುತ್ತಾರೆ. ಆದ್ದರಿಂದ ಇವರಿಗೆ ಭಗವಂತನು ದೀರ್ಘಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಕೊಟ್ಟು ಕಾಪಾಡಬೇಕೆಂದು ಬೇಡಿಕೊಳ್ಳುತ್ತೇವೆ.

ಪ್ರತ್ಯಕ್ಷ ದರ್ಶಿಗಳು.

ವೀರಶೈವ ಮಹಾಸಭೆಯ ವಿಚಾರ.

ಸಮಾಜಬಾಂಧವರೇ! ೮ ನೆಯ ಮಹಾಸಭೆಯು ಬೀರೂರಿನಲ್ಲಿ ಬರುವ ಡಿಸೆಂಬರ್ ತಿಂಗಳಲ್ಲಿ ನಡೆಯುವುದೆಂದು ತಮ್ಮೆಲ್ಲರಿಗೂ ಗೊತ್ತಿರಬಹುದು. ಪ್ರತಿನಿಧಿಗಳು ಉತ್ಸಾಹವುಳ್ಳವರಾಗಿಯೂ ಸೂಕ್ಷ್ಮಾಭಿಪ್ರಾಯದಿಂದೊಡಗೂಡಿದವರಾಗಿಯೂ ಬರುವುದು ಶ್ಲಾಘನೀಯವಲ್ಲವೆ? ಪ್ರತಿವರ್ಷ ಸಭೆಯು ನಡೆಯುವುದಕ್ಕಿಂತಲೂ ಒಂದಾದರೂ [illegible]

ವುದು ಮಹತ್ವದ್ದಿರುತ್ತದೆ. ಒಂದೊಂದಾಗಿ ಮಹಾಸಭೆಯಿಂದ ಕಾರ್ಯತಃ ಕೆಲಸವು ಜರಗದಿದ್ದರೆ ಸಮಾಜಕ್ಕೆ ಹಿತವಾದಂತಾಗುವುದಿಲ್ಲ. ಹೋದಸಲ ದಾವಣಗೆರೆಯಲ್ಲಿ ಸಭೆಯು ಕೂಡಿದಾಗ ೬೬ ಸಾವಿರ ರೂಪಾಯಿಗಳು ಮಹಾಸಭೆಯು ಅವಿಚ್ಛಿನ್ನವಾಗಿ ನಡೆವುದಕ್ಕೆ ಕೊಡಲ್ಪಟ್ಟವು. ಅಭಿವೃದ್ಧಿಗೆ ಇದೇ ಮೊದಲನೆಯ ಚಿನ್ಹವೆಂದು ನಿರ್ಧರಿಸಬಹುದು. ಈ ದ್ರವ್ಯವನ್ನು ಶೇಖರಿಸಲಿಕ್ಕೆ ವಿಚಾರಶಕ್ತಿಯ ಪುರುಷರು ರಾವ್‌ಸಾಹೇಬ್ ಕಣಬರಗಿಮಠ ಮತ್ತು ಚಂದ್ರೋದಯ ಪತ್ರಿಕಾಕರ್ತರಾದ ಮ|| ರಾ|| ಹೊನ್ನಾಪುರ ಮಠ ಇವರು ವಾಚಾಧುರೀಣತೆಯಲ್ಲಿ ಮಾತ್ರವಲ್ಲದೆ ಕಾರ್ಯದಲ್ಲಿಯೂ ಚತುರರಿರುವರು. ನಮ್ಮ ಸಮಾಜದಲ್ಲಿ ಜಗದ್ಗುರು ಪೀಠವನ್ನವಲಂಬಿಸಿದ ಶ್ರೀ ಚಿತ್ರದುರ್ಗ ಜಗದ್ಗುರು ಜಯದೇವಸ್ವಾಮಿಗಳು ಕಾರ್ಯಕ್ರಮದಲ್ಲಿ ಅಗ್ರಗಣ್ಯರೆಂದೆನಿಸಿಕೊಂಡಿದ್ದಾರೆ. ಶ್ರೀ ಸ್ವಾಮಿಗಳು ವಿದ್ಯಾಪ್ರಸಾರಕ್ಕೆ ವಿಶೇಷ ದ್ರವ್ಯವನ್ನು ವ್ಯಯಮಾಡಿ ಕೀರ್ತಿಯನ್ನು ಸಂಪಾದಿಸಿರುವರು. ಇಷ್ಟೆಲ್ಲ ಸಹಾಯವಿದ್ದರೂ ಇನ್ನೂ ಕೊರತೆಗಳು ಇದ್ದೇ ಇರುವವು. ಈಗ ಪೃಥ್ವಿಯಲ್ಲಿ ಪ್ರಸಿದ್ಧಿಯನ್ನು ಪಡೆದ ಮತಗಳು ತಮ್ಮ ಮತಗ್ರಂಥಗಳನ್ನು ಅನೇಕ ವಿದೇಶಭಾಷೆಗಳಲ್ಲಿ ಬರೆಸಿರುವವು. ಕ್ರಿಶ್ಚಿಯನ್ನರು ಬೈಬಲ್ಲನ್ನು ಮುನ್ನೂರಕ್ಕಿಂತ ಹೆಚ್ಚು ಭಾಷೆಗಳಲ್ಲಿ ಪ್ರಚುರಪಡಿಸಿರುವರು. ವೇದಗಳು, ಉಪನಿಷತ್ತುಗಳು, ಕುರಾನ್ ಮತ್ತು ಧರ್ಮಪದ ಮೊದಲಾದ ಗ್ರಂಥಗಳು ಇಂಗ್ಲೀಷ್‌ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಹೋದವರ್ಷ ಬೆಂಗಳೂರಿಗೆ ಫಾರ್ಕರ್ ಎಂಬ ಪಾದ್ರಿಗಳು ಲಿಂಗಾಯತಮತದ ವಿಷಯವಾಗಿ ಒಂದು ಗ್ರಂಥವನ್ನು ಬರೆಯುವುದಕ್ಕೆ ಕೆಲವು ಅಭಿಪ್ರಾಯಗಳನ್ನು ಸಂಗ್ರಹಿಸಲೋಸುಗ ಕಲ್ಕತ್ತೆಯಿಂದ ಬಂದಿದ್ದರು. ನಮ್ಮ ಶಾಸ್ತ್ರಿಗಳು ಮತ್ತು ಗ್ರ್ಯಾಜ್ಯುಯೇಟರು ಪ್ರಯತ್ನಹೀನರಾಗಿ, ಪರದೇಶದ ಗ್ರಂಥಕರ್ತರಿಗೆ ತಮಗೆ ಅಲ್ಪಸ್ವಲ್ಪ ತಿಳಿದಿದ್ದನ್ನು ವಿಪರೀತವಾಗಿ ಬರೆಯುವುದಕ್ಕೆ ಅಸ್ಪದಕೊಡದಹಾಗೆ ತಾವೇ ಬರೆದರೆ ಚನ್ನಾಗಿರುವುದಿಲ್ಲವೇ? ಯಾವ ವಾಚನಾಲಯದಲ್ಲಿ ನೋಡಿದರೂ ಕೂಡ ಮತಸ್ಥಾಪಕರಾದಂಥ ಕ್ರಿಸ್ತ, ಬುದ್ಧ, ಮಹಮ್ಮದ, ರಾಮ್‌ಮೋಹನರಾಯ್, ರಾಮದಾಸ್, ಕಬೀರ್, ನಾನಕ್, ಚೈತನ್ಯ ಮತ್ತು ಶಂಕರಾಚಾರ್ಯ ಮೊದಲಾದವರ ಜೀವಚರಿತ್ರೆಗಳು ಇಂಗ್ಲೀಷ್‌ಭಾಷೆಯಲ್ಲಿ ಕಂಡುಬರುತ್ತವೆ. ಆದರೆ ಲಿಂಗಾಯತಮತಸಂಸ್ಥಾಪಕನಾದ ಬಸವೇಶ್ವರನ ಜೀವಚರಿತ್ರೆಯು ಪುಸ್ತಕಭಾಂಡಾರಗಳಲ್ಲಿ ಇಲ್ಲದೆ ಇರುವುದು ಅತಿ ಪ್ರಮಾದವಲ್ಲವೇ? ಹೋದ ಸಭೆಯಲ್ಲಿ ಮ|| ರಾ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಇವರು ಬೆಂಗಳೂರಲ್ಲಿ ವೀರಶೈವಮತದ ಪುಸ್ತಕಭಾಂಡಾಗಾರದ ಕೇಂದ್ರಸ್ಥಾನವನ್ನು ಮಾಡಿ ಪರಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಚುರಪಡಿಸಬೇಕೆಂದು ಸೂಚಿಸಿರುವರು. ಇದು ಅತಿ ಶ್ಲಾಘ್ಯವಾದದ್ದಾಗಿದೆ. ಮುಂದೆ ನಡೆಯುವ ಸಭೆಯಲ್ಲಾದರೂ ಇದನ್ನು ಕಾರ್ಯತಃ ಮಾಡುವರೆಂದು ನಂಬುತ್ತೇನೆ. ಅನುಭವಿಕರಾದ ಗ್ರ್ಯಾಜ್ಯುಯೇಟರು ಈ ಕೆಲಸವನ್ನು ಕೈಕೊಳ್ಳುವರೆಂದು ನನ್ನ ವಿಜ್ಞಾಪನೆಯುಂಟು.

ವಿ. ಯಗಟಿ.

ಹೊಸದುರ್ಗದ ನೋಟ್ಸ್.

1. ಇದೇ ಆಗಸ್ಟ ಮಾಹೆ ತಾರೀಖು 26 ನೆ ಸೋಮವಾರ ಇಲ್ಲಿನ ಟವರ್‌ಹಾಲಿನಲ್ಲಿ ಡಿಸ್ಟ್ರಿಕ್ಟುಬೋರ್ಡು, ಡಿಸ್ಟ್ರಿಕ್ಟುಕಮಿಟಿ ಮತ್ತು ಅಗ್ರಿಕಲ್‌ಚರಲ್ ಅಸೋಸಿಯೇಷನ್ ಮೀಟಿಂಗುಗಳು ನಡೆದವು. ಇದಕ್ಕಾಗಿ ಈ ಡಿಸ್ಟ್ರಿಕ್ಟು ಡೆಪ್ಯುಟೀಕಮಿಷನರ್ ಮಿ|| ಜಹಿರುದ್ದೀನ್ ಮೆಕ್ಕೆಸಾಹೇಬರವರೂ, ಡಿಸ್ಟ್ರಿಕ್ಟಿನ ಎಲ್ಲಾ ಇಲಾಖಾ ಆಫೀಸರುಗಳೂ, ಅಮಲ್‌ದಾರರುಗಳೂ, ಡಿಸ್ಟ್ರಿಕ್ಟುಬೋರ್ಡು ಮತ್ತು ಡಿಸ್ಟ್ರಿಕ್ಟುಕಮಿಟಿ ಮೆಂಬರುಗಳೂ ದಯಮಾಡಿಸಿದ್ದರು. ಆ ದಿವಸದ ಮೀಟಿಂಗುಗಳು ಸಾಂಗವಾಗಿ ನಡೆದವು. ಮಾರನೆಯದಿನವಾದ ತಾರೀಖು 27 ನೆ ಮಂಗಳವಾರ ಟವರ್‌ಹಾಲಿನ ಮುಂಭಾಗದಲ್ಲಿ ಹಾಕಲ್ಪಟ್ಟಿದ್ದ ಚಪ್ಪರದಲ್ಲಿ ಈ ತಾಲ್ಲೂಕಿನ 3 ನೆ ಕಾನ್‌ಫರೆನ್ಸ್ ಸಭೆಯು ನಡೆಯಿತು. ಅಗ್ಗೆ ಮೇಲ್ಕಂಡ ಆಫೀಸರುಗಳಲ್ಲದೆ ಪೌರಸಾಮಾಜಿಕಸಂಘದ ಸೆಕ್ರೆಟರಿಯವರಾದ ಮ|| ರಾಮರಾಯರವರು, ತಾಲ್ಲೂಕಿನ ಪಟೇಲಶ್ಯಾನುಭೋಗರು, ವರ್ತಕರು, ಗ್ರಾಮಾಭಿವೃದ್ಧಿ ಕಮಿಟಿ ಮೆಂಬರುಗಳು, ಹೊಸದುರ್ಗದ ದೊಡ್ಡಮನುಷ್ಯರುಗಳು ಹಾಜರಿದ್ದರು.

2. ಡೆಪ್ಯುಟೀಕಮಿಷನರ್ ಮ|| ರಾ|| ಜಹಿರುದ್ದೀನ್ ಮೆಕ್ಕೆಸಾಹೇಬರವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅಮಲ್‌ದಾರ್ ಮ|| ರಾ|| ಇ. ಹೆಚ್. ಥಾಂಸನ್‌ಸಾಹೇಬರವರಿಂದ ಗ್ರಾಮಾಭಿವೃದ್ಧಿ ಕೆಲಸ ಟವರ್ ಮತ್ತು ತಾಲ್ಲೂಕು ಪ್ರೋಗ್ರೆಸ್‌ಕಮಿಟಿ ಕೆಲಸದ ರಿಪೋರ್ಟು ಓದಲ್ಪಟ್ಟಿತು. ಇವರ ರಿಪೋರ್ಟಿನಿಂದ ಈ ತಾಲ್ಲೂಕಿನಲ್ಲಿ ಸ್ಕೂಲ್ ಕಟ್ಟಡಗಳು ವಗೈರೆ ಗ್ರಾಮಾಭಿವೃದ್ಧಿ ಕೆಲಸಗಳು ತೃಪ್ತಿಕರವಾಗಿ ನಡೆದಿರುವಂತೆ ಗೊತ್ತಾಗುತ್ತೆ.

3. ನಂತರ 1. ಪರಸ್ಪರ ಸಹಾಯಸಂಘದ ವಿಷಯವಾಗಿ ಕೋಆಪರೇಟೀವ್ ಸೊಸೈಟಿಗಳ ಇನ್ಸ್‌ಪೆಕ್ಟರ್ ಮಿ|| ಅಹಂಮದ್‌ಷರೀಫ್‌ರವರು, 2. ರಾಜಭಕ್ತಿವಿಷಯವಾಗಿ ಪೊಲೀಸ್ ಇನ್ಸ್‌ಪೆಕ್ಟರು ಮಿ|| ವೆಂಕಟವರದಾಚಾರ್ರು, 3. ವಿದ್ಯಾಭ್ಯಾಸವಿಷಯವಾಗಿ ಅಸಿಸ್ಟೆಂಟ್ ಡೆಪ್ಯುಟೀ ಇನ್ಸ್‌ಪೆಕ್ಟರ್ ಮಿ|| ರಾಮರಾಯರು, 4. ಕೈಗಾರಿಕೆ ವಿಷಯವಾಗಿ ಮಿ|| ಚಿಕ್ಕಮೂಡ್ಲಪ್ಪನವರು, 5. ಪೌರಸಾಮಾಜಿಕ ವಿಷಯವಾಗಿ ತಾಲ್ಲೂಕು ಶಿರಸ್ತೇದಾರರು ಮಿ|| ಟಿ. ಎ. ಶ್ರೀನಿವಾಸಾಚಾರ್ರು, 6. ಆರೋಗ್ಯವಿಚಾರವಾಗಿ ಡಿಸ್ಟ್ರಿಕ್ಟು ಮೆಡಿಕಲ್ ಆಫೀಸರವರು ಮಿ|| ರಾಘವೇಂದ್ರರಾಯರು ಮತ್ತು ಸಬ್ ಅಸಿಸ್ಟೆಂಟು ಸರ್ಜನ್‌ರವರು ಮಿ|| ನಾರಾಯಣರಾಯರು, ಇವರುಗಳಿಂದ ಉಪನ್ಯಾಸಗಳು ಕೊಡಲ್ಪಟ್ಟವು.

ಈ ತಾಲ್ಲೂಕಿಗೆ ಯಾವಯಾವ ಅನುಕೂಲತೆ ಅವಶ್ಯಕವಾಗಿ ಬೇಕಾಗಿದೆ ಎಂಬ ವಿಷಯ ಚರ್ಚಿಸಲ್ಪಟ್ಟು ಅನುಕೂಲವಾದ ರೆಜಲ್ಯೂಷನ್‌ಗಳು ಮಾಡಲ್ಪಟ್ಟವು. ಹಾಜರಿದ್ದ ಪ್ರಜೆಗಳು ಹೇಳಿಕೊಂಡ ಅಹವಾಲುಗಳನ್ನ ಅಧ್ಯಕ್ಷರು ಬಹಳ ವಿನಯದಿಂದ ಕೇಳಿ ಅವರಿಗೆ ತಕ್ಕ ಪ್ರತ್ಯುತ್ತರಗಳನ್ನು ದಯಪಾಲಿಸಿದರು. ಮತ್ತು ಈಗ ಆಹಾರಧಾನ್ಯಗಳು ಪುಷ್ಟಿಯಾಗಿ ಸಿಕ್ಕದೆ ತೊಂದರೆಪಡುತ್ತಾ ಇರುವ ವಿಷಯದಲ್ಲಿ ಒಂದು ವರ್ಷದ ದಾಸ್ತಾನ್ ಇಟ್ಟುಕೊಂಡು ಹೆಚ್ಚಾದ ಜಿನಸೀ ಮಾರಬಹುದೆಂತಲೂ, ದಾಸ್ತಾನ್ ಇಟ್ಟುಕೊಳ್ಳದೆ ಮಾರುವುದರಿಂದ ಉಂಟಾಗತಕ್ಕ ಅನಾನುಕೂಲತೆಗಳು ಮತ್ತು ತೊಂದರೆಗಳನ್ನು ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಕೊಟ್ಟರು. ಗ್ರಾಮಾಭಿವೃದ್ಧಿ ಕೆಲಸವನ್ನ ಯಾವ ರೀತಿ ಮಾಡಬೇಕೆಂಬುವ ವಿಷಯದಲ್ಲಿಯೂ ರಿಪೋರ್ಟುಗಳನ್ನು ಸಕಾಲದಲ್ಲಿ ಸರಿಯಾಗಿ ಕಳುಹಿಸುವ ವಿಷಯದಲ್ಲಿಯೂ, ಅಧ್ಯಕ್ಷರು ಸರಿಯಾದ ತಿಳುವಳಿಕೆ ಕೊಟ್ಟರು. ಮೈಸೂರಿಂದ ದಯಮಾಡಿಸಿದ್ದ ಮ|| ರಾಮರಾಯರವರು ಪೌರಸಾಮಾಜಿಕ ವಿಷಯದಲ್ಲಿ ಜನಗಳ ಮನಸ್ಸಿಗೆ ನಾಟುವಂತೆ ಉಪನ್ಯಾಸವನ್ನು ಕೊಟ್ಟರು.

4. ಈ ಮೂರನೇ ಕಾನ್‌ಫರೆನ್ಸ್ ಮಹಾಸಭೆಯು ಹಿಂದೆ ನಡೆದ 2 ಸಭೆಗಳಂತೆ ನಮ್ಮ ಅಮಲ್ದಾರ್ ಮಿ|| ಥಾಂಸನ್‌ಸಾಹೇಬರವರ ಏರ್ಪಾಟಿನಿಂದ ಬಹಳ ವಿಜೃಂಭಣೆಯಿಂದ ನಡೆಯಿತು. ನಂತರ ನಮ್ಮ ಚಕ್ರವರ್ತಿಯವರಿಗೂ, ನಮ್ಮ ಶ್ರೀಮನ್ಮಹಾರಾಜಾ ಸಾಹೇಬರವರಿಗೂ, ಶ್ರೀಮನ್ ಯುವರಾಜರವರಿಗೂ ಸಂತೋಷಾರ್ಥವಾಗಿ ಜಯಘೋಷಗಳು ಮಾಡಲ್ಪಟ್ಟು ಸಾಯಂಕಾಲ 8 ಘಂಟೆಗೆ ಸಭೆಯು ಬರಖಾಸ್ತಾಯಿತು. ತಾ|| 28 ರಲ್ಲಿ ಡೆಪ್ಯುಟೀಕಮಿಷನರ್ ಸಾಹೇಬರವರು ಗ್ರಾಮಾಂತರಸಂಚಾರ ಹೋದವರು ದಯಮಾಡಿ ಮಧ್ಯಾಹ್ನಕ್ಕೆ ಚಿತ್ರದುರ್ಗಕ್ಕೆ ಪ್ರಯಾಣಮಾಡಿದರು.

ವೃತ್ತಪ್ರೇಮಿ.

ಕೈ. ಶ್ರೀ. ಗುರುಭಕ್ತವರ್ಯ ಸನ್ನಯ್ಯಪ್ಪನವರು.

ಇವರು ತಮ್ಮ ಪೂರ್ವಾಶ್ರಮದಲ್ಲಿ ನೈಜಾಂ ಇಲಾಖಾ ರಾಯಚೂರುಜಿಲ್ಲೆಗೆ ಸೇರಿದ ಚಿಕ್ಕಸೂಗೂರು ಗ್ರಾಮದ ಸಮೀಪದ ಹಳ್ಳಿಯಲ್ಲಿ ವೀರಶೈವೇತರ ವಂಶದಲ್ಲಿ ಉತ್ಪನ್ನರಾಗಿ, ಗೃಹಸ್ಥಾಶ್ರಮವನ್ನವಲಂಬಿಸಿ ಆ ನಂತರ ಪೂರ್ವಪುಣ್ಯವಿಪಾಕದ ಮೂಲಕ ತಮ್ಮ ಕುಟುಂಬದಿಂದ ಬಿಡುಗಡೆಯನ್ನು ಹೊಂದಿ ಅಲ್ಲಿಂದ ಶ್ರೀ|| ಪ್ರ|| ಕೈ|| ಸಿದ್ಧರಾಮ ಶಿವಯೋಗಿಗಳವರ ಕೃಪಾಶ್ರಯದಲ್ಲಿ ಬಂದು ಸೇರಿ, ಅನುಪಮವೂ ಅನನ್ಯಸಾಧಾರಣವೂ ಆದ ಸ್ವಾಮಿಸೇವೆಯ ಮೂಲಕ ಶ್ರೀ|| ವಿರೂಪಾಕ್ಷಸ್ವಾಮಿಗಳವರ ಪೂರ್ಣಕೃಪೆಗೂ, ಆಶೀರ್ವಾದಕ್ಕೂ ಪಾತ್ರರಾಗುತ್ತ ಬಂದರು. ವಜ್ರವು ಶಿಲೆಯಿಂದುತ್ಪನ್ನವಾದರೂ ತನ್ನ ಸ್ವಭಾವಸಿದ್ಧವಾದ ಪ್ರಕಾಶದ ಮೂಲಕ ಅನರ್ಘ್ಯವಾಗಿ ರಾಜಾಧಿರಾಜರಿಂದಲೂ ಹೇಗೆ ಧಾರಣಯೋಗ್ಯವಾಗುವುದೋ ತದ್ವತ್ ಇವರು ತಾವು ಭವಿಜನ್ಮದಿಂದ ಅವತರಿಸಿದರೂ, ಶ್ರೀ|| ಸಿದ್ಧಲಿಂಗಸ್ವಾಮಿಗಳವರ ಪೂರ್ಣಕೃಪಾಕಟಾಕ್ಷವೀಕ್ಷಣವು ಲಭಿಸಿದ ಮಾತ್ರದಿಂದಲೇ ಪೂರ್ಣಜ್ಞಾನಿಗಳಾಗಿ, ವೀರಶೈವ ಸದಾಚರಣೆಯನ್ನು ತಾವೇ ಪ್ರತ್ಯೇಕವಾಗಿ ಮರಣಾವಧಿ ಜರಗಿಸುತ್ತ ಬಂದರು. ಅನಂತರ ಮಹಾ ಶ್ರೀ|| ಬಸವೇಶ್ವರ ಸ್ವಾಮಿಗಳವರು ಶಿವೈಕ್ಯರಾಗಲು ಅಗ್ಗೆ ತಾವು ಸದರಿ ಚಿಕ್ಕಸೂಗೂರು ಮಠಾಧಿಕಾರಕ್ಕೆ ಅರ್ಹರಾದ ಅಪ್ರಾಪ್ತವಯಸ್ಸಿನ ಶ್ರೀ|| ವಿರೂಪಾಕ್ಷಸ್ವಾಮಿ ಶ್ರೀ|| ಸಿದ್ಧಲಿಂಗಸ್ವಾಮಿಗಳವರ ಪುರೋವೃದ್ಧಿಯ ಕಡೆಗೆ ತುಂಬಾ ಗಮನಂ ಕೊಟ್ಟು ಅವರಿಗೆ ಪ್ರಾಪ್ತವಯಸ್ಸಿನಲ್ಲಿ ೧೦-೧೫ ಸಹಸ್ರ ರೂಪಾಯಿಗಳ ವ್ಯಯದಿಂದ ಅಧಿಕಾರಪ್ರಾಪ್ತಿಯನ್ನೂ ಆಶ್ರಮಸ್ವೀಕಾರವನ್ನೂ ಉಂಟುಮಾಡಿಸಿ, ಅವರ ಪ್ರತಿನಿಧಿಗಳಾಗಿ ಮಠದ ಸಮಸ್ತ ಕಾರ್ಯಭಾರವನ್ನೂ ತಾವೇ ವಹಿಸಿದರು. ಇವರು ತಮ್ಮ ಗುರುಗಳಾದ ಶ್ರೀ|| ಗಳವರ ಸ್ಮಾರಕಾರ್ಥವಾಗಿ ೮-೧೦ ಸಹಸ್ರ ರೂಪಾಯಿಗಳ ಖರ್ಚಿನಿಂದ ಸುಂದರವಾದ ಸಮಾಧಿಮಂಟಪದ ರಚನೆಯನ್ನು ಮಾಡಿಸಿದ್ದಲ್ಲದೆ ಅವರ ವಾರ್ಷಿಕಾರಾಧನೆಯನ್ನು ಪ್ರತಿ ಸಂವತ್ಸರದ ಆಶ್ವಯುಜ ಬಹುಳ ಪಂಚಮಿ ತಿಥಿಯಲ್ಲಿ ಸಹಸ್ರಾವಧಿ ಗಣತೃಪ್ತಿಯೊಡನೆ ಅವಿಚ್ಛಿನ್ನವಾಗಿ ಜರುಗಿಸುತ್ತ ಬಂದರು. ಮಹಾ ಶ್ರೀ|| ಗಳವರ ಪೂರ್ಣಾಶೀರ್ವಾದ ಪ್ರಭಾವದಿಂದಲೂ, ಕಠಿನವಾದ ಸದಾಚರಣೆಯಿಂದಲೂ ಜನಾವಲಂಬನೆ ಮುಂತಾದ ನಿಸರ್ಗವಾದ ಸದ್ಗುಣಾತಿಶಯದ ಮೂಲಕ ಇವರ ಪ್ರತಿಯೊಂದು ಕಾರ್ಯವೂ ಶುಕ್ಲಪಕ್ಷದ ಚಂದ್ರನಂತೆ ಊರ್ಜಿತಾವಸ್ಥೆಯನ್ನೈದಿ ವಿರಾಜಮಾನವಾಗಿ ಜರಗುತ್ತಲೂ ವೀರಶೈವರಲ್ಲೂ ತದಿತರಲ್ಲೂ ಇವರಲ್ಲಿ ಅಕುಟಿಲವಾದ ಪೂಜ್ಯಬುದ್ಧಿಯು ಜನಿಸಿ ಇವರು ಕೈಕೊಳ್ಳುವ ಯಾವ ಘನತರವಾದ ಕಾರ್ಯಕ್ಕೂ ಲೋಪಬಾರದಹಾಗೆ ಪ್ರಜಾವಲಂಬನೆಯು ದೊರೆಯುತ್ತಾ ಬಂತು. ಈ ಮೂಲಕ ಇವರು ಅನೇಕ ಭಕ್ತಜನಸಹಾಯದಿಂ ಲಕ್ಷಾವಧಿ ರೂ.ಗಳ ಖರ್ಚಿನಿಂದ ಭವ್ಯವಾದ ಮಠವನ್ನು ಕಟ್ಟಿಸಿ, ಗತವಿರೋಧಿಕೃತ್ಸಂವತ್ಸರದಲ್ಲಿ ೬೦ ಸಹಸ್ರ ರೂ ಗಳ ಖರ್ಚಿನಿಂದ ಶ್ರೀ|| ಮಹಾಪುರಾಣವನ್ನು ಸಾಗಿಸಿ, ಅನ್ಯಾದೃಶವೆಂಬಂತೆ ಸಾಂಗಪಡಿಸಿದರು. ಈಗಣ ನವನಾಗರಿಕತೆಯ ಲಕ್ಷಣಕ್ಕೂ, ಮಹಾಸಭೆಗಳ ನಿಯಮಗಳಿಗೂ ದುಂದುಗಾರಿಕೆಯ ಕಾರ್ಯಗಳು ಜನಾನುರಾಗಕ್ಕೆ ಪಾತ್ರವಾದವುಗಳಲ್ಲವೆಂಬ ಅಂಶವನ್ನು ಕೂಡ ಗಮನಕ್ಕೆ ತಂದು ವೇ|| ಶ್ರೀ|| ವೈಯಾಕರಣಿ ಗುರುಮೂರ್ತಿಶಾಸ್ತ್ರಿಗಳವರ ಅಧ್ಯಾಪಕತೆಯಲ್ಲಿ ೨೫ ಜನ ವಿದ್ಯಾರ್ಥಿಗಳೊಡನೆ ಮಠದಲ್ಲಿ ಸಂಸ್ಕೃತಪಾಠಶಾಲೆಯನ್ನು ಆರಂಭಿಸಿದರು. ಆದರೂ "ಶ್ರೇಯಾಂಸಿಬಹುವಿಘ್ನಾನಿ" ಎಂಬಂತೆ ಕೆಲ ಅಂತರ್ಕಾರಣಗಳಿಂದಲೂ, ಕಲಿಮಹಿಮೆಯಿಂದಲೂ ಅವರ ಜೀವಮಾನದಲ್ಲಿ ಕೈಕೊಂಡ ಕಾರ್ಯಗಳಲ್ಲಿ ಪಾಠಶಾಲಾಕಾರ್ಯವು ಊರ್ಜಿತಾವಸ್ಥೆಗೆ ಬಾರದೆ ನಿಂತುಹೋಯಿತು. ಅಂತು ಜನಸಾಮಾನ್ಯ ಮಧ್ಯದಲ್ಲಿ ಮನುಷ್ಯಮಾತ್ರರಿಗೆ ದುರ್ಲಭವಾದ ಕೀರ್ತಿಪ್ರತಿಷ್ಠೆಗಳನ್ನು ಇವರು ಪಡೆದು ಕಲೆಕ್ಟರ್ ಕಮಿಷನರ್ ಮುಂತಾದ ರಾಜಕೀಯಾಧಿಕಾರಿ ಜನರಿಂದಲೂ ಮಾನ್ಯರಾಗಿ ತಮ್ಮ ಅಪರ ವಯಸ್ಸಿನ ಪ್ರಾರಂಭದಲ್ಲಿಯೇ ಅನಾರೋಗ್ಯದ ಮೂಲಕ ಗತ ಜ್ಯೇಷ್ಠ ಬಹುಳ ೧೪ ಆದಿತ್ಯವಾರ ಅಪರಾಹ್ನಕಾಲದಲ್ಲಿ ಚಿಕ್ಕಸೂಗೂರು ಮಠದಲ್ಲಿಯೇ ನಶ್ವರವಾದ ಈ ಸ್ಥೂಲಶರೀರವನ್ನು ತ್ಯಜಿಸಿ, ಯಶಶ್ಶರೀರಿಗಳಾಗಿ ಶಿವಾಧೀನರಾದ ವಿಷಾದವಾರ್ತೆಯನ್ನು ತಿಳುಪಲು ತುಂಬಾ ಖೇದವಾಗುತ್ತದೆ. ಮಾರನೇದಿನ ಬ|| ೩೦ ಪರ್ವಕಾಲದಲ್ಲಿ ರಾಯಚೂರು ಪತ್ತನದ ಪ್ರಮುಖಜನರೇ ಮುಂತಾದ ೪-೬ ಸಹಸ್ರ ಜನರಿಂದ ಬಹುಸಮಾರಂಭದೊಡನೆ ಅವರ ಅಂತ್ಯಕ್ರಿಯೆಯು ಜರುಗಿಸಲ್ಪಟ್ಟಿತು. ಮಹೋಪಕಾರಿಗಳಾದ ಇವರ ವಿಯೋಗವು ಈ ನಾಡಿನ ವೀರಶೈವರಿಗೆ ದೊಡ್ಡ ನಷ್ಟವಾಗಿ ಪರಿಣಮಿಸಿತು. ಮಠಾಧೀಶ ಶ್ರೀ|| ಗಳವರಿಗೂ ಸೇವಕೋತ್ತಮನನ್ನು ಕಳೆದುಕೊಂಡಂತಾಯಿತು. ಶಿವಾಜ್ಞೆಗೆ ಪ್ರತಿಯಿಲ್ಲ. ಗತಿಸಿದವರಿಗೆ ಶಿವಸಾಯುಜ್ಯವೂ, ಆಪ್ತರಿಗೆ ಶಾಂತಿಯೂ ಉಂಟಾಗಲೆಂದು ಕೋರಿ, ಈ ಮೂಲಕ ನನ್ನ ಅನುತಾಪವನ್ನು ನಿವೇದಿಸುತ್ತೇನೆ.

ಅವರ ಹಿತೈಸಿ, ಬಸವಲಿಂಗಪ್ಪ, ಮಕ್ತಲ್.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿಕ ಹುರುಕಿನ ಔಷಧ—ಬೆಲೆ ೧ಕ್ಕೆ ೧೮. ೨೫ಕ್ಕೆ ೧-೪-೦.
೨. ಕಣ್ಣುಬೇನೆಯ ಔಷಧ—ಚೀಟು-೧ಕ್ಕೆ ೩ ಪೈ. ೧೦೦ಕ್ಕೆ ೧-೪-೦.
೩. ಹೇನುಶಿರುನಾಶಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಸ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂಗೌಂಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ನೀಲಿ ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
38 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ರಾ|| ಬ|| ನಾರಣ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅತ್ಯಂತ ವಿಷಯಗಳೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

3 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 39

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಟ್ಟದಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಿಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಸೆಪ್ಟಂಬರ್ ತಾ|| ೮ ರಿಂದ ೧೯೧೮ ನೆಯ ಸೆಪ್ಟಂಬರ್ ತಾ|| ೧೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಭಾದ್ರಪದ ಶು|| ತದಿಗೆಯಿಂದ ಭಾದ್ರಪದ ಶು|| ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	[illegible]
8	[1]ಭಾನು	ತದಿಗೆ	34-40	ಹಸ್ತ	11-3	23
9	[2]ಸೋಮ	ಚೌತಿ	39-48	ಚಿತ್ತ	17-37	24
10	[3]ಮಂಗಳ	ಪಂಚ	44-35	ಸ್ವಾತಿ	23-53	25
11	ಬುಧ	ಷಷ್ಠಿ	48-40	ವಿಶಾಖಾ	29-28	26
12	ಗುರು	ಸಪ್ತಮಿ	51-43	ಅನೂ	34-7	27
13	[4]ಶುಕ್ರ	ಅಷ್ಟಮಿ	53-9	ಜ್ಯೇಷ್ಠ	37-37	28
14	ಶನಿ	ನವಮಿ	53-22	ಮೂಲ	39-51	29

(1) ಸ್ವರ್ಣಗೌರೀವ್ರತಂ. (2) ಸಿದ್ಧಿವಿನಾಯಕವ್ರತಂ. (3) ಋಷಿಪಂಚಮಿ, ದಗ್ಧಯೋಗಃ. (4) ಜ್ಯೇಷ್ಠಾಲಕ್ಷ್ಮೀ ಸಿದ್ಧಲಕ್ಷ್ಮೀ-ಮಹಾಲಕ್ಷ್ಮೀವ್ರತಾನಿ

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಸಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ ಸನ್ಮಿತ್ರತೋಷರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತುಮಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಸೆಪ್ಟೆಂಬರ್ ತಾರೀಖು ೨೨ ನೆಯ ಭಾನುವಾರ. (ಸಂಚಿಕೆ ೩೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ, ಸ್ತುತಿಮುಕ್ತಾವಳಿ ೬ ಆಣೆ; ರತ್ನಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ೧೪ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಸೇವಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್‌ಗೋಲ್ಡ್ ಎಂಬ ಬಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4-0-0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
30 3, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೬ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಜಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರವಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿ, ಜಡ್ಡು, ಗುದ್ದವ್ಯನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ತೋರಿದರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
19 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಷ್ಯಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
24 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 46

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆತಿಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಳು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವವು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
39 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಧಾರಾ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯಖರ್ಚು ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸೀಮೆಯ ರೆವಿನ್ಯೂ ಕಮೀಷನರ್ ಮತ್ತು ಇನಾಂ ಕಮೀಷನ್ ಪ್ರೆಸಿಡೆಂಟರವರ ಆಫೀಸ್.

ಬೆಂಗಳೂರು ತಾರೀಖು 3-9-1918.

ಪ್ರಕಟನೆ.

ಇನಾಂದಾರರು ಮತ್ತು ಇನಾಂ ಗ್ರಾಮಗಳ ಹಿಡುವಳಿದಾರರು ಇವರುಗಳ ಹಕ್ಕು ಬಾಧ್ಯತೆ ಮತ್ತು ಸಾಮಾನ್ಯವಾಗಿ ಇನಾಂ ಗ್ರಾಮಗಳ ಆಡಳಿತದ ವಿಚಾರಗಳನ್ನು ಚರ್ಚಿಸಲು ಶ್ರೀಮನ್ ಮಹಾರಾಜಾ ಸರ್ಕಾರದವರು ಸನ್ 1918 ನೆ ಇಸವಿ ಜುಲೈ 18 ನೇ ಮರ್ಖಂ ಆರ್. 1115-22/-ಎಲ್. ಆರ್. 482-17.8 ನೇ ನಂಬರು ಹುಕ್ಕುಮಿನಲ್ಲಿ ಒಂದು ಕಮಿಷನನ್ನು ನೇಮಕರೂರ್ ಮಾಡಿರುತ್ತಾರೆ. ಮೇಲ್ಕಂಡ ವಿಚಾರಗಳಲ್ಲಿ ಆಸಕ್ತಿಯುಳ್ಳವರು ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಇದೇ ಸೆಪ್ಟಂಬರು ಮಾಹೆ ತಾರೀಖು 25 ರೊಳಗಾಗಿ ಕೆಳಗೆ ರುಜುಮಾಡಿರುವವರಿಗೆ ಲಿಖಿತಮೂಲಕವಾಗಿ ತಿಳಿಯಪಡಿಸಬೇಕಾಗಿ ಕೋರಿದೆ. ಕಮಿಷನ್‌ನವರಿಂದ ನೇರ್ಪಾಗಿ ವಿಚಾರಣೆ ಮಾಡಲ್ಪಡಲು ಇಷ್ಟವುಳ್ಳವರು ಸಹಾ ಕೆಳಗೆ ರುಜುಮಾಡಿರುವವರಿಗೆ ತಿಳಿಸಿದಲ್ಲಿ ಆ ಬಗ್ಗೆ ತಕ್ಕ ಏರ್ಪಾಡು ಮಾಡಲಾಗುವದು.

(Sd). C. S. KUPPUSAMY IYENGAR.
ಇನಾಂ ಕಮಿಷನ್ ಸೆಕ್ರಟರಿ.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಸೆಪ್ಟಂಬರ್ ತಾ|| ೨೨ನೆಯ ಭಾನುವಾರ.

ಬೆಲೆ ಹೆಚ್ಚುಗೆ.

ಅಕ್ಕಿ, ಜೋಳ, ರಾಗಿ, ಮೆಣಸಿನಕಾಯಿ ಮೊದಲಾದ ಮುಖ್ಯಾಹಾರ್ಯವಸ್ತುಗಳ ಮತ್ತೂ ಬಟ್ಟೆಬರೆಗಳ ಬೆಲೆಯು ಮಿತಿಮೀರಿ ಹೋಗಿರುವುದಷ್ಟೆ. ಇದಕ್ಕೆ ಕಾರಣವು ನಾನಾ ವಿಧವಾಗಿ ಹೇಳಲ್ಪಡುತ್ತಿದೆ. ವರ್ತಕರೇ ಲಾಭದ ಆಸೆಯಿಂದ ಬೆಲೆ ಹೆಚ್ಚಿಸಿದ್ದಾರೆಂದು ಕೆಲರು ಭಾವಿಸುತ್ತಾರೆ. ಸರ್ಕಾರದವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸರಕುಗಳನ್ನು ಸಾಗಿಸುವುದಕ್ಕೆ ನಿರ್ಬಂಧವನ್ನು ಕಲ್ಪಿಸಿರುವುದರಿಂದ ಹೀಗಾಗಿರುತ್ತದೆಯೆಂದು ಕೆಲರು ಹೇಳುತ್ತಾರೆ. ಹೊಗೆಬಂಡಿಗಳು ತಕ್ಕಷ್ಟು ದೊರೆಯದಿರುವುದರಿಂದ ಸಾಮಗ್ರಿಗಳು ಒಂದುಕಡೆಯಿಂದ ಮತ್ತೊಂದುಕಡೆಗೆ ಸಾಗದೆ ಹೀಗಾಗಿದೆಯೆಂದು ಮತ್ತೆ ಕೆಲರು ಹೇಳುತ್ತಾರೆ. ಪರದೇಶಗಳಿಂದ ಬಟ್ಟೆಬರೆಗಳು ಸಮೃದ್ಧಿಯಾಗಿ ಬರದೆ ಅವುಗಳ ಬೆಲೆ ಹೆಚ್ಚಿದೆಯೆಂದು ಕೆಲರು ಹೇಳುತ್ತಾರೆ. ಮಳೆಬೆಳೆಗಳು ಸಮೃದ್ಧಿಯಾಗಿ ಆಗದೆ ಇರುವುದೇ ಇದಕ್ಕೆಲ್ಲಾ ಕಾರಣವೆಂದು ಹಲವರು ಹೇಳುತ್ತಾರೆ. ಸರ್ಕಾರದವರು ಸೈನ್ಯಗಳಿಗಾಗಿ ಆಹಾರ್ಯವಸ್ತುಗಳನ್ನೂ ಬಟ್ಟೆಬರೆಗಳನ್ನೂ ವಿಶೇಷವಾಗಿ ಸಾಗಿಸಿಕೊಂಡು ಹೋಗುತ್ತಿರುವುದರಿಂದ ಇಂಥ ದುರ್ಭಿಕ್ಷವು ಪ್ರಜೆಗಳಿಗೆ ಪ್ರಾಪ್ತವಾಗಿದೆಯೆಂದು ಮತ್ತೆ ಕೆಲವರು ಹೇಳುತ್ತಾರೆ. ಇವುಗಳೆಲ್ಲವೂ ಕೆಲಕೆಲಮಟ್ಟಿಗೆ ಬೆಲೆ ಹೆಚ್ಚುಗೆಗೆ ಕಾರಣವಾಗಿವೆಯೆಂದು ಹೇಳುವಲ್ಲಿ ಸಂಶಯವಿಲ್ಲ. ಎಲ್ಲಕ್ಕಿಂತಲೂ ಕಟ್ಟಕಡೆಯ ೨ ಕಾರಣಗಳೇ ಪ್ರಬಲವಾದುವುಗಳು. ಅವೆರಡೂ ದುರ್ನಿವಾರಗಳು. ಮಳೆಬೆಳೆಗಳು ದೈವಾಧೀನವಾದುದರಿಂದ ಮಾನವ ಪ್ರಯತ್ನದಲ್ಲಿ ಅದನ್ನು ನಿವಾರಿಸಲಾಗುವುದಿಲ್ಲ. ಯುದ್ಧವೂ ಕೂಡ ದೈವಸಂಕಲ್ಪದಿಂದಲೇ ಪ್ರಾಪ್ತವಾದಂತಿರುವುದರಿಂದಲೂ, ಕಡೆಯತನಕ ಹೋರಾಡಿ ಶತ್ರುಗಳನ್ನು ನಿಗ್ರಹಿಸುವವರೆಗೂ ಪ್ರಪಂಚಕ್ಕೆ ಶಾಂತಿಯುಂಟಾಗುವಹಾಗಿಲ್ಲದಿರುವುದರಿಂದಲೂ ಸಾಧ್ಯವಾಗುವ ಸಹಾಯಗಳನ್ನೆಲ್ಲಾ ಮಾಡಿ ಯುದ್ಧವನ್ನು ಕೊನೆಮುಟ್ಟಿಸುವುದು ಪ್ರಪಂಚಕ್ಷೇಮಕಾಂಕ್ಷಿಯಾದ ಪ್ರತಿಯೊಬ್ಬ ಪ್ರಜೆಗೂ ಕರ್ತವ್ಯವಾಗಿರುವುದರಿಂದಲೂ, ಪ್ರಪಂಚರಕ್ಷಣೆಯಂಥ ಪವಿತ್ರಕಾರ್ಯವನ್ನು ಸಾಧಿಸಲು ತಮ್ಮ ದೇಹಪ್ರಾಣಗಳನ್ನು ಅರ್ಪಿಸುವುದಕ್ಕೂ ಹಿಂದೆಗೆಯದೆ ಕಾದಾಡುತ್ತಿರುವ ಸೈನಿಕರಿಗೆ ಆಹಾರ್ಯಾದಿ ವಸ್ತುಗಳನ್ನು ಸಮೃದ್ಧವಾಗಿ ಒದಗಿಸಿಕೊಡಬೇಕಾದುದು ಸರ್ಕಾರದವರಿಗೂ ಪ್ರಜೆಗಳಿಗೂ ಸಹ ಮುಖ್ಯ ಕರ್ತವ್ಯವಾಗಿರುವುದರಿಂದಲೂ ಸಹ ಹಸಿವಿನಿಂದ ಪ್ರಜೆಗಳು ಸಂಕಟಪಡುತ್ತಿದ್ದರೂ ಸೈನಿಕರನ್ನು ಹೊಟ್ಟೆಗಿಲ್ಲದಂತೆ ಮಾಡುವುದಕ್ಕಾಗುವುದಿಲ್ಲವಾದಕಾರಣ ಆ ಸಂಬಂಧದ ಕಾರಣವೂ ದುರ್ನಿವಾರವಾಗಿಯೇ ಇರುತ್ತದೆ. ಉಳಿದ ಕಾರಣಗಳೆಲ್ಲಾ ಸಾಮಾನ್ಯವಾದುವುಗಳು. ಮತ್ತೂ ಪ್ರಯತ್ನಪಟ್ಟು ಅವುಗಳನ್ನು ತಕ್ಕಮಟ್ಟಿಗೆ ನಿವಾರಿಸಿಕೊಳ್ಳಲೂ ಬಹುದು. ಯುದ್ಧಾರಂಭವಾದಮೇಲೆ ಅನೇಕ ಮಂದಿ ವರ್ತಕರು ಯುದ್ಧದ ನೆಪವನ್ನು ಹೇಳಿ ಒಂದಕ್ಕೆ ನಾಲ್ಕಾಗಿ ಬೆಲೆ ಹೆಚ್ಚಿಸಿ ಅಕ್ರಮಲಾಭವನ್ನು ಮಾಡಿಕೊಂಡಿರುವುದು ಸುಳ್ಳಲ್ಲ. ಆದರೆ ಎಲ್ಲರೂ ಹೀಗೆ ಮಾಡಿರುವರೆಂದು ಹೇಳಲಾಗುವುದಿಲ್ಲ. ಕೆಲರು ಅತಿಲಾಭದ ದುರಾಶೆಮಾಡಿ ಕಡೆಗೆ ಸಮೂಲವಾಗಿ ತಾವೂ ನಾಶವಾಗುವುದಲ್ಲದೆ ತಮ್ಮ ನೆರೆಹೊರೆಯವರ ನಾಶಕ್ಕೂ ಕಾರಣರಾಗುತ್ತಾರೆ. ಕೆಟ್ಟಮೇಲೆ ಅವರಿಗೆ ಬುದ್ಧಿ ಬರುತ್ತದೆ. ಬಡಬಗ್ಗರು ಹಸಿವಿನಿಂದ ಸಾಯಬೇಕಾಗಿ ಬಂದ ಸಂದರ್ಭದಲ್ಲಿ ದೇಹಪ್ರಾಣಾಭಿಮಾನಗಳನ್ನೆಲ್ಲಾ ತೊರೆದು ನಿರಾಶೆಯಿಂದ ಮಾಡಬಾರದ ಕೆಲಸಗಳಿಗೆಲ್ಲಾ ಪ್ರವೃತ್ತರಾಗುತ್ತಾರೆ. ಇದಕ್ಕೆ ಈಗ ಹಲವು ಕಡೆ ಕಣ್ಣಿದಿರಿಗೇ ದೃಷ್ಟಾಂತಗಳಾಗುತ್ತಿವೆ. ಮದ್ರಾಸು ಪಟ್ಟಣದಲ್ಲೇ ೨-೩ ದಿನ ಬೀದಿಬೀದಿಗಳಲ್ಲಿ ಸೂರೆ ನಡೆದು ಸರ್ಕಾರದ ಸೈನಿಕರು ಗುಂಡುಗಳನ್ನು ಹಾರಿಸಿ ಸೂರೆಗಾರರನ್ನು ಚದರಿಸಿ ಕಡೆಗೆ ಸೈನ್ಯದ ಕಾವಲನ್ನಿರಿಸಿ ನಗರದಲ್ಲಿ ಶಾಂತಿಯನ್ನುಂಟುಮಾಡಬೇಕಾಯಿತು. ಮದ್ರಾಸು ಅಧಿಪತ್ಯಕ್ಕೆ ಸೇರಿದ ಕಂಚಿ, ಮಧುರೆ, ಕೃಷ್ಣಾ, ವಿಶಾಖಪಟ್ಣ, ಮಂಗಳೂರು ಮೊದಲಾದ ಹಲವು ಜಿಲ್ಲೆಗಳಲ್ಲಿ ಇಂಥ ಸೂರೆಗಳು ನಡೆದು ವರ್ತಕರ ಲಕ್ಷಾಂತರ ರೂ.ಗಳ ಸರಕುಗಳು ಕ್ಷಣಮಾತ್ರದಲ್ಲಿ ಹಾಳಾಗಿಹೋಗಿರುವುವು. ಇನ್ನೂ ಎಲ್ಲೆಲ್ಲೂ ಸೂರೆಯ ಭಯವು ಇದ್ದೇ ಇರುವುದು. ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಸೂರೆಯಾಗುವುದಕ್ಕಿರುವುದೆಂಬ ಸುದ್ದಿಯು ಮದ್ರಾಸಿನಲ್ಲಿ ಹರಡಿಕೊಂಡಿರುವುದು. ಕಲ್ಕತ್ತಾದಲ್ಲಿ ಇದೇ ಗದ್ದಲದಿಂದ ಬೀದಿಗಳಲ್ಲಿ ಫಿರಂಗಿಗಳನ್ನು ತಂದು ನಿಲ್ಲಿಸಬೇಕಾಯಿತು. ಈ ಗದ್ದಲಗಳಲ್ಲಿ ಸರ್ಕಾರದಕಡೆಯ ಮನುಷ್ಯರಿಗೂ ಸೂರೆಗಾರರ ಪಕ್ಷದವರಿಗೂ ಏಟುಗಳು ಬಿದ್ದು ಗಾಯಗಳಾಗಿ ಮರಣಗಳು ಸಂಭವಿಸಿರುತ್ತವೆ. ದೊಂಬಿಗಾರರಲ್ಲಿ ಅನೇಕರು ಸೆರೆಸಿಕ್ಕಿ ವಿಚಾರಣೆಗೆ ಒಳಪಡಿಸಲ್ಪಟ್ಟು ಶಿಕ್ಷೆಯನ್ನನುಭವಿಸುವುದಕ್ಕೂ ಇರುವರು. ಹೀಗೆ ಈ ವಿಧವಾದ ದೊಂಬಿಯು ಉಭಯಾನರ್ಥಕ್ಕೂ ಮೂಲವಾಗುವುದು. ಈ ಅನರ್ಥಗಳನ್ನೆಲ್ಲಾ ನೋಡಿ ವರ್ತಕರು ಎಚ್ಚತ್ತು ಭೂತದಯೆಯಿಂದ ನಡೆದುಕೊಂಡರೆ ಇಹಪರ ಲಾಭಗಳೆರಡೂ ಅವರಿಗುಂಟು. ಸರ್ಕಾರದವರಿಗೆ ಸರ್ವಪ್ರಜೆಗಳನ್ನೂ ಸಮನಾಗಿ ಕಾಪಾಡುವ ಭಾರವು ಅನಿವಾರ್ಯವಾಗಿರುವುದು. ಇಂಥ ಕಾಲದಲ್ಲಿ ಅವರ ಕರ್ತವ್ಯವು ಅತ್ಯಂತ ದುರ್ಭರವಾಗಿರುವುದು. ಅದಕ್ಕಾಗಿ ಅವರು ತಮ್ಮ ಕರ್ತವ್ಯವನ್ನು ಚತುರ್ವಿಧೋಪಾಯಗಳಿಂದಲೂ ಸಾಗಿಸಲೇಬೇಕಾಗುವುದು. ದೇಶರಕ್ಷಣ ಶಾಸನವು ಅವರಿಗೆ ಈ ಸಮಯದಲ್ಲಿ ವಿಶೇಷಾಧಿಕಾರವನ್ನು ಕೊಟ್ಟಿರುವುದು. ಹೆಚ್ಚಾಗಿ ಸರಕುಗಳಿದ್ದ ಕಡೆಯಿಂದ ಅಂಥ ಸರಕುಗಳಿಗೆ ಅಭಾವವಿರುವಕಡೆಗೆ ಬಲಾತ್ಕಾರದಿಂದಲಾದರೂ ಸಾಗಿಸಿ ಒದಗಿಸುವ ಅಧಿಕಾರವನ್ನು ಅವರು ಈ ಸಮಯದಲ್ಲಿ ಉಪಯೋಗಿಸದೆ ಇರಲಾರರು. ಬಡಬಗ್ಗರ ಆಗ್ರಹಕ್ಕೂ ಸರ್ಕಾರದ ನಿಗ್ರಹಕ್ಕೂ ಪಾತ್ರರಾಗಿ ಬಳಿಕ ವರ್ತಕರು ಕೈಸಡಿಲ ಬಿಡುವುದಕ್ಕಿಂತಲೂ ಮುಂದಾಗಿಯೇ ಎಚ್ಚತ್ತು ಕೆಲಕಾಲ ಅಲ್ಪಲಾಭದಿಂದಲೋ ಅಥವಾ ಲಾಭವೇ ಇಲ್ಲದೆಯೋ ಕೊಂಡಬೆಲೆಗೆ ಮುಖ್ಯಾಹಾರ್ಯ ವಸ್ತುಗಳನ್ನು ಮಾರುವುದಕ್ಕೆ ತೊಡಗುವುದು ಬಹಳ ಶ್ರೇಯಸ್ಕರವು.

ಇನ್ನು ಸರಕುಗಳನ್ನು ಒಂದು ಕಡೆಯಿಂದ ಒಂದು ಕಡೆಗೆ ಸಾಗಿಸುವ ನಿರ್ಬಂಧದ ಕಾರಣವು ಒಂದು ತೆರದಲ್ಲಿ ಅಪೇಕ್ಷಣೀಯವಾಗಿಯೇ ಇರುವುದು; ಒಂದು ತೆರದಲ್ಲಿ ಆಕ್ಷೇಪಣೀಯವೂ ಆಗಿರುವುದು. ಅದುಕಾರಣ ಅದು ಸಂಪೂರ್ಣವಾಗಿ ಪರಿಹರಿಸತಕ್ಕುದಾಗಿಲ್ಲ. ಹೊಗೆಬಂಡಿಗಳು ತಕ್ಕಷ್ಟು ಒದಗದಿರುವ ಕೊರತೆಯು ಯುದ್ಧದ ಕಾರಣದಿಂದಲೇ ಪ್ರಾಪ್ತವಾಗಿದೆ. ಅದನ್ನು ಸಂಪೂರ್ಣವಾಗಿ ತೊಲಗಿಸಲಾಗುವುದಿಲ್ಲ. ವಿದೇಶಗಳಿಂದ ಬಟ್ಟೆಬರೆಗಳು ಬರುವುದಕ್ಕೆ ಅನುಕೂಲ ಕಡಿಮೆಯಾಗಿದೆ. ಮತ್ತೂ ಕೆಲ ಸರಕುಗಳು ಈಗ ಇಲ್ಲಿಗಿಂತಲೂ ಅಲ್ಲೇ ತಗ್ಗಾಗಿರುತ್ತವೆ.

ಈಗ ಸಂಪತ್ತಿರುವ ನಾವುಗಳು ಮಾತ್ರ ಸುಖಪಡೋಣ, ಬಡವರು ಕಷ್ಟಪಟ್ಟರೆ ಪಡಲಿ ಎಂದು ಹೇಳುವ ಕಾಲವಾಗಿಲ್ಲ. ಆಹಾರ್ಯವಸ್ತು ವಿಷಯದಲ್ಲಿ ನಮಗಿಂತ ಹತ್ತುಪಟ್ಟು ಹೆಚ್ಚಾದ ಕಷ್ಟಗಳನ್ನು ಯೂರೋಪುಖಂಡದ ಶ್ರೀಮಂತರು ರಿಕ್ತರು ಮೊದಲಾಗಿ ಸರ್ವಪ್ರಜೆಗಳೂ ಅನುಭವಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಮಳೆಬೆಳೆಗಳು ಸರಿಯಾಗಿ ನಡೆಯಿಸದೆ ಹೋಗಿರುವುದರಿಂದ ಇಷ್ಟು ಕಷ್ಟವು ಈ ವರ್ಷ ಪ್ರಾಪ್ತವಾಗಿದೆ. ಯುದ್ಧವು ಪ್ರಾಪ್ತವಾಗಿ ೪ ವರ್ಷಗಳಾಗಿದ್ದರೂ ಆಗಣಿಂದಲೂ ನಮಗೆ ಇಂಥ ಕಷ್ಟವು ಬಂದಿರಲಿಲ್ಲ. ಈ ವರ್ಷ ನಾವು ಹೇಗೋ ಸುದರಾಯಿಸಿಕೊಂಡರೆ ಮುಂದೆ ಇಷ್ಟು ಕಷ್ಟವು ಪ್ರಾಪ್ತವಾಗಲಾರದು.

ದೇಶದ ಪ್ರಜೆಗಳನ್ನೆಲ್ಲಾ ತಮ್ಮ ಕುಟುಂಬದವರಂತೆ ಪ್ರಭುತ್ವದವರು ಕಾಪಾಡಬೇಕಾಗಿರುವುದರಿಂದ ಅವರು ಆಹಾರ್ಯಾದಿವಸ್ತುಗಳ ಬೆಲೆಯು ನಿಗದಿ ಮತ್ತೂ ಅವನ್ನು ಒದಗಿಸುವುದೇ ಮೊದಲಾದುವುಗಳನ್ನು ಮಾಡಿಸುವುದಕ್ಕಾಗಿಯೇ ಪ್ರತ್ಯೇಕ ಶಾಖೆಯನ್ನೂ ಅಧಿಕಾರಿಗಳನ್ನೂ ಗೊತ್ತುಮಾಡಿದ್ದಾರೆ. ಅವರ ಸಾಹಸದಿಂದ ದೇಶದ ಪ್ರಜೆಗಳ ಕಷ್ಟವು ಅತ್ಯಲ್ಪಣಕ್ಕೆ ಬರಲು ಅವಕಾಶವಾಗಲಾರದು. ವರ್ತಕರೂ ಧನಿಕಪ್ರಜೆಗಳೂ ಅವರಿಗೆ ಒತ್ತಾಸೆಮಾಡಿದಷ್ಟೂ ಅವರ ಪ್ರಯತ್ನಗಳು ದೇಶಸಾಮಾನ್ಯಕ್ಕೂ ಪ್ರಯೋಜಕವಾಗುವುದರಲ್ಲಿ ಸಂಶಯವಿಲ್ಲ.

ನಮ್ಮ ರಾಜಧಾನಿಯಲ್ಲಿ ಸಂತೇಪೇಟೆಯ ಪ್ರಮುಖವರ್ತಕರು ತಾವಾಗಿ ಧರ್ಮಬುದ್ಧಿಯಿಂದ ಇದಕ್ಕಾಗಿ ಒಂದು ಫಂಡನ್ನು ಕಲ್ಪಿಸುವುದಕ್ಕೆ ಪ್ರಯತ್ನಿಸಿ ೬ ಸಾವಿರ ರೂ. ಗಳ ಮೇಲೆಯೇ ಸೇರಿಸಿರುವುದು ಅಭಿನಂದನೀಯವಾಗಿದೆ. ಈ ಫಂಡು ಇನ್ನೂ ಹೆಚ್ಚಾಗಿ ವೃದ್ಧಿಯಾಗಬೇಕು. ಇದಕ್ಕೆ ಸರ್ಕಾರದಿಂದಲೂ ಮ್ಯುನ್ಸಿಪಾಲಿಟಿಯಿಂದಲೂ ಸಹಾಯದ್ರವ್ಯವನ್ನು ಕೂಡಿಸಿ, ಆ ಹಣದ ಬಂಡವಾಳದಿಂದ ಮುಖ್ಯಾಹಾರ್ಯವಸ್ತುಗಳನ್ನು ಕೊಂಡು ಅಸಲು ಬೆಲೆಗೆ ಮಾರುವ ಅಂಗಡಿಗಳನ್ನು ಪ್ರತಿ ಮೊಹಲ್ಲೆಗೂ ಸ್ಥಾಪಿಸಿದರೆ ಹಾಹಾಕಾರವು ಬಲುಮಟ್ಟಿಗೆ ತಗ್ಗುವುದು. ಆದರೆ ರಾಜಕೀಯಾದಿ ಇತರ ವಿಷಯದಲ್ಲೆಲ್ಲಾ ತಾವೇ ಮುಂದೆಂದು ಬರುತ್ತಿರುವ ವಕೀಲರ ಮಂಡಲಿಯು ಇಂಥ ವಿಷಯಗಳಲ್ಲಿ ಮಾತ್ರ ತಲೆಯನ್ನೇ ಇಕ್ಕದಿರುವುದು ಮಾತ್ರ ಧರ್ಮವಾಗಿಲ್ಲ. ಸಂಪಾದನೆಯನ್ನು ಮಾಡುವವರು ವರ್ತಕರೇನೆಯೆ? ಬಡವರ ರಕ್ಷಣೆಯ ಭಾರವೂ ಪುರಕ್ಷೇಮಚಿಂತನೆಯೂ ಅವರಿಗೆ ಮಾತ್ರವೇ ಸೇರಿದೆಯೆ? ಸಂಪಾದನ ಕರ್ತೃಗಳೂ ವಾಚಾಳಿಗಳೂ ಆದ ವಕೀಲರುಗಳು ಈ ವಿಷಯದಲ್ಲಿ ಮುಂದಾಗಿ ನಿಂತು ಚಂದಾ ಕೊಟ್ಟು ಉಪಪನ್ನರಾಗಿರುವ ಎಲ್ಲ ತೆರದ ಜನರಿಂದಲೂ ಇಂಥ ಧರ್ಮಕಾರ್ಯಕ್ಕೆ ಫಂಡನ್ನು ಕೂಡಿಸಲು ಪ್ರಯತ್ನಿಸಬಾರದೆ?

ಪುರನಿವಾಸಿಗಳ ಪುಣ್ಯವಿಶೇಷದಿಂದ ಕರ್ತವ್ಯದಕ್ಷರಾದ ಅನರರಿ ಪ್ರೆಸಿಡೆಂಟರು ನಮ್ಮ ಮ್ಯುನ್ಸಿಪಾಲಿಟಿಗೆ ದೊರೆದಿರುತ್ತಾರೆ. ಅವರು ಈ ವಿಷಯದಲ್ಲಿ ಬಹಳ ಮುಂಜಾಗರೂಕತೆಯಿಂದಲೂ ಮುಖವರ್ಜಿಯಿಂದಲೂ ಕೆಲಸಮಾಡುತ್ತಿರುವುದು ಸಂತೋಷಪ್ರದವಾಗಿದೆ. ಪುರಪ್ರಮುಖರನ್ನೂ ವರ್ತಕರನ್ನೂ ಬರಮಾಡಿಕೊಂಡು ಪದೇಪದೇ ಆಲೋಚಿಸುತ್ತಲೂ ಅಗ್ಗವಾಗಿ ಅಕ್ಕಿ ರಾಗಿಗಳನ್ನು ಮಾರಿಸುವುದಕ್ಕೆ ಉಪಾಯಗಳನ್ನು ಹೇಳುತ್ತಲೂ, ಸಾಧ್ಯವಾದ ಸಹಾಯಗಳನ್ನು ಸರ್ಕಾರದಿಂದ ಮಾಡಿಸಿಕೊಡಲು ಅಭಯಕೊಡುತ್ತಲೂ ಇದ್ದಾರೆ. ಅಕ್ಕಿಯನ್ನು ರೂ. ಗೆ ೬ ಸೇರಿಗೆ ಕಡಿಮೆಯಿಲ್ಲದೆಯೂ, ರಾಗಿಯನ್ನು ೧೨ ಸೇರಿಗೆ ಕಡಿಮೆಯಿಲ್ಲದೆಯೂ ಮಾರುವಂತಾದರೆ ಬಡವರ ಕಷ್ಟವು ಎಷ್ಟೋ ಕಡಿಮೆಯಾದೀತೆಂಬುದು ಅವರ ನಿರೀಕ್ಷಣೆಯಾಗಿದೆ. ಇದನ್ನು ವರ್ತಕರು ನೆರವೇರಿಸುವುದು ದುರ್ಭರವಲ್ಲ. ಅನೇಕ ಮಂದಿ ಧರ್ಮಾತ್ಮರು ಈಗ ಹಾಗೆಯೇ ಮಾರಲುಪಕ್ರಮಿಸಿದ್ದಾರೆ. ಧಾನ್ಯಗಳು ಒದಗುವಂತೆ ಮಾಡುವುದು ಸರ್ಕಾರದವರ ಭಾರವಾಗಿದ್ದರೆ ವರ್ತಕರು ಅಲ್ಪಲಾಭದಿಂದ ಈ ಕಾರ್ಯವನ್ನು ಸಾಧಿಸುವುದು ಕಷ್ಟವಾಗಿರಲಾರದು. ಆದರೆ ಈ ಯೇರ್ಪಾಟಿನಿಂದ ಇದಕ್ಕೆ ಮೊದಲೇ ಹೆಚ್ಚು ಬೆಲೆಗೆ ಕೊಂಡು ಬತ್ತ ಮೊದಲಾದುವುಗಳನ್ನು ಶೇಖರಮಾಡಿಟ್ಟಿರುವವರಿಗೆ ನಷ್ಟವು ತಟ್ಟಬಹುದು. ಆದರೆ ಅಂಥ ಕೆಲರ ರಕ್ಷಣೆಗಾಗಿ ಸಹಸ್ರಗಟ್ಟಲೆ ಪ್ರಜೆಗಳ ಕಷ್ಟವನ್ನು ಹೆಚ್ಚಿಸುವುದಕ್ಕಾದೀತೆ? ವರ್ತಕರು ಉದಾರಚಿತ್ತದಿಂದ ಈ ಕಾರ್ಯವನ್ನು ಸಾಗಿಸದಿದ್ದರೆ ಮ್ಯುನ್ಸಿಪಾಲಿಟಿಯವರಾದರೂ ಸ್ವತಂತ್ರವಾಗಿ ಅಂಗಡಿಗಳನ್ನಿಡಿಸಿ ಮೇಲೆಕಂಡ ಬೆಲೆಯಿಂದ ಅಕ್ಕಿರಾಗಿಗಳನ್ನು ಮಾರಿಸದೆ ಬಿಡುವವರಲ್ಲವಾಗಿ ಕಾಣುತ್ತದೆ. ಇದಕ್ಕಾಗಿ ಪುರನಿವಾಸಿಗಳೆಲ್ಲಾ ಕೃತಜ್ಞರಾಗಿರುವುದರಲ್ಲಿ ಸಂಶಯವಿಲ್ಲ. ಬೆಂಗಳೂರಿನಲ್ಲೂ ಇಂಥ ಏರ್ಪಾಟೇ ನಡೆದಿದೆಯೆಂದು ಕೇಳುತ್ತೇವೆ. ಆದರೆ ಈ ಉದಾರವಾದ ಏರ್ಪಾಟು ಮುಖ್ಯಪಟ್ಟಣಗಳೆರಡರಲ್ಲಿ ಮಾತ್ರ ಆದರೆ ಸಾಲದು. ಪ್ರತಿಯೊಂದು ತಾಲ್ಲೂಕಿನಲ್ಲೂ ಸಂತೆಗಳಲ್ಲೂ ನಡೆಯುವಂತಾಗಬೇಕು. ನಗರನಿವಾಸಿಗಳ ಕಷ್ಟಕ್ಕಿಂತ ಗ್ರಾಮಾಂತರದವರ ಕಷ್ಟವು ನೂರುಭಾಗ ಮಿಗಿಲಾಗಿರುವುದು. ಅದುಕಾರಣ ಸರ್ಕಾರದವರು ಅತ್ತಕಡೆಗೆ ವಿಶೇಷ ಲಕ್ಷ್ಯವನ್ನು ಕೊಡಬೇಕಾಗಿರುವುದು. ಹತ್ತಾರುಲಕ್ಷ ರೂ. ಗಳು ಈ ಸಮಯದಲ್ಲಿ ಸರ್ಕಾರಕ್ಕೆ ವೆಚ್ಚವಾದರೂ ಅದು ಬಹಳ ನ್ಯಾಯವಾದ ವೆಚ್ಚವೇ ಆಗಿರುತ್ತದೆ. ಅದುಕಾರಣ ತಡಮಾಡದೆ ಪ್ರತಿತಾಲ್ಲೂಕಿನ ಅಧಿಕಾರಿಗಳೂ ಮುಖಂಡಪ್ರಜೆಗಳೂ ಈ ವಿಷಯದಲ್ಲಿ ಮಾಡಬೇಕಾದ ಯತ್ನಗಳನ್ನು ಬೇಗನೆ ಕೈಕೊಂಡು ಬೇಕಾದ ಸಹಾಯವನ್ನು ಪ್ರಭುತ್ವದವರಿಂದ ಪಡೆದುಕೊಂಡು ಈಗಣ ವಿಷಮಸ್ಥಿತಿಯ ಸಂಕಟಗಳಿಂದ ಕೆಲಕಾಲದಮಟ್ಟಿಗೆ ಬಡಪ್ರಜೆಗಳನ್ನು ಉದ್ಧಾರಮಾಡುವುದರಲ್ಲಿ ಪಾಲುಮಾಡಲಾರರೆಂದು ನಂಬುತ್ತೇವೆ.

ಯುದ್ಧವಾರ್ತೆಯು.

ಮಿತ್ರಮಂಡಲಿಯ ವಿಜಯವಾರ್ತಾ ಪರಂಪರೆಗಳು ಆಪ್ಯಾಯಮಾನವಾಗಿ ಬರುತ್ತಿವೆ. ಕಳೆದ ೧ ಪಕ್ಷದಲ್ಲಿ ಬಂದಿರುವ ವಾರ್ತೆಗಳೊಳಗೆ ಯುದ್ಧಪಙ್ಕ್ತಿಯ ದಕ್ಷಿಣಭಾಗದಲ್ಲಿ ಎಂದರೆ ವರ್ಡನ್ನಿನ ಪೂರ್ವಭಾಗದಲ್ಲಿ ಒಬ್ಬರಿಗೂ ಗೊತ್ತಾಗಬಾರದಂತೆ ಅಮೇರಿಕನ್ನರ ಲಕ್ಷೋಪಲಕ್ಷ ಸೈನ್ಯಗಳು ಫ್ರೆಂಚರೊಡನೆ ಸೇರಿ ಸೆಂಟ್ ಮಿಹೇಲ್ ಪಟ್ಟಣದ ಕಡೆಗೆ ಅಭಿಮುಖವಾಗಿ ನುಗ್ಗಿ ಯುದ್ಧವನ್ನಾರಂಭಿಸಿದುವು. ಯುದ್ಧಾರಂಭವಾದ ವರ್ಷದಲ್ಲೇ ಜರ್ಮನರು ಇದನ್ನು ಹಿಡಿದುಕೊಂಡು ಮತ್ತಷ್ಟು ಬಲಪಡಿಸಿ ಇದರ ಆಧಾರದಿಂದಲೇ ವರ್ಡನ್ ಕೋಟೆಯಮೇಲೆ ಪದೇಪದೇ ಬೀಳುತ್ತಿದ್ದರು. ಇಂಥ ಆಯಕಟ್ಟಿನ ದುರ್ಗದಿಂದ ರಕ್ಷಿತವಾದ ಸೆಂಟ್ ಮಿಹೇಲ್ ಪುರವನ್ನು ನಮ್ಮವರು ವಶಪಡಿಸಿಕೊಂಡುದಲ್ಲದೆ ಆ ರಂಗದಲ್ಲಿ ಇದುವರೆಗೆ ೧೫ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಶತ್ರುಸೈನಿಕರನ್ನೂ ಫಿರಂಗಿ ಮೊದಲಾದ ಅನೇಕ ಯುದ್ಧೋಪಕರಣಗಳನ್ನೂ ವಶಪಡಿಸಿಕೊಂಡರು. ಅದರ ಬತ್ತಿನಲ್ಲೇ ಇದ್ದ ತಿಯೋಕೋರ್ಟು ಎಂಬ ಇನ್ನೊಂದು ಮುಖ್ಯಪಟ್ಟಣವನ್ನೂ ಆ ಸುತ್ತಣ ಅನೇಕ ಗ್ರಾಮಗಳನ್ನೂ ತಿಯೋಕೋರ್ಟು ಲೋಹಮಾರ್ಗವನ್ನೂ ವಶಪಡಿಸಿಕೊಂಡರು. ಈಗ ಅಮೇರಿಕನ್ ಫ್ರೆಂಚ್ ಸೈನ್ಯಗಳು ಸೆಂಟ್ ಮಿಹೇಲ್‌ನ ವಾಯವ್ಯದ ಮೂಲೆಯಲ್ಲಿ ಇನ್ನೂ ೧೩ ಮೈಲಿಗಳಷ್ಟು ದೂರ ಮುಂದಕ್ಕೆ ಸಾಗಿಹೋಗಿ ಅತ್ತಕಡೆಯಲ್ಲಿರುವ ಮೆಟ್ಜು ಕೋಟೆಯನ್ನು ಫಿರಂಗಿ ಗುಂಡುಗಳಿನಿಂದ ಧ್ವಂಸಮಾಡುತ್ತಿರುವರು. ಆ ಬಳಿಯಲ್ಲಿದ್ದ ೨೦೦ ಫಿರಂಗಿಗಳನ್ನು ವಶಪಡಿಸಿಕೊಂಡರೆಂಬ ವಿಜಯವಾರ್ತೆಯು ಬಂದಿರುವುದು. ಈ ಮೆಟ್ಜು ಕೋಟೆಯು ಜರ್ಮನಿಗೆ ಸೇರಿದುದಾಗಿರುವ ಲೋರೈನ್ ಪ್ರಾಂತದಲ್ಲಿರುತ್ತದೆ. ಎಂದರೆ ಮಿತ್ರಮಂಡಲಿ ಸೈನ್ಯಗಳು ಈ ಭಾಗದಲ್ಲಿ ಫ್ರಾನ್ಸ್ ಎಲ್ಲೆಯನ್ನು ದಾಟಿ ನುಗ್ಗಿಹೋದಂತಾಗಿದೆ. ಈ ಪ್ರಾಂತದ ಮಿತ್ರಮಂಡಲಿ ವಿಜಯದಿಂದ ಶತ್ರುಗಳು ವರ್ಡನ್ನಿನ ಆಸೆಯನ್ನು ಸಂಪೂರ್ಣವಾಗಿ ತ್ಯಜಿಸುವಂತಾದುದು ಮಾತ್ರವೇ ಅಲ್ಲದೆ, ಈ ಸುತ್ತಿನಲ್ಲಿ ನಿಲ್ಲುವುದಕ್ಕೆಡೆಯಿಲ್ಲದೆ ೮-೧೦ ಮೈಲಿ ದೂರದಲ್ಲಿರುವ ಬೆಲ್ಜಿಯಂ ಎಲ್ಲೆಯೊಳಕ್ಕೆ ಹೋಗಿ ಸೇರಿಕೊಳ್ಳುವುದೇ ಅವರಿಗೆ ಗತಿಯಾಗಿರುತ್ತದೆ. ಈಗ ಅವರು ಅತ್ತಕಡೆಗೆ ಹಿಮ್ಮೆಟ್ಟಿಹೋಗುತ್ತಿದ್ದಾರೆ. ತಾವೆಲ್ಲರೂ ಹಿಂದಕ್ಕೆ ಹೋಗುವವರೆಗೆ ಮಿತ್ರಮಂಡಲಿ ಸೈನ್ಯವನ್ನು ತಡೆದಿರಿಸುವುದಕ್ಕೆ ಆಸ್ಟ್ರಿಯನ್ ಸೈನ್ಯವನ್ನು ಅಲ್ಲಿ ನಿಯೋಜಿಸಿದ್ದಾರೆ. ಮಿತ್ರಮಂಡಲಿಯ ಹೊಡೆತವನ್ನು ಆಸ್ಟ್ರಿಯನ್ನರು ತಾಳಲಾರದೆ ವಿಶೇಷ ನಷ್ಟವನ್ನನುಭವಿಸುತ್ತಿದ್ದಾರೆ. ಬಹುಮಂದಿಗಳು ಸೆರೆಯಾಳುಗಳಾಗಿ ಹೋದರು. ಅವರ ೧ ಸೈನ್ಯದ ಫಿರಂಗಿಗಳೆಲ್ಲಾ ಮಿತ್ರಮಂಡಲಿ ವಶವಾಗಿರುವುವು.

ಈರಂಗಕ್ಕೆ ಉತ್ತರದಿಕ್ಕಿನಲ್ಲಿರುವ ಮಿತ್ರಮಂಡಲಿ ಸೈನ್ಯವು ಸೆಂಟ್ ಕ್ವಿಂಟನ್ನಿನ ಕಡೆಗೆ ಸಾಗುತ್ತಿದೆ. ಈ ದುರ್ಭೇದ್ಯವಾದ ಪಟ್ಟಣದ ಉತ್ತರಭಾಗದಲ್ಲಿ ಶತ್ರುಗಳು ಆಧಾರವಾದ ಜಾಗಗಳನ್ನೇಪಡಿಸಿರುವುದರಿಂದ ದಕ್ಷಿಣ ಪಶ್ಚಿಮ ದಿಕ್ಕುಗಳಿಂದ ಇಂಗ್ಲೀಷ್ ಫ್ರೆಂಚ್ ಬೆಲ್ಜಿಯಂ ಸೈನ್ಯಗಳು ಇದರ ಮೇಲೆ ಸಾಗಿಹೋಗುತ್ತಿವೆ. ಇದಕ್ಕೆ ವಾಯವ್ಯದಲ್ಲಿರುವ ಮೊಯಿಸಿಯ ಎಂಬ ಯುದ್ಧಪ್ರಾಮುಖ್ಯಸ್ಥಲವಾದ ಗ್ರಾಮವನ್ನೂ ಅದರಂತೆಯೇ ಬಲವತ್ತರವಾದ ಹಾವ್ರಿಕೋರ್ಟು ಎಂಬ ಸ್ಥಾನವನ್ನೂ ಇಂಗ್ಲೀಷರು ವಶಪಡಿಸಿಕೊಂಡಿರುವರು. ಅವನ್ನು ಮರಳಿ ವಶಪಡಿಸಿಕೊಳ್ಳಬೇಕೆಂದು ಜರ್ಮನರು ಬಹು ನಷ್ಟಕಷ್ಟಗಳನ್ನು ಲೆಕ್ಕಿಸದೆ ಈಗ ಯುದ್ಧಮಾಡುತ್ತಿರುವರು. ಈ ರಂಗದಲ್ಲಿ ಇಂಗ್ಲೀಷ್ ಸೈನಿಕರು ಕಾಂಬ್ರೆ ಎಂಬ ಮುಖ್ಯಪಟ್ಟಣದ ಕಡೆಗೆ ಸಾಗುತ್ತಿದ್ದಾರೆ. ದಾರಿಯಲ್ಲಿ ಅಡ್ಡವಾಗಿರುವ ಮಾರ್ಕ್ವಿಯಿಂಗ್ ಪಟ್ಟಣವನ್ನು ಸಮೀಪಿಸುತ್ತಿದ್ದಾರೆ. ಇದು ವಶವಾದಕೂಡಲೇ ಕಾಂಬ್ರೆ ಪಟ್ಟಣವು ಇವರ ಹಸ್ತಗತವಾಗುತ್ತದೆ. ಅಲ್ಲದೆ ಕಾಂಬ್ರೆ ಪಟ್ಟಣಕ್ಕೆ ಈಶಾನ್ಯದಿಕ್ಕಿನಲ್ಲಿ ೪|| ಮೈಲಿಗಳ ಸಮೀಪದಲ್ಲಿರುವ ಮಾಪ್ರಿಸ್ ಎಂಬ ಗ್ರಾಮವನ್ನು ಇಂಗ್ಲೀಷರು ಹಿಡಿದು ಅಲ್ಲಿ ಫಿರಂಗಿಗಳನ್ನು ಜೋಡಿಸಿ ಕಾಂಬ್ರೆ ಪಟ್ಟಣದ ಮೇಲೆ ಗುಂಡುಗಳನ್ನು ಸುರಿಸುತ್ತಿದ್ದಾರೆ. ಅದುಕಾರಣ ಆ ಪಟ್ಟಣವು ಇಷ್ಟರಲ್ಲೇ ನಮ್ಮವರ ವಶವಾಗುವುದರಲ್ಲಿದೆ. ಫ್ರೆಂಚ್ ಸೈನ್ಯವು ಈ ರಂಗದಲ್ಲಿ ಸೆಂಟ್ ಕ್ವಿಂಟನ್ನಿಗೆ ನೈಋತ್ಯದಲ್ಲಿ ೩|| ಮೈಲಿಗಳ ದೂರಕ್ಕೆ ಬಂದು ಸೇರಿರುತ್ತದೆ. ಇದಲ್ಲದೆ ಫ್ರೆಂಚರು ಇದಕ್ಕೆ ಸ್ವಲ್ಪ ಉತ್ತರದಲ್ಲಿ ಅಯಸ್, ಎಯಿಜ್ ನದಿಗಳ ಮಧ್ಯದಲ್ಲಿ ಮತ್ತೊಂದು ಅವಸ್ಕಂದನವನ್ನು ಸಾಗಿಸುತ್ತಿದ್ದಾರೆ. ಇದು ಚೆಮಿಂಡೇಸ್ ಡೆಮ್ಸ್‌ಡೇಸಿನಲ್ಲಿರುವ ಜರ್ಮನಿ ಸ್ಥಾನಗಳ ಕಡೆಗೆ ಹೋಗುತ್ತಿದೆ. ಇಲ್ಲೂ ಜರ್ಮನರು ಅನೇಕ ಸ್ಥಳಗಳನ್ನು ಕಳೆದುಕೊಂಡು ಹಿಮ್ಮೆಟ್ಟುತ್ತಿದ್ದಾರೆ. ಈ ರಂಗದಲ್ಲಿ ಇದುವರೆಗೆ ೩|| ಸಾವಿರ ಮಂದಿ ಶತ್ರುಸೈನಿಕರು ಸೆರೆಸಿಕ್ಕಿದ್ದಾರೆ.

ಈಗ ಶತ್ರುಗಳ ಸೇನೆಯಲ್ಲಿ ಜನವೂ ಬಲವೂ ಕಡಿಮೆಯಾಗಿ ಅಧೈರ್ಯವು ಹೆಚ್ಚಾಗಿದೆ. ಉತ್ಸಾಹಯುತರಾದ ಮಿತ್ರಮಂಡಲಿ ಸೈನಿಕರ ಮುಂದೆ ಅವರು ಈಗ ಮಾಡುತ್ತಿರುವ ಯುದ್ಧವು ಬಂಡತನದುದಾಗಿದೆ. ಅವರು ಹಿಂಡನ್ಬರ್ಗ್ ಪಙ್ಕ್ತಿಯಲ್ಲೂ ಕೂಡ ನಿಲ್ಲುವುದು ಅಸಾಧ್ಯವಾಗಿ ಕಾಣುತ್ತದೆ. ಅದನ್ನು ಬಿಡುವ ಯೋಚನೆಯನ್ನು ಅವರು ಮಾಡಿರುವಂತಿದೆ. ಆ ಪಂಕ್ತಿಯಲ್ಲಿ ಎಷ್ಟೋಕಡೆ ೧-೨ ಸಾಲುಗಳನ್ನು ನಮ್ಮವರು ಭೇದಿಸಿದ್ದಾರೆ. ಆ ಪಂಕ್ತಿಯ ಮೇಲಿರುವ ಕೆಲವು ಪಟ್ಟಣಗಳು ನಮ್ಮವರ ಫಿರಂಗಿಯೇಟಿನಿಂದ ಸುಟ್ಟು ಉರಿಯುತ್ತಿವೆ. ಶತ್ರುಗಳ ಸೇನಾಪಂಕ್ತಿಯ ಹಿಂಗಡೆಯಲ್ಲಿ ಅವರು ಹೆಂಗುಸರು ಮಕ್ಕಳು ಗಂಡುಸರುಗಳನ್ನೂ ಕೂಡ ತಂದು ನಿಲ್ಲಿಸಿರುವರಂತೆ.

ತಮ್ಮ ದುರ್ಬಲಸ್ಥಿತಿಯನ್ನು ಈಗ ಶತ್ರುಮಂಡಲಿಯವರು ತಿಳಿದುಕೊಂಡು, ಮತ್ತೊಂದುಸಲ ಸಂಧಿಯ ಮಾತುಕತೆಗಳಿಗಾರಂಭಿಸಿದ್ದಾರೆ. ಮಿತ್ರಮಂಡಲಿಯವರು ಹಿಡಿದುಕೊಂಡಿರುವ ಜರ್ಮನಿಯ ಅಧಿನಿವೇಶಗಳನ್ನೆಲ್ಲಾ ಮೊದಲು ಬಿಟ್ಟುಕೊಟ್ಟರೆ ಯುದ್ಧಕ್ಕೆ ಪೂರ್ವದಲ್ಲಿ ಯಾರ್ಯಾರ ರಾಜ್ಯವು ಯಾರ್ಯಾರಿಗಿದ್ದುವೋ ಅವನ್ನು ಬಿಟ್ಟುಕೊಡುವುದಕ್ಕೂ ನಷ್ಟಪರಿಹಾರವನ್ನು ತಾವು ಕೇಳದಿರುವುದಕ್ಕೂ ಸಿದ್ಧರಾಗಿದ್ದೇವೆಂದು ಅವರು ತಿಳಿಯಿಸುತ್ತಿದ್ದಾರೆ. ಆದರೆ ಪೋಲಾಂಡನ್ನು ಮಾತ್ರ ಬಿಡುವುದಿಲ್ಲವಂತೆ. ಸಮುದ್ರಸ್ವಾತಂತ್ರ್ಯವೂ ವ್ಯಾಪಾರಸ್ವಾತಂತ್ರ್ಯಗಳೂ ಸಮನಾಗಿರಬೇಕಂತೆ. ಬೆಲ್ಜಿಯಮ್ಮಿನವರು ಯುದ್ಧ ಮುಗಿಯುವವರೆಗೂ ತಟಸ್ಥರಾಗಿರುವುದಕ್ಕೆ ಒಪ್ಪಿದರೆ ಅವರ ರಾಜ್ಯವನ್ನು ಅವರಿಗೆ ಬಿಟ್ಟುಕೊಡುವ ಸಂಧಿಗೆ ಒಪ್ಪುತ್ತೇವೆಂದು ಅವರೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳುವ ಭೇದೋಪಾಯವನ್ನು ಕೂಡ ಜರ್ಮನರು ಮಾಡಿದರು. ಬೆಲ್ಜಿಯಮ್ಮಿನವರು ಮಿತ್ರಮಂಡಲಿಯವರೊಡನೆ ಆಲೋಚಿಸಿ ಅದಾಗಲಾರದೆಂದು ಉತ್ತರಕೊಟ್ಟರು. ಅಮೇರಿಕನ್ನರು "ನಾವು ಮೊದಲೇ ಹೇಳಿರುವ ನಿಬಂಧನೆಗಳಿಗೊಪ್ಪುವುದಾದರೆ ಸಂಧಿಯ ಮಾತನಾಡಬೇಕು; ಇಲ್ಲದಿದ್ದರೆ ಆ ಮಾತೇ ಬೇಡ. ಮತ್ತೂ ಜರ್ಮನ್ ಪ್ರಭುತ್ವದವರೊಡನಲ್ಲದೆ ಜರ್ಮನ್ ಪ್ರಜೆಗಳೊಡನೆ ನಾವು ಕೆಲಸಮಾಡುತ್ತೇವೆಂಬುದಾಗಿ ತೋರುವವರೆಗೂ ಸಂಧಿಪ್ರಯತ್ನವು ಬೇಕಿಲ್ಲ" ಎಂದು ಉತ್ತರಕೊಟ್ಟರು. ಇಂಗ್ಲೀಷರೂ ಫ್ರೆಂಚರೂ ಹಾಗೆಯೇ ದಿಟ್ಟವಾಗಿ ಉತ್ತರವಿತ್ತು ತಿರಸ್ಕರಿಸಿರುವರು. ಆಸ್ಟ್ರಿಯಾದಲ್ಲಿ ಪ್ರಜೆಗಳು ಆಹಾರ್ಯಾದಿ ಅಭಾವಗಳಿಂದ ಬಹು ಖಿನ್ನರಾಗಿದ್ದಾರೆ. ಅವರನ್ನು ಸಮಾಧಾನಪಡಿಸಿ ಮುಂದಕ್ಕೆ ಯುದ್ಧ ಸಾಗಿಸುವುದು ಪ್ರಭುತ್ವದವರಿಗೆ ಬಹಳ ಕಷ್ಟವಾಗಿದೆ. ಜರ್ಮನಿಯವರ ತಾಪತ್ರಯಗಳೂ ಹೆಚ್ಚಿವೆ. ಧರ್ಮಪಕ್ಷಕ್ಕೆ ಜಗದೀಶನು ಜಯವನ್ನು ಅನುಗ್ರಹಿಸುವ ಕಾಲವು ಸಮೀಪಿಸಿದಂತೆ ಕಾಣುತ್ತಿದೆ.

ಬಾಲ್ಕನ್ ರಂಗದಲ್ಲಿ ಬಲ್ಗೇರಿಯಾ ಸೈನ್ಯದ ಮೇಲೆ ಮಿತ್ರಮಂಡಲಿ ಸೈನ್ಯವು ಯುದ್ಧವನ್ನು ಬಲವಾಗಿ ಆರಂಭಿಸಿ ದೇಶಾಕ್ರಮಣವನ್ನು ಮಾಡಿಕೊಂಡು ಮುಂದಕ್ಕೆ ಸಾಗುತ್ತಿದೆ. ಫ್ರೆಂಚರೂ ಸರ್ವಿಯನ್ನರೂ ಬಹಳ ಸಾಹಸದಿಂದ ಮಾಸಡೋನಿಯಾಪ್ರಾಂತದಲ್ಲಿ ಕಾಳಗ ಮಾಡಿ ಅತಿ ಮುಖ್ಯವಾದ ಕೆಲವು ಪುರಗ್ರಾಮಗಳನ್ನೂ ೮೦ ಫಿರಂಗಿಗಳನ್ನೂ ಬಹಳ ಸಾಮಗ್ರಿಗಳನ್ನೂ ೪ ಸಾವಿರ ಮಂದಿ ಶತ್ರುಸೈನಿಕರನ್ನೂ ವಶಪಡಿಸಿಕೊಂಡರು. ಮೊನಾಸ್ಟರಿನಲ್ಲೂ ಬಲ್ಗೇರಿಯನ್ನರು ಸೋತು ಹಿಮ್ಮೆಟ್ಟುತ್ತಿದ್ದಾರೆ. ಗ್ರೀಕ್ ಸೈನ್ಯವು ೨ ಲಕ್ಷ ಸಿದ್ಧವಾಗಿದೆ. ಬೇಕಿದ್ದರೆ ಇನ್ನೊಂದು ಲಕ್ಷವೂ ಸಿದ್ಧವಾಗುವಹಾಗಿದೆ. ಸಾಲೋನಿಕಾ ರಂಗದಲ್ಲಿ ಒಂದು ದೊಡ್ಡ ಯುದ್ಧವು ಆರಂಭವಾಗುವಂತಿದೆಯೆಂದು ಹೇಳುತ್ತಾರೆ.

ರಷ್ಯಾದಲ್ಲಿ ಬೋಲ್ಷೆವಿಕ್ ಪ್ರಭುತ್ವವು ದಿನದಿನಕ್ಕೆ ಕ್ಷೀಣಿಸುತ್ತಿದೆ. ಪದಭ್ರಷ್ಟ ಜಾರ್‌ರವರ ಪತ್ನೀಪುತ್ರಪುತ್ರಿಯರನ್ನೂ ಕೂಡ ಬೋಲ್ಷೆವಿಕ್ ಪಕ್ಷದವರು ಕೊಂದರೆಂದು ಒಂದು ಸುದ್ದಿಯೂ, ಪತ್ನೀಪುತ್ರಿಯರು ಕಾಪಾಡಲ್ಪಟ್ಟಿರುವರೆಂದು ಮತ್ತೊಂದು ಸುದ್ದಿಯೂ ಬಂದಿರುತ್ತದೆ. ಸೈಬೇರಿಯಾದಲ್ಲಿ ಜಪಾನ್, ಅಮೇರಿಕಾ, ಇಂಗ್ಲಿಷ್, ಪ್ರೆಂಚ್ ಸೈನ್ಯಗಳು ಮುಂದಕ್ಕೆ ನುಗ್ಗಿ ಹೋಗುತ್ತಿವೆ. ಹಾಬ್ಲೋವಿಕ್ಸ್ ಪಟ್ಟಣವು ಇವರ ವಶವಾಯಿತು. ಜಕೋಸ್ಲಾವಕ್ ಸೈನ್ಯವು ಅತ್ಯಂತ ಮುಖ್ಯಸ್ಥಲವಾದ ಕೋಯಾರ್ಕ್ ಎಂಬ ಪುರವನ್ನು ಸೇರಿ ೨೪ ಫಿರಂಗಿಗಳನ್ನೂ ೩೦೦೦ ಮಂದಿ ಶತ್ರುಪಕ್ಷದವರನ್ನೂ ವಶಪಡಿಸಿಕೊಂಡರು. ಆರ್ಕಂಜೇಲ್‌ರಂಗದಲ್ಲಿ ಬೋಲ್ಷೆವಿಕ್ ಸೈನಿಕರು ಬಹು ಪರಾಭವವನ್ನು ಹೊಂದಿ ಪಲಾಯನಗೊಂಡರು. ಬೋಲ್ಷೆವಿಕ್ ನಾಯಕರಲ್ಲಿ ಹಲವರು ಈಗ ಇಂಗ್ಲೀಷ್ ಪಕ್ಷಕ್ಕೆ ಸೇರುತ್ತಿರುವರು. ಜಪಾನರು ಕಾಬರಸ್ಕಿನ ಹತ್ತಿರ ಶತ್ರುಗಳ ನೌಕಾಸ್ಥಾನವೊಂದನ್ನು ವಶಪಡಿಸಿಕೊಂಡರು. ಅಲ್ಲಿ ೧೭ ಸಬ್‌ಮೆರೀನುಗಳೂ, ೪ ಹಡಗುಗಳೂ, ೧೨೦ ಫಿರಂಗಿಗಳೂ ಬಹಳ ಮದ್ದೂ ಗುಂಡು ಮೊದಲಾದ ಸಾಮಗ್ರಿಗಳೂ ಸಿಕ್ಕಿದುವು. ಅಂತಃಕಲಹದಿಂದ ಪೆಟ್ರೋಗ್ರೇಡ್ ಪಟ್ಟಣದಲ್ಲಿ ೧೨ ಕಡೆ ಬೆಂಕಿ ಹೊತ್ತಿ ಉರಿಯುತ್ತಿದೆ. ರಷ್ಯಾದ ದುರವಸ್ಥೆಯು ವಾಚಾಮಗೋಚರವಾಗಿದೆ. ಜನರಲ್ ಬ್ರುಸಿಲಾಫ್ ಎಂಬ ದಳಪತಿಯು ಮಾಸ್ಕೋಪಟ್ಟಣದಲ್ಲಿ ಕೊಲ್ಲಲ್ಪಟ್ಟನು. ತಮಗೆ ವಿರುದ್ಧ ಪಕ್ಷದವರೆಂದು ತೋರಿದವರನ್ನೆಲ್ಲಾ ವಿಚಾರಣೆಯಿಲ್ಲದೆಯೇ ಬೋಲ್ಷೆವಿಕ್ಕರು ಕೊಲ್ಲುತ್ತಿದ್ದಾರೆ. ಇದರಿಂದ ರಷ್ಯಾ ಪ್ರಜೆಗಳೆಲ್ಲಾ ಆ ಪಕ್ಷದವರಿಗೆ ಬದ್ಧವೈರಿಗಳಾಗುತ್ತಿದ್ದಾರೆ. ಅಲ್ಲಿದ್ದ ಇಂಗ್ಲೀಷ್ ರಾಯಭಾರಿಯನ್ನು ಅವರು ಕೊಂದುದಲ್ಲದೆ ಇಂಗ್ಲೀಷ್ ಪ್ರಜೆಗಳನ್ನೂ ಬಂಧಿಸಿರುವರು. ಈ ದೌರ್ಜನ್ಯಗಳನ್ನೆಲ್ಲಾ ನೋಡಿ ತಟಸ್ಥ ರಾಷ್ಟ್ರಗಳವರೂ ಕೂಡ ಸೈರಿಸದೆ ರೇಗಿ ತಮ್ಮ ಸೈನ್ಯಗಳನ್ನು ಅವರ ಮೇಲೆ ಯುದ್ಧಕ್ಕೆ ಕಳುಹಿಸುತ್ತೇವೆಂದು ಭಯಪಡಿಸಿ ಸಂದೇಶವನ್ನು ಕಳುಹಿಸಿದ್ದಾರೆ. ರಷ್ಯಾದಲ್ಲಿದ್ದ ಇತರ ಮಿತ್ರಮಂಡಲಿ ರಾಯಭಾರಿಗಳೆಲ್ಲಾ ಸ್ವದೇಶಗಳಿಗೆ ತೆರಳಿದರು.

ಒಳದೇಶದ ವೃತ್ತಾಂತಗಳು.

ನೀಲಗಿರಿಗೆ ದಯಮಾಡಿಸಿರುವ ಶ್ರೀಮದ್ಯುವರಾಜರವರು ಇಷ್ಟರಲ್ಲೇ ರಾಜಧಾನಿಗೆ ದಯಮಾಡಿಸುವವರಾಗಿದ್ದಾರೆ.

ಕೈ|| ರಾ|| ಬ|| ಗುಬ್ಬಿ ತೋಟದಪ್ಪನವರ ಪುಣ್ಯದಿನ ವಾರ್ಷಿಕ ಮಹೋತ್ಸವವು ಅವರ ಸತ್ರದಲ್ಲಿ ಕಳೆದ ಗುರುವಾರ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ನಡೆದಿತು.

ಶ್ರೀಮನ್ಮಹಾರಾಜರು ಸಪರಿವಾರರಾಗಿ ಬರುವ ಬುಧವಾರ ಸಾಯಂಕಾಲ ರಾಜಧಾನಿಗೆ ಅರಸೀಕೆರೆ ಮೈಸೂರು ಲೋಹಮಾರ್ಗವಾಗಿ ದಯಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ.

ಒಂದು ಪಕ್ಷಕಾಲದಲ್ಲಿ ಕೋಲಾರದಲ್ಲಿ ಚಿನ್ನದ ಗಣಿಗಳಿಂದ ತೋಡಲ್ಪಟ್ಟ ೧೪೦೩೪೮೪೮ ರೂ. ಬೆಲೆಯ ಭಂಗಾರವು ಕಳೆದ ತಾ|| ೧೦ ರಲ್ಲಿ ಬೆಂಗಳೂರಿಂದ ಬೊಂಬಾಯಿ ಟಂಕಸಾಲೆಗೆ ಕಳುಹಿಸಲ್ಪಟ್ಟಿತು.

ರಾಜಧಾನಿಯಲ್ಲಿ ಪ್ಲೇಗಿನ ಹಾವಳಿಯು ಹೆಚ್ಚುತ್ತಲಿದೆ. ಮ|| ಸಾ|| ಬನುಮಯ್ಯನವರೇ ಮೊದಲಾದ ಅನೇಕ ವರ್ತಕರು ರಾಗಿಯನ್ನು ರೂ. ಗೆ ೧೨ ಸೇರಿನಂತೆಯೂ, ಅಕ್ಕಿಯನ್ನು ೬ ಸೇರಿನಂತೆಯೂ ಮಾರಿಸುತ್ತಿದ್ದಾರೆ.

ರಾಜಧಾನಿಯ ಕೃಷ್ಣರಾಜ ಆಸ್ಪತ್ರೆಯ ಸರ್ಜನ್‌ರಾಗಿರುವ ಮ|| ಸಿ. ಎ. ನಂಜಪ್ಪನವರು ಇಷ್ಟರಲ್ಲೇ ರಜಾದಮೇಲೆ ಹೋಗುವವರಾಗಿರುವುದರಿಂದ ಅವರ ಭಾರವನ್ನು ಡಾ|| ಕೃಷ್ಣಸ್ವಾಮಯ್ಯರ್‌ರವರು ವಹಿಸಿಕೊಳ್ಳುವುದರಲ್ಲಿದ್ದಾರೆ.

ಸೀಮೆಗೆ ಹೋಗಿ ಎಲೆಕ್ಟ್ರಿಕ್ಸ್ ಇಂಜನಿಯರಿಂಗ್ ಮೊದಲಾದ ವಿದ್ಯಾಪರೀಕ್ಷೆಕೊಟ್ಟು ಬಂದ ತಮ್ಮ ಕುಮಾರರನ್ನು ಡಾಕ್ಟರ್ ಕೃಷ್ಣಸ್ವಾಮಯ್ಯರ್‌ರವರು ಬೊಂಬಾಯಿಯಿಂದ ಕಳೆದ ಬುಧವಾರ ರಾಜಧಾನಿಗೆ ಕರೆದುಕೊಂಡು ಬಂದರು.

ಹುಣಸೂರು ತಾ|| ಅಮಲ್ದಾರ್ ಮ|| ಲಿಂಗಯ್ಯನವರು ಶಿವಮೊಗ್ಗೆಗೂ, ಹೊಳೆನರಸೀಪುರದ ಅಮಲ್ದಾರರಾಗಿದ್ದ ಮಿ|| ಮೊಹಿಯುದ್ದೀನ್ ಷರೀಫ್‌ರವರು ಹುಣಸೂರಿಗೂ, ಎಡತೊರೆ ಅಮಲ್ದಾರರಾಗಿದ್ದ ಮ|| ಆರ್. ರಾಮಯ್ಯನಾಯಡುರವರು ಹುಣಸೂರಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಳೆದ ಭಾನುವಾರ ರಾತ್ರಿಯೂ ಮಂಗಳವಾರ ಹಗಲೂ ಸಹ ರಾಜಧಾನಿಯಲ್ಲಿ ಒಳ್ಳೆಯ ಹದವಾದ ಮಳೆಗಳಾದುವು. ಈ ಉತ್ತರೆ ಮಳೆಯು ಮೈಸೂರು ಡಿಸ್ಟ್ರಿಕ್ಟಿನ ಬಹುಕಡೆಗಳಲ್ಲಿ ನಡೆಯಿತು. ರೈತರ ಮನಸ್ಸನ್ನು ಸ್ವಲ್ಪಮಟ್ಟಿಗೆ ಶಾಂತಿಪಡಿಸಿದೆಯೆಂದು ಕೇಳುತ್ತೇವೆ. ಇನ್ನೂ ಮಳೆ ಬರುವ ಲಕ್ಷಣವಿದೆ.

ಬೆಂಗಳೂರಿನಲ್ಲಿ ಲೂಟಿಮಾಡಲ್ಪಡುವುವೆಂಬ ಪತ್ರಿಕೆಗಳು ಅಲ್ಲಲ್ಲಿ ಗೋಡೆಗಳಿಗೆ ಹಚ್ಚಲ್ಪಟ್ಟಿದ್ದುವು. ಪೊಲೀಸರೂ ಸೈನಿಕರೂ ಎಚ್ಚರಿಕೆಯಿಂದ ಕಾವಲುಕೊಡಲುಪಕ್ರಮಿಸಿದರು. ಗದ್ದಲವೇನೂ ಆಗಲಿಲ್ಲ. ರಾಗಿಯನ್ನು ರೂ. ಗೆ ೧೨ ಸೇರಿನಂತೆ ಮಾರುವ ೭-೮ ಅಂಗಡಿಗಳು ಸರ್ಕಾರದವರಿಂದ ಇಡಿಸಲ್ಪಟ್ಟಿವೆ. ಕಳೆದವಾರದಲ್ಲಿ ಬೆಂಗಳೂರಿನಲ್ಲೂ ಮಳೆಯಾದ ವರ್ತಮಾನ ಬಂದಿದೆ.

ರಾಜಧಾನಿಯ ಮ್ಯುನ್ಸಿಪಲ್ ವೈಸ್‌ಪ್ರೆಸಿಡೆಂಟ್‌ಗಿರಿಗೆ ಮ|| ಅಡ್ವೊಕೇಟ್ ಎಂ. ಎನ್. ಸುಬ್ಬಣ್ಣ, ಬಿ.ಎ., ಎಲ್‌ಎಲ್.ಬಿ. ಯವರೂ, ಮ|| ದೇಶಿಕಾಚಾರ್ ಬಿ.ಎ. ಯವರೂ ಉಮೇದುವಾರರಾಗಿ ನಿಂತಿದ್ದರು. ಕೌನ್ಸಿಲರುಗಳಲ್ಲಿ ೪ ಮಂದಿ ಬರದೆ ಸುಬ್ಬಣ್ಣನವರಿಗೆ ೧೪, ದೇಶಿಕಾಚಾರರಿಗೆ ೧೨ ಓಟುಗಳು ಬಂದುದರಿಂದ ಇಬ್ಬರೂ ವಿಫಲರಾದರು.

ಅರ್ಥಸಾಧಕಪತ್ರಿಕೆಯು ಮೈಸೂರು ಸರ್ಕಾರಿ ಪತ್ರಿಕೆಯಷ್ಟೆ. ಅದು ಭರತಖಂಡದ ರಾಜಕೀಯ ಪಕ್ಷಗಳಲ್ಲಿ ಯಾವುದಕ್ಕೂ ಸೇರದೆ ದೇಶದ ಸಂಪದಭ್ಯುದಯ ಚಿಂತೆಗಾಗಿಯೇ ನಡುಕಟ್ಟಿರುವುದೆಂದು ನಾವು ಇದುವರೆಗೂ ತಿಳಿದಿದ್ದೆವು. ಈಗ ಅದು ತನ್ನ ಉಗ್ರವಾದಿ ಮತವನ್ನು ಮೆಲ್ಲಮೆಲ್ಲನೆ ಹೊರಗೆಡಹುತ್ತಿದೆಯೆಂದು ತಿಳಿಯುತ್ತದೆ. ಉಗ್ರವಾದಿ ಮುಖಂಡರಾದ ಅನಿಬೆಸೆಂಟರನ್ನು ಲೋಕಮಾತೆಯೆಂಬುದಾಗಿಯೂ, ತಿಲಕರನ್ನು ಲೋಕಮಾನ್ಯರೆಂಬುದಾಗಿಯೂ ಹೊಗಳಿ, ಮಿತವಾದಿ ಪ್ರಮುಖರಾದ ಸರ್ ವಾಛಾರವರನ್ನು ಸರ್ ದಿನ್‌ಷಾವಾಛಾ ಎಂದು ಕರೆದು ತಾ|| ೬ ರ ಸಂಚಿಕೆಯಲ್ಲಿ ಗೇಲಿಮಾಡಿರುತ್ತದೆ. ಇಂಥ ಲೇಖನಗಳಿಂದ ನಮ್ಮ ಗೌರ್ನಮೆಂಟೂ ಕೂಡ ಉಗ್ರವಾದಿ ಪಕ್ಷಕ್ಕೆ ಸೇರಿದುದೆಂದು ತಿಳಿಯಲವಕಾಶವಾಗುವುದಿಲ್ಲವೆ?

ವಿದ್ಯಾಶಾಖೆ.

ನೋಟಿಫಿಕೇಷನ್ D ನಂ. 31 ತಾ|| 7 ನೆಯ ಸೆಪ್ಟಂಬರ್ 1918

ಯುನಾನಿ ವಿದ್ಯಾರ್ಥಿ ವೇತನ.

1. ಯುನಾನಿ ವೈದ್ಯವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಬೇಕೆಂಬುದ್ದೇಶದಿಂದ ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರು ಡಿಲ್ಲಿಯಲ್ಲಿರುವ ಆಯುರ್ವೇದ ಮತ್ತು ಯುನಾನಿ ಟಿಬ್ಬಕಾಲೇಜಿನಲ್ಲಿ 5 ವರ್ಷ ಕಾಲ ವ್ಯಾಸಂಗಮಾಡಲು ಒಬ್ಬ ವಿದ್ಯಾರ್ಥಿಗೆ ತಿಂಗಳೊಂದಕ್ಕೆ 25 ರೂ. ವೇತನವನ್ನು ಕೊಡಲಪ್ಪಣೆಮಾಡಿರುತ್ತಾರೆ.

2. ಈ ವೇತನವನ್ನಪೇಕ್ಷಿಸಿ ಬರೆದುಕೊಳ್ಳತಕ್ಕವರು 25 ವರ್ಷ ವಯಸ್ಸಿನೊಳಗಿರಬೇಕಲ್ಲದೆ ಮೈಸೂರು ಅಪ್ಪರ್‌ಸೆಕೆಂಡರಿ ತರಗತಿಗೆ ಸಮನಾಗಿ ಅರಾಬಿಕ್ ಭಾಷೆಯಲ್ಲಿ ಪರಿಶ್ರಮವುಳ್ಳವರಾಗಿರಬೇಕು.

3. ಆರಿಸಲ್ಪಟ್ಟ ವಿದ್ಯಾರ್ಥಿಗೆ ವರ್ಷದಲ್ಲಿ ಒಂದಾವೃತ್ತಿ ಡಿಲ್ಲಿಗೆ ಹೋಗಿಬರಲು 3 ನೆಯ ತರಗತಿಯ ರೈಲು ಛಾರ್ಜು ಕೊಡಲ್ಪಡುವುದು.

4. ವಿದ್ಯಾರ್ಥಿಯು ವ್ಯಾಸಂಗಮಾಡಿ ಬಂದ ನಂತರ ಅಪೇಕ್ಷಿಸಲ್ಪಟ್ಟಲ್ಲಿ ಸರ್ಕಾರದಲ್ಲಾಗಲಿ ಅಥವಾ ಲೋಕಲ್ ಬೋರ್ಡಿನಲ್ಲಾಗಲಿ ಗೊತ್ತುಮಾಡಲ್ಪಡುವ ಸಂಬಳದ ಮೇಲೆ 5 ವರ್ಷಕ್ಕೆ ಕಡಿಮೆಯಿಲ್ಲದೆ ಕೆಲಸಮಾಡಲೊಪ್ಪಿ ಪತ್ರವನ್ನು ಬರೆದುಕೊಡಬೇಕು.

5. ವೇತನವು ಪ್ರಥಮತಃ 1 ವರ್ಷಕ್ಕೆ ಮಾತ್ರ ಕೊಡಲ್ಪಟ್ಟದ್ದು ವಿದ್ಯಾರ್ಥಿಯ ವ್ಯಾಸಂಗವೂ ನಡತೆಯೂ ಸಮರ್ಪಕವಾಗಿ ಕಂಡುಬಂದಲ್ಲಿ ವೇತನವು ಪ್ರತಿವರ್ಷದಲ್ಲೂ ಕೊಡಲ್ಪಡುವುದು.

6. ಕಾಲೇಜಿನಲ್ಲಿ ವ್ಯಾಸಂಗಕ್ಕಾಗಿ ಫೀಯನ್ನೇನೂ ಕೊಡಬೇಕಾದುದಿಲ್ಲವು. ಅಲ್ಲಿಯ ವ್ಯಾಸಂಗದ ಕಾಲಾವಧಿಯು ಈ ತಿಂಗಳಲ್ಲಿ ಪ್ರಾರಂಭವಾಗುವುದು.

7. ಇಷ್ಟವುಳ್ಳವರು ಈ ಕೆಳಗಿನ ವಿಷಯಕ್ಕೆ ವಿವರವನ್ನು ಕಾಣಿಸಿ 1918 ನೆಯ ಅಕ್ಟೋಬರ್ ತಾ|| 1 ರೊಳಗೆ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದು.—

   1. ಪೂರ್ಣವಾದ ಹೆಸರು ಮತ್ತು ವಿಳಾಸ.
   2. ತಂದೆ ಅಥವಾ ಪೋಷಕರ ಹೆಸರು ಮತ್ತು ಕಸಬು.
   3. ವಯಸ್ಸು.
   4. ವಿದ್ಯಾಸಂಬಂಧವಾದ ಯೋಗ್ಯತೆ.
   5. ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಸಮನಾಗಿ ಅರಾಬಿಕ್ ಭಾಷೆಯಲ್ಲಿ ಪರಿಚಯವಿರುವುದೆಂಬುದಕ್ಕೆ ಸರ್ಟಿಫಿಕೇಟು.

M. S. Mehkri, ಇನ್‌ಸ್ಪೆಕ್ಟರ್ ಜನರಲ್‌ರವರಿಗಾಗಿ.

ಮರಿಮಲ್ಲಪ್ಪನವರ ಹೈಸ್ಕೂಲು ಹೆಡ್ಮಾಸ್ಟರ್‌ಗಿರಿ.

ಸ್ವಾಮಿ!

ಮ|| ವೆಂಕಟಕೃಷ್ಣಯ್ಯನವರ ಹೆಡ್ಮಾಸ್ಟರ್ ಗಿರಿಯ ವಿಷಯವಾಗಿ ಶ್ರೀಮನ್ಮಹಾರಾಜರವರ ಸನ್ನಿಧಿಗೆ ಒಂದು ಅರ್ಜಿಯನ್ನು ಮೈಸೂರು ಪ್ರಜೆಗಳು ಬರೆದುಕೊಂಡಿದ್ದಾರೆಂದು ಅದರ ನಕಲು ಸತ್ಯವಾದಿ ಪತ್ರಿಕೆಯಲ್ಲಿ ಪ್ರಕಟಿತವಾಗಿದೆ. ಮರಿಮಲ್ಲಪ್ಪನವರ ಸ್ಕೂಲು ಮ|| ವೆಂಕಟಕೃಷ್ಣಯ್ಯನವರ ಸಾಹಸದಿಂದಲೇ ಈಗಿನ ಅಭಿವೃದ್ಧಿಸ್ಥಿತಿಗೆ ಬಂದಿರುವುದೆಂದೂ, ಇವರು ಸಕಲ ರಾಜಕೀಯ ಸಾರ್ವಜನಿಕ ಸಮಾಜಗಳಲ್ಲಿ ಪ್ರಧಾನರಾಗಿರುವರೆಂದೂ, ಇಂಥಾವರನ್ನು ಕೆಲವು ಕಮಿಟಿ ಮೆಂಬರುಗಳು ರಿಟೈರ್ ಮಾಡುವುದಕ್ಕೆ ಏರ್ಪಡಿಸಿದ್ದಾರೆಂದೂ, ಇವರ ಟ್ರಸ್ಟ್‌ಬೋರ್ಡಿನಲ್ಲಿ ೫ ಜನ ಮೆಂಬರುಗಳಿರಬೇಕೆಂದು ಅಪೀಲ್‌ಕೋರ್ಟು ಡಿಕ್ರಿಯಲ್ಲಿ ನಿಷ್ಕರ್ಷೆಯಾಗಿದ್ದರೂ ೧೧ ಜನಗಳನ್ನು ನಿಯಮಿಸಿದ್ದಾರೆಂದೂ, ಲಿಂಗಾಯತೇತರ ವಿದ್ಯಾರ್ಥಿಗಳಿಗೆ ತಕ್ಕಷ್ಟು ಪ್ರತಿನಿಧಿಗಳು ಟ್ರಸ್ಟ್‌ಬೋರ್ಡಿನಲ್ಲಿರುವದಿಲ್ಲವೆಂದೂ, ವಯಸ್ಸಿನಲ್ಲಿ ಮ|| ವೆಂಕಟಕೃಷ್ಣಯ್ಯನವರು ವೃದ್ಧರಾಗಿದ್ದಾಗ್ಯೂ ಪೂರ್ವವಯಸ್ಸಿನವರಿಗಿಂತಲೂ ಬಹಳ ಚಟುವಟಿಕೆಯಿಂದ ಅಹೋರಾತ್ರಿಯಲ್ಲಿಯೂ ಕೆಲಸಮಾಡುವ ಉತ್ಸಾಹವುಳ್ಳವರಾಗಿದ್ದಾರೆಂದೂ, ಇವರನ್ನು ಈಗಲೇ ರಿಟೈರ್ ಮಾಡಿಸದೆ ಸರ್ವೀಸಿನಲ್ಲಿ ಇನ್ನೂ ಕೆಲವುಕಾಲ ಇಡಿಸಿಕೊಡಬೇಕೆಂದೂ ಈ ಅರ್ಜಿಯಲ್ಲಿ ಪ್ರಾರ್ಥನೆಮಾಡಲ್ಪಟ್ಟಿದೆ. ಈ ಅರ್ಜಿಯ ಕೆಳಗೆ "ಜಿ. ರಾಮರಾವ್ ಪಬ್ಲಿಕ್ ಸಿಂಪಥೈಜರ್ ಮೈಸೂರು. ಕಾರ್ಯದರ್ಶಿ" ಎಂದು ಒಂದುಕಡೆಯೂ, ಇನ್ನೊಂದುಕಡೆ "ಮಹಾಪ್ರಭುಗಳಾದ ತಮ್ಮ ಪ್ರಜೆಗಳು" ಎಂದೂ ಅಚ್ಚಾಗಿದೆ. ಈ ರಾಮರಾಯರನ್ನು ಪಬ್ಲಿಕ್ ಸಿಂಪಥೈಜರೆಂದು ಮ|| ವೆಂಕಟಕೃಷ್ಣಯ್ಯನವರ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳು ಧ್ವಜಪತಾಕೆಯಂತೆ ಮೆರಿಸುತ್ತಿರುವುವು. ಅದಕ್ಕೆ ಪ್ರತ್ಯುಪಕಾರವಾಗಿ ವೆಂಕಟಕೃಷ್ಣಯ್ಯನವರನ್ನು ಪರಿಪೋಷಿಸಲು ಈ ರಾಯರು ಈ ರೂಪದಿಂದ ಪ್ರಯತ್ನಿಸಿರಬಹುದು. ಆದರೆ ಇವರು ಕಾರ್ಯದರ್ಶಿ ಎಂದು ಬರೆದುಕೊಂಡಿರುವುದು ಯಾವ ಸಂಘಕ್ಕೊ? ಆ ಸಂಘದ ಹೆಸರೇನೊ? ಅದಕ್ಕೆ ಪ್ರೆಸಿಡೆಂಟರ್ಯಾರೋ ಗೊತ್ತಾಗಲಿಲ್ಲ. ಈ ರಾಯರು ಬೀದಿಬೀದಿಗಳಲ್ಲಿ ಅಂಗಡಿಗಳ ಬಾಗಿಲಿಗೆ ಹೋಗಿ ಬೇಡಿಕೊಂಡು ಕೆಲವರ ರುಜುಗಳನ್ನು ತೆಗೆದುಕೊಂಡು ಬಂದರೆಂದು ಈ ಮೊದಲೇ ಪುಕಾರಾಗಿತ್ತು. ಅದೇ ಈ ಅರ್ಜಿಯಾಗಿರಬಹುದೋ ಏನೊ? ಅದು ಹೇಗಾದರೂ ಇರಲಿ. ಅರ್ಜಿಯಲ್ಲಿ ಕಂಡಂಶಗಳ ಯುಕ್ತಾಯುಕ್ತತೆಯನ್ನು ಸ್ವಲ್ಪ ವಿಚಾರಮಾಡಿದರೆ ಅದು ಎಷ್ಟುಮಟ್ಟಿಗೆ ಸಫಲವಾಗುವುದೋ ಅದು ಗೊತ್ತಾಗುವುದು. ಮರಿಮಲ್ಲಪ್ಪನವರ ಸ್ಕೂಲು ಗೌರ್ನಮೆಂಟ್ ಸ್ಕೂಲಲ್ಲ. ಗ್ರಾಂಟಿನೇಡ್ ಸ್ಕೂಲಾಗಿರುತ್ತದೆ. ಇದು ಗೌರ್ನಮೆಂಟ್ ಸ್ಕೂಲಾಗಿದ್ದರೆ ೨೦ ವರ್ಷಕ್ಕೆ ಹಿಂದೆಯೇ ಮ|| ವೆಂಕಟಕೃಷ್ಣಯ್ಯನವರು ರಿಟೈರಾಗಿ ಕುಳಿತುಕೊಳ್ಳುತ್ತಿದ್ದರು. ಈ ಸ್ಕೂಲಿನ ಅಂತರ್ವ್ಯವಸ್ಥೆಗೆ ಒಂದು ಟ್ರಸ್ಟ್‌ಕಮಿಟಿಯೂ ಮೇಲ್ವಿಚಾರಣೆಗೆ ಡಿಸ್ಟ್ರಿಕ್ಟ್ ಜಡ್ಜರೂ ಕರ್ತರಾಗಿರುತ್ತಾರೆ. ಮ್ಯಾಸ್ಟರುಗಳನ್ನು ನಿಯಮಿಸುವುದಕ್ಕೂ ತೆಗೆಯುವುದು ಮೊದಲಾದ ಕೆಲಸಗಳಿಗೂ ಟ್ರಸ್ಟ್‌ಕಮಿಟಿಯು ಅಧಿಕಾರಿಯಾಗಿರುತ್ತದೆ. ಇದರ ಆಗುಹೋಗುಗಳೆಲ್ಲಾ ಅವರುಗಳಿಗೆ ಕಟ್ಟುಬಿದ್ದಿರುತ್ತದೆ. ಹೀಗಿರುವುದರಿಂದ ಅಪ್ರಕೃತವಾಗಿ ಇದರಲ್ಲಿ ಸಂಬಂಧವನ್ನು ಶ್ರೀಮನ್ಮಹಾರಾಜರವರು ಕಲ್ಪಿಸಿಕೊಳ್ಳುವಹಾಗೆಯೇ ಇಲ್ಲ. ಇದನ್ನು ವಿಚಾರಮಾಡದೆ ಅರಿಯದ ಜನರಿಗೆ ಏನೇನೋ ಬೋಧಿಸಿ ರುಜುಮಾಡಿಸಿ ರವಾನಿಸಿರುವುದು ಬರಿಯ ಗದ್ದಲವಾಗಿಯೂ ಗಾಳಿಗುದ್ದಿ ಮೈನೋಯಿಸಿಕೊಳ್ಳುವ ಪ್ರಯತ್ನದಂತೆಯೂ ಇರುತ್ತದೆ.

ಟ್ರಸ್ಟ್‌ಬೋರ್ಡಿನಲ್ಲಿ ೫ ಜನ ಮೆಂಬರುಗಳಿರಬೇಕಾದುದಕ್ಕೆ ಈಗ ೧೧ ಜನರನ್ನು ನಿಯಮಿಸಿಕೊಂಡಿರುವರೆಂದು ಅರ್ಜಿಯಲ್ಲಿ ಬರೆದಿರುವ ಮಾತು ಸುಳ್ಳಾಗಿಯೂ ತಿಳಿಯದ ಜನರನ್ನು ವಂಚಿಸುವುದಾಗಿಯೂ ಇರುತ್ತದೆ. ಸುಮಾರು ೨೫ ವರ್ಷಗಳ ಮೇಲಿಂದಲೂ ಈ ಕಮಿಟಿಯಲ್ಲಿ ೧೧ ಮಂದಿ ಮೆಂಬರುಗಳು ನಿಯಮಿತರಾಗಿ ಬಂದಿದ್ದಾರೆ. ಅದನ್ನು ಡಿಸ್ಟ್ರಿಕ್ಟ್‌ಜಡ್ಜಿಗಳು ಒಪ್ಪಿಕೊಂಡೇ ಬಂದಿದ್ದಾರೆ. ಈ ಕಮಿಟಿಯಲ್ಲಿ ಕನಿಷ್ಠಪಕ್ಷ ೫ ಮಂದಿಯಾದರೂ ಲಿಂಗಾಯತ ಮೆಂಬರುಗಳು ಇದ್ದೇ ಇರಬೇಕೆಂದು ಡಿಸ್ಟ್ರಿಕ್ಟ್‌ಜಡ್ಜ್ ಕ್ರಸ್ ಸಾಹೇಬರು ಆರ್ಡರ್ ಮಾಡಿದ್ದಾರೆ. ಹೀಗಿರುವಲ್ಲಿ ಅದನ್ನೆಲ್ಲಾ ಮರೆಮಾಚಿ, ಈಗ ೧೧ ಜನ ಮೆಂಬರನ್ನು ಕಮಿಟಿಯಲ್ಲಿ ನಿಯಮಿಸಿಕೊಂಡಿರುತ್ತಾರೆಂದು ಅರ್ಜಿಯಲ್ಲಿ ಬರೆದು ಶ್ರೀಮನ್ಮಹಾರಾಜರವರಿಗೆ ಸುಳ್ಳನ್ನು ಶ್ರುತಪಡಿಸಿರುವದು ಮಹಾಪರಾಧವಲ್ಲವೆ? ಈ ಒಳಗುಟ್ಟನ್ನೆಲ್ಲಾ ತಿಳಿಯದ ಜನರಿಗೆ ಏನೇನೋ ಹೇಳಿ ರುಜುಮಾಡಿಸಿರುವುದು ಮಹಾದೋಷವಲ್ಲವೆ? ಸ್ಕೂಲು ಅಭಿವೃದ್ಧಿಯಲ್ಲಿದೆಯೆಂದು ವಾದಸಂದರ್ಭಕ್ಕೆ ಒಪ್ಪಿಕೊಂಡರೂ, ಅದಕ್ಕೆ ಮ|| ವೆಂಕಟಕೃಷ್ಣಯ್ಯನವರೊಬ್ಬರ ಪ್ರಯತ್ನವೇ ಕಾರಣವೆಂದು ಹೇಳುವದು ಅತ್ಯುಕ್ತಿಯೇ ಸರಿ. ಒಂದು ವೇಳೆ ಹಾಗೆ ಆಗಿದ್ದರೂ ಅದಕ್ಕೆ ತಕ್ಕ ಪ್ರತಿಫಲವಿಲ್ಲದೆ ವೆಂಕಟಕೃಷ್ಣಯ್ಯನವರು ಮಾಡಿಲ್ಲ. ೩ ರೂ. ಸಂಬಳದಿಂದ ೨೦೦ ರೂ. ಸಂಬಳದವರೆಗೆ ಅವರು ಬಡತಿಮಾಡಿಕೊಂಡು ಪ್ರತ್ಯಕ್ಷವಾಗಿ ಲಕ್ಷಾಂತರ ವರಮಾನವನ್ನು ಈ ಸ್ಕೂಲಿನ ಮೂಲಕ ಮಾಡಿಕೊಂಡಿರುವುದಲ್ಲದೆ ಅಪ್ರತ್ಯಕ್ಷವಾದ ಫಲಗಳನ್ನೆಷ್ಟೋವಿಧವಾಗಿ ಪಡೆದುಕೊಂಡಿರುವರು. ಅದನ್ನೆಲ್ಲಾ ಕಳೆದುಕೊಳ್ಳಬೇಕಾಗುವುದಲ್ಲಾ ಎಂಬ ಚಿಂತೆಯಿಂದಲೇ ಅವರು ಇನ್ನೂ ರಿಟೈರಾಗದೆ ಲೋಕಕ್ಕೆ ಹೊನ್ನು ಹೆಣ್ಣು ಮಣ್ಣಿನಾಸೆ ಕಟ್ಟಿದ್ದೆಂದು ತಾವು ಪದೇಪದೇ ಬೋಧಿಸುತ್ತಿದ್ದರೂ ತಮ್ಮ ನುಡಿಗೂ ತಮ್ಮ ನಡೆಗೂ ಸಂಬಂಧವೇ ಇಲ್ಲದಂತೆ ನಡೆದುಕೊಳ್ಳುತ್ತಿದ್ದಾರೆ.

ಕೀರ್ತಿಶೇಷರಾದ ಗೋಪಾಲಕೃಷ್ಣ ಗೋಖಲೆಯವರು ಭರತಖಂಡಕ್ಕೆ ಮಾಡಿದ ಸೇವೆಯನ್ನು ಅರಿಯದ ವಿದ್ಯಾವಂತರು ಈ ದೇಶದಲ್ಲಿ ಯಾರೂ ಇಲ್ಲವಷ್ಟೆ. ಅಂಥವರು ಕೂಡ ಕೇವಲ ೭೫ ರೂ. ಸಂಬಳವನ್ನು ತೆಗೆದುಕೊಂಡು ಎಷ್ಟೋಕಾಲ ಪುಣೆಯಲ್ಲಿ ಕಾಲೇಜಿನ ಪ್ರೊಫೆಸರಾಗಿದ್ದುಕೊಂಡು ಕೆಲಸಮಾಡಿ, ೩೦ ರೂ. ಪೆನ್ಷನನ್ನು ತೆಗೆದುಕೊಳ್ಳುತ್ತಿದ್ದರು. ನೆನ್ನೆತಾನೇ ಬೊಂಬಾಯಿಯ ಸ್ಪೆಷಲ್ ಕಾಂಗ್ರೆಸ್ಸಿಗೆ ಹೋಗಿದ್ದು ಬರುತ್ತಿದ್ದು ಮಾರ್ಗಮಧ್ಯದಲ್ಲಿ ತಮ್ಮ ೫೩ ನೆ ವಯಸ್ಸಿನಲ್ಲಿ ಕಾಲವಾದ ಮ|| ರಾಜೋಟಿ ಗಿರಿರಾವ್ ಎಂಬ ದೇಶಭಕ್ತರು ಮದನಪಲ್ಲಿಯಲ್ಲಿ ಒಂದು ಸ್ಕೂಲನ್ನು ಸ್ವಪರಿಶ್ರಮದಿಂದ ಸ್ಥಾಪಿಸಿ ಅದರಲ್ಲಿ ಬೋಧಕರಾಗಿದ್ದು, ತಮಗೆ ಕೆಲವು ಕಾಲ ತಿಂಗಳಿಗೆ ೨೫ ರೂ. ನಂತೆಯೂ, ಕೆಲಕಾಲ ಸಂಬಳವನ್ನು ತೆಗೆದುಕೊಳ್ಳದೆಯೂ ಕೆಲಸಮಾಡಿ, ಸ್ಕೂಲನ್ನು ಹೈಸ್ಕೂಲನ್ನಾಗಿ ಮಾಡಿ, ಲಕ್ಷ ರೂ. ಬೆಲೆಯ ಶಾಲಾಭವನವನ್ನು ಸ್ವತಂತ್ರವಾಗಿ ಏರ್ಪಡಿಸಿ, ೬೦೦ ಮಂದಿ ವಿದ್ಯಾರ್ಥಿಗಳಿರುವಂತೆ ಮಾಡಿ, ಅಂಥ ಅತ್ಯುನ್ನತಸ್ಥಿತಿಗೆ ಬಂದ ಸ್ಕೂಲನ್ನು ದಿವ್ಯಜ್ಞಾನ ಸಮಾಜದವರ ಪರಿಪಾಲನೆಗೆ ಒಳಪಡಿಸಿ ಒಪ್ಪಿಸಿಬಿಟ್ಟರು. ಈಗ ಅವರು ಅದನ್ನು ಕಾಲೇಜನ್ನಾಗಿ ಮಾಡಿರುವರು. ಈ ಗಿರಿರಾವ್‌ರವರು ತಮ್ಮ ಯಾವದಾರ್ಜಿತವನ್ನೂ ಕಡೆಗೆ ತಮ್ಮ ಪತ್ನಿಯ ದೇಹದ ಮೇಲಣ ಮಾಂಗಲ್ಯವನ್ನೂ ಕೂಡ ಮಾರಿ ಸ್ಕೂಲಿಗೆ ವಿನಿಯೋಗಿಸಿದುದನ್ನು ಚಿತ್ತೂರುಜಿಲ್ಲೆಗೆ ಜಿಲ್ಲೆಯೇ ಬಲ್ಲದು. ಅದೊಂದು ಸ್ಕೂಲೇ ಅಲ್ಲದೆ ಅಸುತ್ತಿನ ಪಂಚಮರ ಸ್ಕೂಲುಗಳು ರಾತ್ರಿ ಪಾಠಶಾಲೆಗಳು ಇತರ ಸಮಾಜಗಳು ಮೊದಲಾದವುಗಳಿಗೆಲ್ಲಾ ಅವರು ಯಥಾಶಕ್ತಿ ಸಹಾಯಮಾಡುತ್ತ ನಾನಾವಿಧದಲ್ಲಿ ಅಹರ್ನಿಶಿಯೂ ದೇಶಸೇವೆ ಮಾಡುತ್ತಿದ್ದರು. ಆ ಮಹಾಪುರುಷರುಗಳು ಸ್ವಾರ್ಥತ್ಯಾಗಪೂರ್ವಕವಾಗಿ ಮಾಡಿದ ಕೆಲಸದಲ್ಲಿ ನೂರನೆ ಒಂದು ಭಾಗಕ್ಕಾದರೂ ಮ|| ವೆಂಕಟಕೃಷ್ಣಯ್ಯನವರು ಮಾಡಿದ ಕೆಲಸವು ಸಾಟಿಯೆ? ತಾವು ಅಭಿವೃದ್ಧಿಗೆ ತಂದ ಸ್ಕೂಲುಗಳ ಸಂಬಂಧವನ್ನೂ ಸಂಬಳವನ್ನೂ ತಮ್ಮ ತಲೆಬುರುಡೆ ಬೀಳುವವರೆಗೂ ಕಳೆದುಕೊಳ್ಳಲಾರೆವೆಂದು ಆ ಮಹನೀಯರ್ಯಾರೂ ಮೊಂಡತನ ಮಾಡಲಿಲ್ಲವಲ್ಲಾ!

ಅರ್ಜಿಯಲ್ಲಿ ಮ|| ವೆಂಕಟಕೃಷ್ಣಯ್ಯನವರು ರಾಜಧಾನಿಯ ರಾಜಕೀಯ ಮತ್ತು ಸಾರ್ವಜನಿಕ ಸಮಾಜಗಳಲ್ಲಿ ಪ್ರಧಾನರಾಗಿದ್ದಾರೆಂದು ಬರೆಯೋಣವಾಗಿದೆ. ರಾಜಧಾನಿಗೇ ಯಾಕೆ? ದೇಶಕ್ಕೇ ಅಂದರೂ ಅನ್ನಬಹುದು. ಇವರ ಸಂಬಂಧವಿಲ್ಲದ ಯಾವುದೊಂದು ಸಂಘಗಳೂ ಸಮಾಜಗಳೂ ಇಲ್ಲವೇ ಇಲ್ಲ. ಇದರಮೇಲೆ ವೃತ್ತಪತ್ರಿಕೆಗಳ ಪಟಾಟೋಪ ಸಂಬಂಧ ಬೇರೆ. ಇಷ್ಟೆಲ್ಲಾ ಹೊರಗಣ ತಾಪತ್ರಯಗಳನ್ನು ಅವರು ಹೆಚ್ಚಿಸಿಕೊಂಡದ್ದರಿಂದಲೇ ಅವರು ಸ್ಕೂಲು ಹೆಡ್ಮಾಸ್ಟರ್‌ಗಿರಿಯಿಂದ ನಿವೃತ್ತರಾಗಬೇಕಾದುದ್ದು ಅವಶ್ಯಕವಾಯಿತು. ಇದನ್ನು ಟ್ರಸ್ಟಿಗಳು ೨೦ವರ್ಷಕ್ಕೆ ಹಿಂದೆಯೇ ಮಾಡಿಸದೆಹೋದದ್ದು ಅವರ ಅಪರಾಧವಾಗಿರುವದು. ಸ್ಕೂಲಿನ ಆದಾಯ ಮತ್ತು ಹುಡುಗರ ಸಂಖ್ಯೆಯ ಡಬಡ್ಡಾಳಿಕೆಯು ಅರ್ಜಿಯಲ್ಲಿ ವಿವರಿಸಲ್ಪಟ್ಟಿದೆಯೇ ಹೊರತು ಪರೀಕ್ಷೆಗೆ ಹೋದ ಹುಡುಗರ ರಿಜಲ್ಟು ಎಷ್ಟುಮಟ್ಟಿಗಿದೆಯೆಂಬುವದನ್ನು ಮಾತ್ರ ಅರ್ಜಿಯಲ್ಲಿ ಯಾಕೆ ಹೇಳಲಿಲ್ಲವೋ ತಿಳಿಯಲಿಲ್ಲ. ಅದನ್ನು ಬಾಯ್ಬಿಟ್ಟರೆ ಬಣ್ಣಗೇಡೆಂದು ತಿಳಿದು ಅರ್ಜಿಯನ್ನು ಬರೆದುಕೊಟ್ಟವರು ಬಿಟ್ಟಿರಬಹುದು. ಸರ್ವಜನ ಹಿತಚಿಂತನೆಯ ರಾಜಕೀಯ ಕಾರ್ಯದಮುಂದೆ ಒಂದು ಯಃಕಶ್ಚಿತ್ ಸ್ಕೂಲಿನ ಕಾರ್ಯವು ಘನತರವಾದದ್ದಲ್ಲವೆಂದಾಲೋಚಿಸಿ, ಇವರಿಗೆ ದೇಶಸೇವಾಕಾರ್ಯಕ್ಕೆ ತುಂಬಾ ಅವಕಾಶವನ್ನು ಕಲ್ಪಿಸಿಕೊಡಬೇಕಾದದ್ದೇ ಯುಕ್ತವಾದದ್ದೆಂದು ಕಮಿಟಿಯವರು ಯೋಚಿಸಿ ಇವರ ರಿಟೈರ್ಮೆಂಟನ್ನು ಒಂದುವೇಳೆ ನಿರ್ಧರಿಸಿದ್ದರೆ, ಅದಕ್ಕಾಗಿ ವೆಂಕಟಕೃಷ್ಣಯ್ಯನವರು ಸಂತೋಷಿಸಿ ಕೃತಜ್ಞತೆಯಿಂದಲೂ ಗೌರವದಿಂದಲೂ ಅದನ್ನು ಪರಿಗ್ರಹಿಸಬೇಕಲ್ಲವೆ? ಕಮಿಟಿಯಮೆಂಬರುಗಳೆಲ್ಲರೂ ವಿಚಾರಪೂರ್ವಕವಾಗಿಯೂ ಏಕಕಂಠದಿಂದಲೂ ಉತ್ತಮೋದ್ದೇಶದಿಂದಲೂ ೨ ಸಲ ರೆಜುಲ್ಯೂಷನ್ ಮಾಡಿ ಇವರ ರಿಟೈರ್ಮೆಂಟನ್ನು ತೀರ್ಮಾನಿಸಿದ್ದರೂ “ಕೆಲವು ಕಮಿಟಿ ಮೆಂಬರುಗಳು ರಿಟೈರ್ಮಾಡುವುದಕ್ಕೆ ಏರ್ಪಾಡು ಮಾಡಿರುವರು” ಎಂದು ಅರ್ಜಿಯಲ್ಲಿ ಬರೆದಿರುವುದು ದುಸ್ಸಾಹಸವಲ್ಲವೆ? ನಮ್ಮ ಸಂಸ್ಥಾನದ ದಿವಾನಗಿರಿಯನ್ನು ೧೮ ವರ್ಷಕಾಲ ಮಾಡಿ, ಇದನ್ನು ಇಂಡ್ಯಾದೇಶದಲ್ಲೆಲ್ಲಾ ಮಾದರಿಸಂಸ್ಥಾನವೆಂಬ ಪ್ರತಿಷ್ಠೆಗೆ ತಂದು ಅಸದೃಶವಾಗಿ ಸೇವೆಮಾಡಿದ ಸರ್ ಶೇಷಾದ್ರಿಅಯ್ಯರವರು ಕೂಡ ತಾವು ಸಾಯುವವರೆಗೂ ದಿವಾನ್‌ಗಿರಿಯಲ್ಲೇ ಇರಬೇಕೆಂದು ಅಪೇಕ್ಷಿಸಲಿಲ್ಲ. ಮ|| ವೆಂಕಟಕೃಷ್ಣಯ್ಯನವರ ಈಗಿನವಯಸ್ಸಿಗಿಂತ ಎಷ್ಟೋ ಕಡಿಮೆವಯಸ್ಸಿನಲ್ಲೇ ಅವರು ರಿಟೈರಾದರು. ಈಗಿನ ದಿವಾನ್ ಸರ್ ವಿಶ್ವೇಶ್ವರಯ್ಯನವರೂ ಕೂಡ ಸಂಸ್ಥಾನಕ್ಕೆ ಅಮೋಘವಾದ ಸೇವೆಯನ್ನು ಮಾಡುತ್ತಿರುವರು. ಇವರೂಕೂಡ ಜೀವಾಂತವಾಗಿ ದಿವಾನ್‌ಗಿರಿಯನ್ನನುಭೋಗಿಸಬೇಕೆಂಬ ಸಂಕಲ್ಪವನ್ನಿಟ್ಟುಕೊಂಡಿರಲಾರರು. ಹೀಗಿರುವಾಗ ಮ|| ವೆಂಕಟಕೃಷ್ಣಯ್ಯನವರು ಮಾತ್ರ ಸ್ಕೂಲಿಗಾಗಿ ಮಾಡಿರುವ ಮಹಾ ಅನಿರ್ವಚನೀಯವಾದ ಉಪಕಾರಕ್ಕೆ ಅವರು ೭೩ ವರ್ಷ ತುಂಬಿದಮೇಲೂ ಮ್ಯಾಸ್ಟರಾಗಿರಬೇಕೆ? ಇಷ್ಟು ವಯಸ್ಸಿನವರನ್ನು ಯಾವ ಗೌರ್ನಮೆಂಟಿನವರಾದರೂ ನೌಕರಿಯಲ್ಲಿಟ್ಟುಕೊಂಡಿರುವದುಂಟೆ? ಈಗ ವಿದ್ಯಾವಂತರಿಗೆ ದೇಶದಲ್ಲಿ ದುರ್ಭಿಕ್ಷವೆ? ಮುದಿಕರನ್ನೇ ಕಟ್ಟಿಕೊಂಡು ಕಾಲಯಾಪನೆ ಮಾಡಬೇಕಾದಷ್ಟು ಕೊರತೆಬಂದಿರುವದೇನು? ತಮ್ಮ ಗೌರ್ನಮೆಂಟಿನಲ್ಲೇ ೬೦ ವರ್ಷ ತುಂಬಿದವರ್ಯಾರೂ ಕೆಲಸದಲ್ಲಿಲ್ಲದಿರುವಾಗ ಒಂದು ಸ್ಕೂಲ್ ಹೆಡ್ಮಾಸ್ಟರ್‌ಗಿರಿಯಂಥ ಸಾಮಾನ್ಯಕೆಲಸಕ್ಕೆ ಒಬ್ಬ ಹಣ್ಣುಮುದಿಕರನ್ನೇ ಇಟ್ಟುಕೊಳ್ಳಲೆಂದು ಶ್ರೀಮನ್ಮಹಾರಾಜರವರು ಅಪ್ಪಣೆಮಾಡಬಲ್ಲರೆ? ಇದನ್ನೆಲ್ಲಾ ಆಲೋಚಿಸದೆ ಕಾಗದವೂ ಮಸಿಯೂ ಇದೆಯೆಂದು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಅಸಮಂಜಸವೂ ಅಪ್ರಮಾಣವೂ ಆದ ಅರ್ಜಿಯನ್ನು ಬರೆದು ಅವರ ಚಿತ್ತಕ್ಕೆ ಬೇಸರನ್ನುಂಟುಮಾಡುವುದೇ ಅಲ್ಲದೆ ಕೈತೋರಿಸಿ ಅವಲಕ್ಷಣವೆನ್ನಿಸಿಕೊಳ್ಳುವ ಸಾಹಸಕ್ಕೆ ಜನರನ್ನು ಪ್ರೋತ್ಸಾಹಿಸಬಹುದೆ? ಕಮಿಟಿಯವರು ನ್ಯಾಯವಾಗಿಯೂ ಸಾಧಿಕಾರವಾಗಿಯೂ ಮಾಡಿರುವ ತೀರ್ಮಾನವನ್ನು ಹಠದಿಂದ ತಿರಸ್ಕರಿಸಬೇಕೆಂಬ ರಾಗದ್ವೇಷಗಳಿಗೆ ಗುರಿಯಾಗದೆ ನಿಜವಾದ ನಿಸ್ಪೃಹತೆಯಿಂದ ಗೌರವಪುರಸ್ಸರವಾಗಿ ಮ|| ವೆಂಕಟಕೃಷ್ಣಯ್ಯನವರು ರಿಟೈರಾಗಿಬಿಟ್ಟಿದ್ದರೆ ಈ ಹಾದಿಬೀದಿ ರಂಪುಗಳಿಗೇ ಅವಕಾಶವಾಗುತ್ತಿರಲಿಲ್ಲ. ಈಗಲಾದರೂ ಅವರು ಹಾಗೆ ಮಾಡುವುದು ಅವರ ವಯಸ್ಸಿಗೂ ಗೌರವಕ್ಕೂ ಕೀರ್ತಿಗೂ ಭೂಷಣವೆಂದು ಅವರ ಮೇಲಿನ ಅಭಿಮಾನದಿಂದ ನಾನು ಹೇಳುತ್ತೇನೆ. ಪಬ್ಲಿಕ್ ಸಿಂಪಥೈಜರು ಮೊದಲಾದ ವೆಂಕಟಕೃಷ್ಣಯ್ಯನವರ ಕೂಟದವರು ಇಂಥ ಶುಷ್ಕಪ್ರಯತ್ನಗಳಿಂದಲೇ ತಮ್ಮ ಪ್ರತ್ಯುಪಕಾರಗಳನ್ನು ಮುಗಿಸಿಬಿಡುವುದಕ್ಕಿಂತಲೂ, ಅವರ ಚಿರಸ್ಮರಣೆ ಉಳಿಯುವಂತೆ ಒಂದು ಸ್ಟ್ಯಾಚು ತಯಾರ್ಮಾಡಿ ನಿಲ್ಲಿಸುವುದಕ್ಕೋ ಅಥವಾ ಅವರ ಹೆಸರಿನಲ್ಲ ಬೇರೆ ಧರ್ಮದ ಸ್ಕೂಲನ್ನು ಸ್ಥಾಪಿಸುವುದಕ್ಕೋ ಅಥವಾ ಅವರಿಗ ಬೇರೆತೆರದಲ್ಲಿ ಕನಕಾಭಿಷೇಕಮಾಡಿ ತೃಪ್ತಿಪಡಿಸುವದಕ್ಕೋ ಒಂದು ಫಂಡನ್ನು ಕಲ್ಪಿಸುವ ಸಾಮರ್ಥ್ಯವಿದ್ದರೆ ಹಾಗೆ ಮಾಡಬಹುದಾಗಿದೆ. ಅದು ಉಚಿತವಾದದ್ದು. ಅಂಥ ಪ್ರಯತ್ನಕ್ಕೆ ನಾನೂ ಯಥಾಶಕ್ತಿ ಡೊನೇಷನ್ ಕೊಡಲು ಸಿದ್ಧನಾಗಿರುವೆನು.

ಪುರನಿವಾಸಿ.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

4 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿತ ಹುರುಕಿನಔಷಧ—ಬೆಲೆ ೧ಕ್ಕೆ ೧೮. ೨೫ಕ್ಕೆ ೧-೪-೦.
೨. ಕಣ್ಣುಬೇನೆಯಔಷಧ—ಚೀಟು-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇನುತೀರುನಾಶಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಸ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಆಂವಶ್ಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ನೀಲಿ ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
30 ಪೋಸ್ಟ್ ಶಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 40

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಪೆರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಪವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಸೆಪ್ಟಂಬರ್ ತಾ|| ೨೨ ರಿಂದ ೧೯೧೮ ನೆಯ ಸೆಪ್ಟಂಬರ್ ತಾ|| ೨೮ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಭಾದ್ರಪದ ಬ|| ಬಿದಿಗೆಯಿಂದ ಭಾದ್ರಪದ ಬ|| ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
22	ಭಾನು	ಬಿದಿಗೆ	20-1	ರೇವತಿ	22-3	6
23	1 ಸೋಮ	ತದಿಗೆ	13-56	ಅಶ್ವಿನಿ	7-51	7
24	ಮಂಗಳ	ಚೌತಿ	8-8	ಭರಣಿ	13-57	8
25	ಬುಧ	ಪಂಚಮಿ	2-42	ಉಪರಿ	54-47	9
26	ಗುರು	ಸಪ್ತಮಿ	53-26	ರೋಹಿ	7-34	10
27	2 ಶುಕ್ರ	ಅಷ್ಟಮಿ	50-25	ಮೃಗ	5-31	11
28	3 ಶನಿ	ನವಮಿ	48-29	ಆರಿದ್ರಾ	4-27	12

(1) ಬೃಹದ್ಗೌರೀವ್ರತಂ, ಗೇವಾಜಮ್ಮಣ್ಣಿಯವರ ೨ನೇ ಕುಮಾರಿ ವರ್ಧಂತಿ. (2) ಗಜಗೌರೀವ್ರತಂ. (3) ಹರಿಹರವ್ರತಂ, ಪೆರಟಾಶಿ ಶನಿವಾರಂ..

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಳಾಲೀಲಂಸುಧೀಭೃಂಗವ | ಸ್ತೋಮಾಭೀಷ್ಟದೀಲ ವಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಕಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಸೆಪ್ಟಂಬರ್ ತಾರೀಖು ೨೯ ನೆಯ ಭಾನುವಾರ. (ಸಂಚಿಕೆ ೩೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯಂಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೨-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗನಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ. ರಿಜಿಸ್ಟರ್ ಮಾಡಲ್ಪಟ್ಟ ಈ [illegible] ಗಡಿಯಾರವು ಲೋಕಪ್ರಸಿದ್ಧಿ ಮಾಡುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ [illegible] 1, ಗಡಿಯಾರದ ಸರಪಣಿ 1, ಗೆಜ್ಜೆ [illegible] 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ [illegible] 1, ರೋಲ್ ಗೋಲ್ಡ್ ಎಂಬ ಶೃಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.9.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
40 3, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದೇಶಕ್ಕೆ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಅದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
20 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

೧ ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

[illegible]ಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ [illegible] ಬೋಧಕವಾದ [illegible]. ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
25 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 47

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಚಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ, ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಇಂಗ್ಲಿಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).



ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಚಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಅಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಅಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
40 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

[illegible]	೧—೦—೦
[illegible] ವೀರಶೈವ ವಿವಾಹವಿಧಿ	೦—೮—೦
[illegible]	೦—೮—೦
[illegible]	೦—೧೦—೦
[illegible]	೦—೩—೦
[illegible]	೦—೪—೦
[illegible]	೦—೨—೦
[illegible] (ಮುಕ್ತಿ ಸಾಧನ)	೦—೪—೦
[illegible]	೦—೧—೦

ಅಂಚೆವೆಚ್ಚ ಬೇರೆ.

[illegible]

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಸೆಪ್ಟಂಬರ್ ತಾ|| ೨೯ನೆಯ ಭಾನುವಾರ.

ರಾಜಧಾನಿಯ ಮ್ಯುನ್ಸಿಪಲ್ ವೈಸ್‌ಪ್ರೆಸಿಡೆಂಟಗಿರಿ.

ನಮ್ಮ ಪ್ರಜಾಪ್ರಿಯ ಪ್ರಭುತ್ವದವರು ತಮ್ಮ ಪ್ರಜೆಗಳಿಗೆ ರಾಜ್ಯಕಾರ್ಯನಿರ್ವಾಹದಲ್ಲಿ ಹೆಚ್ಚು ಹೆಚ್ಚಾದ ಅಧಿಕಾರಗಳನ್ನಿತ್ತು ಮುಂದಕ್ಕೆ ತರಬೇಕೆಂದು ಪದೇಪದೇ ಅನುಕೂಲವಾದ ವರದಾನಗಳನ್ನು ಮಾಡುತ್ತಲೇ ಇದ್ದಾರೆ. ಪ್ರಜಾಪ್ರತಿನಿಧಿಸಭೆ, ನಿಯಮನಿರ್ಮಾಣಸಭೆ, ಲೋಕಲ್‌ಬೋರ್ಡುಗಳು ಇವುಗಳ ಸಭಿಕರಿಗೆ ಇತ್ತೀಚೆಗೆ ಕೊಡುತ್ತಾಬಂದಿರುವ ಅಧಿಕಾರಾಧಿಕ್ಯಗಳೇ ಅದಕ್ಕೆ ನಿದರ್ಶನವಾಗಿವೆ. ಆದರೆ ಅವುಗಳನ್ನು ಎಷ್ಟುಮಟ್ಟಿಗೆ ಪ್ರಜೆಗಳು ಸಾರ್ಥಕಪಡಿಸಿಕೊಳ್ಳುತ್ತಿದ್ದಾರೆಂಬುದನ್ನು ಅವರ ಕಾರ್ಯಕ್ರಮಗಳಿಂದ ತಿಳಿದುಕೊಳ್ಳಲು ಪ್ರಯತ್ನಿಸಿದಷ್ಟೂ ವಿಷಾದಕರವಾಗಿಯೂ ಸೋಜಿಗವಾಗಿಯೂ ತೋರುತ್ತಿರುವುದು. ಪೌರಕಾರ್ಯನಿರ್ವಾಹಕ ಸಂಘಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡಬೇಕೆಂಬ ಉದಾತ್ತವಿಚಾರದಿಂದ ನಮ್ಮ ಪ್ರಭುತ್ವದವರು ಪ್ರೆಸಿಡೆಂಟರನ್ನೂ ವೈಸ್‌ಪ್ರೆಸಿಡೆಂಟರನ್ನೂ ಆಯಾ ಸಂಘಗಳವರೇ ನಿಯಮಿಸಿಕೊಳ್ಳುವಂತೆ ಏರ್ಪಾಟುಮಾಡಲುಜ್ಜುಗಿಸಿ ಸದ್ಯಃ ವೈಸ್‌ಪ್ರೆಸಿಡೆಂಟರ ಆರಿಸುವಿಕೆಯ ಅಧಿಕಾರವನ್ನು ಕೆಲ ಮ್ಯು|| ಕೌನ್ಸಿಲುಗಳಿಗೆ ಕೊಟ್ಟಿರುವರಷ್ಟೆ. ಇಂಥ ಅಧಿಕಾರವನ್ನು ಬೆಂಗಳೂರು ಕೌನ್ಸಿಲಿನವರೇನೋ ಒಂದುಸಲ ಸಾರ್ಥಕಪಡಿಸಿ ಸರ್ಕಾರದ ಉದ್ದೇಶವನ್ನು ನೆರವೇರಿಸಿ, ತಮ್ಮ ಯೋಗ್ಯತಾಗೌರವಗಳನ್ನೂ ಕರ್ತವ್ಯನಿಷ್ಠೆಯನ್ನೂ ವ್ಯಕ್ತಪಡಿಸಿದರು. ಆದರೆ ಮೈಸೂರು ಕೌನ್ಸಿಲಿನ ಅವಸ್ಥೆಯು ಮಾತ್ರ ತಾರುಮಾರಾಯಿತು. ಪ್ರಭುತ್ವದವರು ಕೊಟ್ಟ ಗೌರವವನ್ನು ಅಸಾರ್ಥಕಪಡಿಸಿಕೊಳ್ಳುವುದಕ್ಕೆ ಎಷ್ಟೆಷ್ಟು ಕಾರ್ಯಭಾಗಗಳು ಬೇಕೋ ಅಷ್ಟೂ ಇಲ್ಲಿ ನಡೆದು, ಕಡೆಗೆ ಸರ್ಕಾರದವರೇ ಒಬ್ಬ ವೈಸ್‌ಪ್ರೆಸಿಡೆಂಟರನ್ನು ಗೊತ್ತುಮಾಡಿಕೊಡಬೇಕಾದ ಪರ್ಯವಸಾನವಾಯಿತು. ದೇಶಕ್ಕೇ ರಾಜಧಾನಿಯಾದ ಈ ಪಟ್ಟಣದ ಕೌನ್ಸಿಲಿನ ಅವಸ್ಥೆಯು ಹೀಗಾದುದು ದೇಶೀಯರೆಲ್ಲರಿಗೂ ಸಖೇದಾಶ್ಚರ್ಯಕರವಾಗಿದ್ದರೂ ಇಲ್ಲಿಯ ವಿಷಮಸ್ಥಿತಿಗಳನ್ನು ಅರಿತವರಿಗೆ ಇದು ಆಶ್ಚರ್ಯಕರವಲ್ಲ.

ಇಲ್ಲಿಯ ವೈಸ್‌ಪ್ರೆಸಿಡೆಂಟ್‌ಗಿರಿಗೆ ಕೌನ್ಸಿಲರುಗಳಲ್ಲಿ ಮ|| ದೇಶಿಕಾಚಾರ್ ಬಿ.ಎ ಯವರೂ, ಮ|| ಎಂ. ಎಸ್. ಸುಬ್ಬಣ್ಣ ಬಿ.ಎ, ಎಲ್.ಎಲ್.ಬಿ. ಯವರೂ ಉಮೇದುವಾರರಾಗಿ ವಿಜ್ಞಾಪನಪತ್ರಗಳನ್ನು ಬರೆದುಕೊಂಡಿದ್ದರು. ಹಾಗೆ ಬರೆದುಕೊಂಡ ಪತ್ರಿಕೆಯಲ್ಲಿ ಮ|| ಸುಬ್ಬಣ್ಣನವರಿಗೆ ವೈಸ್‌ಪ್ರೆಸಿಡೆಂಟ್‌ಗಿರಿಯಾಗುವುದಕ್ಕೆ ತಮ್ಮ ಅನುಮತಿಯನ್ನು ಕಾಣಿಸಿ ಕೌನ್ಸಿಲರುಗಳಲ್ಲೀ ೨೧ ಮಂದಿಗಳು ಹಸ್ತಾಕ್ಷರವನ್ನು ಹಾಕಿದ್ದರು. ಮ|| ದೇಶಿಕಾಚಾರರಿಗೆ ಇಬ್ಬರೋ ಮೂವರೋ ಹಾಕಿಕೊಟ್ಟಿದ್ದರೆಂದು ಕೇಳಿದೆವು. ಈ ವಿಜ್ಞಾಪನಪತ್ರಗಳು ಸರ್ಕಾರದನುಮೋದನೆಯನ್ನು ಪಡೆದುಕೊಂಡು ಬಂದಕೂಡಲೇ ಸಂಪದಭ್ಯುದಯ ಪತ್ರಿಕೆಗಳಲ್ಲಿ ದುರಭಿಮಾನಪ್ರೇರಿತ ಅಸೂಯಾಧರಿತ ಅಸಂಬದ್ಧ ಲೇಖನಗಳ ಪರಂಪರೆಯು ಸುರಿಯುವುದಕ್ಕಾರಂಭಿಸಿತು. ಮತ್ತೂ ಮ|| ದೇಶಿಕಾಚಾರರಿಗೆ ವೈಸ್‌ಪ್ರೆಸಿಡೆಂಟ್‌ಗಿರಿ ಆಗಬೇಕು ಇಲ್ಲದಿದ್ದರೆ ತಪ್ಪಿಹೋಗಬೇಕು ಎನ್ನುವುದಕ್ಕೆ ಎಷ್ಟುಮಾಡಬೇಕೋ ಅಷ್ಟು ಸಾಹಸಗಳನ್ನೂ ಮಾಡುವುದಕ್ಕೆ ಈ ಊರಿನಲ್ಲಿ ಏರ್ಪಟ್ಟಿರುವ ಅಸೂಯಾಂಧ ಕೂಟದವರು ಅಹರ್ನಿಶಿಯೂ ಪ್ರಯತ್ನಪಟ್ಟು ಓಟುಕೊಡತಕ್ಕ ಕೌನ್ಸಿಲರುಗಳ ಮನಸ್ಸೆಲ್ಲಾ ತಿರುಗಿಸುವುದಕ್ಕೆ ಯತ್ನಿಸಿದರು. ಇದರಿಂದ [illegible] ನಮೂದಿದ್ದವರು ಕೂಡ ದಾಕ್ಷಿಣ್ಯಕ್ಕೋ ಇತರ ಕಾರಣಗಳಿಗೋ ವಶರಾಗಿ ಹುಸಿದುಹೋಗಬೇಕಾಯಿತು. ತಕ್ಕಷ್ಟು ಓಟುಗಳು ಮ|| ಸುಬ್ಬಣ್ಣನವರಿಗೂ ಬರಲಿಲ್ಲ. ಮ|| ದೇಶಿಕಾಚಾರರಿಗೂ ಬರಲಿಲ್ಲ. ಒಟ್ಟು ಕೌನ್ಸಿಲರ ಸಂಖ್ಯೆಯಲ್ಲಿ ⅔ ಭಾಗದ ಓಟುಗಳನ್ನು ಪಡೆದವರೇ ವೈಸ್‌ಪ್ರೆಸಿಡೆಂಟರಾಗಬೇಕಾಗಿರುವಲ್ಲಿ ೧೮ ಓಟುಗಳಾದರೂ ಇಬ್ಬರಲ್ಲಿ ಯಾರಿಗೆ ಬಂದಿದ್ದರೂ ಜಯಶೀಲರಾಗುತ್ತಿದ್ದರು. ಆದರೆ ಮ|| ಸುಬ್ಬಣ್ಣನವರಿಗೆ ೧೪, ಮ|| ದೇಶಿಕಾಚಾರರಿಗೆ ೧೨ ಓಟುಗಳು ಬಂದು ಇಬ್ಬರೂ ವಿಫಲರಾದರು. ಇಷ್ಟನ್ನು ಮಾಡಿಸುವುದಕ್ಕೆ ಪ್ರಯತ್ನಿಸಿದ ವಿಘ್ನಸಂತೋಷಿಗಳು ಈಗ ಬಹು ತೃಪ್ತರಾಗಿರಬಹುದು! ಸಂತೋಷಪಡಲಿ. ಇಲ್ಲಿಯವರು ಎಷ್ಟುಮಟ್ಟಿಗೆ ಪರೋತ್ಕರ್ಷಸಹಿಷ್ಣುಗಳೂ ಏಕಮತ್ಯಾದಿಯೋಗ್ಯತೆಯುಳ್ಳವರೂ ಆಗಿದ್ದಾರೆಂಬುದನ್ನು ಮಹಾಪ್ರಭುಗಳೂ ಅವರ ಸರ್ಕಾರದವರೂ ಗಮನಿಸಲಿ.

ಇಷ್ಟಾದರೂ ಸಂಪದಭ್ಯುದಯ ಪತ್ರಿಕೆಗೆ ಮನಸ್ಸು ಶಾಂತವಾಗಿಲ್ಲ. ಅದು ಮ||ಗಳಾದ ಸಿ. ನರಸಿಂಹಯ್ಯನವರನ್ನೋ ಎ. ಕೃಷ್ಣರಾಯರನ್ನೋ ವೈಸ್‌ಪ್ರೆಸಿಡೆಂಟರನ್ನಾಗಿ ಸರ್ಕಾರದವರು ನಾಮಿನೇಷನ್ ಮಾಡಬೇಕೆಂದು ಸೂಚಿಸಿರುತ್ತದೆ. ಮ್ಯುನ್ಸಿಪಲ್ ಕೆಲಸಗಳನ್ನು ಮಾಡಲು ತಕ್ಕ ಯೋಗ್ಯತೆಮೊದಲಾದುವುಗಳನ್ನು ಪಡೆದುಕೊಂಡು ಸಿದ್ಧರಾಗಿದ್ದವರು ಯಾವ ಸಂಧಾನಗಳಿಂದಲೋ ವಿಫಲರಾಗಿಹೋಗಿರುವಾಗ ಅಂಥವರಲ್ಲೊಬ್ಬರನ್ನು ನಾಮಿನೇಷನ್ ಮಾಡಿಸುವುದಕ್ಕೆ ಸೂಚಿಸದೆ, ತಮ್ಮ ಉದ್ಯೋಗದಲ್ಲಿ ಸ್ವಲ್ಪವೂ ವಿರಾಮವಿಲ್ಲದೆ ಇರುವವರೂ ಈ ವೈಸ್‌ಪ್ರೆಸಿಡೆಂಟ್‌ಗಿರಿಗೆ ಉಮೇದವಾರರಾಗಿಯೇ ಇಲ್ಲದವರೂ ಆದ ಇಬ್ಬರು ಅಡ್ವೊಕೇಟರಲ್ಲೊಬ್ಬರಿಗೆ ಈ ಪದವಿಯನ್ನು ಬಲಾತ್ಕರಿಸಿ ತಾಲಿಕಟ್ಟಿದಂತೆ ಮಾಡಬೇಕೆಂದು ಬೋಧಿಸಿರುತ್ತದೆ. ಮ|| ಸುಬ್ಬಣ್ಣನವರು ಅಡ್ವೊಕೇಟರಾಗಿಯೂ ಉಪಪನ್ನರಾಗಿಯೂ ನಿಸ್ಪೃಹರಾಗಿಯೂ ಮ್ಯುನ್ಸಿಪಲ್ ಕಾರ್ಯನಿರ್ವಾಹಕ್ಕೆ ಬೇಕಾದಷ್ಟು ಸಾಮರ್ಥ್ಯವುಳ್ಳವರಾಗಿಯೂ, ರಾಜಧಾನಿಯ ರೇಟ್‌ಪೇಯರ್ಸ್ ಅಸೋಸಿಯೇಷನ್ನಿನ ಆ|| ಸೆಕ್ರೆಟರಿಯಾಗಿದ್ದುಕೊಂಡು ಪೌರಸೇವಾಕಾರ್ಯವನ್ನು ಮಾಡಲು ಕುತೂಹಲವುಳ್ಳವರಾಗಿಯೂ, ಮತ್ತು ವೈಸ್‌ಪ್ರೆಸಿಡೆಂಟ್‌ಗಿರಿಗೆ ಉಮೇದುವಾರರಾಗಿದ್ದು ಅದಕ್ಕೆ ೨೧ ಮಂದಿ ಕೌನ್ಸಿಲರ ಒಪ್ಪಿಗೆಯನ್ನು ಪಡೆದವರಾಗಿಯೂ, ನಿಂತಿದ್ದ ಉಮೇದುವಾರರಿಬ್ಬರಲ್ಲಿ ಹೆಚ್ಚು ಓಟುಗಳನ್ನು ಪಡೆದವರಾಗಿಯೂ ಇರುವಲ್ಲಿ ಅಂಥವರನ್ನು ನಾಮಿನೇಷನ್ ಮೂಲಕ ವೈಸ್‌ಪ್ರೆಸಿಡೆಂಟ್‌ಗಿರಿಯಲ್ಲಿ ಸ್ಥಾಪಿಸಲು ಸರ್ಕಾರಕ್ಕೆ ಸೂಚನೆ ಕೊಡುವುದಕ್ಕೆ ಸಂಪದಭ್ಯುದಯ ಪತ್ರಿಕೆಗೆ ಸ್ವಜಾತ್ಯಭಿಮಾನದಿಂದ ನಾಲಗೆಯೇ ಬರದೆ ಇರುವಲ್ಲಿ, ಅದರ ಅಗಾಧಹೃದಯ ಸಂಕಲ್ಪವು ಎಷ್ಟು ನಿರ್ಮತ್ಸರವಾಗಿರುವುದೆಂಬುದನ್ನು ವಾಚಕರೇ ಊಹಿಸಿಕೊಳ್ಳಬೇಕು. ಇದೇ ವಿಷಯಸಂಬಂಧದಲ್ಲಿಯೇ ಹಿಂದೆ ಆ ಪತ್ರಿಕೆಯೊಳಗೆ ಬಂದಿದ್ದ ಲೇಖನಗಳಲ್ಲಿ "ವೈಸ್‌ಪ್ರೆಸಿಡೆಂಟ್‌ಗಿರಿಗೆ ಬರತಕ್ಕವರು ತಮ್ಮ ಇತರ ಸ್ವಕೀಯೋದ್ಯೋಗಗಳನ್ನೆಲ್ಲಾ ಬಿಟ್ಟು ತಮ್ಮ ಕಾಲವನ್ನೆಲ್ಲಾ ಈ ಉದ್ಯೋಗನಿರ್ವಾಹಕ್ಕೇ ಉಪಯೋಗಿಸುವವರಾಗಿರಬೇಕು" ಎಂದು ಮೊದಲಾಗಿ ಸ್ವಯಂವಿಧಿಸಿದ ನಿಯಮಗಳಿಗೆ ಈ ಪತ್ರಿಕೆಯಿಂದಲೇ ನಾಮಿನೇಷನ್ ಮಾಡಲ್ಪಟ್ಟಿರುವ ದೊಡ್ಡ ಮನುಷ್ಯರುಗಳಿಬ್ಬರೂ ಬದ್ಧರಾಗಿ ನಡೆದುಕೊಳ್ಳುತ್ತಾರೆಯೋ ಎಂಬುದನ್ನಾದರೂ ಈ ಪತ್ರಿಕೆಯು ಯೋಚಿಸದೆ ಹೋಗಿರುವುದಕ್ಕೆ ಅದರ ಪರೋತ್ಕರ್ಷಾಸಹಾಂಧತೆಯ ಪ್ರಭಾವವೇ ಕಾರಣವಾಗಿರಬೇಕು. ಇಂಥ ಅಸೂಯಾಂಧ ವಿದ್ಯಾಧಿಕಜನರಿಂದ ಭರತಖಂಡವು ಧ್ವಂತವಾಗಿರುವುದರಿಂದಲೇ ಈ ದೇಶಕ್ಕೆ ಸ್ವರಾಜ್ಯಸ್ವಾತಂತ್ರ್ಯವು ಅನುಗುಣವಾದುದಲ್ಲವೆಂದು ದೀರ್ಘದರ್ಶಿಗಳು ಹೇಳುತ್ತಿರುವರು. ಆ ವಿಷಯವಂತಿರಲಿ. ವೈಸ್‌ಪ್ರೆಸಿಡೆಂಟ್‌ಗಿರಿಗೆ ಉಮೇದುವಾರರಾಗಿದ್ದವರನ್ನು ಬಿಟ್ಟು ಇಷ್ಟವಿಲ್ಲದವರನ್ನು ಸರ್ಕಾರದವರು ಬಲಾತ್ಕರಿಸುವುದಕ್ಕಿಂತಲೂ ಬಂದಿದ್ದ ಉಮೇದುವಾರರುಗಳಲ್ಲಿ ರಾಜಧಾನಿಯ ವೈಸ್‌ಪ್ರೆಸಿಡೆಂಟ್‌ಗಿರಿಯ ನಿರ್ವಾಹಕ್ಕೆ ಸಾಕಾದಷ್ಟು ವಿದ್ಯಾಬುದ್ಧಿ ಕಾರ್ಯನಿರ್ವಾಹಶಕ್ತಿಗಳನ್ನೂ ಚಟುವಟಿಕೆಯನ್ನೂ ಹೊಂದಿ ನಿಸ್ಪೃಹರೂ ಪ್ರಮಾಣಿಕರೂ ಎಂದು ತೋರಿದವರೊಬ್ಬರನ್ನು ಸರ್ಕಾರದವರು ನಾಮಿನೇಷನ್ ಮಾಡುವುದೇ ಉಚಿತವಾದುದೆಂದು ನಾವು ಬಿನ್ನಯಿಸುತ್ತೇವೆ.

ಮದ್ಯಪಾನನಿರೋಧ.

ಕುಡಿತತನವನ್ನು ತಗ್ಗಿಸುವುದಕ್ಕೆ ಹೇಳಲ್ಪಡುತ್ತಿರುವ ನಾನಾ ಉಪಾಯಗಳೊಳಗೆ ಹೆಂಡದ ಮತ್ತು ಸಾರಾಯಿಯ ಅಂಗಡಿಗಳ ಹತ್ತಿರ ಕಾಫೀ ಮಾರುವ ಅಂಗಡಿಗಳನ್ನಿಡಿಸಿದರೆ ಕುಡಿತತನದ ದುರಭ್ಯಾಸವು ಕಡಿಮೆಯಾಗುವುದೆಂಬ ಸೂಚನೆಯು ಒಂದಾಗಿರುತ್ತದೆ. ಈ ಉಪಾಯವು ಎಷ್ಟುಮಟ್ಟಿಗೆ ಸಫಲವಾಗುವುದೆಂಬುದನ್ನು ಮದ್ರಾಸು ಸರ್ಕಾರದವರು ಪರೀಕ್ಷೆ ಮಾಡಿಸಲಾಗಿ ಅದು ಫಲಕಾರಿಯಾಗಲಿಲ್ಲವೆಂದು ಅಲ್ಲಿಯ ರೆವಿನ್ಯೂ ಬೋರ್ಡಿನವರು ಅನುಭವದ ಮೂಲಕ ವರದಿಮಾಡಿರುತ್ತಾರೆ. ಹೆಂಡದಂಗಡಿಗಳ ಹತ್ತಿರ ಕಾಫೀ ಟೀ ಮಾರುವ ಅಂಗಡಿಗಳನ್ನಿಡಿಸಿ ಪರೀಕ್ಷೆ ಮಾಡಿಸಲಾಗಿ, ಕುಡಿಕರು ಮದದ್ರವ್ಯಗಳನ್ನು ಕುಡಿದ ಬಳಿಕ ಕಾಫಿಯನ್ನೂ ಕುಡಿಯುವುದಕ್ಕೆ ಆರಂಭಿಸಿದರಂತೆ. ಇದರಿಂದ ಅವರು ಒಂದಕ್ಕೆರಡಾಗಿ ದುಡ್ಡನ್ನು ಕಳೆದುಕೊಳ್ಳಲು ಮಾರ್ಗವಾಯಿತು. ಯೂರೋಪು ಖಂಡದಲ್ಲಿ ಈ ತೆರದ ಪ್ರಯತ್ನದಿಂದ ಕುಡಿತತನವು ತಗ್ಗಿತಂತೆ. ಆದರೆ ಅದೇ ತೆರದ ಪ್ರಯತ್ನವು ನಮ್ಮ ದೇಶದಲ್ಲಿ ಸಫಲವಾಗಲಿಲ್ಲ. ಮದದ್ರವ್ಯಗಳ ಬೆಲೆಯನ್ನು ಹೆಚ್ಚಿಸುತ್ತ ಬಂದರೂ ಕುಡಿತತನವು ಕಡಿಮೆಯಾಗಲಿಲ್ಲ. ಆ ಶಾಖೆಯ ಉತ್ಪತ್ತಿಯು ಮಾತ್ರ ಹೆಚ್ಚಿತು. ಆದುಕಾರಣ ಕುಡಿತತನವನ್ನು ತಗ್ಗಿಸುವುದಕ್ಕೆ ಈ ಉಪಾಯಗಳೊಂದೂ ಸಾಧಕವಲ್ಲವೆಂಬುದು ಸಿದ್ಧವಾಗಿದೆ. ಅವುಗಳನ್ನು ಮಾರುವ ಅಂಗಡಿಗಳನ್ನು ಊರಿನಿಂದ ದೂರವಾಗಿ ಸಾಗಿಸುವುದು, ಜಾತ್ರೆ ಸ್ಥಳಗಳಲ್ಲಿ ಅವುಗಳ ಮಾರಾಟವನ್ನು ನಿಲ್ಲಿಸುವುದು ಇತ್ಯಾದಿ ಯತ್ನಗಳು ಕೆಲಮಟ್ಟಿಗೆ ಸಾರ್ಥಕವಾಗಬಹುದು. ಸರ್ಕಾರದವರು ಈ ಶಾಖೆಯನ್ನೇ ಎತ್ತಿಹಾಕಿ ಅದರಮೂಲಕವಾದ ಆದಾಯದ ಆಸೆಯನ್ನು ತೊರೆದುಬಿಟ್ಟಲ್ಲದೆ ಈ ದುರಭ್ಯಾಸದ ಹಾನಿಯು ದೇಶದಲ್ಲಿ ತಪ್ಪಲಾರದು. ಸದ್ಯದಲ್ಲಿ ಬೊಂಬಾಯಿ ಗೌರ್ನಮೆಂಟಿನವರು ಈ ಶಾಖೆಯಿಂದಾಗುವ ಹೆಚ್ಚಿನ ವರಮಾನವನ್ನೆಲ್ಲಾ ವಿದ್ಯಾವ್ಯಾಪನೆ ಆರೋಗ್ಯಸಾಧನೆಗಳಿಗೆ ಉಪಯೋಗಿಸಲು ಅಪ್ಪಣೆ ಮಾಡಿರುವುದು ಒಂದು ತೆರದಲ್ಲಿ ಸಮಾಧಾನಕರವಾಗಿದೆ. ಅನೀತಿಮಾರ್ಗದಿಂದ ಬರುವ ಈ ಶಾಖೆಯ ವರಮಾನವನ್ನೆಲ್ಲಾ ವಿದ್ಯಾಭಿವೃದ್ಧಿಗೆ ಕೊಡುವಂತೆ ಸರ್ಕಾರದವರು ಮಾಡಬಿಟ್ಟರೆ ಅದರ ದೋಷವು ತಪ್ಪಿಹೋಗುವುದೆಂದು ನಾವು ಇದಕ್ಕಮುಂಚೆ ಹಲವುಸಲ ಸೂಚಿಸಿದ್ದೇವೆ. ಸದ್ಯಃ ಬೊಂಬಾಯಿ ಪ್ರಭುತ್ವದವರು ಮಾಡಿರುವ ಯತ್ನವು ಸ್ತುತಿಪಾತ್ರವಾಗಿದೆ. ಆ ಶಾಖೆಯ ವರಮಾನವನ್ನೆಲ್ಲಾ ವಿದ್ಯಾಶಾಖೆ ಆರೋಗ್ಯವರ್ಧನ ಶಾಖೆಗಳಿಗೆ ವಿನಿಯೋಗಿಸುವಂತೆ ಏರ್ಪಡಿಸಿಬಿಟ್ಟರೆ ಮದದ್ರವ್ಯಶಾಖಾದಾಯಾಭಿವೃದ್ಧಿಯನ್ನು ಕಂಡು ದೇಶಾಭಿಮಾನಿಗಳು ವ್ಯಥೆಪಡುವುದಕ್ಕೆ ಕಾರಣವು ತಪ್ಪಿಹೋಗುವುದು. ಅಂಥ ಪ್ರಯತ್ನವನ್ನು ನಮ್ಮ ಪ್ರಜಾರಂಜನೈಕಧುರೀಣವಾದ ಮೈಸೂರುಸರ್ಕಾರವು ಮಾಡಿ ಮೇಲುಪಂಕ್ತಿಯನ್ನು ಇತರಪ್ರಭುತ್ವಗಳಿಗೆಲ್ಲಾ ಹಾಕಿಕೊಡಬಾರದೆ?

ಯುದ್ಧವಾರ್ತೆಯು.

ಕಳೆದ ವಾರದಲ್ಲೂ ಮಿತ್ರಮಂಡಲಿಗೆ ಶ್ಲಾಘನೀಯವಾದ ಕೆಲವು ಜಯಗಳು ಲಭಿಸುತ್ತವೆ. ಸೆಂಟ್‌ಕ್ವಿಂಟಿನ್ ಗೋಚರಿಕೋಟೆಗಳ ಮಧ್ಯದಲ್ಲಿ ಜರುಗಿದ ಯುದ್ಧದಲ್ಲಿ ಇಂಗ್ಲೀಷರಿಗೆ ದಿವ್ಯವಾದ ಜಯಲಾಭವಾಗಿರುತ್ತದೆ. ಆ ದಿನವೇ ಜರ್ಮನರು ಟ್ರಿಸ್ಕಾಲ್ಟು ಮೋಯಿವರ್ಸಗಳ ಮಧ್ಯದಲ್ಲಿ ಸಂಪೂರ್ಣವಾಗಿ ಸೋತು ಓಡಿದರು. ಇದರಿಂದ ಉಭಯಪಕ್ಷಗಳ ಬಲಾಬಲವು ಸುವ್ಯಕ್ತವಾಗುವುದು. ಜರ್ಮನ್ ಸೈನ್ಯದಲ್ಲಿ ಇನ್ನೂ ಯುದ್ಧಕೌಶಲವು ಅಳಿವಿಲ್ಲವಾದರೂ ಅವರಿಗೆ ಪೂರ್ವದಲ್ಲಿದ್ದಷ್ಟು ರಣೋತ್ಸಾಹವೂ ಸತ್ತ್ವವರ್ತನವೂ ಕುಗ್ಗಿ ಹೋಗಿವೆ. ಆದುಕಾರಣ ಅವರು ಎಷ್ಟುಯುಕ್ತಿಯಿಂದ ಯುದ್ಧಮಾಡಿದರೂ ವಿಜಯವು ಸಿದ್ಧಿಸುವುದು ದುರ್ಲಭವಾಗಿದೆ. ದುರ್ನೀತಿಯು ಅವರ ಸೈನ್ಯದಲ್ಲಿ ಪ್ರಬಲಿಸಿಕೊಂಡಿದೆ. ಇಂಗ್ಲೀಷರಿಗೆ ಇದುವರೆಗಣ ಯುದ್ಧದಲ್ಲಿ ಈ ರಂಗದಲ್ಲೇ ಶತ್ರುಗಳ ಕಡೆಯ ೨|| ಲಕ್ಷ ಮಂದಿ ಸೈನಿಕರೂ ೩೦೦೦ ಫಿರಂಗಿಗಳೂ ವಶವಾಗಿರುತ್ತವೆ. ಇಂಗ್ಲೀಷ್ ಸೇನಾಪತಿ ಸರ್ ಡಗ್ಲಸ್ ಹೇಗ್‌ರವರು ಈಗ ಹಿಂಡನ್‌ಬರ್ಗ್ ಪಙ್ಕ್ತಿಯ ಬಳಿಯಲ್ಲೇ ಇದ್ದಾರೆ. ಕಳೆದೆರಡುವಾರಗಳಲ್ಲಿ ಈ ಸೆಂಟ್‌ಕ್ವಿಂಟಿನ್ ಬಳಿಯಣ ಯುದ್ಧದಲ್ಲಿ ಮಿತ್ರಮಂಡಲಿಯವರು ೧೦ ಸಾವಿರಕ್ಕೆ ಮೇಲ್ಪಟ್ಟ ಶತ್ರುಸೈನಿಕರನ್ನು ಹಿಡಿದಿದ್ದಾರೆ. ಸೆಂಟ್‌ಕ್ವಿಂಟಿನಿಗೆ ಪಶ್ಚಿಮದಲ್ಲೂ ವಾಯವ್ಯದಲ್ಲೂ ಇರುವ ಹಿಂಡನ್‌ಬರ್ಗ್ ಪಙ್ಕ್ತಿಯ ಮುಂದಣ ರಕ್ಷಣಸ್ಥಾನವನ್ನು ಇಂಗ್ಲೀಷರು ಭೇದಿಸಿದ್ದಾರೆ. ಪಶ್ಚಿಮದಿಕ್ಕಿನ ಹೊರತು ಉಳಿದ ಎಲ್ಲಾ ಕಡೆಯಲ್ಲೂ ಸೆಂಟ್‌ಕ್ವಿಂಟಿನನ್ನು ಮಿತ್ರಮಂಡಲಿಯವರು ಈಗ ಮುತ್ತಿರುತ್ತಾರೆ. ಇಂಗ್ಲೀಷ್ ಸೈನ್ಯವು ಕಾಂಬ್ರೆ ಪಟ್ಟಣವನ್ನು ಸಮೀಪಿಸುತ್ತಿರುವುದರಿಂದ ಶತ್ರುಗಳು ಅದರಾಸೆಯನ್ನು ಬಿಟ್ಟು ತೆರವುಮಾಡುತ್ತಿರುವಂತೆ ಕಾಣುತ್ತದೆ. ಅಲ್ಲಿದ್ದ ಪ್ರಜೆಗಳು ಊರನ್ನುಬಿಟ್ಟು ಹೋಗುತ್ತಿದ್ದಾರೆ. ಈ ಹಿಂಡನ್‌ಬರ್ಗ್ ಪಙ್ಕ್ತಿಯ ರಕ್ಷಣೆಗೆ ಶತ್ರುಗಳು ತಮ್ಮಯಾವತ್ಪ್ರಯತ್ನವನ್ನೂ ಮಾಡುತ್ತಲಿದ್ದಾರೆ. ಇದು ಮಿತ್ರಮಂಡಲಿಯಿಂದ ಭೇದಿಸಲ್ಪಟ್ಟರೆ ಶತ್ರುಗಳು ಫ್ರಾನ್ಸಿಗೆ ಶರಣುಹೊಡೆದು ಓಡಬೇಕಾಗುವುದು. ಈಗ ಶತ್ರುಗಳು ಮೊಂಡತನದಿಂದ ಪ್ರತಿಭಟಿಸುತ್ತಿರುವ ಕಾರಣ ಅವರಕಡೆ ಬಹಳ ಸೇನಾನಷ್ಟವಾಗುತ್ತಿದೆ. ಸೆಂಟ್‌ಕ್ವಿಂಟಿನ್ನಿನ ಪೂರ್ವದಲ್ಲೂ ದಕ್ಷಿಣದಲ್ಲೂ ಶತ್ರುಗಳು ನೀರಿನ ಕಾಲ್ವೆಯನ್ನು ಒಡೆದು ಜಲಮಯ ಮಾಡಿರುತ್ತಾರೆ. ಆದರೂ ಮಿತ್ರಮಂಡಲಿಯ ಸೈನಿಕರು ನೀರಿನಲ್ಲೇ ನಿಂತು ಯುದ್ಧಮಾಡಿ ಜಯಶಾಲಿಗಳಾಗುತ್ತಿದ್ದಾರೆ. ಮೆಟ್ಜ ಪ್ರಾಂತ್ಯದಲ್ಲಿ ಅಮೇರಿಕನ್ ಸೈನ್ಯವು ಬಹು ಸಾಹಸದಿಂದ ಯುದ್ಧಮಾಡಿ ಮುಂಬರಿಯುತ್ತಿದೆ. ಅಲ್ಲಿರುವ ಶತ್ರುಗಳ ವಾಯುವಾರ್ತಾಲಯವನ್ನೆಲ್ಲಾ ಧ್ವಂಸಮಾಡಿ ಅದರ ಮೂಲಕ ಜರ್ಮನ್ ಸೈನ್ಯಗಳಿಗೆ ಪರಸ್ಪರ ಸಂಬಂಧವಿಲ್ಲದಂತೆ ಮಾಡಿ ಧ್ವಂಸಗೊಳಿಸಬೇಕೆಂದು ಉದ್ದೇಶಿಸಿದ್ದಾರೆ. ಎಯ್ಸ್ನ್ ಎಯಿಲೆಟ್ಟೆಗಳ ಮಧ್ಯದಲ್ಲಿ ಫ್ರೆಂಚರಿಗೂ ಜಯವಾಗಿ ಶತ್ರುಗಳು ಹಿಮ್ಮೆಟ್ಟಿದರು.

ಬಲ್ಗೇರಿಯನ್ ರಂಗ—ಈ ಪ್ರಾಂತದಲ್ಲಿ ಸರ್ಬಿಯಾ ಸೈನಿಕರು ಫ್ರೆಂಚ್ ಇಂಗ್ಲೀಷ್ ಗ್ರೀಕ್ ಸೈನ್ಯಗಳ ಸಹಾಯದಿಂದ ಬಲವತ್ತರವಾಗಿ ಯುದ್ಧವನ್ನು ನಡೆಯಿಸುತ್ತಾ ಅನೇಕ ಸ್ಥಳಗಳನ್ನು ವಶಪಡಿಸಿಕೊಂಡಿರುವುದಲ್ಲದೆ ೮ ಸಾವಿರ ಶತ್ರುಸೈನಿಕರನ್ನೂ ನೂರಾರು ಫಿರಂಗಿಗಳನ್ನೂ ವಶಪಡಿಸಿಕೊಂಡು ೩೫ ಮೈಲಿಗಳ ದೂರದವರೆಗೆ ಮುಂದಕ್ಕೆ ನುಗ್ಗಿ ಹೋಗಿರುತ್ತಾರೆ. ಬಲ್ಗೇರಿಯನ್ ಸೇನಾಪಙ್ಕ್ತಿಯು ೨೫ ಮೈಲಿಯಗಲಕ್ಕೆ ಭೇದಿಸಲ್ಪಟ್ಟಿರುವುದು. ಮಿತ್ರಮಂಡಲಿಯವರು ಪ್ರತಿದಿನವೂ ಕೆಲಕೆಲ ಗ್ರಾಮಗಳನ್ನು ಹಿಡಿದುಕೊಳ್ಳುತ್ತಲೇ ಇರುವರು. ಬಲ್ಗೇರಿಯನ್ನರು ಹಿಂದಿರುಗಿ ಓಡಿಹೋಗುವಾಗ ಪುರಗ್ರಾಮಗಳಿಗೆಲ್ಲಾ ಅಗ್ನಿಪ್ರವೇಶಮಾಡಿಸಿ ಹಾಳ್ಮಾಡಿ ಹೋಗುತ್ತಿರುವರು. ಬಲ್ಗೇರಿಯನ್ನರಿಗೆ ಎಲ್ಲೋ ಸ್ವಲ್ಪ ಜರ್ಮನರ ಸಹಾಯವಿರುವುದಾದಕಾರಣ ಬೇರೆ ಸಹಾಯವನ್ನು ಪಡೆಯಲವಕಾಶವಿಲ್ಲದೆ ವಿಪರೀತವಾಗಿ ಸೋಲುತ್ತಿರುವರು. ಅವರ ಮೇಲಣ ಹಗೆಯನ್ನು ಸರ್ಬಿಯನ್ನರು ಈಗ ಚೆನ್ನಾಗಿ ತೀರಿಸಿಕೊಳ್ಳುತ್ತಿರುವರು. ಈ ರಂಗಕ್ಕೆ ಇಟಲಿ ಸೈನಿಕರೂ ಕೂಡ ಕಳುಹಿಸಲ್ಪಟ್ಟಿರುವುದರಿಂದ ಅವರು ವೀರಾವೇಶದಿಂದ ಕಾದುತ್ತ ಅನೇಕ ಗ್ರಾಮಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಮಿತ್ರಮಂಡಲಿ ಸೇನೆಯು ವರ್ದಾರ್ ನದಿಯವರೆಗೂ ಒತ್ತರಿಸಿಕೊಂಡು ಹೋದದ್ದರಿಂದ ಅಲ್ಲಿದ್ದ ಬಲ್ಗೇರಿಯಾ ಸೈನ್ಯವು ಇಬ್ಭಾಗವಾಗಿಹೋಗಿರುವುದು. ಇದರಿಂದ ಅವರಲ್ಲಿ ಬಲವು ಬಹಳ ಕುಗ್ಗಿ ಹೋಗಿದೆ. ಬಲ್ಗೇರಿಯನ್ನರಿಗೆ ಚಿಂತೆಯು ಪ್ರಬಲವಾಗಿದೆ. ಒಂದುಕಡೆಯಲ್ಲಿ ಮಿತ್ರಮಂಡಲಿ ಸೇನೆಯು ಬಲ್ಗೇರಿಯಾ ಎಲ್ಲೆಕಟ್ಟಿಗೆ ಮೂರೇ ಮೈಲಿಗಳ ದೂರದಲ್ಲಿದೆ. ಮೊನಾಸ್ಟರಿಗೆ ಉತ್ತರದಲ್ಲೂ ದೋರೀಯನ್ ಸರ ಪ್ರಾಂತದಲ್ಲೂ ಶತ್ರುಗಳು ಪಲಾಯನಗೊಳ್ಳುತ್ತಿದ್ದಾರೆ. ಆ ಪ್ರಾಂತದ ಬೆಟ್ಟಗಳೆಲ್ಲಾ ಮಿತ್ರಮಂಡಲಿ ವಶವಾಗಿವೆ. ವರ್ದಾರ್ ನದಿಯ ಬಳಿಯಣ ಲೋಹಮಾರ್ಗವು ಮಿತ್ರಮಂಡಲಿ ವಶವಾಗಿದೆ. ಸರ್ಬಿಯನ್ನರು ಆ ನದಿಯನ್ನು ದಾಟಿ ಆಚೆಗೆ ಹೋಗಿ ಮುಂಬರಿಯುತ್ತಿದ್ದಾರೆ.

ತುರ್ಕಿರಂಗ—ಇಂಗ್ಲೀಷ್ ಸೇನಾನಾಯಕರಾದ ಜನರಲ್ ಅಲ್ಲನ್ಬಿಯವರು ಪಾಲೆಸ್ಟೈನ್ ರಂಗದಲ್ಲಿ ಜರೂಸಲೇಂ ನಾಬ್ಲಸ್ಸು ಪಟ್ಟಣಗಳ ಮಧ್ಯದಲ್ಲಿ ಇಂಗ್ಲೀಷ್ ಹಿಂದೂ ಫ್ರೆಂಚ್ ಸೇನೆಗಳ ಸಹಾಯದಿಂದ ತುರ್ಕಿಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿ ಆ ಪ್ರಾಂತದಲ್ಲಿ ಬಹು ಭಾಗವನ್ನು ವಶಪಡಿಸಿಕೊಂಡಿರುತ್ತಾರೆ. ಮತ್ತು ೨೫ ಸಾವಿರದವರೆಗೆ ತುರ್ಕಿಯವರ ಆಳಿಯಾದ ಸೈನ್ಯವೂ ೨೬೦ ಫಿರಂಗಿಗಳೂ ಬಹಳವಾಗಿ ಯುದ್ಧೋಪಕರಣಗಳೂ ಕುದುರೆಗಳೂ ಇವರಿಗೆ ಸಿಕ್ಕಿರುತ್ತವೆ. ನಾಬ್ಲಸ್ಸು ಪುರವೂ ಇವರ ವಶವಾಯಿತು. ಮಿತ್ರಮಂಡಲಿ ಸೈನ್ಯವು ಪ್ರಸಿದ್ಧವಾದ ೨೫ ಸಾವಿರ ತುರ್ಕಿ ಸೈನ್ಯವನ್ನು ಸುತ್ತುಗಟ್ಟಿ ಅವರು ಓಡಿಹೋಗುವುದಕ್ಕಿದ್ದ ಲೋಹಮಾರ್ಗಗಳನ್ನು ವಶಪಡಿಸಿಕೊಂಡುಬಿಟ್ಟರು. ಅರಬ್ಬಿಯವರು ಒಂದು ಕಡೆಯಲ್ಲಿ ದಾರಿಯನ್ನು ಕಟ್ಟಿ ಲೋಹಮಾರ್ಗಗಳನ್ನೂ ಸೇತುಗಳನ್ನೂ ಧ್ವಂಸಮಾಡಿಬಿಟ್ಟರು. ಬೆಟ್ಟಗಾಡಿಗೆ ಓಡಿಹೋದ ತುರುಕರ ಮೇಲೆ ಇಂಗ್ಲೀಷ್ ವೈಮಾನಿಕರು ಸಿಡಿಮದ್ದಿನ ಮಳೆಯನ್ನು ಸುರಿಸುತ್ತಾ ಬಂದರು. ಇದರಿಂದ ತುರ್ಕಿಸೈನ್ಯಕ್ಕೆ ಎತ್ತ ತಲೆತಪ್ಪಿಸಿಕೊಂಡು ಹೋಗುವುದಕ್ಕೂ ಮಾರ್ಗವಿಲ್ಲದೆ ಸಿಕ್ಕಿಹೋಗಬೇಕಾಗಿಬಂದಿತು. ಜನರಲ್ ಅಲ್ಲನ್ಬಿಯವರಿಗೆ ಈ ರಂಗದಲ್ಲುಂಟಾದ ಮಹಾವಿಜಯದಿಂದ ಏಷ್ಯಾಮೈನರಿನ ಯುದ್ಧವು ಮುಗಿದುಹೋಗುವ ಕಾಲವು ಸಮೀಪಿಸಿತೆಂದು ಪತ್ರಿಕೆಗಳು ವ್ಯಾಖ್ಯಾನಮಾಡುತ್ತಿವೆ. ಪಾಲೆಸ್ಟೈನ್ ಮೆಸಪೊಟೋಮಿಯಾಗಳ ಮೇಲಿದ್ದ ತುರುಕರ ಆಸೆಯೆಲ್ಲಾ ಮಣ್ಣುಗೂಡಿದಂತಾಗಿದೆ. ಇನ್ನು ಮಿತ್ರಮಂಡಲಿ ಸೈನ್ಯಕ್ಕೆ ಅಲೆಪ್ಪೋಬಂದರಿನ ಕಡೆಯ ಮಾರ್ಗವು ತೆರೆದಿಟ್ಟದೆಯೆಂದು ಹೇಳಬಹುದು. ಮೆಸಪೊಟೋಮಿಯಾದಲ್ಲೂ ಬಾಲ್ಕನ್ನಿನಲ್ಲೂ ಇಂಥ ಜಯವು ಮಿತ್ರಮಂಡಲಿಗೆ ಆಗುತ್ತಿರುವುದರಿಂದ ಈ ಕಡೆಯ ಸೇನಾಸಹಾಯವು ಶತ್ರುಗಳಿಗೆ ಪಶ್ಚಿಮರಂಗಕ್ಕೆ ಒದಗಲವಕಾಶವಿಲ್ಲದಂತಾಗಿ ಅಲ್ಲಿಯ ಮಿತ್ರಮಂಡಲಿ ವಿಜಯಲಾಭಕ್ಕೆ ವಿಶೇಷಾವಕಾಶವಾಗಿರುತ್ತದೆ.

ರಷ್ಯಾರಂಗ—ರಷ್ಯಾದಲ್ಲಿರುವ ಇಂಗ್ಲೀಷ್ ರಾಯಭಾರಿಗಳೂ ಇಂಗ್ಲೆಂಡಿನಲ್ಲಿರುವ ರಷ್ಯಾ ರಾಯಭಾರಿಗಳೂ ಅವರವರ ದೇಶಕ್ಕೆ ಹಿಂದಿರಿಗಿ ಕರೆಯಿಸಿಕೊಳ್ಳಲ್ಪಡುತ್ತಿದ್ದಾರೆ.

ಬಾಕೂಪಟ್ಟಣದಲ್ಲಿ ಇಂಗ್ಲೀಷ್ ಸೈನಿಕರು ಹೋಗಿ ಇಳಿದಿದ್ದರಷ್ಟೆ. ಅಲ್ಲಿರುವ ಆರ್ಮೀನಿಯನ್ನರು ಇವರಿಗೆ ಸಹಾಯಮಾಡುವಂತೆ ಮೊದಲು ಹೇಳುತ್ತಿದ್ದು ಕಡೆಗೆ ದ್ರೋಹಮಾಡಿ ಶತ್ರುಗಳ ಕಡೆಗೇ ಸೇರಿದ್ದರಿಂದ ಅದನ್ನು ಇಂಗ್ಲೀಷರು ಬಿಟ್ಟುಬಿಟ್ಟು ಬಂದರು.

ಉರಲ್ಸ್ ಪ್ರಾಂತವನ್ನು ಮುತ್ತುವುದಕ್ಕೆ ಜರ್ಮನರ [illegible] ೧|| ಲಕ್ಷ ಸೈನ್ಯವು ಸಿದ್ಧವಾಗಿದೆ. [illegible] ಸೈನಿಕರ [illegible]

ಜಪಾನರ ಅಶ್ವಸೈನ್ಯವು ಸ್ವಾಟೋನಸ್ಕ್ ಚಿಸಾಳು ಅಲೆಕ್ಸೀವ್ಸ್ಕ್ ಎಂಬ ಪುರಗಳನ್ನು ಸ್ವಾಧೀನಪಡಿಸಿಕೊಂಡುವು. ಕೋಲ್ಕ್ಟೋ ಹತ್ತಿರ ೨ ಸಾವಿರ ಆಸ್ಟ್ರಿಯನ್ ಜರ್ಮನ್ ಸೈನಿಕರು ಜಪಾನರಿಗೆ ಸೆರೆಸಿಕ್ಕಿದರು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿರುವ ಪಂಚಮರ ಪಾಠಶಾಲೆಯನ್ನು ಹೈಸ್ಕೂಲನ್ನಾಗಿ ಮಾಡಲು ಸರ್ಕಾರದಪ್ಪಣೆಯಾಗಿದೆ.

ಬೆಂಗಳೂರಿನಲ್ಲಿ ರೂ. ಗೆ ೧೪ ಸೇರು ರಾಗಿಯಂತೆ ೨ ತಿಂಗಳವರೆಗೆ ಮಾರಲು ಅಲ್ಲಿಯ ಮ್ಯುನಿಸಿಪಾಲಿಟಿಯವರು ಏರ್ಪಡಿಸಬೇಕೆಂದು ನಿರ್ಧರಿಸಿರುವರು.

ಶ್ರೀಮನ್ಮಹಾರಾಜರವರು ಸಪರಿವಾರರಾಗಿ ಕಳೆದ ತಾ|| ೨೫ ನೆ ಬುಧವಾರ ಪ್ರಾತಃಕಾಲ ೫|| ಗಂಟೆಯಲ್ಲಿ ಅರಸೀಕೆರೆ ಲೋಹಮಾರ್ಗದಿಂದ ರಾಜಧಾನಿಗೆ ದಯಮಾಡಿಸಿದರು.

ರಾಜಧಾನಿಯಲ್ಲಿ ಸ್ಥಾಪಿತವಾಗಿದ್ದ ಸೇಕಡಾರಿ ಸ್ಕೂಲು [illegible] ರೆವಿನ್ಯೂ ಕಮಿಷನರ ಅಧೀನದಲ್ಲಿ ಬೆಂಗಳೂರಿನೊಳಗೆ ಸ್ಥಾಪಿಸಲ್ಪಡುವುದಕ್ಕೆ ಏರ್ಪಾಡಾಗಿದೆಯೆಂದು ಕೇಳುತ್ತೇವೆ.

ಉತ್ತರೆಮಳೆಯ ೨ನೆ ಪಾದವು ಹಲವುಕಡೆ ನಡೆಯಿಸಿದ ವರ್ತಮಾನ ಬಂದಿದೆ. ಆದರೆ ಈಚೆಗೆ ಮತ್ತೆ ಮಳೆಯು ಹಿಂದೆಗೆದಿದೆ. ಪೈರಿಗೂ ಕೆರೆಕಟ್ಟೆಗಳಿಗೂ ಇನ್ನೂ ಮಳೆಗಳ ಆವಶ್ಯಕತೆಯು ಬಹಳವಾಗಿದೆ.

ನವರಾತ್ರಿ ಮಹೋತ್ಸವ ಪ್ರಯುಕ್ತವಾಗಿ ಶ್ರೀಮನ್ಮಹಾರಾಜರವರು ಬರುವ ಅಕ್ಟೋಬರ್ ೬ ನೆ ಭಾನುವಾರ ಸಿಂಹಾಸನಾರೋಹಣವನ್ನು ಮಾಡುವವರಾಗಿದ್ದಾರೆ. ತಾ|| ೧೫ನೆ ಮಂಗಳವಾರ ವಿಜಯದಶಮಿ ಮಹೋತ್ಸವವು ಜರುಗುತ್ತದೆ. ವಸ್ತುಪ್ರದರ್ಶನವು ತಾ|| ೧೨ ರಿಂದ ಆರಂಭವಾಗುತ್ತದೆ. ಪರಸ್ಪರ ಸಹಾಯಕಸಂಘ ಮಹಾಸಭೆಯು ತಾ|| ೧೦-೧೧-೧೨ ರಲ್ಲಿ ನಡೆಯುತ್ತದೆ.

ಬೆಂಗಳೂರಿನಲ್ಲಿ ಹೊಸದಾಗಿ ನಡೆದ ಮುನ್ಸಿಪಲ್ ಕೌನ್ಸಿಲರ ಆರಿಸುವಿಕೆಯಲ್ಲಿ ಒಟ್ಟು ೧೮ ಸ್ಥಾನಕ್ಕೆ ಹಿಂದುಳಿದ ಜನವರ್ಗಗಳಿಗೆಲ್ಲಾ ಒಂಭತ್ತೇ ಮಂದಿಯು ಬಂದು ಬ್ರಾಹ್ಮಣಜನವರ್ಗಕ್ಕೆ ೯ ಮಂದಿಗಳು ಬಂದಿದ್ದಾರೆ. ಪ್ರಮುಖವಾಗಿರುವ ಅನೇಕ ಜನವರ್ಗಗಳಿಗೆ ಪ್ರಾತಿನಿಧ್ಯವೇ ಇಲ್ಲದಂತಾಗಿರುವ ಈ ಲೋಪವನ್ನು ನಾಮಿನೇಷನ್ನಿನ ಮೂಲಕ ಪ್ರಭುತ್ವದವರು ನಿವಾರಿಸಬೇಕಾಗಿದೆ.

ರಾಜಧಾನಿಯಲ್ಲಿ ಕೆಲ ವರ್ತಕರು ಅಕ್ಕಿ ರಾಗಿಗಳನ್ನು ಸ್ವಲ್ಪ ಅಗ್ಗವಾಗಿ ಮಾರುತ್ತಿದ್ದುದು ತೃಪ್ತಿಕರವಾಗಿರಲಿಲ್ಲ. ಈಚೆಗೆ ಮ್ಯುನಿಸಿಪಲ್ ಅಧಿಕಾರಿಗಳೂ ಡಿಸ್ಟ್ರಿಕ್ಟ್ ಕಮಿಷನರೂ ಸೇರಿ ಅಕ್ಕಿಯನ್ನು ೬ ಸೇರಿಗೆ ಕಡಿಮೆಯಾಗಿ ಮಾರಕೂಡದೆಂದು ಕಟ್ಟಪ್ಪಣೆ ಮಾಡಿರುವುದಲ್ಲದೆ ಪ್ರತಿಮೊಹಲ್ಲೆಯಲ್ಲೂ ರಾಗಿಯನ್ನು ೧೨ ಸೇರಿಗೆ ಕಡಿಮೆಯಿಲ್ಲದಂತೆ ಮಾರಲು ೧೩-೧೪ ಅಂಗಡಿಗಳನ್ನು ವರ್ತಕರಿಂದ ಇಡಿಸಿ ರಾಗಿಯನ್ನು ಒದಗಿಸಿಕೊಡುವುದಕ್ಕೆ ತಾವು ನಿಂತಿರುವುದು ಪ್ರಜೆಗಳಿಗೆ ಉಪಕಾರಕವಾಗಿಯೂ ಸ್ತುತ್ಯವಾಗಿಯೂ ಇದೆ

ರಾಜಧಾನಿಯಲ್ಲಿ ಉತ್ತರಭಾಗದ ಮೊಹಲ್ಲೆಗಳಲ್ಲಿ ವಿಶೇಷವಾಗಿ ಹಾವಳಿಮಾಡುತ್ತಿರುವ ಪ್ಲೇಗುರೋಗವು ದಕ್ಷಿಣಭಾಗಗಳಲ್ಲೂ ಕಾಲುಚಾಚಿದ ಲಕ್ಷಣಗಳು ತೋರುತ್ತಿವೆ. ಹೆಲ್ತಾಫೀಸರು ಇನಾಕ್ಯುಲೇಷನ್ ಮಾಡಿಸುವುದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿದ್ದಾರೆ. ಬೇಕಾದವರು ಮನೆಗೆ ಬರಮಾಡಿಕೊಂಡು ಇನಾಕ್ಯುಲೇಷನ್ ಮಾಡಿಸಿಕೊಳ್ಳಬಹುದು. ಟೌನ್‌ಹಾಲಿಗೆ ಹೋಗಿಯೂ ಮಾಡಿಸಿಕೊಳ್ಳಬಹುದು. ಪ್ರತಿಬೀದಿಯವರೂ ಒಟ್ಟುಕೂಡಿ ಡಾಕ್ಟರನ್ನು ಬರಮಾಡಿಕೊಂಡು ಇನಾಕ್ಯುಲೇಷನ್ನನ್ನು ಬೇಗಬೇಗನೆ ಮಾಡಿಸಿಕೊಳ್ಳುತ್ತ ಬಂದರೆ ಪ್ಲೇಗಿನ ಬಾಯಿಗೆ ತುತ್ತಾಗುವವರ ಸಂಖ್ಯೆಯನ್ನು ಬಲುಮಟ್ಟಿಗೆ ಕಡಿಮೆಮಾಡಿಕೊಳ್ಳಬಹುದು.

ಸಂಪದಭ್ಯುದಯ ಸಮಾಜದ ಡಿಸ್ಟ್ರಿಕ್ಟ್ ಕಮಿಟಿಗಳಿಗೆ ಸಭಿಕರನ್ನು ಇದುವರೆಗೆ ಸರ್ಕಾರದವರೇ ನಿಯಮಿಸುತ್ತಿದ್ದರು. ಇನ್ನುಮೇಲೆ ಪ್ರತಿ ಡಿಸ್ಟ್ರಿಕ್ಟ್ ಕಮಿಟಿಗೂ ಕೆಲರನ್ನು ಪ್ರಜೆಗಳಿಂದ ಆರಿಸಲ್ಪಟ್ಟವರನ್ನೂ, ಕೆಲರನ್ನು ಸರ್ಕಾರದ ಉದ್ಯೋಗಿಗಳಿಂದ ಆರಿಸಿಕೊಂಡೂ, ಕೆಲರನ್ನು ಪ್ರಜೆಗಳಿಂದಲೋ ಅಧಿಕಾರಿವರ್ಗದಿಂದಲೋ ನಾಮಿನೇಷನ್ ಮಾಡಿಕೊಂಡೂ ಹೀಗೆ ಮೂರುತೆರನಾದ ಮೆಂಬರುಗಳನ್ನು ಸೇರಿಸಲು ಏರ್ಪಡಿಸಿರುವರು. ಈ ಏರ್ಪಾಟಿನ ಪ್ರಕಾರಕ್ಕೆ ಈ ಕೆಳಗೆ ಕಂಡಂತೆ ಸಭಿಕರುಗಳು ಗೊತ್ತುಮಾಡಲ್ಪಡುವರು.

ಡಿ|| ಕಮಿಟಿಗಳು	ಉದ್ಯೋಗಿಗಳಿಂದ ಆರಿಸಲ್ಪಟ್ಟವರು	ಪ್ರಜೆಗಳಿಂದ ಆರಿಸಲ್ಪಟ್ಟವರು	ಸರ್ಕಾರದಿಂದ ನಿಯುಕ್ತರಾದವರು
ಬೆಂಗಳೂರು ಡಿ|| ಗೆ	೮	೧೦	೧೫ = ೩೩.
ಮೈಸೂರು ಡಿ|| ಗೆ	೯	೧೪	೧೦ = ೩೩.
ಕೋಲಾರ ಡಿ|| ಗೆ	೮	೧೧	೧೪ = ೩೩.
ತುಮಕೂರು ಡಿ|| ಗೆ	೭	೧೦	೧೩ = ೩೦.
ಹಾಸನ ಡಿ|| ಗೆ	೭	೮	೧೨ = ೨೭.
ಶಿವಮೊಗ್ಗ ಡಿ|| ಗೆ	೮	೯	೧೩ = ೩೦.
ಕಡೂರು ಡಿ|| ಗೆ	೭	೬	೧೪ = ೨೭.
ಚಿತ್ರದುರ್ಗ ಡಿ|| ಗೆ	೭	೯	೧೪ = ೩೦.

ಈ ಮೇಲೆ ಕಂಡ ಮೆಂಬರುಗಳಲ್ಲಿ ಪ್ರಜೆಗಳಿಂದ ಆರಿಸಲ್ಪಡುವವರ ಕಾಲಾವಧಿಯು ೩ ವರ್ಷವು. ಉಳಿದವರು ಪ್ರತಿವರ್ಷವೂ ಬದಲಾಯಿಸಲ್ಪಡುವರು.

ಭರತಖಂಡದ ವೃತ್ತಾಂತಗಳು.

ಕಳೆದ ತಾ|| ೨೫ರ ವರೆಗೆ ೨ನೆ ಯುದ್ಧದ ಸಾಲದ ಪತ್ರಗಳು ೫೧೦೨೪೮೦೦ ರೂ. ಗಳವು ಮಾರಲ್ಪಟ್ಟಿರುವುವು.

ಮದ್ರಾಸು ಅಧಿಪತ್ಯಕ್ಕೆ ಸೇರಿದ ಕರ್ನೂಲು, ತಿಯ್ಯಾಲಿ, ಕಾಮುತಿ, ಪುದುಚೇರಿ, ಗುಂಟೂರು ಮೊದಲಾದ ಕಡೆ ಲೂಟಿಗಳಾಗಿವೆ.

ಬರುವ ನವಂಬರ್ ತಾ|| ೨೮ರಲ್ಲಿ ಗೌರ್ನರ್ ಜನರಲ್‌ರವರು ಪ್ರಾಪ್ತವಯಸ್ಕರಾಗಿರುವ ಭರತಪುರದ ಮಹಾರಾಜರಿಗೆ ಸ್ವರಾಜ್ಯಾಧಿಕಾರವನ್ನು ಕೊಡುವರು.

ಅಲ್ವಾರ್ ಮಹಾರಾಜರು ಯುದ್ಧ ಮುಗಿಯುವವರೆಗೂ ತಮ್ಮ ಸೈನ್ಯವನ್ನು ಇಂಡ್ಯಾ ಸರ್ಕಾರದವರ ವಶಮಾಡಿರುವುದಲ್ಲದೆ ಅದರ ಪೋಷಣೆಗಾಗಿ ಪ್ರತಿವರ್ಷವೂ ೩ ಲಕ್ಷ ರೂ.ಗಳನ್ನು ಕೊಡುತ್ತೇನೆಂದು ತಿಳಿಯಿಸಿದ್ದಾರೆ.

ಇಂಡ್ಯಾ ಗೌರ್ನಮೆಂಟಿನವರು ಹೊಸದಾಗಿ ಹಾಕಬೇಕೆಂದು ಯೋಚಿಸಿರುವ ತೆರಿಗೆಯಿಂದ ವರ್ಷ ೧ಕ್ಕೆ ೨೦||| ಕೋಟಿ ರೂ.ಗಳ ವರಮಾನವಾಗುವುದಂತೆ. ಆದರೆ ಇದೆಲ್ಲಾ ಉಪ್ಪಿನಮೇಲೆಯೇ ಬೀಳುವುದು.

ಮದರಾಸಿನಲ್ಲಿ ಬರುವ ಅಕ್ಟೋಬರ್ ತಾ|| ೨೦ ರಲ್ಲಿ ಮಾಂಟೇಗು ಚೆಲಮ್ಸ್‌ಫರ್ಡ್ ನೂತನ ರಾಜಕೀಯ ಸಂಸ್ಕರಣ ವಿಷಯವನ್ನು ಕುರಿತು ಆಲೋಚಿಸುವುದಕ್ಕಾಗಿ ಹಿಂದುಳಿದವರ ಮಹಾಸಭೆಯನ್ನು ನಡೆಯಿಸಲು ನಿರ್ಧರವಾಗಿದೆ.

ಅನಿಬೆಸೆಂಟಮ್ಮನವರೂ ಮಿ|| ಹರ್ನಿಮಾನ್‌ರವರೂ ಸಹದೇಶೀಯ ಮಹಾಸಭಾ ರಾಯಭಾರಿಗಳಾಗಿ ಸೀಮೆಗೆ ಹೊರಡಲು ಸಿದ್ಧರಾಗಿದ್ದರು. ಸಾಮ್ರಾಜ್ಯ ನಿಯಮನಿರ್ಮಾಣಸಭೆಯಲ್ಲಿ ಇದರ ಚರ್ಚೆಬಂದಾಗ ಸರ್ಕಾರದವರು ಒಪ್ಪಿಗೆಕೊಡಲಿಲ್ಲ.

ಬೊಂಬಾಯಿಯಲ್ಲಿ ಮಿತವಾದಿಗಳ ಪ್ರತ್ಯೇಕ ಮಹಾಸಭೆಯು ಬರುವ ಅಕ್ಟೋಬರ್ ತಾ|| ೧೯-೨೦ ರಲ್ಲಿ ಕೂಡುವುದಾಗಿದೆ. ಇದರಲ್ಲಿ ತೀರ್ಮಾನಿಸಲ್ಪಡುವ ವಿಷಯಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯಾವಶ್ಯಕತೆಯೂ ಒಂದಾಗಿ ಮಾಡಲ್ಪಡುವುದೆಂದು ಅರಿಯುತ್ತೇವೆ.

ಬೊಂಬಾಯಿಯಲ್ಲಿ ವಿಷಜ್ವರವು ಮತ್ತೆ ಪ್ರಾರಂಭವಾಗಿ ದಿನಕ್ಕೆ ೩೦೦-೪೦೦ ಮಂದಿಗಳು ಅದರಿಂದ ಸಾಯುತ್ತಿದ್ದಾರೆ. ತಾ|| ೨೩ರಲ್ಲಿ ೪೨೭ ಮಂದಿ ಸತ್ತಿರುವರಂತೆ! ಮುಖ್ಯವಾಗಿ ಬಡಬಗ್ಗರಾದ ಕೂಲಿಯವರೂ ಮಕ್ಕಳೂ ಇದರಿಂದ ವಿಶೇಷವಾಗಿ ಸಾಯುತ್ತಿರುವರು.

ನೂಲಿನ ಮತ್ತು ರಂಗಿನ ಬೆಲೆಗಳು ಹೆಚ್ಚಿಹೋಗಿ ನೆಯ್ಗೆಗಾರರ ಬಡತನವು ಮಿತಿಮೀರಿರುವುದರಿಂದಲೂ ಧಾನ್ಯಗಳ ಬೆಲೆಯು ಹೆಚ್ಚಿಹೋಗಿರುವುದರಿಂದಲೂ ಆ ನೆಯ್ಗೆಗಾರರು ವಿಶೇಷವಾಗಿರುವ ಮಧುರೆ, ಕೊರ್ನಾಡು, ಕುತ್ತಾಲು, ತಿರುನಲ್ವೇಲಿ ಮೊದಲಾದ ಕಡೆಗಳಲ್ಲಿ ಲೂಟಿಯಾಗಿಯೂ ಆಗುತ್ತಲೂ ಇದೆ.

ಉತ್ತರ ಹಿಂದೂಸ್ಥಾನದಲ್ಲಿ ಪ್ಲೇಗುರೋಗದ ಹಾವಳಿಯು ಈಗ ಬಲುಕಡಿಮೆಯಾಗಿದೆ. ಕಳೆದ ತಾ|| ೭ಕ್ಕೆ ಕಡೆಯಾದ ೧ ವಾರ ಕಾಲದಲ್ಲಿ ಬಂಗಾಳಾ, ಬೀಹಾರು, ಒರಿಸ್ಸಾ, ಸಂಯುಕ್ತಪ್ರಾಂತಗಳು, ರಾಜಪುತ್ರಸ್ಥಾನ, ಮಧ್ಯಪ್ರಾಂತ ಇವುಗಳಲ್ಲೆಲ್ಲಾ ೧೧ ಮಂದಿಮಾತ್ರವೇ ಈ ರೋಗದಿಂದ ಸತ್ತರು.

ಗುಂತಕಲ್ಲು ಸಂತೆಯಲ್ಲಿ ಬಟ್ಟೆಬರೆಗಳು ಲೂಟಿಮಾಡಲ್ಪಟ್ಟವು. ಅಲ್ಲಿಯ ದೊಡ್ಡ ವ್ಯಾಪಾರಸ್ಥರಾದ ಮ|| ಎಂ. ಹಂಪಯ್ಯನವರು ೫೨೦ ಚೀಲ ಅಕ್ಕಿಯನ್ನೂ ರಾಗಿ ಜೋಳಗಳನ್ನೂ ತರಿಸಿ ರೂ.ಗೆ ೫|| ಸೇರು ಅಕ್ಕಿ, ೧೦ ಸೇರು ರಾಗಿ ೭ ಸೇರು ಜೋಳದಂತೆ ಮಾರಲುಪಕ್ರಮಿಸಿದುದರಿಂದ ಬಡವರಿಗೆ ಅನುಕೂಲವಾಯಿತು.

ಬೊಂಬಾಯಿ, ದಿಲ್ಲಿ, ಕಲ್ಕತ್ತಾ, ಮದ್ರಾಸು ಇಂಥ ಮುಖ್ಯಪಟ್ಟಣಗಳಿಗೆ ಒಂದುಕಡೆಯಿಂದ ಮತ್ತೊಂದುಕಡೆಗೆ ಟೆಲಿಫೋನಿನ ಮೂಲಕ ಮಾತನಾಡುವ ಯಂತ್ರಸ್ಥಾಪನೆಯನ್ನು ಮಾಡುವ ಪರ್ಯಾಲೋಚನೆಯನ್ನು ಇಂಡ್ಯಾ ಸರ್ಕಾರದವರು ಮಾಡುತ್ತಿದ್ದಾರೆ. ಅಷ್ಟುದೂರಕ್ಕೆ ಟೆಲಿಫೋನ್ ಸಂಬಂಧವಿಡುವುದು ಸಾಧ್ಯವೆಂದು ಯೋಚಿಸಲ್ಪಟ್ಟಿದೆ.

ಬೊಂಬಾಯಿಯಲ್ಲಿ ಅಕ್ಕಿವ್ಯಾಪಾರವನ್ನು ಮಾಡುವವರೆಲ್ಲರೂ ತಮ್ಮ ಬಳಿಯಲ್ಲಿ ಸಿದ್ಧವಾಗಿರುವ ಅಥವಾ ತಮಗೆ ಇಷ್ಟರಲ್ಲೇ ಬರಲಿಕ್ಕಿರುವ ಅಕ್ಕಿಯು ೧೦೦ ಮೂಟೆಗಳಿಗಿಂತ ಹೆಚ್ಚಾಗಿರುವಪಕ್ಷದಲ್ಲಿ ಅವುಗಳ ವಿವರವನ್ನೆಲ್ಲಾ ಆಹಾರದ ಕಂಟ್ರೋಲರಿಗೆ ಈ ತಿಂಗಳು ತಾ|| ೨೮ರೊಳಗಾಗಿ ತಿಳಿಯಪಡಿಸಬೇಕೆಂದು ಅಲ್ಲಿಯ ಪ್ರಭುತ್ವದವರು ಅಪ್ಪಣೆಮಾಡಿದ್ದಾರೆ.

೧೦೦೦ ಪೌನುಗಳ ತೂಕಕ್ಕಿಂತ ಹೆಚ್ಚಾದ ಬತ್ತವನ್ನಾಗಲೀ ಅಕ್ಕಿಯನ್ನಾಗಲೀ ಹೊಂದಿರುವ ಪ್ರಜೆಗಳೆಲ್ಲರೂ ತಮ್ಮಲ್ಲಿರುವ ಸ್ಟಾಕಿನ ಪರಿಮಾಣವನ್ನು ಸಿವಲ್ ಸಪ್ಲೈ ಡೈರೆಕ್ಟರಿಗೆ ತಿಳಿಯಪಡಿಸಬೇಕೆಂದು ಮದ್ರಾಸ್ ಸರ್ಕಾರದವರು ಪ್ರಕಟಿಸಿದ್ದಾರೆ. ಹೆಚ್ಚಾಗಿರುವ ಧಾನ್ಯವನ್ನು ಸರ್ಕಾರದವರು ತಮ್ಮ ವಶಪಡಿಸಿಕೊಳ್ಳುವುದಕ್ಕಾಗಿ ಇದು ಸೂಚನೆಯೆಂದು ಕಾಣುತ್ತದೆ.

ಬೊಂಬಾಯಿಯಲ್ಲಿ ಒಬ್ಬ ಸರಾಫನು ಸೌರನನ್ನು ೧೫ ರೂ.ಗಿಂತ ಹೆಚ್ಚುಬೆಲೆಗೆ ಮಾರಿದಕಾರಣ ನಾನು ಸರ್ಕಾರದಪ್ಪಣೆಯನ್ನು ಕಾಣದೆ ಹಾಗೆ ಮಾರಿದೆನೆಂದು ತನ್ನ ವಕೀಲನ ಮೂಲಕ ಮ್ಯಾಜಿಸ್ಟ್ರೇಟರ ಇದಿರಿಗೆ ಹೇಳಿಕೊಂಡರೂ ಮಾರಿದವನಿಗೂ ಕೊಂಡವನಿಗೂ ಸಹ ೨೦೦ರೂ. ದಂಡವು ವಿಧಿಸಲ್ಪಟ್ಟಿತು. ಕಲ್ಕತ್ತಾದಲ್ಲಿ ಸೌರನನ್ನು ಕರಗಿಸಿದ ಇಬ್ಬರು ಬಂಗಾಳಿಗಳ ಮೇಲೆ ಪೋಲೀಸರು ವ್ಯಾಜ್ಯಹೂಡಿದ್ದಾರೆ.

ರಂಗೂನಿನಿಂದ ಪ್ರತಿವಾರವೂ ೪-೫ ಸಾವಿರ ಟನ್ನುಗಳಷ್ಟು ಅಕ್ಕಿಯು ಕಲ್ಕತ್ತಾಕ್ಕೆ ಬರುತ್ತಿದ್ದಿತು. ಅದು ನಿಲ್ಲಿಸಲ್ಪಟ್ಟಿದೆ. ಹಡಗುಗಳು ದೊರೆಯುವುದು ಕಷ್ಟವಾಗಿದೆ. ಈಗ ಬೊಂಬಾಯಿ ಕಲ್ಕತ್ತಾ ಮದ್ರಾಸು ಪಟ್ಟಣಗಳಲ್ಲಿ ಅಕ್ಕಿಗೆ ತುಂಬಾ ಅಭಾವಬಂದಿದೆ. ಮದ್ರಾಸಿಗೆ ರಂಗೂನಿನಿಂದ ಅಕ್ಕಿಯನ್ನು ತರಿಸಿಕೊಳ್ಳಲಿಕ್ಕೆ ಬೆಸ್ಟ್ ಅಂಡ್ ಕಂಪೆನಿಯವರು ತಮ್ಮ ೨ ಹಡಗುಗಳನ್ನು ಬಾಡಿಗೆಗೆ ಕೊಡಲು ಒಪ್ಪಿದ್ದಾರೆ.

ಬಂಗಾಳಾಕ್ಕೆ ಸೇರಿದ ಪಾಬ್ನಾಪಟ್ಟಣದ ಬಳಿಯಲ್ಲಿರುವ ರಾಮಚಂದ್ರಪುರವೆಂಬ ಗ್ರಾಮದಲ್ಲಿ ಅಲ್ಲಿಯುದ್ದೀನ್ ಷೇಕು ಎಂಬ ಬಡವನ ಹೆಂಡತಿಯು ಕೆಲಕಾಲದಿಂದಲೂ ತನ್ನ ಶರೀರವನ್ನು ಮುಚ್ಚಿಕೊಳ್ಳುವುದಕ್ಕೂ ತಕ್ಕಷ್ಟು ಬಟ್ಟೆಯನ್ನು ತನ್ನ ಗಂಡನು ತಂದುಕೊಡಲಾರದವನಾಗಿರಲು ಮಾನಾಭಿಮಾನದಿಂದ ಹೊರಕ್ಕೇಬರಲಾರದ ಸ್ಥಿತಿಯಲ್ಲಿ ಬದುಕಲಾರದೆ ಆಕೆಯು ಆತ್ಮಹತ್ಯೆಯನ್ನು ಮಾಡಿಕೊಂಡಳೆಂದು ಪ್ರಕಟವಾಗಿದೆ.

ಇಂಡ್ಯಾ ಸರ್ಕಾರದವರು ದೇಶೋಪಯೋಗಕ್ಕಾಗಿ ೬ ಹಡಗುಗಳನ್ನು ಈ ದೇಶದಲ್ಲೇ ಕಟ್ಟಿಸುತ್ತಿದ್ದಾರೆ. ಇವುಗಳಲ್ಲಿ ಬೊಂಬಾಯಿಯೆಂಬ ಹೆಸರಿನ ಹಡಗು ಮೊದಲೇ ಕಟ್ಟಿ ಮುಗಿದು ಪಶ್ಚಿಮ ಸಮುದ್ರತೀರಗಳಲ್ಲಿ ಉಪಯೋಗಿಸಲ್ಪಡುವುದು. ಇದರ ಬಾಯಿಲರು ಇಂಜನ್ನುಗಳ ಹೊರತು ಉಳಿದ ಸಾಮಗ್ರಿಗಳೆಲ್ಲಾ ಈ ದೇಶದಲ್ಲೇ ನಿರ್ಮಿತವಾಗುವ ಸಾಮಗ್ರಿಗಳಿಂದಲೇ ಕಟ್ಟಲ್ಪಟ್ಟಿವೆ. ಕಲ್ಕತ್ತಾ ಎಂಬ ಹಡಗು ಕಟ್ಟಲ್ಪಟ್ಟು ಮುಗಿದಿದೆ. ಇದರಿಂದ ಇನ್ನು ಮೇಲೆ ಈ ದೇಶದ ನೌಕಾನಿರ್ಮಾಣಕ್ಕೆ ದಾರಿತಾಕಿಕೊಟ್ಟಂತೆಯೂ, ವ್ಯಾಪಾರ ಪರಿಶ್ರಮಾಭಿವೃದ್ಧಿಗೆ ಪ್ರೋತ್ಸಾಹವಾದಂತೆಯೂ ಆಯಿತು.

ಅಕ್ಕಿ ರಾಗಿಗಳ ಜತೆಗೆ ಮೆಣಸಿನಕಾಯಿಯ ಬರವು ಬಹಳ ದಿಗಿಲನ್ನು ಉಂಟುಮಾಡಿದೆ. ಮಣಕ್ಕೆ ೧೫ ರೂ.ಗಳ ವರೆಗೆ ಅದರ ಬೆಲೆಯು ನಮ್ಮಲ್ಲಿ ಹೆಚ್ಚಿಹೋಗಿದೆ. ಮದ್ರಾಸು ಪಟ್ಟಣದಲ್ಲಿ ೧೫೦೦೦ ಮಣಗಳಷ್ಟು ಮಾತ್ರವೇ ಮೆಣಸಿನಕಾಯಿಯು ಶೇಖರವಾಗಿರುವುದಂತೆ. ಆ ಪಟ್ಟಣದಲ್ಲಿರುವ ೫೧೮೦೦೦ ಮಂದಿ ಪ್ರಜೆಗಳಿಗೆ ತಲೆಯೊಂದಕ್ಕೆ ದಿನ ೧ಕ್ಕೆ ೧|| ತೊಲೆಯಷ್ಟು ಕಾರವನ್ನು ಉಪಯೋಗಿಸುವರೆಂದು ಇಟ್ಟುಕೊಂಡರೂ ೪೧ ದಿನಗಳಿಗೆ ಮಾತ್ರ ಅಲ್ಲಿರುವ ಮೆಣಸಿನಕಾಯಿಯು ಸಾಕಾಗುವುದು. ಮುಂದೇನು ಗತಿಯೆಂದು ಅಲ್ಲಿಯ ಮೆಣಸಿನಕಾಯಿ ವರ್ತಕ ಸಂಘಾಧ್ಯಕ್ಷರು ಪತ್ರಿಕೆಗಳಿಗೆ ಬರೆದುಕೊಂಡಿದ್ದಾರೆ.

ಬಟ್ಟೆಬರೆಗಳ ಬೆಲೆಯ ನಿರ್ಣಯ ಮತ್ತು ಅವುಗಳನ್ನೊದಗಿಸುವಿಕೆಯ ವಿಷಯವಾಗಿ ಕಳೆದ ಸಾಮ್ರಾಜ್ಯಶಾಸನ ಸಭೆಯಲ್ಲಿ ಚರ್ಚೆನಡೆದುದರಮೇಲೆ ಬಡಬಗ್ಗರಿಗೆ ಯಾವತೆರದ ಬಟ್ಟೆಯು ಹೆಚ್ಚಾಗಿಬೇಕಾಗಿರುವುದೋ ಅದನ್ನು ನಿರ್ಧರಿಸಿ ಈ ದೇಶದಲ್ಲಿರುವ ನೆಯ್ಗೆಯಂತ್ರಗಳನ್ನೆಲ್ಲಾ ಪರಾಮರಿಸಿ ಎಲ್ಲ ಅಧಿಪತ್ಯಗಳ ಪ್ರತಿನಿಧಿಗಳನ್ನೂ ಬೊಂಬಾಯಿಯಲ್ಲಿ ಕೂಡಿಸಿ ಯಾವಯಾವ ಅಧಿಪತ್ಯಕ್ಕೆ ಎಷ್ಟೆಷ್ಟು ಬಟ್ಟೆಯಾಗಬೇಕೆಂಬುದನ್ನು ಗೊತ್ತುಮಾಡಿ ಕಂಟ್ರೋಲರು ಪ್ರತಿ ಯಂತ್ರಾಲಯಗಳಲ್ಲೂ ಅಗ್ಗವಾದ ಬಟ್ಟೆಗಳನ್ನು ನಿರ್ಮಿಸುವಂತೆ ಮಾಡಲು ಅಧಿಕಾರವನ್ನು ಹೊಂದಿರುವರು. ಮತ್ತು ಈಗಾಗಲೇ ಬೊಂಬಾಯಿಯಲ್ಲಿ ಮೇಲೆಕಂಡ ರೀತಿಯಲ್ಲಿ ಕೆಲಸವನ್ನು ಜರುಗಿಸುವುದಕ್ಕೆ ಉಜ್ಜುಗಿಸಿರುವರು.

ವಿದೇಶ ವೃತ್ತಾಂತಗಳು.

ರಷ್ಯಾದ ಜೆಕೋಸ್ಲಾವಕ್ಕರೆಲ್ಲಾ ತಮ್ಮ ಕೂಟಕ್ಕೆ ಸೇರಿದವರೆಂದು ಮಿತ್ರಮಂಡಲಿಯವರು ಅಂಗೀಕರಿಸಿರುವರು.

ಕಳೆದ ಆಗಸ್ಟ್ ತಿಂಗಳಲ್ಲಿ ಅಮೇರಿಕಾದಿಂದ ಯೂರೋಪು ರಣರಂಗಕ್ಕೆ ೩೧೩೦೦೦ ಸೈನಿಕರು ಹೊರಟುಬಂದಿರುವರು.

ಅಮೇರಿಕಾದಿಂದ ಎಲ್ಲ ರಣರಂಗಗಳಿಗೂ ಹೋಗುವುದಕ್ಕೆ ೧೭|| ಲಕ್ಷ ಸೈನ್ಯವು ಮರಳಿ ಸಮುದ್ರದಮೇಲೆ ಪ್ರಯಾಣಮಾಡುತ್ತಲಿರುವುದು.

ಮುಂದಣ ವರ್ಷದ ಸೇನೆಯ ವೆಚ್ಚಕ್ಕಾಗಿ ಅಮೇರಿಕಾ ಯುದ್ಧಶಾಖೆಯವರು ೬೪೫೨೦೦೦೦೦೦ ಡಾಲರುಗಳನ್ನು ಅಪ್ಪಣೆಮಾಡಬೇಕೆಂದು ತಮ್ಮ ರಾಜ್ಯಾಂಗಸಭೆಯವರ ಅಪ್ಪಣೆ ಕೇಳಿರುವರು.

ಆಸ್ಟ್ರಿಯಾ ಜರ್ಮನಿ ದೇಶದವರೂ ತಟಸ್ಥದೇಶದವರೂ ಸಹ ಎಷ್ಟು ಆಕ್ಷೇಪಣೆ ಮಾಡುತ್ತಿದ್ದರೂ ಪೆಟ್ರೊಗ್ರೇಡ್ ಪಟ್ಟಣದಲ್ಲಿ ನಡೆಯುತ್ತಿರುವ ಹತ್ಯೆಗಳು ಇನ್ನೂ ತಪ್ಪಲೇ ಇಲ್ಲ. ಇದುವರೆಗೆ ೨೦೦೦ ಮಂದಿ ಪುರಪ್ರಜೆಗಳು ಕೊಲ್ಲಲ್ಪಟ್ಟಿರುವರು.

ರಷ್ಯಾದಲ್ಲಿರುವ ದೃಢಕಾಯರಾದ ಜರ್ಮನರೆಲ್ಲರೂ ಸೋವಿಯಟ್ ಸೈನ್ಯದಲ್ಲಿ ಸೇರಬೇಕೆಂದೂ ಪೂರ್ವರಷ್ಯಾದೇಶವನ್ನು ವಶಪಡಿಸಿಕೊಳ್ಳುತ್ತೇವೆಂದು ಭಯಪಡಿಸುತ್ತಿರುವ ಜಪಾನ್ ಮೊದಲಾದ ಮಿತ್ರಮಂಡಲಿಯವರೊಡನೆ ಯುದ್ಧಮಾಡಬೇಕೆಂದೂ ಕೈಸರರು ಅಪ್ಪಣೆಮಾಡಿರುವರು.

ಪತ್ರವ್ಯವಹಾರ.

ಕಳೆದವಾರದ ಸಂಚಿಕೆಯ ೪ ನೇ ಪೇಜು ೧ ನೆ ಕಾಲಮು ೧೯ ನೆ ಪಙ್ಕ್ತಿಯಲ್ಲಿ ೩ ಎಂಬುದಕ್ಕೆ ಬದಲಾಗಿ ೩೦ ಎಂದಿರಬೇಕು.

ಪುರವಾಸಿ.

ಶ್ರೀರಂಗಪಟ್ಟದ ತಾ|| ಗಂಜಾಂ.

ನೋಡನಾಡುತ್ತಾ ಇದೆ. ಮಳೆ ಇಲ್ಲ. ಎಲ್ಲರೂ ಆಕಾಶವನ್ನು ಇದಿರುನೋಡುತಿದ್ದಾರೆ. ಧಾರಣಾಸಿಗಳು ತುಂಬಾ ಚಡಾವಾಗಿವೆ. ರಾಗಿ ರೂಪಾಯಿಗೆ 8 ಸೇರುಮೇರೆ ಮಾರಾಟವಾಗುತ್ತಿತ್ತು. ಇದನ್ನು ನೋಡಿ ಮ|| ಸಾ|| ಬಾಲಯ್ಯನವರು ಈಗ್ಗೆ 8-10 ದಿನಗಳಿಂದ ಬೆಳಿಗ್ಗೆ 8 ಘಂಟೆ ಲಾ|| 12 ಘಂಟೆವರೆಗೆ ತಮ್ಮ ಮನೆಯಮುಂದೆ ರೂಪಾಯಿಗೆ 10 ಸೇರು ಮೇರೆ ಬಿಕರಿ ಮಾಡಿಸುತ್ತಿದ್ದಾರೆ. ಸುತ್ತುಮುತ್ತಿನ ಗ್ರಾಮದವರೂ ಬಂದು ತೆಗೆದುಕೊಂಡು ಹೋಗುತ್ತಿದ್ದಾರೆ. ಆದರೆ ಇವರು ಸಲ್ಲಾಗಟ್ಟಳೆ ಒಟ್ಟಿಗೆ ಕೊಡದಿರುವುದು ಕೆಲವರಿಗೆ ಅಸಮಾಧಾನವಾಗಿರುವಹಾಗೆ ಕಾಣಬರುತ್ತದೆ. ಇವರ ಏರ್ಪಾಡಿನಿಂದ ಬಡವರಿಗೆ ಸ್ವಲ್ಪ ಅನುಕೂಲವಾಯಿತು. ಈ ಏರ್ಪಾಡು ಸ್ತುತ್ಯರ್ಹವಾಗಿದೆ. ಹೀಗಿಯೇ ಅಕ್ಕಿಯ ವಿಷಯದಲ್ಲಿ ಇನ್ನು ಯಾರಾದರೂ ಏರ್ಪಾಡುಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದಾಗಿದೆ.

ಜಿ. ಜಿ. ಎಸ್. ಎಸ್.

ತುಂಕೂರು ಡಿ|| ಮದ್ದಗಿರಿ ತಾ|| ಮಿಡಿಗೇಶಿಹೋ|| ಪತ್ರಪಾಳ್ಯ.

ಈ ಗ್ರಾಮಕ್ಕೆ ಸಮೀಪವಾಗಿರುವ ಕೋಟೆಮಠವು ಗ್ರಾಮದಲ್ಲಿರುವ ಶ್ರೀ ಕೋಂಟೆದ ಸಿದ್ಧಲಿಂಗೇಶ್ವರಸ್ವಾಮಿಯ ಮಠವು ಅನಾದಿ ಸಂಸಿದ್ಧವಾದದ್ದು. ಈ ಮಠಕ್ಕೆ ಅನೇಕಜನ ಭಕ್ತಾದಿಗಳಿದ್ದು ಕೂಡ ಇದನ್ನು ಅಭಿವೃದ್ಧಿಗೊಳಿಸಲು ಯಾರೂ ಗಮನಕ್ಕೆ ತಂದುಕೊಳ್ಳಲಿಲ್ಲ. [illegible] ಮಠಾಧ್ಯಕ್ಷರಾದ ಶ್ರೀ ಸಂಜುಂಡಯ್ಯನವರ ಕುಮಾರರು ಎಂ. [illegible] ಈ ಮಠದ ವಿಷಯವಾಗಿ ಅನೇಕ ಜನಗಳಿಗೆ ಪ್ರೀತಿಪಾತ್ರರಾಗುತ್ತಿದ್ದಾರೆ. [illegible]

ಕ್ತಿಗಳಿಂದ ಅವರಿಗೆ ಭಕ್ತಿಹುಟ್ಟಿಸಿ ಕೆಲವು ವೊಬಲಗನ್ನು ಕೇಳುಸಲು ಒಪ್ಪಿಸಿರುತ್ತಾರೆ. ಸದರಿ ಎಂ. ನೀಲಕಂಠಸ್ವಾಮಿಗಳು ಇಷ್ಟರಲ್ಲೇ ದೇಶಮಧ್ಯೆ ಸಂಚರಿಸಿ ಸದರಿ ತೋಂಟದಾರ್ಯರ ಮಠವನ್ನು ಉತ್ತೇಜನಗೊಳಿಸಿಯಾರೆಂದು ಕೋರುವ ವಿಧೇಯ, ಪ್ರತ್ಯಕ್ಷದರ್ಶಿ.

ಮ|| ರಾ|| ಸ್ಟಾರ್ ಪತ್ರಕರ್ತರಿಂಗೆ—

ವೀರಶೈವ ಮಹಾಸಭಾಧ್ಯಕ್ಷತೆ.

ಮುಂದೆ ಬೀರೂರಿನಲ್ಲಿ ನಡೆಯುವ ಮಹಾಸಭೆಗೆ ಅಧ್ಯಕ್ಷರನ್ನಾಗಿ ಯಾರನ್ನು ಚುನಾಯಿಸಿರುವರೋ ಗೊತ್ತಾಗಲಿಲ್ಲ. ಧಾರವಾಡದ ಚಂದ್ರೋದಯ ಪತ್ರಿಕೆಗಳಲ್ಲಿ ಮೂವರ ಹೆಸರುಗಳು ಪ್ರಸಿದ್ಧವಾಗಿವೆ. ಅವರೆಲ್ಲರೂ ಆ ಮಾನಕ್ಕೆ ಅರ್ಹರೇ ಹೌದು. ಆದರೂ ಮದ್ರಾಸಾಧಿಪತ್ಯದ ಮಹನೀಯರಿಗೆ ಯಾರಿಗೂ ಇದುವರೆಗೂ ಮಹಾಸಭಾಧ್ಯಕ್ಷತೆಯ ಮಾನವನ್ನು ಕೊಡದಿರುವದು ದೊಡ್ಡ ಲೋಪವಾಗಿದೆ. ಬಳ್ಳಾರಿ ಸಭೆಗೆ ಶ್ರೀಮನ್ ಪುಂಗನೂರು ಜಮೀನ್ದಾರರನ್ನು ಅಧ್ಯಕ್ಷರನ್ನಾಗಿ ಮಾಡಬೇಕಾಗಿದ್ದ ಯೋಚನೆಯು ತಪ್ಪಿಹೋಗಿ ಅದು ಹಾಗೇ ನಿಂತಿರುವುದು. ಈ ಸಲ ಅದನ್ನು ನೆರವೇರಿಸಿದರೆ ಸಮಂಜಸವಾಗಿರುವುದು. ಈಗಿನ ಪುಂಗನೂರು ರಾಜರು ಮತಾಭಿಮಾನಿಗಳೂ, ಕಾರ್ಯ್ಯಸಕ್ತರೂ, ಧೀಮಂತರೂ ಆಗಿದ್ದಾರೆ. ಅವರನ್ನು ಪ್ರಾರ್ಥಿಸಿ ಅಧ್ಯಕ್ಷತೆಗೆ ನಿಯೋಜಿಸಿಕೊಳ್ಳುವದು ಯುಕ್ತವಾಗಿರುತ್ತದೆ. ಉಳಿದ ಮಹನೀಯರುಗಳೂ ಉತ್ತರೋತ್ತರ ಮಾನಕೊಡುವ ಕೆಲಸವು ಇದ್ದೇ ಇದೆ.

ಸಮಾಜಸೇವಕ.

೯ನೆ ಶ್ರೀಮದ್ವೀರಶೈವ ಮಹಾಸಭಾ ಆಫೀಸು ; ಬೀರೂರು.

ವೀರಶೈವಗ್ರಂಥಲೇಖನದ ಬಹುಮಾನ—

ವೀರಶೈವ ಧರ್ಮವನ್ನು ಬೋಧಿಸುವ ಗ್ರಂಥಗಳು ನಮ್ಮಲ್ಲಿ ಸಾವಿರಾರು ಇದ್ದರೂ ಮುಖ್ಯ ಮೂಲತತ್ವಗಳನ್ನು ಸಾಮಾನ್ಯಜನರೂ ಸಹ ಸುಲಭವಾಗಿ ತಿಳಿದುಕೊಳ್ಳಲು ಅನುಕೂಲವಾದ ಚಿಕ್ಕ ಗ್ರಂಥವು ಒಂದಾದರೂ ಈವರೆಗೆ ಪ್ರಕಟವಾಗಲಿಲ್ಲ. ಈ ಕೊರತೆಯನ್ನು ಹೋಗಲಾಡಿಸತಕ್ಕ ಚಿಕ್ಕ ಚಿಕ್ಕ ಗ್ರಂಥಗಳನ್ನು ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ವಚನರೂಪವಾಗಿ ಬರೆಯಿಸಿ ಪ್ರಚಾರಪಡಿಸಬೇಕೆಂದು ಒಂಭತ್ತನೆಯ ಶ್ರೀಮದ್ವೀರಶೈವ ಮಹಾಸಭೆಯ ಸತ್ಕಾರಕ ಮತ್ತು ವ್ಯವಸ್ಥಾಪಕ ಸಂಘದವರು ಬಹು ಕುತೂಹಲವುಳ್ಳವರಾಗಿದ್ದಾರೆ. ಆದುದರಿಂದ ಬರುವ ಡಿಸೆಂಬರು ತಾರೀಖು 15ರ ಒಳಗೆ ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ವೀರಶೈವಮತ ತತ್ವವಿಷಯವಾಗಿ ಬರೆದು ಸದರಿ ಸಂಘದ ಸೆಕ್ರೆಟರಿಯವರಲ್ಲಿಗೆ ಕಳುಹಿಸಬೇಕಾಗಿ ವೀರಶೈವ ಪಂಡಿತರನ್ನು ಸಂಘದವರು ಪ್ರಾರ್ಥಿಸುತ್ತಾರೆ. ಅವುಗಳಲ್ಲಿ ಅತ್ಯುತ್ತಮವೆಂದು ತಮಗೆ ಕಂಡುಬರುವ ಕನ್ನಡ ಗ್ರಂಥಕ್ಕೂ ಮತ್ತು ಇಂಗ್ಲೀಷು ಗ್ರಂಥಕ್ಕೂ, ಒಂದುನೂರುರೂಪಾಯಿಗಳನ್ನು ಬಹುಮಾನವಾಗಿ ಕೊಡಲು ಸಂಘದವರು ನಿರ್ಧರಿಸಿರುತ್ತಾರೆ.

ಆ ಗ್ರಂಥವನ್ನು ಅಚ್ಚುಹಾಕಿಸಿದರೆ ಲೆಟರ್‌ಪೇಪರುಗಳ ಸೈಜುಪೇಜುಗಳು ಒಂದುನೂರಕ್ಕೆ ಮೀರದಂತಿರಬೇಕು. ವಿಷಯವು ಕ್ಲಿಷ್ಟವಾಗದಂತೆ ಸುಲಭಶೈಲಿಯಲ್ಲಿ ಸಂಕ್ಷೇಪವಾಗಿ ಬರೆಯಲ್ಪಡಬೇಕು. ಪತ್ರಿ ಚಂ|| ವೀರಪ್ಪಯ್ಯ.

ವೀರಶೈವ ತರುಣರ ಸಂಘ.

ಈ ಸಂಘದ ಪ್ರಥಮಸಮಾರಂಭವು ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ಇದೇ ಸೆಪ್ಟಂಬರ್ ತಾ|| ೧೫ ಭಾನುವಾರ ಮ|| ರಾ|| ಎಚ್. ಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಎಂಭತ್ತುಮಂದಿ ವೀರಶೈವ ತರುಣರು ಸಭೆಯನ್ನು ಅಲಂಕರಿಸಿದ್ದರು. ದೇವತಾಪ್ರಾರ್ಥನೆಯಾದನಂತರ ಮ|| ರಾ|| ಟಿ. ಯನ್. ಶಿವನಂಜಪ್ಪನವರು ಸಭಾಸದರ ಸುಸ್ವಾಗತವನ್ನು ಬಯಸಿ, "ವೀರಶೈವ ತರುಣರ ಸಂಘದ ಆವಶ್ಯಕತೆ ಮತ್ತು ಅದರ ಉದ್ದೇಶ" ಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಮ|| ರಾ|| ಕೆ. ಜಿ. ಚೆನ್ನಬಸವಯ್ಯನವರು ಅದೇ ವಿಷಯವನ್ನು ಕುರಿತು ವಿಶದಪಡಿಸಿದರು. ಕಾರ್ಯನಿರ್ವಾಹಕ ಮಂಡಲಿಯೊಂದು ಏರ್ಪಡಿಸಲ್ಪಟ್ಟು ಮ|| ರಾ|| ಗಳಾದ ಕೆ. ಜಿ. ಚೆನ್ನಬಸವಯ್ಯನವರು ಮತ್ತು ಟಿ. ಯನ್. ಶಿವನಂಜಪ್ಪನವರು ಕಾರ್ಯದರ್ಶಿಗಳಾಗಿಯೂ, ಮ|| ರಾ|| ಪಿ. ವೈ. ಸದಾಶಿವಪ್ಪನವರು ಟ್ರೆಜರರಾಗಿಯೂ ಆರಿಸಲ್ಪಟ್ಟರು. ಸಭಾಧ್ಯಕ್ಷರಿಗೂ, ಸಭಾಸದರಿಗೂ ವಂದನೆಗಳನ್ನು ತಿಳಿಸಿ, ಸಂಘದ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯಿತು.

ವೀರಶೈವತರುಣರ ಏಳಿಗೆ, ವೀರಶೈವ ಮತೋದ್ಧಾರ ಮತ್ತು ಕನ್ನಡ ಭಾಷಾಭಿವೃದ್ಧಿ ಇವುಗಳೇ ಈ ಸಂಘದ ಮುಖ್ಯ ಉದ್ದೇಶಗಳು. ಈ ಸಂಘಕ್ಕೆ ಸೇರಲಿಚ್ಛೆಯುಳ್ಳವರು ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳುವುದು.

ಬೆಂಗಳೂರು. } ಕೆ. ಜಿ. ಚೆನ್ನಬಸವಯ್ಯ, ಇಂಜನೀರಿಂಗ್ ಕಾಲೇಜು.
ತಾ|| 17-9-18. } ಟಿ. ಯನ್. ಶಿವನಂಜಪ್ಪ, ಸೆಂಟ್ರಲ್ ಕಾಲೇಜು.
(ಕಾರ್ಯದರ್ಶಿಗಳು.)

ವೀರಶೈವ ಮಹನೀಯರಿಗೆ ಒಂದು ವಿಜ್ಞಾಪನೆ.

ತುಮಕೂರು ಟವನ್ನಿನಲ್ಲಿ ವೀರಶೈವರ ಸಂಖ್ಯೆಯು ಬಹಳವಿದ್ದರೂ, ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕರ ಸಂಖ್ಯೆಯು ಶೇಕಡ 8, 10ರ ವರೆಗೂ ಇಲ್ಲ. ಇಂಗ್ಲೀಷಿನಲ್ಲಿ "ಎಂಟ್ರನ್ಸ್" ಕ್ಲಾಸಿನವರೆಗೂ, ಕನ್ನಡದಲ್ಲಿ "ಅಪ್ಪರ್‌ಸೆಕೆಂಡರಿ" ಟ್ರೈನಿಂಗ್ ಪರೀಕ್ಷೆಯವರೆಗೂ ವಿದ್ಯಾರ್ಜನೆಗೆ ಸೌಕರ್ಯಗಳಿದ್ದರೂ ನಮ್ಮವರು ವಿದ್ಯಾಭ್ಯಾಸ ವಿಷಯದಲ್ಲಿ ಸ್ವಲ್ಪವೂ ಗಮನಕೊಡದೆ ಇರುವುದನ್ನು ನೋಡಿ ಎಷ್ಟು ಪಶ್ಚಾತ್ತಾಪ ಪಟ್ಟರೂ ಸಾಲದು.

ಹಣಗಾರರಾದ ವೀರಶೈವ ವರ್ತಕರು ಬಹುಮಂದಿ ಈ ಊರಿನಲ್ಲಿ ಇದ್ದಾರೆ ಎಂದು ಹೇಳಿದರೆ ಏನೂ ಆಶ್ಚರ್ಯಕರವಾದ ಮಾತಲ್ಲ. ಆದರೆ ಇವರು ಅರ್ಜಿಸಿರುವ ದ್ರವ್ಯವು "ದಿ ಡಾಗ್ ಇನ್ ದಿ ಮ್ಯಾಂಗರ್" ಎನ್ನುವ ಇಂಗ್ಲೀಷ್ ಗಾದೆಯಂತೆ, ನಿರುಪಯುಕ್ತವಾದುದು ಎನ್ನುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಏಕೆಂದರೆ—ಇವರು ತಮ್ಮ ಮಕ್ಕಳಿಗೆ ಪ್ರೌಢವಿದ್ಯಾಭ್ಯಾಸಮಾಡಿಸಲು ಇಷ್ಟಪಡುವುದಿಲ್ಲ. ಇತರ ಊರುಗಳಿಂದ ಯಾರಾದರೂ ಹೈಸ್ಕೂಲಿನಲ್ಲಿಯೋ ಇತರ ಸ್ಕೂಲುಗಳಲ್ಲಿಯೋ ಓದುವುದಕ್ಕೆ ಬಂದರೆ, ಫ್ರೀ ಬೋರ್ಡಿಂಗ್ ಇಲ್ಲವಾದರೂ, ದುಡ್ಡುಕೊಟ್ಟು ಭೋಜನಮಾಡೋಣವೆಂದರೆ ವೀರಶೈವಾಶ್ರಮವಾಗಲಿ ಮತ್ತೊಂದಾಗಲಿ ಯಾವುದೂ ಏರ್ಪಟ್ಟಿಲ್ಲ. ಅನುಕೂಲವಾದ ಹೋಟಲಂತೂ ಒಂದಾದರೂ ಇಲ್ಲವೇ ಇಲ್ಲ. ಇದನ್ನು ನೋಡಿಯೂ ನೋಡಿಯೂ ಇವರು ವೀರಶೈವ ವಿದ್ಯಾರ್ಥಿಗಳ ಭೋಜನ ಸೌಕರ್ಯಕ್ಕೆ ಸ್ವಲ್ಪವೂ ನಿಗಾಕೊಡದೆ ಇರುವುದನ್ನು ಯೋಚಿಸಿದರೆ, ಈ ಮಹಾಶಯರಿಗೆ ವಿದ್ಯೆಯಲ್ಲಿ ಎಷ್ಟು ಅಭಿರುಚಿ ಇದೆ ಎನ್ನುವುದನ್ನೂ, ತಮ್ಮ ಜನಾಂಗದ ಬಾಲಕರ ಪ್ರೋತ್ಸಾಹಕ್ಕಾಗಿ ಎಷ್ಟರಮಟ್ಟಿಗೆ ಮುಂದಾಳುಗಳಾಗಿ ನಿಂತು ಕೆಲಸಮಾಡುತ್ತಿರುವರೆನ್ನುವುದನ್ನೂ, ಖಂಡಿತವಾಗಿಯೂ ಚೆನ್ನಾಗಿ ತಿಳಿಯಬಹುದು. ಇಲ್ಲಿ ಹೈಸ್ಕೂಲಿದ್ದರೂ ಗುಬ್ಬಿ ತಿಪಟೂರು ಮೊದಲಾದ ಊರಿನ ಅನೇಕ ವಿದ್ಯಾರ್ಥಿಗಳು ಹೋಟಲುಗಳ ಅನಾನುಕೂಲದಿಂದ ಹತ್ತಿರದಲ್ಲಿರುವ ಈ ಊರನ್ನು ಬಿಟ್ಟು, ಬೆಂಗಳೂರು ಮೈಸೂರು ಮುಂತಾದ ಕಡೆಗಳಿಗೆ ಹೋಗಿ ತುಂಬಾ ಶ್ರಮಪಡುತ್ತಾರೆ. ಆದುದರಿಂದ ಈ ವಿಷಯವು ಶೀಘ್ರದಲ್ಲಿಯೇ ಅಲ್ಲಿನ ಉದಾರ ವೀರಶೈವ ಮಹನೀಯರ ಗಮನಕ್ಕೆ ಬಂದು ಯಾವುದಾದರೂ ಒಂದು ವಿಧದಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಭೋಜನ ಸೌಕರ್ಯಗಳು ಕಲ್ಪಿಸಲ್ಪಡುವುವೆಂದು ನಂಬಿದ್ದೇನೆ. ವಿದ್ಯಾರ್ಥಿ.

ಮಂಜರಾಬಾದ್ ತಾಲ್ಲೋಕು ದೋಣಿಗಾಲ್.

ವಾಚಕವಾಚಕಿಯರೆ !

ಈ ಊರಿನಲ್ಲಿರುವ ಪ್ರಖ್ಯಾತಿಯನ್ನು ಪಡೆದ ಕಾಫಿಪ್ಲಾಂಟರೂ ಡಿಸ್ಟ್ರಿಕ್ಟ್‌ಬೋರ್ಡು ಮೆಂಬರೂ ದೀರ್ಘಕಾಲದಿಂದಲೂ ಪ್ರಜಾಪ್ರತಿನಿಧಿಸಭೆಯ ಸಭಾಸದರೂ ಆದ ಮ|| ರಾ|| ದೋಣಿಗಾಲು ನಂಜೇಗೌಡರು ಮತ್ತು ಇವರ ಸಹೋದರರು ಮ|| ರಾ|| ಶಾಂತವುಲ್ಲೇಗೌಡರು ಆಪದ್ಬಾಂಧವರೆಂದು ಬಿರುದನ್ನು ವಹಿಸಿ ಬಡಬಗ್ಗರಿಗೆ ತಮ್ಮ ಕೈಯಲ್ಲಾಗುವ ಸಹಾಯಸಂಪತ್ತುಗಳನ್ನು ಸರ್ವತೋಭಿಮುಖವಾಗಿ ಧಾರೆಯೆರೆಯುತ್ತಲಿರುವರೆಂಬುದನ್ನು ಹೇಳಲು ಸಂದೇಹವೇತ್ತಣದು? ಇವರು ಅನೇಕ ವಿಧಗಳಲ್ಲಿ ಸರ್ಕಾರದವರಿಗೆ ಸಹಾಯಕರಾಗಿ ನಾನಾಸಭೆಗಳಲ್ಲಿ ಪ್ರಮುಖರಾಗಿ ಗರೀಬರಾದ ರೈತಾದಿ ಇತರ ಪ್ರಜೆಗಳಿಗೆ ಬಂದೊದಗಿದ ಕಷ್ಟನಷ್ಟಗಳನ್ನು ಶ್ರೀಮನ್ಮಹಾರಾಜ ರಾಜಾ ಸರ್ಕಾರದವರ ಗಮನಕ್ಕೆ ತಂದು, ಅವು ಕಡಮೆಯಾಗಲು ತಮ್ಮ ಸ್ವಂತ ಕೆಲಸಗಳನ್ನು ತ್ಯಜಿಸಿ, ಪ್ರಜಾಮಿತ್ರರಾಗಿ ತ್ರಿಕಾಲದಲ್ಲಿಯೂ ಅವರು ಪಡುತ್ತಿರುವ ಕಷ್ಟವನ್ನು ನೋಡಿದರೆ "ಪರೋಪಕಾರಾರ್ಥ ಮಿದಂಶರೀರಂ" ಎಂಬ ವಚನಾರ್ಥವು ಇವರಲ್ಲಿ ದೃಷ್ಟಾಂತವಾಗಿರುವುದು. ಅಲ್ಲದೆ ಇವರು ಮಲೆನಾಡು ಇಂಪ್ರೂವ್‌ಮೆಂಟ್ ಸ್ಕೀಮು, ತಾಲ್ಲೋಕುಬೋರ್ಡು, ಸಿವಿಕ್ ಮತ್ತು ಸೋಷಿಯಲ್ ಮುಂತಾದ ಸಮಾಜಗಳಲ್ಲಿ ಮುಂದಾಳುಗಳಾಗಿ ನಿಂತಿರುತ್ತಾರೆಂದು ಕೇಳಲು ಬಹಳ ಆಹ್ಲಾದ ಉಂಟಾಗುವುದು.

ಇವರು ಈ ತಾಲ್ಲೋಕಿನ ಘನತೆಯನ್ನು ಹೊಂದಿದ (1) ಟಿ|| ವೆಂಕಟರಾಯರವರು ಬಿ. ಎ. ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಮತ್ತು (2) ಜಿ. ಸಂತಾನಂ ಅಯ್ಯಂಗಾರ್ರು ಬಿ. ಎ. ಅಮಲ್ದಾರ್ ಸಾಹೇಬರವರುಗಳ ಜೊತೆಯಲ್ಲಿ ಒಂದೇ ಕುಟುಂಬದಲ್ಲಿ ಜನಿಸಿದ ಸಹೋದರರಂತೆ ಭ್ರಾತೃವಿಶ್ವಾಸವನ್ನಿಟ್ಟು ಈಗ ನಡೆಯುತ್ತಿರುವ ಘೋರಯುದ್ಧದ ರಿಕ್ರೂಟಿಂಗ್ ಕಮಿಟಿ ಮೆಂಬರಾಗಿ ಅನೇಕ ವಿಧದಲ್ಲಿ ಸರ್ಕಾರಕ್ಕೆ ಸಹಾಯಮಾಡುತ್ತಿರುತ್ತಾರೆ. ಮ|| ರಾ|| ನಂಜೇಗೌಡರೇ ಮೊದಲಾಗಿ ಮಂಜರಾಬಾದು ತಾಲ್ಲೋಕು ನಿವಾಸಿಗಳು ಘನತೆಯನ್ನು ಹೊಂದಿದ ಅ|| ಕ|| ಸಾಹೇಬರವರೂ ಮತ್ತು ಅಮಲ್ದಾರ್ ಸಾಹೇಬರವರೂ ಈ ತಾಲ್ಲೋಕಿನಲ್ಲಿ ತಮ್ಮ ಸ್ವಲ್ಪಕಾಲದ ಇರುವಿಕೆಯಿಂದ ಪ್ರಜೆಗಳಿಗಾದ ಸಂತೋಷವು ಅಪರಿಮಿತವಾದ್ದೆಂದು ಸೂಚಿಸಲೋಸುಗವು ಮತ್ತು ಅವರಿಗೆ ವರ್ಗದ ಅಗಲುವಿಕೆಯಿಂದ ಉಂಟಾದ ದುಃಖವನ್ನು ತೋರಿಸಲು ತಮ್ಮ ಗೃಹಕ್ಕೆ ಅ|| ಕ|| ಸಾಹೇಬರವರನ್ನೂ ಅಮಲ್ದಾರ್ ಸಾಹೇಬರವರನ್ನೂ ಇವರ ಮಿತ್ರವರ್ಗ ಸಹಿತ ಆದರಪೂರ್ವಕವಾಗಿ ಪುರಜನರೊಡನೆ ಬರಮಾಡಿಕೊಂಡು ಸರ್ಕಾರದವರು ಅವರ ಕಾರ್ಯತತ್ಪರತೆಯು ನಮ್ಮ ದೇಶದ ಇತರೇ ಜನಗಳಿಗೆ ಲಭಿಸುವಂತೆ ಮಾಡುವುದಕ್ಕಾಗಿ ತಮ್ಮ ಅನುತಾಪಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದನಂತರ ಅ|| ಕ|| ಸಾಹೇಬರವರೂ ಅಮಲ್ದಾರ್ ಸಾಹೇಬರವರೂ ಇತರ ಸ್ಥಳೀಯ ಉದ್ಯೋಗಸ್ಥರೊಡನೆ ಉಪಾಹಾರ ಫಲಾಹಾರಾದಿಗಳನ್ನು ಅಂಗೀಕರಿಸಿ, ಸಂಗೀತವಿನೋದದಿಂದ ಕರ್ಣಾನಂದವನ್ನು ಹೊಂದಿದ ತರುವಾಯ ಇವರೀರ್ವರಿಗೂ ದೇವರು ಆಯುರಾರೋಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಪ್ರಾರ್ಥಿಸಿ ಹಾರ ತುರಾಯಿಗಳೊಂದಿಗೆ ಕಳುಹಿಸಿಕೊಟ್ಟರು. ಮರುದಿನ ಅವರ ಆಸ್ಥಾನವನ್ನು ಸ್ವೀಕರಿಸಿದ ಹೊಸ ಅ|| ಕ|| ಸಾಹೇಬರವರನ್ನೂ ಅಮಲ್ದಾರ್ ಸಾಹೇಬರವರನ್ನೂ ಮತ್ತು ಅವರ ಮಿತ್ರಮಂಡಲಿಯವರನ್ನೂ ಸಹ ಯಥಾರೀತಿ ಸ್ವಗೃಹಕ್ಕೆ ಬರಮಾಡಿಕೊಂಡು ಹಿಂದೆ ಇದ್ದು ಹೋದ ಅಧಿಕಾರಿಗಳ ಶ್ರೇಷ್ಠವಾದ ಉಪಕಾರವು ಇವರಿಂದಲೂ ಉಂಟಾಗಲೆಂದು ಕೋರಿದರು. ಈ ಎರಡು ಕೂಟಗಳಿಗೂ (1) ಶಿರಸ್ತೇದಾರರಾದ ಮ|| ಚನ್ನಪ್ಪನವರು, (2) ಪೋ|| ಇನ್ಸ್‌ಪೆಕ್ಟರರಾದ ಮ|| ಕೃಷ್ಣಯ್ಯಂಗಾರ್ರು, (3) ಹೆ|| ಗುಮಾಸ್ತರಾದ ಮ|| ಕೃಷ್ಣಪ್ಪನವರು ದಯಮಾಡಿಸಿ ಯಥೋಚಿತವಾಗಿ ಸತ್ಕಾರವನ್ನು ಹೊಂದಿದನಂತರ ಶ್ರೀಮನ್ಮಹಾರಾಜರವರಿಗೂ ಶ್ರೀಯುವರಾಜರವರಿಗೂ ದೇವರು ಸನ್ಮಂಗಳವನ್ನೀಯಲೆಂದೂ ಈಗಿನ ಘೋರಯುದ್ಧದಲ್ಲಿ ಮಿತ್ರಮಂಡಲಿಯವರಿಗೆ ಜಯವನ್ನುಂಟುಮಾಡಲೆಂದೂ ಪ್ರಾರ್ಥಿಸಿ ಸಭೆಯನ್ನು ಮುಕ್ತಾಯಮಾಡಿದರು.

ಓರ್ವ ಪ್ರತ್ಯಕ್ಷದರ್ಶಿ.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

5 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ ಕಳುಹಿಸಿ ತರಿಸಿಕೊಳ್ಳಿರಿ !!

೧. ಸುವಾಸಿಕ ಹುರುಕಿನೌಷಧ—ಬೆಲೆ ೧ಕ್ಕೆ ೧೪. ೨೫ಕ್ಕೆ ೧-೪-೦.
೨. ಕಣ್ಣುಬೇನೆಯೌಷಧ—ಬಾಟ-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇನುಶೀರುನಾಶಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಸ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂವತೌಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ನೀಲಿ ಕೆಚ್ಚು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
40 ಪೋಸ್ಟ್ ಚಿಕ್ಕೋಡಿ, ಜಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಒಂದಾವರ್ತಿ ಪರೀಕ್ಷಿಸಿ ನೋಡಿರಿ. 41

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಪನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್‌ಸ್ಟೇನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಸೆಪ್ಟಂಬರ್ ತಾ|| ೨೯ ರಿಂದ ೧೯೧೮ ನೆಯ ಅಕ್ಟೋಬರ್ ತಾ|| ೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಭಾದ್ರಪದ ಬ|| ದಶಮಿಯಿಂದ ಭಾದ್ರಪದ ಬ|| ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾಮಾಸ
29	ಭಾನು	ದಶಮಿ	47-51	ಪುನ	4-28	13
30	[1] ಸೋಮ	ಏಕಾದ	48-10	ಪುಷ್ಯ	5-43	14
1	ಮಂಗಳ	ದ್ವಾದಶಿ	49-59	ಆಶ್ಲೇಷ	8-7	15
2	[2] ಬುಧ	ತ್ರಯೋ	52-53	ಮಘಾ	11-56	16
3	[3] ಗುರು	ಚತು	56-57	ಪುಬ	16-34	17
4	[4] ಶುಕ್ರ	ಅಮಾ	60	ಉತ್ತ	22-14	18
5	[5] ಶನಿ	ಅಮಾ	2-13	ಹಸ್ತ	28-33	19

(1) ಸರ್ವತ್ರೈಕಾದಶೀ, ದಗ್ಧಯೋಗಃ. (2) ಪ್ರದೋಷಃ, ಕಲಿಯುಗಾದಿಃ. (2) ಮಾಸಶಿವರಾತ್ರಿಃ. (4) ಸರ್ವತ್ರಮಹಾಲಯಮಾವಾಸ್ಯಾ. (5) ಪೆರಟಾಶಿ ಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಪತ್ರನೋಪರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೀತನಾಥೀಷ್ಟಪದೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ನೀಯಾಶೀತಯಶಃಪ್ರಕಾಶವಿಕ್ಷುಲಂ ಸದ್ವೃತ್ತಮಾರಾತುಲಂ | ಪ್ರೇಮುಂಚೆಶ್ರೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಅಕ್ಟೋಬರ್ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೪೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವ ಪಂಚವಿಂಶತಿ ಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಪುತ್ರರಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸಂಗ್ರಹಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರಲಕ್ಷಣ ೬ ಆಣೆ; ದೇವೀಕಾಲೋತ್ತರಾಗಮದ ಧ್ಯಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತೋತ್ರಮಾಲಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಶತಕ ೧ ಆಣೆ.

ಎಚ್. ಆರ್. ಶಿವಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಿತ್ರಗಳಲ್ಲಿ ಕಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಪೂಳ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಕಾಮಂಚಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಚಿತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
41 8, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದೆ

ಅರ್ಕಶಫಾ ಅಂದರೆ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತೆಗೆದುಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ವಿಷ ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಪಡಸರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೂತ್ರಶೂಲ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚಿ, ಪಡ್ಡು, ಗುದ್ದಪ್ಪನಬೇನೆ, ಹುರುಕುಳಜ್ಜಿ, ಗಜಕರ್ಣ, ದದ್ದು, ಇಸಬು, ಭ್ರಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರಿವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿವರ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಸೇರಿನ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಷನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಷನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದು ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
21 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇಡತಕ್ಕ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವತ್ತೂ ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವೆಂಕಟರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
26 ಆನಂದ ಬುಕ್‌ಡಿಪೋ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 48

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕಿಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
41 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಾವಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ತಂದಾನಿ	೦—೪—೦
ವೃತ್ತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೩—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಕಾಶಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಅಕ್ಟೋಬರ್ ತಾ|| ೬ನೆಯ ಭಾನುವಾರ.

ನೂತನಜ್ವರ.

ಮನುಷ್ಯರಿಗೆ ಒಂದುಕಡೆ ಭೌತಿಕಭೋಗತೃಷ್ಣೆಯು ಅಧಿಕವಾಗುತ್ತ ಬರುತ್ತಿದ್ದರೆ ಮತ್ತೊಂದುಕಡೆ ವಿಷಮವಿಪತ್ಪರಂಪರೆಯು ವೃದ್ಧಿಯಾಗುತ್ತಿರುವುದು ದೈವಿಕವಿಚಿತ್ರವಾಗಿದೆ. ಯಾವ ಹೊಗೆಬಂಡಿಗಳಿಂದಲೂ, ಹಡಗುಗಳಿಂದಲೂ, ಮೋಟಾರುಗಳಿಂದಲೂ, ನಾವು ಅಪರಿಮಿತ ಸುಖಲಾಭವನ್ನು ಹೊಂದುವೆವೆಂದು ಎಣಿಸಿರುತ್ತೇವೆಯೋ ಅವುಗಳಿಂದ ಒಂದೊಂದು ಸಮಯದಲ್ಲಿ ಸಂಭವಿಸುವ ವಿಪತ್ತಿಯು ಅವುಗಳ ಮೂಲಕವಾದ ಆದ್ಯಂತ ಸುಖವನ್ನೂ ಮರೆಮಾಡಿಸಿಬಿಡುತ್ತದೆ. ಹೊಗೆಬಂಡಿಗಳೂ ಹೊಗೆಹಡಗುಗಳೂ ಸಹ ಪ್ರಯಾಣಸೌಕರ್ಯವನ್ನು ಹೆಚ್ಚಿಸಿರುವುವೆಂದು ಒಂದುಕಡೆ ಸಂತೋಷಪಡುತ್ತಲಿದ್ದರೆ ಮತ್ತೊಂದುಕಡೆ ಅವೇ ದುರ್ಭಿಕ್ಷಪ್ರಾಪ್ತಿಗೂ ಸಾಂಕ್ರಾಮಿಕರೋಗವ್ಯಾಪನೆಗೂ ಸಹಾಯಮಾಡುತ್ತಿರುವುದನ್ನು ಕಾಣುತ್ತಲಿದ್ದೇವೆ. ಸಂಸಾರವು ಹೆಚ್ಚುತ್ತಬಂದ ಮನುಷ್ಯನಿಗೆ ತಾಪತ್ರಯವು ವೃದ್ಧಿಯಾಗುತ್ತಲಿರುವಂತೆ ಭೌತಿಕಭೋಗಸಾಧನೆಗಳು ಹೆಚ್ಚಿದಷ್ಟೂ ಅಪಾಯಪರಂಪರೆಗಳು ಹೆಚ್ಚುವುದು ನಿಸರ್ಗವಾಗಿದೆ.

ಪ್ರಕೃತದಲ್ಲಿ ಬೊಂಬಾಯಿಯೊಳಗೆ ಭೀಕರವಾದ ಹಾವಳಿಯನ್ನುಂಟುಮಾಡುತ್ತಿರುವ ನೂತನಜ್ವರವು ಹಡಗುಗಳ ಮೂಲಕವಾಗಿಯೇ ಈ ದೇಶಕ್ಕೆ ಕಾಲಿಕ್ಕಿತೆಂದು ಊಹಿಸಲ್ಪಟ್ಟಿದೆ. ಭರತಖಂಡಕ್ಕೆ ಒಂದುಸಲ ತಲೆಯಿಕ್ಕಿ ಸ್ಥಿರನಿವಾಸ ಮಾಡಿಕೊಂಡಿರುವ ಪ್ಲೇಗುಬೀಜವು ಕೂಡ ವಿದೇಶಗಳಿಂದ ಹಡಗುಗಳ ಮೂಲಕವಾಗಿಯೇ ಈ ದೇಶದ ಮಹಾದ್ವಾರವಾಗಿರುವ ಬೊಂಬಾಯಿಗೆ ಬಂದು ಕಾಲೂರಿತೆಂಬುದನ್ನು ಎಲ್ಲರೂ ತಿಳಿದಿದ್ದಾರೆ. ಈಗ್ಗೆ ೩ ತಿಂಗಳ ಹಿಂದೆ ಬೊಂಬಾಯಿಗೆ ಇಂಫ್ಲುಯನ್ಜಾ ಎಂಬ ಜ್ವರವು, ರಣರಂಗಗಳಿಂದ ಬಂದ ಆ ರೋಗಗ್ರಸ್ತರ ಜತೆಗೆ ಈ ದೇಶಕ್ಕೆ ಬಂದು ವ್ಯಾಪಿಸಿತು. ಆದರೆ ಆಗ ಅದರಿಂದ ಮರಣಗಳೇನೂ ವಿಶೇಷವಾಗಿ ಸಂಭವಿಸುತ್ತಿರಲಿಲ್ಲ. ಈಗಣ ಜ್ವರದಿಂದ ಅದೊಂದು ಪಟ್ಟಣದಲ್ಲೇ ದಿನಕ್ಕೆ ೫೦೦-೬೦೦-೭೦೦ ಕ್ಕಿಂತ ಹೆಚ್ಚಾಗಿ ಮರಣಗಳಾಗುತ್ತಿವೆ.

ಈ ಜ್ವರ ತಗುಲಿದವರು ೩ ದಿನಗಳವರೆಗೆ ಬಹಳ ನರಳುತ್ತಾರೆ. ದೇಹವೆಲ್ಲಾ ನೊಯ್ಯುತ್ತಿರುತ್ತದೆ. ತಲೆತಿರುಗುವುದು, ತಲೆನೋವು, ದಾಹ, ನಿಶ್ಚೈತನ್ಯ, ಕೆಮ್ಮು, ಮಲಬಂಧ, ಆಹಾರದಲ್ಲಿ ಅನಪೇಕ್ಷೆ, ಶ್ಲೇಷ್ಮಾಭಿವೃದ್ಧಿ, ಎದೆನೋವು, ಓಕರಿಕೆ, ವಾಂತಿ-ಇವುಗಳೆಲ್ಲಾ ಈ ಜ್ವರದ ಚಿಹ್ನೆಗಳು. ಇದನ್ನು ಆಂಗ್ಲವೈದ್ಯರು "ಬ್ರಾಂಕೊ ನ್ಯುಮೋನಿಯಾ" ಎಂದು ಕರೆಯುವರಂತೆ. ಮೊದಮೊದಲು ಈ ರೋಗವು ಜನಸಮ್ಮರ್ದವು ಹೆಚ್ಚಾಗಿರುವ ಪುರಗ್ರಾಮಗಳಲ್ಲಿ ಕೊಳಕಾಗಿರುವ ಸ್ಥಲದಲ್ಲೂ ಅಶುಚಿಯಾಗಿರುವ ಜನರಲ್ಲೂ ತಲೆದೋರಿ ಬಳಿಕ ಸರ್ವತ್ರ ವ್ಯಾಪಿಸುವುದು. ಇದು ಸಾಂಕ್ರಾಮಿಕವೆಂಬದು ಸ್ಪಷ್ಟವಾಗಿದೆ. ಒಂದುಮನೆಗೆ ಕಾಲಿಕ್ಕಿದರೆ ಎಲ್ಲರಿಗೂ ಅಂಟದೆ ಬಿಡುವುದಿಲ್ಲ. ತಪ್ಪಿಸಿಕೊಳ್ಳುವವರೇ ಅಪೂರ್ವ. ಮೊದಮೊದಲು ಈ ರೋಗದಿಂದ ಮೃತಿಭಯವಿಲ್ಲವೆಂದು ತೋರುತ್ತಿದ್ದಿತು. ಈಗಳಾದರೊ ಬಹುಜನರು ಇದರಿಂದ ಮೃತ್ಯುವಿಗೆ ತುತ್ತಾಗುತ್ತಿದ್ದಾರೆ. ಈ ರೋಗ ತಗುಲಿದ ಕೂಡಲೇ ಮಲವು ಕ್ರಮವಾಗಿ ಜಾರುವುದಕ್ಕೆ ಔಷಧವನ್ನು ಸೇರಿಸಿ, ೨ ದಿನಗಳ ಕಾಲ ಅನ್ನವನ್ನು ತ್ಯಜಿಸಿ, ರವೆಯು ಅಥವಾ ಸೀಮೆಅಕ್ಕಿಯ ಗಂಜಿಯನ್ನು ಉಪಯೋಗಿಸುತ್ತ ಜ್ವರವಿಳಿಯುವುದಕ್ಕೆ ತಕ್ಕ ಔಷಧವನ್ನು ಸೇವಿಸುತ್ತ ಬರಬೇಕು. ರೋಗಿಯನ್ನು ಗಾಳಿಬೆಳಕಿಗೆ ಅವಕಾಶವಿರುವ ಕೊಟ್ಟಡಿಯಲ್ಲಿ ಪ್ರತ್ಯೇಕವಾಗಿಡಬೇಕು. ಅನ್ನವನ್ನು ಬಿಡದೆ ತಿನ್ನುವವರನ್ನು ಈ ರೋಗವು ಹೆಚ್ಚುಕಾಲ ನರಳಿಸುವುದು. ಅಪಥ್ಯದೋಷದಿಂದ ಬಹುಬೇಗ ವಿಷಮಿಸುವುದು. ರೋಗಿಯು ಗಾಳಿಗೆ ಮೈಬಿಡದೆ ಬೆಚ್ಚಗೆ ಹೊದೆದಿರಬೇಕು. ಶ್ವಾಸಕೋಶಕ್ಕೆ ಇದು ಬೇಗನೆ ಅಪಾಯಮಾಡುವುದರಿಂದ ಹಲವರು ಶ್ವಾಸಬಂಧನದಿಂದ ಮೃತರಾಗುತ್ತಿರುವರು. ಈ ಜ್ವರವು ಸ್ಪೆಯಿನ್ ದೇಶದಲ್ಲಿ ಕಾಣಿಸಿಕೊಂಡು ೧ ತಿಂಗಳೊಳಗೆ ಆ ದೇಶದ ೮೦ ಲಕ್ಷ ಪ್ರಜೆಗಳಿಗೆ ತಗುಲಿತಂತೆ. ಈಗಲೂ ಆ ದೇಶದಲ್ಲಿ ಮರಳಿ ತಲೆದೋರಿ ಅಲ್ಲಿಯ ದೊರೆಯನ್ನೇ ಅಂಟಿಕೊಂಡಿದೆ. ಅಲ್ಲಿಂದ ಇದು ಯೂರೋಪ್ ಖಂಡವನ್ನೆಲ್ಲಾ ಬಳಸಿ, ರಣರಂಗಕ್ಕೂ ಪ್ರಯಾಣಮಾಡಿ, ಸೈನಿಕರೊಡನೆ ಹೋರಾಡಿ, ಅಲ್ಲಿಂದ ಹಡಗಿನ ಮೂಲಕ ಬೊಂಬಾಯಿಗೆ ಬಂದಿರುವುದೆಂದು ವೈದ್ಯರು ಹೇಳುತ್ತಿದ್ದಾರೆ. ಬೊಂಬಾಯಿಯಲ್ಲಿ ಇದರ ಹಾವಳಿಯು ವಿಪರೀತವಾಗಿರುವುದರಿಂದ ಅಲ್ಲಿಯ ಮ್ಯುನ್ಸಿಪಾಲಿಟಿಯವರು ಪ್ರತಿಯೊಂದು ಭಾಗಕ್ಕೂ ಬೇರೆಬೇರೆ ವೈದ್ಯಸಂಘಗಳನ್ನೇರ್ಪಡಿಸಿ, ರೋಗತಗುಲಿದ ಮನೆಮನೆಗೂ ವೈದ್ಯರನ್ನು ಕಳುಹಿಸಿ, ಔಷಧೋಪಚಾರಗಳನ್ನು ಮಾಡಿಸುತ್ತಿರುವರು. ಆದರೂ ಮರಣಸಂಖ್ಯೆಗಳು ಬಹಳ ಹೆಚ್ಚಾಗಿಯೇ ಇರುವುವು. ಈ ಭೀಕರರೋಗವು ಬಹು ಬೇಗನೆ ವ್ಯಾಪಿಸುವ ಸ್ವಭಾವವುಳ್ಳದಾಗಿರುವುದರಿಂದ ದೇಶವೆಲ್ಲಾ ತತ್ತರಿಸುವ ಹೊತ್ತು ಬಂದಿರುವುದು. ಮದ್ರಾಸಿನಲ್ಲೂ ಇದು ಆಗಲೇ ಹಾವಳಿ ಮಾಡುತ್ತಿದೆ. ಆದರೆ ಬೊಂಬಾಯಿ ಕಡೆ ಶ್ವಾಸಕೋಶಗಳಿಗೆ ಧಕ್ಕೆಕೊಟ್ಟು ಮೃತಿಯನ್ನು ಹೆಚ್ಚಿಸುತ್ತಿರುವಷ್ಟು ಮದ್ರಾಸು ಪ್ರಾಂತದಲ್ಲಿ ಮಾಡುತ್ತಿಲ್ಲವೆಂದು ತಿಳಿಯಬರುತ್ತದೆ. ಧಾರವಾಡದ ಪತ್ರಿಕೆಗಳಿಂದ ಅಲ್ಲೂ ಈ ರೋಗದ ಮೂಲಕವಾದ ಮೃತಿಗಳು ಸಂಭವಿಸಲುಪಕ್ರಮಿಸಿರುವಂತೆ ಗೊತ್ತಾಗುತ್ತದೆ. ನಮ್ಮ ರಾಜಧಾನಿಯಲ್ಲೂ ಮನೆಮನೆಗೂ ಈ ರೋಗ ತಗುಲಿದವರು ಕಂಡುಬರುತ್ತಿರುವರಲ್ಲದೆ ಅನೇಕರು ಮೃತಪಡುತ್ತಲೂ ಇದ್ದಾರೆ. ಪ್ಲೇಗಿನಜತೆಗೆ ಇದೂ ಗಂಟುಬಿದ್ದು, ಆಹಾರ್ಯದ ದುರ್ಭಿಕ್ಷದ ಸಂಗಡ ಇವೆರಡೂಸೇರಿ ಪ್ರಜೆಗಳನ್ನು ಕಣ್ಣಾಯಿ ಬಿಡಿಸುತ್ತಿವೆ. ಈ ನೂತನಜ್ವರನಿರೋಧಕ್ಕೆ ಉಪಾಯವೇನೆಂಬುದು ಇನ್ನೂ ದೃಢಪಟ್ಟಿಲ್ಲ. ಜನರು ಶುಚಿಯಾಗಿಯೂ ಆಹಾರವ್ಯವಹಾರಗಳಲ್ಲಿ ಎಚ್ಚರಿಕೆಯಿಂದಲೂ ವರ್ತಿಸಬೇಕಾಗಿದೆ. ರೋಗದ ಚಿಹ್ನೆ ಕಂಡಕೂಡಲೇ ತಡಮಾಡದೆ ವೈದ್ಯರ ಚಿಕಿತ್ಸೆಯನ್ನು ಪಡೆದುಕೊಳ್ಳುವಲ್ಲಿ ಉದಾಸೀನ ಮಾಡಲಾಗದು. ಈಶ ಸಂಕಲ್ಪದಿಂದ ಪಶ್ಚಿಮ ಖಂಡಗಳು ಒಂದುತೆರದ ವಿಪತ್ತನ್ನು ಅನುಭವಿಸುತ್ತಿದ್ದರೆ ಪೂರ್ವಖಂಡದವರಾದ ನಮಗೆ ಮತ್ತೊಂದು ತೆರದ ವಿಪತ್ತು ಸಂಘಟಿಸಿರುತ್ತದೆ. ಜಗದೀಶನ ಕೃಪೆಯಿಂದಲೇ ಎಲ್ಲವೂ ಪರಿಹಾರವಾಗಬೇಕು.

ಯುದ್ಧವಾರ್ತೆಯು.

ಪಶ್ಚಿಮರಣರಂಗದಲ್ಲಿ ಮಿತ್ರಮಂಡಲಿಯವರು ಇನ್ನೂ ಮುಂದಕ್ಕೆ ನುಗ್ಗುತ್ತಲೇ ಇರುವರು. ನೂರಾರು ಗ್ರಾಮಗಳೂ ಅನೇಕ ವನಗಳೂ ಗುಡ್ಡಗಳೂ ಶತ್ರುಗಳ ಕಂದಕಗಳೂ ನಮ್ಮವರಿಗೆ ಕಳೆದವಾರ ವಶವಾಗಿರುವುದಲ್ಲದೆ ೨-೩ ಕಡೆಯ ರಂಗಗಳಲ್ಲಿ ೩೦ ಸಾವಿರಕ್ಕೆ ಮೇಲೆಯೇ ಶತ್ರುಸೈನಿಕರು ನಮ್ಮವರಿಗೆ ವಶರಾಗಿರುವರು. ಪ್ರತಿದಿನವೂ ಅಮೋಘವಾದ ದಿಗ್ವಿಜಯಗಳಾಗಿರುವುವು. ಇವೆಲ್ಲವುಗಳ ಫಲಿತವಾಗಿ ಆಗಿರುವುದೇನೆಂದರೆ ಹಿಂಡನ್‌ಬರ್ಗ್ ಪಂಗ್ತಿಯಲ್ಲಿ ೨ ಸಾಲನ್ನು ನುಗ್ಗಿದಂತಾಯಿತು. ಆ ಪಂಗ್ತಿಯಲ್ಲಿ ೮ ಮೈಲಿ ಅಗಲಕ್ಕೆ ಭೇದಿಸಿ ೨ ಮೈಲಿಗಳ ದೂರ ಒಳಕ್ಕೆ ನುಗ್ಗಿಹೋಗಿರುವರು. ಫ್ರೆಂಚರು ಸೆಂಟ್‌ಕ್ವಿಟನ್ನಿಗೆ ಆಗಲೇ ಒಂದುಕಡೆಯಲ್ಲಿ ನುಗ್ಗಿರುವರು. ಇಂಗ್ಲೀಷರು ಕಾಂಬ್ರೆ ಪಟ್ಟಣವನ್ನು ಕೇವಲ ಸಮೀಪಿಸಿ ಇನ್ನೇನು ಆಕ್ರಮಿಸಿಕೊಳ್ಳುವುದರಲ್ಲಿರುವುದರಿಂದ ಶತ್ರುಗಳು ಅದಕ್ಕೆ ಬೆಂಕಿಯಿಕ್ಕಿ ಬಿಟ್ಟುಬಿಡುವುದರಲ್ಲಿರುವರು. ಇವೆರಡೂ ಸ್ವಲ್ಪಕಾಲದಲ್ಲೇ ಸಂಪೂರ್ಣವಾಗಿ ನಮ್ಮವರ ವಶವಾಗುವುದರಲ್ಲಿವೆ. ಹೀಗಾದ ಬಳಿಕ ಹಿಂಡನ್‌ಬರ್ಗ್ ಪಂಗ್ತಿಯು ನಮ್ಮವರನ್ನು ತಡೆಗಟ್ಟಲಾರದು. ಅದನ್ನೆಲ್ಲಾ ದಾಟಿಹೋಗುವುದಕ್ಕೆ ಮಾತ್ರ ಇನ್ನೂ ಕೆಲಕಾಲ ಹಿಡಿದರೂ ಹಿಡಿಯಬಹುದು. ಆದರೂ ಅದರ ಹಿಂದೆಯೂ ಶತ್ರುಗಳು ಇನ್ನೂ ಬೇರೆ ನೂತನ ರಕ್ಷಕಪಂಗ್ತಿಯನ್ನೇರ್ಪಡಿಸಿದ್ದಾರೆಂದು ವರ್ತಮಾನವಿದೆ. ನಾಲ್ಕು ವರ್ಷದಿಂದ ಏರ್ಪಡಿಸಿದ್ದ ಹಿಂಡನ್‌ಬರ್ಗ್ ಪಂಗ್ತಿಯೇ ತಡೆಯದೆಹೋದರೆ ಹೊಸದಾಗಿ ಆತುರದಲ್ಲಿ ಏರ್ಪಡಿಸಿದ ಪಂಗ್ತಿಯು ನಮ್ಮವರಿಗೆ ಅಭೇದ್ಯವಾದೀತೆ? ಆಗಲಾರದು. ಶತ್ರುಗಳು ಈಗ ತಮ್ಮ ಮೂಲಬಲವನ್ನು ವಿಶೇಷವಾಗಿ ತಂದೊಡ್ಡುತ್ತಿದ್ದಾರೆ. ಬಹು ನಷ್ಟಪಡುತ್ತಿದ್ದಾರೆ. ಕಳೆದ ತಾ|| ೨೬ ರಿಂದ ೩೦ ರೊಳಗೆ ಶತ್ರುಗಳ ೧೩ ಸಾವಿರ ಸೈನಿಕರೂ ೩೦೦ ಫಿರಂಗಿಗಳೂ ಎಸ್ನಿ, ವೆಸ್ಲೀ ನದಿಗಳ ಮಧ್ಯದ ರಂಗವೊಂದರಲ್ಲೇ ಫ್ರೆಂಚರ ವಶವಾಗಿವೆ. ಕಳೆದ ಭಾನುವಾರ ಒಂದರಲ್ಲೇ ಸೆಂಟ್‌ಕ್ವಿಟನ್ನಿಗೆ ಉತ್ತರದಲ್ಲಿ ಇಂಗ್ಲೀಷರು ಶತ್ರುಗಳ ಕಡೆಯ ೪೦೦೦ ಸೈನಿಕರನ್ನೂ, ೪೦ ಫಿರಂಗಿಗಳನ್ನೂ ವಶಪಡಿಸಿಕೊಂಡಿದ್ದಾರೆ. ಪ್ಲಾಂಡರ್ಸಿನಲ್ಲಿ ಬೆಲ್ಜಿಯಮ್ಮಿನವರು ಮಹಾಯುದ್ಧ ಮಾಡಿ ಅನೇಕ ಗ್ರಾಮಗಳನ್ನು ಶತ್ರುಗಳಿಂದ ಕಿತ್ತುಕೊಂಡು ಬಹುದೂರ ಹಿಮ್ಮೆಟ್ಟಿರುವುದಲ್ಲದೆ ಅವರ ಕಡೆಯ ಒಬ್ಬ ಸೇನಾಪತಿಯು ತಾ|| ೨೮-೨೯ ರಲ್ಲಿ ೯೦೦೦ ಶತ್ರುಸೈನಿಕರನ್ನೂ, ೨೦೦ ಫಿರಂಗಿಗಳನ್ನೂ, ಇನ್ನೊಬ್ಬ ಸೇನಾಪತಿಯು ೩೬೦೦ ಮಂದಿ ಸೈನಿಕರನ್ನೂ ೯೦ ಫಿರಂಗಿಗಳನ್ನೂ ವಶಪಡಿಸಿಕೊಂಡಿರುವರು. ಬೆಲ್ಜಿಯಂ ಪ್ರಭುವು ತಮ್ಮ ಸೇನೆಯನ್ನು ತಾವೇ ನಡಿಸಿರುವರು. ಇದರಂತೆ ಹಲವುಕಡೆ ಶತ್ರುಸೈನಿಕರು ನಮ್ಮವರಿಗೆ ಸ್ವಾಧೀನರಾಗಿರುವರು. ಆ ವಿವರವನ್ನೆಲ್ಲಾ ಬರೆಯುವುದಕ್ಕೆ ಸ್ಥಲಸಾಲದು. ಈಸಲ ನಮ್ಮವರು ಅವಸ್ಕಂದನವನ್ನಾರಂಭಿಸಿದ ಜುಲೈ ತಾ|| ೧೮ ರಿಂದ ಸೆಪ್ಟಂಬರ್ ಕಡೆಯವರೆಗೂ ಮಿತ್ರಮಂಡಲಿಯವರೆಲ್ಲರೂ ೨ ಲಕ್ಷ ಮಂದಿ ಶತ್ರುಸೈನಿಕರನ್ನೂ, ೩೦೦೦ ಫಿರಂಗಿಗಳನ್ನೂ, ೨೦ ಸಾವಿರ ಮಿಷಿನ್ ಫಿರಂಗಿಗಳನ್ನೂ ಅಪರಿಮಿತವಾದ ಇತರ ಸಾಮಗ್ರಿಗಳನ್ನೂ ವಶಪಡಿಸಿಕೊಂಡಿದ್ದಾರೆಂದು ಲೆಕ್ಕವಾಗಿದೆ. ಈ ಸಂಖ್ಯೆಯೇ ಅಲ್ಲದೆ ಪಾಲಸ್ಟೈನ್ ರಂಗದಲ್ಲಿ ೫೮ ಸಾವಿರ ತುರ್ಕಿ ಸೈನಿಕರನ್ನೂ, ೩೨೫ ಫಿರಂಗಿಗಳನ್ನೂ ವಶಪಡಿಸಿಕೊಂಡಿರುವರು. ಬಾಲ್ಕನ್ ರಂಗದಲ್ಲಿ ನಮ್ಮವರಿಗುಂಟಾದ ಜಯವು ಬಹಳ ಸಂತೋಷಕರವಾಗಿರುವುದು. ಮಿತ್ರಮಂಡಲಿ ಸೈನ್ಯವು ಇಬ್ಭಾಗವಾಗಿ ಎಡಗಡೆಯ ಸೈನ್ಯವು ಮೊನಾಸ್ಟರಿನಿಂದ ಉತ್ತರಕ್ಕೆ ಸರ್ವಿಯಾ ದೇಶದೊಳಗೆ ನುಗ್ಗಿ ಉಸ್ಕುಬ್ಲೆಂಬ ಪಟ್ಟಣವನ್ನು ಸಮೀಪಿಸುತ್ತಿರುವುದು. ಬಲಗಡೆಯ ಸೈನ್ಯವು ಬಲ್ಗೇರಿಯಾ ದೇಶದೊಳಕ್ಕೆ ನುಗ್ಗಿಹೋಗಿ ಸ್ಟ್ರುಮಿಟ್ಸಾ ಪಟ್ಟಣವನ್ನು ಹಿಡಿದು ಅದರಿಂದ ಮುಂದಕ್ಕೂ ಸಾಗಿ ಬಲ್ಗರ್ ಸೈನ್ಯವನ್ನು ಅಟ್ಟಿಕೊಂಡು ಹೋಗುತ್ತಿರುವುದು. ಶತ್ರುಸೈನ್ಯವು ಇದನ್ನು ತಡೆಯಲಾರದೆ ಪಲಾಯನವಾಗುತ್ತಿರುವುದು. ಬಹುದುರ್ಗಮಗಳಾಗಿದ್ದ ಬೆಟ್ಟಗಾಡುಗಳನೇಕವು ನಮ್ಮವರ ಸ್ವಾಧೀನವಾದುವು. ಇದೇ ರಭಸದಲ್ಲಿ ನುಗ್ಗಿದರೆ ಸರ್ವಿಯಾದ ಬಹುಭಾಗವೂ ಬಲ್ಗೇರಿಯಾದಲ್ಲಿ ಬಹುಭಾಗವೂ ನಮ್ಮವರ ವಶವಾಗಿಹೋಗುವುದರಲ್ಲಿ ಸಂಶಯವಿಲ್ಲ. ಆದರೆ ಬಲ್ಗೇರಿಯನ್ನರಿಗೆ ಈ ಮಿತ್ರಮಂಡಲಿಯ ವಿಜಯಪರಂಪರೆಯು ಎದೆ ದಿರಿಯಿಸಿತು. ತಮ್ಮ ಇದುವರೆಗಣ ಲಾಭವನ್ನೇ ಅಲ್ಲದೆ ಸ್ವದೇಶವನ್ನೂ ಕಳೆದುಕೊಳ್ಳಬೇಕಾಗುವುದಲ್ಲಾ ಎಂದು ಚಿಂತಿಸಿ, ಮಿತ್ರಮಂಡಲಿಯವರೊಡನೆ ಸಂಧಿಗೆ ಕೋರಿದರು. ತಾವು ಪರಾಜಿತರಾದೆವೆಂದು ಒಪ್ಪಿಕೊಂಡು ಸಂಧಿನಿಬಂಧನೆಗಳನ್ನು ಗೊತ್ತುಮಾಡುವುದಕ್ಕಾಗಿ ತಾತ್ಕಾಲಿಕವಾಗಿ ಯುದ್ಧವನ್ನು ನಿಲ್ಲಿಸುವುದಕ್ಕೆ ಮಿತ್ರಮಂಡಲಿಯವರ ಅಪ್ಪಣೆ ಪಡೆದು ಕಳೆದ ತಾ|| ೩೦ ರಲ್ಲಿ ಎರಡು ಪಕ್ಷದವರೂ ಯುದ್ಧವನ್ನು ನಿಲ್ಲಿಸಿಬಿಟ್ಟರು. ತಾತ್ಕಾಲಿಕವಾಗಿರುವಂತೆ ಮಿತ್ರಮಂಡಲಿಯವರು ಸೂಚಿಸಿದ ಏರ್ಪಾಟುಗಳಿಗೆಲ್ಲಾ ಅವರು ಒಪ್ಪಿದರು. ಇದರ ಪ್ರಕಾರ ಬಲ್ಗೇರಿಯಾ ವಶದಲ್ಲಿರುವ ಸರ್ವಿಯಾ ಮತ್ತೂ ಗ್ರೀಸ್ ದೇಶಭಾಗಗಳನ್ನು ಅವರು ಬಿಟ್ಟುಬಿಡಬೇಕೆಂದೂ, ಅಲ್ಲಿರುವ ಸೈನ್ಯವನ್ನು ಅವರು ಹಿಂದಕ್ಕೆ ಕರೆಯಿಸಿಕೊಂಡುಬಿಡಬೇಕೆಂದೂ, ಅವರ ಆಯುಧಗಳನ್ನೆಲ್ಲಾ ಮಿತ್ರಮಂಡಲಿಯವರು ವಶಪಡಿಸಿಕೊಳ್ಳಬೇಕೆಂದೂ, ಬಲ್ಗೇರಿಯಾ ದೇಶದ ಮುಖ್ಯಸ್ಥಾನಗಳಿಗೆ ಮಿತ್ರಮಂಡಲಿಯವರು ಪ್ರವೇಶಿಸುವುದಲ್ಲದೆ, ಅಲ್ಲಿರುವ ಶತ್ರುಪಕ್ಷದವರನ್ನೆಲ್ಲಾ ಹೊರಕ್ಕೆ ಕಳುಹಿಸಿಬಿಡಬೇಕೆಂದೂ, ಬಲ್ಗೇರಿಯನ್ ಲೋಹಮಾರ್ಗವೆಲ್ಲಾ ಮಿತ್ರಮಂಡಲಿಯ ಅಧೀನವಾಗಬೇಕೆಂದೂ ಗೊತ್ತಾಗಿರುವುದು. ಇಷ್ಟು ನೆರವೇರಿಬಿಟ್ಟರೆ ಜರ್ಮನರಿಗೆ ಪೂರ್ವದೇಶದಮೇಲಿದ್ದ ಆಸೆಯೆಲ್ಲಾ ಇಲ್ಲಿಗೆ ಸಂಪೂರ್ಣವಾಗಿ ಮಣ್ಣುಪಾಲಾದಂತಾಗುವುದರಲ್ಲಿ ಸಂಶಯವೇ ಇಲ್ಲ. ಬಲ್ಗೇರಿಯಾವು ಹೀಗಾದಬಳಿಕ ಈ ಕಡೆಯಲ್ಲಿ ಶತ್ರುಗಳ ಸತ್ವವೇ ಅಡಗಿಹೋಗುವುದು. ರುಮೇನಿಯಾವು ಮರಳಿ ಮಿತ್ರಮಂಡಲಿಯ ಪರವಾಗುವುದು. ಕಡೆಗೆ ತುರ್ಕಿಯು ಒಂಟಿಯಾಗಿ ಬಾಳುವುದುಂಟೆ? ಅದೂ ಮಿತ್ರಮಂಡಲಿಗೆ ಕೂಡಿಯೇ ಕೂಡಿಕೊಳ್ಳುವುದು. ಬಳಿಕ ಜರ್ಮನಿಯ ಅವಸ್ಥೆಯನ್ನು ಹೇಳಬೇಕಾಗಿಯೇ ಇರುವುದಿಲ್ಲ. ಯುದ್ಧವೂ ಬೇಗನೆ ಮುಗಿದುಹೋಗುವುದು. ಇದನ್ನೆಲ್ಲಾ ಯೋಚಿಸಿಕೊಂಡು ಜರ್ಮನಿ ಆಸ್ಟ್ರಿಯಾಗಳು ಈಗ ತಮ್ಮ ಮೂಲಬಲವನ್ನು ಬಲ್ಗೇರಿಯಾದ ಕಡೆಗೆ ಕಳುಹಿಸಿ, ಮಿತ್ರಮಂಡಲಿಯಮೇಲೆ ನುಗ್ಗಿಸಿ, ಬಲ್ಗೇರಿಯಾವನ್ನು ರಕ್ಷಿಸಿಕೊಡುವೆವೆಂದು ಹೇಳುತ್ತ, ಕೆಲವು ಸೈನ್ಯವನ್ನು ಆಗಲೇ ಬಲ್ಗೇರಿಯಾ ರಾಜಧಾನಿಯಾದ ಸೋಫಿಯಾ ಪಟ್ಟಣಕ್ಕೆ ಕಳುಹಿಸಿರುವರು. ಬಲ್ಗೇರಿಯಾವು ಮಿತ್ರಮಂಡಲಿಯೊಡನೆ ಸೇರಿಹೋಗದಂತೆ ಮಾಡುವುದಕ್ಕೆ ಶತ್ರುಗಳು ವಿಶ್ವಪ್ರಯತ್ನವನ್ನು ಮಾಡುತ್ತಿರುವರು. ಅಲ್ಲಿಯ ಫರ್ಡಿನಾಂಡ್‌ರಾಜನು ಇನ್ನೂ ಜರ್ಮನರ ಮೈತ್ರಿಯನ್ನು ಬಿಟ್ಟಿರುವುದಿಲ್ಲ. ಆತನಿಗೆ ಇನ್ನೂ ಜರ್ಮನಿಯಕಡೆ ಆಸೆಯಿದ್ದರೂ ಬಲ್ಗೇರಿಯಾ ಪ್ರಜೆಗಳಿಗೆ ಮೊದಲೇ ಜರ್ಮನರೆಂದರೆ ಸೇರುತ್ತಿರಲಿಲ್ಲ. ಅವರಿಗೆ ಈಗ ದೇಶರಕ್ಷಣೆ ಸ್ವಲಾಭಗಳೇ ಬೇಕು. ಮಿತ್ರಮಂಡಲಿಯ ಪ್ರಬಲ ಪ್ರಯತ್ನದಲ್ಲಿಯೂ, ಬಲ್ಗೇರಿಯನ್ ಪ್ರಜೆಗಳ ಶಾಂತಿಕಾಮುಕತ್ವದಲ್ಲಿಯೂ ಅಲ್ಲಿಯ ಪ್ರಭುವು ಶತ್ರುಪಕ್ಷವನ್ನು ವಹಿಸಿ ನಿಲ್ಲುವನಾದರೆ, ಗ್ರೀಕ್‌ರಾಜನಿಗಾದ ಅವಸ್ಥೆಯೇ ಆತನಿಗೂ ಆಗುವುದರಲ್ಲಿ ಸಂಶಯವಿಲ್ಲ. ಸದ್ಯಸ್ಥಿತಿಯಲ್ಲಿ ಮಿತ್ರಮಂಡಲಿಯನ್ನು ಸೇರಿದರೇಸರಿಯೇ ಬಲ್ಗೇರಿಯಾಕ್ಕೆ ಸುಖವುಂಟು. ಈ ಸಂದರ್ಭದಲ್ಲಿ ಶತ್ರುಗಳೂ ಚತುರುಪಾಯವನ್ನೂ ಉಪಯೋಗಿಸದಿರಲಾರರು. ಈ ಕಾರಣದಿಂದ ಸದ್ಯದಲ್ಲಿ ಬಾಲ್ಕನ್‌ರಂಗದ ವಿಷಯವು ಪ್ರಾಮುಖ್ಯವನ್ನು ಹೊಂದಿ ಎಲ್ಲರ ಲಕ್ಷ್ಯವನ್ನೂ ಸೆಳೆದಿರುತ್ತದೆ. ಮುಂದೆ ಹೇಗಾಗುವುದೋ ಇಷ್ಟರಲ್ಲೇ ಗೊತ್ತಾಗುವುದು.

ಜರ್ಮನರ ಕಾಪಟ್ಯ.

ಜರ್ಮನರ ಕಪಟಪ್ರಯೋಗವು ಅವರ ಶತ್ರುಮಂಡಲಿಯ ಮೇಲೆ ಮಾತ್ರವೇ ಎಂದು ತಿಳಿಯಕೂಡದು. ಅವರ ಮಿತ್ರಮಂಡಲಿಯಲ್ಲೂ ಒಬ್ಬರರಿಯದಂತೆ ಮತ್ತೊಬ್ಬರ ಮೇಲೆ ಕಪಟಪ್ರಯೋಗ ಮಾಡುತ್ತಿರುವರೆಂಬುದು ಹೊರಪಟ್ಟಿದೆ. ಕಪಟವೂ ಮೋಸವೂ ದುರ್ನೀತಿಯೂ ಜರ್ಮನರ ನಿಸರ್ಗಗುಣವಾಗಿರುವಂತಿದೆ. ಪಶ್ಚಿಮರಂಗದಲ್ಲಿ ಕಳೆದ ಜುಲೈತಿಂಗಳ ಹಿಂದೆ ಜರ್ಮನರಿಗೆ ಮಹಾಜಯ ಪ್ರಾಪ್ತಿಯಾಗಿದ್ದಿತಷ್ಟೆ. ಆ ಸಂಧಿಯನ್ನು ಸಾಧಿಸಿ ಜರ್ಮನರು ಆಸ್ಟ್ರಿಯನ್ನರಿಗೆ ತಿಳಿಯಗೊಡಿಸದಂತೆ ತುರ್ಕಿಯವರೊಡನೆ ಗುಟ್ಟಾಗಿ ಒಂದು ಪ್ರತ್ಯೇಕ ಸಂಧಿಯನ್ನು ಮಾಡಿಕೊಂಡಿರುವರಂತೆ! ಆ ಸಂಧಿಯ ಪ್ರಕಾರ ಜರ್ಮನರು ತುರ್ಕಿಯವರಿಗೆ ಪಾರಸೀಕ ದೇಶದಲ್ಲಿ ಸ್ವಾತಂತ್ರ್ಯವನ್ನು ಕೊಡಿಸುವುದಕ್ಕೂ, ಅದಕ್ಕೆ ಪ್ರತಿಯಾಗಿ ತುರ್ಕಿಯವರು ಜರ್ಮನರಿಗೆ ಏಷಾ ಮೈನರಿನಲ್ಲಿ ನುಗ್ಗಿಹೋಗುವುದಕ್ಕೆ (ಭರತಖಂಡದ ಕಡೆಗೆ ನುಗ್ಗಿಬರುವುದಕ್ಕಿರಬಹುದು) ದೊಡ್ಡಮಾರ್ಗವನ್ನೂ, ಆರ್ಥಿಕಾದಿ ಇತರ ಸಹಾಯವನ್ನೂ ಒದಗಿಸಿಕೊಡುವುದಕ್ಕೂ, ಮತ್ತು ಯುದ್ಧಮುಗಿದ ಬಳಿಕ ಜರ್ಮನರು ಬಾಲ್ಕನ್ ವಿಷಯಗಳನ್ನು ಪರಿಷ್ಕರಿಸುವಾಗ ತುರ್ಕಿಯವರು ಜರ್ಮನರಿಗೆ ಸಹಾಯವಾಗಿರುವುದಕ್ಕೂ ಏರ್ಪಾಟುಗಳು ಜರುಗಿವೆಯಂತೆ. ಆಸ್ಟ್ರಿಯನ್ನರಿಗೆ ಬಾಲ್ಕನ್ನಿನಲ್ಲಿ ದೊರೆಯಬೇಕಾಗಿದ್ದ ಕೆಲವು ಫಲವನ್ನು ಇದುವರೆಗೆ ಜರ್ಮನರೇ ನುಂಗಿ ಕುಳಿತಿರುವರು. ಮುಂದೆ ಮರಳಿ ಬಾಲ್ಕನ್ ವಿಷಯವು ಬಂದಾಗ ಆಸ್ಟ್ರಿಯನ್ನರನ್ನು ಚತುರುಪಾಯದಿಂದ ಸರಿಮಾಡಿಕೊಳ್ಳುವುದಕ್ಕೆ ತುರ್ಕಿಯೊಡನೆ ಕೈಜರನು ಹೀಗೆ ಸಂಬಂಧವನ್ನು ಬಲಪಡಿಸಿಕೊಂಡನೆಂದು ಕಾಣುತ್ತದೆ. ತುರ್ಕಿಗೆ ಪಾರಸೀಕ ದೇಶದಮೇಲೆ ಆಸೆಯು ಬಹುಕಾಲದಿಂದಿದೆ. ಸದ್ಯಕ್ಕೆ ಅದರಿಷ್ಟವನ್ನು ಪೂರ್ಣಮಾಡಿಬಿಟ್ಟರೆ ಭರತಖಂಡಕ್ಕೆ ನುಗ್ಗಿಬರಲು ತನಗೆ ಬಾಗಿಲು ತೆರೆದಿಟ್ಟಂತಾಗುವುದೆಂಬುದೂ, ಕಟ್ಟಕಡೆಗೆ ತುರ್ಕಿ ಪಾರಸೀಕದೇಶಗಳೆರಡನ್ನೂ ನುಂಗಿ ನೀರುಕುಡಿಯಬಹುದೆಂಬುದೂ ಕೈಜರನ ಅಗಾಧಸಂಕಲ್ಪವಾಗಿರಬೇಕೆಂದು ಕಾಣುತ್ತದೆ. ತುರ್ಕಿಯೊಡನೆ ಸಂಧಿಮಾಡಿಕೊಳ್ಳುವುದು ಆಸ್ಟ್ರಿಯಕ್ಕೆ ತಿಳಿದುಬಿಟ್ಟರೆ ಕೆಲಸ ಕೆಡಬಹುದೆಂದು ಜರ್ಮನಿಯು ಮಿತ್ರದ್ರೋಹಕ್ಕೂ ಅಂಜದೆ ಗುಟ್ಟಾಗಿ ಸಂಧಿಮಾಡಿಕೊಂಡಿದೆ. ಕಡೆಗಾದರೂ ಇಂಥ ಕಪಟಗಳೆಲ್ಲಾ ಹೊರಬೀಳದೆ ಇರುವುದುಂಟೆ? ಇದಕ್ಕೆಲ್ಲಾ ತಕ್ಕ ಪ್ರಾಯಶ್ಚಿತ್ತವನ್ನುಣ್ಣುವ ಕಾಲವು ಜರ್ಮನಿಗೆ ಒಂದಾನೊಂದು ದಿವಸ ಸಿದ್ಧವಾಗಿಯೇ ಇದೆ. ಕೈಜರನು ತಾತ್ಕಾಲಿಕ ಜಯದಿಂದುಬ್ಬಿ ಇನ್ನೇನು ನಾನೇ ಪ್ರಪಂಚಸಾರ್ವಭೌಮನಾಗುವೆನೆಂದು ಮನಸ್ಸಿನ ಮಂಡಿಗೆಯನ್ನು ತಿನ್ನುತ್ತ ಈಗ್ಗೆ ೩ ತಿಂಗಳ ಕೆಳಗೆ ಮೇಲೆ ಕಂಡಂತೆ ಸಂಧಿಯನ್ನು ಮಾಡಿಕೊಂಡಿದ್ದನು. ಆದರೆ ಈಗಣ ಅವಸ್ಥೆಯು ಅವನ ಸಂಕಲ್ಪಕ್ಕೆಲ್ಲಾ ಮಣ್ಣುಗೂಡಿಸಲು ಸಾಕಾಗಿರುತ್ತದೆ. ಪಶ್ಚಿಮರಣರಂಗದಲ್ಲಿ ಆತ್ಮರಕ್ಷಣೆಯೇ ಅವನಿಗೆ ದುರ್ಘಟವಾಗಿದೆ. ತಾವು ಆತ್ಮರಕ್ಷಣೆಗಾಗಿ ಯುದ್ಧ ಮಾಡುತ್ತಿದ್ದೇವೆಂದು ಅವನ ಮಂತ್ರಿಗಳೇ ಹೇಳಿಕೊಳ್ಳುವ ಹೊತ್ತು ಬಂದಿದೆ. ತುರ್ಕಿಗೆ ಏಷ್ಯಾಮೈನರಿನ ಆಸೆಯೇ ಉಳಿಯದ ಹೊತ್ತು ಬಂದಿದೆ. ಬಲ್ಗೇರಿಯಾವು ಮಿತ್ರಮಂಡಲಿಯೊಡನೆ ಪ್ರತ್ಯೇಕಸಂಧಿ ಮಾಡಿಕೊಳ್ಳದಿದ್ದರೆ ತನ್ನ ಪರಿಣಾಮವಾಗುವುದಿಲ್ಲವೆಂದು ತಿಳಿದುಕೊಂಡಿದೆ. ಆಸ್ಟ್ರಿಯಾವು ಈ ಜರ್ಮನರ ಹಾಳುಸಂಕಲೆಗೆ ಸಿಕ್ಕಿ ಯುದ್ಧದ ಬೇಗೆಯಲ್ಲಿ ಉಬ್ಬೆಗೊಳುವುದಕ್ಕಿಂತ ಹೇಗಾದರೂ ಮುಕ್ತರಾದರೆ ದೇಶವು ಉಳಿದುಕೊಂಡೀತೆಂದು ಹಾರೈಸುವ ಹೊತ್ತು ಬರುವುದರಲ್ಲಿದೆ. ಇನ್ನು ೩ ತಿಂಗಳು ತುಂಬುವುದರೊಳಗಾಗಿ ಕೈಜರನ ಮತ್ತೂ ಅವನ ಮಿತ್ರಮಂಡಲಿಯ ಅವಸ್ಥೆಯು ಯಾವಲ್ಲಿಗೆ ಬರುವುದೋ ನೋಡಬೇಕು.

ಜರ್ಮನ್ ಮಂತ್ರಿಯ ಉಪನ್ಯಾಸ.

ಜರ್ಮನ್ ಮಂತ್ರಿಯಾದ ಕೌಂಟ್ ಹಾರ್ಟಲಿಂಗ್‌ರವರು ತಮ್ಮ ರಾಜ್ಯಾಂಗಸಭೆಯಲ್ಲಿ ಒಂದು ಉಪನ್ಯಾಸ ಮಾಡಿದರು. ಆಗ್ಗೆ ಈಗಣ ಯುದ್ಧಪರಿಸ್ಥಿತಿಯಿಂದ ತಮ್ಮ ದೇಶದ ಪ್ರಜೆಗಳಲ್ಲಿ ಅಸಂತೃಪ್ತಿಯು ಅಪರಿಮಿತವಾಗಿರುವುದನ್ನು ಎತ್ತಿಆಡಿ, ಇದಕ್ಕಾಗಿಯೇ ಪ್ರಜೆಗಳು ಅಧೈರ್ಯಪಡಕೂಡದೆಂದೂ ೧೯೧೬ನೆ ವರ್ಷಕ್ಕಿಂತ ಈಗಣ ತಮ್ಮ ಸ್ಥಿತಿಯು ವಿಷಮವಾಗಿಲ್ಲವೆಂದೂ, ಪೂರ್ವರಂಗದಿಂದ ಪಶ್ಚಿಮರಂಗಕ್ಕೆ ತಾವು ಸೈನ್ಯವನ್ನು ಕಳುಹಿಸುವೆವೆಂದೂ, ತಮ್ಮ ಸೇನಾನಿಗಳಾದ ಹಿಂಡನ್ಬರ್ಗ್, ಲುಡೆಂಡಾರ್ಫಗಳ ಪ್ರತಿಭೆಯು ಮತ್ತೆ ವ್ಯಕ್ತವಾಗುವುದೆಂದೂ, ತಮ್ಮ ಶತ್ರುಪ್ರಯತ್ನಗಳೆಲ್ಲಾ ವ್ಯರ್ಥವಾಗುವುವೆಂದೂ, ತಮ್ಮ ಪ್ರಜೆಗಳು ಭಯಪಡುವುದು ಕೃತಘ್ನತೆಯಾಗುವುದೆಂದೂ, ಈಗಣ ವಿಷಮದಶೆಯಲ್ಲಿ ದೇಶದ ಹೆಣ್ಣುಗಂಡುಗಳೆಲ್ಲಾ ರಣರಂಗದಲ್ಲಿ ಸಹಾಯಮಾಡಬೇಕೆಂದೂ, ನಾವು ಆತ್ಮರಕ್ಷಣೆಗಾಗಿಯೇ ಯುದ್ಧವನ್ನಾರಂಭಿಸಿ ಬೆಲ್ಜಿಯಮ್ಮನ್ನು ಅದಕ್ಕಾಗಿಯೇ ಆಕ್ರಮಿಸಿದೆವೆಂದೂ, ಜರ್ಮನರು ಎಚ್ಚತ್ತು ಆಗ ಚುರುಕಿನಿಂದ ಕೆಲಸ ಮಾಡದಿದ್ದರೆ ಶತ್ರುಗಳು ಜರ್ಮನಿಯಮೇಲೆ ಬೀಳುತ್ತಿದ್ದರೆಂದು ಊಹಿಸುವುದಕ್ಕೆ ಕಾರಣವಿದ್ದಿತೆಂದೂ, ಜರ್ಮನರಿಗೆ ಜಗತ್ತನ್ನು ಆಕ್ರಮಿಸಬೇಕೆಂಬ ದುರಾಸೆಯು ಯಾವಾಗಲೂ ಇರಲಿಲ್ಲವೆಂದೂ, ಈ ಲೋಕಯುದ್ಧಕ್ಕೆ ಗತಿಸಿದ ಎಡ್ವರ್ಡ್ ಚಕ್ರವರ್ತಿಯವರೇ ಹದಿಯನ್ನು ಹಾಕಿಹೋದರೆಂದೂ, ಆ ಮದ್ದಿನ ಗುದ್ದೆಗೆ ಚಾಳಿಗೆಬತ್ತಿಯನ್ನು ರಷ್ಯಾಸೈನಿಕರು ಅವರ ಚಕ್ರವರ್ತಿಯ ಸಮ್ಮತಿಯಿಲ್ಲದೆಯೇ ಹೊತ್ತಿಸಿದರೆಂದೂ, ತಮ್ಮ ಶತ್ರುಗಳು ಅಸತ್ಯವಾರ್ತೆಯನ್ನು ಹುಟ್ಟಿಸಿ, ಜರ್ಮನರನ್ನು ದೂರುತ್ತಿರುವರೆಂದೂ, ಯುದ್ಧದಲ್ಲಿ ವಿಶೇಷ ಲಾಭವನ್ನು ಪಡೆಯುವುದಕ್ಕೇ ಅಮೇರಿಕಾದವರು ಪ್ರವೇಶಿಸಿದರೆಂದೂ, ಆದರೂ ತಮ್ಮ ಸಬ್‌ಮರೀನುಗಳು ಅಮೇರಿಕಾ ಸೈನ್ಯ ಮೊದಲಾದುವುಗಳನ್ನು ರಣರಂಗಕ್ಕೆ ಬರಗೊಡಿಸದಂತೆ ತಡೆಯುತ್ತಿರುವುವೆಂದೂ, ಯುದ್ಧಮುಗಿಯುವುದಕ್ಕೆ ಇನ್ನೂ ಬಹುಕಾಲಬೇಕೆಂದೂ, ಪ್ರಪಂಚದ ಮೇಲಿರುವ ಯೋಧರಲ್ಲಿ ಅರ್ಧಪಾಲು ಅಳಿದಲ್ಲದೆ ತಮ್ಮ ಶತ್ರುಗಳಿಗೆ ಯುದ್ಧದಲ್ಲಿ ಜಿಗುಪ್ಸೆ ಹುಟ್ಟುವಹಾಗಿಲ್ಲವೆಂದೂ, ಅದುವರೆಗೂ ನಾವು ಸ್ವದೇಶಸಂರಕ್ಷಣಾರ್ಥವಾಗಿ ದೀಕ್ಷಾಬದ್ಧರಾಗಿರುವೆವೆಂದೂ, ಮೊದಲಾಗಿ ಹೇಳಿರುವರು. ಈ ಮಾತುಗಳಲ್ಲಿ ಎಷ್ಟು ಸತ್ಯಾಂಶವಿರುವುದೆಂಬುದನ್ನು ಜಗತ್ತೇ ಕಂಡಿರುವುದು. ಈ ಉಪನ್ಯಾಸವನ್ನು ಇತರರು ಹಾಗಿರಲಿ ಜರ್ಮನಿಯ ವೃತ್ತಪತ್ರಿಕೆಗಳೇ ಒಪ್ಪಿಲ್ಲ. ಆತ್ಮರಕ್ಷಣೆಗಾಗಿ ಬೆಲ್ಜಿಯಮ್ಮನ್ನು ನಾವು ಆಕ್ರಮಿಸಿದೆವೆಂದು ಹಾರ್ಟಲಿಂಗ್‌ರವರು ಹೇಳಿದುದು ಸತ್ಯವಲ್ಲವೆಂದು ಜ್ಯೂಟಿಂಗ್ ಎಂಬ ಜರ್ಮನ್ ಪತ್ರಿಕೆಯೇ ಹೇಳಿರುವುದು. ಇನ್ನು ಇತರರ ಅಭಿಪ್ರಾಯವೇಕೆ? ಹೀಗೆ ಉಪನ್ಯಾಸ ಮಾಡಿದ ಮಂತ್ರಿಗಳು ಆಗಲೇ ರಾಜೀನಾಮೆಕೊಟ್ಟು ಹೋದರು.

ಅಂಚೆಯ ಹೆಚ್ಚು ಛಾರ್ಜು.

ಬರುವ ನವಂಬರ್ ತಿಂಗಳಿಂದ ಅಂಚೆಯ ಮೂಲಕ ಹೋಗತಕ್ಕ ಬಾಂಗಿಗಳ ಛಾರ್ಜು ದ್ವಿಗುಣವಾಗುತ್ತದೆ. ಎಂದರೆ ಇದುವರೆಗೆ ೪೦ ತೊಲೆಯ ತೂಕದೊಳಗಿದ್ದ ಬಾಂಗಿಗೆ ೨ ಆಣೆ ಛಾರ್ಜನ್ನು ಕೊಡಬೇಕಾಗಿದ್ದಿತು. ಇನ್ನುಮೇಲೆ ೪ ಆಣೆಯನ್ನು ಕೊಡಬೇಕಾಗುವುದು. ೨೦ ತೊಲ ತೂಕದ ಭಾಂಗಿಗೆ ೨ ಆಣೆ. ೨೦ ತೊಲ ತೂಕದಿಂದ ೮೦೦ ತೊಲದವರೆಗೂ ತೂಕವುಳ್ಳ ಬಾಂಗಿಗೆ ಪ್ರತಿ ೪೦ ತೊಲೆಗೂ ೪ ಆಣೆಯಂತೆ ಕೊಡಬೇಕಾಗುವುದು. ಹೀಗೆ ಛಾರ್ಜಿನ ದರವನ್ನು ಹೆಚ್ಚಿಸುವುದರಿಂದ ಬಾಂಗಿಗಳ ಸಂಖ್ಯೆಯನ್ನು ಕಡಿಮೆಮಾಡಿಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶವೆಂದು ಇದರ ಪ್ರಕಟನೆಯಲ್ಲಿ ಕಾಣಿಸಲ್ಪಟ್ಟಿದೆ. ಸರ್ಕಾರದವರು ಇದೇ ತೆರದ ಕಾರಣದಿಂದ ತಂತ್ರೀವಾರ್ತೆಯ ಛಾರ್ಜಿನ ಮತ್ತೂ ಹೊಗೆಬಂಡಿ ಬಾಡಿಗೆಗಳ ದರವನ್ನು ಹಿಂದೆ ಹೆಚ್ಚಿಸಿದುದರ ಪರಿಣಾಮವೇನಾಯಿತು? ಸರ್ಕಾರಕ್ಕೆ ಹೆಚ್ಚು ವರಮಾನವೇ. ಅದರಂತೆಯೇ ಈ ಮಾರ್ಪಾಡೂ ಕೂಡ ಸರ್ಕಾರದ ಆದಾಯಾಭಿವೃದ್ಧಿಗೆ ಮಾರ್ಗವಾಗುವುದೇ ಹೊರತು ಅಂಚೆಯ ದ್ವಾರಾ ಸಾಗುವ ಬಾಂಗಿಗಳ ಸಂಖ್ಯೆಯು ಕಡಿಮೆಯಾಗುವಂತೆ ತೋರುವುದಿಲ್ಲ. ಆಗುವ ಫಲವೇನೆಂದರೆ—ಈಗಣ ಸಕಲ ಪದಾರ್ಥಗಳ ಹೆಚ್ಚು ಬೆಲೆಯನ್ನು ಹೊರಲಾರದೆ ಕೊರಗುವ ಪ್ರಜೆಗಳಮೇಲೆ ಈ ಅಂಚೆಯ ಹೆಚ್ಚು ಭಾರವೂ ಬಿದ್ದುದೇ ಆಗುತ್ತದೆ. ಆದರೆ ಪೋಸ್ಟುಕಾರ್ಡು ಕವರುಗಳ ಬೆಲೆಯನ್ನು ಹೆಚ್ಚಿಸದಿರುವುದು ಕೆಟ್ಟುದರಲ್ಲಿ ಮೇಲೆಂದು ಭಾವಿಸಬೇಕಾಗಿರುತ್ತದೆ. ಹಾಳು ಯುದ್ಧದಸಂಬಂಧದಿಂದ ಪ್ರಪಂಚವೆಲ್ಲಾ ಇಂಥ ಅನಿಷ್ಟಸಂಕಟಗಳನ್ನನುಭವಿಸಬೇಕಾಗಿ ಬಂದಿರುತ್ತದೆ.

ಚಿಲ್ಲರೆನಾಣ್ಯದ ಸೌಲಭ್ಯ.

ಮೈಸೂರ ಸಂಸ್ಥಾನದಲ್ಲಿ ಚಿಲ್ಲರೆನಾಣ್ಯವು ದೊರೆಯದೆ ಜನರಿಗೆ ಮುಖ್ಯವಾಗಿ ಕೂಲಿಕಾರರಿಗೆ ಮತ್ತು ರೈತರುಗಳಿಗೆ ಉಂಟಾಗಿರುವ ತೊಂದರೆಯನ್ನು ಪರಿಹರಿಸುವ ಬಗೆಗೆ ನಮ್ಮ ಸರ್ಕಾರದವರು ಈ ಕೆಳಗೆ ಕಂಡಂತೆ ಸೌಲಭ್ಯವನ್ನು ಕಲ್ಪಿಸಿಕೊಟ್ಟಿರುತ್ತಾರೆ.

(1) ಚಿಲ್ಲರೆನಾಣ್ಯವನ್ನಪೇಕ್ಷಿಸುವಂತಹ ಯಾವನೊಬ್ಬ ಮನುಷ್ಯನಾಗಲಿ ಒಂದು ವಾರದಲ್ಲಿ ಒಂದುವೇಳೆಗೆ ಹೆಚ್ಚಿಲ್ಲದೆ 2½ ರೂಪಾಯಿಗಳವರೆಗೆ ಚಿಲ್ಲರೆನಾಣ್ಯಗಳನ್ನು ಯಾವ ಸರ್ಕಾರಿಖಜಾನೆಯಲ್ಲಾಗಲಿ ಪಡೆಯಬಹುದು.

(2) ಎಷ್ಟು ಹೆಚ್ಚು ಮೊಬಲಗಿನ ನೋಟಿಗಾದರೂ 2½, 5 ಮತ್ತು 10 ರೂ. ನ ಚಿಲ್ಲರೆ ನೋಟುಗಳನ್ನು ಬದಲಾಯಿಸಿಕೊಳ್ಳಬಹುದು.

(3) ಸರ್ಕಾರದ ಸಂಬಂಧವುಳ್ಳ ಕಂಟ್ರಾಕ್ಟರುಗಳು, ಪ್ಲಾಂಟರುಗಳು ಮತ್ತೂ ಕೂಲಿಆಳುಗಳನ್ನಿಟ್ಟುಕೊಂಡಿರತಕ್ಕ ಇತರರೂ ಪ್ರತಿತಿಂಗಳಿನಲ್ಲಿ ತಮ್ಮ ಬಿಲ್ಲಿಗೆ ಖಜಾನೆಯಲ್ಲಿ ಹಣವನ್ನು ತೆಗೆದುಕೊಳ್ಳುವಾಗ್ಗೆ 50 ರೂ. ವರೆಗೆ ಚಿಲ್ಲರೆನಾಣ್ಯವನ್ನು ಪಡೆಯಬಹುದು.

(4) ನಾರ್ತ್ ಮೈಸೂರು, ಸೌತ್ ಮೈಸೂರು ಮತ್ತು ಇಂಡಿಯನ್ ಕಾಫಿಪ್ಲಾಂಟರುಗಳ ಸಂಘಗಳಿಗೆ ನೋಟುಗಳಿಗೆ ಬದಲಾಗಿ 1000 ರೂ. ವರೆಗೆ ಚಿಲ್ಲರೆ ನಾಣ್ಯಗಳು ತಿಂಗಳಿಗೊಂದಾವೃತ್ತಿ ಕೊಡಲ್ಪಡುವುವು.

(5) ಖಜಾನೆಯಲ್ಲಿ ಚಿಲ್ಲರೆನಾಣ್ಯಗಳನ್ನು ಪಡೆಯಲು ಮ್ಯುನಿಸಿಪಲ್ ಪ್ರೆಸಿಡೆಂಟರುಗಳಿಂದ ಶಿಫಾರಸುಮಾಡಲ್ಪಟ್ಟಿರುವ ಬೆಂಗಳೂರು ಮತ್ತು ಮೈಸೂರುಪಟ್ಟಣಗಳಲ್ಲಿ ಕೂಲಿಯಾಳುಗಳನ್ನಿಟ್ಟುಕೊಂಡಿರುವವರಿಗೂ, ಮೇಲೆಹೇಳಿದ ಸಂಘಗಳಿಗೆ ಸೇರದಿರುವ ಪ್ಲಾಂಟರುಗಳಿಗೂ, ಚಿಲ್ಲರೆನಾಣ್ಯಗಳು ಖಜಾನೆಯಲ್ಲಿ ಕೊಡಲ್ಪಡತಕ್ಕುದಾವಶ್ಯಕವೆಂದು ಡಿ|| ಕಮಿಷನರುಗಳಿಗೆ ತೋರುವಂತಹ ಡಿ|| [illegible] ಕೂಲಿಯಾಳುಗಳನ್ನಿಟ್ಟುಕೊಂಡಿರುವವರಿಗೂ ತಿಂಗಳಿಗೊಂದಾವೃತ್ತಿ 50 ರೂ. ವರೆಗೆ ನೋಟಿಗೆ ಬದಲಾಗಿ ಚಿಲ್ಲರೆನಾಣ್ಯಗಳು ಕೊಡಲ್ಪಡುವುವು.

ಈ ವಿಚಾರವಾಗಿ ಸಿಟಿಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರುಗಳಿಂದಲೂ, ಡೆ|| ಕಮಿಷನರುಗಳಿಂದಲೂ ವರದಿಗಳು ಬಂದಮೇಲೆ ಮೇಲ್ಕಂಡ ನಿಬಂಧನೆಯನ್ನನುಸರಿಸಿ ಚಿಲ್ಲರೆನಾಣ್ಯಗಳನ್ನು ಕೊಡಲು ಕಂಟ್ರೋಲರು ಖಜಾನೆಗಳಿಗೆ ಅಧಿಕಾರವನ್ನು ಕೊಡುವರು. ಚಿಲ್ಲರೆನಾಣ್ಯಗಳು ಹೆಚ್ಚಾಗೊದಗಿಸಲ್ಪಡಬೇಕಾದಾವಶ್ಯಕತೆಯನ್ನು ಕುರಿತು ಡೆ|| ಕಮಿಷನರುಗಳು ವರದಿಮಾಡಿದಲ್ಲಿ ಕಂಟ್ರೋಲರು ಸಾಧ್ಯವಿದ್ದಷ್ಟು ಒದಗಿಸಿಕೊಡುವರು.

ಒಳದೇಶದ ವೃತ್ತಾಂತಗಳು.

ಇಂದಿನಿಂದ ರಾಜಧಾನಿಯಲ್ಲಿ ನವರಾತ್ರಿ ಪ್ರಯುಕ್ತವಾದ ಮಹೋತ್ಸವಗಳಿಗೆ ಆರಂಭವಾಗುತ್ತದೆ.

ಚಿತ್ರದುರ್ಗದಲ್ಲಿ ಪ್ಲೇಗಿನ ಹಾವಳಿಯಿಂದ ಜನರು ಊರನ್ನು ಬಿಟ್ಟು ಹೊರಗೆ ವಾಸಮಾಡುತ್ತಿರುವರು.

ಕೋಲಾರದ ಗಣಿಗಳಿಂದ ತೋಡಲ್ಪಟ್ಟ ೮೩೩೨೨೩ ರೂ. ಬೆಲೆಯ ಭಂಗಾರವು ಕಳೆದ ತಾ|| ೨೪ ರಲ್ಲಿ ಬೊಂಬಾಯಿ ಟಂಕಸಾಲೆಗೆ ಸಾಗಿಸಲ್ಪಟ್ಟಿತು.

ಸಂಸ್ಥಾನದ ಮಂತ್ರಿವರ್ಯರೂ ಕೌನ್ಸಿಲರುಗಳೂ ರಾಜಧಾನಿಗೆ ದಯಮಾಡಿಸಿದ್ದಾರೆ. ಶಾಖಾಮುಖ್ಯಾಧಿಕಾರಿಗಳೂ ಡಿ|| ಕಮಿಷನರುಗಳೂ ಬರುವವರಾಗಿದ್ದಾರೆ.

ರಾಜಧಾನಿಯಲ್ಲಿ ಕಳೆದ ಭಾನುವಾರ ೧ ಹದ ಮಳೆಯಾದುದರಹೊರತು ಈಚೆಗೆ ಮಳೆಯಿಲ್ಲ. ಬಿಸಿಲೂ ಸೆಕೆಯೂ ಬೇಸಗೆಕಾಲದಲ್ಲಿರುವಂತಿವೆ. ಪ್ಲೇಗಿನ ಮತ್ತೂ ನೂತನಜ್ವರದ ಮರಣಗಳು ದಿನಕ್ಕೆ ೧೦ ಕ್ಕೆ ಕಡಿಮೆಯಿಲ್ಲದಷ್ಟು ಆಗುತ್ತಿವೆ.

ನವರಾತ್ರಿ ಪ್ರಯುಕ್ತವಾದ ರಜವು ಬರುವ ತಾ|| ೧೨ ರಿಂದ ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ಕೊಡಲ್ಪಡುವುದು. ಆದರೆ ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲು ಕಳೆದ ತಾ|| ೩ ರಿಂದಲೇ ವಿಶ್ರಾಂತಿಯನ್ನು ತೆಗೆದುಕೊಂಡಿರುವುದು.

ಅಜ್ಜಂಪುರದ ಮು|| ಸೆಟ್ಟರ ಶಿವನಾಗಪ್ಪನವರ ಮಕ್ಕಳು ಸಿದ್ದಪ್ಪಸೆಟ್ಟರು ಬಡಜನರುಪಯೋಗಾರ್ಥವಾಗಿ ರಾಗಿಯನ್ನು ತರಿಸಿ, ಒಂದು ರೂಪಾಯಿಗೆ ೧೪ ಸೇರಿನಂತೆ ಮಾರಿಸುತ್ತಿರುವುದರಿಂದ ಬಡಜನರು ಅವರ ಉಪಕಾರವನ್ನು ಬಹುವಾಗಿ ಸ್ಮರಿಸುತ್ತಿರುವುದಾಗಿ ಆ ಸ್ಥಳದವರೊಬ್ಬರು ತಿಳಿಸಿರುತ್ತಾರೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಫಿರಿಕ್ಸ್ ನೆಕ್‌ಸೆಲ್ಲರ್ ಎಂಬ ಫೋಟೋಗ್ರಾಫರಿರುವನು. ಈತನು ರಷ್ಯಾದೇಶೀಯನೆಂದು ಇದುವರೆಗೆ ತಿಳಿಯಲ್ಪಟ್ಟಿದ್ದನು. ಬರುಬರುತ್ತ ಅವನು ಜರ್ಮನಿಯವನೆಂಬುದು ಗೊತ್ತಾಗಲು ಅವನನ್ನು ನಿರ್ಬಂಧದಲ್ಲಿಟ್ಟಿರುವರು. ಆತನ ಮೋಟಾರು ಮೊದಲಾದ ಆಸ್ತಿಗಳನ್ನೆಲ್ಲಾ ಸರ್ಕಾರದವರು ವಶಪಡಿಸಿಕೊಂಡರು.

ರಾಜಧಾನಿಯಲ್ಲಿ ಕುಂಟರು ಕುರುಡರು ಮೊದಲಾದ ಅನಾಥರಿಗೆ ಭಿಕ್ಷೆಹುಟ್ಟದಿರುವ ಈ ದುಷ್ಕಾಲದಲ್ಲಿ ಸಾಧ್ಯವಾದಮಟ್ಟಿಗೆ ಹಿಟ್ಟುಬಟ್ಟೆಗಳನ್ನು ಸಹಾಯ ಮಾಡುವುದಕ್ಕಾಗಿ ಮ್ಯುನಿಸಿಪಾಲಿಟಿಯಿಂದಲೂ ಧಾರ್ಮಿಕರ ಚಂದಾಧನದಿಂದಲೂ ಒಂದು ಏರ್ಪಾಟನ್ನು ಮಾಡಲು ನಮ್ಮ ಮ್ಯು|| ಪ್ರೆಸಿಡೆಂಟರು ಯೋಚಿಸಿರುವುದು ಪ್ರಶಂಸನೀಯವಾಗಿದೆ.

ಅನಾವೃಷ್ಟಿಯ ನಿವಾರಣಾರ್ಥವಾಗಿ ಚಿತ್ರದುರ್ಗದ ಶ್ರೀ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಬೃಹನ್ಮಠದಲ್ಲಿ ನಡೆಯುತ್ತಿದ್ದ ರುದ್ರಾಭಿಷೇಕ ಸಂತರ್ಪಣೆ ಮೊದಲಾದುವುಗಳು ವಿಧ್ಯುಕ್ತಪ್ರಕಾರ ನಡೆದು ಪೂರೈಸಿದ ೧ ವಾರದೊಳಗೆ ಎಲ್ಲಕಡೆಯೂ ಮಳೆಬೀಳುವುದಕ್ಕೆ ಪ್ರಾರಂಭವಾಗಿರುವುದು. ಸತ್ಕರ್ಮಗಳು ಶುಭಫಲಗಳನ್ನು ಕೊಡದೆ ಎಂದಿಗೂ ನಿರರ್ಥಕವಾಗಲಾರವೆಂದು ಅಲ್ಲಿಯ ವೃತ್ತಾಂತರತ್ನಾಕರ ಪತ್ರಿಕೆಯು ಹೇಳಿರುತ್ತದೆ.

ಮೈಸೂರಿನ ಪಂಚಮಬೋರ್ಡಿಂಗ್ ಸ್ಕೂಲು ಕನ್ನಡ ಹೈಸ್ಕೂಲಾಗಿಯೂ ಆಂಗ್ಲೋವರ್ನಾಕ್ಯುಲರ್ ಸ್ಕೂಲಾಗಿಯೂ ಸರ್ಕಾರದಿಂದ ಅಭಿವೃದ್ಧಿಗೊಳಿಸಲ್ಪಟ್ಟಿರುವುದರಿಂದ ಕನ್ನಡ ಹೈಸ್ಕೂಲು ತರಗತಿಯಲ್ಲಿ ವ್ಯಾಸಂಗಮಾಡಲು ಲೋವರ್‌ಸೆಕೆಂಡರಿ ಪರೀಕ್ಷೆ ಕೊಟ್ಟಿರುವ ೨೦ ಪಂಚಮ ಮತ್ತು ಇತರ ಹೀನದೆಶೆಯಲ್ಲಿರುವ ವಿದ್ಯಾರ್ಥಿಗಳು ತೆಗೆದುಕೊಳ್ಳಲ್ಪಡುತ್ತಾರಾದಪ್ರಯುಕ್ತ ಇಷ್ಟವುಳ್ಳವರು ಈ ಸ್ಕೂಲಿನ ಸೆಕ್ರೆಟರಿಯವರಿಗೆ ಕೂಡಲೇ ಅಪ್ಲಿಕೇಷನ್ ಕಳುಹತಕ್ಕದ್ದು. ಈ ವಿದ್ಯಾರ್ಥಿಗಳಿಗೆ ಅನ್ನಬಟ್ಟೆಗಳು ಸರ್ಕಾರದಿಂದ ಉಚಿತವಾಗಿ ಕೊಡಲ್ಪಡುವುವೆಂದು ಸೆಕ್ರೆಟರಿಯವರು ಈ ಪತ್ರಿಕಾದ್ವಾರಾ ತಿಳಿಸುತ್ತಾರೆ.

ರಾಜಧಾನಿಯ ಮ್ಯುನ್ಸಿಪಾಲಿಟಿಗೆ ಹೊಸ ವೈಸ್‌ಪ್ರೆಸಿಡೆಂಟರನ್ನು ಕೌನ್ಸಿಲರಲ್ಲೇ ಆರಿಸುವುದಕ್ಕಾಗಿ ಮಾಡಿದ ಪ್ರಯತ್ನದಿಂದ ಆದ ಫಲಿತಾಂಶವು ಗೊತ್ತಾಗಿದೆಯಷ್ಟೆ. ಆದರೆ ಕಳೆದವಾರ ನಡೆದ ಮ್ಯು|| ಮೀಟಿಂಗಿನಲ್ಲಿ ಈಗ ಹೊಸದಾಗಿ ಬಂದಿರುವ ಮ್ಯು|| ವಿಧಿಪ್ರಕಾರ ಇನ್ನೊಂದುಸಲ ವೈಸ್‌ಪ್ರೆಸಿಡೆಂಟರ ಆರಿಸುವಿಕೆ ಮಾಡಲು ಗೌರ್ನಮೆಂಟಿನವರನ್ನು ಪ್ರಾರ್ಥಿಸಬೇಕೆಂದು ಕೆಲ ಕೌನ್ಸಿಲರು ಅಭಿಪ್ರಾಯಪಟ್ಟರೆಂದು ಕೇಳುತ್ತೇವೆ. ಮೊದಲು ನಡೆದ ಆರಿಸುವಿಕೆಯಲ್ಲಿ ನ್ಯೂನತೆಯೇನೂ ಕಂಡುಬಂದಿಲ್ಲವಾಗಿ ಅದರಮೇಲೆ ಮತ್ತೊಂದುಸಲ ಆರಿಸುವಿಕೆಗೆ ಅಪ್ಪಣೆಮಾಡಲು ವಿಧಿಪ್ರಕಾರ ಅವಕಾಶವೇ ಇರುವುದಿಲ್ಲ. ಗೌರ್ನಮೆಂಟಿನವರು ಅದಕ್ಕೆ ಅನುಮೋದಿಸಲಾರರೆಂದು ಕಾಣುತ್ತದೆ. ನಾಮಿನೇಷನ್ ಮಾಡುವುದೊಂದೇ ಈಗ ಉಳಿದಿರುವುದು. ಒಂದುವೇಳೆ ಮತ್ತೆ ಅವಕಾಶ ದೊರೆದರೂ ಕೌನ್ಸಿಲರು ಮರೆಯಿಸಿಕೊಂಡ ತಮ್ಮ ಅನೈಕಮತ್ಯಕೀರ್ತಿಯನ್ನು ಈಗ ಸರಿಪಡಿಸಿಕೊಳ್ಳಬಲ್ಲರೆ?

ರಾಜಧಾನಿಯ ಮ್ಯುನ್ಸಿಪಲ್ ಪ್ರೆಸಿಡೆಂಟರು ದೇಶರಕ್ಷಣಶಾಸನ ಪ್ರಕಾರ ಒದಗಿರುವ ಅಧಿಕಾರದಮೇಲೆ ಪ್ರಕಟನಪತ್ರಿಕೆಗಳನ್ನು ಹಂಚಿ, ಬತ್ತ, ಅಕ್ಕಿ ರಾಗಿಗಳನ್ನು ದಾಸ್ತಾನಿಟ್ಟಿರುವವರೆಲ್ಲಾ ತಮ್ಮಲ್ಲಿ ಅವು ಎಷ್ಟೆಷ್ಟಿವೆಯೋ ಅದನ್ನು ಯಥಾರ್ಥವಾಗಿ ವಿವರಿಸಿ ಬರೆದುಕೊಡಬೇಕೆಂದೂ, ಹಾಗೆ ಮಾಡದೆ ತಪ್ಪಿದವರು ೬ ತಿಂಗಳ ಕಾರಾಗೃಹವಾಸ, ಅಥವಾ ೧ ಸಾವಿರ ರೂ. ಗಳೊಳಗಿನ ಅರ್ಥದಂಡಕ್ಕೆ ಗುರಿಯಾಗಬೇಕಾಗುವುದೆಂದೂ, ಮತ್ತೂ ಮೈಸೂರು ಡಿಸ್ಟ್ರಿಕ್ಟಿನಲ್ಲೂ ಮೈಸೂರುಪಟ್ಟಣದಲ್ಲೂ ವ್ಯಾಪಾರಗಾರರು ೨ ನೆ ತರದ ದಪ್ಪಬತ್ತ ಅಂದರೆ ಕೆಂಬುತ್ತ, ಕಡ್ಡಿ, ಅಲ್ಲಬತ್ತಲು—ಈ ಜಾತಿಯವುಗಳನ್ನು ೧೮೦ ಸೇರಿನ ಖಂಡಿ ೧ ಕ್ಕೆ ೧೪ ರೂ. ನಂತೆಯೂ, ೨ ನೆ ತರದ ಅಕ್ಕಿಯನ್ನು ರೂ. ಗೆ ೬ ಸೇರಿನಂತೆಯೂ, ರಾಗಿ ಉತ್ತಮತರವಾದುದು ೬೮೦ ಸೇರಿನ ಖಂಡಿ ೧ ಕ್ಕೆ ೩೨ ರೂ. (ಮ್ಯುನ್ಸಿಪಾಲಿಟಿಯಿಂದ ರಾಗಿಯು ಒದಗಿಸಲ್ಪಡುತ್ತಿರುವುದರಿಂದ) ಚಿಲ್ಲರೆಯಾಗಿ ರೂ. ೧ ಕ್ಕೆ ೧೨ ಸೇರಿನಂತೆ ಮಾರಾಟಮಾಡಬೇಕೆಂದೂ, ಇದಕ್ಕೆ ವಿರುದ್ಧವಾಗಿ ಹೆಚ್ಚು ಬೆಲೆಗೆ ಮಾರಿದವರು ಕೂಡ ಮೇಲೆ ಹೇಳಿದಂತೆ ಕಾರಾಗೃಹವಾಸಕ್ಕೆ ಅರ್ಥದಂಡಗಳಿಗೆ ಗುರಿಯಾಗಬೇಕಾಗುವುದಲ್ಲದೆ, ವಿರುದ್ಧವಾದ ಬೆಲೆಯಿಂದ ಮಾರಿದ ಧಾನ್ಯದಿಂದ ಎಷ್ಟು ಹಣವು ಬಂದಿರುವುದೋ ಅದಕ್ಕೆ ಮೂರರಷ್ಟು ದಂಡವನ್ನು ತೆರಲೂ ಬದ್ಧರಾಗಬೇಕಾಗುವುದೆಂದೂ ಪ್ರಕಟಿಸಿದ್ದಾರೆ. ಮತ್ತೂ ಮ್ಯು|| ಪ್ರೆಸಿಡೆಂಟರಿಂದ ಅಪ್ಪಣೆಪತ್ರವನ್ನು ಪಡೆಯದೆ ಯಾರೊಬ್ಬರೂ ರಾಜಧಾನಿಯಿಂದ ಹೊರಕ್ಕೆ ಮೇಲೆ ಕಂಡ ಧಾನ್ಯಗಳನ್ನು ಸಾಗಿಸಬಾರದೆಂದೂ ವಿಧಿಸಿದ್ದಾರೆ. ಈ ಏರ್ಪಾಟಿನಿಂದ ರಾಜಧಾನಿಯ ನಿವಾಸಿಗಳಿಗೆ ಎಷ್ಟೋ ಉಪಕಾರವಾಯಿತೆಂಬುದರಲ್ಲಿ ಸಂಶಯವಿಲ್ಲ. ಅದುಕಾರಣ ಇದಕ್ಕೆ ಮೂಲಭೂತರಾದ ಸರ್ಕಾರದವರಿಗೂ ಸ್ಥಳಾಧಿಕಾರಿಗಳಿಗೂ ಮ್ಯು|| ಕಮಿಷನರ್ ಮೊದಲಾದ ಪುರಪ್ರಮುಖರಿಗೂ ಪ್ರಜೆಗಳೆಲ್ಲಾ ಕೃತಜ್ಞರಾಗಿರುವರು. ಮೇಲ್ಕಂಡ ರೀತಿಯಲ್ಲಿ ಏರ್ಪಡಿಸುವುದಕ್ಕೆ ಸರ್ಕಾರದವರಿಗೆ ಮುಖ್ಯವಾದ ಸಂದರ್ಭವುಂಟಾಗಿರುವುದನ್ನು ವರ್ತಕರೂ ಧಾನ್ಯಗಳನ್ನು ದಾಸ್ತಾನಿಟ್ಟಿರುವವರೂ ಗಮನಿಸಿ ಸಹಾಯಕತನದಿಂದ ನಡೆದು, ಯಶಃಪುಣ್ಯಗಳಿಗೆ ಭಾಗಿಗಳಾಗಬೇಕು.

ಭರತಖಂಡದ ವೃತ್ತಾಂತಗಳು.

ಧಾರವಾಡಪ್ರಾಂತದಲ್ಲಿ ಹಸ್ತದ ಮಳೆಯು ಚನ್ನಾಗಿ ನಡೆದಿದೆ. ನೂತನ ವಿಷಜ್ವರದಿಂದ ಆ ಪಟ್ಟಣದಲ್ಲಿ ದಿನಕ್ಕೆ ೧೦ ಮಂದಿಗಳವರೆಗೂ ಸಾಯುತ್ತಿರುವರಂತೆ.

ಭರತಖಂಡದಲ್ಲಿ ಸಿಂಕೋನಾ ಗಿಡಗಳ ಸಂಖ್ಯೆಯು ಹೆಚ್ಚಾಗಿದ್ದರೂ ಅವುಗಳಿಂದ ಉತ್ಪನ್ನವಾದ ಕ್ವಿನೈನು ಕಳೆದ ವರ್ಷ ೫೫೦೧೮ ಪೌನಾಗಿರಲು, ಈ ವರ್ಷ ೮೨೫೧೩ ಪೌನುಗಳಾಗಿರುತ್ತವೆ.

ಬೊಂಬಾಯಿ ಮ್ಯುನ್ಸಿಪಾಲಿಟಿಯವರು ಸಂಚರಿಸುವ ಧಾನ್ಯದ ಬಂಡಿಗಳನ್ನೇರ್ಪಡಿಸಿ, ಯಾವ ಭಾಗದಲ್ಲಿ ತಗ್ಗಾಗಿ ಧಾನ್ಯಗಳು ಮಾರಲ್ಪಡುತ್ತಿರುವುವೋ ಅಲ್ಲಿಗೆ ಈ ತಮ್ಮ ಬಂಡಿಗಳನ್ನು ಕಳುಹಿಸಿ, ಅಗ್ಗವಾಗಿ ಮಾರಿಸುವುದಕ್ಕೆ ಏರ್ಪಡಿಸಿರುವರು.

ಸರ್ ಜೇಂಸ್‌ಸೇಟ್ ಜೀಜಿಭಾಯಿಯವರೇ ಮೊದಲಾದ ಬೊಂಬಾಯಿ ಪಾರ್ಸಿ ಪ್ರಮುಖರು ಸಭೆಮಾಡಿ ತಮಗೆ ಪ್ರತ್ಯೇಕಪ್ರಾತಿನಿಧ್ಯವು ನೂತನ ರಾಜಕೀಯ ಸಂಸ್ಕರಣದಲ್ಲಿ ಕೊಡಲ್ಪಡಬೇಕೆಂದು ನಿರ್ಧಾರಮಾಡಿ ಪ್ರಭುತ್ವದವರಿಗೆ ಬಿನ್ನಯಿಸಿಕೊಂಡರು.

ಮದ್ರಾಸಿನಲ್ಲಿರುವ ಮಹಮ್ಮದೀಯ ಪ್ರಮುಖರು ಅಲ್ಲಿಯ ಟೌನ್ ಹಾಲಿನಲ್ಲಿ ಬಹಿರಂಗ ಸಭೆಗೂಡಿ, ಸಾಮ್ರಾಜ್ಯಶಾಸನ ಪ್ರಾಂತಿಕಶಾಸನ ಸಭೆಗಳಲ್ಲಿ ತಮ್ಮ ಮತಕ್ಕೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟಿರುವಂತೆ ಮದ್ರಾಸು ಮ್ಯುನ್ಸಿಪಲ್ ಕೌನ್ಸಿಲಿನಲ್ಲೂ ತಮ್ಮ ಮತಕ್ಕೆ ಪ್ರತ್ಯೇಕ ಪ್ರಾತಿನಿಧ್ಯವಿರುವಂತೆ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಧಾರವನ್ನು ಮಾಡಿದರು.

ಮದರಾಸು ಅಧಿಪತ್ಯದಲ್ಲಿ ಕಳೆದ ತಿಂಗಳಲ್ಲಿ ಹಲವುಕಡೆ ಲೂಟಿಗಳಾದುವಷ್ಟೆ. ಈ ಸಂಬಂಧವಾಗಿ ಅಲ್ಲಿಯ ಪ್ರಭುತ್ವದವರು ವಿಚಾರಣೆ ನಡೆಯಿಸಿ ಬಂದ ವರದಿಯ ಮೇಲೆ ತಮ್ಮ ಅಪ್ಪಣೆಯೊಂದನ್ನು ಪ್ರಕಟಿಸಿರುವುದರಲ್ಲಿ ಈ ಲೂಟಿಗೆ ಕೇವಲ ಕ್ಷಾಮದ ಹಾವಳಿಯೇ ಕಾರಣವಲ್ಲವೆಂತಲೂ, ಸರ್ಕಾರದ ದರ್ಪಕ್ಕೆ ಭಂಗ ತಂದು ಸರ್ಕಾರದ ವಿಷಯದಲ್ಲಿ ಪ್ರಜಾಸಾಮಾನ್ಯರ ಮನಸ್ಸನ್ನು ಕೆಡಿಸಬೇಕೆಂಬುದ್ದೇಶದಿಂದ ಕೆಲವರು ಕೆಲಕಾಲದಿಂದ ನಡೆಸುತ್ತ ಬರುತ್ತಿರುವ ಆಂದೋಳನವು ಕೂಡ ಬಲುಮಟ್ಟಿಗೆ ಕಾರಣವೆಂತಲೂ, ಹೊಟ್ಟೆಗಿಲ್ಲದವರೇ ಈ ಲೂಟಿಯನ್ನು ಮಾಡಿದ್ದರೆ ಅಂಗಡಿಯ ಸಾಮಗ್ರಿಗಳನ್ನು ಬೀದಿಗೆ ಚೆಲ್ಲಿಬಿಡುತ್ತಿರಲಿಲ್ಲವೆಂತಲೂ, ಆಹಾರ್ಯವಸ್ತುಗಳು ಸಮೃದ್ಧವಾಗಿ ಒದಗುವುದಕ್ಕೆ ಸರ್ಕಾರದವರು ತಕ್ಕ ಏರ್ಪಾಟನ್ನು ಮಾಡುವರೆಂತಲೂ ಹೇಳಿರುತ್ತಾರೆ. ಸರ್ಕಾರದ ಈ ಅಭಿಪ್ರಾಯದಲ್ಲಿ ಸತ್ಯಾಂಶವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಮಧುರೆಯಲ್ಲಿ ನೆಯ್ಗೆಯಂತ್ರಾಲಯದ ಕೂಲಿಗಾರರಿಗೆ ದುರುಪದೇಶ ಮಾಡಿದ ಕಾರಣ ರಾಜದ್ರೋಹದ ಅಪರಾಧದ ಮೇಲೆ ವರದರಾಜುಲು ನಾಯಡುರವರು ಅಲ್ಲಿಯ ಸಬ್‌ಡಿವಿಜನಲ್ ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ. ಕಳೆದ ತಾ|| ೨೬ ರಲ್ಲಿ ಕೋರ್ಟಿನಲ್ಲಿ ವಿಚಾರಣೆ ನಡೆಯುವಾಗ್ಗೆ ನೋಡುವುದಕ್ಕಾಗಿ ಹತ್ತಿಪ್ಪತ್ತು ಸಾವಿರ ಜನರು ಕೂಡಿ ಆವರಣದ ಸುತ್ತಲೂ ಮುತ್ತಿ ಹೋಗುವುದಕ್ಕೂ ದಾರಿಕೊಡದೆ, ವಂದೇಮಾತರಂ ಮೊದಲಾದ ಕೂಗುಗಳನ್ನು ಹಾಕುತ್ತ ಬಹುಗದ್ದಲ ಮಾಡುತ್ತಿದ್ದುದರಿಂದ ಪೊಲೀಸರೂ ಸೈನಿಕರೂ ಅಲ್ಲಿಗೆಬಂದು ಹಿತವಚನಗಳಿಂದ ದೊಂಬಿಗಾರರು ಸರಿಯದೆ ಹೋದಕಾರಣ ಗುಂಡುಗಳನ್ನು ಪ್ರಯೋಗಿಸಬೇಕಾಗಿ ಬಂದಿತು. ಕೋರ್ಟಿನ ಮಾಡದಮೇಲೆ ೧ ಮಿಷನ್ ಫಿರಂಗಿಯೂ ಏರಿಸಲ್ಪಟ್ಟಿದ್ದಿತು. ಗುಂಪಿನ ಜನರು ಇಟ್ಟಿಗೆ ಕಲ್ಲು ಮೊದಲಾದುವುಗಳನ್ನು ಸರ್ಕಾರದ ಜನರಮೇಲೆ ಪ್ರಯೋಗಿಸಿದರು. ಉಭಯಪಕ್ಷದಲ್ಲೂ ಅನೇಕರಿಗೆ ಗಾಯಗಳಾದುವು. ಒಬ್ಬ ಪೋಲೀಸಾಳು ಸತ್ತನು. ಒಬ್ಬ ಗುಜರಾತಿ ಯುವಕನು ಬಲವಾದ ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟು ರಾತ್ರಿ ಅಲ್ಲಿ ಸತ್ತನು.

ಸದ್ಯ! ಬಟ್ಟೆಗಳ ಬೆಲೆ ಹೆಚ್ಚಿಹೋಗಿರುವುದರ ಸಂಕಟವನ್ನು ಬಡಪ್ರಜೆಗಳಿಗೆ ಹೇಗಾದರೂ ಸಾಧ್ಯವಾದಮಟ್ಟಿಗೆ ತಪ್ಪಿಸಬೇಕೆಂದು ಇಂಡ್ಯಾ ಸರ್ಕಾರದವರು ಬಹಳ ಪ್ರಯತ್ನಮಾಡುತ್ತಿದ್ದಾರೆ. ಈಗ ದೇಶದಲ್ಲಿ ಎಷ್ಟು ಬಟ್ಟೆಬರೆಗಳಿವೆಯೆಂಬುದನ್ನು ಪರಿಶೋಧಿಸಿ ಸಾಲದಿದ್ದುವುಗಳನ್ನು ಹೊಸದಾಗಿ ನೆಯ್ಸಬೇಕೆಂದು ಅವರು ಉದ್ದೇಶಪಟ್ಟು ಮುಖ್ಯಮುಖ್ಯ ಪಟ್ಟಣಗಳಲ್ಲಿನ ಚಿಲ್ಲರೆ ವರ್ತಕರನ್ನು ಬಟ್ಟೆ ಲೇವೆಗಳ ಉಗ್ರಾಣ ಮೊದಲಾದುವುಗಳಲ್ಲಿದ್ದ ಬಟ್ಟೆಗಳನ್ನು ಶೋಧನೆ ಮಾಡಿಸಲಾಗಿ ಈ ಕೆಳಗೆ ಕಂಡಂತೆ ವಿವರವು ಗೊತ್ತಾಗಿರುವುದು.

ಪಟ್ಟಣಗಳು	ಗೋಡುವೆ ಬಣ್ಣದ ಬಟ್ಟೆ	ಒಗೆದ ಬಿಳೀ ಬಟ್ಟೆ	ರಂಗಿನ ಬಟ್ಟೆ	ಕೋರಾ ಬಟ್ಟೆ
	ಗಜ	ಗಜ	ಗಜ	ಗಜ
ಕಲ್ಕತ್ತಾ	328449000	140292000	57675850	
ಬೊಂಬಾಯಿ	10314350	52446000	133326500	2416500
ರಂಗೂನು	7414142	21940866	27853243	577609
ಮದ್ರಾಸು	20981000	16536000	28026000	431000
ಕರಾಚಿ	17025000	71192000	37348500	357000
ದಿಲ್ಲಿ	5041500	17742500	25046000	2512000
ಅಮೃತಸರ	5838706	19280605	10788228	

ಈ ಮೇಲೆ ವಿವರಿಸಲ್ಪಟ್ಟಿರುವುವು ಮಾತ್ರವೇ ಅಲ್ಲದೆ ಬೊಂಬಾಯಿ ಪೋರ್ಟ್‌ಟ್ರಸ್ಟ್ ವೇರ್ ಹೌಸಿನಲ್ಲಿ 119310000 ಗಜಗಳ ಬಟ್ಟೆಯೂ, ಕರಾಚಿಯ ಪೋರ್ಟ್‌ಟ್ರಸ್ಟ್ ವೇರ್ ಹೌಸಿನಲ್ಲಿ 13444000 ಗಜಗಳ ಬಟ್ಟೆಯೂ ಇರುವುವು. ಮತ್ತೂ ಇನ್ನೂ 32000000 ಗಜಗಳ ಬಟ್ಟೆಯು ಬರುವುದರಲ್ಲಿರುವುದು. ಈಮೇಲೆ ಕಂಡ ಪಟ್ಟಣಗಳಲ್ಲದೆ ಇತರ ಪಟ್ಟಣಗಳಲ್ಲಿ ನಿಂತಿರುವ ಬಟ್ಟೆಗಳ ಪರಿಮಾಣವನ್ನೆಲ್ಲಾ ತಿಳಿದುಕೊಳ್ಳುವುದನ್ನು ಆಯಾ ಸ್ಥಳದ ಸರ್ಕಾರದವರಿಗೆ ಇಂಡ್ಯಾ ಸರ್ಕಾರದವರು ವಹಿಸಿದ್ದಾರೆ. ಮೇಲೆ ಕಂಡ ವಿವರವನ್ನು ನೋಡಲಾಗಿ ನಮ್ಮ ದೇಶಕ್ಕೆ ಬೇಕಾದಷ್ಟು ಬಟ್ಟೆಬರೆಗಳಿಗೆ ಕೊರತೆಯೇನೂ ಇಲ್ಲವೆಂದು ವ್ಯಕ್ತವಾಗುತ್ತದೆ. ಕೆಲವರ್ತಕರು ಅಧಿಕಲಾಭದ ಮೇಲಿನ ಆಸೆಯಿಂದ ಬಟ್ಟೆಗಳನ್ನು ಮಾರದೆ ಶೇಖರಿಸಿಟ್ಟುಕೊಂಡಿದ್ದಾರೆ. ಹಾಗೆ ಆಗದಿರುವಂತೆ ಮಾಡುವುದಕ್ಕಾಗಿ ಸರ್ಕಾರದವರು ಈ ಪರಿಶೋಧನೆಗಳನ್ನು ನಡೆಯಿಸಿದ್ದಾರೆ. ದೇಶರಕ್ಷಣೆ ಶಾಸನದ ಪ್ರಕಾರ ಬಟ್ಟೆಬರೆ ಬೆಲೆಯನ್ನು [illegible] ನಿಯಮವಾಗಿ ಮಾಡಲು ಸರ್ಕಾರದವರು ಕೃತಸಂಕಲ್ಪರಾಗಿದ್ದಾರೆ.

ವಿದೇಶ ವೃತ್ತಾಂತಗಳು.

ಇದುವರೆಗೆ ಶತ್ರುಗಳ ಸಬ್‌ಮೆರೀನಿನ ಹಾವಳಿಯಿಂದ ಯುದ್ಧ ಸಂಬಂಧವಿಲ್ಲದ ಮಿತ್ರಮಂಡಲಿ ನಾವಿಕರು ೨೦ ಸಾವಿರ ಮಂದಿ ಸತ್ತಿರುತ್ತಾರೆ. ಇವರಲ್ಲಿ ೧೫ ಸಾವಿರ ಮಂದಿ ಇಂಗ್ಲೀಷ್ ನಾವಿಕರೇ ಆಗಿರುತ್ತಾರೆ.

ಚೀನಾದೇಶದಲ್ಲಿ ಗಸಗಸೆಯ ಬೇಸಾಯವನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಡಲು ಪ್ರಯತ್ನಿಸುವೆವೆಂದೂ, ಅಫೀಮನ್ನು ದೇಶೀಯರಾರೂ ತಿನ್ನದಂತೆ ಮಾಡುವೆವೆಂದೂ ಅಲ್ಲಿಯ ಪ್ರೆಸಿಡೆಂಟರು ರೂಟರ್‌ವಾರ್ತಾದಾಯಕನೊಡನೆ ಹೇಳಿದರಂತೆ.

ಬೋಲ್ಷೆವಿಕ್ ಪಕ್ಷದವರು ರಷ್ಯಾದ ಜಾರರನ್ನು ಉರುಲುಹಾಕಿ ಕಾಡಿನಲ್ಲಿ ಶವವನ್ನು ಹೂತುಬಿಟ್ಟಿದ್ದರು. ಈಗ ಜಕೋಸ್ಲಾವಕ್ಕರು ಆ ಶವವನ್ನು ಅಲ್ಲಿಂದ ತೆಗೆದು ವೈಭವದಿಂದ ಉತ್ಸವಮಾಡಿಕೊಂಡು ಹೋಗಿ, ಗೌರವಪುರಸ್ಸರವಾದ ಸಮಯೋಚಾರಗಳನ್ನೆಲ್ಲಾ ನೆರವೇರಿಸಿದರು. ಅದಕ್ಕೆ ತಾತ್ಕಾಲಿಕವಾಗಿ ಓಮಸ್ಕ ಪಟ್ಟಣದಲ್ಲಿ ಸಮಾಧಿಮಾಡುವವರಾಗಿದ್ದಾರೆ.

ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್ನರವರು ಈಸೆ ಯುದ್ಧಋಣವನ್ನು ಕೊಡಿಸುವ ಸಂದರ್ಭದಲ್ಲಿ ಮತ್ತೊಂದು ಅನೋಘವಾದ ದೀರ್ಘ ಭಾಷಣವನ್ನು ಮಾಡಿರುವರು. ಅದು ಜರ್ಮನರ ದುರುದ್ದೇಶ ಸಂಧಿಯ ಕಾಪಟ್ಯ ಮೊದಲಾದುವುಗಳನ್ನೆಲ್ಲಾ ಖಂಡಿಸಿ ಹೀನಯಿಸತಕ್ಕದಾಗಿಯೂ, ಮಿತ್ರಮಂಡಲಿಯವರ ಸದುದ್ದೇಶವನ್ನೂ ಚಿತ್ತಸ್ಥೈರ್ಯವನ್ನೂ ಐಕಮತ್ಯವನ್ನೂ ವ್ಯಕ್ತಪಡಿಸತಕ್ಕದಾಗಿಯೂ, ಪ್ರಪಂಚಕ್ಷೇಮವನ್ನು ಕೋರತಕ್ಕದಾಗಿಯೂ, ಶತ್ರುಗಳ ಎದೆಯನ್ನು ಬಿಂಸತಕ್ಕದಾಗಿಯೂ, ಜಗತ್ತನ್ನೇ ತಲೆದೂಗಿಸತಕ್ಕದಾಗಿಯೂ, ಸ್ವದೇಶೀಯರನ್ನು ಯುದ್ಧಕ್ಕಾಗಿ ಸರ್ವಸ್ವವನ್ನೂ ಸಮರ್ಪಿಸಲು ಪ್ರೋತ್ಸಾಹಿಸತಕ್ಕದಾಗಿಯೂ ಇತ್ತು.

ಬೆಲ್ಜಿಯಂ ದೇಶವು ಪರಿಶ್ರಮಾಭ್ಯುದಯಗಳಿಗೆ ಪ್ರಸಿದ್ಧವಾದುದು. ಅಂತಹ ದೇಶವನ್ನು ಶತ್ರುಗಳು ಸ್ಮಶಾನದಂತೆ ಮಾಡಿದಬಳಿಕ ಅಲ್ಲಿಯ ಜನರು ಹೊಟ್ಟೆಬಟ್ಟೆಗಿಲ್ಲದೆ ದೇಶಾಂತರಗತಿಯಾದರು. ಅವರಲ್ಲಿ ಕೈಗಾರಿಕೆಯೊಳಗೆ ಪ್ರವೀಣರಾದವರನ್ನು ಭರತಖಂಡಕ್ಕೆ ಬರಮಾಡಿಕೊಂಡು ಆಶ್ರಯಕೊಟ್ಟು ಅವರ ಸಾಹಾಯದಿಂದ ಈ ದೇಶದ ಪರಿಶ್ರಮಗಳನ್ನು ಹೆಚ್ಚಿಸುವುದಕ್ಕೆ ಒಳ್ಳೆಯ ಸಮಯವಾಗಿರುವುದೆಂದು ಆ ಕಾಲದಲ್ಲಿಯೇ ಈ ದೇಶದ ಅನೇಕ ಪತ್ರಿಕೆಗಳು ಇಂಡ್ಯಾಸರ್ಕಾರಕ್ಕೆ ಸೂಚನೆಕೊಟ್ಟುವು. ಆದರೆ ಸರ್ಕಾರವು ಅದೇಕೋ ಅತ್ತಕಡೆಗೆ ಗಮನಕೊಡಲಿಲ್ಲ. ಆದರೆ ಜಗದ್ವ್ಯಾಪಿಗಳಾಗುತ್ತಿರುವ ಜಪಾನರು ಮಾತ್ರ ಈ ಸಂಧಿಯನ್ನು ವ್ಯರ್ಥವಾಗಿ ಹೋಗಗೊಡಲಿಲ್ಲ. ಈಗ ಅವರು ದಿಕ್ಕುಗೆಟ್ಟಿರುವ ಬೆಲ್ಜಿಯಮ್ಮನವರನ್ನು ತಮ್ಮ ದೇಶಕ್ಕೆ ಬರಮಾಡಿಕೊಂಡು ಅವರುಗಳಿಗೆ ತಿಳಿದಿರುವ ಪರಿಶ್ರಮಗಳನ್ನು ತಮ್ಮ ದೇಶದಲ್ಲಿ ಅಭಿವೃದ್ಧಿಗೊಳಿಸುತ್ತಲಿರುವರಂತೆ.

ದಸರಾಮಹೋತ್ಸವ.

ಅಕ್ಟೋಬರ್ ತಾ|| ೬ ನೇ ಭಾನುವಾರ ಪ್ರಾತಃಕಾಲ ೮|| ಘಂಟೆಗೆ ತುಲಾಲಗ್ನದಲ್ಲಿ ಸಿಂಹಾಸನಾರೋಹಣ, ದಿವಾನರುಗಳಿಂದಲೂ, ಖಾಸಾ ಅಳಿಯಂದಿರುಗಳಿಂದಲೂ, ಕೌನ್ಸಿಲರುಗಳಿಂದಲೂ, ಇತರ ಸರದಾರರುಗಳು, ಸಿವಿಲ್ ಆಫೀಸರುಗಳು, ಮತ್ತು ಇತರರಿಂದಲೂ ನಜರ್. ಸಾಯಂಕಾಲ ೫ ಘಂಟೆಗೆ ಆನೆ ಕುದುರೆ ಕೆರೆಬಳಿಗೆ ಬಿಜಮಾಡುವುದು, ೭ ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸರುಗಳಿಂದಲೂ ಮತ್ತು ಪೊಲೀಸ್ ಆಫೀಸರುಗಳಿಂದಲೂ ನಜರ್. ತಾ|| ೭ ನೆಯ ಸೋಮವಾರದಿಂದ ತಾ|| ೧೩ ನೆಯ ಭಾನುವಾರದವರೆಗೆ ಪ್ರತಿದಿವಸವೂ ಪ್ರಾತಃಕಾಲ ೮ ಘಂಟೆಗೆ ಆನೆ ಕುದುರೆ ಕೆರೆಬಳಿಗೆ ಬಿಜಮಾಡುವದು, ಸಾಯಂಕಾಲ ೫ ಘಂಟೆಗೆ ಆನೆ ಕುದುರೆ ಕೆರೆಬಳಿಗೆ ಬಿಜಮಾಡುವದು, ೭ ಘಂಟೆಗೆ ದರ್ಬಾರ್. ತಾ|| ೧೪ ನೇ ಸೋಮವಾರ ಪ್ರಾತಃಕಾಲ ೮|| ಘಂಟೆಗೆ ಬೃಹಸ್ಪತಿಕಾಲ ಹೋರೆಯಲ್ಲಿ ಆನೆ ಕುದುರೆ ಮತ್ತು ಆಯುಧ ಕೆರೆಯಿಂದ ಅರಮನೆಗೆ ಬಿಜಮಾಡುವುದು, ಅನಂತರ ಆಯುಧ ಗಜಾಶ್ವಾದಿಗಳ ಪೂಜೆ. ಸಾಯಂಕಾಲ ೭ ಘಂಟೆಗೆ ಇಂಗ್ಲಿಷ್ ದರ್ಬಾರ್. ತಾ|| ೧೫ ನೇ ಮಂಗಳವಾರ ಪ್ರಾತಃಕಾಲ ೭|| ಘಂಟೆಗೆ ತುಲಾಲಗ್ನದಲ್ಲಿ ಆಯುಧ ಗಜಾಶ್ವ ಬನ್ನೀಮಂಟಪಕ್ಕೆ ಬಿಜಮಾಡುವದು, ಅನಂತರ ಜಟ್ಟೀಕಾಳಗ. ಸಾಯಂಕಾಲ ೪ ಘಂಟೆಗೆ ಜಂಬೂಸವಾರಿ, ಅನಂತರ ಅಂಬಾವಿಲಾಸದಲ್ಲಿ ದರ್ಬಾರ್. ತಾ|| ೧೬ ನೇ ಬುಧವಾರ ಸಾಯಂಕಾಲ ೭ ಘಂಟೆಗೆ ಅಂಬಾವಿಲಾಸ[illegible] ದರ್ಬಾರ್, ಸೆಷ್ಟಿ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದಿರುವ [illegible] ಮತ್ತು ಪೊಲೀಸ್ ಆಫೀಸರುಗಳಿಂದಲೂ ಮತ್ತು ಕೆಲವು [illegible]ಗಳಿಂದಲೂ ನಜರ್. ತಾ|| ೧೭ ನೇ ಗುರುವಾರ ಸಾಯಂಕಾಲ ೭ ಘಂಟೆಗೆ ಅಂಬಾವಿಲಾಸದಲ್ಲಿ ದರ್ಬಾರ್, ಉಳಿದ ಪ್ರಜಾಪ್ರತಿನಿಧಿಗಳಿಂದ ನಜರ್.

ಪತ್ರವ್ಯವಹಾರ.

ಒಬ್ಬ ಕೊಡಗು ಡಿ|| ಬೋ|| ಮೆಂಬರಿನ ವಿಜ್ಞಾಪನೆ.

"ಮೈಸೂರು ಸ್ಟಾರ್" ಎಡಿಟರವರ ಸ|| ಕ್ಕೆ.

ಅಯ್ಯಾ !

ಇದರಮೂಲಕ ಕೊಡಗುದೇಶದ ನಂಜರಾಯಪಟ್ಣದ ತಾಲ್ಲೂಕಿನ ನಿವಾಸಿಗಳಿಗೆ ಪ್ರಾರ್ಥಿಸಿಕೊಳ್ಳುವುದೇನೆಂದರೆ:—

ಈ ನಮ್ಮ ಕೊಡಗುದೇಶದಲ್ಲಿಯೂ ಒಂದು ಡಿಸ್ಟ್ರಿಕ್ಟ್‌ಬೋರ್ಡು ಸ್ಥಾಪಿತವಾಗಿರುವದು ಸರ್ವವಿದಿತವಾಗಿಯೇ ಆಗಿ ನಂಬಿದ್ದೇನೆ. ಸದರಿ ಬೋರ್ಡಿಗೆ ಪ್ರತಿ ತಾಲ್ಲೂಕಿನಿಂದಲೂ ಒಬ್ಬೊಬ್ಬ ಖಾಸಗಿ ಮೆಂಬರನ್ನ ಚುನಾಯಿಸುವ ಪದ್ಧತಿ ಇದೆ. ಹಾಗೆ ಚುನಾಯಿಸಲ್ಪಟ್ಟ ಪ್ರತಿಯೊಬ್ಬನೂ 3ವರ್ಷಗಳವರೆಗೆ ಮೆಂಬರಾಗಿರತಕ್ಕದ್ದು. ಅನೇಕ ಈ ನಂಜ್ರಾಯಪಟ್ಣದ ತಾಲೂಕಿಗೆ ಈ ವರ್ಷದಿಂದ ಚಾಲ್ತಿ 3 ವರ್ಷದ ಒಗ್ಗೆ ಜನರ ಪ್ರತಿನಿಧಿಯಾಗಿ ನನ್ನನ್ನ ಚುನಾಯಿಸಿದ್ದಾರೆ. ಈ ಬೋರ್ಡಿನಿಂದಾಗಬೇಕಾದ ಕೆಲಸಗಳು ನಮ್ಮ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಹೇರಳವಾಗಿರಬಹುದು. ಎಲ್ಲೆಲ್ಲಿ ಏನೇನಾಗಬೇಕೆಂಬುದು ನನಗೆ ತಿಳಿಯದು. ಪ್ರತಿಯೊಂದು ಸ್ಥಳಕ್ಕೆ ಹೋಗಿ ಈ ಸಂಗತಿ ತಿಳಿಯುವುದು ಅಸಾಧ್ಯವೆಂಬುದು ಸರ್ವರಿಗೂ ತಿಳಿದದ್ದಾಗಿದೆ. ಅದ್ದರಿಂದ ಎಲ್ಲೆಲ್ಲಿಗೆ ಏನೇನು ಅವಶ್ಯವೆಂಬುದನ್ನು ತಪ್ಪಿಲ್ಲದೆ ಬರೆದಾಗಲಿ ಯಾ ರೂಬರೂಬಾಗಿಯಾಗಲಿ ತಿಳಿಸುತ್ತಾಬಂದಲ್ಲಿ ಅಂಥವುಗಳನ್ನು ನನ್ನ ಕೈಲಾದಮಟ್ಟಿಗೆ ದೇಶಸೇವೆಯೆಂದು ಭಾವಿಸಿ ಸಾಧ್ಯವಿದ್ದು ಬೋರ್ಡಿಗೆ ಹಾಜರು ಪಡಿಸಿ ಚರ್ಚಿಸುವದರ ಮೂಲಕ ಫಲಿತಾಂಶ ಉಂಟು ಆಗಾಗ ಸರ್ವರ ಪರಾಮರ್ಶಕ್ಕೆ ತರಲು ಬದ್ಧಾದರನಾಗಿದ್ದೇನೆ. ಮೇಲ್ಕಂಡಂತೆ ಯಾರೂ ಯಾವ ಸಂಗತಿಯನ್ನು ನನಗೆ ತಿಳಿಸದೆ ನನ್ನ ಮೆಂಬರುತನದ ಅವಧಿಯು ಮುಗಿದ ಬಳಿಕ ವೃಥಾ ಇವನಿಂದ ಏನೂ ಉಪಕಾರವಾಗಲಿಲ್ಲೆಂದು ಹೇಳಿ ದೇಶದ್ರೋಹಿಯೆಂಬ ಅಪವಾದಕ್ಕೆ ನನ್ನನ್ನ ಗುರಿಮಾಡಬಾರದಾಗಿ ಪ್ರಾರ್ಥಿಸಿಕೊಂಡಿದ್ದೇನೆ. ಈ ಸಣ್ಣ ಕೋರಿಕೆಯನ್ನ ನೆರವೇರಿಸುತ್ತಾರಾಗಿ ನಂಬಿದ್ದೇನೆ.

ಎಚ್. ಆರ್. ಸುಬ್ಬಯ್ಯ.

ಪರಮತಸಹನೆ ತೋರಬಾರದೆ?

ಅಯ್ಯಾ !

ಇತ್ತೀಚಿನ ಕೆಲವು ಕಾಲಗಳಿಂದ ಹಿಂದುಳಿದ ಜನಾಂಗದವರು ತಮ್ಮ ಪುರೋಭಿವೃದ್ಧಿಗೋಸ್ಕರ ಮಾಡುತ್ತಿರುವ ಯತ್ನಗಳನ್ನು ಇದಕ್ಕಾಗಿ ತಾವು ಅನುಭವಿಸುತ್ತಿರುವ ಕಷ್ಟನಷ್ಟಗಳನ್ನೂ ಸರ್ಕಾರದವರಿಗೂ ಬ್ರಾಹ್ಮಣರಾದ ಪ್ರಮುಖರಿಗೂ ತಿಳಿಸುತ್ತಿರುವಲ್ಲಿ ಪರೋತ್ಕರ್ಷಾಸಹನೆಯುಳ್ಳ ಕೆಲವರು ಅಸೂಯೆಯಿಂದ ಈ ಯತ್ನಗಳನ್ನು ನಿಂದಿಸುತ್ತಿರುವರು. ಹಿಂದುಳಿದ ಜನಾಂಗದವರ ಕಷ್ಟನಷ್ಟಗಳೆಂದರೆ ಅವರ ಮತಗ್ರಂಥಗಳ ಅಪಾರ್ಥ, ಅನೇಕ ಮಹನೀಯರುಗಳ ನಿಂದನೆ, ಮುಂದುವರಿಯಲು ಇದ್ದ ಅಸಾನುಕೂಲಗಳು, ಇವೇ ಮೊದಲಾದುವು. ಯಾವಸಮಾಜವೇ ಆಗಲಿ ಯಾವದೇಶವೇ ಆಗಲಿ ಅದು ತನ್ನ ಹಿಂದಿನಚರಿತ್ರೆಯಲ್ಲಿನ ಶ್ರೇಷ್ಠತರವಾದ ಉದಾಹರಣೆಗಳಿಂದ ಶೌರ್ಯವನ್ನೂ, ಗಾಂಭೀರ್ಯವನ್ನೂ ಪಡೆದುಕೊಂಡು ತನ್ನ ಮುಂದಣ ಪುರೋಭಿವೃದ್ಧಿಯನ್ನು ಮಾಡಿಕೊಳ್ಳಬೇಕೆಂಬ ತತ್ತ್ವವು ಜನಜನಿತವಾದುದು. ಇದರಂತೆಯೇ ನಾವು ಮುಂದುವರಿಯಬೇಕಾದರೆ ನಮ್ಮ ಪೂರ್ವಜರ ಚರಿತ್ರೆಗಳನ್ನೂ, ಅವರು ಮಾಡಿದ ಸಾಹಸಕಾರ್ಯಗಳನ್ನೂ ತಿಳಿದುಕೊಂಡು ಅವರಂತೆಯೇ ನಾವು ಆಗಬೇಕೆಂಬ ಉದ್ದೇಶವನ್ನಿಟ್ಟು ಯತ್ನಗೈಯ್ಯಬೇಕು. ಆದರೆ ಇಂಥ ನಮ್ಮ ಪೂರ್ವಜರ ವೃತ್ತಾಂತವನ್ನೂ ನಮ್ಮ ಮತವಿಷಯಗಳನ್ನೂ ತಿಳಿಸತಕ್ಕ ಮತಗ್ರಂಥಗಳನ್ನು ತಪ್ಪುತಪ್ಪಾಗಿ ಬರೆದು ನಮ್ಮ ಯಾವತ್ತು ಪೂರ್ವವೃತ್ತಾಂತ ವಿಷಯದಲ್ಲಿ ನಮಗೆ ತಪ್ಪುತಿಳಿವಳಿಕೆಯಾಗುವಂತೆ ಮಾಡಿದರೆ ನಾವು ಮುಂದುವರಿಯುವ ಬಗೆಹೇಗೆ? ನಮ್ಮ ಮಹನೀಯರುಗಳ ನಮ್ಮ ಶ್ರೇಷ್ಠಕವಿಗಳ ನಮ್ಮ ವಿದ್ವನ್ಮಣಿಗಳೇ ಮೊದಲಾದವರ ಜೀವನಚರಿತೆಯೂ, ಅವರ ಮಹಚ್ಛಾಸ್ತ್ರಗಳ ವಿಷಯವೂ ನಮ್ಮ ಬಾಲಬಾಲಕಿಯರಿಗೆ ತಿಳಿಯದಿದ್ದರೆ ನಮ್ಮ ಭಾವೀಸಮಾಜವು ಯಾವ ಸ್ಥಿತಿಯನ್ನು ಹೊಂದೀತು? ನಮ್ಮ ಬಾಲಬಾಲಿಕೆಯರು ಸರ್ಕಾರೀ ಪಾಠಶಾಲೆಗಳಿಗೆ ಹೋಗುತ್ತಿದ್ದಾರೆ. ಪಠ್ಯಪುಸ್ತಕಗಳಲ್ಲಿ ಬರೀ ಒಂದೇ ವರ್ಗದವರ ಸಾಹಸಕಾರ್ಯಗಳ ಕವಿಗಳ ಮಹನೀಯರ ವಿಷಯಗಳನ್ನು ಓದುತ್ತಿರುವರೇ ಹೊರತು, ಎಲ್ಲಾ ಸಮಾಜಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಓದುತ್ತಾ ಇಲ್ಲ. ಮತ್ತು ನಮ್ಮ ಗ್ರಂಥಗಳ ಅಪಾರ್ಥವಿಷಯದಲ್ಲೋ? ಅದನ್ನು ಹೇಳತೀರದು. ಹಿಂದೆ ವಿದ್ಯಾಭ್ಯಾಸ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರಾದ ಎಂ. ಶಾಮರಾಯರು ಮಹೀಶೂರುಚರಿತೆ, ಸಾರವೆಂಬ ಪುಸ್ತಕವನ್ನು ಬರೆದು ಇದನ್ನು ಕನ್ನಡ ಎರಡನೇತರಗತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವನ್ನಾಗಿ ಗೊತ್ತುಮಾಡಿರುವರು. ಅದರಲ್ಲಿ ಪಶ್ಚಿಮಚಾಳುಕ್ಯ ಶತವಾನದಲ್ಲಿ ಬಸವನೆಂಬ ಆರಾಧ್ಯ ಬ್ರಾಹ್ಮಣನೊಬ್ಬನು ಲಿಂಗಾಯತ ಮತವನ್ನು ಸ್ಥಾಪಿಸಿದನು, ಎಂದು ಬರೆದಿರುವರು. ಇವರು ಯಾವಗ್ರಂಥಗಳ ಆಧಾರದಿಂದ ಬರೆದರು? ಯಾರಾದರೂ ಯೋಗ್ಯರಾದ ಮಹನೀಯರನ್ನು ವಿಚಾರಿಸಿದರೆ, ಇದನ್ನು ಬರೆಯುವುದರಲ್ಲಿ ಇವರ ನಿಜವಾದ ಅಭಿಪ್ರಾಯವೇನಿತ್ತು? ಈ ಪುಸ್ತಕವನ್ನು ಓದುವ ಲಿಂಗಾಯತ ವಿದ್ಯಾರ್ಥಿಗಳು ತಮ್ಮ ಸಮಾಜ ವಿಷಯದಲ್ಲಿ ಎಷ್ಟು ಕೀಳಾದ ಅಭಿಪ್ರಾಯವನ್ನಿಟ್ಟುಕೊಳ್ಳುವರು. ಇದರಿಂದ ಸಮಾಜ ಛಿನ್ನಭಿನ್ನವಾಗುವುದು? ನಡೆಸುಕೋಪವಾಗಿಗೆ ಮುದಭಳಿಕೆಯೇನು? ಇನ್ನಾದರೂ ಸರಿಯಾಗಿ ನಡೆಸಿಕೊಳ್ಳುವ ಎಂದು ಇವರು ಹೇಳಲವಕಾಶಕ್ಕೆ ಅಲಕ್ಷ್ಯಕೊಡೋಣವೆಂದರೆ ಅದರಲ್ಲಿ ಗಿಜಾಂಕಿತನ್ನಂತೆ ತೋರುವುದಿಲ್ಲ. ಏತಕ್ಕೆಂದರೆ ಕಳೆದವರ್ಷ ದಾವಣಗೆರೆಯಲ್ಲಿ ನಡೆದ ಮಹಾಸಭೆಯ ಅಧ್ಯಕ್ಷರಾದ ಮತ್ತು ಬ್ರಾಹ್ಮಣಪ್ರಿಯರಾದ ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಬಸವೇಶ್ವರನು ವೀರಶೈವಮತಸ್ಥಾಪಕನೆಂಬ ವಿಷಯವನ್ನು ಸಿದ್ಧಾಂತಪೂರ್ವಕವಾಗಿ ಖಂಡಿಸಿದರು. ಇನ್ನುಮೇಲಾದರೂ ತಪ್ಪುಬರವಣಿಗೆಗಳು ಬರೆಯಲ್ಪಡುವುದಿಲ್ಲವೆಂದು ನಿರೀಕ್ಷಿಸಲ್ಪಟ್ಟಿತ್ತು. ಆದರೆ ಆಕಾಶವು, ಭೂಮಿಯು ಇವೆರಡೂ ಸ್ವಲ್ಪ ದೂರದಲ್ಲಿಯೇ ಕೂಡಿವೆಯೆಂದು ತಿಳಿದು ಅದನ್ನು ಮುಟ್ಟಿನೋಡಬೇಕೆಂದು ಹೋಗುವ ಮನುಷ್ಯನೋಪಾದಿಯಲ್ಲಿ ನಮ್ಮ ಸ್ಥಿತಿಯಾಯಿತು. ಮಾಚಿಕ ಶಿಂಗಳಲ್ಲಿ ಪ್ರಸಿದ್ಧಪಡಿಸಿದ ಕನ್ನಡ ಸಾಹಿತ್ಯಪರಿಷತ್ ಪತ್ರಿಕೆಯ ಜನವರಿ ಸಂಚಿಕೆಯಲ್ಲಿ ಮ|| ರಾ|| ರಘುನಾಥರಾಯರು ಕನ್ನಡಭಾಷೆಯ ಹೆಸರು ರುತುಗಳು ಎಂಬ ಲೇಖನದಲ್ಲಿ ವೀರಶೈವಮತಸ್ಥಾಪಕನಾದ ಬಸವನು ಎಂದು ಬರೆದಿರುವರು? ಅಂದಮೇಲೆ ಇವರ ನಿಜವಾದ ಅಭಿಪ್ರಾಯವೇನು? ಇಷ್ಟಲ್ಲದೆ ಕಳೆದವರ್ಷ ಲಿಂಗಾಯತ ಮಹಾಸಭೆಯಲ್ಲಿ ಸಾಹಿತ್ಯ ಸಂಪದಭ್ಯುದಯಗಳಲ್ಲಿ ಪ್ರಕಟಿಸಲ್ಪಟ್ಟ ಲೇಖನಗಳ ವಿಷಯವು ವಾಚಕರಿಗೆಲ್ಲಾ ಗೊತ್ತೇ ಇದೆ. ಎಮ್. ಶಾಮರಾಯರು ಜಿ. ಎಲ್. ಚಕ್ರವರ್ತಿಯವರು ಮತ್ತು ಇನ್ನು ಕೆಲವರು ಸೇರಿ ಸಮೂಹವಾಗಿ ಮೈಸೂರುಚರಿತ್ರೆಯೊಂದನ್ನು ಬರೆಯಲು ಸರ್ಕಾರದವರಿಂದ ನಿಯಮಿಸಲ್ಪಟ್ಟಿರುವರೆಂದು ಗೊತ್ತಾಗುತ್ತದೆ. ಈಗಲಾದರೂ ಈ ಚರಿತ್ರೆಯು ವೀರಶೈವಮತದ ವಿಷಯದಲ್ಲಿ ತಪ್ಪು ಅಭಿಪ್ರಾಯವನ್ನು ಕೊಡದೆ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಕೊಡುವಂತೆ ಮಾಡುವರೆಂದು ನಂಬಿ ನಿರೀಕ್ಷಿಸುವೆವು. ಈಗಲಾದರೂ ಪರಮತಸಹನೆಯೂ ನಿರ್ದುಷ್ಟವಿಚಾರವೂ ಹೊರಬೀಳಲಿ.

ಮತಾಭಿಮಾನಿ

ರಾ|| ಬ|| ನಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅತ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

6 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ದುಡ್ಡಿಗೆ ದುಡ್ಡು ಲಾಭ!

ಪಡೆದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ
ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿತ ಹುರುಕಿನಔಷಧ—ಬೆಲೆ ೧ಕ್ಕೆ ೧೮. ೨೫ಕ್ಕೆ ೧-೪-೦.
೨. ಕಣ್ಣುಬೇನೆಯಔಷಧ— ಬೀಟು-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇಮಶೀರುನಾಶಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಲ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂದಕ್ಕೆ ಚದುರೊಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲ ೧ ಕ್ಕೆ ೧೨ ಆಣೆ.
೧೦. ಸೀಳು ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
41 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 42

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯ್‌ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ! ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತವಾತಿಗೂ ವೈದ್ಯರ ಸಮಯವನ್ನು ಕಾದು ನೊಂದಿರುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗನೋಬೇನೆ, ಬಲಹೀನತೆ, ಕಟ್ಟಿಕಾವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಸೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದೇ ? ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೦ ಮಾತ್ರೆಗಳುಳ್ಳ ಬುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಲ್. ಎಮ್. ಇನ್ಸ್ಟಿಟ್ಯೂಟ್ ಆಫ್‌ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಡಿ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು,

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಳೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ನಿತ್ಯನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿಯುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರುಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಅನಾರೋಗ್ಯ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೆ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ಸದ್ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಅಕ್ಟೋಬರ್ ತಾ|| ೬ ರಿಂದ ೧೯೧೮ ನೆಯ ಅಕ್ಟೋಬರ್ ತಾ|| ೧೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಶ್ವಯುಜ ಶು|| ಪಾಡ್ಯಮಿಯಿಂದ ಆಶ್ವಯುಜ ಶು|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
6	[1] ಭಾನು	ಪಾಡ್ಯ	7-22	ಚಿತ್ತ	35-13	20
7	ಸೋಮ	ಬಿದಿಗೆ	12-36	ಸ್ವಾತಿ	41-36	21
8	ಮಂಗಳ	ತದಿಗೆ	17-21	ವಿಶಾಖ	47-28	22
9	ಬುಧ	ಚೌತಿ	21-23	ಅನೂ	52-23	23
10	[2] ಗುರು	ಪಂಚ	24-17	ಜ್ಯೇಷ್ಠ	56-18	24
11	[3] ಶುಕ್ರ	ಷಷ್ಠಿ	25-55	ಮೂಲ	58-51	25
12	[4] ಶನಿ	ಸಪ್ತ	26-17	ಪೂಷಾ	60	26

(1) ನವರಾತ್ರಾರಂಭಃ, ಜಯಲಕ್ಷ್ಮೀವ್ರತಂ, ಕೊಲ್ಲೂರಿನಲ್ಲಿ ಮೂಕಾಂಬಾ ಉತ್ಸವಾರಂಭಃ, ೧೩೩೭ ನೇ ಮೊಹರಂ ಪ್ರಾರಂಭಃ. (2) ಉಪಾಂಗಲಲಿತಾವ್ರತಂ. (3) ಸರಸ್ವತೀಪೂಜಾ. (4) ಕಾಳರಾತ್ರಿಃ, ಮಹಿಷಾಸುರಸಂಹಾರ, ತಿರುಪತಿ ವೆಂಕಟಾಚಲಸ್ವಾಮಿ ರಥಃ, ಪೆರಟಾಶಿ ಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರೆಲೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ಟ ೧೯೧೮ ನೆಯ ಇಸವಿ ಅಕ್ಟೋಬರ್ ತಾರೀಖು ೧೩ ನೇಯ ಭಾನುವಾರ. (ಸಂಚಿಕೆ ೪೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ಶಕ್ತಿಸ್ತ್ರುಲಾತಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಚಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಳಿ 1, ಗಿಲ್ಟ್ ಉಂಗುರ 1, ಗಡಿಯಾರದ ಅಟ ರುಮಾಲು 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಟೊಯಲೆಟ್ ಸೋಪ್ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಶೃಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ—ವಿ. ಎ. ಕೃಷ್ಣ ಅಂಡ್ ಕೋ.,
9, ಇರುಳಪ್ಪನವೀಧಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜನ್ಯೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಯೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಹೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದರ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
22 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೫ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸತ್ಪುತ್ರಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ [illegible] ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶಿಷ್ಟವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
27 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 49

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಿಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿತ್ವರಿತ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಳು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
43 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
[illegible]	೦—೮—೦
ಶಿವಪೂಜಾವಿಧಿಃ	೦—೧೦—೦
[illegible]	೦—[illegible]—೦
[illegible]	೦—೪—೦
ಪ್ರಶ್ನಪಂಚಕ	೦—೨—೦
[illegible] (ಮುಕ್ತಿ ಸಾಧನ)	೦—೨—೦
ಗುರುಪಂಚಕೇಶ್ವರ ಶತಕಂ	೦—೧—೦

ಅಂಚೆವೆಚ್ಚ ಬೇರೆ.

ಗ್ರಂಥ[illegible] ನಮ್ಮಲ್ಲಿ ಕೊಡಲಾಗುತ್ತದೆ.

ವಿದೇಶ ವೃತ್ತಾಂತಗಳು.

ಇದುವರೆಗೆ ಶತ್ರುಗಳ ಸಬ್‌ಮೆರೀನ ಹಾವಳಿಯಿಂದ ಯುದ್ಧಸಂಬಂಧವಿಲ್ಲದ ಮಿತ್ರಮಂಡಲಿ ನಾವಿಕರು ೨೦ ಸಾವಿರ ಮಂದಿ ಸತ್ತಿರುತ್ತಾರೆ. ಇವರಲ್ಲಿ ೧೫ ಸಾವಿರ ಮಂದಿ ಇಂಗ್ಲೀಷ್ ನಾವಿಕರೇ ಆಗಿರುತ್ತಾರೆ.

ಚೀನಾದೇಶದಲ್ಲಿ ಗಸಗಸೆಯ ಬೇಸಾಯವನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಡಲು ಪ್ರಯತ್ನಿಸುವೆವೆಂದೂ, ಅಫೀಮನ್ನು ದೇಶೀಯರಾರೂ ತಿನ್ನದಂತೆ ಮಾಡುವೆವೆಂದೂ ಅಲ್ಲಿಯ ಪ್ರೆಸಿಡೆಂಟರು ರೂಟರ್‌ವಾರ್ತಾದಾಯಕನೊಡನೆ ಹೇಳಿದರಂತೆ.

ಬೋಲ್ಷೆವಿಕ್ ಪಕ್ಷದವರು ರಷ್ಯಾದ ಜಾರರನ್ನು ಉರಲುಹಾಕಿ ಕಾಡಿನಲ್ಲಿ ಶವವನ್ನು ಹೂತುಬಿಟ್ಟಿದ್ದರು. ಈಗ ಜೆಕೋಸ್ಲಾವಕ್ಕರು ಆ ಶವವನ್ನು ಅಲ್ಲಿಂದ ತೆಗೆದು ವೈಭವದಿಂದ ಉತ್ಸವಮಾಡಿಕೊಂಡು ಹೋಗಿ, ಗೌರವಪುರಸ್ಸರವಾದ ಸಮಯೋಚಾರಗಳನ್ನೆಲ್ಲಾ ನೆರವೇರಿಸಿದರು. ಅದಕ್ಕೆ ತಾತ್ಕಾಲಿಕವಾಗಿ ಓಮಸ್ಕ ಪಟ್ಟಣದಲ್ಲಿ ಸಮಾಧಿಮಾಡುವರಾಗಿದ್ದಾರೆ.

ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರು ಈ ಯುದ್ಧಜಯವನ್ನು ಕೊಡಿಸುವ ಸಂದರ್ಭದಲ್ಲಿ ಮತ್ತೊಂದು ಅಮೋಘವಾದ ದೀರ್ಘ ಭಾಷಣವನ್ನು ಮಾಡಿರುವರು. ಅದು ಜರ್ಮನರ ದುರುದ್ದೇಶ ಸಂಧಿಯ ಕಾಪಟ್ಯ ಮೊದಲಾದುವುಗಳನ್ನೆಲ್ಲಾ ಖಂಡಿಸಿ ಹೀನಯಿಸತಕ್ಕದಾಗಿಯೂ, ಮಿತ್ರಮಂಡಲಿಯವರ ಸದುದ್ದೇಶವನ್ನೂ ಚಿತ್ತಸ್ಥೈರ್ಯವನ್ನೂ ಏಕಮತ್ಯವನ್ನೂ ವ್ಯಕ್ತಪಡಿಸತಕ್ಕದಾಗಿಯೂ, ಪ್ರಪಂಚಶ್ರೇಯವನ್ನು ಕೋರತಕ್ಕದಾಗಿಯೂ, ಶತ್ರುಗಳ ಎದೆಯನ್ನು ಬಿರಿಸತಕ್ಕದಾಗಿಯೂ, ಜಗತ್ತನ್ನೇ ತಲೆದೂಗಿಸತಕ್ಕದಾಗಿಯೂ, ಸ್ವದೇಶೀಯರನ್ನು ಯುದ್ಧಕ್ಕಾಗಿ ಸರ್ವಸ್ವವನ್ನೂ ಸಮರ್ಪಿಸಲು ಪ್ರೋತ್ಸಾಹಿಸತಕ್ಕದಾಗಿಯೂ ಇದ್ದಿತು.

ಬೆಲ್ಜಿಯಂ ದೇಶವು ಪರಿಶ್ರಮಾಭ್ಯುದಯಗಳಿಗೆ ಪ್ರಸಿದ್ಧವಾದುದು. ಅಂತಹ ದೇಶವನ್ನು ಶತ್ರುಗಳು ಸ್ಮಶಾನದಂತೆ ಮಾಡಿದಬಳಿಕ ಅಲ್ಲಿಯ ಜನರು ಹೊಟ್ಟೆಬಟ್ಟೆಗಿಲ್ಲದೆ ದೇಶಾಂತರಗತರಾದರು. ಅವರಲ್ಲಿ ಕೈಗಾರಿಕೆಯೊಳಗೆ ಪ್ರವೀಣರಾದವರನ್ನು ಭರತಖಂಡಕ್ಕೆ ಬರಮಾಡಿಕೊಂಡು ಆಶ್ರಯಕೊಟ್ಟು ಅವರ ಸಹಾಯದಿಂದ ಈ ದೇಶದ ಪರಿಶ್ರಮಗಳನ್ನು ಹೆಚ್ಚಿಸುವುದಕ್ಕೆ ಒಳ್ಳೆಯ ಸಮಯವಾಗಿರುವುದೆಂದು ಆ ಕಾಲದಲ್ಲಿಯೇ ಈ ದೇಶದ ಅನೇಕ ಪತ್ರಿಕೆಗಳು ಇಂಡ್ಯಾಸರ್ಕಾರಕ್ಕೆ ಸೂಚನೆಕೊಟ್ಟುವು. ಆದರೆ ಸರ್ಕಾರವು ಅದೇಕೋ ಅತ್ತಕಡೆಗೆ ಗಮನಕೊಡಲಿಲ್ಲ. ಆದರೆ ಜಗದ್ವ್ಯಾಪಿಗಳಾಗುತ್ತಿರುವ ಜಪಾನರು ಮಾತ್ರ ಈ ಸಂಧಿಯನ್ನು ವ್ಯರ್ಥವಾಗಿ ಹೋಗಗೊಡಲಿಲ್ಲ. ಈಗ ಅವರು ದಿಕ್ಕುಗೆಟ್ಟಿರುವ ಬೆಲ್ಜಿಯಮ್ಮಿನವರನ್ನು ತಮ್ಮ ದೇಶಕ್ಕೆ ಬರಮಾಡಿಕೊಂಡು ಅವರುಗಳಿಗೆ ತಿಳಿದಿರುವ ಪರಿಶ್ರಮಗಳನ್ನು ತಮ್ಮ ದೇಶದಲ್ಲಿ ಅಭಿವೃದ್ಧಿಗೊಳಿಸುತ್ತಲಿರುವರಂತೆ.

ದಸರಾಮಹೋತ್ಸವ.

ಅಕ್ಟೋಬರ್ ತಾ|| ೬ ನೇ ಭಾನುವಾರ ಪ್ರಾತಃಕಾಲ ೮|| ಘಂಟೆಗೆ ತುಲಾಲಗ್ನದಲ್ಲಿ ಸಿಂಹಾಸನಾರೋಹಣ, ದಿವಾನರುಗಳಿಂದಲೂ, ಖಾಸಾ ಅಳಿಯಂದರುಗಳಿಂದಲೂ, ಕೌನ್ಸಿಲರುಗಳಿಂದಲೂ, ಇತರ ಸರದಾರರುಗಳು, ಸಿವಿಲ್ ಆಫೀಸರುಗಳು, ಮತ್ತು ಇತರರಿಂದಲೂ ನಜರ್. ಸಾಯಂಕಾಲ ೫ ಘಂಟೆಗೆ ಆನೆ ಕುದುರೆ ಕೆರೆಬೀಳಿಗೆ ಬಿಜಮಾಡುವುದು, ೭ ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸರುಗಳಿಂದಲೂ ಮತ್ತು ಪೊಲೀಸ್ ಆಫೀಸರುಗಳಿಂದಲೂ ನಜರ್. ತಾ|| ೭ ನೆಯ ಸೋಮವಾರದಿಂದ ತಾ|| ೧೩ ನೆಯ ಭಾನುವಾರದವರೆಗೆ ಪ್ರತಿದಿವಸವೂ ಪ್ರಾತಃಕಾಲ ೮ ಘಂಟೆಗೆ ಆನೆ ಕುದುರೆ ಕೆರೆಬೀಳಿಗೆ ಬಿಜಮಾಡುವದು, ಸಾಯಂಕಾಲ ೫ ಘಂಟೆಗೆ ಆನೆ ಕುದುರೆ ಕೆರೆಬೀಳಿಗೆ ಬಿಜಮಾಡುವದು, ೭ ಘಂಟೆಗೆ ದರ್ಬಾರ್. ತಾ|| ೧೪ ನೇ ಸೋಮವಾರ ಪ್ರಾತಃಕಾಲ ೮|| ಘಂಟೆಗೆ ಬೃಹಸ್ಪತಿಕಾಲ ಹೋರೆಯಲ್ಲಿ ಆನೆ ಕುದುರೆ ಮತ್ತು ಆಯುಧ ಕೆರೆಯಿಂದ ಅರಮನೆಗೆ ಬಿಜಮಾಡುವದು, ಅನಂತರ ಆಯುಧ ಗಜಾಶ್ವಾದಿಗಳ ಪೂಜೆ. ಸಾಯಂಕಾಲ ೭ ಘಂಟೆಗೆ ಇಂಗ್ಲೀಷ್ ದರ್ಬಾರ್. ತಾ|| ೧೫ ನೇ ಮಂಗಳವಾರ ಪ್ರಾತಃಕಾಲ ೭|| ಘಂಟೆಗೆ ತುಲಾಲಗ್ನದಲ್ಲಿ ಆಯುಧ ಗಜಾಶ್ವ ಬನ್ನಿಮಂಟಪಕ್ಕೆ ಬಿಜಮಾಡುವದು, ಅನಂತರ ಜಟ್ಟಿಕಾಳಗ. ಸಾಯಂಕಾಲ ೪ ಘಂಟೆಗೆ ಜಂಬೂಸವಾರಿ, ಅನಂತರ ಅಂಬಾವಿಲಾಸದಲ್ಲಿ ದರ್ಬಾರ್. ತಾ|| ೧೬ ನೇ ಬುಧವಾರ ಸಾಯಂಕಾಲ ೭ ಘಂಟೆಗೆ ಅಂಬಾವಿಲಾಸದಲ್ಲಿ ದರ್ಬಾರ್, ಸದ್ರಿ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದಿರುವ ಸಿವಿಲ್ [illegible] ಮತ್ತು ಪೊಲೀಸ್ ಆಫೀಸರುಗಳಿಂದಲೂ ಮತ್ತು ಕೆಲವು ಪ್ರಜಾಪ್ರತಿನಿಧಿಗಳಿಂದಲೂ ನಜರ್. ತಾ|| ೧೭ ನೇ ಗುರುವಾರ ಸಾಯಂಕಾಲ ೭ ಘಂಟೆಗೆ ಅಂಬಾವಿಲಾಸದಲ್ಲಿ ದರ್ಬಾರ್, ಉಳಿದ ಪ್ರಜಾಪ್ರತಿನಿಧಿಗಳಿಂದ ನಜರ್.

ಪತ್ರವ್ಯವಹಾರ.

ಒಬ್ಬ ಕೊಡಗು ಡಿ|| ಬೋ|| ಮೆಂಬರಿನ ವಿಜ್ಞಾಪನೆ.

“ಮೈಸೂರು ಸ್ಟಾರ್” ಎಡಿಟರವರ ಸ|| ಕ್ಕೆ.

ಅಯ್ಯಾ !

ಇದರಮೂಲಕ ಕೊಡಗುದೇಶದ ನಂಜರಾಯಪಟ್ಟಣ ತಾಲ್ಲೂಕಿನ ನಿವಾಸಿಗಳಿಗೆ ಪ್ರಾರ್ಥಿಸಿಕೊಳ್ಳುವುದೇನೆಂದರೆ:—

ಈ ನಮ್ಮ ಕೊಡಗುದೇಶದಲ್ಲಿಯೂ ಒಂದು ಡಿಸ್ಟ್ರಿಕ್ಟು ಬೋರ್ಡು ಸ್ಥಾಪಿತವಾಗಿರುವದು ಸರ್ವವಿದಿತವಾಗಿದೆಯಾಗಿ ನಂಬಿದ್ದೇನೆ. ಸದರಿ ಬೋರ್ಡಿಗೆ ಪ್ರತಿ ತಾಲ್ಲೂಕಿನಿಂದಲೂ ಒಬ್ಬೊಬ್ಬ ಖಾಸಗಿ ಮೆಂಬರನ್ನ ಚುನಾಯಿಸುವ ಪದ್ಧತಿ ಇದೆ. ಹಾಗೆ ಚುನಾಯಿಸಲ್ಪಟ್ಟ ಪ್ರತಿಯೊಬ್ಬನೂ 3 ವರ್ಷಗಳವರೆಗೆ ಮೆಂಬರಾಗಿರತಕ್ಕದ್ದು. ಆಮೇಲೆ ಈ ನಂಜರಾಯಪಟ್ಟಣ ತಾಲೂಕಿಗೆ ಈ ವರ್ಷದಿಂದ ಚಾಲ್ತಿ 3 ವರ್ಷದ ಬಗ್ಗೆ ಜನರ ಪ್ರತಿನಿಧಿಯಾಗಿ ನನ್ನನ್ನ ಚುನಾಯಿಸಿದ್ದಾರೆ. ಈ ಬೋರ್ಡಿನಿಂದಾಗಬೇಕಾದ ಕೆಲಸಗಳು ನಮ್ಮ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಹೇರಳವಾಗಿರಬಹುದು. ಎಲ್ಲೆಲ್ಲಿ ಏನೇನಾಗಬೇಕೆಂಬುದು ನನಗೆ ತಿಳಿಯದು. ಪ್ರತಿಯೊಂದು ಸ್ಥಳಕ್ಕೆ ಹೋಗಿ ಈ ಸಂಗತಿ ತಿಳಿಯುವುದು ಅಸಾಧ್ಯವೆಂಬುದು ಸರ್ವರಿಗೂ ತಿಳಿದದ್ದಾಗಿದೆ. ಆದ್ದರಿಂದ ಎಲ್ಲೆಲ್ಲಿಗೆ ಏನೇನು ಅವಶ್ಯವೆಂಬುದನ್ನು ಕಾಗದಮೂಲಕವಾಗಲಿ ಯಾ ರೂಬರೂಬಾಗಿಯಾಗಲಿ ತಿಳಿಸುತ್ತಾ ಬಂದಲ್ಲಿ ಅಂಥವುಗಳನ್ನು ನನ್ನ ಕೈಲಾದಮಟ್ಟಿಗೆ ದೇಶಸೇವೆಯೆಂದು ಭಾವಿಸಿ ಸಾಧ್ಯವರಿತು ಬೋರ್ಡಿಗೆ ಹಾಜರು ಪಡಿಸಿ ಚರ್ಚಿಸುವದರ ಮೂಲಕ ಫಲಿತಾಂಶ ಕುರಿತು ಆಗಾಗ ಸರ್ವರ ಪರಾಮರ್ಶಕ್ಕೆ ತರಲು ಬದ್ಧಾದರನಾಗಿದ್ದೇನೆ. ಮೇಲ್ಕಂಡಂತೆ ಯಾರೂ ಯಾವ ಸಂಗತಿಯನ್ನು ನನಗೆ ತಿಳಿಸದೆ ನನ್ನ ಮೆಂಬರುತನದ ಅವಧಿಯು ಮುಗಿದ ಬಳಿಕ ವೃಥಾ ಇವನಿಂದ ಏನೂ ಉಪಕಾರವಾಗಲಿಲ್ಲೆಂದು ಹೇಳಿ ದೇಶದ್ರೋಹಿಯೆಂಬ ಅಪವಾದಕ್ಕೆ ನನ್ನನ್ನ ಗುರಿಮಾಡಬಾರದಾಗಿ ಪ್ರಾರ್ಥಿಸಿಕೊಂಡಿದ್ದೇನೆ. ಈ ಸಣ್ಣ ಕೋರಿಕೆಯನ್ನ ನೆರವೇರಿಸುತ್ತಾರಾಗಿ ನಂಬಿದ್ದೇನೆ.

ಯಚ್. ಆರ್. ಸುಬ್ಬಣ್ಣಯ್ಯ.

ಪರಮತಸಹನೆ ಕೋರಬಾರದೆ ?

ಅಯ್ಯಾ !

ಕಳೆದ ಕೆಲವು ಕಾಲಗಳಿಂದ ಹಿಂದುಳಿದ ಜನಾಂಗದವರು ತಮ್ಮ ಪುರೋಭಿವೃದ್ಧಿಗೋಸ್ಕರ ಮಾಡುತ್ತಿರುವ ಯತ್ನಗಳನ್ನು, ಇದಕ್ಕಾಗಿ ಕೆಲವು ಅನುಭೋಗಿಸುತ್ತಿರುವ ಕಷ್ಟನಿಷ್ಠುರಗಳನ್ನೂ ಸರ್ಕಾರದವರಿಗೂ ಪ್ರಾಜ್ಞರಾದ ಪ್ರಮುಖರಿಗೂ ತಿಳಿಸುತ್ತಿರುವಲ್ಲಿ ಪರೋತ್ಕರ್ಷಾಸಹನೆಯುಳ್ಳ ಕೆಲವರು ಅಸೂಯೆಯಿಂದ ಈ ಯತ್ನಗಳನ್ನು ನಿಂದಿಸುತ್ತಿರುವರು. ಹಿಂದುಳಿದ ಜನಾಂಗದವರ ಕಷ್ಟನಿಷ್ಠುರಗಳೆಂದರೆ ಅನ್ಯಮತಗ್ರಂಥಗಳ ಅನಾದರ, ಅನೇಕ ಮಹನೀಯರುಗಳ ನಿಂದನೆ, ಮುಂದುವರಿಯಲು ಇದ್ದ ಅನಾನುಕೂಲಗಳು, ಇವೇ ಮೊದಲಾದುವು. ಯಾವ ಸಮಾಜವೇ ಆಗಲಿ ಯಾವದೇಶವೇ ಆಗಲಿ ಅದು ತನ್ನ ಹಿಂದಿನ ಚರಿತ್ರೆಯಲ್ಲಿನ ಶ್ರೇಷ್ಠತರವಾದ ಉದಾಹರಣೆಗಳಿಂದ ಶೌರ್ಯವನ್ನೂ, ಗಾಂಭೀರ್ಯವನ್ನೂ ಪಡೆದುಕೊಂಡು ತನ್ನ ಮುಂದಣ ಪುರೋಭಿವೃದ್ಧಿಯನ್ನು ಮಾಡಿಕೊಳ್ಳಬೇಕೆಂಬ ತತ್ವವು ಜನಜನಿತವಾದದ್ದು. ಇದರಂತೆಯೇ ನಾವು ಮುಂದುವರಿಯಬೇಕಾದರೆ ನಮ್ಮ ಪೂರ್ವಜರ ಚರಿತ್ರೆಗಳನ್ನೂ ಅವರು ಮಾಡಿದ ಸಾಹಸಕಾರ್ಯಗಳನ್ನೂ ತಿಳಿದುಕೊಂಡು ಅದರಂತೆಯೇ ನಾವು ಆಗಬೇಕೆಂಬ ಉದ್ದೇಶವನ್ನಿಟ್ಟು ಯತ್ನಿಸಬೇಕು. ಆದರೆ ಇಂಥ ನಮ್ಮ ಪೂರ್ವಜರ ವೃತ್ತಾಂತವನ್ನೂ ನಮ್ಮ ಮತವಿಷಯಗಳನ್ನೂ ತಿಳಿಸತಕ್ಕ ಮತಗ್ರಂಥಗಳನ್ನು ತಪ್ಪುತಪ್ಪಾಗಿ ಬರೆದು ನಮ್ಮ ಯಾವತ್ತು ಪೂರ್ವವೃತ್ತಾಂತ ವಿಷಯದಲ್ಲಿ ನಮಗೆ ತಪ್ಪುತಿಳಿವಳಿಕೆಯಾಗುವಂತೆ ಮಾಡಿದರೆ ನಾವು ಮುಂದುವರಿಯುವ ಬಗೆಹೇಗೆ? ನಮ್ಮ ಮಹನೀಯರುಗಳ ನಮ್ಮ ಶ್ರೇಷ್ಠಕವಿಗಳ ನಮ್ಮ ವಿದ್ವನ್ಮಣಿಗಳೇ ಮೊದಲಾದವರ ಜೀವನಚರಿತೆಯೂ, ಅವರ ಮಹತ್ಕಾರ್ಯಗಳ ವಿಷಯವೂ ನಮ್ಮ ಬಾಲಬಾಲಿಕೆಯರಿಗೆ ತಿಳಿಯದಿದ್ದರೆ ನಮ್ಮ ಭಾವಿಸಮಾಜವು ಯಾವ ಸ್ಥಿತಿಯನ್ನು ಹೊಂದೀತು? ನಮ್ಮ ಬಾಲಬಾಲಿಕೆಯರು ಸರ್ಕಾರೀ ಪಾಠಶಾಲೆಗಳಿಗೆ ಹೋಗುತ್ತಿದ್ದಾರೆ. ಪಠ್ಯಪುಸ್ತಕಗಳಲ್ಲಿ ಬರೀ ಒಂದೇ ವರ್ಗದವರ ಸಾಹಸಕಾರ್ಯಗಳ ಕಥೆಗಳ ಮತ್ತು [illegible] ವಿಷಯಗಳನ್ನು ಓದುತ್ತಿರುವರೇ ಹೊರತು, ಎಲ್ಲಾ ಸಮಾಜಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಓದುತ್ತಾ ಇಲ್ಲ. ಮತ್ತು ನಮ್ಮ ಗ್ರಂಥಗಳ ಅಪಾರ್ಥ ವಿಷಯದಲ್ಲೋ? ಅದನ್ನು ಹೇಳತೀರದು. ಹಿಂದೆ ವಿದ್ಯಾಭ್ಯಾಸ ಇಲಾಖೆ ಇನ್ಸ್ಪೆಕ್ಟರ್ ಜನರಲ್‌ರಾದ ಎಂ. ಶಾಮರಾಯರು ಮಹಿಷೂರುಚರಿತ್ರೆ ಎಂಬ ಪುಸ್ತಕವನ್ನು ಬರೆದು ಇದನ್ನು ಕನ್ನಡ ಎಂಟನೇತರಗತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವನ್ನಾಗಿ ಗೊತ್ತುಮಾಡಿರುವರು. ಇದರಲ್ಲಿ ಬಸವೇಶನು ಶರಣನಲ್ಲಿ ಬಸವನೆಂಬ ಆರಾಧ್ಯ ಬ್ರಾಹ್ಮಣನೊಬ್ಬನು ಲಿಂಗಾಯತ ಮತವನ್ನು ಸ್ಥಾಪಿಸಿದನು, ಎಂದು ಬರೆದಿರುವರು. ಇವರು ಯಾವಗ್ರಂಥಗಳ ಆಧಾರದಿಂದ ಬರೆದರು? ಯಾರಾದರೂ ಯೋಗ್ಯರಾದ ಮಹನೀಯರನ್ನು ವಿಚಾರಿಸಿದರೆ, ಇದನ್ನು ಬರೆಯುವುದರಲ್ಲಿ ಇವರ ನಿಜವಾದ ಅಭಿಪ್ರಾಯವೇನಿತ್ತು? ಈ ಪುಸ್ತಕವನ್ನು ಓದುವ ಲಿಂಗಾಯತ ವಿದ್ಯಾರ್ಥಿಗಳು ತಮ್ಮ ಸಮಾಜ ವಿಷಯದಲ್ಲಿ ಎಷ್ಟುಮಟ್ಟಿಗೆ ಅಭಿಪ್ರಾಯವನ್ನಿಟ್ಟುಕೊಳ್ಳುವರು. ಇದರಿಂದ ಸಮಾಜ ಭಿನ್ನಭಿನ್ನವೆಂತಾಗುವುದು? ನಡೆಯುತ್ತಿದ್ದಮಾತಿಗೆ ಮಡಿದುಫಲವೇನು? ಇನ್ನಾದರೂ ಸರಿಯಾಗಿ ನಡೆಸುಕೊಳ್ಳುವ ಎಂದು ಇವರು ಹೇಳದವನಿಗೆ ಲಕ್ಷ್ಯಕೊಡದೋಣವೆಂದರೆ ಇದರಲ್ಲಿ ಗಮನಿಸಿದ್ದಂತೆ ತೋರುವುದಿಲ್ಲ. ಏಕೆಕ್ಕೆಂದರೆ ಕಳೆದವರ್ಷ ದಾವಣಗೆರೆಯಲ್ಲಿ ನಡೆದ ಮಹಾಸಭೆಯ ಅಧ್ಯಕ್ಷರಾದ ಮತ್ತು ಬ್ರಾಹ್ಮಣಪ್ರಿಯರಾದ ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಬಸವೇಶ್ವರನು ಸಾಂಖ್ಯೀಯಮತಸ್ಥಾಪಕನೆಂಬ ವಿಷಯವನ್ನು ಸಿದ್ಧಾಂತಪೂರ್ವಕವಾಗಿ ಖಂಡಿಸಿದರು. ಇನ್ನು ಮೇಲಾದರೂ ತಪ್ಪುಬರವಣಿಗೆಗಳು ಬರೆಯಲ್ಪಡುವುದಿಲ್ಲವೆಂದು ನಿರೀಕ್ಷಿಸಲ್ಪಟ್ಟಿತ್ತು. ಆದರೆ ಆಕಾಶವು, ಭೂಮಿಯು ಇವರ ದೂ ಸ್ವಲ್ಪ ದೂರದಲ್ಲಿಯೇ ಕೂಡಿದೆಯೆಂದು ತಿಳಿದು ಅದನ್ನು ಮುಟ್ಟಿನೋಡಬೇಕೆಂದು ಹೋಗುವ ಮನುಷ್ಯನ ಸ್ಥಿತಿಯಲ್ಲಿ ನಮ್ಮ ಸ್ಥಿತಿಯಾಯಿತು. ಮಾರ್ಚ ತಿಂಗಳಲ್ಲಿ ಪ್ರಸಿದ್ಧಪಡಿಸಿದ ಕನ್ನಡ ಸಾಹಿತ್ಯಪರಿಷತ್ ಪತ್ರಿಕೆಯ ಜನವರಿ ಸಂಚಿಕೆಯಲ್ಲಿ ಮ|| ರಾ|| ರಘುನಾಥರಾಯರು ಕನ್ನಡಭಾಷೆಯ ಹೆಗ್ಗುರುತುಗಳು ಎಂಬ ಲೇಖನದಲ್ಲಿ ವೀರಶೈವಮತಸ್ಥಾಪಕನಾದ ಬಸವನು ಎಂದು ಬರೆದಿರುವರು? ಅಂದಮೇಲೆ ಇವರ ನಿಜವಾದ ಅಭಿಪ್ರಾಯವೇನು? ಇಷ್ಟಲ್ಲದೆ ಕಳೆದವರ್ಷ ಲಿಂಗಾಯತ ಮಹಾಸಭೆಯಲ್ಲಿ ಸಾಹಿತ್ಯ ಸಂಪದಭ್ಯುದಯಗಳಲ್ಲಿ ಪ್ರಕಟಿಸಲ್ಪಟ್ಟ ಲೇಖನಗಳ ವಿಷಯವು ವಾಚಕರಿಗೆಲ್ಲಾ ಗೊತ್ತೇ ಇದೆ. ಎಸ್. ಶಾಮರಾಯರು ಜಿ. ಎಸ್. ಚಕ್ರವರ್ತಿಯವರು ಮತ್ತು ಇನ್ನು ಕೆಲವರು ಸೇರಿ ನೂತನವಾಗಿ ಮೈಸೂರುಚರಿತ್ರೆಯೊಂದನ್ನು ಬರೆಯಲು ಸರ್ಕಾರದವರಿಂದ ನಿಯಮಿಸಲ್ಪಟ್ಟಿರುವರೆಂದು ಗೊತ್ತಾಗುತ್ತದೆ. ಈಗಲಾದರೂ ಈ ಚರಿತ್ರೆಯು ವೀರಶೈವಮತದ ವಿಷಯದಲ್ಲಿ ತಪ್ಪು ಅಭಿಪ್ರಾಯವನ್ನು ಕೊಡದೆ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಕೊಡುವಂತೆ ಮಾಡುವರೆಂದು ನಂಬಿ ನಿರೀಕ್ಷಿಸುವೆವು. ಈಗಲಾದರೂ ಪರಮತಸಹನೆಯೂ ನಿಷ್ಪಕ್ಷಪಾತ ವಿಚಾರವೂ ತೋರಬಹುದಲ.

ಮಹಾಭಿಮಾನಿ

ರಾ|| ಬ|| ನಾರದ ಮಲ್ಲಪ್ಪನವರ ಚರಿತ್ರೆ.—ಇದರಲ್ಲಿ ಮಲ್ಲಪ್ಪನವರ ಅತ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

6 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ದುಡ್ಡಿಗೆ ದುಡ್ಡು ಲಾಭ!

ಪಡೆದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ
ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿಕ ಹುರುಕಿನಔಷಧ—ಬೆಲೆ ೧ಕ್ಕೆ ೧೮. ೨೫ಕ್ಕೆ ೧-೪-೦.
೨. ಕಜ್ಜಿಬೇಸಿಯಔಷಧ—ಚೀಟು-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇಮಾಕರುಣಾಕರಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಲ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಆಂದಕ್‌ಡಮೋಲಿ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ಸೀಳಿ ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
41 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 42

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ್ಯ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾಹಕವಾಗಿಯೂ ವೈದ್ಯರ ಸಮಯವನ್ನು ಕಾದು ನೋವೆಯ್ದುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಜಬೇನೆ, ಬಲಹೀನತೆ, ಕಟ್ಟಿಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಮ್ಯೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೦ ಮಾತ್ರೆಗಳುಳ್ಳ ಬುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಸ್. ವ್ಹಿ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಫಿಸಿಷನ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿಯತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರುಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕನಾರ್ಟಿಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲೋಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಅಕ್ಟೋಬರ್ ತಾ|| ೬ ರಿಂದ ೧೯೧೮ ನೆಯ ಅಕ್ಟೋಬರ್ ತಾ|| ೧೨ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಶ್ವಯುಜ ಶು|| ಪಾಡ್ಯಮಿಯಿಂದ ಆಶ್ವಯುಜ ಶು|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ವಾಸ
6	1 ಭಾನು	ಪಾಡ್ಯ	7-22	ಚಿತ್ತ	35-13	20
7	ಸೋಮ	ಬಿದಿಗೆ	12-36	ಸ್ವಾತಿ	41-36	21
8	ಮಂಗಳ	ತದಿಗೆ	17-21	ವಿಶಾಖ	47-28	22
9	ಬುಧ	ಚೌತಿ	21-23	ಅನೂ	52-23	23
10	2 ಗುರು	ಪಂಚ	24-17	ಜ್ಯೇಷ್ಠ	56-18	24
11	3 ಶುಕ್ರ	ಷಷ್ಠಿ	25-55	ಮೂಲ	58-51	25
12	4 ಶನಿ	ಸಪ್ತ	26-17	ಪೂಷಾ	60	26

(1) ನವರಾತ್ರ್ಯಾರಂಭಃ, ಜಯಲಕ್ಷ್ಮೀವ್ರತಂ, ಕೊಲ್ಲೂರಿನಲ್ಲಿ ಮೂಕಾಂಬಾ ಉತ್ಸವಾರಂಭಃ, ೧೩೩೭ ನೇ ಮೊಹರಂ ಪ್ರಾರಂಭಃ. (2) ಉಪಾಂಗಲಲಿತಾವ್ರತಂ. (3) ಸರಸ್ವತೀಪೂಜಾ. (4) ಕಾಳರಾತ್ರಿಃ, ಮಹಿಷಾಸುರಸಂಹಾರ, ತಿರುಪತಿ ವೆಂಕಟಾಚಲಸ್ವಾಮಿ ರಥಃ, ಪೆರಟಾಶಿ ಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀಕ್ ಎಲೆಕ್ಟ್ರಿಕ್ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಾಧೀಶ್ವರಾ ಪರಮಾಧಿಕಾರಾಜಮಂಡಲೇಶ್ವರಾ | ಧೀಸಂಪತ್ಸೌಖ್ಯಶೀಲಸ್ವಕೃತಸಕೃತ್ಸ್ವನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ | ಸ್ತ್ರೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಅಕ್ಟೋಬರ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೪೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ಅಕ್ಷರಮಾಲಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಕಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಉಂಗುರ 1, ಗಡಿಯಾರದ ಆತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಛಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೋ.,
8, ಇರುಳಪ್ಪನವೀಧಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದೆ

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜನ್ಯೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೂತ್ರಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಚಿ, ಜಡ್ಡು, ಗುದ್ದಪ್ಪನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಅದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ ಹೆಡ್ ಆಫೀಸ
22 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕಲೋಚನೆ ಸಹ ಬೆಲೆ ೪—೦—೦.

ಸಪ್ತಶತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿಬೋಧಕವಾದ ಗ್ರಂಥವು. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವದ್ವಿಶೇಷವು ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜಾ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನು ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
27 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 49

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿಶ್ಯಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಅವುಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.
ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
42 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶರವಾದಿ ಗಣಾಂಕಶತಮಾಲಾ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೫—೦
ಶರಣಾಸಿ	೦—೪—೦
ವ್ರತಪಂಚಕ	೦—೨—೦
ಸೊಲ್ಲು ಮುಮ್ಮ (ಮುಕ್ತಿಸಾಧನ)	೦—೨—೦
ಗುರುಪಂಚಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಕಾಶಕರುಗಳ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಅಕ್ಟೋಬರ್ ತಾ॥ ೧೩ನೆಯ ಭಾನುವಾರ.

ಮಹಾನವಮಿ.

ಚರಾಚರಾತ್ಮಕವಾದ ಈ ಪ್ರಪಂಚವು ಪ್ರಕೃತಿಪುರುಷರ ಕಾರ್ಯರೂಪವಾಗಿರುವುದು. ಸೃಷ್ಟಿಸ್ಥಿತಿಸಂಹಾರಗಳಿಗೆ ಮೂಲಬೀಜಗಳಾದ ತ್ರಿಗುಣಗಳೂ ಪ್ರಕೃತಿಯ ಕಾರ್ಯಗಳು. ಪ್ರಕೃತಿವಿಕಾಸರೂಪವಾಗಿರುವ ಈ ವಿಶ್ವವು ಆ ಗುಣತ್ರಯದಿಂದಲೂ ಬೀಜವೃಕ್ಷನ್ಯಾಯಸಿದ್ಧವಾದ ಅನಾದಿಕರ್ಮದಿಂದಲೂ ಬದ್ಧವಾಗಿರುವುದು. ನಿವೃತ್ತಿಮಾರ್ಗದಿಂದ ನಿಷ್ಕಾಮಕರ್ಮವನ್ನಾಚರಿಸಿ ಪ್ರಕೃತಿಯನ್ನು ಜಯಿಸಿದ ವಿರಾಗಿಗಳು ಪರಮಪುರುಷಾರ್ಥವನ್ನು ಸಾಧಿಸುವರು. ಪ್ರವೃತ್ತಿಮಾರ್ಗದಿಂದ ಕಾಮ್ಯಕರ್ಮವನ್ನಾಚರಿಸುವ ಭೋಗೇಚ್ಛುಗಳು ಐಹಿಕಫಲಪ್ರಾಪ್ತಿಗಾಗಿ ಪ್ರಕೃತಿಯನ್ನೇ ಆರಾಧಿಸುವರು. ಪ್ರಕೃತಿಯು ಪರಬ್ರಹ್ಮನಲ್ಲಿ ಅವಿನಾಭೂತವಾಗಿರುವ ಪರಾಶಕ್ತಿಯ ಸ್ವರೂಪವಾಗಿರುವುದು. ಆದುಕಾರಣ ಪ್ರಕೃತ್ಯಾರಾಧನೆಯು ಶಿವಶಕ್ತಿಯಾದ ಸಾಕ್ಷಾದ್ಭಗವತಿಯ ಆರಾಧನೆಯಾಗಿರುತ್ತ ಜಗತ್ಕಲ್ಯಾಣಕ್ಕೆ ಸಾಧಕವಾಗಿರುವುದು.

ಈ ಮಹಾನವಮಿಯ ಕಾಲದಲ್ಲಿ ಅಂಥ ಪ್ರಕೃತ್ಯಾರಾಧನೆಯು ಐಹಿಕಸುಖಾವಾಪ್ತಿಗಾಗಿ ನಮ್ಮ ಪೂರ್ವಿಕರುಗಳಿಂದ ಪ್ರತಿಷ್ಠಾಪಿಸಲ್ಪಟ್ಟು ಪದ್ಧತಿಯಾಗಿ ಬಂದಿರುವುದು. ಮತ್ತು "ಶಿವತತ್ವಾತ್ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ | ಫೇನೋರ್ಮಿಬುದ್ಬುದಾಕಾರಂ ಯಥಾಸಿಂಧೋರ್ನಭಿದ್ಯತೇ॥" ಎಂಬ ಪ್ರಮಾಣದಂತೆ ಶಿವತತ್ವದಿಂದುತ್ಪನ್ನವಾದ ಪ್ರಪಂಚವೆಲ್ಲವೂ ಶಿವಸ್ವರೂಪವಾಗಿಯೇ ಇರುವುದಾದಕಾರಣ, ಶಿವಕಾರ್ಯವಾದ ಸಕಲವಸ್ತುಜಾತದಲ್ಲಿ ಮಾಡಲ್ಪಡುವ ಅರ್ಚನೆಯೂ ಬ್ರಹ್ಮಪರ್ಯವಸಾಯಿಯೆನಿಸಿಕೊಳ್ಳುವುದಾದ ಕಾರಣ, ಕಾಮ್ಯಾರ್ಥಿಗಳು ತಂತಮ್ಮ ಮುಖ್ಯಕರ್ಮಸಾಧನವಸ್ತುಜಾತಗಳನ್ನೆಲ್ಲಾ ಈ ಸಮಯದಲ್ಲಿ ಆರಾಧಿಸುವ ಪರಿಪಾಠಿಯಾದರೂ ಸ್ಥಾಪಿಸಲ್ಪಟ್ಟಿರುವುದು.

ಮತ್ತೂ ಪ್ರವೃತ್ತಿಮಾರ್ಗಕ್ರಮಣಕ್ಕೆ ಅನುಗುಣವಾಗಿ ಈ ಸಮಯದಲ್ಲಿ ರಾಜಸಗುಣಕ್ಕೆ ಪ್ರಾಧಾನ್ಯವು ಕೂಡ ಕೊಡಲ್ಪಟ್ಟಿರುವುದು. ಆದುಕಾರಣವೇ ಈ ಮಹಾನವಮಿಯ ಕಾಲದಲ್ಲಿ ಉಪವಾಸಾದಿ ಸಾತ್ವಿಕಧರ್ಮಗಳಿಗೆ ಪ್ರಾಧಾನ್ಯವಿಲ್ಲದೆ ಸುಖಭೋಜನ ವಿಹಾರಾದಿಗಳು ಪ್ರಸ್ಫುಟವಾಗಿರುವುವು. ಗುಣಕರ್ಮಬದ್ಧರಾದ ಸಕಲಜನರೂ ತಂತಮ್ಮ ಜೀವನೋಪಾಧಿಗೆ ಸಾಧನಗಳಾದ ಪರಿಕರಗಳನ್ನು ಆರಾಧಿಸಿ ಕರ್ಮಾಧಿದೇವತೆಯ ಪ್ರಸಾದವನ್ನು ಪ್ರಾರ್ಥಿಸುವರು. ವಿದ್ಯಾಜೀವಿಗಳು ತಮ್ಮ ಜೀವಿತಸಾಧನಗಳಾದ ಪುಸ್ತಕಗಳ ಮಂಡಲದಲ್ಲಿ ವಿದ್ಯಾಧಿದೇವಿಯಾದ ಸರಸ್ವತಿಯನ್ನು ಆವಾಹಿಸಿ ಪೂಜಿಸುವರು. ಬಾಹುಬಲಜೀವಿಗಳು ತಮ್ಮ ಚತುರಂಗಬಲವೈಭವ ಸಮೇತರಾಗಿ ತಮ್ಮ ರಾಜಸಪ್ರಕರ್ಷವನ್ನು ಮೆರೆಯಿಸುತ್ತ ತಮ್ಮ ಅಸ್ತಿತ್ವಕ್ಕೆ ಸಾಧಕಗಳಾದ ಗಜತುರಗಾಯುಧಾದಿಗಳನ್ನು ಆರಾಧಿಸಿ, ಸಿಂಹಾಸನಾಸೀನರಾಗಿ, ತಮ್ಮ ಪ್ರಜಾರಂಜನ ಪರಾಯಣತೆಯನ್ನು ಅನಂತಮುಖವಾಗಿ ಸಾರ್ಥಕಪಡಿಸುವರು. ಉಳಿದ ಪ್ರತಿಯೊಂದು ತೆರದ ಕಸಬಿನವರೂ ತಂತಮ್ಮ ಉದ್ಯೋಗಗಳ ಮುಖ್ಯಸಾಧನಗಳನ್ನೆಲ್ಲಾ ಇಟ್ಟು ಅಲಂಕರಿಸಿ ಪೂಜಿಸುವರು. ಬಾಲಕರುಗಳು ಹೊಸ ಉಡುಪುಗಳನ್ನು ತೊಟ್ಟು ಬಿಲ್ಲನ್ನೋ ಬೆತ್ತವನ್ನೋ ಕೈಯಲ್ಲಿ ಹಿಡಿದು ಬೀದಿಯಲ್ಲಿ ಮೆರೆಯುತ್ತ ರಾಜಸಭಾವಪ್ರೇರಕಗಳಾದ ಹಾಡುಗಳನ್ನು ಹೇಳಿಕೊಂಡು ಹೋಗುವರು. ಬಾಲೆಯರು ಸರ್ವಾಲಂಕಾರ ಸುಶೋಭಿತೆಯರಾಗಿ ಒಟ್ಟುಗೂಡಿ ಜಡೆಕೋಲಾಟ ಮೊದಲಾದುವುಗಳನ್ನು ನಡೆಯಿಸುತ್ತ ರಾಜಸವೈಭವವನ್ನು ಮೆರೆಯಿಸುವುದಕ್ಕಾಗಿ ಬೊಂಬೆಸಾಮಾನುಗಳನ್ನು ಮನೆಯಲ್ಲಿಟ್ಟು ಪ್ರದರ್ಶನಮಾಡಿಸುವರು. ಇಂಥ ಉತ್ಸವಗಳು ಒಂದೊಂದು ದೇಶಭಾಗದಲ್ಲಿ ಒಂದೊಂದು ತೆರನಾಗಿದ್ದರೂ ಎಲ್ಲ ಕಡೆಯ ಕರ್ಮಾರಾಧನೋದ್ದೇಶವೂ ಒಂದೇ ಮುಖವಾಗಿರುವುದೆಂಬುದರಲ್ಲಿ ಸಂಶಯವಿಲ್ಲ. ವಂಗದೇಶದಲ್ಲಿ ಕಾಳೀರೂಪಳಾದ ಭಗವತಿಯನ್ನೇ ಅತಿವೈಭವದಿಂದ ಆರಾಧಿಸುವರು. ಉತ್ತರಹಿಂದೂಸ್ಥಾನದವರು

"ಶಮೀಶಮಯತೇಪಾಪಂ ಶಮೀಶತ್ರುವಿನಾಶಿನೀ"

ಎಂಬಂತೆ ಶತ್ರುವಿನಾಶಕ್ಕೆ ಸಾಧಕವೆಂದು ಬನ್ನಿಯ ಚಿಗುರನ್ನು ಒಬ್ಬರಿಗೊಬ್ಬರು ಕೊಟ್ಟು ಮರ್ಯಾದಿಸಿ ರಾಜಸಭಾವಾಭಿಮಾನವನ್ನು ವ್ಯಕ್ತಪಡಿಸುವರು. ನವರಾತ್ರಿಯ ಕಡೆಯದಿನವಾದ ವಿಜಯದಶಮಿಯ ದಿನವು ವಿಜಯಯಾತ್ರೆಗೆ ಅತ್ಯಂತ ಶುಭಪ್ರದವಾದ ದಿನವೆಂದು ಗಣಿಸಲ್ಪಟ್ಟಿರುವುದು. ವರ್ಷದಲ್ಲಿ ಪ್ರಭುಗಳು ಶತ್ರುಸಂಹನನಕ್ಕಾಗಿ ಎಂಥ ದುರ್ದಿನದಲ್ಲಿ ಪ್ರಯಾಣಮಾಡಬೇಕಾಗಿ ಬಂದರೂ ಈ ವಿಜಯದಶಮಿ ಶುಭದಿನ ಶುಭಹೋರೆಯಲ್ಲಿ ಸಕಲ ಪರಿವಾರಪರಿವೃತರಾಗಿ ಪುರಸೀಮೋಲ್ಲಂಘನೆಯನ್ನು ಮಾಡಿಬಿಟ್ಟು ಬಂದಿದ್ದರೆ, ಮುಂದೆ ಯಾವ ದುರ್ದಿನಪ್ರಯಾಣದೋಷವೂ ಸಂಭವಿಸುವುದಿಲ್ಲವೆಂದು ಸಿದ್ಧಾಂತಿಸಲ್ಪಟ್ಟಿರುವುದು. ಇವೆಲ್ಲವುಗಳನ್ನೂ ಪರಿಶೀಲಿಸಲಾಗಿ, ಗುಣಕರ್ಮಬದ್ಧರಾದ ಮಾನವರೆಲ್ಲರನ್ನೂ ಸ್ವಸ್ವಕರ್ಮದಲ್ಲಿ ನವನವಚೈತನ್ಯದಿಂದ ಮುಂಬರಿಯುವಂತೆ ಮಾಡಲು ಈ ವಾರ್ಷಿಕಸಮಾರಂಭದ ಮೂಲಕ ಒಂದು ತೆರದ ಪ್ರೋತ್ಸಾಹವನ್ನು ಕಲ್ಪಿಸಿಟ್ಟಿರುವರೆಂಬುದು ವ್ಯಕ್ತವಾಗುವುದು. ಸಕಲವಿಧದ ಪರಿಶ್ರಮಗಳೂ ವಿದ್ಯೆಗಳೂ ಈ ವಾರ್ಷಿಕ ಮಹೋತ್ಸವಗಳಿಂದ ಉತ್ತೇಜನಗೊಂಡು ತನ್ಮೂಲಕ ದೇಶಾಭ್ಯುದಯವಾಗಬೇಕೆಂಬುದೇ ಇಂಥ ಪ್ರತಿಷ್ಠಾಪನೆಗಳಿಗೆಲ್ಲಾ ಕಾರಣರಾದ ನಮ್ಮ ಪೂರ್ವಿಕರ ದೂರದೃಷ್ಟಿಯಾಗಿದ್ದಿತೆಂದು ವ್ಯಕ್ತವಾಗುತ್ತದೆ.

ಈಗಳಾದರೊ ಕಾಲಸ್ಥಿತಿಯು ವ್ಯತ್ಯಸ್ತವಾಗಿದೆ. ಆ ಪೂರ್ವಪದ್ಧತಿಗಳೆಲ್ಲಾ ಕೆಲಮಟ್ಟಿಗೆ ಬದಲಾಯಿಸುತ್ತಿವೆ. ಆದರೂ ಉದ್ದೇಶಕ್ಕೆ ಭಂಗವೇನೂ ಆಗುತ್ತಲಿಲ್ಲ. ಕೆಲ ರೀತಿಗಳನ್ನು ನೋಡಿದರೆ ಮೂಲೋದ್ದೇಶವು ಮತ್ತಷ್ಟು ಪರಿಪುಷ್ಟವಾಗುತ್ತಲಿದೆಯೆಂದೇ ಹೇಳಬಹುದು. ಈ ನವರಾತ್ರಿ ಕಾಲದಲ್ಲಿ ನಮ್ಮ ರಾಜಧಾನಿಯಲ್ಲಿ ನಡೆಯಿಸಲ್ಪಡುತ್ತಿರುವ ವಸ್ತುಪ್ರದರ್ಶನವು ಪಾರಿಶ್ರಮಿಕ ಪುರೋವೃದ್ಧಿಗೆ ಶತಗುಣಾಧಿಕವಾದ ಪ್ರೋತ್ಸಾಹವನ್ನು ಕೊಡುತ್ತಿದೆ. ರಾಜ್ಯಾಧಿಪರಿಗೆ ಶತ್ರುನಿಗ್ರಹಕಾರ್ಯದ ಜಂಜಡವು ತಪ್ಪಿರುವ ಈಗಣ ಸಮಯದಲ್ಲಿ ದೇಶದ ಕಲ್ಯಾಣಕ್ಕೆ ಅವಶ್ಯಕವಾದ ರಾಜಕೀಯ ವಿಷಯಗಳನ್ನು ಚರ್ಚಿಸುವುದಕ್ಕೆ ಸಭಾರಂಗದಲ್ಲಿ ಬೇಕಾದಷ್ಟು ಕೆಲಸಗಳು ನಡೆಯುವಂತೆ ಮಾಡಿರುವುದು ಅತ್ಯಂತ ಸಂಗತವಾಗಿರುತ್ತದೆ.

ಈಗಣ ಯೂರೋಪಿನ ಮಹಾಯುದ್ಧ ಸಂಬಂಧದಿಂದ ಪ್ರಪಂಚದಲ್ಲಿ ರಾಜಸವೈಭವಕ್ಕೆ ಅತ್ಯಂತ ತೇಜಸ್ಸುಂಟಾಗಿರುತ್ತದೆ. "ಶೂರನನೆಲ್ಲರ್ಮಾನಿಪ | ರಾರುಂ ಮನ್ನಣೆಸರಲ್ತೆ ಭೀರುವನಿಳೆಯೊಳ್ || ಹೋರದ ಕುರಿಯಂ ಕೊಲ್ವರ್ | ವಿಾರಿದ ಮದವೆತ್ತ ಕಗರನೊಲ್ದೋಲಗಿಪರ್" ಎಂಬ ನೀತಿಯಂತೆ ಬಲಕಾರ್ಯಗಳಿಗೆ ಪ್ರಾಮುಖ್ಯವು ಬಂದು ಕುಳಿತಿದೆ. ಜಗತ್ತಿನ ದೃಷ್ಟಿಯನ್ನೆಲ್ಲಾ ರಾಜಸಭಾವವೇ ಆಕರ್ಷಿಸಿರುತ್ತದೆ. ಬಲಾಧಿಕ್ಯಪರಿಪೂರ್ಣವಾದ ರಾಜಸವಿಜೃಂಭಣವೇ ಕಡೆಗೆ ಯುದ್ಧಶಾಂತಿಯನ್ನೂ ಜಗಚ್ಛಾಂತಿಯನ್ನೂ ಕೊಡಲು ಸಮರ್ಥವಾಗಿರುತ್ತದೆ. ಆದಕ್ಕಾಗಿಯೇ ನಮ್ಮ ಶ್ರೀಮನ್ಮಹಾರಾಜ ಸರ್ಕಾರದವರೂ ಸಾಮ್ರಾಜ್ಯದ ಸಕಲ ಭಾಗದವರೂ ಯಥಾಶಕ್ತಿ ತನುಮನೋಧನಗಳ ಸಹಾಯವನ್ನಿತ್ತು ರಜೋಗುಣಾಧಿದೇವತೆಯನ್ನು ಆರಾಧಿಸುತ್ತಿದ್ದಾರೆ. ಪ್ರಜೆಗಳಾದ ನಮ್ಮಗಳಿಗೂ ಮನುಷ್ಯಬಲವನ್ನೂ ಧನಬಲವನ್ನೂ ಯಥಾಶಕ್ತಿ ಒದಗಿಸಿ ಕೊಡುವುದು ಕರ್ತವ್ಯವಾಗಿದೆ. ರಾಜಸಭಾವವರ್ಧನಾನುಕೂಲವಾದ ಈಗಣ ನಮ್ಮ ಮಹಾನವಮಿಯ ಮಹೋತ್ಸವಸಮಯದಲ್ಲಿ ಸರ್ವರಿಗೂ ಅಪೇಕ್ಷಣೀಯವಾದ ಜಗಚ್ಛಾಂತಿಯನ್ನು ಕೋರಿ, ಮಿತ್ರಮಂಡಲಿಯ ವಿಜಯಪ್ರಾಪ್ತಿಗಾಗಿ ನಮ್ಮ ಕೈಯಿಂದಾಗುವ ಸಹಾಯಗಳನ್ನೆಲ್ಲಾ ಮಾಡಲು ಸನ್ನದ್ಧರಾಗಿ, ಪ್ರಜಾಮಂಡಲಿಯವರಾದ ನಮ್ಮೆಲ್ಲರ ಸುಖಶಾಂತಿಕ್ಷೇಮಲಾಭಗಳಿಗೆಲ್ಲಾ ಸೂತ್ರಧಾರಕವಾಗಿರುವ ಶ್ರೀಮನ್ಮಹಾರಾಜರವರು ಇಂಥ ನವರಾತ್ರ್ಯುತ್ಸವಗಳನ್ನು ಅತೋಪ್ಯಧಿಕವಾದ ವೈಭವದಿಂದ ಅನಂತಕಾಲ ಅನುಭವಿಸುತ್ತಿರುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸೋಣ.

ಒಳದೇಶದ ವೃತ್ತಾಂತಗಳು.

ಪ್ರಜಾಪ್ರತಿನಿಧಿ ಸಭೆಯು ಬರುವ ತಾ॥ ೧೭ರಲ್ಲಿ ಆರಂಭವಾಗುವುದು.

ರಾಜಧಾನಿಯಲ್ಲಿ ಆಚೆ ಶನಿವಾರ ಭಾನುವಾರಗಳ ರಾತ್ರಿ ಬಲವಾದ ಮಳೆಯಾಯಿತು. ಈಚೆಗೆ ಮಳೆಯಿಲ್ಲ.

ಇಂಫ್ಲುಯನ್ಜಾ ಜ್ವರವು ಬೆಂಗಳೂರು ಪಟ್ಟಣದಲ್ಲಿ ವಿಶೇಷವಾಗಿ ವ್ಯಾಪಿಸಿರುವುದಲ್ಲದೆ ಕಂಟೋನ್ಮೆಂಟಿನಲ್ಲಿರುವ ಸೈನಿಕರಿಗೂ ವ್ಯಾಪಿಸಿರುವುದು.

ನಾಳಿನ ಮಹಾರಾಜಾ ಪ್ರೌಢಕಲಾಶಾಲೆಯಲ್ಲಿ "ಕಾಲೇಜ್ ಡೇ" ಎಂಬ ತೃತೀಯ ವಾರ್ಷಿಕೋತ್ಸವವು ಬೆಳಗ್ಗೆ ಮಧ್ಯಾಹ್ನವೂ ನಡೆವುದು.

ಈ ನವರಾತ್ರಿ ಪ್ರಯುಕ್ತವಾಗಿ ಮೈಸೂರು ಬೆಂಗಳೂರುಗಳ ಮಧ್ಯದಲ್ಲಿ ದಿನಗಟ್ಟಲೆಯ ಬಂಡಿಗಳೇ ಅಲ್ಲದೆ ಹೆಚ್ಚುಗಟ್ಟಲೆಯ ಎರಡೆರಡು ಬಂಡಿಗಳನ್ನು ಬಿಡುವುದಕ್ಕೆ ರೈಲ್ವೆ ಕಂಪೆನಿಯವರು ಏರ್ಪಡಿಸಿದ್ದಾರೆ.

ನಮ್ಮ ದಿವಾನ್ ಸರ್ ವಿಶ್ವೇಶ್ವರಯ್ಯನವರಿಗೆ ಈ ವರ್ಷದ ನವರಾತ್ರಿಯ ಸಮಾರಂಭ ಕಾಲದಲ್ಲಿ ಶ್ರೀಮನ್ಮಹಾರಾಜರವರು ಘನತರವಾದ ಪ್ರಶಸ್ತಿಯೊಂದನ್ನು ದಯಪಾಲಿಸುವವರಾಗಿದ್ದಾರೆಂದು ಕೇಳುತ್ತೇವೆ.

ಪರಸ್ಪರ ಸಹಾಯಸಂಘಗಳ ಮಹಾಸಭೆಯ ೮ ನೆಯ ಅಧಿವೇಶನವು ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಕಳೆದ ಶುಕ್ರವಾರ ಮಧ್ಯಾಹ್ನಾನಂತರ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಟ್ಟಿತು. ಕೌನ್ಸಿಲರ್ ಮ॥ ಪಿ. ರಾಘವೇಂದ್ರರಾಯರ ಅಧ್ಯಕ್ಷತೆಯಿಂದ ಸಭಾಕಾರ್ಯಗಳು ಜರುಗುತ್ತಿರುವುವು.

ಶ್ರೀಮನ್ಮಹಾರಾಜರವರ ಕೃಪಾನುಗ್ರಹದಿಂದ ರಾಜಧಾನಿಯಲ್ಲಿರುವ ಅನಾಥರಿಗೂ ಅಂಗಹೀನರಿಗೂ ಹಿಟ್ಟುಬಟ್ಟೆಗಳನ್ನು ಕೊಡುವುದಕ್ಕೆ ಏರ್ಪಾಡುಮಾಡಲ್ಪಟ್ಟಿರುವುದು ಬಹಳ ಶ್ಲಾಘನೀಯವಾಗಿದೆ. ಮ್ಯುನಿಸಿಪಾಲಿಟಿಯವರು ಈ ಸದುದ್ದೇಶವನ್ನು ಸಫಲಮಾಡುತ್ತಲಿದ್ದಾರೆ. ಮತ್ತೂ ರೂ ಗೆ ೧೪ ಸೇರಿನಂತೆ ರಾಗಿಯನ್ನು ಮಾರಲೇರ್ಪಡಿಸಿರುವುದು ಬಡವರಿಗೆ ಬಹಳ ಸಂತೋಷಕರವಾಗಿದೆ.

ಶತ್ರುಪಕ್ಷದಲ್ಲಿ ಬಲ್ಗೇರಿಯಾದವರು ನಮ್ಮವರಿಗೆ ಶರಣಾಗತರಾದುದೂ ಮತ್ತು ಪಶ್ಚಿಮರಣರಂಗದಲ್ಲೂ ಪಾಲಸ್ತೈನಿನಲ್ಲೂ ನಮ್ಮವರಿಗೆ ವಿಶೇಷ ಜಯಪರಂಪರೆಗಳುಂಟಾಗಿರುವುದೂ ಇವುಗಳ ಸಂತೋಷೋತ್ಸವಕ್ಕಾಗಿ ವೈಸ್ರಾಯರ ಅಪ್ಪಣೆಮೇರೆ ಈ ದೇಶದ ಎಲ್ಲಾ ಕಡೆಯೂ ಕಳೆದ ಸೋಮವಾರ ಕೋರ್ಟುಕಚೇರಿಗಳಿಗೆ ವಿಶ್ರಾಂತಿ ಕೊಡಲ್ಪಟ್ಟು ದೇವಾಲಯಗಳಲ್ಲಿ ಪ್ರಾರ್ಥನೆಯೂ ಇತರೋತ್ಸವಗಳೂ ನಡೆದುವು.

1918-19 ನೆಯ ವರ್ಷಕ್ಕಾಗಿ ಮೈಸೂರು ಡಿಸ್ಟ್ರಿಕ್ಟಿನ ಹಿಂದುಳಿದ ವಿದ್ಯಾರ್ಥಿಗಳಿಗೆ ೩ ನೆಯ ತರಗತಿಯ ವೇತನವು ಹಂಚಲ್ಪಟ್ಟಿರುವುದರಲ್ಲಿ ೪ ಮಹಮ್ಮದೀಯರು, ೧೨ ಲಿಂಗಾಯತರು, ೨೨ ಒಕ್ಕಲಿಗರು, ೧ ವೈಶ್ಯ, ೧ ಬಣಜಿಗ, ೧ ನಾಯಿಂದ, ೧ ದರ್ಜಿ, ೧ ಗೊಲ್ಲ, ೧ ಮಹರಾಟಿ, ೧ ಸಾತಾನಿ, ೨ ಇಂಡಿಯನ್ ಕ್ರಿಸ್ಟಿಯನ್, ೧ ಜೈನ, ೧ ಕ್ಷತ್ರಿಯ, ೨ ಪಂಚಮ, ೧ ಚಟ್ಟಿ, ೧ ವೆಲ್ಲಾಳ ಅಥವಾ ಪಿಳ್ಳೆ, ೧ ದೇವಾಂಗ ಮತ್ತು ೧ ಕುಂಚಟಿಗ ಜನವರ್ಗದವರಿಗೆ ವೇತನಗಳು ದೊರೆದಿರುತ್ತವೆ.

ರಾಜಧಾನಿಯಲ್ಲಿ ಪ್ಲೇಗಿನ ಜತೆಗೆ ನೂತನ ವಿಷಜ್ವರವೂ ಬಹಳವಾಗಿ ಪ್ರಬಲಿಸಿದೆ. ದಿನ ೧ಕ್ಕೆ ಒಟ್ಟು ಮರಣಗಳು ೩೦ ರಿಂದ ೪೦ ರ ವರೆಗೆ ಜರುಗುತ್ತವೆ. ಪ್ರತಿಮನೆಯಲ್ಲೂ ಒಬ್ಬರಿಬ್ಬರು ಹಾಸಿಗೆ ಹಿಡಿದು ಬಿದ್ದೇ ಇದ್ದಾರೆ. ಕೆಲಮನೆಗಳಲ್ಲಿ ಒಟ್ಟಿಗೆ ಮಲಗಿದ್ದಾರೆ. ಪ್ರತಿಯೊಂದು ವೈದ್ಯಶಾಲೆಯಲ್ಲೂ ವೈದ್ಯರುಗಳಿಗೆ ಎರಡುಹೊತ್ತು ಮಾಡಿದರೂ ಮುಗಿಯದಷ್ಟು ಕೆಲಸವು ಹೆಚ್ಚಿಕೊಂಡಿದೆ. ಈ ಸಮಯದಲ್ಲಿ ಪ್ರತಿಮೊಹಲ್ಲೆಗೂ ಒಬ್ಬ ಸಂಚಾರದ ಡಾಕ್ಟರನ್ನು ನಿಯಮಿಸಿ, ಮನೆಮನೆಗೆ ಔಷಧವನ್ನು ಒದಗಿಸುವಂತೆ ಏರ್ಪಡಿಸಿದರೆ ಬಹು ಪ್ರಾಣಗಳನ್ನು ಕಾಪಾಡಿದ ಪುಣ್ಯವು ಸರಕಾರಕ್ಕೆ ಬರುವುದು.

ಗತಿಸಿದ ಸಾ॥ ಜಿ. ಕೆ. ನರಸಿಮ್ಹಯ್ಯನವರ ಕುಟುಂಬ ಅಲಮ್ಮನವರು ತಮ್ಮ ಯಜಮಾನರ ಸ್ಮರಣಾರ್ಥವಾಗಿ ಇಲವಾಲದ ಮಾರ್ಗದಲ್ಲಿ ಕಟ್ಟಿಸಿರುವ ಸತ್ರದಲ್ಲಿ ಪರಸ್ಥಳದವರ ವಸತಿಗೂ ವಿದ್ಯಾರ್ಥಿಗಳ ವಾಸಕ್ಕೂ ಏರ್ಪಡಿಸಿ ಕೊಟ್ಟಿದ್ದಾರಷ್ಟೆ. ಈಗ ಅಲ್ಲಿರುವ ೩೦ ಮಂದಿ ವಿದ್ಯಾರ್ಥಿಗಳಿಗೆ ಪ್ರತಿ ಭಾನುವಾರವೂ ಮೃಷ್ಟಾನ್ನಭೋಜನ ನಡೆಯುವಂತೆಯೂ, ಪ್ರತಿದಿನವೂ ೧೦೦ ಮಂದಿ ಬಡಬಗ್ಗರಿಗೆ ಹಿಟ್ಟು ಅಂಬಲಿ ಹುರುಳಿಗಳನ್ನು ದಾನಮಾಡುವಂತೆಯೂ ಏರ್ಪಡಿಸಿರುತ್ತಾರೆ. ಈಗಣಕಾಲದಲ್ಲಿ ಪತಿಯು ಸದ್ಬುದ್ಧಿಯಿಂದ ಮಾಡಿದ ಧರ್ಮಕ್ಕೇ ಕಂಟಕಿಯರಾಗತಕ್ಕ ಪತ್ನಿಯರು ಹೆಚ್ಚಾಗಿರುವಾಗ ಪತಿಯ ಸದ್ಗತಿಗಾಗಿ ಈ ಅಲಮ್ಮನವರು ಸ್ವಬುದ್ಧಿಯಿಂದ ಇಂಥ ಸತ್ಕಾರ್ಯವನ್ನು ಪ್ರತಿಷ್ಠಾಪಿಸಿ ನಡೆಯಿಸಿಕೊಂಡು ಹೋಗುತ್ತಿರುವುದು ವಿಶೇಷ ಶ್ಲಾಘನೀಯವಲ್ಲವೆ?

ಧಾರವಾಡದ ಮ॥ ಚನ್ನಮಲ್ಲಯ್ಯ ರಪಾಟಿಯವರನ್ನು ಕಳೆದ ತಾ॥ ೨ನೆ ಬುಧವಾರ ರಾತ್ರಿ ೮ಗಂಟೆ ಹೊತ್ತಿನಲ್ಲಿ ಅವರು ಮನೆಗೆ ಹೋಗುತ್ತಿರುವಾಗ ಹಿಂದಣಿಂದ ಯಾರೋ ತುಪಾಕಿಗುಂಡಿನಿಂದ ಹೊಡೆದು ತಲೆತಪ್ಪಿಸಿಕೊಂಡರೆಂದೂ ಮರುದಿನ ಅವರು ವೈದ್ಯಶಾಲೆಯಲ್ಲಿ ಮೃತರಾದರೆಂದೂ ಕೇಳಿ ವಿಷಾದಿಸುತ್ತೇವೆ. ಇವರು ಧಾರವಾಡದ ಪ್ರಸಿದ್ಧ ವೀರಶೈವವರ್ತಕರಲ್ಲಿ ಒಬ್ಬರಾಗಿಯೂ ಅಲ್ಲಿಯ ಮ್ಯುನಿಸಿಪಾಲಿಟಿ ಮ್ಯಾನೇಜಿಂಗ್‌ಕಮಿಟಿ ಚೇರ್ಮನ್ನರಾಗಿಯೂ ಇದ್ದರು. ಪಟ್ಟಣದ ಮಧ್ಯದಲ್ಲೇ ಇಂಥ ಅಪಘಾತಕವು ಸಂಭವಿಸಿರುವುದು ಸಾಮಾನ್ಯವಾದ ಮಾತಲ್ಲ. ಯಾವ ಮೂಲಕವಾದ ದ್ವೇಷದಿಂದ ಯಾವ ನೀಚರು ಇಂಥ ಕಾರ್ಯವನ್ನು ಮಾಡಿದರೆಂಬುದನ್ನು ಅಲ್ಲಿಯ ಪೋಲೀಸರು ಗೊತ್ತುಮಾಡದಿರಲಾರರೆಂದು ನಂಬುತ್ತೇವೆ. ಅಕಾಲದಲ್ಲಿ ಇಂಥ ಅಪಮೃತ್ಯುವಿಗೆ ಗುರಿಯಾದ ಮ॥ ಚನ್ನಮಲ್ಲಯ್ಯನವರ ಕುಟುಂಬದವರಿಗೆ ಈ ಮೂಲಕ ನಮ್ಮ ಸಹಾನುತಾಪವನ್ನು ನಿವೇದಿಸುತ್ತೇವೆ.

ರಾಜಧಾನಿಯ ವೈಶ್ಯಕುಲದಲ್ಲಿ ಹುಟ್ಟಿ ಬಿ. ಎ., ಮತ್ತು ಬಿ. ಇ., ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅನಂತರ ಸೀಮೆಗೆ ಹೋಗಿ ಮೆಕಾನಿಕಲ್ ಇಂಜನಿಯರಿಂಗ್ ಪರೀಕ್ಷೆಯನ್ನು ಶ್ರೇಷ್ಠತರವಾಗಿ ಕೊಟ್ಟು ಯೋಗ್ಯತಾಪತ್ರಿಕೆಗಳನ್ನು ಪಡೆದುಕೊಂಡುಬಂದು ಬೆಂಗಳೂರ ಮೆಕಾನಿಕಲ್ ಇಂಜನಿಯರಿಂಗ್ ಸ್ಕೂಲಿನಲ್ಲಿ ಸೂಪರಿಂಟೆಂಡೆಂಟರಾಗಿದ್ದು ಈಗ ಹೊಸದಾಗಿ ಸ್ಥಾಪಿತವಾಗಿರುವ ಇಂಜನಿಯರಿಂಗ್ ಸ್ಕೂಲಿನಲ್ಲಿ ಪ್ರಿನ್ಸಿಪಾಲರಾಗಿದ್ದ ಮ॥ ಎಸ್. ವಿ. ಸೆಟ್ಟರು ಇನ್‌ಫ್ಲುಯನ್ಜಾ ಜ್ವರ ಪೀಡಿತರಾಗಿದ್ದು ಮೊನ್ನೆಯದಿನ ವಿಧಿವಶರಾದರೆಂದು ತಿಳಿಸಲು ಅತ್ಯಂತ ಖೇದವಾಗುತ್ತದೆ. ಇದಕ್ಕೆ ಮೊದಲು ಇವರ ಹೆಂಡತಿಯವರು ಮತ್ತು ಒಬ್ಬ ಮಗಳು ಇದೇ ರೋಗದಿಂದ ೨ ದಿವಸಗಳ ಹಿಂದೆ ಮೃತರಾಗಿದ್ದರು. ಮ॥ ಸೆಟ್ಟರು ಆಕಾಶವಿಮಾನವನ್ನು ರಚಿಸಿ ತಮ್ಮ ಅಸಾಧಾರಣವಾದ ಬುದ್ಧಿಚಾತುರ್ಯವನ್ನು ಪ್ರದರ್ಶಿಸಿ ಬಹಳ ಸಮರ್ಥರೆಂದು ಖ್ಯಾತಿಯನ್ನು ಪಡೆದು ಇನ್ನೂ ಬಹಳ ಉನ್ನತಪದವಿಗೆ ಬರತಕ್ಕವರಾಗಿದ್ದರು. ಇಂತಹ ಸಮರ್ಥರನ್ನು ಕಳೆದುಕೊಂಡುದು ವೈಶ್ಯಕುಲಕ್ಕೇ ಅಲ್ಲದೆ ನಮ್ಮ ಸಂಸ್ಥಾನಕ್ಕೇ ಬಹಳ ನಷ್ಟವಾಯಿತೆಂಬುದರಲ್ಲಿ ಸಂದೇಹವಿಲ್ಲ.

ಮೈಸೂರು ದಸರಾ ಕೈಗಾರಿಕೆಯ ಮತ್ತು ವ್ಯವಸಾಯದ ವಸ್ತುಪ್ರದರ್ಶನವು ನಿನ್ನೆಯದಿನ ಸಾಯಂಕಾಲ ೫ ಗಂಟೆಯಲ್ಲಿ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಟ್ಟಿತು, ಮತ್ತು ಈ ತಾ॥ ೨೩ ರವರೆಗೆ ನಡೆಯುವುದು. ೪ ರೂಪಾಯನ್ನು ಕೊಟ್ಟು ಸಿಲ್ವರ್ ಟಿಕೆಟ್ಟನ್ನು ಕೊಂಡುಕೊಂಡಲ್ಲಿ ಪ್ರದರ್ಶನವು ಮುಗಿಯುವವರೆಗೂ ಪ್ರತಿದಿನ ಪ್ರಾತಃಕಾಲ ಮತ್ತು ಸಾಯಂಕಾಲದಲ್ಲಿ ಒಬ್ಬರು ಹೋಗಿ ನೋಡಿಕೊಂಡು ಬರಬಹುದು. ಈ ೪ ರೂ. ನಲ್ಲಿ ಕಾಲುಭಾಗದ ಮೊಬಲಗು ಮೈಸೂರು ಇಂಪೀರಿಯಲ್ ಲ್ಯಾನ್ಸರ್ ಸೇನೆಯ ಫಂಡಿಗುಪಯೋಗಿಸಲ್ಪಡುವುದು. ೨ ರೂಪಾಯಿ ಕೊಟ್ಟು ಸೀಜನ್ ಟಿಕೆಟ್ಟು ಕೊಂಡಲ್ಲಿ ಒಬ್ಬರು ಕಡೆಯದಿನದವರೆಗೂ ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲವೂ, ೧ ರೂ. ಯನ್ನು ಕೊಟ್ಟು ಸೀಜನ್ ಟಿಕೆಟ್ ಕೊಂಡಲ್ಲಿ ಪ್ರತಿದಿನ ಸಾಯಂಕಾಲ ೩ ರಿಂದ ೮ ಗಂಟೆಯವರೆಗೂ ಹೋಗಿ ನೋಡಿಕೊಂಡು ಬರಬಹುದು. ಮೇಲ್ಕಂಡ ಟಿಕೆಟ್ಟುಗಳನ್ನು ಪಡೆಯದಿರುವವರು ಮೊದಲನೆಯದಿನ ೮ ಆಣೆ ಕೊಡಬೇಕು. ಈ ಮೊಬಲಗಿನಲ್ಲಿ ಅರ್ಧ ಇಂಪೀರಿಯಲ್ ಸೇನೆಯ ಫಂಡಿಗೆ ಕೊಡಲ್ಪಡುವುದು. ಬಾಕಿ ದಿನಗಳಲ್ಲಿ ನಿತ್ಯವೂ ೨ ಆಣೆ ಕೊಟ್ಟು ಸಾಯಂಕಾಲ ೩ ರಿಂದ ೮ ರವರೆಗೆ ನೋಡಬಹುದು. ತಾರೀಖು ೧೪-೨೨ ಮತ್ತು ೨೪ ರ ಬೆಳಗ್ಗೆ ೮ ರಿಂದ ೧೧ ಗಂಟೆಯವರೆಗೂ ತಾ॥ ೧೬, ೧೭, ೧೮, ೧೯ ಮತ್ತು ೨೩ ರಲ್ಲಿ ಬೆಳಗ್ಗೆ ೧೧ ರಿಂದ ೧ ಗಂಟೆಯವರೆಗೂ ನೋಡಲು ನಿತ್ಯದಲ್ಲೂ ೪ ಆಣೆ ಕೊಡಬೇಕು. ತಾ॥ ೧೫ ರಲ್ಲಿ ಪ್ರದರ್ಶನಾಲಯವು ತೆರೆಯಲ್ಪಡುವುದಿಲ್ಲ. ಮತ್ತು ತಾ॥ ೨೩ ರಲ್ಲಿ ಘೋಷಾ ಹೆಂಗುಸರು ಮಾತ್ರ ಬಿಡಲ್ಪಡುವರು.

ಯುದ್ಧವಾರ್ತೆಯು.

ಪಶ್ಚಿಮರಂಗದಲ್ಲಿ ಈಗ ಶತ್ರುಗಳು ನಿರಾಶೆಯಿಂದ ದೇಹಾಭಿಮಾನವನು ತೊರೆದು ಕೆಲಸಮಾಡುವವರಂತೆ ಅತ್ಯಂತ ಘೋರಯುದ್ಧವನ್ನು ನಡೆಯಿಸುತ್ತ ಮಿತ್ರಮಂಡಲಿಯವರನ್ನು ತಡೆಯುತ್ತಿದ್ದಾರೆ. ಆದುಕಾರಣ ನಮ್ಮವರ ನುಗ್ಗಾಟವು ಮೆಲ್ಲನೆ ಸಾಗುತ್ತಿದ್ದರೂ ಫಲವು ಆಶಾಜನಕವಾಗಿಯೇ ಇದೆ. ಶತ್ರುಗಳು ಬಹು ನಷ್ಟಪಡುತ್ತಲೂ ಒಂದೊಂದಾಗಿ ಸ್ಥಳಗಳನ್ನು ಕಳೆದುಕೊಳ್ಳುತ್ತಲೂ ಇದ್ದಾರೆ. ಕಾಂಬ್ರೈ ಸೆಂಟ್‌ಕ್ವಿಟನ್ನುಗಳ ಮಧ್ಯದಲ್ಲಿ ಮಿತ್ರಮಂಡಲಿಯವರು ಭೇದಿಸಿಕೊಂಡು ನುಗ್ಗಿದರು. ಶತ್ರುಗಳು ಹಠಾತ್ತಾಗಿ ಹಿಮ್ಮೆಟ್ಟಬೇಕಾಯಿತು. ಸೆಂಟ್‌ಕ್ವಿಟನ್ನು ಫ್ರೆಂಚರ ವಶವಾಯಿತು. ಕಾಂಬ್ರೈಯ ಸುತ್ತುಮುತ್ತಣ ಪ್ರದೇಶವೆಲ್ಲಾ ಇಂಗ್ಲೀಷರ ವಶವಾಗಿದೆ. ಆ ಪಟ್ಟಣವನ್ನು ಮಾತ್ರ ಶತ್ರುಗಳು ಬಿಗಿಪಟ್ಟಿನಿಂದ ಕಾಯ್ದುಕೊಂಡು ಹೋರಾಡುತಿದ್ದಾರೆ. ಆದರೂ ಆದೂ ದುವಾಯಿಪಟ್ಟಣವೂ ಸಂಪೂರ್ಣವಾಗಿ ಅಲ್ಪಕಾಲದಲ್ಲೇ ನಮ್ಮವರ ವಶವಾಗುವುದರಲ್ಲಿ ಸಂಶಯವಿಲ್ಲ. ಉತ್ತರದಲ್ಲಿ ಬೆಲ್ಜಿಯಂ ದೇಶದ ಸಮುದ್ರತೀರ ಪ್ರಾಂತಗಳಲ್ಲಿ ನಮ್ಮವರ ಒತ್ತಾಟವು ಬಲವಾದುದರಿಂದ ಸಮುದ್ರತೀರ ಪ್ರಾಂತವನ್ನು ಶತ್ರುಗಳು ಬಿಟ್ಟು ಹಿಂಜರಿದು ಹೋಗುವುದರಲ್ಲಿದ್ದಾರೆ. ದೊಡ್ಡದೊಡ್ಡ ಫಿರಂಗಿ ಮೊದಲಾದ ಸಾಮಗ್ರಿಗಳನ್ನು ಹಿಂದಕ್ಕೆ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಅಲ್ಲಿ ಜರ್ಮನರ ಸೇನೆಯ ಪ್ರಥಮ ರಕ್ಷಣ ಪಙ್ತಿಯಲ್ಲಿದ್ದ ಡಿಕ್ಸ್‌ಮೂಡು, ವೈಪ್ರೆಸ್, ಅರ್ಮೆಂಟಿಯರ್ಸ್, ಲಾಬಾಸಿ ಪಟ್ಟಣಗಳೆಲ್ಲಾ ನಮ್ಮವರ ವಶವಾದುದರಿಂದ ಅದರ ಹಿಂದಣ ಸಂರಕ್ಷಣಪಙ್ಕ್ತಿಯ ಪಟ್ಟಣಗಳಾದ ಲಿಲ್ಲಿ, ರೌಬಿ, ಲೆನ್ಸು ಮೊದಲಾದ ಪಟ್ಟಣಗಳ ಸಾಲಿಗೆ ಶತ್ರುಗಳು ಹೋಗಿದ್ದಾರೆ. ಈ ಸಾಲಿನ ಕಡೆಗೂ ನಮ್ಮವರು ನುಗ್ಗಿ ಯುದ್ಧಮಾಡುತ್ತಿದ್ದಾರೆ. ಲೆನ್ಸ್ ಪಟ್ಟಣವು ನಮ್ಮವರ ವಶವಾಯಿತು. ಲಿಲ್ಲಿ ಪಟ್ಟಣವನ್ನು ಶತ್ರುಗಳು ತೆರವುಮಾಡುತ್ತಿದ್ದಾರೆ. ಬ್ರೂಜೆಸ್ ಪಟ್ಟಣದ ಬೆಲ್ಜಿಯಂ ನಿವಾಸಿಗಳು [illegible].

ಜರ್ಮನಿಯ ಅವಸ್ಥೆ.

ಕೃತಕರ್ಮಕ್ಕೆ ಪ್ರಾಯಶ್ಚಿತ್ತವನ್ನು ಪಡೆದುಕೊಳ್ಳುವ ಅವಸ್ಥೆಯ ಆರಂಭವು ಜರ್ಮನಿಗೆ ಈಗ ಪ್ರಾಪ್ತವಾಗಿದೆ. ಇದುವರೆಗಣ ತಮ್ಮ ದುರ್ಯೋಚನೆ, ಪ್ರಪಂಚಸಾಮ್ರಾಜ್ಯಭೋಗಾಶೆ ಇವುಗಳೆಲ್ಲಾ ವ್ಯರ್ಥವಾದುವುಗಳೆಂದೂ ಆತ್ಮಹಾನಿಗೇ ಮೂಲವೆಂದೂ ಅವರು ತಿಳಿದುಕೊಳ್ಳುವಂತಾಗಿದೆ. ಅಪಜಯವನ್ನು ಪಡೆದು ಮಿತ್ರಮಂಡಲಿಯವರೇ ಸಂಧಿಗೆ ಹಲ್ಕಿರಿದು ಬರುವವರೆಗೂ ಆಯುಧವನ್ನು ನಾವು ಕೆಳಕ್ಕೆ ಇಳುಹುವವರಲ್ಲವೆಂದು ಜಂಭಕೊಚ್ಚುತ್ತಿದ್ದ ಅವರ ಮಂತ್ರಿಗಳೆಲ್ಲಾ ಉದ್ಯೋಗವನ್ನು ಬಿಟ್ಟು ತಲೆತಪ್ಪಿಸಿಕೊಂಡರು. ದೈವಪ್ರೇರಣೆಯಿಂದಲೇ ಈ ಯುದ್ಧವನ್ನು ಆರಂಭಿಸಿದ್ದೇನೆ ನನಗೇ ದೈವಬಲವಿದೆಯೆಂದು ದೇವನೂತನಂತೆ ಕಾಯಾಸವನ್ನು ಹೇಳುತ್ತಿದ್ದ ಕೈಜರರ ನಾಲಿಗೆಯು ತುಂಡಾಯಿತು. ಆತನ ಶೂರದಳಪತಿಗಳು ಅಪಜಯದ ದೋಷವನ್ನು ಒಬ್ಬರಮೇಲೊಬ್ಬರು ಹೊರಿಸುತ್ತ ಕಾಲಯಾಪನೆ ಮಾಡುತ್ತಿರುವರು. ಪ್ರಜೆಗಳೆಲ್ಲಾ ಕುಪಿತರೂ ಅಂದೋಳಿತರೂ ಆಗಿರುವರು. ಈಗ ಜರ್ಮನಿಗೆ ಹೊಸ ಮಂತ್ರಿಮಂಡಲವು ಏರ್ಪಟ್ಟಿರುವುದು. ಈಗಣ ನೂತನ ಮಂತ್ರಿಗಳು ಅಹಂಭಾವವನ್ನು ಬಿಟ್ಟು ಬೇರೆ ದಾರಿಯಲ್ಲಿ ನಡೆದಲ್ಲದೆ ದೇಶರಕ್ಷಣೆ ಮಾಡಿಕೊಳ್ಳುವುದು ಸಾಧ್ಯವಲ್ಲವೆಂದು ಯೋಚಿಸಿದಂತೆ ಕಾಣುತ್ತದೆ. ಜರ್ಮನಿ ದೇಶದಲ್ಲಿ ನಿರಂಕುಶಪ್ರಭುತ್ವವು ತಪ್ಪಿ ಪ್ರಜಾಸ್ವಾಮ್ಯಪ್ರಾಬಲ್ಯವುಳ್ಳ ಪ್ರಭುತ್ವನೇರ್ಪಡುವಂತೆ ಅವರು ಶಾಸನ ಮಾಡಲು ಸಿದ್ಧರಾಗಿದ್ದಾರೆ. ನೂತನ ಪ್ರಭುತ್ವದಲ್ಲಿ ಕೂಲಿಕಾರರ ಪಕ್ಷದ ಪ್ರಮುಖರಿಗೆ ವಿಶೇಷ ಭಾಗವು ಕೊಡಲ್ಪಡುವುದಂತೆ. ಪ್ರಪಂಚದಮೇಲೆ ಸರ್ವರಾಷ್ಟ್ರಗಳಿಗೂ ಸಮಾನವಾದ ಬಾಧ್ಯತೆಯನ್ನು ತಾವು ಪಡೆದುಕೊಳ್ಳುವುದಕ್ಕೂ, ಬೆಲ್ಜಿಯಮ್ಮಿಗೆ ಸರ್ವಸ್ವಾತಂತ್ರ್ಯವನ್ನೂ ಒಪ್ಪಿಕೊಳ್ಳುವುದಕ್ಕೂ ನಷ್ಟಪರಿಹಾರವನ್ನು ಬೇಕಿದ್ದರೂ ಕೊಡುವುದಕ್ಕೂ, ಶಾಶ್ವತಸಂಧಿಯನ್ನು ಮಾಡಿಕೊಳ್ಳುವುದಕ್ಕೂ, ಬಾಲ್ಟಿಕ್ ಸಮುದ್ರದಲ್ಲಿ ವಿಥೋನಿಯೊ ಪೋಲಂಡುಗಳಲ್ಲಿ ಪ್ರಜಾಪ್ರತಿನಿಧಿ ಸಂಘಗಳನ್ನು ಸ್ಥಾಪಿಸುವುದಕ್ಕೂ ಜರ್ಮನಿಯು ಸಿದ್ಧವಾಗಿರುವುದಂತೆ. ಅದಕ್ಕಾಗಿ ಜರ್ಮನಿಯ ಮುಖ್ಯಮಂತ್ರಿಯವರು ಸ್ವಿಡ್ಜರ್ಲೆಂಡಿನವರ ಮುಖೇನ ಅಮೇರಿಕಾದ ಅಧ್ಯಕ್ಷರಿಗೆ ಸಂಧಿಯನ್ನು ಕೋರುವ ಪತ್ರಿಕೆಯನ್ನು ಕಳುಹಿಸಿ ಕೊಟ್ಟಿರುವರು. ಇತ್ತಕಡೆ ತಮ್ಮ ಪ್ರಜೆಗಳ ಮುಂದೆ ನಾವು ನಾಲ್ಕು ವರ್ಷಗಳಿಂದಲೂ ಮಹಾಯುದ್ಧವನ್ನು ನಡಿಸುತ್ತಿದ್ದೇವೆ. ಅವರೂ ಪಶ್ಚಿಮರಂಗದಲ್ಲಿ ನಮ್ಮ ಸೇನಾಪಂಕ್ತಿಯು ಕದಲಲಿಲ್ಲ. ಆದರೂ ಅನವಶ್ಯಕವಾಗಿ ಯುದ್ಧವನ್ನು ಬಳೆಯಿಸದೆ ಎಷ್ಟರವರೆಗೆ ಯುದ್ಧ ಮಾಡಬೇಕೋ ಅಷ್ಟುಮಟ್ಟಿಗೆ ಮಾಡಿ ವಿರಮಿಸುವುದು ಗೌರವಕ್ಕೆ ಭಂಗಕರವಲ್ಲ. ಆದುಕಾರಣವೇ ನಾನು ಪ್ರೆ॥ ವಿಲ್ಸನ್ನರವರಿಗೆ ಸಂಧಿವಿಷಯವಾಗಿ ಬರೆದಿರುವೆನು. ಅವರು ಮಾಡಿರುವ ಸೂಚನೆಗಳು ನಮಗೆ ಅನುಕೂಲವಾಗಿಯೇ ಇವೆ. ಸಕಲ ಮಾನವಕೋಟಿಗೂ ಪ್ರೆ॥ ವಿಲ್ಸನ್ನರೂ ನಮ್ಮ ಪ್ರಭುತ್ವದವರೂ ಕೂಡ ಹಿತವನ್ನು ಕೋರುವವರಾಗಿದ್ದಾರೆ. ಆದುಕಾರಣ ಸರ್ವಹಿತಕರವಾದ ಸಂಧಿ ಜರುಗಬೇಕಾಗಿದೆ. ಸಂಧಿ ಕುದುರಿದರೆ ಸಂತೋಷವೇ. ತಪ್ಪಿದರೆ ಕಡೆಯವರೆಗೂ ನಾವು ಅನಿವಾರ್ಯದಿಂದ ಯುದ್ಧ ಮಾಡುವುದಕ್ಕೆ ಸಿದ್ಧರಾಗಿಯೇ ಇರಬೇಕಾಗುತ್ತದೆ" ಎಂದು ಜರ್ಮನಿ ಮುಖ್ಯಮಂತ್ರಿಯವರು ಒಣಜಂಭದಿಂದ ಹೇಳಿರುತ್ತಾರೆ. ಸಂಧಿ ವಿಷಯದಲ್ಲಿ ಜರ್ಮನರು ಮಾಡಿದ ಸೂಚನೆಗೆ ಆಸ್ಟ್ರಿಯಾದವರೂ ಕೂಡ ಒಪ್ಪಿ ಅವರೂ ಅಮೇರಿಕಾ ಪ್ರೆಸಿಡೆಂಟ್ ವಿಲ್ಸನ್ನರವರಿಗೆ ಬರೆದುಕೊಂಡಿರುವರು. ಕಳೆದ ಜನವರಿ ತಾ॥ ೮ ರಲ್ಲಿ ನೀವು ಮಾಡಿರುವ ೧೪ ಸೂಚನೆಗಳೂ, ಫೆಬ್ರವರಿ ತಾ॥ ೧೨ ರಲ್ಲಿ ಮಾಡಿರುವ ೪ ಸೂಚನೆಗಳೂ, ಸೆಪ್ಟಂಬರ್ ತಾ॥ ೨೭ ರಲ್ಲಿ ನೀವು ಮಾಡಿರುವ ಪ್ರಕಟನೆಗಳೂ ಕೂಡ ಸಂಧಿನಿಬಂಧನೆಗಳಿಗೆ ಮೂಲಾಧಾರವಾಗಿರಬೇಕು. ಅದರಂತೆ ಶಾಶ್ವತಸಂಧಿ ನಡೆಯಿಸುವುದಕ್ಕಾಗಿ ಭೂಮಿಯಮೇಲೂ ಜಲದಮೇಲೂ ಆಕಾಶದಲ್ಲೂ ನಡೆಯಿಸುತ್ತಿರುವ ಯುದ್ಧವನ್ನೆಲ್ಲಾ ಕೂಡಲೇ ತಾತ್ಕಾಲಿಕವಾಗಿ ನಿಲ್ಲಿಸುವಂತೆ ಮಾಡಬೇಕು. ಎಂಬುದಾಗಿ ವಿಲ್ಸನ್ನರವರಿಗೆ ಸ್ವೀಡನ್ನಿನವರ ಮೂಲಕ ತಂತ್ರಿಯ ದ್ವಾರಾ ಇವರು ತಿಳಿಯಪಡಿಸಿಕೊಂಡಿರುವರು.

ಫ್ರಾನ್ಸ್ ದೇಶದ ಅನೇಕ ಪತ್ರಿಕೆಗಳು ಶತ್ರುಗಳ ಈ ಸಂಧಿಸೂಚನೆಯು ಮೋಸವೆಂತಲೂ, ಈಗ ನಾವು ಯುದ್ಧಕ್ಕೆ ವಿಶ್ರಾಂತಿಯನ್ನು ಕೊಡಕೂಡದೆಂತಲೂ ಹೇಳಿರುತ್ತವೆ. ಇಂಗ್ಲಿಷ್ ಯುದ್ಧಸಂಘಮಂತ್ರಿಯವರಾದ ಚಾರ್ಲ್ಸ್‌ರವರು ಜರ್ಮನರ ದಂಭೋಕ್ತಿಗಳು ಇನ್ನೂ ತಪ್ಪಿಲ್ಲ. ಕೈಜರರ ಮಾತನ್ನು ನಂಬಲಾಗದು. ಬೆಲ್ಜಿಯಂ, ಫ್ರಾನ್ಸ್ ದೇಶಗಳನ್ನು ಅವರು ಮೊದಲು ಬಿಟ್ಟುಬಿಟ್ಟು, ಪ್ರಜಾಪರಿಪಾಲನವನ್ನು ತಮ್ಮ ದೇಶದಲ್ಲಿ ಏರ್ಪಡಿಸಿದರೆ ಆಬಳಿಕ ಸಂಧಿಯ ಮಾತನ್ನಾಡಬಹುದೆಂದು ಹೇಳಿರುತ್ತಾರೆ.

ಬಲ್ಗೇರಿಯಾ.

ಮಿತ್ರಮಂಡಲಿ ಸೈನ್ಯದ ಶೌರ್ಯಾತಿರೇಕದಿಂದ ತಮಗೆ ವಿಷಮಸ್ಥಿತಿಯುಂಟಾಗುವ ಸೂಚನೆ ಕಂಡಕೂಡಲೇ ಬಲ್ಗೇರಿಯಾ ಪ್ರಭುವಾದ ಫರ್ಡಿನಾಂಡ್‌ರವರು ತಮಗೆ ಸಹಾಯಮಾಡಬೇಕೆಂದು ಆಸ್ಟ್ರಿಯಾದವರನ್ನೂ ಜರ್ಮನಿಯವರನ್ನೂ ಕೇಳಿಕೊಂಡರಂತೆ. ಅವರು ನಿರಾಕರಿಸಿಬಿಟ್ಟುದರಿಂದ ಬಳಿಕ ಮಿತ್ರಮಂಡಲಿಯ ಸಹಾಯವನ್ನು ಬಲ್ಗೇರಿಯಾ ರಾಜರು ಕೋರಿಕೊಳ್ಳಬೇಕಾಯಿತು. ಅಷ್ಟರಲ್ಲಿ ಬಲ್ಗೇರಿಯಾ ದೇಶದೊಳಗಣ ಪ್ರಜೆಗಳ ದೌರ್ಜನ್ಯವು ರಷ್ಯಾದೊಳಗಿನ ಸ್ಥಿತಿಯಂತಿದ್ದಿತು. ಕಾರ್ಮಿಕಸೈನಿಕರು ಸಭೆಗೂಡಿಸುತ್ತಿದ್ದರು. ಮತ್ತೂ ರಷ್ಯಾ ಜಾರಿನ ಕೊಲೆಯನ್ನು ಜ್ಞಾಪಿಸುತ್ತ ಕೂಗಿಕೊಂಡು ಅರಮನೆ ಕಡೆಗೆ ನುಗ್ಗುತ್ತಿದ್ದರು. ಈ ಒಳಗಣ ವೈಷಮ್ಯದಮೇಲೆ ಹೊರಗಣ ಶತ್ರುಬಾಧೆಯನ್ನು ಸಹಿಸುವುದು ಅಸಾಧ್ಯವಾಯಿತು. ತಮ್ಮ ಸೈನ್ಯವು ದಿಕ್ಕುದಿಕ್ಕಿಗೆ ಚದರಿಹೋಗಿದ್ದಿತು. ಈ ಕಾರಣಗಳಿಂದೆಲ್ಲಾ ಅವರು ಮಿತ್ರಮಂಡಲಿಗೆ ಶರಣಾಗತರಾಗಿ ದೇಶವನ್ನು ರಕ್ಷಿಸಿಕೊಳ್ಳಬೇಕಾದ ಹೊತ್ತು ಪ್ರಾಪ್ತವಾಯಿತು.

ತುರ್ಕಿ.

ಚಿಕ್ಕಏಷ್ಯಾದಲ್ಲಿ ಬಹು ಪ್ರಮುಖಸ್ಥಾನವಾಗಿರುವ ಡಮಾಸ್ಕಸ್ ಪಟ್ಟಣವನ್ನು ನಮ್ಮವರು ಕಳೆದ ತಾ॥ ೩೦ ರಲ್ಲಿ ಆಕ್ರಮಿಸಿಕೊಂಡರು. ಅಲ್ಲಿ ೭೦೦೦ ಮಂದಿ ತುರ್ಕೀಸೈನಿಕರು ಸೆರೆಸಿಕ್ಕಿದರು. ಈಚೆಗೆ ಡಮಾಸ್ಕಸ್ಸಿಗೆ ಉತ್ತರಕ್ಕೂ ಪಶ್ಚಿಮಕ್ಕೂ ಮಿತ್ರಮಂಡಲಿ ಸೈನ್ಯಗಳು ನುಗ್ಗಿಹೋಗಿ ೧೫ ಸಾವಿರ ಮಂದಿ ಶತ್ರುಸೈನಿಕರನ್ನು ಸೆರೆ ಹಿಡಿದರು. ಎಂದರೆ ಕಳೆದ ಸೆಪ್ಟಂಬರ್ ತಾ॥ ೧೮ ರಿಂದ ಅಕ್ಟೋಬರ್ ತಾ॥ ೩ ರವರೆಗೆ ೭೧ ಸಾವಿರ ಮಂದಿಗಳನ್ನೂ ೩೫೦ ಫಿರಂಗಿಗಳನ್ನೂ ವಶಪಡಿಸಿಕೊಂಡಂತಾಯಿತು. ಇದಲ್ಲದೆ ಅರಬ್ಬಿಯವರು ಕೂಡ ೮೦೦೦ ಮಂದಿ ಶತ್ರುಸೈನಿಕರನ್ನು ಹಿಡಿದಿದ್ದಾರೆ. ಒಟ್ಟಿಗೆ ಸೆರೆ ಸಿಕ್ಕಿದವರಲ್ಲಿ ೩೨೦೬ ಮಂದಿಗಳು ಜರ್ಮನರೂ ಆಸ್ಟ್ರಿಯಾದವರೂ ಆಗಿದ್ದಾರೆ. ತುರ್ಕಿಯವರು ಸಂಧಿನಿಬಂಧನೆಗಳಿಗೆ ವಿರುದ್ಧವಾಗಿ ಕೆಲ ಪ್ರಾಂತಗಳನ್ನು ಆಕ್ರಮಿಸಿಕೊಂಡುದರಿಂದ ಅವರೊಡನೆ ನಮಗೆ ನಡೆದಿದ್ದ ಸಂಧಿಯು ಮುರಿದುಹೋಯಿತೆಂದು ರಷ್ಯಾದವರು ತುರ್ಕಿಯವರಿಗೆ ತಿಳಿಯಬಿಟ್ಟಿರುವರು. ಇದರಮೇಲೆ ತುರ್ಕಿಗೂ ಜರ್ಮನಿಗೂ ವೈಷಮ್ಯವುಂಟಾಗಿದೆ. ಬಲ್ಗೇರಿಯಾವು ತುರ್ಕಿಯಮೇಲೆ ಯುದ್ಧಪ್ರಕಟಮಾಡುವುದಕ್ಕೆ ಸಿದ್ಧವಾಗಿರುವಂತಿದೆ. ಇವೆಲ್ಲ ಕಾರಣಗಳಿಂದ ತುರ್ಕಿಗೆ ದಿಕ್ಕುತೋಚದೆ ಇದೆ. ಅದು ದೊಡ್ಡದೊಡ್ಡ ರಾಷ್ಟ್ರಗಳ ಸಾಲಿನಲ್ಲಿ ಸೇರಿ ಒಂದು ಮಹಾಸಾಮ್ರಾಜ್ಯವನ್ನಿಟ್ಟುಕೊಳ್ಳಬೇಕೆಂದಿದ್ದ ಆಸೆಯೆಲ್ಲಾ ಎಷ್ಟೋ ದೂರ ಹೊರಟುಹೋಯಿತು. "ಬಲ್ಗೇರಿಯಾದವರು ನಮ್ಮಮೇಲೆ ಬೀಳದಿದ್ದರೆ ಸಾಕು, ಭೂಮಂಡಲದ ಮೇಲೆ ನಮ್ಮ ರಾಜ್ಯವು ಉಳಿದರೆ ಸಾಕು" ಎಂದು ತಪಸ್ಸು ಮಾಡುವ ಸ್ಥಿತಿಯು ಅವರಿಗೆ ಪ್ರಾಪ್ತವಾಗಿದೆ. ತುರ್ಕಿಯವರು ಬಲ್ಗೇರಿಯಾದಂತೆ ಮಿತ್ರಮಂಡಲಿಯನ್ನು ಮರೆಹೋಗದಿದ್ದರೆ ಭೂಮಾರ್ಗದಿಂದಲೇ ಮಿತ್ರಮಂಡಲಿಯವರು ಕಾನ್‌ಸ್ಟಾಂಟಿನೋಪಲ್ಲಿನಮೇಲೆ ಹೋಗಿ ಮುತ್ತಿ ಆಕ್ರಮಿಸಿಕೊಳ್ಳುವುದು ಅಸಾಧ್ಯವಾಗಿರುವುದಿಲ್ಲ.

ಭರತಖಂಡದ ವೃತ್ತಾಂತಗಳು.

ಬಂಗಾಳಾದಲ್ಲಿ ಲೈಸೆನ್ಸು ಪಡೆಯದವರಾರೂ ಬಟ್ಟೆಯ ಒಟ್ಟುವ್ಯಾಪಾರವನ್ನು ಮಾಡಲಾಗದೆಂದು ವಿಧಿಸಿದ್ದಾರೆ.

ಬರುವ ಏಪ್ರಿಲ್ ತಿಂಗಳಿಂದ ಮದ್ರಾಸು ಗೌರ್ನರ್ ಪದವಿಗೆ ಈಗಣ ಬೊಂಬಾಯಿ ಗೌರ್ನರ್ ಲಾರ್ಡ್ ವೆಲ್ಲಿಂಗ್ಟನ್ನರವರು ಬರುವರು.

ರೌಲೆಟ್ ಕಮಿಟಿಯವರ ವರದಿಯಲ್ಲಿ ಕಂಡ ಸೂಚನೆಯನ್ನನುಸರಿಸಿ ಇಂಡ್ಯಾ ಸರ್ಕಾರದವರು ಒಂದು ನೂತನಶಾಸನವನ್ನು ಏರ್ಪಡಿಸುವವರಾಗಿದ್ದಾರೆ.

ವೈಸ್ರಾಯರು ಪತ್ನೀಪರಿವಾರ ಸಮೇತರಾಗಿ ಕಾಶ್ಮೀರಸಂಸ್ಥಾನದ ಕಡೆಗೆ ಹೋಗಿ ಸಂಚರಿಸಿಕೊಂಡು ಬರುವ ತಿಂಗಳು ತಾ॥ ೩ ಕ್ಕೆ ಮರಳಿ ದಿಲ್ಲಿಪಟ್ಟಣವನ್ನು ಸೇರುವವರಾಗಿದ್ದಾರೆ.

ಶ್ರೀಯುತ್ ಗಂಧಿಯವರಿಗೆ ಕಳೆದ ತಾ॥ ೩ ರ ರಾತ್ರಿ ಅಕಸ್ಮಾತ್ತಾಗಿ ಹೃದಯದಲ್ಲಿ ನೋವು ಕಾಣಿಸಿಕೊಂಡು ಅವರು ರುಗ್ಣಶಯ್ಯಾಗತರಾಗಿದ್ದಾರೆ. ಸ್ಥಿತಿಯು ಅಪಾಯಕರವಾಗಿದೆಯೆಂದು ವರ್ತಮಾನ ಬಂದಿದ್ದು ಈಚೆಗೆ ಗುಣಮುಖವಾಗಿದೆಯೆಂದು ಕೇಳುತ್ತೇವೆ. ಈ ಅನುಪಮ ದೇಶಭಕ್ತರಿಗೆ ಜಗದೀಶನು ಆರೋಗ್ಯವನ್ನು ಬೇಗನೆ ಅನುಗ್ರಹಿಸಲಿ.

ಕಾಂಗ್ರೆಸ್ ಪ್ರತಿನಿಧಿಗಳು ಸೀಮೆಗೆ ಹೋಗುವ ವಿಷಯದಲ್ಲಿ ಇಂಡ್ಯಾ ಪ್ರಭುತ್ವದವರ ಅನುಮತಿಯನ್ನು ಕೇಳಲು ಮಿ॥ ಸಯ್ಯದ್‌ಹಸನ್ ಇಮಾಮ್‌ರವರೂ, ಮಿ॥ ಸಿ.ಪಿ. ರಾಮಸ್ವಾಮಯ್ಯರೂ ಸಹ ವೈಸ್‌ರಾಯರನ್ನು ಕಂಡರು. ಸುಧಾರಣೆಯ ವಿಷಯದಲ್ಲಿ ಪ್ರತ್ಯೇಕಸಂಘಗಳ ಸೂಚನೆಗಳೆಲ್ಲಾ ಪ್ರಕಟವಾದ ಹೊರತು ಪ್ರಯಾಣಕ್ಕೆ ಅನುಮತಿಯು ದೊರೆಯಲಾರದೆಂದೂ, ಸುಧಾರಣೆಯ ವಿಷಯದಲ್ಲಿ ವರದಿಯು ಸಿದ್ಧವಾದ ಕೂಡಲೇ ಮಸೂದೆಯನ್ನು ಪಾರ್ಲಿಮೆಂಟಿನ ಮುಂದಕ್ಕೆ ಇಡುವುದಕ್ಕಿಂತ ಮುಂಚೆಯೇ ಕಾಂಗ್ರೆಸ್ ರಾಯಭಾರಿಗಳಿಗೆ ಸೀಮೆಗೆ ಹೋಗುವುದಕ್ಕೆ ಅಪ್ಪಣೆಚೀಟಿಯು ಕೊಡಲ್ಪಡುವುದೆಂದೂ ವೈಸ್ರಾಯರು ಅಪ್ಪಣೆಕೊಟ್ಟರು.

ಇದುವರೆಗೆ ಭರತಖಂಡ ಸರ್ಕಾರದ ಕೋಶಾಧ್ಯಕ್ಷರಾಗಿದ್ದ ಸರ್ ವಿಲಿಯಂಮೇಯರ್‌ರವರು ತಮ್ಮ ಕೆಲಸದಿಂದ ನಿವೃತ್ತರಾಗಿ ಹೋಗುವವರಾಗಿದ್ದಾರೆ. ಇವರ ಕಾಲದಲ್ಲಿ ಭರತಖಂಡದಲ್ಲಿ ಯುದ್ಧಮೂಲಕವಾದ ಆರ್ಥಿಕದಾಹವು ವಿಶೇಷವಾಗಿದ್ದರೂ ಪ್ರಜಾಸಾಮಾನ್ಯಕ್ಕೆ ಬಾಧಾಕರವಾಗದ ರೀತಿಯಲ್ಲಿ ಬಡ್ಜೆಟ್ಟುಗಳನ್ನು ಏರ್ಪಡಿಸಿ ದೇಶೀಯರ ಕೃತಜ್ಞತೆಗೂ ಮರ್ಯಾದೆಗೂ ಇವರು ಪಾತ್ರರಾಗಿರುವರಲ್ಲದೆ ಸಾರ್ವಭೌಮರ ಮನ್ನಣೆಗೂ ಪಾತ್ರರಾಗಿರುವರು. ಈಗತಾನೆ ಇವರಿಗೆ ಜಿ.ಸಿ.ಐ.ಇ. ಎಂಬ ಪ್ರಶಸ್ತಿಯು ಸಾರ್ವಭೌಮರಿಂದ ಅನುಗ್ರಹಿಸಲ್ಪಟ್ಟಿರುವುದು. ಕಳೆದ ತಾ॥ ೩ ರಲ್ಲಿ ಇವರನ್ನು ಸಾಗಗಳುಹಿಸುವಾಗ ವೈಸ್‌ರಾಯರು ಒಂದು ಔತಣವನ್ನು ಮಾಡಿದರು.

ಬರುವ ಡಿಸೆಂಬರ್ ತಿಂಗಳಲ್ಲಿ ದಿಲ್ಲಿಪಟ್ಟಣದಲ್ಲಿ ಕೂಡುವುದಕ್ಕಿರುವ ರಾಷ್ಟ್ರೀಯ ಮಹಾಸಭೆಗೆ ಅಧ್ಯಕ್ಷರನ್ನು ನಿಯಮಿಸುವ ವಿಚಾರದಲ್ಲಿ ರಾಷ್ಟ್ರೀಯ ಸಂಘಗಳು ೧೨ ರಲ್ಲಿ ೧ ಮಾತ್ರ ಮಹಮ್ಮದಾಬಾದು ರಾಜರನ್ನು ಸೂಚಿಸಿ, ಉಳಿದ ೧೧ ಸಂಘಗಳೂ ಶ್ರೀಮಾನ್ ತಿಲಕರನ್ನು ಸೂಚಿಸಿರುವುದರಿಂದ ಅವರೇ ಮುಂದಣ ಸಭೆಗೆ ಅಧ್ಯಕ್ಷರಾಗಬೇಕಾಗಿದೆ. ಆದರೆ ದಿಲ್ಲಿಪಟ್ಟಣಕ್ಕೆ ತಿಲಕರ ಪ್ರವೇಶವೇ ಅಲ್ಲಿಯ ಸರ್ಕಾರದಿಂದ ನಿರೋಧಿಸಲ್ಪಟ್ಟಿರುವಾಗ ಈ ನಿಯಮನವು ಸರ್ಕಾರದವರ ಸಂಕಲ್ಪಕ್ಕೆ ವಿರೋಧಿಸುವುದೇ ಮುಖ್ಯತಕ್ಷವಾಗಿ ಮಾಡಿದಂತೆ ಕಾಣಿಸುತ್ತದೆ. ಆದರೆ ತಿಲಕರೇ ಇದಕ್ಕೆ ಒಪ್ಪಲಿಲ್ಲ. ಅವರು ಸೀಮೆಯಿಂದ ಬರುವುದಕ್ಕೆ ೬ ತಿಂಗಳಾಗಬಹುದು

ಮದ್ರಾಸಿನಲ್ಲಿ ಲೂಟಿ ಮಾಡಿದ ಅಪರಾಧಿಗಳ ಮೇಲಣ ವ್ಯಾಜ್ಯವು ನ್ಯಾಯಸ್ಥಾನದಲ್ಲಿ ಈಗ ವಿಚಾರಣೆಯಾಗುತ್ತಿದೆ. ಜನಸಮ್ಮರ್ದವು ವಿಶೇಷವಾಗಿ ಆಗದಂತೆ ಮಾಡುವುದಕ್ಕಾಗಿ ಕೋರ್ಟಿನ ಹೊರಗೆ ಕಾವಲಿಗೆ ಇರಿಸಲ್ಪಟ್ಟಿದ್ದ ಇಬ್ಬರು ಪೋಲೀಸಾಳುಗಳು ಅಪರಾಧಿಗಳ ಬಂಧುಬಳಗದ ಕೆಲವರಿಂದ ಲಂಚ ತೆಗೆದುಕೊಂಡು ಅವರನ್ನು ಕೋರ್ಟಿರುವ ಮಾಡದ ಮೇಲಕ್ಕೆ ಬಿಟ್ಟುಕೊಟ್ಟರು. ಪೋಲೀಸಾಳುಗಳು ಲಂಚ ತೆಗೆದುಕೊಳ್ಳುತ್ತಿದ್ದುದನ್ನು ಇನ್‌ಸ್ಪೆಕ್ಟರು ಹೇಗೋ ಕಂಡು ಅವರ ದೇಹವನ್ನು ಪರಿಶೋಧಿಸಲಾಗಿ ಕೆಲವು ರೂ. ಗಳ ಚಿಲ್ಲರೆ ದೊರೆದಿತು. ಕೂಡಲೇ ಪೋಲೀಸ್ ಕಮಿಷನರ ಮುಂದಕ್ಕೆ ಅವರನ್ನು ಕಳುಹಿಸಲು, ಅವರನ್ನು ತಾತ್ಕಾಲಿಕವಾಗಿ ಕೆಲಸದಿಂದ ಬಿಡುಗಡೆಮಾಡಿ, ಅವರ ಮೇಲೆ ಕೇಸು ಮಾಡುವುದಕ್ಕೆ ಕಮಿಷನರು ಅಪ್ಪಣೆ ಮಾಡಿರುವರು.

ಕಳೆದ ಬಕ್ರೀದ್ ಹಬ್ಬವು ಭರತಖಂಡದ ಎಲ್ಲಕಡೆಯೂ ಶಾಂತವಾಗಿ ನಡೆದುಹೋಯಿತು. ಆದರೆ ಹರಿದ್ವಾರಕ್ಕೆ ೬ ಮೈಲಿಗಳ ದೂರದಲ್ಲಿರುವ ಕಟಾರ್‌ಪೂರ್ ಎಂಬ ಗ್ರಾಮದಲ್ಲಿ ಮಾತ್ರ ಸ್ವಲ್ಪ ಗದ್ದಲವಾಯಿತು. ಗೋಹತ್ಯದ ವಿಷಯವಾಗಿ ಅಲ್ಲಿಯ ಮುಸಲ್ಮಾನರಿಗೂ ಹಿಂದುಗಳಿಗೂ ಮನಸ್ತಾಪಹುಟ್ಟಿ ಕಡೆಗೆ ಸಮಾಧಾನವಾಯಿತು. ಆದರೆ ಮರಳಿ ಮಹಮ್ಮದೀಯರು ಗೋವಧೆಯನ್ನು ಮಾಡಲುಜ್ಜುಗಿಸಿರುವ ಸುದ್ದಿಯು ಹುಟ್ಟಲು ಹಿಂದುಗಳು ಬಹುಜನರು ಗುಂಪುಕೂಡಿದರು. ಸಬ್‌ಡಿವಿಜನಲ್ ಆಫೀಸರು ಎರಡು ಪಕ್ಷದವರಿಗೂ ಸಮಾಧಾನಪಡಿಸತೊಡಗಿದರು. ಅಷ್ಟರಲ್ಲಿ ಒಬ್ಬ ಹಿಂದುವನ್ನು ಮಹಮ್ಮದೀಯರು ಹೊಡೆದರೆಂಬ ಸುದ್ದಿ ಹುಟ್ಟಲು ಹಿಂದುಗಳೆಲ್ಲಾ ಮಹಮ್ಮದೀಯರಮೇಲೆ ಸಾಗಿಹೋಗಿ ೨೩ ಮಂದಿಗಳನ್ನು ಕೊಂದು ಅವರ ಹೆಣಗಳನ್ನು ಸುಟ್ಟುಬಿಟ್ಟರಂತೆ. ಮತ್ತೂ ಗ್ರಾಮದಲ್ಲಿ ಅಲ್ಲಲ್ಲೇ ಬೆಂಕಿಯನ್ನು ಇಕ್ಕಿ ಕೆಲ ಭಾಗವನ್ನು ಸುಟ್ಟುಬಿಟ್ಟರಂತೆ.

ಇನ್ಫ್ಲುಯಂಜಾ ಜ್ವರದಿಂದ ಪೀಡಿತರಾಗಿದ್ದ ಜೋಧಪುರದ ಮಹಾರಾಜರು ಎಷ್ಟೋ ಮಂದಿ ಪ್ರಸಿದ್ಧಾಂಗ್ಲ ವೈದ್ಯರಿಂದ ಚಿಕಿತ್ಸೆಗೊಂಡರೂ ಕಡೆಗೆ ಕಳೆದ ತಾ॥ ೩ ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಯುವುದಕ್ಕೆ ವಿಷಾದವಾಗುತ್ತದೆ. ಇವರಿಗೆ ಅಂತ್ಯಕಾಲದಲ್ಲಿ ೨೨ ವರ್ಷಗಳು ಮಾತ್ರವೇ ಆಗಿದ್ದುವು. ಇವರಿಗೆ ೧೫ ನೆ ವಯಸ್ಸಿನಲ್ಲಿ ಪಟ್ಟಾಭಿಷೇಕವಾಯಿತು. ರಜಪುತ್ರಸ್ಥಾನದ ಸಂಸ್ಥಾನಗಳೊಳಗೆಲ್ಲಾ ಇವರ ದೇಶವೇ ದೊಡ್ಡದು. ಇವರು ಪ್ರಾಪ್ತವಯಸ್ಕರಾಗುವವರೆಗೂ ಸರ್ ಪ್ರತಾಪಸಿಂಹರವರ ಸಂರಕ್ಷಣೆಯಲ್ಲಿದ್ದರು. ಯುದ್ಧಾರಂಭವಾದ ಬಳಿಕ ಪ್ರತಾಪಸಿಂಹರವರೊಡನೆ ಇವರೂ ಫ್ರಾನ್ಸಿನ ರಣರಂಗಕ್ಕೆ ಹೋಗಿ ತಾವೂ ಯುದ್ಧದಲ್ಲಿ ಪ್ರವೃತ್ತರಾಗಿದ್ದುದಲ್ಲದೆ, ತಮ್ಮ ಸಂಸ್ಥಾನದಿಂದ ಯುದ್ಧಕ್ಕೆ ಅನೇಕ ಸಹಾಯಗಳನ್ನು ಮಾಡಿದರು. ರಣರಂಗದಲ್ಲಿರುವ ತಮ್ಮ ಸೇನೆಯ ವೆಚ್ಚವನ್ನೆಲ್ಲಾ ಅವರೇ ಕೊಡುತ್ತಿದ್ದರು. ಪಾಲಸ್ತೈನಿನಲ್ಲಿ ಈಗಲೂ ಅವರ ಸೈನ್ಯವು ಕೆಲಸಮಾಡುತ್ತಿರುವುದು.

ಬೊಂಬಾಯಿಯಲ್ಲಿ ಇನ್‌ಫ್ಲುಯನ್ಜಾ ರೋಗದ ಹಾವಳಿಯು ಇನ್ನೂ ಪ್ರಬಲವಾಗಿಯೇ ಇದೆ. ಅದರ ಸುತ್ತುಮುತ್ತಣ ಗ್ರಾಮಗಳಿಗೂ ಆ ಅಧಿಪತ್ಯದ ಅನೇಕ ಜಿಲ್ಲೆಗಳಿಗೂ ರೋಗವು ವ್ಯಾಪಿಸಿಕೊಂಡಿದೆ. ಪಟ್ಟಣದಲ್ಲಿ ರೋಗವು ಪ್ರಬಲವಾಗಿದ್ದ ಕಡೆಗೆಲ್ಲಾ ಬೊಂಬಾಯಿಗೌರ್ನರೇ ಸ್ವತಃ ಹೋಗಿ ಸ್ಥಿತಿಗತಿಗಳನ್ನು ವಿಚಾರಿಸಿಕೊಂಡು ಬಂದರು. ಅಲ್ಲಿಯ ಮ್ಯುನ್ಸಿಪಾಲಿಟಿಯವರೂ ಧನಿಕರೂ ಸಹ ರೋಗಿಷ್ಠರ ಔಷಧಗಳಿಗೂ ಉಪಚಾರಗಳಿಗೂ ಬೇಕಾದಷ್ಟು ಏರ್ಪಾಟನ್ನು ಮಾಡಿದ್ದಾರೆ. ಇದಕ್ಕೆಲ್ಲಾ ಮೇಲ್ವಿಚಾರಣೆಗೆ ಒಂದು ಸಂಘವನ್ನೇ ಏರ್ಪಡಿಸಿದ್ದಾರೆ. ರೋಗಪ್ರಬಲವಾಗಿರುವ ಭಾಗಗಳಲ್ಲಿ ಈ ರೋಗದ ಚಿಕಿತ್ಸೆಗಾಗಿಯೇ ೨೧ ವೈದ್ಯಶಾಲೆಗಳನ್ನೇರ್ಪಡಿಸಿದ್ದಾರೆ. ವೈದ್ಯರು ಬೀದಿಬೀದಿಗೆ ಹೋಗಿ ಔಷಧಗಳನ್ನು ಕೊಡುತ್ತಿರುವರು. ಕಳೆದವರ್ಷ ಈ ಕಾಲದಲ್ಲಿ ದಿನಕ್ಕೆ ೭೦ ಮಂದಿಗಳಂತೆ ಸಾಯುತ್ತಿದ್ದರು. ಈಗ ದಿನ ೧ ಕ್ಕೆ ೭೦೦ ರ ಮೇಲೆಯೇ ಸಾಯುತ್ತಿದ್ದಾರೆ. ಅಲ್ಲಿಯ ಯಂತ್ರಾಲಯ ಮೊದಲಾದುವುಗಳ ಕೆಲಸಗಳಿಗೆ ಅಡ್ಡಿಯಾಗಿದೆ. ಮದ್ರಾಸಿನಲ್ಲಿ ಈಗಣ ನೂತನಜ್ವರದಿಂದ ವಾರಕ್ಕೆ ೩೦೦ ರ ಮೇಲೆಯೇ ಮರಣಗಳಾಗುತ್ತಿವೆ.

ವಿದೇಶ ವೃತ್ತಾಂತಗಳು.

ಅರಬ್ಬಿಯವರನ್ನು ತಮ್ಮ ಮಂಡಲಿಗೆ ಸೇರಿದ ಒಂದು ರಾಷ್ಟ್ರವನ್ನಾಗಿ ಮಿತ್ರಮಂಡಲಿಯವರೆಲ್ಲಾ ಅಂಗೀಕರಿಸಿದರು.

ಪೆಟ್ರೋಗ್ರೇಡ್ ಪಟ್ಟಣದಲ್ಲಿದ್ದ ಇಂಗ್ಲೆಂಡ್ ಪತ್ರಿಕಾವಿಲೇಖರುಗಳೆಲ್ಲಾ ಅಲ್ಲಿಯ ಪ್ರಭುತ್ವದವರಿಂದ ಸೆರೆಯಲ್ಲಿಡಲ್ಪಟ್ಟು ಬಹಳ ತಾಪತ್ರಯಕ್ಕೆ ಗುರಿಯಾಗಿದ್ದಾರೆ.

ಜರ್ಮನರು ಮಿತ್ರಮಂಡಲಿಯವರಲ್ಲಿ ಒಡಕು ಹುಟ್ಟಿಸುವುದಕ್ಕೆ ನಾನಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಸಮುದ್ರವ್ಯಾಪಾರದಲ್ಲಿ ಅಮೇರಿಕಾದವರು ಇಂಗ್ಲೀಷರಿಗಿಂತ ಹೆಚ್ಚು ಅಭಿವೃದ್ಧಿಗೊಂಡಿದ್ದಾರೆಂಬ ಅಭಿಪ್ರಾಯದ ಪ್ರಕಟನಪತ್ರಗಳನ್ನು ಇಂಗ್ಲೀಷ್ ಸೇನಾಮುಖದಲ್ಲಿ ಜರ್ಮನ್ ವೈಮಾನಿಕರು ಚೆಲ್ಲಿಹೋಗಿದ್ದಾರೆ.

ರಷ್ಯಾದ ಜಾರರನ್ನು ಕೊಲ್ಲುವುದಕ್ಕಾಗಿ ನಿಯಮಿಸಲ್ಪಟ್ಟಿದ್ದ ಸೋಲ್ಜರುಗಳು ತಮ್ಮ ಕೈಯಾರ ಗುಂಡುಹೊಡೆದು ತಮ್ಮ ಪ್ರಭುವನ್ನು ಕೊಲ್ಲುವುದಕ್ಕೆ ಒಡಂಬಡಲಾರದೆ ಹೋಗಲು, ಅವರ ಮೇಲಣ ಅಧಿಕಾರಿಯಾದ ಕ್ಯಾಪ್ಟನ್ನನು ತನ್ನ ಕೈಕತ್ತಿಯಿಂದಲೇ ಜಾರರ ತಲೆಯನ್ನು ಕಡಿದನಂತೆ. ಈಚೆಗೆ ಜಾರರ ಪತ್ನೀಪುತ್ರಿಯರನ್ನು ಬೇರೊಂದು ಸುರಕ್ಷಿತವಾದ ಸ್ಥಳಕ್ಕೆ ಸಾಗಿಸಲು ಸೈನಿಕರು ಕರೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ಅವರು ಮಾಯವಾಗಿ ಹೋದರಂತೆ. ಕಾವಲಿನವರಿಗೆ ಲಂಚವನ್ನು ಕೊಟ್ಟೋ ಏನೋ ಅವರುಗಳು ತಪ್ಪಿಸಿಕೊಂಡು ಹೋಗಿ ಉರಲ್ಸ್ ಪ್ರಾಂತದಲ್ಲಿ ಎಲ್ಲೋ ಅಡಗಿಕೊಂಡಿರುವರೆಂದು ಸುದ್ದಿಯಿದೆ.

ಇತರ ವಿಷಯಗಳು.

ಜರ್ಮನಿಯ ರಾಜಧಾನಿಯಲ್ಲಿ ವಾಂತಿಭೇದಿಗುಪಕ್ರಮವಾಗಿದೆ.

ಈಗ ಪಶ್ಚಿಮರಂಗದಲ್ಲಿ ಜರ್ಮನರ ೧೮೭ ಡಿವಿಜನ್ ಸೈನ್ಯಗಳೂ ಆಸ್ಟ್ರಿಯನ್ನರ ೬-೮ ಡಿವಿಜನ್ನುಗಳೂ ಇರುತ್ತವೆ. ರಷ್ಯಾದಲ್ಲಿ ೨ ನೆ ತರಗತಿಯ ೪೬ ಡಿವಿಜನ್ ಸೈನ್ಯಗಳಿವೆ.

ತುರ್ಕಿಯ ಗ್ರ್ಯಾಂಡ್ ವಜೀರನು ಬಲ್ಗೇರಿಯಾ ರಾಜಧಾನಿಗೆ ಹೋಗಿ ಅಲ್ಲಿರುವ ಅಧಿಕಾರಿಗಳೊಡನೆ ಆಲೋಚಿಸಿ ಸಂಭಾಷಿಸಿಕೊಂಡು ಬಂದಿರುವನು. ವಿಷಯವೇನೋ ಗೊತ್ತಾಗಲಿಲ್ಲ.

ತುರ್ಕಿಯವರು ನಾವು ಮಿತ್ರಮಂಡಲಿಯೊಡನೆ ಸಂಧಿಮಾಡಿಕೊಳ್ಳುತ್ತೇವೆಂದು ಜರ್ಮನರಿಗೆ ತಿಳಿಯಪಡಿಸಲಾಗಿ, ನಮ್ಮ ಸೈನ್ಯವು ಬಲ್ಗೇರಿಯಾವನ್ನು ಆಕ್ರಮಿಸಿಕೊಳ್ಳುವುದರಲ್ಲಿದೆಯೆಂದು ಅವರು ತುರ್ಕಿಗೆ ಉತ್ತರವನ್ನು ಕೊಟ್ಟರಂತೆ.

ಕಳೆದ ಜುಲೈ ತಾ॥ ೧೬ ರಿಂದ ಸೆಪ್ಟಂಬರ್ ಕಡೆಯವರೆಗೆ ಇಂಗ್ಲೀಷ್ ಸಾಮ್ರಾಜ್ಯಕ್ಕೆ ಸೇರಿದ ಸೈನ್ಯಗಳೇ ಶತ್ರುಗಳ ವಶದಲ್ಲಿದ್ದ ೧೦೦೦ ಚದರಮೈಲಿಯಗಲದ ದೇಶಭಾಗಗಳನ್ನೂ ೨೫೦ ಗ್ರಾಮಗಳನ್ನೂ ೧೨೦೦೦೦ ಮಂದಿ ಜರ್ಮನರನ್ನೂ ವಶಪಡಿಸಿಕೊಂಡಿರುವರು.

ಹುಲಿಯು ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲಲ್ಲವೆ? ನಾರ್ವೆಯವರು ಕೂಡ ಜರ್ಮನರನ್ನು ಅಸಡ್ಡೆಯಿಂದ ಕಾಣಲುಪಕ್ರಮಿಸಿದರು. ಜರ್ಮನರ ಸಬ್‌ಮೆರೀನುಗಳು ತಮ್ಮ ಸಮುದ್ರದ ಕಡೆ ಹಾದುಹೋಗದಂತೆ ಮಾಡುವುದಕ್ಕಾಗಿ ಸಮುದ್ರದಲ್ಲಿ ಸುರಂಗಗಳನ್ನು ಹಾಕಿಬಿಟ್ಟರು.

ಬಲ್ಗೇರಿಯಾ ಸ್ಥಿತಿಗತಿಯನ್ನು ನೋಡಿಕೊಂಡು ರುಮೇನಿಯಾದವರು ಮರಳಿ ಜರ್ಮನರಮೇಲೆ ತಿರುಗಿಬೀಳುವುದಕ್ಕೆ ಅನುಕೂಲಿಸಿತೆಂದು ಉತ್ಸಾಹಗೊಂಡಿದ್ದಾರೆ. ಜರ್ಮನರು ರುಮೇನಿಯಾದಲ್ಲಿ ಸೈನಿಕಶಾಸನವನ್ನು ಸಾರಿಸಿದ್ದಾರೆ. ತಿರುಗಿಬಿದ್ದವರನ್ನು ಕಠಿನವಾಗಿ ಶಿಕ್ಷಿಸುವೆವೆಂದು ಬೆದರಿಸುತ್ತಿದ್ದಾರೆ. ಆದರೇನು? ಹುಚ್ಚುಹೊಳೆ ಬಂದರೆ ತಡಿಕೆಯ ಅಡ್ಡಗಟ್ಟು ತಡೆದುಕೊಂಡೀತೆ?

ಪಶ್ಚಿಮರಂಗದ ಸರ್ವಸೇನಾಧಿಪತ್ಯವನ್ನು ನೀನು ವಹಿಸಿಕೊಳ್ಳಬೇಕೆಂದು ಕೈಜರರು ಜನರಲ್ ಮೆಕೆನ್‌ಸೇನನಿಗೆ ಆಜ್ಞಾಪಿಸಲು, ಲುಡೆಂಡಾರ್ಫ್ ಅಲ್ಲಿ ವಿಷಮಸ್ಥಿತಿಯನ್ನುಂಟುಮಾಡಿಬಿಟ್ಟಿರುವುದರಿಂದ ನಾನು ಅಲ್ಲಿಗೆ ಹೋಗುವುದಿಲ್ಲವೆಂದು ನಿರಾಕರಿಸಿಬಿಟ್ಟನಂತೆ. ಆದುಕಾರಣ ಜರ್ಮನರು ಮೆಕೆನ್‌ಸೇನನನ್ನು ಬಲ್ಗೇರಿಯಾವನ್ನಾಕ್ರಮಿಸಿಕೊಳ್ಳಲು ಕಳುಹಿಸಿಕೊಡುವಂತೆ ಕಾಣುತ್ತದೆ.

ಮಿತ್ರಮಂಡಲಿಯ ಯುದ್ಧದ ಹಡಗುಗಳು ದುರಜ್ಜೋ ರೇವಿಗೆ ಹೋಗಿ ಸಿಡಿಮದ್ದುಗಳನ್ನು ಹಾಕಿ ದಡವನ್ನೂ ಅಲ್ಲಿದ್ದ ಆಸ್ಟ್ರಿಯಾ ಹಡಗುಗಳನ್ನೂ ಸಂಪೂರ್ಣವಾಗಿ ನಾಶಮಾಡಿದುವು. ಆದರೆ ವೈದ್ಯಶಾಲಾ ನೌಕೆಗಳ ತಂಟೆಗೆ ಮಾತ್ರ ಹೋಗಲಿಲ್ಲ. ಅಮೇರಿಕನ್ ಸಬ್‌ಮೆರೀನು ಆಸ್ಟ್ರಿಯನ್ನರ ೨ ಸಬ್‌ಮೆರೀನುಗಳನ್ನು ಮುಳುಗಿಸಿತು. ನಮ್ಮವರ ಹಡಗುಗಳೆಲ್ಲಾ ಸುರಕ್ಷಿತವಾಗಿ ಬಂದುವು.

ಶಕ್ತಿಯಿಂದಲೇ ದೇಶರಕ್ಷಣವನ್ನು ಮಾಡಿಕೊಳ್ಳುವುದು ಸಾಧ್ಯವಲ್ಲ. ಪ್ರಪಂಚ ಸಂಘಟನೆಯು ಅತ್ಯವಶ್ಯಕವಾಗಿದೆ. ಅದಕ್ಕೆ ಆಸ್ಟ್ರಿಯಾದವರೂ ಸಿದ್ಧರಾಗಿದ್ದಾರೆ. ಪೋಲಂಡಿಗೆ ಸ್ವಾತಂತ್ರ್ಯವನ್ನು ಕೊಡಬೇಕು. ಆದರೆ ಅವರು ಆಸ್ಟ್ರಿಯನ್ನರೊಡನೆ [illegible] ಬಾಳುವುದಕ್ಕೆ ಅಪೇಕ್ಷಿಸುತ್ತಾರೆ. ಆದುಕಾರಣ ನಾವು ಅವರಿಗೆ ಸಾಮ್ರಾಜ್ಯವನ್ನು ಕೋರಿರುತ್ತೇವೆ ಎಂದು ಆಸ್ಟ್ರಿಯಾ ಮಂತ್ರಿಯು ಹೇಳಿರುವನು.

ಆಸ್ಟ್ರಿಯಾದಲ್ಲೂ ಹಂಗೇರಿಯಲ್ಲೂ ಎಲ್ಲಾ ಪಕ್ಷದ ಸಭಿಕರೂ ಕೂಡಿದ ಮಂತ್ರಿಮಂಡಲಗಳೇರ್ಪಡುವುದರಲ್ಲಿವೆ. ಆಲ್ಬೇನಿಯಾದಲ್ಲಿ ಆಸ್ಟ್ರಿಯನ್ ಸೈನ್ಯಗಳು ಬಹಳವಾಗಿ ಸೋತು ಆ ದೇಶವನ್ನೇ ಬಿಟ್ಟು ಸ್ವದೇಶಕ್ಕೆ ಓಡಿಹೋದುವು. ಅಲ್ಲಿದ್ದ ಮಿತ್ರಮಂಡಲಿ ಸೈನ್ಯವು ೭೧೯ ಮಂದಿ ಸೈನಿಕರನ್ನೂ ೫ ದೊಡ್ಡ ಫಿರಂಗಿಗಳನ್ನೂ ೭೦ ಮಿಷಿನ್ ಫಿರಂಗಿಗಳನ್ನೂ ೧೨೧ ಮಂದಿ ಸೈನಿಕೋದ್ಯೋಗಿಗಳನ್ನೂ ಸೆರೆಹಿಡಿಯಿತು. ಉಳಿದವರು ಓಡಿಹೋದರು.

ಸರ್ವಿಯಾದಲ್ಲಿ ಈಗ ⅔ ಭಾಗವು ಮಿತ್ರಮಂಡಲಿ ವಶವಾದಂತಾಯಿತು. ಉತ್ತರಭಾಗವು ಮಾತ್ರ ಆಸ್ಟ್ರಿಯನ್ನರ ವಶದಲ್ಲಿದೆ. ಉತ್ತರತ್ರ ಅದೂ ಬಿಡಿಸಿಕೊಳ್ಳಲ್ಪಡುವುದರಲ್ಲಿದೆ. ಈಗ ಸರ್ವಿಯಾದ ಮೂಲಕ ಕಾನ್ಸ್ಟಾಂಟಿನೋಪಲ್ಲಿನವರೆಗೆ ಹೋಗಿರುವ ಲೋಹಮಾರ್ಗದ ಬಹುಭಾಗವೆಲ್ಲಾ ಮಿತ್ರಮಂಡಲಿ ವಶವಾಗಿದೆ. ಡಾನ್ಯೂಬ್ ನದಿಯ ಮೇಲಣ ಅಧಿಕಾರವು ಮಿತ್ರಮಂಡಲಿಗೆ ಬಂದಿದೆ. ಆ ಮಾರ್ಗವಾಗಿ ಶತೃಗಳ ಹಡಗುಗಳೂ ಸಾಗುವಂತಿಲ್ಲ. ಇಟಲಿಯವರು ಆಸ್ಟ್ರಿಯಾಮೇಲೆ ಬಲವತ್ತರವಾಗಿ ನುಗ್ಗಲು ಹವಣಿಸುತ್ತಿದ್ದಾರೆ.

ಬಲ್ಗೇರಿಯಾವು ಮಿತ್ರಮಂಡಲಿಕಡೆಗೆ ಬಿದ್ದು ಹೋದ ಸುದ್ದಿಯು ಜರ್ಮನಿದೇಶದ ಪ್ರಜೆಗಳಿಗೆ ಸಿಡಿಲುಬಿದ್ದಷ್ಟು ಭಯವನ್ನುಂಟುಮಾಡಿದೆ. ಯುದ್ಧಾರಂಭವಾದಾಗಿನಿಂದಲೂ ಅವರು ಈಗಿನಷ್ಟು ಆಂದೋಳನವನ್ನು ಯಾವಾಗಲೂ ಹೊಂದಿರಲಿಲ್ಲ. ಪ್ರಜೆಗಳಲ್ಲಿ ಅಸಂತೃಪ್ತಿಯು ಹೆಚ್ಚಿಕೊಂಡಿದೆ. ಆ ದೇಶದ ಸ್ಟೇಟ್‌ಸೆಕ್ರೆಟರಿಗಳೆಲ್ಲಾ ಒಟ್ಟಿಗೆ ರಾಜೀನಾಮೆ ಕೊಟ್ಟರು. ಮಂತ್ರಿಗಳೂ ರಾಜೀನಾಮೆ ಕೊಟ್ಟರು. ಪ್ರಿನ್ಸ್ ಮಾಕ್ಸ್ ಎಂಬುವವರು ಮುಖ್ಯಮಂತ್ರಿಯಾಗಿಯೂ, ಡಾಕ್ಟರ್ ಸಾಲ್ಫ್ ಎಂಬುವರು ಅಧಿನಿವೇಶ ಮಂತ್ರಿಗಳಾಗಿಯೂ ಏರ್ಪಡಿಸಲ್ಪಟ್ಟಿರುವರು. ಸಾಂಘಿಕ ರಾಜಕೀಯ ವಿಷಯಗಳ ವಿಚಾರಕ್ಕಾಗಿ ಪ್ರತ್ಯೇಕವಾಗಿ ಕಾರ್ಮಿಕಮಂತ್ರಿವರ್ಗವನ್ನೇ ಏರ್ಪಡಿಸಲು ಈ ಜನರು ನಿಶ್ಚಯಿಸಿರುವರಂತೆ. ಉದ್ವಿಗ್ನರಾಗಿರುವ ಕೂಲಿಕಾರ ಜನರ ಪಕ್ಷವನ್ನು ಸಮಾಧಾನಪಡಿಸುವುದಕ್ಕೆ ಕೈಜರರು ಹೀಗೆ ಮಾಡಿದ್ದಾರೆ.

ಬಲ್ಗೇರಿಯಾದ ಫರ್ಡಿನಾಂಡು ರಾಜನಿಗೆ ಜರ್ಮನಿಯಕಡೆ ಅಭಿಮಾನವೇ ಹೆಚ್ಚು. ಅದುಕಾರಣ ಈಗಣ ಸ್ಥಿತಿಯಲ್ಲಿ ಆತನಿಗೆ ಗ್ರೀಕ್ ರಾಜನ ಅವಸ್ಥೆಯೇ ಪ್ರಾಪ್ತವಾಗಬೇಕಾಯಿತು. ಬಲ್ಗರ್ ಪ್ರಜೆಗಳು ಜರ್ಮನರ ಸಂಬಂಧಕ್ಕೂ ಯುದ್ಧವನ್ನು ಬೆಳೆಯಿಸುವುದಕ್ಕೂ ವಿಮುಖರಾಗಿದ್ದಾರೆ. ಅದುಕಾರಣ ಫರ್ಡಿನಾಂಡ್ ರಾಜನು ನಿರ್ವಾಹವಿಲ್ಲದೆ ಕಳೆದ ತಾ॥ ೫ ರಲ್ಲಿ ರಾಜ್ಯಪರಿತ್ಯಾಗಮಾಡಿದನು. ಬೋರಿಸ್ ರಾಜಕುಮಾರನು ಸಿಂಹಾಸನಾರೋಹಣಮಾಡಿದನು. ಪದ್ಧತಿಯಂತೆ ಪಟ್ಟಾಭಿಷೇಕ ಕಾರ್ಯಗಳೆಲ್ಲಾ ಜರುಗಿ ನೂತನರಾಜನು ಉತ್ಸವಪೂರ್ವಕವಾಗಿ ಬೀದಿಗಳಲ್ಲಿ ಬರುವಾಗ್ಗೆ ಪ್ರಜೆಗಳು ಅತಿಶಯವಾಗಿ ಜಯಧ್ವನಿಗಳನ್ನು ಮಾಡಿ ತಮ್ಮ ಸಂತೃಪ್ತಿಯನ್ನು ವ್ಯಕ್ತಪಡಿಸಿದರು. ಹಳೆಯ ಮಂತ್ರಿಗಳು ರಾಜೀನಾಮೆ ಕೊಡಬೇಕಾದ ಅವಶ್ಯಕತೆಯಿಲ್ಲವೆಂದೂ, ಸೇನೆಯನ್ನು ತಗ್ಗಿಸಬೇಕೆಂದೂ ನೂತನರಾಜನು ಅಪ್ಪಣೆಮಾಡಿದ್ದಾನೆ.

ಈಗಣ ಸ್ಥಿತಿಗತಿಗಳನ್ನು ನೋಡಿ ಜರ್ಮನ್ ಪತ್ರಿಕೆಗಳು ತರತರವಾಗಿ ತಮ್ಮ ಪ್ರಭುತ್ವಕ್ಕೆ ಸೂಚನೆಕೊಡುತ್ತಿವೆ. ಆಸ್ಟ್ರಿಯಾ ತುರ್ಕಿದೇಶಗಳೂ ಕೂಡ ಮಿತ್ರಮಂಡಲಿಯವರೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳುವುದು, ಪಶ್ಚಿಮರಂಗದಲ್ಲಿ ಜರ್ಮನರು ಹತಾಶರಾಗಿ ಸ್ವದೇಶಕ್ಕೆ ಓಡಿಬರುವುದು, ಪ್ರಜೆಗಳು ಕ್ರುದ್ಧರಾಗಿ ಪ್ರಭುತ್ವದಮೇಲೆ ತಿರುಗಿಬೀಳುವುದು, ಸೈನಿಕರು ಅವರನ್ನು ಕೊಲ್ಲುವುದು, ಮಿತ್ರಮಂಡಲಿಗೆ ನಾವು ಸರ್ವಸ್ವವನ್ನೂ ಒಪ್ಪಿಸುವುದು— ಇತ್ಯಾದಿಗಳೆಲ್ಲಾ ಜರುಗುವುದಕ್ಕೆ ಮೊದಲೇ ಈಗಲೇ ಸಂಧಿಮಾಡಿಕೊಳ್ಳುವುದು ಒಳ್ಳೆಯದೆಂದು ವರ್ವಾರ್ಟ್ಸ್ ಪತ್ರಿಕೆ ಹೇಳಿರುತ್ತದೆ. ಬೆಲ್ಜಿಯಂ ಹೋದರೂ ಹೋಗಲಿ, ಫ್ರಾನ್ಸನ್ನೆಲ್ಲಾ ಬಿಟ್ಟರೂ ಚಿಂತೆಯಿಲ್ಲ, ಯಾವುದು ಹೋದರೂ ಲಕ್ಷಿಸದೆ ಪಶ್ಚಿಮರಂಗದಲ್ಲಿರುವ ಸೈನ್ಯವನ್ನೆಲ್ಲಾ ತಂದು ಬಲ್ಗೇರಿಯಾ ಸರ್ವಿಯಾ ಮೊದಲಾದುವುಗಳನ್ನು ನಾವು ಉಳಿಸಿಕೊಳ್ಳುವುದಕ್ಕೆ ಯತ್ನಿಸಬೇಕೆಂದು ಇನ್ನೊಂದು ಪತ್ರಿಕೆಯು ಸೂಚಿಸಿರುತ್ತದೆ.

ಪತ್ರವ್ಯವಹಾರ.

ವೀರಶೈವ ತರುಣರ ಸಂಘ.

ಬೆಂಗಳೂರು ವೀರಶೈವಾಶ್ರಮದಲ್ಲಿರುವ ಮೇಲ್ಕಂಡ ಸಂಘದವರು ವೀರಶೈವ ವಿದ್ಯಾರ್ಥಿಗಳ ಪ್ರೋತ್ಸಾಹಕ್ಕೋಸ್ಕರ ಕನ್ನಡ ಕಾಂಪೋಸಿಷನ್ ಕಾಂಪಿಟಿಟಿವ್ ಎಗ್ಸಾಮಿನೇಷನ್ (Kannada Composition Competitive Examination) ಎಂಬ ಪರೀಕ್ಷೆಯನ್ನು 1918 ನೇ ಸೆಪ್ಟಂಬರ್ 7 ನೇ ತಾರೀಖಿನಲ್ಲಿ ನಡೆಯಿಸಿದರು. ಹೈಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಲಿರುವ ವೀರಶೈವ ವಿದ್ಯಾರ್ಥಿಗಳ ಪೈಕಿ ಮೂವತ್ತು (30) ಜನರು ಪರೀಕ್ಷೆಗೆ ಕಳುಹಿಸಿದ್ದರು. ಆದರೆ ಕಾಲೇಜುಗಳಲ್ಲಿ ಅಭ್ಯಾಸಮಾಡುವವರ ಪೈಕಿ ಒಬ್ಬರೂ ಬಂದಿರಲಿಲ್ಲವೆಂಬ ವಿಷಯವನ್ನು ತಿಳಿಸಲು ತುಂಬಾ ವ್ಯಸನಪಡಬೇಕಾಗುತ್ತದೆ. ಹೈಸ್ಕೂಲುಗಳಿಂದ ಬಂದಿದ್ದವರಲ್ಲಿ ಬೆಂಗಳೂರು ವೆಸ್ಲಿಯನ್ ಹೈಸ್ಕೂಲು VI ಫಾರಂನಲ್ಲಿ ಅಭ್ಯಾಸಮಾಡುತ್ತಲಿರುವ ಆರ್. ರಾಚಯ್ಯ ಎಂಬುವರು ಉತ್ತಮವರ್ಗದಲ್ಲಿಯೂ, ಇದೇ ಸ್ಕೂಲು IV ಫಾರಂನಲ್ಲಿರುವ ಕೆ. ಮಲ್ಲಯ್ಯ ಮತ್ತು ನ್ಯಾಷನಲ್ ಹೈಸ್ಕೂಲು VI ಫಾರಂನಲ್ಲಿರುವ ಎಚ್. ಪರಮೇಶ್ವರಪ್ಪ ಎಂಬಿಬ್ಬರೂ ಎರಡನೇ ವರ್ಗದಲ್ಲಿಯೂ ತೇರ್ಗಡೆ ಹೊಂದಿರುತ್ತಾರೆಂಬ ಸಂತೋಷವಿಷಯವನ್ನು ತಿಳಿಸಲು ತುಂಬಾ ಆನಂದಪಡುತ್ತೇನೆ. ಕೆ. ಕಾಳಯ್ಯ, ಆನರರಿ ಸೆಕ್ರೆಟರಿ.

ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ಟರು.

ಸ್ವಾಮಿ !

ಮ॥ ವೆಂಕಟಕೃಷ್ಣಯ್ಯನವರು ಈ ದಸರಾಹಬ್ಬ ಮುಗಿದಕೂಡಲೇ ಮರಿಮಲ್ಲಪ್ಪನವರ ಸ್ಕೂಲು ಹೆಡ್ಮಾಸ್ಟರ್‌ಗಿರಿಯಿಂದ ನಿವೃತ್ತರಾಗುವರೆಂದೂ, ಅವರಿಗೆ ಘನತರವಾದ ಪೆನ್ಷನ್ನು ಸರ್ಕಾರದಿಂದ ಕೊಡಲ್ಪಡುವುದೆಂದೂ ಬೆಂಗಳೂರು ಡಿಸ್ಟ್ರಿಕ್ಟ್ ಪತ್ರಿಕೆಯು ಬರೆದುಕೊಂಡಿದೆ. ಸದರಿ ಪತ್ರಿಕಾಕರ್ತರು ಇದನ್ನು ಸ್ವಪ್ನದಲ್ಲಿ ಕಂಡು ಬರೆದಿರುವರೋ ಏನೋ! ಯಾಕಂದರೆ ಹೆಡ್ಮಾಸ್ಟರ್‌ಗಿರಿ ಸಂಬಂಧವಾಗಿ ವ್ಯಾಜ್ಯವನ್ನು ಮೈಸೂರು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿಗೆ ಹತ್ತಿಸಿರುವ ನಾಟಕವನ್ನು ಸದರಿ ಪತ್ರಿಕಾಕರ್ತರು ಕಾಣದಿರಬಹುದು. ಮ॥ ವೆಂಕಟಕೃಷ್ಣಯ್ಯನವರು ವೃದ್ಧರಾಗಿದ್ದು ಮಾರ್ಗಭ್ರಷ್ಟರಿಗೆ ಮಾರ್ಗವನ್ನು ತೋರಿಸಬಲ್ಲ ಸ್ಥಿತಿಯಲ್ಲಿದ್ದು ತಮ್ಮ ವಿಷಯವಾಗಿ ಕೋರ್ಟಿನಲ್ಲಿ ೧೧ ಅಂಕದ ನಾಟಕವು ನಡೆದು ಪೂರೈಸುವುದಕ್ಕೆ ಅವಕಾಶ ಕೊಡುವುದು ಅವರಿಗೆ ಹೇಗೆ ಒಪ್ಪಿತವಾಗಿರುವುದೋ ದೇವರೇ ಬಲ್ಲ. ಧರ್ಮವನ್ನು ಮಹಾಂತರ್ಗತಗೊಳಿಸಬೇಕೆಂದು ಪ್ರಯತ್ನಿಸುವ ಮಹಾನುಭಾವರಿಗೆ ಈಗಿನ ಕಾಲದಲ್ಲೇನೂ ಕೊರತೆಯಿಲ್ಲ. ಅಂಥವರ ಪಾಶಕ್ಕೆ ಮ॥ ವೆಂಕಟಕೃಷ್ಣಯ್ಯನವರು ಒಳಬೀಳುವುದು ಅವರ ಗೌರವಕ್ಕೂ ಶ್ರೇಯಸ್ಸಿಗೂ ತಕ್ಕದ್ದಲ್ಲವೆಂದು ಜನಗೊಬ್ಬನಿಗೇ ಅಲ್ಲ ಅನೇಕರಿಗೆ ತೋರಿರುತ್ತದೆ. ತಾವಾಗಿ ರಿಟೈರಾಗುತ್ತೇವೆಂದು ಅವರೇ ಮೊದಲು ಹೇಳಿಕೊಂಡು ಅದರಂತೆ ನಡೆಯದೆ ಹೋಗಿರುವುದನ್ನು ನೋಡಿದರೆ ಈ ಕೋರ್ಟಿನ ರಂಪೆಲ್ಲಾ ಅವರಿಗೂ ಸಮ್ಮತವೇ ಎಂದು ಕಾಣುತ್ತದೆ. ಅವರಿಗೆ ಮೈಸೂರು ಸರ್ಕಾರದಿಂದ ಪೆನ್ಷನ್ನಾದರೂ ಆಗಲಿ ಜಹಗೀರಿಯಾದರೂ ಕೊಡಲ್ಪಡಲಿ; ಅವರ ರಕ್ಷಣೆಯ ಮಾತೇ ಬೇರೆ; ಸ್ಕೂಲಿನ ಉದ್ಧಾರದ ಮಾತೇ ಬೇರೆ. ಸ್ಕೂಲು ಊರ್ಜಿತವಾಗಬೇಕಾದರೆ ಅವರು ಗೌರವಪುರಸ್ಸರವಾಗಿ ರಿಟೈರಾಗಿಯೇ ತೀರಬೇಕು. ಇಲ್ಲದಿದ್ದರೆ ಮುಂದಣ ಪರಿಣಾಮಗಳೇನೋ ಅವನ್ನು ಯಾರುಯಾರು ಹೇಗೆ ಅನುಭವಿಸಬೇಕೋ. "ಸ್ಪಷ್ಟಮಗ್ರೇ ಭವಿಷ್ಯತಿ" ಹಿತವಾದಿ.

ಮ॥ ರಾ॥ ಮೈಸೂರ್ ಸ್ಟಾರ್ ಪತ್ರಿಕಾ ಎಡಿಟರವರ ಸನ್ನಿಧಾನಕ್ಕೆ.

ಸ್ವಾಮಿ !

ಕೈ. ರಾ॥ಬ॥ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಪುಣ್ಯದಿನದ ವಾರ್ಷಿಕೋತ್ಸವವು ಕಳೆದ ತಿಂಗಳು ತಾ॥ 19 ನೇ ಗುರುವಾರ ಸಾಯಂಕಾಲ 6 ಗಂಟೆಗೆ ಸರಿಯಾಗಿ ಅತಿ ವಿಜೃಂಭಣೆಯಿಂದ ನಡೆಯಿತು. ಆ ಕಾಲದಲ್ಲಿ ಸತ್ರದ ಹೊರಭಾಗವು ಧ್ವಜಪತಾಕೆಗಳಿಂದಲೂ, ತಳಿರತೋರಣಗಳಿಂದಲೂ ಒಳಭಾಗವು ಪುಷ್ಪಪಲ್ಲವಗಳಿಂದಲೂ ಬಹಳ ಮನೋಹರವಾಗಿ ಮಾಡಿದ ಅಲಂಕಾರದಿಂದ ಮೆರೆಯುತ್ತಿತ್ತು. ಸುಮಾರು 800 ಜನಗಳವರೆಗೂ ದಯಮಾಡಿಸಿದ್ದರು. ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಅಲ್ಲಲ್ಲೇ ನಿಂತು ಸುಖಾಗಮನವನ್ನು ಬಯಸುತ್ತಿದ್ದರು. ಮುಂದಿರದಲ್ಲಿ ನವ ಮಲ್ಲಿಕಾಪುಷ್ಪಗಳಿಂದ ಅಲಂಕೃತವಾದ ಕೈ॥ ತೋಟದಪ್ಪನವರ ಭಾವಚಿತ್ರವು ನೋಟಕರ ಕಣ್ಣುಗಳನ್ನು ಸೆಳೆಯುತ್ತಿದ್ದಿತು. ಸಭೆಯ ಅಗ್ರಾಸನಾಧಿಪತಿಗಳಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು 6 ಘಂಟೆಗೆ ಸರಿಯಾಗಿ ದಯಮಾಡಿಸಿದರು. ದೇವರ ಪ್ರಾರ್ಥನೆಯಾದನಂತರ ವೇ॥ ನಂ॥ ಶಿವಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟ ನವರತ್ನಮಾಲಿಕೆಯು ಮ॥ ರಾ॥ ಬಿ. ಸಿ. ಸಿದ್ಧಲಿಂಗಶರ್ಮರವರಿಂದ ಹಾಡಲ್ಪಟ್ಟಿತು. ತದನಂತರ ನ್ಯಾಷನಲ್ ಹೈಸ್ಕೂಲ್ ಲೆಕ್ಚರರಾದ ಮ॥ ರಾ॥ ಕೆ. ಸಂಪತ್‌ಗಿರಿರಾವ್ ಬಿ. ಎ. (ಆನರ್ಸ್) ಇವರು ಪ್ರಾಚೀನ ಮತ್ತು ನೂತನ ಧರ್ಮವನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಬುಲೆಟಿನ್ ಎಡಿಟರವರಾದ ಮ॥ ರಾ॥ ಎಚ್. ಕೆ. ಮಲ್ಲಪ್ಪನವರು ತಮ್ಮ ಹಾಸ್ಯರಸಭರಿತವಾದ ವಾಕ್ಚತುರತೆಯಿಂದ ರಾವ್ ಬಹದ್ದೂರ್ ಧರ್ಮಪ್ರವರ್ತಕರ ಜೀವನ ಚರಿತ್ರೆಯ ವಿಚಾರವಾಗಿ ಕನ್ನಡದಲ್ಲಿ ಉಪನ್ಯಾಸಮಾಡಿದರು. ಅವರು ಮಾಡಿರತಕ್ಕ ಮಹತ್ಕಾರ್ಯಗಳನ್ನು ಶ್ಲಾಘನೆಮಾಡಿ ಅವುಗಳಿಂದ ವೀರಶೈವಮತಕ್ಕೂ ದೇಶಕ್ಕೂ ಉಂಟಾದ ಪ್ರಯೋಜನಗಳನ್ನು ತಿಳಿಸಿ ಅವರು ಗತಿಸಿದಾಗ್ಯೂ ಇನ್ನೂ ಅನೇಕರು ಅವರ ಮಾದರಿಯಂತೆ ಉಂಟಾಗಬೇಕಾಗಿ ಕೋರಿದರು. ಮ॥ ರಾ॥ ವಿದ್ವಾನ್ ನಾಗಭೂಷಣರವರು ಕೊಳಲು (ಫ್ಲೂಟ್) ಮೂಲಕ ಸಂಗೀತವನ್ನು ಹಾಡಿ ಸಭಿಕರ ಮನಸ್ಸನ್ನೆಲ್ಲಾ ಸಂತೋಷಗೊಳಿಸಿದರು. ಅನಂತರ ಅಧ್ಯಕ್ಷಮಹಾಶಯರು ಸದರೀಸತ್ರವನ್ನು ಕಟ್ಟಿಸಲು ಪ್ರೋತ್ಸಾಹವನ್ನೂ ದೇಹಶ್ರಮವನ್ನೂ ಕೊಟ್ಟ ಮ॥ ರಾ॥ ಗಳಾದ ದೇಶದ ಯಜಮಾನ್ ಬಸಪ್ಪನವರು, ದೊಡ್ಡರಂಗಯ್ಯನವರು, ಡಿ. ವೆಂಕಟರಾಮಯ್ಯನವರು ಇನ್ನೂ ಮೊದಲಾದವರನ್ನು ಕೊಂಡಾಡಿದರಲ್ಲದೆ, ಸತ್ರದಿಂದುಂಟಾಗಿರುವ ನಾನಾವಿಧವಾದ ಪ್ರಯೋಜನಗಳನ್ನೂ ಪೂರ್ವದಂತೆ ಈಗಲೂ ಜನಗಳಲ್ಲಿ ಧರ್ಮಬುದ್ಧಿಯು ಕಡಮೆಯಾಗಿಲ್ಲವಾಗಿಯೂ ವಿದ್ಯಾರ್ಥಿಗಳು ಒಳ್ಳೇನಡತೆಯುಳ್ಳವರಾಗಿ ಇರಬೇಕೆಂತಲೂ, ಭಾಷಣಮಾಡಿದರು. ಈ ಪ್ರಕಾರ ಅಧ್ಯಕ್ಷರ ಭಾಷಣವು ಮುಗಿದನಂತರ ಪುಷ್ಪಹಾರ ಮತ್ತು ಗುಚ್ಛಗಳ ವಿನಿಯೋಗವು ನಡೆದು ಸಭಿಕರಿಗೆ ವಂದನೆಗಳು ಮ॥ ರಾ॥ ಹೆಚ್. ಸಿದ್ಧಯ್ಯನವರಿಂದ ಸಮರ್ಪಿಸಲ್ಪಟ್ಟಮೇಲೆ ಈ ಘೋರಯುದ್ಧದಲ್ಲಿ ಮಿತ್ರಮಂಡಲಿಯವರಿಗೆ ಶೀಘ್ರದಲ್ಲಿಯೇ ಜಯವುಂಟಾಗಲೆಂದು ಜಯಘೋಷದಿಂದ ಸಭೆಯು ಮುಕ್ತಾಯವಾಯ್ತು.

ಪ್ರತ್ಯಕ್ಷದರ್ಶಿ.

ಯುದ್ಧದ ಫೋಟೋಗಳು. 1

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನಿಗೂ, ಕಳೆದ ನಾಲ್ಕುವರುಷಗಳಿಂದಲೂ, ನಡೆದ ಯುದ್ಧದ ಫೋಟೋಗಳು, ವಿಲಾಯತಿಯಿಂದ ಬಂದಿರುತ್ತೆ. ಇವರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ, ಮುಂತಾದ ರಖಂವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ ರೂ. 1—0—0.

ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ರಾ॥ ಬ॥ ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

7 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿಕ ಹುರುಕಿನಔಷಧ—ಬೆಲೆ ೧ಕ್ಕೆ ೧ಆ. ೨೫ಕ್ಕೆ ೧-೪-೦.
೨. ಕಣ್ಣುಬೇನೆಯಔಷಧ—ಚೀಟು-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇನುಶೀರುನಾಶಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಸ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂಪಶೌಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ಹೀಲಿ ಕೆಮ್ಮು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
43 ಪೋಸ್ಟ್ ಕಿತ್ತೂರು, ಡಿ॥ ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 43

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಅಕ್ಟೋಬರ್ ತಾ॥ ೧೩ ರಿಂದ ೧೯೧೮ ನೆಯ ಅಕ್ಟೋಬರ್ ತಾ॥ ೧೯ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೧ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಶ್ವಯುಜ ಶು॥ ಅಷ್ಟಮಿಯಿಂದ ಆಶ್ವಯುಜ ಶು॥ ಪೌರ್ಣಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
13	ಭಾನು	ಅಷ್ಟಮಿ	25-20	ಉಷಾ	60	27
14	[1]ಸೋಮ	ನವಮಿ	22-53	ಶ್ರವಣ	59-2	28
15	[2]ಮಂಗಳ	ದಶಮಿ	20-4	ಧನಿಷ್ಠ	56-54	29
16	[3]ಬುಧ	ಏಕಾದಶಿ	15-56	ಶತಭಿಷ	53-58	30
17	[4]ಗುರು	ದ್ವಾದಶಿ	11-4	ಪೂಭಾ	50-24	1
18	[5]ಶುಕ್ರ	ತ್ರಯೋ	5-37	ಉಭಾ	54-22	2
19	[6]ಶನಿ	ಪೌರ್ಣ	53.52	ರೇವತಿ	42-7	3

(1) ಮಹಾನವಮಿ, ಆಯುಧಗಜಾಶ್ವಪೂಜಾ, ಹಯಗ್ರೀವಪೂಜಾ ವೆಂಕಟೇಶಜಯಂತಿ. (2) ವಿಜಯದಶಮೀ ತಿಥಿಃ, ವಿಜಯದಶಮಿ, ಶಮೀಪೂಜಾ, (3) ಸರ್ವೇಷಾಂ ಏಕಾದಶೀ, ಮೊಹರಂ ಕೊನೇದಿನ. (4) ಗೋದ್ವಾದಶೀ, ಕುಲಾವಿಷ್ಣುವತ್ಪುಣ್ಯಕಾಲಃ. (5) ಬೆಟ್ಟದಲ್ಲಿ ಚಾಮರಾಜಮುಡಿ, ಉತ್ಸವಃ. (6) ಚಂದ್ರೋದಯ ಗೌರೀವ್ರತಂ, ದಾನಫಲವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಕ್ಷಕೃತಾವಕಾರಾ ಪಶ್ಯತ ನಕ್ಷತ್ರತೋಹರಾಜೀಯಾಶ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಳುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೇಯಿಂಸಪಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಅಕ್ಟೋಬರ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೪೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ, ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಫ್ರಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿ ಪಡೆಯುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಗದಕೈ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ಬಂಗಾರದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ [illegible] 1, ರೋಲ್ಡ್ ಗೋಲ್ಡ್ ಎಂಟು [illegible] ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೋ.,
43 3, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸಮಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
23 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜ್ಯೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ವೃತ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ [illegible]. ಬೆಲೆ ೧—೦—೦.

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಭಾಗ ಯಾವತ್ತನ್ನೂ ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦, ಸೂರ್ಯನಮಸ್ಕಾರ ೦—೩—೦, ಲಘುಜ್ಯೋತಿಷ್ಯ ೦—೨—೦, ವಸಂತರಾಮಪೂಜೆ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
28 ಆನಂದ ಬುಕ್‌ಡಿಪೊ, ಮೈಸೂರು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 50

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ [illegible]ಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦, ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
43 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಹರವಾದಿ [illegible]	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತರಂಜನಿ	೦—೨—೦
[illegible] ಅವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯಖರ್ಚು ಬೇರೆ.

[illegible]

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಅಕ್ಟೋಬರ್ ತಾ|| ೨೦ನೆಯ ಭಾನುವಾರ.

ಮೈಸೂರು ವಸ್ತುಪ್ರದರ್ಶನ.

ಈ ಸಲದಷ್ಟು ವಿಸ್ತಾರವಾಗಿ ವಸ್ತುಪ್ರದರ್ಶನ ಮಂಟಪಗಳ ರಚನೆಯು ಹತ್ತಾರುವರ್ಷಗಳಿಂದೀಚೆಗೆ ಯಾವ ಸಲವೂ ಆಗಿರಲಿಲ್ಲ. ಮಂಟಪಗಳ ಬಾಹ್ಯಾಲಂಕಾರವೂ ಅವುಗಳ ಸಂಖ್ಯೆಯೂ ಮಿಗಿಲಾಗಿರುವಷ್ಟು ಪ್ರದರ್ಶನೀಯ ವಸ್ತುಗಳ ಸಂಖ್ಯೆಯಲ್ಲಿ ಆಧಿಕ್ಯವು ಕಾಣಬರುವುದಿಲ್ಲ. ರಾತ್ರಿಕಾಲದಲ್ಲಿ ಮಾಡುತ್ತಿರುವ ವಿದ್ಯುದ್ದೀಪಾಲಂಕಾರವೂ ಮೂರುತೆರನಾದ ವಾದ್ಯವೈಭವವೂ ಮಹಾದ್ವಾರದಿಂದ ಹಿಡಿದು ಉಭಯಪಾರ್ಶ್ವಗಳಲ್ಲೂ ನೂತನವಾಗಿ ಮಂದಿರಗಳನ್ನು ಶೋಭಾಯಮಾನವಾಗಿ ರಚಿಸಿರುವುದೇ ಮೊದಲಾದ ಏರ್ಪಾಟುಗಳೂ ಪ್ರೇಕ್ಷಕರಿಗೆ ಅತ್ಯಾನಂದವನ್ನುಂಟುಮಾಡುತ್ತಿರುವುವು. ವರ್ಷೇವರ್ಷೇ ಇಂಥ ನೂತನಮಂಟಪನಿರ್ಮಾಣ ಮತ್ತೂ ಅಲಂಕರಣಗಳಿಗೇ ಬಹುಧನವು ವ್ಯಯವಾಗಿ ಹೋಗುತ್ತಿರುವುದು ಉಚಿತವಾಗಿ ಕಾಣುವುದಿಲ್ಲ. ಈ ಭಾಗದ ವ್ಯಯವು ಕಡಿಮೆಯಾಗಿ ನೂತನವಸ್ತುನಿರ್ಮಾಪಕರಿಗೆ ಬಹುಮಾನಗಳನ್ನು ವಿನಿಯೋಗಿಸಿ ಪ್ರೋತ್ಸಾಹಿಸುವುದಕ್ಕೆ ಹೆಚ್ಚು ಹಣವು ವಿನಿಯೋಗಿಸಲ್ಪಡಬೇಕಾದುದು ಅವಶ್ಯಕವು.

ಕಳೆದವರ್ಷ ಇತರ ದೇಶಗಳ ವಸ್ತುಗಳನ್ನು ಪ್ರದರ್ಶನಕ್ಕೆ ಬರಮಾಡಿಕೊಂಡಿರಲಿಲ್ಲ. ಆ ಲೋಪವನ್ನು ಈ ವರ್ಷ ಹೋಗಲಾಡಿಸಿರುವುದಲ್ಲದೆ, ಮಿತ್ರಮಂಡಲಿಗೆ ಸೇರಿದ ಫ್ರಾನ್ಸ್, ಅಮೇರಿಕಾ ಮೊದಲಾದ ವಿದೇಶಗಳ ವಸ್ತುಗಳನ್ನೂ ಪ್ರದರ್ಶನಕ್ಕೆ ಬರಮಾಡಿಕೊಂಡಿರುವುದು ಉಚಿತವಾಗಿರುತ್ತದೆ. ಪ್ರದರ್ಶನದ ಉದ್ದೇಶವು ಉತ್ಕೃಷ್ಟವಾದ ವಸ್ತುಗಳು ಹೊರಗಣವೇ ಆಗಿರಲಿ ಒಳಗಣವೇ ಆಗಿರಲಿ ಅವನ್ನು ಇತರರು ಅನುಕರಣಮಾಡಲು ಅಥವಾ ಅವಕ್ಕಿಂತ ಉತ್ತಮತರವಾದ ವಸ್ತುಗಳನ್ನು ರಚಿಸಲು ಸಮರ್ಥರಾಗುವಂತೆ ಮಾಡುವುದೇ ಆಗಿರುತ್ತದೆ. ಅದುಕಾರಣ ನಮಗೆ ತಿಳಿದನಟ್ಟಿನ ವಸ್ತುಗಳ ರಚನೆಯಲ್ಲೇ ನಾವು ತೃಪ್ತರಾಗುವುದು ವಿಹಿತವಲ್ಲ. ಹೊರಗಣಿಂದ ಈ ಸಲ ಬಂದಿರುವ ವಸ್ತುಗಳಲ್ಲೂ ವಿದೇಶದ ವಸ್ತುಗಳಿಗಿಂತಲೂ ಭರತಖಂಡದ ನಾನಾ ಭಾಗಗಳಿಂದ ಬಂದಿರುವ ಸ್ವದೇಶೀಯ ವಸ್ತುಗಳೇ ಮಿಗಿಲಾಗಿರುತ್ತವೆ. ಮತ್ತೂ ಅಂಥ ಪದಾರ್ಥಗಳಲ್ಲಿ ಅನೇಕ ವಸ್ತುಗಳು, ಈಗ ಭರತಖಂಡದಲ್ಲಿ ಪರಿಶ್ರಮಾಭಿವೃದ್ಧಿಗೆ ಉಂಟಾಗಿರುವ ಉತ್ತೇಜನವನ್ನು ದೃಷ್ಟಾಂತಪಡಿಸಲು ಸಮರ್ಥವಾಗಿರುತ್ತವೆ. ಹೊರಗಣ ದೇಶದ ವಸ್ತುಗಳನ್ನು ನಮ್ಮ ಕಾರೇಗಾರರ ಕಣ್ಣಮುಂದೆ ತಂದಿರಿಸುವುದರಿಂದ ನಮಗೆ ಎಷ್ಟು ಪ್ರಯೋಜನವಾಗುವುದೆಂಬುದು, ವರ್ಷೇವರ್ಷೇ ಪ್ರದರ್ಶನಕ್ಕೆ ಬರುತ್ತಿರುವ ವಸ್ತುಗಳ ರೀತಿಯನ್ನು ಸೂಕ್ಷ್ಮತರವಾಗಿ ಪರಿಶೀಲಿಸುವವರಿಗೆಲ್ಲಾ ಗೊತ್ತಾಗದೆ ಹೋಗುವುದಿಲ್ಲ. ದೃಷ್ಟಾಂತವಾಗಿ ಒಂದನ್ನು ಇಲ್ಲಿ ಉದಹರಿಸುತ್ತೇವೆ. ಮೊನ್ನೆವರ್ಷ ಹೊರಗಣ ದೇಶಗಳಿಂದ ಬಂದಿದ್ದ ಸಾಮಗ್ರಿಗಳೊಳಗೆ ಬರೋಡಾ ಸಂಸ್ಥಾನದ ನ್ಯಾಷನಲ್ ಮೆಟಲ್‌ವರ್ಕ್ಸ್ ಕರ್ಮಾಗಾರದಲ್ಲಿ ನಿರ್ಮಿತವಾಗಿ ಬಂದಿದ್ದ ಹಿತ್ತಾಳೆಯ ನರ್ಮದಾಗಳು, ತಾಪಾಳಗಳು, ಕೊಕ್ಕೆಗಳು ಮೊದಲಾದ ವಸ್ತುಗಳು ಸೀಮೆಯ ಸಾಮಾನುಗಳಷ್ಟು ಸುಂದರವಾಗಿಯೂ ನಯವಾಗಿಯೂ ಇದ್ದುವು. ಅಂಥ ವಸ್ತುಗಳು ನಮ್ಮ ದೇಶದ ಕಾರೇಗಾರರಿಂದ ಇದುವರೆಗೂ ನಿರ್ಮಿಸಲ್ಪಟ್ಟಿರಲಿಲ್ಲ. ಆದರೆ ಈ ಸಲದ ಪ್ರದರ್ಶನಕ್ಕೆ ಅದೇ ತೆರದ ಸಾಮಾನುಗಳು ಬೆಂಗಳೂರಿನಿಂದಲೂ ನಾಗಮಂಗಲದಿಂದಲೂ ತಲಕಾಡಿನಿಂದಲೂ ನಿರ್ಮಿತವಾಗಿ ಬಂದಿರುತ್ತವೆ. ಇವು ಗಟ್ಟಿಮುಟ್ಟಾಗಿಯೂ ಅಂದವಾಗಿಯೂ ಇರುತ್ತವೆ. ಭೋಗ್ಯವಸ್ತುನಿರ್ಮಾಣಕ್ಕಿಂತಲೂ ಇಂಥ ಆವಶ್ಯಕವಸ್ತುಗಳ ನಿರ್ಮಾಣಕ್ಕೆ ಪ್ರೋತ್ಸಾಹವಾಗಬೇಕಾದುದು ಅತ್ಯವಶ್ಯಕವು.

ಪ್ರದರ್ಶನೀಯ ಪದಾರ್ಥಗಳನ್ನು ಜಾತಿವಾರು ವಿಂಗಡಿಸಿಡುವುದರಲ್ಲಿ ಇದರ ಉದ್ಯೋಗಿಗಳು ವಿಶೇಷ ಶ್ರದ್ಧೆಯನ್ನು ತೋರಿಸಿದ್ದರೂ ಇನ್ನೂ ಬಿರಕೆಯು ಹೇರಳವಾಗಿಯೇ ಇದೆ. ಕಳೆದವರ್ಷ ಡಿಸ್ಟ್ರಿಕ್ಟುವಾರು ಸಾಮಗ್ರಿಗಳನ್ನು ಬೇರೆಬೇರೆ ವಿಂಗಡಿಸಿಟ್ಟಿದ್ದರು. ಅದಕ್ಕಿಂತಲೂ ವಸ್ತುಗಳನ್ನು ಜಾತಿವಾರು ವಿಂಗಡಿಸಿಡುವುದರಿಂದಲೇ ಪ್ರಯೋಜನವು ಹೆಚ್ಚುಂಟು. ಏಕೆಂದರೆ ಒಂದುಜಾತಿಯ ವಸ್ತುಗಳೆಲ್ಲಾ ಒಂದರಮಗ್ಗುಲಲ್ಲಿ ಒಂದಿದ್ದರೆ ತಾರತಮ್ಯಗಳು ಬೇಗನೆ ಗೊತ್ತಾಗುವುವು. ಈ ಸಲದ ಏರ್ಪಾಟಿನಲ್ಲಿ ಒಂದೇ ಜಾತಿಯ ವಸ್ತುಗಳನ್ನು ೪-೫ ಕಡೆಗಳಲ್ಲೂ ಕೂಡ ಕಾಣಬಹುದಾಗಿದೆ. ಇಂಥ ದೋಷವು ಪರಿಷ್ಕೃತವಾಗಬೇಕು.

ಈ ಸಲ ಬಂದಿರುವ ವಸ್ತುಗಳೊಳಗೆ ಕೊಚ್ಚಿ ಸಂಸ್ಥಾನಕ್ಕೆ ಸೇರಿದ ಪರವೂರಿನಿಂದ ಬಂದಿದ್ದ ತೆಂಗಿನಜುಂಗಿನ ಹಗ್ಗಗಳ ಹೆಣಿಕೆಯಿಂದ ಮಾಡಿದ ಕೈಚೀಲಗಳು, ಪೆಟ್ಟಿಗೆಯ ತರದ ಚೀಲಗಳು, ತಾಟುಗಳು, ಕಾಲೊರಸುವ ತಟ್ಟುಗಳು ಮೊದಲಾದುವುಗಳು ನೂತನತರವಾಗಿಯೂ ಅತ್ಯುಪಯೋಗಕರವಾಗಿಯೂ ಇದ್ದುವು. ನಮ್ಮ ದೇಶದಲ್ಲೂ ತೆಂಗಿನಜುಂಗು ವಿಶೇಷವಾಗಿ ಸಿಕ್ಕುತ್ತಿರುವುದರಿಂದ ನಮ್ಮಲ್ಲಿಯ ಕೈಗಾರಿಕೆಯ ಶಾಖೆಯವರೂ, ಮನೆಕೈಗಾರಿಕೆಯವರೂ ಇಂಥ ವಸ್ತುಗಳ ನಿರ್ಮಾಣದ ಕಡೆಗೆ ಗಮನಕೊಟ್ಟರೆ ಅನುಕೂಲ. ನಮ್ಮದೇಶದ ಮನೆಕೈಗಾರಿಕೆಯ ಶಾಖೆಯವರಿಂದ ನಿರ್ಮಿತವಾದ ವಸ್ತುಗಳು ಹೇರಳವಾಗಿ ಬಂದಿರುತ್ತವೆ. ಇವುಗಳಲ್ಲಿ ಬಹುಭಾಗವು ಶ್ರೀಮಂತರ ಮನೆಯ ಭೋಗ್ಯವಸ್ತುಗಳಾಗಲು ಅರ್ಹವಾದುವುಗಳೇ ಆಗಿವೆ. ಸರ್ವಸಾಮಾನ್ಯವಾಗಿ ಉಪಯೋಗಿಸತಕ್ಕ ಆವಶ್ಯಕ ವಸ್ತುಗಳು ತೀರ ಕಡಿಮೆಯೆಂಬುದನ್ನು ನೋಡಿದರೆ ವಿಷಾದವಾಗುತ್ತದೆ.

ಭರತಖಂಡದ ಇತರ ಸಂಸ್ಥಾನಗಳಿಂದ ಬಂದಿರುವ ಸ್ವದೇಶೀಯ ಸಾಮಗ್ರಿಗಳೊಳಗೆ ಥಕ್ಕಾದ ಮುತ್ತಿನಚಿಪ್ಪಿನ ಗುಂಡಿಗಳು ಬಹಳ ಅಂದವಾಗಿಯೂ ಗಟ್ಟಿಯಾಗಿಯೂ ಅಗ್ಗವಾಗಿಯೂ ಇರುತ್ತವೆ. ೧೨ ಡಜನ್ನಿಗೆ ೯ ಆಣೆ ಬೆಲೆಯುಳ್ಳ ಗುಂಡಿಗಳೂ ಕೂಡ ಇರುತ್ತವೆ. ಇಂಥ ಗುಂಡಿಗಳು ನಮ್ಮ ಪೇಟೆಗಳಲ್ಲಿ ಡಜನ್ನಿಗೆ ೩ ಆಣೆಗೆ ಕಡಿಮೆಯಾಗಿ ಸಿಕ್ಕುವಹಾಗಿಲ್ಲ. ಸಂಯುಕ್ತ ಪ್ರಾಂತದ ಗ್ಲಾಸ್‌ವರ್ಕ್ಸ್ ಕರ್ಮಾಗಾರದಿಂದಲೂ ಜಬ್ಬಲ್‌ಪೂರ್ ಗ್ಲಾಸ್‌ಫ್ಯಾಕ್ಟರಿಯಿಂದಲೂ ನಿರ್ಮಿತವಾಗಿ ಬಂದಿರುವ ಗಾಜಿನ ತರತರದ ಚಿಮಿನಿಗಳು ಕಂದೀಲುಗಳು ಮೊದಲಾದ ಸಾಮಾನುಗಳು ಸೀಮೆಯ ಸಾಮಾನುಗಳಂತೆಯೇ ಇರುತ್ತವೆ. ನಾಗಪೂರಿನ ಇಂಡಿಯನ್ ಸ್ಟೀಲ್‌ಟ್ರಂಕ್ ಫ್ಯಾಕ್ಟರಿಯ ಕತ್ತರಿಗಳು ಚಾಕುಗಳು ಹಿತ್ತಾಳೆಯ ತಟ್ಟೆ ಟ್ರಂಕು ಮೊದಲಾದ ಸಾಮಗ್ರಿಗಳೂ, ಕೊಯಮತ್ತೂರು ಕ್ಯಾಂಡಲ್‌ವರ್ಕ್ಸ್ ಕರ್ಮಾಗಾರದ ಮೋಂಬತ್ತಿಗಳೂ, ಮದ್ರಾಸಿನಿಂದಲೂ ಕರಾಚಿಗೆ ಸೇರಿದ ಚಿತ್ತೂರಿನಿಂದಲೂ, ಮಂಗಳೂರು ರಾಯಲ್‌ಸೋಪು ವರ್ಕ್ಸಿನಿಂದಲೂ ಬಂದಿರುವ ವಿಧವಿಧದ ಸುಗಂಧಿ ಸಾಬೂನುಗಳು ತಲೆಯೆಣ್ಣೆಗಳು ಮೊದಲಾದ ಔಷಧದ್ರವ್ಯಗಳೂ, ಕನ್ನಾನೂರಿನ ನ್ಯಾಷನಲ್ ಬಿಸ್ಕಟ್‌ಕರ್ಮಾಗಾರದ ತರತರದ ಬಿಸ್ಕತ್ತುಗಳೂ, ಮದ್ರಾಸು ಸ್ವದೇಶೀಸ್ಟೋರು, ಅಲಿಘರು, ಜಯಪುರ, ಕಾಂಚಿಗಳಿಂದ ಬಂದಿರುವ ಹಿತ್ತಾಳೆ ಮೊದಲಾದ ಲೋಹಗಳ ಚಿತ್ರಗೆಲಸದ ಮತ್ತೂ ತಾನಾಗಿ ಎಲ್ಲಕಡೆಗೂ ತಿರುಗಿ ಪನ್ನೀರನ್ನು ಚಿಮುಕಿಸುವ ಪನ್ನೀರುದಾನಿಗಳೂ ಬೀಗಗಳೂ ವರಕದ ವಿವಿಧ ಪದಾರ್ಥಗಳೂ, ಬೊಂಬಾಯಿಯ ಹಿಂದೀ ಬಟನ್ ಫ್ಯಾಕ್ಟರಿಯ ವಿವಿಧವಾದ ಗುಂಡಿಗಳೂ, ಬ್ರಷ್ಷುಗಳೂ, ಗಿಲೀಟಿನ ಬಳೆಗಳೂ, ಸರಪಣಿಗಳೂ, ಬೀಗಗಳೂ, ಕಲ್ಕತ್ತಾ ಬೊಂಬಾಯಿ ಮೊದಲಾದ ಕಡೆಯ ಕ್ರೋಂ ಚರ್ಮದ ಹಣದ ಚೀಲಗಳು, ಜೋಡುಗಳು ಮೊದಲಾದ ಸಾಮಗ್ರಿಗಳೂ, ಬೊಂಬಾಯಿಯ ಬಾಲಿವಾಲ ಅಂಡ್ ಮೋದಿ ಕಂಪೆನಿಯ ಕನ್ನಡಕಗಳೂ, ಅದಕ್ಕೆ ಉಪಯೋಗಿಸುವ ಶಿಲೆಯ ಬಿಂಡಗಳೂ, ಕೊಲ್ಲಾಪುರದ ಮತ್ತು ಮದ್ರಾಸ್ ಗವರ್ನ್‌ಮೆಂಟಿನ ಪೆನ್‌ಸಿಲ್ ಕಾರ್ಮಾಗಾರದ ತರತರದ ಸೀಸದ ಕಡ್ಡಿಗಳೂ, ಬೊಂಬಾಯಿ ಯೂನಿಯನ್ ಆಂಟಿಸ್ಪೆಟಿಕ್ ಕಂಪೆನಿಯಲ್ಲಿ ನಿರ್ಮಿತವಾದ ಬಣ್ಣಗಳೂ, ತರತರದ ಸ್ಲೇಟುಗಳೂ, ಪಾಂಡಿಚರಿಯ ಬಣ್ಣದ ಬೊಂಬೆಗಳೂ, ಕೊಚ್ಚಿ ಕಡೆಯ ಸಣ್ಣ ಮಂದಳಿಗೆಗಳೂ, ಗುಡಪ್ಪಾಜಿಲ್ಲಾ ಪುಲ್ಲಂಪೇಟೆಯ ಇಂದೋರಿನ ವಿಧವಿಧವಾದ ರೇಷ್ಮೆಯ ಮತ್ತು ನೂಲಿನ ಹಸನಾದ ಪಂಚೆ ಸೀರೆ ಪೇಟಾ ಮೊದಲಾದ ಜವಳಿಗಳೂ, ಜೋಧಪುರದ ಕಲ್ಲಿನಿಂದ ಮಾಡಿದ ತರತರದ ಪಾತ್ರೆಗಳೂ, ಅಹಮ್ಮದಾಬಾದ್ ತಾತಾ ಐರ್ನ್ ಆಂಡ್ ಸ್ಟೀಲ್ ಕಂಪೆನಿಯಲ್ಲಿ ನಿರ್ಮಿತವಾಗುವ ಉಕ್ಕು ಮೊದಲಾದ ಪದಾರ್ಥಗಳ ಮಾದರಿಗಳೂ, ಮೊದಲಾದ ಸಾವಿರಾರು ಬಗೆಯ ಅನೇಕ ವಸ್ತುಗಳು ಪ್ರೇಕ್ಷಣೀಯವಾಗಿಯೂ ದೇಶೀಯರ ಪರಿಗ್ರಹಕ್ಕೆ ಯೋಗ್ಯವಾಗಿಯೂ ಇರುವುವು.

ನಮ್ಮ ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಈಚೆಗೆ ಕೈಗಾರಿಕೆಯ ಶಾಖೆಯವರ ಪ್ರೋತ್ಸಾಹದಿಂದ ನಿರ್ಮಿತವಾಗಿರುವ ಅನೇಕ ವಸ್ತುಗಳೂ, ಪದ್ಧತಿಯಂತೆ ಪೂರ್ವದ ಮಾದರಿಯ ಸಾಮಗ್ರಿಗಳೂ ಅನೇಕವಾಗಿ ಬಂದಿರುವುವು. ಬೆಂಗಳೂರು ಸೆಂಟರಲ್ ಕಾಲೇಜ್ ಸಂಬಂಧದಲ್ಲಿ ನಿರ್ಮಿಸಲ್ಪಡುತ್ತಿರುವ ಮತ್ತೂ ಮೈಸೂರು ಸರ್ಕಾರದವರು ಕಾಡುಬಿದರು, ಹೆಬ್ಬಿದಿರು, ಜೊಂಡುಹುಲ್ಲು, ಬತ್ತದಹುಲ್ಲು, ಹತ್ತಿ, ಚಿಂದಿಕಾಗದ, ಲಾಂಟಾನಾಗಿಡದ ತಿರುಳು ಇವುಗಳಿಂದೆಲ್ಲಾ ಬೇರೆಬೇರೆ ನಿರ್ಮಾಣಮಾಡಿಸಿರುವ ರಟ್ಟುಗಳ ಮಾದರಿಗಳೂ ಕಾಗದಗಳ ಮಾದರಿಗಳೂ ಸಾಲುಸಾಲಾಗಿರುವುವು. ಈ ರಟ್ಟುಗಳಲ್ಲಿ ಕೆಲವು ಆಸ್ಟ್ರೇಲಿಯಾ ಸ್ಟ್ರಾಬೋರ್ಡ್‌ಗಳಿಗಿಂತಲೂ ಗಟ್ಟಿತರವಾಗಿಯೂ ನಯವಾಗಿಯೂ ಇರುವುವು. ಜಪಾನಿನ ಬೋರ್ಡುಗಳಿಗಿಂತ ಎಷ್ಟೋ ಭಾಗ ಮಿಗಿಲಾಗಿರುವುವು. ಇವುಗಳ ಮಗ್ಗುಲಲ್ಲೇ ಸೂರತ್ತಿನ ಪೇಪರ್ ಮಿಲ್ಲಿನಿಂದಲೂ ಪುನಲೂರು ಲಕ್ಷ್ಮೀಪೇಪರ್ ಮಿಲ್ಲಿನಿಂದಲೂ ಬಂದಿರುವ ಕಾಗದಗಳ ಮಾದರಿಗಳು ಇಡಲ್ಪಟ್ಟಿರುವುವು. ಬಳಪಗಳನ್ನು ನಿರ್ಮಿಸುವ ರೀತಿಯು ಪ್ರೇಕ್ಷಕರಿಗೆ ತೋರಿಸಲ್ಪಡುತ್ತಿರುವುದು. ಕಂಬಳಿಗಳ ಮಾದರಿಗಳು ವಿಶೇಷವಾಗಿರುವುದು. ದೊಡ್ಡಬಳ್ಳಾಪುರ, ಮೇಲುಕೋಟೆ, ಬೆಂಗಳೂರು, ತುಮಕೂರು, ಮೈಸೂರುಗಳಿಂದ ಬಂದಿರುವ ಅನೇಕ ತರದ ಜವಳಿಗಳು ಬಡವರಿಗೂ ಭಾಗ್ಯವಂತರಿಗೂ ಅನುಕೂಲವಾಗಿರುವುವು. ಚೆನ್ನಪಟ್ಟಣ, ಮೈಸೂರು, ಬೆಂಗಳೂರು, ನರಸೀಪುರ ಮೊದಲಾದ ಕಡೆಯ ಕೈಗಾರಿಕೆಯ ಪಾಠಶಾಲೆಗಳವರಿಂದ ನಿರ್ಮಿತವಾದ ಮರದ ಬೆತ್ತದ ಮತ್ತೂ ಬಚ್ಚರಣೆಯ ಲೋಹದ ಬಿದಿರಿನ ಅನೇಕ ಸಾಮಗ್ರಿಗಳೂ, ಮಣ್ಣಿನ ಪಾತ್ರೆಗಳೂ, ಭಾವಪ್ರತಿಮೆಗಳೂ, ಚಿತ್ರಲೇಖನಗಳೂ ಅಪರಿಮಿತವಾಗಿರುವುವು. ಬೆಂಗಳೂರು ಸೆಂಟರಲ್ ಜೈಲಿನಲ್ಲಿ ನಿರ್ಮಿತವಾದ ಹಲವು ಬಗೆಯ ಜಕ್ಕುಗಳೂ, ದುಪ್ಪಟಿಗಳೂ, ರತ್ನಗಂಬಳಿಗಳೂ ಪ್ರೇಕ್ಷಣೀಯವಾಗಿರುವುವು. ಬೆಂಗಳೂರು ರೈಲ್ವೆ ವರ್ಕ್ ಷಾಪಿನಿಂದ ನಿರ್ಮಿತವಾದ ಸಣ್ಣ ಆಕೃತಿಯ ಎಂಜನ್ನೂ ಪ್ರಯಾಣಿಕರ ಬಂಡಿಗಳೂ ಮನೋಹರವಾಗಿರುವುವು. ಇದುವರೆಗೆ ಲೋಹಮಾರ್ಗದ ಮತ್ತೂ ಬಂಡಿಗಳ ರಚನೆಯಲ್ಲಿ ಆಗಿರುವ ವೈಲಕ್ಷಣ್ಯಗಳನ್ನು ತೋರಿಸುವುದಕ್ಕೆ ಸಾಧನವಾದ ಆಯಾ ಪದಾರ್ಥಗಳನ್ನೂ ಬಂಡಿಗಳನ್ನೂ ಒಂದುಕಡೆ ಮೈಸೂರ ರೈಲ್ವೆ ಶಾಖೆಯವರೇ ಪ್ರದರ್ಶನಕ್ಕಿಟ್ಟಿರುವರು. ಕೋಲಾರದ ಚಿನ್ನದ ಗಣಿಯವರು ಗಣಿಗಳಲ್ಲಿ ಸುವರ್ಣಮಿಶ್ರವಾಗಿ ದೊರೆಯುವ ಕಲ್ಲುಗಳು ಅವನ್ನು ಅಗೆದು ತೆಗೆಯುವುದು ಸಾಗಿಸುವುದು ಕುಟ್ಟಿ, ಪುಡಿಮಾಡುವುದು, ಆ ಪುಡಿಯಲ್ಲಿರುವ ಚಿನ್ನವನ್ನು ಪಾದರಸದ ಸಂಯೋಗದಿಂದಗ್ರಹಿಸಿ ಬಳಿಕ ಚಿನ್ನವನ್ನು ಬೇರ್ಪಡಿಸಿ ಗಟ್ಟಿಮಾಡುವವರೆಗಣ ವಸ್ತುರೀತಿಗಳು ಇವನ್ನೆಲ್ಲಾ ಪ್ರದರ್ಶನಕ್ಕಿಟ್ಟಿರುವುದಲ್ಲದೆ 56536-3-2 ಬೆಲೆ ಬಾಳುವ ಒಂದು ಇಟ್ಟಿಗೆಗಾತ್ರದ ಭಂಗಾರದ ಗಟ್ಟಿಯನ್ನು ಮಾದರಿಗಾಗಿ ಇಟ್ಟಿರುವರು. ಕೋಲಾರದ ಗಣಿಗಳನ್ನು ರೂಢಿಸುವುದಕ್ಕೆ ಆರಂಭಿಸಿದ ೧೮೮೫ನೆ ವರ್ಷದಿಂದ ಇದುವರೆಗೆ ಇಂಥ 12000 ಗಟ್ಟಿಗಳ ಭಂಗಾರವು ತೆಗೆಯಲ್ಪಟ್ಟಿದೆಯಂತೆ. ಈ ಮಾದರಿಗಳೆಲ್ಲಾ ಪ್ರೇಕ್ಷಣೀಯವಾಗಿರುವುವು. ಆರೋಗ್ಯಶಾಖೆಯವರು ದೇಶದಲ್ಲಿ ಪ್ರತಿವರ್ಷ ಆಯಾ ರೋಗಗಳಿಂದ ಭೀಕರವಾಗಿ ಆಗುತ್ತಿರುವ ಮರಣಸಂಖ್ಯೆ ಮತ್ತೂ ಜನನಸಂಖ್ಯೆಗಳನ್ನೂ, ಮಲೇರಿಯಾ ಮೊದಲಾದ ರೋಗಗಳಿಗೆ ಕಾರಣವಾದ ಸೊಳ್ಳೆಗಳ ಚಿತ್ರಗಳನ್ನೂ, ಆರೋಗ್ಯಕರವಾದ ಮನೆಗಳ ನಕ್ಷೆಗಳನ್ನೂ, ಇನಾಕ್ಯುಲೇಷನ್ ವ್ಯಾಕ್ಸಿನೇಷನ್ನು ಮೊದಲಾದುವುಗಳ ಪ್ರಯೋಜನಗಳನ್ನು ತಿಳಿಯಿಸುವ ಪಟಗಳನ್ನೂ, ಚಿತ್ತಾಕರ್ಷಕವಾಗುವ ರೀತಿಯಲ್ಲಿ ಇಡಿಸಿರುವರು. ವಿದ್ಯಾಭ್ಯಾಸಶಾಖೆಗೆ ಸಂಬಂಧಪಟ್ಟ ವಸ್ತುಗಳ ಪ್ರದರ್ಶನದ ಮಂದಿರದಲ್ಲಿ ವಿದ್ಯಾರ್ಥಿಗಳಿಂದಲೂ ವಿದ್ಯಾರ್ಥಿನಿಯರಿಂದಲೂ ಬರೆಯಲ್ಪಟ್ಟ ಚಿತ್ರವಸ್ತುಗಳು, ಮಾಡಲ್ಪಟ್ಟಿರುವ ಮಣ್ಣಿನ ಮತ್ತೂ ಕಾಗದವೇ ಮೊದಲಾದ ವಸ್ತುಗಳ ಸಾಮಗ್ರಿಗಳೂ, ಆಕಾಶವಿಮಾನದ ಮಾದರಿಗಳೂ, ಬೆಂಗಳೂರು ಮೆಕಾನಿಕಲ್ ಇಂಜನಿಯರಿಂಗ್ ಶಾಲೆಯ ಲೋಹಸಾಮಗ್ರಿಗಳೂ, ಪಂಚಮಶಾಲೆಯ ವಿದ್ಯಾರ್ಥಿಗಳ ಕೌಶಲ್ಯವನ್ನು ವ್ಯಕ್ತಪಡಿಸುವ ಹಲವು ತೆರದ ಸಾಮಗ್ರಿಗಳೂ ಭೂಪಟಗಳೂ ಕಿಕ್ಕಿರಿದಿರುವುವು. ಮೈಸೂರು ಕಲೇಜಿಯೇಟ್ ಹೈಸ್ಕೂಲು ಡ್ರಾಯಿಂಗ್‌ಮಾಸ್ಟರಿಂದ ಬರೆಯಲ್ಪಟ್ಟಿರುವ ಆಯಿಲ್ಪೇಂಟಿಂಗಿನ 10-12 ಚಿತ್ರಪಟಗಳು ಪ್ರೇಕ್ಷಣೀಯವಾಗಿರುವುವು. ಮತ್ತೊಂದೆರಡು ಕಡೆಗಳಲ್ಲಿ ಪ್ರಸಿದ್ಧ ಚಿತ್ರಗಾರರಿಂದ ಬರೆಯಲ್ಪಟ್ಟಿರುವ ಮನೋಹರವಾದ ಪ್ರಸಿದ್ಧಪುರುಷರ ಭಾವಚಿತ್ರಗಳು ವಿಶೇಷವಾಗಿರುವುವು. ವ್ಯವಸಾಯೋಪಕರಣಗಳ, ಮತ್ತೂ, ಆಟವೀಶಾಖೆಯ ವಸ್ತುಗಳ, ಮತ್ತೂ ಯಂತ್ರಗಾರಿಕೆಯ ಪದಾರ್ಥಗಳ ಸಾಲುಗಳು ಪದ್ಧತಿಯಂತೆ ಬೇರೆಬೇರೆ ಇದ್ದೇ ಇರುವುವು. ಕುರುಡ ಮೂಕರ ಶಾಲೆಯ ವಿದ್ಯಾರ್ಥಿಗಳ ಕೈಗಾರಿಕೆಯ ಸಾಮಗ್ರಿಗಳೂ, ಅವರು ಕಲಿತಿರುವ ಸಂಗೀತಾದಿ ವಿದ್ಯೆಯ ಪ್ರದರ್ಶನವೂ ನಡೆಯುತ್ತಲೇ ಇರುವುದು. ಬಂದು ನೋಡಿದಲ್ಲದೆ ಅಲ್ಲಿಯ ವಸ್ತುವೈಲಕ್ಷಣ್ಯಗಳನ್ನೆಲ್ಲಾ ಬರೆದು ತೋರಿಸುವುದು ಯಾರಿಗೂ ಸಾಧ್ಯವಲ್ಲ.

ಅಂತು ಈ ವರ್ಷದ ಪ್ರದರ್ಶನವು ಎಲ್ಲಬಗೆಯಿಂದಲೂ ಕಳೆದ ವರ್ಷದ ಪ್ರದರ್ಶನಕ್ಕಿಂತಲೂ ಬಹಳ ಭಾಗ ಉತ್ಕೃಷ್ಟವಾಗಿರುವುದೆಂದು ಹೇಳಲು ಅಡ್ಡಿಯಿರುವುದಿಲ್ಲ. ಇದನ್ನು ಇಷ್ಟು ಸಲಕ್ಷಣವಾಗಿ ನೆರವೇರುವಂತೆ ಮಾಡಲು ಅಹರ್ನಿಶಿಯೂ ಇದಕ್ಕಾಗಿ ಪಾಡುಪಟ್ಟ ಸೆಕ್ರಟರಿ ಮ|| ಎಂ. ಎನ್. ಬಾಳರಾಜಅರಸ್. ಬಿ.ಎ., ಯವರೂ ಅವರ ಸಹಾಯಕರೂ ವಂದನೀಯರು. ಆದರೆ ಹಾಳು ಇನ್‌ಫ್ಲುಯಂಜಾ ರೋಗದ ಹಾವಳಿಯಿಂದ ಬರಬೇಕಾದಷ್ಟು ಪ್ರೇಕ್ಷಕರು ಬಂದು ಈ ಪ್ರದರ್ಶನದ ಪ್ರಯೋಜನವನ್ನು ಪಡೆದುಕೊಳ್ಳಲು ಅವಕಾಶವಾಗದೆ ಹೋದುದೊಂದು ಮಾತ್ರ ವಿಷಾದಕ್ಕೆಡೆಮಾಡಿರುವುದು.

ಇನ್‌ಫ್ಲುಯಂಜಾ.

ರೋಗದ ಹಾವಳಿಯು ಪ್ಲೇಗಿಗಿಂತಲೂಹೆಚ್ಚಿನ ಭಯವನ್ನು ರಾಜಧಾನಿಯ ನಿವಾಸಿಗಳಲ್ಲಿ ಹುಟ್ಟಿಸಿದೆ. ಬಹು ಮನೆಗಳಲ್ಲಿ ರೋಗಪೀಡಿತರಿಗೆ ಗಂಜಿಯನ್ನು ಕೊಡುವವರೂ ಔಷಧಗಳನ್ನೂ ಕೊಡುವವರೂ ಸಹ ಇಲ್ಲದಂತೆ ಮಲಗಿದ್ದಾರೆ. ೧೫ ಸಾವಿರ ಮಂದಿಗಳಿಗೆ ಕಡಿಮೆಯಿಲ್ಲದೆ ಈ ರೋಗಪೀಡಿತರು ರಾಜಧಾನಿಯಲ್ಲಿರುವರೆಂದು ಊಹಿಸಲ್ಪಟ್ಟಿದೆ. ತಮ್ಮ ಪ್ರಜೆಗಳಿಗೆ ಇಂಥ ವಿಪತ್ತು ಪ್ರಾಪ್ತವಾಗಿರುವುದರಿಂದ ಶ್ರೀಮನ್ಮಹಾರಾಜ ಸಹೋದರರಿಗೆ ಎಷ್ಟು ಚಿಂತೆಯುಂಟಾಗಿರುವುದೆಂಬುದು ಅವರುಗಳ ಮುಖಮುದ್ರೆಯನ್ನು ವಿಜಯದಶಮಿಯ ದಿವಸ ನೋಡಿದ ಪ್ರತಿಯೊಬ್ಬ ಪ್ರಜೆಗೂ ಕಾಣುವಂತಿದ್ದಿತು. ಯಾವೊಬ್ಬರೋಗಿಯೂ ಔಷಧಗಳಿಗೂ ಉಪಚಾರಗಳಿಗೂ ಅಭಾವವಾಗಿ ಸಾಯದಂತೆ ಮಾಡುವುದಕ್ಕೆ ಎಷ್ಟು ವ್ಯಯವನ್ನಾದರೂ ಯಾವ ಏರ್ಪಾಟುಗಳನ್ನಾದರೂ ಮಾಡಲು ಹಿಂದೆಗೆಯಬಾರದೆಂದೂ, ಅರಮನೆಗೆ ಸಂಬಂಧಪಟ್ಟ ಕಟ್ಟಡಗಳನ್ನೂ, ಮೋಟಾರುಗಳನ್ನೂ, ಧನವನ್ನೂ ವಿನಿಯೋಗಿಸಿ, ವೈದ್ಯರು ಎಲ್ಲ ಬೀದಿಗಳಲ್ಲೂ ಸಂಚರಿಸಿ, ರೋಗಿಗಳಿಗೆ ತಕ್ಕ ಆನುಕೂಲ್ಯವನ್ನುಂಟುಮಾಡಬೇಕೆಂದೂ, ಹೆಚ್ಚು ವೈದ್ಯಾಲಯಗಳನ್ನು ಇದಕ್ಕಾಗಿ ಪ್ರತ್ಯೇಕವಾಗಿ ಸ್ಥಾಪಿಸಬೇಕೆಂದೂ ಶ್ರೀಮನ್ಮಹಾರಾಜರು ಕನಿಕರದಿಂದ ಅಪ್ಪಣೆಮಾಡಿರುವರೆಂದು ಕೇಳುತ್ತೇವೆ. ಅಧಿಕಾರಿಗಳು, ತಕ್ಕ ಪ್ರಯತ್ನಗಳನ್ನು ಮಾಡುತ್ತಿರುವರು. ಔಷಧಗಳ ಅಭಾವ, ವೈದ್ಯರ ಅಭಾವ, ಉಪಚಾರಕರ ಅಭಾವ ಇವುಗಳಿಂದ ಇನ್ನೂ ತಕ್ಕ ಸಹಾಯವು ರೋಗಿಗಳಿಗೆ ಆಗುತ್ತಲಿಲ್ಲ. ವೈದ್ಯಾಲಯಗಳಿಗೆ ಔಷಧಗಳಿಗೆ ಹೋದವರು ಮಧ್ಯಾಹ್ನ ೧ ಗಂಟೆಯಾದರೂ ಔಷಧವನ್ನು ತೆಗೆದುಕೊಂಡು ಬರುವುದು ಅಸಾಧ್ಯವಾಗಿರುತ್ತದೆ. ಅಲ್ಲಿ ಅಷ್ಟು ಗದ್ದಲವಾಗಿರುತ್ತದೆ. ಕಾಲಕ್ಕೆ ಸರಿಯಾಗಿ ಔಷಧಗಳು ವೈದ್ಯಾಲಯಗಳಲ್ಲಿ ಸಿಕ್ಕುವಂತೆ ಅವುಗಳಲ್ಲಿ ಹೆಚ್ಚು ಸಿಬ್ಬಂದಿಯನ್ನು ಸಾವಕಾಶವಿಲ್ಲದೆ ಏರ್ಪಡಿಸಬೇಕಾಗಿದೆ. ಪ್ರತಿಯೊಂದು ಮುಖ್ಯಬೀದಿಗಳಿಗೂ ಒಂದೊಂದು ಕಡೆ ಔಷಧಗಳು ದೊರೆಯುವಂತೆಯೂ ಸ್ಯಾ|| ಇನ್‌ಸ್ಪೆಕ್ಟರುಗಳೂ ಜನನಮರಣದ ರಿಜಿಸ್ಟ್ರಾರುಗಳೂ ಮನೆಮನೆಗೂ ಹೋಗಿ ಔಷಧಗಳನ್ನು ಕೊಡುವಂತೆಯೂ, ಈಗ ಪಾಠಶಾಲೆಗಳೂ ಕೋರ್ಟುಕಚೇರಿಗಳೂ ಮುಚ್ಚಲ್ಪಟ್ಟಿರುವುದರಿಂದ ಅಲ್ಲಿಯ ಉದ್ಯೋಗಿಗಳ ಸಹಾಯವನ್ನಾದರೂ ಪಡೆದುಕೊಂಡು ಅವರುಗಳ ಮೂಲಕ ಔಷಧಗಳ ವಿನಿಯೋಗವನ್ನು ಮಾಡಿಸುವಂತೆಯೂ, ಬಡಬಗ್ಗರಿಗೆ ಹಾಲುಗಂಜಿಗಳಿಗೆ ತಾಪತ್ರಯವಿಲ್ಲದೆ ಒದಗಿಸುವಂತೆಯೂ ಮಾಡುವಲ್ಲಿ ಮ್ಯುನ್ಸಿಪಾಲಿಟಿಯವರು ಈ ಕಾಲದಲ್ಲಿ ತಮ್ಮ ಸರ್ವಕಾಲವನ್ನೂ ವಿನಿಯೋಗಿಸುವುದು ಅತ್ಯವಶ್ಯಕವಾಗಿದೆ. ಕ್ಷಾಮದ ಪೀಡೆಯಿಂದ ಬಳಲುತ್ತಿದ್ದವರಿಗೆ ಎಷ್ಟೋಮಟ್ಟಿಗೆ ಧಾನ್ಯದ ಸಹಾಯವನ್ನು ಮಾಡಿಕೊಟ್ಟು ಉಪಕರಿಸಿದ ಅಧಿಕಾರಿಗಳು ಈ ಮಹಾರೋಗದ ವಿಪತ್ತಿನಕಾಲದಲ್ಲೂ ಸಹಾಯವನ್ನೊದಗಿಸಿ ಕಂಗೆಟ್ಟಿರುವಪ್ರಜೆಗಳಿಗೆ ಧೈರ್ಯಕೊಟ್ಟು ಕಾಪಾಡುವುದು ಅತ್ಯವಶ್ಯಕವಾಗಿದೆ. ಪ್ರಜೆಗಳು ಆಹಾರವಿಹಾರಗಳಲ್ಲಿ ಮಿತವಾಗಿಯೂ ಶುಚಿಯಾಗಿಯೂ ಇದ್ದುಕೊಂಡು ಕಾಲಯಾಪನೆಮಾಡಬೇಕಾಗಿದೆ.

ಯುದ್ಧವಾರ್ತೆಯು.

ಕ್ಯಾಂಬ್ರೆ ಸೆಂಟ್‌ಕ್ವಿಟನ್ನುಗಳ ಲೋಹಮಾರ್ಗವು ಮಿತ್ರಮಂಡಲಿಯ ವಶವಾಯಿತು. ಅದಿನ ನಡೆದ ಮಹಾಯುದ್ಧದಲ್ಲಿ ನಮ್ಮವರು ೧೧೦೦೦ ಮಂದಿ ಶತ್ರುಸೈನಿಕರನ್ನೂ ಫಿರಂಗಿಗಳನ್ನೂ ವಶಪಡಿಸಿಕೊಂಡರು. ಕಳೆದ ತಾ|| ೯ ರಲ್ಲಿ ಕಾಂಬ್ರೆಪಟ್ಟಣವು ಸಂಪೂರ್ಣವಾಗಿ ನಮ್ಮವರ ಸ್ವಾಧೀನವಾಯಿತು. ಅದರೇನು? ಅಪಟ್ಟಣವೆಲ್ಲಾ ಉರಿದು ಭಸ್ಮವಾಗಿರುವುದು. ಇದು ಶತ್ರುಗಳಿಂದ ಮಾಡಲ್ಪಟ್ಟಿರುವ ದೌರ್ಜನ್ಯ. ಈ ಜಯದಿಂದ ಹಿಂಡನ್‌ಬರ್ಗ್ ಪಂಕ್ತಿಯೆಲ್ಲಾ ಭೇದಿಸಲ್ಪಟ್ಟಂತಾಯಿತು. ಈಗ ನಮ್ಮವರು ಆ ಪಂಕ್ತಿಯನ್ನು ದಾಟಿ ಹಿಂಡನ್‌ಬರ್ಗ್ ರಕ್ಷಕಸ್ಥಾನದ ಕಡೆಗೆ ಸಾಗುತ್ತಿದ್ದಾರೆ. ನಮ್ಮವರು ಕಾಂಬ್ರೆಗೆ ಉತ್ತರದಕಡೆ ನುಗ್ಗಿ ಅನೇಕ ಪುರಗ್ರಾಮಗಳನ್ನು ಹಿಡಿದೂ ಹಿಡಿಯುತ್ತಲೂ ಇದ್ದಾರೆ. ಶತ್ರುಗಳು ಡೋವೈಪಟ್ಟಣಕ್ಕೆ ಹೋಗಿ ಸೇರಿಕೊಂಡರು. ಅದರ ಕಡೆಗೆ ಮಿತ್ರಮಂಡಲಿ ಸೈನಿಕರೂ ಸಾಗಿ ವಶಪಡಿಸಿಕೊಂಡರು. ಶತ್ರುಗಳು ಹೋಗಿ ಬರುವುದಕ್ಕೆ ದಾರಿಯಾಗಿರುವ ಮುಖ್ಯಸ್ಥಲದಲ್ಲಿರುವ ಗೈಸ್ ಎಂಬ ಪಟ್ಟಣವನ್ನು ನಮ್ಮವರು ಸಮೀಪಿಸಿದ್ದಾರೆ. ಅದೂ ಇಷ್ಟರಲ್ಲೇ ವಶವಾದೀತು. ದಕ್ಷಿಣದಲ್ಲಿ ಲಾಫೆರ್ರಿ ಎಂಬ ಪಟ್ಟಣವು ಫ್ರೆಂಚರ ವಶವಾಯಿತು. ಈಚೆಗೆ ಚೆಮಿಂಡೇಸ್‌ಡೆಮ್ಸ್‌ಡೇನಿನ ಸುತ್ತಲೂ ಫ್ರೆಂಚ್ ಅಮೇರಿಕನ್ ಸೈನ್ಯಗಳು ಮುತ್ತಿ ಅಲ್ಲಿದ್ದ ಶತ್ರುಗಳನ್ನು ಸೋಲಿಸಿ ಓಡಿಸಿದ್ದಾರೆ. ಅದೂ ನಮ್ಮವರ ವಶವಾಗಿದೆ. ಲಯನ್ ಎಂಬ ಪಟ್ಟಣವೂ ನಮ್ಮವರ ವಶವಾಯಿತು. ಎಯಿನ್ ನದೀಪ್ರಾಂತದಲ್ಲಿ ಶತ್ರುಗಳು ತಮ್ಮ ಸ್ಥಾನಗಳನ್ನು ಬಿಟ್ಟು ಓಡುತ್ತಿದ್ದಾರೆ. ಷಾಂಪೆನ್ನಿಗೆ ಉತ್ತರದಲ್ಲಿ ಶತ್ರುಗಳು ಹಲವು ಗ್ರಾಮಗಳಿಗೆ ಬೆಂಕಿಯಿಟ್ಟು ಉರಿಯಿಸಿ ಹೋಗುತ್ತಿದ್ದಾರೆ. ಹೀಗೆ ಮಾಡುವುದು ಆತ್ಮರಕ್ಷಣೆಗೆ ಅವಶ್ಯಕವೆಂದೂ, ತಮ್ಮ ಪ್ರಾಣಕ್ಕಿಂತ ಈ ಗ್ರಾಮಗಳು ದೊಡ್ಡವಲ್ಲವೆಂದೂ ಜರ್ಮನ್ ವಿದೇಶಾಂಗಮಂತ್ರಿಯು ಹೇಳುತ್ತಾನೆ. ಈ ಷಾಂಪೇನ್ ಪ್ರಾಂತದಲ್ಲಿ ಸೆಪ್ಟಂಬರ್ ತಾ|| ೨೬ ರಿಂದ ಮಹಾಯುದ್ಧಕ್ಕೆ ಫ್ರೆಂಚರು ಆರಂಭಿಸಿದರು. ೭ ದಿನಗಳವರೆಗೆ ಅಖಂಡವಾಗಿ ಯುದ್ಧ ನಡೆದುದರಲ್ಲಿ ಶತ್ರುಗಳು ಸಂಪೂರ್ಣವಾಗಿ ಸೋತುಹೋದರು. ಇಲ್ಲಿ ಘೋರಯುದ್ಧವನ್ನು ನಡೆಯಿಸಿದ ಫ್ರೆಂಚರ ೪ ನೆ ಸೈನ್ಯವೊಂದೇ ೨೧೫೬೭ ಮಂದಿ ಶತ್ರುಗಳನ್ನೂ ೬೦೦ ಫಿರಂಗಿಗಳನ್ನೂ ೩೫೦೦ ವಾಗನ್ನುಗಳ ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡಿರುವರು. ೫ನೇ ನಂ|| ಫ್ರೆಂಚ್‌ಸೈನ್ಯವು ಎಯಿನ್ ನದಿಯನ್ನು ದಾಟಿ ಶತ್ರುಗಳನ್ನು ಬೆನ್ನಂಟಿ ಓಡಿಸುತ್ತಿರುವುದು. ಇದು ಅಲ್ಲಿ ಮುಖ್ಯಸ್ಥಲಗಳಾದ ಎಮಿಲಟ್ಟೆ ಮೊದಲಾದುವುಗಳನ್ನು ಆಕ್ರಮಿಸಿರುವುದು. ಮತ್ತೂ ಫ್ರೆಂಚ್ ಸೈನ್ಯಗಳು ಲಾಫೆರಿ ಪಟ್ಟಣವನ್ನೂ ಆ ಸುತ್ತಣ ಲೋಹಮಾರ್ಗವನ್ನೂ ವಶಪಡಿಸಿಕೊಂಡುವು. ಚೆಮಿಂಡೇಸ್‌ಡೆಮ್ಸ್‌ಡೇನಿನ ಮುಂದಕ್ಕೆ ಸಾಗಿದ ಮಿತ್ರಮಂಡಲಿ ಸೈನ್ಯಗಳು ಸೆಂಟ್‌ಆಬರ್ಟ್ ಎಂಬ ಮುಖ್ಯಸ್ಥಾನವನ್ನು ವಶಪಡಿಸಿಕೊಂಡುವು. ಲಯನ್ನಿನಿಂದ ಆರ್ಗೋನಿವರೆಗಣ ೬೦ ಮೈಲಿಯಗಲದ ರಂಗದಲ್ಲೆಲ್ಲಾ ಶತ್ರುಗಳು ಬೆನ್ನುತೋರಿಸಿ ಹಿಮ್ಮೆಟ್ಟಿಹೋಗುತ್ತಿದ್ದಾರೆ. ಫ್ರಾನ್ಸಿನ ಉತ್ತರಭಾಗವನ್ನೆಲ್ಲಾ ಶತ್ರುಗಳು ಬೆಂಕಿಯಿಕ್ಕಿ ದಿಗ್ಮಂಡಲವನ್ನೆಲ್ಲಾ ಹೊಗೆಯಿಂದ ತುಂಬಿಸಿಬಿಟ್ಟಿದ್ದಾರೆ. ತಾವು ದೇಶವನ್ನು ಸೋತುಬಿಟ್ಟರೆ ಫ್ರೆಂಚರಿಗೆ ಬರಿಯ ಸ್ಮಶಾನದಂತಿರುವ ದೇಶವುಮಾತ್ರ ವಶವಾಗಲಿಯೆಂಬ ಹೊಟ್ಟೆಕಿಚ್ಚಿನಿಂದಲೇ ಅವರು ಹೀಗೆ ಮಾಡುತ್ತಿದ್ದಾರೆ. ಫ್ರೆಂಚರು ಲಯನ್ ಪಟ್ಟಣದಿಂದಾಚೆಗೂ ೭ ಮೈಲಿಗಳವರೆಗೆ ಶತ್ರುಗಳನ್ನು ಅಟ್ಟಿಕೊಂಡು ಹೋಗಿದ್ದಾರೆ.

ಫ್ಲಾಂಡರ್ಸಿನಲ್ಲಿ ಶತ್ರುಗಳು ಜೇಬ್ರುಗ್, ಆಂಟ್ವರ್ಪ್ ತೀರಪಟ್ಟಣಗಳನ್ನು ಸಂರಕ್ಷಿಸಿಕೊಳ್ಳುವುದರಲ್ಲಿ ಬಹಳ ಸಾಹಸಮಾಡುತ್ತಿದ್ದಾರೆ. ಅವನ್ನು ಜಲಮಾರ್ಗದಿಂದ ನಮ್ಮವರು ಮುತ್ತಿದ್ದಾರೆ. ಇಂಗ್ಲಿಷ್ ಬೆಲ್ಜಿಯಂ ಸೈನ್ಯಗಳು ಕಳೆದ ವಾರ ಮತ್ತೆ ಕೆಲವು ಮೈಲಿಗಳ ದೂರ ಮುಂದಕ್ಕೆ ಸಾಗಿ ಶತ್ರುಗಳನ್ನು ಹಿಮ್ಮೆಟ್ಟಿಸಿ ಅನೇಕ ಸ್ಥಲಗಳನ್ನು ವಶಪಡಿಸಿಕೊಂಡಿದ್ದಾರೆ. ರೋಲರ್ಸ್ ಎಂಬ ಪಟ್ಟಣವೂ, ಕೋರ್ಟುಮಾರ್ಕ್ ಘೂಗ್ಲೆಡ್, ಸೆಂಟ್‌ಜೋಸಫ್, ಬವರ್, ದೀತೆಮ್, ಗೋಕ್ಕಿಮಾಡೇಲ್. ಸೆಂಟ್‌ಪ್ಲೂಯಿ ಮೊದಲಾದ ಅನೇಕ ಗ್ರಾಮಗಳೂ ಅನೇಕ ಫಿರಂಗಿಗಳೂ ಅನೇಕ ಸಹಸ್ರ ಶತ್ರುಸೈನಿಕರೂ ನಮ್ಮವರ ವಶವಾಗಿರುವುವು. ಕೋರ್ಟ್ರೆ ಮುಖದಲ್ಲಿ ಇಂಗ್ಲಿಷ್ ಫ್ರೆಂಚ್ ಬೆಲ್ಜಿಯಂ ಸೈನ್ಯಗಳು ಈಗ ದೊಡ್ಡಯುದ್ಧವನ್ನು ಮಾಡುತ್ತಿವೆ. ತಾ|| ೧೪ ರಲ್ಲಿ ೩ ಸಾವಿರ ಶತ್ರುಸೈನಿಕರು ಅಲ್ಲಿ ಸೆರೆಸಿಕ್ಕಿರುವರು. ಇಲ್ಲಿ ಶತ್ರುಗಳ ಸ್ಥಿತಿ ಅಪಾಯಕರವಾಗಿದೆ. ಈ ಬೆಲ್ಜಿಯಂ ರಂಗದಲ್ಲಿ ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡೂ ಬೆಲ್ಜಿಯಂ ಸೇನಾಪತಿಗಳ ಅಧೀನವಾಗಿಯೇ ಯುದ್ಧ ಮಾಡುತ್ತಿವೆ. ದಕ್ಷಿಣದಲ್ಲಿ ವರ್ಡನ್ ಪ್ರಾಂತದಲ್ಲಿ ಅಮೇರಿಕನ್ ಸೈನ್ಯಗಳು ಜಯಶಾಲಿಗಳಾಗಿ ಮುಂದಕ್ಕೆ ನುಗ್ಗುತ್ತಿವೆ. ವರ್ಡನ್ನಿಗೆ ಉತ್ತರದಲ್ಲಿ ಬಹುದೂರ ಮುಂದಕ್ಕೆ ಸಾಗಿದ್ದಾರೆ. ಕೂನೇಲ್, ರೋಮಾಗ್ನಿಗಳನ್ನು ಇವರು ದಾಟಿದರು. ಸೆಂಟ್‌ಜಾರ್ಜ್ ಲಾಂಡಿಚ್ ಎಂಬ ಸ್ಥಲಗಳನ್ನು ಹೂಣಿಯ ದಳಗಳು ನುಗ್ಗಿರುವುವು.

ಬಾಲ್ಕನ್ ರಂಗದಲ್ಲಿ ಮಿತ್ರಮಂಡಲಿ ಸೈನ್ಯಗಳು ಸರ್ವಿಯಾ ದೇಶದ ಮಧ್ಯಭಾಗದಲ್ಲಿ ಲೋಹಮಾರ್ಗದ ಕೂಡುದಾಣವಾಗಿರುವ ನಿಷ್ ಎಂಬ ಮುಖ್ಯಪಟ್ಟಣವನ್ನು ಹಿಡಿದುಕೊಂಡುವು. ಇದನ್ನು ಬಿಡಲಾಗದೆಂದು ಬಿಗಿಪಟ್ಟಿನಿಂದ ಕಾಯುತ್ತಿದ್ದ ಜರ್ಮನ್-ಆಸ್ಟ್ರಿಯನ್ ಸೈನ್ಯಗಳು ಸೋತು ಪಟ್ಟಣವನ್ನು ಬಿಟ್ಟು ಓಡಿದುವು. ಇಲ್ಲಿ ಸರ್ವಿಯನ್ನರಿಗೆ ಶತ್ರುಗಳ ೬ ಫಿರಂಗಿಗಳೂ ಯುದ್ಧಸಾಮಗ್ರಿಗಳೂ ದೊರೆದುವು. ಫ್ರೆಂಚ್ ಅಶ್ವದಳವೂ ಸರ್ವಿಯನ್ ಸೈನ್ಯವೂ ಈ ಸುತ್ತಣ ಅನೇಕ ಸ್ಥಳಗಳನ್ನು ಹಿಡಿದುಕೊಂಡು ಮುಂದಕ್ಕೆ ನುಗ್ಗುತ್ತಿವೆ.

ತುರ್ಕಿ—ಇಂಗ್ಲಿಷ್ ಫ್ರೆಂಚ್ ನೌಕಾದಳಗಳು ಬೇರುಟ್ ನಗರದ ಬಳಿಗೆ ತಾ|| ೬ ರಲ್ಲಿ ಹೋಗಲು ಪಟ್ಟಣವೆಲ್ಲಾ ಸೇನಾರಹಿತವಾಗಿದ್ದಿತು. ತಾ|| ೮ ರಲ್ಲಿ ಇಂಗ್ಲೀಷ್ ಸೈನ್ಯವೂ ಭರತಖಂಡದ ಸೈನ್ಯವೂ ಭೂಮಾರ್ಗವಾಗಿ ಆ ಪಟ್ಟಣವನ್ನು ಪ್ರವೇಶಿಸಲಾಗಿ ಪುರಪ್ರಜೆಗಳು ಇವರನ್ನು ಸಂತೋಷದಿಂದ ಸ್ವಾಗತಿಸಿದರು. ಈ ಪ್ರಾಂತ್ಯದಲ್ಲಿ ತುರ್ಕಿಯರ ೪-೭-೮ ಈ ಮೂರು ಪಟಾಲಮ್ಮುಗಳೂ ನಮ್ಮವರ ವಶವಾದುವು. ಈಗ ತುರ್ಕಿದೇಶದವರು ಅಮೇರಿಕಾದ ಪ್ರೆಸಿಡೆಂಟರಿಗೆ ಸಂಧಿವಿಷಯವಾಗಿ ಬರೆದುಕೊಂಡಿದ್ದಾರೆ. ಮತ್ತೂ ಮೆಸಪೊಟೋಮಿಯಾ ಮೊದಲಾದ ಕಡೆಗಳಲ್ಲಿದ್ದ ತಮ್ಮ ಸೈನ್ಯಗಳನ್ನೆಲ್ಲಾ ರಾಜಧಾನಿಯ ರಕ್ಷಣೆಗಾಗಿ ಬರಮಾಡಿಕೊಂಡಿದ್ದಾರೆ. ಇದುವರೆಗೆ ಮಂತ್ರಿಮಂಡಲದಲ್ಲಿ ಮುಖ್ಯರಾಗಿದ್ದ ಗ್ರಾಂಡ್‌ವಜೀರ್ ಎನ್ವರ್‌ಪಾಷಾನೂ, ತಲ್ಲತ್‌ಪಾಷಾನೂ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಹಿಂದೆ ಇಂಗ್ಲೆಂಡಿನಲ್ಲಿ ತುರ್ಕಿಯ ರಾಯಭಾರಿಯಾಗಿಯೂ ಮಿತ್ರಮಂಡಲಿ ಪಕ್ಷಪಾತಿಯಾಗಿಯೂ ಇರುವ ಟೊಫಿಕ್‌ಪಾಷಾನು ತುರ್ಕಿಯ ಗ್ರಾಂಡ್‌ವಜೀರನಾಗಿ ನಿಯಮಿಸಲ್ಪಟ್ಟಿದ್ದಾನೆ.

ಬಲ್ಗೇರಿಯಾದ ಸೈನ್ಯಗಳೂ ಮಿತ್ರಮಂಡಲಿಯ ಸೈನ್ಯಗಳೂ ಸೇರಿ ಕಾನ್‌ಸ್ಟಾಂಟಿನೋಪಲ್ಲಿನ ಮೇಲೆ ಸಾಗುವ ಚಿಹ್ನೆಗಳು ಕಾಣಿಸುತ್ತಿವೆ. ಬಲ್ಗೇರಿಯಾದಲ್ಲಿದ್ದ ತುರ್ಕಿ ರಾಯಭಾರಿಯು ಹಿಂದಿರುಗಿ ಕರೆಯಿಸಿಕೊಳ್ಳಲ್ಪಟ್ಟಿದ್ದಾನೆ. ಅಮೇರಿಕನ್ನರೊಡನೆ ನಡೆಯುತ್ತಿರುವ ಸಂಧಿಪ್ರಸ್ತಾಪದ ಪರ್ಯವಸಾನವು ತೇಲುವವರೆಗೂ ನೀವು ದುಡುಕಬೇಡಿರೆಂದು ಜರ್ಮನರು ತುರ್ಕಿಪ್ರಭುತ್ವದವರಿಗೆ ಸಮಾಧಾನ ಹೇಳುತ್ತಿದ್ದಾರೆ. ಆದರೆ ತುರ್ಕಿಯವರು ಅದಕ್ಕೆ ಉತ್ತರವನ್ನೇ ಕೊಟ್ಟಿಲ್ಲ. ಬಲ್ಗೇರಿಯಾದಂತೆಯೇ ತುರ್ಕಿಯೂ ಮಿತ್ರಮಂಡಲಿಯೊಡನೆ ಯಾವ ನಿಬಂಧನೆಯನ್ನೂ ಕೋರದೆ ಸಂಧಿಮಾಡಿಕೊಳ್ಳಬಹುದೆಂದು ಕಾಣುತ್ತದೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಬಿಸಿಲದಗೆಯು ವಿಪರೀತವಾಗಿದೆ. ಪ್ರತಿದಿನದ ಮರಣಸಂಖ್ಯೆಯು ೫೦ ರ ಮೇಲೆಯೇ ಇದೆ. ನೆನ್ನೆಯ ದಿನರಾತ್ರಿ ಕೊಂಚ ಮಳೆಯಾಯಿತು.

ನಮ್ಮ ವಿಶ್ವವಿದ್ಯಾಲಯದ ಪಟ್ಟಪ್ರದಾನ ಪ್ರಥಮಸಮಾರಂಭವು ನಿನ್ನೆಯದಿನ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಿಂದ ರಾಜಧಾನಿಯಲ್ಲಿ ನೆರವೇರಿತು.

ಜನಸಮ್ಮರ್ದದಿಂದಲೂ ನಿದ್ರೆಕೆಡುವುದರಿಂದಲೂ ರೋಗೋಪದ್ರವವು ಹೆಚ್ಚೀತೆಂಬ ಕಾರಣದಿಂದ ನಾಟಕಗಳನ್ನಾಡುವುದನ್ನೂ ಸಿನಿಮಾಪ್ರದರ್ಶನಗಳನ್ನೂ ರಾಜಧಾನಿಯಲ್ಲಿ ಸರ್ಕಾರದವರು ನಿಲ್ಲಿಸಿಬಿಟ್ಟಿದ್ದಾರೆ.

ರಾಜಧಾನಿಯ ಜವಳಿಅಂಗಡಿ ಮ|| ತಮ್ಮಯ್ಯನವರಿಂದ ನಂಜನಗೂಡು ಪುರನಿವಾಸಿಗಳು ಭಾರತವನ್ನೋದಿಸಿ ಆನಂದಪಟ್ಟು ಅವರಿಗೆ ಒಂದು ಭಂಗಾರದ ಮೆಡಲನ್ನು ಕೊಟ್ಟು ಮರ್ಯಾದಿಸಿದರೆಂದು ಕೇಳಿ ಸಂತೋಷಿಸುತ್ತೇವೆ.

ಇಂಫ್ಲುಯನ್ಜಾ ರೋಗದಿಂದ ಆಗುತ್ತಿರುವ ಮರಣಗಳ ಸಂಖ್ಯೆಯು ರಾಜಧಾನಿಗಿಂತಲೂ ಬೆಂಗಳೂರಿನಲ್ಲಿ ಹೆಚ್ಚಾಗಿದೆ. ಅಲ್ಲಿನ ಅಡ್ವೋಕೇಟರಲ್ಲಿ ಪ್ರಸಿದ್ಧರಾಗಿದ್ದ ಮ|| ಎಂ. ಜಿ. ವರದಾಚಾರ್ಯರು ಇದೇ ರೋಗದಿಂದ ಮೃತರಾದರೆಂದು ಕೇಳಿ ವಿಷಾದಿಸುತ್ತೇವೆ.

ಚೀಫ್‌ಕೋರ್ಟ್ ಜಡ್ಜರಾದ ಮ|| ಟಿ. ಪರಮಶಿವಯ್ಯರ್‌ರವರು ೩ ತಿಂಗಳ ರಜಾವನ್ನು ಪಡೆದುಕೊಂಡಿದ್ದಾರೆ. ಅದು ಮುಗಿದಕೂಡಲೇ ಅವರು ಉದ್ಯೋಗದಿಂದ ನಿವೃತ್ತರಾಗುತ್ತಾರೆ. ಸೆಷನ್ ಜಡ್ಜರಾದ ಮಿ|| ಬಿ. ಪ್ಲಮರ್‌ರವರು ಚೀಫ್‌ಕೋರ್ಟಿನ ಜಡ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ನವರಾತ್ರಿಯ ಉತ್ಸವಗಳೆಲ್ಲಾ ಮುಗಿದುವು. ಇನ್‌ಫ್ಲುಯನ್ಜಾ ಹಾವಳಿಯಿಂದ ಉತ್ಸವಗಳೂ ಈ ಕಾಲದಲ್ಲಿ ನಡೆಯಬೇಕಾಗಿದ್ದ ಸಭಾಕಾರ್ಯಗಳೂ ಉಪನ್ಯಾಸಗಳೂ ಸಹ ರಾಹುಗ್ರಸ್ತ ಚಂದ್ರಮಂಡಲದಂತೆ ತೇಜೋವಿಹೀನವಾದುವು. ಹೊರಗಣ ಪ್ರಜೆಗಳು ಬಂದಿದ್ದುದೂ ಬಹಳಕಡಿಮೆ.

ಇನ್‌ಫ್ಲುಯನ್ಜಾ ರೋಗಪೀಡಿತರಾಗಿದ್ದ ರಾಜಬಂಧುಮಂಡಲಿಯಲ್ಲಿ ಸರಸಿಗಳೂ ದೃಢಾಂಗರೂ ಗುಣಯುಕ್ತರೂ ಚಿಕ್ಕವಯಸ್ಸಿನವರೂ ಕವಿತಾರಚನಪ್ರೇಮರೂ ಆಗಿದ್ದ ಮ||ಗಳಾದ ಚೆನ್ನರಾಜಅರಸಿನವರೂ, ಪೋಲೀಸ್ ಇನ್‌ಸ್ಪೆಕ್ಟರ್ ಮ|| ದೇವರಾಜಅರಸಿನವರೂ ಸಹ ಸ್ವರ್ಗಸ್ಥರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಇನ್‌ಫ್ಲುಯನ್ಜಾ ರೋಗದ ಹಾವಳಿಯಿಂದರಾಜಧಾನಿಯಲ್ಲಿರುವ ಸರ್ಕಾರಿ ಪಾಠಶಾಲೆಗಳು ಗ್ರಾಂಟೆಡ್ ಪಾಠಶಾಲೆಗಳೆಲ್ಲಾ ಈ ತಿಂಗಳ ಕೊನೆಯವರೆಗೂ ಮುಚ್ಚಲ್ಪಡತಕ್ಕದೆಂದು ವಿದ್ಯಾಭ್ಯಾಸಶಾಖೆಯ ಇನ್|| ಜನರಲ್‌ರವರು ಅಪ್ಪಣೆಮಾಡಿದ್ದಾರೆ. ವಸ್ತುಪ್ರದರ್ಶನಾಲಯವೂ ಈ ದಿನದಿಂದ ಮುಚ್ಚಲ್ಪಡುವುದೆಂಬ ಪ್ರವಾದವಿದೆ.

ಜಪಾನಿಗೆ ಹೋಗಿಬಂದಿದ್ದು ಮೊನ್ನೆತಾನೇ ರಾಜಧಾನಿಯ ಮ್ಯು|| ಕೌನ್‌ಸಿಲರಾಗಿ ದೇಶಸೇವೆಯನ್ನು ಹಲವುತೆರದಲ್ಲಿ ಮಾಡಲು ಉತ್ಸಾಹಯುಕ್ತರಾಗಿದ್ದ ಮ|| ಆರ್. ರಂಗಯ್ಯನವರೂ, ದಳವಾಯಿ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನ ಹೆಡ್ಮಾಸ್ಟರ್ ಮ|| ಕೃಷ್ಣರಾಯರೂ ಇವರ ಸಹೋದರರಾದ ಕೆ. ನರಸಿಂಹಯ್ಯನವರು ಸಹ ಇನ್‌ಫ್ಲುಯನ್ಜಾ ರೋಗಕ್ಕೆ ತುತ್ತಾದುದು ವಿಷಾದಕರವಾಗಿದೆ.

ಪ್ರಜಾಪ್ರತಿನಿಧಿಸಭೆಯು ಕಳೆದ ತಾ|| ೧೭ರಲ್ಲಿ ದಿವಾನರ ಅಧ್ಯಕ್ಷತೆಯಿಂದ ಆರಂಭಿಸಲ್ಪಟ್ಟಿತು. ಪ್ರತಿನಿಧಿಗಳು ಬಹುಶಃ ೬೦-೭೦ ಮಂದಿಗಳು ಮಾತ್ರ ಬಂದಿದ್ದರು. ದಿವಾನರು ಸಿದ್ಧವಾಗಿದ್ದ ಉಪನ್ಯಾಸವನ್ನು ಓದಿ ಕೆಲವು ಸಂಘಗಳಿಂದ ಪದ್ಧತಿಯಂತೆ ಒಪ್ಪಿಸಲ್ಪಟ್ಟ ವಿಜ್ಞಾಪನ ಪತ್ರಿಕೆಗಳನ್ನು ಸ್ವೀಕರಿಸಿ, ಸಭಾಕಾರ್ಯವನ್ನು ಒಂದೇ ದಿನಕ್ಕೇ ಸಮಾಪ್ತಿಗೊಳಿಸಿದರು.

ಚನ್ನಗಿರಿ ತಾ|| ಹೊದಿಗೆರೆಯ ಶ್ರೀಮಂತರಾದ ಅಡವಪ್ಪಸೆಟ್ಟರ ಜೇಷ್ಠ ಮತ್ತು ತೃತೀಯಪುತ್ರರುಗಳು, ಇಬ್ಬರು ಪುತ್ರಿಯರು, ಮತ್ತು ಒಬ್ಬ ಅಳಿಯನು ಇನ್‌ಫ್ಲುಯಿಂಜಾ ಜ್ವರರೋಗಪೀಡಿತರಾಗಿದ್ದು ಶಿವಾಧೀನರಾದರೆಂದು ತಿಳುಹಲು ಅತ್ಯಂತ ಖೇದವಾಗುತ್ತದೆ. ನಿಗರ್ವಶಿಖಾಮಣಿಗಳೂ, ದಯಾರ್ದ್ರಹೃದಯರೂ, ಗುರುಭಕ್ತಿನಿಸ್ಸೀಮರೂ, ದಾನಶೀಲರೂ, ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಫಂಡಿಗೆ ೨೦೦೦ ರೂ. ಗಳನ್ನೂ, ಮಹಾಸಭೆಯ ಸ್ಥಿರತೆಗಾಗಿ ೨೦೦೦ ರೂ. ಗಳನ್ನೂ ಅಪ್ರಾರ್ಥಿತವಾಗಿ ಸಹಾಯಮಾಡಿ ಭ್ರಾತೃವೀರಶೈವ ಶ್ರೀಮಂತರಿಗೆ ಮಾರ್ಗದರ್ಶಕರೂ ಆಗಿರುವ ಮ|| ಅಡವಪ್ಪಸೆಟ್ಟರಿಗೆ ವೃದ್ಧಾಪ್ಯಕಾಲದಲ್ಲಿ ಹೀಗೆ ಏಕಕಾಲದಲ್ಲಿ ಪುತ್ರಪುತ್ರಿಯರುಗಳ ಮತ್ತು ಜಾಮಾತೃವಿನ ವಿಯೋಗದುಃಖವು ಪ್ರಾಪ್ತವಾದುದಕ್ಕಾಗಿ ನಮ್ಮ ಅನುತಾಪವನ್ನು ಈ ಮೂಲಕ ಪ್ರದರ್ಶಿಸಿ ಮ|| ಸೆಟ್ಟರಿಗೂ ಅವರ ಕುಟುಂಬಕ್ಕೂ ದುಃಖಸಮಾಧಾನವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಕೊಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಕಳೆದ ಗುರುವಾರ ಅಂಬಾವಿಲಾಸದಲ್ಲಿ ನಡೆದ ದರುಬಾರಿನಲ್ಲಿ ಶ್ರೀಮನ್ಮಹಾರಾಜರವರು ಆಸ್ಥಾನಮಹಾವಿದ್ವಾನ್ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳವರಿಗೆ "ಕರ್ನಾಟಕಭಾಷಾರತ್ನ" ಎಂಬ ಬಿರುದನ್ನೂ, ರತ್ನಖಚಿತವಾದ ಭಂಗಾರದ ತೋಡಾವನ್ನೂ, ಕಲಾಬತ್ತು ಶಾಲುಜೋಡಿ, ವಲ್ಲಿ, ದುಪ್ಪಟ್ಟಾ, ಪೇಟಾ- ಈ ವಸ್ತ್ರಾಭರಣ ಬಹುಮಾನಗಳೊಡನೆ ಅನುಗ್ರಹಿಸಿದರೆಂದು ತಿಳಿಯಿಸಲು ಬಹಳ ಸಂತೋಷಪಡುತ್ತೇವೆ. ಈ ಜ್ಞಾನವಯೋವೃದ್ಧಪಂಡಿತರಿಗೆ ಇಂಥ ಬಹುಮಾನವು ಎಷ್ಟೋಕಾಲಕ್ಕೆ ಹಿಂದೆಯೇ ದೊರೆಯಬೇಕಾಗಿದ್ದಿತು. ದೇಶಭಾಷಾಪಾಂಡಿತ್ಯದಲ್ಲಿ ಈಚೆಗೆ ನಮ್ಮದೇಶದೊಳಗೆ ತಲೆಯೆತ್ತಿಕೊಂಡಿರುವ ಜನರಲ್ಲಿ ಮುಕ್ಕಾಲುಮೂರುವೀಸಪಾಲಿನವರೆಲ್ಲಾ ಈ ನಮ್ಮ ಶಾಸ್ತ್ರಿಗಳ ಶಿಷ್ಯಪ್ರಶಿಷ್ಯಕೋಟಿಗೆ ಸೇರಿದವರೇ ಆಗಿರುತ್ತಾರೆ. ಇಂಥವರಿಗೆ ಈಗಲಾದರೂ ಈ ತೆರದ ರಾಜಮರ್ಯಾದೆಯು ಲಭಿಸಿದುದು ಕನ್ನಡಿಗರೆಲ್ಲರಿಗೂ ಸಂತೋಷವನ್ನುಂಟುಮಾಡತಕ್ಕುದಾಗಿದೆ. ಈ ಪ್ರಶಸ್ತಿಯು ಶಾಸ್ತ್ರಿಗಳಿಗೆ ಸರ್ವವಿಧದಿಂದಲೂ ಒಪ್ಪತಕ್ಕುದಾಗಿದೆ. ಈ ರತ್ನಪ್ರಭೆಯು ದೇಶಭಾಷೆಗೆ ಎಷ್ಟು ಮೇಲ್ಮೆಯನ್ನುಂಟುಮಾಡಿರುವುದೆಂಬುದನ್ನು ದೇಶವೇ ಬಲ್ಲುದು. ಗುಣಗ್ರಹಣಧುರೀಣರಾದ ಶ್ರೀಮನ್ಮಹಾರಾಜರವರ ಈ ವಿದ್ವತ್ಪಕ್ಷಪಾತವು ಅಭಿನಂದ್ಯವಾಗಿದೆ.

ಇತರ ವಿಷಯಗಳು.

ಈಗ ರಣರಂಗದಲ್ಲಿ ಅಮೇರಿಕನ್ನರ ಸೈನ್ಯವು ೧೯ ಲಕ್ಷವಿದೆ. ಇನ್ನು ೨೦ ಲಕ್ಷವು ರಣರಂಗಕ್ಕೆ ಹೊರಡುವುದರಲ್ಲಿದೆಯೆಂದು ಅಮೇರಿಕನ್ ದಳಪತಿಯೊಬ್ಬರು ಹೇಳಿದ್ದಾರೆ.

ಈಗಲೂ ಜರ್ಮನರು ಫ್ರಾನ್ಸಿನಲ್ಲಿ ಹಿಂದೆಗೆದುಹೋಗುತ್ತಿರುವಾಗ ಪಟ್ಟಣಗಳನ್ನು ಸುಟ್ಟು ಹಾಳ್ಮಾಡಿಹೋಗುತ್ತಿದ್ದಾರೆ. ಈ ದೌರ್ಜನ್ಯವು ಮಿತ್ರಮಂಡಲಿಗೆ ಅತ್ಯಾಗ್ರಹವನ್ನುಂಟುಮಾಡಿದೆ. ಇದಕ್ಕೆ ಮುಯ್ಯಾಗಿ ನಾವೂ ಜರ್ಮನಿಯ ಅನೇಕ ಪಟ್ಟಣಗಳನ್ನು ಸುಟ್ಟು ಹಾಳ್ಮಾಡಬೇಕು, ಇಲ್ಲವೆ ವಶಪಡಿಸಿಕೊಳ್ಳಬೇಕು, ಅಥವಾ ತಕ್ಕ ನಷ್ಟಪರಿಹಾರವನ್ನು ಪಡೆಯಬೇಕು. ಅದು ಆದ ಹೊರತು ಸಂಧಿಯನ್ನು ಮಾಡಕೊಳ್ಳಲಾಗದೆಂದು ಇಂಗ್ಲೀಷ್ ಪತ್ರಿಕೆಗಳೂ ಕೆಲಮಂದಿ ದೊಡ್ಡಮನುಷ್ಯರೂ ಹೇಳುತ್ತಿದ್ದಾರೆ.

ಜರ್ಮನರು ಸಂಧಿಪ್ರಸ್ತಾಪವನ್ನೊಂದುಕಡೆ ನಡೆಯಿಸುತ್ತಿದ್ದರೂ ಬೇರೊಂದುಕಡೆ ತಮ್ಮ ಸಬ್‌ಮೆರೀನುಗಳ ಹಾವಳಿಯನ್ನು ಪ್ರಬಲವಾಗಿ ನಡೆಯಿಸುತ್ತಲೇ ಇದ್ದಾರೆ. ಕಳೆದವಾರ ಅವರು

ಮುಳುಗಿಸಿದ ಹಡಗುಗಳಲ್ಲಿ ಲೀನ್ಸ್‌ಟರ್ ಎಂಬ ಐರ್ಲೆಂಡ್ ಹಡಗು ಒಂದಾಗಿರುತ್ತದೆ. ಇದರಲ್ಲಿದ್ದ ೭೯೦ ಮಂದಿಗಳಲ್ಲಿ ೧೯೩ ಮಂದಿ ಮಾತ್ರ ಕಾಪಾಡಲ್ಪಟ್ಟು ಉಳಿದವರೆಲ್ಲಾ ಸತ್ತರು. ಹಿರಾನೊಮಾರು ಎಂಬ ಜಪಾನು ಹಡಗು ಕೂಡ ಶತ್ರುಗಳ ಟಾರ್ಪಿಡೋ ಏಟಿನಿಂದ ಮುಳುಗಿಸಲ್ಪಟ್ಟಿತು. ಒಳಗಿದ್ದ ೨೦೦ ಮಂದಿಗಳಲ್ಲಿ ೯೭ ಮಂದಿ ಬದುಕಿ ಉಳಿದವರು ಸತ್ತರು.

ಅಮೇರಿಕಾದ ಅಧ್ಯಕ್ಷರೊಡನೆ ಜರ್ಮನರೂ ಆಸ್ಟ್ರಿಯನ್ನರೂ ತುರ್ಕಿಯವರೂ ಸಂಧಿವಿಷಯವಾಗಿ ಪತ್ರವ್ಯವಹಾರ ನಡೆಯಿಸುತ್ತಿರುವರಷ್ಟೆ. ಅದರ ಪರ್ಯವಸಾನವು ಇನ್ನೂ ತೇಲಲಿಲ್ಲ. "ತಾತ್ಕಾಲಿಕವಾಗಿ ಯುದ್ಧವು ನಿಲ್ಲಬೇಕಾದರೂ, ಜರ್ಮನರು ಸೇನೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಮುಖ್ಯಮುಖ್ಯ ಸಂರಕ್ಷಕ ಸ್ಥಲಗಳನ್ನು ಮಿತ್ರಮಂಡಲಿ ವಶಮಾಡಬೇಕು. ಅವರ ಸಬ್‌ಮೆರೀನುಗಳನ್ನೂ ನೌಕಾದಳವನ್ನೂ ಮಿತ್ರಮಂಡಲಿಯ ವಶಮಾಡಬೇಕು'' ಎಂಬುದೇ ಮೊದಲಾದ ಕಠಿನವಾದ ನಿಬಂಧನೆಗಳನ್ನು ಮಿತ್ರಮಂಡಲಿಯ ಸೇನಾಪತಿಗಳು ಸೂಚಿಸುತ್ತಿದ್ದಾರೆ. ಮತ್ತು ಶತ್ರುದೇಶದ ಪ್ರಜೆಗಳೊಡನೆ ಸಂಧಿಯಾಗಬೇಕೇ ಹೊರತು ಕೈಜರರೊಡನೆ ಆಗಕೂಡದೆಂದು ಹೇಳುತ್ತಿದ್ದಾರೆ. ಅಮೇರಿಕಾದ ಅಧ್ಯಕ್ಷರು ಜರ್ಮನಿಯವರ ಲೇಖನಕ್ಕೆ ಕೊಟ್ಟಿರುವ ಉತ್ತರದಲ್ಲಿ—"ಮಿತ್ರಮಂಡಲಿಯವರ ಮತ್ತೂ ಅಮೇರಿಕಾದ ಸೈನ್ಯಗಳಿಗಿರುವ ಪ್ರಾಶಸ್ತ್ಯಕ್ಕೆ ಯಾವ ತೆರದ ಭಂಗವೂ ಬರಕೂಡದು. ದೇಶವನ್ನು ಬಿಡುವುದು ತಾತ್ಕಾಲಿಕವಾಗಿ ಯುದ್ಧವನ್ನು ನಿಲ್ಲಿಸುವುದು ಈ ವಿಷಯಗಳಿಗೆ ಸಂಬಂಧಪಟ್ಟ ಸಂಗತಿಗಳನ್ನೆಲ್ಲಾ ನಮ್ಮಗಳ ಸೈನ್ಯಾಧಿಪತಿಗಳ ಆಲೋಚನೆಯನ್ನು ತೆಗೆದುಕೊಂಡು ನಿರ್ಧರಿಸಬೇಕಾಗಿದೆ. ಜರ್ಮನರು ದುರಾಗತವನ್ನು ಪರಿತ್ಯಜಿಸುವವರೆಗೆ ತಾತ್ಕಾಲಿಕಸಂಧಿಯೂ ಜರುಗಲಾರದು'' ಎಂದು ತಿಳಿಯಿಸಿರುತ್ತಾರೆ. ಜರ್ಮನಿಯ ಅಂತಸ್ಥಿತಿಯನ್ನು ನೋಡಿದರೆ ಕೈಜರು ರಾಜ್ಯಪರಿತ್ಯಾಗ ಮಾಡುವುದೇ ಸಿದ್ಧವೆಂದು ಕಾಣುತ್ತದೆ. ಆದರೂ ಮಿತ್ರಮಂಡಲಿಯವರು ಸೂಚಿಸುವಂತೆ ಒಪ್ಪಿ ಸಂಧಿಗೆ ಅವರು ನಿಲ್ಲುವರೆಂದು ಊಹಿಸುವುದು ಅಸಾಧ್ಯವಾಗಿದೆ. ಹಾಗಾದುದಲ್ಲದೆ ಯುದ್ಧವನ್ನು ಮಿತ್ರಮಂಡಲಿಯು ನಿಲ್ಲಿಸುವುದಿಲ್ಲ. ಇನ್ನು ಕೆಲಕಾಲ ಯುದ್ಧಮಾಡಿ ಪೂರ್ಣವಾಗಿ ಹಣ್ಣಾದಲ್ಲದೆ ಈಗಲೇ ಸಂಧಿ ನಡೆಯುವಂತೆ ಕಾಣುವುದಿಲ್ಲ.

ಇನ್‌ಫ್ಲುಯಂಜಾ ನಿವಾರಣಾಕ್ರಮ.

ಇನ್‌ಫ್ಲುಯಂಜಾ ಕ್ರಿಮಿಗಳು ಮನುಷ್ಯನ ಶರೀರವನ್ನು ಪ್ರವೇಶಿಸುವುದರಿಂದ ಈ ರೋಗವು ಉಂಟಾಗುತ್ತದೆ. ಈ ರೋಗವನ್ನು ಅಲಕ್ಷ್ಯಮಾಡಿ, ಇದಕ್ಕೆ ಯಾವವಿಧವಾದ ಚಿಕಿತ್ಸೆಯೂ ಆವಶ್ಯಕವಿಲ್ಲವೆಂದು ತಿಳಿದುಕೊಳ್ಳುವುದು ಒಂದು ದೊಡ್ಡ ತಪ್ಪು. ಜ್ವರ, ತಲೆನೋವು, ಮೈಕೈ ನೋವುಗಳು, ಅತಿ ನಿಶ್ಶಕ್ತತೆ ಈ ಚಿಹ್ನೆಗಳು ಕಾಣಿಸಿಕೊಂಡ ಕೂಡಲೇ ಹಾಸಿಗೆಮೇಲೆ ಮಲಗಿಕೊಳ್ಳಬೇಕು. ಹಾಗೆ ಮಲಗಿಕೊಳ್ಳುವ ಕೊಠಡಿಯ ಬಾಗಿಲು, ಕಿಟಕಿಗಳು ಎಲ್ಲವನ್ನೂ ತೆರೆದಿಡಬೇಕು. ಧಾರಾಳವಾಗಿ ಬೀಸುವ ಗಾಳಿಗೆ ಇನ್‌ಫ್ಲುಯಂಜಾ ಕ್ರಿಮಿಗಳನ್ನು ನಾಶಮಾಡುವ ಶಕ್ತಿ ಉಂಟು. ಬಾಗಿಲು ಕಿಟಕಿಗಳು ಮುಚ್ಚಿರುವ ಕೊಠಡಿಯಲ್ಲಿ ಒಬ್ಬರಾಗಲೀ ಅಥವಾ ಹೆಚ್ಚು ಮಂದಿಯಾಗಲೀ ಮಲಗಿದ್ದರೆ ಅಲ್ಲಿನ ಗಾಳಿಯು ಬೇಗ ಕೆಟ್ಟು ಹೋಗುತ್ತದೆ. ಇಂಥಾ ಸಂದರ್ಭಗಳಲ್ಲಿ ಇನ್‌ಫ್ಲುಯಂಜಾ ಕ್ರಿಮಿಗಳಿಗೆ ಅತ್ಯುಗ್ರವಾದ ರೋಗಚಿಹ್ನೆಗಳನ್ನು ಉಂಟುಮಾಡುವ ಶಕ್ತಿ ಇರುತ್ತದೆ. ಅಲ್ಲದೆ ನ್ಯೂಮೋನಿಯಾ ಎಂಬ ಶ್ಲೇಷ್ಮಜ್ವರವೂ ಇದರಿಂದ ಉಂಟಾಗಬಹುದು.

ಚೆನ್ನಾಗಿ ಗಾಳಿ ಬೀಸುವ ಸ್ಥಳದಲ್ಲಿರುವುದರಿಂದ ಈ ಕ್ರಿಮಿಗಳ ಶಕ್ತಿಯು ಕಡಮೆಯಾಗುವದಲ್ಲದೆ ರೋಗಿಗೆ ಗುಣಮುಖವಾಗಿ ಅವನ ದೇಹಕ್ಕೆ ಇನ್‌ಫ್ಲುಯಂಜಾ ಕ್ರಿಮಿಗಳನ್ನೂ ಅವುಗಳ ವಿಷವನ್ನೂ ನಾಶಮಾಡುವ ಶಕ್ತಿಯು ಬರುತ್ತದೆ. ಗಾಳಿ ಹೆಚ್ಚಾಗಿ ಬೀಸಿದರೂ ರೋಗಿಗಳು ಭಯಪಡಬೇಕಾದ ಅವಶ್ಯಕವಿಲ್ಲ. ಅವರಿಗೆ ಚಳಿಯಾದರೆ ಹೆಚ್ಚಾಗಿ ಹೊದ್ದುಕೊಳ್ಳಬಹುದು. ಮಲಬಾಧೆಯು ಸರಿಯಾಗಿ ಆಗುವಂತೆ ನೋಡಿಕೊಳ್ಳಬೇಕು. ಹಾಲು ಗಂಜಿ, ಮೊದಲಾದ ಆಹಾರಪದಾರ್ಥಗಳನ್ನೇ ಉಪಯೋಗಿಸಬೇಕು. ತಕ್ಷಣವೇ ಡಾಕ್ಟರ ಸಹಾಯವನ್ನು ಕೋರಿ, ಅವರು ಹೇಳುವ ಔಷಧದ ಅನುಪಾನಗಳನ್ನು ಅನುಸರಿಸಬೇಕು. ರೋಗದ ಚಿಹ್ನೆಗಳು ಸಂಪೂರ್ಣವಾಗಿ ಹೋಗುವವರೆಗೂ ದೇಹಕ್ಕಾಗಲೀ ಮನಸ್ಸಿಗಾಗಲೀ ಯಾವಶ್ರಮವನ್ನೂ ಕೊಡಕೂಡದು. ಇನ್‌ಫ್ಲುಯಂಜಾ ರೋಗಿಗಳು ಮಲಗಿರುವ ಕೊಠಡಿಯಲ್ಲಿ ಆರೋಗ್ಯವಾಗಿರುವವರು ಮಲಗಕೂಡದು. ಮತ್ತು ರೋಗಿಗಳು ಕೆಮ್ಮುತ್ತಿರುವಾಗ ಅವರಿಗೆ ಬಹಳ ಹತ್ತಿರಕ್ಕೆ ಹೋಗಕೂಡದು. ಏಕೆಂದರೆ, ಕೆಮ್ಮುವಾಗ ಅನೇಕ ಕ್ರಿಮಿಗಳು ಹೊರಗೆ ಬಂದು ಹತ್ತಿರ ಇರುವವರ ಮೂಗಿನ ಹೊಳ್ಳೆಗಳಲ್ಲಿಯೂ, ಗಂಟಲಲ್ಲಿಯೂ ಸೇರಿಕೊಳ್ಳುತ್ತವೆ. ಆದುದರಿಂದ ಗಂಟಲಿಗೆ ಹಚ್ಚಿಕೊಳ್ಳುವುದಕ್ಕೆ ಥೈಮಾಲ್ ಎಂಬ ದ್ರವ್ಯವನ್ನು ಉಪಯೋಗಿಸಬೇಕು. ಅಲ್ಲದೆ ಅದೇ ದ್ರವ್ಯವನ್ನು 3 ಗ್ರೇನಿನಷ್ಟು ಹೊಟ್ಟೆಗೆ ತೆಗೆದುಕೊಳ್ಳಬೇಕು. ಹೀಗೆ ಮಾಡುವುದರಿಂದ ರೋಗವು ಬರುವುದಿಲ್ಲ. ಥೈಮಾಲ್ ಸಿಕ್ಕದಿದ್ದಲ್ಲಿ ಪೊಟಾಸಿಯಮ್ ಪರ್‌ಮ್ಯಾಂಗನೇಟೆಂಬ ಉಪ್ಪನ್ನು ನೀರಿನಲ್ಲಿ ಹಾಕಿ ದಿನಕ್ಕೆ ಮೂರು ಬಾರಿ ಬಾಯಿ ಮುಕ್ಕಳಿಸಬೇಕು. ಹೀಗೆ ಮಾಡಿದರೆ ಗಂಟಲಿನಲ್ಲಿರಬಹುದಾದ ಕ್ರಿಮಿಗಳು ಹೊರಟು ಹೋಗುತ್ತವೆ. ಇವೆರಡು ಔಷಧಿಗಳು ಸಿಕ್ಕದಿದ್ದರೆ, ಉಗುರು ಬೆಚ್ಚಗಿರುವ ನೀರನ್ನು ಪದೇ ಪದೇ ಚೆನ್ನಾಗಿ ಮುಕ್ಕಳಿಸಬೇಕಲ್ಲದೆ ಮೂಗಿನ ಹೊಳ್ಳೆಗಳಿಂದ ಸ್ವಲ್ಪ ನೀರನ್ನು ಸೇದಿ ಹೊರಕ್ಕೆ ಬಿಡಬೇಕು. ಯಾವಾಗಲೂ ಮನೆಯಲ್ಲಿಯೇ ಇದ್ದುಕೊಂಡು ಅಲ್ಲಿನ ಕೆಟ್ಟಗಾಳಿಯನ್ನೇ ಉಸುರು ತೆಗೆದುಕೊಳ್ಳುತ್ತೇನೆಂದು ಹಠ ಹಿಡಿದವರಿಗೆ ಯಾವ ಔಷಧದಿಂದಲೂ ಏನೂ ಪ್ರಯೋಜನವಾಗುವುದಿಲ್ಲ.

ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಡಾಕ್ಟರುಗಳು ಮೋಟಾರ್‌ಕಾರಿನಲ್ಲಿಯಾಗಲಿ, ಗಾಡಿಯಲ್ಲಾಗಲೀ, ಜಟಕಾದಲ್ಲಾಗಲೀ ಔಷಧಿಗಳನ್ನು ಪ್ರತಿ ಮನೆಯ ಬಾಗಿಲಿಗೂ ತೆಗೆದುಕೊಂಡು ಹೋಗಿ ಕೊಡುವುದರಿಂದ ಬೇಕಾದವರು ತೆಗೆದುಕೊಳ್ಳಬಹುದು. ಖರೀದಿ ಕೊಟ್ಟು ಹಾಲು ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲದ ಬಡವರು ಹಾಲನ್ನು ಸಹ ಕೇಳಿ ತೆಗೆದುಕೊಳ್ಳಬಹುದು. ಈ ಪಟ್ಟಣಗಳ ಕೆಲವು ಭಾಗಗಳಲ್ಲಿ ಹೊಸ ಆಸ್ಪತ್ರೆಗಳನ್ನು ಹಂಗಾಮಿಯಾಗಿ ಇಟ್ಟಿದೆ. ಸುತ್ತುಮುತ್ತಲಿರುವವರು ಅಲ್ಲಿಗೆ ಹೋಗಿ ಔಷಧಗಳನ್ನು ತೆಗೆದುಕೊಳ್ಳಬಹುದು. ರೋಗಿಗಳ ಮನೆಗಳಲ್ಲಿ ಧಾರಾಳವಾಗಿ ಗಾಳಿ ಆಡುವ ಕೊಠಡಿಗಳಿಲ್ಲದಿದ್ದರೆ ಅವರು ಈ ಹೊಸ ಆಸ್ಪತ್ರೆಗಳ ಹತ್ತಿರದಲ್ಲಿ ಹಾಕಿರುವ ಡೇರೆಗಳಲ್ಲಿರುವ ಸ್ಥಳವನ್ನು ಉಪಯೋಗಿಸಿಕೊಂಡು ಚಿಕಿತ್ಸೆ ಹೊಂದುವುದಕ್ಕೂ ಅನುಕೂಲಗಳನ್ನು ಉಂಟುಮಾಡಿದೆ.

ಎಂ. ಶ್ರೀನಿವಾಸರಾವ್,
ಸ್ಯಾನಿಟರಿ ಕಮಿಷನರ್.

ಪತ್ರವ್ಯವಹಾರ.

ನೋಟೀಸ್.

ಇಂಫ್ಲುಯಂಜಾ, ನ್ಯುಮೋನಿಯಾ ಜ್ವರವು ಬೆಂಗಳೂರು ಸಿಟಿಯಲ್ಲಿ ಸ್ವಲ್ಪ ಉಲ್ಬಣವಾಗಿರುವುದರಿಂದ ಈ ದಸರಾ ರಜಾದಲ್ಲಿ ತಮ್ಮ ಸ್ವಂತ ಗ್ರಾಮಗಳಿಗೆ ಹೋಗಿರುವ ವೀರಶೈವಾಶ್ರಮದ ವಿದ್ಯಾರ್ಥಿಗಳು ಸ್ವಲ್ಪ ಸಮಾಧಾನಸ್ಥಿತಿಯನ್ನು ನೋಡಿಕೊಂಡು ಇಲ್ಲಿಗೆ ಬರುವುದು ಉತ್ತಮವೆಂಬ ಅಂಶವು ಸೂಚಿಸಲ್ಪಟ್ಟಿದೆ.

ಬೆಂಗಳೂರು ಸಿಟಿ, }
ತಾ|| 14-10-1918. }
ಜಿ. ಕೆ. ರುದ್ರಾಪ್ಪ, ಸೆಕ್ರೆಟರಿ,
ವೀರಶೈವಾಶ್ರಮ.

ಮೈಸೂರು ಗ್ರಾಮದ ಒಬ್ಬ ಬಡರೈತನ ಅರಿಕೆ ಏನೆಂದರೆ—

ಅಯ್ಯಾ! ಮಂಜ್ರಾಬಾದ್ ತಾಲ್ಲೂಕಿಗೆ ಸೇರಿದ ಪ್ರಾಂತದಲ್ಲಿ ಮಳೆಯಿಲ್ಲದೆ ಪೈರು ಬೆಳೆಯಲಿಕ್ಕೆ ಬಹಳ ಅನಾನುಕೂಲವಾಗಿಯೂ ಅಲ್ಲದೆ ಬಿಸಿಲಿನ ತಾಪವು ದಿನೇದಿನ ಹೆಚ್ಚುತ್ತಲೂ ಇದೆ. ನಮ್ಮ ಮಲೆನಾಡು ಪ್ರಾಂತ್ಯಕ್ಕೆ ಬತ್ತವೇ ಮುಖ್ಯ ಬೆಳೆ. ಈಗಿನ ಮಳೆಯ ದೆಸೆಯಿಂದ ಮುಂದಿನ ಜನಗಳ ಜೀವದ ಗುಕ್ಕು ಅಳಿಯುವಂತೆಯಾಗಿ ಕಾಣುತ್ತದೆ. ಅಲ್ಲದೆ ನಮ್ಮ ಮಲೆನಾಡುಪ್ರಾಂತ್ಯಕ್ಕೆ ರಫ್ತಾಗತಕ್ಕ ದಿನಸು ಎಣ್ಣೆ ಬಟ್ಟೆ ಮೊದಲಾದ ಪದಾರ್ಥಗಳ ಬೆಲೆಯು ಬಹಳ ತುಟ್ಟಿಯಾಗಿದೆ. ಅಲ್ಲದೆ ಮೆಣಸಿನಕಾಯಿ ಸೇರು 8 ಆಣೆ. ಹುಣಸೆಹಣ್ಣು 2 ಆಣೆ 6 ಕಾ. ಉಪ್ಪು 4 ಆಣೆ. ತೊಗರಿ 6 ಆಣೆ. ಗೋಧಿ 5 ಆಣೆ. ಹೊಗೇಸೊಪ್ಪು 8 ಆಣೆ. ಹುರುಳಿ 6 ಆಣೆ. ಹಚ್ಚೆಳ್ಳೆಣ್ಣೆ 6 ಆಣೆ. ಈ ರೀತಿ ಎಲ್ಲಾ ದಿನಸುಗಳು ಬಹಳ ತುಟ್ಟಿಯಾಗಿ ಮಾರಾಟವಾಗುತ್ತವೆ. ರಾಗಿ 1 ರೂ. ಗೆ 9 ಸೇರು–10 ಸೇ. ಬಟ್ಟೆವಿಷಯ ಹೇಳಲಿಕ್ಕೆ ಸಾಧ್ಯವಿಲ್ಲ. ಈ ರೀತಿಯಲ್ಲಿ ಎಲ್ಲಾ ದಿನಸೂ ಬಟ್ಟೆ ಸಹ ತುಟ್ಟಿಯಲ್ಲಿ ಕೊಂಡು ರೈತನು ಜೀವಿಸುವುದು ಹೇಗೋ ಶ್ರೀಭಗವಂತನೇ ಬಲ್ಲ. ಇಂಥಾಕಾಲದಲ್ಲಿ ನಮ್ಮ ಸರ್ಕಾರದವರು ಬತ್ತವನ್ನು ನಿಗದಿಮಾಡಿರುವ ದರದಲ್ಲಿ ರೈತನು ಬೆಳೆದ ಬತ್ತವನ್ನು ಅಗ್ಗವಾಗಿ ಕೊಟ್ಟು ತಮಗೆ ಬೇಕಾದ ಸರಕುಗಳನ್ನು ತುಟ್ಟಿಯಲ್ಲಿ ಕೊಂಡು ಪೂರೈಸುವ ಬಗೆ ಹೇಗೆ? ಮಲೆನಾಡು ಪ್ರಾಂತ್ಯವಾದುದರಿಂದ ಪ್ರಾಣಾಧಾರವಾದ ಬತ್ತ ಮಾತ್ರವೇ ಅಲ್ಲದೆ ಈ ಪ್ರಾಂತ್ಯದಲ್ಲಿ ಕಾಫಿ ಯಾಲಕ್ಕಿ ಸಹ ಬೆಳೆಯುತ್ತದೆ. ಈ ಪದಾರ್ಥವನ್ನು ಆಹಾರಕ್ಕೆ ಉಪಯೋಗಿಸುವುದಕ್ಕೆ ಆಗುವುದಿಲ್ಲ. ಮತ್ತೆ ಯಾವ ಫಸಲು ಬೆಳೆಯುವುದಕ್ಕೂ ಅನಾನುಕೂಲ. ಈಗಿನ ಮಳೆಯ ದೆಸೆಯಿಂದ ಮುಂದಿನ ಭತ್ತದ ಪೈರು ಕೈಗೆ ಸಿಕ್ಕುವಹಾಗೆ ಕಾಣುವುದಿಲ್ಲ. ನಮ್ಮ ಸರ್ಕಾರದವರು ಭತ್ತ ಒಂದಕ್ಕೆ ದರ ನಿಗದಿ ಮಾಡಿರುವುದು ಸಾಲದು. ಬಟ್ಟೆ ಎಣ್ಣೆ ದಿನಸು ವಗೈರೆ ಎಲ್ಲಾ ಭಾಗದಲ್ಲೂ ಸಹ ಸಾಮಾನುಗಳ ಬೆಲೆಯನ್ನು ನಿಷ್ಕರ್ಷೆಮಾಡಿ ಬಡರೈತರನ್ನು ಉದ್ಧರಿಸ್ಯಾರೆಂದು ನಂಬಿದ್ದೇನೆ. ಅಲ್ಲದೆ 1 ರೂ. ನೋಟಿಗೆ 1 ಆಣೆ 2 ಆಣೆ ಬಟ್ಟ ಕೇಳುತ್ತಾರೆ. ನೋಟು ಸ್ವಲ್ಪ ಮಾಸಿದ್ದರೆ ನೋಟನ್ನು ನೋಡಿ ನಮಗೆ ಬೇಡವೆಂಬುದಾಗಿ ತಿರಸ್ಕರಿಸುತ್ತಾರೆ. ನಮ್ಮ ಸರ್ಕಾರದವರು ಅಪ್ಪಣೆಕೊಡಿಸಿದ್ದರಮೇರೆ ಅಂಥಾ ಮಾಸಿದ ನೋಟನ್ನು ಪೋಸ್ಟಾಫೀಸಿಗೆ ಕೊಟ್ಟು ನಿಮ್ಮ ಹಣವನ್ನು ಪಡೆದುಕೊಳ್ಳಬಹುದು ಎಂಬುದಾಗಿ ಅಪ್ಪಣೆಕೊಟ್ಟಿರುವುದು ಸರಿಯಷ್ಟೆ. ವಿದ್ಯೆಯನ್ನು ಓದಿ ಬುದ್ಧಿಯನ್ನು ತಿಳಿದಂಥವರು ಹಾಗೆ ಮಾಡುತ್ತಾರೆ. ಏನೂ ತಿಳಿಯದಂಥವರು ನಮ್ಮ ಮಲೆನಾಡು ಪ್ರದೇಶದಲ್ಲಿ ಅನೇಕರು ಇರುತ್ತಾರೆ. ಅವರುಗಳು ಹೇಗೆತಾನೇ ಚಲಾವಣೆ ಮಾಡ್ಯಾರು? ಈ ವಿಷಯದಲ್ಲಿ ನಮ್ಮ ಸರ್ಕಾರದವರು ಬಡರೈತರಮೇಲೆ ದಯವಿಟ್ಟು ಅಂಥ ನೋಟುಗಳನ್ನು ಯಾರಾದರೂ ಕೊಡ ತಿರಸ್ಕಾರ ಮಾಡಕೂಡದೆಂಬವಾಗಿ ಅಪ್ಪಣೆ ಮಾಡಿ ಬಡರೈತರನ್ನು ಉದ್ಧರಿಸ್ಯಾರೆಂದು ನಂಬಿದ್ದೇನೆ. ಅಲ್ಲದೆ ಮಳೆ ಇಲ್ಲದ ದೆಸೆಯಿಂದ ಕಳ್ಳತನ, ದೊಂಬಿ, ಲೂಟಿ ವಗೈರೆ ಆಗಲಿಕ್ಕೆ ಏನೂ ಸಂದೇಹವಿಲ್ಲ. ಇಂಥಾ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಗಮನಕ್ಕೆ ತಂದುಕೊಂಡು ಬಡರೈತರನ್ನು ಉದ್ಧರಿಸ್ಯಾರೆಂದು ನಂಬಿದ್ದೇನೆ. ಓರ್ವ ಪ್ರೇಕ್ಷಕ.

ಯುದ್ಧದ ಫೋಟೋಗಳು. 2

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ ನಾಲ್ಕುವರುಷಗಳಿಂದಲೂ, ನಡೆದ ಯುದ್ಧದ ಫೋಟೋಗಳು, ವಿಲಾಯತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ, ಮುಂತಾದ ರಮಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ ರೂ. 1—0—0.

ವಿಳಾಸ:–ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ರಾ|| ಬ|| ನಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ಆ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

8 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ
ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿಕ ಹುರುಕಿನಔಷಧ—ಬೆಲೆ ೧ಕ್ಕೆ ೧ಆ. ೨೫ಕ್ಕೆ ೧-೪-೦.
೨. ಕಣ್ಣುಬೇನೆಯಔಷಧ— ಚೀಟು-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇನುಶೀರುನಾಶಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಸ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂವಶೌಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ನೀಲಿ ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
43 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 44

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಕೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್‌ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಅಕ್ಟೋಬರ್ ತಾ|| ೨೦ ರಿಂದ ೧೯೧೮ ನೆಯ ಅಕ್ಟೋಬರ್ ತಾ|| ೨೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಶ್ವಯುಜ ಬ|| ಪಾಡ್ಯಮಿಯಿಂದ ಆಶ್ವಯುಜ ಬ|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
20	ಭಾನು	ಪಾಡ್ಯ	47-48	ಅಶ್ವಿನಿ	37-51	4
21	[1]ಸೋಮ	ಬಿದಿಗೆ	41-58	ಭರಣಿ	33-49	5
22	[2]ಮಂಗಳ	ತದಿಗೆ	36-36	ಕೃತ್ತಿಕೆ	30-9	6
23	ಬುಧ	ಚೌತಿ	31-51	ರೋಹಿಣಿ	27-9	7
24	[3]ಗುರು	ಪಂಚ	27-56	ಮೃಗಶಿರಾ	24-55	8
25	ಶುಕ್ರ	ಷಷ್ಠಿ	25-0	ಆರಿದ್ರಾ	23-31	9
26	ಶನಿ	ಸಪ್ತಮಿ	23-6	ಪುನರ್ವಸು	22-18	10

(1) ಶ್ರೀ ಚಾಮುಂಡೇಶ್ವರೀ ರಥ. (2) ಶ್ರೀರಂಗದಲ್ಲಿ ತೋರೋತ್ಸವಾರಂಭ. (3) ದಶರಥಗೌರೀವ್ರತಂ, ಮೃತ್ಯುಯೋಗ.

ಮೈಸೂರ್: ಪ್ರೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕ್ಕಿತಾವಕಾರಾ ಪಕ್ಕಜ ಸಹಕೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಲೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಲಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ಕ ೧೯೧೮ ನೆಯ ಇಸವಿ ಅಕ್ಟೋಬರ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೪೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರದೀಪಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೩ ಆಣೆ; ಕಂಠರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, 5 ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— [illegible] 1, [illegible] 1, ಸೆಂಟ್ ಬಾಟಲ್ 1, ಚಂದದ [illegible] 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದೊಡ್ಡ ಕನ್ನಡಿ 1, [illegible] 1, [illegible] ಉಂಗುರಗಳು 4, [illegible] 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1-ಕ್ಕೆ ಕ್ರಯ ರೂ. 6-0-0.

MADRAS
MAIL
WATCH
WITH 15
PRESENTS

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
44 3, [illegible], ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇತ್ಸಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಿಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಅಫೀಸ
34 ಮುಕ್ಕಾಮು ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಶನ್ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಶ್ಶಾಸ್ತ್ರಪಯೋನಿಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರತಕ್ಕ ಭಕ್ತಿ ಬೋಧಕವಾದ ಕಥೆಗಳು. ಬೆಲೆ ೧—೦—೦

ಮುಹೂರ್ತ[illegible]—ಮತ್ತೊಬ್ಬರ ಸಹಾಯವಿಲ್ಲದೆ [illegible] ಸ್ವತಃ ತಿಳಿದುಕೊಳ್ಳಬಹುದು. ಬೆಲೆ ೦-೧೦-೦.

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
29 ಆನಂದ ಬುಕ್‌ಡಿಪೊ, ಮೈಸೂರು.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ
ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿಕ ಹುರುಕಿನಔಷಧ—ಬೆಲೆ ೧ಕ್ಕೆ ೧ಆ. ೨೫ಕ್ಕೆ ೧-೪-೦.
೨. ಕಣ್ಣುಬೇನೆಯಔಷಧ— ಚೀಟು-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇನುಶೀರುನಾಶಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಸ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂವಶೌಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ನೀಲಿ ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
44 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಯುದ್ಧದ ಫೋಟೋಗಳು. 3

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ ನಾಲ್ಕುವರುಷಗಳಿಂದಲೂ, ನಡೆದ ಯುದ್ಧದ ಫೋಟೋಗಳು, ವಿಲಾಯತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ, ಮುಂತಾದ ರಮಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ ರೂ. 1—0—0.

ವಿಳಾಸ:–ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕ್ಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.
ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
44 3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ [illegible]	೦—೮—೦
ಪರವಾದಿ [illegible]	೦—೮—೦
ಶಿವಪೂಜಾವಿಧಿ	೦—೧೦—೦
[illegible]	೦—೫—೦
[illegible]	೦—೪—೦
[illegible]	೦—೨—೦
[illegible] (ಮುಕ್ತಿಸಾಧನ)	೦—೨—೦
[illegible]	೦—೧—೦

ಅಂಚೆವೆಚ್ಚ ಬೇರೆ.

[illegible]

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಅಕ್ಟೋಬರ್ ತಾ|| ೨೭ನೆಯ ಭಾನುವಾರ.

ವಿಶ್ವವಿದ್ಯಾಲಯ ಪಟ್ಟಪ್ರಧಾನಸಭೆ.

ನಮ್ಮ ನೂತನವಿದ್ಯಾಪೀಠದಲ್ಲಿ ಓದಿ ಪಟ್ಟ ಪರೀಕ್ಷೆಯಲ್ಲಿ ಉತ್ತೀರ್ಣರಾದವರುಗಳಿಗೆ ಪ್ರಶಸ್ತಿಯನ್ನು ಕೊಡುವ ಮಹೋತ್ಸವದ ಪ್ರಥಮಸಭೆಯು ರಾಜಧಾನಿಯಲ್ಲಿರುವ ವಿಶ್ವವಿದ್ಯಾಲಯ ನೂತನ ಭವನದಲ್ಲಿ ಕಳೆದ ತಾ|| ೧೯ ನೆ ಶನಿವಾರ ಚಾನ್ಸಲರಾದ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಿಂದ ನೆರವೇರಿತು. ಈ ಮಹಾಸಭೆಯನ್ನು ಪ್ರೊ|| ಚಾನ್ಸಲರಾದ ಶ್ರೀಮದ್ಯುವರಾಜರೂ, ಪಟ್ಟಾಂಚಿತರಿಗೆ ಹಿತೋಪದೇಶಮಾಡುವುದಕ್ಕಾಗಿ ಆಹ್ವಾನಮಾಡಲ್ಪಟ್ಟು ಕಲ್ಕತ್ತಾದಿಂದ ಬಂದಿದ್ದ ಬಂಗಾಳಾ ವಿಶ್ವವಿದ್ಯಾಲಯದ ವೈಸ್ ಚಾನ್ಸಲರೂ ಅಲ್ಲಿಯ ಹೈಕೋರ್ಟು ನ್ಯಾಯಮೂರ್ತಿಗಳೂ ಆದ ಶ್ರೀಮಾನ್ ಅಶುತೋಷಮುಕರ್ಜಿಯವರೂ, ಡಾಕ್ಟರ್ ರಾಧಾಕಮಲಮುಕರ್ಜಿಯವರೂ, ಚೋಟಾನಾಗಪುರದ ಸ್ತ್ರೀಕಲಾಶಾಲಾಧ್ಯಕ್ಷೆಯರಾದ ಶ್ರೀಮತೀ ಸುಶೀಲಾಬಾಲಾ ಬಿ.ಎ., ಎಲ್.ಟಿ. ಯವರೂ, ಮೈಸೂರು ಸಂಸ್ಥಾನದ ಮಂತ್ರಿವರ್ಯರೂ, ಕೌನ್ಸಿಲರೂ, ಇತರ ಕೆಲ ಮುಖ್ಯಾಧಿಕಾರಿಗಳೂ ಅನೇಕ ವಿದ್ವಜ್ಜನರೂ ಪುರಪ್ರಮುಖರು ಮೊದಲಾದ ಸಾವಿರಾರು ಮಂದಿಗಳೂ, ಅನೇಕ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ನಾರೀಮಣಿಯರೂ ಸಭೆಯನ್ನಲಂಕರಿಸಿದ್ದರು. ಶ್ರೀಮನ್ಮಹಾರಾಜರವರು ಅಧ್ಯಕ್ಷ ಪೀಠವನ್ನಲಂಕರಿಸಿದ ಬಳಿಕ ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ಮ|| ಎಚ್. ವಿ. ನಂಜುಂಡಯ್ಯನವರು ಕಳೆದ ೩ ವರ್ಷಗಳಿಂದಲೂ ವಿದ್ಯಾಪೀಠದವರು ಈ ಸಂಸ್ಥಾನದಲ್ಲಿ ವಿದ್ಯಾವ್ಯಾಪನೆಗಾಗಿ ನಡೆಯಿಸಿರುವ ಪ್ರಯತ್ನವಿಶೇಷಗಳನ್ನು ಕುರಿತ ವರದಿಯನ್ನೋದಿದರು. ಬಳಿಕ ಶ್ರೀಮನ್ಮಹಾರಾಜರು ಉತ್ತೀರ್ಣರಾದವರಿಗೆ ಬಿರುದುಗಳನ್ನೂ ಬಹುಮಾನಪದಕಗಳನ್ನೂ ಪ್ರಶಸ್ತಿಪತ್ರಗಳನ್ನೂ ಇತ್ತು, ತಮ್ಮ ವಿಶ್ವವಿದ್ಯಾಲಯ ಪ್ರತಿಷ್ಠಾಪನೆಯ ಉದ್ದೇಶವನ್ನೂ, ಇದುವರೆಗೆ ಮಾಡಿರುವ ಮತ್ತೂ ಮುಂದೆ ಮಾಡಲಿಕ್ಕಿರುವ ಉದ್ದೇಶಗಳನ್ನೂ ಹೇಳಿ, ಈಗ ಏರ್ಪಟ್ಟಿರುವ ತರಗತಿಗಳಲ್ಲಿ ಇಂಜನಿಯರಿಂಗಿಗೂ ವ್ಯಾಪಾರ ತರಗತಿಗೂ ವಿದ್ಯಾರ್ಥಿಗಳು ಹೆಚ್ಚಾಗಿ ಸೇರಿರುವುದರಿಂದ ಅವುಗಳ ವಿಷಯದಲ್ಲಿ ವಿದ್ಯಾರ್ಥಿಗಳಿಗಿರುವ ಆದರವನ್ನು ಅಭಿನಂದಿಸಿ, ಸ್ತ್ರೀಯರಲ್ಲಿ ಪ್ರೌಢವಿದ್ಯಾಭ್ಯಾಸವು ಬಹಳವಾಗಿ ಹೆಚ್ಚಬೇಕೆಂಬುದು ತಮ್ಮ ಕಾಂಕ್ಷೆಯೆಂತಲೂ, ಈಸಲ ಒಬ್ಬ ಮಹಿಳೆಯು ಪಟ್ಟಾಂಚಿತಳಾಗುವುದಕ್ಕೆ ಬಂದುದಕ್ಕಿಂತಲೂ ೧೦ ಮಂದಿಗಳಾದರೂ ಬಂದಿದ್ದರೆ ತಮಗೆ ಬಹಳ ಸಂತೋಷವಾಗುತ್ತಿದ್ದಿತೆಂತಲೂ ಹೇಳಿ, ದೇಶೀಯರಿಗೆ ದೇಶಭಾಷೆಯಲ್ಲಿ ಜ್ಞಾನವುಂಟಾಗುವಂತೆ ಮಾಡುವುದಕ್ಕೆ ಈ ವಿದ್ಯಾಲಯದವರು ಮಾಡುತ್ತಿರುವ ಪ್ರಯತ್ನವನ್ನೂ, ಶಾಸ್ತ್ರೀಯಾದಿ ಗ್ರಂಥಗಳನ್ನು ಕನ್ನಡದಲ್ಲಿ ಬರೆಯಿಸುವುದಕ್ಕೆ ಮಾಡಿರುವ ಪ್ರಯತ್ನಗಳನ್ನೂ ವಿವರಿಸಿ, ಅದರಂತೆ ಮುಖ್ಯವಾದ ಸಂಸ್ಕೃತಭಾಷೆಯ ಅಭಿವೃದ್ಧಿಗೂ ಕೊಡಲ್ಪಟ್ಟಿರುವ ಪ್ರೋತ್ಸಾಹವನ್ನು ವ್ಯಕ್ತಪಡಿಸಿ, ಮುಖ್ಯವಾದ ಇವೆರಡು ಭಾಷೆಗಳೂ ವೃದ್ಧಿಗೊಳ್ಳಬೇಕಾದುದರಲ್ಲಿ ತಮಗಿರುವ ಕುತೂಹಲವನ್ನು ಅಪ್ಪಣೆಕೊಡಿಸಿ, ಇವೆರಡು ಭಾಷೆಗಳಿಗೂ ಸಮನಾದ ಪ್ರೋತ್ಸಾಹವನ್ನು ಕೊಟ್ಟರೇನೇ ದೇಶವು ಅಭಿವೃದ್ಧಿಗೊಳ್ಳುವುದೆಂಬುದರಲ್ಲಿ ತಮಗಿರುವ ನಂಬುಗೆಯನ್ನು ಎತ್ತಿ ತೋರಿಸಿದರು. ಮಾತೃಭಾಷಾ ದೇಶಭಾಷೆಗಳೆರಡನ್ನೂ ವೃದ್ಧಿಗೆ ತರುವ ವಿಷಯದಲ್ಲಿ ಅವರಿಗೆ ಎಷ್ಟು ಕುತೂಹಲವಿರುವುದೆಂಬುದಕ್ಕೆ ಅವರ ಈ ಪ್ರಸಾದವಾಣಿಯೇ ನಿದರ್ಶನವಾಗಿರುವುದಲ್ಲದೆ, ಇತ್ತೀಚೆಗೆ ಅವರು ಆ ಭಾಷೆಗಳ ವಿದ್ಯಾವಂತರಿಗೆ ಮಾಡುತ್ತಿರುವ ಪ್ರೋತ್ಸಾಹವೂ ಮತ್ತೂ ಅವರ ಸರ್ಕಾರದವರು ನಾನಾ ವಿಧವಾಗಿ ಅವೆರಡು ಭಾಷೆಗಳ ವಿಕಾಸಕ್ಕೆ ಮಾಡುತ್ತಿರುವ ನಾನಾ ತೆರದ ಯತ್ನಗಳೂ ಕೂಡ ನಿದರ್ಶನಗಳಾಗಿರುತ್ತವೆ. ಆದರೆ ಬರುಬರುತ್ತ ನಮ್ಮ ವಿದ್ಯಾಲಯದಲ್ಲಿ ವಿದೇಶಭಾಷೆಯ ಪ್ರಥಮಸ್ಥಾನವನ್ನು ನಮ್ಮ ದೇಶಭಾಷೆಯೇ ಪಡೆಯುವಂತಾದರೆ ನಮ್ಮ ವಿದ್ಯಾಪೀಠದ ನೂತನ ಪ್ರತಿಷ್ಠಾಪನೆಯು ಸಾರ್ಥಕವಾಗುವುದೆಂಬುದು ಭಾಷಾಭಿಮಾನಿಗಳ ಕೋರಿಕೆ. ಕಾಲಕ್ರಮದಲ್ಲಿ ಅದನ್ನು ಸಿದ್ಧಿಸುವಂತೆ ಮಾಡುವುದೇ ನಮ್ಮ ವಿದ್ಯಾಪೀಠದ ಸೂತ್ರಚಾಲಕರ ಮತ್ತೂ ವಿದ್ಯಾಶಾಖಾಮುಖ್ಯಾಧಿಕಾರಿಗಳ ಲಕ್ಷ್ಯವಾಗಿರಬೇಕೆಂಬುದು ನಮ್ಮ ಪ್ರಾರ್ಥನೆ.

ಕಟ್ಟಕಡೆಗೆ ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ವಿದ್ಯಾಪೀಠದ ಪ್ರೌಢತರಗತಿಗಳಲ್ಲೋದುವ ವಿದ್ಯಾರ್ಥಿಗಳಿಗಾಗಿ ಮಾಡಲ್ಪಡುತ್ತಿರುವ ಸೌಕರ್ಯಗಳನ್ನೂ, ಅವರಲ್ಲಿ ಧೀಶಕ್ತಿಜ್ಞಾನಶಕ್ತಿಗಳು ಮಾತ್ರವೇ ಅಲ್ಲದೆ ದೇಹಶಕ್ತಿಯೂ ಬಳೆಯುವುದಕ್ಕೆ ಮಾಡಲ್ಪಡುತ್ತಿರುವ ಅಂಗಸಾಧನದೇರ್ಪಾಟುಗಳನ್ನೂ ವಿದ್ಯಾರ್ಥಿಗಳ ನೈತಿಕ ಗುಣಾಭಿವೃದ್ಧಿ ಸಾಮಾಜಿಕ ಸಂಸ್ಕರಣ ಮೊದಲಾದವುಗಳಿಗಾಗಿ ಮಾಡುತ್ತಿರುವ ಯತ್ನವನ್ನೂ, ವರ್ದಿಷ್ಣುಗಳಾದ ವಿದ್ಯಾರ್ಥಿಗಳು ಅವುಗಳ ಕಡೆಗೆಲ್ಲಾ ಗಮನವೀಯಬೇಕಾದುದನ್ನೂ, ಹೆಚ್ಚು ವೆಚ್ಚದಿಂದಲ್ಲದೆ ಸಾಧ್ಯವಾಗದಿರುವ ಪ್ರೌಢವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚದ ಭಾರವನ್ನು ಸರ್ಕಾರದಮೇಲೆಯೇ ಹೊರಿಸದೆ ಪ್ರಜಾಪ್ರಮುಖರೂ ವಿದ್ಯಾಭಿಮಾನಿಗಳೂ ಆದ ಜನರು ತಾವೂ ಸಾಧ್ಯವಾದಷ್ಟನ್ನು ಹೊತ್ತುಕೊಳ್ಳಬೇಕಾಗಿರುವುದನ್ನೂ, ದೇಶಹಿತಕರವಾದ ಈ ವಿಶ್ವವಿದ್ಯಾಲಯವು ಮೈಸೂರುದೇಶದಲ್ಲಿ ಸ್ಥಾಪಿತವಾಗುವಂತೆ ಮಾಡಿದ ಕೀರ್ತಿಗೆ ಸಾಹಸಿಗಳೂ ಕಾರ್ಯದಕ್ಷರೂ ಆದ ದಿವಾನ್ ಸರ್ ವಿಶ್ವೇಶ್ವರಯ್ಯನವರೇ ಪಾತ್ರರೆಂದೂ, ಅವರ ದೃಢಶ್ರದ್ಧಾಸಾಹಸಗಳಿಂದಲೇ ಇದು ಕಾರ್ಯರೂಪಕ್ಕೆ ಬಂದಿತೆಂಬುದನ್ನೂ ಅಪ್ಪಣೆಕೊಡಿಸಿ, ಕಡೆಗೆ ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನು ಮಾಡುವುದಕ್ಕಾಗಿ ತಮ್ಮ ಆಹ್ವಾನವನ್ನು ಒಪ್ಪಿ ಕಲ್ಕತ್ತಾದಿಂದ ಬಂದುದಕ್ಕಾಗಿ ಅಶುತೋಷಮುಖರ್ಜಿಯವರಿಗೆ ತಮ್ಮ ಕೃತಜ್ಞತೆಯನ್ನು ತಿಳಿಯಿಸಿ, ಕೊನೆಗೆ ಇಂಗ್ಲೆಂಡಿನ ಮುಖ್ಯಮಂತ್ರಿಯವರಾಗಿದ್ದ ಮಿ|| ಆಸ್ಕ್ವಿತ್ ರವರು ವಿದ್ಯಾರ್ಥಿಗಳಿಗಾಗಿ ಒಂದು ಸಲ ಮಾಡಿದ್ದ ಹಿತೋಪದೇಶದ ಕೆಲ ವಾಕ್ಯಗಳನ್ನುದಹರಿಸಿ, ಅದರಂತೆ ಪಟ್ಟಾಂಚಿತರಾದ ಯುವಕರೆಲ್ಲರೂ ತಾವು ಕೇಳಿದ ಹಿತೋಪದೇಶದಂತೆ ದೃಢನಿಷ್ಠೆಯಿಂದ ಯಾವ ಕಾರ್ಯವನ್ನೂ ಮಾಡುವವರಾಗಬೇಕು ಎಂದು ಬೋಧಿಸಿ, ಉಪನ್ಯಾಸವನ್ನು ಮುಗಿಸಿದರು. ಬಳಿಕ ಶ್ರೀಮಾನ್ ಅಶುತೋಷಮುಖರ್ಜಿಯವರು ಅತ್ಯಂತ ಹೃದಯಂಗಮವೂ ವಿಶೇಷಬೋಧಪ್ರದವೂ ಸರ್ವೋತ್ಕೃಷ್ಟವೂ ಆದ ದೀರ್ಘವಾದ ಉಪನ್ಯಾಸವನ್ನು ಮಾಡಿ ಸಭಿಕರಿಗೆಲ್ಲಾ ಪರಮಾನಂದಗೊಳಿಸಿದರು (ಅದರ ಮುಖ್ಯಾಭಿಪ್ರಾಯಗಳನ್ನು ಮತ್ತೊಂದು ಸಂಚಿಕೆಯಲ್ಲಿ ಬರೆಯಬೇಕೆಂದಿದ್ದೇವೆ).

ಪಟ್ಟಪ್ರದಾನ ಮಹಾಸಭೆಯು ರಾಜಧಾನಿಯೊಳಗೆ ಸೇರಿ ಪ್ರಶಸ್ತಿಪ್ರದಾನ ಮಾಡುವಂತಾದುದು ಮೈಸೂರಿನ ಚರಿತ್ರೆಯಲ್ಲಿ ಅತ್ಯಂತ ಗಣ್ಯವಾದ ವಿಷಯವಾಗಿರುತ್ತದೆ. ಇಂಥ ಅಭೂತಪೂರ್ವವಾದ ಸಮಾರಂಭದಲ್ಲಿ ಮೊದಲನೆಯಸಲ ಬಿರುದಾಂಕನವನ್ನು ಶ್ರೀಮನ್ಮಹಾರಾಜರ ಪವಿತ್ರಹಸ್ತದಿಂದ ಪಡೆದ ವಿದ್ಯಾವಂತರುಗಳಿಗೂ ಮತ್ತು ಆ ಪಙ್ಕ್ತಿಯಲ್ಲಿ ಸೇರಿದ ಶ್ರೀಮತಿ ಕನಕಲಕ್ಷ್ಮಮ್ಮ ಎಂಬ ಮಹಿಳಾಮಣಿಗೂ ನಾವು ಈ ಮೂಲಕ ಧನ್ಯವಾದವನ್ನರ್ಪಿಸಿ, ನಮ್ಮ ವಿದ್ಯಾಪೀಠವು ದಿನದಿನಕ್ಕೆ ನಾನಾಶಾಖಾಶತಶತವಿತತವಾಗಿ ದೇಶಕ್ಕೆ ಅನಂತ ಮುಖಜ್ಞಾನಪ್ರಸಾರವನ್ನು ಮಾಡುತ್ತ ಕೀರ್ತಿಭೂಯಿಷ್ಠವಾಗಿ ವಿರಾಜಿಸುವಂತೆ ಪರಿಣಮಿಸಲೆಂದು ಕೋರುವೆವು.

STATISTICS.

(ಲೆಕ್ಕದ ಟಿಪ್ಪಣಿ).

ದೇಶದ ಯಾವುದೊಂದು ತೆರದ ಅಭ್ಯುದಯವನ್ನು ಸಾಗಿಸಬೇಕಾದರೂ, ಯಾವ ತೆರದ ಕಾರ್ಯಗಳನ್ನು ನಡೆಯಿಸಬೇಕೆಂಬುದನ್ನು ನಿರ್ಧರಿಸುವುದಕ್ಕಾದರೂ, ಕಾರ್ಯದ ಲೋಪಾಲೋಪಗಳನ್ನು ತಿದ್ದಿಕೊಳ್ಳಬೇಕಾದರೂ, ಯಾವ ತೆರದ ನವೀನ ಸಂಸ್ಕರಣದ ಆವಶ್ಯಕತೆಯನ್ನು ನಿರ್ಧರಿಸಬೇಕಾದರೂ, ಇವಕ್ಕೆಲ್ಲಾ ಸ್ಥಿತಿಗತಿಯ ವಿದ್ಯಮಾನವನ್ನು ತಿಳಿಯಪಡಿಸುವ ಲೆಕ್ಕದ ಟಿಪ್ಪಣಿಯು (Statistics) ಆಧಾರವಾಗಿರುತ್ತದೆ. ಈ ಆಧಾರವು ನಿರ್ದುಷ್ಟವಾಗಿಯೂ ಪ್ರಮಾಣವಾಗಿಯೂ ಇದ್ದರೆ ಇವುಗಳ ಅವಲಂಬನೆಯಮೇಲೆ ಮಾಡಲ್ಪಡುವ ಏರ್ಪಾಟುಗಳೂ ಯೋಚನೆಗಳೂ ನಿರ್ದುಷ್ಟಗಳಾಗಿಯೂ ಫಲಕಾರಿಗಳಾಗಿಯೂ ಪರಿಣಮಿಸುತ್ತವೆ. ಇವೇ ಅಪ್ರಮಾಣಗಳಾಗಿದ್ದರೆ ಇವುಗಳ ಆಧಾರದ ಮೇಲೆ ಮಾಡಲ್ಪಡುವ ಕಟ್ಟಡವೆಲ್ಲಾ ಗಾಳಿಗೋಪುರದಂತೆ ಪರಿಣಮಿಸುವುದು ಸಹಜವಾಗಿರುತ್ತದೆ. ನಮ್ಮ ಸಂಸ್ಥಾನದಲ್ಲಿ ನಾನಾ ಶಾಖೆಗಳೊಳಗೆ ಕೆಳಗಣ ಉದ್ಯೋಗಿಗಳಿಂದ ಅಣಿಮಾಡಲ್ಪಡುವ ಈ ತೆರದ ಲೆಕ್ಕದ ಟಿಪ್ಪಣಿಗಳು ಅನೇಕ ಸಂದರ್ಭಗಳಲ್ಲಿ "ಕರಾರ್ಖಾಕಾ" ಇರದೆ ಔದಾಸೀನ್ಯದಿಂದ ನಿರ್ಮಿಸಲ್ಪಟ್ಟವುಗಳಾಗಿರುವುವೆಂದೂ, ಇವುಗಳ ಆಧಾರದಮೇಲೆ ಸರ್ಕಾರದ ಶಾಖಾಧಿಕಾರಿಗಳು ಮಾಡುವ ವರದಿಗಳೂ ಸೂಚನೆಗಳೂ ಪ್ರಮಾಣಭೂತವಾಗಿ ಪರಿಗ್ರಹಿಸಲ್ಪಡುವುದಕ್ಕೆ ಕೆಲವು ಸಂದರ್ಭದಲ್ಲಿ ಕಷ್ಟವಾಗುವುದೆಂಬುದಾಗಿಯೂ ವೃತ್ತಿಪತ್ರಿಕೆಗಳಲ್ಲೂ ಸಭಾಮುಖಗಳಲ್ಲೂ ನಡೆಯುತ್ತಿರುವ ಚರ್ಚೆಗಳನ್ನು ನಾವು ಆಗಾಗ್ಗೆ ಕೇಳುತ್ತಿದ್ದೇವೆ. ಆದರೆ ಇಂಥ ಆಕ್ಷೇಪವು ನಿರಾಧಾರವಾದುದಲ್ಲ ಸಹಜವಾದುದು ಎಂಬುದನ್ನು ದೃಢಪಡಿಸಿಕೊಡುವ ಒಂದಾನೊಂದು ಬಲವಾದ ಸಾಕ್ಷ್ಯವು ಈ ಸಲದ ವಸ್ತುಪ್ರದರ್ಶನಾಲಯದಲ್ಲಿ ನಡೆದ ಒಂದು ಸಂದರ್ಭದಿಂದ ಸರ್ವರಿಗೂ ವ್ಯಕ್ತವಾಯಿತು. ಅದೇನೆಂದರೆ—ಕಳೆದ ೧೬ನೆ ತಾರೀಖಿನ ದಿನ ಬೆಳಗ್ಗೆ ಪ್ರದರ್ಶನಾಲಯದಲ್ಲಿ ಏರ್ಪಡಿಸಿದ್ದ ಒಂದಾನೊಂದು ಉಪನ್ಯಾಸದ ಸಭೆಗೆ ರಾ|| ಬ|| ಎಂ. ಶ್ಯಾಮರಾವ್, ಎಂ.ಎ. ರವರು ಅಧ್ಯಕ್ಷರಾಗಿದ್ದರು. ಇವರು ತಮ್ಮ ಸಮಾರೋಪಭಾಷಣ ಮಾಡುವಾಗ್ಗೆ ಸ್ಟಾಟಿಸ್ಟಿಕ್ಸಿನ ಅತ್ಯಾವಶ್ಯಕತೆಯನ್ನೂ ನಿರ್ದುಷ್ಟತೆಯನ್ನೂ ಚೆನ್ನಾಗಿ ಸಮರ್ಥಿಸಿದುದಲ್ಲದೆ, ಅನೇಕವೇಳೆ "ಕರಾರ್ಖಾಕಾ" ಸ್ಟಾಟಿಸ್ಟಿಕ್ಸು ಸಿದ್ಧವಾಗುವುದಿಲ್ಲವೆಂಬ ವಿಷಯವನ್ನು ದೃಷ್ಟಾಂತಪಡಿಸುವುದಕ್ಕಾಗಿ ತಮ್ಮ ಸ್ವಕೀಯಾನುಭವವನ್ನೇ ಉದಾಹರಿಸಿದರು. ಅದೇನೆಂದರೆ—ಇವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸ್ಪೆಷಲ್ ಡ್ಯೂಟಿಯಮೇಲಿರುವಾಗ್ಗೆ ಕೆಲವು ಭಾಗದ ಸ್ಟಾಟಿಸ್‌ಟಿಕ್ಸನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗಿದ್ದಿತಂತೆ. ಅದಕ್ಕಾಗಿ ಮೇಲಿಂದ ಎಷ್ಟೋ "ತಗಾದೆ" ಗಳು ಬರುತ್ತಿದ್ದುವು. ಅದರ ಮೇಲೆ ಚಾಮರಾಜನಗರದ ತಾಲ್ಲೂಕಿಗೆ ತಾವೇ ಹೋಗಿ, ಅಲ್ಲಿಯ ತಾ|| ಉದ್ಯೋಗಿಗಳನ್ನು ಲೆಕ್ಕವು ಅಣಿಯಾಯಿತೆ? ಎಂದು ಕೇಳುವಲ್ಲಿ ಇನ್ನೂ ಇಲ್ಲವೆಂದು ಹೇಳಿದರಂತೆ. ಆಗ ಬಲು ಸಿಟ್ಟುಮಾಡಿ ಗದ್ದರಿಸುವಲ್ಲಿ, ಬೆಳಗಾಗುವುದರೊಳಗೆ ಅಣಿಮಾಡಿಕೊಡುತ್ತೇವೆಂದು ಅವರುಗಳು ಉತ್ತರ ಹೇಳಿ ಸಮಾಧಾನಪಡಿಸಿದರಂತೆ. ಹಾಗೆಯೇ ಬೆಳಗಾಗುವುದರೊಳಗೆ ತಾರುಮಾರಾಗಿ ಗೀಟನ್ನೆಳೆದು ಒಂದು ಸ್ಟಾಟಿಸ್ಟಿಕ್ಸೆಂಬುದನ್ನು ಅಣಿಮಾಡಿ ತಂದು ಇಟ್ಟರಂತೆ. ಅದರಮೇಲೆ ಇವರಿಗೆ ಕೆಲಕಡೆ ಸಂಶಯ ಬಂದು ಕೇಳುವಲ್ಲಿ ಅವರುಗಳು ಏನೇನೋ ಸಮಾಧಾನ ಹೇಳಿದರಂತೆ. ಕಡೆಗೆ ಹೇಗೋ ಇವರು ಒಂದೆರಡುಕಡೆ ಸರಿಪಡಿಸಿ, ಅದನ್ನೇ ಸರ್ಕಾರಕ್ಕೆ ಕಳುಹಿಸಿಕೊಟ್ಟರಂತೆ. ಹೇಗೋ ಅವಸರದಿಂದ ಇದನ್ನು ಮುಗಿಸಿ ಕಳುಹಿಸಿಕೊಡದಿದ್ದರೆ ಇವರಿಗೆ ಪ್ರಮೋಷನ್ ಸಿಕ್ಕುತ್ತಿರಲಿಲ್ಲವಂತೆ. ಇದನ್ನೆಲ್ಲಾ ಅವರೇ ಅಧ್ಯಕ್ಷಪೀಠದಲ್ಲಿ ನಿಂತು ಅಪ್ಪಣೆ ಕೊಡಿಸಿರುವರು. ಮ|| ಶ್ಯಾಮರಾಯರು ಮುಚ್ಚುಮರೆಯ ಸ್ವಭಾವದವರಲ್ಲವಾದುದರಿಂದ ಇಂಥ ಅವರ ಸ್ವಾನುಭೂತ ವಿಷಯವು ಹೊರಬಿದ್ದಿತೇ ಹೊರತು ಚಾಕಚಕ್ಯವುಳ್ಳವರುಗಳ ಬಾಯಿಂದ ಇಂಥ ದೋಷಗಳು ಹೊರಬೀಳುವ ಸಂಭವವೇ ಇರುವುದಿಲ್ಲ. ಆ ವಿಷಯವಂತಿರಲಿ. ಈ ನಮ್ಮ ಶ್ಯಾಮರಾಯರವರು ಸಂಸ್ಥಾನದಲ್ಲಿ ಸಾಮಾನ್ಯವಾದ ಅಧಿಕಾರದಲ್ಲಿದ್ದವರಲ್ಲ. ಡಿ|| ಕಮಿಷನರ್ ಗಿರಿಯನ್ನೂ, ಅನೇಕ ವರ್ಷಕಾಲ ಪರಸ್ಪರಸಂಘಗಳ ರಿಜಿಸ್ಟ್ರಾರ್ ಪದವಿಯನ್ನೂ, ಕಡೆಗೆ ವಿದ್ಯಾಭ್ಯಾಸಶಾಖಾಧ್ಯಕ್ಷತೆಯನ್ನೂ ವಹಿಸಿ ಆಳಿಹೋದವರು. ಇಂಥ ದೊಡ್ಡಪದವಿಯಲ್ಲಿರುವವರೇ ಸ್ವಾರ್ಥವನ್ನು ಕಳೆದುಕೊಳ್ಳಲಾರದೆ ಮನಸ್ಸಿಗೆ ಒಪ್ಪದಂಥ ಕಾರ್ಯವನ್ನು ಸರಿಯೆಂದು ಹೇಳಿ ನೆರವೇರಿಸಿ, ಸರ್ಕಾರದ ಕಾರ್ಯವನ್ನು ಕಾಟಾಚಾರದಿಂದ ಸಾಗಿಸುತ್ತ ಬಂದರೆ ಇನ್ನು ಉಳಿದ ಸಾಮಾನ್ಯೋದ್ಯೋಗಿಗಳು ಎಷ್ಟುಮಟ್ಟಿಗೆ ಸ್ವಾರ್ಥತ್ಯಾಗಿಗಳಾಗಿಯೂ ಪ್ರಮಾಣಿಕರಾಗಿಯೂ ವರ್ತಿಸುವರೆಂಬುದನ್ನು ಸುಲಭವಾಗಿ ಊಹಿಸಬಹುದಾಗಿದೆ. ಒಂದೇ ಜನವರ್ಗದವರೇ ಒಂದು ಮನೆಯ ಬಂಧುಬಳಗದವರಂತೆ ಕೂಡಿಕೊಂಡು ಒಬ್ಬರ ಭೀತಿಯು ಒಬ್ಬರಿಗಿಲ್ಲದೆ ಒಬ್ಬರ ಹುಳುಕನ್ನು ಮತ್ತೊಬ್ಬರು ಮುಚ್ಚಿಕೊಂಡು ಸರ್ಕಾರದ ಕಾರ್ಯಗಳನ್ನು ಸಾಗಿಸುವುದಾದರೆ, ಒಳಗಣ ಕಾರ್ಯಭಾಗಗಳು ಎಷ್ಟು ಲೋಪಭೂಯಿಷ್ಠವಾಗುವುವೆಂಬುದನ್ನು ಹೇಳಬೇಕಾಗಿಯೇ ಇರುವುದಿಲ್ಲ. ಮ|| ಶ್ಯಾಮರಾಯರು ಉದಹರಿಸಿದಂಥ ಸ್ಟಾಟಿಸ್ಟಿಕ್ಸುಗಳೇ ಸರ್ಕಾರದಲ್ಲಿ ಹೆಚ್ಚುವುದಾದರೆ ಅದನ್ನು ಚಿಂದಿಯನ್ನು ತುಂಬಿ ಮಾಡಿದ ತಲೆದಿಂಬಿಗೆ ಸಮಾನವಾಗಿ ಗಣಿಸಬಹುದೇ ಹೊರತು ವಿಶೇಷತಃ ಎಂದಿಗೂ ಗಣ್ಯವಾಗಲಾರದು. ತಾವು ಒಳಗೊಳಗೆ ನಡೆಯಿಸುವ ಮೊಗಲಾಯಿಗಳೂ ಅಪಚಾರಗಳೂ ಇತರರಿಗೆ ಗೊತ್ತಾಗಬಾರದೆಂಬುದಕ್ಕಾಗಿಯೇ ಕೆಲವರು "ಮೈಸೂರು ಮೈಸೂರಿನವರಿಗೇ ಇರಬೇಕು" ಎಂದು ಪರಮದೇಶಾಭಿಮಾನಿಗಳಂತೆ ವಾಗ್ಬ್ರಹ್ಮವನ್ನು ಹೊರಗೆ ನುಡಿಯುತ್ತ, ಮದ್ರಾಸು ಪಾರ್ಟಿ ಮೈಸೂರು ಪಾರ್ಟಿಯೆಂದು ಏರ್ಪಡಿಸಿ ಸಮರ್ಥರಾದ ಹೊರಗಣವರನ್ನು ಉಚ್ಚಾಟನಗೊಳಿಸಿ, ಒಳಗಣ ಸ್ವದೇಶೀಯರಾದ ಇತರರನ್ನು ಪಾಲಿಗೆ ಬರದಂತೆ ಅವರಿಗೊಂದು ತೆರದ ಮುಳ್ಳಿನ ಬೇಲಿಯನ್ನು ವಿಧ್ಯುಚ್ಛಕ್ತಿಸಂಯೋಗದಿಂದ ಅಡ್ಡಗಟ್ಟಿ, ಸರ್ಕಾರಿಕಾರ್ಯನಿರ್ವಾಹಕ್ಕಾಗಿ ಸ್ವರ್ಗಲೋಕದಿಂದ ತಾವೇ ಪಟ್ಟಗಟ್ಟಿಸಿಕೊಂಡು ಇಳಿದವರಂತೆ ವಿಜೃಂಭಿಸಿಕೊಳ್ಳುತ್ತಿರುವರು. ದೇಶಹಿತವೇ ತಮ್ಮ ಸರ್ವಸ್ವವೆಂದು ತಿಳಿದಿರುವ ಶ್ರೀಮನ್ಮಹಾರಾಜಸಹೋದರರ ಸಹಸ್ರಾಕ್ಷತೆಯಿಂದಲೂ, ಸಮರ್ಥರಾದ ಮಂತ್ರಿವರ್ಯರ ಮತ್ತೂ ಉಪಮಂತ್ರಿಗಳ ನಿಷ್ಪಕ್ಷಪಾತತಾಯುಕ್ತದರ್ಪಸಾಮರ್ಥ್ಯಗಳಿಂದಲೂ ನಮ್ಮ ದೇಶದಲ್ಲಿ ಮೇಲೆ ಹೇಳಿರುವಂಥ ಮಹಾಲೋಪಗಳೆಲ್ಲಾ ಪರಿಹೃತವಾಗಬೇಕು. ನಿರ್ದುಷ್ಟರೂ ಅನ್ಯಾಯರಹಿತರೂ ದೈವಭಯಪಾಪಭಯ ವಿಶಿಷ್ಟರೂ ಆದ ನಾನಾ ಜನವರ್ಗಗಳ ಪ್ರಜೆಗಳು ಸರ್ಕಾರದ ಕಾರ್ಯವನ್ನು ಸ್ವಕೀಯಕಾರ್ಯದಂತೆ ತಿಳಿದು ದ್ರೋಹಾಚರಣೆಯಿಲ್ಲದೆ ನಿರ್ವಹಿಸುವಂತೆ ಆಗಬೇಕು. ಹಾಗಾದಲ್ಲದೆ ದೇಶವು ಸುಖ ಶಾಂತಿ ಸುಭಿಕ್ಷಗಳಿಂದ ನಲಿಯಲಾರದು. ಅಂಥ ಸುಯೋಗವು ಶ್ರೀಮನ್ಮಹಾರಾಜ ಸಹೋದರರ ಪ್ರಜಾರಂಜನೈಕಪರಾಯಣತಾತಪಃಪ್ರಭಾವದಿಂದಲೂ ಪ್ರಜೆಗಳ ಸುಕೃತವಿಶೇಷದಿಂದಲೂ ಅಚಿರಕಾಲದಲ್ಲೇ ಲಭಿಸಲೆಂದು ಕೋರುವೆವು.

ಯುದ್ಧವಾರ್ತೆಯು.

ಪಶ್ಚಿಮರಣರಂಗ—ಬೆಲ್ಜಿಯಂ ದೇಶದಲ್ಲಿ ಬೆಲ್ಜಿಯಂ ಪ್ರಭುಗಳ ಸೇನಾಧಿಪತ್ಯದಿಂದ ನಡೆಯುತ್ತಿರುವ ಬೆಲ್ಜಿಯಂ ಇಂಗ್ಲೀಷ್ ಸೈನ್ಯಗಳು ಡಿಕ್ಸ್‌ಮೂಡು, ಲೀಸುಪಟ್ಟಣಗಳ ಮಧ್ಯದಲ್ಲಿ ನುಗ್ಗಿ ಇಜರ್ ನದಿಯನ್ನು ದಾಟಿ ಸ್ಕೂರುಬೇಕೆಯನ್ನು ಹಿಡಿದು ಥೋರೂಟ್ ಪಟ್ಟಣವನ್ನು ವಶಪಡಿಸಿಕೊಂಡುವು. ಇಂಗ್ಲೀಷರು ಲೀಸನ್ನು ದಾಟಿ ಮೆರ್ಸಿ ಪಟ್ಟಣವನ್ನು ವಶಪಡಿಸಿಕೊಂಡು ಬಳಿಕ ಕೋಟ್ರೀಯಿಪುರವನ್ನೂ ೨೦ ಗ್ರಾಮಗಳನ್ನೂ ವಶಪಡಿಸಿಕೊಂಡರು. ಈ ಯುದ್ಧಗಳಲ್ಲಿ ೪ ಸಾವಿರಕ್ಕೆ ಮಿಗಿಲಾದ ಶತ್ರುಸೈನಿಕರೂ, ೧೫೦ ಫಿರಂಗಿಗಳೂ ಮಿತ್ರಮಂಡಲಿಯವರ ವಶವಾದುವು. ಈಗ ಈ ಪ್ರಾಂತದ ಸೈನ್ಯಗಳು ಘೆಂಟ್‌ಪಟ್ಟಣವನ್ನು ಸಮೀಪಿಸುತ್ತಿವೆ. ಅಲ್ಲಿ ಯುದ್ಧವು ನಡೆಯುತ್ತಿದೆ. ಇದಕ್ಕೆ ದಕ್ಷಿಣಭಾಗದಲ್ಲಿ ಫ್ರಾನ್ಸಿನಲ್ಲಿ ಲಿಲ್ಲಿಪಟ್ಟಣದ ಪ್ರಾಂತದಲ್ಲಿ ಆಂಗ್ಲಸೈನ್ಯಗಳು ಬಹುಘೋರವಾಗಿ ಯುದ್ಧಮಾಡಿ ಲಿಲ್ಲಿಪಟ್ಟಣವನ್ನೂ ಡುವೈ ಎಂಬ ಪಟ್ಟಣವನ್ನೂ ವಶಪಡಿಸಿಕೊಂಡುವು. ಇಲ್ಲಿ ೩ ಸಾವಿರ ಮಂದಿ ಶತ್ರುಸೈನಿಕರು ಸೆರೆ ಸಿಕ್ಕಿದರು. ಈ ಲಿಲ್ಲಿಪಟ್ಟಣವನ್ನು ಜರ್ಮನರು ಬಿಟ್ಟುಹೋಗುವಾಗ ನೀರಿನ ಕೊಳಾಯಿಗಳ ಯಂತ್ರಗಳನ್ನೂ ವಿದ್ಯುದ್ದೀಪದ ಯಂತ್ರಗಳನ್ನೂ ಧ್ವಂಸಮಾಡಿ, ಅವುಗಳ ಉಪಕರಣಗಳನ್ನೆಲ್ಲಾ ಹೊತ್ತುಕೊಂಡು ಹೋಗಿರುವರು. ಮತ್ತೂ ಹೆಂಗುಸರನ್ನೂ ಹರೆಯದ ಹುಡುಗಿಯರನ್ನೂ ವೈದ್ಯಪರೀಕ್ಷೆಗೆಂದು ಬರಮಾಡಿ ಅವರುಗಳ ಮಾನಭಂಗಪಡಿಸಿರುವರು. ಬ್ಯಾಂಕುಗಳಲ್ಲಿದ್ದ ಪತ್ರಗಳನ್ನೂ ಹಣಕಾಸುಗಳನ್ನೂ ಇತರ ಆಸ್ತಿಗಳನ್ನೂ ದೋಚಿಕೊಂಡು ಕಡೆಗೆ ದೂರದಿಂದ ಆ ಪಟ್ಟಣದ ಮೇಲೆ ಫಿರಂಗಿ ಗುಂಡುಗಳನ್ನು ಅಮಿತವಾಗಿ ಪ್ರಯೋಗಿಸಿ ಹೋಗಿರುವರು. ಬೆಲ್ಜಿಯಂ ದೇಶದ ಸಮುದ್ರ ತೀರಪಟ್ಟಣಗಳಾಗಿಯೂ ರೇವೆಯಾಗಿಯೂ ಶತ್ರುಗಳ ನೌಕಾದಳಕ್ಕೂ ಸಬ್‌ಮೆರೀನುಗಳಿಗೂ ಆಶ್ರಯಸ್ಥಾನವಾಗಿಯೂ ಇದ್ದ ಆಸ್ಟೆಂಡ್ ಜೇಬ್ರುಗ್ ಎಂಬ ಎರಡು ಸ್ಥಳಗಳೂ ಕಳೆದವಾರ ನಮ್ಮವರ ವಶವಾದುವು. ಇವುಗಳಮೇಲೆ ಭೂಮಿಮಾರ್ಗದಿಂದಲೂ ಜಲಮಾರ್ಗದಿಂದಲೂ ಇಂಗ್ಲೀಷ್ ಬೆಲ್ಜಿಯಂ ದಳಗಳು ಮುತ್ತಿ ಯುದ್ಧಮಾಡಿದುವು. ಬೆಲ್ಜಿಯಂ ಸೈನಿಕರು ಭೂಮಾರ್ಗವಾಗಿ ಆಸ್ಟೆಂಡ್ ಪಟ್ಟಣವನ್ನು ತಾ|| ೧೮ರ ಬೆಳಗ್ಗೆ ನುಗ್ಗಿದರು. ಫ್ರೆಂಚ್ ವೈಮಾನಿಕರು ಆಕಾಶಮಾರ್ಗದಿಂದ ಆ ಪಟ್ಟಣಕ್ಕಿಳಿದರು. ಬಹುಕಾಲದಿಂದ ವಿಯುಕ್ತರಾಗಿದ್ದ ತಮ್ಮ ಜನರನ್ನು ಪುರನಿವಾಸಿಗಳು ಕಂಡು ಆನಂದಪಟ್ಟು ಅತಿಶಯ ಹರ್ಷಧ್ವನಿಯಿಂದ ಜಯಜಯಕಾರವನ್ನು ಮಾಡಿ ಸ್ವಾಗತಿಸಿದರು. ಅದಕ್ಕೆ ಮುಂಚಿನದಿನವೇ ಇಂಗ್ಲೀಷ್ ನೌಕಾದಳದ ವೈಮಾನಿಕರು ಆ ಪಟ್ಟಣವನ್ನು ನುಗ್ಗಿ ಒಳಗಿದ್ದ ಶತ್ರುಗಳನ್ನು ಓಡಿಸಿದ್ದರು. ಆ ಮಧ್ಯಾಹ್ನವೇ ಇಂಗ್ಲೀಷ್ ನೌಕಾಧಿಪತಿಯು ಆ ಪಟ್ಟಣವನ್ನು ಪ್ರವೇಶಿಸಿದ್ದರು. ಆ ಪಟ್ಟಣದಲ್ಲಿದ್ದ ಶತ್ರುಗಳ ಅನೇಕಫಿರಂಗಿಗಳು ನಮ್ಮವರ ವಶವಾದುವು. ಇನ್ನು ಹಲವು ಫಿರಂಗಿಗಳನ್ನು ಶತ್ರುಗಳು ಹಾಳ್ಮಾಡಿಹೋಗಿರುವರು. ಇಂಗ್ಲೀಷ್ ಸೈನಿಕರು ಭೂಜಲಮಾರ್ಗಗಳೆರಡರಿಂದಲೂ ಜೇಬ್ರುಗ್ಗನ್ನು ಮುತ್ತಿ ವಶಪಡಿಸಿಕೊಂಡರು. ಇದರಿಂದ ಶತ್ರುಗಳಿಗೆ ಸಮುದ್ರತೀರದ ಬಲವು ತಪ್ಪಿ, ಮಿತ್ರಮಂಡಲಿ ನೌಕೆಗಳಿಗೆ ಶತ್ರುಗಳ ಸಬ್‌ಮೆರೀನಿನ ಹಾವಳಿಯು ಈ ಕಡೆಯಲ್ಲಿ ತಪ್ಪಲು ಅವಕಾಶವಾಯಿತು. ಈಗ ಮಿತ್ರಮಂಡಲಿಯವರು ಬೆಲ್ಜಿಯಮ್ಮಿನಲ್ಲಿ ಪಶ್ಚಿಮದಕಡೆಯಿಂದಲೂ ದಕ್ಷಿಣದಕಡೆಯಿಂದಲೂ ಶತ್ರುಗಳನ್ನು ದಬ್ಬಿಕೊಂಡು ಹೋಗುತ್ತಿದ್ದಾರೆ. ಆಸ್ಟೆಂಡ್ ಜೇಬ್ರುಗ್‌ಗಳಲ್ಲಿದ್ದ ಜರ್ಮನರ ಯುದ್ಧದ ಹಡಗುಗಳೆಲ್ಲಾ ರಾತ್ರಿಯಹೊತ್ತು ಹೇಗೋ ತಲೆತಪ್ಪಿಸಿಕೊಂಡು ಹಾಲೆಂಡ್ ಸಮುದ್ರಮಾರ್ಗವಾಗಿ ಜರ್ಮನಿಗೆ ಓಡಿಹೋಗಿರುವುವೆಂದು ಹೇಳಲ್ಪಟ್ಟಿದೆ. ಇಂಗ್ಲೀಷ್‌ನೌಕಾದಳಕ್ಕೆ ಇವು ಕಣ್ಣುತಪ್ಪಿಸಿ ಹೋದುದು ಆಶ್ಚರ್ಯವೇಸರಿ ಬಹುಶಃ ಅವು ಆಂಟ್ವರ್ಪಿನ ಒಳಗೆ ಸೇರಿರುವುವೋ ಹೇಗೋ ನೋಡಬೇಕು. ಜೇಬ್ರುಗ್ಗನ್ನು ಜರ್ಮನರು ಬಿಡುವುದಕ್ಕೆ ಮುಂಚೆ ಅಲ್ಲಿಯ ನೌಕಾಶ್ರಯಸ್ಥಾನವನ್ನೂ ಡಾಕುಗಳನ್ನೂ ಧ್ವಂಸಮಾಡಿ, ಕಾಲುವೆಗಳಲ್ಲಿ ಯುದ್ಧದ ಹಡಗುಗಳನ್ನು ಮುಳುಗಿಸಿ, ಎಲ್ಲ ಸೇತುಗಳನ್ನೂ ನಾಶಮಾಡಿದ್ದರು. ನೀರಿನ ಕಾಲುವೆಗಳನ್ನೆಲ್ಲಾ ಹಾಳ್ಮಾಡಿದ್ದರು. ಪುರಜನರಿಂದ ೭ ಲಕ್ಷ ಫ್ರಾಂಕುಗಳನ್ನು ಅಪರಾಧದ್ರವ್ಯವಾಗಿ ಸುಲಿದುಕೊಂಡರು. ಮುನ್ಸಿಪಾಲಿಟಿಯ ೭|| ಲಕ್ಷ ಪೌಂಡುಗಳನ್ನು ಅಪಹರಿಸಿದರು. ಯಂತ್ರಾಲಯಗಳನ್ನೆಲ್ಲಾ ಹಾಳ್ಮಾಡಿದರು. ಅವುಗಳಲ್ಲಿದ್ದ ಸಾಮಗ್ರಿಗಳನ್ನು ಹೊತ್ತುಕೊಂಡುಹೋದರು. ಅವರು ಬಿಟ್ಟುಹೋದ ಪ್ರತಿಪಟ್ಟಣ ಗ್ರಾಮಗಳಲ್ಲೆಲ್ಲಾ ಹೀಗೆಯೇ ಅವರು ದೌರ್ಜನ್ಯವನ್ನು ನಡೆಯಿಸಿ ಹೋಗಿರುವರು. ಇಂಗ್ಲೀಷರು ಜೇಬ್ರುಗ್ಗನ್ನು ವಶಪಡಿಸಿಕೊಂಡನಂತರ ಅದರ ಮಗ್ಗುಲ ಬ್ರೂಜಸ್ ಪಟ್ಟಣವನ್ನು ಹಿಡಿದು, ಬ್ರೂಜಸ್‌ಘೆಂಟ್ ಕಾಲುವೆಯನ್ನು ದಾಟಿ ಎಲಿಟಿರಿಯ ಕಡೆಗೆ ಸಾಗಿದರು. ಮತ್ತೂ ಬ್ರೂಜಸ್ ಆಸ್ಟೆಂಡ್ ಕಾಲುವೆಯನ್ನು ದಾಟಿ ಉತ್ತರಕ್ಕೆ ಹೋಗುತ್ತಿರುವರು. ಶತ್ರುಗಳು ಅಲ್ಲಲ್ಲಿಗೆ ಮೊಂಡತನದಿಂದ ಯುದ್ಧ ನಡೆಯಿಸುತ್ತಲೇ ಇದ್ದಾರೆ. ಆದರೂ ನಮ್ಮವರ ಪುರೋಗಮನವು ಸಾಗುತ್ತಿದೆ. ಬೆಲ್ಜಿಯಮ್ಮಿಗೆ ದಕ್ಷಿಣದಲ್ಲಿ ಫ್ರಾನ್ಸಿನ ಉತ್ತರದ ಎಲ್ಲೆಯ ಬಳಿಯಣ ಲಿಲ್ಲಿಯು ನಮ್ಮವರ ವಶವಾದೀಚೆಗೆ ಅದರ ದಕ್ಷಿಣದಲ್ಲಿ ನಮ್ಮವರು ನಡೆಯಿಸಿದ ಮಹಾಯುದ್ಧದಲ್ಲಿ ಶತ್ರುಗಳಿಗೆ ಬಹಳ ನಷ್ಟವುಂಟಾಗಿದೆ. ೧೦೦೦೦ ಮಂದಿಗಳು ಸೆರೆಸಿಕ್ಕಿಹೋಗಿದ್ದಾರೆ. ಬಹಳ ಫಿರಂಗಿಗಳು ನಮ್ಮವರ ವಶವಾಗಿವೆ. ಲೀಕ್ಯಾಬಿಟಿಗೆ ಆಗ್ನೇಯದಲ್ಲಿ ಓಯಿಬು, ಸಾಂಬರ್ ಕಾಲುವೆಗಳನ್ನು ನಮ್ಮವರು ಸೇರಿದರು. ಅದುಕಾರಣ ಶತ್ರುಗಳು ಓಯಿಬಿನಿಂದ ದಕ್ಷಿಣಕ್ಕೆ ಹಿಂದಿರುಗಿಹೋಗಬೇಕಾಗಿ ಬಂದಿತು. ನಮ್ಮವರು ೧೦ ದಿನಗಳೊಳಗೆ ೧೮ ಮೈಲಿಗಳ ದೂರ ಮುಂದಕ್ಕೆ ಸಾಗಿದರು. ಸೆಲ್ ನದಿಯನ್ನು ಹಲವುಕಡೆ ದಾಟಿ ನೂರಾರು ಗ್ರಾಮಗಳನ್ನು ವಶಪಡಿಸಿಕೊಂಡರು. ಇಲ್ಲಿ ಮಹಾ ದಿಗ್ವಿಜಯವು ನಮ್ಮವರಿಗೆ ಲಭಿಸಿತು. ಆದರೆ ನಮ್ಮವರ ವಶವಾಗಿದ್ದ ಡುವಾಯಿ ಎಂಬ ಪಟ್ಟಣವೊಂದು ಮಾತ್ರ ಮರಳಿ ಜರ್ಮನರಿಂದ ಆಕ್ರಮಿಸಲ್ಪಟ್ಟಿತೆಂಬ ವರ್ತಮಾನ ಬಂದಿದೆ. ಆದರೂ ಇದನ್ನು ಸ್ಥಿರವಾಗಿ ಜರ್ಮನರ ವಶದಲ್ಲಿ ಇರಗೊಡಿಸಲಾರರು.

ಇದಕ್ಕೆ ದಕ್ಷಿಣದಲ್ಲಿ ಅಮೇರಿಕನ್ನರು ವರ್ಡನ್ನಿಗೆ ವಾಯವ್ಯದಿಕ್ಕಿನಲ್ಲಿ ಮಹಾಯುದ್ಧವನ್ನು ಮಾಡಿ ಗ್ರಾಂಡುಪ್ರಿ ಎಂಬ ಪಟ್ಟಣವನ್ನು ವಶಪಡಿಸಿಕೊಂಡರು. ಇಲ್ಲಿ ಜರ್ಮನರಿಗೂ ಅಮೇರಿಕನ್ನರಿಗೂ ಬಾಹಾಬಾಹಿ ಯುದ್ಧವು ನಡೆದು ಶತ್ರುಗಳು ಸೋತುದರಿಂದ ಲೋಹಮಾರ್ಗವೂ ಅದರ ಮೇಲಿರುವ ಈ ಮುಖ್ಯಸ್ಥಲವೂ ನಮ್ಮವರ ಅಧೀನವಾದಂತಾಯಿತು. ಈ ಪ್ರಾಂತಕ್ಕೆ ಶತ್ರುಗಳು ಈಗ ಹೆಚ್ಚು ಸೈನ್ಯಗಳನ್ನು ತಂದು ಸೇರಿಸಿದ್ದಾರೆ. ಮ್ಯೂಜುನದಿಗೆ ಪಶ್ಚಿಮದಲ್ಲಿ ಈಗ ಅಮೇರಿಕನ್ನರು ಘೋರಸಂಗ್ರಾಮವನ್ನು ನಡೆಯಿಸುತ್ತಿದ್ದಾರೆ. ಅಲ್ಲಿರುವ ೩೬೭ನೆ ಗುಡ್ಡವನ್ನೂ ಬಳಿಯಣ ಕಾಡನ್ನೂ ಅಮೇರಿಕನ್ನರು ಹಿಡಿದುಕೊಂಡು ಶತ್ರುಗಳನ್ನು ಓಡಿಸಿ ಅವರ ಅನೇಕ ಮಿಷನ್ ಫಿರಂಗಿಗಳನ್ನು ವಶಪಡಿಸಿಕೊಂಡು ಮುಂದಕ್ಕೆ ಸಾಗಿಹೋಗಿದ್ದಾರೆ.

ಈ ಪಶ್ಚಿಮರಂಗದಲ್ಲಿ ಜುಲೈ ತಿಂಗಳಿಂದೀಚೆಗೆ ಶತ್ರುಗಳ ಕಡೆಯ ೩ ಲಕ್ಷ ಸೈನಿಕರೂ ೪ಸಾವಿರ ಫಿರಂಗಿಗಳೂ ನಷ್ಟವಾಗಿವೆ. ಆದರೂ ಅವರಲ್ಲಿ ಇನ್ನೂ ೨೦೦ ಡಿವಿಜನ್ ಸೈನ್ಯಗಳಿವೆಯಂತೆ. ಆದುಕಾರಣ ಇನ್ನೂ ಕೆಲತಿಂಗಳುಗಳ ವರೆಗೂ ಅವರು ಧೈರ್ಯಸ್ಥೈರ್ಯದಿಂದ ಯುದ್ಧವನ್ನು ಸಾಗಿಸಬಲ್ಲರು. ಆದರೂ ಮುಂದಣವರ್ಷದ ಕಡೆಯವರೆಗೂ ಅವರು ನಿಲ್ಲುವುದು ಅಸಾಧ್ಯವೆಂದು ಅನೇಕ ಯುದ್ಧಕಲಾಭಿಜ್ಞರು ಹೇಳುತ್ತಾರೆ.

ಸರ್ವಿಯಾರಂಗ—ನಿಷ್ ಪಟ್ಟಣವನ್ನು ಹಿಡಿದ ಮಿತ್ರಮಂಡಲಿ ಸೈನ್ಯಗಳು ಅಕ್ಟೋಬರ್ ತಾ|| ೧೫ರಲ್ಲಿ ಆ ಪಟ್ಟಣಕ್ಕೆ ಈಶಾನ್ಯದಲ್ಲಿರುವ ಕಾಲ್ಪನದಿಯನ್ನು ದಾಟಿ ಲೆಕ್ರಿನಾವಿಗೂ ಕ್ರೂಸಿನಕ್ಕಿಗೂ ದಕ್ಷಿಣದಲ್ಲಿರುವ ಪರ್ವತಗಳನ್ನು ಆಕ್ರಮಿಸಿಕೊಂಡು ಮುಂದೆ ಸಾಗುತ್ತಿರುವುವು. ಫ್ರೆಂಚ್ ಗ್ರೀಕ್ ಸೈನ್ಯಗಳು ಪಶ್ಚಿಮದಲ್ಲಿರುವ ನೋವಿಬಜಾರನ್ನು ಆಕ್ರಮಿಸಿದುವು. ಅಲ್ಲಿದ್ದ ಶತ್ರುಗಳು ಬಹಳ ಪರಾಜಿತರಾಗಿ ಓಡುತ್ತಿರುವರು. ಅದಕ್ಕೆ ಈಶಾನ್ಯದಲ್ಲಿ ಲೋಹಮಾರ್ಗದಲ್ಲಿರುವ ಮಿಟ್ರೋವಿಟ್ಜಾವನ್ನು ಬಿಟ್ಟು ಓಡುತ್ತಿರುವ ಆಸ್ಟ್ರಿಯನ್ ಸೈನ್ಯಗಳನ್ನು ಸರ್ವಿಯನ್ನರು ಓಡಿಸಿಕೊಂಡುಹೋಗಿ ಮಾಂಟಿನೀಗ್ರೋ ರಂಗದಲ್ಲಿ ಫ್ರೆಂಚ್ ಅಶ್ವಸೈನ್ಯದ ಸಹಾಯದಿಂದ ಮುತ್ತಿ ಯುದ್ಧಮಾಡಿ ಸೋಲಿಸಿ ಅವರಕಡೆಯ ೩೦೦೦ ವಾಗಿನ್ನುಗಳ ಯುದ್ಧಸಾಮಗ್ರಿಗಳನ್ನೂ ೭೦೦೦ ಸೈನಿಕರನ್ನೂ ವಶಪಡಿಸಿಕೊಂಡರು. ಮತ್ತು ಆ ಪ್ರಾಂತದಲ್ಲಿರುವ ಸ್ಪೇಕುಪುರವನ್ನೂ ವಶಪಡಿಸಿಕೊಂಡರು. ನಿಷ್ಷಿಗೆ ಉತ್ತರದಲ್ಲಿರುವ ಜರ್ಮನ್ ಆಸ್ಟ್ರಿಯನ್ ಸೈನ್ಯಗಳನ್ನು ಮಿತ್ರಮಂಡಲಿ ಸೈನ್ಯಗಳು ಓಡಿಸಿ ಆಲೆಗ್ಜಿನಿಟ್ಜ ಪಟ್ಟಣವನ್ನೂ ಕ್ರೈಸಿಬಾಡಾ ಎಸ್ಟಿರುಜಟ್ಟು ಬೆಟ್ಟಗಳನ್ನೂ ಅಲ್ಲಿದ್ದ ೩೨ ಫಿರಂಗಿಗಳನ್ನೂ ವಶಪಡಿಸಿಕೊಂಡರು. ಫ್ರೆಂಚರು ನಿಷ್ಷಿಗೆ ಆಗ್ನೇಯದಿಕ್ಕಿನಲ್ಲಿ ಲೋಹಮಾರ್ಗದ ಮೇಲಿರುವ ಪಿರಾಟ್ ಎಂಬ ಪಟ್ಟಣವನ್ನು ವಶಪಡಿಸಿಕೊಂಡರು. ಇದರಿಂದ ಮಿತ್ರಮಂಡಲಿಯವರು ನಿಷ್‌ಪಟ್ಟಣವನ್ನು ಮಾತ್ರವೇ ಅಲ್ಲದೆ ಅದರ ಸುತ್ತಣ ಬಹುಭಾಗವನ್ನೆಲ್ಲಾ ಆಕ್ರಮಿಸಿ ವಶಪಡಿಸಿಕೊಂಡು ಮುಂದುವರಿಯುತ್ತಿರುವರೆಂಬುದು ಸ್ಪಷ್ಟವಾಗಿದೆ. ಈ ಬಾಲ್ಕನ್ ರಂಗದಲ್ಲಿ ಕಳೆದ ತಿಂಗಳು ತಾ|| ೧೫ರಿಂದ ಈ ತಿಂಗಳು ತಾ|| ೧೨ರ ವರೆಗೆ ಶತ್ರುಗಳ ಕಡೆಯ ೯೦೦೦೦ ಮಂದಿಗಳನ್ನೂ ೬೦೦ ಫಿರಂಗಿಗಳನ್ನೂ ಮಿತ್ರಮಂಡಲಿಯವರು ವಶಪಡಿಸಿಕೊಂಡಿದ್ದಾರೆ. ಸರ್ವಿಯಾ ದೇಶದಲ್ಲಿ ಇನ್ನೂ ಆಸ್ಟ್ರಿಯನ್ನರ ೨ ಸೈನ್ಯಗಳೂ ಜರ್ಮನರ ೪ ಸೈನ್ಯಗಳೂ ಯುದ್ಧಮಾಡುತ್ತಿವೆ. ಬಲ್ಗೇರಿಯಾದಲ್ಲಿರುವ ಫ್ರಾನ್ಸ್ ಸೈನ್ಯವು ಡಾನ್ಯೂಬ್ ನದಿಯನ್ನು ತಾ|| ೧೯ ರಲ್ಲಿ ಸೇರಿ ಅಲ್ಲಿ ನಡೆಯುತ್ತಿರುವ ವ್ಯಾಪಾರವನ್ನೂ ಹಡಗುಗಳ ಹೋಗುಬರುವಿಕೆಯನ್ನೂ ತಡೆಯಲು ಆರಂಭಿಸಿರುವರು. ಮಿತ್ರಮಂಡಲಿಯ ಫಿರಂಗಿಗುಂಡಿನೇಟಿನಿಂದ ಶತ್ರುಗಳ ಒಂದು ಯುದ್ಧದ ಹಡಗು ದಡವನ್ನು ಕಚ್ಚಿತು.

ಒಳದೇಶದ ವೃತ್ತಾಂತಗಳು.

ಡಿಸ್ಟ್ರಿಕ್ಟು ಜಡ್ಜರುಗಳಾದ ಮ|| ಬ್ಯಾರಿಸ್ಟರ್ ನಾಗಪ್ಪನವರು ಮೈಸೂರಿಗೂ, ಮ|| ಸುಬ್ಬಣ್ಣನವರು ಶಿವಮೊಗ್ಗೆಗೂ ವರ್ಗಾಯಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ಮಳೆಯ ಲಕ್ಷಣವು ಹಿಂದಾಗಿ ಹಿಮಂತಋತುವಿನ ಚಿಹ್ನೆಗಳು ತಲೆದೋರಿವೆ. ಇನ್‌ಫ್ಲುಯಂಜಾ ರೋಗದ ಹಾವಳಿಯು ತಗ್ಗಿಲ್ಲ.

ರೋಗನಿರೋಧದ ಏರ್ಪಾಟಿಗಾಗಿ ನಮ್ಮ ಸರ್ಕಾರದವರು ರಾಜಧಾನಿಗೂ ಬೆಂಗಳೂರಿಗೂ ಒಂದೊಂದಕ್ಕೆ ತಿಂಗಳಿಗೆ ೨|| ಸಾವಿರ ರೂ. ಗೆ ಹೆಚ್ಚಿಲ್ಲದಂತೆ ವೆಚ್ಚಮಾಡಬಹುದೆಂದು ಅಪ್ಪಣೆ ಮಾಡಿದ್ದಾರೆ.

ಮ|| ಆರ್. ರಂಗಯ್ಯನವರ ಮೃತಿಯಿಂದ ತೆರವಾಗಿರುವ ರಾಜಧಾನಿ ಮಂಡಿ ಮೊಹಲ್ಲಾ ಮ್ಯು|| ಕೌನ್ಸಿಲರ ಸ್ಥಾನವೊಂದಕ್ಕೆ ಹೊಸಕೌನ್ಸಿಲರನ್ನು ಆರಿಸುವ ಕೆಲಸವು ಬರುವ ನವಂಬರ್ ತಾ|| ೧ ರಲ್ಲಿ ನೆರವೇರುವುದು.

ಅಜ್ಜಂಪುರದಲ್ಲಿ ಇನ್‌ಫ್ಲುಯನ್ಸಾ ರೋಗದಿಂದ ನರಳತಕ್ಕ ಬಡಜನಗಳ ಪ್ರಯೋಜನಕ್ಕಾಗಿ ಮ|| ಅಜ್ಜಂಪುರದ ಶೆಟ್ಟರ ಶಿವನಾಗಪ್ಪನವರ ಮಕ್ಕಳು ಸಿದ್ದಪ್ಪಶೆಟ್ಟರು ರವೆ, ಸಕ್ಕರೆ, ಅಕ್ಕಿ ಇವುಗಳನ್ನು ಧರ್ಮಾರ್ಥವಾಗಿ ಕೊಡಲಿಕ್ಕೆ ಏರ್ಪಾಟು ಮಾಡಿರುವುದಾಗಿ ಸ್ಥಳಿಕರೊಬ್ಬರು ತಿಳಿಸಿರುತ್ತಾರೆ.

ರಾಜಧಾನಿಯಲ್ಲಿ ಇನ್‌ಫ್ಲುಯಂಜಾ ರೋಗಗ್ರಸ್ತರಿಗೆ ಮನೆಮನೆ ಬಳಿಯಲ್ಲಿಯೇ ಔಷಧಗಳೂ ಆಹಾರಗಳೂ ದೊರೆಯುವಂತೆ ಮಾಡಲು ಮ್ಯುನ್ಸಿಪಾಲಿಟಿಯವರು ತುಂಬಾ ಮುತುವರ್ಜಿ ಮಾಡುತ್ತಿದ್ದಾರೆ. ಅರಮನೆಯ ಮೋಟಾರುಗಳಮೇಲೆ ಅವುಗಳನ್ನು ಬೀದಿಬೀದಿಯಲ್ಲಿ ಒದಗಿಸುತ್ತಿದ್ದಾರೆ. ಮತ್ತೂ ಬಡಬಗ್ಗರಿಗೆ ಎರಡೆರಡಾಣೆಯಂತೆ ಸಹಾಯಮಾಡಲು ಮ್ಯು|| ಕೌನ್ಸಿಲರುಗಳೇ ಮೊದಲಾದ ಪ್ರಮುಖಜನರ ವಶಕ್ಕೆ ಹಣವನ್ನು ಕೊಟ್ಟಿದ್ದಾರೆ. ಏರ್ಪಾಟುಗಳೆಲ್ಲಾ ವಿಫಲವಾಗದಂತೆ ನೋಡಿಕೊಳ್ಳುವುದಕ್ಕೆ ಮುನ್ಸಿಪಲ್ ಕೌನ್ಸಿಲರುಗಳನ್ನು ಬೇರೆಬೇರೆ ಮೊಹಲ್ಲಾ ಭಾಗಗಳ ಮೇಲ್ವಿಚಾರಣೆಗೆ ಏರ್ಪಡಿಸಿದ್ದಾರೆ. ಪ್ರಜೆಗಳು ಈ ಸೌಕರ್ಯಗಳನ್ನೆಲ್ಲಾ ಒದಗಿಸಿಕೊಂಡು ಸಾಧ್ಯವಾದ ಮಟ್ಟಿಗೆ ಮೃತ್ಯುವಿನಿಂದ ಬಿಡುಗಡೆ ಹೊಂದಲು ಮೈಮರೆಯಬಾರದು.

ಡಾ|| ಪಿ. ಎಸ್. ಅಚ್ಯುತರಾಯರವರು ಕಳೆದ ತಾ|| ೨೩ರ ರಾತ್ರಿ ಬೆಂಗಳೂರಿನಲ್ಲಿರುವ ತಮ್ಮ ಮನೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಿಸಲು ತುಂಬಾ ವಿಷಾದಿಸುತ್ತೇವೆ. ಇವರು ಕೆಲಕಾಲದಿಂದ ಅಸ್ವಸ್ಥರಾಗಿ ಕಳೆದ ನಾಲ್ಕಾರು ತಿಂಗಳಿಂದ ರಾಜಧಾನಿಯಲ್ಲಿ ಡಾ|| ಕೃಷ್ಣಯ್ಯಂಗಾರರ ಚಿಕಿತ್ಸೆಯಲ್ಲಿದ್ದು ಕೂಡಿದಮಟ್ಟಿಗೂ ಆರೋಗ್ಯಗೊಂಡು ಕಳೆದ ನವರಾತ್ರಿ ದರ್ಬಾರು ಕಾಲದಲ್ಲಿ ಅರಮನೆಗೂ ಹೋಗಿಬರುವ ಸ್ಥಿತಿಯಲ್ಲಿದ್ದರು. ತಾ|| ೨೦ ರಲ್ಲಿ ಇಲ್ಲಿಂದ ಬೆಂಗಳೂರಿಗೆ ಪ್ರಯಾಣಮಾಡಿದರು. ಅಲ್ಲಿ ಇನ್‌ಫ್ಲುಯಂಜಾ ತಗುಲಿಯೋ ಏನೋ ಒಂದೆರಡುವೇಳೆ ವಮನಮಾಡಿಕೊಂಡು ಹಾಸುಗೆಯಲ್ಲಿ ಮಲಗಿದವರು ಅನಾಯಾಸವಾಗಿ ಭೌತಿಕದೇಹವನ್ನು ತ್ಯಜಿಸಿದರೆಂದು ಕೇಳುತ್ತೇವೆ. ಮ|| ರಾಯರು ವೈದ್ಯಶಾಖೆಯಲ್ಲಿ ಸೀನಿಯರ್ ಸರ್ಜನ್ ಪದವಿವರೆಗೂ ಏರಿ ಉದ್ಯೋಗಮಾಡಿ ಪ್ರಜೆಗಳ ಮತ್ತು ಪ್ರಭುತ್ವದವರ ಮೆಚ್ಚುಗೆಗೆ ಪಾತ್ರರಾಗಿ ವಿಶ್ರಾಂತಿಯನ್ನು ಪಡೆದುಕೊಂಡಿದ್ದರು. ಇವರಲ್ಲಿದ್ದ ವೈದ್ಯವಿದ್ಯಾವೈದುಷ್ಯಕ್ಕಿಂತಲೂ ಇವರ ಗುಣಾತಿಶಯಗಳು ದೇಶೀಯರ ಮನಸ್ಸನ್ನೆಲ್ಲಾ ಆಕರ್ಷಿಸಿದ್ದುವು. ಇವರಂಥ ನಿಸ್ಪೃಹರೂ, ನಿಗರ್ವಿಗಳೂ, ಸರಸಿಗಳೂ, ಸರ್ವಪ್ರಜಾಸಹೋದರಭಾವವುಳ್ಳವರೂ, ಕರುಣಾಳುಗಳೂ ಅಧಿಕಾರಿವರ್ಗದಲ್ಲಿ ಬಹಳ ವಿರಳರು. ಇವರಿಗೆ ದೇಶಭಾಷೆಯಮೇಲೆ ಇದ್ದ ಅಭಿಮಾನವು ಅಸಾಧಾರಣವು. ಸಾಹಿತ್ಯಪರಿಷತ್ತಿನಲ್ಲಿ ಇವರಂಗವು ವಿಶೇಷವಾಗಿದ್ದಿತು. ಇಂಥ ದೇಶಬಾಂಧವರನ್ನು ಕಳೆದುಕೊಂಡುದು ನಮ್ಮ ದೌರ್ಭಾಗ್ಯವು. ಅವರ ಸದ್ಧರ್ಮ ಸೌಜನ್ಯಗಳೇ ಅವರ ಆತ್ಮಕ್ಕೆ ಚಿರಶಾಂತಿಯನ್ನುಂಟುಮಾಡಲು ಸಮರ್ಥವಾಗಿರುವುವು. ಅವರ ಸಹೋದರರು ಕುಮಾರರು ಮೊದಲಾದ ಕುಟುಂಬದವರಿಗೆಲ್ಲಾ ಈ ಮೂಲಕ ನಮ್ಮ ಸಹಾನುತಾಪವನ್ನು ನಿವೇದಿಸುತ್ತೇವೆ.

ಆಹಾರ್ಯವಸ್ತುಗಳ ಬೆಲೆಯು ಹೆಚ್ಚಿಯೂ ಧಾನ್ಯಗಳು ಇಲ್ಲದೆಯೂ ಇರುವುದರಿಂದ ತಮ್ಮ ಪ್ರಜೆಗಳಿಗುಂಟಾಗಿರುವ ಸಂಕಟವನ್ನು ಪರಿಹರಿಸುವುದಕ್ಕಾಗಿ ಬರೋಡಾ ಮಹಾರಾಜರವರು ತಮ್ಮ ಕೈಹಣದಿಂದ ೧೦ ಲಕ್ಷ ರೂ. ಗಳನ್ನು ಕೊಟ್ಟಿರುತ್ತಾರೆ.

ರಾಜಧಾನಿಯ ಮ್ಯು|| ವೈಸ್‌ಪ್ರೆಸಿಡೆಂಟರ ಸ್ಥಾನಕ್ಕೆ ಕೌನ್ಸಿಲರಲ್ಲಿ ಒಬ್ಬರನ್ನು ಆರಿಸುವ ಕೆಲಸವು ಮತ್ತೊಂದುಸಲ ನಡೆಯುವ ವಿಷಯದಲ್ಲಿ ಸರ್ಕಾರದ ಅನುಮತಿಯು ಬಂದಿದೆಯೆಂದೂ ಅದು ಬರುವ ನವೆಂಬರ್ ತಾ|| ೬ ರಲ್ಲಿ ನಡೆಯುವುದಾಗಿದೆಯೆಂದೂ ಕೇಳುತ್ತೇವೆ. ಈಗ ಅದಕ್ಕೆ ಉಮೇದುವಾರರಾಗಿ ನಿಂತಿರುವ ಇಬ್ಬರಲ್ಲಿ ಮ|| ಎ. ಕೃಷ್ಣರಾಯರವರು ಒಬ್ಬರಾಗಿರುತ್ತಾರೆ. ರೀಯೆಲಕ್ಷನ್ ನಡೆಯಬೇಕೆಂದು ಕೌನ್ಸಿಲ್ ಮೀಟಿಂಗಿನಲ್ಲಿ ಸೂಚಿಸಿದವರೇ ಇವರಾಗಿರುವುದರಿಂದ ಹೇಗಾದರೂ ವೈಸ್‌ಪ್ರೆಸಿಡೆಂಟ್‌ಗಿರಿಯನ್ನು ತಾವು ಸಂಪಾದಿಸಬೇಕೆಂಬ ಉದ್ದೇಶವು ಇವರಿಗೆ ಪೂರ್ಣವಾಗಿದೆಯೆಂದು ವ್ಯಕ್ತವಾಗಿರುತ್ತದೆ. ಇವರು ಆ ಕೆಲಸದ ನಿರ್ವಾಹಕ್ಕೆ ಸರ್ವವಿಧದಿಂದಲೂ ಅರ್ಹರಾಗಿರುತ್ತಾರೆಂಬುದರಲ್ಲಿ ಸಂಶಯವೇನೂ ಇಲ್ಲ. ಆದರೆ ಇವರಿಗೆ ತಮ್ಮ ಅಡ್ವೋಕೇಟ್ ಕೆಲಸದ ಭಾರವೇ ಅಪಾರವಾಗಿರುತ್ತದೆ. ಬೆಳಗಿನಹೊತ್ತು ಕಕ್ಷಿಗಾರರೊಡನೆ ಆಫೀಸಿನಕೆಲಸ; ಮಧ್ಯಾಹ್ನದಹೊತ್ತು ಕೋರ್ಟಿನಕೆಲಸ. ವೈಸ್‌ಪ್ರೆಸಿಡೆಂಟ್ ಕೆಲಸವನ್ನು ಯಾವಾಗ ನಿರ್ವಹಿಸುವರೋ ಗೊತ್ತಾಗುವುದಿಲ್ಲ. ಹಿಂದೆ ಸಂಪದಭ್ಯುದಯದಲ್ಲಿ ವೈಸ್‌ಪ್ರೆಸಿಡೆಂಟ್‌ಗಿರಿಗೆ ಇರಬೇಕಾದ ಯೋಗ್ಯತೆ ಮೊದಲಾದುವುಗಳನ್ನು ವಿಧಿಸುವಾಗ್ಗೆ "ಫುಲ್‌ಟೈಂ ವೈಸ್‌ಪ್ರೆಸಿಡೆಂಟರಾಗಿ ಕೆಲಸಮಾಡುವವರಾಗಬೇಕು" ಎಂದು ಹೇಳಿರುವಂತೆ ಇವರು ಸ್ವಾರ್ಥತ್ಯಾಗಿಗಳಾಗಿ ರಾಜಧಾನಿಯ ನಿವಾಸಿಗಳ ಹಿತಕ್ಕಾಗಿಯೇ ತಮ್ಮ ವಿದ್ಯಾ ಬುದ್ಧಿ ಕೌಶಲಗಳನ್ನೂ ಯಾವತ್ಕಾಲವನ್ನೂ ವಿನಿಯೋಗಿಸಲು ದೊಡ್ಡ ಮನಸ್ಸು ಮಾಡಿ ಕೌನ್ಸಿಲರುಗಳಿಗೆ ಭರವಸೆ ಕೊಡುವುದಾದರೆ ಇವರನ್ನೇ ಆರಿಸಿಕೊಳ್ಳುವುದು ಯುಕ್ತವಾಗಿರುತ್ತದೆ. ಹೆಸರಿಗೆ ಮಾತ್ರ ಇದನ್ನು ವಹಿಸಿ, ಅತಿಶಯವಾಗಿರುವ ತಮ್ಮ ವಕೀಲ್ ವೃತ್ತಿಯಲ್ಲೇ ತಗುಲಿಕೊಂಡಿರುವುದಾದರೆ ಮ್ಯುನ್ಸಿಪಾಲಿಟಿಗೆ ಏನೂ ಪ್ರಯೋಜನವಾಗುವುದಿಲ್ಲ. ಆಗ್ಗೆ ಇವರನ್ನು ಬಿಟ್ಟು ಇತರರನ್ನು ಆರಿಸಿಕೊಳ್ಳುವುದೇ ಮೇಲಾಗಿರುತ್ತದೆ.

ಪತ್ರವ್ಯವಹಾರ.

ಶಿವಮೊಗ್ಗಾ ವೀರಶೈವ ಸ್ಟೂಡೆಂಟ್ಸ್ ಹೋಮ್.

ಈ ಪ್ರಾಂತದಲ್ಲಿ ಪ್ಲೇಗು ಮತ್ತು ಇನ್‌ಫ್ಲುಯಂಜಾ ಖಾಯಿಲೆಗಳು ಜಾಸ್ತಿಯಾಗಿರುವುದರಿಂದ ನವಂಬರ್ ಮಾಹೆ ತಾರೀಖು ೫ ರ ವರಿವಿಗೆ ಮುಚ್ಚಲ್ಪಟ್ಟಿರುತ್ತದೆ.

ಜಿ. ಎಂ. ಕಾಡಪ್ಪ.

ತುಮಕೂರು ಡಿಸ್ಟ್ರಿಕ್ಟ್ ಶಿರಾ.

ಈ ಶಿರಾದಲ್ಲಿ ಈಗ ಪ್ರಾಪ್ತವಾಗಿರುವ ನೂತನಜ್ವರದಿಂದ ನಿತ್ಯವೂ ಹತ್ತು ಹನ್ನೆರಡು ಮರಣಗಳಾಗುತ್ತಿವೆ. ಇದಕ್ಕಾಗಿ ತಾ|| ಅಮಲ್ದಾರರವರು ಡಾಕ್ಟರ್‌ಸಾಹೇಬರು ಬಹಳ ಮುತುವರ್ಜಿಯಿಂದ ಔಷಧಕೊಡುವುದು ಮೊದಲಾದ ಕೆಲಸಗಳನ್ನು ಸಮರ್ಪಕವಾಗಿ ನಡೆಸುತ್ತಾ ಇದ್ದಾರೆ. ಮಳೆ ಮಾತ್ರ ಉತ್ತರೆಮಳೆ ಬಂದದ್ದೇ ವಿನಾ ಇನ್ನೂ ಮಳೆ ಬಂದಿಲ್ಲ. ಬಿಸಿಲಿನ ತಾಪದಿಂದ ಪೈರುಗಳು ಒಣಗುತ್ತಾ ಇವೆ. ಅಲ್ಲದೆ ಈ ಸಾರಿ ಮೊಹರಂ ಮತ್ತು ನವರಾತ್ರಿ ಈ ಎರಡೂ ಏಕಕಾಲದಲ್ಲಿ ಬಂದದ್ದು ಸರಿಯಷ್ಟೆ. ಪದ್ಧತಿಯಂತೆ ಕೆಳಗಳ ಪೇಟೆಯಲ್ಲಿಯೂ ಮತ್ತು ಮೇಗಣ ಪೇಟೆಯಲ್ಲಿಯೂ ಸಹ ಮಹಮ್ಮದೀಯರು ಪದ್ಧತಿಯಂತೆ ತಮ್ಮ ದೇವರುಗಳನ್ನು ಇಟ್ಟು ಪೂಜಿಸಿದ್ದರು. ಮೇಗಳ ಪೇಟೆಯಲ್ಲೇ ಶ್ರೀ ತಗಡೂರು ಉಜ್ಜಯಿನಿ ಸದ್ಧರ್ಮಸಿಂಹಾಸನ ಚತುಷ್ಟ್ಯಧ್ಯಕ್ಷ ಚನ್ನಬಸವಸ್ವಾಮಿ ಗದ್ದಿಗೆ ಇರುವದು. ವೀರಶೈವರು ಪದ್ಧತಿಪ್ರಕಾರ ಶ್ರೀ ಚನ್ನಬಸವಸ್ವಾಮಿಯನ್ನು (೧೫-೧೦-೧೯೧೮ ಸೆ) ಅಶ್ವೀಜ ಶು|| ೧೦ ಮಂಗಳವಾರ [illegible] ಉತ್ಸವಕ್ಕೆ ಹೊರಡಬೇಕಾದ್ದಕ್ಕೆ ಆ ಕಾಲದಲ್ಲಿ ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಮಿ|| ಅಲೀಮ್‌ಖಾನ್ ಸಾಹೇಬರು ಮತ್ತು ಮ|| ಅಪ್ಪುಮಿಯ್ಯ ಸಾಹೇಬರು ರಹಿಮ್‌ಸಾಹೇಬರೇ ಮೊದಲಾದವರುಗಳು ಬಹಳ ಮುತುವರ್ಜಿಯಿಂದ ಶ್ರೀ ಚನ್ನಬಸವಸ್ವಾಮಿ ಉತ್ಸವವನ್ನು ಹೊರಡಿಸಿದರು. ಹಾಗೂ ಕೆಲವು ಮಹಮ್ಮದೀಯರು ತಮ್ಮ [illegible] ವಾದ ಮೇಗಳಪೇಟೆಯಲ್ಲಿ ಇಟ್ಟಿದ್ದ ದೇವರ ಮುಂದೆ ಹಿಂದೂದೇವರು ಬರಕೂಡದೆಂತ ಆಕ್ಷೇಪಣೆ ಮಾಡಿದ್ದಕ್ಕೆ ಮ|| ಅಪ್ಪುಮಿಯ್ಯಾ ಸಾಹುಕಾರು ದೇವರು ಒಂದೇ ಎಂಬುವ ಮಾತಿನಿಂದ ಒಬ್ಬರಿಗೊಬ್ಬರು ಐಕಮತ್ಯವಾಗಿ [illegible]

ಅಲ್ಲಿ ಮದಲೂರು ಊದೇದಮಠದ ಪಟ್ಟಾಧ್ಯಕ್ಷ ರುದ್ರದೇವರಿಂದ ಶಮಾಪೂಜೆಯು ನಡೆಸಲ್ಪಟ್ಟಿತು. ಮುಖ್ಯ ಈ ರೀತಿಯಾಗಿ ಯಾವದಕ್ಕೂ ಲಕ್ಷ್ಯ ಅವಕಾಶವಿಲ್ಲದಂತೆ ತಿಳುವಳಿಕೆಯಿಲ್ಲದವರಿಗೆ ಮಾರ್ಗದರ್ಶಕರಾಗಿ ಉತ್ಸವಮಾಡಿಸಿದ ಪೋಲೀಸ್ ಇನ್ಸ್ಪೆಕ್ಟರ್ ಮೊದಲಾದ ಮಹನೀಯರಿಗೆ ಜಗದೀಶನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂತ ಪ್ರಾರ್ಥಿಸುತ್ತೇವೆ. ಸ್ಥಳಿಕ.

ಶ್ರೀಮದ್ವೀರಶೈವ ಸದ್ಬೋಧಪ್ರಸಾರಕ ಪ್ರಾಂತಿಕಸಭಾ ದ್ವಿತೀಯ ಸಮ್ಮೇಳನವು.

(ನಾರಾಯಣಪೇಟೆ.)

ಈ ಊರಿನಲ್ಲಿ ಶ್ರೀರಾಮಗಡ್ಡೆ ಚರವರ್ಯ ಸಿದ್ಧಲಿಂಗಸ್ವಾಮಿಗಳ ಪಾದಪೂಜಾ ಸಮಾರಂಭವು ಶ್ರಾವಣಮಾಸದಿಂದಾರಂಭವಾಗಿ ವಿಜೃಂಭಣೆಯಿಂದ ನಡೆಯುತ್ತ ಬಂದು ಕಡೆಗೆ ಭಾದ್ರಪದ ಬಹುಳ ೯ ಯಲ್ಲಿ ಮಂಗಳಾರಾಧನೆ ನಡೆಯುವಾಗ್ಗೆ ಪ್ರಾಂತಿಕ ವೀರಶೈವ ಸಭಾಕಾರ್ಯವೂ ನಡೆಯಿತು. ಆ ಕಾಲಕ್ಕೆ ಶ್ರೀಮನ್ನಿರಂಜನ ಗುಣಿಮುಡಿಗಲ್ಲು ಶಿವಾನುಭವ ಚರವರ್ಯ ಶಾಂತವೀರಸ್ವಾಮಿಗಳೂ, ಹಾನಗಲ್ಲ ಶ್ರೀಮನ್ನಿರಂಜನ ಪೂಜ್ಯವಾದ ಕುಮಾರಸ್ವಾಮಿಗಳೂ, ಮತ್ತು ಈ ಸುತ್ತಿನ ಪಾಠಶಾಲೆಗಳ ಅಧ್ಯಾಪಕರಾದ ವಿರೂಪಾಕ್ಷಶಾಸ್ತ್ರಿಗಳು, ಬಸವಣ್ಣಪ್ಪಶಾಸ್ತ್ರಿಗಳು, ಚೆನ್ನಬಸವಶಾಸ್ತ್ರಿಗಳು, ಶ್ರೀಕಂಠಶಾಸ್ತ್ರಿಗಳು, ಅದ್ವೈತಮತೀಯ ಸಾಂಬಶಾಸ್ತ್ರಿಗಳು ಮೊದಲಾದ ಪಂಡಿತರೂ ಬಂದಿದ್ದರು. ಮತ್ತು ಸ್ಥಳಪರಸ್ಥಳದ ಭಕ್ತಮಾಹೇಶ್ವರರು ಸಾವಿರಾರು ಮಂದಿಗಳು ದಯಮಾಡಿಸಿದ್ದರು. ಶ್ರೀ|| ಗುಣಿಮುಡಿಗಲ್ಲು ಶಾಂತವೀರಸ್ವಾಮಿಗಳ ಅಧ್ಯಕ್ಷತೆಯಿಂದ ಕೂಡಿದ ಸಭೆಯಲ್ಲಿ ಈಶಸ್ತವನವಾದ ಬಳಿಕ ಏಲೇರಿ ಬಸವಣ್ಣಪ್ಪಶಾಸ್ತ್ರಿಗಳು ಸ್ವಾಗತಭಾಷಣವನ್ನು ಮಾಡಿದಬಳಿಕ ಹಂಪಣ್ಣನೆಂಬ ೧೦ ವರ್ಷದ ಬಾಲಕನು ವೀರಶೈವಮತ ಪ್ರಾಶಸ್ತ್ಯವನ್ನು ಕುರಿತು ಉಪನ್ಯಾಸಮಾಡಿದನು. ಆತನ ವಾಗ್ಮಿತೆಗೆ ಅಧ್ಯಕ್ಷರು ಮೆಚ್ಚಿ ೧೦ ರೂ. ಬಹುಮಾನ ಮಾಡಿದರು. ಈ ಊರಿನ ವೀರಶೈವ ಪಾಠಶಾಲಾ ವಿದ್ಯಾರ್ಥಿಗಳು ವಿದ್ಯೆ, ಆಚ್ಛಾದನ, ಲಿಂಗಧಾರಣ, ವಿಶ್ವಮತ ಮೊದಲಾದ ವಿಷಯಗಳಮೇಲೆ ಉಪನ್ಯಾಸಮಾಡಿದರು. ಅಧ್ಯಕ್ಷರು ಅವರುಗಳಿಗೆಲ್ಲಾ ಉತ್ತೇಜನಾರ್ಥವಾಗಿ ಬಹುಮಾನಪ್ರತ್ಯೇಕಗಳನ್ನು ಆಶೀರ್ವದಿಸಿದರು. ಆ ಬಳಿಕ ಅದೇ ಪಾಠಶಾಲಾಧ್ಯಾಪಕರಾದ ಸಿದ್ಧಲಿಂಗಶಾಸ್ತ್ರಿಗಳು ಲಿಂಗಧಾರಣ ವಿಷಯವಾಗಿ ಪ್ರೌಢವಾದ ಉಪನ್ಯಾಸವನ್ನು ಮಾಡಿ ಸಭಿಕರನ್ನು ಆನಂದಪಡಿಸಿದರು. ಮರುದಿನ ಬೆಳಗೂ ಮಧ್ಯಾಹ್ನವೂ ಸಭೆ ನಡೆದು ಬೆಲ್ಲದ ವೀರಣ್ಣನವರು, ಕಾಡಪ್ಪನವರು, ಮುಕ್ತಲ್ ಬಸವಲಿಂಗಪ್ಪನವರು, ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು, ಗು|| ಸೋಮಯ್ಯನವರು, ಬಾಲತೀಡ ಶಾಸ್ತ್ರಿಗಳು, ಮರ್ಚೇಡ ಶಾಸ್ತ್ರಿಗಳು, ವಿರೂಪಾಕ್ಷಶಾಸ್ತ್ರಿಗಳು ಇವರುಗಳು ಅನೇಕ ಲೌಕಿಕ ಧಾರ್ಮಿಕ ವಿಷಯಗಳಮೇಲೆ ರಸವತ್ತಾದ ಉಪನ್ಯಾಸಗಳನ್ನು ಮಾಡಿದರು. ಸಾಂಬಶಾಸ್ತ್ರಿಗಳು ಭಕ್ತಿಪೂರ್ವಕವಾಗಿ ನಿರಂಜನ ಶ್ರೀ|| ಸಿದ್ಧಲಿಂಗಸ್ವಾಮಿಗಳ ವಿಷಯವಾಗಿ ರಚಿಸಿದ್ದ ಪದ್ಯಗಳನ್ನು ಓದಿ ಸಭಿಕರನ್ನು ಆನಂದಪಡಿಸಿದರು. ಶ್ರೀ ಹಾನಗಲ್ಲ ಚರವರ್ಯ ಮಹಾಸ್ವಾಮಿಗಳು ಮಧ್ಯೇಮಧ್ಯೆ ತಮ್ಮ ಉಪದೇಶಾಮೃತದಿಂದ ಶ್ರೋತೃವೃಂದವನ್ನು ತಣಿಸುತ್ತಿದ್ದರು. ಕಡೆಗೆ ಸಭಾಧ್ಯಕ್ಷ ಮಹಾಸ್ವಾಮಿಗಳು ಅದುವರೆಗೆ ನಡೆದ ಭಾಷಣಗಳ ಮುಖ್ಯ ಸಾರವನ್ನೆಲ್ಲಾ ಅನುವಾದ ಮಾಡಿ, ಪ್ರಕೃತದ ವೀರಶೈವಮತ ಸ್ಥಿತಿಯನ್ನೂ ಅದರ ಸುಧಾರಣೆಗಾಗಿ ಮತೀಯರೆಲ್ಲರೂ ಬದ್ಧಕಂಕಣರಾಗಿ ನಡೆಯಬೇಕಾಗಿರುವ ಕಾರ್ಯಮಹತ್ತ್ವವನ್ನೂ ಕುರಿತು ಬೋಧಪ್ರದವಾದ ಭಾಷಣವನ್ನು ಮಾಡಿ ಸರ್ವರನ್ನೂ ಉತ್ತೇಜನಗೊಳಿಸಿದರು. ಸಭಿಕರಿಗೆಲ್ಲಾ ಪುಷ್ಪಹಾರ ಗುಚ್ಛಾದಿಗಳು ಸಮರ್ಪಿಸಲ್ಪಟ್ಟುವು. ಶ್ರೀರಾಮಗಡ್ಡೆ ಮಠದ ಸಿದ್ಧಲಿಂಗಸ್ವಾಮಿಗಳು ಜಮಖಂಡಿಯ ಕಾಡಪ್ಪ ಮೆಡಿಕಲ್ ಸ್ಟೂಡೆಂಟ್ ಇವರಿಗೆ ವೈದ್ಯಗ್ರಂಥಸಹಾಯಕ್ಕಾಗಿ ೧೦೦ ರೂ. ಗಳನ್ನು ಆಶೀರ್ವದಿಸಿದರು. ಈ ರೀತಿಯಿಂದ ಸಭಾಕಾರ್ಯವು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಅವಿಚಾರದಿಂದ ಅಥವಾ ಕಪಟದಿಂದ ದುಡುಕಿದರೆ ಒಡಕು.

ಹಿಂದುಳಿದವರ ಸ್ಕಾಲರ್ಶಿಪ್ಪನ್ನು ಹಂಚಿರುವ ವಿಷಯವಾಗಿ ಇಂಡಿಯನ್ ಸೋಷಿಯಲ್ ರಿಫಾರ್ಮರ್ ಪತ್ರಿಕೆಯಲ್ಲಿ ಒಂದು ಲೇಖನವು ಬಂದಿದೆ. ಅದರ ಕನ್ನಡಭಾಷಾಂತರವನ್ನು ಒಬ್ಬ ವಿದ್ಯಾರ್ಥಿ ಮಾಡಿ ಕಳುಹಿಸಿದಂತೆ ಅಕ್ಟೋಬರ್ ತಾ|| ೨ ರ ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಇದು ಪರ್ಯಾಲೋಚನೀಯವಾದದ್ದೆಂದು ಆ ಲೇಖನದಲ್ಲಿ ಹೇಳಿಕೊಳ್ಳಲ್ಪಟ್ಟಿದೆ. ಆದಕಾರಣ ಈ ನನ್ನ ಲೇಖನವನ್ನು ಅವಲೋಕಿಸಿದರೆ ಸೋಷಿಯಲ್ ರಿಫಾರ್ಮರಿನ ಲೇಖನವು ಪರ್ಯಾಲೋಚನೀಯವೋ ತಿರಸ್ಕರಣೀಯವೋ ಎಂಬ ಸಂಗತಿಯು ಗೊತ್ತಾಗುವದು. ಆ ಲೇಖನದಲ್ಲಿ—ಈ ವರ್ಷದ ಯೂನಿವರ್ಸಿಟಿ ಎಂಟ್ರೆನ್ಸ್ ತರಗತಿಯಲ್ಲಿ ಓದುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಕೊಟ್ಟಿರುವ ವೇತನಗಳ ಪಟ್ಟಿಯನ್ನು ನೋಡಿದರೆ ನಿಜವಾಗಿಯೂ ಹಿಂದುಳಿದ ಜನವರ್ಗಗಳ ಬಡವಿದ್ಯಾರ್ಥಿಗಳಿಗೆ ಸಹಾಯವು ದೊರೆಯಲಿಲ್ಲವೆಂಬ ದುಃಖವುಂಟಾಗುವುದೆಂತಲೂ, ಮ|| ಸಿ. ಆರ್. ರೆಡ್ಡಿಯವರು ವಿದ್ಯಾ|| ಇ|| ಜನರಲ್ಲಾಗಿ ಬಂದಮೇಲಾದರೂ ಈ ಅವ್ಯವಸ್ಥೆಯು ತೊಲಗಲಿಲ್ಲವೆಂತಲೂ, ಈ ತರಗತಿಯ ವೇತನಗಳಲ್ಲಿ ೧೮ ಲಿಂಗಾಯತರಿಗೂ, ೧೨ ಮಹಮ್ಮದೀಯರಿಗೂ, ೫ ಒಕ್ಕಲಿಗರಿಗೂ ಉಳಿದವುಗಳು ಇತರ ಪಂಗಡಗಳಿಗೂ ಕೊಡಲ್ಪಟ್ಟಿರುತ್ತವೆಂತಲೂ, ಸಂಸ್ಥಾನದ ಹಿಂದುಳಿದ ಪ್ರಜಾವರ್ಗಗಳಲ್ಲಿ ದೊಡ್ಡ ಪಂಗಡದವರಾದ ಒಕ್ಕಲಿಗರಿಗೆ ಅತ್ಯಲ್ಪಸಂಖ್ಯೆಯ ವೇತನಗಳು ಬಂದಿರುವದು ಶೋಚನೀಯವಾಗಿದೆಯೆಂತಲೂ, ಆಯಾ ಪಂಗಡದ ಜನಸಂಖ್ಯೆಯನ್ನನುಸರಿಸಾಗಲಿ ಅಥವಾ ಆಯಾ ಪಂಗಡದ ಬಡತನವನ್ನು ಪರಿಗಣಿಸಾಗಲಿ ವೇತನಗಳು ಹಂಚಲ್ಪಟ್ಟಿರುವುದಿಲ್ಲವೆಂತಲೂ, ಪ್ರಕೃತ ಪ್ರತ್ಯೇಕ ಪ್ರಾತಿನಿಧ್ಯದ ಆಂದೋಳನವು ಲಿಂಗಾಯತ ಎಜ್ಯುಕೇಷನ್ ಫಂಡಿನ ಪ್ರತಿನಿಧಿಗಳಿಂದ ಮಾಡಲ್ಪಡುತ್ತಿದೆಯೆಂತಲೂ, ಹಿಂದುಳಿದ ಜನವರ್ಗಗಳ ಪ್ರಯೋಜನಾರ್ಥವಾಗಿ ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟ ಸಹಾಯದಲ್ಲಿ ಬಹುಭಾಗವನ್ನೆಲ್ಲಾ ಈ ಪಂಗಡದವರೇ ಅನುಭವಿಸುತ್ತಿದ್ದಾರೆಂತಲೂ, ಈ ಏರ್ಪಾಡು ಹೀಗೆಯೇ ನಡೆಯುತ್ತ ಬಂದರೆ ಮುಂದೆ ತುಂಬಾ ತೊಂದರೆಯಾಗುವುದೆಂತಲೂ, ಸಾಧ್ಯವಾದಮಟ್ಟಿಗೂ ಮುಂದುವರಿದಿರುವ ಲಿಂಗಾಯತ ಪಂಗಡವು ಕೆಲವು ವರ್ಷಗಳಲ್ಲಿ ನಿಜವಾಗಿಯೂ ಹಿಂದುಳಿದ ಪಂಗಡಗಳನ್ನು ಹಿಂದಕ್ಕೆ ತಳ್ಳಿ ತಾನೇ ಪ್ರಬಲಕ್ಕೆ ಬರುವುದರಲ್ಲಿ ಅಡ್ಡಿಯಿಲ್ಲವೆಂತಲೂ ಮೊದಲಾಗಿ ಆ ಲೇಖನದಲ್ಲಿ ಬರೆಯಲ್ಪಟ್ಟಿದೆ.

ಈ ಲೇಖನವು ಅವಿಚಾರದಿಂದ ಬರೆಯಲ್ಪಟ್ಟಿದ್ದೋ ಅಥವಾ ನಿಜಸ್ಥಿತಿ ಗೊತ್ತಿದ್ದರೂ ಪಂಗಡಗಳಲ್ಲಿ ತಪ್ಪು ಅಭಿಪ್ರಾಯವನ್ನು ಬಲಪಡಿಸಿ ಪರಸ್ಪರ ಒಡಕನ್ನು ಹುಟ್ಟಿಸಬೇಕೆಂಬ ಕಪಟಾಲೋಚನೆಯಿಂದ ಬರೆಯಲ್ಪಟ್ಟಿದ್ದೋ ಗೊತ್ತಾಗಲಿಲ್ಲ. ನನಗೆ ತಿಳಿದಿರುವಮಟ್ಟಿಗೆ ಎಂಟರೆನ್ಸ್ ತರಗತಿಯ ವೇತನಗಳು ಹಂಚಿಕೆಯಾಗಿರುವ ರೀತಿ ಹೇಗೆಂದರೆ—ಈ ತರಗತಿಯ ಸ್ಕಾಲರ್ಶಿಪ್ಪುಗಳಿಗಾಗಿ ಮಹಮ್ಮದೀಯ ವಿದ್ಯಾರ್ಥಿಗಳಿಂದ ೨೦ ಅರ್ಜಿಗಳೂ, ಲಿಂಗಾಯತ ವಿದ್ಯಾರ್ಥಿಗಳಿಂದ ೩೬ ಅರ್ಜಿಗಳೂ, ಒಕ್ಕಲಿಗ ವಿದ್ಯಾರ್ಥಿಗಳಿಂದ ೫ ಅರ್ಜಿಗಳೂ ಕಮಿಟಿಯ ಮುಂದಕ್ಕೆ ಬಂದಿದ್ದುವು. ಮಹಮ್ಮದೀಯರಿಗೆ ೧೨ ವೇತನಗಳು ಕೊಡಲ್ಪಟ್ಟಿದ್ದರಿಂದ ಅರ್ಜಿಕೊಂಡವರಲ್ಲಿ ಹೆಚ್ಚುಭಾಗ ಅವರಿಗೆ ಬಂದಂತಾಯಿತು. ಲಿಂಗಾಯತರಿಗೆ ೧೮ ವೇತನಗಳು ಕೊಡಲ್ಪಟ್ಟದ್ದರಿಂದ ಅರ್ಧಭಾಗದಷ್ಟು ಅವರಿಗೆ ಬಂದಂತಾಯಿತು. ಒಕ್ಕಲಿಗರ ಅರ್ಜಿಗಳು ೫ ಬಂದಿರುವಲ್ಲಿ ೫ ವೇತನಗಳೂ ಅವರಿಗೆ ಕೊಡಲ್ಪಟ್ಟಿದ್ದರಿಂದ ಸಂಪೂರ್ಣಭಾಗವು ಅವರಿಗೆ ಸಂದಂತಾಯಿತು. ಬಂದಿದ್ದ ಒಕ್ಕಲಿಗವಿದ್ಯಾರ್ಥಿಗಳೆಲ್ಲರೂ ಸ್ಕಾಲರ್ಶಿಪ್ಪನ್ನು ಪಡೆದದ್ದರಿಂದ ಅವರಲ್ಲಿ ಯಾರಿಗೂ ಕೊರತೆಯಾಗಲಿಲ್ಲ. ಮಹಮ್ಮದೀಯರಲ್ಲಿ ೨೦ ಜನಕ್ಕೆ ೧೨ ಜನರು ಫಲ ಪಡೆದು ೮ ಜನರು ನಿರಾಶರಾದರು. ಲಿಂಗಾಯತರಲ್ಲಿ ಸ್ಕಾಲರ್ಶಿಪ್ಪನ್ನು ಅಪೇಕ್ಷಿಸಿದ್ದ ವಿದ್ಯಾರ್ಥಿಗಳಲ್ಲಿ ಅರ್ಧಭಾಗದ ಜನರೇ ವಿಫಲರಾಗಿಹೋದರು. ಇದರಿಂದ ಈ ಹಂಚಿಕೆಯು ಯಾರಿಗೆ ಫಲಕಾರಿಯೂ ಯಾರಿಗೆ ಅತೃಪ್ತಿಕರವಾಗಿಯೂ ಇದೆಯೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ. ಒಕ್ಕಲಿಗರ ಜನಸಂಖ್ಯೆಯು ದೊಡ್ಡದಾಗಿರುವುದು ನಿಜ. ಆದರೆ ವಿದ್ಯಾರ್ಥಿಗಳು ಹೆಚ್ಚಾಗಿಲ್ಲದಿದ್ದರೆ ಹೆಚ್ಚು ಸ್ಕಾಲರ್ಶಿಪ್ಪುಗಳನ್ನು ಯಾರಿಗೆ ಕೊಡಬೇಕು? ಮಹಮ್ಮದೀಯ ಲಿಂಗಾಯತ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದದ್ದೇ ಅವರ ತಪ್ಪೆ? ಅಥವಾ ಹೆಚ್ಚು ಸ್ಕಾಲರ್ಶಿಪ್ಪುಗಳನ್ನು ಅವರು ಘಾತುಕತನದಿಂದ ಪಡೆದುಕೊಂಡರೆ? ನಾಳೆ ವರ್ಷ ೧೦೦ ವಿದ್ಯಾರ್ಥಿಗಳು ಒಕ್ಕಲಿಗ ಮಂಡಲಿಯಲ್ಲಿ ಬಂದರೆ ಅವರ ಭಾಗಕ್ಕೆ ಸ್ಕಾಲರ್ಶಿಪ್ಪುಗಳು ಹೆಚ್ಚಾಗಿ ಬರುವುವಲ್ಲವೆ? ಹೈಸ್ಕೂಲು ತರಗತಿಗಳ ಸ್ಕಾಲರ್ಶಿಪ್ಪುಗಳ ಹಂಚಿಕೆಯನ್ನು ನೋಡಿದರೆ ಅವು ಒಕ್ಕಲಿಗರಿಗೇ ಹೆಚ್ಚಾಗಿ ಬಂದಿವೆಯಲ್ಲಾ! ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಒಕ್ಕಲಿಗರಿಗೆ ೮, ಲಿಂಗಾಯತರಿಗೆ ೩, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಒಕ್ಕಲಿಗರಿಗೆ ೨೨ ಲಿಂಗಾಯತರಿಗೆ ೧೨ ಬಂದಿರುತ್ತವೆ. ಹೀಗೆ ಒಕ್ಕಲಿಗರಿಗೇ ಹೆಚ್ಚಾಗಿ ಸ್ಕಾಲರ್ಶಿಪ್ಪುಗಳು ಬಂದಿರುವುದಕ್ಕಾಗಿ ಲಿಂಗಾಯತರೇ ಮೊದಲಾದವರು ಅಸಮಾಧಾನಪಟ್ಟಿರುವರೆ? ಪಡಬಹುದೆ? ಅವಿಚಾರದಿಂದ ದುಡುಕಿ ಇಂಥ ಲೇಖನಗಳನ್ನು ಬರೆಯುವುದೂ, ಅವನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದೂ ಕೂಡ ಜನವರ್ಗಗಳಲ್ಲಿ ಪರಸ್ಪರ ಒಡಕುಗಳನ್ನೂ ಕೆಡಕುಗಳನ್ನೂ ಹುಟ್ಟಿಸುವುದಕ್ಕೆ ಮಾತ್ರ ಸಾಧಕವಾಗಬಹುದಲ್ಲದೆ ಹಿತವೇನೂ ಆಗಲಾರದು.

ಒಬ್ಬ ಅಂಡರ್ಗ್ರ್ಯಾಜುಯೇಟ್.

ನಗರಡಿವಿಜನ್ ವೀರಶೈವ ವಿದ್ಯಾವರ್ಧಕಸಂಘಕ್ಕೆ ಚಂದಾಕೊಟ್ಟ ಮಹನೀಯರುಗಳ ಪಟ್ಟಿ.

ಇಲ್ಲಿಯವರೆಗೆ ಪತ್ರಿಕೆಯಲ್ಲಿ ಪ್ರಚುರವಾಗಿರುವುದು, 20292.4.7. ಮ|| ರಾ|| ಮುಂಡಿ ಅಂಗಡಿ ಕೊಟ್ರಪ್ಪ, ನ್ಯಾಮತಿ ಗುರುಲಿಂಗಪ್ಪನವರು, ಶಿವಮೊಗ್ಗ ರುಸುಂಬಾಬ್ತು 40.5.0. ಮ|| ಮಾದೇನಹಳ್ಳಿ ಎಂ. ಬಸಪ್ಪನವರು, (ಲಗ್ನದ್ದು) 1.0.0. ಮ|| ದೇಶದಶೆಟ್ಟರ ವೀರಪ್ಪನವರು, ಹಾರ್ನಹಳ್ಳಿ 26.0.0. ಮ|| ಬೆಳ್ಳುಳ್ಳಿ ಮುರಿಗೆಪ್ಪ, ಬಿನ್ ಚನ್ನಬಸಪ್ಪನವರು, ಡಿಟೊ 11.0.0. ಮ|| ಐನಾಪುರದ ಕಲ್ಯಾಣಪ್ಪ, ಬಿನ್ ವೀರಪ್ಪನವರು, ಡಿಟೊ 12.0.0. ಮ|| ಬೆಂಕಿಪುರದ ಶಿವಣ್ಣ, ಬಿನ್ ಚನ್ನಬಸಪ್ಪನವರು, ಡಿಟೊ 11.0.0. ಮ|| ಗಟ್ಟಿ ಶಿವಲಿಂಗಪ್ಪ, ಬಿನ್ ಬಸಪ್ಪನವರು, ಡಿಟೊ 2.0.0. ಮ|| ಜವಳಿ ಕೆಂಚಡಿಯಪ್ಪನವರು, ಡಿಟೊ 26.0.0. ಮ|| ಬೆಂಕಿಪುರದ ಸಂಗಪ್ಪನವರು, ಡಿಟೊ 6.0.0. ಮ|| ನಾಡಗೌಡ ವೀರಭದ್ರಪ್ಪನವರು, ಅರೋಗೊಪ್ಪ 11.0.0. ಮ|| ಶೆಟ್ಟಿಪ್ಪಳ ಶಾಂತವೀರಪ್ಪನವರು, ಹಾರ್ನಹಳ್ಳಿ 6.0.0. ಮ|| ಜವಳಿ ರುದ್ರಪ್ಪನವರು, ಡಿಟೊ 13.0.0. ಮ|| ಗಾಜನೂರು ನಂಜಪ್ಪನವರು, ಡಿಟೊ 6.0.0. ಮ|| ಸಂತೆಬೆನ್ನೂರು ಚನ್ನಬಸಪ್ಪನವರು, ಡಿಟೊ 6.0.0. ಮ|| ಕಲ್ಬುರ್ಗಿ ಬಸವಪ್ಪನವರು, ಡಿಟೊ 6.0.0. ಮ|| ಸ್ಥಾನೀಕ ಚನ್ನಬಸಪ್ಪನವರು, ಡಿಟೊ 5.0.0. ಮ|| ಮಲೆಬೆನ್ನೂರು ಶಾಂತಯ್ಯನವರು, ಡಿಟೊ 2.0.0. ಮ|| ಹೊಳೆಹೊನ್ನೂರು ಚನ್ನಬಸಪ್ಪನವರು, ಡಿಟೊ 6.0.0. ಮ|| ಕಶೆಟ್ಟಿ ಬಸವಲಿಂಗಪ್ಪನವರು, ಡಿಟೊ 51.0.0. ಮ|| ದೇವರಹಳ್ಳಿ ತೀರ್ಥಪ್ಪನವರು, ಡಿಟೊ 6.0.0. ಮ|| ಬೆನವಳ್ಳಿ ಲಿಂಗಪ್ಪನವರು, ಡಿಟೊ 11.0.0. ಮ|| ಬೆಂಕಿಪುರದ ಮಹದೇವಪ್ಪನವರು, ಡಿಟೊ 10.0.0. ಮ|| ಕೊಟ್ರಪ್ಪನ ಚನ್ನವೀರಪ್ಪನವರು, ಡಿಟೊ 10.0.0. ಮ|| ಜವಳಿ ಗುರುಶಾಂತಪ್ಪನವರು, ಡಿಟೊ51.0.0. ಮ|| ಗುಗ್ರಿ ವೀರಪ್ಪನವರು, ಡಿಟೊ 2.8.0. ಮ|| ಉಪ್ಪಿನ ಶಿವಲಿಂಗಪ್ಪನವರು, ಡಿಟೊ 3.0.0. ಮ|| ದೋಣಿ ಬಸಪ್ಪನವರು, ಡಿಟೊ 5.0.0. ಮ|| ಕೋರಿ ಅಡಿವಪ್ಪಶೆಟ್ಟರು, ಸಾಗರ 150.0.0. ಮ|| ಹಿರಿಯೂರು ಅಂಗಡಿ ನಂಜಪ್ಪನವರು, 100.0.0. ಮ|| ಮೆಣಸಿನಕಾಯಿ ಶಾಂತವೀರಪ್ಪನವರು, ಶಿವಮೊಗ್ಗ (ಲಗ್ನದ್ದು) 5.0.0. ಮ|| ಗಡ್ಡದಮಠದ ಗುರಮ್ಮನವರು, ಸಾಗರ 7.5.0. ಮ|| ಉಡುಗಣಿ ನಂಜಪ್ಪನವರು, ಸಾಗರ 4.4.0. ಮ|| ವಾಸೂರು ಬಸವಣ್ಣಪ್ಪನವರು, ಡಿಟೊ 10.10.0. ಮ|| ಕಲ್ಲೇಮಂಡಳ್ಳಿ ಬೆನಕಪ್ಪನವರು, ಡಿಟೊ 100.0.0. ಮ|| ಭದ್ರಾಪುರದ ವೀರಪ್ಪನವರು, ಡಿಟೊ 75.0.0. ಮ|| ಪುರಾಣದ ಮಠದ ಗುರುಬಸವಯ್ಯನವರು, ಡಿಟೊ 5.0.0. ಮ|| ಮೂಡಳ್ಳಿ ಕೊಟ್ರಬಸಪ್ಪನವರು, ಸಾಗರ 50.0.0. ಮ|| ಬೇಸೂರು ಉಡುಚಣದ ಚನ್ನಬಸಪ್ಪನವರು, ಡಿಟೊ50.0.0. ಮ|| ಗೊಜ್ಜನೂರು ಚನ್ನಪ್ಪನವರು, ಡಿಟೊ 101.0.0. ಮ|| ಗುಂಡಾಲೀ ಚನ್ನಬಸಪ್ಪನವರು, ಡಿಟೊ 15.0.0. ಮ|| ಸಕ್ಕರೆ ರುದ್ರಪ್ಪನವರು, ಶಿವಮೊಗ್ಗ 5.0.0. ಮ|| ಕಾಕಂಟಿ ಸಿದ್ಧಪ್ಪನವರು, ಡಿಟೊ 5.0.0. ಮ|| ಚೀಲೂರು ನಂಜಪ್ಪನವರು, ಡಿಟೊ 50.0.0. ಮ|| ಶೀದಗಾರ ಹಾಲಪ್ಪನವರ ಕಡೆಯಿಂದ (ರುದ್ರಾಭಿಷೇಕದಲ್ಲಿ) 10.0.0. ಮ|| ಹೊಳೆಹನಸವಾಡಿ ನಂ. ಬಸಪ್ಪನವರು (ಲಗ್ನದ್ದು) 6.0.0 ಮ|| ಸಿಕಾರಿಪುರದ ಚನ್ನಬಸಪ್ಪ ಬಿನ್ ಮುರಿಗೆಪ್ಪನವರು, ನಂದಿಹಳ್ಳಿ 25.0.0. ಮ|| ಸಣ್ಣ ಗುರುಸಿದ್ಧಯ್ಯನವರು, ಹುಲಿಕುಂಚಿಮಠ 10.0.0. ಮ|| ಪ್ರಭಪ್ಪನವರು, ಐನಾಪುರ 20.0.0. ಮ|| ಮಹದೇವಪ್ಪನವರು, ಕಡಕವಳ್ಳಿ 10.0.0. ಮ|| ಕೊಟ್ರಪ್ಪ, ಯಮ್ಮಿ 8.0.0. ಮ|| ಕೋರಿ ಚನ್ನಮಲ್ಲಪ್ಪನವರು, ಹೆಡ್ಮಾಸ್ಟರ್ ಶಿರಾಳಕೊಪ್ಪ 50.0.0. ಮ|| ಹಂದ್ರಾಳ ಶಿವಲಿಂಗಪ್ಪನವರು, ಶಿರಾಳಕೊಪ್ಪ 10.0.0 ಮ|| ಹದವಾಡದ ಶಿವಲಿಂಗಪ್ಪನವರು, ಡಿಟೊ 10.0.0. ಮ|| ಚಿನವಾಲವಳಟ್ಟಿ ಹಾಲಪ್ಪನವರು, ಡಿಟೊ 21.0.0. ಮ|| ಸಾವಕಾರ್ ಪುಟ್ಟಪ್ಪನವರು, ಡಿಟೊ 25.0.0. ಮ|| ಚಂಬೋಳಿಚಿಕ್ಕೋಟೂರ್ ಮಲ್ಲಪ್ಪನವರು, ಡಿಟೊ 10.0.0. ವೇ|| ಹಾರ್ನಳ್ಳಿ ಚರಮೂರ್ತಿಗಳವರು, 200.0.0. ಮ|| ಲಿಂಗದಹಳ್ಳಿ ಈಶ್ವರಪ್ಪನವರ ಕಡೆಯಿಂದ (ದವಸದಬಾಬ್ತು) 10.0.0. ಬಡ್ಡಿಯಿಂದ 4.4.5. ಮ|| ಲಿಂಗದಹಳ್ಳಿ ಸಣ್ಣಪ್ಪನವರು, ಚನ್ನಗಿರಿ 10.0.0. ಜುಮ್ಲಾ ರೂ. 21810.9.0.

ಜಿ. ಎಂ. ಕಾಡಪ್ಪ,
ಟ್ರೆಜರರ್, ಶಿವಮೊಗ್ಗ.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ.—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

9 ವಿಳಾಸ—ಎ. ಎ. ಹರ್ಡೇಕರ್ ದಾವಣಗೆರೆ.

ಪಾಶ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 45

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ಕೊಂಡು ಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಶ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ಅಕ್ಟೋಬರ್ ತಾ|| ೨೭ ರಿಂದ ೧೯೧೮ ನೆಯ ನವಂಬರ್ ತಾ|| ೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಶ್ವಯುಜ ಬ|| ಅಷ್ಟಮಿಯಿಂದ ಆಶ್ವಯುಜ ಬ|| ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
27	ಭಾನು	ಅಷ್ಟ	22-24	ಪುಷ್ಯ	24-7	11
28	ಸೋಮ	ನವ	23-8	ಆಶ್ಲೇಷ	26-22	12
29	¹ಮಂಗಳ	ದಶ	24-58	ಮಖಾ	29-43	13
30	ಬುಧ	ಏಕಾ	28-5	ಪೂಫ	34-16	14
31	ಗುರು	ದ್ವಾದ	32-34	ಉಫ	39-47	15
1	²ಶುಕ್ರ	ತ್ರಯೋ	37-8	ಹಸ್ತ	46-0	16
2	ಶನಿ	ಚತು	42-34	ಚಿತ್ತ	52-36	17

(1) ಶ್ರೀರಂಗಪಟ್ಟಣದಲ್ಲಿ ಅಶ್ವಾರೋಹಣೋತ್ಸವ. (2) ಪ್ರದೋಷ, ಮಾಸಶಿವರಾತ್ರಿ, ನರಕಚತುರ್ದಶೀ, ನೀರುತುಂಬುವ ಹಬ್ಬ, ಚಂದ್ರೋದಯವ್ಯಾಪಿ ಅಭ್ಯಂಗಸ್ನಾನ, ಯಮತರ್ಪಣ.

ಸೂಚನೆ: ಶ್ರೀ. [illegible]

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೃಪಾ | ಘನಪಕ್ಷಕೃತಾವತಾರಾ ಪಕ್ಷ್ಯಜ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯಿಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ನವಂಬರ್ ತಾರೀಖು ೩ ನೆಯ ಭಾನುವಾರ. (ಸಂಚಿಕೆ ೪೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಚ್ಛಾದನ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕ್ಷೋಣೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, 5 ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಿತ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್ಮೆಂಟ್ ಮಾಡಿರುವುದು ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಸೀಸೆಗೆ 1, ಹಾಮಂತಿಗೆಮುಪ್ಪು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಉಂಗುರ 1, ಗಡಿಯಾರದ ಚಾಕ ಕಮಾನು 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಷರಟು ಗುಂಡಿಗಳು 4, ಜರ್ಮನ್ ಕೈಚೈನು 1, ರೋಲ್ಡ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ.,
65 3, ಅರುಳಪ್ಪನಬೀದಿ, ಮದರಾಸು.

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜನ್ಮೋರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೊ ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಿಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೃಶೂಲಿ, ಆರಡಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿ, ಜಡ್ಡು, ಗುದ್ದವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
25 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ ಕೊಡುತ್ತೆ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು.

ಜೋತಿಷ್ಯಪ್ರಸಂಗೋದಧಿ—ಮತ್ತೊಬ್ಬರ ಸಹಾಯವಿಲ್ಲದೆ ಸ್ವತಃ ತಮ್ಮ ತಮ್ಮ ಜಾತಕಗಳ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಸಂಸ್ಕೃತ ಶ್ಲೋಕ, ಕನ್ನಡ ತಾತ್ಪರ್ಯ, ಶ್ರೀಮನ್ ಮಹಾರಾಜರವರ ಜಾತಕೋದಾಹರಣೆ ಸಹ ಬೆಲೆ ೪—೦—೦.

ಸದ್ಭಕ್ತಿಚಂದ್ರಿಕೆ—ಪ್ರತಿ ಕುಟುಂಬದಲ್ಲಿಯೂ ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಭಕ್ತಿಬೋಧಕವಾದ ಕಥೆಗಳು. ಬೆಲೆ ೧—೦—೦

ಮುಹೂರ್ತರಾಜಚಂದ್ರಿಕೆ—ಮತ್ತೊಬ್ಬರ ಸಹಾಯವಿಲ್ಲದೆ ಮುಹೂರ್ತಗಳನ್ನು [illegible] ತಿಳಿದುಕೊಳ್ಳಬಹುದು. ಬೆಲೆ ೦-೧೨-೦.

ಸೂರ್ಯನಮಸ್ಕಾರ ೦—೩—೦, ಲಘುಜೋತಿಷ್ಯ ೦—೨—೦, ವಸಂತರಾಮಪೂಜ ೦—೨—೦, ದ್ವಾತ್ರಿಂಶದ್ಗಣಪತಿಗಳ ಧ್ಯಾನಸಮೇತವಾದ ಚಿತ್ರಪುಸ್ತಕ ೦—೮—೦. ಇನ್ನೂ ಮುಂತಾದ ಗ್ರಂಥಗಳು ನಮ್ಮಲ್ಲಿ ಸಿಕ್ಕುತ್ತವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಎ. ಸಚ್ಚಿದಾನಂದ ಜೋಯಿಸ್,
30 ಆನಂದ ಬುಕ್ಡಿಪೊ, ಮೈಸೂರು.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛೆಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿಕ ಹುರುಕಿನೌಷಧ—ಬೆಲೆ ೧ಕ್ಕೆ ೧೪ ೨೫ಕ್ಕೆ ೧-೪-೦.
೨. ಕಣ್ಣು ಬೇನೆಯೌಷಧ—ಚೀಟು-೧ಕ್ಕೆ ೩ ಪೈ. ೧೦೦ಕ್ಕೆ ೧-೪-೦.
೩. ಹಲ್ಲುಶೀರುನಾಶಕಚೂರ್ಣ—೧ಕ್ಕೆ ೩ ಪೈ. ೧೦೦ಕ್ಕೆ ೧-೪-೦.
೪. ಛಳಿಜ್ವರದ ಗುಳಿಗೆ—೩೨ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಲ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂಟಕೌಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ನೀಲಿ ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
45 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಯುದ್ಧದ ಫೋಟೋಗಳು. 4

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ ನಾಲ್ಕುವರುಷಗಳಿಂದಲೂ, ನಡೆದ ಯುದ್ಧದ ಫೋಟೋಗಳು, ವಿಲಾಯತಿಯಿಂದ ಬಂದಿರುತ್ತೆ. ಇವರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ, ಮುಂತಾದ ರಮಣೀಯವಾದ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ ರೂ. 1—0—0.

ವಿಳಾಸ:-ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
45 3. ಇರುಳಪ್ಪನಬೀದಿ, ಮದರಾಸು.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ.—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

10 ವಿಳಾಸ—ಎ. ಎ. ಹರ್ಡೇಕರ್ ದಾವಣಗೆರೆ.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ನವಂಬರ್ ತಾ|| ೩ನೆಯ ಭಾನುವಾರ.

ಶಿವಮೊಗ್ಗಾ ವಿದ್ಯಾರ್ಥಿನಿಲಯ.

ನಮ್ಮ ಶ್ರೀಮನ್ಮಹಾರಾಜರವರಿಗೆ ಅವರ ಪ್ರಜಾಕೋಟಿಯಲ್ಲಿರುವ ಹೆಣ್ಣುಗಂಡುಗಳೆಲ್ಲರೂ ಅಕ್ಷರಸ್ಥರಾಗುವಂತೆ ಮಾಡಬೇಕೆಂಬ ಕುತೂಹಲವು ವಿಶೇಷವಾಗಿರುವುದು. ವಿದ್ಯಾಭ್ಯಾಸಕ್ಕೆ ಸಕಲ ವಿಧವಾದ ಸೌಕರ್ಯಗಳನ್ನೂ ಉಂಟುಮಾಡಿ ಸಕಲರಿಗೂ ಪ್ರೋತ್ಸಾಹವಿತ್ತು ಸರ್ವ ಪ್ರಜೆಗಳನ್ನೂ ವಿದ್ಯಾಧಿಕರನ್ನೂ ಜ್ಞಾನಸಂಪನ್ನರನ್ನೂ ಮಾಡಬೇಕೆಂಬ ಸಂಕಲ್ಪದಿಂದಲೇ ಅವರು ವರ್ಷೇವರ್ಷೆ ವಿದ್ಯಾಭ್ಯಾಸಶಾಖೆಯ ವೆಚ್ಚವನ್ನು ಲಕ್ಷಗಟ್ಟಲೆಯಾಗಿ ಹೆಚ್ಚಿಸಿ, ಈಗ ವರ್ಷ ೧ಕ್ಕೆ ಈ ಶಾಖೆಗಾಗಿಯೇ ೩೩ ಲಕ್ಷ ರೂ ಗಳವರೆಗೆ ವೆಚ್ಚ ಮಾಡಿಸುತ್ತಿರುವರು. ವಿಶೇಷವಿದ್ಯಾವಂತರಾಗಿ ಪ್ರಪಂಚವನ್ನೆಲ್ಲಾ ಪರ್ಯಟನಮಾಡಿ ನಾನಾದೇಶದ ವಿದ್ಯಾಭ್ಯಾಸ ಮಾರ್ಗಗಳನ್ನೆಲ್ಲಾ ಅರಿತು ಬಂದಿರುವ ವಿಶಾಲಮತಿಗಳಾದ ಅಧಿಕಾರಿಗಳನ್ನು ವಿದ್ಯಾಶಾಖೆಯ ಅಧ್ಯಕ್ಷಪದವಿಗೆ ತಂದಿರುವರು. ಹಿಂದುಳಿದವರ ಪ್ರೋತ್ಸಾಹಕ್ಕಾಗಿ ಪ್ರತ್ಯೇಕವಾದ ಧನಸಹಾಯವನ್ನು ಮಾಡಿಸುತ್ತಿರುವರು. ಪರದೇಶಗಳಿಗೆ ಹೋಗಿ ಓದತಕ್ಕವರಿಗೆ ಉದಾರವಾಗಿ ವೇತನಗಳನ್ನು ಕೊಡಿಸುತ್ತಿರುವರು. ಸ್ವದೇಶದಲ್ಲಿ ಎಲ್ಲ ತರದ ಕಲೆಗಳ ಪ್ರೌಢವಿದ್ಯಾಭ್ಯಾಸಕ್ಕೂ ಅನುಕೂಲವಾಗುವಂತೆ ವಿಶ್ವವಿದ್ಯಾಲಯವನ್ನು ಸಂಸ್ಥಾನದಲ್ಲೇ ಸ್ಥಾಪಿಸಿರುವರು. ಸ್ತ್ರೀವಿದ್ಯಾಭ್ಯಾಸಕ್ಕೂ ವಿಶೇಷವಾದ ಪ್ರೋತ್ಸಾಹವನ್ನಿತ್ತಿರುವರು. ಮತ್ತೂ ಬಾಲವಿದ್ಯಾಭ್ಯಾಸವನ್ನು ಉಚಿತವಾಗಿಯೂ ನಿರ್ಬಂಧವಾಗಿಯೂ ಮಾಡಿಸಲು ಏರ್ಪಾಟು ಮಾಡಿಸಿರುವರು. ಸಕಲ ಪ್ರಜೆಗಳೂ ತಂತಮ್ಮ ಮಕ್ಕಳುಗಳ ವಿದ್ಯಾಭ್ಯಾಸದ ಕಡೆಗೆ ಗಮನವಿತ್ತು ವಿದ್ಯಾಪ್ರಸಾರಕ್ಕಾಗಿ ಸಾಧ್ಯವಾದಷ್ಟು ಸಾಹಾಯ್ಯ ಪ್ರೋತ್ಸಾಹಗಳನ್ನು ಮಾಡುವಂತೆ ಮನಸ್ಸು ಹುಟ್ಟಿಸುತ್ತಿರುವರು. ಇವುಗಳೆಲ್ಲಾ ದೇಶಾಭಿಮಾನಿಗಳಿಗೆ ವಿಶೇಷ ಸಂತೋಷಪ್ರದವಾಗದೆ ಇಲ್ಲ. ಆದರೆ ದೀಪವು ತನ್ನ ಸುತ್ತಲೂ ಬೆಳಕನ್ನು ಮಾಡಬಲ್ಲುದಾಗಿದ್ದರೂ ಅದರ ಬುಡದಲ್ಲೇ ಕತ್ತಲೆಯಿರುವಂತೆ ವಿದ್ಯಾಪ್ರೋತ್ಸಾಹಕ ಕಾರ್ಯಗಳಲ್ಲಿ ನ್ಯೂನತೆಯೂ ಪಕ್ಷಪಾತತೆಯೂ ಕಾಣಬರುತ್ತಿರುವುದನ್ನು ನೋಡಿ ವಿಷಾದಿಸಬೇಕಾಗುತ್ತದೆ. ಆ ನ್ಯೂನತೆಗಳನ್ನೆಲ್ಲಾ ವಿವರಿಸುವುದಕ್ಕೆ ಸದ್ಯಃ ಪ್ರವರ್ತಿಸದೆ ಒಂದೆರಡು ವಿಷಯಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇವೆ.

ವಿದ್ಯಾಭ್ಯಾಸ ಸೌಕರ್ಯಗಳು ಸರ್ವ ಪ್ರಜೆಗಳಿಗೂ ಸಮಾನವಾಗಿರಬೇಕಾದುದು ಧರ್ಮವು. ಹಾಗೆ ಮಾಡಲ್ಪಟ್ಟಿರುವುದೆಂದು ಅಧಿಕಾರಿಗಳು ಹಲವು ಸಲ ಹೇಳುತ್ತಿರುವುದುಂಟು. ಕ್ರಿಯೆಯಲ್ಲಿಮಾತ್ರ ಅದಕ್ಕೆ ವಿರುದ್ಧ ವರ್ತನವೇ ಇರುವುದೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿರುವುವು. ಗ್ರಾಮಾಂತರದ ಪ್ರಜೆಗಳ ವಿದ್ಯಾಭ್ಯಾಸಕ್ಕೂ ನಗರ ನಿವಾಸಿಗಳ ವಿದ್ಯಾಭ್ಯಾಸಕ್ಕೂ ಕಲ್ಪಿಸಿರುವ ಸೌಕರ್ಯಗಳ ತಾರತಮ್ಯವೊಂದನ್ನು ನೋಡಲಿ. ಎಲ್ಲರಂತೆಯೇ ಗ್ರಾಮಾಂತರದವರೂ ಸಮಾನಪ್ರಜೆಗಳೇ ಆಗಿದ್ದರೂ ಅವರ ಮಕ್ಕಳ ಓನಾಮಪಾಠಗಳಿಗೂ ಅವರು ಪ್ರತ್ಯೇಕವಾದ ವ್ಯಯಭಾರವನ್ನು ಹೊರಬೇಕು; ಶಾಲೆಯ ಕಟ್ಟಡಗಳನ್ನು ಕಟ್ಟಿಸಿಕೊಡುವುದರಲ್ಲಿ ವೆಚ್ಚಕ್ಕೆ ಭಾಗಿಗಳಾಗಬೇಕು. ನಗರ ನಿವಾಸಿಗಳ ಮಕ್ಕಳ [illegible]ವಿದ್ಯಾಭ್ಯಾಸ ಮೊದಲು ಕಲಾಶಾಲಾ ತರಗತಿಗಳವರೆಗಣ ವಿದ್ಯಾಭ್ಯಾಸಕ್ಕೆಲ್ಲಾ ಎಷ್ಟೋ ತೆರದ ಸೌಕರ್ಯಗಳನ್ನು ಸರ್ಕಾರದವರೇ ಮಾಡಿಸಿಕೊಟ್ಟಿರುವರು. ಗ್ರಾಮಾಂತರಗಳು ಬಹಳವಾಗಿರುವುದರಿಂದ ಅವುಗಳಿಗೆಲ್ಲಾ ನಗರಗಳಲ್ಲಿರುವಂಥ ಸೌಕರ್ಯಗಳನ್ನು ಒದಗಿಸಿಕೊಡುವುದು ಸದ್ಯಕ್ಕೆ ಸಾಧ್ಯವಲ್ಲವೆಂದಿಟ್ಟುಕೊಂಡರೂ, ಆ ಕಾರಣವನ್ನೇ ಮುಂದುಮಾಡಿ ಮಾಡಬಹುದಾದ ಸಾಹಾಯ್ಯಗಳಿಗೂ ಸರ್ಕಾರವು ಬಿಗಿಹಿಡಿದು ಧನಾಭಾವವನ್ನು ತೋರಿಸುವುದು ಅನ್ಯಾಯವಲ್ಲವೆ? ಅದಂತಿರಲಿ.

ಪಟ್ಟಣಗಳಲ್ಲಿ ಪ್ರೌಢವಿದ್ಯಾಭ್ಯಾಸ ಮಾಡುವ ಬಾಲಕರಿಗೆ ಆರೋಗ್ಯಕರವಾಗಿಯೂ ಸತ್ಸಹವಾಸಕ್ಕೆಡೆಯಾಗಿಯೂ ಇರುವಂತೆ ಸರ್ಕಾರದವರೇ ವಿದ್ಯಾರ್ಥಿ ನಿಲಯಗಳನ್ನು ಕಟ್ಟಿಸಿಕೊಟ್ಟಿರುತ್ತಾರಷ್ಟೆ. ಇಂಥ ಆಲಯಗಳೆಲ್ಲಾ ಬಹುಶಃ ವಿದ್ಯೆಯಲ್ಲಿ ಬಹುಕಾಲದಿಂದ ಮುಂದಾಗಿ ಬಂದಿರುವ ಜನವರ್ಗದವರ ಪಾಲೇ ಮಾಡಲ್ಪಟ್ಟಿರುತ್ತವೆ. ಇತರರಿಗೆ ಒಂದೆರಡು ಕೋಣೆಗಳು ಅಲ್ಲಿ ಸಿಕ್ಕುವುದೂ ಪರಮಪ್ರಯಾಸವಾಗಿದೆ. ಸರ್ವ ಪ್ರಜೆಗಳಿಗೂ ಸಮಾನ ಸೌಕರ್ಯವನ್ನುಂಟುಮಾಡಿಕೊಡುತ್ತಿರುವೆವೆಂದು ಹೇಳುವ ಸರ್ಕಾರವು ಈ ಲೋಪವನ್ನು ಪರಿಹರಿಸಿಕೊಡಬಾರದೆ? ಆದರೂ ತಂತಮ್ಮ ಬಾಲಕರ ವಿದ್ಯಾಭ್ಯಾಸಕ್ಕೆ ಸರ್ಕಾರದ ನೆರವನ್ನೇ ಕಾಯದೆ ತಾವುಗಳೂ ಸಾಧ್ಯವಾದಷ್ಟು ಸಾಹಾಯ್ಯವನ್ನು ಮಾಡುವುದು ಕರ್ತವ್ಯವೆಂದು ತಿಳಿದು ಇತರ ಕೆಲ ಪ್ರಜಾವರ್ಗಗಳವರು ಬಡ ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ವಿದ್ಯಾರ್ಥಿ ವೇತನಗಳನ್ನೊದಗಿಸಲು ಫಂಡುಗಳನ್ನು ಸ್ಥಾಪಿಸಿಕೊಂಡಿದ್ದಾರೆ; ಕೆಲಕಡೆ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುತ್ತಿದ್ದಾರೆ; ಕೆಲಕಡೆ ಭೋಜನಾಲಯಗಳನ್ನು ಏರ್ಪಡಿಸಿದ್ದಾರೆ; ಕೆಲಕಡೆ ಪಾಠಶಾಲಾ ಭವನಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಹೀಗೆ ವಿದ್ಯಾಪ್ರಚಾರಕ್ಕಾಗಿ ಪ್ರಜೆಗಳು ಸಾಹಾಯ ಮಾಡುವುದಕ್ಕೆ ಬಂದುದನ್ನು ಕಂಡು ಪ್ರಭುತ್ವದವರು ಆನಂದಿಸಿ ಆ ಪ್ರಜೆಗಳಿಗೆ ದುರ್ಭರವಾಗಿ ತೋರಿದ ಕಾರ್ಯದಲ್ಲಿ ತಾವೂ ಒತ್ತಾಸೆಯಾಗಿ ಸಹಾಯ ಮಾಡಬೇಕಾದುದು ಧರ್ಮವಲ್ಲವೆ? ಮುಂದಾದ ಜನವರ್ಗದವರ ವಿದ್ಯಾರ್ಥಿ ನಿಲಯಗಳನ್ನೆಲ್ಲಾ ಸರ್ಕಾರದ ಧನವ್ಯಯದಿಂದಲೇ ಕಟ್ಟಿಸಿಕೊಟ್ಟಿರುವಾಗ ಹಿಂದಾದ ಜನವರ್ಗದವರಿಗೆ ಸರ್ಕಾರದವರು ಅದಕ್ಕೆ ದ್ವಿಗುಣದಿಂದ ಸಹಾಯವನ್ನು ಮಾಡಿ ಪ್ರೋತ್ಸಾಹಿಸಬೇಕಲ್ಲವೆ? ದ್ವಿಗುಣದ ಮಾತೂ ಬೇಡ, ಸಮನಾದ ಭಾಗವೂ ಹಾಗಿರಲಿ. ೧ ರಲ್ಲಿ ಅರ್ಧಭಾಗದ ಸಹಾಯವನ್ನು ಮಾಡುವುದಕ್ಕೂ ಸರ್ಕಾರವು ಮನಸ್ಸು ಮಾಡದಿರುವುದೆಂದರೆ ಇದಕ್ಕೆ ಅನ್ಯಾಯ—ಪಕ್ಷಪಾತ—ಎಂದು ಹೆಸರಿಡದೆ ಮತ್ತೇನೆನ್ನಬೇಕೋ ನಮಗೆ ತಿಳಿಯದು.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘದವರು ಶಿವಮೊಗ್ಗಾದಲ್ಲಿ ವಿದ್ಯಾರ್ಥಿಗಳಿಗಾಗಿ ಒಂದು ಭವನವನ್ನು ೪೦ ಸಾವಿರ ರೂ. ಗಳ ವೆಚ್ಚದಲ್ಲಿ ಕಟ್ಟುವುದಕ್ಕೆ ಪ್ರಯತ್ನಿಸಿ ಅದಕ್ಕೆ ಹಣವನ್ನು ಕೂಡಿಸಲು ೨ ವರ್ಷಗಳಿಂದಲೂ ಪ್ರಯತ್ನಪಟ್ಟಿರುತ್ತಾರೆ. ಅದು ಮಲೆನಾಡಾಗಿಯೂ, ಕಾಲವು ವಿಷಮವಾಗಿಯೂ ಇರುವುದರಿಂದ ಇಲ್ಲಿಯವರೆಗೂ ೨೧ ಸಾವಿರ ರೂ. ಗಳನ್ನು ಕೂಡಿಸುವುದಕ್ಕೇ ಸಾಕುಸಾಕಾಗಿ ಹೋಗಿದೆ. ಇನ್ನು ಧನಶೇಖರವಾಗುವುದು ಪರಮದುಸ್ತರವಾಗಿದೆ. ತಗಲುವ ವೆಚ್ಚದಲ್ಲಿ ಅರ್ಧಭಾಗವನ್ನು ಸರ್ಕಾರದವರು ಸಹಾಯಮಾಡಿದರೆ ಕಾರ್ಯವು ಬೇಗನೆ ಕೊನೆಮುಟ್ಟುವುದೆಂದು ಅದರ ಕಾರ್ಯನಿರ್ವಾಹಕಸಂಘದವರು ಸರ್ಕಾರಕ್ಕೆ ಎಷ್ಟೋ ವಿಧದಿಂದ ಬಿನ್ನಯಿಸಿ ಬೇಡಿಕೊಂಡಿದ್ದಾರೆ. ಈ ಕಾರ್ಯದ ಉಪಯುಕ್ತತೆಯನ್ನು ಪ್ರತ್ಯಕ್ಷವಾಗಿ ಅರಿತಿರುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಇಬ್ಬರು ಡಿ|| ಕಮಿಷನರುಗಳು ಕೂಡ ಹಾಗೆ ಅರ್ಧ ಸಹಾಯಮಾಡುವುದು ವಿಹಿತವೆಂದು "ಶಿಫಾರಸ್" ಮಾಡಿರುವರೆಂತಲೂ, ಇದಲ್ಲದೆ ವಿದ್ಯಾಭ್ಯಾಸ ಶಾಖಾಧ್ಯಕ್ಷರೂ ಕೂಡ ಅದೇ ಅಭಿಪ್ರಾಯವನ್ನು ಸರ್ಕಾರಕ್ಕೆ ಸೂಚಿಸಿರುವರೆಂತಲೂ ಕೇಳಿರುತ್ತೇವೆ. ಇಷ್ಟಾಗಿದ್ದರೂ ಸರ್ಕಾರದವರು ¼ ಭಾಗದಷ್ಟನ್ನಲ್ಲದೆ ಹೆಚ್ಚಿಗೆ ಸಮಾರ್ಧಧನವನ್ನು ಕೊಡಲು ಮನಸ್ಕರಿಸದೆ ಇರುವುದೆಂದರೆ ಏನಾಶ್ಚರ್ಯ? ೧೨ ಸಾವಿರ ರೂ. ಗಳನ್ನು ಕೊಟ್ಟಿರುವ ಸರ್ಕಾರವು ಇಂಥ ಪ್ರಶಸ್ತವಾದ ಕಾರ್ಯಕ್ಕೆ ಇನ್ನೊಂದೆಂಟು ಸಾವಿರಗಳನ್ನು ಕೊಟ್ಟರೆ ಏನು ಕೆಡುವುದು? ವೀರಶೈವರು ಸರ್ಕಾರಕ್ಕೆ ಸವತಿಯಮಕ್ಕಳೆ? ಇವರ ಅಭಿವೃದ್ಧಿಯು ಸರ್ಕಾರಕ್ಕೆ ಅಪ್ರಿಯವೆ? ಯಾರೋ ಒಬ್ಬ ವೀರಶೈವಮತದ ಸರ್ಕಾರಿ ಉದ್ಯೋಗಿಯು ಈ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಜನರಿಂದ ಚಂದಾ ಎತ್ತಿಸುವ ಕೆಲಸದಲ್ಲಿ ತೊಡಗಿದ್ದರಂತೆ. ಅದು ವಿಧಿವಿರುದ್ಧವಾದ ಕೃತ್ಯವೆಂದು ನ್ಯಾಯಪಾರಂಗತರಾದ ನಿಯಮನಿರ್ಮಾಣಸಭಾಸಭಿಕರೊಬ್ಬರು ಆ ಸಭೆಯಲ್ಲಿ ಆಕ್ಷೇಪಿಸಿ ನ್ಯಾಯೋದ್ಧಾರಮಾಡುವವರಂತೆ ತೋರ್ಪಡಿಸಿಕೊಂಡರು. ಅಂಥ ನ್ಯಾಯೋದ್ಧಾರಕರಿಗೆ ಸರ್ಕಾರದಿಂದ ನಡೆಯಿಸಲ್ಪಡುತ್ತಿರುವ ಮೇಲೆಕಂಡ ತೆರದ ಪಕ್ಷಪಾತವೆಲ್ಲವೂ ನ್ಯಾಯಸಂಮತವಾಗಿಯೇ ಇರಬಹುದು! ಎಕನಾಮಿಕ್ ಸೂಪರಿಂಟೆಂಡೆಂಟರುಗಳು ಪುರಗ್ರಾಮಗಳ ಜನರ ಮುಂದೆ ತಮ್ಮ ವಿದ್ಯಾಬುದ್ಧಿಗಳನ್ನೆಲ್ಲಾ ವೆಚ್ಚಮಾಡಿ ನಾನಾಕಾರ್ಯಗಳಿಗೆ ವರ್ಗಣಿ ಹಾಕಿಸುವಂತೆ ಮಾಡುತ್ತಿರುವ ಪ್ರಯತ್ನಗಳೆಲ್ಲಾ ನಿರಾಕ್ಷೇಪವಾಗಿರಬಹುದು! ಪಾಠಶಾಲೆಯ ಕಟ್ಟಡಕ್ಕೂ ತಾ|| ಕಾನ್ಫರೆನ್ಸುಗಳ ಫಂಡು ಮೊದಲಾದ ಇತರ ಕಾರ್ಯಗಳಿಗೂ ಎತ್ತಲ್ಪಡುವ ಚಂದಾವೂ ಅದಕ್ಕೆ ಸರ್ಕಾರದ ಉದ್ಯೋಗಿಗಳು ಮಾಡುವ ಪ್ರೋತ್ಸಾಹವೂ ನ್ಯಾಯವೇ ಆಗಿರುವಾಗ ಅದೇ ತೆರದ ಒಂದಾನೊಂದು ವಿದ್ಯಾಭ್ಯುದಯ ಪ್ರಯತ್ನಕ್ಕಾಗಿ ಒಬ್ಬಾನೊಬ್ಬ ಸರ್ಕಾರದುದ್ಯೋಗಿಯು ಪ್ರೋತ್ಸಾಹಿಸಿದ್ದರೆ ಅದು ಮಾತ್ರ ಸೇರದ ಗಂಡನಿಗೆ ಮೊಸರಿನಲ್ಲಿ ಕಲ್ಲಿದ್ದಿತೆಂಬ ಗಾಥೆಯಂತೆ ನಿಯಮನಿರ್ಮಾಣ ಸಭಾಲಂಕಾರಭೂತರೊಬ್ಬರಿಗೆ ಸೈರಿಸದೆ ಹೋದುದು ಕಲಿ ವಿಚಿತ್ರವಲ್ಲವೆ?

ಹಿಂದುಳಿದವರನ್ನು ವಿದ್ಯೆಯಲ್ಲಿ ಮುಂದಕ್ಕೆ ತರಬೇಕೆನ್ನುವುದು ಸರ್ಕಾರದ ಉದ್ದೇಶವಾಗಿರುವಾಗ, ಅದಕ್ಕಾಗಿ ವಿಶೇಷ ಪ್ರೋತ್ಸಾಹಗಳನ್ನು ಅವರಿಗೆ ಮಾಡುತ್ತಿರುವಾಗ, ವಿದ್ಯಾರ್ಥಿನಿಲಯ ಸೌಕರ್ಯವೂ ಅವರಿಗೆ ವಿಶೇಷವಾಗಿರಬೇಕಲ್ಲವೆ? ಈಗಣ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಆ ಏರ್ಪಾಟನ್ನು ಮಾಡಿರುವರೆ? ಅನೇಕಮಂದಿ ಪ್ರೌಢತರಗತಿ ವಿದ್ಯಾರ್ಥಿಗಳಿಗೆ ಸರ್ಕಾರಿ ಹಾಸ್ಟಲಿನಲ್ಲಿ ಅವಕಾಶ ಸಿಕ್ಕದೆ ಅನಾರೋಗ್ಯಕರವಾದ ಕೇರಿ ಹೋಟಲುಗಳಲ್ಲಿ ತಿಂದು ಕಾಲಯಾಪನೆ ಮಾಡುತ್ತಿದ್ದಾರಲ್ಲಾ! ಸರ್ಕಾರಿ ಹಾಸ್ಟಲುಗಳಲ್ಲಿ ಅರ್ಧಭಾಗವನ್ನಾದರೂ ಹಿಂದುಳಿದವರಿಗಾಗಿ ಪ್ರತ್ಯೇಕಿಸುವಂತೆ ಮಾಡಿಸಲು ನಿಯಮನಿರ್ಮಾಣಕಸಭೆಯ ನ್ಯಾಯೋದ್ಧಾರಕ ಸಭಾಸ್ತಾರರಾದರೂ ಪ್ರಯತ್ನಿಸಿರುವರೆ?

ಪಶ್ಚಿಮದೇಶಗಳ ಸಂಚರಣದಿಂದ ಉದಾರಚಿತ್ತರೂ ವಿಕಸಿತಮತಿಗಳೂ ಆದ ನಮ್ಮ ಸರ್ ವಿಶ್ವೇಶ್ವರಯ್ಯನವರ ಮಂತ್ರಿತ್ವವು ಹಿಂದುಳಿದ ಪ್ರಜಾವರ್ಗಗಳ ಉದ್ಧಾರಕ್ಕೆ ಎಷ್ಟೋ ಸಹಾಯವಾಗುವುದೆಂದು ನಂಬಿ ಅವರ ಅಧಿಕಾರವು ಚಿರಕಾಲಿಕವಾಗಿರಲೆಂದು ಇವರುಗಳು ಹಿಂದೆಯೂ ಕೋರುತ್ತಿದ್ದರು; ಈಗಲೂ ಕೋರುತ್ತಿರುವರು. ಆದರೆ ಇಲ್ಲಿಯ ಸಂಕುಚಿತವಾತಾವರಣ ಚಿರಸಂಸರ್ಗದಿಂದ ಅವರ ಭಾವಗಳೂ ಸಂಕೋಚಗೊಳ್ಳಲು ಪಕ್ರಮಿಸಿರುವುವೇ ಎಂದು ಅನೇಕರು ಚಿಂತೆಪಡುವಂತಾಗಿರುವುದು. ಅವರು ತಮ್ಮ ನಿಷ್ಪಕ್ಷಪಾತವರ್ತನವನ್ನೂ ಉದಾರಚಿತ್ತವನ್ನೂ ಮೇಲೆಕಂಡ ಶಿವಮೊಗ್ಗಾ ವಿದ್ಯಾರ್ಥಿನಿಲಯ ವಿಷಯವಾಗಿ ವ್ಯಕ್ತಪಡಿಸಿ, ಪ್ರಜಾಪ್ರೀತಿಯನ್ನು ಮತ್ತಷ್ಟು ವೃದ್ಧಿಪಡಿಸಿಕೊಳ್ಳುವವರಾಗಲೆಂದು ಕೋರುವೆವು.

ಸರ್ ಆಶುತೋಷಮುಕರ್ಜಿಯವರ ಉಪನ್ಯಾಸದ ಮುಖ್ಯಭಾಗಗಳು.

ವಿಶ್ವವಿದ್ಯಾಲಯದ ಲಕ್ಷಣವು ಹೀಗಿರಬೇಕೆಂದು ನಿರ್ಧರಿಸಿ ಹೇಳುವುದು ಅಸಾಧ್ಯವಾದ ಕೆಲಸ. ಅದಕ್ಕೆ ನಾನು ಪ್ರವರ್ತಿಸುವುದಿಲ್ಲ. ಅದರ ಲಕ್ಷಣವನ್ನು ಸ್ಪಷ್ಟಪಡಿಸುವುದಕ್ಕೆ ಅನೇಕ ಪಂಡಿತರು ತೊಡಗಿ ಕೃತಾರ್ಥರಾಗದೆ ಹೋಗಿದ್ದಾರೆ. ವಿಶ್ವವಿದ್ಯಾಲಯವೆಂದರೇನು ಎಂಬುದಾಗಿ ಅನೇಕರು ಕೇಳುತ್ತಾರೆ. ಅದು ಅನೇಕ ಭವನಗಳನ್ನು ಹೊಂದಿರುವ ಒಂದು ವಿಶಾಲಪ್ರದೇಶವೆ? ಅನೇಕ ಮಂದಿಗಳಿಂದ ಲಕ್ಷಾಂತರ ರೂಪಾಯಿಗಳ ಚಂದಾಹಣವನ್ನು ಪಡೆದುಕೊಂಡಿರುವ ಒಂದಾನೊಂದು ಪ್ರತಿಷ್ಠಾಪನೆಯೆ? ಅನೇಕ ಶಾಸ್ತ್ರಶಾಖೆಗಳನ್ನು ಹೊಂದಿರುವ ಒಂದು ಸಮುದಾಯವೆ? ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವ ಒಂದು ವಿದ್ಯಾಲಯವೆ? ಅನೇಕ ಮಂದಿ ಉಪಾಧ್ಯಾಯರನ್ನು ಹೊಂದಿರುವ ಒಂದು ಪ್ರತಿಷ್ಠಾಲಯವೆ? ಬಿರುದುಗಳನ್ನು ಕೊಡುವುದಕ್ಕೆ ಏರ್ಪಟ್ಟಿರುವ ಒಂದು ಪರೀಕ್ಷಾಲಯವೆ? ಅನೇಕಮಂದಿ ವಿದ್ಯಾರ್ಥಿಗಳು ಕೂಡಿರುವ ಒಂದು ಸಂಘವೆ? ನಾನಾಶಾಸ್ತ್ರ ರಹಸ್ಯಗಳನ್ನು ಪರಿಶೋಧಿಸುವುದಕ್ಕಾಗಿ ತೊಡಗಿರುವ ಕೆಲ ಮಂದಿ ಯುವಕರಿಂದ ಕೂಡಿದ ಪಾಠಶಾಲೆಯೆ? ಮತಬೋಧೆಯನ್ನು ತಿಳಿಯಿಸುವ ಅನೇಕ ಕಲಾಶಾಲೆಗಳನ್ನು ಹೊಂದಿರುವ ಒಂದು ಸಂಸ್ಥಾಪನೆಯೆ? ಜಾನ್ಸನ್‌ರವರು ಹೇಳಿರುವಂತೆ ಅನೇಕ ಶಾಸ್ತ್ರಗಳನ್ನು ಬೋಧಿಸುವ ಉಪಾಧ್ಯಾಯತ್ವವನ್ನು ಸಂಪಾದಿಸುವುದಕ್ಕಾಗಿ ಕುತೂಹಲದಿಂದ ಬಂದು ಸೇರಿರುವ ಒಂದು ಸಭೆಯೆ? ಇವುಗಳಲ್ಲಾವುದೆಂದು ಹೇಳಬಹುದು? ನಾನು ಮೇಲೆ ಹೇಳಿರುವಂತೆ ವಿಶ್ವವಿದ್ಯಾಲಯವೆಂದರೆ ಇಂತಹುದೇ ಸರಿಯೆಂದು ನಿರ್ಣಯಿಸಿ ಹೇಳುವುದು ಅಸಾಧ್ಯವು. ನೀವು ನನ್ನನ್ನು ಏನೆಂದರೂ ಸರಿ, ನಾನುಮಾತ್ರ ನನ್ನಭಿಪ್ರಾಯವನ್ನು ಹೊರಳಿಸಿಕೊಳ್ಳುವವನಲ್ಲ. ಅನೇಕಮಂದಿ ಉಪಾಧ್ಯಾಯರನ್ನೂ ವಿದ್ಯಾರ್ಥಿಗಳನ್ನೂ ಒಂದು ಕಡೆ ಸೇರಿಸಿ, ಪ್ರಪಂಚದಲ್ಲಿ ಜ್ಞಾನಬೀಜವನ್ನು ಬಿತ್ತಿ ಹರಡುವುದಕ್ಕೆ ಆವಶ್ಯಕವಾದ ಪ್ರಯತ್ನಗಳನ್ನು ಬಾಲಕರಿಗೆ ಕಲಿಸಿಕೊಡುವುದಕ್ಕಾಗಿ ವಿಶ್ವವಿದ್ಯಾಲಯವೆಂಬುವುದು ಸ್ಥಾಪಿಸಲ್ಪಟ್ಟಿರುವುದೆಂದು ತಿಳಿದುಕೊಳ್ಳೋಣ. ಇದೇ ಅಭಿಪ್ರಾಯವೇ ನಿಜವಾದುದಾಗಿದ್ದರೆ ವಿಶ್ವವಿದ್ಯಾಲಯವು ಮಾಡಬೇಕಾದ ಕಾರ್ಯಗಳಲ್ಲಿ ಎರಡು ಮುಖ್ಯವಾದುವುಗಳಿರುವುವು. ಕಾಲಾನುಗುಣವಾಗಿ ಪ್ರಜೆಗಳಿಗೆ ಬೇಕಾದ ವಿದ್ಯೆಯನ್ನು ಬೋಧಿಸುವುದಕ್ಕೆ ಪ್ರಯತ್ನಿಸುವುದು ವಿಶ್ವವಿದ್ಯಾಲಯದ ಮೊದಲನೆಯ ಕೆಲಸವು. ದೇಶೋದ್ಧಾರಾರ್ಥವಾಗಿ ಬೇಕಾದ ವಿದ್ಯೆಯನ್ನೂ ಜಾತೀಯಾಚಾರ ಗೌರವಗಳನ್ನೂ ದೃಢಪಡಿಸಲವಶ್ಯಕವಾದ ವಿದ್ಯೆಯನ್ನು ಸರ್ವಸಂಘಗಳಲ್ಲೂ ಹರಡಿ ವಿಕಾಸಗೊಳಿಸಿ, ಅವರ ಹೃದಯದಲ್ಲಿ ದೇಶಾಭಿಮಾನಬೀಜವನ್ನು ನಾಟುವುದಕ್ಕೆ ಸಾಧಕವಾದ ವಿದ್ಯೆಯನ್ನು ಪ್ರಜೆಗಳಿಗೆ ಅನುಗ್ರಹಿಸುವುದು ವಿಶ್ವವಿದ್ಯಾಲಯದ ೨ ನೆ ಕೆಲಸವು. ಇವುಗಳನ್ನು ನೆರವೇರಿಸಿದ ವಿಶ್ವವಿದ್ಯಾಲಯವು ತನ್ನ ಹೆಸರನ್ನು ಶಾಶ್ವತಗೊಳಿಸಿಕೊಳ್ಳುವುದು. ದೇಶದಲ್ಲಿ ನೂತನವಿಜ್ಞಾನವು ಹಬ್ಬಿಕೊಳ್ಳುವಂತೆ ಮಾಡುವುದು.

ಈ ವಿಷಯದಲ್ಲಿ ನಮ್ಮ ದೇಶದೊಳಗಿರುವ ವಿಶ್ವವಿದ್ಯಾಲಯಗಳು ಮಾಡುತ್ತಿರುವ ಕಾರ್ಯಗಳು ಅತ್ಯದ್ಭುತವಾಗಿವೆ. ವಿದೇಶಗಳಲ್ಲಿ ಸ್ಥಾಪಿತವಾಗಿರುವ ವಿಶ್ವವಿದ್ಯಾಲಯಗಳನ್ನು ಮೇಲುಪಂಕ್ತಿಯಾಗಿಟ್ಟುಕೊಂಡು ನಮ್ಮ ದೇಶದ ವಿಶ್ವವಿದ್ಯಾಲಯ ಪ್ರತಿಷ್ಠಾಪನೆಗಳನ್ನು ಮಾಡುತ್ತಿದ್ದಾರೆ. ಇಂಥವುಗಳಲ್ಲಿ ಜಾತೀಯತಾ ಬೀಜಸ್ಥಾಪನೆಗೂ ಅಂಕುರಕ್ಕೂ ಅವಕಾಶವೇ ಇಲ್ಲ. ದೇಶೀಯಪದ್ಧತಿಗಳು ಅವುಗಳಲ್ಲಿ ರೂಢಮೂಲವಾಗುವ ಸಂಭವವೇ ಇಲ್ಲ. ಅದಕ್ಕೆ ಅವಕಾಶವೇ ದೊರೆಯುವುದಿಲ್ಲ. ಅವು ಯಾವಾಗಲೂ ಪಾಶ್ಚಾತ್ಯಪದ್ಧತಿಯನ್ನನುಸರಿಸುವುದಕ್ಕೇ ಪ್ರಯತ್ನಿಸುತ್ತಿರುತ್ತವೆ. ಪಾಶ್ಚಾತ್ಯಪದ್ಧತಿಗಳಿಂದ ನಮ್ಮ ದೇಶವನ್ನು ಮಾರ್ಪುಗೊಳಿಸುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಅದುಕಾರಣ ನಮ್ಮ ದೇಶದಲ್ಲಿ ನಮ್ಮ ದೇಶೀಯಪದ್ಧತಿಗಳ ಆಧಾರದಮೇಲೆಯೇ ನೂತನವಿಶ್ವವಿದ್ಯಾಲಯಗಳು ಪ್ರತಿಷ್ಠಾಪಿಸಲ್ಪಡಬೇಕು. ಜಾತೀಯತಾ ವಿಕಾಸಕ್ಕೆ ಅದರಲ್ಲಿ ಮುಖ್ಯಸ್ಥಾನವು ಕೊಡಲ್ಪಡಬೇಕು. ಮತ್ತೂ ಜಗತ್ತಿನ ನಾನಾ ಜನಸಂಘಗಳಿಂದ ತಿಳಿದುಕೊಳ್ಳಬಹುದಾದ ವಿಶೇಷಾಂಶಗಳನ್ನೂ ಗ್ರಹಿಸಿಕೊಳ್ಳುತ್ತಿರಬೇಕು. ಆಗ ನಮ್ಮ ವಿಶ್ವವಿದ್ಯಾಲಯಗಳು ದೇಶವನ್ನುದ್ಧರಿಸುವುದಕ್ಕೆ ಸಾಧಕವಾಗುತ್ತವೆ.

ನಮ್ಮ ದೇಶದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಆದರ್ಶರೂಪವನ್ನಾಗಿ ನೆಲೆಗೊಳಿಸಿ, ಜಾತೀಯ ಜೀವನಕ್ಕೆ ಅದು ಎಷ್ಟುಮಟ್ಟಿಗೆ ಸಹಾಯಮಾಡಬಹುದೋ ನೋಡಬೇಕೆಂದು ನಾನು ಬಹು ವರ್ಷಗಳಿಂದ ಕುತೂಹಲಗೊಂಡಿರುವೆನು. ಬಾಲವಿದ್ಯೆ ಮಾಧ್ಯಮಿಕವಿದ್ಯೆ ಇವುಗಳು ದೇಶದಲ್ಲಿ ಯಥೇಚ್ಛವಾಗಿ ಹರಡಿಕೊಳ್ಳುವುದಕ್ಕೆ ಸಕಲ ಪ್ರಯತ್ನಗಳನ್ನೂ ಮಾಡಬೇಕು. ಒಬ್ಬಾನೊಬ್ಬ ವಿದ್ಯಾರ್ಥಿಯು ಕೆಳಗಣ ತರಗತಿಗಳಲ್ಲಿ ಕೃತಾರ್ಥನಾಗಿ. ವಿಶ್ವವಿದ್ಯಾಲಯವನ್ನು ಪ್ರವೇಶಿಸಬೇಕಾದವನಾಗಿದ್ದರೆ ಅವನ ಜ್ಞಾನಪರಿಮಿತಿಯನ್ನು ತಿಳಿದುಕೊಳ್ಳುವುದಕ್ಕೆ ಮಾತ್ರ ಒಂದು ಚಿಕ್ಕ ಪರೀಕ್ಷೆಯನ್ನು ಏರ್ಪಡಿಸಬೇಕು. ವಿಶ್ವವಿದ್ಯಾಲಯವನ್ನು ಪ್ರವೇಶಿಸಿದ ವಿದ್ಯಾರ್ಥಿಯು ಇತರರಿಗೆ ಅತಿ ಸುಲಭವಾಗಿ ಬೋಧೆಯಾಗುವಂತೆ ತನ್ನ ಅಭಿಪ್ರಾಯಗಳನ್ನು ವಿಶದೀಕರಿಸುವುದಕ್ಕೆ ಬೇಕಾದಷ್ಟು ಜ್ಞಾನವನ್ನು ಅವನ ಮಾತೃಭಾಷೆಯಲ್ಲಿ ನಿರ್ಬಂಧವಾಗಿ ಕಲಿತುಕೊಳ್ಳುವಂತೆ ಮಾಡಬೇಕು. ಪಾಶ್ಚಾತ್ಯ ಶಾಸ್ತ್ರಜ್ಞಾನವನ್ನು ಸಂಪಾದಿಸುವುದಕ್ಕೆ ಸಾಕಾಗುವ ಮಟ್ಟಿಗೆ ಆಂಗ್ಲಭಾಷೆಯ ವಿದ್ಯೆಯನ್ನು ಕಲಿತುಕೊಳ್ಳಬಹುದು. ಸಾಧಾರಣ ಮೇಧಾ ಶಕ್ತಿಸಂಪನ್ನನಾದ ಒಬ್ಬ ವಿದ್ಯಾರ್ಥಿಯು ಮಾತೃಭಾಷೆಯಲ್ಲಿ ತನಗೆ ಕಲಿಸಿದ ವಿದ್ಯೆಯಿಂದ ಪ್ರಪಂಚವಿಜ್ಞಾನವನ್ನು ಚೆನ್ನಾಗಿ ಗ್ರಹಿಸಿಕೊಳ್ಳಲು ಶಕ್ತನಾಗುವನು. ಮತ್ತು ತನ್ನ ಜಾತಿಯಲ್ಲಿರುವ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ಗ್ರಹಿಸಿಕೊಳ್ಳುವನು.

ವಿದ್ಯಾರ್ಥಿಯು ವಿಶ್ವವಿದ್ಯಾಲಯವನ್ನು ಪ್ರವೇಶಿಸಿದ ಬಳಿಕ ಎಲ್ಲತೆರದ ಶಾಸ್ತ್ರಗಳ ರುಚಿನೋಡುವುದಕ್ಕೂ ಅವನಿಗೆ ಅವಕಾಶವಿತ್ತು, ಕಡೆಗೆ ಯಾವ ಶಾಸ್ತ್ರದಲ್ಲಿ ಅವನಿಗೆ ರುಚಿಯೂ ಅಭಿನಿವೇಶವೂ ಹೆಚ್ಚಾಗಿರುವುದೋ ಆ ಶಾಸ್ತ್ರದಲ್ಲಿ ಪೂರ್ಣಪಾರಂಗತನಾದ ಉಪಾಧ್ಯಾಯನ ಬಳಿಯಲ್ಲಿ ಅವನು ಶಿಕ್ಷಣಪಡೆಯುವಂತೆ ಮಾಡಬೇಕು. ವಿದ್ಯಾರ್ಥಿ ದಶೆಯಲ್ಲಿ ಅವನಿಗೆ ವಿದ್ಯಾರ್ಜನೆಗೆ ಬೇಕಾದಷ್ಟು ಸರ್ವಸ್ವಾತಂತ್ರ್ಯವನ್ನೂ ಕೊಟ್ಟಿರಬೇಕು. ವಿಶ್ವವಿದ್ಯಾಲಯದ ವಿದ್ಯಾದಾನವು ಉಚಿತವಾಗಿ ನಡೆಯುವಂತಾಗಬೇಕು. ಮತ್ತೂ ಸಕಲ ಜನವರ್ಗಕ್ಕೂ ತಾರತಮ್ಯ ಪಕ್ಷಪಾತವಿಲ್ಲದೆ ವಿದ್ಯಾದಾನವಾಗಬೇಕು. ಹಾಗೆ ವಿದ್ಯಾರ್ಜನೆ ಮಾಡಿದವರು ತಮ್ಮ ವಿದ್ಯೆಯನ್ನು ಇತರರಿಗೆ ಪ್ರದಾನಮಾಡುವಾಗ ಉದಾರಮತಿಗಳಾಗಿರಬೇಕು. ಕಾಲೋಚಿತವಾದ ಪರಿಶ್ರಾಮಿಕ ವಿದ್ಯೆಗಳ ಅಭ್ಯಾಸವು ನಮ್ಮ ವಿಶ್ವವಿದ್ಯಾಯಗಳಲ್ಲಿ ವಿಶೇಷವಾಗಿ ನಡೆಯುವುದು ಅವಶ್ಯಕವು. ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾತ್ರವೇಅಲ್ಲದೆ ಗುಣವಂತರಾಗುವುದಕ್ಕೂ ಪ್ರಯತ್ನಿಸಬೇಕು. ಹೀಗೆಲ್ಲಾ ಆಗುವುದಾದರೆ ವಿಶ್ವವಿದ್ಯಾಲಯದ ನಿಜವಾದ ಆದರ್ಶವನ್ನು ನಮ್ಮ ಪ್ರತಿಷ್ಠಾಪನೆಗಳಲ್ಲಿ ಕಾಣಬಹುದು. ದೊಡ್ಡದೊಡ್ಡ ಶಾಸ್ತ್ರಜ್ಞರೂ ಪರಿಶೋಧಕರೂ ಚಾರಿತ್ರಕಾರರೂ ನಮ್ಮ ದೇಶದಲ್ಲಿ ಹುಟ್ಟಿ ವಿಜ್ಞಾನವನ್ನು ನೆಲೆಗೊಳಿಸಿ ದೇಶಕೀರ್ತಿಯನ್ನು ಸಕಲ ದಿಗಂತಗಳಿಗೂ ವ್ಯಾಪನೆಗೊಳಿಸಬಲ್ಲರು.

ಅಂಥ ವಿಶ್ವವಿದ್ಯಾಲಯದ ಆದರ್ಶವನ್ನು ಮೈಸೂರಿನವರು ಅನುಸರಿಸುತ್ತಿರುವುದನ್ನು ಕಂಡು ನಾನು ಉಬ್ಬೇರುತ್ತೇನೆ. ಮೈಸೂರುದೇಶವು ಈ ವಿಶ್ವವಿದ್ಯಾಲಯ ವಾತಾವರಣದ್ವಾರಾ ಆದಷ್ಟು ಬೇಗನೆ ನಮ್ಮ ಭರತಖಂಡದಲ್ಲಿ ಇತರ ಪ್ರಾಂತದವರಿಗೆಲ್ಲಾ ಆದರ್ಶಭೂತರಾಗಿ ಮುಂದರಿಯುವರೆಂದು ನಾನು ದೃಢವಾಗಿ ನಂಬುತ್ತೇನೆ. ಈ ವಿಶ್ವವಿದ್ಯಾಲಯವು ಪ್ರಪಂಚಕ್ಕೆ ಕಳುಹಿಸಿಕೊಡಲಿಕ್ಕಿರುವ ಪಟ್ಟಾಂಚಿತರ ಗುಂಪು ಈಮೇಲೆ ಹೇಳಿದ ಆದರ್ಶಗಳನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ದೇಶಸೇವೆ ಮಾಡುವುದಕ್ಕೆ ತೊಡಗುವವರಾಗಲಿ. ಅವರ ಪ್ರಯತ್ನಗಳು ಸಫಲಗಳಾಗಲಿ, ಅವರುಗಳು ದೇಶಕ್ಕೆ ಆದರ್ಶಪ್ರಾಯರಾಗಲಿ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ನೆನ್ನೆಯದಿನ ತಕ್ಕಮಟ್ಟಿಗೆ ಮಳೆಯಾಯಿತು.

ಮ|| ಸಿ. ರಾಮಲಿಂಗರೆಡ್ಡಿ ಎಂ.ಎ. ಯವರು ವಿದ್ಯಾಭ್ಯಾಸಶಾಖಾ ಇನ್ಸ್‌ಪೆಕ್ಟರ್ ಜನರಲ್ ಪದವಿಯಲ್ಲಿ ಸ್ಥಿರಗೊಳಿಸಲ್ಪಟ್ಟಿದ್ದಾರೆ.

ಸೀನಿಯರ್ ಸೆಷನ್ ಜಡ್ಜರಾದ ಮ|| ಬ್ಯಾರಿಸ್ಟರ್ ನಾಗಪ್ಪನವರು ಶಿವಮೊಗ್ಗಾದಿಂದ ಬಂದು ಕಳೆದ ತಾ|| ೨೯ ರಲ್ಲಿ ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ ಪದವಿಯನ್ನು ಸ್ವೀಕರಿಸಿದರು.

ಈಸಲದ ನವರಾತ್ರಿಯ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಕೃಷ್ಣರಾಜಸಾಗರದ ಚೀಫ್ ಇಂಜನಿಯರ್ ಮ|| ಕೆ. ಕೃಷ್ಣಯ್ಯಂಗಾರರಿಗೆ "ರಾಜಸಭಾಭೂಷಣ" ಎಂಬ ಬಿರುದನ್ನು ದಯಪಾಲಿಸಿದ್ದಾರೆ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಚೇರ್ಮನ್ನರಾದ ರಾಜಶಿಲ್ಪವಿಶಾರದ ರಾ|| ಬ|| ಬಿ. ಸುಬ್ಬರಾಯರ ಜ್ಯೇಷ್ಠಪುತ್ರರು ನಾಗಪುರದಲ್ಲಿ ವ್ಯವಸಾಯ ವಿದ್ಯಾಭ್ಯಾಸಂಗಮಾಡುತ್ತಿದ್ದು ಇನ್‌ಫ್ಲುಯಂಜಾ ಜ್ವರ ರೋಗಗ್ರಸ್ತರಾಗಿ ವಿಧಿವಶರಾದರೆಂದು ತಿಳುಹಲು ವಿಷಾದವಾಗುತ್ತದೆ.

ನಮ್ಮ ಸರ್ಕಾರದವರಿಗೆ ಬೆಂಗಳೂರು ಮೈಸೂರು ಪಟ್ಟಣಗಳ ಪ್ರಜೆಗಳ ಇನ್‌ಫ್ಲುಯಂಜಾ ರೋಗನಿವಾರಣೆಗೂ ಧಾನ್ಯವನ್ನು ಅಗ್ಗವಾಗಿ ಮಾರಿಸುವುದಕ್ಕೂ ಏರ್ಪಾಟುಮಾಡಿಸುವುದರಲ್ಲೇ ಸಾಕಾಗಿಹೋಗಿರುವಂತೆ ಕಾಣುತ್ತದೆ. ಗ್ರಾಮಾಂತರಗಳ ಪ್ರಜೆಗಳ ಕಷ್ಟಕ್ಕೆ ಪರಿಹಾರವೇನೋ ಗೊತ್ತಾಗಲಿಲ್ಲ. ಸರ್ಕಾರದವರು ಯಾವ ಏರ್ಪಾಟನ್ನಾದರೂ ಮಾಡದಿರುವುದು ಭಯಂಕರವು.

ಶ್ರೀ ಶಿವಗಂಗಾಸ್ವಾಮಿಗಳು ಕೆಲ ತಿಂಗಳುಗಳಿಂದ ಅಸ್ವಸ್ಥರಾಗಿದ್ದು ದೇಹವು ನಿಲ್ಲಲಾರದೆಂದು ತೋರಿಬಂದುದರಮೇಲೆ ಉತ್ತರಾಧಿಕಾರಿಯನ್ನು ತಾವೇ ಗೊತ್ತುಮಾಡಿ, ಆಶ್ರಮವನ್ನಿತ್ತು, ಆರೋಗ್ಯಾರ್ಥವಾಗಿ ಪಾಂಡಿಚೆರಿಗೆ ಹೋಗಿ ವಾಸಮಾಡುತ್ತಿದ್ದು ಕಡೆಗೂ ಸ್ವಸ್ಥರಾಗದೆ ಕಳೆದ ತಾ|| ೧೨ ರಲ್ಲಿ ಮುಕ್ತರಾದರೆಂದು ಕೇಳುತ್ತೇವೆ. ಅಂತ್ಯಕಾಲದಲ್ಲಿ ಇವರಿಗೆ ೪೩ ವರ್ಷಗಳು ಮಾತ್ರವೇ ಆಗಿದ್ದುವು.

ಮೈಸೂರು ಶ್ರೀ ಕೃಷ್ಣರಾಜ ಆಸ್ಪತ್ರೆಯ ಇನ್‌ಛಾರ್ಜ್ ಆಫೀಸರಾದ ಡಾ|| ಸಿ. ಎ. ನಂಜಪ್ಪನವರು, ದರ್ಬಾರ್‌ಭಕ್ಷಿಯವರಾದ ಮ|| ಎಚ್. ಲಿಂಗರಾಜೆಅರಸಿನವರು, ಸರದಾರ್ ಬಾಳರಾಜಅರಸ್ ಬಿ.ಎ. ಯವರು, ಮತ್ತು ಕೋಲಾರ ಡಿ|| ಮೆಡಿಕಲ್ ಆಫೀಸರಾದ ಡಾ|| ಮುತ್ತುಸಾಮಿದಾಸ್‌ರವರು ಇನ್‌ಫ್ಲುಯಂಜಾ ರೋಗಪೀಡಿತರಾಗಿದ್ದು ಈಗ ಸಂಪೂರ್ಣ ಗುಣವನ್ನು ಹೊಂದಿರುವರೆಂದು ತಿಳುಹಲು ಹರ್ಷವಾಗುತ್ತದೆ.

ಇನ್‌ಫ್ಲುಯಂಜಾ ರೋಗಗ್ರಸ್ತರ ಔಷಧ ಪಥ್ಯಗಳಿಗಾಗಿ ಮ್ಯುನಿಸಿಪಾಲಿಟಿಯವರು ಅರಮನೆಯ ಮೋಟಾರುಗಳ ಸಹಾಯವನ್ನೂ ಇನ್ನುಕೆಲ ಪರೋಪಕಾರಿಗಳ ಸಹಾಯವನ್ನೂ ಪಡೆದು ಏರ್ಪಾಟುಮಾಡಿದ್ದರೂ ಸಂದಿಗೊಂದಿಗಳಲ್ಲಿ ಅಸಹಾಯರಾಗಿ ಬಿದ್ದು ನರಳುತ್ತಿರುವ ಬಹು ಜನರಿಗೆ ತಕ್ಕ ಸಹಾಯವು ದೊರೆಯುವುದಿಲ್ಲ. ಮೋಟಾರುಗಳು ರಾಜಬೀದಿಗಳಲ್ಲಿ ಮಾತ್ರ ಓಡಾಡತಕ್ಕುವು. ಆಯಾ ಮೊಹಲ್ಲೆಯ ಜನನ ಮರಣ ರಿಜಿಸ್ಟ್ರಾರುಗಳ ಮೂಲಕವೂ ಸ್ಯಾ|| ಇನ್ಸ್‌ಪೆಕ್ಟರುಗಳ ಮೂಲಕವೂ ಅಂಥ ಬಡ ರೋಗಿಗಳ ಮನೆಗಳನ್ನು ಗೊತ್ತುಮಾಡಿ ಅಲ್ಲಲ್ಲಿಗೆ ಔಷಧಪಥ್ಯಗಳನ್ನು ಒದಗಿಸಿದರೆ ಈ ಏರ್ಪಾಟು ಸಾರ್ಥಕವಾದೀತು. ಮರಣ ಸಂಖ್ಯೆಯು ಇಳಿಮುಖವಾಗಿರುವಂತೆ ತೋರುತ್ತದೆ.

ಶ್ರೀ|| ಸಿರಸಂಗಿ ದೇಸಾಯರವರು ತಮಗೆ ಸಂತಾನವಿಲ್ಲದಿದ್ದರೂ ದತ್ತಸ್ವೀಕಾರಮಾಡಿಕೊಳ್ಳಲು ಇಷ್ಟಪಡದೆ ತಮ್ಮ ದೇಸಗತಿಯನ್ನೇ ವೀರಶೈವ ಸಮಾಜದವರ ವಿದ್ಯಾಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳಲು ಮರಣಶಾಸನವನ್ನು ಬರೆದಿಟ್ಟು ಟ್ರಸ್ಟಿಗಳಿಗೆ ಅದರ ಅಧಿಕಾರವನ್ನು ಕೊಟ್ಟಿದ್ದರೂ, ಅದರಮೇಲೆ ಅವರ ಪತ್ನಿ ಸುಂದರಾಬಾಯಿಯವರು ಯಾರ ಪ್ರೇರಣೆಯಿಂದಲೋ ಪತಿಯ ಇಚ್ಛಾನುಸಾರ ನಡೆಯಗೊಡಿಸಲು ವಿಘ್ನವೊಡ್ಡಿ ಸಿವಿಲ್ ಕೋರ್ಟುಗಳಲ್ಲಿ ವ್ಯಾಜ್ಯಮಾಡಿ ಬೊಂಬಾಯಿ ಹೈಕೋರ್ಟಿನವರೆಗೂ ಹತ್ತಿ ವಿಫಲರಾದುದರಮೇಲೆ ಸೀಮೆಯಲ್ಲಿರುವ ಪ್ರಿವೀಕೌನ್ಸಿಲಿಗೆ ಅಪೀಲ್ ಮಾಡಿಕೊಂಡಿದ್ದರಷ್ಟೆ. ಅಲ್ಲಿ ಇದರ ವಿಚಾರವೆಲ್ಲಾ ಮುಗಿದು ಕಡೆಗೆ ಶ್ರೀ|| ಲಿಂಗಪ್ಪ ಜಯಪ್ಪ ಸರ್ ದೇಸಾಯಿ ಸಿರಸಂಗಿಯವರ ಮೃತ್ಯುಪತ್ರದಂತೆ ನಡೆಯುವುದೇ ಸರಿಯೆಂದು ಸಿದ್ಧಾಂತಿಸಲ್ಪಟ್ಟು ಅಪೀಲು ತಿರಸ್ಕರಿಸಲ್ಪಟ್ಟಿತೆಂದು ಬೆಳಗಾಂ ಜಿಲ್ಲಾ ಕಲೆಕ್ಟರಿಗೆ (ಟ್ರಸ್ಟಿನ ಪ್ರೆಸಿಡೆಂಟರು) ತಂತ್ರೀವಾರ್ತೆ ಬಂದಿರುವುದೆಂದು ಕೇಳಿ ಸಂತೋಷಿಸುತ್ತೇವೆ. ಧರ್ಮೋದ್ದೇಶವು ವಿಜಯಪರ್ಯವಸಾಯಿಯಾಗುವುದು ಸಹಜವೇ ಇದೆ. ಈ ತೀರ್ಮಾನವನ್ನು ಕೇಳಿ ವೀರಶೈವ ಮಂಡಲವೆಲ್ಲವೂ ಸಂತೋಷಿಸುವುದೆಂಬುದಕ್ಕೆ ಸಂಶಯವಿಲ್ಲ. ಇದರಿಂದ ಅವರ ವಿದ್ಯಾವೃದ್ಧಿ ಫಂಡಿಗೆ ಅಸಾಧಾರಣವಾದ ಸಾಹಾಯ್ಯ ಪ್ರೋತ್ಸಾಹಗಳುಂಟಾಗುವುವು. ಪತಿ ಸಂಕಲ್ಪಕ್ಕೆ ಪ್ರತಿಕೂಲಿಸದೆ ಸುಂದರಾಬಾಯಿಯವರು ನಡೆದುಕೊಂಡಿದ್ದರೆ ವೀರಶೈವ ಸಮಾಜವೆಲ್ಲವೂ ಅವರನ್ನು ಉಪಮಾತೃವಿನಂತೆ ಗೌರವಿಸುತ್ತಿದ್ದಿತು. ಅಂಥ ಭಾಗ್ಯವನ್ನು ಅವರು ಕಳೆದುಕೊಂಡು "ಪರಬುದ್ಧಿರ್ವಿನಾಶಾಯ" ಎಂಬಂತೆ ವಿಶೇಷ ಧನಹಾನಿಯನ್ನೂ ಕಡೆಗೆ ಮನೋವ್ಯಥೆಯನ್ನೂ ಪಡೆದುಕೊಂಡುದು ವಿಷಾದಸ್ಥಾನವು.

ಯುದ್ಧವಾರ್ತೆಯು.

ಬೆಲ್ಜಿಯಮ್ಮಿನಲ್ಲಿ ಮಿತ್ರಮಂಡಲಿಯವರು ಶತ್ರುಗಳನ್ನು ಸ್ವಲ್ಪಸ್ವಲ್ಪವಾಗಿ ಹಿಮ್ಮೆಟ್ಟಿಸುತ್ತಲೇ ಇದ್ದಾರೆ. ಶತ್ರುಗಳು ಮೊಂಡತನದಿಂದ ಯುದ್ಧಮಾಡಿ ಬಹು ನಷ್ಟಪಡುತ್ತಿದ್ದಾರೆ. ಘೆಂಟ್ ಪಟ್ಟಣವನ್ನೂ ಆಂಟ್ವರ್ಪ್ ಪಟ್ಟಣವನ್ನೂ ಅವರು ತೆರವು ಮಾಡುತ್ತಿರುವರೆಂಬ ವರ್ತಮಾನ ಬಂದಿರುವುದರಿಂದ ಅವರು ಅವುಗಳನ್ನು ಕಾಪಾಡಿಕೊಳ್ಳಲಾರರೆಂಬುದು ವ್ಯಕ್ತವಾಗುತ್ತದೆ. ಅದಕ್ಕೆ ದಕ್ಷಿಣದಲ್ಲಿ ಇಂಗ್ಲೀಷ್ ಫ್ರೆಂಚ್ ಬೆಲ್ಜಿಯಂ ಸೈನಿಕರು ಕಳೆದವಾರ ಬಹು ಭೀಕರವಾದ ಯುದ್ಧವನ್ನು ನಡೆಯಿಸಿ ಜಯಶಾಲಿಗಳಾಗಿದ್ದಾರೆ. ಅಲ್ಲಿ ಶತ್ರುಗಳು ವಿಷದ ಹೊಗೆಯನ್ನು ಬಿಟ್ಟು ಬಹು ಭೀಕರವಾಗಿ ತಡೆದು ಕಡೆಗೂ ಸೋತರು. ಈ ಯುದ್ಧವು ಏಯಿಜ್‌ನದಿ ಸೆರ್ರಿನದಿಗಳ ಮಧ್ಯದಲ್ಲಾಯಿತು. ಸೆರ್ರಿನದಿಯನ್ನು ನಮ್ಮವರು ದಾಟಿದರು. ಅನೇಕ ಗ್ರಾಮಗಳನ್ನೂ ವಿಪರೀತ ಯುದ್ಧಸಾಮಗ್ರಿಗಳನ್ನೂ ೨೫೦೦ ಕ್ಕೆ ಮೇಲ್ಪಟ್ಟ ಶತ್ರುಸೈನಿಕರನ್ನೂ ೯ ಫಿರಂಗಿಗಳನ್ನೂ ವಶಪಡಿಸಿಕೊಂಡರು. ಈ ರಂಗದ ಮಧ್ಯದಲ್ಲಿ ೨ ದೊಡ್ಡ ಕಾಲ್ವೆಗಳಿದ್ದುವು. ಇವು ಶತ್ರುಗಳಿಗೆ ವಿಶೇಷ ರಕ್ಷಕವಾಗಿದ್ದುವು. ಕಡೆಗೆ ಅವೆಲ್ಲಾ ನಮ್ಮವರ ವಶವಾದುವು. ಇದಲ್ಲದೆ ಷೆಲ್ಟ್ ನದಿಯ ಮತ್ತೂ ಅನೇಕ ಅರಣ್ಯಸಮುದಾಯದಿಂದ ಕೂಡಿದ ಒಂದು ರಂಗದಲ್ಲೂ ಫ್ರೆಂಚರಿಗೂ ಶತ್ರುಗಳಿಗೂ ಘೋರಯುದ್ಧವು ನಡೆದು ಅಲ್ಲೂ ಶತ್ರುಗಳು ಸೋತರು. ಆ ಪ್ರದೇಶವೆಲ್ಲಾ ನಮ್ಮವರ ವಶವಾಯಿತು. ಒಟ್ಟು ಆ ರಣರಂಗದಲ್ಲಿ ೧೫ ಸಾವಿರ ಜರ್ಮನ್ ಸೈನಿಕರೂ ೨೦೦ ಫಿರಂಗಿಗಳೂ ನಮ್ಮವರ ವಶವಾಗಿರುವುವು. ಈಗ ಫ್ರೆಂಚರು ಆಯಿಸ್ ನದಿಗೂ ಸೆರ್ರಿನದಿಗಳಿಗೂ ಮಧ್ಯದಲ್ಲಿ ಶತ್ರುಗಳ ಮೇಲೆ ಕಾದಾಡುತ್ತಿದ್ದಾರೆ. ಶತ್ರುಗಳು ಅದಕ್ಕೆ ದಕ್ಷಿಣದಲ್ಲಿ ವರ್ಡನ್ನಿಗೆ ಉತ್ತರದಲ್ಲಿ ಮ್ಯೂಜ್ ನದಿಯ ದಡದಮೇಲೆ ೨೫ ಮೈಲಿಗಳ ಅಗಲವಾದ ರಂಗದಲ್ಲಿ ಬಹು ಬಲವಾಗಿ ತಡೆದು ಯುದ್ಧ ಮಾಡುತ್ತಿದ್ದಾರೆ. ಆದರೂ ಅಮೇರಿಕನ್ನರು ಬಹಳ ಪರಾಕ್ರಮವನ್ನು ತೋರಿಸಿ ಶತ್ರುಗಳಿಗೆ ಬಹಳನಷ್ಟಗೊಳಿಸಿ ಹಿಮ್ಮೆಟ್ಟಿಸಿ, ಅಲ್ಲಿದ್ದ ಬರ್ಮಾಂಟ್ ಮೊದಲಾದ ಅಡವಿಗಳನ್ನು ವಶಪಡಿಸಿಕೊಂಡರು. ಗ್ರಾಂಡ್‌ಪ್ರಿಗೆ ವಾಯವ್ಯದಲ್ಲಿ ಅಮೇರಿಕನ್ನರು ಮುಂಬರಿಯುತ್ತಿರುವರು. ಈ ರಂಗದಲ್ಲಿ ಅಮೇರಿಕನ್ನರಿಗೆ ಸೆಪ್ಟಂಬರ್ ತಾ|| ೨೬ ರಿಂದ ಅಕ್ಟೋಬರ್ ತಾ|| ೨೪ ರೊಳಗಾಗಿ ಶತ್ರುಪಕ್ಷದ ೨೬೦೦೦ ಸೈನಿಕರೂ ೧೧೫೦ ಫಿರಂಗಿಗಳೂ ಅನೇಕ ಸಹಸ್ರ ಮಿಷನ್ ಫಿರಂಗಿಗಳೂ ಸಿಕ್ಕಿರುತ್ತವೆ. ಇಟಲಿಯವರೂ ವಿಜೃಂಭಿಸಿ ಆಸ್ಟ್ರಿಯನ್ನರನ್ನು ಮಾಂಟೆಗ್ರಾ ಪ್ರಾಂತದಲ್ಲಿ ಸೋಲಿಸಿ ಕೆಲ ಪ್ರದೇಶಗಳನ್ನೂ ಪಿಯಾವೀನದಿಯಲ್ಲಿ ಕೆಲ ದ್ವೀಪಗಳನ್ನೂ ೨೯೭೧ ಮಂದಿ ಸೈನಿಕರನ್ನೂ ವಶಪಡಿಸಿಕೊಂಡಿದ್ದಾರೆ.

ಬಾಲ್ಕನ್ನಿನಲ್ಲಿ ಮಿತ್ರಮಂಡಲಿಯವರು ವೇಗವಾಗಿ ಸಾಗುತ್ತಿದ್ದಾರೆ. ಬಲ್ಗೇರಿಯಾಕ್ಕೆ ವಾಯವ್ಯದಲ್ಲಿರುವ ಡಾನ್ಯೂಬಿನ ದಡದಮೇಲಿರುವ ವಿಶಾಲವಾದ ರಂಗವನ್ನು ಇವರು ಸೇರಿದ್ದಾರೆ. ರೊಮೇನಿಯಾದಲ್ಲಿ ಆಗಲೇ ವಿಪ್ಲವವದ್ದಿದೆ. ಸರ್ವಿಯನ್ನರು ಕ್ರಗ್‌ಯೊವಾಡ್ಜನ್ನು ಹಿಡಿದುಕೊಂಡು ಬೆಲ್‌ಗ್ರೇಡ್ ಪಟ್ಟಣದಕಡೆಗೆ ಸಾಗುತ್ತಿದ್ದಾರೆ. ಪಟ್ಟಣಕ್ಕೆ ೬೦ ಮೈಲಿಗಳ ದೂರದಲ್ಲಿದ್ದಾರೆ. ಮಾಂಟಿನೀಗ್ರೋವಿಗೆ ನುಗ್ಗಿ ಅಲ್ಲಿ ೨೦೦೦ ಶತ್ರುಸೈನಿಕರನ್ನು ಸೆರೆಹಿಡಿದು ಓಡಿಸಿಕೊಂಡು ಹೋಗುತ್ತಿದ್ದಾರೆ.

ತುರ್ಕಿಯಲ್ಲಿ ಅಲೆಪ್ಪೋ ಪಟ್ಟಣವು ನಮ್ಮವರ ವಶವಾಯಿತು. ಇದು ಮೆಸೊಪಟೋಮಿಯಾದಲ್ಲಿ ಮುಖ್ಯವಾದ ಲೋಹಮಾರ್ಗವು ಕೂಡುವ ಸ್ಥಲದಲ್ಲಿರುವ ಒಂದು ದೊಡ್ಡ ಪಟ್ಟಣ. ಹೀಗೆ ಎಲ್ಲ ರಂಗಗಳಲ್ಲೂ ನಮ್ಮವರಿಗೆ ಜಯಪರಂಪರೆಗಳು ಲಭಿಸುತ್ತಲೇ ಇವೆ. ಶತ್ರುಗಳ ಪರಾಜಯವು ಮಿತಿಮೀರಿದೆ. ಅವರಿಗೆ ಜಯದಾಶೆಯು ತೊರೆದುಹೋಯಿತು. ಜರ್ಮನರ ಸಂಗ್ರಾಮಚೈತನ್ಯನಾಗಿಯೂ ಪ್ಯಾರಿಸ್ಸನ್ನು ಲೀಲಾಮಾತ್ರದಲ್ಲಿ ಹಿಡಿದುಕೊಳ್ಳುವೆನೆಂದು ಕಳೆದ ಜುಲೈ ತಿಂಗಳಲ್ಲಿ ಜಂಭವನ್ನು ಕೊಚ್ಚಿದವನಾಗಿಯೂ ಇದ್ದ ಮಾರ್ಷಲ್ ಲುಡೆಂಡಾರ್ಫ್ ಎಂಬ ಜರ್ಮನ್ ಮುಖ್ಯಸೇನಾನಿಯು ಕೆಲಸಕ್ಕೆ ರಾಜೀನಾಮೆ ಕೊಟ್ಟನು. ಅಪಜಯದಿಂದ ಮುಖತೋರಿಸದಂತಾದುದೇ ಇದಕ್ಕೆ ಕಾರಣ. ಅವನನ್ನು ಬರತರಫ್ ಮಾಡಿದರೆಂಬ ವಾರ್ತೆಯು ಇದೆ. ಇಂಗ್ಲೀಷರ ಸರ್ವಸೇನಾನಿ ಕಿಚನರ್ ಪ್ರಭುವನ್ನು ಶತ್ರುಗಳು ಮರೆಮೋಸದಿಂದ ಹಡಗನ್ನು ಮುಳುಗಿಸಿ ಕೊಂದರು. ಈಗ ನಮ್ಮ ವೀರರು ಶತ್ರುಮುಖ್ಯಸೇನಾನಿಯನ್ನು ಯುದ್ಧದಲ್ಲೇ ಸೋಲಿಸಿ, ಬದುಕಿದ್ದರೂ ಸತ್ತಂತೆ ಮಾಡಿದ ಹಾಗಾಯಿತು. ತುರ್ಕಿಗೂ ಜರ್ಮನಿಗೂ ವೈರವು ಬೆಳೆಯುತ್ತಿದೆ. ಅಸ್ಟಾದಲ್ಲಿರುವ ತುರುಕರು ಜರ್ಮನ್ ಸೈನಿಕರನ್ನು ದಿಗಂಬರರನ್ನು ಮಾಡಿ ಚಾಟಿಗಳಿಂದ ಹೊಡೆದರು. ದಮಾಸ್ಕಸ್ ಪಟ್ಟಣದಲ್ಲಿ ಬಹುಮಂದಿ ಜರ್ಮನರ ಕೊರಲನ್ನು ಕೊಯ್ದರು. ಕೆಲಜರ್ಮನರು ಇಂಗ್ಲೀಷ್ ಸೇನೆಯನ್ನು ಶರಣುಹೊಕ್ಕು ಪ್ರಾಣ ಉಳಿಯಿಸಿಕೊಂಡರು. ಆಸ್ಟ್ರಿಯಾದಲ್ಲಿ ಪ್ರಜೆಗಳು ಯುದ್ಧವಿಮುಖರಾಗಿ ಸಂಧಿಗೆ ತಹತಹಪಡುತ್ತಿದ್ದಾರೆ. ಅವರಿಗೆ ಕ್ಷಾಮದ ಬಾಧೆ ವಿಪರೀತವಾಗಿದೆ. ಆ ಸಾಮ್ರಾಜ್ಯವು ವಿಚ್ಛಿನ್ನವಾಗಿ ಹೋಗುವ ಸೂಚನೆಗಳು ಸ್ಪಷ್ಟವಾಗುತ್ತಿವೆ. ಆ ದೇಶದ ಜೆಕ್‌ಪ್ರಜೆಗಳೂ ಸರ್ವಿಯನ್ನರೂ ಸ್ವತಂತ್ರರಾಗಿ ಪ್ರತ್ಯೇಕ ರಾಷ್ಟ್ರನಿರ್ಮಾಣ ಮಾಡಿಕೊಳ್ಳುವುದರಲ್ಲಿದ್ದಾರೆ. ಅಲ್ಲಿರುವ ಜರ್ಮನರೂ ಸ್ವಾತಂತ್ರ್ಯವನ್ನು ಕೋರುತ್ತಿದ್ದಾರೆ. ಹಂಗೇರಿಯವರು ಬೇರ್ಪಟ್ಟುಹೋಗಬೇಕೆಂದು ತುದಿಗಾಲಿನಲ್ಲಿ ನಿಂತಿದ್ದಾರೆ. ಅಲ್ಲಿಯ ಕಾರಲ್ ಚಕ್ರವರ್ತಿಗೆ ಹಂಗೇರಿರಾಜನಾಗಿಯಾದರೂ ಇರಬೇಕೆಂದು ಅಪೇಕ್ಷೆ. ಹೇಗಾಗುವುದೋ ನೋಡಬೇಕು. ಈ ಗೃಹಛಿದ್ರ ಪ್ರಾಬಲ್ಯದಿಂದ ಅವರಿಗೆ ಯುದ್ಧವನ್ನು ಸಾಗಿಸುವುದಕ್ಕೆ ಸುತರಾಂ ಶಕ್ತಿಯೂ ಕುತೂಹಲವೂ ಇಲ್ಲ. ಅದುಕಾರಣ ಆಸ್ಟ್ರಿಯಾದವರು ಜರ್ಮನರು ಒಪ್ಪದಿದ್ದರೂ ಮಿತ್ರಮಂಡಲಿಯವರೊಡನೆ ತಾವು ಸಂಧಿಯನ್ನು ಪ್ರತ್ಯೇಕವಾಗಿ ಮಾಡಿಕೊಂಡೇ ಮುಗಿಸುವುದರಲ್ಲಿದ್ದಾರೆ. ಆಗಲೇ ಅವರು ಮಿತ್ರಮಂಡಲಿಯವರಿಗೆ ಬರೆದುಕೊಂಡಿದ್ದಾರೆ. ತುರ್ಕಿಯವರ ಅವಸ್ಥೆಯೂ ಹೀಗೆಯೇ ಇದೆ. ಜರ್ಮನರ ಅವಸ್ಥೆಯು ಇದೆಲ್ಲಕ್ಕಿಂತಲೂ ವಿಷಮವಾಗಿದೆ. ಯುದ್ಧಪರಾಜಯವು ಒಂದು ಭಾಗವಾದರೆ ದುಡ್ಡಿನ ಮತ್ತೂ ಆಹಾರ್ಯವಸ್ತುಗಳ ಅಭಾವದ ತೊಂದರೆಯು ಹೆಚ್ಚುಭಾಗವಾಗಿದೆ. ಮದ್ದು ಗುಂಡುಗಳನ್ನು ನಿರ್ಮಿಸುವುದಕ್ಕೆ ತಕ್ಕ ಸಾಮಗ್ರಿಗಳು ಸಿಕ್ಕುವುದಿಲ್ಲ. ಪ್ರಜೆಗಳಲ್ಲಿ ಉತ್ಸಾಹವು ಹೀನವಾಗಿದೆ. ರಾಜಕೀಯ ಸ್ಥಿತಿಯೂ ಅತಿ ವಿಷಮವಾಗಿದೆ.

ಸಂಧಿವಿಷಯ.

ಸಂಧಿ ನಡೆಯಬೇಕಾಗಿದ್ದರೆ ಜರ್ಮನರು ಆಕ್ರಮಿಸಿಕೊಂಡಿರುವ ಮಿತ್ರಮಂಡಲಿ ದೇಶಭಾಗಗಳನ್ನು ಮೊದಲು ಬಿಟ್ಟುಕೊಡಬೇಕು. ಭೂಜಲಗಳ ಮೇಲೆ ಶತ್ರುಗಳು ನಡೆಯಿಸುತ್ತಿರುವ ರಾಕ್ಷಸಕೃತ್ಯಗಳನ್ನು ನಿಲ್ಲಿಸಿಬಿಡಬೇಕು. ನಂಬುಗೆಗರ್ಹವಾದ ಪ್ರಭುತ್ವವು ಜರ್ಮನಿಯಲ್ಲಿ ಸ್ಥಾಪಿತವಾಗಬೇಕು. ಎಂಬ ಮೂರು ಮುಖ್ಯವಿಷಯಗಳನ್ನು ಅಮೇರಿಕಾದ ಅಧ್ಯಕ್ಷರಾದ ವಿಲ್ಸನ್‌ರವರು ಜರ್ಮನರ ಸಂಧಿಪ್ರಾರ್ಥನೆಯ ಪತ್ರಿಕೆಗೆ ಕೊಟ್ಟ ಉತ್ತರದಲ್ಲಿ ತಿಳಿಯಿಸಿ ಅದಕ್ಕೆ ಪ್ರತ್ಯುತ್ತರವನ್ನು ಕೇಳಿದ್ದರು. ಇದಕ್ಕೆ ಜರ್ಮನರು ತಿಳಿಯಿಸಿರುವ ಉತ್ತರವೇನೆಂದರೆ—ತಾವು ಆಕ್ರಮಿಸಿರುವ ದೇಶಗಳನ್ನು ಬಿಡುವ ವಿಷಯದಲ್ಲಿ ಸೇನಾಕಾರ್ಯನಿರ್ವಾಹಕರು ನಿರ್ಣಯಿಸಬೇಕಾಗಿರುವುದೆಂತಲೂ, ತಾವು ನಡೆಯಿಸಿರುವ ಘೋರಕೃತ್ಯಗಳು ಪಲಾಯನಗೊಳ್ಳುವಾಗ ನಿರ್ವಾಹವಿಲ್ಲದೆ ಮಾಡಬೇಕಾಗುವುವೆಂತಲೂ, ಆದರೂ ಪ್ರಜೆಗಳ ಆಸ್ತಿಗಳನ್ನು ಯಾರೂ ದೋಚಿಕೊಳ್ಳದಂತೆ ಸೈನಿಕರಿಗೆ ಆಜ್ಞಾಪಿಸಿರುವೆವೆಂತಲೂ, ಶಾಂತಿಗೆ ಭಂಗತರುವಂಥ ಯಾವ ಘಾತುಕಕೃತ್ಯವನ್ನೂ ಜರುಗಿಸದಿರುವಂತೆ ತಮ್ಮ ಸಬ್‌ಮೆರೀನ್ ಅಧಿಕಾರಿಗಳಿಗೆ ಅಪ್ಪಣೆಮಾಡಿರುವೆವೆಂತಲೂ, ಆದರೂ ದೂರದಲ್ಲಿರುವ ಸಬ್‌ಮೆರೀನುಗಳಿಗೆ ಈ ಅಪ್ಪಣೆಯು ಮುಟ್ಟುವುದು ತಡವಾಗಿ ಏನಾದರೂ ನಡೆದರೆ ಅದಕ್ಕೆ ಉತ್ತರವಾದಿಗಳಾಗಲಾರೆವೆಂತಲೂ, ತಮ್ಮ ರಾಜ್ಯಾಂಗನಿರ್ಮಾಣದಲ್ಲಿ ಹೊಸ ಮಾರ್ಪು ನಡೆದಿದೆಯೆಂತಲೂ ಸಾರ್ವಜನಿಕ ಪ್ರಾತಿನಿಧ್ಯದಿಂದ ಏರ್ಪಟ್ಟ ರಾಜ್ಯಾಂಗಸಭೆಯವರ ಅಭಿಪ್ರಾಯಾನುಸಾರವಾಗಿ ಒಂದು ನೂತನ ಪ್ರಭುತ್ವವು ಜರ್ಮನಿಯಲ್ಲಿ ಏರ್ಪಟ್ಟಿದೆಯೆಂತಲೂ, ಅದರಿಂದ ಮುಖ್ಯಮಂತ್ರಿಯು ಪ್ರಜಾಪ್ರತಿನಿಧಿಗಳಿಗೆ ಉತ್ತರವಾದಿಯಾಗಿರುವನೆಂತಲೂ, ಶಾಂತಿಯನ್ನೇ ಆಗಲಿ ಯುದ್ಧವನ್ನೇ ಆಗಲಿ ನಿರ್ಣಯಿಸುವುದಕ್ಕೆ ಪ್ರಜಾಪ್ರತಿನಿಧಿಗಳ ಅಭಿಪ್ರಾಯವು ಮುಖ್ಯವಾಗಿರಬೇಕೆಂಬ ಒಂದಾನೊಂದು ಬಿಲ್ಲು ಇಷ್ಟರಲ್ಲೇ ತಮ್ಮ ರಾಜ್ಯಾಂಗ ಸಭೆಯ ಮುಂದಿಡಲ್ಪಡುವುದರಲ್ಲಿದೆಯೆಂತಲೂ ತಿಳಿಯಿಸಿರುತ್ತಾರೆ.

ಈ ಉತ್ತರದಿಂದ ಜರ್ಮನ್ ಪ್ರಭುತ್ವದಲ್ಲಿ ಪೂರ್ವದ ಸಾಂಗ್ರಾಮಿಕಾಧಿಕಾರವು ತಗ್ಗುವ ರೀತಿಯೇ ಆಗಲೀ ಕೈಸರರ ಅಧಿಕಾರ ಪರಿತ್ಯಾಗವಾಗಲೀ ಪ್ರಜಾಧಿಕಾರ ಪ್ರಾಬಲ್ಯವುಂಟಾಗುವುದೇ ಆಗಲಿ ತೋರುವುದಿಲ್ಲ. ಇತರ ವಿಷಯಗಳಿಗೆ ಅವರು ಕೊಟ್ಟಿರುವ ಉತ್ತರವೂ ಕೂಡ ಸರಳವಾಗಿಲ್ಲ. ಈ ಅತೃಪ್ತಿಕರವಾದ ಉತ್ತರಕ್ಕೆ ಮಿತ್ರಮಂಡಲಿಯವರು ಒಪ್ಪುವುದುಂಟೆ? ಜರ್ಮನರ ಈ ಪ್ರತ್ಯುತ್ತರವನ್ನು ಕೇಳಿ ಮಿತ್ರಮಂಡಲಿಯ ಪ್ರಸಿದ್ಧ ವಾರ್ತಾಪತ್ರಿಕೆಗಳು "ಇದೊಂದು ರಾಜಕೀಯ ಚಮತ್ಕಾರ, ಜರ್ಮನರು ಮಿತ್ರಮಂಡಲಿಯವರನ್ನು ಮೋಸಗೊಳಿಸಲು ಈ ಆಟವನ್ನು ಕಟ್ಟಿದ್ದಾರೆ. ಇವರು ಘಾತುಕರು, ಹಂತಕರು, ಇವರು ನಿರ್ಲೋಪಿಗಳಂತೆ! ಇವರ ಮಾತನ್ನು ನಂಬಲೇಕೂಡದು. ಇವರು ತಮ್ಮ ಕೋಟೆಕೊತ್ತಲಗಳನ್ನೂ ಯುದ್ಧನೌಕೆಗಳನ್ನೂ ವಶಪಡಿಸಿಕೊಟ್ಟಹೊರತು ಸಂಧಿರಾಯಭಾರವನ್ನು ನಡೆಯಿಸಲಾಗದು. ಜರ್ಮನ್ ಪಾರ್ಲಿಮೆಂಟ್ ಸಭಿಕರು ಬಿಳಿಬಾವುಟವನ್ನು ಹಿಡಿದುಕೊಂಡು ನಮ್ಮ ಸೇನಾಪತಿಗಳ ಬಳಿಗೆ ಬಂದು ಸಂಧಿಯನ್ನು ಬೇಡಿಕೊಂಡು ಬರಲಿ. ಅವರ ಬರೆವಣಿಗೆಗಳು ಬರೀ ಸುಳ್ಳು" ಎಂದು ಮೊದಲಾಗಿ ವ್ಯಾಖ್ಯಾನಮಾಡಿ, ಅವರ ಮಾತಿಗೆ ಕಿವಿಗೊಡದೆ ಮಿತ್ರಮಂಡಲಿಯವರು ಯುದ್ಧಮಾಡುವುದೇ ಸರಿಯೆಂದು ಸೂಚಿಸಿದುವು. ಜರ್ಮನರು ಬರೆದುಕೊಂಡಿದ್ದ ಆ ಪತ್ರಕ್ಕೆ ಅಮೇರಿಕಾದ ಅಧ್ಯಕ್ಷರು ತಾ|| ೨೪ ರಲ್ಲಿ ಕೊಡಿಸಿರುವ ಉತ್ತರದಲ್ಲಿ "ಇದುವರೆಗೆ ಯುದ್ಧವನ್ನು ಸಾಗಿಸಿದ

ತುರ್ಕಿಯು ಮಿತ್ರಮಂಡಲಿಯೊಡನೆ ಸಂಧಿಮಾಡಿಕೊಂಡಿತು.

ಜರ್ಮನಿ ನಿರಂಕುಶಾಧಿಕಾರಿಗಳ ಮಾತನ್ನು ಯಾವ ದೇಶದವರೂ ನಂಬುವದಿಲ್ಲ. ಸಂಧಿಯನ್ನು ಕುರಿತು ಮಾತನಾಡಬೇಕಾದರೆ ನೂತನ ಶಾಸನಪ್ರಕಾರ ದೇಶಾಧಿಕಾರವನ್ನೂ ಸೈನಿಕಾಧಿಕಾರದ ಮೇಲೆ ತಮ್ಮ ಅಧಿಪತ್ಯವನ್ನೂ ಸ್ಥಾಪಿಸಿಕೊಂಡಿರುವ ಪ್ರಜಾಪ್ರತಿನಿಧಿಗಳು ಮುಂದಕ್ಕೆ ಬಂದರೆ ಅವರೊಡನೆ ಮಾತನಾಡುವೆವೇ ಹೊರತು ಇನ್ನಾರೊಡನೆಯೂ ನಾವು ಚರ್ಚಿಸಲಾರೆವು" ಎಂದು ಹೇಳಿ ಕೈಜರರ ಮುಖಕ್ಕೆ ಸಗಣಿಯನ್ನು ಹಾಕಿದಂತೆ ಹೇಳಿಬಿಟ್ಟಿರುವರು. ಇದರಮೇಲೆ ಜರ್ಮನರು ತಾ|| ೨೮ರಲ್ಲಿ ಪ್ರತ್ಯುತ್ತರ ಕೊಟ್ಟಿದರಲ್ಲಿ "ಈಗಣ ಸಂಧಿಪ್ರಯತ್ನವನ್ನು ಜರ್ಮನ್ ಪ್ರಜಾಪ್ರತಿನಿಧಿಪ್ರಭುತ್ವದವರೇ ಮಾಡುತ್ತಿದ್ದಾರೆ. ಎಲ್ಲಸಂಗತಿಗಳನ್ನು ಪರಿಷ್ಕರಿಸುವುದಕ್ಕೂ ಇವರಿಗೇ ಹಕ್ಕಿರುವುದು. ಸಂಗ್ರಾಮಾಧಿಕಾರಿಗಳು ಇವರಾಜ್ಞೆಯನ್ನೇ ಶಿರಸಾವಹಿಸುವರು. ವಿಲ್ಸನ್‌ರವರು ಪ್ರಕಟಿಸಿರುವಂತೆ ನ್ಯಾಯವಾದ ಸಂಧಿಮಾಡಿಕೊಳ್ಳುವುದಕ್ಕೆ ಜರ್ಮನರು ನಿರೀಕ್ಷಿಸಿಕೊಂಡಿದ್ದಾರೆ" ಎಂದು ತಿಳಿಯಿಸಿರುತ್ತಾರೆ. ಇದರಿಂದ ಅವರಿಗೆ ಸಂಧಿಯಲ್ಲಿ ಎಷ್ಟು ಆತುರವಿದೆಯೆಂಬುದು ವ್ಯಕ್ತವಾಗುತ್ತದೆ. ಆದರೆ ಮಾತಿನಲ್ಲಿ ಪ್ರಜಾಪ್ರಭುತ್ವವಾಗಿದೆಯೆಂದು ಶತ್ರುಗಳು ಹೇಳಿದರೆ ಅಷ್ಟುಮಾತ್ರಕ್ಕೇ ಮಿತ್ರಮಂಡಲಿಯವರು ಒಪ್ಪುವಂತೆ ಕಾಣಲಿಲ್ಲ. ಕೈಜರರ ನಿರಂಕುಶಾಧಿಕಾರವು ತಪ್ಪಿದುದು ಸ್ಪಷ್ಟಪಡಬೇಕಾಗಿದೆ. ಜರ್ಮನಿಯ ಸಾಂಘಿಕವಾದಿಗಳು ಈಗಣ ನಿರಂಕುಶಪ್ರಭುತ್ವವನ್ನು ಅತಿ ನಿಕೃಷ್ಟವಾಗಿ ಕಂಡು, ಅವರ ರಾಜಕೀಯ ಸಭೆಯಲ್ಲೂ ಕೂಡ ಕೈಜರರು ರಾಜ್ಯಪರಿತ್ಯಾಗ ಮಾಡಿಯೇ ತೀರಬೇಕು; ಇಲ್ಲದಿದ್ದರೆ ನಾವುಗಳು ಮಿತ್ರಮಂಡಲಿ ಕಡೆಗೆ ಸೇರಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಸಾಕ್ಸನ್ ಮಂತ್ರಿವರ್ಗದವರೆಲ್ಲಾ ರಾಜೀನಾಮೆ ಕೊಟ್ಟುಬಿಟ್ಟರು. ಸಾಂಘಿಕ ಪಕ್ಷದವರ ಧೈರ್ಯವು ಹೆಚ್ಚುತ್ತಿದೆ. "ಜರ್ಮನರು ಅಸತ್ಯಸಮುದ್ರದಲ್ಲಿ ಕೊಚ್ಚಿಹೋಗುತ್ತಿದ್ದಾರೆ. ಈಗಣ ರಾಷ್ಟ್ರಾಧಿಪತಿಗಳೆಲ್ಲಾ ರಾಜೀನಾಮೆಕೊಟ್ಟು ಪ್ರಜಾಪ್ರಭುತ್ವವು ಏರ್ಪಟ್ಟರೆ ೨೪ ಗಂಟೆಗಳೊಳಗಾಗಿ ನಾವು ಮಿತ್ರಮಂಡಲಿಯೊಡನೆ ಸಂಧಿಮಾಡಿಕೊಂಡು ಸುಖವಾಗಿರುತ್ತೇವೆ" ಎಂದು ಪ್ರಜಾಪ್ರಮುಖನೂ ಈಗತಾನೇ ಸೆರೆಯಿಂದಬಿಡಲ್ಪಟ್ಟವನೂ ಆದ ಹೇರ್ ಐಸನರ್ ಎಂಬುವನು ಮಹಾಸಭೆಯಲ್ಲಿ ಉಪನ್ಯಾಸಮಾಡಿದ್ದಾನೆ. ಜರ್ಮನರ ಪಾರ್ಲಿಮೆಂಟಿನಲ್ಲಿ ರೂಲ್ ಎಂಬುವನು ರಾಜ್ಯವನ್ನು ಕೈಜರು ಕೂಡಲೇ ಪರಿತ್ಯಜಿಸಬೇಕೆಂದು ಭಾಷಣಮಾಡಲಾಗಿ, ಅಧ್ಯಕ್ಷರು ಇದು ಅಸಭ್ಯವಾದಮಾತೆಂದು ಹೇಳಿದನು. "ನೀವು ಸಭ್ಯತೆಯೆಂದ ಮಾತ್ರದಿಂದಲೇ ಕೈಜರು ಕ್ರಿಮಿನಲ್ ಕೋರ್ಟಿನ ವಿಚಾರಣೆಗೆ ಗುರಿಮಾಡಲ್ಪಡುವುದು ತಪ್ಪುವುದಿಲ್ಲ" ಎಂದು ಉತ್ತರಕೊಟ್ಟನು. ಜರ್ಮನ್ ಸಾಂಗ್ರಾಮಿಕಾಧಿಕಾರಿಗಳ ಅವಸ್ಥೆಯು ಈಗ ಹೀಗಾಗಿದೆ. ಪ್ಯಾರಿಸ್ ಪಟ್ಟಣದಲ್ಲಿ ಈಗ ಮಿತ್ರಮಂಡಲಿಯವರ ಸಭೆಯು ಕೂಡಿದೆ. ಅಲ್ಲಿಗೆ ಮಿತ್ರಮಂಡಲಿ ಕಡೆಯ ಮುಖ್ಯಸೇನಾಪತಿಗಳೂ ಮಂತ್ರಿಗಳೂ ಎಲ್ಲರೂ ಸೇರಿರುವರು. ತಾತ್ಕಾಲಿಕ ಸಂಧಿವಿಷಯವನ್ನೂ, ಅದು ನೆರವೇರದಿದ್ದರೆ ಮುಂದೆ ತೀಕ್ಷ್ಣವಾಗಿ ಯುದ್ಧವನ್ನು ಸಾಗಿಸಬೇಕಾದುದನ್ನೂ ಕುರಿತು ಇವರುಗಳು ಆಲೋಚಿಸುವರು.

ಪತ್ರವ್ಯವಹಾರ.

ಸಂಕೆಬೆನ್ನೂರು ಹಿರಿಯಮಠದ ಶ್ರೀಪಟ್ಟಾಧ್ಯಕ್ಷಸ್ವಾಮಿಗಳವರು

ಈ ಮಾಹೆ ತಾ|| ೧೨ ನೆಯ ಸ್ಥಿರವಾರ ರಾತ್ರಿ ಇನ್‌ಫ್ಲುಯಂಜಾ ಜ್ವರದಿಂದ ಲಿಂಗೈಕ್ಯರಾದರು. ಮರುದಿವಸ ಸ್ಥಳೀಯ ಭಕ್ತಮಾಹೇಶ್ವರರೇ ಮೊದಲಾದ ಅಶೇಷ ಮಹಾದೈವದವರು ವಿಧ್ಯುಕ್ತಪ್ರಕಾರ ಸಂಸ್ಕಾರಕ್ರಿಯೆಯನ್ನು ನೆರವೇರಿಸಿದರು. ಶ್ರೀಗಳವರಿಗೆ ಈ ಕಾಲಕ್ಕೆ ೪೮ ವರ್ಷಗಳಾಗಿದ್ದಿರಬಹುದು. ಇವರು ಸಂಸ್ಕೃತಪ್ರಾಕೃತಗಳಲ್ಲಿ ವಿಶಾರದರಾಗಿ ವೇದ, ವೇದಾಂತ, ಜ್ಯೋತಿಷ, ಪುರಾಣಾದಿಗಳಲ್ಲಿ ಅನುಭವವುಳ್ಳವರಾಗಿದ್ದರಲ್ಲದೆ, ಶ್ರೀಮದ್ವೀರಶೈವ ಧಾರ್ಮಿಕ ವಿಷಯಗಳಲ್ಲಿ ಈ ಪ್ರಾಂತಕ್ಕೆ ಪ್ರಮುಖರಾದ ಆಗಮಿಕರಾಗಿದ್ದರು. ಓರ್ವ ಶಿಷ್ಯ.

ಮುಕ್ಕಾಮು ಚಿಟಗೋಪಾ, ನಿಜಾಮು ಇಲಾಖಾ.

ಈ ನಮ್ಮ ಊರಲ್ಲಿ ಸುಮಾರು ಜನಸಂಖ್ಯೆಯು ೧೦,೦೦೦ ಕ್ಕಿಂತಲೂ ಕಮ್ಮಿಯಾಗಿರುವದು. ಇಲ್ಲಿ ಈವರೆಗೆ ಇನ್‌ಫ್ಲುಯಂಜಾಯೆಂಬ ಜ್ವರದಿಂದ ಸುಮಾರು ೨೫೦ ಜನರು ಬಿದ್ದಿರುವರು. ಮತ್ತು ಇದೆ ಜ್ವರದಿಂದ ನಿತ್ಯ ೧೦-೧೨ ಮರಣಗಳಾಗುತ್ತಿರುವವು. ಇಲ್ಲಿ ಬಡಜನರ ಸ್ಥಿತಿಯನ್ನು ಹೇಳತೀರದು. ಹೇಗೆಂದರೆ—ಮನೆಯಲ್ಲಿ ಉಂಡೇನೆಂದರೇ ಅನ್ನವಿಲ್ಲಾ, ಅಥವಾ ಭಿಕ್ಷೆಬೇಡಲಿಕ್ಕೆ ಹೋದರೆ ಜನರು ಥೂ, ಛೀ ಎನ್ನುವರು. ಮತ್ತು ಮೈಮೇಲೆ ಅರಿವೆಗಳಿಲ್ಲ. ಅಭಯಕೊಡುವ ಇಷ್ಟಮಿತ್ರರು ಮೊದಲೇ ಇಲ್ಲ. ಇಂತಹ ದುರವಸ್ಥೆಯು ಹಿಂದೆ ಎಂದಿಗೂ ಬಂದಿರಲಿಲ್ಲ, ಮತ್ತು ಮುಂದೆ ಬರುವಂತಿಲ್ಲ. ನಾವು ಪರಮೇಶ್ವರನನ್ನು ದೂಷಿಸುವದು ಉಚಿತವಲ್ಲ. ನಮ್ಮ ಕರ್ಮಫಲವನ್ನು ನಾವೇ ಅನುಭವಿಸಬೇಕು. ಸ್ಥಳೀಕ.

ಬೀರೂರು.

ಈ ಊರಿನಲ್ಲಿ ಇನ್‌ಫ್ಲುಯಂಜಾ ಎಂಬ ನೂತನಜ್ವರದಿಂದ ಅನೇಕರು ಬಾಯಲಿಮಲ್ಲಿ ಮಲಗಿದ್ದಾರೆ. ದಿನ ಒಂದಕ್ಕೆ 10-12 ಮರಣಗಳಾಗುತ್ತಾ ಇವೆ. ಈ ಊರಿನಲ್ಲಿ ಸಂತೆಯಲ್ಲಾಗಲಿ ಅಂಗಡಿಯಲ್ಲಾಗಲಿ ಅಕ್ಕಿ ರಾಗಿ ದೊರೆಯದೆ ಬಡಬಗ್ಗರಿಗೆ ಉಂಟಾಗಿರುವ ಸಂಕಟವನ್ನು ಸೂಚಿಸಲು ಸಾಧ್ಯವಿಲ್ಲ. ಈ ಊರಿನಲ್ಲಿ ಶ್ರೀಮಂತರೂ ಸಾಹುಕಾರರೂ ಅನೇಕರಿದ್ದಾಗ್ಯೂ ಕೂಡ ಬಡಬಗ್ಗರು ಪಡುತ್ತಿರುವ ಸಂಕಟವನ್ನು ಕಣ್ಣುಮುಚ್ಚಿಕೊಂಡು ತಮ್ಮ ಸ್ವಕಾರ್ಯದಲ್ಲಿ ದುರಂಧರರಾಗಿರುವುದನ್ನ ನೋಡಿದರೆ ತುಂಬಾ ವಿಷಾದ ಉಂಟಾಗುತ್ತದೆ. ಬೇರೆ ಕಡೆಯಿಂದ ಅಕ್ಕಿ ರಾಗಿಯನ್ನು ತರಿಸಿ ಅಸಲು ಬೆಲೆಗೆ ಮಾರಾಟಮಾಡುವಷ್ಟು ಚೈತನ್ಯವನ್ನು ಹೊಂದಿದ್ದಾಗ್ಯೂ ಕೂಡ ಈ ರೀತಿ ಮಾಡುವುದನ್ನ ನೋಡಿದರೆ ಯಾರಿಗೆತಾನೇ ವ್ಯಸನ ಉಂಟಾಗದಿರದು? ಇಷ್ಟೆಲ್ಲಾ ಪರ್ಯಾಲೋಚಿಸಿ ನೋಡಿದರೆ ಶ್ರೀಮಂತರಿಗೂ ಸಾಹುಕಾರರಿಗೂ ಸ್ವಪ್ನದಲ್ಲಿಯೂ ಕೂಡ ಪರೋಪಕಾರಮಾಡಬೇಕೆಂಬ ದಯಾರಸ ಕೊಂಚವೂ ಕೂಡ ಇರುವಂತೆ ತೋರಲಿಲ್ಲ. ಈಗಲಾದರೂ [illegible] ಅಕ್ಕಿ ರಾಗಿಗಳನ್ನು ದೊರೆಯುವ ಕಡೆಯಿಂದ ತರಿಸಿ ಅಸಲು ಬೆಲೆಗೆ ಮಾರಾಟಮಾಡಿ ಬಡಬಗ್ಗರು ಪಡುತ್ತಿರುವ ಸಂಕಟವನ್ನು ನಿವಾರಿಸುವರೆಂದು ನಂಬಿದ್ದೇನೆ. ಒಬ್ಬ ಸಾನುಭೂತಿ.

ಶಿರಾ.

ಇಲ್ಲಿ ಇನ್‌ಫ್ಲುಯಂಜಾ ಎಂಬ ಜ್ವರದಿಂದ ಪ್ರತಿನಿತ್ಯವೂ 10-12 ಜನಗಳು ಸಾಯುತ್ತಾ ಇದ್ದಾರೆ. ಗಾಡಿ 1 ಕ್ಕೆ 50 ರೂಪಾಯಿಗೆ ಮೇಲ್ಪಟ್ಟು ರಾಗಿಯನ್ನು ಮಾರಕೂಡದೆಂದು ನಿರ್ಬಂಧಪಡಿಸಿರುವದ್ದರಿಂದ ನಿನ್ನೆ ಸಂತೆಗೆ 1 ಗಾಡಿಯೂ ರಾಗಿ ಅಕ್ಕಿ ಸಹ ಬರಲಿಲ್ಲ. ಇದರಿಂದ ಬಡವರಿಗೆ ರಾಗಿ ಇಲ್ಲದೆ ಬಹಳ ತೊಂದರೆಯಾಯ್ತು. ಇದನ್ನು ನೋಡಿ ಮ|| ದಲ್ಲಾಳಿ ಇಬ್ರಾಹಿಂಖಾನ್ ಸಾಹೇಬರು ರಾಗಿಯನ್ನು ತರಿಸಿ ರೂಪಾಯಿ 1 ಕ್ಕೆ 11 ಸೇರಿನಂತೆ ಬಿಕರಿಮಾಡಿಸಿದರು. ಇನ್‌ಫ್ಲುಯಂಜಾ ಹಾವಳಿಯಿಂದ ಊರಲ್ಲಿ ಅಲ್ಲಲ್ಲಿ ಅನ್ನಶಾಂತಿಯೂ ದೇವತಾಪ್ರಾರ್ಥನೆಗಳೂ ನಡೆಯುತ್ತಿವೆ. ಮ|| ಇಬ್ರಾಹಿಂಖಾನ್ ಸಾಬರು ಮತ್ತು ಇತರ ಜನಗಳು ಸೇರಿ ಚಿಕ್ಕಕೆರೆ ಅಂಗಳದ ಭಾವಿ ಪಕ್ಕದಲ್ಲಿ ಬಡಜನಗಳಿಗೆ ಅನ್ನಹಾಕುವಂತೆ ಏರ್ಪಾಡು ಮಾಡಿರುತ್ತಾರೆ. ಮತ್ತು ಚೆಟ್ಟಿ ಸಿದ್ದಪ್ಪನವರ ಈಶ್ವರ ದೇವಸ್ಥಾನದಲ್ಲಿ ನವಗ್ರಹಜಪ, ಮೃತ್ಯುಂಜಯಜಪ, ಸೂರ್ಯಜಪ ಇವುಗಳನ್ನೂ ಮತ್ತು ಪೇಟೆಯಲ್ಲಿ ಭಜನೆಯನ್ನೂ ಸಹ ರಾಮಕೃಷ್ಣಪ್ಪನವರು, ಲಕ್ಷ್ಮಣರಾವ್‌ಯವರು, ವೆಂಕಟಾಚಲಯ್ಯನವರು ಇವರೆಲ್ಲಾ ಸೇರಿ ಮುಖವರ್ಜಿ ವಹಿಸಿ, ದೇವತಾಕಾರ್ಯಗಳನ್ನು ಮಾಡಲು ಬದ್ಧಕಂಕಣರಾಗಿ ನಿಂತಿರುವುದಲ್ಲದೆ 31-10-18 ನೆ ಗುರುವಾರದ ದಿನ ಬ್ರಾಹ್ಮಣರಿಗೂ ಇತರ ಪೇಟೆ ಎಲ್ಲಾ ಜನಗಳಿಗೂ ಸಂತರ್ಪಣೆ ಏರ್ಪಾಡು ಇಟ್ಟಿರುವುದು ತುಂಬಾ ಸ್ತೋತ್ರಾರ್ಹವಾಗಿದೆ. ಇವರೆಲ್ಲರೂ ಇಷ್ಟು ಮುಖವರ್ಜಿಯಿಂದ ದೇವತಾಕಾರ್ಯಗಳನ್ನು ಸಾಂಗವಾಗಿ ನೆರವೇರಿಸುತ್ತಿರುವುದಕ್ಕಾಗಿ ದೇವರು ಸನ್ಮಂಗಳವನ್ನುಂಟುಮಾಡಲೆಂದು ಕೋರುತ್ತೇನೆ. ಸ್ಥಳೀಕ.

ಗುಳೇದಗುಡ್ಡದ ವೀರಶೈವರ ಖೇದಕಾರಕ ಸಂಗತಿಯು.

ಪರಮಪೂಜ್ಯಪಾದರಾದ ಶ್ರೀ ಹುಚ್ಚೀಂದ್ರ ಮಹಾಶಿವಯೋಗಿವರ್ಯರು ಮಹಾಮಹಿಮರಾಗಿಯೂ, ವೇದಾಂತಾದಿ ಸಕಲ ಶಾಸ್ತ್ರಪಾರಂಗತರಾಗಿಯೂ ಮತಸುಧಾರಣೆಯ ಕಾರ್ಯದಲ್ಲಿ ಅವಿಶ್ರಾಂತ ಶ್ರಮವಹಿಸುವವರಾಗಿಯೂ ಇರುವ ಸಂಗತಿಯು ಇಡಿ ವಿಜಾಪೂರ ಜಿಲ್ಲೆಯ ಜನಾಂಗಕ್ಕೆ ವಿದಿತವಾದ ಸಂಗತಿಯೇ ಸರಿ. ಈ ಪೂಜ್ಯಪಾದರು ಚಿಕ್ಕಂದಿನಲ್ಲಿಯೇ ಅನೇಕ ಮಹಿಮೆಗಳನ್ನು ತೋರಿಸಿ ೧೮ ವರ್ಷ ವಯಸ್ಕರಾದಮೇಲೆ ಸಂಸ್ಕೃತವನ್ನು ಪ್ರಾರಂಭಿಸಿ ಸಾಹಿತ್ಯವನ್ನೂ ವ್ಯಾಕರಣಾದಿ ಶಾಸ್ತ್ರಗಳನ್ನೂ ಈ ದೇಶದಲ್ಲಿಯೇ ಅಭ್ಯಸಿಸಿ, ಸಮಗ್ರ ೪-೫ ವರ್ಷ ಪರ್ಯಂತ ಶ್ರೀ ಕಾಶೀಕ್ಷೇತ್ರದಲ್ಲಿ ಪೂರ್ವಮೀಮಾಂಸ ಉತ್ತರಮೀಮಾಂಸಾದಿ ದೊಡ್ಡದೊಡ್ಡ ಶಾಸ್ತ್ರಗಳನ್ನಭ್ಯಾಸಮಾಡಿ ಈ ದೇಶಕ್ಕೆ ಬಂದು ಅಧಿಕಾರಹೊಂದಿ ಈ ಮತದ ಮಾಹೇಶ್ವರವರ್ಗವು ಸುಧಾರಿಸಬೇಕೆಂಬ ಹಂಬಲದಿಂದ ಈ ಪುರದ ಶಾಖಾನಗರವಾದ ಕೋಟಕಲ್ಲೆಂಬ ಗ್ರಾಮದ ತಮ್ಮ ಮಠದಲ್ಲಿ ಪಾಠಶಾಲೆಯನ್ನು ಸ್ಥಾಪಿಸಿ ೨೫ ಜನ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಕೃತಾರ್ಥರನ್ನಾಗಿ ಮಾಡುತ್ತಿದ್ದರಿಷ್ಟೇ ಅಲ್ಲ. ಊರಲ್ಲಿಯ ಸಣ್ಣ ದೊಡ್ಡ ನ್ಯಾಯಗಳೆಲ್ಲವೂ ಇವರ ಸನ್ನಿಧಿಯಲ್ಲಿಯೇ ನಿರ್ಣಯವಾಗುತ್ತಿದ್ದು ಕೋರ್ಟು ಮೊದಲಾದ ಸ್ಥಳಗಳಿಗೆ ಹೋಗುವ ಪ್ರಸಂಗವೇ ಬರುತ್ತಿದ್ದಿಲ್ಲ. ಪರಮತೀಯರು ಕೂಡಾ ಈ ಮಹಾನುಭಾವರನ್ನು ಇಷ್ಟದೇವತೆಯೆಂದು ಭಾವಿಸುತ್ತಿದ್ದರು. ಇಂಥ ತೇಜೋರಾಶಿಯು ಈ ಗ್ರಾಮದ ವೀರಶೈವರ ಇಷ್ಟೇಯಾಕೆ? ಇಡೀ ವೀರಶೈವಜನಾಂಗದ ದುರ್ದೈವಯೋಗದಿಂದ ಇದೇ ಕಾಳಯುಕ್ತಿನಾಮಸಂವತ್ಸರದ ಅಶ್ವಯುಜ ಶುದ್ಧ ವಿಜಯದಶಮಿ ಸೋಮವಾರ ಸೂರ್ಯೋದಯಾನಂತರ ಶಿವೈಕ್ಯರಾದ ಸಂಗತಿಯನ್ನು ತಿಳಿಸಲಿಕ್ಕೆ ವಿಷಾದವಾಗುತ್ತದೆ. ವೀರಶೈವ ಸದ್ಭಕ್ತ.

ಕಾಲವೈಚಿತ್ರ್ಯದ ಶೋಚನೀಯ ವಿಷಯ.

ಅಣಿಯಾದ ಮುತ್ತುಗಳನ್ನೇ ಕಳೆದುಕೊಳ್ಳುತ್ತಿರುವಂತೆ ನಮ್ಮ ಮತಸುಧಾರಕಮಂಡಲಿಯ ಪ್ರಮುಖರಲ್ಲೊಬ್ಬೊಬ್ಬರು ಶಿವನ ಸಭೆಯನ್ನಲಂಕರಿಸುತ್ತಿರುವುದು ಪರಮ ವಿಷಾದಜನಕವಾಗಿದೆ. ನಿಜಾಮು ಇಲಾಖೆಯ ವೀರಶೈವ ನಿರಾಭಾರಿ ಗುರುಕುಲವರ್ಗದ ಮಠಗಳಲ್ಲಿ ಸೀರಡಗುಂಭದ ಪಶ್ಚಿಮಾದ್ರಿ ಮಠವೂ ತತ್ಸಂಬಂಧವಾದ ರಾಮಗಡ್ಡಿಯ ಮಠವೂ ಇವೆರಡು ಜನಸಾಮಾನ್ಯಮಧ್ಯದಲ್ಲಿ ತುಂಬಾ ಗೌರವಪ್ರತಿಷ್ಠೆಗಳನ್ನು ಪಡೆದು, ದೊರೆತನದವರಿಂದಲೂ ಕೊಡಲ್ಪಟ್ಟ ಅನೇಕ ಭೂದಾನಗಳಿಂದ ಮಠಾಧೀಶರಾದ ಸ್ವಾಮಿಗಳವರು ತಮ್ಮ ಆಶ್ರಮಧರ್ಮ ಪರಾಯಣತೆಯಲ್ಲಿ ತುಂಬಾ ಬದ್ಧಾದರರಾಗಿ ರಾಜಯೋಗವನ್ನನುಭವಿಸುತಲಿದ್ದುದಲ್ಲದೆ ಸಮಾಜಸುಧಾರಣೆಯಲ್ಲು ತುಂಬಾ ಇಷ್ಟವುಳ್ಳವರಾಗಿ ತತ್ಸಂಬಂಧಿಕಾರ್ಯಗಳನ್ನು ಆಚರಣೆಯಲ್ಲಿ ತಂದ ಅನತಿಕಾಲದಲ್ಲಿಯೇ ಹತಭಾಗ್ಯರಾದ ಈ ನಾಡಿನ ವೀರಶೈವರ ಕರ್ಮಫಲದಿಂದ ಸೀರಡಗುಂಭದ ಶ್ರೀ ಸಿದ್ಧಲಿಂಗಸ್ವಾಮಿಗಳು ಇದೇ ಅಶ್ವಯುಜ ಶು|| ೧, ಮಂದವಾರದಲ್ಲು ರಾಮಗಡ್ಡಿಯ ಶ್ರೀ ಸಿದ್ಧಲಿಂಗಸ್ವಾಮಿಗಳವರು ಶು|| ೩ ಸೋಮವಾರದಲ್ಲೂ ಇಬ್ಬರೂ ಮೂರೇ ದಿವಸಗಳ ಅಂತರದಲ್ಲಿ ಒಬ್ಬರೊಡನೆ ಒಬ್ಬರು ಪ್ರಯಾಣಿಸಿದಂತೆ ನಮ್ಮಗಳ ಸಂಸರ್ಗವನ್ನು ತ್ಯಜಿಸಿ ಅಶೇಷ ವೀರಶೈವವರ್ಗವನ್ನು ಚಿಂತಾಸಾಗರದಲ್ಲಿ ಮುಳುಗಿಸಿ ಶಿವೈಕ್ಯರಾದ ಈ ದುಃಖದಾಯಕವಾದ ವಿಷಯವು ಯಾರಿಗೆತಾನೇ ಪರಿತಾಪಕರವಾಗದಿರದು? ಹಾ! ವಿಧಿವಿಲಾಸವು ದುರವಗಾಹವಾದದ್ದು. ರಾಮಗಡ್ಡಿಯ ಶ್ರೀಗಳವರು ಗತವರ್ಷತ್ರಯದಿಂದಲೂ ಮಠದಲ್ಲಿ ಸಂಸ್ಕೃತ ಪಾಠಶಾಲೆಯೊಂದನ್ನೂ ಶಾಖಾಶಿವಯೋಗ ಮಂದಿರವನ್ನೂ ಸ್ಥಾಪಿಸಿದ್ದರಿಂದ ಅವರು ಕೈಕೊಂಡ ಕಾರ್ಯಗಳು ತಕ್ಕಮಟ್ಟಿಗೆ ಉನ್ನತಾವಸ್ಥೆಗೆ ಬಂದಿದ್ದುವು. ಮತ್ತು ಈ ವರ್ಷಾರಂಭ ನಾರಾಯಣಪೇಟೆಯಲ್ಲಿ ಅವರು ತಮ್ಮ ನಿವಾಸಸ್ಥಲವನ್ನೇರ್ಪಡಿಸಿ ಅಲ್ಲಿಯ ಮತಹಿತಚಿಂತಕರಾದ ಭಕ್ತಶಿರೋಮಣಿಗಳ ಅವಲಂಬನೆಯ ಮೂಲಕ ಮತಸುಧಾರಣಾರೂಪ ಕಾರ್ಯಗಳನ್ನು ನಡೆಸುತ್ತ ಬಂದುದಲ್ಲದೆ ಶ್ರೀಗಳವರ ಸದ್ಬೋಧಾಮೃತಪಾನದಿಂದ ಪರಿತೃಪ್ತರಾದ ಜನಾಂಗದ ಆಚಾರಗಳು ಸುಧಾರಣೆಗೊಳ್ಳುತ್ತ ಬಂದಿದ್ದುವು. ಗತಮಾಸದಲ್ಲಿ ನಾರಾಯಣಪೇಟೆಯ ಅಸ್ತಿಕಶಿರೋಮಣಿಗಳೆಲ್ಲರೂ ಪರಮಪೂಜ್ಯಶ್ರೀ ಹಾನಗಲ್ಲು ಶ್ರೀ ಕುಮಾರಮಹಾಸ್ವಾಮಿಗಳನ್ನು ಬರಮಾಡಿಕೊಂಡು ಚಿಕ್ಕದೊಂದು ಪ್ರಾಂತಿಕಸಭೆಯನ್ನು ೨ ದಿವಸಗಳು ಕೂಡಿಸಿದರು. ಕೈ|| ಶ್ರೀಗಳವರ ಅವಾಸವು ಇನ್ನು ಕೆಲಕಾಲ ಆಗಿದ್ದರೆ ಈ ಪ್ರಾಂತದ ವೀರಶೈವರ ಆಚಾರಲೋಪವು ನಿವಾರಣೆಗೊಳ್ಳುವದೆಂಬ ಪೂರ್ಣನಂಬುಗೆಯು ಸಮಾಜಬಂಧುಗಳಿಗೆಲ್ಲ ಇತ್ತು. ಈ ಆಶಾವಲ್ಲರಿಯು ಕಾಲಚಕ್ರಪ್ರಹತಿಯಿಂದ ಕತ್ತರಿಸಲ್ಪಟ್ಟಿತು. ಈಶ್ವರೇಚ್ಛೆಗೆ ಪ್ರತಿ ಇಲ್ಲ. ಉಭಯವಮುಖ ಮಠಗಳಿಗೂ ಅರ್ಹರಾದ ಯೋಗ್ಯತಾಸಂಪನ್ನರನ್ನು ಮಠಾಧಿಕಾರಕ್ಕೆ ನಿಯಮಿಸುವುದೇ ಮುಂದಾದ ಕಾರ್ಯಭಾರವು ಈ ನಾಡಿನ ಮಠಾಭಿಮಾನಿಗಳ ತಲೆಯಮೇಲೆ ಇದೆ. ಅವರ ಮುಖ್ಯಸೂತ್ರವು ಪರಮಪೂಜ್ಯಶ್ರೀ ಹಾನಗಲ್ಲು ಮಹಾಸ್ವಾಮಿಗಳವರ ಹಸ್ತದಲ್ಲಿದೆ. ಈ ವಿಷಯದಲ್ಲಿ ತುಂಬಾ ಅನುಭವಿಗಳಾದ ಶ್ರೀ ಹಾನಗಲ್ಲು ಮಹಾಶ್ರೀಗಳವರು [illegible]ಯಿಂದ ಈ ಮಹಾಕಾರ್ಯವನ್ನು ಸಾಂಗವಾಗಿಸುವರೆಂದು ನಂಬುತ್ತೇನೆ.

[illegible] ಬಸವಲಿಂಗಪ್ಪ ಮುಲ್ಲಾಳ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 46

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಲ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಲ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೮ ನೆಯ ಇಸವಿ ನವಂಬರ್ ತಾ|| ೩ ರಿಂದ ೧೯೧೮ ನೆಯ ನವಂಬರ್ ತಾ|| ೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಆಶ್ವಯುಜ ಬ|| ಅಮಾವಾಸ್ಯೆಯಿಂದ ಕಾರ್ತಿಕ ಶು|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
3	[1]ಭಾನು	ಅಮಾ	47-59	ಸ್ವಾತಿ	59-10	18
4	[2]ಸೋಮ	ಪಾಡ್ಯ	52-53	ವಿಶಾಖ	60	19
5	[3]ಮಂಗಳ	ಬಿದಿಗೆ	57-2	ವಿಶಾಖ	4-58	20
6	ಬುಧ	ತದಿಗೆ	60	ಅನೂ	10-1	21
7	ಗುರು	ಚೌತಿ	60	ಜ್ಯೇಷ್ಠ	14-4	22
8	ಶುಕ್ರ	ಚೌತಿ	1-15	ಮೂಲ	16-53	23
9	ಶನಿ	ಪಂಚ	1-40	ಪೂಷಾ	18-26	24

(1) ಸರ್ವೇಷಾಮಮಾವಾಸ್ಯಾ, ಕೇದಾರೇಶ್ವರವ್ರತಂ, ಪದ್ಮಕಂ. (2) ದೀಪಾವಳಿ, ಕಾಮಧೇನುಪೂಜಾ, ಬಲೀಂದ್ರಪೂಜಾ, ಕಾರ್ತಿಕಸ್ನಾನಾರಂಭಂ. (3) ಸಫರ್‌ಪ್ರಾರಂಭ.

ಮೈಸೂರ್: ವೈ. [illegible] [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 134.

ಮೈಸೂರು ಸ್ಟಾರ್

REGISTERED NO M. 134.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಳಾಲೀಲಾಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ವಾಕಲಿತ ಸಾದ್ಗುಣ್ಯಾಲವಾಲಂ ವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆ ಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ನವಂಬರ್ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೪೫

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿಸಲಾಗಿದೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ನಂದವರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

MADRAS
MAIL
WATCH
WITH 15
PRESENTS

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಥಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸವಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೀಸಣಿಗೆ 1, ಕಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅಕ್ಷರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
48 9, ಇರುಳಪ್ಪನವೀಧಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೮೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇಪ್ಪಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಚಿ, ಜಡ್ಡು, ಗುಪ್ತವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಕುತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗಬೇಕೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದೇಶಕ್ಕೆ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತವೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
26 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ದುಡ್ಡಿಗೆ ದುಡ್ಡು ಲಾಭ!

ಪಡಿದುಕೊಳ್ಳಲಿಚ್ಛಿಸುತ್ತಿದ್ದರೆ ಈಗಿಂದೀಗ್ಗೇ ಆರ್ಡರ ಕಳುಹಿಸಿ ತರಿಸಿಕೊಳ್ಳಿರಿ!!

೧. ಸುವಾಸಿಕ ಹುರುಕಿನಔಷಧ—ಬೆಲೆ ೧ಕ್ಕೆ ೧೪. ೨೫ಕ್ಕೆ ೧-೪-೦.
೨. ಕಣ್ಣುಬೇನೆಯಔಷಧ—ಚೀಟು-೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೩. ಹೇಮುಕೀರುವಾತಕಚೂರ್ಣ—೧ಕ್ಕೆ ೩ಪೈ. ೧೦೦ಕ್ಕೆ ೧-೪-೦.
೪. ಭಾಸ್ಕರಕ ಗುಳಿಗೆ—೩೨ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೫. ಕಾಲರಾಪಿಲ್ಸ—೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ.
೬. ಅಂಟಸೌಚದಮೇಲೆ ಗುಳಿಗೆ—೩೨ಕ್ಕೆ ೧ರೂ. ೧೦೦ಕ್ಕೆ ೩ ರೂ.
೭. ಶಕ್ತಿವರ್ಧಕಮಾತ್ರೆ—೨೫ ಕ್ಕೆ ೧ ರೂ. ೧೦೦ ಕ್ಕೆ ೩-೮-೦.
೮. ದನಗಳ ಎಲ್ಲಾ ರೋಗಕ್ಕೆ ಚೂರ್ಣ—೧೦ ತೊಲಕ್ಕೆ ೧೨ ಆಣೆ.
೯. ಬಾಲಸುಧಾ—ಬಾಟ್ಲಿ ೧ ಕ್ಕೆ ೧೨ ಆಣೆ.
೧೦. ನೀಲಿ ಕಪ್ಪು ಮತ್ತು ಕೆಂಪು ಮಸಿಯಗುಳಿಗೆ—೧೦೦ಕ್ಕೆ ೧-೪-೦.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಔಷಧಗಳು ದೊರಕುವ ಒಂದೇ ಸ್ಥಳ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
46 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 47

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಲ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಲ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ನವಂಬರ್ ತಾ|| ೧೦ ನೆಯ ಭಾನುವಾರ.

ಇನ್‌ಫ್ಲುಯೆಂಜಾ.

ರಾಜಧಾನಿಯಲ್ಲಿ ಇದರ ಹಾವಳಿಯು ಕಡಿಮೆಯಾಗುತ್ತಲಿದೆ. ದಿನಂಪ್ರತಿ ಈ ರೋಗದಿಂದಾಗುವ ಮರಣಗಳು ೨೦ ರ ಒಳಗೇ ಇಳಿದಿರುತ್ತವೆ. ಇನ್ನು ೧-೨ ವಾರಗಳೊಳಗಾಗಿ ಬಹಳ ಕಡಿಮೆಯಾಗಿ ಹೋದೀತೆನ್ನುವುದಕ್ಕೆ ಸಂಶಯವಿಲ್ಲ. ಇದರ ಉಲ್ಬಣವನ್ನು ತಡೆಯುವುದಕ್ಕೂ ರೋಗಪೀಡಿತರಾದ ಅಸಹಾಯರಿಗೆ ಔಷಧಪಥ್ಯಾದಿಗಳನ್ನು ಒದಗಿಸುವುದಕ್ಕೂ ಆದರವನ್ನೂ ಕನಿಕರವನ್ನೂ ಮುತುವರ್ಜಿಯನ್ನೂ ತೋರಿಸಿದ ಅಧಿಕಾರಿ ವರ್ಗದವರಿಗೂ ಪ್ರಜಾಪ್ರಮುಖರಿಗೂ ಪುರವಾಸಿಗಳು ವಿಶೇಷ ಕೃತಜ್ಞರಾಗಿರುವರು. ಶ್ರೀಮನ್ಮಹಾರಾಜರವರ ಪ್ರಜಾವಾತ್ಸಲ್ಯಪ್ರಭಾವವು ಈಗಣ ಕಷ್ಟಕಾಲದಲ್ಲಿ ಪ್ರಜೆಗಳಿಗೆ ಬಲುಮಟ್ಟಿಗೆ ಮನದಟ್ಟಾಯಿತು. ಬೆಂಗಳೂರಿನಲ್ಲೂ ಈ ರೋಗದ ಹಾವಳಿಯು ಶಮನವಾಗುತ್ತ ಬರುತ್ತಿದೆ. ಗ್ರಾಮಾಂತರಗಳಲ್ಲಿ ಮಾತ್ರ ಇನ್ನೂ ಇದರ ಹಾವಳಿಯು ವಿಶೇಷವಾಗಿದೆಯೆಂದೇ ವರ್ತಮಾನವಿದೆ. ಶ್ರೀಮನ್ಮಹಾರಾಜರ ಸದ್ಧರ್ಮಪ್ರಭಾವದಿಂದಲೂ ದೈವಕೃಪೆಯಿಂದಲೂ ಅವರ ಕಷ್ಟಗಳು ಬೇಗನೆ ಪರಿಹಾರವಾಗಬೇಕಾಗಿದೆ. ಅವರುಗಳಿಗೆಲ್ಲಾ ಔಷಧಗಳೂ ಪಥ್ಯವೂ ಒದಗಿಸಲ್ಪಡುವುದು ಅಸಾಧ್ಯ. ಲಂಘನವೇ ಈ ರೋಗಕ್ಕೆ ಪರಮೌಷಧವೆಂದು ಅನೇಕ ಗ್ರಾಮಾಂತರದವರು ತಿಳಿದುಕೊಂಡು ಆಚರಿಸುತ್ತಿರುವುದು "ಅಭಾವೇವಿರಕ್ತಿಃ" ಎಂಬ ಗಾದೆಗೆ ಅನುಗುಣವಾಗಿದೆ. ಅಸಹಾಯರಾದ ಆ ದೀನಪ್ರಜೆಗಳಿಗೆ ಕ್ಷಾಮದ ಜತೆಗೆ ಈ ರೋಗೋಪದ್ರವವೂ ತಟ್ಟಿ ಕಂಗೆಡಿಸಿರುವುದು ಬಹು ಭಯಂಕರವಾಗಿದೆ. ಈಗಾಗಲೇ ಈ ರೋಗದಿಂದ ಸಂಸ್ಥಾನದ ಪ್ರಜಾವರ್ಗದಲ್ಲಿ ನೂರಕ್ಕೆ ೨ಕ್ಕೆ ಕಡಿಮೆಯಿಲ್ಲದಂತೆ ಪ್ರಜಾನಾಶವಾಗಿರಬೇಕೆಂದು ಊಹಿಸಲ್ಪಟ್ಟಿದೆ. ಹಾಗಾದರೂ ೧ ಲಕ್ಷದ ಮೇಲೆಯೇ ಪ್ರಜಾನಾಶವಾದಂತಾಯಿತು. ಈ ರೋಗದ ಭೀಕರಾವಸ್ಥೆಯು ಯಾವಾಗ್ಗೂ ೬ ವಾರಗಳ ಕಾಲ ಇರುವುದೆಂದು ಅನುಭವಿಗಳು ಹೇಳುತ್ತಿದ್ದಾರೆ. ಅದೇ ನಿಜವೆಂದು ಕಾಣುತ್ತಿದೆ. ಈಗಣ ಸ್ವಾತಿ-ವಿಶಾಖೆ ಮಳೆಗಳು ಚೆನ್ನಾಗಿ ನಡೆಯಿಸಿ, ನಿಂತಿರುವ ಪೈರುಗಳು ಅನುಕೂಲವಾಗಿರುವುದರಿಂದಲೂ ೧-೨ ತಿಂಗಳುಗಳಲ್ಲಿ ನೂತನ ಧಾನ್ಯಗಳು ಬರುವುದರ ಜತೆಗೆ ಜಗದ್ಭೀಕರವಾದ ಯುದ್ಧವೂ ಕೊನೆಮುಟ್ಟುವ ಸ್ಥಿತಿಯಲ್ಲಿರುವುದರಿಂದಲೂ, ಅಚಿರಕಾಲದಲ್ಲೇ ದೇಶಕ್ಕೆ ರೋಗಭೀತಿ, ತಗ್ಗು ಬೆಲೆಯ ಭೀತಿ, ಧಾನ್ಯಾಭಾವದ ಭೀತಿ—ಇವುಗಳೆಲ್ಲಾ ತೊಲಗಿ ಸುಖಸ್ಥಿತಿಗೆ ಬಂದೀತೆಂದು ನಿರೀಕ್ಷಿಸಬಹುದಾಗಿದೆ.

ರಾಜಧಾನಿಯಲ್ಲಿ ಅಕ್ಕಿ ರಾಗಿಗಳ ಕೊರತೆ.

ಈ ಪಟ್ಟಣದಲ್ಲಿ ಯಾವ ಪೇಟೆಯಲ್ಲಿ ಯಾವ ಅಂಗಡಿಗೆ ನುಗ್ಗಿದರೂ ಅಕ್ಕಿಯು ಸಿಕ್ಕುವಹಾಗಿಲ್ಲ. ಮ್ಯುನ್ಸಿಪಾಲಿಟಿಯವರು ಸರ್ಕಾರದ ಸಹಾಯದಿಂದ ಸಾಧ್ಯವಾದಷ್ಟು ಅಕ್ಕಿ ರಾಗಿಗಳನ್ನು ಒದಗಿಸಿಕೊಂಡು ಸ್ವಂತವಾಗಿ ೪-೫ ಕಡೆ ಅಂಗಡಿಗಳನ್ನಿಡಿಸಿ ಅಕ್ಕಿಯನ್ನು ರೂ. ಗೆ ೬ ಸೇರಿನಂತೆಯೂ, ರಾಗಿಯನ್ನು ೧೨ ಸೇರಿನಂತೆಯೂ ಮಾರಿಸುತ್ತಿದ್ದಾರೆ. ಈ ಏರ್ಪಾಟೂ ಇಲ್ಲದಿದ್ದರೆ ಬಡಬಗ್ಗರು ಇಷ್ಟರೊಳಗೆ ಎಷ್ಟು ಅತ್ಯಾಚಾರಗಳನ್ನು ನಡೆಯಿಸಿಬಿಡುತ್ತಿದ್ದರೋ, ಯಾರುಯಾರು ಅದರ ಅನರ್ಥಗಳನ್ನು ಅನುಭವಿಸಬೇಕಾಗುತ್ತಿದ್ದಿತೋ ಹೇಳಲಾಗುವುದಿಲ್ಲ. ಅದನ್ನೆಲ್ಲಾ ತಪ್ಪಿಸಿದ ಸ್ಥಲಾಧಿಕಾರಿಗಳಿಗೂ ಗೌರ್ನಮೆಂಟಿಗೂ ಪ್ರಜೆಗಳು ಎಷ್ಟು ಕೃತಜ್ಞರಾಗಿದ್ದರೂ ತೀರದು. ಹೀಗಿರುವಲ್ಲಿ ಇಂಥ ಸಮಯದೊಳಗೆ ಉಪಪನ್ನರಾಗಿ ಧಾನ್ಯಗಳನ್ನು ಶೇಖರಿಸಿಟ್ಟಿರುವ ಜನರು ಸ್ವಲಾಭೈಕದೃಷ್ಟಿಯಿಂದ ಅಧಿಕಾರಿಗಳ ಪ್ರಜಾಹಿತಕಾರ್ಯಗಳಿಗೆ ಸಹಾಯಮಾಡದೆ ವಂಚಿಸುವುದು ಎಷ್ಟು ಅನ್ಯಾಯವೂ ಅಧರ್ಮವೂ ಆಗಿರುವುದೆಂಬುದನ್ನು ಹೇಳಬೇಕೆ? ತಕ್ಕ ಬೆಲೆಯನ್ನು ಪಡೆದುಕೊಂಡು ತಮ್ಮಲ್ಲಿರುವ ಧಾನ್ಯಗಳನ್ನು ಸರ್ಕಾರದ ವಶಕ್ಕೆ ಒಪ್ಪಿಸಿದರೆ ಗೌರವವೂ ಉಳಿಯುವುದು, ಇಂಥ ಕಷ್ಟಕಾಲದಲ್ಲಿ ವಿಶೇಷ ಲಾಭವನ್ನೇ ನೋಡದೆ ಬಡವರ ಕಷ್ಟಪರಿಹಾರಕ್ಕೆ ಸಹಾಯಮಾಡಿದ ಪುಣ್ಯವೂ ಯಶಸ್ಸೂ ಬರುವುದು. ಅದನ್ನು ಬಿಟ್ಟು ಸರ್ಕಾರವನ್ನು ಮೋಸಗೊಳಿಸಿ ದೊಡ್ಡವರಾಗುತ್ತೇವೆಂದು ತಿಳಿದುಕೊಂಡಿರುವವರು ಭಗವಂತನನ್ನು ವಂಚಿಸಿದಂತಾಗುವುದೇ ಸರಿ. ಸರ್ಕಾರದವರಾದರೊ ಪ್ರಜೆಗಳ ಪ್ರಾಣ ಮಾನವನ್ನು ಕಾಪಾಡುವ ಮುಖ್ಯ ಕಾರ್ಯದಲ್ಲಿ ತಮ್ಮ ಯಾವಚ್ಛಕ್ತಿಯನ್ನೂ ವಿನಿಯೋಗಿಸದೆ ಇರಲಾರರು. ದೇಶರಕ್ಷಕಶಾಸನವು ಅವರಿಗೆ ಈಗ ಬೇಕಾದಷ್ಟು ಅಧಿಕಾರವನ್ನಿತ್ತಿರುವುದು. ನ್ಯಾಯಮಾರ್ಗದಿಂದ ಸರಿಯಾದ ಪ್ರತಿಫಲವನ್ನು ಪಡೆದುಕೊಂಡು ತಮ್ಮಲ್ಲಿರುವ ದವಸಗಳನ್ನು (ತಮ್ಮ ಸಂಸಾರಕ್ಕೆ ಅವಶ್ಯಕವಾದಷ್ಟನ್ನು ಇಟ್ಟುಕೊಂಡು ಉಳಿದುದನ್ನು) ಕೊಟ್ಟುಬಿಡದಿದ್ದರೆ ಸರ್ಕಾರದವರು ಜಪ್ತಿಮಾಡಿಸಿ ತೆಗೆದುಕೊಂಡು ಬಡಬಗ್ಗರಿಗೆ ಮಾರಿಸದೆ ಬಿಡರು. ಹಾಗೆ ಮಾಡಿಸಿಕೊಳ್ಳುವವರೆಗೂ ಎಚ್ಚರುಗೊಳ್ಳದಿರುವುದು ಬುದ್ಧಿವಂತರ ಲಕ್ಷಣವಲ್ಲ. ಈಗ ಧಾನ್ಯಗಳು ಒದಗದಿರುವುದರಿಂದಲೇ ಮ್ಯುನ್ಸಿಪಾಲಿಟಿಯವರು ಹೆಚ್ಚು ಅಂಗಡಿಗಳನ್ನು ಇಡಿಸಿ ಸರ್ವರಿಗೂ ತೊಂದರೆಯಿಲ್ಲದಂತೆ ಧಾನ್ಯವು ದೊರೆಯುವ ಹಾಗೆ ಮಾಡಲು ಅಸಾಧ್ಯವಾಗಿದೆ. ಶ್ರೀಮನ್ಮಹಾರಾಜರು ಮೊದಲಾಗಿ ಇಲ್ಲಿಯ ಸರ್ಕಾರಾಧಿಕಾರಿಗಳೂ ಈಗ ಈ ಭಾಗಕ್ಕೇ ವಿಶೇಷ ಗಮನವನ್ನಿತ್ತಿದ್ದಾರೆ. ಇಂಥ ಕಾಲದಲ್ಲಿ ವರ್ತಕರುಗಳು ಸಂಕುಚಿತಭಾವವನ್ನು ತೋರಿಸುವುದು ಧರ್ಮವಾಗಿಲ್ಲ. ಕೆಲ ವರ್ತಕರು ರಾತ್ರಿವೇಳೆ ಮೋಸದಿಂದ ಹೆಚ್ಚು ಬೆಲೆಗೆ ಹೊರಕ್ಕೆ ಅಕ್ಕಿಯನ್ನು ಸಾಗಿಸುತ್ತಿರುವರೆಂದು ವಾರ್ತೆಯಿದೆ. ಕೆಲವರ ಮಳಿಗೆಗಳಲ್ಲೂ ಮನೆಗಳಲ್ಲೂ ವಿಶೇಷವಾಗಿ ಅಕ್ಕಿಯೂ ಬತ್ತವೂ ಗುಪ್ತವಾಗಿಡಲ್ಪಟ್ಟಿದೆಯೆಂದು ವರ್ತಮಾನವಿದೆ. ರೈಲ್ವೆ ಕಂಪೆನಿಯ ಉದ್ಯೋಗಸ್ಥರ ಸಹಾಯದಿಂದ ಹೊರಕ್ಕೆ ನಾಮಾಂತರದಿಂದ ಅಕ್ಕಿಯು ಸಾಗಿಹೋಗುತ್ತಲಿದೆಯೆಂದೂ ವರ್ತಮಾನವಿದೆ. ಇದಕ್ಕೆಲ್ಲಾ ಸರ್ಕಾರದವರು ಗಮನವಿತ್ತು ಮಾಡಬೇಕಾದ ಏರ್ಪಾಟುಗಳನ್ನು ಮಾಡದೆ ಬಿಡರು. ರಂಗೂನಿನಿಂದ ಅಕ್ಕಿಯನ್ನು ತರಿಸುವ ಪ್ರಯತ್ನವು ನಡೆದಿದೆಯೆಂದು ಕೇಳುತ್ತೇವೆ. ಇದರಮೇಲೆ ಇನ್ನು ೧ ತಿಂಗಳೊಳಗಾಗಿ ಯಥೇಚ್ಛವಾಗಿ ಹೊಸಬತ್ತವು ಬರಲೂ ಉಪಕ್ರಮವಾಗುವುದು. ಅಲ್ಲಿಯವರೆಗೆ ನಾಸ್ತಾನಿಟ್ಟಿರುವ ವರ್ತಕರೂ ಉಪಪನ್ನರೂ ತಾವಾಗಿ ಮುಂದೆ ಬಂದು ಯಥೋಚಿತವಾದ ಬೆಲೆಗೆ ತಮ್ಮಲ್ಲಿರುವ ಧಾನ್ಯಗಳನ್ನು ಕೊಟ್ಟು ಬಡವರು ಹೊಟ್ಟೆಗಿಲ್ಲದೆ ಸಾಯುವ ದುರವಸ್ಥೆಯನ್ನು ತಪ್ಪಿಸಿ, ಪುಣ್ಯವನ್ನೂ ಯಶೋಗೌರವಗಳನ್ನೂ ಪಡೆದುಕೊಳ್ಳುವವರಾಗಲೆಂದು ಕೋರುವೆವು.

ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ.ಐ.ಇ., ಯವರು.

ಇವರು ಆರೋಗದೃಢಕಾಯರಾಗಿಯೂ ಇನ್ನೂ ಬಹುಕಾಲ ರಾಜ್ಯಕಾರ್ಯನಿರ್ವಾಹವನ್ನು ಮಾಡಲು ಸಾಮರ್ಥ್ಯವುಳ್ಳವರಾಗಿಯೂ ಇದ್ದರೂಕೂಡ ಸರ್ಕಾರದ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟರೂ ಸರ್ಕಾರದವರ ಕೋರಿಕೆಯಪ್ರಕಾರ ಸಂಸ್ಥಾನಕ್ಕೆಲ್ಲಾ ದೊಡ್ಡದಾಗಿರುವ ಬೆಂಗಳೂರು ಮ್ಯುನ್ಸಿಪಾಲಿಟಿಯ ಪ್ರೆಸಿಡೆಂಟ್ ಪದವಿಯನ್ನು ಗೌರವಪೂರ್ವಕವಾಗಿ ವಹಿಸಲು ಒಪ್ಪಿ ಕಳೆದ ೬ ವರ್ಷಗಳಿಂದಲೂ ಅದನ್ನು ಪ್ರಜೆಗಳೂ ಸರ್ಕಾರದವರೂ ಮೆಚ್ಚುವಂತೆ ನಿರ್ವಹಿಸಿ, ಅದೇ ಪದವಿಯಲ್ಲಿದ್ದು ಸಾಮರ್ಥ್ಯಪ್ರದರ್ಶನಮಾಡಿದುದರಿಂದಲೇ ಸಿ.ಐ.ಇ. ಎಂಬ ಪ್ರಶಸ್ತಿಯನ್ನು ಸಾರ್ವಭೌಮರಿಂದ ಪಡೆದುಕೊಂಡರು. ಈಗ ನೂತನ ವಿಧಿಯಪ್ರಕಾರ ಬೆಂಗಳೂರು ಮ್ಯುನ್ಸಿಪಾಲಿಟಿಗೆ ಕೌನ್ಸಿಲರುಗಳಿಂದ ಆರಿಸಲ್ಪಟ್ಟ ಪ್ರೆಸಿಡೆಂಟರು ನಿಯಮಿಸಲ್ಪಡಬೇಕಾಗಿದೆ. ಆ ಕಾರ್ಯವು ಬರುವ ತಾ|| ೨೩ ರಲ್ಲಿ ನಡೆಯುವುದಾಗಿದೆ. ಮ|| ಶೆಟ್ಟರು ಈ ಪದವಿಯನ್ನಪೇಕ್ಷಿಸಿ ಚುನಾವಣೆಗೆ ನಿಲ್ಲಲಿಲ್ಲವೆಂದು ಕೇಳುತ್ತೇವೆ. ಅಲ್ಲಿಯ ಮ್ಯು|| ಕೌನ್ಸಿಲರುಗಳಲ್ಲೂ ಪುರಪ್ರಜಾಪ್ರಮುಖರಲ್ಲೂ ಬಹು ಜನರು ಇವರ ಪ್ರೆಸಿಡೆಂಟ್‌ಗಿರಿಯೇ ಇನ್ನು ಕೆಲಕಾಲ ತಮಗೆ ಇರುವಂತೆ ಆಗಬೇಕೆಂದು ಅಪೇಕ್ಷಿಸಿರುವರು. ಈ ವಿಷಯಕ್ಕಾಗಿ ಕೆಲ ದೊಡ್ಡ ಮನುಷ್ಯರು ದಿವಾನರವರ ಬಳಿಗೆ ಡೆಪ್ಯುಟೇಷನ್ ಹೋಗಿ ಪ್ರತ್ಯಕ್ಷವಾಗಿ ಬಿನ್ನಯಿಸಿಕೊಂಡು, ಈ ಸಂಗತಿಯನ್ನು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಅರಿಕೆಮಾಡುವೆವೆಂಬುದಾಗಿ ದಿವಾನರಿಂದ ಉತ್ತರವನ್ನು ಪಡೆದು ಬಂದಿರುವರು. ಶ್ರೀಮನ್ಮಹಾರಾಜರವರ ಉತ್ತರವು ಹೇಗಾಗುತ್ತದೋ ನೋಡಬೇಕು.

ಮ|| ಶೆಟ್ಟರ ಶಾಂತಪ್ರವರ್ತನ, ನಿಸ್ಪೃಹತೆ, ದೀರ್ಘದರ್ಶಿತೆ, ಕಾರ್ಯದಕ್ಷತೆ ಮೊದಲಾದ ಸದ್ಗುಣಗಳ ಪ್ರಯೋಜನವನ್ನು ಅರಿತ ಮಹಾಜನರು ಅವರನ್ನು ಇನ್ನಷ್ಟುಕಾಲ ಪ್ರೆಸಿಡೆಂಟ್ ಪದವಿಯಲ್ಲಿರಿಸಿಕೊಳ್ಳುವುದಕ್ಕೆ ಅಪೇಕ್ಷಿಸುವುದೇನೂ ಹೆಚ್ಚಲ್ಲ. ಅವರ ಮಂತ್ರಿತ್ವದಿಂದ ಸಂಸ್ಥಾನದ ಪ್ರಜೆಗಳೆಲ್ಲರಿಗೂ ಆಗಬಹುದಾಗಿದ್ದ ಹಿತವು ತಪ್ಪಿದರೂ, ಬೆಂಗಳೂರು ಪ್ರಜೆಗಳಿಗಾದರೂ ಕಳೆದ ೬ ವರ್ಷಗಳಿಂದ ಅವರ ಅಧಿಕಾರಮೂಲಕವಾದ ಹಿತವು ಎಷ್ಟೋ ರೂಪವಾಗಿ ದೊರೆಯುವಂತಾಯಿತು. ಅಧಿಕಾರರೂಪದಿಂದಲ್ಲದಿದ್ದರೂ ಮ|| ಶೆಟ್ಟರು, ಚಿಕ್ಕಬಳ್ಳಾಪುರದ ಸ್ಟೇಟ್ ರೈಲ್ವೆಯ ಸಂಬಂಧ ಮೈಸೂರು ಬ್ಯಾಂಕಿನ ಸಂಬಂಧ ಮೊದಲಾದ ಅನೇಕ ರೂಪಗಳಿಂದ ದೇಶಸೇವೆಯನ್ನೂ ಪ್ರಜಾಹಿತವನ್ನೂ ಮಾಡಿರುತ್ತಾರೆ. ಅವರು ಯಾವಜ್ಜೀವಿತವೂ ಪ್ರಜಾಸೇವೆಯಲ್ಲಿ ಹೀಗೆಯೇ ಕಾಲಕಳೆಯುವುದರಲ್ಲಿ ಹಿಂದೆಗೆಯತಕ್ಕವರಲ್ಲ. ಈಗಲೂ ಬೆಂಗಳೂರು ಪುರಪ್ರಮುಖರ ಪ್ರಾರ್ಥನೆಯನ್ನು ಶ್ರೀಮನ್ಮಹಾರಾಜರವರು ನೆರವೇರಿಸಿಕೊಡುವವರಾದರೆ ಇನ್ನು ಕೆಲಕಾಲ ಅವರು ಅಲ್ಲಿಯ ಪ್ರೆಸಿಡೆಂಟ್‌ಗಿರಿಯಲ್ಲಿರಲು ಒಪ್ಪಿಗೆಯನ್ನು ಕೊಟ್ಟಾರು. ಹಾಗಲ್ಲದೆ ಚುನಾವಣೆಗೆ ಇವರೇ ನಿಂತಿದ್ದರೂ ತಕ್ಕಷ್ಟು ಮತಗಳು ದೊರೆತು ಇವರೇ ಆ ಪದವಿಗೆ ಬರುತ್ತಿದ್ದರೆಂಬುದರಲ್ಲೂ ಸಂಶಯವಿಲ್ಲ. ನಾಮಿನೇಷನ್ನಿನ ಏರ್ಪಾಡೂ ತಪ್ಪಿ, ಮ|| ಶೆಟ್ಟರು ಆ ಉದ್ಯೋಗಕ್ಕೆ ಪ್ರಯತ್ನಪಡದೆ ತಪ್ಪಿಹೋಗುವುದೂ ಆದರೆ ಮ|| ಶೆಟ್ಟರು ಇದುವರೆಗೂ ದೇಶಸೇವೆಯಿಂದಲೇ ಪರಿತೃಪ್ತರಾಗಿ ಮುಂದೆ ಮತದಸೇವೆಗೂ ಮತಸ್ಥರ ವಿದ್ಯಾಭಿವೃದ್ಧಿಯ ಪ್ರೋತ್ಸಾಹಕ್ಕೂ ತಕ್ಕಷ್ಟು ಶ್ರಮಸಾಹಸಗಳನ್ನು ವಹಿಸಿ ಕೆಲಸಮಾಡಿ ಕೀರ್ತಿ ಪುಣ್ಯಗಳಿಗೂ ಈಶ್ವರ ಕಟಾಕ್ಷಕ್ಕೂ ಭಾಜನರಾಗಲು ಅವಕಾಶಮಾಡಿಕೊಳ್ಳದಿರಲಾರರೆಂದು ನಂಬುತ್ತೇವೆ.

ಮಿತವಾದಿಗಳ ದ್ವಿತೀಯ ಮಹಾಸಭೆ.

ಗೊತ್ತಾಗಿದ್ದಮೇರೆಗೆ ಬೊಂಬಾಯಿಯಲ್ಲಿ ಈ ಸಭೆಯು ಕಳೆದ ತಾ|| ೧-೨ ರಲ್ಲಿ ನಡೆದಿತು. ಬೊಂಬಾಯಿಯಲ್ಲಿ ಕಾಲಸ್ಥಿತಿಯು ವಿಷಮವಾಗಿ ರೋಗಭೀತಿಯು ಹೆಚ್ಚಾಗಿದ್ದರೂ ೫೦೦ ಕ್ಕೆ ಕಡಿಮೆಯಿಲ್ಲದಷ್ಟು ಪ್ರತಿನಿಧಿಗಳು ಬಂದಿದ್ದರು. ಅನೇಕ ದೇಶಾಭಿಮಾನಿಗಳು ಸಭಾಕಾರ್ಯಕ್ಕೆ ತಮ್ಮ ಸಾನುಭೂತಿಯನ್ನು ತೋರಿಸಿದ ಪತ್ರಗಳನ್ನು ಬರೆದಿದ್ದರು. ಆ|| ಸುರೇಂದ್ರನಾಥ ಬಾನರ್ಜಿಯವರ ಅಧ್ಯಕ್ಷತೆಯಿಂದ ಇದು ಜರುಗಿತು. ಸರ್ ದಿನ್‌ಷಾ ಎದಲ್ಜಿ ವಾಚಾರವರು ಸತ್ಕಾರಕ ಸಂಘಾಧ್ಯಕ್ಷರಾಗಿದ್ದರು. ಇವರು ತಮ್ಮ ಭಾಷಣದಲ್ಲಿ ಮಿತವಾದಿಗಳು ಈ ಸಭೆಯನ್ನು ಕೂಡಿಸಬೇಕಾಗಿ ಬಂದುದಕ್ಕೆ ಕಾರಣವನ್ನು ವಿವರಿಸುವಾಗ್ಗೆ—ಈಗಣ ರಾಜಕೀಯ ವಾತಾವರಣವು ವಿಶಕಲಿತವಾಗಿರುವುದೆಂತಲೂ ಸ್ವಾತಂತ್ರ್ಯರಕ್ಷಣಾರ್ಥವಾಗಿ ಪ್ರಭುತ್ವದವರಿಂದ ಕೊಡಲ್ಪಟ್ಟ ವರವನ್ನು ಧಿಕ್ಕರಿಸಿಬಿಟ್ಟು, ಅನುಭವಸ್ಥರೂ ದೇಶಹಿತಕ್ಕಾಗಿ ದೀರ್ಘಕಾಲದಿಂದ ಪಾಡುಪಡುವವರೂ ಜ್ಞಾನವಯೋವೃದ್ಧರೂ ಆದವರನ್ನು ಹಿಂದಕ್ಕೊತ್ತರಿಸಿ, ತೀವ್ರವಾದಗಳಿಂದ ಭೇದಾಭಿಪ್ರಾಯಗಳನ್ನು ಹೆಚ್ಚಿಸಿ ದೇಶಕ್ಕೆ ಅಹಿತವನ್ನುಂಟುಮಾಡುತ್ತಿರುವ ಯುವಕರು ದೇಶೀಯ ಮಹಾಸಭೆಯಲ್ಲಿ ಹೆಚ್ಚಿಕೊಂಡುದರಿಂದ, ಅವರಿಂದಾಗುವ ಅನರ್ಥವನ್ನು ತಪ್ಪಿಸಿ ರಾಜಕೀಯರಂಗದಲ್ಲಿ ಅವರಿಂದುಂಟಾಗುವ ಕಳಂಕವನ್ನು ತೊಡೆದು ದೇಶಗೌರವವನ್ನು ಕಾಪಾಡುವುದಕ್ಕಾಗಿಯೇ ಈ ಸಭೆಯನ್ನು ಕೂಡಿಸಬೇಕಾಯಿತೆಂತಲೂ ಹೇಳಿದರು. ಮತ್ತು ನ್ಯಾಷನಲ್ ಕಾಂಗ್ರೆಸ್ಸಿನ ಪ್ರತಿಷ್ಠಾಪಕರಲ್ಲೊಬ್ಬರಾದ ಮಿ|| ಹ್ಯೂಮ್‌ರವರು ೧೮೮೮ ನೆಯ ವರ್ಷದಲ್ಲಿ ಮಾಡಿದ ಭಾಷಣದೊಳಗೆ "ನಾವು ಕಾಂಗ್ರೆಸ್ಸಿನಲ್ಲಿ ಪ್ರತಿವರ್ಷವೂ ನಮ್ಮ ಕಷ್ಟನಿಷ್ಠುರಗಳನ್ನು ಚರ್ಚಿಸುತ್ತ ಪ್ರಭುತ್ವದವರಿಗೆ ನಾವು ಸಹಾಯಕರಾಗಿದ್ದುಕೊಂಡು, ನಮಗೆ ಬೇಕಾದುದನ್ನು ಅವರಿಗೆ ಶ್ರುತಪಡಿಸಿ, ಪಡೆದುಕೊಳ್ಳುತ್ತ ಬಂದರೆ ನಾವು ಸಫಲಮನೋರಥರಾಗುವೆವು" ಎಂದು ಉಪದೇಶಿಸಿರುವುದರಿಂದ ಅದರಂತೆ ನಾವು ಸರ್ಕಾರಕ್ಕೆ ವಿರುದ್ಧರಾಗದೆ ಅವರು ನಮ್ಮ ಹಿತಕ್ಕಾಗಿ ಮಾಡಿರುವ ರಾಜಕೀಯ ಸಂಸ್ಕರಣಗಳನ್ನು ನಾವು ಧಿಕ್ಕರಿಸದೆ, ದೊರೆದಷ್ಟಕ್ಕೆ ಕೃತಜ್ಞತೆಯನ್ನು ತೋರಿಸಿ, ಮುಂದೆ ಬೇಕಾದುವುಗಳಿಗಾಗಿ ಸಕ್ರಮಾಂದೋಳನವನ್ನು ಜರುಗಿಸಬೇಕು. ದೇಶಾಭ್ಯುದಯದಲ್ಲಿ ಕುತೂಹಲವುಳ್ಳ ಯುವಕರು ರಾಜಕೀಯರಂಗದಲ್ಲಿ ಕೆಲಸಮಾಡಿ ನುರಿತ ವೃದ್ಧರೊಡನೆ ಸೇರಿ ಅವರುಗಳ ಹಿತೋಪದೇಶವನ್ನು ಆಲಿಸಿ ರಾಜನೀತಿಜ್ಞರಾಗಿ ದೇಶಸೇವೆಮಾಡದೆ ದುರುಳನಿಂದ ದುಡುಕಿದರೆ ದೇಶಕ್ಕೆ ಅನರ್ಥವನ್ನು ತಂದುಕೊಳ್ಳುವರು, ಎಂದು ಹೇಳಿದ ಮಾತುಗಳು ಬೋಧಪ್ರದವಾಗಿದ್ದುವು. ಆದರೆ ಸರ್ಕಾರದ ಪ್ರತಿಯೊಂದು ಕಾರ್ಯವನ್ನೂ ವಕ್ರದೃಷ್ಟಿಯಿಂದ ನೋಡುತ್ತ, ರಾಜಕೀಯಾಪರಾಧಿಗಳಿಗೂ ಒತ್ತಾಸೆಮಾಡುತ್ತ, ಮಾತುಮಾತಿಗೂ ಸರ್ಕಾರಕ್ಕೆ ವಿಘ್ನವನ್ನೊಡ್ಡುತ್ತ, ತಮ್ಮ ಕ್ರೂರವಾಗ್ಬಾಣಗಳಿಂದಲೇ ಸ್ವರಾಜ್ಯವನ್ನು ಈಗಲೇ ಅಂಗೈಗೆ ತಂದುಕೊಳ್ಳುವೆನೆಂದು ಭ್ರಮಿಸಿರುವ ಜನರಿಗೆ ಈ ಸೌಮ್ಯವಾದಗಳು ಎಂದಿಗೂ ರುಚಿಸಲಾರವೆಂಬುದು ಕಂಡೇ ಇದೆ.

ಕಡೆಗೆ ವಾಚಾರವರು ಈಗಣ ಮಾಂಟೆಗೂ ಚಲಮ್ಸ್‌ಫರ್ಡ್ ಸಂಸ್ಕರಣ ವಿಷಯವನ್ನು ಎತ್ತಿಮಾತನಾಡುವಾಗ್ಗೆ "ಇಂಥ ಸಂಸ್ಕರಣಗಳನ್ನು ಇದುವರೆಗೆ ನಮಗೆ ಯಾರೂ ಅನುಗ್ರಹಿಸಿರಲಿಲ್ಲ. ನಮ್ಮ ದೇಶಕ್ಕೆ ಉತ್ತಮಗಮ್ಯಸ್ಥಾನವನ್ನು ಸೇರಿಸುವುದಕ್ಕೆ ಇವು ವಿಶೇಷ ಸಹಾಯಕಗಳು" ಎಂದು ಹೇಳಿದರು. ಬಳಿಕ ಸರ್ ಗಣೇಶ ನಾರಾಯಣ ಚಂದ್ರಾವರ್ಕರ್‌ರವರು ಆ|| ಸುರೇಂದ್ರನಾಥ ಬಾನರ್ಜಿಯವರ ದೇಶಸೇವಾಪರತೆಯನ್ನೂ ಸಾಮರ್ಥ್ಯವನ್ನೂ ವಿಶದಪಡಿಸಿ, ಅವರನ್ನು ಸಭಾಧ್ಯಕ್ಷತೆಗೆ ಕೋರಿಕೊಳ್ಳಲು, ಮ|| ಆರ್. ಪಿ. ಮಧೋಳ್ಕರ್‌ರವರೂ ಚಿಂತಾಮಣಿಯವರೂ ಅನುಮೋದಿಸಲಾಗಿ ಸಭಿಕರ ಕರತಾಡನವಾಗುತ್ತಿರುವಾಗ್ಗೆ ಬಾನರ್ಜಿಯವರು ಅಧ್ಯಕ್ಷಪೀಠವನ್ನಲಂಕರಿಸಿ, ಮೇಘಸ್ವನಗಂಭೀರವಾದ ತಮ್ಮ ಅಸ್ಖಲಿತವಾಣಿಯಿಂದ ೨ ಗಂಟೆಗಳ ಹೊತ್ತು ಅದ್ಭುತವಾದ ಭಾಷಣವನ್ನು ಮಾಡಿದರು. ಅದರಲ್ಲಿ—"ಮಿತವಾದಿ ಪಕ್ಷದವರಾದ ನಾವು ದೇಶಪುರೋವೃದ್ಧಿಗನುಕೂಲರಾಗಿಯೂ, ದೇಶವಿಪ್ಲವಕ್ಕೆ ಪ್ರತಿಕೂಲರಾಗಿಯೂ ಇದ್ದೇವೆ. ಅಶಾಂತಿಯನ್ನು ಹುರಿದುಂಬಿಸುವ ಯತ್ನಗಳನ್ನು ನಾವು ಖಂಡಿಸತಕ್ಕವರಾಗಿದ್ದೇವೆ. ರಷ್ಯಾದೇಶದ ವಿಪ್ಲವವೂ ಭಯಂಕರಕೃತ್ಯಗಳೂ ನಮಗೆ ಕರ್ಣಕಠೋರವಾಗಿ ಇನ್ನೂ ಮರೆತಿರುವುದಿಲ್ಲ. ಯಾವಾಗಲೂ ದೇಶಾಭಿವೃದ್ಧಿಯು ಶಾಂತಿಯುಕ್ತವಾಗಿ ನಡೆದರೇ ಕ್ಷೇಮಕರವು. ನಾವು ಯಾವಾಗಲೂ ಪ್ರಭುತ್ವದವರಿಗೆ ಸಹಾಯಕರಾಗಿರುವೆವಲ್ಲದೆ ದೇಶಹಿತಕ್ಕೆ ವಿಘಾತಕವಾದ ವಿಧಾನಗಳು ಕಂಡುಬಂದಾಗ ಅವನ್ನು ಖಂಡಿಸುವುದಕ್ಕೆ ಎಂದಿಗೂ ಹಿಂಜರಿಯಲಾರೆವು. ಯಾವಾಗಲೂ ಪ್ರಭುತ್ವವನ್ನು ಪ್ರತಿಭಟಿಸುವುದೇ ನಮ್ಮ ಉದ್ದೇಶವಲ್ಲ. ಈಗ ನಮ್ಮ ಪ್ರಭುತ್ವದವರ ದೃಷ್ಟಿಪಥವು ನಮಗೆ ಅನುಕೂಲವಾಗಿದೆ. ಆಂಗ್ಲ ರಾಜನೀತಿಜ್ಞರು ನಮಗೆ ಹಸ್ತಾವಲಂಬನೆಯಿತ್ತು ನಮ್ಮ ಉದ್ಧಾರಕ್ಕೆ ತಕ್ಕ ಸಂಸ್ಕರಣಗಳನ್ನು ಅನುಗ್ರಹಿಸುತ್ತಿದ್ದಾರೆ. ಇದರ ಲಾಭವನ್ನು ಗುರ್ತಿಸಲಾರದೆ ಈಗಣ ಕಾಂಗ್ರೆಸ್ ಪ್ರಮುಖರಾಗಿರುವವರು ಪ್ರತಿಕೂಲ ಪ್ರಯತ್ನಗಳನ್ನೇ ವಿಶೇಷವಾಗಿ ಮಾಡುತ್ತಲಿರುವುದರಿಂದ ನಾವು ಈ ಪ್ರತ್ಯೇಕ ಸಭೆಯನ್ನು ಕೂಡಿಸಬೇಕಾಯಿತು" ಎಂದು ಸಭೋದ್ದೇಶವನ್ನು ಹೇಳಿ, ರಾಜಕೀಯ ಸಂಸ್ಕರಣಗಳ ಲಾಭವನ್ನು ಕುರಿತು ದೀರ್ಘವಾಗಿ ಉಪನ್ಯಾಸಮಾಡಿದುದರಲ್ಲಿ—"ಇದು ಆಂಗ್ಲಪ್ರಭುತ್ವದವರು ಕಳೆದ ವರ್ಷದ ಆಗಸ್ಟ್ ತಾ|| ೨೦ ರಲ್ಲಿ ಮಾಡಿದ ವಾಗ್ದಾನಕ್ಕೆ ಅನುಗುಣವಾಗಿದೆ. ಇವು ಭಾರತಪ್ರಜೆಗಳಮೇಲೆ ವಿಶ್ವಾಸವಿಟ್ಟೇ ಮಾಡಲ್ಪಟ್ಟಿವೆ. ಕ್ರಮಪದ್ಧತಿಯಿಂದ ರಾಜಕೀಯ ಪುರೋವೃದ್ಧಿಯಾಗಬೇಕೆಂಬುದೇ ಕಾಂಗ್ರೆಸ್ಸಿನ ಉದ್ದೇಶವು. ಕಾಂಗ್ರೆಸ್ಸಿನವರು ೧೯೧೬ ನೆ ವರ್ಷದಲ್ಲಿ ಸೂಚಿಸಿದ ರಾಜಕೀಯ ಸುಧಾರಣೆಗಳು ತಾತ್ಕಾಲಿಕವು. ಏಕೆಂದರೆ ೧೯೧೬ ನೆ ಆಗಸ್ಟ್ ತಾ|| ೨೦ ರಲ್ಲಿ ಹುಟ್ಟಿದ ಪ್ರಭುತ್ವಪ್ರಕಟನೆಯು ನೂತನ ಪದ್ಧತಿಗಳನ್ನುಂಟುಮಾಡಿತು. ಆದರಮೇಲೆ ನೂತನವಿಧಾನವನ್ನವಲಂಬಿಸಬೇಕಾಯಿತು. ಈಗಣ ಕಾಂಗ್ರೆಸ್ ಪ್ರಮುಖರು ಮಾಂಟೆಗ್ ವಿಧಾನದ ಗುಣಾಂಶವನ್ನು ಅಂಗೀಕರಿಸದೆ ತಿರಸ್ಕರಣಕ್ಕೆ ಸಮನಾಗಿಯೇ ಕೆಲಸಮಾಡುತ್ತಿದ್ದಾರೆ. ನಮ್ಮ ಕಾರ್ಯವು ಅದಕ್ಕೆ ಭಿನ್ನವು. ನಾವು ಆಗಸ್ಟ ತಾ|| ೨೦ ರ ಪ್ರಕಟನೆಗೆ ಅನುಸಾರವಾಗಿರುವುದಲ್ಲದೆ ಅದನ್ನತಿಕ್ರಮಿಸಲಾರೆವು. ನಾವು ಕಾಂಗ್ರೆಸ್ಸಿನಿಂದ ಒಡೆದುಕೊಳ್ಳುವುದು ನನಗೆ ವಿಷಾದಕರವಾಗಿದ್ದರೂ ಈಗಣ ಕಾಂಗ್ರೆಸ್ಸಿನಲ್ಲಿ ವ್ಯಕ್ತಿವೈಷಮ್ಯಗಳು ಹೆಚ್ಚಿಕೊಂಡಿರುವುದರಿಂದ ನಾವು ಆ ಸಭೆಯನ್ನು ಬಿಟ್ಟುಬಿಡಬೇಕಾಯಿತು. ಈಗ ಉಗ್ರವಾದಿಗಳ ಪ್ರತಾಪವು ಹೆಚ್ಚಿಕೊಂಡಿದೆ. ಕಾಂಗ್ರೆಸ್ಸಿನಲ್ಲೂ ಹಾಗೆಯೇ ಆಗಿದೆ, ಆ ವಿಧಾನವು ಖಂಡಿಸಲ್ಪಡದೆ ಹೋಗುವುದಿಲ್ಲವೆಂಬುದು ಖಂಡಿತ. ಅದುಕಾರಣ ಪ್ರತ್ಯೇಕ ಕಾಂಗ್ರೆಸ್‌ಸಭೆಯು ಭರತಖಂಡದ ಅಭಿಪ್ರಾಯವನ್ನು ಏಕಕಂಠ್ಯದಿಂದ ವ್ಯಕ್ತಪಡಿಸುವುದೆಂದು ಹೇಳಲವಕಾಶವಿಲ್ಲ. ಮಾಂಟೆಗ್ ಸಂಸ್ಕರಣ ವಿಧಾನಗಳನ್ನು ತಿರಸ್ಕರಿಸುವುದು ದೇಶಕ್ಕೆ ಅಪಾಯಕರ. ಇದರ ವಿಷಯವಾಗಿ ಉಗ್ರವಾದಿಗಳು ಹುಟ್ಟಿಸಿರುವ ಪ್ರತಿಕೂಲಭಾವಗಳನ್ನು ತೊಲಗಿಸುವುದೇ ನಮಗೆ ಪರಮಕರ್ತವ್ಯವಾಗಿದೆ" ಎಂದು ಹೇಳಿ ಸಂಸ್ಕರಣದ ಗುಣಾಂಶಗಳನ್ನು ವಿಶದೀಕರಿಸಿ, ಇವನ್ನು ಕಾರ್ಯರೂಪಕ್ಕೆ ಬರದಂತೆ ನಾವು ಮಾಡಿದರೆ ದೇಶಕ್ಕೆ ಹೇಗೆ ಅನರ್ಥವಾಗುವುದೆಂಬುದನ್ನು ವ್ಯಕ್ತಪಡಿಸಿ, ಪ್ರಜೆಗಳೂ ಪ್ರಭುಗಳೂ ಪರಸ್ಪರ ಸಹಕಾರದಿಂದ ವರ್ತಿಸಿದಲ್ಲದೆ ದೇಶಾಭ್ಯುದಯವುಂಟಾಗಲಾರದೆಂದೂ ಅದಕ್ಕಾಗಿ ಸರ್ವರೂ ಯಥಾಶಕ್ತಿ ಪ್ರಯತ್ನಿಸಬೇಕೆಂದೂ ಬೋಧಿಸಿ, ಉಪನ್ಯಾಸವನ್ನು ಮುಗಿಸಿದರು. ಮರುದಿನವೂ ಸಭಾಕಾರ್ಯವು ನೆರವೇರಿತು.

ಸಭೆಯ ತೀರ್ಮಾನಗಳೊಳಗೆ ರಾಜಭಕ್ತಿಪ್ರದರ್ಶನ, ಶ್ರೀಮದ್ಯುವರಾಜರವರನ್ನು ಭರತಖಂಡದಕ್ಕೆ ಕಳುಹಿಸಿಕೊಡಲು ಚಕ್ರವರ್ತಿಯವರು ಮಾಡಿರುವ ಸಂಕಲ್ಪಕ್ಕಾಗಿ ಸಂತೋಷಪ್ರದರ್ಶನ, ಮಿತ್ರಮಂಡಲಿಗೆ ಜಯವಾಗುತ್ತಿರುವುದಕ್ಕಾಗಿ ಹರ್ಷಪ್ರದರ್ಶನ-ಇವುಗಳಾದ ಬಳಿಕ, ಮಾಂಟೆಗ್ ಸಂಸ್ಕರಣಗಳು ಪ್ರಜೆಗಳಿಗೆ ಹೆಚ್ಚಾದ ಸ್ವಾತಂತ್ರ್ಯವನ್ನು ಕೊಡಲು ಮಾರ್ಗಗಳಾಗಿರುವುವೆಂತಲೂ, ಅವು ಆಗಸ್ಟ್ ತಾ|| ೨೦ ರ ಪ್ರಕಟನೆಗೆ ಅನುಗುಣವಾಗಿರುವುವೆಂತಲೂ ಸಾರ್ವಭೌಮ ಪ್ರಭುತ್ವದಲ್ಲಿ ಕೆಲ ಬದಲಾವಣೆಗಳು ಮಾತ್ರ ಆಗಬೇಕಾಗಿರುವುವೆಂತಲೂ, ಅಧಿನಿವೇಶ ರಾಜ್ಯಭಾರಗಳಲ್ಲಿರುವಂತೆ ಕೋಶಾಧಿಕಾರವು ಪ್ರಜೆಗಳ ಅಧಿಕಾರಕ್ಕೊಳಪಡಬೇಕೆಂತಲೂ ಮೊದಲಾದ ತೀರ್ಮಾನಗಳಾದುದಲ್ಲದೆ, ಮಹಮ್ಮದೀಯರು, ಮತ್ತು ಹಿಂದುಗಳಲ್ಲಿ ಹಿಂದುಳಿದ ಜನಾಂಗದವರು, ನಿಮ್ನಜಾತಿಯವರು—ಇವರುಗಳಿಗೆಲ್ಲಾ ಪ್ರತ್ಯೇಕ ಪ್ರಾತಿನಿಧ್ಯವು ದೊರೆಯಬೇಕೆಂಬ ತೀರ್ಮಾನವೂ ಮಾಡಲ್ಪಟ್ಟು, ಮುಂದಣ ಸಭೆಯು ಕಲ್ಕತ್ತಾದಲ್ಲಿ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿತು.

ಒಳದೇಶದ ವೃತ್ತಾಂತಗಳು.

ಕಳೆದ ವಾರ ರಾಜಧಾನಿಯಲ್ಲಿ ಅನುಕೂಲವಾದ ಒಂದೆರಡು ಹದ ಮಳೆಯಾಯಿತು.

ರಾಜಧಾನಿಯ ಮಂಡಿಮೊಹಲ್ಲಾಕ್ಕೆ ಮ|| ಆ. ಪುರುಷೋತ್ತಮನಂದಗಿರಿಯವರು ಮ್ಯು|| ಕೌನ್ಸಿಲರಾಗಿ ಆರಿಸಲ್ಪಟ್ಟರು

ರಾಜಧಾನಿಯಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯ ಉಲ್ಬಣವು ತಗ್ಗುತ್ತಲಿದೆ. ಒಟ್ಟು ಮರಣಗಳು ದಿನ ೧ಕ್ಕೆ ೨೦ ರೊಳಗೇ ಇರುತ್ತವೆ.

ಬೆಂಗಳೂರು ಅಡ್ವೋಕೇಟರಾದ ಮ|| ಕೆ. ರಾಮಸ್ವಾಮಯ್ಯಂಗಾರ್ ಬಿ.ಎ., ಬಿ.ಎಲ್. ರವರು ಮೈಸೂರು ಸಬ್ ಜಡ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮ|| ಎಚ್. ಟಿ. ಗೋಪಾಲಯ್ಯಂಗಾರರು ಹಂಗಾಮಿ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರಾಗಿ ನಂದೀದುರ್ಗದ ಡಿವಿಜನ್ನಿಗೆ ನಿಯಮಿಸಲ್ಪಟ್ಟಿದ್ದಾರೆ.

ಪೆನ್‌ಷನ್ಡ್ ಡಾಕ್ಟರ್ ಮ|| ಎಂ. ಡಿ. ಶ್ರೀನಿವಾಸಯ್ಯಂಗಾರರ ಕುಮಾರರು ಇನ್‌ಫ್ಲುಯೆಂಜಾಕ್ಕೆ ತುತ್ತಾದರೆಂದು ತಿಳಿಯಿಸಲು ಬಹಳ ವಿಷಾದಿಸುತ್ತೇವೆ.

ಫಾರೆಸ್ಟ್ ಅ|| ಕನ್ಸರ್ವೇಟರಾಗಿದ್ದ ಮ|| ವೆಂಕಟನರಸಪ್ಪನವರು ಇನ್‌ಫ್ಲುಯೆಂಜಾ ರೋಗದಿಂದ ಮರಣಗೊಂಡರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ನಮ್ಮ ಗೌರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರಾಗಿದ್ದು ವಿಶ್ರಾಂತಿಗೊಂಡು ಕುನ್ನೂರಿನಲ್ಲಿ ವಾಸವಾಗಿದ್ದ ಮಿ|| ಏಟ್ಸ್‌ರವರು ತಮ್ಮ ೬೨ ನೆ ವಯಸ್ಸಿನಲ್ಲಿ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

೨ ನೆಯ ಆವೃತ್ತಿ ರಾಜಧಾನಿಯ ಮ್ಯು|| ವೈಸ್‌ಪ್ರೆಸಿಡೆಂಟ್ ಗಿರಿಗೆ ಉಮೇದುವಾರರಾಗಿದ್ದವರಲ್ಲಿ ಮ|| ಎಂ. ಎನ್. ಸುಬ್ಬಣ್ಣನವರಿಗೆ ೧೪, ಮ|| ಎ. ಕೃಷ್ಣರಾಯರಿಗೆ ೧೩ ಓಟುಗಳು ಬಂದುದರಿಂದ ವಿಧಿಪ್ರಕಾರ ಯಾರೂ ವೈಸ್‌ಪ್ರೆಸಿಡೆಂಟರಾಗಲು ಯತ್ನವಿಲ್ಲ. ನಾಮಿನೇಷನ್ನೇ ಗತಿಯೆಂದು ಕಾಣುತ್ತದೆ.

ದೈವಪ್ರಸನ್ನತೆಯ ದ್ವಾರಾ ಇನ್‌ಫ್ಲುಯೆಂಜಾ ರೋಗಶಾಂತಿಯನ್ನು ಕೋರಿ ರಾಜಧಾನಿಯಲ್ಲಿ ಕಳೆದ ೧೦-೧೨ ದಿನಗಳಿಂದಲೂ ವೇ|| ಶಿವಕಥಾ ಶಿವಯ್ಯಶಾಸ್ತ್ರಿಗಳೇ ಮೊದಲಾದ ವೀರಶೈವ ಮಹಾಜನರು ಪ್ರತಿದಿನವೂ ರಾಜವೀಧಿಗಳಲ್ಲಿ ಶಿವಭಜನೆಯನ್ನು ಮಾಡುತ್ತಿದ್ದು ಕಳೆದ ಶುಕ್ರವಾರ ದೀವಟಿಗೆ ಬೀದಿಯ ಮಹಾ ಲಿಂಗಪ್ಪನವರ ಮಠದಲ್ಲಿ ಶಿವಗಣಾರಾಧನೆಯನ್ನೂ ಬೀದಿಗಳಲ್ಲಿ ವಿಜೃಂಭಣೆಯಿಂದ ದೇವತೋತ್ಸವವನ್ನೂ ರಾತ್ರಿ ಶಿವಕಥಾಶ್ರವಣವನ್ನೂ ಮಾಡಿದರು.

ಮ|| ಡಿ. ಬಿ. ರಾಮಚಂದ್ರ ಮೊದಲಿಯಾರರು ಗೌರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಮತ್ತು ಸ್ಟಾಂಪ್ ಸೂಪರಿಂಟೆಂಡೆಂಟ್‌ಗಿರಿಗಳಲ್ಲಿ ಖಾಯಂ ಗೊಳಿಸಲ್ಪಟ್ಟಿದ್ದಾರೆ. ಸಬ್ ಅ|| ಸೂಪರಿಂಟೆಂಡೆಂಟರಾಗಿರುವ ಮ||ಗಳಾದ ಬಿ. ಶ್ರೀನಿವಾಸಯ್ಯಂಗಾರರೂ, ಬಿ. ಕೃಷ್ಣಯ್ಯನವರೂ ಸಹ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರಾಗಿ ಮಾಡಲ್ಪಟ್ಟಿದ್ದಾರೆ. ಅದೇ ಪ್ರೆಸ್ಸಿನ ಫೋರ್‌ಮನ್‌ರಾಗಿರುವ ಮಿ|| ಜೆ. ಟಿ. ರೀಡ್‌ರವರು ಸಬ್ ಅ|| ಸೂಪರಿಂಟೆಂಡೆಂಟರಾಗಿ ಮಾಡಲ್ಪಟ್ಟಿದ್ದಾರೆ.

ಮರಿತುಲ್ಲಪ್ಪನವರ ಹೈಸ್ಕೂಲು ಹೆಡ್ಮಾಸ್ಟರ್‌ಗಿರಿಯ ಸಂಬಂಧವಾಗಿ ಕೋರ್ಟಿನಲ್ಲಿ ನಡೆಯುತ್ತಿರುವ ವ್ಯಾಜ್ಯವನ್ನು ವಾದಿಗಳು ಉಪಸಂಹರಿಸಿಕೊಳ್ಳುವವರಾಗಿದ್ದಾರೆಂದೂ, ಮ|| ವೆಂಕಟಕೃಷ್ಣಯ್ಯನವರು ಉದ್ಯೋಗದಿಂದ ನಿವೃತ್ತರಾಗಲಿಕ್ಕಿರುವರೆಂದೂ ಸುದ್ದಿಯು ಹುಟ್ಟಿದೆ. ಮ|| ಬ್ಯಾ|| ನಾಗಪ್ಪನವರು ಡಿಸ್ಟ್ರಿಕ್ಟ್ ಜಡ್ಜರಾಗಿ ಬಂದುದೇ ಈ ಪರಿಣಾಮಕ್ಕೆ ಕಾರಣವೆ? ಇನ್ನೇನಾದರೂ ಕಾರಣವಿದ್ದೀತೆ? ತಿಳಿಯಲಿಲ್ಲ. ಹೇಗಾದರೂ ಇದು ಶಾಂತವಾಗಬೇಕಾದುದೇ ಇಷ್ಟವು. ಆದರೆ ಟ್ರಸ್ಟಿಗಳ ಅಧಿಕಾರ ಪರಿಮಿತಿಯೊಂದು ಈ ಸಮಯದಲ್ಲಿ ಇತ್ಯರ್ಥವಾಗದೆ ಹೋಗುವುದಾದರೆ ಈಗ ಬಂದಿದ್ದಂಥ ಉಪಟಳವು ಸಮಯಬಿದ್ದಾಗಳೆಲ್ಲಾ ಮತ್ತೆ ಸಂಘಟಿಸುವುದಕ್ಕೆ ಅವಕಾಶವಾಗುತ್ತದೆ. ಅದು ಇತ್ಯರ್ಥವಾಗಬೇಕಾದುದು ಅತ್ಯವಶ್ಯಕವು.

ರಾಜಧಾನಿಯಲ್ಲಿ ಮ್ಯುನ್ಸಿಪಾಲಿಟಿಯವರು ಅಕ್ಕಿ ರಾಗಿಗಳನ್ನು ಮಾರಿಸುತ್ತಿರುವ ಅಂಗಡಿಗಳಲ್ಲಿ ಜನರ ನುಗ್ಗಾಟವು ಹೆಚ್ಚಾಗಿರುವುದು. ದುರ್ಬಲರಿಗೆ ಅಲ್ಲಿ ನುಗ್ಗಿ ದವಸವನ್ನು ತರುವುದೇ ಕಷ್ಟವಾಗಿದೆ. ಬಲಿಷ್ಠರು ೨-೩ ಸಲ ತರುತ್ತಲಿದ್ದಾರೆ. ಹೆಚ್ಚು ಅಂಗಡಿಗಳನ್ನಿಡುವುದಕ್ಕೆ ತಕ್ಕಷ್ಟು ಧಾನ್ಯವು ದೊರೆಯುವುದು ಪ್ರಯಾಸವಾಗಿದೆ. ಗದ್ದಲವನ್ನು ಸಾಧ್ಯವಾದಷ್ಟು ಕಡಿಮೆಮಾಡುವುದಕ್ಕಾಗಿ ಪ್ರತಿಕುಟುಂಬದವರಿಗೂ ವಾರವಾರಕ್ಕೆ ಬೇಕಾಗುವಷ್ಟು ಧಾನ್ಯವನ್ನು ಗಣಿಸಿ ಟಿಕೆಟ್ಟನ್ನು ಕೊಡುವುದಕ್ಕೂ ಅವರುಗಳು ಅದನ್ನು ತೋರಿಸಿ ಮ್ಯು|| ಅಂಗಡಿಗಳಲ್ಲಿ ದವಸವನ್ನು ಪಡೆದುಕೊಳ್ಳುವುದಕ್ಕೂ ಏರ್ಪಡಿಸಿದ್ದಾರೆ. ಮತ್ತೂ ದಾರಿಗಳಲ್ಲಿ ಹೊರಕ್ಕೆ ಸಾಗುತ್ತಲೂ, ಮಳಿಗೆಗಳಲ್ಲಿ ಮುಗ್ಗುತ್ತಲೂ ಕಾಣದಂತೆ ಬಚ್ಚಿಡಲ್ಪಟ್ಟೂ ಇದ್ದ ಅಕ್ಕಿ ಮೂಟೆಗಳನ್ನು ಬೆಲೆಕೊಟ್ಟು ಮ್ಯುನ್ಸಿಪಾಲಿಟಿಯವರು ಸ್ವಾಧೀನಪಡಿಸಿಕೊಂಡು ಪ್ರಜೆಗಳಿಗೆ ಒದಗಿಸುತ್ತಿದ್ದಾರೆ.

ಬೆಂಗಳೂರು ಮ್ಯುನ್ಸಿಪಾಲಿಟಿಗೆ ಕೆಳಗೆ ಕಂಡ ದೊಡ್ಡಮನುಷ್ಯರುಗಳು ಪ್ರಜೆಗಳಿಂದ ಆರಿಸಲ್ಪಟ್ಟ ಸಭಿಕರಾಗಿರುತ್ತಾರೆ. (೩ ವರ್ಷಗಳ ವರೆಗೆ) ಮ||ಗಳಾದ ಎಂ. ಬಸವಯ್ಯ, ಬಿ.ಎ., ಬಿ.ಲ್. ರವರು, ಬಿ. ಚಿನ್ನಸ್ವಾಮಿಶೆಟ್ಟರು, ದೇಶದ ಸಿದ್ದಪ್ಪಶೆಟ್ಟರು, ಸಿ. ವಿ. ನರಸಿಂಹಯ್ಯಂಗಾರ್, ಬಿ.ಎ., ಬಿ.ಎಲ್. ರವರು, ಪಿ. ಎಂ. ಬಸಪ್ಪನವರು, ಎಲ್. ಎ. ಪೌಸ್ವಾಲ್‌ರವರು, ಬಿ. ಕೆ. ಗರುಡಾಚಾರರು, ದೇಶದ ವೀರಭದ್ರಸೆಟ್ಟರು, ಜಿ. ಸಿದ್ದವೀರಪ್ಪನವರು, ಡಿ. ಆದಪ್ಪನವರು, ಬಿ. ಎ. ರಹಿಮಾನ್ ಬಿ.ಎ. ಯವರು, ಎಂ. ಸುಬ್ಬಯ್ಯ ಬಿ.ಎ. ಯವರು, ಎಚ್. ರಾಮಯ್ಯನವರು, ಆರ್. ಗೋಪಾಲಸ್ವಾಮಯ್ಯರ್‌ರವರು, ಎಸ್. ವೆಂಕಟಾಚಲಯ್ಯಂಗಾರ್ ಬಿ.ಎ., ಬಿ.ಎಲ್. ರವರು, ಎಂ. ಕೆ. ಕೃಷ್ಣಮೂರ್ತಿರಾವ್‌ರವರು, ಎಂ. ಎಚ್. ಪುಟ್ಟಣ್ಣ ಬಿ.ಎ. ಯವರು, ಎಸ್. ವೆಂಕಟರಂಗಯ್ಯಂಗಾರರು, ಕೆ. ಎಸ್. ಕೃಷ್ಣಯ್ಯರ್ ಬಿ.ಎ. ಯವರು, ಇವರಲ್ಲದೆ ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಸಭಿಕರಾರಾರೆಂದರೆ—ಮಿ||ಗಳಾದ ರೆ|| ಡಿ. ಎ. ರೀಸ್‌ರವರು, ಎನ್. ಜ್ಞಾನಪ್ರಿಯಂಪಿಳ್ಳೆಯವರು, ಎ. ಚಂಗಯ್ಯಶೆಟ್ಟರು, ಡಿ. ವೆಂಕಟರಾಮಯ್ಯನವರು, ಅಬ್ಬಾಸ್‌ಖಾನ್‌ರವರು, ಉಸ್ಮಾನ್‌ಖಾನರವರು, ಎಸ್. ಕೆ. ನರಸಿಂಹಯ್ಯನವರು, ಮತ್ತು ಎಂ. ರಾಮಚಂದ್ರರಾವ್ ಸಿಂಧೆಯವರು.

ಯುದ್ಧವಾರ್ತೆಯು.

ಕಳೆದ ತಾ|| ೩೦ ರ ರಾತ್ರಿ ತುರುಕರಿಗೂ ಇಂಗ್ಲೀಷರಿಗೂ ತಾತ್ಕಾಲಿಕ ಸಂಧಿಯು ಜರುಗಿತು. ತಾ|| ೩೧ ರ ಮಧ್ಯಾಹ್ನದಿಂದ ಅದು ಆಚರಣೆಗೆ ಬಂದಿತು. ಆ ಸಂಧಿನಿಬಂಧನೆಗಳ ಮುಖ್ಯಾಭಿಪ್ರಾಯಗಳೇನೆಂದರೆ—ಡಾರ್ಡಿನಲ್ಸ್ ಬಾಸ್ಫರಸ್ ಜಲಮಾರ್ಗಗಳ ಮೂಲಕ ಕಪ್ಪುಸಮುದ್ರಕ್ಕೆ ಮಿತ್ರಮಂಡಲಿಯ ನೌಕಾದಳ ಮೊದಲಾದುವುಗಳು ಹೋಗಬೇಕು. ಅಲ್ಲಿಯ ಕೋಟೆಗಳು ಮಿತ್ರಮಂಡಲಿ ವಶವಾಗಬೇಕು. ತುರ್ಕಿಯುದ್ಧದ ಹಡಗುಗಳೆಲ್ಲಾ ಮಿತ್ರಮಂಡಲಿ ವಶವಾಗಬೇಕು. ಮಿತ್ರಮಂಡಲಿ ಭದ್ರಕ್ಕಾಗಿ ಅವರು ಅಪೇಕ್ಷಿಸುವ ಮುಖ್ಯಸ್ಥಾನಗಳನ್ನು ಆಕ್ರಮಿಸಿಕೊಳ್ಳಬಹುದು. ಬಂದಿಗಳಾಗಿರುವ ಮಿತ್ರಮಂಡಲಿ ಕಡೆಯ ಸೈನಿಕರುಗಳನ್ನೆಲ್ಲಾ ಅವರುಗಳಿಗೆ ಒಪ್ಪಿಸಿಬಿಡಬೇಕು. ತುರ್ಕಿಯ ಎಲ್ಲೆಗಳನ್ನು ಕಾಪಾಡುವುದಕ್ಕೆ ಎಷ್ಟು ಸೈನ್ಯ ಬೇಕೆಂಬುದನ್ನು ತುರ್ಕಿಯವರು ಮಿತ್ರಮಂಡಲಿಯವರೊಡನೆ ಆಲೋಚಿಸಿ, ಅಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನೆಲ್ಲಾ ತೊಲಗಿಸಿಬಿಡಬೇಕು. ಪಾರಸೀಕ ದೇಶದಲ್ಲಿರುವ ತುರ್ಕಿಯವರೆಲ್ಲಾ ಅದನ್ನು ಬಿಟ್ಟುಹೋಗಬೇಕು. ಟ್ರಾನ್ಸ್‌ಕಕೇಷಿಯಾದಲ್ಲಿನ ಸ್ಥಿತಿಗತಿಯನ್ನನುಸರಿಸಿ ಉಳಿದ ಭಾಗಗಳನ್ನು ಬಿಟ್ಟುಕೊಡಬೇಕೆಂದು ಮಿತ್ರಮಂಡಲಿಯವರು ಅಪೇಕ್ಷಿಸಿದರೆ ಅದನ್ನೂ ಬಿಟ್ಟುಕೊಡಬೇಕು. ತುರ್ಕಿದೇಶದ ವಾಯುವಾರ್ತಾಸ್ಥಾನಗಳೂ ಲೋಹಮಾರ್ಗಗಳೂ, ಬಟೋಮು, ಬಾಕೂಮುಗಳೂ ಸಹ ಮಿತ್ರಮಂಡಲಿಯ ವಶವಾಗಬೇಕು. ಹೆಡ್ಜಾಜು, ಅಸೀರು, ಈಮೆನ್, ಸಿರಿಯಾ, ಮೆಸೆಪೊಟೋಮಿಯಾ-ಈ ಸ್ಥಳಗಳಲ್ಲಿರುವ ತುರ್ಕಿಸೈನ್ಯವೆಲ್ಲಾ ಶರಣಾಗತವಾಗಬೇಕು. ಸಿಲೀಷಿಯಾದಲ್ಲಿ ಶಾಂತಿರಕ್ಷಣೆಗೆ ಮಾತ್ರ ಸ್ವಲ್ಪ ಸೈನ್ಯವನ್ನಿಟ್ಟು ಉಳಿದುದನ್ನೆಲ್ಲಾ ತೆಗೆದುಬಿಡಬೇಕು. ಟ್ರಿಪೋಲಿ, ಟಾನಿಯಾ, ಸಿರೇನಿ-ಇವುಗಳಲ್ಲಿರುವ ಸೈನ್ಯವೆಲ್ಲಾ ಇಟಲಿಗೆ ಶರಣಾಗತವಾಗಬೇಕು. ಅಲ್ಲಿಯ ರೇವೆಗಳೆಲ್ಲವೂ ಮಿತ್ರಮಂಡಲಿಯ ವಶವಾಗಬೇಕು. ತುರ್ಕಿಯಲ್ಲಿರುವ ಜರ್ಮನ್ ಆಸ್ಟ್ರಿಯನ್ ಪ್ರಜೆಗಳೆಲ್ಲರೂ ೧ ತಿಂಗಳೊಳಗಾಗಿ ತುರ್ಕಿಯನ್ನು ಬಿಟ್ಟುಹೋಗಬೇಕು. ತುರ್ಕಿಯವರ "ಸಪ್ಲೆ" ಮಂತ್ರಿವರ್ಗದಲ್ಲಿ ಮಿತ್ರಮಂಡಲಿ ಪ್ರತಿನಿಧಿಯೊಬ್ಬರಿರಬೇಕು. ತುರ್ಕಿಗೆ ಜರ್ಮನ್ ಮಿತ್ರದೇಶಗಳೊಡನೆ ಯಾವ ಸಂಬಂಧವೂ ಇರಕೂಡದು. ಅರ್ಮೇನಿಯಾದಲ್ಲೂ ವಿಲಿಯಟ್ಸಿನಲ್ಲೂ ಏನಾದರೂ ತೊಂದರೆಗಳುಂಟಾದರೆ ಅಲ್ಲಿ ಯಾವ ಪ್ರದೇಶವನ್ನಾದರೂ ಆಕ್ರಮಿಸಿಕೊಳ್ಳುವುದಕ್ಕೆ ಮಿತ್ರಮಂಡಲಿಗೆ ಸ್ವಾತಂತ್ರ್ಯವಿರಬೇಕು. ರಾಷ್ಟ್ರದ ಪುನರ್ವಿಭಜನೆಯು ಮುಂದೆ ಕೂಡುವ ಸಂಧಿಸಭೆಯವರ ಇಷ್ಟಾನುಸಾರ ಜರುಗಬಹುದು.

ಈ ಮೇಲೆಕಂಡ ನಿಬಂಧನೆಗಳಿಗೆಲ್ಲಾ ತುರ್ಕಿಯು ಒಪ್ಪಿದುದರಿಂದ ತುರ್ಕಿಯೊಡನೆ ಯುದ್ಧವು ನಿಂತುಹೋಯಿತು. ಇದರಿಂದ ಶತ್ರುಗಳ ಬಲವು ಬಹುಭಾಗ ಮುರಿದುಹೋದುದಲ್ಲದೆ ನಮ್ಮವರಿಗೆ ಅನುಕೂಲ್ಯವು ಹೆಚ್ಚಿತು. ಮೆಡಿಟರೇನಿಯನ್ ಸಮುದ್ರದಿಂದ ಕಪ್ಪುಸಮುದ್ರಕ್ಕೆ ನಮ್ಮ ಸೈನ್ಯಗಳು ಡಾರ್ಡಿನಲ್ಸಿನ ಮೂಲಕ ನುಗ್ಗಿ ಅಲ್ಲಿಂದ ಜರ್ಮನರ ಮೇಲೂ ತಂಟೆಮಾಡುವ ರಷ್ಯನರ ಮೇಲೂ ಪ್ರತಾಪತೋರಿಸಲು ಮಾರ್ಗವಾಯಿತು. ಈಗ ತುರ್ಕಿಪ್ರಭುತ್ವದ ಸೈನ್ಯದಿಂದ ಕೆಲಸಬಿಟ್ಟುಬಂದ ಜನರು ಹೊಟ್ಟೆಗಿಲ್ಲದೆ ಊರೂರುಗಳನ್ನು ಸುಲಿಯುತ್ತಿದ್ದಾರೆ. ಎಲ್ಲೆಲ್ಲೂ ಅರಾಜಕವು ಹೆಚ್ಚಿಕೊಂಡಿದೆ. ಹೀಗೆ ತುರ್ಕಿದೇಶವು ಪತನವಾಗಿ ಮಿತ್ರಮಂಡಲಿಯ ಬಲವು ಹೆಚ್ಚುವುದಕ್ಕೆ ಮೆಸಪೊಟೋಮಿಯಾ ರಂಗದ ಜಯಪರಂಪರೆಗಳೇ ಕಾರಣವೆಂದೂ ಆ ಜಯದ ಕೀರ್ತಿಗೆ ಭರತಖಂಡ ಸೈನ್ಯದ ಮತ್ತು ಆಂಗ್ಲಸೈನ್ಯದ ವಿಶೇಷ ಸಾಹಾಯ್ಯ ಪರಾಕ್ರಮಗಳೇ ಮುಖ್ಯಕಾರಣವೆಂದೂ ಆಂಗ್ಲಸಾರ್ವಭೌಮರೂ ಆಂಗ್ಲಮಹಾಜನರೂ, ವೃತ್ತಪತ್ರಿಕೆಗಳೂ ಉದ್ಘೋಷಿಸಿರುತ್ತಾರೆ.

ಆಸ್ಟ್ರಿಯಾ.

ಕಟ್ಟೆಯಲ್ಲಿ ಒಂದು ಕಲ್ಲು ಕುಸಿದ ಕೂಡಲೇ ಒಂದರಹಿಂದೊಂದು ಕಳೆದುಕೊಳ್ಳುವಂತೆ ಮೊಟ್ಟಮೊದಲು ಬಲ್ಗೇರಿಯಾವು ಮಿತ್ರಮಂಡಲಿಯ ಏಟನ್ನು ತಡೆದುಕೊಳ್ಳಲಾರದೆ ಯಾವಾಗ ಶರಣಾಗತವಾಗಿ ಶತ್ರುಗಳ ಗುಂಪಿನಿಂದ ದೂರವಾಯಿತೋ ಆಗಣಿಂದಲೇ ಶತ್ರುಗಳ ತೀವ್ರನಿಪಾತಕ್ಕೆ ಪ್ರಾರಂಭವಾಯಿತು. ಬಲ್ಗೇರಿಯಾದ ಹಿಂದೆ ತುರ್ಕಿಯು ಬಿದ್ದುಹೋಯಿತು. ಆಸ್ಟ್ರಿಯಾದ ದುರವಸ್ಥೆಯನ್ನು ನಾವು ಕಳೆದ ಸಂಚಿಕೆಯಲ್ಲೇ ತಿಳಿಯಿಸಿದ್ದೆವಷ್ಟೆ. ಅದರ ಚಕ್ರವರ್ತಿಯು ತನ್ನ ಧನಕನಕಾದಿವಸ್ತುಗಳನ್ನು ಜೋಪಾನಪಡಿಸಿಕೊಂಡು ದೇಶವನ್ನು ಬಿಟ್ಟು ಪಲಾಯನಗೊಂಡನು. ಹಂಗೇರಿಯಾವು ಆಸ್ಟ್ರಿಯಾದಿಂದ ವಿಮುಕ್ತಿಗೊಂಡು ಸ್ವತಂತ್ರವಾಯಿತು. ಅಲ್ಲಿಯ ಬಕೋವಿನಾ, ಟ್ರಾನ್ಸಿಲ್ವಾನಿಯಾ, ಕ್ರೋಟಿಯಾ, ಸ್ಲಾವೋನಿಯಾ ಮೊದಲಾದ ಪ್ರಾಂತಗಳೆಲ್ಲಾ ಸ್ವಾತಂತ್ರ್ಯವನ್ನು ಸಾರಿಕೊಂಡು ಪ್ರತ್ಯೇಕ ಪ್ರಭುತ್ವಗಳಾಗಿಯೂ ಆಗುತ್ತಲೂ ಇವೆ. ಇಟಲಿ ಸೇನೆಗಳು ಏಸಿಯಾಗೋ ಪ್ರಾಂತದಲ್ಲೂ, ವೆನಿಷಿಯಾ ಪ್ರಾಂತದಲ್ಲೂ, ಮಾಂಟೆಲೋ ಪ್ರಾಂತದಲ್ಲೂ, ಅಲ್ಬೇನಿಯಾದಲ್ಲೂ, ಮಾಂಟೆನೀಗ್ರೋದಲ್ಲೂ ಬಲು ಪ್ರಬಲವಾದ ವಿಜಯಗಳನ್ನು ಪಡೆದು ೬೦-೮೦ ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರನ್ನೂ ಸಾವಿರಾರು ಫಿರಂಗಿಗಳನ್ನೂ ಅಪಾರವಾದ ಯುದ್ಧಸಾಮಗ್ರಿಗಳನ್ನೂ ವಿಶೇಷವಾದ ದೇಶಭಾಗಗಳನ್ನೂ ಆಕ್ರಮಿಸಿಕೊಂಡುದರಿಂದ ಯುದ್ಧದಲ್ಲಿ ಜಯದಾಸೆಯು ಅವರಿಗೆ ತಪ್ಪಿಹೋಯಿತು. ಅದುಕಾರಣ ಅಲ್ಲಿಯ ಪ್ರಭುತ್ವದವರು "ನಮ್ಮ ರಾಜ್ಯವು ಶಾಂತಿಯನ್ನು ಕೋರುತ್ತಿದೆ. ಕೂಡಲೇ ಯುದ್ಧವನ್ನು ನಿಲ್ಲಿಸಬೇಕು. ತಾತ್ಕಾಲಿಕ ಸಂಧಿಗೆ ಅವಕಾಶ ಕೊಡಬೇಕು." ಎಂದು ಮಿತ್ರಮಂಡಲಿಯವರನ್ನು ಪ್ರಾರ್ಥಿಸಿಕೊಳ್ಳಲಾಗಿ, ಮಿತ್ರಮಂಡಲಿಯವರು ವೇರ್ಸೇಲ್ಸ್ ಪಟ್ಟಣದ ಸಭೆಯಲ್ಲಿ ತಾತ್ಕಾಲಿಕ ಸಂಧಿನಿಬಂಧನೆಗಳನ್ನು ನಿರ್ಧರಿಸಿ ಆಸ್ಟ್ರಿಯನ್ನರಿಗೆ ತಿಳಿಸಿದರು. ಸೈನ್ಯವನ್ನು ಹೆಚ್ಚಿಸಲೂ ಮರಳಿ ಯುದ್ಧವನ್ನು ಉಪಕ್ರಮಿಸಲೂ ಅವಕಾಶವಿಲ್ಲದಿರುವಂಥ ನಿಬಂಧನೆಗಳನ್ನು ಇವರು ಸೂಚಿಸಿದರು. ಅದಕ್ಕೆ ಒಪ್ಪಿ ಆಸ್ಟ್ರಿಯಾ ಹಂಗೇರಿ ಪಕ್ಷದಿಂದ ಜನರಲ್ ಡಿಯೋಜ್‌ರವರು ತಾತ್ಕಾಲಿಕ ಸಂಧಿಪತ್ರಕ್ಕೆ ತಾ|| ೩ ರ ಮಧ್ಯಾಹ್ನ ಹಸ್ತಾಕ್ಷರವನ್ನು ಹಾಕಿದರು. ಅದರಂತೆ ಸೋಮವಾರ ಮಧ್ಯಾಹ್ನ ಆಚರಣೆಗೆ ಬಂದಿತು. ಇದರಿಂದ ಆಸ್ಟ್ರಿಯಾವೂ ಮಿತ್ರಮಂಡಲಿಗೆ ಶರಣಾಗತವಾದಂತಾಗಿ ಜರ್ಮನಿಯೊಂದೇ ಶತ್ರುಪಕ್ಷದಲ್ಲಿ ಉಳಿದಂತಾಯಿತು. ಇಟಲಿಯವರಿಗೆ ಪೂರ್ವರಂಗದ ಕಾರ್ಯವೆಲ್ಲಾ ನಿಂತು, ಅಲ್ಲಿಯ ಅವರ ೩೦ ಲಕ್ಷ ಸೈನ್ಯವು ಬೇರೆಕಡೆಗೆ ಬಂದು ಮಿತ್ರಮಂಡಲಿಗೆ ಸಹಾಯಮಾಡನುಕೂಲಿಸಿತು.

ಸರ್ವಿಯಾ—ಈ ದೇಶದ ರಾಜಧಾನಿಯಾದ ಬಲ್ಗ್ರೇಡ್ ಪಟ್ಟಣವೂ ಕೂಡ ಕಳೆದ ತಾ|| ೧ ರಲ್ಲಿ ಸರ್ವಿಯನ್ನರ ವಶವಾಯಿತು. ಇದರಿಂದ ಸರ್ವಿಯಾ ದೇಶವೆಲ್ಲಾ ಸರ್ವಿಯನ್ನರಿಗೆ ಮರಳಿ ವಶವಾದಂತಾಯಿತು. ಮಾಂಟಿನೀಗ್ರೋವಿನ ಬಹುಭಾಗವೆಲ್ಲಾ ಹೀಗೆಯೇ ಮಿತ್ರಮಂಡಲಿಯ ವಶವಾಯಿತು. ಉಳಿದಿರುವ ಭಾಗದಿಂದ ಜರ್ಮನ್ ಸೈನ್ಯವನ್ನು ನಮ್ಮವರು ಓಡಿಸಿ ಆಕ್ರಮಿಸಿಕೊಳ್ಳುತ್ತಿದ್ದಾರೆ.

ಬಲ್ಗೇರಿಯಾ—ಈ ದೇಶಕ್ಕೆ ಹೊಸದಾಗಿ ಪ್ರಭುವಾಗಿದ್ದ ಬೋರಿಸ್ ರಾಜನೂ ಕೂಡ ಸಿಂಹಾಸನವನ್ನು ಬಿಟ್ಟು ಹೊರಟುಹೋದನು. ರೀಜನ್ಸಿ ಸಂಘದವರು ಈಗ ರಾಜ್ಯಪರಿಪಾಲನೆ ಮಾಡುತ್ತಿದ್ದಾರೆ.

ರುಮೇನಿಯಾ—ಸದ್ಯದ ಪರಿಸ್ಥಿತಿಗಳು ರುಮೇನಿಯಾದವರನ್ನು ಹುರಿದುಂಬಿಸಿವೆ. ಪ್ರಭುವು ಪೂರ್ವಮಂತ್ರಿಯನ್ನು ಬರಮಾಡಿಕೊಂಡು ಆತ್ಮೋದ್ಧಾರ ವಿಷಯವನ್ನೂ ಕರ್ತವ್ಯವನ್ನೂ ಆಲೋಚಿಸುತ್ತಿದ್ದಾರೆ. ಸ್ಥಿತಿಗತಿಗಳೆಲ್ಲಾ ಹೀಗಿರುವಾಗ ಜರ್ಮನರೊಬ್ಬರು ಎಷ್ಟುದಿನ ಶರಣಾಗತರಾಗದೆ ಯುದ್ಧಮಾಡುವರೋ ನೋಡಬೇಕಾಗಿದೆ. ಕೈಸರರು ರಾಜ್ಯಪರಿತ್ಯಾಗ ಮಾಡುವುದು ನಿಜವೆಂದು ಕೆಲಪತ್ರಿಕೆಗಳು ಹೇಳುತ್ತವೆ. ಅವರು ರಾಜ್ಯವನ್ನು ಬಿಟ್ಟರೆ ದೇಶವೇ ಹಾಳಾಗುವುದೆಂದು ಇನ್ನು ಕೆಲ ಜರ್ಮನ್ ಪತ್ರಿಕೆಗಳು ಹೇಳುತ್ತವೆ. ತನಗೆ ರಾಜ್ಯಕಾಂಕ್ಷೆಯೇನೂ ಇಲ್ಲವೆಂದೂ ಪ್ರಜಾಹಿತಕ್ಕಾಗಿಯೇ ತಾನು ಸಿಂಹಾಸನವನ್ನೇರಿರುತ್ತೇನೆಂದೂ ತಾನು ರಾಜ್ಯಪರಿತ್ಯಾಗ ಮಾಡಿದರೆ ದೇಶಕ್ಕೆ ಹಿತವಾಗುವುದೆಂದು ಪ್ರಜೆಗಳು ನೆನಸುವುದಾದರೆ ತಾನು ರಾಜ್ಯಪರಿತ್ಯಾಗಮಾಡುವುದಕ್ಕೂ ಸಿದ್ಧನಾಗಿರುವೆನೆಂದೂ, ಉತ್ತರಕ್ರಮ ತಮ್ಮ ಯುವರಾಜರ ಅಪ್ರಾಪ್ತವಯಸ್ಕ ಕುಮಾರನಿಗೆ ಪಟ್ಟಕಟ್ಟಬೇಕೆಂದೂ ಕೈಸರರು ಪ್ರಕಟಿಸಿದ್ದಾರೆ. ಮತ್ತು ಇದುವರೆಗೆ ತಮ್ಮ

ಧೀನದಲ್ಲಿದ್ದ ಕೆಲ ಮುಖ್ಯಾಧಿಕಾರಗಳನ್ನು ತಮ್ಮ ನೂತನ ಪ್ರಭುತ್ವವರ್ಗದ ಅಧಿಕಾರಕ್ಕೆ ವಹಿಸಿಕೊಟ್ಟಿದ್ದಾರೆ. ಮತ್ತೂ ತಾವು ಈಗ ಪಶ್ಚಿಮ ರಣರಂಗಕ್ಕೆ ಹೋಗಿದ್ದಾರೆ.

ಪಶ್ಚಿಮರಂಗದಲ್ಲಿ ಇಂಗ್ಲೀಷರೂ ಬೆಲ್ಜಿಯಮ್ಮಿನವರೂ ಬೆಲ್ಜಿಯಂ ದೇಶದಲ್ಲಿ ಘೆಂಟ್‌ಪಟ್ಟಣದ ಸುತ್ತಲೂ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡರು. ಅದಕ್ಕೆ ದಕ್ಷಿಣದಲ್ಲಿ ಬೆಲ್ಜಿಯಮ್ಮಿಗೂ ಫ್ರಾನ್ಸಿಗೂ ಮಧ್ಯದ ಎಲ್ಲೆಯ ಹತ್ತಿರ ೬ ಲೋಹಮಾರ್ಗಗಳು ಕೂಡುವ ಪಟ್ಟಣವಾಗಿಯೂ ದುರ್ಗರಕ್ಷಿತವಾಗಿಯೂ ಇದ್ದ ವಾಲನ್ಸಿರೆನ್ಸ್ ಎಂಬ ಸ್ಥಲವನ್ನು ಇಂಗ್ಲೀಷರು ಕಳೆದ ತಾ|| ೧ ರಲ್ಲಿ ಹಿಡಿದರು. ಈಗ ಅದರ ಪೂರ್ವಕ್ಕೂ ದಕ್ಷಿಣಕ್ಕೂ ೬-೮ ಮೈಲಿಗಳ ದೂರ ನುಗ್ಗಿ ಹೋಗಿದ್ದಾರೆ. ಫ್ರೆಂಚ್ ಅಮೇರಿಕನ್ ಸೈನ್ಯಗಳು ಅದಕ್ಕೆ ದಕ್ಷಿಣದಲ್ಲಿ ವರ್ಡನ್ನಿಗೆ ಉತ್ತರದಲ್ಲಿ ೩ ದಿನಗಳೊಳಗಾಗಿ ೧೮ ಮೈಲಿ ಅಗಲದಲ್ಲಿ ೧೨ ಮೈಲಿಗಳ ದೂರ ಮುಂದಕ್ಕೆ ಹೋಗಿ ೧೯ ಗ್ರಾಮಗಳನ್ನೂ ನೂರಾರು ಫಿರಂಗಿಗಳನ್ನೂ ೫ ಸಾವಿರ ಶತ್ರುಸೈನಿಕರನ್ನೂ ಸೆರೆಹಿಡಿದಿದ್ದಾರೆ. ಮಿತ್ರಮಂಡಲಿಯವರಿಗೆ ಈ ರಂಗದಲ್ಲಿ ಜಯಪರಂಪರೆಗಳು ಪ್ರತಿದಿನವೂ ಲಭಿಸುತ್ತಿವೆ.

ಇಟಲಿಯವರು ಆಸ್ಟ್ರಿಯನ್ನರನ್ನು ಪರಾಜಯಗೊಳಿಸಿದ ಮಹಾಯುದ್ಧದಲ್ಲಿ ಇದುವರೆಗೆ ೩೦೫೦೦೦ ಮಂದಿಗಳನ್ನು ಸೆರೆಹಿಡಿದಿರುವರೆಂದು ಪ್ರಕಟವಾಗಿದೆ.

ಪೂರ್ವರಂಗದಲ್ಲಿ ಉಕ್ರೇನಿಯಾ ರುಮೇನಿಯಾ ಸೈನ್ಯಗಳು ಗೆಲೀಷಿಯಾ ಪ್ರಾಂತ್ಯಕ್ಕೆ ನುಗ್ಗಿ ಅಲ್ಲಿರುವ ಪೋಲರೊಡನೆ ಯುದ್ಧಮಾಡಿ ಲೆಂಬರ್ಗ್ ಪಟ್ಟಣವನ್ನೂ ಪ್ರಿಜನ್ಸೆಲ್ ಪಟ್ಟಣವನ್ನೂ ಆಕ್ರಮಿಸಿದರೆಂಬ ವಾರ್ತೆ ಬಂದಿದೆ.

ಜರ್ಮನರು ತಾತ್ಕಾಲಿಕ ಸಂಧಿನಿಬಂಧನೆಗಳನ್ನು ಕುರಿತು ಮಾತನಾಡಬೇಕಾಗಿದ್ದರೆ ಅವರ ರಾಯಭಾರಿಯನ್ನು ಮಿತ್ರಮಂಡಲಿ ಸರ್ವಸೇನಾಪತಿಯಾದ ಜನರಲ್ ಫಾಕ್‌ರವರ ಬಳಿಗೆ ಕಳುಹಿಸಬಹುದೆಂದು ಅಮೇರಿಕಾದ ಪ್ರೆಸಿಡೆಂಟರು ಜರ್ಮನಿಗೆ ತಿಳಿಸಿಬಿಟ್ಟಿದ್ದಾರೆ.

ಮಿತ್ರಮಂಡಲಿಯವರು ಆಸ್ಟ್ರಿಯಾದವರಿಗೆ ತಿಳಿಸಿದ ತಾತ್ಕಾಲಿಕ ಸಂಧಿನಿಬಂಧನೆಗಳು ೨೦ ಆಗಿವೆ. ಇವು ಆ ದೇಶದ ಕೈಕಾಲನ್ನೆಲ್ಲಾ ಕಟ್ಟಿ ನೀರಿನಲ್ಲಿ ಮುಳುಗಿಸುವಂತಿವೆ. ಇವು ತನಗೆ ಅಗೌರವಕರವಾದುದರಿಂದ ಅಂಗೀಕರಿಸಲಾರೆನೆಂದು ಹೇಳಿ ಆಸ್ಟ್ರಿಯಾ ಚಕ್ರವರ್ತಿಯು ನಿರಾಕರಿಸಿ ದೇಶವನ್ನೇ ಬಿಟ್ಟು ಸ್ವಿಡ್ಜರ್ಲಂಡಿಗೆ ಓಡಿಹೋದನು. ಸೈನಿಕ ಸಂಘಾಧ್ಯಕ್ಷನು ಆ ನಿಬಂಧನೆಗಳ ಪತ್ರಕ್ಕೆ ರುಜು ಹಾಕಿರುವನು. ಅದರಂತೆ ಈಗ ನಡೆಯುತ್ತಿರುವುದು.

ಪತ್ರವ್ಯವಹಾರ.

ದುಃಖಪ್ರದರ್ಶನಸಭೆ.

ಧಾರವಾಡದಲ್ಲಿಯ ಒಬ್ಬ ಪ್ರಮುಖರೂ, ವೀರಶೈವ ಸಮಾಜದ ಮುಂದಾಳುಗಳೂ ಆದ ವೇ|| ಚನ್ನಮಲ್ಲಯ್ಯನವರು ಹಿರೇಮಠ ಇವರು ಯಾರೋ ಸೀಚರ ಗುಂಡಿನೇಟಿನಿಂದ ಶಿವಾಧೀನರಾದರಷ್ಟೆ. ಇದರಿಂದ ದಾವಣಗೆರೆ ವೀರಶೈವ ಮಂಡಳಿಯವರಿಗುಂಟಾದ ವಿಷಾದವನ್ನು ಪ್ರದರ್ಶಿಸಲು ಇಲ್ಲಿನ ಮ|| ರಾ|| ಯಜಮಾನ ಪೋಲಿ ಅಜ್ಜಪ್ಪನವರ ಅಧ್ಯಕ್ಷತೆಯಲ್ಲಿ ತಾ|| ೧೦-೧೦-೧೮ನೆಯ ದಿವಸ ಸಭೆಸೇರಿತ್ತು. ಮ|| ಚನ್ನಮಲ್ಲಯ್ಯನವರ ಸಾಹಸ, ಧೈರ್ಯ, ಪರಹಿತಬುದ್ಧಿ, ಮೊದಲಾದವುಗಳನ್ನು ಸಭೆಯಲ್ಲಿ ವಿವರಿಸಿ ಇವರ ಕುಟುಂಬಕ್ಕೆ ತಮಗುಂಟಾದ ದುಃಖವನ್ನು ಪ್ರದರ್ಶಿಸುವ ಪತ್ರವು ಓದಲ್ಪಟ್ಟಮೇಲೆ ಈ ದುಃಖಪ್ರದರ್ಶನಸಭೆಯು ಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ.

ಒಬ್ಬ ಮಠಾಭಿಮಾನಿಗಳ ಔದಾರ್ಯ.

ಜಗಲೂರು ತಾಲ್ಲೂಕು ಮದ್ದೇರಹಳ್ಳಿಯಲ್ಲಿರುವ ಶ್ರೀ ಸಿಟ್ರಳ್ಳಿ ಮಠದ ಗುರುನಂಜಯ್ಯನವರು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ 40 ರೂ. ಗಳನ್ನು ಕಳುಹಿಸಿಕೊಟ್ಟು, “ಈಗ ಇದರ ಲಗತ್ತು 40 ರೂಪಾಯಿಗಳ ಚಿಲ್ಲರೆ ನೋಟು ಇನ್ಷೂರುಮಾಡಿದೆ; ದಯವಿಟ್ಟು ತೆಗೆದುಕೊಂಡು ವಿದ್ಯಾಫಂಡಿಗೆ ಜಮಾ ಮಾಡಿಸಿ. ಮತ್ತು ನಾನು ಕೇವಲ ಗರೀಬನಾಗಿಯೂ, ವೃದ್ಧನಾಗಿಯೂ ಇರುವುದರಿಂದ ಭಿಕ್ಷಾವೃತ್ತಿಯಲ್ಲಿ ಬಂದದ್ದರಿಂದ ಜೀವಿಸಿಕೊಂಡು ಇರುವ ಶಿಲ್ಕು ಮೊಬಲಗು ಧರ್ಮಕ್ಕಾಗಿ ಕಳುಹಿಸಿದೆ” ಎಂದು ಬರೆದಿರುತ್ತಾರೆ. ಇವರು ಕೇವಲ ಮಠಾಭಿಮಾನದಿಂದಲೂ, ವಿದ್ಯಾಭಿಮಾನದಿಂದಲೂ ಇಂಥಾ ದುರ್ಭಿಕ್ಷಕಾಲದಲ್ಲಿ ಯಾಚನೆಮಾಡಿದ್ದರಲ್ಲಿ ಕಾಸಿಗೆಕಾಸು ಸೇರಿಸಿ ಕೂಡಿಟ್ಟದ್ದನ್ನು ವಿದ್ಯಾಭಿವೃದ್ಧಿ ಫಂಡಿಗೆ ಕಳುಹಿಸಿರುವುದನ್ನು ನೋಡಿದರೆ ಇವರ ಅಭಿಮಾನೌದಾರ್ಯವು ಎಷ್ಟರಮಟ್ಟಿಗಿರುವುದೆಂಬುದನ್ನು ವಾಚಕಮಹಾಶಯರೇ ಊಹಿಸಬಹುದಾಗಿದೆ. ಮೇಲ್ಕಂಡ ಸಂಗತಿಯು ಉಳಿದ ಎಲ್ಲಾ ಮಠಾಧಿಪತಿಗಳಿಗೂ ಮಾರ್ಗದರ್ಶಕವಾಗಿರಲೆಂಬ ಉದ್ದೇಶದಿಂದ ಪ್ರಚುರಪಡಿಸಲ್ಪಟ್ಟಿರುವುದು.

ಜಿ. ಪರಮಶಿವಯ್ಯ ಬಿ.ಎ., ಎಲ್ ಎಲ್., ಬಿ.,
ಸೆಕ್ರೆಟರಿ, ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡ್‌ಸಂಘ.

ಸಂತೋಷ ಕೂಟ.

ಕಷ್ಟಾರ್ಜನೆಯಿಂದ ಲಕ್ಷಾಂತರ ಧನವನ್ನು ಸಂಪಾದಿಸಲು ತಮ್ಮ ಶರೀರವನ್ನು ಸವಿಸಿ ಒಂದು ಕಾಸನ್ನಾದರೂ ತಮ್ಮ ಕುಟುಂಬದ ಉದರಂಭರಣೆಗೆ ಉಪಯೋಗಿಸದೆ ನಮ್ಮೀ ವೀರಶೈವ ಸಮಾಜದ ವಿದ್ಯಾರ್ಥಿವರ್ಗಕ್ಕೆಲ್ಲಾ ಮಹದುಪಕಾರವನ್ನು ಮಾಡಿದ ಶ್ರೀಯುತ ಲಿಂಗಪ್ಪಾ ಚಾಯಪ್ಪಾ ಶಿರಸಂಗಿ ದೇಸಾಯಿಯವರು ದಿವಂಗತರಾದನಂತರ ಹುಟ್ಟಿದ ದೊಡ್ಡ ವ್ಯಾಜ್ಯವು ಅಪೀಲ್ ಕೋರ್ಟಿನಲ್ಲಿ ಸಮಾಜದವರಾಗಿ ಇತ್ಯರ್ಥವಾದ ಸಂತೋಷಶ್ಲೋಕ್ಯರ ಕಾರ್ತಿಕ ಶುದ್ಧ ಪ್ರತಿಪದ ಸೋಮವಾರದ ದಿವಸ ಸಾಯಂಕಾಲ ಪದ್ಧತಿಪ್ರಕಾರ ದೀಪೋತ್ಸವವಾದ ನಂತರ ವಿರಕ್ತಮಠದಲ್ಲಿ ಶ್ರೀ ಪ್ರಭುಪತ್ತರೂಪಿಗಳಾದ ಮೃತ್ಯುಂಜಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸರ್ವಮಹನೀಯರೂ ಸೇರಿ ಶ್ರೀಮಂತ ಸರ್ ದೇಸಾಯಿಯವರ ಸ್ಮಾರಕಶ್ಲೋಕ್ಯರ ಹೆಚ್ಚು ಆನಂದಸ್ಮೃತಿಯೊಡನೆ ದೀಪೋತ್ಸವವನ್ನು ಮಾಡಿ ಸಭೆಯ ಮುಂದಿನ ಕಾರ್ಯಗಳನ್ನು ನಡಿಸಲುಪಕ್ರಮಿಸಿದರು. ವಿದ್ಯಾರ್ಥಿಗಳಲ್ಲಿ ಮ|| ರಾ|| ಎಸ್. ಕೆ. ವೀರಭದ್ರಪ್ಪನವರೂ, ವೇ|| ರಾಚಯ್ಯನವರೂ ಮತ್ತು ವೇ|| ನಿರಾಮಠ ಇವರುಗಳು ಸರ ದೇಸಾಯಿಯವರ ಜೀವನ ಚರಿತ್ರೆ ಮತ್ತು ಧರ್ಮಪರಾಯಣತೆಯ ವಿಷಯದಲ್ಲಿ ಉಪನ್ಯಾಸ ಮಾಡಿದನಂತರ ಮ|| ರಾ|| ಕ್ರಿಟ್ನರ್ ಹೆಡ್ಮಾಸ್ಟರ್ ಕೆ. ಗುರುಶಾಂತಯ್ಯನವರು ತಮ್ಮ ಗಂಭೀರವಾದ ವಾಣಿಯಿಂದ ದೇಸಾಯಿಯವರ ಔದಾರ್ಯಾತಿಶಯವನ್ನು ಸಭಿಕರಿಗೆ ಹೃದಯಂಗಮವಾಗುವಂತೆ ವಿವರಿಸಿ, ತಾವು ಮಾಡಿದ ಪಂಚರತ್ನ ಮಾಲಿಕೆಯನ್ನು ಅರ್ಥಗಾಂಭೀರ್ಯದೊಡನೆ ಶೃತಪಡಿಸಿದರು. ಅಧ್ಯಕ್ಷರ ಭಾಷಣವಾದಕೂಡಲೆ ಮಂಗಲಾಚರಣವನ್ನು ಮಾಡಿ ಹಾರಾ ತುರಾಯಿ ಹಂಚಲ್ಪಟ್ಟ ನಂತರ ಇಷ್ಟು ನಿಸ್ಪೃಹತೆಯಿಂದ ಸಮಾಜಸೇವೆಯನ್ನು ಮಾಡಿದ ಶಿರಸಂಗಿ ದೇಸಾಯಿಯವರ ಆತ್ಮಕ್ಕೆ ಶ್ರೀ ಜಗದೀಶ್ವರನು ನಿರಂತರ ಸುಖಶಾಂತಿಯನ್ನೀಯಲೆಂಬ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ದಾವಣಗೆರೆ. ಪ್ರತ್ಯಕ್ಷದರ್ಶಿ.

ದೈವಭಕ್ತಿಯೂ, ಕಾರ್ಯಸಿದ್ಧಿಯೂ.

ದೈವಂನಿಹತ್ಯಕುರುಪೌರುಷಮಾತ್ಮಶಕ್ತ್ಯಾ |
ಯತ್ನೇಕೃತೇಯದಿನಸಿದ್ಧ್ಯತಿಕೋತ್ರದೋಷಃ ||

ಆಕಾಶವು ನಿರ್ಮಲವಾಗಿತ್ತು. ಮೋಡಗಳ ಸುಳಿವೇ ಇರಲಿಲ್ಲ. ನೈರುತವೃಕ್ಷಗಳೆಲ್ಲಾ ಒಣಗಿ, ಕ್ಷಾಮವು ಸಂಪೂರ್ಣವಾಗಿ ತೋರಿಬರುತ್ತಲಿತ್ತು. ಇದರಮೇಲೆ “ಅಪಿಚಪಿಶಾಚಗ್ರಸ್ತ” ಎಂಬಂತೆ ಈ ನೂತನಜ್ವರದ ಹಾವಳಿಯಿಂದ ಪ್ರಪಂಚವೇ ಲಯವನ್ನೈದುವದಾಗಿ ತೋರಿಬರುತ್ತಲಿದೆ. ಪಾಶ್ಚಾತ್ಯದೇಶಗಳಲ್ಲಿ ಯುದ್ಧದ ಅವಾಂತರದಿಂದ ಪ್ರಜೆಗಳು ಲಯವನ್ನೈದುವರು. ಈ ನಮ್ಮ ಭರತಖಂಡದಲ್ಲಿಯಾದರೋ ಪ್ರಜಾಹಿತೈಷಿಗಳಾದ ಗೌರ್ನಮೆಂಟಿನವರು ನಮ್ಮಗಳಿಗೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಯುದ್ಧವು ಹತ್ತಿರ ಸುಳಿಯದಂತೆ ನಿಗಾ ನೋಡಿಕೊಂಡು ರಕ್ಷಿಸುತ್ತಲಿದ್ದಾಗ್ಯೂ ಈ ರೋಗವು ಭೂಭಾರವನ್ನು ಕಮ್ಮಿಮಾಡಲೋಸುಗ ಪ್ರವರ್ತಿಸಿದೆಯೆಂದು ತೋರುತ್ತಲಿದೆ. ಅತಿಶಯೋಕ್ತಿಯಲ್ಲ, ಉತ್ಪ್ರೇಕ್ಷೆಯಲ್ಲ, ಒಂದು ಎಳೇ ಮಗುವಿಗೆ ವೇದಾಂತವೇಕೆ ಇದನ್ನು ವಿವರಿಸತೊಡಗಿದರೆ ಮುಂದಣ ಲೇಖನವು ಇಲ್ಲಿಗೇ ವಿರಾಮಹೊಂದಿ ಹಸ್ತವು ಚಿತ್ರಪ್ರತಿಮೆಯಂತೆ ಸ್ತಂಭೀಭೂತವಾಗುವುದು. ಈ ವಿಷಯವು ಹೀಗಿರಲಿ.

ಇಂಥಾ ವಿಷಮಕಾಲವು ಸಂಭವಿಸಿರುವಲ್ಲಿ ಕಾವೇರೀನದೀತೀರವಾಗಿಯೂ, ವಹ್ನಿಪುಷ್ಕರಿಣೀ ಎಂಬ ನಾಮಧೇಯವನ್ನು ಪಡೆದೂ, ದಕ್ಷಿಣಕಾಶಿ ಎಂಬದಾಗಿ ಪ್ರಸಿದ್ಧಿಯನ್ನು ಹೊಂದಿಯೂ ಇರುತಲಿರುವ ರಾಮನಾಥಪುರಕ್ಷೇತ್ರದಲ್ಲಿ ಈ ಅರಕಲಗೂಡು ತಾಲ್ಲೂಕ್ ರಾಮನಾಥಪುರ, ರುದ್ರಪಟ್ಟಣ, ಅಗ್ರಹಾರ, ಕಟ್ಟೇಪುರ, ಬಸವಾಪಟ್ಟಣ, ಕೇರಳಪುರ, ಆನಂದೂರು ಇವೇ ಮುಂತಾದ ಸಾವಿರಾರು ಬ್ರಾಹ್ಮಣವೈದಿಕ ಮಂಡಲಿಯವರು ತಾರೀಖು 27-10-1918 ನೆ ಭಾನುವಾರ ಏಕೀಭವಿಸಿ ಅದು ಮೊದಲುಗೊಂಡು ಪ್ರತಿದಿನವೂ ಶ್ರೀರಾಮೇಶ್ವರನನ್ನು ಕುಂಭಾಭಿಷೇಕ, ರಾಮಾಯಣಪಾರಾಯಣ, ವೇದಪಾರಾಯಣ, ಮಹಾಮೃತ್ಯುಂಜಯಜಪ, ಪರ್ಜನ್ಯಜಪ, ನವಗ್ರಹಜಪಾದಿಗಳಿಂದ ಅರ್ಚಿಸಲಾಗಿ ಶ್ರೀರಾಮೇಶ್ವರನ ಕೃಪಾಕಟಾಕ್ಷವೀಕ್ಷಣದಿಂದ ತಾ|| 30.31 ರಲ್ಲಿ ಮೇಘವು ಆಕಾಶಮಂಡಲವನ್ನಾವರಿಸಿ ಸಂಪೂರ್ಣವೃಷ್ಟಿಯನ್ನುಂಟುಮಾಡಿತು. ಬ್ರಾಹ್ಮಣನು ಸ್ವಕರ್ಮನಿರತನಾಗಿದ್ದಲ್ಲಿ ಯಾವ ಕೆಲಸತಾನೇ ಅಸಾಧ್ಯ? ಇದಕ್ಕೆ ಬ್ರಹ್ಮತೇಜೋಬಲಂಬಲಂ ಎಂದು ವಿಶ್ವಾಮಿತ್ರರೂ ಕೂಡ ಹೇಳಿರುವರು. ಈ ರೀತಿಯಾಗಿ ಇನ್ನೂ ಒಂದೆರಡು ಹದಮಳೆಯು ಚೆನ್ನಾಗಿ ಬಿದ್ದಲ್ಲಿ ಹುರಳಿಯೇ ಮೊದಲಾದ ಕಿರಾಣಿ ಪೈರುಗಳು ಬಹು ಚೆನ್ನಾಗಿ ಆಗುವವು; ಕ್ಷಾಮವು ಕ್ಷಯಿಸುವುದು; ಈ ನೂತನಜ್ವರವು ಜಾಪಾಳವನ್ನು ಸ್ವೀಕರಿಸಿ ನೇಪಾಳಕ್ಕೆ ಪ್ರಯಾಣಮಾಡುವದರಲ್ಲಿ ಸಂದೇಹವಿಲ್ಲ. ಈ ತಾಲ್ಲೂಕಿನಲ್ಲಿ ಉಚ್ಛ್ರಾಯಸ್ಥಿತಿಯಲ್ಲಿರುವ ಧನಿಕರಿಲ್ಲದಿದ್ದರೂ, ಅಳಲುಸೇವೆ ಮಳಲುಭಕ್ತಿ ಎಂಬ ಲೋಕೋಕ್ತಿಯಂತೆ ಅವರವರಿಗೆ ತೋರಿದಷ್ಟು ಕೂಡಿಸಿ ಒಟ್ಟು ಸಾವಿರಾರು ರೂಪಾಯಿ ಖರ್ಚುಹಾಕಿ ದೈವಭಕ್ತಿಯನ್ನು ತೋರ್ಪಡಿಸುತ್ತಿರುವುದು ಸರ್ವಶ್ಲಾಘನೀಯವಾಗಿದೆ. ಇಂಥಾ ದೇವಕಾರ್ಯಗಳಿಗೆ ಸರ್ಕಾರದವರು ತಕ್ಕಷ್ಟು ಮೊಬಲಗನ್ನು ಕೊಡಿಸಿಕೊಟ್ಟಲ್ಲಿ ತುಂಬಾ ಸಹಾಯಮಾಡಿದಂತಾಗುವುದು. ಶ್ರೀರಾಮೇಶ್ವರನ ದೃಷ್ಟಿಯು ಸರ್ವತ್ರ ಪ್ರಸರಣೆಯಾಗಿ ಪ್ರಪಂಚಕ್ಕೆ ಈಗ ಪ್ರಾಪ್ತವಾಗಿರುವ ಇನ್‌ಫ್ಲೂಯಂಜಾ ನಾಮಜ್ವರವೂ, ಯುದ್ಧವೂ, ಕ್ಷಾಮವೂ ಶೀಘ್ರದಲ್ಲಿಯೇ ಶಾಂತವಾಗಿ ಪ್ರಜೆಗಳಾದ ನಮ್ಮಗಳ ಹಿತಚಿಂತಾಸಕ್ತರಾದ ನಮ್ಮ ಶ್ರೀಮನ್ಮಹಾರಾಜರವರಿಗೂ, ಅವರ ಕುಟುಂಬಕ್ಕೂ, ಸಚಿವಶಿರೋಮಣಿಗಳಿಗೂ ಆಯುರಾರೋಗ್ಯೈಶ್ವರ್ಯಾದಿಗಳನ್ನೀಯಲೆಂದು ಕೋಟಿಶಃ ಪ್ರಾರ್ಥಿಸುವ, ಲೋಕಾಭಿಮಾನಿ.

೯ ನೆಯ ಮಹಾಸಭೆಯ ಕಾರ್ಯವನ್ನು ಹೇಗೆ ನೆರವೇರಿಸಬೇಕು?

೯ ನೆಯ ಶ್ರೀಮದ್ವೀರಶೈವ ಮಹಾಸಭೆಯನ್ನು ತಮ್ಮಲ್ಲಿ ಕೂಡಿಸುತ್ತೇವೆಂದು ಬೀರೂರಿನ ವೀರಶೈವ ಮಹಾಜನಗಳು ಈವರೆಗೂ ಅನೇಕ ಕಾರ್ಯಗಳನ್ನು ಮಾಡಿರುತ್ತಾರಷ್ಟೆ. ಆದರೆ ಆ ಪ್ರಾಂತದಲ್ಲಿ ಇನ್‌ಫ್ಲೂಯಂಜಾ ರೋಗದ ಬಾಧೆಯು ವಿಶೇಷವಾಗಿ ಇನ್ನೂ ಶಾಂತವಾಗದೇ ಇದ್ದುದರಿಂದ ಮಹಾಸಭೆಯ ಕಾರ್ಯವನ್ನು ಈಸಾರೆ ಅವರು ನಿಲ್ಲಿಸುವರೆಂದು ತಿಳಿಯುತ್ತದೆ. ಇದು ನಿಜವಾಗಿರುವ ಪಕ್ಷದಲ್ಲಿ ತುಂಬಾ ವಿಷಾದಕರವಾದುದೇ ಸರಿ. ಈ ರೋಗವು ಕೆಲವು ವಾರಗಳಲ್ಲಿಯೇ ನಿಂತರೂ ಕೂಡ ಕಾಲವು ಬಹು ಸಮೀಪಿಸಿರುವುದರಿಂದ ಬೀರೂರಿನಂಥ ಸ್ಥಳದಲ್ಲಿ ಇಂತಹ ಮಹಾಸಭೆಯನ್ನು ಸೇರಿಸುವುದು ತುಂಬಾ ಅಸಾಧ್ಯವೇ ಸರಿ. ಆಕಸ್ಮಾತ್ತಾಗಿ ಇಂತಹ ಮಹಾವಿಘ್ನವು ಪ್ರಾಪ್ತವಾದುದರಿಂದ ಬೀರೂರಿನ ಮಹಾಜನಗಳು ನಿಲ್ಲಿಸುವುದು ಅಪರಿಹಾರ್ಯವಾಗಿದೆ. ಈಗ ಎಲ್ಲಾ ಭಾಗಗಳಲ್ಲಿಯೂ ಈ ರೋಗವು ವ್ಯಾಪಿಸಿರುವುದರಿಂದ ಸಾಧಾರಣವಾದ ಯಾವ ಸ್ಥಳದಲ್ಲಿಯೂ ಹೊಸದಾಗಿ ಮಾಡಲು ಯಾರೂ ಮುಂದೆ ಬರಲಾರರು. ಅಂದಮೇಲೆ ಈ ಸಾರೆಯ ಸಭೆಯನ್ನು ನಿಲ್ಲಿಸಬಹುದೇ? ಹಾಗೆ ಮಾಡುವುದೂ ಯುಕ್ತವಲ್ಲ. ಏಕೆಂದರೆ ಯಾವ ಮಹತ್ಕಾರ್ಯಕ್ಕಾಗಿ ಕಳೆದವರ್ಷ ೬೨ ಸಹಸ್ರ ರೂ. ಗಳು ನಾಲ್ಕಾರು ತಾಸುಗಳಲ್ಲಿಯೇ ಶೇಖರವಾದವೋ ಅಂತಹ ಕಾರ್ಯವನ್ನು ಈಗಲೇ ಬಿಡುವುದು ಯುಕ್ತವಾಗಬಹುದೇ? ಶೇಖರಿಸಿದ್ದ ದ್ರವ್ಯದ ವಿನಿಯೋಗವನ್ನು ಮಾಡುವುದು, ಮಹಾಸಭೆಯ ನಿಬಂಧನೆಗಳನ್ನು ಕ್ರಮಪಡಿಸಿ ಈ ಮಹತ್ಕಾರ್ಯವು ನಿರಾತಂಕವಾಗಿ ನಡೆಯುವಂತೆ ಮಾಡುವುದು, ಅತ್ಯವಶ್ಯಕವಾಗಿಲ್ಲವೇ? ಸಮಾಜದ ಪುರೋವೃದ್ಧಿಗೆ ಒಂದು ಮುಖ್ಯಸಾಧನವಾದ ಪ್ರತ್ಯೇಕಪ್ರಾತಿನಿಧ್ಯದ ವಿಷಯವನ್ನು ಪುನಃ ಈ ವರ್ಷ ಉದ್ಘೋಷಿಸುವುದು ತುಂಬಾ ಫಲಕಾರಿಯೆಂದು ದೇಶದ ರಾಜಕೀಯ ವಿಷಯವನ್ನು ಬಲ್ಲವರಿಗೆ ವಿವರಿಸಿ ಹೇಳಬೇಕಾಗಿದೆಯೇ? ಸಮಾಜದ ಉದ್ಧಾರಕ್ಕಾಗಿಯೇ ಅವತರಿಸಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳವರ ಘನವಾದ ಚಿತ್ತಕ್ಕೆ ಈ ವಿಷಯವು ಬಂದರೆ, ಸಮಾಜವನ್ನು ಸುಪಥದಲ್ಲಿ ತೆಗೆದುಕೊಂಡು ಹೋಗಲು ತುಂಬಾ ಸಮರ್ಥರಾಗಿರುವ ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ.ಐ.ಇ. ರವರು ಈ ಕಾರ್ಯದಲ್ಲಿ ಮುಖವಿಟ್ಟರೆ ಕಳೆದವರ್ಷ ಮಹಾಸಭೆಯ ಭವ್ಯವಾದ ಮಂಟಪದಲ್ಲಿ ಯಾವ ಸಾತ್ವಿಕ ಉತ್ಸಾಹವು ಉಕ್ಕೇರುತ್ತಿದ್ದಿತೋ ಅಂತಹ ಉತ್ಸಾಹವು ನಮ್ಮ ಸಮಾಜದ ಮುಖಂಡರಲ್ಲುಂಟಾದರೆ ೯ ನೆಯ ಮಹಾಸಭೆಯ ಕಾರ್ಯವನ್ನು ನೆರವೇರಿಸುವ ಮಾರ್ಗವು ಖಂಡಿತವಾಗಿಯೂ ತೋರಿಕೊಳ್ಳುವುದು. ಬೆಂಗಳೂರಿನ ವೀರಶೈವ ಮಹಾಜನಗಳು ಈ ಕಾಲದಲ್ಲಿ ಸಾಹಸಮಾಡಿದರೆ ಸಮಾಜಕ್ಕೆ ಮಹದುಪಕಾರವನ್ನು ಮಾಡಿದ ಶ್ರೇಯಸ್ಸು ಪ್ರಾಪ್ತವಾಗುವುದು. ಇತರ ಎಲ್ಲಾ ಸ್ಥಳದವರಿಗಿಂತಲೂ ಅಲ್ಲಿಯವರಿಗೆ ಸೌಕರ್ಯಗಳು ಬಹುಹೆಚ್ಚು. ದಾವಣಗೆರೆಯವರೇ ಕಳೆದವರ್ಷ ಒಂದು ತಿಂಗಳಲ್ಲಿ ಮಹಾಸಭೆಯ ಕಾರ್ಯವನ್ನು ಮಾಡಿರುವಾಗ ಬೆಂಗಳೂರವರು ಮಾಡಲು ಅತ್ಯಂತರವೇನು? ಈ ನವಂಬರ್ ತಿಂಗಳ ಅಂತ್ಯದೊಳಗಾಗಿ ಇತರ ಸಿದ್ಧತೆಗಳನ್ನು ಮಾಡಿಕೊಂಡರೆ ಡಿಸೆಂಬರ್ ಒಂದು ತಿಂಗಳಲ್ಲಿಯೇ ಸಭೆಯ ಕಾರ್ಯವನ್ನು ಧಾರಾಳವಾಗಿ ಮಾಡಬಹುದು. ಅಷ್ಟರಲ್ಲಿ ಅಲ್ಲಿಯೂ ಹೊಸರೋಗವು ನಿಲ್ಲಬಹುದು. ರಾಷ್ಟ್ರೀಯ ಮಹಾಸಭೆ ಮುಸಲೀಂ ಲೀಗ್, ಮೊದಲಾದ ಮಹಾಮಹಾ ಸಭೆಗಳು ಇಂತಹ ದೊಡ್ಡ ಪಟ್ಟಣಗಳಲ್ಲಿ ಸ್ವಲ್ಪ ಕಾಲದಲ್ಲಿಯೇ ಸೇರುವುದಿಲ್ಲವೇ? ಒಂದುವೇಳೆ ಬೆಂಗಳೂರವರಿಗೆ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಅನನುಕೂಲಗಳಿದ್ದರೆ ಬೀರೂರಿನ ಮಹಾಜನಗಳು ಈಗ ದ್ರವ್ಯವನ್ನು ಶೇಖರಿಸಿದ್ದಾರಷ್ಟೆ. ಇವರು ಸ್ವಾಗತ ಸಂಘದವರಾಗಿಯೂ, ಬೆಂಗಳೂರಿನ ಮಹಾಸಜ್ಜನಗಳು ವ್ಯವಸ್ಥಾಪಕ ಸಂಘದವರಾಗಿಯೂ, ಸೇರಿಕೊಂಡು ಸಭೆಯ ಕಾರ್ಯವನ್ನು ಮಾಡಲು ಯಾವ ಅಭ್ಯಂತರವೂ ತೋರುವುದಿಲ್ಲ. ಹೀಗೆ ಮಾಡುವುದರಿಂದ ಬೀರೂರಿನ ಮಹಾಜನಗಳ ಸಂಕಲ್ಪವೂ ನೆರವೇರಿದಂತಾಗುವುದು. ಮತ್ತು ಸಭೆಯು ಬೆಂಗಳೂರಲ್ಲಿ ಸೇರುವುದರಿಂದ ಬೀರೂರಿಗಿಂತಲೂ ವೆಚ್ಚವು ಎಷ್ಟೋ ಪಾಲು ಕಡಿಮೆಯಾಗುವುದು. ಮುಖ್ಯವಾಗಿ ಬೆಂಗಳೂರಿನ ಮತ್ತು ಬೀರೂರಿನ ವೀರಶೈವ ಮಹಾಜನಗಳು ಏಕೀಭವಿಸಿ ಈ ಮಹತ್ಕಾರ್ಯವನ್ನು ನೆರವೇರಿಸಿದ ಕೀರ್ತಿಗೆ ಭಾಜನರಾಗಲೆಂದು ಹಾರೈಸುತ್ತೇನೆ. “ಎಂ”.

(ಬೀರೂರಿನವರು ತಾವು ಯತ್ನವನ್ನು ಕೈಬಿಟ್ಟ ಸಂಗತಿಯನ್ನು ಪ್ರಕಟಿಸಿರುವರೆ? ಪ. ಪ್ರ.)

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

11 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ
ಸುಖಾನಂದ
(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
46 3. ಇರುಳಪ್ಪನಬೀದಿ, ಮದರಾಸು.

೧೯೧೮ ನೆಯ ಇಸವಿ ನವಂಬರ್ ತಾ|| ೧೦ ರಿಂದ ೧೯೧೮ ನೆಯ ನವಂಬರ್ ತಾ|| ೧೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಕಾರ್ತಿಕ ಶು|| ಷಷ್ಠಿಯಿಂದ ಕಾರ್ತಿಕ ಶು|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾಮಾಸ
10	ಭಾನು	ಷಷ್ಠಿ	0-47	ಉಷರಿ	58-37	25
11	[1] ಸೋಮ	ಅಷ್ಟ	56-15	ಶ್ರವಣ	17-58	26
12	ಮಂಗಳ	ನವಮಿ	52-0	ಧನಿಷ್ಠ	16-28	27
13	ಬುಧ	ದಶಮಿ	46-28	ಶತಭಿಷ	13-27	28
14	[2] ಗುರು	ಏಕಾದ	41-31	ಪುಭಾ	10-5	29
15	[3] ಶುಕ್ರ	ದ್ವಾದಶಿ	35-37	ಉಭಾ	7-10	30
16	[4] ಶನಿ	ತ್ರಯೊ	29-45	ರೇವತಿ	2-8	1

(1) ಕಾರ್ತಿಕಸೋಮವಾರ, ಮೇಲುಕೋಟೆಯಲ್ಲಿ ರಾಜಮುಡೀ ಉತ್ಸವ. (2) ಸರ್ವೇಷಾಮೇಕಾದಶಿ, ಮೇಲುಕೋಟೆಯಲ್ಲಿ ಅಶ್ವತೀರ್ಥ ರಥ. (3) ಉತ್ಥಾನದ್ವಾದಶಿ, ತುಳಸೀಬೃಂದಾವನೋತ್ಸವ, ಉಡುಪಿಯಲ್ಲಿ ಲಕ್ಷದೀಪ, ವಿಷ್ಣುಪದ ಪುಣ್ಯಕಾಲ. (4) ಶನಿಪ್ರದೋಷ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮುದಿಗತರಾಜಮಂಡಲೋಹಿತ್ಯಾ | ಘನಪಥಶ್ಯಾವಕಾರಾ ಪಶ್ಯಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತೀಯಂಸದಾಪೂರಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ನವಂಬರ್ ತಾರೀಖು ೧೭ ನೆಯ ಭಾನುವಾರ. (ಸಂಚಿಕೆ ೪೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.



ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವ 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಉಡ್ಡಿ 1, ಗಡಿಯಾರದ [illegible] 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಸೋಪು [illegible] 1, ವಜ್ರದ [illegible] ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 6.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
[illegible] 9, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.
ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ
ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ
ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಜಸ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇತ್ಯಿ, ಜಡ್ಡು, ಗುದ್ದಿಪ್ಪನಬೇನೆ, ಹುರುಕುಕಜ್ಜ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇವಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮೀಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
27 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಫುಕಟು! ಇನ್‌ಫ್ಲ್ಯುಎಂಝಾ ಪತ್ರಿಕೆ-ಫುಕಟು!!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬುದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲ್ಯುಎಂಝಾ ಪಿಲ್ಸ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳವೇಳೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಮೆದಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ಬೆ-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚನವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ “ಇನ್‌ಫ್ಲ್ಯುಎಂಝಾ ಪತ್ರಿಕೆ” ಯನ್ನು ಪುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
47 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 48

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಚ್. ವೈ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿ ನಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪೂರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ [illegible] ಔಷಧವನ್ನು ತಯಾರುಮಾಡುತ್ತಾರೆ.

ಸಮಸ್ತ ರೋಗಿಗಳೂ ಮತ್ತು [illegible] [illegible].

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ನವಂಬರ್ ತಾ|| ೧೭ ನೆಯ ಭಾನುವಾರ.

ಮಿತ್ರಮಂಡಲಿಯ ಸಂಪೂರ್ಣ ವಿಜಯ. ಯುದ್ಧ ಸಮಾಪ್ತಿ.

(ಕಂದ ಪದ್ಯ)

ಭುಜಬಲವೊಂದೇ ಜಗತೀ ।
ವಿಜಯಾಸ್ಪದಮೆಂದು ಪೊಣರಿ ರಿಪುಗಳ್ ಕೆಟ್ಟರ್ ॥
ಭುಜಬಲ ಧರ್ಮಬಲಂಗಳ್ ।
ವಿಜಯಾಸ್ಪದಮೆಂದು ನಮ್ಮಿಗೆಲ್ದರ್ ಮಿತ್ರರ್ ॥೧॥
ಭೂವಿನುತ ಸತ್ಯಧರ್ಮ್ಮೋ ।
ಜ್ಜೀವಿತ ನಿವನೆನಗೆ ತಕ್ಕನೆಂದೊಲವಿಂದಂ ॥
ಪಾವನಚರಿತ್ರನು ಜಯ ।
ದೇವತೆ ವರಿಯಿಸಿದಳೆಮ್ಮ ಜಾರ್ಜನೃಪವರನಂ ॥೨॥
ದುರ್ಮ್ಮದ ದುಷ್ಕರ್ಮ್ಮಪ್ರಿಯ ।
ಜರ್ಮ್ಮಕೈಜರನ ತೊರೆದು ಜಯಲಕ್ಷ್ಮಿಯು ಸ ॥
ದ್ಧರ್ಮ್ಮಪ್ರಿಯೆಯೆಂಬುದ ನಿ ।
ನ್ನೊರ್ಮ್ಮೆ ಮಹೀತಳಕೆ ತೋರಿ ಯೆಚ್ಚರಿಸಿರ್ಪಳ್ ॥೩॥

* * *

ಕಳೆದ ನಾಲ್ಕುಕಾಲು ವರ್ಷಗಳಿಂದಲೂ ಒಂದು ದಿನವೂ ವಿರಾಮವಿಲ್ಲದೆ ಪ್ರಪಂಚವನ್ನೇ ತಳಮಳಗೊಳಿಸುತ್ತಿದ್ದ ಮಹಾಯುದ್ಧಾಗ್ನಿಯು ಕಳೆದ ತಾ|| ೧೧ನೆ ಸೋಮವಾರ ಮಧ್ಯಾಹ್ನದಲ್ಲಿ ಶಾಂತವಾಯಿತೆಂದು ತಿಳಿಯಿಸಲು ಅತಿಶಯವಾಗಿ ಸಂತೋಷಿಸುತ್ತೇವೆ. ತತ್ಸಂಬಂಧವಾದ ನಡವಳಿಕೆಗಳನ್ನೆಲ್ಲಾ ಈ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಪ್ರಪಂಚದಲ್ಲಿ ⅓ ಭಾಗದಷ್ಟು ವಿಸ್ತಾರವಾದ ಆಂಗ್ಲಸಾಮ್ರಾಜ್ಯದ ವೈಭವವನ್ನು ನೋಡಿ ಸೈರಿಸಲಾರದೆ ಅಸೂಯೆಯಿಂದ ಪ್ರೇರಿತವಾದ ಜರ್ಮನಿಯು ಮಿತ್ರದ್ರೋಹ ಬಂಧುದ್ರೋಹ ಪ್ರತಿಜ್ಞಾಭಂಗ ಮೊದಲಾದುವುಗಳೊಂದನ್ನೂ ಲಕ್ಷಿಸದೆ, ಜಗತ್ತನ್ನೆಲ್ಲಾ ತನ್ನ ಸಾಮ್ರಾಜ್ಯವನ್ನು ಮಾಡಬೇಕೆಂಬ ದುರಾಶೆಗೊಂಡು, ಆ ದುರಾಶೆಯನ್ನು ಈಡೇರಿಸಿಕೊಳ್ಳುವುದಕ್ಕೆ ಭುಜಬಲವೊಂದೇ ಸಾಧನವೆಂದು ನಂಬಿ, ಕಳೆದ ೪೦ ವರ್ಷಗಳಿಂದಲೂ ಒಳಗೊಳಗೇ ಮಾಡಿಕೊಂಡಿದ್ದ ಯುದ್ಧಸನ್ನಾಹದಿಂದ ಉಬ್ಬಿ, ಸಣ್ಣ ನೆಪವನ್ನೇ ದೊಡ್ಡ ಕಾರಣವನ್ನಾಗಿಮಾಡಿ ಯುದ್ಧದ ಕಿಡಿಯನ್ನು ಯೂರೋಪುಖಂಡದಲ್ಲಿ ಹಾಕಿತು. ಅದರ ದುರುದ್ದೇಶಕ್ಕೆ ಸಹಾಯವಾಗಿ ೩-೪ ರಾಜ್ಯಗಳು ಮಾತ್ರ ನಿಂತುವು. ಪ್ರಪಂಚದ ಮೇಲಿರುವ ಬಹುಶಃ ೩೦ ಸ್ವತಂತ್ರ ರಾಜ್ಯಗಳು ಅದಕ್ಕೆ ವಿರೋಧಿಸಿ ನಿಂತುವು. ಜಗತ್ತೆಲ್ಲವೂ ಕಲಕುವುದಕ್ಕಾರಂಭಿಸಿತು. ಕೃತಕರ್ಮದ ಫಲವನ್ನು ಕಡೆಗೆ ಜರ್ಮನಿಯು ಅನುಭವಿಸಿತು.

ಯುದ್ಧಾರಂಭಕಾಲದಲ್ಲಿಯೇ ಲೋಕದ ಜನರು ಮಿತ್ರಮಂಡಲಿಯನ್ನು ಪಾಂಡವರಿಗೂ, ಶತ್ರುಪಕ್ಷವನ್ನು ಕೌರವರಿಗೂ ಅವರ ಗುಣಚರ್ಯೆಗಳ ಆಧಾರದಿಂದ ಹೋಲಿಸಲುಪಕ್ರಮಿಸಿದರು. ಕಡೆಗೆ ಅದು ನಿಜವೇ ಆಯಿತು. ಬಲ್ಗೇರಿಯಾ ಮೊದಲಾದ ತನ್ನ ಜತೆಯ ರಾಷ್ಟ್ರದವರನ್ನೆಲ್ಲಾ ಕಳೆದುಕೊಂಡು ಕಡೆಗೆ ಒಂಟಿಯಾಗಿ ನಿಂತು ಸಂಧಿಯನ್ನು ಬೇಡಿಕೊಂಡ ಜರ್ಮನಿಯು, ನೂರು ಮಂದಿ ಸಹೋದರರನ್ನು ಕಳೆದುಕೊಂಡು ತನ್ನ ತಲೆಯನ್ನುಳಿಸಿಕೊಳ್ಳುವುದಕ್ಕಾಗಿ ನೀರಿನಲ್ಲಿ ಮುಳುಗಿದ ದುರ್ಯೋಧನನ ಸಾಮ್ಯವನ್ನು ಪಡೆದಿತು. ಸತ್ಯಮೂರ್ತಿಯಾದ ಶ್ರೀಕೃಷ್ಣನ ಸಹಾಯದಿಂದ ಪಾಂಡವರ ಸದ್ಧರ್ಮಪ್ರಭಾವವು ಜಯಶಾಲಿಯಾದಂತೆ ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರ ಸಾಹಚರ್ಯದಿಂದ ಮಿತ್ರಮಂಡಲಿಯ ಸತ್ಯಸಂಕಲ್ಪವು ವಿಜಯಪರ್ಯವಸಾಯಿಯಾಯಿತು. ಅಸತ್ಯ, ಅಧರ್ಮ, ಅನ್ಯಾಯ, ದುರಾಶೆ ಮೊದಲಾದುವುಗಳೆಲ್ಲಾ ಅಲ್ಪಕಾಲ ಫಲೋನ್ಮುಖವಾಗಿ ತೋರಿದರೂ, ಅಂತ್ಯದಲ್ಲಿ ಸತ್ಯ ಧರ್ಮಗಳಿಗೇ ಜಯವೆಂಬುದು ಮತ್ತೊಂದುಸಲ ಈ ಮಹಾಯುದ್ಧದಿಂದ ಪ್ರಪಂಚಕ್ಕೆ ಡಮಡಮಿಸಿಹೋಯಿತು. ಜಯಲಕ್ಷ್ಮಿಯು ಯಾವಾಗಲೂ ಧರ್ಮಪ್ರಿಯೆಯೆಂಬುದು ಪ್ರಪಂಚಕ್ಕೆ ನಿದರ್ಶನವಾಯಿತು. ಕತ್ತಲೆಯು ಬೆಳಕಿನ ಮಹತ್ತ್ವವನ್ನು ಲೋಕದ ಅನುಭವಕ್ಕೆ ತಂದುಕೊಡಲು ಸಾಧಕವಾಗುವಂತೆ ಆಂಗ್ಲಸಾಮ್ರಾಜ್ಯ ಸದ್ಧರ್ಮಪ್ರಭಾವವನ್ನು ಜಗತ್ತಿನ ಮುಂದೆ ಸುವ್ಯಕ್ತಪಡಿಸುವುದಕ್ಕೆ ಕೈಜರಿಂದ ಆರಂಭಿಸಲ್ಪಟ್ಟ ಈ ಮಹಾಯುದ್ಧವೇ ಸಾಧನವಾಗಿ ಪರಿಣಮಿಸಿತು. ದುಸ್ಸಹವಾಸ ಸತ್ಸಹವಾಸ ಫಲಗಳು ಹೇಗಿರುವುವೆಂಬುದನ್ನು ಶತ್ರುಪಕ್ಷ ರಾಷ್ಟ್ರದವರ ಮಿತ್ರವರ್ಗ ರಾಷ್ಟ್ರಗಳ ಪರಿಣಾಮಗಳು ಸಿದ್ಧಾಂತಗೊಳಿಸುತ್ತಿರುವುವು. ಈ ಮಹಾ ಯುದ್ಧದಿಂದ ಆದ ಅನರ್ಥಗಳೂ ನಷ್ಟಕಷ್ಟಗಳೂ ವಾಚಾಮಗೋಚರವಾಗಿದ್ದರೂ ಇದರ ಪರ್ಯವಸಾನದಿಂದ ಜಗತ್ತಿಗೆ ಚಿರಕಾಲಿಕ ಶಾಂತಿಯುಂಟಾಗಲು ಮಾರ್ಗವಾಗುವಂತಿರುವುದಕ್ಕಾಗಿ ಓಂದಾದುದನ್ನೆಲ್ಲಾ ಜಗತ್ಕಲ್ಯಾಣಕ್ಕಾಗಿ ಈಶ್ವರನಿಂದ ಮಾಡಲ್ಪಟ್ಟ ಶಿಕ್ಷೆಯೆಂತಲೇ ಭಾವಿಸಬೇಕಾಗಿದೆ. ಕಲಕಿದಷ್ಟೂ ನೀರು ತಿಳಿಯಾಗುವಂತೆ ಇದುವರೆಗೆ ರಾಷ್ಟ್ರರಾಷ್ಟ್ರಗಳ ವೈಷಮ್ಯದಿಂದ ನಡೆದ ಮಹಾಯುದ್ಧವು ಕಡೆಗೆ ಜಗತ್ತಿನ ಚಿರಶಾಂತಿಗೆ ಮೂಲವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ಯುದ್ಧವು ಶಾಂತವಾದುದೇ ಜಗತ್ತಿಗೆ ಸಂತೋಷಕರವು. ಅದರಲ್ಲೂ ಮಿತ್ರಮಂಡಲಿಯ ಸಂಪೂರ್ಣವಿಜಯದೊಡನೆ ಇದು ಪೂರ್ತಿಗೊಂಡುದು ನಮ್ಮಗಳಿಗೆ ಮತ್ತಷ್ಟು ಸಂತೋಷಪ್ರದವು. ಆಂಗ್ಲಸಾಮ್ರಾಜ್ಯದ ಅಧಿನಿವೇಶಗಳೆಲ್ಲಾವುದಕ್ಕೂ ಕಡಿಮೆಯಿಲ್ಲದೆ ಒಂದು ಕೈಮೇಲಾಗಿಯೇ ಭರತಖಂಡವು ಸಹಾಯಮಾಡಿ, ಸಾಮ್ರಾಜ್ಯ ವಿಜಯಕೀರ್ತಿಗೆ ತಾನೂ ಭಾಗಿಯಾದುದು ಭಾರತೀಯರಿಗೆ ಅತಿಶಯ ಸಂತೋಷಕರವು. ಯುದ್ಧಕ್ಕಾಗಿ ಸಾಮ್ರಾಜ್ಯವು ಇದುವರೆಗೆ ಪಟ್ಟ ನಷ್ಟಕಷ್ಟಗಳೆಲ್ಲಾ ಸಫಲವಾದ ವಿಷಯವು ಅತ್ಯಧಿಕ ಸಂತೋಷಪ್ರದವು. ಇಂಥ ಸಂತೋಷಮಹೋದಧಿಯಲ್ಲಿ ವಿಹರಿಸುವಂತೆ ನಮ್ಮಗಳನ್ನು ಅನುಗ್ರಹಿಸಿದುದಕ್ಕಾಗಿ ಜಗದೀಶ್ವರನಿಗೆ ಕೃತಜ್ಞತಾವಂದನೆಗಳನ್ನು ನಿರ್ಮಲಭಕ್ತಿಯಿಂದ ಸಮರ್ಪಿಸಿ, ಈಗ ಒದಗಿಸಿಕೊಟ್ಟ ತಾತ್ಕಾಲಿಕ ಸಂಧಿಯು ಅಚಿರಕಾಲದಲ್ಲಿಯೇ ಶಾಶ್ವತ ಸಂಧಿಯಾಗಿ ಪರಿಣಮಿಸುವಂತೆಯೂ, ಸದ್ಧರ್ಮ ಸುನೀತಿ ನ್ಯಾಯಾಧಿಷ್ಠಿತವಾದ ಆಂಗ್ಲಸಾಮ್ರಾಜ್ಯದ ಛತ್ರಾಯವು ಭರತಖಂಡಕ್ಕೆ ಆಚಂದ್ರಾರ್ಕವಾಗಿರುವಂತೆಯೂ ಅನುಗ್ರಹಿಸಲೆಂದು ಪ್ರಾರ್ಥಿಸೋಣ.

ಸಂಧಿ.

ಗೊತ್ತಾಗಿದ್ದ ಮೇರೆಗೆ ಜರ್ಮನರ ಕಡೆಯಿಂದ ಹೇರ್ ಎರ್ಜ್‌ಬರ್ಗರ್, ಕೌಂಟ್ ಓಡರನ್ಡ್ರಾಫ್, ಜನರಲ್ ವಾನ್‌ಗೂಂಡೇಲ್, ಜನರಲ್ ವಾನ್‌ಜೆಂಟರ್ ಫೀಲ್ಡರ್ ಎಂಬ ನಾಲ್ಕು ಮಂದಿಗಳು ಮಿತ್ರಮಂಡಲಿಯ ಮುಖ್ಯ ಸೇನಾನಿಗಳಾದ ಜನರಲ್ ಫಾಕ್‌ರೊಡನೆ ತಾತ್ಕಾಲಿಕ ಸಂಧಿವಿಷಯವಾಗಿ ಸಂಭಾಷಿಸುವುದಕ್ಕೆ ಗೊತ್ತಾಗಿದ್ದ ಮಾರ್ಗದಲ್ಲಿ ಫ್ರಾನ್ಸ್ ರಣರಂಗಕ್ಕೆ ಬಂದರು. ತಕ್ಕ ಮರ್ಯಾದೆಗಳೊಡನೆ ಅವರನ್ನು ಬರಮಾಡಿಕೊಳ್ಳಲು ಏರ್ಪಾಟಾಗಿದ್ದಿತು. ಮಿತ್ರಮಂಡಲಿಯ ಕಡೆಯಲ್ಲಿ ಜನರಲ್ ಫಾಕ್‌ರವರ ಜತೆಗೆ ನೌಕಾದಳ ಪ್ರತಿನಿಧಿಯಾಗಿ ಅಡ್ಮಿರಲ್ ಸರ್ ರಾಸ್ಲಿನ್ ವೆಮಿಸ್‌ರವರು ನಿಯಮಿತರಾಗಿದ್ದರು. ತಮ್ಮ ಪ್ರತಿನಿಧಿಗಳು ಸಂಧಿಗಾಗಿ ರಣರಂಗಕ್ಕೆ ಪ್ರವೇಶಿಸಿದ ಕೂಡಲೇ ಯುದ್ಧವು ನಿಲ್ಲಿಸಲ್ಪಟ್ಟರೆ ತಮಗೆ ಸಂತೋಷವೆಂದು ಜರ್ಮನ್ ಪ್ರಭುತ್ವದವರು ತಿಳಿಯಿಸಿದ್ದರು. ಅದಕ್ಕೆ ಮಾರ್ಷಲ್ ಫಾಕ್‌ರವರು ಒಪ್ಪಲಿಲ್ಲ. ಸಂಧಿಪತ್ರಕ್ಕೆ ಪ್ರತಿಪಕ್ಷದವರ ರುಜುಗಳು ಹಾಕಲ್ಪಡುವವರೆಗೂ ಯುದ್ಧವನ್ನು ನಿಲ್ಲಿಸಲೇ ಇಲ್ಲ. ಈ ಸಂಧಿಸಭೆಯು ಎಲ್ಲಿ ಕೂಡುವುದೆಂಬುದು ಇತರರಾರಿಗೂ ತಿಳಿದಿರಲಿಲ್ಲ. ನವಂಬರ್ ತಾ|| ೭ ರಲ್ಲಿ ಜರ್ಮನ್ ಪ್ರತಿನಿಧಿಗಳು ರಣರಂಗಕ್ಕೆ ಬಂದು ಫ್ರಾನ್ಸ್ ಸೇನಾಪಙ್ಕ್ತಿಯನ್ನು ಸೇರಿದರು. ಅಲ್ಲಿಂದ ಅವರನ್ನು ಎಯಿನ್ ಪ್ರಾಂತದಲ್ಲಿರುವ ಚಾಟೂ ಎಂಬ ಒಂದು ಗ್ರಾಮಕ್ಕೆ ಕರೆದುಕೊಂಡು ಹೋದರು. ತಾ|| ೮ ನೆ ಬೆಳಗಿನ ೭ ಗಂಟೆಗೆ ಮಾರ್ಷಲ್ ಫಾಕ್‌ರವರೂ ಜನರಲ್ ವಿಗಾಂಡ್‌ರವರೂ ಅಡ್ಮಿರಲ್ ವಿಗಾಸ್‌ರವರೂ ಇತರಾಧಿಕಾರಿಗಳೂ ಸಹ ಜರ್ಮನ್ ಪ್ರತಿನಿಧಿಗಳಿಗೆ ಸ್ವಾಗತಮಾಡಿದರು. ಬಳಿಕ ಮೊದಲು ಜರ್ಮನ್ ಪ್ರತಿನಿಧಿಗಳ ಕಡೆಯ ಎರ್ಜ್‌ಬರ್ಗರ್‌ರವರು ತಾವು ಬಂದುದರ ಉದ್ದೇಶವನ್ನು ಫ್ರೆಂಚ್ ಭಾಷೆಯಲ್ಲಿ ತಿಳಿಯಿಸಿದರು. ಅನಂತರ ಮಾರ್ಷಲ್‌ಫಾಕ್‌ರವರು ಬರೆದು ಸಿದ್ಧವಾಗಿದ್ದ ತಾತ್ಕಾಲಿಕ ಸಂಧಿನಿಬಂಧನೆಗಳನ್ನು ಗಟ್ಟಿಯಾಗಿ ಓದಿಹೇಳಿದರು. ಬಹುಶಃ ನಿಬಂಧನೆಗಳು ಹೀಗೆಯೇ ಇರಬಹುದೆಂದು ಜರ್ಮನ್ ಪ್ರತಿನಿಧಿಗಳು ಊಹಿಸಿಕೊಂಡಿದ್ದಂತೆಯೇ ಅವು ಇದ್ದುವು. ಅವನ್ನೆಲ್ಲಾ ಕೇಳಿದ ಕೂಡಲೇ ತಮಗೆ ಆಗಿರುವ ಪರಾಜಯದ ಮಹತ್ತ್ವವನ್ನು ಅವುಗಳಿಂದಲೇ ಅವರು ಗ್ರಹಿಸಿಕೊಂಡರು. ಇದುವರೆಗೆ ತಮ್ಮ ಸೋಲು ಇಷ್ಟುಮಟ್ಟಿಗಿದೆಯೆಂಬುದು ಅವರಿಗೆ ಗೊತ್ತಾಗಿರಲಿಲ್ಲ. ಆ ನಿಬಂಧನೆಗಳಲ್ಲಿ ಕೆಲವನ್ನು ಅನುಸರಿಸುವುದು ನಮಗೆ ಬಹು ಕಷ್ಟವೆಂದು ಅವರುಗಳು ಗೊಣಗುಟ್ಟಿಕೊಂಡರೂ, ಕಡೆಗೆ ನಿಷ್ಫಲವಾಗಿ ಯುದ್ಧವನ್ನು ಬಳೆಯಿಸಿ ಇನ್ನೂ ಅನೇಕ ಪ್ರಾಣಹಾನಿ ಮಾಡಿಕೊಳ್ಳುವುದಕ್ಕಿಂತಲೂ ಹೇಗಾದರೂ ಯುದ್ಧವನ್ನು ನಿಲ್ಲಿಸಿಬಿಡುವುದಕ್ಕೆ ದಾರಿಮಾಡುವುದೇ ಯುಕ್ತವೆಂದು ಎರ್ಜ್‌ಬರ್ಗರ್‌ರವರು ನುಡಿದರು. ಜರ್ಮನ್ ಪ್ರತಿನಿಧಿಗಳು ಮಧ್ಯಾಹ್ನ ೧೨ ಗಂಟೆಗೆ ಆ ಸಂಧಿಪತ್ರವನ್ನು ತಮ್ಮ ಕಡೆಯ ಭಟನ ಕೈಯಲ್ಲಿತ್ತು ಮೋಟಾರು ಬಂಡಿಯಮೇಲೆ ಸ್ಪಾ ಎಂಬ ಸ್ಥಲಕ್ಕೆ (ಬೆಲ್ಜಿಯಮ್ಮಿನಲ್ಲಿರುವ ಅವರ ಮುಖ್ಯ ಶಿಬಿರ) ಕಳುಹಿಸಿಕೊಟ್ಟರು. ಇದಕ್ಕೆ ಜರ್ಮನ್ ಪ್ರಭುತ್ವದವರು ಒಪ್ಪಿದುದಕ್ಕೂ ಇಲ್ಲದುದಕ್ಕೂ ತಾ|| ೧೧ ನೆ ಮಧ್ಯಾಹ್ನ ೧೧ ಗಂಟೆಯೊಳಗಾಗಿ ತಿಳಿಯಿಸಬೇಕೆಂದು ಫ್ರಾನ್ಸಿನಿಂದ ಅಧಿಕಾರಿಗಳು ಅಪ್ಪಣೆಮಾಡಿದರು. ಅಲ್ಲಿಯವರೆಗೂ ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವಂತೆ ಮಾಡಬೇಕೆಂದು ಜರ್ಮನ್ ಪ್ರತಿನಿಧಿಗಳು ಕೇಳಿಕೊಂಡರು. ಹಾಗೆ ಮಾಡಲು ಅವಕಾಶವಿಲ್ಲವೆಂದು ಮಾರ್ಷಲ್ ಫಾಕ್‌ರವರು ಖಂಡಿತವಾಗಿ ಹೇಳಿಬಿಟ್ಟರು. ಈ ಸಂಗತಿಯನ್ನೆಲ್ಲಾ ಜನರಲ್ ಎರ್ಜ್‌ಬರ್ಗರ್‌ರವರು ತಮ್ಮ ಭೂಜಲ ಸೇನಾಪತಿಗಳಿಗೆ ತಂತ್ರಿಯಮೂಲಕ ತಿಳಿಯಿಸಿಬಿಟ್ಟರು. ಜರ್ಮನ್ ಪ್ರಭುತ್ವದವರಿಗೆ ಅದು ದುರ್ಭರವಾಗಿದ್ದರೂ ಅನ್ಯಥಾ ವಿಧಿಯಿಲ್ಲವಾದುದರಿಂದ ಅವರು ಒಪ್ಪಲೇಬೇಕಾಯಿತು. ತಾ|| ೧೧ ನೆ ಸೋಮವಾರ ಬೆಳಗಿನ ೫ ಗಂಟೆಗೆ ಜರ್ಮನಿಯವರು ಸಂಧಿಪತ್ರದಮೇಲೆ ರುಜುಮಾಡಿದರು. ಅವರ ಸೈನಿಕರೆಲ್ಲಾ ಮಧ್ಯಾಹ್ನ ೧೧ ಗಂಟೆಗೆ ಶಸ್ತ್ರಾಸ್ತ್ರಗಳನ್ನು ಪರಿತ್ಯಜಿಸಿಬಿಟ್ಟರು. ಯುದ್ಧವು ಅಲ್ಲಿಗೆ ಮುಗಿದುಹೋಯಿತು.

ಜರ್ಮನರು ತಾವು ಸಂಧಿಮಾಡಿಕೊಳ್ಳಲು ಸಿದ್ಧರಾಗಿದ್ದೇವೆಂದು ಕಳೆದ ತಿಂಗಳಲ್ಲಿ ಅಮೇರಿಕಾದ ಅಧ್ಯಕ್ಷರಿಗೆ ಬರೆದಾಗ ಅವರ ಮನಸ್ಸಿನಲ್ಲಿ ೨ ಊಹೆಗಳಿದ್ದುವು. ಅವೆರಡೂ ಈಗ ವ್ಯರ್ಥವಾದುವು. ಯಾವುವೆಂದರೆ—ಇದರ ಮೂಲಕ ಮಿತ್ರಮಂಡಲಿಯೊಳಗೆ ಪರಸ್ಪರ ಅಂತಃಕಲಹವನ್ನುಂಟುಮಾಡಬಹುದೆಂದು ಯೋಚಿಸಿದ್ದರು. ಅದು ಸಾಧ್ಯವಾಗಲಿಲ್ಲ. ಮತ್ತೂ ಆಸ್ಟ್ರಿಯಾ ತುರ್ಕಿ ದೇಶಗಳು ಸಂಧಿಗಾಗಿ ತಮ್ಮೊಡನೆ ಕೂಡಿ ಬರುವುವೆಂದು ಅವರು ಯೋಚಿಸಿದ್ದರು. ಅದೂ ಜರುಗಲಿಲ್ಲ. ತುರ್ಕಿ ಆಸ್ಟ್ರಿಯಾಗಳು ಇವರನ್ನು ಬಿಟ್ಟು ಅವೇ ಪ್ರತ್ಯೇಕವಾಗಿ ಸಂಧಿಮಾಡಿಕೊಂಡುಬಿಟ್ಟುದರಿಂದ ಇವರು ಒಂಟಿಯಾಗಬೇಕಾಯಿತು. ಫ್ರಾನ್ಸ್ ಬೆಲ್ಜಿಯಮ್ಮುಗಳನ್ನು ತಾವೇ ಬಿಟ್ಟುಬಿಡುತ್ತೇವೆಂದು ಹೇಳಿಬಿಟ್ಟರೆ ತಮಗೆ ಹಿಂತಿರುಗಿ ಹೋಗುವಾಗ ನಷ್ಟಗಳೇನೂ ಸಂಭವಿಸಲಾರವೆಂದು ತಿಳಿದುಕೊಂಡಿದ್ದರು. ಮತ್ತೂ ಈ ಸಂಧಿಪ್ರಸ್ತಾವದಲ್ಲೇ ಈ ಮಳೆಗಾಲ ಚಳಿಗಾಲಗಳನ್ನು ತಳ್ಳಿಬಿಟ್ಟರೆ ಅಷ್ಟರೊಳಗಾಗಿ ಹೊಸ ಸೇನೆಗಳನ್ನು ಅಣಿಮಾಡಿಕೊಳ್ಳಬಹುದೆಂದು ಯೋಚಿಸಿಕೊಂಡಿದ್ದರು. ಆದರೆ ಮಿತ್ರಮಂಡಲಿಯವರು ಇವರ ಮಾಯಾಜಾಲಗಳನ್ನೆಲ್ಲಾ ಇದುವರೆಗಣ ಅನುಭವದಿಂದ ಗೊತ್ತುಮಾಡಿಕೊಂಡಿರುವರಾದಕಾರಣ, ಅವೊಂದಕ್ಕೂ ಅವಕಾಶವನ್ನೇ ಕೊಡಲಿಲ್ಲ. ಈಗ ಜರ್ಮನಿಯು ಅಸಹಾಯವಾಯಿತು. ಆದರೂ ತನ್ನ ಒಳಗಾದರೂ ಬಿಗಿಯೂ ಐಕಮತ್ಯವೂ ಇದೆಯೆ? ಅದೂ ಇಲ್ಲ. ಪ್ರಜೆಗಳಿಗೆ ಪ್ರಭುತ್ವದವರ ಕಾರ್ಯಕಲಾಪಗಳಮೇಲೆ ನಂಬುಗೆಯು ಅಳಿದುಹೋಯಿತು. ಆಹಾರ್ಯವಸ್ತುಗಳ ಅಭಾವವು ಅವರನ್ನು ಕಂಗೆಡಿಸಿಬಿಟ್ಟಿರುವುದು. ಜಯದಲ್ಲಿ ನಿರಾಸೆಯೊದುದರಿಂದ ಯುದ್ಧದ ಸುದ್ದಿ ಕೇಳಿದರೆ ಜುಗುಪ್ಸೆ ಹುಟ್ಟುವಂತಾಯಿತು. ದೇಶದ ತುಂಬಾ ಅಂತಃಕಲಹಗಳು ಪ್ರಬಲಿಸಿದುವು. ರಣರಂಗದಲ್ಲಿ ಮೆಟ್ಜ್ ಕೋಟೆಯಿಂದ ಹಿಡಿದು ದಕ್ಷಿಣಭಾಗದಲ್ಲಿಯೂ ಆಗ್ನೇಯಭಾಗದಲ್ಲೂ ತಮ್ಮ ದೇಶದ ಎಲ್ಲೆಕಟ್ಟುಗಳನ್ನು ಕಾಪಾಡಿಕೊಳ್ಳುವುದು ದುಸ್ತರವೆಂದು ಅವರ ಸೇನಾಪತಿಗಳು ಭಯಗ್ರಸ್ತರಾದರು. ನೂತನಸೈನ್ಯಗಳನ್ನೂ ಆಯುಧಸಾಮಗ್ರಿಗಳನ್ನೂ ಅಣಿಮಾಡುವುದು ಅಸಾಧ್ಯವಾಯಿತು. ಜರ್ಮನ್ ಸೈನ್ಯಗಳು ಬಳಲಿ, ಸಕ್ರಮಗತಿಯನ್ನೂ ನ್ಯಾಯ್ಯಪ್ರವರ್ತನವನ್ನೂ ಬಿಟ್ಟು ತಿರಿಗಿಬೀಳುತ್ತಿದ್ದುದಲ್ಲದೆ ದಿನದಿನಕ್ಕೆ ಧೈರ್ಯವನ್ನೂ ಕಳೆದುಕೊಳ್ಳುತ್ತ ಬಂದುವು. ಪ್ರತಿದಿನವೂ ಅಪಜಯ ಪರಂಪರೆಗಳು ಲಭಿಸುತ್ತ ಬಂದುದಲ್ಲದೆ ಸೇನೆಯು ವಿಪರೀತವಾಗಿ ಕ್ಷೀಣಿಸುತ್ತಲೂ, ಹಿಡಿದಿದ್ದ ದೇಶಭಾಗಗಳೆಲ್ಲಾ ಒಂದೊಂದಾಗಿ ಕಳೆದುಹೋಗುತ್ತಲೂ ಬಂದುವು. ಕಳೆದುಕೊಂಡ ಫಿರಂಗಿ ಮೊದಲಾದ ಸಾಮಗ್ರಿಗಳಿಗೂ ಸೆರೆಸಿಕ್ಕಿಹೋದ ಸೈನಿಕರಿಗೂ ಪರಿಮಿತಿಯೇ ಇಲ್ಲವಾಯಿತು. ಇನ್ನೂ ಹಠತೊಟ್ಟು ಯುದ್ಧಮಾಡಿದರೆ ಸ್ವಲ್ಪಕಾಲದೊಳಗೆ ಪ್ರತಿಪಕ್ಷದವರು ಜರ್ಮನಿಗೇ ನುಗ್ಗಿ ಅಪರಿಮಿತವಾದ ಅನರ್ಥಗಳನ್ನು ತಮಗೆ ಪ್ರತೀಕಾರವಾಗಿ ಮಾಡದೆ ಬಿಡರೆಂದೂ, ಆ ಬಳಿಕ ತಮ್ಮ ದೇಶವನ್ನು ಉಳಿಯಿಸಿಕೊಂಡು ಬಾಳುವುದು ಅಸಾಧ್ಯವಾಗುವುದೆಂದೂ ನೆನೆಸಿಕೊಂಡರು. ಇವೆಲ್ಲ ಕಾರಣಗಳಿಂದ ಅವರು ಗತ್ಯಂತರವಿಲ್ಲದೆ ಮಿತ್ರಮಂಡಲಿಯವರು ಎಂಥ ಕಠಿನ ಸಂಧಿನಿಬಂಧನೆಗಳನ್ನು ಸೂಚಿಸಿದರೂ ಒಪ್ಪಿಕೊಳ್ಳಲೇ ಬೇಕಾಯಿತು.

ಜರ್ಮನಿಯ ಅಂತಶ್ಛಿದ್ರ.

ಜರ್ಮನಿಯ ಅವಸ್ಥೆಯು ಬಹು ಶೋಚನೀಯವಾಯಿತು. ಈಗ್ಗೆ ೪ ತಿಂಗಳ ಕೆಳಗೆ ಹಮ್ಮಿನಿಂದ ಮೆರೆಯುತ್ತಿದ್ದ ಆ ದೇಶವು ಈಗ ೨ ನೆ ರಷ್ಯಾದೇಶದಂತೆ ಪ್ರಳಯಮಯವಾಗಿ ತೋರುತ್ತಿದೆ. ಸೈನಿಕಾಧಿಕಾರ ಪ್ರಾಬಲ್ಯದಿಂದಲೂ, ಯುದ್ಧದ ಅನರ್ಥದಿಂದಲೂ, ಆಹಾರಗಳ ಅಭಾವದಿಂದಲೂ ಪ್ರಜೆಗಳು ಕ್ಷುಬ್ಧರಾಗಿರುವರು. ಸ್ಥಲ ಜಲಸೈನಿಕರು ಎಲ್ಲೆಲ್ಲೂ ವಿಪ್ಲವವನ್ನು ಹಬ್ಬಿಸುತ್ತಿರುವರು. ಜರ್ಮನ್ ರಾಜಕುಟುಂಬದ ಮೇಲೆ ಪ್ರಜೆಗಳಿಗೆ ಬಹು ಅಸಹ್ಯಭಾವವು ಹುಟ್ಟಿರುವುದು. ಮೊಟ್ಟಮೊದಲು ಕೀಲ್‌ಕಾಲ್ವೆಯಲ್ಲಿ (ಇದೇ ಜರ್ಮನ್ ನೌಕಾದಳದ ಮುಖ್ಯಸ್ಥಾನ) ನೌಕಾದಳದವರು ವಿಪ್ಲವಕ್ಕೆ ಆರಂಭ ಮಾಡಿದರು. ಅಲ್ಲಿಯ ಸೈನಿಕರಿಗೂ ಸೇನಾಪತಿಗಳಿಗೂ ತಾ|| ೩ ರಲ್ಲಿ ಮೊದಲು ಪರಸ್ಪರ ಕದನವು ಹುಟ್ಟಿತು. ೨೦ ಮಂದಿ ಸೈನಿಕೋದ್ಯೋಗಿಗಳು ಹತರಾದರು. ಅವರಲ್ಲಿಬ್ಬರು ಕೇಪ್ಟನ್ನುಗಳು. ಸೈನಿಕರಲ್ಲಿ ೮ ಮಂದಿ ಸತ್ತರು. ತಿರುಗಿಬಿದ್ದವರನ್ನು ಅಧಿಕಾರಿಗಳು ಸೆರೆಯಲ್ಲಿಡಲಾಗಿ ಅವರನ್ನು ಬಿಡಿಸಿಕೊಳ್ಳುವುದಕ್ಕೆ ಸೈನಿಕರೂ ಪ್ರಜೆಗಳೂ ಸಹ ತೊಡಗಿದುದರಿಂದ ಈ ಕದನವಾಯಿತು. ಈ ಗದ್ದಲವನ್ನಣಗಿಸುವುದಕ್ಕಾಗಿ ಕಳುಹಿಸಲ್ಪಟ್ಟ ೩ ಕಂಪನಿ ಸೈನ್ಯಗಳು ವಿಪ್ಲವಕಾರರೊಡನೆಯೇ ಸೇರಿಬಿಟ್ಟರು. ಇನ್ನೊಂದು ಕಂಪೆನಿಯು ಬರಲು, ಅದನ್ನು ಅಲ್ಲೇ. ನಿರಾಯುಧರನ್ನಾಗಿ ಮಾಡಿಬಿಟ್ಟರು. ಅದರಮೇಲೆ ಸರ್ಕಾರದವರು ಹುಸಾರುಗಳೆಂಬ ಅಶ್ವಸೈನಿಕರನ್ನು ಕಳುಹಿಸಿಕೊಡಲು ನಾವಿಕರು ಅವರುಗಳಮೇಲೆ ಮಿಷನ್ ಫಿರಂಗಿಗಳನ್ನು ಗುರಿಯಿಟ್ಟು ಹಾರಿಸುವುದಕ್ಕುಪಕ್ರಮಿಸಿ, ಎಲ್ಲರನ್ನೂ ಕೀಲ್‌ಪಟ್ಟಣದಾಚೆಗೆ ಓಡಿಸಿಬಿಟ್ಟರು. ಆ ಪಟ್ಟಣದಲ್ಲಿ ಗೌರ್ನರಾಗಿದ್ದವನನ್ನು ಹಿಡಿದು ಸೆರೆಯಲ್ಲಿಟ್ಟರು. ಎಲ್ಲ ಹಡಗುಗಳಮೇಲೂ ಮಿಷನ್ ಫಿರಂಗಿಗಳನ್ನು ನಾವಿಕರು ಎತ್ತಿಕಟ್ಟಿ, ಅಧಿಕಾರಿಗಳಾರಾದರೂ ಈ ಕೇವಿನ ಕಡೆಗೆ ಕಣ್ಣೆತ್ತಿ ನೋಡಿದರೆ ಧ್ವಂಸಮಾಡಿಬಿಡುವೆವೆಂದು ಸಾರಲುಪಕ್ರಮಿಸಿದರು. ಈ ವಿಪ್ಲವದ ಸೋಂಕು ಹಲವು ಕಡೆಗಳಿಗೆ ಬಹು ಬೇಗನೆ ವ್ಯಾಪಿಸಿತು. ವಿಪ್ಲವಕಾರಕರಾದ ಸೈನಿಕರೂ ನಾವಿಕರೂ ಸಹ ಹಾಂಬರ್ಗ್ ಪಟ್ಟಣದಲ್ಲಿ ಸಾಧಿಕಾರವಾದ ಸಭೆಯೊಂದನ್ನು ಸ್ವತಂತ್ರವಾಗಿ ಸ್ಥಾಪಿಸಿಕೊಂಡರು. ಇವರಿಗೆ ಸಾಂಘಿಕವಾದಿಗಳು ಸಹಾಯಕರಾದರು. ಇವರು ತಮ್ಮ ನೂತನ ಪ್ರಭುತ್ವಚಿಹ್ನವಾಗಿ ಕೆಂಪುಬಣ್ಣದ ಧ್ವಜಪಟಗಳನ್ನು ಎಲ್ಲೆಲ್ಲೂ ಎತ್ತಿಕಟ್ಟಿದರು. ಯುದ್ಧನೌಕಾವಳದ ಬಹುಭಾಗವೆಲ್ಲಾ ಈ ರಕ್ತವರ್ಣ ಧ್ವಜಸೈನ್ಯದ ಸ್ವಾಧೀನಕ್ಕೆ ಬಂದುವು. ಅವರೆಲ್ಲಾ

ತಮ್ಮ ಹಡಗುಗಳಮೇಲೆ ಈ ನೂತನಧ್ವಜಗಳನ್ನೇ ಸ್ಥಾಪಿಸಿಕೊಂಡರು. ಕೋಟೆಯನ್ನು ಆಕ್ರಮಿಸಿಕೊಂಡರು. ಈ ಪ್ರಯತ್ನಕ್ಕೆ ವಿಮುಖರಾದ ಉದ್ಯೋಗಿಗಳನ್ನೆಲ್ಲಾ ಸೆರೆಹಿಡಿಯುತ್ತ ಬಂದರು. ಈ ನೂತನಸೈನಿಕರೇ ಪ್ರಜೆಗಳಿಗೂ ಇತರರಿಗೂ ಆಹಾರವನ್ನು ಹಂಚುತ್ತ ಬಂದರು. ಲೋಹಮಾರ್ಗಗಳು ಇವರ ಸ್ವಾಧೀನವಾದುವು. ಈ ಸೈನಿಕೋದ್ಯಮಕ್ಕೆ ವ್ಯತಿರಿಕ್ತವಾಗಿರುವ ಯುದ್ಧನಿಬಂಧನೆಗಳನ್ನೆಲ್ಲಾ ಕೂಡಲೇ ತೊಲಗಿಸಿಬಿಡಬೇಕೆಂದು ಇವರು ಜರ್ಮನ್ ಪಾರ್ಲಿಮೆಂಟಿಗೆ ತಿಳಿಯಪಡಿಸಿದರು. ಸೆರೆಯಿಡಲ್ಪಟ್ಟಿರುವವರನ್ನೆಲ್ಲಾ ಬಿಡಬೇಕೆಂದು ಹೇಳಿ ಬಿಡಿಸಿಕೊಂಡರು. ಕಡೆಗೆ ಪಾರ್ಲಿಮೆಂಟ್ ಪ್ರತಿನಿಧಿಯಾದ ಹೆವೇನೋಸ್ಕಿಯವರು ಕೀಲಿಗೆ ಹೋಗಿ ಸ್ವಲ್ಪಕಾಲದಲ್ಲೇ, ಸಂಧಿಯಾಗಿ ಯುದ್ಧ ನಿಲ್ಲುವುದೆಂದೂ ಸೈನಿಕರ ಮತ್ತೂ ಕೂಲಿಕಾರಜನರ ನ್ಯಾಯವಾದ ಕೋರಿಕೆಗಳೆಲ್ಲಾ ಈಡೇರುವುವೆಂದೂ, ಉಪನ್ಯಾಸ ಮಾಡಿದರು. ಆಗ ಸೇರಿದ್ದ ಜನರೆಲ್ಲಾ ಪ್ರಜಾಪ್ರತಿನಿಧಿ ಪ್ರಭುತ್ವವು ಜರ್ಮನಿಯಲ್ಲಿ ಆಚಂದ್ರತಾರಕವಾಗಿರಲಿ ಎಂದು ಘೋಷಮಾಡಿದರು. ಈ ವಿಪ್ಲವಕಾರರು ರಣರಂಗಕ್ಕೆ ಹೋಗುತ್ತಿದ್ದ ಸೈನಿಕರನ್ನು ಅಲ್ಲಲ್ಲೇ ತಡೆಯುತ್ತ ಬಂದರು. ಕೆಲ ಶಿಬಿರಗಳಿಗೆ ಹೋಗಿ ಅಲ್ಲಿದ್ದ ಸೈನಿಕರನ್ನು ಪಟಾಲಮನ್ನು ಬಿಟ್ಟು ಹೊರಟುಹೋಗಿರೆಂದು ಕಳುಹಿಸಿಬಿಟ್ಟರು. ಅಲ್ಲಿ ಸೇನಾಪತಿಗಳಿಗೂ ಈ ವಿಪ್ಲವಕಾರರಿಗೂ ಯುದ್ಧ ನಡೆದಿತು. ಕಡೆಗೆ ಸೇನಾನಿಯು ತಗ್ಗಿಹೋಗಿ ವಿಪ್ಲವಕಾರರು ಹೇಳಿದಂತೆಯೇ ಕೇಳಬೇಕಾಯಿತು. ಜರ್ಮನ್ ಸಬ್‌ಮೆರೀನಿನ ನಾವಿಕರಲ್ಲಿ ಅನೇಕರು ಈ ವಿಪ್ಲವಕಾರರೊಡನೆ ಸೇರಿಬಿಟ್ಟರು. ಈ ವಿಪ್ಲವಕಾರರಿಗೆಲ್ಲಾ ಬೇಗನೆ ಯುದ್ಧವು ಶಾಂತವಾಗಬೇಕು, ಪ್ರಜಾಪ್ರಭುತ್ವವು ಏರ್ಪಡಬೇಕು ಎಂಬುದೇ ಮುಖ್ಯಾಶಯ. ಈ ವಿಪ್ಲವವು ಜರ್ಮನ್ ನೌಕಾದಳಕ್ಕೆಲ್ಲಾ ವ್ಯಾಪಿಸಿತು. ಉತ್ತರ ಬಾಲ್ಟಿಕ್ ಸಮುದ್ರಗಳ ಮುಖ್ಯ ರೇವೆಗಳಲ್ಲಿ ಕೆಲವು ಈ ವಿಪ್ಲವಸಂಘದವರ ವಶಕ್ಕೆ ಬಂದುವು. ಈ ವಿಪ್ಲವದ ಸುದ್ದಿಯು ರಾಜಧಾನಿಯಾದ ಬರ್ಲಿನ್ನಿಗೆ ಮುಟ್ಟಿದ ಕೂಡಲೇ ಅಲ್ಲೂ ಗದ್ದಲವು ಹೆಚ್ಚಾಯಿತು. ಪೋಲೀಸರು ಯಂತ್ರಶಾಲೆಗಳನ್ನೆಲ್ಲಾ ಮುತ್ತಿ ಕಾಯಬೇಕಾಯಿತು. ಸಾಂಘಿಕವಾದಿಗಳನ್ನು ಸಭೆಗೂಡಿಸಲಾಗದೆಂದು ಕಟ್ಟುಮಾಡಿದರು. ಹಾನೋವರ್ ಪಟ್ಟಣಕ್ಕೆ ಈ ವಿಪ್ಲವಕಾರರು ನುಗ್ಗಿ ಸೈನಿಕಶಿಬಿರದಲ್ಲಿದ್ದ ಆಯುಧಗಳನ್ನೆಲ್ಲಾ ವಶಪಡಿಸಿಕೊಂಡು ಸೇನಾಪತಿಗಳ ಕೈಕಾಲುಗಳಿಗೆ ಬಳೆತೊಡಿಸಿ ಬಂಧಿಸಿದರು. ಪ್ರಿನ್ಸ್ ಹೆನ್ರಿ ಎಂಬ ರಾಜಕುಮಾರನು ಕೀಲ್‌ಪಟ್ಟಣದಿಂದ ಮೋಟಾರಿನಲ್ಲಿ ಕುಳಿತು ಆತ್ಮರಕ್ಷಣೆಗಾಗಿ ರಕ್ತಧ್ವಜವನ್ನು ಮೋಟಾರಿಗೆ ಕಟ್ಟಿ ಓಡಿಹೋಗುತ್ತಿದ್ದರೂ ವಿಪ್ಲವಕಾರರು ಅವನ ಗುರುತು ಹಿಡಿದು ಹಿಂದಟ್ಟಿಹೋಗಿ ೧೨ ಸಲ ಗುಂಡನ್ನು ಹೊಡೆದರು. ಏಟು ಬೀಳದುದರಿಂದ ರಾಜಕುಮಾರನು ತಪ್ಪಿಸಿಕೊಂಡು ಓಡಿದನು. ಕೈಜರರಿಗೂ ಇದೇ ತೆರದ ಪ್ರಾಣಭೀತಿಯು ಪ್ರಾಪ್ತವಾಯಿತು. "ಸಂಧಿಯು ಬೇಗನೆ ಜರುಗುವುದು, ಆಹಾರದ ತೊಂದರೆಯು ತಪ್ಪುವುದು, ಪ್ರಜೆಗಳು ಶಾಂತವಾಗಿರಬೇಕು" ಎಂದು ಅಧಿಕಾರಿಗಳು ಪ್ರಕಟನೆಮಾಡಿ ಸಮಾಧಾನಪಡಿಸುವುದಕ್ಕೆ ಎಷ್ಟೋ ಯತ್ನಗಳನ್ನು ಮಾಡಿದರು. "ನಾವು ಇಂಥ ಅಂತಶ್ಛಿದ್ರಗಳನ್ನು ಬಲಮಾಡಿಕೊಂಡರೆ ಸಂಧಿಪ್ರಯತ್ನಕ್ಕೂ ವಿಘ್ನವಾಗುವುದು" ಎಂಬ ಭೀತಿಯನ್ನು ತೋರಿಸಿ ಅಧಿಕಾರಿಗಳು ಸಮಾಧಾನಪಡಿಸಲುಜ್ಜುಗಿಸಿದರು. ಆದರೂ ಪ್ರಜೆಗಳ ವಿಪ್ಲವವು ಹೆಚ್ಚುತ್ತಲೇ ಬಂದಿತು. ರೈಲ್ವೆ ಉದ್ಯೋಗಿಗಳಲ್ಲಿ ೨ ಲಕ್ಷ ಜನರು ಮುಷ್ಕರಹಿಡಿದು ಕೆಲಸಬಿಟ್ಟು ಮನೆಗಳಿಗೆ ಹೋಗಿ ಕುಳಿತರು. ಸಾಂಘಿಕವಾದಿಗಳ ಪ್ರಮುಖರು ಜರ್ಮನಿಯ ಉತ್ತರ ಪಶ್ಚಿಮ ದೇಶಭಾಗಗಳಲ್ಲಿ ಉಪನ್ಯಾಸಮಾಡುತ್ತ "ದೇಶದಲ್ಲಿ ಪ್ರಜಾಪ್ರಭುತ್ವವು ಸ್ಥಾಪಿತವಾಗಬೇಕು; ಕೈಜರರು ಪದಭ್ರಷ್ಟನಾಗಬೇಕು. ಇಲ್ಲದಿದ್ದರೆ ದೇಶಾನರ್ಥವು ತಪ್ಪುವುದಿಲ್ಲ"ವೆಂದು ಬೋಧಿಸುತ್ತ ಬಂದರು. ಪ್ರಜೆಗಳಲ್ಲೆಲ್ಲಾ ಈ ಭಾವವೇ ವೃದ್ಧಿಹೊಂದುತ್ತ ಬಂದಿತು. ನಮ್ಮ ಕೋರಿಕೆಯನ್ನು ನೆರವೇರಿಸಿಕೊಟ್ಟರೆ ನಾವು ಅಧಿಕಾರಿವರ್ಗಕ್ಕೆ ತಲೆಬಾಗಿ ನಡೆದುಕೊಳ್ಳುವೆವೆಂದು ಘಂಟಾಘೋಷವಾಗಿ ಹೇಳುತ್ತ ಬಂದರು. ಬವೇರಿಯಾ ದೇಶವು ಒಡೆಕೊಂಡು ಸ್ವತಂತ್ರವಾಯಿತು. ಮ್ಯೂನಿಚ್ ಪಟ್ಟಣದಲ್ಲಿ ಸಾಂಘಿಕವಾದಿಗಳೂ ವಿಪ್ಲವಕಾರರೂ ಸಭೆಕೂಡಿ ಸ್ವತಂತ್ರ ಪ್ರಜಾಪ್ರಭುತ್ವವನ್ನು ಪ್ರಕಟಮಾಡಿದುದಲ್ಲದೆ, ಇನ್ನು ಕೈಜರರನ್ನು ಸಿಂಹಾಸನದಿಂದ ತಳ್ಳಿಬಿಡುವುದು ಅವಶ್ಯಕವೆಂದೂ ಬೇಗನೆ ಸಂಧಿಮಾಡಿಕೊಳ್ಳಬೇಕೆಂದೂ ತೀರ್ಮಾನಿಸಿ, ಸಭಿಕರೆಲ್ಲರೂ ಉತ್ಸವಪೂರ್ವಕವಾಗಿ ಮಂತ್ರಿಗಳ ಮನೆಗೆ ಹೋಗಿ ತಮ್ಮ ತೀರ್ಮಾನಗಳನ್ನು ತಿಳಿಯಿಸಿದರು. "ಬರ್ಲಿನ್ ಅಧಿಕಾರಿಗಳು ಬೇಗನೆ ಸಂಧಿಮಾಡಿಕೊಳ್ಳದಿದ್ದರೆ ಮಿತ್ರಮಂಡಲಿಯವರು ಜರ್ಮನಿಗೆ ನುಗ್ಗಿ ದೇಶವನ್ನು ಹಾಳ್ಮಾಡುವವರೆಗೂ ಅವಕಾಶಕೊಡದೆ ನಾವೂ ದಕ್ಷಿಣ ಜರ್ಮನಿ ದೇಶದವರೂ ಸೇರಿ ಪ್ರತ್ಯೇಕ ಸಂಧಿಮಾಡಿಕೊಳ್ಳೋಣ"ವೆಂದು ಬವೇರಿಯಾದವರು ಪ್ರಕಟಿಸಿದರು. ಕೈಜರನೂ ಅವರ ಹಿರಿಮಗನೂ ರಾಜ್ಯಾಧಿಕಾರವನ್ನು ಬಿಡದಿದ್ದರೆ ನಾವು ಪ್ರಭುತ್ವವರ್ಗದ ಉದ್ಯೋಗವನ್ನು ಬಿಟ್ಟುಬಿಡುವೆವೆಂದು ಅಲ್ಲಿಯ ಪಾರ್ಲಿಮೆಂಟಿನ ಸಭಿಕರಾಗಿದ್ದ ಸಾಂಘಿಕವಾದಿಗಳು ಜರ್ಮನ್ ಮುಖ್ಯಮಂತ್ರಿಗೆ ಅಂತ್ಯಸಂದೇಶವನ್ನು ಕಳುಹಿಸಿದರು. ತಾ|| ೮ನೆ ಸಾಯಂಕಾಲದೊಳಗಾಗಿ ಕೈಜರು ರಾಜ್ಯಪರಿತ್ಯಾಗವನ್ನು ಮಾಡಬೇಕೆಂಬುದಾಗಿ ಸಾಂಘಿಕ ಪ್ರಜಾಸತ್ತಾತ್ಮಕವಾದಿ ಸಂಘದವರು ಅಂತ್ಯಸಂದೇಶವನ್ನು ಕಳುಹಿಸಿದರು. ಕೈಜರರಾದರೊ ಇದನ್ನೆಲ್ಲಾ ನೋಡಿ ಕೇಳಿ—"ಸಂಧಿಪತ್ರಕ್ಕೆ ರುಜುಮಾಡಬೇಕಾಗಿರುವ ಈ ಸಮಯದಲ್ಲಿ ನಾನು ರಾಜ್ಯಪರಿತ್ಯಾಗಮಾಡುವುದೆಂದರೆ ಜರ್ಮನಿದೇಶವನ್ನು ಮಿತ್ರಮಂಡಲಿಯ ವಶಪಡಿಸಿದಂತೆಯೇ ಆಗುವುದು. ನಾನು ಈಗ ರಾಜ್ಯವನ್ನು ಕೈಬಿಟ್ಟರೆ ದೇಶದಲ್ಲಿ ಅರಾಜಕವೂ ದೌರ್ಜನ್ಯವೂ ಹೆಚ್ಚಿ ಬೋಲ್ಷೆವಿಕ್ಕರ ವಿಧಾನವೇ ಇಲ್ಲೂ ವ್ಯಾಪಿಸಿಹೋಗುವುದು. ಅದುಕಾರಣ ನಾನು ಈಗ ರಾಜ್ಯವನ್ನು ಬಿಡಲಾರೆನು" ಎಂದು ಮಂತ್ರಿಯೊಡನೆ ಹೇಳಿದರಂತೆ. ಕೈಜರಿನ ಈ ಸ್ಥಿತಿಯನ್ನೂ ಪಾರ್ಲಿಮೆಂಟಿನ ಸ್ಥಿತಿಯನ್ನೂ ದೇಶದ ವಿಪರೀತ ಸ್ಥಿತಿಯನ್ನೂ ನೋಡಿ ಮುಖ್ಯಮಂತ್ರಿಯಾದ ಮಾಕ್ಸ್ ರಾಜಕುಮಾರನು ರಾಜೀನಾಮೆ ಕೊಟ್ಟನು. ಆದರೆ ಅದಕ್ಕೆ ಕೈಜರರು ಒಪ್ಪದೆ ಇನ್ನು ಕೆಲಕಾಲ ಉದ್ಯೋಗದಲ್ಲೇ ಇರಬೇಕೆಂದು ನಿಲ್ಲಿಸಿಕೊಂಡರು.

ಕೈಜರರ ರಾಜ್ಯಪರಿತ್ಯಾಗ.

ಕೈಜರರ ನಾಣ್ಯವು ಜಗತ್ತಿನಲ್ಲೆಲ್ಲಾ ಕೆಟ್ಟುಹೋಯಿತು. ಮಿತ್ರಮಂಡಲಿಯವರಂತೂ—ಅವರೊಡನೆ ನಾವು ಸಂಧಿಮಾತನ್ನೇ ಆಡುವವರಲ್ಲ, ಪ್ರಜೆಗಳ ಪ್ರಭುತ್ವವಾದರೆ ಅವರೊಡನೆ ಮಾತನಾಡುತ್ತೇವೆಂದು ಹೇಳಿಬಿಟ್ಟರು. ಸ್ವದೇಶದ ಪ್ರಜೆಗಳಲ್ಲೂ ತನ್ನ ಗೌರವವು ಉಳಿಯಲಿಲ್ಲ. ಅವರ ವಿಶ್ವಾಸವೂ ತಪ್ಪಿತು. ಸಿಂಹಾಸನದಿಂದ ಇವರು ತೊಲಗಿದರೆ ಅಷ್ಟಮಶನಿಯು ತೊಲಗಿದಂತೆ ಆಗುವುದೆಂದು ದೇಶೀಯರು ಭಾವಿಸಿದರು. ಬಾಯ್ಬಿಟ್ಟೂ ಆಡಿದರು. ತಾನು ಸಿಂಹಾಸನವನ್ನು ಬಿಡದಿದ್ದರೆ ರಷ್ಯಾಜಾರರಿಗೆ ಆದ ಗತಿಯು ತನಗೂ ತಪ್ಪಲಾರದೆಂದು ಕೈಜರರಿಗೆ ತೋರಿರಬಹುದು. ಇವೆಲ್ಲಕಾರಣಗಳಿಂದ ಕೈಜರರು ರಾಜ್ಯಪರಿತ್ಯಾಗ ಮಾಡಿದಲ್ಲದೆ ತೀರದೆಂದು ಕಡೆಗೆ ನಿಶ್ಚಯಿಸಿದರು. ತಾ|| ೯ ನೆ ಬೆಳಗ್ಗೆ ಅವರು ಮಾರ್ಷಲ್ ವಾನ್ ಹಿಂಡೆನ್ಬರ್ಗರು ಯುವರಾಜರು ಮೊದಲಾದ ಮುಖ್ಯಮುಖ್ಯರುಗಳ ಇದಿರಿನಲ್ಲಿ ರಾಜ್ಯಪರಿತ್ಯಾಗ ಪತ್ರಕ್ಕೆ ರುಜುಹಾಕಿದರು. ಆಗ ಮಿತಿಮೀರಿಬಂದ ದುಃಖದಿಂದ ಕೊರಲಿನ ನರಗಳು ಉಬ್ಬೇರಿರಲು "ನನ್ನರಾಜ್ಯದ ಶ್ರೇಯಸ್ಸಿಗಾಗಿಯೇ ನಾನು ರಾಜ್ಯಪರಿತ್ಯಾಗವನ್ನು ಮಾಡುತ್ತೇನೆ" ಎಂದು ಉಚ್ಚರಿಸಿ ಕಣ್ಣೀರುಹಾಕಿದರಂತೆ. ಕೈಯೊಳಗಣ ಕಾಸು ಬಿದ್ದುಹೋದರೇನೆಯೇ ಎಷ್ಟೋ ಸಂಕಟವಾಗುವಾಗ, ಆಗರ್ಭಸಾರ್ವಭೌಮನಾಗಿದ್ದವನು ರಾಜ್ಯವೈಭವವನ್ನು ತ್ಯಜಿಸಿಹೋಗುವುದೆಂದರೆ ಸಾಮಾನ್ಯವಾದ ಮಾತೆ? ಕೃತಕರ್ಮಫಲವು ಹೀಗಾಯಿತು.

ಕೈಜರರ ಪಟ್ಟಣ ಪರಿತ್ಯಾಗ.

ತಾ|| ೧೧ ರಲ್ಲಿ ನೂತನ ಜರ್ಮನ್ ಪ್ರಭುತ್ವದವರು ತಾತ್ಕಾಲಿಕ ಸಂಧಿಪತ್ರಕ್ಕೆ ರುಜುಹಾಕಿ ಮುಗಿದ ಬಳಿಕ ಕೈಜರರು ಸಕುಟುಂಬರಾಗಿ ಬರ್ಲಿನ್ ಪಟ್ಟಣವನ್ನು ಬಿಟ್ಟು ಹಾಲೆಂಡ್ ದೇಶದ ಮೆಸ್ಟ್ರಿಚೇಟ್ ಎಂಬ ಸ್ಥಲಕ್ಕೆ ಹೋಗಿ ಸೇರಿದರು. ಈಗ ಅವರು ಅರನ್‌ಹೇಂ ಎಂಬ ಸ್ಥಲದಲ್ಲಿ ವಾಸಮಾಡಿಕೊಂಡಿದ್ದಾರೆ.

ಜರ್ಮನಿಯ ಈಗಣ ವಿದ್ಯಮಾನ.

ಈಗ ಜರ್ಮನಿಯಲ್ಲಿ ತಾತ್ಕಾಲಿಕವಾಗಿ ನೂತನ ಪ್ರಜಾಪ್ರಭುತ್ವವು ಸ್ಥಾಪಿತವಾಗಿದೆ. ಇದುವರೆಗೆ ಮುಖ್ಯಮಂತ್ರಿಯಾಗಿದ್ದ ಮಾಕ್ಸ್ ರಾಜಕುಮಾರರು ಈ ಪ್ರಭುತ್ವಕ್ಕೆ ರೀಜಂಟರಾಗಿದ್ದಾರೆ. ಎಬರ್ಟ್ ಎಂಬ ಸಾಂಘಿಕವಾದಿಯು ಮುಖ್ಯಮಂತ್ರಿಯಾಗಿದ್ದಾರೆ. ದೇಶದ ಪ್ರಜಾನಾಯಕರನ್ನೆಲ್ಲಾ ಕರೆಯಿಸಿಕೊಂಡು ಮುಂದೆ ನಡೆಯಿಸಬೇಕಾದ ಕಾರ್ಯಗಳನ್ನು ಈ ಪ್ರಭುತ್ವದವರು ಆಲೋಚಿಸುವವರಾಗಿದ್ದಾರೆ. ದೇಶದಲ್ಲಿ ಗದ್ದಲವೆಲ್ಲಾ ನಿಂತು ಸಮಾಧಾನವಾಗಿದೆ. ಜರ್ಮನ್ ದೇಶದ ಎಲ್ಲೆಕಟ್ಟುಗಳನ್ನು ಕಾಯುತ್ತಿದ್ದ ಸೈನಿಕರೆಲ್ಲಾ ಆಯುಧಗಳನ್ನು ಬಿಸುಟು ತಂತಮ್ಮ ಗ್ರಾಮಗಳಿಗೆ ಹೋಗುತ್ತಿದ್ದಾರೆ. ಮದ್ದುಗುಂಡು ಫಿರಂಗಿ ಮೊದಲಾದುವುಗಳನ್ನೆಲ್ಲಾ ನಿರ್ಮಿಸಿಕೊಟ್ಟು ಯುದ್ಧಕ್ಕೆ ಪ್ರೋತ್ಸಾಹಿಸುತ್ತಿದ್ದ ಯಂತ್ರಾಲಯದ ಅಧಿಪತಿಯಾದ ಕ್ರುಪ್‌ರವರನ್ನೂ ಅವರ ಪತ್ನಿಯನ್ನೂ ಹಿಡಿದು ಸೆರೆಯಲ್ಲಿಟ್ಟಿದ್ದಾರೆ. ಸಾಕ್ಸನಿ, ಓಲ್ಡೆನ್‌ಬರ್ಗ್, ಮೆಕ್ಲೆನ್‌ಬರ್ಗ್ ರಾಜರುಗಳು ಸಿಂಹಾಸನವನ್ನು ಬಿಟ್ಟರು. ಅಲ್ಲೆಲ್ಲಾ ಪ್ರಜಾಪ್ರಭುತ್ವವು ಏರ್ಪಟ್ಟಿದೆ.

ಒಳದೇಶದ ವೃತ್ತಾಂತಗಳು.

ರೋಗದ ಹಾವಳಿಯಿಂದ ಮುಚ್ಚಲ್ಪಟ್ಟಿದ್ದ ರಾಜಧಾನಿ ಪಾಠಶಾಲೆಗಳೆಲ್ಲಾ ನೊನ್ನೆ ನಿನ್ನೆಯಿಂದ ತೆರೆಯಲ್ಪಟ್ಟಿವೆ.

ರಾಜಧಾನಿಯಲ್ಲಿ ಇನ್‌ಫ್ಲುಯಂಜಾ ವ್ಯಾಧಿಯು ಕೊನೆಸೇರಿ ಬಂದಿದೆ. ದಿನಗಟ್ಟಲೆಯ ಮರಣಗಳು ೧೦-೧೨ ಕ್ಕೆ ಇಳಿದಿದೆ.

ಮರಿಮಲ್ಲಪ್ಪನವರ ಹೈಸ್ಕೂಲು ಸಂಬಂಧವಾಗಿ ಕೋರ್ಟಿಗೆ ಹತ್ತಿದ್ದ ವ್ಯಾಜ್ಯವು ವಾದಿಗಳಿಂದ ಹಿಂತೆಗೆದುಕೊಳ್ಳಲ್ಪಟ್ಟಿತೆಂದೂ, ಮ|| ವೆಂಕಟಕೃಷ್ಣಯ್ಯನವರು ಹೆಡ್ಮಾಸ್ಟರ್ ಗಿರಿಗೆ ರಾಜೀನಾಮೆ ಕೊಟ್ಟರೆಂದೂ ಕೇಳುತ್ತೇವೆ.

ಬೆಂಗಳೂರು ಸುಪ್ರಸಿದ್ಧ ವರ್ತಕರಲ್ಲಿ ಒಬ್ಬರಾದ ಮ|| ಮಂಡಿ ಹರಿಯಣ್ಣನವರು ಮೈಸೂರು ನಿಯಮನಿರ್ಮಾಣ ಸಭಾಸಭಿಕರಾಗಿ ಆರಿಸಿಕೊಳ್ಳಲ್ಪಟ್ಟಿದ್ದಾರೆ. ವರ್ತಕರಲ್ಲೊಬ್ಬರು ಇಂಥ ಪದವಿಗೆ ಬಂದುದಕ್ಕೆ ಇದೇ ಮೊದಲು.

ಮೈಸೂರು ರಾಜವಂಶಕ್ಕೆ ಸೇರಿದ ಅಜ್ಜಪುರದ ಮ|| ಜಮಾದಾರ್ ಲಿಂಗರಾಜ ಅರಸಿನವರು ಮೆಸಪೊಟೋಮಿಯಾ ರಣರಂಗದಲ್ಲಿ ಯುದ್ಧ ಸಮಾಪ್ತಿಯ ೧ ವಾರಕ್ಕೆ ಮುಂಚೆ ವೀರಸ್ವರ್ಗವನ್ನಡರಿದರೆಂಬ ವಾರ್ತೆಯನ್ನು ಕೇಳಿ ವಿಷಾದಿಸುತ್ತೇವೆ.

ಪ್ರಜಾ ಪ್ರಾರ್ಥನೆಯನ್ನಂಗೀಕರಿಸಿ ಶ್ರೀಮನ್ಮಹಾರಾಜರವರು ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಚೆಟ್ಟರನ್ನೇ ಇನ್ನೊಂದು ವರ್ಷಕಾಲ ಬೆಂಗಳೂರು ಮ್ಯುನಿಸಿಪಾಲಿಟಿಯ ಅಸರಿ ಪ್ರೆಸಿಡೆಂಟರಾಗಿರಲು ಅಪ್ಪಣೆಮಾಡಿರುವರೆಂದು ಕೇಳಿ ಸಂತೋಷಿಸುತ್ತೇವೆ.

ನಮ್ಮ ಶ್ರೀಮನ್ಮಹಾರಾಜರವರ ಮಾವಂದಿರವರಾದ ಶ್ರೀಮಾನ್ ಝೂಲಾ ರಾಣಾವಿನಯಸಿಂಹರವರು ಉತ್ತರ ಹಿಮಾಲಯ ಪ್ರಾಂತದಲ್ಲಿ ತೀರ್ಥಯಾತ್ರೆಯನ್ನು ತೀರಿಸಿಕೊಂಡು ಸ್ವದೇಶಕ್ಕೆ ಬಂದು ಅಲ್ಲಿ ಕಳೆದ ಸೋಮವಾರ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ. ಇವರು ಧರ್ಮ್ಮಾತ್ಮರೂ ಶಾಂತರೂ ಪರೋಪಕಾರ ನಿರತರೂ ಆಗಿದ್ದರು.

ಬರುವ ಡಿಸೆಂಬರ್ ತಾ|| ೨ ರಲ್ಲಿ ಕೂಡುವ ಹಿಂದೂ ವಿಶ್ವವಿದ್ಯಾಲಯದ ಕಾನ್ವೊಕೇಷನ್ನಿನಲ್ಲಿ ಅಧ್ಯಕ್ಷತೆಯನ್ನು ವಹಿಸಲು ಶ್ರೀಮನ್ಮಹಾರಾಜರವರು ಬರುವ ತಾ|| ೨೮ ರಲ್ಲಿ ರಾಜಧಾನಿಯಿಂದ ಕಾಶಿಗೆ ಪ್ರೈವೇಟ್ ಸೆಕ್ರೆಟರಿ, ಹುಜೂರ್ ಸೆಕ್ರೆಟರಿ, ಸರ್ದಾರ್ ಗೋಪಾಲರಾಜ ಅರಸಿನವರು, ಸರದಾರ್ ಗೋಪಾಲರಾಯರು, ಏಡಿಕಾಂಗ್ ಪಾರವರು ಇವರುಗಳೊಡನೆ ಪ್ರಯಾಣ ಮಾಡುವವರಾಗಿದ್ದಾರೆ.

ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಾಗಿದ್ದ ಮ|| ಕೇರಿಯಲ್ ಮೇಥ್ಯಾನ್‌ರವರು ಆಹಾರ ಪದಾರ್ಥಗಳ ಕಂಟ್ರೋಲರಾಗಿ ನಿಯಮಿಸಲ್ಪಟ್ಟರು. ರೆಕ್ರೂಟ್‌ಮೆಂಟ್ ಡೈರೆಕ್ಟರಾಗಿರುವ ಮಿ|| ಬೌರಿಂಗ್‌ರವರು ಈ ಕೆಲಸದ ಜತೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಉದ್ಯೋಗವನ್ನು ವಹಿಸಿಕೊಂಡುದರಿಂದ ಅಲ್ಲಿದ್ದ ಮ|| ಚೊಕ್ಕಣ್ಣನವರು ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರುದ್ಯೋಗಕ್ಕೆ ವರ್ಗಾಯಿಸಲ್ಪಟ್ಟಿರುವರು.

ಮಿತ್ರಮಂಡಲಿಗೆ ವಿಜಯವಾದ ವಾರ್ತೆಯು ಬ್ರಿಟಿಷ್ ರೆಸಿಡೆಂಟರ ಮೂಲಕ ನಮ್ಮ ಶ್ರೀಮನ್ಮಹಾರಾಜರವರಿಗೆ ಕಳೆದ ಸೋಮವಾರ ಸಾಯಂಕಾಲ ತಿಳಿಯಿಸಲ್ಪಟ್ಟಿತು. ಆಗಲೇ ಮುಖ್ಯ ಮುಖ್ಯ ಸರ್ಕಾರಿ ಭವನಗಳಮೇಲೆ ಧ್ವಜಪಟಗಳು ಎತ್ತ ಕಟ್ಟಲ್ಪಟ್ಟುವು. ಮರುದಿನ ಉತ್ಸಾಹಾರ್ಥವಾಗಿ ೧೧ ಗುಂಡುಗಳು ಹಾರಿಸಲ್ಪಟ್ಟುವು. ಟೌನ್‌ಹಾಲಿನ ಮುಂದೆ ಉತ್ಸವವಾದ್ಯಗಳಾದುವು. ಕ್ರೈಸ್ತ ದೇವಾಲಯದಲ್ಲಿ ಗಂಟೆಗಳು ಬಾಜಿಸಲ್ಪಟ್ಟುವು. ಎಲ್ಲಾ ಮತದ ದೇವಾಲಯಗಳಲ್ಲೂ ಪ್ರಾರ್ಥನಾದಿಗಳು ನಡೆಯಿಸಲ್ಪಟ್ಟುವು.

ಸರ್ಕಾರೀ ಮೆಮೊರಾಂಡಂ.

ಜನರ ಉಪಯೋಗಕ್ಕಾಗಿ ಆಹಾರ ಜಿನಸಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳತಕ್ಕ ವಿಷಯದಲ್ಲಿ ಸ್ಥಳೀಯ ಆಫೀಸರುಗಳ ನಡವಳಿಕೆ ಬಗ್ಗೆ ಇದರಡಿ ಕಂಡ ತಿಳವಳಿಕೆಗಳನ್ನು ಸಾದರ್ಪಡಿರುತ್ತದೆ.

1. ಯಾವ ಯಾವ ಜಿನಸಿಗಳಿಗೆ ಧಾರಣೆಗಳನ್ನು ನಿಷ್ಕರ್ಷೆಮಾಡಿರುತ್ತದೆಯೋ ಅಂಥಾ ಜಿನಸಿಗಳ ದಾಸ್ತಾನು ಎಷ್ಟರಮಟ್ಟಿಗೆ ಇರುತ್ತೆಂಬದನ್ನು ತಿಳಿದುಕೊಳ್ಳತಕ್ಕ ಬಗ್ಗಾಗಿ ಇಂಡಿಯಾ ಸಂರಕ್ಷಣೆಯ ರೆಗ್ಯುಲೇಷನ 3(B)(2)(C) ನ ರೂಲಿನ ಮೇರೆಗೆ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಗೆ ಅಧಿಕಾರವನ್ನು 1918 ನೆ ಅಕ್ಟೋಬರ್ 30 ನೆ ತಾರೀಖಿನ ಜಿ. 7918—P. P. 6—18—30 ನೆ ನಂಬರು ಇಸ್ತಿಹಾರ್ನಾಮೆಯ ಮೂಲಕ ಕೊಟ್ಟಿರುತ್ತದೆ.

2. ಪ್ರಕೃತದಲ್ಲಿ ಕೆಲವು ಗೊತ್ತಾದ ಪ್ರದೇಶಗಳಲ್ಲಿ ರಾಗಿ, ಅಕ್ಕಿ, ಭತ್ತ ಮತ್ತು ಜೋಳ ಈ ಜಿನಸಿಗಳ ಪರಮಾವಧಿಯ ಧಾರಣೆಗಳನ್ನು ಗೊತ್ತುಮಾಡಿದೆ. ಇದೇರೀತಿಯಲ್ಲಿ ಸಂಸ್ಥಾನದಲ್ಲೆಲ್ಲಾ ಧಾರಣೆಗಳನ್ನು ಗೊತ್ತುಮಾಡತಕ್ಕ ವಿಷಯದಲ್ಲಿ ಪ್ರಯತ್ನಗಳು ನಡೆಯುತ್ತಲಿವೆ, ಈ ವಿಷಯದಲ್ಲಿ ಒಂದೆರಡು ದಿನಗಳಲ್ಲೇ ಹುಕುಮನ್ನು ಸಾದರ್ಮಾಡಲಾಗುವುದು. ಈ ಹುಕುಂಗಳು ತಲ್ಪಿದಕೂಡಲೆ ಡೆಪ್ಯುಟಿ ಕಮಿಷನರುಗಳು ಅವಶ್ಯಕಬಿದ್ದಾಗಲೆಲ್ಲಾ ದಾಸ್ತಾನು ಇಟ್ಟಿರುವ ಜಿನಸಿಗಳನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಪ್ರಯತ್ನಗಳನ್ನು ನಡಿಸಬಹುದು.

3. ಆರಂಭದಲ್ಲಿ, ಭಾರಿಯಾಗಿ ಜಿನಸಿಗಳನ್ನು ದಾಸ್ತಾನು ಇಟ್ಟುಕೊಂಡಿರುವ ಜನಗಳಿಂದ ಸದರಿ ಜಿನಸಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಡೆಪ್ಯುಟಿ ಕಮಿಷನರು ತಾವೇ ಖುದ್ದಾಗಿ ಅಥವಾ ಒಬ್ಬ ಜವಾಬ್ದಾರಿಯುಳ್ಳ ಆಫೀಸರ ಮುಖಾಂತರ; ನಮೂದಿಸಲ್ಪಟ್ಟಷ್ಟು ಜಿನಸಿಯನ್ನು ಅಧಿಕಾರ ಕೊಡಲ್ಪಟ್ಟ ಆಫೀಸರಿಗೆ ಅರ್ಹವಾಗಬಹುದಾದ ರೀತಿಯಲ್ಲಿ ಪಾವತಿಮಾಡಬೇಕೆಂದು ದಾಸ್ತಾನು ಇಟ್ಟಿರುವ ಮನುಷ್ಯನಿಗೆ ಲಿಖಿತಮೂಲಕವಾಗಿ ಹುಕುಂಕೊಡುವುದರ ಮೂಲಕ ಸದರಿ ಜಿನಸಿಯ ಮೊತ್ತವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಬೇಕಾದಷ್ಟು ಜಿನಸಿಯನ್ನು ಒಂದು ಗ್ರಾಮದಲ್ಲಿ ಅಥವಾ ಇತರ ಪ್ರದೇಶದಲ್ಲಿ ದಾಸ್ತಾನು ಇಟ್ಟಿರುವ ಅನೇಕ ಜನಗಳಿಂದ ಪಡೆಯತಕ್ಕದ್ದು, ಆದರೆ ಆ ಪೈಕಿ ಯಾವನೊಬ್ಬ ಮನುಷ್ಯನಿಗೂ ವಿಶೇಷ ಭಾರವಾಗುವಂತೆ ಪಡೆಯತಕ್ಕದ್ದಲ್ಲವು.

4. ಯಾವ ಮನುಷ್ಯರಿಂದ ಜಿನಸಿಗಳ ದಾಸ್ತಾನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವದೋ ಅಂಥಾ ಮನುಷ್ಯರಿಗೆ ಅನಾನುಕೂಲವಾಗದಂತೆ ಮಾಡುವದಕ್ಕಾಗಿ, ಅಂಥಾ ಮನುಷ್ಯನಿಗೂ, ಅವನ ಸಂಸಾರಕ್ಕೂ ಮತ್ತು ಅವನ ಆಶ್ರಿತರಿಗೂ ಕನಿಷ್ಠ ಪಕ್ಷ ಒಂದು ವರ್ಷಕ್ಕೆ ಆಗುವಷ್ಟು ಜಿನಸಿಯನ್ನು ಅವರಿಗೆ ಬಿಟ್ಟುಕೊಡಬೇಕು. ಈ ಆವಶ್ಯಕತೆಗಳನ್ನು ಗಣನೆ ಮಾಡುವದರಲ್ಲಿ, ಒಬ್ಬ ಮನುಷ್ಯನಿಗೆ ಒಂದು ವರ್ಷಕ್ಕೆ ಎರಡು ಪಲ್ಲಾ ರಾಗಿ, ಅಕ್ಕಿ ಅಥವಾ ಜೋಳ ಅಥವಾ ನಾಲ್ಕು ಪಲ್ಲ ಭತ್ತವು ಬೇಕಾಗುವದೆಂದು ಇಟ್ಟುಕೊಳ್ಳಬೇಕು.

5. ಜಿನಸಿಯ ದಾಸ್ತಾನುಗಳನ್ನು ತೆಗೆದುಕೊಂಡಮೇಲೆ, ಜಿನಸಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿಕಾರ ಪಡೆದಿರುವ ಆಫೀಸರು, ಸ್ಥಳೀಯ ನಿವಾಸಿಗಳ ಪೈಕಿ ಮೂರು ಮಂದಿಗೆ ಕಮ್ಮಿ ಇಲ್ಲದ ಗೌರವಸ್ಥರಾದ ಜನರಿರುವ ಒಂದು ಪಂಚಾಯಿತಿಯ ಸಮಕ್ಷಮದಲ್ಲಿ ನಿಜವಾದ ಅಳತೆಯ ಮೇರೆಗೆ ಸ್ವಾಧೀನಕ್ಕೆ ತೆಗೆದುಕೊಂಡ ಮೊತ್ತವನ್ನು ತೋರಿಸುವ ಒಂದು ಮಹಜರನ್ನು ತಯಾರ್ಮಾಡಬೇಕು. ಜಿನಸಿಯ ಮೊತ್ತವನ್ನು ತೆಗೆದುಕೊಂಡ ಕೂಡಲೆ, ಮತ್ತು ಯಾವ ಸಂದರ್ಭದಲ್ಲಾಗಲೀ ಒಂದು ವಾರದೊಳಗಾಗಿ ನೋಟೀಸಿನಲ್ಲಿ ಡೆಪ್ಯುಟಿ ಕಮಿಷನರು ಗೊತ್ತುಮಾಡಿರುವ ಖರೀದಿಯ ಮೇರೆಗೆ ಮೊಬಲಗನ್ನು ಮಾಲೀಕನಿಗೆ ಪಾವತಿ ಮಾಡಬೇಕು. ಸ್ವಾಧೀನಕ್ಕೆ ತೆಗೆದುಕೊಳ್ಳಲ್ಪಟ್ಟ ಜಿನಸಿಯನ್ನು ಜವಾಬ್ದಾರಿಯುಳ್ಳ ಮನುಷ್ಯನ ಸ್ವಾಧೀನದಲ್ಲಿ ಭದ್ರವಾಗಿ ಇಡಬೇಕು. ಮತ್ತು ಅದನ್ನು ನಿರ್ದೇಶಿಸಲ್ಪಟ್ಟ ಸ್ಥಳಕ್ಕೆ ರವಾನಿಸಬೇಕು ಅಥವಾ ಜಿನಸಿಯು ಬೇಕಾಗಿರುವಂಥ ಬಡ ಜನರಿಗೆ ಕೊಡುವುದಕ್ಕಾಗಿ ಉಪಯೋಗಿಸಬೇಕು ಎಂದರೆ ಗೊತ್ತಾದ ಧಾರಣೆಯ ಮೇರೆಗೆ ಸ್ವಲ್ಪಸ್ವಲ್ಪವಾಗಿ ಅವರಿಗೆ ಮಾರತಕ್ಕದ್ದು. ಮಾರಾಟವನ್ನು, (1) ಸ್ಥಳದಲ್ಲಿ ಕೋ ಆಪರೇಟಿವ್ ಸೊಸೈಟಿಗಳು ಇದ್ದು ಆ ಕೆಲಸವನ್ನು ಕೈಗೊಳ್ಳುವದಾಗಿ ಇಷ್ಟಪಟ್ಟರೆ ಅವರ ಮೂಲಕವೂ, (2) ಈ ಕೆಲಸಕ್ಕಾಗಿ ಲೈಸೆನ್ಸು ಕೊಡಬಹುದಾದ ಗೌರವಸ್ಥರಾದ ವರ್ತಕರ ಮೂಲಕವೂ ಮತ್ತು (3) ಇಂಥಾವರು ದೊರೆಯದ ಸ್ಥಳಗಳಲ್ಲಿ ಈ ಕೆಲಸಕ್ಕಾಗಿ ನೇಮಿಸಲ್ಪಟ್ಟ ಸರ್ಕಾರೀ ಉದ್ಯೋಗಸ್ಥರಲ್ಲದ ಜನರ ಮೂಲಕವೂ ಅಥವಾ ಕಮಿಟಿಗಳ ಮೂಲಕವೂ ನಡಿಸಬಹುದು.

6. ಈ ವಿಷಯದಲ್ಲಿ ದುರುಪಯೋಗಗಳು ನಡೆಯದಂತೆ ಎಲ್ಲಾ ಎಚ್ಚರಿಕೆಯನ್ನೂ ತೆಗೆದುಕೊಳ್ಳಬೇಕು.

7. ಮೇಲ್ಕಂಡ ಮೇರೆಗೆ ದಾಸ್ತಾನು ಇರುವ ಜಿನಸಿಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದಕ್ಕಾಗಿ ಪ್ರತಿ ಡೆಪ್ಯುಟಿಕಮಿಷನರ ವಶದಲ್ಲಿ 10,000 ರೂಪಾಯಿಗಳ ಅಡ್ವಾನ್ಸು ಮೊಬಲಗನ್ನು ಕೊಡತಕ್ಕ ಬಗ್ಗೆ ಪ್ರತ್ಯೇಕ ಹುಕುಮನ್ನು ಸಾದರ್ಮಾಡುವದರಲ್ಲಿದೆ. ಶೀಘ್ರದಲ್ಲಿಯೇ ಇನ್ನೂ ವಿವರವಾದ ತಿಳವಳಿಕೆಗಳನ್ನು ಸಾದರ್ಪಡಿಸಲಾಗುವುದು. ಆದರೆ ಈ ಮೆಮೋರಾಂಡಮಿನಲ್ಲಿ ಸೂಚಿಸಲ್ಪಟ್ಟ ಮೇರೆಗೆ ಬೇಕಾದ ನಡವಳಿಕೆಯನ್ನು ನಡಿಸಬಹುದು.

ಹುಕುಂ ಬಮೋಜಬ್,
ಸಿ. ಎಸ್. ಬಾಲಸುಂದರಂ ಅಯ್ಯರ್,
ಸ್ಪೆಷಲ್ ಚೀಫ್ ಸೆಕ್ರೆಟರಿ.

ಪ್ರೆಸ್ ಕಮ್ಯೂನಿಕ್.

ಹಿಂದಿನ ಪ್ರೆಸ್ ಕಮ್ಯೂನಿಕ್ ಪ್ರಚುರವಾದಾಗಿನಿಂದ ಈಚೆಗೆ ಸರ್ಕಾರದವರು ಮೈಸೂರು ಪಟ್ಟಣದಲ್ಲಿ ರಾಗಿ ೬೪೦ ಸೇರಿನ ಗಾಡಿಗೆ ೫೨ ರೂಪಾಯಿ, ಮತ್ತು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅಕ್ಕಿ ೧೮೦ ಸೇರಿನ ಖಂಡಗಕ್ಕೆ ೧೯ ರೂಪಾಯಿ, ಇದಕ್ಕೆ ಹೆಚ್ಚಾಗಿ ಮಾರಕೂಡದೆಂದು ನಿಯಮಿಸಿದಾರೆ. ತುಂಕೂರು ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲೂ ರಾಗಿಯು ರೂಪಾಯಿಗೆ ೧೨ ಸೇರಿನಂತೆ ಮಾರಲ್ಪಡಬೇಕೆಂದು ಕಟ್ಟು ಮಾಡಲ್ಪಟ್ಟಿದೆ. ಇದು ಒಟ್ಟು ತೆಗೆದು ಚಿಲ್ಲರೆ ವ್ಯಾಪಾರ ಮಾಡತಕ್ಕ ವ್ಯಾಪಾರಗಾರರಿಗೆ ಸಲ್ಲಬೇಕಾದ ಲಾಭ ಮತ್ತು ಖರ್ಚುಗಳನ್ನು ಒಳಕೊಂಡಿದೆ.

ಮತ್ತು ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಎಷ್ಟು ರಾಗಿಯು ಅವಶ್ಯಕವಾಗಿ ಬೇಕಾಗಬಹುದೆನ್ನುವದನ್ನು ತಿಳಿದುಕೊಂಡು, ಡೈರೆಕ್ಟರ್ ಆಫ್ ಸಿವಿಲ್ ಸಪ್ಲೈಸ್‌ರವರು ಬೆಂಗಳೂರು ಮತ್ತು ತುಂಕೂರು ಡಿಸ್ಟ್ರಿಕ್ಟುಗಳಲ್ಲಿ ರಾಗಿಯನ್ನು ಕೊಡಿಟ್ಟಿರುವುದರಿಂದ ಅದನ್ನು ಕೊಂಡು ಆ ಕಡೆಗಳಿಗೆ ಸಪ್ಲೈ ಮಾಡುವದಕ್ಕೆ ಪ್ರಯತ್ನಿಸುತ್ತಿದಾರೆ. ಮೈಸೂರು ಪಟ್ಟಣದಲ್ಲಿ ರಾಗಿಯು ಸ್ವಲ್ಪವೇ ಇದೆಯೆಂತಲೂ, ಅಲ್ಲಿಗೆ ತಿಂಗಳಿಗೆ ೩,೦೦೦ ಪಲ್ಲಾ ರಾಗಿಯು ಬೇಕಾಗುವದೆಂದೂ ತಿಳಿಯಬಂದಿದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿಯೂ, ಅಲ್ಲಿನ ಮೂಲಾಧಾರವಾದ ಅಕ್ಕಿಯು ವರ್ಷದ ಆರಂಭದಲ್ಲೇ ಬಹಳವಾಗಿ ರಫ್ತು ಮಾಡಲ್ಪಟ್ಟಿದ್ದರಿಂದ, ಈಗ ರಾಗಿಯನ್ನು ಹೆಚ್ಚಾಗಿ ತರಿಸಿಕೊಳ್ಳಬೇಕಾಗಿದೆ. ಅಲ್ಲಿನ ಡೆಪ್ಯುಟಿಕಮಿಷನರವರು ತಿಂಗಳಿಗೆ ೩,೦೦೦ ಮೂಟೆ, ಅಥವಾ ೨,೪೦೦ ಪಲ್ಲಾ ರಾಗಿಯು ಬೇಕಾಗಬಹುದೆಂದು ಲೆಖ್ಖ ಹಾಕುತ್ತಾರೆ. ಮೈಸೂರು, ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳೂ ಆಗಾಗ್ಗೆ ರಾಗಿಯನ್ನು ತರಿಸಿಕೊಳ್ಳಬೇಕಾಗಿದೆ.

ಇದಲ್ಲದೆ ಊಟಿಕ ಮುಂದಿಗೆ ತಿಂಗಳಿಗೆ ೨,೦೦೦ ಮೂಟೆ ರಾಗಿಯನ್ನು ಕಳುಹಿಸಿಕೊಡಬೇಕಾಗಿದೆ. ಮತ್ತು ಮದ್ರಾಸಿನಿಂದ ನಮ್ಮ ಸಂಸ್ಥಾನದಲ್ಲಿ ಖರ್ಚಾಗುವ ಅಕ್ಕಿಯಲ್ಲಿ $\frac{1}{10}$ ಪಾಲು ಬರಬೇಕಾಗಿರುವದರಿಂದ ಅಲ್ಲಿನ ಕೆಲವು ಪ್ರಾಂತ್ಯಗಳಿಗೂ ನಮ್ಮ ರಾಗಿಯಲ್ಲಿ ಒಂದು ಭಾಗವನ್ನು ಬಿಟ್ಟುಕೊಡಬೇಕು. ಹಿಂದಿನ ಕಮ್ಯೂನಿಕ್ಕಿನಲ್ಲಿ ಹೇಳಿದಂತೆ ಬೊಂಬಾಯಿಯಾಧಿಪತ್ಯದ ವರ್ತಕರು ನಮ್ಮ ದೇಶದಲ್ಲಿ ರಾಗಿಯನ್ನು ವಿಶೇಷವಾಗಿ ಕೊಂಡಿಟ್ಟದಾರೆ. ಅಲ್ಲಿ ಬಹಳ ಕ್ಷಾಮವಾಗಿದೆ ಎಂದು ವರ್ತಮಾನವಿರುವುದರಿಂದ ಆ ರಾಗಿಯಲ್ಲಿ ಒಂದು ಭಾಗವನ್ನಾದರೂ ಅವರಿಗೆ ಬಿಟ್ಟುಕೊಡಬೇಕು.

ಹೀಗೆ ಬೇಕಾಗುವ ರಾಗಿಗಳನ್ನು ಸರ್ಕಾರದವರು ಬೆಂಗಳೂರಿನಲ್ಲಿ ಸ್ಥಾಪಿಸಿರುವ ಸೆಂಟ್ರಲ್‌ಗ್ರೇನ್ ಸ್ಟೋರಿನ ಮೂಲಕ ಕಳುಹಿಸಿಕೊಡಬೇಕೆಂದು ಏರ್ಪಾಡಾಗಿದೆ. ಯಾಕೆಂದರೆ ಮೊದಲೇ ಧಾನ್ಯವಾಸಿಗಳು ಏರಿ ಕಾಲವು ಕಷ್ಟವಾಗಿರುವಲ್ಲಿ, ಈ ಕೆಲಸವನ್ನು ವರ್ತಕರಿಗೇ ಬಿಟ್ಟುಬಿಟ್ಟರೆ ಬೆಲೆಗಳು ಇನ್ನೂ ಹೆಚ್ಚಿ, ದವಸಗಳು ಪೇಟೆಗೆ ಬರುವದೇ ನಿಂತುಹೋಗಿ ಪ್ರಜೆಗಳಿಗೆ ತುಂಬಾ ತೊಂದರೆಯಾಗಬಹುದು. ಈ ಭಾಗದಲ್ಲಿ ಡಿಸ್ಟ್ರಿಕ್ಟ್ ಅಧಿಕಾರಿಗಳು ಮುಖ್ಯವಾಗಿ ಗಮನಿಸಬೇಕಾದುದೇನಂದರೆ- ಆಯಾಯ ಡಿಸ್ಟ್ರಿಕ್ಟಿನಲ್ಲಿ ದೊರೆಯಬಹುದಾದ ದವಸವನ್ನು ಉಪಯೋಗಿಸಿಕೊಂಡು ನಂತರ ಈಗ ಇನ್ನೂ ಬೇಕಾದರೆ ಆಗ ಸೆಂಟ್ರಲ್ ಸ್ಟೋರಿನ ಸಹಾಯವನ್ನು ಕೇಳಬೇಕೆನ್ನುವುದು.

ಸಂಸ್ಥಾನದಲ್ಲಿ ಅಕ್ಕಿಯು ಸಾಕಾದಷ್ಟಿಲ್ಲವೆಂದು ತಿಳಿದು ಮದ್ರಾಸ್ ಡೈರೆಕ್ಟರವರು ವಾರಕ್ಕೆ ೪೨೦ ಟನ್ ಅಕ್ಕಿಯನ್ನು ಕಳುಹಿಸಿಕೊಡುವಂತೆ ಏರ್ಪಾಡುಮಾಡಿದೆ. ಕೋಲಾರದ ಗಣಿಗಳಿಗೆ ವಾರಕ್ಕೆ ಬೇಕಾಗುವ ೧೮೦ ಟನ್ನುಗಳ ಕುಸಲ ಅಕ್ಕಿಯಲ್ಲದೆ, ಮದರಾಸ್ ಡೈರೆಕ್ಟರವರು ಈ ಕೆಳಗೆ ಹೇಳುವ ಡಿಸ್ಟ್ರಿಕ್ಟುಗಳಿಂದ ಅಕ್ಕಿಯನ್ನು ತರಿಸುವುದಕ್ಕೆ ಪ್ರೈಯಾರಿಟಿ ಸರ್ಟಿಫಿಕೇಟನ್ನು ಕೊಡುವುದಾಗಿ ಒಪ್ಪಿಕೊಂಡಿದಾರೆ:—

ತಂಜಾವೂರು ಡಿ|| ನಿಂದ 10 ವ್ಯಾಗನ್ ಅಥವಾ 100 ಟನ್.
ಮದರಾಸಿನಿಂದ ... 2 ವ್ಯಾಗನ್ ಅಥವಾ 80 ಟನ್ ಅಕ್ಕಿನುಚ್ಚು.
ನೆಲ್ಲೂರು ಡಿಸ್ಟ್ರಿಕ್ಟಿನಿಂದ 1 ವ್ಯಾಗನ್ ಅಥವಾ 20 ಟನ್.

ಮೇಲೆ ಹೇಳಿದ ಸ್ಥಳಗಳಿಂದ ಅವುಗಳನ್ನು ತರಿಸಲು ಅಪೇಕ್ಷಿಸುವ ವರ್ತಕರಿಗೆ, ಅವರು ಚೀಲಕ್ಕೆ 0_4_0 ಆಣೆಗೆ ಮೀರದೆ ಲಾಭವಿಟ್ಟು ಮಾರುವುದಾಗಿ ಒಪ್ಪಿಕೊಂಡರೆ ಇಲ್ಲಿನ ಸಿವಿಲ್ ಸಪ್ಲೈಸ್ ಡೈರೆಕ್ಟರು ಪ್ರೈಯಾರಿಟಿ ಸರ್ಟಿಫಿಕೇಟುಗಳನ್ನು ಕೊಡುವರು.

ಮದರಾಸಿನಿಂದ ಬರುವ ಸಪ್ಲೈಯು ಸಾಲದೆಯಾಗಲಿ ನಿಂತಾಗಲಿ ಹೋದಲ್ಲಿ ದೇಶಕ್ಕೆ ತೊಂದರೆಯುಂಟಾಗದಿರಲೆಂದು ಬರ್ಮಾದಿಂದ ಎರಡು ತರಹ ಅಕ್ಕಿಯನ್ನು ಸ್ವಲ್ಪ ತರಿಸಲು ಏರ್ಪಾಡುಮಾಡಿದೆ. ಅದನ್ನು ಉಪಯೋಗಿಸಿ ನೋಡಲು ಅಪೇಕ್ಷಿಸುವವರು ತಿಳಿಸಿದಲ್ಲಿ ಅಸಲ್ ಕ್ರಯಕ್ಕೆ ಕೊಡಲ್ಪಡುವುದು.

ಬೆಂಗಳೂರಿನಲ್ಲಿ ಸೌದೆಯ ಬೆಲೆಯು ಬಹಳ ಹೆಚ್ಚಿ ಹೋದುದರಿಂದ, ಸರಿಯಾದ ಬೆಲೆಗೆ ಸೌದೆಯು ಸಿಕ್ಕುವಂತೆ ಸರ್ಕಾರದವರು ಏರ್ಪಾಡು ಮಾಡಬೇಕಾಯಿತೆನ್ನುವದು ಜನರಿಗೆ ತಿಳಿದಿದೆ. ಫಾರೆಸ್ಟ್ ಇಲಾಖೆಯವರು ಕಂಟ್ರಾಕ್ಟರುಗಳ ಮೂಲಕ ಜಂಗಲುಗಳಿಂದ ಸೌದೆಯನ್ನು ಒದಗಿಸುತ್ತಾರೆ. ಅದನ್ನು ಡೈರೆಕ್ಟರ್ ಆಫ್ ಸಿವಿಲ್ ಸಪ್ಲೈಸ್‌ರವರು ಊರಿನಲ್ಲಿ ೪೬ ಜನ ಸೌದೆ ವರ್ತಕರಿಗೆ ಕೊಟ್ಟು ಮಾರಿಸುತ್ತಾರೆ. ಸ್ವಲ್ಪ ಹೆಚ್ಚಾಗಿ ಬೇಕೆನ್ನುವವರಿಗೆ ಟನ್ನಿಗೆ ೧೦—೮—೦ ರೂಪಾಯಿಯಂತೆ ಅರ್ಧದಿಂದ ೧ ಟನ್ ವರೆಗೆ ದೊರೆಯುವಂತೆ ಒಂದು ಸೆಂಟ್ರಲ್ ಸ್ಟೋರು ಏರ್ಪಡಿಸಲ್ಪಟ್ಟಿದೆ. ಸೌದೆಯ ಚಿಲ್ರೆ ಬೆಲೆಯು ಕೇಸರಿಕೆ, ರೂಪಾಯಿಗೆ ೪ ಮಣ, ಜಂಗಲ್ ಸೌದೆ ರೂಪಾಯಿಗೆ ೬ ಮಣ.

ಪತ್ರವ್ಯವಹಾರ.

ರಾಯಚೂರು ಡಿ|| ದೇವದುರ್ಗ.

ಇದೇ ನವೆಂಬರ್ ತಿಂಗಳಲ್ಲಿ ಮ|| ರಾ|| ರಾಜಾರಮಪ್ಪ ನಾಯಕ ಸಮಾಯಿ ಬಹದೂರ ಸರ್ ಇನಾಂದಾರ ಕರಿಗುಡ್ಡ ತಾ|| ದೇವದುರ್ಗ ಇವರು ಡಿ|| ವಿಜಾಪೂರ ಪೈಕಿ ತಾ|| ಹುನಗುಂದ ಇಲಾಖೆ ಗ್ರಾಮಗಳಿಗೆ ವಾಲ್ಮೀಕಿ ಮಠಸ್ಥರ ಕುಲಾಚಾರ ವಿಚಾರಮಾಡಲಿಕ್ಕಾಗಿ ಹೋಗುವರು. ಆದರೆ ಮ|| ಧೊರೆಗಳವರಿಗೆ ಮೇಲ್ಕಂಡ ವಿಷಯಕ್ಕಾಗಿ ಇವರ ಪೂರ್ವದ ರಾಜಮುಖ್ಯಾದೆ ಸನದುಗಳ ಆಧಾರದಿಂದ ಮೇಲ್ಕಂಡ ತಾ|| ಹುನಗುಂದ ಮೋಜಸ್ಟ್ರೇಟರ ಕಡೆಯಿಂದ ಅರ್ಜಿ ಆಗಿ ಯಾವತ್ತು ಗ್ರಾಮದ ಗ್ರಾಮಸ್ಥರ ಹೆಸರಿಂದ ಇವರು ಆಯಾ ಗ್ರಾಮಕ್ಕೆ ಹೋದಾಗ್ಯೆ ಮರ್ಯಾದೆ ಮತ್ತು ಸರಬರಾಯಿ ಬಂದೋಬಸ್ತು ಇಡಲಿಕ್ಕಾಗಿ ಹುಕುಂ ಆಗಿರುತ್ತದೆ. ಅದ್ದರಿಂದ ಇವರು ಇದೇ ತಿಂಗಳಲ್ಲಿ ವಾಲ್ಮೀಕಿ ಮಠಸ್ಥರ ಕುಲಾಚಾರ ವಿಚಾರಮಾಡಲಿಕ್ಕಾಗಿ ಹೋಗುವವರಾಗಿದ್ದಾರೆ.

ಒಬ್ಬ ಮಠಸ್ಥ.

ಪ್ರಕಟನೆ.

ಮುಡುಕುತೊರೆ ಶ್ರೀ ವೀರಶೈವಮತಸಂವರ್ಧಿನೀ ಸಭೆಯಿಂದ—

ಕಾಳಯುಕ್ತಿ ಸಂವತ್ಸರದ ಮಾಘಮಾಸದಲ್ಲಿ ನಡೆಯುವ ನಮ್ಮ ಸಭೆಗೆ ವೀರಶೈವ ಬ್ರಾಹ್ಮಣಮತಸಿದ್ಧಾಂತವಾದ ಶಿವಾದ್ವೈತಕ್ಕೂ ಸ್ಮಾರ್ತಬ್ರಾಹ್ಮಣ ಸಿದ್ಧಾಂತವಾದ ಬ್ರಹ್ಮಾದ್ವೈತಕ್ಕೂ, ಜಗತ್ತು, ಈಶ್ವರ, ಮಾಯೆ, ಮುಕ್ತಿ, ಭಕ್ತಿ, ಕರ್ಮ, ಜ್ಞಾನ ಮುಂತಾದವುಗಳ ವಿಷಯವಾಗಿ ಇರುವ ವೈಲಕ್ಷಣ್ಯವನ್ನು ಸಪ್ರಮಾಣವಾಗಿಯೂ, ವಿಶದವಾಗಿಯೂ, ಸಂಪೂರ್ಣವಾಗಿಯೂ, ಶ್ಲಾಘ್ಯವಾಗಿಯೂ, ಗಂಭೀರವಾಗಿಯೂ ತಿಳಿಸುವ ಉಪನ್ಯಾಸವು ಅವಶ್ಯಕವಾಗಿದೆ. ಇಂತಹ ಉಪನ್ಯಾಸವನ್ನು ಶ್ರೀ ಸಭೆಗೆ ಬಿಜಯಂಗೈದು ಮಾಡಿದವರಲ್ಲಿ ಉತ್ತಮತರಗತಿಯ ಉಪನ್ಯಾಸಕರಿಗೆ ೭೫ ರೂಪಾಯಿಗಳೂ, ಮಧ್ಯಮತರಗತಿಯ ಉಪನ್ಯಾಸಕರಿಗೆ ೫೦ ರೂಪಾಯಿಗಳೂ ಬಹುಮಾನವಾಗಿ ಕೊಡಲ್ಪಡುವುವಲ್ಲದೆ ಉತ್ತಮತರಗತಿಯ ಉಪನ್ಯಾಸಕರಿಗೆ "ಶಿವಾದ್ವೈತ ವಿದ್ಯಾವಿಭೂಷಣ" ಎಂಬ ಪ್ರಶಸ್ತಿಯು ಸುವರ್ಣಾಭರಣ ರೂಪವಾಗಿ ಅರ್ಪಿಸಲ್ಪಡುವುದು. ಉಪನ್ಯಾಸವನ್ನು ಮಾಡುವವರು ತಮ್ಮ ಉಪನ್ಯಾಸವನ್ನು ಈ ಸಂವತ್ಸರದ ಪುಷ್ಯ ಶುದ್ಧ ೧೦ ಒಳಗಾಗಿ ಸಭೆಯ ವರ್ಕಿಂಗ್ ಕಮಿಟಿಯ ಅಧ್ಯಕ್ಷರಾದ ಕೊಳ್ಳೇಗಾಲದ ಮ|| ರಾ|| ಜಿ. ಪಿ. ಮಲ್ಲಪ್ಪನವರ ಹೆಸರಿಗೆ ಕಳುಹಿಸಿಕೊಡಬೇಕು. ಸಭೆಗೆ ಬರುವುದಕ್ಕನುಕೂಲವಿಲ್ಲದೆ ಉಪನ್ಯಾಸವನ್ನು ಮಾತ್ರ ಕಳುಹಿಸಿದವರಿಗೆ ಯಥೋಚಿತ ಬಹುಮಾನದ್ರವ್ಯವು ಕಳುಹಿಸಲ್ಪಡುವುದು.

ಕರಿಬಸವಶಾಸ್ತ್ರಿ, ಆಸ್ಥಾನಮಹಾವಿದ್ವಾನ್, ಅಜೀವಸಭಾಧ್ಯಕ್ಷ,
ಮುಡುಕುತೊರೆ ಶ್ರೀ ವೀರಶೈವಮತಸಂವರ್ಧಿನೀಸಭಾ.

ಮಂಜರಾಬಾದು ತಾಲ್ಲೂಕು ಸಕಲೇಶಪುರ.

ಇಲ್ಲಿ ಒಂದು ಒಂದೂವರೆ ತಿಂಗಳಿಂದ ಸುತರಾಂ ಮಳೆ ಇಲ್ಲದೇಲೂ, ಇನ್‌ಫ್ಲುಯೆಂಜಾ ಎಂಬ ಬಾಯಿಲೆಯಿಂದ ಇದುವರೆಗೆ ಸುಮಾರು 40 ಜನಗಳವರೆಗೆ ಮೃತ್ಯುವಿನ ಬಾಯಿಗೆ ತುತ್ತಾದದ್ದಲ್ಲದೆ, ಇನ್ನೂ ಪ್ರತಿಮನೆಯಲ್ಲೂ ಹಲವು ಜನಗಳು ನರಳುತ್ತಿರುವದು ತಪ್ಪಿಯೇ ಇಲ್ಲ. ಸುತ್ತುಮುತ್ತಿನ ಹಳ್ಳಿಗಳಲ್ಲು ಸಹ ಈ ಬಾಯಿಲೆಯೇ ಬಲವಾಗಿದೆ. ಧಾರಣವಾಸಿಯಂತೂ ಹೇಳತೀರದು. ಅಕ್ಕಿ ಒದಗುವುದೇ ದುಸ್ತರವಾಗಿದೆ. ಇಂಥಾ ಕಾಲದಲ್ಲಿ ಈ ಊರಿನಲ್ಲಿರುವ ಸುಂಡೆಕೆರೆಯ ಸ್ಟೇಟ್ ಕಾಫಿಪ್ಲಾಂಟರ್ ಮ|| ಬೇಡಚವಳ್ಳಿ ಸಣ್ಣೇಗೌಡರೆಂಬುವರು ತಮ್ಮ ಮನೆಯಲ್ಲಿ ಒಂದು ತಿಂಗಳಿನಿಂದಲೂ, ಪ್ರತಿದಿನವೂ ಬಡಬಗ್ಗರಿಗೂ ಬಾಯಿಲೆಯವರಿಗೂ ರವೇಗಂಜಿ ಮತ್ತು ಅಕ್ಕಿಯ ಗಂಜಿಯನ್ನು ಬೇರೆ ಬೇರೆ ತಯಾರ್ಮಾಡಿಸಿ ಅನೇಕ ಜನಗಳಿಗೆ ಕೊಡಿಸುತ್ತಾ ಇರುವದರಿಂದ ಬಹಳ ಬಡವರಿಗೂ ಬಾಯಿಲೆ ಇರತಕ್ಕ ಬಡಜನಗಳಿಗೂ ತುಂಬಾ ಅನುಕೂಲವಾಗಿದೆ. ಅಲ್ಲದೆ ಇಲ್ಲಿಗೆ ಒಂದು ಒಂದೂವರೆ ಮೈಲಿ ಫಾಸಲೆ ಇರುವ ಬಾಳೆಗದ್ದೆ, ಕೊಲ್ಲಹಳ್ಳಿ, ವಗೈರೆ ಗ್ರಾಮಗಳಿಂದಲೂ ಸಹಾ ಜನಗಳು ಬಂದು ತೆಗೆದುಕೊಂಡು ಹೋಗಿ ಇದರಿಂದಲೇ ಅನೇಕರು ಪ್ರಾಣವನ್ನ ಉಳಿಸಿಕೊಂಡಿರುತ್ತಾರೆ. ಅಲ್ಲದೆ ಈ ರೀತಿಯಾಗಿ ಸುಮಾರು ನೂರಾರು ಮಂದಿ ಜನಗಳು ಪ್ರತಿನಿತ್ಯವೂ ಬಂದಾಗ್ಯೂ ಮ|| ರಾ|| ಸಣ್ಣೇಗೌಡರವರು ಅತ್ಯಂತ ಉದಾರಮನಸ್ಸಿನಿಂದ ಎದುರಿಗೆ ನಿಂತುಕೊಂಡು ಜನಗಳ ಬಾಯಿಲೆ ವಗೈರೆ ಸ್ಥಿತಿಗಳನ್ನ ವಿಚಾರಿಸುತ್ತ ಅವರುಗಳಿಗೆ ಧೈರ್ಯವೂ, ಸಮಾಧಾನವೂ, ಸಹಾ ಹೇಳಿ ಗಂಜಿ ಕೊಡಿಸುತ್ತಾ ಇರುವದು ಬಹಳ ಸ್ತೋತ್ರಾರ್ಹವಾಗಿರುತ್ತದೆ. ಇಲ್ಲಿನ ಇನ್ನೂ ಅನೇಕ ದೊಡ್ಡ ಮನುಷ್ಯರುಗಳು ಇಂಥಾ ಕಷ್ಟಕಾಲದಲ್ಲಿ ಧರ್ಮಾರ್ಥವಾದ ಕೆಲಸಗಳನ್ನು ನಡಿಸುವುದಕ್ಕೆ ಇದು ಮೇಲ್ಪಂಗ್ತಿಯಾಗಿರುತ್ತದೆ. 3.4 ದಿವಸಗಳಿಂದ 3.4 ಹದ ಮಳೆಯಾಗಿ ಗದ್ದೆ ಹೊಲಗಳಿಗೆ ಕೊಂಚ ಅನುಕೂಲವಾಗಿರುತ್ತದೆ.

ಪ್ರತ್ಯಕ್ಷದರ್ಶಿ.

ವೀರಶೈವ ಸಮಾಜಕ್ಕೆ ಉಂಟಾದ ನಷ್ಟ.

ಅಯ್ಯಾ ಸಂಪಾದಕರೆ, ಸಮಾಜ ಸೇವೆಯಲ್ಲಿ ತುಂಬಾ ನಿರತರಾಗಿದ್ದ ಹಾಸನದ ಸಾಹುಕಾರ್ ಶ್ರೀಕಂಠಪ್ಪನವರು ಇದೇ ತಿಂಗಳು ೨ನೇಯ ತಾರೀಖು ಶನಿವಾರ ರಾತ್ರಿ ಸುಮಾರು 9 ಗಂಟೆಯ ಸಮಯದಲ್ಲಿ ಇನ್‌ಫ್ಲುಯೆಂಜಾ ಎಂಬ ಜ್ವರದಿಂದ ಪೀಡಿತರಾಗಿ ಶಿವಾಧೀನರಾದರೆಂದು ತಿಳಿಸಲು ಪರಮ ವಿಷಾದ ಜನಕವಾಗಿದೆ. ಇವರು ನಮ್ಮ ಹಾಸನದ ಡಿಸ್ಟ್ರಿಕ್ಟಿಗೆ ತುಂಬಾ ಗೌರವ ಪ್ರತಿಷ್ಠೆಗಳನ್ನು ಪಡೆದುಕೊಂಡವರೂ, ಸದ್ವಂಶೀಕರೂ, ಆಗರ್ಭ ಶ್ರೀವಂತರೂ, ನಿಗರ್ವಶಿರೋಮಣಿಗಳೂ, ಸತ್ಯಸಂಧರೂ, ಲೋಕ ಹಿತೈಷಿಗಳೂ, ದಯಾಳುಗಳೂ, ಬಡಬಗ್ಗರಿಗೆ ಆಶ್ರಿತರೂ, ಆಗಿದ್ದರು. ವೀರಶೈವ ಸಮಾಜಕ್ಕಂತೂ ಅನೇಕ ರೂಪದಿಂದ ಧನ ಸಹಾಯವನ್ನು ಮಾಡುತ್ತಿದ್ದರಲ್ಲದೆ ಹಾಸನದಲ್ಲಿ ಒಂದು ವೀರಶೈವ ವಿದ್ಯಾರ್ಥಿಗಳ ನಿಲಯವನ್ನು ಮತ್ತು ಒಂದು ಅನಾಥಾಲಯವನ್ನು ಸ್ಥಾಪಿಸಲು ಶಕ್ತಿಮೀರಿ ಸಹಾಯಮಾಡಲು ಒಪ್ಪಿದರು. ಮತ್ತು ಈ ಕಾರ್ಯಕ್ಕಾಗಿ ಸ್ಥಾಪಿಸಿದ ಸಂಘದಲ್ಲಿ ಮುಖವರ್ಜಿಯಿಂದ ಕೆಲಸವನ್ನು ಮಾಡುತ್ತಿದ್ದರು. ಇವುಗಳಲ್ಲದೆ ಕಳೆದ ಸಂವತ್ಸರದಲ್ಲಿ ದಾವಣಗೆರೆಯಲ್ಲಿ ನಡೆದ ೮ ನೇಯ ವೀರಶೈವ ಮಹಾಸಭೆಯಲ್ಲಿ ಸಭೆಯು ವರ್ಷಂಪ್ರತಿಯಲ್ಲಿಯೂ ಅವಿಚ್ಛಿನ್ನವಾಗಿ ನಡೆಯುವಂತೆ ಏರ್ಪಾಟುಮಾಡಿದ ಧನರಾಸಿಗೆ ಇವರು ಉದಾರಮನಸ್ಸಿನಿಂದ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ವಾಗ್ದಾನಮಾಡಿದ್ದಲ್ಲದೆ ಆ ಕೂಡಲೇ ಹಣವನ್ನು ನಗದಾಗಿ ಪಾವತಿ ಮಾಡಿಬಿಟ್ಟರು. ಚಿತ್ರದುರ್ಗದಲ್ಲಿರುವ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದಲ್ಲಿ ಒಂದು ಸಣ್ಣ ಕಟ್ಟಡವನ್ನು ಧರ್ಮಾರ್ಥವಾಗಿ ಕಟ್ಟಲು ವಾಗ್ದಾನಮಾಡಿ ದ್ರವ್ಯ ಸಹಾಯ ಮಾಡಿದರು. ಸಮಾಜಸೇವೆಯನ್ನು ಇನ್ನು ಅಧಿಕವಾಗಿ ಮಾಡಬೇಕೆಂದು ಆಲೋಚನೆ ಇಟ್ಟುಕೊಂಡಿದ್ದರು. ವೀರಶೈವ ಸಮಾಜವೆಂಬ ಮುತ್ತಿನ ಸರಕ್ಕೆ ಆಣಿಯಾದ ಮುತ್ತು ಎಂದು ಎನಿಸಲ್ಪಟ್ಟಿದ್ದ ಇವರು ಅಕಾಲ ಮರಣವನ್ನು ಹೊಂದಿ ಶಿವನ ಸಭೆಯನ್ನಲಂಕರಿಸಿದ್ದಕ್ಕಾಗಿ ಇದಿ ಸಮಾಜಕ್ಕೆ ದೊಡ್ಡ ನಷ್ಟವಾದೇತಾಯಿತು. ಇವರಿಗೆ ಸುಮಾರು 27-28 ವರ್ಷಗಳಾಗಿದ್ದವು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಷ್ಟು ಧರ್ಮಬುದ್ಧಿಯು ಇರುವುದೆಂದರೆ ಸಾಮಾನ್ಯವಿಷಯವಲ್ಲ. ಪೌರ ಮತ್ತು ಸಮಾಜಿಕ ಕಾರ್ಯಗಳಲ್ಲಿ ತುಂಬಾ ಮುಖವರ್ಜಿಯನ್ನು ವಹಿಸಿ ಕೆಲಸವನ್ನು ಮಾಡುವಂಥಾವರಾಗಿದ್ದರು. ಮುನಸಿಪಲ್ ಕೌನ್ಸಿಲರೂ ಆಗಿದ್ದರು. ಹಾಸನದ ಟೌನಿನಲ್ಲಿ ಜುಬಿಲಿಹಾಲು ಬಳಿ ಕಟ್ಟಿರುವ ಕಾರೋನೇಷನ್ ಹಾಲಿಗೆ ಎಲ್ಲರಿಗಿಂತಲೂ ಹೆಚ್ಚಾಗಿ ಚಂದಾ ಹಣವನ್ನು ಕೊಟ್ಟಿದ್ದಾಗಿ ತಿಳಿಯಬರುತ್ತೆ. ಪ್ರತಿ ಒಂದು ಪೌರ ಮತ್ತು ಸಮಾಜಿಕ ಕಾರ್ಯಗಳಿಗೂ ತಾವೇ ಮುಂದುವರಿದು ಬಂದು ಕೆಲಸಕಾರ್ಯಗಳನ್ನು ಮನಃಪೂರ್ವಕವಾಗಿ ಮಾಡುತ್ತಿದ್ದರು. ಇಂತಹವರ ಮರಣದಿಂದ ನಮ್ಮ ಡಿಸ್ಟ್ರಿಕ್ಟಿಗೇ ಒಂದು ದೊಡ್ಡ ನಷ್ಟವಾಯಿತೆಂದು ಹೇಳಲು ಸಂದೇಹವೇ ಇಲ್ಲ. ಇವರಿಗೆ ಸಣ್ಣ ಪುಟ್ಟ ಎರಡು ಹೆಣ್ಣುಮಕ್ಕಳೂ, 8.9 ವರ್ಷ ವಯಸ್ಸಿನ ಒಬ್ಬ ತಮ್ಮನೂ ಇರುತ್ತಾರೆ. "ಎಡಪಿದಕಾಲೇ ಎಡವುವುದು" ಎಂಬಂತೆ ಈ ಸಮಯದಲ್ಲಿಯೇ ಇವರ ಪತ್ನಿಯವರಿಗೂ ದೇಹಾಲಸ್ಯ ಉಂಟಾಗಿರುತ್ತದೆ. ಪರಮೇಶ್ವರನು ಇವರಿಗೆ ಶೀಘ್ರವಾಗಿಯೇ ಆಯುರಾರೋಗ್ಯವನ್ನಿತ್ತು ಸಣ್ಣ ಪುಟ್ಟ ಮಕ್ಕಳಿಗೆ ಆಶ್ರಯವಾಗಿರುವಂತೆ ಮಾಡಿ ಶ್ರೀಕಂಠಪ್ಪನವರ ವಂಶವನ್ನು ಎಂದಿನಂತೆ ಅಭಿವೃದ್ಧಿಗೆ ತರಲೆಂದು ಹಾರೈಸುತ್ತೇನೆ.

ಅಭಿಮಾನಿ.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಕೋಣ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಬಾಕಿ, ಪರ್ಮ, ಮುಣುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
47 3. ಇರುಳಪ್ಪನಬೀದಿ, ಮದರಾಸು.

ರಾ|| ಬ|| ನಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

12 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಕಾರಾಕಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

೧೯೧೮ ನೆಯ ಇಸವಿ ನವಂಬರ್ ತಾ|| ೧೭ ರಿಂದ ೧೯೧೮ ನೆಯ ನವಂಬರ್ ತಾ|| ೨೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಕಾರ್ತೀಕ ಶು|| ಚತುರ್ದಶಿಯಿಂದ ಕಾರ್ತೀಕ ಬ|| ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಮಾಸ
17	[1] ಭಾನು	ಚತುದ	23-44	ಭರಣಿ	53-49	2
18	[2] ಸೋಮ	ಪೌರ್ಣ	18-1	ಕೃತ್ತಿಕ	50-0	3
19	[3] ಮಂಗಳ	ಪಾಡ್ಯ	12-47	ರೋಹಿಣಿ	46-45	4
20	ಬುಧ	ಬಿದಿಗೆ	8-11	ಮೃಗಶಿರ	44-14	5
21	ಗುರು	ತದಿಗೆ	4-20	ಆರಿದ್ರಾ	42-39	6
22	ಶುಕ್ರ	ಚೌತಿ	1-30	ಪುನರ	57-35	7
23	ಶನಿ	ಷಷ್ಠಿ	57-49	ಪುಷ್ಯ	42-40	8

(1) ಜಯಲಕ್ಷ್ಮಮ್ಮಣ್ಣಿಯವರ ಕುಮಾರೀಯರ ವರ್ಧಂತಿ. (2) ಕಾರ್ತೀಕಸೋಮವಾರ, ಶಿವದೀಪ, ವಿಷ್ಣುದೀಪ. (3) ನಂಜನಗೂಡಿನಲ್ಲಿ ಶ್ರೀ ಕಂಠೇಶ್ವರಸ್ವಾಮೀ ತ್ರಿರಥ.

ಮೈಸೂರ್: ವೈ. ವಿರುಪಾಕ್ಷಯ್ಯನವರಿಂದ [illegible] ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವಿನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ನವಂಬರ್ ತಾರೀಖು ೧೭ ನೆಯ ಭಾನುವಾರ. (ಸಂಚಿಕೆ ೪೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಥಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ದೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸವಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹುವ್ವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಉಡ್ಡಿಕೆ 1, ಗಡಿಯಾರದ ಉಣ್ಣೆ ರುಮಾಲು 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಸೇರಾಯಿಲ್ ಸೀಸೆ 1, ವಜ್ರದ ಶರಟು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ.,
46 ೩, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣತೋರುವದು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ, ಜಡ್ಡು, ಗುಪ್ತವ್ರಣಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಅಫೀಸ
28 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ಫುಕಟ! ಇನ್‌ಫ್ಲುಯೆಂಝಾ ಪತ್ರಿಕೆ-ಫುಕಟ!!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲ್ಯು ಎಂಝಾ ಪಿಲ್ಸ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಮಲಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ಬೆ-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚನವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ "ಇನ್‌ಫ್ಲ್ಯುಎಂಝಾ ಪತ್ರಿಕೆ" ಯನ್ನು ಫುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
48 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 49

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಹುಮಾಶಿಗೂ ವೈದ್ಯರ ಸಮಯವನ್ನು ಕಾದು ನೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ನವಂಬರ್ ತಾ|| ೨೪ ನೆಯ ಭಾನುವಾರ.

ಆಹಾರ್ಯಪದಾರ್ಥಗಳು ಮತ್ತೂ ಸರ್ಕಾರವೂ.

ತಿಂಬುಂಬುವ ಪದಾರ್ಥಗಳಿಗೆ ಕ್ಷಾಮವು ಬಂದಿರುವುದರಿಂದ ಈಗ ಜಗತ್ತೇ ಕಷ್ಟವನ್ನನುಭವಿಸುತ್ತಿದೆ. ಧನಸಂಪತ್ತಿಯಿಂದ ತೂಗಾಡುತ್ತಿರುವ ಪಶ್ಚಿಮಖಂಡವೇ ಆಹಾರ್ಯದ ಕೊರತೆಯಿಂದ ತಲ್ಲಣಿಸಿಹೋಗಿರುವಾಗ ಈ ಬಡ ಭರತಖಂಡದ ಪಾಡನ್ನು ಹೇಳುವುದೇನು? ತಮ್ಮ ದೇಶದ ಆಹಾರ್ಯದುರ್ಭಿಕ್ಷದ ನಿವಾರಣೆಗಾಗಿ ಕೃಷಿಸಮೃದ್ಧವಾದುದೆಂದು ಭರತಖಂಡದ ಕಡೆಗೆ ಬೆರಲನ್ನು ತೋರಿಸಿ ಲಂಡನ್ ಟೈಮ್ಸ್‌ಪತ್ರಿಕೆಯು ಸ್ವದೇಶೀಯರನ್ನು ಸಮಾಧಾನಪಡಿಸುವುದಕ್ಕೆ ತೊಡಗಿರುವುದು "ತರಗನ್ನು ತಿನ್ನುವವನ ಮನೆಗೆ ಹಪ್ಪಳವನ್ನು ಕೇಳುವುದಕ್ಕೆ ಹೋದ"ನೆಂಬ ಗಾಥೆಗೆ ಸಮನಾಗಿರುತ್ತದೆ. ಭರತಖಂಡವೆಲ್ಲವೂ ಈಗ ಆಹಾರ್ಯಕ್ಷಾಮದಿಂದ ತತ್ತರಿಸುತ್ತಿರುವಾಗ ನಮ್ಮ ಮೈಸೂರು ದೇಶವೊಂದು ಮಾತ್ರ ಆ ಭಯದಿಂದ ನಿರ್ಮುಕ್ತವಾಗಿ ಬಾಳುವುದು ಸಾಧ್ಯವೆ? ಲೋಕವೆಲ್ಲಾ ಅನುಭವಿಸುತ್ತಿರುವ ಕಷ್ಟವನ್ನು ನಾವೂ ಕೂಡ "ವಿಪದಿಧೈರ್ಯಂ" ಎಂಬ ನೀತಿಯಂತೆ ಗಟ್ಟಿಮನಸ್ಸಿನಿಂದ ಸ್ವಲ್ಪ ಕಾಲದವರೆಗೆ ತಾಳಿಕೊಳ್ಳಲೇಬೇಕಾಗಿದೆ. ಈಗಣ ವಿಷಮಕಾಲವು ಪಾಲ್ಯಪಾಲಕರ ನಿಜಸತ್ವವನ್ನು ಹೊರಹಾಕಲು ಸಾಧಕವಾಗಿ ಪರಿಣಮಿಸಿರುತ್ತದೆ.

ದೇಶದ ಕಷ್ಟಸುಖಗಳಿಗೆ ಪ್ರಭುಗಳಿಗಿಂತಲೂ ಪ್ರಜೆಗಳೇ ಹೆಚ್ಚಾಗಿ ಬಾಧ್ಯರೆಂಬ ಭಾವವು ಈಗ ಪ್ರಪಂಚದಲ್ಲೆಲ್ಲಾ ಪ್ರಬಲಿಸುತ್ತಲಿದೆ. ಇದರಿಂದಲೇ ಅನೇಕ ಪ್ರಭುತ್ವ ಪ್ರಳಯಗಳು ಈಗ ನಡೆಯುತ್ತಿವೆ. ದೇಶೋದ್ಧಾರಕ್ಕಾಗಿಯೇ ಪಶ್ಚಿಮದೇಶದ ಆಗರ್ಭ ಶ್ರೀಮಂತರುಗಳೆಲ್ಲಾ ಸುಖಭೋಗಗಳನ್ನೂ, ಮೃಷ್ಟಾನ್ನಭೋಜನಗಳನ್ನೂ, ವಿಹಾರವೈಭವಗಳನ್ನೂ ತೊರೆದುಬಿಟ್ಟು ಕಡೆಗೆ ದೇಹಪ್ರಾಣಗಳ ಅಭಿಮಾನವನ್ನೂ ಮೂಲೆಗೊತ್ತರಿಸಿ ಹೇಗೆ ಇಷ್ಟಾರ್ಥಸಾಧನೆಯನ್ನು ಮಾಡಿಕೊಂಡರೆಂಬುದನ್ನು ಮಹಾಯುದ್ಧಕಾಲದ ಅನುಭವದಿಂದಲೂ ಪರಿಣಾಮದಿಂದಲೂ ತಿಳಿದುಕೊಳ್ಳಬಹುದಾಗಿದೆ. ಕರ್ಣ, ಶಿಬಿ, ಬಲಿ ಮೊದಲಾದ ಮಹಾತ್ಯಾಗಿಗಳೂ ಬುದ್ಧದೇವನೇ ಮೊದಲಾದ ಪ್ರಾಣಿದಯಾಪರರೂ ಅವತರಿಸಿದ್ದ ಭರತಖಂಡದಲ್ಲಿ ಜನ್ಮಿಸಿರುವ ಪ್ರಜೆಗಳು ತಮ್ಮ ಅನೂಚಾನವಾದ ಪರಹಿತಗುಣ ವಿಜೃಂಭಣೆಯನ್ನೆಲ್ಲಾ ಗ್ರಂಥಗಳಲ್ಲಿ ಮಾತ್ರವೇ ಅಲಂಕಾರವಾಗಿರುವಂತೆ ಮಾಡಿಡದೆ ಪಾಶ್ಚಾತ್ಯರಷ್ಟು ಸ್ವಾರ್ಥತ್ಯಾಗಿಗಳಲ್ಲದೆ ಹೋದರೂ ಯತ್ಕಿಂಚಿತ್ತಾದರೂ ಪರಹಿತಾಚರಣ ಸಹೋದರ ಪ್ರೀತಿಗಳನ್ನು ಹೊಂದಿರಬೇಕಲ್ಲವೇ?

ಅನೇಕ ವಿಧವಾದ ಕಾರಣಗಳಿಂದ ಆಹಾರ್ಯವಸ್ತುಗಳ ಬೆಲೆಯು ಏರಿ, ಅಲ್ಪಸಂಪಾದನೆಯುಳ್ಳ ಬಹು ಜನರು ದಿನಕ್ಕೆ ೧ ಹೊತ್ತು ೩ ದಿನಕ್ಕೆ ಒಂದು ಹೊತ್ತು ಆಹಾರವನ್ನು ತೆಗೆದುಕೊಳ್ಳುತ್ತಿರುವರೆಂಬ ಭಯಂಕರ ವಾರ್ತೆಯನ್ನು ಪ್ರತಿದಿನವೂ ನಾವು ಕೇಳುತ್ತಿರುವೆವು. ಅದನ್ನು ಕಂಡರೂ ಕಾಣದಂತೆ ಕೇಳಿದರೂ ಕೇಳದಂತೆ ಉಪಪನ್ನರಾದ ಪ್ರಜೆಗಳನೇಕರು ಸ್ವಾರ್ಥಲೋಲುಪ್ತಿಯಲ್ಲೇ ಮುಳುಗಿರುವರೆಂಬುದನ್ನೂ ಕೇಳುತ್ತಿರುವೆವು. ಪ್ರಜಾಸಾಮಾನ್ಯದಲ್ಲಿ ಇಂಥ ನಡೆಯೇ ಹೆಚ್ಚಾಗುತ್ತಿರುವುದನ್ನು ಪ್ರಭುತ್ವದವರು ಎಲ್ಲಿಯವರೆಗೂ ನೋಡಿಕೊಂಡು ಸುಮ್ಮನಿರುವರು? ಉಪಪನ್ನರಾದ ರೈತರೂ ವರ್ತಕರೂ ಲಾಭೈಕದೃಷ್ಟಿಯನ್ನಿಡದೆ ಇಂಥ ವಿಷಮಕಾಲದಲ್ಲಿ ವಿಪನ್ನಪ್ರಜೆಗಳ ಕಷ್ಟನಿವಾರಣೆಗೆ ಸಾಧ್ಯವಾದ ಸಾಹಾಯ್ಯಗಳನ್ನು ಮಾಡುವುದು ಧರ್ಮವೆಂದು ಅವರು ಎಷ್ಟೋ ವಿಧದಿಂದ ಹೇಳಿ ಎಚ್ಚರಿಸಿದರೂ ಪ್ರಯೋಜನವಾಗಲಿಲ್ಲ. ನಾವು ಧಾನ್ಯಗಳನ್ನು ಒದಗಿಸಿಕೊಡುತ್ತೇವೆ; ನೀವು ಲಾಭದೃಷ್ಟಿಯನ್ನು ಬಿಟ್ಟು ಮಾರಿ ಪ್ರಜೆಗಳಿಗನುಕೂಲಪಡಿಸಿರೆಂದು ಸರ್ಕಾರದವರು ಏರ್ಪಡಿಸಿದರು. ಅದನ್ನೂ ಇವರು ನೆಟ್ಟಗೆ ನೆರವೇರಗೊಡಲಿಲ್ಲ. ಕಡೆಗೆ ಪ್ರಜಾಸೇವೆಯೇ ಪ್ರಭುತ್ವದ ಮುಖ್ಯ ಕರ್ತವ್ಯವೆಂಬುದನ್ನರಿತ ಸರ್ಕಾರದವರು ದೇಶವನ್ನೆಲ್ಲಾ ತಮ್ಮ ಒಂದು ಕುಟುಂಬದಂತೆ ಕಂಡು ವಿಪತ್ಸಮುದ್ರದಿಂದ ಉದ್ಧರಿಸಲು ನಡುಕಟ್ಟಿ ನಿಂತರು. ಈ ಪ್ರಯತ್ನದಲ್ಲಿ ಕಳೆದ ೨-೩ ತಿಂಗಳಿಂದಲೂ ನಮ್ಮ ಪ್ರಜಾಪ್ರಿಯ ಪ್ರಭುತ್ವದವರು ಎಷ್ಟು ನಿಶಿತವಾದ ಸಾಹಸಗಳನ್ನೂ ಏರ್ಪಾಟುಗಳನ್ನೂ ಮಾಡುತ್ತಿರುವರೆಂಬುದನ್ನು ಸರ್ಕಾರಿ ಪ್ರಕಟನೆಗಳಿಂದಲೂ ಊರೂರುಗಳಲ್ಲಿ ಮಾಡಿರುವ ಏರ್ಪಾಟುಗಳಿಂದಲೂ ಸರ್ವರೂ ತಿಳಿದೇ ಇರುತ್ತಾರೆ. ಆದರೆ ದೇಶದ ಸಕಲ ಪ್ರಜೆಗಳಿಗೂ ಪ್ರಭುತ್ವದವರೇ ಪಡಿಯನ್ನು ನಡೆಯಿಸುವುದೆಂದರೆ ಸಾಧ್ಯವೆ? ಅದು ನ್ಯೂನಾತಿರೇಕವಿಲ್ಲದೆ ನಡೆದೀತೆ? ಮೇಲ್ಪಟ್ಟ ಉದ್ಯೋಗಿಗಳಿಗೆ ಇರುವಂಥ ದೇಶಾಭಿಮಾನವೂ ನಿಸ್ಪೃಹತೆಯೂ ಸಣ್ಣ ಉದ್ಯೋಗಿಗಳಿಗೆಲ್ಲಾ ಇದ್ದೀತೆ? ಸರ್ಕಾರದವರಿಗೆ ಈ ಪಡಿ ಅಳೆಯುವ ಕಾರ್ಯವೇ ದೊಡ್ಡದಾಗಿ ತಗುಲಿಬಿದ್ದರೆ ಉಳಿದ ನಿತ್ಯಗಟ್ಟಲೆಯ ಅವರ ಕಾರ್ಯಗಳ ಗತಿಯೆಲ್ಲಾ ಏನಾಗಬೇಕು? ಇದನ್ನೆಲ್ಲಾ ಪರ್ಯಾಲೋಚಿಸಬೇಡವೆ? ನಮಗೋಸ್ಕರಲೇ ಇರುವ ಸರ್ಕಾರದ ಆವಶ್ಯಕ ಕಾರ್ಯಗಳೆಲ್ಲಾ ಮೂಲೆಗೆ ಬಿದ್ದರೆ ಅದರ ಅನರ್ಥವನ್ನು ಪ್ರಜೆಗಳಾದ ನಾವೇ ಅನುಭವಿಸಬೇಕಲ್ಲವೆ? ಹೆಚ್ಚಾಗಿ ದವಸಗಳನ್ನು ಬೆಳೆದಿರುವ ರೈತರುಗಳು ತಮಗೆ ಬೇಕಾದಷ್ಟನ್ನಿಟ್ಟುಕೊಂಡು ಉಳಿದುದನ್ನು ನ್ಯಾಯವಾದ ಬೆಲೆಗೆ ಸ್ವದೇಶೀಯರ ಉಪಯೋಗಕ್ಕಾಗಿಯೇ ಮಾರಿಬಿಡುವುದಕ್ಕೂ, ಅದನ್ನು ಕೊಂಡ ವರ್ತಕರು ಸ್ವಲಾಭದ ದೃಷ್ಟಿಯಿಂದ ಪರದೇಶಗಳವರಿಗೆ ಹೆಚ್ಚು ಬೆಲೆಗೆ ಮಾರದೆ ಅಲ್ಪಲಾಭದಿಂದ ಸ್ವದೇಶೀಯರಿಗೇ ಮಾರುವುದಕ್ಕೂ ಏರ್ಪಡಿಸಿಕೊಂಡಿದ್ದರೆ ಅವರುಗಳಿಗೆ ಇಹಲೋಕದಲ್ಲಿ ಘನತೆಯೂ ಕೀರ್ತಿಯೂ ಪರಗತಿಸಾಧಕವಾದ ಪುಣ್ಯವೂ ಲಭಿಸುತ್ತಿರಲಿಲ್ಲವೆ? ಅಷ್ಟನ್ನು ಅವರು ಮಾಡಲಾರದೆ ಹೋದುದರಿಂದ ಸರ್ಕಾರದವರು ದೇಶರಕ್ಷಕ ಶಾಸನದ ಆಧಾರದ ಮೇಲೆ ಹೆಚ್ಚು ದವಸಗಳನ್ನಿಟ್ಟುಕೊಂಡಿರುವವರಿಂದ ಅವುಗಳನ್ನು ವಶಪಡಿಸಿಕೊಳ್ಳುವುದಕ್ಕೂ ಪದಾರ್ಥಗಳ ಬೆಲೆಯನ್ನು ನಿಗದಿಮಾಡುವುದಕ್ಕೂ ಸ್ವಂತದ ಅಂಗಡಿಗಳನ್ನಿಡಿಸಿ ಮಾರಿಸುವುದಕ್ಕೂ ಅವಶ್ಯಕತೆಯುಂಟಾಯಿತು. ಇದನ್ನು ಅವರು ಮಾಡದಿದ್ದರೆ ಇಷ್ಟುಹೊತ್ತಿಗೆ ದೇಶದಲ್ಲೆಲ್ಲಾ ಎಷ್ಟೋ ಬೊಬ್ಬೆಯೆದ್ದು ವಿಪರೀತಾನರ್ಥಗಳನ್ನು ಉಪಪನ್ನರಾದ ರೈತರೂ ವರ್ತಕರೂ ಮೊದಲು ಅನುಭವಿಸಬೇಕಾಗುತ್ತಿದ್ದಿತು. ಕಷ್ಟಕಾಲದಲ್ಲಿ ಸರ್ಕಾರದವರು ಪ್ರಜೆಗಳಿಗೆ ಅಭಯದಾನಮಾಡಿದುದಕ್ಕಾಗಿ ಪ್ರಜೆಗಳು ಎಷ್ಟು ಕೃತಜ್ಞರಾದರೂ ತೀರದು.

ಸರ್ಕಾರದವರು ಈಗ ಎತ್ತಿಸಿರುವ ಲೆಕ್ಕದ ಪ್ರಕಾರ ಹಿಂದಣ ವರ್ಷದ ಧಾನ್ಯವು ಸಂಸ್ಥಾನದೊಳಗೆಲ್ಲಾ ೫ ಲಕ್ಷ ಟನ್ನಿನಷ್ಟೂ ಈಗ ಬೆಳೆದು ಕೈಸೇರುವುದಕ್ಕಿರುವ ಧಾನ್ಯವು ೩ ಲಕ್ಷ ಟನ್ನಿನಷ್ಟೂ ಆಗುವುದೆಂದೂ ಗೊತ್ತಾಗುತ್ತದೆ. ನಮ್ಮ ಸಂಸ್ಥಾನಕ್ಕೆಲ್ಲಾ ೧೧ ಲಕ್ಷ ಟನ್ನುಗಳ ಧಾನ್ಯವು ವರ್ಷ ೧ಕ್ಕೆ ಬೇಕಾಗುತ್ತದೆ. ಎಂದರೆ ಇನ್ನು ಸಾಲದಿರುವ ೩ ಲಕ್ಷ ಟನ್ನಿನಷ್ಟು ಧಾನ್ಯಗಳನ್ನು ಅವರು ಹೊರಗಣಿಂದ ತರಿಸಿಕೊಳ್ಳಬೇಕಾಗಿರುತ್ತದೆ. ಇದಕ್ಕೂ ಅವರು ಸಿದ್ಧರಾಗಿದ್ದಾರೆ. ಸಿವಿಲ್‌ಸಪ್ಲೈ ಡೈರೆಕ್ಟರು ಫುಡ್‌ಕಂಟ್ರೋಲರು ಮೊದಲಾದ ಅಧಿಕಾರಿಗಳನ್ನು ಈ ಕೆಲಸಕ್ಕಾಗಿಯೇ ಗೊತ್ತುಮಾಡಿರುವುದಲ್ಲದೆ ಡಿ|| ಡೆ|| ಕಮಿಷನರುಗಳು, ಎಕನಾಮಿಕ್ ಸೂಪರಿಂಟೆಂಡೆಂಟರುಗಳು ತಾಲ್ಲೂಕು ಅಧಿಕಾರಿಗಳು ಇವರೆಲ್ಲಾ ಈ ಕಾರ್ಯದಲ್ಲಿ ನಿರತರಾಗಿರುವಂತೆ ಏರ್ಪಾಟುಮಾಡಿರುವರು. ಗೊತ್ತಾದ ಅಧಿಕಾರಿಗಳು ಹೆಚ್ಚಾಗಿ ಧಾನ್ಯಗಳನ್ನು ಸೇರಿಸಿಟ್ಟಿರುವವರಿಗೆ ನೋಟೀಸನ್ನು ಕೊಟ್ಟು ಅವರ ಸಂಸಾರಕ್ಕೆ ವರ್ಷಕ್ಕೆ ಬೇಕಾದಷ್ಟನ್ನು ಬಿಟ್ಟು ಉಳಿದುದನ್ನೆಲ್ಲಾ ನಿಗದಿಯಾದ ಬೆಲೆಕೊಟ್ಟು ಪಂಚಾಯಿತರ ಪ್ರತ್ಯಕ್ಷದಲ್ಲಿ ವಶಪಡಿಸಿಕೊಳ್ಳುವಂತೆ ಏರ್ಪಡಿಸಿರುವರು. ಬೆಂಗಳೂರಿನಲ್ಲಿ ಮುಖ್ಯವಾದ ಉಗ್ರಾಣವನ್ನಿಟ್ಟು ಆಯಾಡಿಸ್ಟ್ರಿಕ್ಟುಗಳಲ್ಲಿ ಬೇರೆ ಬೇರೆ ಉಗ್ರಾಣಗಳನ್ನಿಡಿಸಿ, ಅಲ್ಲಲ್ಲಿ ಜತೆಯಾಗಿ ಸಾಲದೆ ಹೋದಷ್ಟು ಧಾನ್ಯಗಳನ್ನು ಮುಖ್ಯವಾದ ಉಗ್ರಾಣದಿಂದ ಒದಗಿಸುವುದಕ್ಕೆ ಏರ್ಪಾಟುಮಾಡಿರುವರು. ಆಗಾಗಣ ಸ್ಥಿತಿಯನ್ನನುಸರಿಸಿ ನಿಗದಿಮಾಡುವ ಬೆಲೆಗೆ ಅಕ್ಕಿ ರಾಗಿ ಜೋಳಗಳನ್ನು ಮಾರಿಸುವುದಕ್ಕೆ ಏರ್ಪಡಿಸುವರು. ಆಯಾ ಸ್ಥಳದಲ್ಲಿ ಪರಸ್ಪರ ಸಹಾಯಕಸಂಘಗಳಿದ್ದು ಅವರು ಸರ್ಕಾರದಿಂದ ಧಾನ್ಯಗಳನ್ನು ಪಡೆದು ಪ್ರಜೆಗಳಿಗೆ "ಕರಾರ್ವಾಕಾ" ಮಾರುವುದಕ್ಕೆ ಇಷ್ಟಪಟ್ಟರೆ ಅವರ ವಶಕ್ಕೆ ಕೊಡುವರು. ಸತ್ಯಸಂಧತೆಯಿಂದ ಮಾರಾಟಮಾಡಲು ಇಷ್ಟಪಡುವ ಗೌರವಸ್ಥರಾದ ವರ್ತಕರಿಗೂ ಧಾನ್ಯವನ್ನು ಒದಗಿಸಿಕೊಡುವರು. ಅವೆರಡೂ ಅನುಕೂಲಿಸದಿರುವ ಕಡೆಗಳಲ್ಲಿ ಪ್ರಜೆಗಳೇ ಪಂಚಾಯಿತರನ್ನು ಗೊತ್ತುಮಾಡಿ ಅವರ ವಶಕ್ಕೆ ಧಾನ್ಯವನ್ನು ತರಿಸಿಕೊಂಡು ಮಾರಾಟಮಾಡಬಹುದು. ಇವೊಂದೂ ಅನುಕೂಲಿಸದಿದ್ದ ಕಡೆಯಲ್ಲಿ ಸರ್ಕಾರದವರೇ ಮಾರಾಟ ಮಾಡಿಸಬೇಕಾಗುವುದು.

ಪ್ರಜೆಗಳ ಸಹಾಯವಿಲ್ಲದೆ ಸರ್ಕಾರದವರೇ ಇಂಥ ಮಹಾಕಾರ್ಯವನ್ನು ನ್ಯೂನಾತಿರೇಕವಿಲ್ಲದಂತೆ ಈಡೇರಿಸುವುದು ಅಸಾಧ್ಯವಾದ ಕಾರಣದಿಂದಲೇ ಸರ್ಕಾರದವರು ದೇಶದ ಪ್ರಮುಖ ವರ್ತಕರೇ ಮೊದಲಾದ ಪ್ರಜೆಗಳನ್ನು ಬೆಂಗಳೂರಿಗೆ ಬರಮಾಡಿಕೊಂಡು, ದಿವಾನರ ಅಧ್ಯಕ್ಷತೆಯಿಂದ ಸಭೆಗೂಡಿಸಿ, ಇದುವರೆಗೆ ಸರ್ಕಾರದವರು ಮಾಡಿರುವ ಮುಂದೆ ಮಾಡಬೇಕೆಂದಿರುವ ಏರ್ಪಾಟುಗಳನ್ನೂ ಇದಕ್ಕೆ ಪ್ರಜೆಗಳಿಂದ ಆಗಬೇಕಾಗಿರುವ ಒತ್ತಾಸೆಯನ್ನೂ ಕುರಿತು ಸ್ಪಷ್ಟವಾದ ವಿವರಣೆಯಿಂದ ತಿಳಿಯಹೇಳಿದರು. ಪ್ರಜಾಪ್ರಮುಖರು ಈ ಸಂಬಂಧವಾಗಿ ಸಭೆಯಲ್ಲೂ ಪ್ರತ್ಯೇಕವಾಗಿಯೂ ಕೊಟ್ಟ ಅಭಿಪ್ರಾಯವನ್ನು ಸರ್ಕಾರದವರು ಕೇಳಿಕೊಂಡಿರುವರು. ಕೆಲವರು ಈ ವ್ಯಾಪಾರ ಸಂಬಂಧವನ್ನು ಸರ್ಕಾರದವರು ಇಟ್ಟುಕೊಳ್ಳದೆ ಪ್ರಜೆಗಳಿಗೇ ವಹಿಸಿಕೊಡಬೇಕೆಂದು ವಿಜ್ಞಾಪಿಸಿದರೆಂಬುದಾಗಿ ಕೇಳುತ್ತೇವೆ. ಈಗ ಹಾಗೆ ಹೇಳುವುದೂ ಅದನ್ನು ಪ್ರಜೆಗಳೇ ಸ್ವತಂತ್ರಿಸಿ ಸರ್ವತ್ರ ನಡೆಯಿಸುವರೆಂದು ನಂಬುವುದೂ ಸಮಂಜಸವಾಗಿರುವುದಿಲ್ಲ. ಪ್ರಜಾಪ್ರಭುಗಳೀರ್ವರೂ ಸೇರಿ ಕೆಲಸ ಮಾಡದಿದ್ದರೆ ಇಂಥ ಪ್ರಯತ್ನವು ಸಾರ್ಥಕವಾಗುವುದಿಲ್ಲ. ಪ್ರಜೆಗಳು ವಂಚನೆಯಿಲ್ಲದೆ ತಮ್ಮಲ್ಲಿರುವ ಹೆಚ್ಚು ದವಸಗಳನ್ನೆಲ್ಲಾ ಸರ್ಕಾರದವರಿಗೆ ಮಾರುವಲ್ಲಿ ಸಹಾಯಮಾಡುವುದು ಮುಖ್ಯವಾದ ಕರ್ತವ್ಯ. ಅಷ್ಟು ಉದಾರಮತಿಗಳು ಪ್ರಜಾಸಾಮಾನ್ಯರಲ್ಲಿ ವಿರಳರಾಗಿರುವುದರಿಂದ ದಾಕ್ಷಿಣ್ಯಕ್ಕೂ ಲಂಚ ಮೊದಲಾದುವುಗಳಿಗೂ ಅವಕಾಶವಿಲ್ಲದಂತೆ ಗುಳಿಗಳಲ್ಲೂ ಕಣಜಗಳಲ್ಲೂ ದರ್ಪದಿಂದ ನುಗ್ಗಿ ದವಸಗಳನ್ನು ತೆಗೆಯುವಲ್ಲಿ ಸಮರ್ಥರಾದ ಉದ್ಯೋಗಿಗಳನ್ನು ಸರ್ಕಾರದವರು ನಿಯಮಿಸಬೇಕು. ಈ ಕಾರ್ಯವನ್ನು ಸಮರ್ಪಕವಾಗಿ ಸರ್ಕಾರದವರು ನೆರವೇರಿಸಿದರೆ ೧ ವರ್ಷಕ್ಕೆ ಸಾಕಾಗುವಷ್ಟು ಧಾನ್ಯವೆಲ್ಲಾ ನಮ್ಮ ದೇಶದಲ್ಲೇ ದೊರೆಯುವುದು ಅಸಾಧ್ಯವಲ್ಲ. ಈ ಭಾಗಕ್ಕೆ ಸರ್ಕಾರದವರು ಹೆಚ್ಚಾದ ಗಮನವನ್ನು ಕೊಡಬೇಕು. ಹೀಗೆ ಸರ್ಕಾರದವರು ಸೇರಿಸಿಟ್ಟ ಧಾನ್ಯಕ್ಕೆ ನಿಗದಿಯಾದ ಬೆಲೆಯನ್ನು ಗೊತ್ತುಮಾಡಿಕೊಟ್ಟರೆ ಅದನ್ನು ಆಯಾಸ್ಥಳದ ಪ್ರಮುಖಪ್ರಜೆಗಳೂ ಸಂಘಗಳೂ ಸ್ವಾರ್ಥೈಕ ದೃಷ್ಟಿಯನ್ನಿಡದೆ ಸರ್ವಪ್ರಜೆಗಳಿಗೂ ಸಮನಾಗಿ ಮಾರಾಟಮಾಡುವಲ್ಲಿ ಮುತುವರ್ಜಿಯನ್ನು ತೋರಿಸಿದರೆ ಸಾಕು. ಇದೇ ಪ್ರಜೆಗಳು ಈ ಕಾರ್ಯದಲ್ಲಿ ಸರ್ಕಾರಕ್ಕೆ ಮಾಡುವ ಸಾಹಾಯ್ಯವಾಗಿರುತ್ತದೆ. ಇದುವರೆಗೆ ಮಾಡಿರುವ ಕೆಲಕಡೆಯ ಏರ್ಪಾಟಿನಿಂದ ಒಂದೊಂದು ಇಲಾಖೆಗೆ ಒಟ್ಟಾಗಿ ಕಳುಹಿಸಲ್ಪಟ್ಟ ಧಾನ್ಯಗಳನ್ನು ಮುಖ್ಯಮುಖ್ಯೋದ್ಯೋಗಿಗಳು ಪಲ್ಲಗಟ್ಟಲೆಯಾಗಿ ತಾವು ತಾವೇ ಹಂಚಿಕೊಂಡು, ಬಡಬಗ್ಗರಿಗೆ ಸೇರುಗಟ್ಟಲೆ ಹಂಚಿದ ಶಾಸ್ತ್ರವನ್ನು ಮಾಡಿದರೆಂಬುದೇ ಮೊದಲಾದ ನಾನಾ ತೆರದ ದೂರು ಬಂದಿರುತ್ತದೆ. ಇಂಥ ಸಂದರ್ಭಗಳು ಗೊತ್ತಾದರೆ ಕಠಿನ ಶಿಕ್ಷೆಗಳಿಂದ ಅದನ್ನು ಮೂಲೋತ್ಪಾಟನೆ ಮಾಡಲು ಸರ್ಕಾರದವರು ಸಿದ್ಧರಾಗಬೇಕು. ವರ್ತಕರೂ ರೈಲ್ವೆಶಾಖೆಯವರೂ ಧಾನ್ಯಪರಿಶೋಧನೆಗೆ ಪ್ರವರ್ತಿಸಿದ ಉದ್ಯೋಗಿಗಳೂ ಸ್ವಾರ್ಥಕ್ಕೂ ಲಂಚ ಮೊದಲಾದ ದುರಾಶೆಗಳಿಗೆ ಬಲಿಬಿದ್ದರೆ ಕಡುತರವಾದ ಶಿಕ್ಷೆಗಳನ್ನು ಅವರಿಗೆ ವಿಧಿಸಿ ಇತರರಿಗೆಲ್ಲಾ ಬೆಸೆ ಹುಟ್ಟಿಸಬೇಕು.

"ಮುಖ್ಯವಾಗಿ ಪ್ರಜೆಗಳ ಕ್ಷೇಮಾರ್ಥವಾಗಿಯೂ ಜನರ ಪ್ರಾಣರಕ್ಷಣಾರ್ಥವಾಗಿಯೂ ವಿಧಿಸಿರುವ ನಿರ್ಬಂಧಗಳ ವಿಷಯದಲ್ಲಿ ವರ್ತಕಮಂಡಲಿಯವರು ಅಸಮಾಧಾನ ಪಡಕೂಡದು. ನೀವುಗಳು ಶಾಂತಚಿತ್ತರಾಗಿ ಜನಗಳ ಪ್ರತಿನಿಧಿಗಳುಳ್ಳ ಕಮಿಟಿಯಿಂದ ಸಹಾಯಪಡೆಯತಕ್ಕ ಸರಕಾರಿ ಆಫೀಸರುಗಳು ದಿನೇ ದಿನೇ ಕೊಡುವ ಹುಕುಮುಗಳನ್ನು ಜಾರಿಮಾಡೋಣದರಲ್ಲಿ ಮನಃಪೂರ್ವಕವಾಗಿ ಸಹಾಯಮಾಡಬೇಕು. ನಿಮ್ಮ ಕೈಲಾದಮಟ್ಟಿಗೂ ಆಫೀಸರುಗಳಿಗೂ ಕಮಿಟಿಗಳಿಗೂ ಸಹಾಯಮಾಡಬೇಕು. ನಿಮ್ಮ ನಿಮ್ಮ ಟೌನ್ ಮತ್ತು ಗ್ರಾಮಗಳಲ್ಲಿ ಪರಸ್ಪರ ಸಹಾಯ ಮಾಡಿಕೊಳ್ಳಬೇಕು. ಲೆಕ್ಕಗಳೂ ತಖ್ತೆಗಳೂ ಕರಾರುವಾಕ ತಯಾರಾಗುವಂತೆಯೂ ದಾಸ್ತಾನುಗಳನ್ನು ಮರೆಮಾಚದಂತೆಯೂ, ವರ್ತಕರು ಲಾಭದ ಮೇಲೆ ದೃಷ್ಟಿಯಿಡದಂತೆಯೂ ಸಹ ನೋಡಿಕೊಂಡು, ಬಾಕೀ ವಿಷಯಗಳಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಸರಿಯಾದ ಮಾರ್ಗದಲ್ಲಿ ಸರಿಯಾದ ಕಾರ್ಯವನ್ನು ಮಾಡುವರೆಂಬ ನಂಬಿಕೆಯನ್ನಿಡಬೇಕು" ಎಂಬುದಾಗಿ ನಮ್ಮ ದಿವಾನರವರು ತಮ್ಮ ಭಾಷಣದ ಕೊನೆಯಲ್ಲಿ ಅಪ್ಪಣೆಕೊಡಿಸಿರುವುದನ್ನು ಪ್ರತಿಯೊಬ್ಬ ಪ್ರಜೆಯೂ ಸರ್ಕಾರದ ಉದ್ಯೋಗಿಗಳೂ ಸದಾ ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡಿದರೆ, ಶ್ರೀಮನ್ಮಹಾರಾಜರು ಪುತ್ರನಿರ್ವಿಶೇಷವಾದ ಅಭಿಮಾನವನ್ನು ಪ್ರಜೆಗಳ ಮೇಲಿಟ್ಟು ಕನಿಕರದಿಂದ ಮಾಡಿಯೂ ಮಾಡುತ್ತಲೂ ಇರುವ ಈಗಣ ಏರ್ಪಾಟುಗಳೆಲ್ಲಾ ಸಾರ್ಥಕವಾಗಿ, ದೇಶದ ಪ್ರಜೆಗಳು ಅನ್ನಾಭಾವದಿಂದ ಮೃತ್ಯುವಶರಾಗದ ಹಾಗೆ ಆಗುವುದರಲ್ಲಿ ಸಂಶಯವಿಲ್ಲ. ಅಂಥ ಮನೋಭಾವಗಳನ್ನು ಜಗದೀಶ್ವರನು ಸರ್ವ ಪ್ರಜೆಗಳಿಗೂ ಅನುಗ್ರಹಿಸಿ, ತಾತ್ಕಾಲಿಕ ವಿಷಮಸ್ಥಿತಿಯಿಂದ ದೇಶದ ಪ್ರಜೆಗಳನ್ನು ಅಚಿರಕಾಲದಲ್ಲೇ ಪಾರಗಾಣಿಸಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ಸಂಸ್ಥಾನದಲ್ಲಿ ಉಪಾಧ್ಯಾಯರ ಸರ್ಟಿಫಿಕೇಟ್ ಪರೀಕ್ಷೆಗಳು ೧೯೧೯ನೆ ಏಪ್ರಿಲ್ ತಾ|| ೧೬ ರಿಂದ ಆರಂಭಿಸಲ್ಪಡುವುವು.

ಮೈಸೂರು ಬೆಂಗಳೂರುಗಳ ಮಧ್ಯದ ಲೋಹಮಾರ್ಗದ ಆಡಳಿತವು ನಮ್ಮ ಸರ್ಕಾರಕ್ಕೆ ಇಷ್ಟರಲ್ಲೇ ವಹಿಸಿಕೊಡಲ್ಪಡುವುದರಲ್ಲಿದೆ.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಬತ್ತದ ಬೆಲೆಯ ಪರಮಾವಧಿಯು ೧೮೦ ಸೇರಿನ ಕಂಡಗಕ್ಕೆ ೧೪ ರೂ. ಗಳಾಗಿರತಕ್ಕುದೆಂದು ಸರ್ಕಾರದವರು ವಿಧಿಸಿದ್ದಾರೆ.

ಈಗಣ ಆಹಾರ್ಯಧಾನ್ಯಗಳ ತಗ್ಗಿನಿಂದ ಬಡಪ್ರಜೆಗಳು ಆಹಾರವಿಲ್ಲದೆ ಸಾಯುವುದನ್ನು ತಪ್ಪಿಸುವುದಕ್ಕಾಗಿ ಅವಶ್ಯಕವಾಗಿ ಕೋರಿಬಂದೆಡೆಗಳಲ್ಲಿ ರಿಲೀಫ್ ಕೆಲಸಗಳನ್ನು ಆರಂಭಿಸುವುದಕ್ಕೂ ನಮ್ಮ ಸರ್ಕಾರದವರು ಸಿದ್ಧರಾಗಿದ್ದಾರೆ.

ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಇವರು ಬೆಂಗಳೂರು ಮ್ಯುನಿಸಿಪಾಲಿಟಿಯ ಆನರರಿ ಪ್ರೆಸಿಡೆಂಟ್ ಕೆಲಸದ ಜತೆಗೆ ಅಲ್ಲಿಯ ಟ್ರಸ್ಟ್‌ಬೋರ್ಡ್ ಚೇರ್ಮನ್ನರಾಗಿಯೂ ಮಾಡಲ್ಪಟ್ಟಿದ್ದಾರೆ.

ಮರಿಮಲ್ಲಪ್ಪನವರ ಹೈಸ್ಕೂಲಿನ ಹೆಡ್ಮಾಸ್ಟರ್‌ಗಿರಿಗೆ ಹೊಸಬರು ಮುಂದಣ ಡಿಶಂಬರ್ ತಾ|| ೧ರಲ್ಲಿ ಬರುವವರಾಗಿದ್ದಾರೆ. ಕೈಜರರು ರಾಜ್ಯಪರಿತ್ಯಾಗ ಮಾಡಿದ ದಿನವೇ ಮ|| ವೆಂಕಟಕೃಷ್ಣಯ್ಯನವರೂ ಸ್ಕೂಲಿನ ಆಧಿಪತ್ಯಕ್ಕೆ ಪರಿತ್ಯಾಗಪತ್ರವನ್ನು ಬರೆದುಕೊಟ್ಟರೆಂದು ಕೇಳುತ್ತೇವೆ.

ಮುಂದಣ ಲೋವರ್‌ಸೆಕೆಂಡರಿ ಪರೀಕ್ಷೆಗೆ ಅಪ್ಲಿಕೇಷನ್ನುಗಳನ್ನು ಸ್ವಂತವಾಗಿ ಕಳುಹಿಸತಕ್ಕವರು ಡಿಶಂಬರ್ ತಾ|| ೭ ರೊಳಗೆ ಕಟ್ಟಬೇಕು. ಸ್ಕೂಲುಗಳ ಮೂಲಕ ಹೋಗತಕ್ಕ ಅಪ್ಲಿಕೇಷನ್ನುಗಳು ಮುಂದಣ ಜನವರಿ ತಾ|| ೧೦ ರೊಳಗೆ ಎಗ್ಜಾಮಿನೇಷನ್ ಆಫೀಸಿಗೆ ಹೋಗಿ ಸೇರಬೇಕು.

ಕಾಶಿಯಲ್ಲಿ ಇನ್‌ಫ್ಲುಯಂಜಾ ರೋಗದ ಹಾವಳಿಯು ವಿಶೇಷವಾಗಿರುವುದರಿಂದ ಮುಂದಣ ತಿಂಗಳ ಮೊದಲ ವಾರದಲ್ಲಿ ನಡೆಯಬೇಕಾಗಿದ್ದ ವಿಶ್ವವಿದ್ಯಾಲಯದ ಸಭೆಯನ್ನು ಜನವರಿ ಮೂರನೆ ವಾರಕ್ಕೆ ಇಟ್ಟಿದ್ದಾರೆ. ಈ ಕಾರಣದಿಂದ ನಮ್ಮ ಶ್ರೀಮನ್ಮಹಾರಾಜರವರ ಪ್ರಯಾಣವೂ ಪ್ರಕೃತದಲ್ಲಿ ನಿಲ್ಲಿಸಲ್ಪಟ್ಟಿದೆ.

ಬರುವ ವರ್ಷದ ಏಪ್ರಿಲ್ ತಾ|| ೧ರಲ್ಲಿ ನಡೆಯಬೇಕೆಂದು ಗೊತ್ತಾಗಿದ್ದ ಲೋವರ್‌ಸೆಕೆಂಡರಿ, ಅಪ್ಪರ್‌ಸೆಕೆಂಡರಿ, ಕನ್ನಡ ಪಂಡಿತಪರೀಕ್ಷೆ, ಮಾಲ್ವಿಪರೀಕ್ಷೆ, ಪ್ರಾ| ವ್ಯವಸಾಯ ಪರೀಕ್ಷೆ, ಹೊಲಿಗೆ ಪರೀಕ್ಷೆ ಇವುಗಳೆಲ್ಲಾ ಏಪ್ರಿಲ್ ತಾ|| ೨೧ ರಿಂದ ಆರಂಭಿಸಲ್ಪಡುವುವೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಯುದ್ಧವು ಶಾಂತವಾದುದರ ಸಂತೋಷಮಹೋತ್ಸವಕ್ಕಾಗಿ ಮೈಸೂರುಸೀಮೆಯ ಎಲ್ಲಾ ಕೋರ್ಟು ಕಚೇರಿ ಮತ್ತು ಸ್ಕೂಲುಗಳಿಗೆ ಈ ತಾ|| 27 ರಲ್ಲಿ ಕೊಡಲ್ಪಟ್ಟಿದ್ದ ರಜವು ತಪ್ಪಿಸಲ್ಪಟ್ಟು ಬರುವ ಡಿಶಂಬರ್ ತಾ|| 7 ನೆಯ ಶನಿವಾರದ ದಿವಸ ಕೊಡಲ್ಪಟ್ಟಿರುವುದಾಗಿ ಗೆಜೆಟ್ ವಿಶೇಷ ಪ್ರತಿಯಿಂದ ಪ್ರಕಟವಾಗಿದೆ.

ಮೈಸೂರು ರಾಜಧಾನಿಯಲ್ಲಿ ಈಗ ರೂ. ಗೆ ೧೨ ಸೇರು ರಾಗಿಯೂ ೬ ಸೇರು ಅಕ್ಕಿಯೂ ಮಾರಲ್ಪಡುತ್ತಿದೆ. ಈ ಡಿಸ್ಟ್ರಿಕ್ಟಿನಲ್ಲೆಲ್ಲಾ ಅಕ್ಕಿ ರಾಗಿ ಜೋಳಗಳ ಬೆಲೆಯ ಪರಮಾವಧಿಯು ೧ ನೇ ಉತ್ತಮತರದ ರಾಗಿ ರೂ. ಗೆ ೧೨ ಸೇರು, ೨ ನೆ ತರಹ ಅಕ್ಕಿ ರೂ. ಗೆ ೫ ಸೇರು, ಜೋಳ ರೂ. ಗೆ ೧೩ ಸೇರು ಈ ರೀತಿಯಾಗಿರತಕ್ಕದೆಂದು ಸರ್ಕಾರದವರು ನಿಗದಿಮಾಡಿದ್ದಾರೆ. ಯಾವ ವರ್ತಕರೂ ಇದಕ್ಕಿಂತ ಕಡಿಮೆಯಾಗಿ ಮಾರಲಾಗದು.

ಮೈಸೂರು ಪಂಚಮರ ಬೋರ್ಡಿಂಗ್ ಸ್ಕೂಲು ಸೆಂಟ್ರಲ್ ಪಂಚಮ ಬೋರ್ಡಿಂಗ್ ಸ್ಕೂಲಾಗಿ ಮಾಡಲ್ಪಟ್ಟು ಅದರಲ್ಲಿ ಕನ್ನಡದ ಹೈಸ್ಕೂಲು ತರಗತಿಗಳೂ ಇಂಗ್ಲೀಷು ಲೋವರ್‌ಸೆಕೆಂಡರಿ ಪಾಠಗಳೂ ನಡೆಯುವಂತೆ ಏರ್ಪಡಿಸಿರುವುದರ ಜತೆಗೆ ಜೋಡುಗಳನ್ನು ಹೊಲೆಯುವುದು, ನೆಯ್ಯುವುದು, ಮರಗೆಲಸ, ಹೊಲಿಗೆ, ವ್ಯವಸಾಯ, ರೇಷ್ಮೆಬೆಳಸು ಮೊದಲಾದ ಕೈಕಸಬುಗಳನ್ನು ನಿರ್ಬಂಧದಿಂದ ಕಲಿಸುವುದಕ್ಕೂ, ವಿದ್ಯಾರ್ಥಿಗಳ ಪೋಷಣೆಗೆ ಯಥೋಚಿತವಾಗಿ ಪ್ರೋತ್ಸಾಹಧನವನ್ನು ಕೊಡುವುದಕ್ಕೂ ಸರ್ಕಾರದವರು ಏರ್ಪಡಿಸಿದ್ದಾರೆ.

ರಾಜಧಾನಿಯಲ್ಲಿ ಪ್ರತಿ ಕುಟುಂಬಕ್ಕೂ ಆಹಾರ್ಯವಸ್ತುಗಳನ್ನು ಕೊಳ್ಳುವ ಚೀಟಿಗಳನ್ನು ಕೊಡುತ್ತಿದ್ದಾರೆ. ಮ್ಯುನಿಸಿಪಾಲಿಟಿಯವರು ಏರ್ಪಡಿಸಿರುವ ಮಂಡಿಗಳ ಹೊರತು ಉಳಿದಕಡೆ ಅಕ್ಕಿ ರಾಗಿಗಳು ಸಿಕ್ಕುವುದೇ ಇಲ್ಲ. ಮ್ಯು|| ಮಂಡಿಗಳಿಗೆ ತಕ್ಕಷ್ಟು ಧಾನ್ಯಗಳು ಒದಗುವುದಿಲ್ಲ. ಜನರಿಗೆ ಒಂದೊಂದು ದಿನಕ್ಕೆ ಸಾಕಾಗುವಷ್ಟು ಧಾನ್ಯಸಿಕ್ಕುವುದೂ ಪರಮ ಪ್ರಯಾಸವಾಗಿದೆ. ಬತ್ತದ ಸುಗ್ಗಿಯು ಒದಗಿದಬಳಿಕ ಈ ತಾಪತ್ರಯವು ಕಡಿಮೆಯಾಗಬಹುದು. ಈಗ ಮಾತ್ರ ಅನೇಕ ಕುಟುಂಬದವರು ಒಂದೊಂದುದಿನ ನಿರಾಹಾರವನ್ನೇ ಮಾಡಬೇಕಾಗುತ್ತಲಿದೆ.

೯ನೆ ವೀರಶೈವ ಮಹಾಸಭೆಯ ಸಂಬಂಧವಾಗಿ ಬೀರೂರಿನವರು ಕೊಟ್ಟಿರುವ ಪ್ರಕಟನ ಪತ್ರಿಕೆಯನ್ನೂ ಅದರ ಸಂಬಂಧವಾಗಿ ಬಂದಿರುವ ಮತ್ತೊಂದು ಪತ್ರವ್ಯವಹಾರವನ್ನೂ ಬೇರೆಕಡೆ ಮುದ್ರಿಸಿದ್ದೇವೆ. ತಮ್ಮ ಅನಿವಾರ್ಯ ಸಂದರ್ಭಗಳನ್ನು ಸತ್ಕಾರಕ ಸಂಘದವರು ಇಷ್ಟು ತಡವಾಗಿ ಪ್ರಕಟಿಸಿದುದು ಸಮರ್ಪಕವಾಗಿಲ್ಲ. ಬೇರೆಕಡೆಯವರು ಹೊಸದಾಗಿ ಪ್ರಯತ್ನಿಸಿ ಇನ್ನೊಂದು ತಿಂಗಳೊಳಗಾಗಿ ಮಹಾಸಭೆಯನ್ನು ಜರುಗಿಸುವುದು ಅಸಾಧ್ಯವಾದುದರಿಂದಲೂ, ರೋಗದ ಹಾವಳಿಯು ನಿಂತಿರುವುದರಿಂದಲೂ ಧನಾಭಾವದ ತೊಡಕಿಲ್ಲದಿದ್ದರೆ ತಕ್ಕ ಜನಸಹಾಯವನ್ನು ಪಡೆದು ನೆರವೇರಿಸಲು ಈಗಲೂ ಮತ್ತೊಂದುಸಲ ಬೀರೂರಿನ ಮಹಾಜನರು ಪ್ರಯತ್ನಿಸುವುದು ಒಳ್ಳೆಯದು.

ಕನ್ನಡದಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆ ಕೊಟ್ಟಿರುವ ವಿದ್ಯಾರ್ಥಿಗಳು ಮುಂದೆ ಎರಡೇ ವರ್ಷಗಳಲ್ಲಿ ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಓದಿ ಉತ್ತೀರ್ಣರಾಗಲು ಅನುಕೂಲಿಸುವಂತೆ ಸರ್ಕಾರದವರು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಪ್ರತ್ಯೇಕ ತರಗತಿಗಳನ್ನು ಏರ್ಪಡಿಸಿದ್ದಾರೆ. ತಕ್ಕಷ್ಟು ವಿದ್ಯಾರ್ಥಿಗಳು ಸೇರುವುದು ಗೊತ್ತಾದರೆ ಬರುವ ಜನವರಿ ತಿಂಗಳಿಂದಲೇ ಈ ತರಗತಿಗಳು ತೆರೆಯಲ್ಪಡುವುವು. ಸೇರಲಿಷ್ಟವುಳ್ಳ ವಿದ್ಯಾರ್ಥಿಗಳು ಆಯಾ ಸ್ಥಳದ ಸ್ಕೂಲು ಹೆಡ್ಮಾಸ್ಟರುಗಳಿಗೆ ಕೂಡಲೇ ಬರೆದುಕೊಳ್ಳಬೇಕು. ಸ್ಥಳಗಳು—ಚಾಮರಾಜನಗರ, ತುಮಕೂರು, ಚಿಕ್ಕಮಗಳೂರು, ಮೈಸೂರು ಲಕ್ಷ್ಮೀಪುರ, ಹಾಸನ, ತಿಪಟೂರು, ತರೀಕೆರೆ, ಮೂಡಿಗೆರೆ, ಹೊಳೆನರಸೀಪುರ, ನಂಜನಗೂಡು, ಬೆಂಗಳೂರು ಪೇಟೆ, ಕೋಲಾರ, ಚಿಕ್ಕಬಳ್ಳಾಪುರ, ಶಿವಮೊಗ್ಗೆ, ಸಾಗರ, ಚಿತ್ರದುರ್ಗ, ಚೆನ್ನಪಟ್ಟಣ, ದೊಡ್ಡಬಳ್ಳಾಪುರ, ತೀರ್ಥಹಳ್ಳಿ.

ತಾತ್ಕಾಲಿಕ ಸಂಧಿ ನಿಬಂಧನೆಗಳು.

ಪಶ್ಚಿಮರಂಗ.

ತಾ|| ೧೧ನೆ ಸೋಮವಾರ ಮಧ್ಯಾಹ್ನ ೧೧ ಗಂಟೆಗೆ ಭೂವ್ಯೋಮಾಕಾಶಯುದ್ಧಗಳನ್ನು ನಿಲ್ಲಿಸಬೇಕು. ಜರ್ಮನರು ಇದುವರೆಗೆ ಆಕ್ರಮಿಸಿಕೊಂಡಿರುವ ದೇಶಗಳನ್ನೂ ಬೆಲ್ಜಿಯಂ, ಫ್ರಾನ್ಸು, ಆಲ್ಸೆಸ್, ಲೋರೈನು, ಲುಕ್ಸೆಂಬರ್ಗುಗಳನ್ನೂ ಕೂಡಲೇ ಬಿಡಬೇಕು. ೧೪ ದಿನಗಳು ತುಂಬಿದಮೇಲೆ ಆ ಭಾಗಗಳಲ್ಲಿ ಯಾವ ಜರ್ಮನ್ ಸೈನಿಕರಿದ್ದರೂ ಸೆರೆಯಾಳುಗಳಂತೆ ಹಿಡಿಯಲ್ಪಡುವರು. ಜರ್ಮನರು ಬಿಟ್ಟ ದೇಶಭಾಗಗಳನ್ನು ಮಿತ್ರಮಂಡಲಿಯವರೂ ಅಮೇರಿಕಾದವರೂ ಆಕ್ರಮಿಸಿಕೊಳ್ಳುವರು. ಫ್ರಾನ್ಸು ಮೊದಲಾದ ಕಡೆಗಳಿಂದ ಜರ್ಮನರು ಬಲಾತ್ಕಾರದಿಂದ ಹಿಡಿದುಕೊಂಡುಹೋಗಿರುವ ಮತ್ತು ಹೊಣೆಯಾಗಿ ತೆಗೆದುಕೊಂಡುಹೋಗಿರುವ, ಬಂದಿಗಳಲ್ಲಿ ಶಿಕ್ಷಿತರಾಗಿರುವ ಅಥವಾ ವಿಚಾರಣೆಯಲ್ಲಿರುವ ಪ್ರಜೆಗಳನ್ನೆಲ್ಲಾ ೧೪ ದಿನಗಳೊಳಗೆ ಅವರವರ ದೇಶಕ್ಕೆ ಕಳುಹಿಸಿಕೊಡಬೇಕು. ಕೆಟ್ಟುಹೋಗದಿರುವ ೫ ಸಾವಿರ ಫಿರಂಗಿಗಳನ್ನು (ಅವುಗಳಲ್ಲಿ ೨|| ಸಾವಿರ ದೊಡ್ಡಫಿರಂಗಿಗಳು ೨|| ಸಾವಿರ ಚಿಕ್ಕವು) ಸಿಡಿಮದ್ದುಗಳನ್ನು ಪಯೋಗಿಸುವ ೩೦೦೦ ಯಂತ್ರಗಳನ್ನೂ, ೨೦೦೦ ಆಕಾಶವಿಮಾನಗಳನ್ನೂ ಜರ್ಮನರು ಮಿತ್ರಮಂಡಲಿಯವರ ವಶಮಾಡಬೇಕು. ಜರ್ಮನಿದೇಶದಲ್ಲಿ ರೈನ್ ನದಿಯ ಪಶ್ಚಿಮಭಾಗದಲ್ಲಿರುವ ದೇಶವನ್ನು ಜರ್ಮನರು ಬಿಟ್ಟುಬಿಡಬೇಕು. ಅದನ್ನು ಮಿತ್ರಮಂಡಲಿಯವರೂ ಅಮೇರಿಕನ್ನರೂ ಆಕ್ರಮಿಸಿದ ಬಳಿಕ, ಅವರ ಮೇಲ್ವಿಚಾರಣೆಗೊಳಪಟ್ಟು ಸ್ಥಳಾಧಿಕಾರಿಗಳು ಪರಿಪಾಲನೆ ನಡೆಯಿಸಬೇಕು. ಮತ್ತು ಮಿತ್ರಮಂಡಲಿಯವರು ರೈನ್ ನದಿಯ ಪೂರ್ವತೀರದ ಮೇಲಿರುವ ಕೊಲೋನ್ ಕೋಬ್ಲೆಂಜ್ ಮೆಯಿನ್ಜ್ ಪಟ್ಟಣಗಳನ್ನೂ ಅವುಗಳ ಬಳಿಯಲ್ಲಿ ನದಿಯನ್ನು ದಾಟುವುದಕ್ಕಿರುವ ಸೇತುಗಳನ್ನೂ ಮಾರ್ಗಗಳನ್ನೂ ಎಂದರೆ ನದಿಯ ಪೂರ್ವಭಾಗಕ್ಕೆ ಬಹುಶಃ ೨೨ ಮೈಲಿಗಳಗಲದ ಪ್ರದೇಶವನ್ನು ವಶಪಡಿಸಿಕೊಳ್ಳಬೇಕು. ರೈನ್ ನದಿಯ ಮುಖವನ್ನು ಜರ್ಮನರು ಯುದ್ಧನಿಂತ ೩೧ ದಿನಗಳೊಳಗಾಗಿ ಬಿಟ್ಟಿರಬೇಕು. ಬಿಟ್ಟುಹೋಗುವ ದೇಶದಲ್ಲಿ ಅವರು ಯಾವುದನ್ನೂ ನಾಶಪಡಿಸಲಾಗದು. ಯುದ್ಧಸಂದರ್ಭದಲ್ಲಿ ಅಲ್ಲಿ ಯಾವ ಯಾವ ಏರ್ಪಾಟುಗಳನ್ನು ಮಾಡಿಕೊಂಡಿದ್ದರೋ ಅವನ್ನೆಲ್ಲಾ ಸ್ವಲ್ಪವೂ ಕೆಡಿಸದೆ ಹಾಗೆಯೇ ಬಿಟ್ಟುಹೋಗಬೇಕು. ಕೈಗಾರಿಕೆಯ ಯಂತ್ರಾಗಾರಕೆಯ ಏರ್ಪಾಡುಗಳಾವುದಕ್ಕೂ ಯಾವ ತೆರದ ಭಂಗವನ್ನೂ ಉಂಟುಮಾಡದೆ ಬಿಟ್ಟುಹೋಗಬೇಕು. ೫ ಸಾವಿರ ಎಂಜಿನ್ನುಗಳನ್ನೂ ೧|| ಲಕ್ಷ ವಾಗನ್ನುಗಳನ್ನೂ ೫೦೦೦ ಮೋಟಾರುಗಳನ್ನೂ ಜರ್ಮನರು ಮಿತ್ರಮಂಡಲಿಯ ವಶಮಾಡಬೇಕು. ಎಲ್ಲೆಲ್ಲಿ ಮದ್ದಿನ ಸುರಂಗಗಳನ್ನು ಇಟ್ಟಿರುವರೋ ಯಾವ ಜಲಾಧಾರಗಳಲ್ಲಿ ವಿಷವನ್ನು ಕದಡಿರುವರೋ ಅಂಥ ಅಪಾಯಕರವಾದ ಏರ್ಪಾಡುಗಳನ್ನೆಲ್ಲಾ ತೋರಿಸಿಬಿಟ್ಟು ಹೋಗುವ ಭಾರವು ಜರ್ಮನರ ಮೇಲಿರಬೇಕು. ಹಾಗೆ ಅವರು ಮಾಡದಿದ್ದರೆ ಅವರು ಪ್ರತಿಕ್ರಿಯೆಗೆ ಗುರಿಯಾಗಬೇಕು. ರೈನ್ ನದೀ ಪ್ರಾಂತದಲ್ಲಿ ನಿಲ್ಲಿಸಲ್ಪಟ್ಟಿರುವ ಮಿತ್ರಮಂಡಲಿ ಸೈನ್ಯದ ಪೋಷಣೆಯನ್ನು ಜರ್ಮನರೇ ಮಾಡುತ್ತಿರಬೇಕು. ಜರ್ಮನರು ಸೆರೆಹಿಡಿದಿರುವ ಸೈನಿಕರನ್ನೆಲ್ಲಾ ಬಿಟ್ಟುಕೊಡಬೇಕು. ಮಿತ್ರಮಂಡಲಿಯವರು ಸೆರೆಹಿಡಿದಿರುವ ಶತ್ರುಸೈನಿಕರನ್ನು ಬಿಡುಗಡೆಮಾಡುವ ವಿಷಯವು ಸಂಧಿಸಭೆಯಲ್ಲಿ ಆಲೋಚಿಸಲ್ಪಡುವುದು.

ಪೂರ್ವರಂಗ.

ರಷ್ಯಾ ರುಮೇನಿಯಾ ಟರ್ಕಿ ಎಲ್ಲೆಗಳಲ್ಲಿರುವ ಜರ್ಮನ್ ಸೈನ್ಯವನ್ನೆಲ್ಲಾ ತೆಗೆದುಬಿಡಬೇಕು. ರಷ್ಯಾ ರುಮೇನಿಯಾಗಳಲ್ಲಿರುವ ಜರ್ಮನ್ ಸೈನಿಕರು ಅಲ್ಲಿಯ ಪ್ರಜೆಗಳಿಂದ ಯಾವ ಪದಾರ್ಥಗಳನ್ನೂ ಕೊಂಡು ಹೋಗಕೂಡದು. ಬ್ರೆಸ್ಟ್‌ಲಿಟೋವಿಸ್ಕ್, ಬುಖಾರೆಸ್ಟ್ ಮೊದಲಾದ ಕಡೆಗಳಲ್ಲಿ ಜರ್ಮನರು ಯುದ್ಧಕಾಲದಲ್ಲಿ ಮಾಡಿಕೊಂಡಿರುವ ಸಂಧಿಗಳೆಲ್ಲಾ ರದ್ದಾಗಬೇಕು. ಜರ್ಮನರು ಬಿಟ್ಟ ದೇಶಭಾಗಗಳಲ್ಲಿರುವ ಪ್ರಜೆಗಳಿಗೆ ಆಹಾರಾದಿ ಪದಾರ್ಥಗಳನ್ನು ಒದಗಿಸುವುದಕ್ಕೂ ಅಲ್ಲಿಯ ಶಾಂತಿರಕ್ಷಣೆಗಾಗಿಯೂ ಮಿತ್ರಮಂಡಲಿಯವರು ಹೋಗಿಬರುವುದಕ್ಕೆ ಅವಕಾಶವಾಗಿರಬೇಕು.

ನೌಕಾದಳದ ವಿಷಯ.

ಜಲಯುದ್ಧವೆಲ್ಲಾ ನಿಂತುಹೋಗಬೇಕು. ತಮ್ಮ ಹಡಗುಗಳು ಎಲ್ಲಿರುವುವೆಂಬುದನ್ನೆಲ್ಲಾ ಶತ್ರುಗಳು ತಿಳಿಯಪಡಿಸಬೇಕು. ಈಗ ಇರುವ ಅವರ ಸಬ್‌ಮೆರೀನುಗಳನ್ನೆಲ್ಲಾ ಮಿತ್ರಮಂಡಲಿಗೆ ವಶಪಡಿಸಬೇಕು. ಶತ್ರುಗಳ ಯುದ್ಧದ ಹಡಗುಗಳಲ್ಲಿ ಕ್ರೂಯಿಸರುಗಳು ೬, ದೊಡ್ಡ ಯುದ್ಧದ ಹಡಗುಗಳು ೧೦, ಹಗುರವಾದ ಯುದ್ಧದ ಹಡಗುಗಳು ೮, ಡಿಸ್ಟ್ರಾಯರುಗಳು ೫೦, ಇವೆಲ್ಲಾ ತಟಸ್ಥದೇಶದ ರೇವೆಗಳಲ್ಲಾಗಲೀ ಮಿತ್ರಮಂಡಲಿಯವರು ಸೂಚಿಸುವ ರೇವೆಗಳಲ್ಲಾಗಲೀ ಕಟ್ಟಿಹಾಕಲ್ಪಡಬೇಕು. ಉಳಿದ ಜರ್ಮನ್ ಯುದ್ಧನೌಕೆಗಳ ಮೇಲಣ ಫಿರಂಗಿಗಳನ್ನೆಲ್ಲಾ ತೆಗೆದು ಜರ್ಮನ್ ರೇವೆಗಳಲ್ಲಿ ಮಿತ್ರಮಂಡಲಿಯಾಜ್ಞೆಗೊಳಪಡಿಸಿ ನಿಲ್ಲಿಸಬೇಕು. (ಈಗ ಜರ್ಮನ್ ನೌಕಾದಳದಲ್ಲಿ ವಿಪ್ಲವವುಂಟಾಗಿರುವುದರಿಂದ ಅದನ್ನು ಮಿತ್ರಮಂಡಲಿಗೆ ಸ್ವಾಧೀನಪಡಿಸುವುದು ಅಸಾಧ್ಯವಾದರೆ ತದ್ವಿಷಯದ ಸಂಧಿ ನಿಬಂಧನೆಯನ್ನು ವಿಧಿಸಿ ವ್ಯವಹಾರಕ್ಕೆ ತರುವುದಕ್ಕಾಗಿ ಮಿತ್ರಮಂಡಲಿಯವರು ಹೆಲಿಗೋಲ್ಯಾಂಡನ್ನು ವಶಪಡಿಸಿಕೊಳ್ಳಬೇಕು). ಬಾಲ್ಟಿಕ್ ಸಮುದ್ರದಲ್ಲಿ ಸಂಚರಿಸುವ ಸ್ವಾತಂತ್ರ್ಯವು ಮಿತ್ರಮಂಡಲಿಯವರ ಅಮೇರಿಕಾದವರ ನೌಕಾದಳಕ್ಕೆ ಇರಬೇಕು. ಈ ಅಧಿಕಾರನಿರ್ವಾಹಕ್ಕಾಗಿ ಬಾಲ್ಟಿಕ್‌ಸಮುದ್ರ ಮುಖಭಾಗದ ಜರ್ಮನ್ ರೇವೆಗಳನ್ನೆಲ್ಲಾ ಮತ್ತೂ ಅಲ್ಲಿರುವ ಫಿರಂಗಿಗಳು ದುರ್ಗಗಳು ಮೊದಲಾದ ರಕ್ಷಣೆಯ ಏರ್ಪಾಡುಗಳ ಮೇಲಣ ಅಧಿಕಾರವನ್ನೆಲ್ಲಾ ಮಿತ್ರಮಂಡಲಿಯವರೂ ಅಮೇರಿಕಾದವರೂ ವಹಿಸಿಕೊಳ್ಳುವರು. ಸಮುದ್ರದಮೇಲೆ ತೇಲಿಬಿಟ್ಟಿರುವ ಸುರಂಗಗಳನ್ನೆಲ್ಲಾ ಜರ್ಮನರು ತೆಗೆದುಹಾಕಬೇಕು. ಅಂಥ ಸುರಂಗಗಳನ್ನು ಹಾಕಿರುವ ಸ್ಥಾನಗಳನ್ನೆಲ್ಲಾ ತಿಳಿಯಿಸಿಕೊಡಬೇಕು. ಸಮುದ್ರದ ಮೇಲೆ ಪ್ರಯಾಣಮಾಡುತ್ತಿರುವ ಜರ್ಮನ್ ವರ್ತಕ ನೌಕೆಗಳನ್ನು ಹಿಡಿದುಕೊಳ್ಳುವ ಅಧಿಕಾರವು ಮಿತ್ರಮಂಡಲಿಯವರಿಗೆ ಇರಬೇಕು. ಕಪ್ಪುಸಮುದ್ರದಲ್ಲಿರುವ ರೇವೆಗಳನ್ನೆಲ್ಲಾ ಜರ್ಮನರು ಬಿಟ್ಟುಬಿಡಬೇಕು. ಜರ್ಮನರು ಹಿಡಿದುಕೊಂಡಿರುವ ರಷ್ಯನ್ ಹಡಗುಗಳನ್ನೆಲ್ಲಾ ಮಿತ್ರಮಂಡಲಿ ವಶಗೊಳಿಸಬೇಕು. ತಟಸ್ಥ ದೇಶಗಳವರ ಹಡಗುಗಳನ್ನೆಲ್ಲಾ ಜರ್ಮನರು ಬಿಡಬೇಕು. ಪ್ರತಿಫಲವನ್ನಪೇಕ್ಷಿಸದೆಯೇ ಮಿತ್ರಮಂಡಲಿಯ ವ್ಯಾಪಾರಿ ಹಡಗುಗಳನ್ನು ಜರ್ಮನರು ಬಿಟ್ಟುಕೊಡಬೇಕು. ಅವನ್ನು ಬಿಟ್ಟುಕೊಡುವುದಕ್ಕೆ ಮೊದಲು ಅವನ್ನು ನಾಶಪಡಿಸಲಾಗದು. ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಹಾಲೆಂಡು ಮೊದಲಾದ ತಟಸ್ಥ ದೇಶಗಳು ಮಿತ್ರಮಂಡಲಿಯೊಡನೆ ವ್ಯಾಪಾರನಡೆಯಿಸುವ ವಿಷಯವಾಗಿ ಜರ್ಮನರು ವಿಧಿಸಿದ್ದ ನಿಯಮಗಳನ್ನೆಲ್ಲಾ ತೊಲಗಿಸಿ ಆ ಸಂಗತಿಯನ್ನು ಆಯಾದೇಶಗಳಿಗೆ ತಿಳಿಯಿಸಬೇಕು. ಜರ್ಮನರು ತಮ್ಮ ವ್ಯಾಪಾರದ ಹಡಗುಗಳಲ್ಲಾವುದನ್ನೂ ತಟಸ್ಥದೇಶದವರಿಗೆ ಕೊಟ್ಟು ಬದಲಾಯಿಸಲಾಗದು.

ವಿರಾಮ.

ತಾತ್ಕಾಲಿಕವಾದ ಯುದ್ಧ ವಿರಾಮವು ೩೬ ದಿನಗಳವರೆಗೆ ಇರುವುದು. ಅವಶ್ಯಕವಾದರೆ ಆಕಾಲಪರಿಮಿತಿಯನ್ನು ಹೆಚ್ಚಿಸಬಹುದು. ಈ ಕಾಲದೊಳಗಾಗಿ ಯಾವ ನಿಬಂಧನೆಯನ್ನು ಶತ್ರುಗಳು ಮೀರಿದರೂ ೪೮ ಗಂಟೆಗಳ ಅವಧಿಯನ್ನು ಕೊಟ್ಟು ಈ ಸಂಧಿನಿಬಂಧನೆಯೆಲ್ಲವೂ ರದ್ದುಮಾಡಲ್ಪಡುವುದು.

ಆರ್ಥಿಕವಿಷಯ

ಜರ್ಮನರು ಉಂಟುಮಾಡುವ ನಷ್ಟಕ್ಕೆ ಪರಿಹಾರವನ್ನು ಕೊಡಬೇಕು. ಅದರ ಶೋಧನೆಗಾಗಿ ಜರ್ಮನರು ಕಾಗದಪತ್ರಗಳ ಮೂಲಕವಾಗಿ ನಡೆಯಿರುವ ಲೇವಾದೇವಿಗಳ ಮತ್ತೂ ಸೊತ್ತುಗಳ ಸ್ವಾಮ್ಯವನ್ನೂ ತೊಲಗಿಸಿಕೊಳ್ಳಲಾಗದು. ಬೆಲ್ಜಿಯಂ ನ್ಯಾಷನಲ್ ಬ್ಯಾಂಕಿನಲ್ಲಿ ಟ್ರಸ್ಟ್ ಡಿಪಾಜಿಟ್ಟುಗಳನ್ನೆಲ್ಲಾ ಕೂಡಲೇ ನಿಲ್ಲಿಸಿಬಿಡಬೇಕು. ಎಲ್ಲ ತೆರದ ಪತ್ರಗಳನ್ನೂ ನಗದುಹಣವನ್ನೂ ಭಾಗಪತ್ರಗಳನ್ನೂ ನೋಟು ಮೊದಲಾದುವುಗಳನ್ನೂ ಕೂಡಲೇ ಕೊಟ್ಟುಬಿಡಬೇಕು. ಜರ್ಮನರು ಆಕ್ರಮಿಸಿಕೊಂಡಿದ್ದ ದೇಶದ ಪ್ರಜೆಗಳ ಸೊತ್ತುಗಳನ್ನೂ ಸರ್ಕಾರಿ ಸೊತ್ತನ್ನೂ ಹಿಂದಿರಿಗಿ ಕೊಟ್ಟುಬಿಡಬೇಕು. ರಷ್ಯಾ ರುಮೇನಿಯಾ ದೇಶಗಳಿಂದ ಅವರು ತೆಗೆದುಕೊಂಡುಹೋಗಿದ್ದ ಭಂಗಾರವನ್ನೂ ಕೂಡ ಕೊಟ್ಟುಬಿಡಬೇಕು. ಮಹಾಸಂಧಿ ಪತ್ರದಲ್ಲಿ ರುಜುಗಳು ಬೀಳುವವರೆಗೂ ಆ ಭಂಗಾರವು ಮಿತ್ರಮಂಡಲಿಯ ವಶದಲ್ಲಿರಬೇಕು.

ಇತರ ವಿಷಯ.

ರೈನ್ ನದಿಯ ಬಲಗಡೆಯಲ್ಲಿ ೩ ಮೈಲಿಗಳ ದೂರದಲ್ಲಿ ಜರ್ಮನಿಯ ಎಲ್ಲೆಯು ಏರ್ಪಡಬೇಕು. ಮಧ್ಯಭಾಗದಲ್ಲಿ ತಟಸ್ಥಪ್ರದೇಶವು ಗೊತ್ತುಮಾಡಲ್ಪಡುವುದು. ಅದು ಹಾಲೆಂಡಿನಿಂದ ಹಿಡಿದು ಸ್ವಿಡ್ಜರ್‌ಲೆಂಡಿನವರೆಗೂ ವ್ಯಾಪಿಸಿರುವುದು. ಇದಕ್ಕೆ ಮುಂಚೆ ಯುದ್ಧದಲ್ಲಿ ಸೇರಿ ಕೆಲಸಮಾಡಿದುದಕ್ಕಾಗಿ ಆಯಾ ದೇಶನಿವಾಸಿಗಳಾರನ್ನೂ ಜರ್ಮನರು ಹಿಂಸಿಸಕೂಡದು. ಯಂತ್ರಾಗಾರ ಮೊದಲಾದುವುಗಳಿಗೆ ನಷ್ಟಕರವಾದ ಯಾವ ಕಾರ್ಯವನ್ನೂ ಶತ್ರುಗಳು ಮಾಡಲಾಗದು. ಅವುಗಳಲ್ಲಿಟ್ಟಿರುವ ಸಿಬ್ಬಂದಿಯನ್ನು ಕಡಿಮೆಮಾಡಲಾಗದು. ತಾವು ಬಿಟ್ಟುಹೋಗುವ ದೇಶಗಳ ಪ್ರಜೆಗಳಾರನ್ನೂ ಜರ್ಮನರು ತಮ್ಮ ಸಂಗಡ ಕರೆದುಕೊಂಡು ಹೋಗಲಾಗದು. ಅವರುಗಳ ಪ್ರಾಣ ಧನಗಳಿಗೆ ಯಾವ ಹಾನಿಯನ್ನೂ ಉಂಟುಮಾಡಕೂಡದು. ಸೇನೆಯ ನಿಮಿತ್ತವಾಗಿ ಕೂಡುಹಾಕಿದ್ದ ಅಪಾರ ಸಾಮಗ್ರಿಗಳನ್ನೆಲ್ಲಾ ಮಿತ್ರಮಂಡಲಿಯ ವಶಗೊಳಿಸಬೇಕು. ಮನುಷ್ಯರಿಗೂ ಪಶುಗಳಿಗೂ ಬೇಕಾದ ಆಹಾರಗಳಲ್ಲಾವುದನ್ನೂ ತೆಗೆದುಕೊಂಡು ಹೋಗಲಾಗದು. ಮಾರ್ಗಗಳು ಸೇತುಗಳು ಮೊದಲಾದ ಪ್ರಯಾಣಸೌಕರ್ಯಗಳಲ್ಲಾವುದನ್ನೂ ವಿನಾಶಗೊಳಿಸಲಾಗದು. ಅಲ್ಸೆಸ್ ಲೊರೈನ್ ಪ್ರಾಂತಗಳಲ್ಲಿರುವ ಲೋಹಮಾರ್ಗಗಳನ್ನು ಇದ್ದರೀತಿಯಲ್ಲೇ ಮಿತ್ರಮಂಡಲಿ ವಶಪಡಿಸಬೇಕು. ರೈನ್ ನದಿಯ ಪಶ್ಚಿಮಭಾಗದ ದೇಶದಲ್ಲಿರುವ ಲೋಹಮಾರ್ಗಗಳನ್ನೂ ಅವುಗಳ ಉಪಯೋಗಕ್ಕಿರುವ ಸಕಲ ಸಾಮಗ್ರಿಗಳನ್ನೂ ಹಾಗೆಯೇ ಬಿಟ್ಟುಹೋಗಬೇಕು. ಮಿತ್ರಮಂಡಲಿಯವರು ಹೇಳುವ ರೇವೆಗಳಲ್ಲಿರುವ ಸಬ್‌ಮರೀನುಗಳನ್ನೂ ಕ್ರೂಯಿಸರುಗಳನ್ನೂ ಅವುಗಳಲ್ಲಿರುವ ನಾವಿಕರ ಸಮೇತ ಮಿತ್ರಮಂಡಲಿ ವಶಪಡಿಸಬೇಕು. ಸಮುದ್ರದಲ್ಲಿ ಸಂಚರಿಸಲಾರದಿರುವ ಹಡಗುಗಳ ಮೇಲಿರುವ ನಾವಿಕರನ್ನೆಲ್ಲಾ ಇಳಿಯಿಸಿಬಿಟ್ಟು ಅವುಗಳನ್ನು ಮಿತ್ರಮಂಡಲಿ ವಶಪಡಿಸಬೇಕು. ಮಿತ್ರಮಂಡಲಿಯವರು ಜರ್ಮನಿದೇಶಕ್ಕೆ ಈಗ ಕಲ್ಪಿಸಿರುವ ನೌಕಾನಿಬಂಧ ಪದ್ಧತಿಯೆಲ್ಲಾ ಹಾಗೆಯೇ ಇರಬೇಕು. ತಾತ್ಕಾಲಿಕ ಸಂಧಿಯ ಗಡುಬವು ಮುಗಿಯುವವರೆಗೂ ಶತ್ರುದೇಶಗಳಿಗೆ ಬೇಕಾದ ಆಹಾರ್ಯವಸ್ತುಗಳನ್ನು ಮಿತ್ರಮಂಡಲಿಯವರೇ ಒದಗಿಸಿಕೊಡುವರು. ಶತ್ರುಗಳಲ್ಲಿರುವ ವಿಮಾನಗಳನ್ನೆಲ್ಲಾ ಮಿತ್ರಮಂಡಲಿಯವರು ಹೇಳುವ ಸ್ಥಾನಕ್ಕೆ ಸೇರಿಸಿಡಬೇಕು. ಬೆಲ್ಜಿಯಂ ತೀರದಲ್ಲಿರುವ ಜರ್ಮನಿ ವ್ಯಾಪಾರ ನೌಕೆಗಳನ್ನೂ ಆಕಾಶವಿಮಾನಗಳನ್ನೂ ಸಕಲ ವಿಧವಾದ ಆರೋಹಣಗಳನ್ನೂ ತಟಸ್ಥರ ಹಡಗುಗಳನ್ನೂ ಅಲ್ಲೇ ಬಿಟ್ಟುಹೋಗಬೇಕು. ಪೂರ್ವಾಫ್ರಿಕಾದಲ್ಲಿರುವ ಜರ್ಮನ್ ಸೈನ್ಯಗಳು ೧ ತಿಂಗಳೊಳಗಾಗಿ ಆ ದೇಶವನ್ನು ಸಂಪೂರ್ಣವಾಗಿ ಬಿಟ್ಟುಹೋಗಬೇಕು.

ಈ ಮೇಲ್ಕಂಡ ನಿಬಂಧನೆಗಳೆಲ್ಲಾ ಬಲುಮಟ್ಟಿಗೆ ಬಿಗಿಯಾಗಿರುವುದೇನೋ ನಿಜ. ಏಕೆಂದರೆ—ಶತ್ರುಗಳು ಯುದ್ಧವಿರಾಮವನ್ನು ಮರಳಿ ತಾವು ಚೇತರಿಸಿಕೊಂಡು ಪುನಃ ಯುದ್ಧವನ್ನು ಹೂಡಲು ಸಾಧನವಾಗುವಂತೆ ಮಾಡಿಕೊಳ್ಳಲಾಗದಂತೆ ಇರಲಿಯೆಂಬುದಕ್ಕಾಗಿಯೇ ವಿಧಿಸಿದ್ದಾರಲ್ಲದೆ ಮತ್ತೆ ಬೇರೆ ಅಲ್ಲ. ಇದು ಶಾಶ್ವತ ಸಂಧಿಗೆ ದಾರಿಮಾಡುವುದಕ್ಕೆ ಕೆಲಕಾಲದವರೆಗೆ ವಿಧಿಸಲ್ಪಟ್ಟ ಬಿಗಿಪಟ್ಟೇಹೊರತು ಶಾಶ್ವತವಾಗಿರುವುದಿಲ್ಲ. ಬರುವ ಜನವರಿ ತಿಂಗಳ ಮೊದಲು ವಾರದಲ್ಲಿ ಶಾಶ್ವತಸಂಧಿಯು ಫ್ರಾನ್ಸ್‌ದೇಶದಲ್ಲಿ ಜರುಗುತ್ತದೆ. ಅಲ್ಲಿ ನಿರ್ಧಾರವಾಗುವ ನಿಬಂಧನೆಗಳೇ ಶಾಶ್ವತವಾಗತಕ್ಕುವು. ಅದೇರ್ಪಟ್ಟ ಕೂಡಲೇ ಇವೆಲ್ಲಾ ರದ್ದಾಗುತ್ತವೆ. ಈ ಮೇಲ್ಕಂಡ ನಿಬಂಧನೆಗಳೊಳಗೆ ಆಹಾರ್ಯವಸ್ತುಗಳನ್ನು ತಮಗೆ ಸಾಗಿಸಿಕೊಳ್ಳಲು ಸ್ವಾತಂತ್ರ್ಯವಿಲ್ಲದೆ ಹೋಗಿರುವುದು, ಮತ್ತು ತಮ್ಮ ದೇಶದಲ್ಲಿಡಲ್ಪಡುವ ಮಿತ್ರಮಂಡಲಿ ಸೈನ್ಯವನ್ನು ಜರ್ಮನರೇ ರಕ್ಷಿಸಬೇಕಾದುದು ಹೊಗೆಬಂಡಿಗಳಲ್ಲಿ ಹೆಚ್ಚುಭಾಗವನ್ನು ಬಿಟ್ಟುಕೊಡುವುದು ಇವುಗಳು ಬಹಳ ದುರ್ಭರವೆಂದೂ, ಆಹಾರವಿಲ್ಲದೆ ತಮ್ಮ ದೇಶದ ಲಕ್ಷಾಂತರ ಜನರು ಸಾಯಬೇಕಾಗುವುದೆಂದೂ ಸಹ ಜರ್ಮನ್ ವಿದೇಶಾಂಗ ಮಂತ್ರಿಯು ಅಮೇರಿಕಾದವರಿಗೆ ಹೇಳಿಕೊಳ್ಳಲು, ಬೇಕಾದ ಆಹಾರ್ಯವಸ್ತುಗಳನ್ನು ಒದಗಿಸಿಕೊಡುವೆವೆಂದು ಪ್ರೆ|| ವಿಲ್ಸನ್ನರವರು ಉತ್ತರವಿತ್ತಿರುವರು. ಮತ್ತು ಈಗ ಮಿತ್ರಮಂಡಲಿಯವರೆಲ್ಲರೂ ಶರಣಾಗತರಾದ ಜರ್ಮನರಿಗೆ ಆಹಾರ್ಯವಸ್ತುಗಳನ್ನು ಒದಗಿಸಿಕೊಳ್ಳಲು ಇಷ್ಟವುಳ್ಳವರಾಗಿಯೇ ಇರುವರು. ಜರ್ಮನರಾದರೊ ಸಂಧಿನಿಬಂಧನೆಯಂತೆ ತಾವು ಮಾಡಬೇಕಾದ ಕಾರ್ಯಗಳನ್ನೆಲ್ಲಾ ಸಂಧಿಯಾದ ದಿನದಿಂದಲೂ ಮಾಡುತ್ತಲೇ ಇರುವರು. ಬೇಗನೆ ಶಾಶ್ವತಸಂಧಿಯನ್ನು ಮಾಡಿಕೊಂಡು ದೇಶವನ್ನು ಕಷ್ಟನಷ್ಟಗಳಿಂದ ಬಿಡುಗಡೆಮಾಡಿ ಸುಖದಿಂದ ಬಾಳಿಕೊಂಡಿರಬೇಕೆಂಬುದೇ ಅವರ ಆತುರವಾಗಿರುವುದಾಗಿ ಕಾಣುತ್ತದೆ. ಶಾಶ್ವತಸಂಧಿಯನ್ನು ಬೇಗನೆ ನಡೆಯಿಸಬೇಕೆಂದು ಅವರು ಅಮೇರಿಕನ್ನರನ್ನು ತ್ವರೆಗೊಳಿಸುತ್ತಿದ್ದಾರೆ.

ಭರತಖಂಡದ ವೃತ್ತಾಂತಗಳು.

ಫ್ರಾನ್ಸಿನಲ್ಲಿ ನಡೆಯುವ ಸಂಧಿಸಭೆಗೆ ಭರತಖಂಡದ ಸರ್ಕಾರದ ಪ್ರತಿನಿಧಿಗಳಾಗಿ ಸರ್ ಎಸ್. ಪಿ. ಸಿನ್ಹರವರೂ, ಸಂಸ್ಥಾನಾಧಿಪತಿಗಳ ಪ್ರತಿನಿಧಿಗಳಾಗಿ ಬಿಕನೀರ್ ಮಹಾರಾಜರೂ ಸಹ ದಯಮಾಡಿಸುವವರಾಗಿದ್ದಾರೆ. ಸಂಧಿವಿಷಯವಾಗಿ ಸ್ಟೇಟ್ ಸೆಕ್ರೆಟರಿಯವರಿಗೆ ಸಹಾಯಕರಾಗಿ ಕೆಲಸಮಾಡುವುದಕ್ಕೆ ಭರತಖಂಡದ ಸರ್ಕಾರದಿಂದ ಸರ್ ಹಾಮಿಲ್ಟನ್ ಗ್ರ್ಯಾಂಟ್‌ರವರು ಹೋಗುವವರಾಗಿದ್ದಾರೆ.

ಮದ್ರಾಸಿನಲ್ಲಿ ಬಟ್ಟೆಗಳ ಬೆಲೆಯು ದಿನದಿನಕ್ಕೆ ಇಳಿದುಹೋಗುತ್ತಿರುವುದರಿಂದ ಅದರ ವರ್ತಕರುಗಳು ತಮ್ಮ ನಷ್ಟವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ೩೦ ಲಕ್ಷ ರೂ. ಗಳ ಮೂಲಧನದಿಂದ "ಪೀಸ್‌ಗೂಡ್ಸ್ ಮರ್ಚೆಂಟ್ಸ್ ಸಿಂಡಿಕೇಟ್" ಎಂಬ ಹೆಸರಿನ ಸಂಘವೊಂದನ್ನು ಸ್ಥಾಪಿಸಿಕೊಂಡು ಮದ್ರಾಸಿನಲ್ಲಿ ದೊರೆಯುವ ಬಟ್ಟೆಗಳ ಬೇಲುಗಳನ್ನೆಲ್ಲಾ ಬೆಲೆಮಾಡಿಟ್ಟುಕೊಂಡು ಅವುಗಳ ಬೆಲೆಯನ್ನು ಇಳಿಯಿಸದೆ ನಿಲ್ಲಿಸಿಕೊಳ್ಳಬೇಕೆಂದು ಯೋಚಿಸಿರುವರಂತೆ. ಸೀಮೆಯಿಂದ ಅಗ್ಗವಾಗಿ ಹೊಸಬಟ್ಟೆಗಳು ಬರುವುದಕ್ಕುಪಕ್ರಮಿಸಿದರೆ ಈ ದುರಾಶಿಗರು ಏನು ಮಾಡುವರು?

ವಿದೇಶ ವೃತ್ತಾಂತಗಳು.

ಬರುವ ಡಿಶಂಬರ್ ತಾ|| ೯ ರಲ್ಲಿ ಇಂಗ್ಲೀಷ್ ಪಾರ್ಲಿಮೆಂಟ್ ಸಭಿಕರ ಹೊಸ ಚುನಾವಣೆಯು ನಡೆಯುವುದು.

ಪ್ರಜಾಧಿಕಾರ ಪ್ರಾಬಲ್ಯವುಳ್ಳ ರಾಜಪ್ರಭುತ್ವವನ್ನು ಬೆಲ್ಜಿಯಂ ಪ್ರಜೆಗಳು ಅಪೇಕ್ಷಿಸುತ್ತಿದ್ದಾರೆ. ಆ ದೇಶದ ಪಾರ್ಲಿಮೆಂಟು ತಾ|| ೨೧ ರಲ್ಲಿ ಬ್ರಸಲ್ಸ್‌ಪಟ್ಟಣದೊಳಗೆ ಕೂಡಲು ಗೊತ್ತಾಗಿದ್ದಿತು.

ತಲ್ಲತ್ ಪಾಷಾ, ಎನ್ವರ್ ಪಾಷಾ, ಡಿಜಮಲ್ ಪಾಷಾ, ನಾಜಿಂಬೆ ಇವರುಗಳು ಸರ್ಕಾರದ ಹಣವನ್ನು ಎತ್ತಿಹಾಕಿ ಕಾನ್‌ಸ್ಟಾಂಟಿನೋಪಲನ್ನು ಬಿಟ್ಟು ಓಡಿಹೋಗಿರುವರೆಂದು ಲಂಡನ್ನಿನ ತಂತ್ರೀವಾರ್ತೆಯು ತಿಳಿಸುತ್ತದೆ.

ಇಂಗ್ಲೀಷ್ ಪಾರ್ಲಿಮೆಂಟಿಗೆ ಸ್ತ್ರೀಯರೂ ಸಭಿಕರಾಗಿ ಆರಿಸಲ್ಪಡಬಹುದೆಂಬ ವಿಧಿಯೇರ್ಪಟ್ಟಿದೆಯಷ್ಟೆ. ಆನಿಬೆಸೆಂಟಮ್ಮನವರನ್ನು ತಮ್ಮ ಪ್ರತಿನಿಧಿಯಾಗಿ ಆರಿಸಿ ಕಳುಹಿಸುವುದಕ್ಕೆ ಆ ದೇಶದ ಒಂದು ಮಂಡಲದವರು ಅಪೇಕ್ಷಿಸಿರುವಹಾಗೂ, ಅದಕ್ಕೆ ಅಮ್ಮನವರು ನಿಲ್ಲುವಹಾಗೂ ನ್ಯೂ ಇಂಡ್ಯಾ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಶತ್ರುಗಳಿಂದ ಬಿಡಲ್ಪಟ್ಟ ಅಲ್ಸೆಸ್ ಲೋರೈನ್ ಪ್ರಾಂತಗಳನ್ನು ಫ್ರೆಂಚ್ ಸೈನಿಕರೂ, ಬೆಲ್ಜಿಯಂ ದೇಶವನ್ನು ಬೆಲ್ಜಿಯಂ ಸೈನಿಕರೂ, ರೈನ್ ನದಿಯ ಪಶ್ಚಿಮಭಾಗ ದೇಶವನ್ನು ಇಂಗ್ಲೀಷ್ ಸೈನಿಕರೇ ಮೊದಲಾದವರೂ ಆಸ್ಟ್ರಿಯಾದ ದೇಶಭಾಗಗಳನ್ನು ಇಟಲಿಯವರೂ ಆಕ್ರಮಿಸಿದರು. ತಾ|| ೧೭ ರೊಳಗಾಗಿ ಫ್ರೆಂಚ್ ದೇಶವೆಲ್ಲಾ ಶತ್ರುಗಳಿಂದ ವಿಮುಕ್ತಿಹೊಂದಿತು. ತಂತಮ್ಮ ಸೈನಿಕರನ್ನು ಅಲ್ಲಲ್ಲಿಯ ಪ್ರಜೆಗಳು ಅತ್ಯಂತಹರ್ಷದಿಂದ ಸ್ವಾಗತಮಾಡಿದರು. ಬೆಲ್ಜಿಯಂ ರಾಜದಂಪತಿಗಳು ತಮ್ಮ ರಾಜಧಾನಿಯಾದ ಬ್ರಸೆಲ್ಸ್ ನಗರವನ್ನು ವಿಜೃಂಭಣೆಯಿಂದ ಪ್ರವೇಶಮಾಡಿ ಪ್ರಜೆಗಳಿಂದ ಸ್ವಾಗತಿಸಲ್ಪಟ್ಟರು.

ಜರ್ಮನಿಯ ಹಿಂದಣ ಚಕ್ರವರ್ತಿಯವರು ಈಗ ಹಾಲೆಂಡಿನಲ್ಲಿದ್ದಾರಷ್ಟೆ. ಅವರು ತಮ್ಮಲ್ಲಿದ್ದ ಆಯುಧಗಳನ್ನೆಲ್ಲಾ ಡಚ್ ಪ್ರಭುತ್ವದ ವಶಪಡಿಸಿದ್ದಾರೆ. ಆ ಪ್ರಭುತ್ವದವರು ಕೈಜರರನ್ನು ನಿರ್ಬಂಧದಲ್ಲಿಡದೆ ರಾಜಕೀಯ ವಿಷಯವಾಗಿ ಶರಣಾಗತನಾದ ಒಬ್ಬ ಘನವಂತನಂತೆ ಕಾಣಲು ತೀರ್ಮಾನಿಸಿದ್ದಾರೆ. ಅತ್ಯಂತಾನರ್ಥಗಳಿಗೆಲ್ಲಾ ಮೂಲಕಾರಣನಾದ ಈತನನ್ನು ವಿಚಾರಣೆಗೊಳಪಡಿಸಿ ತಕ್ಕ ಶಿಕ್ಷೆಯನ್ನು ವಿಧಿಸದೆ ಬಿಡುವುದು ಸರಿಯಲ್ಲವೆಂದು ಫ್ರಾನ್ಸ್ ಪತ್ರಿಕೆಗಳು ತಮ್ಮ ಮಿತ್ರವರ್ಗದವರಿಗೆಲ್ಲಾ ದೂರುತ್ತಲಿವೆ. ಕೈಜರನನ್ನು ಮಿತ್ರಮಂಡಲಿಯವರು ವಶಪಡಿಸಿಕೊಳ್ಳಬೇಕೆಂದು ಇಂಗ್ಲೀಷ್ ಪಾರ್ಲಿಮೆಂಟಿನಲ್ಲಿ ಬಹು ಮಂದಿ ಸಭಿಕರು ಅಭಿಪ್ರಾಯಕೊಟ್ಟಿರುವರು. ಲೋಕಾನರ್ಥಕಾರಿಯಾದ ಮಹಾಯುದ್ಧಕ್ಕೆ ಯಾರು ಉತ್ತರವಾದಿಗಳೋ ಅಂಥವರು ಯಾವ ದೇಶದಲ್ಲಿದ್ದರೂ ಅವರನ್ನೆಲ್ಲಾ ಮಿತ್ರಮಂಡಲಿಯವರು ವಶಪಡಿಸಿಕೊಳ್ಳಬೇಕೆಂದು ಫ್ರೆಂಚ್ ರಾಜ್ಯಾಂಗ ಸಭೆಯಲ್ಲಿ ಒಂದು ತೀರ್ಮಾನವು ಮಾಡಲ್ಪಡುವುದರಲ್ಲಿದೆ. ಪ್ರಪಂಚಕ್ಕೆಲ್ಲಾ ಮಹಾಪರಾಧಮಾಡಿದವನಿಗೆ ನಮ್ಮ ದೇಶದಲ್ಲಿ ತಾವು ಕೊಡಕೂಡದೆಂದು ಲಂಡನ್ನಿನಲ್ಲಿರುವ ಡಚ್ಚರು ತಮ್ಮ ಹಾಲೆಂಡ್ ಪ್ರಭುತ್ವದವರಿಗೆ ತಿಳಿಯಪಡಿಸಿಕೊಂಡಿದ್ದಾರೆ. ಕೈಜರ ಅವಸ್ಥೆಯು ಮುಂದೆ ಇನ್ನು ಹೇಗಾಗುವುದೋ ನೋಡಬೇಕು. ಜರ್ಮನ್ ಯುವರಾಜನು ನಾಲ್ಕು ಮೋಟಾರು ಬಂಡಿಗಳಲ್ಲಿ ತನ್ನ ಪರಿವಾರದೊಡನೆ ಹಾಲೆಂಡಿಗೆ ಹೋಗಿರುವನಂತೆ. ಅಲ್ಲಿಯ ಪ್ರಭುತ್ವದವರು ಮಾಸ್ಟ್ರಿಕ್ಟ್ ಪಟ್ಟಣದಲ್ಲಿ ಇದಿರೊಂದು ಸರ್ಕಾರಿ ಭವನದಲ್ಲಿ ಇಳಿಯಿಸಿ, ಅನಪೇಕ್ಷಣೀಯವಾದ ಅತನ ಆಗಮನವನ್ನು ಕುರಿತು ಅವರು ಆಲೋಚನಾಪರರಾಗಿದ್ದಾರಂತೆ. ಕೈಜರರ ಪತ್ನಿಯವರೂ ಸೊಸೆಯೂ ಮೊಮ್ಮಕ್ಕಳೂ ಹೆಣ್ಣುಮಕ್ಕಳೂ ಸಹ ಜರ್ಮನಿಯಲ್ಲೇ ಪೋಟ್ಸ್‌ಡಾಂ ಪಟ್ಟಣದ ಒಂದು ರಾಜಭವನದಲ್ಲಿ ಇಡಲ್ಪಟ್ಟು ಅಪಾಯವಾವುದೂ ಸಂಭವಿಸದಂತೆ ಕಾವಲು ಮಾಡಲು ಭಟರನ್ನು ಸರ್ಕಾರದವರು ನಿಯಮಿಸಿದ್ದಾರೆ.

ವಿಜಯಸಂಬಂಧವಾದ ಮಹೋತ್ಸವಗಳು ಮಿತ್ರಮಂಡಲಿಯವರ ದೇಶಗಳಲ್ಲೆಲ್ಲಾ ಅಪರಿಮಿತವಾಗಿ ನಡೆಯುತ್ತಿವೆ. ಆಂಗ್ಲಸಾಮ್ರಾಜ್ಯಕ್ಕೆ ಒಳಪಟ್ಟ ಸಕಲ ದೇಶಗಳಲ್ಲೂ ನಡೆದೂ ನಡೆಯುತ್ತಲೂ ಇವೆ. ಲಂಡನ್ ಪಟ್ಟಣದಲ್ಲಿ ಅದು ಅತ್ಯಂತ ವೈಭವದಿಂದ ಜರುಗಿದೆ. ಸಾರ್ವಭೌಮ ದಂಪತಿಗಳೂ ಪಾರ್ಲಿಮೆಂಟ್ ಸಭಿಕರೂ ಸಹ ತಮಗೆ ವಿಜಯಪ್ರಸಾದವನ್ನು ಕರುಣಿಸಿದ ಭಗವಂತನಿಗೆ ಕೃತಜ್ಞತಾ ನಮಸ್ಕಾರಗಳನ್ನು ಸಮರ್ಪಿಸುವುದಕ್ಕೆ ಅತಿ ವೈಭವದಿಂದ ದೇವಾಲಯಕ್ಕೆ ಹೋಗಿ ಬಂದರು. ಪ್ರಜೆಗಳು ಅತ್ಯಂತ ಸಂತೋಷದಿಂದ ರಾಜಮಂದಿರಕ್ಕೆ ಹೋಗಿ ಚಕ್ರವರ್ತಿ ದಂಪತಿ [illegible]

ಕೊಂಡು, ಮುಖ್ಯ ಮಂತ್ರಿಯವರ ಮನೆಗೆ ಹೋಗಿ ಅವರ ಅಮೃತ ಸಮಾನವಾದ ಸಂತೋಷವಾಕ್ಯಗಳನ್ನು ಕೇಳಿ ಅಟ್ಟಹಾಸಮಾಡಿ ಬಂದರು. ೩-೪ ವರ್ಷಗಳಿಂದಲೂ ರಾತ್ರಿಯಹೊತ್ತು ಬೆಳಕನ್ನೇ ಕಾಣದಿದ್ದ ಲಂಡನ್ ಪಟ್ಟಣವು ತಾ|| ೧೨ ರಿಂದ ಬೀದಿಬೀದಿಗಳಲ್ಲಾ ಪೂರ್ವವಾದ ದೀಪದ ಸಾಲುಗಳಿಂದ ಅಲಂಕೃತವಾಗಿ ಪ್ರಜೆಗಳಿಗೆ ಅಪಾರವಾದ ಸಂತೋಷವನ್ನುಂಟುಮಾಡಿತು. ಚಕ್ರವರ್ತಿ ದಂಪತಿಗಳು ರಥದಲ್ಲಿ ಕುಳಿತು ಪುರವೀಧಿಗಳಲ್ಲಿ ಪ್ರಜೆಗಳಿಗೆ ದರ್ಶನವಿತ್ತು ಅವರ ಜಯಘೋಷಗಳನ್ನು ಆನಂದದಿಂದ ಲಾಲಿಸಿ ಅಭಿನಂದಿಸಿದರು. ತಾ|| ೧೪ ನೆ ರಾತ್ರಿಯಲ್ಲಿ ಅಧಿಕೋತ್ಸವವು ನಡೆಯಿತು. ಟ್ರಫಾಲ್ಗರ್ ಚೌಕದಲ್ಲಿ ೧ ಲಕ್ಷ ಮಂದಿಗಳು ಕೂಡಿದ್ದರು. ಹಾಡುವುದು, ಕುಣಿಯುವುದು, ಕುಪ್ಪಳಿಸುವುದು, ಜಯಧ್ವನಿ ಮಾಡುವುದು, ಬಾವುಟಗಳನ್ನು ಹಾರಿಸುವುದು, ಬಾಣಗಾರಿಕೆ ಮಾಡುವುದು ಮೊದಲಾದ ವಿನೋದಗಳನ್ನು ಅನುಭವಿಸುತ್ತಿದ್ದರು. ಪಟ್ಟಣವೆಲ್ಲಾ ದೀಪೋತ್ಸವದಿಂದ ಕಂಗೊಳಿಸುತ್ತಿದ್ದಿತು. ಜರ್ಮನರಿಂದ ಕಿತ್ತುಕೊಂಡ ಫಿರಂಗಿಗಳನ್ನು ಬೀದಿಯಲ್ಲಿ ಎಳೆದಾಡಿಕೊಂಡು ಹೋಗುತ್ತಿದ್ದರು. ಆ ದಿನವೆಲ್ಲಾ ೧೦ ಲಕ್ಷ ಮಂದಿಗಳು ಇಂಥ ಉತ್ಸವದಲ್ಲಿ ಕಾಲಕಳೆದರು. ಈ ವಿಜಯಾನಂದ ಸಮಯದಲ್ಲಿ ಚಕ್ರವರ್ತಿಯವರಿಗೆ ಒಂದು ಸನ್ಮಾನಪತ್ರವನ್ನು ಸಮರ್ಪಿಸಬೇಕೆಂದು ಪಾರ್ಲಿಮೆಂಟಿನವರು ನಿರ್ಧರಿಸಿ ಒಪ್ಪಿಸಿದರು. ಸ್ಕಾಟ್ಲಾಂಡ್ ತೀರದಲ್ಲಿ ಆಂಗ್ಲನೌಕಾದಳದವರು ತಮ್ಮ ಯುದ್ಧದ ಹಡಗುಗಳನ್ನೆಲ್ಲಾ ಸಮುದ್ರದಲ್ಲಿ ೩೦ ಮೈಲಿಗಳ ದೂರ ಸಾಲಾಗಿ ನಿಲ್ಲಿಸಿ ಎಲ್ಲದರಲ್ಲೂ ದೀಪಾಲಂಕಾರಮಾಡಿ ಪ್ರತಿಯೊಂದರಿಂದಲೂ ಫಿರಂಗಿಗುಂಡುಗಳನ್ನು ಅಪರಿಮಿತವಾಗಿ ಹಾರಿಸಿದರು. ಲಂಡನ್ ಪಟ್ಟಣದಲ್ಲೆಲ್ಲಾ ನಾಟಕಗಳು ಸಿನಿಮಾ ಪ್ರದರ್ಶನಗಳು ಕೊನೆಯಿಲ್ಲದೆ ನಡೆಯುತ್ತಿವೆ. ಕೆನಡಾ ದೇಶೀಯರು ಕೈಜರನ ಆಕಾರದ ದೊಡ್ಡ ಬೊಂಬೆಯೊಂದನ್ನು ಮಾಡಿ ಬೀದಿಗಳಲ್ಲಿ ನೇತಾಡುವಂತೆ ಕಟ್ಟಿ ಕೊನೆಗೆ ಕೋಲಾಹಲಮಾಡುತ್ತ ಸುಟ್ಟುಬಿಟ್ಟರು.

ಪತ್ರವ್ಯವಹಾರ.

ಶ್ರೀಮತಿ ವೀರವ್ವನವರ ಔದಾರ್ಯ.

ರಾ|| ಬ|| ರುದ್ರಗೌಡ ಅರಟಾಳ ಇವರ ಸಹೋದರಿ ಶ್ರೀಮತಿ ವೀರವ್ವ ಭ್ರತಾರ ಬಸಪ್ಪಗೌಡ ಪಾಟೀಲ ತಟಕದ ಹೊನ್ನೀಹಳ್ಳಿ ಜಿ|| ಧಾರವಾಡ ಇವರು ಲಿಂಗಾಯತ ಸಮಾಜದ ಸ್ತ್ರೀ ಶಿಕ್ಷಣದ ಪ್ರಸಾರಕ್ಕಾಗಿ ೧೫೦೦ ರೂಪಾಯಿಗಳ ಪ್ರಾಮಿಸರಿ ನೋಟುಗಳನ್ನು ಧಾರವಾಡ ಲಿಂಗಾಯತ ಫಂಡ್ ಅಸೋಸಿಯೇಷನ್ನವರ ವಶಕ್ಕೆ ಕೊಟ್ಟಿರುತ್ತಾರೆ. ಈ ನೋಟುಗಳ ೪|| ರೂ. ಬಡ್ಡಿಯಿದ್ದು ಈ ಬಡ್ಡಿಯ ಹಣದಿಂದ ಶ್ರೀಮತಿ ವೀರವ್ವನವರ ಹೆಸರಿನದೊಂದು ಶಿಷ್ಯವೃತ್ತಿಯು ಸ್ಥಾಪಿಸಲ್ಪಟ್ಟಿದೆ. ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಕ್ಕೆ ಜೋಡಿಸಿರುವ ಕನ್ಯಾಶಾಲೆಯಲ್ಲಿ ೫ ನೇ ಇಯತ್ತೆಯಲ್ಲಿ ೧ ನೇ ನಂಬರ್ ತೇರ್ಗಡೆ ಹೊಂದಿ ಕಾಲೇಜಕ್ಕೆ ಹೋಗಿ ಅಭ್ಯಾಸಿಸುವ ವಿದ್ಯಾರ್ಥಿನಿಗೆ ಈ ಶಿಷ್ಯವೃತ್ತಿಯು ಕೊಡಲ್ಪಡುವದು. ಸ್ತ್ರೀಶಿಕ್ಷಣದ ಮಹತ್ವವನ್ನು ಕಂಡು ಅದರ ಉತ್ತೇಜನಾರ್ಥವಾಗಿ ಈ ಶಿಷ್ಯವೃತ್ತಿಯನ್ನು ಸ್ಥಾಪಿಸಿದ್ದಕ್ಕಾಗಿ ಶ್ರೀ ವೀರವ್ವನವರ ಉದಾಹರಣೆಯು ಮೊದಲನೆಯದಾಗಿರುವುದಲ್ಲದೆ ಎಷ್ಟೋ ಶ್ರೀಮಂತ ಮನೆತನದ ಸ್ತ್ರೀಸಮಾಜಕ್ಕೆ ಅನುಕರಣೀಯವಾಗಿದೆ. ಈ ಬಗೆಯ ಮೇಲ್ತರದ ಉದಾಹರಣೆಯನ್ನು ಹಾಕಿಕೊಟ್ಟದ್ದಕ್ಕಾಗಿ ಸಮಸ್ತ ವೀರಶೈವರೂ ಅವರಿಗೆ ಋಣಿಯಾಗಿದ್ದಾರೆ. ಶ್ರೀಮತಿ ವೀರವ್ವನವರ ಈ ಔದಾರ್ಯಬುದ್ಧಿಯು ಅಭಿನಂದನೀಯವಾಗಿದೆ.

9 ನೆ ಶ್ರೀಮದ್ವೀರಶೈವಮಹಾಸಭಾ ಆಫೀಸು, ಬೀರೂರು.

9 ನೆ ಶ್ರೀಮದ್ವೀರಶೈವ ಮಹಾಸಭೆಯು ಈ ಡಿಶಂಬರ್ ತಿಂಗಳು ತಾರೀಖು 27, 28, 29 ರಲ್ಲಿ ನಡೆಯಬೇಕೆಂದು ಆದ ರಿಸೆಪ್ಷನ್ ಕಮಿಟಿಯವರ ತೀರ್ಮಾನದ ಪ್ರಕಾರ ಮಹಾ ಸಭಾಕಾರ್ಯಕ್ರಮಗಳ ವಿಚಾರದಲ್ಲಿ ಏರ್ಪಾಟನ್ನು ನಡಿಸುತ್ತಿರಲಾಗಿ, ಇಂಫ್ಲುಯಂಜಾ ರೋಗವು ಈ ಊರಲ್ಲಿಯೂ, ಮತ್ತು ಹಿಂದೂಸ್ಥಾನದ ಅನೇಕ ಭಾಗಗಳಲ್ಲಿಯೂ ವ್ಯಾಪಿಸಿ, ಅನೇಕವಾದ ಅನಾಹುತವನ್ನು ಮಾಡಿಯೂ ಮಾಡುತ್ತಲೂ ಇರುವ ಅಂಶವು ಸರ್ವರಿಗೂ ತಿಳಿದಿರುತ್ತದಷ್ಟೆ. ಈವರೆಗೆ ನಿರೀಕ್ಷಿಸಿದಾಗ್ಯೂ ಈ ರೋಗದ ಹಾವಳಿಯು ಕಡಮೆಯಾಗುವ ಸಂಭವವು ಕಾಣಲಿಲ್ಲ. ಮತ್ತು ಇದರ ಜೊತೆಗೆ ಎಲ್ಲಾ ಕಡೆಯೂ ಭೀಕರವಾದ ಕ್ಷಾಮವು ತಲೆದೋರಿ ಜನಗಳಿಗೆ ಹೆಚ್ಚಿನ ಭೀತಿಯನ್ನು ಉಂಟುಮಾಡುತ್ತಲಿದೆ. ಈ ಅನಾನುಕೂಲದಿಂದ ಈ ಡಿಶಂಬರ್ ತಿಂಗಳಲ್ಲಿ ನಡೆಯಬೇಕಾಗಿದ್ದ ಮಹಾ ಸಭಾಕಾರ್ಯವನ್ನು ನಿರ್ವಾಹವಿಲ್ಲದೆ ನಿಲ್ಲಿಸಬೇಕಾಗಿ ಬಂದದ್ದರಿಂದ ನಾವು ಕುಂಬಾ ವಿಷಾದಿಸುತ್ತೇವೆ.

ಈ 9 ನೇ ಮಹಾಸಭೆಯನ್ನು ಮುಂದೆ ಯಾವತಿಂಗಳಲ್ಲಿ ನಡೆಸುವುದು ಅನುಕೂಲವೆಂಬುವ ಬಗೆಗೆ ಧಾರ್ವಾಡದ ಸ್ಟ್ಯಾಂಡಿಂಗ್‌ಕಮಿಟಿ ಚೇರ್ಮನ್ನರನ್ನೂ ಮತ್ತು ಮಹಾಸಭಾ ಚಿರಸ್ಥಾಯಿ ಫಂಡ್ ಚೇರ್ಮನ್ನರನ್ನೂ ಸಹ ಸಲಹೆ ಕೇಳಿರುತ್ತೇವೆ. ಅವರ ಸಲಹೆ ಬಂದೊಡನೆ ಈ ಮಹಾಸಭೆಯು ಯಾವಾಗ ನಡೆಯತಕ್ಕದೆಂಬುದನ್ನು ನಿರ್ಧರಿಸಿ ಮತ್ತೊಮ್ಮೆ ಪ್ರಚುರಪಡಿಸುವೆವು.

ಪತ್ರಿ ಚಂ|| ವೀರಪ್ಪ ಬೀರೂರು, ಸ್ವಾಗತ ಸಂಘಾಧ್ಯಕ್ಷ.

ಒಂಭತ್ತನೆಯ ಶ್ರೀಮದ್ವೀರಶೈವ ಮಹಾಸಭೆಯಿಂದ ಆಗತಕ್ಕ ಪ್ರಯೋಜನಗಳೇನು ?

ಮಹಾಶಯರೆ ! ಪ್ರತಿವರ್ಷದ ಡಿಶಂಬರ್ ತಿಂಗಳು ಸಭೆಗಳ ಸುಗ್ಗಿಯ ಕಾಲವೆಂದು ಸುಪ್ರಸಿದ್ಧವಾಗಿದ್ದರೂ ಈ ವರ್ಷದ ಡಿಶಂಬರ್ ತಿಂಗಳನ್ನು ಒಂದು ಸಂಧಿಕಾಲವೆಂದು ಹೇಳಬಹುದು. ಯಾಕೆಂದರೆ ಯಾವ ಸದ್ಧರ್ಮಪ್ರಭುಗಳ ರಾಜ್ಯಭಾರದಲ್ಲಿ ಬಹು ಸಂಖ್ಯಾಕರಾದ ಹಲವು ಪ್ರಜಾವರ್ಗಗಳಿಂದ ಕೂಡಿದ ಭರತಖಂಡವು ಶಾಂತಿಸುಖದಲ್ಲೋಲಾಡುತ್ತಿರುವುದೋ ಅಂಥಾ ಆಂಗ್ಲ ಸಾರ್ವಭೌಮ ಸರ್ಕಾರಕ್ಕೆ ಈಗ ನಾಲ್ಕುಕಾಲು ವರ್ಷಗಳಿಂದಲೂ ವರ್ಣನಾತೀತವಾದ ಘೋರಸಂಗ್ರಾಮವು ಪ್ರಾಪ್ತವಾಗಿ, ಪಾಲ್ಯಪಾಲಕರೀರ್ವರನ್ನೂ ಅತ್ಯಂತಾನರ್ಥಗಳಿಗೆ ಗುರಿಮಾಡಿರುವದು ಸರಿಯಷ್ಟೆ. ಇಂಥಾ ವಿಷಮಸಮಯದಲ್ಲಿ ಸಮಸ್ತಭಾರತೀಯರೂ ಅದರಲ್ಲೂ ಸಿಕ್‌ಜನರೇ ಮೊದಲಾದ ಎಲ್ಲಾ ಹಿಂದುಳಿದ ಜನವರ್ಗದವರೂ ಸಹ ಅಸಾಧಾರಣವಾದ ರಾಜಭಕ್ತಿಯಿಂದ ಅಪರಿಮಿತವಾಗಿ ಜನಸಹಾಯ ಧನಸಹಾಯವಂ ಮಾಡಿ ರಣಾಂಗಣದಲ್ಲೂ ನಮ್ಮ ಭಾರತೀಯ ವೀರಭಟರು ಅಸಮಸಾಹಸದಿಂದ ರಾಜಸೇವೆಯಂ ಮಾಡಿದ ಕಾರಣ, ಪ್ರಜಾರಂಜನೈಕ ಪರಾಯಣರಾದ ನಮ್ಮ ಪಂಚಮ ಜಾರ್ಜ್ ಸಾರ್ವಭೌಮರು ನಿಷ್ಕಳಂಕವಾದೀರಾಜಭಕ್ತಿಗೆ ಮೆಚ್ಚಿ ಮುಂದೆ ತಮ್ಮ ರಾಜ್ಯಭಾರದಲ್ಲಿ ಭಾರತೀಯರಿಗೆ ವಿಶೇಷ ಸ್ವಾತಂತ್ರ್ಯವನ್ನು ವಹಿಸುವದಾಗಿ ವರದಾನ ಮಾಡಿದರಷ್ಟೆ. ಈ ವರವನ್ನು ಸಫಲಮಾಡಲು ನಮ್ಮ ವೈಸ್ರಾಯರು ರಾಜಕೀಯ ಸುಧಾರಣಾ ವಿಚಾರದಲ್ಲಿ ಹಲವು ಸಲಹೆಗಳನ್ನು ಆಗಲೇ ಸಾರ್ವಭೌಮ ಸರ್ಕಾರಕ್ಕೆ ಬಿನ್ನೈಸಿರುವರು. ಈ ಸಲಹೆಗಳು ಪ್ರಜಾಭಿಪ್ರಾಯದಿಂದ ಪರಿಪಾಕಗೊಂಡು ರಾಜಶಾಸನವಾಗಿ ಮಾಡಲ್ಪಡುವ ಕಾಲವು ಕೇವಲ ಸಮೀಪಕ್ಕೆ ಬಂದಿರುವದು. ಭೂವಲಯವನ್ನೆಲ್ಲಾ ಅಲ್ಲೋಲಕಲ್ಲೋಲಮಾಡಿದ ಘೋರಯುದ್ಧವು ಈಗಾಗಲೇ ಶಾಂತಿಯನ್ನೈದಿರುವುದರಿಂದ ಧರ್ಮಪ್ರಭುಗಳಾದ ಆಂಗ್ಲ ಸರ್ಕಾರದವರಿಗೆ ವಿರಾಮದೊರೆಯುವದರಿಂದ ರಾಜಕೀಯ ಸುಧಾರಣಾ ವಿಷಯದಲ್ಲಿ ಆದಷ್ಟು ಬೇಗನೆ ಪ್ರಜಾಭಿಪ್ರಾಯವಂ ಸಂಗ್ರಹಿಸಬಹುದು. ಈ ಸುಧಾರಣೆಗಳು ಶಾಸನವಾಗಿ ನಿಯಮಿತವಾದಕೂಡಲೇ ಭರತಖಂಡದ ರಾಜ್ಯಭಾರಸ್ಥಿತಿಯೇ ಸಂಪೂರ್ಣ ಬದಲಾಗಿ ಹಲವು ಪ್ರಜಾವರ್ಗಗಳಿಗೆ ಹೆಚ್ಚು ಸ್ವಾತಂತ್ರ್ಯವು ದೊರೆತು ಭರತಖಂಡದ ಮುಂದಿನ ಸ್ಥಿತಿಯೇ ನೂತನವಾಗುವದು. ಆದರಿಂದಲೇ ಪ್ರತಿಯೊಂದು ಪಂಗಡದವರೂ ತಮ್ಮ ತಮ್ಮಗಳ ಹಕ್ಕು ಬಾಧ್ಯತೆಯನ್ನು ಕಾಪಾಡಿಕೊಳ್ಳಲು ಅವಶ್ಯವಾದ ಸಲಹೆಗಳನ್ನು ಸೂಚಿಸುವದಕ್ಕಾಗಿ ಎಲ್ಲಾ ಪ್ರದೇಶಗಳಲ್ಲೂ ಸಭೆಗಳನ್ನು ಕೂಡಿಸುತ್ತಿರುವಲ್ಲಿ ಇಂಥಾ ಸಂಧಿ ಕಾಲದಲ್ಲಿ ಯಾವ ಜನಾಂಗದವರು ಔದಾಸೀನ್ಯವಂ ವಹಿಸುವರೋ ಅವರು ಮುಂದೆ ನಾಮಾವಶೇಷರಾಗಿ ಬಹಳ ಅಧೋಗತಿಯನ್ನೂ ತಿರಸ್ಕಾರವನ್ನೂ ಪಡೆಯುವದರಲ್ಲಿ ಲೇಶವೂ ಸಂದೇಹವಿಲ್ಲ. ಆದರೆ ಯಾವ ಮಹನೀಯರ ಅವಿಚ್ಛಿನ್ನವಾದ ಶಾಂತಪ್ರಯತ್ನಗಳಿಂದೀರಾಜಕೀಯ ವರದಾನವಾಗಿದೆಯೋ ಅಂಥಾ ಅತುಲದೇಶಾಭಿಮಾನಿಗಳಾದ ದಾದಾಭಾಯಿ ನೌರೋಜಿಯವರು, ಗೋಪಾಲಕೃಷ್ಣ ಗೋಖಲೆ ಸಿ. ಐ. ಇ. ಯವರು, ಪಿ. ಎಂ. ಮಹತಾರವರು ಮತ್ತು ಶಿವೈಕ್ಯರಾದ ರಾ|| ಬ|| ವಾರದ ಮಲ್ಲಪ್ಪನವರು, ಶ್ರೀಮಂತ್ ಲಿಂಗಪ್ಪ ಜಯಪ್ಪದೇಸಾಯಿಯವರೇ ಮೊದಲಾದ ಮಹನೀಯರು ಈಗಲೂ ಇದ್ದಿದ್ದರೆ ನಾವು ಅಷ್ಟು ಯೋಚಿಸಬೇಕಾಗಿರಲಿಲ್ಲ. ಆದರೆ ಸದ್ಯಃ ಕಾಲಸ್ಥಿತಿಯು ಹಾಗಿಲ್ಲದೆ ದೇಶದಲ್ಲೆಲ್ಲಾ ಉಗ್ರಪಕ್ಷ ಸೌಮ್ಯಪಕ್ಷಗಳುಂಟಾಗಿ ಪ್ರಜಾಕ್ಷೇಮಕ್ಕೆ ವಿಷಮಸ್ಥಿತಿಯುಂಟಾಗಿದೆ. ಆದಕಾರಣ ಎಲ್ಲಾ ಹಿಂದುಳಿದ ಜನವರ್ಗದವರೂ ಅದರಲ್ಲೂ ಸುಮಾರು $\frac{1}{3}$ ಕೋಟಿಗಿಂತಲೂ ಹೆಚ್ಚಾದ ಜನಸಂಖ್ಯೆಯುಳ್ಳ ವೀರಶೈವ ಸಮಾಜದವರು, ಆ|| ಬಾಬು ಸುರೇಂದ್ರನಾಥ ಬಾನರ್ಜಿಯವರು, ರಾ|| ಬ|| ರುದ್ರಗೌಡ ಚನ್ನವೀರಗೌಡ ಅರಟಾಳ್ ಐ. ಎಸ್. ಓ. ರವರೇ ಮೊದಲಾದ ಅನೇಕ ಜ್ಞಾನವಯೋವೃದ್ಧರಿಂದೆಲ್ಲಾ ಅನುಮೋದಿಸಲ್ಪಟ್ಟಿರುವ ಸೌಮ್ಯಪಕ್ಷವನ್ನು ಹಿಂಬಾಲಿಸಿ, ಬಹಳ ಕೃತಜ್ಞತೆಯಿಂದ ಆಂಗ್ಲ ಸರ್ಕಾರದ ಬೆಂಬಲವಿಡಿದು ಪ್ರತ್ಯೇಕ ಪ್ರಾತಿನಿಧ್ಯತತ್ವವನ್ನು ಪ್ರತಿಪಾದಿಸಿ ನಮ್ಮ ಸಮಾಜದ ಶ್ರೇಯಸ್ಸಿಗೆ ಅವಶ್ಯವಾದ ಸಲಹೆಗಳನ್ನು ನೂತನ ರಾಜಕೀಯ ಸುಧಾರಣೆಗಳಲ್ಲಿ ಸೂಚಿಸುವದಕ್ಕಾಗಿಯೂ ಮತ್ತು ಪ್ರಜಾಭಿಪ್ರಾಯವನ್ನು ಪಾರ್ಲಿಮೆಂಟಿಗೆ ಅರಿಕೆಮಾಡಲು ನಮ್ಮ ಸಮಾಜದ ಪರವಾಗಿ ಒಂದು ಕಮಿಟಿಯನ್ನೇರ್ಪಡಿಸುವದಕ್ಕೂ ಸಹ 9 ನೆ ಶ್ರೀಮದ್ವೀರಶೈವ ಮಹಾಸಭೆಯನ್ನು ಈ ಡಿಶಂಬರ್ ತಿಂಗಳಲ್ಲೇ ಕೂಡಿಸಬೇಕಾದದ್ದು ಅತ್ಯಂತ ಅವಶ್ಯಕವೂ ಕರ್ತವ್ಯವೂ ಆಗಿರುತ್ತೆ. ಇಷ್ಟೇ ಅಲ್ಲ. ದಾನಶೂರರಾದ ಕೈ. ಲಿಂಗಪ್ಪ ಜಯಪ್ಪ ದೇಸಾಯರು ಶ್ರೀ ಬಸವೇಶ್ವರರ ಅಪರಾವತಾರರೆನಿಸಿ ಮಾಡಿದ ಅಭೂತಪೂರ್ವವಾದ ಮಹಾದಾನವನ್ನು ಆಂಗ್ಲ ಸಾಮ್ರಾಜ್ಯದ ನ್ಯಾಯಸಭೆಯವರು ಸ್ಥಿರಪಡಿಸಿ ನಮ್ಮ ಸಮಾಜಕ್ಕೆ ಕಲ್ಯಾಣವನ್ನು ಉಂಟುಮಾಡಿರುವದರಿಂದ ಪ್ರಜಾವಾತ್ಸಲ್ಯಪೂರ್ಣ ಸಾರ್ವಭೌಮ ಸರ್ಕಾರಕ್ಕೂ ಟ್ರಸ್ಟಿಗಳಿಗೂ ಕೃತಜ್ಞತೆಯನ್ನು ಮಹಾಸಭಾ ಮೂಲಕ ಸಮರ್ಪಿಸಬೇಕಾಗಿರುವದು. ಅಲ್ಲದೆ ಮಹಾಸಭೆಯ ಚಿರಜೀವಿತೆಗಾಗಿ ಏರ್ಪಟ್ಟಿರುವ ಧನರಾಶಿಗೆ ಹಿಂದಿನ ಸಭಾಕಾಲದಲ್ಲಿ ಕೂಡಿದ ಹಣದ ಹೊರತು ಈಚೆಗೆ ವಸೂಲಿ ನಡೆದಿರುವ ಹಾಗೆ ಕಾಣುವುದಿಲ್ಲ. ಆದ ಪ್ರಯುಕ್ತ ಬಾಕಿ ಇರುವ ಮೊಬಲಗಿನ ವಸೂಲಿ ವಿಚಾರದಲ್ಲಿ ಏರ್ಪಾಟುಗಳನ್ನು ಮಾಡುವದು ಅವಶ್ಯವಾಗಿದೆ. ಅಲ್ಲದೆ ಪ್ರತಿಯೊಂದು ಸಭೆಯ ಅವನತಿಗೂ ಉನ್ನತಿಗೂ ಅದರ ಸ್ಟ್ಯಾಂಡಿಂಗ್ ಕಮಿಟಿಯೇ ಮೂಲಕಾರಣವಾಗಿದೆ. ಇದರಿಂದಲೇ ಕಾಂಗ್ರೆಸ್ಸಿಗೂ ಕೂಡ ಸೆಂಟ್ರಲ್ ಕಮಿಟಿಯೂ ಪ್ರಾಂತಿಕ ಸಭೆಗಳೂ ಏರ್ಪಟ್ಟಿವೆ. ಸಭೆಯ ಪೋಷಕರಾದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳವರ ಅನಂತ ಕೃಪಾಬಲದಿಂದ ಪುನರುಜ್ಜೀವಿಸಿದ ಶ್ರೀಮದ್ವೀರಶೈವ ಮಹಾಸಭೆಯು ಪುನಃ ರಾಹುಗ್ರಸ್ತವಾಗಲು ಅವಕಾಶವಾಗದಂತೆ ಪೋಷಿಸುತ್ತಾ ಚಿರಜೀವಿಯಾಗಿ ಮಾಡಲು ಈಗಿನ ಸ್ಟ್ಯಾಂಡಿಂಗ್ ಕಮಿಟಿಯನ್ನು ಸುಧಾರಿಸತಕ್ಕದ್ದು ಮುಖ್ಯ ಕರ್ತವ್ಯವಾಗಿದೆ. ಮೈಸೂರು ಸರ್ಕಾರದವರು ಹೊಸದಾಗಿ ಬರೆಯುತ್ತಿರುವ ಮೈಸೂರು ಗೆಜಿಟಿಯರ್, ಮೈಸೂರು ಚರಿತ್ರೆ ಮೊದಲಾದ ಜನಾಂಗ ವರ್ಣನಾ ಪುಸ್ತಕಗಳಲ್ಲಿ ವೀರಶೈವಮತದ ಸನಾತನತ್ವವು ಉದಹರಿಸಲ್ಪಡುವಂತೆ ಮಾಡಲು ಒಂದು ಕಮಿಟಿಯನ್ನು ಏರ್ಪಡಿಸತಕ್ಕದ್ದು ಅವಶ್ಯವಾಗಿದೆ. ಇತ್ಯಾದಿ ಅನಂತ ಮಹತ್ತರ ಸಂಗತಿಗಳೆಲ್ಲಾ ಸಂಧಿಸಿರುವ ಈಗಿನ ಸ್ಥಿತಿಯಲ್ಲಿ ಈ ಡಿಶಂಬರ್ ತಿಂಗಳಲ್ಲೇ ಮಹಾಸಭೆಯನ್ನು ನಡೆಸತಕ್ಕದ್ದು ಬಹಳ ಅವಶ್ಯವಾಗಿದೆ. ಒಂದು ವೇಳೆ ಆಹಾರ ದಿನಸಿಗಳ ಅಭಾವದಿಂದುಂಟಾಗಿರುವ ಕಾಲಸ್ಥಿತಿಯನ್ನು ಕೆಲವರು ಸೂಚಿಸಿ ಸಭೆಯನ್ನು ಮುಂದೆ ಮೇ ತಿಂಗಳಲ್ಲಿ ನಡಿಸಬಹುದೆಂದು ಅಭಿಪ್ರಾಯ ಪಡಬಹುದು. ಬೀರೂರಿನವರ ಯೋಚನೆಯೂ ಹೀಗೆಯೇ ಇರಬಹುದು. ಆದರೆ ಮುಂದಣಕಾಲಸ್ಥಿತಿಯು ಇನ್ನೂ ಭಯಂಕರವಾದರೆ ? ಅದರಿಂದ ಮಹಾಸಭೆಯೇ ನಿಂತುಹೋಗಬಹುದು. ಈಗಿನ ಸುಧಾರಣಾ ಸಂಧಿಯಲ್ಲಿ ಸಭೆಯನ್ನು ಡಿಶಂಬರ್ ತಿಂಗಳಲ್ಲೇ ನಡಿಸದಿದ್ದರೆ ಸಮಾಜಕ್ಕೆ ಆಗಬಹುದಾದ ಲಾಭವು ತಪ್ಪಿ ಅನರ್ಥಕ್ಕೆ ಅವಕಾಶವಾಗಬಹುದು. ಈ ಅಪಪ್ರಥೆಗೆ ಗುರಿಯಾಗತಕ್ಕ ದುರ್ಯೋಗವು ಬೀರೂರಿನವರಿಗೆ ಉಂಟಾಗತಕ್ಕದ್ದಲ್ಲ. ಇಂಥಾ ಅನೇಕ ಸಭೆಗಳನ್ನು ಸ್ವಶಕ್ತಿಯಿಂದಲೇ ನಡಿಸತಕ್ಕ ಧನಸಂಪತ್ತಿಯನ್ನು ಶ್ರೀ ಪರಶಿವನು ಶ್ರೀ|| ಪತ್ರಿ ವೀರಪ್ಪಯ್ಯನವರಿಗೊಬ್ಬರಿಗೆ ದಯಪಾಲಿಸಿದ್ದಾನೆ. ಇವರ ಬೀಗರಾದ ಶ್ರೀ|| ಟಿ. ಎಂ. ಷಡಕ್ಷರಪ್ಪನವರೇ ಮೊದಲಾದವರು ಹಿಂದಿನ ಸಭೆಯನ್ನು ಒಂದು ತಿಂಗಳೊಳಗಾಗಿ ನಡಿಸಲಿಲ್ಲವೆ ? ಅಲ್ಲದೆ ಇನ್ನು ಕೆಲವು ಶ್ರೀಮಂತರ ಅವಲಂಬನವೂ ಬೀರೂರಿನ ಸತ್ಕಾರಕಸಂಘಕ್ಕೆ ದೊರೆದಿದೆ. ಸಭಾಕಾಲವು ಬಹಳ ಸಮೀಪಿಸಿರುವದರಿಂದ ಬೀರೂರಿನವರು ಭಕ್ತವತ್ಸಲನಾದ ಶ್ರೀ ಪರಶಿವನನ್ನು ನಂಬಿ ಶ್ರೀ ಜಗದ್ಗುರುಗಳವರ ದಿವ್ಯಸನ್ನಿಧಿಯಲ್ಲಿ ಕೈಕೊಂಡ ತಮ್ಮ ಕರ್ತವ್ಯದಲ್ಲಿ ವಿಮುಖರಾಗದೆ ಧೈರ್ಯದಿಂದ ಕಾರ್ಯತತ್ಪರರಾಗಿ ಈ ಡಿಶಂಬರ್‌ನಲ್ಲೇ ಮಹಾಸಭೆಯನ್ನು ಕೂಡಿಸಿ ಧನ್ಯರಾಗಿ ಶ್ರೀ ಜಗದಂಬಾಪತಿಯ ಪ್ರೀತಿಗೂ ಇಹಲೋಕಖ್ಯಾತಿಕರವಾದ ಕೀರ್ತಿಗೂ ಪಾತ್ರರಾಗಲು ಸವಿನಯಪ್ರಾರ್ಥನೆ. ಇವರು ವಿಮುಖರಾದರೆ ಸಮಾಜದ ಆದರ್ಶಪ್ರಾಯರಾದ ಧಾರ್ವಾಡ ಮತ್ತು ಬೆಳಗಾಂ ಬಂಧುಗಳು ಜಾಗ್ರತೆ ಇವರಭಿಪ್ರಾಯವನ್ನು ತಿಳಿದು ಸಭೆಯನ್ನು ಡಿಶಂಬರಿನಲ್ಲೇ ಹುಬ್ಬಳ್ಳಿ ಅಥವಾ ಗದಗಿನಲ್ಲಿ ಅಲ್ಲಿಯ ಶ್ರೀ ಜಗದ್ಗುರುಗಳವರ ಕೃಪಾವಲಂಬನದಿಂದ ಖಂಡಿತನಡಿಸಬೇಕಾಗಿ ಸವಿನಯಪ್ರಾರ್ಥನೆ.

ಸಮಾಜಸೇವಕ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ
ಸುಖಾನಂದ
(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
48 3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಪರತ.) 1
ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಯಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

13 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

೧೯೧೮ ನೆಯ ಇಸವಿ ನವಂಬರ್ ತಾ|| ೨೪ ರಿಂದ ೧೯೧೮ ನೆಯ ನವಂಬರ್ ತಾ|| ೩೦ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೧ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಕಾರ್ತೀಕ ಬ|| ಸಪ್ತಮಿಯಿಂದ ಕಾರ್ತೀಕ ಬ|| ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ಮಾಸ
24	ಭಾನು	ಸಪ್ತ	58-57	ಆಶ್ಲೇಷ	44-30	9
25	[1] ಸೋಮ	ಅಷ್ಟ	60	ಮಖಾ	47-35	10
26	ಮಂಗಳ	ಅಷ್ಟ	2-0	ಪುಭ	51-55	11
27	ಬುಧ	ನವ	5-17	ಉಭ	57-14	12
28	ಗುರು	ದಶ	9-31	ಹಸ್ತ	60	13
29	[2] ಶುಕ್ರ	ಏಕಾ	14-34	ಹಸ್ತ	3-53	14
30	[3] ಶನಿ	ದ್ವಾದ	19-58	ಚಿತ್ತ	10-11	15

(1) ಕಾರ್ತೀಕಸೋಮವಾರಂ. (2) ದ್ವಾದಶೀತಿಥಿಃ, ಸರ್ವತ್ರೈಕಾದಶೀ. (3) ಶನಿಪ್ರದೋಷಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀತಾರಾ ಶರನುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ರಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶಿವಮಾತೀತಯಶಃಪ್ರತಾಪವಿಪುಲಂ ಸದ್ವೃತ್ತನಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಡಿಶಂಬರ್ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೪೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ —ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಅಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ. —ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ನಂದಿಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.



ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ನಿಲ್ ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹೂವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅಚ್ಚ ರವುಣಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ ಸೀಸೆ 1, ವಜ್ರದ ಹರಳು ಗುಂಡಿಗಳು 4, ಜರ್ಮನ್ ಕೈವಸ್ತ್ರ 1, ರೋಲ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೋ.,
40 3, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೆಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದ ಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ್ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಸ್ಮೆ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಧಾಯಿವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಪನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ ಹೆಡ್ ಆಫೀಸ
29 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ ಕೊಡುತ್ತೆ.

ಫುಕಟ ! ಇನ್‌ಫ್ಲುಯೆಂಝಾ ಪತ್ರಿಕೆ-ಫುಕಟ !!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬದನ್ನು ಲಕ್ಷ್ಯದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲುಯೆಂಝಾ ಪಿಲ್ಸ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳ ಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಕ್ಸನ್ನಿಪಾತ ಕಫ ಮಲಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ಬೆ-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚಕವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ 'ಇನ್‌ಫ್ಲುಯೆಂಝಾ ಪತ್ರಿಕೆ' ಯನ್ನು ಫುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
49 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 50

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯಸ್ಟೇಟ್ಸ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಮ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯುರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನು ಉಪಯೋಗಿಸಿದುದರಲ್ಲಿ ಕ್ರಮವಾಗಿ [illegible]ಗಳ ಶ್ವಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಕುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಡಿಸೆಂಬರ್ ತಾ|| ೧ ನೆಯ ಭಾನುವಾರ.

ದವಸದ ಮಾರಾಟ.

ಈಗಣ ದುರ್ಭಿಕ್ಷದ ವಿಷಮಕಾಲದಲ್ಲಿ ಸರ್ಕಾರದವರು ದವಸಗಳ ಬೆಲೆಯನ್ನು ನಿಗದಿಮಾಡಿ, ಅವುಗಳನ್ನು ತಮ್ಮಧೀನಕ್ಕೆ ತೆಗೆದುಕೊಂಡು, ಮಾರಾಟಮಾಡಿಸಲು ಏರ್ಪಡಿಸದಿದ್ದರೆ ದೇಶದಲ್ಲಿ ವಾಚಾಮಗೋಚರವಾದಷ್ಟು ಅನರ್ಥಗಳಾಗದೆ ಇರುತ್ತಿರಲಿಲ್ಲವೆಂಬುದನ್ನು ದೀರ್ಘದರ್ಶಿಗಳೆಲ್ಲಾ ಬಲ್ಲರು. ಇಂಥ ಪ್ರಯತ್ನವನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ಮಾಡಿದುದಕ್ಕಾಗಿ ಪ್ರಜೆಗಳೆಲ್ಲರೂ ಕೃತಜ್ಞತೆಯಿಂದ ವಂದಿಸುತ್ತಿರುವರು. ಆದರೆ ಸರ್ಕಾರದವರೇ ಈ ಕಾರ್ಯವನ್ನು ಎಲ್ಲಿಯವರೆಗೆ ನಿರ್ವಹಿಸುತ್ತಿರುವುದಕ್ಕಾದೀತು? ಇದರ ಭಾರವನ್ನೆಲ್ಲಾ ಸರ್ಕಾರದ ತಲೆಗೇ ಕಟ್ಟಿಬಿಟ್ಟು ಪ್ರಜೆಗಳು ತಟಸ್ಥರಾಗಿದ್ದರೆ, ಸಂಪಾದನಾಕರ್ತನಾದ ಮನೆಯಜಮಾನನನ್ನು ಅಡುಗೆಯ ಕೋಣೆಕೆಲಸಕ್ಕೆ ಕಳುಹಿಸಿ, ಉಂಡಾಡಿಗಳಾದ ಇತರರೆಲ್ಲಾ ಉಂಡುಂಡು ಹಾಸಿ ಮಲಗಿದಂತಾಗುವುದೇ ಸರಿ. ಏಕೆಂದರೆ—ಸರ್ಕಾರದವರಿಗೆ ದೇಶಪ್ರಜೆಗಳ ಹಿತಾರ್ಥವಾಗಿ ಮಾಡಬೇಕಾದ ನಿತ್ಯಗಟ್ಟಲೆಯ ಹೆಚ್ಚುಗಟ್ಟಲೆಯ ಕಾರ್ಯಭಾಗಗಳು ಮೊದಲೇ ಮಿತಿಮೀರಿರುವುವು. ಅಂಥ ಭಾರವನ್ನು ಹೊತ್ತಿರುವವರನ್ನು ಈ ವ್ಯಾಪಾರದ ಉದ್ಯೋಗಕ್ಕೂ ತಗುಲಿಹಾಕಿಬಿಟ್ಟರೆ ಗತಿಯೇನು? ಸರ್ಕಾರದ ಕಾರ್ಯಗಳೆಲ್ಲಾ ಹಾಸಿ ಹೊದ್ದು ಮಲಗಿಕೊಳ್ಳುವುವು. ಅದರ ಕಷ್ಟನಷ್ಟಗಳು ಪ್ರಜೆಗಳಿಗೇ ತಟ್ಟುವುವು. ಇದನ್ನು ಯೋಚಿಸಬಲ್ಲ ಪ್ರಜೆಗಳು ಮೊದಲು ಅವರನ್ನು ಈ ನೂತನ ಕಾರ್ಯಭಾರದಿಂದ ಬಿಡುಗಡೆ ಮಾಡಿ ಅವರ ನಿಯಮಿತ ಕಾರ್ಯಗಳಿಗೆ ಅವರನ್ನು ಹೋಗಗೊಡಿಸಬೇಕು. ಮತ್ತು ಸರ್ಕಾರದವರಾದರೂ ದೇಶದ ಪ್ರಜೆಗಳಿಗೆಲ್ಲಾ ತಾವೇ ಮಾರಾಟಮಾಡಿ ದವಸವನ್ನೊದಗಿಸುತ್ತೇವೆಂದು ನಿಲ್ಲುವುದು ಸಮರ್ಪಕವಾಗಿ ನಡೆಯತಕ್ಕ ಕಾರ್ಯವಾಗಿರುವುದಿಲ್ಲ. ಅದರಿಂದ ಸರ್ಕಾರಕ್ಕೂ ಶ್ರಮ ತಪ್ಪುವುದಿಲ್ಲ; ಪ್ರಜೆಗಳ ದೂರೂ ತಪ್ಪುವುದಿಲ್ಲ. ಲೋಪದೋಷಗಳಿಲ್ಲದೆ ಕಾರ್ಯವು ಸಾಗುವುದಿಲ್ಲ. ಈ ವಿಷಯವನ್ನು ಸರ್ಕಾರದವರೂ ಯೋಚಿಸದೆ ಇಲ್ಲ. ವ್ಯಾಪಾರಗಾರರು ದೇಶದ ಸ್ಥಿತಿಗತಿಯನ್ನೂ ಸ್ವಪರಿಣಾಮ ಪ್ರಜಾಪರಿಣಾಮಗಳನ್ನೂ ಆಲೋಚಿಸಿ, ಆಪತ್ಕಾಲದಲ್ಲಿ ಸ್ವಾರ್ಥಕ್ಕಿಂತಲೂ ಪರಹಿತಾಚಾರಣೆಯೇ ಮುಖ್ಯವೆಂದು ಭಾವಿಸಿ, ತಮ್ಮ ವ್ಯಾಪಾರಧರ್ಮವನ್ನು ತಾವು ಸಾಗಿಸುತ್ತಿದ್ದರೆ ಸರ್ಕಾರದವರು ಈ ಭಾಗಕ್ಕೆ ಕೈಹಾಕುತ್ತಲೇ ಇರಲಿಲ್ಲ. ವಿಪತ್ಕಾಲದಲ್ಲಿ ವರ್ತಕರು ತೋರಿಸಿದ ಸ್ವಾರ್ಥತ್ಯಾಗ ಪರಹಿತಾಚರಣವರ್ತನಕ್ಕಾಗಿ ಪ್ರಭುಗಳು ಸಂತೋಷಿಸಿ ಪ್ರಸನ್ನರಾಗುತ್ತಿದ್ದರಲ್ಲದೆ ಪ್ರಜೆಗಳೂ ಕೃತಜ್ಞರಾಗಿ ಗೌರವಿಸುತ್ತಿದ್ದರು. ಅಂಥ ಸುಯೋಗಸಂಧಿಯು ವ್ಯರ್ಥವಾಗಿ ಕಳೆದುಹೋಯಿತು, ಹೋಗಲಿ. ಇನ್ನಾದರೂ ಮಾಡಬೇಕಾದ ಕಾರ್ಯವು ಉಳಿಯದೆ ಮುಳುಗಿಹೋಗಿಲ್ಲ. ಅದನ್ನಾದರೂ ವರ್ತಕರು ಸಾರ್ಥಕಪಡಿಸದೆ ತಟಸ್ಥರಾಗಬಾರದು. ಪ್ರಜೆಗಳಿಂದ ಈ ಭಾಗದಲ್ಲಿ ಯಾವ ತೆರದ ಸಾಹಾಯ್ಯವಾದರೂ ಅದನ್ನುಪಯೋಗಿಸಿಕೊಂಡು ದೇಶಸೇವೆಯನ್ನು ಮಾಡಲು ಸರ್ಕಾರದವರೂ ಸಿದ್ಧರಾಗಿಯೇ ಇರುವರು. ಅವರು ಇದುವರೆಗೆ ತಮ್ಮ ಪ್ರಕಟನೆಗಳಲ್ಲಿ ತಿಳಿಸಿರುವುದು ಮಾತ್ರವೇ ಅಲ್ಲದೆ, ದಿವಾನರು ಬೆಂಗಳೂರಿನಲ್ಲಿ ತಾ|| ೧೬ ನೆಯ ದಿನ ನಡೆಯಿಸಿದ ಸಭೆಯಲ್ಲೂ ಹೇಳಿರುವರು. ಕಳೆದ ತಾ|| ೨೮ ರಲ್ಲಿ ರಾಜಧಾನಿಯ ಟೌನ್‌ಹಾಲಿನಲ್ಲಿ ಮ್ಯು|| ಪ್ರೆಸಿಡೆಂಟರೂ ರೆ|| ಕಮಿಷನರೂ ಆಹಾರ್ಯವಸ್ತುಗಳ ಕಂಟ್ರೋಲರೂ ಸೇರಿ ಪ್ರಜಾಪ್ರಮುಖರನ್ನು ಕರೆಯಿಸಿಕೊಂಡು ಮಾಡಿದ್ದ ಸಭೆಯಲ್ಲೂ ಅದನ್ನು ಹೇಳಿರುವರು. ಈಗಲಾದರೂ ವರ್ತಕರುಗಳು ಮುಂದಾಗಿ ಬಂದು ಸರ್ಕಾರದವರು ನಿಗದಿಮಾಡಿಕೊಡುವ ಬೆಲೆಗೆ ಮುಖ್ಯಧಾನ್ಯಗಳನ್ನು ಮಾರಾಟಮಾಡುವುದಕ್ಕೆ ನಿಂತುಕೊಳ್ಳಬಾರದೆ? ಆ ಭಾಗದಲ್ಲಿ ಸರ್ಕಾರದಿಂದಾಗಬೇಕಾದ ಸಹಾಯವನ್ನು ಅವರು ಮಾಡಿಕೊಡುವುದಕ್ಕೆ ಎಂದಿಗೂ ಹಿಂದೆಗೆಯಲಾರರು. ಬೊಂಬಾಯಿ ಮದ್ರಾಸು ಸರ್ಕಾರದವರು ನಿಗದಿಬೆಲೆಯಿಂದ ಮಾರಾಟಮಾಡುತ್ತೇವೆಂಬ ವರ್ತಕರಿಗೆ ವ್ಯಾಪಾರ ಮಾಡಲು ಅಪ್ಪಣೆಚೀಟಿಯನ್ನು ಕೊಡಲು ಏರ್ಪಡಿಸಿರುವುದಲ್ಲದೆ ಮೂಟೆಯೊಂದಕ್ಕೆ ೮ ಆಣೆ ಲಾಭದಮೇಲೆ ಧಾನ್ಯವನ್ನು ಮಾರಾಟ ಮಾಡಬಹುದೆಂದೂ ಅವಕಾಶವಿತ್ತಿರುವರು. ನಮ್ಮ ಸರ್ಕಾರದವರೂ ಕೂಡ ಪ್ರಾಮಾಣಿಕರಾದ ವರ್ತಕರಿಗೆ ಅಲ್ಪಲಾಭದ ಮೇಲೆ ನಿಗದಿಯ ಬೆಲೆಗೆ ಅಕ್ಕಿ ರಾಗಿ ಜೋಳಗಳನ್ನು ಮಾರಾಟ ಮಾಡಲು ಅಪ್ಪಣೆಚೀಟಿಯನ್ನು ಕೊಡಲು ಸಿದ್ಧರಾಗಿರುವರಲ್ಲದೆ, ಧಾನ್ಯಗಳು ಸ್ವದೇಶದಲ್ಲಿ ಯಾವ ಕಡೆ ದೊರೆಯುವುದೆಂದು ಗೊತ್ತಾದರೂ ತರಿಸಿ ಮಾರಾಟಕ್ಕೆ ಒದಗಿಸಿಕೊಡಲು ಸಿದ್ಧರಾಗಿರುತ್ತಾರೆ. ವರ್ತಕರು ಲಾಭೈಕದೃಷ್ಟಿಯಿಂದ ಹೊರಗಣ ದೇಶಗಳಿಗೆ ಧಾನ್ಯವನ್ನು ಕಳುಹಿಸುವ ಯೋಚನೆಯನ್ನು ಬಿಟ್ಟು ನಿಗದಿಬೆಲೆಗೆ ಮಾರಾಟಮಾಡಲು ಸಾಧ್ಯವಾಗುವಷ್ಟರ ಬೆಲೆಯನ್ನು ಮೀರಿ ಯಾವ ದವಸವನ್ನೂ ಪೈರುದಾರರಿಂದ ಕೊಂಡುಕೊಳ್ಳದಿದ್ದರೆ ಬೆಲೆಯು ತಾನಾಗಿ ಸ್ತಿಮಿತಕ್ಕೆ ಬಂದು ನಿಲ್ಲುವುದು. ದೇಶಕ್ಕೆ ಸಾಲದೆಹೋದಾಗ ಧಾನ್ಯಗಳನ್ನು ಸರ್ಕಾರದವರು ಹೊರಗಣಿಂದಲಾದರೂ ತರಿಸಿ ಒದಗಿಸಿಕೊಡಬಲ್ಲರು. ಇಷ್ಟನ್ನಾದರೂ ವರ್ತಕರು ಏತಕ್ಕೆ ಮಾಡಬಾರದು? ಈಗಲಾದರೋ ಸರ್ಕಾರದವರು ಕೊಳ್ಳುವ ಮಾರಾಟಮಾಡುವ ಬೆಲೆಗಳನ್ನೆಲ್ಲಾ ನಿರ್ಧರಮಾಡಿಟ್ಟಿರುವರು. ಅದಕ್ಕೆ ಮೀರಿ ಮಾರಿದವರೂ ಕೊಂಡವರೂ ಕೂಡ ಶಿಕ್ಷೆಗೊಳಗಾಗಬೇಕಾಗುವುದು. ಅದುಕಾರಣ ಈ ನಿರ್ಬಂಧವನ್ನು ಮೀರಿ ನಡೆಯಲು ವರ್ತಕರಿಗೆ ಬೇರೆ ಮಾರ್ಗವೂ ಇರುವುದಿಲ್ಲ. ಪ್ರಮುಖರೂ ಕಾಲಸ್ಥಿತಿಗತಿಯನ್ನು ಯೋಚಿಸಬಲ್ಲವರೂ ಆದ ಕೆಲವರ್ತಕರು ಇಂಥ ಸಮಯದಲ್ಲಿ ಮುಂದೆ ಬಂದು ಪ್ರಾಮಾಣಿಕತನದಿಂದ ಕೆಲಸಮಾಡುವುದಕ್ಕೆ ನಿಂತರೆ ಇತರರಿಗೆಲ್ಲಾ ಮೇಲುಪಂಕ್ತಿ ಹಾಕಿಕೊಟ್ಟಂತಾಗುವುದು. ಮಾಡುವ ಉದ್ಯೋಗವನ್ನು ಬಿಟ್ಟು ವರ್ತಕರು ಕೈಕಟ್ಟಿ ಕುಳಿತರೆ ಜ್ಯೇಷ್ಠಾಲಕ್ಷ್ಮಿಯು ಕಾಲುಹಾಕಿಕೊಳ್ಳುವಳು. ಅದು ದೇಶಕ್ಕೇ ಅಹಿತವು. ಈಗಾಗಲೇ ಹಲಕೆಲವರು ಒಂದೆರಡು ತಿಂಗಳಿಂದ ಸುಮ್ಮನೆ ಕುಳಿತು ಹೆಸರನ್ನೂ ಕೆಡಿಸಿಕೊಂಡು, ಮನೋವ್ಯಥೆಯನ್ನೂ ಕಟ್ಟಿಕೊಂಡು, ಅಲ್ಪಸ್ವಲ್ಪವಾದಾಯವನ್ನೂ ಹಾಳ್ಮಾಡಿಕೊಂಡಿರುವರು. ತಾವೇ ಧರ್ಮಸ್ವರೂಪರೆಂದು ತಿಳಿದುಕೊಂಡಿರುವ ಕೆಲ ಧೂರ್ತರು ಇದೇ ಸುಸಮಯವೆಂದು ತಿಳಿದು ವರ್ತಕಮಂಡಲಿಯನ್ನೆಲ್ಲಾ ಸೇರಿಸಿ ವಾಚಾಮಗೋಚರವಾಗಿ ದೂಷಿಸುವುದಕ್ಕೂ ಪತ್ರಿಕಾಪ್ರಸಂಗಗಳನ್ನು ಮಾಡುವುದಕ್ಕೂ ಇಲ್ಲದ ಅಪವಾದಗಳನ್ನು ಹೊರಿಸುವುದಕ್ಕೂ ಉಪಕ್ರಮಿಸಿರುವರು. ಲೋಕಕ್ಕೆಲ್ಲಾ ಹಂಚಬಹುದಾದಷ್ಟು ವಂಚನೆ ಕಾಪಟ್ಯ ಮೋಸ ಪರಸ್ವಾಪಹರಣ ಮೊದಲಾದ ದುರ್ಗುಣಗಳಿಗೆ ಅವರೇ ತವರ್ಮನೆಯಾಗಿದ್ದರೂ ಮಾರ್ಜಾಲವಿರಕ್ತರಂತೆ ನಟಿಸಿ ಡಂಬವನ್ನು ಮೆರೆಯಿಸುತ್ತಿರುವರು. ಇಂಥವರ ದೂಷಣ ಭೂಷಣಗಳೊಂದನ್ನೂ ಧರ್ಮೈಕದೃಷ್ಟಿಯುಳ್ಳ ವರ್ತಕಜನರು ಲಕ್ಷಿಸದೆ, ಸಮಯದಲ್ಲಿ ಹಿಂಜರಿಯದೆ, ಧೈರ್ಯದಿಂದ ಸ್ವಕರ್ತವ್ಯವನ್ನು ತಾವು ಮಾಡುವುದಕ್ಕುಪಕ್ರಮಿಸಿದರೆ ದೂಷಕರ ಹರಟೆಗಳೆಲ್ಲಾ ವರ್ಷಾಕಾಲದಲ್ಲಿ ನೆಲಗಚ್ಚಿಹೋಗುವ ಧೂಳಿಯಂತೆ ನಿರ್ನಾಮವಾಗುವುವು. ಅದುಕಾರಣ ಪ್ರಮುಖರಾದ ವರ್ತಕಮಂಡಲಿಯವರು ತಡಮಾಡದೆ ತಮ್ಮ ಧರ್ಮನಿರ್ವಾಹಕ್ಕೆ ಉದ್ಯುಕ್ತರಾಗಿ ಸರ್ಕಾರದ ಅಪ್ಪಣೆಚೀಟಿಯನ್ನು ಪಡೆದು ನಿಗದಿಯಾದ ಬೆಲೆಯಂತೆ ಮಾರಾಟಮಾಡಲು ನಿಂತುಕೊಳ್ಳುವವರಾಗಲಿ. ಈಗಣ ಸರ್ಕಾರದ ಸ್ವಂತ ಮಾರಾಟದಿಂದ ಉಂಟಾಗಿರುವ ತೊಂದರೆಗಳೂ ಬಿಕ್ಕಟ್ಟೂ ಹಾಹಾಕಾರವೂ ಸ್ವಲ್ಪಕಾಲದೊಳಗೇ ನಿಂತು ಅದರಿಂದ ವ್ಯಕ್ತವಾಗುವ ವ್ಯಾಪಾರಗಾರರ ಸಾಮರ್ಥ್ಯಕ್ಕೆ ಕೀರ್ತಿಯೂ ಗೌರವವೂ ಬರುವಂತಾಗಲಿ ಎಂಬುದೇ ನಮ್ಮ ಕೋರಿಕೆಯು. ಇದನ್ನು ಪ್ರಮುಖರಾದ ವರ್ತಕಮಂಡಲಿಯವರು ಶಾಂತಚಿತ್ತದಿಂದ ಪರ್ಯಾಲೋಚಿಸುವವರಾಗಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಟ್ಟಣದಲ್ಲಿ ಇಲಿಗಳು ಸಾಯುತ್ತಲೂ ಪ್ಲೇಗು ತಲೆದೋರಿಯೂ ಇವೆ. ರಾಜಧಾನಿಯಲ್ಲೂ ಪ್ಲೇಗಿನ ಮರಣಗಳಾಗುತ್ತಿವೆ.

ಯುದ್ಧವು ನಿಲ್ಲಿಸಲ್ಪಟ್ಟುದರಿಂದ ಹೊಸದಾಗಿ ಸೈನ್ಯಕ್ಕೆ ಜನರನ್ನು ಸೇರಿಸುವ ಕೆಲಸವು ಅನಾವಶ್ಯಕವೆಂದು ಬೆಂಗಳೂರು ರಿಕ್ರೂಟಿಂಗ್ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಬರುವ ಜನವರಿ ತಿಂಗಳಿಂದ ಹೊಗೆಬಂಡಿಗಳು ಪೂರ್ವದಂತೆಯೇ ಬಿಡಲ್ಪಡುವ ಏರ್ಪಾಟು ನಡೆದಿದೆಯೆಂದು ಕೇಳುತ್ತೇವೆ. ಹೆಚ್ಚಿರುವ ಬಾಡಿಗೆಗಳನ್ನೂ ಪೂರ್ವಸ್ಥಿತಿಗೆ ತರುವುದು ಅತ್ಯವಶ್ಯಕ.

✓ವಿಜಯ ಸಂತೋಷಕ್ಕಾಗಿಯೂ ಪ್ರಪಂಚದಲ್ಲಿ ಯುದ್ಧತಾಪ ಶಾಂತಿಯನ್ನು ಅನುಗ್ರಹಿಸಿದುದಕ್ಕಾಗಿಯೂ ಶ್ರೀ ಭಗವತೀ ಚಾಮುಂಡೇಶ್ವರಿಗೆ ರಥೋತ್ಸವಾದಿ ವಿಶೇಷ ಪೂಜಾದಿಗಳನ್ನು ವಿಜೃಂಭಣೆಯಿಂದ ನೆರವೇರಿಸಲು ಶ್ರೀಮನ್ಮಹಾರಾಜರವರು ಏರ್ಪಡಿಸಿರುವರು.

ರಾಜಧಾನಿಯ ಮ್ಯುನಿಸಿಪಾಲಿಟಿಗೆ ಚೀಫ್ ಆಫೀಸರನ್ನು ಗೊತ್ತುಮಾಡಬೇಕೆ ಬೇಡವೆ? ವೈಸ್‌ಪ್ರಸಿಡೆಂಟ್‌ಗಿರಿಗೆ ಮತ್ತೊಂದು ಸಲ ಎಲೆಕ್ಷನ್ ಮಾಡಬೇಕೇ ಬೇಡವೇ ಎಂಬ ವಿಷಯದ ವಿವೇಚನೆಗೆ ಕಳೆದ ಶುಕ್ರವಾರ ಟೌನ್‌ಹಾಲಿನಲ್ಲಿ ಕೌನ್ಸಿಲರ ಸಭೆಯು ಕೂಡಿದ್ದಿತು.

ರಾಜಧಾನಿಯಲ್ಲಿ ಮೋಡ ಮುಚ್ಚಿ ಆಗಾಗ್ಗೆ ಮಳೆಯಾಗುತ್ತಲೇ ಇದೆ. ಈಗಣ ಮಳೆಯು ಬತ್ತ ರಾಗಿ ಮೊದಲಾದುವುಗಳ ಕುಯ್ಲಿಗೆ ಹಾನಿಕರವಾಗಿರುವುದರಿಂದ ಮೊದಲು ಹುಯ್ಯದೆ ಕೆಡಿಸಿದ ಮಳೆಯು ಈಗ ಹುಯ್ದು ಕೆಡಿಸುತ್ತಿದೆಯೆಂದು ರೈತರು ವ್ಯಸನಾಕ್ರಾಂತರಾಗಿದ್ದಾರೆ.

ರಾಜಧಾನಿಯಲ್ಲಿ ಈಗ ಮ್ಯುನಿಸಿಪಾಲಿಟಿಯವರು ಮಾರಿಸುತ್ತಿರುವ ಅಕ್ಕಿಯಲ್ಲಿ ಬಹುಭಾಗವು ಹೊಟ್ಟು ತವುಡುಗಳಿಂದ ಮಿಶ್ರವಾಗಿರುವುದು. ಇದನ್ನು ಅಧಿಕಾರಿಗಳು ಗಮನಿಸಿರುವಂತೆ ಕಾಣಲಿಲ್ಲ. ಬತ್ತದ ಮಿಷನ್ನುಗಳು ಹೆಚ್ಚಿಕೊಂಡಿರುವ ರಾಜಧಾನಿಯಲ್ಲೂ ಈ ಗತಿಯಾಗಬಹುದೆ?

ಮ|| ಎಫ್. ಎಸ್. ರಾಘವಾಚಾರರು ಬೆಂಗಳೂರು ಡಿಸ್ಟ್ರಿಕ್ಟ್ ಡೆ|| ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ ಮಾಡಲ್ಪಟ್ಟು, ಆ ಸ್ಥಳದಲ್ಲಿದ್ದ ಮ|| ಬಿ. ಎಸ್. ರಾಜೋಜಿರಾವ್ ಬಿ.ಎ. ಯವರು ಆಹಾರ್ಯಪದಾರ್ಥಗಳ ಏರ್ಪಾಟಿನ ವಿಷಯದಲ್ಲಿ ಬೆಂಗಳೂರು ಮ್ಯುನಿಸಿಪಲ್ ಅ|| ಪ್ರೆಸಿಡೆಂಟರವರ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಇದುವರೆಗೆ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸಶಾಖಾ ಸಂಘದ ಮೇಲ್ವಿಚಾರಣೆಗೊಳಪಟ್ಟಿದ್ದ ಮನೆ ಕೈಗಾರಿಕೆಯ ಶಾಖೆಯ ಕೆಲಸವನ್ನು ಇತಃಪರ ವಿದ್ಯಾಭ್ಯಾಸ ಶಾಖಾಧ್ಯಕ್ಷರ ಅಧಿಕಾರಕ್ಕೆ ಸರ್ಕಾರದವರು ವಹಿಸಿಕೊಟ್ಟಿರುತ್ತಾರೆಂದು ಕೇಳುತ್ತೇವೆ. “ಮಂತ್ರ ಕಡಿಮೆಯಾದರೂ ಉಗುಳು ಹೆಚ್ಚು” ಎಂಬ ಗಾದೆಯಂತೆ ಇದುವರೆಗೆ ಈ ಶಾಖೆಯ ಕಾರ್ಯಗಳ ಪರಿಣಾಮವಾಗಿರುತ್ತದೆ. ಮಿತವಿಲ್ಲದೆ ಮಾಡುವ ವೆಚ್ಚಕ್ಕೆ ತಕ್ಕ ಫಲವಿಲ್ಲ. ದಾಕ್ಷಿಣ್ಯಪ್ರಾಧಾನ್ಯವೇ ವಿಶೇಷ. ಪಟಾಟೋಪವು ಅಪರಿಮಿತ. ಈ ಲೋಪಗಳೆಲ್ಲಾ ಹೊಸ ಏರ್ಪಾಟಿನಿಂದ ನಿವೃತ್ತವಾಗಲು ಅವಕಾಶವಾದೀತೆಂದು ನಂಬುತ್ತೇವೆ.

ನಮ್ಮ ಸರ್ಕಾರದವರು ಫೈನಾನ್ಷಿಯಲ್ ಶಾಖೆಗೆ ೨, ರೆವಿನ್ಯೂ ಶಾಖೆಗೆ ೩, ಮದದ್ರವ್ಯಶಾಖೆಗೆ ೧, ವಿದ್ಯಾಭ್ಯಾಸಶಾಖೆಗೆ ೪, ಲೋಹಮಾರ್ಗಶಾಖೆಗೆ ೪, ಉದ್ಯಾನವನದಶಾಖೆಗೆ ೧, ಮುದ್ರಾಲಯಶಾಖೆಗೆ ೧ ಹೀಗೆ ೧೬ ಮಂದಿ ಪ್ರೊಬೇಷನರುಗಳನ್ನು ಸ್ವೀಕರಿಸಲು ಪ್ರಕಟಿಸಿದ್ದಾರೆ. ಇದಕ್ಕಾಗಿ ವಿಜ್ಞಾಪನಾಪತ್ರಗಳು ಡಿಸೆಂಬರ್ ೧೫ರೊಳಗೆ ಇದಕ್ಕಾಗಿ ನಿಯುಕ್ತವಾಗಿರುವ ಸಂಘದ ಸೆಕ್ರೆಟರಿಗಳಿಗೆ ಬರೆಯಲ್ಪಡಬೇಕೆಂದು ತಿಳಿಯಿಸಿದ್ದಾರೆ. ಉಮೇದುವಾರರು ಗ್ರಾಜುಯೇಟರಾಗಿಯೂ ಮೈಸೂರಿನವರಾಗಿಯೂ ೨೫ ವರ್ಷದೊಳಗಣ ವಯಸ್ಸಿನವರಾಗಿಯೂ ಇರಬೇಕು. ಆರಂಭದಲ್ಲಿ ಸಂಬಳವು ೭೫. ಸ್ಥಿರವಾದಾಗ ೧೦೦.

ಕಂ|| ಎಲೆ ಪಾಪೆ ಪಲದಿನಂ ಗೆ | ದ್ದಿಲು ಕಟ್ಟಿದ ಪುತ್ತನಾಳ್ದುಮಿಸಿ
ಸುಖಮಿಪ್ಪೆ || ನೆಲಣಿದನರಿದುಂ ಮತಿಗೆ | ಟ್ಟೆಲರಿಂ ಪಾಲಿಂದೆ ನಿಸ್ಸನೇ
ಪೂಚಿಸುಗುಂ ||

ಬತ್ತ ಅಕ್ಕಿ ರಾಗಿ ಜೋಳ ನವಣೆ ಇವುಗಳನ್ನು ಸಂಸ್ಥಾನದಲ್ಲಿ ಒಂದು ಕಡೆಯಿಂದ ಮತ್ತೊಂದುಕಡೆಗೆ ಸಾಗಿಸುವಿಕೆ ಅವುಗಳ ಮಾರಾಟ—ಇವುಗಳಿಗೆ ಸಂಬಂಧಪಟ್ಟ ನೂತನ ನಿಬಂಧನೆಯನ್ನು ಏರ್ಪಡಿಸಿ ಸರ್ಕಾರದವರು ಕಳೆದ ತಾ|| ೨೮ ನೆ ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ. ಅದನ್ನು ಆದ್ಯಂತವಾಗಿ ಮುಂದಣ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ಅದರಪ್ರಕಾರ ಈ ಡಿಸೆಂಬರ್ ತಾ|| ೧ ರಿಂದ ಲೈಸೆನ್ಸ್ ನಿಬಂಧನೆಮೀರಿ ಯಾವ ಸಣ್ಣ ದೊಡ್ಡ ವ್ಯಾಪಾರಿಗಳೂ ಮೇಲಿಕಂಡ ಧಾನ್ಯಗಳನ್ನು ಮಾರಕೂಡದಾಗಿರುತ್ತದೆ. ಇದುವರೆಗೆ ಧಾನ್ಯಗಳಿಗೆ ಏರ್ಪಡಿಸಿದ್ದ ಬೆಲೆಗಳನ್ನು ತಪ್ಪಿಸಿ ಈಗ ನಿರ್ಣಯಿಸಿರುವ ಕೊಡುವ ತೆಗೆದುಕೊಳ್ಳುವ ಬೆಲೆಗಳ ವಿವರವನ್ನೂ ಪ್ರಕಟಿಸಿದ್ದಾರೆ.

ಸದ್ಯಃ ಸಂಸ್ಥಾನದಲ್ಲಿ ದನಗಳ ಮೇವಿಗೆ ಕೊರತೆಯಾಗಿರುವುದರಿಂದ ಬೇಗನೆ ಬೆಳೆಯತಕ್ಕ ಮೇವುಗಳ ಪೈರನ್ನಿಡುವುದಕ್ಕೆ ನಮ್ಮ ಸರ್ಕಾರದವರು ಖರಾಬು, ಗೋಮಾಳ, ಹಿಡುವಳಿಯಲ್ಲಿಲ್ಲದ ಆಕಾರಕಂಡ ಬಂಜರು, ಕೆರೆ ಅಂಗಳ ಇವೇ ಮೊದಲಾದ ರೆವಿನ್ಯೂಶಾಖೆಯ ಅಧಿಕಾರಕ್ಕೊಳಪಟ್ಟ ಭೂಮಿಗಳನ್ನು ತಾತ್ಕಾಲಿಕವಾದ ವ್ಯವಸಾಯಕ್ಕಾಗಿ ರೈತರಿಗೆ ಕೊಡಲು ಏರ್ಪಾಟುಮಾಡಿರುತ್ತಾರೆ. ಇದಕ್ಕಾಗಿ ಕಂದಾಯವೇನೂ ಹಾಕಲ್ಪಡುವುದಿಲ್ಲ. ಮೇವಿನ ಜತೆಗೆ ಫಸಲು ಬಂದಲ್ಲಿ ಕುಸ್ಕಿ ಕಂದಾಯವನ್ನು ಕೊಡಬೇಕಾಗುವುದು. ಗ್ರಾಮಸ್ಥರುಗಳು ಒಟ್ಟುಒಟ್ಟಾಗಿ ಸೇರಿ ಇಂಥ ಜಮೀನುಗಳನ್ನು ಪಡೆಯಲು ತಾ|| ಅಮಲ್ದಾರರುಗಳಲ್ಲಿ ಅರ್ಜಿಗಳನ್ನು ಬರೆದುಕೊಳ್ಳಬಹುದು. ಬೇರೆ ಬೇರೆಯಾಗಿ ಜನರು ಪೈಪೋಟಿಮಾಡಲಾಗದು.

ಜಗನ್ಮೋಹನ ಬಂಗಲೆಯ ಮುಂದಣಸಾಲಿನ ಮನೆಯ ಹಿಂಗಡೆಯಲ್ಲಿ ಹಾಕಿರುವ ವಿದ್ಯುದ್ದೀಪದ ತಂತಿಗಳು ಆ ಮನೆಗಳ ಮಾಡಗಳ ಮೇಲೆ ನಿಂತಿರುವವರ ಕೈಗೆ ಮುಟ್ಟುವಂತಿವೆ. ಕಳೆದ ಗುರುವಾರ ಅವುಗಳಲ್ಲೊಂದು ಮನೆಯ ೮-೧೦ ವರ್ಷದ ಹುಡುಗಿಯು ಮೇಲುಪ್ಪರಿಗೆಯ ಮೇಲೆ ನಿಂತಿದ್ದು ಅಪಾಯವನ್ನರಿಯದೆ ತಂತಿಯನ್ನು ಮುಟ್ಟಲಾಗಿ ಶಕ್ತಿಯ ಸೆಳೆವಿನಿಂದ ಕೆಳಕ್ಕೆ ಅಪ್ಪಳಿಸಲ್ಪಟ್ಟು ಬಿದ್ದಿತು. ಸ್ವಲ್ಪಕಾಲ ಶೈತ್ಯೋಪಚಾರ ಮಾಡಿದ ಮೇಲೆ ಚೇತರಿಸಿಕೊಂಡಿತು. ಪ್ರಾಣಾಪಾಯವೇನೂ ಆಗದಿದ್ದುದು ಪುಣ್ಯ. ಈಗ ಕರ್ಜನ್‌ಪಾರ್ಕಿನಲ್ಲಿ ಹಾಕುತ್ತಿರುವಂತೆ ಭೂಗರ್ಭದಲ್ಲೇ ಕೇಬಲ್ಲುಗಳನ್ನಿಟ್ಟು ಅವುಗಳ ಮೂಲಕ ಬೀದಿಸಾಲಿನ ದೀಪಗಳೆಲ್ಲಾ ಉರಿಯುವಂತೆ ಎಲ್ಲಾ ಬೀದಿಗಳಲ್ಲೂ ಏರ್ಪಡಿಸಿದರೆ ಇಂಥಾ ಅಪಾಯದೋಷಗಳೆಲ್ಲಾ ತಪ್ಪುವವು.

“ಮೈಸೂರು ದಳವಾಯರ ಆಂಗ್ಲೋ ಸಂಸ್ಕೃತ ಪಾಠಶಾಲೆಯ ವೃದ್ಧಿಗಾಗಿ ಒಂದು ಸಭೆಯು ಕಳೆದ ತಾ|| ೧೦ ರಲ್ಲಿ ಆ ಪಾಠಶಾಲಾ ಕಟ್ಟಡದಲ್ಲಿ ನಡೆದು, ಅದರ ಮ್ಯಾನೇಜಿಂಗ್ ಕಮಿಟಿಗೆ ಸಭಿಕರುಗಳನ್ನಾರಿಸುವುದೇ ಮೊದಲಾದ ರೆಜಲ್ಯೂಷನ್ನುಗಳು ಮಾಡಲ್ಪಟ್ಟುವೆಂದು ಪತ್ರಿಕೆಯಲ್ಲಿ ಫಾಯಿಷ್ ಆಗಿದೆ. ಕಮಿಟಿಗೆ ಚುನಾಯಿಸಲ್ಪಟ್ಟಿರುವ ಸಭಿಕರೆಲ್ಲಾ ತ್ರಿಮತಸ್ಥ ಬ್ರಾಹ್ಮಣರೇ ಆಗಿರುತ್ತಾರೆ. ಈ ಶಾಲೆಯ ಹಿತಚಿಂತನಕ್ಕೂ ಸಂಬಂಧಪಟ್ಟುಕೊಳ್ಳುವುದಕ್ಕೂ ಅರ್ಹರಾದವರು ರಾಜಧಾನಿಯಲ್ಲಿ ಇತರರಾರೂ ಇಲ್ಲದೆಯೇ ಇರಬಹುದೊ? ಶಾಲೆಗೆ ಬೀಜಾವಾಪನೆ ಮಾಡಿದವರೂ ಮಣ್ಣು ಮರ ಕಲ್ಲು ಹೊನ್ನುಗಳನ್ನು ತೆತ್ತು ಸಹಾಯಮಾಡಿದವರೂ ಆದವರ ಹಂಗು ಈಗೇತಕ್ಕೆ? ಬ್ರಾಹ್ಮಣವರ್ಗದವರು ಇತರರಲ್ಲಿ ಸಾನುಭೂತಿಯನ್ನು ಸಾರ್ವಜನಿಕ ಕಾರ್ಯಗಳಲ್ಲಾದರೂ ಎಷ್ಟುಮಟ್ಟಿಗೆ ತೋರಿಸಿ ಶ್ರೀಮನ್ಮಹಾರಾಜರವರ ಅಪ್ಪಣೆಗೆ ಗೌರವವನ್ನು ತೋರಿಸುತ್ತಿರುವರೆಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ” ಯೆಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.

ಭರತಖಂಡದ ವೃತ್ತಾಂತಗಳು.

ಸಂಸ್ಥಾನಾಧಿಪತಿಗಳ ಸಭೆಯು ಬರುವ ಜನವರಿ ತಾ|| ೨೦ ರಿಂದ ೨೫ರ ವರೆಗೆ ದಿಲ್ಲಿ ಪಟ್ಟಣದಲ್ಲಿ ಜರುಗುವುದು.

ಈಗಣ ಅನೂರಾಧೆ ಮಳೆಯು ಭರತಖಂಡದ ಸಮುದ್ರ ತೀರದ ಎಲ್ಲ ಭಾಗಗಳಲ್ಲೂ ನಡೆಯುತ್ತಿರುವಂತೆ ವರ್ತಮಾನಗಳು ಬರುತ್ತಿವೆ.

ಬೊಂಬಾಯಿಯಲ್ಲಿ ಯುದ್ಧವಿಜಯ ಸಂತೋಷಕ್ಕಾಗಿ ತಾ|| ೨೨-೨೩ ರಲ್ಲಿ ರಜಾ ದಿನಗಳಾಗಿ ಮಾಡಲ್ಪಟ್ಟು ದೊಡ್ಡ ಉತ್ಸವಗಳು ಜರುಗಿದುವು.

ಸೀಮೆಯಿಂದ ಭರತಖಂಡಕ್ಕೂ ಇಲ್ಲಿಂದಲ್ಲಿಗೂ ಪ್ರತಿವಾರವೂ ಅಂಚೆಯ ಹಡಗುಗಳು ಪೂರ್ವದಂತೆ ಹೋಗಿ ಬರುವುದಕ್ಕೂ ಅವುಗಳ ಗಮನಾಗಮನಕಾಲವನ್ನು ತಿಳಿಯಪಡಿಸುವುದಕ್ಕೂ ಏರ್ಪಾಟು ನಡೆದಿದೆ.

ಬರುವ ಡಿಸೆಂಬರ್ ತಾ|| ೩೦-೩೧ ರಲ್ಲಿ ದಿಲ್ಲಿ ಪಟ್ಟಣದೊಳಗೆ ಕೂಡುವ ೧೧ ನೆ ಅಖಿಲಭಾರತ ಮಹಮ್ಮದೀಯ ಮಹಾಸಭೆಗೆ ಅ|| ಎ. ಕೆ. ಫಜಲುಲ್ ಹಕ್‌ರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಬೊಂಬಾಯಿಯಲ್ಲಿ ಪಶುಗಳ ಮೇವಿಗೆ ಅಭಾವವಾಗಿರುವುದರಿಂದ ಸರ್ಕಾರದವರು ಆಧಿಪತ್ಯದಲ್ಲಿರುವ ಮೇವನ್ನೆಲ್ಲಾ ತಮ್ಮ ಅಧಿಕಾರಕ್ಕೆ ಒಳಪಡಿಸಿಕೊಂಡು ಮಿತವಾಗಿ ಎಲ್ಲಾ ಕಡೆಗೂ ಹಂಚಿಕೊಡಬೇಕೆಂದು ನಿರ್ಧರಿಸಿದ್ದಾರೆ.

ಪುದುಕೋಟೆ ಸಂಸ್ಥಾನದಲ್ಲಿ ರೂಪಾಯಿಗೆ ೨|| ಸೇರು ಅಕ್ಕಿಯು ಮಾರಲ್ಪಡುತ್ತಿದೆ. ಅಗ್ಗವಾಗಿ ಮಾರುವ ವರ್ತಕರಿಗೆ ಬಡ್ಡಿಯಿಲ್ಲದೆ ಹಣವನ್ನು ಸಾಲವಾಗಿ ಕೊಡುತ್ತೇವೆಂದು ಅಲ್ಲಿಯ ಸರ್ಕಾರದವರು ಪ್ರಕಟಿಸಿದ್ದಾರೆ.

ಭರತಖಂಡದಲ್ಲೆಲ್ಲಾ ಕಳೆದ ತಾ|| ೨೭ ನೆ ದಿನ ಯುದ್ಧವಿಜಯೋತ್ಸವಕ್ಕಾಗಿ ರಜಾದಿನವಾಗಿರಬೇಕೆಂದು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದರು. ಆ ದಿನ ಎಲ್ಲಾ ಟೆಲಿಗ್ರಾಫು ಅಂಚೆ ಆಫೀಸುಗಳಿಗೂ ವಿಶ್ರಾಂತಿಯು ಕೊಡಲ್ಪಟ್ಟಿದ್ದಿತು.

ಆಹಾರಧಾನ್ಯಗಳನ್ನು ಚಿಲ್ಲರೆಯಾಗಲೀ ಒಟ್ಟಿಗೆಯಾಗಲೀ ಹೊರಗಣಿಂದ ತರಿಸಿ ಮಾರುವವರುಗಳು ಸಿವಿಲ್ ಸಪ್ಲೈ ಡೈರೆಕ್ಟರುಗಳ ಅಪ್ಪಣೆ ಚೀಟಿಯನ್ನು ಪಡೆದೇ ತೀರಬೇಕೆಂದು ಬೊಂಬಾಯಿ ಮದ್ರಾಸ್ ಸರ್ಕಾರಗಳವರು ಪ್ರಕಟನೆ ಮಾಡಿದ್ದಾರೆ.

೫೦ ಸೇರು ಅಕ್ಕಿಗೆ ೮ ಆಣೆ ಲಾಭವನ್ನು ಮಾತ್ರ ಸೇರಿಸಿ ಮಾರಾಟಮಾಡಲು ಇಷ್ಟಪಡತಕ್ಕ ವರ್ತಕರು ಸರ್ಕಾರದ ಅಪ್ಪಣೆ ಚೀಟಿಯನ್ನು ಪಡೆದು ಬಂಗಾಳದಿಂದಲೂ ಬರ್ಮಾದಿಂದಲೂ ಅಕ್ಕಿಯನ್ನು ತರಿಸಿಕೊಂಡು ವ್ಯಾಪಾರಮಾಡಬಹುದೆಂದು ಮದ್ರಾಸ್ ಸರ್ಕಾರದವರು ಪ್ರಕಟಿಸಿದ್ದಾರೆ.

ರಂಗೂನ್ ಪಟ್ಟಣದ ಜನರು ಕಳೆದ ತಾ|| ೨೭ ರಲ್ಲಿ ಯುದ್ಧವಿಜಯ ಸಂತೋಷ ಮಹೋತ್ಸವವನ್ನು ಆಚರಿಸುವಾಗ್ಗೆ ೨೦ ಅಡಿಗಳ ಉದ್ದದ ಕೈಜರನ ಆಕೃತಿಯ ಬೊಂಬೆಯನ್ನು ಮಾಡಿ ಮೋಟಾರು ಬಂಡಿಯಮೇಲೆ ಕುಳ್ಳಿರಿಸಿ ಊರಿನಲ್ಲೆಲ್ಲಾ ಮೆರೆವಣಿಗೆಮಾಡಿ ಕಡೆಗೆ ದೊಡ್ಡ ಬಯಲಿನಲ್ಲಿ ಅದನ್ನು ದಹನಮಾಡಿದರಂತೆ.

ಅಹಮ್ಮದಾಬಾದು ಸ್ವರಾಜ್ಯ ಸಮಿತಿ ಸಭಿಕರಾದ ಕೆಲ ನಾರೀಮಣಿಗಳು ನೂತನ ರಾಜಕೀಯ ಸಂಸ್ಕರಣಗಳಲ್ಲಿ ಪುರುಷರಿಗೆ ಕೊಡಲ್ಪಡುವ ಹಕ್ಕುಗಳನ್ನು ಸ್ತ್ರೀಯರಿಗೂ ಕೊಡಬೇಕೆಂದು ಪ್ರಾರ್ಥಿಸಬೇಕೆಂದೂ, ಇಂಗ್ಲಾಂಡಿಗೆ ಈ ಕಾರ್ಯಸಾಧನೆಗಾಗಿ ತಮ್ಮ ಕೆಲ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದೂ ತೀರ್ಮಾನಿಸಿದ್ದಾರೆ.

ಬೊಂಬಾಯಿಯ ಹೊಸ ಗೌರ್ನರಾದ ಸರ್ ಜಾರ್ಜ್ ಲಾಯಿಡ್‌ರವರು ಪ್ರಯಾಣಿಕರಾಗಿ ಡಿಸೆಂಬರ್ ತಾ|| ೧೩ ರಲ್ಲಿ ಸೀಮೆಯಿಂದ ಬೊಂಬಾಯಿಗೆ ಬರುವರು. ತಾ|| ೧೪ ರಲ್ಲಿ ಈಗಣ ಗೌರ್ನರಾದ ಲಾರ್ಡ್ ವೆಲ್ಲಿಂಗ್ಡನರವರು ಪತ್ನೀಸಮೇತರಾಗಿ ಸೀಮೆಗೆ ಪ್ರಯಾಣಮಾಡುವರು. ಅಲ್ಲಿಯ ಮ್ಯುನಿಸಿಪಾಲಿಟಿಯವರು ಇಬ್ಬರಿಗೂ ಸನ್ಮಾನಪತ್ರಗಳನ್ನು ಸಮರ್ಪಿಸಲು ಏರ್ಪಡಿಸಿಕೊಂಡಿದ್ದಾರೆ.

ಯುದ್ಧವು ಶಾಂತವಾದ ಮರುದಿನದಿಂದಲೇ ಚಿನ್ನ ಬೆಳ್ಳಿಗಳೂ ಬಟ್ಟೆಬರೆ ಮೊದಲಾದುವುಗಳ ಬೆಲೆಯೂ ಇಳಿಯುವುದಕ್ಕಾರಂಭವಾಗಿದೆ. ತೊಲೆಗೆ ೩೨-೩೩ ರೂ. ಗಳ ವರೆಗಿದ್ದ ಬಂಗಾರದ ಬೆಲೆಯು ೨೫-೨೬ ಕ್ಕೆ, ೧೦೦ ತೊಲೆಗೆ ೧೫೦ ರ ಮೇಲೆಯೇ ಏರಿದ್ದ ಬೆಳ್ಳಿಯ ಬೆಲೆಯು ೯೫-೯೬ ಕ್ಕೆ ಇಳಿದಿದೆ. ಇನ್ನೂ ಇಳಿಯುವುದರಲ್ಲೇ ಇದೆ. ಬಟ್ಟೆ ಬೆಲೆಯು ಈಗಾಗಲೇ ನೂರಕ್ಕೆ ೨೫ ರಷ್ಟು ಇಳಿದಿದೆ.

ಭರತಖಂಡದ ಪ್ರತಿನಿಧಿಗಳಾಗಿ ಸಂಧಿಮಹಾಸಭೆಗೆ ಹೊರಟ ಬಿಕನೀರ್ ಮಹಾರಾಜರೂ, ಸರ್ ಎಸ್. ಪಿ. ಸಿಂಹರವರೂ ತಾ|| ೨೨ ರಲ್ಲಿ ಬೊಂಬಾಯಿಗೆ ಹೋಗಿ ತಾ|| ೨೩ ರಲ್ಲಿ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವವರಾಗಿದ್ದರು. ಆದರೆ ಅವರು ಪ್ರಯಾಣಮಾಡಬೇಕೆಂದಿದ್ದ ಡಫರಿನ್ ಎಂಬ ಅಂಚೆ ಹಡಗಿನಲ್ಲಿ ಅಗ್ನಿಯನಾಹುತವು ಸಂಭವಿಸಿದುದರಿಂದ ಸದ್ಯಃ ಅವರುಗಳ ಪ್ರಯಾಣವು ನಿಂತುಹೋಗಿದೆ.

ಯುದ್ಧವು ನಿಂತುದರಿಂದ ರಣರಂಗದಿಂದ ಭರತಖಂಡಕ್ಕೆ ಹಿಂದಿರುಗಿ ಬರಬೇಕಾದ ಮತ್ತು ಇಲ್ಲಿಂದ ಸೀಮೆಗೆ ಹೋಗಬೇಕಾದ ಲಕ್ಷಾಂತರ ಸೈನ್ಯಗಳು ಕರಾಚಿ ರೇವಿನ ಮೂಲಕವಾಗಿಯೇ ಪ್ರಯಾಣ ಬೆಳಸುತ್ತವೆ. ಇದು ಕೆಲ ತಿಂಗಳವರೆಗೂ ನಡೆಯುತ್ತದೆ. ಅಲ್ಲಿಗೆ ಬಂದ ಸೈನಿಕರಿಗೆ ಆತಿಥ್ಯಮಾಡುವುದಕ್ಕೆ ೧೦ ಲಕ್ಷ ರೂ. ಗಳ ವೆಚ್ಚವು ಹಿಡಿಯುತ್ತದೆ. ಈಗನಿಂದಲೂ ಅದಕ್ಕೆ ತಕ್ಕ ಏರ್ಪಾಟುಗಳು ನಡೆಯುತ್ತಿವೆ.

ಬಂಗಾಳಕ್ಕೆ ಸೇರಿದ ಇಚ್ಛಾಮತಿ ನದಿಯಲ್ಲಿರುವ ದೋಣಿಗಳಲ್ಲಿ ಕೃತ್ರಿಮನಾಣ್ಯವನ್ನು ಕೆಲರು ನಿರ್ಮಿಸುತ್ತಿರುವರೆಂಬಸುದ್ದಿಯು ಪೋಲೀಸರಿಗೆ ತಿಳಿಯಲು ಅವರು ಸರಿರಾತ್ರಿಯಲ್ಲಿ ಹೋಗಿ ಅವರುಗಳಿಗೆ ಮುತ್ತಿಗೆಹಾಕಿ ಪರಿಶೋಧಿಸಲಾಗಿ, ೩೨ ತೆರದ ಅಚ್ಚುಗಳೂ, ರೂಪಾಯಿ, ಅರ್ಧರೂಪಾಯಿ, ಪಾವಲಿ, ೨ ಆಣೆ, ೧ ಆಣೆಯ ಮೊಲ್ಡುಗಳೂ, ೧೫ ಸೇರು ಸೀಸವೂ ೨೨೫ ಸಲ್ಲದ ರೂಪಾಯಿಗಳೂ ಅರ್ಧಾಂತವಾಗಿದ್ದ ಕೆಲ ರೂಪಾಯಿಗಳೂ ೭ ಮಂದಿ ಅಪರಾಧಿಗಳೂ ಸಿಕ್ಕಿಬಿದ್ದರು. ಅವರನ್ನು ಸೆರೆಹಿಡಿದು ದಂಡಾಧಿಕಾರಿಯಿದಿರಿಗೆ ವಿಚಾರಣೆಗೊಳಪಡಿಸಲಾಗಿ, ಇಬ್ಬರು ತಮ್ಮಪರಾಧವನ್ನು ಒಪ್ಪಿಕೊಂಡಿದ್ದಾರೆ.

ಹೈದರಾಬಾದು ಸಂಸ್ಥಾನದಲ್ಲಿ ಯುದ್ಧವಿಜಯದ ಸಂತೋಷೋತ್ಸವಕ್ಕಾಗಿ ಕಳೆದ ತಾ|| ೨೧ ನೆ ದಿನ ಎಲ್ಲ ಕೋರ್ಟು ಕಚೇರಿಗಳಿಗೂ ವಿಶ್ರಾಂತಿ ಕೊಡಲ್ಪಟ್ಟಿದ್ದಿತು. ಬಡವರಿಗೆ ಉದಾರವಾಗಿ ಅನ್ನ ಬಟ್ಟೆಗಳು ಹಂಚಲ್ಪಟ್ಟವು. ಇದಕ್ಕಾಗಿ ನೈಜಾಮರು ೨|| ಲಕ್ಷ ರೂ. ಗಳನ್ನು ವೆಚ್ಚಮಾಡಲು ಸರ್ಕಾರಕ್ಕೆ ಅಪ್ಪಣೆಕೊಟ್ಟರು. ತಾ|| ೨೮ ನೆ ದಿನವು ಹೈದರಾಬಾದ್ ರೆಸಿಡೆನ್ಸಿಯಲ್ಲಿ ವಿಶ್ರಾಂತಿ ದಿನವಾಗಿದ್ದಿತು. ಆ ದಿನ ರೆಸಿಡೆಂಟರು ವಿಜಯೋತ್ಸವವನ್ನು ಅತಿ ವೈಭವದಿಂದ ಜರುಗಿಸಿದರು. ಸಾಯಂಕಾಲ ರೆಸಿಡೆಂಟ್ ಮಿ|| ಎಸ್. ಎಂ. ಫ್ರೇಜರ್‌ರವರೂ ಅವರ ಪತ್ನಿಯವರೂ ಅಗ್ರಾಸನವನ್ನು ವಹಿಸಿ ದರ್ಬಾರನ್ನು ಮಾಡಿದರು.

ಮದ್ರಾಸು ಗೌರ್ನಮೆಂಟಿನ ಕಾರ್ಯನಿರ್ವಾಹಕ ಸಂಘದಲ್ಲಿ ಸಭಿಕರಾಗಿದ್ದ ಆ|| ಹೆಚ್. ಎಫ್. ಡಬ್ಲ್ಯು. ಗಿಲ್ಮನ್, ಸಿ. ಎಸ್. ಐ. ರವರು ಕಳೆದ ತಾ|| ೨೩ ರಲ್ಲಿ ವಿಧಿವಶರಾದರು. ಇವರು ಆ ಸರ್ಕಾರದ ನಾನಾ ಶಾಖೆಗಳಲ್ಲಿ ಕೆಲಸಮಾಡಿ, ಮದ್ರಾಸ್ ರಿಕ್ರೂಟಿಂಗ್ ಬೋರ್ಡಿಗೂ, ಮದ್ರಾಸು ಗಾರ್ಡಿಗೂ ಅಧ್ಯಕ್ಷರಾಗಿದ್ದರು. ಈಗ ರಾಜಕೀಯ ಸಂಸ್ಕರಣ ಸಂಘದ ಸಭ್ಯತ್ವವನ್ನು ನಿರ್ವಹಿಸುವುದಕ್ಕಾಗಿ ಸಿಮ್ಲಾಕ್ಕೆ ಹೋಗಿದ್ದು ಅಲ್ಲೇ ವಿಷಮಜ್ವರದಿಂದ ಪೀಡಿತರಾಗಿ ಪರಲೋಕಗತರಾದರು. ಇವರು ಪಾಲ್ಯಕಾಟೀರ್ವರ ಪ್ರೀತಿಗೂ ಪಾತ್ರರಾದ ಅಧಿಕಾರಿಗಳಾಗಿದ್ದರು. ಇವರ ಗೌರವಾರ್ಥವಾಗಿ ತಾ|| ೨೫ ರಲ್ಲಿ ಮದ್ರಾಸಿನಲ್ಲಿ ಸಾಯಂಕಾಲದವರೆಗೂ ಆಂಗ್ಲಪತಾಕೆಯು ಸ್ವಲ್ಪ ಇಳಿಯಿಸಲ್ಪಟ್ಟಿದ್ದಿತು. ಕೋಟೆಯಲ್ಲಿ ೧೫ ಗುಂಡುಗಳು ಹಾರಿಸಲ್ಪಟ್ಟು, ಅಧಿಪತ್ಯದ ಸರ್ಕಾರಿ ಕಾರ್ಯಾಲಯಗಳೆಲ್ಲವೂ ಮುಚ್ಚಲ್ಪಟ್ಟಿದ್ದವು.

ಯುದ್ಧ ವಿಶ್ರಾಂತ ದೇಶವಾರ್ತೆಗಳು.

ಹಂಗೇರಿಯಲ್ಲಿ ಪ್ರಜಾಪರಿಪಾಲನಾ ಪ್ರತಿಷ್ಠಾಪನೆಯು ಪ್ರಕಟಿಸಲ್ಪಟ್ಟಿತು.

ಹಿಂದಣ ಕೈಜರರ ಅನುಚಾರರಲ್ಲಿ ಬಹುಜನರು ಹಾಲೆಂಡಿನಿಂದ ಜರ್ಮನಿಗೆ ಹಿಂದಿರುಗಿ ಬಂದಿದ್ದಾರೆ.

ಈಗ ಫ್ರಾನ್ಸ್ ಬೆಲ್ಜಿಯಂ ದೇಶಗಳ ಎಲ್ಲ ಭಾಗಗಳಿಗೂ ಸುಸೂತ್ರವಾಗಿ ಅಂಚೆಯ ರಿಜಿಸ್ಟರು ಮೊದಲಾದುವುಗಳೆಲ್ಲಾ ನಡೆಯುತ್ತ ಎಲ್ಲವೂ ಪೂರ್ವದಂತೆ ಶಾಂತಸ್ಥಿತಿಗೆ ಬಂದಿವೆ.

ನಮ್ಮ ಸಾರ್ವಭೌಮ ದಂಪತಿಗಳು ಕಳೆದ ತಾ|| ೨೮ ರಲ್ಲಿ ಪ್ಯಾರಿಸ್ ಪಟ್ಟಣಕ್ಕೆ ಪ್ರಯಾಣಮಾಡಿ ಬಂದಿರುವರು ಅತಿ ವೈಭವದಿಂದ ಇವರನ್ನು ಸತ್ಕರಿಸಲು ಏರ್ಪಾಟು ನಡೆದಿರುವುದು.

ಯುದ್ಧಾಂತದವರೆಗೆ ಅಮೇರಿಕನ್ ಸೈನ್ಯದಲ್ಲಿ ೫೩,೧೬೯ ಮಂದಿಗಳು ಹತರಾಗಿರುವರು. ೧,೧೭,೬೨೫ ಮಂದಿಗಳಿಗೆ ಗಾಯಗಳಾದುವು. ೩,೩೨೩ ಮಂದಿಗಳು ಸೆರೆಹಿಡಿಯಲ್ಪಟ್ಟಿರಬಹುದು.

ಬೆಲ್ಜಿಯಂ ರಾಜರು ತಮ್ಮ ದೇಶದಲ್ಲಿ ಎಲ್ಲ ಪಕ್ಷಗಳ ಪ್ರತಿನಿಧಿಗಳೂ ಇರುವ ಮಂತ್ರಿಮಂಡಲವನ್ನು ನಿರ್ಮಿಸುವುದಕ್ಕೆ ಆಲೋಚಿಸಿದ್ದಾರೆ. ಸಾರ್ವಜನಿಕ ನಿಯೋಜನಸ್ವಾತಂತ್ರ್ಯವನ್ನು ಪ್ರಜೆಗಳಿಗೆ ಕೊಡುವವರಾಗಿದ್ದಾರೆ.

ಕಳೆದ ತಾ|| ೨೧-೨೨ ರಲ್ಲಿ ಜರ್ಮನರ ಯುದ್ಧದ ಹಡಗುಗಳೂ ಸಬ್‌ಮೆರೀನುಗಳು ಮೊದಲಾದುವೆಲ್ಲಾ ನಿಬಂಧನೆಯ ಪ್ರಕಾರ ಇಂಗ್ಲೀಷ್ ನೌಕಾದಳದವರ ವಶಕ್ಕೆ ಒಪ್ಪಿಸಲ್ಪಟ್ಟು ಮ್ಯೂನಿಚ್ ರೇವೆಯಲ್ಲಿ ಲಂಗರ್ ಹಾಕಲ್ಪಟ್ಟುವು.

ಇದುವರೆಗಣ ಯುದ್ಧದಲ್ಲಿ ಜರ್ಮನರ ಕಡೆ ಸೈನ್ಯದಲ್ಲಿ ೧೫೮೦೦೦೦ ಮಂದಿಗಳು ಹತರಾಗಿರುವರು. ೨೬೦೦೦೦೦ ಮಂದಿಗಳು ಏನಾದರೋ ಗೊತ್ತಿಲ್ಲ. ೪೯೦೦೦೦ ಮಂದಿಗಳು ಸೆರೆಸಿಕ್ಕಿ ಹೋಗಿರುವರು ಗಾಯಗೊಂಡವರು ಬಹುಶಃ ೪೦೦೦೦೦೦ ಮಂದಿಗಳು ಎಂದು ಲೆಕ್ಕವಾಗಿದೆ.

ಕಾನ್‌ಸ್ಟಾಂಟಿನೋಪಲ್ಲನ್ನೂ ಬುಡಾಪೆಸ್ಟ್ ಪಟ್ಟಣವನ್ನೂ ಮಿತ್ರಮಂಡಲಿ ನೌಕಾದಳದವರು ಆಕ್ರಮಿಸಿದರು. ಇಜ್ಜತ್‌ಪಾಷಾನು ತುರ್ಕಿರಾಜ್ಯದ ಮುಖ್ಯ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟುದರಿಂದ ಟೌಫಿಕ್ ಪಾಷಾನು ಮಿತ್ರಮಂಡಲಿಗನುಕೂಲವಾದ ಮಂತ್ರಿಮಂಡಲವನ್ನೇರ್ಪಡಿಸಿರುವನು.

ಎನ್ವರ್‌ಪಾಷಾ ತಲ್ಲತ್‌ಪಾಷಾರುಗಳು ಜರ್ಮನಿ ಯುದ್ಧದ ಹಡಗುಗಳನ್ನು ಹತ್ತಿ ಜರ್ಮನ್ ಅಧಿಕಾರಿಗಳ ಉಡುಪನ್ನು ತೊಟ್ಟು ಬರ್ಲಿನ್ ಪಟ್ಟಣಕ್ಕೆ ಹೋಗಿ ಸೇರಿರುವರಂತೆ. ಅಲ್ಲಿಯವರು ಇವರನ್ನು ಬಂದಿಯಾಗಿ ಹಿಡಿಯುವುದಕ್ಕೋ ಅಥವಾ ತಮ್ಮ ದೇಶದಿಂದ ಓಡಿಸಿಬಿಡುವುದಕ್ಕೋ ಯೋಚಿಸಿರುವರು.

೧೯೧೮ ನೆ ವರ್ಷದ ಕಡೆಯವರೆಗೆ ಯುದ್ಧಕ್ಕಾಗಿ ಎರಡು ಪಕ್ಷದವರೂ ಮಾಡಿರುವ ವೆಚ್ಚವು ೪೦೦೦೦೦೦೦೦೦೦ ಪೌನುಗಳು. ರೂಪಾಯಿ ಹಣದಲ್ಲಿ ೬೦೦೦೦೦೦೦೦೦೦೦. ಇದರಲ್ಲಿ ಮಿತ್ರಮಂಡಲಿಯವರು ಸಾಲಮಾಡಿಕೊಂಡಿರುವುದು ೨೦೦೦೦೦೦೦೦೦೦ ಪೌನುಗಳು. ಜರ್ಮನರ ಕಡೆಯವರೆಲ್ಲಾ ಮಾಡಿರುವ ಸಾಲವು ೧೯೦೦೦೦೦೦೦೦೦ ಪೌನುಗಳು.

ಈಗ ಜರ್ಮನರ ಕೆಲ ಸೇನೆಗಳು ಹಾಲೆಂಡಿಗೆ ಹೋಗಿರುತ್ತವೆ. ಅನೇಕ ಸೈನ್ಯಗಳು ಈಗಲೂ ಹಿಂದಣ ಕೈಜರನಲ್ಲೇ ಅಭಿಮಾನವುಳ್ಳವುಗಳಾಗಿವೆಯಂತೆ. ಇಂಥ ಪರಸೈನ್ಯವನ್ನು ತಟಸ್ಥ ದೇಶೀಯರಾದ ಹಾಲೆಂಡಿನವರು ತಮ್ಮಲ್ಲಿಗೆ ಬರಗೊಡಿಸುವುದು ನಿಯಮವಿರುದ್ಧವಾದುದೆಂದು ಅಲ್ಲಿಯ ಪ್ರಭುತ್ವದವರಿಗೆ ತಿಳಿಯಪಡಿಸುವುದಕ್ಕೆ ಮಿತ್ರಮಂಡಲಿಯವರು ನಿಶ್ಚಯಿಸಿರುವರು.

ಆಸ್ಟ್ರಿಯಾದಲ್ಲಿ ಬೊಲ್ಷೆವಿಕ್ಕರು ಸರ್ಕಾರಿ ಆಫೀಸುಗಳನ್ನೆಲ್ಲಾ ವಶಪಡಿಸಿಕೊಂಡು ಮಂತ್ರಿಗಳನ್ನು ಸೆರೆಹಿಡಿದು ತಮ್ಮ ಪ್ರಭುತ್ವವನ್ನು ಪ್ರಕಟಿಸಬೇಕೆಂದು ಒಂದು ರಹಸ್ಯಕೂಟವನ್ನು ಮಾಡಿದ್ದರು. ಇದಕ್ಕೆ ಸೇರಿದ್ದ ಪ್ರಮುಖರಾದ ನೂರಾರು ಮಂದಿಗಳನ್ನು ಅಲ್ಲಿಯ ತಾತ್ಕಾಲಿಕ ಪ್ರಭುತ್ವದವರು ಹಿಡಿದು ಸೆರೆಯಲ್ಲಿಟ್ಟಿದ್ದಾರೆ. ರಷ್ಯಾ ಬೊಲ್ಷೆವಿಕ್ಕರ ಪ್ರೋತ್ಸಾಹವೇ ಇದಕ್ಕೆ ಕಾರಣವಾಗಿದ್ದಿತು.

ಜರ್ಮನರು ಬೆಲ್ಜಿಯಮ್ಮನ್ನು ಆಕ್ರಮಿಸಿದ ಬಳಿಕ ಕೆಲ ಸ್ವದೇಶದ್ರೋಹಿಗಳಾದ ಬೆಲ್ಜಿಯಂ ಪ್ರಜೆಗಳು ಆ ಜರ್ಮನರೊಡನೆ ಸೇರಿಕೊಂಡು ವ್ಯಾಪಾರ ಮೊದಲಾದುವುಗಳನ್ನು ನಡೆಯಿಸಿಕೊಂಡಿದ್ದರು. ಅಂಥವರನ್ನೆಲ್ಲಾ ಈಗ ಹಿಡಿದು ಸೆರೆಯಲ್ಲಿಟ್ಟರು. ಕೆಲರು ತಲೆತಪ್ಪಿಸಿಕೊಂಡು ಓಡಿಹೋಗಿರುವರು ಇಂಥ ಬಹುಜನರ ಸೊತ್ತನ್ನು ಈಗಣ ಪ್ರಭುತ್ವದವರು ಮುಟ್ಟುಗೋಲು ಹಾಕಿ ವಶಪಡಿಸಿಕೊಂಡರು.

ಆಲ್ಸೇಸ್ ಲೋರೈನ್ ಮಂಡಲಗಳನ್ನು ಜರ್ಮನರು ಫ್ರಾನ್ಸಿನವರಿಂದ ಕಿತ್ತು ವಶಪಡಿಸಿಕೊಂಡು ಇಲ್ಲಿಗೆ ೫೦ ವರ್ಷಗಳಾಗಿದ್ದುವು. ಈಗ ಅವೆರಡೂ ಫ್ರೆಂಚರ ವಶವಾದುವಷ್ಟೆ. ಲೋರೈನಿನಲ್ಲಿರುವ ಮೆಟ್ಜ್ ಪಟ್ಟಣದಲ್ಲಿ ಜರ್ಮನರು ಹಿಂದಣ ಮತ್ತು ಈಗಣ ತಮ್ಮ ಚಕ್ರವರ್ತಿಗಳ ಶಿಲಾಪ್ರತಿಮೆಗಳನ್ನು ಸ್ಥಾಪಿಸಿದ್ದರು. ಈಗ ಅಲ್ಲಿಯ ಪುರಜನರು ಆ ವಿಗ್ರಹಗಳನ್ನು ಹೊಡೆದುರುಳಿಸಿ ಚೂರುಮಾಡಿದರೆಂದು ವರ್ತಮಾನ ಬಂದಿದೆ.

ತಾ|| ೨೦ ರಲ್ಲಿ ಬ್ರಸಲ್ಸ್ ಪಟ್ಟಣವನ್ನು ಜರ್ಮನರು ಬಿಟ್ಟುಹೋಗುವಾಗ ಮಧ್ಯಾಹ್ನದ ಹೊತ್ತು ೩ ಕಡೆ ಮದ್ದು ಗುಂಡುಗಳ ಮನೆಯನ್ನೂ ರೈಲ್ವೆ ಸಾಮಗ್ರಿಗಳ ಉಗ್ರಾಣಗಳನ್ನೂ ಸುಟ್ಟುಹೋಗಿದ್ದಾರೆ. ಇದರಿಂದ ಹಲವು ಕಡೆ ಅಗ್ನಿಯ ಅನಾಹುತವಾಗಿ ಬಹು ಮನೆಗಳು ಧ್ವಂಸವಾದುವು. ಆದರೂ ಪಿಶಾಚನಿವೃತ್ತವಾದರೆ ಸಂತೋಷಪಡುವ ಜನರಂತೆ ಪುರಪ್ರಜೆಗಳು ಎಲ್ಲಕಡೆಯೂ ಬೆಲ್ಜಿಯಂ ಧ್ವಜಪಟಗಳನ್ನೇರಿಸಿ ಸಂತೋಷಿಸಿದರು.

ಆರ್ಮೇನಿಯಾದವರು ಈಜಿಪ್ಟಿನಲ್ಲೂ ಸೌದಾನಿನಲ್ಲೂ ಸಭೆಗೂಡಿ ತಮ್ಮ ಆರ್ಮೀನಿಯಾ ಸಿರಿಯಾ ಪ್ರಾಂತಗಳನ್ನು ಒಟ್ಟುಗೂಡಿಸಿ ಒಂದು ಸ್ವತಂತ್ರರಾಷ್ಟ್ರವನ್ನಾಗಿ ಏರ್ಪಡಿಸಿ, ಅದನ್ನು ಮಿತ್ರಮಂಡಲಿಯ ದೇಶಗಳಲ್ಲೊಂದನ್ನಾಗಿ ಅಂಗೀಕರಿಸುವಂತೆ ಮಾಡಬೇಕೆಂದೂ, ಈ ದೇಶವನ್ನು ಮಿತ್ರಮಂಡಲಿಯ ಮತ್ತೂ ಜರ್ಮನ್ ಪಕ್ಷದ ಸೈನ್ಯಗಳೆರಡೂ ಬಿಟ್ಟುಹೋಗಬೇಕೆಂದೂ ತೀರ್ಮಾನಿಸಿ, ಇದನ್ನು ಅಮೇರಿಕಾದವರಿಗೂ ಮಿತ್ರಮಂಡಲಿಯವರಿಗೂ ಶ್ರುತಪಡಿಸಿಕೊಂಡಿದ್ದಾರೆ.

ಬೆಲ್ಜಿಯಂ ಹಾಲೆಂಡ್ ಎಲ್ಲೆಕಟ್ಟಿನಲ್ಲಿ ಆಯುಧಸಾಮಗ್ರಿಗಳನ್ನು ತುಂಬಿದ್ದ ಹೊಗೆಬಂಡಿಗಳಲ್ಲಿ ಬೆಂಕಿ ಹೊತ್ತಿದುದರಿಂದ ೩ ಟ್ರೇನುಗಳು ಒಂದೇ ಸಲ ಭಗ್ಗನೆ ಹೊತ್ತಿಕೊಂಡುವು. ಆದರಿಂದ ಗಾಯಗೊಂಡ ೮೦೦ ಮಂದಿ ಸೈನಿಕರು ಸತ್ತರು. ಬಹು ಮಂದಿಗೆ ಅಪಾಯವಾಗಿದೆ. ಮಗ್ಗುಲಲ್ಲಿದ್ದ ಹೊಳೆಯಲ್ಲಿ ಹೆಣಗಳೂ ರಕ್ತವೂ ಅಂತ್ಯಾವಸ್ಥೆಯಲ್ಲಿ ಆರ್ತನಾದ ಮಾಡುತ್ತ ಕೊಚ್ಚಿಹೋಗುತ್ತಿದ್ದ ಜನರೂ ತೇಲಿಹೋಗುತ್ತ ನೋಡುವವರಿಗೆ ವೈತರಣೀ ನದಿಯಂತೆ ಭಯಂಕರವಾಗಿ ತೋರುತ್ತಿದ್ದಿತು.

ಮೆಟ್ಜ್ ಪಟ್ಟಣವನ್ನು ಜನರಲ್ ಮ್ಯಾಂಜಿಯವರು ಪ್ರವೇಶಿಸಿ ವಶಪಡಿಸಿಕೊಂಡು, “ಕಳೆದ ೫೦ ವರ್ಷಗಳಿಂದ ನೀವು ಅನುಭವಿಸಿದ ದುರ್ನಯಪ್ರಭುತ್ವವು ಈಗ ಶಾಶ್ವತವಾಗಿ ತೊಲಗಿಸಲ್ಪಟ್ಟಿತು. ಪ್ರಜಾಪ್ರಭುತ್ವದ ಶ್ರೀಕರ ಸೈನ್ಯಗಳು ಈಗ ಲೋರೈನ್ ಮಂಡಲಕ್ಕೆ ನ್ಯಾಯಸ್ವಾತಂತ್ರ್ಯಗಳನ್ನು ತರುತ್ತಿವೆ. ಮರಳಿ ತನ್ನ ಕೈಗೆ ದೊರೆತ ತನ್ನ ಮಕ್ಕಳನ್ನು ಅಪ್ಪಿಕೊಳ್ಳುವುದಕ್ಕಾಗಿ ಫ್ರಾನ್ಸ್ ಮಾತೆಯು ತನ್ನ ಕೈಗಳನ್ನು ಚಾಚಿರುವಳು” ಎಂದು ಪ್ರಜೆಗಳಿಗೆ ಪ್ರಕಟನ ಪತ್ರವನ್ನು ಹಂಚಿದರು.

ಅಮೇರಿಕಾದ ಪ್ರೆಸಿಡೆಂಟ್ ವಿಲ್ಸನ್‌ರವರು ಡಿಸೆಂಬರ್ ತಾ|| ೨ ಕ್ಕೆ ಪ್ಯಾರಿಸ್ಸಿಗೆ ಪ್ರಯಾಣಮಾಡುವರು. ತಾವು ನಿರ್ಣಯಿಸಿಕೊಂಡಿರುವ ಸರ್ವದೇಶ ಸಂಮೇಳನಸಂಘಕ್ಕೆ ಇರಬೇಕಾದ ಲಕ್ಷಣವನ್ನು ಕುರಿತು ಇಂಗ್ಲೀಷ್ ಮುಖ್ಯಮಂತ್ರಿ ಫ್ರಾನ್ಸ್ ಮುಖ್ಯಮಂತ್ರಿಯವರುಗಳೊಡನೆ ಮೊದಲು ಆಲೋಚಿಸಿಕೊಳ್ಳುವರು. ಬಳಿಕ ಫ್ರಾನ್ಸ್ ರಣರಂಗಕ್ಕೆ ಹೋಗಿ ನೋಡಿ ತಮ್ಮ ಅಮೇರಿಕನ್ ಸೈನ್ಯವನ್ನೂ ಪರೀಕ್ಷಿಸಿ, ಸಂಧಿಸಭಾಕಾರ್ಯವನ್ನು ಮುಗಿಸಿಕೊಂಡು ಜನವರಿ ಮುಗಿಯುವುದರೊಳಗಾಗಿ ಮರಳಿ ಅಮೇರಿಕಾಕ್ಕೆ ಹೋಗಿ ಸೇರುವರು.

ಜರ್ಮನರಿಂದ ಬಿಡಲ್ಪಟ್ಟ ಮಿತ್ರಮಂಡಲಿ ಕಡೆಯ ಸೆರೆಯಾಳುಗಳು ಪ್ರತಿದಿನವೂ ಈಗ ಹಿಂದಿರುಗಿ ಬರುತ್ತಿದ್ದಾರೆ. ಅವರಿಗೆ ಅಂಗಿಗಳೆಲ್ಲಾ ಹರಕು. ಜೋಡುಗಳೆಲ್ಲಾ ಕಿತ್ತುಹೋಗಿವೆ. ೨-೩ ದಿನಗಳಿಂದ ಆಹಾರವೇ ಇಲ್ಲ. ಕೈಯಲ್ಲಿ ಅವರಿಗೆ ಒಂದು ಕಾಸೂ ಇಲ್ಲ. ಸೆರೆಯಿಂದ ಬಿಟ್ಟಕೊಡಲೇ ನಿಮ್ಮ ದಾರಿಯನ್ನು ನೀವು ನೋಡಿಕೊಳ್ಳಿರೆಂದು ಜರ್ಮನ್ ಅಧಿಕಾರಿಗಳು ಹೇಳಿ ದೂಡಿಬಿಟ್ಟರಂತೆ. ಇವರಲ್ಲಿ ಹಲವರು ದಾರಿಯಲ್ಲೇ ಸತ್ತರು. ಎಲ್ಲರೂ ಜೀವಚ್ಛವಗಳಂತೆ ಇರುವರು. ಹೀಗೆ ಮಾಡಿದ ಜರ್ಮನ್ ಅಧಿಕಾರಿಗಳ ವಿಷಯದಲ್ಲಿ ಮಿತ್ರಮಂಡಲಿಯವರು ಕಠಿನ ಚರ್ಯೆಯನ್ನು ನಡೆಯಿಸಬೇಕೆಂದಿದ್ದಾರೆ.

ಬೆಲ್ಜಿಯಂ ರಾಜರು ಆಂಟ್ವರ್ಪ್ ಪಟ್ಟಣವನ್ನು ಅತ್ಯಂತ ವೈಭವದಿಂದ ತಾ|| ೧೯ ರಲ್ಲಿ ಪ್ರವೇಶಿಸಿದರು. ಪುರವನ್ನೆಲ್ಲಾ ಅಲಂಕರಿಸಿ ಪ್ರಜೆಗಳು ಅತ್ಯಾನಂದದಿಂದ ಸ್ವಾಗತಿಸಿದರು. ಪಟ್ಟಣಕ್ಕೆ ನಷ್ಟವೇನೂ ಆಗಿಲ್ಲ. ಪ್ರಜೆಗಳು ಸೌಖ್ಯವಾಗಿದ್ದಾರೆ. ತಾ|| ೨೨ ರಲ್ಲಿ ರಾಜದಂಪತಿಗಳು ರಾಜಧಾನಿಯಾದ ಬ್ರಸಲ್ಸ್ ಪಟ್ಟಣವನ್ನು ಅತ್ಯಂತ ವೈಭವದಿಂದ ಪ್ರವೇಶಿಸಿದರು. ಅವರೂ ಅವರ ಮಕ್ಕಳುಗಳೂ ನಮ್ಮ ಸಾರ್ವಭೌಮರ ಕುಮಾರರಾದ ಪ್ರಿನ್ಸ್ ಅಲ್ಬರ್ಟ್‌ರವರೂ ಸಹ ಕುದುರೆಗಳನ್ನೇರಿ ಉತ್ಸವಗೊಂಡು ಪ್ರವೇಶಿಸಿದರು. ಭೂಜಲ ಸೇನಾಪತಿಗಳು ಕೆಲರು ತಮ್ಮ ಸೈನ್ಯಗಳೊಡನೆ ಹಿಂದು ಮುಂದುಗಡೆಯಲ್ಲಿ ಹೋಗುತ್ತಿದ್ದರು. ಪುರಜನರೆಲ್ಲಾ ಮಾಡಗಳ ಮೇಲೆ ನಿಂತು ಜಯಧ್ವನಿಮಾಡಿ ಸ್ವಾಗತಿಸಿದರು.

ಜರ್ಮನ್ ಪ್ರಜೆಗಳು ಈಗ ಸ್ಥೈರ್ಯವನ್ನು ವಹಿಸಿರುವುದು ಅವಶ್ಯಕವೆಂಬ ವಿಷಯಕ್ಕೆ ವಾನ್ ಹಿಂಡನ್‌ಬರ್ಗ್‌ರವರು ಒಂದು ತಂತ್ರೀವಾರ್ತೆಯನ್ನು ತಮ್ಮ ಪ್ರಭುತ್ವಕ್ಕೆ ಬರೆದುಕೊಂಡಿದ್ದಾರೆ. ಅದರಲ್ಲಿ ಹೀಗೆ ತಿಳಿಯಿಸಿರುತ್ತಾರೆ- “ಶತ್ರುಗಳು ಮುಖ್ಯವಾಗಿ ಫ್ರೆಂಚರು ನಮ್ಮ ವಿಷಯದಲ್ಲಿ ಸೌಮ್ಯಭಾವವನ್ನೇನೂ ತೋರಿಸುವುದಿಲ್ಲ. ಅಸಾಧ್ಯವಾದ ವಿಷಮಕಾಂಕ್ಷೆಗಳನ್ನು ಪ್ರತಿದಿನವೂ ತೋರುತ್ತಿದ್ದಾರೆ. ಫ್ರೆಂಚರು ಮರಳಿ ಯುದ್ಧವನ್ನಪೇಕ್ಷಿಸುತ್ತಿರುವಂತೆ ಕಾಣುತ್ತದೆ. ಜರ್ಮನ್ ಸೈನ್ಯವು ಫ್ರೆಂಚರೊಬ್ಬರನ್ನಾದರೂ ಪ್ರತಿಭಟಿಸಲಾರದ ಸ್ಥಿತಿಗೆ ಬರುತ್ತಿದೆ. ಪ್ರಜೆಗಳಲ್ಲಿ ಹೆಚ್ಚುಮಂದಿಯು ಅಂಗೀಕರಿಸಿದ ಪ್ರಭುತ್ವದ ಹೊರತು ಇತರರೊಡನೆ ನಮ್ಮ ಶತ್ರುಗಳು ಸಂಧಿಯನ್ನು ಜರುಗಿಸುವುದಕ್ಕೆ ಒಪ್ಪುವುದಿಲ್ಲ” ಎಂದು ತಿಳಿಯಿಸಿಕೊಂಡಿದ್ದಾರೆ.

ಸಕಲ ದೇಶ ಸಂಮೇಳನ ಕಾರ್ಯವು ಹೇಗೆ ಪರ್ಯವಸಾನವಾಗುವುದೋ ಸರ್ವ ದೇಶ ಸೈನ್ಯಗಳೂ ಬಿಚ್ಚಬಿಡ್ಡುವ ಕಾರ್ಯವು ಎಂದಿಗೆ ನಡೆಯುವುದೋ ಮಹಾಸಂಧಿಯ ಪರಿಷ್ಕಾರವು ಹೇಗಾಗುವುದೋ ಗೊತ್ತಾಗುವುದಿಲ್ಲವಾದಕಾರಣ, ನಮ್ಮ ನೌಕಾನಿರ್ಮಾಣಕಾರ್ಯವನ್ನು ವಿರಮಿಸುವುದು ಸರಿಯಲ್ಲ; ಇನ್ನು ೩ ವರ್ಷಗಳ ವರೆಗೆ ೧೦ ದೊಡ್ಡ ಯುದ್ಧದ ಹಡಗು (ಡ್ರೆಡ್ ನಾಟು)ಗಳನ್ನೂ, ೬ ಕ್ರೂಜರುಗಳನ್ನೂ, ೧೪೦ ಚಿಕ್ಕ ಹಡಗುಗಳನ್ನೂ ಕಟ್ಟಿ ಮುಗಿಸಬೇಕೆಂದು ಅಮೇರಿಕಾ ಪಾರ್ಲಿಮೆಂಟಿನಲ್ಲಿ ಅಲ್ಲಿಯ ನೌಕಾದಳ ಮಂತ್ರಿಯು ಹೇಳಿರುತ್ತಾರೆ. ಅಮೇರಿಕಾ ನೌಕಾದಳವು ಈಗ ಪ್ರಪಂಚದಲ್ಲಿ ೨ನೆ ಸ್ಥಾನದಲ್ಲಿದೆ. ಇಂಗ್ಲೆಂಡ್ ನೌಕಾದಳವು ೧ನೆಯದಾಗಿದೆ. ಜರ್ಮನಿ ನೌಕಾದಳವು ಯುದ್ಧಕ್ಕೆ ಮುಂಚೆ ೨ನೆ ಸ್ಥಾನದಲ್ಲಿದ್ದು ಈಗ ೬ನೆ ಸ್ಥಾನಕ್ಕಿಳಿದಿದೆ.

ಯುದ್ಧಕಾಲದಂತೆಯೇ ಶಾಂತಿಸಮಯದಲ್ಲೂ ಕೂಡ ವಿದೇಶೀಯರನ್ನು ಬಹಿಷ್ಕರಿಸುವುದಕ್ಕೆ ಅಧಿಕಾರವುಳ್ಳ ವಿಧಿಯೊಂದನ್ನೇರ್ಪಡಿಸುವುದಕ್ಕೆ ಆಂಗ್ಲಪ್ರಭುತ್ವದವರು ಪಾರ್ಲಿಮೆಂಟಿನ ಮುಂದೆ ಸೂಚನೆಯನ್ನು ತರುವವರಾಗಿದ್ದಾರೆ. ಜರ್ಮನರಾರನ್ನೂ ನಮ್ಮ ದೇಶಕ್ಕೆ ಬರಗೊಡಿಸಲೇ ಬಾರದೆಂಬುದೇ ನನ್ನ ಅಭಿಪ್ರಾಯವೆಂದು ಲಾರ್ಡುಗಳ ಸಭೆಯಲ್ಲಿ ಸರ್ ಜಾರ್ಜ್ ಕೇವ್‌ರವರು ಹೇಳಿರುವರು. ಇದರಿಂದ ಇಂಗ್ಲೀಷ್ ಜನರಿಗೆ ಜರ್ಮನರಲ್ಲಿ ಎಷ್ಟು ಹೇಯಭಾವವು ಬೇರುಬಿಟ್ಟುಕೊಂಡಿದೆಯೆಂಬುದು ವ್ಯಕ್ತವಾಗುತ್ತಿದೆ. ಜರ್ಮನರಾದರೂ ನಿರುಪಾಯರಾಗಿ ಶರಣಾಗತರಾಗಬೇಕಾದರಾದುದರಿಂದ ಅವರುಗಳ ಮನಸ್ಸಿನಲ್ಲಾದರೂ ಇಂಗ್ಲೀಷರ ಮೇಲಣ ಹೊಟ್ಟೆಕಿಚ್ಚು ಶಾಂತವಾಗಿಲ್ಲ “ಕಡೆಗೆ ನಮಗೆ ಇಂಥ ಗತಿಯು ಬಂದಿತೇ” ಎಂದು ಅವರು ಮತ್ತಷ್ಟು ಮಚ್ಚರಿಸುವಂತೆಯೇ ಆಗಿರುವುದು. ಯುದ್ಧಾಗ್ನಿಯು ಶಾಂತವಾದರೂ ಕ್ರೋಧಾನಲವು ಆರಿಲ್ಲವೆಂದೇ ಹೇಳಬೇಕಾಗುವುದು.

ಹಾಲೆಂಡ್‌ದೇಶದಲ್ಲಿ ರಾಜಕೀಯ ವಿಪ್ಲವವೆದ್ದಿರುವುದರಿಂದ ಅಲ್ಲೂ ತನಗೆ ಶಾಂತಿಯಿಲ್ಲದೆ ಜರ್ಮನಿ ಪೂರ್ವ ಕೈಜರನು ಮರಳಿ ಸ್ವದೇಶಕ್ಕೆ ಹೋಗಲು ಯೋಚಿಸಿರುವನಂತೆ. ಆತನು ಹೀಗೆ ನಿರಾತಂಕವಾಗಿ ಇಲ್ಲಿಂದಲ್ಲಿಗೆ ಓಡಾಡುತ್ತಿರುವುದಕ್ಕೆ ಅವಕಾಶಕೊಟ್ಟಿರುವುದು ಅನರ್ಥಕಾರಿಯೆಂದೂ, ಆ ಹದ್ದು ಹೊಸ ರಕ್ಕೆಪುಕ್ಕಗಳನ್ನು ಬಲಿಸಿಕೊಂಡು ಮತ್ತೊಂದು ಯುದ್ಧಕ್ಕೆ ದಾರಿಮಾಡಿದರೂ ಮಾಡಬಹುದೆಂದೂ, ನೆಪೋಲಿಯನ್ ಬೊನಾಪಾರ್ಟನ್ನು ಹಿಡಿದು ಕೊನೆಗೆ ಸೆಂಟ್ ಹೆಲೀನಾದಲ್ಲಿ ಹಾಕಿದಂತೆ ಈತನಿಗೂ ಮಾಡುವುದು ಕರ್ತವ್ಯವೆಂದೂ ಮಿತ್ರಮಂಡಲಿ ಪತ್ರಿಕೆಗಳು ಸೂಚಿಸಿರುತ್ತವೆ. ಹಿಂದಣ ಕೈಜರನನ್ನು ಹಾಲೆಂಡ್ ಸರ್ಕಾರದವರು ನಿರ್ಬಂಧದಲ್ಲಿಡದಿದ್ದರೆ ಬಹಳ ಹೆಚ್ಚಿನ ಬಾಧ್ಯತೆಯು ಅವರ ತಲೆಯಮೇಲೆ ಬೀಳುವುದೆಂದು ಮಿತ್ರಮಂಡಲಿಯವರು ಅವರಿಗೆ ಬರೆದಿರುತ್ತಾರೆ. “ಕೈಜರು ಅಮೆರಾಂಜನ್ನಿನಲ್ಲಿ ನಿರ್ಬಂಧವಾಸದಲ್ಲಿಡಲ್ಪಟ್ಟಿದ್ದಾರೆ. ಅವರು ತಮ್ಮ ವಾಸದ ಬಂಗಲೆಯ ಉದ್ಯಾನವನ್ನು ದಾಟಿ ಎಲ್ಲಿಗೂ ಹೋಗಿಲ್ಲ” ಎಂದು ಹಾಲೆಂಡ್ ಸರ್ಕಾರದವರು ಪ್ರಕಟಿಸಿದ್ದಾರೆ.

ನಮ್ಮ ಸಾರ್ವಭೌಮರವರು ಕಳೆದ ತಾ|| ೨೧ ರಲ್ಲಿ ಪಾರ್ಲಿಮೆಂಟಿಗೆ ದಯಮಾಡಿಸಿ ಸಭಿಕರನ್ನೆಲ್ಲಾ ಕುರಿತು ಒಂದು ಉಪನ್ಯಾಸಮಾಡಿದರು. ಅದರಲ್ಲಿ—ಕಳೆದ ೪ ವರ್ಷಗಳಿಂದಲೂ ದೇಶದ ಪ್ರಜೆಗಳ ಸರ್ವ ಬಲವನ್ನೂ ಹೀರಿ ಹಿಪ್ಪೆಮಾಡಿದ ಮಹಾಯುದ್ಧವು ಕಟ್ಟಕಡೆಗೆ ನಮಗೆ ಜಯಪ್ರದವಾಗಿ ಮುಗಿದಿತೆಂದೂ, ಶತ್ರುದೇಶಗಳಲ್ಲಿ ಕಟ್ಟಕಡೆಯವರೊಡನೆ ಮಾಡಿಕೊಂಡಿರುವ ತಾತ್ಕಾಲಿಕ ಸಂಧಿಯು ಬೇಗನೆ ಗೌರವಕರವಾದ ಶಾಶ್ವತಸಂಧಿ ಜರುಗುವುದಕ್ಕೆ ವಾಗ್ದಾನರೂಪವಾಗಿರುವುದೆಂದೂ, ಈ ನಮ್ಮ ಮಹಾವಿಜಯಕ್ಕೆ ಕಾರಣಭೂತರಾದ ನನ್ನ ಸಾಮ್ರಾಜ್ಯದ ಸಕಲ ಪ್ರಜೆಗಳಿಗೂ ಮಿತ್ರಮಂಡಲಿಯವರೆಲ್ಲರಿಗೂ ಕೃತಜ್ಞತೆಯನ್ನು ತಿಳಿಯಿಸುವೆನೆಂದೂ, ನಮ್ಮ ಪ್ರಯತ್ನಗಳಿಗೆಲ್ಲಾ ವಿಜಯ ಫಲವನ್ನುಂಟುಮಾಡಿಕೊಟ್ಟ ಸರ್ವಶಕ್ತನಾದ ಪರಮಾತ್ಮನಿಗೆ ನಮ್ಮ ನಮಸ್ಕಾರಗಳನ್ನು ಸಲ್ಲಿಸುವುದಕ್ಕೆ ಮರೆಯಬಾರದೆಂದೂ ಅಪ್ಪಣೆಕೊಡಿಸಿದುದಲ್ಲದೆ, ಈಗ ಕೊನೆಮುಟ್ಟಿದ ಯುದ್ಧದ ಪ್ರಮಾದತಾಪವೆಲ್ಲವೂ ಕೊನೆಮುಟ್ಟಿ ಸೌಖ್ಯಸ್ಥಿತಿಯು ಪ್ರಾಪ್ತವಾಗುವವರೆಗೂ, ನಮ್ಮ ಜಾತೀಯಲಕ್ಷ್ಮಿಗೆ ಸುಸ್ಥಿತಿಯು ಏರ್ಪಡುವವರೆಗೂ ಇದುವರೆಗೆ ನಾವು ಮಾಡಿದಂಥ ಪ್ರಯತ್ನಗಳ ವಿಧಾನವನ್ನು ಬಿಡಕೂಡದು (ಎಂದರೆ ಇದುವರೆಗೆ ಏರ್ಪಟ್ಟಿದ್ದ ಎಲ್ಲ ಪಕ್ಷಗಳ ಪ್ರತಿನಿಧಿಗಳುಳ್ಳ ಸಂಯುಕ್ತ ಪ್ರಭುತ್ವವೇ ಇನ್ನು ಕೆಲ ಕಾಲದವರೆಗೆ ಇರಬೇಕು) ಎಂದು ಅಪ್ಪಣೆಕೊಡಿಸಿದರು.

ಪಾರ್ಲಿಮೆಂಟಿನಲ್ಲಿ ಅಧಿಕಾರಿಗಳು ಹೇಳಿರುವ ವಿವರಣೆಯ ಪ್ರಕಾರ ಇಂಗ್ಲೀಷರ ಸೈನ್ಯದಲ್ಲಿ ಇದುವರೆಗಣ ಮಹಾಯುದ್ಧದಲ್ಲಿ ಈ ಕೆಳಗೆ ಕಾಣಿಸಿರುವ ನಷ್ಟವು ಸಂಭವಿಸಿದೆ. ಯುದ್ಧಾರಂಭದಿಂದ ಕಳೆದ ನವಂಬರ್ ತಾ|| ೧೦ ರ ವರೆಗೆ ಎಲ್ಲಾ ರಂಗಗಳಲ್ಲು ೩೦|| ಲಕ್ಷ ಇಂಗ್ಲೀಷ್ ಸೈನಿಕರು (ಇದರಲ್ಲಿ ವೈಮಾನಿಕ ಸೈನಿಕರ ನಷ್ಟವು ಸೇರಿಲ್ಲ. ಅಧಿನಿವೇಶನಗಳ ಮತ್ತು ಭರತಖಂಡದ ಸೇನಾನಷ್ಟವೆಲ್ಲಾ ಇದರಲ್ಲಿ ಸೇರಿಹೋಗಿದೆ.) ಇವರಲ್ಲಿ ಸೈನಿಕೋದ್ಯೋಗಿಗಳೇ ೧೪೨೬೩೪ ಮಂದಿಗಳು, ೨೯೦೦೦೦೦ ಮಂದಿ ಸೈನಿಕರು, ಒಟ್ಟು ಸಂಖ್ಯೆಯಲ್ಲಿ ಹತರಾದವರುಗಳು ೩೭೬೯೪ ಮಂದಿ ಸೈನಿಕೋದ್ಯೋಗಿಗಳೂ, ೫೨೬೮೪೩ ಮಂದಿ ಸೈನಿಕರೂ ಆಗಿರುತ್ತಾರೆ. ಉಳಿದ ಸಂಖ್ಯೆಯವರೆಲ್ಲಾ ಅಂಗವಿಕಲರೂ ಕಾಣದೆಹೋಗಿರುವವರೂ ಆಗಿರುತ್ತಾರೆ. ನಷ್ಟವು ಯಾವ ಯಾವ ರಂಗದಲ್ಲಿ ಎಷ್ಟೆಷ್ಟಾಯಿತೆಂದರೆ—

	ಉದ್ಯೋಗಿಗಳು.	ಸೈನಿಕರು.
ಫ್ರಾನ್ಸ್ ರಂಗದಲ್ಲಿ ನಷ್ಟ	೧೨೬೭೦೦	೨೫೯೩೦೦೦
ಇವರಲ್ಲಿ ಸತ್ತವರು	೩೨೮೦೦	೫೨೬೦೦೦
ಡಾರ್ಡನೆಲ್ಸ್ ನಷ್ಟ	೫೦೦೦	೧೧೫೦೦೦
ಸತ್ತವರು	೧೮೦೦	೩೨೦೦೦
ಸಾಲೋನಿಕಾ ನಷ್ಟ	೧೨೦೦	೨೬೦೦೦
ಮೆಸಪಟೋಮಿಯಾ ನಷ್ಟ	೪೩೦೦	೯೩೦೦೦
ಈಜಿಪ್ಟ್	೩೬೦೦೦	೫೪೦೦೦
ಪೂರ್ವಾಫ್ರಿಕಾ	೯೦೦	೧೭೦೦೦

ಪಾರ್ಲಿಮೆಂಟಿನಲ್ಲಿ ಚಕ್ರವರ್ತಿಯವರಿಗೆ ಒಂದು ಸನ್ಮಾನಪತ್ರವನ್ನು ಈ ಸಂದರ್ಭದಲ್ಲಿ ಒಪ್ಪಿಸಬೇಕೆಂಬ ವಿಷಯದ ತೀರ್ಮಾನವನ್ನು ಮುಖ್ಯಮಂತ್ರಿಯವರು ಸೂಚಿಸಿದಾಗ ಅದನ್ನು ಹಿಂದಣ ಮುಖ್ಯಮಂತ್ರಿಯವರಾದ ಮಿ|| ಆಸ್ಕ್ವಿತ್‌ರವರು ಪುಷ್ಟಿಗೊಳಿಸುವಲ್ಲಿ ಹೇಳಿದ ಮಾತುಗಳು ಪ್ರಭುಗಳೆಲ್ಲರೂ ನೆನಪಿನಲ್ಲಿಡತಕ್ಕುವಾಗಿವೆ. ಏನೆಂದರೆ—“ಈ ೪ ವರ್ಷದ ಯುದ್ಧಚರಿತ್ರವನ್ನು ಬರೆದರೆ ಅದು ಅಪೂರ್ವ ಚರಿತ್ರವಾಗುವುದು. ಅದರಲ್ಲಿ ಅಸದೃಶ ಧೈರ್ಯಸ್ಥೈರ್ಯಗಳು ವ್ಯಕ್ತವಾದುವು. ಪ್ರಪಂಚವು ಜನಶೂನ್ಯವಾಯಿತು. ಶಾಶ್ವತವೆಂದು ತಿಳಿಯಲ್ಪಟ್ಟಿದ್ದ ನಿರಂಕುಶ ಸಾಮ್ರಾಜ್ಯಗಳು ಭಸ್ಮೀಭೂತವಾದುವು. ಎಲ್ಲವೂ ವ್ಯತ್ಯಸ್ತವಾಗಿಹೋಯಿತು. ಮಾಲಿನ್ಯ ಕಳೆದು ಮಡಿಮಾಡಿದಂಥ ಈ ಕೆಲಸದಲ್ಲಿ ಆಂಗ್ಲಸಾಮ್ರಾಜ್ಯವು ಬಹಳ ಕೆಲಸವನ್ನು ಮಾಡಿತು. ನಮ್ಮ ರಾಜರು ಘನವಾದ ಕಾರ್ಯವನ್ನು ಮಾಡಿದರು. ಇತರ ರಾಜರ ಸಿಂಹಾಸನಗಳು ಪ್ರಜಾದೌರ್ಬಲ್ಯವೆಂಬ ಹುದಿಗಲ್ಲಿನ ಮೇಲೆ ನಿಂತಿದ್ದುವು. ಆಂಗ್ಲರಾಜ ಸಿಂಹಾಸನವು ಸುಸ್ಥಿರವಾದ ಪ್ರಜಾಭಿಮಾನವೆಂಬ ಹದಿಗಲ್ಲಿನ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿರುವುದು. ಮತ್ತು ನಮ್ಮ ರಾಜದಂಪತಿಗಳ ಸದ್ಗುಣಚಾರಿತ್ರಗಳು ಪ್ರಶಂಸಾಪಾತ್ರವಾದುವುಗಳು. ಅಲ್ಲಿಯ ಪ್ರಜೆಗಳು ಪ್ರಭುವನ್ನು ಸೇವಿಸುತ್ತಲಿಲ್ಲ. ನಮ್ಮ ರಾಜಕುಟುಂಬದವರಿಗೆ ಪ್ರಜಾಸೇವೆಯೇ ಮುಖ್ಯಧರ್ಮವೂ ಐಶ್ವರ್ಯವೂ ಆಗಿರುವುದರಿಂದ ಅವರುಗಳು ಸುಸ್ಥಿರರಾಗಿರುವರು. ಪ್ರಜೆಗಳ ಮನೋಭಾವವನ್ನು ಪ್ರತಿ

ಸಾನುಭೂತಿಯಿಂದಲೂ ಶ್ರದ್ಧೆಯಿಂದಲೂ ಪ್ರಭುಗಳು ನಡೆದುಕೊಳ್ಳದಿದ್ದರೆ ಈ ಕಾಲದಲ್ಲಿ ರಾಜ್ಯಗಳು ನಿಲ್ಲುವುದು ಕಷ್ಟ" ಎಂದು ಹೇಳಿರುವರು. ಬೃಹಸ್ಪತಿಗೆ ಸಮನಾದ ಈ ವೃದ್ಧಮಂತ್ರಿಯ ಉಪದೇಶವಚನವು ಸರ್ವದೇಶಗಳಿಗೂ ಸರ್ವಕಾಲಕ್ಕೂ ಉಪಾದೇಯಗಳಾದುವಲ್ಲವೆ ?

ಮುಂದೆ ಕೂಡುವ ಸಂಧಿಮಹಾಸಭೆಯಲ್ಲಿ ಎಲ್ಲ ವಿಷಯಗಳೂ ಚರ್ಚೆಯಾಗಿ ಮುಗಿದ ಬಳಿಕ ಸಮುದ್ರಸ್ವಾತಂತ್ರ್ಯವು ಸರ್ವರಿಗೂ ಸಮವಾಗಿರಬೇಕೆಂಬ ವಿಷಯವು ಚರ್ಚಿಸಲ್ಪಡುತಕ್ಕದಾಗಿದೆ. ಅದೇ ಕೊನೆಯದು. ಅದರ ಚರ್ಚೆಗೆ ಮುಖ್ಯವಾಗಿ ಅಮೇರಿಕಾದ ಡಾ|| ವಿಲ್ಸನ್ನರವರು ಪ್ರತ್ಯಕ್ಷವಾಗಿರುವರು. ಇದು ಬಹು ಪ್ರಧಾನವಾದ ವಿಷಯ. ಇದರ ಸಂಪಾದನೆಗಾಗಿಯೇ ಜರ್ಮನರು ಹವಣಿಸಿಕೊಂಡಿದ್ದರು. ಈಗಣ ಯುದ್ಧಕ್ಕೂ ಅದೇ ಮುಖ್ಯಕಾರಣವೆಂದು ಹೇಳಿದರೂ ಹೇಳಬಹುದು. ಡಾ|| ವಿಲ್ಸನ್ನರವರು ಸೂಚಿಸಿದ್ದ ೧೪ ಅಂಶಗಳಲ್ಲಿ ಇದೂ ಒಂದಾಗಿದ್ದಿತು. ಇದು ನೆರವೇರುವುದೆಂಬ ಭರವಸೆಯ ಮೇಲೆಯೇ ಜರ್ಮನರು ಯುದ್ಧಶಾಂತಿಗೂ ಕೈಸರರ ರಾಜ್ಯಪರಿತ್ಯಾಗಕ್ಕೂ ಅನುಮತಿಸಿದರೆಂದು ಹೇಳಿದರೂ ಹೇಳಬಹುದು. ಇಂಥ ವಿಷಯವು ಹೇಗೆ ಪರ್ಯವಸನ್ನವಾಗುವುದೋ ಎಂದು ಲೋಕವೇ ಇದಿರುನೋಡುತ್ತಿರುವುದು. ಜರ್ಮನ್ ನರಪಿಶಾಚರಿಗೆ ಸಕಲ ಸಮುದ್ರದಲ್ಲೂ ಸ್ವಾತಂತ್ರ್ಯವಿದ್ದು ಬಿಟ್ಟರೆ ಅವರ ದೇಶಾಕ್ರಮಣ ದುರಾಶೆಗೆ ಪ್ರಪಂಚವೆಲ್ಲಾ ತೆರೆದಿಟ್ಟದ್ದಾರಿಯಾಗಿ ಪರಿಣಮಿಸಬಹುದು. ಇದನ್ನು ಮಿತ್ರಮಂಡಲಿಯವರೇ ಅಲ್ಲದೆ ಪ್ರಪಂಚದವರೆಲ್ಲಾ ಅರಿತಿರುವರು. ಆದುಕಾರಣ ಆ ಭಾಗದಲ್ಲಿ ಸಂಪೂರ್ಣ ಸ್ವಾತಂತ್ರ್ಯವು ಜರ್ಮನರಿಗೆ ಲಭಿಸಲಾರದು. ವ್ಯಾಪಾರದ ವಿಷಯದಲ್ಲಿ ಎಲ್ಲ ದೇಶದ ಹಡಗುಗಳಿಗೂ ಸರ್ವಸಮುದ್ರಗಳಲ್ಲೂ ಸಂಚರಿಸುವ ಬಾಧ್ಯತೆಯು ಇರುವುದರಲ್ಲಿ ಬಾಧಕವೇನೂ ಇರುವುದಿಲ್ಲ. ಅದು ಅನುಮೋದಿತವಾಗುವುದರಲ್ಲಿ ಸಂಶಯವೂ ತೋರುವುದಿಲ್ಲ. ಶಾಂತಿಸಮಯದಲ್ಲಿ ಸಕಲ ದೇಶಗಳ ಹಡಗುಗಳೂ ಎಲ್ಲ ರೇವೆಗಳಿಗೂ ಹೋಗಿಬರಬಹುದು. ಇಂಗ್ಲೀಷರಿಗೆ ಸಮುದ್ರಾಧಿಪತ್ಯವು ದೊರೆಯುವುದಕ್ಕೆ ಮುಂಚೆ ಕ್ರೈಸ್ತಜಗದ್ಗುರುವಿನ ಅಧಿಕಾರವು ಯುರೋಪಿನಲ್ಲಿ ಅನರ್ಗಳವಾಗಿದ್ದಾಗ್ಗೆ ಸ್ಪೆಯಿನ್ನಿನವರೂ, ಪೋರ್ಚುಗಲ್ಲಿನವರೂ ಸಮುದ್ರಾಧಿಪತ್ಯವನ್ನು ತಮ್ಮಲ್ಲಿಟ್ಟುಕೊಂಡಿದ್ದರು. ಅವರ ಪ್ರಾಬಲ್ಯವು ಅಡಗಿದ ಬಳಿಕ ಇಂಗ್ಲೀಷರು ಅಟ್ಲಾಂಟಿಕ್ ಪೆಸಿಫಿಕ್ ಇಂಡ್ಯಾ ಸಮುದ್ರಗಳಲ್ಲೆಲ್ಲಾ ಸರ್ವದೇಶದವರಿಗೂ ವ್ಯಾಪಾರಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರು. ಡಚ್ಚರ ಅಧಿಕಾರವು ಕ್ಷೀಣಿಸಿದ ಬಳಿಕ ಏಷ್ಯಾಸಮುದ್ರದಲ್ಲೂ ಕೂಡ ಹಾಗೆಯೇ ಸರ್ವಸ್ವಾತಂತ್ರ್ಯವು ಉಂಟಾಯಿತು. ಇಷ್ಟನ್ನೆಲ್ಲಾ ಮಾಡಿದವರು ಇಂಗ್ಲೀಷ್ ನೌಕಾಪಡೆಯವರೇ. ಅವರೇ ಈಗಲೂ ಕೂಡ ಅನಿತರ ಸಾಧಾರಣವಾದ ಸಾಮರ್ಥ್ಯದಿಂದ ಸಮುದ್ರಸ್ವಾತಂತ್ರ್ಯವನ್ನು ಕಾಪಾಡುತ್ತಿದ್ದಾರೆ. ಅದಕ್ಕಾಗುವ ವೆಚ್ಚದ ಭಾರವನ್ನೆಲ್ಲಾ ಆಂಗ್ಲದೇಶವೇ ಹೊರುತ್ತಿದೆ.

ಪತ್ರವ್ಯವಹಾರ.

ಧಾರವಾಡ ಡಿ|| ತುಮ್ಮಿನಕಟ್ಟೆ.

ಈಗ ಭಯಂಕರ ದುಷ್ಕಾಲವಿದ್ದು ಎಷ್ಟೋ ಜನರು ಹೊಟ್ಟೆಗಿಲ್ಲದೆ ನರಳುತ್ತಿರುವರು. ಇಂಥಾ ಕಠಿನಪ್ರಸಂಗದಲ್ಲಿ ಇಲ್ಲಿಯ ಪ್ರಮುಖರೆನಿಸಿಕೊಂಡಂಥ ಸುಬ್ರಾಯಪ್ಪ ರಾಮಚಂದ್ರಪ್ಪ ಶೆಟ್ಟರ ವ ಮಹದೇವಪ್ಪ ಭುಟ್ಟಪ್ಪ ಅಣಜಿ ಈ ಮಹನೀಯರುಗಳು ತಾ|| ೧೮-೧೧-೧೮ ರಿಂದ ಬಡಜನಗಳ ಊಟದ ಸಲುವಾಗಿ ಅನ್ನಸತ್ರವನ್ನು ಸ್ಥಾಪಿಸಿ, ದಾಸೋಹವನ್ನು ನಡಿಸಿರುತ್ತಾರೆ. ಇದರಿಂದ ಸುತ್ತುಮುತ್ತು ಇರುವಂಥಾ ಹಳ್ಳಿಹಳ್ಳಿಗಳಲ್ಲಿಯ ಜನರು ರಾತ್ರಿಗೆ ಬಂದಂತೆ ಎರಡು ಹೊತ್ತೂ ಬಂದು ಊಟಾ ಮಾಡಿ ಹೋಗುತ್ತಿರುತ್ತಾರೆ. ಇದಕ್ಕಾಗಿ ಸದರಿ ಮಹನೀಯರು ೪೦ ಚೀಲ ಅಕ್ಕಿ, ೬೦ ಚೀಲ ಜೋಳವನ್ನು, ೧೨ ಚೀಲ ಉಳಿದ ಕಾಳು ಕಡಿಗಳನ್ನು ಪ್ರತ್ಯೇಕವಾಗಿ ತೆಗೆದಿಟ್ಟಿರುತ್ತಾರೆ. ಇದರಂತೆ ಮುಂದಾದರೂ ನಡಿಸಲಿಕ್ಕೆ ಕೂಡಾ ಸಿದ್ಧರಿರುತ್ತಾರೆ. ಇದು ಅವರಿಗೆ ಭೂಷಣಾಸ್ಪದವೇ ಸರಿ. ದೇವರು ಈ ಮಹನೀಯರುಗಳಿಗೆ ಆಯುರಾರೋಗ್ಯಾಭಿವೃದ್ಧಿಯನ್ನುಂಟುಮಾಡಿ ಇನ್ನೂ ಹೆಚ್ಚಿನ ಯೋಗ್ಯತೆಯನ್ನು ಕೊಟ್ಟು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸಿ ನನ್ನ ಲೇಖನವನ್ನು ಮುಗಿಸಿರುತ್ತೇನೆ.

ಸ್ಥಳೀಕ.

ಸ್ವಾಮಿ ! ಗೌರಿಬಿದನೂರು ತಾಲೂಕು ಮಂಚೇನಹಳ್ಳಿ ಸಮ್ಮತು ಮಾವಿನಕಾಯಿನ ಹಳ್ಳಿ ಗ್ರಾಮವೆಂಬ ನಾನು ವಾಸವಾಗಿರುತ್ತಿರುವ ಈ ಸಣ್ಣ ಗ್ರಾಮದಲ್ಲಿ ಸುಮಾರು 300 ಜನ ಪ್ರಜೆಗಳು ಇರುತ್ತಾರೆ. ಈಗ ಸುಮಾರು 1½ ತಿಂಗಳ ಬಾಗಾಯ್ತು ಈ ಗ್ರಾಮದಲ್ಲಿ 250 ಜನರಿಗೆ ಎಲ್ಲಾ ಕಡೆಯೂ ಹಬ್ಬಿರುವ ಇನ್ಫ್ಲುಯೆಂಜಾ ರೋಗವು ವ್ಯಾಪ್ತವಾಯಿತು. ಒಂದೂವರೆ ತಿಂಗಳ ಹಿಂದೆ ಹಿಜ್ ಮೆಜೆಸ್ಟ್ರೀ ಇಲಾಖಾಕಸೂರ್ವಲ್ ಜಿಲ್ಲಾ ಕಲೆಕ್ಟರ್ ಸಾಹೇಬರವರ ಆಫೀಸು ಸೀನಿಯರ್ ಟೈಪಿಸ್ಟರಾದ ಮ|| ಹೆಚ್. ಶ್ರೀನಿವಾಸರಾಯರವರು ತಮ್ಮ ಮಾವಂದಿರವರಾದ ಈ ಗ್ರಾಮದಲ್ಲಿರುವ ವೇ|| ಶಾಕತಿಮ್ಮಾಚಾರ್ಯರವರ ಮನೆಗೆ ದಯಮಾಡಿಸಿ ಇರುತ್ತಾರೆ. ಮ|| ಹೆಚ್. ಶ್ರೀನಿವಾಸರಾಯರವರು ಉತ್ತಮವಾದ ನೇಟೀವ್ ಔಷಧಿಗಳನ್ನು ತಯಾರಿಸಿ ಈ ಗ್ರಾಮದ ಎಲ್ಲಾ ರೋಗಿಗಳಿಗೂ ಅಜುಬಾಜು ಗ್ರಾಮಗಳು ದ್ವಾರಗಾನಹಳ್ಳಿ, ರಾಯಮಾಕಲಹಳ್ಳಿ, ಬಿಸಲಹಳ್ಳಿ, ಕೊಂಡೇನಹಳ್ಳಿ, ಪುರ, ಕೋರಿಗಾನಹಳ್ಳಿ, ಬೊಮ್ಮಸಂದ್ರ ಈ ಗ್ರಾಮಗಳಲ್ಲಿ ಸದರಿ ರೋಗಪೀಡಿತರಾಗಿದ್ದವರಿಗೂ ಸಹ ಚಿಕಿತ್ಸೆಗಳನ್ನು ನಡಿಸಿದರು. ಎಚ್. ಹೆಚ್. ಶ್ರೀನಿವಾಸರಾಯರು ಎಲ್ಲಾ ರೋಗಿಗಳ ಮನೆಗಳಿಗೆ ಈ ಗ್ರಾಮದಲ್ಲಿ ದಿನ 1 ಕ್ಕೆ 3-4 ದಫಾ ಹೋಗಿ ವಿಚಾರಿಸಿ ತಕ್ಕ ಔಷಧಿಗಳನ್ನು ಪ್ರಯೋಗಿಸಿ ಔಷಧಿಗಳ ಖರೀದಿಯನ್ನು ಸಹಾ ತೆಗೆದುಕೊಳ್ಳದೆ ಇಹಪರ ಸಾರ್ಥಕ್ಯವನ್ನು ಹೊಂದುತ್ತಿರುತ್ತಾರೆ. ಹೆಚ್. ಶ್ರೀನಿವಾಸರಾಯರವರು ಔದಾರ್ಯಮನಸ್ಸಿನಿಂದ ಚಿಕಿತ್ಸೆ ಮಾಡುತ್ತಿರುವವರಲ್ಲಿ ಶೇಕಡಾ 95 ರಂತೆ ಈವರೆಗೆ ಗುಣವಾಗಿ ಸೌಖ್ಯವಾಗಿರುತ್ತಾರೆ.

ಪ್ರತ್ಯಕ್ಷದರ್ಶಿ.

ಪ್ರಿಯವಾಚಕರೇ, ನಮ್ಮ ಸಮಾಜದಲ್ಲಿ ಕಾಶಿಯಲ್ಲಿ ಅಧ್ಯಯನಮಾಡಿದ ಕಮತಗಿ ಹುಚ್ಚೇಂದ್ರ ಮಹಾಸ್ವಾಮಿಗಳು ಇಂಫ್ಲುಯಂಝಾದಿಂದ ವಿಜಯದಶಮಿ ಸೋಮವಾರದ ದಿವಸ ಉದಯ ೮ ಘಂಟೆಗೆ ಲಿಂಗೈಕ್ಯರಾದ ವಾರ್ತೆಯನ್ನು ತಿಳಿಯಿಸಲಿಕ್ಕೆ ಬಹು ವಿಷಾದವಾಗುತ್ತದೆ. ಶ್ರೀಗಳು 30 ಜನ ವಿದ್ಯಾರ್ಥಿಗಳಿಗೆ ಸ್ವಾರ್ಥತ್ಯಾಗವಹಿಸಿ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಶ್ರೀಗಳ ಅವಸಾನಕಾಲದಲ್ಲಿ ಬಾಗಲಕೋಟೆ, ನಿಡಗುಂದಿ, ಗುಳೇದಗುಡ್ಡ, ಕಮತಗಿ, ಮುಂತಾದ ಗ್ರಾಮದ ಸದ್ಭಕ್ತರು ಅತಿ ವಿಜೃಂಭಣೆಯಿಂದ ಹೋಗಿ ಸಮಾಧಿ ಕಾರ್ಯವನ್ನು ತೀರಿಸಿದನಂತರ ಮಹಾಸ್ವಾಮಿಗಳ ಕೃಪೆಯಿಂದ ನಡೆದ ಪಾಠಶಾಲೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ೧೮೦೦೦ ರೂಪಾಯಿ ಫಂಡು ಕೂಡಿಸಿದ್ದಾರೆ. ಶ್ರೀಗಳ ಸಮತಾಬುದ್ಧಿ ನಿಷ್ಪಕ್ಷಪಾತಿತ್ವ ಔದಾರ್ಯಾದಿ ಸದ್ಗುಣಗಳು ಹೇರಳವಾಗಿದ್ದವು. ಎಷ್ಟೋ ಗ್ರಾಮದಲ್ಲಿಯ ಪಂಗಡಗಳನ್ನು ತಮ್ಮ ಚತುರತೆಯಿಂದ ಶಾಂತಗೊಳಿಸಿದ್ದರು. ಪ್ರತಿನಿತ್ಯದಲ್ಲಿ ತಮ್ಮ ಶಾಸ್ತ್ರವಾಕ್ಸೈಖರಿಯ ಅಮೃತವಾಕ್ಯಗಳಿಂದ ಅಜ್ಞಾನವೆಂಬ (ಪಂಕ) ಕೆಸರಿನಲ್ಲಿ ಬಿದ್ದ ಪ್ರಾಣಿಗಳನ್ನು ಸಮ್ಯಕ್‌ಜ್ಞಾನಶಲಾಕೆಯಿಂದ ಎಬ್ಬಿಸಿ ಸ್ವ್ಯಾದಿಗಳಿಂದ ತೊಳೆದು ಭಕ್ತರನ್ನು ಮುಕ್ತರನ್ನಾಗಿ ಮಾಡುತ್ತಿದ್ದರು. ಇಂಥಾ ವಿದ್ವದ್ರತ್ನವಾಗಿದ್ದ ನಿರಂಜನ ಪ್ರಭುಗಳು ಭಕ್ತರುದ್ಧಾರ ಕಾರ್ಯವನ್ನು ಬಿಟ್ಟು ಲಿಂಗೈಕ್ಯರಾದ್ದರಿಂದ (ಕಾಲೋಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ) ಅಪರಿಮಿತವಾದ ಕಾಲವಿಪುಲವಾದ ಪೃಥ್ವಿಯಲ್ಲಿ ಅನೇಕ ಮಹನೀಯರು ಅವತರಿಸಿಯೂ ಅವತರಿಸುತ್ತಲೂ, ಇರುವರೆಂದು ವೇದಾಗಮ ಪುರಾತನಾಚಾರವನ್ನಾಚರಿಸಿದ ಭವಭೂತಿ ಮಹಾಕವಿಗಳ ವಾಕ್ಯವನ್ನು ನಾವು ನಂಬಿ ಚಿಂತಿಸುವುದನ್ನು ಬಿಟ್ಟು ಪುನಃ ಅಂಥಾ ಮಹನೀಯರು ಶೀಘ್ರ ಅವತರಿಸಿ ತಮ್ಮ ಸದುಪದೇಶಗಳಿಂದ ಭಕ್ತರನ್ನುದ್ಧಾರ ಮಾಡಲೆಂದು ಆಸಿಸುತ್ತೇನೆ.

ಓರ್ವ ಭಕ್ತ.

ಇದೇ ಕಾಳಯುಕ್ತಿ ನಾಮಸಂವತ್ಸರದ ಕಾರ್ತಿಕ ಶುದ್ಧ ೧ ಸೋಮವಾರ ಬೇಲೂರು ಕಸಬಾ ಜವಳಿ ಅಂಗಡಿ ಸಾ|| ಶಿವಣ್ಣಶೆಟ್ಟರು ಶಿವಾಧೀನರಾದರು. ಆರಾಧನೆಯು ಇದೇ ಕಾರ್ತೀಕ ಶುದ್ಧ ೧೧-೧೨-೧೩ ಈ ೩ ದಿವಸಗಳಲ್ಲಿ ಇವರ ಪುತ್ರರು ಮ|| ರಾ|| ವೀರಪ್ಪಶೆಟ್ಟರು ಮತ್ತು ಪರ್ವಶೆಟ್ಟರುಗಳಿಂದ ಸಾಂಗವಾಗಿ ನೆರವೇರಿತು. ೧೩ ಶನಿವಾರ ಮಧ್ಯಾಹ್ನ ವೀರಶೈವ ಧಾರ್ಮಿಕ ಸಭೆಯು ಸೇರಿದ್ದಿತು. ಈ ಸಭೆಗೆ ಚಿಕ್ಕಮಗಳೂರು ತಾ|| ಶಂಕರಸ್ವಾಮಿಗಳವರ ಮಠದ ನಿರಂಜನ ಮೂರ್ತಿಗಳಾದ ಶ್ರೀ ಶಂಕರಸ್ವಾಮಿಗಳವರು, ಶ್ರೀಪುಷ್ಪಗಿರಿ ಮಲ್ಲಾಪುರದ ಮಠದ ಪಟ್ಟದ ಶಾಂತಮಲ್ಲಿಕಾರ್ಜುನ ಒಡೆಯರವರು, ಶ್ರೀ ನಿರುಪಾಧಿಸ್ವಾಮಿಗಳವರ ಮಠದ ಮೈಪಟ್ಟಾರ್ ಮರಿಸಿದ್ಧಪ್ಪನವರು, ಸಕಲೇಶಪುರದ ಮ|| ಗೋಣೀಬೀಡು ರುದ್ರಪ್ಪನವರು, ಮುಗುಳುವಳ್ಳಿ ಮಠದ ಮುಪ್ಪನಯ್ಯನವರು ಹು|| ಸಿದ್ಧಲಿಂಗಯ್ಯನವರು, ಸ್ಯಾನಿಟರಿ ಇನ್ಸ್‌ಪೆಕ್ಟರ್ ಜಿ. ಶಂಕರಪ್ಪನವರು, ಬೆಳ್ಳಾವರದ ಪಟೇಲ್ ಶ್ರೀಮಂತ ಬಿ. ಮಲ್ಲೇಗೌಡರು, ಲಿಂಗಯ್ಯನವರು, ನಂಜುಂಡಪ್ಪನವರು, ಮಲ್ಲೇಗೌಡರ ಮಕ್ಕಳು ಬಸವೇಗೌಡರು, ಇನ್ನೂ ಉಳಿದ ಭಕ್ತಮಾಹೇಶ್ವರರು ನೆರೆದಿದ್ದರು. ಸಭೆಯಲ್ಲಿ ವಿರಕ್ತಮೂರ್ತಿಗಳಾದ ಶ್ರೀ ಶಂಕರಸ್ವಾಮಿಗಳವರು ಆಚಾರ, ವಿದ್ಯೆ ಈ 2 ವಿಷಯಗಳಲ್ಲಿ ಯುಕ್ತಿಯುಕ್ತವಾಗಿ ಅಪ್ಪಣೆಕೊಡಿಸಿದ ನಂತರ ಗತಿಸಿದ ಸಾ|| ಶಿವಣ್ಣಶೆಟ್ಟರ ಹೆಸರಿನಲ್ಲಿ ವಿದ್ಯಾಭಿವೃದ್ಧಿಫಂಡಿಗೆ 15 ರೂ. ಗಳು, ಮೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ 2 ರೂ. ಗಳನ್ನು ಕಳುಹಿಸಿಕೊಡಬೇಕಾಗಿ ಶ್ರೀಗಳವರು ಅಪ್ಪಣೆಕೊಡಿಸಿದ್ದಕ್ಕೆ ಆ ಒಡನೆ ಮೇಲ್ಕಂಡ ಮೊಬಲಗನ್ನು ವೀರಪ್ಪಶೆಟ್ಟರು ಮತ್ತು ಇವರ ವಾಸಾ ಅಳಿಯಂದಿರಾದ ಮುಗಳವಳ್ಳಿ ಮ|| ಮಲ್ಲೇಗೌಡರ ಮಕ್ಕಳು ಬಸವೇಗೌಡರು ಧರ್ಮಾರ್ಥವಾಗಿ ಒಪ್ಪಿಸಿ ೨ ರೂ. ಈ ಮೊಬಲಗನ್ನು ಒಪ್ಪಿಸಿದ್ದನ್ನು ಫಂಡಿನ ಸೆಕ್ರೆಟರಿಯವರಿಗೂ, ಮ|| ರಾ|| ಮೈ. ವಿರೂಪಾಕ್ಷಯ್ಯನವರಿಗೂ ರವಾನಿಸಿದೆ. ಇದೇ ಪ್ರಕಾರ ಈ ಪ್ರಾಂತದ ವೀರಶೈವರು ತಮ್ಮ ಶಕ್ತ್ಯನುಸಾರ ಫಂಡಿಗೆ ಸಹಾಯಮಾಡಿ ಪುಣ್ಯಸಂಪಾದಿಸುವರಾಗಿ ನಂಬಿದ್ದೇನೆ.

ಮೇಲ್ಕಂಡ ೨ ರೂ. ಸಂದಿದೆ. ವಿ. ಪ್ರ. ಒಬ್ಬ ಪ್ರೇಕ್ಷಕ.

ಆನಂದವಾರ್ತೆ.

ಸ್ವಾಮಿ ! ಈಗಿನಕಾಲದಲ್ಲಿ ನಮ್ಮ ವೀರಶೈವ ಸಮಾಜದಲ್ಲಿ ವಕೀಲರ ಸಂಖ್ಯೆಯು ಹೆಚ್ಚಬೇಕಾದ ವಿಚಾರವು ಅತ್ಯವಶ್ಯಕವಾಗಿರುವುದು ಸರಿಯಷ್ಟೆ. ಈಗ ನಮ್ಮ ಸಮಾಜದಲ್ಲಿ ಮೈಸೂರು ದೇಶದಲ್ಲಿ 3-4 ಜನ ಅಡ್ವೋಕೇಟರುಗಳು ಇರಬಹುದು. ಇವರುಗಳೂ ಕೂಡ ಸರ್ಕಾರದ ಉನ್ನತಾಧಿಕಾರಗಳನ್ನು ವಹಿಸತಕ್ಕವರೇ ಆಗಿದ್ದಾರೆ. ಪ್ಲೀಡರುಗಳ ಪೈಕಿಯಾದರೋ ಹಳಬರಾಗಿರತಕ್ಕ 3 ಜನಗಳಿರುವುದು ಸಿವಾಯಿ ಈಚೆಗೆ 10-12 ವರ್ಷಗಳಿಂದಲೂ ವೀರಶೈವರಾರೂ ಪ್ಲೀಡರುಗಳಾಗಿ ಬಾರದಿರುವುದು ವಿಷಾದಕರವಾಗಿತ್ತು. ಈ ಕೊರತೆಯನ್ನು ತಪ್ಪಿಸುವುದಕ್ಕಾಗಿ ಗುಬ್ಬಿ ಪಟ್ಟಣದ ಸುಜನಶಿರೋಮಣಿಗಳಾದ, ಮ|| ಕೊಟ್ಟೂರಯ್ಯನವರ ಮಕ್ಕಳು ಜಿ. ಕೆ. ಗುರುಸಂಗಾರ್ಯರೆಂಬ ವೀರಶೈವತರುಣರು ಅತ್ಯಂತ ಶ್ರಮಪಟ್ಟು ದೃಢಪ್ರಯತ್ನದಿಂದ ಈ ವರ್ಷ ಪ್ಲೀಡರ್ ಪರೀಕ್ಷೆಯಲ್ಲಿ ಸಂಪೂರ್ಣವಾಗಿ ಜಯಶೀಲರಾಗಿ ತುಮಕೂರಿಗೆ ವಕೀಲರಾಗಿ ಬಂದಿರುತ್ತಾರೆ. ಕೈಲಾಸವಾಸಿಗಳಾದ ಶ್ರೀ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರು ಧರ್ಮಾರ್ಥವಾಗಿ ವಿದ್ಯಾರ್ಥಿನಿಲಯವನ್ನು ಆರಂಭಿಸಮಾಡಿದಾಗ ಇವರು ಅದರಲ್ಲಿ ಸೇರಿದವರಾಗಿ ಕಾಲೇಜಿನಲ್ಲಿ ಓದುತ್ತಿದ್ದರು. ಮತ್ತು ಸದರಿ ಶ್ರೀ ರಾವ್ ಬಹದ್ದೂರ್‌ರವರ ಜನ್ಮಸ್ಥಳವಾದ ಗುಬ್ಬಿಯಲ್ಲಿ ಸದ್ವಂಶಕ್ಕೆ ಸೇರಿದವರಾಗಿದ್ದಾರೆ. ಈ ರೀತಿ ಈ ವೀರಶೈವತರುಣರು ಪ್ಲೀಡರಾದದ್ದು, ನಮ್ಮ ವೀರಶೈವ ಸಮಾಜಕ್ಕೆ ಭೂಷಣವಾಗಿರುವುದಲ್ಲದೆ, ಶ್ರೀ ರಾವ್ ಬಹದ್ದೂರ್‌ರವರ ಧರ್ಮಸತ್ರದ ವಿದ್ಯಾರ್ಥಿಗಳಲ್ಲಿ ಇವರೇ ಮೊದಲನೆಯವರಾಗಿ, ಶ್ರೀ ರಾವ್ ಬಹದ್ದೂರ್‌ರವರ ಧರ್ಮಕಾರ್ಯಗಳಿಗೆ ಕೀರ್ತಿಯನ್ನು ಬಹಳವಾಗಿ ಹೆಚ್ಚಿಸಿರುತ್ತಾರೆಂದರೆ ಅತಿಶಯೋಕ್ತಿಯಾಗಲಾರದು. ಪ್ರತಿ ಡಿಸ್ಟ್ರಿಕ್ಟ್ ಮುಖ್ಯಸ್ಥಳಗಳಲ್ಲಾದರೂ ಸದ್ಯಃ ಕನಿಷ್ಠಪಕ್ಷ ಇಬ್ಬರಾದರೂ ನಮ್ಮ ವಕೀಲರುಗಳಿರಬೇಕಾದದ್ದು ಅತ್ಯವಶ್ಯಕವಾಗಿದೆ. ಕಾರಣ ನಮ್ಮ ವೀರಶೈವ ತರುಣರನೇಕರು ಈ ಮಹನೀಯರ ಮೇಲುಪಂಕ್ತಿಯನ್ನು ಅನುಸರಿಸಿ ಜಾಗ್ರತ ವಕೀಲರುಗಳಾಗಿ ಬರಬೇಕಾಗಿ ಕೋರುತ್ತೇನೆ. ಇದಂತಿರಲಿ. ತುಮಕೂರು ನಮ್ಮ ಸೀಮೆಗೆ ಮಧ್ಯರಾಷ್ಟ್ರವಾಗಿದೆ. ಕೈಲಾಸವಾಸಿಗಳಾದ ಶ್ರೀ ಸಿದ್ಧಣ್ಣಯ್ಯನವರು ಬಹುಕಾಲ ತುಮಕೂರಿನಲ್ಲಿ ವಕೀಲರಾಗಿದ್ದು ಕೀರ್ತಿಯನ್ನು ಪಡೆದಿದ್ದರು. ಅವರೀಚೆಗೆ ಈಗ ಅ|| ಕ|| ರವರಾಗಿರುವ ಮೆ. ಪಿ. ಮಹಾದೇವಯ್ಯನವರು B. A. B. L. ರವರು ಕೆಲವುಕಾಲ ತುಮಕೂರಿನಲ್ಲಿ ಅಡ್ವೋಕೇಟರಾಗಿದ್ದು ಉನ್ನತಾಧಿಕಾರವನ್ನು ಹೊಂದಿ ನಮ್ಮ ಸಮಾಜಕ್ಕೆ ಶ್ಲಾಘ್ಯರಾಗಿದ್ದಾರೆ. ಇವರೀಚೆಗೆ ತುಮಕೂರಿನಲ್ಲಿ ವೀರಶೈವ ವಕೀಲರಾರೂ ಇಲ್ಲದೆ ಬಹಳ ವಿಷಾದವಾಗಿತ್ತು. ಇದನ್ನು ಈಗ ನಮ್ಮ ಜಿ. ಕೆ. ಗುರುಸಂಗಾರ್ಯರು ತೊಲಗಿಸಿ ಪ್ಲೀಡರಾಗಿ ಬಂದಿದ್ದಾರೆ. ಇವರು 7-8 ವರ್ಷಗಳಿಂದಲೂ 3-4 ಸಿವಿಲ್ ಕೋರ್ಟುಗಳಲ್ಲಿ ಕೆಲಸಮಾಡಿ ಅನುಭವಶಾಲಿಗಳಾಗಿದ್ದಾರೆ. ಇವರಿಗೆ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ನಮ್ಮ ಸಮಾಜಬಾಂಧವರೂ ಮತ್ತು ಇತರ ದೇಶಬಾಂಧವರುಗಳು ಸಹ ಅತ್ಯವಶ್ಯಕವಾಗಿ ಇವರ ಕಾರ್ಯದಲ್ಲಿ ಸಂಪೂರ್ಣ ಪ್ರೋತ್ಸಾಹಿಸುವರೆಂದು ಕೋರುತ್ತೇನೆ. ಅಲ್ಲದೆ ಜಗನ್ಮಾತಾಪಿತೃಗಳಾದ ಶ್ರೀ ಪಾರ್ವತೀ ಪರಮೇಶ್ವರರು ಇವರಿಗೆ ಸಮಸ್ತ ಸನ್ಮಂಗಳಗಳನ್ನುಂಟುಮಾಡಿ ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಬೇಕಾಗಿ ಶ್ರೀ ಸಾಂಬಮೂರ್ತಿಯನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಸುಜನವಿಧೇಯ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೩—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಳು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
49 3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 2

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

14 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

೧೯೧೮ ನೆಯ ಇಸವಿ ಡಿಸೆಂಬರ್ ತಾ|| ೧ ರಿಂದ ೧೯೧೮ ನೆಯ ಡಿಸೆಂಬರ್ ತಾ|| ೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಕಾರ್ತೀಕ ಬ|| ತ್ರಯೋದಶಿಯಿಂದ ಮಾರ್ಗಶಿರ ಶು|| ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕಮಾಸ
1	ಭಾನು	ತ್ರಯೋ	25-21	ಸ್ವಾತಿ	16-41	16
2	[1]ಸೋಮ	ಚತು	30-13	ವಿಶಾ	22-46	17
3	[2]ಮಂಗಳ	ಅಮಾ	34-20	ಅನೂ	28-9	18
4	[3]ಬುಧ	ಪಾಡ್ಯ	37-15	ಜ್ಯೇಷ್ಠ	32-27	19
5	ಗುರು	ಬಿದಿಗೆ	39-1	ಮೂಲ	35-37	20
6	ಶುಕ್ರ	ತದಿಗೆ	39-24	ಪೂಷಾ	37-31	21
7	ಶನಿ	ಚೌತಿ	38-29	ಉಷಾ	38-5	22

(1) ಕಾರ್ತೀಕಸೋಮವಾರಂ. (2) ಸರ್ವತ್ರಮಾವಾಸ್ಯಾ. (3) ಶ್ರೀರಂಗದಲ್ಲಿ ಅಧ್ಯಯನೋತ್ಸವಾರಂಭ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಶರನಿಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನನೇತ್ರಮೋಹರಾಜೀಯತ್ ||
ಶ್ರೀಮತ್ಕೃಷ್ಣನೃಪಾಲಸುತ್ರಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಮ್ರಾಜ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಡಿಸೆಂಬರ್ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೪೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:— ಜರ್ಮನ್ ಬೀಸಣಿಗೆ 1, ಶಾಮಂತಿಗೆಹೂವು 1, ಸೆಂಟ್ ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗೆಜ್ಜೆ ಅಡ್ಡಿಕೆ 1, ಗಡಿಯಾರದ ಅಂತ ರವುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಸುವಾಸನೆ ಜೇರಾಯಿಲ್ ಸೀಸೆ 1, ವಜ್ರದ ಶರಟು ಗುಂಡಿಗಳು 4, ಜರ್ಮನ್ ಸೈಪತ್ತ 1, ರೋಲ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಕಾ 15 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

MADRAS
MAIL
WATCH
WITH 15
PRESENTS

ವಿಳಾಸ:—ಪಿ. ಎ. ಕೃಷ್ಣ ಅಂಡ್ ಕೊ.,
50 ೩, ಇರುಳಪ್ಪನಬೀದಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹಿರಾತನ್ನು ಓದಿನೋಡಿರಿ.

ಸ್ವಲ್ಪಕ್ರಯ] ಅನೇಕ ರೋಗಗಳಿಗೆ ಒಂದೇ ಔಷಧವು. [ಬಹುಲಾಭ

ಇದು ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇಯ ಆಕ್ಟಿನ ಪ್ರಕಾರ ರಿಜಿಸ್ಟರ ಮಾಡಿದ

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರ ರೋಗವು ಪ್ರಾಪ್ತವಾದ ಕೂಡಲೇ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳು ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಣ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪ್ಯಾಸಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಕಿ, ಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರದಿ ಮುಟ್ಟಿನದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ಪ್ರತಿ ತಿಂಗಳಿಗೆ ೧ ಸಾವಿರಕ್ಕೆ ಮೇಲ್ಪಟ್ಟು ಬಾಟಲಿಗಳು ಮಾರಾಟ ಆಗುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವುದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ ಖರ್ಚು ಬೇರೆ ಬೀಳುವುದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ. ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೊಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೊದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ ಹೆಡ್ ಆಫೀಸ
30 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಪುಕಟ ! ಇನ್‌ಫ್ಲ್ಯುಯಂಝಾ ಪತ್ರಿಕೆ-ಪುಕಟ !!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲು ಎಂಝಾ ಪಿಲ್ಲ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಮಲಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ಬೆ-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚಕವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ "ಇನ್‌ಫ್ಲು ಎಂಝಾ ಪತ್ರಿಕೆ" ಯನ್ನು ಪುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
2 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 1

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯನ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಲ್. ಮೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟು ಎಗಿಯರ್ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಅತ್ಯುತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಡಿಸೆಂಬರ್ ತಾ|| ೮ ನೆಯ ಭಾನುವಾರ.

ಭರತಖಂಡದ ಯೋಗ್ಯತೆಯನ್ನು ಸೈನಿಕರಿಂದಲೇ ಅಳೆಯುವುದೆ?

ಪಾಶ್ಚಾತ್ಯ ಮಹಾಜನರ ಮತ್ತು ಪ್ರಪಂಚದವರೆಲ್ಲರ ಗಮನವನ್ನು ಭರತಖಂಡವು ಈಗ ಸೆಳೆದಿರುವಷ್ಟುಗೆ ಮತ್ತಾವಾಗಲೂ ಆಕರ್ಷಿಸಿರಲಿಲ್ಲ. ಪಾರ್ಲಿಮೆಂಟಿನಲ್ಲಿ ಭರತಖಂಡದ ವಿಷಯಕವಾದ ಚರ್ಚೆಬಂದಾಗ ೪-೬ ಜನರ ಹೊರತು ಉಳಿದ ಸಭಿಕರೆಲ್ಲಾ ಎದ್ದುಹೋಗುವುದೇ ಪೂರ್ವದ ಪದ್ಧತಿಯಾಗಿದ್ದಿತು. ಈಗಲಾದರೊ ಮುಖ್ಯ ಮಂತ್ರಿಯವರು ಮೊದಲುಗೊಂಡು ೨ ಸಭೆಗಳ ಪ್ರಮುಖ ಸಭಿಕರನೇಕರು ಭರತಖಂಡದ ಭಾವಿಭಾಗ್ಯೋದಯವನ್ನು ಕುರಿತು ಮಾತನಾಡುವವರೇ ಆಗಿದ್ದಾರೆ. ಅಲ್ಲಿಯ ಪ್ರಮುಖ ರಾಜಕೀಯ ಪಕ್ಷದವರ ಮಾತುಗಳಲ್ಲೆಲ್ಲಾ ಭರತಖಂಡದ ರಾಜಕೀಯ ಸುಧಾರಣೆಯೂ ಒಂದು ಗಣನೀಯ ಸ್ಥಾನವನ್ನಾಕ್ರಮಿಸಿ ನಿಂತಿದೆಯೆಂಬುದು ವ್ಯಕ್ತವಾಗುತ್ತಿರುವುದು. ಇಂಥ ವಿಲಕ್ಷಣಯೋಗವು ಭರತಖಂಡಕ್ಕೆ ಉಂಟಾದುದು ಯುದ್ಧಕಾಲದಿಂದೀಚೆಗೆಯೇ ಎಂಬುದನ್ನು ತಿಳಿದರೆ, ಇದಕ್ಕೆ ಕಾರಣವು ಭಾರತೀಯ ಸೈನಿಕರ ಅಸಾಧಾರಣ ಪರಾಕ್ರಮವೂ ನಿಷ್ಕಪಟವಾದ ಭಕ್ತಿಯೂ ಆಗಿದ್ದಿತೆಂದು ಸರ್ವರೂ ಒಪ್ಪಿಕೊಳ್ಳಬೇಕಾಗಿರುವುದು. ಆದುಕಾರಣ ಭರತಖಂಡಕ್ಕೆ ಬೆಲೆಯು ಸೈನಿಕರಿಂದಾಯಿತೆಂದು ಅನೇಕರು ಹೇಳುವರು.

ಈ ಮಧ್ಯೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಪಾರ್ಲಿಮೆಂಟಿನೊಳಗೆ ಭರತಖಂಡದ ಸ್ವರಾಜ್ಯ ವಿಷಯಕವಾದ ಚರ್ಚೆಬಂದಾಗ್ಗೆ ಹಿಂದೆ ಇಲ್ಲಿನ ವೈಸ್‌ರಾಯರಾಗಿದ್ದ ಲಾರ್ಡ್ ಲ್ಯಾನ್ಸ್‌ಡೌನ್ ರವರು—ಸ್ವಪರಿಪಾಲನವನ್ನನುಭವಿಸುತ್ತಿರುವ ಅಧಿನಿವೇಶನಗಳೊಡನೆ ಭರತಖಂಡವನ್ನು ಸಮನಾಗಿ ನೋಡುವುದು ಬರಿಯ ಭ್ರಮೆಯೆಂದೂ, ಭರತಖಂಡವು ಪಾಶ್ಚಾತ್ಯ ಸಂಸರ್ಗದಿಂದ ಸ್ವಲ್ಪ ಚಲನವಲನವನ್ನು ವ್ಯಕ್ತಪಡಿಸಿದರೂ ಅದು ಮೇಲೆಮೇಲೆ ಕಾಣುವುದೇ ಹೊರತು ಅದರ ಹೃದಯವು ಎಂದೆಂದಿಗೂ ಒಂದೇ ತೆರನಾಗಿರುವುದೆಂದೂ, ಈಗಣ ನೂತನ ರಾಜಕೀಯ ಸಂಸ್ಕರಣ ನಿರ್ಮಾತೃಗಳು ಭರತಖಂಡದಲ್ಲಿರುವ ಜಾತಿ ಮತ ಕುಲಾದಿ ಭೇದೋಪಾಧಿಗಳನ್ನು ಗಮನಿಸಿಯೇ ಇಲ್ಲವೆಂದೂ, ಭರತಖಂಡವು ಯುದ್ಧದಲ್ಲಿ ಆಂಗ್ಲದೇಶಕ್ಕೆ ಸಹಾಯವನ್ನು ಮಾಡಿದ್ದರೆ ಅದಕ್ಕಾಗಿ ಭರತಖಂಡಕ್ಕೆ ರಾಜಕೀಯ ಸಂಸ್ಕರಣಗಳನ್ನು ಬಹುಮಾನವಾಗಿ ಕೊಡತಕ್ಕುದಲ್ಲವೆಂದೂ, ಯುದ್ಧಮಾಡಿದವರಿಗೆ ಈ ಸಂಸ್ಕರಣಗಳೇನೂ ಬೇಕಿಲ್ಲವೆಂದೂ, ಹೆಚ್ಚು ಸಂಬಳವನ್ನೂ ಭೂಮಿಕಾಣಿಗಳನ್ನೂ ಸಮೃದ್ಧವಾಗಿ ಕೊಟ್ಟುಬಿಟ್ಟರೆ ಸುಖವಾಗಿರಬೇಕೆಂಬುದು ಅವರ ಅಪೇಕ್ಷೆಯೆಂದೂ ಮೊದಲಾಗಿ ಹೇಳಿ ನಿರೋಧಿಸಿದರು. ಇವರಂತೆಯೇ ಮತ ಜಾತಿ ಭಾಷಾದಿ ಭೇದೋಪಾಧಿಗಳಿಂದಲೇ ಭರತಖಂಡಕ್ಕೆ ಸ್ವರಾಜ್ಯ ಭೋಗಾರ್ಹತೆಯಿಲ್ಲವೆಂದು ಅನೇಕರು ವಾದಿಸುತ್ತಿದ್ದಾರೆ. ಆ ಉಪಾಧಿಯು ನಮ್ಮ ಅರ್ಹತೆಯನ್ನು ಭಂಗಪಡಿಸಲಾರದೆಂದು ನಮ್ಮ ದೇಶೀಯರು ಹೇಳುತ್ತಿದ್ದಾರೆ. ಆದರೆ ಈ ಭೇದೋಪಾಧಿಗಳ ತೀಕ್ಷ್ಣತೆಯು ಐಕ್ಯಕ್ಕೆ ವಿಘಾತಕವೆಂದೂ, ಅನೈಕ್ಯವು ಸ್ವರಾಜ್ಯಭೋಗಕ್ಕೆ ವಿಘ್ನಕಾರಿಯೆಂದೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಆದುಕಾರಣವೇ ನಮ್ಮಲ್ಲಿಯ ದೇಶನಾಯಕರನೇಕರು ಸಂಘ ಸಂಸ್ಕರಣ ಕಾರ್ಯದಲ್ಲಿ ತೊಡಗಿ ಮತ [illegible] ಯುಕ್ತ ಮಾತ್ಸರ್ಯಾದಿಗಳನ್ನು ಕುಗ್ಗಿಸಲು ಯತ್ನಿಸುತ್ತಿದ್ದಾರೆ. ಕೈ. ಗೋಖಲೆ, ಶ್ರೀಮಾನ್ ತಿಲಕ ಮೊದಲಾದ ಅಗ್ರಪೂರ್ಣೀಯರೂ ಕೂಡ ಭಿನ್ನಮತ ಜಾತಿ ಕುಲದವರೊಡನೆ ಸಹಪಙ್ಕ್ತಿ ಭೋಜನಗಳನ್ನು ನಡೆಯಿಸುವುದಕ್ಕೂ ಹಿಂಜರಿಯದೆ, ಒಂದು ತೆರದ ಪರಸ್ಪರ ಸಹನಬುದ್ಧಿಯನ್ನು ವಿಭಿನ್ನ ಜಾತಿ ಮತ ಕುಲದವರುಗಳ ಮಧ್ಯದಲ್ಲಿ ಪ್ರಕಟಿಸುವುದಕ್ಕೆ ಮೇಲುಪಂಕ್ತಿಯನ್ನು ಹಾಕಿಕೊಟ್ಟಿರುತ್ತಾರೆ. ಆದರೆ ಈ ಸಾಮಾನ್ಯ ಪ್ರಯತ್ನಗಳಿಂದೆಲ್ಲಾ ಲಾರ್ಡ್ ಲ್ಯಾನ್ಸ್‌ಡೌನರು ಹೇಳಿರುವಂತೆ ಈ ದೇಶದ ಪೂರ್ವ ಸಂಪ್ರದಾಯಗಳೇನೂ ವ್ಯತ್ಯಸ್ತಗೊಳ್ಳುವ ಲಕ್ಷಣಗಳು ತೋರುವುದಿಲ್ಲ. ಇದಕ್ಕೆ ಅ|| ಪಟೇಲರು ಸಾಮ್ರಾಜ್ಯ ನಿಯಮ ನಿರ್ಮಾಣಸಭೆಯಲ್ಲಿ ಭಿನ್ನಭಿನ್ನ ಮತ ಜಾತೀಯ ವಿವಾಹಗಳ ವಿಷಯಕ ಶಾಸನವನ್ನೇರ್ಪಡಿಸಬೇಕೆಂದು ತೀರ್ಮಾನವನ್ನು ತಂದುದರಮೇಲೆ ಈ ದೇಶದಲ್ಲಿ ನಡೆಯುತ್ತಿರುವ ಆಂದೋಳನವೇ ನಿದರ್ಶನವಾಗಿರುತ್ತದೆ. ದೇಶೀಯರಲ್ಲಿ ಭಿನ್ನಭಿನ್ನ ಜಾತಿ ಮತೀಯ ವಿವಾಹಸಂಬಂಧವನ್ನು ಬಳೆಯಿಸಬೇಕೆಂಬ ಕಾಂಕ್ಷೆಯು ಎಲ್ಲೋ ಕೆಲವರಿಗೆ ಇರುವಂತೆ ಕಂಡುಬರುತ್ತಿದೆ. ಇಂಥವರು ಹಿಂದೂಸಂಘಕ್ಕೆ ಹೊರಗಾಗಿ ಬ್ರಹ್ಮೋಪಂಥವನ್ನು ಸ್ವೀಕರಿಸಿ ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುತ್ತಿದ್ದಾರೆ. ಈ ತೊಂದರೆಯನ್ನು ತಪ್ಪಿಸಿ, ಹಿಂದುಗಳೆಲ್ಲರೂ ತಮಗೆ ಇಷ್ಟಬಂದವರೊಡನೆ ವಿವಾಹಸಂಬಂಧವನ್ನು ಬಳೆಯಿಸುವುದಕ್ಕೆ ಅವಕಾಶವಿರುವಂತೆಯೂ, ಹಾಗೆ ನಡೆದ ವಿವಾಹವು ಶಾಸನಕ್ಕೆ ಬದ್ಧವಾದುದೆಂದು ಗ್ರಹಿಸಲ್ಪಡಲನುಕೂಲವಾಗುವಂತೆಯೂ, ಈ ವಿಷಯದಲ್ಲಿ ಒಂದು ಶಾಸನವನ್ನೇರ್ಪಡಿಸಬೇಕೆಂದು ಇದಕ್ಕೆ ಮುಂಚೆ ಬಾಬು ಭೂಪೇಂದ್ರನಾಥ ಬಾಸುರವರು ಇದೇ ಸಾಮ್ರಾಜ್ಯಶಾಸನ ಸಭೆಯಲ್ಲಿ ಒಂದು ಸಲ ಪ್ರಯತ್ನಪಟ್ಟು ವಿಫಲರಾಗಿ ಕುಳಿತರು. ಈಗ ಅದೇತೆರದ ಪ್ರಯತ್ನವನ್ನು ಅ|| ಪಟೇಲರವರು ಅದೇ ಸಭೆಯಲ್ಲಿ ಮಾಡಿರುವರು. ಬಹು ಪ್ರಜಾನುಮತಿಯಿಲ್ಲದೆ ಪ್ರಭುತ್ವದವರು ಇದನ್ನು ಈಡೇರಿಸಲಾರರು: ಪ್ರಜಾಮತದ ಕಡೆಗೆ ಲಕ್ಷಿಸಿದರೆ ಅದಕ್ಕೆ ಅನುಮೋದಿಸುವವರು ಕೆಲವರಾದರೆ ವಿರೋಧಿಸುವವರೇ ಹೆಚ್ಚು ಮಂದಿಯೆಂದು ತೋರುತ್ತಿರುವುದು. ಬೊಂಬಾಯಿ ಮೊದಲಾದ ಪ್ರಾಂತಗಳಲ್ಲಿ ಈ ವಿಷಯದ ಖಂಡನೆಗಾಗಿಯೇ ಸಭೆಗಳು ಕೂಡಿದ್ದು ಈ ಮತವಿಷಯದಲ್ಲಿ ಸರ್ಕಾರದವರು ಪ್ರವೇಶಿಸಲಾಗದೆಂದು ನಿರ್ಧಾರಮಾಡಿ ಸರ್ಕಾರಕ್ಕೆ ಕಳುಹಿಸಿರುವರು. ಜಾತ್ಯಂತರವಿವಾಹಾನುಮೋದಕರುಗಳಾದರೊ—ಇದು ನಮಗೆ ಹೊಸದಲ್ಲವೆಂದೂ, ವಿವಿಧವರ್ಗಗಳ ವಿವಾಹಕ್ಕೆ ಶಾಸ್ತ್ರಗಳಲ್ಲಿ ಅವಕಾಶವು ಕೊಡಲ್ಪಟ್ಟಿರುವುದೆಂದೂ, ನಮ್ಮ ಪುರಾಣೇತಿಹಾಸಗಳಲ್ಲೆಲ್ಲಾ ಅದಕ್ಕೆ ದೃಷ್ಟಾಂತಗಳೂ ಸಿಕ್ಕುವುವೆಂದೂ, ಅಷ್ಟೇ ಅಲ್ಲದೆ ದೇವತೆಗಳು ಭೂಲೋಕಕ್ಕೆ ಬಂದು ಇಲ್ಲಿಯ ಹೆಂಗುಸರನ್ನು ಮದುವೆಯಾಗಿದ್ದರೆಂದೂ, ಇಲ್ಲಿಯವರು ದೇವಲೋಕಕ್ಕೆ ಹೋಗಿ ದೇವಾಂಗನೆಯರನ್ನು ಮದುವೆಯಾದ ಉದಾಹರಣೆಗಳು ಇರುವುವೆಂದೂ, ಕುಂತೀದೇವಿಯು ಸೂರ್ಯನಿಂದ ಕರ್ಣನನ್ನೂ ಯಮನಿಂದ ಧರ್ಮರಾಯನನ್ನೂ ವಾಯುವಿನಿಂದ ಭೀಮನನ್ನೂ ಇಂದ್ರನಿಂದ ಅರ್ಜುನನನ್ನೂ, ಮಾದ್ರಿಯು ಅಶ್ವಿನೀದೇವತೆಗಳಿಂದ ನಕುಲ ಸಹದೇವರನ್ನೂ ಪಡೆದಿರುವರೆಂದೂ, ಪುರೂರವ ಚಕ್ರವರ್ತಿಯು ಊರ್ವಶಿಯನ್ನೂ, ಭೀಮನು ಹಿಡಿಂಬಿಯನ್ನೂ, ಪರಾಶರನು ಅಂಬಿಗಿತ್ತಿಯನ್ನೂ ವರಿಸಿದಂಥ ಉದಾಹರಣೆಗಳನೇಕವು ಸಿದ್ಧವಾಗಿರುವುವೆಂದೂ, ಈಗಣ ನಾಗರಕಪ್ರಪಂಚದಲ್ಲಿ ವಿವಾಹವಿಷಯಕ ಸ್ವಾತಂತ್ರ್ಯವಿದ್ದರೆ ಜಾತಿಮತ ವೈಷಮ್ಯಗಳು ತೊಲಗುವುದಕ್ಕೆ ಅವಕಾಶವಾಗುವುದೆಂದೂ, ಸ್ವರಾಜ್ಯಸ್ವಾತಂತ್ರ್ಯಗಳನ್ನು ಕೋರುವ ನಾವು ಈ ವಿವಾಹ ವಿಷಯದಲ್ಲಿ ಸ್ವಾತಂತ್ರ್ಯವನ್ನು ಪಡೆಯುವುದಕ್ಕೂ ಅರ್ಹತೆಯಿಲ್ಲದವರಾದ ಬಳಿಕ ಸ್ವರಾಜ್ಯನಿರ್ವಾಹಕ್ಕೆ ಅರ್ಹರಾಗುವುದು ಹೇಗೆ? ಎಂದೂ, ವಾದಿಸುತ್ತಿರುವರು. ಆದರೆ ಹೀಗೆ ವಾದಿಸುವ ಜನರುಗಳು ಕಡಿಮೆಯಾಗಿ ವಿರುದ್ಧವಾಗಿ ವಾದಿಸುವ ಜನರೇ ಹೆಚ್ಚಾಗಿರುವರು. ಜನಸಾಮಾನ್ಯದಲ್ಲೂ ಸಾಂಘಿಕ ಸುಧಾರಣೆಗಳ ಕಾಂಕ್ಷೆಯು ಉತ್ಪನ್ನವಾದಲ್ಲದೆ ಹೊಸ ಮಾರ್ಪುಗಳು ಸಿದ್ಧಿಸುವ ಹಾಗಿಲ್ಲ. ರಾಜಕೀಯ ವಿಷಯಕ್ಕಾದರೂ ಇದೇನ್ಯಾಯವು ಪ್ರವರ್ತಿಸುವುದು. ರಾಜಕೀಯವಾದ ಸ್ವಾತಂತ್ರ್ಯಗಳೂ ಮಾರ್ಪುಗಳೂ ಆಗಬೇಕೆಂಬ ಕಾಂಕ್ಷೆಯು ಭರತಖಂಡದ ಜನಸಾಮಾನ್ಯದಲ್ಲೂ ಉದಯಿಸಿರುವುದಿಲ್ಲ. ಅದು ಬೇಕೆಂದು ಕೋರತಕ್ಕವರು ವಿದ್ಯಾಧಿಕರಾದ ಸ್ವಲ್ಪ ಸಂಖ್ಯಾಕಜನರೇ ಆಗಿರುತ್ತಾರೆ. ಸ್ವಲ್ಪ ಸಂಖ್ಯಾಕರ ಇಷ್ಟಾನುಸಾರ ಸ್ವರಾಜ್ಯ ಸಿದ್ಧಿಯಾಗುವ ಪಕ್ಷಕ್ಕೆ ಸ್ವಲ್ಪ ಸಂಖ್ಯಾಕರಾದ ಸಂಘಸಂಸ್ಕರಣಾಪೇಕ್ಷಿಗಳ ಯತ್ನವೂ ಫಲಸಿದ್ಧಿಗೊಳ್ಳಲೇ ಬೇಕಾಗಿರುತ್ತದೆ.

ಭರತಖಂಡದ ಒಳಗಣ ಸ್ಥಿತಿಗತಿಯನ್ನು ಚೆನ್ನಾಗಿ ಶೋಧಿಸಿ ತಿಳಿಯದ ಮಿ|| ಮಾಂಟೊಗ್'ರಂಥವರು ಎಷ್ಟೋ ಸಮಯಗಳಲ್ಲಿ ಮೇಲೆ ಮೇಲಣ ಸ್ಥಿತಿಯನ್ನು ನೋಡಿಯೇ ಮೋಸಹೋಗುತ್ತಾರೆ. ಅವರು ಮೊನ್ನೆ ತಾನೇ ಕೇಂಬ್ರಿಡ್ಜಿನಲ್ಲಿ ಒಂದುಕಡೆ ಉಪನ್ಯಾಸ ಮಾಡುವಾಗ್ಗೆ—"ಭರತಖಂಡದ ಪರಿಸ್ಥಿತಿಗಳು ಮಾರ್ಪುಗೊಂಡಿವೆ. ಬಹು ತೀಕ್ಷ್ಣಗತಿಯಿಂದ ಇನ್ನೂ ಮಾರ್ಪುಗೊಳ್ಳುತ್ತಿವೆ. ನಾನು ಭಾರತಸೈನ್ಯದಲ್ಲಿ ಈ ದಿವಸ ಕಂಡ ವಿಶೇಷ ಸಂಗತಿಯನ್ನು ಹೇಳಿದರೆ ಅದನ್ನು ನಿಜವೆಂದು ನಂಬಲಾರರು. ಅದೇನೆಂದರೆ-ಬ್ರಾಹ್ಮಣರೂ, ರಾಜಪುತ್ರರೂ, ಸಿಕ್ಕರೂ, ಮಹಮ್ಮದೀಯರೂ ಸಹ ವರ್ಣದ್ವೇಷವಿಲ್ಲದೆ ಒಂದೇ ಪಙ್ಕ್ತಿಯಲ್ಲಿ ಕುಳಿತು ಊಟಮಾಡುತ್ತಿದ್ದರು. ಫ್ರಾನ್ಸಿನಲ್ಲಿ ಕೆಲಸಮಾಡುತ್ತಿದ್ದ ಎಲ್ಲಾ ಪಟಾಲಮ್ಮಿನ ಭಾರತ ಸೈನಿಕೋದ್ಯೋಗಿಗಳೂ ಒಟ್ಟಿಗೆ ಕೂಡಿ ಭೋಜನ ಮಾಡುತ್ತಿದ್ದರು. ಈ ಸಂಗತಿಗಳೇ ಭರತಖಂಡದಲ್ಲಿ ವರ್ಣಜಾತಿವೈಷಮ್ಯಭೇದಗಳು ಮಸುಳಿಸಲಾರವೆಂದು ಹೇಳಿದ ಲಾರ್ಡ್ ಲ್ಯಾನ್ಸ್‌ಡೌನರ ಮಾತಿಗೆ ಪ್ರತ್ಯುತ್ತರವನ್ನು ಕೊಡುತ್ತಿರುವುವು" ಎಂದು ಹೇಳಿದರು. ಮಿ|| ಮಾಂಟೊಗ್'ರವರು ಭರತಖಂಡದ ಸಕಲ ಜನರಲ್ಲೂ ಇದೇ ತೆರದ ಭಾವಗಳು ಮೂಡಿರುವುವೆಂದು ತಿಳಿದುಕೊಂಡಿದ್ದರೆ ಅದು ಹಾಸ್ಯಾಸ್ಪದವಾದ ಬರೀ ಭ್ರಮೆಯಲ್ಲವೆ? ಆ ಮಾಂಟೊಗ'ರವರಿಗೆ ಅ|| ಪಟೇಲ್'ರವರ ಜಾತ್ಯಂತರ ವಿವಾಹ ಶಾಸನದ ಪರ್ಯವಸಾನವು ಒಳ್ಳೆಯ ಪ್ರತ್ಯುತ್ತರವನ್ನು ಕೊಡದಿರಲಾರದೆಂದು ನಾವು ಭಾವಿಸುತ್ತೇವೆ.

ಕೈಜರರು ಕ್ಷಮಾರ್ಹರೆ?

ಹಿಂದಣ ಜರ್ಮನ್ ಕೈಜರರು ಯುದ್ಧಕ್ಕೆ ಮುಖ್ಯ ಕಾರಣರಾಗಿದ್ದು ಜಗತ್ತಿಗೆ ಮಾಡಬಾರದ ಅನರ್ಥಗಳನ್ನೆಲ್ಲಾ ಮಾಡಿ, ಕಡೆಗೆ ದೇಶವನ್ನು ಬಿಟ್ಟು ಹಾಲೆಂಡಿಗೆ ಓಡಿಹೋಗಿ ನಿಶ್ಚಿಂತೆಯಿಂದ ಕುಳಿತುಬಿಟ್ಟಿರುವರಷ್ಟೆ. ಇವರು ಯುದ್ಧಕ್ಕೆ ಮುಂಚೆ ರಾಜ್ಯರಾಜ್ಯಗಳೊಳಗೆ ನಡೆದಿದ್ದ ನಿಬಂಧನೆಗಳನ್ನೆಲ್ಲಾ ಮೀರಿ ಮಾಡಬಾರದ ದುರ್ನಯಗಳನ್ನೆಲ್ಲಾ ಮಾಡಿರುತ್ತಾರೆ. ಇಂಥವರಿಗೆ ಸ್ವತಂತ್ರವಾಗಿರುವುದಕ್ಕೆ ಅವಕಾಶಕೊಡಬಹುದೆ? ಎಂಬುದು ಈಗ ಪರ್ಯಾಲೋಚಿಸಲ್ಪಡುತ್ತಿದೆ. ಇಂಗ್ಲೀಷರೂ ಫ್ರೆಂಚರೂ ಕೂಡ ತಂತಮ್ಮ ಅಟರ್ನಿಜನರಲ್ಲರನ್ನೂ ಸಾಲಿಸಿಟರ್‌ಜನರಲ್ಲರನ್ನೂ ಈ ವಿಷಯವಾಗಿ ಅಭಿಪ್ರಾಯ ಕೇಳಿರುವರು. ನಿಬಂಧನೆಯನ್ನು ಮೀರಿ ಎಲ್ಲಾ ವಿಘಾತಕತನವನ್ನೂ ನಡೆಯಿಸಿದ ಅವರು ಬಹಿಷ್ಕರಣಕ್ಕೂ ವಿಚಾರಣೆಗೂ ದಂಡನಕ್ಕೂ ಅರ್ಹರೆಂಬುದಾಗಿ ಅವರುಗಳು ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ಇವರನ್ನು ವಿಚಾರಣೆಗೆ ಗುರಿಪಡಿಸಿ ನ್ಯಾಯವನ್ನನುಸರಿಸಿ ಶಿಕ್ಷೆ ಮಾಡಬೇಕೆಂತಲೂ ಅಲ್ಲಿಯವರೆಗೂ ಇವರ ಹಿರಿಮಗನೂ ಇವರೂ ಮಿತ್ರಮಂಡಲಿಯ ವಶಗೊಳಿಸಲ್ಪಡಬೇಕೆಂತಲೂ ಇಂಗ್ಲೀಷ್ ಫ್ರಾನ್ಸ್ ಪತ್ರಿಕೆಗಳು ಸೂಚಿಸಿರುತ್ತವೆ. ಹಾಲಂಡಿನವರು ಇವರಿಗೆ ಆಶ್ರಯಕೊಟ್ಟಿರುವುದು ಸರಿಯಲ್ಲವೆಂತಲೂ, ತಮ್ಮ ದೇಶದಿಂದ ಹೊರಡಿಸಿಬಿಡಬೇಕೆಂತಲೂ ಹಾಲೆಂಡ್ ಪ್ರಭುತ್ವದವರಿಗೆ ತಿಳಿಯಪಡಿಸಬೇಕೆಂದು ಯುದ್ಧ ಮಂತ್ರಿವರ್ಗದವರೂ ಅಧಿನಿವೇಶನಗಳ ಮಂತ್ರಿಗಳೂ ಸಹ ನಿರ್ಧಾರಮಾಡಿರುವರೆಂದು ಈಚೆಗೆ ವರ್ತಮಾನ ಬಂದಿದೆ. ಹಿಂದಣ ಕೈಜರರೂ ಅವರ ಮಗನೂ ಮರಳಿ ಜರ್ಮನಿಗೆ ಹೋಗಲು ಉದ್ದೇಶಪಟ್ಟಿರುವರೆಂಬುದಾಗಿಯೂ ಕೈಜರರ ಪತ್ನಿಯು ತನ್ನ ಗಂಡನ ಬಳಿಗೆ ಹೋಗಲು ಅಪೇಕ್ಷಿಸುತ್ತಿರುವಳೆಂತಲೂ ವಾರ್ತೆಗಳು ಬಂದಿದ್ದುವು. ಆದರೆ ಡಿಸೆಂಬರ್ ತಾ|| ೧ ರ ಲಂಡನ್ ತಂತೀವಾರ್ತೆಯನ್ನು ನೋಡಲಾಗಿ, ಈಗಣ ಜರ್ಮನ್ ಪ್ರಭುತ್ವದವರು, ಕೈಜರ್ ದಂಪತಿಗಳು ಜರ್ಮನಿದೇಶಕ್ಕೆ ಪ್ರವೇಶವನ್ನು ಮಾಡಲೀಕೂಡದೆಂದು ಅಪ್ಪಣೆಮಾಡಿರುವರೆಂದು ಗೊತ್ತಾಗುತ್ತದೆ. ದೇಶಕ್ಕೆ ಬಂದರೆ ಇನ್ನಾವ ರಹಸ್ಯಪ್ರಯತ್ನಗಳನ್ನು ಮಾಡಿ ಎಲ್ಲಿ ಅಶಾಂತಿಯನ್ನು ಹಬ್ಬಿಸುವರೋ ಎಂದು ಜರ್ಮನಿಯವರು ಇಂಥ ಅಪ್ಪಣೆಮಾಡಿರಬೇಕೆಂದು ಕಾಣುತ್ತದೆ. ಸ್ವದೇಶೀಯರಿಂದಲೇ ಆ ರೀತಿಯಲ್ಲಿ ಬಹಿಷ್ಕರಿಸಲ್ಪಟ್ಟಿರುವ ಮನುಷ್ಯನನ್ನು ಉಳಿದ ದೇಶಗಳಲ್ಲಿ ಸ್ವತಂತ್ರನಾಗಿರುವುದಕ್ಕೆ ಬಿಡುವುದು ನಿರಪಾಯವೆಂದು ಹೇಗೆ ನಂಬಬಹುದು? ಅಲ್ಲದೆ ಜರ್ಮನ್ ಪ್ರಭುತ್ವದವರು ಮಿತ್ರಮಂಡಲಿಗೆ ಶರಣಾಗತರಾದರೇ ಹೊರತು ಈ ಪದಭ್ರಷ್ಟ ಕೈಜರನೇನೂ ಶರಣಾಗತನಾಗಲಿಲ್ಲ. ಈತನಿಗೆ ಮಿತ್ರಮಂಡಲಿಯ ಮೇಲೆ ದ್ವೇಷಮಾತ್ಸರ್ಯಾದಿಗಳು ಇಲ್ಲದೆ ಬಿಟ್ಟಿಲ್ಲ. ಈಗಣ ಪರ್ಯವಸಾನದಿಂದ ಆತನ ಮತ್ಸರವು ಮತ್ತಷ್ಟು ಅಭಿವೃದ್ಧಿಗೊಂಡೇ ಇರಬೇಕು. ಪ್ರಳಯಕ್ಕೂ ಹೇಸದ ಅಂಥ ಮನುಷ್ಯನನ್ನು ಸುಮ್ಮನೆ ಬಿಟ್ಟುಬಿಟ್ಟರೆ ಸಮಯಸಾಧಿಸಿ ಮತ್ತೊಂದುಸಲ ವಿನಾಶಕ್ಕೆ ಹೇತುವಾಗದೆ ಬಿಡತಕ್ಕವನಲ್ಲ. ಶತ್ರುಶೇಷವು ನಿರ್ಮೂಲಮಾಡಲ್ಪಟ್ಟೇ ತೀರಬೇಕೆಂದು ರಾಜನೀತಿಯೂ ಸಾರುತ್ತಿರುವುದು. ಆದುಕಾರಣ ಜಗಚ್ಛಾಂತಿಗಾಗಿ ಎಷ್ಟೋ ನಷ್ಟಕಷ್ಟಗಳನ್ನು ಅನುಭವಿಸಿರುವ ಮಿತ್ರಮಂಡಲಿಯವರು ಕೈಜರನನ್ನು ಸುಮ್ಮನೆ ಬಿಟ್ಟುಕೊಡುವುದು ಯುಕ್ತವಾಗಿ ಕಾಣುವುದಿಲ್ಲ. ಅಥವಾ ಆತನು ಎಷ್ಟೇ ಪ್ರಮಾಣಮಾಡಿಕೊಟ್ಟರೂ ಅದು ನಂಬುತಕ್ಕುದಾಗಿಲ್ಲ. ನೆಪೋಲಿಯನ್ನಿನ ತುಂಟತನಕ್ಕೆ ವಿಧಿಸಿದ ಶಿಕ್ಷೆಯಂತೆ ಇವರಿಗೂ ನಿರ್ಬಂಧ ನಿವಾಸವನ್ನು ಏರ್ಪಡಿಸಿದರೆ ಜಗತ್ತು ಶಾಂತವಾಗಿದ್ದೀತು. ಅದನ್ನು ಮಿತ್ರಮಂಡಲಿಯವರು ಮಾಡದೆ ಇರಲಾರರು. ಮುಖ್ಯಮಂತ್ರಿ ಲಾಯಿಡ್‌ಜಾರ್ಜ್ ರವರು ನ್ಯೂಕ್ಯಾಸಿಲ್ ಭವನದಲ್ಲಿ ತಮಗೆ ಗೌರವವು ಕೊಡಲ್ಪಟ್ಟಾಗ ಕಳೆದ ತಾ|| ೨೯ರಲ್ಲಿ ಭಾಷಣಮಾಡುವಾಗ್ಗೆ--"ಮುಂದೆ ಜರುಗುವ ಸಂಧಿಯು ನಿಷ್ಪಕ್ಷಪಾತವಾಗಿಯೂ ನ್ಯಾಯಸಮ್ಮತವಾಗಿಯೂ ಇರಬೇಕು. ನಮ್ಮ ದೇಶದ ಗುಟ್ಟು ಹೊರಕ್ಕೆ ಹೋಗಲವಕಾಶವಿಲ್ಲದಂತೆ ಮಾಡಬೇಕು. ಪರಾಜಿತರಿಂದ ತಕ್ಕ ನಷ್ಟವನ್ನು ತೆಗೆದುಕೊಳ್ಳಬೇಕು. ಜರ್ಮನಿಯಿಂದ ಸಾಧ್ಯವಾದಷ್ಟು ಯುದ್ಧ ನಷ್ಟಪರಿಹಾರವನ್ನು ಪಡೆದುಕೊಂಡೇ ತೀರಬೇಕು. ಈ ಯುದ್ಧದ ಮೂಲಕ ದುರಾಗತವನ್ನು ನಡೆಯಿಸಿದವರಿಗೆ ಯಾವ ಶಿಕ್ಷೆಯನ್ನೂ ಮಾಡದೆ ನಾವು ಬಿಟ್ಟುಬಿಡಬಹುದೆ? ಇದನ್ನೆಲ್ಲಾ ನೆರವೇರಿಸುವಲ್ಲಿ ನಾವು ನಿಷ್ಕಳಂಕವಾದ ನ್ಯಾಯದಿಂದ ಪ್ರವರ್ತಿಸಬೇಕು. ಹಾಗೆ ಮಾಡಿದರೆ ನಮಗೆ ಯಾವ ಅಪಖ್ಯಾತಿಯೂ ಬರುವುದಿಲ್ಲ. ಜಗತ್ತನ್ನೆಲ್ಲಾ ಯುದ್ಧದಲ್ಲಿ ಮುಳುಗಿಸಿದ ರಾಜರುಗಳನ್ನು ಅನುಸರಿಸುವುದಕ್ಕೆ ಕೆಲಪ್ರಜೆಗಳು ಕೋರುತ್ತಿರಬಹುದು. ಹಾಗೆ ಮಾಡಿದರೆ ಯುದ್ಧಾಂತದಲ್ಲಿ ಅವರಿಗೆ ಎಂಥ ಗತಿಯು ಕಾದುಕೊಂಡಿರುವುದೆಂಬುದನ್ನು ಅವರಿಗೆ ತಿಳಿಯಪಡಿಸುವ ಹಾಗೆ ನಾವು ಪ್ರವರ್ತಿಸಬೇಕು. ಒಬ್ಬರು ಇತರ ದೇಶಗಳನ್ನು ಹಾಳ್ಮಾಡಿದರೆ ಅವರು ಅದಕ್ಕೆ ಬಾಧ್ಯರಾಗಿರಬೇಕು. ಅವರುಂಟುಮಾಡಿದ ನಷ್ಟಕ್ಕಾಗಿ ಅವರನ್ನು ಶಿಕ್ಷಿಸಿಯೇ ತೀರಬೇಕು. ಹಾಗೆ ಮಾಡದೆಹೋದರೆ ಅಪರಾಧಿಯೂ ಚಕ್ರವರ್ತಿಯೂ ಇಬ್ಬರೂ ಸಮಾನರೇ ಆಗಿ ತಿಳಿಯಲ್ಪಟ್ಟರೆಂಬ ಅಪವಾದವು ಬರುವುದು. ಆದುಕಾರಣ ಯುದ್ಧಕಾರಕರನ್ನು ನಾವು ಶಿಕ್ಷಿಸಬೇಕು." ಎಂದು ಹೇಳಿರುವುದನ್ನು ನೋಡಿದರೆ ಕೈಜರರು ಕೃತಾಪರಾಧಕ್ಕೆ ಅನುಭವಿಸಬೇಕಾದ ಪ್ರಾಯಶ್ಚಿತ್ತವನ್ನು ಇನ್ನೂ ಮುಗಿಸಿಕೊಂಡಿಲ್ಲವೆಂದು ಹೇಳಬೇಕಾಗುವುದು. ಮತ್ತೂ ಕಳೆದ ಡಿಸೆಂಬರ್ ತಾ|| ೩ ರ ವರೆಗೆ ಲಂಡನ್ನಿನಲ್ಲಿ ಮಿತ್ರಮಂಡಲಿ ದೇಶೀಯರೆಲ್ಲರೂ ಸಭೆಗೂಡಿ ನಡೆಯಿಸಿದ ಚರ್ಚೆಗಳೊಳಗೆ-ಪದಭ್ರಷ್ಟನಾದ ಕೈಜರನನ್ನೂ ಅವನ ಯುವರಾಜನನ್ನೂ ಅಂತರ್ಜಾತೀಯ ನಿಬಂಧನೆಗಳನ್ನುಲ್ಲಂಘಿಸಿ ಯುದ್ಧಕಾಲದಲ್ಲಿ ದುರಾಗತಗಳನ್ನು ನಡೆಯಿಸಿದುದಕ್ಕಾಗಿ ಅವರುಗಳನ್ನು ತಮ್ಮ ಸ್ವಾಧೀನಕ್ಕೆ ತಂದು ಇಟ್ಟುಕೊಳ್ಳಬೇಕೆಂದು ಸರ್ವರೂ ಏಕಕಂಠ್ಯದಿಂದ ನಿಶ್ಚಯಿಸಿದರೆಂದು ವಾರ್ತೆಬಂದಿದೆ. ಅಲ್ಲದೆ ಇನ್ನೂ ಎಷ್ಟೋ ಅವಾಂತರಗಳು ಅವರ ಬೆನ್ನಂಟುವಂತೆ ಕಾಣಬರುತ್ತಿರುವುವು.

ಒಬ್ಬ ಫ್ರಾನ್ಸ್ ದೇಶದ ವಿತಂತುವು ತನ್ನ ಗಂಡನು ಸಸೆಕ್ಸ್ ಎಂಬ ಹಡಗಿನಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದನೆಂತಲೂ ಜರ್ಮನರ ಸಬ್‌ಮೆರೀನ್ ಪ್ರಹಾರದಿಂದ ಮುಳುಗಿಸಲ್ಪಟ್ಟ ಆ ಹಡಗಿನೊಡನೆ ತನ್ನ ಗಂಡನು ಮೃತನಾದುದರಿಂದ ಆತನನ್ನು ಕೊಲ್ಲಿಸಿದ ಅಪರಾಧವನ್ನು ಕೈಜರನು ಮಾಡಿರುವನೆಂದೂ ಆತನಮೇಲೆ ಕ್ರಮವಾದ ವ್ಯಾಜ್ಯವನ್ನು ಫ್ರಾನ್ಸ್ ಸಂಧಿವಿಷಯಕ ಮಂತ್ರಿಯಬಳಿಯಲ್ಲಿ ಹೂಡಿರುವಳು. ಇಂಥ ದೂರುಗಳು ಲಕ್ಷಾಂತರವಾಗಿ ಕಾದಿರುವುವು. ಇದಕ್ಕೆಲ್ಲಾ ಇಹಲೋಕದಲ್ಲೂ ಪರಲೋಕದಲ್ಲೂ ಕೂಡ ಕೈಜರರು ಉತ್ತರ ಕೊಡಲು ಬದ್ಧರಾಗಿಯೇ ಇರಬೇಕು. ಆದರೆ ಹಿಂದಾದುದನ್ನೆಲ್ಲಾ ಬಿಟ್ಟು ಕೈಜರನನ್ನು ಕ್ಷಮಿಸುವುದೇ ಲೇಸೆಂದು ಸೂಚನೆ ಕೊಡತಕ್ಕವರು ಪ್ರಪಂಚದ ಇತರ ಭಾಗಗಳಲ್ಲಿದ್ದರೆ ಇದ್ದುಕೊಳ್ಳಲಿ; ನಮ್ಮ ಭರತಖಂಡದಲ್ಲೂ ಇರುತ್ತಿರುವರೆಂಬುದನ್ನು ನೋಡಿ ಆಶ್ಚರ್ಯಪಡಬೇಕಾಗುತ್ತದೆ. ಯುದ್ಧಾರಂಭದಿಂದಲೂ ಇವರಿಗೆ ಶತ್ರುಪಕ್ಷದಲ್ಲಿದ್ದ ಅಭಿಮಾನವು ಇನ್ನೂ ಬಿಡದಿರುವುದೆಂದು ಊಹಿಸಬೇಕಾಗುತ್ತದೆ. ಮನೆಗೆಮಾರಿ ಹೆರರಿಗುಪಕಾರಿಗಳೆಂಬುವವರು ಇಂಥವರೇ ಅಲ್ಲವೆ?

ಒಳದೇಶದ ವೃತ್ತಾಂತಗಳು.

ಚೀಫ್ ಕೋರ್ಟು ಜಡ್ಜರಾದ ಮ|| ಕೆ. ಎಸ್. ಚಂದ್ರಶೇಖರಯ್ಯರ್ ರವರು ಜನವರಿ ತಾ|| ೨ ರಿಂದ ೧ ತಿಂಗಳ ರಜವನ್ನು ಪಡೆದುಕೊಂಡಿದ್ದಾರೆ.

ಇನ್ಫ್ಲುಯಂಜಾ ರೋಗಭೀತಿಯಿಂದ ನಿಲ್ಲಿಸಲ್ಪಟ್ಟಿದ್ದ ನಾಟಕ ಸಿನಿಮಾ ಪ್ರದರ್ಶನಗಳಿಗೆಲ್ಲಾ ಕಳೆದ ತಾ|| ೫ ರಿಂದ ನಡೆಯಿಸಿಕೊಳ್ಳಲು ಅಪ್ಪಣೆ ಕೊಡಲ್ಪಟ್ಟಿದೆ.

ಇಂಡ್ಯಾ ಕೌನ್ಸಿಲ್ಲಿನಲ್ಲಿ ಸಭಿಕರಾಗಿದ್ದ ಸರ್ ಪ್ರಭಾಶಂಕರ ಪಟಾಣಿಯವರು ತಮ್ಮ ಕುಮಾರನ ದೇಹಾರೋಗ್ಯ ನಿಮಿತ್ತವಾಗಿ ಕೆಲವು ಕಾಲದವರೆಗೆ ಬೆಂಗಳೂರಿನಲ್ಲಿ ಬಂದಿರುವರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಮಳೆಯು ನಿಂತು ಚಳಿಗಾರಂಭವಾಗಿದೆ. ಪ್ಲೇಗಿನ ಮತ್ತೂ ಇನ್ಫ್ಲುಯಂಜಾದ ಮರಣಗಳ ಸಂಖ್ಯೆಯು ಎಲ್ಲೋ ಒಂದೆರಡರಂತೆ ಆಗುತ್ತಿವೆ. ನಿಕ್ಕಗಟ್ಟಲೆಯ ಒಟ್ಟು ಮರಣಸಂಖ್ಯೆಯು ೧೦-೧೨ ರೊಳಗೇ ಇದೆ.

ಮ|| ಸಿ. ಆರ್. ರಡ್ಡಿಯವರು ಕ್ರಿಸ್ತ್‌ಮಸ್ ರಜಾ ಮುಗಿದ ಬಳಿಕ ಜನವರಿ ತಾ|| ೨ ರಿಂದ ೧೫ ದಿನಗಳ ರಜಾ ಪಡೆದುಕೊಂಡಿರುವುದರಿಂದ ಆ ಕಾಲದಲ್ಲಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್ ಕೆಲಸವನ್ನು ಡೆ|| ಇನ್|| ಜನರಲ್ಲರಾದ ಮ|| ಬಿ. ದಾಸಪ್ಪ ಬಿ. ಎ. ಯವರು ನೋಡಿಕೊಳ್ಳುವಂತೆ ನಿಯಮಿಸಲ್ಪಟ್ಟಿದ್ದಾರೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಬಿ. ಎ. ಪರೀಕ್ಷೆಯಲ್ಲುತ್ತೀರ್ಣರಾದವರನ್ನು ಎಲ್. ಎಲ್. ಬಿ. ಪರೀಕ್ಷೆಗೆ ತಮ್ಮಲ್ಲಿ ಓದಲು ಸೇರಿಸಿಕೊಳ್ಳುವುದಕ್ಕೆ ಬೊಂಬಾಯಿ ವಿಶ್ವವಿದ್ಯಾಲಯದವರು ಅವಕಾಶಕೊಟ್ಟಿರುವರು. ಈಚೆಗೆ ಮದ್ರಾಸು ವಿಶ್ವವಿದ್ಯಾಲಯದವರೂ ಕೂಡ ನಮ್ಮಲ್ಲಿನ ಬಿ. ಎ. ಗಳನ್ನು ತಮ್ಮ ವಿದ್ಯಾಪೀಠದ ಬಿ. ಎಲ್. ಪರೀಕ್ಷೆಗೆ ಓದಲು ಸೇರಿಸಿಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿರುತ್ತಾರೆ.

ಮ|| ಗಳಾದ ಮಾಳಿಅಪ್ಪನವರು ತಿಪಟೂರಿನಿಂದ ಚಿಕ್ಕನಾಯಕನಹಳ್ಳಿಗೂ, ಅಲ್ಲಿರುವ ಜಿ. ಮಲ್ಲಿಕಾರ್ಜುನಯ್ಯನವರು ತಿಪಟೂರಿಗೂ, ಟಿ. ಕೃಷ್ಣರಾಯರು ಗುಡಿಬಂಡೆಯಿಂದ ಗುಬ್ಬಿಗೂ, ಎಚ್. ಸಿ. ಸುಬ್ಬರಾಯರು ಸೆಕ್ರೆಟೆರಿಯೇಟ್ಟಿನಿಂದ ಗುಡಿಬಂಡೆಗೂ, ಶಂಕರಪ್ಪನವರು ಕ್ಲೋಸ್‌ಪೇಟೆಯಿಂದ ಕೊಪ್ಪಕ್ಕೂ, ಎಚ್. ವೆಂಕಟಸುಬ್ಬರಾಯರು ಕಡೂರು ಡಿಸ್ಟ್ರಿಕ್ಟ್ ಆಫೀಸಿನಿಂದ ಕ್ಲೋಸ್‌ಪೇಟೆಗೂ ಅಮಲ್ದಾರರುಗಳಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ರಾಗಿ ಅಕ್ಕಿಗಳ ಮಾರಾಟಕ್ಕೆ ವರ್ತಕರು ಇನ್ನೂ ಸ್ವತಂತ್ರಿಸಿ ಮುಂದೆ ಬಂದು ನಿಂತಿಲ್ಲ. ಲೈಸೆನ್ಸನ್ನು ಅಪೇಕ್ಷಿಸಿ ಬಂದ ಕೆಲ ವರ್ತಕರಿಗೆ ಪ್ರೆಸಿಡೆಂಟರು ಅನುಮತಿಕೊಡಲಿಲ್ಲವೆಂದು ಕೇಳುತ್ತೇವೆ. ಏಕೋ ಗೊತ್ತಾಗಲಿಲ್ಲ. ದೊಡ್ಡ ವರ್ತಕರು ಲೈಸೆನ್ಸಿಗೆ ಬದ್ಧರಾಗುವುದಿಲ್ಲ. ಸಣ್ಣವರಿಗೆ ಅಪ್ಪಣೆ ಸಿಕ್ಕುವುದಿಲ್ಲ. ಹೀಗಾದರೆ ಪ್ರಜೆಗಳಿಗೆ ಸಾಕಾದಷ್ಟು ಧಾನ್ಯಗಳು ಕಷ್ಟವಿಲ್ಲದೆ ದೊರೆಯುವುದಾವಾಗ? ಮ್ಯುನಿಸಿಪಾಲಿಟಿಯವರೇ ಮಂಡಿಗಳನ್ನಿಡಿಸಿ ತಮ್ಮ ನೌಕರರಿಂದ ಮಾರಾಟಮಾಡಿಸುವುದಕ್ಕಾರಂಭಮಾಡಿದಾರಭ್ಯ ಮ್ಯುನಿಸಿಪಾಲಿಟಿಯ ವಸೂಲಿ ಮೊದಲಾದ ಇತರ ಕಾರ್ಯಗಳೆಲ್ಲಾ ಕಟ್ಟಾಗಿ ಹೋಗಿವೆ. ಸ್ವಲ್ಪ ಸಡಿಲಕೊಟ್ಟು ವ್ಯಾಪಾರಬಾಧ್ಯತೆಯನ್ನು ವರ್ತಕರಿಗೆ ಅಂಟಿಸುವುದೇ ವಿಹಿತವಾಗಿರುತ್ತದೆ.

ವಿಜಯಮಹೋತ್ಸವಕ್ಕಾಗಿ ಸಂಸ್ಥಾನದ ಕೋರ್ಟು ಕಚೇರಿ ಪಾಠಶಾಲೆ ಮೊದಲಾದುವುಗಳಿಗೆಲ್ಲಾ ಶನಿವಾರದದಿನ ವಿಶ್ರಾಂತಿಯು ಕೊಡಲ್ಪಟ್ಟಿದ್ದಿತು. ಎಲ್ಲೆಲ್ಲೂ ಈ ಉತ್ಸವವು ನಾನಾ ರೀತಿಯಲ್ಲಿ ಆಚರಿಸಲ್ಪಡುವುದಕ್ಕೆ ಏರ್ಪಾಟಾಗಿದ್ದಿತು. ರಾಜಧಾನಿಯಲ್ಲಿ ಶುಕ್ರವಾರದದಿನವೇ ಎಲ್ಲ ಶಾಲೆಗಳೂ ಮುಚ್ಚಲ್ಪಟ್ಟು ಬಾಲಬಾಲಿಕೆಯರ ಸ್ಪೋರ್ಟ್ಸುಗಳು ನಡೆಯಿಸಲ್ಪಟ್ಟು ಶನಿವಾರ ಬಹುಮಾನಗಳೂ ತಿಂಡಿಗಳೂ ಹಂಚಲ್ಪಟ್ಟುವು. ಮಿತ್ರಮಂಡಲಿ ವಿಜಯವಿಷಯಕವಾದ ಉಪನ್ಯಾಸಗಳೂ ಆನಂದಪ್ರದರ್ಶನಗಳೂ ನಡೆಯುವುದಕ್ಕೆ ಏರ್ಪಾಟಾಗಿದ್ದುವು. ದೇವಾಲಯಗಳಲ್ಲಿ ಪೂಜಾ ಪುನಸ್ಕಾರಗಳೂ ಬಡಬಗ್ಗರಿಗೆ ಅನ್ನ ಬಟ್ಟೆಗಳ ದಾನಗಳೂ ರಾಜವೀಧಿಗಳಲ್ಲಿ ಸೈನಿಕರ ಮೆರವಣಿಗೆಯೂ ಟೌನ್‌ಹಾಲಿನಲ್ಲಿ ಶ್ರೀಮದ್ಯುವರಾಜರ ಅಧ್ಯಕ್ಷತೆಯಿಂದ ದರ್ಬಾರೂ ಸಾಯಂಕಾಲ ದೀಪೋತ್ಸವಗಳೂ ಸಹ ನಡೆಯಲು ಏರ್ಪಾಟಾಗಿದ್ದಿತು. ವಿಶೇಷಗೆಜೆಟ್ ಪತ್ರಿಕೆಯ ಮೂಲಕ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳಿಗೆ ಈ ವಿಜಯೋತ್ಸವಾನಂದವನ್ನು ಪ್ರಕಟಿಸಿದ್ದರು.

ಅಕ್ಕಿಯನ್ನು ಪಲ್ಲಾಕ್ಕೆ ೧೨| ರೂ. ಗಳ ಮೇರೆ ಒದಗಿಸುವುದಕ್ಕೆ ರಾಜಧಾನಿಯ ೩ ಮಿಲ್ಲಿನವರು ಒಪ್ಪಿರುವರೆಂದು ಕೇಳುತ್ತೇವೆ. ಇಂಥ ಒಪ್ಪಂದಕ್ಕೆ ಇತರ ಮಿಲ್ಲಿನವರೂ ಒಪ್ಪಿದರೆ ಅದಕ್ಕೂ ಅವಕಾಶವನ್ನೇಕೆ ಕೊಡಬಾರದು? ಹೇಗೂ ಸಮೃದ್ಧಿಯಾಗಿ ಧಾನ್ಯಗಳೊದಗುವುದೇ ಬೇಕಾದುದು. ಈಗ ಸ್ವದೇಶದ ಅಕ್ಕಿಯು ತಕ್ಕಷ್ಟು ಒದಗದಿರುವುದರಿಂದ ಮ್ಯುನಿಸಿಪಾಲಿಟಿಯವರು ರಂಗೂನ್ ಅಕ್ಕಿಯನ್ನು ರೂ. ಗೆ ೫ ಸೇರಿನಂತೆ ಮಾರಾಟ ಮಾಡಿಸುತ್ತಿದ್ದಾರೆ. ಕೆಲವು ಅಂಗಡಿಗಳಲ್ಲಿ ಬೆಳಗ್ಗೆ ಮಧ್ಯಾಹ್ನ ಎಂದೆರಡು ಗಂಟೆಗಳ ಹೊತ್ತು ಮಾತ್ರವೇ ಮಾರಾಟವಾಗುತ್ತಿರುವುದರಿಂದ ಜನರಿಗೆ ಧಾನ್ಯವು ಸಿಕ್ಕದೆಯೂ ಗದ್ದಲವು ಹೆಚ್ಚಾಗಿಯೂ ಇರುತ್ತದೆ. ಬೆಳಗಿನ ೬ ಗಂಟೆಗಾರಂಭಿಸಿ ೧೧ ಗಂಟೆವರೆಗೂ ಮಧ್ಯಾಹ್ನ ೨ ಗಂಟೆಗಾರಂಭಿಸಿ ೫ ಗಂಟೆವರೆಗೂ ವ್ಯಾಪಾರ ಮಾಡಿಸುವಂತಾದರೆ ಗದ್ದಲವೂ ಕಷ್ಟವೂ ಇಲ್ಲದೆ ಪ್ರಜೆಗಳಿಗೆ ಧಾನ್ಯವು ಸಿಕ್ಕುವುದೆಂಬುದಕ್ಕೆ ಈಗ ಜಗ್ಗೂಲಾಲಾ ಧರ್ಮಸತ್ರದಲ್ಲಿಟ್ಟಿರುವ ಅಂಗಡಿಯ ಏರ್ಪಾಟು ನಿದರ್ಶನವಾಗಿದೆ.

ನಮ್ಮ ದಿವಾನರವರು ೬ ತಿಂಗಳ ರಜಾವನ್ನು ಪಡೆದುಕೊಳ್ಳುವರೆಂದೂ, ದಿಲ್ಲಿಗೆ ಸಂಸ್ಥಾನಿಕರ ಮಹಾಸಭೆಗಾಗಿ ಪ್ರಯಾಣಮಾಡುವರೆಂದೂ, ಈ ಕಾಲದಲ್ಲಿ ಆಕ್ಟಿಂಗಾಗಿ ದಿವಾನ್‌ಗಿರಿಯನ್ನು ೧ನೆ ಕೌನ್ಸಿಲರ್ ಸರ್ದಾರ್ ಕಾಂತರಾಜ ಅರಸಿನವರು ವಹಿಸಿರುವರೆಂದೂ, ಅವರು ರಾಜೀನಾಮೆಯನ್ನೇ ಕೊಟ್ಟರೆಂದೂ, ಶ್ರೀಮನ್ಮಹಾರಾಜರವರು ಅಂಗೀಕರಿಸಿದರೆಂದೂ ಮೈಸೂರಿನಲ್ಲಿ ವರ್ತಮಾನಗಳು ಹುಟ್ಟಿವೆ. ಅವರು ಶ್ರೀಮನ್ಮಹಾರಾಜರ ಸಂದರ್ಶನಕ್ಕಾಗಿ ರಾಜಧಾನಿಗೂ ಬಂದಿದ್ದರು. ಆದರೆ ಮದ್ರಾಸಿನ ಪತ್ರಿಕೆಗಳೊಳಗೆ ಮೈಸೂರು ಎಗ್ಜಿಕ್ಯುಟೀವ್ ಕೌನ್ಸಿಲಿನ ಅಧ್ಯಕ್ಷತೆಯನ್ನು ಶ್ರೀಮದ್ಯುವರಾಜರವರು ವಹಿಸಿಕೊಳ್ಳುವರೆಂದೂ, ಆ ಕೌನ್ಸಿಲಿನಲ್ಲಿ ದಿವಾನರು ಒಬ್ಬ ಸಾಧಾರಣ ಸಭಿಕರಾಗಿರಲು ಇಷ್ಟಪಡದೆ ಇರುವರೆಂದೂ ಈ ಅಸಮಾಧಾನದಿಂದ ಅವರು ದಿವಾನ್‌ಗಿರಿಯನ್ನೇ ಪರಿತ್ಯಾಗಮಾಡುವವರಾಗಿದ್ದಾರೆಂದೂ ಪ್ರಕಟವಾಗಿರುತ್ತದೆ. ದೀರ್ಘದರ್ಶಿಗಳಾದ ಶ್ರೀಮನ್ಮಹಾರಾಜರ ಸನ್ನಿಧಿಯಲ್ಲಿ ದೇಶಾಭಿಮಾನಿಗಳೂ ವಿಚಕ್ಷಣರೂ ಆದ ಸರ್ ವಿಶ್ವೇಶ್ವರಯ್ಯನವರ ಕರ್ತೃತ್ವದಲ್ಲಿ ಅವರ ಉದ್ಯೋಗ ವಿಶ್ರಾಂತಿಯು ಈ ರೂಪದಿಂದ ಸಾಗುವುದೆಂದು ನಾವು ನೆನಸಲಾರೆವು. ಇನ್ನು ಕೆಲಕಾಲ ಇವರ ದೇಶಸೇವೆಯು ಸಂಸ್ಥಾನಕ್ಕೆ ಇರಬೇಕಾದುದೇ ಇಷ್ಟವು. ಅವರು ೬ ತಿಂಗಳ ರಜಾ ಪಡೆದುಕೊಂಡಿರುವುದೂ ಸರ್ದಾರ್ ಕಾಂತರಾಜ ಅರಸಿನವರು ಆಕ್ಟಿಂಗಾಗಿ ದಿವಾನಗಿರಿ ಮಾಡುವುದೂ ನಿಜವಾದ ವಾರ್ತೆಯಾಗಿದೆ.

ಮರಿಮಲ್ಲಪ್ಪನವರ ಹೈಸ್ಕೂಲು ಹೆಡ್ಮಾಸ್ಟರ್ ಗಿರಿಯನ್ನು ಮ|| ವೆಂಕಟಕೃಷ್ಣಯ್ಯನವರು ಪರಿತ್ಯಜಿಸಿದರು. ಮ|| ಕಳಲೆ ಕೃಷ್ಣರಾಯರು ಅದನ್ನು ವಹಿಸಿಕೊಂಡರು. ಮ|| ವೆಂಕಟಕೃಷ್ಣಯ್ಯನವರು ತಾವು ಕೆಲಸವನ್ನು ಬಿಡುವುದಕ್ಕೆ ಮುಂಚೆ ತಮ್ಮ ಶಿಷ್ಯರಿಗೆ ಒಂದು ಉಪದೇಶಮಾಡಿದರೆಂದು ಸಂಪದಭ್ಯುದಯದಲ್ಲಿ ಪ್ರಕಟವಾಗಿದೆ. ಅದರಲ್ಲಿನ ಉಳಿದ ವಿಷಯಗಳೆಲ್ಲಾ ಹೇಗಾದರೂ ಇರಲಿ. ಶಾಲೆಯ ಸರ್ವಸ್ವಾತಂತ್ರ್ಯವೂ ನಿರಂಕುಶವಾಗಿ ತಮ್ಮಲ್ಲಿದ್ದಿತು. ಪ್ರತಿಯೊಬ್ಬ ಉಪಾಧ್ಯಾಯರೂ ಸ್ಕೂಲಿಗೇ ಸರ್ವಾಧಿಕಾರಿಗಳಂತಿದ್ದರು. ಶಾಲೆಯ ಹುಡುಗರಿಗೆ ಪರೀಕ್ಷೆಯಲ್ಲಿ ತಕ್ಕಷ್ಟು ನಂಬರುಗಳು ಬಾರದಿದ್ದರೂ ಶಿಫಾರಸ್ ಮಾಡಿ ಮೇಲಕ್ಕೆ ತಳ್ಳಲ್ಪಡುತ್ತಿದ್ದರು. ಹುಡುಗರ ವಿದ್ಯಾಭ್ಯಾಸಕ್ಕೆ ಮುಖ್ಯ ಗಮನಕೊಡಲ್ಪಡುತ್ತಿರಲಿಲ್ಲ. ಇತ್ಯಾದಿ ವಿಷಯಗಳನ್ನೆಲ್ಲಾ ಮರೆಮಾಜದೆ ಸ್ಪಷ್ಟವಾಗಿ ಹೇಳಿಕೊಂಡಿರುತ್ತಾರೆ. ಆದರೆ ತಾವು ಗ್ರಂಥಕರ್ತರಾದುದರಿಂದ, ದೋಷವನ್ನೆಲ್ಲಾ ಗುಣವನ್ನಾಗಿ ಹೇಳಬಲ್ಲ ಶಕ್ತಿಯು ಕವಿಗಳಿಗಿರುವುದೆಂಬ - "ಕಾಣಾಃ ಕಮಲಪತ್ರಾಕ್ಷಾಃ ಕದರ್ಯಾಃ ಕಲ್ಪಶಾಖಿನಃ | ಕಾತರಾವಿಕ್ರಮಾದಿತ್ಯಾಃ ಕವಿದೃಗ್ಗೋಚರಂಗತಾಃ" || ಈ ನೀತಿವಚನದಂತೆ ಆ ದೋಷಗಳನ್ನೆಲ್ಲಾ ಗುಣವನ್ನಾಗಿ ವರ್ಣಿಸಿಕೊಂಡಿರುವುದಕ್ಕಾಗಿ ಮೆಚ್ಚಬೇಕಾಗಿದೆ. ನಿರಂಕುಶಾಧಿಕಾರಕ್ಕೆ ಇನ್ನು ಎಡೆಯಿಲ್ಲವೆಂಬ ಕಾರಣದಿಂದಲೋ ಏನೋ ಮ|| ಅಡ್ವೊಕೇಟ್ ಚಂದ್ರಶೇಖರಯ್ಯನವರೂ ಕೂಡ ಟ್ರಸ್ಟ್ ಕಮಿಟಿಯ ಆನರರಿ ಸೆಕ್ರೆಟರಿತನಕ್ಕೆ ರಾಜೀನಾಮೆ ಕೊಟ್ಟರೆಂದೂ ಕಮಿಟಿಯವರು ಅದನ್ನಂಗೀಕರಿಸಿದರೆಂದೂ ಕೇಳುತ್ತೇವೆ.

ಭರತಖಂಡದ ವೃತ್ತಾಂತಗಳು.

೬ ಕೋಟಿ ರೂ. ಬೆಲೆಯ ಬೆಳ್ಳಿಯು ಅಮೇರಿಕಾದಿಂದ ಭರತಖಂಡಕ್ಕೆ ಕಳುಹಿಸಲ್ಪಟ್ಟಿದೆ.

ರಣರಂಗದಿಂದ ಮರಳಿ ಬರುವ ಸೈನಿಕರಿಗೆ ಸಂಭ್ರಮದಿಂದ ಸ್ವಾಗತವನ್ನು ಮಾಡುವುದಕ್ಕೆ ಬೊಂಬಾಯಿಯಲ್ಲಿ ಒಂದು ಸಂಘವು ಏರ್ಪಟ್ಟಿದೆ.

ತಿರುವಾಂಕೂರು ಸಂಸ್ಥಾನದ ದಿವಾನರಾಗಿದ್ದ ದಿ|| ಬ|| ಎಸ್. ಪದ್ಮನಾಭಯ್ಯರ್ ಎಂ. ಎ. ಯವರು ಕಳೆದ ತಾ|| ೨೯ರಲ್ಲಿ ಸ್ವರ್ಗಸ್ಥರಾದರು.

ಇಂಗ್ಲಾಂಡು ಭರತಖಂಡಗಳ ಮಧ್ಯದಲ್ಲಿ ವಿಮಾನಗಳನ್ನು ನಡೆಯಿಸುವ ಪ್ರಯತ್ನವು ನಡೆಯುತ್ತಿದೆ. ಡಿಸೆಂಬರ್ ತಿಂಗಳ ಮಧ್ಯಭಾಗದಲ್ಲಿ ಪರಿಶೋಧನೆಗಾರಂಭವಾಗುವುದರಲ್ಲಿದೆ.

ಕಳೆದ ತಾ|| ೨೯ ರ ಬೆಳಗ್ಗೆ ಬೊಂಬಾಯಿ ಸಮುದ್ರ ತೀರದಲ್ಲಿ ನಿಂತಿದ್ದ ಒಂದು ಜಪಾನ್ ಹಡಗಿಗೆ ಬೆಂಕಿಬಿದ್ದು ಹತ್ತಿ ಮೊದಲಾದ ೧|| ಲಕ್ಷ ರೂ. ಗಳ ಸೊತ್ತು ದಗ್ಧವಾಯಿತು.

ಯುದ್ಧ ನಡೆಯುತ್ತಿದ್ದ ಕಾಲದಲ್ಲಿ ಭರತಖಂಡದಲ್ಲಿ ೧೧೬೧೭೮೯ ಮಂದಿ ಪ್ರಜೆಗಳು ಸೈನ್ಯಕ್ಕೆ ಸೇರಿಸಿಕೊಳ್ಳಲ್ಪಟ್ಟರೆಂದೂ, ಭರತಖಂಡದಿಂದ ಸಮುದ್ರದ ಮೇಲೆ ಹೊರಕ್ಕೆ ೧೨೧೫೩೩೮ ಮಂದಿ ಸೈನಿಕರು ಕಳುಹಿಸಿ ಕೊಡಲ್ಪಟ್ಟರೆಂದೂ, ಅವರಲ್ಲಿ ೧೦೧೪೩೯ ಮಂದಿಗಳು ನಷ್ಟಪಟ್ಟರೆಂದೂ ಸ್ಟೇಟ್ ಸೆಕ್ರೆಟರಿಯವರು ಹೇಳಿರುತ್ತಾರೆ.

ವೈಸ್ರಾಯರು ಕಳೆದ ತಿಂಗಳು ತಾ|| ೨೮ರಲ್ಲಿ ಭರತಪುರದ ಮಹಾರಾಜರಿಗೆ ಅವರ ಸಂಸ್ಥಾನದ ಯಾಜಮಾನ್ಯವನ್ನು ವಹಿಸಿಕೊಟ್ಟರು. ಇದುವರೆಗೆ ಕಳೆದ ೨೩ ವರ್ಷಗಳಿಂದ ಆ ಸಂಸ್ಥಾನವನ್ನು ಇಂಡ್ಯಾ ಸರ್ಕಾರದವರೇ ಆಳುತ್ತಿದ್ದರು. ರಾಜರು ಪ್ರಾಪ್ತವಯಸ್ಕರಾದುದರಿಂದ ಈಗ ಅವರಿಗೆ ವಹಿಸಿಕೊಡಲ್ಪಟ್ಟಿತು. ಈ ಸಮಯದಲ್ಲಿ ವೈಸ್ರಾಯರು ಮಾಡಿದ ಉಪದೇಶಪರವಾದ ಭಾಷಣವು ಸಕಲ ಪ್ರಭುಗಳಿಂದಲೂ ಲಾಲಿಸಲ್ಪಡಲರ್ಹವಾಗಿರುವುದು.

ಬೊಂಬಾಯಿ ಅಧಿಪತ್ಯದಲ್ಲಿ ಕ್ಷಾಮದ ಬಾಧೆಯು ವಿಶೇಷವಾಗಿರುವುದರಿಂದ ವ್ಯವಸಾಯಗಾರರಿಗೆ ಸಾಲಕೊಡುವುದಕ್ಕಾಗಿ ಕಲೆಕ್ಟರುಗಳ ಸೂಚನೆಯನ್ನನುಸರಿಸಿ ಆ ಸರ್ಕಾರದವರು ೨೩|| ಲಕ್ಷ ರೂ. ಗಳನ್ನು ಪ್ರತ್ಯೇಕವಾಗಿ ಕೊಟ್ಟಿದ್ದಾರೆ. ಇನ್ನೂ ೫೦ ಲಕ್ಷವನ್ನು ಈ ವರ್ಷ ಕೊಡುವವರಾಗಿದ್ದಾರೆ. ಮುಂದಣ ವರ್ಷದಲ್ಲಿ ಮತ್ತೆ ೬೦ ಲಕ್ಷವನ್ನು ಕೊಡಲು ಯೋಚಿಸುತ್ತಿದ್ದಾರೆ. ತಮಗೂ ತಮ್ಮ ಪತ್ನಿಗೂ ಸ್ಮಾರಕಚಿಹ್ನವನ್ನು ಏರ್ಪಡಿಸಲು ಪ್ರಜೆಗಳು ಕೂಡಿಸುವ ಹಣವನ್ನೆಲ್ಲಾ ಪ್ರಜೆಗಳ ಶಾಶ್ವತೋಪಯೋಗಕರವಾದ ಕಾರ್ಯಗಳಿಗೆ ವಿನಿಯೋಗಿಸಿದರೆ ತಮಗೆ ಬಹಳ ಸಂತೋಷವೆಂದು ಲಾರ್ಡ್ ವಿಲ್ಲಿಂಗ್ಡನ್‌ರವರು ಹೇಳಿದ್ದಾರೆ.

ಪ್ರಯಾಣಮಾಡಲು ಸಿದ್ಧರಾಗಿರುವ ಬೊಂಬಾಯಿ ಗೌರ್ನರ್ ಲಾರ್ಡ್ ವಿಲ್ಲಿಂಗ್ಡನ್‌ರವರಿಗೆ ಆ ಊರಿನಲ್ಲಿ ಹಲವು ಔತಣಗಳು ಪುರಪ್ರಮುಖರಿಂದಲೂ ಸಂಘಗಳಿಂದಲೂ ಕೊಡಲ್ಪಡುತ್ತಿವೆ. ಮ್ಯು|| ಕಾರ್ಪೊರೇಷನ್ ಅಧ್ಯಕ್ಷಪಕ್ಷದಿಂದ ಸರ್ ರಹಿಮತ್ತುಲ್ಲಾ ಇಬ್ರಾಹಿಂರವರು ಟೀವೌತಣವನ್ನು ಕಳೆದ ಮಂಗಳವಾರ ಮಾಡಿದರು. ನಿನ್ನೆದಿನ ಗೌರ್ನರವರು ಔತಣಮಾಡಿಸಿದರು. ತಾ|| ೯ ರಲ್ಲಿ ಶಾಸನನಿರ್ಮಾಣಸಭೆಯು ಜರುಗುವುದು. ತಾ|| ೧೦ ರಲ್ಲಿ ಶಾಸನಸಭಿಕರಿಗೆಲ್ಲಾ ಗೌರ್ನರವರು ಔತಣಮಾಡಿಸುವರು. ತಾ|| ೧೧ ರಲ್ಲಿ ಪೌರಭವನದೊಳಗೆ ಪ್ರಜೆಗಳ ಮಹಾಸಭೆಯು ನಡೆದು ಗೌರ್ನರವರಿಗೆ ವಿಜ್ಞಾಪನಪತ್ರವು ಸಮರ್ಪಿಸಲ್ಪಡುವುದು. ತಾ|| ೧೮ ರಲ್ಲಿ ಹೊಸ ಗೌರ್ನರ ಆಗಮನವೂ ಲಾರ್ಡ್ ಮತ್ತೂ ಲೇಡಿ ವಿಲ್ಲಿಂಗ್ಡನ್‌ರವರ ಪ್ರಯಾಣವೂ ಜರುಗುವುವು.

ಯುದ್ಧ ವಿಶ್ರಾಂತ ದೇಶವಾರ್ತೆಗಳು.

ಜರ್ಮನರಿಂದ ೨೦೦ ಕೋಟಿ ಪೌನುಗಳ ನಷ್ಟಪರಿಹಾರವನ್ನು ತೆಗೆದುಕೊಳ್ಳಬೇಕಾಗಿದೆಯೆಂದು ವಿನ್‌ಸ್ಟನ್ ಚರ್ಚಿಲ್‌ರವರು ಒಂದುಕಡೆ ಭಾಷಣ ಮಾಡಿದ್ದಾರೆ.

ತಾತ್ಕಾಲಿಕ ಸಂಧಿನಿಬಂಧನೆ ಮೇರೆಗೆ ಜರ್ಮನರು ಮಿತ್ರಮಂಡಲಿಗೆ ವಶಪಡಿಸಬೇಕಾಗಿದ್ದ ೧|| ಲಕ್ಷ ಹೊಗೆಬಂಡಿಗಳು ಮಿತ್ರಮಂಡಲಿಯ ವಶಕ್ಕೆ ಕೊಡಲ್ಪಟ್ಟುವು.

ಅಮೇರಿಕಾದಿಂದ ಇಷ್ಟರಲ್ಲೇ ಲಂಡನ್ನಿಗೆ ಬರುವುದಕ್ಕಿರುವ ಪ್ರೆಸಿಡೆಂಟ್ ವಿಲ್ಸನ್‌ರವರೂ, ಇಟಲಿ ರಾಜರೂ, ಸರ್ವಿಯಾ ಪ್ರಭುತ್ವಪ್ರತಿನಿಧಿಯೂ ಗ್ರೀಸ್‌ಪ್ರಭುವೂ, ಆಂಗ್ಲಪ್ರಭುತ್ವ ಪ್ರತಿನಿಧಿಗಳೂ ಇವರೆಲ್ಲಾ ಪ್ಯಾರಿಸ್ಸಿಗೆ ಸಂಧಿಸಭೆಗಾಗಿ ಹೋಗುವವರಾಗಿದ್ದಾರೆ.

ಸಂಧಿಸಭೆಗೆ ಹೋಗಲಿಕ್ಕಿರುವ ಬೇರೆಬೇರೆ ದೇಶಪ್ರತಿನಿಧಿಗಳೆಲ್ಲಾ ಪ್ಯಾರಿಸ್ ಪಟ್ಟಣದಲ್ಲಿರುವ ಬೇರೆಬೇರೆ ಹೋಟೆಲುಗಳಲ್ಲಿ ತಂತಮ್ಮ ಬಿಡಾರಗಳಿಗೆ ಏರ್ಪಾಟನ್ನು ಮಾಡಿಕೊಂಡಿದ್ದಾರೆ. ಜರ್ಮನರಿಗೆ ಮಾತ್ರ ಪಟ್ಟಣದಲ್ಲಿ ಅವಕಾಶ ಕೊಡದೆ ಊರಹೊರಗೆ ಬಿಡಾರಕ್ಕೆ ಅವಕಾಶ ಕೊಟ್ಟಿದ್ದಾರೆ.

ರಣರಂಗದಲ್ಲಿ ಸತ್ತ ಸಕಲ ಸೈನಿಕರಿಗೂ ಒಂದೇಕಡೆ ಸಮಾಧಿ ಮಾಡಬೇಕೆಂದೂ ಅವೆಲ್ಲಾ ಒಂದೇ ಮಾದರಿಯಲ್ಲಿರಬೇಕೆಂದೂ ಪ್ರತಿ ಸಮಾಧಿಯ ಮೇಲೂ ಸೈನಿಕನ ಹೆಸರು ಅವನು ತೋರಿಸಿದ ಶೌರ್ಯ ಅವನ ಹುದ್ದೆ ಮೊದಲಾದ ಸಂಗತಿಗಳನ್ನು ಕಲ್ಲಿನಮೇಲೆ ಕೆತ್ತಿಸಿ ಸ್ಥಾಪಿಸಬೇಕೆಂದೂ ಆಂಗ್ಲಪ್ರಭುತ್ವದವರು ತೀರ್ಮಾನಿಸಿದ್ದಾರೆ.

ಲಕ್ಸೆಂಬರ್ಗ್ ದೇಶವು ಇದುವರೆಗೆ ಜರ್ಮನರಿಂದ ಆಕ್ರಮಿಸಲ್ಪಟ್ಟಿದ್ದು ಈಗ ಬಿಡಲ್ಪಟ್ಟಿತಷ್ಟೆ. ಅದರ ರಾಣಿಯು ರಾಜ್ಯಪರಿತ್ಯಾಗ ಮಾಡುವವಳಾಗಿದ್ದಾಳೆ. ಅಲ್ಲಿಯ ಪ್ರಜೆಗಳಲ್ಲಿ ಬಹುಜನರು ಆ ದೇಶವನ್ನು ಬೆಲ್ಜಿಯಮ್ಮಿಗೆ ಸೇರಿಸಿಬಿಡಬೇಕೆಂದು ಯೋಚಿಸುತ್ತಿರುವರಂತೆ. ರಾಜ್ಯವನ್ನು ಹಾಗೆ ಮಾಡುವುದೋ ಅಥವಾ ಪ್ರಜಾಸತ್ತಾತ್ಮಕ ರಾಜ್ಯವನ್ನಾಗಿ ಮಾಡುವುದೋ ಅದು ಅಲ್ಲಿಯ ರಾಜ್ಯಾಂಗಸಭೆಯವರ ಅಧೀನದಲ್ಲಿರುವುದು.

ಆಂಗ್ಲಪ್ರಭುತ್ವದವರು ಕೋರಿದ ಪ್ರಕಾರಕ್ಕೆ ಫ್ರೆಂಚ್ ಸರ್ವಸೇನಾನಿಗಳಾದ ಮಾರ್ಷಲ್‌ಫಾಕ್‌ರವರೂ ಮುಖ್ಯಮಂತ್ರಿ ಕ್ಲೆಮೆಂಶೋರವರೂ ಕೂಡ ಕಳೆದ ತಾ|| ೧ ರಲ್ಲಿ ಲಂಡನ್ ಪಟ್ಟಣಕ್ಕೆ ಹೋಗಿದ್ದರು. ಅವರಿಗೆ ಅತ್ಯದ್ಭುತವಾದ ಸ್ವಾಗತವನ್ನು ಆಂಗ್ಲಪ್ರಜೆಗಳೂ ಪ್ರಭುತ್ವದವರೂ ಮಾಡಿದರು. ಡ್ಯೂಕ್ ಆಫ್ ಕನ್ನಾಟ್‌ರವರೂ ಮುಖ್ಯಮಂತ್ರಿ ಲಾಯಿಡ್‌ಜಾರ್ಜ್‌ರವರೂ ಅವರನ್ನಿದಿರುಗೊಂಡರು. ಆಂಗ್ಲಪತ್ರಿಕೆಗಳೆಲ್ಲಾ ಅವರುಗಳ ಆಗಮನವನ್ನು ಅಭಿನಂದಿಸಿ, ಫಾಕ್‌ರವರನ್ನು ಜರ್ಮನ್ ವಿಜೇತನೆಂದು ಕರೆಯುತ್ತಿವೆ. ಫ್ರಾನ್ಸಿನ ಈ ಇಬ್ಬರು ಅಧಿಕಾರಿಗಳೂ ಇಟಲಿಯ ಸೀನಿಯರ್ ಆರ್ಲೊಂಡೊಯವರೂ ಬ್ಯಾರನ್ ಸೋನಿಯವರೂ ಸಹ ಕೂಡಿ ಸಂಧಿಸಭೆಯಲ್ಲಿ ನಡೆಯಬೇಕಾದ ಏರ್ಪಾಟುಗಳನ್ನು ಆಲೋಚಿಸುವವರಾಗಿದ್ದಾರೆ.

ನಮ್ಮ ಸಾರ್ವಭೌಮರು ಯುವರಾಜರು ಮತ್ತೂ ದ್ವಿತೀಯ ಕುಮಾರರುಗಳೊಡನೆ ಪ್ಯಾರಿಸ್ಸಿಗೆ ದಯಮಾಡಿಸಿದ್ದರು. ಅಲ್ಲಿ ಇವರ ಸ್ವಾಗತಕ್ಕಾಗಿ ಅಭೂತಪೂರ್ವವಾದ ಏರ್ಪಾಟುಗಳು ಬಹಳ ಸಂಭ್ರಮದಿಂದ ಮಾಡಲ್ಪಟ್ಟಿದ್ದುವು. ಪಟ್ಟಣದಲ್ಲೆಲ್ಲಾ ಇಂಗ್ಲೀಷ್ ಫ್ರೆಂಚ್ ಪತಾಕೆಗಳು ಅಲಂಕರಿಸಲ್ಪಟ್ಟಿದ್ದುವು. ಜರ್ಮನರ ಕಡೆಯಿಂದ ಫ್ರೆಂಚರು ರಣರಂಗದಲ್ಲಿ ಕಿತ್ತುಕೊಂಡಿದ್ದ ೨೦೦೦ ಫಿರಂಗಿಗಳನ್ನು ಸಾಲಾಗಿ ನಿಲ್ಲಿಸಿದ್ದರು. ಮುಖ್ಯವೀಧಿಗಳಲ್ಲಿ ಇವರನ್ನು ಉತ್ಸವಪೂರ್ವಕವಾಗಿ ಕರೆದುಕೊಂಡುಹೋದಾಗ ಪುರಜನರು ಮಾಡಿದ ಜಯಘೋಷವು ಆ ಪಟ್ಟವು ಹುಟ್ಟಿದಂದಿನಿಂದಲೂ ಕೇಳಲ್ಪಟ್ಟಿರಲಿಲ್ಲ. ಔತಣಗಳೂ ವಿನೋದೋತ್ಸವಗಳೂ ಸೇನಾಪ್ರದರ್ಶನಗಳೂ ನಡೆದುವು. ಯುದ್ಧದಲ್ಲಿ ಫ್ರಾನ್ಸಿನವರೂ ಇಂಗ್ಲೀಷರೂ ಸಂಮೇಳನಗೊಂಡು ದೇಶಾಭಿಮಾನದಿಂದ ತೋರಿಸಿದ ಪರಾಕ್ರಮಾತಿಶಯದಿಂದಲೇ ಜಯಪರಿಣಾಮವಾಯಿತೆಂದೂ ಫ್ರೆಂಚರ ಕಾರ್ಯದೀಕ್ಷೆಯು ಅದ್ಭುತವಾದುದೆಂದೂ, ಈ ಯುದ್ಧದಿಂದ ಫ್ರಾನ್ಸ್ ಇಂಗ್ಲೆಂಡುಗಳ ಮೈತ್ರಿಯು ದೃಢವಾಯಿತೆಂದೂ ಮೊದಲಾಗಿ ನಮ್ಮ ಸಾರ್ವಭೌಮರು ಭಾಷಣಮಾಡಿದರು. ಅದಕ್ಕೆ ಪಾಯಿಂಕೇರರು ಉತ್ತರಕೊಡುವಾಗ್ಗೆ ಈಗಣ ಯುದ್ಧದಿಂದ ನಮ್ಮ ಭೂಜಲ ಸೈನ್ಯಗಳ ಘನತೆಯು ಸಾವಿರಪಾಲು ಹೆಚ್ಚಿತು. ಚರಿತ್ರದಲ್ಲಿ ಅದು ಶಾಶ್ವತವಾಗಿರುವುದು. ನಮ್ಮ ಘನತೆಯೂ ಕೂಡ ಹೆಚ್ಚಿತು. ಈ ಯುದ್ಧದಲ್ಲಿ ಸಕಲ ಪ್ರಜೆಗಳೂ ದೇಶಾಭಿಮಾನದಿಂದಲೂ ಸ್ವಾತಂತ್ರ್ಯೇಚ್ಛೆಯಿಂದಲೂ ಸಡುಕಟ್ಟಿ ನಿಂತು ಯುದ್ಧಮಾಡಿದರು. ಅದರಿಂದಲೇ ಇಂಥ ಫಲವು ಸಿದ್ಧಿಸಿತು. ಈಗಣ ಯುದ್ಧವು ಫ್ರಾನ್ಸ್ ಇಂಗ್ಲೆಂಡುಗಳ ಮೈತ್ರಿಯನ್ನು ಚಿರಸ್ಥಾಯಿಗೊಳಿಸಿತು. ಎಂದು ಮೊದಲಾಗಿನುಡಿದು ಅವರ ಆಗಮನವನ್ನು ಅಭಿನಂದಿಸಿದರು. ಇಂಗ್ಲೆಂಡ್ ಫ್ರಾನ್ಸುಗಳ ಪರಸ್ಪರ ವಿಶ್ವಾಸಗಳೂ ಮೈತ್ರಿಗಳೂ ಆಚಂದ್ರತಾರಕವಾಗಿರಲಿ; ಅದರಿಂದ ಪ್ರಪಂಚಶಾಂತಿಯೂ ದೇಶಾಭ್ಯುದಯವೂ ನಾಗರಕತೆಯೂ ಶಾಶ್ವತವಾಗುವುವು. ಎಂದು ಉಭಯರೂ ವ್ಯಕ್ತಪಡಿಸಿದರು. ಸಾರ್ವಭೌಮರು ರಣರಂಗಗಳಿಗೆ ಹೋಗಿ ಸೈನಿಕರನ್ನು ಸಂದರ್ಶಿಸಿದಾಗ ಫ್ರೆಂಚ್ ಸೈನಿಕರ ಅಪ್ರತಿಮಪರಾಕ್ರಮವನ್ನು ಕೊಂಡಾಡಿದರು. ಇಂಗ್ಲೀಷ್ ರಾಯಭಾರಿಗಳ ಭವನದಲ್ಲಿ ಔತಣ ನಡೆದಾಗ ಮುಖ್ಯ ಸೇನಾಪತಿಯಾದ ಮಾರ್ಷಲ್‌ಫಾಕ್‌ರವರಿಗೆ "ಆರ್ಡರ್ ಆಫ್ ಮೆರಿಟ್" ಎಂಬ ಬಿರುದನ್ನು ಸಾರ್ವಭೌಮರು ಸ್ವಹಸ್ತದಿಂದಲೇ ಅಲಂಕರಿಸಿ, ನಾನು ಕೊಡಬಹುದಾದ ಬಿರುದುಗಳಲ್ಲೆಲ್ಲಾ ಇದೇ ದೊಡ್ಡಬಿರುದೆಂದು ಹೇಳಿ ಅಭಿನಂದಿಸಿದರು. ತಾ|| ೩ರಲ್ಲಿ ಸಾರ್ವಭೌಮರು ಸಪರಿವಾರರಾಗಿ ಮರಳಿ ಲಂಡನ್ನಿಗೆ ಪ್ರಯಾಣಮಾಡಿದರು.

ಮೈಸೂರು ದಸರಾ ಕೈಗಾರಿಕೆಗಳ ಮತ್ತು ವ್ಯವಸಾಯದ ವಸ್ತುಪ್ರದರ್ಶನ:—

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ:—

ಈ ಸಾಲಿನ ಪ್ರದರ್ಶನಕಾಲದಲ್ಲಿ ಹಾಕಿದ್ದ ಹಂಗಾಮಿ ಕಟ್ಟಡಗಳಿಗೆ ಉಪಯೋಗಿಸಿದ್ದ ಸುಮಾರು 1400 ಬಂಬುಗಳು 500 ಮೇದರ ಗಳುಗಳು, 10100 ಸಣ್ಣ ಗಳುಗಳು, 1133 ಕಾಡುಮರದ ನಾಟಾಗಳು ಸರಗಳು, ಅನೇಕ ಬಿದಿರು ಚಾಪೆಗಳು ಮತ್ತು ತಟ್ಟಿಗಳು ಬಿದಿರು ತೆರೆಗಳು, ಈಚಲು ಚಾಪೆಗಳು, ಭತ್ತದಹುಲ್ಲು ತೆಂಗಿನಮಟ್ಟೆ ಇತ್ಯಾದಿ ಸಾಮಾನುಗಳು 1918 ನೇ ಇಸ್ವಿ ಡಿಸೆಂಬರು ಮಾಹೆ 15 ಮತ್ತು 16 ನೇ ತಾರೀಖು ಬೆಳಗ್ಗೆ 8½ ಘಂಟೆಗೆ ಸರಿಯಾಗಿ ಎಗ್ಜಿಬಿಷನ್ ಪ್ರಾಕಾರದಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ.

ಮೇಲ್ಕಂಡ ಬಂಬು ಇತ್ಯಾದಿಗಳು ಹೊಸದಾಗಿ ಫಾರೆಸ್ಟು ಇಲಾಖೆಯಿಂದ ಕಡಿಸಿ ತರಿಸಿದುವಾಗಿವೆ. ಬಿದಿರುತಟ್ಟಿ ಮುಂತಾದುವು ಹೊಸದಾಗಿ ಬಂದ ಗಳುಗಳಿಂದ ತಯಾರಾದುವಾಗಿವೆ.

ಭಡಸವಾಲ್'ದಾರರೇ ಕ್ರಯದಾರರೆನ್ನಿಸಿಕೊಳ್ಳುತ್ತಾರೆ. ಆದರೆ ಸೆಕ್ರೆಟರಿಯವರು ಯಾರ ಸವಾಲನ್ನಾದರೂ ತಿರಸ್ಕರಿಸಬಹುದು. ಅಥವಾ ಹರಾಜುಕಾಲದಲ್ಲಿ ಮಾರಾಟವನ್ನು ತಮ್ಮ ಇಷ್ಟಬಂದ ಕಾಲದಲ್ಲಿ ನಿಲ್ಲಿಸಬಹುದು. ಆದಕ್ಕೆ ಕೊಂಡುಕೊಳ್ಳಲಿಕ್ಕೆ ಬಂದಿರತಕ್ಕವರ ಆಕ್ಷೇಪಣೆಯೇನೂ ಗಮನಿಸಲ್ಪಡುವುದಿಲ್ಲ.

ಯಾವುದಾದರೂ ಒಂದು ಗುಡ್ಡೆಯನ್ನು ಹರಾಜಿನಲ್ಲಿ ತೆಗೆದುಕೊಂಡಕೂಡಲೇ ಆ ಗುಡ್ಡೆಯನ್ನು ತೆಗೆದುಕೊಂಡವರು ಹರಾಜುಮೊಬಲಗಿನಲ್ಲಿ ನಾಲ್ಕನೇ ಒಂದುಪಾಲು ಹಣವನ್ನು ಡಿಪಾಜಿಟ್ಟುಕಟ್ಟಿ ಆ ಗುಡ್ಡೆಗೆ ಕಟ್ಟಿರುವ ಚೀಟಿಯಮೇಲೆ ತಮ್ಮ ಹೆಸರು ಮತ್ತು ಅಡ್ರಸ್ಸನ್ನು ಬರೆಯಬೇಕು.

ಹರಾಜಾದ ಇಪ್ಪತುನಾಲ್ಕು ಘಂಟೆಯೊಳಗಾಗಿ ಬಾಕಿ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಕೊಡದೆ ತಪ್ಪಿದಲ್ಲಿ ಡಿಪಾಜಿಟ್ ಹಣದ ಮೇಲಾಗಲಿ ಹರಾಜಿನಲ್ಲಿ ತೆಗೆದುಕೊಂಡ ಪದಾರ್ಥದ ಮೇಲಾಗಲಿ, ಹರಾಜುದಾರರಿಗೆ ಯಾವ ವಿಧವಾದ ಹಕ್ಕೂ ಇರುವುದಿಲ್ಲ.

ಪೂರ್ತಾ ಮೊಬಲಗು ಪಾವತಿಯಾದ ಹೊರ್ತು ಪದಾರ್ಥವನ್ನು ಸಾಗಿಸಲಿಕ್ಕೆ ಹರಾಜುದಾರನಿಗೆ ಯಾವ ವಿಧವಾದ ಹಕ್ಕೂ ಇರುವುದಿಲ್ಲ.

ಎಗ್ಜಿಬಿಷನ್ ಪ್ರಾಕಾರದಿಂದ ಪದಾರ್ಥವನ್ನ ಸಾಗಿಸಿಕೊಂಡು ಹೋದನಂತರ ಹೆಚ್ಚು ಕಮ್ಮಿ ವಿಚಾರದಲ್ಲಿ ಏನು ಆಕ್ಷೇಪಣೆ ಬಂದರೂ ಗಮನಿಸಲ್ಪಡುವುದಿಲ್ಲ.

ಎಂ. ಎನ್. ಬಾಳರಾಜೇಅರಸ್,
ಸೆಕ್ರೆಟರಿ.
ಮೈಸೂರು ದಸರಾ ಎಗ್ಜಿಬಿಷನ್.

ಮೈಸೂರು,
3-12-1918.

ನಂಬರ್ ಜ. 9337—ಪಾ. ಪೊ. 134-18-21, ತಾರೀಖು
23 ನೆಯ ನವಂಬರ್ 1818.

1918 ನೆ ಇಸವಿಯ 1 ನೆ ನಂಬರ್ ಇಂಡಿಯಾ ಸಂರಕ್ಷಣೆ ರೆಗ್ಯುಲೇಷನನ್ನು ಅನುಸರಿಸಿ ಸಾದರಾದ ನಿಬಂಧನೆಗಳಲ್ಲಿ 3 B. ನಿಬಂಧನೆಯ (2) (a) ಮತ್ತು (b) ಉಪನಿಬಂಧನೆಯನ್ನು ಅನುಸರಿಸಿ, ಸಂಸ್ಥಾನದೊಳಗೆ ಕೆಲವು ಆಹಾರ ಸಾಮಗ್ರಿಗಳ ಸಾಗಿಸುವಿಕೆ ಮತ್ತು ಬಿಕರಿಯನ್ನು ಕ್ರಮಪಡಿಸುವದಕ್ಕೋಸ್ಕರ ಕೆಳಗೆ ಹೇಳತಕ್ಕ ನಿಬಂಧನೆಗಳನ್ನು ಸರ್ಕಾರದವರು ಸಾದರ್ಮಾಡಿರುತ್ತಾರೆ.

ಕೆಲವು ಆಹಾರ ಸಾಮಗ್ರಿಗಳ ಸಾಗಿಸುವಿಕೆ ಮತ್ತು ಬಿಕರಿಯನ್ನು ಕ್ರಮಪಡಿಸುವ ನಿಬಂಧನೆಗಳು:—ಅಕ್ಕಿ, ಭತ್ತ, ರಾಗಿ, ಜೋಳ ಮತ್ತು ನವಣೆ.

1. 5 ಪಲ್ಲಗಳು ರಾಗಿ, ಅಕ್ಕಿ, ಜೋಳ ಅಥವಾ ನವಣೆಯನ್ನಾಗಲೀ ಇಲ್ಲವೆ 10 ಪಲ್ಲ ಭತ್ತವನ್ನಾಗಲೀ, ತನ್ನ ಸುಪರ್ದಿನಲ್ಲಿ ಅಥವಾ ಹತೋಟಿಯಲ್ಲಿ ಇಟ್ಟುಕೊಂಡಿರತಕ್ಕ ಲೈಸೆನ್ಸುದಾರನಲ್ಲದ ಪ್ರತಿ ಮನುಷ್ಯನೂ ತನ್ನ ಹತ್ತಿರ ಇರುವ ದಾಸ್ತಾನಿನ ಸರಿಯಾದ ಲೆಖ್ಖವನ್ನೂ, ಆಗೀದಾಗ್ಗೆ ಖರೀದಿ ಮಾಡಿದ ದವಸದ ಲೆಖ್ಖವನ್ನೂ ಕರಾರುವಾಕಾಗಿ ಇಡಬೇಕು. ಡೆಪ್ಯುಟಿ ಅಮಲ್ದಾರರ ಗ್ರೇಡಿಗೆ ಸಮಾನವಾದ ಅಥವಾ ಅದಕ್ಕಿಂತ ಹೆಚ್ಚಾದ ಗ್ರೇಡಿನ ಯಾವ ಅಧಿಕಾರೀ ಆಗಲೀ ಯಾವಾಗ ಬೇಕಾದರೂ ಸದರಿ ಲೆಖ್ಖವನ್ನು [illegible] ಮಾಯಿಷಿ ಮಾಡಲು ಅವಕಾಶವಿರತಕ್ಕದ್ದು. ಪ್ರತಿ ತಿಂಗಳಲ್ಲಿಯೂ [illegible] ಕ್ಕೆ ಮತ್ತು ಹೋಗತಕ್ಕ ದವಸವನ್ನು ತೋರಿಸುವ ಒಂದು ಮಾಹೆವಾರು [illegible] ಮತ್ತು ಪ್ರತಿ ತಿಂಗಳ ಕಡೆಯಲ್ಲಿ ಬಾಕಿ ನಿಲ್ಲುವ ದಾಸ್ತಾನನ್ನೂ,

(i) ಮ್ಯುನಿಸಿಪಾಲಿಟಿ ಇರುವ ಊರುಗಳಲ್ಲಿ ಪ್ರೆಸಿಡೆಂಟ್ ಅಥವಾ ಅವರಿಂದ ಈ ಬಗ್ಗೆ ನಿಯಮಿಸಲ್ಪಟ್ಟ ಇತರ ಉದ್ಯೋಗಸ್ಥರಿಗೆ ಮತ್ತು (2) ಮ್ಯುನಿಸಿಪಾಲಿಟಿ ಇಲ್ಲದ ಕಡೆಗಳಲ್ಲಿ, ಗ್ರಾಮದ ಪಟೇಲನ ಮುಖಾಂತರ ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರರಿಗೆ ಕೊಡತಕ್ಕದ್ದು.

2. ರಾಗಿ, ಅಕ್ಕಿ, ಜೋಳ ಮತ್ತು ನವಣೆಯನ್ನು ಒಂದು ಪಲ್ಲಕ್ಕಿಂತ ಹೆಚ್ಚಾಗಿಯೂ, ಅಥವಾ ಭತ್ತವನ್ನು ಎರಡು ಪಲ್ಲಗಳಿಗಿಂತ ಹೆಚ್ಚಾಗಿಯೂ ಕೆಳಗೆ ಹೇಳತಕ್ಕ ಹುದ್ದೇದಾರರ ಬರವಣಿಗೆ ಮೂಲಕವಾದ ಅಪ್ಪಣೆ ಇಲ್ಲದೆ, ಒಂದು ಗ್ರಾಮ, ತಾಲ್ಲೂಕು ಅಥವಾ ಡಿಸ್ಟ್ರಿಕ್ಟಿನಿಂದ ಇನ್ನೊಂದು ಗ್ರಾಮ, ತಾಲ್ಲೂಕು, ಅಥವಾ ಡಿಸ್ಟ್ರಿಕ್ಟಿಗೆ ಯಾವ ಮನುಷ್ಯನೂ ಸಾಗಿಸಕೂಡದು.

(i) ಒಂದೇ ತಾಲ್ಲೂಕಿನಲ್ಲಿ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ:—ತಾಲ್ಲೂಕು ಯಾ ಸಬ್ ತಾಲ್ಲೂಕಿನ ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರ್ ಅಥವಾ ಈ ಸಂದರ್ಭದಲ್ಲಿ ನಿಯಾಮಕ ಮಾಡಿಕೊಳ್ಳುವದಕ್ಕೆ ಸರಕಾರದವರು ಅವರಿಗೆ ಅಧಿಕಾರ ಕೊಟ್ಟು ಹಾಗೆ ನಿಯಾಮಕ ಮಾಡಿಕೊಂಡ ಇತರ ಹುದ್ದೇದಾರರು, (ii) ಒಂದೇ ಡಿಸ್ಟ್ರಿಕ್ಟಿನಲ್ಲಿ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ:—ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ಅಧಿಕಾರ ಕೊಡಲ್ಪಟ್ಟ ಇತರ ಹುದ್ದೇದಾರರು. (iii) ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ಫುಡ್ ಕಂಟ್ರೋಲರ್ ಅಥವಾ ಅವರಿಂದ ಅಧಿಕಾರ ಕೊಡಲ್ಪಟ್ಟ ಇತರ ಹುದ್ದೇದಾರರು.

3. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದವಸ ಸಾಗಿಸುವುದಕ್ಕೆ ಅಪ್ಪಣೆಯನ್ನು ಕೊಡುವುದಕ್ಕೆ ಕೆಳಗೆ ಹೇಳುವ ವಿಚಾರಗಳು ಗಮನಕ್ಕೆ ತರಲ್ಪಡುವುವು.

(a) 1918 ನೆ ಇಸವಿಯ ಡಿಸೆಂಬರ್ 1 ನೆ ತಾರೀಖಿನಿಂದ ಕನಿಷ್ಠಪಕ್ಷ ಮೂರು ತಿಂಗಳಿಗೆ ಗ್ರಾಮಕ್ಕೆ, ತಾಲ್ಲೂಕಿಗೆ ಅಥವಾ ಡಿಸ್ಟ್ರಿಕ್ಟಿಗೆ ದಾಸ್ತಾನು ಸಾಕಾಗದೆ ಇದ್ದರೆ, ಅಂಥ ಗ್ರಾಮ, ತಾಲ್ಲೂಕು ಅಥವಾ ಡಿಸ್ಟ್ರಿಕ್ಟಿನಿಂದಲಾಗಲೀ ಅಥವಾ (b) ಮೂರು ತಿಂಗಳಿಗೆ ಬೇಕಾಗುವ ಆಹಾರ ಸಾಮುಗ್ರಿಗಳಿಗಿಂತ ಹೆಚ್ಚಾಗಿರುವ ಗ್ರಾಮ, ತಾಲ್ಲೂಕು ಅಥವಾ ಡಿಸ್ಟ್ರಿಕ್ಟಿಗೆ ಆಗಲೀ ಧಾನ್ಯವನ್ನು ಸಾಗಿಸುವುದಕ್ಕೆ ಅಪ್ಪಣೆಯನ್ನು ಕೊಡಕೂಡದು.

4. ಮ್ಯುನಿಸಿಪಾಲಿಟಿ ಇರುವ ಟೌನ್‌ಗಳಲ್ಲಿ ಪ್ರೆಸಿಡೆಂಟರಿಂದಲೂ ಮತ್ತು ಮ್ಯುನಿಸಿಪಾಲಿಟಿಗಳು ಇಲ್ಲದೆ ಇರುವ ಕಡೆಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ಅಧಿಕಾರ ಕೊಡಲ್ಪಟ್ಟ ಇತರ ಹುದ್ದೇದಾರರಿಂದಲೂ ಕೊಡಲ್ಪಟ್ಟ ಲೈಸೆನ್ಸಿನ ಷರತ್ತುಗಳಿಗೆ ಅನುಸಾರವಾಗಿಯಲ್ಲದೆ ಯಾರೂ ರಾಗಿ, ಅಕ್ಕಿ, ಭತ್ತ, ಜೋಳ ಅಥವಾ ನವಣೆಯನ್ನು ಒಟ್ಟಿನಲ್ಲಿಯಾಗಲೀ ಚಿಲ್ಲರೆಯಾಗಲೀ ವ್ಯಾಪಾರ ಮಾಡಕೂಡದು. ಸೂಕ್ತ ತೋರಿದಂತೆ, ಮತ್ತು ಆವಶ್ಯಕತೆ ಬಿದ್ದಂತೆ, ಇಂಥಾ ಲೈಸೆನ್ಸುಗಳನ್ನು ಖಾಸಗಿ ವ್ಯಾಪಾರಿಗಳಿಗೂ, ಅಸಾಮಿಗಳಿಗೂ ಪರಸ್ಪರಸಹಾಯ ಸಂಘಗಳಿಗೂ ಅಥವಾ ಕಮಿಟಿಗಳಿಗೂ ಕೊಡಬಹುದು.

5. ಪಡಾವು ವ್ಯಾಪಾರದ ಲೈಸೆನ್ಸುಗಳು ಈ ಕೆಳಗೆ ಹೇಳುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(i) ಸ್ಥಳಕ್ಕೆ ಮೂರು ತಿಂಗಳಿಗೆ ಬೇಕಾದ ಪ್ರಮಾಣಗಳಿಗಿಂತ ಹೆಚ್ಚಾದ ದಾಸ್ತಾನು ಇರತಕ್ಕ ಸ್ಥಳಗಳಿಂದಲೇ 3 ನೆ ನಿಬಂಧನೆಮೇರೆ ಕೊಡೋಣಾದ ಅಪ್ಪಣೆ ಚೀಟಿಯನ್ನು ಅನುಸರಿಸಿ ಲೈಸೆನ್ಸುದಾರನು ತನ್ನ ಸರಕನ್ನು ತರಿಸಿಕೊಳ್ಳತಕ್ಕದ್ದು. (ii) ಲೈಸೆನ್ಸುದಾರನು ತನ್ನ ಸರಕನ್ನು ದಾಸ್ತಾನಾಗಿ ಕೂಡಿಸಿ ಇಡಕೂಡದು.

ಆದರೆ, ಅದೇ ಸ್ಥಳದಲ್ಲಿರುವ ಅಥವಾ ತನ್ನ ಸರಹದ್ದಿಗೆ ಒಳಪಟ್ಟು ಲೈಸೆನ್ಸು ಕೊಡುವ ಹುದ್ದೇದಾರನಿಂದ ನಿಯಮಿಸಲ್ಪಡುವ ಇನ್ನು ಇತರ ಸ್ಥಳಗಳಲ್ಲಿರುವ ಚಿಲ್ಲರೆ ವ್ಯಾಪಾರಿಗಳಿಗೆ ನ್ಯಾಯವಾದ ಕಾಲದೊಳಗೆ ಆ ದಾಸ್ತಾನನ್ನು ವಿಲೆ ಮಾಡತಕ್ಕದ್ದು. ಒಂದು ತಡವೆಗೆ 25 ಸೇರುಗಳಿಗೆ ಕಡಮೆ ಇಲ್ಲದೆ ಎರಡು ಪಲ್ಲಗಳಿಗೆ ಮೀರದೆ ಅಥವಾ ಲೈಸೆನ್ಸು ಕೊಡುವ ಹುದ್ದೇದಾರನಿಂದ ನಿಯಮಿಸಲ್ಪಡುವ ಪರಿಮಾಣಕ್ಕೆ ಮೀರದೆ, ಲೈಸೆನ್ಸುದಾರನು ತನ್ನ ಚಿಲ್ಲರೆ ಗಿರಾಕಿಗಳಿಗೆ ಮಾರಬಹುದು.

ಸರಕು ಜನರಿಗೆ ಬೇಕಾಗಿರುವಾಗ ಲೈಸೆನ್ಸುದಾರನು ಹೆಚ್ಚು ಲಾಭ ಸಂಪಾದಿಸುವ ಅಥವಾ ಇತರ ಉದ್ದೇಶದಿಂದ ಅದನ್ನು ಹೊರಗೆ ತೆಗೆಯದೆ ಕೂಡಿಸಿಡುವದಾಗಿ ಕಂಡುಬಂದರೆ, ಸರಕಾರದವರು ಆ ದಾಸ್ತಾನನ್ನು ತಾವು ಈ ಬಗ್ಗೆ ನಿಷ್ಕರ್ಷೆ ಮಾಡಿರುವ ದರಗಳ ಮೇರೆ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ಚಿಲ್ಲರೆ ವ್ಯಾಪಾರಿಗಳಿಗೆ ಮಾರಬಹುದು. ಅಥವಾ ಅವರು ಯುಕ್ತವೆಂದು ತಿಳಿಯುವ ದರದಮೇರೆ ಇತರ ರೀತಿಯಲ್ಲಿ ಸರಕನ್ನು ವಿಲೇ ಮಾಡಬಹುದು.

(iii) ಲೈಸೆನ್ಸುದಾರನು ತಾನು ಕೊಂಡ ಮತ್ತು ಬಿಕರಿ ಮಾಡಿದ ಸರಕುಗಳ ಕರಾರುವಾಕ್ ಲೆಖ್ಖವನ್ನು ಇಡತಕ್ಕದ್ದು; ಮತ್ತು ಡೆಪ್ಯುಟಿ ಕಮಿಷನರು ಅಥವಾ ಮ್ಯುನಿಸಿಪಲ್ ಪ್ರೆಸಿಡೆಂಟರು ನಿಬಂಧಿಸುವಂಥ ನಮೂನೆಯಲ್ಲಿ ಒಂದು ಮಾಹೆವಾರಿ ಲೆಖ್ಖವನ್ನು ಕಳುಹಿಸತಕ್ಕದ್ದು. ಡೆಪ್ಯುಟಿ ಕಮಿಷನರು ಅಥವಾ ಪ್ರೆಸಿಡೆಂಟರು ಅಥವಾ ಅವರಿಂದ ಅಧಿಕಾರ ಕೊಡಲ್ಪಟ್ಟ ಇತರ ಹುದ್ದೇದಾರರು ಈ ಲೆಖ್ಖವನ್ನು ಪರೀಕ್ಷಿಸುವುದಕ್ಕೆ ಅವಕಾಶವಿರತಕ್ಕದ್ದು.

6. ಹತೋಟಿಗೆ ತರಲ್ಪಟ್ಟ ಆಹಾರ ಧಾನ್ಯಗಳ ಚಿಲ್ಲರೆ ಬಿಕರಿಗೆ ಕೊಡುವ ಲೈಸೆನ್ಸುಗಳು ಕೆಳಗೆ ಹೇಳುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(i) ಧಾನ್ಯವನ್ನು ಮಾರತಕ್ಕ ಪರಮಾವಧಿ ಹೆಚ್ಚು ದರವನ್ನು ತೋರಿಸುವ ಒಂದು ನೋಟೀಸು ಬೋರ್ಡನ್ನು ಅಂಗಡಿಯ ಮುಂಭಾಗದಲ್ಲಿ ಇಡಬೇಕು. (ii) ಲೈಸೆನ್ಸಿನಲ್ಲಿ ನಮೂದಾಗುವ ಪ್ರದೇಶಗಳಲ್ಲಿ ಹಂಗಾಮಿಯಾಗಿ ಅಥವಾ ಖಾಯಂ ಆಗಿ ವಾಸಿಸುವವರಿಗೆ ನಿಜವಾಗಿಯೂ ಅವರ ಉಪಯೋಗಕ್ಕೆ ಬೇಕಾದಷ್ಟನ್ನು ಮಾರತಕ್ಕ ಮತ್ತು 5 ರೂಪಾಯಿಗೆ ದೊರಕುವಷ್ಟರ ಪ್ರಮಾಣಕ್ಕೆ ಹೆಚ್ಚಾಗಿ ಅಕ್ಕಿ ಅಥವಾ ಭತ್ತವನ್ನಾಗಲೀ 3 ರೂಪಾಯಿಗೆ ದೊರಕುವಷ್ಟರ ಪ್ರಮಾಣಕ್ಕೆ ಹೆಚ್ಚಾಗಿ ರಾಗಿ, ಜೋಳ, ನವಣೆಯನ್ನಾಗಲೀ ಯಾವ ಮನುಷ್ಯನಿಗೂ ಒಂದೇ ತಡವೆ ಕೊಡಕೂಡದು. ಈ ನಿಬಂಧನೆಯ ಉದ್ದೇಶಕ್ಕೆ ನಿಜವಾದ ಪ್ರಯಾಣಸ್ಥರನ್ನು ಹಂಗಾಮಿ ವಾಸಸ್ಥರಂತೆ ಎಣಿಸತಕ್ಕದ್ದು. (iii) ದಿನವಹಿ ಬರತಕ್ಕ ಜಿನಸಿಗಳನ್ನೂ ಮಾರಿದ ಜಿನಸಿಗಳನ್ನೂ ಪ್ರತಿದಿನದ ಕೊನೆಯಲ್ಲಿರುವ ದಾಸ್ತಾನನ್ನೂ ತೋರಿಸಿ ಒಂದು ಲೆಖ್ಖವನ್ನು ಇಡತಕ್ಕದ್ದು; ಮ್ಯುನಿಸಿಪಾಲಿಟಿಗಳು ಇರತಕ್ಕ ಊರುಗಳಲ್ಲಿ ಪ್ರೆಸಿಡೆಂಟರು ಅಥವಾ ಅವರಿಂದ ನಿಯಮಿತರಾದ ಇತರ ಹುದ್ದೇದಾರರು, ಮ್ಯುನಿಸಿಪಾಲಿಟಿಗಳು ಇಲ್ಲದ ಕಡೆಗಳಲ್ಲಿ ಡೆಪ್ಯುಟಿಕಮಿಷನರು ಅಥವಾ ಅಮಲ್ದಾರರು ಅಥವಾ ಅವರಿಂದ ನಿಯಮಿತರಾದ ಇತರ ಹುದ್ದೇದಾರರು ಯಾವಾಗ ಬೇಕಾದರೂ ಈ ಲೆಖ್ಖವನ್ನು ಪರೀಕ್ಷಿಸುವುದಕ್ಕೆ ಅವಕಾಶವಿರತಕ್ಕದ್ದು. (iv) ಯಾವನಾದರೂ ಲೈಸೆನ್ಸುದಾರನು ಜನರಿಗೆ ಧಾರಾಳವಾಗಿ ಬಿಕರಿಮಾಡದೆ, ದಾಸ್ತಾನನ್ನು ಹಾಗೆಯೇ ಇಟ್ಟುಕೊಂಡರೆ, ಸರಕಾರದವರು ಆ ದಾಸ್ತಾನನ್ನು ಬಲಾತ್ಕಾರದಿಂದ ವಶಪಡಿಸಿಕೊಂಡು ಮೇಲ್ಕಂಡ 6 (ii) ನೆ ನಿಬಂಧನೆಯಲ್ಲಿ ಹೇಳಿರುವ ಮೇರೆ ದಾಸ್ತಾನನ್ನು ವಿನಿಯೋಗಿಸುವರು.

7. ಸಂತೆಗಳಲ್ಲಿನ ಚಿಲ್ಲರೆ ಬಿಕರಿಯ ಲೈಸೆನ್ಸುಗಳು (6) ನೆ ನಿಬಂಧನೆಯಲ್ಲಿ ಹೇಳಿರುವ ಷರತ್ತುಗಳಿಗೆ ತಕ್ಕ ಬದಲಾವಣೆಗಳೊಡನೆ ಒಳಪಟ್ಟಿರುತ್ತವೆ.

ಸರ್ಕಾರದವರು ದಾಸ್ತಾನುಗಳನ್ನು ತಾವು ತೆಗೆದುಕೊಳ್ಳುವದಕ್ಕಾಗಿ ಈ ಕೆಳಗೆ ಕಂಡ ನಮೂನೆಯಲ್ಲಿ ಕಂಡಂತೆ ಧಾನ್ಯಗಳಿಗೆ ಬೆಲೆಯನ್ನು ವಿಧಿಸಿರುವುದಲ್ಲದೆ ಖಾಸಗಿ ಜನರು ಪಡಾವು ಮತ್ತು ಚಿಲ್ಲರೆಯಾಗಿ ಬಿಕರಿ ಮಾಡುವುದಕ್ಕಾಗಿ ಬೆಲೆಗಳನ್ನು ವಿಧಿಸಿರುತ್ತಾರೆ. ಆದರೆ ಅಂಥ ಧಾನ್ಯಗಳು ಸಂಸ್ಥಾನದ ಆಯಾ ಡಿಸ್ಟ್ರಿಕ್ಟುಗಳಲ್ಲೇ ಬೆಳೆದುವಾಗಿರಬೇಕು. ಈ ಇಸ್ತಿಹಾರ್ ನಾಮೆಯಿಂದ ಹಿಂದೆ ಅದೇ ವಿಷಯದಲ್ಲಿ ಘಾಯಿಷಾಗಿರುವ ಎಲ್ಲಾ ಇಸ್ತಿಹಾರ್ ನಾಮೆಗಳೂ ರದ್ದಾಗಿರುತ್ತವೆ.

ಸ್ಥಳಗಳು.	— ಅಕ್ಕಿ — ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳುವ ಧಾನ್ಯದ ಬೆಲೆ.	ಪಡಾವು ಬೆಲೆ.	ಪರಮಾವಧಿ ಚಿಲ್ಲರೆಬೆಲೆ. ರೂ. ೧ ಕ್ಕೆ	— ರಾಗಿ — ಬಲಾತ್ಕರಿಸಿ ತೆಗೆಯುವ ಧಾನ್ಯದ ಬೆಲೆ.	ಪಡಾವು ಬೆಲೆ.	ಚಿಲ್ಲರೆ ಪರಮಾವಧಿ ಬೆಲೆ. ರೂ. ೧ ಕ್ಕೆ	— ಜೋಳ — ಸರ್ಕಾರದವರು ತೆಗೆದ ಧಾನ್ಯಕ್ಕೆ ಕೊಡುವ ಬೆಲೆ.	ಪಡಾವು ಬೆಲೆ.	ಚಿಲ್ಲರೆ ಬೆಲೆ ರೂ. ೧ ಕ್ಕೆ
	ರಕಂ.	ರಕಂ.	ರಕಂ.						
	೧ — ೨ — ೩	೧ — ೨ — ೩	೧ — ೨ — ೩						
ಬೆಂಗಳೂರು ಸಿಟಿ ,, ಡಿಸ್ಟ್ರಿಕ್ಟ್	೨೩—೧೯—೧೬	೨೪—೨೦—೧೮	೩||—೪||—೫	೫೦	೫೫	೧೧ ಸೇರು	....	....	....
ಕೋಲಾರ ,,	೨೪—೨೦—೧೯	೨೫—೨೨—೨೦	೩||—೪|—೪||	೫೦	೫೫	ಚಿನ್ನದಗಣಿ ೧೦ ಸೇರು ಇತರ ಭಾಗ ೧೧	....	....	....
ತುಮಕೂರು ,,	..—೨೦—೧೯	..—೨೨—೨೦	..—೪|—೪||	೫೦	೫೫	೧೧ ಸೇರು	....	....	....
ಮೈಸೂರು ಸಿಟಿ ,, ಡಿಸ್ಟ್ರಿಕ್ಟ್	೧೯—೧೬—೧೫	೨೦—೧೮—೧೬	೪|—೫—೫||	೫೫	೬೦	ಸಿಟಿ ೧೦ ಸೇರು ೬ ತಾಲ್ಲೂಕುಗಳು ೯ ಸೇರು ಉಳಿದಕಡೆ ೧೦ ಸೇರು	೮ ರೂ.	೧೦ ರೂ.	೮|| ಸೇರು
ಹಾಸನ ,,	೨೦—೧೬—೧೪	೨೨—೧೬—೧೫	೪|—೫|—೬	೪೮	೫೦	ಮಂಜರಾಬಾದು ೧೧ಸೇ|| ಉಳಿದಕಡೆ ೧೨	....	....	....
ಶಿವಮೊಗ್ಗ ,,	೨೦—೧೬—೧೩	೨೦—೧೬—೧೪	೪||—೫|—೬||	೫೮	೬೫	೮-೬-೯ ಸೇ|| ಮೇರೆಗೆ ಬೇರೆಬೇರೆ ತಾ||	೮	೧೦	೮||
ಚಿತ್ರದುರ್ಗ ,,	..—೧೯—೧೬	..—೨೦—೧೮	..—೪||—೫	೫೦	೫೫	೧೦-೧೧ ಸೇರು	೬	೮||	೧೦
ಕಡೂರು ,,	..—೧೬—೧೪	..—೧೬—೧೫	..—೫||—೬	೫೦	೫೫	೧೧-೧೦-೯ ಸೇರು	೬||	೯	೯

ಟಿಪ್ಪಣಿ—೧. ಬತ್ತದ ಬೆಲೆ ಅಕ್ಕಿಗೆ ಗೊತ್ತಾದ ಬೆಲೆಯಲ್ಲಿ ಶೇಕಡಾ ೪೫ ರಷ್ಟು.

೨. ಪಡಾವು ಬೆಲೆಯು—ಗಾಡಿಗಟ್ಟಲೆ ರಾಗಿ ವ್ಯಾಪಾರಕ್ಕೂ ೫ ಪಲ್ಲಾಕ್ಕೆ ಕಡಮೆಯಿಲ್ಲದ ಅಕ್ಕಿ ಜೋಳಗಳ ವ್ಯಾಪಾರಕ್ಕೂ ೧೦ ಪಲ್ಲಾಕ್ಕೆ ಕಡಮೆಯಿಲ್ಲದ ಬತ್ತದ ವ್ಯಾಪಾರಕ್ಕೂ ಅನ್ವಯಿಸುತ್ತದೆ.

೩. ಮುಂದಿನ ಸುಗ್ಗಿಯ ಬತ್ತದ ಅಕ್ಕಿಯ ಬೆಲೆಯು ಮೇಲೆ ತಿಳಿಸಿರುವ ಬೆಲೆಯಲ್ಲಿ ಶೇಕಡಾ ೨೦ ರಷ್ಟು ಕಡಿಮೆಯಾಗಿರಬೇಕು.

೪. ಬಲಾತ್ಕಾರದಿಂದ ವಶಪಡಿಸಿಕೊಳ್ಳುವ ಧಾನ್ಯವನ್ನೆಲ್ಲಾ ಪ್ರತಿ ಡಿಸ್ಟ್ರಿಕ್ಟು ಕಸಬೆಗಳಿಗೆ ತಂದು ಒಪ್ಪಿಸಬೇಕು (ಬೆಲೆಯಲ್ಲಿಯೇ ಬಾಡಿಗೆಯೂ ಸೇರಿದೆ) ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮಾತ್ರ ದವಸವನ್ನು ದಾವಣಗೆರೆಗೆ ತಂದು ಒಪ್ಪಿಸಬೇಕು. ಕಡೂರು ಡಿಸ್ಟ್ರಿಕ್ಟಿನಲ್ಲಿ ರಾಗಿಯನ್ನು ಕಡೂರಿಗೆ ತಂದು ಒಪ್ಪಿಸಬೇಕು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.
ಸಟೀಕ ಶತಕತ್ರಯ ೧—೦—೦
ಸಟೀಕ ವೀರಶೈವ ವಿವಾಹವಿಧಿಃ ೦—೮—೦
ಪರವಾದಿ ಗಜಾಂಕುಶಶತಾರಾ ೦—೮—೦
ಶಿವಪೂಜಾವಿಧಿಃ ೦—೧೦—೦
ಚಾರುಶೀಲಚರಿತ್ರೆ ೦—೩—೦
ಹರಿದಾಸಿ ೦—೪—೦
ವ್ರತಪಂಚಕ ೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ) ೦—೨—೦
ಗುರುಶಂಕರೇಶ್ವರ ಶತಕಂ ೦—೧—೦
ಅಂಚೆಯಖರ್ಚು ಬೇರೆ.

ಇಂಗ್ಲೀಷ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ
ಸುಖಾನಂದ
(ಎಂಬ ಮರ್ಮದ ಚೀಲವು).

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕುಳು, ಭಗೇಂದ್ರಿಯ ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿ ಕಳುಹಿಸಲ್ಪಡುವದು.
ಕ್ರಯ 1 ಕ್ಕೆ 1—4—0 ರೂಪಾಯಿ.
ವಿಳಾಸ:—ರಾಸ್ ವಾಟ್ ಅಂಡ್ ಕೊ,
50 3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಪರತ.) 3
ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.
ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.
ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.
15 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

೧೯೧೮ ನೆಯ ಇಸವಿ ಡಿಸೆಂಬರ್ ತಾ|| ೮ ರಿಂದ ೧೯೧೮ ನೆಯ ಡಿಸೆಂಬರ್ ತಾ|| ೧೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಮಾರ್ಗಶಿರ ಶು|| ಪಂಚಮಿಯಿಂದ ಮಾರ್ಗಶಿರ ಶು|| ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಮಾಸ
8	¹ಭಾನು	ಪಂಚ	36-21	ಶ್ರವಣ	37-33	23
9	²ಸೋಮ	ಷಷ್ಠಿ	33-7	ಧನಿಷ್ಠ	35-55	24
10	ಮಂಗಳ	ಸಪ್ತಮಿ	29-1	ಶತಭಿಷ	33-23	25
11	ಬುಧ	ಅಷ್ಟಮಿ	24-9	ಪೂಭಾ	30-9	26
12	ಗುರು	ನವಮಿ	18-43	ಉಭಾ	26-23	27
13	ಶುಕ್ರ	ದಶಮಿ	12-56	ರೇವತಿ	22-14	28
14	³ಶನಿ	ಏಕಾ	7-0	ಅಶ್ವಿನಿ	18-3	29

(1) ನಾಗರಪಂಚಮಿ. (2) ಚಂಪಾಷಷ್ಠಿ, ಸುಬ್ರಹ್ಮಣ್ಯಷಷ್ಠಿ ರಥ. (3) ಸರ್ವತ್ರ ಏಕಾದಶೀ, ಶ್ರೀರಂಗದಲ್ಲಿ ವೈಕುಂಠೋತ್ಸವ ಪ್ರಾರಂಭ.

ಮೈಸೂರ್: ವೈ. ತಿರುವೆಂಗಳಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುದಿತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ಸಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ರಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂ ವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತ್ರಿಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಡಿಶಂಬರ್ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೫೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ್ಕಂದಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಪರತ.) 4
ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.
ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.
ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.
ಸಟೀಕ ಶತಕತ್ರಯ ೧—೦—೦
ಸಟೀಕ ವೀರಶೈವ ವಿವಾಹವಿಧಿಃ ೦—೮—೦
ಪರವಾದಿ ಗಜಾಂಕುಶಶತಾರಾ ೦—೮—೦
ಶಿವಪೂಜಾವಿಧಿಃ ೦—೧೦—೦
ಚಾರುಶೀಲಚರಿತ್ರೆ ೦—೩—೦
ಹರಿದಾಸಿ ೦—೪—೦
ವ್ರತಪಂಚಕ ೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ) ೦—೨—೦
ಗುರುಶಂಕರೇಶ್ವರ ಶತಕಂ ೦—೧—೦
ಅಂಚೆಯಖರ್ಚು ಬೇರೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.
ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 2
ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮರಿಯಸ್ಸಿಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ [illegible] ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರ್ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.
16 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.
ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ
ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ
ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೨-೮-೧೯೧೩ ನೇ ಇಸ್ವಿಯಿಂದ ತಾ|| ೧೮-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ 'ಅಕ್ಟೋಬರ್' ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಉದರರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚಿಜಡ್ಡು, ಗುದ್ದವ್ಯನಬೇನೆ, ಹುರಕುಳಜ್ಜ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅಲವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚ ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಟಿ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
31 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಯುದ್ಧದ ಫೋಟೋಗಳು. 1

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯಿತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಕಂವಾರಿ 60 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ.
ವಿಳಾಸ—ಮಹಲಾಟಿ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಡಿಶಂಬರ್ ತಾ|| ೭ ರಲ್ಲಿ

ಶ್ರೀಮತ್ ಮಹಾರಾಜಾ ಸಾಹೇಬ್ಬಹಾದುರವರು ತಮ್ಮ ಪ್ರಜೆಗಳಿಗೆ ದಯಪಾಲಿಸಿದ ನಿರೂಪ.

ಸಮಸ್ತ ಜನಗಳೂ ಆನಂದಿಸುವ ಈ ದಿವಸ ಮೈಸೂರು ಸೀಮೆಯಲ್ಲಿನ ನಮ್ಮ ಪ್ರೀತಿಪಾತ್ರರಾದ ಪ್ರಜೆಗಳಿಗೆ ಒಂದು ವಿಶೇಷ ವಾರ್ತೆಯನ್ನು ತಿಳಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಸೈನ್ಯಬಲವೇ ಪ್ರಧಾನವಾದ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿ ಯೂರೋಪ್ ಖಂಡದ ದೇಶಗಳ ಸ್ವಾತಂತ್ರ್ಯವನ್ನು ನಿರ್ಮೂಲನಮಾಡುವುದರಲ್ಲಿಯೇ ಬದ್ಧಸಂಕಲ್ಪರಾಗಿದ್ದ ಬಲಿಷ್ಠರಾದ ಮತ್ತು ಕ್ರೂರರಾದ ಶತ್ರುಗಳ ಮೇಲೆ, ಗ್ರೇಟ್ ಬ್ರಿಟನ್ ಮತ್ತು ಅವರ ಮಿತ್ರಮಂಡಲಿಯವರು ಈಶ್ವರಾನುಗ್ರಹದಿಂದ ಪಡೆದ ಸಂಪೂರ್ಣ ಮತ್ತು ಯಶಸ್ಕರವಾದ ವಿಜಯಕ್ಕೋಸ್ಕರ ಈ ದಿವಸ ನಾವು ಮಹೋತ್ಸವವನ್ನು ನಡೆಸುವವರಾಗಿದ್ದೇವೆ. ಪ್ರಪಂಚದ ಸ್ವಾತಂತ್ರ್ಯಕ್ಕೂ ನ್ಯಾಯಪರತೆಗೂ ಜಯಪ್ರದವಾದುದಕ್ಕಾಗಿ ಅಖಿಲ ಬ್ರಿಟಿಷ್ ಸಾಮ್ರಾಜ್ಯವೂ ಅನುಭವಿಸುತ್ತಿರುವ ಆನಂದದಲ್ಲಿ ನೀವೂ ಭಾಗಿಗಳಾಗಬೇಕೆಂದು ಅಪೇಕ್ಷಿಸುತ್ತೇವೆ.

ಈ ಯುದ್ಧವು ಪ್ರಾರಂಭವಾದ ಲಾಗಾಯಿತು ಇದುವರೆಗೂ ಅತಿಶಯವಾದ ಧೈರ್ಯವನ್ನೂ ಅನುತಾಪವನ್ನೂ ದೇಶಾಭಿಮಾನವನ್ನೂ ತಮ್ಮ ಪ್ರಜೆಗಳಿಗೆಲ್ಲಾ ಉದಾಹರಣೆಯಾಗಿ ತೋರ್ಪಡಿಸಿರುವ ಘನ ಮಹಿಮರಾದ ಸಾರ್ವಭೌಮರನ್ನೂ ಯಶಸ್ವಿನಿಯರಾದ ಚಕ್ರವರ್ತಿನಿಯವರನ್ನೂ ನಾವೆಲ್ಲರೂ ಈ ದಿವಸ ಮುಖ್ಯವಾಗಿ ಸ್ಮರಿಸತಕ್ಕದ್ದಾಗಿರುತ್ತದೆ.

ದಾರುಣವಾದ ರೋಗದ ಹಾವಳಿಯಿಂದ ನಮ್ಮ ಪ್ರಜೆಗಳು ವ್ಯಸನಪಡುತ್ತಿರುವ ಈ ಸಮಯದಲ್ಲಿ ಅವರು, ಯುದ್ಧದ ದೆಸೆಯಿಂದುಂಟಾದ ಬಂಧುವಿಯೋಗಕ್ಕಾಗಿ ದುಃಖಿಸುತ್ತಿರುವ ಸಾವಿರಾರುಮಂದಿ ತಾಯಿತಂದೆಗಳ ಮತ್ತು ಪತ್ನಿಯರ, ಮತ್ತು ಮಕ್ಕಳ ವಿಷಯದಲ್ಲಿ ಮನಃಪೂರ್ವಕವಾದ ಅನುತಾಪವನ್ನು ತೋರಿಸುವುದು ಯುಕ್ತವಾಗಿರುತ್ತದೆ. ಯುದ್ಧದಲ್ಲಿ ಹತರಾದ ತಮ್ಮ ವೀರಬಂಧುಗಳು ತಮ್ಮ ದೇಶಕ್ಕಾಗಿ ಪ್ರಾಣವನ್ನು ಒಪ್ಪಿಸಿದುದು ವ್ಯರ್ಥವಾಗದೆ ಅವರ ಕೀರ್ತಿಯು ಆಚಂದ್ರಾರ್ಕವಾಗಿ ನಿಲ್ಲುವುದೆಂಬ ಭಾವನೆಯಿಂದಲೇ ತಮ್ಮ ದುಃಖೋಪಶಾಂತಿಯನ್ನು ಪಡೆಯಲೆಂದು ನಾವು ಪ್ರಾರ್ಥಿಸುವೆವು.

ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ನಾವಿಕರೂ ಯೋಧರೂ ಯುದ್ಧಪ್ರಾರಂಭವಾದ ಲಾಗಾಯಿತು ತೋರ್ಪಡಿಸಿದ ಶೌರ್ಯವನ್ನೂ ಕಷ್ಟಸಹನೆಯನ್ನೂ ನಾವು ಯಾವಾಗಲೂ ಮೆಚ್ಚುಗೆಯಿಂದಲೂ ಕೃತಜ್ಞತೆಯಿಂದಲೂ ಜ್ಞಾಪಕದಲ್ಲಿಡತಕ್ಕದ್ದಾಗಿರುತ್ತದೆಯಲ್ಲದೆ, ಇಂಡಿಯಾ ದೇಶದವರು ಸ್ವಲ್ಪ ಹೆಚ್ಚುಕಡಿಮೆ ಪ್ರತಿಯೊಂದು ಯುದ್ಧಮುಖದಲ್ಲಿಯೂ ನಡೆದ ಮಹತ್ತರವಾದ ಹೋರಾಟದಲ್ಲಿ ಉನ್ನತ ಕಾರ್ಯಶಕ್ತಿಯನ್ನು ತೋರ್ಪಡಿಸಿರುವುದನ್ನೂ ಈ ದೇಶದಿಂದ ಸಾವಿರಾರು ಮಂದಿ ಸೈನಿಕರು ಗ್ರೇಟ್ ಬ್ರಿಟನ್ ಮತ್ತು ಅವರ ಮಿತ್ರಮಂಡಲಿಯವರ ಸೈನಿಕರ ಜತೆಗೆ ಸಹಯೋಧರಾಗಿ ಭ್ರಾತೃಭಾವದಿಂದ ಹೋರಾಡಿ ಮಡಿಯುವದಕ್ಕೋಸ್ಕರ ಹೋಗಿರುವುದನ್ನೂ ನೋಡಿ ನಾವು ವಿಶೇಷ ಗರ್ವಪಡಬಹುದಾಗಿರುತ್ತದೆ. ನಮ್ಮ ಮೈಸೂರು ಸಂಸ್ಥಾನದ ಸೈನ್ಯದವರು ಮಾಡಿದ ಕಾರ್ಯಭಾಗವು ಎಷ್ಟೇ ಅಲ್ಪವಾಗಿದ್ದರೂ, ಅವರು ಪರಾಕ್ರಮದಿಂದಲೂ ಖ್ಯಾತಿಯಿಂದಲೂ ನಡೆದುಕೊಂಡಿರುವುದನ್ನೂ ಮತ್ತು ಇತರ ಯಾವ ಇಂಡಿಯಾ ಸಂಸ್ಥಾನಕ್ಕಿಂತಲೂ ಅತಿಶಯವಾಗಿ ನಮ್ಮ ಸಂಸ್ಥಾನಕ್ಕೂ ಬ್ರಿಟಿಷ್ ಸರ್ಕಾರಕ್ಕೂ ಈಗ ಒಂದು ಶತಮಾನಕ್ಕಿಂತ ಹೆಚ್ಚಾದ ಕಾಲದಿಂದಲೂ ನೆಲೆಗೊಂಡಿರುವ ಪ್ರೀತಿ ಮತ್ತು ಕೃತಜ್ಞತಾ ಸ್ನೇಹಬಂಧವನ್ನು ಇನ್ನೂ ಬಲಪಡಿಸುವಂತೆ ಸಹಾಯ ಮಾಡಿರುವುದನ್ನೂ ಆಲೋಚಿಸುವುದು ನಮಗೆ ಕೇವಲ ಸಂತೋಷಕರವಾಗಿರುತ್ತದೆ.

ಈ ದಿವಸದ ಮಹೋತ್ಸವಕ್ಕೆ ಕಾರಣವಾದ ಯುದ್ಧವಿರಾಮವು ಮುಂದೆ ಪ್ರಪಂಚದಲ್ಲೆಲ್ಲಾ ನ್ಯಾಯಸಮ್ಮತವಾದ ಮತ್ತು ಚಿರಸ್ಥಾಯಿಯಾದ ಸಮಾಧಾನಕ್ಕೂ ಅಭ್ಯುದಯಕ್ಕೂ ಸೌಖ್ಯಕ್ಕೂ ಸೂಚಕವಾಗಿರಲೆಂಬುದೇ ನಮ್ಮೆಲ್ಲರ ಮನಃಪೂರ್ವಕವಾದ ಪ್ರಾರ್ಥನೆಯಾಗಿದೆ.

ಕೃಷ್ಣರಾಜ ಒಡೆಯರ್.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಡಿಸೆಂಬರ್ ತಾ|| ೧೫ ನೆಯ ಭಾನುವಾರ.

ಸಂಸ್ಥಾನದ ಮಂತ್ರಿಪದವಿ.

ಸಂಸ್ಥಾನದ ಮಂತ್ರಿತ್ವಸಂಬಂಧವಾಗಿಯೂ, ಸರ್ ಎಂ. ವಿಶ್ವೇಶ್ವರಯ್ಯನವರ ಸಂಬಂಧವಾಗಿಯೂ, ಕೌನ್ಸಿಲಿನ ಸಂಬಂಧವಾಗಿಯೂ ೧-೨ ವಾರಗಳಿಂದ ನಾನಾವಾರ್ತೆಗಳು ಸಂಸ್ಥಾನದ ಒಳಗೂ ಹೊರಗೂ ಪ್ರಬಲವಾಗಿದ್ದು ನಿಜಸ್ಥಿತಿಯು ಗೊತ್ತಾಗದೆ ಜನಗಳು ಸಂಶಯಪಡುತ್ತಿದ್ದರು. ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜ ಸರ್ಕಾರದವರು ದಿವಾನ್ ಸರ್ ವಿಶ್ವೇಶ್ವರಯ್ಯನವರ ರುಜುವಿನಿಂದಲೇ ಒಂದು ಗೆಜೆಟ್ ವಿಶೇಷ ಪತ್ರಿಕೆಯನ್ನು ಪ್ರಕಟಿಸಿರುವುದು ಸಂಶಯನಿವಾರಣೆಗೆ ತುಂಬಾ ಸಹಾಯಕವಾಯಿತು. ಅದರಲ್ಲಿ—ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರು ಡಿಶಂಬರ್ ತಾ|| ೧೦ ರಿಂದ ೬ ತಿಂಗಳ ರಜಾವನ್ನು ಪಡೆದುಕೊಂಡಿರುವರೆಂತಲೂ, ಆ ಕಾಲದಲ್ಲಿ ಅಥವಾ ಮತ್ತೊಂದಪ್ಪಣೆ ಕೊಡುವವರೆಗೂ ಕೌನ್ಸಿಲಿನ ೧ ನೆ ಸಭಿಕರಾದ ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್ ಸಿ. ಎಸ್. ಐ. ರವರು ಆಕ್ಟಿಂಗ್ ದಿವಾನರಾಗಿಯೂ, ಕೌನ್ಸಿಲಿನ ಪ್ರೆಸಿಡೆಂಟರಾಗಿಯೂ ಏರ್ಪಡಿಸಲ್ಪಟ್ಟಿರುವರೆಂತಲೂ, ಆ ಕಾಂತರಾಜ ಅರಸಿನವರು ಅಸ್ವಸ್ಥರಾಗಿರುವ ಪ್ರಯುಕ್ತ ೧ ತಿಂಗಳ ರಜಾವು ಅವರಿಗೆ ಕೊಡಲ್ಪಟ್ಟಿರುವುದೆಂತಲೂ, ಆ ೧ ತಿಂಗಳ ಕಾಲದವರೆಗೆ ಅಥವಾ ಮತ್ತೊಂದಪ್ಪಣೆ ಕೊಡುವವರೆಗೆ ಕೌನ್ಸಿಲಿನ ೨ ನೆ ಸಭಿಕರಾದ ಮ|| ಎ. ಆರ್. ಬಾನರ್ಜಿ ಸಿ.ಐ.ಇ. ಯವರು ಆಕ್ಟಿಂಗಾಗಿ ಕೌನ್ಸಿಲಿನ ೧ ನೆ ಮೆಂಬರಾಗಿರುವುದರ ಜತೆಗೆ ದಿವಾನಗಿರಿಯನ್ನೂ ಕೌನ್ಸಿಲ್ ಪ್ರೆಸಿಡೆಂಟ್ ಗಿರಿಯನ್ನೂ ಆಕ್ಟಿಂಗಾಗಿ ವಹಿಸಿರಲು ಅಪ್ಪಣೆಮಾಡಲ್ಪಟ್ಟಿರುವುದೆಂತಲೂ, ಆ ಕಾಲದಲ್ಲಿ ಕೌನ್ಸಿಲಿನ ಹೆಚ್ಚುಗೆಯ ಸಭಿಕರಾದ ಮ|| ಪಿ. ಆರ್. ರಾಘವೇಂದ್ರರಾವ್ ಬಿ. ಎ. ಬಿ. ಎಲ್. ರವರು ಕೌನ್ಸಿಲಿನ ಆಕ್ಟಿಂಗ್ ೨ ನೆ ಸಭಿಕರಾಗಿ ಏರ್ಪಡಿಸಲ್ಪಟ್ಟಿರುವರೆಂತಲೂ ಹೇಳಲ್ಪಟ್ಟಿದೆ. ಈ ಪ್ರಕಟನದಿಂದ ನಿಜವಾಗಿರುವ ಸಂಗತಿಗಳೆಲ್ಲವೂ ಹೊರಪಟ್ಟಂತಾದುವು. ಇನ್ನು ವಿಧವಿಧಗಳಾದ ವ್ಯಾಖ್ಯಾನಗಳಿಗೆ ಅವಕಾಶವೇ ಉಳಿಯಲಿಲ್ಲ.

ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನಗಿರಿಯನ್ನು ಮ|| ಎ. ಆರ್. ಬಾನರ್ಜಿಯವರಿಗೆ ವಹಿಸಿಕೊಟ್ಟು ವಿಶ್ರಾಂತರಾಗಿರುವರು. ತಾವು ಕೆಲಸವನ್ನು ಬಿಡುವುದಕ್ಕೆ ಮುಂಚೆ ಮ|| ವಿಶ್ವೇಶ್ವರಯ್ಯನವರು ಗೌರ್ನಮೆಂಟಿನ ಸೆಕ್ರೆಟರಿಗಳನ್ನೂ ಸೆಕ್ರೆಟರಿಯಟ್ಟಿನ ಇತರೋದ್ಯೋಗಿಗಳನ್ನೂ ಬರಮಾಡಿಕೊಂಡು ಅವರನ್ನು ಕುರಿತು ದೀರ್ಘವಾದ ಒಂದು ಉಪನ್ಯಾಸ ಮಾಡಿದರೆಂದು ಬೆಂಗಳೂರು ಡೇಲಿಪೋಸ್ಟ್ ಪತ್ರಿಕಾಕರ್ತರು ಹೇಳಿ, ಅದನ್ನು ಪ್ರಕಟಿಸಿರುವರು. ಅದನ್ನು ನೋಡುವಲ್ಲಿ ಇವರು ರಜಾದಮೇಲೆ ಹೋಗುವುದಕ್ಕಾಗಿ ಕಳೆದ ಏಪ್ರಿಲ್ ತಿಂಗಳಲ್ಲೇ ಅಪೇಕ್ಷಿಸಿದ್ದಂತೆಯೂ, ಅದನ್ನು ಶ್ರೀಮನ್ಮಹಾರಾಜರವರು ಆಗಲೇ ಒಪ್ಪಿ ಅಪ್ಪಣೆ ಮಾಡಿದ್ದರೆಂತಲೂ ಇವರ ಮಾತಿನಿಂದಲೇ ವ್ಯಕ್ತವಾಗಿರುವುದು. ಇದರಿಂದ ಈಗಣ ಏರ್ಪಾಟಿಗೆ ಯಾವ ತೆರದ ಅಸಮಾಧಾನಸ್ಥಿತಿಯೂ ಕಾರಣವಾಗಿಲ್ಲವೆಂದು ಊಹಿಸಬಹುದಾಗಿರುವುದು. ಅಲ್ಲದೆ ಅವರ ಉಪನ್ಯಾಸದಲ್ಲೇ ಇನ್ನು ಕೆಲವು ಕಾಲ ಶ್ರೀಮನ್ಮಹಾರಾಜರ ಸೇವೆಯನ್ನೂ ದೇಶಸೇವೆಯನ್ನೂ ಮಾಡಲು ತಮಗೆ ಉತ್ಸಾಹವಿರುವುದೆಂತಲೂ, ಅದು ಲಭ್ಯವಾದರೆ ಸಂತೋಷಿಸುವೆನೆಂತಲೂ ಹೇಳಿಕೊಂಡಿರುವುದರಿಂದ, ಅವರು ಸಂಸ್ಥಾನದ ಉದ್ಯೋಗವನ್ನು ತಾವಾಗಿ ಬಿಟ್ಟುಬಿಡುವಂಥ ಬೇಸರನ್ನೇನೂ ಹೊಂದಿಲ್ಲವೆಂತಲೂ ವ್ಯಕ್ತವಾಗಿರುವುದು. ದಿವಾನಗಿರಿಯ ಮಹಾಭಾರವನ್ನು ವಹಿಸಿದಾರಭ್ಯ ಇವರು ವಿಶ್ರಾಂತಿಯೇ ಇಲ್ಲದೆ ದಿನಕ್ಕೆ ೧೫-೧೬ ಗಂಟೆಗಳ ಹೊತ್ತು ಕೆಲಸಮಾಡುತ್ತಲೂ, ವಿಶೇಷವಾಗಿ ದೇಶದೊಳಗೆ ಸಂಚರಣಗಳನ್ನು ನಡೆಯಿಸುತ್ತಲೂ ಇದ್ದುದರಿಂದ ಇವರಿಗೆ ಹೆಚ್ಚಾದ ವಿಶ್ರಾಂತಿಯು ಅವಶ್ಯಕವಾಗಿದ್ದಿತೆಂದು ಹೇಳುವಲ್ಲಿ ಸಂಶಯವಿಲ್ಲ. ಈ ವಿಶ್ರಾಂತಿಯಲ್ಲಿ ಇವರು ನವಚೈತನ್ಯಗೊಂಡು ಮರಳಿ ಸಂಸ್ಥಾನದ ಉದ್ಯೋಗಕ್ಕೆ ಬರುವುದು ಪ್ರಜೆಗಳೆಲ್ಲರಿಗೂ ಸಂತೋಷಪ್ರದವೇ ಸರಿ. ಆದರೆ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಪರಿವಾರಕ್ಕಾಗಿ ಏರ್ಪಡಿಸಿಕೊಂಡಿದ್ದವರನ್ನೆಲ್ಲಾ ಒಡೆದು ಬೇರೆಬೇರೆ ಉದ್ಯೋಗಗಳಿಗೆ ಕಳುಹಿಸಿಬಿಟ್ಟಿರುವುದು, ಅವರು ಸೆಕ್ರೆಟೆರಿಯಟ್ಟಿನವರನ್ನು ಕುರಿತು ಮಾಡಿರುವ ಭಾಷಣದ ಧೋರಣೆ, ಅವರು ಉದ್ಯೋಗದಿಂದ ನಿವೃತ್ತರಾಗುವುದೇ ನಿಜವೆಂದು ಹುಟ್ಟಿರುವ ಜನಪ್ರವಾದ, ಇವುಗಳನ್ನೆಲ್ಲಾ ವಿಚಾರಮಾಡಿದರೆ ಅವರು ಮತ್ತೆ ಸಂಸ್ಥಾನದ ಅಧಿಕಾರಕ್ಕೆ ಬರುವರೋ ಇಲ್ಲವೋ ಅದು ಸಂಶಯವಾಗಿಯೇ ಇರುವುದು.

ಇವರು ಮೈಸೂರು ದೇಶೀಯರಾಗಿ ದಿವಾನ್ ರಂಗಾಚಾರ್ಯರವರ ಕಾಲದಲ್ಲಿ ಸಂಸ್ಥಾನದ ಧನ ಸಹಾಯವನ್ನು ಪಡೆದು ಬೊಂಬಾಯಿಗೆ ಹೋಗಿ ಓದಿ ಇಂಜನಿಯರಿಂಗ್ ಪರೀಕ್ಷೆಯಲ್ಲಿ ಅತ್ಯುತ್ತಮವಾಗಿ ತೇರ್ಗಡೆಹೊಂದಿ ತಮ್ಮ ವಿಶದ ವಿದ್ಯಾಪಾಂಡಿತ್ಯಪ್ರಥೆಯಿಂದ ಬೊಂಬಾಯಿ ಸರ್ಕಾರದವರ ಮೆಚ್ಚುಗೆಗೆ ಪಾತ್ರರಾಗಿ, ಅವರಿಂದ ಕೊಡಲ್ಪಟ್ಟ ದೊಡ್ಡ ದೊಡ್ಡ ಉದ್ಯೋಗಗಳನ್ನೆಲ್ಲಾ ಬಹು ಸಮರ್ಪಕವಾಗಿ ನೆರವೇರಿಸಿ, ಯೂರೋಪು ಮೊದಲಾದ ಅನೇಕ ವಿದೇಶಗಳಲ್ಲಿ ಸಂಚರಿಸಿ ವಿಶೇಷಾನುಭವಗಳನ್ನು ಪಡೆದು, ಆಂಗ್ಲ ಪ್ರಭುತ್ವದ ಉದ್ಯೋಗದಿಂದ ನಿವೃತ್ತರಾದ ಬಳಿಕ ಸ್ವದೇಶದ ಸೇವೆಗಾಗಿ ಬಂದು, ನಮ್ಮ ಸಂಸ್ಥಾನದ ಚೀಫ್ ಇಂಜನಿಯರ್ ಕೆಲಸಕ್ಕೆ ಸೇರಿ, ಆ ಅಧಿಕಾರದಲ್ಲಿರುವಾಗಲೇ ಕನ್ನಂಬಾಡಿಕಟ್ಟೆಯ ಏರ್ಪಾಡಿಗೂ, ಲೋಹಮಾರ್ಗದ ಅಭಿವೃದ್ಧಿಗೂ ದಾರಿ ಹಾಕಿಕೊಟ್ಟು, ಶ್ರೀಮನ್ಮಹಾರಾಜರವರ ಮೆಚ್ಚುಗೆಗೂ ಕೃಪೆಗೂ ಪಾತ್ರರಾಗಿ ಮ|| ಟಿ. ಆನಂದರಾಯರ ನಂತರ ಸಂಸ್ಥಾನದ ದಿವಾನ್‌ಗಿರಿಗೆ ತರಲ್ಪಟ್ಟರು. ಇವರ ದಿವಾನಗಿರಿಯಲ್ಲಿ ಸಂಸ್ಥಾನದೊಳಗೆ ನಡೆದಿರುವ ಅಭಿವೃದ್ಧಿಕರವಾದ ಕಾರ್ಯಗಳು ಈ ದೇಶದ ಏಳ್ಗೆಗೂ ಪ್ರತಿಷ್ಠೆಗೂ ವಿಶೇಷ ಸಹಾಯಕವಾದುವು. ಅವುಗಳೊಳಗೆಲ್ಲಾ ಕನ್ನಂಬಾಡಿಕಟ್ಟೆ, ಮೈಸೂರು ಅರಸಿಕೆರೆ ಲೋಹಮಾರ್ಗ ಸ್ಥಾಪನೆ, ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ, ಸಂಪದಭ್ಯುದಯ ಸಮಾಜ ಸ್ಥಾಪನೆ, ಇವುಗಳು ಅತ್ಯಂತ ಗಣ್ಯವೂ ಫಲಪ್ರದವೂ ಆಗಿ ಅವರ ಅಧಿಕಾರ ಕಾಲವನ್ನು ಚಿರಸ್ಮರಣೀಯವಾಗಿ ಮಾಡಿರುವುವು. ಮೈಸೂರು ಸಂಸ್ಥಾನಕ್ಕೆ ಅನಿತರ ಸಾಧಾರಣವಾದ ಪ್ರತಿಷ್ಠೆಯನ್ನು ತಂದ ಮಂತ್ರೀಶ್ವರರಲ್ಲಿ ಅಗ್ರಗಣ್ಯರು ಸರ್ ಕೆ. ಶೇಷಾದ್ರಿಅಯ್ಯರವರು. ಅವರನ್ನು ಬಿಟ್ಟರೆ ೨ ನೆ ಸ್ಥಾನವನ್ನು ಆಕ್ರಮಿಸಿದವರು ಸರ್ ವಿಶ್ವೇಶ್ವರಯ್ಯನವರೇ ಸರಿ. ಕೆಲ ವಿಷಯಗಳಲ್ಲಿ ಇವರು ಸರ್ ಶೇಷಾದ್ರಿಅಯ್ಯರವರನ್ನೂ ಮೀರಿಸಿದ್ದರು. ಪ್ರಜೆಗಳು ವಿದ್ಯೆಯಲ್ಲೂ ರಾಜಕೀಯ ಕಾರ್ಯನಿರ್ವಾಹದಲ್ಲೂ, ದೇಶಾಭ್ಯುದಯಚಿಂತೆಯಲ್ಲೂ ಇವರ ಕಾಲದಲ್ಲಿ ಮುಂದಕ್ಕೆ ತರಲ್ಪಟ್ಟಂತೆ ಇನ್ನಾರಿಂದಲೂ ಮಾಡಲ್ಪಡಲಿಲ್ಲ. ಇವರಷ್ಟು ನಿಸ್ಪೃಹರಾಗಿ ಯಾವ ದಿವಾನರೂ ಕೆಲಸ ಮಾಡಲಿಲ್ಲ. ಇವರಿಗೆ ಸಂಸ್ಥಾನವೇ ಸ್ವಂತ ಕುಟುಂಬವಾಗಿದ್ದಿತು. ಹಗಲಿರುಳೂ ಅದರ ಅಭ್ಯುದಯ ಚಿಂತೆಯೇ ಇವರ ತಪಸ್ಸಾಗಿದ್ದಿತು. ತಾವು ಸರ್ಕಾರದಿಂದ ಪಡೆದ ವೇತನಕ್ಕೆ ಶತಗುಣಾಧಿಕವಾದ ಪ್ರತಿಫಲವನ್ನು ಸಂಸ್ಥಾನಕ್ಕೆ ಮಾಡಿರುವರು. ಇವರು ಅಹರ್ನಿಶಿಯೂ ದುಡಿಯುವುದನ್ನು ನೋಡಿ ಸೋಂಬೇರಿಗಳಾದ ಇತರೋದ್ಯೋಗಿಗಳನೇಕರು ಇವರನ್ನು ಶಪಿಸುತ್ತಲೂ ನಾಚುಗೆಗೊಳ್ಳುತ್ತಲೂ ಇದ್ದರು. ಇವರು ವೈಗಲ್ಯತನವಿಲ್ಲದೆ ತ್ರಿಕರಣಶುದ್ಧಿಯಿಂದ ಮಾಡುತ್ತಿದ್ದ ಅಧಿಕಾರ ನಿರ್ವಾಹಕ್ರಮವು ಅಧಿಕಾರ ಪರಂಪರೆಗೇ ಮಾರ್ಗದರ್ಶಕವಾಗಿದ್ದಿತೆಂದು ಹೇಳಲು ಲೇಶವೂ ಸಂಶಯವಿಲ್ಲ. ಇವರು ದಿವಾನಗಿರಿಗೆ ಬಂದ ಆರಂಭದಲ್ಲಿ ಇಂಜನಿಯರಿಂಗ್ ಶಾಖೆಯ ಹೊರತು ಇತರ ಶಾಖೋದ್ಯೋಗಗಳ ಅನುಭವವೂ ಪಾಂಡಿತ್ಯವೂ ಇಲ್ಲದ ಇವರು ಹೇಗೆ ಕೃತಕೃತ್ಯರಾಗುವರೆಂದು ಒಳಗೊಳಗೇ ಇವರನ್ನು ಪರಿಹಾಸಮಾಡಿ ಆಡಿಕೊಳ್ಳುತ್ತಿದ್ದ ಜನರೆಲ್ಲಾ ಕಟ್ಟಕಡೆಗೆ ತಾವೇ ಮುಖವನ್ನು ತಗ್ಗಿಸಿಕೊಳ್ಳುವಂತಾಯಿತು. ಹೀಗೆ ಇವರಲ್ಲಿದ್ದ ಗುಣಾತಿಶಯವನ್ನೂ ಅಧಿಕಾರನಿರ್ವಾಹದ ಲಕ್ಷಣವನ್ನೂ ವಿವರಿಸುವುದಕ್ಕೆ ಕುಳಿತರೆ ೧ ಗ್ರಂಥವೇ ಆಗುವುದು. ಲೋಕದಲ್ಲಿ ಸರ್ವಸದ್ಗುಣಪರಿಪೂರ್ಣನಾದವನು ಭಗವಂತನ ಹೊರತು ಮತ್ತೊಬ್ಬನಿರುವುದಿಲ್ಲ. ಅದರಂತೆ ಇವರಲ್ಲೂ ಕೆಲನ್ಯೂನತೆಗಳಿಲ್ಲದೆ ಇರಲಿಲ್ಲ. ಆದಿಯಲ್ಲಿ ಪಾಶ್ಚಾತ್ಯ ಸಂಸರ್ಗದಿಂದ ವಿಸ್ತೃತಗಳಾಗಿದ್ದ ಇವರ ಮನೋಭಾವಗಳು ಬರುಬರುತ್ತ ಇಲ್ಲಿಯ ಕೆಲ ಸ್ತುತಿಪಾಠಕರು ಚೆಲ್ಲಿದ ಮಂಕುಬೂದಿಯ ಪ್ರಭಾವದಿಂದ ಸಂಕುಚಿತವಾಗುತ್ತ ಬಂದಿದ್ದುವು. ಕೆಲವು ಭಾಗಗಳಲ್ಲಿ ಬೊಕ್ಕಸದ ಹಣವನ್ನು ಹಿಡಿತವಿಲ್ಲದೆ ಇವರು ಚೆಲ್ಲಿದುದು ಆಕ್ಷೇಪಾಸ್ಪದವಾಯಿತು. ತಾವು ಬಿಡುವಿಲ್ಲದೆ ದುಡಿಯುತ್ತ ಬಂದಂತೆ ಇತರ ಶಾಖಾ ಕಾರ್ಯಗಳನ್ನು ಆಯಾ ಅಧಿಕಾರಿಗಳು ಮುತವರ್ಜಿಯಿಂದ ನಡೆಯಿಸುವಂತೆ ಮಾಡುವಲ್ಲಿ ಇವರು ದರ್ಪವನ್ನು ಪ್ರಯೋಗಿಸಲಿಲ್ಲ. ಈ ತೆರದ ಕೆಲದೋಷಗಳು ತೋರಿಬಂದರೂ "ನಿಮಜ್ಜತೀಂದೋಃಕಿರಣೇಷ್ವಿವಾಂಕಃ" ಎಂಬಂತೆ ಗುಣಾಧಿಕ್ಯದಲ್ಲಿ ದೋಷಲೇಶವು ಗಣನೀಯವಾದುದಲ್ಲ. ಅದಂತಿರಲಿ. ತಮ್ಮ ವಿದ್ಯಾಬುದ್ಧಿಗಳನ್ನೂ ವಿವೇಕವನ್ನೂ ಸ್ವದೇಶದ ಸೇವೆಗಾಗಿ ತ್ರಿಕರಣಶುದ್ಧಿಯಿಂದ ಉಪಯೋಗಿಸಿ ಕೀರ್ತಿಭಾಜನರಾದ ಸರ್ ವಿಶ್ವೇಶ್ವರಯ್ಯನವರ ಜನ್ಮವೇ ಧನ್ಯವು. ಅವರ ವಿಷಯದಲ್ಲಿ ದೇಶೀಯರೆಲ್ಲರೂ ಕೃತಜ್ಞರಾಗಿರುವರು. ಸಂಸ್ಥಾನದಲ್ಲಿ ಇವರು ಉಪಕ್ರಮಿಸಿದ ಕೆಲ ಮುಖ್ಯ ಕಾರ್ಯಗಳು ಯುದ್ಧದ ವಿಘ್ನದಿಂದ ಫಲೋನ್ಮುಖಗಳಾಗದೆ ನಿಂತಿದ್ದುವು. ಈಗ ಯುದ್ಧವು ಶಾಂತವಾಗಿ ವಿಘ್ನವು ತೊಲಗಿಬಂದ ಸಮಯದಲ್ಲಿ ಇವರಂಥವರ ಸಹಾಯವು ತಪ್ಪಿಹೋಗುವುದು ವಿಷಾದಸ್ಥಾನವು.

ತೆರವಾಗಿರುವ ದಿವಾನಗಿರಿಯನ್ನು ಮ|| ಸರ್ದಾರ್ ಕಾಂತರಾಜ ಅರಸಿನವರು ಅಲಂಕರಿಸುವಂತಾದುದು ಮೈಸೂರು ಪ್ರಜೆಗಳಿಗೆ ಸರ್ ವಿಶ್ವೇಶ್ವರಯ್ಯನವರ ಅಗಲುವಿಕೆಯಿಂದ ಉಂಟಾದ ವಿಷಾದವನ್ನು ಸಾಧ್ಯವಾದಮಟ್ಟಿಗೂ ನಿವಾರಿಸಲು ಸಮರ್ಥವಾಗಿರುವುದೆಂದು ಹೇಳಬಹುದು. ಇವರು ಶ್ರೀಮನ್ಮಹಾರಾಜರವರ ಸೋದರ ಮಾವಂದಿರು. ದೇಶಕ್ಕೆ ಕೀರ್ತಿಯನ್ನು ತಂದು ತಮ್ಮ ವಿದ್ಯಾಬುದ್ಧಿಗಳನ್ನು ಸಾರ್ಥಕಪಡಿಸಿಕೊಳ್ಳುವಲ್ಲಿ ಪರಮಾದರವುಳ್ಳವರು. ಮತ್ತು ನಿಸ್ಪೃಹಶಿಖಾಮಣಿಗಳು. ವೇತನಕ್ಕಾಗಿಯೇ ಅಧಿಕಾರ ನಿರ್ವಾಹಮಾಡಬೇಕೆಂಬ ಆಶೆಯುಳ್ಳವರಲ್ಲವೆಂಬುದು ಗೊತ್ತೇ ಇದೆ. ಇವರಿಗಿರುವ ದೇಶಾಭಿಮಾನವು ಇದುವರೆಗಣ ದಿವಾನರುಗಳಲ್ಲಿದ್ದ ಅಭಿಮಾನಕ್ಕಿಂತ ಒಂದು ಭಾಗ ಮಿಗಿಲಾಗಿಯೇ ಇರುವುದು. ಸ್ವತಃ ವಿದ್ಯಾವಂತರು. ದೀರ್ಘಕಾಲದಿಂದ ನಾನಾ ಪ್ರಭುತ್ವಾಧಿಕಾರಗಳನ್ನು ವಹಿಸಿ ಸಾಮರ್ಥ್ಯದಿಂದ ನಿರ್ವಹಿಸಿ, ಕೌನ್ಸಲಿನ ಪ್ರಥಮ ಸಭಿಕರಾಗಿದ್ದವರು. ಯೋಗ್ಯತೆಯಿಂದಲೂ ಅಧಿಕಾರಕ್ರಮದಿಂದಲೂ ಇವರೇ ಈಗ ಆ ಅಧಿಕಾರಕ್ಕೆ ಬರಲರ್ಹರಾಗಿದ್ದವರು. ಇಂಥವರನ್ನು ಶ್ರೀಮನ್ಮಹಾರಾಜರವರು ದಿವಾನಪದವಿಗೆ ತಂದುದು ದೇಶೀಯರೆಲ್ಲರಿಗೂ ಸಂತೋಷಪ್ರದವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಇವರ ಕಾಲದಲ್ಲಿ ಅರ್ಧಾವಶಿಷ್ಟವಾಗಿರುವ ಮತ್ತು ಆರಂಭದಶೆಯಲ್ಲಿರುವ ಪುರೋವೃದ್ಧಿ ಕಾರ್ಯಗಳೆಲ್ಲಾ ಕೊನೆಮುಟ್ಟಲೆಂದೂ, ಸಂಸ್ಥಾನದ ಸರ್ವತೋಮುಖವಾದ ಪುರೋವೃದ್ಧಿಗಳಿಗೆ ವಿಶೇಷಾವಕಾಶವು ಕಲ್ಪಿಸಲ್ಪಡಲೆಂದೂ, ಅದಕ್ಕೆ ತಕ್ಕ ಆಯುರಾರೋಗ್ಯಾದಿ ಸಕಲ ಸಂಪಚ್ಛಕ್ತಿಗಳನ್ನೂ ಜಗದೀಶ್ವರನು ಇವರಿಗೆ ಅನುಗ್ರಹಿಸಲೆಂದೂ ಕೋರುವೆವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಇಷ್ಟರಲ್ಲೇ ಬೆಂಕಿಪುರದ ಕಾಡಿಗೆ ಬೇಟೆಗಾಗಿ ದಯಮಾಡಿಸುವವರಾಗಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯನವರ ಮಾತೃಶ್ರೀಯವರು ಕಳೆದ ತಾ|| ೧೨ ರಲ್ಲಿ ತಮ್ಮ ೮೫ ನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಯುದ್ಧಶಾಂತಿಯ ಜ್ಞಾಪಕಾರ್ಥವಾಗಿ ಬೆಂಗಳೂರು ರಾ|| ಬ|| ಅಣ್ಣಾಸಾಮಿ ಮೊದಲಿಯಾರರು ತಮ್ಮ ಪತ್ನಿಯ ಹೆಸರಿನಮೇಲೆ ದಂಡಿನೊಳಗೆ ಒಂದು ಪಶುವೈದ್ಯಾಲಯವನ್ನು ಸ್ಥಾಪಿಸುವವರಾಗಿದ್ದಾರೆ.

ಬೊಂಬಾಯಿ ಗಾಂಧರ್ವ ಮಹಾ ವಿದ್ಯಾಲಯದ ವ್ಯವಸ್ಥಾಪಕರಾದ ಪಂಡಿತ ವಿಷ್ಣು ದಿಗಂಬರ ಗಾಯನಾಚಾರ್ಯರು ತಮ್ಮ ಶಿಷ್ಯವರ್ಗದೊಡನೆ ಟವನ್ ಹಾಲಿನಲ್ಲಿ ಎರಡು ಕಚೇರಿಗಳನ್ನು ನಡೆಯಿಸಿದರು. ಪುರಜನರು ವಿಶೇಷವಾಗಿ ಸೇರಿ ಕರ್ಣಾನಂದಗೊಂಡು ಮಂಡಲಿಯವರನ್ನು ಪ್ರೋತ್ಸಾಹಿಸಿದರು. ಗಾಯನಾಚಾರ್ಯರ ಸಂಗೀತ ವಿದ್ಯೋದ್ಧರಣ ಪ್ರಯತ್ನದ ಘನತೆಗೆ ಅನುಗುಣವಾಗಿ ಅವರ ಗಾನವಿದ್ಯಾಪ್ರಾವೀಣ್ಯವೂ ಅಸಾಧಾರಣವಾಗಿರುವುದು.

ಆಕ್ಟಿಂಗ್ ದಿವಾನ್ ಸರ್ದಾರ್ ಕಾಂತರಾಜ ಅರಸ್ ಬಿ.ಎ. ಯವರಿಗೆ ಒಂದು ಕುರುವೆದ್ದು ಅಸ್ವಸ್ಥರಾಗಿರುವುದರಿಂದ ೧ ತಿಂಗಳ ರಜಾ ಪಡೆದುಕೊಂಡಿರುವರು. ರಾಜಧಾನಿಯಿಂದ ವಾಣೀವಿಲಾಸಸನ್ನಿಧಾನದ ಮಹಾಮಾತೃಶ್ರೀಯವರು ಇದಕ್ಕಾಗಿ ಬೆಂಗಳೂರಿಗೆ ಹೋಗಿರುವರು. ಈಗ ಅವರ ದೇಹಸ್ಥಿತಿಯು ಗುಣಮುಖವಾಗುತ್ತಲಿದೆಯೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಶ್ರೀಚಾಮುಂಡಾಂಬಿಕೆಯ ಅನುಗ್ರಹದಿಂದ ಬೇಗನೆ ಆರೋಗ್ಯಗೊಳ್ಳುವವರಾಗಲೆಂದು ಕೋರುತ್ತೇವೆ.

ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸುಗ್ಗಿ ಬತ್ತದ ಬೆಲೆಯನ್ನು ಪಲ್ಲಕ್ಕೆ ೪-೫-೬ ರೂ.ಗಳೆಂದು ನಿರ್ಧರಿಸಿ, ಕೊಂಡ ಬತ್ತದ ಮಾರಾಟವನ್ನು ರೂ.ಗೆ ೪||-೫-೫|| ಸೇರಿನಂತೆ ನಿಗದಿಮಾಡಿರುವುದೇಕೋ ಗೊತ್ತಾಗಲಿಲ್ಲ. ಸುಗ್ಗಿಯಲ್ಲೇ ಹೀಗಾದರೆ ಮುಂದಣ ಪರಿಣಾಮವೇನೆಂದು ಪ್ರಜೆಗಳು ಚಿಂತಿಸುತ್ತಿದ್ದಾರೆ. ಬೆಲೆ ನಿಗದಿಮಾಡಿ ಸಂಸ್ಥಾನದಿಂದ ಹೊರಕ್ಕೆ ಧಾನ್ಯಗಳನ್ನು ಸ್ವಲ್ಪವೂ ಸಾಗಿಸದಂತೆ ಕಟ್ಟುಮಾಡಿ, ಉಳಿದ ನಿರ್ಬಂಧಗಳನ್ನೆಲ್ಲಾ ತಪ್ಪಿಸಿ ವರ್ತಕರುಗಳಿಗೇ ವ್ಯಾಪಾರ ಸ್ವಾತಂತ್ರ್ಯವನ್ನು ಕೊಟ್ಟರೆ ಅನುಕೂಲವಾದೀತೆಂದು ಕಾಣುತ್ತದೆ.

ಚಾಮರಾಜನಗರದ ತಾ|| ಕುದೇರು ಗ್ರಾಮದಲ್ಲಿ ಇನ್ಫ್ಲುಯಂಜಾ ಮೊದಲಾದ ಕ್ಷುದ್ರರೋಗಗಳ ನಿವೃತ್ತಿಗಾಗಿ ಕಾರ್ತಿಕ ಮಾಸದಾರಭ್ಯ ಅಲ್ಲಿಯ ವೀರಶೈವಮಠಗಳು ಪುರಾಣಶ್ರವಣಕ್ಕಾರಂಭಿಸಿ ನಡೆಯಿಸುತ್ತ, ಈ ಮಧ್ಯೆ ಮಿತ್ರಮಂಡಲಿಗೆ ವಿಜಯಪ್ರಾಪ್ತಿಯ ಮೂಲಕ ಯುದ್ಧಶಾಂತಿಯಾದ ಪ್ರಯುಕ್ತ ತತ್ಸಂತೋಷಕ್ಕಾಗಿಯೂ ಸಹ ಕಳೆದ ಪೂರ್ಣಿಮೆಯ ದಿವಸ ಅಲ್ಲಿಯ ಹೊಸಮಠದ ಶ್ರೀ ಜಯದೇವಸ್ವಾಮಿಗಳು ನಿತ್ಯಾನಂದಸ್ವಾಮಿಗಳು ಮೊದಲಾದವರನ್ನು ಉತ್ಸವಪೂರ್ವಕವಾಗಿ ಬರಮಾಡಿ ಪಾದಪೂಜಾ ಗಣಾರಾಧನೆ ಮೊದಲಾದುವುಗಳನ್ನು ನಡೆಯಿಸಿದರೆಂದೂ ಈಚೆಗೆ ರೋಗಾದ್ಯುಪದ್ರವಗಳು ಶಾಂತವಾಗುತ್ತಲಿವೆಯೆಂದೂ ಸ್ಥಳೀಕರೊಬ್ಬರು ಬರೆದಿರುತ್ತಾರೆ.

ರಾಜಧಾನಿಯ ಜನರಲ್ ಮರ್ಚಂಟರಾದ ಮ|| ಎಂ.ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರು ಬರುವ ೧೯೧೯ನೆ ವರ್ಷದ ನಾನಾಬಣ್ಣದ ಸಚಿತ್ರವಾದ ಕ್ಯಾಲಂಡರನ್ನು ೩ ತೆರನಾಗಿ ಅಚ್ಚುಮಾಡಿಸಿ ನಮ್ಮಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಇವು ಪ್ರತಿಯೊಂದೂ ಗೋಡೆಗೆ ನೇತುಗಟ್ಟಿದರೆ ನೋಡುವುದಕ್ಕೆ ಅಂದವಾಗಿಯೂ ಅಲಂಕಾರವಾಗಿಯೂ ಇರುತ್ತವೆ. ಅವುಗಳಲ್ಲಿ ೧ ನೆ ತೆರದುದು ಗಂಗಾವತರಣದ ರಮಣೀಯ ಚಿತ್ರಪಟದಲ್ಲಿ ಸೇರಿಸಲ್ಪಟ್ಟಿದೆ. ಮತ್ತೊಂದು ಬೇರೆಬೇರೆ ಮನೋಹರವಾದ ಬಣ್ಣದ ಬೊಂಬೆಯ ಚಿತ್ರಪಟದಲ್ಲಿ ಪಾಕೆಟ್ಟಿನೊಡನೆ ಸೇರಿಸಲ್ಪಟ್ಟಿದೆ. ಇವು ಪ್ರತಿಯೊಂದಕ್ಕೆ ಅಂಚೆವೆಚ್ಚ ಸೇರಿ ೮ ಆಣೆ. ಮತ್ತೊಂದು ಅನೇಕ ವಿಷಯಗಳಿಂದ ಕೂಡಿದ ಶೀಟ್ ಕ್ಯಾಲೆಂಡರಾಗಿದೆ.

ರಾಜಧಾನಿಗೆ ಈ ಸುಗ್ಗಿಕಾಲದಲ್ಲಿ ದಿನ ೧ ಕ್ಕೆ ೨೦೦ ಬಂಡಿಗಳವರೆಗೆ ಬತ್ತವು ಬರುವ ಪದ್ಧತಿ. ಈಗ ೧೦-೨೦ ಬಂಡಿಗಳು ಬರುವುದೂ ಕಷ್ಟವಾಗಿದೆ. ತಕ್ಕಷ್ಟು ಧಾನ್ಯವೊದಗದಿರುವುದರಿಂದ ಮ್ಯುನಿಸಿಪಾಲಿಟಿಯವರು ಮಿತವಾಗಿ ದವಸಗಳನ್ನು ಮಾರಿಸುತ್ತಿದ್ದಾರೆ. ಈ ಕಾರಣದಿಂದಲೇ ವರ್ತಕರಿಗೆ ಲೈಸನ್ಸನ್ನು ಕೊಡುವುದಕ್ಕೂ ಕಷ್ಟವಾಗಿದೆ. ತಿಂಗಳಿಗೆ ೨೫ ಸಾವಿರ ಮೂಟೆಗಳಂತೆ ಅಕ್ಕಿಯನ್ನು ಒದಗಿಸಿಕೊಡಲು ಅಕ್ಕಿ ಮಿಲ್ಲುಗಳವರಿಗೆ ಕಂಟ್ರಾಕ್ಟು ಕೊಟ್ಟಿರುವುದರಿಂದ ಇನ್ನು ಮುಂದೆ ಈ ತಾಪತ್ರಯವು ಸ್ವಲ್ಪ ತಪ್ಪಬಹುದು. ಬತ್ತ ಬೆಳೆಯುವ ತಾಲ್ಲೂಕುಗಳಲ್ಲಿ ರೈತರಿಂದ ಬತ್ತವನ್ನು ತಕ್ಕ ಬೆಲೆಗೆ ಕೊಡಿಸಲು ಅಲ್ಲಲ್ಲಿಯ ತಾಲ್ಲೂಕಧಿಕಾರಿಗಳು ಮುತುವರ್ಜಿಯಿಂದ ಸಹಾಯ ಮಾಡಬೇಕಾಗಿದೆ.

ಸರ್ಕಾರದವರು ಕಾಲಸ್ಥಿತಿಯನ್ನನುಸರಿಸಿ ಆಗಾಗ್ಗೆ ಮುಖ್ಯ ಧಾನ್ಯಗಳ ಬೆಲೆಯನ್ನು ನಿಗದಿಮಾಡಿ ಪ್ರಕಟಿಸುತ್ತಿರುವುದು ಕೊಂಡು ತಿನ್ನುವ ಜನರ ಹಿತಾರ್ಥವಾಗಿಯೇ ಹೊರತು ಸಾಹುಕಾರಿ ವ್ಯಾಪಾರದ ಮೇಲೆ ಪೈಪೋಟಿ ಮಾಡಬೇಕೆಂಬುದಕ್ಕಲ್ಲ. ವ್ಯಾಪಾರಿಗಳು ಕಾನೂನಿಗೆ ವಿರೋಧವಾಗಿ ನಡೆಯದೆ ಸರ್ಕಾರದವರು ಬಲಾತ್ಕರಿಸಿ ತೆಗೆದುಕೊಳ್ಳುವ ಬಗೆಗೆ ಗೊತ್ತುಮಾಡಿರುವ ದರಕ್ಕಿಂತಲೂ ಹೆಚ್ಚಾದ ಬೆಲೆಯನ್ನು ತಾವು ಕೊಟ್ಟು ದಾಸ್ತಾನಿಟ್ಟಿರುವ ಜನರಿಂದ ದವಸವನ್ನು ಕೊಂಡುಕೊಳ್ಳುವುದಾದರೆ ಅದಕ್ಕೆ ಸರ್ಕಾರದವರು ಅಡ್ಡಿಮಾಡುವುದಿಲ್ಲ. ಮತ್ತೂ ಸರ್ಕಾರದವರು ಗೊತ್ತುಮಾಡಿರುವ ಪರಮಾವಧಿ ಬೆಲೆಗೆ ಒಳಪಟ್ಟು ಮಾರಲ್ಪಡುವ ವರ್ತಕರ ವ್ಯಾಪಾರಕ್ಕೆ ಅವರು ಯಾವ ವಿಧದಿಂದಲೂ ತೊಂದರೆ ಪಡಿಸುವುದಿಲ್ಲ ಎಂದು ಚೀಫ್ ಸೆಕ್ರೆಟರಿಯವರು ತಾ|| ೧೦ ರಲ್ಲಿ ಪ್ರಕಟಿಸಿದ್ದಾರೆ.

ನಮ್ಮ ಸಂಸ್ಥಾನದ ವ್ಯವಸಾಯಶಾಖೆಯವರು ಈಗಣ ದುಷ್ಕಾಲಬಾಧಾ ನಿವಾರಣಸಹಾಯಕ್ಕಾಗಿ ವೈಶಾಖ ಫಸಲನ್ನು ವ್ಯವಸಾಯಗಾರರು ಮಾಡುವುದಕ್ಕೆ ತಕ್ಕ ಸೂಚನೆಯೊಂದನ್ನು ರೈತರ ತಿಳಿವಿಕೆಗಾಗಿ ಪ್ರಕಟಿಸಿದ್ದಾರೆ. ಪ್ರತಿಯೊಂದು ಜಲಾಶಯದ ನೀರನ್ನೂ ಮಿತವಾಗಿ ಉಪಯೋಗಿಸಿಕೊಂಡು ಈರುಳ್ಳಿ, ಹೊಗೇಸೊಪ್ಪು ಮೊದಲಾದ ಬೆಳಸನ್ನಿಡದೆ ಜಲಾಶಯಗಳ ಕೆಳಗಣ ಭೂಮಿಯಲ್ಲಿ ನಾಟಿರಾಗಿ, ಬತ್ತ, ಜೋಳ, ನವಣೆ-ಈ ಧಾನ್ಯಗಳನ್ನು ಬೆಳೆಯಬೇಕೆಂದೂ, ೧ ಎಕರೆ ಬತ್ತದ ಗದ್ದೆಗೆ ಬೇಕಾಗುವಷ್ಟು ನೀರನ್ನು ೫ ಎಕರೆ ರಾಗಿ ಪೈರಿಗೆ ಉಪಯೋಗಿಸಬಹುದೆಂದೂ, ೩-೪ ತಿಂಗಳೊಳಗೆ ಕುಯ್ಲಿಗೆ ಬರುವ ಬತ್ತವನ್ನು ಬಿತ್ತಬೇಕೆಂದೂ, ಈ ವ್ಯವಸಾಯಕ್ಕೆ ಅನುಕೂಲವಾಗುವ ಬೀಜಗಳನ್ನು ವ್ಯವಸಾಯಶಾಖೆಗೆ ಸೇರಿದ ಡಿಪೋಗಳಲ್ಲಿ ಮಾರಿಸುವುದಕ್ಕೆ ಏರ್ಪಡಿಸಿರುವೆವೆಂದೂ ಪ್ರಕಟಿಸಿದ್ದಾರೆ.

ಕಳೆದ ತಾ|| ೭ ನೆಯ ದಿವಸ ರಾಜಧಾನಿಯಲ್ಲಿ ವಿಜಯಮಹೋತ್ಸವ ಸಂಬಂಧ ಸಭಾಸಮಾರಂಭಗಳೂ, ದೇವಾಲಯಗಳಲ್ಲಿ ಪೂಜಾದಿಗಳೂ, ಟವನ್‌ಹಾಲಿನಲ್ಲಿ ಶ್ರೀಮದ್ಯುವರಾಜರ ಅಧ್ಯಕ್ಷತೆಯಿಂದ ದರಬಾರೂ, ಪಾಠಶಾಲೆಗಳಲ್ಲಿ ಬಾಲಕಬಾಲಿಕೆಯರಿಗೆ ತಿಂಡಿಗಳ ಹಂಚುವಿಕೆಯೂ, ಉಪನ್ಯಾಸಗಳೂ ನಡೆದುವು. ಬಡಬಗ್ಗರಿಗೆ ೩ ಕಡೆಯಲ್ಲಿ ಅಕ್ಕಿ, ಬಟ್ಟೆ, ದುಡ್ಡುಗಳನ್ನು ಉದಾರವಾಗಿ ಮುನಿಸಿಪಾಲಿಟಿಯವರು ಹಂಚಿಸಿದರು. ಅದಕ್ಕೆ ಪ್ರೆಸಿಡೆಂಟರೂ ಕೆಲಮಂದಿ ಕೌನ್ಸಿಲರೂ ಧನಸಹಾಯ ಮಾಡಿದರು. ಹಳೆಅಗ್ರಹಾರದಲ್ಲಿ ಮ್ಯು|| ಕೌನ್ಸಿಲರಾದ ಮ|| ಶೆಟ್ಟಪ್ಪ ಸಿದ್ದಪ್ಪನವರು ತಮ್ಮ ಅಂಗಡಿಯ ಮುಂದೆ ವೇ|| ಶಿವಕಥಾ ಶಿವಯ್ಯಶಾಸ್ತ್ರಿಗಳಿಂದ ಇಂದ್ರಕೀಲವಿಜಯಕಥೆಯನ್ನು ಮಾಡಿಸಿ ಸಾವಿರಾರು ಮಂದಿ ಶ್ರೋತೃವೃಂದಕ್ಕೆ ಸಕ್ಕರೆಯನ್ನು ವಿನಿಯೋಗಿಸಿದರು. ಹೆಲ್ತ್ ಆಫೀಸರೂ ಇತರೋದ್ಯೋಗಿಗಳೂ ನೂರಾರು ರೂ. ಗಳನ್ನು ಕೊಟ್ಟು ಇಸಾಲೇಷನ್ ಆಸ್ಪತ್ರೆಯಲ್ಲಿ ೮೦೦ ಮಂದಿ ಕಸ ಗುಡಿಸುವವರಿಗೆಲ್ಲಾ ಭಾನುವಾರದ ದಿನ ಮೃಷ್ಟಾನ್ನಭೋಜನ ಮಾಡಿಸಿದರು.

ಬೆಂಗಳೂರಿನಲ್ಲಿ ಕೌನ್ಸಿಲರ್ ಮ|| ಎ. ಆರ್. ಬಾನರ್ಜಿಯವರ ಅಧ್ಯಕ್ಷತೆಯಿಂದ ಕೂಡಿದ್ದ ಒಂದು ಸಭೆಯಲ್ಲಿ ಭರತಖಂಡದ ನಿಮ್ನಜಾತಿ ಸಮುದ್ಧಾರಕ ಸಂಘದ ಕಾರ್ಯದರ್ಶಿಗಳಾದ ಮ|| ವಿ. ಆರ್. ಸಿಂಧೆಯವರು ಒಂದು ಉಪನ್ಯಾಸ ಮಾಡಿದರು. "ಪ್ರತ್ಯೇಕಸಂಘ ಪ್ರಾತಿನಿಧ್ಯವಿಷಯವನ್ನು ನಾನು ಮಾತನಾಡುವುದಿಲ್ಲ. ನಿಮ್ನಜಾತಿಯವರಿಗೆ ಮಾತ್ರ ಪ್ರತ್ಯೇಕ ಪ್ರಾತಿನಿಧ್ಯವು, ಶಾಸನನಿರ್ಮಾಣಸಭೆ ಲೋಕಲ್‌ಬೋರ್ಡು ಮೊದಲಾದುವುಗಳಲ್ಲೆಲ್ಲಾ ಇದ್ದೇ ತೀರಬೇಕು. ಉತ್ತಮಜಾತಿಯವರು ನಿಮ್ನಜಾತಿಯವರ ಬಹಿಷ್ಕರಣವನ್ನು ಬಿಡದಿದ್ದರೆ ಇವರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದೇ ಮಾರ್ಗವು. ಇದರಲ್ಲಿ ಸ್ವಾರ್ಥಪರತ್ವವೇನೂ ಇಲ್ಲ. ಇತರ ಸಂಘಗಳೆಲ್ಲಾ ಪ್ರತ್ಯೇಕ ಪ್ರಾತಿನಿಧ್ಯವನ್ನು ಸ್ವಾರ್ಥಪರತ್ವದಿಂದ ಕೋರುತ್ತಲಿವೆ. ಸಿಕ್ಕರು ಮಹಮ್ಮದೀಯರು ಮೊದಲಾದವರಿಗೆಲ್ಲರಿಗಿಂತಲೂ ಹೀನವಾದ ಸ್ಥಿತಿಯು ಪಂಚಮರಿಗೆ ಪ್ರಾಪ್ತವಾಗಿರುವುದರಿಂದ ಎಲ್ಲರಿಗಿಂತಲೂ ಮೊದಲು ಇವರಿಗೆ ಪ್ರಾತಿನಿಧ್ಯವನ್ನು ಕೊಡಬೇಕು." ಎಂಬ ಅಭಿಪ್ರಾಯವನ್ನು ತಿಳಿಸಿದರು. ಸಭಾಧ್ಯಕ್ಷರು ಉಪಸಂಹಾರ ಭಾಷಣ ಮಾಡುವಾಗ್ಗೆ ತಮ್ಮ ತಂದೆಗಳಾದ ಶಶಿಪಾದ ಬಾನರ್ಜಿಯವರು ನಿಮ್ನಜಾತಿ ಸಮುದ್ಧಾರಕ್ಕಾಗಿಯೇ ಬಹಳ ಕೆಲಸ ಮಾಡಿರುವರೆಂದು ಹೇಳಿದರು.

ಭರತಖಂಡದ ವೃತ್ತಾಂತಗಳು.

ವೈಸ್ರಾಯರು ಕಳೆದ ಭಾನುವಾರ ದಿಲ್ಲಿಯಿಂದ ಪ್ರಯಾಣಮಾಡಿದರು. ಕಲ್ಕತ್ತಾ ಮೊದಲಾದ ಕಡೆಗಳಲ್ಲಿ ಸಂಚರಿಸಿಕೊಂಡು ಜನವರಿ ತಾ|| ೮ ಕ್ಕೆ ದಿಲ್ಲಿಯನ್ನು ಸೇರುವರು.

ಬೊಂಬಾಯಿ ಗೌರ್ನರಾದ ಲಾರ್ಡ್ ವಿಲ್ಲಿಂಗ್ಡನ್‌ರವರ ಸ್ಮಾರಕ ಚಿತ್ರ ಸ್ಥಾಪನಾರ್ಥವಾದ ಫಂಡಿಗೆ ಹೈದರಾಬಾದ್ ನೈಜಾಮರವರು ೨೫ ಸಾವಿರ ರೂ. ಗಳನ್ನು ಕೊಟ್ಟರು.

ಪುದುಕೋಟೆಯಲ್ಲಿ ಬಂಗಾರದ ಬೆಲೆಯು ವರಹ ತೂಕಕ್ಕೆ ೮|| ರೂ. ಇದ್ದುದು ೭ ರೂ.ಗೂ ಬೆಳ್ಳಿ ೧೦೦ ತೊಲೆಗೆ ೧೨೫ ರೂ. ಇದ್ದುದು ೮೫ ರೂ.ಗೂ ಇಳಿದುಹೋಗಿದೆ.

ಇನ್ನುಮೇಲೆ ಜರ್ಮನರ ವ್ಯಾಪಾರಕ್ಕೆ ಭರತಖಂಡದಲ್ಲಿ ಅವಕಾಶಕೊಡಕೂಡದೆಂದು ಮದ್ರಾಸ್ ಯೂರೋಪ್ಯ ವರ್ತಕ ಸಂಘದವರು ಭರತಖಂಡದ ಸರಕಾರಕ್ಕೆ ಬಿನ್ನಯಿಸಿಕೊಂಡಿದ್ದಾರೆ.

ನವೆಂಬರ್ ತಾ|| ೧೫ರಲ್ಲಿ ಕೈರೋಪಟ್ಟಣದಿಂದ ಹೊರಟ ಒಂದು ವಿಮಾನವು ಆ ದಿನವೇ ದಮಾಸ್ಕಸ್ ಪಟ್ಟಣಕ್ಕೆ ಬಂದಿತು. ಡಿಶಂಬರ್ ತಾ|| ೧ ರಲ್ಲಿ ಬಾಗ್ದಾದಿಗೆ ಬಂದಿತು. ಅದು ಬಸಾರಾ, ಬುಷೈರ್, ಬಂದರಬ್ಬಾಸ್, ಚಾರ್ಬರ್, ಕರಾಚಿ ಇವುಗಳ ಮಾರ್ಗವಾಗಿ ದಿಲ್ಲಿಪಟ್ಟಣಕ್ಕೆ ಕಳೆದ ಬುಧವಾರ ಬಂದು ಸೇರಿತು.

ಬೊಂಬಾಯಿ ಗೌರ್ನರರವರಿಗೆ ಕಳೆದ ತಾ|| ೪ ರಲ್ಲಿ ಒಂದು ದೊಡ್ಡ ಆತಿಥ್ಯವು ಆ ಪಟ್ಟಣದಲ್ಲಿ ನಡೆಯಿತು. ೨೦೦೦ ಮಂದಿಗಳು ಅದಕ್ಕೆ ಕೂಡಿದ್ದರು. ಅನೇಕ ಮಂದಿ ಸಂಸ್ಥಾನಿಕರೂ ಬಂದಿದ್ದರು. ಸಾರ್ವಭೌಮರಿಂದ ಅನುಗ್ರಹಿಸಲ್ಪಟ್ಟಿದ್ದ ಅನೇಕ ಬಿರುದಾಂಕಿತಗಳನ್ನು ಆಯಾ ಜನರಿಗೆ ಗೌರ್ನರರವರು ಕೊಟ್ಟು ಅಭಿನಂದಿಸಿದರು.

ಚೀನಾಕ್ಕೂ ಟಿಬೆಟ್ಟಿಗೂ ಕೆಲಕಾಲದಿಂದ ಮನಸ್ತಾಪಹುಟ್ಟಿದ್ದು ಪರಸ್ಪರ ಯುದ್ಧವೂ ನಡೆದಿದ್ದಿತು. ಅಲ್ಲಿರುವ ಇಂಗ್ಲೀಷ್ ರಾಯಭಾರಿಗಳ ಪ್ರಯತ್ನದಿಂದ ಅವೆರಡು ರಾಷ್ಟ್ರಗಳಿಗೂ ಸಂಧಿಯಾಯಿತೆಂದೂ ಚೀನಾದವರು ಆಕ್ರಮಿಸಿಕೊಂಡಿದ್ದ ಟಿಬೆಟ್ ರಾಷ್ಟ್ರಭಾಗಗಳೆಲ್ಲಾ ಮರಳಿ ಟಿಬೆಟ್ಟಿನವರಿಗೆ ಕೊಡಲ್ಪಟ್ಟಿವೆಂದೂ ತಿಳಿಯಬರುತ್ತದೆ.

ಕಾಶಿಯ ಹಿಂದೂವಿಶ್ವವಿದ್ಯಾಲಯದ ಪಟ್ಟಪ್ರದಾನ ಪ್ರಥಮ ಮಹಾಸಭೆಯು ಬರುವ ವರ್ಷದ ಜನವರಿ ತಾ|| ೧೭ ರಲ್ಲಿ ಜರುಗುವುದು. ಅದಕ್ಕೆ ಅಧ್ಯಕ್ಷರಾದ ನಮ್ಮ ಶ್ರೀಮನ್ಮಹಾರಾಜರವರು ಆ ಕಾಲಕ್ಕೆ ಕಾಶಿಗೆ ದಯಮಾಡಿಸಿ ಸಭಾಧ್ಯಕ್ಷತೆಯನ್ನು ವಹಿಸುವರು. ಪ್ರೊ|| ಚಾನ್ಸಲರಾದ ಗ್ವಾಲಿಯರ್ ಸಿಂಧ್ಯಾ ಮಹಾರಾಜರೂ ಲೆ|| ಗೌರ್ನರಾದ ಸರ್ ಹಾರ್ಕೋರ್ಟ್ ಬಟ್ಲರ್‌ರವರೂ ಕೂಡ ಆ ಸಭೆಗೆ ದಯಮಾಡಿಸುವವರಾಗಿದ್ದಾರೆ.

ಸಂಚಾರಕ್ಕೆ ತಕ್ಕಷ್ಟು ಹಡಗುಗಳು ಈಗ ದೊರೆಯದಿರುವುದರಿಂದ ಭರತಖಂಡದ ಹಲವು ರೇವುಗಳಲ್ಲಿ ಹಡಗುಗಳನ್ನು ಹೊಸದಾಗಿ ಕಟ್ಟುವ ಕೆಲಸವು ಭರದಿಂದ ನಡೆಯುತ್ತಿದೆ. ಕೆಲ ವರ್ತಕರುಗಳೇ ಈಗ ಸ್ವಂತವಾಗಿ ಇಂಥ ಹಡಗುಗಳನ್ನು ಕಟ್ಟುತ್ತಿದ್ದಾರೆ. ಕೊಚಿನ್ನಾಡಿನಲ್ಲಿ ಅದೇ ಹೆಸರಿನ ಒಂದು ಹಡಗನ್ನು ೧ ಲಕ್ಷ ರೂ ವೆಚ್ಚದಿಂದ ಕಟ್ಟಿಸಿದ್ದಾರೆ. ಇದು ಮದ್ರಾಸಿಗೂ ರಂಗೂನಿಗೂ ಪ್ರಯಾಣಮಾಡುತ್ತಿರುವುದು. ಇದು ೫೦೦ ಟನ್ನುಗಳ ಭಾರವನ್ನು ಹೊರುವುದು. ಇನ್ನೊಬ್ಬ ಮಾರ್ವಾಡಿ ವರ್ತಕನು ಕಲಕತ್ತಾದಲ್ಲಿ ೩೦೫ ಟನ್ನುಗಳ ಭಾರವನ್ನು ಹೊರುವ ಹಡಗನ್ನು ಕಟ್ಟಿಸಿದ್ದಾನೆ.

ಜರ್ಮನರು ಆಕ್ರಮಿಸಿದ ದೇಶಗಳಲ್ಲಿ ಅವರ ಸೈನಿಕರು ನಡೆಯಿಸಿದ ಅತ್ಯಾಚಾರಪರಂಪರೆಗಳನ್ನು ನಾವು ಇದುವರೆಗೆ ಅಪರಿಮಿತವಾಗಿ ಕೇಳಿರುವೆವಷ್ಟೆ. ನಮ್ಮ ಆಂಗ್ಲ ಸಾರ್ವಭೌಮ ಸೈನಿಕರು ಮೆಸಪಟೋಮಿಯಾವನ್ನು ಆಕ್ರಮಿಸಿದ ಬಳಿಕ ಅಲ್ಲಿ ಅವರ ಪ್ರವರ್ತನೆಯನ್ನು ಕುರಿತು ಬಸಾರಾದಲ್ಲಿರುವ ಒಬ್ಬ ಅಮೇರಿಕನ್ ದೊಡ್ಡ ಮನುಷ್ಯರು ಏಷ್ಯಾ ಎಂಬ ಪತ್ರಿಕೆಗೆ ಹೀಗೆ ಬರೆದಿರುತ್ತಾರೆ—"ಇಂಗ್ಲೀಷರು ಮೆಸಪಟೋಮಿಯಾವನ್ನು ಆಕ್ರಮಿಸಿದ ೨|| ವರ್ಷಗಳ ಕಾಲದಲ್ಲೂ ನಾನು ಒಬ್ಬ ಅರಬ್ಬಿಯ ಮುಖದಿಂದಲಾದರೂ ಆಂಗ್ಲ ಸೈನಿಕರು ಸ್ತ್ರೀಯರ ಮಾನಭಂಗಮಾಡಿದರೆಂಬ ವಾರ್ತೆಯನ್ನು ಯಾವಾಗಲೂ ಕೇಳಿದುದಿಲ್ಲ. ಈ ಸೈನಿಕರಲ್ಲಿ ಕೆಲರು ಭಾರತೀಯರೂ ಇರುವರು. ಅವರಲ್ಲಿ ಸಿಕ್ಕರು, ರಜಪುತ್ರರು, ಪಠಾನರು, ಘೂರ್ಕರು, ಮಹಾರಾಷ್ಟ್ರರು, ಮಹಮ್ಮದೀಯರು, ಬೌದ್ಧರು ಮೊದಲಾದವರೆಲ್ಲಾ ಇರುವರು" ಎಂದು ಬರೆದಿರುವರು. ನಮ್ಮ ಸೈನ್ಯವು ವಿಜಯಕೀರ್ತಿಯ ಜತೆಗೆ ಇಂಥ ಪವಿತ್ರ ವರ್ತನಪ್ರಶಂಸೆಗೂ ಪಾತ್ರವಾಗಿರುವುದು ನಮ್ಮ ದೇಶದ ಘನತೆಗೆ ಮತ್ತಷ್ಟು ಭೂಷಣವಲ್ಲವೆ?

ಯುದ್ಧ ವಿಶ್ರಾಂತ ದೇಶವಾರ್ತೆಗಳು.

ಬೆಲ್ಜಿಯಂ ರಾಜದಂಪತಿಗಳನ್ನು ಫ್ರೆಂಚರು ತಮ್ಮ ರಾಜಧಾನಿಗೆ ಬರಮಾಡಿಕೊಂಡು ಬಹಳ ವಿಜೃಂಭಣೆಯಿಂದ ಸ್ವಾಗತಿಸಿ ಮರ್ಯಾದಿಸಿದರು.

ಫ್ರಾನ್ಸ್‌ದೇಶದಲ್ಲಿ ಇನ್‌ಫ್ಲುಯಂಜಾ ಜ್ವರವು ಹಾವಳಿಮಾಡುತ್ತಿದೆ. ಪ್ಯಾರಿಸ್ಸಿನಲ್ಲೂ ಲಯನ್ಸ್ ಪಟ್ಟಣದಲ್ಲೂ ೧೫೪ ಮಂದಿಗಳು ಇದರಿಂದ ಸತ್ತಿರುವರು.

ಆಂಗ್ಲದೇಶಕ್ಕೂ ಅದರ ಅಧಿನಿವೇಶನಗಳಿಗೂ ಸಹ ನಷ್ಟಪರಿಪೂರ್ತಿಗಾಗಿ ಜರ್ಮನರು ನಗದಾಗಿ ೮ ನೂರು ಕೋಟಿ ಪೌನುಗಳನ್ನು ಕೊಡಬೇಕಾಗುವುದೆಂದು ಆಂಗ್ಲ ಮುಖ್ಯ ಮಂತ್ರಿಯವರು ಪ್ರಕಟಿಸಿರುವರು.

ಜರ್ಮನರು ಉಂಟುಮಾಡಿರುವ ನಷ್ಟಕ್ಕಾಗಿ ಅವರಿಂದ ಎಷ್ಟು ನಷ್ಟಪರಿಹಾರವನ್ನು ಪಡೆದುಕೊಳ್ಳಬೇಕೋ ಅದನ್ನು ಗೊತ್ತುಮಾಡುವುದಕ್ಕಾಗಿ ಮಿತ್ರಮಂಡಲಿಯವರು ತಕ್ಕ ಸಾಮರ್ಥ್ಯವುಳ್ಳ ಜನರ ಒಂದು ಸಂಘವನ್ನೇರ್ಪಡಿಸಿದ್ದಾರೆ.

ಜರ್ಮನಿಯಲ್ಲೂ ಬೋಲ್ಷೆವಿಕ್ಕರ ಹಾವಳಿಯು ಹೆಚ್ಚುವಂತೆ ಕಾಣುತ್ತದೆ. ಈಗಣ ಪ್ರಭುತ್ವದವರ ಮೇಲೆ ಅವರು ಮುಸೆಯುತ್ತಿದ್ದಾರೆ. ಪ್ರಭುತ್ವ ಸೈನಿಕರಿಗೂ ಅವರಿಗೂ ಫಿರಂಗಿಗಳ ಯುದ್ಧವೂ ಕೂಡ ನಡೆದು ಪ್ರಾಣಹಾನಿಯಾಗಿದೆ. ಇನ್ನೂ ಶಾಂತವಾಗಿಲ್ಲ.

"ಚಕ್ರವರ್ತಿಯು ರಾಜ್ಯಪರಿತ್ಯಾಗ ಮಾಡಿದುದರಿಂದಲೂ ಇತರ ಕಾರಣಗಳಿಂದಲೂ ನಾನು ಪ್ರಷ್ಯಾ, ಜರ್ಮನಿ ದೇಶದ ಕಿರೀಟಧಾರಣಾಧಿಕಾರವನ್ನು ಪರಿತ್ಯಜಿಸಿರುವೆನು" ಎಂದು ಜರ್ಮನ್ ಯುವರಾಜನು ಕಳೆದ ಡಿಶಂಬರ್ ತಾ|| ೧ ರಲ್ಲಿ ವೈರಿಂಜನ್ ಎಂಬ ಪುರದಿಂದ ತನ್ನ ರುಜುಮಾಡಿರುವ ಪ್ರಕಟನಪತ್ರದ ಮೂಲಕ ತಿಳಿಯಪಡಿಸಿರುವನೆಂದು ಪತ್ರಿಕೆಗಳಲ್ಲಿ ಪ್ರಕಟಿತವಾಗಿದ್ದುದು ಸುಳ್ಳೆಂದು ಆತನು ತಿರಸ್ಕರಿಸಿದ್ದನಂತೆ.

ಹಿಂದಣ ಕೈಜರನನ್ನು ತಮ್ಮ ವಶಮಾಡಬೇಕೆಂದು ಮಿತ್ರಮಂಡಲಿಯವರು ತಿಳಿಯಿಸಲಾಗಿ ಹಾಲೆಂಡ್ ಪ್ರಭುತ್ವದವರು ನಿರಾಕರಿಸಿದರಂತೆ. ಮಿತ್ರಮಂಡಲಿಯವರು ಕೈಜರರನ್ನು ವಶಮಾಡಿಕೊಳ್ಳಬೇಕೆಂದು ಬಿಗಿಪಟ್ಟು ಹಿಡಿದಿರುವುದು ಜರ್ಮನಿಯ ಕೆಲ ಪ್ರಜೆಗಳಿಗೆ ಕೋಪೋದ್ರೇಕವನ್ನುಂಟುಮಾಡಿದೆಯಂತೆ. ಆದರೆ ಮಿತ್ರಮಂಡಲಿ ನ್ಯಾಯಸ್ಥಾನದಲ್ಲಿ ಕೈಜರರನ್ನೂ ಅವರ ಯುವರಾಜನನ್ನೂ ವಿಚಾರಣೆಗೆ ಗುರಿಮಾಡಬೇಕೆಂದೂ, ಅದಕ್ಕಾಗಿ ಅವರುಗಳನ್ನು ಹಾಲಂಡಿನವರು ಬಹಿಷ್ಕರಿಸಬೇಕೆಂದೂ ಮಿತ್ರಮಂಡಲಿಯವರು ಕೋರಿದರೆ ತಾವು ಅದನ್ನು ಆಕ್ಷೇಪಿಸತಕ್ಕವರಲ್ಲವೆಂದು ಜರ್ಮನಿಯ ಪ್ರಭುತ್ವದವರು ತಿಳಿಯಪಡಿಸಿರುವರು.

ಆಂಗ್ಲದೇಶದಲ್ಲಿ ಪಾರ್ಲಿಮೆಂಟ್ ಸಭಿಕರ ಹೊಸ ಆರಿಸುವಿಕೆಯು ಬಹು ಸ್ಪರ್ಧೆಯಿಂದ ನಡೆಯುತ್ತಿದೆ. ಲಿಬರಲ್ ಪಕ್ಷವು ಹಿಂದೆ ಬಿದ್ದು ಕನ್ಸರ್ವೇಟೀವ್ ಲೇಬರ್ ಪಕ್ಷದವರುಗಳೇ ಮುಂದಾಗುವಂತೆ ಕಾಣುತ್ತದೆ. ಇದುವರೆಗೆ ಯುದ್ಧಕಾಲದಲ್ಲಿ ಏರ್ಪಟ್ಟಿದ್ದಂಥ ಸಂಯುಕ್ತಪ್ರಭುತ್ವವೇ ಈ ರಾಜ್ಯಕ್ಕೆ ಕ್ಷೇಮಾವಹವಾಗುವುದೆಂದು ಲಾಯಿಡ್ ಜಾರ್ಜರವರು ಅಲ್ಲಲ್ಲಿ ಉಪದೇಶಮಾಡುತ್ತ ತಮ್ಮ ಪಕ್ಷದ ಪ್ರತಿನಿಧಿಗಳು ಹೆಚ್ಚಾಗಿ ಬರುವಂತೆ ಪ್ರಯತ್ನಮಾಡುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಕೂಲಿಕಾರ ಪಕ್ಷದವರು ತಮ್ಮ ಪ್ರಾಬಲ್ಯವನ್ನುಂಟುಮಾಡಿಕೊಂಡು ಪ್ರಭುತ್ವಸೂತ್ರವನ್ನು ತಮ್ಮ ಕೈಗೆ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದಾರೆ.

ಸಂಧಿ ಸಭೆಗಾಗಿ ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರು ಪತ್ನೀಸಮೇತರಾಗಿ ಕಳೆದ ತಾ|| ೩ ರಲ್ಲಿ ಯೂರೋಪಿಗೆ ಪ್ರಯಾಣಮಾಡಿದರು. ನಿನ್ನೆ ಶನಿವಾರ ಅವರು ಪ್ಯಾರಿಸ್ಸನ್ನು ಸೇರುವವರಾಗಿದ್ದರು. ತಾ|| ೧೭ ರಿಂದ ಸಂಧಿಯ ವಿಷಯವಾಗಿ ಇಂಗ್ಲೀಷ್ ಫ್ರಾನ್ಸ್ ಇಟಲಿ ಪ್ರತಿನಿಧಿಗಳೊಡನೆಯೂ ಬೆಲ್ಜಿಯಂ ರಾಜರೊಡನೆಯೂ ಮಾತನಾಡಿ ಮುಖ್ಯ ನಿಬಂಧನೆಗಳನ್ನು ಗೊತ್ತುಮಾಡುವರು. ಈ ಸಭಾಕಾರ್ಯಗಳು ಜನವರಿ ತಾ|| ೧೫ ರೊಳಗೆ ಮುಗಿಯುವುವು. ಆ ಬಳಿಕ ಜರ್ಮನ್ ರಾಯಭಾರಿಗಳೊಡನೆ ಸಂಧಿರಾಯಭಾರವು ಆರಂಭಿಸಲ್ಪಡುವುದು. ಏಪ್ರಿಲ್ ತಿಂಗಳ ಕೊನೆಯಲ್ಲೋ ಮೇ ತಿಂಗಳ ಆರಂಭದಲ್ಲೋ ಕೊನೆಯ ಸಂಧಿಪತ್ರಕ್ಕೆ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳ ಹಸ್ತಾಕ್ಷರಗಳೂ ಹಾಕಲ್ಪಟ್ಟು ಮುಗಿಯುವುವು. ಡಾ|| ವಿಲ್ಸನ್‌ರವರು ಅಲ್ಲಿಯವರೆಗೂ ಯೂರೋಪಿನಲ್ಲಿರುವುದಿಲ್ಲ. ಮುಖ್ಯ ಭಾಗಗಳ ಚರ್ಚೆಯನ್ನು ಮುಗಿಸಿಕೊಂಡು ಇಂಗ್ಲೆಂಡು, ಫ್ರಾನ್ಸ್, ಇಟಲಿ, ಬೆಲ್ಜಿಯಂ ದೇಶಗಳನ್ನೂ ಮುಖ್ಯ ರಣರಂಗಗಳನ್ನೂ ನೋಡಿಕೊಂಡು ೬ ವಾರಗಳ ಕಾಲದೊಳಗೆ ಮರಳಿ ಅಮೇರಿಕಾಕ್ಕೆ ತೆರಳುವರು.

ಯುದ್ಧಕ್ಕೆ ಕಾರಣಭೂತರಾರೆಂಬುದನ್ನು ಗೊತ್ತುಮಾಡುವುದಕ್ಕಾಗಿ ಬರ್ಲಿನ್ ಪಟ್ಟಣದ ಅರಮನೆಯಲ್ಲಿರುವ ಹಿಂದಣ ಕೈಜರರ ರಿಕಾರ್ಡುಗಳನ್ನೆಲ್ಲಾ ಪರಿಶೋಧಿಸುತ್ತಿರುವರು. ಕೈಜರೇ ಯುದ್ಧಕ್ಕೆ ಬಾಧ್ಯನೆಂಬುದಕ್ಕೆ ಲಿಖಿತಮೂಲಕವಾದ ಆಧಾರಗಳಿವೆ, ಅವನ್ನು ನಾನು ಪ್ರಕಟಿಸುತ್ತೇನೆಂದು ಬವೇರಿಯಾ ರಾಜ್ಯದ ಮುಖ್ಯ ಮಂತ್ರಿ ವಾನ್ ಎಲ್ಸ್ನೇರ್‌ರವರು ಪ್ರಕಟಿಸಿದ್ದಾರೆ. ಕೈಜರರಾದರೋ—"ನನ್ನಮೇಲೆ ಕ್ರಿಮಿನಲ್ ತಪ್ಪಿತವು ಹೊರಿಸಲ್ಪಡುವುದೆಂದು ನನ್ನನ್ನು ಬೆದರಿಸುತ್ತಿದ್ದಾರೆ. ಅದನ್ನೆಲ್ಲಾ ನಾನು ಪ್ರತಿಘಟಿಸಬೇಕಾಗಿದೆ. ಅದುಕಾರಣ ನನ್ನ ಮೇಲಣ ದೋಷಗಳು ಇಂತಹವು ಎಂದು ನಿರೂಪಿಸಲ್ಪಡುವವರೆಗೂ ನಾನು ಯಾವ ಪ್ರತ್ಯುತ್ತರವನ್ನೂ ಕೊಡದೆ ಸುಮ್ಮನಿರುವೆನು. ಈಗ ನಾನು ಹತ್ತರಲ್ಲಿ ಒಬ್ಬ ಸಾಮಾನ್ಯ ಮನುಷ್ಯನಾಗಿರುವೆನು. ಅದುಕಾರಣ ನಾನು ಈಗಣ ಜರ್ಮನ್ ಪ್ರಭುತ್ವಕ್ಕೆ ವಿಧೇಯನಾಗಿರುವೆನು. ನಾನು ಈಗ ಏನನ್ನು ಹೇಳಬೇಕಾದರೂ ಇತರರನ್ನು ದೋಷಿಗಳನ್ನಾಗಿ ಮಾಡಿಯೇ ತೀರಬೇಕಾಗುವುದು" ಎಂದು ಹೇಳಿರುವರೆಂದು ಅಮೇರಿಕಾದ ಒಂದು ತಂತ್ರೀವಾರ್ತೆಯು ತಿಳಿಯಿಸಿರುವುದು.

"ಕೆಲವು ವಾರಗಳೊಳಗೆ ಯುದ್ಧವು ಸಂಭವಿಸುವಂತಿರುವಾಗ್ಗೆ ಪ್ರವೇಶಗೊಳಿಸಿದ ಜರ್ಮನ್ ವಿಧಾನಗಳಿಗೆಲ್ಲಾ ವಾನ್ ಬೇತ್ಮನ್ ಹಾಲ್ವೆಗ್ (ಆಗಣ ಜರ್ಮನ್ ಮುಖ್ಯಮಂತ್ರಿ) ವಾನ್ ಬ್ಲೊ ಇವರುಗಳೇ ಉತ್ತರವಾದಿಗಳು. ನನ್ನನ್ನು ಅವರು ಬಲಾತ್ಕಾರವಾಗಿ ನಾರ್ವೆಗೆ ಕಳುಹಿಸಿಬಿಟ್ಟರು. ನಾನು ನಾರ್ವೆಗೆ ಹೋಗದಿದ್ದರೆ ಯುದ್ಧವು ತಪ್ಪದೆ ಸಂಭವಿಸುವುದೆಂತಲೂ ಇದಕ್ಕೆ ಪ್ರಪಂಚವೆಲ್ಲಾ ನಿನ್ನನ್ನೇ ಉತ್ತರವಾದಿಯನ್ನಾಗಿ ಮಾಡುವುದೆಂತಲೂ ವಾನ್ ಬೇತ್ಮನ್ ಹಾಲ್ವೆಗ್ಗರು ನನಗೆ ಹೇಳಿದರು. ನಾನು ಆದರಮೇಲೆ ನಾರ್ವೆಗೆ ಹೋಗಿ ಅಲ್ಲಿದ್ದಾಗ ನನ್ನ ಮಂತ್ರಿಗಳಾರೂ ಯಾವ ಸಂಗತಿಯನ್ನೂ ನನಗೆ ತಿಳಿಯಿಸಲಿಲ್ಲ. ಜಗತ್ತಿನಲ್ಲಿ ಜರುಗುತ್ತಿದ್ದುದನ್ನೆಲ್ಲಾ ನಾನು ನಾರ್ವೆ ಪತ್ರಿಕೆಗಳ ಮುಖೇನ ತಿಳಿದುಕೊಳ್ಳುತ್ತಿದ್ದೆ. ಆಂಗ್ಲನೌಕಾದಳವು ಹೊರಟಿತೆಂದು ನಾನು ಆ ಪತ್ರಿಕೆಗಳಿಂದ ತಿಳಿದುಕೊಂಡ ಬಳಿಕ ನಾನಾಗಿ ಜರ್ಮನಿಗೆ ಹೋದೆ. ಈ ಯುದ್ಧಕ್ಕೆಲ್ಲಾ ರಷ್ಯಾವೇ ಉತ್ತರವಾದಿ; ಯುದ್ಧಪ್ರಕಟನೆಗೆ ಮುಂಚೆಯೇ ರಷ್ಯಾ ಸೈನ್ಯಗಳು ಎಲ್ಲೆಕಟ್ಟನ್ನು ದಾಟಿ ಬಂದಿದ್ದುವು" ಎಂದು ಕೈಜರರು ಮೊನ್ನೆ ದೇಶವನ್ನು ಬಿಟ್ಟು ಹೋಗುವುದಕ್ಕೆ ಮುಂಚೆ ಒಬ್ಬರೊಡನೆ ಹೇಳಿದರೆಂದು ಪ್ರಕಟವಾಗಿದೆ.

ಮೈಸೂರು ಸೀಮೆಯ ರೆವಿನ್ಯು ಕಮಿಷನರ ಆಫೀಸು :—

ತಾ|| 10-12-1918.

ಭತ್ತ, ಅಕ್ಕಿ ರಾಗಿ ಮತ್ತು ಜೋಳ ಇವುಗಳಿಗೆ ಪ್ರತಿ ಡಿಸ್ಟ್ರಿಕ್ಟಿನಲ್ಲೂ ಮಂಡಿ ವರ್ತಕರು ಕೊಡಬೇಕಾದ ಮತ್ತು ಚಿಲ್ಲರೆ ವ್ಯಾಪಾರಿಗಳು ಕೊಡಬೇಕಾದ ಪರಮಾವಧಿ ದರವನ್ನೂ, ತಮ್ಮ ಉಪಯೋಗಕ್ಕೆ ಅವಶ್ಯಕವಾದದ್ದಕ್ಕಿಂತಲೂ ಜಾಸ್ತಿ ದಾಸ್ತಾನನ್ನು ಇಟ್ಟಿರುವವರು ಅದನ್ನು ಮಾರಾಟಕ್ಕೆ ಕೊಡದೆ ಇಟ್ಟುಕೊಳ್ಳುವದರಿಂದ ಜನರಿಗೆ ಸಾಕಾದಷ್ಟು ಸರಬರಾಜಿಲ್ಲದೆ ತೊಂದರೆಯಾದಾಗ್ಯೆ ಸರ್ಕಾರದವರು ಬಲಾತ್ಕಾರವಾಗಿ ಮೇಲ್ಕಂಡ ಜನಸಿಗಳನ್ನು ತೆಗೆದುಕೊಳ್ಳಬೇಕಾದಾಗ ಅವರು ಕೊಡಬೇಕಾದ ದರಗಳನ್ನೂ ಈ ಕೆಳಗೆ ಕಂಡ ಪಟ್ಟಿಯಲ್ಲಿ ತೋರಿಸಿರುವಂತೆ ಸರ್ಕಾರದವರು ಗೊತ್ತು ಮಾಡಿರುತ್ತಾರೆ.

ಈ ದರಗಳು ಆಗಾಗ್ಯೆ ಕಾಲಸ್ಥಿತಿ ಧಾರಣೆವಾಸಿಗನುಸಾರವಾಗಿ ಬದಲಾಯಿಸಲ್ಪಡುವವು. ಈ ಪಟ್ಟಿಯಿಂದ ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳುವಾಗ ಕೊಡಲು ಗೊತ್ತುಮಾಡಿರುವ ದರವು ಮಂಡಿ ವರ್ತಕರು ಮತ್ತು ಚಿಲ್ಲರೆ ವ್ಯಾಪಾರಿಗಳು ಕೊಡಬಹುದಾದ ಪರಮಾವಧಿ ದರಗಳಿಗಿಂತಲೂ ಕಡಮೆಯೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ಮೇಲ್ಕಂಡ ಜನಸಿಗಳನ್ನು ತಮ್ಮ ಉಪಯೋಗಕ್ಕೆ ಬೇಕಾದದ್ದಕ್ಕಿಂತಲೂ ಹೆಚ್ಚು ದಾಸ್ತಾನ ಇಟ್ಟಿರುವವರು ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳುವದಕ್ಕೆ ಅವಕಾಶಕೊಡದೆ ತಾವಾಗಿಯೇ ಸರ್ಕಾರದಿಂದ ಲೈಸೆನ್ಸ್ ಪಡೆದಿರುವ ವರ್ತಕರಿಗಾಗಲೀ ಅಥವಾ ಇತರರಿಗಾಗಲೀ ಮಾರಿದಲ್ಲಿ ಹೆಚ್ಚು ಆದಾಯ ಬರುವದೆಂಬುವದನ್ನು ತಿಳಿದುಕೊಳ್ಳಬೇಕು. ಜನಸಿಗಳನ್ನಿಟ್ಟುಕೊಂಡಿರುವವರು ಅವುಗಳನ್ನು ಮಾರಾಟಕ್ಕೆ ಒದಗಿಸದೆ ಜನರಿಗೆ ಅನಾನುಕೂಲವಾದಲ್ಲಿ ಮಾತ್ರವೇ ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳಬೇಕಾಗುವುದು. ಆದಕಾರಣ ತಮ್ಮ ಉಪಯೋಗಕ್ಕೆ ಅವಶ್ಯಕವಾದದ್ದಕ್ಕಿಂತಲೂ ಜಾಸ್ತಿ ದಾಸ್ತಾನು ಇಟ್ಟಿರುವವರೆಲ್ಲರೂ ಸರ್ಕಾರದವರು ಬಲಾತ್ಕರಿಸುವವರೆಗೂ ತಡಮಾಡದೆ ತಾವೇ ಖುದ್ದುರಾಜಿಯಿಂದ ಜನಸಿಗಳನ್ನು ಮಾರಾಟಕ್ಕೆ ತರುವುದು ಅವರಿಗೇ ಪ್ರಯೋಜನಕರವಾಗಿರುತ್ತದೆ.

ಗ್ರಾಮಾಂತರಗಳಲ್ಲಿ ದಾಸ್ತಾನು ಇಟ್ಟುಕೊಂಡಿರುವವರು ಜನಸಿಗಳನ್ನು ಹೊರಗೆ ತೆಗೆದುಕೊಂಡು ಹೋಗಬೇಕಾದಲ್ಲಿ ಅವರು ಆ ಸಂಗತಿಯನ್ನು ಗ್ರಾಮದ ಪಟೇಲ ಅಥವಾ ಗ್ರಾಮದ ಕಮಿಟಿಯ ಅಧ್ಯಕ್ಷ ಅಥವಾ ಅಮಲ್ದಾರರವರಿಂದ ಅಧಿಕಾರಕೊಡಲ್ಪಟ್ಟವರಿಗೆ ತಿಳಿಯಪಡಿಸಿದಲ್ಲಿ ಸದರಿಯವರು ಗ್ರಾಮಸ್ಥರ ಉಪಯೋಗಕ್ಕೆ ಸಾಕಾದಷ್ಟು ದಾಸ್ತಾನು ಗ್ರಾಮದಲ್ಲಿದೆ ಮತ್ತು ಜನಸಿಗಳನ್ನು ಹೊರಗೆ ಕಳುಹಿಸಿದಲ್ಲಿ ಗ್ರಾಮಸ್ಥರಿಗೆ ಸಾಲದೆ ಅನಾನುಕೂಲವಿಲ್ಲವೆಂಬ ಅಂಶಗಳನ್ನು ದೃಢಪಡಿಸಿಕೊಂಡು ಜನಸಿಗಳನ್ನು ಹೊರಗೆ ಸಾಗಿಸಲು ಅಪ್ಪಣೆಚೀಟಿಯನ್ನು ಕೊಡುತ್ತಾರೆ. ಈ ಮೇರೆ ಚೀಟಿಯನ್ನು ಪಡೆದಿರುವವರು ಜನಸಿಗಳನ್ನು ಚೀಟಿಯಲ್ಲಿ ನಮೂದುಮಾಡಿರುವ ಸ್ಥಳಕ್ಕೆ ಸಾಗಿಸಲು ದಾರಿಯಲ್ಲಿ ಸರ್ಕಾರಿ ಉದ್ಯೋಗಸ್ಥರು ಯಾವ ವಿಧವಾದ ಅಡ್ಡಿಯನ್ನೂ ಮಾಡುವದಿಲ್ಲ.

ಕೆ. ಆರ್. ಶ್ರೀನಿವಾಸಯ್ಯಂಗಾರ್,
ರೆವಿನ್ಯು ಕಮಿಷನರು.

ಸರ್ಕಾರದಿಂದ ಗೊತ್ತುಮಾಡಲ್ಪಟ್ಟಿರುವ ದರಗಳು.

ಸ್ಥಳಗಳು.	— ಅಕ್ಕಿ — ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳುವ ಧಾನ್ಯದ ಬೆಲೆ.	ಪರಮಾವಧಿ ಹೆಚ್ಚಿನ ಪಡಾವು ಬೆಲೆ.	ಪರಮಾವಧಿ ಚಿಲ್ಲರೆ ಬೆಲೆ. ರೂ. ೧ ಕ್ಕೆ	ಬಲಾತ್ಕರಿಸಿ ತೆಗೆಯುವ ಧಾನ್ಯದ ಬೆಲೆ.	ಪಡಾವು ಬೆಲೆ.	— ರಾಗಿ — ಚಿಲ್ಲರೆ ಪರಮಾವಧಿ ಬೆಲೆ. ರೂ. ೧ ಕ್ಕೆ ಸೇರು.	— ಜೋಳ — ಸರ್ಕಾರದವರು ತೆಗೆದ ಧಾನ್ಯಕ್ಕೆ ಕೊಡುವ ಬೆಲೆ.	ಪಡಾವು ಬೆಲೆ.	ಚಿಲ್ಲರೆ ಬೆಲೆ ರೂ. ೧ ಕ್ಕೆ
ರಖಂ	೧ — ೨ — ೩	೧ — ೨ — ೩	೧ — ೨ — ೩						
ಬೆಂಗಳೂರು ಸಿಟಿ ,, ಡಿಸ್ಟ್ರಿಕ್ಟು	೨೩—೧೯—೧೬	೨೪—೨೦—೧೮	೩||—೪||—೫	೫೦	೫೫	ಬೆಂಗಳೂರು ಸಿಟಿ ಮತ್ತು ಡಿಸ್ಟ್ರಿಕ್ಟು ಎಲ್ಲಾ ೧೧ ಸೇರು.	....	....	....
ಕೋಲಾರ ,,	೨೪—೨೧—೧೯	೨೫—೨೨—೨೦	೩||—೪|—೪||	೫೦	೫೫.	ಕೋಲಾರದ ಚಿನ್ನದ ಗಣಿಗಳ ಪ್ರದೇಶ ೧೦ ಸೇರು ಡಿಸ್ಟ್ರಿಕ್ಟಿನಲ್ಲಿ ಉಳಿದ ಭಾಗದಲ್ಲಿ ೧೧ ಸೇರು.	....	....	....
ತುಮಕೂರು ,,	..—೨೧—೧೯	..—೨೨—೨೦	..—೪|—೪||	೫೦	೫೫	ಡಿಸ್ಟ್ರಿಕ್ಟಿನ ಎಲ್ಲಾ ಕಡೆಯು ೧೧.	....	....	....
ಮೈಸೂರು ಸಿಟಿ ,, ಡಿಸ್ಟ್ರಿಕ್ಟು	೧೯—೧೬—೧೫	೨೦—೧೮—೧೬	೪|—೫—೫||	೫೫	೬೦	ಮೈಸೂರು ಸಿಟಿ ೧೦, ನಂಜನಗೂಡು ತಾ|| ಶ್ರೀರಂಗಪಟ್ಟಣದ ತಾ|| ಫ್ರೆಂಚರಾಕ್ಸ್ ಸಬ್ ತಾ|| ಸೇರಿ ; ಎಡತೊರೆ ತಾ|| ತಿರುಮಕೂಡ್ಲು ನರಸೀಪುರದ ತಾ|| ಚಾಮರಾಜನಗರ ನಗರ ತಾ|| ೯, ಡಿ|| ಉಳಿದಕಡೆ ೧೦.	೮ ರೂ.	೧೦ ರೂ.	೮|| ಸೇರು
ಹೊಸಕೊಯ್ಲಿನ ಅಕ್ಕಿ	೧೩—೧೧—೯								
ಹೊಸಕೊಯ್ಲಿನ ಬತ್ತ	೬—೫—೪								
ಹಾಸನ ,,	೨೧—೧೬—೧೪	೨೨—೧೭—೧೫	೪|—೫|—೬	೪೮	೫೦	ಮಂಜರಾಬಾದು ತಾಲ್ಲೂಕು ೧೧, ಡಿಸ್ಟ್ರಿಕ್ಟಿನಲ್ಲಿ ಉಳಿದಕಡೆ ೧೨.	....	....	....
ಶಿವಮೊಗ್ಗ ,,	೨೦—೧೬—೧೩	೨೧—೧೭—೧೪	೪||—೫|—೬||	೫೮	೬೫	ತೀರ್ಥಹಳ್ಳಿ, ಶಿಕಾರಿಪುರ, ಹೊನ್ನಾಳಿ, ಚೆನ್ನಗಿರಿ ತಾ|| ೮, ನಗರ, ಸಾಗರ, ಸೊರಬ ತಾ|| ೭, ಡಿ|| ಉಳಿದಕಡೆ ೯.	೮	೧೦	೮||
ಚಿತ್ರದುರ್ಗ ,,	..—೧೯—೧೭	..—೨೦—೧೮	..—೪||—೫	೫೦	೫೫	ದಾವಣಗೆರೆ, ಹೊಸದುರ್ಗ, ಹೊಳಲ್ಕೆರೆ, ಹರಿಹರ ತಾಲ್ಲೂಕುಗಳಲ್ಲಿ ೧೦, ಡಿಸ್ಟ್ರಿಕ್ಟಿನ ಉಳಿದಕಡೆ ೧೧.	೭	೮||	೧೦
ಕಡೂರು ,,	..—೧೬—೧೪	..—೧೭—೧೫	..—೫|—೬	೫೦	೫೫	ಕಡೂರು, ತರೀಕೆರೆ ತಾ|| ೧೧, ಚಿಕ್ಕಮಗಳೂರು ತಾ|| ೧೦, ಕೊಪ್ಪ, ಮೂಡಗೆರೆ ತಾಲ್ಲೂಕುಗಳಲ್ಲಿ ೯.	೭||	೯	೯

ಟಿಪ್ಪಣಿ—೧. ಬತ್ತದ ಬೆಲೆ ಅಕ್ಕಿಗೆ ಗೊತ್ತಾದ ಬೆಲೆಯಲ್ಲಿ ಶೇಕಡಾ ೪೫ ರಷ್ಟು.

೨. ಪಡಾವು ಬೆಲೆಯು—ಗಾಡಿಗಟ್ಟಲೆ ರಾಗಿ ವ್ಯಾಪಾರಕ್ಕೂ ೫ ಪಲ್ಲಕ್ಕೆ ಕಡಿಮೆಯಿಲ್ಲದ ಅಕ್ಕಿ ಜೋಳಗಳ ವ್ಯಾಪಾರಕ್ಕೂ ೧೦ ಪಲ್ಲಕ್ಕೆ ಕಡಿಮೆಯಿಲ್ಲದ ಬತ್ತದ ವ್ಯಾಪಾರಕ್ಕೂ ಅನ್ವಯಿಸುತ್ತದೆ.

೩. ಮುಂದಣ ಸುಗ್ಗಿಯ ಬತ್ತದ ಅಕ್ಕಿಯ ಬೆಲೆಯು ಮೇಲೆ ತಿಳಿಸಿರುವ ಬೆಲೆಯಲ್ಲಿ ಶೇಕಡಾ ೨೦ ರಷ್ಟು ಕಡಿಮೆಯಾಗಿರಬೇಕು.

೪. ಬಲಾತ್ಕಾರದಿಂದ ವಶಪಡಿಸಿಕೊಳ್ಳುವ ಧಾನ್ಯವನ್ನೆಲ್ಲಾ ಪ್ರತಿ ಡಿಸ್ಟ್ರಿಕ್ಟು ಕಸಬೆಗಳಿಗೆ ತಂದು ಒಪ್ಪಿಸಬೇಕು (ಬೆಲೆಯಲ್ಲಿಯೇ ಬಾಡಿಗೆಯೂ ಸೇರಿದೆ) ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮಾತ್ರ ದವಸವನ್ನು ದಾವಣಗೆರೆಗೆ ತಂದು ಒಪ್ಪಿಸಬೇಕು. ಕಡೂರು ಡಿಸ್ಟ್ರಿಕ್ಟಿನಲ್ಲಿ ರಾಗಿಯನ್ನು ಕಡೂರಿಗೆ ತಂದು ಒಪ್ಪಿಸಬೇಕು.

ಪತ್ರವ್ಯವಹಾರ.

ಗುಮಾಸ್ತರು ಬೇಕು.

ಒಬ್ಬ ಗುಮಾಸ್ತರು ಬೇಕಾಗಿದೆ. ಸಂಬಳ ಮಾಹೆಯಾನ ೧೫ ರೂಪಾಯಿ ಆಗಾಯಿತು ೨೦ ರೂಪಾಯಿ ವರೆಗೆ ಕೊಡಲಾಗುತ್ತೆ, ವೀರಶೈವರಾಗಿಯೂ ಇಂಗ್ಲೀಷ್ ಕನ್ನಡ ಬಲ್ಲವರಾಗಿಯೂ ಇರತಕ್ಕವರು ತಮ್ಮ ಯೋಗ್ಯತಾಪತ್ರದೊಂದಿಗೆ ಈ ಕೆಳಗಿನ ವಿಳಾಸಕ್ಕೆ ತಾರೀಖು ೧೦-೧೨-೧೯೧೮ ರೊಳಗಾಗಿ ಅಪ್ಲಿಕೇಷನ್ ಕಳಿಸಬೇಕು.

ಆನರರಿ ಸೆಕ್ರಿಟರಿ,
ದಾವಣಗೆರೆ. ವೀರಶೈವ ವಿದ್ಯಾವರ್ಧಕಸಂಘದ ಫಂಡ್.

ಮಹಾದೇವಪುರದ ಮಠ.

ಜರ್ಮನಿಯವರಿಗೂ ನಮ್ಮ ಬ್ರಿಟಿಷ್ ಸರಕಾರದವರಿಗೂ, ಈ ಹಿಂದೆ ನಾಲ್ಕು ವರ್ಷಗಳಿಂದ ಘೋರವಾದ ಯುದ್ಧವು ನಡೆದು ಈಗ ಶಾಂತವಾಗಿ ನಮ್ಮ ಬ್ರಿಟಿಷ್ ಸರಕಾರದವರಿಗೆ ಜಯವಾದುದರಿಂದ ಆ ಆನಂದಕ್ಕೋಸ್ಕರ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಧಿಕಾರಕ್ಕೂ ಆಡಳಿತಕ್ಕೂ ಒಳಪಟ್ಟಂಥಾ ಕೊಡಗು ಗಡಿನಾಡು ಮಹಾದೇವಪುರ ಮಠದಲ್ಲಿ ತಾ|| ೨೭-೧೧-೧೯೧೮ ರಲ್ಲಿ ದೇವತಾಪೂಜಾ ಮತ್ತು ಗಣಾರಾಧನೆಯೂ ಇತರ ೨೦೦ ಬಡಜನರಿಗೆ ಅನ್ನಸಂತರ್ಪಣೆಯೂ ನಡೆದಿರುತ್ತದೆ.

ದಾನಶೂರ ಶಿರಸಂಗೀಕರ ಇವರ ಸಮಭಿನಂದನವು.

ಇದೇ ತಿಂಗಳ ಒಂದನೇ ತಾರೀಖಿನ ದಿವಸ ಬೆಂಗಳೂರು ವೀರಶೈವಾಶ್ರಮದಲ್ಲಿ ಯಾವತ್ತು ವಿದ್ಯಾರ್ಥಿಗಳು ತಮ್ಮ ಅತ್ಯಂತ ಕೃತಜ್ಞತೆಯನ್ನೂ ಮತ್ತು ಸಂತೋಷವನ್ನೂ ಸರ್ ದೇಸಾಯಿಯವರಿಗೆ ತೋರಿಸುವುದಕ್ಕೋಸ್ಕರ ಸಭೆ ಸೇರಿದ್ದರು. ವೇ|| ಆರ್. ರಾಚಯ್ಯನವರು ಇವರ ಸಂಕ್ಷಿಪ್ತಚರಿತ್ರೆಯನ್ನು ಚೆನ್ನಾಗಿ ತಿಳಿಸಿ ಹೇಳಿದರು. ಮ|| ವೈ. ವೀರಪ್ಪ ಇವರು ದಾನದ ವಿಷಯವಾಗಿ ಉಪನ್ಯಾಸ ಮಾಡಿದರು. ಮ|| ಮರುಳಸಿದ್ಧಪ್ಪನವರೂ ಮ|| ಶ್ರೀಕಂಠಯ್ಯನವರೂ ಮತ್ತು ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮ|| ಜಿ. ಚನ್ನಪ್ಪನವರೂ ತಮ್ಮ ಅಭಿನಂದನವನ್ನು ಪುಷ್ಟೀಕರಿಸಿ ಹೇಳಿದರು. “ನಾಸ್ತಿ ತೇಷಾಂ ಯಶಃಕಾಯೇ ಜರಾಮರಣಜಂ ಭಯಮ್” ಎಂಬಂತೆ ಕವಿಗಳ ಮತ್ತು ಧಾರ್ಮಿಕರ ಯಶಸ್ಸೆಂಬ ಶರೀರಕ್ಕೆ ಜರಾಮರಣಗಳ ಭಯವಿರುವುದಿಲ್ಲ. ಇದರಂತೆ ಸರ್ ದೇಸಾಯಿಯವರ ಯಶಸ್ಸು ವಿದ್ಯಾರ್ಥಿ ವರ್ಗದಲ್ಲಿ ಕಲ್ಪಾಂತದವರೆಗೂ ಚಿರಜೀವಿಯಾಗಿರುವುದು. ಸರ್ ದೇಸಾಯಿಯವರ ಆತ್ಮಕ್ಕೆ ದೇವರು ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥನೆಯಾದನಂತರ ಸಭೆಯು ಪೂರೈಸಿತು.

ನರಗುಂದ.

ಕೈಲಾಸವಾಸಿ ಶ್ರೀಮಂತ ಲಿಂಗಪ್ಪಾ ಜಾಯಪ್ಪಾ ಸರದೇಸಾಯಿ ಸಂಸ್ಥಾನ ನವಲಗುಂದ (ಶಿರಸಂಗಿ) ಇವರು ಲಿಂಗಾಯತ ಬಂಧುಗಳ ವಿದ್ಯಾಪ್ರಸಾರಕ್ಕಾಗಿ ತಮ್ಮ ಇಡೀ ಸಂಸ್ಥಾನವನ್ನೇ ದಾನಮಾಡಿದ ಕೃತಜ್ಞತೆಯ ಸ್ಮಾರಕಮಹೋತ್ಸವವನ್ನು ನೆರವೇರಿಸಬೇಕೆಂದು ಈ ಊರ ವೀರಶೈವಬಾಂಧವರು ನಿಶ್ಚಯಿಸಿ, ಅಧ್ಯಕ್ಷಸ್ಥಾನಕ್ಕೆ ಶ್ರೀಯುತ ಗುರುಪಾದಪ್ಪಾ ಅಂಗಾಡಿ ಸಬಿಯವರನ್ನು ನೇಮಿಸಬೇಕೆಂದು ಮಿ|| ವೀರಪ್ಪಾ ಕುದರಿಮೋತಿ ಇವರು ಹೇಳಿದ್ದಕ್ಕೆ ಮಿ|| ಫಕೀರಗೌಡರು ಪಾಟೀಲ ವ ಮಿ|| ವೀರಪ್ಪಾ ಕಾಲಚೆಟ್ಟಿ ಇವರು ಅನುಮೋದನೆ ಕೊಡಲು ಸಭಿಕರ ಕರತಾಡನದಿಂದ ಶ್ರೀಯುತ ಗುರುಪಾದಪ್ಪಾ ಅಂಗಾಡಿಸಬಿಯವರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿ ಸಮಯೋಚಿತ ಭಾಷಣವನ್ನು ಮಾಡಿ ನಿರ್ಧರಿಸಿ, ಬಹುವಿಧದಿಂದ ಅಲಂಕೃತವಾದ ರಾಜವೀಧಿಯಲ್ಲಿ ಶ್ರೀಮಂತರ ಭಾವಚಿತ್ರವನ್ನು ಸುಂದರವಾದ ಅಂದಣದಲ್ಲಿಟ್ಟು ಮೆರೆಯಿಸಿದರು. ಶ್ರೀಮಂತರ ಕುಲದೇವತಾ ಶ್ರೀ ಸಿದ್ಧೇಶ್ವರನ ದೇವಸ್ಥಾನದಲ್ಲಿ ಸಾಂಗಸಮರ್ಚನೆಯನ್ನು ಮಾಡಿಸಿದರು. ಹುಡುಗಂಗೆ ಮಿಠಾಯಿ ಹಂಚುವುದೂ ಬಡವರಿಗೆ ಅನ್ನದಾನವೂ ನಡೆದುವು. ಶ್ರೀಯುತ ಗುರುಪಾದಪ್ಪ ಅಣ್ಣಾ ಇವರ ಅಧ್ಯಕ್ಷತೆಯಿಂದ ಕೂಡಿದ ಸಭೆಯಲ್ಲಿ ಉತ್ಸವವು ನಡೆದು ಬಂದನಂತರ ನಮ್ಮನ್ನಾಳುವ ಬ್ರಿಟಿಷ್ ಮಹಾಪ್ರಭುಗಳಿಗೂ ಅವರ ಕುಟುಂಬದ ಜನರಿಗೂ ಸದಾ ಸುಖವನ್ನೀಯಲೆಂದು ಪರಮಾತ್ಮನ ಪ್ರಾರ್ಥನೆಯು ನಡೆದಿತು. ಶ್ರೀಮಂತ ಸೈ|| ದೇಸಾಯರ ಅಪೂರ್ವ ಸತ್ಪಾತ್ರದಾನ ಗುಣಾನುವಾದವು ಬಹುಪರಿಯಿಂದ ನಡೆದಿತು. ತಾಂಬೂಲಸಮಾರಂಭದೊಡನೆ ಸಭಾವಿಸರ್ಜನವಾಯಿತು. ಈ ಪ್ರಕಾರ ಕಾರ್ಯಕ್ರಮದೊಂದಿಗೆ ಈ ಊರ ವೀರಶೈವರು ಸಭೆಯ ಕೆಲಸವನ್ನು ವಿಜೃಂಭಣೆಯಿಂದಲೂ ಆಸ್ಥೆಯಿಂದಲೂ ಸಾಗಿಸಲು ಅತ್ಯಾಂತ ಶ್ರಮಪಟ್ಟಿದ್ದಲ್ಲದೆ ಶಕ್ತ್ಯನುಸಾರ ಹಣವನ್ನು ಕೂಡ ವೆಚ್ಚಮಾಡಿದರು.

ಉದಾರವಾದ ಅನ್ನದಾನ.

ಧಾರವಾಡ ಡಿಸ್ಟ್ರಿಕ್ಟ್ ರಾಣೀಬೆನ್ನೂರು ತಾಲ್ಲೂಕು ತುಮ್ಮಿನಕಟ್ಟಿ ಗ್ರಾಮದಲ್ಲಿರುವ ಮ|| ರಾ|| ಗೋವಿಂದಪ್ಪ ಶೆಟ್ಟರ ಮ|| ರಾ|| ಮಹಾದೇವಪ್ಪ ಅಣಜಿ ಎಂಬ ಇಬ್ಬರು ಉದಾರಗೃಹಸ್ಥರು ಸದ್ಯಕ್ಕೆ ಒದಗಿರುವ ದುಷ್ಕಾಳದ ಕಾಲದಲ್ಲಿ ಬಡಜನರಿಗೆ ಅನ್ನ ಕೊಡುವ ಬಗ್ಗೆ ಅಕ್ಕಿ, ಜೋಳ, ಇತರ ಕಾಳು ಕಡಿಗಳ ೧೧೨ ಚೀಲಗಳನ್ನು ಕೂಡಿಸಿ, ತಾರೀಖು ೧೮-೧೧-೧೯೧೮ ನೇ ದಿವಸದಿಂದ ಎರಡು ಹೊತ್ತೂ ಅನ್ನಾ ಕೊಡುತ್ತ ಬಂದಿದ್ದರು. ತಾ|| ೨೯-೧೧-೧೮ ನೇ ದಿವಸ ನಮ್ಮ ಈ ತುಮ್ಮಿನಕಟ್ಟಿ ಗ್ರಾಮದಲ್ಲಾದ ನಮ್ಮ ರಾಜರ ಜಯೋತ್ಸವದ ಸಮಾರಂಭದ ಸಭೆಯಲ್ಲಿ ಅಧ್ಯಕ್ಷರಾದಂಥ ರಾವಸಾ|| ಶಿತಾಲ ಮಾಮಲೇದಾರರವರೂ ಹಾಗೂ ಶ್ರೀಮದ್ಭಕ್ತಿ ಐಶ್ವರ್ಯ ಸಿಂಹಾಸನ ಚವುಡದಾನಪುರ ಸಂಸ್ಥಾನದ ಶ್ರೀಗಳವರೂ ಸದರೀ ಗೋವಿಂದಪ್ಪ ಮಹಾದೇವಪ್ಪನವರ ಉದಾರಬುದ್ಧಿಯನ್ನು ಶ್ಲಾಘನೆಮಾಡಿ ಈ ಮಹತ್ಕಾರ್ಯವನ್ನು ಇನ್ನೂ ಕೆಲವು ದಿವಸ ನಡಿಸುವ ಬಗ್ಗೆ ಪ್ರೋತ್ಸಾಹಿಸಿದ್ದರಿಂದ ಆ ಸದ್ಗೃಹಸ್ಥರು ೧೧೨ ಚೀಲಗಳು ತೀರಿದಮೇಲೆಯೂ ಹಾಗೆಯೇ ಕೆಲವು ದಿವಸಗಳವರೆಗೆ ಅನ್ನ ಕೊಡುವೆವೆಂಬದಾಗಿ ನಿರ್ಧಾರಮಾಡಿರುತ್ತಾರೆ. ಇಷ್ಟೇ ಅಲ್ಲ. ಸದರಿ ಗೋವಿಂದಪ್ಪ ಮಹಾದೇವಪ್ಪನವರು ಅಭಿಮಾನ ತೊರೆದು ಕುಟುಂಬ ಸಹಿತವಾಗಿ ಸ್ವತಃ ಸ್ವಹಸ್ತದಿಂದ ಸಾವಿರಗಟ್ಟಿ ಅತಿಥಿಗಳಿಗೆ ಮಂದಹಾಸವದನದಿಂದ ಊಟಕ್ಕೆ ನೀಡುವರು. ಅಂದ ಬಳಿಕ ಇವರ ಉದಾರಬುದ್ಧಿಗೆ ಬೆಲೆಯೇ ಇಲ್ಲವೆನ್ನಬಹುದು. ಹಿಂದಕ್ಕೆ ಸಕ್ಕರೀ ಕರಡೆಪ್ಪನವರೆಂಬ ಶರಣರು ದುಷ್ಕಾಳದ ಕಾಲದಲ್ಲಿ ಇದೇ ಪ್ರಕಾರ ಅನ್ನದಾನ ಮಾಡಿದರೆಂಬದಾಗಿ ಒಣೇ ಕಿವಿಯಿಂದ ಕೇಳಿದ್ದೆವು. ಈಗ ಸ್ವತಃ ಅಂಥಾ ಸುಯೋಗವನ್ನು ಪ್ರತ್ಯಕ್ಷ ನಾವು ನೋಡಿ ನಮ್ಮ ನೇತ್ರಗಳ ಸಾಫಲ್ಯವನ್ನು ಮಾಡಿಕೊಂಡೆವು. ಎಷ್ಟೋ ಹಳ್ಳಿಯ ಬಡಬಗ್ಗ ಜನರು ಈ ಗ್ರಾಮಕ್ಕೆ ಬಂದು ದೊಡ್ಡ ದೊಡ್ಡ ಗೃಹಸ್ಥರ ಕಟ್ಟೆಯಮೇಲೆ ಕುಟುಂಬಸಹಿತ ವಾಸವಾಗಿ ಎರಡು ಹೊತ್ತು ಅನ್ನಸತ್ರದಲ್ಲಿ ಊಟಾ ಮಾಡುವರು. ಬರುವ ಜನರು ಹೆಚ್ಚು ಹೆಚ್ಚಾದಂತೆ ಗೋವಿಂದಪ್ಪ ಮಹಾದೇವಪ್ಪನವರ ಮನಸ್ಸಿನಲ್ಲಿ ಆನಂದವು ಹೆಚ್ಚು ಹೆಚ್ಚಾಗ ಹತ್ತುತ್ತದೆ. ಧನ್ಯ ! ಈ ಹೊತ್ತಿಗೆ ಇಂಥಾ ಉದಾರಗೃಹಸ್ಥರಿರುವ ಈ ತುಮ್ಮಿನಕಟ್ಟಿಯೇ ಧನ್ಯ !! ಆದುದರಿಂದ ಇಂಥಾ ಮಹಾಶಯರ ಈ ಅನ್ನದಾನದ ಕಾರ್ಯವು ಕೆಲವು ದಿವಸ ನಿರ್ವಿಘ್ನದಿಂದ ಸಾಗಲೆಂದೂ ಅವರಿಗೂ ಅವರ ಕುಟುಂಬಕ್ಕೂ ಆಯುರಾರೋಗ್ಯವಾಗಲೆಂದೂ ಶಾಂತಿಲ್ಲಿರೂ ದೇವರನ್ನು ಪ್ರಾರ್ಥಿಸುತ್ತೇವೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 1

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂಪಕ್ಷಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಿತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದೆ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಫುಕಟ ! ಇನ್‌ಫ್ಲ್ಯುಯಂಝಾ ಪತ್ರಿಕೆ-ಫುಕಟ !!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲ್ಯು ಎಂಝಾ ಪಿಲ್ಲ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಮೆಲಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ೬-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚನವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ “ಇನ್‌ಫ್ಲ್ಯು ಎಂಝಾ ಪತ್ರಿಕೆ” ಯನ್ನು ಫುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
3 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

೧೯೧೮ ನೆಯ ಇಸವಿ ಡಿಸೆಂಬರ್ ತಾ|| ೧೫ ರಿಂದ ೧೯೧೮ ನೆಯ ಡಿಸೆಂಬರ್ ತಾ|| ೨೧ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಮಾರ್ಗಶಿರ ಶು|| ದ್ವಾದಶಿಯಿಂದ ಮಾರ್ಗಶಿರ ಬ|| ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುಮಾಸ
15	¹ ಭಾನು	ದ್ವಾದ	1-8	ಅಶ್ವಿನಿ	54-14	1
16	ಸೋಮ	ಚತು	50-12	ಕೃತ್ತಿಕ	10-8	2
17	ಮಂಗಳ	ಪೌರ್ಣಿ	45-37	ರೋಹಿಣಿ	6-48	3
18	² ಬುಧ	ಪಾಡ್ಯ	41-51	ಮೃಗಶಿರ	4-9	4
19	³ ಗುರು	ಬಿದಿಗೆ	39-3	ಆರಿದ್ರಾ	2-23	5
20	ಶುಕ್ರ	ತದಿಗೆ	37-25	ಪುನರ್ವ	1-35	6
21	ಶನಿ	ಚೌತಿ	37-5	ಪುಷ್ಯ	1-56	7

(1) ಧನುರ್ಮಾಸಪೂಜಾರಂಭಃ. (2) ಅಂಧಕಾಸುರಸಂಹಾರಃ. (3) ಮಾರ್ಗಶಿರ ಲಕ್ಷ್ಮೀವ್ರತಂ, ಅರಿದ್ರೋತ್ಸವಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಲ್ಯಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತ್ಯೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಪ್ತೃ ತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಫುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಯಂಸದಾಪುರೀಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಡಿಸೆಂಬರ್ ತಾರೀಖು ೨೨ ನೆಯ ಭಾನುವಾರ. (ಸಂಚಿಕೆ ೫೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 5

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಂಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧— ೦—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦
ಪರವಾದಿ ಗಜಾಂಕುಶತಾರಾ	೦— ೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦— ೫—೦
ಹರಿದಾಸಿ	೦— ೪—೦
ವ್ರತಪಂಚಕ	೦— ೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 3

ಪ್ರತಿಸಪ್ತಾಹವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯನ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹಾನುಭಾವರಿಗೂ ವೈದ್ಯರ ಸಮಯವನ್ನು ಕಾದು ಕೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ಕೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೪-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೫-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ವೈ ಇನ್ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಫುಕಟ ! ಇನ್‌ಫ್ಲ್ಯುಯಂಝಾ ಪತ್ರಿಕೆ-ಫುಕಟ !!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲ್ಯು ಎಂಝಾ ಪಿಲ್ಲ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಮೆಲಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ೬-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚನವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ “ಇನ್‌ಫ್ಲ್ಯು ಎಂಝಾ ಪತ್ರಿಕೆ” ಯನ್ನು ಫುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
4 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ
ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೦ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮ್ಮತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಶಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುಪ್ತವ್ರಣಬೇನೆ, ಹುರಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಹೆಸರು ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
33 ಹೆಡ್ ಆಫೀಸು ಶಹಾಪೂರ, ಬೆಳಗಾಂವ.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಡಿಸೆಂಬರ್ ತಾ|| ೨೨ ನೆಯ ಭಾನುವಾರ.

ವಿಮಾನಸಂಚಾರಸೌಕರ್ಯ.

ಯುದ್ಧಕ್ಕೆಮುಂಚೆ ಹತ್ತಾರು ವರ್ಷಗಳಿಂದ ಆಕಾಶವಿಮಾನ ಸಂಚಾರವನ್ನು ನಿರುಪಾಧಿಕಗೊಳಿಸುವುದಕ್ಕೆ ಜರ್ಮನಿಯೇ ಮೊದಲಾದ ಯೂರೋಪ್ಯರಾಷ್ಟ್ರಗಳವರು ಸಾಹಸಪಡುತ್ತಿದ್ದರು. ಯುದ್ಧಾರಂಭವಾದ ಮೇಲೆ ಅವುಗಳ ರಚನೆಯಲ್ಲಿ ವಿಶೇಷ ಸುಧಾರಣೆಗಳಾಗಿ ಅವುಗಳು ಈಗ ಹಡಗುಗಳಂತೆ ಸಂಪೂರ್ಣವಾಗಿ ಮಾನವಾಧೀನವಾಗಿರುವುವು. ಯುದ್ಧದಲ್ಲಿ ಇವುಗಳಿಂದಾದ ಪ್ರಯೋಜನವು ವರ್ಣನಾತೀತವು. ಯುದ್ಧನಡೆಯುತ್ತಿರುವಾಗಲೇ ಮುಂದೆ ಇವುಗಳಿಂದ ಪ್ರಪಂಚಕ್ಕೆ ವಿಶೇಷೋಪಯೋಗವಾಗುವುದೆಂದು ಎಣಿಸಲ್ಪಡುತ್ತಿದ್ದಿತು. ಈಗ ಅದು ಕಾರ್ಯರೂಪಗೊಳ್ಳುತ್ತಿದೆ. ಆಂಗ್ಲದೇಶದಲ್ಲಿರುವ ಈ ವಿಮಾನಸಂಘದ ವ್ಯಾಪಾರಶಾಖೆಯ ಉಪಸಂಘದವರು ಭಾವಿಕರ್ತವ್ಯವನ್ನು ಕುರಿತು ಒಂದು ವರದಿಯನ್ನು ಸಿದ್ಧಮಾಡಿರುವುದರಲ್ಲಿ-ಪ್ರಪಂಚದೊಳಗೆ ಈ ವಿಮಾನಗಳು ಯಾವ ಯಾವ ದೇಶಕ್ಕೆ ಯಾವ ಯಾವ ಮಾರ್ಗಗಳಿಂದ ಸಂಚರಿಸಬೇಕು, ಎಲ್ಲೆಲ್ಲಿ ಇವುಗಳ ನಿಲ್ದಾಣಗಳನ್ನು ಕಲ್ಪಿಸಬೇಕು, ಎಂಬುದನ್ನು ಕುರಿತು ಕೂಡಲೇ ಪರಿಶೋಧನೆ ನಡೆಯಿಸಬೇಕೆಂದು ಹೇಳಿರುವುದಲ್ಲದೆ, ಈ ವಿಮಾನಗಳ ಮೂಲಕ ಲಂಡನ್ನಿನಿಂದ ಕಲ್ಕತ್ತಾಕ್ಕೆ ೪ ದಿನಗಳಲ್ಲೂ ಜೋಹಾನ್ಸ್‌ಬರ್ಗಿಗೆ (ಆಫ್ರಿಕಾದಲ್ಲಿರುವುದು) ೬ ದಿನಗಳಲ್ಲೂ ಅಂಚೆಯನ್ನು ಸಾಗಿಸಿಕೊಂಡು ಹೋಗುವುದು ಅಸಾಧ್ಯವಲ್ಲವೆಂದೂ, ಇದಕ್ಕೆ ಸಂಬಂಧಪಟ್ಟ ಉದ್ಯಮಗಳನ್ನು ಕುರಿತು ಮಿತ್ರಮಂಡಲಿಯ ಮತ್ತೂ ಅಧಿನಿವೇಶನಗಳ ರಾಷ್ಟ್ರಗಳೆಲ್ಲವುಗಳೊಡನೆಯೂ ಚರ್ಚೆನಡೆಯಿಸಬೇಕೆಂದೂ, ಇವುಗಳ ಗಮನಾಗಮನ ಮೂಲಕದಿಂದ ಉಂಟಾಗುವ ಲಾಭವನ್ನು ಸರ್ವತ್ರ ಪ್ರಕಟಿಸಬೇಕೆಂದೂ, ಇದರ ಸಂಚಾರಪ್ರಯುಕ್ತವಾದ ಶಾಸನವೊಂದನ್ನು ಕಲ್ಪಿಸಬೇಕೆಂದೂ ಆಂಗ್ಲಪ್ರಭುತ್ವದವರಿಗೆ ತಿಳಿಯಪಡಿಸಿಕೊಂಡಿದ್ದಾರೆ. ಇಂಥ ಅವಶ್ಯಕ ಕಾರ್ಯದ ವಿಷಯದಲ್ಲಿ ಆಂಗ್ಲಪ್ರಭುತ್ವದವರು ಕೂಡಲೇ ತಕ್ಕ ಪ್ರಯತ್ನವನ್ನು ಕೈಕೊಳ್ಳದೆ ಇರಲಾರರು.

ವೈಮಾನಿಕರುಗಳಾದರೊ ತಮ್ಮ ವಿಮಾನಗಮನ ಸಾಮರ್ಥ್ಯವನ್ನು ಯುದ್ಧರಂಗದಲ್ಲಿ ತೋರಿಸಿ ಮುಗಿಸಿಕೊಂಡು, ಈಗ ದೇಶದೇಶ ಸಂಚಾರಗಳ ಮೂಲಕ ಜಗತ್ತಿಗೆಲ್ಲಾ ಅದನ್ನು ಪ್ರಕಟಿಸಿ ಚಿತ್ತಾಕರ್ಷಣ ಮಾಡಲು ತೊಡಗಿರುವರು. ಈಜಿಪ್ಟಿನ ಕೈರೋ ಪಟ್ಟಣದಿಂದ ಬಾಗ್ದಾದ್ ಬಸ್ರಾ ಕರಾಚಿ ಮಾರ್ಗವಾಗಿ ದಿಲ್ಲಿಗೆ ಒಂದು ವಿಮಾನವು ಹೊರಟುಬಂದು ಸೇರಿತೆಂದು ಕಳೆದ ಸಂಚಿಕೆಯ ವೃತ್ತಾಂತಗಳಲ್ಲಿ ತಿಳಿಯಿಸಿದ್ದೆವಷ್ಟೆ. ಆ ವಿಮಾನದಲ್ಲಿ ಮೇಜರ್‌ಜನರಲ್ ಡಬ್ಲ್ಯು. ಸಾಲ್ಮಂಡ್ ರವರೇ ಮೊದಲಾದ ಮೂವರು ಸೈನಿಕೋದ್ಯೋಗಿಗಳೂ ಇಬ್ಬರು ಇಂಜನಿಯರುಗಳೂ ಇದ್ದರು. ಇವರ ವಿಮಾನವು ತಾ|| ೧೦ ರಲ್ಲಿ ಮಧ್ಯಾಹ್ನ ೨ ಗಂಟೆಗೆ ಕರಾಚಿಗೆ ಸೇರಿತು. ಅಲ್ಲಿಂದ ೫೦೦ ಮೈಲಿಗಳ ದೂರದಲ್ಲಿರುವ ನಸಿರಾಬಾದಿಗೆ ತಾ|| ೧೧ ರಲ್ಲಿ ಸೇರಿ, ಅಲ್ಲಿಗೆ ೨೩೦ ಮೈಲಿ ದೂರದಲ್ಲಿರುವ ದಿಲ್ಲಿ ಪಟ್ಟಣವನ್ನು ಗುರುವಾರ ಮಧ್ಯಾಹ್ನ ಸೇರಿತು. ಇದು ಆಯಾ ಪಟ್ಟಣಗಳಲ್ಲಿ ತಂಗಿದ್ದ ಕಾಲವನ್ನು ಕಳೆದು, ಪ್ರಯಾಣಮಾಡಿದ ಕಾಲವನ್ನೂ ಮೈಲಿಗಳನ್ನೂ ಲೆಕ್ಕಹಾಕಿ ನೋಡಿದರೆ ಗಂಟೆಗೆ ೬೭ ಮೈಲಿಗಳಂತೆ ಪ್ರಯಾಣ ಮಾಡಿ ಬಂದಿರುವುದು. ಇದು ಬರುವಾಗ್ಗೆ ಮಾರ್ಗಮಧ್ಯದಲ್ಲಿ ಯಾವ ವಿಧವಾದ ಪ್ರಮಾದವೂ ಸಂಭವಿಸಲಿಲ್ಲ. ಇದು ಬಂದಿಳಿದ ಪ್ರತಿಪಟ್ಟಣದ ಜನರೂ ಬಹು ಸಂಭ್ರಮದಿಂದ ಇದಿರುನೋಡುತ್ತಿದ್ದು ಸಂತೋಷಪಟ್ಟರುವರು. ಅಲ್ಲೆಲ್ಲಾ ಅದರ ನೋಟವು ಒಂದು ಅಪೂರ್ವವಾದ ಹಬ್ಬವನ್ನೇ ಉಂಟುಮಾಡಿದ್ದಿತು. ಇದು ಕರಾಚಿಪಟ್ಟಣಕ್ಕೆ ಬಂದಾಗ ೭೫೦೦ ಅಡಿಗಳ ಎತ್ತರದಲ್ಲಿದ್ದು ಕಣ್ಣಿಗೆ ಕಾಣಿಸಿತು. ಈ ವಿಮಾನವು ಈಜಿಪ್ಟಿನ ಕೈರೋ ಪಟ್ಟಣದಿಂದ ಇಲ್ಲಿಗೆ ಪ್ರಯಾಣಮಾಡಿ ಬಂದುದಾದರೂ ಇದಕ್ಕೆ ಮುಂಚೆ ಕೆಲತಿಂಗಳ ಹಿಂದೆ ಹೀಗೆಯೇ ಇಂಗ್ಲೆಂಡಿನಿಂದ ಕೈರೋವಿಗೆ ಬಂದುದಾಗಿದ್ದಿತು. ಈ ವಿಮಾನವು ದ್ವಿಪಕ್ಷ ವಿಮಾನಜಾತಿಗೆ ಸೇರಿದುದು. ಎರಡುಕಡೆಗೂ ರೆಕ್ಕೆಗಳಂತೆ ಹರಡಿಕೊಂಡಿರುವುದು. ಇದು ದಿಲ್ಲಿಗೆ ಬಂದಾಗ್ಗೆ ಭರತಖಂಡದ ವಿಮಾನ ಸೇನಾಪತಿಗಳಾದ ಕರ್ನಲ್ ಟಿನೆಂಟ್‌ರವರು ತಮ್ಮದೊಂದು ವಿಮಾನದಲ್ಲಿ ಕುಳಿತು ಆಕಾಶಕ್ಕೆ ಹಾರಿಹೋಗಿ ಅಂತರಿಕ್ಷದಲ್ಲೇ ಇದಿರ್ಗೊಂಡು ಎರಡು ವಿಮಾನಗಳೂ ಜತೆಯಾಗಿ ಪಟ್ಟಣದ ಸುತ್ತಲೂ ಪ್ರದಕ್ಷಿಣೆ ಮಾಡುತ್ತ ಗೊತ್ತಾಗಿದ್ದ ಸ್ಥಳದಲ್ಲಿ ಇಳಿದುವು. ಭರತಖಂಡದ ಸರ್ವಸೇನಾಪತಿಗಳೂ ಸೈನ್ಯವೂ ಆ ವೈಮಾನಿಕರಿಗೆ ಸ್ವಾಗತಮರ್ಯಾದೆಯನ್ನು ಮಾಡಿದುವು. ಸಾವಿರಾರು ಪುರಪ್ರಜೆಗಳು ಗುಂಪುಕಟ್ಟಿ ಬಂದು ನೋಡಿ ಸಂತೋಷಿಸಿದರು. ಈ ವೈಮಾನಿಕರು ಕೈರೋಪಟ್ಟಣದಿಂದ ತಂದಿದ್ದ ಕೆಲ ಅಂಚೆಯ ಕಾಗದಗಳನ್ನು ಕರಾಚಿ ಪೋಸ್ಟ್‌ಮಾಸ್ಟರಿಗೆ ಒಪ್ಪಿಸಿದರು. ಅವುಗಳ ಮೇಲೆ “ಕೈರೋ-ಕರಾಚಿ ವಿಮಾನಗಳ ಪೋಸ್ಟ್ ತಾ|| ೧೦-೧೨-೧೮” ಎಂದು ಮುದ್ರೆಯು ಒತ್ತಲ್ಪಟ್ಟಿದ್ದಿತು. ಇದಲ್ಲದೆ ಮತ್ತೊಂದು ವಿಮಾನವು ಇಂಗ್ಲೆಂಡಿಗೆ ಸೇರಿದ ಇಪ್ಸಿವಿಚಿ ಪಟ್ಟಣದಿಂದ ೬ ಮಂದಿ ವೈಮಾನಿಕರನ್ನು ಕುಳ್ಳಿರಿಸಿಕೊಂಡು ತಾ|| ೧೩ ರಲ್ಲಿ ಭರತಖಂಡಕ್ಕೆ ಹೊರಟಿರುವುದು. ಅದೂ ಕೂಡ ಕರಾಚಿ ಮಾರ್ಗವಾಗಿ ದಿಲ್ಲಿಗೆ ಬರುವುದು. ಮೊದಲನೆ ವಿಮಾನವು ದಿಲ್ಲಿಯಿಂದ ಕಳೆದ ಸೋಮವಾರ ಬೆಳಗ್ಗೆ ಹೊರಟಿತು. ಅದೇ ಮಧ್ಯಾಹ್ನ ೨ ಗಂಟೆಗೆ ಅಲಹಾಬಾದಿನ ಕೋಟೆಯ ಬಳಿಯಲ್ಲಿಳಿದಿತು. ಮರುದಿನ ಅಲ್ಲಿಂದ ಬೆಳಗ್ಗೆ ಹೊರಟು ತಾ|| ೧೭ ನೆ ಮಂಗಳವಾರ ಮಧ್ಯಾಹ್ನ ೩ ಗಂಟೆಗೆ ಕಲ್ಕತ್ತಾದಲ್ಲಿ ಕುದುರೆಜೂಜಿನ ಬಯಲಿನಲ್ಲಿಳಿದಿತು. ಇದು ಭರತಖಂಡದಿಂದ ಆಸ್ಟ್ರೇಲಿಯಾಕ್ಕೂ ಪ್ರಯಾಣಮಾಡುವುದಾಗಿದೆ. ಇನ್ನುಮುಂದೆ ಯೂರೋಪಿನಿಂದ ಇಲ್ಲಿಗೂ ಇಲ್ಲಿಂದ ಅಲ್ಲಿಗೂ ಹೀಗೆಯೇ ವಿಮಾನಸಂಚಾರಗಳು ನಿರುಪಾಧಿಕವಾಗಿ ನಡೆಯುವುವೆಂಬುದರಲ್ಲಿ ಸಂಶಯವಿಲ್ಲ. ಯಾವುದೊಂದು ಶಿತೋಷ್ಣಾದಿ ವಾಯುಗುಣ ಭೇದವೂ ಇವುಗಳಿಗೆ ಪ್ರತಿಬಂಧಕವಾಗುವುದಿಲ್ಲವೆಂದು ಗೊತ್ತಾಗಿದೆ.

ಲಂಡನ್ ಪೌರವಿಮಾನಕ ಸಂಘದವರು ಈಗ ಮಾಡಿರುವ ಒಂದು ಪ್ರಕಟನದಲ್ಲಿ-ಮುಖ್ಯವಾಗಿ ಈ ವಿಮಾನಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ವಿಶೇಷವಾದ ಸೌಕರ್ಯಗಳು ಏರ್ಪಡಿಸಲ್ಪಟ್ಟಿರುವುವು. ಮತ್ತೂ ಬಹಳ ಸುರಕ್ಷಿತವಾಗಿಯೂ ಇರುವುವು. ಸದ್ಯ ಈ ವಿಮಾನಗಳು ಗಂಟೆಗೆ ೭೮ ಮೈಲಿಯಂತೆ ಪ್ರಯಾಣ ಮಾಡುತ್ತಿರುವುವು. ಅಖಂಡವಾಗಿ ೪ ಸಾವಿರ ಮೈಲಿಗಳ ದೂರ ಹೋಗಬಲ್ಲುವು. ಬಲವಾದ ಎಂಜಿನ್ನುಗಳನ್ನುಪಯೋಗಿಸಿ ಎಚ್ಚರಿಕೆಯಿಂದ ನಡೆಯಿಸಿದರೆ ಒಟ್ಟು ಒಂದಾವೃತ್ತಿಗೆ ೮ ಸಾವಿರ ಮೈಲಿಗಳವರೆಗೆ ಹೋಗುವ ಹಾಗೆ ಮಾಡಬಹುದು. ನೂತನವಾಗಿ ಏರ್ಪಡಿಸಲ್ಪಟ್ಟಿರುವ ವೇಗವನ್ನನುಸರಿಸಿ ಈಗ ಸೌತಾಂಪ್ಟನ್ನಿನಿಂದ ಕೇಪ್‌ಟವನ್ನಿಗೆ ಹೋಗುವುದಕ್ಕೆ ೩ ದಿನಗಳು ಹಿಡಿಯುವುವು. ಅಟ್ಲಾಂಟಿಕ್‌ಸಮುದ್ರದ ಮೇಲೆ ಹೋಗುವುದಕ್ಕೆ ಮಧ್ಯದಲ್ಲಿ ಎಲ್ಲೂ ಇಳಿಯಬೇಕಾದ ಅವಶ್ಯಕತೆಯೇ ಇರುವುದಿಲ್ಲ. ಇನ್ನುಮುಂದೆ ಗಂಟೆಗೆ ೧೦೦ ಮೈಲಿಗಳಂತೆಯೂ ಕೂಡ ವಿಮಾನಗಳು ಹೋಗಬಲ್ಲುವು. ಆ ವಿಮಾನಗಳಲ್ಲಿ ಪ್ರಯಾಣಿಕರಿಗೆ ಪ್ರತ್ಯೇಕವಾದ ಕೋಣೆಗಳು ಕೂಡ ನಿರ್ಮಿಸಿಕೊಡಲ್ಪಡುವುವು. ೧ ವಾರ ಕಾಲ ಆಕಾಶದಲ್ಲೇ ಸಂಚರಿಸಿಕೊಂಡಿರಬಹುದಾದ ಸೌಕರ್ಯಗಳೂ ಕಲ್ಪಿಸಿಕೊಡಲ್ಪಡುವುವು ಎಂಬುದಾಗಿ ತಿಳಿಯಪಡಿಸಿರುವರು. ಇವನ್ನು ನೋಡಲಾಗಿ ಮುಂದೆ ವೈಮಾನಿಕ ಯುಗವು ಪ್ರಾಪ್ತವಾಗಿ ಮಾನವವರ್ಗವು ಗಾಂಧರ್ವರಂತೆ ಆಕಾಶಗಮನ ಸೌಖ್ಯವನ್ನನುಭವಿಸುವುದು ಅರಿದಾಗಿಲ್ಲ. ಹೀಗೆ ೧೦ ವರ್ಷಗಳು ಕಳೆದರೆ ಹೊಗೆಬಂಡಿಗಳ ಮುಂದೆ ಈಗ ಎತ್ತಿನ ಬಂಡಿಗಳ ಅವಸ್ಥೆಯಾಗಿರುವಂತೆ ಮುಂದೆ ವಿಮಾನಗಳ ಮುಂದೆ ಹೊಗೆಬಂಡಿಗಳ ಮೋಟಾರುಗಳ ಅವಸ್ಥೆಯೂ ಆಗುವುದೆಂದು ಕಾಣುತ್ತದೆ. ಅಲ್ಲದೆ ಪ್ರಪಂಚಕ್ಕೆ ವಿಮಾನಗಳಿಂದ ಅತ್ಯತಿಶಯವಾದ ಪ್ರಯಾಣಸೌಕರ್ಯಗಳುಂಟಾಗಿ ಅಭಿವೃದ್ಧಿಗೆ ಮಾರ್ಗವಾಗುವುದು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರವರೂ ಮಹಾಮಾತೃಶ್ರೀಯವರೂ ಸಹ ಈಗ ಬೆಂಗಳೂರಿಗೆ ದಯಮಾಡಿಸಿದ್ದಾರೆ.

ಅಫಿಸಿಯೇಟಿಂಗ್ ದಿವಾನ್ ಸರ್ದಾರ್ ಕಾಂತರಾಜ ಅರಸರವರ ದೇಹಾರೋಗ್ಯವು ಸುಮುಖವಾಗಿದೆಯೆಂದು ತಿಳಿಯಿಸಲು ಸಂತೋಷಿಸುತ್ತೇವೆ.

ಚೀಫ್ ಜಡ್ಜ್ ಸರ್ ಲೆಸ್ಲಿ ಮಿಲ್ಲರ್‌ರವರು ಪ್ಲೇಗು ರೋಗ ಗ್ರಸ್ತರಾಗಿದ್ದು ಈಗ ಗುಣಹೊಂದುತ್ತಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ..

ಚಿಕ್ಕಮಗಳೂರು ವೀರಶೈವ ವಿದ್ಯಾರ್ಥಿನಿಲಯಕ್ಕೆ ಸರ್ಕಾರದವರು ೨೦ ರೂ.ಯಂತೆ ಮಾಸಿಕಸಹಾಯ ದ್ರವ್ಯವನ್ನು ಕೊಡಲು ಅಪ್ಪಣೆಮಾಡಿದ್ದಾರೆ.

ಬರುವ ತಾ|| ೨೪ ರಿಂದ ಜನವರಿ ತಾ|| ೨ ರ ವರೆಗೆ ಕ್ರಿಸ್ತ್‌ಮಸ್ ರಜಾಕ್ಕಾಗಿ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳೂ ಪಾಠಶಾಲೆಗಳೂ ಮುಚ್ಚಲ್ಪಡುವುವು.

ಬೆಂಗಳೂರು ಸುತ್ತಿನಲ್ಲಿ ವೀರಶೈವ ಮಂಡಲಿಯ ಶುಭಾಶುಭ ಕರ್ಮಗಳ ಪೌರೋಹಿತ್ಯಕ್ಕೆ ಅತ್ಯಂತ ಸಹಾಯಕರಾಗಿಯೂ ಸಾಹಿತ್ಯವ್ಯುತ್ಪನ್ನರಾಗಿಯೂ ಸಾತ್ವಿಕರಾಗಿಯೂ ಇದ್ದ ವೇ|| ಕೆಂ|| ಮಹಾಂತಶಾಸ್ತ್ರಿಗಳು ಶಿವಾಧೀನರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಕ್ಲೋಸ್‌ಪೇಟೆಯಲ್ಲಿ ೨ನೆ ತರಗತಿ ಮೇಜಿಸ್ಟ್ರೇಟ್ ಕೋರ್ಟು ಸ್ಥಾಪಿಸಲ್ಪಟ್ಟು ಅದರಲ್ಲಿ ಚೆನ್ನಪಟ್ಟಣ, ಮಾಗಡಿ, ಕಾನಕಾನಹಳ್ಳಿ, ಕ್ಲೋಸ್‌ಪೇಟೆ ತಾ||ಗಳ ೨-೩ನೆ ತರಗತಿ ಕೇಸುಗಳು ವಿಚಾರಿಸಲ್ಪಡುವುವು. ಇದಕ್ಕೆ ಮಿ|| ಅಬ್ದುಲ್‌ಗನಿ ಬಿ.ಎ. ಯವರು ೨ನೆ ತರಗತಿ ಮೇಜಿಸ್ಟ್ರೇಟರಾಗಿರುವರು.

ಹಿಂದುಳಿದವರಲ್ಲಿ ಸಮರ್ಥರಾದವರನ್ನು ಮುಂದಕ್ಕೆ ತರಬೇಕೆನ್ನುವ ಅಭಿಪ್ರಾಯವು ನಮ್ಮ ಮೈಸೂರು ಗೌರ್ನಮೆಂಟಿಗೆ ತ್ರಿಕರಣಶುದ್ಧಿಯಿಂದ ಇರುತ್ತಿದ್ದರೆ ಮ|| ಬಿ ಬಸವಾರಾಧ್ಯ ಬಿ.ಎ., ಬಿ.ಎಲ್. ರವರಿಗೆ ಮೈಸೂರಿನ ಸಬ್ ಜಡ್ಜಿ ಕೆಲಸವು ಕೊಡಲ್ಪಡದೆ ಹೋಗುತ್ತಿರಲಿಲ್ಲ. ಇದುವರೆಗೆ ಅವರನ್ನು ಕಾಡಿನ ಅಧಿಕಾರಕ್ಕೆ ಕಳುಹಿಸಿದ್ದರು. ಈಗ ಮರಳಿ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಪದವಿಗೆ ಸುತ್ತಾಡಿಸಿದ್ದಾರೆ.

ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸುಗ್ಗಿ ಬತ್ತವನ್ನು ಪಲ್ಲ ೧ಕ್ಕೆ ೬-೫-೪ ರೂ.ಗಳಂತೆ ಕೊಳ್ಳಲೂ ಅಕ್ಕಿಯನ್ನು ಪಲ್ಲ ೧ಕ್ಕೆ ೧೩-೧೧-೪ ರೂ.ಗಳಂತೆ ಮಾರಲೂ ನಿಗದಿಮಾಡಿದ್ದಾರೆ. ಆದರೆ ಇದರ ಪ್ರಯೋಜನವು ಪ್ರಜೆಗಳಿಗೆ ಮಾತ್ರ ಆಗುತ್ತಲಿಲ್ಲ. ರಾಜಧಾನಿಯ ನಿವಾಸಿಗಳು ರಂಗೂನಿನ ಅಕ್ಕಿಯನ್ನು ೪ ಆಣೆಗೆ ೫ ಪಾವಿನಂತೆ ಕೊಂಡು ತಿನ್ನುತ್ತಿದ್ದಾರೆ. ಮ್ಯುನಿಸಿಪಾಲಿಟಿಯವರೇ ಹಾಗೆ ಮಾರಿಸುತ್ತಿದ್ದಾರೆ

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಶಿವಮೊಗ್ಗೆಯೊಳಗೆ ೧ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟು, ಅದಕ್ಕೆ ಮ|| ಡಿ.ಕೆ. ರಾಮರಾವ್ ಬಿ.ಎ.ಬಿ.ಎಲ್. ರವರು ಫಸ್ಟ್‌ಕ್ಲಾಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರು, ಮತ್ತು ಅದೇ ಊರಿನಲ್ಲಿ ೨ನೆ ತರಗತಿ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟು ೧, ಅದಕ್ಕೆ ಮ|| ಜಿ. ಕೃಷ್ಣಮೂರ್ತಿಯವರು ೨ನೆ ತರಗತಿ ಮೇಜಿಸ್ಟ್ರೇಟರು. ಸಾಗರದಲ್ಲಿ ೨ನೆ ತರಗತಿ ಮೇಜಿಸ್ಟ್ರೇಟ್ ಕೋರ್ಟು ೧. ಅದಕ್ಕೆ ಮ|| ವಿ. ಗೋಪಾಲರಾವ್ ಬಿ.ಎ. ಯವರು ೨ನೆ ತರಗತಿ ಮೇಜಿಸ್ಟ್ರೇಟರಾಗಿ ನಿಯಮಿಸಲ್ಪಡುವರು.

ಮರಿಮಲ್ಲಪ್ಪನವರ ಹೈಸ್ಕೂಲಿನ ಲೆಕ್ಕವನ್ನು ಪರಿಶೋಧಿಸಲು ಸರ್ಕಾರದಿಂದ ನಿಯಮಿಸಲ್ಪಟ್ಟಿದ್ದ ಆಡಿಟರ ವರದಿಯನ್ನು ಸ್ಟಾರ್ ಪತ್ರಿಕೆಯಲ್ಲಿ ಜನರ ತಿಳಿವಳಿಕೆಗಾಗಿ ಪ್ರಚುರಪಡಿಸುವುದಕ್ಕೋಸ್ಕರ ಅದರ ಪ್ರತಿಯೊಂದನ್ನು ದಯವಿಟ್ಟು ಕಳುಹಿಸಿಕೊಡಬೇಕೆಂದು ಸ್ಕೂಲ್ ಟ್ರಸ್ಟಿನ ಪ್ರೆಸಿಡೆಂಟರಾದ ಮಿ|| ಟಿ. ಡೆನ್ಹಾಂ ಸಾಹೇಬರವರಿಗೆ ಬರೆದು ಕೇಳಿದ್ದೆವು. ಆದರೆ ಈವರೆಗೆ ಅದರ ಪ್ರತಿಯು ಕಳುಹಲ್ಪಡದೆಯೂ ಯಾವುದೊಂದು ಉತ್ತರವೂ ಬಾರದೆಯೂ ಇರಲು ಕಾರಣವು ತಿಳಿಯಲಿಲ್ಲವು. ಪ್ರೆಸಿಡೆಂಟರು ಈಗಲಾದರೂ ವಿಶ್ವಾಸವಿಟ್ಟು ಕಳುಹಿಸಿಕೊಡುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಮ್ಯುನಿಸಿಪಾಲಿಟಿಯವರು ಸ್ವತಃ ಅಂಗಡಿಗಳನ್ನಿಟ್ಟು ಅಕ್ಕಿ ರಾಗಿಗಳನ್ನು ಮಾರಿಸುತ್ತಿರುವುದರಿಂದ ದಿನ ೧ಕ್ಕೆ ೧|| ಸಾವಿರ ರೂ.ಗಳ ನಷ್ಟವು ಸಂಭವಿಸುತ್ತಿರುವುದೆಂದು ಸಂಪದಭ್ಯುದಯ ಪತ್ರಿಕೆಯಲ್ಲಿ ಲೇಖನವು ಬಂದಿರುತ್ತದೆ. ಇದನ್ನು ನೋಡಿ ಪ್ರಜೆಗಳು ಸಂಶಯಪಡುತ್ತಿದ್ದಾರೆ. ಅದು ಸುಳ್ಳೋ ನಿಜವೋ ಗೊತ್ತಾಗಲಿಲ್ಲ. ಮ್ಯುನಿಸಿಪಾಲಿಟಿಯವರು ಅದನ್ನು ನೋಡಿಯೂ ಮೌನವನ್ನು ಧರಿಸುವುದನ್ನು ನೋಡಿದರೆ ಪ್ರಜೆಗಳ ಭೀತಿಯು ಮತ್ತಷ್ಟು ಹೆಚ್ಚುತ್ತಿದೆ. ಯಥಾರ್ಥ ಸ್ಥಿತಿಯನ್ನು ಮ್ಯುನಿಸಿಪಲ್ ಅಧಿಕಾರಿಗಳು ಹೇಗಾದರೂ ಹೊರಬೀಳುವಂತೆ ಮಾಡುವುದು ವಿಹಿತವು.

ವೈಸ್ರಾಯರ ಎಗ್ಜಿಕ್ಯೂಟೀವ್ ಕೌನ್ಸಿಲಿನಲ್ಲಿ ಮೆಂಬರಾಗಿರುವ ಸರ್ ಶಂಕರನ್ ನಾಯರ್‌ರವರ ಅಧಿಕಾರದವಧಿಯು ಇನ್ನೂ ೨ ವರ್ಷಗಳ ಕಾಲದವರೆಗೆ ಇರುವುದು ಆದರೆ ಅವರು ಯಾವುದೋ ಒಂದು ಅಸಮಾಧಾನದಿಂದ ತಮ್ಮ ಕೆಲಸವನ್ನು ಮುಂದಣ ಏಪ್ರಿಲ್ ತಿಂಗಳಲ್ಲಿ ಬಿಟ್ಟುಬಿಡುವರೆಂದು ಪಾಟ್ನಾನಗರದ ಸರ್ಚ್‌ಲೈಟ್ ಎಂಬ ಪತ್ರಿಕೆಯು ಹೇಳಿರುತ್ತದೆ. ಇದನ್ನಾಧಾರಮಾಡಿಕೊಂಡೋ ಏನೋ ಬೆಂಗಳೂರು ಡೇಲಿಪೋಸ್ಟ್ ಪತ್ರಿಕೆಯು ಆ ಸ್ಥಾನಕ್ಕೆ ನಮ್ಮ ಸರ್ ವಿಶ್ವೇಶ್ವರಯ್ಯನವರು ನಿಯಮಿಸಲ್ಪಡುವರೆಂದು ಪ್ರಕಟಿಸಿರುತ್ತದೆ. ಹಾಗಾದರೆ ಸಂತೋಷವೇ. ನಿಜಸ್ಥಿತಿಯನ್ನು ಮುಂದೆ ನೋಡಬೇಕು.

ಮ|| ಗಳಾದ ನಾಯಬ್ ನಾರಾಯಣರಾಯರು, ಎಚ್. ಸೀತಾರಾಮಯ್ಯನವರು, ದೊಡ್ಡಮಲ್ಲಣ್ಣನವರು, ಮಿರ್‌ನೈಜಾಮುದ್ದೀನ್ ಅಲ್ಲಿಖಾನ್‌ರವರು, ಕಾವೇರಿಪಟ್ಟಣಂ ಸುಬ್ರಾಯಸೆಟ್ಟರು, ಎ. ಸತ್ತಾರ್‌ಸೇಟರು, ಎಚ್. ಸುಬ್ಬರಾಜ ಅರಸಿನವರು, ವೈ. ವಿರೂಪಾಕ್ಷಯ್ಯನವರು, ಎಸ್. ಸಿದ್ದೋಜಿರಾಯರು, ವಿ. ಡಿ. ನಾರಾಯಣಸ್ವಾಮಿ ಮೊದಲಿಯಾರರು, ಅರುಳದಾಸ್‌ರವರು, ಎ. ಕೃಷ್ಣೇ ಅರಸಿನವರು, ಡಿ. ನರಸಿಂಗರಾಯರು, ಎಂ. ನರಸಿಂಹಸ್ವಾಮಿಯವರು ಮತ್ತು ದರ್ವೇಷ್‌ಪೀರ್‌ರವರು ೨ನೆಯ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟು ರಾಜಧಾನಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು ಅರಮನೆ ಇಲಾಖೆಯಲ್ಲಿ ದರ್ಬಾರ್ ಭಕ್ಷಿ ಮ|| ಎಚ್. ಲಿಂಗರಾಜೆ ಅರಸಿನವರಿಗೂ ಮಿಲಿಟರಿ ಭಕ್ಷಿ ಮ|| ಎ. ವಿ. ಸುಬ್ರಹ್ಮಣ್ಯರಾಜೆ ಅರಸಿನವರಿಗೂ ಬಾಡಿಗಾರ್ಡ್ ಕಮಾಂಡೆಂಟ್ ಮ|| ಗೋಪಾಲರಾಯರಿಗೂ ತಲಾ ೩೦೦-೫೦-೪೦೦ ರೂಪಾಯಿನಂತೆ ಗ್ರೇಡು ನಿಷ್ಕರ್ಷೆಮಾಡಿ ಬಡ್ತಿ ಮಾಡಿರುತ್ತಾರೆ. ಮ|| ಎಂ. ಪಿ. ಸುಬ್ರಹ್ಮಣ್ಯರಾಜೆ ಅರಸಿನವರಿಗೆ ೧೦೦-೧೫೦ ರೂಪಾಯಿನಂತೆಯೂ, ಅರಮನೆ ಖಜಾನೆಯ ಮೊಖ್ತೇಸರ್ ಮ|| ಎಲ್. ಆರ್. ಸುಬ್ಬರಾಯರಿಗೆ ೧೦೦-೧೦-೧೫೦ ರೂಪಾಯಿನಂತೆಯೂ, ಮೋತಿಖಾನೆ ಮೊಖ್ತೇಸರ್ ಮ|| ಸಿ. ವಿ. ಸುಬ್ರಹ್ಮಣ್ಯರಾಜೆ ಅರಸಿನವರಿಗೆ ೮೦-೧೦-೧೦೦ ರೂಪಾಯಿನಂತೆಯೂ ಬಡ್ತಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆಂದು ಕೇಳಿ ಸಂತೋಷಪಡುತ್ತೇವೆ.

ತಾವು ರಜಾವನ್ನು ತೆಗೆದುಕೊಂಡಿರುವ ವಿಷಯವಾಗಿ ಈಗ ಪತ್ರಿಕೆಗಳಲ್ಲಿ ವಾದೋಪವಾದಗಳು ನಡೆಯುತ್ತಿರುವುದು ತಮಗೆ ವಿಷಾದಕರವಾಗಿರುವುದೆಂತಲೂ, ತಮ್ಮ ರಜಾವನ್ನು ಶ್ರೀಮನ್ಮಹಾರಾಜರವರು ಒಪ್ಪುವುದಕ್ಕೆ ಮುಂಚೆ ರಾಜ್ಯಾಂಗದ ಏರ್ಪಾಟುಗಳಲ್ಲಿ ಯಾವ ಮಾರ್ಪನ್ನು ಮಾಡುವ ಉದ್ದೇಶವೂ ಅವರಿಗಿರಲಿಲ್ಲವೆಂದು ತಾವು ಖಂಡಿತವಾಗಿ ಹೇಳುವೆವೆಂತಲೂ, ದಿವಾನರುಗಳು ಇದುವರೆಗೆ ಅನುಭವಿಸದೆ ಇದ್ದಂಥ ೬ ವರ್ಷದ ದಿವಾನಪದವಿಯನ್ನು ತಾವು ನಿರ್ವಹಿಸಿರುವೆವೆಂತಲೂ, ತಮ್ಮ ರಜಾ ಮುಗಿದ ಕೂಡಲೇ ತಮ್ಮ ಉದ್ಯೋಗದ ಕಾಲವು ಮುಗಿದರೆ ಅದರಲ್ಲಿ ವಿಪರೀತವೇನೂ ಇಲ್ಲವೆಂತಲೂ, ಸರ್ ಎಂ. ವಿಶ್ವೇಶ್ವರಯ್ಯನವರು ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯೊಡನೆ ಸಂಭಾಷಿಸಿದರೆಂದು ಪ್ರಕಟವಾಗಿದೆ. “ಅಸಮಾಧಾನಕರವಾದ ಹೊಸ ಏರ್ಪಾಟಿನಿಂದ ಸರ್ ವಿಶ್ವೇಶ್ವರಯ್ಯನವರು ರಜಾಪಡೆದರು ಕೆಲಸವನ್ನು ಬಿಟ್ಟರು” ಎಂದು ಗುಲ್ಲೆಬ್ಬಿಸಿರುವ ಜನರ ಬಾಯಿ ಈಗಲಾದರೂ ಮುಚ್ಚೀತೆ !

ಬರುವ ಜನವರಿ ತಿಂಗಳಿಂದ ಸಂಸ್ಥಾನದ ಬೆಂಗಳೂರು ಶಿವಮೊಗ್ಗಾ ಡಿಸ್ಟ್ರಿಕ್ಟುಗಳೆರಡರಲ್ಲಿ ಜ್ಯುಡಿಸಿಯಲ್ ಮತ್ತು ಎಗ್ಜಿಕ್ಯೂಟೀವ್ ಅಧಿಕಾರಗಳು ಪ್ರತ್ಯೇಕಿಸಲ್ಪಟ್ಟು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟುಗಳು ಸ್ಥಾಪಿಸಲ್ಪಡುವುವು. ರೆವಿನ್ಯೂ ಅಧಿಕಾರಿಗಳಿಗೆ ಕ್ರಿಮಿನಲ್ ವಿಚಾರಣೆಯು ತಪ್ಪಿಹೋಗುವುದು. ಇದರ ಪ್ರಕಾರ ಆಗಿರುವ ಏರ್ಪಾಟಿನ ಕ್ರಮವೇನೆಂದರೆ— ಬೆಂಗಳೂರು ಪಟ್ಟಣದಲ್ಲಿರುವ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಬೆಂಗಳೂರು ಪಟ್ಟಣದ ಮತ್ತು ಬೆಂಗಳೂರು, ಕಾನಕಾನಹಳ್ಳಿ, ಚೆನ್ನಪಟ್ಟಣ, ಮಾಗಡಿ, ಕ್ಲೋಸ್‌ಪೇಟೆ ಈ ತಾಲ್ಲೂಕುಗಳ ೧ನೆ ತರಗತಿ ಕೇಸುಗಳೂ ಮತ್ತು ಬೆಂಗಳೂರು ಪಟ್ಟಣದ ೨-೩ನೆ ತರಗತಿ ಕೇಸುಗಳೂ ಸಹ ವಿಚಾರಣೆ ಮಾಡಲ್ಪಡುವುವು. ಇದಕ್ಕೆ ಮ|| ಬಿ. ಬಸವಾರಾಧ್ಯರು ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿದ್ದಾರೆ. ಇದಲ್ಲದೆ ಬೆಂಗಳೂರಿನಲ್ಲೇ ಹೊಸದಾಗಿ ಏರ್ಪಡಿಸಲ್ಪಡುವ ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೊಸಕೋಟೆ, ಆನೆಕಲ್ಲು, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಈ ತಾಲ್ಲೂಕುಗಳ ೧ನೆ ತರಗತಿ ಕೇಸುಗಳೂ, ದೇವನಹಳ್ಳಿ, ನೆಲಮಂಗಲ, ದೊಡ್ಡಬಳ್ಳಾಪುರ ತಾ||ಗಳ ೨-೩ನೆ ತರಗತಿ ಕೇಸುಗಳೂ ವಿಚಾರಿಸಲ್ಪಡುವುವು. ಇಲ್ಲಿಗೆ ಮ|| ಎಸ್. ಕೃಷ್ಣರಾವ್, ಬಿ.ಎ., ಬಿ.ಎಲ್. ರವರು ಫಸ್ಟ್ ಕ್ಲಾಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಡುವರು. ಅಲ್ಲದೆ ಅದೇ ಬೆಂಗಳೂರಿನಲ್ಲೇ ೨ನೆ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟು ಸ್ಥಾಪಿಸಲ್ಪಡುವುದು. ಅದರಲ್ಲಿ ಬೆಂಗಳೂರು, ಹೊಸಕೋಟೆ, ಆನೆಕಲ್ಲು, ತಾ||ಗಳ ೨-೩ನೆ ತರಗತಿ ಕೇಸುಗಳು ವಿಚಾರಿಸಲ್ಪಡುವುವು. ಇದಕ್ಕೆ ಮ|| ಬಿ. ನಾರಾಯಣಸಾಮಯ್ಯಂಗಾರರು ೨ನೆ ತರಗತಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿರುವರು.

ರಾಜಭಕ್ತಿಯುತರಾದ ಮೈಸೂರು ದೇಶದ ವೀರಶೈವರು.

ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ಸೀಮೆಯ ವೀರಶೈವ ವಿದ್ಯಾವರ್ಧಕ ಫಂಡ್ ಅಸೋಸಿಯೇಷನ್ನಿನ ಪ್ರೆಸಿಡೆಂಟರಾದ ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟಿ, ಸಿ. ಐ. ಇ., ಯವರಿಂದ ಮೈಸೂರು ಸೀಮೆಯ ವೀರಶೈವ ಜನಾಂಗದವರ ಪರವಾಗಿ ಈ ಕೆಳಗೆ ಕಂಡ ತಂತ್ರೀವಾರ್ತೆಗಳು ತಾ|| 17-12-1918 ರಲ್ಲಿ ಕಳುಹಲ್ಪಟ್ಟುವು.

I. ಮೈಸೂರು ಶ್ರೀಮನ್ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರ ಸನ್ನಿಧಿಗೆ.—

ರಾಜಸೇವಾಧುರೀಣ ಸರದಾರ್ ಎಂ. ಕಾಂತರಾಜ ಅರಸ್, ಸಿ. ಎಸ್. ಐ., ಯವರನ್ನು ಸಂಸ್ಥಾನದ ದಿವಾನರನ್ನಾಗಿ ಶ್ರೀಮನ್ ಮಹಾರಾಜರವರು ಕೃಪೆಯಿಟ್ಟು ನಿಯಮಿಸಿದುದಕ್ಕಾಗಿ ಮೈಸೂರು ಲಿಂಗಾಯತ ವಿದ್ಯಾವರ್ಧಕ ಸಂಘದವರು ಸಂಸ್ಥಾನದ ವೀರಶೈವ ಜನಾಂಗದ ಪರವಾಗಿ ತಮ್ಮ ವಿಧೇಯತಾ ಪುರಸ್ಸರವಾದ ಕೃತಜ್ಞತೆಯನ್ನು ಸಮರ್ಪಿಸುತ್ತಾರೆ. ಸರದಾರ್ ರವರು ರಾಜಕುಟುಂಬದ ಸಮೀಪಸಂಬಂಧಿಗಳಾಗಿಯೂ, ಸಂಸ್ಥಾನದ ಪ್ರಜೆಗಳಲ್ಲಿ ತತ್ರಾಪಿ ಹಿಂದುಳಿದ ಜನಾಂಗದವರಲ್ಲಿ ವಿಶೇಷ ಸಾನುಭೂತಿಯುಳ್ಳವರಾಗಿಯೂ ಇರುವುದರಿಂದ ಈ ಉನ್ನತ ಪದವಿಗೆ ಸಂಪೂರ್ಣವಾಗಿ ಅರ್ಹರಾಗಿರುತ್ತಾರೆ. ಇವರ ನಿಯಮನದಿಂದ ಸಂಸ್ಥಾನದ ಸಮಸ್ತ ಪ್ರಜೆಗಳಿಗೂ ಸಂತೃಪ್ತಿಯಾಗಿರುತ್ತದೆ. ಮತ್ತು ಇವರು ಅತ್ಯಂತ ಜನಾನುರಾಗಿಗಳಾದ ದಿವಾನರೆಂದು ಸಕಾಲದಲ್ಲಿ ಖ್ಯಾತಿಗೊಳ್ಳುವರೆಂದು ಈ ಸಂಘದವರು ನಂಬುತ್ತಾರೆ.

II. ರಾಜಸೇವಾಧುರೀಣ ಸರದಾರ್ ಎಂ. ಕಾಂತರಾಜ ಅರಸ್, ಸಿ. ಎಸ್. ಐ., ಬೆಂಗಳೂರು ಇವರ ಸನ್ನಿಧಿಗೆ.—

ತಾವು ಸಂಸ್ಥಾನದ ದಿವಾನ ಪದವಿಗೆ ನಿಯಮಿಸಲ್ಪಟ್ಟಿರುವುದಕ್ಕಾಗಿ ಮೈಸೂರು ಸಂಸ್ಥಾನದ ವೀರಶೈವ ಜನಾಂಗದವರ ಪರವಾಗಿ ಮೈಸೂರು ಲಿಂಗಾಯತ ವಿದ್ಯಾವರ್ಧಕ ಫಂಡಿನ ಸಂಘದವರು ತಮ್ಮನ್ನು ವಿಧೇಯತಾ ಪುರಸ್ಸರವಾಗಿ ಅಭಿನಂದಿಸುತ್ತಾರೆ. ತಾವು ಈ ಪದವಿಯನ್ನಲಂಕರಿಸಿರುವುದು ಸಂಸ್ಥಾನದ ಕ್ಷೇಮಲಾಭಕ್ಕೆ ಶುಭಸೂಚಕವಾಗಿದೆ. ಸಂಸ್ಥಾನದ ಪ್ರಜೆಗಳಲ್ಲಿ ಮುಖ್ಯವಾಗಿ ಹಿಂದುಳಿದ ಜನಾಂಗದವರಲ್ಲಿ ತಮಗೆ ವಿಶೇಷ ಸಾನುಭೂತಿಯಿರುವುದರಿಂದ ತಮ್ಮ ಆಡಳಿತವು ಅತ್ಯಂತ ಫಲಪ್ರದವಾಗುವುದೆಂದು ಸಂಘದವರು ನಂಬುತ್ತಾರೆ.

ಭರತಖಂಡದ ವೃತ್ತಾಂತಗಳು.

ಬೊಂಬಾಯಿಯಲ್ಲಿ ಆರೋಗ್ಯಸ್ಥಿತಿಯು ಮತ್ತೆ ದಿಗಿಲಿಗೆ ಆಸ್ಪದವನ್ನುಂಟುಮಾಡಿದೆ. ಕಳೆದ ತಾ|| ೧೪ ರಲ್ಲಿ ಅಲ್ಲಿಯ ಮರಣಸಂಖ್ಯೆಯು ೧೯೪ಆಗಿದೆ.

ಭರತಖಂಡಕ್ಕೆ ವಿದೇಶಗಳಿಂದ ಮೋಟಾರುಬಂಡಿ ಮೋಟಾರುಸೈಕಲ್ಲುಗಳು ಬರಲಾಗದೆಂದು ಯುದ್ಧಸಮಯದಲ್ಲಿ ಮಾಡಿದ್ದ ನಿರೋಧವು ಈಗ ಸರ್ಕಾರದವರಿಂದ ತೆಗೆದುಹಾಕಲ್ಪಟ್ಟಿತು.

ಮದ್ರಾಸಿನ ತಿರುವಲಕ್ಕೇಣಿಯಲ್ಲಿ ಪ್ಲೇಗು ಕಾಣಿಸಿಕೊಂಡು ಹಬ್ಬುತ್ತಿದೆ. ಅಲ್ಲಿಯ ಪ್ರೆಸಿಡೆನ್ಸಿ ಕಾಲೇಜು, ಇಂಜನಿಯರಿಂಗ್ ಕಾಲೇಜು, ಪಚ್ಚಯಪ್ಪ ಕಾಲೇಜುಗಳು ಈ ಕಾರಣದಿಂದ ಮುಚ್ಚಲ್ಪಟ್ಟವೆ.

ವೈಸ್ರಾಯರವರು ಬರುವ ಜನವರಿ ತಾ|| ೩ ರಲ್ಲಿ ಕಲಕತ್ತಾ ಪಟ್ಟಣದಿಂದ ಹೊರಟು ಪುಸೆಗೆ ಬಂದು ಅಲ್ಲಿರುವ ವ್ಯವಸಾಯ ಸಂಶೋಧನಾ ಕಾರ್ಯಾಲಯ ಮೊದಲಾದುವುಗಳನ್ನು ನೋಡಿಕೊಂಡು ಜನವರಿ ತಾ|| ೮ ರಲ್ಲಿ ದಿಲ್ಲಿಗೆ ಸೇರುವರು.

ಕೆಲಸವನ್ನು ಬಿಟ್ಟು ಹೋಗಲಿದ್ದ ಬೊಂಬಾಯಿ ಗೌರ್ನರಿಗೆ ಕಳೆದ ತಾ|| ೭ ರ ರಾತ್ರಿ ಆ ಅಧಿಪತ್ಯದ ಅನೇಕಮಂದಿ ಮಹಾರಾಜರೂ ಜಹಗೀರ್ದಾರರೂ ಸೇರಿ ಅಭೂತಪೂರ್ವವಾದ ವೈಭವದಿಂದ ಔತಣಮಾಡಿ ಅವರ ಕಾಲದ ರಾಜ್ಯಭಾರದ ಗುಣಗಳನ್ನು ಪ್ರಶಂಸೆ ಮಾಡಿದರು. ತಾ|| ೧೬ ರಲ್ಲಿ ಅವರು ಪತ್ನೀ ಸಮೇತ ಸೀಮೆಗೆ ಪ್ರಯಾಣಮಾಡಿದರು.

ಯದುನಾಥ ಸರ್ಕಾರ್ ಎಂಬುವವರು ಮಾಡರ್ನ್ ರಿವ್ಯೂ ಎಂಬ ಪತ್ರಿಕೆಗೆ ಒಂದು ಲೇಖನವನ್ನು ಬರೆದು ಶಿವಾಜಿಯು ಭೂಸೈನ್ಯವನ್ನು ಪ್ರಬಲವಾಗಿಟ್ಟಿದ್ದುದು ಮಾತ್ರವೇ ಅಲ್ಲದೆ ಒಂದು ನೌಕಾದಳವನ್ನೂ ಇಟ್ಟಿದ್ದನೆಂದೂ ಅದರಲ್ಲಿ ಎಲ್ಲ ಜಾತಿಯ ೪೦೦ ನೌಕೆಗಳು ಇದ್ದುವೆಂದೂ, ಅವುಗಳ ಉದ್ಯೋಗಕ್ಕೆ ಬೊಂಬಾಯಿ ತೀರದ ಹಡಗುಗಳ್ಳರ ಗುಂಪಿನಿಂದ ಸಮರ್ಥರಾದವರನ್ನು ಆರಿಸಿ ನಿಯಮಿಸಿದ್ದನೆಂದೂ, ಈ ಮಹಾರಾಷ್ಟ್ರ ನೌಕಾದಳವು ಆಗಣ ಕಾಲದಲ್ಲಿ ಜಾಂಜಿರಾದ ಸಿದ್ದಿಗಳಿಗೂ ಮೊಗಲರಿಗೂ ಆಂಗ್ಲವರ್ತಕರಿಗೂ ಕಂಟಕವಾಗಿದ್ದಿತೆಂದೂ ಹಲವುಸಲ ಜಲಯುದ್ಧಗಳೂ ನಡೆದಿದ್ದುವೆಂದೂ ತಿಳಿಯಿಸಿರುತ್ತಾರೆ.

ಭರತಖಂಡದಲ್ಲಿ ಲೋಹಮಾರ್ಗಸ್ಥಾಪನೆಗೆ ೧೮೫೩ನೆ ವರ್ಷದಿಂದ ಆರಂಭವಾಯಿತು. ಮೊಟ್ಟಮೊದಲು ಸ್ಥಾಪಿತವಾದುದು ಗ್ರೇಟ್ ಇಂಡಿಯನ್ ಪೆನಿನ್ಸುಲರ್ ರೈಲ್ವೆಕಂಪೆನಿಯು. ಇದುವರೆಗೆ ಭರತಖಂಡದಲ್ಲೆಲ್ಲಾ ೩೬|| ಸಾವಿರ ಮೈಲಿಗಳುದ್ದದ ಲೋಹಮಾರ್ಗ ಸ್ಥಾಪನೆಯಾಗಿದೆ. ಪ್ರಪಂಚದಲ್ಲಿ ಲೋಹಮಾರ್ಗಸಂಘಗಳಿಗೆ ಆಗುತ್ತಿರುವ ಆದಾಯವೆಲ್ಲಕ್ಕಿಂತಲೂ ಭರತಖಂಡದಲ್ಲಿ ಆಗುತ್ತಿರುವ ಲಾಭವೇ ಹೆಚ್ಚೆಂದು ಕಳೆದ ಡಿಸೆಂಬರ್ ತಾ|| ೧೨ ರಲ್ಲಿ ಬೊಂಬಾಯಿಯಲ್ಲಿ ಕೂಡಿದ ಇಂಜನಿಯರಿಂಗ್ ಸಭೆಯಲ್ಲಿ ಹೇಳಲ್ಪಟ್ಟಿರುವುದು. ಭರತಖಂಡದಲ್ಲಿ ಹೊಗೆಬಂಡಿಗಳನ್ನು ವಿದ್ಯುಚ್ಛಕ್ತಿಯಿಂದ ನಿರಪಾಯವಾಗಿ ನಡೆಯಿಸಬಹುದೆಂಬ ವಿಷಯವು ಅಲ್ಲಿ ಚರ್ಚೆಗೆ ಬಂದಿತು. ಗ್ರೇಟ್ ಇಂಡಿಯನ್ ಪೆನಿನ್ಸುಲರ್ ಕಂಪೆನಿಯವರು ಆ ಏರ್ಪಾಟನ್ನು ಮೊಟ್ಟಮೊದಲು ನಡೆಯಿಸಬೇಕೆಂದು ಈಗಾಗಲೇ ಪ್ರಯತ್ನಿಸಿರುವರಂತೆ.

ಬೊಂಬಾಯಿಯ ಹಿಂದಣ ಗೌರ್ನರ ಪತ್ನಿಯಾದ ಲೇಡಿ ವೆಲ್ಲಿಂಗ್ಡನ್‌ರವರ ಸ್ಮಾರಕನಿಧಿಗೆ ಅನೇಕ ಸಂಸ್ಥಾನಗಳ ರಾಣಿಯರು ಚಂದಾಕೊಟ್ಟು ೭ ಲಕ್ಷ ರೂ. ಗಳನ್ನು ಕೂಡಿಸಿದ್ದಾರೆ. ಈ ಹಣವನ್ನು ಕೊಟ್ಟ ಆಯಾ ದೇಶಗಳಲ್ಲಿ ಲೇಡಿ ವೆಲ್ಲಿಂಗ್ಡನ್‌ರವರ ಹೆಸರಿನ ಮೇಲೆ ಬೇರೆ ಬೇರೆ ಧರ್ಮಪ್ರತಿಷ್ಠಾಪನೆಗಳು ಏರ್ಪಡಿಸಲ್ಪಡುವುವು. ಇದರ ಜತೆಗೆ ಒಂದು ವಿಜ್ಞಾಪನ ಪತ್ರವನ್ನು ಅವರಿಗೆ ಸಮರ್ಪಿಸುವುದಕ್ಕೆ ಏರ್ಪಡಿಸಿಕೊಂಡಿರುವಷ್ಟರಲ್ಲಿ ಈ ಏರ್ಪಾಟಿಗೆಲ್ಲಾ ಮೂಲಭೂತೆಯರಾಗಿದ್ದ ಭಾವನಗರಿ ಮಹಾರಾಣಿಯವರು ಮೃತರಾದರು. ಅದುಕಾರಣ ಅವರು ಏರ್ಪಡಿಸಿದ್ದ ಬೆಳ್ಳಿಯ ಪಟ್ಟಿಗೆಯಲ್ಲಿ ವಿಜ್ಞಾಪನ ಪತ್ರವನ್ನಿಟ್ಟು ಅದರ ಮೇಲೆ ಫಂಡಿಗೆ ಧನಸಹಾಯ ಮಾಡಿದ ರಾಣಿಯರುಗಳ ಹೆಸರುಗಳನ್ನೆಲ್ಲಾ ಕೆತ್ತಿಸಿ, ಅವರುಗಳೆಲ್ಲರ ಪರವಾಗಿ ಭಾವನಗರಿ ಮಂತ್ರೀಶ್ವರರು ಅದನ್ನು ಲೇಡಿ ವೆಲ್ಲಿಂಗ್ಡನ್‌ರವರಿಗೆ ಸಮರ್ಪಿಸಿದರು.

ಕಲಕತ್ತಾ ವಿದ್ಯಾಪೀಠದಲ್ಲಿ ಕಳೆದಸಲ ಪಟ್ಟಪರೀಕ್ಷೆಯಲ್ಲುತ್ತೀರ್ಣರಾದವರ ಸಂಖ್ಯೆಯು ಬಹಳ ಹೆಚ್ಚಾಗಿದ್ದಿತು. ಬಿ. ಎ. ಪರೀಕ್ಷೆಯೊಂದರಲ್ಲೇ ೫೧೭ ಮಂದಿಗಳು ಉತ್ತೀರ್ಣರಾಗಿರುವರು. ಅವರಲ್ಲಿ ಹೆಂಗುಸರೇ ೧೨ ಮಂದಿಗಳು. ಪಟ್ಟಪ್ರದಾನ ಸಭೆಯಲ್ಲಿ ವೈಸ್ ಚಾನ್ಸಲರು ಪಟ್ಟಾಂಚಿತರನ್ನು ಕುರಿತು ಉಪನ್ಯಾಸ ಮಾಡುವಾಗ್ಗೆ “ನೀವುಗಳೆಲ್ಲರೂ ಗತಾನುಗತಿಕರಾಗಿ ವಕೀಲತನಕ್ಕೇ ಪ್ರವೇಶಿಸಬೇಡಿರಿ. ಮಾನವಕೋಟಿಯ ಹಿತಕ್ಕೂ ದೇಶಾಭ್ಯುದಯಕ್ಕೂ ಸಾಧಕವಾದ ಪಾರಿಶ್ರಾಮಿಕ ವೃತ್ತಿಗಳಿಗೆ ತೊಡಗಬೇಕು. ಈಗ ದೇಶಕ್ಕೆ ಅದರ ಅಭ್ಯುದಯವು ಅತ್ಯವಶ್ಯಕವಾಗಿದೆ. ಈಗಣ ಯುದ್ಧದಲ್ಲಿ ಎಷ್ಟೋ ಮಂದಿ ಮುಖ್ಯ ಪುರುಷರು ಹತರಾದರು. ವಸ್ತುಸಾಮಗ್ರಿಯು ಅಪರಿಮಿತವಾಗಿ ನಷ್ಟವಾಗಿರುವುದು. ದೇಶದಲ್ಲಿ ಪೂರ್ವಸ್ಥಿತಿಯುಂಟಾಗಬೇಕಾದರೆ ಪರಿಶ್ರಮಗಳೂ ವಾಣಿಜ್ಯವೂ ಅತ್ಯತಿಶಯವಾಗಿ ವೃದ್ಧಿಗೊಳ್ಳಬೇಕಾಗಿದೆ” ಎಂದು ಉಪದೇಶಿಸಿದರು.

ಕಳೆದ ತಾ|| ೧೬ನೆ ಸೋಮವಾರದ ದಿನ ಹೊಸ ಗೌರ್ನರವರಾದ ಸರ್ ಜಾರ್ಜ್ ಅಂಬ್ರೋಸ್ ಲಾಯಿಡ್‌ರವರು ಪತ್ನೀಪುತ್ರಸಮೇತರಾಗಿ ಬೊಂಬಾಯಿಪಟ್ಟಣದ ಅಪೋಲೋ ಬಂದರಿನಲ್ಲಿ ಬೆಳಗಿನ ೮|| ಗಂಟೆಗೆ ಹಡಗಿನಿಂದಿಳಿದರು. ಅನೇಕ ಸಂಸ್ಥಾನಾಧೀಶರೂ, ಸರ್ದಾರರೂ, ಪುರಾಧಿಕಾರಿಗಳೂ, ಪ್ರಜಾಪ್ರಮುಖರೂ, ಸರ್ಕಾರಿ ಉದ್ಯೋಗಿಗಳೂ ಕಾದಿದ್ದು ಬಹು ಸಂಭ್ರಮದಿಂದ ಸ್ವಾಗತಿಸಿದರು. ಮ್ಯುನಿಸಿಪಾಲಿಟಿಯವರು ಸಮರ್ಪಿಸಿದ ವಿಜ್ಞಾಪನ ಪತ್ರಿಕೆಗೆ ಅವರು ಉತ್ತರವನ್ನು ಕೊಡುವಾಗ್ಗೆ ಆಗಸ್ಟ್ ತಾ|| ೨೦ ರಲ್ಲಿ ಆಂಗ್ಲಪ್ರಭುತ್ವದವರಿಂದ ಮಾಡಲ್ಪಟ್ಟಿರುವ ವಾಗ್ದಾನದಂತೆ ಭರತಖಂಡಕ್ಕೆ ಸ್ವಾತಂತ್ರ್ಯಗಳು ದೊರೆಯುವ ಹಾಗೆ ಮಾಡಲು ನಾನು ಸಹಾಯಕನಾಗಿರುವೆನೆಂದೂ, ಉಳಿದ ನಿಮ್ಮ ಆಶಯಗಳನ್ನೂ ಫಲಿಸುವ ವಿಷಯದಲ್ಲೂ ನಾನು ಶಕ್ತಿವಂಚನೆಯಿಲ್ಲದೆ ಸಹಾಯಮಾಡುವೆನೆಂದೂ, ನನ್ನ ಪತ್ನಿಯು ಸಾಂಘಿಕಾಭಿವೃದ್ಧಿಕಾರ್ಯಗಳಲ್ಲಿ ನಿಮಗೆ ಸಹಾಯಕರಾಗಿರುವರೆಂದೂ, ಇದುವರೆಗೆ ಇಲ್ಲಿಯ ಗೌರ್ನರಾದ ಲಾರ್ಡ್ ವೆಲ್ಲಿಂಗ್ಡನ್‌ರವರು ನಡೆದ ಮಾರ್ಗದಲ್ಲೇ ನಾನು ನಡೆಯಲು ಪ್ರಯತ್ನಿಸುವೆನೆಂದೂ, ದೇಶಾಭ್ಯುದಯಸಾಧಕವಾದ ಪ್ರತಿ ವಿಷಯದಲ್ಲೂ ನೀವುಗಳು ಸಹಾಯಕರಾಗಿರಬೇಕೆಂದೂ ಅಪ್ಪಣೆ ಕೊಡಿಸಿದರು.

ಕಳೆದ ತಾ|| ೧೨ ರಲ್ಲಿ ಬೊಂಬಾಯಿಯಲ್ಲಿ ಕಾಂಗ್ರೆಸ್‌ಸಂಘಸಭೆಯು ಕೂಡಿದ್ದು ರಾಷ್ಟ್ರೀಯ ಮಹಾಸಭೆಗೆ ಪ್ರತಿನಿಧಿಗಳನ್ನು ಆರಿಸುವ ಕೆಲಸವನ್ನು ಮಾಡಿದರು. ಆಗ್ಗೆ ಮಿ|| ಎಸ್. ಆರ್. ಬೊಮ್ಮಂಜಿಯವರನ್ನು ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಡಕೂಡದೆಂದೂ, ಅವರು ಕಾಂಗ್ರೆಸ್ಸಿಗೆ ದ್ರೋಹಿಗಳೆಂದೂ, ಮಿ|| ಜಮುನಾದಾಸ್ ದ್ವಾರಕದಾಸ್‌ರವರು ಒಂದು ಸೂಚನೆಯನ್ನು ತಂದರು. ಅದನ್ನು ಕ್ರಾನಿಕಲ್ ಸಂಪಾದಕರಾದ ಮಿ|| ಹಾರ್ನಿಮನ್‌ರವರು ಪುಷ್ಟೀಕರಿಸಿದರು. ಬಳಿಕ ಮಿ|| ಜೋಷಿಯವರು ಆ ತೀರ್ಮಾನಕ್ಕೆ ವಿರೋಧವಾಗಿ ಮಾತನಾಡಿದುದರಿಂದ ಆ ವಿಷಯವನ್ನು ಮತ್ತೊಂದು ಸಭೆಯಲ್ಲಿ ವಿಚಾರಮಾಡಲಿಕ್ಕೆ ನಿಲ್ಲಿಸಿದರು. ಸರ್ ನಾರಾಯಣಚಂದ್ರ ವಾರ್ಕರ್‌ರವರು ಮಿತವಾದಿಗಳ ಬೊಂಬಾಯಿ ಸಭೆಯಲ್ಲಿ ಮಾಡಿದ ಉಪನ್ಯಾಸವನ್ನು ಆಕ್ಷೇಪಿಸಿ, ಅವರು ಆಗ ಹೇಳಿದ ಮಾತುಗಳನ್ನು ಹಿಂದಕ್ಕೆ ತೆಗೆದುಕೊಂಡು ಸಭೆಯವರನ್ನು ಕ್ಷಮಾಪಣೆ ಬೇಡಿಕೊಳ್ಳದಿದ್ದರೆ ಇನ್ನುಮೇಲೆ ದೇಶೀಯ ಸಭಾಸಂಘಕ್ಕೆ ಅಧ್ಯಕ್ಷರಾಗಿರಲರ್ಹರಲ್ಲವೆಂದು ತೀರ್ಮಾನಿಸಿದರು. ಈ ದೇಶದ ಸ್ವರಾಜ್ಯವಾದಿಗಳ ಉದ್ಧತತನವು ಎಷ್ಟುಮಟ್ಟಿಗೆ ಪ್ರಬಲಿಸಿದೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ. ಮಿ|| ಬೊಮ್ಮಂಜಿಯವರು ಬೊಂಬಾಯಿ ಸ್ವರಾಜ್ಯಸಂಘಕ್ಕೆ ಉಪಾಧ್ಯಕ್ಷರಾಗಿದ್ದವರು. ಮತ್ತು ೧ ಲಕ್ಷ ರೂ.ಗಳನ್ನು ಸ್ವರಾಜ್ಯೋದ್ದೇಶಕ್ಕಾಗಿ ಸಹಾಯಮಾಡಿದ್ದವರು. ಇಂಥವರಮೇಲೆ ಹೀಗೆ ಪ್ರವರ್ತಿಸುವುದಕ್ಕೆ ಕಾರಣವೇನೆಂದರೆ—ಮಿ|| ಬೊಮ್ಮಂಜಿಯವರು ಕೆಲ ಸ್ವರಾಜ್ಯವಾದಿಗಳ ಹುಳುಕುಗಳನ್ನು ಈಚೆಗೆ ಕಂಡು ಅಸಹ್ಯಪಟ್ಟರು. ಬೊಂಬಾಯಿ ಗೌರ್ನರಾಗಿದ್ದ ಲಾರ್ಡ್ ವೆಲ್ಲಿಂಗ್ಡನ್‌ರವರಿಗೆ ಅಲ್ಲಿಯ ಮ್ಯುನಿಸಿಪಾಲಿಟಿಯವರು ಸನ್ಮಾನಪತ್ರವನ್ನು ಸಮರ್ಪಿಸಲು ಪ್ರಯತ್ನಿಸಿದಾಗ್ಗೆ ಮಿ|| ಜಿನ್ನಾರವರು ಪ್ರತಿಭಟಿಸಲಿಕ್ಕೆ ಅವರು ಬೊಂಬಾಯಿ ಕಾರ್ಪೊರೇಷನ್ ಕೌನ್ಸಿಲಿನಲ್ಲಿ ತೆರವಾದ ಮಿ|| ಚೌಬಳರ ಸ್ಥಾನವನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸಿ ವಿಫಲರಾದುದರಿಂದ ಮಿ|| ಜಿನ್ನಾರವರಿಗೆ ಲಾರ್ಡ್ ವೆಲ್ಲಿಂಗ್ಡನ್‌ರವರ ಮೇಲೆ ಅಸೂಯೆ ಹುಟ್ಟಿದುದೇ ಕಾರಣ ಎಂದು ಮೊದಲಾಗಿ ಸ್ವರಾಜ್ಯವಾದಿಮುಖಂಡರ ಗುಟ್ಟುಗಳನ್ನು ಹೊರಹಾಕಿದುದಲ್ಲದೆ ಆ ಸಮಿತಿಯ ವೈಸ್‌ಪ್ರೆಸಿಡೆಂಟ್‌ಗಿರಿಗೆ ರಾಜೀನಾಮೆಯನ್ನು ಕೊಟ್ಟುಬಿಟ್ಟದ್ದರು. ಈ ಕಾರಣಕ್ಕಾಗಿಯೇ ಅವರಮೇಲೆ ಮುಳಿದು ಪ್ರಾಂತಿಕಸಭೆಯವರು ಅವರಮೇಲೆ ಆಗ್ರಹತೊಟ್ಟು ಇಂಥ ತೀರ್ಮಾನಕ್ಕೆ ಆರಂಭಿಸಿರುವರು. ಸರ್ ನಾರಾಯಣಚಂದ್ರ ವಾರ್ಕರರವರಂಥ ಉಜ್ವಲದೇಶಭಕ್ತರೂ ಅನುಭವಿಗಳೂ ಆದವರ ಮೇಲೆ ಇವರುಗಳು ಹಠತೊಡುವುದಕ್ಕೂ ಸಹ ಅವರು ಇವರುಗಳ ತಾಳಕ್ಕೆ ಅನುಗುಣವಾಗಿ ಕುಣಿಯದಿರುವುದೇ ಕಾರಣವಾಗಿದೆ.

ಯುದ್ಧವಿಶ್ರಾಂತ ದೇಶವಾರ್ತೆಗಳು.

ಇಟಲಿ ರಾಜದಂಪತಿಗಳೂ ಮುಖ್ಯಮಂತ್ರಿಯವರೂ ಕಳೆದ ಗುರುವಾರ ಪ್ಯಾರಿಸ್ಸಿಗೆ ಬಂದರು.

ಹಿಂದಣ ಕೈಸರನ ಪತ್ನಿಯವರು ಹೃದಯರೋಗದಿಂದ ಬಹಳ ಅಸ್ವಸ್ಥರಾಗಿರುವರಂತೆ.

ಈ ವರ್ಷ ಅಮೇರಿಕಾದಲ್ಲಿ ೧೧೭೦೦೬೦೦ ಬೇಲುಗಳ ಹತ್ತಿಯಾಗುವುದೆಂದು ಎಣಿಸಲ್ಪಟ್ಟಿದೆ.

ಸಂಧಿ ಸಭೆಗಾಗಿ ಹೊರಟ ಭಾರತಪ್ರತಿನಿಧಿಗಳು ತಾ|| ೧೫ ರಲ್ಲಿ ಲಂಡನ್ ಪಟ್ಟಣವನ್ನು ಸೇರಿದರು.

ನಾರ್ವೆ ಡೆನ್ಮಾರ್ಕು ದೇಶಗಳು ರಷ್ಯಾ ಬೋಲ್ಷೆವಿಕ್ ಪ್ರಭುತ್ವದೊಡನೆ ಸಂಬಂಧವನ್ನು ಬಿಟ್ಟುಬಿಟ್ಟವು.

ಜಪಾನರ ಹಿಸಿಂ ಎಂಬ ಕ್ರ್ಯೂಯಿಜರು ೨ ಟಾರ್ಪೆಡೊ ದೋಣಿಗಳೊಡನೆ ಕಳೆದ ತಾ|| ೬ ರಲ್ಲಿ ಕಾನ್‌ಸ್ಟಾಂಟಿನೋಪಲ್ಲಿಗೆ ಸೇರಿತು.

ರಷ್ಯಾದೇಶದ ಪೋಲೆಂಡನ್ನು ಜರ್ಮನರು ಬಿಟ್ಟುಹೋದ ಕೂಡಲೆ ಆ ಭಾಗವನ್ನೆಲ್ಲಾ ರಷ್ಯಾದ ಬೊಲ್ಷೆವಿಕ್ಕರು ಆಕ್ರಮಿಸಿಕೊಂಡಿದ್ದಾರೆ.

ಹಿಂದಣ ಕೈಜರನು ಖಿನ್ನತೆಯಿಂದ ಬರುಬರುತ್ತ ಶಿಥಿಲವಾಗುತ್ತಲಿರುವನಂತೆ. ಯಾವಾಗಲೂ ಕಿಟಕಿಯ ಹತ್ತಿರ ಕುಳಿತು ಏನನ್ನೋ ಬರೆಯುತ್ತಿರುವನು.

೧೯೨೫ ನೆ ವರ್ಷದೊಳಗೆ ತಮ್ಮ ನೌಕಾದಳವನ್ನು ಪ್ರಪಂಚದೊಳಗೆ ಅದ್ವಿತೀಯವನ್ನಾಗಿ ಮಾಡಬೇಕೆಂದು ಅಮೇರಿಕಾ ನೌಕಾದಳ ಮಂತ್ರಿಯವರು ಹೇಳಿದ್ದಾರೆ.

ಬವೇರಿಯಾದೇಶದ ಮುಖ್ಯಮಂತ್ರಿಯು ಮಿತ್ರಮಂಡಲಿಯವರೊಡನೆ ಪ್ರತ್ಯೇಕ ಸಂಧಿ ಮಾಡಿಕೊಳ್ಳುವುದಕ್ಕಾಗಿ ಮಿತ್ರಮಂಡಲಿ ಪ್ರತಿನಿಧಿಗಳೊಡನೆ ಮಾತುಕತೆ ನಡೆಯಿಸಿರುವರು.

ಅಮೇರಿಕಾದಲ್ಲಿರುವ ಮೆಕ್ಸಿಕೋ ರಾಜ್ಯದವರು ಈಗಣ ಯುದ್ಧಪರ್ಯವಸಾನ ಫಲಿತಾಂಶ ರೂಪವಾಗಿ ಅವರಲ್ಲಿದ್ದ ವಿರೋಧಭಾವವನ್ನು ಬಿಟ್ಟು ಮಿತ್ರಮಂಡಲಿ ಪಕ್ಷವನ್ನವಲಂಬಿಸಿದರು.

ಜರ್ಮನರಿಂದ ಯುದ್ಧಕಾಲದಲ್ಲಿ ಹಿಡಿಯಲ್ಪಟ್ಟ ಇಂಗ್ಲೀಷ್ ವಾಣಿಜ್ಯನೌಕೆಗಳನ್ನೆಲ್ಲಾ ಕೀಲುಪಟ್ಟಣದಲ್ಲಿ ಕೂಡಿಸಿ ಆಂಗ್ಲದೇಶದ ರೇವುಗಳಿಗೆ ಕಳುಹಿಸಿ ಕೊಡುವುದಕ್ಕೆ ಏರ್ಪಡಿಸಿದ್ದಾರೆ.

ಫ್ರೆಂಚರು ಸೈನಿಕರನ್ನೆಲ್ಲಾ ಒಡೆದು ಅವರವರ ಸ್ಥಳಗಳಿಗೆ ಕಳುಹಿಸಿಬಿಡುತ್ತಿದ್ದಾರೆ. ಬರುವ ಫೆಬ್ರವರಿ ತಿಂಗಳೊಳಗಾಗಿ ಅವರವರ ಮನೆಗಳಿಗೆ ೧೨ ಲಕ್ಷ ಮಂದಿಗಳನ್ನು ಕಳುಹಿಸಿಬಿಡುವವರಾಗಿದ್ದಾರೆ.

ಆಸ್ಟ್ರಿಯಾ ಪ್ರಭುತ್ವವನ್ನು ಪರಿತ್ಯಾಗಮಾಡಿದ ಕಾರಲ್ ಚಕ್ರವರ್ತಿಯವರು ತಮ್ಮ ದೇಶದ ಪ್ರಜಾಪ್ರಭುತ್ವದಲ್ಲಿ ತಾನೊಬ್ಬ ಸಾಮಾನ್ಯ ಮನುಷ್ಯರಂತೆ ಪಾರ್ಲಿಮೆಂಟ್ ಸಭಿಕರಾಗಿರಲು ಪ್ರಯತ್ನಿಸಿರುವರು.

ಕೈಜರನು ವಾಸಮಾಡಿಕೊಂಡಿರುವ ವಿಷಯವಾಗಿ ಮಿತ್ರಮಂಡಲಿಯವರ ಇಷ್ಟಪ್ರಕಾರ ನಡೆದುಕೊಳ್ಳುವಲ್ಲಿ ಹಾಲೆಂಡಿನವರು ಒಪ್ಪಿರುವರೆಂದು ಅಲ್ಲಿಯ ದ್ವಿತೀಯ ಮಂತ್ರಿಯು ಸಭೆಯಲ್ಲಿ ಉಪನ್ಯಾಸ ಮಾಡಿರುವರಂತೆ.

ಸಂಧಿಸಭೆಯು ಪ್ಯಾರಿಸ್ ಪಟ್ಟಣದಲ್ಲಿ ಜನವರಿ ತಾ|| ೧ ರಲ್ಲಿ ಆರಂಭವಾಗುವುದು. ಆಂಗ್ಲಪ್ರಭುತ್ವ ಪಕ್ಷದಿಂದ ಮಿ|| ಗಳಾದ ಲಾಯಿಡ್‌ಜಾರ್ಜ್, ಬೋನರ್ಲಾ, ಬಾಲ್ಫರ್‌ರವರೂ, ಇತರ ಮಂತ್ರಿಗಳೂ ನಿನ್ನೆ ಶನಿವಾರ ಪ್ಯಾರಿಸ್ಸಿಗೆ ಪ್ರಯಾಣಮಾಡಿದರು.

ಜರ್ಮನರ ಪ್ರಾರ್ಥನೆಯ ಪ್ರಕಾರ ಮಿತ್ರಮಂಡಲಿಯವರು ತಾತ್ಕಾಲಿಕ ಸಂಧಿಕಾಲವನ್ನು ಜನವರಿ ತಾ|| ೧೭ರ ವರೆಗೆ ಹೆಚ್ಚಿಸಿಕೊಟ್ಟಿರುತ್ತಾರೆ. ಮಿತ್ರಮಂಡಲಿಯವರು ಅಂಗೀಕರಿಸಿದರೆ ಶಾಶ್ವತಸಂಧಿ ಸಭಾ ಪ್ರಾರಂಭಕಾಲದವರೆಗೂ ಮರಳಿ ಹೆಚ್ಚಿಸಿಕೊಡಬಹುದು.

ಜರ್ಮನರು ೧೯೦೦ ನೆ ವರ್ಷದಲ್ಲಿ ಚೀನಾದೇಶದವರ ಪ್ರಾಚೀನ ಖಗೋಳ ಪರಿಶೋಧಕ ಪರಿಕರಗಳನ್ನೆಲ್ಲಾ ಬರ್ಲಿನ್ ಪಟ್ಟಣಕ್ಕೆ ಸಾಗಿಸಿಕೊಂಡು ಹೋಗಿದ್ದರು. ಅವನ್ನೆಲ್ಲಾ ಮತ್ತೆ ತಮಗೆ ಕೊಡಿಸಿಕೊಡಬೇಕೆಂಬ ವಿಷಯವನ್ನು ಸಂಧಿಸಭೆಯಲ್ಲಿ ಚೀನಾದವರು ತರುವುದಕ್ಕೆ ಇತರ ರಾಷ್ಟ್ರಗಳವರೆಲ್ಲರೂ ಒಪ್ಪಿದ್ದಾರೆ.

ಯುದ್ಧಕಾಲದಲ್ಲಿ ಪ್ರಪಂಚದ ಸಕಲ ರಾಷ್ಟ್ರದವರಿಗೂ 15053786 ಟನ್ನುಗಳ ಹಡಗುಗಳು ನಷ್ಟವಾಗಿವೆ. ಅವಕ್ಕೆ ಪ್ರತಿಯಾಗಿ 13849527 ಟನ್ನುಗಳ ಹೊಸಹಡಗುಗಳು ನಿರ್ಮಿತವಾಗಿವೆ. ಇಂಗ್ಲೀಷರಿಗೇ ನಷ್ಟವಾಗಿರುವುದು 9031828 ಟನ್ನುಗಳ ಹಡಗುಗಳು. ಅವರು ಹೊಸದಾಗಿ ಕಟ್ಟಿದುವು 4342296 ಟನ್ನುಗಳಷ್ಟು.

ಕಪ್ಪುಸಮುದ್ರದ ತೀರದ ಒಡೆಸ್ಸಾ ಪಟ್ಟಣದಲ್ಲಿ ೪|| ಸಾವಿರ ಮಂದಿ ಜರ್ಮನರು ಬೋಲ್ಷೆವಿಕ್ಕರೊಡನೆ ಕೂಡಿ ನಡೆಯಿಸುತ್ತಿದ್ದ ದುರಾಗತವನ್ನು ಅಲ್ಲಿಯ ಪ್ರಜೆಗಳು ತಾಳಿಕೊಳ್ಳಲಾರದೆ ಫ್ರೆಂಚ್ ನೌಕಾದಳದ ಸಹಾಯವನ್ನು ಕೋರಲಾಗಿ, ಇವರು ಪಟ್ಟಣವನ್ನು ಪ್ರವೇಶಿಸಿ ಬೆದರಿಸಲಾಗಿ ಜರ್ಮನರು ಆ ಪಟ್ಟಣವನ್ನು ತಾವು ಬಿಟ್ಟುಬಿಡುವುದಾಗಿ ಪ್ರಕಟಿಸಿದರು.

ಜರ್ಮನರು ಹಿಂದೆ ಬ್ರೆಸ್ಟ್‌ಲಿಟೋ ವಿಸ್ಕಿನಲ್ಲಿ ರಷ್ಯನರೊಡನೆ ನಡೆಯಿಸಿಕೊಂಡಿದ್ದ ಸಂಧಿಯ ಪ್ರಕಾರ ೩೨ ಕೋಟಿ ಫ್ರಾಂಕುಗಳ ಬೆಲೆಯ ಭಂಗಾರವನ್ನು ರಷ್ಯನರಿಂದ ತೆಗೆದುಕೊಂಡಿದ್ದರು. ಈಗ ನಡೆದಿರುವ ತಾತ್ಕಾಲಿಕ ಸಂಧಿಯ ಪ್ರಕಾರ ಆ ಭಂಗಾರವನ್ನು ಮಿತ್ರಮಂಡಲಿಯವರಿಗೆ ಜರ್ಮನರು ಒಪ್ಪಿಸಿಬಿಡಬೇಕಾಗಿದ್ದಿತು. ಅದನ್ನು ಪ್ಯಾರಿಸ್ಸಿಗೆ ಕಳುಹಿಸಿಕೊಟ್ಟರು.

ಹಿಂದಣ ಕೈಜರನ ಅಪ್ಪಣೆಯ ಮೇರೆ ಜರ್ಮನ್ ಸೇನಾಪತಿಗಳು ತಮ್ಮ ಅಪ್ರಾಪ್ತವಯಸ್ಕರಾದ ಹೆಣ್ಣುಮಕ್ಕಳನ್ನು ೧೯೧೬ನೆ ವರ್ಷದ ಏಪ್ರಿಲ್ ತಿಂಗಳಲ್ಲಿ ಬಲಾತ್ಕಾರದಿಂದ ಎತ್ತಿಕೊಂಡುಹೋಗಿ ಅವರನ್ನು ವ್ಯಭಿಚಾರಿಣಿಯರೊಡನೆ ಕೂಡಿಸಿ ನಾನಾಹಿಂಸೆಗಳನ್ನು ಕೊಟ್ಟು ಜರ್ಮನ್ ಸೈನಿಕರಿಗೆ ಹಂಚಿಬಿಟ್ಟರೆಂಬ ಅಪರಾಧವನ್ನು ಕೈಜರನಮೇಲೆ ಹೊರಿಸಿ ಲಿಲ್ಲಿ ಪಟ್ಟಣದ ಕೆಲ ಹೆಂಗುಸರು ವ್ಯಾಜ್ಯವನ್ನು ಹೂಡಿದ್ದಾರೆ.

ಇಂಗ್ಲೀಷರ ಸೈನ್ಯಗಳಲ್ಲಿ ಇತರ ದೇಶಗಳೊಳಗೆ ಈಗ ೨|| ಲಕ್ಷ ಕುದುರೆಗಳಿವೆ. ಅವರು ಅಮೇರಿಕಾದಿಂದ ೭ ಲಕ್ಷ ಕುದುರೆಗಳನ್ನು ಕೊಂಡರು. ಆಂಗ್ಲದೇಶದ ವ್ಯವಸಾಯಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದ ಕುದುರೆಗಳಲ್ಲಿ ೧೦೦ ಕ್ಕೆ ೧೭ ರಂತೆ ಯುದ್ಧಕ್ಕೆ ಕರೆದುಕೊಂಡರು. ಯುದ್ಧಕ್ಕೆ ಮುಂಚೆ ವಾಣಿಜ್ಯಸಂಘಗಳವರಿಗೆ ಆಗುತ್ತಿದ್ದ ನಷ್ಟಕ್ಕಿಂತಲೂ ಯುದ್ಧದಲ್ಲಿ ಉಂಟಾದ ಕುದುರೆಗಳ ನಾಶವು ಬಹಳ ಸ್ವಲ್ಪವೆಂದೇ ಲೆಕ್ಕದಿಂದ ಗೊತ್ತಾಗಿದೆ.

ಯುದ್ಧಕಾಲದಲ್ಲೆಲ್ಲಾ ಇಂಗ್ಲೀಷರು ೩೦೬೦ ಶತ್ರುವಿಮಾನಗಳನ್ನು ನಾಶಪಡಿಸಿರುವರು. ೧೧೭೪ ನ್ನು ಕೆಲಸಕ್ಕೆ ಬರದಂತೆ ಮಾಡಿರುವರು. ಇಂಗ್ಲೀಷರ ಕಡೆ ೧೩೧೮ ವಿಮಾನಗಳು ಕಾಣದೆ ಹೋಗಿರುವುವು. ಫ್ರೆಂಚರೂ ಅಮೇರಿಕನ್ನರೂ ಹಾಳ್ಮಾಡಿದವುಗಳಲ್ಲದೇನೆಯೋ ಜರ್ಮನರು ೧೯೧೮ ನೆ ವರ್ಷದಲ್ಲಿ ೬೦೦೦ ವಿಮಾನಗಳನ್ನು ಹಾಳ್ಮಾಡಿಕೊಂಡಿರುವರು. ಇದರಲ್ಲಿ ಸಂಧಿನಿಬಂಧನೆ ಪ್ರಕಾರ ಉತ್ತಮಸ್ಥಿತಿಯಲ್ಲಿರುವ ೨೦೦೦ ವಿಮಾನಗಳನ್ನು ಜರ್ಮನರು ಮಿತ್ರಮಂಡಲಿಗೆ ಒಪ್ಪಿಸಿಬಿಟ್ಟಿದ್ದಾರೆ. ಇದರಿಂದ ಮಿತ್ರಮಂಡಲಿಯ ವಿಮಾನಬಲಾಧಿಕ್ಯವು ಎಷ್ಟುಮಟ್ಟಿಗಿದೆಯೆಂಬುದು ವ್ಯಕ್ತವಾಗಿರುವುದು.

ಜರ್ಮನಿಯ ಹಿಂದಣ ಯುವರಾಜನು ಜರ್ಮನರು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರೆ ತಾನು ಸಾಮಾನ್ಯಪ್ರಜೆಯಂತೆ ಜರ್ಮನಿಯಲ್ಲಿ ಪ್ರವೇಶಿಸುವೆನೆಂದೂ, ವಿಲ್ಸನ್‌ರವರು ಜರ್ಮನಿಗೆ ನ್ಯಾಯವಾದ ಸಂಧಿಯನ್ನುಂಟುಮಾಡದೆ ೭ ಕೋಟಿ ಪ್ರಜೆಗಳ ಜಾತಿಗೌರವಕ್ಕೆ ಭಂಗತಂದರೆ ಅದು ತುಂಬಾ ಅಸಮಾಧಾನವನ್ನು ಹೆಚ್ಚಿಸುವುದೆಂದೂ, ಹಾಗೆ ಮಾಡಲ್ಪಟ್ಟ ಜಾತಿಯು ಎಂದಿಗೂ ಅಳಿಸಿಹೋಗಲಾರದೆಂದೂ, ಈಗಣ ತಾತ್ಕಾಲಿಕ ಯುದ್ಧನಿಬಂಧನೆಗಳು ಬಹಳ ಕಠಿನವಾಗಿರುವುವೆಂದೂ, ಅವನ್ನು ನೆರವೇರಿಸುವುದು ಕಷ್ಟವೆಂದೂ ಹೇಳಿರುವನಂತೆ ! ಇದು ಬಾಲ ಮುರಿಯ ಏಟನ್ನುತಿಂದ ಹೆಗ್ಗಣವು ಬಿಲವನ್ನು ಸೇರಿ ಗುರುಗುಟ್ಟುವಂತಿದೆ.

ಪೋರ್ಚುಗೀಸ್ ದೇಶದ ಅಧ್ಯಕ್ಷರಾದ ಮೇಜರ್ ಸಿಡೋನಿಯೋಪೇಸ್‌ರವರು ಅರ್ಧರಾತ್ರಿಯಹೊತ್ತು ಒಂದು ನಿಲ್ದಾಣಕ್ಕೆ ಹೋಗುತ್ತಿರುವಾಗ ಒಬ್ಬ ಹಂತಕನು ಅವರಮೇಲೆ ರಿವಾಲ್ವರಿನ ಗುಂಡುಗಳನ್ನು ಹೊಡೆದನು. ಅವರು ಕೂಡಲೇ ವೈದ್ಯಾಲಕ್ಕೆ ಸಾಗಿಸಲ್ಪಟ್ಟರೂ ಬದುಕದೆ ಮೃತರಾದರು. ಹಂತಕನನ್ನು ಅಲ್ಲಿದ್ದ ಪ್ರಜೆಗಳು ಹಿಡಿದು ಕೋಪಾವೇಶದಿಂದ ಕೊಂದುಬಿಟ್ಟರು. ಪೋರ್ಚುಗೀಸ್ ಪ್ರಭುತ್ವದವರು ಈಗಣ ಮಹಾಯುದ್ಧದಲ್ಲಿ ಮಿತ್ರಮಂಡಲಿಯವರ ಪಕ್ಷದಲ್ಲಿದ್ದರು. ಈಗ ಆ ದೇಶದಲ್ಲಿ ನೂತನ ಪ್ರಭುತ್ವವನ್ನು ಏರ್ಪಡಿಸಿಕೊಂಡಿದ್ದಾರೆ. ನೌಕಾದಳ ಮಂತ್ರಿಯಾಗಿದ್ದ ಕಾಂಟೊಕಾಸ್ಟ್ರೊಯವರು ಪ್ರೆಸಿಡೆಂಟರಾಗಿ ಮಾಡಲ್ಪಟ್ಟಿದ್ದಾರೆ.

ಈಗಣ ಜರ್ಮನ್ ಪ್ರಭುತ್ವಾಧ್ಯಕ್ಷನಾಗಿರುವ ಹೇರ್‌ಎರ್ಜ್‌ಬರ್ಗರ್‌ರವರು - ಮಿತ್ರಮಂಡಲಿಯವರ ತಾತ್ಕಾಲಿಕ ಸಂಧಿನಿಬಂಧನೆಗಳು ಬಹಳ ಕಠಿಣವಾಗಿವೆ. ಜರ್ಮನಿಗೆ ಅವರು ಆಹಾರಸಾಮಗ್ರಿಗಳನ್ನು ಕಳುಹಿಸಿ ಕೊಡಲಿಲ್ಲ. ನೌಕಾನಿರೋಧವನ್ನು ತೊಲಗಿಸಬೇಕು. ಯುದ್ಧದ ಸೆರೆಯಾಳುಗಳನ್ನು ಬಿಟ್ಟುಕೊಡಬೇಕು. ಶಾಶ್ವತ ಸಂಧಿಕಾರ್ಯಭಾರವನ್ನು ಕೂಡಲೇ ಆರಂಭಿಸಬೇಕು” ಎಂದು ತಾತ್ಕಾಲಿಕ ಸಂಧಿಸಂಘದವರಿಗೆ ಬರೆದುಕೊಂಡಿದ್ದಾರಂತೆ. ಅತ್ತ ಜರ್ಮನರು ತಾತ್ಕಾಲಿಕಸಂಧಿನಿಬಂಧನೆಯಲ್ಲಿ ಒಪ್ಪಿಕೊಂಡಿರುವಂಥ ಕಾರ್ಯಗಳೆಲ್ಲಾ ಇನ್ನೂ ಸಮಗ್ರವಾಗಿ ನಡೆದು ಮುಗಿದಿಲ್ಲ. ಅವೆಲ್ಲಾ ಮುಗಿಯುವವರೆಗೂ ಮಿತ್ರಮಂಡಲಿಯವರು ಶಾಶ್ವತಸಂಧಿ ಸಭೆಯನ್ನು ಉಪಕ್ರಮಿಸಲು ಒಪ್ಪಲಾರರು.

ಮುಖ್ಯಮಂತ್ರಿ ಲಾಯಿಡ್‌ಜಾರ್ಜ್‌ರವರು ಹೊಸ ಪಾರ್ಲಿಮೆಂಟ್ ಚುನಾವಣೆ ಸಂಬಂಧವಾಗಿ ಪ್ರಜೆಗಳ ಮುಂದೆ ಉಪನ್ಯಾಸ ಕೊಡುತ್ತಿರುವಾಗ್ಗೆ ತಮ್ಮ ಆದರ್ಶವು ಹೀಗಿರುವುದೆಂದು ತಿಳಿಯಿಸಿದ್ದಾರೆ. ಏನೇನೆಂದರೆ— ಸೈನಿಕನಿರ್ಬಂಧ ಶಾಸನವನ್ನು ತೊಲಗಿಸಿಬಿಡುವುದು. ಜರ್ಮನರಿಗೆ ಶಕ್ತಿಯಿರುವವರೆಗೂ ಅವರಿಂದ ನಾವು ಪರಿಹಾರವನ್ನು ತೆಗೆದುಕೊಂಡೇ ತೀರುವುದು. ಯುದ್ಧದ ದುರಾಗತಗಳಿಗೆ ಹಿಂದಣ ಕೈಜರನನ್ನೂ ಆತನ ಅನುಚರರನ್ನೂ ಗುರಿಪಡಿಸುವುದು, (ಈ ಯುದ್ಧಪ್ರೋತ್ಸಾಹಕ್ಕೆ ಮುಖ್ಯ ಕಾರಣನು ಜರ್ಮನ್ ಯುವರಾಜನೆಂದು ತಕ್ಕ ಆಧಾರಗಳ ಮೂಲಕ ಆಂಗ್ಲಪ್ರಭುತ್ವದವರು ಗೊತ್ತುಮಾಡಿರುವರು.) ಈಗ ಆಂಗ್ಲದೇಶದಲ್ಲಿರುವ ಜರ್ಮನರನ್ನೆಲ್ಲಾ ಅವರ ದೇಶಕ್ಕೆ ಕಳುಹಿಸಿಬಿಟ್ಟು ಬಳಿಕ ಮತ್ತೆ ಯಾವೊಬ್ಬ ಜರ್ಮನನನ್ನೂ ನಮ್ಮ ದೇಶಕ್ಕೆ ಸೇರಗೊಡಿಸದಂತೆ ಮಾಡುವುದು.

ಪೂರ್ವದ ರಷ್ಯಾ ಜಾರ್ಜನ್ನು ಬೋಲ್ಷೆವಿಕ್ಕರು ಕೊಂದ ರೀತಿಯು ಈಗ ಪ್ರಕಟವಾಗಿದೆ. ಅದು ಎಂಥ ಕಲ್ಲೆದೆಯವನ ಕಣ್ಣಿನಿಂದಲೂ ನೀರನ್ನು ಸುರಿಸುವಂತಿದೆ. ಜುಲೈ ತಾ|| ೧೨ ರಲ್ಲಿ ಎಕಾಟರಿನ್‌ಬರ್ಗ್ ಪುರದಲ್ಲಿ ಸನ್ಯಾಸಿಗಳ ಮಠದ ಹತ್ತಿರ ಬೋಲ್ಷೆವಿಕ್ಕರು ಜಾರನು ವಾಸಮಾಡುತ್ತಿದ್ದ ಮನೆಯಿಂದ ನೆಲಮಾಳಿಗೆಯ ದ್ವಾರಾ ಆತನನ್ನು ಕರೆದುಕೊಂಡು ಹೋಗಿ ಗೋಡೆಗೆ ಕಟ್ಟಿ ಗುಂಡಿನಿಂದ ಹೊಡೆದು ಕೊಂದರಂತೆ. ಆ ಸಮಯದಲ್ಲಿ ಅಸ್ವಸ್ಥಳಾಗಿದ್ದ ತನ್ನ ಪತ್ನಿಯನ್ನು ತನ್ನ ಕೈಗಳಮೇಲೆ ಮಲಗಿಸಿಕೊಂಡು ಆಕೆಯೊಡನೆ ಕೊಲ್ಲಲ್ಪಡುವುದಕ್ಕೆ ಅಪ್ಪಣೆ ಕೊಡಬೇಕೆಂದು ಜಾರನು ಹಂತಕರನ್ನು ಕೇಳಿಕೊಳ್ಳಲು, ಅವರು ಒಪ್ಪಿ ಹಾಗೆಯೇ ಮಾಡಿದರಂತೆ ! ಅವರ ಮಗಳಿಗೆ ತುಪಾಕಿ ಗುಂಡಿನೇಟಿನಿಂದ ಮರಣವಾಗದೆ ಗಾಯಗಳು ಮಾತ್ರ ಆಗಿರಲು, ತುಪಾಕಿಯ ಬುಡದಿಂದ ಬಡಿದು ಕೊಂದರಂತೆ ! ಉಳಿದ ರಾಜಬಂಧು ಪರಿವಾರದವರನ್ನೆಲ್ಲಾ ಹಂತಕರು ಸಾವಿರಾರು ಅಡಿ ಆಳದ ಗಣಿಯೊಳಕ್ಕೆ ಚಾಟಿಯಿಂದ ಹೊಡೆದು ದುಮುಕಿಸಿ ಕೊಂದುಬಿಟ್ಟರಂತೆ !!

ಡಾ|| ವಿಲ್ಸನ್‌ರವರನ್ನು ಜರ್ಮನಿಗೆ ಬಂದು ಹೋಗಬೇಕೆಂದು ಈಗಣ ಜರ್ಮನ್ ಪ್ರಭುತ್ವದವರು ಪ್ರಾರ್ಥಿಸಲಾಗಿ, ಜರ್ಮನರು ತಮ್ಮ ಕೃತಪಾಪದ ಪ್ರಾಯಶ್ಚಿತ್ತಕ್ಕಾಗಿ ಅನೇಕ ಸಂವತ್ಸರಗಳವರೆಗೆ ನಿಯಮಾಚರಣವನ್ನು ಮಾಡಿ, ತಮ್ಮಲ್ಲಿ ಸದ್ಭಾವಗಳು ದೃಢಮೂಲವಾದುವೆಂಬುದನ್ನು ಜಗತ್ತಿಗೆ ನಿದರ್ಶನಪಡಿಸಿಕೊಡಬೇಕು. ಈಗ ರಾಜಕೀಯ ವಿಷಯಾವಶ್ಯಕತೆಯಿಂದ ವಿಧಿಯಿಲ್ಲದ ಸಂದರ್ಭವೊದಗಿದರೇ ಹೊರತು ಅಮೇರಿಕಾ ದೇಶದ ಯಾವೊಬ್ಬ ಮನುಷ್ಯನೂ ಜರ್ಮನಿ ದೇಶದಲ್ಲಿ ಕಾಲಿಡುವುದಕ್ಕೆ ಅಂಗೀಕರಿಸನು. ಅನುಕಾರಣ ನಾನು ಈಗ ಜರ್ಮನಿ ದೇಶಕ್ಕೆ ಬರಲೊಲ್ಲೆನು" ಎಂದು ಉತ್ತರವನ್ನು ಕೊಟ್ಟರೆಂದು ಅವರು ಪ್ರಯಾಣಮಾಡಿ ಬರುತ್ತಿದ್ದ ವಾಷಿಂಗ್‌ಟನ್ ಹಡಗಿನಿಂದ ವಾಯುವಾರ್ತೆ ಬಂದಿರುತ್ತದೆ. ಜರ್ಮನರು ವಿಲ್ಸನ್‌ರವರನ್ನು ಸ್ವದೇಶಕ್ಕೆ ಬರಮಾಡಿಕೊಂಡು ಒಲಿಸಿಕೊಳ್ಳಬೇಕೆಂದು ಸಂಕಲ್ಪಿಸಿ ಪ್ರಾರ್ಥಿಸಿದ್ದರೋ ಏನೋ! ಆದರೆ ಈ ಸಂದರ್ಭದಲ್ಲಿ ಅವರು ಪಡೆದುಕೊಂಡ ಉತ್ತರವು ಜರ್ಮನಿ ಮಾಡಿದ ಪಾಪಕ್ಕೆ ಒಳ್ಳೆ ಚಾಟಿಯೇಟನ್ನೇ ತಿಂದಂತಾಯಿತು.

ಅಮೇರಿಕಾದ ಅಧ್ಯಕ್ಷರಾದ ಡಾಕ್ಟರ್ ವಿಲ್ಸನ್‌ರವರು ಪತ್ನೀಪರಿವಾರಸಮೇತರಾಗಿ ಕಳೆದ ತಾ|| ೧೩ ರಲ್ಲಿ 'ಫ್ರಾನ್ಸ್‌ದೇಶದ ತೀರಪಟ್ಟಣವಾದ ಬ್ರೆಸ್ಟಿಗೆ ಬಂದಿಳಿದರು. (ಇದು ಅಮೇರಿಕನ್ನರ ನೌಕಾಶ್ರಯವನ್ನಾಗಿ ಯುದ್ಧಕಾಲದಲ್ಲಿ ಏರ್ಪಡಿಸಿಕೊಂಡಿದ್ದರು.) ಅಲ್ಲಿಂದ ಸ್ಪೆಷಲ್ ಟ್ರೇನಿನಲ್ಲಿ ಹೊರಟು ತಾ|| ೧೪ ನೆ ಶನಿವಾರ ಬೆಳಗ್ಗೆ ಪ್ಯಾರಿಸ್ ಪಟ್ಟಣವನ್ನು ಸೇರಿದರು. ನಿಲ್ದಾಣದಲ್ಲಿ ಫ್ರಾನ್ಸ್ ಅಧ್ಯಕ್ಷರಾದ ಪಾಯಿಂಕೇರ್‌ರವರು ಬಹುಮರ್ಯಾದೆಯಿಂದ ಸ್ವಾಗತಿಸಿದರು. ಫಿರಂಗಿ ಗುಂಡುಗಳನ್ನು ಗೌರವಾರ್ಥವಾಗಿ ಹಾರಿಸಿದರು. ಯಾವೊಬ್ಬ ಚಕ್ರವರ್ತಿಗೂ ನಡೆಯದಿದ್ದಂಥ ಗೌರವಗಳೂ ಸ್ವಾಗತಗಳೂ ಇವರಿಗೆ ಫ್ರೆಂಚ್ ಪ್ರಜೆಗಳಿಂದ ಅರ್ಪಿಸಲ್ಪಟ್ಟುವು. ಪುರಾಲಂಕರಣವು ಅಭೂತಪೂರ್ವವಾಗಿದ್ದಿತು. ೨ ದಿನಗಳವರೆಗೆ ವಿಲ್ಸನ್‌ರವರು ಆ ಪಟ್ಟಣದ ವೈಭವಗಳನ್ನು ಅವಲೋಕಿಸುವುದರಲ್ಲೇ ಕಳೆದರು. ಅಲ್ಲಿಯ ಪುರಪಾಲಕ ಸಂಘದವರು ಡಾ|| ವಿಲ್ಸನ್‌ರವರಿಗೆ "ಪ್ಯಾರಿಸ್‌ನಗರಪೌರ" ನೆಂಬ ಗೌರವ ಬಿರುದನ್ನಿತ್ತರು. ಸೋಮವಾರದವರೆಗೆ ಡಾ|| ವಿಲ್ಸನ್‌ರವರಿಗೆ ಸ್ವಾಧಿಕಾರಗೌರವಗಳು ಫ್ರಾನ್ಸಿನಲ್ಲಿರುವುವು. ಆ ಬಳಿಕ ಸಾಧಾರಣ ತರವಾಗಿ ನಡೆಸಿಕೊಳ್ಳುವರು. ಶನಿವಾರ ಮಧ್ಯಾಹ್ನ ಎಲಿಸಿ ಎಂಬಲ್ಲಿ ಫ್ರಾನ್ಸ್ ಪ್ರಭುತ್ವ ಪಕ್ಷದ ಔತಣವಾಯಿತು. ಆಗ ಪಾಯಿಂಕೇರ್‌ರವರು ಒಂದು ಸ್ವಾಗತೋಪನ್ಯಾಸವನ್ನು ಮಾಡಿ ಅಮೇರಿಕಾದವರು ಈಗಣ ಯುದ್ಧದಲ್ಲಿ ಫ್ರಾನ್ಸಿಗೆ ಮಾಡಿದ ಮಹಾಸಹಾಯವನ್ನು ಹೊಗಳಿದುದಲ್ಲದೆ "ಜರ್ಮನರು ದೇಶವನ್ನು ವಿಶೇಷವಾಗಿ ಧ್ವಂಸಗೊಳಿಸಿರುವರು. ಅದನ್ನು ಕುರಿತು ಜರ್ಮನರು ಕಳುಹಿಸಿರುವ ಲೇಖನಗಳನ್ನು ನಿಮಗೆ ತೋರಿಸುವೆನು. ಇಂಥ ದಾರುಣ ದೌರ್ಜನ್ಯಗಳನ್ನು ನಡೆಯಿಸಿದವರನ್ನು ತಕ್ಕ ಹಾಗೆ ಶಿಕ್ಷಿಸದೆ ಬಿಟ್ಟುಬಿಡಬಹುದೆ? ಹಾಗೆ ಅವರನ್ನು ಬಿಟ್ಟುಬಿಟ್ಟರೆ ಫ್ರೆಂಚರು ಇದುವರೆಗೆ ಮಾಡಿದ ತ್ಯಾಗಗಳೆಲ್ಲವೂ ನಿಷ್ಫಲವಾಗದೆ ಇರುವುವೆ? ಮುಂದೆ ಯಾರೂ ಯುದ್ಧಕ್ಕೆ ಪ್ರಯುಕ್ತಿಸಲು ಅವಕಾಶವಿಲ್ಲದಂತೆ ಸಂಧಿನಿಬಂಧನೆಗಳು ಏರ್ಪಡಬೇಕು. ಮುಂದೆ ಯಾವ ದೌರ್ಜನ್ಯಗಳನ್ನೂ ನಡೆಯಿಸದಿರುವಂತೆ ಹೊಣೆಗಳು ತೆಗೆದುಕೊಳ್ಳಬೇಕು. ಇದುವರೆಗೆ ಶತ್ರುಗಳು ಉಂಟುಮಾಡಿರುವ ದಾರುಣತ್ವಕ್ಕೆ ಪರಿಹಾರವನ್ನು ಪಡೆಯಕೊಳ್ಳಬೇಕು. ಮುಂದೆ ಇಂಥ ಕೆಲಸವನ್ನು ನಡೆಯಿಸದಿರುವಂತೆ ಕಟ್ಟುನಿಟ್ಟುಗಳನ್ನು ಮಾಡಬೇಕು. ಎಷ್ಟು ಕಟ್ಟುನಿಟ್ಟುಗಳನ್ನು ಮಾಡಿದರೂ ಘಾತುಕಕೃತ್ಯಗಳು ಮತ್ತೆ ತಲೆಯೆತ್ತಲಾರವೆನ್ನುವುದಕ್ಕೆ ಆಧಾರವೇನೂ ಇಲ್ಲ. ಆದರೆ ಎಷ್ಟು ದೀರ್ಘಕಾಲದವರೆಗೆ ಅಂಥ ಶಾಂತಿಯನ್ನು ನೆಲೆಗೊಳಿಸುವುದು ಸಾಧ್ಯವೋ ಅಷ್ಟರವರೆಗೂ ಮಾಡುವುದಕ್ಕೆ ತಕ್ಕ ಏರ್ಪಾಟುಗಳನ್ನು ಜರುಗಿಸಬೇಕು. ಅಂಥ ನ್ಯಾಯವಾದ ಸಂಧಿಯನ್ನು ನೀವು ಜರುಗಿಸುವಿರೆಂದು ಫ್ರಾನ್ಸಿನವರು ನಿಮ್ಮ ಮೇಲೆ ಸಂಪೂರ್ಣವಾದ ಭರವಸೆಯನ್ನಿಟ್ಟುಕೊಂಡು ನಿಮಗೆ ಸಹಾಯಕರಾಗಿರುವರು" ಎಂದು ಹೇಳಿದರು. ಅದಕ್ಕೆ ವಿಲ್ಸನ್‌ರವರು ಉತ್ತರವನ್ನು ಕೊಡುವಾಗ್ಗೆ— "ರಾಕ್ಷಸಸಮಾನರಾದ ಶತ್ರುಗಳು ಮಾಡಿದ ನಾಶನಕಾರ್ಯಗಳನ್ನು ಕುರಿತು ಬೆಲ್ಜಿಯಂ ಫ್ರಾನ್ಸ್ ಪ್ರಜೆಗಳು ಯಾವ ತೆರದ ತಿರಸ್ಕಾರಭಾವದಿಂದಲೂ ಕೋಪದಿಂದಲೂ ನೋಡುವರೋ ಹಾಗೆಯೇ ನಾನು ನೋಡುವೆನು. ಎಂದು ತಮ್ಮ ಆಗ್ರಹವನ್ನು ವ್ಯಕ್ತಪಡಿಸಿದುದಲ್ಲದೆ ಅಂಥ ಭಯಂಕರ ಕಾರ್ಯಗಳು ಮರಳಿ ನಡೆಯಿಸಿದರೆ ತಕ್ಕ ಶಿಕ್ಷೆಯಾಗುವುದೆಂಬ ಭೀತಿಯು ಸಿದ್ಧವಾಗಿರುವ ಹಾಗೆ ಸಂಧಿನಿಬಂಧನೆಗಳನ್ನೇರ್ಪಡಿಸುವುದಕ್ಕೆ ನಾನು ಆಲೋಚಿಸುತ್ತೇನೆ" ಎಂದು ಹೇಳಿದರು. ವಿಲ್ಸನ್‌ರವರು ಈಗ ಫ್ರಾನ್ಸ್ ದೇಶದಲ್ಲಿ ಜರ್ಮನರು ನಾಶಮಾಡಿರುವ ಭಾಗಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುವರೆಂದು ಗೊತ್ತಾಗಿದೆ. ಧ್ವಂಸವಾಗಿರುವ ಗ್ರಾಮಗಳನ್ನೂ ಯಂತ್ರಾಲಯಗಳನ್ನೂ ದೇವಾಲಯಗಳನ್ನೂ ಸುಡುಗಾಡಾಗಿರುವ ಫಲವತ್ತಾದೇಶಗಳನ್ನೂ ಸ್ವತಃ ನೋಡಿ ನೋಡಿದಂತೆ ಡಾ|| ವಿಲ್ಸನ್‌ರವರಿಗೆ ಜರ್ಮನರಮೇಲೆ ಆಗ್ರಹವೂ ಫ್ರೆಂಚರಮೇಲೆ ಕನಿಕರವೂ ದ್ವಿಗುಣವಾಗುವುದೆಂಬುದಕ್ಕೆ ಸಂಶಯವಿಲ್ಲ. ಅವುಗಳ ಫಲವು ಸಂಧಿಸಭೆಯಲ್ಲಿ ವ್ಯಕ್ತವಾಗದೆ ಇರದು. ಡಾ|| ವಿಲ್ಸನ್‌ರವರನ್ನು ಲಂಡನ್ನಿಗೆ ದಯಮಾಡಬೇಕೆಂದು ನಮ್ಮ ಸಾರ್ವಭೌಮರು ತಂತೀವಾರ್ತೆಯ ಮೂಲಕ ಆಹ್ವಾನಮಾಡಿರುವರು. ಅದಕ್ಕೆ ವಿಲ್ಸನ್‌ರವರು ಒಪ್ಪಿ ಉತ್ತರವನ್ನು ಕೊಟ್ಟಿರುವರು. ಡಿಸೆಂಬರ್ ತಾ|| ೨೪ ಕ್ಕೆ ವಿಲ್ಸನ್‌ರವರು ರಣರಂಗವನ್ನು ನೋಡುವುದಕ್ಕೆ ಹೋಗುವರು.

ಮೈಸೂರು ಸೀಮೆಯ ರೆವಿನ್ಯೂ ಕಮಿಷನರವರ ಆಫೀಸು.

ತಾರೀಖು 10-12-1918.

ಭತ್ತ, ಅಕ್ಕಿ, ರಾಗಿ ಮತ್ತು ಜೋಳ ಇವುಗಳಿಗೆ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಮಂಡಿ ವರ್ತಕರು ಕೊಡಬೇಕಾದ ಮತ್ತು ಚಿಲ್ಲರೆ ವ್ಯಾಪಾರಿಗಳು ಕೊಡಬೇಕಾದ ಪರಮಾವಧಿ ದರವನ್ನೂ, ತಮ್ಮ ಉಪಯೋಗಕ್ಕೆ ಅವಶ್ಯಕವಾದದ್ದಕ್ಕಿಂತಲೂ ಜಾಸ್ತಿ ದಾಸ್ತಾನು ಇಟ್ಟಿರುವವರು ಅದನ್ನು ಮಾರಾಟಕ್ಕೆ ಕೊಡದೆ ಇಟ್ಟುಕೊಳ್ಳುವುದರಿಂದ ಜನರಿಗೆ ಸಾಕಾದಷ್ಟು ಸರಬರಾಜು ಇಲ್ಲದೆ ತೊಂದರೆಯಾದಾಗ್ಯೆ ಸರ್ಕಾರದವರು ಬಲಾತ್ಕಾರವಾಗಿ ಮೇಲ್ಕಂಡ ಜಿನಸಿಗಳನ್ನು ತೆಗೆದುಕೊಳ್ಳಬೇಕಾದಾಗ ಅವರು ಕೊಡಬೇಕಾದ ದರಗಳನ್ನೂ ಸರ್ಕಾರದವರು ಸನ್ 1918 ನೇ ಇಸವಿ ನವಂಬರ್ 25 ನೇ ಮರ್ಸ್ಯಂ ಜಿ. 9338 ಪಿ. ಪಿ. 134-18-19 ನೇ ನಂಬರು ಮತ್ತು ಡಿಸಂಬರ್ 2 ನೇ ಮಾರ್ಸ್ಯಂ ಆರ್. 10192 ಪಿ. ಪಿ. 134-18-19 ನೇ ನಂಬರು ಹುಕ್ಮುಂಗಳಲ್ಲಿ ಗೊತ್ತುಮಾಡಿರುವುದರ ಪ್ರಕಾರ ಸರ್ಕಾರದವರು ಬಲಾತ್ಕಾರವಾಗಿ ತೆಗೆದುಕೊಳ್ಳುವಾಗ ಕೊಡಲು ಗೊತ್ತುಮಾಡಿರುವ ದರಗಳು ಮಂಡಿ ವರ್ತಕರು ಮತ್ತು ಚಿಲ್ಲರೆ ವ್ಯಾಪಾರಿಗಳು ಕೊಡಬಹುದಾದ ಪರಮಾವಧಿ ದರಗಳಿಗಿಂತಲೂ ಬಹಳ ಕಮ್ಮಿಯೆಂಬುವದನ್ನು ಸರ್ವರೂ ಗಮನಿಸತಕ್ಕದ್ದು. ಮೇಲ್ಕಂಡ ದರಗಳು ಕಾಲಸ್ಥಿತಿ ಧಾರಣೆವಾಸಿಗಳಿಗನುಸಾರವಾಗಿ ಬದಲಾಯಿಸಲ್ಪಡುವುವು.

ತಮ್ಮ ಉಪಯೋಗಕ್ಕೆ ಅವಶ್ಯಕವಾದದ್ದಕ್ಕಿಂತಲೂ ಹೆಚ್ಚು ದಾಸ್ತಾನು ಇಟ್ಟಿರುವವರು ಅದನ್ನು ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳಲು ಅವಕಾಶಕೊಡದೆ ತಾವಾಗಿಯೇ ಸರ್ಕಾರದವರಿಂದ ಲೈಸನ್ಸು ಪಡೆದಿರುವ ವರ್ತಕರಿಗಾಗಲಿ ಅಥವಾ ಇತರರಿಗಾಗಲಿ ಮಾರಿದಲ್ಲಿ ಹೆಚ್ಚು ಆದಾಯ ಬರುವುದೆಂಬುದನ್ನು ತಿಳಿದುಕೊಳ್ಳಬೇಕು. ಜಿನಸಿಗಳನ್ನಿಟ್ಟುಕೊಂಡಿರುವವರು ಅವುಗಳನ್ನು ಮಾರಾಟಕ್ಕೆ ಒದಗಿಸದೆ ಜನರಿಗೆ ಅನಾನುಕೂಲವಾದಲ್ಲಿ ಮಾತ್ರವೇ ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳಬೇಕಾಗುವುದು. ಅದಕಾರಣ ತಮ್ಮ ಉಪಯೋಗಕ್ಕೆ ಬೇಕಾದದ್ದಕ್ಕಿಂತಲೂ ಜಾಸ್ತಿ ದಾಸ್ತಾನು ಇಟ್ಟಿರುವವರೆಲ್ಲರೂ ಸರ್ಕಾರದವರು ಬಲಾತ್ಕರಿಸುವವರೆವಿಗೂ ಎಡೆಮಾಡದೆ ತಾವೇ ಖುದ್ದು ರಾಜಿಯಿಂದ ಜಿನಸಿಗಳನ್ನು ಮಾರಾಟಕ್ಕೆ ತರುವುದು ಅವರಿಗೆ ಪ್ರಯೋಜನಕರವಾಗಿರುತ್ತದೆ.

ಗ್ರಾಮಾಂತರಗಳಲ್ಲಿ ದಾಸ್ತಾನು ಇಟ್ಟಿರುವವರು ಜಿನಸಿಗಳನ್ನು ಬಿಕರಿಗೆ ಹೊರಗೆ ತೆಗೆದುಕೊಂಡು ಹೋಗಬೇಕಾದಲ್ಲಿ, ಅವರು ಆ ಸಂಗತಿಯನ್ನು ಗ್ರಾಮದ ಪಟೇಲ ಅಥವಾ ಗ್ರಾಮಕಮಿಟಿಯ ಅಧ್ಯಕ್ಷ ಅಥವಾ ಅಮಲ್ದಾರರವರಿಂದ ಅಧಿಕಾರ ಕೊಡಲ್ಪಟ್ಟ ಗ್ರಾಮಸ್ಥರಿಗೆ ತಿಳಿಯಪಡಿಸಿದಲ್ಲಿ, ಸದರೀಯವರು ಗ್ರಾಮಸ್ಥರ ಉಪಯೋಗಕ್ಕೆ ಸಾಕಾದಷ್ಟು ದಾಸ್ತಾನು ಗ್ರಾಮದಲ್ಲಿದೆ ಮತ್ತು ಜಿನಸಿಗಳನ್ನು ಹೊರಗೆ ಕಳುಹಿಸಿದಲ್ಲಿ ಗ್ರಾಮಸ್ಥರಿಗೆ ಸಾಲದೆ ಅನನುಕೂಲವಾಗುವದಿಲ್ಲವೆಂಬ ಅಂಶಗಳನ್ನು ದೃಢಪಡಿಸಿಕೊಂಡು, ಜಿನಸಿಗಳನ್ನು ಹೊರಗೆ ಸಾಗಿಸಲು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ. ಈ ನೇರೆ ಚೀಟಿಯನ್ನು ಪಡೆದಿರುವವರು ಜಿನಸಿಗಳನ್ನು ಚೀಟಿಯಲ್ಲಿ ನಮೂದು ಮಾಡಿರುವ ಸ್ಥಳಕ್ಕೆ ಸಾಗಿಸಲು ದಾರಿಯಲ್ಲಿ ಸರ್ಕಾರಿ ಉದ್ಯೋಗಸ್ಥರು ಯಾವ ಅಡ್ಡಿಯನ್ನೂ ಮಾಡುವದಿಲ್ಲ.

ಕೆ. ಆರ್. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಕಮಿಷನರು.

ಪತ್ರವ್ಯವಹಾರ.

ಹೀಗಾಗಬಹುದೇ?

ಇಲ್ಲಿನ ಮುನಿಸಿಪಲ್ ಮೆಂಬರುಗಳಲ್ಲಿ ಬ್ರಾಹ್ಮಣರೇ ಹೆಚ್ಚು ಸಂಖ್ಯೆ. ಒಬ್ಬ ಬ್ರಾಹ್ಮಣ ಮೆಂಬರನೇ ತನ್ನ ಅಧಿಕಾರಿಗಳ ಸ್ನೇಹಬಲದಿಂದ ಎಲ್ಲ ಬ್ರಾಹ್ಮಣೇತರರನ್ನೂ ತುಳಿದುಬಿಟ್ಟಿದ್ದಾನೆ. ಬಹುಮಂದಿ ಬಡ ಬ್ರಾಹ್ಮಣೇತರರು ವಾಸಕ್ಕೆ ಸ್ಥಳವಿಲ್ಲದೆ ಬಡಾವಣೆಯಲ್ಲಿ ಸ್ಥಳಕ್ಕಾಗಿ 'ಅರ್ಜಿ'ಕೊಟ್ಟುಕೊಂಡಿದ್ದರೂ ಮುನಿಸಿಪಲ್ ಮೆಂಬರುಗಳೇ ತಮಗೆ ತಾವೇ ವಿಶೇಷವಾಗಿ ಬ್ರಾಹ್ಮಣರೇ ಎಲ್ಲ ಸೈಟುಗಳನ್ನೂ ಹಂಚಿಕೊಂಡು ಬಿಟ್ಟಿರುವುದಾಗಿಯೂ ದುಃಖೋಪಶಮನಾರ್ಥವಾಗಿ ಹಾಜರಿದ್ದ ಒಬ್ಬರು ಬ್ರಾಹ್ಮಣೇತರ ಮೆಂಬರುಗಳಿಗೂ ಒಂದೊಂದು ಸೈಟುಗಳನ್ನು ಕೊಟ್ಟಿರುವರೆಂದೂ ಜನಜನಿತವಾದ ಪ್ರಬಲವರ್ತಮಾನವಿದೆ. ಮೆಂಬರುಗಳ ಈ ವಿಧವಾದ ವರ್ತನೆಯನ್ನು ಸರ್ಕಾರದವರು ವಿಚಾರಿಸದೆಯೇ ಬಡಬ್ರಾಹ್ಮಣೇತರರ ಹಕ್ಕು ಬಾಧ್ಯತೆಗಳನ್ನು ನಷ್ಟಪಡಿಸುವುದಾದರೆ ದಿಕ್ಕಾರು? ಇದು ನಿಜವಿದ್ದಲ್ಲಿ ಈ ಮೆಂಬರುಗಳು ತಮಗೆ ತಾವೇ ಸ್ವಲ್ಪ ನಾಚಿಕೊಳ್ಳಬಾರದೆ? ಸುಳ್ಯಾಗದ್ದಲ್ಲಿ ಬರೆದು ತಿಳಿಸಲಿ— ಇಲ್ಲಿನ ಸಬ್ ಡಿವಿಜನ್ ಆಫೀಸರವರು ಒಬ್ಬ ಬ್ರಾಹ್ಮಣ ವರ್ತಕರಿಗೆ ಮಾತ್ರ ವಿಶೇಷವಾಗಿ ಅಕ್ಕಿಯನ್ನು ತರಿಸಿಕೊಟ್ಟು ಲಾಭ ಸಂಪಾದನೆಗೆ ಅವಕಾಶಕೊಟ್ಟಿರುವಂತೆ! ಹಳ್ಳಿಗಳಲ್ಲಿ ಜೋಳ, ರಾಗಿಗಳನ್ನು ಸೊಲ್ಲಾ ಒಂದಕ್ಕೆ ಎಂಟು ರೂಪಾಯಿನಂತೆ ಕೆಗೆದು ಐದೂವರೆ ಸೇರಿನ ಕೊಳಗದಲ್ಲಿ ಅಳೆಸಿಕೊಂಡು ಅರೆವಾವು ಕಡಿಮೆ ಸೇರಿನಲ್ಲಿ ಮಾರುತ್ತಿರುವರೆಂದು ಜನಜನಿತವಾಗಿರುವ ಧಾನ್ಯದ ಸಂಘಕ್ಕೆ ಸಹಾಯಮಾಡುತ್ತಿರುವಂತೆ ಸಾಮಾನ್ಯ ವರ್ತಕರಿಗೆ ಸಹಾಯಮಾಡುವುದಾದರೆ ಇದಕ್ಕಿಂತಲೂ ಎಷ್ಟೋ ವಿತರಣೆಯಿಂದಲೂ ಅಗ್ಗವಾಗಿಯೂ ಮಾರಲಾರದ ಹೋಗಿದ್ದರೇನು? ಇವರು ಬ್ರಾಹ್ಮಣರಾಗದಿದ್ದುದೇ ದೋಷವಾಗಿರಬಹುದೊ? ನಮ್ಮ ದಯಾಳು ಸಬ್‌ಡಿವಿಜನ್ ಆಫೀಸರವರು ಇಂತಹ ಪಕ್ಷಪಾತಕ್ಕೆ ಸತ್ಯವಾಗಿಯೂ ಅವಕಾಶಕೊಡತಕ್ಕವರಲ್ಲವಾಗಿ ಇನ್ನು ಮುಂದೆ ಬರುವ ಮ್ಯುನಿಸಿಪಲ್ ಎಲೆಕ್ಷನ್ನಿನಲ್ಲಿಯಾದರೂ ಸಂಖ್ಯಾನುಗುಣವಾಗಿ ಬ್ರಾಹ್ಮಣೇತರರನ್ನು ನಾಮಿನೇಷನ್ ಮಾಡುತ್ತಾರೆಂದು ನಂಬಿದ್ದೇನೆ.

ನಂಜನಗೂಡು.   ಹಿತೈಷಿ.

ಹೋಂ ಇಂಡಸ್ಟ್ರೀಸ್.

ತಾ|| 29-11-18 ನೇಯ ಸಂಪದಭ್ಯುದಯ ಪೇಪರಿನಲ್ಲಿ ಮೈಸೂರು ಮತ್ತು ಬೆಂಗಳೂರು ಹೋಂ ಇಂಡಸ್ಟ್ರೀಸ್ ಇನ್‌ಸ್ಟಿಟ್ಯೂಟ್‌ಗಳು ಈಗ ಇರುವಂತೆಯೇ ಕಮಿಟಿಗಳ ಮ್ಯಾನೇಜ್‌ಮೆಂಟಿನಲ್ಲಿದ್ದರೆ ಚೆನ್ನಾಗಿತ್ತೆಂತಲೂ ಮ|| ರಾ|| ರೆಡ್ಡಿಯವರ ಕೈಕೆಳಗೆ ಏಳಿಗೆ ಬರುವುದಿಲ್ಲವೆಂತಲೂ ಆಕ್ಷೇಪಿಸಿ ಬರೆದಿರುತ್ತಾರೆ. ಈ ಇನ್‌ಸ್ಟಿಟ್ಯೂಟ್‌ಗಳು ಮ|| ರಾ|| ದಿವಾನ್ ಬಹದ್ದೂರ್ ಶ್ರೀಕಂಠೇಶ್ವರ ಅಯ್ಯರ್‌ರವರ, ಮತ್ತು ರಾವ್ ಬಹದ್ದೂರ್ ಶ್ಯಾಮರಾಯರ ಆಡಳಿತಕ್ಕೂ ಸಾಂದ್ರಕ್ಕೆ ಸಂಬಳವಿಲ್ಲದೆ ಚಾಕರಿಮಾಡುವ ಕಮಿಟಿಗಳ ಮತ್ತು ಸಬ್‌ಕಮಿಟಿಗಳ ಆಡಳಿತಕ್ಕೂ ಒಳಪಟ್ಟಿರುತ್ತವೆ. ದೂರಕ್ಕೆ ಪರ್ವತ ನುಣ್ಣಗೆ ಅನ್ನುವಹಾಗೆ ಹೆಸರುಗಳೇನೊ ಅದ್ಭುತವೇ ಸರಿ. ಆದರೆ ಡಿಪ್ಲೋ ಛೇರ್ಮೆನ್ನರು ಯಾವಯಾವ ಕೈಗಾರಿಕೆ ನಡೆಯುವ ದೇಶಗಳಲ್ಲಿ ಸಂಚರಿಸಿ ಎಷ್ಟು ಪರಿಶ್ರಮ ಹೊಂದಿದ್ದಾರೆ. ಕಮಿಟಿಯವರಿಗೆ ಎಷ್ಟರವರೆಗೆ ಕೈಗಾರಿಕೆಗಳಲ್ಲಿ ತಿಳುವಳಿಕೆ ಇದೆ ಎಂಬುವದು ಮೊದಲು ಯೋಚಿಸಬೇಕಾದ ವಿಷಯ. ಎರಡನೆಯದು ಛೇರ್ಮೆನ್‌ಗಳೂ, ಮೆಂಬರುಗಳೂ ಆಡ್ಮಿನಿಸ್ಟ್ರೇಶನ್ ಕೆಲಸಮಾಡುವವರೇ ಹೊರತು ಸರ್ಕಾರದ ನಿರ್ಬಂಧಕ್ಕೆ ಭೀತಿಗೂ ಇವರು ಒಳಪಟ್ಟವರಲ್ಲ. ಮೂರನೆಯದು ಛೇರ್ಮ್ಯಾನ್‌ಗಳು ಸರ್ವಿಸ್ ಪೂರೈಸಿ ಪರಲೋಕದ ಧ್ಯಾನಮಾಡುವ ಕಾಲ. ಇವರು ಎಷ್ಟು ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಕೆಲಸ ಮಾಡಬಲ್ಲರೆಂಬುವದನ್ನು ವಾಚಕರೇ ಊಹಿಸಬಹುದು. ಕಂಡವರ ಒಸವೆಗೆ ಹೆಗ್ಗಣ ಗುದ್ದಾಡಿತು ಎನ್ನುವಹಾಗೆ ಈ ಇನ್‌ಸ್ಟಿಟ್ಯೂಟ್‌ಯೆಂಬ ಕಮಿಟಿಗಳಲ್ಲಿ ಜಗಳವಾಡುವದು ಪರ್ಯವಸಾನವೇ ಹೊರತು ಕಾರ್ಯವೇನೂ ಸಾಗುವಹಾಗಿಲ್ಲ. ಇದಕ್ಕೆ ಹತ್ತುಜನ ಯಜಮಾನರು. ಇಬ್ಬರು ಯಜಮಾನರಿದ್ದರೇ ಎಷ್ಟೋ ಅನಾಹುತಕ್ಕೆ ಕಾರಣ. ಇಷ್ಟು ಜನ ಯಜಮಾನರಿದ್ದರೆ ಆಗತಕ್ಕ ಫಲಿತಾಂಶ ಗೊತ್ತೇ ಇದೆ. ಆದರೂ ಕಮಿಟಿಯ ಮೆಂಬರುಗಳಲ್ಲಿ ಜವಾಬ್ ವಹಿಸತಕ್ಕವರು ಮಾತ್ರ ಯಾರೂ ಇಲ್ಲ. ಹೀಗಿರುವ ಅನಾಯಕ ಅಥವಾ ಬಹುನಾಯಕ ಪ್ರಭುತ್ವಕ್ಕೆ ಒಳಪಟ್ಟಿರುವ ಇನ್‌ಸ್ಟಿಟ್ಯೂಟ್‌ಗಳು ಎಷ್ಟರಮಟ್ಟಿಗೆ ವೃದ್ಧಿಗೆ ಬರಬಹುದು! ಇದುವರೆಗೆ ಈ ಕಮಿಟಿಗಳು ಕೆಲಸಮಾಡಿರುವದನ್ನು ನೋಡಿದರೆ ಎಷ್ಟರಮಟ್ಟಿಗೆ ಇವರ ಆಡಳಿತದಲ್ಲಿ ಕೈಗಾರಿಕೆಗಳು ಏಳಿಗೆಗೆ ಬಂದಿದೆ ಎನ್ನುವದು ಗೊತ್ತಾದೀತು. ಈ ಕಮಿಟಿಗಳ ಏರ್ಪಾಡಿನಿಂದ ಕೆಲಸಗಳು ಕಾಲಕಾಲದಲ್ಲಿ ಸಾಗದೆ ಸರ್ಕಾರದ ದ್ರವ್ಯವು ವ್ಯರ್ಥ ಖರ್ಚಾಗುತ್ತಿದೆಯೇ ಹೊರತು ತಕ್ಕ ಪ್ರಯೋಜನ ಮಾತ್ರ ಕಾಣುವದಿಲ್ಲ. ಅಲ್ಲದೆ ಈ ಕೈಗಾರಿಕೆಗಳನ್ನು ಸರ್ಕಾರದವರು ಬಡವರ ಪ್ರಯೋಜನಕ್ಕೋಸ್ಕರ ಸ್ಥಾಪಿಸಿರುವದು. ಈಗ ಯಾವಯಾವ ಮತ್ತು ಎಷ್ಟು ಜನ ಬಡವರು ಇವುಗಳಿಂದ ಪ್ರಯೋಜನ ಹೊಂದುತ್ತಿದ್ದಾರೆ. ನೋಡಿದರೆ ಸರ್ಕಾರದ ಅಧಿಕಾರಸ್ಥರ ಮನೆಯವರನ್ನು ಬಿಟ್ಟರೆ ಬೇರೆ ಯಾರೊಬ್ಬರೂ ಸ್ಕೂಲುಗಳಲ್ಲಿ ಕಣ್ಣಿಗೆ ಕಾಣುವಹಾಗಿಲ್ಲ. ಇತರ ಜನರೋ ವಿದ್ಯೆಯಲ್ಲಿ ಮುಂದುವರಿಯುವುದಕ್ಕೆ ಅವಕಾಶವಿಲ್ಲದೆ ಸಣ್ಣ ಸಣ್ಣ ಕೈಗಾರಿಕೆಗಳಲ್ಲಾದರೂ ಜೀವನಕ್ಕೆ ಮಾರ್ಗಮಾಡಿಕೊಳ್ಳಬೇಕೆಂದರೆ ಈಗಣ ಹೋಂ ಇಂಡಸ್ಟ್ರೀಸ್ ದರ್ಬಾರಿನಲ್ಲಿ ಅವಕಾಶವಿಲ್ಲ. ಇದರಿಂದ ಸರ್ಕಾರದವರ ಘನತರವಾದ ಅಭಿಪ್ರಾಯವು ಸಾವಿರದಲ್ಲಿ ಒಂದು ಭಾಗವಾದರೂ ನೆರವೇರದ ಹೋಗಿದೆ. ಮ|| ರಾ|| ರೆಡ್ಡಿಯವರು ನಮ್ಮ ದೇಶದ ಜನಗಳ ಅಜ್ಞಾನವನ್ನು ಸರ್ವತೋಮುಖವಾಗಿ ಹೋಗಲಾಡಿಸಿ ದೇಶದ ಸೇವೆಗೋಸ್ಕರ ಕೆಲಸಮಾಡುವವರಾಗಿದ್ದಾರೆ; ಇವರು ವಿದೇಶಸಂಚಾರ ಮಾಡಿ ಅನೇಕ ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿದವರು. ಇತರ ಅನುಭವವೂ, ಆಸಕ್ತಿಯೂ, ಉತ್ಸಾಹವೂ ಜವಾಬ್‌ದಾರಿಯೂ ಈಗಿರತಕ್ಕ ಛೇರ್ಮೆನ್‌ಗಳಿಗಾಗಲಿ ಕಮಿಟಿಯವರಿಗಾಗಲಿ ಇದೆಯೆಂದು ಹೇಳಲಾಗುವುದಿಲ್ಲ. ಕೈಗಾರಿಕೆಯೂ ಒಂದು ವಿಧವಾದ ವಿದ್ಯಾಭ್ಯಾಸವಾದುದರಿಂದ ಉಭಯತರವಾದ ವಿದ್ಯೆಗಳೂ ವಿದ್ಯಾಭ್ಯಾಸದ ಇಲಾಖೆಯ ಆಡಳಿತಕ್ಕೆ ಒಳಪಡುವುದರಿಂದ ಸ್ಕೂಲ್ ವಿದ್ಯಾರ್ಥಿಗಳೂ ಇತರರೂ ಉಭಯ ವಿದ್ಯೆಗಳಲ್ಲೂ ಸಕಾಲದಲ್ಲಿ ಪರಿಶ್ರಮ ಹೊಂದಬಹುದು. ಮ|| ರಾ|| ರೆಡ್ಡಿಯವರು ದೇಶದ ಒಟ್ಟು ವಿದ್ಯಾಭ್ಯಾಸದ ಜವಾಬ್ದಾರಿಯನ್ನು ವಹಿಸಿಕೊಂಡು ಸಮರ್ಥತೆಯಿಂದ ಕೆಲಸಮಾಡುತ್ತಿರುವಾಗ್ಗೆ ಈ ಒಂದೆರಡು ಇನ್‌ಸ್ಟಿಟ್ಯೂಟುಗಳ ಮೇಲ್ವಿಚಾರಣೆ ನೋಡಲು ಇವರಿಗೆ ಸಾಧ್ಯವಿಲ್ಲ ಎನ್ನುವದು ಸ್ವಪ್ರಯೋಜನಕ್ಕೆ ಕುಂದಕ ಬಂದೀತೆಂದೋ ಅಥವಾ ಇನ್ಯಾವ ದುರಭಿಪ್ರಾಯದಿಂದಲೋ ಹೊಟ್ಟೇಕಿಚ್ಚಿನಿಂದಲೋ ಹೇಳಿದ ಮಾತಲ್ಲದೆ ನಿಷ್ಪಕ್ಷಪಾತದಿಂದ ಹೇಳಿದ್ದಾಗಿ ಕಾಣುವದಿಲ್ಲ. ಸರ್ವಜನ ಪ್ರಯೋಜಕವಾದ ಈ ಹೋಂ ಇಂಡಸ್ಟ್ರೀಗಳ ಮೇಲ್ವಿಚಾರಣೆಯನ್ನೂ ಜವಾಬ್‌ದಾರಿಯನ್ನೂ ಕಮಿಟಿಗಳಿಂದ ತಪ್ಪಿಸಿ ವಿದ್ಯಾಭ್ಯಾಸದ ಇಲಾಖೆಗೆ ಒಳಪಡಿಸಿದ್ದೇ ಆದರೆ ಕ್ಷಿಪ್ರಕಾಲದಲ್ಲಿಯೇ ಈ ಕೈಗಾರಿಕೆಗಳು ಬಹಳ ಏಳಿಗೆಗೆ ಬರುವುವೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ.

ಸತ್ಯವಾದಿ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.   2

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇವಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇನೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂಬು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದ ವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಯುದ್ಧದ ಫೋಟೋಗಳು.   2

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಮಣೀಯವಾದ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ.

ವಿಳಾಸ:—ಸುಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಬೀದಿ, ಮದರಾಸ್.

೧೯೧೮ ನೆಯ ಇಸವಿ ಡಿಸೆಂಬರ್ ತಾ|| ೨೨ ರಿಂದ ೧೯೧೮ ನೆಯ ಡಿಸೆಂಬರ್ ತಾ|| ೨೮ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಮಾರ್ಗಶಿರ ಬ|| ಪಂಚಮಿಯಿಂದ ಮಾರ್ಗಶಿರ ಬ|| ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
22	ಭಾನು	ಪಂಚ	37-53	ಆಶ್ಲೇಷ	3-32	8
23	ಸೋಮ	ಷಷ್ಠಿ	40-6	ಮಖಾ	6-20	9
24	ಮಂಗಳ	ಸಪ್ತ	43-30	ಪುಬ್ಬ	10-22	10
25	1 ಬುಧ	ಅಷ್ಟ	47-52	ಉಬ್ಬ	15-28	11
26	2 ಗುರು	ನವಮಿ	53-1	ಹಸ್ತ	21-23	12
27	ಶುಕ್ರ	ದಶಮಿ	58-41	ಚಿತ್ತ	27-51	13
28	ಶನಿ	ಏಕಾ	60	ಸ್ವಾತಿ	34-37	14

(1) ಭೈರಾಷ್ಟಮಿ, ತಿಸ್ರೋಷ್ಟಕಾ. (2) ಮಾರ್ಗಶಿರ ಲಕ್ಷ್ಮೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

REGISTERED NO M. 124.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯೆಷಾ | ಘನಪಥಕೃತಾವತಾರಾ ಪತ್ಯಜ್ಞ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]   [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧)   ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಡಿಸೆಂಬರ್ ತಾರೀಖು ೨೯ ನೆಯ ಭಾನುವಾರ.   (ಸಂಚಿಕೆ ೫೨

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಶರಣಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.)   6

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇವನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟು.

ವಿಳಾಸ—ವೈದ್ಯ, ಜಿ. ಎಲ್. ಜೋತಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶಾರಾಣಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರ	೦—೫—೦
ಹಂದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ವೈದ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ.   4

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೪-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೫-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್‌ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಸಾಳ್ವದ ವೆಂಕಟಾಚಲಪಂಡಿತರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಫುಕಟು! ಇನ್‌ಫ್ಲ್ಯುಯೆಂಝಾ ಪತ್ರಿಕೆ-ಫುಕಟು!!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡೆಯಲಾರದು. ಎಂಬದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲು ಎಂಝಾ ಪಿಲ್ಸ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ, ರೋಗದ ಆರಂಭದ ಲಕ್ಷಣಗಳಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಶುಲಾವರೋಧ ತೊ-೧ಕ್ಕೆ ೨.
,, ೩ ನೇ ,, ಆಹಾರ ವಾಂತಿಯುಳ್ಳಜ್ವರ ತೊ-೧ಕ್ಕೆ ೦-೧೨ರೂ.
,, ೪ ನೇ ,, ಸರ್ವಗಣಯುತ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಚಾತುರ್ಥಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚನವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ "ಇನ್‌ಫ್ಲ್ಯುಎಂಝಾ ಪತ್ರಿಕೆ" ಯನ್ನು ಫುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
5   ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೮೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೆಯಿಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಯೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ ಬಡ್ಡು, ಗುಪ್ತವ್ರನಬೇನೆ, ಹುರಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಜೋರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಫೋಟೆ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಹಸಿಂದಿ ಪ್ರಕಾರ ಬಾಟಲಿಯ ಶೋಭಿತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
33   ಹೆಡ್ ಆಫೀಸು ಶಹಾಪೂರ, ಬೆಳಗಾಂವ.

ಮೈಸೂರು ಸ್ಟಾರ್.

೧೯೧೮ನೆಯ ಇಸವಿ ಡಿಸೆಂಬರ್ ತಾ|| ೨೯ ನೆಯ ಭಾನುವಾರ.

ಪಾರಿಶ್ರಾಮಿಕಾಭ್ಯುದಯ.

ನಮ್ಮ ದೇಶದ ಪ್ರಜೆಗಳಲ್ಲಿ ವಿದ್ಯಾವಂತರ ಸಂಖ್ಯೆಯೇ ಬಹಳ ಸ್ವಲ್ಪ. ವಿದ್ಯಾವಂತರಾದವರುಗಳಿಗೆ ಸರ್ಕಾರದ ಉದ್ಯೋಗದ ಮೇಲೆ ಅಪೇಕ್ಷೆ. ಇಲ್ಲವೆ ವಕೀಲತನವನ್ನು ಸಂಪಾದಿಸುವ ಕುತೂಹಲ. ದೇಶಾಭ್ಯುದಯಕ್ಕೆ ಮುಖ್ಯ ಸ್ತಂಭದಂತಿರುವ ವಿದ್ಯಾವಂತರುಗಳ ಗುರಿಯು ಮೇಲೆ ಕಂಡ ಎರಡು ವಿಷಯಗಳಲ್ಲಿ ಮಾತ್ರವೇ ಪರ್ಯವಸನ್ನವಾದುದರಿಂದ, ದೇಶದ ಶ್ರೇಯಸ್ಸಿಗೆ ವಿಶೇಷ ಸಾಧಕಗಳಾದ ಕೃಷಿ ಶಿಲ್ಪಿ ವಾಣಿಜ್ಯ ಪರಿಶ್ರಮಾದಿಗಳು ಪ್ರೌಢರ ಅವಲಂಬನವಿಲ್ಲದೆ ಸಾಮಾನ್ಯಸ್ಥಿತಿಯಲ್ಲಿ ನಿಂತಿರುವುದೇನಾಶ್ಚರ್ಯ? ಸರ್ಕಾರದ ಉದ್ಯೋಗದಿಂದಲೂ ವಕೀಲತನದಿಂದಲೂ ಜೀವಿಸುವವರೆಲ್ಲರೂ ಒಂದು ವಿಧದಲ್ಲಿ ಸಹೋದರ ಪ್ರಜೆಗಳು ಆರ್ಜಿಸಿಕೊಟ್ಟ ದ್ರವ್ಯದಿಂದ ಉದರಂಭರಣ ಮಾಡುತ್ತ ಕುಳಿತುಕೊಳ್ಳುವವರಾಗುವರೇ ಹೊರತು, ಬೇರೆ ವಿಧದಿಂದ ಸ್ವತಂತ್ರವಾಗಿ ದ್ರವ್ಯಾಕರ್ಷಣೆ ಮಾಡತಕ್ಕವರಾಗಿರುವುದಿಲ್ಲ. ಸರ್ಕಾರದ ಉದ್ಯೋಗಸ್ಥಾನಗಳು ಮಿತವಾಗಿರುವುವೇ ಹೊರತು ವಿದ್ಯೆ ಕಲಿತವರಿಗೆಲ್ಲಾ ದೊರೆಯುವಷ್ಟು ಕೂಡ ಅವು ಇರುವುದಿಲ್ಲ. ವಕೀಲರ ಸಂಖ್ಯೆಯು ಹೆಚ್ಚಿದಷ್ಟೂ ಲೋಕದಲ್ಲಿ ವ್ಯಾಜ್ಯಗಳ ಸಂಖ್ಯೆ ಹೆಚ್ಚುವುದೇ ಹೊರತು ಕಡಿಮೆಯಾಗುತ್ತಲಿಲ್ಲ. ದಿವಾನ್ ಮಿ|| ವಿ. ಪಿ. ಮಾಧವರಾಯರ ಕಾಲದಲ್ಲಿ ರಾಜಧಾನಿಯೊಳಗೆ ಒಬ್ಬ ಪ್ರಸಿದ್ಧೋಪನ್ಯಾಸಕರು ಉಪನ್ಯಾಸ ಮಾಡುವಾಗ್ಗೆ ವಕೀಲರನ್ನು ಭೂಗತವಾಗಿರುವ ಒಂದು ಜಾತಿಯ ಸಣ್ಣ ಹುಳುಗಳನ್ನು ನುಂಗುವ ಭೂಗತಸರ್ಪಗಳಿಗೆ ಹೋಲಿಸಿದ್ದರು. ಕಳೆದ ೧೫೦ ವರ್ಷಗಳಿಂದ ಆಂಗ್ಲಪ್ರಭುತ್ವದವರು ನಮಗೆ ಮಾಡಿಸಿದ ವಿದ್ಯಾಭ್ಯಾಸವೆಲ್ಲವೂ ಮೇಲೆ ಕಂಡ ಸರ್ಕಾರದುದ್ಯೋಗ ಸಂಪಾದನೆ, ಇಲ್ಲವೆ ವಕೀಲತನದ ಲಾಭ—ಇವುಗಳಿಗೆ ಮಾತ್ರ ಸಾಧಕವಾಯಿತೇ ಹೊರತು, ವಿದ್ಯಾವಂತರು ದೇಶವನ್ನು ಸಂಪದಭಿವೃದ್ಧಿಯಲ್ಲಿ ಮುಂದಕ್ಕೆ ತಂದು ತಾವೂ ಏಳ್ಗೆಗೊಳ್ಳಲು ಸಹಾಯಮಾಡಲಿಲ್ಲ. ಆ ದೋಷವು ಈಗ ಪ್ರಜೆಗಳಿಗೂ ಪ್ರಭುಗಳಿಗೂ ಸಹ ಚೆನ್ನಾಗಿ ಮನದಟ್ಟಾಗಿರುತ್ತದೆ. ಬರಿಯ ಸಾಹಿತ್ಯ ವಿದ್ಯೆಯ ಅಭ್ಯಾಸಮಾಡಿ ಪ್ರಯೋಜನವಿಲ್ಲವೆಂಬುದು ಸಿದ್ಧಾಂತವಾಗಿದೆ. ಪಶ್ಚಿಮ ದೇಶಗಳಲ್ಲಿ ಯಾವೊಂದು ವಿದ್ಯಾಪೀಠದವರೂ ವಿದ್ಯಾರ್ಥಿಗಳಿಗೆ ಕೇವಲ ಸಾಹಿತ್ಯ ವಿದ್ಯಾಭ್ಯಾಸವನ್ನು ಮಾಡಿಸಿ ಮುಗಿಸುವುದಿಲ್ಲ. ಪುಸ್ತಕವಿದ್ಯೆಯ ಜತೆಗೆ ಯಾವುದಾದರೊಂದು ಪರಿಶ್ರಮ ವಿದ್ಯೆಯನ್ನು ಪ್ರತಿಯೊಬ್ಬರೂ ಕಲಿತುಕೊಂಡೇ ತೀರಬೇಕೆಂಬ ನಿರ್ಬಂಧವನ್ನಿಟ್ಟಿರುತ್ತಾರೆ. ಅಲ್ಲಿಯ ವಿದ್ಯಾವಂತರು ಕೂಡ ತಮ್ಮ ವಿದ್ಯೆಯಿಂದ ಸ್ವತಂತ್ರಜೀವನಕ್ಕೆ ದಾರಿಮಾಡಿಕೊಳ್ಳುವುದು ಹೇಗೆಂದು ಯೋಚಿಸುವರೇ ಹೊರತು ವಿದ್ಯೆಕಲಿತು ಸರ್ಕಾರದ ಉದ್ಯೋಗದ ದಾರಿಯನ್ನೇ ನಿರೀಕ್ಷಿಸಿಕೊಂಡಿರುವುದಿಲ್ಲ.

ನಮ್ಮ ಭರತಖಂಡದ ವಿದ್ಯಾಪೀಠಗಳಲ್ಲೂ ಪಟ್ಟಪ್ರದಾನ ಸಭೆಗಳಲ್ಲಿ ಹಿತೋಪದೇಶ ಮಾಡತಕ್ಕವರುಗಳು ವಿದ್ವದ್ವರ್ಗಕ್ಕೆ ಪರಿಶ್ರಮಾಸಕ್ತಿಯನ್ನು ಹುಟ್ಟಿಸುವ ಬೋಧೆಗಳನ್ನು ಮಾಡುವುದಕ್ಕೆ ಈಗೀಗ ಉಪಕ್ರಮಿಸಿರುತ್ತಾರೆ. ಮದ್ರಾಸು ವಿಶ್ವವಿದ್ಯಾಲಯದ ಪಟ್ಟಪ್ರದಾನ ಸಮಾರಂಭ ಕಾಲದಲ್ಲಿ ಕಳೆದಸಲ ಸರ್ ಥಾಮಸ್ ಹಾಲೆಂಡ್‌ರವರು ಇದೇ ವಿಷಯವಾಗಿ ಬಹು ದಿವ್ಯವಾದ ಉಪನ್ಯಾಸಮಾಡಿ ಪರಿಶ್ರಮಾಭ್ಯುದಯದ ಕಡೆಗೆ ವಿದ್ಯಾವಂತರುಗಳು ಹೆಚ್ಚು ಗಮನ ಕೊಡಬೇಕೆಂದು ಒತ್ತಿಹೇಳಿದರು. ನಮ್ಮ ಮೈಸೂರು ವಿಶ್ವವಿದ್ಯಾಲಯ ಪಟ್ಟಪ್ರದಾನ ಸಮಯದಲ್ಲಿ ಸರ್ ಅಶುತೋಷಮುಕರ್ಜಿಯವರೂ ಅದೇ ಧ್ವನಿಯನ್ನು ತೋರಿಸಿದರು. ಕಳೆದ ತಾ|| ೧೫-೧೭ ರಲ್ಲಿ ಕಲ್ಕತ್ತಾ ಪಟ್ಟಣದೊಳಗೆ ನಡೆದ ವಿಶ್ವವಿದ್ಯಾಲಯ ಪಟ್ಟಪ್ರದಾನ ಸಭೆಯಲ್ಲೂ ಅಧ್ಯಕ್ಷರಾದ ವೈಸ್ರಾಯರೂ ವೈಸ್ ಛಾನ್ಸಲರಾದ ಸರ್ ಎಲ್ ಸ್ಯಾಂಡರ್ಸನ್ ರವರೂ ಕೂಡ "ಭರತಖಂಡವು ಈಗ ಪರಿಶ್ರಮ ಮೂಲಕವಾಗಿ ತಾನು ಮುಂದಕ್ಕೆ ಬರಬೇಕೆಂದು ನಿರೀಕ್ಷಿಸುತ್ತಿದೆ. ಆದುಕಾರಣ ಭಾರತೀಯರು ಇನ್ನು ಮುಂದೆ ತಮ್ಮ ದೃಷ್ಟಿಯನ್ನು ಕೇವಲ ಸಾಹಿತೀವಿದ್ಯೆಯ ಕಡೆಗೇ ಇಡದೆ ಪಾರಿಶ್ರಾಮಿಕ ವಿಷಯಗಳ ಕಡೆಗೆ ಮರಳಿಸಬೇಕು" ಎಂದು ಬೋಧಿಸಿರುತ್ತಾರೆ.

ವಿದ್ಯೆಯಿಲ್ಲದ ಜನರ ಕೈಯಲ್ಲೇ ಸಿಕ್ಕಿ ವೃದ್ಧಿಗೊಳ್ಳದಿರುವ ಪಾರಿಶ್ರಾಮಿಕ ಕಾರ್ಯಗಳು ವಿದ್ಯಾವಂತರ ಹಸ್ತಾವಲಂಬನದಿಂದ ವೃದ್ಧಿಹೊಂದಲು ವಿಶೇಷಾವಕಾಶವುಂಟು. ಪಶ್ಚಿಮದೇಶಗಳಲ್ಲಿ ಪಾರಿಶ್ರಾಮಿಕಾಭ್ಯುದಯವುಂಟಾಗುವುದಕ್ಕೆ ವಿದ್ವಜ್ಜನರು ಅತ್ತಕಡೆಗೆ ಗಮನಕೊಟ್ಟುದೇ ಕಾರಣ. ನಮ್ಮಲ್ಲಿರುವ ವಿದ್ವಜ್ಜನರು ಭರತಖಂಡದ ಪ್ರಾಚೀನ ಮಹತ್ವವನ್ನು ವಿಧವಿಧವಾಗಿ ಸಿದ್ಧಾಂತಮಾಡುವುದರಲ್ಲಿ ತಮ್ಮ ಪ್ರೌಢಿಮೆಯನ್ನು ವೆಚ್ಚಮಾಡುತ್ತ, ಅಷ್ಟರಿಂದಲೇ ತಮ್ಮ ವಿದ್ಯಾಶಕ್ತಿಯು ಧನ್ಯವಾದಂತೆ ತಿಳಿಯುತ್ತಿರುವುದನ್ನು ಬಿಟ್ಟು, ಸ್ವತಃ ಅವುಗಳ ಪುನರುಜ್ಜೀವನದ ಕಡೆಗೆ ಮನಸ್ಸು ಮಾಡುವುದಿಲ್ಲ. ಈ ಲೋಪವನ್ನು ದೂರೀಕರಿಸಬೇಕು. ಪ್ರಭುತ್ವದವರಾದರೂ ಬರಿಯ ಉಪದೇಶಮಾತ್ರದಿಂದಲೇ ವಿದ್ವಜ್ಜನರ ದೃಷ್ಟಿಯನ್ನು ಪರಿಶ್ರಮದ ಕಡೆಗೆ ತಿರುಗಿಸಬಹುದೆಂದು ತಿಳಿದುಕೊಳ್ಳದೆ, ಅದರ ಅಭ್ಯುದಯಕ್ಕೆ ಬೇಕಾದ ಸಹಾಯ ಸಂಪತ್ತಿಗಳನ್ನೆಲ್ಲಾ ಕೇವಲ ದೇಶಾಭ್ಯುದಯೈಕಕಾಂಕ್ಷೆಯಿಂದ ನಿಷ್ಪಕ್ಷಪಾತವಾಗಿ ಒದಗಿಸುತ್ತ ಬರಬೇಕು. ಮತ್ತು ಸಾಹಿತೀವಿದ್ಯೆಯ ಜತೆಯಲ್ಲೇ ಪ್ರತಿಯೊಬ್ಬ ವಿದ್ಯಾರ್ಥಿಯೂ ಯಾವುದಾದರೊಂದು ಪಾರಿಶ್ರಾಮಿಕ ವಿದ್ಯೆಯನ್ನೂ ಕಲಿಯುವಂತೆ ನಿರ್ಬಂಧವಿಡಬೇಕು. ಹೀಗೆ ಮಾಡಿದರೇನೆಯೇ ತರುಣರಿಗೆ ಅತ್ತಕಡೆಯ ರುಚಿ ಹತ್ತುವುದು.

ಸದ್ಯಃ ನಮ್ಮ ಮೈಸೂರು ಪ್ರಭುತ್ವದವರು ಪರಿಶ್ರಮಾಭ್ಯುದಯ ವಿಷಯದಲ್ಲೂ, ಪ್ರಜೆಗಳ ದೃಷ್ಟಿಯನ್ನು ಅತ್ತಕಡೆಗೆ ಮರಳಿಸುವುದರಲ್ಲೂ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಿಂದಲೂ ಹೆಚ್ಚು ಗಮನವನ್ನಿತ್ತಿರುವರೆಂಬುದನ್ನು ಎಲ್ಲರೂ ಬಲ್ಲರಷ್ಟೆ. ಈಗಣ ನಮ್ಮ ವಿದ್ಯಾಭ್ಯಾಸಶಾಖೆಯ ಇನ್ಸ್‌ಪೆಕ್ಟರ್ ಜನರಲ್ ಮಿ|| ರಾಮಲಿಂಗರೆಡ್ಡಿಯವರ ಪ್ರಯತ್ನವಿಶೇಷದಿಂದ ಸಾಹಿತೀ ವಿದ್ಯಾಭ್ಯಾಸದ ಜತೆಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಯಾವುದಾದರೊಂದು ಕಸುಬಿನ ಅಭ್ಯಾಸವನ್ನು ಮಾಡುವಂತೆ ಏರ್ಪಾಟು ನಡೆಯದಿರಲಾರದೆಂದು ನಂಬುತ್ತೇವೆ. ಇವರು ಪಶ್ಚಿಮದೇಶದ ವಿದ್ಯಾಭ್ಯಾಸ ಪದ್ಧತಿಗಳನ್ನೆಲ್ಲಾ ಸ್ವಾನುಭವದಿಂದ ತಿಳಿದವರು. ಇಲ್ಲಿಗೆ ಅನುಕೂಲವಾಗತಕ್ಕ ಪದ್ಧತಿಗಳನ್ನೆಲ್ಲಾ ವ್ಯವಹಾರಕ್ಕೆ ತಂದರೆ ದೇಶಾಭ್ಯುದಯಕ್ಕೆ ವಿಶೇಷ ಸಹಾಯವಾಗುವುದು. ಈಗ ನಮ್ಮ ದೇಶದ ಹೈಸ್ಕೂಲು ತರಗತಿಗಳಲ್ಲಿ ಓದತಕ್ಕವರುಗಳು ಮರಗೆಲಸ, ಕಬ್ಬಿಣಕೆಲಸ, ಯಂತ್ರಗಾರಿಕೆ, ಎರಕದ ಕೆಲಸ, ನೆಯ್ಗೆ, ವ್ಯವಸಾಯ, ರೇಷ್ಮೆಕಸಬು, ಅಚ್ಚಿನಕೆಲಸ, ಬೈಂಡಿಂಗು, ವಾಣಿಜ್ಯ—ಇವುಗಳಲ್ಲಾವುದನ್ನಾದರೂ ತಮ್ಮ ಮನಸ್ಸಿಗೆ ಒಪ್ಪಿದುದನ್ನು ತೆಗೆದುಕೊಂಡು ಸ್ಕೂಲ್ ಫೈನಲ್ ಪರೀಕ್ಷೆಯನ್ನು ಕೊಡಬೇಕೆಂದು ಏರ್ಪಡಿಸಿರುವರು. ಈ ನಿರ್ಬಂಧ ಪದ್ಧತಿಯು ತರುಣವಿದ್ಯಾರ್ಥಿಗಳಲ್ಲಿ ಪಾರಿಶ್ರಾಮಿಕಾಭಿರುಚಿಯನ್ನು ಬಲಪಡಿಸಲು ಸಹಾಯಕವಾದೀತೆಂದು ನಂಬುತ್ತೇವೆ. ಈ ಪ್ರಾರಂಭಸ್ಥಿತಿಯಿಂದ ಪಾರಿಶ್ರಾಮಿಕ ಕಲಾಶಾಖೆಯೂ ನಮ್ಮ ಸಂಸ್ಥಾನದಲ್ಲಿ ಉತ್ತರೋತ್ತರ ಉದ್ಭವಿಸಲು ಅವಕಾಶವುಂಟಾಗಲೆಂದು ಕೋರುವೆವು.

ರಾಜಧಾನಿಯ ಪೊಲೀಸು.

ಈಗೆ ೧-೧|| ವರ್ಷದ ಕೆಳಗೆ ಈ ಪಟ್ಟಣದಲ್ಲಿ ಬೇಗಾದರೆ ಕನ್ನ ಕಳವುಗಳ ಸುದ್ದಿಯನ್ನು ಕೇಳುವುದೇ ಆಗಿದ್ದಿತು. ಯುದ್ಧದ ಕಾರಣದಿಂದ ಕಬ್ಬಿಣದ ಬೆಲೆಯು ಹೆಚ್ಚಾಗಲು ಕಳ್ಳರು ಜನವಾಸವಿಲ್ಲದ ವೈದ್ಯಶಾಲೆಗಳು, ಪಾಠಶಾಲೆಗಳು, ಕಟ್ಟಲ್ಪಡುತ್ತಿರುವ ಮನೆಗಳು—ಇವುಗಳ ಕಿಟಕಿಗಳ ಕಂಬಿಗಳನ್ನೆಲ್ಲಾ ಕಿತ್ತು ಅಪಹರಿಸಿಕೊಂಡು ಹೋಗುತ್ತಿದ್ದರು. ಕಿಟಕಿ ಕಂಬಿಗಳನ್ನು ಕಿತ್ತು ಮನೆಗಳಿಗೆ ನುಗ್ಗಿ ವಸ್ತ್ರಾಭರಣಗಳನ್ನು ಅಪಹರಿಸುವುದು ಹೆಚ್ಚಿಕೊಂಡಿದ್ದಿತು. ಈಚೆಗೆ ಅಂಥ ಹಾವಳಿಯು ಬಲುಮಟ್ಟಿಗೆ ಕಡಿಮೆಯಾಗಿರುವುದು ಸಂತೋಷಪ್ರದವು. ರಾಜಧಾನಿಯ ಪೊಲೀಸಿನ ಚಟುವಟಿಕೆಯಿಂದ ಅಂಥ ಅಪರಾಧಿಗಳಲ್ಲಿ ಹಲವರು ಸಿಕ್ಕಿಬಿದ್ದು ಶಿಕ್ಷಿತರಾದುದೇ ಈಗಣ ಶಾಂತಸ್ಥಿತಿಗೆ ಕಾರಣ. ಪೊಲೀಸರ ದಕ್ಷತೆಯಿಂದ ಅಪರಾಧಿಗಳು ಸಿಕ್ಕಿ ಶಿಕ್ಷಿತರಾಗದೆ ಇರುತ್ತಿದ್ದರೆ ಈಗಣ ದುರ್ಭಿಕ್ಷ ಕಾಲದಲ್ಲಿ ಹೊಟ್ಟೆಗಿಲ್ಲದ ಕಳ್ಳರ ಹಾವಳಿಯು ಅತ್ಯಂತ ದುಸ್ಸಹವಾಗುತ್ತಿದ್ದಿತೆಂಬುದಕ್ಕೆ ಸಂಶಯವಿಲ್ಲ. ಮುಖ್ಯವಾಗಿ ಹಿಂದೆ ಎ. ಡಿವಿಜನ್ನಿನೊಳಗೇ ಅಂಥ ಅಪರಾಧಗಳು ವಿಶೇಷವಾಗಿ ನಡೆಯುತ್ತಿದ್ದುವು. ಇದು ಬಹು ಬಡಜನರೂ, ಸಣ್ಣಜನರೂ ವಾಸಮಾಡುವ ದೊಡ್ಡ ಡಿವಿಜನ್ನಾಗಿರುತ್ತದೆ. ಈಗ ಬಲುಮಟ್ಟಿಗೆ ಈ ಡಿವಿಜನ್ನು ನಿರುಪದ್ರವವಾಗಿದ್ದರೂ ಕಳೆದ ೧ ಪಕ್ಷದೊಳಗೆ ೨ ಕಡೆಯಲ್ಲಿ ದೊಡ್ಡ ಕಳವುಗಳು ನಡೆದಿರುತ್ತವೆ. ೧ನೆಯದು ಮಿ|| ಹಾರ್ಡಿಂಜ್‌ರವರ ಬಂಗಲೆಯ ಪಶ್ಚಿಮಕ್ಕಿರುವ ಮಹಾಲಕ್ಷ್ಮೀ ಟ್ರೇಡಿಂಗ್ ಕಂಪೆನಿಯಲ್ಲಿ ಕಿಟಕಿಕಂಬಿಗಳನ್ನು ಕಿತ್ತು ಒಳನುಗ್ಗಿ ೧ ಸಾವಿರ ರೂ. ಗಳ ವರೆಗೆ ಹೊಸ ಸೀರೆ ಕುಪ್ಪಸ ನಗದು ಹಣ ಮೊದಲಾದುದನ್ನು ಅಪಹರಿಸಿದ ಕಳ್ಳತನವಾಗಿರುತ್ತದೆ. ೨ ನೆಯದು ಮಿ|| ಅಬ್ಬಾಅಬ್ದುಲ್ ಷುಕರ್ ಆಂಡ್ ಸನ್ಸ್‌ರವರ ಮನೆಯಲ್ಲಿ ೫೦೦೦ ರೂ. ಗಳ ನಗಗಳನ್ನು ಅಪಹರಿಸಿದ ಕಳವಾಗಿರುತ್ತದೆ. ಇವೆರಡರ ಅಪರಾಧಿಗಳನ್ನೂ ಪದಾರ್ಥಗಳ ಸಮೇತ ರಾಜಧಾನಿಯ ಎ. ಡಿವಿಜನ್ ಇನ್ಸ್‌ಪೆಕ್ಟರ್ ಮ|| ಚನ್ನವೀರಪ್ಪನವರು ಪತ್ತೆಮಾಡಿರುವುದು ಅವರ ಕರ್ತವ್ಯದಕ್ಷತೆಗೂ ಪೊಲೀಸು ಶಾಖೆಗೂ ಭೂಷಣಪ್ರದವಾಗಿದೆ. ೧ ನೆ ಕಳವಿನ ಸಂಬಂಧದಲ್ಲಿ ೫-೬ ನೂರು ರೂ. ಗಳ ಪದಾರ್ಥಗಳ ಸಮೇತ ಅಪರಾಧಿಯು ಸಿಕ್ಕಿ ಸೆರೆಯಾಗಿರುತ್ತಾನೆ. ಇಷ್ಟರಲ್ಲೇ ವಿಚಾರಣೆಗೆ ಒಳಪಡುವುದರಲ್ಲಿದ್ದಾನೆ. ೨ ಕಳವಿನಲ್ಲಿ ಮಿ|| ಸೇಟರ ಮನೆಯಲ್ಲೇ ೨೦ ವರ್ಷಗಳಾರಭ್ಯ ಸಾಕಿ ಸಲಹಿಸಿಕೊಂಡು ನಂಬುಗೆ ಹುಟ್ಟಿಸಿದ್ದ ಹಲೀಮಾಬಿ ಎಂಬ ತರುಣಿಯು ಹಗಲುಹೊತ್ತಿನಲ್ಲೇ ಯಾರೂ ಇಲ್ಲದ ಸಮಯದಲ್ಲಿ ಬೀರುಗಳನ್ನು ಬಿಚ್ಚಿ ರತ್ನಖಚಿತ ಆಭರಣಗಳನ್ನು ಅಪಹರಿಸಿ ಗುಟ್ಟಿನಿಂದ ಸಾಗಿಸಿಬಿಟ್ಟಿದ್ದುದನ್ನು ೧ ದಿನದೊಳಗಾಗಿ ಪೊಲೀಸರು ಬುದ್ಧಿವಂತಿಕೆಯಿಂದ ಪತ್ತೆಮಾಡಿ, ೧ ವಾರದೊಳಗಾಗಿ ಅಪರಾಧಿನಿಗೆ ೩ ತಿಂಗಳು ಕಾರಾಗೃಹವಾಸ, ೧೦೦ ರೂ. ಅರ್ಥದಂಡದ ಶಿಕ್ಷೆಗಳಿಗೆ ಒಳಪಡುವಂತೆ ಮಾಡಿದುದು ಶ್ಲಾಘನೀಯವಾಗಿದೆ. ಎ. ಡಿವಿಜನ್ನಿಗೆ ಇನ್ಸ್‌ಪೆಕ್ಟರಾಗಿ ಬಂದಿರುವ ಮ|| ಗುಬ್ಬಿ ಚನ್ನವೀರಪ್ಪನವರು ಮುಖಭಾವದಿಂದ ಶಾಂತರಾಗಿ ತೋರುತ್ತಿದ್ದರೂ ಕಾರ್ಯದಲ್ಲಿ ಇಷ್ಟು ಶೂರರಾಗಿರುವರೆಂಬುದು ಅವರ ಕಾಲದ ಈ ಡಿವಿಜನ್ನಿನ ಪೊಲೀಸು ದಕ್ಷತೆಯಿಂದ ವ್ಯಕ್ತವಾಗುತ್ತದೆ. ಹಿಂದೆ ಇವರು ಪಾವಗಡ ತಾಲ್ಲೂಕಿನಲ್ಲಿದ್ದಾಗ ಮೈಸೂರು ದೇಶದ ಎಲ್ಲೆಕಟ್ಟಿನಲ್ಲಿ ಬೆಸುಗೆಯಂತೆ ಕಡೆಯ ದುಷ್ಟರು ಬಹಳವಾಗಿ ನಡೆಯಿಸುತ್ತಿದ್ದ ದರೋಡೆಗಳಲ್ಲಿ ೩-೪ ನ್ನು ಬಹು ಧೈರ್ಯಸಾಹಸಗಳಿಂದ ಪತ್ತೆಮಾಡಿದುದಕ್ಕಾಗಿ ಗೌರ್ನಮೆಂಟಿನವರು ಮೆಚ್ಚಿ ಇಲಾಖೆಯ ಮೂಲಕ ಭಂಗಾರದ ಸರಪಣಿಯ ಸಮೇತವಾದ ಕೈಗಡಿಯಾರವೊಂದನ್ನು ಬಹುಮಾನಿಸಿದ್ದರೆಂದು ಕೇಳಿದ್ದೆವು. ಇವರು ಹೋದಹೋದ ಕಡೆಯಲ್ಲೆಲ್ಲಾ ಹೀಗೆಯೇ ಸಾಮರ್ಥ್ಯಪ್ರದರ್ಶನಮಾಡಿ ಜನಗಳ ಕೃತಜ್ಞತೆಗೂ ಸರ್ಕಾರದ ಮೆಚ್ಚುಗೆಗೂ ಪಾತ್ರರಾಗಿ ಬಂದಿರುವರು. ರಾಜಧಾನಿಗೆ ಇಂಥ ಸಮರ್ಥರ ಸಹಾಯವು ಒದಗಿದುದು ಸಂತೋಷಕರವು. ಇಂಥವರುಗಳ ಸಂಖ್ಯೆಯು ಪೊಲೀಸು ಶಾಖೆಯಲ್ಲಿ ಹೆಚ್ಚಿದರೆ ಅದು ದೇಶಕ್ಕೆ ವಿಶೇಷ ಸಹಾಯಕವಾಗುವುದು. ವೈಗಳ್ಯತನವಿಲ್ಲದೆಯೂ ನಿಸ್ಪೃಹತೆ ಪಾಪಭೀತಿಗಳಿಂದಲೂ ಕೆಲಸಮಾಡತಕ್ಕ ಇಂಥ ಉದ್ಯೋಗಿಗಳ ಸಂಖ್ಯೆಯು ಪೊಲೀಸು ಶಾಖೆಯಲ್ಲಿ ಹೆಚ್ಚುತ್ತ ಬರಬೇಕು. ಮತ್ತು ಇಂಥವರ ಮಹತ್ತಿನ ಮೇಲೆ ಶಾಖಾ ಮುಖ್ಯಾಧಿಕಾರಿಗಳ ಗಮನವು ಪ್ರಸರಿಸುತ್ತ ಬಂದರೆ ಇತರೋದ್ಯೋಗಿಗಳೂ ವಿಶೇಷವಾಗಿ ಕರ್ತವ್ಯ ತತ್ಪರರಾಗಲು ಅವಕಾಶವಾಗುವುದು.

ಶ್ರೀಮನ್ಮಹಾರಾಜರವರು ಕಳೆದ ವಾರ ೨ ದಿವಸ ಬಂಡೀಪುರದ ಅಡವಿಗೆ ಬೇಟೆಗಾಗಿ ದಯಮಾಡಿಸಿದ್ದು ಬಂದರು.

ಒಳದೇಶದ ವೃತ್ತಾಂತಗಳು.

ಕಳೆದವಾರ ಬೆಂಗಳೂರಿನಲ್ಲಿ ಕುದುರೆಗಳ ಮತ್ತು ನಾಯಿಗಳ ಪ್ರದರ್ಶನವು ನಡೆಯಿತು.

ಮೈಸೂರು ಸರ್ಕಾರದ ರೈಲ್ವೆ ಆಫೀಸು ಬರುವ ಜನವರಿ ತಾ|| ೨ ರಿಂದ ರಾಜಧಾನಿಗೆ ಬಂದು ಸ್ಥಾಪಿಸಲ್ಪಡುವುದು.

ಚಿತ್ರದುರ್ಗದಲ್ಲಿ ಪ್ಲೇಗು ಶಾಂತವಾಗಿರುವುದರಿಂದ ಹೊರಗೆ ವಾಸಮಾಡುತ್ತಿದ್ದವರೆಲ್ಲಾ ಊರನ್ನು ಸೇರುತ್ತಿದ್ದಾರೆ.

ಸರ್ದಾರ್ ಎಂ. ಕಾಂತರಾಜಅರಸಿನವರ ವ್ಯಾಧಿಯು ನಿವಾರಿತವಾಗಿ ಅವರು ಶಕ್ತಿಗೊಳ್ಳುತ್ತಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ.

ಸರ್ ಎಂ. ವಿಶ್ವೇಶ್ವರಯ್ಯನವರು ಮುಂದಣ ತಿಂಗಳಲ್ಲಿ ಬೊಂಬಾಯಿಗೆ ಪ್ರಯಾಣಮಾಡಿ ಅಲ್ಲಿಂದ ಕಾಶೀಕ್ಷೇತ್ರಕ್ಕೆ ತೆರಳುವವರಾಗಿದ್ದಾರೆ.

ಬೆಂಗಳೂರು ದಂಡಿನಲ್ಲಿ ಕ್ರಿಸ್ತಮಸ್ ಹಬ್ಬದ ಕಾಲದಲ್ಲಿ ನಡೆಯುತ್ತಿದ್ದ ವಾರಕಟ್ಟಿನ ಪ್ರದರ್ಶನವು ಈಸಲ ವಿಜೃಂಭಣೆಯಿಂದ ನಡೆಯುತ್ತಿದೆ.

ಬೆಂಗಳೂರಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಸರ್ದಾರ್ ಕಾಂತರಾಜಅರಸಿನವರ ದೇಹಸ್ಥಿತಿಯನ್ನು ವಿಚಾರಿಸಿಕೊಂಡು ಮರಳಿ ರಾಜಧಾನಿಗೆ ದಯಮಾಡಿಸಿದ್ದಾರೆ.

ಪಶು ಚಿಕಿತ್ಸಾಭ್ಯಾಸಕ್ಕಾಗಿ ಬೊಂಬಾಯಿಗೆ ಹೋಗುವ ೬ ಮಂದಿ ವಿದ್ಯಾರ್ಥಿಗಳಿಗೆ ೩ ವರ್ಷಕಾಲ ತಿಂಗಳಿಗೆ ೨೫ ರೂ.ನಂತೆ ವೇತನಕೊಡಲು ನಮ್ಮ ಸರ್ಕಾರದವರು ಪ್ರಕಟಿಸಿದ್ದಾರೆ.

ತಿಪಟೂರಿನಲ್ಲಿ ಹೊಸದಾಗಿ ಏರ್ಪಡಿಸಲ್ಪಟ್ಟಿರುವ ಟ್ರೇಡಿಂಗ್ ಕಂಪೆನಿಯ ಆರಂಭಮಹೋತ್ಸವವು ಡಿಸ್ಟ್ರಿಕ್ಟ್ ಡಿ|| ಕಮೀಷನರ್ ಮ|| ಎ. ಸುಬ್ರಮಣ್ಯಯ್ಯರ್‌ರವರ ಅಧ್ಯಕ್ಷತೆಯಿಂದ ಕಳೆದ ಭಾನುವಾರ ನಡೆಯಿತು.

ಸರ್ ಮಿಲ್ಲರ್‌ರವರು ರಜಾದಮೇಲಿರುವುದರಿಂದ ಮ|| ಚಂದ್ರಶೇಖರಯರ್‌ರವರು ಆಕ್ಟಿಂಗ್ ಚೀಫ್‌ಜಡ್ಜರಾಗಿಯೂ, ಗೌ|| ಅಡ್ವೋಕೇಟ್ ಮಿ|| ಕೆ. ದೊರಸಾಮಯ್ಯರು ಚೀಫ್‌ಕೋರ್ಟ್ ಜಡ್ಜರಾಗಿಯೂ ಮಾಡಲ್ಪಟ್ಟಿದ್ದಾರೆ.

ಸ್ಯಾನಿಟರಿ ಕಮಿಷನರಾಗಿರುವ ಮ|| ಎಂ. ಶ್ರೀನಿವಾಸರಾಯರು ಬರುವ ಜನವರಿ ತಿಂಗಳಲ್ಲಿ ಉದ್ಯೋಗದಿಂದ ನಿವೃತ್ತರಾಗುವರೆಂದೂ ಡಾ|| ಎ. ಕೋದಂಡಪಾಣಿ ಮೊದಲಿಯಾರರು ಸ್ಯಾನಿಟರಿ ಕಮಿಷನರಾಗಿ ನಿಯಮಿಸಲ್ಪಡುವರೆಂತಲೂ ವರ್ತಮಾನವಿದೆ.

ಬರುವ ಜನವರಿ ತಾ|| ೧೦ ರಲ್ಲಿ ವಂಗಕವಿ ಸಾರ್ವಭೌಮರಾದ ಸರ್ ರವೀಂದ್ರನಾಥ ಠಾಕೂರ್‌ರವರು 'ಬೆಂಗಳೂರಿನ ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್ನಿನವರು ಏರ್ಪಡಿಸಿರುವ ಚಿತ್ರ ಕಲಾಪ್ರದರ್ಶನಕ್ಕಾಗಿ ಆಹೂತರಾಗಿ ದಯಮಾಡಿಸುವವರಾಗಿದ್ದಾರೆ.

ಬೆಂಗಳೂರು ಮ್ಯುನಿಸಿಪಾಲಿಟಿಯ ಚೀಫ್ ಆಫೀಸರಾದ ಮ|| ಆರ್. ಸುಬ್ಬರಾಯರವರು ಬರುವ ಜನವರಿ ತಾ|| ೨ ರಿಂದ ೩ ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಆ ಕಾಲದಲ್ಲಿ ಮ|| ಬಿ. ಎಸ್. ರಾಣೋಜಿರಾಯರು ಚೀಫ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ.

ಲೈಸೆನ್ಸ್ ಪಡೆದ ವರ್ತಕರಿಗೆ ಅಕ್ಕಿ ರಾಗಿಗಳನ್ನು ಮಾರಲು ನಮ್ಮ ರಾಜಧಾನಿಯ ಮ್ಯುನಿಸಿಪಾಲಿಟಿಯವರು ಅವಕಾಶಕೊಟ್ಟಿದ್ದಾರೆ. ಇದರಂತೆ ಏರ್ಪಟ್ಟಿರುವ ಹೊಸ ಅಂಗಡಿಗಳಲ್ಲಿ ರೂ.ಗೆ ೭|| ಸೇರಿನಂತೆ ಹೊಸ ಅಕ್ಕಿಯು ಮಾರಲ್ಪಡುತ್ತಿದೆ. ಇದರಿಂದ ಪ್ರಜೆಗಳಿಗೆ ಎಷ್ಟೋ ಅನುಕೂಲವಾಗಿದೆ. ಮ್ಯುನಿಸಿಪಾಲಿಟಿಯವರ ಸ್ವಂತದ ಅಂಗಡಿಗಳು ಇಷ್ಟರಲ್ಲೇ ನಿಲ್ಲಿಸಲ್ಪಡಬಹುದು.

ರಾಜಧಾನಿಯ ವರ್ತಕರಲ್ಲನೇಕರು ಲೈಸೆನ್ಸ್ ನಿರ್ಬಂಧವಿಲ್ಲದೆ ವ್ಯಾಪಾರ ನಡೆಯಿಸಲು ಅವಕಾಶವಿತ್ತರೆ ಧಾನ್ಯಗಳು ಪೇಟೆಗಳಿಗೆ ವಿಶೇಷವಾಗಿ ಒದಗುವುದಕ್ಕೂ ಅಕ್ಕಿಯನ್ನು ಅಗ್ಗವಾಗಿ ಮಾರುವುದಕ್ಕೂ ಅವಕಾಶವಾಗುವುದೆಂಬುದಾಗಿಯೂ, ಹೊರಕ್ಕೆ ಸಾಗಿಹೋಗುವುದನ್ನು ಮಾತ್ರ ತಪ್ಪಿಸಲು ನಿರ್ಬಂಧವನ್ನು ಬಲವಾಗಿ ಮಾಡಿದರೆ ಸಾಕೆಂತಲೂ ಹೇಳುತ್ತಲಿದ್ದಾರೆ.

ಕಾಶೀ ಪಟ್ಟಣದಲ್ಲಿ ಜರುಗುವ ಹಿಂದೂ ಯೂನಿವರ್ಸಿಟಿಯಲ್ಲಿ ತೇರ್ಗಡೆಯನ್ನು ಹೊಂದಿದ ವಿದ್ಯಾರ್ಥಿಗಳಿಗೆ ಪಟ್ಟಪ್ರದಾನವನ್ನು ಮಾಡುವ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಲು ಶ್ರೀಮನ್ಮಹಾರಾಜರವರು ಬರುವ ಜನವರಿ ತಾ|| ೬ ರಲ್ಲಿ ಮಿತಪರಿವಾರದೊಡನೆ ಮೈಸೂರು ಅರಸೀಕೆರೆ ಮಾರ್ಗವಾಗಿ ಪ್ರಯಾಣಮಾಡಿ ಪ್ರಯಾಗದಲ್ಲಿ ೩-೪ ದಿನಗಳಿದ್ದು ಅನಂತರ ಕಾಶೀಪಟ್ಟಣವನ್ನು ತಲುಪುವುದಾಗಿ ತಿಳಿಯಬರುತ್ತದೆ.

ಬರುವ ಜನವರಿ ತಿಂಗಳಿಂದ ಅಂಚೆಯ ಮೂಲಕ ಕಳುಹಿಸಲ್ಪಡುವ ಕಾಗದಗಳ ತೂಕವು ೧ ತೊಲೆಯಾಗಿದ್ದರೆ ೬ ಪೈ. ೧ ತೊಲೆಯಿಂದ ೨|| ತೊಲೆಯೊಳಗಿದ್ದರೆ ೧ ಆಣೆ. ಅನಂತರ ಪ್ರತಿ ೨|| ತೊಲೆಯ ತೂಕಕ್ಕೆ ಒಂದೊಂದಾಣೆಯಂತೆ ಸ್ಟಾಂಪನ್ನು ಅಂಟಿಸತಕ್ಕುದೆಂದು ಸರ್ಕಾರದಪ್ಪಣೆಯಾಗಿದೆ. ಇದುವರೆಗೆ ೧ ತೊಲೆಯಿಂದ ೧೦ ತೊಲೆಯ ತೂಕದವರೆಗೂ ೧ ಆಣೆ, ಬಳಿಕ ಪ್ರತಿ ೧೦ ತೊಲೆಗೂ ೧ ಆಣೆಯಂತೆ ಛಾರ್ಜಿದ್ದಿತು.

ನಂಜನಗೂಡಿನಲ್ಲಿ ಯಾರೋ ನೋಟುಗಳನ್ನು ಕೃತ್ರಿಮವಾಗಿ ಮಾಡುತ್ತಿರುವುದು ಪೊಲೀಸರಿಗೆ ತಿಳಿದು ಅವನ ಮನೆಯನ್ನು ಶೋಧಿಸುವಲ್ಲಿ ನೋಟಿನ ನಿರ್ಮಾಣಕ್ಕೆ ಬೇಕಾದ ಯಂತ್ರ ಸಾಮಗ್ರಿಗಳೆಲ್ಲವೂ ದೊರಕಿರುವುದಾಗಿಯೂ ಮುಂದಣ ವಿಚಾರಣೆ ನಡೆಯುತ್ತಿರುವುದಾಗಿಯೂ ವರ್ತಮಾನವಿದೆ. ಈ ಯಂತ್ರಕ್ಕೆ ಕಾಗದವನ್ನು ಕೊಟ್ಟು ಕೀಲನ್ನು ತಿರುಗಿಸಿದಲ್ಲಿ ನಿಜವಾದ ನೋಟಿಗೆ ಲೇಶಮಾತ್ರವೂ ವ್ಯತ್ಯಾಸವಿಲ್ಲದೆ ಮುದ್ರಣವಾಗಿ ಈಚೆಗೆ ಬರುವುದಂತೆ. ಆದರೆ ಸರ್ಕಾರಿಯ ನೋಟುಗಳಿಗುಪಯೋಗಿಸಲ್ಪಡುವ ಕಾಗದದ ಮೇಲೆ ನೀರಿನ ಗೆರೆಗಳೂ ನಂಬರೂ ಮಾತ್ರವಿರುವುದಿಲ್ಲವು. ಇದರಿಂದ ಕೃತ್ರಿಮವು ಈಗ ಹೊರಬೀಳಲು ಅವಕಾಶವಾಯಿತು. ಈವರೆಗೆ ೧೦,೦೦೦ ರೂ.ಗಳ ನೋಟುಗಳು ನಿರ್ಮಿಸಲ್ಪಟ್ಟು ಮಾರಲ್ಪಟ್ಟಿರುವುದಾಗಿ ವದಂತಿಯಿದೆ. ಇದರ ನಿಜಸ್ಥಿತಿಯು ಇನ್ನೂ ಹೊರಬಿದ್ದಿಲ್ಲವು.

ಚೆನ್ನಪಟ್ಟಣದಲ್ಲಿ ಪೊಲೀಸ್ ಇನ್ಸ್‌ಪೆಕ್ಟರಾಗಿರುವ ಮ|| ಮರಿಯಪ್ಪನವರ ಪ್ರಯತ್ನವಿಶೇಷದಿಂದ ಆ ಊರಿನಲ್ಲಿ ಒಂದು ಒಕ್ಕಲಿಗ ವಿದ್ಯಾರ್ಥಿಗಳ ಸಂಘವು ಸ್ಥಾಪಿತವಾಗಿದೆ. ಅದರ ಜನರಲ್ ಮೀಟಿಂಗು ಕಳೆದ ಭಾನುವಾರ ಚೆನ್ನಪಟ್ಟಣದಲ್ಲಿ ಒಕ್ಕಲಿಗರಸಂಘದ ಅಧ್ಯಕ್ಷರಾದ ಮ|| ಮಾರಪ್ಪನವರ ಅಧ್ಯಕ್ಷತೆಯಿಂದ ನಡೆಯಿತು. ತಮ್ಮ ವರ್ಗದವರ ವಿದ್ಯಾಭಿವೃದ್ಧಿಗೆ ತಮ್ಮ ಜನಗಳೆಲ್ಲರೂ ಪ್ರೋತ್ಸಾಹಕೊಡಬೇಕಾದ ಆವಶ್ಯಕತೆಯನ್ನು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿರುವರು. ಚೆನ್ನಪಟ್ಟಣದಲ್ಲಿ ತಮ್ಮ ವಿದ್ಯಾರ್ಥಿಗಳಿಗಾಗಿ ೧ ಹಾಸ್ಟಲನ್ನು ಸ್ಥಾಪಿಸಬೇಕೆಂದು ನಿರ್ಧಾರವಾಗಿ ಅದಕ್ಕೋಸ್ಕರ ಸಭೆಯಲ್ಲೇ ೪ ಸಾವಿರ ರೂ ಕೂಡಿದುವು. ಅಲ್ಲದೆ ೩೦೦ ರೂ. ಗಳನ್ನೂ ೩ ಎಕರೆಯ ಗದ್ದೆಯನ್ನೂ ಕೊಡಲು ವಾಗ್ದಾನವಾಯಿತು. ದೇಶದ ಮುಖ್ಯ ಪ್ರಜಾಕೋಟಿಯವರಾದ ಈ ಜನರಲ್ಲಿ ವಿದ್ಯಾವಿವೇಕವರ್ಧನೆಗೆ ಇಂಥ ಪ್ರಯತ್ನಗಳು ನಡೆಯುತ್ತಿರುವುದು ಸಂತೋಷವು. ಆದರೆ ಅವರ ಜನಸಂಖ್ಯೆಯನ್ನು ಗಮನಿಸಿದರೆ ಈಗ ಮಾಡಲ್ಪಡುತ್ತಿರುವ ಪ್ರಯತ್ನಗಳೂ ಸಹಾಯವೂ ಬಹಳ ಸ್ವಲ್ಪವಾಗಿಯೇ ಇರುವುವು.

ಮೈಸೂರು ಶಾಕುಂತಲ ಕರ್ಣಾಟಕ ನಾಟಕ ಸಂಘದವರು ಕಳೆದ ಶುಕ್ರವಾರ ರಾತ್ರಿ ಮಹಾಭಾರತ ಆದಿಭಾಗವನ್ನು ಟೌನ್‌ಹಾಲಿನಲ್ಲಿ ಉತ್ತಮವಾಗಿ ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ಬಹಳವಾಗಿದ್ದಿತು. ಪ್ರತಿಯೊಬ್ಬರೂ ತಂತಮ್ಮ ಪಾತ್ರವನ್ನು ಶ್ಲಾಘ್ಯವಾಗಿ ಮಾಡಿದರು. ತಥಾಪಿ ದ್ರೌಪದೀ ಪಾತ್ರವನ್ನು ವಹಿಸಿದ್ದ ಮ|| ಸುಬ್ಬಣ್ಣನವರು ವಸ್ತ್ರಾಪಹರಣ ಸಮಯದಲ್ಲಿ ಮಾಡಿದ ಅಭಿನಯವು ಪ್ರೇಕ್ಷಣೀಯವೂ ಶ್ಲಾಘ್ಯವೂ ಆಗಿದ್ದಿತು. ನಾಟಕಾಭಿನಯದಲ್ಲಿ ಪೂರ್ಣಾನುಭವಿಗಳೂ, ಹೆಸರ್ವಡೆದವರೂ ಈ ಸಂಘದಲ್ಲಿ ಇರುವರಲ್ಲದೆ, ಅಮೋಘವಾದ ವಸ್ತ್ರಾಭರಣಗಳು, ಸೀನರಿಗಳು ಸಹಾ ಇರುವುದರಿಂದ ಪ್ರತಿಯೊಬ್ಬರೂ ಪರಸ್ಪರ ಪ್ರೀತಿ ವಿಶ್ವಾಸದಿಂದಲೂ ಒಕ್ಕಟ್ಟಿನಿಂದಲೂ ನಡೆದುಕೊಂಡು ನೀತಿಪ್ರದವಾದ ನವೀನ ನಾಟಕಗಳನ್ನು ಅಭ್ಯಸಿಸಿ ಪ್ರಯೋಗಮಾಡುವುದಾದರೆ ಈಗ ಬರೀ ಹೊರಗಣ ಡಬ್ಬಿನಿಂದ ಜನರನ್ನು ಮಂಕುಮಾಡುತ್ತಿರುವ ಸಂಘಗಳನ್ನು ಮೀರಿಸಿ ವಿಶೇಷವಾದ ಜನಾನುರಾಗವನ್ನು ಸಂಪಾದಿಸುವುದರಲ್ಲಿ ಅಭ್ಯಂತರವಿಲ್ಲವು. ಈ ಶಾಕುಂತಲ ಸಂಘದವರು ಬರುವ ಜನವರಿ ತಿಂಗಳಾದಿಭಾಗದಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿ ಅಲ್ಲಿ ಕೆಲಕಾಲ ತಮ್ಮ ನಾಟಕಗಳನ್ನು ಪ್ರಯೋಗಿಸಿ ಅಲ್ಲಿಂದ ಕಣಿವೆ ಕೆಳಗಿನ ಸೀಮೆಗೆ ಹೋಗುವವರಾಗಿರುವರೆಂದು ತಿಳಿಯುತ್ತೇವೆ. ಇವರು ಅರಮನೆಯ ಪೋಷಣೆಯಲ್ಲಿದ್ದಾಗ್ಗೆ ಅಂದರೆ ೩-೪ ವರ್ಷಗಳ ಕೆಳಗೆ ಬೆಂಗಳೂರಿಗೆ ಹೋಗಿ ನಾಟಕಗಳ ಪ್ರಯೋಗವನ್ನು ಮಾಡಿ ಅಲ್ಲಿಯ ಜನರ ಅನುರಾಗವನ್ನೂ, ಬಹುಮಾನಗಳನ್ನೂ, ದ್ರವ್ಯವನ್ನೂ ಸಂಪಾದಿಸಿಕೊಂಡು ಬಂದಿದ್ದರು. ಈಗಲೂ ಅಲ್ಲಿಯ ನಿವಾಸಿಗಳು ಈ ಸಂಘದವರಿಗೆ ಮೊದಲಿಗಿಂತಲೂ ಹೆಚ್ಚಾದ ಪ್ರೋತ್ಸಾಹವನ್ನು ಕೊಡುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಅಖಿಲ ಭಾರತಾಯುರ್ವೇದ ಮಹಾಸಭೆಯು ಕಳೆದ ತಾ|| ೨೬ ರಲ್ಲಿ ದಿಲ್ಲಿಪಟ್ಟಣದೊಳಗೆ ಸರ್ ನೀಲರತ್ನ ಸರ್ಕಾರ್‌ರವರ ಅಧ್ಯಕ್ಷತೆಯಿಂದ ನಡೆಯಿತು.

ಹಡಗಿನ ಯುದ್ಧಕ್ಕೆ ಸಂಬಂಧಪಟ್ಟ ದೊಡ್ಡದೊಡ್ಡ ಚಿತ್ರಪಟಗಳ ಪ್ರದರ್ಶನವನ್ನು ಈಗ ಮದ್ರಾಸಿನಲ್ಲಿ ನಡೆಯಿಸುತ್ತಿದ್ದಾರೆ. ಅವು ಬಹು ಪ್ರೇಕ್ಷಣೀಯವಾಗಿವೆ.

ಆಂಗ್ಲದೇಶದಿಂದ ಭರತಖಂಡಕ್ಕೆ ಯಾವ ಸಾಮಗ್ರಿಗಳನ್ನು ಬೇಕಾದರೂ ಬಹಿರಂಗವಾಗಿ ಬರೆದು ತರಿಸಿಕೊಳ್ಳುವಲ್ಲಿ ಅಡ್ಡಿಯಿಲ್ಲವೆಂದು ಸ್ಟೇಟ್ ಸೆಕ್ರೆಟರಿಯವರು ಪ್ರಕಟಿಸಿದ್ದಾರೆ.

ವಿಜಯನಗರ ಸಂಸ್ಥಾನಶೇಷವಾಗಿರುವ ಆನೆಗೊಂದಿ ಸಂಸ್ಥಾನದ ಪ್ರಭುಗಳಾಗಿದ್ದ ಶ್ರೀಮತ್ ರಾಜಾ ಶ್ರೀರಂಗದೇವರಾಯರವರು ಕಳೆದ ತಾ|| ೧೦ ರಲ್ಲಿ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಬಾಬೂ ವಿಪಿನ ಚಂದ್ರಪಾಲರು ದಿಲ್ಲಿಪಟ್ಟಣಕ್ಕೆ ಬರಲಾಗದೆಂದು ಅಲ್ಲಿನ ಚೀಫ್ ಕಮಿಷನರು ಈ ಹಿಂದೆ ಮಾಡಿದ್ದ ನಿರೋಧಾಜ್ಞೆಯನ್ನು ಪಾಲರ ಪ್ರಾರ್ಥನೆಮೇರೆಗೆ ಸರ್ಕಾರದವರು ತಪ್ಪಿಸಿಬಿಟ್ಟಿದ್ದಾರೆ. ಆದುಕಾರಣ ಪಾಲರೂ ದೇಶೀಯ ಮಹಾಸಭೆಗಾಗಿ ದಿಲ್ಲಿಗೆ ಹೋಗಿದ್ದಾರೆ.

ಬೊಂಬಾಯಿ ಮ್ಯುನಿಸಿಪಾಲಿಟಿಯಲ್ಲಿ ಸ್ತ್ರೀಯರೂ ಸಭಿಕರಾಗಿ ಬರಲು ಅನುಕೂಲಿಸುವಂತೆ ಅಲ್ಲಿಯ ೧೮೮೮ ನೆ ವರ್ಷದ ಮ್ಯುನಿಸಿಪಲ್ ಆಕ್ಟನ್ನು ತಿದ್ದುಪಡಿಮಾಡಬೇಕೆಂಬ ವಿಷಯವಾಗಿ ಒಂದು ನಿರ್ಧಾರವನ್ನು ಅಲ್ಲಿಯ ನಾರೀಮಣಿಗಳು ಒಂದು ಸಭೆಯಲ್ಲಿ ನಿರ್ಧರಿಸಿ ಸರ್ಕಾರಕ್ಕೆ ಕಳುಹಿಸಿರುವರು.

ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಿತರಾಗುತ್ತಿರುವಷ್ಟು ವಿದ್ಯಾರ್ಥಿಗಳು ಪ್ರಪಂಚದ ಮೇಲಣ ಯಾವ ವಿದ್ಯಾಪೀಠದಲ್ಲೂ ಇಲ್ಲವೆಂದು ವೈಸ್ರಾಯರು ಹೇಳಿರುವರು. ಆ ವಿದ್ಯಾಲಯದಲ್ಲಿ ಪಟ್ಟ ಪರೀಕ್ಷೆಗೆ ಓದುವವರು ೨೩ ಸಾವಿರ ಮಂದಿಗಳಿರುವರು. ಆ ವಿದ್ಯಾಪೀಠಕ್ಕೆ ೬೦೦ ಪಾಠಶಾಲೆಗಳು ಒಳಪಟ್ಟಿವೆ.

ದಿಲ್ಲಿಗೆ ಬಂದು ಅಲ್ಲಿಂದ ಕಲ್ಕತ್ತೆಗೆ ಹೋದ ಹೆಂಡ್ಲಿಪೇಜ ವೈಮಾನಿಕರು ಬಂಗಾಳ ಪೋಸ್ಟ್‌ಮಾಸ್ಟರ್ ಜನರಲ್ಲರೊಡನೆ ಕೂಡಿ ವಿಮಾನದಲ್ಲೇ ರಂಗೂನಿಗೆ ಹೋಗಿ ಸೇರಿದರು. ಕಲ್ಕತೆಗೂ ರಂಗೂನಿಗೂ ವಿಮಾನದ ಮೂಲಕ ಅಂಚೆಯನ್ನು ಸಾಗಿಸುವುದಕ್ಕೆ ಇರತಕ್ಕ ಸೌಕರ್ಯಗಳನ್ನು ಇವರು ಪರಿಶೀಲಿಸುತ್ತಿದ್ದಾರೆ.

ಸೀಮೆಗೆ ಹೋಗಿರುವ ಡಾಕ್ಟರ್ ನಾಯರ್‌ರವರು ಬರುವ ಜನವರಿ ತಿಂಗಳಲ್ಲಿ ಮದ್ರಾಸಿಗೆ ಹಿಂದಿರುಗಿ ಬರುವವರಾಗಿದ್ದಾರೆ. ಅವರನ್ನು ಉಚಿತ ರೀತಿಯಿಂದ ಸತ್ಕರಿಸಿ ಸ್ವಾಗತಿಸಲು ತಕ್ಕ ಏರ್ಪಾಟನ್ನು ಮಾಡಲು ರಾ|| ಬ|| ತ್ಯಾಗರಾಯಚೆಟ್ಟಿರು, ರಾ|| ಬ|| ರಾಮರಾಯಣಿಯವರೇ ಮೊದಲಾದವರು ಈಗಣಿಂದಲೂ ಪ್ರಯತ್ನಪಟ್ಟಿದ್ದಾರೆ.

ಬರ್ಮಾದೇಶದಲ್ಲಿ ವರ್ಣಭೇದಗಳಿಲ್ಲದಿರುವುದರಿಂದ ಸ್ವರಾಜ್ಯವನ್ನು ಪಡೆಯುವುದಕ್ಕೆ ಆ ದೇಶೀಯರು ಅರ್ಹರೆಂದು ಹೇಳಿ ಅಲ್ಲಿಯ ಗೌರ್ನರಾದ ಸರ್ ರೆಜಿನಾಲ್ಡ್ ಕ್ರಾಡಕ್‌ರವರು ಅಲ್ಲಿಯ ರಾಜಕೀಯ ಸಂಸ್ಕರಣಗಳನ್ನು ಒಂದು ರೀತಿಯಿಂದ ತಾವು ರಚಿಸಿ ಪ್ರಕಟಿಸಿದ್ದಾರೆ. ಅದು ಮಾಂಟೊಗ್ ಸಂಸ್ಕರಣ ವಿಧಾನಕ್ಕೆ ಭಿನ್ನವಾಗಿದೆ ಗ್ರಾಮಗಳಿಂದ ಸ್ವಪರಿಪಾಲನ ಪದ್ಧತಿಯು ಆರಂಭಿಸಲ್ಪಟ್ಟು ವೃದ್ಧಿಗೊಳ್ಳಬೇಕೆಂಬುದೇ ಅವರ ಅಭಿಪ್ರಾಯ.

ಈಗಣ ಯೋಚನೆಗಳೊಳಗೆ ಭರತಖಂಡದ ಮುಖ್ಯಮುಖ್ಯ ಪಟ್ಟಣಗಳಿಗೆ ಅಂಚೆಯನ್ನು ವಿಮಾನಗಳ ಮೂಲಕ ಸಾಗಿಸುವ ಏರ್ಪಾಟು ಪ್ರಮುಖವಾಗಿರುತ್ತದೆ. ಬೊಂಬಾಯಿಯಿಂದ ಕಲ್ಕತ್ತೆಗೆ ಹೊಗೆಬಂಡಿಗಳು ಹೋಗಬೇಕಾದರೆ ೪೬ ಗಂಟೆಗಳಾದರೂ ಹಿಡಿಯುತ್ತವೆ. ಗಂಟೆಗೆ ಕನಿಷ್ಠಪಕ್ಷ ೭೦ ಮೈಲಿಗಳಂತೆ ವಿಮಾನಗಳು ನಡೆಯುವುವೆಂದು ಇಟ್ಟುಕೊಂಡರೂ ೧೭ ಗಂಟೆಗಳ ಕಾಲದೊಳಗೆ ಹೋಗಿ ಸೇರಬಹುದು. ಅದರಂತೆ ಬೊಂಬಾಯಿಂದ ಸಿಮ್ಲಾಕ್ಕೆ ೪೮ ಗಂಟೆಗಳಿಗೆ ಪ್ರತಿಯಾಗಿ ೧೪ ಗಂಟೆಗಳೊಳಗೂ, ಕರಾಚಿಯಿಂದ ದಿಲ್ಲಿಗೆ ೧೦ ಗಂಟೆಗಳೊಳಗಾಗಿಯೂ ಹೋಗಿ ಸೇರಬಹುದು.

ಮದರಾಸು ಪಟ್ಟಣದಲ್ಲಿ ಇದುವರೆಗೂ ಪ್ಲೇಗು ಹುಟ್ಟಿದುದಿಲ್ಲ. ಹೊರಗಣಿಂದ ರೋಗ ತಗುಲಿದವರು ಅಲ್ಲಿಗೆ ಬಂದರೂ, ಅಲ್ಲಿ ಇದು ಉದಿಸಿ ಹಬ್ಬಿದುದು ಇದುವರೆಗೂ ಇರಲಿಲ್ಲ. ಆದರೆ ಈಗ ಅಲ್ಲಿಯ ತಿರುವಲಿಕ್ಕೇಣಿಯ ಭಾಗದಲ್ಲಿ ಇದು ಉದಿಸಿ ಹಬ್ಬುವಂತೆ ಕಾಣುತ್ತಿದೆ. ತಡೆಮಾಡುವುದಕ್ಕೆ ಅಲ್ಲಿಯ ಮ್ಯುನಿಸಿಪಾಲಿಟಿಯವರು ಬಹಳ ಸಾಹಸಮಾಡುತ್ತಿದ್ದಾರೆ. ಈ ರೋಗದ ಜತೆಗೆ ವಾಂತಿಭೇದಿ, ಇನ್‌ಫ್ಲುಯೆಂಜಾ ರೋಗಗಳೂ ಸೇರಿ ಜನರಿಗೆ ಭಯವನ್ನು ಮಾಡುತ್ತಿವೆ. ಇವುಗಳ ಮೇಲೆ ಕ್ಷಾಮದ ಬಾಧೆಯು ಬೇರೆ. ಪುರಜನರು ಸಾವಿರಾರುಗಟ್ಟಲೆ ಹೊರಕ್ಕೆ ಹೋಗುತ್ತಿದ್ದಾರೆ. ಪ್ಲೇಗಿನಿಂದ ಇದುವರೆಗೆ ೧೬ ಮರಣಗಳಾಗಿವೆ.

ಕಳೆದ ತಾ|| ೨೬ ರಿಂದ ದಿಲ್ಲಿಪಟ್ಟಣದಲ್ಲಿ ೩೩ ನೆ ದೇಶೀಯ ಮಹಾಸಭೆಯು ಶ್ರೀಮತ್ ಮದನಮೋಹನ ಮಾಳವ್ಯರವರ ಅಧ್ಯಕ್ಷತೆಯಿಂದ ನಡೆಯುತ್ತ ಇದಿನ ಮುಗಿಯುವುದಾಗಿದೆ. ಈ ಸಭೆಗೆ ಅ|| ಶ್ರೀನಿವಾಸಶಾಸ್ತ್ರಿ ಮೊದಲಾದ ಕೆಲ ಮಿತವಾದಿ ಪ್ರಮುಖರೂ ಹೋಗಿದ್ದಾರೆ. ಈ ಸಭೆಯವರು ಮಾಡಬೇಕೆಂದು ನಿರ್ಧರಿಸಿರುವ ತೀರ್ಮಾನಗಳೊಳಗೆ—ಯುದ್ಧವಿಜಯಕ್ಕಾಗಿ ಸಂತೋಷವನ್ನು ಪ್ರದರ್ಶಿಸುವುದು, ಸಾರ್ವಭೌಮರು ಭರತಖಂಡಕ್ಕೆ ದಯಮಾಡಿದ್ದಾಗ್ಗೆ ಮಾಡಿದ ಸಂತೋಷವನ್ನು ಸಫಲಗೊಳಿಸಬೇಕೆಂದು ಅವರನ್ನು ಪ್ರಾರ್ಥಿಸುವುದು, ಭಾರತೀಯರ ರಾಜಕೀಯಾಭಿಪ್ರಾಯಗಳನ್ನು ತಿಳಿಯಿಸುವ ವಿಜ್ಞಾಪನ ಪತ್ರವೊಂದನ್ನು ಪಾರ್ಲಿಮೆಂಟಿನವರಿಗೆ ಕಳುಹಿಸಿಕೊಡುವುದು, ಇವೆರಡನ್ನೂ ದೇಶೀಯ ಮಹಾಸಭಾ ಪ್ರತಿನಿಧಿಗಳು ಕೆಲವರು ಸೀಮೆಗೇ ತೆಗೆದುಕೊಂಡು ಹೋಗಿ ಒಪ್ಪಿಸುವುದು, ಆಂಗ್ಲ ಮಹಾಜನರಿಗೆ ಭಾರತೀಯಾಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಯಪಡಿಸಿಕೊಳ್ಳುವುದಕ್ಕೆ ೫೦ ಅಥವಾ ೧೦೦ ಮಂದಿ ಭಾರತೀಯ ಪ್ರತಿನಿಧಿಗಳು ಲಂಡನ್ ಪಟ್ಟಣಕ್ಕೆ ಹೋಗಿ ಅಲ್ಲಿ ಒಂದು ದೇಶೀಯ ಮಹಾಸಭೆಯನ್ನು ಜರುಗಿಸುವುದು. ಇವುಗಳೇ ಆಗಿರುತ್ತವೆ.

ಯುದ್ಧ ವಿಶ್ರಾಂತ ದೇಶವಾರ್ತೆಗಳು.

ಆಂಗ್ಲಪ್ರಭುತ್ವದವರು ಸೇರಿಸಿದ್ದ ಸೈನ್ಯವನ್ನು ಒಡೆದು ಅವರವರ ಸ್ಥಲಕ್ಕೆ ಕಳುಹಿಸಿಬಿಡಲು ಆರಂಭಿಸಿದ್ದಾರೆ.

ರೊಮೇನಿಯಾ ಪ್ರಭುವಿನ ದ್ವಿತೀಯ ಪುತ್ರರಾದ ನಿಕೋಲಸ್‌ರವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಬಂದಿದ್ದಾರೆ.

ಏಡನ್ನಿನ ಸುತ್ತುಮುತ್ತಿನಲ್ಲಿ ತುರ್ಕಿ ಸೇನಾಪತಿಯಾಗಿದ್ದ ಸಯ್ಯದ್ ಪಾಷಾನು ತನ್ನ ಅನುಚರರೊಡನೆ ನಮ್ಮವರಿಗೆ ಶರಣಾಗತನಾದನು.

ಪ್ರೆಸಿಡೆಂಟ್ ವಿಲ್ಸನ್‌ರವರ ಕೋರಿಕೆಯಂತೆ ಫ್ರಾನ್ಸಿನ ಜನರಲ್ ಫಾಕ್‌ರವರು ಅಮೇರಿಕೆಗೆ ಬಂದು ಹೋಗುವುದಾಗಿ ಒಪ್ಪಿಕೊಂಡಿದ್ದಾರೆ.

ಅಮೇರಿಕಾದ ಪ್ರೆಸಿಡೆಂಟ್ ವಿಲ್ಸನ್‌ರವರು ಕಳೆದ ತಾ|| ೨೬ ರಲ್ಲಿ ಲಂಡನ್ ಪಟ್ಟಣಕ್ಕೆ ದಯಮಾಡಿಸಿದರು. ಅವರ ಸತ್ಕಾರಕ್ಕೆ ಅತ್ಯುತ್ಕೃಷ್ಟವಾದ ಏರ್ಪಾಡುಗಳು ಮಾಡಲ್ಪಟ್ಟಿದ್ದುವು.

ಫ್ರಾನ್ಸಿನಲ್ಲಿರುವ ಭೋಜನಾಲಯಗಳ ಸಂಘದವರು ಇನ್ನು ೧೦ ವರ್ಷಗಳವರೆಗೂ ಯಾವೊಬ್ಬ ಜರ್ಮನನನ್ನೂ ತಮ್ಮ ಹೊಟೇಲುಗಳ ಕೆಲಸಕ್ಕೆ ಇರಿಸಿಕೊಳ್ಳದಿರುವಂತೆಯೂ, ಜರ್ಮನರನ್ನು ತಮ್ಮ ಹೊಟೇಲುಗಳಲ್ಲಿ ಇಳಿಯಿಸಿಕೊಳ್ಳದಿರುವಂತೆಯೂ ಕಟ್ಟುಮಾಡಿಕೊಂಡರು.

ಜರ್ಮನರು ತಾತ್ಕಾಲಿಕ ಸಂಧಿನಿಬಂಧನೆಯಂತೆ ಡಿಸೆಂಬರ್ ತಾ|| ೧೬ ರೊಳಗಾಗಿ ೫೦೦೦ ರೈಲ್ವೆ ಇಂಜನ್ನುಗಳನ್ನು ಮಿತ್ರಮಂಡಲಿಗೆ ಒಪ್ಪಿಸಬೇಕಾಗಿದ್ದಿತು. ಕ್ರಮವಾಗಿ ಅಷ್ಟರೊಳಗೆ ಅವರು ಒಪ್ಪಿಸದಿದ್ದರೆ ಮಾಡಿದ ಸಾವಕಾಶಕ್ಕಾಗಿ ಇನ್ನು ೬೦೦ ಇಂಜನ್ನುಗಳನ್ನು ಹೆಚ್ಚಾಗಿ ಕೊಡಬೇಕಾಗುತ್ತದೆ ಎಂದು ಹಾವಾಸ್ ವಾರ್ತಾ ಸಂಘದವರು ಪ್ರಕಟಿಸಿದ್ದಾರೆ.

ಯುದ್ಧಮಂತ್ರಿಮಂಡಲದವರೂ ಅಧಿನಿವೇಶರಾಜ್ಯ ಪ್ರತಿನಿಧಿಗಳೂ ಭರತಖಂಡದ ಪ್ರತಿನಿಧಿಗಳೂ ಸಹ ಸಂಧಿಸಭೆಯಲ್ಲಿ ಮುಂದೆ ಚರ್ಚಿಸಬೇಕಾದ ವಿಷಯಗಳನ್ನು ಆಲೋಚಿಸಿಕೊಳ್ಳುವುದಕ್ಕೆ ಆಂಗ್ಲ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕಳೆದವಾರ ಲಂಡನ್ ಪಟ್ಟಣದೊಳಗೆ ಒಂದು ಸಭೆಗೂಡಿದ್ದರು.

ಆಂಗ್ಲನೌಕಾದಳದ ಪ್ರಮುಖ ಸೇನಾಪತಿಗಳು ಬಂದು ಸಾಮ್ರಾಜ್ಯದ ಅಧಿನಿವೇಶನಗಳನ್ನೆಲ್ಲಾ ನೋಡಿಕೊಂಡು ಹೋಗಬೇಕೆಂದು ಅಧಿನಿವೇಶ ರಾಜ್ಯಗಳ ಮಂತ್ರಿಗಳು ಕೋರಿಕೊಳ್ಳಲಾಗಿ, ನೌಕಾದಳ ಸಂಘದವರು ಯುದ್ಧಮಂತ್ರಿವರ್ಗದವರ ಸಮ್ಮತಿಯ ಮೇರೆ ಸರ್ ಜಾನ್ ಜಲ್ಲಿಕೋರವರು ಬರುವ ವರ್ಷದ ಮೊದಲಲ್ಲಿ ಎಲ್ಲ ಅಧಿನಿವೇಶಗಳನ್ನೂ ಭರತಖಂಡವನ್ನೂ ನೋಡಿಕೊಂಡು ಹೋಗಲು ಏರ್ಪಾಟು ಮಾಡಿದ್ದಾರೆ.

ದಕ್ಷಿಣಾಫ್ರಿಕಾದಲ್ಲಿರುವ ಜೀವವಿಮೆ ಕಂಪೆನಿಗಳವರಿಗೆ ಈ ಸಲದ ಇನ್‌ಫ್ಲುಯೆಂಜಾ ಬಾಧೆಯಿಂದ ೨| ಕೋಟಿ ರೂ. ಗಳ ನಷ್ಟವುಂಟಾಯಿತಂತೆ. ಆ ರೋಗದಿಂದ ಬಹುಜನರು ಸತ್ತು, ಅವರ ವಾರಸ್‌ದಾರರಿಗೆ ವಿಮೆ ಹಣವನ್ನು ಸಲ್ಲಿಸಬೇಕಾದುದರಿಂದಲೇ ಇಷ್ಟು ನಷ್ಟವು ತಟ್ಟಿತು. ೪ ವರ್ಷಗಳ ಕಾಲ ಯುದ್ಧದಿಂದ ಜನನಷ್ಟವಾದುದಕ್ಕಿಂತಲೂ ೪ ವಾರಗಳ ಕಾಲ ಈ ಜ್ವರದಿಂದ ಆದ ನಷ್ಟವು ಬಹಳ ಹೆಚ್ಚೆಂದು ಆ ಕಂಪೆನಿಗಳ ಏಜಂಟು ಹೇಳಿರುತ್ತಾರೆ.

ಜರ್ಮನಿಯಲ್ಲಿ ಕೆಲರು ಬೇಡವೆಂದು ಹೇಳುತ್ತಿದ್ದರೂ ಜರ್ಮನಿಯ ಈಗಣ ಪ್ರಭುತ್ವದವರು ಬರ್ಲಿನ್ ಪಟ್ಟಣವನ್ನು ನೀವು ಆಕ್ರಮಿಸಿಕೊಳ್ಳಿರೆಂದು ಮಿತ್ರಮಂಡಲಿಯವರನ್ನು ಕೋರುತ್ತಿರುವರಂತೆ. ಆದರೆ ಇದಕ್ಕೆ ಮಿತ್ರಮಂಡಲಿಯವರು ಒಪ್ಪಲಾರರು. ಜರ್ಮನಿಯಲ್ಲಿ ಸದ್ಯಃ ಉಂಟಾಗಿರುವ ಅಂತಶ್ಛಿದ್ರಪ್ರಾಬಲ್ಯವನ್ನು ಶಾಂತಿಗೊಳಿಸುವ ಸಾಮರ್ಥ್ಯವು ಅಲ್ಲಿಯ ಪ್ರಭುತ್ವಕ್ಕಿಲ್ಲದುದರಿಂದಲೇ ಈ ಪ್ರಾರ್ಥನೆಯನ್ನು ಮಾಡುತ್ತಿರುವರೋ ಇನ್ನೇನಾದರೂ ಕಪಟಾಲೋಚನೆಯುಂಟೋ ಗೊತ್ತಾಗಲಿಲ್ಲ.

ಇಂಗ್ಲೆಂಡು ಸಮುದ್ರತೀರದಿಂದ ಫ್ರಾನ್ಸ್ ಸಮುದ್ರತೀರದವರೆಗೆ ಸಮುದ್ರದಡಿಯಲ್ಲೇ ಕೊಳವೆಯ ಒಳಗಡೆಯಲ್ಲಿ ಲೋಹಮಾರ್ಗವನ್ನು ಹಾಕಿ, ಲಂಡನ್ನಿಗೂ ಪ್ಯಾರಿಸ್ಸಿಗೂ ಅಖಂಡವಾಗಿ ಹೊಗೆಬಂಡಿಯಲ್ಲೇ ಪ್ರಯಾಣಮಾಡುವ ಸೌಕರ್ಯವು ಏರ್ಪಡಿಸಲ್ಪಟ್ಟಿದೆ. ಈ ಮಾರ್ಗವು ಯುದ್ಧಕಾಲದಲ್ಲಿ ಕಳೆದೆರಡು ವರ್ಷಗಳಿಂದ ಮುಚ್ಚಲ್ಪಟ್ಟಿದ್ದಿತು. ಕಳೆದ ತಾ|| ೧೯ ರಲ್ಲಿ ಮರಳಿ ಇದು ತೆರೆಯಲ್ಪಟ್ಟಿತು. ಮೊದಲ ಬಂಡಿಯು ಮಧ್ಯಾಹ್ನ ೧೧ ಗಂಟೆಗೆ ಲಂಡನ್ನಿನ ಚೇರಿಂಗ್‌ಕ್ರಾಸ್ ನಿಲ್ದಾಣದಿಂದ ಹೊರಟು ರಾತ್ರಿ ೯|| ಗಂಟೆಗೆ ಪ್ಯಾರಿಸ್ಸನ್ನು ಸೇರಿತು.

ಕಳೆದ ೩ ತಿಂಗಳ ಕಾಲದಲ್ಲಿ ಇನ್‌ಫ್ಲುಯೆಂಜಾ, ನ್ಯೂಮೋನಿಯಾ ರೋಗಗಳಿಂದ ೬೦ ಲಕ್ಷ ಮಂದಿಗಳು ಸತ್ತಿರುವರು. ೪| ವರ್ಷ ಕಾಲದ ಯುದ್ಧದಿಂದ ೨೦ ಲಕ್ಷ ಮಂದಿಗಳು ಸತ್ತಿರುವರು. ಇದರಿಂದ ಮಹಾರೋಗವು ಯುದ್ಧಕ್ಕಿಂತಲೂ ಪ್ರಪಂಚಕ್ಕೆ ಎಷ್ಟು ಭಯಂಕರವಾದುದೆಂಬುದನ್ನು ತಿಳಿದುಕೊಳ್ಳಬಹುದು. ಯುದ್ಧ ನಡೆದಷ್ಟು ಕಾಲ ಈ ರೋಗವೇನಾದರೂ ನಿಂತಿದ್ದರೆ ಜಗತ್ತಿನಲ್ಲಿ ೧೦ ಕೋಟಿಯೂ ೮೦ ಲಕ್ಷ ಮಂದಿಗಳು ಮಡಿದು ಹೋಗುತ್ತಿದ್ದರು. ಬ್ಲಾಕ್‌ಡೆತ್ತು (ಕರಿಯ ಮೃತ್ಯು) ಎಂಬ ರೋಗ ಬಂದಿದ್ದೀಚೆಗೆ ಇವರಷ್ಟು ಆಹುತಿಗೊಂಡ ವ್ಯಾಧಿಯಾವುದೂ ಪ್ರಪಂಚಕ್ಕೆ ಬಂದಿರಲಿಲ್ಲವೆಂದು ಒಬ್ಬ ವೈದ್ಯರು ಟೈಮ್ಸ್ ಪತ್ರಿಕೆಗೆ ಬರೆದಿರುತ್ತಾರೆ.

ಇಟಲಿ ರಾಜರು ತಮ್ಮ ಕುಮಾರನೊಡನೆ ತಾ|| ೨೦ ರಲ್ಲಿ ಪ್ಯಾರಿಸ್ ಪಟ್ಟಣಕ್ಕೆ ಹೋದರು. ಅವರ ಗೌರವಾರ್ಥವಾಗಿ ಆ ದಿವಸ ಪಟ್ಟಣದ ಎಲ್ಲ ಕೋರ್ಟು ಆಫೀಸುಗಳಿಗೂ ರಜಾ ಕೊಡಲ್ಪಟ್ಟಿದ್ದಿತು. ಬಹು ಸಂಭ್ರಮದಿಂದಲೂ ವಿಶ್ವಾಸದಿಂದಲೂ ಫ್ರೆಂಚರು ಅವರನ್ನು ಸ್ವಾಗತಿಸಿದರು. ಎಲಿಸಿ ರಾಜಭವನದಲ್ಲಿ ಔತಣಮಾಡಿದಾಗ ಪ್ರೆಸಿಡೆಂಟ್ ಪಾಯಿಂಕೇರ್‌ರವರು—ಇದುವರೆಗಿದ್ದ ಸಂಬಂಧವನ್ನು ಭೇದಿಸಿ ಏಕಮತ್ಯವನ್ನೂ ಸದ್ವಿಚಾರವನ್ನೂ ವೃದ್ಧಿಪಡಿಸಿದ ನೂತನ ವಿಷಯಗಳಲ್ಲಿ ಇಟಲಿ ರಾಜರು ಸ್ವತಃ ಪಾಡುಪಟ್ಟುದರಿಂದಲೇ ಇಂಥ ಘನತೆಯು ಪ್ರಾಪ್ತವಾಯಿತು. ಯುದ್ಧದ ಫಲವು ಇನ್ನೂ ತೋರುವುದಕ್ಕೆ ಮುಂಚೆಯೇ ರಾಜರ ಬಲದಂತೆಯೇ ಇಟಲಿ ದೇಶವು ಇಂಗ್ಲೆಂಡಿಗೂ ಫ್ರಾನ್ಸಿಗೂ ಸಹಾಯಮಾಡಿತು" ಎಂದು ಹೇಳಲಾಗಿ ಇಟಲಿ ರಾಜರು—ನ್ಯಾಯ ಧರ್ಮಬುದ್ಧಿಯಿಂದಲೇ ಇಟಲಿಯು ಸ್ವೇಚ್ಛೆಯಿಂದ ಯುದ್ಧಕ್ಕೆ ಪ್ರವೇಶಿಸಿತು. ಇಲ್ಲಿಂದ ಬಹುಕಾಲದವರೆಗೆ ಫ್ರಾನ್ಸಿಗೂ ಇಟಲಿಗೂ ಪರಸ್ಪರ ಸ್ನೇಹಗೌರವಗಳು ವೃದ್ಧಿಗೊಂಡರೆ ಎಲ್ಲವೂ ಸುಖವಾಗಿರುವುದೆಂದು ನುಡಿದರು.

ಫ್ರಾನ್ಸಿನಲ್ಲಿ ಪ್ರೆ|| ವಿಲ್ಸನ್‌ರವರಿಗೆ ಫ್ರೆಂಚರಿಂದ ನಡೆದ ಆದರಣವನ್ನು ಕುರಿತು ಪತ್ರಿಕಾ ಪ್ರತಿನಿಧಿಗಳು ಪ್ರಶ್ನೆಮಾಡಲಾಗಿ, ಅದಕ್ಕೆ ವಿಲ್ಸನ್‌ರವರು ಹೀಗೆ ಉತ್ತರ ಕೊಟ್ಟಿರುವರು—ಇಲ್ಲಿಯ ಆದರಣವು ಅತ್ಯಾದರವಾಗಿದೆ. ಅದರ ವಿಷಯವಾಗಿ ನಾನು ಏನು ಹೇಳಬೇಕೋ ಕಾಣದವನಾಗಿದ್ದೇನೆ. ಆ ಆದರಣವು ನನಗೆ ಬಹು ಸಂತೋಷಪ್ರದವಾಗಿದೆ. ಅದು ನನ್ನ ವ್ಯಕ್ತಿವಿಷಯಕ ಮಾತ್ರವಾದುದಾಗಿಲ್ಲ. ನಾನು ಇದೇ ಮಾತನ್ನೇ ಅನೇಕ ಫ್ರೆಂಚ್ ಸ್ನೇಹಿತರೊಡನೆ ಹೇಳಿದ್ದೇನೆ. ನಾನು ಏತಕ್ಕಾಗಿ ಸಂತೋಷಪಟ್ಟೆನೆಂದರೆ—ಈ ದೇಶದ ಸಭ್ಯರೆಲ್ಲರ ಕಣ್ಣುಗಳಿಂದಲೂ ಅವರ ಮನೋಭಾವಗಳು ನನ್ನ ಮನೋಭಾವಕ್ಕನುಸಾರವಾದುವೇ ಎಂಬುದಾಗಿ ತಿಳಿದುಕೊಂಡೆನು. ನಮ್ಮ ಅವರ ಭಾವಗಳು ಅನ್ಯೋನ್ಯತೆಯನ್ನು ಪಡೆದಿರುವುವು. ಅದು ಕೇವಲ ಬರಿಯ ಸ್ನೇಹಭಾವಕ್ಕಿಂತಲೂ ಹೆಚ್ಚು ಉದಾರವಾಗಿರುವುದು. ಆದುದರಿಂದಲೇ ನನಗೆ ಆ ಆದರಣವು ಅತ್ಯಂತ ಸಂತೋಷಪ್ರದವಾಗಿರುವುದು. ಸುಂದರತರವಾದ ಪ್ಯಾರಿಸ್ ಪಟ್ಟಣದಲ್ಲಿ ಅಂಥ ಉದಾರಭಾವಗಳು ಐಕ್ಯವಾಗಿರುವುದರಿಂದ ಅದು ಬಹು ಸಂತೋಷಪ್ರದವಾಗಿರುವುದು. ಇಂಥ ದೊಡ್ಡ ಸಂತೋಷವು ಜನ್ಮಮಧ್ಯದಲ್ಲಿ ಯಾವಾಗಲೂ ಸಂಘಟಿಸಲಾರದು. ನಾನು ಈ ವಿಷಯವಾಗಿ ಇದಕ್ಕಿಂತ ಹೆಚ್ಚಾಗಿ ಏನನ್ನೂ ಹೇಳಲಾರೆ" ಈ ವಾಕ್ಯದಿಂದ ಪ್ರೆಸಿಡೆಂಟ್ ವಿಲ್ಸನ್‌ರವರ ಮನೋಭಾವಗಳನ್ನು ಫ್ರೆಂಚ್ ದೇಶವು ಹೇಗೆ ಸೂರೆಗೊಂಡಿರುವುದೆಂಬುದು ವ್ಯಕ್ತವಾಗಿರುತ್ತದೆ.

ಪ್ರಕಟಣೆ.

ಅಕ್ಕಿ, ಭತ್ತ, ರಾಗಿ, ಜೋಳ, ಇವುಗಳಿಗೆ ಸರಕಾರದವರು ಗೊತ್ತುಮಾಡಿರುವ ಪರಮಾವಧಿಬೆಲೆಯ ದರಗಳ ವಿಚಾರವಾಗಿ ಕೆಲವರು ಇನ್ನೂ ತಪ್ಪು ಅಭಿಪ್ರಾಯವುಳ್ಳವರಾಗಿದಾರೆಂದು ತಿಳಿಯ ಬಂದಿದೆ. ಪರಮಾವಧಿ ಒಟ್ಟು ವ್ಯಾಪಾರದ ದರವನ್ನೂ ಪರಮಾವಧಿ ಚಿಲ್ಲರೆ ವ್ಯಾಪಾರದ ದರವನ್ನೂ ಗೊತ್ತುಮಾಡಿರುವದರಿಂದ ಈ ದರಗಳಿಗಿಂತಲೂ ಯಾವ ಸಂದರ್ಭದಲ್ಲಿಯೂ ಹೆಚ್ಚಾಗಿ ಮಾರಕೂಡದೆಂದು ಸರಕಾರದವರ ಅಭಿಪ್ರಾಯವೇ ಹೊರತು ಅಗ್ಗವಾಗಿ ಮಾರುವುದಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ. ಕ್ರಮೇಣ ಎಲ್ಲಾ ಬೆಲೆಗಳೂ ಅಗ್ಗವಾಗಬೇಕೆಂತಲೂ ಇದಕ್ಕಾಗಿ ಪ್ರತಿಯೊಬ್ಬರೂ ಸಾಧ್ಯವಾದಮಟ್ಟಿಗೂ ಪ್ರೋತ್ಸಾಹಿಸಬೇಕೆಂತಲೂ ಸರಕಾರದವರ ಉದ್ದೇಶವಾಗಿರುತ್ತದೆ.

ಆಹಾರಧಾನ್ಯಗಳನ್ನು ಸರಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳುವದೂ ಮತ್ತು ಅದಕ್ಕಾಗಿ ಸರಕಾರದವರು ಕೊಡಲು ಗೊತ್ತುಮಾಡಿರುವ ದರಗಳೂ ಸಹ ಶಿಕ್ಷಾರೂಪವಾದ ನಿಯಮಗಳೆಂದು ಭಾವಿಸಬೇಕು. ಎಂದರೆ ಜನಗಳಿಗೆ ಆಹಾರಧಾನ್ಯಗಳು ಬೇಕಾಗಿದ್ದರೂ ಯಾರಾದರೂ ತಮ್ಮಲ್ಲಿ ಹೆಚ್ಚಾಗಿರುವ ಸರಕನ್ನು ಮಾರಾಟಕ್ಕೆ ಒದಗಿಸದೆ ದಾಸ್ತಾನು ಇಟ್ಟರೆ ಅಂಥ ಸಂದರ್ಭಗಳಲ್ಲಿ ಮಾತ್ರವೇ ಈ ನಿಯಮಗಳನ್ನು ಜಾರಿಯಲ್ಲಿ ತರಬೇಕು. ಸಾಧಾರಣವಾಗಿ ರೈತರು ತಮ್ಮ ಸರಕನ್ನು ತಾವೇ ಪೇಟೆಗೆ ತೆಗೆದುಕೊಂಡು ಹೋಗುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಮತ್ತು ಅಂಥ ಸರಕನ್ನು ಸಾಗಿಸುವುದಕ್ಕೆ ಅನವಶ್ಯಕವಾದ ಅಡಚಣೆಗಳೊಂದೂ ಇಲ್ಲದಂತೆ ಪ್ರತಿಯೊಬ್ಬ ರೆವಿನ್ಯೂ ಆಫೀಸರು ನೋಡಿಕೊಳ್ಳಬೇಕು. ರೈತರಾಗಲಿ ವರ್ತಕರಾಗಲಿ ತಮ್ಮಷ್ಟಕ್ಕೆ ತಾವೇ ಪೇಟೆಗೆ ವ್ಯಾಪಾರಕ್ಕಾಗಿ ತೆಗೆದುಕೊಂಡು ಬಂದ ಸರಕನ್ನು ಅವರ ಅನುಮತಿಯಿಲ್ಲದೆ ಸರಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳಕೂಡದು. ಹಾಗೆ ಸರಕಾರದವರಿಗೆ ಆ ಸರಕು ಬೇಕಾಗಿದ್ದರೆ ಚಾಲ್ತಿಯಲ್ಲಿರುವ ಪೇಟೆಯ ಧಾರಣೆಯಂತೆ ಕೊಂಡುಕೊಳ್ಳಬೇಕು.

ಕೆ. ಆರ್. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಕಮಿಷನರ್.

ಪತ್ರವ್ಯವಹಾರ.

ಹೀನಸ್ಥಿತಿಯಲ್ಲಿರುವ ಗ್ರಾಮಗಳನ್ನು ನೋಡುವವರೇ ದಿಕ್ಕಿಲ್ಲ.

ಬಳ್ಳಾರಿ ಜಿಲ್ಲಾ ಹುವ್ವಿನ ಹಡಗಲಿ ತಾಲ್ಲೂಕು ಹೊಳಗುಂದಿಯೆಂಬ ಗ್ರಾಮವು ಸುಮಾರು 1000 ಮನೆಗಳಿರತಕ್ಕ ಗ್ರಾಮವಾಗಿದ್ದು ಮ್ಯುನಿಸಿಪಾಲಿಟಿ ಪೋಸ್ಟ್ ಆಫೀಸ್ ಸಹ ಇಲ್ಲದೆ ಜನಗಳಿಗಿರುವ ತೊಂದರೆಯನ್ನು ವಿವರಿಸಲಸದಳವಾಗಿದೆ. ಇನ್‌ಫ್ಲುಯೆಂಜಾ ರೋಗದ ಕಾಲದಲ್ಲಂತೂ ಆದ ಜನಗಳ ಕಷ್ಟನಷ್ಟಗಳನ್ನು ದೇವರೇ ಬಲ್ಲ. ಆದ್ದರಿಂದ ದಯಾಳುಗಳಾದ ಸರ್ಕಾರದವರು ಈ ಬಡಗ್ರಾಮದ ಕಡೆ ಲಕ್ಷ್ಯಕೊಟ್ಟು ಸರಿಯಾದ ವ್ಯವಸ್ಥೆ ಮಾಡಿದರೆ ತುಂಬಾ ಅನುಕೂಲವಾದೀತೆಂದು ಹಾರೈಸುವ

ಓರ್ವ ಪ್ರಜಾಭಿಮಾನಿ.

ಅಜ್ಜಂಪುರದ ವೀರಶೈವಮಂಡಲಿಯವರಿಗೆ ಆದ ಆನಂದವು.

ಶ್ರೀಮತ್ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ಖಾಸಾ ಸ್ವಾರಿಯು ಈ ಊರು ಮೊಕ್ಕಾಮಿಗೆ ಈ ಹಿಂದೆ ಬಿಜಯಂಗೈಸಿದಾಗ್ಗೆ ಮಹಾಸ್ವಾಮಿಯವರು ಅಪ್ಪಣೆ ದಯಪಾಲಿಸಿದ ಮೇರಿಗೆಯೂ ಮತ್ತು ವೇ|| ಗಳಾದ ಕೊಡಗಿನ ಮಠದ ಶಿವಯೋಗಿ ಶಿವಣ್ಣಯ್ಯನವರ ಪ್ರೋತ್ಸಾಹದ ಮೇರೆಗೂ ಈ ಊರು ಪ್ಯಾಟೆಯ ಶ್ರೀ ಬಸವೇಶ್ವರ ದೇವರ ದೇವಸ್ಥಾನವು ಶಿಥಿಲವಾಗುತ್ತಿದ್ದದ್ದನ್ನು ನೋಡಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಉದ್ದಿಶ್ಯ ಈ ಊರಿನ ಪ್ರಜೆಗಳಿಂದ ಸುಮಾರು ೩೫೦೦ ರೂ. ಗಳನ್ನು ವಾಗ್ದಾನಮಾಡಿಸಿಕೊಂಡು $\frac{1}{4}$ ನೆ ಒಂದು ಭಾಗ ಹಣವನ್ನು ವಸೂಲ್ಮಾಡಿ ತಾ|| 22-12-18 ನೆ ಭಾನುವಾರದ ದಿವಸ ದೇವಸ್ಥಾನಕ್ಕೆ ಕಾರ್ಯದರ್ಶಿಗಳಾಗಿ ನಿಂತಿರುವ ವೇ|| ಶಿವಯೋಗಿ ಶಿವಣ್ಣಯ್ಯನವರು ಮ|| ಅ|| ಸೆಕ್ರಟರಿ ಸಿ|| ಸಿದ್ದಪ್ಪಶೆಟ್ಟರು, ಮ|| ರೇವಣ್ಣನ ಗಂಗಪ್ಪನವರು, ಮ|| ಸಾಹುಕಾರ್ ಬಿ|| ಮಲ್ಲಪ್ಪನವರು, ಮ|| ಫಣಿಯಪ್ಪಶೆಟ್ಟರು, ಮ|| ಹೊಳೆಹೊನ್ನೂರು ವಿರೂಪಾಕ್ಷಪ್ಪನವರು ಈ ಆರು ಜನಗಳು ಮತ್ತು ಊರಿನ ಪ್ರಮುಖರು ಸೇರಿ ಶ್ರೀ ಬಸವೇಶ್ವರ ದೇವರ ದೇವಸ್ಥಾನವನ್ನು ಕಟ್ಟುವುದಕ್ಕಾಗಿ ಮ|| ರಾ|| ಕಂಟ್ರಾಕ್ಟರ್ ಮಧುರೆ ಅಲಿಗರ್ ಸಾಮಿನಾಯುಡು ಇವರನ್ನು ಬರಮಾಡಿಕೊಂಡು ಇವರಿಗೆ ಸದರಿ ದೇವಸ್ಥಾನವನ್ನು 4 ಸಾವಿರ ಚಿಲ್ರೆ ರೂ. ಗಳಿಗೆ ಕಂಟ್ರಾಕ್ಟು ಕೊಟ್ಟು ದೇವಸ್ಥಾನವನ್ನು ಕಟ್ಟಿ ಪೂರೈಸುವದಕ್ಕೆ ಒಪ್ಪಂದದ ಕರಾರು ಬಾಂಡ್ ಬರಸಿ ಸದರಿ ಕಂಟ್ರಾಕ್ಟರಿಗೆ ಈ ದಿವಸವೆ 500 ರೂ. ಗಳನ್ನು ಪಾವತಿಮಾಡಿಸಿರುತ್ತಾರೆ. ಮೇಲ್ಕಂಡ ಕಾರ್ಯದರ್ಶಿಗಳಾಗಿ ನಿಂತಿರುವ ಮಹನೀಯರುಗಳು ಮತ್ತು ಪ್ರಮುಖರು ಮತ್ತು ಕಂಟ್ರಾಕ್ಟರು ಸಹ ಸಾಧ್ಯವಾದಷ್ಟು ಜಾಗ್ರತೆ ವಾಗ್ದಾನಮಾಡಿರುವ ಮಹನೀಯರುಗಳಿಂದ ಮೊಬಲಗು ಬಂದಾಡಿಕೊಳ್ಳುತ್ತಾ ಸಾಲದೆ ಇರತಕ್ಕ ಮೊಬಲಗನ್ನು ಸತ್ಕಾರ್ಯಕ್ಕೆ ಪಾತ್ರರಾಗತಕ್ಕ ಜನಗಳಿಂದ ವಸೂಲ್ ತೆಗೆದುಕೊಳ್ಳುತ್ತಾ ದೇವಸ್ಥಾನದ ಕಟ್ಟಡವನ್ನು ಜಾಗ್ರತೆ ಪೂರ್ಣಮಾಡಿ ಶ್ರೀ ಬಸವೇಶ್ವರ ದೇವರ ಆಶೀರ್ವಾದಕ್ಕೆ ಪಾತ್ರರಾಗುತ್ತಾರೆಂತ ಈ ಊರಿನ ಪ್ರಜೆಗಳು ತುಂಬಾ ಕುತೂಹಲವುಳ್ಳವರಾಗಿದ್ದಾರೆ. ಮತ್ತು ಮುಂದೆ ಅಜ್ಜಂಪುರ ಸಮ್ಮತು ಅತ್ತಿಮೊಗ್ಗೆ ದೇವಾಂಗದ ಮ|| ಸಾಹುಕಾರ್ ದಾಸಣ್ಣನವರು ಇದೇ ಪೇಟೆಯಲ್ಲಿ ಶ್ರೀ ಬಸವೇಶ್ವರ ದೇವಾಲಯ ಪಕ್ಕದ ಒಂದು ಹೆಂಚಿನಮನೆಯನ್ನು ಕ್ರಯಕ್ಕೆ ತೆಗೆದುಕೊಂಡು ಸದರಿ ಮನೆಯನ್ನು ದೇವರ ಸೇವಾ ನಡೆಯುವದಕ್ಕೋಸ್ಕರ ಒಪ್ಪಿಸುವುದಾಗಿ ವಾಗ್ದಾನಮಾಡಿರುವುದು ಸರ್ವ ಜನರಿಗೂ ತುಂಬಾ ಸಂತೋಷಪ್ರದವಾಗಿದೆ

ಸ್ಥಳೀ.

ಯುದ್ಧ ಶಾಂತಿ ಸಂತೋಷೋತ್ಸವಗಳು.

ಚಿಕ್ಕನಾಯಕನಹಳ್ಳಿ ತಾ|| ಶೆಟ್ಟಿಹಳ್ಳಿ.

ಈ ಮಹಾಯುದ್ಧವು ನಿಂತದ್ದಕ್ಕಾಗಿ ತಾ|| 7 ನೇ ಶನಿವಾರ ಲೀವ್ ಕೊಟ್ಟಿದ್ದು ಸರಿಯಷ್ಟೆ. ಈ ದಿನ ಸಮ್ಮತು ಶೇಕದಾರರವರು M. ಭದ್ರಪ್ಪ ಶೆಟ್ಟರು ಮುತುವರ್ಜಿ ವಹಿಸಿ ಹೆಡ್ಮಾಸ್ಟರು ಜಿ. ವೀರಪ್ಪನವರೂ ಅಸಿಸ್ಟೆಂಟ್ ಮಾಸ್ಟರು S ಲಿಂಗಪ್ಪನವರೂ ಈ ಸ್ಕೂಲಿನ ಕಮಿಟಿ ಮೆಂಬರುಗಳನ್ನೂ ದೊಡ್ಡ ಮನುಷ್ಯರನ್ನೂ ಸೇರಿಸಿ ಸ್ಕೂಲ್ ಬಾಲಕರಿಂದ ವಿನೋದವಾಗಿ ಆಟಗಳನ್ನು ಆಡಿಸಿ ಸಾಯಂಕಾಲ 6 ಗಂಟೆಗೆ ಸ್ಕೂಲ್ ಹಾಲಿನಲ್ಲಿ ಸೇರಿ ಶೇಕ್‌ದಾರ್ M. ಭದ್ರಪ್ಪಶೆಟ್ಟರವರನ್ನೇ ಛೇರ್ಮನ್ನರಾಗಿ ಮಾಡಿ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಫೋಟೋಗಳಿಗೂ ಹಾರ ತುರಾಯಿಗಳನ್ನು ಒಪ್ಪಿಸಿ ಸ್ಕೂಲ್ ಬಾಲಕರಿಂದ ಚಕ್ರವರ್ತಿಯವರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಿ ಅನಂತರ ಹೂವು ಗಂಧವನ್ನು ಸಭಿಕರಿಗೆಲ್ಲಾ ಹಂಚಿ ಮ|| ನಮ್ಮ ಶೇಕದಾರರು ಸ್ವಂತ ಖರ್ಚಿನಿಂದ ಆಟಗಳಲ್ಲಿ ಗೆದ್ದ ಬಾಲಕರಿಗೆಲ್ಲಾ ಇನಾಂಗಳನ್ನು ಕೊಟ್ಟರು. ಅನಂತರ ಸಭಿಕರಿಗೆಲ್ಲಾ ಸಕ್ಕರೆ ಮುಂತಾದ್ದೆಲ್ಲಾ ಹಂಚಲ್ಪಟ್ಟಿತು. ಮ|| ನಮ್ಮ ಶೇಕದಾರರವರು ಇಂಗ್ಲೀಷಿನವರಿಂದ ನಮಗೆ ಉಂಟಾಗುವ ಅನುಕೂಲ್ಯಗಳ ವಿಷಯವಾಗಿ ಉಪನ್ಯಾಸ ಮಾಡಿ ರಾತ್ರಿ 8 ಗಂಟೆಗೆ ಸಭೆ ಬರಖಾಸ್ತಾಯಿತು. ಊರೊಳಗೆ ಶ್ರೀ ನರಸಿಂಹಸ್ವಾಮಿಯ ದೇವಸ್ಥಾನದಲ್ಲಿ ಮಂಗಳಾರತಿ ಸಕ್ಕರೆ ಮುಂತಾದ್ದೆಲ್ಲಾ ಹಂಚಿ ಬಹಳ ವಿನೋದವಾಡಿದರು.

ಹಿತಚಿಂತಕ.

ಬೆಂಗಳೂರು ತಾಲ್ಲೂಕ್ ಕಾಕೋಳ್ ಸ್ಕೂಲ್.

ತಾ|| 7.12.1918 ರಲ್ಲಿ ಆರ್ಮಿಸ್ಟೀಸ್ ಪ್ರಯುಕ್ತಕ್ಕಾಗಿ ಈ ಗ್ರಾಮದಲ್ಲಿ ಈ ಸುದಿನ ಸಂತೋಷೋತ್ಸವ ಕಾರ್ಯಗಳು ಅತಿ ವಿಜೃಂಭಣೆಯಿಂದ ನಡೆಯಿಸಲ್ಪಟ್ಟವು. ಈ ಗ್ರಾಮದ ಸ್ಕೂಲ್ ಹೆಡ್ಮಾಸ್ಟರು ಬಿ. ನಂಜಪ್ಪನವರು, ಶಾ|| ನರಸಣ್ಣನವರು, ಪಟೇಲ್ ಕೆಂಪೇಗೌಡರು, ಇನ್ನೂ ಕಮಿಟಿ ಮೆಂಬರುಗಳು ಸಹಾ ಸೇರಿ ಸ್ಕೂಲ್ ಮತ್ತು ದೇವಸ್ಥಾನಗಳನ್ನು ತಳಿರುತೋರಣಾದಿಗಳಿಂದಲೂ ಚಿತ್ರಪಟಗಳಿಂದಲೂ ಅಲಂಕರಿಸಿ ಬೆಳಿಗ್ಗೆ 7 ಗಂಟೆಗೆ ಸ್ಕೂಲ್ ಬಾಲಕರಿಂದ ಕಿಂಡರ್‌ಗಾರ್ಟನ್ ಆಟಗಳನ್ನು ಆಡಿಸಿ ಡ್ರಿಲ್ ಮಾಡಿಸಿ ಬ್ರಿಟಿಷ್ ಬಾವುಟಕ್ಕೆ ಸೆಲ್ಯೂಟ್ ಮಾಡಿಸಿ ಘನತೆಯನ್ನು ಹೊಂದಿರುವ ಶ್ರೀ ಜಾರ್ಜ್ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿಸಿದರು. ಮಧ್ಯಾಹ್ನ ದೇವಸ್ಥಾನಗಳಲ್ಲಿ ಅಭಿಷೇಕ ಸಹಸ್ರನಾಮ ಮೊದಲಾದ ಪೂಜೆಗಳು ನಡೆಯಿಸಲ್ಪಟ್ಟವು. ಮಧ್ಯಾಹ್ನಾನಂತರ ಶ್ರೀ ಜಾರ್ಜ್ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಫೋಟೋಗಳನ್ನು ವಾದ್ಯಘೋಷಗಳೊಡನೆ ಮೆರವಣಿಗೆ ಮಾಡಿಸಿ ಸ್ಕೂಲ್‌ನಲ್ಲಿ ಅಲಂಕರಿಸಿದ್ದ ಉಚ್ಚಾಸನದಲ್ಲಿ ಬಿಜಯಮಾಡಿಸಿದರು. ನಂತರ ಬಾಲಕರಿಂದ ಆಟಗಳು ಆಡಿಸಿ ಗೆದ್ದವರಿಗೆ ಬಹುಮಾನಗಳು ಹಂಚಲ್ಪಟ್ಟವು. ನಂತರ ಸ್ಕೂಲ್‌ನಲ್ಲಿ ಸರ್ವರೂ ಸಭೆಸೇರಿ ಧ್ವನಿಯಿಂದ ಕರ್ಣಾನಂದವನ್ನು ಹೊಂದಿದರು. ಸ್ಕೂಲ್ ಹೆಡ್ಮಾಸ್ಟರ್ ಬಿ. ನಂಜಪ್ಪನವರು ಯೂರೋಪಿಯನ್ ಯುದ್ಧಕ್ಕೆ ಕಾರಣಗಳೂ ನಾಲ್ಕು ವರ್ಷಗಳಿಂದಲೂ ಇದರಿಂದ ಪ್ರಪಂಚಕ್ಕೆ ಉಂಟಾದ ಕಷ್ಟಗಳೂ ಈಗ ಯುದ್ಧ ನಿಂತ ಲಾಭಾಯ್ತು ಮುಂದೆ ಪ್ರಪಂಚಕ್ಕೆ ಆಗುವ ಸೌಕರ್ಯಗಳೂ ಈ ವಿಷಯಗಳಲ್ಲಿ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ತರುವಾಯ ಅಗ್ರಾಸನಾಸೀನರಾದ ಶ್ರೀಮದಿಕ್ಕಾದಿ ಕಾಕಾಚಾರ್ಯ ಗುರುಸ್ವಾಮಿಗಳವರು ಬ್ರಿಟಿಷ್ ರಾಜ್ಯಭಾರದಿಂದ ನಮಗುಂಟಾಗಿರುವ ಸೌಕರ್ಯಗಳ ವಿಷಯವಾಗಿಯೂ, ನಾವು ರಾಜಭಕ್ತಿಯಿಂದ ಇರಬೇಕಾದ ವಿಷಯವಾಗಿಯೂ ವಿಶದವಾಗಿ ಉಪನ್ಯಾಸ ಮಾಡಿದರು. ಅಲ್ಲದೆ ಹಾಲಿ ಇರುವ ಹೆ|| ಮಾ|| ಬಿ. ನಂಜಪ್ಪನವರು ಅಪ್ಪರ್ ಸೆಕೆಂಡರಿಗೆ ಓದುವುದಕ್ಕೆ ಹೋಗಿದ್ದ ೩ ವರ್ಷಗಳು ಕುಂದಿಹೋಗಿ ಹಿನ್ನಡೆಯಲ್ಲಿದ್ದ ಈ ಸ್ಕೂಲನ್ನು ಪುನಃ ಇವರು ಬಂದು ಸುಂಬಾ ಅಭಿವೃದ್ಧಿಗೆ ತಂದರೆಂದು ಸಂತೋಷೋಕ್ತಿಗಳನ್ನು ವಿಶದಪಡಿಸಿದರು. ತರುವಾಯ ಬಾಲಕರಿಗೆಲ್ಲಾ ಮಿಠಾಯಿ ಹಂಚಲ್ಪಟ್ಟು ಸಮಸ್ತರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಜಯಧ್ವನಿಗಳೊಡನೆ ಸಭೆಯು ಬರಖಾಸ್ತಾಯಿತು. ರಾತ್ರಿ ವಾದ್ಯಘೋಷಗಳಿಂದಲೂ ಬಾಣಬಿರುಸುಗಳಿಂದಲೂ ದೇವರ ಉತ್ಸವಗಳು ಎಲ್ಲಾ ಬೀದಿಗಳಲ್ಲಿಯೂ ಅತಿ ವಿಜೃಂಭಣೆಯಿಂದ ನಡೆಯಿಸಲ್ಪಟ್ಟವು. ನಂತರ ದೇವಸ್ಥಾನದಲ್ಲಿ ಮಂತ್ರಪುಷ್ಪ ರಾಜಾಶೀರ್ವಾದಗಳು ನಡೆದವು. ಸರ್ವರೂ ಭಗವದನುಗ್ರಹವನ್ನು ಪಡೆದು ಸ್ವಗೃಹಗಳನ್ನು ಸೇರಿದರು.

ಓರ್ವ ಪ್ರೇಕ್ಷಕ.

ಬೀರೂರು.

ಕಳೆದ ನಾಲ್ಕು ವರ್ಷಗಳಿಂದಲೂ ನಡೆಯುತ್ತಾ ಬಂದು ಪ್ರಪಂಚದಲ್ಲೆಲ್ಲಾ ಹಾಹಾಕಾರವನ್ನುಂಟುಮಾಡಿದ್ದ ಘೋರಯುದ್ಧವು ಕಳೆದ ನವೆಂಬರ್ ತಾ|| ೧೧ ನೆಯ ಸೋಮವಾರ ಸಮಾಧಾನವಾಯಿತೆಂಬ ಸಂತೋಷವಾರ್ತೆಯು ಪ್ರಪಂಚವನ್ನೆಲ್ಲಾ ಆನಂದಸಾಗರದಲ್ಲಿ ಮುಳುಗಿಸಿದೆ. ಈ ಮಹಾ ಸಂತೋಷವನ್ನು ರಾಜಕೀಯವಾದ ಭಕ್ತಿಯಿಂದ ನಡೆಸಬೇಕಾಗಿ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಇಲ್ಲಿಯ ವೀರಶೈವ ಮಹಾಜನಗಳಿಗೆ ಆಶೀರ್ವಾದ ನಿರೂಪ ದಯಪಾಲಿಸಿದ ಪ್ರಕಾರ ಬೀರೂರಿನ ಸಮಸ್ತ ವೀರಶೈವರೂ ಜಗದ್ಗುರುಗಳವರ ಅಪ್ಪಣೆ ಪ್ರಕಾರ ಡಿಸಂಬರ್ ತಾ|| 7 ನೆ ಶನಿವಾರ ವೀರಭದ್ರದೇವರ ದೇವಸ್ಥಾನವನ್ನು ತಳಿರುತೋರಣ ಕದಳೀಸ್ತಂಭಗಳಿಂದ ಅಲಂಕರಿಸಿ, ದೇವರಿಗೆ ಅಭಿಷೇಕ ಅರ್ಚನೆ ವಗೈರೆ ನಡೆಯಿಸಿದರು. ಈ ಕಾರ್ಯಗಳಿಗೆಲ್ಲಾ ಮ|| ಸ|| ಪರ್ವತಪ್ಪನವರು ಮುಖ್ಯ ಕಾರ್ಯದರ್ಶಿಗಳಾಗಿ ನಿಂತು ೨೦೦೦ ಮಂದಿ ಬಡಬಗ್ಗರಿಗೆ ಸಾಯಂಕಾಲದವರೆಗೂ ತಮ್ಮ ಸ್ವಂತ ಖರ್ಚಿನಿಂದ ಅನ್ನದಾನ ಮಾಡಿಸಿದರು. ಮತ್ತು ರಾತ್ರಿ ದೇವರ ಸನ್ನಿಧಾನದಲ್ಲಿ ದೀಪಾರಾಧನೆ ಮಾಡಿಸಿ, ಭಜನೆ ಮತ್ತು ವಾದ್ಯಘೋಷಗಳೊಡನೆ ರಾಜಬೀದಿಗಳಲ್ಲಿ ದೇವರ ಉತ್ಸವ ನಡೆಯಿಸಿ ಸರ್ವರು ದೇವಸ್ಥಾನವನ್ನು ಪ್ರವೇಶಿಸಿದನಂತರ ದೇವರಿಗೆ ಮಂಗಳಾರತಿ ಮಾಡಿಸಿ ಘನತೆಯನ್ನು ಹೊಂದಿದ ಐದನೆ ಜಾರ್ಜ್ ಚಕ್ರವರ್ತಿಗಳಿಗೂ ನಮ್ಮ ಶ್ರೀ ಕೃಷ್ಣರಾಜೇಂದ್ರ ಒಡೆಯರಿಗೂ ಆಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಜಗದೀಶನನ್ನು ಸರ್ವರೂ ಪ್ರಾರ್ಥಿಸಿದರು. ಈ ವಿಚಾರವನ್ನೆಲ್ಲಾ ಮ|| ಸ|| ಪರ್ವತಪ್ಪನವರು ಶ್ರೀಜಗದ್ಗುರುಗಳವರ ಸನ್ನಿಧಿಗೂ ಶ್ರೀಮನ್ಮಹಾರಾಜರವರಿಗೂ ಡೆಪ್ಯುಟಿ ಕಮಿಷನರಿಗೂ ತಂತಿ ಮೂಲಕ ಕೃತಪಡಿಸಿದರು. ಸದರಿಯವರು ಕಾರ್ಯದರ್ಶಿಗಳಾಗಿ ವಿಶದತೆಯಿಂದ ನೆರವೇರಿಸಿ ರಾಜಭಕ್ತಿಯನ್ನು ವ್ಯಕ್ತಗೊಳಿಸಿದ್ದಕ್ಕೆ ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರಿಂದ ಶ್ಲಾಘನೀಯವಾದ ಪ್ರತ್ಯುತ್ತರ ಬಂದಿರುವುದನ್ನು ತಿಳಿಸಲು ಬಹಳ ಸಂತೋಷವುಳ್ಳವರಾಗಿರುತ್ತೇವೆ. ಧರ್ಮಕಾರ್ಯಗಳನ್ನು ಮಾಡಿ ರಾಜಭಕ್ತಿಯುಕ್ತರಾದ ಪ್ರಜೆಗಳ ವಿಷಯದಲ್ಲಿ ನಮ್ಮ ಪ್ರಭುಗಳಿಗೆ ಇರತಕ್ಕ ವಿಶ್ವಾಸವು ಅವರ ಪ್ರತ್ಯುತ್ತರದಿಂದಲೆ ವ್ಯಕ್ತವಾಗುತ್ತಿದೆ. ಜಗದ್ಗುರುಗಳವರ ಅಪ್ಪಣೆ ಪ್ರಕಾರ ಪರ್ವತಪ್ಪನವರು ಕಾರ್ಯದರ್ಶಿಗಳಾಗಿ ನಿಂತು ದೇವತಾಕಾರ್ಯವನ್ನು ಸಾಂಗಗೊಳಿಸಿ ರಾಜಭಕ್ತಿಯನ್ನು ಪ್ರಕಾಶಪಡಿಸಿದುದಕ್ಕಾಗಿ ಮಹಾಸನ್ನಿಧಿಯಿಂದ ಸದರಿಯವರಿಗೆ ವೀರಭಕ್ತರೆಂಬ ಘನತೆಯನ್ನು ಆಶೀರ್ವಾದಪೂರ್ವಕ ಅನುಗ್ರಹಿಸಿರುವುದನ್ನು ತಿಳಿದು ವೀರಶೈವರೆಲ್ಲರೂ ಸಂತೋಷಪಡತಕ್ಕದ್ದಾಗಿದೆ. ಮತ್ತು ರಾವ್ ಬಹದ್ದೂರ್ ಕೈ|| ತೋಟದಪ್ಪನವರು ಶಿವಾಧೀನರಾದ ಕಾಲದಲ್ಲಿ ಅವರ ಧರ್ಮಸತ್ರದ ಮ್ಯಾನೆಜ್ಮೆಂಟನ್ನು ೩ ವರ್ಷಗಳ ಕಾಲ ಬೆಂಗಳೂರು ಮ|| ಯ|| ಬಸವಪ್ಪನವರೊಂದಿಗೆ ನಿಸ್ಪೃಹತೆಯಿಂದಲೂ ಧೈರ್ಯದಿಂದಲೂ ಮುಂದೆ ಯಾವ ನ್ಯೂನತೆಯೂ ಬಾರದಂತೆ ಕಾರ್ಯನಿರ್ವಾಹ ಮಾಡಿರುವುದರಿಂದ ಮ|| ಪರ್ವತಪ್ಪನವರಿಗೆ ನಮ್ಮ ಸರ್ಕಾರದವರು ತಮ್ಮ ಮೆಚ್ಚುಗೆಯನ್ನು ಬೆಂಗಳೂರು ಡಿ|| ಡೆ|| ಕಮಿಷನರವರ ಮೂಲಕ ಅಪ್ಪಣೆ ದಯಪಾಲಿಸಿದ್ದಾರೆಂಬ ವಾರ್ತೆಯು ಸರ್ವರಿಗೂ ಆನಂದವನ್ನು ಉಂಟುಮಾಡಿರುತ್ತದೆ. ಪ್ರಕೃತ ಮ|| ಪರ್ವತಪ್ಪನವರಲ್ಲಿ ತೋರಿಬಂದ ಸತ್ಪಾತ್ರದಾನರೂಪವಾದ ಸದ್ಗುಣವು ಅವರ ವಿಷಯದಲ್ಲಿ ಅಪರಿಮಿತವಾಗಿ ಪ್ರವಹಿಸಿದ ಭಗವದನುಗ್ರಹದ ಸೂಚನೆಯಾಗಿರುವುದು. ಆದ್ದರಿಂದ ಅವರಿಗೂ ಅವರ ಕುಟುಂಬದವರಿಗೂ ಇತೋಪ್ಯತಿಶಯವಾದ ಶ್ರೇಯಸ್ಸನ್ನುಂಟುಮಾಡಬೇಕಾಗಿ ಮಹಾದೇವನನ್ನು ಪ್ರಾರ್ಥಿಸುತ್ತೇನೆ.

ವೀರಶೈವ ಮತಾಭಿಮಾನಿ.

ದಾವಣಗೆರೆ.

ತಾ|| 7 ರಲ್ಲಿ ಮ್ಯುನ್ಸಿಪಾಲಿಟಿಯಿಂದ ಬಂದ 250 ರೂಪಾಯಿಗಳಲ್ಲದೆ ಇಲ್ಲಿನ ಸಾಹುಕಾರರ ಅಕೃತ್ರಿಮ ರಾಜಭಕ್ತಿಸೂಚಕವಾಗಿ ಕೊಟ್ಟ ಚಂದಾ 300 ರೂ. ಗಳಿಂದ ಈ ಕೆಳಗಿನಂತೆ ಉತ್ಸವವು ಜರುಗಿತು. ಟವನ್ನಿನ ಎಲ್ಲಾ ಬೀದಿಗಳೂ ಕದಳೀಸ್ತಂಭ ತೋರಣಾದಿಗಳಿಂದಲೂ ರಾತ್ರಿ ಮೆರವಣಿಗೆ ಕಾಲದಲ್ಲಿ ದೀಪೋತ್ಸವದಿಂದಲೂ ಥಳಥಳಿಸುತ್ತಿದ್ದವು. ಸರ್ಕಾರ ಕಟ್ಟಡವು ಟವನ್ ಹಾಲು ಸಹಾ ಯೂನಿಯನ್ ಜಾಕ್ ಬಾವುಟಗಳಿಂದ ದೇದೀಪ್ಯಮಾನವಾಗಿ ಇದ್ದವು. ಹೈಸ್ಕೂಲ್ ಬಳಿ ಬ್ರಿಟಿಷ್ ಸಾರ್ವಭೌಮರ ಮತ್ತು ಶ್ರೀಮನ್ ಮಹಾರಾಜರ ಭಾವಚಿತ್ರಗಳಿಗೆ ಸೆಲೂಟ್ ಸಲ್ಲಿಸಲ್ಪಟ್ಟಿತು. ದೇವಸ್ಥಾನಗಳಲ್ಲಿ ಅಭಿಷೇಕಪೂಜಾ, ರಾಜಶ್ರೇಯಃಪ್ರಾರ್ಥನೆಗಳೂ ಮಸಜೀದು ಮತ್ತು ಚರ್ಚುಗಳಲ್ಲಿ ದೇವತಾಪ್ರಾರ್ಥನೆಯೂ ಆಚರಿಸಲ್ಪಟ್ಟವು. ಹೈಸ್ಕೂಲ್ ಬಳಿ ಸ್ಕೂಲಿನ ಸಾವಿರಾರು ಬಾಲಕ ಬಾಲಕಿಯರ ಆಟಪಾಟಗಳು, ಕಸರತ್ತುಗಳು ನಡೆದು ಅವರೆಲ್ಲರಿಗೂ ಮಿಠಾಯಿ ಹಂಚಲ್ಪಟ್ಟಿತಲ್ಲದೆ ಅವರಲ್ಲಿ ಗೆದ್ದವರಿಗೆ ಸಾಯಂಕಾಲದ ಸಭೆಯಲ್ಲಿ ಯುಕ್ತವಾದ ಬಹುಮಾನ ಕೊಡಲ್ಪಟ್ಟಿತು. ಮ|| ತಿರಕಪ್ಪನವರ ಷಡಕ್ಷರಪ್ಪನವರು, ಮ|| ಎಲ್ಲಾಗಟ್ಟಿ ಗುರುಸಿದ್ದಪ್ಪನವರು, ಮ|| ದೊಗ್ಗಳ್ಳಿ ಬಸವಣ್ಣನವರು, ಮ|| ಅಜ್ಜಂಪುರದ ಶೆಟ್ಟಿ ಸಿದ್ರಾಮಣ್ಣನವರು ಮುಂತಾದ ದೊಡ್ಡಮನುಷ್ಯರ ಮೇಲ್ವಿಚಾರಣೆಯಿಂದ ಟೌನ್ ಪೇಟೆಯಲ್ಲಿ 6-7 ಸಾವಿರ ಬಡಬಗ್ಗರಿಗೆ ಮಧ್ಯಾಹ್ನದಿಂದ ರಾತ್ರಿ 11 ಘಂಟೆವರೆಗೂ ಭೋಜನವು ನಡಿಸಲ್ಪಟ್ಟಿತು. ಸಾಯಂಕಾಲ ಟವನ್ ಹಾಲಿನಲ್ಲಿ ಎಲ್ಲಾ ಆಫೀಸರು ಮ್ಯುನ್ಸಿಪಲ್ ಮೆಂಬರು ಇತರ ದೊಡ್ಡಮನುಷ್ಯರು ಸ್ಕೂಲಿನ ಬಾಲಕ ಬಾಲಕಿಯರು ಸಭೇ ಸೇರಿರುವಾಗ ಇಲ್ಲಿನ ಸಬ್‌ಡಿವಿಜನ್ ಆಫೀಸರವರು ಮಿ|| ಮಹಮ್ಮದ್ ಪೋಚೆದಲ್ಲಾ ಸಾಹೇಬರವರು ಅಗ್ರಾಸನವನ್ನು ವಹಿಸಿದ್ದರು. ನ್ಯಾಷನಲ್ ಆಂತಂಸ್ತೋತ್ರವು ಬಾಲಕಿಯರ ಮಂಜುಳಗಾನದಿಂದುದ್ಘೋಷಿಸಲ್ಪಟ್ಟ ನಂತರ ಛೇರ್ಮನ್ನರವರು ಬ್ರಿಟಿಷ್ ಸಾರ್ವಭೌಮರವರ ವಿಜಯವನ್ನು ಇಂಗ್ಲೀಷಿನಲ್ಲಿ ಭಾಷಿಸಿದರು. ಆಗ ಮಿ|| ಮಂಜಪ್ಪ ಹಾಂಡೇಕರ್‌ಯವರು ಕನ್ನಡದಲ್ಲಿಯೂ, ಹಿಂದೂಸ್ಥಾನಿ ಸ್ಕೂಲ್ ಹೆಡ್ಮಾಸ್ಟರು ಹಿಂದೂಸ್ಥಾನಿಯಲ್ಲಿಯೂ ಯುದ್ಧದ ಮುಕ್ತಾಯದ ವಿಷಯವಾಗಿ ಉಪನ್ಯಾಸ ಮಾಡಿದರು. ಆಗ ಮಿ|| ತಾಲೂಕ ರಾ|| ಸಾ|| ವೆಂಕಟಕೃಷ್ಣಯ್ಯನವರು ಮತ್ತು ಹೈಸ್ಕೂಲ್ ಸಂಸ್ಕೃತ ಪಂಡಿತರು ಮಿ|| ಶ್ರೀನಿವಾಸಯ್ಯಂಗಾರ್ರವರ ಸಂಸ್ಕೃತ ಕವಿತೆಯೂ ಬಳಿಗಾರ ಮಿ|| ಹುಸೇನಿ ಸಾಹೇಬರ ಹಿಂದೂಸ್ಥಾನಿ ಕವಿತೆಯೂ ಆಹ್ಲಾದಕರವಾಗಿದ್ದುವು. ಕೊನೆಗೆ ಹಾರ ತಾಂಬೂಲಗಳಿತ್ತು ಸಭೆಯು ಮುಕ್ತಾಯವಾಯಿತು. ಆಗ ಬ್ರಿಟಿಷ್ ಸಾರ್ವಭೌಮದಂಪತಿಗಳ ಮತ್ತು ಶ್ರೀಮನ್ ಮಹಾರಾಜರವರ ಫೋಟೋಗಳನ್ನು ಕೋಚ್‌ಗಾಡಿಯಲ್ಲಿಟ್ಟುಕೊಂಡು ಬ್ಯಾಂಡು ವಾದ್ಯಘೋಷ ಮತ್ತು ಬಾಣಬಿರುಸುಗಳ ಸಮೇತ ಇಲ್ಲಿನ ಸ್ಥಳೀಯ ಅಧಿಕಾರಿಗಳಾದ ಸಬ್‌ಡಿವಿಜನ್ ಆಫೀಸರ್ ಮಿ|| ಮಹಮ್ಮದ್‌ಪೋಚೇದುಲ್ಲಾ ಸಾಹೇಬರು ಇಲ್ಲಿಗೆ ಹೊಸದಾಗಿ ಬಂದಿರುವ ಅ|| ಪೊ|| ಮಿ|| ಅಬ್ದುಲ್‌ಗನಿಸಾಹೇಬರು, ಮಿ|| ಅಮಲ್‌ದಾರ್ ನಾರಾಯಣ ಅಯ್ಯರ್‌ರವರು, ಮಿ|| ಇನ್ಸ್‌ಪೆಕ್ಟರ್ ನಾಗೇಶರಾಯರವರು, ಸಾಹುಕಾರರಾದ ಮ|| ತವನಪ್ಪನವರ ಬ್ರಹ್ಮಪ್ಪನವರು, ಲಾಯರ್ ಮಿ|| ನರಸಿಂಹಮೂರ್ತಿರಾವ್, ಮಿ|| ವೆಂಕಟಗಿರಿರಾಯರು, ಅನೇಕ ವರ್ತಕಮಂಡಳಿಯವರು, ಇತರ ಮುಖಂಡರು ಸಹಾ ರಾತ್ರಿ 10 ಘಂಟೆವರೆಗೂ ಬಹು ವಿಜೃಂಭಣೆಯಿಂದ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿದರು. ತಾ|| 8 ನೇ ಬೆಳಿಗ್ಗೆ ಸಬ್‌ಡಿವಿಜನ್ ಆಫೀಸರು ಅಮಲ್‌ದಾರರು ಕಮಿಟಿ ಮೆಂಬರುಗಳು ಸಹ ಸೇರಿ ಅನೇಕ ಕುಂಟರು ಕುರುಡರು ಮತ್ತು ನಿರ್ಗತಿಕರಾದ ಬಡಬಗ್ಗರಿಗೆ ನೂರಾರುರೂ. ಬಟ್ಟೆಯನ್ನು ಹಂಚಿದ್ದಲ್ಲದೆ ಸಣ್ಣ ಮಕ್ಕಳಿಗೆ ಕುಲಾಯಿ ಅಂಗಿಗಳು ಕೆಲವು ವೃದ್ಧರಿಗೆ ಹೊದಿಯತಕ್ಕ ದುಪಟಿಗಳನ್ನು ಸಹ ಕೊಟ್ಟು ಆನಂದವನ್ನುಂಟುಮಾಡಿದರು. ಇಲ್ಲಿನ ಸ್ಥಳೀಯ ಆಫೀಸರ ಸುವ್ಯವಸ್ಥೆಯು ಅನ್ಯಾದೃಶವಾದದ್ದು. ಇದೇ ಪ್ರಕಾರವಾಗಿ ತಾಲ್ಲೂಕಿನ ಗ್ರಾಮಗಳಲ್ಲಿಯೂ ವಿಜಯೋತ್ಸವವು ನಡೆಯುವಂತೆ ಇಲ್ಲಿನ ಅಮಲ್ದಾರ್ರವರು ಸರ್ಕಾರದಿಂದ ಬಂದದ್ದರಲ್ಲಿ ಕೆಲವು ರೂಪಾಯಿಗಳನ್ನು ಹಳ್ಳಿಗಳ ಮುಖಂಡರಿಗೂ ಕೊಟ್ಟರು. ಆರ್ಯರು ತಮ್ಮ ರಾಜಭಕ್ತಿ ಪುರಸ್ಸರವಾಗಿ ಫಂಡನ್ನು ಸೇರಿಸಿ ಈ ದಿನ ಎಲ್ಲಾ ದೇವಸ್ಥಾನಗಳಲ್ಲಿಯೂ ದೇವತಾಸೇವೆ ಉತ್ಸವ ಹುಡುಗರ ಆಟಪಾಟ ತಿಂಡಿಹಂಚುವಿಕೆ ನಿರ್ಗತಿಕರಿಗೆ ಅನ್ನದಾನ ಮುಂತಾದ ಸತ್ಕಾರ್ಯಗಳನ್ನು ನಡೆಸಿರುವರು. ಇದು ಸ್ತೋತ್ರಾರ್ಹವಾದ ಸಂಗತಿಯಾಗಿದೆ.

ಪ್ರೇಕ್ಷಕರಲ್ಲೊಬ್ಬ.

ಅಧ್ಯಾಪಕರು ಬೇಕು.

ಬೆಂಗಳೂರು ಮ|| ರಾ|| ಗೌಡರ ವೀರಭದ್ರಪ್ಪನವರ ಸಂಸ್ಕೃತ ಪಾಠಶಾಲೆಗೆ ಸಂಸ್ಕೃತ, ಜ್ಯೋತಿಷ್ಯ, ಅಧ್ಯಯನ ಇವುಗಳನ್ನು ಚೆನ್ನಾಗಿ ಬಲ್ಲ ಒಬ್ಬ ಉಪಾಧ್ಯಾಯರು ಬೇಕಾಗಿದ್ದಾರೆ. ಬರತಕ್ಕವರು ಬೆಂಗಳೂರು ದೊಡ್ಡಪೇಟೆ ಊಮುತ್ತಿ ಸಾವು ಕಲ್ಲಪ್ಪನವರಿಗೆ ಬರೆದರೆ ವ್ಯವಸ್ಥೆ ಮಾಡಲ್ಪಡುವುದು.

ಯುದ್ಧದ ಫೋಟೋಗಳು. 3

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಹಡಗುಗಳ ಜಗಳ, ಸೈನ್ಯಗಳ ಕದನ ಮುಂತಾದ ರಮಣೀಯವಾದ 60 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ.

ವಿಳಾಸ:—ಮಹಾರಾಷ್ಟ್ರ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಲಿಂಗಾಯತರಿಗೋಸ್ಕರ ತಯಾರಿಸಿದ ನವೀನ ಮತ್ತು ಸಾರ್ಥ ವೀರಶೈವ ಧರ್ಮಾಮೃತ.

ಈ ವೀರಶೈವ ಧರ್ಮಾಮೃತದಲ್ಲಿ ಶಿವ ಪಾರ್ವತಿ ಸಂವಾದರೂಪದಿಂದ ಲಿಂಗಾಯತರ ಉತ್ಪತ್ತಿ, ಧರ್ಮ, ಆಚಾರ ಮತ್ತು ಇವರು ಯಾವ ಪ್ರಕಾರದಿಂದ ನಡೆಯಬೇಕು ಮುಂತಾದ ಅನೇಕ ವಿಷಯಗಳನ್ನು ವೇದಾಗಮ ಪುರಾಣೇತಿಹಾಸಾದಿ ಮಹದ್ಗ್ರಂಥಗಳಲ್ಲಿ ಪರಿಶೋಧನಂ ಮಾಡಿ, ಮತ್ತು ನಿತ್ಯದಲ್ಲಿ ಪ್ರಚಲಿತವಾದ ಸ್ವಾನುಭವಾದಿ ದಿವ್ಯವ್ಯವಹಾರಿಕ ದೃಷ್ಟಾಂತಗಳನ್ನು ಸೇರ್ಪಡೆ ಮಾಡಿ, ಸ್ವಧರ್ಮದ ಭಾವಚಿತ್ರವು ಚನ್ನಾಗಿ ತೋರಿಸಲ್ಪಟ್ಟಿದೆ. ಈ ಪುಸ್ತಕವು ಓದುವ ವಾಚಕವರ್ಗದ ಮನಸ್ಸಿನಲ್ಲಿ ತತ್ಕಾಲವೆ ಧರ್ಮಜಾಗ್ರತಿಯು ಹುಟ್ಟಿ ನಾವು ಈ ಕಾಲದವರೆಗೆ ಯಾವ ಪ್ರಕಾರದಿಂದ ನಡೆದಿರುತ್ತೇವೆ ಮತ್ತು ಈಗ ಯಾವ ಪ್ರಕಾರದಿಂದ ನಡೆಯಬೇಕೆಂಬ ಸಶಾಸ್ತ್ರಸ್ವಾನುಭವದಿಂದೊಡಗೂಡಿದ ಮಾತು ಸ್ವಾಭಿಮಾನದಿಂದ ವೇದ್ಯವಾಗುತ್ತದೆ. ಇಂಥಾ ಅಮೂಲ್ಯವಾದ ಗ್ರಂಥವು ಇನ್ನುವರಿಗು ಎಲ್ಲಿಯೂ ತಯಾರಾಗಲಿಲ್ಲೆಂದರೂ ಅತಿರೇಕವಾಗುವುದಿಲ್ಲ. ಆದರೆ ಸ್ವಧರ್ಮಶಾಲಿಗಳಾದ ವೀರಶೈವ ಮತಾಭಿಮಾನಿಗಳು ಈ ಗ್ರಂಥದ ಒಂದು ಪ್ರತಿಯನ್ನು ತರಿಸಿಕೊಂಡು ಸ್ವಧರ್ಮಸುಧಾರಣೆಯಂ ಮಾಡಬೇಕೆಂದು ಅತ್ಯಾಗ್ರಹದಿಂದ ಕೋರಿಕೆ ಮಾಡುತ್ತೇವೆ.

ಕ್ರಯ ೧ ರೂಪಾಯಿ ೪ ಆಣೆ. ಟಪಾಲ ಖರ್ಚು ಬೇರೆ.

ನಮ್ಮ ವಿಳಾಸ:-ಲಿಂಗಾಯತ ಧರ್ಮಗ್ರಂಥಪ್ರಸಾರಕ, ಅಫೀಸ,
1 ಮುಕ್ಕಾಂ. ಪೋ|| ಲಾತೂರ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 3

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇಲ್ಲದೆ ವನಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದ ವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇವರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೧೮ ನೆಯ ಇಸವಿ ಡಿಸೆಂಬರ್ ತಾ|| ೨೯ ರಿಂದ ೧೯೧೯ ನೆಯ ಜನವರಿ ತಾ|| ೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮ ಸಂವತ್ಸರದ ಮಾರ್ಗಶಿರ ಬ|| ಏಕಾದಶಿಯಿಂದ ಪುಷ್ಯ ಶು|| ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
29	[1] ಭಾನು	ಏಕಾ	4-9	ವಿಶಾ	40-44	15
30	ಸೋಮ	ದ್ವಾದಶಿ	8-57	ಅನೂ	46-25	16
31	[2] ಮಂಗಳ	ತ್ರಯೋ	12-56	ಜ್ಯೇಷ್ಠ	51-2	17
1	[3] ಬುಧ	ಚತು	15-46	ಮೂಲ	54-33	18
2	[4] ಗುರು	ಅಮಾ	17-20	ಪೂಷಾ	56-45	19
3	[5] ಶುಕ್ರ	ಪಾಡ್ಯ	17-37	ಉಷಾ	57-41	20
4	[6] ಶನಿ	ಬಿದಿಗೆ	16-37	ಶ್ರವಣ	57-22	21

(1) ಸರ್ವತ್ರೈಕಾದಶೀ. (2) ಮಾಸಶಿವರಾತ್ರಿ, ಚೆಲುವಾಜಮ್ಮಣ್ಣಿಯವರ ವರ್ಧಂತಿ. (3) ಅಮಾವಾಸ್ಯಾ ತಿಥಿ. (4) ಮಾರ್ಗಶಿರ ಅಕ್ಷ್ಯಾವ್ರತಂ, ಎಳ್ಳಮಾವಾಸ್ಯೆ, ತೀರ್ಥಹಳ್ಳಿಯಲ್ಲಿ ತುಂಗಾನದೀಸ್ನಾನ. (5) ತೀರ್ಥಹಳ್ಳಿಯಲ್ಲಿ ರಾಮೇಶ್ವರಸ್ವಾಮಿ ರಥ. (6) ಕೊತಾರೋತ್ಸವಾರಂಭ.

ಮೈಸೂರ್: ವೈ. ತಿರುಮಲೈಯ್ಯಂಗಾರವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.





REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಳಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೨) ಮೈಸೂರ್ ಸ್ಟಾರಿ ಸನ್ ೧೯೧೯ ನೆಯ ಇಸವಿ ಫೆಬ್ರವರಿ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇವರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 12

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ!

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇವನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಜೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುಪ್ತವ್ಯನಬೇನೆ, ಹುರಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತವೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಜೊತೆ ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
39 ಹೆಡ್ ಆಫೀಸು ಶಹಾಪೂರ, ಬೆಳಗಾಂವ.

ಪುಕಟ! ಇನ್‌ಫ್ಲುಯಂಝಾ ಪತ್ರಿಕೆ-ಪುಕಟ!!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲು ಎಂಝಾ ಪಿಲ್ಸ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಮಲಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ಬೆ-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚಕವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ “ಇನ್‌ಫ್ಲ್ಯು ಎಂಝಾ ಪತ್ರಿಕೆ” ಯನ್ನು ಪುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
11 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಲಿಂಗಾಯತರಿಗೋಸ್ಕರ ತಯಾರಿಸಿದ ನವೀನ ಮತ್ತು ಸಾರ್ಥ

ವೀರಶೈವ ಧರ್ಮಾಮೃತ.

ಈ ವೀರಶೈವ ಧರ್ಮಾಮೃತದಲ್ಲಿ ಶಿವ ಪಾರ್ವತಿ ಸಂವಾದರೂಪದಿಂದ ಲಿಂಗಾಯತರ ಉತ್ಪತ್ತಿ, ಧರ್ಮ, ಆಚಾರ ಮತ್ತು ಇವರು ಯಾವ ವ್ರತದಿಂದ ನಡೆಯಬೇಕು ಮುಂತಾದ ಅನೇಕ ವಿಷಯಗಳನ್ನು ವೇದಾಗಮ ಪುರಾಣೇತಿಹಾಸಾದಿ ಮಹದ್ಗ್ರಂಥಗಳಲ್ಲಿ ಪರಿಶೋಧನಂ ಮಾಡಿ, ಮತ್ತು ನಿತ್ಯದಲ್ಲಿ ಪ್ರಚಲಿತವಾದ ಸ್ವಾನುಭವಾದಿ ದಿವ್ಯವ್ಯವಹಾರಿಕ ದೃಷ್ಟಾಂತಗಳನ್ನು ಸೇರ್ಪಡೆ ಮಾಡಿ, ಸ್ವಧರ್ಮದ ಭಾವಚಿತ್ರವು ಚನ್ನಾಗಿ ತೋರಿಸಲ್ಪಟ್ಟಿದೆ. ಈ ಪುಸ್ತಕವು ಓದುವ ವಾಚಕವರ್ಗದ ಮನಸ್ಸಿನಲ್ಲಿ ತತ್ಕಾಲವೆ ಧರ್ಮಜಾಗ್ರತಿಯುಂಹುಟ್ಟಿ ನಾವು ಈ ಕಾಲದವರೆಗೆ ಯಾವ ಪ್ರಕಾರದಿಂದ ನಡೆದಿರುತ್ತೇವಿ ಮತ್ತು ಈಗ ಯಾವ ಪ್ರಕಾರದಿಂದ ನಡೆಯಬೇಕೆಂಬ ಸಶಾಸ್ತ್ರಸ್ವಾನುಭವದಿಂದೊಡಗೂಡಿದ ಮಾತು ಸ್ವಾಭಿಮಾನದಿಂದ ವೇದ್ಯವಾಗುತ್ತದೆ. ಇಂಥಾ ಅಮೂಲ್ಯವಾದ ಗ್ರಂಥವು ಇನ್ನುವರಿಗು ಎಲ್ಲಿಯೂ ತಯಾರಾಗಲಿಲ್ಲೆಂದರೂ ಅತಿರೇಕವಾಗುವುದಿಲ್ಲ. ಆದರೆ ಸ್ವಧರ್ಮಶಾಲಿಗಳಾದ ವೀರಶೈವ ಮತಾಭಿಮಾನ್ಯರು ಈ ಗ್ರಂಥದ ಒಂದು ಪ್ರತಿಯನ್ನು ಕರಿಸಿಕೊಂಡು ಸ್ವಧರ್ಮಸುಧಾರಣೆಯುಂಮಾಡಬೇಕೆಂದು ಅತ್ಯಾಗ್ರಹದಿಂದ ಕೋರಿಕೆ ಮಾಡುತ್ತೇವೆ.

ಕ್ರಯ ೧ ರೂಪಾಯಿ ೪ ಆಣೆ. ಟಪಾಲ ಖರ್ಚು ಬೇರೆ.

ನಮ್ಮ ವಿಳಾಸ:-ಲಿಂಗಾಯತ ಧರ್ಮಗ್ರಂಥಪ್ರಸಾರಕ, ಆಫೀಸ,
7 ಮುಕ್ಕಾಂ. ಪೊ|| ಲಾತೂರ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 9

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶಕಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಫೆಬ್ರವರಿ ತಾ|| ೯ ನೆಯ ಭಾನುವಾರ.

ಮೈಸೂರು ಮಂತ್ರಿಪದವಿ.

ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ಮಂತ್ರಿಪದವಿಯಿಂದ ೬ ತಿಂಗಳ ವಿಶ್ರಾಂತಿಯನ್ನು ಪಡೆದುಕೊಂಡುಹೋಗಿರುವ ಕಾರಣ, ಆ ಸ್ಥಾನಕ್ಕೆ ಅಫಿಷಿಯೇಟಿಂಗಾಗಿ ಮ|| ಸರದಾರ್ ಕಾಂತರಾಜ ಅರಸಿನವರು ನಿಯಮಿಸಲ್ಪಟ್ಟಿರುವುದೂ, ಅವರು ಅಸ್ವಸ್ಥರಾಗಿರುವ ಕಾರಣ ಮ|| ಎ. ಆರ್. ಬಾನರ್ಜಿಯವರು ದಿವಾನಗಿರಿಯನ್ನು ನಿರ್ವಹಿಸಿಕೊಂಡಿರುವಂತೆ ಏರ್ಪಡಿಸಿರುವುದೂ ಸರ್ವಶ್ರುತವಷ್ಟೆ. ಮ|| ವಿಶ್ವೇಶ್ವರಯ್ಯನವರು ತಮ್ಮ ವಿಶ್ರಾಂತಿ ಮುಗಿದ ಬಳಿಕ ಮರಳಿ ಸಂಸ್ಥಾನದ ಮಂತ್ರಿಪದವಿಗೆ ಬರುವ ಹಾಗಿಲ್ಲವೆಂಬ ಚಿಹ್ನೆಗಳೇ ವ್ಯಕ್ತವಾಗಿರುತ್ತವೆ. ಹಾಗಾದರೆ ಮ|| ಸರದಾರ್ ಕಾಂತರಾಜ ಅರಸಿನವರು ಸ್ಥಿರಗೊಳಿಸಲ್ಪಡುವರೆಂಬುದು ಸಿದ್ಧವಾಗಿರುತ್ತದೆ. ಹೀಗಿರುವಲ್ಲಿ ಈ ಮಧ್ಯೆ ಕೆಲವರು ಪತ್ರಿಕೆಗಳಲ್ಲಿ ಮಾಡುತ್ತಿರುವ ವ್ಯಾಖ್ಯಾನಗಳನ್ನು ನೋಡಿದರೆ ವಿಸ್ಮಯವಾಗುತ್ತಿದೆ. ಮ|| ವಿಶ್ವೇಶ್ವರಯ್ಯನವರು ಇಲ್ಲದಿದ್ದರೆ ಮೈಸೂರು ಸಂಸ್ಥಾನವೇ ಉಳಿಯಲಾರದೆನ್ನುವ ಮಟ್ಟಿಗೆ ಇವರು ಆಡುತ್ತಿರುವಮಾತುಗಳು ಉತ್ಪ್ರೇಕ್ಷಾಮಯವಾಗಿರುತ್ತವೆ. ವಸ್ತುತಃ ವಿಶ್ವೇಶ್ವರಯ್ಯನವರು ತಮ್ಮ ದಿವಾನಗಿರಿಯನ್ನು ಇದುವರೆಗೆ ತೇಜೋವಂತವಾಗಿ ನಿರ್ವಹಿಸಿದರೆಂದು ಹೇಳುವಲ್ಲಿ ಅಡ್ಡಿಯಿಲ್ಲವಾದರೂ, ಅವರಹೊರತು ಮೈಸೂರು ದೇಶವು ಉದ್ಧಾರವಾಗುವಹಾಗೆಯೇ ಇಲ್ಲವೆಂದು ಹೇಳುವುದು ಮಾತ್ರ ಅಪ್ರಶಸ್ತವಾದ ಮಾತೆಂಬುದರಲ್ಲಿ ಸಂಶಯವಿಲ್ಲ. ಇದಲ್ಲದೆ ಪ್ರತಿಯೊಂದೂರಿನಲ್ಲಿಯೂ ಪ್ರಜೆಗಳು ಸಂಘಗಳನ್ನು ಮಾಡಿ ಇನ್ನಾರನ್ನೂ ದಿವಾನಗಿರಿಗೆ ತರಕೂಡದೆಂದು ನಿಷೇಧಪ್ರದರ್ಶನ ಮಾಡುವುದಲ್ಲದೆ, ಸರ್ ವಿಶ್ವೇಶ್ವರಯ್ಯನವರನ್ನೇ ಮರಳಿ ಆ ಪದವಿಗೆ ತರಬೇಕೆಂದು ಠರಾವುಗಳನ್ನು ಮಾಡಿ ಶ್ರೀಮನ್ಮಹಾರಾಜರ ಬಳಿಗೆ ತಂತ್ರೀವಾರ್ತೆಗಳನ್ನೂ ವಿಜ್ಞಾಪನಾಪತ್ರಗಳನ್ನೂ ಕಳುಹಿಸಿಕೊಡುತ್ತಬರಬೇಕೆಂದು ಪ್ರೇರೇಪಿಸುತ್ತಿರುವ ವಿಷಯವಂತೂ ದುರ್ಭಾವಪ್ರೇರಣೆಯ ಸನ್ನೆಯಾಗಿರುತ್ತದೆ.

ಮೈಸೂರು ಸಂಸ್ಥಾನವು ನಮ್ಮ ರಾಜವಂಶಕ್ಕೆ ಮರಳಿ ವಹಿಸಲ್ಪಟ್ಟಾರಭ್ಯ ಇದುವರೆಗೆ ೬ ಮಂದಿ ಮಂತ್ರೀಶ್ವರರುಗಳು ಅಧಿಕಾರವನ್ನು ವಹಿಸಿ ಹೋಗಿರುತ್ತಾರೆ. ಅವರೆಲ್ಲರ ಕಾಲದಲ್ಲೂ ದೇಶವು ಒಂದೊಂದು ತೆರದಲ್ಲಿ ಅಭಿವೃದ್ಧಿಯನ್ನು ಹೊಂದುತ್ತಲೇ ಬಂದಿದೆ. ಮುಖ್ಯಮಂತ್ರಿತ್ವಕ್ಕೆ ಯಾರು ಅರ್ಹತೆಯುಳ್ಳವರೋ ಯಾರನ್ನು ನಿಯಮಿಸುವುದರಿಂದ ರಾಜಕಾರ್ಯಗಳು ನಂಬುಗೆಯಿಂದಲೂ ವಿಚಕ್ಷಣೆಯಿಂದಲೂ ನಿರ್ವಾಹಗೊಳ್ಳುವುವೋ ಎಂಬುದನ್ನು ಪರಿಶೀಲಿಸಿ, ತಕ್ಕವರುಗಳನ್ನು ಆಯಾ ಕಾಲದಲ್ಲಿ ಮಂತ್ರಿಪದವಿಗೆ ಪ್ರಭುಗಳು ನಿಯಮಿಸಿಕೊಳ್ಳುತ್ತ ಬಂದಿದ್ದಾರೆ. ಪ್ರಜೆಗಳಿಗೆ ದೇಶಾಭ್ಯುದಯದಲ್ಲಿ ಎಷ್ಟು ಆಸಕ್ತಿಯಿರುವುದೋ ಅದಕ್ಕೆ ಕೋಟಿ ಭಾಗ ಮಿಗಿಲಾದ ಆದರವು ಶ್ರೀಮನ್ಮಹಾರಾಜರಿಗೂ ಅವರ ಸಹೋದರರಾದ ಶ್ರೀಮದ್ಯುವರಾಜರಿಗೂ ಇರುತ್ತದೆ. ಅವರುಗಳ ಪ್ರಜಾರಂಜನ ಪರಾಯಣತೆಯು ಸರ್ವರಿಗೂ ಗೊತ್ತೇ ಇದೆ. ಅವರುಗಳ ನಿಷ್ಕಳಂಕನ್ಯಾಯ್ಯಪ್ರವರ್ತನೆಯೂ, ಸತ್ಯಾಸಕ್ತಿಯೂ, ಧರ್ಮದೃಷ್ಟಿಯೂ, ದೂರದರ್ಶಿತೆಯೂ, ಪ್ರಜೆಗಳ ವಿಶ್ವಾಸವನ್ನು ಸೂರೆಗೊಂಡಿರುತ್ತವೆ. ಅವರುಗಳು ರಾಜ್ಯರಥವನ್ನು ಯಾವ ಯಾವ ಸಮಯದಲ್ಲಿ ಹೇಗೆ ಹೇಗೆ ಸಾಗಿಸಬೇಕಾಗಿರುವುದೆಂಬುದನ್ನು ಅರಿಯದಷ್ಟು ಅಸಮರ್ಥರಾಗಿರುವುದಿಲ್ಲ. ರಾಜ್ಯದ ಕೀರ್ತ್ಯಪಕೀರ್ತಿಗಳ ಹಾನಿವೃದ್ಧಿಗಳ ವಿಷಯದಲ್ಲಿ ಅವರುಗಳಿಗಿರುವಷ್ಟು ದೂರಾಲೋಚನೆಯು ಮತ್ತಾರಿಗೂ ಇರುವುದಿಲ್ಲ. ಹೀಗಿರುವಾಗ ಹಿಂದೆ ಯಾವ ದಿವಾನರ ನಿಯಮನ ಕಾಲದಲ್ಲೂ ಉಂಟಾಗದಿದ್ದಷ್ಟು ವಾದೋಪವಾದಗಳೂ ಗದ್ದಲಗಳೂ ಈಗ ಉಂಟುಮಾಡಲ್ಪಡಲು ಕಾರಣವೇನು? ಶ್ರೀಮನ್ಮಹಾರಾಜರ ಕಾರ್ಯನಿರ್ವಾಹ ಸಾಮರ್ಥ್ಯದಲ್ಲಿ ಪ್ರಜೆಗಳಿಗೆ ಆಗ ಇದ್ದಷ್ಟು ಭರವಸೆಯು ಈಗಿಲ್ಲವೆ? ಅದು ದಿನದಿನಕ್ಕೆ ಹೆಚ್ಚುತ್ತಿರುವುದೇ ಹೊರತು ಕುಗ್ಗುವುದಕ್ಕೆ ಕಾರಣವೇನೂ ಇರುವುದಿಲ್ಲ.

ಶ್ರೀಮನ್ಮಹಾರಾಜರು ರಾಜ್ಯಭಾರನಿರ್ವಾಹವಿಷಯದಲ್ಲಿಯೂ ಮಂತ್ರಿಪದವಿಯ ಸಂಬಂಧವಾಗಿಯೂ ಮಾಡತಕ್ಕ ಏರ್ಪಾಟನ್ನು ಪ್ರಜೆಗಳು ಅನುಮೋದಿಸದೆ ಪ್ರತಿರೋಧಿಸುವುದೆಂದರೆ—"ನಿಮ್ಮ ಏರ್ಪಾಟನ್ನು ನಾವು ಒಪ್ಪುವುದಿಲ್ಲ; ನಾವು ಹೇಳಿದಂತೆ ನೀವು ನಡೆಯಬೇಕು" ಎಂದು ಹೇಳುವುದೇ ಆಗಿರುತ್ತದೆ. ಈ ರೀತಿಯು, ನಮ್ಮ ಸಂಸ್ಥಾನದಲ್ಲಿ ರಾಜಭಕ್ತಿವಿರುದ್ಧವಾಗಿ ನಡೆಯತಕ್ಕ ಪ್ರಯತ್ನಕ್ಕೆ ಅನುಸಾರವಾಗಿರುವುದೇ ಹೊರತು ಮತ್ತೇನೂ ಅಲ್ಲ. ಇದಲ್ಲದೆ ಇಂಥ ವಾದೋಪವಾದಗಳೂ ಕೃತ್ಯಗಳೂ ಮುಂದೆ ದಿವಾನರಾಗಿ ಬರತಕ್ಕ ಸರದಾರ್ ಕಾಂತರಾಜ ಅರಸಿನವರ ವಿಷಯವಾಗಿ ಕರ್ತವ್ಯಕುಂಠತೆಯನ್ನೂ ಅಗೌರವವನ್ನೂ ವ್ಯಕ್ತಪಡಿಸಿದಂತಾಗುತ್ತವೆ. ಮತ್ತೂ ಶ್ರೀಮನ್ಮಹಾರಾಜಸಹೋದರರ ಸದುದ್ಯಮದಲ್ಲಿ ಕುಂದನ್ನಾರೋಪಿಸುವ ಈ ಪ್ರವರ್ತನದಿಂದ ಅವರುಗಳ ಮನಸ್ಸಾದರೂ ಕಲುಷಗೊಳ್ಳಲು ಅವಕಾಶವಾಗುತ್ತದೆ.

ಮಂತ್ರಿಪದಕ್ಕೆ ಸರ್ದಾರ್ ಕಾಂತರಾಜ ಅರಸಿನವರಲ್ಲದೆ ಇನ್ನಾರಾದರೊಬ್ಬ ಬ್ರಾಹ್ಮಣಾಧಿಕಾರಿಯು ಬರುವಂತಿದ್ದರೆ ಇಷ್ಟು ಕೋಲಾಹಲವು ಹುಟ್ಟುತ್ತಿರಲಿಲ್ಲವೆಂದು ಕಾಣುತ್ತದೆ. ರಾಜವಂಶಕ್ಕೆ ಸೇರಿದ ಮಹಾಸಮೀಪಬಂಧುಗಳಲ್ಲೊಬ್ಬರು ವಿದ್ಯಾವಿವೇಕ ಸಾಮರ್ಥ್ಯಾದಿಗಳಲ್ಲಿ ಮುಂದುವರಿದು ಮಂತ್ರಿಪದವಿಯನ್ನು ಅಡರುವಸ್ಥಿತಿಗೆ ಬಂದುದಕ್ಕಾಗಿ ಮೈಸೂರು ರಾಜವಂಶದಲ್ಲಿ ಭಕ್ತಿವಿಶ್ವಾಸಗಳುಳ್ಳ ಪ್ರತಿಯೊಬ್ಬ ಪ್ರಜೆಯೂ ಎಷ್ಟೋ ಸಂತೋಷಿಸಿ ಸುಸ್ವಾಗತವನ್ನು ಮಾಡಬೇಕಾದುದು ಧರ್ಮವಾಗಿರುವಾಗ, ಯಾವ ಯಾವ ದುರುದ್ದೇಶಗಳನ್ನೋ ಒಳಗಿಟ್ಟುಕೊಂಡು, ಹೊರಗೆ ಬೇರೆ ನಟನೆಯನ್ನು ಮಾಡುತ್ತ, ಪರ್ಯಾಯದಿಂದ ಪ್ರಭುಗಳ ಸಂಕಲ್ಪಕ್ಕೆ ವಿರುದ್ಧವಾಗಿ ಪ್ರವರ್ತಿಸುವಂಥ ಭಾವವನ್ನು ಪ್ರಜೆಗಳಲ್ಲಿ ಹುಟ್ಟಿಸುವ ಹಳವಳಿಗಾರಂಭಿಸುವುದು ಹೇಯವಾದ ಕೃತ್ಯವಲ್ಲವೆ? ಶ್ರೀಮಾನ್ ಸರ್, ವಿಶ್ವೇಶ್ವರಯ್ಯನವರನ್ನೇ ದಿವಾನಗಿರಿಯಲ್ಲಿ ಇನ್ನೂ ಕೆಲಕಾಲ ಕೆಲಸದಲ್ಲಿರಿಸಿಕೊಳ್ಳುವುದು ಅವಶ್ಯಕವೆಂದು ಶ್ರೀಮನ್ಮಹಾರಾಜರಿಗೆ ತೋರಿದರೆ ಅವರು ಬಿಡುವರೆ? ಹಾಗೆ ಅವರೇ ಬಂದರೆ ಬೇಡವೆನ್ನುವವರಾರು? ಮೊದಲು ಸರ್ ವಿಶ್ವೇಶ್ವರಯ್ಯನವರ ಸಾಮರ್ಥ್ಯವನ್ನು ಅರಿತು ಅವರನ್ನು ಚೀಫ್‌ಇಂಜನಿಯರ್ ಪದವಿಗೂ ಬಳಿಕ ದಿವಾನಗಿರಿಗೂ ತಂದವರು ಶ್ರೀಮನ್ಮಹಾರಾಜರೇ ಅಲ್ಲವೆ? ಸ್ವದೇಶಕ್ಷೇಮಾರ್ಥವಾಗಿ ಆಗ ಚಾಣಾಕ್ಷತೆಯನ್ನು ತೋರಿಸಿದ ಶ್ರೀಮನ್ಮಹಾರಾಜರವರು ಈಗಲೂ ತೋರಿಸಲಾರರೆ? ಹೀಗಿರುವಾಗ ಪ್ರೊಟೆಸ್ಟ್ ಮೀಟಿಂಗುಗಳನ್ನು ಮಾಡಿ ಭವಿಷ್ಯನ್ಮಂತ್ರಿಗಳಾದ ಸರ್ ಕಾಂತರಾಜ ಅರಸಿನವರಿಗೆ ತೇಜೋವಧೆಯೂ, ಶ್ರೀಮನ್ಮಹಾರಾಜರವರಿಗೆ ಮನೋಭಾರವೂ ಹುಟ್ಟಲು ಅವಕಾಶಕೊಡುವಂಥ ನಿಂದ್ಯಪ್ರಯತ್ನಕ್ಕೆ ಪ್ರಭುಭಕ್ತಿಸಂಪನ್ನರಾದ ಸಾಧುಪ್ರಜೆಗಳಾರಾದರೂ ಸಮ್ಮತಿಸುವರೆ? ಇಂಥ ಪ್ರಯತ್ನವನ್ನು ಸರ್ ವಿಶ್ವೇಶ್ವರಯ್ಯನವರೂ ಕೂಡ ಧಿಕ್ಕರಿಸದಿರಲಾರರು.

ಇದಿಷ್ಟೇ ಅಲ್ಲದೆ ಹಾದಿಬೀದಿಗಳಲ್ಲೂ ಊರುಕೇರಿಗಳಲ್ಲೂ ಮೈಸೂರು ದಿವಾನಗಿರಿ ಸಂಬಂಧವಾಗಿಯೂ, ಸರ್ ವಿಶ್ವೇಶ್ವರಯ್ಯನವರ ಸಂಬಂಧವಾಗಿಯೂ ಕೆಲವರು ಹುಟ್ಟಿಸಿರುವ ಸುದ್ದಿಗಳು ಚಿತ್ರವಿಚಿತ್ರಗಳಾಗಿರುತ್ತವೆ. ಅವುಗಳನ್ನೆಲ್ಲಾ ಬರೆಯುವುದಕ್ಕೆ ಹೇಸಿಗೆಯಾಗುತ್ತದೆ. ದೃಷ್ಟಾಂತಕ್ಕಾಗಿ ಒಂದನ್ನು ಹೇಳುತ್ತೇವೆ. ಸರ್ ವಿಶ್ವೇಶ್ವರಯ್ಯನವರನ್ನು ಸಮಾಧಾನಮಾಡಿ ಕರೆದುಕೊಂಡು ಬರುವುದಕ್ಕೆ ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಸಹ ಉತ್ತರ ಹಿಂದೂಸ್ಥಾನಕ್ಕೆ ಪ್ರಯಾಣ ಮಾಡಿರುವರಂತೆ! ಎಂಥ ವಿಚಿತ್ರಕಲ್ಪನೆ ನೋಡಿದಿರಾ? ಮ|| ವಿಶ್ವೇಶ್ವರಯ್ಯನವರು ವಿಶ್ರಾಂತಿಯನ್ನು ಪಡೆದುಕೊಂಡಾಗಳಿಂದ ಈ ದೇಶದಲ್ಲೇ ಇದ್ದು ಮೊನ್ನೆತಾನೇ ಬೊಂಬಾಯಿಗೆ ಪ್ರಯಾಣಮಾಡಿರುವಲ್ಲಿ ಅದನ್ನೂ ಕೂಡ ಮರೆಮಾಚಿ, ಹೀಗೆ ಅಗೌರವಕರವಾದ ಪೊಳ್ಳುಸುದ್ದಿಗಳನ್ನು ತರಂಗತರಂಗವಾಗಿ ಹಬ್ಬಿಸುವ ಕ್ಷುದ್ರಜನರ ಪ್ರವೃತ್ತಿಯನ್ನು ಏನೆಂದು ಹೇಳಬಹುದು! ಇಂಥ ಕುಹಕವಾರ್ತೆಗಳಿಗೂ ಸ್ವಾರ್ಥಸಾಧಕರ ಕುಟಿಲತಂತ್ರಗಳಿಗೂ ಪರೋತ್ಕರ್ಷಾಸಹಿಷ್ಣುಗಳ ದುರ್ಬೋಧನೆಗಳಿಗೂ ಪ್ರಭುಭಕ್ತಿಪರಾಯಣರಾದ ಪ್ರಜೆಗಳು ಕಿವಿಗೊಡದೆ ಶ್ರೀಮನ್ಮಹಾರಾಜಸಹೋದರರ ಕರ್ತವ್ಯದಕ್ಷತೆಯಲ್ಲಿ ಭರವಸೆಯನ್ನಿಟ್ಟು ನಡೆದುಕೊಳ್ಳುವುದೇ ವಿಹಿತವು.

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ನಿನ್ನೆಯಿಂದ ಕುದುರೆ ಜೂಜುಗಳಿಗೆ ಆರಂಭವಾಗಿದೆ.

ಸರ್ ಎಂ. ವಿಶ್ವೇಶ್ವರಯ್ಯನವರು ಕಳೆದ ತಾ|| ೩೦ ರಲ್ಲಿ ಬೆಂಗಳೂರಿನಿಂದ ಬೊಂಬಾಯಿಗೆ ಪ್ರಯಾಣಮಾಡಿದರು.

ಆಕ್ಟಿಂಗ್ ದಿವಾನರಾದ ಮ|| ಬಾನರ್ಜಿಯವರು ತಮ್ಮ ಸಂಚಾರವನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದಿರುತ್ತಾರೆ.

ನಿನ್ನೆ ಶನಿವಾರ ರಾಜಧಾನಿಯ ಟೌನ್‌ಹಾಲಿನಲ್ಲಿ ಪದ್ಧತಿಯಂತೆ ಫಲಪುಷ್ಪ ಪ್ರದರ್ಶನೋತ್ಸವವು ಆರಂಭಿಸಲ್ಪಟ್ಟಿತು. ಈದಿನವೂ ಜರುಗುವುದು.

ಕಳೆದ ಶುಕ್ರವಾರ ರಥಸಪ್ತಮಿಯದಿವಸ ಶ್ರೀಮನ್ಮಹಾರಾಜರಿಗೆ ಪಟ್ಟಾಭಿಷೇಕವಾದ ದಿನವಾದ ಕಾರಣ ರಾಜಧಾನಿಯಲ್ಲಿ ಬೆಳಗಿನ ೭ ಗಂಟೆಗೆ ೨೧ ಗುಂಡುಗಳು ಹಾರಿಸಲ್ಪಟ್ಟವು.

ಕೌನ್ಸಿಲರ್ ಮಿ|| ಹಂಜಾಹುಸೇನ್‌ರವರು ಕಳೆದವಾರ ಮೈಸೂರು ಪಟ್ಟಣ ಮತ್ತು ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕುಗಳ ವೈದ್ಯಾಲಯಗಳನ್ನೂ ಕಾರಾಗೃಹವನ್ನೂ ಪರೀಕ್ಷಿಸಿಕೊಂಡು ಹೋದರು.

ರಾಜಧಾನಿಯಲ್ಲಿ ಪ್ಲೇಗಿನ ಸೋಂಕು ಎಲ್ಲ ಮೊಹಲ್ಲೆಗಳಲ್ಲೂ ವಿರಳವಾಗಿರುವಂತೆ ಕಾಣುತ್ತಿದೆ. ಇಲಿಗಳು ಅಲ್ಲಲ್ಲಿ ಸಾಯುತ್ತಿವೆ. ಆಕಸ್ಮಾತ್ತಾಗಿ ಆ ರೋಗದಿಂದ ಒಂದೊಂದು ಮರಣಗಳೂ ಆಗುತ್ತಿವೆ.

ಆ|| ದಿವಾನರವರಾದ ಮ|| ಬಾನರ್ಜಿಯವರು ತಮ್ಮ ಕಡೂರು ಡಿಸ್ಟ್ರಿಕ್ಟ್ ಸಂಚಾರಕಾಲದಲ್ಲಿ ಶ್ರೀ ರಂಭಾಪುರೀ ಸಂಸ್ಥಾನಮಠಕ್ಕೆ ದಯಮಾಡಿಸಿ ಪರಾಂಬರಿಸಿಕೊಂಡು ಬಂದರೆಂದು ಕೇಳುತ್ತೇವೆ.

ರಾಜಧಾನಿಯ ಟ್ರಸ್ಟ್‌ಬೋರ್ಡಿಗೆ ಇಲ್ಲಿಯ ಮ್ಯುನ್ಸಿಪಲ್ ಕೌನ್ಸಿಲಿನಿಂದ ಅಡ್ವೋಕೇಟರುಗಳಾದ ಮ|| ಸಿ. ನರಸಿಂಹಯ್ಯನವರೂ ಮ|| ಎ. ಕೃಷ್ಣರಾಯರೂ ಸಹ ಮೆಂಬರುಗಳಾಗಿ ಆರಿಸಲ್ಪಟ್ಟಿದ್ದಾರೆ.

ನಮ್ಮ ಈಗಣ ದಿವಾನರು ಮ|| ಎನ್. ಮಾಧವರಾಯರನ್ನು ಪ್ರೈವೇಟ್ ಸೆಕ್ರಟರಿಗಳನ್ನಾಗಿಯೂ, ಮ|| ಬಿ. ಪುಟ್ಟಯ್ಯನವರನ್ನು ಅಸಿಸ್ಟೆಂಟ್ ಪ್ರೈವೇಟ್ ಸೆಕ್ರಟರಿಗಳನ್ನಾಗಿಯೂ ನಿಯಮಿಸಿಕೊಂಡಿದ್ದಾರೆ.

ರಾಜಧಾನಿಯಲ್ಲಿ ಸುಗ್ಗಿ ಕಾಲವಾದರೂ ಬತ್ತದ ಬೆಲೆಯು ಕಂಡಗಕ್ಕೆ ೧೪ ರಿಂದ ೧೬ ವರೆಗೆ ಇದೆ. ಕಾಳುಕಡ್ಡಿಗಳ ಬೆಲೆಯೆಲ್ಲಾ ಬಹಳ ಹೆಚ್ಚಿಹೋಗಿದೆ. ಅಕ್ಕಿಯು ರೂ. ಗೆ ೫ ರಿಂದ ೫|| ಸೇರಿನವರೆಗೆ ಮಾರುತ್ತಿದ್ದರೂ ಸಮೃದ್ಧವಾಗಿ ಸಿಕ್ಕುತ್ತಲಿಲ್ಲ.

ರಾಜಧಾನಿಯ ಆಬ್ಕಾರಿ ಕಂಟ್ರಾಕ್ಟರ್ ಮ|| ಸಾಹುಕಾರ್ ತಿಮ್ಮಯ್ಯನವರು ಒಂದು ಇಂಗ್ಲಿಷ್ ಹೈಸ್ಕೂಲನ್ನು ಕಟ್ಟಿಸುವುದಕ್ಕಾಗಿ ಲಕ್ಷ್ಮೀಪುರದಲ್ಲಿ ಮ ಟಿ. ಜಿ. ಲಕ್ಷ್ಮಣರಾಯರ ಮನೆಯ ಸಮೀಪದ ನಿವೇಶನವನ್ನು ಟ್ರಸ್ಟ್‌ಬೋರ್ಡಿನವರಿಂದ ಪಡೆದುಕೊಂಡಿರುವುದಾಗಿ ತಿಳಿಯುತ್ತೇವೆ.

ಮೈಸೂರು ಬ್ಯಾಂಕಿನ ಡೈರೆಕ್ಟರುಗಳಲ್ಲೊಬ್ಬರಾದ ರಾ|ಬ| ಅಣ್ಣಾಸ್ವಾಮಿ ಮೊದಲಿಯಾರರು ಆ ಉದ್ಯೋಗದಿಂದ ನಿವೃತ್ತರಾದ ಪ್ರಯುಕ್ತ ಅವರಿಗೆ ಬದಲು ಬೆಂಗಳೂರಿನ ಬೆಂಚುಮ್ಯಾಜಿಸ್ಟ್ರೇಟರುಗಳಲ್ಲೊಬ್ಬರಾದ ಮ|| ತೂಬಗೆರೆ ನಂಜಪ್ಪನವರು ಬ್ಯಾಂಕಿನ ಡೈರೆಕ್ಟರುಗಳಾಗಿ ನಿಯಮಿಸಲ್ಪಟ್ಟಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ಆ|| ದಿವಾನ್ ಸರ್ದಾರ್ ಕಾಂತರಾಜ ಅರಸಿನವರು ಚೆನ್ನಾಗಿ ಆರೋಗ್ಯಗೊಂಡಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ. ಸಹೋದರರಾದ ಅವರ ಆರೋಗ್ಯಸ್ಥಿತಿಯನ್ನು ವಿಚಾರಿಸುವುದಕ್ಕಾಗಿ ಬೆಂಗಳೂರಿಗೆ ದಯಮಾಡಿಸಿ ಇದುವರೆಗೂ ಅಲ್ಲಿದ್ದ ವಾಣೀವಿಲಾಸಸನ್ನಿಧಾನದ ಮಹಾಮಾತೃಶ್ರೀಯವರು ಕಳೆದ ಸೋಮವಾರ ರಾಜಧಾನಿಗೆ ದಯಮಾಡಿಸಿದರು.

ಭರತಖಂಡದ ವೃತ್ತಾಂತಗಳು.

ಸೀಮೆಯಿಂದ ಭರತಖಂಡಕ್ಕೆ ವಸ್ತ್ರಗಳನ್ನು ಕಳುಹಿಸಿಕೊಡುವುದರಲ್ಲಿ ಏರ್ಪಟ್ಟಿದ್ದ ನಿರ್ಬಂಧಾಜ್ಞೆಯು ತೊಲಗಿಸಲ್ಪಟ್ಟಿತು.

ಬೊಂಬಾಯಿಯಲ್ಲಿ ವಾಂತಿಭೇದಿಯುಪದ್ರವವು ಇನ್ನೂ ಶಾಂತವಾಗಿಲ್ಲ. ದಿನ ೧ ಕ್ಕೆ ೩೦೦ ರ ಮೇಲೆಯೇ ಆ ರೋಗದಿಂದ ಮೃತರಾಗುತ್ತಿದ್ದಾರೆ.

ಭರತಖಂಡದ ಲೋಹಮಾರ್ಗಗಳ ಉಪಯೋಗಕ್ಕಾಗಿ ೩೫ ಇಂಜನ್ನುಗಳನ್ನು ಹೊಸದಾಗಿ ಕಟ್ಟಲು ಸೀಮೆಯ ಕರ್ಮಾಗಾರಗಳಿಗೆ ಅಪ್ಪಣೆ ಕೊಡಲ್ಪಟ್ಟಿದೆ.

ಪಂಜಾಬ್ ಅಧಿಪತ್ಯದಲ್ಲಿರುವ ಎಲ್ಲತರದ ವಕೀಲರುಗಳೂ ಬರುವ ಮಾರ್ಚಿ ತಾ|| ೨೯-೩೦ ರಲ್ಲಿ ಲಾಹೋರ್ ಪಟ್ಟಣದೊಳಗೆ ತಮ್ಮದೊಂದು ಕಾನ್ಫರೆನ್ಸನ್ನು ನಡೆಯಿಸುವವರಾಗಿದ್ದಾರೆ.

ಮೈಸೂರು ದೇಶದಲ್ಲಿರುವ ಶಾಸನದಂತೆಯೇ ೧೮ ವರ್ಷ ವಯಸ್ಸಿನೊಳಗಣ ಬಾಲಕರಾರೂ ಚುಟ್ಟಾ ಬೀಡಿ ಮೊದಲಾದುವುಗಳನ್ನು ಸೇದಕೂಡದೆಂಬ ವಿಧಿಯನ್ನು ತಿರುವಾಂಕೂರು ಸಂಸ್ಥಾನದವರು ಮಾಡುತ್ತಲಿದ್ದಾರೆ.

ಕಳೆದ ೬ ತಿಂಗಳಿಂದ ಮದ್ರಾಸು ಪಟ್ಟಣದಲ್ಲಿ ಅಲ್ಲಿಯ ಮ್ಯುನಿಸಿಪಾಲಿಟಿಯವರು ಸ್ವಂತದ ಅಂಗಡಿಗಳನ್ನಿಟ್ಟು ಧಾನ್ಯಗಳ ಮಾರಾಟ ಮಾಡಿಸಿದುದುದರಲ್ಲಿ ತಿಂಗಳಿಗೆ ೨೦೦ ರೂ. ನಂತೆ ನಷ್ಟವು ಸಂಭವಿಸಿದೆಯಂತೆ. ಕಷ್ಟಕಾಲದಲ್ಲಿ ಪ್ರಜಾಪರಿಪಾಲನೆಗಾಗಿ ಅವರು ೧ ಲಕ್ಷ ರೂ. ಗಳನ್ನು ಕಳೆದುಕೊಂಡಿದ್ದರೂ ಅನ್ಯಾಯವೆನಿಸಿಕೊಳ್ಳುತ್ತಿರಲಿಲ್ಲ.

ಸೀಮೆಯಲ್ಲಿ ಕುಳಿತಿರುವ ಬಾಲಗಂಗಾಧರತಿಲಕರು ಭರತಖಂಡದ ಸ್ವರಾಜ್ಯಾಕಾಂಕ್ಷೆಯನ್ನು ನಿರೂಪಿಸುವ ೧೦ ಲಕ್ಷ ಪ್ರತಿಗಳನ್ನು ಮುದ್ರಣಮಾಡಿಸಿ ಆಂಗ್ಲದೇಶದಲ್ಲಿ ಹಂಚಿರುವರಂತೆ. ಮತ್ತೂ ಅಲ್ಲಿ ಇಷ್ಟರಲ್ಲೇ ಪ್ರಕಟವಾಗುವುದಕ್ಕಿರುವ ಕೂಲಿಕಾರರ ಪಕ್ಷದ ಒಂದು ಪತ್ರಿಕೆಯ ಮೂಲಧನಕ್ಕೆ ೩೦ ಸಾವಿರ ರೂ. ಗಳನ್ನು ಕೊಟ್ಟಿರುವರಂತೆ.

ಭರತಖಂಡದ ಪಶ್ಚಿಮೋತ್ತರ ಲೋಹಮಾರ್ಗದಲ್ಲಿ ಸ್ಪಿಂಟಂಗಿ-ಅನೂರಿ ಎಂಬ ನಿಲ್ದಾಣಗಳ ಮಧ್ಯದಲ್ಲಿ ಒಂದು ಸ್ಪೆಷಲ್ ಬಂಡಿಯ ಇಂಜನ್ನು ನೀರನ್ನು ತುಂಬಿಕೊಳ್ಳುವುದಕ್ಕಾಗಿ ಬಿಟ್ಟಾಗ ಸ್ವಾಧೀನತಪ್ಪಿ ಹಿಂದಕ್ಕೆ ಓಡಿ ಪಟ್ಟೆದಪ್ಪಿ ಹೋದ ರಭಸದಿಂದ ೮ ಬಂಡಿಗಳು ಅಪ್ಪಳಿಸಲ್ಪಟ್ಟು ಬಿದ್ದು ನುಚ್ಚುನೂರಾದುವು. ೪ ಮಂದಿ ಪ್ರಯಾಣಿಕರು ಸತ್ತರು. ಇಬ್ಬರಿಗೆ ಬಲವಾದ ಪೆಟ್ಟುಗಳು ಬಿದ್ದುವು. ಒಳಗಿದ್ದ ಒಂಟೆಗಳಲ್ಲಿ ೫೦ ಸತ್ತವು.

ವೈಸ್ರಾಯರೂ ಸ್ಟೇಟ್ ಸೆಕ್ರೆಟರಿಯವರೂ ಸಹ ಸೇರಿ ಅಣಿಮಾಡಿರುವ ಭಾರತ ರಾಜಕೀಯ ಸಂಸ್ಕರಣ ನಿವೇದಿಕೆಯೊಳಗೆ ಕಂಡಿರುವಂತೆ ಇಂಡ್ಯಾ ಆಫೀಸಿನ ಸ್ಥಿತಿಯನ್ನು ಸುಧಾರಿಸುವುದಕ್ಕೆ ಮಾಡಬೇಕಾದ ಕಾರ್ಯಗಳೇನೆಂಬುದನ್ನು ವಿಚಾರಮಾಡಿ ವರದಿಮಾಡುವುದಕ್ಕಾಗಿ ಪ್ರಭುತ್ವದವರು ಒಂದು ಸಂಘವನ್ನೇರ್ಪಡಿಸಿದ್ದಾರೆ. ಅದಕ್ಕೆ ಕ್ರ್ಯೂ ಪ್ರಭುಗಳು ಅಧ್ಯಕ್ಷರಾಗಿದ್ದಾರೆ. ಎಚ್. ಎಚ್. ಆಗಾಖಾನರು, ಭೂಪೇಂದ್ರನಾಥ ಬಾಸುರವರ ಸಮೇತ ಇನ್ನು ೭ ಮಂದಿ ಯೂರೋಪ್ಯರೂ ಸಭಿಕರಾಗಿ ಮಾಡಲ್ಪಟ್ಟಿದ್ದಾರೆ.

ಭರತಖಂಡದಲ್ಲಿ ರಾಜದ್ರೋಹ ವ್ಯಾಪನೆಗೆ ಕಾರಣ ಮೊದಲಾದುವುಗಳನ್ನು ತಿಳಿದು ವರದಿ ಮಾಡುವುದಕ್ಕೆ ಏರ್ಪಟ್ಟಿದ್ದ ರೌಲತ್ ಸಂಘದವರು ತಮ್ಮ ವರದಿಯಲ್ಲಿ ಸೂಚಿಸಿರುವ ರಾಜದ್ರೋಹನಿರೋಧೋಪಾಯವನ್ನು ಆಚರಣೆಯಲ್ಲಿ ತರುವುದಕ್ಕಾಗಿ ಇಂಡ್ಯಾ ಸರ್ಕಾರದವರು ೨ ಶಾಸನಗಳನ್ನು ಈಗ ನಡೆಯುತ್ತಿರುವ ಸಾಮ್ರಾಜ್ಯಶಾಸನ ಸಭೆಯಲ್ಲಿ ಏರ್ಪಡಿಸುವವರಾಗಿದ್ದಾರೆ. ಇದನ್ನು ಏರ್ಪಡಿಸಕೂಡದೆಂದು ಮುಖ್ಯಮುಖ್ಯ ಪಟ್ಟಣಗಳಲ್ಲೆಲ್ಲಾ ಸ್ವರಾಜ್ಯವಾದಿಗಳು ಸಭಾಮುಖದಲ್ಲಿ ಚರ್ಚಿಸಿ ನಿರ್ಧಾರಮಾಡುತ್ತಿದ್ದಾರೆ.

ಅಂತರ್ಜಾತೀಯ ಸಮ್ಮೇಳನದವರ ಆಧಿಪತ್ಯಕ್ಕೊಳಪಟ್ಟು ಜರ್ಮನ್ ಅಧಿನಿವೇಶನಗಳೂ ತುರ್ಕಿದೇಶಭಾಗಗಳೂ ಪರಿಪಾಲಿಸಲ್ಪಡುತ್ತ ಬರಬೇಕೆಂದು ಡಾ|| ವಿಲ್ಸನ್‌ರವರು ಮಾಡಿದ ಸಿದ್ಧಾಂತಕ್ಕೆ ಮಿತ್ರಮಂಡಲಿ ದೇಶೀಯರೆಲ್ಲರೂ ಅನುಮೋದಿಸಿರುವರೆಂದು ಸುದ್ದಿ ಬಂದಿದೆ. ಇದನ್ನು ಕಂಡು ಲಂಡನ್ನಿನ ಡೇಲಿಮೇಲ್ ಪತ್ರಿಕೆಯು ಮೆಸಪಟೋಮಿಯಾದ ಪರಿಪಾಲನ ಬಾಧ್ಯತೆಯು ಮುಂದೆ ಭರತಖಂಡಕ್ಕೆ ಸೇರುವುದೆಂದು ಹೇಳಿರುತ್ತದೆ. ಹಾಗಾದರೆ ಮೆಸಪಟೋಮಿಯಾದ ಆಕ್ರಮಣಕ್ಕಾಗಿ ಹೆಚ್ಚು ಶ್ರಮವ್ಯಯಗಳನ್ನನುಭವಿಸಿದ ಭರತಖಂಡಕ್ಕೆ ಇದು ತಕ್ಕ ಗೌರವವೇ ಆದಂತಾಗುವುದು.

ಕಳೆದ ಡಿಸೆಂಬರ್ ತಿಂಗಳಲ್ಲಿ ದಿಲ್ಲಿಯೊಳಗೆ ಕೂಡಿದ ಅಖಿಲಭಾರತ ಮಹಮ್ಮದೀಯಸಭೆಗೆ ಸತ್ಕಾರಕ ಸಂಘಾಧ್ಯಕ್ಷರಾಗಿದ್ದ ಡಾಕ್ಟರ್ ಎಂ. ಎ. ಅನ್ಸಾರಿಯವರು ಮಾಡಿದ ಉಪನ್ಯಾಸವು ಆಂಗ್ಲಸಾರ್ವಭೌಮರ ವಿಷಯದಲ್ಲಿ ಅವಿಧೇಯತೆಯನ್ನೂ, ಅವರ ಶತ್ರುಗಳ ವಿಷಯದಲ್ಲಿ ಸಾನುಭೂತಿಯನ್ನೂ, ಸಾರ್ವಭೌಮರ ಪ್ರಜೆಗಳಲ್ಲಿ ಅಸೂಯಾಭಾವವನ್ನೂ, ಪ್ರಭುತ್ವದವರ ಮೇಲೆ ಅಸಹನೆಯನ್ನೂ ಹುಟ್ಟಿಸುವ ಮಾತುಗಳಿಂದ ಕೂಡಿದೆಯೆಂಬ ಕಾರಣದಿಂದ ಆ ಭಾಷಣದ ಕಾಪಿಗಳು ಯಾವ ಭಾಷೆಯಲ್ಲಿ ಎಲ್ಲಿ ದೊರಕಿದರೂ ಅವನ್ನು ಸರ್ಕಾರದವರು ವಶಪಡಿಸಿಕೊಂಡುಬಿಡಬೇಕೆಂದು ಪಂಜಾಬ್ ಲೆ|| ಗೌರ್ನರಾದ ಸರ್ ಮೈಕೇಲ್ ಓಡ್ವಯರ್‌ರವರು ಪ್ರಕಟಿಸಿದ್ದಾರೆ.

ಕಳೆದ ಜನವರಿ ತಾ|| ೩೧ ರಲ್ಲಿ ಕಲ್ಕತ್ತಾದ ಹೌರಾ ನಿಲ್ದಾಣದಲ್ಲಿ ಷಾರ್ಕರ್ ಎಂಬ ಒಬ್ಬ ಯೂರೋಪಿಯನ್ ಇಂಜನಿಯರು ಬಂಡಿಯಿಂದಿಳಿದನು. ಅವನ ಸಂಬಂಧವಾಗಿ ಅಲ್ಲಿಯ ಸುಂಕದ ಕಟ್ಟೆಯವರಿಗೆ ಏನೋ ಸಮಾಚಾರವು ತಿಳಿದಿದ್ದುದರಿಂದ ಅವರು ಕೂಡಲೇ ಹೋಗಿ ಅವನನ್ನು ಹಿಡಿದುಕೊಂಡರು. ಅವನ ವಶದಲ್ಲಿ ೭ ತೋಟಾಗಳ ಒಂದು ರಿವಾಲ್ವರು ತುಂಬಾ ತೋಟಾಗಳನ್ನಿಟ್ಟು ಸಿದ್ಧಮಾಡಲ್ಪಟ್ಟದ್ದು ಇದ್ದಿತು. ಅವನ ವಶದಲ್ಲಿದ್ದ ಬೀಗದಕೈಯಿಂದ ಅವನ ಪೆಟ್ಟಿಗೆಗಳನ್ನು ತೆರೆದು ನೋಡಲಾಗಿ ೧ ಮಣ ಅಫೀಮು ದೊರೆಯಿತು. ಮೇಜಿಸ್ಟ್ರೇಟರ ಮುಂದೆ ಅವನನ್ನು ಕರೆದುಕೊಂಡು ವಿಚಾರಣೆ ಮಾಡಿಸಿದಾಗ ಅದು ನನ್ನ ಪೆಟ್ಟಿಗೆಯಲ್ಲವೆಂತಲೂ, ಒಬ್ಬ ಪಂಜಾಬಿಯೂ ಒಬ್ಬ ಮಾರ್ವಾಡಿಯೂ ತನ್ನ ಕಂಪಾರ್ಟ್‌ಮೆಂಟಿನಲ್ಲಿ ಪ್ರಯಾಣಮಾಡುತ್ತಿದ್ದರೆಂತಲೂ, ನಾನು ಬಂಡಿಯಿಂದಿಳಿದು ಬಾಡಿಗೆಬಂಡಿಯನ್ನು ಏರ್ಪಡಿಸಿಕೊಳ್ಳುತ್ತಿದ್ದಾಗ ಸುಂಕದವರು ಬಂದು ಈ ಸಾಮಾನುಗಳು ಯಾರವು? ಎಂದು ನನ್ನನ್ನು ಕೇಳಿದರೆಂತಲೂ, ನಾನು ಅವುಗಳ ಕಡೆ ನೋಡದೆನೆಯೇ ಅವೆಲ್ಲಾ ನನ್ನವು ಎಂದು ಹೇಳಿಬಿಟ್ಟೆನೆಂತಲೂ ಕಡೆಗೆ ಬಂದು ನಾನು ನೋಡುವಾಗ್ಗೆ ನನ್ನ ಸಾಮಾನುಗಳ ಜತೆಯಲ್ಲಿ ನನ್ನವಲ್ಲದ ಇನ್ನೆರಡು ಪೆಟ್ಟಿಗೆಗಳಿದ್ದುದನ್ನು ನಾನು ಕಂಡೆನೆಂತಲೂ, ಅವು ನನ್ನವಲ್ಲವೆಂತಲೂ, ಸುಂಕದವರು ಒಂದನ್ನು ತಾವೇ ಒಡೆದರೆಂತಲೂ, ಮತ್ತೊಂದರ ಬೀಗವು ನನ್ನಲ್ಲಿದ್ದ ಬೀಗದಕೈಯಿಂದಲೇ ತೆಗೆಯಲ್ಪಟ್ಟಿತೆಂತಲೂ, ಉತ್ತರದೇಶದಲ್ಲಿ ಸಂಚರಿಸುವಾಗ ರಿವಾಲ್ವರನ್ನು ಹತ್ತಿರ ಇಟ್ಟುಕೊಳ್ಳುವುದು ನನ್ನ ಪದ್ಧತಿಯೆಂತಲೂ ಹೇಳಿದನು. ಮೇಜಿಸ್ಟ್ರೇಟರು ೫೦೦೦ ರೂ. ಹೊಣೆಯ ಮೇಲೆ ಅವನನ್ನು ಬಿಡುವುದಕ್ಕೆ ಒಪ್ಪಿದರೂ ಯಾರೂ ಹೊಣೆಗಾರರು ಅವನಿಗೆ ದೊರೆಯಲಿಲ್ಲವಾದುದರಿಂದ ವಿಚಾರಣೆ ಮುಗಿಯುವವರೆಗೂ ಸೆರೆಮನೆಯಲ್ಲಿರಿಸಲು ಆಜ್ಞೆ ಮಾಡಿದರು.

ಯುದ್ಧ ವಿಶ್ರಾಂತ ದೇಶವಾರ್ತೆಗಳು.

ಸಂಧಿಸಭೆಯಲ್ಲಿ ದೇಶಗಳನ್ನು ಹಂಚಿಕೊಳ್ಳುವ ವಿಷಯವಾಗಿ ವಾದಾನುವಾದಗಳು ಜರುಗುತ್ತಿವೆ. ಕೊನೆಮುಟ್ಟಿದಾಗ ಪರ್ಯವಸಾನವನ್ನು ತಿಳಿಯುವುದೇ ಲೇಸು.

ಪೋರ್ಚುಗಲ್ ದೇಶದಲ್ಲಿ ರಾಜಪಕ್ಷ ಪ್ರಜಾಪಕ್ಷಗಳೆರಡೂ ಮುಚ್ಚರಿಸುತ್ತಲೇ ಇವೆ. ಒಂದೊಂದು ಭಾಗದಲ್ಲಿ ಅವರವರು ತಂತಮ್ಮ ಪಕ್ಷದ ಪ್ರತಿಷ್ಠೆಯನ್ನು ಸಾರಿಸಿಕೊಳ್ಳುತ್ತಿದ್ದಾರೆ.

ಪ್ರತಿದಿನವೂ ಆಂಗ್ಲದೇಶದಿಂದ ಬೆಲ್ಜಿಯಮ್ಮಿಗೆ ಆಹಾರ ಪದಾರ್ಥಗಳನ್ನು ವಿಮಾನಗಳ ಮೇಲೆ ಸಾಗಿಸುವುದಕ್ಕೆ ಏರ್ಪಾಟುಮಾಡಿದ್ದಾರೆ. ಇಂಗ್ಲೀಷ್ ಯುದ್ಧವಿಮಾನಗಳು ಈ ಕೆಲಸಕ್ಕೆ ನಿಯೋಜಿಸಲ್ಪಟ್ಟಿವೆ.

ಎಸ್ತೋನಿಯನ್ನರು ಪೆಟ್ರೋಗ್ರೇಡ್ ಪಟ್ಟಣಕ್ಕೆ ಬಂದು ವಶಪಡಿಸಿಕೊಳ್ಳುವುದರಲ್ಲಿದ್ದಾರೆ. ಅಲ್ಲಿದ್ದ ಬೊಲ್ಷೆವಿಕ್ಕರು ತಮ್ಮ ಮುಖ್ಯಶಿಬಿರವನ್ನು ಅಲ್ಲಿಂದ ನೋವ್‌ಗ್ರೇಡ್ ಪಟ್ಟಣಕ್ಕೆ ಬದಲಾಯಿಸಿಕೊಳ್ಳುತ್ತಿದ್ದಾರೆ.

ಅಮೇರಿಕಾದ ರಾಜ್ಯಾಂಗಸಭೆಯ ಕಾರ್ಯಕ್ಕಾಗಿ ಹೋಗಲು ಪ್ರೆ|| ವಿಲ್ಸನ್‌ರವರು ಇದೇ ತಿಂಗಳು ತಾ|| ೧೫ ಕ್ಕೆ ಪ್ಯಾರಿಸ್ಸಿನಿಂದ ಹೊರಟು ಕೆಲದಿನಗಳನಂತರ ಸಂಧಿಸಭೆಗಾಗಿ ಮರಳಿ ಪ್ಯಾರಿಸ್ಸಿಗೆ ಬರುವವರಾಗಿದ್ದಾರೆ.

ಈಗ ಎಲ್ಲ ದೇಶಗಳಿಗೂ ಅವಕ್ಕೆ ಅವಶ್ಯಕವಾದಷ್ಟು ಹತ್ತಿಯನ್ನು ಅಮೇರಿಕಾದಿಂದ ಕಳುಹಿಸಿಕೊಡತಕ್ಕದ್ದೆಂದು ಪ್ರೆ|| ವಿಲ್ಸನ್‌ರವರು ಅಪ್ಪಣೆ ಮಾಡಿದ್ದಾರೆ. ಶತ್ರುದೇಶಗಳಿಗೆ ಅದನ್ನು ಕಳುಹಿಸಿಕೊಡುವ ವಿಷಯವು ಪರಿಷ್ಕಾರವಾಗಿಲ್ಲ.

ತುರ್ಕಿಯ ಹಿಂದಣ ಸೇನಾಧಿಪತಿಗಳಾಗಿದ್ದ ಎನ್ವರ್‌ಪಾಷಾ, ಜಮಲ್‌ಪಾಷಾ ಇವರುಗಳು ಹೇಳದೆಕೇಳದೆ ತಮ್ಮ ಸೈನ್ಯಾಧಿಕಾರವನ್ನು ಬಿಟ್ಟು ಪರದೇಶಕ್ಕೆ ಓಡಿಹೋದಕಾರಣದಿಂದ ತುರ್ಕಿ ಪ್ರಭುತ್ವದವರು ಅವರುಗಳಿಗೆ ೧ ವರ್ಷದ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದ್ದಾರೆ.

ದಕ್ಷಿಣಾಫ್ರಿಕಾದ ಬೂವರ್ ಪ್ರಭುತ್ವದವರು ತಮಗೆ ಸಂಪೂರ್ಣಸ್ವತಂತ್ರಪ್ರಭುತ್ವ ದೊರೆಯಬೇಕೆಂಬ ವಾಂಛೆಯನ್ನು ತಿಳಿಯಪಡಿಸಿಕೊಳ್ಳುವುದಕ್ಕಾಗಿ ತಮ್ಮ ರಾಷ್ಟ್ರೀಯ ಭಾಗಗಳಿಂದ ಬೇರೆಬೇರೆ ಪ್ರತಿನಿಧಿಗಳನ್ನು ಆರಿಸಿ ಆಂಗ್ಲದೇಶಕ್ಕೆ ಕಳುಹಿಸಿಕೊಡಲು ನಿರ್ಧರಿಸಿದ್ದಾರೆ.

ಜರ್ಮನರು ಬೆಲ್ಜಿಯಮ್ಮಿನ ಈಪ್ರೆಸ್ ಪಟ್ಟಣವನ್ನು ಸಂಪೂರ್ಣವಾಗಿ ಹಾಳ್ಮಾಡಿದರಷ್ಟೆ. ಈಗ ಅದನ್ನು ಬೆಲ್ಜಿಯಮ್ಮಿನವರು ಜೀರ್ಣೋದ್ಧಾರ ಮಾಡದೆ, ಜರ್ಮನರ ಘಾತುಕತನಕ್ಕೆ ಸ್ಮಾರಕಚಿಹ್ನವಾಗಿರುವಂತೆ ಹಾಗೆಯೇ ಬಿಟ್ಟು, ಅದರ ಮಗ್ಗುಲಲ್ಲಿ ಬೇರೊಂದು ನೂತನ ಪಟ್ಟಣವನ್ನು ಕಟ್ಟಲು ಏರ್ಪಡಿಸಿದ್ದಾರೆ.

ಕಳೆದ ಯುದ್ಧದಲ್ಲಿ ಮಹಾ ಪರಾಕ್ರಮ ಪ್ರದರ್ಶನ ಮಾಡಿದ ಇಂಗ್ಲೀಷ್ ಜಲಸೈನ್ಯ ಭೂಸೈನ್ಯಾಧಿಪತಿಗಳಲ್ಲಿ ಪ್ರಮುಖರಾದ ಲಾರ್ಡ್ ಜಲ್ಲಿಕೋ, ಸರ್ ಡೇವಿಡ್‌ಬಿಯಾಟಿ, ಲಾರ್ಡ್ ಫ್ರೆಂಚಿ, ಸರ್ ಡಗ್ಲಸ್‌ಹೇಗ್, ಸರ್ ಎಡ್ಮಂಡ್‌ಅಲನ್ಬಿ—ಇವರುಗಳಿಗೆ ಲಂಡನ್ ಪುರಪಾಲಕಸಂಘದವರು ಆನಗರಸ್ವಾತಂತ್ರ ಪಟ್ಟವನ್ನೂ ಒಂದೊಂದು ಖಡ್ಗವನ್ನೂ ಬಹುಮಾನವಾಗಿ ಕೊಡಲು ಏರ್ಪಡಿಸಿರುವರು.

ಲಂಡನ್ ಪಟ್ಟಣದಲ್ಲಿ ಭೂಮಿಯ ಅಡಿಯೊಳಗೆ ಹಾಕಲ್ಪಟ್ಟಿರುವ ೮ ಲೋಹಮಾರ್ಗಗಳಲ್ಲಿ ಬಂಡಿಗಳ ತಿರುಗಾಟಕ್ಕೆ ಕೆಲಸಗಾರರ ಮುಷ್ಕರದಿಂದ ಅವಕಾಶವಿಲ್ಲದೆ ಹೋಗಿರುವಕಾರಣ ಟ್ರಾಂಬಂಡಿಗಳಲ್ಲೂ ಮೋಟಾರುಗಳಲ್ಲೂ ಪ್ರಯಾಣಿಕರು ತುಂಬಿಹೋಗಿರುವರು. ತಾ|| ೩ ನೆ ದಿನ ಸಾವಿರಾರುಮಂದಿ ಕೆಲಸಗಾರರು ಕಾಲಿನಲ್ಲಿ ನಡೆದುಕೊಂಡೇ ಹೋಗಬೇಕಾಯಿತು. ರಾತ್ರಿ ಹೊತ್ತು ಮಂಜು ವಿಪರೀತವಾಗಿ ಸುರಿದಿದ್ದುದರಿಂದ ಬೀದಿಯಲ್ಲಿ ಜಾರಾಟವು ಹೆಚ್ಚಾಗಿ ಕಾಲಿನಿಂದ ನಡೆದುಹೋಗುವುದು ಬಹು ಕಷ್ಟವಾಗಿದ್ದಿತು.

ಪ್ಯಾರಿಸ್ ಪಟ್ಟಣದಲ್ಲಿ ಸಂಧಿಮಹಾಸಭೆಯು ನಡೆಯುತ್ತಿದೆಯಷ್ಟೆ. ಸರ್ವದೇಶಸಾಂಘಿಕವಾದಿಗಳು ತಮ್ಮ ಮಹಾಸಭೆಯನ್ನು ಕಳೆದ ತಾ|| ೩ ರಿಂದ ಬೆರ್ನಿಪಟ್ಟಣದಲ್ಲಿ ನಡೆಯಿಸುತ್ತಿದ್ದಾರೆ. ಇದಕ್ಕೆ ಆಂಗ್ಲದೇಶದಿಂದ ೧೦ ಮಂದಿ, ಜರ್ಮನಿಯಿಂದ ೮, ಸ್ವೀಡನ್ನಿನಿಂದ ೭, ಬೊಹೆಮಿಯಾ ೬, ಆಸ್ಟ್ರಿಯಾ, ಡೆನ್ಮಾರ್ಕ್, ನಾರ್ವೆ, ದೇಶಗಳಿಂದ ಐದೈದುಮಂದಿಯಂತೆ. ಹಂಗೇರಿಯಿಂದ ೩, ಫ್ರಾನ್ಸ್, ಬಲ್ಗೇರಿಯಾ, ರಷ್ಯಾ, ಫಿನ್‌ಲಂಡು, ಜಾರ್ಜಿಯಾ ದೇಶಗಳಿಂದ ಇಬ್ಬಿಬ್ಬರಂತೆ, ಹಾಲಂಡು, ಗ್ರೀಸು, ಲೇಟ್ಲಂಡು, ಇವುಗಳಿಂದ ಒಬ್ಬೊಬ್ಬರಂತೆ, ಪ್ರತಿನಿಧಿಗಳು ಹೋಗಿ ಸೇರಿದ್ದಾರೆ.

ಸೀಮೆಯಲ್ಲಿ ಕೂಲಿಕಾರರ ಮುಷ್ಕರವು ಇನ್ನೂ ಶಾಂತವಾಗಿಲ್ಲ. ಕ್ರಮಾನುಸರಣೆಯಿಲ್ಲದೆ ದೇಶದಲ್ಲಿ ಅಶಾಂತಿಯನ್ನು ಹಬ್ಬಿಸುವ ಉದ್ದೇಶದಿಂದಲೇ ಹುಟ್ಟಿರುವ ಈ ಕಟ್ಟುಪಾಡನ್ನು ಅಡಗಿಸಲು ಸರ್ಕಾರದವರು ತೀರವಾಗಿ ಶ್ರದ್ಧೆವಹಿಸಿದ್ದಾರೆ. ಈ ಗುಂಪಿನವರಿಗೆ ಅಧ್ಯಕ್ಷರಾಗಿದ್ದ ಷಿನ್ವೆಲ್ ಗಲ್ಲಾಘೇರ್, ಕರ್ಕ್‌ವುಡ್ ಎಂಬ ಮೂವರನ್ನು ಗ್ಲಾಸ್ಗೊ ಪಟ್ಟಣದ ಹತ್ತಿರ ಅಧಿಕಾರಿಗಳು ಸೆರೆಹಿಡಿದರು. ಸ್ಕಾಟಿಷ್ ವರ್ತಕಸಂಘಸಭೆಯವರು ಅವರನ್ನು ಬಿಟ್ಟುಕೊಡಬೇಕೆಂದು ನಿರ್ಧಾರಮಾಡಿ ಸರ್ಕಾರದವರನ್ನು ಕೇಳಿಕೊಂಡಿರುವರು. ಈಚೆಗೆ ಇನ್ನು ಮೂವರು ಪ್ರಮುಖರನ್ನೂ ಸೆರೆಹಿಡಿದರು. ಮುಷ್ಕರ ಹಿಡಿದಿರುವ ಪಟ್ಟಣಗಳಲ್ಲಿ ಸೈನಿಕರ ಕಾವಲು ಇಡಲ್ಪಟ್ಟಿದೆ. ಕೆಲಕಡೆ ಕಟ್ಟಿನವರು ಕೆಲಸಕ್ಕೆ ಹೋಗಿ ಸೇರಿಕೊಂಡಿದ್ದಾರೆ.

ಪ್ಯಾರಿಸ್ ಪಟ್ಟಣದ ಕೋಟೆಯು ವಿಸ್ತಾರವಾಗಿದ್ದಿತು. ಅದನ್ನೆಲ್ಲಾ ಒಡೆದುಬಿಡುವುದಕ್ಕೆ ಫ್ರೆಂಚ್ ಸೈನ್ಯಾಧಿಕಾರಿಗಳು ಅನುಮತಿಸಿರುವರಂತೆ. ಆ ಕೋಟೆಯು ಆವರಣದಲ್ಲಿದ್ದ ೪೭೮ ಎಕರೆ ಭೂಮಿಯನ್ನು ಫ್ರೆಂಚ್ ಸರ್ಕಾರದವರು ಮಾರಿಬಿಡುವುದಕ್ಕೆ ನಿರ್ಧರಿಸಿದ್ದಾರೆ. ಇದರಿಂದ ಅಪರಿಮಿತವಾದ ಧನವು ಕೋಟಿಗಟ್ಟಲೆ ದೊರೆಯುವುದೆಂಬುದಕ್ಕೆ ಸಂಶಯವಿಲ್ಲ. ಈ ಭೂಮಿಯಲ್ಲಿ $\frac{1}{3}$ ಭಾಗದಷ್ಟನ್ನು ಉಪವನವನ್ನಾಗಿ ಮಾಡುವುದಕ್ಕೂ, ಅದರ ಸುತ್ತಲೂ ಯಂತ್ರಾಲಯ ಮೊದಲಾದುವುಗಳ ಕೆಲಸಗಾರರಿಗೆ ಮನೆಕಟ್ಟಿಸಿಕೊಳ್ಳುವುದಕ್ಕೂ ಉಳಿದುದನ್ನು ವ್ಯಾಯಾಮಕ್ರೀಡಾದಿಗಳಿಗೂ ವಿನಿಯೋಗಿಸುವರಂತೆ. ಈ ಸುದ್ದಿಯನ್ನು ಕೇಳಲಾಗಿ ಒಂದು ತೆರದ ಸಂತೋಷ ಸಮಾಧಾನಗಳು ಹುಟ್ಟುತ್ತವೆ. ಏನೆಂದರೆ—ಅಂಥ ಮುಖ್ಯಪಟ್ಟಣದ ರಕ್ಷಣಕ್ಕಾಗಿ ಏರ್ಪಟ್ಟಿದ್ದ ಕೋಟೆಯನ್ನು ಒಡೆಸಲು ಸೈನ್ಯಾಧಿಕಾರಿಗಳು ಒಪ್ಪಬೇಕಾಗಿದ್ದರೆ ಇನ್ನುಮುಂದೆ ಶತ್ರುಭೀತಿ ಯುದ್ಧಭೀತಿಗಳು ಇಲ್ಲದಂತೆಯೇ ಆಗುವುದೆಂಬ ನಂಬುಗೆಯೂ ಅವರಿಗೆ ಹುಟ್ಟಿರಬೇಕು. ಇದು ಜಗತ್ತಿಗೆಲ್ಲಾ ಸಂತೋಷವನ್ನುಂಟುಮಾಡತಕ್ಕ ವಿಷಯ. ಸಂಧಿಸಭೆಯಲ್ಲಿ ಇಂಥ ಪರಿಣಾಮವು ಸಿದ್ಧವಾಗುವುದೇ ಖಂಡಿತವೆಂಬುದಕ್ಕೆ ಪ್ಯಾರಿಸ್‌ಕೋಟೆಯ ಸಂಬಂಧದ ಈ ಸುದ್ದಿಯೇ ಶುಭಸೂಚನೆಯಾಗಿದೆ. ಇನ್ನುಮೇಲೆ ನ್ಯಾಯಸ್ವಾತಂತ್ರ್ಯಗಳ ಹೊರತು ಸೇನಾಬಲ ಆಯುಧಬಲಗಳಿಗೆ ಗೌರವವಿಲ್ಲವೆಂಬುದು ಸಿದ್ಧವಾಗುವುದು.

ಸ್ವೀಕಾರ.

ಚಿಕ್ಕಮಗಳೂರಲ್ಲಿ ಪ್ರಾಸಿಕ್ಯೂಟಿಂಗ್ ಪೋಲೀಸ್ ಇನ್ಸ್‌ಪೆಕ್ಟರಾಗಿರುವ ಮ|| ಎಂ. ಪಿ. ಭೋಗಯ್ಯ, ಬಿ.ಎ.ಬಿ.ಎಲ್. ರವರ ಪುತ್ರಿಯು ಮೈಸೂರಿನ ಮ|| ಚಿಕ್ಕಚಂದ್ರಪ್ಪನವರ ಪುತ್ರನಿಗೆ ಕೊಡಲ್ಪಟ್ಟು ಕಳೆದ ಸೋಮವಾರ ಮೈಸೂರಿನಲ್ಲಿ ಬಹಳ ವಿಜೃಂಭಣೆಯಿಂತೆ ವಿವಾಹಮಹೋತ್ಸವವು ನಡಿಸಲ್ಪಟ್ಟಿತು. ಈ ಮಹೋತ್ಸವದಲ್ಲಿ ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ವರನ ಕಡೆಯಿಂದ ೫ ರೂ. ಗಳೂ, ಕನ್ಯೆಯ ಕಡೆಯಿಂದ ೩ ರೂ. ಗಳೂ ಕೊಡಲ್ಪಟ್ಟಿವೆ. ಅಲ್ಲದೆ ಕೈ. ವೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ೧ ರೂ. ಕೊಡಲ್ಪಟ್ಟಿತು. [ಮೇಲ್ಕಂಡ ಮೊಬಲಗನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಪ. ಪ್ರ.]

ಪತ್ರವ್ಯವಹಾರ.

ಶಿವಮೊಗ್ಗಾ ಡಿಸ್ಟ್ರಿಕ್ಟು ಹೊನ್ನಾಳಿ ತಾಲ್ಲೂಕು ಸಾಸ್ವೆಹಳ್ಳಿ ಮಾಗಣಿ ರಾಮಪುರದಲ್ಲಿ ಶ್ರೀ ಹಾಲಸ್ವಾಮಿಗಳವರ ರಥೋತ್ಸವವು ಮಾಮೂಲು ಮೇರೆ ಇದೇ ಸಂವತ್ಸರದ ಮಾಘಬಹುಳ ೨ ಬಿದಿಗೆ (ತಾ|| 16-1-19) ಭಾನುವಾರ ರಾತ್ರಿ ನಡೆಯುತ್ತ. ಈ ಜಾತ್ರೆಗೆ ಸುಮಾರು ೫೦-೬೦ ಸಾವಿರ ಜನಗಳೂ, ಸಾವಿರಾರು ತರಹೇವಾರಿ ಷಾಪುಗಳೂ, ಅಂಗಡಿಗಳೂ, ನಾಟಕಗಳೂ ವಿನೋದವಾದ ಆಟಗಳೂ ಸೇರುತ್ತವೆ, ಈ ಪ್ರಾಂತ್ಯದಲ್ಲಿ ಯಾವ ವಿಧವಾದ ರೋಗಾದಿಗಳೂ ಈವರೆಗೂ ಇರುವುದಿಲ್ಲ. ನದೀನೀರಿನ ಸೌಕರ್ಯ ಚೆನ್ನಾಗಿದೆ.

ಎಸ್. ಪ್ರಭುವಯ್ಯ.

ಮ|| ರಡ್ಡಿಯವರು ಮತ್ತೂ ಸಂಪದಭ್ಯುದಯ.

ಭಾಗ III.

ಸಂಪದಭ್ಯುದಯದ ದೇಶಾಭಿಮಾನಿ ನಾಮಕ ಲೇಖಕರಿಗೆ ಮ|| ರಡ್ಡಿಯವರ ಮೇಲೆ ದೋಷಾರೋಪಣೆ ಮಾಡಿ ದೂರುವುದಕ್ಕೆ ಇನ್ನೂ ೨-೩ ವಿಷಯಗಳು ಸಿಕ್ಕಿರುತ್ತವೆ. ಅವುಗಳಲ್ಲಿ ಮ|| ಪಾಲ್‌ಚಿನ್ನಪ್ಪನವರನ್ನು ಇವರು ಟ್ರೇನಿಂಗ್‌ಕಾಲೇಜ್ ಪ್ರಿನ್ಸಿಪಾಲ್ ಕೆಲಸಕ್ಕೆ ನಿಯಮಿಸಿದ ವಿಷಯವು ಒಂದಾಗಿರುತ್ತದೆ. ಪಾಲ್‌ಚಿನ್ನಪ್ಪನವರಿಗೆ ಈ ಕೆಲಸವನ್ನು ಕೊಟ್ಟದ್ದು ಶುದ್ಧ ತಪ್ಪೆಂದೂ, ಇದು ವಿಚಾರಣೀಯವಾದದ್ದೆಂದೂ, ತಮಗೆ ಬೇಕಾದವರನ್ನು ಮೇಲಕ್ಕೆ ತರುವುದಕ್ಕಾಗಿ ಯೋಗ್ಯರನ್ನೆಲ್ಲಾ ಕೆಳಕ್ಕೆ ನೂಕಿ ಮ|| ರಡ್ಡಿಯವರು ಅನ್ಯಾಯವಮಾಡಿರುತ್ತಾರೆಂದೂ ಮೊದಲಾಗಿ ಕೂಗಿಕೊಂಡು, ರಡ್ಡಿಯವರ ಮೇಲಿನ ಆಗ್ರಹವನ್ನು ತೀರಿಸಿಕೊಳ್ಳುವುದಕ್ಕಾಗಿ ಸಂಪದಭ್ಯುದಯದ ಮೂರು ಕಾಲಮ್ಮುಗಳ ತುಂಬಾ ಇವರು ಅಸೂಯಾಗ್ನಿಯನ್ನು ಕಕ್ಕಿದ್ದಾರೆ. ಯೋಗ್ಯತೆಯನ್ನು ನೋಡದೆ ಸ್ವಜನರನ್ನು ಮುಂದಕ್ಕೆ ತಂದು ಅನ್ಯಾಯಮಾಡಿದವರು ಮ|| ರಡ್ಡಿಗಳೆಂದಿಗೂ ಅಲ್ಲ. ಇದುವರೆಗೆ ನಡೆದುಹೋಗಿರುವ ಅನ್ಯಾಯಾಧರ್ಮಗಳನ್ನು ಮ|| ರಡ್ಡಿಯವರು ತಿದ್ದಿ ಧರ್ಮಪ್ರತಿಷ್ಠಾಪನೆ ಮಾಡುತ್ತಿರುವುದಕ್ಕಾಗಿ ಅವರಿಗೆ ಗುಣಜ್ಞರೆಲ್ಲರೂ ವಂದಿಸಬೇಕಾಗಿದೆ. ಮ|| ಪಾಲ್‌ಚಿನ್ನಪ್ಪನವರಷ್ಟು ವಿದ್ಯಾಧಿಕತೆಯುಳ್ಳವರು ಆ ಶಾಖೆಯಲ್ಲೀ ಸದ್ಯಃ ವಿರಳರೆಂದು ಹೇಳಿದರೆ ತಪ್ಪಾಗಲಾರದು. ಅವರು ಎಂ. ಎ. ಪ್ಯಾಸ್ ಮಾಡಿರುವುದು ಮಾತ್ರವೇ ಅಲ್ಲದೆ, ಎಲ್. ಟಿ. ಡಿಗ್ರಿಯನ್ನು ಪಡೆದು ಪಿ. ಹೆಚ್. ಡಿ. ಪ್ರಶಸ್ತಿಯನ್ನು ಹೊಂದಿ ಡಾಕ್ಟರೆನಿಸಿಕೊಂಡಿರುವುದರ ಜತೆಗೆ ಪಶ್ಚಿಮ ದೇಶಗಳಲ್ಲಿ ಸಂಚರಿಸಿ ತಮ್ಮ ಅಸಾಧಾರಣ ಪಾಂಡಿತ್ಯವನ್ನು ಪಂಡಿತಸಹವಾಸ ಸಂಭಾಷಣಾದಿಗಳಿಂದ ಪರಿಪಕ್ವಗೊಳಿಸಿಕೊಂಡು ಬಂದಿದ್ದಾರೆ. ಇಷ್ಟು ಘನತರವಾದ ಯೋಗ್ಯತೆಯಿಂದ ಕೂಡಿದವರಾದರೂ ಮ|| ಚಿನ್ನಪ್ಪನವರು ಬ್ರಾಹ್ಮಣರೆಂದು ಹೇಳಿಸಿಕೊಳ್ಳದೆ ಕ್ರೈಸ್ತರೆಂದು ಕರೆಸಿಕೊಳ್ಳುತ್ತಿರುವುದರಿಂದ ಯೋಗ್ಯತಾನುರೂಪವಾದ ಪದವಿಗೇರದೆ ಕೊಳೆಯುತ್ತ ಬಿದ್ದಿದ್ದರು. ನಿಜವಾದ ಯೋಗ್ಯತೆಗೆ ತಕ್ಕ ಬೆಲೆಯು ದೊರೆಯುವ ಕಾಲವು ಈಗ ಬಂದುದರಿಂದ ನಮ್ಮ ಸರ್ಕಾರದವರು ಅವರನ್ನು ಪ್ರೋತ್ಸಾಹಿಸಿದರು. ವಿಚಾರಮಾಡಿನೋಡಿದರೆ ಮ|| ಪಾಲ್‌ಚಿನ್ನಪ್ಪನವರು ಕ್ರಮೇಣ ಇನ್|| ಜನರಲ್ ಪದವಿಗೆ ತರಲ್ಪಡುವುದಕ್ಕೂ ಅರ್ಹರಾಗಿದ್ದಾರೆ. ಅವರಿಗೆ ಈಗ ತಕ್ಕ ಸ್ಥಾನವು ದೊರೆತದ್ದರಲ್ಲಿ ಅಸೂಯಾಳುಗಳಿಗೆ ಮಾತ್ರ ಹೊಟ್ಟೆಯುರಿ ಇದ್ದೀತೇ ಹೊರತು, ದೇಶೀಯರಲ್ಲಿ ಯೋಗ್ಯತಾಪಕ್ಷಪಾತಿಗಳಾದ ಯಾವೊಬ್ಬ ಬ್ರಾಹ್ಮಣನೇ ಆಗಲೀ ಇತರರೇ ಆಗಲೀ ಅಸಮಾಧಾನವನ್ನು ಎಂದಿಗೂ ಪಡರು. ಈ ಏರ್ಪಾಡು ಶ್ರೀಮನ್ಮಹಾರಾಜಾ ಸರ್ಕಾರದವರ ನಿಷ್ಪಕ್ಷಪಾತಪ್ರವರ್ತನ ಯೋಗ್ಯತಾಪ್ರೋತ್ಸಾಹಗಳಿಗೆ ನಿದರ್ಶಕವಾಗಿದೆಯೇ ಹೊರತು ಮತ್ತೇನೂ ಅಲ್ಲ. ಇದರಲ್ಲಿ ಮ|| ರಡ್ಡಿಗಳು ನಿಮಿತ್ತಮಾತ್ರಕ್ಕೆ ಕಾರಣರಾಗಿದ್ದರೂ ಗೌರ್ನಮೆಂಟಿನವರೇ ಇದರ ಬಾಧ್ಯತೆಯನ್ನು ಹೊತ್ತವರು. ಹೀಗಿರುವಾಗ ಸಂಪದಭ್ಯುದಯದ ಲೇಖಕರು ಈ ಏರ್ಪಾಟನ್ನು ಅನ್ಯಾಯವೂ ಅಧರ್ಮವೂ ಆದದ್ದೆಂದು ಅಪರಾಧ ಹೊರಿಸುವುದಾದರೆ, ಅದನ್ನು ಶ್ರೀಮನ್ಮಹಾರಾಜರ ಮತ್ತು ಅವರ ಗೌರ್ನಮೆಂಟಿನ ಮೇಲೆ ಹೊರಿಸಿದಂತೆಯೇ ಆಗುವದು. ಈಗಿನ ಏರ್ಪಾಟನ್ನು ಸಾಧುವೋ ಅಸಾಧುವೋ ಎಂದು ವಿಚಾರಿಸುವುದಕ್ಕಿಂತ ಮುಂಚಿತವಾಗಿ ಇದುವರೆಗೆ ಮ|| ಪಾಲ್‌ಚಿನ್ನಪ್ಪನವರ ವಿಷಯದಲ್ಲಿ ನಡೆದಿರುವ ಅನ್ಯಾಯಕ್ಕೆ ಕಾರಣಭೂತರಾದವರನ್ನು ವಿಚಾರಿಸಿ ಮೊದಲು ದಂಡಿಸಬೇಕಾಗಿರುವುದು. ಮ|| ಪಾಲ್‌ಚಿನ್ನಪ್ಪನವರಿಗೂ ಇನ್ಸ್‌ಪೆಕ್ಟರುಗಳಿಗೂ ಕಾಂಪಿಟಿಟೀವ್ ಪರೀಕ್ಷೆಯನ್ನೇರ್ಪಡಿಸಿ ಬಳಿಕ ಕೆಲಸ ಕೊಡಬೇಕೆಂದು ಈ ಲೇಖಕರು ಹೇಳಿರುತ್ತಾರೆ. ಅದಕ್ಕೆ ಮ|| ಚಿನ್ನಪ್ಪನವರೇನೂ ಹಿಂಜರಿಯಲಾರರು. ಆದರೆ ಇಂಥ ಪರೀಕ್ಷೆಯನ್ನು ಇದುವರೆಗೆ ಮಹಾಮಹಾಧಿಕಾರಗಳನ್ನು ಹತ್ತಿರುವ ಯಾರ ವಿಷಯದಲ್ಲಿ ಮಾಡಿರುವರೋ ಗೊತ್ತಾಗಲಿಲ್ಲ. ಅಂಥ ಪರೀಕ್ಷೆಯನ್ನೇರ್ಪಡಿಸಿದ್ದರೆ ಸರ್ ವಿಶ್ವೇಶ್ವರಯ್ಯನವರೂ ಕೂಡ ದಿವಾನಗಿರಿಗೆ ಬರುವುದು ಸಾಧ್ಯವಾಗಿತ್ತೆ? ತಮ್ಮವರು ಎಂಥಮೂಢರಾಗಿದ್ದರೂ ಅವರು ಷಡ್ಗುಣೈಶ್ವರ್ಯಸಂಪನ್ನರಾದ ಸರ್ವಜ್ಞರು! ಅವರಿಗೆ ಎದುರಿಲ್ಲ. ಇತರರು ಎಷ್ಟು ಸಾಮರ್ಥ್ಯವಂತರಾಗಿದ್ದರೂ ಅವರುಗಳು ಸರ್ಕಾರದ ಉದ್ಯೋಗಸ್ಥಾನಗಳಲ್ಲಿ ಬಹಳ ವಿರಳರಾಗಿದ್ದು, ಎಲ್ಲೋ ಒಬ್ಬೊಬ್ಬರು ಮೇಲಕ್ಕೆ ಬರುವಂತಿದ್ದರೂ ಅವರಿಗೆ ಇಷ್ಟೊಂದು ತೊಡಕುಗಳು! "ಕಲಾವನ ತರಿಷ್ಯಂತಿನಿಂದಕಾಸ್ತೇನರಾಧಮಾಃ" ಎಂಬ ಸೂಕ್ತವಾಕ್ಯದಂತೆ ಕಲಿಯುಗದ ಮಹತ್ವವನ್ನು ಪ್ರಕಾಶಗೊಳಿಸತಕ್ಕ ಮಹಾತ್ಮರುಗಳು ಇವರೇ ಅಲ್ಲವೆ?

ಇನ್ನು ಸ್ಕೂಲ್ ಟೀಚರುಗಳಿಗೆ ಮ|| ರಡ್ಡಿಯವರು ಮಾಡಿರುವ ಒಂದು ಸರ್ಕ್ಯುಲರ್ ವಿಷಯವನ್ನು ವಿಚಾರಮಾಡೋಣ. ಸ್ಕೂಲ್ ಉಪಾಧ್ಯಾಯರುಗಳು ಪ್ರೈವೇಟ್ ಟೀಚಿಂಗ್ ಮಾಡಕೂಡದೆಂದು ಇನ್|| ಜನರಲ್‌ರವರು ಒಂದು ಖಂಡಿತವಾದ ಹುಕುಮನ್ನು ಮಾಡಿದ್ದಾರೆ. ಇದನ್ನು ಆಧಾರಮಾಡಿಕೊಂಡು ಸಂಪದಭ್ಯುದಯದ ಲೇಖಕರು ಇದು ಬ್ರಾಹ್ಮಣರನ್ನು ಹೊಟ್ಟೆಗಿಲ್ಲದೆ ಸಾಯಿಸಬೇಕೆಂಬ ಹೊಟ್ಟೆಕಿಚ್ಚಿನಿಂದ ಮಾಡಿದ ಹುಕುಮೆಂದು ಮ|| ರಡ್ಡಿಯವರ ಮೇಲೆ ದೋಷಾರೋಪಣೆ ಮಾಡಿದ್ದಾರೆ. ಯಾವ ದುಷ್ಟವ್ಯಾಪಾರವನ್ನು ತಾವು ನಡೆಸುವುದಕ್ಕೆ ಉದ್ದೇಶಿಸಿರುವರೋ ಅಂಥ ಕೆಲಸವನ್ನು ಮೊದಲೇ ತಮ್ಮ ವೈರಿಗಳು ಮಾಡುತ್ತಿರುವವರೆಂದು ಸುಮ್ಮಸುಮ್ಮನೆ ಅವರಮೇಲೆ ದೋಷವನ್ನು ಆರೋಪಿಸಿ ಬಿಟ್ಟು, ಬಳಿಕ ತಮ್ಮ ಸಂಕಲ್ಪವನ್ನು ನಡೆಸುವುದು ಜರ್ಮನ್ ನಿಶಾಚರರ ಕೃತ್ಯವಾಗಿತ್ತೆಂಬುದನ್ನು ಕಳೆದ ಯುದ್ಧದಲ್ಲಿ ಎಲ್ಲರೂ ಬಲ್ಲರಷ್ಟೆ. ಈ ಲೇಖಕರು ಅಂಥ ಜರ್ಮನ್ ಪ್ರವರ್ತನೆಯನ್ನೇ ಇಲ್ಲಿ ತೋರಿಸಿದ್ದಾರೆ. ಪರರೆಲ್ಲಾ ಹಾಳಾಗಲಿ ನಾವು ಮಾತ್ರ ಬದುಕಬೇಕೆನ್ನುವದು ಈ ಲೇಖಕರ ಜನ್ಮಾಂತರ ಸಿದ್ಧವಿದ್ಯೆಯು. ಅವನ್ನು ಇತರರ ಮೇಲೆ ಆರೋಪಿಸುತ್ತಿದ್ದಾರೆ. ಸ್ಕೂಲ್ಮಾಸ್ಟರ ಕೆಲಸದಲ್ಲಿರುವವರೆಲ್ಲಾ ಬ್ರಾಹ್ಮಣರೇನೆಯೊ? ಹಾಗಿದ್ದ ಪಕ್ಷದಲ್ಲಿ ಬ್ರಹ್ಮದ್ವೇಷದಿಂದ ಸರ್ಕ್ಯುಲರನ್ನು ಕೊಟ್ಟರೆಂದು ಹೇಳಿದ್ದರೆ, ಸುಳ್ಳಾದರೂ ನಿಜದ ಬಾಯಿ ಬಡಿಯುವಂತೆ ಇರುತ್ತಿತ್ತು. ಅದೂ ಇಲ್ಲವೆ, ಈಗಿನ ಅನೇಕ ಸ್ಕೂಲ್ಮಾಸ್ಟರುಗಳ ಸಂಪ್ರದಾಯವನ್ನು ಅರಿತವರು ಈ ಸರ್ಕ್ಯುಲರನ್ನು ಕಂಡು ಅಧಿಕವಾಗಿ ಸಂತೋಷಿಸುತ್ತಿದ್ದಾರೆ. ಟೀಚರುಗಳು ಸ್ಕೂಲಿನಲ್ಲಿ ಶ್ರಮವನ್ನೇ ಪಡುವುದಿಲ್ಲ. ಪುಸ್ತಕಗಳನ್ನು ಬಿಚ್ಚಿ ಪಾಠಗಳನ್ನು ಕ್ಲಾಸಿನಲ್ಲಿ ದಡಬಡನೆ ಪಾರಾಯಣ ಮಾಡಿಬಿಡುವುದು, ಇಲ್ಲವೆ ಈ ಪುಟದಿಂದ ಆ ಪುಟದವರಿವಿಗೆ ಗಟ್ಟಮಾಡಿಕೊಂಡು ಬನ್ನಿರೆಂದು ಹೇಳಿಬಿಡುವುದು, ಇಷ್ಟುಮಾತ್ರವೇ ಕೆಲವರುಗಳ ಕೆಲಸವಾಗಿರುತ್ತದೆ. ಪ್ರತಿಹುಡುಗನೂ ಪ್ರೈವೇಟ್ ಟೀಚಿಂಗಿಗೆ ಏರ್ಪಡಿಸಿಕೊಳ್ಳದಿದ್ದರೆ ಸಾಗುವಹಾಗೆಯೇ ಇರುವುದಿಲ್ಲ. ಸ್ಕೂಲುಗಳಲ್ಲಿ ಟೀಚರುಗಳು ಶ್ರಮಪಟ್ಟು ಬೋಧಿಸುತ್ತಿದ್ದರೆ ಪ್ರೈವೇಟ್ ಟೀಚಿಂಗಿನ ಅವಶ್ಯಕತೆಯೇ ಕಡಿಮೆಯಾಗುತ್ತಿತ್ತು. ಇದರಿಂದ ಹುಡುಗರ ಪೋಷಕರಿಗೆ ಮಕ್ಕಳ ವಿದ್ಯಾಭ್ಯಾಸದ ಭಾರವು ದುಸ್ಸಹವಾಗುತ್ತಾ ಇದೆ. ಕಾಟಾಚಾರಕ್ಕೆ ಸ್ಕೂಲಿನಲ್ಲಿ ಪಾಠ ಹೇಳಿ ಮುಗಿಸುವ ಮಾಸ್ಟರುಗಳು ರಾತ್ರಿಹೊತ್ತು ತಮ್ಮ ಕ್ಲಾಸ್ ಹುಡುಗರಿಗೇ ಪ್ರೈವೇಟ್ ಟೀಚಿಂಗ್ ಮಾಡಿಸಲು ಏರ್ಪಡಿಸಿಕೊಳ್ಳುತ್ತಿದ್ದರು. ಇಲ್ಲವೆ ಬೇರೆ ಹುಡುಗರಿಗೆ ಟೀಚಿಂಗ್ ಮಾಡಿಸುತ್ತಿದ್ದರು. ಅಂತೂ ಸ್ಕೂಲುಗಳ ಪಾಠವು ಹುಡುಗರಿಗೆ ಅಪ್ರಯೋಜಕವೇ ಆಗಿ, ಹೊರಗಣ ಟೀಚಿಂಗನ್ನೇ ಅವರು ನಂಬಿಕೊಂಡಿರಬೇಕಾಗುತ್ತಿತ್ತು. ಈ ದೂರು ಬಹಳ ಪ್ರಬಲವಾಗಿದ್ದದ್ದರಿಂದ ಅದನ್ನು ತಪ್ಪಿಸುವದಕ್ಕಾಗಿ ವಿದ್ಯಾ ಇಲಾಖೆಯವರು ಈ ಸರ್ಕ್ಯುಲನ್ನು ಕೊಟ್ಟಿರಬೇಕೆಂದು ಕಾಣುತ್ತದೆ. ಇದರಿಂದ ಎಲ್ಲಾ ಮಾಸ್ಟರಿಗೂ ಒಂದೇ ವಿಧವಾದ ನಿರ್ಬಂಧವು ಮಾಡಲ್ಪಟ್ಟಿದೆಯೇ ಹೊರತು ಬ್ರಾಹ್ಮಣರಿಗೆ ಮಾತ್ರ ಮಾಡಲ್ಪಟ್ಟಿರುವುದೆಂದು ಹೇಳುವುದು ಕೇವಲ ಧೂರ್ತತನದ ಲಜ್ಜಾಹೀನವಚನವಲ್ಲದೆ ಸಂಪನ್ನರ ಮಾತಾಗಿರುವುದಿಲ್ಲ. ಇಂಥ ಲೇಖಕರು ತಮಗೆ ತಾವು ದೇಶಾಭಿಮಾನಿಯೆಂಬ ಹೆಸರನ್ನಿಟ್ಟುಕೊಂಡರೂ ಗುಣಗ್ರಾಹಿಗಳು ಇವರನ್ನು ದುರಭಿಮಾನಿಯೆಂದು ಕರೆಯದೆ ಬಿಡರು

ಶೃಂಗೇರಿಸ್ಕೂಲಿಗೆ ಪಂಚಮರನ್ನು ಸೇರಿಸಿಕೊಳ್ಳಬೇಕೆಂದು ಮ|| ರಡ್ಡಿಯವರು ಆರ್ಡರ್ ಮಾಡಿ ಆ ಸ್ಕೂಲನ್ನು ಹಾಳ್ಮಾಡಿದರೆಂದು ಸಂಪದಭ್ಯುದಯದ ಈ ದುರಭಿಮಾನಿಗಳು ದೋಷಾರೋಪಣೆ ಮಾಡಿರುವರು. ಇದರ ನಿಜತ್ವದ ಹುರುಳನ್ನು ವಿಚಾರಮಾಡೋಣ. ಶೃಂಗೇರಿಸ್ಕೂಲಿಗೆ ಅಲ್ಲಿನ ಹವ್ಯಕರನ್ನು ಸೇರಿಸಬೇಕೆಂಬ ವಿಷಯವು ಈಗಿನ ಮಾತಲ್ಲ. ಅದು ಶ್ಯಾಮರಾಯರ ಕಾಲದಲ್ಲೇ ಹುಟ್ಟಿದ್ದು. ಅದರ ವಿಷಯದಲ್ಲಿ ಅವರ ಕಾಲದಿಂದಲೇ ಗೌರ್ನಮೆಂಟಿನಲ್ಲಿ ನಡವಳಿಕೆ ನಡೆದಿತ್ತು. ಏನುಮಾಡಬೇಕೆಂಬುದನ್ನು ಗೌರ್ನಮೆಂಟಿನವರು ಪರ್ಯಾಲೋಚಿಸಿ ಕಡೆಗೆ ಆರ್ಡರ್ ಮಾಡಿರುತ್ತಾರೆ. ಮ|| ಶ್ಯಾಮರಾಯರೇ ರೆಡ್ಡಿಯವರ ಸ್ಥಾನದಲ್ಲಿದ್ದರೂ ಗೌರ್ನಮೆಂಟಿನ ಆರ್ಡರು ಹಾಗೇ ಆಗುತ್ತಿತ್ತು. ಗೌರ್ನಮೆಂಟಿನ ಕೃತ್ಯವನ್ನು ಪ್ರತಿಭಟಿಸುವುದಕ್ಕಾಗಿ ಈ ದುರಭಿಮಾನಿಗಳಂಥವರ ಸಜಾತೀಯರಿಂದಲೇ ಆ ಸ್ಕೂಲಿನ ಸಂಬಂಧವಾಗಿ ಗದ್ದಲವು ಎದ್ದಿರಬೇಕೇ ಹೊರತು ಮತ್ತೇನೂ ಅಲ್ಲ. "ರಾಜ್ಯಭಾರ ಮಾಡತಕ್ಕವರು ಜಾತಿ ಕುಲ ಗೋತ್ರ ಮೊದಲಾದುವುಗಳನ್ನು ನೋಡದೆ ಗುಣೈಕಪಕ್ಷಪಾತಿಗಳಾಗಿ ಸರ್ಕಾರದ ಕೆಲಸವನ್ನು ಯಾರು ಚೆನ್ನಾಗಿ ಮಾಡಬಲ್ಲರೋ ಅವರನ್ನು ಉದ್ಯೋಗಗಳಿಗೆ ನಿಯಮಿಸಬೇಕು." "ಶ್ರೀಮನ್ಮಹಾರಾಜರವರು ಜಾತಿ ಕುಲ ಭೇದ ಪಕ್ಷಪಾತಗಳನ್ನು ಮಾಡುವವರಾಗಿಲ್ಲ" "ಅನಾದಿಯಾಗಿ ಪಂಚಮರ ಯೋಗಕ್ಷೇಮವನ್ನು ನೋಡತಕ್ಕವರು ಬ್ರಾಹ್ಮಣರು .. ..ರಾಮಾನುಜಾಚಾರ್ಯರೇ ಮೊದಲಾದವರು ಪಂಚಮರ ಉದ್ಧರಣಕ್ಕೆ ಮಾಡಿದ ಮೆಹನತ್ತಿನಲ್ಲಿ ಸಾವಿರದಲ್ಲಿ ಒಂದು ಪಾಲನ್ನಾದರೂ ಇತರರು ಮಾಡಿದಾರೆಯೆ? ....ಕನಿಷ್ಠವರ್ಣದವರೆಲ್ಲಾ ಉತ್ತಮವರ್ಣದವರಾಗುವಂತೆ ಮಾಡುವುದರಲ್ಲಿ ನನಗೆ ಪ್ರಾಣವೂ ಶಕ್ತಿಯೂ ಇರುವವರೆಗೂ ನನ್ನ ಕೈಲಾದಷ್ಟು ಕೆಲಸವನ್ನು ಮಾಡುವುದಕ್ಕೆ ಸಿದ್ಧನಾಗಿದ್ದೇನೆಂದು ಮ|| ವಿ. ಎನ್. ನರಸಿಂಹಯ್ಯಂಗಾರರು ಅಪ್ಪಣೆ ಕೊಡಿಸಿದ್ದಾರೆ............ಹೀಗಿದ್ದಾಗ್ಯೂ ಏನೂ ಕೆಲಸಮಾಡದೆ ಇರತಕ್ಕ ಕೆಲವು ಜನಗಳು ಬ್ರಾಹ್ಮಣನಿಂದೆಯನ್ನು ಮಾಡುತ್ತ ಬ್ರಾಹ್ಮಣೇತರರ ಅಭಿವೃದ್ಧಿಯಲ್ಲಿ ಬ್ರಾಹ್ಮಣರಿಗೆ ಆಸಕ್ತಿಯಿಲ್ಲವೆಂದು ಹೇಳುವರು" ಇತ್ಯಾದಿಯಾಗಿ ಸಂಪದಭ್ಯುದಯದ ಲೇಖಕರುಗಳು ಒಂದುಕಡೆ ಅದೇ ಪತ್ರಿಕೆಯಲ್ಲೇ ಬರೆದುಕೊಂಡು ತಾವು ಲೋಕೋದ್ಧಾರಕರೆಂದು ಹೇಳಿಕೊಳ್ಳುತ್ತಿರುವುದೇನು? ನ್ಯಾಯವನ್ನನುಸರಿಸಿ ಜಾತಿ ಪಕ್ಷಪಾತವಿಡದೆ ಗೌರ್ನಮೆಂಟಿನವರು ಹವ್ಯಕರ ವಿಷಯದಲ್ಲಿ ಮಾಡಿದ ಅಪ್ಪಣೆಯಲ್ಲಿ ದೋಷವನ್ನು ಆರೋಪಿಸಿ, ಅದಕ್ಕೆ ಮ|| ರಡ್ಡಿಯವರನ್ನು ಒಡ್ಡುವುದೇನು? ಪಂಚಮರ ಉದ್ಧರಣೆಯ ವಿಷಯದಲ್ಲಿ ಬ್ರಾಹ್ಮಣರಿಗೆ ತ್ರಿಕರಣಪೂರ್ವಕವಾದ ಅಭಿಮಾನಾದರಗಳು ಇದ್ದರೆ ಒಂದು ಕೈಯಲ್ಲಿ ತೊಟ್ಟಿಲನ್ನು ತೂಗುತ್ತ ಮತ್ತೊಂದು ಕೈಯಲ್ಲಿ ಮಗುವನ್ನು ಚಿಗುಟುತ್ತ ಅಳಿಸುವ ಕೆಲಸದಂಥ ತಂತ್ರಗಳು ನಡೆಯಲು ಆಸ್ಪದವಾಗುತ್ತಿತ್ತೆ? ಈ ಜಘನ್ಯವಾದ ಪ್ರಯತ್ನಗಳಿಂದೆಲ್ಲಾ ಮ|| ರಡ್ಡಿಯವರ ಮೇಲೆ ಅಪವಾದವನ್ನು ಹೊರಿಸಿಬಿಟ್ಟರೆ ಅದನ್ನು ಪ್ರಭುತ್ವದವರು ನಿಜವೆಂದು ನಂಬಿ ಮ|| ರಡ್ಡಿಯವರನ್ನು ಉದ್ಯೋಗಭ್ರಷ್ಟರನ್ನಾಗಿ ಮಾಡಿಬಿಡುವರೆಂದು ಸಂಪದಭ್ಯುದಯದ ಲೇಖಕರೂ ಅದರ ಕರ್ತರೂ ತಿಳಿದುಕೊಂಡಿದ್ದು, ಇಂಥ ಲೇಖನಗಳ ಪ್ರಕಟನೆಗೆ ಅವಕಾಶ ಮಾಡಿದ್ದರೆ ಅದು ಕೇವಲ ದುರ್ಭ್ರಮೆಯೇ ಸರಿ. ಇದರಿಂದ ತಕ್ಕ ಫಲವು ಆ ಭ್ರಾಂತರಿಗೆ ಮಾತ್ರವೇ ಅಲ್ಲದೆ ಅವರ ಪಕ್ಷ್ಯಯವರಿಗೂ ಸಂಭವಿಸದೆ ತಪ್ಪುವುದಿಲ್ಲ. ಯಾತಕ್ಕೆಂದರೆ ಮ|| ರಡ್ಡಿಯವರ ಮುಖ್ಯಮುಖ್ಯ ಏರ್ಪಾಡುಗಳೆಲ್ಲಾ ಗೌರ್ನಮೆಂಟಿನವರ ಮತ್ತು ಖುದ್ದಾಗಿ ಶ್ರೀಮನ್ಮಹಾರಾಜರ ಪರಾಂಬರಿಕೆಗೆ ಬರದೆ ಸ್ಯಾಂಕ್ಷನ್ ಆಗುವ ಹಾಗಿಲ್ಲ. ಸಂಪದಭ್ಯುದಯದ ಜನವರಿ ತಾ|| ೧೬ ನೆ ಸಂಚಿಕೆಯ ೧ ಲೇಖನದಲ್ಲಿ "ಇನ್|| ಜನರಲ್‌ರವರು ಅಧರ್ಮದಿಂದ ಒಂದು ಹುಕುಮನ್ನು ಮಾಡಿದರೆ ಸರ್ಕಾರದವರು ಅದನ್ನು ಮಂಜೂರ್ಮಾಡುವುದಿಲ್ಲ" ಎಂದು ಬರೆದುಕೊಂಡಿರುವುದನ್ನು ಇವರೇ ಒಪ್ಪಿಕೊಳ್ಳದಿರಲಾರರು. ಆದಕಾರಣ ಹೊಸಹೊಸ ಏರ್ಪಾಡುಗಳಲ್ಲಿ ಅನ್ಯಾಯ ಅಧರ್ಮಗಳಿರುವುವೆಂದು ಇತರರು ದ್ವೇಷಾದಿಗಳಿಂದ ಹೇಳಿದ ಮಾತ್ರದಿಂದಲೇ ಅದಕ್ಕೆ ರಡ್ಡಿಯವರೇ ಕಾರಣರೆಂದು ಗೌರ್ನಮೆಂಟಿನವರು ಎಂದಿಗೂ ತಿಳಿದುಕೊಳ್ಳಲಾರರು. ಆ ಸೂಯಾಳುಗಳ ದುಷ್ಪ್ರಯತ್ನಗಳ ಮತ್ತೂ ಕುತಂತ್ರಗಳ ಪ್ರಭಾವವು ಅವರಿಗೆ ಚೆನ್ನಾಗಿ ಗೊತ್ತಾಗಿ, ಮ|| ರಡ್ಡಿಯವರ ಅಭ್ಯುನ್ನತಿಗೇ ಅದು ಮತ್ತಷ್ಟು ಸಹಾಯವಾಗುವುದು.

ಮುಖ್ಯವಾಗಿ ಒಂದು ವಿಷಯವನ್ನು ನಾನು ವಿಜ್ಞಾಪಿಸುವದು ಉಳಿದಿದೆ. ಅದೇನಂದರೆ—"ಮೈಸೂರಿನಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಜಗಳಗಳ ಪ್ರೋತ್ಸಾಹಕ್ಕೆ ಮ|| ರಡ್ಡಿಯವರು ಕಾರಣಭೂತರಾಗಿರುವರು. ಇವರು ಇನ್ಸ್‌ಪೆಕ್ಟರ್ ಜನರಲ್ ಪದವಿಗೆ ಅರ್ಹರಲ್ಲ" ಎಂದು ಈ ದುರಭಿಮಾನಿ ಲೇಖಕರು ಬರೆದಿರುತ್ತಾರೆ. ಇದು ತಲೆಕೆಳಗು ಮಾಡಿ ಹೇಳಿದ ಮಾತಿನಂತೆ ಇರುತ್ತದೆ. ಮೈಸೂರಿನಲ್ಲಿ ಈ ವಿಭೇದದ ಜಗಳಗಳು ಸಂಪದಭ್ಯುದಯದ ಮತ್ತು ಅದರ ಲೇಖಕರುಗಳ ಹೊರತು ಮತ್ತಾರಿಗೂ ಬೇಕಿಲ್ಲ. ಈ ಪತ್ರಿಕೆಯೂ ಇದರ ಓಲಗದವರೂ ಈ ತರದ ಲೇಖನಗಳನ್ನೂ ಹಾವಳಿಯನ್ನೂ ಬಿಟ್ಟು ೬ ತಿಂಗಳ ಕಾಲ ಸುಮ್ಮನಿರಲಿ. ದೇಶವೆಲ್ಲಾ ವೈಷಮ್ಯಗಳನ್ನುಳಿದು ಶಾಂತಸ್ಥಿತಿಗೆ ಬರುವುದು. ಇತರರು ಸೈರಿಸಲಾಗದಂಥ ಅವಮಾ

ದಗಳನ್ನೂ ಲೇಖನಗಳನ್ನೂ ಈ ಪತ್ರಿಕೆಯು ಪದೇಪದೇ ಪ್ರಕಟಿಸುತ್ತಿರುವದರಿಂದಲೇ ಅದನ್ನು ನೋಡಿ ಸೈರಿಸಲಾರದವರು ತಮಗಿಲ್ಲದ ವೈಷಮ್ಯಗಳನ್ನು ಹೊಂದಿ ನಿರೋಧಿಸಬೇಕಾಗಿ ಬರುತ್ತದೆ. ತಾನು ಒಳ್ಳೆಯವನಾದರೆ ಊರೇ ಒಳ್ಳೆಯದಾಗುವುದು. ನಮ್ಮ ಮೈಸೂರು ದೇಶದಲ್ಲಿ ಈ ಭೇದಭಾವಗಳು ಬೆಳೆಯುವುದಕ್ಕೆ ಈ ಪತ್ರಿಕೆಯ ಲೇಖನಗಳೇ ಮುಖ್ಯ ಕಾರಣವೆಂಬುವದನ್ನು ತ್ರಿಕರಣಪೂರ್ವಕವಾಗಿ ನನ್ನಂತೆ ಲಕ್ಷಾಂತರ ಜನರು ಹೇಳುವವರಾಗಿದ್ದಾರೆ. ಸಂಪದಭ್ಯುದಯವು ನಿಜವಾಗಿ ದೇಶಸಾಮಾನ್ಯದ ಹಿತವನ್ನು ಕೋರಿ ಕೆಲಸಮಾಡಿ ತನ್ನ ಹೆಸರನ್ನು ಸಾರ್ಥಕಪಡಿಸಿಕೊಳ್ಳಬೇಕಾಗಿದ್ದರೆ ಬ್ರಾಹ್ಮಣ ಬ್ರಾಹ್ಮಣೇತರ ಭೇದಸಂಬಂಧವಾದ ಲೇಖನಗಳನ್ನೂ ಪರದ್ವೇಷಾಸೂಯೆಯ ಮಾತುಗಳನ್ನೂ ಘಟಶ್ರಾದ್ಧ ಮಾಡಿದಂತೆ ಬಿಟ್ಟುಕೊಡುವುದೊಂದೇ ಉಪಾಯವಾಗಿರುವುದು. ಹಾಗೆ ಮಾಡದೆ ಈಗಿನ ಕಾಯಕವನ್ನೇ ನಡೆಯಿಸುತ್ತ ಬಂದರೆ ಅದು "ಆಪದಭ್ಯುದಯ" ಎಂಬ ಹೆಸರಿಗೆ ಗುರಿಯಾಗಬೇಕಾಗುವದು ಖಂಡಿತ.

ಮತ್ತೊಂದು ಕಡೇಮಾತು.

ಹೇಗಾದರೂ ಮಾಡಿ ಮ|| ರಡ್ಡಿಯವರನ್ನು ಕೆಲಸದಿಂದ ಬಡತರಫ್ ಮಾಡಿಸಬೇಕೆಂದು ಈ ಪತ್ರಿಕೆಯ ಲೇಖಕರೂ ಕರ್ತರೂ ಪಡುತ್ತಿರುವ ಕಷ್ಟಗಳನ್ನು ನೋಡಿದರೆ ಕನಿಕರವುಂಟಾಗುತ್ತದೆ. ಪ್ರಾಣಿದಯಾಪರರು ಅದನ್ನು ಸೈರಿಸಲಾರರು. ಆದಕ್ಕಾಗಿ ನಾನೊಂದು ವಿಷಯವನ್ನು ಸೂಚಿಸಬೇಕೆಂದಿದ್ದೇನೆ. ಎಜುಕೇಷನ್ ಇನ್ಸ್‌ಪೆಕ್ಟರ್ ಜನರಲ್ ಕೆಲಸವನ್ನು ನೋಡುವುದಕ್ಕೆ ನಿಷ್ಪಕ್ಷಪಾತಿಗಳಾಗಿಯೂ ಅನುಭವಶಾಲಿಗಳಾಗಿಯೂ ಇತರ ಸಾಮರ್ಥ್ಯಗಳನ್ನೆಲ್ಲಾ ಹೊಂದಿರುವವರಾಗಿಯೂ ಇರತಕ್ಕವರು ಬೇಕು. ಇದಕ್ಕೆ ಮ|| ವೆಂಕಟಕೃಷ್ಣಯ್ಯನವರೇ ಸರಿಯೆಂದು ನನಗೆ ತೋರುವುದು. ಅವರು ಆ ಕೆಲಸಕ್ಕೆ ಬರಲು ಒಪ್ಪಿಕೊಳ್ಳುವರಾದರೆ, ಅವರಿಗೆ ಅಸಿಸ್ಟೆಂಟರಾಗಿರಲು ಸಂಪದಭ್ಯುದಯದ ಧ್ವಜಪತಾಕೆಯಾದ ಸಿಂಪಣ್ಣಿಜರು ಒಪ್ಪಿಕೊಳ್ಳುವುದಾದರೆ, ನಾನು ಮ|| ರಡ್ಡಿಯವರನ್ನು ಪ್ರಾರ್ಥಿಸಿಕೊಂಡು ಅವರು ಕೆಲಸವನ್ನು ಬಿಟ್ಟುಬಿಡುವಂತೆ ಮಾಡುವುದಕ್ಕೂ, ಮೈಸೂರುದೇಶೀಯರೆಲ್ಲಾ ಮೀಟಿಂಗುಗಳನ್ನು ಮಾಡಿ ಈ ಹೊಸ ಅಪಾಯಿಂಟ್‌ಮೆಂಟನ್ನು ಗೌರ್ನಮೆಂಟಿನವರು ಸ್ಪೆಷಲ್ಲಾಗಿ ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದಕ್ಕೂ ಏರ್ಪಾಡು ಮಾಡಬಹುದು. ಹಾಗಾದಮೇಲಾದರೂ ಇಂಥ ಲೇಖನಗಳು ಸಂಪದಭ್ಯುದಯದಲ್ಲಿ ತಪ್ಪಿಹೋದಾವೇ ಎಂಬುದೇ ನಾವುಗಳು ನಿರೀಕ್ಷಿಸುವ ಫಲವಾಗಿದೆ.

ಪುರನಿವಾಸಿ.

ಜಾಹೀರ ನೋಟೀಸ.

ಇದರಿಂದ ಕೆಳಗೆ ಸಹಿ ಮಾಡುವವರ ಕಡೆಯಿಂದಾ ಸರ್ವ ಜನರಿಗೆ ತಿಳಿಸುವದೇನಂದರೆ—

ಸಂ|| ಸಾಂಗಲಿ ತಾಲೂಕು ಪೈಕಿ ಮುಕ್ಕಾಮ ದೊಡ್ಡವಾಡದಲ್ಲಿ ನಮ್ಮ ದುಂಡಪ್ಪಾ ಸಂಗಪ್ಪಾ ವಾಲಿ ಇವನ ಮನಿಗಳು ಎರಡು ಇರುತ್ತವೆ. ಈಗ ಸದರಿ ದುಂಡಪ್ಪನು ಸತ್ತಿರುತ್ತಾನೆ. ಅವನ ವಾರಸದಾರರು ನಾವೇ ಇರುತ್ತೇವೆ. ಈಗ ಸದರಿ ದುಂಡಪ್ಪನ ಹೆಂಡತಿ ಪಾರ್ವತವ್ವಾ ಈಕೆಯು ಸದರಿ ಮನಿಗಳನ್ನು ಮಾರಿಕೊಂಡು ಎರಡನೆ ಗಂಡನ ಉಡಕಿ ಆಗಿಹೋಗುವ ತಜವೀಜದೊಳಗೆ ಇದ್ದಾಳೆ. ಆದಕಾರಣ ಸದರಿ ಮನಿಗಳಿಗೆ ಮತ್ತು ಅವನ ಅಂದರೆ ದುಂಡಪ್ಪಾ ವಾಲಿ ಇವನ ಎಲ್ಲ ಮಿಳಕತ್ತಿಗೆ ಅಂದರೆ ಆಸ್ತಿಗೆ ನಾವೇ ನಾಲ್ಕರು ಇರುತ್ತೇವೆ. ಸದರಿ ಮನಿಗಳನ್ನು ವ ಜಂಗಮ ಸ್ಥಿತಿಯನ್ನು ಯಾರೂ ಸದರಿ ಪಾರ್ವತವ್ವಾ ಈಕಿಯ ಕಡೆಯಿಂದಾ ಖರೀದಿ ವ ಬಕ್ಷೀಸ ಕಬಜಾವತ್ತಿ ವಗೈರೆ ಯಾವ ಪ್ರಕಾರದಿಂದಲೂ ತಕ್ಕೊಳಬಾರದು. ಇನ್ನ ಮುಂದೆ ತಕ್ಕೊಂಡರೆ ಈ ಮುಂಚೆ ತಕ್ಕೊಂಡಿದ್ದರೆ ಸದರಿ ಪ್ರಕಾರ ಆದ ವ್ಯವಹಾರವು ಖೊಟ್ಟಿ ವ ಫೋಕಳ ಅಂತ ತಿಳಿದು ರದ್ದ ಬಾತಲ ಅದೆ ಅಂತ ತಿಳಿಯುತ್ತೇವೆ. ಸರ್ವರಿಗೆ ತಿಳಿಯಬೇಕು ಅಂತ ನೋಟೀಸ ಸಹಿ ತಾರೀಖು ೩೦-೧-೧೯೧೯ ಇಸವಿ.

ಅಂದಾನಪ್ಪಾ ಚನ್ನಪ್ಪಾ ವಾಲಿ ದ|| ಖು||.

) ಈ ಗುರ್ತಾ ಸಂಗವ್ವ ಕೋಮ ಚನಮಲ್ಲಪ್ಪಾ ಜೀವಗಾಳ ಈಕಿದು.

ನೋಟೀಸ. 2

ತರೀಕೆರೆ ತಾಲ್ಲೋಕು ಬುಕ್ಕಾಂಬುಧಿಯಲ್ಲಿರುವ ಹಲಸಿನಗೊಂದಿ ಸಣ್ಣಕಾಡಯ್ಯನವರ ಮಲ್ಲಪ್ಪನವರ ಮಗ ಬಸಪ್ಪ, ಮೈನರ್ ಗಾರ್ಡಿಯನ್ ತಾಯಿ ದೇವೀರಮ್ಮನು ಈ ಮೂಲಕ ತಿಳಿಯಪಡಿಸುವದೇನಂದರೆ:—

ನನ್ನ ಮಗ ಮೈನರ್ ಬಸಪ್ಪನ ಅಣ್ಣ ಶಾಂತಮಲ್ಲಪ್ಪನು ಈಚೆಗೆ ಕಾಲವಾದ ನಂತರ ಈತನ ಹೆಂಡತಿ ನೀಲಮ್ಮನು ಬೇರೆಯವರ ಪ್ರೇರೇಪಣೆ ಮೇಲೆ ದುರುದ್ದೇಶದಿಂದ ಕುಟುಂಬದ ಸೊತ್ತುಗಳನ್ನು ಅಡವು, ಕ್ರಯ, ವಗೈರೆ ಮೂಲಕ ಪರಾಧೀನಮಾಡುವದರಲ್ಲಿ ಇದ್ದಾಳೆಂದು ವರ್ತಮಾನ ಕೇಳುತ್ತೇನೆ. ಸದರಿ ನೀಲಮ್ಮನಿಗೆ ಆಸ್ತಿಯನ್ನು ಪರಾಧೀನಮಾಡಲು ಯಾವ ಹಕ್ಕೂ ಇರುವದಿಲ್ಲ. ಹೀಗಿರುವಲ್ಲಿ ನೀಲಮ್ಮನಿಂದ ಯಾರಾದರೂ ಸೊತ್ತುಗಳ ಕ್ರಯ ವಗೈರೆ ಬರಸಿಕೊಂಡಲ್ಲಿ ಅಂಥಾ ಪರಾಧೀನವು ಕಾನೂನು ರೀತ್ಯಾ ಯಾರಿಗೂ ಸಿದ್ಧವಾಗತಕ್ಕದ್ದಲ್ಲವೆಂದು ಈ ಮೂಲಕ ಸಮಸ್ತರಿಗೂ ಮುಂಚಿತವಾಗಿ ತಿಳಿಸಿರುತ್ತೇನೆ.

ಸಕಲ ವೀರಶೈವರಿಗೂ ಪೂಜಾರ್ಹವಾದದ್ದು.

ಎಡೆಯೂರು ತೋಂಟದಾರ್ಯರ ಫೋಟೋ. ನಂಬಣ್ಣ, ನಂಬಮ್ಮ, ಕಂಬಳಿ ಸ್ವಾಮಿಗಳ ಸಮೇತ. ಡಜನ್ 1 ಕ್ಕೆ 0—12—0. 100 ಕ್ಕೆ 5—0—0. [illegible] ನಮ್ಮಲ್ಲಿ ರಖಂವಾರು ಫೋಟೋಗಳು ದೊರೆಯುತ್ತೆ.

ಹೆಚ್. ಜಿ. ಮಹದೇವಪ್ಪ,
ಫೋಟೋಗ್ರಾಫರ್,
ನಂಜನಗೂಡು, ಮೈಸೂರು ಡಿ||.

ಡಿ. ನಂಜುಂಡಯ್ಯ,
ಚೀಟಾಜವಳಿ ಅಂಗಡಿ,
ಎಡತೊರೆ, ಮೈಸೂರು ಡಿ||.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

19 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 2

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಇದು ಒಳ್ಳೇ ವಾಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು— ಜಪಾನ್ ಬೀಸಣಿಗೆ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಶರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4—8—0.



ವಿಳಾಸ:—ಎ. ಎ. ಕೃಷ್ಣ ಅಂಡ್ ಕೊ,
2 5. ಇರುಳಪ್ಪನ ಬೀದಿ, ಮದರಾಸ್.

ಈಗತಾನೇ ಕೊನೆಗಂಡ ಯುದ್ಧದ ವಿಷಯವನ್ನು ಕಿವಿಯಿಂದಲೂ, ವೃತ್ತಪತ್ರಿಕೆಗಳಿಂದಲೂ, ಕೇಳುವುದಕ್ಕಿಂತ ಕಣ್ಣಿನಿಂದ ನೋಡುವುದು ಲೇಸಲ್ಲವೆ?

ಕಳೆದ 4 ವರುಷ 99 ದಿನಗಳವರಿವಿಗೂ ನಡೆದ ಯುದ್ಧದ ವಿಷಯವನ್ನು 92 ಚಿತ್ರಪಟಗಳ ಸಹಿತ ಕಂಡಿ ಇದ್ದದ್ದನ್ನು ಇದ್ದ ಹಾಗೆಯೇ ತಿಳಿಸುವ,

ಯುದ್ಧದ ಚರಿತ್ರೆಯು.

ಲಂಡನ್ ಪಟ್ಟಣದಲ್ಲಿ ತಯಾರಾಗಿ ಈಗಲೇ ಬಂದಿರುವವು.

ಈ ಪುಸ್ತಕದಲ್ಲಿ ಕೈಲಿತಜಗಳ, ಆಕಾಶವಿಮಾನಗಳ ಜಗಳ, ಜಹಜುಗಳ ಜಗಳ, ಜಹಜುಗಳು ಸಿಡಿಮದ್ದಿನ ಗುಂಡುಗಳಿಗೆ ತಗಲಿ ಮುಳುಗಿಹೋಗುವುದು, ಆ ಸಮಯದಲ್ಲಿ ಬ್ರಿಟಿಷರು ಜನರನ್ನು ಕಾಪಾಡುವುದು, ಆಸ್ಪತ್ರೆಯಲ್ಲಿ ಘಾಯಪಟ್ಟವರನ್ನು ಇಂಗ್ಲೀಷ್ ಸ್ತ್ರೀಯರು ಕಾಪಾಡುವುದು, ಜರ್ಮಾನಿ, ಟರ್ಕಿ, ಆಸ್ಟ್ರಿಯ ಮುಂತಾದ ಶತ್ರುಗಳು ಜಗಳ ಮಾಡಲು ಕೈಲಾಗದೆ ಓಡಿಹೋಗುವುದು, ಶತ್ರುಗಳನ್ನೂ, ಕಂದಕಗಳನ್ನೂ ಸೆರೆಹಿಡಿಯುವುದು, ಮತ್ತೂ ಚಕ್ರವರ್ತಿಗಳಾದ 5 ನೆಯ ಜಾರ್ಜ್ ಪ್ರಭುಗಳು ರಣರಂಗದಲ್ಲಿ ಸೈನಿಕರಿಗೆ ಬಿರುದು ಬಿಲ್ಲೆಗಳನ್ನು ಕೊಡುವುದು, ಆಸ್ಪತ್ರೆಗಳಲ್ಲಿ ಘಾಯಪಟ್ಟ ಸೈನಿಕರಿಗೆ ಬಿರುದು ಬಿಲ್ಲೆಗಳನ್ನು ಕೊಡುವುದು, ಸಿಡಿಮದ್ದಿನ ಕಾರ್ಖಾನೆಗಳನ್ನು ಪರೀಕ್ಷಿಸುವುದು, ಸೆರೆಹಿಡಿದ ಶತ್ರುಗಳನ್ನು ಅವರ ಕಂದಕಗಳನ್ನು ಪರೀಕ್ಷಿಸುವುದು, ಅಮೇರಿಕಾ, ಬೆಲ್ಜಿಯಂ, ಫ್ರಾನ್ಸ್ ಮುಂತಾದ ರಾಜರುಗಳೊಡನೆ ರಣರಂಗದಲ್ಲಿ ಸಂಭಾಷಿಸುತ್ತಿರುವುದು ಮುಂತಾದುವುಗಳನ್ನೆಲ್ಲಾ ವಿವರವಾಗಿ ತಿಳಿಯುವಂತೆ ಚಿತ್ರಪಟಗಳೊಡನೆ ಕನ್ನಡ ಭಾಷೆಯಲ್ಲಿ ಮುದ್ರಣವಾದ ಮುದ್ದಾದ ಯುದ್ಧದ ಚರಿತ್ರೆಯು.

ಕ್ರಯ 1 ಕ್ಕೆ 1—12—0. ಟಪಾಲ್ ಖರ್ಚು 0—4—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
2 ನಂ. (1) ಇರುಳಪ್ಪನಬೀದಿ, ಮದರಾಸು.

ಯುದ್ಧದ ಫೋಟೋಗಳು. 9

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಖಂವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ. ವಿಳಾಸ:—ಮಹಾರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೇರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ ಅಡಕವಾಗಿವೆ. ಕ್ರಯ. ೮ ಆಣೆ.

6 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
10 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಫೆಬ್ರವರಿ ತಾ|| ೯ ರಿಂದ ೧೯೧೯ ನೆಯ ಫೆಬ್ರವರಿ ತಾ|| ೧೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿ ನಾಮಸಂವತ್ಸರದ ಮಾಘ ಶು|| ನವಮಿಯಿಂದ ಮಾಘ ಬ|| ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ಕುಂ
9	[1] ಭಾನು	ನವಮಿ	11-29	ರೋಹಿ	47-5	27
10	ಸೋಮ	ದಶಮಿ	6-0	ಮೃಗಶಿ	44-0	28
11	[2] ಮಂಗಳ	ಏಕಾದ	2-0	ಆರಿ	55-52	29
12	[3] ಬುಧ	ತ್ರಯೋ	55-12	ಪುನರ್ವ	40-33	1
13	[4] ಗುರು	ಚತುದ	53-42	ಪುಷ್ಯ	40-20	2
14	[5] ಶುಕ್ರ	ಪೌರ್ಣ	53-27	ಆಶ್ಲೆ	41-17	3
15	ಶನಿ	ಪಾಡ್ಯ	54-30	ಮಖಾ	43-36	4

(1) ಮಧ್ವನವಮೀ, ಮುದುಕುತೊರೆ ಮಲ್ಲಿಕಾರ್ಜುನಸ್ವಾಮಿ ರಥಃ. (2) ವೈಷ್ಣನಾಮೇಕಾದಶೀ. (3) (ಸೌರರೀತ್ಯಾ ಕುಂಭಶುಕ್ಲ ತ್ರಯೋದಶೀ ತಿಥಿಃ) ಪ್ರದೋಷಃ, ತೊಂಡನೂರು ಗೋಪಾಲಕೃಷ್ಣಸ್ವಾಮಿ ರಥಃ, ವಿಷ್ಣುಪದಪುಣ್ಯಕಾಲಃ. (4) ತ್ರಿನೇತ್ರಸ್ವಾಮಿ ರಥಃ. (5) ವ್ಯಾಸಪೂಜಾ, ಹುರಳಿನರಸಿಂಹಸ್ವಾಮಿ ರಥಃ, ಮೇಳಿಗೆ ಮತ್ತು ಅರಗದಲ್ಲಿ ರಥಃ, ಮೃತ್ಯುಯೋಗಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರು ಸ್ಟಾರ್

REGISTERED NO. M. 124.

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಮ್ರಾಜ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಫೆಬ್ರುವರಿ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 13

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ, ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುಪ್ತವ್ರನಬೇನೆ, ತುರಕುಕಜ್ಜಿ, ಗಜಕರ್ಣ, ಇಸಬು, ಕದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟುದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇನೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇನೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ತಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
40 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಫುಕಟ! ಇನ್‌ಫ್ಲುಯೆಂಝಾ ಪತ್ರಿಕೆ-ಫುಕಟ!!

ಜ್ವರ ಪ್ರತಿಬಂಧಕ ಮತ್ತು ನಿವಾರಕ ಅತ್ಯಂತ ಖಾತ್ರಿಯುಳ್ಳ ಅನುಭವಸಿದ್ಧ ಔಷಧಗಳು. ಒಂದೇ ಔಷಧವು ರೋಗದ ಎಲ್ಲ ಲಕ್ಷಣಗಳ ಮೇಲೆ ನಡಿಯಲಾರದು. ಎಂಬದನ್ನು ಲಕ್ಷದಲ್ಲಿ ತಂದು ಬೇಗ ಆರ್ಡರ ಕಳಿಸಿರಿ.

ಇನ್‌ಫ್ಲು ಎಂಝಾ ಪಿಲ್ಸ (ರೋಗ ಪ್ರತಿಬಂಧಕ) ಒಂದೇ ಗುಳಿಗೆ ಸಾಕು. ೩೨ ಕ್ಕೆ ೧ ರೂ. ೧೧೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕ್ಕೆ ೧೦ ರೂ.

ನಂಬರ ೧ ನೇ ಮಾತ್ರೆ ರೋಗದ ಆರಂಭದ ಲಕ್ಷಣಗಳಮೇಲೆ ತೊ-೧ಕ್ಕೆ ೧.
,, ೨ ನೇ ,, ಜ್ವರಸನ್ನಿಪಾತ ಕಫ ಮಲಾವರೋಧ ತೊ-೧ಕ್ಕೆ ೨.
,, ೩ ನೇ ,, ಅತಿಸಾರ ವಾಂತಿಯುಕ್ತಜ್ವರ ತೊ-೧ಕ್ಕೆ ಬೆ-೧ರೂ.
,, ೪ ನೇ ,, ಗರ್ಭಿಣಿಯರ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೩ ರೂ.
,, ೫ ನೇ ,, ಬಾಣಂತಿಯ ಜ್ವರಕ್ಕೆ ತೊಲ ೧ ಕ್ಕೆ ಬೆಲೆ ೨ ರೂ.
,, ೬ ನೇ ,, ಸೌಮ್ಯವಿರೇಚನವಟಿ ತೊಲ ೧ ಕ್ಕೆ ಬೆಲೆ ೬ ಆಣೆ.

ವಿಶೇಷ ಮಾಹಿತಿ ಬೇಕಾದವರು ಅರ್ಧ ಆಣೆ ಟಿಕೇಟ ಕಳುಹಿಸಿದರೆ "ಇನ್‌ಫ್ಲು ಎಂಝಾ ಪತ್ರಿಕೆ" ಯನ್ನು ಫುಕಟಿಯಾಗಿ ಕಳಿಸುವೆವು. ಪ್ಯಾಕಿಂಗ್ ಅಂಚೆ ವೆಚ್ಚ ಬೇರೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
12 ಪೋಸ್ಟ್ ಕಿತ್ತೂರು, ಡಿ|| ಬೆಳಗಾಂ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 10

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಶುಭಾಶುಭಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚುಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

20 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಯುದ್ಧದ ಫೋಟೋಗಳು. 10

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಖಂವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ. ವಿಳಾಸ:—ಮಹಾರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಫೆಬ್ರವರಿ ತಾ|| ೧೬ ನೆಯ ಭಾನುವಾರ.

ಸಾಮ್ರಾಜ್ಯಶಾಸನಸಭೆ.

ದಿಲ್ಲಿಪಟ್ಟಣದಲ್ಲಿ ಕಳೆದ ತಾ|| ೬-೭-೧೦ ಈ ಮೂರುದಿನಗಳಲ್ಲಿ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯೊಳಗೆ ಅದರ ಬಹುಕಾಲವನ್ನು ಹಿಡಿದು ದೀರ್ಘವಾದ ಚರ್ಚೆಗೆ ಭಾಗಿಯಾಗಿದ್ದುದು ರೌಲತ್‌ಬಿಲ್ಲುಗಳ ವಿಷಯವಾಗಿರುತ್ತದೆ. ಈ ಬಿಲ್ಲುಗಳು ೨ ಭಾಗವಾಗಿರುತ್ತವೆ. ೧ ನೆ ಭಾಗವು ಈಗಿರುವ ಕ್ರಿಮಿನಲ್ ಪ್ರೊಸಿಜರ್ ಕೋಡಿನಲ್ಲೂ ಪೀನಲ್ ಕೋಡಿನಲ್ಲೂ ಸ್ವಲ್ಪ ಹೊಸ ಭಾಗಗಳನ್ನು ಸೇರಿಸತಕ್ಕುದಾಗಿಯೂ, ೨ ನೆ ಬಿಲ್ಲು ಸರ್ಕಾರದವರಿಗೆ ದೇಶಶಾಂತಿರಕ್ಷಣೆಗೆ ಅವಶ್ಯಕಗಳಾದ ಕೆಲವು ಅಧಿಕಾರಗಳನ್ನು ಉಂಟುಮಾಡಿಕೊಡತಕ್ಕುದಾಗಿಯೂ ಇರುತ್ತವೆ. ಇವುಗಳು ಶಾಸನವಾಗಿ ಏರ್ಪಟ್ಟು ವ್ಯವಹಾರಕ್ಕೆ ಬಂದರೆ ದುಷ್ಟನಿಗ್ರಹಕ್ಕಾಗಿ ಸರ್ಕಾರದವರು ಧರಿಸಿರುವ ಆಯುಧಕ್ಕೆ ಒಳ್ಳೆಯ ಹಿಡಿಯನ್ನು ಹಾಕಿ ಮೋಪುಮಾಡಿಟ್ಟಂತಾಗುವುದೆಂಬುದರಲ್ಲಿ ಸಂಶಯವಿಲ್ಲ. ಶಾಸನಗಳು ಒಳ್ಳೆಯುದ್ದೇಶದಿಂದ ಏರ್ಪಟ್ಟರೂ ಅವುಗಳ ವಿನಿಯೋಗವನ್ನು ಮಾಡತಕ್ಕವರು ಎಷ್ಟೋ ಸಮಯದಲ್ಲಿ ಅತಿ ವ್ಯಾಪ್ತಿಯನ್ನು ಮಾಡುವುದು ಅನುಭವಸಿದ್ಧವಾದುದರಿಂದ ಈ ಶಾಸನಪ್ರಯೋಗವು ನಿರಪರಾಧಿಗಳ ಮೇಲೂ ನಡೆದು ಅನರ್ಥಕಾರಿಯಾಗಬಹುದೆಂಬ ಭೀತಿಯು ಇಂಥ ಕಠಿನಶಾಸನಗಳ ನಿರ್ಮಾಣಕಾಲದಲ್ಲಿ ಪ್ರಜೆಗಳಿಗೆ ಹುಟ್ಟುವುದು ಸ್ವಭಾವವಾಗಿರುತ್ತದೆ. ಅದರಂತೆಯೇ ಈಗಳಾದರೂ ಇವುಗಳ ಮಸೂದೆಯು ಈ ಮೊದಲೇ ಪ್ರಕಟಿತವಾಗಿದ್ದುದರಿಂದ, ಅದನ್ನು ನೋಡಿ ದೇಶದ ವಿದ್ಯಾಧಿಕಜನರು ಬೆದರಿಬಿದ್ದು, ಇದನ್ನು ಶಾಸನವಾಗಗೊಡದಂತೆ ಮಾಡಬೇಕೆಂದು ವೃತ್ತಪತ್ರಿಕೆಗಳಲ್ಲೂ ಸಭಾನಿರ್ಧಾರಗಳಲ್ಲೂ ಕೋಲಾಹಲವನ್ನು ಹುಟ್ಟಿಸಿದ್ದುದಲ್ಲದೆ, ಶಾಸನಸಭೆಯಲ್ಲಿ ತಮ್ಮ ಪ್ರತಿನಿಧಿಗಳಾಗಿರುವ ಸಭಿಕರನ್ನೂ ಅದರ ನಿರೋಧಕ್ಕೆ ಪ್ರೇರಿಸಿದ್ದರು. ತಮ್ಮ ಅಡ್ಡಿಯನ್ನು ಸರ್ಕಾರದವರು ಗಮನಿಸದೆ ಹೋದರೆ ಸಭೆಯಿಂದ ಸಭಿಕರೆಲ್ಲರೂ ಎದ್ದುಬಂದುಬಿಡಬೇಕೆಂತಲೂ ಸಹ ಸೂಚನೆಯನ್ನು ಕೊಟ್ಟು ಹುರಿದುಂಬಿಸಿದ್ದರು. ಇದರಿಂದ ಸಭೆಯಲ್ಲಿ ಈ ಸಂಬಂಧವಾದ ವಾದೋಪವಾದಗಳು ಬಹು ತೀಕ್ಷ್ಣವಾಗಿ ನಡೆಯಬಹುದೆಂದು ಎಲ್ಲರೂ ನಿರೀಕ್ಷಿಸಿದ್ದಂತೆಯೇ ಅವು ಜರುಗಿದುವು.

ಮೊಟ್ಟಮೊದಲು ಸರ್ಕಾರದ ಔದ್ಯೋಗಿಕ ಸಭಾಸದರಾದ ಸರ್ ವಿಲಿಯಂ ವಿನ್ಸೆಂಟ್‌ರವರು ಈ ಬಿಲ್ಲಿನ ಉಪಪಾದನೆಗೆ ಸಭಾಧ್ಯಕ್ಷರ ಅನುಮತಿಯನ್ನು ಪಡೆದು ಹೇಳಿದುದೇನೆಂದರೆ— "ದೇಶರಕ್ಷಣಶಾಸನದ ಅವಧಿಯು ಇಷ್ಟರಲ್ಲೇ ಮುಗಿಯುವುದರಿಂದ, ದೇಶದಲ್ಲಿ ಅರಾಜಕತನ ಮೊದಲಾದ ಹಾನಿಕರಾನರ್ಥಗಳು ಪ್ರಬಲಿಸದಂತೆ ಮಾಡುವುದಕ್ಕಾಗಿ ತಕ್ಕ ಶಾಸನಬಲವು ಪ್ರಭುತ್ವದವರಿಗೆ ಇರಬೇಕಾದುದು ಅವಶ್ಯಕವೆಂದು ರೌಲತ್‌ಸಂಘದವರು ಮಾಡಿದ ಸೂಚನೆಯು ಯುಕ್ತವೆಂದು ಕಂಡುದರ ಮೇಲೆ ಈ ಬಿಲ್ಲುಗಳು ಏರ್ಪಡಿಸಲ್ಪಟ್ಟಿವೆ. ದೇಶದಲ್ಲಿ ಸಕ್ರಮವಾಗಿ ಜರುಗುವ ರಾಜಕೀಯಾಂದೋಳನವನ್ನು ಅಡಗಿಸುವುದಕ್ಕಾಗಿ ಈ ಶಾಸನವನ್ನೇನೂ ನಿರ್ಮಿಸುವುದಿಲ್ಲ. ರಾಜದ್ರೋಹ ಮಾಡಿದವರನ್ನು ಶಿಕ್ಷಿಸುವುದಕ್ಕಾಗಿಯೇ ಈ ಶಾಸನವು ಏರ್ಪಡಿಸಲ್ಪಡುವುದು. ಪ್ರಜೆಗಳ ಸ್ವಾತಂತ್ರ್ಯಕ್ಕೆ ಭಂಗಬರದಂತೆಯೂ, ಅವರುಗಳ ಶಾಂತಿಗೆ ನ್ಯೂನತೆಯುಂಟಾಗದಂತೆಯೂ ಕಾಪಾಡಲು ಇಂಥ ಶಾಸನಗಳ ಹೊರತು ಬೇರೆ ಉಪಾಯವನ್ನು ಯಾರೂ ಸೂಚಿಸಿಕೊಟ್ಟಿಲ್ಲ. ಇದಕ್ಕಿಂತ ಬೇರೆ ಉಪಾಯವೇನಾದರೂ ಇದ್ದು ಅದನ್ನು ಯಾರಾದರೂ ಸೂಚಿಸಿದರೆ ಪ್ರಭುತ್ವದವರು ಅದನ್ನೇ ಅಂಗೀಕರಿಸುವರು. ಅರಾಜಕರು ದೇಶಕ್ಕೆ ಶತ್ರುಗಳು. ಸ್ವರಾಜ್ಯವು ಲಭಿಸಿದರೆ ಅರಾಜಕತನವು ಅಡಗುತ್ತದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಅವರು ತಮ್ಮ ದಾರುಣಕೃತ್ಯದಿಂದ ಪ್ರಭುತ್ವದವರಿಗೆ ತೊಂದರೆಯನ್ನುಂಟುಮಾಡುವುದೇ ಅವರ ಕೆಲಸವಾಗಿರುತ್ತದೆ. ಅದುಕಾರಣ ಆ ದೇಶದ್ರೋಹಿಗಳ ವಿಷಯವಾಗಿ ಯಾರೂ ಸಾನುಭೂತಿಯನ್ನು ತೋರಿಸತಕ್ಕುದಲ್ಲ. ಇಲ್ಲಿಯ ಸಭಿಕರು ಬಾಧ್ಯತಾಯುತ ಪ್ರಭುತ್ವವನ್ನೇನೋ ಕೋರುತ್ತಾರೆ. ಹಾಗಾದರೆ ಅವರೂ ಕೂಡ ಈ ಅರಾಜಕರನ್ನು ತಮ್ಮ ಶತ್ರುಗಳಂತೆಯೇ ತಿಳಿಯಬೇಕಲ್ಲದೆ ಅವರಿಗೆ ಸಾನುಭೂತಿಯನ್ನು ತೋರಿಸಲಾಗದು. ಅದುಕಾರಣ ನೀವುಗಳೆಲ್ಲಾ ಅನುಮತಿಯನ್ನಿತ್ತು ಇದನ್ನು ಶಾಸನವಾಗಿ ಏರ್ಪಡಿಸಲು ಅವಕಾಶವನ್ನುಂಟುಮಾಡಿಕೊಡಬೇಕೆಂದು ಕೋರುತ್ತೇನೆ" ಎಂದು ಹೇಳಿದುದಲ್ಲದೆ ಈ ಶಾಸನವನ್ನು ಒಂದು ಪ್ರತ್ಯೇಕಸಂಘಕ್ಕೆ ಕಳುಹಿಸಿಕೊಟ್ಟು ಅದರಲ್ಲಿ ತಾವೂ ಸಭಿಕರಾಗಿದ್ದುಕೊಂಡು ವಿಮರ್ಶೆ ಮಾಡುವವರಾಗಿದ್ದೇವೆಂದು ಸೂಚಿಸಿದರು.

ಅದರಮೇಲೆ ಅ|| ಪಟೇಲರು—ಈಗಣ ಸಭಿಕರ ಅಧಿಕಾರ ಕಾಲದವಧಿಯು ಮುಗಿದ ೬ ತಿಂಗಳ ನಂತರ ಇದನ್ನು ಸಭೆಯ ಚರ್ಚೆಗೆ ತರುವಂತೆ ಮಾಡಬೇಕೆಂದು ಒಂದು ಉಪಸೂಚನೆಯನ್ನು ಮಾಡಿದರು. ಆಗ ಅವರು ಹೇಳಿದುದೇನೆಂದರೆ—ದೇಶದಲ್ಲಿ ಅರಾಜಕತನವು ಕಠಿನಶಾಸನಗಳಿಂದ ಅಡಗುವುದಿಲ್ಲ. ಪ್ರಜೆಗಳ ಕೋರಿಕೆಯನ್ನು ಈಡೇರಿಸಿಕೊಟ್ಟರೇನೆಯೋ ಅದು ಹುಟ್ಟಡಗುವುದು. ಇದು ಶಾಸನವಾಗಿ ಬಿಟ್ಟರೆ ದೇಶದಲ್ಲಿ ಅಸಮಾಧಾನವು ಹೆಚ್ಚಿ ಮಹಾನರ್ಥಗಳು ಹುಟ್ಟುವುವು. ಮತ್ತೂ ಇದರಿಂದ ಸಕ್ರಮ ರಾಜಕೀಯಾಂದೋಳನಗಳಾವುವನ್ನು ನಡೆಯಿಸುವುದಕ್ಕೂ ಪ್ರಜೆಗಳಿಗೆ ಭಯವುಂಟಾಗುವುದು ಎಂದು ಹೇಳಲಾಗಿ, ಇದನ್ನೇ ಅ|| ಗಳಾದ ಸುರೇಂದ್ರನಾಥಬನರ್ಜಿ, ಚಾಂದಾ, ಜಿನ್ನಾ, ಮಾಳವ್ಯ, ರಂಗಯ್ಯಂಗಾರ್ ಮೊದಲಾದ ಅನೌದ್ಯೋಗಿಕ ಸಭಾಸದರೆಲ್ಲರೂ ಬಹು ಧೀರವಾಗಿಯೂ, ಸಾಮರ್ಥ್ಯ ಸಂಪನ್ನವಾಗಿಯೂ, ಆವೇಶಪೂರಿತವಾಗಿಯೂ, ಭಯೋತ್ಪಾದಕವಾಗಿಯೂ ಇರತಕ್ಕ ಭಾಷಣಗಳಿಂದ ಪುಷ್ಟೀಕರಿಸಿ ಶಾಸನವನ್ನು ನಿಷೇಧಿಸಿದರು. ಅ|| ಮದನಮೋಹನ ಮಾಳವ್ಯರವರ ಭಾಷಣವೇ ೧೩೦ ನಿಮಿಷಗಳ ವರೆಗೆ ಜರುಗಿತು. ಉಳಿದವರುಗಳೂ ಸಹ ಯಥಾಶಕ್ತಿಯಾಗಿ ಹೀಗೆಯೇ ಭಾಷಣಗಳನ್ನು ಮಾಡಿದರು. ಪ್ರಭುಪಕ್ಷ ಪ್ರಜಾಪಕ್ಷದವರುಗಳೀರ್ವರೂ ಪರಸ್ಪರ ಕರುಳನ್ನು ಚುಚ್ಚುವಂಥ ಮಾತುಗಳನ್ನು ಪಯೋಗಿಸಿ ಈ ಸಲ ವಾದೋಪವಾದಗಳನ್ನು ನಡೆಯಿಸಿದಂತೆ ಹಿಂದೆ ಯಾವಾಗಲೂ ನಡೆಯಿಸಿದುದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮಾಳವ್ಯರವರ ವಚನಪ್ರವಾಹರಭಸವನ್ನು ನೋಡಿ ಒಂದುಸಲ ವೈಸ್ರಾಯರು "ಮಾಳವ್ಯರು ತಮ್ಮ ಸ್ವಾತಂತ್ರ್ಯವನ್ನು ದುರ್ವಿನಿಯೋಗಪಡಿಸುತ್ತಿರುವ"ರೆಂದು ಎಚ್ಚರಿಸಬೇಕಾಯಿತು. "ಹೇಳಬೇಕಾದ ಕಾರಣಗಳನ್ನೆಲ್ಲಾ ಹೇಳುವುದಕ್ಕೆ ನನಗೆ ಹಕ್ಕಿದೆ, ನೀವು ಬೇಡವೆಂದರೆ ಬಿಟ್ಟುಬಿಡುತ್ತೇನೆ" ಎಂದು ಮಾಳವ್ಯರು ಅದಕ್ಕೆ ಉತ್ತರವಿತ್ತರು. ನೀವು ನಿಲ್ಲಿಸಬೇಕಾದುದೇನೂ ಇಲ್ಲವೆಂದು ವೈಸ್ರಾಯರು ಹೇಳಿದರು. ಜಿನ್ನಾರವರು—"ಇದರಿಂದ ದೇಶದ ಪ್ರಜೆಗಳಿಗೂ ಪ್ರಭುತ್ವದವರಿಗೂ ಪ್ರಬಲ ವೈಷಮ್ಯವೃದ್ಧಿಯಾಗುವುದು. ಧನಸಹಾಯ ಬೇಕಾದಾಗ ನೀವು ಪ್ರಜೆಗಳ ಸಹಕಾರವನ್ನು ಕೋರುತ್ತೀರಿ. ಈಗ ಅವರ ಅಭಿಪ್ರಾಯವನ್ನು ತಿರಸ್ಕರಿಸಿ, ಸ್ವತಂತ್ರಿಸಿ ಕಠಿಣ ಶಾಸನಗಳನ್ನೇರ್ಪಡಿಸುತ್ತಿದ್ದೀರಿ" ಎಂದರು.

ಅ|| ಸಪ್ರೂರವರು ಈ ಶಾಸನವನ್ನೇರ್ಪಡಿಸುವುದಕ್ಕೆ ಪ್ರಭುತ್ವದವರಿಗೆ ಅಧಿಕಾರವಿಲ್ಲವೆಂದು ಹೇಳಿದರು. ಅ|| ಕಪರ್ದಿಯವರು ಕೂಡ ಈ ಶಾಸನವನ್ನೇರ್ಪಡಿಸಲು ಈ ಸಭೆಯವರಿಗೂ ಮತ್ತು ಗೌರ್ನರ್ ಜನರಲ್‌ರವರ ಸಂಘದವರಿಗೂ ಕೂಡ ಅಧಿಕಾರವಿಲ್ಲವೆಂದು ನಿರೋಧಿಸುತ್ತ, ಅದನ್ನು ನಿರೂಪಿಸುವುದಕ್ಕೆ ಪ್ರಿವಿಕೌನ್ಸಿಲ್ಲಿನಲ್ಲಿ ಆನಿಬೆಸೆಂಟಮ್ಮನವರ ಪಕ್ಷದಿಂದ ಕೊಡಲ್ಪಟ್ಟಿದ್ದ ಒಂದು ವಿಜ್ಞಾಪನಪತ್ರದ ಆಧಾರವನ್ನು ತೋರಿಸಿದರು. ಆದರೆ ಪ್ರಿವಿಕೌನ್ಸಿಲ್ಲಿನವರು ಆ ವಿಜ್ಞಾಪನ ಪತ್ರವನ್ನು ನಿರಾಕರಿಸಿಬಿಟ್ಟ ಸಂಗತಿಯನ್ನು ಅ|| ಲವೆಂಡೆಸ್‌ರವರು ಹೇಳಲಾಗಿ ಅದು ನನಗೆ ತಿಳಿಯದೆಂದು ಕಪರ್ದಿಯವರು ಹೇಳಿದಾಗ ಸಭಿಕರೆಲ್ಲಾ ನಕ್ಕುಬಿಟ್ಟರು. ಅ|| ಶ್ರೀನಿವಾಸ ಶಾಸ್ತ್ರಿಯವರು—"ಈ ಶಾಸನದಿಂದ ಇನ್ನುಮುಂದೆ ರಾಜಕೀಯವಾದಿಗಳ ವಾಕ್ಪಟತ್ವವು ಇಂಗಿಹೋಗುವುವು. ಶಾಸನಸಭೆಯಮೇಲೆ ಅಧಿಕಾರಿಗಳು ತಮ್ಮಧಿಕಾರವನ್ನು ನಿರಂಕುಶವಾಗಿ ನಡೆಯಿಸುವುದು ತಪ್ಪಿ ಅವರುಗಳು ಶಾಸನಸಭೆಯ ಅಧಿಕಾರಕ್ಕೆ ಬದ್ಧರಾಗಿ ನಡೆಯುವಂತೆ ಎಂದಿಗಾಗುವುದೋ ಕಾಣೆ. ಅಧಿಕಾರಿಗಳು ನಮ್ಮ ಮಾತನ್ನೆಲ್ಲಾ ಕಿವಿಗೆ ಹಾಕಿಕೊಳ್ಳದೆ ಹಠದಿಂದ ಈ ಶಾಸನವನ್ನು ವ್ಯವಹಾರಕ್ಕೆ ತಂದರೆ ನಾನೂ ರಾಜಕೀಯಾಂದೋಳನಕಾರರ ಗುಂಪಿಗೆ ಸೇರಿ ಕೆಲಸಮಾಡದೆ ಇರುವುದಕ್ಕೆ ಹೇಗಾದೀತು?" ಎಂದು ಹೇಳಿದರು. ಹೀಗೆ ನಾನಾತರವಾಗಿ ಅನೌದ್ಯೋಗಿಕ ಸಭಿಕರೆಲ್ಲಾ ಪ್ರತಿಭಟಿಸಿ ಮಾತನಾಡಿದರೂ, ಸಭೆಯನ್ನು ಬಿಟ್ಟು ಎದ್ದುಹೋಗುವಂಥ ಸಣ್ಣತನವನ್ನೇನೂ ಅವರು ತೋರಿಸಲಿಲ್ಲ. ಇವುಗಳಿಗೆಲ್ಲಾ ಅ|| ಲವೆಂಡೆಸ್‌ರವರು ಉತ್ತರಕೊಡುವಾಗ್ಗೆ ಎಷ್ಟೋ ಶಾಂತಿಯಿಂದ ಮಾತನಾಡಿದುದಲ್ಲದೆ ಇಂಥ ಬೆದರಿಕೆಗಳಿಗೆಲ್ಲಾ ಪ್ರಭುತ್ವದವರು ಜಗ್ಗುವಹಾಗಿಲ್ಲವೆಂದು ಅಡಿತೋರಿಸಿದರು. ಪ್ರಭುತ್ವದವರು ಇಷ್ಟು ಕಠಿಣವಾದ ಪ್ರತಿವಾದಗಳನ್ನು ಇದುವರೆಗೆ ಯಾವಾಗಲೂ ಕೇಳಿದುದಿಲ್ಲವಾದರೂ ಅವರು ತೋರಿಸಿದ ಸಹನೆಯು ಅವರ ಸಾಂಕುಶ ರಾಜನೀತಿಗೆ ಒಪ್ಪುವಂತಿದ್ದಿತು. ಕಡೆಗೆ ಅ|| ಪಟೇಲರು ಮಾಡಿದ ಉಪಸೂಚನೆಗೆ ಒಪ್ಪುವವರೆಷ್ಟುಮಂದಿಯೆಂಬುದನ್ನು ಕೇಳಲಾಗಿ ಅತ್ತ ೨೨ ಮತಗಳೂ, ಒಪ್ಪದೆ ಇರುವುದಕ್ಕೆ ೩೮ ಮತಗಳೂ ದೊರೆದುದರಿಂದ ಪಟೇಲರ ಸೂಚನೆಯು ಬಿದ್ದುಹೋಯಿತು. ತದನಂತರ ಅ|| ವಿನ್ಸೆಂಟರು ಶಾಸನದ ಅವಶ್ಯಕತೆಯನ್ನು ಕುರಿತು ಇನ್ನೂ ಕೆಲ ವಿವರಣಗಳನ್ನು ಹೇಳಿ ಶಾಸನವು ದುರ್ಬಲವಾಗದಂತೆ ಇನ್ನಾವ ಸೌರಣೆಗಳನ್ನು ಮಾಡಲು ನೀವು ಸೂಚಿಸಿದರೂ ಮಾಡಲಾಗುವುದೆಂದು ತಿಳಿಯಿಸಿ, ಸಭಿಕರುಗಳು ಅನುಮತಿಯನ್ನೀಯಬೇಕೆಂದು ಕೇಳಿಕೊಳ್ಳಲಾಗಿ, ಬಾನರ್ಜಿಯವರು—ಹಾಗಾದರೆ ಈ ಶಾಸನವನ್ನು ಶಾಶ್ವತಗೊಳಿಸದೆ ತಾತ್ಕಾಲಿಕವಾಗಿ ಮಾಡುವಿರಾ? ಎಂದು ಕೇಳಲಾಗಿ, ಅದಕ್ಕೆ ವೈಸ್ರಾಯರ ಅಭಿಪ್ರಾಯವನ್ನು ಕೇಳಿ, ಸಂಧಿ ನಡೆದನಂತರ ೩ ವರ್ಷಗಳವರೆಗೆ ಇದು ವ್ಯವಹಾರದಲ್ಲಿರುವಂತೆ ಮಾಡಲಾಗುವುದೆಂದು ಉತ್ತರ ಕೊಡಲ್ಪಟ್ಟಿತು. ಅದರ ಮೇಲೆ ಶಾಸನಮಾಡುವುದಕ್ಕೆ ಸಭಿಕರ ಅನುಮತಿಯನ್ನು ಕೇಳಲು ೩೬ ಮಂದಿ ಒಪ್ಪಿದರು. ೨೧ ಮಂದಿ ಮಾತ್ರ ಒಪ್ಪದೆಹೋದರು. ಬಳಿಕ ಅದು ಶಾಸನವಾಗುವುದು ಸಿದ್ಧವಾಗಿ ಉಪಸಂಘದವರ ಪರ್ಯಾಲೋಚನೆಗೆ ಕಳುಹಿಸಲ್ಪಟ್ಟಿತು.

ತಾ|| ೧೧ನೆದಿನ ಕ್ರಿಮಿನಲ್‌ಲಾ ಅಮೆಂಡ್‌ಮೆಂಟ್ ಬಿಲ್ಲು ಕೂಡ ಚರ್ಚೆಗೊಂಡು ಅದರ ಮೇಲೂ ವಾದೋಪವಾದಗಳು ಹೀಗೆಯೇ ನಡೆದು ಕಡೆಗೆ ಅದೂ ಉಪಸಂಘದವರ ವಿಮರ್ಶೆಗೆ ಕಳುಹಿಸಲ್ಪಟ್ಟು ಶಾಸನವಾಗುವುದು ಸಿದ್ಧವಾಯಿತು.

ಹಿಂದೆ ದೇಶರಕ್ಷಣಶಾಸನವು ಏರ್ಪಡುವಾಗಲೂ ಸಭಿಕರು ಹೀಗೆಯೇ ಪ್ರತಿಭಟಿಸಿದರು. ಆದರೆ ಅದು ಶಾಸನವಾಗಿ ಏರ್ಪಟ್ಟ ಬಳಿಕ ಅದರಿಂದ ದೇಶಕ್ಕೆ ಉಂಟಾದ ಫಲವನ್ನು ಕಂಡು ಎಲ್ಲರೂ ಸಂತೋಷಿಸುವಂತಾಯಿತು. ಅದಕ್ಕೆ ಮುಂಚೆ ಎಲ್ಲೆಲ್ಲೂ ಕೇಳಬರುತ್ತಿದ್ದ ಸಿಡಿಮದ್ದುಗಳು, ಕೊಲೆ ಸುಲಿಗೆ, ವಿಪ್ಲವ, ರಹಸ್ಯಸಂಘ, ರಾಜದ್ರೋಹದ ಸಂಚುಗಳು ಮೊದಲಾದುವೆಲ್ಲಾ ಈ ಶಾಸನವು ತಲೆಯಿಕ್ಕಿದಮೇಲೆ ನಾಮಾವಶೇಷವಾಗುವ ಸ್ಥಿತಿಗೆ ಬಂದುವು. ಆ ಶಾಸನದ ಭಯದಿಂದ ಅಡಗಿರುವ ಆ ಅಪರಾಧಕೃತ್ಯಗಳು ಶಾಸನದ ಭೀತಿ ತಪ್ಪಿಹೋದ ಬಳಿಕ ಮರಳಿ ತಲೆದೋರದೆ ಇರುವುವೆಂದು ಹೇಳುವುದಕ್ಕೆ ಯಾರಿಗೆ ಧೈರ್ಯವಿರುವುದು? ಅಂಥ ದುರ್ಜನರ ಹಾವಳಿಯಿಂದ ದೇಶವು ತತ್ತರಿಸುವಂತಾದರೆ ದೇಶಾಭಿಮಾನಿಗಳು ನೋಡಿಕೊಂಡು ಸುಮ್ಮನಿರಬಹುದೆ? ಶಿಷ್ಟರಕ್ಷಣೆಗಾಗಿ ಪ್ರಭುತ್ವದವರು ಮುಂದೆಚ್ಚರಿಕೆಯಿಂದ ತಕ್ಕ ಸನ್ನಾಹವನ್ನು ಮಾಡಿಕೊಂಡಿರಬೇಕೆನ್ನುವಾಗ ಪ್ರಜೆಗಳು ಅದಕ್ಕೆ ಸಹಾಯಮಾಡಬೇಕಾದುದು ಧರ್ಮವೇ ಆಗಿರುವುದು. ಈ ಶಾಸನವನ್ನು ದುಷ್ಟನಿಗ್ರಹಕ್ಕಲ್ಲದೆ ಶಿಷ್ಟನಿಗ್ರಹಕ್ಕೆ ಎಂದಿಗೂ ವಿನಿಯೋಗಿಸುವುದಿಲ್ಲವೆಂದು ಹೇಳಿರುವ ಪ್ರಭುತ್ವದವರ ವಾಗ್ದಾನದಲ್ಲಿ ಪ್ರಜೆಗಳು ಭರವಸೆಯನ್ನಿಡಬೇಕಾದುದು ಧರ್ಮವಾಗಿರುವುದು. ಸರ್ಕಾರವೆಂದರೆ ಸವತಿಗಳಂತೆ ಮತ್ಸರಿಸುತ್ತ, ಅವರ ಕೆಲಸಗಳಿಗೆ ಮಾತುಮಾತಿಗೂ ಅಡ್ಡಿಯನ್ನೊಡ್ಡುತ್ತ, ಅವರಿಗೆ ಪ್ರತಿವಿರೋಧಿಸುವುದನ್ನೇ ದೇಶಾಭಿಮಾನವೆಂದು ತಿಳಿದುಕೊಂಡಿರುವವರೂ, ಅಪಕ್ವಮತಿಗಳಾದ ಅತ್ಯಾಚಾರಿಗಳೂ ಇಂಥ ಶಾಸನಗಳ ಉದಯವನ್ನು ಕಂಡು ಭಯಪಡಬೇಕಾಗಿದೆಯೇ ಹೊರತು ಶಿಷ್ಟಪ್ರಜೆಗಳು ಇದಕ್ಕೆ ಭಯಪಡಬೇಕಾದ ಕಾರಣವೇನೂ ಇರುವುದಿಲ್ಲ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಬಿಸಿಲು ತೀಕ್ಷ್ಣವಾಗಿದೆ. ಪ್ಲೇಗಿನ ಮರಣಗಳು ವಿರಳವಾಗಿ ಆಗುತ್ತಲಿವೆ.

ಮಹಾಮಾತೃಶ್ರೀಯವರು ಸಹೋದರರ ದೇಹಾರೋಗ್ಯವನ್ನು ವಿಚಾರಿಸಿಕೊಳ್ಳುವುದಕ್ಕಾಗಿ ಕಳೆದ ಭಾನುವಾರ ಮತ್ತೆ ಬೆಂಗಳೂರಿಗೆ ದಯಮಾಡಿಸಿದರೆಂದು ಕೇಳುತ್ತೇವೆ

ಮ|| ಎಸ್. ರಾಘವೇಂದ್ರರಾವ್ ಬಿ.ಎ. ಎ.ಸಿ.ಇ. ಬಿ.ಎಸ್.ಸಿ. ಯವರು ಬೆಂಗಳೂರು ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಆಹಾರ್ಯಧಾನ್ಯಗಳ ಒದಗಿಸುವಿಕೆ ಮೊದಲಾದ ವಿಷಯಗಳಲ್ಲಿ ಸಂಸ್ಥಾನದಲ್ಲೆಲ್ಲಾ ತಕ್ಕ ಏರ್ಪಾಟನ್ನು ನಡೆಯಿಸುವುದಕ್ಕೆ ನಮ್ಮ ಆಕ್ಟಿಂಗ್ ದಿವಾನರು ಪೂರ್ಣವಾಗಿ ಗಮನ ಕೊಟ್ಟಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಸಂಸ್ಥಾನದಲ್ಲಿ ಹಲವುಕಡೆ ಸುಗ್ಗಿ ಕಾಲವಾಗಿದ್ದರೂ ಆಹಾರ್ಯವಸ್ತುಗಳ ಬೆಲೆಯು ಹೆಚ್ಚಿ, ಮತ್ತೂ ಅವುಗಳು ತಕ್ಕಷ್ಟು ದೊರೆಯದೆ ಹಾಹಾಕಾರವು ಹೆಚ್ಚುತ್ತಿರುವುದು. ಅಕ್ಕಿಯನ್ನು ಬರ್ಮಾ-ಬಂಗಾಳಾ-ಮದ್ರಾಸಾದಿಪತ್ತನಗಳಿಂದ ನಮ್ಮ ದೇಶಕ್ಕೆ ತರಿಸಲು ಸರ್ಕಾರದವರು ಏರ್ಪಡಿಸಿರುವರು.

ಡಾಕ್ಟರುಗಳಾದ ಎಸ್. ಸುಬ್ಬರಾಯರು ಮೈಸೂರು ಕೃಷ್ಣರಾಜ ವೈದ್ಯಾಲಯದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟಿಗೂ, ಅಲ್ಲಿದ್ದ ಸಿ. ಅಪ್ಪಾದೊರೆ ಮೊದಲಿಯಾರರು ಚಿತ್ರದುರ್ಗಕ್ಕೂ, ಮ|| ಟಿ. ವಿ. ಕುಪ್ಪುಸ್ವಾಮಿ ಮೊದಲಿಯಾರರು ಬೆಂಗಳೂರು ಡಿಸ್ಟ್ರಿಕ್ಟಿನಿಂದ ಮೈಸೂರು ಡಿಸ್ಟ್ರಿಕ್ಟಿಗೂ, ಮ|| ಡಿ. ಎಸ್. ಪುಟ್ಟಣ್ಣನವರು ಬೆಂಗಳೂರು ಡಿಸ್ಟ್ರಿಕ್ಟಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಡಾ|| ಇ. ಎಸ್. ಕೃಷ್ಣಸ್ವಾಮಯ್ಯರ್‌ರವರು ಕಳೆದ ತಾ|| ೧೩ ರಲ್ಲಿ ತಮ್ಮ ಕೆಲಸದಿಂದ ನಿವೃತ್ತರಾದರು. ಇವರ ಅಧಿಕಾರದವಧಿಯು ಹೆಚ್ಚಿಸಲ್ಪಡುವ ಸಂಭವವಿದ್ದರೂ ಇವರೇ ಅದನ್ನು ಸ್ವೀಕರಿಸಲಿಲ್ಲವೆಂದು ತೋರುತ್ತದೆ. ಆಡಂಬರಪ್ರಿಯರಲ್ಲದೆಯೂ ಸತ್ಯಸಂಧರಾಗಿಯೂ ಕೆಲಸದಲ್ಲಿ ವ್ಯಗ್ರರಾಗಿಯೂ ಇದ್ದ ಇವರ ಸರ್ವೀಸು ಮೈಸೂರು ದೇಶೀಯರಿಗೆ ತಪ್ಪಿಹೋದುದಕ್ಕಾಗಿ ಚಿಂತಿಸಬೇಕಾಗಿದೆ.

ಶ್ರೀಮನ್ನಿರಾನಿರಂಜನ ಜಗದ್ಗುರುಗಳವರ ಸ್ವಾರಿಯನ್ನು ಬರುವ ಮೇ ತಿಂಗಳು ತಾ|| ೨ ರಲ್ಲಿ ಬೆಂಗಳೂರು ನಗರಕ್ಕೆ ಬಿಜಯಮಾಡಿಸಿಕೊಳ್ಳಲು ಬೆಂಗಳೂರು ಪಟ್ಟಣದ ವೀರಶೈವ ಮಹಾಜನರು ಏರ್ಪಾಟನ್ನು ಮಾಡುತ್ತಿದ್ದಾರೆ. ಶ್ರೀಗಳ ಸತ್ಕಾರಕ್ಕೂ ಆ ಕಾಲದಲ್ಲಿ ನಡೆಯಿಸತಕ್ಕ ಸಮಾರಾಧನೆ ಮೊದಲಾದ ಏರ್ಪಾಟುಗಳಿಗೂ ೨೦ ಸಾವಿರ ರೂ. ಗಳವರೆಗೆ ಚಂದಾ ಕೂಡಿಸುವುದಕ್ಕೂ ಇತರ ಏರ್ಪಾಡುಗಳಿಗಾಗಿಯೂ ಕಳೆದವಾರ ವಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಭೆಗೂಡಿಸಿದ್ದರು.

ಕಳೆದ ಬುಧವಾರದ ದಿನ ಸಂತೇಪೇಟೆಯ ಬಸಮಯ್ಯನವರ ಸತ್ರದಲ್ಲಿ ಲೋಕಹಿತೈಷಿ ಮ|| ನಂಜುಂಡರಾಜೇ ಅರಸಿನವರೇ ಮೊದಲಾದ ದೊಡ್ಡ ಮನುಷ್ಯರೂ ಪ್ರಮುಖ ವರ್ತಕರೂ ಸೇರಿ ಧಾನ್ಯಗಳನ್ನು ಬಡಬಗ್ಗರಿಗೆ ಅನುಕೂಲವಾಗಿ ಸಿಕ್ಕುವಂತೆ ಮಾಡುವುದಕ್ಕೆ ಏನು ಮಾಡಬೇಕೆಂಬುದನ್ನು ಚರ್ಚಿಸಿ, ಅದಕ್ಕಾಗಿ ಉಪಪನ್ನರೂ ಧರ್ಮದೃಷ್ಟಿಯುಳ್ಳ ಮಹಾಜನರೂ ಷೇರುಗಳ ಮೂಲಕ ಕೆಲ ಸಹಸ್ರ ರೂಪಾಯಿಗಳನ್ನು ಕೂಡಿಸಿ, ಅದರಿಂದ ಬತ್ತವನ್ನೂ ರಾಗಿಯನ್ನೂ ಕೊಂಡು ಹೆಚ್ಚುಲಾಭವನ್ನಿಟ್ಟುಕೊಳ್ಳದೆ ಅಗ್ಗವಾದ ವಾದ ಬೆಲೆಗೆ ಮಾರಿಸುವಂತೆ ಏರ್ಪಡಿಸಬೇಕೆಂದು ನಿರ್ಧರಿಸಿರುವರು. ಸ್ತುತ್ಯವಾದ ಏರ್ಪಾಡು.

ಶೃಂಗೇರಿಯ ಸ್ಕೂಲಿಗೆ ಹಳೇಪೈಕದ ಕೆಲ ವಿದ್ಯಾರ್ಥಿಗಳು ಸೇರಿದುದರಮೇಲೆ ಅಲ್ಲಿಯ ಇತರ ವಿದ್ಯಾರ್ಥಿಗಳ ಪೋಷಕರು ನ್ಯಾಷನಲ್ ಸ್ಕೂಲನ್ನೊಂದನ್ನು ಹೊಸದಾಗಿ ಏರ್ಪಡಿಸಿಕೊಂಡು ತಮ್ಮ ಹುಡುಗರನ್ನು ಅಲ್ಲಿಗೆ ಸೇರಿಸಿಕೊಂಡ ವಿಷಯವಾಗಿ ಗೌರ್ನಮೆಂಟಿನವರು ನೂತನವಾಗಿ ಮಾಡಿರುವ ಅಪ್ಪಣೆಯು ಈಗತಾನೇ ನಮ್ಮ ಹಸ್ತಗತವಾಗಿದೆ. ಅದನ್ನು ಮುಂದಣವಾರದಲ್ಲಿ ಭಾಷಾಂತರಿಸಿ ಪ್ರಕಟಿಸುತ್ತೇವೆ. ಸರ್ಕಾರಿ ಸ್ಕೂಲುಗಳಿಗೆ ಎಲ್ಲ ವರ್ಗದ ವಿದ್ಯಾರ್ಥಿಗಳೂ ಸೇರಬೇಕು. ಅದಕ್ಕೆ ವಿರುದ್ಧವಾಗಿ ಮಾಡತಕ್ಕ ಪ್ರಯತ್ನಗಳನ್ನು ಸರ್ಕಾರದವರು ಅನುಮೋದಿಸುವುದಿಲ್ಲ ಮತ್ತು ಸಹಾಯವನ್ನು ಮಾಡುವುದಿಲ್ಲ. ಎಂದು ಅದರಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಗತಿಸಿದ ಸಾಹುಕಾರ್ ಬಚ್ಚಣ್ಣನವರ ಪತ್ನಿಯವರು ಬಹಳ ದಯಾಪರೆಯರೂ ಧರ್ಮದೃಷ್ಟಿಯುಳ್ಳವರೂ ಆಗಿದ್ದಾರೆ. ಇವರು ವಿದ್ಯಾರ್ಥಿಗಳ ವಾಸಕ್ಕಾಗಿ ಒಂದುನೂರು ಕೊಟಡಿಗಳುಳ್ಳ ಕಟ್ಟಡವೊಂದನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡಲು ಸಂಕಲ್ಪಿಸಿರುವುದಾಗಿ ಕೇಳಿ ಸಂತೋಷಿಸುತ್ತೇವೆ. ವಿದ್ಯೆಯಲ್ಲಿ ಬಹಳವಾಗಿ ಹಿಂದೆಬಿದ್ದಿರುವ ತಮ್ಮ ಕುಂಚಿಟಿಗ ಜನವರ್ಗದಲ್ಲಿ ಬಡವರಾದ ಹುಡುಗರಿಗೆ ಅನ್ನ ಬಟ್ಟೆಗಳು ಶಾಶ್ವತವಾಗಿ ದೊರೆಯುವಂತೆಯೂ, ಈ ಕಟ್ಟಡದಲ್ಲಿ ವಾಸಮಾಡಿಕೊಂಡು ವಿದ್ಯಾಭ್ಯಾಸ ಮಾಡುವಂತೆಯೂ ಏರ್ಪಡಿಸಿದರೆ ಆ ಸಹಾಯದಿಂದ ಮುಂದಕ್ಕೆ ಬರುವ ನೂರಾರು ಕುಟುಂಬಗಳನ್ನು ಉದ್ಧರಿಸಿದ ಕೀರ್ತಿಯೂ ಪುಣ್ಯವೂ ಇವರಿಗೆ ಬರುವುದರಲ್ಲಿ ಸಂಶಯವಿಲ್ಲ. ಈ ವಿಷಯಕ್ಕೆ ಅವರೂ ಅವರ ಆಪ್ತಬಂಧುವರ್ಗದವರೂ ಮುಖ್ಯವಾಗಿ ಗಮನ ಕೊಡದಿರಲಾರರೆಂದು ನಂಬುತ್ತೇವೆ.

ವೈಸ್ರಾಯರ ಉಪನ್ಯಾಸ.

ದಿಲ್ಲಿಪಟ್ಟಣದಲ್ಲಿ ವೈಸ್ರಾಯರ ಅಧ್ಯಕ್ಷತೆಯಿಂದ ಈ ಸಭೆಯು ಕಳೆದ ತಾ|| ೬ ರಲ್ಲಿ ಆರಂಭಿಸಲ್ಪಟ್ಟಿತು. ಸಭಾರಂಭಕಾಲದಲ್ಲಿ ವೈಸ್ರಾಯರು ಮಾಡಿದ ಭಾಷಣದಲ್ಲಿ ಕೆಲವು ಮುಖ್ಯವಾದ ಸಂಗತಿಗಳು ಸೂಚಿಸಲ್ಪಟ್ಟುವು. ಅವರು ಉಪನ್ಯಾಸದ ಮೊಟ್ಟಮೊದಲೇ ಸರ್ ಸಿನ್ಹರವರಿಗೆ ಲಾರ್ಡ್ ಪದವಿಯೂ ಅಂಡರ್‌ಸ್ಟೇಟ್ ಸೆಕ್ರೆಟರಿ ಪದವಿಯೂ ಲಭಿಸಿದುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುವರು. ಆ ಸಭೆಯ ಸಭಿಕರ ಸಭ್ಯತನದ ಕಾಲಾವಧಿಯನ್ನು ೧೯೨೦ ನೆ ಜುಲೈ ತಾ|| ೨೦ ರವರೆಗೆ ಹೆಚ್ಚಿಸಿದುದಕ್ಕೆ ಸ್ಟೇಟ್ ಸೆಕ್ರೆಟರಿಯವರ ಅನುಮತಿ ದೊರೆದಿರುವುದನ್ನು ತಿಳಿಯಿಸಿದರು. ಆ ಬಳಿಕ ರೌಲತ್ ಸಂಘದವರ ವರದಿಯಮೇಲೆ ಏರ್ಪಡಿಸಬೇಕಾಗಿರುವ ೨ ಮುಖ್ಯ ವಿಧಿಗಳ ಬಿಲ್ಲುಗಳು ಈ ಸಭೆಯಲ್ಲೇ ಉಪಪಾದಿಸಲ್ಪಡಲಿಕ್ಕಿವೆಯೆಂಬುದನ್ನು ಹೇಳುವಾಗ ಅದನ್ನು ಇಷ್ಟು ಅವಸರವಾಗಿ ಏರ್ಪಡಿಸುವುದಕ್ಕೆ ಕಾರಣವನ್ನು ಹೀಗೆ ಹೇಳಿದರು— "ಯುದ್ಧಕಾಲದಲ್ಲಿ ಏರ್ಪಡಿಸಲ್ಪಟ್ಟಿದ್ದ ದೇಶರಕ್ಷಣ ಶಾಸನದ ಕಾಲಾವಧಿಯು ಇಷ್ಟರಲ್ಲೇ ಮುಗಿದುಹೋಗುತ್ತದೆ. ಅಂಥ ಅಧಿಕಾರವನ್ನೇ ಕೊಡತಕ್ಕ ಮತ್ತೊಂದು ಶಾಸನವು ಮುಖ್ಯವಾಗಿ ದೇಶಶಾಂತಿ ರಕ್ಷಣೆಗೆ ಇರಬೇಕಾದುದು ಅವಶ್ಯಕವಾಗಿದೆ. ಅಂಥ ಶಾಸನವಿಲ್ಲದಿದ್ದರೆ ಅರಾಜಕರ ಗುಂಪು ಮತ್ತೊಂದುಸಲ ಸ್ವೇಚ್ಛೆಯಿಂದ ವಿಜೃಂಭಿಸುವುದಕ್ಕೆ ಅವಕಾಶವಾಗಬಹುದು. ಈಗ ನಾಗರಿಕದೇಶಗಳನೇಕಗಳಲ್ಲಿ ಅಧಿಕಾರವನ್ನು ತಿರಸ್ಕಾರ ಮಾಡತಕ್ಕ ಭಾವವು ತೀವ್ರವಾಗಿ ತಲೆಯಿಕ್ಕಿರುತ್ತದೆ. ಅಂಥ ಭಾವವು ಭರತಖಂಡದಲ್ಲೂ ಕೂಡ ಹುಟ್ಟದೆ ಇರಲಾರದು. ಈ ಭರತಖಂಡದಲ್ಲೂ ವಿಪ್ಲವವನ್ನುಂಟುಮಾಡಬೇಕೆಂಬ ಉದ್ದೇಶವುಳ್ಳ ಪ್ರಯತ್ನಗಳು ಇಲ್ಲದೆ ಇಲ್ಲ. ಅಂಥ ಪ್ರಯತ್ನವಿಲ್ಲವೆಂದು ಹೇಳಲು ಅವಕಾಶವಿಲ್ಲ. ಅಂಥ ಅರಾಜಕತನವನ್ನು ನಿರ್ಮೂಲಮಾಡಲು ಇಂಡ್ಯಾ ಸರ್ಕಾರದವರು ತಕ್ಕ ಏರ್ಪಾಟನ್ನು ಮಾಡದಿದ್ದರೆ ಅವರು ತಮ್ಮ ಕರ್ತವ್ಯವನ್ನು ನೆರವೇರಿಸಿದವರಾಗುವುದಿಲ್ಲ. ಅದಕ್ಕಾಗಿ ನಾನು ಬಹಳದೂರ ಆಲೋಚಿಸಿ ನೋಡಿದೆನು. ಈ ದೇಶದಲ್ಲಿ ಆಂಗ್ಲಪ್ರಭುತ್ವಕ್ಕೆ ಭಂಗಬರದೆ ಇರಬೇಕಾದರೂ ಪ್ರಜೆಗಳ ಅರ್ಥ ಪ್ರಾಣಗಳನ್ನು ಕಾಪಾಡಬೇಕಾದರೂ ಇಂಥ ಶಾಸನವು ಇದ್ದೇ ತೀರಬೇಕೆಂದು ನಾನು ನಿಶ್ಚಯಿಸಿದೆನು. ಅದುಕಾರಣ ನೀವುಗಳೆಲ್ಲಾ ಅವುಗಳ ವಿಷಯವಾಗಿ ಅತಿ ಶ್ರದ್ಧೆಯಿಂದ ಆಲೋಚಿಸಬೇಕೆಂದು ಕೋರುತ್ತೇನೆ" ಎಂದು ಹೇಳಿದರು. ಆಯುಧಶಾಸನ ವಿಷಯವಾಗಿ-ಕಳೆದ ಅಧಿವೇಶನದಲ್ಲಿ ಈ ಸಭೆಯವರು ಮಾಡಿದ ತೀರ್ಮಾನವನ್ನನುಸರಿಸಿ, ಏರ್ಪಡಿಸಲ್ಪಟ್ಟ ಪ್ರತ್ಯೇಕ ಸಂಘದವರು ಕೊಟ್ಟ ವರದಿಯಮೇಲೆ ನಮ್ಮ ಸೂಚನೆಯನ್ನು ಸ್ಟೇಟ್ ಸೆಕ್ರೆಟರಿಯವರಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಅದರ ಫಲಿತಾಂಶವು ಪ್ರಕಟವಾದಮೇಲೆ ನಾವು ಶಕ್ತಿವಂಚನೆಯಿಲ್ಲದೆ ಅದರ ವಿಷಯದಲ್ಲಿ ಕೆಲಸಮಾಡಿದ್ದೇವೆಂಬುದು ನಿಮಗೆ ಗೊತ್ತಾಗುವುದು ಎಂದು ಹೇಳಿದರು. ತದನಂತರ ಬಾಲವಿದ್ಯಾಭ್ಯಾಸವನ್ನು ನಿರ್ಬಂಧಪಡಿಸುವ ವಿಷಯದಲ್ಲಿ ಅವರು ಹೇಳಿದ ಮಾತುಗಳು ಬಹಳ ಸಂತೋಷಪ್ರದವಾಗಿದ್ದುವು ಅವೇನೆಂದರೆ— "ಬೊಂಬಾಯಿ ಅಧಿಪತ್ಯದಲ್ಲಿ ಶಾಸನನಿರ್ಮಾಣ ಸಭೆಯಲ್ಲಿ ಅ|| ಪಟೇಲ್‌ರವರ ತೀರ್ಮಾನದ ಪ್ರಕಾರ ಯಾವ ಪುರಪಾಲಕ ಸಂಘಗಳು ಬಾಲವಿದ್ಯಾಭ್ಯಾಸವನ್ನು ನಿರ್ಬಂಧವಾಗಿ ಮಾಡಿಸುವುದಕ್ಕೆ ಅಪೇಕ್ಷಿಸುವುವೋ ಅವುಗಳಿಗೆಲ್ಲಕ್ಕೂ ಅನುಮತಿಯನ್ನು ಬೊಂಬಾಯಿ ಸರ್ಕಾರದವರು ಕೊಡಲು ನಿಶ್ಚಯಿಸಿರುವರು. ಬೀಹಾರು ಪ್ರಾಂತಕ್ಕೂ ಇಂತಹ ರೀತಿಯದೇ ಮತ್ತು ಅದಕ್ಕಿಂತಲೂ ಅಧಿಕಾವಕಾಶವುಳ್ಳ ಮತ್ತೊಂದು ವಿಧಿಯನಿರ್ಮಾಣಕ್ಕೆ ನಾನುಅನುಮತಿಯನ್ನು ಕೊಟ್ಟಿರುವೆನು. ಉಳಿದ ಪ್ರಾಂತಗಳಿಂದಲೂ ಈ ಸಂಬಂಧವಾದ ಬಿಲ್ಲುಗಳು ಕೆಲವು ಬಂದಿವೆ. ಮತ್ತ ಕೆಲವು ಬರುವುದರಲ್ಲಿವೆ. ಸಂಯುಕ್ತಪ್ರಾಂತ ಪಂಜಾಬುಪ್ರಾಂತಗಳಲ್ಲಿ ಇದುವರೆಗೆ ಬಾಲವಿದ್ಯಾಭ್ಯಾಸವು ಬಹಳ ಹಿಂದೆ ಬಿದ್ದಿದ್ದಿತು. ಈಗ ಆವೆರಡು ರಾಷ್ಟ್ರಗಳಲ್ಲೂ ಕೆಲಸವು ಚುರುಕಾಗಿ ನಡೆಯುವುದಕ್ಕೆ ಏರ್ಪಾಟು ಮಾಡಲ್ಪಟ್ಟಿದೆ. ನಿರ್ಬಂಧವಿದ್ಯಾಭ್ಯಾಸ ಶಾಸನಕ್ಕೆ ಅನುಮತಿಯನ್ನು ಕೋರುವ ರಾಷ್ಟ್ರಗಳೆಲ್ಲವೂ ಅದಕ್ಕೆ ತಕ್ಕ ಏರ್ಪಾಟುಗಳನ್ನೆಲ್ಲಾ ಸಿದ್ಧಪಡಿಸಿಕೊಂಡಿರಬೇಕಾದುದು ಅವಶ್ಯಕವು. ಇದಕ್ಕೆ ಮುಖ್ಯವಾಗಿ ಶಿಕ್ಷಣವಿದ್ಯೆಯಲ್ಲಿ ಉತ್ತೀರ್ಣರಾದ ಉಪಾಧ್ಯಾಯರುಗಳು ಬೇಕು. ಈಗ ದೇಶಭಾಷೋಪಾಧ್ಯಾಯರುಗಳಲ್ಲಿ ೧೦೦ ಕ್ಕೆ ೩೩ ಮಂದಿ ಮಾತ್ರವೇ ಅಂಥ ಪರೀಕ್ಷೆಯನ್ನು ಕೊಟ್ಟವರಿದ್ದಾರೆ. ಈಗ ಯುದ್ಧವು ಮುಗಿದಿದೆ. ಇನ್ನು ಬಾಲವಿದ್ಯಾವ್ಯಾಪನೆಯನ್ನು ವಿಶೇಷವಾಗಿ ಮಾಡಿಸಬೇಕಾಗಿದೆ. ಅದಕ್ಕಾಗಿ ದೇಶಭಾಷೋಪಾಧ್ಯಾಯರನ್ನು ಶಿಕ್ಷಣವಿದ್ಯೆಯಲ್ಲಿ ಅಣಿಮಾಡತಕ್ಕ ಪಾಠಶಾಲೆಗಳ ಸಂಖ್ಯೆಯನ್ನು ೨-೩ ಭಾಗ ಹೆಚ್ಚಿಸಬೇಕು. ಪಾಠಶಾಲೆಗಳಿಗೆ ಮುಖ್ಯಾಂಗವೇ ಉಪಾಧ್ಯಾಯರು. ಅಂಥ ಉಪಾಧ್ಯಾಯರು ಸಮರ್ಥರಾಗಿಲ್ಲದಿದ್ದರೆ ಪಾಠಶಾಲೆಗಳಿಗಾಗಿ ಮಾಡಲ್ಪಡುವ ವೆಚ್ಚವೆಲ್ಲಾ ವ್ಯರ್ಥವಾಗುವುದು. ಈ ವರ್ಷ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸುವುದಕ್ಕೂ ಅವರ ಶಿಕ್ಷಣ ವಿದ್ಯಾಭಿವೃದ್ಧಿಗೂ ಸಹ ೩ ಕೋಟಿ ರೂ. ಗಳನ್ನು ವೆಚ್ಚಮಾಡಬೇಕೆಂದು ಏರ್ಪಡಿಸಿದ್ದೇವೆ."

ಬಳಿಕ ಪರಿಶ್ರಮಾಭ್ಯುದಯ ವಿಷಯದಲ್ಲಿ ವೈಸ್ರಾಯರು ಕೆಲವು ಮಾತುಗಳನ್ನಾಡಿದುದರಲ್ಲಿ-ಈ ವಿಷಯಕವಾಗಿ ಏರ್ಪಟ್ಟಿದ್ದ ಸಂಘದವರು ಕೊಟ್ಟಿದ್ದ ಸೂಚನೆಗಳ ಪ್ರಕಾರ ಭರತಖಂಡ ಸರ್ಕಾರದವರು ಪರಿಶ್ರಮಾಭ್ಯುದಯಕ್ಕೆ ಹೆಚ್ಚು ಗಮನವನ್ನು ಕೊಡಬೇಕಾದುದು ಅತ್ಯವಶ್ಯಕವಾಗಿದೆಯೆಂತಲೂ, ಪರಿಶ್ರಮಾಭ್ಯುದಯಕ್ಕೆ ಮುಖ್ಯವಾಗಿ ಕೃಷಿಯು ಶಾಸ್ತ್ರೀಯಾನುಸಾರವಾಗಿ ಅಭಿವೃದ್ಧಿಗೊಳ್ಳಬೇಕಾಗಿರುವುದೆಂತಲೂ, ಕೃಷಿಪರಿಶ್ರಮಗಳೆರಡರ ಅಭ್ಯುದಯಕ್ಕೂ ರಾಸಾಯನಿಕ ಪಾರಿಭಾಷಿಕಾದಿ ಶಾಸ್ತ್ರಪರಿಶೋಧಕರ ಸಹಾಯವು ಅತ್ಯವಶ್ಯಕವಾದುದರಿಂದ ಅಂಥವರ ಶಾಖೆಯೊಂದನ್ನು ಮೊದಲು ಏರ್ಪಡಿಸಬೇಕೆಂದು ವರದಿಯಲ್ಲಿ ಕಂಡಿರುವ ವಿಷಯವು ಮುಖ್ಯವಾಗಿ ಗಮನೀಯವಾದುದೆಂತಲೂ, ಮತ್ತೂ ಆ ವರದಿಯಲ್ಲಿ ಕಂಡಪ್ರಕಾರವೇ ಭರತಖಂಡದ ಸರ್ಕಾರದವರು ಪಾರಿಶ್ರಾಮಿಕ ಶಾಖೆಯೊಂದನ್ನು ಏರ್ಪಡಿಸಬೇಕಾದುದು ಉಚಿತವಾಗಿರುವುದೆಂತಲೂ, ಈ ವಿಷಯದಲ್ಲಿ ಮುಖ್ಯವಾಗಿ ಪ್ರಾಂತಿಕ ಪ್ರಭುತ್ವಗಳು ಮುತುವರ್ಜಿಯನ್ನು ಶೀಘ್ರವಾಗಿ ವಹಿಸಬೇಕೆಂತಲೂ ಹೇಳಿ, ಪಾರಿಶ್ರಾಮಿಕಸಂಘದವರು ಮಾಡಿದ ಕೆಲಸಕ್ಕಾಗಿ ಅವರನ್ನು ವಂದಿಸಿದರು.

ತದನಂತರ ಭರತಖಂಡವು ಯುದ್ಧಕ್ಕಾಗಿ ಮಾಡಿದ ಸಹಾಯವನ್ನು ಸ್ವಲ್ಪಮಟ್ಟಿಗೆ ವಿಸ್ತರಿಸುವಾಗ್ಗೆ—ಯುದ್ಧವಿಷಯದಲ್ಲಿ ಭರತಖಂಡವು ಎಷ್ಟು ಅಧಿಕ ಸಹಾಯ ಮಾಡಿತೆಂಬುದನ್ನು ಪ್ರಪಂಚದವರು ಇನ್ನೂ ಚೆನ್ನಾಗಿ ಗ್ರಹಿಸಿಕೊಂಡಿಲ್ಲ. ಮೆಸಪಟೋಮಿಯಾ ರಂಗದಲ್ಲಿನ ಸೇನೆಯ ವಿಷಯವಾಗಿ ನಮಗೆ ಬಹಳ ಬಾಧ್ಯತೆ ಇದ್ದಿತು. ಆ ದೇಶದಲ್ಲಿ ಈಗಣಕಾಲದ ಸೈನ್ಯಕ್ಕೆ ಬೇಕಾಗುವಂಥ ಯುದ್ಧಸಾಮಗ್ರಿಗಳಾವುವೂ ಇಲ್ಲ. ಅಲ್ಲಿ ಬಂಡಿದಾರಿಗಳಾಗಲೀ ಲೋಹಮಾರ್ಗಗಳಾಗಲೀ ಸೇತುಗಳಾಗಲೀ ಹಡಗುಗಳ ಸಂಚಾರಸೌಕರ್ಯಗಳಾಗಲೀ ಯಾವುದೂ ಇಲ್ಲ. ಹಲಗೆಗಳು ಸಾಧಾರಣವಾದ ಕಲ್ಲುಗಳು ಕೂಡ ಸಿಕ್ಕುವುದಿಲ್ಲ. ದನಕರುಗಳು ಮೊದಲಾದುವುಗಳಿಗೆ ಹುಲ್ಲುಸವಿದೆಯೂ ಕೂಡ ಸಮೃದ್ಧವಾಗಿಲ್ಲ. ಅವನ್ನೆಲ್ಲಾ ಭರತಖಂಡದಿಂದಲೇ ಅಲ್ಲಿಗೆ ಸಾಗಿಸಿಕೊಡಬೇಕಾಯಿತು. ಹೀಗೆ ಅನೇಕಾನೇಕ ಸಾಮಗ್ರಿಗಳನ್ನು ಇಲ್ಲಿಂದ ಕಳುಹಿಸಿಕೊಡಬೇಕಾಗಿ ಬಂದುದರಿಂದ ಈ ದೇಶದ ಪ್ರಜೆಗಳಿಗೆ ತೊಂದರೆಯುಂಟಾಯಿತು. ಮತ್ತು ಪೂರ್ವದಂತೆ ವಿದೇಶವಸ್ತುಗಳು ಇಲ್ಲಿಗೆ ಸಮೃದ್ಧವಾಗಿ ಬರುವುದಕ್ಕೆ ಅವಕಾಶವಿಲ್ಲದೆ ಹೋಯಿತು. ಆ ವಿದೇಶಗಳಲ್ಲಿರುವ ಯಂತ್ರಾಲಯಗಳಲ್ಲೆಲ್ಲಾ ಯುದ್ಧಸಾಮಗ್ರಿಗಳೇ ನಿರ್ಮಿಸಲ್ಪಡಬೇಕಾಯಿತು. ಇಂಥ ವಿಷಮಸ್ಥಿತಿಯು ಬಂದುದರಿಂದ ಪ್ರಭುತ್ವದವರ ಬಾಧ್ಯತೆಯು ಬಹಳ ದುರ್ಭರವಾಯಿತು. ಕಲ್ಲಿದ್ದಲನ್ನು ಕೂಡ ಹಡಗುಗಳಲ್ಲಿ ಸೂಯೆಜ್ ಕಾಲ್ವೆಯ ಪೂರ್ವಭಾಗದೇಶಗಳಿಗೆ ಕಳುಹಿಸಿಕೊಡಬೇಕಾಗಿ ಬಂದುದರಿಂದ ಮತ್ತಷ್ಟು ಕಷ್ಟವು ಹೆಚ್ಚಿತು. ಅದರಿಂದ ಈ ದೇಶದ ಮುಖ್ಯಮುಖ್ಯವಾದ ಪರಿಶ್ರಮಗಳಿಗೆ ಕಲ್ಲಿದ್ದಲು ಸಿಕ್ಕದಂತಾಯಿತು. ಹೀಗೆ ಸ್ವದೇಶದ ಸರಕುಗಳು ಹೊರಕ್ಕೆ ವಿಶೇಷವಾಗಿ ಹೋಗಬೇಕಾದುದರಿಂದಲೂ, ಪರದೇಶದ ಸರಕುಗಳು ಬರುವುದು ಕಡಿಮೆಯಾದುದರಿಂದಲೂ ಪದಾರ್ಥಗಳ ಬೆಲೆಯು ಬಹಳ ಹೆಚ್ಚಿಹೋಯಿತು. ಅದರಿಂದ ಕೆಲವರು ಸಾಮಗ್ರಿಗಳನ್ನು ಶೇಖರಿಸಿಟ್ಟುಕೊಳ್ಳುವುದಕ್ಕುಪಕ್ರಮಿಸಿದರು. ಮಾರುವುದನ್ನು ನಿಲ್ಲಿಸಿಬಿಟ್ಟರು. ಸೈನ್ಯಗಳಿಗೆ ಬೇಕಾದ ಸಾಮಗ್ರಿಗಳು ಕೂಡ ಸಾವಕಾಶವಾಗಿ ದೊರೆಯುವುದಕ್ಕೂ ಕಷ್ಟವಾಯಿತು. ಇದರ ಮೇಲೆ ಹಡಗುಗಳಿಗೆ ಸಬ್‌ಮೆರೀನುಗಳ ಕಾಟವು ಬೇರೆ ಹೆಚ್ಚಾಯಿತು. ಇವುಗಳಿಂದೆಲ್ಲಾ ಭರತಖಂಡದ ಮೇಲೆ ಬಿದ್ದ ಭಾರವು ಬಹಳ ದುಸ್ಸಹವಾಯಿತು. ಯುದ್ಧಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಸ್ವದೇಶದಲ್ಲೇ ನಿರ್ಮಿಸಿಕೊಳ್ಳಬಲ್ಲ ದೇಶದವರು ಇಂಡ್ಯಾದೇಶದ ಬಾಧ್ಯತೆಯ ಭಾರವೆಷ್ಟೆಂಬುದನ್ನು ಸರಿಯಾಗಿ ತಿಳಿದುಕೊಳ್ಳಲಾರರು. ಹೊರಗಣಿಂದ ಬರಬೇಕಾದ ಸಾಮಗ್ರಿಗಳನ್ನೇ ಆಧಾರಮಾಡಿಕೊಂಡಿದ್ದ ಪೂರ್ವದ ಏರ್ಪಾಟುಗಳನ್ನು ಇಲ್ಲಿಯ ಪ್ರಭುತ್ವದವರೂ ಪ್ರಜೆಗಳೂ ಸಹ ಮಾರ್ಪಗೊಳಿಸಿಕೊಳ್ಳಬೇಕಾಯಿತು. ಕೆಲವಸ್ತುಗಳನ್ನು ಇಲ್ಲೇ ನಿರ್ಮಿಸಬೇಕಾಯಿತು. ಆದರೆ ಅದಕ್ಕೆ ತಕ್ಕ ಉಪಕರಣಗಳು ಇರಲಿಲ್ಲ. ಉಕ್ಕು ಕಬ್ಬಿಣ ಮೊದಲಾದ ಅನೇಕ ಸಾಮಗ್ರಿಗಳ ಉಪಯೋಗವನ್ನು ಮಿತಪಡಿಸಿಕೊಳ್ಳಬೇಕಾಯಿತು. ಕುಶಲರಾದ ಕಾರೇಗಾರರ ಸಹಾಯದಿಂದ ಮೂಲಪದಾರ್ಥಗಳನ್ನು ತಕ್ಕ ರೀತಿಯಲ್ಲಿ ಉಪಯೋಗಿಸಿಕೊಂಡೆವು. ಆಗ ಹಾಗೆ ಪ್ರಯತ್ನಮಾಡಿ ಪಡೆದುಕೊಂಡ ಅನುಭವದಿಂದ, ಅಂಥ ಕೆಲಸಗಳನ್ನೇ ಈ ದೇಶದಲ್ಲಿ ಇನ್ನು ಮುಂದೆ ಬೇಕಾದಷ್ಟು ಅಭಿವೃದ್ಧಿಪಡಿಸಿಕೊಳ್ಳಬಹುದಾಗಿದೆ. ಅದಕ್ಕಾಗಿಯೇ ಸರ್ಕಾರದವರು ವಿಶೇಷ ಶ್ರದ್ಧೆಯನ್ನು ವಹಿಸಿದರು. ಯುದ್ಧಕಾಲದಲ್ಲಿ ಭರತಖಂಡವೇ ವಿದೇಶವಸ್ತುಗಳಿಗಾಗಿ ನಿರೀಕ್ಷಿಸಿಕೊಂಡಿರದೆ, ಇಲ್ಲಿಯ ಅಪಕ್ವವಸ್ತುಗಳನ್ನು ಮಿತ್ರಮಂಡಲಿಯ ಎಲ್ಲ ದೇಶಗಳಿಗೂ ಕಳುಹಿಸಿಕೊಟ್ಟಿರುವುದು. ಇಂಗ್ಲೆಂಡಿಗೆ ೧ ಲಕ್ಷ ಟನ್ನು, ಇಟಲಿಗೆ ೪೪ ಸಾವಿರ ಟನ್ನುಗಳ ಚರ್ಮವನ್ನು ಕಳುಹಿಸಿಕೊಟ್ಟಿರುವುದು. ಅವುಗಳ ಬೆಲೆಯು ೨ ಕೋಟಿಯೂ ೧೦ ಲಕ್ಷ ಪೌನುಗಳು. ಆ ಚರ್ಮದಲ್ಲಿ ಬಹುಭಾಗವು ಈ ದೇಶದಲ್ಲೇ ಹದಮಾಡಲ್ಪಟ್ಟುದು. ಈ ಕೆಲಸಕ್ಕಾಗಿ ನಿಪುಣರಾದ ಕಾರೇಗಾರರನ್ನು ಯೋಜಿಸಿ, ತಕ್ಕ ಪರಿಶೋಧಕರನ್ನು ಸಹಾಯಗೊಳಿಸಿದ್ದೆವು. ಇನ್ನು ಮುಂದೆ ಈ ದೇಶದಲ್ಲಿ ಆ ಪರಿಶ್ರಮವನ್ನು ಶಾಶ್ವತಗೊಳಿಸಬೇಕಾಗಿದೆ. ಇಷ್ಟಲ್ಲದೆ ಈ ದೇಶದಿಂದ ರಣರಂಗಕ್ಕೆ ಬಹಳ ಸವಿದೆಯನ್ನೂ ಮನೆಕಟ್ಟುವ ತೊಲೆ ಜಂತಿ ಮೊದಲಾದ ಮುಟ್ಟುಗಳು ೨ ಲಕ್ಷ ಟನ್ನುಗಳಷ್ಟನ್ನೂ, ೧೮೦೦ ಮೈಲಿಗಳ ದೂರ ಲೋಹಮಾರ್ಗವನ್ನು ಹಾಕುವುದಕ್ಕೂ ೧೩ ಸಾವಿರ ಅಡಿಗಳಷ್ಟು ಸೇತುಗಳನ್ನು ಕಟ್ಟುವುದಕ್ಕೂ ಬೇಕಾದ ಎಲ್ಲ ಸಾಮಗ್ರಿಗಳನ್ನೂ ಈ ದೇಶದಿಂದಲೇ ಅಣಿಮಾಡಿ ಕೊಟ್ಟಿರುವೆವು. ೨೨೮ ಇಂಜನ್ನುಗಳನ್ನೂ ೫೯೦೦ ರೈಲುಬಂಡಿಗಳನ್ನೂ ಕೂಡ ಕಳುಹಿಸಿಕೊಟ್ಟಿರುವೆವು. ಸೇನೆಗೆ ಬೇಕಾದ ನೂಲಿನ ಬಟ್ಟೆಗಳನ್ನೆಲ್ಲಾ ಈ ದೇಶದ ಮಗ್ಗಗಳಿಂದಲೇ ನೆಯ್ಸಿ ಕಳುಹಿಸಿದೆವು. ಉಣ್ಣೆಯ ಬಟ್ಟೆಗಳಲ್ಲಿ ಬಹುಭಾಗವನ್ನು ಟಿಬೆಟ್ಟಿನ ಉಣ್ಣೆಯಿಂದ ಈ ದೇಶದಲ್ಲೇ ನೆಯ್ಸಿ ಕಳುಹಿಸಿದೆವು. ಒಟ್ಟು ೪ ಕೋಟಿಯೂ ೨೦ ಲಕ್ಷ ಉಡುಪುಗಳನ್ನು ನೆಯ್ಸಿ ಕಳುಹಿಸಿಕೊಟ್ಟಿರುವೆವು. ಇನ್ನು ಜನಸಹಾಯವೋ ಮುಖ್ಯಮಂತ್ರಿಯವರ ಕೋರಿಕೆಯ ಪ್ರಕಾರ ಕಳೆದ ೧೯೧೮ನೆ ಮಾರ್ಚ್ ತಿಂಗಳಾರಂಭದಿಂದ ೧೨ ತಿಂಗಳೊಳಗಾಗಿ ೫ ಲಕ್ಷ ಮಂದಿ ಸೈನಿಕರನ್ನು ಯುದ್ಧಮಾಡಲಣಿಯಾದವರನ್ನು ಕಳುಹಿಸಿಕೊಡುವುದಕ್ಕೆ ಸಾಮ್ರಾಜ್ಯಶಾಸನ ಸಭೆಯವರು ನಿರ್ಧರಿಸಿದರು. ಇದು ಸಾಧ್ಯವೆ? ಎಂದು ಕೆಲವರು ಸಂಶಯಪಟ್ಟರು. ೧೯೧೮ ನೆ ವರ್ಷ ಮುಗಿಯುತ್ತ ಬಂದರೂ ೨ ಲಕ್ಷದ ೬೬ ಸಾವಿರ ಮಂದಿ ಮಾತ್ರ ದೊರೆದುದರಿಂದ ಇದಕ್ಕಾಗಿ ಬಹು ಶ್ರದ್ಧೆ ವಹಿಸಿದುದಲ್ಲದೆ ೫ ಲಕ್ಷ ಮಂದಿಯನ್ನು ಕೂಡಿಸುವುದು ಕಷ್ಟವೆಂದು ತೋರಿದ ಕಾರಣ, ಅದರಂತೆ ಪ್ರಯತ್ನಿಸಲು ಮುಂದಣ ೬ ತಿಂಗಳಲ್ಲಿ ಉಳಿದ ೩ ಲಕ್ಷ ಮಂದಿಯೂ ಸೇರಿದರು. ಒಟ್ಟಿಗೆ ಯುದ್ಧಾರಂಭ ಕಾಲದಿಂದ ಕೊನೆಯವರೆಗೆ ಭರತಖಂಡವು ೧೨|| ಲಕ್ಷ ಮಂದಿಯನ್ನು ಕಳುಹಿಸಿಕೊಟ್ಟಿತು. ಇದು ಬಹಳ ಶ್ಲಾಘನೀಯವು. ಈಗ ಯುದ್ಧನಿಂತು ಸೈನಿಕರನ್ನು ಬಿಡುಗಡೆ ಮಾಡುವ ಕೆಲಸಕ್ಕೆ ಆರಂಭವಾಗಿದೆ. ಸಂಧಿಪತ್ರಕ್ಕೆ ಎಲ್ಲರ ರುಜುಗಳು ಬೀಳುವವರೆಗೂ ಸೈನ್ಯವನ್ನೆಲ್ಲಾ ಪೂರ್ತಿಯಾಗಿ ಒಡೆದುಬಿಡಲು ಅವಕಾಶವಿಲ್ಲ. ಇದುವರೆಗೆ ೫೦ ಸಾವಿರ ಮಂದಿ ಹಿಂದೂಸ್ಥಾನಿಕರು ಬಿಡಲ್ಪಟ್ಟಿದ್ದಾರೆ. ರಿಕ್ರೂಟಿಂಗ್ ಬೋರ್ಡು ತೆಗೆದುಹಾಕಲ್ಪಟ್ಟಿದೆ. ರಣರಂಗದಲ್ಲಿ ಸಾಹಸತೋರಿಸಿದ ಭಟರಿಗೂ ವಿಕಲಾಂಗರಾದವರ ಜೀವನಕ್ಕೂ ಮೃತರಾದವರ ಮಕ್ಕಳುಗಳಿಗೂ ಬಹುಮಾನಗಳು, ಭೂಮಿಗಳ ಜಹಗೀರಿಗಳು, ಪೆನ್ಷನ್ನುಗಳು, ಉಚಿತ ವಿದ್ಯಾಭ್ಯಾಸ ಮೊದಲಾದುವುಗಳನ್ನು ನಡೆಯಿಸಲು ತಕ್ಕ ಏರ್ಪಾಟುಗಳುಮಾಡಲ್ಪಟ್ಟಿವೆ" ಎಂದು ಹೇಳಿದಬಳಿಕ, ಯುದ್ಧದ ಭಾರವು ಕಡಿಮೆಯಾಗುತ್ತ ಬಂದ ಹೊತ್ತಿಗೆ ಲೋಕಭೀಕರವಾಗಿ ತಲೆಯಿಕ್ಕಿದ ಇನ್‌ಫ್ಲುಯೆನ್ಜಾ ವ್ಯಾಧಿಯ ವಿಷಯವಾಗಿ ವೈಸ್ರಾಯರು ಹೇಳುವಾಗ್ಗೆ, ಪ್ರಪಂಚದಲ್ಲೆಲ್ಲಾ ಅತ್ಯನರ್ಥವನ್ನು ಮಾಡಿದ ಈ ರೋಗದಿಂದ ಆದ ಪ್ರಾಣಹಾನಿಯ ಲೆಕ್ಕವು ಇನ್ನೂ ಸ್ಪಷ್ಟವಾಗಿ ಗೊತ್ತಾಗದಿದ್ದರೂ ಕೋಟ್ಯಂತರ ಜನರನ್ನು ಆಹುತಿ ತೆಗೆದುಕೊಂಡ ಈ ರೋಗದ ನಿರೋಧಕ್ಕಾಗಿ ವೈದ್ಯರುಗಳು ಪಟ್ಟ ಶ್ರಮವು ವಿಶೇಷವಾಗಿದ್ದಿತೆಂದು ವೈಸ್ರಾಯರು ಕೊಂಡಾಡಿ, ಇಂಥ ರೋಗಗಳ ಹಾವಳಿಯಿಂದ ವಿಶೇಷಾನರ್ಥವುಂಟಾಗದಂತೆ ಮಾಡಿಕೊಳ್ಳಬೇಕಾದರೆ ಗ್ರಾಮಾಂತರಗಳಲ್ಲಿ ಪಾರಿಶುದ್ಧ್ಯದ ಏರ್ಪಾಟು ಚೆನ್ನಾಗಿರಬೇಕೆಂತಲೂ ಅದನ್ನು ಸರ್ವರೂ ಗಮನಿಸಬೇಕೆಂತಲೂ, ಈ ರೋಗದ ಮೂಲವನ್ನು ಶೋಧಿಸಿ ಅದರ ನಿರ್ಮೂಲನಕ್ಕೆ ವೈದ್ಯರು ತಕ್ಕ ಪರಿಶೋಧನೆಯನ್ನು ಜರುಗಿಸಬೇಕಾಗಿದೆಯೆಂತಲೂ ಅಪ್ಪಣೆಕೊಡಿಸಿದರು.

ಕಟ್ಟಕಡೆಗೆ ಆಹಾರ್ಯವಸ್ತುಗಳ ಕ್ಷಾಮವನ್ನು ಕುರಿತು ಕೆಲಮಾತುಗಳನ್ನಾಡಿದರು. ಈ ದೇಶದಲ್ಲಿ ಮಳೆಬೆಳೆಗಳು ಸರಿಯಾಗಿ ಆಗದೆಹೋಗಿರುವುದರಿಂದಲೇ ಕ್ಷಾಮಹುಟ್ಟಿ ಬೆಲೆಗಳು ಏರಿಹೋಗಿವೆಯೆಂದೂ, ಬಡಬಗ್ಗರು ಜೀವಿಸುವುದು ಕಷ್ಟವಾಗಿದೆಯೆಂದೂ ಆದರೆ ಈಗ ಬಿದ್ದ ಮಳೆಯಿಂದ ಸ್ವಲ್ಪ ಅನುಕೂಲವಾಗಿರುವುದೆಂದೂ, ಇದರ ಬಾಧೆಯ ನಿವಾರಣೆಗೆ ಸರ್ಕಾರದವರು ಮಾಡಿರುವ ಏರ್ಪಾಟುಗಳನ್ನು ಅ|| ಕ್ಲಾಡ್‌ಹಿಲ್‌ರವರು ವಿವರಿಸಿ ಹೇಳುವವರೆಂದೂ ತಿಳಿಯಿಸಿ ಬಳಿಕ ವೈಸ್ರಾಯರು ಸಿವಿಲ್‌ಸರ್ವೀಸ್ ಉದ್ಯೋಗಿಗಳ ಸಂಬಂಧವಾಗಿಯೂ ರಾಜಕೀಯ ಸಂಸ್ಕರಣ ಸಂಬಂಧವಾಗಿಯೂ ಕೆಲ ಮಾತುಗಳನ್ನಾಡಿದರು. ಅದರಲ್ಲಿ—ಈಗ ಮಾಡಲ್ಪಡಬೇಕೆಂದಿರುವ ರಾಜಕೀಯ ಸುಧಾರಣೆಗಳಿಂದ ಸಿವಿಲ್‌ಸರ್ವೀಸ್ ಶಾಖೆಯವರ ಸ್ಥಿತಿಗಳಲ್ಲಿ ಕೆಲ ಮಾರ್ಪಾಟುಗಳಾಗುತ್ತವೆಂದು ಆ ಶಾಖೆಯವರು ದಿಗಿಲುಬೀಳಬೇಕಾದುದಿಲ್ಲವೆಂದೂ ಯುದ್ಧಸಮಯದಲ್ಲಿ ಈ ಶಾಖೆಯವರು ಮಾಡಿದ ಪ್ರಶಂಸನೀಯವಾದ "ಮೆಹನತ್ತನ್ನು" ನಾನು ಅಭಿನಂದಿಸುತ್ತೇನೆಂದೂ ಹೇಳಿ, ಸದ್ಯಃ ಭರತಖಂಡದಲ್ಲಿ ಕೆಲ ರಾಜಕೀಯ ವಾದಿಗಳು ಸಿವಿಲ್ ಅಧಿಕಾರಿಗಳನ್ನು ಧಿಕ್ಕಾರದಿಂದ ಕಾಣುತ್ತಿರುವುದಕ್ಕೆ ಉತ್ತರವೋ ಎಂಬಂತೆ ಕೆಲಮಾತುಗಳನ್ನಾಡಿರುವರು. ಅದೇನೆಂದರೆ—ಪಾರ್ಲಿಮೆಂಟಿನವರು ಕೊಡದೆ ಇರುವ ಅಧಿಕಾರವನ್ನು ಇಲ್ಲಿಯ ಸಿವಿಲ್‌ಸರ್ವೀಸಿನವರು ನಡೆಯಿಸುತ್ತಿದ್ದಾರೆಂದು ಇಲ್ಲಿಯ ಕೆಲವರು ಆಕ್ಷೇಪಿಸುತ್ತಾರೆ. ಚರಿತ್ರೆಯನ್ನು ಓದಿದವರಿಗೆಲ್ಲಾ ಈ ಆಕ್ಷೇಪವು ಅಕ್ರಮವಾದುದೆಂದು ಸ್ಪಷ್ಟವಾಗದೆ ಇರುವುದಿಲ್ಲ. ಭರತಖಂಡದಲ್ಲಿ ಪ್ರಜಾಪ್ರಭುತ್ವದ ಪ್ರತಿನಿಧಿಗಳಾಗಿ ಕೆಲಸಮಾಡುವುದಕ್ಕಾಗಿ ಇವರುಗಳನ್ನು ಪಾರ್ಲಿಮೆಂಟಿನವರು ಕಳುಹಿಸಿಕೊಟ್ಟಿರುವುದಿಲ್ಲ. ಮತ್ತೇನೆಂದರೆ ಭರತಖಂಡದ ಮೇಲೆ ಅಧಿಕಾರ ವಹಿಸಿರುವ ಪ್ರಭುತ್ವಕ್ಕೆ ಅಧೀನರಾಗಿ ಪರಿಪಾಲಿಸುವುದಕ್ಕಾಗಿಯೇ ಕಳುಹಿಸಿಕೊಟ್ಟಿದ್ದಾರೆ. ಅವರುಗಳು ಇದುವರೆಗೆ ಮಾಡಿರುವಷ್ಟು ಕೆಲಸವನ್ನು ಇತರರಾರೂ ಮಾಡಿರುವುದಿಲ್ಲ. ಬಾಧ್ಯತಾಯುಕ್ತ ಪ್ರಭುತ್ವವು ಎಷ್ಟು ಸ್ವಲ್ಪತರವಾಗಿ ಈ ದೇಶದಲ್ಲಿ ಪ್ರಾರಂಭಗೊಂಡರೂ ಆ ಕೂಡಲೇ ಈ ಸ್ಥಿತಿಯಲ್ಲಿ ಮಾರ್ಪುಂಟಾಗುವುದು. ಮಂತ್ರಿಗಳು ಈ ಉದ್ಯೋಗಿಗಳನ್ನು ನಿಯಮಿಸಿ ಕಳುಹಿಸಿರುವುದರಿಂದ ಅವರಾಜ್ಞೆಯನ್ನು ಇವರು ನೆರವೇರಿಸಬೇಕಾಗಿದೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಅನನುಭವಿಗಳೂ ಪ್ರತಿಕೂಲರೂ ಆದ ಮಂತ್ರಿಗಳ ಆಜ್ಞೆಗಳಿಗೆ ಸಿವಿಲ್ ಸರ್ವೀಸ್ ಶಾಖೆಯವರು ತಲೆಬಗ್ಗಿ ನಡೆಯಬೇಕೆಂದು ಏರ್ಪಡಿಸಿ ಇವರುಗಳ ಅಧಿಕಾರವನ್ನು ತೊಲಗಿಸಿಬಿಡುವುದೇ ಅಲ್ಲದೆ ಇವರ ಆತ್ಮಗೌರವಕ್ಕೂ ಭಂಗಕರವಾದ ಅಪ್ಪಣೆಯನ್ನು ವ್ಯವಹಾರಕ್ಕೆ ತರಬೇಕೆಂದು ನಾವು ಆ ಮಂತ್ರಿಗಳನ್ನು ಕೋರುತ್ತೇವೆಂದು ಯಾರೂ ತಿಳಿಯಬಾರದು. ಯಾವ ಸಂಸ್ಕರಣಗಳೂ ನಿರ್ಹೇತುಕವಾಗಿ ಮುಂದೆ ಜರುಗಲಾರವು. ಈ ದೇಶೀಯರು ತಮಗೆ ಕೊಡಲ್ಪಟ್ಟ ಅಧಿಕಾರವನ್ನು ಸರಿಯಾಗಿ ನಿರ್ವಹಿಸಿದರೆಂದು ನಿಷ್ಪಕ್ಷಪಾತಿಗಳಾದ ವಿದೇಶೀಯರು ನಿಶ್ಚಯಿಸಿದರೇ ಹೊರತು ಇವರಿಗೆ ಮರಳಿ ನೂತನಾಧಿಕಾರಗಳು ಕೊಡಲ್ಪಡುವುದಿಲ್ಲ. ಸದ್ಯಃ ಈ ದೇಶದ ಪರಿಪಾಲನವನ್ನು ಸಂಪೂರ್ಣವಾಗಿ ದೇಶೀಯರು ವಶಪಡಿಸಿಕೊಳ್ಳುವುದಕ್ಕೆ ತಕ್ಕ ಸ್ಥಿತಿಯು ಒದಗಿರುವುದಿಲ್ಲವೆಂಬುದನ್ನು ಇಲ್ಲಿಯ ಮಿತವಾದಿಗಳೂ ದೂರದೃಷ್ಟಿಯುಳ್ಳ ಭಾರತೀಯರೆಲ್ಲರೂ ಕೂಡ ಅಂಗೀಕರಿಸಿದ್ದಾರೆ. ರಾಜ್ಯಪರಿಪಾಲನವು ಅಷ್ಟು ಸುಲಭವಾದ ಕೆಲಸವಲ್ಲ. ಅಭ್ಯಾಸವೂ, ಸಾಮರ್ಥ್ಯವೂ, ನಿಷ್ಪಕ್ಷಪಾತಿತ್ವವೂ, ಸದ್ವರ್ತನವೂ, ಕಾರ್ಯನಿರತೆಯೂ ಉಳ್ಳ ಶಾಖೆಯವರು ಸಹಾಯಗೊಂಡಲ್ಲದೆ ಪರಿಪಾಲನ ಕ್ರಮವು ಶ್ಲಾಘನೀಯವಾಗಿ ಜರುಗದು. ಅಂಥ ಸಾಮರ್ಥ್ಯವು ಭಾರತೀಯರಿಗೆ ಈಗ ಇರುವುದಿಲ್ಲ. ಅದನ್ನು ಅವರು ಪಡೆದುಕೊಳ್ಳುವವರೆಗೂ ಸಿವಿಲ್‌ಸರ್ವೀಸ್ ಶಾಖೆಯವರನ್ನು ಬಿಟ್ಟಿರುವುದಕ್ಕೆ ಆಗಲಾರದು. ಇಲ್ಲಿಯ ಸಿವಿಲ್‌ಸರ್ವೀಸ್ ಶಾಖೆಯವರು ಈಗಣ ಸುಧಾರಣೆಯಿಂದ ತಮಗೇನೋ ಲೋಪವುಂಟಾಗುವುದೆಂದು ಭೀತಿಪಡಬೇಕಾದುದಿಲ್ಲ. ಅವರನ್ನು ಕಾಪಾಡುವುದಕ್ಕೆ ಈಗಣ ಸ್ಟೇಟ್‌ಸೆಕ್ರೆಟರಿಯವರೂ ನಾನೂ ತಕ್ಕ ನಿರ್ಧಾರವನ್ನು ಮಾಡಿಯೇ ಇದ್ದೇವೆ. ಆಂಗ್ಲದೇಶದಲ್ಲಿ ನಿಯಮಿತರಾಗಿ ಈ ದೇಶದ ಉದ್ಯೋಗಗಳಿಗೆ ಬಂದವರಿಗೆ ಸಂಬಳ ಪೆನ್ಷನ್ನು ರಜಾ ಮೊದಲಾದುವುಗಳನ್ನು ವಿಧಿಸುವ ಭಾಗವನ್ನೇರ್ಪಡಿಸುವುದಕ್ಕೆ ಸ್ಟೇಟ್‌ಸೆಕ್ರೆಟರಿಯವರಿಗೆ ಅಧಿಕಾರವಿರುವಂತೆ ಮಾಡಲ್ಪಡುವುದು. ಅವನ್ನು ವ್ಯತ್ಯಾಸಮಾಡುವುದಕ್ಕೆ ಭರತಖಂಡದವರಾರಿಗೂ ಸಾಮರ್ಥ್ಯವಿರಲಾರದು" ಎಂದು ಹೇಳಿ ಈ ಸಿವಿಲ್‌ಸರ್ವೀಸ್ ಶಾಖೆಯವರ ಅಧಿಕಾರಗೌರವಗಳಿಗೆ ಲೋಪವಿಲ್ಲದಿರುವಂಥ ಏರ್ಪಾಟುಗಳು ಈಗಣ ಸಂಸ್ಕರಣಗಳಲ್ಲೂ ಇರುವುವೆಂಬುದನ್ನು ಇನ್ನು ಕೆಲ ವಿವರಣೆಗಳಿಂದ ತಿಳಿಯಿಸಿ, ಅವರುಗಳಿಗೆ ಅಭಯವನ್ನು ವ್ಯಕ್ತಪಡಿಸಿದರು. ಅನಂತರ ಅದರಂತೆಯೇ ಈಗಣ ರಾಜಕೀಯ ಸುಧಾರಣೆಗಳಿಂದ ಈ ದೇಶದ ಆಂಗ್ಲವರ್ತಕರೂ ಭಯಪಡಬೇಕಾದುದಿಲ್ಲವೆಂಬುದನ್ನು ವಿವರಿಸುವಾಗ್ಗೆ, ಆಂಗ್ಲವರ್ತಕರಿಗೆ ನಷ್ಟವುಂಟಾಗದಂತೆ ನೋಡಿಕೊಳ್ಳುವುದಕ್ಕೆ ಪ್ರಾಂತಿಕಗೌರ್ನರುಗಳಿಗೆ ಪ್ರತ್ಯೇಕಾಧಿಕಾರವು ಕೊಡಲ್ಪಟ್ಟಿರುವುದೆಂದೂ, ಅಲ್ಲದೆ ವರ್ತಕಸಂಘ ಪ್ರತಿನಿಧಿಗಳು ರಾಷ್ಟ್ರೀಯ ಸಭೆಗಳಲ್ಲೂ ಸಭಿಕರಾಗಿದ್ದುಕೊಂಡು ತಮ್ಮ ಕರ್ತವ್ಯವನ್ನು ನೆರವೇರಿಸಿಕೊಳ್ಳುವುದಕ್ಕೆ ಅವಕಾಶವಿರುವುದೆಂದೂ ಹೇಳಿ ಅವರನ್ನು ಸಮಾಧಾನಪಡಿಸಿರುವರು.

ಕಡೆಗೆ ಈಗಣ ಯುದ್ಧದಲ್ಲಿ ಮಹಾ ವಿಜಯವನ್ನು ಸಂಪಾದಿಸುವುದಕ್ಕೆ ಆಂಗ್ಲರ ನೌಕಾಭೂದಳಸಾಮರ್ಥ್ಯಾತಿಶಯವೂ ಭರತಖಂಡದ ಸಹಾಯವೂ ಅತಿ ಮುಖ್ಯವಾದುವೆಂದು ಹೇಳಿ ಪ್ರಶಂಸೆಮಾಡಿ, ಸಂಧಿನಡೆದು ಸರ್ವರೂ ಯಥಾ ಪೂರ್ವದ ಶಾಂತಸ್ಥಿತಿಗೆ ಬರುವವರೆಗೂ ಉಚಿತಜ್ಞರಾದ ಸರ್ವರೂ ಇದುವರೆಗಣಂತೆಯೇ ಪ್ರಭುತ್ವಕ್ಕೆ ಸಹಾಯಕರಾಗಿರಬೇಕೆಂದೂ ಯೂರೋಪುಖಂಡದಲ್ಲಿ ತಲೆದೋರಿರುವ ಬೋಲ್ಷೆವಿಕ್ಕರ ತಂಟೆಗಳು ಭರತಖಂಡಕ್ಕೂ ವ್ಯಾಪಿಸಬಹುದೆಂದು ಭಯಪಡುವುದಕ್ಕೆ ಕಾರಣವೇನೂ ಇಲ್ಲವೆಂದೂ ಯುದ್ಧದಲ್ಲಿ ಪರಾಜಯಗೊಂಡ ದೇಶಗಳ ಪ್ರಜೆಗಳಿಗೆ ಬೋಲ್ಷೆವಿಕ್ಕರ ತೊಂದರೆಯೇ ಹೊರತು ಜಯಶೀಲರಾದ ದೇಶಗಳವರಿಗೆ ಅಂಥ ಭಾವಗಳು ಹುಟ್ಟುವುದಕ್ಕೆ ಕಾರಣವಿಲ್ಲವೆಂದೂ ಹೇಳಿ ಕೊನೆಗೆ ಈ ದೇಶದ ನಿಜಸ್ಥಿತಿಯನ್ನು ಒಂದು ಮಾತಿನಲ್ಲಿ ಚೆನ್ನಾಗಿ ಹೇಳಿರುವರು. ಏನೆಂದರೆ— "ಈ ದೇಶದ ಗ್ರಾಮಾಂತರ ಪ್ರಜೆಗಳನ್ನು ಏನನ್ನೂ ಅರಿಯದ ಮತ್ತು ನಿರುಪದ್ರವಕಾರಕರಾದ ಜನರೆಂದು ನಾನು ಸ್ಪಷ್ಟವಾಗಿ ತಿಳಿದಿರುವೆನು. ಅವರು ಈಗಣ ನವೀನ ನಾಗರಿಕತೆಯನ್ನು ತಿಳಿಯದವರು. ರಾಜಕೀಯಾದಿ ವಿಷಯಗಳ ಸಂಬಂಧವನ್ನೇ ಹಚ್ಚಿಕೊಂಡವರಲ್ಲ. ಅವರು ಅಶಾಂತಿಯನ್ನು ಹುಟ್ಟಿಸುವರೆಂಬುದು ಸ್ವಪ್ನದ ಮಾತು. ಎಷ್ಟೋ ವಿದೇಶೀಯರು ಈ ದೇಶವನ್ನು ಜಯಿಸಿದುದರಿಂದ ಈ ದೇಶೀಯರು ಆಗ ಬಹು ಕಷ್ಟನಷ್ಟಗಳನ್ನನುಭವಿಸಿದರು. ಅವರಿಗೆ ಶಾಂತಿಯೇ ಇರಲಿಲ್ಲ. ಈಗ ಸಂಪೂರ್ಣ ಶಾಂತಿಯು ಲಭಿಸಿದೆ. ಪ್ರಬಲವಾದ ಕಾರಣವು ಕಂಡ ಹೊರತು ಅವರು ಶಾಂತಿಯನ್ನು ಬಿಡುವವರಾಗಿಲ್ಲ, ಹೀಗೆಂಬ ಸಂಗತಿಯು ಈಗಣ ಯುದ್ಧದಿಂದ ದೃಢಪಟ್ಟಿದೆ."

ಪತ್ರವ್ಯವಹಾರ.

ಶ್ರೀಮದ್ವೀರಶೈವ ಶಿವಯೋಗಮಂದಿರದ ಮಹಾಶಿವರಾತ್ರಿಯ ಸಮಾರಂಭವು.

ವಾಡಿಕೆಯಂತೆ ಇದೇ ಮಾಘ ಬ|| ೧೪-೩೦ ಫಾಲ್ಗುಣ ಶು|| ೧ ಫೆಬ್ರವರಿ ತಾರೀಖು ೨೮, ಮಾರ್ಚಿ ತಾ|| ೧-೨ ನೇ ದಿವಸ ಇಲ್ಲಿ ಯಾತ್ರಾಸಮಾರಂಭವೂ, ಮಹಿಳಾಪರಿಷತ್ತೂ ಜರುಗುವವು. ವಕ್ತೃತ್ವ ಕಲೆಯುಳ್ಳ ಪಂಡಿತರ ವ್ಯಾಖ್ಯಾನ, ಪುರಾಣ, ಹಾಗೂ ಶಿವಕೀರ್ತನ, ಸಂಗೀತಭಜನೆಗಳೂ, ಧರ್ಮಗ್ರಂಥಗಳಲ್ಲಿ ಪರೀಕ್ಷೆಯೂ, ಮಂಗಲರಥೋತ್ಸವ ಮುಂತಾದ ಕಾರ್ಯಗಳೂ ಜರಗುವವು. ಕಾರ್ಯಕ್ರಮ—ಮಹಾಶಿವರಾತ್ರಿಯ ಶುಕ್ರವಾರದ ದಿವಸ ವಾಡಿಕೆಯಂತೆ ಸಾಯಂಕಾಲಕ್ಕೆ ಪಾದಪೂಜಾ, ರಾತ್ರಿ ಪುರಾಣ, ಕೀರ್ತನೆಗಳು. ವ ಶನಿವಾರ ೩೦ ದಿವಸ ಮುಂಜಾನೆ ಆಲೋಚನಾಸಭೆಯು, ಮಧ್ಯಾಹ್ನದ ೨ ಗಂಟೆಯಿಂದ ೩ ಗಂಟೆಯವರೆಗೆ ಬೇರೆಬೇರೆ ಸ್ಥಳಗಳಲ್ಲಿ ಸ್ತ್ರೀಯರ ಹಾಗೂ, ಪುರುಷರ ಧರ್ಮಗ್ರಂಥಗಳ ಪರೀಕ್ಷೆಯು, ಮತ್ತು ಭಾಷಣಗಳು, ೫ ಗಂಟೆಯಿಂದ ೭ ಗಂಟೆಯವರೆಗೆ ರಥೋತ್ಸವವು, ೯ ಗಂಟೆಯಿಂದ ಶಿವಕೀರ್ತನ, ಶು|| ೧ ರವಿವಾರ ಬೆಳಗ್ಗೆ ೭ ಗಂಟೆಯಿಂದ ೧೧ ಗಂಟೆಯವರೆಗೆ ಶ್ರೀ ಸಾಧಕರ ಹಾಗೂ, ವಟುಗಳ ಪರೀಕ್ಷೆಯು, ಉತ್ತಮ ಹೋರಿ ಮುಂತಾದವುಗಳ ಮಾರಾಟವು, ಆಲೋಚನಾಸಭೆಯು, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಇನಾಮು ಹಂಚಲ್ಪಡುವದು. ಮಧ್ಯಾಹ್ನದಲ್ಲಿ ಭಾಷಣವು, ಹೋರಿಗಳ ಮಾರಾಟವು, ರಾತ್ರಿ ೭ ರಿಂದ ೯ ರವರೆಗೆ ಕೀರ್ತನ ಮತ್ತು ವಾಹನೋತ್ಸವಗಳುನಡೆಯುವವು. ಆದುದರಿಂದ ಜನರಲ್ ಕಮಿಟಿಯ ಮೆಂಬರರೂ ಹಾಗೂ ಧರ್ಮಾಭಿಮಾನಿಗಳೂ ಆದ ತಾವು ತಮ್ಮ ಪ್ರಾಂತದ ಜನರೊಡನೆ

ಇತರ ಕ್ಷೇತ್ರಯಾತ್ರೆಗಳಿಗೆ ಹೋಗುವಂತೆ ಇಲ್ಲಿಗೆ ಕುಟುಂಬಸಹಿತರಾಗಿ ಬಂದು ಇಲ್ಲಿ ಜರಗುವ ಪುಣ್ಯಕಾರ್ಯಗಳ ಫಲಭಾಗಿಗಳಾಗಿ ಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕಾಗಿ ಕೋರುತ್ತೇನೆ. ಮಂದಿರವು ವಿಜಾಪೂರ ಜಿಲ್ಲಾ ಬಾದಾಮಿ ಸ್ಟೇಶನ್‌ನಿಂದ ೯ ಮೈಲು ಅಂತರದಲ್ಲಿದೆ. ಬಾಡಿಗೆಯ ಟಾಂಗಾ ಹಾಗೂ ಬಂಡಿಗಳು ಸ್ಟೇಶನ್ನದ ಮೇಲೆ ದೊರೆಯುವವು.

ಟೀಪು—ಪ್ರತಿವರ್ಷ ಪ್ರತಿಯೊಬ್ಬರಿಗೆ ಪತ್ರ ಬರೆಯುವ ಅವಶ್ಯವಿಲ್ಲ. ಆದರೆ ವರ್ತಮಾನ ಮಾಸಿಕ ಪತ್ರಗಳಲ್ಲಿ ಪ್ರಸಿದ್ಧಿಸಬೇಕೆಂದು ಗೊತ್ತಾದ ಪ್ರಕಾರ ಈ ವರ್ಷ ಯಾರಿಗೂ ಪತ್ರ ಬರೆದಿಲ್ಲ. ವ್ಯವಸ್ಥಾಪಕ.

ಬೀರೂರಿನ ೯ ನೆಯ ವೀರಶೈವ ಮಹಾಸಭೆ.

ಬೀರೂರಿನ ವೀರಶೈವ ಮಹಾಜನಗಳು ದಾವಣಗೆರೆಯಲ್ಲಿ ಜರುಗಿದ ೮ ನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ೯ ನೆಯ ಮಹಾಸಭೆಯನ್ನು ತಾವು ಕೂಡಿಸುವುದಾಗಿ ಕೇಳಿಕೊಂಡಿದ್ದರಷ್ಟೆ. ಆ ಪ್ರಕಾರ ಕಳೆದವರ್ಷ ಡಿಶಂಬರ್ ತಿಂಗಳಲ್ಲಿಯೇ ಈ ಮಹಾಶಯರು ತಾವು ವಹಿಸಿಕೊಂಡಿದ್ದ ಕಾರ್ಯವನ್ನು ಮಾಡಬೇಕಾಗಿದ್ದಿತು. ಆದರೆ ಮಹಾಮಹಾಸತ್ಪುರುಷರಿಂದಲೂ, ಮಹನೀಯರಿಂದಲೂ ನಿರೀಕ್ಷಿತವಾದ ಆ ವೀರಶೈವ ಮಹಾವೃಂದದಲ್ಲಿ ಇವರು ಮಾಡಿದ ಪ್ರತಿಜ್ಞೆಯನ್ನು ಭಂಗಪಡಿಸಬೇಕೆಂದು ಆ ದುಷ್ಟ ಇನ್‌ಫ್ಲುಯಂಜಾ ರೋಗವು ಪ್ರಯತ್ನಿಸಿತು. ಆದರೂ ಬೀರೂರಿನ ಮಹಾಶಯರು ಈ ವಿಘ್ನಕ್ಕೆ ಭಯಪಟ್ಟು ಹುರುಳಿಲ್ಲದವರಂತೆ ತಮ್ಮ ಪವಿತ್ರೋದ್ದೇಶವನ್ನು ಬಿಟ್ಟುಬಿಟ್ಟರೇನು? ಇಲ್ಲ; ಇಲ್ಲ. ಎಷ್ಟು ಎಡರುಗಳು ಬಂದರೂ ಕೈಕೊಂಡ ಸತ್ಕಾರ್ಯವನ್ನು ಉತ್ತಮರು ಬಿಡುವುದಿಲ್ಲವೆಂದು ಭರ್ತೃಹರಿಯು ಹೇಳಿಲ್ಲವೇ? ಅದರಂತೆಯೇ ಬೀರೂರಿನ ಸತ್ಸಂಕಲ್ಪರೂ, ದೃಢಪ್ರಯತ್ನರೂ ಆದ ವೀರಶೈವ ಮಹನೀಯರು, ಮಹಾಸಭೆಯ ಚಿರಸ್ಥಾಯಿಫಂಡಿನ ಮತ್ತು ಸ್ಟ್ಯಾಂಡಿಂಗ್‌ಕಮಿಟಿಯ ಅಧ್ಯಕ್ಷರುಗಳು ಪುನಃ ಯಾವಕಾಲವನ್ನು ಸೂಚಿಸುತ್ತಾರೆಯೋ ಆಗ ಮಹಾಸಭೆಯನ್ನು ಮಾಡುತ್ತೇವೆಂದು ಪ್ರಕಟಿಸಿ ತಾವು ಮಾಡಿರುವ ಪ್ರತಿಜ್ಞೆಯ ವಿಷಯದಲ್ಲಿ ತಮಗಿರುವ ಅಭಿಮಾನವನ್ನು ವ್ಯಕ್ತಗೊಳಿಸಿದರು. ಇದು ಆ ಮಹಾಜನರಿಗೆ ತುಂಬಾ ಭೂಷಣಪ್ರದವಾದುದಲ್ಲವೆ? ೯ ನೆಯ ಮಹಾಸಭೆಯನ್ನು ಇದೇ ಬರುವ ಬೇಸಗೆಯ ಕಾಲದಲ್ಲಿ ಮಾಡಬೇಕೆಂದು ಸ್ಟ್ಯಾಂಡಿಂಗ್ ಕಮಿಟಿಯವರು ಬೀರೂರಿನ ಮಹಾಜನಗಳಿಗೆ ತಿಳುಹಿಸಿರುವುದಾಗಿ ಕೇಳುತ್ತೇನೆ. ಅದು ಯುಕ್ತವಾದ ಕಾಲವಾಗಿಯೂ ಇದೆ. ಮೊದಲನೆಯ ಮಹಾಸಭೆಯು ಧಾರವಾಡದಲ್ಲಿ ಮೇ ತಿಂಗಳಲ್ಲಿಯೇ ಸೇರಿದ್ದಿತು. ಮಹಾಸಭೆಯ ಚಿರಸ್ಥಾಯಿಯ ವಿಷಯದಲ್ಲಿ ಯೋಚಿಸಿದರೆ ಈ ೯ ನೆಯ ಮಹಾಸಭೆಯೇ ಮೊದಲನೆಯ ಸಭೆಯೆಂದು ಹೇಳಿದರೆ ಅಯುಕ್ತವಾಗಲಾರದು. ಸಭೆಯ ಕಾಲವು ಸಮೀಪಿಸಿರುವುದರಿಂದ ಬೀರೂರಿನ ಮಹಾಜನಗಳು ಮುಂದಣ ಕಾರ್ಯಗಳನ್ನೆಲ್ಲಾ ಮಾಡುತ್ತಿರಬಹುದು. ಇದು ಸಾರ್ವಜನಿಕವಾದ ಮಹತ್ಕಾರ್ಯವಿರುವುದರಿಂದ ಎಷ್ಟರವರೆಗೆ ನಡೆದಿದೆಯೆಂಬುದನ್ನು ತಿಳಿದುಕೊಳ್ಳಲು ಸಮಾಜಹಿತಚಿಂತಕರೆಲ್ಲಾ ಅಪೇಕ್ಷಿಸುವುದು ಸಹಜವಾಗಿದೆ. ಆದುದರಿಂದ ಬೀರೂರಿನ ಮಹಾಜನಗಳು ಮಹಾಸಭೆಯ ಸಂಬಂಧವಾಗಿ ನಡೆಯುವ ಕಾರ್ಯಗಳನ್ನು ಇನ್ನುಮೇಲಾದರೂ ಆಗಾಗ್ಗೆ ಪತ್ರಿಕೆಗಳಲ್ಲಿ ಪ್ರಕಟಿಸುವರೆಂದು ನಂಬಿದ್ದೇನೆ. ಈ ಸಾರೆಯ ಬೀರೂರಿನ ಮಹಾಸಭೆಯು ಅತ್ಯಂತ ಪ್ರಾಮುಖ್ಯವುಳ್ಳದ್ದಾಗಿದೆ. ಆದುದರಿಂದ ಕೇವಲ ಉಪನ್ಯಾಸದ ವಿಷಯಗಳನ್ನಿಟ್ಟು ಕಾಲಕಳೆಯುವುದಕ್ಕಿಂತ ಈ ಕೆಳಗಣ ಎರಡೇ ಸಂಗತಿಗಳನ್ನು ತೀರ್ಮಾನಿಸುವುದು ತುಂಬಾ ಫಲಕಾರಿಯೆಂದು ತೋರುತ್ತದೆ. (೧) ಮಹಾಸಭೆಯ ಚಿರಸ್ಥಾಯಿ ಫಂಡಿನ ಏರ್ಪಾಟು ಮತ್ತು ಮಹಾಸಭೆಯ ನಿಬಂಧನೆ. (Constitution) ಈ ವಿಷಯವನ್ನು ಜಾಗ್ರತೆ ಕ್ರಮಗೊಳಿಸದಿದ್ದರೆ ಯಾವ ಮಹನೀಯರು ಸಮಾಜೋನ್ನತಿಗಾಗಿ ಬಹು ಉದಾರಬುದ್ಧಿಯಿಂದ ಸಹಸ್ರಾವಧಿ ರೂ. ಗಳನ್ನು ಕೊಟ್ಟಿರುವರೋ ಅವರ ಉದ್ದೇಶವು ಸಾರ್ಥಕವಾದಂತಾಗುವುದೇ? ವಾಗ್ದಾನವನ್ನು ಮಾಡಿರುವ ಉಳಿದ ಮಹನೀಯರು ದ್ರವ್ಯವನ್ನು ಕೊಡಲು ಸಂದೇಹಗೊಳ್ಳಲಾರರೇ? ಕಳೆದ ಡಿಶಂಬರ್ ತಿಂಗಳಲ್ಲಿಯೇ ಮಹಾಸಭೆಯು ಸೇರಿ ಅಲ್ಲಿ ಈ ಫಂಡಿನ ವ್ಯವಸ್ಥೆಯಾಗದಿದ್ದುದರಿಂದ ಈಗಾಗಲೇ ಈ ಚಿರಸ್ಥಾಯಿ ಫಂಡಿನ ಉಪಯೋಗದ ವಿಷಯದಲ್ಲಿ ಅನೇಕರು ಶಂಕಿಸುತ್ತಿರುವರು. ಹೀಗಿರುವಾಗ ಈ ವಿಷಯವನ್ನು ಕೂಡಲೇ ನಿರ್ಣಯಿಸದಿದ್ದರೆ ಅವರ ಶಂಕೆಯು ಯಥಾರ್ಥವಾದದ್ದಾಗಿ ಪರಿಣಮಿಸಲಿಕ್ಕಿಲ್ಲವೇ? ಮತ್ತು ಸಮಾಜದ ಪ್ರಮುಖರಿಗೆ ಇದೊಂದು ಭಾರವಾಗಿಯೇ ಉಳಿಯಲಿಕ್ಕಿಲ್ಲವೇ! ಆದ ಪ್ರಯುಕ್ತ ಈ ಫಂಡಿನ ಏರ್ಪಾಟನ್ನೂ ಮತ್ತು ಮಹಾಸಭೆಯ ನಿಬಂಧನೆಗಳನ್ನೂ ಆದಷ್ಟು ಜಾಗ್ರತೆ ಮಾಡುವುದು ಪ್ರಥಮಕರ್ತವ್ಯವಾಗಿದೆ. ಈ ಫಂಡು ಮತ್ತು ನಿಬಂಧನೆಗಳೇ ಸಮಾಜಪುರುಷನನ್ನು ಶ್ರೇಷ್ಠಸ್ಥಿತಿಗೆ ತೆಗೆದುಕೊಂಡು ಹೋಗುವ ನಮ್ಮ ಮಹಾಸಭೆಯೆಂಬ ದಿವ್ಯರಥದ ಉಭಯಚಕ್ರಗಳು. ಇವು ಎಷ್ಟು ಭದ್ರವಾಗಿಯೂ, ಕ್ರಮವಾಗಿಯೂ ಇರುತ್ತವೆಯೋ ಅಷ್ಟು ಸುರಕ್ಷಿತವಾಗಿಯೂ, ಶೀಘ್ರವಾಗಿಯೂ ಸಮಾಜಪುರುಷನು ಉಚ್ಛ್ರಾಯಸ್ಥಿತಿಗೆ ಹೋಗುತ್ತಾನೆ. ಕಾಂಗ್ರೆಸ್ ಮತ್ತು ಮುಸಲೀಮ್ ಲೀಗ್ ಮೊದಲಾದ ಮಹಾಮಹಾಸಭೆಗಳೂ ಈ ಉಭಯಸಾಧನಗಳಿಂದಲೇ ತಮ್ಮ ತಮ್ಮ ಉದ್ದೇಶಗಳನ್ನು ಸಾಧಿಸುತ್ತಲಿವೆ. ಆದಕಾರಣ ಈ ವಿಷಯದ ಕಡೆಗೆ ಬೀರೂರಿನ ಮಹಾಜನಗಳು ಉಪೇಕ್ಷಿಸಲಾರರೆಂದು ನಂಬಿದ್ದೇನೆ. ನಾಗಪುರದಲ್ಲಿ ಸಿದ್ಧವಾಗುತ್ತಿರುವ ಭರತಖಂಡದ ಜ್ಞಾನಕೋಶ (Eucyclopedia) ಕ್ಕೆ ವೀರಶೈವ ಮತತತ್ವಗಳನ್ನು ತಿಳುಹಿಸಲು ಒಂದು ಸಂಘವನ್ನೇರ್ಪಡಿಸುವುದೇ ಈ ಸಾರೆಯ ಮಹಾಸಭೆಯ ಎರಡನೆಯ ಮಹತ್ಕಾರ್ಯವು. ಈ ವರ್ಷದ ಅಂತ್ಯಕ್ಕೆ ಅದನ್ನು ಬರೆಯುವ ಕಾರ್ಯವು ಪೂರೈಸುತ್ತದೆಂತಲೂ, ಮುಂದಣ ವರ್ಷ ಮುದ್ರಿಸಲು ಪ್ರಾರಂಭಿಸುತ್ತೇವೆಂತಲೂ ಆ ಜ್ಞಾನಕೋಶ ಸಂಘದವರು ಪ್ರಕಟಿಸಿದ್ದಾರೆ. ಆದುದರಿಂದ ಅಷ್ಟರಲ್ಲಿ ನಮ್ಮ ತತ್ವಗಳನ್ನು ನಾವು ತಿಳುಹಿಸದಿದ್ದರೆ ಅವರು ತಮಗೆ ತಿಳಿದಂತೆ ಬರೆಯಬಹುದು. ಆದುದರಿಂದ ಈ ವಿಷಯದ ಕಡೆಗೂ ಬೀರೂರಿನ ಮಹಾಸಭೆಯವರು ಗಮನಿಸಿ ಈ ಸಾರೆಯ ೯ ನೆಯ ಮಹಾಸಭೆಯನ್ನು ಬಹು ತೃಪ್ತಿಕರವಾಗಿ ಮಾಡಿ ಸಮಾಜಕ್ಕೆ ಮಹದುಪಕಾರವನ್ನು ಮಾಡುವುದಲ್ಲದೆ ಆ ಮೂಲಕ ತಾವೂ ಸತ್ಕೀರ್ತಿಯನ್ನು ಹೊಂದುವರೆಂದು ತುಂಬಾ ನಂಬಿರುತ್ತೇನೆ. "ಎಚ್."

ನೋಟೀಸು. 3

ತರೀಕೆರೆ ತಾಲ್ಲೂಕು ಬುಕ್ಕಾಂಬುಧಿಯಲ್ಲಿರುವ ಹಲಸಿನಗೊಂದಿ ಸಣ್ಣ ಕಾಡಯ್ಯನವರ ಮಲ್ಲಪ್ಪನವರ ಮಗ ಬಸಪ್ಪ, ಮೈನರ್ ಗಾರ್ಡಿಯನ್ ತಾಯಿ ದೇವೀರಮ್ಮನು ಈ ಮೂಲಕ ತಿಳಿಯಪಡಿಸುವದೇನೆಂದರೆ:—

ನನ್ನ ಮಗ ಮೈನರ್ ಬಸಪ್ಪನ ಅಣ್ಣ ಶಾಂತಮಲ್ಲಪ್ಪನು ಈಚೆಗೆ ಕಾಲವಾದ ನಂತರ ಈತನ ಹೆಂಡತಿ ನೀಲಮ್ಮನು ಬೇರೆಯವರ ಪ್ರೇರೇಪಣೆ ಮೇಲೆ ದುರುದ್ದೇಶದಿಂದ ಕುಟುಂಬದ ಸೊತ್ತುಗಳನ್ನು ಅಡವು, ಕ್ರಯ, ವಗೈರೆ ಮೂಲಕ ಪರಾಧೀನಮಾಡುವದರಲ್ಲಿದ್ದಾಳೆಂದು ವರ್ತಮಾನ ಕೇಳುತ್ತೇನೆ. ಸದರಿ ನೀಲಮ್ಮನಿಗೆ ಆಸ್ತಿಯನ್ನು ಪರಾಧೀನಮಾಡಲು ಯಾವ ಹಕ್ಕೂ ಇರುವದಿಲ್ಲ. ಹೀಗಿರುವಲ್ಲಿ ನೀಲಮ್ಮನಿಂದ ಯಾರಾದರೂ ಸೊತ್ತುಗಳ ಕ್ರಯ ವಗೈರೆ ಬರಸಿಕೊಂಡಲ್ಲಿ ಅಂಥಾ ಪರಾಧೀನವು ಕಾನೂನು ರೀತ್ಯಾ ಯಾರಿಗೂ ಸಿದ್ಧವಾಗತಕ್ಕದ್ದಲ್ಲವೆಂದು ಈ ಮೂಲಕ ಸಮಸ್ತರಿಗೂ ಮುಂಚಿತವಾಗಿ ತಿಳಿಸಿರುತ್ತೇನೆ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 3

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:— ರಾಸ್ ವಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಮದರಾಸ್ ಮೇಲ್ ವಾಚ್, 5 ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು—ಜಪಾನ್ ಬೀಸಣಿಗೆ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4—8—0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
3 5. ಇರುಳಪ್ಪನ ಬೀದಿ, ಮದರಾಸ್.

ಲಂಡನ್ ಪಟ್ಟಣದಲ್ಲಿ ತಯಾರಾಗಿ ಈಗಲೇ ಬಂದಿರುವ

ಯುದ್ಧದ ಚರಿತ್ರೆಯು.

ಈಗತಾನೇ ಕೊನೆಗಂಡ ಯುದ್ಧದ ವಿಷಯವನ್ನು ಕಿವಿಯಿಂದಲೂ, ವೃತ್ತಪತ್ರಿಕೆಗಳಿಂದಲೂ, ಕೇಳುವುದಕ್ಕಿಂತ ಕಣ್ಣಿನಿಂದ ನೋಡುವುದು ಲೇಸಲ್ಲವೆ?

ಕಳೆದ 4 ವರುಷ 99 ದಿನಗಳವರೆವಿಗೂ ನಡೆದ ಯುದ್ಧದ ವಿಷಯವನ್ನು 92 ಚಿತ್ರಪಟಗಳ ಸಹಿತ ಕೂಡಿ ಇದ್ದದ್ದನ್ನು ಇದ್ದ ಹಾಗೆಯೇ ತಿಳಿಸುವವು.

ಈ ಪುಸ್ತಕದಲ್ಲಿ ಕೈಲೆತಜಗಳ, ಆಕಾಶವಿಮಾನಗಳ ಜಗಳ, ಜಹಜುಗಳ ಜಗಳ, ಜಹಜುಗಳು ಸಿಡಿಮದ್ದಿನ ಗುಂಡುಗಳಿಗೆ ತಗಲಿ ಮುಳುಗಿಹೋಗುವುದು, ಆ ಸಮಯದಲ್ಲಿ ಬ್ರಿಟಿಷರು ಜನರನ್ನು ಕಾಪಾಡುವುದು, ಆಸ್ಪತ್ರೆಯಲ್ಲಿ ಘಾಯಪಟ್ಟವರನ್ನು ಇಂಗ್ಲೀಷ್ ಸ್ತ್ರೀಯರು ಕಾಪಾಡುವುದು, ಜರ್ಮನಿ, ಟರ್ಕಿ, ಆಸ್ಟ್ರಿಯ ಮುಂತಾದ ಶತ್ರುಗಳು ಜಗಳ ಮಾಡಲು ಕೈಲಾಗದೆ ಓಡಿಹೋಗುವುದು, ಶತ್ರುಗಳನ್ನೂ, ಕಂದಕಗಳನ್ನೂ ಸೆರೆಹಿಡಿಯುವುದು, ಮತ್ತೂ ಚಕ್ರವರ್ತಿಗಳಾದ 5 ನೆಯ ಜಾರ್ಜ್ ಪ್ರಭುಗಳು ರಣರಂಗದಲ್ಲಿ ಸೈನಿಕರಿಗೆ ಬಿರುದು ಬಿಲ್ಲೆಗಳನ್ನು ಕೊಡುವುದು, ಆಸ್ಪತ್ರೆಗಳಲ್ಲಿ ಘಾಯಪಟ್ಟ ಸೈನಿಕರಿಗೆ ಬಿರುದು ಬಿಲ್ಲೆಗಳನ್ನು ಕೊಡುವುದು, ಸಿಡಿಮದ್ದಿನ ಕಾರ್ಖಾನೆಗಳನ್ನು ಪರೀಕ್ಷಿಸುವುದು, ಸೆರೆಹಿಡಿದ ಶತ್ರುಗಳನ್ನು ಅವರ ಕಂದಕಗಳನ್ನು ಪರೀಕ್ಷಿಸುವುದು, ಅಮೇರಿಕಾ, ಬೆಲ್ಜಿಯಂ, ಫ್ರಾನ್ಸ್ ಮುಂತಾದ ರಾಜರುಗಳೊಡನೆ ರಣರಂಗದಲ್ಲಿ ಸಂಭಾಷಿಸುತ್ತಿರುವುದು ಮುಂತಾದುವುಗಳನ್ನೆಲ್ಲಾ ವಿವರವಾಗಿ ತಿಳಿಯುವಂತೆ ಚಿತ್ರಪಟಗಳೊಡನೆ ಕನ್ನಡ ಭಾಷೆಯಲ್ಲಿ ಮುದ್ರಣವಾದ ಮುದ್ದಾದ ಯುದ್ಧದ ಚರಿತ್ರೆಯು.

ಕ್ರಯ 1 ಕ್ಕೆ 1—12—0. ಟಪಾಲ್ ಖರ್ಚು 0—4—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
3 ನಂ. (1) ಇರುಳಪ್ಪನಬೀದಿ, ಮದರಾಸು.

ಸಕಲ ವೀರಶೈವರಿಗೂ ಪೂಜಾರ್ಹವಾದದ್ದು. 2

ಎಡೆಯೂರು ತೋಂಟದಾರ್ಯರ ಫೋಟೋ, ನಂಬಣ್ಣ, ನಂಬಮ್ಮ, ಕಂಬಳಿ ಸ್ವಾಮಿಗಳ ಸಮೇತ. ಡಜನ್ 1 ಕ್ಕೆ 0—12—0. 100 ಕ್ಕೆ 5—0—0. ಮತ್ತು ನಮ್ಮಲ್ಲಿ ರಖಂವಾರು ಫೋಟೋಗಳು ದೊರೆಯುತ್ತೆ.

ಹೆಚ್. ಜಿ. ಮಹದೇವಪ್ಪ,
ಫೋಟೊಗ್ರಾಫರ್,
ಎಡತೊರೆ, ಮೈಸೂರು ಡಿ||.

ಡಿ. ನಂಜುಂಡಯ್ಯ,
ಚೀಣಾಜವಳಿ ಅಂಗಡಿ,
ನಂಜನಗೂಡು, ಮೈಸೂರು ಡಿ||.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನೋಹರವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

7 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2.14.0. 25 ಕ್ಕೆ 5.5.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
11 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಫೆಬ್ರವರಿ ತಾ|| ೧೬ ರಿಂದ ೧೯೧೯ ನೆಯ ಫೆಬ್ರವರಿ ತಾ|| ೨೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿ ನಾಮಸಂವತ್ಸರದ ಮಾಘ ಬ|| ಬಿದಿಗೆಯಿಂದ ಮಾಘ ಬ|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
16	[1]ಭಾನು	ಬಿದಿಗೆ	56-55	ಪೂಫ	47-28	5
17	[2]ಸೋಮ	ತದಿಗೆ	60	ಉಫ	1-46	6
18	ಮಂಗಳ	ತದಿಗೆ	1-4	ಹಸ್ತ	5-22	7
19	ಬುಧ	ಚೌತಿ	5-31	ಚಿತ್ತ	60	8
20	ಗುರು	ಪಂಚಮಿ	10-38	ಚಿತ್ತ	4-0	9
21	ಶುಕ್ರ	ಷಷ್ಠಿ	16-3	ಸ್ವಾತಿ	10-33	10
22	ಶನಿ	ಸಪ್ತ	21-15	ವಿಶಾಖ	17-0	11

(1) ಗವಿರಾಯಸ್ವಾಮಿ ಬೆಟ್ಟದಲ್ಲಿ ರಥ, ಮಾರೀಕಾರು, ಉತ್ತನಹಳ್ಳಿ ಜಾತ್ರೆ. (2) ಕೆಂಗೆಟ್ಟದ ಶ್ರೀನಿವಾಸಸ್ವಾಮಿ ರಥ.

ಮೈಸೂರ್: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಫೆಬ್ರವರಿ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ,

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 14

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯು ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಕಿಸರಿ, ವಾತರೋಗವು ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಾಂತೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಲಂಡನ್ ಪಟ್ಟಣದಲ್ಲಿ ತಯಾರಾಗಿ ಈಗಲೇ ಬಂದಿರುವ

ಯುದ್ಧದ ಚರಿತ್ರೆಯು.

ಈಗತಾನೇ ಕೊನೆಗಂಡ ಯುದ್ಧದ ವಿಷಯವನ್ನು ಕಿವಿಯಿಂದಲೂ, ವೃತ್ತಪತ್ರಿಕೆಗಳಿಂದಲೂ, ಕೇಳುವುದಕ್ಕಿಂತ ಕಣ್ಣಿನಿಂದ ನೋಡುವುದು ಲೇಸಲ್ಲವೆ?

ಕಳೆದ 4 ವರುಷ 99 ದಿನಗಳವರೆವಿಗೂ ನಡೆದ ಯುದ್ಧದ ವಿಷಯವನ್ನು 92 ಚಿತ್ರಪಟಗಳಸಹಿತ ಕೂಡಿ ಇದ್ದದ್ದನ್ನು ಇದ್ದ ಹಾಗೆಯೇ ತಿಳಿಸುವವು.

ಈ ಪುಸ್ತಕದಲ್ಲಿ ಕೈಲೆತಜಗಳ, ಆಕಾಶವಿಮಾನಗಳ ಜಗಳ, ಜಹಜುಗಳ ಜಗಳ, ಜಹಜುಗಳು ಸಿಡಿಮದ್ದಿನ ಗುಂಡುಗಳಿಗೆ ತಗಲಿ ಮುಳುಗಿಹೋಗುವುದು, ಆ ಸಮಯದಲ್ಲಿ ಬ್ರಿಟಿಷರು ಜನರನ್ನು ಕಾಪಾಡುವುದು, ಆಸ್ಪತ್ರೆಯಲ್ಲಿ ಘಾಯಪಟ್ಟವರನ್ನು ಇಂಗ್ಲೀಷ್ ಸ್ತ್ರೀಯರು ಕಾಪಾಡುವುದು, ಜರ್ಮನಿ, ಟರ್ಕಿ, ಆಸ್ಟ್ರಿಯ ಮುಂತಾದ ಶತ್ರುಗಳು ಜಗಳ ಮಾಡಲು ಕೈಲಾಗದೆ ಓಡಿಹೋಗುವುದು, ಶತ್ರುಗಳನ್ನೂ, ಕಂದಕಗಳನ್ನೂ ಸೆರೆಹಿಡಿಯುವುದು, ಮತ್ತೂ ಚಕ್ರವರ್ತಿಗಳಾದ 5 ನೆಯ ಜಾರ್ಜ್ ಪ್ರಭುಗಳು ರಣರಂಗದಲ್ಲಿ ಸೈನಿಕರಿಗೆ ಬಿರುದು ಬಿಲ್ಲೆಗಳನ್ನು ಕೊಡುವುದು, ಆಸ್ಪತ್ರೆಗಳಲ್ಲಿ ಘಾಯಪಟ್ಟ ಸೈನಿಕರಿಗೆ ಬಿರುದು ಬಿಲ್ಲೆಗಳನ್ನು ಕೊಡುವುದು, ಸಿಡಿಮದ್ದಿನ ಕಾರ್ಖಾನೆಗಳನ್ನು ಪರೀಕ್ಷಿಸುವುದು, ಸೆರೆಹಿಡಿದ ಶತ್ರುಗಳನ್ನು ಅವರ ಕಂದಕಗಳನ್ನು ಪರೀಕ್ಷಿಸುವುದು, ಅಮೇರಿಕಾ, ಬೆಲ್ಜಿಯಂ, ಫ್ರಾನ್ಸ್ ಮುಂತಾದ ರಾಜರುಗಳೊಡನೆ ರಣರಂಗದಲ್ಲಿ ಸಂಭಾಷಿಸುತ್ತಿರುವುದು ಮುಂತಾದುವುಗಳನ್ನೆಲ್ಲಾ ವಿವರವಾಗಿ ತಿಳಿಯುವಂತೆ ಚಿತ್ರಪಟಗಳೊಡನೆ ಕನ್ನಡ ಭಾಷೆಯಲ್ಲಿ ಮುದ್ರಣವಾದ ಮುದ್ದಾದ ಯುದ್ಧದ ಚರಿತ್ರೆಯು.

ಕ್ರಯ 1 ಕ್ಕೆ 1—12—0. ಟಪಾಲ್ ಖರ್ಚು 0—4—0.

4 ವಿಳಾಸ:—ರಾಸ್ ವಾಚ್ ಅಂಡ್ ಕೊ, ನಂ. (1) ಇರುಳಪ್ಪನಬೀದಿ, ಮದರಾಸು.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ !!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಮೊದಲು ಅಥವಾ ಅದರಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

1 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಸ್ಟ ನಿಪ್ಪಾಣಿ ಜಿ. ಬೆಳಗಾಂವ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2.14.0. 25 ಕ್ಕೆ 5.5.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
12 ವೈದ್ಯಶಾಲಾ, ಮೈಸೂರು.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 4

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:— ರಾಸ್ ವಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಯುದ್ಧದ ಫೋಟೋಗಳು. 11

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಖಂವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ.

ವಿಳಾಸ—ಮುಹರಾಟ್ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳವೀದಿ, ಮದರಾಸ್,

ಸೂಚನೆ.

ಬರುವ ಶುಕ್ರವಾರ ಮಹಾಶಿವರಾತ್ರಿಯಾದ ಪ್ರಯುಕ್ತ ಮುಂದಣ ಭಾನುವಾರದಲ್ಲಿ ಸ್ಟಾರ್ ಪತ್ರಿಕೆಯು ಪ್ರಕಟವಾಗುವುದಿಲ್ಲ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಫೆಬ್ರವರಿ ತಾ|| ೨೩ ನೆಯ ಭಾನುವಾರ.

ಸರ್ಕಾರಿ ಪಾಠಶಾಲೆಗಳು ಸರ್ವಜನೋಪಯೋಗ್ಯಗಳು.

ಶೃಂಗೇರಿಯಲ್ಲಿರುವ ಗೌರ್ನಮೆಂಟ್ ಆಂಗ್ಲೋ ವರ್ನಾಕ್ಯುಲರ್ ಪಾಠಶಾಲೆಗೆ ಹಳೆಪೈಕದ ಮೂವರು ವಿದ್ಯಾರ್ಥಿಗಳನ್ನು ಕಳೆದ ವರ್ಷ ಸೇರಿಸಿದುದರಿಂದ, ಇತರ ವಿದ್ಯಾರ್ಥಿಗಳ ಪೋಷಕರುಗಳು ಅದನ್ನು ನಿರೋಧಿಸುವುದಕ್ಕಾಗಿ ತಮ್ಮ ಮಕ್ಕಳುಗಳನ್ನು ಆ ಪಾಠಶಾಲೆಯಿಂದಲೇ ಬಿಡಿಸಿ, ಬೇರೊಂದು ಶಾಲೆಯನ್ನು ನ್ಯಾಷನಲ್‌ಸ್ಕೂಲ್ ಎಂಬ ಹೆಸರಿನಿಂದ ಸ್ಥಾಪಿಸಿ, ಅದರಲ್ಲಿ ತಮ್ಮ ಹುಡುಗರಿಗೆ ವಿದ್ಯಾಭ್ಯಾಸ ಮಾಡಿಸಿಕೊಳ್ಳಲು ಏರ್ಪಡಿಸಿಕೊಂಡಿದ್ದಾರೆ. ಇದರಮೇಲೆ ಇನ್ನು ಮುಂದೆ ಸರ್ಕಾರಿ ಶಾಲೆಗಳಿಗೆ ಹಿಂದುಳಿದ ಜನವರ್ಗದ ವಿದ್ಯಾರ್ಥಿಗಳನ್ನು ಸೇರಿಸುವ ವಿಷಯದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ವಿದ್ಯಾಭ್ಯಾಸಶಾಖಾ ಇನ್|| ಜನರಲ್‌ರವರು ಕಳೆದ ೧೯೧೮ ನೆ ವರ್ಷದ ಜೂನ್ ತಾ|| ೨೭ ರಲ್ಲಿ ಒಂದು ಲೇಖನವನ್ನು ಸರ್ಕಾರಕ್ಕೆ ಬರೆದು ಕೇಳಿಕೊಂಡಿದ್ದರು. ಅದರಮೇಲೆ ಸರ್ಕಾರದವರು ಕಳೆದ ನವಂಬರ್ ತಾ|| ೨೯ ರಲ್ಲಿ 4592 ನೆ ಸಂ. ಅಪ್ಪಣೆ ಮಾಡಿರುವುದೇನೆಂದರೆ—

“ಸರ್ಕಾರದ ವೈದ್ಯಶಾಲೆಗಳು, ಕೋರ್ಟುಗಳು, ಕಚೇರಿಗಳು ಮೊದಲಾದುವುಗಳಂತೆಯೇ ಎಲ್ಲ ಜನವರ್ಗದ ಪ್ರಜೆಗಳ ಉಪಯೋಗಾರ್ಥವಾಗಿ ಸರ್ಕಾರಿ ಹಣದ ವೆಚ್ಚದಿಂದ ನಡೆಯಿಸಲ್ಪಡುತ್ತಿರುವ ಪಾಠಶಾಲೆಗಳಿಗೆ ಜಾತಿವೈಷಮ್ಯದ ಮೂಲಕವಾಗಿ ‘ಇಂಥವರನ್ನು ಸೇರಿಸಬೇಕು, ಇಂಥವರನ್ನು ಸೇರಿಸಬಾರದು’ ಎಂಬುದನ್ನು ಸರ್ಕಾರವು ಅನುಮೋದಿಸಲಾಗುವುದಿಲ್ಲ. ಮುಂದುವರಿದ ಜನವರ್ಗಗಳವರ ವಿವೇಕವು ಅಭಿವೃದ್ಧಿಗೊಳ್ಳುತ್ತಲೂ, ನಿಮ್ನ ಜಾತಿಯವರ ಸಾಮಾಜಿಕ ಸ್ಥಿತಿಯು ಸುಧಾರಿಸುತ್ತಲೂ ಬಂದಂತೆಲ್ಲಾ ಇಂಥ ವಿಚಾರದಲ್ಲಿ ಸಾಮಾಜಿಕ ನಿರಾಧಾರ ದುರಾಗ್ರಹವು ನಶಿಸಿಹೋಗುತ್ತಲಿದೆ. ಸಂಸ್ಥಾನದ ಕೆಲ ಭಾಗಗಳಲ್ಲಿ ಈ ನಿಮ್ನವರ್ಗದ ವಿದ್ಯಾರ್ಥಿಗಳು ಪಾಠಶಾಲೆಗಳಿಗೆ ಧಾರಾಳವಾಗಿ ಸೇರಿಸಲ್ಪಡುತ್ತಿರುವರೆಂದೂ, ಮತ್ತೆ ಕೆಲವೆಡೆಗಳಲ್ಲಿ ಈ ಹುಡುಗರು ಇತರ ವರ್ಗಗಳ ಹುಡುಗರುಗಳೊಡನೆ ಧಾರಾಳವಾಗಿ ಬಳಕೆಯಾಗುತ್ತಿರುವರೆಂದೂ ತಿಳಿದು ಸರ್ಕಾರದವರು ಸಂತೋಷಿಸುತ್ತಾರೆ. ಇಂಥ ಸಾರ್ವಜನಿಕಗಳಾದ ಸಂಸ್ಥೆಗಳ ಉಪಯೋಗವನ್ನು ಪಡೆದುಕೊಳ್ಳಲು ಪ್ರತಿಯೊಂದು ಜನವರ್ಗಕ್ಕೂ ನ್ಯಾಯವಾದ ಬಾಧ್ಯತೆಯುರುತ್ತದೆ. ಅದನ್ನ ಸುಭದಿಸಲು ಇದುವರೆಗಿದ್ದ ತೊಡಕುಗಳು ದಿನದಿನಕ್ಕೆ ನಶಿಸಿಹೋಗುತ್ತಿರುವಲ್ಲಿ ಪುನಃ ಅವನ್ನು ಉಜ್ಜೀವನಗೊಳಿಸುವುದಕ್ಕೆ ಮಾಡಲ್ಪಡುವಂಥ ಪ್ರಯತ್ನವು ತಿರಸ್ಕರಿಸಲ್ಪಡತಕ್ಕದಾಗಿದೆ.

ಹಳೇಪೈಕದ ಕೆಲ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗೆ ಸೇರಿಸಲ್ಪಡುವ ವಿಚಾರದಲ್ಲಿ ಶೃಂಗೇರಿಯ ಕೆಲ ಜನವರ್ಗದವರುಗಳು ಮಾಡಿದ ಅಸಹ್ಯಕರವಾದ ಗದ್ದಲದ ವಿಚಾರದಲ್ಲಿ ಸಾನುಭೂತಿಯು ತೋರಿಸಲ್ಪಡತಕ್ಕದಾಗಿಲ್ಲ. ಸರ್ಕಾರಿ ಶಾಲೆಗಳಿಗೆ ಯಾವುದಾದರೊಂದು ಜನವರ್ಗದ ವಿದ್ಯಾರ್ಥಿಗಳು ಸೇರಿಸಲ್ಪಟ್ಟರೆಂಬ ಕಾರಣದಿಂದ ಅದಕ್ಕೆ ವಿರುದ್ಧವಾಗಿ ಯಾವುದಾದರೊಂದು ನೂತನ ಪಾಠಶಾಲೆಯು ಏರ್ಪಡಿಸಲ್ಪಟ್ಟರೆ ಅಂಥ ಶಾಲೆಗೆ ಸರ್ಕಾರದಿಂದ ಯಾವ ವಿಧವಾದ ಧನಸಹಾಯ ಮೊದಲಾದುವುಗಳೂ ಕೊಡಲ್ಪಡುವುದಿಲ್ಲವೆಂದು ಅಂಥ ಶಾಲೆಗಳ ಸ್ಥಾಪಕರುಗಳಿಗೆ ಸ್ಪಷ್ಟವಾಗಿ ತಿಳಿಯಿಸಬೇಕು. ಆದರೆ ಅಂಥ [illegible] ಗೊತ್ತಾದ ಪರಿಮಾಣಕ್ಕೆ (ಸ್ಟ್ಯಾಂಡರ್ಡಿಗೆ) ತರಲ್ಪಟ್ಟಲ್ಲಿ (ಸರ್ಕಾರಿ [illegible]ಕ್ಕೆಗೆ ಹೋಗುವುದು) ಮೊದಲಾದ ವಿಚಾರದಲ್ಲಿ, ಸಂ.) ಸರ್ಕಾರದಿಂದ ಅಂಗೀಕರಿಸಲ್ಪಡಲಾಗುವುದು.

ಈಗ ಶೃಂಗೇರಿಯಲ್ಲಿ ಸ್ಥಾಪಿತವಾಗಿರುವ ನ್ಯಾಷನಲ್ ಆಂಗ್ಲೋ ವರ್ನಾಕ್ಯುಲರ್ ಶಾಲೆಯು ವಿದ್ಯಾಶಾಖಾ ಇನ್|| ಜನರಲ್‌ರವರ ಅನುಮತಿಯನ್ನು ಪಡೆಯದೆ ಏರ್ಪಟ್ಟಿರುವುದರಿಂದ ಅದು ಧನಸಹಾಯವನ್ನು ಪಡೆಯಲು ಅರ್ಹವಾಗಿಲ್ಲ.”

ಈ ಮೇಲಣ ಅಪ್ಪಣೆಯನ್ನು ನೋಡಲಾಗಿ ನಮ್ಮ ಪ್ರಭುತ್ವದವರು ಕಾಲೋಚಿತವಾಗಿ ದೇಶಾಭ್ಯುದಯ ಸಾಧಕಗಳಾದ ಏರ್ಪಾಟುಗಳನ್ನು ನಿಷ್ಪಕ್ಷಪಾತವಾಗಿ ನಡೆಯಿಸುವಲ್ಲಿ ಪೂರ್ಣವ್ಯಗ್ರರಾಗಿರುವರೆಂಬುದು ವ್ಯಕ್ತವಾಗುತ್ತದೆ. ಈಗ ಭರತಖಂಡದಲ್ಲೆಲ್ಲಾ ನಿಮ್ನಜಾತಿ ಜನೋದ್ಧರಣವು ರಾಜಕೀಯ ಸಾಮಾಜಿಕ ವಿಷಯಗಳಲ್ಲೆಲ್ಲಾ ಅತ್ಯಂತ ಪ್ರಾಮುಖ್ಯವನ್ನು ಪಡೆದ ಸಮಸ್ಯೆಯಾಗಿ ಕುಳಿತಿರುತ್ತದೆ. ಆ ನಿಮ್ನಜಾತಿ ಜನರಲ್ಲಾದರೂ ಸ್ವೋದ್ಧರಣಸ್ಫೂರ್ತಿಯು ವ್ಯಕ್ತವಾಗಿರುತ್ತದೆ. “ನಮ್ಮವರಿಗೆ ಹಿತಕರವಲ್ಲದಂತಿರುವ ಸ್ವರಾಜ್ಯಸಂಸ್ಕರಣವು ಕೊಡಲ್ಪಟ್ಟರೆ ಏಳು ಕೋಟಿ ಪ್ರಜೆಗಳ ವರ್ಗವಾಗಿರುವ ನಾವು ನಮ್ಮದೊಂದು ತಲೆಬುರುಡೆ ಉಳಿದಿರುವವರೆಗೂ ಕಾದಾಡದೆ ಬಿಡುವವರಲ್ಲ” ವೆಂದು ಘಂಟಾಘೋಷವಾಗಿ ಅವರುಗಳು ಆಂಗ್ಲಪ್ರಭುತ್ವದವರಿಗೆ ಮೊರೆಯಿಟ್ಟುಕೊಳ್ಳುವ ಸ್ಥಿತಿಯವರೆಗೂ ಬಂದಿರುತ್ತಾರೆ. ಹೀಗೆ ಮುಂಬರಿಯಲು ವ್ಯಗ್ರರಾಗಿರುವ ಆ ಜನರನ್ನು ಪೂರ್ವಕಾಲದಂತೆ ಈಗಳೂ ನಾಯಿಗಳಿಗಿಂತಲೂ ಕಡೆಯಾಗಿ ಕಂಡಿರುವುದೆಂದರೆ ಸಾಧ್ಯವೆ? ಅದರೊಳಗೂ ಮಾದರಿ ಸಂಸ್ಥಾನವೆಂದು ಹೆಸರು ಪಡೆದುಕೊಂಡಿರುವ ನಮ್ಮ ದೇಶದ ಪ್ರಭುತ್ವವು ಈಗಣ ನಾಗರಕತೆಗೆ ಪೂರ್ಣವಾಗಿ ಅನನುಗುಣವಾದ ರೀತಿಯಲ್ಲಿ ವರ್ತಿಸಲಾದೀತೆ? ನಿಮ್ನಜಾತಿಯವರ ಉದ್ಧಾರಕ್ಕಾಗಿಯೇ ಲಕ್ಷಾಂತರ ರೂ.ಗಳ ವ್ಯಯದಿಂದ ಬೇರೆಬೇರೆ ಪ್ರತಿಷ್ಠಾಪನೆಗಳನ್ನು ನಮ್ಮ ಗೌರ್ನಮೆಂಟಿನವರು ಮಾಡಿಕೊಟ್ಟೂ, ವಿದ್ಯಾವಿವೇಕವಂತರಾದ ಮುಂಬರಿದ ಜನವರ್ಗದ ಪ್ರಮುಖರನೇಕರು ಆ ನಿಮ್ನಜಾತಿಯವರ ಉದ್ಧರಣಾರ್ಥವಾಗಿ ಅನೇಕಮುಖ ಪ್ರಯತ್ನಗಳನ್ನು ಮಾಡುತ್ತಲೂ ಇರುವಾಗ, ಇಷ್ಟೊಂದು ಸಹಾಯೋತ್ತೇಜನಗಳನ್ನು ಪಡೆದು ಜ್ಞಾನವಿಕಾಸಗೊಳ್ಳುತ್ತಿರುವ ಜನವರ್ಗದವರು ತಮ್ಮ ಮೇಲೆ ಹೊರಿಸಲ್ಪಟ್ಟಿರುವ ಅಸಹ್ಯವಾದ ಅಗೌರವ ಭಾರವನ್ನು ಇಳುಹಿಕೊಂಡು ಇತರರಿಗೆ ಸರಿಯಾಗಿ ಎಂದರೆ (ಅವರೊಡನೆ ಬಾಂಧವ್ಯಾದಿಗಳಿಲ್ಲದಿದ್ದರೂ ಸಹವಾಸ ಸಂಭಾಷಣಾದಿಗಳಿಗಾದರೂ ಅರ್ಹರಾಗಿ) ಬಾಳಬೇಕೆಂದು ಯೋಚಿಸಿಕೊಳ್ಳುವಂತಾದರೆ ಅದರಲ್ಲಿ ಆಶ್ಚರ್ಯವೇನೂ ಇರಲಾರದು. ಅದನ್ನೂ ನಿಷೇಧಿಸುವುದೆಂದರೆ ಅದು ಮಾನುಷಸ್ವಭಾವಕ್ಕೇ ಅಪಮಾನಕರವಾದ ಕೆಲಸವೇ ಸರಿ. ಅಷ್ಟು ಅಲ್ಪಮಾತ್ರದ ಸಾನುಭೂತಿಯನ್ನು ಕೃತ್ಯದಲ್ಲಿ ತೋರಿಸುವುದಕ್ಕೂ ಹಿಂದೆಗೆದು, ಬೇರೆ ವಿಧದಲ್ಲಿ ಅವರ ಉದ್ಧಾರಕ್ಕೆಂದು ಬರಿಯ ಮಾತುಗಳನ್ನೂ ಕಂಡವರ ಹಣವನ್ನೂ ಎಷ್ಟು ವೆಚ್ಚಮಾಡಿದರೂ ಅದೆಲ್ಲಾ ಬೂಟಾಟಿಕೆಯಾಗಿಯೇ ತೋರುವುದು. ಆದುಕಾರಣ ಈಗ ಗೌರ್ನಮೆಂಟಿನವರು ಮಾಡಿರುವ ಅಪ್ಪಣೆಯು ನೈತಿಕಸ್ಥೈರ್ಯವುಳ್ಳುದೆಂದು ಹೇಳುವಲ್ಲಿ ಏನೂ ಅಡ್ಡಿಯಿರುವುದಿಲ್ಲ.

ಪೂರ್ವಾಚಾರಪರಾಯಣರಾದವರಿಗೆ ಇಂಥ ವಿಷಯಗಳೆಲ್ಲಾ ಮನಸ್ಸಿಗೆ ಭಾರವನ್ನುಂಟುಮಾಡುವುವೆಂಬುದು ನಿಜ. ಆದರೆ ಮಾಡುವುದೇನು? ಲೋಕವೇ ಗತಾನುಗತಿಕವಾಗಿದೆ; ಪ್ರಗಮನಶೀಲವಾಗಿದೆ. ಶಾಸ್ತ್ರ ಮತ್ತು ಆಚಾರಣೆಗಳೇ ಶರಣ್ಯರಾಗಿರುವವರು ಊರುಕೇರಿಗಳನ್ನು ಬಿಟ್ಟು ಪರಮಾರ್ಥಚಿಂತನೆಯಿಂದ ಗಿರಿಗುಹಾದಿಗಳಲ್ಲಿ ವಾಸಮಾಡಬೇಕಾಗಿದೆ. ಪೂರ್ವಕಾಲದವರೇ ಹಾಗೆ ಮಾಡುತ್ತಿದ್ದರೆನ್ನುವಾಗ ಈಗಣ ಸಾಂಕರ್ಯವಿಜೃಂಭಣ ಕಾಲದಲ್ಲಿ ಅದರ ಅವಶ್ಯಕತೆಯು ಮತ್ತಷ್ಟು ಹೆಚ್ಚಲ್ಲವೆ? “ಲೌಕಿಕವಿಷಯಗಳಲ್ಲಾದರೂ ಜಾತಿಕುಲಭೇದ ವೈಷಮ್ಯಗಳನ್ನು ನೋಡದೆ ಐಕಮತ್ಯದಿಂದ ನಡೆದುಕೊಳ್ಳಬೇಕು. ಸರ್ವರೂ ಒಬ್ಬದೇವರ ಮಕ್ಕಳೆಂಬುದನ್ನರಿತು ಪರಸ್ಪರ ಸಹೋದರ ಭಾವದಿಂದ ವರ್ತಿಸಬೇಕು” ಎಂದು ವಾಗ್ಬ್ರಹ್ಮವನ್ನು ನುಡಿಯತಕ್ಕ ವೃತ್ತಪತ್ರ ಕರ್ತರಂಥವರೇ ಈ ಲೌಕಿಕ ವಿಷಯಗಳಲ್ಲೂ ಸರ್ಕಾರದ ಮೇಲೆ ಹಠತೊಟ್ಟು ವಿರೋಧಿಸಿ ಐಕಮತ್ಯಕ್ಕೆ ವಿಘಾತಕವಾದ ಪ್ರಯತ್ನಗಳನ್ನು ಮಾಡುತ್ತಲಿರುವವರಿಗೆ ಬೆಂಬಲವಾಗಿ ಬರೆಯತಕ್ಕ ಲೇಖನಗಳಿಗೆ ಅವಕಾಶ ಕೊಡುವುದನ್ನು ನೋಡಿದರೆ ಇನ್ನು ಸಾಮಾನ್ಯರಾದವರು ನುಡಿಯುವುದೊಂದಾದರೆ ನಡೆಯುವುದೊಂದು ರೀತಿಯಾಗಿ ವರ್ತಿಸುವುದರಲ್ಲಾಶ್ಚರ್ಯವೇನು? ಆದರೆ ಪ್ರಭುತ್ವದವರು ಹಾಗೆ ಮಾಡಲಾದೀತೆ? ಅವರಿಗೆ ಸರ್ವಸಮತ್ವವು ಇದ್ದೇ ತೀರಬೇಕು. ಅವರಲ್ಲಿ ತ್ರಿಕರಣ ಶುದ್ಧಿಯು ಇರಬೇಕು. ಅವರಲ್ಲಿರುವುದು ದೇವಾಂಶ. ದೈವಸಾಮ್ರಾಜ್ಯದಲ್ಲಿ ಜಾತಿಭೇದವೇ ಇಲ್ಲ. ಅಲ್ಲಿ ಭಕ್ತಿಜ್ಞಾನಾದಿಗಳೇ ಪ್ರಧಾನಗಳು. ಪ್ರಭುಸಾಮ್ರಾಜ್ಯದಲ್ಲೂ ಸ್ವಪ್ರಜಾತ್ವರೂಪ ವಿಶಿಷ್ಟಧರ್ಮವೊಂದೇ ಗಣ್ಯವಾದುದು.

ಇದಲ್ಲದೆ ಲೋಕವೆಲ್ಲಾ ಎಚ್ಚರುಗೊಳ್ಳುತ್ತಿರುವಾಗ ಹಳೆಪೈಕದವರೇ ಮೊದಲಾದ ನಿಮ್ನಜಾತಿ ಜನರುಗಳು ಮಾತ್ರ ಪಶುಸಮಾನರಾಗಿಯೇ ಕಲ್ಪಾಂತವಾಗಿಯೂ ಇರುವರೆಂದು ನೆನಸುವುದು ತಪ್ಪು. ಅವರು ಎಚ್ಚತ್ತು ವಿದ್ಯಾಬುದ್ಧಿಗಳನ್ನು ಕಲಿತ ಬಳಿಕ ಅವರ ವಿಚಾರಗಳೂ ಉನ್ನತ್ಯಾಕಾಂಕ್ಷೆಗಳೂ ಸಹ ಇತರರೊಡನೆ ಸ್ಪರ್ಧಿಸದೆ ಎಂದಿಗೂ ಇರಲಾರವು. ಮುಂಬರಿದವರೆಲ್ಲಾ ಅವಕ್ಕೆ ಅವಕಾಶವನ್ನಿತ್ತೇ ತೀರಬೇಕಾಗುವುದು. ದೇಶವನ್ನೆಲ್ಲಾ ಗೆದ್ದು ೧೫೦ ವರ್ಷ ಕಾಲ ಆಳಿ ಒಂದುಹಿಡಿತಕ್ಕೆ ದೇಶವನ್ನು ತಂದು ಶಾಂತಿಯನ್ನು ಸ್ಥಾಪಿಸಿದ ಆಂಗ್ಲಾಧಿಕಾರಿಗಳನ್ನೇ ಈಗಣ ಭಾರತೀಯರು “ನೀವೆಲ್ಲಾ ಗುಡಿಚಾಪೆಯನ್ನು ಕಟ್ಟಿಕೊಂಡು ಹೋಗಿರಿ. ನಾವು ನಮ್ಮ ದೇಶವನ್ನು ಆಳಿಕೊಳ್ಳುತ್ತೇವೆ” ಎಂದು ಹೇಳುತ್ತಲಿಲ್ಲವೆ? ಇದೇ ಸ್ವಭಾವವನ್ನು ಸಾರ್ವತ್ರಿಕವೆಂದು ತಿಳಿಯಲಾಗದೆ? ಅದಕ್ಕೆ ದೃಷ್ಟಾಂತವಾಗಿ ಕಳೆದವರ್ಷ ನಮ್ಮ ದಿವಾನ್‌ರಾಗಿದ್ದ ಸರ್ ವಿಶ್ವೇಶ್ವರಯ್ಯನವರು ಈ ಊರಿನ ದೊಡ್ಡಹೊಲಗೇರಿಗೆ ಹೋಗಿ ಅಲ್ಲಿರುವ ಪಂಚಮರ ಪಾಠಶಾಲೆಯನ್ನು ಪರಾಮರಿಸಿ, ಅವರ ಮುಖಂಡರುಗಳ ಯೋಗಕ್ಷೇಮವನ್ನು ವಿಚಾರಿಸಿ, ಅವರಿಗೆ ಹಿತವಾದಗಳನ್ನು ಹೇಳಿದಾಗ, ಅವರುಗಳು ದಿವಾನರನ್ನು ಕುರಿತು—ಮಹಾಸ್ವಾಮಿ, ತಾವು ನಮ್ಮಗಳ ಉದ್ಧಾರಕ್ಕಾಗಿ ಮಾಡಿರುವ ಸಹಾಯ ಪ್ರೋತ್ಸಾಹಾದಿಗಳಿಗೆ ನಾವು ಕೃತಜ್ಞರಾಗಿ ವಂದಿಸುತ್ತೇವೆ. ನಮ್ಮಲ್ಲಿ ಕೆಲವರು ಅಂಗಸಾಧನೆಯಲ್ಲೂ ಕೆಲರು ಸಂಗೀತದಲ್ಲೂ ನಾಟಕವಾಡುವುದರಲ್ಲೂ ನಿಪುಣರಾಗಿದ್ದಾರೆ. ಅರಮನೆ ಮುಂದೆ ನವರಾತ್ರಿ ಕಾಲದಲ್ಲಿ ಕುಸ್ತಿಮಾಡುವುದಕ್ಕೂ ಟೌನ್‌ಹಾಲಿನಲ್ಲಿ ನಾಟಕವಾಡುವುದಕ್ಕೂ ನಮಗೆ ಅವಕಾಶವನ್ನು ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಅದೇ ವರ್ಗದ ಮತ್ತೊಬ್ಬ ಮನುಷ್ಯನು ರಾಜಧಾನಿಯ ಮ್ಯುನಿಸಿಪಾಲಿಟಿಯಲ್ಲಿ ಕೌನ್ಸಿಲರಾಗಲು ಉಮೇದುವಾರನಾಗಿ ಅರ್ಜಿಯನ್ನು ಹಾಕಿಕೊಂಡಿದ್ದನು. ಇಂಥ ಉದಾಹರಣೆಗಳು ಈಗಲೇ ಸಿಕ್ಕುತ್ತಿರುವಾಗ ಮುಂದೆ ಇವರುಗಳು ಸರ್ಕಾರದ ಉನ್ನತೋದ್ಯೋಗಗಳನ್ನು ಅಡರುವ ಸ್ಥಿತಿಗೂ ಕೂಡ ಬರುವುದು ಅಸಾಧ್ಯವೇನೂ ಅಲ್ಲ. ಆಗ ಅವರನ್ನು ಸರ್ಕಾರದವರು ನ್ಯಾಯವಾದ ಯಾವ ಕಾರಣವನ್ನು ಹೇಳಿ ವಂಚಿಸಲಾದೀತು? ಸ್ಪರ್ಶದೋಷವನ್ನೇ ದೊಡ್ಡದೆಂದು ಹೇಳಿ ಅವರನ್ನು ನಾವು ನಿರೋಧಿಸುತ್ತಿದ್ದರೆ ಸ್ಪರ್ಶದೋಷವನ್ನು ಲೇಶಮಾತ್ರವೂ ಇಟ್ಟುಕೊಳ್ಳದಿರುವ ಮಹಮ್ಮದೀಯ ಕ್ರೈಸ್ತರುಗಳಲ್ಲೆಲ್ಲಾ ನಾವು ಸಹವಾಸವನ್ನು ಮಾಡುತ್ತಲಿಲ್ಲವೆ? ನಾಟಕಾಲಯ ಮೊದಲಾದುವುಗಳಲ್ಲಿ ಪಂಚಮರೇ ಮೊದಲಾದ ಸರ್ವರೂ ಏಕತ್ರ ಕೂಡುತ್ತಿರುವುದಿಲ್ಲವೆ? ಸರ್ಕಾರಿ ಸ್ಕೂಲಿಗೆ ಹಳೆಪೈಕದವರು ಬಂದರೆ ವರ್ಣಸಂಕರವಾಗುತ್ತದೆಂದು ಹೇಳುವುದು, ಬೆಕ್ಕು ಕಣ್ಣನ್ನು ಮುಚ್ಚಿ ಹಾಲನ್ನು ಕುಡಿದರೆ ತನ್ನನ್ನು ಯಾರೂ ಕಾಣರೆಂದು ತಿಳಿದುಕೊಂಡಿರುವಂತೆ ಇರುತ್ತದೆ. ನಿಜವಾಗಿ ವರ್ಣಸಾಂಕರ್ಯವು ಹಾಗಿರಲಿ; ವರ್ಣಮೂಲಕ್ಕೇ ವಿನಾಶಕರಾಗಿರುವವರನ್ನು ಕೇಳುವವರೇ ದಿಕ್ಕಿಲ್ಲವಾಗಿದೆ. ಹೀಗಿರುವಾಗ ವರ್ಣಸಾಂಕರ್ಯವನ್ನುಂಟುಮಾಡುವುದಕ್ಕಾಗಿ ಗೌರ್ನಮೆಂಟಿನವರು ಇಂಥ ಅಪ್ಪಣೆಯನ್ನು ಮಾಡಿರುವರೆಂದು ಅವರಮೇಲೂ, ಇದೊಂದು ನೆಪಮಾಡಿ ವಿದ್ಯಾಭ್ಯಾಸಶಾಖಾ ಇನ್|| ಜನರಲ್‌ರವರ ಮೇಲೂ ಅಪವಾದವನ್ನು ಹೊರಿಸಲು ಪ್ರಯತ್ನಿಸಿರುವವರ ಸಾಹಸವು ಗರ್ಹಣೀಯವಲ್ಲವೆ?

ಇಂಥ ಶಾಸನವು ನಮ್ಮ ಮೈಸೂರು ದೇಶದಲ್ಲಿ ಈಗ ಹುಟ್ಟಿದರೂ ಬರೋಡಾ ಮೊದಲಾದ ಸಂಸ್ಥಾನಗಳಲ್ಲಿ ಇದಕ್ಕೆ ಮುಂಚೆಯೇ ಹುಟ್ಟಿದೆ. ಆಗ ಅಲ್ಲೂ ಹೀಗೆಯೇ ಇದಕ್ಕಿಂತಲೂ ಹೆಚ್ಚಾಗಿಯೇ ಗದ್ದಲವು ಎಬ್ಬಿಸಲ್ಪಟ್ಟಿತು. ಅದರ ಮೇಲೆ ಪ್ರಭುತ್ವದವರು ತಕ್ಕ ದಕ್ಷತೆಯಿಂದ ನಿಂತು, ಇದಕ್ಕೆ ಪ್ರತಿಭಟಿಸಿದವರನ್ನು ಸರ್ಕಾರದ ಯಾವ ಶಾಖೆಯ ಉದ್ಯೋಗಗಳಿಗಾಗಲೀ ಯಾವ ಸರ್ಕಾರಿ ಪಾಠಶಾಲೆಗಳಿಗಾಗಲೀ ಸೇರಿಸುವುದಿಲ್ಲವೆಂದು ಖಂಡಿತವಾದ ಅಪ್ಪಣೆಮಾಡಿದುದರಿಂದ ಪುಂಡೆಲ್ಲಾ ನಿಂತುಹೋಯಿತು. ಅವಶ್ಯಬಿದ್ದರೆ ಅಂಥ ಕಟ್ಟಪ್ಪಣೆಯನ್ನು ನಮ್ಮ ಸರ್ಕಾರದವರೂ ಮಾಡದೆ ಬಿಡಲಾರರು.

ಈಗ ಭರತಖಂಡದ ಹಲವುಕಡೆಗಳಲ್ಲಿ ಸರ್ಕಾರಿಶಾಲೆಗಳೊಳಗೆ ಅಭ್ಯಾಸಕ್ರಮವು ಸರಿಯಾಗಿಲ್ಲವೆಂದು ಹೇಳಿ ಪ್ರಜೆಗಳೇ “ನ್ಯಾಷನಲ್ ಸ್ಕೂಲು, ನ್ಯಾಷನಲ್ ಕಾಲೇಜು” ಗಳನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅದೇ ತೆರದ ಹೆಸರನ್ನು ಈ ಸಮಯದಲ್ಲಿ ಶೃಂಗೇರಿಯ ಕೆಲ ಜನರು ತಮ್ಮ ನೂತನ ಶಾಲೆಗೆ ಇಟ್ಟುಕೊಂಡಿದ್ದರೂ, ಇವರ ವರ್ತನವು ಭರತಖಂಡದ ನ್ಯಾಷನಲ್ ಎಜುಕೇಷನ್ ಅಭಿಮಾನಿಗಳ ಉದ್ದೇಶಕ್ಕೆ ಸಂಪೂರ್ಣ ವಿರುದ್ಧವೆಂಬುದಕ್ಕೆ ಸಂಶಯವಿಲ್ಲ. ಅವರಿಗೆ ದೇಶದಲ್ಲಿ “ನ್ಯಾಷನಾಲಟಿ” (ಜನಾಂಗತೆ=ಜಾತೀಯತೆ) ಯನ್ನು ಉಂಟುಮಾಡಬೇಕೆಂಬುದೇ ಮುಖ್ಯೋದ್ದೇಶವಾಗಿದೆ. ಶೃಂಗೇರಿಯವರದು ಅದಕ್ಕೆ ಪೂರ್ಣ ವಿರುದ್ಧವಾಗಿದೆ. ಭೇದಬುದ್ಧಿಯಿಂದ ಐಕಮತ್ಯಕ್ಕೆ ವಿಘಾತಕವಾಗಿ ಹುಟ್ಟಿಸುವ ಪ್ರತಿಷ್ಠಾಪನೆಗೆ “ನ್ಯಾಷನಲ್” ಎಂದು ಹೆಸರನ್ನು ಕರೆಯುವುದು ಅಮಂಗಳವಾರವನ್ನು ಮಂಗಳವಾರವೆಂದು ಹೇಳುವಂತೆಯೇ ಸರಿ.

ನೋಟುಗಳು, ನಾಣ್ಯಗಳು.

ನಮ್ಮ ದೇಶದಲ್ಲಿ ಈಗ ನೋಟುಗಳ ಬಳಕೆಯೇ ಹೆಚ್ಚಾಗಿರುತ್ತ ನಾಣ್ಯಗಳ ಕೊರತೆಯು ಮಿಗಿಲಾಗಿರುವುದರಿಂದ ಕೆಲ ಸಮಯಗಳಲ್ಲಿ ಪ್ರಜೆಗಳು ೧೦೦ ರೂ. ನ ನೋಟಿಗೆ ನಾಣ್ಯವನ್ನು ಮಾಡಿಸುವುದಕ್ಕೆ ೧–೨–೩ ರೂ. ಗಳ ಬಟ್ಟವನ್ನು ಸಹ ಕೊಡಬೇಕಾಗುತ್ತಿದೆ. ೧ ರೂ.ನ ನೋಟಿಗೆ ಚಿಲ್ಲರೆ ಪಡೆಯಲು ೬ ಪೈ ೧ ಆಣೆಯವರೆಗೂ ಬಟ್ಟವನ್ನು ಕೊಡಬೇಕಾಗುತ್ತದೆ. ಪಟ್ಟಣಗಳ ಅವಸ್ಥೆಯೇ ಹೀಗಿರುವಾಗ ಗ್ರಾಮಾಂತರಗಳ ಅವಸ್ಥೆಯನ್ನು ಹೇಳಬೇಕಾಗಿಯೇ ಇಲ್ಲ. ಪ್ರಭುತ್ವದವರು ಈ ತೊಂದರೆಯನ್ನು ಆದಷ್ಟು ಶೀಘ್ರವಾಗಿ ತಪ್ಪಿಸುವುದು ಅವಶ್ಯವಾಗಿದೆ. ಈಸಲದ ಸಾಮ್ರಾಜ್ಯ ಶಾಸನಸಭೆಯಲ್ಲಿ ಮಿ|| ಷುಕುಲ್‌ರವರು ಈ ಸಂಬಂಧವಾಗಿ ಮಾಡಿದ ಪ್ರಶ್ನೆಗೆ ಕೋಶಾಧ್ಯಕ್ಷರು ಉತ್ತರಕೊಡುವಾಗ್ಗೆ “ನಮ್ಮ ಟಂಕಸಾಲೆಯಲ್ಲಿ ಬಿಡುವಿಲ್ಲದಂತೆ ಕೆಲಸವನ್ನು ನಡೆಯಿಸುತ್ತಿರುವುದರಿಂದ ೭ ಕರೆನ್ಸಿ ಆಫೀಸುಗಳಲ್ಲೂ ನೋಟುಗಳನ್ನು ತೆಗೆದುಕೊಂಡು ನಾಣ್ಯಗಳನ್ನು ಕೊಡುತ್ತಿದ್ದೇವೆ. ಒಂದು ಡಿಸೆಂಬರ್ ತಿಂಗಳಲ್ಲೇ ೮ ಕೋಟಿ ರೂ.ಗಳನ್ನು ಎರಕಹುಯ್ಸಿದ್ದೇವೆ. ಈ ವರ್ಷ ಸರ್ಕಾರದವರು ಬಹುಶಃ ೬೦ ಕೋಟಿ ರೂ. ಗಳ ಬೆಳ್ಳಿಯನ್ನು ಕೊಂಡಿದ್ದಾರೆ. ನಾವು ಶಕ್ತಿವಂಚನೆಯಿಲ್ಲದೆ ನಾಣ್ಯಗಳನ್ನೊದಗಿಸುವುದಕ್ಕೆ ಕೆಲಸಮಾಡುತ್ತಿದ್ದೇವೆ” ಎಂದು ನುಡಿದಿರುತ್ತಾರೆ. ಅಮೇರಿಕೆಯಿಂದ ಇದುವರೆಗೆ ಅಪಾರವಾದ ಬೆಳ್ಳಿಯು ಬಂದಿರುವುದಲ್ಲದೆ ಈಗಲೂ ಮತ್ತೊಂದು ಹಡಗಿನಲ್ಲಿ ೫೫ ಲಕ್ಷ ರೂ.ಗಳ ಬೆಳ್ಳಿಯು ಬರುತ್ತಿದೆ. ಹೀಗಿದ್ದರೂ ನಮ್ಮಲ್ಲಿ ನಾಣ್ಯಗಳು ಬಳಕೆಗೆ ಸಾಲದೆ ಇರುವುದಕ್ಕೇನುಕಾರಣವೋ ಗೊತ್ತಾಗಲಿಲ್ಲ. ಸರ್ಕಾರಿಯ ಅಂಚೆಮನೆಗಳಿಂದಲೂ ನಾಣ್ಯಗಳು ಈಚೆಗೆ ಬರುವುದು ದುರ್ಲಭವಾಗಿರುವಾಗ ಉಳಿದ ಕಡೆಯಿಂದ ನಾಣ್ಯಗಳು ಹೇಗೆ ಹೊರಕ್ಕೆ ಬಂದಾವು? ಎಲ್ಲಕಡೆಯ ಖಜಾನೆಗಳಿಗೂ ನಾಣ್ಯಗಳು ಹೇರಳವಾಗಿ ಬರುವಂತಾದರೆ ಅಲ್ಲಿಂದ ಹೊರಕ್ಕೆ ನಾಣ್ಯಗಳು ವಿಶೇಷವಾಗಿ ಬಂದು ಈಗಣ ಕಷ್ಟವು ತಪ್ಪಬಹುದು.

ಪಾರ್ಲಿಮೆಂಟಿನ ಆರಂಭ.

ಹೊಸ ಪಾರ್ಲಿಮೆಂಟು ಕಳೆದ ತಾ|| ೧೧ನೆ ಮಂಗಳವಾರ ಶ್ರೀ ಜಾರ್ಜ್ ಸಾರ್ವಭೌಮರಿಂದ ಆರಂಭಿಸಲ್ಪಟ್ಟಿತು. ಚಕ್ರವರ್ತಿನಿಯವರೂ ಸಭೆಗೆ ದಯಮಾಡಿಸಿದ್ದರು. ಸಾರ್ವಭೌಮರು ತಮ್ಮ ಉಪಕ್ರಮಭಾಷಣದಲ್ಲಿ ಯುದ್ಧವು ಜಯಕರವಾಗಿ ಮುಗಿದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಜರ್ಮನರ ಪರಾಜಯದಿಂದ ಲೋಕದಲ್ಲಿ ನೂತನ ಯುಗವು ಆರಂಭವಾಗುವುದಕ್ಕಿದೆಯೆಂತಲೂ, ಲೋಕಶಾಂತಿಸಂರಕ್ಷಣೆಗಾಗಿ ಬಲವಾದ ಒಂದು ಸೈನ್ಯವನ್ನು ಸರ್ವದೇಶೀಯರೂ ಒಟ್ಟುಗೂಡಿ ಸ್ಥಾಪಿಸಬೇಕೆಂತಲೂ, ಈಗಣ ಸಂಧಿಸಭೆಯಲ್ಲಿ ಸರ್ವದೇಶಗಳ ಅನ್ಯೋನ್ಯಭಾವವು ಸುವ್ಯಕ್ತವಾಗಿದೆಯೆಂತಲೂ, ಸರ್ವಜಾತಿ ಸೌಭ್ರಾತೃತ್ವಸಂಘಸ್ಥಾಪನಕ್ಕೆ ಎಲ್ಲರ ಅನುಮೋದನವೂ ಸಿಕ್ಕಿರುವುದು ತಮಗೆ ಸಂತೋಷಪ್ರದವಾಗಿದೆಯೆಂತಲೂ, ಯುದ್ಧಸಮಯದಲ್ಲಿ ನಮ್ಮ ಅಧಿನಿವೇಶಗಳ ಮತ್ತು ಭರತಖಂಡದ ಸಹಾಯವು ಅಗಣಿತವಾಗಿ ಮಾಡಲ್ಪಟ್ಟುದಕ್ಕಾಗಿ ಆ ದೇಶಗಳಿಗೆ ಲೋಕದಲ್ಲಿ ನೂತನವಾದ ಗೌರವಸ್ಥಾನವು ದೊರೆದಿರುವುದೆಂತಲೂ, ಪ್ಯಾರಿಸ್ಸಿನಲ್ಲಿ ನಡೆಯುತ್ತಿರುವ ಸಂಧಿಸಭೆಯಲ್ಲಿ ಆ ದೇಶಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವು ದೊರೆತುದು ನನಗೆ ಬಹಳ ಸಂತೋಷಪ್ರದವಾಯಿತೆಂತಲೂ, ಭರತಖಂಡದ ರಾಜಕೀಯ ಸಂಸ್ಕರಣಗಳನ್ನು ಕುರಿತು ಯೋಚಿಸುತ್ತಿರುವ ಸಂಘದ ವರದಿಯು ಬೇಗನೆ ಪ್ರಕಟಿತವಾಗಿ ತತ್ಸಂಬಂಧವಾದ ಬಿಲ್ಲು ಈ ಸಭೆಯ ಚರ್ಚೆಗೇ ಇಡಲ್ಪಡುವುದೆಂದು ನಂಬುತ್ತೇನೆಂತಲೂ, ಐರ್ಲಂಡಿನ ಸ್ಥಿತಿಯೂ, ಕೂಲಿಕಾರರ ಕಠಿನ ಸ್ಥಿತಿಗಳೂ ಸಾನುಕೂಲವಾಗಿ ವ್ಯವಸ್ಥೆಗೊಳಿಸಲ್ಪಡಬೇಕೆಂತಲೂ, ಯುದ್ಧದ ಕಷ್ಟಕ್ಕೆ ತಲೆಕೊಟ್ಟು ನಿಂತಿದ್ದವರ ಕಷ್ಟಗಳನ್ನೆಲ್ಲಾ ನಾವು ಈಗ ತೊಲಗಿಸಿಕೊಡುವುದು ಅವಶ್ಯಕವೆಂತಲೂ, ದೇಶಸೌಖ್ಯವನ್ನು ನಾವು ಅಭಿವೃದ್ಧಿಪಡಿಸಬೇಕೆಂತಲೂ ಸ್ಫುಟವಾಗಿ ಹೇಳಿದ ಅಭಿಪ್ರಾಯಗಳು ಅವರ ನಿರ್ಮಲ ದಯಾಂತಃಕರಣವನ್ನೂ ಪ್ರಜಾವಾತ್ಸಲ್ಯವನ್ನೂ ಸಂಪೂರ್ಣವಾಗಿ ವ್ಯಕ್ತಪಡಿಸುತ್ತ ಸರ್ವರನ್ನೂ ಸಂತೋಷಗೊಳಿಸಿದುವು.

ಸಂಧಿಸಭೆ.

ಬೇರೆ ಬೇರೆ ಉಪಸಂಘಗಳನ್ನೇರ್ಪಡಿಸಿ, ಅವವಕ್ಕೆ ಪ್ರತ್ಯೇಕ ಕಾರ್ಯಭಾರಗಳನ್ನು ವಹಿಸಿ, ವಿಚಾರಣೆಯಿಂದ ವರದಿಮಾಡುವಂತೆ ಅವಕ್ಕೆ ನಿಯಮಿಸಿಬಿಟ್ಟು ಸ್ವದೇಶದ ವಿಶೇಷ ಕಾರ್ಯಾಂತರಗಳಿಗಾಗಿ ಪ್ರೆ|| ವಿಲ್ಸನ್‌ರವರು, ಮಿ|| ಲಾಯಿಡ್ ಜಾರ್ಜ್‌ರವರು, ಮಿ|| ಮಾಂಟೂಗ್‌ರವರು ಮೊದಲಾದ ಕೆಲರು ಸ್ವದೇಶಗಳಿಗೆ ಹೋಗಿರುತ್ತಾರೆ. ಸರ್ವದೇಶ ಸಂಘವನ್ನು ಸ್ಥಾಪಿಸುವ ವಿಷಯದಲ್ಲಿ ಸಂಧಿಸಭೆಯವರು ಏರ್ಪಡಿಸಿ, ಆ ವಿಷಯದಲ್ಲಿ ತಕ್ಕ ನಿಬಂಧನೆಗಳನ್ನು ಸಿದ್ಧಪಡಿಸಿದ್ದಾರೆ. ಅದನ್ನು ಪ್ರೆ|| ವಿಲ್ಸನ್‌ರವರು ಸಭೆಯಲ್ಲಿ ವಿವರಿಸಿ ಉಪನ್ಯಾಸಮಾಡುವಾಗ್ಗೆ ಇದಕ್ಕೆ ಅಮೇರಿಕಾ, ಗ್ರೇಟ್‌ಬ್ರಿಟನ್, ಫ್ರಾನ್ಸು, ಇಟಲಿ, ಜಪಾನು, ಬೆಲ್ಜಿಯಂ, ಬ್ರೆಜಿಲ್, ಚೀನಾ, ಜಕೋಸ್ಲಾವಕ್, ಗ್ರೀಸು, ಪೋಲಂಡು, ಪೋರ್ಚುಗಲ್, ರುಮೇನಿಯಾ, ಸರ್ವಿಯಾ—ಈ ದೇಶಗಳವರೆಲ್ಲರೂ ಏಕಕಂಠ್ಯದಿಂದ ಒಪ್ಪಿರುವರೆಂದು ತಿಳಿಯಿಸಿದರು. ಈ ಸರ್ವದೇಶ ಸಂಘದ ನಿಬಂಧನೆಗಳ ಮುಖ್ಯಾಭಿಪ್ರಾಯಗಳನ್ನು ಸ್ಥಲಾಭಾವದಿಂದ ಮುಂದಣ ಸಂಚಿಕೆಯಲ್ಲಿ ತಿಳಿಯಪಡಿಸಬೇಕೆಂದಿದ್ದೇವೆ.

ಜರ್ಮನರ ಹುಟ್ಟುಗುಣವು ಕಡೆಗಾಣಲಿಲ್ಲ.

ತಾತ್ಕಾಲಿಕ ಸಂಧಿಯ ಗಡುಬವು ೩ನೆಯಾವೃತ್ತಿ ಹೆಚ್ಚಿಸಲ್ಪಟ್ಟುದು ಕಳೆದ ತಾ|| ೧೭ಕ್ಕೆ ಮುಗಿದಿತು. ಮಿತ್ರಮಂಡಲಿಯವರೇನೋ ನಿಷ್ಕಲ್ಮಷಭಾವದಿಂದ ತಾವು ನುಡಿದ ಮಾತಿಗೆ ತಪ್ಪದಂತೆ ಸಂಧಿಕಾರ್ಯವನ್ನು ಸಾಗಿಸುತ್ತಿರುವರು. ಆದರೆ ಜರ್ಮನರು ಮಾತ್ರ ತಾವು ಒಪ್ಪಿದ್ದ ರೀತಿಯಂತೆ ಎಲ್ಲ ಕೆಲಸಗಳನ್ನೂ ಮಾಡಿ ಮುಗಿಯಿಸಿಲ್ಲ. ಸಬ್‌ಮೆರೀನುಗಳನ್ನು ಎಲ್ಲವನ್ನೂ ಅವರು ಕೊಟ್ಟಿಲ್ಲ. ಹೊಗೆಬಂಡಿಗಳು ಸಂಪೂರ್ಣವಾಗಿ ಒಪ್ಪಿಸಲ್ಪಟ್ಟಿಲ್ಲ. ವ್ಯಾಪಾರದ ಹಡಗುಗಳನ್ನು ಒಪ್ಪಿಸಿಲ್ಲ. ಇದರಂತೆ ಇನ್ನೂ ಎಷ್ಟೋ ಭಾಗಗಳು ಅಸಂಪೂರ್ಣವಾಗಿ ನಿಂತಿವೆ. ಮನಃಪೂರ್ವಕವಾಗಿ ಅವರು ಕಾಲಯಾಪನೆ ಮಾಡುತ್ತಿರುವಂತೆ ಕಾಣುತ್ತಿದೆ. ಇದಕ್ಕೆ ಅವರ ದುರುದ್ದೇಶವು ಏನೋ ಇರಬೇಕೆಂದು ಕಾಣುತ್ತಿದೆ. ಇದನ್ನು ಮಿತ್ರಮಂಡಲಿಯವರು ಗಮನಿಸದೆ ಇಲ್ಲ. ಕಪಟಾಚರಣೆಯಿಂದ ಜರ್ಮನರು ಮತ್ತೆ ಯುದ್ಧಕ್ಕೆ ದಾರಿಮಾಡಿದರೆ ಮಿತ್ರಮಂಡಲಿಯವರು ಅದಕ್ಕಾಗಿ ಸ್ವಲ್ಪವೂ ಭಯಪಡುವಂತಿಲ್ಲ. ಭಯಪಡುವ ಸ್ಥಿತಿಯಲ್ಲಿ ಅವರು ಇಲ್ಲವೇ ಇಲ್ಲ. ಜರ್ಮನರ ಮಯ್ಯಿಂಡ ಕಪಟಾಚರಣೆಯ ಸ್ವಭಾವವನ್ನು ಸಂಪೂರ್ಣವಾಗಿಬಲ್ಲ ಫೀಲ್ಡ್‌ಮಾರ್ಷಲ್‌ಫಾಕ್‌ರವರು ಅವರನ್ನು ನಂಬಕೂಡದೆಂದು ಮೊದಲಿಂದಲೂ ಹೇಳುತ್ತ ಅದಕ್ಕಾಗಿ ಅವರ ಕೈಬಾಯ್ಗಳನ್ನೆಲ್ಲಾ ಕಟ್ಟಿಹಾಕುವಂಥ ತಾತ್ಕಾಲಿಕ ಸಂಧಿನಿಬಂಧನೆಗಳನ್ನು ಏರ್ಪಡಿಸಿದ್ದರು. ಈಗಲೂ ಕೂಡ ಮತ್ತೊಂದು ಗಡುಬವನ್ನು ಜರ್ಮನರಿಗೆ ಕೊಡಬೇಕಾಗಿ ಬಂದರೆ ಇನ್ನಷ್ಟು ಕಠಿನವಾದ ನಿಬಂಧನೆಗಳನ್ನು ಏರ್ಪಡಿಸಿ ಅವನ್ನು ಜರ್ಮನರಿಗೆ ಕಳುಹಿಸಿ ಕೊಡಬೇಕೆಂದು ನಿರ್ಧರಿಸಿ, ಆ ನಿಬಂಧನೆಗಳನ್ನು ಗೊತ್ತುಮಾಡಿ ತಿಳಿಸಿರುವರು. ಈ ಸಮಯದಲ್ಲಿ ಜರ್ಮನರು ಮತ್ತೆ ಯುದ್ಧಾಭಿನಿವೇಶವನ್ನು ತೋರಿಸದೆ ನಡೆದುಕೊಂಡರೆ ಅವರಿಗೇ ಹಿತವಾಗುವುದು. ಇಲ್ಲದೆ ಅಹಂಕಾರದಿಂದ ತಿರುಗಿಬಿದ್ದರೆ ಅವರಿಗೆ ಸಂಪೂರ್ಣ ವಿನಾಶವುಂಟಾಗುವುದೇ ಖಂಡಿತ. ಜರ್ಮನರು ಹೇಗೆ ನಡೆದುಕೊಂಡರೂ ಅವರನ್ನು ಮೆಟ್ಟಿ ಅಡಗಿಸುವುದಕ್ಕೆ ಮಿತ್ರಮಂಡಲಿಯವರು ಸರ್ವವಿಧದಿಂದಲೂ ಶಕ್ತರೂ ಸನ್ನದ್ಧರೂ ಆಗಿರುವರು. ಹಿಂದೆ ಕಳೆದ ನವಂಬರ್ ತಿಂಗಳಲ್ಲಿ ಮಿತ್ರಮಂಡಲಿಯವರು ಮಾಡಿದ್ದ ಸೈನಿಕಸನ್ನಾಹದ ಏರ್ಪಾಟಿನಿಂದ ಜರ್ಮನರ ಸಂಪೂರ್ಣ ವಿನಾಶವು ಸಮೀಪಸ್ಥವಾಗಿದ್ದಿತು. ಹಿಂದೆ ಜರ್ಮನರು ಬೆಲ್ಜಿಯಂ, ಫ್ರಾನ್ಸ್ ದೇಶಗಳಲ್ಲಿ ಮಾಡಿದ್ದ ಅನಾಹುತಗಳು ಅವರ ದೇಶದಲ್ಲೇ ಈಗ ಸಂಭವಿಸುವ ಸ್ಥಿತಿಯು ಪ್ರಾಪ್ತವಾಗಿದ್ದಿತು. ಅಷ್ಟರಲ್ಲಿ ಇದನ್ನೆಲ್ಲಾ ಅರಿತುಕೊಂಡಿದ್ದ ಅವರ ಸೇನಾಪತಿಗಳ ಅಭಿಪ್ರಾಯದ ಪ್ರಕಾರ ಜರ್ಮನರು ಯುದ್ಧವನ್ನು ನಿಲ್ಲಿಸಿ ತಾತ್ಕಾಲಿಕ ಸಂಧಿ ಮಾಡಿಕೊಂಡುದರಿಂದ ಆ ಗಂಡವು ಕಳೆದು ದೇಶಕೋಶಗಳನ್ನು ಉಳಿಯಿಸಿಕೊಳ್ಳಲು ಮಾರ್ಗವಾಯಿತು. ಈ ಸ್ಥಿತಿಯನ್ನು ಜನರಲ್ ಫಾಕ್‌ರವರು ಆಗಲೇ ಪ್ರಕಟಿಸಿದ್ದರು. ಈಗ ಜರ್ಮನರ ಬಾಯಿಂದಲೇ ಅದು ನಿಜವೆಂಬ ಸಂಗತಿಗಳು ಹೊರಬಿದ್ದಿವೆ. ಹೇಗೆಂದರೆ—ಕಳೆದ ನವಂಬರ್ ತಾ|| ೧೦ ರಲ್ಲಿ ಜರ್ಮನ್ ಮುಖ್ಯಮಂತ್ರಿಯ ಮನೆಯೊಳಗೆ ಹಳೆಯ ಮತ್ತೂ ಈಗಣ ಪ್ರಭುತ್ವದ ಸಭಿಕರೆಲ್ಲಾ ಸೇರಿ ಮಂತ್ರಾಲೋಚನೆ ಮಾಡುತ್ತಿರುವಾಗ “ನೀವು ಮಿತ್ರಮಂಡಲಿಯವರ ತಾತ್ಕಾಲಿಕ ಸಂಧಿನಿಬಂಧನೆಗಳಿಗೆಲ್ಲಾ ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ನಾನು ಸರ್ವಸೈನ್ಯದೊಡನೆ ಶತ್ರುಗಳಿಗೆ ಶರಣಾಗತನಾಗಿ ಹೋಗಬೇಕಾಗುವುದು” ಎಂಬುದಾಗಿ ಸರ್ವಸೇನಾಪತಿ ವಾನ್‌ಹಿಂಡನ್‌ಬರ್ಗರು ಕಳುಹಿಸಿದ ತಂತ್ರೀವಾರ್ತೆಯು ಅಲ್ಲಿಗೆ ಬಂದಿತು. ಜರ್ಮನರು ತಾತ್ಕಾಲಿಕ ಸಂಧಿಗೆ ಒಪ್ಪುವುದಕ್ಕೆ ಅವರ ಸೇನಾದುಸ್ಸ್ಥಿತಿಯೇ ಕಾರಣವು, ಎಂಬುದಾಗಿ ಜರ್ಮನಿಯ ಹಿಂದಣ ರಿಚ್‌ಸ್ಟಾಗ್ ಸಭಾಧ್ಯಕ್ಷರಾಗಿದ್ದ ಹೇರ್ ಪೆಹರೆನ್‌ಬಕ್‌ರವರು ಈಗತಾನೇ ಒಂದುಕಡೆ ಉಪನ್ಯಾಸ ಮಾಡುವಾಗ್ಗೆ ಹೇಳಿರುವರು. ಹೀಗೆ ಜರ್ಮನರು ಕೈಲಾಗದೆ ಹೋದಕಾರಣದಿಂದ ಸೋತು, ಹೇಳಿದ ನಿಬಂಧನೆಗೆ ಒಪ್ಪುತ್ತೇವೆಂದು ಮಾತು ಕೊಟ್ಟು, ಮಿತ್ರಮಂಡಲಿಯವರ ಏಟನ್ನು ತಪ್ಪಿಸಿಕೊಂಡು, ತಾವು ಹಿಡಿದಿದ್ದ ದೇಶಗಳನ್ನೆಲ್ಲಾ ಬಿಟ್ಟುಹೋದರೇಹೊರತು ಇನ್ನಾವಕಾರಣದಿಂದಲೂ ಅಲ್ಲ. ಆದರೆ ನಮ್ಮ ಭರತಖಂಡದ ಬೋಲ್ಷೆವಿಕ್ಕರಾದ ಕೆಲರು ಜರ್ಮನ್‌ಅಭಿಮಾನಿಗಳು ಸಮಯಬಿದ್ದಾಗಲೆಲ್ಲಾ ಜರ್ಮನರು ಯುದ್ಧದಲ್ಲಿ ಸೋಲಲೇ ಇಲ್ಲವೆಂದು ಆಡುತ್ತ ತೃಪ್ತಿಪಟ್ಟುಕೊಳ್ಳುತ್ತಿದ್ದಾರೆ. ಅದಂತಿರಲಿ.

ಆ ಸ್ಥಿತಿಯನ್ನೆಲ್ಲಾ ಜರ್ಮನಿಯು ಮೂರು ತಿಂಗಳು ತುಂಬುವುದರೊಳಗಾಗಿ ಮರೆತಂತೆ ಕಾಣುತ್ತಿದೆ. ಈಗ ಅಲ್ಲಿ ನೂತನ ಪ್ರಜಾಪ್ರಭುತ್ವವು ಏರ್ಪಟ್ಟಿದೆ. ಪ್ರಜಾಪ್ರತಿನಿಧಿಸಭೆಯ ನಿಬಂಧನೆಗಳು ಏರ್ಪಟ್ಟು ಅದರ ಸಭಿಕರುಗಳೂ ಆರಿಸಲ್ಪಟ್ಟಿದ್ದಾರೆ. ಹಿಂದೆ ತಾತ್ಕಾಲಿಕಾಧ್ಯಕ್ಷನಾಗಿದ್ದ ಎಬರ್ಟ್ ಎಂಬಾತನೇ ಈಗಲೂ ಅಧ್ಯಕ್ಷನಾಗಿ ಆರಿಸಲ್ಪಟ್ಟಿದ್ದಾನೆ. ನೂತನ ಮಂತ್ರಿಮಂಡಲವು ಸ್ಥಾಪಿಸಲ್ಪಟ್ಟಿದೆ. ಇದು ಹೆಸರಿನಲ್ಲಿ ನೂತನ ಪ್ರಭುತ್ವವಾಗಿ ಏರ್ಪಟ್ಟಿದ್ದರೂ ಹಿಂದಣ ರಾಜಪ್ರಭುತ್ವದ ಕಿಲುಬೇ ಇದರಲ್ಲೂ ವ್ಯಕ್ತವಾಗುತ್ತಿದೆ. ಮತ್ತೆ ಇವರ ವೀರಾಲಾಪಗಳಿಗೆ ಆರಂಭವಾಗಿವೆ. ಮೊನ್ನೆತಾನೇ ಅವರ ಸಭೆಯಲ್ಲಿ ವಿದೇಶಾಂಗ ಮಂತ್ರಿಯಾದ ಕೌಂಟ್‌ರಾಂಟ್ಜೊ ಎಂಬುವನು ಹೀಗೆ ನುಡಿದಿರುವನಂತೆ “ರಾಷ್ಟ್ರಗಳನ್ನಾಗಲೀ ನಷ್ಟಪರಿಹಾರವನ್ನೇ ಆಗಲಿ ಕೋರುವುದಕ್ಕೆ ಮಿತ್ರಮಂಡಲಿಯವರಿಗೆ ಅಧಿಕಾರವಿಲ್ಲ. ಮಿತ್ರಮಂಡಲಿಯವರಿಗೆ ಆದ ವಿಜಯವು ಆರ್ಥಿಕ ಸಂಬಂಧವಾದುದೇ ಹೊರತು ಯುದ್ಧಸಂಬಂಧವಾದುದಲ್ಲ. ಈಗಣ ಸಂಧಿಯು ಬರಿಯ ಆರ್ಥಿಕವಿಷಯಕವಾಗಿರಬೇಕು. ವಾಣಿಜ್ಯವಿಷಯದಲ್ಲಿ ಜರ್ಮನರಿಗೆ ತಾತ್ಕಾಲಿಕವಾಗಿಯಾದರೂ ನಿರ್ಬಂಧಗಳನ್ನು ಕಲ್ಪಿಸಿದರೆ ನಾವು ಅದಕ್ಕೆ ಒಪ್ಪಲಾರೆವು. ವಿಲ್ಸನ್‌ರವರ ೧೪ ಸೂತ್ರಗಳನ್ನು ಅನುಸರಿಸಬೇಕು. ಅವುಗಳಲ್ಲಿ ಸಮುದ್ರ ಸ್ವಾತಂತ್ರ್ಯವು ಮುಖ್ಯವಾದುದು. ನಮ್ಮ ಅಧಿನಿವೇಶನಗಳನ್ನು ನಮಗೆ ತಿರುಗಿಕೊಡದಿದ್ದರೆ ನಾವು ನಾನಾ ದೇಶ ಸಂಘದಲ್ಲಿ ಕೂಡಲು ಅವಕಾಶವಿಲ್ಲ. ನಾನಾದೇಶ ಸಂಘದ ಅಧಿಕಾರದ ಕೆಳಗೆ ಕೆಲ ದೇಶಗಳನ್ನಿಡುವುದಾದರೆ ನಮ್ಮ ಅಧಿಕಾರದಲ್ಲೂ ಕೆಲ ದೇಶಗಳಿರುವಂತೆ ಮಾಡಬೇಕು” ಇತ್ಯಾದಿಯಾಗಿ ವೀರಾಲಾಪಗಳನ್ನು ಮಾಡಿರುವನು. ಆದರೆ ಈತನು ಆಗಲೇ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟನೆಂದು ಸುದ್ದಿಬಂದಿದೆ. ಮತ್ತು ಈಗಣ ಜರ್ಮನ್ ಪ್ರಭುತ್ವದ ಮುಖ್ಯಮಂತ್ರಿಯಾದ ಹೇರ್‌ಸ್ಕೆಯಿಡ್ಮಾನ್‌ರವರು ತಮ್ಮ ಪರಿಪಾಲನಾ ವಿಧಾನವು ಹೀಗಿರುವುದೆಂದು ಒಂದುಕಡೆ ಹೇಳಿರುವರಂತೆ—“ಮೊದಲು ನಮ್ಮಲ್ಲಿ ಜಾತೀಯೈಕಮತ್ಯವನ್ನು ಬಲವತ್ತರಪಡಿಸಿಕೊಂಡು ಬಳಿಕ ಸಂಧಿಯನ್ನು ಮಾಡಿಕೊಳ್ಳುವೆವು. ವಿಲ್ಸನ್‌ರವರು ಹೇಳಿರುವ ೧೪ ಸೂತ್ರಗಳನ್ನು ಚೆನ್ನಾಗಿ ಅನುಸರಿಸುವೆವು. ಸಂಧಿಯು ದಾರುಣವಾಗಿದ್ದರೆ ಅದನ್ನು ತಿರಸ್ಕರಿಸುವೆವು. ನಮ್ಮ ಅಧಿನಿವೇಶನಗಳನ್ನು ಮರಳಿ ನಮ್ಮ ವಶಪಡಿಸಿಕೊಳ್ಳುವೆವು. ಎಲ್ಲರಿಗೂ ಸಮನಾಗಿ ಜರ್ಮನಿಯೂ ಕೂಡ ನಾನಾ ಜಾತೀಯ ಸಂಘದಲ್ಲಿ ಸೇರಿಸಿಕೊಳ್ಳಲ್ಪಡುವಂತೆ ಮಾಡಬೇಕಾಗಿರುವುದು. ಎಲ್ಲ ದೇಶೀಯರೂ ಶಸ್ತ್ರಾಸ್ತ್ರಧಾರಣವನ್ನು ತೊಲಗಿಬಿಡುವಂತೆ ಮಾಡಬೇಕಾಗಿರುವುದು. ಎಲ್ಲರಿಗೂ ಮಧ್ಯಸ್ಥವಾದ ನ್ಯಾಯಸ್ಥಾನವೊಂದಿರುವಂತೆ ಮಾಡಬೇಕಾಗಿರುವುದು. ಪರಸ್ಪರ ರಹಸ್ಯ ರಾಜಕೀಯ ವ್ಯವಹಾರಗಳನ್ನು ನಿರ್ಮೂಲಮಾಡಬೇಕಾಗಿರುವುದು” ಇತ್ಯಾದಿಯಾಗಿ ತಮ್ಮ ಸಿದ್ಧಾಂತಗಳನ್ನು ಹೇಳಿಕೊಂಡಿರುವರು. ತಾತ್ಕಾಲಿಕ ಸಂಧಿನಿಬಂಧನೆಗೆ ವ್ಯತಿರಿಕ್ತವಾಗಿ ಪೋಲಂಡಿನಲ್ಲಿ ಜರ್ಮನ್ ಅಧಿಕಾರಿಗಳು ನಡೆಯಿಸುತ್ತಿರುವ ದುರಾಗತಗಳನ್ನು ವಿಚಾರಿಸುವುದಕ್ಕಾಗಿ ಮಿತ್ರಮಂಡಲಿಯವರು ಬಂದು ರಾಯಭಾರವನ್ನು ಕಳುಹಿಸುತ್ತೇವೆಂದು ತಿಳಿಯಿಸಲಾಗಿ, ಪೂರ್ವಪ್ರಷ್ಯಾದಲ್ಲಿ ಪೋಲರುಗಳು ಗೊಂದಲವನ್ನೆಬ್ಬಿಸದಂತೆ ನೋಡಿಕೊಳ್ಳುವ ಅಧಿಕಾರವು ತಮಗಿರಬೇಕೆಂದೂ, ಅಲ್ಲಿಯ ವಿಷಯವಾಗಿ ತಮ್ಮ ಶತ್ರುಗಳು ಹೇಳುವ ಸಲಹೆಗಳನ್ನು ನಾವು ಕೇಳುವುದಿಲ್ಲವೆಂದೂ ಸಹ ಜನರಲ್ ಫಾಕ್‌ರವರಿಗೆ ಜರ್ಮನರು ಉತ್ತರವನ್ನು ಕೊಟ್ಟಿರುವರಂತೆ. ಹೀಗೆ ಜರ್ಮನರು ತಮ್ಮ ನಡೆಯಲ್ಲೂ ನುಡಿಯಲ್ಲೂ ಸಹ ಮಿತ್ರಮಂಡಲ ವಿಷಯವಾಗಿ ಬಿರಿಸನ್ನೂ ಧಿಕ್ಕಾರವನ್ನೂ ತೋರಿಸಲುಪಕ್ರಮಿಸಿರುವರು. ಅಲ್ಲದೆ ವಾನ್‌ಹಿಂಡನ್‌ಬರ್ಗರು ಪೂರ್ವಪ್ರಷ್ಯಾದಲ್ಲಿ ೬ ಲಕ್ಷ ಐಚ್ಛಿಕ ಸೈನಿಕರನ್ನು ಕೂಡಿಸಿಕೊಂಡು ಬಾಲ್ಟಿಕ್ ಸಮುದ್ರತೀರದ ಟೋಯಿಬರ್ಗನೆಸ್ ಪಟ್ಟಣವನ್ನು ತನ್ನ ಸೇನಾ ಮುಖ್ಯಸ್ಥಾನವನ್ನಾಗಿ ಏರ್ಪಡಿಸಿಕೊಂಡು ಕುಳಿತಿರುವನೆಂದು ವಾರ್ತೆಬಂದಿರುವುದು. ಈ ಲಕ್ಷಣಗಳನ್ನೆಲ್ಲಾ ನೋಡಲಾಗಿ ಮರಳಿ ಯುದ್ಧವು ಉಪಕ್ರಮಿಸುವುದೆಂದೇ ತೋರುತ್ತಿರುವುದು. ಆದರೆ ಇಂಗ್ಲೀಷರೂ ಅಮೇರಿಕನ್ನರೂ ಫ್ರೆಂಚರೂ ಇದಕ್ಕಾಗಿ ಏನೂ ಬೆದರಿಬಿದ್ದಿಲ್ಲ. ಅವರನ್ನು ಲಕ್ಷ್ಯದಲ್ಲೇ ಇಟ್ಟಿಲ್ಲ. ಅವರು ತಲೆಯೆತ್ತಲಾರರೆಂಬುದೇ ಇವರುಗಳ ದೃಢನಿಶ್ಚಯವಾಗಿದೆ. ಇದರಮೇಲೆ ಜರ್ಮನಿಯ ಕೃತಕರ್ಮ ಫಲಾನುಭೋಗವು ಯಾವ ರೂಪವಾಗಿ ಪರಿಣಮಿಸುವುದೋ ನೋಡಬೇಕು.

ತಾತ್ಕಾಲಿಕ ಸಂಧಿಯ ಗಡುಬವು ಮುಗಿದುದರಿಂದ ಅದನ್ನು ಮರಳಿ ಹೆಚ್ಚಿಸಬೇಕಾದರೆ ಜರ್ಮನರು ಅನುಸರಿಸಬೇಕಾದ ಹೆಚ್ಚಿನ ನಿಬಂಧನೆಗಳನ್ನು ತಿಳಿಯಪಡಿಸುವುದಕ್ಕಾಗಿ ಜನರಲ್ ಫಾಕ್‌ರವರು ತಾ|| ೧೬ ರಲ್ಲಿ ಟ್ರೆವಿಸ್‌ಪಟ್ಟಣಕ್ಕೆ ಹೋಗಿದ್ದರು. ಅದರಲ್ಲಿ “ಜರ್ಮನ್ ಸೈನ್ಯವು ಮಿತ್ರಮಂಡಲಿಯವರು ಏರ್ಪಡಿಸಿದ ರೇಖೆಯನ್ನು ದಾಟಿ ಯಾವನ್ಮಾತು ಈಚೆಗೆ ಬಂದರೂ ತಾತ್ಕಾಲಿಕ ಸಂಧಿನಿಬಂಧನೆಯು ಅವರಿಂದ ಮೀರಲ್ಪಟ್ಟಂತೆ ಭಾವಿಸಿ ಮುಂದಣ ಕೆಲಸವನ್ನು ಜರುಗಿಸಲಾಗುವುದು. ಪೋಲಂಡ್ ದೇಶದಲ್ಲಿ ಜರ್ಮನರು ನಡೆಯಿಸುತ್ತಿರುವ ಯುದ್ಧವನ್ನು ನಿಲ್ಲಿಸಬೇಕು. ಸೈನ್ಯವನ್ನು ಚದುರಿಸಿಬಿಡಬೇಕು.” ಇತ್ಯಾದಿ ನಿಬಂಧನೆಗಳಿರುವುವಂತೆ. ಇದನ್ನಂಗೀಕರಿಸುವುದಕ್ಕೆ ೨೪ ಗಂಟೆಗಳ ವ್ಯವಧಿಯನ್ನು ಕೊಡಬೇಕೆಂದು ಜರ್ಮನ್ ಅಧಿಕಾರಿಗಳು ಕೋರಿಕೊಂಡರು. ಮಾರ್ಷಲ್ ಫಾಕ್‌ರವರು ಒಪ್ಪಲಿಲ್ಲ. ಕಡೆಗೆ ಜರ್ಮನರು ತಾ|| ೧೬ ರಲ್ಲಿ ಈ ನೂತನ ನಿಬಂಧನಪತ್ರಕ್ಕೂ ಹಸ್ತಾಕ್ಷರವನ್ನು ಹಾಕಿದರೆಂಬ ಸುದ್ದಿಯನ್ನು ಕೇಳಲಾಗಿ ಅವರ ಶೂರತ್ವವು ವಾಙ್ಮಾತ್ರವೇ ಹೊರತು ಕಾರ್ಯರೂಪಗೊಳ್ಳಲು ಶಕ್ತವಾಗಿಲ್ಲವೆಂದೇ ಕಾಣುವುದು.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ತಮ್ಮ ಸಂಚಾರವನ್ನು ಮುಗಿಸಿಕೊಂಡು ಕಳೆದವಾರ ಬೆಂಗಳೂರಿಗೆ ದಯಮಾಡಿಸಿದರು.

ಅವಧಿಯು ಮುಗಿದುದರಿಂದ ಈ ವರ್ಷದ ಪ್ರಜಾಪ್ರತಿನಿಧಿ ಸಭೆಗೆ ನೂತನ ಸಭಿಕರನ್ನು ಆರಿಸುವ ಕೆಲಸವು ಸಂಸ್ಥಾನದಲ್ಲೆಲ್ಲಾ ನಡೆಯಬೇಕಾಗಿದೆ.

ಬರುವ ಮಾರ್ಚಿ ತಾ|| ೩ರಲ್ಲಿ ಸಿದ್ಧಗಂಗಾಕ್ಷೇತ್ರದಲ್ಲೂ ತಾ|| ೧೩ರಲ್ಲಿ ಹುಣಸುಮಾರನಹಳ್ಳಿಯಲ್ಲಿಯೂ ಜಾತ್ರೆಯೂ ದನಗಳ ಸಂತೆಯೂ ಸಹ ನಡೆಯುವುವು.

ದಾವಣಗೆರೆ ಸಬ್‌ಡಿವಿಜನ್ ಆಫೀಸರಾಗಿದ್ದ ಮಿ|| ಮಹಮ್ಮದ್ ಒಬದುಲ್ಲಾಯವರು ಬೆಂಗಳೂರು ಸೆಂಟರಲ್ ಜೈಲಿನ ಆಕ್ಟಿಂಗ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಸಂಸ್ಥಾನದಲ್ಲಿ ೫೦ ರೂ.ಗಳೊಳಗಿರುವ ಸರ್ಕಾರಿ ಸಂಬಳಗಾರರಿಗೆಲ್ಲಾ ಅವರ ಸಂಬಳದ ಜತೆಗೆ ರೂ. ಗೆ ೧ ಆಣೆಯಂತೆ ಅಲೋಯನ್ಸನ್ನು ಸಹ ಸೇರಿಸಿ ೩ ತಿಂಗಳವರೆಗೆ ಸಲ್ಲಿಸತಕ್ಕದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಹೊರಗಣಿಂದ ಸೀಮೆಯೆಣ್ಣೆಯು ಬಂದಿಲ್ಲದಿರುವುದರಿಂದ ಸಂಸ್ಥಾನದ ಎಲ್ಲಕಡೆಯೂ ಅದಕ್ಕೆ ಅಭಾವವಾಗಿ ಸೀಸೆ ಒಂದಕ್ಕೆ ೪-೬-೮ ಆಣೆಗಳವರೆಗೂ ಬೆಲೆಯಾಗಿದೆ. ಕೆಲಕಡೆ ಸಿಕ್ಕುವುದೇ ಇಲ್ಲವಾಗಿ ಪ್ರಜೆಗಳು ಕಷ್ಟಪಡುತ್ತಿದ್ದಾರೆ.

ಇದುವರೆಗೆ ಸಂಸ್ಥಾನದ ಆಹಾರ್ಯಧಾನ್ಯಗಳ ಏರ್ಪಾಟಿನ ವಿಷಯದಲ್ಲಿ ಸಿವಿಲ್ ಸಪ್ಲೈ ಡೈರೆಕ್ಟರು, ಫುಡ್ ಕಂಟ್ರೋಲರು ಎಂಬ ಇಬ್ಬರು ಅಧಿಕಾರಿಗಳನ್ನು ಬೇರೆ ಬೇರೆ ನಿಯಮಿಸಿದ್ದರು. ಏಕಸೂತ್ರವಾಗಿ ಕೆಲಸಗಳು ನಡೆಯುವಂತೆ ಮಾಡುವುದಕ್ಕಾಗಿ ಮಿ|| ಮೆಥ್ಯೂನ್‌ರವರಿಗೇ ೨ ಅಧಿಕಾರಗಳನ್ನೂ ಸರ್ಕಾರದವರು ವಹಿಸಿಕೊಟ್ಟಿದ್ದಾರೆ.

ಸರ್ಕಾರದವರು ಧಾನ್ಯಗಳ ಮಾರಾಟದ ವಿಷಯದಲ್ಲಿ ವಿಶೇಷ ನಿರ್ಬಂಧವನ್ನಿಟ್ಟಿರುವುದರಿಂದ ದವಸಗಳು ತಗ್ಗಾಗಿವೆಯೆಂದೂ ತಕ್ಕಷ್ಟು ಪೇಟೆಗಳಿಗೆ ಬರುವುದಿಲ್ಲವೆಂದೂ ಅನೇಕರು ಆಕ್ಷೇಪಿಸುತ್ತಿದ್ದರು. ಈಗ ಸರ್ಕಾರದವರು ಸಂಸ್ಥಾನದ ಹೊರಕ್ಕೆ ಧಾನ್ಯಗಳನ್ನು ಸಾಗಿಸಲಾಗದೆಂಬ ನಿರ್ಬಂಧವೊಂದನ್ನು ಮಾತ್ರ ಉಳಿಯಿಸಿ ಉಳಿದ ನಿರ್ಬಂಧಗಳನ್ನೆಲ್ಲಾ ತೆಗೆದುಹಾಕಿಬಿಟ್ಟಿದ್ದಾರೆ. ಇನ್ನುಮೇಲಣ ಸ್ಥಿತಿಗತಿಯು ಎಷ್ಟುಮಟ್ಟಿಗೆ ಸಮರ್ಪಕವಾಗುವುದೋ ನೋಡಬೇಕಾಗಿದೆ. ವೈರುದಾರರಾಗಲೀ ವರ್ತಕರಾಗಲೀ ದುರಾಸೆಯಿಂದ ಅವುಗಳನ್ನು ಮಾರಾಟಕ್ಕೆ ಕೊಡದೆ ಶೇಖರಿಸಿಟ್ಟುಕೊಂಡಿದ್ದರೆ ಅಂಥ ಸಂದರ್ಭದಲ್ಲಿ ಸರ್ಕಾರದವರು ಬೆಲೆಯನ್ನು ನಿಗದಿಮಾಡಿ ಬಲಾತ್ಕಾರದಿಂದ ವಶಪಡಿಸಿಕೊಳ್ಳದೆ ಬಿಡುವುದಿಲ್ಲ. ವರ್ತಕರೇ ಮೊದಲಾದವರುಗಳು ಈಗಣ ಸಂಧಿಯಲ್ಲಿ ಬೆಲೆಗಳನ್ನೇರಿಸಿ ಮತ್ತೆ ಪೂರ್ವದಸ್ಥಿತಿಯನ್ನು ತಂದಿಟ್ಟು ಪುನಃ ಸರ್ಕಾರದವರು ನಿರ್ಬಂಧದ ಏರ್ಪಾಟುಗಳಿಗೆ ನಿಲ್ಲಬೇಕಾದ ಸ್ಥಿತಿಯನ್ನು ತಂದಿಡಬಾರದೆಂದು ಸೂಚಿಸುತ್ತೇವೆ.

ಪತ್ರವ್ಯವಹಾರ.

ಮೈಸೂರುದೇಶದ ಸಕಲ ವೀರಶೈವ ವಿದ್ಯಾರ್ಥಿಗಳಿಗೆ ವಿಜ್ಞಾಪನೆ.

ಪ್ರಿಯ ಸಮಾಜಬಾಂಧವರೆ!

ನಮ್ಮ ಸಮಾಜದಲ್ಲಿ ಆಂಗ್ಲ ವಿದ್ಯಾಭಿರುಚಿಯನ್ನು ಹೆಚ್ಚಿಸುವುದಕ್ಕಾಗಿ ಮಹನೀಯರು ನಾನಾವಿಧವಾದ ಪ್ರೋತ್ಸಾಹಗಳನ್ನು ಕಲ್ಪಿಸುತ್ತಿದ್ದಾರೆ. ಅದರಂತೆಯೇ ಈ ವರ್ಷ ಅಂದರೆ 1919 ನೆ ಏಪ್ರಿಲ್ ಸುಮಾರಿನಲ್ಲಿ ನಡೆಯುವ ಮೈಸೂರ್ ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ನಮ್ಮ ವಿದ್ಯಾರ್ಥಿಗಳ ಪೈಕಿ ಅತ್ಯುತ್ತಮವಾಗಿ ತೇರ್ಗಡೆಯಾಗುವವರಿಗೆ ಶಿವಾಂಶೀಭೂತರಾದ ಮೈಸೂರಿನ ಯಜಮಾನರು ಕೈ. ಶ್ರೀ. ವೀರಸಂಗಪ್ಪನವರ ಹೆಸರಿನಲ್ಲಿ ಒಂದು ಬಹುಮಾನವೂ, ಮತ್ತು ಮೈಸೂರು ಸರ್ಕಾರದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮೇಲ್ಕಂಡಂತೆ ಉತ್ತೀರ್ಣರಾಗುವವರಿಗೆ ಶೀರ್ಘರೂಪು ನಮ್ಮ ಯಜಮಾನರಾದ ಕೈ. ಶ್ರೀ. ಗುಬ್ಬೀ ಕೊಟ್ರಯ್ಯನವರ ಹೆಸರಿನಲ್ಲಿ ಒಂದು ಬಹುಮಾನವೂ ಕೊಡಲ್ಪಡುತವೆ. ಅಲ್ಲದೆ ವೀರಶೈವ ಸ್ತ್ರೀ ವಿದ್ಯಾಪ್ರಸಾರಕ್ಕಾಗಿ ಈ ವರ್ಷದ ಮೈಸೂರು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಮೇಲ್ಕಂಡಂತೆ ತೇರ್ಗಡೆಯಾಗುವ ವೀರಶೈವ ಬಾಲಿಕಾಮಣಿಗೆ ನಮ್ಮ ಧರ್ಮಪತ್ನಿಯಾದ ಸಾಧ್ವೀ ಶಿರೋಮಣಿ ಕೈಲಾಸವಾಸಿ ಶ್ರೀಮತಿ ಹುಚ್ಚಮ್ಮನ ಜ್ಞಾಪಕಾರ್ಥವಾಗಿ ಒಂದು ಬಹುಮಾನವೂ ಸಹ ಕೊಡಲ್ಪಡುತ್ತದೆ. ಇದೇ ಆರಂಭಪ್ರಯತ್ನವಾಗಿರುವುದರಿಂದ ಬಹುಮಾನಗಳು ಮಿತವಾಗಿವೆ. ಇವುಗಳನ್ನು ಮುಂದೆ ಕ್ರಮೇಣ ಹೆಚ್ಚಿಸುವದಲ್ಲದೆ ಶಾಶ್ವತಪಡಿಸುವುದಾಗುತ್ತದೆ. ಪರೀಕ್ಷೆಗಳ ಕಾಲವು ಸಮೀಪಿಸುತ್ತಿರುವುದರಿಂದ ಮೇಲ್ಕಂಡ ಪರೀಕ್ಷೆಗಳಿಗೆ ಹೋಗತಕ್ಕ ವೀರಶೈವರು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕಾಗಿಯೂ ಮತ್ತು ಈ ನಮೂದಿರುವ ತಪ್ಸೀಲುಗಳನ್ನು ೧೯೧೯ ನೇ ಮಾರ್ಚಿ ೩೦ ರ ಒಳಗಾಗಿ ನಮಗೆ ತಿಳಿಸಬೇಕಾಗಿಯೂ ಸಹ ವಿಜ್ಞಾಪಿಸಿದೆ.

ತಪಸೀಲು:—ರಿಜಿಸ್ಟರ್ ನಂಬರ್, ಹೆಸರು, ತಂದೆ ಹೆಸರು, ಪರೀಕ್ಷೆ ಹೆಸರು, ಸ್ಕೂಲು, ಸಂಪೂರ್ಣ ವಿಳಾಸ.

ಶುಭಸಮೀಪಿಯ

ತುಮಕೂರು,
ತಾ|| 19–2–1919.

ಜಿ. ಕೆ. ಗುರುಸಂಗಾರ್ಯ,
ಪ್ಲೀಡರ್.

ಶ್ರೀ ಶಿವಲಿಂಗ ಪ್ರತಿಷ್ಠಾದಿ ಮಹೋತ್ಸವಗಳು.

ಪೂರ್ವಾರ್ಜಿತ ಸುಕೃತವಿಶೇಷದಿಂದ ಭಾಗ್ಯಶಾಲಿಗಳಾದ ಪುಣ್ಯಾತ್ಮರು ತಮ್ಮಿಂದಾರ್ಜಿಸಲ್ಪಟ್ಟ ದ್ರವ್ಯಕ್ಕೆ “ಯದ್ದದಾತಿವಿಶಿಷ್ಟೇಭ್ಯೋ ಯಚ್ಚಾಶ್ನಾತಿದಿನೇದಿನೇ । ತತ್ತೇವಿತ್ತಮಹಂಮನ್ಯೇ ಶೇಷಂಕಸ್ಯಾಪಿರಕ್ಷಸಿ ॥ ಉಪಾರ್ಜಿತಾನಾಂ ವಿತ್ತಾನಾಂ ತ್ಯಾಗಏವ ಹಿರಕ್ಷಣಂ ॥ ಸತ್ಪಾತ್ರರೇಳ್ ದಾನಮಂ” ಇತ್ಯಾದ್ಯಭಿಯುಕ್ತೋಕ್ತಿಗಳಿಂದ ಸದ್ವಿನಿಯೋಗಭೋಗಗಳೇ ವಿಭೂಷಣಗಳೆಂಬಂಶವನ್ನೂ, ಮತ್ತು ಜನ್ಮಸಾರ್ಥಕತೆಗೆ “ಧರ್ಮೋವಿಶ್ವಸ್ಯಜಗತಃಪ್ರತಿಷ್ಠಾ ॥ ಧರ್ಮೇಸರ್ವಂಪ್ರತಿಷ್ಠಿತಂ” ಇತ್ಯಾದಿ ವಾಕ್ಯಗಳಿಂದುದ್ಘೋಷಿಸುತ್ತಿರುವ ಧರ್ಮಸಂಗ್ರಹವೇ ಇಹಪರಗಳೆರಡರಲ್ಲಿಯೂ ಪರಮಸುಖಪ್ರದಾಯಕವಾಗಿರುವುದೆಂಬ ಮುಖ್ಯ ತತ್ವವನ್ನು ಶಾಸ್ತ್ರವಿಚಾರ ಸ್ವಾನುಭವಗಳಿಂ ತಿಳಿದವರಾದುದರಿಂದಲೇ ವಿವೇಕಿಗಳು ಬಹುಪ್ರಕಾರದಿಂದನ್ನದಾನ, ವಿದ್ಯಾದಾನ, ಭೂದಾನ, ಕೆರೆಕಟ್ಟೆಕಾದಿ ನಿರ್ಮಾಣ, ಶಿವಲಿಂಗಪ್ರತಿಷ್ಠಾ, ಶಿವಾಲಯ ಜೀರ್ಣೋದ್ಧಾರ ಮೊದಲಾದ ಧರ್ಮಕಾರ್ಯಗಳನ್ನು ಆಚರಿಸುತ್ತಿರುವುದು ಲೋಕವಿಖ್ಯಾತವಾದ ಸಂಗತಿಯಾಗಿರುತ್ತದಷ್ಟೆ. ಅದರಂತೆ ಯುಕ್ತಾಯುಕ್ತ ವಿಚಾರತತ್ಪರರಾಗಿಯೂ, ಐಶ್ವರ್ಯಶಾಲಿಗಳಾಗಿಯೂ, ಗುರುಲಿಂಗ ಜಂಗಮಾರಾಧನತತ್ಪರರಾಗಿಯೂ ಇರುವ ದಾವಣಗೆರೆ ಮ|| ರಾ|| ಮಾಗಾನಹಳ್ಳಿ ಷಡಕ್ಷರಪ್ಪನವರು ತಮ್ಮ ಬಂಗಲೆಯ ಆವರಣದಲ್ಲಿ ಕೆಲವು ದಿವಸಗಳ ಹಿಂದೆ ೫-೬ ಸಾವಿರ ರೂ. ಗಳನ್ನು ಮುಟ್ಟಿಸಿ ಶಿಲಾಮಯವಾದ ದೇವಾಲಯವನ್ನೂ, ಇದರ ಸಮೀಪದಲ್ಲಿ ಒಂದು ಧರ್ಮಛತ್ರವನ್ನು ಸಹ ಕಟ್ಟಿಸಿ, ಕಾಶೀಕ್ಷೇತ್ರದಿಂದ ತರಿಸಲ್ಪಟ್ಟ ಶ್ರೇಷ್ಠ ತರವಾದ ಶ್ರೀ ಶಿವಲಿಂಗಮೂರ್ತಿಯನ್ನೂ ವೃಷಭೇಶ್ವರನನ್ನೂ ಇದೇ ಕಾಳಯುಕ್ತಿ ನಾಮಸಂವತ್ಸರದ ಮಾಘ ಶುದ್ಧ ೫ ಬುಧವಾರ ಶುಭಮುಹೂರ್ತದಲ್ಲಿ ವಿಧ್ಯುಕ್ತಪ್ರಕಾರವಾಗಿ ಪೂಜ್ಯಪಾದರಾದ ೩-೪ ಜನ ಶ್ರೀ ಚರಪಟ್ಟಾಧಿಕಾರಿಗಳಿಂದಲೂ, ತಮ್ಮ ಮನೆಗುರುಗಳಿಂದಲೂ, ವೇ|| ಶಾಸ್ತ್ರಿಗಳು, ಪುರೋಹಿತರು ಮೊದಲಾದವರಿಂದಲೂ ಪ್ರತಿಷ್ಠಾ ಕಾರ್ಯವನ್ನು ಸಾಂಗವಾಗಿ ನೆರವೇರಿಸಿದುದಲ್ಲದೆ, ಇದೇ ಸಮಯದಲ್ಲಿ ಅಂದರೆ ಮಾಘ ಶು|| ೨ ಭಾನುವಾರ ಪೂರ್ವಾಹ್ಣದಲ್ಲಿ ಹೊಳೇಹೊನ್ನೂರು ಪುರಾಣಮಠದ ಶ್ರೀ ಪಟ್ಟದಸ್ವಾಮಿಗಳಿಗೋಸ್ಕರ ದಾವಣಗೆರೆ ಚಾಮರಾಜಪೇಟೆಯಲ್ಲಿ ಗೌರ್ನಮೆಂಟಿನವರಿಂದ ತೆಗೆದುಕೊಂಡಿರುವ ನಿವೇಶನದಲ್ಲಿ ಮಠವನ್ನು ಕಟ್ಟಿಸುವುದಕ್ಕಾಗಿ ಚತುರ್ವಿಂಶತಿಗಳ ಸ್ಥಲದಸ್ಥಲದವರ ಅನುಮತಿಯಿಂದ ಮಠಪದ್ಧತಿ ಪ್ರಕಾರ ಲಿಂಗಮುದ್ರೆಸ್ಥಾಪನೆಯನ್ನೂ ಮತ್ತು ೩ ಸೋಮವಾರ ಕೆಲವು ವೀರಮಾಹೇಶ್ವರ ವಟುಗಳಿಗೆ ಶಿವದೀಕ್ಷಾಸಂಸ್ಕಾರವನ್ನು ಭಕ್ತಿಯಿಂದ ಈಶ್ವರಾರ್ಪಿತವಾಗಿ ನಡಸಿ, ಇದೇ ಮಾಘ ಶುದ್ಧ ೪ ಭಾನುವಾರ ಶುಭಲಗ್ನದಲ್ಲಿ ತಮ್ಮ ಪುತ್ರರಾದ ಚಿ|| ಗಣಪತಿಯಪ್ಪ ಮತ್ತು ತಮ್ಮ ಪುತ್ರಿ ಚಿ|| ಸೌ|| ದಾಕ್ಷಾಯಣಿಯಮ್ಮ ಇವರ ವಿವಾಹಮಹೋತ್ಸವದ ಜತೆಯಲ್ಲಿ ೪ ಧರ್ಮ ಲಗ್ನಗಳನ್ನು ಸಹ ಸಾಂಗವಾಗಿ ಜರುಗಿಸಿದರು. ಈ ಮಹೋತ್ಸವದಲ್ಲಿ ವೇ|| ಮೈಸೂರು ಶಿವಕಥಾ ಶಿರಪ್ಪಶಾಸ್ತ್ರಿಗಳು ಸಭೆಯಲ್ಲಿ ನೆರೆದಿದ್ದ ಮ|| ಡಿಪ್ಯುಟಿಕಮೀಷನರ್ ಸಾಹೇಬರು ಮೊದಲಾದ ಅಧಿಕಾರಿ ಜನರಿಗೂ ಸಮಸ್ತ ಸಭಾಸದರಿಗೂ ಅತ್ಯಾನಂದವುಂಟಾಗುವಂತೆ ೩-೪ ದಿವಸ ಶಿವಕೀರ್ತನೆಗಳನ್ನು ಮಾಡಿ ಸಂತೋಷಪಡಿಸಿದರು. ಮತ್ತೊಂದು ವಿಶೇಷವೇನೆಂದರೆ— “ದುರ್ಭಿಕ್ಷೇಚಾನ್ನದಾತಾರಂ” ಎಂಬಂತೆ ಇಂತಹ ಕ್ಷಾಮಗಾಲದಲ್ಲಿ ೫-೬ ಸಾವಿರ ಬಡಜನರಿಗೆ ಅನ್ನದಾನವನ್ನು ಮಾಡಿ ಭೂರಿದಕ್ಷಿಣೆ ಮೊದಲಾದ ಸದ್ವಿನಿಯೋಗವನ್ನು ಕೇವಲ ಉಲ್ಲಾಸದಿಂದಲೂ ನಿರ್ಮಲಚಿತ್ತದಿಂದಲೂ ಆಚರಿಸಿದುದು ಅಭಿನಂದನೀಯವಾಗಿರುತ್ತದೆ. ಈ ಶುಭಸಮಯದಲ್ಲಿ ಮೈಸೂರು ವೀರಶೈವ ವಿದ್ಯಾವರ್ಧಕಫಂಡಿಗೆ ೨೫ ರೂ. ಗಳನ್ನೂ ಮ|| ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ೫ ರೂ. ಗಳನ್ನು ಕಳುಹಿಸಿಕೊಟ್ಟು ತಮ್ಮ ಸಹಜವಾದ ವಿದ್ಯಾಭಿಮಾನವನ್ನು ವ್ಯಕ್ತಗೊಳಿಸಿದರು. ಇಂತಹ ಧರ್ಮಕಾರ್ಯಗಳನ್ನಾಚರಿಸಿ ಮಾರ್ಗದರ್ಶಕರಾಗಿರುವ ಮ|| ಮಾಗಾನಹಳ್ಳಿ ಷಡಕ್ಷರಪ್ಪನವರಿಗೂ, ಇವರ ಅಶೇಷ ಕುಟುಂಬದವರಿಗೂ ಭಕ್ತವತ್ಸಲನಾದ ಶ್ರೀ ಪ್ರಸನ್ನ ವಿಶ್ವೇಶ್ವರಮೂರ್ತಿಯು ದೀರ್ಘಾಯುರಾರೋಗ್ಯಾದಿ ಸುಖಪರಂಪರೆಗಳನ್ನೂ ಧನಕನಕ ವಸ್ತುವಾಹನಾದಿ ಮಹದೈಶ್ವರ್ಯವನ್ನೂ ಕರುಣಿಸಲೆಂದು ಬಯಸುವ ಪ್ರತ್ಯಕ್ಷದರ್ಶಿ.

[ಮೇಲ್ಕಂಡ ೫ ರೂಪಾಯಿಗಳನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಪ. ಪ್ರ]

ನೋಟೀಸು. 4

ತರೀಕೆರೆ ತಾಲ್ಲೋಕು ಬುಕ್ಕಾಂಬುಧಿಯಲ್ಲಿರುವ ಹಲಸಿನಗೊಂದಿ ಸಣ್ಣ ಕಾಡಯ್ಯನವರ ಮಲ್ಲಪ್ಪನವರ ಮಗ ಬಸಪ್ಪ, ಮೈನರ್ ಗಾರ್ಡಿಯನ್ ತಾಯಿ ದೇವೀರಮ್ಮ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ನನ್ನ ಮಗ ಮೈನರ್ ಬಸಪ್ಪನ ಅಣ್ಣ ಶಾಂತಮಲ್ಲಪ್ಪನು ಈಚೆಗೆ ಕಾಲವಾದ ನಂತರ ಈತನ ಹೆಂಡತಿ ನೀಲಮ್ಮನು ಬೇರೆಯವರ ಪ್ರೇರೇಪಣೆ ಮೇಲೆ ದುರುದ್ದೇಶದಿಂದ ಕುಟುಂಬದ ಸೊತ್ತುಗಳನ್ನು ಅಡವು, ಕ್ರಯ, ವಗೈರೆ ಮೂಲಕ ಪರಾಧೀನಪಡಿಸುವದರಲ್ಲಿದ್ದಾಳೆಂದು ವರ್ತಮಾನ ಕೇಳುತ್ತೇನೆ. ಸದರಿ ನೀಲಮ್ಮನಿಗೆ ಆಸ್ತಿಯನ್ನು ಪರಾಧೀನಮಾಡಲು ಯಾವ ಹಕ್ಕೂ ಇರುವದಿಲ್ಲ. ಹೀಗಿರುವಲ್ಲಿ ನೀಲಮ್ಮನಿಂದ ಯಾರಾದರೂ ಸೊತ್ತುಗಳ ಕ್ರಯ ವಗೈರೆ ಬರಸಿಕೊಂಡಲ್ಲಿ ಅಂಥಾ ಪರಾಧೀನವು ಕಾನೂನು ರೀತ್ಯಾ ಯಾರಿಗೂ ಸಿದ್ಧವಾಗತಕ್ಕದ್ದಲ್ಲವೆಂದು ಈ ಮೂಲಕ ಸನುಷ್ಯರಿಗೂ ಮುಂಚಿತವಾಗಿ ತಿಳಿಸಿರುತ್ತೇನೆ.

ಸಕಲ ವೀರಶೈವರಿಗೂ ಪೂಜಾರ್ಹವಾದದ್ದು.

ಎಡೆಯೂರು ತೋಂಟದಾರ್ಯರ ಫೋಟೋ. ನಂಬಣ್ಣ, ನಂಬಮ್ಮ, ಕಂಬಳಿ ಸ್ವಾಮಿಗಳ ಸಮೇತ. ಡಜನ್ 1 ಕ್ಕೆ 0—12—0. 100 ಕ್ಕೆ 5—0—0. ಮತ್ತು ನಮ್ಮಲ್ಲಿ ತರಾವರಿ ಫೋಟೋಗಳು ದೊರೆಯುತ್ತೆ.

ಹೆಚ್. ಜಿ. ಮಹದೇವಪ್ಪ,
ಫೋಟೋಗ್ರಾಫರ್,
ಎಡತೊರೆ, ಮೈಸೂರು ಡಿ||.

3

ಡಿ. ನಂಜುಂಡಯ್ಯ,
ಬೀಜಾಜವಳಿ ಅಂಗಡಿ,
ನಂಜನಗೂಡು, ಮೈಸೂರು ಡಿ||.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವ್ಯಾಖ್ಯಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

8 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು— ಜಪಾನ್ ಬೀಸಣಿಗೆ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4—8—0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
4 5. ಇರುಳಪ್ಪನ ಬೀದಿ, ಮದರಾಸ್.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

21 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುಪ್ತವ್ಯಸನಬೇನೆ, ಹುರಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊಂಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
41 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 11

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪಶಿಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೧೯ ನೆಯ ಇಸವಿ ಫೆಬ್ರವರಿ ತಾ|| ೨೩ ರಿಂದ ೧೯೧೯ ನೆಯ ಮಾರ್ಚಿ ತಾ|| ೧ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿ ನಾಮಸಂವತ್ಸರದ ಮಾಘ ಬ|| ಅಷ್ಟಮಿಯಿಂದ ಮಾಘ ಬ|| ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ಮಾಸ
23	(1) ಭಾನು	ಅಷ್ಟಮಿ	25-57	ಅನೂ	21-54	12
24	ಸೋಮ	ನವಮಿ	29-42	ಜ್ಯೇಷ್ಠ	28-0	13
25	ಮಂಗಳ	ದಶಮಿ	32-19	ಮೂಲ	32-0	14
26	(2) ಬುಧ	ಏಕಾದ	33-38	ಪೂಷಾ	34-46	15
27	ಗುರು	ದ್ವಾದಶಿ	33-38	ಉಷಾ	36-18	16
28	(3) ಶುಕ್ರ	ತ್ರಯೋ	32-21	ಶ್ರವಣ	36-34	17
1	ಶನಿ	ಚತು	29-57	ಧನಿಷ್ಠ	35-39	18

(1) ಅಷ್ಟಮೀ ತಿಥಿಃ, ತಿಸ್ರೋಷ್ಟಕಾಃ. (2) ಸರ್ವತ್ರೈಕಾದಶೀ. (3) ಪ್ರದೋಷಃ, ಮಹಾಶಿವರಾತ್ರಿಃ, ನಂಜನಗೂಡಿನಲ್ಲಿ ಬೆಳ್ಳಿಕೈಲಾಸ ವಾಹನ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಶೀಲಂ ಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೇಕೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಮಾರ್ಚಿ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೧೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ —ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ. —ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 15

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಕಾರವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಿಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರಸಪುಷ್ಟಿಕ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾತ್ಯಾವ ಅವಶ್ಯ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಸಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ನಾಕಿನಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೆ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

2 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಷ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುಪ್ತವ್ಯಸನಬೇನೆ, ಹುರಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊಂಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
42 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು— ಜಪಾನ್ ಬೀಸಣಿಗೆ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4—8—0.

MADRAS
MAIL
WATCH
WITH 15
PRESENTS

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
5 5. ಇರುಳಪ್ಪನ ಬೀದಿ, ಮದರಾಸ್.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಆದ್ಯಂತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

22 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮೈಸೂರ್ ಸ್ಟಾರ್.

೧೯೧೯ ನೆಯ ಇಸವಿ ಮಾರ್ಚಿ ತಾ|| ೯ ನೆಯ ಭಾನುವಾರ.

ಆಹಾರ್ಯಧಾನ್ಯಗಳು.

ಈಗ ಪ್ರಪಂಚದ ಯಾವುದೊಂದು ದೇಶದಲ್ಲೂ ಆಹಾರ್ಯ ಪದಾರ್ಥಗಳಿಗೆ ಕ್ಷಾಮಬಂದು ಬೆಲೆಗಳು ಏರಿಹೋಗಿರುತ್ತವೆ. ವಿಚಾರಮಾಡಿನೋಡಿದರೆ ಇತರದೇಶಗಳೆಲ್ಲಕ್ಕಿಂತಲೂ ನಮ್ಮ ಭರತಖಂಡದ ಸ್ಥಿತಿಯೇ ಮೇಲಾಗಿರುವುದೆಂದು ಹೇಳಬಹುದು. ಯುದ್ಧದ ಜತೆಗೆ ಮಳೆಬೆಳೆಗಳ ವೈಷಮ್ಯವೂ ಕೂಡಿಕೊಂಡು ಕಳೆದ ವರ್ಷದ ಅರ್ಧಭಾಗದಿಂದೀಚೆಗೆ ನಮ್ಮ ದೇಶದಲ್ಲಿ ಆಹಾರ್ಯವಸ್ತುಗಳ ಕೊರತೆಯು ಹೆಚ್ಚಿಹೋಗಿ ಬಹಳ ಕಳವಳವನ್ನುಂಟುಮಾಡಿರುತ್ತದೆ. ಈ ದೇಶವು ವ್ಯವಸಾಯ ದೇಶವಾದುದರಿಂದ ಧಾನ್ಯಾದಿಗಳು ಇಲ್ಲಿ ಹೇರಳವಾಗಿ ಸಿಕ್ಕುವುವೆಂದು ಪ್ರಪಂಚದವರಿಗೆಲ್ಲಾ ಇದರ ಮೇಲೆ ಕಣ್ಣುಂಟು. ಅನೇಕ ದೇಶಗಳಿಗೆ ಮುಖ್ಯವಾಗಿ ಮಿತ್ರಮಂಡಲಿ ದೇಶಗಳಿಗೆ ಯುದ್ಧಕಾಲದಲ್ಲೂ ಈ ದೇಶವು ಅಪರಿಮಿತವಾಗಿ ಧಾನ್ಯಗಳನ್ನು ಒದಗಿಸಿಕೊಡುತ್ತಿದ್ದಿತು. ಇಲ್ಲಿಯ ಸ್ಥಿತಿಗತಿಗಳೇ ವಿಷಮವಾಗುವ ಚಿಹ್ನೆಗಳು ತೋರಿಬರಲು ಭರತಖಂಡದ ಸರ್ಕಾರದವರು ಸಾಮ್ರಾಜ್ಯಪ್ರಭುತ್ವದವರೊಡನೆ ಪತ್ರವ್ಯವಹಾರ ನಡೆಯಿಸಿ, ವಿದೇಶಗಳಿಗೆ ಇಲ್ಲಿಂದ ಗೋದುವೆ ಮೊದಲಾದುವುಗಳನ್ನು ಕಳುಹಿಸಿಕೊಟ್ಟೇತೀರಬೇಕಾಗಿದ್ದ ನಿರ್ಬಂಧವನ್ನು ತಪ್ಪಿಸಿಬಿಟ್ಟರು. ಇಲ್ಲಿಂದ ಪರದೇಶಗಳಿಗಾವುದಕ್ಕೂ ಯಾವ ಆಹಾರ್ಯವಸ್ತುಗಳನ್ನೂ ಸಾಗಿಸಕೂಡದೆಂದು ಅಂದಿನಿಂದ ನಿರ್ಬಂಧವನ್ನೇರ್ಪಡಿಸಿದರು. ಅದಕ್ಕೆ ಪ್ರಪಂಚದ ಮೇಲಣ ಅನೇಕ ಪ್ರಭುತ್ವಗಳವರು ಎಷ್ಟೋ ತಂಟೆ ಮಾಡಿದರು. ಅವಕ್ಕೆಲ್ಲಾ ಇವರು ಸಮಾಧಾನವನ್ನು ಹೇಳಿದರು. ಅಲ್ಲದೆ ಧಾನ್ಯಗಳನ್ನು ಕಳುಹಿಸಿಕೊಡಬೇಕೆಂದು ಅನ್ಯದೇಶಗಳಿಂದ ೨೦ ಕೋಟಿ ರೂ. ಗೆ ಮಿಗಿಲಾದ ಕೋರಿಕೆಗಳು ಬಂದಿದ್ದುವು. ಸ್ವದೇಶಪ್ರಜಾಸೌಖ್ಯವನ್ನೇ ಮುಖ್ಯವಾಗಿ ಗಮನಿಸಿ, ಆ ಪರದೇಶಗಳ ಕೋರಿಕೆಗಳನ್ನೆಲ್ಲಾ ಇಂಡ್ಯಾ ಸರ್ಕಾರದವರು ತಿರಸ್ಕರಿಸಿಬಿಟ್ಟರು. ಈ ಪ್ರಕಾರದಿಂದೆಲ್ಲಾ ಪರದೇಶಗಳಿಗೆ ಹರಿದುಹೋಗುತ್ತಿದ್ದ ಧಾನ್ಯದ ಪ್ರವಾಹವನ್ನು ಇಂಡ್ಯಾ ಸರ್ಕಾರದವರು ನಿಲ್ಲಿಸದಿದ್ದರೆ ಭರತಖಂಡದ ಸ್ಥಿತಿಯು ಇನ್ನೂ ಅತ್ಯಂತ ಶೋಚನೀಯವಾಗುತ್ತಿದ್ದಿತು. ಇಂಡ್ಯಾ ಸರ್ಕಾರದವರು ಇಷ್ಟನ್ನು ಮಾತ್ರವೇ ಮಾಡಿ ಸುಮ್ಮನಿರುವುದಿಲ್ಲ. ಸಾಮ್ರಾಜ್ಯ ಸರ್ಕಾರದವರೊಡನೆ ಪತ್ರವ್ಯವಹಾರ ನಡೆಯಿಸಿ ಆಸ್ಟ್ರೇಲಿಯಾದಿಂದ ಈ ದೇಶಕ್ಕೆ ಮುಂದಣ ಜುಲೈ ತಿಂಗಳೊಳಗಾಗಿ ೫ ಲಕ್ಷ ಟನ್ನುಗಳ ಗೋದುವೆಯನ್ನು ತರಿಸಿಕೊಳ್ಳುವುದಕ್ಕೆ ಏರ್ಪಾಟುಮಾಡಿಕೊಂಡಿರುವರು. ಅದರಲ್ಲಿ ಈಗಾಗಲೇ ೩೧೦೦೦೦ ಟನ್ನು ಗೋದುವೆಯು ಬಂದು ಮುಟ್ಟುವುದರಲ್ಲಿದೆ. ಬರ್ಮಾ ದೇಶದಿಂದ ಅಧಿಕವಾಗಿ ಅಕ್ಕಿಯು ಇಲ್ಲಿಗೆ ಸಾಗಿ ಬರುವುದಕ್ಕೂ ಅಲ್ಲಿಂದ ಬರುವ ಹಡಗಿನ ಬಾಡಿಗೆಯು ಕಡಿಮೆಯಾಗುವುದಕ್ಕೂ ಏರ್ಪಾಟು ಮಾಡಿದ್ದಾರೆ. ಇನ್ನು ಕೆಲವು ಬೇರೆಬೇರೆ ಏರ್ಪಾಟುಗಳಿಂದ ಪ್ರತಿಪ್ರಜೆಗೂ ತಗ್ಗಿನಬೆಲೆಗಾದರೂ ಆಹಾರ್ಯಧಾನ್ಯಗಳು ಸಿಕ್ಕುವಂತೆ ಮಾಡುವುದಕ್ಕೆ ಅವರು ವಿಶೇಷವಾದ ಸಾಹಸಪ್ರಯತ್ನಗಳನ್ನು ಮಾಡಿಯೂ ಮಾಡುತ್ತಲೂ ಇದ್ದಾರೆ.

ಭರತಖಂಡದ ಅವಸ್ಥೆಯೇ ಹೀಗಿರುವಾಗ ಅದರೊಳಗಣ ಸಣ್ಣ ಅಂಗವಾಗಿರುವ ನಮ್ಮ ದೇಶವು ಈಗಣ ದುರ್ಭರ ದುಸ್ಥಿತಿಯಿಂದ ತಪ್ಪಿಸಿಕೊಂಡು ಬಾಳುವುದು ಸಾಧ್ಯವಲ್ಲ. ನಮ್ಮ ನೆರೆಹೊರೆಯ ಬೊಂಬಾಯಿ ಮದ್ರಾಸು ಅಧಿಪತ್ಯಗಳ ಹಲವು ಕಡೆ ರೂ. ಗೆ ೨-೨|| ಸೇರು ಅಕ್ಕಿಯು ಮಾರುತ್ತಿದೆ ಯೆಂಬುದನ್ನು ಕೇಳಿದರೆ ಅಲ್ಲಿಗಿಂತಲೂ ನಮ್ಮ ದೇಶದ ಸ್ಥಿತಿಯನ್ನು ಎಷ್ಟೋ ಉತ್ತಮವೆಂದೇ ಹೇಳಬೇಕಾಗುವುದು. ಆದರೂ ಬಡತನದಲ್ಲೂ ಕಡುಬಡತನವನ್ನನುಭವಿಸುತ್ತಿರುವ ನಮ್ಮ ದೇಶದ ಪ್ರಜೆಗಳಿಗೆ ಈಗಣ ಸ್ಥಿತಿಯೂ ಅತಿ ದುರ್ಭರವಾಗಿರುವುದು. ಮುಂದಣ ಮಳೆಬೆಳೆಗಳು ಅನುಕೂಲವಾಗುವವರೆಗೂ ಈಗಣ ವಿಷಮಸ್ಥಿತಿಯನ್ನು ದಾಟುವುದು ಪ್ರಾಣಸಂಕಟವಾಗಿರುವುದು. ಸರ್ಕಾರದವರು ಅಷ್ಟೂ ಇಷ್ಟು ಪ್ರಯತ್ನಗಳನ್ನು ಇದುವರೆಗೂ ಮಾಡಿದರು. ಅದು ಪ್ರಜೆಗಳಿಗೆ ಎಷ್ಟೋ ಸಹಾಯ ಮಾಡಿತು. ಆದರೆ ಅಷ್ಟುಮಾತ್ರವೇ ಸಾಲದು. ಹಿಂದೆ ಅವರು ಮಾಡಿಟ್ಟ ನಿರ್ಬಂಧಗಳಿಂದ ರೂ. ಗೆ ೫-೬ ಸೇರು ಅಕ್ಕಿ ೧೦-೧೨ ಸೇರು ರಾಗಿಯಾದರೂ ಸಿಕ್ಕುವಂತಾಯಿತು. ಹಾಗೆ ಮಾಡದಿದ್ದರೆ ಎಷ್ಟೋ ಒಡಬಗ್ಗರು ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಈಚೆಗೆ ಅಂಥ ನಿರ್ಬಂಧಗಳನ್ನು ತಪ್ಪಿಸಿಬಿಟ್ಟರೆ ಧಾನ್ಯಗಳು ಸಮೃದ್ಧವಾಗಿ ಒದಗುವುದಕ್ಕೂ ಬೆಲೆಗಳು ಇಳಿಯುವುದಕ್ಕೂ ಅವಕಾಶವಾಗುವುದೆಂದು ವರ್ತಕರೂ ಇತರ ಪ್ರಜೆಗಳೂ ಕೂಗಿಕೊಳ್ಳುವುದಕ್ಕೆ ಆರಂಭಿಸಿದುದರಿಂದ ಸರ್ಕಾರದವರು ಆ ಒಳಗಣ ವ್ಯಾಪಾರ ನಿರ್ಬಂಧಗಳನ್ನೆಲ್ಲಾ ತಪ್ಪಿಸಿಬಿಟ್ಟು ಸಂಸ್ಥಾನದಿಂದ ಹೊರಕ್ಕೆ ಮುಖ್ಯಧಾನ್ಯಗಳೊಂದೂ ಹೋಗದಂತೆ ತಡೆಮಾಡಿದ್ದಾರೆ. ಈ ಏರ್ಪಾಟನ್ನು ಮಾಡಿ ೧ ತಿಂಗಳಿಗೆ ಬಂದರೂ ಯಾವ ಸ್ಥಿತಿಯೂ ಪೂರ್ವಕ್ಕಿಂತ ಅನುಕೂಲವಾಗಲಿಲ್ಲ. ಬತ್ತದ ಬೆಲೆ ಕಂಡಗಕ್ಕೆ ೨೧ ರೂ. ವರೆಗೂ ಏರಿಹೋಗಿದೆ. ರಾಗಿ ಸಿಕ್ಕುವುದೇ ದುಸ್ತರವಾಗಿದೆ. ಹುರುಳಿಯು ಪಲ್ಲ ೧ಕ್ಕೆ ೧೪ ರೂ. ಆಗಿದೆ. ಉಳಿದ ಕಾಳುಗಳೆಲ್ಲಾ ರೂ. ಗೆ ೩ ಸೇರಾಗಿರುತ್ತವೆ. ಬೆಲೆಯು ಇಷ್ಟು ಹೆಚ್ಚಿದ್ದರೂ ಧಾನ್ಯಗಳು ಸಮೃದ್ಧವಾಗಿ ಸಿಕ್ಕುವುದೂ ಇಲ್ಲ. ದುಡ್ಡಿನಾಸೆಗಾಗಿ ಹೆಚ್ಚುಬೆಲೆಗೆ ಧಾನ್ಯಗಳನ್ನು ಮೊದಮೊದಲು ಮಾರಿಬಿಟ್ಟ ಬೇಸಾಯಗಾರರೇ ಈಗ ಹೊಟ್ಟೆಗಾಗಿ ಪರರಿಗೆ ಕಯ್ಯೊಡ್ಡುವಂತಾಗಿದೆ. ಇದರಮೇಲೆ ಈ ಸಲ ಬೆಳೆಯಾಗಿರುವುದು ಬಹಳ ಕಡಿಮೆ. ನಮ್ಮ ಡಿಸ್ಟ್ರಿಕ್ಟಿನಲ್ಲಿ ೪-೫ ತಾಲ್ಲೂಕುಗಳಲ್ಲಿ ತಕ್ಕಮಟ್ಟಿಗೆ ಬೆಳೆಯಾಗಿದೆ. ದೇಶದ ಮುಕ್ಕಾಲುಭಾಗದಲ್ಲೆಲ್ಲಾ ೪-೬-೮ ಆಣೆಯಷ್ಟು ಮಾತ್ರ ಬೆಳೆಯಾಗಿರಬಹುದು. ನಮ್ಮ ದೇಶದ ಹಲವು ಕಡೆಯಲ್ಲಿ ರೂ. ಗೆ ೭ ಸೇರು ರಾಗಿಯೂ ೪ ಸೇರು ಅಕ್ಕಿಯೂ ಕೂಡ ಈಗ ದೊರೆಯುತ್ತಲಿಲ್ಲ. ಹೊರಗಣ ದೇಶಕ್ಕೆ ಇಲ್ಲಿಂದಧಾನ್ಯಗಳನ್ನು ಕಳುಹಿಸದಿದ್ದರೂ, ಸ್ವದೇಶದಲ್ಲೇ ಒಂದು ಕಡೆಯಿಂದ ಮತ್ತೊಂದು ಕಡೆಗೆ ಧಾನ್ಯಗಳನ್ನು ಸಾಗಿಸಲು ನಿರ್ಬಂಧವೇನೂ ಇಲ್ಲ. ಆ ನಿರ್ಬಂಧವನ್ನು ಮಾಡುವುದೂ ಸರಿಯಲ್ಲ. ಈ ಕಾರಣದಿಂದ ಮೈಸೂರು ಡಿಸ್ಟ್ರಿಕ್ಟು ಬತ್ತ ಬೆಳೆಯುವ ಡಿಸ್ಟ್ರಿಕ್ಟಾಗಿದ್ದರೂ, ಯಾವಾಗಲೂ ಇಲ್ಲಿಗೆ ಹೊರಗಣ ಗಿರಾಕಿಗಳು ವಿಶೇಷವಾಗಿ ಬರುವುದರಿಂದಲೂ, ಅವರು ಪಲ್ಲಾ ೧ಕ್ಕೆ ೨೬ ರೂ. ನಂತೆಯಾದರೂ ಕೊಟ್ಟು ಅಕ್ಕಿಯನ್ನು ತುಂಬುವುದಕ್ಕೆ ಸಿದ್ಧರಾಗಿರುವುದರಿಂದಲೂ ಸಹ ಈ ಡಿಸ್ಟ್ರಿಕ್ಟಿನಲ್ಲೂ ಅಕ್ಕಿಯ ಬೆಲೆಯು ಇಳಿಯುವುದಕ್ಕೆ ಅವಕಾಶವಿಲ್ಲವಾಗಿದೆ. ಈಗ ರಾಜಧಾನಿಯ ಲೋಕಹಿತೈಷಿ ಮ|| ನಂಜುಂಡರಾಜಅರಸಿನವರು ಧರ್ಮಪ್ರಕಾಶ ಡಿ. ಬನುಮಯ್ಯನವರು ಸಾ|| ತಿಮ್ಮಯ್ಯನವರು ಮೊದಲಾದ ಕೆಲಮಂದಿ ಧರ್ಮಾತ್ಮರುಗಳು ಮನಸ್ಸುಮಾಡಿ ಒಂದು ವರ್ತಕಸಂಘವನ್ನೇರ್ಪಡಿಸಿಕೊಂಡು, ಅದರಮೂಲಕ ಅಕ್ಕಿಯನ್ನು ರೂ.ಗೆ ೫ ಸೇರಿಗೆ ಕಡಿಮೆಯಿಲ್ಲದಂತೆ ಮಾರಿಸುವುದಕ್ಕೆ ಏರ್ಪಡಿಸಿರುವುದು ಪ್ರಜೆಗಳಿಗೆ ಎಷ್ಟೋ ಉಪಕಾರವಾಗಿರುತ್ತದೆ. ಇಂಥ ಕಾರ್ಯವನ್ನು ಆಪತ್ಕಾಲದಲ್ಲಿ ಮಾಡುವುದಕ್ಕೆ ದುಡ್ಡುಳ್ಳ ಜನರೆಲ್ಲರೂ ಪ್ರಯತ್ನಿಸುವುದು ಧರ್ಮವು. ಸಹಸ್ರಾವಧಿ ಸಂಪಾದಿಸುವ ವಕೀಲರುಗಳೂ ಅಧಿಕಾರಿಗಳೂ ಸಹ ಧರ್ಮಾರ್ಥವಾಗಿ ಕೊಡದಿದ್ದರೂ ಷೇರುಹಣದಿಂದ ಇಂಥ ವ್ಯಾಪಾರಸಂಘಗಳನ್ನು ಅಲ್ಲಲ್ಲಿಗೆ ಏರ್ಪಡಿಸಿ, ಸುಲಭವಾದ ಲಾಭದಿಂದ ಧಾನ್ಯಗಳನ್ನು ಮಾರಾಟಮಾಡಿಸಲು ಪ್ರಯತ್ನಪಡುವುದು ಅವರಿಗೆ ಭೂಷಣವು. ಅಲ್ಲದೆ ೨೦೦-೩೦೦ ರೂ. ಗಳ ಮೇಲೆ ಸಂಬಳಹೊಂದುತ್ತಿರುವ ಅಧಿಕಾರಿಗಳೆಲ್ಲರೂ ಈ ಕಾಲದಲ್ಲಿ ತಮ್ಮ ಸಂಬಳದೊಳಗೆ ೧೦೦ ಕ್ಕೆ ೧೦ ರೂ. ನಂತೆಯಾದರೂ ಬಿಟ್ಟುಕೊಟ್ಟು, ಅದರಿಂದ ಒಂದು ನಿಧಿಯನ್ನು ಕೂಡಿಸಿ, ಹೊರಗಣಿಂದ ಮುಖ್ಯ ಧಾನ್ಯಗಳನ್ನು ತರಿಸಿ, ರೂ. ಗೆ ೫ ಸೇರಿಗೆ ಕಡಿಮೆಯಿಲ್ಲದಂತೆ ಎಲ್ಲ ಕಡೆಯೂ ಮಾರಿಸುವುದಕ್ಕೆ ಏರ್ಪಡಿಸಿ, ಅದರಿಂದ ಸ್ವಲ್ಪ ನಷ್ಟ ಸಂಭವಿಸಿದರೂ ಮೂಲನಿಧಿಯಿಂದ ಭರ್ತಿಹಾಕಿಕೊಳ್ಳುವಂತೆ ಮಾಡಿದರೆ ಭರತಖಂಡಕ್ಕೆಲ್ಲಾ ಇಲ್ಲಿನ ಉದ್ಯೋಗಿಗಳ ಸ್ವಾರ್ಥತ್ಯಾಗವು ಮೇಲುಪಂತಿಯಾಗಿ ಪರಿಣಮಿಸಬಲ್ಲುದು. ಇದರಮೇಲೆ ನಮ್ಮ ಸರ್ಕಾರದವರು ಕೂಡ ಇದಕ್ಕಿಂತ ವೀರಕ್ಷಾಮವು ಬೇರೊಂದಿಲ್ಲವೆಂಬುದು ಸಿದ್ಧವಾಗಿರುವಾಗ, ಹತ್ತಾರು ಲಕ್ಷ ರೂ. ಗಳನ್ನು ಪ್ರಜಾರಕ್ಷಣೆಗಾಗಿ ಈಗ ಕ್ಷಾಮದ ಫಂಡಿನಿಂದ ವಿನಿಯೋಗಿಸುವುದಕ್ಕೆ ಹಿಂದೆಗೆಯಬಾರದು. ಹೊರನಾಡುಗಳಿಂದ ಅಕ್ಕಿ ಮೊದಲಾದುವುಗಳನ್ನು ತರಿಸಿ ಪ್ರತಿ ತಾಲ್ಲೂಕುಗಳಲ್ಲೂ ರೂ. ಗೆ ೫ ಸೇರಿಗೆ ಕಡಿಮೆಯಿಲ್ಲದಂತೆ ಮಾರಿಸುವುದಕ್ಕೆ ಅವರೇ ಏರ್ಪಡಿಸುವುದು ಅತ್ಯವಶ್ಯಕವಾಗಿರುವುದು. ಬೇರೆ ಕಡೆಯಿಂದ ವರ್ತಕರೇ ತರಿಸಿ ಮಾರಿಕೊಳ್ಳುವಂತೆ ಈಗ ಮಾಡಿರುವ ಏರ್ಪಾಟುಗಳಿಂದ ಅಷ್ಟೇನೂ ಪ್ರಯೋಜನವಾಗುವುದಿಲ್ಲ. ಇವರು ಏರ್ಪಡಿಸಿಕೊಡುವ ಕಡೆಗಳಿಂದ ವರ್ತಕರು ಧಾನ್ಯಗಳನ್ನು ತರಿಸಿದರೆ ೪ ಸೇರಿನಂತೆಯೂ ಮಾರಲು ಸಾಧ್ಯವಾಗುವುದಿಲ್ಲ. ನಷ್ಟವಾಗುವುದೆಂಬ ಭೀತಿಯಿಂದ ವರ್ತಕರು ಹೊರಗಣಿಂದ ಅದನ್ನು ತರಿಸುವುದೇ ಇಲ್ಲ. ಅದುಕಾರಣ ಪ್ರಭುತ್ವದವರು ನಷ್ಟವಾಗುವುದೆಂಬ ಅಂಜಿಕೆಯನ್ನು ಬಿಟ್ಟು, ಪ್ರಜಾರಕ್ಷಣೆಯ ಮಹಾಲಾಭವನ್ನು ಮುಖ್ಯವಾಗಿ ಗಮನಿಸಿ, ಶೀಘ್ರವಾಗಿ ಅಂಥ ಧೀರಪ್ರಯತ್ನವನ್ನು ಮಾಡುವುದೇ ವಿಹಿತವು. ಸುಮ್ಮನೆ ಮತ್ತೆ ನಿರ್ಬಂಧದ ಬೆಲೆ ಮೊದಲಾದುವುಗಳನ್ನು ಏರ್ಪಡಿಸುವುದರಿಂದ ಅನರ್ಥವೇ ಹೊರತು ಪ್ರಯೋಜನವೇನೂ ಆಗುವುದಿಲ್ಲ. ಬೆಳೆದ ರೈತರು ಇತರ ಪದಾರ್ಥಗಳನ್ನೆಲ್ಲಾ ತಗ್ಗುಬೆಲೆಯಿಂದ ಕೊಳ್ಳಬೇಕಾಗಿರುವಾಗ, ಅವರು ಬೆಳೆದ ಪದಾರ್ಥಗಳನ್ನು ಮಾತ್ರವೇ ಅಗ್ಗವಾಗಿ ಮಾರಿರೆಂದು ಅವರನ್ನು ನಿರ್ಬಂಧಿಸುವುದು ಯುಕ್ತಿಯುಕ್ತವಾಗಿಯೂ ಧರ್ಮವಾಗಿಯೂ ಇರಲಾರದು.

ಭರತಖಂಡ ಸರ್ಕಾರದ ಆಯವ್ಯಯ.

ಸಾಮ್ರಾಜ್ಯಶಾಸನ ಸಭೆಯಲ್ಲಿ ಕಳೆದ ತಾ|| ೧ ನೆಯ ದಿವಸ ಕೋಶಾಧ್ಯಕ್ಷರಾದ ಸರ್ ಜೇಮ್ಸ್ ಮೆಸ್ಟನ್ರವರಿಂದ ೧೯೧೯-೨೦ ನೆ ವರ್ಷದ ಆದಾಯವ್ಯಯಪತ್ರವು ಓದಲ್ಪಟ್ಟಿತು. ಮುಖ್ಯಗಳಾದ ಭಾಗಗಳನ್ನೇ ಆರಿಸಿ ಪ್ರತ್ಯೇಕವಾಗಿ ಸಿದ್ಧಪಡಿಸಿದ್ದ ಭಾಗವನ್ನು ಅರ್ಧ ಗಂಟೆ ಹೊತ್ತಿನೊಳಗಾಗಿ ಅವರು ಓದಿ ಮುಗಿಸಲು ಈ ಕ್ರಮವನ್ನು ನೋಡಿ ಸಭಿಕರೆಲ್ಲಾ ಸಂತೋಷಪಟ್ಟರು. ಸಾಮಾನ್ಯ ವಿವರಣೆಗಳೆಲ್ಲಾ ಪ್ರತ್ಯೇಕವಾಗಿ ಮುದ್ರಿಸಲ್ಪಟ್ಟು ಪ್ರತಿ ಸಭಿಕರಿಗೂ ಕೊಡಲ್ಪಟ್ಟಿತು. ಈಗ ಅದರಮೇಲೆ ಊಹಾಪೋಹಗಳು ಸಭೆಯಲ್ಲಿ ಚರ್ಚಿತವಾಗುತ್ತಿರುವುವು. ಈ ಪತ್ರದಲ್ಲಿ ಕಂಡಿರುವ ಮುಖ್ಯವಿಷಯಗಳೇನೆಂದರೆ ಭರತಖಂಡದಲ್ಲಿಡಲ್ಪಟ್ಟ ಸೈನ್ಯದ ವೆಚ್ಚದ ಭಾರವನ್ನೆಲ್ಲಾ ಕಳೆದ ವರ್ಷದ ಸೆಪ್ಟಂಬರ್ ತಿಂಗಳಿಂದ ಭರತಖಂಡವೇ ಹೊರಬೇಕಾಗಿ ಬಂದುದರಿಂದಲೂ, ಕ್ಷಾಮಬಾಧೆಯು ಪ್ರಾಪ್ತವಾದುದರಿಂದಲೂ, ಭೂಮಿಯ ಕಂದಾಯದಲ್ಲಿ ೧೦ ಲಕ್ಷ ಪೌನುಗಳ ನಷ್ಟ ಬಂದುದರಿಂದಲೂ ಸಹ ಹಿಂದೆ ಮಾಡಿದ್ದ ಬಡ್ಜೆಟ್ಟಿನ ಪ್ರಕಾರ ವೆಚ್ಚ ಕಳೆದು ೨೫ ಲಕ್ಷ ಪೌನುಗಳು ಉಳಿಯುವುದಕ್ಕೆ ಪ್ರತಿಯಾಗಿ ೪೫ ಲಕ್ಷ ರೂ. ಗಳ ನಷ್ಟವೇ ಸಂಭವಿಸಿತು. ನಡೆಯುತ್ತಿರುವ ೧೯೧೯-೨೦ ನೆ ವರ್ಷದಲ್ಲಿ ೮೬೨೨೫೪೦೦ ಪೌನುಗಳ ಆದಾಯವೂ, ೮೫೩೫೭೩೦೦ ಪೌನುಗಳ ವ್ಯಯವೂ ಆಗುವುವು. (ಒಟ್ಟು ಆದಾಯವು ೮ ಕೋಟಿ ಪೌನ್ ಆಗಿ, ವೆಚ್ಚಕ್ಕೆ ೬೦ಲಕ್ಷ ಪೌನುಗಳು ಸಾಲದೆಹೋಗುತ್ತಿದ್ದುದರಿಂದ ಹೆಚ್ಚು ಲಾಭದಮೇಲಣ ಹೊಸಕಂದಾಯವನ್ನು ವಿಧಿಸಿ ೬೦ ಲಕ್ಷ ಪೌನುಗಳು ಹೆಚ್ಚಾಗಿ ಹುಟ್ಟುವಂತೆ ಮಾಡಿರುವರು.) ೪ ಕೋಟಿಯು ೧೨|| ಲಕ್ಷ ಪೌನುಗಳು ಎಂದರೆ ಒಟ್ಟು ಆದಾಯದಲ್ಲಿ ಅರ್ಧಭಾಗವು ಸೇನೆಗಳ ವೆಚ್ಚಕ್ಕೆ ನಿರ್ಧರಿಸಲ್ಪಟ್ಟಿರುವುದು. ಯುದ್ಧವು ಮುಗಿದು ಶಾಂತಸ್ಥಿತಿಯು ಒದಗಿದ್ದರೂ, ದೇಶದ ಎಲ್ಲೆಕಟ್ಟುಗಳಲ್ಲಿ ಶತೃನಿರೋಧಕ್ಕೆ ಮಾಡಬೇಕಾದ ಏರ್ಪಾಟುಗಳ ಅವಶ್ಯಕತೆಯು ಈವಾಗ ಏನೂ ಇಲ್ಲದಿದ್ದರೂ, ಭರತಖಂಡಕ್ಕೆ ನೌಕಾಬಲದ ವ್ಯಯವೇ ಇಲ್ಲದಿದ್ದರೂ, ಸರ್ವಸೇನಾಧಿಪತಿಗಳು ಎಷ್ಟೋ ಕಡಿಮೆಯಾಗಿ ಲೆಕ್ಕಹಾಕಿದರೂ ಸೈನಿಕವ್ಯಯಕ್ಕೆ ಇಷ್ಟು ಹಣವನ್ನು ವಿನಿಯೋಗಿಸದಿದ್ದರೆ ಸಾಗದೆಂದು ಮೆಸ್ಟನ್ರವರು ಹೇಳಿರುವರು. ಮತ್ತೂ ಈ ಸೈನಿಕವ್ಯಯವು ಯುದ್ಧಕ್ಕೆ ಮುಂಚೆ ಇದ್ದಸ್ಥಿತಿಗೆ ಇನ್ನುಮುಂದೆ ಎಂದಿಗೂ ಬರುವುದಿಲ್ಲವೆಂದು ಹೇಳಿರುವುದನ್ನುನೋಡಿದರೆ ಪ್ರಜೆಗಳು ಸೇನಾಭಾರವನ್ನು ತಗ್ಗಿಸಬೇಕೆಂದು ಅಖಂಡವಾಗಿ ಬಂದುಕಡೆ ಮೊರೆಯಿಡುತ್ತಿದ್ದರೂ ಇದು ದಿನಕ್ರಮೇಣ ಹೆಚ್ಚುವುದೇ ಸ್ವಭಾವವೆಂದು ಸಿದ್ಧವಾಗುತ್ತಿರುವುದು. ರಣರಂಗಕ್ಕೆ ಹೋಗಿ ಬಂದ ಸೈನಿಕರುಗಳಿಗೆ ಬಹುಮಾನ ಮೊದಲಾದುವುಗಳಿಗೂ, ಅವರ ಆಗಮನದ ವೆಚ್ಚ ಮೊದಲಾದುವುಗಳಿಗೂ ಸ್ವಲ್ಪ ಹೆಚ್ಚು ವೆಚ್ಚವು ಈಗ ಬೀಳುವುದು ಸ್ವಭಾವವೇ. ಮುಂದಣ ವರ್ಷದಿಂದ ಈ ಭಾಗದ ವೆಚ್ಚಗಳು ಸ್ವಲ್ಪ ಮಾತ್ರ ಕಡಿಮೆಯಾದರೂ ಆಗಬಹುದು. ಲೋಹಮಾರ್ಗಾಭಿವೃದ್ಧಿಗೆ ಈ ವರ್ಷದಲ್ಲಿ ೧೭೭೫೦೦೦೦ ಪೌನುಗಳನ್ನು ವಿನಿಯೋಗಿಸುವರು. ಇಷ್ಟು ಹೆಚ್ಚು ಹಣವನ್ನು ಈ ಶಾಖೆಗೆ ಹಿಂದೆ ಯಾವಾಗಲೂ ವಿನಿಯೋಗಿಸಿದುದಿಲ್ಲ. ದೇಶಾಭ್ಯುದಯಕ್ಕೆ ಅತ್ಯವಶ್ಯಕವಾದ ನೀರಾವರಿ ಕೆಲಸಗಳಿಗೆ ೪ ಲಕ್ಷ ಪೌನುಗಳನ್ನು ಮಾತ್ರವೇ ಏರ್ಪಡಿಸಿರುವುದು ಅನ್ಯಾಯವಾಗಿದೆ. ವಿದ್ಯಾಭಿವೃದ್ಧಿಯಾಗದಿದ್ದರೆ ದೇಶಾಭಿವೃದ್ಧಿಯಾಗುವುದಿಲ್ಲವೆಂದು ಕೋಶಾಧ್ಯಕ್ಷರು ಸಾನುಭೂತಿಯನ್ನು ಮಾತಿನಲ್ಲಿ ತೋರಿಸಿರುವರೇ ಹೊರತು ವಿದ್ಯಾಶಾಖೆಯ ವೆಚ್ಚಕ್ಕಾಗಿಯೂ ಆರೋಗ್ಯಾಭಿವೃದ್ಧಿಗಾಗಿಯೂ ಉದಾರವಾಗಿ ಧನವನ್ನು ನಿಯೋಗಿಸುವ ಮಾತನ್ನೊಂದನ್ನಾದರೂ ಆಡಿರುವುದಿಲ್ಲ. ಇದುವರೆಗೆ ಆದಾಯದಮೇಲಣ ತೆರುಗೆಯನ್ನು ವಿಧಿಸುವಾಗ್ಗೆ ವರ್ಷಕ್ಕೆ ೧ ಸಾವಿರ ರೂ. ಗಳ ಮೇಲ್ಪಟ್ಟು ಆದಾಯವಿರುವವರ ಮೇಲೆ ಅದನ್ನು ವಿಧಿಸುತ್ತಿದ್ದರು ಇನ್ನುಮುಂದೆ ಅದನ್ನು ತಪ್ಪಿಸಿ ೨ ಸಾವಿರದೊಳಗೆ ಆದಾಯವಿರುವವರ ಮೇಲೆ ಈ ತೆರುಗೆಯನ್ನು ವಿಧಿಸುವುದಿಲ್ಲವೆಂದು ಏರ್ಪಡಿಸಿರುವುದು ಸಂತೋಷಕರವಾಗಿದೆ. ಈ ಕಾರಣದಿಂದ ೨೩೭೦೦೦ ಮಂದಿಗಳಿಗೆ ಈ ಕಂದಾಯದ ಭಾರವು ತಪ್ಪಿಹೋಗುವುದು.

ನಾಣ್ಯಗಳ ವಿಷಯವಾಗಿ ಕೋಶಾಧ್ಯಕ್ಷರು ಆಡಿರುವ ಮಾತುಗಳು ಕೇವಲ ಗಮನೀಯವಾಗಿವೆ. ಅದೇನೆಂದರೆ ಈ ದೇಶದಲ್ಲಿ ಲೋಹದ ನಾಣ್ಯಗಳನ್ನು ಒಡವೆಗಳಿಗಾಗಿ ಕರಗಿಸುವುದು ಅಥವಾ ಹೂತಿಟ್ಟು ಮಡಗುವುದು ಈ ಪದ್ಧತಿಯು ತಪ್ಪಿಹೋಗುವವರೆಗೂ ದೇಶದ ವಿಷಮಸ್ಥಿತಿಯು ತಪ್ಪುವುದಿಲ್ಲ. ಎಷ್ಟು ನಾಣ್ಯಗಳನ್ನು ನಾವು ಮುದ್ರಿಸಿಕೊಟ್ಟರೂ ಕೂಡಲೇ ಅವು ಮಾಯವಾಗುವುವು. ಪ್ರಪಂಚದಲ್ಲಿ ಬೆಳ್ಳಿಯ ಬೆಲೆಯು ಬಹಳ ಹೆಚ್ಚಿಹೋಗಿದೆ. ಇಂಥ ಸ್ಥಿತಿಯಲ್ಲಿ ಪ್ರಭುತ್ವದವರು ಎಷ್ಟುಕಾಲ ರೂಪಾಯಿ ಮೊದಲಾದ ನಾಣ್ಯಗಳನ್ನು ಒದಗಿಸಿಕೊಟ್ಟಾರು? ಯುದ್ಧಕಾಲದ ೪ ವರ್ಷದೊಳಗಾಗಿ ೧೨೦ ಕೋಟಿ ರೂ. ಗಳು ಎರಕ ಹುಯ್ಯಲ್ಪಟ್ಟಿರುವುವು. ನಾವು ಕೂಡಿಸಿದ್ದ ಬೆಳ್ಳಿಯನ್ನೆಲ್ಲಾ ಇದಕ್ಕೆ ವಿನಿಯೋಗಿಸಿರುವೆವು. ನಾಣ್ಯಗಳಿಗಾಗಿ ಹೆಚ್ಚು ಹಣವನ್ನು ಹೀಗೆ ವಿನಿಯೋಗಿಸುತ್ತ ಬರುವುದು ದುರ್ವಿನಿಯೋಗವಾಗುತ್ತದೆ. ಇಂಥ ವೆಚ್ಚವನ್ನು ಮುಂದೆಯೂ ಮಾಡುತ್ತ ಬಂದರೆ ನಮ್ಮ ನಾಣ್ಯಗಳ ವ್ಯವಹಾರಕ್ರಮಕ್ಕೆ ಭಂಗಬರುತ್ತದೆ. ಪ್ರಜೆಗಳು ನಾಣ್ಯಗಳನ್ನು ಉಪಯೋಗಕ್ಕೆ ತರದೆಯೂ ದುರ್ವಿನಿಯೋಗ ಪಡಿಸುತ್ತಲೂ ಹೀಗೆಯೇ ಇದ್ದರೆ ಬರಬರುತ್ತ ಸರ್ಕಾರದವರಿಗೆ ಬೆಳ್ಳಿಯನ್ನು ಕೊಂಡು ನಾಣ್ಯವನ್ನು ಒದಗಿಸುವುದೇ ಕಷ್ಟವಾಗುವುದು. ಒಂದು ವೇಳೆ ನಾವು ಆತುರಪಟ್ಟು ಹೀಗೆಯೇ ಬೆಳ್ಳಿಯನ್ನು ಕೊಳ್ಳುತ್ತಿದ್ದರೆ ಅದರ ಬೆಲೆಯು ಹೆಚ್ಚಿಹೋಗುವುದು. ನಾವು ಮುಂದೆ ನೋಟುಗಳ ವ್ಯವಹಾರವನ್ನು ಅಧಿಕಮಾಡಬೇಕಾಗಿದೆ, ಎಂದು ಹೇಳಿರುವರು. ಮೇಲಣ ಧ್ವನಿಯನ್ನು ನೋಡಲಾಗಿ ಮುಂದೆ ನಿಕೆಲ್ಲಿನ ರೂಪಾಯಿಗಳು ವ್ಯವಹಾರಕ್ಕೆ ಬಂದರೂ ಬರಬಹುದೆಂದು ತೋರುವುದು.

ಮಿ|| ಕ್ಲೆಮೆಂಕೋರವರ ಮೃತ್ಯುನಿವಾರಣೆ.

ಯಾವ ಗಳಿಗೆಯಲ್ಲಿ ಆಸ್ಟ್ರಿಯಾ ಯುವರಾಜ ದಂಪತಿಗಳ ಕೊಲೆಯಾಯಿತೋ! ಆ ದುರ್ಮುಹೂರ್ತ ಪ್ರಭಾವವೆಂತಹದೋ ತಿಳಿಯಲಿಲ್ಲ. ಅದರ ಕಾರಣದಿಂದ ಯೂರೋಪುಖಂಡದಲ್ಲಿ ಯುದ್ಧಮೂಲಕವಾಗಿ ಕೋಟ್ಯಂತರ ಪ್ರಜೆಗಳು ಲಯಗೊಂಡು ಹೋದರು. ಪ್ರಪಂಚವೆಲ್ಲಾ ತಳಮಳಿಸಿಹೋಯಿತು. ಅನೇಕ ಪ್ರಭುಗಳ ಸಿಂಹಾಸನಗಳು ಉರುಳಾಡಿಹೋದುವು. ಚಕ್ರವರ್ತಿಗಳ ಮಂತ್ರೀಶ್ವರರುಗಳ ತಲೆಬುರುಡೆಗಳೂ ಕೂಡ ಹಾರಾಡಿಹೋದುವು. ಆ ಪ್ರಭಾವ ವಾಸನೆಯು ಇನ್ನೂ ಕೊನೆಮುಟ್ಟಿದಂತೆ ಕಾಣುವುದಿಲ್ಲ. ಈಗಣಕಾಲಕ್ಕೆ ಜಗದುದ್ಧಾರಾರ್ಥವಾಗಿ ಅವತಾರವೆತ್ತಿದ ದೈವಿಕಪುರುಷರಂತೆ ಭಾವಿಸಲ್ಪಡುತ್ತಿರುವ ಪ್ರೆ|| ವಿಲ್ಸನ್ರವರನ್ನು ಕೂಡ ಕೊಲ್ಲಲು ಪ್ರಯತ್ನವು ಮಾಡಲ್ಪಟ್ಟಿತೆಂದು ಗೊತ್ತಾಗಿ ಆ ರಹಸ್ಯಕೂಟಕ್ಕೆ ಸೇರಿದ್ದ ಗುಂಪಿನಲ್ಲಿ ಸ್ಪೈಯಿನ್ ದೇಶದ ೧೪ ಮಂದಿಗಳನ್ನು ಅಮೇರಿಕಾ ಪ್ರಭುತ್ವದವರು ಕಳೆದವಾರದಲ್ಲಿ ಸೆರೆಹಿಡಿದಿರುವರಂತೆ! ಈ ಸಂಶಯದ ಮೇಲೆಯೇ ಫ್ರಾನ್ಸಿನಿಂದ ಅಮೇರಿಕಾಕ್ಕೆ ಡಾ|| ವಿಲ್ಸನ್ರವರು ಹಡಗಿನಲ್ಲಿ ಪ್ರಯಾಣಮಾಡುವಾಗ್ಗೂ ಅಲ್ಲಿಂದ ಅವರು ಇಳಿದು ಪುರಪ್ರವೇಶ ಮಾಡುವಾಗ್ಗೂ ಬಲವಾದ ಕಾವಲು ಏರ್ಪಡಿಸಲ್ಪಟ್ಟಿದ್ದಿತು. ಅವರು ದೈವಾನುಗ್ರಹದಿಂದಲೂ ಪ್ರಪಂಚದ ಪುಣ್ಯದಿಂದಲೂ ಯಾವ ಅನಾಹುತಕ್ಕೂ ಈಡಾಗದೆ ಸುರಕ್ಷಿತವಾಗಿರುವರು. ಮುತ್ಸದ್ದಿತನದಲ್ಲೂ ಧೈರ್ಯದಲ್ಲೂ ರಾಜ್ಯಧುರಂಧರತ್ವದಲ್ಲೂ ಹೆಸರ್ಗೊಂಡು ಪ್ರೆ|| ವಿಲ್ಸನ್ರವರಿಗೆ ೨ ನೆಯವರಾಗಿ ಭಾವಿಸಲ್ಪಟ್ಟು, ಈಗಣ ಸಂಧಿಮಹಾಸಭೆಯ ಅಧ್ಯಕ್ಷತೆಯ ಗೌರವವನ್ನು ಸರ್ವದೇಶಪ್ರತಿನಿಧಿಗಳಿಂದಲೂ ಪಡೆದಿರುವ ಫ್ರಾನ್ಸ್ ಮುಖ್ಯಮಂತ್ರಿ ಕ್ಲೆಮೆಂಕೋರವರನ್ನು ಅವರು ಮನೆಯನ್ನು ಬಿಟ್ಟು ಸ್ವಲ್ಪ ದೂರದೊಳಗೆ ಮೋಟಾರಿನಮೇಲೆ ಹೋಗುತ್ತಿರುವಾಗ ಒಬ್ಬ ಘಾತುಕನು ಕಳೆದ ತಿಂಗಳು ತಾ|| ೧೯ ರಲ್ಲಿ ರಿವಾಲ್ವರಿನ ಗುಂಡಿನಿಂದ ೫ ಸಲ ಹೊಡೆದನು. ಗುಂಡುಗಳಲ್ಲಿ ಒಂದು ಮಾತ್ರ ಅವರ ಭುಜವನ್ನು ಭೇದಿಸಿಕೊಂಡು ಹೃದಯಕೋಶದ ಪಕ್ಕಕ್ಕೆ ನಾಟಿತು. ಉಳಿದುವೆಲ್ಲಾ ದಪ್ಪನಾಗಿದ್ದ ಅವರ ಕೋಟುಗಳಲ್ಲೇ ಸಿಕ್ಕಿಕೊಂಡುವು. ಅಂಥ ಏಟುಗಳು ಬಿದ್ದರೂ ಮುಪ್ಪಿನವರಾದ ಕ್ಲೆಮೆಂಕೋರವರು ನಸುನಗುತ್ತ “ಗುರಿಯು ತಪ್ಪಿಹೋಯಿತು. ನಾನು ಸಾಯಲಿಲ್ಲ. ಬಿಕನೀರ್ ಮಹಾರಾಜರು ತಮ್ಮ ದೇಶಕ್ಕೆ ಹುಲಿಯ ಬೇಟೆಗಾಗಿ ನನ್ನನ್ನು ಬರಹೇಳಿದ್ದರು. ಇಲ್ಲಿ ಅರಾಜಕರು ಹುಲಿಬೇಟೆಯನ್ನು ಮಾಡಬೇಕೆಂದಿದ್ದಾರೆ. ಆದರೆ ಹುಲಿಯು ಸಿಕ್ಕಲಿಲ್ಲ” ಎಂದು ಹೇಳಿ, ಧೈರ್ಯದಿಂದಲೇ ಮೋಟರನ್ನಿಳಿದು ಮನೆಗೆ ನಡೆದುಹೋದರು. ಬಂದವರೊಡನೆಲ್ಲಾ ಮಾತನಾಡುತ್ತಲೇ ಇದ್ದರು. ವೈದ್ಯರು ಬಂದು ನೀವು ಸ್ವಸ್ಥವಾಗಿ ಮಲಗಿಕೊಳ್ಳಬೇಕೆಂದು ಹೇಳುವವರೆಗೂ ಅವರು ಮಂಚವನ್ನೇರಲಿಲ್ಲ. ಅವರನ್ನು ಪರೀಕ್ಷೆಮಾಡಿದ ವೈದ್ಯರು ಪ್ರಾಣಾಪಾಯವಿಲ್ಲವೆಂದು ಹೇಳಿ ಚಿಕಿತ್ಸೆಮಾಡಿದರು. ಒಂದು ಗುಂಡು ಈಚೆಗೆ ತೆಗೆಯಲಾರದ ಸ್ಥಿತಿಯಲ್ಲಿ ಒಳಗೇ ಉಳಿದಿರುವುದೆಂದು ವೈದ್ಯರು ಹೇಳಿದ್ದರು. ಮಧ್ಯೆ ಅವರ ದೇಹಸ್ಥಿತಿಯು ಅಪಾಯಕರವೆಂದು ವರ್ತಮಾನ ಬಂದಿದ್ದಿತು. ಈಗ ಸಂಪೂರ್ಣವಾಗಿ ಆರೋಗ್ಯಗೊಂಡು ಸಂಧಿಸಭಾ ಕಾರ್ಯದಲ್ಲಿ ಪ್ರವೇಶಿಸಿದರೆಂಬ ಸಂತೋಷವಾರ್ತೆಯು ಬಂದಿರುತ್ತದೆ. ದೇಶಭಕ್ತರಾದ ಇಂಥ ಮಹಾಪುರುಷರಿಗೂ ದುರ್ಜನಬಾಧೆಯು ತಪ್ಪಿದುದಲ್ಲ. ಇವರನ್ನು ಕೊಲ್ಲಲು ಉದ್ದೇಶಪಟ್ಟಿದ್ದ ಘಾತುಕನು ಅದಕ್ಕೆ ಮುಂಚೆ ನಿಮಿಷವೇ ಪೇಟೆಯಲ್ಲಿ ಇತ್ತಿತ್ತ ಹೊಂಚಾಡುತ್ತಿದ್ದುದನ್ನು ಕ್ಲೆಮೆಂಕೋರವರು ಕಂಡಿದ್ದರಂತೆ. ಈ ಘಾತುಕನು ಕಾಂಪ ಎಂಬ ಊರಿನ ನಿವಾಸಿಯಾದ ೨೩ ವರ್ಷದ ಕಾಟಿನ್ ಎಂಬ ಹೆಸರಿನ ಯುವಕನಾಗಿರುತ್ತಾನೆ. ಈತನು ಗಂಭೀರನಾಗಿಯೂ ಮದ್ಯಪಾನ ಧೂಮಪಾನಗಳೊಂದನ್ನೂ ಮಾಡದವನಾಗಿಯೂ, ನಿರಪಾಯಕರವಾದ ಉಪನ್ಯಾಸಗಳನ್ನು ಕೊಡತಕ್ಕ ಅರಾಜಕರ ಗುಂಪಿಗೆ ಸೇರಿದವನಾಗಿಯೂ, ಮಂತ್ರಿವರ್ಗದಲ್ಲಿ ಸೇರಲು ಅರ್ಹತೆಯುಳ್ಳವನಾಗಿಯೂ, ಯಾರನ್ನೂ ಲಕ್ಷ್ಯಮಾಡತಕ್ಕವನಲ್ಲವಾಗಿಯೂ ಇರುವನು. ಅವನ ಜತೆಯಲ್ಲಿ ಮತ್ತಾರೂ ಇರಲಿಲ್ಲ. ಇವನು ದಾರಿಯಲ್ಲಿ ಮಿ|| ಕ್ಲೆಮೆಂಕೋರವರ ಆಗಮನವನ್ನೇ ನಿರೀಕ್ಷಿಸುತ್ತ ಒಂದು ಬಂಡಿಯಲ್ಲಿ ಕುಳಿತಿದ್ದು ಅವರ ಮೋಟಾರು ಸಮೀಪಿಸುತ್ತಲೇ ಥಟ್ಟನೆ ಧುಮುಕಿ ಸಿದ್ಧವಾಗಿದ್ದ ರಿವಾಲ್ವರಿನ ಗುಂಡುಗಳನ್ನು ಪ್ರಯೋಗಿಸಿದನು. ಕೂಡಲೇ ಸಮೀಪದಲ್ಲಿದ್ದ ಪೊಲೀಸರು ಹಂತಕನನ್ನು ಹಿಡಿದುಕೊಂಡರು. ಅವನು ಅವರ ಮೇಲೂ ಗುಂಡುಗಳನ್ನು ಹೊಡೆದು ಇಬ್ಬರಿಗೆ ಗಾಯಪಡಿಸಿದನು. ಕ್ಲೆಮೆಂಕೋರವರ ಮೋಟಾರಿನ ಸಾರಥಿಗೂ ಗುಂಡಿನೇಟಿನ ಗಾಯವಾಯಿತು. ಬೀದಿಯಲ್ಲಿದ್ದ ಪ್ರಜೆಗಳು ಅಷ್ಟರಲ್ಲಿ ಹಂತಕನನ್ನು ಹಿಡಿದು ಗುದ್ದಲು ಪ್ರಯತ್ನಿಸುವಾಗ ಯಾವನೋ ಒಬ್ಬನು ತಡೆದುಕೊಳ್ಳಲು ಬರಲಾಗಿ ಅವನನ್ನೂ ಸಹ ಪೊಲೀಸರು ಹಿಡಿದರು. ಈ ೨ ನೆಯವನು ರೋಗಗ್ರಸ್ತನೆಂಬ ಕಾರಣದಿಂದ ಸೈನ್ಯದಿಂದ ಹೊರಗೆ ಹಾಕಲ್ಪಟ್ಟವನು. ಮಿ|| ಕ್ಲೆಮೆಂಕೋರವರಿಗೆ ಇಂಥ ಅಪತ್ತು ಘಟಿಸಿದುದಕ್ಕೆ ನಮ್ಮ ಸಾರ್ವಭೌಮರೇ ಮೊದಲಾದನೇಕಾನೇಕರು ಸಾನುಭೂತಿಯ ತಂತ್ರೀವಾರ್ತೆಗಳನ್ನೂ ಈಚೆಗೆ ಅವರಿಗೆ ಆರೋಗ್ಯವಾದುದಕ್ಕಾಗಿ ಅಭಿನಂದನವಾರ್ತೆಗಳನ್ನೂ ಕಳುಹಿಸಿರುವರು.

ಕಳೆದ ತಾ|| ೨೦ರಲ್ಲಿ ಬವೇರಿಯಾ ದೇಶದ ಮುಖ್ಯಮಂತ್ರಿಯಾದ ಹೇರ್ಎಯಿಸ್ನೇರ್ ಎಂಬುವವರನ್ನು ಅವರು ಈ ಸಭೆಗೆ ಹೋಗುತ್ತಿರುವಾಗ ನಡುಬೀದಿಯಲ್ಲಿ ಯಾರೋ ಹಿಂದಣಿಂದ ತಲೆಗೆ ಗುರಿಕಟ್ಟಿ ೨ ಗುಂಡುಗಳನ್ನು ಹೊಡೆದು ಕೊಂದುಬಿಟ್ಟರು. ಬಳಿಕ ಸಭೆಯಲ್ಲಿ ಈ ಘಾತುಕನನ್ನು ಕುರಿತು ದೇಶೀಯ ಮಂತ್ರಿಯು ಪ್ರಸ್ತಾಪಿಸಿ ಹಂತಕನನ್ನು ದೂಷಿಸುತ್ತಿರಲು ಪ್ರೇಕ್ಷಕರು ಕುಳಿತಿದ್ದ ಗ್ಯಾಲರಿಯಕಡೆಯಿಂದ ಮಂತ್ರಿಯಮೇಲೆ ಗುಂಡಿನ ಮಳೆ ಸುರಿಯಿತು. ಸಭೆಯಲ್ಲಿದ್ದ ಪ್ರತಿನಿಧಿಗಳೆಲ್ಲಾ ಬೆದರಿಬಿದ್ದರು. ಗುಂಡಿನೇಟಿನಿಂದ ದೇಶೀಯಮಂತ್ರಿಯೂ ಪ್ರಜಾಪಕ್ಷಪಾತಿಯಾದ ಮತ್ತೊಬ್ಬ ಸಭಿಕರೂ ಸಹ ನೆಲಕ್ಕೆ ಉರುಳಿಬಿದ್ದರು. ಆದರೆ ಅವರುಗಳು ಸಾಯಲಿಲ್ಲ. ಯೂರೋಪುಖಂಡದಲ್ಲಿ ಇಂಥ ರಾಜಹತ್ಯಾಮನಸ್ಸ್ವೋದ್ರೇಕಗಳು ಮಿಗಿಲಾಗಿರುವುದರಿಂದ ಅಲ್ಲಿಯ ಸ್ಥಿತಿಗತಿಗಳು ಯಾವಲ್ಲಿಗೆ ಬಂದು ಮುಟ್ಟುವುವೋ ಎಂದು ಚಿಂತಿಸುವಂತಾಗಿದೆ.

ಅಮೀರರ ಕೊಲೆ.

ಅಫ್ಘಾನಿಸ್ಥಾನದ ಅಮೀರರಾಗಿದ್ದ ಹಬೀಬುಲ್ಲಾಖಾನರವರು ಜಲಾಲಾಬಾದಿಗೆ ೩೦ ಮೈಲಿಗಳ ದೂರದಲ್ಲಿರುವ ಒಂದು ಗ್ರಾಮದಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಕಳೆದ ತಿಂಗಳು ತಾ|| ೨೦ರ ರಾತ್ರಿ ೨ ಗಂಟೆಯ ಹೊತ್ತಿನಲ್ಲಿ ಒಬ್ಬಾನೊಬ್ಬ ಹಂತಕನು ಆ ಕೋಣೆಗೆ ಹೋಗಿ ಅಮೀರರ ಕಿವಿಗೆ ಪಿಸ್ತೂಲನ್ನು ಸೇರಿಸಿ ಗುಂಡುಗಳನ್ನು ಹಾರಿಸಿದುದರಿಂದ ಅವರು ಮೃತರಾದರು. ಈ ಸುದ್ದಿಯನ್ನು ಅಮೀರರ ತಮ್ಮಂದಿರಾದ ನಸುರುಲ್ಲಾಖಾನರವರು ವೈಸರಾಯರಿಗೆ ಒಂದು ಪತ್ರದ್ವಾರಾ ತಿಳಿಸಿರುವುದಲ್ಲದೆ, ಗತಿಸಿದ ಅಮೀರರ ಉಮರಾವರೂ ಅವರ ಪ್ರಜೆಗಳೂ ಸಹ ತಮ್ಮನ್ನು ಅಮೀರನನ್ನಾಗಿ ಇರಬೇಕೆಂದು ಕೋರಿದ ಪ್ರಕಾರ ನಾನು ಆ ಪದವಿಯನ್ನು ಅಂಗೀಕರಿಸಿರುವೆನೆಂದೂ ಅಫ್ಘಾನಿಸ್ಥಾನಕ್ಕೂ ಇಂಗ್ಲೀಷರಿಗೂ ಸ್ನೇಹಸಂಬಂಧಗಳು ಪೂರ್ವದಲ್ಲಿದ್ದಂತೆ ಮುಂದೆಯೂ ಇರುವುವೆಂದು ನಾನು ನಂಬುತ್ತೇನೆಂತಲೂ ತಿಳಿಯಪಡಿಸಿದರು. ಗತಿಸಿದ ಅಮೀರರು ನಮ್ಮ ಆಂಗ್ಲಪ್ರಭುತ್ವದವರ ವಿಷಯದಲ್ಲಿ ಒಂದೇ ವಿಧವಾದ ಸ್ನೇಹಭಾವದಿಂದಿದ್ದರು. ಯುದ್ಧಕಾಲದಲ್ಲಿ ತುರ್ಕಿಸ್ಥಾನವು ಜರ್ಮನರೊಡನೆ ಸೇರಿಕೊಂಡರೂ ಇವರು ಮಾತ್ರ ಕದಲಲಿಲ್ಲ. ತಾವು ತಟಸ್ಥರಾಗಿರುತ್ತೇವೆಂದು ಯುದ್ಧಾರಂಭ ಕಾಲದಲ್ಲಿ ಪ್ರಕಟಿಸಿದ್ದಂತೆಯೇ ಕೊನೆಯವರೆಗೂ ನಡೆದುಕೊಂಡರು. ಅಷ್ಟೇ ಅಲ್ಲದೆ ಜರ್ಮನ್ ರಾಯಭಾರಿಗಳು ಅಫ್ಘಾನಿಸ್ಥಾನಕ್ಕೆ ಬಂದು ಇವರನ್ನು ತಮ್ಮ ಕಡೆಗೆ ಸೆಳೆದುಕೊಳ್ಳಬೇಕೆಂದು ಎಷ್ಟೋ ಸಾಹಸಗಳನ್ನು ಮಾಡಿದರೂ ಅದಕ್ಕೆ ವಶರಾಗದೆ ಆಂಗ್ಲಪ್ರಭುತ್ವದವರೊಡನೆ ತಮಗಿದ್ದ ದೃಢವಿಶ್ವಾಸವನ್ನು ಕಾಪಾಡಿಕೊಂಡರು. ಮತ್ತು ಇವರು ಭರತಖಂಡಕ್ಕೆ ಸ್ವತಃ ಆಗಮಿಸಿ ದರ್ಶನವನ್ನಿತ್ತು ಪರಿಚಿತರಾಗಿದ್ದರಲ್ಲದೆ ಆಗ ತಮ್ಮ ಉದಾರಗುಣವನ್ನು ಅತಿಶಯವಾಗಿ ವ್ಯಕ್ತಪಡಿಸಿದ್ದರು. ಇವರು ಬಂದ ಸಮಯದಲ್ಲಿ ತುರುಷ್ಕರ ಬಕ್ರೀದ್ ಹಬ್ಬವಾಗಿರಲು, ಆಗ ಯಾವೊಬ್ಬ ಮಹಮ್ಮದೀಯನೂ ಬಹಿರಂಗವಾಗಿ ಗೋವಧೆಯನ್ನು ನಡೆಯಿಸಿ ಹಿಂದೂಗಳ ಮನಸ್ಸನ್ನು ನೋಯಿಸುವುದು ತಮಗೆ ಅಸಮಾಧಾನವುಂಟಾಗುವುದೆಂದೂ, ಹಿಂದೂಮಹಮ್ಮದೀಯರೀರ್ವರೂ ವೈಷಮ್ಯವನ್ನುಳಿದು ಸಹೋದರಭಾವದಿಂದ ನಡೆದುಕೊಳ್ಳಬೇಕೆಂದೂ ಹಿತಬೋಧೆಯನ್ನು ಮಾಡಿದ್ದರು. ಇವರ ಹಿಂದಣಕಾಲದಲ್ಲಿ ಅಫ್ಘಾನಿಸ್ಥಾನದ ಸಖ್ಯತ್ವವು ಆಂಗ್ಲಪ್ರಭುತ್ವದವರೊಡನೆ ಇದ್ದುದಕ್ಕಿಂತಲೂ ಇವರ ಕಾಲದಲ್ಲಿ ಅದು ಬಲುಮಟ್ಟಿಗೆ ವೃದ್ಧಿಗೊಂಡಿದ್ದಿತು. ಇಂಥ ಉತ್ತಮಸ್ನೇಹಿತರೂ ಗುಣಾಢ್ಯರೂ ಆದ ಅಮೀರರ ಅಕಾಲಮೃತ್ಯುವಿನ ವಾರ್ತೆಯು ಆಂಗ್ಲಪ್ರಭುತ್ವದವರಿಗೆ ಮಾತ್ರವೇ ಅಲ್ಲದೆ ಭರತಖಂಡದ ಮುಸಲ್ಮಾನ್ ಹಿಂದೂ ಪ್ರಜೆಗಳಿಗೆಲ್ಲಾ ದುಃಖಕರವಾಗಿದೆಯೆಂಬುದಕ್ಕೆ ಸಂಶಯವಿಲ್ಲ. ಇವರಲ್ಲಿಟ್ಟಿದ್ದ ಗೌರವಾರ್ಥವಾಗಿ ಇಂಡ್ಯಾ ಸರ್ಕಾರದವರು ಕಳೆದ ತಿಂಗಳು ತಾ|| ೨೮ನೆ ಶುಕ್ರವಾರ ಎಲ್ಲಾ ಕೋರ್ಟು ಕಚೇರಿಗಳನ್ನೂ ಮುಚ್ಚಿಸಿದ್ದುದಲ್ಲದೆ ರಾಜಪತಾಕೆಗಳನ್ನು ಎಲ್ಲೆಲ್ಲೂ ಅರ್ಧಮಟ್ಟಿಗೆ ಇಳಿಯಿಸಿ ಕಟ್ಟಬೇಕೆಂದೂ, ಸೈನ್ಯಶಿಬಿರಗಳಿರುವ ಕಡೆಯಲ್ಲೆಲ್ಲಾ ೩೧ “ಸುಸ್ತಿ” ಗುಂಡುಗಳನ್ನು ಹಾರಿಸಬೇಕೆಂದೂ ಅಪ್ಪಣೆಮಾಡಿ ಅದರಂತೆ ನಡೆಯಿಸಿದರು. ಈಚೆಗೆ ಬಂದಿರುವ ತಂತ್ರೀವಾರ್ತೆಯು ಮತ್ತೊಂದು ನೂತನ ವಿಷಯವನ್ನು ಹೇಳಿರುವುದು. ಗತಿಸಿದ ಅಮೀರರ ತಮ್ಮಂದಿರಾದ ಸರ್ದಾರ್ ನಸಿರುಲ್ಲಾಖಾನರು ಅಮೀರರಾಗಿರುವುದಕ್ಕೆ ಒಪ್ಪದೆ ಆ ಪದವಿಯನ್ನು ಬಿಟ್ಟುಕೊಟ್ಟು ಸೈನಿಕಶಾಖೆ, ಮತಪ್ರಸಾರಕಶಾಖೆಯ ಮುಖ್ಯಾಧಿಕಾರದಲ್ಲಿ ಮಾತ್ರವೇ ಇರುವುದಕ್ಕೆ ಇಷ್ಟಪಟ್ಟರೆಂದೂ, ಗತಿಸಿದ ಅಮೀರರ ಮೂರನೆ ಮಕ್ಕಳಾದ ಎಯಿಸುದ್ದೌಲಾ ಸರ್ದಾರ್ ಅಮಾನುಲ್ಲಾಖಾನರವರು ಅಮೀರರಾಗಿ ಮಾಡಲ್ಪಟ್ಟು ಸಿಂಹಾಸನಾಸೀನರಾದರೆಂದೂ ಗೊತ್ತಾಗುತ್ತದೆ. ಯಾರಾದರೂ ಬರಲಿ, ಬಂದವರು ಹಿಂದಣ ಅಮೀರರ ನಡೆಯನ್ನೇ ಅನುಸರಿಸಿ ನಡೆದು ಸ್ವದೇಶವನ್ನು ವೃದ್ಧಿಗೆ ತಂದು ಅದರ ಗೌರವಪ್ರತಿಷ್ಠೆಗಳನ್ನು ಕಾಪಾಡಿಕೊಳ್ಳುವವರಾಗಬೇಕೆಂಬುದೇ ಭಾರತೀಯರ ಕೋರಿಕೆ.

ಇಂಡ್ಯಾ ಸರ್ಕಾರದ ಸ್ಯಾನಿಟರಿ ಕಮಿಷನರಾದ ಮೇಜರ್ ನಾರ್ಮನ್ ವೈಟ್, ಐ. ಎಂ. ಎಸ್. ರವರು ೧೯೧೮ ನೆಯ ವರ್ಷದ ಕಡೆಯ ಭಾಗದಲ್ಲಿ ಭರತಖಂಡದಲ್ಲಿ ಪ್ರಾಪ್ತವಾಗಿದ್ದ ಇನ್ಫ್ಲುಯೆನ್ಝಾ ರೋಗದ ವಿಚಾರವಾಗಿ ಒಂದು ವರದಿಯನ್ನು ಮಾಡಿರುತ್ತಾರೆ. ೧೦೦ ಕ್ಕೆ ೫೦ ರಿಂದ ೮೦ ರ ವರೆಗೆ ಜನರು ಈ ರೋಗಪೀಡಿತರಾಗಿದ್ದು, ೬೦ ಲಕ್ಷ ಜನರು ಇದರಿಂದ ಸತ್ತಿರುತ್ತಾರೆಂದೂ, ಈ ರೋಗವು ೧೮೦೩, ೧೮೩೩, ೧೮೩೭, ೧೮೪೭ ಮತ್ತು ೧೮೯೦ ಈ ವರ್ಷಗಳಲ್ಲಿ ಪ್ರಾಪ್ತವಾಗಿದ್ದುದಕ್ಕಿಂತ ಈವೇಳೆ ಅತ್ಯಂತ ಉಲ್ಬಣವಾಗಿದ್ದಿತೆಂದೂ, ಈ ಭರತಖಂಡದಲ್ಲಿ ಇದರಿಂದಾದಷ್ಟು ಮರಣಗಳು ಮತ್ತಾವರೋಗದಿಂದಲೂ ಆಗಲಿಲ್ಲವೆಂದೂ ಮೈಸೂರು ಸೀಮೆಯೊಂದರಲ್ಲಿ ೧,೨೭,೬೫೧ ಮರಣಗಳಾಗಿರುತ್ತವೆಂದೂ ತಿಳಿಯಬರುತ್ತದೆ.

ಮ|| ತಿಲಕರವರ ಮಾನನಷ್ಟದ ವ್ಯಾಜ್ಯ.

ಸರ್ ವಾಲಂಟೈನ್ ಚಿರೋಲ್ ಎಂಬ ಪಾಶ್ಚಾತ್ಯರು ಕೆಲ ವರ್ಷಗಳ ಕೆಳಗೆ “ಭರತಖಂಡದ ಅಶಾಂತಿ” ಎಂಬ ಹೆಸರಿನ ಗ್ರಂಥವೊಂದನ್ನು ಬರೆದು ಪ್ರಕಟಿಸಿರುವರು. ಅದರಲ್ಲಿ ಈ ದೇಶದ ರಾಜದ್ರೋಹಾವಿರ್ಭಾವಕಾರಣವನ್ನು ವಿವರಿಸುವಾಗ್ಗೆ ಮ|| ತಿಲಕರವರಿಂದ ತಮ್ಮ ಪತ್ರಿಕೆಯಲ್ಲಿ ಬರೆಯಲ್ಪಡುತ್ತಿದ್ದ ಲೇಖನಗಳು ಜನರಲ್ಲಿ ರಾಜದ್ರೋಹವನ್ನೂ ಅಧಿಕಾರಿಗಳ ಕೊಲೆ ಮಾಡಬೇಕೆಂಬ ಬುದ್ಧಿಯನ್ನೂ ಹುಟ್ಟಿಸಲು ಸಾಧಕವಾದುವು ಎಂದು ಮೊದಲಾಗಿ ಬರೆದಿದ್ದರು. ಈ ಲೇಖನವು ತಮ್ಮ ಗೌರವ ಪ್ರತಿಷ್ಠೆಗಳಿಗೆ ಭಂಗಕರವಾದುದೆಂದು ಹೇಳಿ, ಆ ಗ್ರಂಥಕರ್ತರಾದ ಚಿರೋಲ್ರವರ ಮೇಲೆ ತಿಲಕರು ಸೀಮೆಯ ನ್ಯಾಯಸ್ಥಾನದಲ್ಲಿ ನಷ್ಟಪರಿಹಾರ ಪ್ರಾಪ್ತಿಗಾಗಿ ವ್ಯಾಜ್ಯವನ್ನು ಹೂಡಿದ್ದರು. ಅದರ ವಿಚಾರಣೆಯು ನಡೆದು ಮೊನ್ನೆವಾರದಲ್ಲಿ ತಿಲಕರಿಗೆ ವಿರುದ್ಧವಾಗಿ ತೀರ್ಮಾನವು ಕೊಡಲ್ಪಟ್ಟಿತು. ಸ್ಪೆಷಲ್ ಜೂರರುಗಳಾಗಿ ಏರ್ಪಟ್ಟಿದ್ದ ೧೨ ಮಂದಿ ದೊಡ್ಡಮನುಷ್ಯರೂ ಪ್ರತಿವಾದಿಯು ನಿರ್ದೋಷಿಯೆಂದು ಅಭಿಪ್ರಾಯಪಟ್ಟ ಕಾರಣ ನ್ಯಾಯಾಧೀಶರು ವ್ಯಾಜ್ಯವನ್ನು ವಾದಿಗೆ ವಿರುದ್ಧವಾಗಿ ತೀರ್ಮಾನಿಸಿದುದಲ್ಲದೆ ಪ್ರತಿವಾದಿಯ ವೆಚ್ಚವನ್ನು ಕೂಡ ವಾದಿಯು ಕಟ್ಟಿಕೊಡಬೇಕೆಂದು ತೀರ್ಮಾನಿಸಿರುವುದನ್ನು ಕೇಳಿ ಭರತಖಂಡದಲ್ಲಿ ಅನೇಕಾನೇಕರು ನಿರುತ್ಸಾಹತನವನ್ನು ವ್ಯಕ್ತಪಡಿಸುತ್ತಿದ್ದಾರೆ. ಭರತಖಂಡದ ಉನ್ನತನ್ಯಾಯಸ್ಥಾನಗಳ ಪಾವಿತ್ರ್ಯದಲ್ಲಿ ಸಂಶಯಗೊಂಡೋ ಏನೋ ತಿಲಕರು ಈ ವ್ಯಾಜ್ಯವನ್ನು ಈ ದೇಶದ ನ್ಯಾಯದಲ್ಲೇ ಹಾಕಿ ತೀರ್ಮಾನವನ್ನು ಇದಿರುನೋಡದೆ ಸೀಮೆಗೆ ಹೋಗಿ ಬಹು ಧನವ್ಯಯವನ್ನು ಮಾಡಿಕೊಂಡು ಕಡೆಗೆ ಇಂಥ ಪರಿಣಾಮಕ್ಕೆ ಗುರಿಯಾದುದು ವ್ಯಸನಕರವಾಗಿದೆ. ಕೋರ್ಟಿನ ವೆಚ್ಚಕ್ಕಾಗಿ ಇದುವರೆಗೇ ತಿಲಕರು ೬೦ ಸಾವಿರ ರೂ ಗಳನ್ನು ಮುಂಗಡವಾಗಿ ಕಟ್ಟಿದ್ದಾರೆ. ಇದರ ಮೇಲೆ ಪ್ರತಿವಾದಿಯ ವೆಚ್ಚವನ್ನೂ ಇವರೇ ಹೊರಬೇಕಾಯಿತು. ತಮ್ಮ ಪಕ್ಷದ ವೆಚ್ಚವು ಬೇರೆ. ಇದರಿಂದೆಲ್ಲಾ ಬಹುಶಃ ೧ ಲಕ್ಷಕ್ಕೆ ಕಡಿಮೆಯಿಲ್ಲದ ಹಣವನ್ನು ತಿಲಕರು ಕಳೆದುಕೊಳ್ಳಬೇಕಾಯಿತು.

ಈ ನಷ್ಟವು ಹಾಗಿರಲಿ. ಇದರ ಮೇಲೆ ಅಸಾಧಾರಣವಾದ ನಷ್ಟವೊಂದು ಪ್ರಾಪ್ತವಾದಂತಾಯಿತು. ಅದೇನೆಂದರೆ—ಇವರ ಅನುಚರರನೇಕರು ಸಂಧಿಸಭೆಗೆ ತಿಲಕರನ್ನು ಕಾಂಗ್ರೆಸ್ ಪಕ್ಷದಿಂದ ಪ್ರತಿನಿಧಿಯನ್ನಾಗಿ ಕಳುಹಿಸಿಕೊಡಬೇಕೆಂದು ನಿರ್ಧರಿಸಿ, ಪತ್ರವ್ಯವಹಾರವನ್ನು ನಡೆಯಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಆಂಗ್ಲದೇಶದೊಳಗೂ ಅಲ್ಲಿಯ ಮಹಾಜನರ ಮಧ್ಯದಲ್ಲೂ ಈ ತೀರ್ಮಾನದಿಂದ ಮ|| ತಿಲಕರ ಪ್ರವರ್ತನದ ಯೋಗ್ಯತೆಯು ಪ್ರಸಿದ್ಧಿಗೆ ಬರುವಂತಾದುದರಿಂದ ಸಂಭವಿಸಿದ ಪ್ರತಿಷ್ಠಾನಷ್ಟವು ವಿಶಿಷ್ಟತರವಾದುದೆಂಬುದಕ್ಕೆ ಸಂಶಯವಿಲ್ಲ. ಈಗಲಾದರೋ ಸರ್ ಚಿರೋಲ್ರವರು ರೇಗಿ ತಾವು ಈ ವ್ಯಾಜ್ಯದ ಸಾಕ್ಷ್ಯಕ್ಕಾಗಿ ಸಂಗ್ರಹಿಸಿದ್ದ ೨ ದೊಡ್ಡ ಗ್ರಂಥಗಳಲ್ಲಿರುವ ವೃತ್ತಪತ್ರಿಕಾ ಲೇಖನಗಳನ್ನೆಲ್ಲಾ ಕಾಮನ್ಸ್ ಸಭೆಯ ಭಾಂಡಾಗಾರಕ್ಕೆ ಕೊಟ್ಟುಬಿಡುವೆನೆಂತಲೂ, ಅದನ್ನು ನೋಡುವವರೆಲ್ಲಾ ತಿಲಕರ ಭಾವಗಳನ್ನೂ, ಭರತಖಂಡದ ಕೆಲವು ವೃತ್ತಪತ್ರಿಕೆಗಳು ಮಾಡುತ್ತಿರುವ ಆಂದೋಲನಗಳು ಯದ್ವಾಶವಾದುವೆಂಬುದನ್ನೂ, ಭರತಖಂಡದ ಅತಿವಾದಿಗಳು ಮಾಡತಕ್ಕ ಪ್ರಯತ್ನವು ಉಪೇಕ್ಷಣೀಯವಾದುದಲ್ಲವೆಂಬುದನ್ನೂ ಅವರೆಲ್ಲರೂ ತಿಳಿದುಕೊಳ್ಳುವಂತೆ ಮಾಡುವೆನೆಂದು ಹೇಳಿ ಬೆದರಿಸುತ್ತಿರುವರು. ಇದರಿಂದ ಭರತಖಂಡದ ರಾಜಕೀಯ ಶ್ರೇಯಸ್ಸಿಗೆ ವಿಘ್ನಪರಂಪರೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿಕೊಂಡಂತೆಯೂ ಆಯಿತು. ಇದರ ಮೇಲೂ ತಿಲಕರು ಅಪ್ಪೀಲು ಮಾಡುವುದರಲ್ಲಿದ್ದಾರೆಂದು ವಾರ್ತೆಯು ಹುಟ್ಟಿದೆ. ಅವರ ಅನುಚರರು ಗಟ್ಟಿಯಾಗಿರುವವರೆಗೂ ಅವರಿಗೆ ದುಡ್ಡಿನ ಕೊರತೆಯೇನೂ ಇರಲಾರದು.

ಒಳದೇಶದ ವೃತ್ತಾಂತಗಳು.

ಅರಮನೆ ಮೋತೀಖಾನೆ ಕಂಟ್ರಾಕ್ಟು ಈ ಸಲ ಸಾ|| ತಿಮ್ಮಯ್ಯನವರ ಹೆಸರಿಗೆ ಆಗಿರುತ್ತದೆ.

ಇದೇ ತಿಂಗಳು ತಾ|| ೨೪ ನೆ ಸೋಮವಾರ ಮೈಸೂರು ನಿಯಮನಿರ್ಮಾಣ ಸಭೆಯು ಬೆಂಗಳೂರಿನಲ್ಲಿ ಕೂಡುವುದು.

ಶ್ರೀಮನ್ಮಹಾರಾಜರವರು ಸಪರಿವಾರರಾಗಿ ಕಳೆದ ಬುಧವಾರ ಸ್ಪೆಷಲ್ ಟ್ರೇನಿನಲ್ಲಿ ಪೂನಾಮಾರ್ಗದಿಂದ ಬೆಂಗಳೂರಿಗೆ ದಯಮಾಡಿಸಿದರು.

ಬರುವ ಜುಲೈ ತಾ|| ೧ ರಿಂದ ೮೦ ರೂ. ತೂಕದ ಸೇರು ೧ಕ್ಕೆ ಅಫೀಮಿನ ಬೆಲೆಯನ್ನು ೪೫ ರೂ. ನಿಂದ ೫೦ ರೂ. ಗೆ ಲೈಸೆನ್ಸ್‌ದಾರರಿಗೆ ಮಾರಲು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಮೈಸೂರು ಡಿಸ್ಟ್ರಿಕ್ಟ್ ಕಾನ್ಫರೆನ್ಸು ಡಿ|| ಕಮಿಷನರ ಅಧ್ಯಕ್ಷತೆಯಿಂದ ಕಳೆದ ತಾ|| ೩-೪ ರಲ್ಲೂ, ಪರಸ್ಪರ ಸಹಾಯಸಂಘಗಳ ಸಭೆಯು ತಾ|| ೫ ರಲ್ಲೂ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆದುವು.

ಸರ್ ಎಂ. ವಿಶ್ವೇಶ್ವರಯ್ಯನವರು ಕಳೆದವಾರ ಬೊಂಬಾಯಿಯಿಂದ ಬೆಂಗಳೂರಿಗೆ ದಯಮಾಡಿಸಿದರು. ಇಷ್ಟರಲ್ಲೇ ಅವರು ಮರಳಿ ಬೊಂಬಾಯಿಗೆ ಹೋಗಿ ಹಾಗೆಯೇ ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ಈ ಸಲದ ನಿಯಮನಿರ್ಮಾಣಸಭೆಯಲ್ಲಿ ಆದಾಯದಮೇಲಣ ತೆರುಗೆಯನ್ನು ವಿಧಿಸುವುದು, ಈ ಸಂಸ್ಥಾನಕ್ಕೇ ಪ್ರತ್ಯೇಕವಾದ ನೋಟುಗಳನ್ನು ಮುದ್ರಿಸಿ ವ್ಯವಹಾರಕ್ಕೆ ತರುವ ವಿಷಯ-ಇವುಗಳು ಚರ್ಚೆಗೆ ತರಲ್ಪಡುವುವಾಗಿವೆಯೆಂದು ಕೇಳುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾಗಿದ್ದ ಮ|| ಎಂ. ಎನ್. ಸುಬ್ಬಣ್ಣನವರು ಚಿಕ್ಕಮಗಳೂರಿಗೆ ಮುನಸೀಫರಾಗಿ ಹೋದುದರಿಂದ ಅವರ ಬದಲು ಮ|| ಕಾವೇರೀಪಟ್ಟಣದ ಸುಬ್ರಾಯಸೆಟ್ಟರು ಮ್ಯು|| ಕೌನ್ಸಿಲರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಈಗ ಎಕ್ಸೈಸ್ ಕಮಿಷನರಾಗಿರುವ ಮಿ|| ಚಾಂಡಿಯವರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾಗಿಯೂ, ತುಮಕೂರು ಡಿ|| ಡೆಪ್ಯುಟಿಕಮಿಷನರಾದ ಮ|| ಎ. ಸುಬ್ರಹ್ಮಣ್ಯಅಯ್ಯರ್‌ರವರು ಎಕ್ಸೈಸ್ ಕಮಿಷನರಾಗಿಯೂ ನಿಯಮಿಸಲ್ಪಡುವರೆಂದು ವದಂತಿಯಿದೆ.

ರಾಜಧಾನಿಯಲ್ಲಿ ಸಾ|| ತಿಮ್ಮಯ್ಯನವರು ಕಟ್ಟಿಸಬೇಕೆಂದು ಯತ್ನಿಸಿರುವ ಹೈಸ್ಕೂಲು ಕಟ್ಟಡಕ್ಕೆ ರೈಲ್ ಸ್ಟೇಷನ್ ರೋಡಿನಲ್ಲಿ ಸವಾರ್‌ಲೈನಿನ ಇದಿರಿಗಿರುವ ಪ್ರದೇಶವು ಟ್ರಸ್ಟ್‌ಬೋರ್ಡಿನವರಿಂದ ಕೊಡಲ್ಪಟ್ಟಿದೆ. ಈ ಸ್ಥಲವು ಅವರ ಉದ್ದೇಶಕ್ಕೆ ಪ್ರಶಸ್ತವಾಗಿರುತ್ತದೆ.

ಹರಪನಹಳ್ಳಿಯ ಟಿ. ಹೆಚ್. ಎಂ. ಅಂಡ್ ಕಂಪೆನಿಯವರು ಪ್ರಕಟಿಸಿರುವ ಸಿದ್ಧಾರ್ಥಿ ಸಂವತ್ಸರದ ೧೨ ಮಾಸಗಳಲ್ಲಿ ಜರುಗುವ ದಿನಸಿಧಾರಣೆಯ ಹೆಚ್ಚುಕಡಿಮೆಯನ್ನು ನಿರ್ಣಯಿಸುವ ಪತ್ರಿಕೆಯು ಈ ಸಂಚಿಕೆಯಲ್ಲಿ ಗರ್ಭಿತವಾಗಿರುತ್ತದೆ. ವಾಚಕರು ಗಮನಿಸುವವರಾಗಬೇಕು.

ಸರದಾರ್ ಕಾಂತರಾಜ ಅರಸಿನವರಿಗೆ ದೇಹದಲ್ಲಿ ಹುಣ್ಣುಗಳ ಬಾಧೆಯು ತಪ್ಪಿರುವುದೆಂತಲೂ, ಆದರೆ ಶಕ್ತಿಯು ಬಹಳ ಕುಗ್ಗಿರುವುದರಿಂದ ಅದರ ವೃದ್ಧಿಗಾಗಿ ನೀಲಗಿರಿಗೆ ಪ್ರಯಾಣಮಾಡುವುದರಲ್ಲಿದ್ದಾರೆಂತಲೂ, ಎರಡು ತಿಂಗಳ ಕಾಲ ವಿಶ್ರಮಿಸಿಕೊಂಡು ತಮ್ಮ ನೂತನಾಧಿಕಾರವನ್ನು ವಹಿಸಿಕೊಳ್ಳುವವರಾಗಿದ್ದಾರೆಂತಲೂ ಕೇಳುತ್ತೇವೆ.

ನಮ್ಮ ಪ್ರಭುತ್ವದವರು ಅತ್ಯವಶ್ಯಕಗಳಾದ ಕಾರ್ಯಗಳಿಗಾಗಿ ವರ್ಷ ೧ಕ್ಕೆ ೬೦ ಲಕ್ಷ ರೂ. ಗಳ ಮೇರೆಗೆ ೫ ವರ್ಷಗಳವರೆಗೂ ವೆಚ್ಚಮಾಡಲು ನಿರ್ಧರಿಸಿರುತ್ತಾರೆ. ಅದರಲ್ಲಿ ೨೦ ಲಕ್ಷವನ್ನು ಲೋಹಮಾರ್ಗಸ್ಥಾಪನೆಗೂ, ೨೦ ಲಕ್ಷವನ್ನು ವ್ಯವಸಾಯಕ್ಕೂ, ೨೦ ಲಕ್ಷವನ್ನು ವಿದ್ಯುಚ್ಛಕ್ತಿ ಕಾರ್ಯಗಳಿಗೂ, ೧೦ ಲಕ್ಷವನ್ನು ಪರಿಶ್ರಮಾಭ್ಯುದಯಗಳಿಗೂ ವಿನಿಯೋಗಿಸುವರು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಆನರರಿ ಪ್ರೆಸಿಡೆಂಟರಾದ ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಎಕ್ಸ್‌ಅಫಿಷಿಯೊ ಚೇರ್ಮನ್ನರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಇವರು ಸ್ವತಃ ಇಂಜನಿಯರಲ್ಲವಾದುದರಿಂದ ಇವರ ಸಹಾಯಾರ್ಥವಾಗಿ ಒಬ್ಬ ಎಕ್ಸಿಕ್ಯೂಟಿವ್ ಇಂಜನಿಯರೂ ಮತ್ತೊಬ್ಬ ಅಸಿಸ್ಟೆಂಟ್ ಇಂಜನಿಯರು ನಿಯಮಿಸಲ್ಪಡುವರು. ಇವರ ಹಿಂದೆ ಇಂಜನಿಯರುಗಳಾಗಿದ್ದವರೇ ಚೇರ್ಮನ್ನರಾಗಿದ್ದುದರಿಂದ ಒಬ್ಬ ಅಸಿಸ್ಟೆಂಟ್ ಇಂಜನಿಯರು ಮಾತ್ರ ನಿಯಮಿಸಲ್ಪಡುತ್ತಿದ್ದರು. ಈಗಣ ಏರ್ಪಾಟಿನಿಂದ ವೃಥಾ ಹೆಚ್ಚು ವೆಚ್ಚಕ್ಕೆ ಅವಕಾಶವಾದಂತಾಯಿತು.

ಕನ್ನಂಬಾಡಿ ಅಣೆಕಟ್ಟೆಯನ್ನು ೮೦ ಅಡಿ ಎತ್ತರ ಕಟ್ಟುವುದಕ್ಕೆ ಸ್ಟೇಟ್‌ಸೆಕ್ರೆಟರಿಯವರು ಅಪ್ಪಣೆಯನ್ನು ಕೊಟ್ಟಿದ್ದರು. ಆದರೆ ೧೨೦ ಅಡಿಯವರೆಗೆ ಎತ್ತರಿಸುವುದಕ್ಕೆ ನಮ್ಮ ಪ್ರಭುತ್ವದವರು ಅಪ್ಪಣೆಯನ್ನು ಕೇಳಿಕೊಂಡಿದ್ದರು. ಅದು ಇನ್ನೂ ಆಗಿಲ್ಲ. ಆಚೆ ಈಚೆ ಪಕ್ಕದಲ್ಲಿ ಕೋಡಿಗಳನ್ನು ಕಟ್ಟಿಸುವ ಕೆಲಸವನ್ನೇನೋ ನಮ್ಮ ಸರ್ಕಾರದವರು ಪರಮಾವಧಿಗೆ ತಕ್ಕಷ್ಟಿರುವಂತೆಯೇ ಮಾಡಿಸುತ್ತಿದ್ದಾರೆ. ಈ ಕಾರ್ಯನಿರ್ಣಯಕ್ಕಾಗಿ ಇಂಡ್ಯಾ ಸರ್ಕಾರದ ನೀರಾವರಿ ಕೆಲಸದ ರಿಟೈರ್ಡ್ ಇನ್‌ಜೆನಿಯರ್ ನೆದರ್‌ಸೋಲ್‌ರವರ ಅಧ್ಯಕ್ಷತೆಯಿಂದ ಒಂದು ಸಂಘವು ಏರ್ಪಟ್ಟಿದೆ. ಈ ಸಂಘದಲ್ಲಿ ಮದ್ರಾಸು ಪ್ರಭುತ್ವಪಕ್ಷದ ಸಭಿಕರು ಕೆಲವರೂ ಮೈಸೂರು ಪ್ರಭುತ್ವಪಕ್ಷದ ಉದ್ಯೋಗಿಗಳು ಕೆಲವರೂ ಸಹ ಸಭಿಕರಾಗಿದ್ದಾರೆ. ಇವರುಗಳೆಲ್ಲಾ ಮೊನ್ನೆವಾರ ರಾಜಧಾನಿಯಲ್ಲಿ ಸಭೆಗೂಡಿ ವಿಷಯವಿಮರ್ಶೆಗಳನ್ನು ಮಾಡಿದರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಮ್ಯುನಿಸಿಪಾಲಿಟಿಯವರು ದೇವರಾಜ, ಮಂಡಿ, ನಜರಬಾಗ್ ಮೊದಲಾದ ಮೊಹಲ್ಲಾಗಳಲ್ಲಿ ರಾಗಿಯನ್ನು ಮಾರಿಸಲು ಡಿಪೋಗಳನ್ನೇರ್ಪಡಿಸಿದ್ದಾರೆ. ಮಂಡಿಮೊಹಲ್ಲಾ ಡಿಪೋದಲ್ಲಿ ಈಗ್ಗೆ ೮-೧೦ ದಿನಗಳ ಹಿಂದೆ ೧೦-೧೨ ವರ್ಷ ವಯಸ್ಸಿನ ಒಬ್ಬ ಹುಡುಗಿಯು ಜನರ ನೂಗಾಟದಲ್ಲಿ ಸಿಕ್ಕಿ ಉಸಿರು ಸಿಕ್ಕಿಕೊಂಡು ಕೆಳಗೆಬಿದ್ದು ಜನರಿಂದ ತುಳಿಯಲ್ಪಟ್ಟು ಸ್ಮೃತಿತಪ್ಪಿ ಬಿದ್ದುದರಮೇಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಮಾಡಲ್ಪಟ್ಟಾಗ್ಗೂ ಗುಣಹೊಂದದೆ ಸತ್ತುಹೋಯಿತೆಂದೂ ಮತ್ತೊಬ್ಬ ಮನುಷ್ಯನಿಗೂ ರಾಗಿಯನ್ನಳೆದುಕೊಡುವವನಿಗೂ ಕಲಹ ನಡೆದು ಅಳೆಯುವವನು ತನ್ನ ಕೈಯಲ್ಲಿದ್ದ ಸೇರಿನಿಂದ ಕಲಹಮಾಡಿದವನ ತಲೆಯಮೇಲೆ ಹೊಡೆಯಲು ಅವನ ತಲೆಗೆ ಪೂರಾ ಪೆಟ್ಟು ಬಿದ್ದಿತೆಂದೂ ವರ್ತಮಾನವಿದೆ. ಇದು ನಿಜವಾಗಿದ್ದಲ್ಲಿ ಮ್ಯುನಿಸಿಪಾಲಿಟಿಯವರು ಇಂತಹ ಅನಾಹುತಗಳಿಗೆ ಅವಕಾಶವಿಲ್ಲದಂತೆ ಪ್ರತಿಯೊಬ್ಬರಿಗೂ ಧಾನ್ಯವು ಸಿಕ್ಕುವಂತೆ ಮಾಡುವುದು ಅತ್ಯಾವಶ್ಯಕವಾಗಿದೆ. ಹಾಗಲ್ಲದೆ ಅಧಿಕಾರಿಗಳು ಇವುಗಳಿಗೆ ಗಮನಕೊಡದೆ ಆಫೀಸಿನಲ್ಲಿ ಕುಳಿತು ಆರ್ಡರ್ ಮಾಡುವುದರಿಂದಲೇ ಕೃತಕೃತ್ಯರಾದೆವೆಂದು ಭಾವಿಸುವುದು ಯುಕ್ತವಾಗಿ ತೋರುವುದಿಲ್ಲ.

ಪತ್ರವ್ಯವಹಾರ.

ಕಳೆದ ನವಂಬರ್ ತಿಂಗಳಲ್ಲಿ ಶಿವೈಕ್ಯರಾದ ಹೆಗ್ಗುಂದದ ಗುರುನಂಜಪ್ಪ ಶಾಸ್ತ್ರಿಗಳ ದೌಹಿತ್ರರಾದ ಬೆಂಗಳೂರಿನಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರಾಗಿರುವ ಮ|| ಟಿ ಆರ್. ರುದ್ರಾರಾಧ್ಯರು ಶಾಸ್ತ್ರಿಗಳ ಇಷ್ಟಪ್ರಕಾರ ಅವರ ಜ್ಞಾಪನಾರ್ಥವಾಗಿ ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ 100 ರೂಪಾಯಿಗಳನ್ನು ಕೊಡಲು ವಾಗ್ದಾನಮಾಡಿ ಆಗಲೇ 25 ರೂ. ಗಳನ್ನು ಕೊಟ್ಟಿರುತ್ತಾರೆಂದು ಸಂತೋಷದಿಂದ ತಿಳಿಯಿಸುವುದಲ್ಲದೆ ಇದೇ ರೀತಿ ಇತರರೂ ಅನುಸರಿಸುವರೆಂದು ನಿರೀಕ್ಷಿಸುತ್ತೇನೆ

ಜಿ ಕೆ. ರುದ್ರಾರ್ಯ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್, ಬೆಂಗಳೂರು.

ಶ್ರೀ ವೀರಭದ್ರೇಶ್ವರನ ಜಾತ್ರೆಯು.

ಧಾರವಾಡಜಿಲ್ಲಾ ಗದಗ ತಾಲ್ಲೂಕ ಮುಂಡರಗಿಪೇಟಾ ಪೈಕಿ ಶಿಂಗಟಾಲೂರ ಹಂಪಿಗಿ ನವಲಿ ಈ ಗ್ರಾಮಗಳ ಮಧ್ಯದಲ್ಲಿರುವ ಶ್ರೀ ವೀರಭದ್ರೇಶ್ವರನ ಜಾತ್ರೆಯು ಮಾಮೂಲಮೇರೆಗೆ ಇದೇ ಸಿದ್ಧಾರ್ಥಿನಾಮ ಸಂ||ರದ ಚೈತ್ರ ಶುದ್ಧ ೫ ಶನಿವಾರ ತಾ|| ೫-೪-೧೯) ದಿವಸ ರಥೋತ್ಸವವೂ ಶುದ್ಧ ೬ ಭಾನುವಾರ (ತಾ|| ೬-೪-೧೯) ದಿವಸ ಪ್ರಾತಃಕಾಲಕ್ಕೆ ಅಗ್ನಿಕುಂಡವನ್ನು ಹಾಯುವದು ಈ ಪ್ರಕಾರ ಗುಡ್ಡದಲ್ಲಿ ಉತ್ಸಹವವು ಜರಗುವದು. ಈ ಜಾತ್ರೆಗೆ ಮಿಠಾಯಿ ಅಂಗಡಿಗಳು ಪಾಪಿನ ಅಂಗಡಿಗಳು ನಾಟಕಗಳೂ ಬರುತ್ತವೆ. ಹಾಗು ಇಲ್ಲಿಗೆ ಆಗಮಿಸಿದ ಮಹನೀಯರುಗಳಿಗೆ ತುಂಗಭದ್ರಾನದಿಯಿಂದಲೂ ಮಾವು ಮೊದಲಾದ ವೃಕ್ಷಗಳ ನೆರಳಿನಿಂದಲೂ ಮನಸ್ಸಿಗೆ ಬಹಳ ಆಹ್ಲಾದವನ್ನುಂಟುಮಾಡುತ್ತದೆ. ಆದ ಪ್ರಯುಕ್ತ ಮಹನೀಯರು ತಮ್ಮ ಇಷ್ಟಮಿತ್ರರೊಡಗೂಡಿ ಬಂದು ಶ್ರೀ ದೇವರ ದರ್ಶನಾಶೀರ್ವಾದಗಳನ್ನು ಪಡೆಯಬೇಕಾಗಿ ಕೋರುತ್ತೇನೆ.

ಗುರುಬಸಪ್ಪಾ, ಗದ್ದಿಕೇರಿ.

ಅರಕಲಗೂಡು ತಾಲ್ಲೂಕು ರುದ್ರಪಟ್ಟಣ.

ಸ್ವಾಮಿ! ಈ ಗ್ರಾಮದಲ್ಲಿ ಒಂದು Expl. ಪೋಸ್ಟಾಫೀಸೂ, “ಸರಸ್ವತೀವಿಲಾಸ ರೀಡಿಂಗ್ ರೂಂ” ಎಂಬ ಒಂದು ವಾಚಕಾಲಯವೂ ಸಹ ಕಳೆದ 1918 ನೇ ಇಸವಿ ಸೆಪ್ಟಂಬರ್ ಮಾಹೆ ಗುರ್ರೇ ಲಾಗಾಯ್ತು ಸ್ಥಾಪಿಸಲ್ಪಟ್ಟು, ದಿನೇದಿನೇ ಅನ್ಯೋನ್ಯವಾಗಿ ಅಭಿವೃದ್ಧಿಯನ್ನು ಪಡೆಯುತ್ತವೆ. ಇನ್ನಿನ ಪ್ರೋಗ್ರೆಸ್ಸಿಗೆ ತಕ್ಕಂತೆ ಈ ಪೋಸ್ಟಾಫೀಸನ್ನು ನಮ್ಮ ಘನ ಸರಕಾರದವರು ದಯವಿಟ್ಟು ಇದೇ ರೀತಿ ನಿರಂತರವಾಗಿ ನಡೆಯುವಂತೆ ಮಾಡಿಸಿಕೊಟ್ಟ ಪಕ್ಷದಲ್ಲಿ ಈ ಗ್ರಾಮದ ಸುತ್ತುಮುತ್ತಲಿಯ 35 ಗ್ರಾಮಗಳಿಗೂ ತುಂಬಾ ಸಹಾಯವನ್ನು ಕಲ್ಪಿಸಿಕೊಟ್ಟಂತಾಗುವುದರಲ್ಲಿ ಸಂದೇಹವಿಲ್ಲ. ಈ ರೀಡಿಂಗ್ ರೂಮಿಗೆ ದೈನಂದಿನಪತ್ರಿಕೆಗಳೂ ಸೇರಿ 18 ಸಮಾಚಾರಪತ್ರಿಕೆಗಳು ಬರುತ್ತಲಿವೆ. ಇವುಗಳಿಗೆಲ್ಲಾ ಮೂಲಭೂತವಾದ ಇಲ್ಲಿನ ಪೋಸ್ಟಾಫೀಸನ್ನು ನಮ್ಮ ಘನತೊಂದಿದ ಸರಕಾರದವರು ಖಾಯಂಮಾಡಿಸಿಕೊಟ್ಟು ಉಪಕರಿಸುತ್ತಾರೆಂದು ನಂಬಿದ್ದೇನೆ.

ಗ್ರಾಮನಿವಾಸಿ.

ರೇಷ್ಮೆ ಕಸಬು.

ಸ್ವಾಮಿ! ನಾನು ಕಳೆದ 23 ನೇ ತಾ॥ ದಿನ ಮೈಸೂರಿನಲ್ಲಿರುವ ರೇಷ್ಮೆ ಸ್ಕೂಲನ್ನು ನೋಡಿದೆನು. ರೇಷ್ಮೆ ಇಲಾಖೆಯವರು ಈ ಕಸಬಿನ ಅಭಿವೃದ್ಧಿಗಾಗಿ ಮಾಡುತ್ತಲಿರುವ ಏರ್ಪಾಡುಗಳೆಲ್ಲಾ ಅತ್ಯಂತ ಶ್ಲಾಘ್ಯವಾಗಿರುವವು. ಅನೇಕ ಘೋಷಾಸ್ತ್ರೀಯರು ಈ ಕಸಬನ್ನು ಮಾಡುತ್ತಲಿದ್ದು, ಕಾರಣಾಂತರಗಳಿಂದ ಬಿಟ್ಟುಬಿಟ್ಟಿರುವುದನ್ನು ನೋಡಿ ಅದನ್ನು ಪುನಃ ಅಭ್ಯಾಸಪಡಿಸುವದಕ್ಕಾಗಿ ಘನವನ್ನು ಹೊಂದಿದ ನಮ್ಮ ಸರಕಾರದವರು ಈ ಪಾಠಶಾಲೆಯಲ್ಲಿ ಕೆಲವು ಸ್ತ್ರೀಯರುಗಳಿಗೆ ಕಸಬಿನ ವಿದ್ಯೆಯನ್ನು ಹೇಳಿಕೊಡುತ್ತಲಿರುವುದು ಸ್ತೋತ್ರಾರ್ಹವೇ ಸರಿ. ನಾನು ಹೋಗಿದ್ದಾಗ ಸದರೀ ಸ್ತ್ರೀಯರುಗಳು ಮಾಡುತ್ತಿದ್ದ ಹಿಪ್ಪಲೆ ನೇರಳೆಯ ತೋಟವೂ, ಹುಳುಸಾಕುವ ಮನೆಯೂ, ಸ್ತ್ರೀಯರು ಕೆಲಸಮಾಡುವ ಉತ್ಸಾಹವೂ, ನೋಡುವುದಕ್ಕೆ ಆನಂದವಾಗಿತ್ತು. ಸೂಕ್ಷ್ಮದರ್ಶಕಯಂತ್ರವನ್ನೂ ಅದರ ಉಪಯೋಗವನ್ನೂ ನೋಡಿದೆನು. ಸ್ಕೂಲಿನ ಪ್ರಿನ್ಸಿಪಾಲರಾದ ಮಾ॥ ಅಪ್ಪಾದೊರೆಯವರು ಕಾಶ್ಮೀರಕ್ಕೆ ಹೋಗಿದ್ದಾಗ, ಅಲ್ಲಿ ಅವರೇ ತಯಾರುಮಾಡಿದ ರೇಷ್ಮೆಯನೂಲು ಅಂದವಾಗಿತ್ತು. ಹಿಪ್ಪಲೆ ನೇರಳೆಯ ತೋಟದಲ್ಲಿ ಅನೇಕ ಪಂಚಮ ವಿದ್ಯಾರ್ಥಿಯರೂ ವಿದ್ಯಾರ್ಥಿನಿಯರೂ ಅತ್ಯಾದರದಿಂದ ಕೆಲಸಮಾಡುತಲಿದ್ದರು. ಈ ಕಸಬನ್ನು ಇವರು ಮಾಡಿದಲ್ಲಿ ಲಾಭಕರವಾಗುವುದರಲ್ಲಿ ಸಂಶಯವಿಲ್ಲ. ಸ್ಕೂಲಿನಲ್ಲಿರುವ ಮ್ಯೂಸಿಯಂ ಇನ್ನೂ ಅನೇಕ ಬದಲಾವಣೆಗಳಿಗೆ ಅರ್ಹವಾಗಿದೆ. ಕಾಶ್ಮೀರದಿಂದ ತಂದಿದ್ದ ಛಾಯಾಚಿತ್ರಗಳನ್ನು ನೋಡಿದಲ್ಲಿ ಕಸಬಿನ ಪ್ರಾಮುಖ್ಯತೆಯು ವಿಶದವಾಗಿ ಕಂಡುಬರುವುದು. ಈ ವ್ಯವಸಾಯವು ಅಭಿವೃದ್ಧಿಗೆ ಬರಲು ಈ ಇಲಾಖೆಯ ಸೂಪರಿಂಟೆಂಡೆಂಟರವರಾದ ಮ॥ ಎನ್. ರಾಮರಾಯರವರು ಕಷ್ಟಪಡುತ್ತಿರುವುದೂ, ಈ ಕಸಬಿನ ಪ್ರಾಮುಖ್ಯತೆಯು ಹೆಚ್ಚಾಗುವುದಕ್ಕೆ ಪ್ರಯತ್ನಪಡುವುದೂ ಸ್ಪಷ್ಟವಾಗಿ ತಿಳಿಯುವುದು. ಆದುದರಿಂದ ನಮ್ಮ ಸಹೋದರಿಯರಾದ ಎಲ್ಲಾ ಸ್ತ್ರೀಯರಿಗೂ ಅಲ್ಲದೆ, ಮುಖ್ಯವಾಗಿ ಘೋಷಾಸ್ತ್ರೀಯರಿಗಾಗಿ ಈ ಇಲಾಖೆಯವರು ಅನೇಕ ಸಲಕರಣೆಗಳನ್ನೂ, ವಿಧವಿಧ ಸಹಾಯವನ್ನು ಕೊಡುತ್ತಿರುವ ಸಮಯವನ್ನು ಬಿಡದೆ, ಈ ಲಾಭಕರವಾದ ಕಸಬನ್ನು ಅಂಗೀಕರಿಸಬೇಕೆಂದು ಕೋರುವ,

ಮಿಸೆಸ್. ಟಿ. ಯನ್. ವಿಜಾರ್ ನೈಜಾಮುದ್ದಿನ್ ಅಲ್ಲಿಖಾನ್.

ಬೀರೂರಿನ 9 ನೇ ಶ್ರೀಮದ್ವೀರಶೈವ ಮಹಾಸಭೆಯ ಚಾಲಕರು ಮಲಗಿರುವರೆ?

8 ನೆ ಮಹಾಸಭೆಯಲ್ಲಿ ಹೆಚ್ಚಿನ ಕಾರ್ಯವೇನೂ ಜರುಗದೆ ಮಹಾಸಭಾ ಚಿರಸ್ಥಾಯಿಫಂಡು ಒಂದು ನಿರ್ಮಾಣವಾಗಿ ಮಹಾಸಭೆಗಳು ಕ್ರಮವಾಗಿ ನಡೆಯಲು ಮಾರ್ಗವೊದಗಿ ಸಮಾಜದೇಳಿಗೆಗೆ ಮುಖ್ಯಕಾರಣವಾಗಿ ಪರಿಣಮಿಸಿರುವ ವಿಷಯವು ಸರ್ವರಿಗೂ ತಿಳಿದ ಅಂಶವೇ ಆಗಿದೆ. ಈ 9 ನೆಯ ಸಭೆಯಲ್ಲಾದರೋ ಇಂದಿನ ಯಾವ ಸಭೆಯಲ್ಲೂ ನಡೆಯದ ಅತ್ಯಂತ ಮುಖ್ಯ ವಿಷಯಗಳು ನಡೆಯಬೇಕಾಗಿರುವವು. ನಮ್ಮ ಮಹಾಸಭೆಯು ಯಾವುದೊಂದು ಕ್ರಮವನ್ನು ಅನುಸರಿಸದೆ ನಡೆಯುತ್ತಿರುವುದನ್ನು ತಪ್ಪಿಸಿ ನ್ಯಾಷನಲ್ ಕಾಂಗ್ರೆಸ್ ವಗೈರೆ ಮಹಾಸಭೆಗಳು ಯಾವ ಕ್ರಮದಿಂದ ನಡೆದು ದೇಶದ ಏಳಿಗೆಗೆ ಮುಖ್ಯ ಕಾರಣವಾಗಿವೆಯೋ ಹಾಗೆ ಈ ನಮ್ಮ ಸಭೆಯೂ ಒಂದು ಕ್ರಮದಿಂದ ನಡೆಯುತ್ತಾ ನಮ್ಮ ಸಮಾಜದೇಳಿಗೆಗೆ ಮುಖ್ಯ ಕಾರಣವಾಗುವರೀತಿ ತಕ್ಕ ನಿಯಮಗಳನ್ನು ಏರ್ಪಡಿಸುವುದು, 8 ನೆ ಸಭೆಯಲ್ಲಾದ ಚಿರಸ್ಥಾಯಿ ಫಂಡಿನ ಸಂಬಂಧವಾದ ನಿಯಮರಚನೆ, ವೀರಶೈವಮತ ಗ್ರಂಥಶೋಧನೆ ಮತ್ತು ಒಂದು ಪುಸ್ತಕಭಂಡಾರದ ಅವಶ್ಯಕತೆ, ಕೈಲಾಸವಾಸಿ ಶಿರಸಂಗಿ ದೇಸಾಯರವರ ಫಂಡಿನ ಹಣದಲ್ಲಿ ಯಾವಯಾವ ಭಾಗದ ವೀರಶೈವ ವಿದ್ಯಾರ್ಥಿಗಳಿಗೆ ಎಷ್ಟೆಷ್ಟು ಸಹಾಯದೊರೆಯುವುದೆಂಬುದನ್ನು ನಿರ್ಧರಿಸುವುದು. ಇವೇ ಮುಂತಾದ ಅನೇಕ ಮುಖ್ಯ ವಿಚಾರಗಳು ಈ 9 ನೆ ಮಹಾಸಭೆಯಲ್ಲಿ ಚರ್ಚಿತವಾಗಿ ನಿರ್ಧಾರಗಳು ಮಾಡಲ್ಪಟ್ಟು ಜಾರಿಗೆ ತರಬೇಕಾದವುಗಳಾಗಿರುತ್ತವೆ. ಬೀರೂರಿನ ಮಹಾಜನಗಳು 9 ನೆ ಮಹಾಸಭಾಕಾರ್ಯವನ್ನು ತಾವು ಕೈಕೊಳ್ಳುವುದಾಗಿ 8 ನೆ ಸಭೆ ನಡೆಯುವಾಗಲೇ ಒಪ್ಪಿಕೊಳ್ಳುವಲ್ಲಿ ಎಷ್ಟು ಉತ್ಸುಕರಾಗಿದ್ದರೆಂಬುದನ್ನು ಇಲ್ಲಿ ಬರೆಯುವದು ಅನಾವಶ್ಯಕ. ಇವರು ಕಳೆದ ಡಿಸೆಂಬರು ತಿಂಗಳಲ್ಲಿಯೇ ಈ ಮುಂಚೆ ಪ್ರಸಿದ್ಧಿಪಡಿಸಿದ ಮೇರೆಗೆ ನಡಿಸಬೇಕಾಗಿತ್ತು. ಆದರೆ ಇವರು ಈ ಸಭಾಕಾರ್ಯವನ್ನು ಮುಂದಕ್ಕೆ ಹಾಕಿದುದೇ ಅಸಮಾಧಾನಕರವು. ಇವರು ಇನ್‌ಫ್ಲುಯಂಜಾ ಮತ್ತು ಕ್ಷಾಮಗಳಿಗೆ ಒದಗಿಸಿದ ಕ್ಷಾಮಭೀತಿಯ ಕಾರಣವನ್ನ ಸೂಚಿಸಿರುವದು ಸಮಂಜಸವಾದುದೆಂತಲೇ ಒಪ್ಪಿಕೊಳ್ಳೋಣ. ಇವರು 9 ನೆ ಸಭೆಯನ್ನು ಮುಂದೆ ಯಾವಾಗ ನಡಿಸುವರು, ಸ್ಟಾಂಡಿಂಗ್ ಕಮಿಟಿಯವರು ಚಿರಸ್ಥಾಯಿಫಂಡ್ ಪ್ರೆಸಿಡೆಂಟರು ಸಹ ಈ ವಿಚಾರವಾಗಿ ತಮ್ಮ ಯಾವ ಅಭಿಪ್ರಾಯವನ್ನು ಸೂಚಿಸಿರುವರು, ಎಂಬ ವಿಷಯವನ್ನು ಈವರೆಗೂ ಪ್ರಸಿದ್ಧಿಪಡಿಸದಿರುವದು ವಿಷಾದಕರವು. ಮಹಾಸಭೆಯನ್ನು ನಡೆಸುವಕಾಲಕ್ಕೆ ಸಾಕಾದಷ್ಟು ದಿವಸ ಮುಂಚಿತವಾಗಿ ಸಭಾಕಾರ್ಯಕ್ರಮವನ್ನು ಮಾಡಿದಲ್ಲಿ ಸಭೆಯ ಪ್ರೆಸಿಡೆಂಟರಾಗಲು ವಿಭಾಗರ ಪತ್ರದಲ್ಲಿ ನಮ್ಮ ಬಾಂಧವರು ಸೂಚಿಸಿರುವ ಯೋಗ್ಯತೆಯವರನ್ನು ಚುನಾಯಿಸಲು ಸಭೆಯ ಚಾಲಕರಿಗೆ ಅವಕಾಶಸಿಕ್ಕುವುದಲ್ಲದೆ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ಸಭೆಗೆ ಬರತಕ್ಕ ಪ್ರತಿನಿಧಿಗಳು ಸರಿಯಾಗಿ ಚರ್ಚೆ ನಡಿಸಿ ತಕ್ಕ ನಿರ್ಧಾರಗಳನ್ನ ಮಾಡಿ ಸಿದ್ಧರಾಗಲು ಅವಕಾಶವೂ ಸಿಕ್ಕಿ ಮತದ ಏಳಿಗೆಗೆ ಸಹಾಯವಾಗುವದು. ನಮ್ಮ ಭರತಖಂಡದಲ್ಲಿನ ಇತರ ಜನಾಂಗದವರು ರಾಜಕೀಯ ವಿಚಾರಗಳಲ್ಲಿ ಪ್ರವೇಶಿಸಿ ಚರ್ಚೆಗಳನ್ನು ನಡೆಸುತ್ತಾ ಕೇವಲ ಮುಂದುವರಿಯುತ್ತಿರುವ ಈ ಕಾಲದಲ್ಲಿ ವೀರಶೈವರಾದ ನಾವು ನಮ್ಮ ಸುಧಾರಣೆಗೆ ತಕ್ಕ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕಾದರೂ ಕೂಡ ಇಷ್ಟು ತಾಮಸವಾಗಿ ಪ್ರಯತ್ನಪಡುವದು ಮುಂದುವರಿಯುವದರಲ್ಲಿ ನಮಗಿರುವ ಉತ್ಸುಕತೆಯನ್ನು ಹೊರಗೆಡಹದೆ ಇರಲಾರದು. 9 ನೇ ಸಭೆಯಲ್ಲಿ ಅನೇಕ ಮಹತ್ವದ ವಿಷಯಗಳನ್ನು ನಡಿಸಬೇಕಾಗಿರುವುದರಿಂದ ಯೋಗ್ಯರಾದ ಸಭಾನಾಯಕರನ್ನು ಗೊತ್ತುಮಾಡಿ ಸಭೆಯು ಯಾವಾಗ ನಡೆಯುವುದೆಂಬುದನ್ನು ಬೀರೂರಿನ ಈ ಸಭಾ ಚಾಲಕರು ಕ್ಷಿಪ್ರದಲ್ಲಿಯೇ ಪ್ರಸಿದ್ಧಿಪಡಿಸಿ ಸರ್ವರಿಗೂ ಆನಂದವನ್ನುಂಟುಮಾಡುವರೆಂದು ನಂಬುವೆನು.

ಓರ್ವ ಮಹಾಸಭಾಕಾಂಕ್ಷಿ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಕಡಿದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಫ್ರಾಣಿ ಅಂಡ್ ಕೊ,
5 ಸಾಹುಕಾರಪೇಟೆ, ಮದರಾಸ್.

ಸಕಲ ವೀರಶೈವರಿಗೂ ಪೂಜಾರ್ಹವಾದದ್ದು 4

ಎಡೆಯೂರು ತೋಂಟದಾರ್ಯರ ಫೋಟೋ. ನಂಬಣ್ಣ, ನಂಬಮ್ಮ. ಕಂಪಳಿ ಸ್ವಾಮಿಗಳ ಸಮೇತ. ಡಜನ್ 1 ಕ್ಕೆ 0 12—0. 100 ಕ್ಕೆ 5—0—0. ಮತ್ತು ನಮ್ಮಲ್ಲಿ ರಖಂವಾರು ಫೋಟೋಗಳು ದೊರೆಯುತ್ತೆ.

ಹೆಚ್. ಜಿ. ಮಹದೇವಪ್ಪ,
ಫೋಟೋಗ್ರಾಫರ್,
ಎಡತೊರೆ, ಮೈಸೂರು ಡಿ॥.

ಡಿ. ನಂಜುಂಡಯ್ಯ,
ಚೀಣಿಜವಳಿ ಅಂಗಡಿ,
ನಂಜನಗೂಡು, ಮೈಸೂರು ಡಿ॥.

ಯುದ್ಧದ ಫೋಟೋಗಳು. 12

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯಿತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಖಂವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ.

ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಬೀದಿ, ಮದರಾಸ್.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೇರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

೨ ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

5 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 12

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪರಿಶಿಷ್ಟನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೋತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂಬ ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚಾಗಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 5

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪುಂ, ಮುಟಕು, ಭಗಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ, ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುಪಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ. ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬಂದಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2.14.0. 25 ಕ್ಕೆ 5.5.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ .
13 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮಾರ್ಚಿ ತಾ॥ ೯ ರಿಂದ ೧೯೧೯ ನೆಯ ಮಾರ್ಚಿ ತಾ॥ ೧೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿ ನಾಮಸಂವತ್ಸರದ ಫಾಲ್ಗುಣ ಶು॥ ಅಷ್ಟಮಿಯಿಂದ ಫಾ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಆಂ ಮಾಸ
9	[1]ಭಾನು	ಅಷ್ಟಮಿ	42-2	ರೋಹಿ	7.44	26
10	ಸೋಮ	ನವಮಿ	38-15	ಮೃಗಶಿ	4.36	27
11	ಮಂಗಳ	ದಶಮಿ	34.39	ಆರಿದ್ರಾ	2.15	28
12	[2]ಬುಧ	ಏಕಾದ	32-7	ಪುನ	0.48	29
13	[3]ಗುರು	ದ್ವಾದಶಿ	30-36	ಪುಷ್ಯ	0.21	30
14	ಶುಕ್ರ	ತ್ರಯೋ	30-16	ಆಶ್ಲೇ	1.8	1
15	[4]ಶನಿ	ಚತು	31-27	ಮಖಾ	3.7	2

(1) ತಿರುಕ್ಕಚ್ಚಿನಂಬೀ ತಿರುನಕ್ಷತ್ರಂ, ಶ್ರೀರಂಗದಲ್ಲಿ ಬ್ರಹ್ಮೋತ್ಸವಃ. (2) ಸರ್ವತ್ರೈಕಾದಶೀ, ನಂಜನಗೂಡಿನಲ್ಲಿ ಶ್ರೀಕಂಠಮುಡೀ ಉತ್ಸವಃ, ಪೆರಡೂರಿನಲ್ಲಿ ಉತ್ಸವಃ, ಜಯಲಕ್ಷ್ಮಮ್ಮಣ್ಣಿಯವರ ವರ್ಧಂತಿ. (3) ಮೇಲುಕೋಟೆಯಲ್ಲಿ ವೈರಮುಡೀ ಉತ್ಸವಃ, ಚಂದ್ರಪುರದ ಚಂದ್ರಮೌಳೀಶ್ವರಸ್ವಾಮಿ ರಥಃ. (4) ನಂಜನಗೂಡಿನಲ್ಲಿ ಶ್ರೀಕಂಠೇಶ್ವರಸ್ವಾಮಿ ಪಂಚರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರ್ಯಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಕೌಶಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಮಾರ್ಚಿ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೧೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 16

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಟೀಕ ಶತಕತ್ರಯ	೧—೦—೦
ಟೀಕ ವೀರಶೈವ ವಿವಾಹವಿಧಿ	೦—೮—೦
ವಪೂಜಾವಿಧಿ	೦—೧೦—೦
ರುಶೀಲಚರಿತ್ರೆ	೦—೫—೦
ಂದಾಸಿ	೦—೪—೦
ತಪಂಚಕ	೦—೨—೦
ಲವಿದ್ಯಾ (ಮುಕ್ತಿಸಾಧನ)	೦—೨—೦
ರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಜೊತೆಲು ಅಥವಾ ಅದರ ಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುತ್ತದೆ. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

3 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಷ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕೆಶಫಾ ಅಥವಾ ಆರೋಗ್ಯಬಿಂದು

ಈ ಅರ್ಕೇಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕೇಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಅದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದ್ದವ್ವನಬೇನೆ, ಹುರಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸತ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ಸಮೂನೆ ಉದ್ದೇಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಅದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಅದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಅದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು [illegible] ತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕೆಶಫಾ,
43 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು—ಜಪಾನ್ ಬೀಸಣಿಗೆ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4—8—0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
6 5. ಇರುಳಪ್ಪನ ಬೀದಿ, ಮದರಾಸ್.

ರಾ॥ ಬ॥ ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನವರ ಅದ್ಭುತ ವಿಷಯಗಳೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨ ಆಣೆ.

33 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮಾರ್ಚಿ ತಾ|| ೧೬ ನೆಯ ಭಾನುವಾರ.

ಪ್ರಭುತ್ವದ ಕರ್ತವ್ಯಲೋಪ.

ಬೆಂಗಳೂರಿನ ಟ್ರೂತ್ ಪತ್ರಿಕೆಯು ಪ್ರಭುತ್ವದವರ ಕಾರ್ಯಕಲಾಪದೊಳಗಿನ ಅನೇಕ ನ್ಯೂನಾತಿರೇಕಗಳನ್ನು ಎತ್ತಿ ತೋರಿಸಿ ಆಕ್ಷೇಪಿಸುವುದರಲ್ಲಿ ನಿಜವಾದ ನಿಷ್ಪಕ್ಷಪಾತವಾದ ದೇಶಾಭಿಮಾನವನ್ನು ವ್ಯಕ್ತಪಡಿಸುತ್ತಿರುವುದು ಪ್ರಶಂಸನೀಯವಾಗಿದೆ. ಆ ದೋಷಗಳ ಪಟ್ಟಿಯಲ್ಲಿ ಮೈಸೂರಿನ ಅಡ್ವೋಕೇಟ್ ಮ|| ಎ. ರಾಮಣ್ಣನವರಿಗೆ ೨೦ ಸಹಸ್ರ ರೂ. ಗಳನ್ನು ಸಾಲವಾಗಿ ಕೊಟ್ಟಿರುವುದು ಒಂದು ವಿಷಯವಾಗಿರುತ್ತದೆ. ಇವರು ಎಡತೊರೆ ತಾಲ್ಲೂಕು ಹೊಸ ಅಗ್ರಹಾರದ ಬಳಿಯಲ್ಲಿ ಒಂದು ಬತ್ತ ಕುಟ್ಟುವ ಯಂತ್ರಾಲಯವನ್ನು ಸ್ಥಾಪಿಸುವವರಾಗಿದ್ದಾರಂತೆ. ಅದಕ್ಕಾಗಿ ಪ್ರಭುತ್ವದವರು ಇವರಿಗೆ ಸುಲಭವಾದ ಬಡ್ಡಿಯಲ್ಲಿ ೨೦ ಸಹಸ್ರವನ್ನು ಕೊಡಲು ಅಪ್ಪಣೆ ಮಾಡಿದ್ದಾರಂತೆ. ಇದು ನಿಜವಾಗಿದ್ದರೆ ಸಂಪದಭ್ಯುದಯ ಪ್ರೋತ್ಸಾಹಪ್ರಯತ್ನಗಳ ರೂಪದಿಂದ ಗೌರ್ನಮೆಂಟಿನವರು ಎಷ್ಟು ಅನ್ಯಾಯವನ್ನು ನಡೆಯಿಸುತ್ತಿರುವರೆಂಬುದಕ್ಕೆ ಇದೊಂದು ದೊಡ್ಡ ದೃಷ್ಟಾಂತವೆಂದು ಹೇಳುವಲ್ಲಿ ಅಡ್ಡಿಯಿಲ್ಲ. ನಮ್ಮ ಗೌರ್ನಮೆಂಟಿನವರು ದೇಶದಲ್ಲಿ ಕೈಗಾರಿಕೆಗಳನ್ನೂ ಮತ್ತೂ ಯಂತ್ರಗಾರಿಕೆಗಳನ್ನೂ ಹೆಚ್ಚಿಸಿದಷ್ಟೂ ದೇಶದ ಸಂಪತ್ತು ವೃದ್ಧಿಯಾಗುವುದೆಂದು ಸಿದ್ಧಾಂತಪಡಿಸಿ, ಅವುಗಳ ಪ್ರೋತ್ಸಾಹಕ್ಕಾಗಿ ನಾನಾತರದ ಯತ್ನಗಳನ್ನು ಮಾಡುತ್ತಿರುವುದೇನೋ ವಿಹಿತವೇ ಸರಿ. ಆದರೆ ಅದನ್ನು ನೆರವೇರಿಸುವ ಸಂದರ್ಭದಲ್ಲಿ ಯುಕ್ತಾಯುಕ್ತ ವಿಮರ್ಶೆಯನ್ನು ಮಾಡದೆ ಸರ್ಕಾರದ ದುಡ್ಡನ್ನು ಚೆಲ್ಲುವುದು ಎಂದಿಗೂ ಉಚಿತವೆನಿಸಿಕೊಳ್ಳಲಾರದು. ಕೈಗಾರಿಕೆ ಮತ್ತೂ ಯಂತ್ರಗಾರಿಕೆಗಳ ಪ್ರತಿಸ್ಥಾಪನೆಗೆ ಅಥವಾ ಜೀರ್ಣೋದ್ಧಾರಕ್ಕೆ ಬಂಡವಾಳವನ್ನು ಒದಗಿಸಿಕೊಡುವುದು ಅವಶ್ಯಕವಾದರೂ ವಿಚಾರವು ಬೇಕು. ಮೊಟ್ಟಮೊದಲು ಪ್ರತಿಸ್ಥಾಪನೆಯ ಫಲಾಫಲಗಳ ಯೋಚನೆಯನ್ನು ಮಾಡಬೇಕು. ಬಳಿಕ ಸಾಲವನ್ನು ಪಡೆಯತಕ್ಕವರ ಅರ್ಹತೆಯನ್ನು ವಿಚಾರಿಸಬೇಕು. ಮ|| ರಾಮಣ್ಣನವರ ಸಂಬಂಧದಲ್ಲಿ ಇವೆರಡೂ ಸರಿಯಾಗಿ ನಡೆದಿರುವಂತೆ ಕಾಣುವುದಿಲ್ಲ. ಹೇಗೆಂದರೆ— ಇವರು ಸ್ಥಾಪಿಸಲಿಕ್ಕಿರುವುದು ಬತ್ತ ಕುಟ್ಟುವ ಯಂತ್ರವಾಗಿದೆ. ಈಗಣ ಸ್ಥಿತಿಯಲ್ಲಿ ಇದು ದೇಶಕ್ಕೆ ಹಿತಕರವಾಗಿಲ್ಲವೆಂದು ಗೊತ್ತಾಗಿರುವುದು. ಈಗ ರಾಜಧಾನಿಯಲ್ಲೂ ಈ ಡಿಸ್ಟ್ರಿಕ್ಟಿನ ಉಳಿದ ಕೆಲ ಕಡೆಯೂ ಸ್ಥಾಪಿತಗಳಾಗಿ ನಡೆಯುತ್ತಿರುವ ಬತ್ತದ ಯಂತ್ರಾಲಯಗಳಿಂದ ಉಂಟಾಗಿರುವ ಫಲವು ಸರ್ವರಿಗೂ ಗೊತ್ತಾಗಿದೆ. ಬಡಬಗ್ಗರು ಅಕ್ಕಿಯನ್ನವನ್ನು ತಿಂದು ಜೀವಿಸುವುದೇ ಕಷ್ಟವಾಗಿದೆ. ಈ ಯಂತ್ರಗಳಿಗೆ ಪ್ರತಿದಿನವೂ ಕೆಲಸವನ್ನು ಒದಗಿಸಬೇಕಾಗಿರುವುದರಿಂದ ಅವುಗಳ ಯಜಮಾನರು ಬತ್ತಕ್ಕೆ ಹೆಚ್ಚು ಬೆಲೆಯನ್ನಾದರೂ ಕೊಟ್ಟು ಕೊಂಡು ವಿಪರೀತವಾಗಿ ಶೇಖರಿಸಿ ಅಕ್ಕಿಯನ್ನು ಮಾಡಿ ತಗ್ಗಿನಬೆಲೆಯಿಂದ ಪರಸ್ಥಲಕ್ಕೋ ಪರದೇಶಗಳಿಗೋ ಸಾಗಿಸಿಬಿಡುತ್ತಿದ್ದಾರೆ. ಇದರಿಂದ ಆ ಯಂತ್ರಗಳ ಸ್ಥಾಪಕರಿಗೆ ಮಾತ್ರ ಲಾಭವೇ ಹೊರತು ದೇಶದಲ್ಲಿ ಕೊಂಡು ತಿನ್ನುವ ಮುಕ್ಕಾಲು ಮೂರುವೀಸಪಾಲು ಪ್ರಜೆಗಳಿಗೆಲ್ಲಾ ಫಲವೇನೂ ಇಲ್ಲ. ಅವರಿಗೆ ಕಷ್ಟವೇ ಹೆಚ್ಚಿರುವುದು. ಅಲ್ಲದೆ ಈ ಯಂತ್ರಗಳು ಹೆಚ್ಚಿದುದರಿಂದ ಮನೆಗೈಗಾರಿಕೆಯಾಗಿದ್ದ ಕೊಟ್ಟಣಗಳಕೆಲಸವೆಲ್ಲಾ ನಿಂತು ಅದರಿಂದ ಜೀವಿಸುತ್ತಿದ್ದ ಸಾವಿರಾರು ಕುಟುಂಬಗಳು ಜೀವನಕ್ಕೆ ತೊಂದರೆಪಡುವಂತಾಗಿರುವುದು. ಈಗಣ ಹೆಚ್ಚು ಬೆಲೆಯ ಕಾಲದಲ್ಲಿ ಮಿಲ್ಲುಗಳ ಉಪದ್ರವದಿಂದ ಸ್ಥಳಿಕ ಪ್ರಜೆಗಳಿಗೆ ಎಷ್ಟು ನಷ್ಟಕಷ್ಟಗಳು ಸಂಭವಿಸಿರುವುವೆಂಬುದನ್ನು ಪ್ರಭುತ್ವದವರೂ ತಿಳಿಯದೆ ಇಲ್ಲ. ಹೀಗಿರುವಾಗ್ಗೆ ಈಗಿರುವ ಯಂತ್ರಗಳ ಮೇಲೆ ಇನ್ನೂ ಬತ್ತದ ಯಂತ್ರಗಳನ್ನು ಹೆಚ್ಚಿಸುವುದರಿಂದ ಪೈಪೋಟಿಗಳು ಅವರವರಲ್ಲಿ ಮತ್ತಷ್ಟು ಹೆಚ್ಚುವುದಕ್ಕೆ ಅವಕಾಶವಾಗುವುದಲ್ಲದೆ ಅದರ ದುಷ್ಫಲವನ್ನು ಪ್ರಜೆಗಳು ಅನುಭವಿಸಬೇಕಾಗುವುದು. ಅಲ್ಲದೆ ಈ ಬತ್ತದ ಯಂತ್ರಾಲಯಗಳು ನೆಯ್ಗೆಯ ಯಂತ್ರಾಲಯ ಮೊದಲಾದುವುಗಳಂತೆ ಹೆಚ್ಚು ಕೂಲಿಗಾರರ ಜೀವನಕ್ಕೆ ಆಶ್ರಯವನ್ನೂ ಕೊಡತಕ್ಕುವಾಗಿಲ್ಲ. ಈಗ ಯಡತೊರೆಯಲ್ಲಿ ಬತ್ತದ ಯಂತ್ರಾಲಯವಿರುವುದರಿಂದ ರಾಜಧಾನಿಗೆ ಬರುವ ಬತ್ತವು ತಕ್ಕಮಟ್ಟಿಗೆ ಕಡಿಮೆಯಾಗಿರುತ್ತದೆ. ಇದರ ಮೇಲೆ ಯಡತೊರೆಗೆ ೯ ಮೈಲಿ ದೂರದಲ್ಲಿರುವ ಹೊಸ ಅಗ್ರಹಾರದಲ್ಲಿ ನೂತನ ಯಂತ್ರಾಲಯವನ್ನು ಸ್ಥಾಪಿಸಿದರೆ ಸಮೃದ್ಧವಾಗಿ ಬತ್ತವಾಗತಕ್ಕ ಎಡತೊರೆ ತಾಲ್ಲೂಕಿನ ಅಪಾರವಾದ ಬತ್ತವನ್ನೆಲ್ಲಾ ಅಲ್ಲೇ ತಡೆದುಕೊಂಡು, ಅಕ್ಕಿಮಾಡಿ, ಹೊಸದಾಗಿ ಏರ್ಪಟ್ಟಿರುವ ಮೈಸೂರು ಅರಸೀಕೆರೆ ಲೋಹಮಾರ್ಗದ ಮೂಲಕ ಸಂಸ್ಥಾನದ ಹೊರಕ್ಕೆ ಅಕ್ಕಿಯನ್ನು ಸಾಗಿಸಲು ಅವಕಾಶವಾಗುವುದಾದಕಾರಣ ರಾಜಧಾನಿಯ ಕಡೆಗೆ ಸಮೃದ್ಧವಾಗಿ ಬತ್ತ ಬರುವುದೂ ನಿಂತು ಹೋಗಬಹುದು. ಅದುಕಾರಣ ಈಗಿರುವ ಯಂತ್ರಾಲಯಗಳ ಮೇಲೆ ನೂತನ ಯಂತ್ರಾಲಯಸ್ಥಾಪನೆಗೆ ಅವಕಾಶ ಕೊಡುವುದು ಪ್ರಜೆಗಳಿಗೆ ಅನರ್ಥಕಾರಿಯೇಹೊರತು ಹಿತಕಾರಿಯಾಗಿಲ್ಲ. ಮ|| ಬಿಪಿನಚಂದ್ರಪಾಲರು ಮೊನ್ನೆತಾನೇ ಮದ್ರಾಸಿನಲ್ಲಿ ಪಾರಿಶ್ರಾಮಿಕವಿಷಯವಾಗಿ ಉಪನ್ಯಾಸಮಾಡುವಾಗ್ಗೆ-ಪಾಶ್ಚಿಮಾತ್ಯಪದ್ಧತಿಯನ್ನೇ ಅನುಸರಿಸಿ ನಾವು ಪರಿಶ್ರಮಾಭ್ಯುದಯವನ್ನು ಸಾಗಿಸಬಾರದು. ಯಾವ ಯಂತ್ರಗಾರಿಕೆಯಿಂದ ನಮ್ಮ ಮನೆ ಕೈಗಾರಿಕೆಗಳು ನಷ್ಟವಾಗಿ ಸಾಮಾನ್ಯಜನರ ಜೀವಿತಕ್ಕೆ ಭಂಗವೂ ನಮ್ಮ ಪುರಾತನ ಪರಿಶ್ರಮಕ್ಕೆ ಹಾನಿಯೂ ತಟ್ಟುವಂತಿರುವುದೋ ಅದಕ್ಕೆ ನಾವು ಪ್ರವೇಶಿಸಬಾರದು. ನಿಜವಾಗಿ ಅವಶ್ಯಕತೆಯಿದ್ದಮಟ್ಟಿಗೆ ನಾವು ಯಂತ್ರಗಾರಿಕೆಯನ್ನು ಪ್ರೋತ್ಸಾಹಿಸಬೇಕು. ನಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವುದನ್ನು ನಾವು ಮುಖ್ಯವಾಗಿ ಗಮನಿಸಬೇಕು. ಧನಿಕರುಗಳು ಮಾತ್ರ ಯಂತ್ರಾಲಯಗಳಿಂದ ಪುರೋವೃದ್ಧಿಗೊಂಡು ಸಾಮಾನ್ಯಪ್ರಜೆಗಳು ನಷ್ಟಪಡುತ್ತಿದ್ದರೆ ಅಂತಹದಕ್ಕೆ ಮನಸ್ಸುಕೊಡದೆ ಗ್ರಾಮಾಂತರದಲ್ಲಿರುವ ಪ್ರಜೆಗಳೇ ಮೊದಲಾದ ಸಾಮಾನ್ಯರ ಜೀವಿತಕ್ಕೆಲ್ಲಾ ಸಾಧಕವಾಗುವಂತೆ ನಾವು ಗೃಹಪರಿಶ್ರಮಗಳನ್ನೇ ಮುಖ್ಯವಾಗಿ ಪ್ರೋತ್ಸಾಹಿಸಬೇಕು" ಎಂದು ಹೇಳಿರುವುದನ್ನು ಗಮನಿಸಿದರೂ ಈ ನೂತನಪ್ರತಿಷ್ಠಾಪನೆಯು ಯುಕ್ತವಲ್ಲವೆಂದು ಸಿದ್ಧವಾಗುವುದು.

ಇದರಮೇಲೆ ಮ|| ರಾಮಣ್ಣನವರು ಈ ಕಾರ್ಯಕ್ಕಾಗಿ ಸರ್ಕಾರದಿಂದ ಸಾಲ ಕೇಳಿರುವುದೂ ಅದಕ್ಕೆ ಅವರು ಒಪ್ಪಿದುದೂ ಎರಡೂ ಕೂಡ ಒಂದಕ್ಕಿಂತ ಒಂದು ವಿಚಿತ್ರವಾಗಿರುವುವು. ಮ|| ರಾಮಣ್ಣನವರು ೧೦-೨೦ ಸಾವಿರವನ್ನು ಇತರರಿಗೆ ಸಾಲ ಕೊಡುವ ಸ್ಥಿತಿಯಲ್ಲಿರುವರೇ ಹೊರತು ಸಾಲಕ್ಕಾಗಿ ಪರರಿಗೆ ಕೈಯೊಡ್ಡುವವರಾಗಿಲ್ಲ. ಪರಿಶ್ರಮಾಭ್ಯುದಯದಲ್ಲಿ ಉತ್ಸಾಹವುಳ್ಳವರಾಗಿ ಬಂಡವಾಳಕ್ಕಾಗಿ ತಾಪತ್ರಯಪಡುತ್ತಿರುವವರಿಗೆ ಸುಲಭವಾದ ಬಡ್ಡಿಯಿಂದ ಸಾಲವನ್ನು ಕೊಡಿಸುವ ಕಾರ್ಯವನ್ನು ಪ್ರಭುತ್ವದವರು ಸರಿಯಾಗಿ ನಡೆಯಿಸುತ್ತಿದ್ದಾರೆಯೆ ಇಲ್ಲವೆ ಎಂಬುದನ್ನು ಗಮನಿಸಿ, ಅದರಲ್ಲಿ ನ್ಯೂನಾತಿರೇಕವು ಕಂಡುಬಂದರೆ ಖಂಡಿಸಬಲ್ಲ ಸ್ಥಿತಿಯಲ್ಲಿರುವ ರಾಮಣ್ಣನವರು "ಎಲ್ಲರಿಗೂ ಹೇಳುವ ಕೊತ್ತಿಯು ಎಡಕಲಿಗೆ ಹತ್ತಿತು" ಎಂಬ ಗಾಥೆಯಂತೆ ತಾವೇ ಆಕ್ಷೇಪಕ್ಕಾಸ್ಪದವಾದ ರೀತಿಯಲ್ಲಿ ನಡೆದುಕೊಂಡಿರುವುದು ಉಚಿತವಾಗಿರುವುದಿಲ್ಲ. ಪ್ರಭುತ್ವದವರು ಯಾವ ಯಾವ ಕಾರಣಕ್ಕೋ ಬದ್ಧರಾಗಿ ಇಂಥವರುಗಳಿಗೆ ಸಾಲವನ್ನು ಕೊಟ್ಟು ಪರಿಶ್ರಮಾಭ್ಯುದಯವನ್ನು ಮಾಡಿಸುತ್ತಿದ್ದೇವೆಂಬುದನ್ನು ಲೋಕಕ್ಕೆ ತೋರಿಸಬೇಕೆಂಬ ಉದ್ದೇಶವುಳ್ಳವರಾಗಿದ್ದರೆ, ಇಂಥ ಸಂಪದಭ್ಯುದಯ ಪ್ರಯತ್ನವು ನಾಮಾವಶೇಷವಾಗುವುದೇ ಒಳ್ಳೆಯದು. ಸಂಪದಭ್ಯುದಯ ಸಮಾಜಸಂಬಂಧದಲ್ಲಿ ನಿರರ್ಥವಾಗಿ ದುಂದಿನ ವೆಚ್ಚಗಳಾಗುತ್ತಿವೆಯೆಂದು ಈಗಲೇ ಸಂಸ್ಥಾನದಲ್ಲಿ ಅಪವಾದಗಳು ಹುಟ್ಟಿರುವಾಗ, ಗೌರ್ನಮೆಂಟಿನವರು ಅದಕ್ಕೆ ನಿದರ್ಶನವಾಗಿ ಹೀಗೆ ಪ್ರವರ್ತಿಸುವುದು ಸರಿಯಾಗಿಲ್ಲ. ಇನ್ನಾದರೂ ಗೌರ್ನಮೆಂಟಿನವರು ಈ ವಿಷಯದಲ್ಲಿ ಪುನರಾಲೋಚನೆ ಮಾಡದಿರಲಾರರೆಂದು ನಂಬುತ್ತೇವೆ.

ತಿರುವಾಂಕೂರು ಸಂಸ್ಥಾನದಲ್ಲಿ ನಿಮ್ನಜಾತಿಯವರ ಪುರೋವೃದ್ಧಿ.

ನಿಮ್ನಜಾತಿಯವರ ಉದ್ಧಾರಕ್ಕಾಗಿ ಮೈಸೂರುದೇಶದ ಹೊರಗೆ ಎಷ್ಟುಮಟ್ಟಿನ ಪ್ರೋತ್ಸಾಹಗಳು ಕಲ್ಪಿಸಲ್ಪಡುತ್ತಿವೆ, ಮುಂದಾದ ಜನರು ಅವರಲ್ಲಿ ಎಷ್ಟುಮಟ್ಟಿನ ಸಾನುಭೂತಿಯನ್ನು ತೋರಿಸುತ್ತಿದ್ದಾರೆ, ಅದರಿಂದಲೇ ಆ ಬಡಪಾಯಿಗಳು ಎಷ್ಟುಮಟ್ಟಿಗೆ ಮುಂಬರಿಯುತ್ತ ಬಂದಿದ್ದಾರೆ, ಎಂಬುದನ್ನು ತಿಳಿದುಕೊಂಡರೆ, ಮೈಸೂರುದೇಶದಲ್ಲಿ ಅವರ ಉದ್ಧಾರಯತ್ನವು ಇನ್ನು ಎಷ್ಟು ಪ್ರಬಲತರವಾಗಿ ನಡೆಯಬೇಕಾಗಿದೆಯೆಂಬುದು ಗೊತ್ತಾಗದೆ ಇರಲಾರದು. ತಿರುವಾಂಕೂರು ಸಂಸ್ಥಾನದ ಕಡೆ ಈ ನಿಮ್ನಜಾತಿ ಜನರು ಪುಲಯ ಎಂಬುದಾಗಿ ಕರೆಯಲ್ಪಡುತ್ತಾರೆ. ನಾವು ಇಲ್ಲಿ ಅವರನ್ನು ಹೊಲೆಯರೆಂದು ಹೇಳುತ್ತೇವೆ. ಈ ಜನರ ಮಹಾಸಭೆಯು ಕಳೆದ ತಾ|| ೮ ರಲ್ಲಿ ತಿರುವನಂತಪುರದೊಳಗೆ ಕೂಡಿದ್ದಿತು. ಅದಕ್ಕೆ ಆ ಸಂಸ್ಥಾನದ ದಿವಾನರಾದ ಮ|| ಕೃಷ್ಣನ್ನಾಯರ್‌ರವರು ಅಧ್ಯಕ್ಷರಾಗಿದ್ದರು. ಉತ್ತಮವರ್ಣದ ಅನೇಕಾನೇಕಾಧಿಕಾರಿಗಳೂ ವಕೀಲರುಗಳೂ ವರ್ತಕರೂ ಮೊದಲಾದ ಅನೇಕ ಜನರು ಸಭೆಗೆ ಬಂದು ಆ ನಿಮ್ನಜಾತಿ ಜನರ ಏಳ್ಗೆಯಲ್ಲಿ ತಮಗಿರುವ ಅಭಿಮಾನವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು ತಮ್ಮ ಉಪನ್ಯಾಸಾರಂಭಕಾಲದಲ್ಲಿ ಈ ಜನರುಗಳ ಸಭೆಯಲ್ಲಿ ಅಧ್ಯಕ್ಷತೆಯನ್ನು ನಾನು ವಹಿಸಿದುದಕ್ಕೆ ಇದು ನಾಲ್ಕನೆಯ ಸಲವೆಂದು ಹೇಳಿದುದಲ್ಲದೆ, ಈ ಜನರೊಡನೆ ಸರಾಗವಾಗಿ ಕೂಡಿ ಅವರ ವಾಂಛಿತಾರ್ಥಗಳೇನೆಂಬುದನ್ನು ತಿಳಿದುಕೊಳ್ಳುವುದಕ್ಕೆ ನನಗೆ ಅವಕಾಶವುಂಟಾಗುತ್ತಿರುವುದಕ್ಕಾಗಿ ಸಂತೋಷಿಸುತ್ತೇನೆಂದು ನುಡಿದರು. ಬಳಿಕ ತಿರುವಾಂಕೂರು ಸಂಸ್ಥಾನದಲ್ಲಿ ಪುಲಯಾ ಜನರು ಮೊದಲು ಎಷ್ಟು ಹೀನತರವಾಗಿ ಕಾಣಲ್ಪಡುತ್ತಲೂ ಎಷ್ಟು ನೀಚಸ್ಥಿತಿಯಲ್ಲಿ ನರಳುತ್ತಲೂ ಇದ್ದರೆಂಬುದನ್ನು ವರ್ಣಿಸಿ, ಪ್ರಕೃತದಲ್ಲಿ ಅವರ ಸ್ಥಿತಿಯು ಎಷ್ಟುಮಟ್ಟಿಗೆ ಸುಧಾರಿಸಿದೆಯೆಂಬುದನ್ನು ಕುರಿತು ಹೀಗೆ ಹೇಳಿದರು— "ಈ ಜನರು ಪೂರ್ವದಲ್ಲಿ ಬಲು ದರಿದ್ರರಾಗಿದ್ದರು. ವಿದ್ಯಾಗಂಧವೇ ಇರಲಿಲ್ಲ. ಪರರ ಭೂಮಿಗಳನ್ನು ಬೇಸಾಯಮಾಡುವುದೇ ಇವರ ಉದ್ಯೋಗವಾಗಿದ್ದಿತೇ ಹೊರತು ಸ್ವಂತ ಭೂಮಿಗಾರರಾಗಿರಲಿಲ್ಲ. ತಮ್ಮ ಪ್ರಜೆಗಳಲ್ಲಿ ಬಹುಭಾಗದವರಾಗಿರುವ ಈ ಜನರನ್ನು ಇಷ್ಟು ಜ್ಞಾನಶೂನ್ಯರನ್ನಾಗಿಟ್ಟಿರುವುದು ಸಂಸ್ಥಾನಕ್ಕೇ ನಷ್ಟವೆಂದೂ, ದೇಶದ ಸಕಲ ವರ್ಗದ ಪ್ರಜೆಗಳೂ ಒಂದೇ ತೆರನಾಗಿ ಸಂಪೂರ್ಣಾಭಿವೃದ್ಧಿಗೆ ಬಂದರೇನೆಯೇ ಸಂಸ್ಥಾನದ ಬಲವು ವೃದ್ಧಿಯಾಗುವುದೆಂದೂ ಸಹ ಪ್ರಭುತ್ವದವರು ಆಲೋಚಿಸಿ, ಇವರಿಗೆ ತಕ್ಕ ಪ್ರೋತ್ಸಾಹಗಳನ್ನು ಕೊಡುತ್ತ ಬಂದರು. ಈ ಜನರು ತಮ್ಮ ಸಹಾಯದಿಂದ ತಾವು ಮುಂದಕ್ಕೆ ಬಂದವರೇ ಅಲ್ಲ. ಇತರ ವರ್ಣಗಳವರ ನಾನಾಸಂಘಗಳವರ ಸಾನುಭೂತಿಯಿಂದಲೇ ಇವರು ಈಗ ಮುಂಬರಿಯುತ್ತಿದ್ದಾರೆ. ಸರ್ಕಾರದವರು ಇದುವರೆಗೆ ಈ ಪುಲಯಾಜನರಿಗೆ ೫೦೦೦ ಎಕರೆ ಭೂಮಿಯನ್ನು ಹಿಡುವಳಿಗೆ ಕೊಟ್ಟಿದ್ದಾರೆ. ಇವರ ಹುಡುಗ ಹುಡುಗಿಯರನೇಕರು ಪಾಠಶಾಲೆಗಳಿಗೆ ಹೋಗಿ ಓದುತ್ತಿದ್ದಾರೆ. ಈಗ್ಗೆ ೧೫ ವರ್ಷಗಳ ಕೆಳಗೆ ಈ ಜಾತಿಯ ಜನರನ್ನು ಸರ್ಕಾರಿ ಪಾಠಶಾಲೆಗಳಿಗೆ ಸೇರಿಸಿಕೊಳ್ಳುವರೆಂದು ಯಾರೊಬ್ಬರೂ ನೆನಸಿರಲಿಲ್ಲ. ಮೊಟ್ಟಮೊದಲು ಈ ಜಾತಿ ಹುಡುಗರನ್ನು ಪಾಠಶಾಲೆಗಳಿಗೆ ಸೇರಿಸಿದಾಗ ಪ್ರಬಲವಾದ ಆಕ್ಷೇಪಣೆಯು ಹುಟ್ಟಿತು. ಆದರೆ ಕ್ರಮಕ್ರಮವಾಗಿ ಅದೆಲ್ಲಾ ತಪ್ಪಿಹೋಯಿತು. ಈಗ ೧೦ ಸಾವಿರ ಮಂದಿ ಪುಲಯಾ ಬಾಲಬಾಲಿಕೆಯರು ಶಾಲೆಗಳಿಗೆ ಹೋಗಿ ಇತರ ವರ್ಣಗಳ ಬಾಲಬಾಲಿಕೆಯರೊಡನೆ ಕೂಡಿ ಓದುತ್ತಿದ್ದಾರೆ. ಈಗ ಈ ಜನರನೇಕರು ಭೂಸ್ವಾಮಿಗಳಾಗಿದ್ದಾರೆ. ಇವರ ಪ್ರಾಮುಖ್ಯವು ಹೆಚ್ಚುತ್ತಿದೆ. ಈ ಜನರ ಪ್ರತಿನಿಧಿಯು ಪ್ರಜಾಪ್ರತಿನಿಧಿಸಭೆಯಲ್ಲಿ ಉಳಿದ ಉತ್ತಮವರ್ಣಗಳ ಪ್ರತಿನಿಧಿಗಳಿಗೆ ಸಮಾನವಾದ "ಹಕ್ಕು" ಗಳನ್ನು ಪಡೆದು ಸುಖಿಗಳಾಗಿರುತ್ತಾರೆ" ಎಂದು ಹೇಳಿದರು. ಆ ಬಳಿಕ ಗೌರ್ನಮೆಂಟ್ ಮುಖ್ಯ ಕಾರ್ಯದರ್ಶಿಯಾದ ಮಿ|| ಮಹಾದೇವಯ್ಯರ್‌ರವರು ಪುಲಯಾ ಜನರಿಗೆ ಸರ್ಕಾರದವರು ಮಾಡುತ್ತಿರುವ ಸಹಾಯಗಳನ್ನೆಲ್ಲಾ ವಿವರಿಸಿ ಹೇಳಿದುದಲ್ಲದೆ, ಸರ್ವ ಪ್ರಜೆಗಳೂ ಈ ಜನರ ಪುರೋವೃದ್ಧಿಗೆ ಸಹಾಯಕರಾಗಿ ಸರ್ಕಾರಕ್ಕೆ ಒತ್ತಾಸೆಯಾದಲ್ಲದೆ ಪ್ರಭುತ್ವದವರ ಉದ್ದೇಶವು ಸಂಪೂರ್ಣ ಸಾರ್ಥಕವಾಗಲಾರದೆಂದೂ, ಎಲ್ಲರೂ ವೈಷಮ್ಯಮಾತ್ಸರ್ಯಗಳನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಅವರೊಡನೆ ಪ್ರೀತಿಯಿಂದ ನಡೆದು, ಅವರಲ್ಲಿ ಬಹುಕಾಲದಿಂದ ಅಂಟಿಬಂದಿರುವ ಅಶುಚಿ ದುರಾಚಾರ ದುರಾಹಾರ ಪದ್ಧತಿಗಳನ್ನೆಲ್ಲಾ ಬಿಡಿಸುವಂತೆ ಮಾಡಿ ಅವರನ್ನುದ್ಧರಿಸಬೇಕೆಂದೂ, ಹೇಳಿ ಇದುವರೆಗೂ ಪ್ರಜೆಗಳಲ್ಲಿ ಅನೇಕಾನೇಕರು ಆ ರೀತಿಯಲ್ಲಿ ಮಾಡುತ್ತಿರುವುದನ್ನು ಕೊಂಡಾಡಿದರು.

ಈ ತಿರುವಾಂಕೂರು ಸಂಸ್ಥಾನವು ಪೂರ್ವಾಚಾರ ಪರಾಯಣತೆಯಲ್ಲಿ ಹಿಂದೂ ಸಂಸ್ಥಾನಗಳೆಲ್ಲಕ್ಕಿಂತಲೂ ಮುಂದಾದುದೆಂದು ಚಿರಕಾಲದಿಂದ ಪ್ರಸಿದ್ಧವಾಗಿದೆ. ಮ|| ವಿ. ಪಿ. ಮಾಧವರಾಯರು ಅಲ್ಲಿಯ ಮಂತ್ರಿಗಳಾಗಿದ್ದಾಗ್ಗೆ ಪದ್ಮನಾಭ ದೇವಾಲಯಕ್ಕೆ ಅಂಗಿಯನ್ನು ತೊಟ್ಟುಕೊಂಡು ಹೋಗಿದ್ದರೆಂಬ ಕಾರಣದಿಂದ ಅಲ್ಲಿಯ ವೈದಿಕರು ಅವರಮೇಲೆ ಆಗ್ರಹಪಟ್ಟು ಎಷ್ಟೋ ಕೋಲಾಹಲವನ್ನೆಬ್ಬಿಸಿದರು. ಅಂತಹ ದೇಶದಲ್ಲಿ ಹೊಲೆಯ ಜನರ ವಿಷಯವಾಗಿ ಇಷ್ಟೊಂದು ಸಾನುಭೂತಿಪ್ರದರ್ಶನವೂ ಸುಧಾರಣೆಯೂ ೧೦-೨೦ ವರ್ಷ ಕಾಲದೊಳಗಾಗಿ ನಡೆದಿರುವುದನ್ನು ಕೇಳುವಲ್ಲಿ ನಮ್ಮ ಮೈಸೂರಿನ ದೇಶಾಭಿಮಾನಿಗಳು ನಾಚುಗೆಗೊಳ್ಳಬೇಕಾಗುವುದು. ಹೀಗಿರುತ್ತ ಸರ್ಕಾರದವರು ವಿವೇಕದಿಂದಲೂ ಪ್ರಗತಿಪರತೆಯಿಂದಲೂ ಇತರ ಸಂಸ್ಥಾನಗಳ ಮೇಲುಪಂಕ್ತಿಯನ್ನನುಸರಿಸಿ ನಿಮ್ನಜಾತಿಯವರನ್ನು ಮುಂದಕ್ಕೆ ತರುವುದಕ್ಕೆ ಎಷ್ಟೋ ಅಲ್ಪಸ್ವಲ್ಪ ಪ್ರಯತ್ನವನ್ನು ಮಾಡಿದಮಾತ್ರವೇ ಅದನ್ನೊಂದು ಪರ್ವತಗಾತ್ರದ ದೋಷವನ್ನಾಗಿ ಹೇಳಿ ಕೋಲಾಹಲಮಾಡುವವರ ನಾಗರಕತೆಯನ್ನೂ, ಸರ್ವಜನ ಸಹೋದರತೆಯನ್ನೂ, ದೇಶಾಭಿಮಾನವನ್ನೂ ಏನೆಂದು ಹೇಳಬಹುದು! ಶೃಂಗೇರಿಯ ಹಳೇಪೈಕದ ವಿದ್ಯಾರ್ಥಿಗಳು ಸರ್ಕಾರಿ ಪಾಠಶಾಲೆಗೆ ಸೇರಿದ ವಿಷಯವನ್ನು ಮಹಾಪರಾಧಕೃತ್ಯವನ್ನಾಗಿ ವರ್ಣಿಸಿ, ಈ ನೆಪದಿಂದ ಮ|| ರೆಡ್ಡಿಯವರಮೇಲೆ ಅಪವಾದದ ಮಳೆಗರೆಯಲಿಕ್ಕೆ ಹಿಂದುಮುಂದೆ ನೋಡದೆ ಕೂಪಕೂರ್ಮನ್ಯಾಯದ ಜನರಂತೆ ಪ್ರವರ್ತಿಸಿದ ಸಂಪದಭ್ಯುದಯದ ಕರ್ತರು ಮುಖ್ಯವಾಗಿ ಇದನ್ನು ಗಮನಿಸಬೇಕು. ಏಕೆಂದರೆ—ತಿರುವಾಂಕೂರು ಸಂಸ್ಥಾನದಲ್ಲೂ ಕೂಡ ಈ ಸಾಂಕರ್ಯದ ಏರ್ಪಾಟು ನಡೆದಿಲ್ಲವೆಂದು ಅವರು ಇದೇ ಸಂದರ್ಭದಲ್ಲಿ ಮೊನ್ನೆತಾನೇ ಹೇಳಿಕೊಂಡಿದ್ದರು. ನಮ್ಮ ದೇಶೀಯರು ನಿಮ್ನಜಾತಿ ಜನರಲ್ಲಿ ಆದರವನ್ನು ತೋರಿಸಿ ಅವರ ಪುರೋವೃದ್ಧಿಗೆ ನಿಜವಾದ ಸಾನುಭೂತಿಯುಳ್ಳವರಾಗಬೇಕು. ವೃತ್ತಪತ್ರಿಕಾ ಕರ್ತರುಗಳೂ ಪೌರಸಾಮಾಜಿಕ ಸಂಘದವರೂ ಅವರ ಪತ್ರಿಕೆಯೂ ಇಂಥ ವಿಷಯಗಳನ್ನು ಮುಚ್ಚಿಡದೆ ಪ್ರಕಟಿಸುತ್ತ ಬರುವವರಾಗಬೇಕು.

ಆನಿಬೆಸೆಂಟಮ್ಮನವರ ತೃತೀಯಾವಸ್ಥೆ.

ಆನಿಬೆಸೆಂಟಮ್ಮನವರು ಹಿಂದೆ ಜಿಡ್ಡು ನಾರಾಯಣಯ್ಯರವರ ವ್ಯಾಜ್ಯಕಾಲದಲ್ಲಿ ಭಾರತೀಯರಿಂದ ಶಪಿಸಲ್ಪಡುತ್ತಿದ್ದರು. ಆಬಳಿಕ ಅವರು ಸ್ವರಾಜ್ಯದ ಚಳವಳಿಯನ್ನು ಹಚ್ಚಿದುದರಿಂದ ಲೋಕಮಾತೆಯರೆಂದು ಹೊಗಳಿಸಿಕೊಳ್ಳುತ್ತ ಬಂದರು. ಆ ಸಂದರ್ಭದಲ್ಲೇ ಅವರು ಉಗ್ರಮತವಾದಿಗಳಾದ ಮ|| ತಿಲಕರೇ ಮೊದಲಾದವರನ್ನು ದೇಶೀಯ ಮಹಾಸಭೆಗೆ ಕಾಲಿಕ್ಕುವುದಕ್ಕೆ ದಾರಿಮಾಡಿಕೊಡಲು ಬಹಳ ಶ್ರಮಪಟ್ಟು ೨ ಪಕ್ಷದವರನ್ನೂ ಒಂದುಗೂಡಿಸಿದರು. ಆ ಹಿಂದಣ ೨ ಅವಸ್ಥೆಗಳೂ ಕಳೆದು ಈಗ ಅಮ್ಮನವರಿಗೆ ೩ನೆ ಅವಸ್ಥೆಯು ಪ್ರಾಪ್ತವಾಗಿದೆ. ಅತ್ಯುಗ್ರಪಕ್ಷದವರು ಈಗ ಇವರ ಮೇಲೆ ತಿರುಗಿಬಿದ್ದಿದ್ದಾರೆ. ಕಳೆದ ದಿಲ್ಲಿ ದೇಶೀಯ ಮಹಾಸಭೆಯು ಮುಗಿದೀಚೆಗೆ ಇದು ಪ್ರಾರಂಭವಾಗಿದೆ. ಮುಖ್ಯವಾಗಿ ಸಂಧಿ ಮಹಾಸಭೆಗೆ ದೇಶೀಯ ಮಹಾಸಭೆಯ ಪ್ರತಿನಿಧಿಯಾಗಿ ಮ|| ತಿಲಕರನ್ನು ಕಳುಹಿಸಬೇಕೆಂದು ಸಭೆಯ ಅನೇಕರು ಮಾಡಿದ ತೀರ್ಮಾನಕ್ಕೆ ಅಮ್ಮನವರು ಒಪ್ಪದೆಹೋದುದೇ ಈಗಣ ದ್ವೈವಿಧ್ಯಕ್ಕೆ ಕಾರಣವು. ತಿಲಕರ ಆಂಗ್ಲಭಾಷೆಯು ಚೆನ್ನಾಗಿಲ್ಲವೆಂದು ಅಮ್ಮನವರು ಮೇಲ್ಗಡೆಯಲ್ಲಿ ಹೇಳಿರುವರು. ಒಳಗೆ ಇನ್ನೇನು ಕಾರಣವಿರುವುದೋ ತಿಳಿಯಲಿಲ್ಲ. ಅಲ್ಲದೆ ಅಮ್ಮನವರಿಗೆ ಸ್ವಪ್ರತಿಷ್ಠಾಭಿಮಾನವು ಬಹಳ ಹೆಚ್ಚು. ಸೀಮೆಗೆ ತಾವೇ ಪ್ರತಿನಿಧಿಗಳಾಗಿ ಹೋಗಬೇಕೆಂಬುದೂ, ದೇಶೀಯ ಮಹಾಸಭೆಯ ಸ್ಥಾಯಿಸಂಘದ ಸೆಕ್ರೆಟರಿ ಪದವಿಯು ತಮಗೋ ಅಥವಾ ತಮ್ಮ ಕಡೆಯ ಇನ್ನಾರಿಗೋ ಇರಬೇಕೆಂಬುದೂ ಇವರ ಅಂತರುದ್ದೇಶವಾಗಿದ್ದಿತೆಂದೂ, ಅದು ನಡೆಯದೆಹೋದುದರಿಂದ ಇವರು ತಿರುಗಿಬಿದ್ದಿರುವರೆಂದೂ ಬಾಬು ಬಿಪಿನ ಚಂದ್ರಪಾಲರೇ ಮೊದಲಾದವರು ಹೇಳುತ್ತಿರುವರು. ವಯಸ್ಸು ಹೆಚ್ಚುತ್ತಬಂದ ವೃದ್ಧರಿಗೆ ಒಂದುತೆರದ ಆತ್ಮಪ್ರತಿಷ್ಠೆಯು ನಿಸರ್ಗವಾಗಿರುವುದುಂಟಷ್ಟೆ. ಅಂಥ ಅಭಿಮಾನವು ಈ ಅಮ್ಮನವರಲ್ಲಿ ವಿಶೇಷವಾಗಿರುವುದು. ಕಾಶೀ ವಿಶ್ವವಿದ್ಯಾಲಯ ಪ್ರತಿಷ್ಠಾಕಾಲದಲ್ಲಿ ಮ|| ಗಂಧಿಯವರನ್ನು ತುಂಬಿದ ಸಭೆಯಲ್ಲಿ ಅಮ್ಮನವರು ಮುಖಭಂಗಮಾಡಿದುದನ್ನು ದೇಶಭಕ್ತರುಗಳು ಇನ್ನೂ ಮರೆತಿರಲಾರರು. ಸ್ವರಾಜ್ಯ ಸಂಪಾದನ ಕೀರ್ತಿಪ್ರತಿಷ್ಠೆಗಳ ಅಗ್ರಮರ್ಯಾದೆಯು ತನಗೆ ದೊರೆಯಬೇಕೆಂಬುದೇ ಇವರ ಮಹಾಕಾಂಕ್ಷೆ. ಅದಕ್ಕೆ ಎಲ್ಲಿ ಭಂಗಬರುವುದೋ ಎಂದು ಶಂಕಿಸುತ್ತ ಅಡ್ಡಲಾಗಿ ಬಂದವರನ್ನು ರೋಷಾರುಣನೇತ್ರದಿಂದ ನೋಡುತ್ತಲಿರುವರು. ತಮ್ಮ ಪತ್ರಿಕೆಗಳಲ್ಲಿ ಅವರನ್ನೆಲ್ಲಾ ದ್ರೋಹಿಗಳೆಂದು ದೂಷಿಸುತ್ತಲೂ ಅವರ ಕೃತ್ಯಗಳಲ್ಲಿ ದೋಷವನ್ನು ಆರೋಪಿಸುತ್ತಲೂ ಇರುವರು. ಇದಿರುಪಕ್ಷದವರು ಸಹ ಅಮ್ಮನವರನ್ನು ಸುಮ್ಮನೆ ಬಿಟ್ಟಿಲ್ಲ. ಹಿಂದೂ, ಮರಾಟಾ ಮೊದಲಾದ ಪತ್ರಿಕೆಗಳಲ್ಲೂ ಸಭಾಮುಖಗಳಲ್ಲೂ ಪ್ರತಿಪ್ರಹಾರಗಳನ್ನು ಕೊಡುತ್ತಿರುವರು. ಇದರಿಂದ ಇತ್ತಂಡವು ಪ್ರಬಲಿಸುತ್ತಿರುವುದು. ಸ್ವರಾಜ್ಯಭಾರವನ್ನು ಹೊರುವ ಸಾಮರ್ಥ್ಯವು ನಮ್ಮಲ್ಲಿರುವುದೆಂದು ಹೇಳಿಕೊಳ್ಳುವ ದಿಗ್ದಂತಿಗಳೇ ಆತ್ಮಪ್ರತಿಷ್ಠೆಯನ್ನೇ ದೊಡ್ಡದನ್ನಾಗಿ ತಿಳಿದುಕೊಂಡು ಹೀಗೆ ಹೋರಾಡುತ್ತಿರುವುದು ಪರಿಹಾಸಾಸ್ಪದವಲ್ಲವೆ? ಇಷ್ಟುಮಟ್ಟಿಗಾದರೂ ಸ್ವಾರ್ಥತ್ಯಾಗವೂ ಉದಾರಚಿತ್ತವೂ ಇಲ್ಲದಿರುವವರ ಮುಂದಾಳುತನವುಳ್ಳ ದೇಶವು ಎಂಥ ಸೌಭಾಗ್ಯವನ್ನು ಪಡೆಯಬಹುದು! ಅಮ್ಮನವರು ಥಿಯೋಸಾಫಿಯ ಆಮುಷ್ಮಿಕವ್ಯಾಪಾರದಲ್ಲೇ ನಿಮಗ್ನರಾಗಿದ್ದರೆ ಈ ಕೋಟಲೆಗಳೊಂದೂ ಇಲ್ಲದೆ ಎಷ್ಟೋ ಸುಖಶಾಂತಿ ಗೌರವಗಳಿಂದ ಬಾಳಬಹುದಾಗಿದ್ದಿತು.

ಒಳದೇಶದ ವೃತ್ತಾಂತಗಳು.

ಪ್ರಜಾಪ್ರತಿನಿಧಿಸಭೆಯು ಬರುವ ಏಪ್ರಿಲ್ ತಾ|| ೨೮ ರಲ್ಲಿ ಆರಂಭಿಸಲ್ಪಡುವುದು.

ಬರುವ ತಾ|| ೨೨ ನೆ ದಿನ ರಾಜಧಾನಿಯಲ್ಲಿ ವಿಶ್ವವಿದ್ಯಾಲಯದ ಸಂಘಸಭೆಯು ಕೂಡುವುದು.

ಈ ದಿವಸ ಶ್ರೀಮನ್ಮಹಾರಾಜರವರು ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸುವವರಾಗಿದ್ದಾರೆ.

ಮೈಸೂರು ಮಹಾರಾಣೀ ಕಾಲೇಜಿಗೆ ಎಲ್ಲ ವರ್ಗದ ಬಾಲಿಕೆಯರೂ ಸೇರಿಸಿಕೊಳ್ಳಲ್ಪಡುವಂತೆ ಅಪ್ಪಣೆಯಾಗಿದೆ.

ನಿನ್ನೆಯದಿನ ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರನ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು. ರೋಗಾದ್ಯುಪದ್ರವಗಳೇನೂ ಇಲ್ಲದುದರಿಂದ ಯಾತ್ರಿಕರು ವಿಶೇಷವಾಗಿ ಸೇರಿದ್ದರು.

ಸರ್ಕಾರದವರು ಬಲಾತ್ಕಾರದಿಂದ ತೆಗೆದುಕೊಳ್ಳುವ ರಾಗಿಯ ಬೆಲೆಯು ಸಂಸ್ಥಾನದ ಎಲ್ಲ ಕಡೆಯೂ ೬೪೦ ಸೇರುಳ್ಳ ೧ ಗಾಡಿಯು ರಾಗಿಗೆ ೬೪ ರೂ. ಯೆಂದು ನಿರ್ಣಯಿಸಿದ್ದಾರೆ.

ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾದ ಮಿ|| ಎಚ್. ಕೇಂಬಲ್ ಐ. ಸಿ. ಎಸ್., ಸಿ. ಐ. ಇ. ಯವರ ಅಧಿಕಾರ ಕಾಲಾವಧಿಯು ಇನ್ನೊಂದು ವರ್ಷಕಾಲ ಹೆಚ್ಚಿಸಲ್ಪಟ್ಟಿರುವುದೆಂದು ಕೇಳುತ್ತೇವೆ.

ದೇವನಹಳ್ಳಿ ತಾ|| ಹುಣಸುಮಾರನಹಳ್ಳಿಯಲ್ಲಿರುವ ಶ್ರೀ ಚಂದ್ರಮೌಳೀಶ್ವರಸ್ವಾಮಿಯ ರಥೋತ್ಸವವು ಪದ್ಧತಿಯಂತೆ ಈ ವರ್ಷ ಈ ಫಾಲ್ಗುಣ ಶುದ್ಧ ೧೨ ಯಿಂದ ಬಹುಳ ೨ ಯವರೆಗೂ ನಡೆಯುವುದು. ಆ ಕಾಲದಲ್ಲಿ ಕೆಲ ವಟುಗಳಿಗೆ ಶಿವದೀಕ್ಷಾಸಂಸ್ಕಾರವೂ ನಡೆಯಿಸಲ್ಪಡುವುದು.

ಕಳೆದ ತಾ|| ೮ ರಲ್ಲಿ ಸರ್ ರವೀಂದ್ರನಾಥ ಠಾಕೂರ್‌ರವರು ಬೆಂಗಳೂರು ಮಿಥಿಕ್‌ಸೊಸೈಟಿ ಸಂಬಂಧದಲ್ಲಿ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಿಂದ ಒಂದು ಉಪನ್ಯಾಸವನ್ನು ಮಾಡಿ ಈಗ ಮದ್ರಾಸಿಗೆ ಹೋಗಿರುವರು. ಅಲ್ಲೂ ಅವರ ಕೆಲವುಪನ್ಯಾಸಗಳು ನಡೆದಿರುವುವು.

ಹರಿಹರದಲ್ಲಿ ನಡೆಯುವ ಶ್ರೀ ಸಂಗಮೇಶ್ವರನ ಜಾತ್ರೆಯ ಸಂಬಂಧವಾಗಿ ಈ ಮಾರ್ಚಿ ತಾ|| ೨೫-೨೬ ಮತ್ತು ೨೭ ರಲ್ಲಿ ದನಗಳ ಪ್ರದರ್ಶನವು ನಡೆಯುವುದು. ಇದರ ವಿಚಾರದಲ್ಲಿ ಹೆಚ್ಚು ವಿಷಯವನ್ನು ತಿಳಿಯಲಪೇಕ್ಷಿಸುವವರು ಹರಿಹರದ ಸಬ್ ತಾ|| ಡಿ|| ಅಮಲ್ದಾರರಿಗೆ ಬರೆದುಕೊಳ್ಳತಕ್ಕದ್ದು.

ಸಂಸ್ಥಾನದಲ್ಲಿರುವ ನಿಮ್ನಜಾತಿಯವರ ಅಭಿವೃದ್ಧಿಗಾಗಿ ಪ್ರತಿ ಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಸ್ಪೆಷಲ್ ಇನ್ಸ್‌ಪೆಕ್ಟರು (ಈ ಕೆಲಸದಲ್ಲಿ ಆಸಕ್ತಿಯುಳ್ಳವರು ಮಾತ್ರ ಈ ಉದ್ಯೋಗಕ್ಕೆ) ನಿಯಮಿಸಲ್ಪಡತಕ್ಕದೆಂದೂ, ಈಗಿರುವ ಸಂಚಾರಕೋಪನ್ಯಾಸಕರಿಗೆ ಕೊಡಲ್ಪಡುವ ಸಂಬಳವೂ ಅಲೋಯನ್ಸೂ ಈ ಇನ್ಸ್‌ಪೆಕ್ಟರುಗಳಿಗೆ ಸಲ್ಲತಕ್ಕದೆಂದೂ ಸರ್ಕಾರದ ಅಪ್ಪಣೆಯಾಗಿದೆ.

ಶೇಕದಾರಿ ಸ್ಕೂಲಿಗೆ ಸೇರತಕ್ಕವರು ಮೆಟ್ರಿಕ್ಯುಲೇಷನ್ ಅಥವಾ ಸ್ಕೂಲ್ ಫೈನಲ್ ಪರೀಕ್ಷೆಯನ್ನು ಕೊಟ್ಟಿರಬೇಕೆಂದು ವಿಧಾಯಕವಾಗಿರುತ್ತದೆ. ಆದರೆ ಹಿಂದುಳಿದ ಜನವರ್ಗದ ವಿದ್ಯಾರ್ಥಿಗಳು ಮಾತ್ರ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಮಾಡಿದ್ದರೆ ಸಾಕೆಂದೂ, ಈ ವಿದ್ಯಾರ್ಥಿಗಳಿಗಾಗಿ ಶೇಕದಾರಿ ಸ್ಕೂಲಿನಲ್ಲಿ ೨೫ ಸ್ಥಳಗಳು ಕಾದಿಡಲ್ಪಡಬೇಕೆಂದೂ ಸರ್ಕಾರದವರು ಈಚೆಗೆ ಅಪ್ಪಣೆಮಾಡಿರುತ್ತಾರೆ.

ಕಳೆದ ಮಂಗಳವಾರ ಮಧ್ಯಾಹ್ನದಲ್ಲಿ ರಾಜಧಾನಿಯ ವಸ್ತುಪ್ರದರ್ಶನಾಲಯದ ಮುಂಗಡೆಹಾಕಿದ್ದ ಬಿದಿರಿನ ಜೋಪಡಿಗಳಿಗೆ ಹೇಗೋ ಅಗ್ನಿಪ್ರವೇಶವಾಗಿ ಕೆಲವು ಸುಟ್ಟು ಭಸ್ಮವಾದುವು. ಇದರಿಂದ ವಿಶೇಷ ನಷ್ಟವೇನೂ ಆಗಲಿಲ್ಲವೆಂದು ಕೇಳುತ್ತೇವೆ. ಅಗ್ನಿಯ ಜ್ವಾಲೆಯು ಪ್ರದರ್ಶನದ ಕಟ್ಟಡಕ್ಕೆ ಮಾತ್ರ ವ್ಯಾಪಿಸಿದ್ದರೆ ಅಲ್ಲಿ ಯಥೇಚ್ಛವಾಗಿ ಶೇಖರಿಸಲ್ಪಟ್ಟಿರುವ ಅಕ್ಕಿರಾಗಿಗಳು ಸುಟ್ಟು ವಿಶೇಷ ನಷ್ಟವಾಗುತ್ತಿದ್ದಿತು.

ಸೀಮೆಯೆಣ್ಣೆಯ ಅಭಾವದಿಂದ ಎಲ್ಲೆಲ್ಲೂ ಜನರು ಪಡುತ್ತಿರುವ ಕಷ್ಟವು ಧಾನ್ಯಾಭಾವದ ಕಷ್ಟಕ್ಕಿಂತಲೂ ಮಿಗಿಲಾಗಿದೆ. ಏನುಕಾರಣ ಈ ಕಷ್ಟವುಂಟಾಗಿದೆ; ಅದು ಎಂದಿಗೆ ತಪ್ಪುವುದು ಎಂಬುದನ್ನು ಸರ್ಕಾರದವರೂ ಕೂಡ ಪ್ರಕಟಿಸಿಲ್ಲ. ಯುದ್ಧಕಾಲದಲ್ಲೂ ಈ ಯೆಣ್ಣೆಯ ತಾಪತ್ರಯವು ಇಷ್ಟುಮಟ್ಟಿಗಿರದೆ ಈಗ ಮಾತ್ರ ಉಂಟಾಗಿರುವುದು ಆಶ್ಚರ್ಯಕರವಾಗಿದೆ. ಕೆಲ ತಾಲ್ಲೂಕುಗಳಲ್ಲಿ ೧ ಸೀಸೆ ಎಣ್ಣೆಗೆ ೧ ರೂ. ವರೆಗೂ ಬೆಲೆಯಾಗಿದೆಯೆಂದು ಕೇಳುತ್ತೇವೆ. ಕೆಲ ಕಡೆ ಅದೂ ಸಿಕ್ಕುತ್ತಲಿಲ್ಲ.

ಕಳೆದ ತಾ|| ೧೪ ರಲ್ಲಿ ಬೆಳಗ್ಗೆ ಅರಸೀಕೆರೆಯಿಂದ ಹೊರಟ ಹೆಚ್ಚುಗಟ್ಟಲೆಯ ರೈಲ್ವೆ ಬಂಡಿಯು ಅರಸೀಕೆರೆಗೂ ಹಾರ್ನಹಳ್ಳಿ ರೋಡಿಗೂ ಮಧ್ಯೆ ಕಂಬಿಗಳನ್ನು ಬಿಟ್ಟು ಕೆಳಕ್ಕುರುಳಿತು. ಈ ಲೋಹಮಾರ್ಗವನ್ನು ಪರೀಕ್ಷಿಸುವುದಕ್ಕಾಗಿ ಇಂಡ್ಯಾ ಸರ್ಕಾರದ ರೈಲ್ವೆ ಇಂಜನಿಯರು, ನಮ್ಮ ಸರ್ಕಾರದ ರೈಲ್ವೆಯ ಇಂಜನಿಯರು ಮೊದಲಾದವರು ಅದರಲ್ಲೇ ಪ್ರಯಾಣ ಮಾಡುತ್ತಿದ್ದರು. ಆದರೆ ದೈವಾಧೀನದಿಂದ ಅಂತಹ ಅಪಾಯವೇನೂ ಯಾರಿಗೂ ಆಗಲಿಲ್ಲವೆಂದೂ ಬಂಡಿಗಳು ಮಾತ್ರ ನಷ್ಟವಾದುವೆಂದೂ ತಿಳಿಯಬಂದಿರುತ್ತದೆ. ಕೂಡಲೇ ಮಾರ್ಗವು ಸರಿಪಡಿಸಲ್ಪಟ್ಟು ಬಂಡಿಗಳು ಯಥಾಪ್ರಕಾರ ಓಡಾಡುತ್ತಲಿರುತ್ತವೆ.

ರಾಗಿ ಮೊದಲಾದ ಧಾನ್ಯಗಳ ಬೆಲೆಯು ಹೆಚ್ಚಿ ಆಹಾರದ ಸ್ಥಿತಿಯು ಬಹಳ ತೊಂದರೆಯಾಗಿರುವುದರಿಂದ ಕೆಲ ಗೊತ್ತಾದ ತಾಲ್ಲೂಕುಗಳಲ್ಲಿ ಗ್ರಾಮಾಭಿವೃದ್ಧಿ ಕೆಲಸಗಳಿಗಾಗಿ ಜನರಿಂದ ಹಣವನ್ನು ತೆಗೆದುಕೊಳ್ಳದೆ ಕಷ್ಟನಿವಾರಣಾರ್ಥವಾಗಿ ಗ್ರಾಮಾಭಿವೃದ್ಧಿಯ ಕೆಲಸಗಳು ತತ್‌ಕ್ಷಣದಲ್ಲೇ ಆರಂಭಿಸಲ್ಪಡಬೇಕಾಗಿರುವುದಾವಶ್ಯಕವಾಗಿರುವುದರಿಂದ ರೆವಿನ್ಯೂ ಕಮಿಷನರು ಯಾವ ತಾಲ್ಲೂಕುಗಳಲ್ಲಿ ಅಥವಾ ಅವುಗಳ ಭಾಗಗಳಲ್ಲಿ ಕಷ್ಟನಿವಾರಣಾಕಾರ್ಯಗಳು ಆರಂಭಿಸಲ್ಪಡಬೇಕಾಗಿರುವುವೆಂಬುವದನ್ನು ಬರೆದು ತಿಳಿಸಬೇಕಾಗಿ ಸರ್ಕಾರದಪ್ಪಣೆಯಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಳೆದ ಡಿಸೆಂಬರ್ ಕಡೆಯವರೆಗೆ ಗ್ರಾಮಸ್ಥರಿಂದ ಹಣವನ್ನು ತೆಗೆದುಕೊಳ್ಳದೆ ಗ್ರಾಮಾಭಿವೃದ್ಧಿಯ ಕೆಲಸಗಳು ಆರಂಭಿಸಲ್ಪಡಬೇಕಾಗಿ ಕಳೆದ ಡಿಸೆಂಬರ್ ತಿಂಗಳಲ್ಲೇ ಸರ್ಕಾರಿಯಪ್ಪಣೆಯಾಗಿದ್ದಿತು.

ಈ ದಕ್ಷಿಣದೇಶದ ವೀರಶೈವ ಮಂಡಲಿಯಲ್ಲಿ ಭಕ್ತಿಮಾರ್ಗಾಚರಣದಲ್ಲೂ ಸದ್ಬೋಧೆಯಲ್ಲೂ ಮಹತ್ತ್ವದಲ್ಲೂ ಅತ್ಯಂತ ಪ್ರಖ್ಯಾತರಾಗಿ ೧೨ ಸಾವಿರಕ್ಕೆ ಮೇಲ್ಪಟ್ಟ ಶಿಷ್ಯಮಂಡಲಿಯವರುಳ್ಳರಾಗಿದ್ದು ೩೦ ವರ್ಷಗಳ ಕೆಳಗೆ ಶಿವೈಕ್ಯರಾದ ಶ್ರೀ ಗುರುಮಲ್ಲಸ್ವಾಮಿಗಳ ಗದ್ದುಗೆಯು ನಂಜನಗೂಡು ತಾ|| ದೇವನೂರಿನಲ್ಲಿ ಅತಿ ಭವ್ಯವಾಗಿ ಭೂಕೈಲಾಸದಂತೆ ಅವರ ಶಿಷ್ಯಾವಳಿಯ ಸದ್ಭಕ್ತಿಯಿಂದ ಕಟ್ಟಿಸಲ್ಪಟ್ಟಿರುವುದು. ಅದರಮೇಲೆ ಭಂಗಾರದ ಕಲಶಸ್ಥಾಪನೆ ಮಾಡುವ ಕೆಲಸವು ಕಳೆದ ಬುಧವಾರ ಬಹು ವಿಜೃಂಭಣೆಯಿಂದ ಜರುಗಿತು. ಬಹುಶಃ ೧೫ ಸಹಸ್ರ ಜನರು ಸೇರಿದ್ದರು. ಆ ಕಾಲದಲ್ಲಿ ಅನೇಕ ವಟುಗಳಿಗೆ ದೀಕ್ಷಾಸಂಸ್ಕಾರವು ಜರುಗಿತು. ಮಾರುದಿನ ಗಣಾರಾಧನೆಯು ಜರುಗಿತು. ಇದಕ್ಕಾಗಿ ೨೦೦ಪಲ್ಲ ಅಕ್ಕಿಯ ಲವಾಜಮೆಯು ಶೇಖರಿಸಲ್ಪಟ್ಟಿದ್ದಿತೆಂದು ಕೇಳುತ್ತೇವೆ.

ಸರ್ಕಾರದವರು ಮೈಸೂರು ಸಂಸ್ಥಾನದಲ್ಲಿ ಸಿಸಲ್‌ಹೆಂಪ್ ಎಂಬ ನಾರಿನ ವ್ಯವಸಾಯವನ್ನು ಮಾಡಲು ಪ್ರೋತ್ಸಾಹವನ್ನು ಕೊಡುವ ಉದ್ದೇಶದಿಂದ, ಗೊತ್ತಾದಕಾರ್ಯಕ್ಕಾಗಿ ಕಾದಿಡಲ್ಪಡದಿರುವ ಮತ್ತು ಗ್ರಾಮಸ್ಥರ ಆಕ್ಷೇಪವೇನೂ ಇಲ್ಲದಿರುವ ಆಕಾರಕಾಣದ ಖರಾಬುಜಮೀನುಗಳನ್ನು ಆ ತಾಲ್ಲೂಕಿನ ಛಾರ್ಜಿನಲ್ಲಿರುವ ಅಸಿಸ್ಟೆಂಟ್‌ಕಮಿಷನರುಗಳು ಆ ಜಮೀನಿನಲ್ಲಿ ಇರುವ ಮರಗಳ ಖರೀದಿಯನ್ನಾಗಲಿ ಅಥವಾ ಮೂಲ್ಯವನ್ನಾಗಲಿ ಬರಮಾಡಿಕೊಂಡು ೫೦ ಎಕರೆವರೆಗೆ ಬೆಲೆಯಿಲ್ಲದೆ ಉಚಿತವಾಗಿ ಕೊಡಬಹುದೆಂದೂ, ಡಿ|| ಕಮಿಷನರು ೧೦೦ ಎಕರೆವರೆಗೆ ಕೊಡಬಹುದೆಂದೂ, ಆಕಾರಕೆಂದ ಅಥವಾ ಕ್ಲುಪ್ತವಾದ ಕೆಲಸಕ್ಕಾಗಿ ಕಾದಿಡಲ್ಪಟ್ಟ ಜಮೀನಾದರೆ ಡೆ|| ಕಮಿಷನರು ಆ ಜಮೀನನ್ನು ಕೊಡುವ ವಿಚಾರದಲ್ಲಿ ಆಕ್ಷೇಪವೇನೂ ಇರುವುದಿಲ್ಲವೆಂದು ತಮಗೆ ತೋರಿದಲ್ಲಿ ೫೦ ಎಕರೆವರೆಗೆ ಉಚಿತವಾಗಿ ಕೊಡಬಹುದೆಂದೂ ಸರ್ಕಾರದಪ್ಪಣೆಯಾಗಿದೆ.

ಕಳೆದ ತಾ|| ೩ ರಲ್ಲಿ ಬೆಂಗಳೂರು ಸೆಕ್ರೆಟೆರಿಯೇಟ್ ಭವನದಲ್ಲಿ ಮದ್ರಾಸಿನ ಸಿವಿಲ್ ಸಪ್ಲೈ ಡೈರೆಕ್ಟರೂ ನೀಲಗಿರಿ ಮಲಬಾರು ಜಿಲ್ಲಾ ಕಲೆಕ್ಟರುಗಳೂ ಬ್ರಿಟಿಷ್ ಅ|| ರೆಸಿಡೆಂಟರೂ, ಮೈಸೂರು ಜನರಲ್ ಗೌರ್ನಮೆಂಟ್ ಸೆಕ್ರೆಟರಿಯವರು, ಡೆ|| ಕಮಿಷನರು, ಸಿವಿಲ್‌ಸಪ್ಲೈ ಡೈರೆಕ್ಟರು ಮೊದಲಾದ ಅಧಿಕಾರಿಗಳೂ ಸೇರಿ ಉಭಯದೇಶಗಳೂ ಪರಸ್ಪರ ಆಹಾರ್ಯಸಾಮಗ್ರಿಗಳನ್ನು ಒದಗಿಸಿಕೊಳ್ಳಬೇಕಾದ ವಿಷಯವನ್ನು ಚರ್ಚಿಸಿದರೆಂದು ಕೇಳುತ್ತೇವೆ. ಮೈಸೂರಿನ ದಕ್ಷಿಣಪ್ರಾಂತದ ತಾಲ್ಲೂಕುಗಳಾದ ನೀಲಗಿರಿ ಮಲಬಾರುಗಳ ಕಡೆಗೆ ಸಾಗಿಸುತ್ತಿದ್ದ ಧಾನ್ಯಗಳನ್ನು ಕಟ್ಟುನಿಟ್ಟಾಗಿ ನಮ್ಮ ಸರ್ಕಾರದವರು ತಡೆದುಬಿಟ್ಟುದರಿಂದ ಅಲ್ಲಿಯವರಿಗೆ ತೊಂದರೆಯಾಗಿ, ಅದರಮೇಲೆ ಈ ಕೂಟವನ್ನು ಏರ್ಪಡಿಸಿ ಚರ್ಚಿಸಿದರೆಂದು ಕಾಣುತ್ತದೆ. ಇದರಿಂದ ಬಹುಶಃ ನಮ್ಮ ದೇಶದ ದಕ್ಷಿಣದಿಕ್ಕಿನಲ್ಲಿದ್ದ ನಿರ್ಬಂಧಗಳು ತಪ್ಪಿಹೋಗಬಹುದು. ಮದ್ರಾಸಿನ ಉತ್ತರದ ಜಿಲ್ಲೆಗಳಿಂದ ನಮ್ಮ ದೇಶಕ್ಕೆ ಅಕ್ಕಿಯು ತರಿಸಲ್ಪಡುತ್ತಿರುವುದರಿಂದ ನಾವೂ ಆ ಅಧಿಪತ್ಯದವರಿಗೆ ತಕ್ಕಷ್ಟನ್ನಾದರೂ ಧಾನ್ಯಗಳನ್ನು ಕೊಡದಿದ್ದರೆ ತೀರದು. ಅಂತೂ ಎಲ್ಲರೂ ಕಷ್ಟವನ್ನನುಭವಿಸಿಯೇ ತೀರಬೇಕಾಗಿದೆ.

ಈಗ ಮೇಲುಗೋಟೆಯಲ್ಲಿ ಜಾತ್ರೆಯು ನಡೆಯುತ್ತಿರುವುದು. ಇದೇ ಕಾಲದಲ್ಲಿ ಅಲ್ಲಿ ಕೂಡಿಸಲ್ಪಡುತ್ತಿರುವ ಪಂಚಮರ ಮಹಾಸಭೆಯು ಪದ್ಧತಿಯಂತೆ ಈ ಸಲವೂ ಜರುಗುವುದು. ಸಭೆಯಲ್ಲಿ ಪಂಚಮರಿಗೆ ಮ್ಯು|| ಬೋರ್ಡುಗಳು ಪ್ರಜಾಪ್ರತಿನಿಧಿಸಭೆ ಮೊದಲಾದುವುಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಬೇಕೆಂಬುದೇ ಮೊದಲಾದ ವಿಷಯಗಳ ಮೇಲೆ ಉಪನ್ಯಾಸವೂ ನಿರ್ಧಾರವೂ ಆಗುವುವು. ಮತ್ತು ವಿದ್ಯಾ, ಪರಿಶ್ರಮ, ವ್ಯವಸಾಯ ಪ್ರದರ್ಶನವೂ ಆಗ್ಗೆ ಜರುಗುವುದು. ಇದರ ವೆಚ್ಚಕ್ಕೆ ಶ್ರೀಮದ್ಯುವರಾಜರವರು ೧೦೦ ರೂ. ಗಳನ್ನು ದಯಪಾಲಿಸಿರುವರಲ್ಲದೆ ವಿದ್ಯಾಭ್ಯಾಸದ ಇನ್ಸ್|| ಜನರಲ್‌ರವರು, ಮಿ|| ಡಿಸೌಜಾರವರು, ಮಿ|| ಜಹಿರುದ್ದೀನ್ ಮೆಕ್ಕಿಯವರು, ಮಿ|| ವಿ. ಟಿ. ನರಸಿಂಹಯ್ಯಂಗಾರರು, ಮಿ|| ಎಂ. ಎ. ನಾರಣಯ್ಯಂಗಾರರು ಮೊದಲಾದಅನೇಕ ಮಂದಿ ಪಂಚಮಾಭ್ಯುದಯದಲ್ಲಿ ನಿಜವಾದ ಕುತೂಹಲವುಳ್ಳ ದೊಡ್ಡ ಮನುಷ್ಯರುಗಳು ದಯಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ. ಹಿಂದೆ ಶ್ರೀರಾಮಾನುಜಾಚಾರ್ಯರು ಪಂಚಮರನ್ನು ಉದ್ಧರಿಸಿದರೆಂದು ತೋರಿಸಿಬಿಟ್ಟು ತಾವನ್ಯಾಕ್ರಮದಿಂದಲೇ ದೇಶದೊಳಗೆ ಪಂಚಮರನ್ನು ಉದ್ಧರಿಸುವವರು ಬ್ರಾಹ್ಮಣರೆಂದು ಬಾಯಲ್ಲಿ ಹೇಳಿಕೊಂಡು ಥಳಕು ಮಾಡುವುದಕ್ಕಿಂತಲೂ ನಿಜವಾಗಿ ಹೀಗೆ ಕೃತಿತಃ ಪ್ರಯತ್ನಮಾಡುತ್ತ ಪಂಚಮರಿಗೆ ಸದ್ಬೋಧೆಯನ್ನು ಮಾಡಿ ಅವರ ಆಹಾರವ್ಯವಹಾರಗಳನ್ನು ಶುದ್ಧಿಗೊಳಿಸಿ ಹಿಂದೂಸಮಾಜದಲ್ಲಿ ಅವರೂ ಸೇರಿದವರಾಗಿರುವುದಕ್ಕೆ ತಕ್ಕ ಫಲವನ್ನು ಅವರಿಗೆ ಮಾಡಿ, ಅವರಿಂದ ಸಮಾಜಕ್ಕೂ ತಕ್ಕ ಪ್ರತಿಫಲವನ್ನುಂಟುಮಾಡಿಕೊಳ್ಳುವುದು ವಿಹಿತವು.

ಭರತಖಂಡದ ವೃತ್ತಾಂತಗಳು.

ಭರತಖಂಡಕ್ಕೂ ಸೀಮೆಗೂ ಮಧ್ಯದಲ್ಲಿ ನಡೆಯುವ ಹಡಗುಗಳ ಬಾಡಿಗೆಯು ೧೦೦ಕ್ಕೆ ೨೦ರಷ್ಟು ಕಳೆದ ತಾ|| ೧ ರಿಂದ ಕಡಿಮೆಮಾಡಲ್ಪಟ್ಟಿದೆ.

ಸೀಮೆಗೂ ಭರತಖಂಡಕ್ಕೂ ಅಂಚೆಯನ್ನು ವಿಮಾನಗಳ ಮೂಲಕ ಸಾಗಿಸುವುದಕ್ಕೆ ಸರ್ ತಾತಾರವರ ಕಂಪನಿಯವರು ಪ್ರಯತ್ನಿಸಿ, ಪ್ರಭುತ್ವದವರೊಡನೆ ಪತ್ರವ್ಯವಹಾರ ನಡೆಯಿಸುತ್ತಿರುವರಂತೆ.

ಕಳೆದ ಫಿಬ್ರವರಿ ತಿಂಗಳಲ್ಲಿ ಬರ್ಮಾದಿಂದ ೧೭೦೦೦೦ ಟನ್ನುಗಳ ಅಕ್ಕಿಯು ಭರತಖಂಡಕ್ಕೆ ಬಂದಿದೆ. ಅದರಲ್ಲಿ ೭೩೦೦೦ ಟನ್ನು ಬೊಂಬಾಯಿಗೂ, ೪೯೦೦೦ ಟನ್ನು ಕಲ್ಕತ್ತೆಗೂ, ಉಳಿದುದು ಮದ್ರಾಸಿಗೂ ಬಂದಿದೆ.

ಸರ್ ಸಿಂಹರವರಿಗೆ ಲಾರ್ಡ್ ಪದವಿಯು ಕೊಡಲ್ಪಟ್ಟಂತೆ ಭರತಖಂಡದ ಸುಪ್ರಸಿದ್ಧ ಪಾರ್ಸಿ ಗೃಹಸ್ಥರೊಬ್ಬರಿಗೂ ಲಾರ್ಡ್ ಪದವಿಯು ಕೊಡಲ್ಪಡುವುದೆಂದು ಸುದ್ದಿಯುಂಟಾಗಿದೆ. ಬಹುಶಃ ಇವರು ಸರ್ ದೊರಾಬ್ಜಿ ತಾತಾರವರೇ ಆಗಿರಬಹುದು.

ಸ್ವರ್ಗವಾಸಿ ಗೋಪಾಲಕೃಷ್ಣ ಗೋಖಲೆಯವರಿಗೆ ಪುತ್ರಸಂತಾನವಿಲ್ಲ. ಅವರ ಕುಮಾರಿಯರಾದ ಶ್ರೀಮತಿ ಕಾಶೀಬಾಯಿ ಬಿ.ಎ. ಯವರನ್ನು ಬಿಹಾರ ಪ್ರಾಂತದಲ್ಲಿ ಜಡ್ಜರಾಗಿರುವ ಮ|| ಶಂಕರರಾವ್ ಧವಳೆ ಐ.ಸಿ.ಎಸ್. ರವರಿಗೆ ಕೊಟ್ಟು ಪುಣಾಪಟ್ಟಣದಲ್ಲಿ ವಿವಾಹವು ನೆರವೇರಿಸಲ್ಪಟ್ಟಿತು. ಈ ಲಗ್ನಕ್ಕೆ ಸರ್ ವಿಶ್ವೇಶ್ವರಯ್ಯನವರು ದಯಮಾಡಿಸಿದ್ದರು.

ಅಮೃತಬಜಾರ್ ಪತ್ರಿಕಾಕರ್ತರಾಗಿರುವ ಮ|| ಮೋತೀಲಾಲ ಘೋಷರಿಗೆ ಗಂಡುಮಕ್ಕಳಿಲ್ಲ. ಅವರು ತಮ್ಮ ಒಬ್ಬಳೇ ಒಬ್ಬಳಾದ ಮಗಳನ್ನು ಗತಿಸಿದ ಸರ್ ರಮೇಶಚಂದ್ರದತ್ತರ ಕುಮಾರರಾದ ನೃತ್ಯಗೋಪಾಲದತ್ತರಿಗೆ ಕೊಟ್ಟು ಮದುವೆಮಾಡಿದ್ದರು. ದತ್ತರು ಅತಿಮೂತ್ರವ್ಯಾಧಿಯಿಂದ ತಮ್ಮ ಮಾವಂದಿರ ಮನೆಯಲ್ಲೇ ಮೃತರಾದರೆಂಬ ದುಃಖಕರವಾದ ವಾರ್ತೆಯು ಬಂದಿರುತ್ತದೆ.

ಮದರಾಸು ಶಾಸನನಿರ್ಮಾಣಸಭೆಯಲ್ಲಿ ಸೀಮೆಯೆಣ್ಣೆಯ ದುರ್ಭಿಕ್ಷದ ವಿಷಯವಾಗಿ ಸರ್ಕಾರದ ಪಕ್ಷದಿಂದ ಉತ್ತರಕೊಡುವಾಗ್ಗೆ ಅ|| ಕಾರ್ಡ್ಯೂರವರು— ಕಿರಸನಾಯಿಲನ್ನು ತೆಗೆದುಕೊಂಡು ಬರುತ್ತಿದ್ದ ಕೆಲ ಹಡಗುಗಳು ಜರ್ಮನರಿಂದ ಮುಳುಗಿಸಲ್ಪಟ್ಟವೆಂತಲೂ ಕೆಲ ದಿನಗಳಲ್ಲೇ ಕೊರತೆಯು ತಪ್ಪುವುದೆಂತಲೂ ಹೇಳಿದರು. ಜರ್ಮನರು ಈಗ ಎಲ್ಲಿ ಹಡಗುಗಳನ್ನು ಮುಳುಗಿಸಿದರೋ ಅದು ಆಶ್ಚರ್ಯಕರವಾದ ಸುದ್ದಿಯಾಗಿದೆ.

ನಾಗೇಂದ್ರನಾಥ ಸೇನಗುಪ್ತ ಎಂಬ ಒಬ್ಬ ಹುಟ್ಟುಕುರುಡನಾದ ವಿದ್ಯಾರ್ಥಿಯು ಈ ಸಲದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗಿರುವುದು ಕಲ್ಕತ್ತಾ ವಿಶ್ವವಿದ್ಯಾಲಯದ ಚರಿತ್ರದಲ್ಲೆಲ್ಲಾ ಅಪೂರ್ವತರ ವಿಷಯವಾಗಿದೆ. ಈತನು ಕಲ್ಕತ್ತಾದ ಕುರುಡಮೂಗರ ಶಾಲೆಯ ವಿದ್ಯಾರ್ಥಿ. ಕುರುಡರಿಗಾಗಿ ಏರ್ಪಟ್ಟಿರುವ ಲಿಪಿಯಲ್ಲೇ ಈತನಿಗೆ ಪರೀಕ್ಷಾಪ್ರಶ್ನಪತ್ರಿಕೆಗಳು ಮುದ್ರಿಸಿಕೊಡಲ್ಪಟ್ಟಿದ್ದುವು. ಈತನಿಗೆ ಬಾಯಿಂದ ಹೇಳುವುದೂ ಕೈಯಿಂದ ಬರೆಯುವುದೂ ಕೂಡ ಅಭ್ಯಾಸವಾಗಿದೆ. ಲೆಕ್ಕಗಳನ್ನೂ ರೇಖಾಗಣಿತವನ್ನೂ ಹಲಗೆಯ ಮೇಲೆ ಬರೆದು ಕ್ರಮವಾಗಿ ಅದನ್ನೆಲ್ಲಾ ಬಾಯಿಂದ ಹೇಳುವನು.

ಮೃತರಾದ ಅಫ್ಘಾನಿಸ್ಥಾನ್ ಅಮೀರರ ಸಹೋದರರಾದ ನಸರುಲ್ಲಾಖಾನರನ್ನು ಜಲಾಲಾಬಾದಿನ ಪ್ರಜಾಪ್ರಮುಖರು ಮೊದಲು ಅಮೀರರನ್ನಾಗಿ ಗೊತ್ತುಮಾಡಿ ಪ್ರಕಟಿಸಿದರು. ಗತಿಸಿದ ಅಮೀರರ ಹಿರಿಯ ಕುಮಾರರಾದ ಇನಾಯತುಲ್ಲಾಖಾನರು ತಮ್ಮ ಚಿಕ್ಕಪ್ಪನಾದ ಈನಸರುಲ್ಲಾಖಾನರನ್ನು ಸಿಂಹಾಸನದ ಮೇಲೆ ಕುಳ್ಳಿರಿಸುವುದಕ್ಕಾಗಿ ತನ್ನ ಹಕ್ಕನ್ನು ಬಿಟ್ಟುಕೊಟ್ಟರು. ಆದರೆ ನಸರುಲ್ಲಾಖಾನರು ಅಮೀರರಾಗುವುದಕ್ಕೆ ಕಾಬೂಲಿನವರು ಒಪ್ಪಲಿಲ್ಲ. ಅಲ್ಲಿದ್ದ ಅಮೀರರ ೩ನೆ ಕುಮಾರರಾದ ಅಮಾನುಲ್ಲಾಖಾನರವರು ಅಮೀರರ ಪದವಿಯನ್ನು ವಹಿಸಿ ಪ್ರಭುತ್ವವನ್ನು ಸಾಗಿಸುವುದಕ್ಕೆ ಆರಂಭಿಸಿದರು. ಆದರ ಮೇಲೆ ನಸರುಲ್ಲಾಖಾನರು ಅದಕ್ಕೇ ಒಪ್ಪಿ ವಿಧೇಯರಾಗಿ ನಡೆದುಕೊಂಡರು ಎಂಬುದಾಗಿ ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರು ಪ್ರಕಟಿಸಿದ್ದಾರೆ.

ರೌಲೆಟ್‌ಬಿಲ್ಲುಗಳ ಸಂವರಣೆಗಾಗಿ ನಿಯುಕ್ತರಾಗಿದ್ದ ಉಪಸಂಘದವರು ಸಾಮಾನ್ಯವಾದ ಕೆಲ ಸಂವರಣೆಗಳನ್ನು ಮಾಡಿ ಶಾಸನಸಭೆಗೆ ಒಪ್ಪಿಸಿದರು. ಅದಕ್ಕೆ ಆ|| ಗಳಾದ ಮಾಳವ್ಯ, ಶಫೀ, ಪಟೇಲರುಗಳು ಹಸ್ತಾಕ್ಷರವನ್ನು ಹಾಕದೆ ತಾವೊಂದು ಬೇರೆ ವರದಿಯನ್ನು ಒಪ್ಪಿಸಿದರು. ಸಭೆಯಲ್ಲಿ ಬಲು ಚರ್ಚೆ ನಡೆಯಿತು. ಹೇಗೂ ಇದು ಶಾಸನವಾಗುವುದೇ ನಿಶ್ಚಯವೆಂದು ಕಾಣುತ್ತದೆ. ಆದರೆ ದೇಶದೊಳಗೆ ಇದನ್ನು ಒಪ್ಪಲಾಗದೆಂದೂ ಸತ್ಯಯೋಗವನ್ನು ಆಶ್ರಯಿಸಿ ಪ್ರತಿಭಟಿಸಬೇಕೆಂದೂ ಉಪದೇಶಗಳೂ ಪ್ರಯತ್ನಗಳೂ ನಡೆಯುತ್ತಿವೆ. ಮ|| ಗಂಧಿಯವರು ಸತ್ಯಾಗ್ರಹವ್ರತದಿಂದ ಇದನ್ನು ನಿರೋಧಿಸಬೇಕೆಂದು ಪ್ರಕಟಿಸಿ ಆದಕ್ಕೆ ಅಧ್ವರ್ಯುಗಳಾಗಿ ನಿಂತಿದ್ದಾರೆ. ಎಲ್ಲೆಲ್ಲೂ ಅವನ್ನನುಸರಿಸಿ ಶಪಥಮಾಡಲು ಸಭೆಗಳು ಕೂಡುತ್ತವೆ. ಇದರಿಂದ ಭರತಖಂಡದೊಳಗೆ ಪ್ರಭುತ್ವದವರ ಮತ್ತು ಪ್ರಜೆಗಳ ಮಧ್ಯದಲ್ಲಿ ವೈರಸ್ಯಗಳು ವೃದ್ಧಿಯಾಗುವಂತೆ ಕಾಣುತ್ತದೆ. ಇದು ಸುಪರಿಣಾಮಿಯಲ್ಲ. ಭರತಖಂಡಕ್ಕೆ ಪಾರ್ಲಿಮೆಂಟಿನಿಂದ ನವೀನ ರಾಜಕೀಯ ಸಂಸ್ಕರಣಗಳು ಇಷ್ಟರಲ್ಲೇ ಕೊಡಲ್ಪಡಲಿಕ್ಕಿರುವುದರಿಂದ ಇಂಥ ಸಮಯದಲ್ಲಿ ಸತ್ಯಾಗ್ರಹದ ಗದ್ದಲವನ್ನು ಹಬ್ಬಿಸುವುದು ಸರಿಯಲ್ಲವೆಂದೂ ಪ್ರಜೆಗಳು ಶಾಂತರಾಗಿರಬೇಕೆಂದೂ ಆ|| ಬಾನರ್ಜಿ, ವಾಚಾ, ಶಾಸ್ತ್ರಿ ಮೊದಲಾದ ಮಿತವಾದಿಗಳು ಒಂದು ಪ್ರಕಟನವನ್ನು ಮಾಡಿ ಎಚ್ಚರಿಸಿದ್ದಾರೆ.

ವಿದೇಶದ ವೃತ್ತಾಂತಗಳು.

ಜರ್ಮನಿ ಕೈಜರನೂ ಅವರ ಜ್ಯೇಷ್ಠಪುತ್ರನೂ ತಾವು ಈಗಿರುವ ನಿರ್ಬಂಧಸ್ಥಳಗಳಿಂದ ತಮ್ಮನ್ನು ಬೇರೆಕಡೆಗೆ ಸಾಗಿಸಬೇಕೆಂದು ನೆದರ್‌ಲೆಂಡ್ಸ್ ಪ್ರಭುತ್ವದವರನ್ನು ಕೋರಿಕೊಂಡರು. ತಮ್ಮ ಮೇಲೆ ಆ ಭಾರವನ್ನು ಹಾಕಲಾಗದೆಂದು ಅವರು ಪ್ರತ್ಯುತ್ತರವನ್ನು ಕೊಟ್ಟರಂತೆ.

ಆಂಗ್ಲಸೈನ್ಯದಲ್ಲಿ ಇದುವರೆಗೆ ೧೬ ಲಕ್ಷ ಮಂದಿಯನ್ನು ಬಿಡಿಸಿ ಅವರವರ ಮನೆಗೆ ಕಳುಹಿಸಿಕೊಟ್ಟಿದ್ದಾರೆ. ದಿನಕ್ಕೆ ೧೦ ಸಾವಿರಕ್ಕೆ ಕಡಿಮೆಯಿಲ್ಲದಂತೆ ಬಿಡುಗಡೆ ಮಾಡಲ್ಪಡುತ್ತಿದ್ದಾರೆ. ಅಲ್ಲದೆ ಸ್ವಚ್ಛಂದಸೈನಿಕರಾಗಿರುವುದಕ್ಕೆ ಒಪ್ಪಿ ಈಗಲೂ ೧ ಸಾವಿರ ಮಂದಿಗಳಂತೆ ಬಂದು ಸೇರುತ್ತಿದ್ದಾರೆ.

ಇಂಗ್ಲೆಂಡಿನಿಂದ ಈಗ ಜರ್ಮನಿ ದೇಶದಲ್ಲಿ ಮಿತ್ರಮಂಡಲಿಯವರು ದೇಶಾಕ್ರಮಣ ಮಾಡಿರುವ ಶಿಬಿರಗಳಿಗೆ ಅಂಚೆಯನ್ನು ಕಳುಹಿಸಬೇಕಾದರೆ ಇದುವರೆಗೆ ೫ ದಿವಸಗಳು ಹಿಡಿಯುತ್ತಿದ್ದುವು. ಈಗ ಆಕಾಶವಿಮಾನಗಳ ಮೂಲಕ ೧೦ ಗಂಟೆ ಹೊತ್ತಿನೊಳಗಾಗಿ ಅಂಚೆಯು ಸೇರುವಂತೆ ಮಾಡಿ ಪ್ರತಿದಿನವೂ ನಡೆಯಿಸುತ್ತಿದ್ದಾರೆ.

ಜರ್ಮನಿಯ ನೂತನ ಪ್ರಭುತ್ವವು ಕಷ್ಟದೆಶೆಯಲ್ಲಿದೆ. ಅಲ್ಲಿ ಆಹಾರ್ಯದುರ್ಭಿಕ್ಷವು ದುಸ್ಸಹವಾಗಿದೆ. ಸೈನ್ಯದಿಂದ ಬಿಡುಗಡೆ ಹೊಂದಿದ ಲಕ್ಷಾಂತರ ಜನರು ಹೊಟ್ಟೆಗಿಲ್ಲದೆಯೂ ಮಾಡುವುದಕ್ಕೆ ಉದ್ಯೋಗವಿಲ್ಲದೆಯೂ ಅಲೆಯುತ್ತಿದ್ದಾರೆ. ಅಸಂತೃಪ್ತಿಯು ಹೆಚ್ಚಾಗಿದೆ. ಬೇಗನೆ ಸಂಧಿಮುಗಿದು ತಮ್ಮ ಹೊಟ್ಟೆಬಟ್ಟೆಗೆ ಮಾರ್ಗವಾದರೆ ಸಾಕೆಂದು ಆ ದೇಶದ ಪ್ರಜೆಗಳು ಕೋರುತ್ತಿದ್ದಾರೆ. ಈಗಣ ಸ್ಥಿತಿಯೇ ಬಹುಕಾಲ ಇದ್ದರೆ ಬಹುಪ್ರಜೆಗಳು ಆಹಾರಕ್ಕಾಗಿ ಬೋಲ್ಷೆವಿಕ್ ಕೂಟಕ್ಕೆ ಸೇರಿಹೋಗುವುದರಲ್ಲಿದ್ದಾರೆ.

ಲಾರ್ಡ್ ಎಸ್. ಪಿ. ಸಿಂಹರವರು ಲಾರ್ಡ್‌ಪದವಿಯ ಸರ್ವಮರ್ಯಾದೆಗಳೊಡನೆ ಕಳೆದ ತಿಂಗಳು ತಾ|| ೨೫ ರಲ್ಲಿ ಲಾರ್ಡ್ ಸಭೆಯನ್ನು ಪ್ರವೇಶಿಸಿದರು. ಭರತಖಂಡದ ಸಂಸ್ಕರಣ ವಿಷಯವಾಗಿ ಸಿಡೆನ್ಹಾಂ ಇಸ್ಲಿಂಗ್‌ಟನ್ನರವರುಗಳು ಮಾಡಿದ ಪ್ರಶ್ನೆಗಳಿಗೆ ಇವರು ಸಮರ್ಪಕವಾದ ಉತ್ತರಗಳನ್ನು ಕೊಡುವಲ್ಲಿ ಪಾರ್ಲಿಮೆಂಟಿನ ಸಂಪ್ರದಾಯಗಳನ್ನೆಲ್ಲಾ ಚೆನ್ನಾಗಿ ಅರಿತಹಳಬರಂತೆ ಧೀರತನದಿಂದಲೂ ಗಾಂಭೀರ್ಯದಿಂದಲೂ ಪ್ರಸ್ಫುಟವಾಗಿ ಮಾತನಾಡಿದುದು ಅವರ ಕಾರ್ಯನಿರ್ವಾಹದಕ್ಷತೆಯನ್ನು ಸಭಿಕರಿಗೆಲ್ಲಾ ಚೆನ್ನಾಗಿ ವ್ಯಕ್ತಪಡಿಸಿತು.

ಸಂಧಿಸಭೆಯ ಕೆಲಸಗಳೇನೋ ನಡೆಯುತ್ತಿವೆ. ಅದು ಬೇಗ ಕೊನೆಮುಟ್ಟಬೇಕೆಂದು ಪ್ರಪಂಚವೇ ಅಪೇಕ್ಷಿಸುತ್ತಿದೆ. ಆದರೆ ವಿಷಯಗಳ ಚರ್ಚೆಗಳು ಕೊನೆಮುಟ್ಟುವುದು ಸುಲಭವಾಗಿಲ್ಲ. ಒಂದು ಸಂಸಾರದ ಪಂಚಾಯತಿಯೇ ಎಷ್ಟೋ ಶ್ರಮವಾಗಿರುವಾಗ ಪ್ರಪಂಚದ ಪಂಚಾಯತಿಯ ಕಾರ್ಯಭಾರವು ಸಾಮಾನ್ಯವಾಗಿದ್ದೀತೇ? ಆದರೂ ಸಮರ್ಥರಾದ ಮಂತ್ರಿವರ್ಯರುಗಳು ಸಾಧ್ಯವಾದಷ್ಟು ಸಾಹಸದಿಂದ ಸಂಧಿಕಾರ್ಯವನ್ನು ಬೇಗನೆ ಮುಗಿಸಲು ವ್ಯಗ್ರರಾಗಿದ್ದಾರೆ. ಪ್ರೆ|| ವಿಲ್ಸನ್ನರವರು ಇಷ್ಟರಲ್ಲೇ ಪ್ಯಾರಿಸ್ಸಿಗೆ ಬಂದಿರಬಹುದು. ಈಗಣ ಸಂಧಿಸಭೆಯವರು ನಿರ್ಧರಿಸಿದ ವಿಷಯಗಳನ್ನು ಜರ್ಮನ್ ಮಂಡಲಿಗೆ ತಿಳಿಯಪಡಿಸುವರು. ಅವರು ಅದಕ್ಕೆ ಒಪ್ಪದೆಹೋದರೆ ಯುದ್ಧಮಾಡಿ ಅವರನ್ನು ಹಣ್ಣಿಗೆ ತಂದು ಮುಳ್ಳಿನ ಲಗಾಮನ್ನು ಅವರಿಗೆ ತೊಡಿಸುವುದಕ್ಕೂ ಮಿತ್ರಮಂಡಲಿಯವರು ಅಣಿಯಾಗಿರುವರು.

ಪತ್ರವ್ಯವಹಾರ.

ಫಾರ್‌ವರ್ಡ್, ಬ್ಯಾಕ್‌ವರ್ಡ್ ಮತ್ತು ಡಿಪ್ರೆಸ್ಡ್ ಕ್ಲಾಸುಗಳು.

ಅಯ್ಯಾ, ಧರ್ಮಸಂಸ್ಥಾನಾಧೀಶ್ವರರಾದ ನಮ್ಮ ಮೈಸೂರು ಮಹಾಪ್ರಭುಗಳವರೂ, ಅವರ ಗೌರ್ನಮೆಂಟಿನವರು ತಮ್ಮ ದೇಶದಲ್ಲಿನ ಪ್ರಜೆಗಳೆಲ್ಲರ ವಿದ್ಯಾ ವಿಷಯದಲ್ಲಿ ತುಂಬಾ ಗಮನಕೊಟ್ಟು ಸರ್ವರನ್ನೂ ವಿದ್ಯಾವಂತರನ್ನಾಗಿ ಮಾಡಿ ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂಬ ಮಹದಾಶಯದಿಂದ ವಿದ್ಯಾಭ್ಯಾಸದ ಇಲಾಖೆಯನ್ನೇರ್ಪಡಿಸಿ, ಆ ಮೂಲಕ ಕಾಲೇಜುಗಳು, ಹೈಸ್ಕೂಲುಗಳು ಎ. ವಿ. ಸ್ಕೂಲುಗಳು, ಗರ್ಲ್ ಸ್ಕೂಲ್‌ಗಳು, ವಿಲ್ಲೇಜ್‌ಸ್ಕೂಲುಗಳು, ಇತ್ಯಾದಿಯಾಗಿ ದೇಶದ ನಾನಾಕಡೆಗಳಲ್ಲಿಯೂ ಸ್ಥಾಪಿಸಿ ಇದಕ್ಕಾಗಿ ಬಹುಕಾಲದಿಂದ ಅನೇಕ ಕೋಟ್ಯಂತರ ರೂಪಾಯಿಗಳು ಖರ್ಚುಮಾಡಿದ್ದರಲ್ಲಿ ಒಂದುಗುಂಪಿನ ಜನರುಮಾತ್ರ ವಿದ್ಯಾವಂತರಾಗಿ ಅವರು ತಮಗೆ ಅನೂಚಾನವಾಗಿ ಬಂದಿರತಕ್ಕ ವೇದಾಧ್ಯಯನವನ್ನೂ, ತನ್ಮಾರ್ಗಾವಲಂಬನೆಯನ್ನೂ ತ್ಯಜಿಸಿ ಸರ್ಕಾರದ ಸಮಸ್ತ ಆಡಳಿತಕ್ಕೂ (ದಿವಾನರಿಂದ ವಿಲೇಜ್ ಗಿರಿವರೆಗೂ) ತಾವೂ ತಮ್ಮ ಆಪ್ತಬಾಂಧವರೂ ಕಾರ್ಯಭಾಗಿಗಳಾಗಿನಿಂತದ್ದಲ್ಲದೆ ಈ ವಿಲಕ್ಷಣಾಧಿಕಾರದಮೂಲಕ ಅಧಿಕಸಂಖ್ಯಾಕರಾದ ಬಹುಭಾಗದ ಪ್ರಜೆಗಳನ್ನೆಲ್ಲಾ ವಿದ್ಯೆಯಲ್ಲಿ ಹಿಂದಕ್ಕೆ ತಳ್ಳುತ್ತಾ, ಇನ್ನು ಕೆಲವರನ್ನು ನಾಯಿನರಿಗಳಿಗಿಂತಲೂ ಕಡೆಯಾಗಿ ಕಾಣುತ್ತಾ ತಾನೇನೋ ದೇವತಾಸ್ವರೂಪಿಗಳೆಂತಲೂ ಮಿಕ್ಕ ಪ್ರಜಾಸಮುದಾಯವೆಲ್ಲವೂ ತಮ್ಮ ಆಳುಗಳೆಂತಲೂ ಭಾವಿಸಿ ಪ್ರಜೆಗಳೆಲ್ಲರ ಸ್ವಾತಂತ್ರ್ಯವನ್ನೂ ಹೋಗಲಾಡಿಸಿ, ಮತವಿಷಯದಲ್ಲಿಯೂ ಸರ್ಕಾರದ ಆಡಳಿತದಲ್ಲಿಯೂ ತಾವೇ ಮುಂದಾಳುಗಳಾಗಿ ಮಿಕ್ಕ ಜನಾಂಗಕ್ಕೂ ರಾಜ್ಯಾಂಗಕ್ಕೂ ಮೌಢ್ಯಾಂಧಕಾರದ ಪರದೆಯನ್ನು ಹಾಕಿ ದೇಶವನ್ನು ನಾನಾರೀತಿಯಿಂದ ಹೀರುತ್ತಾ ತಾವೂ ತಮ್ಮವರೂ ಸುಖಜೀವಿಗಳಾಗಿಯೂ, ಸ್ವಾರ್ಥೈಕಪರರಾಗಿಯೂ, ಪಕ್ಷಪಾತಾಸೂಯತೆ ಮುಂತಾದವುಗಳಿಂದ ವರ್ತಿಸುತ್ತಾ ದೇಶದೇಳಿಗೆಗೆ ಕಂಟಕಪ್ರಾಯವಾಗಿರುವುದನ್ನು ದೈವಾನುಗ್ರಹದಿಂದ ಪರದೇಶಗಳಿಂದ ಬಂದಿರತಕ್ಕ ವಿದ್ಯಾವಂತರೂ, ನಿಷ್ಪಕ್ಷಪಾತಿಗಳೂ, ಇಂಗಿತಜ್ಞರೂ, ಸೂಕ್ಷ್ಮಗ್ರಾಹಿಗಳೂ ಆದ ಆಂಗ್ಲೇಯಾಧಿಕಾರಿಗಳು ಅರಿತುಕೊಂಡು, ಆ ಮಹಾಶಯರು ಮಿಷನ್‌ಸ್ಕೂಲುಗಳನ್ನು ಅಲ್ಲಲ್ಲಿಸ್ಥಾಪಿಸಿ, ಎಲ್ಲಾ ಜನವರ್ಗಕ್ಕೂ ಸರ್ವಸಮವಾಗಿ ವಿದ್ಯಾರ್ಜನೆಮಾಡಿಸುತ್ತಾ ಮಾನವರೆಲ್ಲರೂ ಒಬ್ಬದೇವರ ಮಕ್ಕಳಾಗಿದ್ದರೆಂಬುದು, ಇಲ್ಲಿನ ವರ್ತಮಾನಕಾಲದ ಜಾತಿಭೇದಗಳು ಮಾನವರೇಳಿಗೆಗೆ ಕುಠಾರಪ್ರಾಯವಾಗಿರುವುವೆಂಬುದು ಇತ್ಯಾದಿ ಹಿತೋಪದೇಶವನ್ನು ಪ್ರಜಾಸಮುದಾಯದಲ್ಲಿಯೂ ರಾಜಸ್ಥಾನಗಳಲ್ಲಿಯೂ ಸಾರುತ್ತಾ ಅದರಂತೆ ತಮ್ಮ

ಪತ್ರಿಕೆಗಳನ್ನು ಪ್ರದರ್ಶಿಸುತ್ತಾ ಬಂದುದರಮೇಲೆ ಸಾಮಾನ್ಯ ಪ್ರಜೆಗಳಲ್ಲಿಯೂ ಕೂಡ ಈಗೀಗ ವಿದ್ಯಾರ್ಜನಾ ಪ್ರೋತ್ಸಾಹವು ಕಲ್ಪನೆಯಾಯಿತು. ಮತ್ತು ನಮ್ಮ ಮಹಾಪ್ರಭುಗಳೀರ್ವರಿಗೂ ಭಗವದನುಗ್ರಹದಿಂದ ಲಭಿಸಿದ ಆಂಗ್ಲೇಯಾಧಿಕಾರಿಗಳಿಂದಲೂ, ನಿಷ್ಪಕ್ಷಪಾತಿಗಳಾದ ವಿದ್ಯಾವಂತರಿಂದಲೂ, ಸದ್ವಿದ್ಯಾರ್ಜನೆಯಾಯಿತು. ಮತ್ತು ಆ ಮಹಾಸ್ವಾಮಿಗಳವರು ಭರತಖಂಡವನ್ನೆಲ್ಲಾ ಸಂಚರಿಸಿ ನಮ್ಮ ಆರ್ಯಾವರ್ತದೇಶಪದ್ಧತಿಗಳನ್ನು ಅರಿತುಕೊಂಡು ರಾಜನೀತಿ ಮರ್ಮಗಳನ್ನೆಲ್ಲಾ ಸ್ವಾನುಭವಮಾಡಿಕೊಂಡು ಉಭಯಮಹಾಸ್ವಾಮಿಗಳೂ ದಕ್ಷರಾಗಿ ರಾಜ್ಯಭಾರವನ್ನು ವಹಿಸಿದನಂತರ ದೇಶದೇಳಿಗೆಗೋಸ್ಕರ ಉದಾರಬುದ್ಧಿಯಿಂದ ಸಂಪದಭಿವೃದ್ಧಿ ಸಮಾಜವನ್ನೇರ್ಪಡಿಸಿದ್ದಲ್ಲದೆ ನಿಷ್ಪಕ್ಷಪಾತಿಗಳೂ ಮತ್ತು ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ನಾನಾದೇಶದ ನಾಗರೀಕತೆಗಳನ್ನೂ ದೇಶದೇಳಿಗೆಗೆ ಆಕರವಾದ ಮೂಲಗಳನ್ನೂ ಅರಿತವರನ್ನೇ ಅಂದರೆ ವರ್ತಮಾನಕಾಲದಲ್ಲಿನ ಅಸಾಧಾರಣ ವಿದ್ಯಾವಂತರನ್ನು ಗೌರ್ನಮೆಂಟು ಅಧಿಕಾರಸ್ಥಾನಗಳಿಗೆ ನೇಮಿಸಿ, ಆ ಮಹಾಶಯರ ಮೂಲಕ ಸಂಕುಚಿತಮನಸ್ಕರೂ ಸ್ವಾರ್ಥಪರರೂ ಆದವರಿಂದ ಹಾಕಲ್ಪಟ್ಟಿದ್ದ ಮೌಢ್ಯಾಂಧಕಾರದ ಪರದೆಯನ್ನು ಹರಿಸಿಬಿಟ್ಟು, ಮೈಸೂರು ದೇಶದಲ್ಲಿಯೇ ಯೂನಿವರ್ಸಿಟಿಯೊಂದನ್ನು ಹೊಸದಾಗಿ ಸ್ಥಾಪಿಸಿ, ಸ್ಕೂಲ್ ಇಲಾಖೆಗೆ ಧಾರಾಳವಾಗಿ ದ್ರವ್ಯಸಹಾಯವನ್ನೊದಗಿಸುತ್ತಾ ಪ್ರಜಾಸಾಮಾನ್ಯಕ್ಕೆಲ್ಲಾ ಸರ್ವಸಮನಾಗಿ ವಿದ್ಯಾರ್ಜನೆಮಾಡಿಸಲು ತಮ್ಮ ದೇಶದಲ್ಲಿನ ಪ್ರಜಾಸಮುದಾಯವನ್ನು ಫಾರ್ವರ್ಡ್, ಬ್ಯಾಕ್‌ವರ್ಡ್, ಡಿಪ್ರೆಸ್ಡ್ ಕ್ಲಾಸು ಎಂಬದಾಗಿ ಮೂರು ಭಾಗಮಾಡಿ ಆಯಾ ಕ್ಲಾಸಿಗೆ ಬೇಕಾದ ಸಹಾಯವನ್ನು ಕಲ್ಪಿಸಿರುವುದು ಸಮಸ್ತರಿಗೂ ತಿಳಿದ ಅಂಶವಾಗಿಯೇ ಇದೆ. ಈ ಮೇಲ್ಕಂಡ ಮಹೋಪಕಾರಗಳಿಗಾಗಿ ನಮ್ಮ ದಯಾಳುಗಳಾದ ಮಹಾಪ್ರಭುಗಳಲ್ಲಿಯೂ ಅವರ ಘನ ಗೌರ್ನಮೆಂಟಿನಲ್ಲಿಯೂ ಸಮಸ್ತ ಪ್ರಜೆಗಳೂ ಕೃತಜ್ಞತೆಯಿಂದ ರಾಜಭಕ್ತಿನಿರತರಾಗಿ ವಿದ್ಯಾರ್ಜನೆಮಾಡುತ್ತಿರುವ ಈ ಸುಸಮಯದಲ್ಲಿ ಫಾರ್ವರ್ಡ್ ಕ್ಲಾಸಿನ ಪೈಕಿ ಸೋಮಾರಿಗಳಾಗಿಯೂ ಹೊಟ್ಟೆಬಾಕರಾಗಿಯೂ ಕಾಪಟ್ಯದಿಂದ ದೇಶದಲ್ಲಿ ಸುಲಿಗೆಮಾಡುತ್ತಿದ್ದ ಸ್ವಾರ್ಥಪರರಾದ ಕೆಲವರು ಮೇಲಿನ ಘನೋದ್ದೇಶಗಳನ್ನು ತಿಳಿಯಕೊಂಡು ಕಷ್ಟಪಟ್ಟು ಸನ್ಮಾರ್ಗಾವಲಂಬಿಗಳೂ ಸ್ವಪ್ರಯತ್ನಶೀಲರೂ ಆಗಿ ಬಾಳದೆ ದುರಾಶೆಯಿಂದಲೋ ಅಜ್ಞಾನ ದುರುದ್ದೇಶದಿಂದಲೋ ಕಾಣೆ - ಪರರ ಸಿರಿಯನು ನೋಡಿ ಕರುಬುವ ನರನು ಮೂರ್ಖನು - ಎಂಬ ಆರ್ಯೋಕ್ತಿಯಂತೆ ಬ್ಯಾಕ್‌ವರ್ಡ್ ಡಿಪ್ರೆಸ್ಡ್ ಕ್ಲಾಸಿನ ಬಹು ಭಾಗದ ಪ್ರಜಾಸಮುದಾಯದಮೇಲೂ, ನಮ್ಮ ದಯಾಳುಗಳಾದ ಪ್ರಭುಗಳಿಂದ ವಿದ್ಯಾರ್ಜನೆಗಾಗಿ ಲಭಿಸಿರುವ ಸ್ವಲ್ಪಭಾಗದ ಸ್ಕಾಲರ್‌ಶಿಪ್ಪಿನಮೇಲೂ, ಮತ್ತು ಆ ಜನಾಂಗದಲ್ಲಿ ಲಕ್ಷಕ್ಕೆ ಒಬ್ಬರಂತೆ ದೈವಯೋಗದಿಂದ ಲಭಿಸಿದ ಅಸಾಧಾರಣ ವಿದ್ಯಾವಂತರಾದ 3-4 ಜನರನ್ನು ಗೌರ್ನಮೆಂಟಿನ ಮುಖ್ಯವಾದ ಇಲಾಖಾ ಮೊಖ್ತೇಸರರನ್ನಾಗಿ ನಿಯಮಿಸಿರುವುದರಮೇಲೂ, ಈ ಮಹಾಶಯರಮೂಲಕ ಬಹುಭಾಗದ ಪ್ರಜಾಸಮುದಾಯದಮೇಲೂ, ಲಭಿಸುತ್ತಿರುವ ವಿದ್ಯಾರ್ಜನಾ ಕಾರ್ಯಕ್ರಮದಮೇಲೂ ಸಹಿಸಲಾರದೆ (ದುರಾಶೆ ಮತ್ತು ಕ್ರೋಧಾಸೂಯಾಪರತೆಯಿಂದ ಪ್ರಪಂಚದಸಿಮ್ಮ ಈಗೆ ಭಂಗಪ್ರಾಯರಾಗಿದ್ದ ದುಷ್ಟರಾದ ಜರ್ಮನರಂತೆ) ಈ ದೇಶದಲ್ಲಿನ ಅನ್ವರ್ಥನಾಮಧಾರಿಗಳಾದ ಕೆಲವುಜನ ಶಠರು ತಮ್ಮ ಜನಾಂಗದ ಹಿತೋಟಿಯಲ್ಲಿರುವ ಸಾಧ್ವೀ ಸಂಪದಭ್ಯುದಯವೆಂಬ ಕನ್ನಡ ವರ್ತಮಾನ ಪತ್ರಿಕೆಗಳಲ್ಲಿಯೂ, ಕರ್ನಾಟಕವೆಂಬ ಇಂಗ್ಲೀಷು ಪೇಪರಿನಲ್ಲಿಯೂ, ಮೇಲ್ಕಂಡ ಸ್ಕಾಲರ್‌ಶಿಪ್ಪಿನ ವಿಷಯವಾಗಿಯೂ, ಆ ಬಡ ವಿದ್ಯಾರ್ಥಿಗಳ ವಿದ್ಯಾರ್ಜನಾ ಕಾರ್ಯಕ್ರಮಗಳ ವಿಷಯವಾಗಿಯೂ, ಮತ್ತು ಭಗವತ್ಕೃಪೆಯಿಂದಲೂ, ನಮ್ಮ ಮಹಾಪ್ರಭುಗಳ ಅನುಗ್ರಹದಿಂದಲೂ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಪದವಿಗೆ ಬಂದಿರುವ ಘನವಂತರಾದ ಶ್ರೀಮಾನ್ ಸಿ. ರಾಮಲಿಂಗರೆಡ್ಡಿ ಎಂ. ಎ. ಯವರ ವಿಷಯವಾಗಿಯೂ, ಅವರು ಮಾಡುವ ಸರ್ಕಾರಿ ಕೆಲಸಗಳಲ್ಲಿಯೂ ಇಲ್ಲದ ದೋಷಾರೋಪಣೆ ಇಲ್ಲದ ಅಪವಾದಗಳನ್ನು ಕಲ್ಪಿಸಿ ಅಸತ್ಯ ಬಾತ್ಮಿಗಳನ್ನೂ, ಸುಳ್ಳುವರ್ತಮಾನಗಳನ್ನೂ ದುರಾಶಾಪರರಾದ ಕುಹಕರು (ಅವರ ಲೇಖನಗಳಿಗೆ ವ್ಯತಿರಿಕ್ತವಾದ) ಸತ್ಯವಾದಿ, ದೇಶಾಭಿಮಾನಿ, ಲೋಕೋಪಕಾರಿ, ದುರ್ಗದ ಸಿಂಹ, ಬೃಹಸ್ಪತಿ, ಬಡಸ್ಕೂಲ್ ಮಾಸ್ಟರುಗಳ ಹಿತಚಿಂತಕ, ಇತ್ಯಾದಿ ಬರೇ ಹೆಸರುಗಳನ್ನಿಟ್ಟುಕೊಂಡು ತಮ್ಮುಗಳ ಮನಸ್ಸಾಕ್ಷಿಗೆ ವಿರೋಧವಾಗಿ ಪ್ರಚುರಪಡಿಸುತ್ತಾ ಇರುವರು. ಆ ಅಸತ್ಯಲೇಖನಗಳನ್ನೂ, ಸುಳ್ಳು ವರ್ತಮಾನಗಳನ್ನೂ ಅಂಗೀಕರಿಸಿ, ಸಾಧ್ವಿಯು ಪ್ರಕಟಿಸಿ ಪ್ರಲಾಪಿಸುತ್ತಿರುವುದು. ಸಂಪದಭ್ಯುದಯವು ಅಪದಭ್ಯುದಯದಂತೆ ಆ ಸುಳ್ಳುಲೇಖನಗಳಿಗೆ ಸ್ಥಳವನ್ನಿತ್ತು ಗೋಳಾಡುತ್ತಿರುವುದು ದೇಶದ್ರೋಹವಾಗಿರುವುದಲ್ಲದೆ ಆ ಪತ್ರಿಕಾಕರ್ತರ ಘನತೆಗೂ, ಫಾರ್ವರ್ಡ್ ಕ್ಲಾಸಿನ ಯೋಗ್ಯತೆಗೂ ಕುಂದಕವಾಗಿದೆ. ಮತ್ತು ಅದರಿಂದ ದುರ್ಮಾರ್ಗತನವನ್ನು ತಮ್ಮ ಜನಾಂಗದ ಮಕ್ಕಳಿಗೆ ಅಭ್ಯಾಸಮಾಡಿಸಿ, ಕೆಡಿಸುತ್ತಾ ಇರುವರು. ಆ ವರ್ಗದ ವಿದ್ಯಾರ್ಥಿಗಳು ಆ ಪೇಪರುಗಳನ್ನು ಓದುತ್ತಾ ರಾತ್ರಿ ಹಗಲು ಎಲ್ಲಿನೋಡಿದರಲ್ಲಿ ಆ ಪ್ರಸಂಗಗಳನ್ನೇ ಪ್ರಲಾಪಿಸುತ್ತಾ ಹೆಂಗಸರಮುಂದೆಯೂ ತಮ್ಮ ಜನಾಂಗದ ಪ್ರತಾಪವನ್ನು ಕೊಚ್ಚಿಕೊಳ್ಳುತ್ತಾ ಬ್ಯಾಕ್‌ವರ್ಡ್, ಡಿಪ್ರೆಸ್ಡ್ ಕ್ಲಾಸಿನ ವಿದ್ಯಾರ್ಥಿಗಳನ್ನು ಕಂಡಾಗಲೆಲ್ಲಾ ಹೀಯಾಳಿಸುತ್ತಾ, ಕಾಲು ಕೆದರಿ ವ್ಯಾಜ್ಯಮಾಡುತ್ತಿರುವುದೇ ದೃಷ್ಟಾಂತವಾಗಿದೆ. ಯಾವ ಸ್ಕೂಲುಗಳಲ್ಲಿಯೂ, ಯಾವ ರೀಡಿಂಗ್ ರೂಮುಗಳಲ್ಲಿಯೂ, ಯಾವ ಹಳ್ಳಿಯಲ್ಲಿ ನೋಡಿದರೂ ಇದೇ ಪ್ರಸ್ತಾಪದ ಕಾಲಯಾಪನೆಯಾಗಿರುವುದಲ್ಲದೆ ಫಾರ್ವರ್ಡ್ ಕ್ಲಾಸಿಗೆ ಸಂಬಂಧಪಟ್ಟ ಕೆಲವುಜನ ಸ್ಕೂಲ್ ಮಾಸ್ಟರುಗಳು ಕೂಡ ಸಾಧ್ವೀ ಸಂಪದಭ್ಯುದಯದಲ್ಲಿನ ಮೇಲ್ಕಂಡ ಪ್ರಸಂಗಗಳನ್ನೇ ಎಲ್ಲೆಲ್ಲೂ ಹಾಸ್ಯಾಸ್ಪದವಾಗಿ ಮಾತನಾಡುತ್ತ ವಿದ್ಯಾಪ್ರೋತ್ಸಾಹಕ್ಕೆ ಬದಲು ನಿರುತ್ಸಾಹವನ್ನು ಕಲ್ಪಿಸುತ್ತಾ ಸ್ಕೂಲ್‌ಗಳಲ್ಲಿನ ಆ ಬಡವಿದ್ಯಾರ್ಥಿಗಳನ್ನು ಯಾವ ರೀತಿಯಿಂದಾದರೂ ಹಿಂದಕ್ಕೆ ಹಾಕುವ ಪ್ರಯತ್ನಗಳನ್ನೇ ಮಾಡುತ್ತಾ ತಮ್ಮ ನಿಯಮಿತ ಸತ್ಕಾರ್ಯಗಳನ್ನು ಕೂಡ ಮರೆತು ಗೌರ್ನಮೆಂಟಿನ ಘನೋದ್ದೇಶಗಳಿಗೆ ವಿಘ್ನಕಾರಿಗಳಾಗಿಯೂ ಜನಸಮೂಹಕ್ಕೆಲ್ಲಾ ಈರ್ಷ್ಯಾಸೂಯೆಗಳನ್ನು ಹೆಚ್ಚಿಸುತ್ತಾ ಇರುವುದಕ್ಕಾಗಿ ಮಾನಿಷ್ಟರಾದ ಬಹುಭಾಗದ ಪ್ರಜಾವರ್ಗಕ್ಕೆ ಬಹಳ ಯೋಚನೆಯಾಗಿರುವದಲ್ಲದೆ ನೆಮ್ಮದಿಗೆ ಭಂಗಕರವಾಗಿಯೂ ಇರುವದರಿಂದ ಘನ ಗೌರ್ನಮೆಂಟಿನವರು ಮೇಲ್ಕಂಡ ವೃತ್ತಪತ್ರಿಕೆಗಳವಿಷಯದಲ್ಲಿಯೂ ಅಸತ್ಯವಾದ ಮತ್ತು ಆಕ್ಷೇಪಣೆಯ ಬಾತ್ಮಿಗಳ ವಿಷಯದಲ್ಲಿಯೂ ತಕ್ಕಬಂದೋಬಸ್ತನ್ನು ಮಾಡಬೇಕೆನ್ನುವುದೇ ಬಹುಭಾಗದ ಪ್ರಜೆಗಳ ಕೋರಿಕೆಯಾಗಿದೆ. ಜನಸೇವಕ.

1

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—4—0

ವಿಳಾಸ:—ಮದರಾಸ ಟ್ರೇಡಿಂಗ್ ಕಂಪೆನಿ, 16 ತಿರುಪೆಳ್ಳಬೀದಿ, ಮದರಾಸ್.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

6 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೇರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

10 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

13

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಪಿ. ಎ. ಎಸ್. ಪಾಣಿ ಅಂಡ್ ಕೊ,
6 ಸಾಹುಕಾರಪೇಟೆ, ಮದರಾಸ್.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 6

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:— ರಾಸ್ ವಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲುಡಜನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2-14.0. 25 ಕ್ಕೆ 5.5.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
14 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮಾರ್ಚಿ ತಾ|| ೧೬ ರಿಂದ ೧೯೧೯ ನೆಯ ಮಾರ್ಚಿ ತಾ|| ೨೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿ ನಾಮಸಂವತ್ಸರದ ಫಾಲ್ಗುಣ ಶು|| ಪೌರ್ಣಿಮಿಂದ ಫಾಲ್ಗುಣ ಬ|| ಷಷ್ಠಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
16	[1] ಭಾನು	ಪೌರ್ಣ	33-49	ಪೂಫ	6-21	3
17	ಸೋಮ	ಪಾಡ್ಯ	37-17	ಉಫ	10-44	4
18	[2] ಮಂಗಳ	ಬಿದಿಗೆ	41-12	ಹಸ್ತ	16-9	5
19	ಬುಧ	ತದಿಗೆ	46-50	ಚಿತ್ತ	22-16	6
20	[3] ಗುರು	ಚೌತಿ	52-14	ಸ್ವಾತಿ	28-49	7
21	ಶುಕ್ರ	ಪಂಚ	57-31	ವಿಶಾಖಾ	35-23	8
22	[4] ಶನಿ	ಷಷ್ಠಿ	60	ಅನೂ	41-31	9

(1) ನಾಗಮಂಗಲದ ಸೌಮ್ಯಕೇಶವಸ್ವಾಮಿ ರಥ, ಪ್ರಸನ್ನಂಜುಂಡೇಶ್ವರಸ್ವಾಮಿ ರಥ, ಕಾಮದಹನ, ಹೋಳೀಹಬ್ಬ, ಮೇಲುಕೋಟೆ ಚೆಲುವರಾಯಸ್ವಾಮಿ ರಥ, ತಿ. ನರಸೀಪುರದಲ್ಲಿ ಪ್ರಹ್ಲಾದೋತ್ಸವ, ಬಾರ್ಕೂರಿನಲ್ಲಿ ಪಂಚಲಿಂಗೇಶ್ವರಸ್ವಾಮಿ ರಥ, ಪೆರಡೂರಿನಲ್ಲಿ ರಥ. (2) ತಿ. ನರಸೀಪುರದಲ್ಲಿ ಗುಂಜಾನೃಸಿಂಹಸ್ವಾಮಿ ರಥ, ಶ್ರೀರಂಗದಲ್ಲಿ ಗೋರಥ, ಮೇಲುಕೋಟೆಯಲ್ಲಿ ನಾರಾಯಣಸ್ವಾಮಿ ಜಯಂತಿ. (3) ಕಳಲೆ ಲಕ್ಷ್ಮೀಕಾಂತಸ್ವಾಮಿ ರಥ. (4) ಚಿಟ್ಟದಲ್ಲಿ ಮಹಾಬಲೇಶ್ವರಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯಾಪಾ | ಘನಪಥಕೃತಾವಕಾರಾ ವಿಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಮ್ರಾಜ್ಯಲಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಲೀಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಮಾರ್ಚಿ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೧೨

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ ವ್ಯಾಖ್ಯಾನ, ಕರಣಹಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸವಿಸ್ತಾರವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಂಚಪ್ರಕರಣಕ್ಕೆ ೧-೩-೦.

ಸಂದರತ್ನಾಕರಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕಲಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 17

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧— ೦—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦— ೫—೦
ಹರಿದಾಸಿ	೦— ೪—೦
ವ್ರತಪಂಚಕ	೦— ೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦— ೨—೦
ಗುರುಜಂಗಲೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನಸೂನಾಗಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವುದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಪೌಷ್ಟಿಕದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣ ಬರುವದು. ದಯಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

4 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಸ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅನುಭವ ಎಂದು ತಿಳಿದು ಸ್ವೀಕಾರಮಾಡುತ್ತಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಜಲದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕೆಮ್ಮುನೆಗಡಿ, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಕಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ಬೆಳ್ಳಿಜಡ್ಡು, ಗುಪ್ತವ್ಯಾನಬೇನೆ, ಹುರಕುಕಜ್ಜ, ಗಜಕರ್ಣ, ಇಸಬು, ತಮ್ಮ, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದವಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟೋ ಹೊರತರೆ ಪರಕ ತಕ್ಕೊಳ್ಳುತ್ತೀವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
44 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮ್ಯಾಡರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಛಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು—ಜಪಾನ್ ಬೀಸಣಿಗೆ 1, ಸಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅತ್ತಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ 4—8—0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
7 5. ಇರುಳಪ್ಪನ ಬೀದಿ, ಮದರಾಸ್.

ರಾ|| ಬ|| ವಾರದ ಮಲ್ಲಪ್ಪನವರ ಚರಿತ್ರೆ—ಇದರಲ್ಲಿ ಮಲ್ಲಪ್ಪನ ಅದ್ಭುತ ವಿಷಯಗಳನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿರುವುದಲ್ಲದೆ ೮ ಸುಂದರವಾದ ಭಾವಚಿತ್ರಗಳೂ ಇವೆ. ಕ್ರಯ ೧೨

34 ವಿಳಾಸ—ಎಂ. ಎಂ. ಹರ್ಡೆ

IN THE CITY CIVIL COURT AT MADRAS

ORIGINAL SUIT No. 475 OF 1918.

ಟಿ. ಟಿ. ಸುಬ್ಬರಾಯಸೆಟ್ಟಿ ಅಂಡ್ ಸನ್ಸ್—ವಾದಿಗಳು.

VS.

ಕೆ. ಎಸ್. ಮಹಮ್ಮದ್ ಮಸೂದ್ ಸಾಹೇಬ್
ಸಿ. ಎಂ. ಅಬ್ದುಲ್ ಅಜೀಜ್ ಸಾಹೇಬ್ } ಪ್ರತಿವಾದಿಗಳು.

ಮೆಸರ್ಸ್.

(1) ಕೆ. ಎಸ್. ಮಹಮ್ಮದ್ ಮಸೂದ್ ಸಾಹೇಬ್
(2) ಸಿ. ಎಂ. ಅಬ್ದುಲ್ ಅಜೀಜ್ ಬಾದ್ ಷಾ ಸಾಹೇಬ್

ಇವರುಗಳಿಗೆ

ಈ ನೋಟೀಸಿನಿಂದ ತಿಳಿಯಪಡಿಸುವುದೇನೆಂದರೆ—ನೀವುಗಳು ಮದ್ರಾಸಿನಲ್ಲಿ ವಾದಿಗಳಿಂದ ಕ್ರಯಕ್ಕೆ ಪಡೆದುಕೊಂಡ ಸಾಮಾನುಗಳ ಬಾಬತು ಬಾಕಿ ಬರಬೇಕಾಗಿರುವ ಅಸಲು ಬಡ್ಡಿ ಸೇರಿ ರೂ. 2312-4-10 ಯನ್ನು ಖರ್ಚು ಸಮೇತ ಬರಮಾಡಿಕೊಳ್ಳುವುದಕ್ಕಾಗಿ ಮದ್ರಾಸಿನಲ್ಲಿರುವ ಸಿಟಿ ಸಿವಿಲ್ ಕೋರ್ಟಿನಲ್ಲಿ ದಾವಾ ಮಾಡಲ್ಪಟ್ಟಿರುತ್ತದೆ. ಈ ಕೇಸು 1919 ನೆಯ ಮಾರ್ಚಿ ತಾ|| 27 ರ ಬೆಳಿಗ್ಗೆ 11 ಗಂಟೆಗೆ ವಿಚಾರಣೆಗಿಡಲ್ಪಟ್ಟಿರುವುದರಿಂದ ಆ ದಿವಸ ನೀವುಗಳು ಖುದ್ದಾಗಿಯಾಗಲಿ ಅಥವಾ ಲಾಯರ ಮೂಲಕವಾಗಿಯಾಗಲಿ ಹಾಜರಾಗದಿದ್ದರೆ ಮೊಖದ್ದಮೆಯು ಎಕ್ಸ್‌ಪಾರ್ಟಿ ಇತ್ಯರ್ಥ ಮಾಡಲ್ಪಡುವುದು.

(Sd). N. SUBRAHMANYAM,
Vakil for plaintiffs.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮಾರ್ಚಿ ತಾ|| ೨೩ ನೆಯ ಭಾನುವಾರ.

ಪ್ರತ್ಯೇಕ ಸಾಂಘಿಕಪ್ರಾತಿನಿಧ್ಯ.

ಬೇರೆಬೇರೆ ಸಂಘಗಳಿಗೆ ಪುರಪಾಲಕ ಸಂಘ ಮೊದಲಾದುವುಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯವು ವಿಾಸಲಾಗಿದ್ದರೇನೆಯೇ ರಾಜ್ಯಾಂಗ ಕಾರ್ಯನಿರ್ವಾಹದಲ್ಲಿ ಸರ್ವಪ್ರಜಾ ಪ್ರಾತಿನಿಧ್ಯವು ದೊರೆದು ಪ್ರಭುತ್ವವು ನಿರ್ದುಷ್ಟವಾಗುವುದೆಂಬುದಾಗಿ ಆಲೋಚಿಸಿ ನಮ್ಮ ಸಂಸ್ಥಾನದಲ್ಲಿ ಈ ಪ್ರಾತಿನಿಧ್ಯಪ್ರಾಪ್ತಿಗಾಗಿ ಕೆಲ ದೇಶಾಭಿಮಾನಿಗಳಿಂದ ಆರಂಭಿಸಲ್ಪಟ್ಟ ಯತ್ನವು ನಿಷ್ಫಲವಾಗಿ ಹೋಗಲಿಲ್ಲ. ಈ ಸಂಕಲ್ಪದ ಸಾಧನೆಗಾಗಿಯೇ ನಿಯಮನಿರ್ಮಾಣಸಭೆಯಲ್ಲಿ ಪ್ರಜಾಪ್ರತಿನಿಧಿಗಳು ಬಹುದೂರ ಚರ್ಚೆಯನ್ನು ನಡೆಯಿಸಿದರು. ಇದಕ್ಕಾಗಿಯೇ ಪ್ರಜಾಮಿತ್ರಮಂಡಲಿಯು ಏರ್ಪಟ್ಟಿತು. ಕಡೆಗೆ ಶ್ರೀಮನ್ಮಹಾರಾಜರವರ ಸನ್ನಿಧಿಗೂ ಪ್ರತ್ಯಕ್ಷತಃ ಹೋಗಿ ಬಿನ್ನಯಿಸಿಕೊಂಡರು. ಆ ಪ್ರಾರ್ಥನೆಯು ಯುಕ್ತವಾದುದೆಂಬುದನ್ನು ಶ್ರೀಮನ್ಮಹಾರಾಜರವರು ಅಂಗೀಕರಿಸಿದುದರಿಂದಲೇ ನಾಮಿನೇಷನ್ನಿನ ಮೂಲಕ ಲೋಕಲ್‌ಬೋರ್ಡು ಮೊದಲಾದುವುಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯಪ್ರಾಪ್ತಿಗೆ ಅನುಕೂಲಮಾಡಿಕೊಡುವುದಾಗಿ ಅಪ್ಪಣೆ ಕೊಡಿಸಿದರು. ಅದರಿಂದೀಚೆಗೆ ಮ್ಯುನಿಸಿಪಾಲಿಟಿ ಮೊದಲಾದುವುಗಳಿಗೆ ಸಭಿಕರನ್ನಾರಿಸುವೆಡೆಗಳಲ್ಲಿ ಯಾವ ಜನವರ್ಗಗಳವರಿಗೆ ಎಲಕ್ಷನ್ನಿನ ಮೂಲಕ ಪ್ರಾತಿನಿಧ್ಯವು ಬರದೆಹೋಗಿರುವುದೋ ಅಂಥ ವರ್ಗಗಳ ಒಬ್ಬಿಬ್ಬರನ್ನು ನಾಮಿನೇಷನ್ನಿನ ಮೂಲಕ ಸರ್ಕಾರದವರು ತಾವಾಗಿಯೇ ಸೇರಿಸುವ ಕ್ರಮವು ವ್ಯವಹಾರಕ್ಕೆ ಬಂದಿರುತ್ತದೆ.

ಇದರ ಮೇಲೆ ಕಳೆದ ಜನವರಿ ತಿಂಗಳಿನಲ್ಲಿ ನಮ್ಮ ಪ್ರಭುತ್ವದವರು ಮಾಡಿರುವ ಮತ್ತೊಂದು ಅಪ್ಪಣೆಯಿಂದ ಈ ಪ್ರತ್ಯೇಕ ಪ್ರಾತಿನಿಧ್ಯತತ್ವದ ಪುಷ್ಟೀಕರಣವು ಸ್ಪಷ್ಟವಾಗಿರುತ್ತದೆ. ಈ ಅಪ್ಪಣೆಯು ಸಿಟಿಮ್ಯುನಿಸಿಪಲ್ ಚುನಾವಣೆಗೆ ಸಂಬಂಧಪಟ್ಟ ನಿಬಂಧನಾರೂಪವಾಗಿರುತ್ತದೆ. ಇದರೊಳಗೆ-ಆಯಾ ಮ್ಯುನಿಸಿಪಾಲಿಟಿಗಳನ್ನು ಸೌಕರ್ಯಕ್ಕೆ ತಕ್ಕಂತೆ ಡಿವಿಜನ್ನುಗಳಾಗಿ ವಿಭಾಗಿಸಿಕೊಂಡು, ಆಯಾ ಡಿವಿಜನ್ನುಗಳ ಜನಸಂಖ್ಯೆ ವಿಸ್ತಾರ ಮೊದಲಾದುವುಗಳಿಗೆ ತಕ್ಕಂತೆ ಆರಿಸಲ್ಪಡಬೇಕಾದ ಕೌನ್ಸಿಲರುಗಳ ಸಂಖ್ಯೆಯನ್ನು ನಿರ್ಧರಿಸಬೇಕಾದ ಕ್ರಮ, ಕೌನ್ಸಿಲರಾಗತಕ್ಕವರಿಗೆ ಇರಬೇಕಾದ ಅರ್ಹತೆ, ಆರಿಸಲು ಮತ ಕೊಡತಕ್ಕವರ ಅರ್ಹತೆ, ಮತ ಕೊಡತಕ್ಕ ರೀತಿ-ಮೊದಲಾದ ಕ್ರಮಗಳೆಲ್ಲಾ ವಿವರಿಸಲ್ಪಟ್ಟಿರುವುದಲ್ಲದೆ, ಪ್ರತ್ಯೇಕ ಪ್ರಾತಿನಿಧ್ಯಪ್ರಾಪ್ತಿಗಾಗಿ ಕೆಲ ಸೌಕರ್ಯಗಳು ಉಂಟುಮಾಡಿಕೊಡಲ್ಪಟ್ಟಿವೆ. ಆ ಸಂಬಂಧವಾದ ನಿಬಂಧನೆಯಲ್ಲಿ ಹೇಳಲ್ಪಟ್ಟಿರುವುದೇನೆಂದರೆ—

“ಚುನಾವಣೆ ಬಗೆಗಾಗಿ ಡಿವಿಜನುಗಳಾಗಿ ವಿಭಾಗಿಸಲ್ಪಟ್ಟಿರುವ ಮ್ಯುನಿಸಿಪಾಲಿಟಿಯ ಯಾವುದಾದರೂ ಡಿವಿಜನ್ನಿನಲ್ಲಿ ಸಮ್ಮತಿ ಕೊಡಲು ಅರ್ಹರಾದ ಜನಗಳ ಪೈಕಿ ಶೇಕಡಾ ೫೦ ಕ್ಕೆ ಕಡಿಮೆಯಿಲ್ಲದಷ್ಟು ಜನರು ಮತ್ತು ಹಾಗೆ ವಿಭಾಗಿಸಲ್ಪಡದ ಒಂದು ಮ್ಯುನಿಸಿಪಾಲಿಟಿಯಲ್ಲಿ ಶೇಕಡಾ ೨೫ ಜನಕ್ಕೆ ಕಡಿಮೆಯಿಲ್ಲದಷ್ಟು ಜನರು ಪುರನಿವಾಸಿಗಳ ಯಾವುದಾದರೂ ಒಂದು ಪಂಗಡಕ್ಕೆ ಸೇರಿದ್ದರೇ ಆಗಲಿ ಆಗ ಅಂಥ ಓಟರುಗಳು ತಮ್ಮ ಪಂಗಡಕ್ಕೆ ಸೇರಿದ ಒಬ್ಬರು ಅಥವಾ ಹೆಚ್ಚು ಮೆಂಬರುಗಳನ್ನು ಚುನಾಯಿಸಲು ಅನುಮತಿಯನ್ನು ಕೊಡಬೇಕೆಂದು ಸರ್ಕಾರದವರಿಗೆ ಅರ್ಜಿ ಬರೆದುಕೊಳ್ಳಬಹುದು. ಪರಂತು ಅಂಥ ಅರ್ಜಿಯು ಆ ಪಂಗಡದ ಒಟ್ಟು ಜನಸಂಖ್ಯೆಯ ಪೈಕಿ ಮುಕ್ಕಾಲು ಪಾಲಿಗಿಂತಲೂ ಕಡಿಮೆಯಿಲ್ಲದಷ್ಟು ಜನರಿಂದ ಬರೆದುಕೊಳ್ಳಲ್ಪಟ್ಟುದಾಗಿರಬೇಕು. ಮತ್ತು ಆ ಅರ್ಜಿಯಮೇಲೆ ಸರ್ಕಾರದವರು ತಮಗೆ ಯುಕ್ತತೋರಿದಂತೆ ಹುಕುಂ ಮಾಡಬಹುದು. ಯಾವುದಾದರೂ ಮ್ಯುನಿಸಿಪಾಲಿಟಿಯಲ್ಲಿ ಯಾವುದಾದರೂ ಒಂದು ಅಂಗೀಕರಿಸಲ್ಪಟ್ಟ ಜನಗಳ ಸಮಾಜ ಯಾ ಸಂಘವಿದ್ದಲ್ಲಿ ಸದರಿ ಸಮಾಜ ಯಾ ಸಂಘದ ಮೆಂಬರುಗಳ ಒಟ್ಟು ಸಂಖ್ಯೆಯ ಪೈಕಿ ಮುಕ್ಕಾಲುಪಾಲಿಗೆ ಕಡಿಮೆಯಿಲ್ಲದಷ್ಟು ಸಂಖ್ಯೆಯ ಮೆಂಬರುಗಳಿಂದ ಮಂಜೂರಾಗಿರುವ ತೀರ್ಮಾನದ ಸದರಿ ಸಮಾಜ ಯಾ ಸಂಘದವರು ತಮ್ಮೊಳಗೆ ಚುನಾಯಿಸಲ್ಪಟ್ಟ [illegible] ಪ್ರತಿನಿಧಿಗಳು ಮ್ಯುನಿಸಿಪಲ್ ಕೌನ್ಸಿಲಿನಲ್ಲಿರುವಂತೆ ಮಾಡ ವಿಶೇಷ:—ಮು[illegible]ಸರ್ಕಾರದವರಿಗೆ ಅರ್ಜಿಕೊಡಬಹುದು. ಆದರೆ ಅಂಥ ತೀರ್ಮಾನವಾದ ತಾರೀಖಿಗೆ ಪೂರ್ವ ೬ ತಿಂಗಳವರೆಗೆ ಸದರಿ ಸಮಾಜ ಯಾ ಸಂಘದಲ್ಲಿ ೧೦೦ ಮೆಂಬರುಗಳಿಗಿಂತ ಕಡಿಮೆಯಾಗಿರಕೂಡದು. ಮತ್ತು ಮೆಂಬರುಗಳ ಪೈಕಿ ಮುಕ್ಕಾಲುಪಾಲಿಗೆ ಕಡಿಮೆಯಿಲ್ಲದಷ್ಟು ಜನರು ಓಟರುಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ಬರೆಸಲು ಅರ್ಹರಾಗಬೇಕು. ಮತ್ತು ಈ ಅರ್ಜಿ ಮೇಲೆ ಸರ್ಕಾರದವರು ತಮಗೆ ಯುಕ್ತತೋರಿದಂತೆ ಹುಕುಂ ಮಾಡಬಹುದು” ಎಂಬುದಾಗಿರುತ್ತದೆ.

ಈ ನಿಬಂಧನೆಯಿಂದ ಯಾವುದಾದರೊಂದು ಜನವರ್ಗದವರು ತಮ್ಮ ಊರಿನ ಮ್ಯುನಿಸಿಪಾಲಿಟಿಯಲ್ಲಿ ತಮ್ಮ ವರ್ಗದ ಪ್ರತಿನಿಧಿಯೊಬ್ಬನನ್ನೋ ಇಬ್ಬರನ್ನೋ ಸೇರಿಸಿಕೊಳ್ಳಬೇಕೆಂದು ಅಪೇಕ್ಷಿಸಿದರೆ ಅದಕ್ಕೆ ಅನುಕೂಲ್ಯವು ಕಲ್ಪಿಸಿಕೊಡಲ್ಪಟ್ಟಿರುತ್ತದೆ. ಮತ್ತೂ ಸರ್ಕಾರದವರಿಂದ ಅಂಗೀಕೃತವಾಗಿರುವ ಯಾವುದೊಂದು ಸಮಾಜ ಅಥವಾ ಸಂಘದವರಾದರೂ ಸರ್ಕಾರದವರಿಗೆ ಬಿನ್ನಯಿಸಿಕೊಂಡು ತಮ್ಮ ಪ್ರತಿನಿಧಿಯನ್ನು ಆಯಾ ಮ್ಯುನಿಸಿಪಾಲಿಟಿಯಲ್ಲಿ ಸೇರಿಸಬಹುದಾಗಿರುತ್ತದೆ. ಈ ರೀತಿಯಾಗಿ ಸರ್ಕಾರದವರು ಪ್ರತ್ಯೇಕಪ್ರಾತಿನಿಧ್ಯ ತತ್ತ್ವೋದ್ಧಾರಕ್ಕಾಗಿ ಉದಾರವಾದ ಅಪ್ಪಣೆಯನ್ನು ಮಾಡಿರುವುದಕ್ಕಾಗಿ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಆದರೆ ಇಲ್ಲಿ ವಿಚಾರಮಾಡತಕ್ಕ ವಿಷಯವೊಂದಿರುತ್ತದೆ. ಏನೆಂದರೆ—ಈ ನಿಬಂಧನೆಯು ಪ್ರತ್ಯೇಕಪ್ರಾತಿನಿಧ್ಯ ರಕ್ಷಣೆಗಾಗಿ ಉದ್ದೇಶಿಸಲ್ಪಟ್ಟಿದ್ದರೂ ಇದರಲ್ಲಿ ಕಾಣಿಸಲ್ಪಟ್ಟಿರುವ ವಿಧಾನವು ಮಾತ್ರ ಉದ್ದೇಶಸಾಧನೆಗೆ ಸುಕರವಾಗಿರುವುದಿಲ್ಲ. ಹೇಗೆಂದರೆ—ಬೆಂಗಳೂರು ಮೈಸೂರು ನಂಥ ಡಿವಿಜನ್ನುಗಳಾಗಿ ವಿಂಗಡಿಸಲ್ಪಟ್ಟಿರುವ ದೊಡ್ಡ ಮ್ಯುನಿಸಿಪಾಲಿಟಿಗಳಲ್ಲಿ ಸಮ್ಮತಿ ಕೊಡಲು ಅರ್ಹರಾದ ಜನರ ಪೈಕಿ ಶೇಕಡಾ ೫೦ ರಷ್ಟು ಜನರೂ, ಡಿವಿಜನ್ ವಿಭಾಗವಿಲ್ಲದ ಸಣ್ಣ ಮ್ಯುನಿಸಿಪಾಲಿಟಿಗಳಲ್ಲಿ ಶೇಕಡಾ ೨೫ ಕ್ಕೆ ಕಡಿಮೆಯಿಲ್ಲದಷ್ಟು ಜನರೂ ಒಂದು ಪಂಗಡಕ್ಕೆ ಸೇರಿದವರಾಗಿದ್ದರೇನೆಯೇ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೋರಿ ಅರ್ಜಿಯನ್ನು ಬರೆದುಕೊಳ್ಳಬಹುದೆಂದು ಮಾಡಿರುವ ನಿರ್ಬಂಧವು ಕಠಿನವಾಗಿರುತ್ತದೆ. ಜಾತಿವಾರು ಮನೆಗಳನ್ನು ಕಟ್ಟುವ ವಿಧಾನವಿಲ್ಲದಿರುವ ಪಟ್ಟಣಗಳಲ್ಲಿ ಒಂದೊಂದು ಡಿವಿಜನ್ನಿನೊಳಗೆ ಓಟನ್ನು ಕೊಡಲು ಅರ್ಹರಾದ ಒಟ್ಟು ಜನರಲ್ಲಿ ಅರ್ಧಭಾಗಕ್ಕೆ ಕಡಿಮೆಯಿಲ್ಲದಷ್ಟು ಜನರು (ಓಟನ್ನು ಕೊಡಲು ಅರ್ಹತೆಯುಳ್ಳವರಾದವರು) ಒಂದೇ ಒಂದು ವರ್ಗಕ್ಕೆ ಸೇರಿದವರಾಗಿರುವುದು ಅಸಂಭವ. ಇದರಮೇಲೂ ಒಂದುವೇಳೆ ಯಾವುದಾದರೂಕಡೆ ಅಷ್ಟುಜನರು ಇರುತ್ತಿದ್ದು ಅರ್ಜಿಯನ್ನು ಬರೆದುಕೊಂಡರೂ, ಸರ್ಕಾರದವರು ಯುಕ್ತತೋರಿದಂತೆ ಅಪ್ಪಣೆ ಕೊಡುವುದಾಗಿ ಹೇಳಲ್ಪಟ್ಟಿರುವುದರಿಂದ ಪರಿಣಾಮಫಲವು ಸಂದೇಹದಲ್ಲೇ ಪರ್ಯವಸನ್ನವಾಯಿತು. ಅದುಕಾರಣ ಈ ವರದಾನವು ರೂಪತಃ ರಮಣೀಯವಾಗಿರುವ ಮಟ್ಟಿಗೆ ಕಾರ್ಯತಃ ಅನುಕೂಲವಾಗಿರುವಂತೆ ತೋರುವುದಿಲ್ಲ. ಡಿವಿಜನ್ನುಗಳಾಗಿ ವಿಭಾಗಿಸಲ್ಪಟ್ಟಿರುವ ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಓಟನ್ನು ಕೊಡಲು ಅರ್ಹರಾದವರೊಳಗೆ ಶೇಕಡಾ ೫೦ ರಷ್ಟು ಜನರು ೧ ವರ್ಗಕ್ಕೆ ಸೇರಿದವರಾಗಿದ್ದರೆ ಅರ್ಜಿಯನ್ನು ಬರೆದುಕೊಳ್ಳಬಹುದೆಂದು ಮಾಡಿರುವ ನಿರ್ಬಂಧವನ್ನು ಶೇಕಡಾ ೨೫ ಕ್ಕಾದರೂ ಇಳಿಯಿಸಿದರೆ ಸ್ವಲ್ಪ ಅನುಕೂಲವಾಗುವುದು. ಮತ್ತು ಹಾಗೆ ಬಂದ ಅರ್ಜಿಯ ಮೇಲೆ ಯುಕ್ತತೋರಿದಂತೆ ಅಪ್ಪಣೆ ಮಾಡಲ್ಪಡುವುದೆಂಬ ಸಂಶಯದ ಮಾತನ್ನು ತಪ್ಪಿಸಿ, ಹಾಗೆ ಬಂದ ಅರ್ಜಿಯು ನಿಸ್ಸಂಶಯವಾಗಿ ನೆರವೇರಿಸಲ್ಪಡುವುದೆಂಬ ಬರವಸೆಯು ಹುಟ್ಟುವಂತೆ ಮಾಡಲ್ಪಡಬೇಕು. ಅಂಗೀಕೃತವಾದ ಸಮಾಜ ಅಥವಾ ಸಂಘಗಳ ವಿಷಯದಲ್ಲಿ ಹೇಳಲ್ಪಟ್ಟಿರುವ ವಿಧಾನಗಳೇನೂ ಕಠಿನವಾಗಿ ಇರುವುದಿಲ್ಲ. ಪ್ರತಿಯೊಂದು ಜನವರ್ಗವನ್ನೂ ರಾಜಕೀಯಾದಿ ಸಕಲ ವಿಷಯಗಳಲ್ಲೂ ಮುಂದುವರಿಯಿಸಬೇಕೆನ್ನುವ ಘನತರೋದ್ದೇಶದಿಂದ ಪ್ರೇರಿತರಾಗಿರುವ ನಮ್ಮ ಪ್ರಭುತ್ವದವರು ಪ್ರಜಾಸೌಕರ್ಯಕ್ಕೋಸ್ಕರವೇ ಇಂಥ ಹೊಸಹೊಸ ಏರ್ಪಾಟುಗಳನ್ನು ನಿರ್ಮಿಸುತ್ತಿರುವಾಗ, ಸಂಪೂರ್ಣವಾಗಿ ಅವರುಗಳಿಗೆ ಪ್ರಯೋಜಕವಾಗಿರುವಂತೆಯೂ ಸುಕರವಾಗಿರುವಂತೆಯೂ ಅವನ್ನು ಮಾಡಿಡುವುದು ಅತ್ಯವಶ್ಯಕವಾಗಿರುವುದು. ದೇಶದ ಸ್ಥಿತಿಗತಿಗಳನ್ನು ಅವಲೋಕಿಸುವವರಿಗೆಲ್ಲಾ ಇಂಥ ಏರ್ಪಾಟುಗಳಲ್ಲಿ ಎಷ್ಟು ಸುಲಭತೆಯು ಇದ್ದರೆ ಅಷ್ಟು ಅವು ಸಾರ್ಥಕವಾಗುವುವೆಂಬುದು ತೋರದೆ ಇರಲಾರದು. ಆದುಕಾರಣ ಇಂಥ ವರದಾನವನ್ನು ಉಪಯೋಗಕ್ಕೆ ಬರಲವಕಾಶವಿಲ್ಲದಂತೆ ಕೆಡವಿರುವುದಕ್ಕಿಂತಲೂ ಉಪಯೋಗಕ್ಕೆ ಬರುವ ರೀತಿಯಿಂದ ಪುನಸ್ಸಂಸ್ಕರಣವನ್ನು ಮಾಡಲು ಗೌರ್ನಮೆಂಟಿನವರು ಮನಸ್ಕರಿಸುವುದೇ ವಿಹಿತವು.

ಈ ಪತ್ರಿಕೆಯ ಬೇರೆಕಡೆಯಲ್ಲಿ ಮುದ್ರಿಸಿರುವ ನಂಜನಗೂಡು ಪತ್ರವ್ಯವಹಾರದಿಂದ ಒಂದೇ ಒಂದು ಜನವರ್ಗದವರು ಮುಂದುವರಿದು ಬೇರು ಬಿಟ್ಟು ಇತರರ ಮುಂಬರಿಯುವಿಕೆಗೆ ಎಷ್ಟು ತೊಡಕನ್ನು ಕಲ್ಪಿಸುವರೆಂಬುದು ಗೊತ್ತಾಗುವುದು. ಇಂಥ ವಿಷಯಗಳೆಲ್ಲಾ ಪ್ರತ್ಯೇಕ ಪ್ರಾತಿನಿಧ್ಯದ ಅವಶ್ಯಕತೆಯನ್ನು ಮತ್ತಷ್ಟು ಹೆಚ್ಚಿಸುತ್ತಿರುವುವು. ಗೌರ್ನಮೆಂಟಿನವರು ಉದಾರಚಿತ್ತದಿಂದ ಅನುಗ್ರಹಿಸಿದ ಶಾಸನಗಳ ಫಲವನ್ನೂ ಕೂಡ ಅನುಭವಿಸಲು ಹಿಂದುಳಿದವರಿಗೆ ಅವಕಾಶ ಕೊಡದಂತೆ ಅವರು ಎಷ್ಟೋ ತಂತ್ರಗಳನ್ನು ಮಾಡುವರು. ಹಿಂದುಳಿದವರು ವಿದ್ಯಾವಿವೇಕಗಳನ್ನು ಪಡೆದು, ತಮ್ಮ ಒಗ್ಗಟ್ಟನ್ನು ಹೆಚ್ಚಿಸಿಕೊಂಡು ಇಂಥ ಕುತಂತ್ರಗಳಿಗೆಲ್ಲಾ ಪ್ರತಿಭಟಿಸಿ ಸರ್ಕಾರದ ಉದ್ದೇಶವು ಸಾರ್ಥಕವಾಗುವಂತೆಯೂ, ಸ್ಥಳಿಕ ಸರ್ಕಾರದ ಕಾರ್ಯಗಳು ನಿಷ್ಪಕ್ಷಪಾತವಾಗಿ ನಡೆಯಲು ಅವಕಾಶವಾಗುವಂತೆಯೂ ಮಾಡಿಕೊಳ್ಳಬೇಕು. ಸರ್ಕಾರದವರು ಕೊಡುವ ಸೌಕರ್ಯವನ್ನು ತಮ್ಮ ಹಿತಕ್ಕೆ ಉಪಯೋಗಿಸಿಕೊಳ್ಳದಿರುವುದು ಪ್ರಜೆಗಳ ತಪ್ಪೇಹೊರತು ಪ್ರಭುತ್ವದವರದಲ್ಲ. ಮ್ಯುನಿಸಿಪಾಲಿಟಿಗಳಲ್ಲಿ ಓಟನ್ನು ಕೊಡತಕ್ಕವರ ಹೆಸರುಗಳು ಬಿಟ್ಟುಹೋಗಿದ್ದರೆ ಹೆಸರುಗಳ ಪಟ್ಟಿಯು ಪ್ರಕಟಿತವಾದ ೧ ವಾರದೊಳಗೆ ಆ ವಿಷಯವಾಗಿ ಮ್ಯುನಿಸಿಪಲ್ ಕೌನ್ಸಿಲಿಗೂ, ಬಳಿಕ ಡಿ|| ಜಡ್ಜರಿಗೂ ಅರ್ಜಿಯನ್ನು ಬರೆದುಕೊಳ್ಳಬಹುದು. ಚುನಾವಣೆಯಲ್ಲಿ ಅಕ್ರಮವು ನಡೆದಿದ್ದರೆ ೮ ದಿನಗಳೊಳಗಾಗಿ ಡಿ|| ಕಮಿಷನರಿಗೆ ಬರೆದುಕೊಳ್ಳಬಹುದು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಕಳೆದ ಸೋಮವಾರ ಸಾಯಂಕಾಲ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು.

ಸರದಾರ್ ಕಾಂತರಾಜ ಅರಸಿನವರು ಈ ತಾ|| ೨೬ ರಲ್ಲಿ ರಾಜಧಾನಿಗೆ ದಯಮಾಡಿಸಿ ಯುಗಾದಿ ಹಬ್ಬವಾದನಂತರ ಉದಕಮಂಡಲಕ್ಕೆ ಹೊರಡುವುದಾಗಿ ತಿಳಿಯುತ್ತೇವೆ.

ಬೆಂಗಳೂರು ಮ್ಯು|| ಕೌನ್ಸಿಲರುಗಳು ಸರ್ವರೂ ಒಗ್ಗಟ್ಟಿನಿಂದ ತಮ್ಮ ಮ್ಯುನಿಸಿಪಾಲಿಟಿಗೆ ಮಿ|| ಅಬ್ಬಾಸ್‌ಖಾನರನ್ನು ವೈಸ್‌ಪ್ರೆಸಿಡೆಂಟರನ್ನಾಗಿ ಆರಿಸಿದರೆಂದು ಕೇಳಿ ಸಂತೋಷಿಸುತ್ತೇವೆ.

ನಮ್ಮ ಶ್ರೀಮನ್ಮಹಾರಾಜರವರು ಇಂಪೀರಿಯಲ್ ಇಂಡಿಯನ್ ರಿಲೀಫ್‌ಫಂಡಿಗೆ ೧|| ಲಕ್ಷ ರೂ. ಗಳನ್ನೂ ಕಿಂಗ್‌ಜಾರ್ಜ್‌ರವರ ಫಂಡಿಗೆ ೬೦ ಸಾವಿರ ರೂ. ಗಳನ್ನೂ ಚಂದಾ ಕೊಟ್ಟಿರುತ್ತಾರೆ.

ವಿದ್ಯಾಭ್ಯಾಸಶಾಖೆಯ ಇನ್|| ಜನರಲ್‌ರವರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮಿ|| ಎಂ. ಜಿ. ಮೇಕ್ರಿಯವರು ಜನರಲ್ ಮತ್ತೂ ರೆವಿನ್ಯೂಶಾಖೆಯ ಅಂ|| ಸೆಕ್ರೆಟರಿಗಳಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಯಡತೊರೆ ತಾ|| ಸಾಲಿಗ್ರಾಮಕ್ಕೆ ಸೇರಿದ ತಂದ್ರಕೀಳನಕೊಪ್ಪಲು ಎಂಬ ಗ್ರಾಮದಲ್ಲಿ ಕಳೆದ ತಾ|| ೨೦ ರಲ್ಲಿ ಮಳೆ ಬಂದಾಗ್ಗೆ ಒಬ್ಬ ಕುರುಬರ ಹೆಂಗುಸು ಸಿಡಿಲಿನ ಪೆಟ್ಟನ್ನುತಿಂದು ಸತ್ತುಹೋದಳು.

ಈ ಸಂಚಿಕೆಯಲ್ಲಿ ಗರ್ಭಿತವಾಗಿರುವ ಮದರಾಸಿನ ಮಹರಾಟ ಟ್ರೇಡಿಂಗ್ ಕಂಪೆನಿಯಲ್ಲಿ ದೊರೆಯುವ ಯುದ್ಧದ ಫೋಟೋ ಮೊದಲಾದ ಪದಾರ್ಥಗಳ ಪ್ರಕಟನಪತ್ರಿಕೆಯನ್ನು ವಾಚಕರು ಗಮನಿಸುವವರಾಗಬೇಕು.

ಸಂಸ್ಥಾನದ ಫೈನಾನ್ಷಿಯಲ್ ಸೆಕ್ರೆಟರಿಗಳಾಗಿರುವ ದಿ|| ಬ|| ಜ್ಞಾನಶರಣ ಚಕ್ರವರ್ತಿಯವರು ಇಷ್ಟರಲ್ಲೇ ಸಂಸ್ಥಾನದ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟು ಇಂಡ್ಯಾಗೌರ್ನಮೆಂಟ್ ಸರ್ವೀಸಿಗೆ ತೆರಳುವವರಾಗಿದ್ದಾರೆಂದು ಕೇಳುತ್ತೇವೆ.

ಕಡೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಾಗಿರುವ ಮ|| ಸಿ. ದೇವರಾಜ ಅರಸಿನವರು ಉದ್ಯೋಗದಿಂದ ನಿವೃತ್ತರಾಗುವರೆಂದೂ ಅವರ ಸ್ಥಾನಕ್ಕೆ ಮ|| ಕೆ. ಮೈಲಾರಿರಾವ್‌ರವರು ಆಕ್ಟಿಂಗ್ ಡಿಸ್ಟ್ರಿಕ್ಟ್ ಕಮಿಷನರಾಗಿ ನಿಯಮಿಸಲ್ಪಡುವರೆಂದೂ ಕೇಳುತ್ತೇವೆ.

ವಿದ್ಯಾಭ್ಯಾಸಶಾಖೆಯ ಇನ್|| ಜನರಲ್‌ರವರಾದ ಮ|| ರಾಮಲಿಂಗ ರಡ್ಡಿ ಎಂ. ಎ. ಯವರು ಯೂರೋಪುಖಂಡದಲ್ಲಿ ಸಂಚರಿಸಿಕೊಂಡು ಬರುವುದಕ್ಕಾಗಿ ೧|| ವರ್ಷದ ರಜಾವನ್ನು ಕೇಳಿಕೊಂಡಿದ್ದರೆಂತಲೂ, ಅದನ್ನು ಗೌರ್ನಮೆಂಟಿನವರು ಸದ್ಯಃ ಒಪ್ಪಲಿಲ್ಲವೆಂತಲೂ ಕೇಳುತ್ತೇವೆ.

ಕಳೆದ ನಂಜನಗೂಡು ಜಾತ್ರೆಯ ಕಾಲದಲ್ಲಿ ದೊಡ್ಡತೇರು ಹರಿಯುವಾಗ್ಗೆ ರಥದ ಅಚ್ಚು ಸಿಡಿದುಹೋದುದರಿಂದ ಅದನ್ನು ಕಳೆದು ಬೇರೊಂದು ಅಚ್ಚನ್ನು ಜೋಡಿಸಿ ರಥವನ್ನು ಸಾಗಿಸಬೇಕಾಗಿ ಬಂದುದರಿಂದ ಮುಖ್ಯ ರಥವು ಸ್ಥಾನಕ್ಕೆ ನಿಲ್ಲುವುದಕ್ಕೆ ರಾತ್ರಿ ೯ ಗಂಟೆಯಾಯಿತು. ಉಳಿದ ನಾಲ್ಕು ತೇರುಗಳು ರಾತ್ರಿಯೆಲ್ಲಾ ಹರಿದುವು.

ಕಾಮನಹುಣ್ಣಿಮೆಯಾದ ಮರುದಿನದಿಂದಲೂ ರಾಜಧಾನಿಯಲ್ಲೂ ಮೈಸೂರು ಡಿಸ್ಟ್ರಿಕ್ಟಿನ ಹಲವು ಕಡೆಗಳಲ್ಲೂ ಸಾಯಂಕಾಲದ ಹೊತ್ತು ಮೋಡ ಕವಿದು ಗುಡುಗು ಸಿಡಿಲುಗಳ ಆರ್ಭಟದಿಂದ ಒಂದೊಂದುಕಡೆ ಮಳೆಯಾಗುತ್ತಲೇ ಇದೆ. ರಾಜಧಾನಿಯಲ್ಲಿ ಮಂಗಳವಾರ ಬಿದ್ದ ಮಳೆಯು ಹದವಾಗಿದ್ದಿತು. ಕೆಲಕಡೆ ಜೋಳದ ಬಿತ್ತನೆಗೆ ಆರಂಭವಾಗಿದೆ.

ಈ ತಿಂಗಳಲ್ಲಿ ಕೂಡುವುದಕ್ಕಿರುವ ನಿಯಮನಿರ್ಮಾಣಸಭೆಯಲ್ಲಿ ಮೈಸೂರು ಸಂಸ್ಥಾನದಲ್ಲೇ ವ್ಯವಹಾರಕ್ಕೆ ತರುವಂಥ ನೋಟುಗಳ ಏರ್ಪಾಟಿನ ವಿಷಯವು ಚರ್ಚೆಗೆ ಬರುವುದೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದು ಎಷ್ಟುಮಟ್ಟಿಗೆ ನಿಜವೋ ಹೇಳಲಾಗುವುದಿಲ್ಲ. ನಿಜವಾಗಿ ಇಂಥ ಏರ್ಪಾಡಾಗುವುದಾಗಿದ್ದರೆ ಅದು ಪ್ರಜೆಗಳಿಗೆ ಮತ್ತಷ್ಟು ತೊಂದರೆಯನ್ನು ಹೆಚ್ಚಿಸುವುದೇ ಹೊರತು ಸೌಕರ್ಯವನ್ನು ಕಲ್ಪಿಸುವ ಹಾಗಿಲ್ಲ. ಈಗಣ ಇಂಡ್ಯಾ ಸರ್ಕಾರದ ನೋಟುಗಳ ವ್ಯವಹಾರವೇ ಪ್ರಜೆಗಳಿಗೆ ಭಾರವಾಗಿರುವಾಗ ಸಂಸ್ಥಾನದ ಹೊರಗೆ ವ್ಯವಹರಿಸಲಾಗದೆ ಒಳಗೆ ಮಾತ್ರವೇ ವ್ಯವಹರಿಸಬಲ್ಲ ಕಾಗದದ ಚೂರುಗಳನ್ನು ಕಟ್ಟಿಕೊಂಡು ಒದ್ದಾಡುವುದು ಪ್ರಜೆಗಳಿಗೆ ಮತ್ತಷ್ಟು ತೊಂದರೆಯನ್ನೇ ಹೆಚ್ಚಿಸುವುದೆಂಬುದರಲ್ಲಿ ಸಂಶಯವಿಲ್ಲ.

ಬೆಂಗಳೂರಿನಲ್ಲಿ ಬಡವಿದ್ಯಾರ್ಥಿಗಳ ಫಂಡೆಂದು ಒಂದು ಫಂಡು ಏರ್ಪಾಡಾಗಿರುವುದೆಂದೂ, ಇದಕ್ಕೆ ಮ|| ಸಿ. ಎಸ್. ಬಾಲಸುಂದರಂ ಅಯ್ಯರ್‌ರವರು ಪ್ರೆಸಿಡೆಂಟರಾಗಿಯೂ, ಇನ್ನು ಕೆಲವರು ಬ್ರಾಹ್ಮಣರುಗಳು ವೈಸ್‌ಪ್ರೆಸಿಡೆಂಟರಾಗಿಯೂ ಕಾರ್ಯದರ್ಶಿಗಳಾಗಿಯೂ ಇರುವರೆಂದೂ ಸಂಪದಭ್ಯುದಯ ಪತ್ರಿಕೆಯು ಹೇಳಿರುತ್ತದೆ. ಈ ಬಡವಿದ್ಯಾರ್ಥಿಗಳ ಫಂಡೆಂದರೆ ಮೈಸೂರಿನ ಅನಾಥಾಲಯದಂತೆ ಬ್ರಾಹ್ಮಣವಿದ್ಯಾರ್ಥಿಗಳಿಗೆ ಸಂಬಂಧಪಟ್ಟುದೇ ಆಗಿರಬೇಕೆಂದುತೋರುತ್ತದೆ. ಹಿಂದೆ ಒಬ್ಬ ವೀರಶೈವ ಎಕನಾಮಿಕ್ ಸೂಪರಿಂಟೆಂಡೆಂಟರು ಒಂದಾನೊಂದು ವಿದ್ಯಾಭಿವೃದ್ಧಿಫಂಡನ್ನು ಶೇಖರಿಸುವಲ್ಲಿ ಮತವರ್ಜನ ಮಾಡುತ್ತಿರುವರೆಂಬಕಾರಣದಿಂದ ಮೈಸೂರು ಪೇಟ್ರಿಯಟ್‌ಪತ್ರಿಕೆಯು ಅವರನ್ನು ಬಯಲಿಗೆ ಎಳೆದಿದ್ದಿತು. ಅದರಮೇಲೆ ಮ|| ಬಿ. ನರಸಿಂಗರಾಯರು ನಿಯಮನಿರ್ಮಾಣಸಭೆಯಲ್ಲಿ ಈ ವಿಷಯವಾಗಿ ಚರ್ಚೆಯನ್ನು ಬೆಳೆಯಿಸಿದ್ದರು. ಈಗ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯವರೇ ಇಂಥ ಫಂಡಿನ ಸಂಬಂಧವನ್ನಿಟ್ಟುಕೊಂಡಿರುವುದರಿಂದ, ಇವರ ವಿಷಯದಲ್ಲಿ ಯಾವ ಪತ್ರಿಕೆಯವರೂ ಯಾವ ಲೆ|| ಕೌ|| ಮೆಂಬರೂ ಕಾರ್ಯಭಾಗವನ್ನು ನಡೆಯಿಸಿ ನ್ಯಾಯೋದ್ಧಾರವನ್ನು ಮಾಡುವುದಕ್ಕಿದ್ದಾರೋ ನೋಡಬೇಕಾಗಿದೆ. ಬ್ರಾಹ್ಮಣರಿಗೊಂದು ನ್ಯಾಯ, ಇತರರಿಗೊಂದುನ್ಯಾಯವೆಂದು ಜನರು ಆಡಿಕೊಳ್ಳುವ ಮಾತು ಎಷ್ಟುಮಟ್ಟಿಗೆ ನಿಜವೆಂಬುದನ್ನು ಇದರ ಪರ್ಯವಸಾನವು ನಿದರ್ಶನಪಡಿಸತಕ್ಕುದಾಗಿದೆ.

ಧಾನ್ಯಗಳ ಮಾರಾಟ ಮತ್ತು ಬೆಲೆಗಳ ವಿಷಯದಲ್ಲಿ ಸರ್ಕಾರದವರು ನಿರ್ಬಂಧವನ್ನೇರ್ಪಡಿಸಿದ್ದಾಗ, ಜನರು ಆ ನಿರ್ಬಂಧದಿಂದಲೇ ಪ್ರಜೆಗಳಿಗೆ ದುರ್ಭಿಕ್ಷವುಂಟಾಗಿರುವುದೆಂದೂ, ಸರಾಗವಾಗಿ ಧಾನ್ಯಗಳು ಒದಗುವುದಕ್ಕವಕಾಶವಿಲ್ಲವೆಂದೂ, ಎಲ್ಲಾ ನಿರ್ಬಂಧಗಳನ್ನೂ ತಪ್ಪಿಸಿಬಿಟ್ಟರೆ ಕಷ್ಟಗಳೆಲ್ಲಾ ಪರಿಹಾರವಾಗುವುವೆಂದೂ ಕೂಗಿಕೊಳ್ಳುತ್ತಿದ್ದರು. ಸರ್ಕಾರದವರು ನಿರ್ಬಂಧಗಳನ್ನು ತಪ್ಪಿಸಿಬಿಟ್ಟರು, ಈಗ ದಾರಣೆಗಳು ಮೊದಲಿಗಿಂತಲೂ ಹೆಚ್ಚಾದುವು. ತಕ್ಕಷ್ಟು ದೊರೆಯುವುದೂ ಇಲ್ಲ. ಈ ಕಾರಣದಿಂದ ಮತ್ತೆ ಸರ್ಕಾರದವರು ನಿರ್ಬಂಧಪಡಿಸುವುದೇ ವಿಹಿತವೆಂದು ಜನರು ಮೊರೆಯಿಟ್ಟುಕೊಳ್ಳುತ್ತಿದ್ದಾರೆ. ಈ ಪಾಡು ನಮ್ಮ ಸಂಸ್ಥಾನದಲ್ಲಿಮಾತ್ರವೇ ಇಲ್ಲ; ಭರತಖಂಡದ ಎಲ್ಲಾ ಕಡೆಯೂ ಹೀಗೆಯೇ ಆಗಿದೆ. ಮದ್ರಾಸಿನವರು ಮೈಸೂರಿನವರೇನೋ ಸುಖವಾಗಿದ್ದಾರೆಂದು ತಿಳಿದುಕೊಂಡು ತಮಗಿರುವ ವ್ಯಾಪಾರನಿರ್ಬಂಧವನ್ನು ತಪ್ಪಿಸಬಡರೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದಾರೆ. ಇದನ್ನು ನೋಡಲಾಗಿ ಮಾಘಕವಿಯು ಒಂದುಕಡೆ “ಬಿಂಬೋಷ್ಠಂ ಬಹುಮನುತೇತುರಂಗವಕ್ತ್ರಶ್ಚುಂಬಂತಂಮುಖಮಿತಕಿನ್ನರಂ ಪ್ರಿಯಾಯಾಃ | ಶ್ಲಿಷ್ಯಂತಂ ಮುಹುರಿತರೋಪಿತಂ ನಿಜಸ್ತ್ರೀಮುತ್ತುಂಗಸ್ತನಭರಭಂಗಭೀರುಮಧ್ಯಾಂ” ಎಂದರೆ—ಕುದುರೆಮುಖದಂತೆ ಮುಖವುಳ್ಳ ಒಬ್ಬ ಕಿನ್ನರನು, ತನ್ನ ಪ್ರಿಯೆಯ ಮುಖಚುಂಬನ ಮಾಡುತ್ತಲಿದ್ದ ಮನುಷ್ಯಮುಖದ ಕಿನ್ನರನನ್ನು ನೋಡಿ ಅವನೇ ತನಗಿಂತ ಧನ್ಯನೆಂದು ತಿಳಿದುಕೊಳ್ಳುತ್ತಿದ್ದನು. ಆ ಮನುಷ್ಯಮುಖದವನಾದರೊ, ತನಗೆ ಮನುಷ್ಯದೇಹವಿಲ್ಲದೆ ಆ ಅಶ್ವಮುಖದವನಿಗೆ ಮನುಷ್ಯದೇಹವಿದ್ದು ಅವನು ತನ್ನ ಪತ್ನಿಯನ್ನು ಆಲಿಂಗಿಸುತ್ತಿರುವುದನ್ನು ನೋಡಿ, ತನಗೆ ಆ ಸುಖಾನುಭವಕ್ಕೆ ಅವಕಾಶವಿಲ್ಲದುದರಿಂದ ತನಗಿಂತ ಅವನೇ ದೊಡ್ಡವನೆಂದು ತಿಳಿಯುತ್ತಿದ್ದನು ಎಂಬುದಾಗಿ ಹೇಳಿರುವ ಶ್ಲೋಕವು ಸ್ಮರಣೆಗೆ ಬರುತ್ತಿದೆ. ಯಾವ ಏರ್ಪಾಟುಗಳನ್ನು ಮಾಡಿದರೂ ಮಳೆಬೆಳೆಗಳು ಆಗುವವರೆಗೆ ಕಷ್ಟಪಡುವುದು ತಪ್ಪುವುದಿಲ್ಲ.

ಭರತಖಂಡದ ವೃತ್ತಾಂತಗಳು.

ಯುದ್ಧದಲ್ಲಿ ಸತ್ತ ಸೈನಿಕರ ಆಶ್ರಿತಕುಟುಂಬದವರಿಗೂ, ಅಂಗವಿಕಲರಾದ ಸೈನಿಕರಿಗೂ ಸಹಾಯ ಮಾಡಲಿಕ್ಕಾಗಿ ವೈಸ್ರಾಯರು ಏರ್ಪಡಿಸಿರುವ ಫಂಡಿಗೆ ಪಂಜಾಬು ಅಧಿಪತ್ಯದಲ್ಲಿ ಇದುವರೆಗೆ ೧೧,೮೪,೦೦೦ ರೂ. ಗಳು ಕೂಡಿರುತ್ತವೆ.

ಮದರಾಸಿನ ಈಗಿನ ಗೌರ್ನರು ಪತ್ನೀಸಮೇತರಾಗಿ ಈ ತಿಂಗಳ ಕೊನೆಯಲ್ಲಿ ಸೀಮೆಗೆ ಪ್ರಯಾಣಮಾಡುವರು. ಹೊಸಗೌರ್ನರಾದ ಲಾರ್ಡ್ ವಿಲ್ಲಿಂಗ್ಡನ್‌ರವರು ಸಪರಿವಾರರಾಗಿ ಏಪ್ರಿಲ್ ತಾ|| ೧೨ ರೊಳಗಾಗಿ ಮದ್ರಾಸಿಗೆ ಬರುವವರಾಗಿದ್ದಾರೆ.

ಇಂಗ್ಲೆಂಡಿನಲ್ಲಿ ಭಾರತ ರಾಜಕೀಯ ಸಂಸ್ಕರಣಗಳನ್ನು ಕುರಿತು ಉಪನ್ಯಾಸ ಮಾಡುವ ಕಾರ್ಯಕ್ಕಾಗಿ ಅಖಿಲಭಾರತ ಮಹಮ್ಮದೀಯ ಸಂಘದ ೮ ಮಂದಿ ಪ್ರತಿನಿಧಿಗಳಿಗೆ ಸೀಮೆಗೆ ಹೋಗಲು ಇಂಡ್ಯಾ ಸರ್ಕಾರದವರು ಅಪ್ಪಣೆಚೀಟಿ ಕೊಟ್ಟಿದ್ದಾರೆ.

“ಪಂಚಮ” ಎಂಬ ಹೆಸರಿನಿಂದ ಒಂದು ಮಾಸಪತ್ರವು ತೆಲುಗಿನಲ್ಲಿ ಹೈದರಾಬಾದಿನಲ್ಲಿ ಪ್ರಕಟಿತವಾಗುತ್ತಿದೆ. ಜೆ. ಎಸ್. ಮುತ್ತಯ್ಯ ಎಂಬುವರು ಇದರ ಪ್ರಕಾಶಕರು. ಇದು ಪಂಚಮರ ಅಭ್ಯುದಯಕ್ಕೆ ಸಾಧಕವಾದ ವಿಷಯಗಳನ್ನು ಪ್ರತಿಪಾದಿಸುತ್ತದೆ. ವಾರ್ಷಿಕಚಂದಾ ೧|| ರೂ.

ಮ|| ತಿಲಕರು ಸರ್ ವಾಲಂಟೈನ್ ಚಿರೋಲರಮೇಲೆ ಇದುವರೆಗೆ ನಡೆಸಿದ ವ್ಯಾಜ್ಯದ ವೆಚ್ಚಕ್ಕೂ ಮುಂದೆ ನಡೆಯಿಸುವ ಅಪ್ಪೀಲಿನ ವೆಚ್ಚಕ್ಕೂ ಸಹ ೪ ಲಕ್ಷ ರೂ. ಗಳು ಆಗುವುವಂತೆ. ಇದನ್ನು ಜನರಿಂದ ಕೂಡಿಸುವ ಪ್ರಯತ್ನವನ್ನು ತಿಲಕರ ಅನುಚರರು ದೇಶದಲ್ಲಿ ನಡೆಯಿಸುತ್ತಿದ್ದಾರೆ.

ಸಾಮ್ರಾಜ್ಯಶಾಸನಸಭೆಯಲ್ಲಿ ಬಹುಕಾಲವನ್ನೆಲ್ಲಾ ರೌಲತ್‌ಬಿಲ್ಲುಗಳ ಚರ್ಚೆಯೇ ಹಿಡಿಯಿತು. ಒಂದೆರಡು ದಿನ ರಾತ್ರಿಯ ಹೊತ್ತು ಬೆಳಗಿನ ಜಾವದ ವರೆಗೂ ಸಭಾಕಾರ್ಯಗಳು ಜರುಗಿದುವು. ಸಭಿಕರು ಸೂಚಿಸಿದ ಸವರಣೆಗಳಾವುವೂ ಫಲಕಾರಿಯಾಗಲಿಲ್ಲ. ಈಗ ನಡೆದಷ್ಟು ಧೀರತನದ ವಾದೋಪವಾದಗಳು ಹಿಂದೆ ಯಾವಾಗಲೂ ಯಾವ ಬಿಲ್ಲಿನ ವಿಷಯವಾಗಿಯೂ ನಡೆದಿಲ್ಲವೆಂದು ಹೇಳಬಹುದು. ಕಡೆಗೂ ಕಳೆದ ಮಂಗಳವಾರ ಬಿಲ್ಲು ಶಾಸನವಾಗಿ ಏರ್ಪಟ್ಟಿತು.

ಕಳೆದ ೧೮ ರ ಬೆಳಿಗ್ಗೆ ಮ|| ಗಾಂಧಿಯವರು ಮದ್ರಾಸಿಗೆ ಬಂದರು. ದೇಹಾರೋಗ್ಯವು ಸಮರ್ಪಕವಾಗಿಲ್ಲದುದರಿಂದ ಕೆಲ ಪುರಪ್ರಮುಖರು ಮಾತ್ರ ನಿಲ್ದಾಣಕ್ಕೆ ಹೋಗಿ ಇದಿರ್ಗೊಂಡರು. ಈಗ ಅವರು ಮ|| ಕಸ್ತೂರಿರಂಗಯ್ಯಂಗಾರ್ಯರ ಮನೆಯಲ್ಲಿ ಇಳಿದುಕೊಂಡಿದ್ದಾರೆ. ಮದ್ರಾಸು ಪುರಜನರಿಗೆ ಸತ್ಯಾಗ್ರಹ ಮಂತ್ರೋಪದೇಶವನ್ನು ದೊಡ್ಡಸಭೆಯಲ್ಲಿ ಮಾಡಿದರು. ಇದೇ ಕಾರ್ಯಕ್ಕಾಗಿ ಇವರು ಗುಂಟೂರು, ಮಚಲೀಪಟ್ಟಣ ಬೆಜವಾಡ ಮೊದಲಾದ ಕಡೆಗಳಿಗೆ ತೆರಳುವವರಾಗಿದ್ದಾರೆ.

ಕಳೆದ ಜನವರಿ ತಿಂಗಳೊಂದರಲ್ಲೇ ವಿದೇಶಗಳಿಂದ ನಮ್ಮ ಭರತಖಂಡದ ಬೊಂಬಾಯಿ ಮದ್ರಾಸು ಕಲ್ಕತ್ತಾ ಕರಾಚಿ ಬರ್ಮಾ ರೇವುಗಳಿಗೆ ೧೯೬ ಹಡಗುಗಳು ೪೪೫೮೯೪ ಟನ್ನುಗಳ ತೂಕದ ಸಾಮಗ್ರಿಗಳನ್ನು ತಂದುಕೊಟ್ಟಿರುತ್ತವೆ. ಅದೇ ಕಾಲದಲ್ಲಿ ಈ ದೇಶದ ರೇವುಗಳಿಂದ ೧೯೪ ಹಡಗುಗಳು ೪೯೪೦೬೮ ಟನ್ನುಗಳ ಭಾರದ ಸಾಮಗ್ರಿಗಳನ್ನು ಸಾಗಿಸಿಕೊಂಡು ಹೋಗಿವೆ. ಅಲ್ಲದೆ ೨೮೪ ಸಣ್ಣ ಹಡಗುಗಳು ಬೇರೆ ೪೦ ಸಾವಿರ ಟನ್ನುಗಳ ಸಾಮಗ್ರಿಗಳನ್ನು ಈ ದೇಶಕ್ಕೆ ತಂದಿರುತ್ತವೆ.

ಸಿಂಹಲದ್ವೀಪ (ಲಂಕಾ) ಕ್ಕೆ ಸೇರಿದ ರಾವಣ ಎಂಬ ಗ್ರಾಮದಲ್ಲಿ ವಾಸಿಸುವ ಒಬ್ಬಾನೊಬ್ಬ ಸಿಂಗಾಲಿಗೆ ೧೨೦೦ ಕ್ಯಾರೆಟ್ಟುಗಳ ತೂಕದ ಒಂದು ಇಂದ್ರನೀಲರತ್ನವು ಸಿಕ್ಕಿತು. ಅದನ್ನು ಅವನು ತನ್ನ ಆಪ್ತನೊಬ್ಬನಿಗೆ ತೋರಿಸಿದನು. ಅವನು ಅದಕ್ಕೆ ೧೦೦ ರೂ. ಬೆಲೆ ಕಟ್ಟಿದನು. ಕಡೆಗೆ ಸಿಂಗಾಲಿಯು ಅದನ್ನು ೮೦ ರೂ. ಗೆ ಮಾರಿಬಿಟ್ಟನು. ಅದೇ ರತ್ನವು ಈಗ ೩೦ ಸಾವಿರ ರೂ. ಬೆಲೆ ಕಟ್ಟಲ್ಪಡುತ್ತಿದೆ. ಅದೃಷ್ಟಹೀನರ ಕೈಗೆ ಮಣಿ ಸಿಕ್ಕಿದರೂ ಮಣ್ಣಾಗುವುದೆಂಬ ಗಾಥೆಗೆ ಇದೂ ಒಂದು ನಿದರ್ಶನವು.

“ಶಾಂತಿಸಮಯದಲ್ಲಿ ರೌಲತ್‌ಬಿಲ್ಲನ್ನು ಈ ರೂಪದಿಂದ ಶಾಸನವಾಗಿ ಏರ್ಪಡಿಸಿದುದು ನ್ಯಾಯಶಾಸ್ತ್ರಪ್ರಧಾನಸೂತ್ರಕ್ಕೆ ಭಂಗಕರವೂ, ವ್ಯಕ್ತಿಸ್ವಾತಂತ್ರ್ಯಕ್ಕೆ ಉಪದ್ರವಕರವೂ ಆಗಿರುವುದಲ್ಲದೆ ಸ್ವಾತಂತ್ರ್ಯನಾಶಕ್ಕೆ ಆರಂಭದಶೆಯನ್ನು ಸೂಚಿಸುತ್ತದೆ. ಆದುಕಾರಣ ಸಾಮ್ರಾಜ್ಯಶಾಸನ ಸಭೆಯಲ್ಲಿ ನನಗಿದ್ದ ಸಭ್ಯತ್ವಕ್ಕೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ಅದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ” ಎಂಬುದಾಗಿ ಆ|| ಬಯ್ಯಾ ನರಸಿಂಹೇಶ್ವರಶರ್ಮರವರು ವೈಸ್ರಾಯರಿಗೆ ಬರೆದು ತಮ್ಮ ಪದವಿಯನ್ನು ಪರಿತ್ಯಾಗ ಮಾಡಿದರು.

ತಮಗೆ ಯಾರೋ ಅನಾಮಧೇಯರು ಒಂದು ಪತ್ರವನ್ನು ಹೀಗೆ ಬರೆದಿರುವರೆಂದು ಅನಿಬೆಸೆಂಟಮ್ಮನವರು ತಮ್ಮ ನ್ಯೂಇಂಡಿಯಾ ಪತ್ರದಲ್ಲಿ ಪ್ರಕಟಿಸಿಕೊಂಡಿರುವರು. ಅದೇನೆಂದರೆ—“ಕೂಡಲೇ ನೀನು ಗಂಟುಮೂಟೆ ಕಟ್ಟಿಕೊಂಡು ಹಿಂದಕ್ಕೆ ಸರಿ. ಕುದುರೆ ಚಾಟಿಯಿಂದ ಬಾರಿಸಲ್ಪಡುವುದಕ್ಕೆ ನೀನು ಪಾತ್ರಳಾಗಿದ್ದೀಯೆ. ನಿನ್ನ ತಲೆಯನ್ನು ಬೋಳಿಸಿ, ಹಸುವಿನ ಸಗಣಿಯನ್ನು ಬಳಿದು ಶುದ್ಧಿಗೊಳಿಸಿ, ಕತ್ತೆಯಮೇಲೆ ನಿನ್ನನ್ನು ಕುಳ್ಳಿರಿಸಿ ಮೆರವಣಿಗೆ ಮಾಡಿ ಕಸಪೊರಕೆಯಿಂದ ಹೊಡೆಯಲು ಯಾರನ್ನಾದರೂ ನಿಯಮಿಸಬೇಕೆಂದು ನನಗಿಷ್ಟವಿದೆ. ನೀನು ಈ ದೇಶವನ್ನು ಬಿಟ್ಟು ಕೂಡಲೇ ಹೊರಟುಹೋಗದಿದ್ದರೆ ಪರಲೋಕಕ್ಕೆ ಪ್ಯಾಕ್‌ಮಾಡಿ ಕಳುಹಿಸಲ್ಪಡುವೆ. ಎಲೆ ಮುದಿಮಾಯಗಾತಿ ಎಚ್ಚರ!” ಸಮುದ್ರತೀರದಲ್ಲಿ ಶಿಲಾಮೂರ್ತಿಯಾಗಿ ಪ್ರತಿಷ್ಠಿಸಲ್ಪಟ್ಟು ಯಾವಮ್ಮನು ಯಾರಿಂದ ಕಳೆದವರ್ಷ ಪೂಜಿಸಲ್ಪಟ್ಟಳೋ ಆ ಅಮ್ಮನವರಿಗೆ ಅದೇ ಜನರೇ ಇಂಥ ಪುಷ್ಪಾಂಜಲಿಯನ್ನು ಸಮರ್ಪಿಸುವ ಸ್ಥಿತಿಗೆ ಬರಬಹುದೆ? ಇಂಥ ಕೆಳೆಚಿತ್ತರೂ ಕೃತಘ್ನರೂ ಹೆಚ್ಚಿದ ದೇಶವು ವೃದ್ಧಿಗೊಂಡೀತೆ?

ವ್ಯಭಿಚಾರದಿಂದ ಜೀವಿಸುತ್ತಿದ್ದ ಒಬ್ಬ ಸೂಳೆಯು ತನ್ನ ಮನೆಯನ್ನು ಅಡವಿಟ್ಟು ೮ ಸಾವಿರ ರೂ. ಗಳ ಸಾಲವನ್ನು ತೆಗೆದುಕೊಂಡಿದ್ದು ಅದನ್ನು ತೀರಿಸದೆಯೇ ನಿಸ್ಸಂತಾನಳಾಗಿ ಸತ್ತಳು. ಬಳಿಕ ಅವಳ ಜತೆಯಲ್ಲಿ ವಾಸಮಾಡುತ್ತಿದ್ದ ಶಿರೋಗ್ರಾಹಿಯು ತಾನೇ ಅವಳ ವ್ಯಭಿಚಾರವೃತ್ತಿಯನ್ನು ಸಾಗಿಸುತ್ತಿದ್ದವನಾದ ಕಾರಣ, ಅವಳು ಸತ್ತನಂತರ ಲಾ ಪ್ರಕಾರ ತನಗೇ ಆ ಮನೆಯ ಹಕ್ಕುದಾರಿಕೆಯಿರುವುದೆಂದು ಹೇಳಿ, ಅಡವಿಟ್ಟುಕೊಂಡಿದ್ದವನ ಮೇಲೆವ್ಯಾಜ್ಯ ಹೂಡಿದನು. ಶಿರೋಗ್ರಾಹಿವೃತ್ತಿಯು ನೀತಿವಿರುದ್ಧವಾದುದೆಂದೂ ಈ ವ್ಯಾಜ್ಯದಲ್ಲಿ ವಾದಿಗೆ ವ್ಯಭಿಚಾರಿಣಿಯ ಆಸ್ತಿಯಲ್ಲಿ ಹಕ್ಕನ್ನುಂಟುಮಾಡಿದರೆ ಶಿರೋಗ್ರಾಹಿವೃತ್ತಿಗೆ ಆದರಣವನ್ನು ತೋರಿಸಿದಂತಾಗುವುದೆಂದೂ, ಅದರಿಂದ ದುರ್ನೀತಿಯು ವೃದ್ಧಿಯಾಗುವುದೆಂದೂ, ನೀತಿಗೆ ವಿರುದ್ಧವಾದ ಯಾವ ಕೆಲಸವನ್ನೂ ಲಾ ಪ್ರಕಾರ ಅಂಗೀಕರಿಸಕೂಡದೆಂದೂ ಹೇಳಿ ಪಂಚಾಟು ಚೀಫ್‌ಕೋರ್ಟಿನವರು ವಾದಿಯ ದಾವೆಯನ್ನು ತಳ್ಳಿಹಾಕಿ ಮಾಡಿದರು. ವ್ಯಭಿಚಾರ ವೃತ್ತಿಯಲ್ಲಿರುವ ಸೂಳೆಯರು ಮನೆಯಲ್ಲಿ ಬಾಡಿಗೆಗಿದ್ದು ಆ ಬಾಡಿಗೆಯನ್ನು ಸಲ್ಲಿಸದೆ ಹೋದರೆ ಆ ಬಾಡಿಗೆಯನ್ನು ಬರಮಾಡಿಕೊಳ್ಳುವುದಕ್ಕಾಗಿ ಕೋರ್ಟುಗಳಲ್ಲಿ ವ್ಯಾಜ್ಯವನ್ನು ಹೂಡಿದರೆ ಅದು ಸಲ್ಲುವುದಿಲ್ಲವೆಂದು ಇದಕ್ಕೆ ಹಿಂದೆಯೇ ಇತ್ಯರ್ಥವಾಗಿರುವುದು.

ವಿದೇಶದ ವೃತ್ತಾಂತಗಳು.

ಅಮೇರಿಕಾ ಸೈನಿಕರಲ್ಲಿ ೧೦೦ ಕ್ಕೆ ೯೫ ಮಂದಿಗಳು ಸಿಗರೇಟುಗಳನ್ನು ಸೇದುವುದರಲ್ಲಿ ತುಂಬಾ ಆಸಕ್ತರಾಗಿರುವರು. ಆದುದರಿಂದ ವರ್ಷಕ್ಕೆ ಇವರುಗಳಿಗೇ ೪೨|| ಕೋಟಿ ಸಿಗರೆಟ್ಟುಗಳೂ, ೨ ಕೋಟಿ ಚುಟ್ಟಗಳೂ ಒದಗಿಸಲ್ಪಡುತ್ತವೆಯಂತೆ.

ಯುದ್ಧಕ್ಕೆ ಬಾಧ್ಯರಾರೆಂಬುದನ್ನು ವಿಚಾರಿಸುವುದಕ್ಕೆ ಗೊತ್ತುಮಾಡಲ್ಪಟ್ಟಿದ್ದ ಸಂಘದವರು ನಿರ್ಣಯಿಸಿರುವ ಮೇರೆಗೆ ಜರ್ಮನಿಯ ಹಿಂದಣ ಕೈಜರನ್ನು ಹಿಡಿದು ತಮಗೆ ಒಪ್ಪಿಸಬೇಕೆಂದು ಮಿತ್ರಮಂಡಲಿಯವರು ಡಚ್ ಪ್ರಭುತ್ವದವರನ್ನು ಕೇಳುವವರಾಗಿದ್ದಾರೆ.

ಬಾಯಲ್ಲಿ ಸಿಳ್ಳುಹಾಕುತ್ತ ಹಾಡುವುದರಲ್ಲಿ ಅದ್ವಿತೀಯ ಸಾಮರ್ಥ್ಯವುಳ್ಳವಳೆಂದು ಪ್ರಸಿದ್ಧಳಾದ ಲೇಡಿಮೆಕ್ಸ್ ಎಂಬಾಕೆಯ ಛಾಯಾಚಿತ್ರಪಟವನ್ನು ಸೀಮೆಯಲ್ಲಿ ಅಮೇರಿಕಾನವರು ೪೦ ಸಾವಿರ ಪೌನುಗಳ ಕ್ರಯಕ್ಕೆ ತೆಗೆದುಕೊಂಡು ಸ್ವದೇಶಕ್ಕೆ ಸಾಗಿಸಿದರು.

ಇದುವರೆಗೆ ಸಂಧಿಸಭೆಯಲ್ಲಿ ನಡೆದ ವಿಷಯಪರಿಷ್ಕರಣದ ಮೇಲೆ ಭೂಜಲವಿಮಾನ ಸೇನಾವಿಷಯಗಳಲ್ಲಿ ಮಿತ್ರಮಂಡಲಿಯವರ ಅಭಿಪ್ರಾಯಗಳೆಲ್ಲಾ ಏಕಮುಖಕ್ಕೆ ನಿಂತುವು. ಜರ್ಮನರು ಬಹುಶಃ ಈ ತಿಂಗಳು ತಾ|| ೨೦ ರಲ್ಲಿ ವಾರ್ಸೇಲ್ಸಿಗೆ ಬರುವರು. ಏಪ್ರಿಲ್ ಮೊದಲನೆ ವಾರದಲ್ಲಿ ಪ್ರಥಮಸಂಧಿಪತ್ರಕ್ಕೆ ಎಲ್ಲರ ರುಜುಗಳೂ ಆಗಬಹುವೆಂದು ಎಣಿಸಲ್ಪಟ್ಟಿದೆ.

ಕೈಜರನು ತನ್ನ ಸ್ವಂತ ಆಸ್ತಿಯಲ್ಲಿ ೪೫ ಕೋಟಿ ರೂ. ಗಳನ್ನು ಯುದ್ಧಾರಂಭವಾಗುವುದಕ್ಕೆ ಮುಂಚೆಯೇ ಎಂದರೆ ೧೯೧೪ ನೆ ವರ್ಷದ ಜುಲೈ ತಿಂಗಳಲ್ಲಿ ಇಂಗ್ಲೆಂಡಿನಿಂದ ತರಿಸಿಕೊಂಡು ಹಾಲೆಂಡಿಗೆ ಸಾಗಿಸಿ ಅಲ್ಲಿ ಇಡಿಸಿದ್ದನು. ಈಗ ಕೈಜರನು ಹಾಲೆಂಡಿನಲ್ಲಿ ಮತಿಭ್ರಮಣೆಗೊಂಡವನಾಗಿ ಯಾರು ಮುಂದೆ ಸುಳಿದರೂ ಭಯಪಡುತ್ತ ಪ್ರಾಣಭೀತಿಯಿಂದ ಕೊರಗುತ್ತಿರುವನಂತೆ.

ಬೆಲ್ಜಿಯಮ್ಮಿನವರು ಮೊಟ್ಟಮೊದಲು ಫ್ರಾನ್ಸಿನಮೇಲೆ ಜರ್ಮನರು ನುಗ್ಗುವುದಕ್ಕೆ ಬಂದಾಗ ದಾರಿಕೊಡದೆ ತಡೆದುದರಿಂದ ತಾವು ಧ್ವಂಸವಾಗಿ ಹೋದರಷ್ಟೆ. ಅವರ ನಷ್ಟಪರಿಹಾರಕ್ಕಾಗಿ ಅಮೇರಿಕನ್ನರೂ ಇಂಗ್ಲೀಷರೂ ಫ್ರೆಂಚರೂ ಇಟಲಿಯವರೂ ಸಹ ಕೆಲ ಧನವನ್ನು ಕೊಡುವುದಕ್ಕೆ ಒಪ್ಪಿ ಅದರಲ್ಲಿ ಮೊದಲನೆಯ ಕಂತಾಗಿ ಈಗ ೪೦ ಕೋಟಿ ಪೌನುಗಳನ್ನು ಬೆಲ್ಜಿಯಮ್ಮಿನವರಿಗೆ ಕಳುಹಿಸಿಕೊಟ್ಟಿದ್ದಾರೆ.

“ಸ್ಪಾ” ವಿನ ಹತ್ತಿರ ಕೂಡಿದ್ದ ಸಭೆಯಲ್ಲಿ ಆದ ಮತಭೇದಗಳಿಂದ ಸಂಧಿಗ್ಧಸ್ಥಿತಿಯೇರ್ಪಟ್ಟುದರಿಂದ, ಜನವರಿ ತಾ|| ೧೦ ರಲ್ಲಿ ತಾತ್ಕಾಲಿಕ ಯುದ್ಧವಿರಾಮಸಭೆಯವರು ನಿರ್ಣಯಿಸಿರುವ ಪ್ರಕಾರಕ್ಕೆ ಜರ್ಮನರು ತಮ್ಮ ವ್ಯಾಪಾರನೌಕೆಗಳನ್ನು ಮಿತ್ರಮಂಡಲಿಯವರ ಅಧೀನಪಡಿಸಿಯೇ ತೀರಬೇಕೆಂದೂ ನೌಕಾದಳವನ್ನು ಮಿತ್ರಮಂಡಲಿಯವರ ವಶಪಡಿಸುವುದಕ್ಕೆ ನಿಬಂಧನೆಗಳನ್ನು ಏರ್ಪಡಿಸಲು ಜರ್ಮನರು ಬಾಧ್ಯರಲ್ಲವೆಂದೂ ಉನ್ನತಯುದ್ಧಸಭೆಯವರು ಜರ್ಮನಿಗೆ ಒಂದು ನೋಟೀಸನ್ನು ಕಳುಹಿಸಬೇಕೆಂದು ನಿರ್ಧರಿಸಿದ್ದಾರೆ.

ಯುದ್ಧಕ್ಕೆ ಯಾರು ಬಾಧ್ಯರೆಂಬುದನ್ನು ಗೊತ್ತುಮಾಡಿ ತಿಳಿಯಿಸುವುದಕ್ಕೆ ಸಂಧಿಸಭೆಯವರಿಂದ ಏರ್ಪಡಿಸಲ್ಪಟ್ಟಿದ್ದ ಸಂಘದವರು ತಮ್ಮ ವರದಿಯನ್ನು ಮುಗಿಸಿಕೊಟ್ಟಿದ್ದಾರೆ. ಅದರಲ್ಲಿ ಜರ್ಮನ್ ಕೈಜರ್, ಯುವರಾಜ, ಜರ್ಮನ್‌ಪಕ್ಷದ ಅಂತರಂಗಿಕ ಸಂಘಗಳು, ಫ್ರಾನ್ಸ್ ಬೆಲ್ಜಿಯಂ ಪೋಲಂಡುಗಳಲ್ಲಿದ್ದ ಜರ್ಮನ್ ಸೈನಿಕೋದ್ಯೋಗಿಗಳು ಕೆಲವರು, ಸಿವಿಲ್ ಅಧಿಕಾರಿಗಳು ಕೆಲವರು ಇವರುಗಳಮೇಲೆಲ್ಲಾ ಅಪರಾಧವು ಹೊರಿಸಲ್ಪಟ್ಟಿದೆ. ಜರ್ಮನರು ೩೦ ವರ್ಷಗಳೊಳಗೆ ೨ ಅರ್ಬುದವೂ ನಾನೂರು ಕೋಟಿ ಪೌನುಗಳು ರೂ. ಗಳಾದರೆ ೩೬೦೦೦೦೦೦೦೦೦೦ ಪರಿಹಾರವನ್ನು ಕೊಡಬೇಕೆಂದು ಮಿತ್ರಮಂಡಲಿಯವರು ವಿಧಿಸುವವರಾಗಿದ್ದಾರೆ.

ಮತ್ತೊಂದುಸಲ ತಾತ್ಕಾಲಿಕಸಂಧಿ ವಿರಾಮಕಾಲವನ್ನು ಹೆಚ್ಚಿಸುವಾಗ್ಗೆ ಮಿತ್ರಮಂಡಲಿಯವರು ವಿಧಿಸಿದ ನೂತನ ನಿಬಂಧನೆಗಳನ್ನು ತಿಳಿಯಿಸುವುದಕ್ಕೆ ಮಿತ್ರಮಂಡಲಿ ಪ್ರತಿನಿಧಿಗಳು ಜರ್ಮನ್ ಪ್ರತಿನಿಧಿಗಳೊಡನೆ “ಸ್ಪಾ” ಪಟ್ಟಣದ ಹತ್ತಿರ ಕಲೆತಿದ್ದರು. ನಿಬಂಧನೆಗಳೊಳಗೆ ಜರ್ಮನರು ತಮ್ಮ ವ್ಯಾಪಾರಿ ಹಡಗುಗಳನ್ನೆಲ್ಲಾ ಮಿತ್ರಮಂಡಲಿಯವರಿಗೆ ಒಪ್ಪಿಸಿಬಿಡಬೇಕೆಂದು ಹೇಳಿದ ನಿಬಂಧನೆಗೆ ಜರ್ಮನರು ಒಪ್ಪದೆ ಹಿಂದಿರುಗಿಹೋಗಿ ಬಿಟ್ಟರು. ಮುಂದೆ ಜರ್ಮನರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನಿರ್ಧರಿಸುವುದಕ್ಕೆ ಮಿತ್ರಮಂಡಲಿಯವರು ಒಂದು ಉಪಸಂಘವನ್ನೇರ್ಪಡಿಸಿದ್ದಾರೆ. ಇದುವರೆಗೆ ಅವರು ಒಪ್ಪಿಕೊಂಡಿದ್ದ ನಿಬಂಧನೆಗಳಲ್ಲೇ ಕೆಲವನ್ನು ಇನ್ನೂ ಜರ್ಮನರು ಪೂರೈಸಿಕೊಟ್ಟಿಲ್ಲ. ಇದರಮೇಲೆ ಮಿತ್ರಮಂಡಲಿಯವರು ಆಗ್ರಹಗೊಂಡು ಜರ್ಮನರನ್ನು ನಿಗ್ರಹಿಸುವುದಕ್ಕೆ ನಿಂತರೆ, ಅಂತಃಛಿದ್ರದಲ್ಲಿ ಈಗಲೇ ಬೆಂದು ಬೆಂಡಾಗಿರುವ ಜರ್ಮನಿಯು ಯಾವ ಅವಸ್ಥೆಗೀಡಾಗುವುದೋ ತಿಳಿಯದು.

ಜರ್ಮನಿದೇಶದಲ್ಲಿ ನಿರ್ಬಂಧಸೈನಿಕಶಾಸನವಿದ್ದುದನ್ನು ತೊಲಗಿಸಿಬಿಡಬೇಕೆಂದು ಸಂಧಿಸಭೆಯಲ್ಲಿ ತೀರ್ಮಾನ ಮಾಡಲ್ಪಟ್ಟಿತು. ಇದನ್ನು ಮಾಡಿಸುವುದಕ್ಕೆ ಆಂಗ್ಲಮುಖ್ಯಮಂತ್ರಿಯವರಾದ ಮಿ|| ಲಾಯಿಡ್‌ಜಾರ್ಜ್‌ರವರ ಮುಖ್ಯ ಸಾಹಸವೇ ಕಾರಣವು. ಘನತರವಾದ ಈ ತೀರ್ಮಾನವು ಸರ್ವರೊಡನೆಯೂ ನಡೆದುದನ್ನು ಕುರಿತು ಸಂಧಿಸಭಾಕಾರ್ಯದಲ್ಲೆಲ್ಲಾ ಇದು ಅತ್ಯಂತ ಮುಖ್ಯವಾದುದೆಂದು ಆಂಗ್ಲಪತ್ರಿಕೆಗಳೆಲ್ಲಾ ಹೊಗಳುತ್ತಿವೆ. ಜರ್ಮನಿಯಲ್ಲಿ ನಿರ್ಬಂಧದಿಂದ ಪ್ರತಿಯೊಬ್ಬ ಯುವಕನೂ ಸೈನ್ಯಕ್ಕೆ ಸೇರಿಯೇ ತೀರಬೇಕೆಂಬ ನಿರ್ಬಂಧವಿದ್ದುದರಿಂದ ಆ ದೇಶದಲ್ಲಿ ಯುದ್ಧಾಭಿನಿವೇಶವು ಬೆಳೆದು ಮಹಾಪ್ರಳಯಯುದ್ಧಕ್ಕೆ ಅವಕಾಶ ಮಾಡಿತು. ಜರ್ಮನಿಯಲ್ಲಿ ಅಂಥ ಶಾಸನವಿದ್ದುದರಿಂದ ಇತರ ರಾಜ್ಯಗಳವರೂ ಅದೇ ತೆರದ ಶಾಸನವನ್ನು ತಮ್ಮಲ್ಲೂ ಏರ್ಪಡಿಸಿಕೊಳ್ಳಬೇಕಾದ ಅವಶ್ಯಕತೆಯು ಅನಿವಾರ್ಯವಾಗಿದ್ದಿತು. ಜರ್ಮನಿಯಲ್ಲೇ ಅದು ತಪ್ಪಿಹೋದಬಳಿಕ ಪ್ರಪಂಚದ ಇನ್ನಾವ ರಾಜ್ಯಗಳವರೂ ಅದನ್ನಪೇಕ್ಷಿಸಲಾರರು. ಆದುಕಾರಣ ಈ ತೀರ್ಮಾನಕ್ಕೆ ಅಷ್ಟು ಪ್ರಾಮುಖ್ಯವು ಕೊಡಲ್ಪಟ್ಟಿದೆ.

ಪ್ರಪಂಚದಲ್ಲಿರುವ ಪ್ರತಿಯೊಂದು ಪಟ್ಟಣದಲ್ಲೂ ಹೋಟೆಲುಗಳು ಇರುವುವು. ಆದರೆ ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿ ಇರುವಂಥ ಹೋಟೆಲಿಗೆ ಸಮಾನವಾದುದು ಮತ್ತಾವಲ್ಲೂ ಇರುವುದಿಲ್ಲ. ಈ ಹೋಟೆಲು ೨೭ ಅಂತಸ್ತುಗಳುಳ್ಳದಾಗಿರುವುದು. ಇದಕ್ಕೆ ಪೆನ್ಸಿಲ್ವೇನಿಯಾ ಭವನವೆಂದು ಹೆಸರು. ಪೆನ್ಸಿಲ್ವೇನಿಯಾ ಲೋಹಮಾರ್ಗದ ಸಮೀಪದಲ್ಲಿ ಇದು ಕಟ್ಟಲ್ಪಟ್ಟಿದೆ. ಕಳೆದ ವರ್ಷದಲ್ಲಿ ಇದು ಕಟ್ಟಿ ಸಿದ್ಧವಾಯಿತು. ಇದರಲ್ಲಿ ೨೨೦೦ ಮಲಗುವ ಕೊಟ್ಡಿಗಳೂ ೨೨೦೦ ಸ್ನಾನದ ಮನೆಗಳೂ ಇರುವುವು. ಇದಕ್ಕೆ ಶಾಖೆಯಾಗಿ ಮತ್ತೊಂದು ಭವನವು ಈಗ ಕಟ್ಟಲ್ಪಡುತ್ತಿದೆ. ಅದರಲ್ಲೂ ೨೦೦೦ ಮಲಗುವ ಮನೆಗಳೂ ೨೦೦೦ ಸ್ನಾನದ ಮನೆಗಳೂ ಇರುವುವು. ಇವೆರಡು ಭವನರತ್ನಗಳಿಂದ ನ್ಯೂಯಾರ್ಕ್ ಪಟ್ಟಣಕ್ಕೆ ಪ್ರಪಂಚನಾಯಕ ನಗರವೆಂಬ ಹೆಸರು ಸಲ್ಲುವುದೆಂದರೂ ಅತಿಶಯೋಕ್ತಿಯಾಗುವ ಹಾಗಿಲ್ಲ. ೨೭ ಅಂತಸ್ತುಗಳುಳ್ಳ ಈ ಹೋಟೇಲಿನಲ್ಲಿ ೨೫೦೦ ಮಂದಿ ಉದ್ಯೋಗಿಗಳಿರುವರು. ಇವರಿಗೆಲ್ಲಾ ತಿಂಗಳೊಂದಕ್ಕೆ ಸಂಬಳಕ್ಕಾಗಿಯೇ ೨ ಲಕ್ಷ ರೂ. ಗಳು ಕೊಡಲ್ಪಡುವುವು. ಅಲ್ಲಿ ವಾಸಮಾಡತಕ್ಕ ಜನರಿಗೆ ಅವರವರ ಇಷ್ಟಕ್ಕೆ ತಕ್ಕಂತೆ ರಾಜಭವನದಲ್ಲಿ ಆಗತಕ್ಕ ಸಕಲೋಪಚಾರಗಳೂ ನಡೆಯುವುವು. ವಿದ್ಯುಚ್ಛಕ್ತಿ ಮೂಲಕವಾಗಿ ಅಡುಗೆಯೂ ಅದರ ದೀಪವೂ, ಬೀಸಣಿಗೆಯೂ, ಕ್ಷಣಮಾತ್ರದಲ್ಲಿ ಪ್ರತಿಯೊಂದು ಅಂತಸ್ತಿಗೂ ಏರುವುದಕ್ಕೂ ಇಳಿಯುವುದಕ್ಕೂ ವಿದ್ಯುಚ್ಛಕ್ತಿಯಿಂದ ಏರಿ ಇಳಿಯುತ್ತಿರುವ ತೊಟ್ಟಿಲುಗಳೂ, ವ್ಯಾಯಾಮ ವಿನೋದಾದಿ ಸೌಕರ್ಯಗಳೂ ಇವೆಲ್ಲಾ ಇರುವುವು. ಆ ಪಟ್ಟಣದಲ್ಲಿ ಒಟ್ಟಿಗೆ ೩೦೦ ಹೋಟೆಲುಗಳಿವೆ. ಅವುಗಳೆಲ್ಲಾ ಏಕಕಾಲದಲ್ಲಿ ೧ ಲಕ್ಷ ಸಂಸಾರಗಳು ವಾಸಮಾಡಿಕೊಂಡಿರಬಹುದು. ಅವುಗಳಲ್ಲೆಲ್ಲಾ ಈ ಹೋಟೇಲೇ ನಾಯಕಮಣಿಯಂತಿರುವುದು.

ಆಕಾಶದಲ್ಲಿ ಸಂಚರಿಸುವ ವಿಮಾನಜಾತಿಗಳಲ್ಲಿ ಅನೇಕ ತರಗಳುಂಟು. ಅಲ್ಲದೆ ನೀರಿನಮೇಲೆ ಸಂಚರಿಸುವ ಹಡಗುಗಳಂತೆ ಅಂತರಿಕ್ಷದಲ್ಲಿ ಸಂಚರಿಸುವ ಒಂದು ಬಗೆಯ ಹಡಗುಗಳೂ ಕೂಡ ನಿರ್ಮಿಸಲ್ಪಟ್ಟಿರುತ್ತವೆ. ಇವಕ್ಕೆ ಗಾಳಿಹಡಗುಗಳೆಂದು ಹೆಸರು. ಯುದ್ಧಕಾಲದಲ್ಲಿ ಇವುಗಳ ರಚನೆಯಲ್ಲಿ ಬಹಳ ಅಭಿವೃದ್ಧಿಯುಂಟಾಗಿದೆ. ಇನ್ನುಮುಂದೆ ಉಪಯೋಗಕ್ಕೆ ಬರಲಿಕ್ಕಿರುವ ಗಾಳಿಹಡಗುಗಳು ೧ ಕೋಟಿ ಕ್ಯೂಬಿಕ್ ಅಡಿಗಳಷ್ಟು ವೈಶಾಲ್ಯವುಳ್ಳವುಗಳಾಗಿಯೂ ೬೦೦೦ ಕುದುರೆಗಳ ಶಕ್ತಿಯುಳ್ಳವುಗಳಾಗಿಯೂ ಇರುವುವು. ಇವು ಗಂಟೆಯೊಂದಕ್ಕೆ ೮೬ ಮೈಲಿಗಳಂತೆ ಪ್ರಯಾಣ ಮಾಡುವುವು. ಒಂದು ಸಲಕ್ಕೆ ೨೦೦ ಟನ್ನುಗಳ ಭಾರವನ್ನು ಹೊತ್ತುಕೊಂಡು ೪ ವಾರಗಳ ತನಕ ಅವಿಚ್ಛಿನ್ನವಾಗಿ ಗಾಳಿಯಲ್ಲಿ ಪ್ರಯಾಣಮಾಡುವುವು. ಇವುಗಳ ಬೆಲೆ ಪ್ರತಿಯೊಂದಕ್ಕೂ ೨ ಲಕ್ಷದಿಂದ ೪ ಲಕ್ಷ ಪೌನುಗಳವರೆಗಾಗುವುದು. ಪ್ರತಿಯೊಂದು ಹಡಗಿನಲ್ಲೂ ೨೬ ಮಂದಿ ಕೆಲಸಗಾರರೂ ೬ ಮಂದಿ ಅಧಿಕಾರಿಗಳೂ ಇರುವರು. ಇವುಗಳ ಸಂಚಾರಮಾರ್ಗದಲ್ಲಿ ೨-೪ ಸಾವಿರ ಮೈಲಿಗಳಿಗೊಂದೊಂದು ಕಡೆ ನಿಲ್ದಾಣವು ಇರಬೇಕಾಗುವುದು. ಈ ಹಡಗುಗಳು ಲಂಡನ್ ಪಟ್ಟಣವನ್ನು ಬಿಟ್ಟು ೪ ದಿನಗಳಲ್ಲಿ ಅಮೇರಿಕಾದ ನ್ಯೂಯಾರ್ಕ್ ನಗರವನ್ನು ಸೇರುವುವು. ಇದು ಎಷ್ಟೆಷ್ಟು ದೊಡ್ಡದಾದರೆ ಅಷ್ಟಷ್ಟು ಹೆಚ್ಚು ಭಾರವನ್ನು ಹೊರುವುದು. ಈ ಅನುಕೂಲ್ಯವು ವಿಮಾನಗಳಿಗಿಲ್ಲ. ಪ್ರಯಾಣಸೌಕರ್ಯದ ವಿಷಯದಲ್ಲಿ ವಿಮಾನಗಳಿಗಿಂತ ಗಾಳಿಹಡಗುಗಳಲ್ಲಿ ಬಹಳ ಅಭಿವೃದ್ಧಿ ಗೋಚರವಾಗುತ್ತಿದೆ. ಈಗ ನಮ್ಮ ಆಂಗ್ಲಸೈನಿಕಶಾಖೆಯವರಿಂದ ಉಪಯೋಗಿಸಲ್ಪಡುತ್ತಿರುವ ಗಾಳಿಹಡಗುಗಳೂ ಅವುಗಳ ೯ ನಿಲ್ದಾಣಗಳೂ ಸಹ ಇನ್ನುಮುಂದೆ ವ್ಯಾಪಾರ ಕಾರ್ಯಕ್ಕೆ ಉಪಯೋಗಿಸಲ್ಪಡುವುವಾಗಿವೆ. ಈ ಗಾಳೀ ಹಡಗುಗಳನ್ನು ನಡೆಯಿಸುವ ಸಾರಥಿಗಳಿಗೆ ತಿಂಗಳಿಗೆ ೨೦೦ ರಿಂದ ೬೫೦ ಪೌನುಗಳವರೆಗೂ ಸಂಬಳವು ಕೊಡಲ್ಪಡುತ್ತಿದೆ.

ಅಮೇರಿಕಾದ ಕೆಲವರು ಸರ್ವರಾಷ್ಟ್ರಸಂಘದಲ್ಲಿ ಅಮೇರಿಕೆಯು ಕೂಡಲಾಗದೆಂದೂ, ಅಮೇರಿಕೆಯು ಯೂರೋಪಿನ ರಾಜ್ಯಗಳ ಸಂಬಂಧವನ್ನಿಟ್ಟುಕೊಂಡರೆ, ಯೂರೋಪುರಾಷ್ಟ್ರಗಳವರು ತಮ್ಮ ಅಮೇರಿಕೆಯ ಸಂಸರ್ಗಕ್ಕೂ ಬರುವರೆಂದೂ, ಅದು ಸರಿಯಲ್ಲವೆಂದೂ, ಅಮೇರಿಕೆಯ ಕ್ಷೇಮವೊಂದನ್ನೇ ನಾವು ನೋಡಿಕೊಳ್ಳಬೇಕೆಂದೂ ಮೊದಲಾಗಿ ಹೇಳುತ್ತಲಿದ್ದಾರೆ. ಈ ಅವಿವೇಕಾಂಧತೆಗೆ ಪ್ರೆ|| ವಿಲ್ಸನ್‌ರವರು ತಕ್ಕ ಅಂಜನವನ್ನು ತಮ್ಮ ಉಪನ್ಯಾಸಗಳಿಂದ ಹಾಕಿರುತ್ತಾರೆ. ಹೇಗೆಂದರೆ-ಇದುವರೆಗೆ ನಾವು ಯುದ್ಧಕ್ಕೆ ದುಮುಕಿದುದರಿಂದ ಯುದ್ಧಶಾಂತಿಯುಂಟಾಯಿತು. ಆ ಕೀರ್ತಿಯೂ ಗೌರವವೂ ಅಮೇರಿಕೆಗೆ ಪ್ರಾಪ್ತವಾಗಿರುವುದು. ಇನ್ನು ಮುಂದೆ ಶಾಶ್ವತಶಾಂತಿಯು ಉಳಿಯುವಂತೆ ಮಾಡಬೇಕಾದ ಕೆಲಸದಲ್ಲಿ ನಾವು ಸಹಾಯಕರಾಗಿಲ್ಲದಿದ್ದರೆ ಇದುವರೆಗೆ ನಾವು ಅನುಭವಿಸಿದ ನಷ್ಟಕಷ್ಟಗಳೂ ಸಾಹಸವೂ ವ್ಯರ್ಥವಾಗುವುವು. ಪ್ರಪಂಚವೆಲ್ಲವೂ ನಮ್ಮನ್ನು ಅಸಹ್ಯತನದಿಂದ ನೋಡುವುದು. ಯುದ್ಧಕ್ಕೆ ನಾವು ದುಮುಕುವುದಕ್ಕೆ ಮುಂಚೆ ನಮ್ಮ ತಾಟಸ್ಥ್ಯವನ್ನು ನೋಡಿ ಪ್ರಪಂಚವೆಲ್ಲಾ ಅಮೇರಿಕಾವನ್ನು ಹೀಯಾಳಿಸಿ ನಗುತ್ತಿದ್ದಿತು. ನಾವು ಯುದ್ಧಕ್ಕೆ ಇಳಿದಕೂಡಲೇ ಯುದ್ಧದಲ್ಲಿ ಕಂಡುಬಂದ ಪರಿಣಾಮವೈಚಿತ್ರ್ಯವನ್ನು ನೋಡಿ ಜಗತ್ತೆಲ್ಲಾ ಬೆರಗಾಯಿತು. ಹಾಗೆ ಮಾಡಿಕೊಂಡ ನಮ್ಮ ಗೌರವವನ್ನು ಈಗ ನಾವು ಉಳಿಯಿಸಿಕೊಳ್ಳುವುದು ಅವಶ್ಯವಲ್ಲವೆ? ಮಾನವಕುಲಕ್ಕೆ ಅಮೇರಿಕಾವು ಸ್ನೇಹಿತವು. ಎಂದು ಲೋಕವು ಭಾವಿಸಿರುವುದನ್ನು ನಾವು ಸಾರ್ಥಕಪಡಿಸಬಾರದೆ? ಯುದ್ಧಕ್ಕೆ ನಾವು ಸಿದ್ಧವಾಗುವಾಗ ಯಾವ ಸತ್ಸಂಕಲ್ಪವನ್ನು ಹೊಂದಿದ್ದೆವೋ ಅದರ ಸಿದ್ಧಿಗಾಗಿಯೇ ಈಗ ನಾನಾದೇಶ ಸಂಘವನ್ನು ಸ್ಥಾಪಿಸುವುದು ಅವಶ್ಯಕವಾಗಿದೆ. ಸಕಲ ಜಾತಿಗಳೂ ಈಗ ಒಂದಾಗಿ ಸೇರುವುದಕ್ಕೆ ಸಿದ್ಧವಾಗಿವೆ. ಒಬ್ಬರಮೇಲೊಬ್ಬರು ದಂಡೆತ್ತಿ ಹೋಗುವುದಕ್ಕೆ ಉದ್ದೇಶಿಸಿಲ್ಲ. ಅನ್ಯಾಯಮಾಡುವವರನ್ನು ಶಿಕ್ಷಿಸುವುದಕ್ಕಾಗಿಯೇ ಒಂದು ಸಂಘವನ್ನೇರ್ಪಡಿಸಲು ಉದ್ದೇಶಿಸಿವೆ. ಇದಕ್ಕೆ ಅಮೇರಿಕೆಯೂ ಅಂಗವಾಗಿರಬೇಕೇ ಹೊರತು ಹಿಂದೆಗೆಯಕೂಡದು. ದೂರದರ್ಶಿಗಳಾದ ಅಮೇರಿಕನ್ನರ ಅಭಿಪ್ರಾಯವೆಲ್ಲಾ ಹೀಗೆಯೇ ಇರುವುದೆಂದು ನಾನು ನಂಬುತ್ತೇನೆ ಎಂದು ಹೇಳಿ, ವಿರುದ್ಧಾಭಿಪ್ರಾಯದ ಜನರ ಮನಸ್ಸನ್ನೆಲ್ಲಾ ನಾನಾದೇಶ ಸಂಘಸ್ಥಾಪನೆಗೆ ಅನುಮೋದಿಸುವಂತೆ ಬಲು ಮಟ್ಟಿಗೆ ಮಾಡಿರುವರು.

ಪತ್ರವ್ಯವಹಾರ.

ದಾವಣಗೆರೆ.

ವೀರಶೈವ ವಿದ್ಯಾರ್ಥಿಗಳಿಗೆ ತಿಳಿಸುವದೇನಂದರೆ:—

ಬರುವ ಏಪ್ರಿಲ್‌ತಿಂಗಳಲ್ಲಿ ದಾವಣಗೆರೆ ಸೆಂಟರಿನಲ್ಲಿ ನಡೆಯುವ ಇಂಗ್ಲೀಷ್ ಮತ್ತು ಕನ್ನಡ ಲೋಅರ್ ಸೆಕೆಂಡರಿ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳಿಗೆ ತಾರೀಖು ೨೦ ನೇ ಭಾನುವಾರ ರಾತ್ರಿ ಲಾಗಾಯ್ತು ಊಟದ ವ್ಯವಸ್ಥೆಯು ಶ್ರೀ ವಿರಕ್ತಮಠದಲ್ಲಿ ಏರ್ಪಡಿಸಲ್ಪಡುವುದು. ಬರತಕ್ಕವರು ಏಪ್ರಿಲ್ ತಾರೀಖು ೫ ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ತಮ್ಮ ಹೆಸರು ಗ್ರಾಮ ವಗೈರೆ ಅಡ್ರಸ್ ತಿಳಿಸಬೇಕಾಗಿ ಕೋರುತ್ತೇವೆ.

ದಾವಣಗೆರೆ
೧೫-೩-೧೯೧೯. } ಸೆಕ್ರೆಟರಿ
ವೀರಶೈವ ವಿದ್ಯಾವರ್ಧಕಸಂಘದ ಫಂಡ್.

NOTICE.

ಶಿವಮೊಗ್ಗದಲ್ಲಿ ಮುಂದಿನ ಏಪ್ರಿಲ್ ತಿಂಗಳಲ್ಲಿ ನಡೆಯುವ ಸ್ಕೂಲ್ ಫೈನಲ್ ಲೋವರ್‌ಸೆಕೆಂಡರೀಪರೀಕ್ಷೆಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಅಲ್ಲಿಯ ವೀರಶೈವ ಸ್ಟೂಡೆಂಟ್ಸ್ ಹೋಮಿನಲ್ಲಿ ಭೋಜನಕ್ಕೆ ತಕ್ಕ ಏರ್ಪಾಡನ್ನು ನಗರಡಿವಿಜನ್ ವಿದ್ಯಾವರ್ಧಕ ಸಂಘದವರು ಮಾಡಿಸಿರುವರು. ಈ ಸೆಂಟರಿಗೆ ಬರತಕ್ಕ ವಿದ್ಯಾರ್ಥಿಗಳು ಸಂಘದ ಪ್ರೆಸಿಡೆಂಟರವರಿಗೆ ಮುಂಚೆಯೇ ತಿಳಿಸುವದಲ್ಲದೆ, ತಮ್ಮ ಹಾಸಿಗೆ ಮತ್ತು ತಂಬಿಗೆ ಸಮೇತ ಬರತಕ್ಕದ್ದು.

(Sd) G. M. KADAPPA,
Vice President
V. V. SANGHA, NAGAR DIVISION.

ದನಗಳ ಪ್ರದರ್ಶನ.

ಅರಸೀಕೆರೆ ತಾಲ್ಲೂಕು ಹೊಳಲಕೆರೆ ಶ್ರೀ ಪ್ರಸನ್ನ ರಾಮೇಶ್ವರಸ್ವಾಮಿಯವರ ರಥೋತ್ಸವಕಾಲದಲ್ಲಿ ಮಾಮೂಲ್ ಮೇರೆ ದನಗಳ ಪ್ರದರ್ಶನವು 1919 ನೆ ಏಪ್ರಿಲ್ 8 ರ ಲಾಗಾಯ್ತು 3 ದಿವಸಗಳವರೆಗೆ ಅರಸೀಕೆರೆ ಹುಳಿಯಾರು ರಸ್ತೆ 13 ನೆ ಮೈಲಿಗೆ ಸಮೀಪವಾಗಿರುವ ಮೈದಾನದಲ್ಲಿ ನಡೆಯುತ್ತದೆ. ಬಹುಮಾನ ದ್ರವ್ಯವು ರೆವಿನ್ಯೂ ಅಧಿಕಾರಿಗಳಿಂದ ಸರ್ಟಿಫಿಕೇಟ್ ಸಮೇತ ಉತ್ತಮವಾದ ರಾಸುಗಳಿಗೆ ಹಂಚಲಾಗುತ್ತದೆ. ಪ್ರದರ್ಶಕರು ಬಹುಮಾನ ವಿನಿಯೋಗಕ್ಕಾಗಿ ಏರ್ಪಟ್ಟಿರುವ ಕಮಿಟಿಯವರ ನಿಬಂಧನೆಗೆ ಒಳಪಟ್ಟಿರತಕ್ಕದ್ದು. ಈ ಜಾತ್ರೆಯಲ್ಲಿ ಭಾರಿಯಾಗಿ ಜನಗಳು ಸೇರುವುದರಿಂದ ವ್ಯಾಪಾರಿಗಳೂ ಬರಬಹುದು. ಎಲ್ಲಾ ಮತೀಯರಿಗೂ ಸಾಧ್ಯವಾದ ಮಟ್ಟಿಗೆ ಭೋಜನಕ್ಕೆ ಏರ್ಪಡಿಸಿರುತ್ತೇವೆ. ದನಗಳ ವ್ಯಾಪಾರವು ಬಹಳವಾಗಿ ನಡೆಯುವುದರಿಂದ ಈ ಪ್ರದರ್ಶನಕ್ಕೆ ತಮ್ಮ ತಮ್ಮ ರಾಸುಗಳನ್ನು ತೆಗೆದುಕೊಂಡು ಬಂದು ಶ್ರೀ ಪರಮೇಶ್ವರನ ಸೇವೆಮಾಡಿಕೊಂಡು ಹೋಗಬೇಕಾಗಿ ಕೋರಲ್ಪಟ್ಟಿದೆ. ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡುವುದಲ್ಲದೆ ಈ ಪ್ರದರ್ಶನಕ್ಕೆ ಪ್ರೋತ್ಸಾಹಮಾಡಿ ರಾಸುಗಳನ್ನು ತರತಕ್ಕವರಿಗೂ ಕೆಳಗೆ ಕಂಡಂತೆ ಬಹುಮಾನ ಕೊಡಲಾಗುತ್ತದೆ. 50 ಜೋಡಿ ತರತಕ್ಕ ಯಜಮಾನನಿಗೆ 3 ರೂ, 100 ಜೋಡಿ ತರತಕ್ಕ ಯಜಮಾನನಿಗೆ 5 ರೂ, 500 ಜೋಡಿ ತರತಕ್ಕ ಯಜಮಾನನಿಗೆ 15 ರೂ.

ಎಚ್. ಕೃಷ್ಣಮೂರ್ತಿರಾವ್, ಯಂ. ಎಲ್. ಹರಿಯಣ್ಣ,
ಸೆಕ್ರೆಟರಿಗಳು.

ನಂಜನಗೂಡು.

ಹೊಸ ಮ್ಯುನಿಸಿಪಲ್ ಕಾನೂನಿನ ಪ್ರಕಾರ ಈ ನಂಜನಗೂಡು ಮ್ಯುನಿಸಿಪಲ್ ಎಲೆಕ್ಷನ್ನು ಕೆಲವು ದಿವಸಗಳ ಕೆಳಗೆ ನೆರವೇರಿತು. ಈ ಕಾನೂನಿನ ಪ್ರಕಾರ ಎಲೆಕ್ಷನ್ನಿನಲ್ಲಿ ತೇರ್ಗಡೆ ಹೊಂದಬೇಕಾದವರು 8 ಜನ ಮತ್ತು ಸರ್ಕಾರದಿಂದ ನೇಮಿಸಲ್ಪಡತಕ್ಕವರು ನಾಲ್ಕು ಜನ. ಈಗ ನಡೆದ ಚುನಾವಣೆಯಲ್ಲಿ 8 ಜನ ಬ್ರಾಹ್ಮಣರೂ, 7 ಜನ ಇತರರೂ ಉಮೇದುವಾರರಾಗಿದ್ದರು. ಮೇಲ್ಕಂಡ 8 ಜನ ಬ್ರಾಹ್ಮಣರೂ ಚುನಾಯಿಸಲ್ಪಟ್ಟರು ; ಇತರರಲ್ಲಿ ಇಬ್ಬರು ಮಾತ್ರ ಚುನಾಯಿಸಲ್ಪಟ್ಟರು. ನಾಮಿನೇಷನ್ ಆಗತಕ್ಕವರು ನಾಲ್ಕು ಜನ ಇತರರೇ ಆದರೂ ಬ್ರಾಹ್ಮಣರು 8 ಜನಗಳೂ, ಇತರರು 6 ಜನಗಳೂ ಆಗಿರುತ್ತಾರೆ. ಆದರೆ ಕೀಳದಮಟ್ಟಿಗೆ ನಾಮಿನೇಷನ್ನಿಗೂ ಕೂಡ ಒಬ್ಬರು ಬ್ರಾಹ್ಮಣರು ನೇಮಕಮಾಡಲ್ಪಡುವಂತೆ ಕಾಣಬರುತ್ತದೆ. ಹೀಗಾದಲ್ಲಿ ಇನ್ನೂ ಚೆನ್ನಾಗಿ ಆಗುತ್ತದೆ. ಹಿಂದೆ ಇದ್ದ ಕಾನೂನಿನ ಪ್ರಕಾರ 5 ಜನರು ಎಲೆಕ್ಷನ್ನಿನಲ್ಲೂ, 5 ಜನರು ನಾಮಿನೇಷನ್ನಿನಲ್ಲೂ ನೇಮಕವಾಗುತ್ತಿದ್ದರು. ಇದರ ಪ್ರಕಾರ ಗೌರ್ನಮೆಂಟಿನವರು ಹೆಚ್ಚು ಕಡಮೆ ನೋಡಿ ಸುಮಾರಾಗಿ ಸಂಪಡಿಸುತ್ತಿದ್ದರು. ಅರ್ಧ ಸಂಖ್ಯೆ ಬ್ರಾಹ್ಮಣರೂ ಇನ್ನರ್ಧ ಸಂಖ್ಯೆ ಬ್ರಾಹ್ಮಣೇತರರೂ ಇರುತ್ತಿದ್ದರು. ಹಾಗಿದ್ದರೂ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿರಲಿಲ್ಲ. ಈಗ್ಗೆ ಸುಮಾರು ಮೂರುವರ್ಷದಿಂದ ಬ್ರಾಹ್ಮಣರ ಸಂಖ್ಯೆಯೇ ಹೆಚ್ಚಾಗಿದ್ದಿತು. ಈಗಾದ ಎಲೆಕ್ಷನ್ನಿನಲ್ಲಂತೂ ಮತ್ತಷ್ಟು ಹೆಚ್ಚಾಯಿತು. ಇವರುಗಳು ಸ್ವಾರ್ಥತ್ಯಾಗಮಾಡಿ ನ್ಯಾಯಪಕ್ಷಪಾತಿಗಳಾದರೆ ಇವರ ಸಂಖ್ಯೆಯು ಹೆಚ್ಚಿದರೂ ಯಾರಿಗೂ ಅಸಮಾಧಾನವಾಗುತ್ತಿರಲಿಲ್ಲ. ಈ ಟೌನನ್ನು ಇತರ ಕೆಲಸಗಳಿಗೆಲ್ಲಾ ನಾಲ್ಕು ಡಿವಿಜನ್ನಾಗಿ ಏರ್ಪಟ್ಟಿತ್ತು. ಆದರೆ ಈ ಎಲೆಕ್ಷನ್ನಿನಲ್ಲಿ ಮಾತ್ರ ಡಿವಿಜನ್ ಮೇರೆ ನಡೆಯಲಿಲ್ಲ. ಹಾಗೆ ನಡೆದಿದ್ದರೆ ಮೇಲ್ಕಂಡ ಒಗಟ್ಟಿಗೆ ಅವಕಾಶವಾಗುತ್ತಿರಲಿಲ್ಲವೆಂದು ತೋರುತ್ತದೆ. ಮತ್ತು ಕೇವಲ ವೋಟರುಗಳ ಹೆಸರುಗಳನ್ನು ಲಿಸ್ಟಿನಿಂದ ಬಿಟ್ಟಿದ್ದಾರೆ. ಎಲೆಕ್ಷನ್ನಿಗೆ ನಿಂತಿದ್ದ ಜನಗಳ ಹೆಸರನ್ನು ಬರೆಯುವ ಕವರಿನಮೇಲೆ 8 ಜನ ಬ್ರಾಹ್ಮಣ ಹೆಸರುಗಳು ಮೊದಲೂ, 7 ಜನರ ಹೆಸರುಗಳು ಅನಂತರವೂ ಕ್ರಮವಾಗಿ ಬರೆಯಲ್ಪಟ್ಟದ್ದು. ಅಕ್ಷರಸ್ಥನಲ್ಲದ ವೋಟರು ಬಂದು ಓಟ್‌ಮಾಡಲು ಪ್ರತಿಯೊಂದು ಹೆಸರನ್ನು ಮೊದಲಿನಿಂದ ಓದಿದಲ್ಲಿ ಯಾರುತಾನೇ ಮೇಲ್ಕಂಡ 8 ಹೆಸರುಗಳೂ ತನಗೆ ಅನವಶ್ಯಕವೆಂದು ಹೇಳಬಲ್ಲನು? ಈ ಊರಲ್ಲಿ ನೌಕರ ಮಾನೆಯರೆಲ್ಲಾ ಒಂದೇ ಜಾತಿಗೆ ಸೇರಿದವರಾದ್ದರಿಂದಲೂ, ಇವರೆಲ್ಲಾ ಓಟ್‌ಮಾಡಲು ಅರ್ಹರಾದುದರಿಂದಲೂ ಇವರೆಲ್ಲಾ ಒಗಟ್ಟಾದುದರಿಂದಲೂ ಅನರ್ಥಕ್ಕೆ ಕಾರಣವಾಯಿತು. ಮುನಿಸಿಪಾಲಿಟಿಯಲ್ಲಿ ಒಬ್ಬರು ಬ್ರಾಹ್ಮಣರು ಸ್ಯಾನಿಟರಿ ಇನ್‌ಸ್ಪೆಕ್ಟರಾಗಿದ್ದಾರೆ. ಇವರು 5-6 ವರ್ಷದಿಂದಲೂ ಇಲ್ಲೇ ನೆಲೆಗೊಂಡಿದ್ದಾರೆ. ಇವರೇನೇ ಈ ಮ್ಯುನಿಸಿಪಾಲಿಟಿಯ ಕೆಲಸಗಳಿಗೆ ಎಸ್ಟಿಮೇಟನ್ನು ತಯಾರುಮಾಡುವವರು, ಇವರನ್ನು ಇತರ ಸ್ಥಳಗಳ ಮುನಿಸಿಪಲ್ ಇಂಜನಿಯರಂತೆ ಭಾವಿಸಬಹುದು. ಇವರೂ ಮತ್ತು ಮ್ಯುನಿಸಿಪಾಲಿಟಿಯ ಮೆಂಬರುಗಳೂ ಸೇರಿಕೊಂಡು ಕೆಲವು ವರ್ಷಗಳಿಂದ ಮ್ಯುನಿಸಿಪಾಲಿಟಿಯ ಕೆಲಸಗಳನ್ನೆಲ್ಲಾ ಒಬ್ಬ ಬ್ರಾಹ್ಮಣ ಕಂಟ್ರಾಕ್ಟರಿಗೇನೆ ಕೊಡುತ್ತಾ ಇದ್ದಾರೆ. ಇತರ ಜಾತಿಯ ಕಂಟ್ರಾಕ್ಟರು ಎಷ್ಟು ಕೇಳಿಕೊಂಡರೂ ಒಂದು ಕೆಲಸವೂ ಅವರಿಗೆ ದೊರೆಯುವುದಿಲ್ಲ. ಈ ವಿಷಯದಲ್ಲಿ ಇತರ ಜಾತಿಯ ಕಂಟ್ರಾಕ್ಟರುಗಳು ಪ್ರೆಸಿಡೆಂಟರವರಿಗೆ ಅರ್ಜಿಗಳನ್ನು ಸಹ ಕೊಟ್ಟುಕೊಂಡಿದ್ದರು. ಆದರೆ ಫಲವೇನು? ಇದುವರೆಗೂ ಆಗಲಿಲ್ಲ ; ಮುಂದೆ ನೋಡಬೇಕಾಗಿದೆ. ಮತ್ತು ಈ ಮ್ಯುನಿಸಿಪಾಲಿಟಿಯ ದೀಪ ಹಚ್ಚುವ ಕಂಟ್ರಾಕ್ಟು ಕೂಡ ಒಬ್ಬ ಬ್ರಾಹ್ಮಣನಿಗೇನೇ ಕೊಡಲ್ಪಟ್ಟಿದೆ. ಮತ್ತು ಮ್ಯುನಿಸಿಪಾಲಿಟಿಯ ಇತರ ಕೆಲಸಗಳಲ್ಲೂ ಇವರೆಲ್ಲಾ ಒಗಟ್ಟಾಗಿ ನಡೆಸುತ್ತಾ ಇದ್ದಾರೆ. ಈ ಮ್ಯುನಿಸಿಪಾಲಿಟಿಯಲ್ಲಿ ಇನ್ನೂ ಅನೇಕ ನ್ಯೂನತೆಗಳು ಇರುತ್ತವೆ. ಇವುಗಳನ್ನೆಲ್ಲಾ ಬರೆದರೆ ತಮ್ಮ ಪತ್ರಿಕೆಯ ಸ್ಥಳವನ್ನೆಲ್ಲಾ ಇದೇ ಆಕ್ರಮಿಸುತ್ತದೆಂಬ ಭಯದಿಂದ ಸದ್ಯದಲ್ಲಿ ವಿರಮಿಸುತ್ತೇನೆ. ಸತ್ಯವಾದಿ.

ಮಹಾಶಯರೇ! ಇಲ್ಲಿನೋಡಿ !!

ಅಚ್ಚುಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಸ್ಟೇಜು ಸೇರಿ	1—0—0.
200 ಕ್ಕೆ ... ... " "	1—12—0.
300 ಕ್ಕೆ ... ... " "	2—4—0.

ವಿಳಾಸ—ಡಿ. ಹೆಚ್. ಮಸ್ತಾನ್‌ಸಾಹೇಬ್, ಅಂಡ್ ಕೊ.
1 ಮರಡಿಹಳ್ಳಿ—ಚಿತ್ರದುರ್ಗ ಡಿ||.

2

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯಕರವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—4—0

ವಿಳಾಸ—ಮಹಾರಾಟಿ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಬೀದಿ, ಮದರಾಸ್.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಕಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

7 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನೋಹರವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

11 ವಿಳಾಸ—ಎಂ. ಎಂ. ಹರ್ಡೆಕರ್ ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 14

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶಕಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೋತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಶುಭಾಶುಭಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ಕೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
7 ಸಾಹುಕಾರಪೇಟೆ, ಮದರಾಸ್.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 7

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:— ರಾಸ್ ವಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
15 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮಾರ್ಚಿ ತಾ|| ೨೩ ರಿಂದ ೧೯೧೯ ನೆಯ ಮಾರ್ಚಿ ತಾ|| ೨೯ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಲಯುಕ್ತಿ ನಾಮಸಂವತ್ಸರದ ಫಾಲ್ಗುಣ ಬ|| ಷಷ್ಠಿಯಿಂದ ಫಾಲ್ಗುಣ ಬ|| ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿಸಾನ ವಾಸ
23	ಭಾನು	ಷಷ್ಠಿ	1-53	ಜ್ಯೇಷ್ಠ	46-56	10
24	ಸೋಮ	ಸಪ್ತಮಿ	5-29	ಮೂಲ	51-10	11
25	ಮಂಗಳ	ಅಷ್ಟಮಿ	7-54	ಪೂಷಾ	54-20	12
26	ಬುಧ	ನವಮಿ	9-3	ಉಷಾ	56-9	13
27	[1]ಗುರು	ದಶಮಿ	8-56	ಶ್ರವಣ	56-43	14
28	ಶುಕ್ರ	ಏಕಾದ	7-33	ಧನಿಷ್ಠ	56-8	15
29	[2]ಶನಿ	ದ್ವಾದಶಿ	5-0	ಶತಭ	54-20	16

(1) ಹಿಮವದ್ಗೋಪಾಲಸ್ವಾಮಿ ರಥಃ. (2) ಶನಿಪ್ರದೋಷಃ.

ಮೈಸೂರ್: ಮೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಶ್ರೀತಾವತಾರಾ ಪಕ್ಷ್ಮಜ್ಞನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಲೇಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೨) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಮಾರ್ಚಿ ತಾರೀಖು ೩೦ ನೆಯ ಭಾನುವಾರ. (ಸಂಚಿಕೆ ೧೩

REGISTERED NO. M. 124.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಮ್ನಾಯ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರೆ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಸಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ.) 18

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಡಿಸಿಬಿ, ವಾತರೋಗವು ಮುಂತಾದವು ಅತಿತ್ವರಿತ ಗುಣವಾಗಿ ಪುಂಸತ್ವ (ನಿರೋಗತ್ವವೂ ಕಾಂತಿಯೂ ದಣಿಸುವುದಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ವಾಪಸ್ತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತಬಳ್ಳಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ರೋಗವು ಅಥವಾ ಅದರಮೇಲೆ ಧಾತು ಬೀಳುವುದು ಇಲ್ಲವಾಗುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ನಡೆದುಬಂದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದಣಿದವಾದ ಶರೀರಕ್ಕೆ ಯಾವ್ಯಾವ ಅತ್ಯುತ್ತಮ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವದಲ್ಲದೆ ಇನ್ನೂ ಅನೇಕ ಪೌಷ್ಟಿಕತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸದೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣವಾಗುವದು. ನಮ್ಮ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೆ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

5 ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪನಿ, ಪೋಸ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಆದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅನುಭವಿಸಿ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಉದರರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನ್ನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿ, ಅಜೀರ್ಣ, ಹೊಟ್ಟೆಶೂಲಿ, ಪೈರಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಚಿಜಡ್ಡು, ಗುಹ್ಯವೃಣಬೇನೆ, ಹುರಕುಕಜ್ಜಿ, ಗಜಕರ್ಣ, ಇಸುಬು, ತದ್ದು, ಫಾಯುವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಸ್ಟ ಹೊರಟರೆ ತರತ ತಕ್ಕೊಳ್ಳುತ್ತೀವೆ. ಮತ್ತು ಹೆಚ್ಚಿನ ಮಾಹಿತಿಯ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನದ ಕಾಯಿದೆ ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಇಂದಿ ಪ್ರತಿಯೊಂದು ಬಾಟಲಿಯ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ಬಗ್ಗೆರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
45 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಒಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು— ಜಪಾನ್ ಬೀಸಣಿಗೆ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಹರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಮಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ 4—8—0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
8 5. ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

26 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮಾರ್ಚಿ ತಾ|| ೩೦ ನೆಯ ಭಾನುವಾರ.

ಪಂಚಮೋದ್ಧಾರ.

ನಿಮ್ನಜಾತ್ಯುದ್ಧಾರದ ವಿಷಯದಲ್ಲಿ ನೆರೆಯ ತಿರುವಾಂಕೂರು ಸಂಸ್ಥಾನದೊಳಗೆ ಎಷ್ಟು ದೂರದವರೆಗೆ ಕೆಲಸ ನಡೆದಿರುವುದೆಂಬುದನ್ನು ಮೊನ್ನೆಯ ಸಂಚಿಕೆಯಲ್ಲಿ ವಿವರಿಸಿದೆವು. ಪ್ರಸಿದ್ಧ ಧಾರ್ಮಿಕ ಗುರುಗಳೊಬ್ಬರು ಈ ವಿಷಯವಾಗಿ ಕೊಟ್ಟಿರುವ ಗಣ್ಯವಾದ ಸಾನುಭೂತಿ ಸಂದೇಶವನ್ನು ಈ ಸಂಚಿಕೆಯಲ್ಲಿ ಪ್ರಕಟಿಸುವವರಾಗಿದ್ದೇವೆ. ಅದೇನೆಂದರೆ—ಪ್ರಾಕ್ಪಶ್ಚಿಮ ವಿದ್ಯಾವೈದುಷ್ಯದಿಂದಲಂಕೃತರಾಗಿ, ಡಾಕ್ಟರ್ ಪ್ರಶಸ್ತಿಯನ್ನು ಪಡೆದು ಮಹಾಭಾಗವತರೆಂದು ಲೋಕಪ್ರಸಿದ್ಧಿಯನ್ನು ಹೊಂದಿ, ಈಚೆಗೆ ಕೊಲ್ಹಾಪುರದ ಶಂಕರಾಚಾರ್ಯ ಪೀಠಾಧಿಕಾರವನ್ನು ವಹಿಸಿರುವ ಸ್ವಾಮಿಗಳು ಬೊಂಬಾಯಿಯಲ್ಲಿ ಕೂಡಿದ್ದ ನಿಮ್ನಜಾತಿಯವರ ಸಭೆಗೆ ಅಧ್ಯಕ್ಷರಾಗಿದ್ದ ಬರೋಡಾ ಮಹಾರಾಜರವರನ್ನು ಕುರಿತು ಒಂದು ಪತ್ರವನ್ನು ಬರೆದು, ಅದರಲ್ಲಿ ನಿಮ್ನಜಾತ್ಯುದ್ಧಾರದ ಅವಶ್ಯಕತೆ, ಮಾಡಬೇಕಾದ ಕರ್ತವ್ಯದ ರೀತಿ ಮೊದಲಾದ ವಿಷಯಗಳನ್ನು ವಿವರಿಸಿ ತಮ್ಮ ಸಾನುಭೂತಿಯನ್ನು ಪ್ರದರ್ಶಿಸಿರುತ್ತಾರೆ—ಆ ಲೇಖನದ ಮುಖ್ಯಾಭಿಪ್ರಾಯಗಳನ್ನು ಇಲ್ಲಿ ಕೊಟ್ಟಿರುತ್ತೇವೆ

“ನನಗೆ ಈ ಪ್ರಯತ್ನದಲ್ಲಿರುವ ಅಭಿಮಾನವನ್ನು ಇಷ್ಟೆಂದು ಹೇಳಲಾರೆ. ಆದರೆ ಉದ್ರೇಕಪೂರಿತಗಳಾದ ನಮ್ಮ ಪೂರ್ವಶಾಸ್ತ್ರಗಳನ್ನು ನಿರ್ಲಕ್ಷ್ಯಮಾಡಲಾಗದೆಂದೂ ಅವುಗಳಿಗೆ ಅಪಾರ್ಥವನ್ನು ಮಾಡಲಾಗದೆಂದೂ ನಿಮ್ಮನ್ನು ಎಚ್ಚರಿಸುತ್ತೇನೆ. ಇಂಥ ವಿಷಯಗಳನ್ನು ಕುರಿತು ನಮ್ಮ ಪೂರ್ವಶಾಸ್ತ್ರಗಳಲ್ಲಿ ಅವಶ್ಯಕಗಳೂ ಉನ್ನತಗಳೂ ಆದ ಆಧ್ಯಾತ್ಮಿಕನಿಯಮಗಳುಂಟು. ಆದರೆ ನಿರರ್ಥಕಗಳೂ ಕಠಿನಗಳೂ ಆದ ಅಶಾಸ್ತ್ರೀಯಾಚಾರಗಳೂ ಸಹ ನಮ್ಮ ಸಂಘಗಳಲ್ಲಿ ಬೆಳೆದು ದೊಡ್ಡವಾಗಿವೆ. ಮೊದಲನೆಯ ಶಾಸ್ತ್ರನಿಯಮಗಳು ಅನುಲ್ಲಂಘನೀಯಗಳು. ಆತ್ಮಾನುಭವಕ್ಕಾಗಿ ಪ್ರಯತ್ನಿಸತಕ್ಕ ನಿಷ್ಠಾವಂತರುಗಳು ಅವಲಂಬಿಸಬೇಕಾದ ಕೆಲ ಶೌಚವಿಧಿಗಳೂ, ಭ್ರಷ್ಟರಾಗದಂತೆ ವರ್ತಿಸುವುದಕ್ಕೆ ಅವಶ್ಯಕಗಳಾದ ನಿಷೇಧಗಳೂ ಕೂಡ ಅವಶ್ಯವಾಗಿ ಅವರಿಂದ ಆಚರಿಸಲ್ಪಡತಕ್ಕವುಗಳು. ನಿಜವೈದಿಕರುಗಳು ತಿನ್ನಬಾರದೆಂದು ನಿಷೇಧಿಸಲ್ಪಟ್ಟಿರುವ ಪದಾರ್ಥಗಳನ್ನು ತಿನ್ನಲಾಗದು. ಕೂಡಬಾರದವರೊಡನೆ ಅವರು ಸಂಪರ್ಕಮಾಡಲಾಗದು. ಸದಾಚಾರಕ್ಕೆ ಭಿನ್ನವಾಗಿ ನಡೆಯಲಾಗದು. ಇದು ಅವರ ಆಧ್ಯಾತ್ಮಿಕಾಭ್ಯುದಯಕ್ಕೋಸ್ಕರಲೇ ಅಲ್ಲದೆ ಲೋಕೋದ್ಧರಣಕ್ಕೂ ಅವಶ್ಯಕವು. ಜಿತೇಂದ್ರಿಯನಾಗಬೇಕೆಂದೂ, ಆತ್ಮಾನುಭವವನ್ನು ಪಡೆಯಬೇಕೆಂದೂ ಪ್ರಯತ್ನಿಸುವ ಬ್ರಾಹ್ಮಣನೇ ಆಗಲೀ ಇತರನೇ ಆಗಲೀ ಈ ನಿಯಮಗಳನ್ನು ಲೇಶವೂ ಓರೆಯಾಗದಂತೆ ಆಚರಿಸಬೇಕು. ತಾನು ಅಧ್ಯಾತ್ಮವಿಷಯಗಳಲ್ಲಿ ಔನ್ನತ್ಯವನ್ನು ಪಡೆದು, ತನ್ನ ಬಳಿಗೆ ಬಂದವರನ್ನೆಲ್ಲಾ ಪರಿಶುದ್ಧರನ್ನಾಗಿ ಮಾಡಬಲ್ಲವನಾಗುವವರೆಗೂ ಮನೋವಾಕ್ಕಾಯ ಕರ್ಮಗಳಲ್ಲಿ ಪರಿಶುದ್ಧನಾಗಿರುವುದಕ್ಕೆ ಬಹು ಜಾಗರೂಕತೆಯಿಂದ ಪ್ರಯತ್ನಿಸಬೇಕು. ಅಪರಿಶುದ್ಧತೆಗೂ ಅಸ್ಪೃಶ್ಯತೆಗೂ ಸಂಬಂಧಿಸಿದ ನಿಯಮಗಳೆಲ್ಲಾ ಈ ಸಿದ್ಧಾಂತವನ್ನೇ ಆಧಾರಮಾಡಿಕೊಂಡಿವೆ. ಆತ್ಮಾನುಭೂತಿಯನ್ನು ಹೊಂದಬೇಕೆನ್ನುವ ಯಾರೊಬ್ಬರೂ ಈ ನಿಯಮಗಳನ್ನು ನಿರ್ಲಕ್ಷ್ಯಮಾಡಲಾಗದು. ನಿಜವೈದಿಕನು ಇವುಗಳನ್ನು ಅವಲಂಬಿಸಿಯೇ ತೀರಬೇಕು. ಕೇವಲ ದುರಭಿಮಾನದಿಂದ ನಮ್ಮ ಸಂಘಗಳಲ್ಲಿ ನಿರರ್ಥಕಗಳಾದ ಕಠಿನಾಚಾರಗಳು ಕೆಲವು ತಲೆಯೆತ್ತಿಕೊಂಡಿವೆಯೆಂದು ಮೇಲೆಯೇ ಹೇಳಿರುವೆನಷ್ಟೆ. ಅದು ನಿಜವಾದುದು.

ಈಗಣ ಕಾಲದಲ್ಲಿ ನಿಜವಾದ ವೈದಿಕರು ಅತ್ಯಂತ ದುರ್ಲಭರು. ಲೌಕಿಕರಿಗಾದರೊ ಯಾವಾಗಲೂ ಸ್ವೇಚ್ಛಾಪ್ರವೃತ್ತಿಯೇ ವಿಪರೀತವಾಗಿರುವುದು. ಇವೆಲ್ಲಾ ಹೀಗಿರುವಾಗ, ಸದ್ಯಃ ನಮ್ಮ ದೇಶದ ಸ್ಥಿತಿಗತಿಗಳಲ್ಲಿ ಉಂಟಾಗಿರುವ ಮಾರ್ಪುಗಳನ್ನು ನಾವು ಎಷ್ಟುಮಾತ್ರಕ್ಕೂ ಮರೆಯಕೂಡದು. ದೇಶಕಾಲಗಳನ್ನನುಸರಿಸಿ ಆಚಾರಗಳು ಯಾವಾಗಲೂ ಮಾರ್ಪುಗೊಳ್ಳುತ್ತಿರುವುವು. ಇದಕ್ಕೆ ನಿದರ್ಶನವೇನೆಂದರೆ—ಮಹಮ್ಮದೀಯರೂ ಕ್ರೈಸ್ತರೂ ಸಹ ಹಿಂದೂಗಳಲ್ಲದೆ ಇದ್ದರೂ ಅವರು ನಮ್ಮಿಂದ ಬಹು ಮರ್ಯಾದಾಪೂರ್ವಕವಾಗಿಯೂ ಅತಿ ಪ್ರೇಮದಿಂದಲೂ ಆದರಿಸಲ್ಪಡುತ್ತಿರುವುದೇ ಆಗಿದೆ. ಈ ಮಹಮ್ಮದೀಯ ಕ್ರೈಸ್ತರುಗಳಾದರೊ ನಮ್ಮ ಮತದವರಲ್ಲದೆ ಇರುವುದು ಮಾತ್ರವೇ ಅಲ್ಲದೆ ನಮ್ಮ ಮತವನ್ನು ಹೀಯಾಳಿಸುವವರೂ ಕ್ಷೀಣಗೊಳಿಸುವವರೂ ಸಹ ಆಗಿದ್ದಾರೆ. ಆತ್ಮೋಪಲಬ್ಧಿಗಾಗಿ ಪ್ರಯತ್ನಿಸದೆ ಇರುವ ಹಿಂದೂ ಲೌಕಿಕನು ಮತಾಂತರದವರಾದ ಮುಸಲ್ಮಾನರನ್ನೂ ಕ್ರೈಸ್ತರನ್ನೂ ಪ್ರೇಮಿಸಿ ಗೌರವಿಸುತ್ತ, ಹಿಂದೂಗಳೇ ಆಗಿರುವ ಪಂಚಮರನ್ನು ಮಾತ್ರ ದೂರದಲ್ಲಿ ನಿಲ್ಲಿಸಿ ಹೇಯವಾಗಿ ನೋಡುವ ಪಕ್ಷದಲ್ಲಿ ಆತನು ಘೋರಪಾಪವನ್ನಾಚರಿಸುತ್ತಾನೆಂಬುದೇ ನನ್ನ ಅಭಿಪ್ರಾಯವು. ಉತ್ತಮವಾದ ಪರಿಶುದ್ಧತೆಯು ಸಕಲ ಪ್ರಾಣಿಗಳನ್ನೂ ಪ್ರೇಮಿಸುವುದರಿಂದಲೇ ಉಂಟಾಗುವುದೆಂಬುದನ್ನು ಮರೆಯಲಾಗದು. ಈಗಲಾದರೂ ಉತ್ತಮವರ್ಣದ ಹಿಂದುಗಳು ಪಂಚಮರನ್ನು ತಮ್ಮ ಸಹೋದರರೆಂಬುದಾಗಿ ಗ್ರಹಿಸುವುದು ಅವಶ್ಯಕವು.

ಆ ಪಂಚಮರಿಗೂ ಕೂಡ ನಾನು ಒಂದು ಉಪದೇಶವನ್ನು ಮಾಡುತ್ತೇನೆ. ಅವರಲ್ಲಿ ನನಗಿರುವ ಪ್ರೇಮವು ತನ್ನಂತೆಯೇ ಸಕಲ ಪ್ರಾಣಿಗಳನ್ನೂ ತಿಳಿಯಬೇಕೆಂಬ ಸಾಮಾನ್ಯತತ್ತ್ವವನ್ನು ಅವಲಂಬಿಸಿರುವ ಮಾತ್ರವಾಗಿರುವುದೆಂದು ತಿಳಿಯಲಾಗದು. ಪೂರ್ವದಲ್ಲಿ ಪಂಚಮರೊಳಗೆ ಎಲ್ಲರೂ, ಈಗ ಬಲುಮಂದಿಯೂ ಅಪರಿಶುಭ್ರವಾದ ದುರಾಚಾರಗಳಿಗೆ ದಾಸರಾಗಿದ್ದಾರೆ. ಈ ಕೆಟ್ಟ ಪದ್ಧತಿಗಳನ್ನು ವಿಸರ್ಜಿಸುವುದಕ್ಕೆ ಅವರು ಪ್ರಯತ್ನಿಸಬೇಕು. ಸ್ವಪ್ರಯತ್ನದಿಂದ ಅವರು ಸುಧಾರಣೆಗೊಳ್ಳದಿದ್ದರೆ ಸಂಘಗಳಲ್ಲಿ ಅವರಿಗೆ ಉನ್ನತಿ ಲಭಿಸಲಾರದು. ಅಸ್ಪೃಶ್ಯರೆಂದು ತಿಳಿಯಲ್ಪಟ್ಟಿದ್ದ ಜನರಲ್ಲಿಯೇ ಅನೇಕ ಯೋಗಿಗಳೂ ಭಕ್ತರೂ ಉದಯಿಸಿ ಬ್ರಾಹ್ಮಣರಿಂದಲೂ ಕೂಡ ಗೌರವಿಸಲ್ಪಟ್ಟಿರುವ ಸಂಗತಿಯು ನನಗೆ ಗೊತ್ತುಂಟು. ಅಸ್ವರ್ಣದವರು ಪತಿತರಾಗಿ ನೀಚಜಾತಿಸ್ಥಿತಿಗೆ ಬೀಳಲಾಗದು. ನಿಮ್ನಜಾತಿಯವರ ಅಭಿವೃದ್ಧಿಗೆ ಆತಂಕಪಡಿಸುತ್ತಲಿರುವ ನಿರರ್ಥಕಗಳಾದ ಪ್ರತಿಬಂಧಕಗಳನ್ನು ತೊಲಗಿಸಿ ಕ್ರಮಕ್ರಮವಾಗಿ ಉನ್ನತಸ್ಥಿತಿಗೆ ತಂದುಕೊಳ್ಳಬೇಕು. ನಾನು ಮತಾಧಿಪತಿಯು. ಆಚಾರಧರ್ಮಸಂಬಂಧಗಳಾದ ಮುಖ್ಯವಿಷಯಗಳಿಗೆ ಭಂಗವುಂಟಾಗಕೂಡದೆಂಬುದನ್ನು ನಾನು ಗಟ್ಟಿಯಾಗಿ ಹೇಳುತ್ತೇನೆ. ಆದರೆ ಮಾರ್ಪುಗೊಂಡಿರುವ ನಮ್ಮ ದೇಶದ ಸ್ಥಿತಿಗತಿಗಳನ್ನು ಅನುಸರಿಸಿ ಸಂಘಾಚಾರಗಳಲ್ಲೂ ಕೂಡ ಮಾರ್ಪುಗಳು ಜರುಗಿಯೇ ತೀರಬೇಕಾದುದು ಅಪರಿಹಾರ್ಯವಾಗಿದೆ. ಜರುಗಬೇಕಾಗಿರುವ ಮಾರ್ಪುಗಳಲ್ಲಿ ಮೊದಲನೆಯದಾವುದೆಂದರೆ—ಅಸ್ಪೃಶ್ಯರೆಂದು (ನಿಷ್ಕಾರಣವಾಗಲ್ಲ) ತಿಳಿಯಲ್ಪಟ್ಟಿದ್ದ ಅವರುಗಳು ಈಗ ಸನ್ಮಾರ್ಗವನ್ನವಲಂಬಿಸುತ್ತಿರುವುದರಿಂದಲೂ, ಉತ್ತಮಜಾತಿಗಳಲ್ಲಿರುವ ಲೌಕಿಕರುಗಳು ಶುದ್ಧವೈದಿಕರಾಗಿದ್ದ ತಮ್ಮ ಪೂರ್ವಿಕರಂತೆ ಪ್ರಾಕೃತವನ್ನು ಬಿಟ್ಟು ದೂರಸ್ಥರಾಗಿರಲಾರರಾದ ಕಾರಣದಿಂದಲೂ, ಆ ಅಸ್ಪೃಶ್ಯರಾಗಿದ್ದ ಜನರನ್ನು ಈಗ ತಮ್ಮ ಸಂಘಗಳಲ್ಲಿ ಗೌರವವಾಗಿ ಕಾಣಬೇಕಾಗಿದೆ. ಮುಖ್ಯವಾಗಿ ಅವರನ್ನು ಹಿಂದೂಮತದಿಂದ ಹೊರದಬ್ಬಿಕೊಡದಂತೆ ಮಾಡುವುದಕ್ಕೆ ಇದು ಅತ್ಯವಶ್ಯಕವು. ಈ ವಿಷಯದಲ್ಲಿ ನಿಮ್ಮ ಸಭೆಯು ಪ್ರಜಾಭಿಪ್ರಾಯವನ್ನು ಬಲಪಡಿಸುತ್ತಿರುವುದಕ್ಕಾಗಿ ನಾನು ಸಂತೋಷಿಸುತ್ತೇನೆ. ಮಾರ್ಪು ಜರುಗಬೇಕೆಂಬ ಕೋರಿಕೆಯು ವಿಸ್ತರಿಸುತ್ತ ಬಂದರೆ ನನ್ನ ಸಹೋದರ ಪೀಠಾಧಿಪತಿಗಳೊಡನೆ ನಾನು ಆಲೋಚಿಸಿ ದೇಶೀಯಾವಶ್ಯಕತೆಗಳಿಗೆ ಅನುಗುಣವಾಗಿಯೂ ಶಾಸ್ತ್ರಸಿದ್ಧಾಂತಗಳಿಗೆ ಭಂಗಬರದಂತೆಯೂ ತಕ್ಕ ಮಾರ್ಪುಗಳನ್ನು ಮಾಡಿಕೊಡುವೆನೆಂದು ನಾನು ನಿಮಗೆ ನಂಬುಗೆಯಿಂದ ವಾಗ್ದಾನಮಾಡುತ್ತೇನೆ.”

ಕರವೀರ ಪೀಠಾಧಿಪತಿಗಳ ಈ ಮೇಲೆ ಕಂಡ ಅಭಿಪ್ರಾಯವು ಕೂಪಮಂಡೂಕಾವಸ್ಥೆಯವರ ಮಾತಿನಂತಿರದೆ ಉದಾರವಾಗಿಯೂ ದೀರ್ಘಾಲೋಚನೆಯಿಂದ ಹುಟ್ಟಿದುದಾಗಿಯೂ ಇರುವುದೆಂಬುದು ಚೆನ್ನಾಗಿ ವ್ಯಕ್ತವಾಗಿರುತ್ತದೆ. ಆಧ್ಯಾತ್ಮಿಕೋನ್ನತಿಯಲ್ಲೇ ಬದ್ಧದೃಷ್ಟಿಗಳಾಗಿ ವೈದಿಕತ್ವದಿಂದ ಕಾಲಕಳೆಯಬೇಕಾಗಿದ್ದ ಬ್ರಾಹ್ಮಣರು ಆ ತಮ್ಮ ಪೂರ್ವಕಾಲದ ಸ್ಥಿತಿಗೆ ಸಂಬಂಧವಿಲ್ಲದವರಾಗಿಯೇ ಈಗ ನಡೆದುಕೊಳ್ಳುತ್ತಿರುವಾಗ, ಪೂರ್ವಕಾಲದ ಸ್ಥಿತಿಯಲ್ಲಿ ಕಲ್ಪಿತವಾಗಿದ್ದ ಸ್ಪೃಶ್ಯಾಸ್ಪೃಶ್ಯತ್ವಭೇದವನ್ನು ಈಗ ಬಲಪಡಿಸುವುದರಲ್ಲಿ ನ್ಯಾಯವೇನಿರುವುದು? ಪ್ರಾಕೃತದಲ್ಲಿ ಮುಳುಗಿ ತೇಲುತ್ತಿರುವ ಲೌಕಿಕ ಬ್ರಾಹ್ಮಣಬ್ರುವರು ತಮ್ಮ ಧರ್ಮಭ್ರಷ್ಟತೆಯನ್ನು ತಾವು ಸರಿಪಡಿಸಿಕೊಳ್ಳಲಾರದ ಸ್ಥಿತಿಯಲ್ಲಿರುವಾಗ, ಇತರರ ಅಸ್ಪೃಶ್ಯತ್ವದೋಷದಲ್ಲಿ ಅನಿವಾರ್ಯತ್ವವನ್ನು ಪ್ರತಿಷ್ಠಾಪಿಸುವುದು ಹೇಗೆತಾನೇ ಸಾಧ್ಯವಾದೀತು? ಲೌಕಿಕಸಂಪತ್ತಿಗೆ ಗಮನಕೊಡದೆ ಆಧ್ಯಾತ್ಮಿಕೋನ್ನತಿಗಾಗಿ ವೇದವೇದಾಂತಾದಿಗಳನ್ನು ಅಭ್ಯಸಿಸಬೇಕೆಂದು ನಿರ್ದುಷ್ಟಬ್ರಾಹ್ಮಣ್ಯಶೀಲರುಗಳು ಅಪೇಕ್ಷಿಸುವುದೂ, ಅದಕ್ಕಾಗಿ ಪ್ರತ್ಯೇಕ ಪಾಠಶಾಲೆಗಳನ್ನು ಅವರು ಏರ್ಪಡಿಸಿಕೊಳ್ಳಬೇಕಾದುದೂ, ಅದಕ್ಕೆ ಪ್ರಭುತ್ವದವರೂ ಯಥೋಚಿತ ಸಹಾಯಮಾಡಬೇಕಾದುದೂ, ಅಲ್ಲಿಗೆ ಅಸ್ಪೃಶ್ಯವರ್ಗದವರನ್ನು ಸೇರಿಸಲಾಗದೆಂದು ತಡೆಯುವುದೂ ಸಹ ನ್ಯಾಯವೇ ಆಗಿರುತ್ತವೆ. ವೈದಿಕವನ್ನು ಮೂಲೆಗೊತ್ತಿ ಲೌಕಿಕವನ್ನೇ ಪುರುಷಾರ್ಥವನ್ನಾಗಿ ತಿಳಿದು, ದುರಾಹಾರ ದುಷ್ಪಾನಸಂಪ್ರದಾಯದ ಇತರ ಲೌಕಿಕಜನರು ಓದುವ ಪಾಠಶಾಲೆಗಳಲ್ಲಿ ಲೌಕಿಕ ವಿದ್ಯಾಪ್ರಾಪ್ತಿಗಾಗಿ ತಾವೂ ಸೇರಿ ಓದುತ್ತಿರುವವರುಗಳು, ಅಲ್ಲಿ ಅಸ್ಪೃಶ್ಯದೋಷವನ್ನು ನಿಮ್ನಜಾತಿಯವರಲ್ಲಿ ಎಣಿಸಿ, ಅವರನ್ನು ಅಲ್ಲಿಂದಲೂ ಹೊರಕ್ಕೆ ದೂಡಿಸಬೇಕೆಂದು ಯತ್ನಿಸುವುದು ಎಂಥ ನಿಷ್ಕರುಣತೆ! ಎಷ್ಟು ನ್ಯಾಯದೂರತೆ!! ಆ ಬಡಪಾಯಿಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ತಿಳಿದುಕೊಳ್ಳಲಾರದೆ ಪಶುಸಮಾನತೆಯಿಂದ ದುರ್ಬಲರಾಗಿ ಬಿದ್ದಿದ್ದ ಮಾತ್ರಕ್ಕೇ ಅಂಥವರ ಮೇಲೆಯೇ ತಮ್ಮ ವಿದ್ಯಾಬುದ್ಧಿ ಶಕ್ತಿಗಳನ್ನೆಲ್ಲಾ ವಿನಿಯೋಗಿಸಿ ಈಗಲೂ ಅವರನ್ನು ಮೆಟ್ಟಿ ಕೆಸರಿನಲ್ಲಿ ಹೂಣಿಡಬೇಕೆ? ಪರಪೀಡನಕ್ಕೂ ನಿಗ್ರಹಕ್ಕೂ ತಮ್ಮ ಶಕ್ತಿಗಳನ್ನುಪಯೋಗಿಸುವ ಸ್ವಭಾವದವರಿಗೆ ಆ ಬಡಪಾಯಿಗಳ ಮೇಲೆ ಇನ್ನೂ ಕರುಣಹುಟ್ಟದಿದ್ದರೆ ಸರ್ವಾಂತರ್ಯಾಮಿಯಾದ ಆ ಜಗದೀಶ್ವರನಿಗೂ ಹುಟ್ಟುವುದಿಲ್ಲವೆ?

ವೈದಿಕಮಾರ್ಗದಲ್ಲಿರುವ ಶುದ್ಧಾಚಾರಿಗಳಿಗೆ ಸ್ಪೃಶ್ಯಾಸ್ಪೃಶ್ಯತ್ವದ ಆ ಮಾತೇ ಹೊರತು ಲೌಕಿಕದಲ್ಲಿ ತೇಲಾಡುತ್ತಿರುವ ಈಗಣ ಬ್ರಾಹ್ಮಣರಿಗೆ ಆ ಹಂಬಲೇಕೆ? ಎಂದು ಕರವೀರ ಪೀಠಾಧಿಪತಿಗಳು ಹೊಡೆದಿರುವ ಈ ಚಾಟಿಯೇಟು ಈಗಣ ತುಚ್ಛ ಪ್ರತಿಷ್ಠಾಮೂರ್ತಿಗಳನ್ನು ಸ್ವಲ್ಪವಾದರೂ ಎಚ್ಚರುಗೊಳಿಸಬಲ್ಲುದೆ? ನೋಡಬೇಕು. ಆದರೆ ಶಾಸ್ತ್ರವಚನವನ್ನೇ ಮೀರಿ ನಡೆಯುವವರಿಗೆ ಗುರುವಚನವು ಮಾತ್ರ ಅನುಲ್ಲಂಘನೀಯವಾಗಿ ಉಳಿಯುವುದೆಂತು? ಹಾಗಾದರೆ ಶಾಸ್ತ್ರವಚನ ಗುರೂಪದೇಶಗಳೆರಡನ್ನೂ ಮೀರಿ ನಡೆಯುವ ಅಂಥವರನ್ನ ಲೋಕವು ಧಿಕ್ಕರಿಸಿ ನಡೆಯುವುದೂ ಕೂಡ ಸಹಜವೇ ಆಗಿರುತ್ತದೆ. ಸರ್ಕಾರ ಶಾಲೆಗಳಿಗೆ ಹಳೇಪೈಕದವರನ್ನು ಸೇರಿಸಿದುದು ವರ್ಣಸಾಂಕರ್ಯಪಾತಕವೆಂದು ವಿಜೃಂಭಿಸುತ್ತಿರುವ ಸಂಪದಭ್ಯುದಯದ ಕೂಟದವರು, ತಮ್ಮ ಮತಾಚಾರ್ಯರಲ್ಲೇ ಒಬ್ಬರಾದ ಕರವೀರ ಪೀಠಾಧಿಪತಿಗಳು ಅದನ್ನು ಕರ್ತವ್ಯವೆಂದು ಹೇಳಿರುವಾಗ ಈ ಸಿದ್ಧಾಂತಕ್ಕೆ ಯಾವ ತಿರುಮಂತ್ರವನ್ನು ಹೇಳುವರೋ ನೋಡಬೇಕು.

ಅಮೀರ್ ಹಬೀಬುಲ್ಲಾ ಖಾನರ ಕೊಲೆಯಸಂಬಂಧ ವಿವರ.

ಟೈಮ್ಸ್ ಆಫ್ ಇಂಡ್ಯಾ ಪತ್ರಿಕೆಗೆ ಪೆಷಾವರಿನಿಂದ ಒಬ್ಬ ವಿಲೇಖಕನು ಅಫ್ಘಾನಿಸ್ಥಾನದ ಅಮೀರರ ಕೊಲೆಯ ಸಂಬಂಧವಾಗಿ ಈಚೆಗೆ ತಿಳಿದುಬಂದಿರುವ ಸಂಗತಿಗಳನ್ನು ಕುರಿತು ಹೀಗೆ ಬರೆದಿದ್ದಾನೆ. ಸ್ವಲ್ಪ ಹೆಚ್ಚು ಕಡಿಮೆ ಇದೇ ಅಭಿಪ್ರಾಯವನ್ನು ಇಂಗ್ಲೀಷ್‌ಮನ್ ಪತ್ರಿಕೆಯೂ ಪ್ರಕಟಿಸಿದೆ. ಅದುಕಾರಣ ಈ ವಿವರವು ಬಹುಮಟ್ಟಿಗೆ ನಿಜವಾಗಿರಬೇಕೆಂದೇ ಕಾಣುತ್ತದೆ. “ಫೆಬ್ರವರಿ ತಿಂಗಳಲ್ಲಿ ಅಮೀರರು ಜಲಾಲಾಬಾದಿನ ಸಮೀಪದಲ್ಲಿರುವ ಲೆಘ್ಮಾನ್ ಕ್ಯಾಂಪಿನ ಪರಿಸರದಲ್ಲಿ ಬೇಟೆಯಾಡುವುದಕ್ಕೆ ಹೋದರು. ಹೀಗೆ ಬೇಟೆಗೆ ಹೋಗತಕ್ಕ ಕಾಲದಲ್ಲಿ ಪದ್ಧತಿಯಾಗಿದ್ದಂತೆ ಅವರ ಸಂಗಡ ಅನೇಕ ಮಂದಿಗಳು ಪರಿವಾರವಾಗಿ ಹೋದರು. ಆ ಪರಿವಾರದಲ್ಲಿ ಅಮೀರರ ಸಹೋದರ ನಸರುಲ್ಲಾಖಾನರೂ, ಮುಖ್ಯಸೇನಾಪತಿ ನಾದಿರ್ಖಾನರವರೂ ಸಹ ಇದ್ದರು. ಇವರೆಲ್ಲಾ ಅಮೀರರು ಇಳಿದ ತೋಟದಲ್ಲೇ ಒಂದು ಕಡೆ ಇಳಿದುಕೊಂಡಿದ್ದರು. ಅಲ್ಲಿ ಭಯಪಡುವುದಕ್ಕೆ ಯಾವ ಕಾರಣವೂ ಇಲ್ಲದಿದ್ದುದರಿಂದ ಯಥಾಪ್ರಕಾರ ಏರ್ಪಾಟುಗಳೆಲ್ಲಾ ಇದ್ದುವು. ಪೊಲೀಸರ ಕಾವಲು ಇಡಲ್ಪಟ್ಟಿತ್ತು. ಆದರೂ ನಾದಿರ್ಖಾನ ಸಹೋದರನೂ ಅಂಗರಕ್ಷಕಸೈನ್ಯದಲ್ಲಿ ಒಬ್ಬನೂ ಆಗಿದ್ದ ಅಹಮ್ಮದ್‌ಷಾ ಎಂಬುವನು ಅಮೀರರು ಮಲಗಿದ್ದ ಗುಡಾರದೊಳಕ್ಕೆ ನಡುರಾತ್ರಿಯಲ್ಲಿ ನುಗ್ಗಿ ಅಮೀರರನ್ನು ತುಪಾಕಿಗುಂಡಿನಿಂದ ಹೊಡೆದು ಕೊಂದನು. ಅವನು ಒಳಗಿಂದ ಈಚೆಗೆ ಬರುತ್ತಿದ್ದಾಗ ಕಾವಲಿನ ಭಟನು ಅವನನ್ನು ಹಿಡಿದುಕೊಂಡನು. ಆದರೆ ಅಷ್ಟರಲ್ಲಿ ನಸರುಲ್ಲಾಖಾನರೂ ನಾದಿರ್ಖಾನೂ ಅಲ್ಲಿಗೆ ಬರಲು ಅವನು ಬಿಡಿಸಲ್ಪಟ್ಟನು. ನಸರುಲ್ಲಾಖಾನರು ವೈಸ್ರಾಯರಿಗೆ ಬರೆದಿರುವ ಪತ್ರದಲ್ಲಿ ಹಂತಕನು ಯಾರೋ ಗೊತ್ತಿಲ್ಲವೆಂದು ಬರೆದಿರುವುದನ್ನು ಎಲ್ಲರೂ ತಿಳಿದಿರುವರು. ಇದು ಸಂಶಯಕ್ಕೆ ಮತ್ತಷ್ಟು ಅವಕಾಶಮಾಡಿದೆ. ನಸರುಲ್ಲಾಖಾನರೂ ನಾದಿರ್ಖಾನೂ ಅಲ್ಲಿಗೆ ಕೂಡಲೇ ಬಂದು ಮಾಡಿದುದೇನೆಂದರೆ ಅಮೀರರ ಶವವನ್ನು ಜಲಾಲಾಬಾದಿಗೆ ಸಾಗಿಸಿಕೊಂಡು ಹೋಗಿರಿ ಎಂದು ಅಪ್ಪಣೆಮಾಡಿದುದು ಮಾತ್ರವೇ ಆಗಿರುತ್ತದೆ. ಆ ಬಳಿಕ ಅನೇಕಾದ್ಭುತಕಾರ್ಯಗಳು ಜರುಗಿರುತ್ತವೆ. ಆ ಕಾರ್ಯಗಳು ಪೂರ್ವದಲ್ಲಿ ರೋಮನ್ ಸಾಮ್ರಾಜ್ಯದಲ್ಲೂ ಜರುಗಿರುವಂತೆ ಕೇಳಿಲ್ಲ. ಅಮೀರರ ಶವವು ಜಲಾಲಾಬಾದಿಗೆ ಸಾಗಿಸಲ್ಪಟ್ಟ ತರುವಾಯ, ಅವನ ಬಳಿಕ ರಾಜ್ಯಾಧಿಕಾರಕ್ಕೆ ಯಾರು ಬರುವರೋ ಅದನ್ನು ಹೇಳದಿದ್ದರೆ ಅಂತ್ಯಸಂಸ್ಕಾರವನ್ನು ಮಾಡಲಾಗುವುದಿಲ್ಲವೆಂದು ಅಲ್ಲಿಯ ಮೌಲ್ವಿಗಳು ಹೇಳಿದರು. ನಸರುಲ್ಲಾಖಾನನು ಮುಖ್ಯ ಸೇನಾಪತಿಯ ಸಹಾಯದಿಂದ ಯುವರಾಜನನ್ನು ಭಯಪಡಿಸಿ, ತಾನೇ ಅಮೀರನೆಂದು ಪ್ರಕಟಿಸಿ ಸೈನಿಕರ ಸಂಬಳವನ್ನು ೧೩ ರೂ. ನಿಂದ ೧೬ ರ ವರೆಗೆ ಹೆಚ್ಚಿಸಿದನು. ಬಳಿಕ ಆತನು ಅಲ್ಲಿಂದ ಕಾಬೂಲಿಗೆ ಹೊರಡಲು ಉಜ್ಜುಗಿಸಿದನು. ಅಲ್ಲಿ ಇವನಿಗೆ ಕೆಲಮಂದಿ ಶತ್ರುಗಳಿದ್ದರು. ಅವರನ್ನು ಕೂಡಲೇ ಅಡಗಿಸಿಬಿಡಬೇಕೆಂಬ ಉದ್ದೇಶದಿಂದ ಅಲ್ಲಿಗೆ ಹೋದನು. ಆದರೂ ತನ್ನ ಉದ್ಯಮಕ್ಕೆ ವಿರುದ್ಧವಾಗಿ ಬೇರೊಂದು ವಿಪ್ಲವವು ಉಂಟಾಗದಂತೆ ಮಾಡಿಕೊಳ್ಳುವಷ್ಟು ಕೌಶಲವು ಅವನಲ್ಲಿದ್ದಂತೆ ಕಂಡುಬರಲಿಲ್ಲ. ಕಾಬೂಲಿನಲ್ಲಿದ್ದ ಗತಿಸಿದ ಅಮೀರನ ಸ್ನೇಹಿತರು ಕೆಲವರು ಅಮೀರರ ಮೂರನೆ ಮಗನಾದ ಅಮಾನುಲ್ಲಾಖಾನರನ್ನು ಉದ್ಬೋಧಿಸಿ ಅವರನ್ನೇ ಅಮೀರರನ್ನಾಗಿ ಪ್ರಕಟಿಸಿದರು. ಮತ್ತೂ ನಸರುಲ್ಲಾಖಾನರ ಮತ್ತೂ ನಾದಿರ್ಖಾನರ ಕೃತ್ಯಗಳನ್ನು ನಿಂದಿಸಿ ಬೇರೊಂದು ಪ್ರಕಟನೆಯನ್ನು ಮಾಡಿದರು. ಅಷ್ಟೇ ಅಲ್ಲದೆ ಸೈನಿಕರ ಸಂಬಳವನ್ನು ತಿಂಗಳಿಗೆ ೧೬ ರೂ. ನಿಂದ ೨೦ ರ ವರೆಗೆ ಹೆಚ್ಚಿಸಿದರು. ಆ ಬಳಿಕ ಜಲಾಲಾಬಾದಿನಲ್ಲಿ ಅಮೀರರ ಕೊಲೆಯ ರಹಸ್ಯ ಪ್ರಯತ್ನಕ್ಕೆ ಸೇರಿದ್ದ ಗುಂಪಿನವರೆಲ್ಲರನ್ನೂ ಮತ್ತೂ ನಸರುಲ್ಲಾಖಾನರನ್ನೂ ನಾದಿರ್ಖಾನನ್ನೂ ಕೂಡ ಹಿಡಿಸಿ ಸೆರೆಯಲ್ಲಿಡಿಸಿದರು. ಇಷ್ಟರಮೇಲೆ ಅಮೀರರ ಹಿರಿಯಮಗನು ಸುಮ್ಮನಿರಲಿಲ್ಲ. ಆತನಿಗೆ ಸಹಾಯಕರಾಗಿದ್ದವರಲ್ಲಿ ಹುಸ್ಸೇನ್ ಎಂಬುವವನು ಮುಖ್ಯನಾಗಿದ್ದನು. ಆತನಾದರೊ ಸೈನಿಕರ ಸಂಬಳವನ್ನು ದ್ವಿಗುಣಮಾಡುತ್ತೇನೆಂದೂ ಎಲ್ಲರೂ ತನ್ನಂತೆ ಇರಬೇಕೆಂದೂ ಆಸೆ ಹುಟ್ಟಿಸಿದನು. ಆದರೂ ಅವನ ಉದ್ಯೋಗವೇನೂ ಸಾಗಲಿಲ್ಲ. ಅವನನ್ನೂ ಹಿಡಿಯಿಸಿದರು. ಮತ್ತೂ ಅವನ ತಲೆಯನ್ನು ಬೋಳಿಸಿ ಕತ್ತೆಯಮೇಲೆ ಕುಳ್ಳಿರಿಸಿ ಕಾಬೂಲಿನ ಬೀದಿಗಳಲ್ಲೆಲ್ಲಾ ಮೆರೆಸಿದರು. ಅದರಿಂದೀಚೆಗೆ ಹೊಸ ಅಮೀರರ ಸ್ಥಿತಿ ಹೇಗಿರುವುದೆಂಬುದು ತಿಳಿದುಬಂದಿಲ್ಲ.”

ಈ ಮೇಲೆ ಕಂಡ ವಿವರಣೆಗಳನ್ನೆಲ್ಲಾ ಕೇಳಿದರೆ ಅಫ್ಘಾನಿಸ್ಥಾನದ ಪ್ರಕೃತಸ್ಥಿತಿಯು ಪರಸ್ಪರ ಪಕ್ಷಮತ್ಸರದಿಂದ ಕುದಿಯುತ್ತಿರುವಂತೆ ಕಾಣುವುದು. ಈಗಣ ಅಮೀರರ ಆಧಿಪತ್ಯವು ಶಾಂತವಾಗಿ ಎಲ್ಲಿಯವರೆಗೆ ಸಾಗುವುದೋ ನೋಡಬೇಕು. ಮುಖ್ಯವಾಗಿ ಹೊಸ ಅಮೀರರು ತಮ್ಮ ತಂದೆಯವರಂತೆಯೇ ಆಂಗ್ಲಪ್ರಭುತ್ವದ ವಿಶ್ವಾಸವನ್ನು ಕಳೆದುಕೊಳ್ಳದ ಉಳಿಯಿಸಿಕೊಂಡರೆ ಅವರಿಗೇ ಸುಖವುಂಟು.

ಒಳದೇಶದ ವೃತ್ತಾಂತಗಳು.

ಈ ವರ್ಷದ ಕರ್ನಾಟಕಸಾಹಿತ್ಯ ಪರಿಷತ್ತು ಹಾಸನದಲ್ಲಿ ಬರುವ ಮೇ ತಿಂಗಳು ತಾ|| ೬ ರಲ್ಲಿ ನಡೆಯುವುದಾಗಿದೆಯೆಂದು ಕೇಳುತ್ತೇವೆ.

ಮೈಸೂರು-ಅರಸೀಕೆರೆ, ಬೆಂಗಳೂರು-ಹರಿಹರ ಈ ಲೋಹಮಾರ್ಗಗಳಲ್ಲಿ ತಿರುಗುವ ಹೊಗೆಬಂಡಿಗಳ ಕಾಲದಲ್ಲಿ ವ್ಯತ್ಯಾಸವು ಇಷ್ಟರಲ್ಲೇ ಮಾಡಲ್ಪಡುವುದಾಗಿದೆ.

ಗೌರ್ನಮೆಂಟಿನವರು ಏರ್ಪಡಿಸಿರುವ ಫೈನಾನ್ಸ್ ಕಮಿಟಿಗೆ ಮ|| ಗಳಾದ ಎಂ. ಬಸವಯ್ಯನವರು, ಸಿ. ನರಸಿಂಹಯ್ಯನವರು, ಬಿ. ನರಸಿಂಗರಾಯರು ಆರಿಸಿ ಸೇರಿಸಲ್ಪಟ್ಟಿದ್ದಾರೆ.

ಶ್ರೀಮನ್ಮಹಾರಾಜರವರು ಕಳೆದ ಸೋಮವಾರವೂ ಸರ್ದಾರ್ ಕಾಂತರಾಜ ಅರಸಿನವರು ಮಹಾಮಾತೃಶ್ರೀಯವರೊಡನೆ ಸ್ಪೆಷಲ್ ಟ್ರೇನಿನಲ್ಲಿ ಕಳೆದ ಗುರುವಾರವೂ ರಾಜಧಾನಿಗೆ ದಯಮಾಡಿಸಿದರು.

ಪ್ರಜೆಗಳು ಬೇಸಗೆ ಕಳೆಯುವುದರೊಳಗಾಗಿ ತಮ್ಮ ದನಕರುಗಳಿಗೆ ಸಂಸ್ಥಾನದ ಸ್ಟೇಟ್ ಫಾರೆಸ್ಟುಗಳಿಂದ ಮೇವನ್ನು ಕ್ರಯಕೊಡದೆಯೇ ಕುಯ್ದುಕೊಂಡು ಹೋಗಬಹುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೆಂಕಿಪುರದ ಕಬ್ಬಿಣದ ಯಂತ್ರಾಗಾರ ಪ್ರತಿಷ್ಠಾ ಕಾರ್ಯಕ್ಕಾಗಿ ಸರ್ ಕಾಂತಾರವರ ಕಡೆಯ ಇಂಜನಿಯರ್ ಮಿ|| ಪೆರಿನ್ನರವರು ಬಂದಿರುವರು. ಸಂಸ್ಥಾನದ ಆ|| ದಿವಾನರೂ, ಕೌನ್ಸಿಲರ್, ಮ|| ಸಿ. ರಾಘವೇಂದ್ರರಾಯರೂ ಸಹ ತಾ|| ೨೨ ರಲ್ಲಿ ಅಲ್ಲಿಗೆ ದಯಮಾಡಿಸಿದ್ದರು.

ಪ್ರತಿತಾಲ್ಲೂಕು ಸ್ಥಳಗಳಲ್ಲೂ ವಿದ್ಯಾರ್ಥಿಗಳಿಗೆ ಹಾಸ್ಟೆಲ್ಲುಗಳನ್ನು ಕಟ್ಟಿಸಿಕೊಡಬೇಕೆಂದು ಶಾಸನ ಸಭೆಯಲ್ಲಿ ಮ|| ಎಂ. ಬಸವಯ್ಯನವರು ಮಾಡಿದ ಪ್ರಶ್ನೆಗೆ ದಿವಾನರು ಮುಂದಣ ವರ್ಷದ ಬಜೆಟ್ಟಿನಲ್ಲಿ ಈ ಭಾಗದ ವೆಚ್ಚಕ್ಕೆ ಏರ್ಪಾಡನ್ನು ಮಾಡಿಕೊಡುವೆನೆಂದು ಹೇಳಿದ ಉತ್ತರವು ಸಂತೋಷಕರವಾಗಿದೆ.

ಮುಂದಣ ನವರಾತ್ರಿ ಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವ ವಸ್ತುಪ್ರದರ್ಶನದ ವೆಚ್ಚಕ್ಕಾಗಿ ಸರ್ಕಾರದವರು ೧೫೦೦೦ ರೂ ಗಳನ್ನು ಅಪ್ಪಣೆಮಾಡಿದ್ದಾರೆ. ಆದರೆ ಮೈಸೂರು ಸಂಸ್ಥಾನದ ವಸ್ತುಗಳನ್ನು ಮಾತ್ರವೇ ಪ್ರದರ್ಶನಕ್ಕಿಡಿಸಲಿಕ್ಕೆ ಮಾಡಿರುವ ಅಪ್ಪಣೆಯು ಮಾತ್ರ ಪ್ರಯೋಜನಕರವಾಗಿಲ್ಲ.

ಭಾರತೀಯರಿಂದಲೇ ಪ್ರತಿಷ್ಠಾಪಿಸಲ್ಪಟ್ಟು ಭಾರತೀಯರ ಯಜಮಾನ್ಯದಿಂದಲೇ ನಡೆಯುತ್ತ ವಿಶೇಷ ಪ್ರಸಿದ್ಧಿಗೆ ಬಂದಿರುವ ಕಾರ್ಲೇಕರ್ ಸರ್ಕಸ್ ಕಂಪೆನಿಯವರು ಮೊನ್ನೆ ಶುಕ್ರವಾರದಿಂದ ತಮ್ಮ ಆಟಗಳನ್ನು ರಾಜಧಾನಿಯ ಎಂಪ್ರೆಸ್ ಹೋಟೆಲಿನ ಆವರಣದೊಳಗೆ ಆಡುತ್ತಲಿದ್ದಾರೆ. ವನ್ಯಮೃಗಗಳು ವಿಶೇಷವಾಗಿವೆ.

ಸಂಸ್ಥಾನದಲ್ಲಿರುವ ಎಲ್ಲಾ ಹೈಸ್ಕೂಲುಗಳಲ್ಲಿಯೂ ವಿದ್ಯಾರ್ಥಿಗಳಿಗೆ ಪದಾರ್ಥ ಜ್ಞಾನಸಾಧನೆಗೆ ಅನುಕೂಲವಾಗುವಂತೆ ಒಂದೊಂದು ವಸ್ತುಪ್ರದರ್ಶನಾಲಯವನ್ನೇರ್ಪಡಿಸಬೇಕೆಂದು ಅಪ್ಪಣೆಮಾಡಿ ೧೦ ಸಾವಿರ ರೂ. ಗಳನ್ನು ಅದರ ವೆಚ್ಚಕ್ಕೆ ಕೊಡಲೂ ಮುಂದೆ ಪ್ರತಿವರ್ಷದಲ್ಲೂ ೨ ಸಾವಿರದಂತೆ ಕೊಡಲೂ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಕಳೆದ ಶಾಸನನಿರ್ಮಾಣಸಭೆಯಲ್ಲಿ ಆದಾಯದ ಮೇಲೆ ಕಂದಾಯವನ್ನು ಹಾಕುವ ವಿಷಯಕವಾಗಿ ಶಾಸನಮಾಡಬೇಕಾದ ಅವಶ್ಯಕತೆಯನ್ನು ಕುರಿತು ಫೈನಾನ್ಸಿಯಲ್ ಸೆಕ್ರೆಟರಿ ದಿ|| ಬ|| ಜೆ. ಎಸ್. ಚಕ್ರವರ್ತಿಯವರು ದೀರ್ಘವಾದ ಭಾಷಣವನ್ನು ಮಾಡಿದರು. ಅದರಮೇಲೆ ಪ್ರಬಲವಾದ ಚರ್ಚೆಯನ್ನು ಸರ್ಕಾರಿ ಉದ್ಯೋಗಸ್ಥರಲ್ಲದ ಪ್ರಜಾಪಕ್ಷದ ಸಭಿಕರು ನಡೆಯಿಸಿ ಈ ಕಂದಾಯದ ಸಂಬಂಧವಾದ ಬಿಲ್ಲನ್ನು ಪ್ಯಾಸ್‌ಮಾಡಲಾಗದೆಂದು ಏಕವಾಕ್ಯತೆಯಿಂದ ಪ್ರತಿಭಟಿಸಿದಾಗ್ಯೂ ಸರ್ಕಾರಿ ಪಕ್ಷದ ಮೆಂಬರುಗಳ ಓಟು ಹೆಚ್ಚಾದುದರಿಂದ ಬಿಲ್ಲು ಶಾಸನವಾಗಿ ಏರ್ಪಡಲನುವೋಲಿಸಲಾಯಿತು.

ಹಿರಿಯೂರು ಶ್ರೀ ಗಿರೀಶ ವೀರಶೈವ ಹಿತೋಪದೇಶಕಸಂಘದ ೭ ನೆ ವಾರ್ಷಿಕಾಧಿವೇಶನವು ಬರುವ ಏಪ್ರಿಲ್ ತಾ|| ೪ ರಲ್ಲಿ ಶ್ರೀ ಗಿರಿರಾಜ ಸೂರ್ಯಸಿಂಹಾಸನ ಜಗದ್ಗುರು ಚರ ಪಟ್ಟಾಧ್ಯಕ್ಷ ಶ್ರೀ ವೀರಭಿಕ್ಷಾವರ್ತಿ ರಾಜದೇಶಿಕೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯುವುದು. ಆಗ ಮತಧಾರ್ಮಿಕಾಭಿವೃದ್ಧಿಗೂ ವಿದ್ಯಾಭಿವೃದ್ಧಿಗೂ ಪಂಚಾಚಾರ್ಯ ಸ್ಮಾರಕನಿಧಿಗೂ, ವಿದ್ಯಾಭಿವೃದ್ಧಿಗೂ ಸಂಬಂಧಪಟ್ಟ ಉಪನ್ಯಾಸಗಳು ನಡೆಯುವುವಲ್ಲದೆ ಉದ್ದೇಶಸಾಧನೆಗೆ ತಕ್ಕ ಏರ್ಪಾಟುಗಳು ನಿರ್ಧರಿಸಲ್ಪಡುವುವು.

ನಿಯಮನಿರ್ಮಾಣ ಸಭೆಯಲ್ಲಿ ದಿವಾನರು ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಬರ್ಮಾ ಅಕ್ಕಿಯನ್ನು ರೂ. ಗೆ ೬ ಸೇರಿನಂತೆಯೂ ರಾಗಿಯನ್ನು ೧೦ ಸೇರಿನಂತೆಯೂ ಮಾರಿಸುತ್ತೇವೆಂದು ಭರವಸೆ ಕೊಟ್ಟಿರುತ್ತಾರೆ. ಆದರೆ ಇತರ ತಾಲ್ಲೂಕುವಾರು ಪ್ರಜೆಗಳಿಗೆಲ್ಲಾ ಏನುಮಾಡುವುದಕ್ಕಿದ್ದಾರೋ ಅದನ್ನು ಹೇಳಲಿಲ್ಲ. ಮುಖ್ಯಪಟ್ಟಣದ ಪ್ರಜೆಗಳಿಗಿಂತಲೂ ಗ್ರಾಮಾಂತರದವರ ಕಷ್ಟಗಳು ವಿಶೇಷವೆಂಬುದನ್ನು ಸರ್ಕಾರದವರು ಗಮನಿಸಬೇಕು. ಅವರನ್ನು ಉಪೇಕ್ಷಿಸುವುದು ಅಧರ್ಮವೂ ಸಂಸ್ಥಾನಕ್ಕೆ ನಷ್ಟಕಾರಿಯೂ ಆಗುವುದು.

ಮೈಸೂರು ದೇಶದಲ್ಲಿ ಪ್ರತ್ಯೇಕವಾದ ನೋಟುಗಳನ್ನು ವ್ಯವಹಾರಕ್ಕೆ ತರುವ ಶಾಸನವು ಏರ್ಪಡುವುದೆಂಬ ಸುದ್ದಿಯು ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿದ್ದಿತಷ್ಟೆ. ಈ ಸಂಬಂಧವಾಗಿ ಶಾಸನಸಭೆಯಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಚೆಟ್ಟರು ಪ್ರಶ್ನೆಮಾಡಲಾಗಿ, ಹಿಂದೂಸ್ಥಾನ ಸರ್ಕಾರದ ಪೇಪರ್ ಕರೆನ್ಸಿ ನೋಟುಗಳು ಕಳೆದವರ್ಷದವರೆಗೆ ಬೆಂಗಳೂರು ಪಟ್ಟಣದಲ್ಲಿ ಬಳಕೆಯಲ್ಲಿದ್ದುವೆಂತಲೂ, ಇನ್ನು ಮುಂದೆ ಸಂಸ್ಥಾನದಲ್ಲೆಲ್ಲಾ ಅವನ್ನು ವ್ಯವಹಾರಕ್ಕೆ ತರುವಂತೆ ಶಾಸನವಾಗಬೇಕಾಗಿದೆಯೆಂತಲೂ, ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಷಯಕ್ಕೂ ಇದಕ್ಕೂ ಸಂಬಂಧವಿಲ್ಲವೆಂತಲೂ ದಿ|| ಬ|| ಚಕ್ರವರ್ತಿಯವರು ಉತ್ತರ ಕೊಟ್ಟರು.

ರಾಜಧಾನಿಯಲ್ಲಿ ಅಕ್ಕಿ ರಾಗಿಗಳನ್ನು ಸಮೃದ್ಧವಾಗಿ ಮಾರಾಟಮಾಡಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಮ್ಯುನಿಸಿಪಾಲಿಟಿಯವರು ಮುತುವರ್ಜಿಯಿಂದ ಮಾಡುತ್ತಿದ್ದಾರೆ. ಪ್ರತಿ ಮೊಹಲ್ಲೆಗೂ ಎರಡೆರಡು ಅಂಗಡಿಗಳನ್ನಿಡಿಸಿ ಮಾರಿಸುವುದಕ್ಕೂ, ಪ್ರತಿ ಸಂಸಾರದವರಿಗೂ ಇಷ್ಟೇ ಧಾನ್ಯವಾಗಬೇಕೆಂಬುದನ್ನು ಗೊತ್ತುಮಾಡಿ ಟಿಕೆಟ್ಟುಗಳನ್ನು ಕೊಡುವುದಕ್ಕೂ ಏರ್ಪಾಟುಮಾಡಿರುತ್ತಾರೆ. ಈ ಏರ್ಪಾಟುಗಳ ಜತೆಗೆ ಈ ಅಂಗಡಿಗಳನ್ನು ಬೆಳಗಿನ ೬ ಗಂಟೆಯಿಂದ ಸಂಜೆ ೬ ಗಂಟೆಯವರೆಗೂ ತೆಗೆದಿರುವಂತೆ ಕಟ್ಟಪ್ಪಣೆಯನ್ನು ಮಾಡಿದರೆ ಗದ್ದಲಕ್ಕವಕಾಶವಿಲ್ಲದೆ ಪ್ರಜೆಗಳಿಗೆಲ್ಲಾ ಧಾನ್ಯಗಳು ದೊರೆಯುವುದಕ್ಕೆ ಅನುಕೂಲವಾಗುವುದು.

ಕಳೆದ ತಾ|| ೨೪ ರಲ್ಲಿ ನಿಯಮನಿರ್ಮಾಣಸಭೆಯು ಆ|| ದಿವಾನರಾದ ಮ|| ಎ. ಸಿ. ಬಾನರ್ಜಿ ಸಿ. ಐ. ಇ. ಯವರ ಅಧ್ಯಕ್ಷತೆಯಿಂದ ಬೆಂಗಳೂರಿನಲ್ಲಿ ಕೂಡಿದ್ದಿತು. ಮೊಟ್ಟಮೊದಲು ಅಧ್ಯಕ್ಷರು ಭಾಷಣಮಾಡುವಾಗ್ಗೆ ಸರ್ ಎಂ. ವಿಶ್ವೇಶ್ವರಯ್ಯನವರು ಆ ಸಭೆಯನ್ನಲಂಕರಿಸದೆ ಇರುವಂತಾದುದಕ್ಕೂ ಸರ್ದಾರ್ ಕಾಂತರಾಜ ಅರಸಿನವರು ಅಸ್ವಸ್ಥರಾಗಿರುವುದಕ್ಕೂ ವಿಷಾದವನ್ನು ಪ್ರದರ್ಶನಮಾಡಿ, ಬಳಿಕ ಸರ್ದಾರ್ ಕಾಂತರಾಜ ಅರಸಿನವರು ದಿನದಿನಕ್ಕೆ ಆರೋಗ್ಯಗೊಳ್ಳುತ್ತಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಇಷ್ಟರಲ್ಲೇ ಅವರು ದಿವಾನಪದವಿಯನ್ನು ಅಲಂಕರಿಸಲು ತಕ್ಕ ದೇಹದಾರ್ಢ್ಯವುಳ್ಳವರಾಗುವರೆಂದೂ ಹೇಳಿದರು. ಅನಂತರ ಸಂಸ್ಥಾನದ ಆಹಾರ್ಯವಸ್ತು ದುರ್ಭಿಕ್ಷವಿಷಯದಲ್ಲಿ ಭಾಷಣವನ್ನು ಮಾಡಿದರು ಅದರಲ್ಲಿ ಕಳೆದ ೧೯೧೮ ನೆ ಜುಲೈ ತಿಂಗಳಿಂದಲೂ ಈ ದುರ್ಭಿಕ್ಷನಿರೋಧಕ್ಕಾಗಿ ಸರ್ಕಾರದವರು ಆಗಾಗ್ಗೆ ಮಾಡುತ್ತ ಬಂದಿರುವ ಪ್ರಯತ್ನಗಳನ್ನೂ ಅಪ್ಪಣೆಗಳನ್ನೂ, ಈಗ ಇಂಡ್ಯಾ ಗೌರ್ನಮೆಂಟಿನವರೊಡನೆ ಪತ್ರವ್ಯವಹಾರ ನಡೆಯಿಸಿ, ಇತರ ಸ್ಥಳಗಳಿಂದ ಇಲ್ಲಿಗೆ ಆಹಾರ್ಯವಸ್ತುಗಳನ್ನು ತರಿಸಿಕೊಂಡು ಎಲ್ಲ ಕಡೆಗೂ ಹಂಚುವುದಕ್ಕೆ ಮಾಡಿರುವ ಏರ್ಪಾಟನ್ನೂ, ಬೇಸಾಯಗಾರರ ಅನುಕೂಲ್ಯಕ್ಕಾಗಿ ನೀರಾವರಿಯ ಅನುಕೂಲತೆ, ತಕ್ಕಾವಿ ಸಾಲ ಇವುಗಳನ್ನು ಒದಗಿಸಲು ಮಾಡಿರುವ ಏರ್ಪಾಟುಗಳನ್ನೂ ವಿವರಿಸಿದರು.

ಭರತಖಂಡದ ವೃತ್ತಾಂತಗಳು.

ಇನ್‌ಫ್ಲುಯೆನ್ಜಾ ನ್ಯುಮೋನಿಯಾ ಜ್ವರವು ಮರಳಿ ಕಲ್ಕತ್ತಾದಲ್ಲಿ ಕಾಣಿಸಿಕೊಂಡಿದೆಯೆಂಬ ಭೀಕರವಾರ್ತೆಯು ಬಂದಿದೆ.

ರೌಲಟ್‌ಬಿಲ್ಲು (ಅವಸರಾಧಿಕಾರಕ್ಕೆ ಸಂಬಂಧಪಟ್ಟುದು) ಅಧಿಕಲಾಭದಮೇಲೆ ತೆರುಗೆಯನ್ನು ವಿಧಿಸುವ ಬಿಲ್ಲೂ ಸಹ ಶಾಸನವಾಗುವ ವಿಷಯದಲ್ಲಿ ವೈಸ್ರಾಯರು ಅದಕ್ಕೆ ಒಪ್ಪಿಗೆಯನ್ನು ಕಳೆದ ಭಾನುವಾರ ಕೊಟ್ಟರು.

ಮದರಾಸಿನ ಪ್ರಮುಖರಲ್ಲಿ ಅನಿಬೆಸೆಂಟಮ್ಮ, ದಿ|| ಬ|| ಗೋವಿಂದರಾಘವಯ್ಯರು, ಕೆ. ವಿ. ವೀರರಾಘವಾಚಾರ್ಯರು, ವಾಡಿಯಾ, ಸಿ. ಪಿ. ರಾಮಸ್ವಾಮಯ್ಯರು, ಜೆ. ಎ. ನಟೇಶನ್ ಮೊದಲಾದವರು ಮದ್ರಾಸ್ ರಾಷ್ಟ್ರೀಯ ಕಾಂಗ್ರೆಸ್ ಸಂಘದ ಸಭಿಕತನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ. ಈ ದೇಶದ ರಾಜಕೀಯ ವಾದಿಗಳಲ್ಲಿ ವೈಷಮ್ಯವು ಹೇಗೆ ವೃದ್ಧಿಯಾಗುತ್ತಿದೆಯೆಂಬುದಕ್ಕೆ ಇದೊಂದು ದೃಷ್ಟಾಂತ.

ವೈಸ್ರಾಯರು ರೌಲಟ್ ಬಿಲ್ಲಿಗೆ ಅನುಮೋದನೆ ಕೊಟ್ಟದ್ದು ಭಾನುವಾರವಾದುದರಿಂದ ಆ ದಿನವನ್ನು ಅವಮಾನಕರವಾದ ದಿನವೆಂದು ಗ್ರಹಿಸಿ ಪ್ರತಿ ಭಾನುವಾರದ ದಿವಸ ಉಪವಾಸವಿದ್ದು ಪ್ರಾರ್ಥನೆಯನ್ನು ನಡೆಯಿಸಬೇಕೆಂತಲೂ, ದೇಹಬಲವನ್ನುಪಯೋಗಿಸದೆ ಆತ್ಮಶಕ್ತಿಯಿಂದ ಆ ಶಾಸನವನ್ನು ಪ್ರತಿಭಟಿಸುವುದಕ್ಕಾಗಿ ಸಭೆಗಳನ್ನು ಮಾಡುತ್ತಲೂ, ಪ್ರಜಾಕ್ಷೇಮಕ್ಕೆ ಅವಶ್ಯಕವಾದ ಕಾರ್ಯಗಳನ್ನು ಮಾಡುತ್ತಲೂ, ಈ ಶಾಸನವನ್ನು ತೆಗೆದುಹಾಕಿಬಿಡಬೇಕೆಂದು ಠರಾವುಗಳನ್ನು ಮಾಡುತ್ತಲೂ, ಕಾಲವನ್ನು ಕಳೆಯಬೇಕೇ ಹೊರತು ಇನ್ನಾವ ಕೆಲಸವನ್ನೂ ಮಾಡಬಾರದೆಂದು ಮ|| ಗಂಧಿಯವರು ಪ್ರಕಟಿಸಿದ್ದಾರೆ. ಈ ಉಪವಾಸವ್ರತದಿಂದ ದೂರದಲ್ಲಿ ಉಂಟಾಗುವ ಫಲವು ಹೇಗಿದ್ದರೂ ಸದ್ಯಃ ಆಹಾರ್ಯಪದಾರ್ಥಗಳು ತಗ್ಗಿರುವುದರಿಂದ ವೆಚ್ಚ ಕಡಿಮೆಯಾಗುವ ಫಲವೇನೋ ಸಿದ್ಧಿಸುವುದರಿಂದ ಹಿತಕರವೇ ಸರಿ.

ಆ|| ಬಯ್ಯನರಸಿಂಹಶರ್ಮರವರು ರೌಲಟ್‌ಬಿಲ್ಲಿನ ವಿಷಯವಾಗಿ ಸಾಮ್ರಾಜ್ಯಶಾಸನ ಸಭೆಯಲ್ಲಿ ತಮ್ಮ ಮಾತೇನೂ ನಡೆಯದೆ ಹೋದುದರಿಂದ ಮುಳಿಸಿಕೊಂಡು ತಮ್ಮ ಸಭ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದರಷ್ಟೆ. ಇದನ್ನು ಕೇಳಿ ಈ ದೇಶದ ಉಗ್ರರಾಜಕೀಯವಾದಿಗಳೆಲ್ಲಾ ಶರ್ಮರ ಧೈರ್ಯ ಸಾಹಸಗಳನ್ನು ಕೊಂಡಾಡುತ್ತ ಇದೊಂದು ತರದ ಸತ್ಯಾಗ್ರಹ ದೀಕ್ಷೆಯೆಂದು ಶಹಬಾಸ್‌ಗಿರಿ ಕೊಡುತ್ತ ಇತರ ಅನುದ್ಯೋಗಿಕ ಸಭಾಸದರೂ ಸಹ ಶರ್ಮರ ದಾರಿಯನ್ನೇ ಅನುಸರಿಸದೆ ಹೋಗುವುದಕ್ಕಾಗಿ ಜರೆಯುತ್ತಿದ್ದರು. ಆ|| ಜಿನ್ನಾರವರೂ ಸಹ ರಾಜೀನಾಮೆ ಕೊಡುವುದರಲ್ಲಿದ್ದಾರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಶರ್ಮರವರು ಅದೇನು ಕಾರಣದಿಂದಲೋ ತಮ್ಮ ರಾಜೀನಾಮೆಯನ್ನು ತಾವೇ ಹಿಂದೆಗೆದುಕೊಂಡುಬಿಟ್ಟರು. ಯಾರ ಬಲವಂತದಿಂದಲೋ ಇವರು ಹೀಗೆ ಮಾಡಬೇಕಾಯಿತೆಂದು ಹೇಳಲ್ಪಟ್ಟಿದೆ. ಇದರಿಂದ ಇವರ ಶ್ಲಾಘನೆ ಮಾಡುತ್ತಿದ್ದವರಿಗೆಲ್ಲಾ ಉಂಟಾದ ಆಶಾಭಂಗಕ್ಕೆ ಮಿತಿಯಿಲ್ಲದೆ ಹೋಗಿರಬೇಕು.

ಮದ್ರಾಸಿನಲ್ಲಿ ಬಿಪಿನಚಂದ್ರಪಾಲರು ಸತ್ಯಾಗ್ರಹ ವಿಷಯವಾಗಿ ಒಂದು ದೊಡ್ಡ ಉಪನ್ಯಾಸ ಮಾಡಿದರು. ಅದರಲ್ಲಿ ಈ ದೀಕ್ಷೆಯು ಜಾಗರೂಕತೆಯಿಂದ ಆಚರಿಸಲ್ಪಡದಿದ್ದರೆ ಪ್ರಮಾದಕರವಾಗುವುದಲ್ಲದೆ ಸತ್ಯಾಗ್ರಹವ್ರತಕ್ಕೇ ಮೃತ್ಯುವನ್ನು ತರುವುದೆಂತಲೂ, ದೇಹಬಲವನ್ನು ಮಾತ್ರ ಎಂದಿಗೂ ಉಪಯೋಗಿಸದೆ ಆತ್ಮಶಕ್ತಿಯನ್ನು ಮಾತ್ರ ಉಪಯೋಗಿಸಬೇಕೆಂತಲೂ ಹೇಳಿ, ಈ ವ್ರತವನ್ನು ಆಚರಿಸುವುದು ಹೇಗೆ ಎಂಬುದಕ್ಕೆ ತಮ್ಮ ಆಚರಣೆಯ ಕೆಲ ದೃಷ್ಟಾಂತಗಳನ್ನು ಹೇಳಿದರು. ಹೇಗೆಂದರೆ—“ಕಲ್ಕತ್ತಾದಲ್ಲಿ ಒಂದು ರಾಜದ್ರೋಹದ ಕೇಸಿನಲ್ಲಿ ದಂಡಾಧಿಕಾರಿಯು ಸಾಕ್ಷ್ಯವನ್ನು ಕೊಡುವುದಕ್ಕೆ ನನ್ನನ್ನು ಕರೆಯಿಸಿದಲಾಗಿ, ನಾನು ಸಾಂಘಿಕ ಕ್ಷೇಮಕ್ಕೆ ಸಾಧಕವಾದ ಕೇಸುಗಳಲ್ಲಲ್ಲದೆ ಇತರ ವ್ಯಾಜ್ಯಗಳಲ್ಲಿ ಬಂದು ಸಾಕ್ಷ್ಯವನ್ನು ನುಡಿಯುವುದಿಲ್ಲವೆಂದು ಹೇಳಿ ಹಟ ತೊಟ್ಟೆನು. ನನ್ನನ್ನು ಮದ್ರಾಸಿಗೆ ಹೋಗಕೂಡದೆಂದು ಸರ್ಕಾರದವರು ಹೇಳಿದರೆ ನಾನು ತಪ್ಪದೆ ಮದ್ರಾಸಿಗೆ ಹೋಗಿಯೇ ತೀರಿಸುವೆನು. ಹಾಗೆ ಹೇಳಿ ತಡೆಯುವುದು ಅನ್ಯಾಯವೆಂದು ಸರ್ಕಾರದವರಿಗೆ ಹೇಳುವೆನು. ಅಷ್ಟೇ ಹೊರತು ಇನ್ನೇನನ್ನೂ ಮಾಡುವುದಿಲ್ಲ” ಎಂದು ಉದಾಹರಣೆ ಕೊಟ್ಟಿರುವರು. ಮದ್ರಾಸಿನ ಅನೇಕ ನೇಶನೆಲ್ ದೇಶಭಕ್ತಪ್ರಮುಖರು ಸತ್ಯಾಗ್ರಹವ್ರತ ಸ್ವೀಕಾರವು ಈಗ್ಗೆ ವಿಹಿತವಲ್ಲವೆಂದು ಸಾರಿರುವರು. ಈಗಣ ಸತ್ಯಾಗ್ರಹ ಆಲ್ದೋಲನವು ಎಷ್ಟುಮಟ್ಟಿಗೆ ಫಲಕಾರಿಯಾಗುವುದೋ ಆ|| ಬಿ. ಶರ್ಮರ ಸತ್ಯಾಗ್ರಹದಂತೆಯೋ ಪರ್ಯವಸನ್ನವಾಗುವುದೋ ನೋಡಬೇಕಾಗಿದೆ.

ಭರತಖಂಡದಲ್ಲಿರುವ ಯೂರೋಪಿಯನ್ನರು ಈಸ್ಟಿಂಡಿಯನ್ನರು ಇವರೆಲ್ಲರೂ ಅಪ್ಪಣೆಚೀಟಿಯಿಲ್ಲದೆಯೇ ಆಯುಧಗಳನ್ನು ಧರಿಸುವುದಕ್ಕೆ ಅವಕಾಶವಿದೆ. ಭಾರತೀಯರಿಗೆ ಆ ಸೌಕರ್ಯವಿಲ್ಲ. ಈ ಪಕ್ಷಪಾತವನ್ನು ತಪ್ಪಿಸಿ ಸರ್ವರಿಗೂ ಆಯುಧಧಾರಣೆಗೆ ಸ್ವಾತಂತ್ರ್ಯವಿರುವಂತೆ ಮಾಡಬೇಕೆಂದು ಬಹು ಕಾಲದಿಂದ ದೇಶೀಯರು ಮೊರೆಯಿಡುತ್ತಿದ್ದರು. ಇವರ ವಿಷಯದಲ್ಲಿ ಹೇಗೆ ಮಾಡಬೇಕೆಂಬುದನ್ನು ಸೂಚಿಸುವುದಕ್ಕೆ ಪ್ರಭುತ್ವದವರು ಒಂದು ಸಂಘವನ್ನೇರ್ಪಡಿಸಿದ್ದರು. ಆ ಸಂಘದ ವರದಿಯ ಮೇಲೆ ಭರತಖಂಡದ ಸರ್ಕಾರದವರು ಈಗ ಮಾಡಿರುವ ನಿರ್ಧಾರವನ್ನು ಕುರಿತು ಒಂದು ಪ್ರಕಟನೆಯನ್ನು ಕೊಟ್ಟಿರುತ್ತಾರೆ. ಅದರ ಪ್ರಕಾರ ಭಾರತೀಯರೆಲ್ಲರಿಗೂ ಆ ಯುದ್ಧಧಾರಣಸ್ವಾತಂತ್ರ್ಯವನ್ನು ಕೊಟ್ಟಿರುವುದಿಲ್ಲ. ಹಾಗೆ ಕೊಡುವುದು ಅನರ್ಥಕಾರಿಯೆಂದು ಸರ್ಕಾರದವರು ಹೇಳುತ್ತಾರೆ. ಮತಸ್ಪರ್ಧೆ ಸುಲಿಗೆ ಕಳ್ಳತನ ಮೊದಲಾದ ಸಂದರ್ಭಗಳಲ್ಲಿ ಆಯುಧಧಾರಣ ಸ್ವಾತಂತ್ರ್ಯದಿಂದ ಬಹು ಪ್ರಮಾದವುಂಟಾಗಬಹುದೆಂದು ಸರ್ಕಾರದವರು ಯೋಚಿಸಿರುತ್ತಾರೆ. ಈಗಲೇ ಹತ್ಯದ ಕೇಸುಗಳಲ್ಲಿ ಆಯುಧಗಳನ್ನು ಅಕ್ರಮವಾಗಿ ಉಪಯೋಗಿಸುತ್ತಿರುವ ಸಂಗತಿಯು ವ್ಯಕ್ತವಾಗಿರುವುದರಿಂದ ನಿರ್ಬಂಧವನ್ನು ತಪ್ಪಿಸಿಬಿಟ್ಟರೆ ಅಂಥ ಅಪರಾಧಗಳು ಮಿತಿಮೀರಿ ಹೋಗುವುವೆಂದು ಹೇಳುತ್ತಾರೆ. ಅದುಕಾರಣ ಇನ್ನುಮುಂದೆ ಜಾತಿಪಕ್ಷಪಾತಗಳನ್ನು ತೊಲಗಿಸಿಬಿಟ್ಟು ಸಾರ್ವಭೌಮರಿಂದ ಅಥವಾ ದೇಶೀಯ ಪ್ರಭುಗಳಿಂದ ಕೊಡಲ್ಪಟ್ಟ ಗೌರವಬಿರುದನ್ನು ಧರಿಸಿರುವವರೂ, ಸಾಮ್ರಾಜ್ಯಶಾಸನಸಭೆ ಪ್ರಾಂತಶಾಸನಸಭೆ ಪ್ರಾಂತಿಕರಾಜಸಭೆಗಳಲ್ಲಿ ಸಭಿಕರಾಗಿರತಕ್ಕವರೂ, ೧೦೦೦ ರೂ. ಗಳಿಗೆ ಕಡಿಮೆಯಿಲ್ಲದೆ ಕಂದಾಯವನ್ನೂ ೩೫೦ ರೂ. ಗಳಿಗೆ ಕಡಿಮೆಯಿಲ್ಲದೆ ಮನೆಗಂದಾಯ ಮೊದಲಾದುವನ್ನೂ ಕೊಡತಕ್ಕವರೂ, ೨೫೦ ರೂ. ಗಳಿಗೆ ಮೇಲ್ಪಟ್ಟ ಸಂಬಳವುಳ್ಳವರೂ, ಸೈನ್ಯದಲ್ಲಿ ಕಮಿಷನ್ಡ್ ಆಫೀಸರುಗಳಾಗಿರುವವರೂ, ಗೆಜೆಟೆಡ್ ಆಫೀಸರುಗಳೂ, ಅಂಥ ಪದವಿಯಲ್ಲಿದ್ದು ವಿಶ್ರಾಂತಿಗೊಂಡಿರತಕ್ಕವರೂ-ಇವರುಗಳೆಲ್ಲಾ ಅಪ್ಪಣೆಚೀಟಿ ಪಡೆಯದೆಯೇ ಆಯುಧಗಳನ್ನಿಟ್ಟುಕೊಂಡಿರಬಹುದೆಂದು ಹೇಳಿರುತ್ತಾರೆ.

ನೋಟೀಸ್.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ:—

ಹಾನಗಲ್ಲ ತಾಲ್ಲೂಕು ಕೂಡಲಗ್ರಾಮದ ಶ್ರೀ ಸಂಗಮೇಶ್ವರನ ದೇವರ ಜಾತ್ರೆಯು ತಾ|| 1-4-19 ರಿಂದ ಸುರುವು ಆಗುವದು. ಇದರ ಪ್ರೋಗ್ರಾಮು ಕೆಳಗೆ ಬರೆದಪ್ರಕಾರ ಇರುತ್ತದೆ:-

ತಾ|| 2-4-19 ದಿವಸ ರಥೋತ್ಸವ.
ತಾ|| 6-4-19 ದಿವಸ ಓಕಳಿಉತ್ಸವ.

ಮುಂದೆ ತಾರೀಖು 20-4-19 ಅಖೈರದವರೆಗೆ ಜಾತ್ರಿ ನೆರಿಯುವುದು.

ತಾ|| 21-4-19 ದಿವಸ ಜಾತ್ರೆಯು ಬಂದಮಾಡಲ್ಪಡುವುದು.

ಈ ಜಾತ್ರೆಯಲ್ಲಿ ಬೇಸಾಯದ ಧನೋ ವ ಸುಂದರವಾದ ಸಾಮಾನುಗಳು, ಎತ್ತುಗಳು ವ ಇತರ ಜಿನಸುಗಳು, ಬರುವವು. ಈ ಜಾತ್ರೆಯಲ್ಲಿ ಮೊದಲಿನಂತೆ ತಲೆಪಟ್ಟಿ ವಸೂಲಿ ಮಾಡುವುದರಲ್ಲಿ ಬರುವುದು. ಆದರೆ (5) ವಿದುವರ್ಷದ ಒಳಗಿನ ಹುಡುಗರಿಗೆ ಮಾಫಿಯಿರುವುದು.

ತಾ|| 21-3-19.

Manjnath S. Hegde.
ನಾಮಲೆದಾರ, ಹಾನಗಲ್ಲ.

ಪತ್ರವ್ಯವಹಾರ.

ಬೆಂಗಳೂರು.

ವೀರಶೈವ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವವೇನಂದರೆ:—

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಕನ್ನಡ ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಬೆಂಗಳೂರು ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲ್‌ಮಾಸ್ತರುಗಳಿಗೂ ಸಹ ಬೆಂಗಳೂರು ಊದುಬತ್ತಿ ಷಾಪ್ ತಳ್ಳಿಶೆಟ್ಟರವರು ರಾಮುಶಾಲ್‌ಪ್ರಕಾರ ಊಟಕ್ಕೂ ಮತ್ತು ವಾಸಕ್ಕೂ ಏರ್ಪಡಿಸಿರುತ್ತಾರೆ. ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ೮ ದಿವಸ ಮುಂದಾಗಿ ಬರೆದು ತಿಳಿಸಬೇಕು.

B. K. Thammiah.

ಕಡೂರು ತಾಲ್ಲೂಕು ಬೀರೂರು ಟೌನ್ ರೆಗ್ಯುಲೇಟೆಡ್ ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರಾದ ಸಾಹುಕಾರ್ ಮ|| ರಾ|| ಎಸ್. ಎಂ. ಶಿವಲಿಂಗಪ್ಪಯ್ಯನವರು ಕಳೆದ ಎಂಟುವರ್ಷಗಳಿಂದ ಕಡೂರು ಸೆಂಟರಿಗೆ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಬರತಕ್ಕ ವೀರಶೈವ ಮತಸ್ಥರಾದ ಮತ್ತು ಅವರಲ್ಲಿ ಊಟಮಾಡತಕ್ಕ ಇತರ ಮತಸ್ಥರಾದ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರುಗಳಿಗೂ ಅನುಕೂಲವಾಗಿ ಭೋಜನಾದಿಗಳಿಗೆ ಏರ್ಪಾಡು ಮಾಡಿ ಸಹಾಯಮಾಡುತ್ತಿರುವಂತೆ ಈ ವರುಷವೂ ಪರೀಕ್ಷಾ ಕಾಲದಲ್ಲಿ ಅನುಕೂಲಪಡಿಸುತ್ತಾರೆ. ಪರೀಕ್ಷೆಗಾಗಿ ಬರತಕ್ಕವರು ದಯವಿಟ್ಟು ಪರೀಕ್ಷೆಗೆ ಒಂದುವಾರ ಮುಂಚಿತವಾಗಿ ಅಂದರೆ 1919ನೇ ಏಪ್ರಿಲ್ 15ನೇ ತಾ|| ದೊಳಗಾಗಿ) ಸದರಿ ಧರ್ಮಕರ್ತೃಗಳಾದ ಮ|| ಎಸ್, ಎಂ. ಶಿವಲಿಂಗಯ್ಯನವರಿಗೆ ಬರೆದು ತಿಳಿಸಬೇಕಾಗಿ ಅಪೇಕ್ಷಿಸಲ್ಪಟ್ಟಿದೆ

ಪ್ರಸಿದ್ಧಿ ಪತ್ರಿಕಾ.

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹೋಬಳಿ ಮೊತ್ತದಗ್ರಾಮದ ದಾಖಲೆ ಸಂಗಮದ ಶ್ರೀಮದ್ಭಾವೀಶ್ವರಸ್ವಾಮಿಯವರಿಗೆ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನಶಕೆ ೧೮೪೧ ಕ್ಕೆ ಸಂದವರ್ತಮಾನವಾದ ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಚೈತ್ರ ಶುದ್ಧ ೬ ಭಾನುವಾರ ಪುಷ್ಯಾಹದಂತೆ ಪ್ರತಿಷ್ಠೆಕಳಸಸ್ಥಾಪನೆ ರುದ್ರಾಭಿಷೇಕವೂ ೭ ಸೋಮವಾರ ಪೂರ್ವಾಹ್ಣದಲ್ಲಿ ರಥೋತ್ಸವವೂ ೮ ಮಂಗಳವಾರ ರುದ್ರಕುಂಡವೂ ಸಹ ಪದ್ಧತಿಯ ಮೇರೆ ನಡೆಯುತ್ತದೆ. ಈ ಸಂಗಮವು ಕಪಿಲಾ ಮತ್ತು ಭೃಗುನದಿಗಳಿಂದ ಕೂಡಿದ ಈ ಪವಿತ್ರಸ್ಥಳವಾಗಿರುತ್ತ ಇಲ್ಲಿ ಹೊನ್ನ ಹುಣಿಸೇ ವೃಕ್ಷವೂ ಗೋಕರ್ಣಕ್ಷೇತ್ರವೂ ಶ್ರೀ ಕಾರ್ಯದ ಮಹಾಂತದೇಶಿಕೇಂದ್ರ ಶಿವಯೋಗಿಸ್ವಾಮಿಯವರ ಗದ್ದಿಗೆಯೂ ಸಹ ಇವೆ. ಭಕ್ತಿಯುಳ್ಳ ಸರ್ವರೂ ಬಂದು ದೇವಕಾರ್ಯವನ್ನು ನಡೆಸುತ್ತಾರೆಂದು ಕೋರುವ,

ರೇವಣಾರಾಧ್ಯ, ಸರ್ವಾಧಿಕಾರಿ.

ಬಳ್ಳಾರಿ ಜಿಲ್ಲಾ ಹುರಳಿಹಳ್ಳಿ ವಾಸಸ್ಥರಾದ ನೆಲ್ಕುದ್ರಿ ಬೋರಣ್ಣನವರ ಯಜಮಾನ ಕೊಟ್ರಪ್ಪನವರು ಇದೇ ಮಾರ್ಚಿ 4—3—19 ನೇ ದಿವಸ ಭೂಕೈಲಾಸವೆನಿಸುವ ಮಹಾ ಪುಣ್ಯಕ್ಷೇತ್ರವಾದ ಕೊಟ್ಟೂರು ಕ್ಷೇತ್ರದಲ್ಲಿ ತಮ್ಮ 74 ನೇ ವಯಸ್ಸಿನಲ್ಲಿ ಶಿವೈಕ್ಯರಾದರು. ಇವರು ಭಾರೀ ಶ್ರೀಮಂತರಾಗಿದ್ದು ಕೇವಲ ನಿಗರ್ವಶಿರೋಮಣಿಗಳಾಗಿಯೂ, ಶಿವಪೂಜಾಧುರೀಣರಾಗಿಯೂ, ಜಂಗಮರಲ್ಲಿ ಅಂತಃಕರಣಶಾಲಿಗಳಾಗಿಯೂ, ಕೀರ್ತಿವಂತರಾಗಿಯೂ ಇದ್ದರು. ಇವರ ಉತ್ತರಕ್ರಿಯಾದಿಗಳು ಸ್ಥಳ ಪರಸ್ಥಳದಿಂದ ಅನೇಕ ಆಪ್ತಬಂಧುಗಳ ಭಕ್ತಮಹೇಶ್ವರರ ಆಗಮನದಿಂದ ಯಥಾಸಾಂಗವಾಗಿ ಜರುಗಿದವು. ಜಂಗಮರಿಗೆ ಅನ್ನದಾನ ಧಾನ್ಯದಾನ ಮುಂತಾದ ದಾನಗಳು ಮಾಡಲ್ಪಟ್ಟವು. ಪ್ರತಿ ಒಬ್ಬ ಮಾಹೇಶ್ವರರ ಮುಖ್ಯ ಮನೆತನದವರಿಗೆಲ್ಲಾ ದಕ್ಷಿಣೆ ಕಾಣಿಕೆ ತಾಲಿ ತಾಂಬೂಲ ಮೊದಲಾದುವುಗಳು ಕೊಡಲ್ಪಟ್ಟವು. ಈ ಮಹನೀಯರು ಬಹುಜನರಿಗೆ ಆಶ್ರಯಭೂತರಾಗಿದ್ದರು. ಇವರು ಗತಿಸಿದ್ದಕ್ಕೆ ಬಹುಜನರಿಗೆ ದುಃಖವಾಯಿತು. ಇವರ ಪವಿತ್ರವಾದ ಆತ್ಮಕ್ಕೆ ಶಾಂತಿಯನ್ನು ಇವರ ಕುಟುಂಬಕ್ಕೆ ಸುಖವನ್ನೂ ಕೊಡಬೇಕಾಗಿ ಶ್ರೀ ಜಗದೀಶ್ವರನನ್ನು ಪ್ರಾರ್ಥನೆಮಾಡಿಕೊಳ್ಳುತ್ತೇವೆ. ಇವರ ಜ್ಞಾಪಕಾರ್ಥವಾಗಿ ಸ್ಟಾರ್ ಪತ್ರಿಕಾ ಸ್ಥಿರಜೀವಿತ ಕಾರ್ಯಕ್ಕೆ ೩ ರೂಪಾಯಿಗಳನ್ನು ಮನಿಯಾರ್ಡರ್ ಮೂಲಕ ಕಳಿಸಿದೆ.

ಒರ್ವ ಪ್ರತ್ಯಕ್ಷದರ್ಶಿ,

ಶ್ರೀ ಶಿವಯೋಗಮಂದಿರದ ಯಾತ್ರಾಮಹೋತ್ಸವವು.

ಈ ವರ್ಷ ಯಾತ್ರೆಗೆ ಗುಳೇದಗುಡ್ಡ ನಂದಗಡ ಮಮದಾಪುರ ಹಿಪ್ಪರಗಿ ಮೊದಲಾದ ಸ್ಥಳಗಳ ನಿರಂಜನಸ್ವಾಮಿಗಳೂ ಅಣ್ಣಿಗೇರಿ ಬೊಮ್ಮಿಗಟ್ಟಿ ಕಲ್ಲೂರ ತಾಂತಗಿ ಮುಂತಾದ ಗ್ರಾಮಗಳ ದೇಶಾಯರೂ ಗದಗ ಹುಬ್ಬಳ್ಳಿ ಸೊಲ್ಲಾಪುರ ವಿಜಾಪುರ ಬಳ್ಳಾರಿ ಬಾಗಲಕೋಟೆ ಇತ್ಯಾದಿ ಸ್ಥಳಗಳ ಧರ್ಮಾಭಿಮಾನಿಗಳೂ ಬಂದಿದ್ದರು. ಮುಂಗಡ ಹಣಕಳಿಸಿದ ಪ್ರೇಕ್ಷಕರ ಬಿಡಾರಗಳ ಪ್ರತಿಯೊಂದು ಅನುಕೂಲಸ್ಥಳದಲ್ಲಿ ಗ್ಯಾಸಲೈಟುಗಳ ವ್ಯವಸ್ಥೆಯೂ, ವ್ಯಾಪಾರಸ್ಥರ ನಿಮಿತ್ತ ಸ್ಥಾನಗಳೂ ಮುಂಚಿತವಾಗಿಯೇ ಸಿದ್ಧಪಡಿಸಲ್ಪಟ್ಟಿದ್ದುವು. ಪದ್ಧತಿಯಂತೆ ಈ ವರ್ಷವೂ ಮಾಘ ಬಹುಳ ೧೪ ಶುಕ್ರವಾರ ಮಹಾಶಿವರಾತ್ರಿಯ ದಿವಸ ಭಕ್ತಮಾಹೇಶ್ವರರು ಪೂಜಾಸಾಮಗ್ರಿಗಳನ್ನೂ ಪತ್ರಪುಷ್ಪಗಳನ್ನೂ ಅಣಿಮಾಡಿಕೊಂಡು ಗುರುಲಿಂಗಜಂಗಮ ಪೂಜಾತತ್ಪರರಾಗಿದ್ದರು. ಆ ಬಳಿಕ ಚೋಳಚಗುಡ್ಡದ ಸದ್ಭಕ್ತರಿಂದ ದಾಸೋಹದಲ್ಲಿ ಕವಳಿಫಲಗಳ ಸಮರ್ಪಣೆಯು ಜರುಗಿಸಲ್ಪಟ್ಟಿತು. ತರುವಾಯ ಪುರಾಣಶ್ರವಣವನ್ನೂ ವೀರಶೈವರ ಕುಲಭೂಷಣರಾದ ಕೈಲಾಸವಾಸಿ ಶಿರಸಂಗಿ ಲಿಂಗರಾಜರ ಕೀರ್ತನವನ್ನೂ ಹಾಗು ಶಿವಕೀರ್ತನೆಗಳನ್ನೂ ಪ್ರಸಿದ್ಧ ಶಾಸ್ತ್ರಿಗಳ ಮತ್ತು ಕೀರ್ತನಕಾರರಿಂದ ಕೇಳುತ್ತ ಆನಂದದಿಂದ ಮಹಾಶಿವರಾತ್ರಿಯೆಲ್ಲ ಶಿವಸತ್ಸಂಗದಲ್ಲಿಯೇ ಕಳೆದುಹೋಯಿತು. ಮರುದಿವಸ ಮಹಾಸನ್ನಿಧಿಯಲ್ಲಿ ಸಾಧಕಮಹನೀಯರೂ ಪಂಡಿತರೂ ವಿದ್ಯಾವಿಶಾರದರೂ ಸದ್ಭಕ್ತರೂ ಸಭೆಗೂಡಿದಾಗ್ಗೆ ಶಿವಯೋಗಮಂದಿರದ ಸ್ಥಿರತೆಗಾಗಿ ಬಹಳ ಪ್ರಯತ್ನಪಟ್ಟ ಸೂಡಿಯ ಪಟ್ಟದ್ದೇವರು ವ್ಯಾಕರಣಾಳ ಪಟ್ಟದ್ದೇವರು ಈಚೀಚೆ ಲಿಂಗೈಕ್ಯರಾದಬಗ್ಗೆ ಸಮಾಜಕ್ಕೆ ಬಹಳ ಹಾನಿಯಾಯಿತೆಂದು ಹೇಳಿ ಅವರ ಛಾಯಾಚಿತ್ರಪಟಗಳನ್ನು ಶಿವಯೋಗಮಂದಿರದಲ್ಲಿ ಸ್ಥಾಪಿಸುವ ಬಗೆಗೆ ನಿರ್ಣಯವಾಯಿತು. ಮುಂದೆ ಈ ವಿಷಯದಮೇಲೆ ಶಿವಯೋಗಸಾಧಕರಾದ ಶಿರೂರ ಮರಿದೇವರೂ ನವಲಗುಂದ ಸುದೇವರು ಮಹಾಂತ ಶಿವಯೋಗಿಗಳೂ ಸವಿಸ್ತಾರವಾಗಿ ಭಾಷಣಮಾಡಿದರು. ಅದೇ ವಿಷಯಕ್ಕೆ ಪುಷ್ಟೀಕರಣಗಳೂ ಆದವು. ಬಳಿಕ ಹಸ್ತಪತ್ರದ ರಿಪೋರ್ಟು ಓದಲ್ಪಟ್ಟಿತು. ಕೈಲಾಸವಾಸಿ ಶಿರಸಂಗಿ

ಶ್ರೀಮಂತರ ಸ್ಮಾರಕದ ಅವಶ್ಯಕತೆಯು ಸರಸವಾಗಿ ಹೇಳಲ್ಪಟ್ಟು ಅವರ ಜಯಂತಿಯ ಉತ್ಸವವನ್ನು ಇಡೀ ವೀರಶೈವ ಸಮಾಜವು ಹಬ್ಬದಂತೆ ಆಚರಿಸಿ ಕೃತಜ್ಞತೆಯನ್ನು ತೋರಿಸುವದು ಸರ್ವಸಮ್ಮತವೆಂದು ನಿಶ್ಚಯಿಸಲ್ಪಟ್ಟಿತು. ಇದೇ ದಿವಸ ಮಧ್ಯಾಹ್ನದ 3 ರಿಂದ 6 ಗಂಟೆಯವರೆಗೆ ಶ್ರೀಮತಿ ಗಂಗಾಬಾಯಿ ಶಿಕಾರ್ಪುರ ಇವರ ಅಧ್ಯಕ್ಷತೆಯ ಕೆಳಗೆ ಮಹಿಳಾಪರಿಷತ್ತು ಶಿವಗಂಗಾಬಾಯಿ ದೇಸಾಯಿ ಇಟಗಿ ಇವರು ಹೊಸದಾಗಿ ಕಟ್ಟಿಸಿದ ಕಟ್ಟಡದಲ್ಲಿ ನೆರೆದಿತು. ಸ್ತ್ರೀ ಸಮಾಜದ ಉತ್ಕರ್ಷಕ್ಕೂ ಜಾಗೃತಿಗೂ ಅನುಕೂಲವಾದ ಯೋಜನೆಗಳನ್ನು ಆರಿಸಿ ಆಚರಿಸುವಂತೆ ಮಾಡಿಕೊಂಡ ಏರ್ಪಾಡುಗಳಿಗೆ ಸಂಸ್ಥೆಯು ಆನಂದಪಡುವುದು. ತಾ|| ೨-೩-೧೯ ರವಿವಾರ ದಿವಸ ಕೊನೆಯಲ್ಲಿ ಹೊಸದಾಗಿ ಡಾಕ್ಟರರಾದ ಚಂದ್ರಶೇಖರಯ್ಯನವರು ಅಮರಾವತಿ ಇವರು ಆಯುರ್ವೇದ ಮತ್ತು ಪಾಶ್ಚಾತ್ಯ ಔಷಧ ಇವುಗಳ ತಾರತಮ್ಯ ಈ ವಿಷಯವನ್ನು ಸುಲಭವಾಗಿ ವಿವರಿಸಿ ಭಾಷಣಮಾಡಿದರು. ಇವರ ಪರಿಶ್ರಮಕ್ಕಾಗಿ ವಿಸ್ತರಿಸಿದ ವಿವರಣೆಗೂ ಸಂಸ್ಥೆಯು ಅಭಿನಂದಿಸಿತು. ತರುವಾಯ "ಲಿಂಗ" ಈ ವಿಷಯದಮೇಲೆ ಶ್ರೀ ಮಹಾಂತ ಶಿವಯೋಗಿಗಳ ಭಾಷಣವು ಮನೋಹರವಾಗಿ ನಡೆಯಿತು. ಅನಂತರ ರಥೋತ್ಸವವೂ ವಾಹನದ ಮೆರವಣಿಗೆಯೂ, ಪದ್ಧತಿಯಂತೆ ಒಳ್ಳೇ ವಿಜೃಂಭಣೆಯಿಂದಲೂ ಕ್ಷೇಮದಿಂದಲೂ ಜರುಗಿದವು. ಕೊನೆಗೆ ಸಂಸ್ಥೆಯ ಮ್ಯಾನೇಜರಾದ ವೀರಬಸಪ್ಪಶ್ರೇಷ್ಠಿ ಬಿ. ಎ. ಇವರ ಅಧ್ಯಾವರಣಪರವಾದ ಭಗವದ್ಗೀತೆಯ ತಾರತಮ್ಯ ಭಾಷಣವು ಸಭಿಕರನ್ನೆಲ್ಲ ಚಿತ್ರಪಟದಂತೆ ಮಾಡಿತು. ಈ ವರ್ಷ ಪರೀಕ್ಷಿಸಲ್ಪಡತಕ್ಕ ವಿದ್ಯಾರ್ಥಿಗಳು ಚೆನ್ನಾಗಿ ಬಾರಲಿಲ್ಲವು. ಗದಗ ಪಾಠಶಾಲೆಯ ವಿದ್ಯಾರ್ಥಿ ಶಂಕರಮರಿಗಳು ಏಕೀಸಾರ್ಥಪ್ರಕಾಶಿಕೆಯ ಎರಡು ಅಧಿಕರಣಗಳಲ್ಲಿ ಪರೀಕ್ಷಿಸಲ್ಪಟ್ಟು ಕೌಮುದಿಯೆಂಬ ವ್ಯಾಕರಣ ಗ್ರಂಥವನ್ನು ಪಾರಿತೋಷಕವಾಗಿ ಪಡೆದದು ಸಂತೋಷವೆನಿಸುವುದು. ಪ್ರತಿ ವರ್ಷದಂತೆ ಈ ವರ್ಷ ದನಗಳ ಮಾರಾಟ ಜರುಗಿತು. ಧರ್ಮಹಿತೇಚ್ಛುಗಳಾದ ಸಮಸ್ತ ಭಕ್ತಮಾಹೇಶ್ವರರು ತಮ್ಮ ಸಹಾನುಭೂತಿಯನ್ನೂ ಪ್ರೇಮವನ್ನೂ ತೋರ್ಪಡಿಸಿ ದರ್ಶನ ಕಾಣಿಕೆ ವರ್ಷಾಸನಗಳನ್ನು ಕೊಟ್ಟಿದ್ದಲ್ಲದೆ I. ಶ್ರೀಮಂತ ಹನುಮಂತಗೌಡ ಅನ್ನದಾನಗೌಡ ಪಾಟೀಲ ಚಿಕ್ಕಪ್ಪ ಸಂಸ್ಥಾನ ರಾಯದುರ್ಗ ಇವರು ೧೦೦೦ ಅಥವಾ ಅಷ್ಟೇ ಬೆಲೆಯ ಶಿವಯೋಗಮಂದಿರ ನೆರೆಯಲ್ಲಿಯೇ ಜಮೀನು ಕೊಡುವುದಾಗಿ ವಾಗ್ದಾನಮಾಡಿದರು. II. ಮಿಸ್ತರ ಕರವೀರಪ್ಪ ಅಂದಾನಪ್ಪ ಕುಲಕರ್ಣಿ ವಕೀಲ ಧಾರವಾಡ ಇವರು ನಾಯಕನೂರಲ್ಲಿ (೪) ಯಕರೆ ಜಮೀನ ಅಥವಾ ರೋಖ ೫೦೦ ರೂಪಾಯಿ ಕೊಡಲಿಕ್ಕೆ ಒಪ್ಪಿದರು. III. ಮಿ|| ರಾಮನಗೌಡಾ ಪಾಟೀಲ ಕರಮುಡಿ ಸಾ|| ಅಸಿಸಣಗೋಡಿ ಇವರು ೫೦೦ ರೂ. ಬೆಲೆ ಬಾಳುವ ಜಮೀನು ಕೊಡಲಿಕ್ಕೆ ಒಪ್ಪಿದರು. VI. ಹಾಗೂ ಶ್ರೀಮತಿ ಕಂಬಸಮ್ಮನವರು ಸಿಂದಿಗಿ, ಮುಕ್ಕಾಂ ಬಳ್ಳಾರಿ ಇವರು ಇಮಾರತಿ ಮಂಟಪದ ಕೆಲಸಕ್ಕೆ ೫೦೦ ರೂ. ಕೊಡಲಿಕ್ಕೆ ಒಪ್ಪಿದರು. V. ಮ|| ರಾ|| ವೀರಬಸಪ್ಪ ಬಸಪ್ಪ ದಂಡಿನ ಸಾ|| ಹಡಗಲಿ ತಾಲೂಕ ರೋಣ ಇವರು ಇಮಾರತಿಯಬಗ್ಗೆ ೫೦೦ ರೂ. ರೋಖ ಕೊಟ್ಟರು. VI. ಮ|| ರಾ|| ಶಿವಪ್ಪ ಇಂಡಿ ಸಾ|| ಗಜೇಂದ್ರಗಡ ತಾಲೂಕ ರೋಣ ಇವರು ೩೦೧ ರೂ. ಜಮೀನಕೊಳ್ಳಲಿಕ್ಕೆ ರೋಖ ಕೊಟ್ಟರು. ಈ ಪ್ರಕಾರ ಒಪ್ಪಿ ಮಹಾಸನ್ನಿಧಿಯಿಂದ ದರ್ಶನಾಶೀರ್ವಾದಗಳನ್ನು ಪಡೆದರು. ಈ ಸಂಸ್ಥೆಯಲ್ಲಿ ಸ್ಥಾಪಿಸಲ್ಪಟ್ಟ ಇಂಗ್ಲೀಷಶಾಲೆಯು ಮಿ|| ಶ್ರೇಷ್ಠಿಯವರ ಅಭಿಪ್ರಾಯದಂತೆ ನಡೆಸಬೇಕೆಂದು ಗೊತ್ತಾಯಿತು.

ವ್ಯವಸ್ಥಾಪಕ.

ಗೃಹಕೃತ್ಯದ ನೋಟೀಸ್.

ತಿಪಟೂರು ತಾಲೂಕ್ ತಿಬ್ಬನಹಳ್ಳಿ ಸಮ್ಮತಿ ಹಳ್ಳಾಳುಗ್ರಾಮದ ಮಜರೇಪಾಳ್ಯದಲ್ಲಿರುವ ಕುಂಚಿಟಿಗ ಒಕ್ಕಲಿಗರಜಾತಿ ಗುಡ್ಡಯ್ಯನಮಗ ರಂಗಯ್ಯನು ಈ ಮೂಲಕ ತಿಳಿಯಪಡಿಸುವದೇನಂದರೆ:—

ನನ್ನ ಬಾವಾ ಅಣ್ಣ ಬೋರಯ್ಯನೆಂಬುವನೂ ನಾನೂ ಅವಿಭಕ್ತಸಹೋದರರು. ಸದರಿ ಬೋರಯ್ಯನೂ ನಾನೂ ಏಕ ಗೃಹಕೃತ್ಯದಲ್ಲಿದ್ದಾಗ ನನಗೆ ಲಗ್ನವಿಲ್ಲದ ಸಬಬ್ ಲಗ್ನದ ಉಡಿಗಾಗಿ ಸದರೀ ಬೋರೈಯ್ಯನ ಖಾತೆ ಸದರೀ ಗ್ರಾಮ ಸರ್ವೇ 6¼ ನೇ ನಂಬರು ಖುಷ್ಕೀ ಜಮೀನನ್ನು ನನಗೆ ವಹಿಸಿ ಕೊಟ್ಟು ಇದ್ದನು. ಆ ಲಾಗಾಯ್ತು ಸದರಿ ಜಮೀನ್ ನನ್ನದಾಗಿದ್ದು ಜಮೀನ್ ಖಾತೆಮಾತ್ರ ಸದರೀ ಬೋರಯ್ಯನ ಹೆಸರಿಗೆ ಇತ್ತು.

ಈ ವರುಷ ವ್ಯಾಪ್ತವಾಗಿದ್ದ (ಇನ್‌ಫ್ಲುಯೆಂಜಾ) ಖಾಯಿಲೆಯಲ್ಲಿ ಸದರೀ ಬೋರಯ್ಯನು ಫೌತಿಯಾದನು.

ಸದರೀ ಬೋರೈಯ್ಯನ ಹೆಂಡತಿ ಲಕ್ಕಮ್ಮ ಎಂಬುವಳು ಈ ಫೌತೀಯವನ ಹೆಸರಿನ ಖಾತೆಯು ತನಗಾಗಬೇಕೆಂತ ಕರಸ್ಪಾಂಡೆನ್ಸ್ ನಡೆಸುತ್ತಿದ್ದಾಳೆ. ಈಕೆಯು ಈಗ್ಗೆ (20) ವರ್ಷಗಳಿಂದಲೂ ಮನೆಯನ್ನು ಬಿಟ್ಟು ಯಾವಯಾವ ಗ್ರಾಮದಲ್ಲಿಯೋ ಸ್ವೇಚ್ಛೆಯಾಗಿ ವಾಸವಾಗಿದ್ದು ಕೊಂಡಿದ್ದಾಳೆ.

ನನಗೆ ದ್ವೇಷಿಗಳಾದ ಕೆಲವರು ಸದರೀ ಜಮೀನ್ ಈಕೆಯಿಂದ ಪರಭಾರೆಮಾಡಿಸಿ ತಾವು ಆ ಜಮೀನ್ ಹೊಂದಬೇಕೆಂತ ಇಷ್ಟಪಟ್ಟಿರುವಂತೆ ತಿಳಿಯುತ್ತೇನೆ. ಈಕೆಗೆ ಈ ಜಮೀನ್‌ನಲ್ಲಿ ಯಾವಹಕ್ಕೂ ಇರುವುದಿಲ್ಲ. ಹಾಗೂ ಈಕೆಯಿಂದ ಸದರೀ ಜಮೀನ್ ಯಾರಾದರೂ ಯಾವ ತರಹೆಯಾಗಿಯಾದರೂ ಹೊಂದಿದಲ್ಲಿ ಅವರಿಗೆ ಈ ಜಮೀನ್ ಖಂಡಿತವಾಗಿಯೂ ಸಿದ್ಧಿಸಲಾರದು. ಮತ್ತು ಅವರು ನನಗುಂಟಾಗುವ ಪರಿಷ್ಠ ಖರ್ಚಿಗೂ ಗುರಿಯಾಗುವರೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

ತಾ|| 23-3-19. ರಂಗಯ್ಯನ ಒಪ್ಪಿತದ ರುಜು.

ಮಹಾಶಯರೆ! ಇಲ್ಲಿನೋಡಿ !!

ಅಚ್ಚಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಸ್ಟೇಜು ಸಹ	1—0—0.
200 ಕ್ಕೆ ... ... ,, ,,	1—12—0.
300 ಕ್ಕೆ ... ... ,, ,,	2—4—0.

ವಿಳಾಸ—ಬಿ. ಹೆಚ್. ಮಸ್ತಾನ್‌ಸಾಹೇಬ್, ಅಂಡ್ ಕೊ,
2 ಮರಡಿಹಳ್ಳಿ—ಚಿತ್ರದುರ್ಗ ಡಿ||.

3

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯಕರವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಬಿಜ್ಜಿ, ತುರಿ, ನವೆ, ಮುಂತಾದುವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

8 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೇರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

12 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

15

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪಕಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದ್ಯನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಬೇನೆಯೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100-ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
8 ಸಾಹುಕಾರಪೇಟೆ, ಮದರಾಸ್.

ಇಂಗ್ಲೀಷ್ ಡಾಕ್ಟರುಗಳು ಮೃದುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 8

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:— ರಾಸ್ ವಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವು ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೈಕಟ್ಟ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಪ್ಪು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2.14.0. 25 ಕ್ಕೆ 5.5.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
16 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮಾರ್ಚಿ ತಾ|| ೩೦ ರಿಂದ ೧೯೧೯ ನೆಯ ಏಪ್ರಿಲ್ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿ ನಾಮಸಂವತ್ಸರದ ಫಾಲ್ಗುಣ ಬ|| ತ್ರಯೋದಶಿಯಿಂದ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಚೈತ್ರ ಶು|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
30	[1] ಭಾನು	ತ್ರಯೋ	1-25	ಪುಭಾ	56-2	17
31	[2] ಸೋಮ	ಅಮಾ	52-11	ಉಭಾ	48-25	18
1	[3] ಮಂಗಳ	ಪಾಡ್ಯ	46-29	ರೇವತಿ	44-31	19
2	ಬುಧ	ಬಿದಿಗೆ	40-21	ಅಶ್ವಿನಿ	40-25	20
3	ಗುರು	ತದಿಗೆ	34-17	ಭರಣಿ	36-7	21
4	[4] ಶುಕ್ರ	ಚೌತಿ	28-17	ಕೃತ್ತಿಕೆ	32-3	22
5	ಶನಿ	ಪಂಚ	22-39	ರೋಹಿಣಿ	28-15	23

(1) ಮಾಸಶಿವರಾತ್ರಿ. (2) ಸರ್ವತ್ರಅಮಾವಾಸ್ಯಾ. (3) ಚಾಂದ್ರಸಂವತ್ಸರಾರಂಭಃ. (4) ಚತುರ್ದಶೀ ತಿಥಿಃ, ವರಗಣಪತಿವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಧುರೀಣಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾರಾ ಪಶ್ಯಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತಲಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಏಪ್ರಿಲ್ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೧೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇವಣಾರಾಧ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಭಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾದಿ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಸತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 19

ಧಾತುಪುಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಗಾಂಚಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಸಿಫದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯಕರ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಕೇವಲ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಅರ್ಹಿಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಕ ಶತಕತ್ರಯ	೧—೦—೦
ಕ ವೀರಶೈವ ವಿವಾಹವಿಧಿ	೦—೮—೦
ವಪೂಜಾವಿಧಿ	೦—೧೦—೦
ರುಶೀಲಚಂದ್ರ	೦—೫—೦
ವದಾಸಿ	೦—೪—೦
ತಪಂಚಕ	೦—೨—೦
ವಿದ್ಯಾ (ಮುಕ್ತಿಸಾಧನ)	೦—೨—೦
ಶರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ವಾಸಿಯಾಗದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳೆಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸದೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣವಾಗುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

6 ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪನಿ, ಪೋಸ್ಟ್ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲಿಶೂಲಿ, ನಡಶೂಲಿ, ವಾತಶೂಲಿ, ರಕ್ತಜಡ್ಡು, ಗುಪ್ತವ್ಯಸನಬೇನೆ, ಹುರಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಹೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮುಕ್ತ ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
46 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮದರಾಸ್ ಮೇಲ್ ವಾಚ್, ೩ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು—ಜಪಾನ್ ಬೀಸಣಿಗೆ 1, ತಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಷರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ 4—8—0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
9 5. ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

26 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಶ್ರೀಮಂತರ ಸ್ಮಾರಕದ ಅವಶ್ಯಕತೆಯು ಸರಸವಾಗಿ ಹೇಳಲ್ಪಟ್ಟು ಅವರ ಜಯಂತಿಯ ಉತ್ಸವವನ್ನು ಇಡೀ ವೀರಶೈವ ಸಮಾಜವು ಹಬ್ಬದಂತೆ ಆಚರಿಸಿ ಕೃತಜ್ಞತೆಯನ್ನು ತೋರಿಸುವುದು ಸರ್ವಸಮ್ಮತವೆಂದು ನಿಶ್ಚಯಿಸಲ್ಪಟ್ಟಿತು. ಇದೇ ದಿವಸ ಮಧ್ಯಾಹ್ನದ 3 ರಿಂದ 6 ಗಂಟೆಯವರೆಗೆ ಶ್ರೀಮತಿ ಗಂಗಾಬಾಯಿ ಶಿಕ್ಷಾರ ಇವರ ಅಧ್ಯಕ್ಷತೆಯ ಕೆಳಗೆ ಮಹಿಳಾಪರಿಷತ್ತು ಶಿವಗಂಗಾಬಾಯಿ ದೇಸಾಯಿಣಿ ಇವರು ಹೊಸದಾಗಿ ಕಟ್ಟಿಸಿದ ಕಟ್ಟಡದಲ್ಲಿ ನೆರೆಯಿತು. ಸ್ತ್ರೀ ಸಮಾಜದ ಉತ್ಕರ್ಷಕ್ಕೂ ಜಾಗೃತಿಗೂ ಅನುಕೂಲವಾದ ಯೋಜನೆಗಳನ್ನು ಅರಿದು ಆಚರಿಸುವಂತೆ ಮಾಡಿಕೊಂಡ ಏರ್ಪಾಡುಗಳಿಗೆ ಸಂಸ್ಥೆಯು ಆನಂದಪಡುವುದು. ತಾ|| ೨-೩-೧೯ ರವಿವಾರ ದಿವಸ ಲೋಕಪ್ಪ ಅವರಲ್ಲಿ ಹೊಸದಾಗಿ ಡಾಕ್ಟರರಾದ ಚಂದ್ರಶೇಖರಯ್ಯನವರು ಅಮರಾವತಿ ಇವರು ಆಯುರ್ವೇದ ಮತ್ತು ಪಾಶ್ಚಾತ್ಯ ಔಷಧ ಇವುಗಳ ತಾರತಮ್ಯ ಈ ವಿಷಯವನ್ನು ಸುಲಭವಾಗಿ ವಿವರಿಸಿ ಭಾಷಣಮಾಡಿದರು. ಇವರ ಪರಿಶ್ರಮಕ್ಕೂ ವಿಸ್ತರಿಸಿದ ವಿವರಣೆಗೂ ಸಂಸ್ಥೆಯು ಅಭಿನಂದಿಸಿತು. ತರುವಾಯ "ಲಿಂಗ" ಈ ವಿಷಯದಮೇಲೆ ಶ್ರೀ ಮಹಾಂತ ಶಿವಯೋಗಿಗಳ ಭಾಷಣವು ಮನೋಹರವಾಗಿ ನಡೆಯಿತು. ಅನಂತರ ರಥೋತ್ಸವವೂ ವಾದ್ಯದ ಮೆರವಣಿಗೆಯೂ, ಪದ್ಧತಿಯಂತೆ ಒಳ್ಳೇ ವಿಜೃಂಭಣೆಯಿಂದಲೂ ಕ್ಷೇಮದಿಂದಲೂ, ಜರುಗಿದವು. ಕಡೆಗೆ ಸಂಸ್ಥೆಯ ಮ್ಯಾನೇಜರಾದ ವೀರಬಸಪ್ಪ ಶ್ರೇಷ್ಠಿ ಬಿ. ಎ. ಇವರು ಅಧ್ಯಾಪಕರಾದ ಭಗವದ್ಗೀತೆಯ ತಾರತಮ್ಯ ಭಾಷಣವು ಸಭಿಕರನ್ನೆಲ್ಲ ಚಿತ್ರಪಟದಂತೆ ಮಾಡಿತು. ಈ ವರ್ಷ ಪರೀಕ್ಷಿಸಲ್ಪಡತಕ್ಕ ವಿದ್ಯಾರ್ಥಿಗಳು ಚೆನ್ನಾಗಿ ಪಾರಲಿಲ್ಲವು. ಗದಗ ಪಾಠಶಾಲೆಯ ವಿದ್ಯಾರ್ಥಿ ಶಂಕರ ನಂರಿಗಳು ವಿಶೇಷಾರ್ಥಪ್ರಕಾಶಿಕೆಯ ಎರಡು ಅಧಿಕರಣಗಳಲ್ಲಿ ಪರೀಕ್ಷಿಸಲ್ಪಟ್ಟು ಕೌಮುದಿಯೆಂಬ ವ್ಯಾಕರಣ ಗ್ರಂಥವನ್ನು ಸಾಂತೋಷಕವಾಗಿ ಪಡೆದು ಸಂತೋಷಪಡಿಸುವುದು. ಪ್ರತಿ ವರ್ಷದಂತೆ ಈ ವರ್ಷ ದನಗಳ ಮಾರಾಟ ಜರುಗಿತು. ಧರ್ಮಾಭಿಮಾನಿಗಳಾದ ಸಮಸ್ತ ಭಕ್ತಮಾಹೇಶ್ವರರು ತಮ್ಮ ಸಹಾನುಭೂತಿಯನ್ನೂ ಪ್ರೇಮವನ್ನೂ ತೋರ್ಪಡಿಸಿ ದರ್ಶನ ಕಾಣಿಕೆ ವರ್ಷಾಸನಗಳನ್ನು ಕೊಟ್ಟಿದ್ದಲ್ಲದೆ I. ಶ್ರೀಮಂತ ಹನುಮಂತಗೌಡ ಅನ್ನದಾನಗೌಡ ಪಾಟೀಲ ಚಿಕ್ಕೊಪ್ಪ ಸಂಸ್ಥಾನ ರಾಯದುರ್ಗ ಇವರು ೧೦೦೦ ಅಥವಾ ಅಷ್ಟೇಬೆಲೆಯ ಶಿವಯೋಗಮಂದಿರದ ನೆರೆಯಲ್ಲಿಯೇ ಜಮೀನುಕೊಡುವದಾಗಿ ವಾಗ್ದಾನಮಾಡಿದರು. II. ಮಿಸ್ತರ ಕರವೀರಪ್ಪಾ ಅಂದಾನಪ್ಪಾ ಕುಲಕರ್ಣಿ ವಕೀಲ ಧಾರವಾಡ ಇವರು ನಾಯಕನೂರಲ್ಲಿ (೪) ಎಕರೆ ಜಮೀನ ಅಥವಾ ರೋಖ ೫೦೦ ರೂಪಾಯಿ ಕೊಡಲಿಕ್ಕೆ ಒಪ್ಪಿದರು. III. ಮಿ|| ರಾಮನಗೌಡಾ ಪಾಟೀಲ ಕರಮಡಿ ಸಾ|| ಅರಿಸಿಣಗೋಡಿ ಇವರು ೫೦೦ ರೂ. ಬೆಲೆ ಬಾಳುವ ಜಮೀನು ಕೊಡಲಿಕ್ಕೆ ಒಪ್ಪಿದರು. VI. ಹಾಗೂ ಶ್ರೀಮತಿ ಕಂಬಿಣಮ್ಮನವರು ಸಿಂದಗಿ, ಮುಕ್ಕಾಂ ಬಳ್ಳಾರಿ ಇವರು ಇಮಾರತಿ ಮಂಟಪದ ಕೆಲಸಕ್ಕೆ ೫೦೦ ರೂ. ಕೊಡಲಿಕ್ಕೆ ಒಪ್ಪಿದರು. V. ಮ|| ರಾ|| ವೀರಬಸಪ್ಪಾ ಬಸಪ್ಪಾ ದಂಡಿನ ಸಾ|| ಹಡಗಲಿ ತಾಲ್ಲೂಕ ರೋಣ ಇವರು ಇಮಾರತಿಯಬಗ್ಗೆ ೫೦೦ ರೂ. ರೋಖ ಕೊಟ್ಟರು. VI. ಮ|| ರಾ|| ಶಿವಪ್ಪಾ ಇಂಡಿ ಸಾ|| ಗಜೇಂದ್ರಗಡ ತಾಲ್ಲೂಕ ರೋಣ ಇವರು ೩೦೧ ರೂ. ಜಮೀನುಕೊಳ್ಳಲಿಕ್ಕೆ ರೋಖ ಕೊಟ್ಟರು. ಈ ಪ್ರಕಾರ ಒಪ್ಪಿ ಮಹಾಸನ್ನಿಧಿಯಿಂದ ದರ್ಶನಾಶೀರ್ವಾದಗಳನ್ನು ಪಡೆದರು. ಈ ಸಂಸ್ಥೆಯಲ್ಲಿ ಸ್ಥಾಪಿಸಲ್ಪಟ್ಟ ಇಂಗ್ಲೀಷಶಾಲೆಯು ಮಿ|| ಶ್ರೇಷ್ಠಿಯವರ ಅಭಿಪ್ರಾಯದಂತೆ ನಡೆಸಬೇಕೆಂದು ಗೊತ್ತಾಯಿತು.

ವ್ಯವಸ್ಥಾಪಕ.

ಗೃಹಕೃತ್ಯದ ನೋಟೀಸ್.

ತಿಪಟೂರು ತಾಲ್ಲೂಕ್ ತಿಬ್ಬನಹಳ್ಳಿ ಸಮ್ಮತು ಹತ್ಯಾಳುಗ್ರಾಮದ ಮಜರೇಪಾಳ್ಯದಲ್ಲಿರುವ ಕುಂಚಿಟಿಗ ಒಕ್ಕಲಿಗರಜಾತಿ ಗುಡ್ಡಯ್ಯನಮಗ ರಂಗಯ್ಯನು ಈ ಮೂಲಕ ತಿಳಿಯಪಡಿಸುವದೇನಂದರೆ:—

ನನ್ನ ಬಾಸಾ ಅಣ್ಣ ಬೋರಯ್ಯನೆಂಬುವನೂ ನಾನೂ ಅವಿಭಕ್ತರಾಗಿ ಹೋದರು. ಸದರಿ ಬೋರಯ್ಯನೂ ನಾನೂ ಏಕ ಗೃಹಕೃತ್ಯದಲ್ಲಿದ್ದಾಗ ನನಗೆ ಲಗ್ನವಿಲ್ಲದ ಸಬಬ್ ಲಗ್ನದ ಈಡಿಗಾಗಿ ಸದರೀ ಬೋರೈಯ್ಯನ ಖಾತೆ ಸದರೀ ಗ್ರಾಮ ಸರ್ವೇ ೫೬ ನೇ ನಂಬರು ಖುಷ್ಕೀ ಜಮೀನನ್ನು ನನಗೆ ಮಾರಿ ಕೊಟ್ಟು ಇದ್ದನು. ಆ ಲಾಗಾಯ್ತು ಸದರಿ ಜಮೀನ್ ನನ್ನದಾಗಿದ್ದು ಜಮೀನ್ ಖಾತೆಮಾತ್ರ ಸದರೀ ಬೋರಯ್ಯನ ಹೆಸರಿಗೆ ಇತ್ತು.

ಈ ವರುಷ ಪ್ರಾಪ್ತವಾಗಿದ್ದ (ಇನ್ಫ್ಲುಯೆಂಜಾ) ಖಾಯಿಲೆಯಲ್ಲಿ ಸದರೀ ಬೋರಯ್ಯನು ಫೌತಿಯಾದನು.

ಸದರೀ ಬೋರೈಯ್ಯನ ಹೆಂಡತಿ ಲಕ್ಕಮ್ಮಾ ಎಂಬುವಳು ಈ ಫೌತೀಯವನ ಹೆಸರಿನ ಖಾತೆಯು ತನಗಾಗಬೇಕೆಂತ ಕರಸ್ಪಾಂಡೆನ್ಸ್ ನಡೆಸುತ್ತಿದ್ದಾಳೆ. ಈಕೆಯು ಈಗ್ಗೆ (20) ವರ್ಷಗಳಿಂದಲೂ ಮನೆಯನ್ನು ಬಿಟ್ಟು ಮಾವನವರ ಗ್ರಾಮದಲ್ಲಿಯೇ ಸ್ವೇಚ್ಛೆಯಾಗಿ ವಾಸವಾಗಿದ್ದು ಕೊಂಡಿದ್ದಾಳೆ.

ನನಗೆ ದ್ವೇಷಿಗಳಾದ ಕೆಲವರು ಸದರೀ ಜಮೀನ್ ಈಕೆಯಿಂದ ಪರಭಾರೆಮಾಡಿಸಿ ತಾವು ಆ ಜಮೀನ್ ಹೊಂದಬೇಕೆಂತ ಇಷ್ಟಪಟ್ಟಿರುವಂತೆ ತಿಳಿಯುತ್ತೇನೆ. ಈಕೆಗೆ ಈ ಜಮೀನ್‌ನಲ್ಲಿ ಯಾವಹಕ್ಕೂ ಇರುವುದಿಲ್ಲ. ಹಾಗೂ ಈಕೆಯಿಂದ ಸದರೀ ಜಮೀನ್ ಯಾರಾದರೂ ಯಾವ ತರಹೆಯಾಗಿ ಯಾದರೂ ಹೊಂದಿದಲ್ಲಿ ಅವರಿಗೆ ಈ ಜಮೀನ್ ಖಂಡಿತವಾಗಿಯೂ ಸಿದ್ಧಿಸಲಾರದು. ಮತ್ತು ಅವರು ನನಗುಂಟಾಗುವ ಏಟಿನ್ನ ಖರ್ಚಿಗೂ ಗುರಿಯಾಗುವರೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

ತಾ|| 23-3-19. ರಂಗಯ್ಯನ ಒಪ್ಪಿತದ ರುಜು.

ಮಹಾಶಯರೇ! ಇಲ್ಲಿನೋಡಿ !!

ಅಚ್ಚ ಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಷ್ಟೇಜು ಸೇರಿ	1—0—0.
200 ಕ್ಕೆ ... ... ,, ,,	1—12—0.
300 ಕ್ಕೆ ... ... ,, ,,	2—4—0.

ವಿಳಾಸ—ಡಿ. ಹೆಚ್. ಮಸ್ತಾನ್‌ಸಾಹೇಬ್, ಅಂಡ್ ಕೊ,

2 ಮರಡಿಹಳ್ಳಿ—ಚಿತ್ರದುರ್ಗ ಡಿ||.

3

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಪ್ರಕಾಶವಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ದರ್ಬಾರ್ ಸೋಪು.

ಈ ಸೋಪನ್ನು ಕೊಡಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂತ ಕ್ಷೌರಮಾಡಿಸಿಕೊಂಡದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆಯಬಹುದು.

ನಮ್ಮ ದರ್ಬಾರ್ ಸೋಪು

ಗಂಧ, ತೊಡನು, ಬಿಜ್ಜ, ತುರಿ, ನವೆ, ಮುಂತಾದುವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

8 ನಮ್ಮ ವಿಳಾಸ:—ವೈರಂ ಅಂಡ್ ಕೊ,

3. ಇರುಳಪ್ಪನ ಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೇರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇತ್ತೀಚಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಆತ್ಮಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಛಾಯಾಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

12 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

15

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದ ವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರಕ್ಕೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಬೇಸರೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100-ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಶೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,

8 ಸಾಹುಕಾರಪೇಟೆ, ಮದರಾಸ್.

ಇಂಗ್ಲೀಷ್ ಡಾಕ್ಟರುಗಳು ನ್ಯೂಮವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). 8

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಳು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ವಾಚ್ ಅಂಡ್ ಕೊ,

3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೆಳೆತ ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುವದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೈಕತ್ತ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬಂದಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ

16 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮಾರ್ಚಿ ತಾ|| ೩೦ ರಿಂದ ೧೯೧೯ ನೆಯ ಏಪ್ರಿಲ್ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಕಾಳಯುಕ್ತಿ ನಾಮಸಂವತ್ಸರದ ಫಾಲ್ಗುಣ ಬ|| ತ್ರಯೋದಶಿಯಿಂದ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಚೈತ್ರ ಶು|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ದಿನ ಮಾಸ
30	¹ಭಾನು	ತ್ರಯೋ	1-25	ಉಪರಿ	56-2	17
31	²ಸೋಮ	ಅಮಾ	52-11	ಉಭಾ	48-25	18
1	³ಮಂಗಳ	ಪಾಡ್ಯ	46-29	ರೇವತಿ	44-31	19
2	ಬುಧ	ಬಿದಿಗೆ	40-21	ಅಶ್ವಿನಿ	40-25	20
3	ಗುರು	ತದಿಗೆ	34-17	ಭರಣಿ	36-7	21
4	⁴ಶುಕ್ರ	ಚೌತಿ	28-17	ಕೃತ್ತಿಕ	32-3	22
5	ಶನಿ	ಪಂಚ	22-39	ರೋಹಿಣಿ	28-15	23

(1) ಮಾಸಶಿವರಾತ್ರಿ. (2) ಸರ್ವತ್ರಮಾವಾಸ್ಯಾ. (3) ಚಾಂದ್ರಸಂವತ್ಸರಾರಂಭಃ. (4) ಚತುರ್ಥಶೀ ತಿಥಿಃ, ವರಗಣಪತಿವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶೂರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಶ್ಯಜ್ಞ ನಕ್ಷತ್ರತೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಾನುಭಿಪ್ಸದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸನ್ಮಾರ್ಗೇತರಯತ್ಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಿಶಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕ ಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೨) ಮೈಸೂರ್ ಸ್ಟಾರ್ ೧೯೧೯ ನೆಯ ಇಸವಿ ಏಪ್ರಿಲ್ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೧೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ, ಅಷ್ಟಾವರಣ, ಕರಣಹಸುಗೆ, ಪಂಚಾಚಾರ, ಶೂನ್ಯಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಳಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕಸ್ತೋತ್ರ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾದಿ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೪-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ವಶಿಖಾಮುಕ್ತಾವಳಿ ೬ ಆಣೆ; ರಕ್ಷಾಸಕರ ೩ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ.) 19

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಭ, (ಟಾಕಿ) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಪಿತ್ತಕಾಲಿ, ವಾತರೋಗವು ಮುಂತಾದವು ಆಶ್ಚರ್ಯವಾಗಿ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಹಸ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತವೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಪ್ರಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೩ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶೀಲ ಶತಕತ್ರಯ	೧—೦—೦
ಶೀಲ ವೀರಶೈವ ವಿವಾಹವಿಧಿ	೦—೮—೦
ಪೂಜಾವಿಧಿ	೦—೧೦—೦
ರುಶೀಲಶತಕ	೦—೫—೦
ಬಿಡಾಣಿ	೦—೪—೦
ಪಂಚಕ	೦—೩—೦
ವಿದ್ಯಾ (ಮುಕ್ತಿಸಾಧನ)	೦—೨—೦
ಕೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ !!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಕೂಡಲು ಅಥವಾ ಅದರಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅವಸ್ಥೆಗಳು ಗುಣವೆಂದೆನಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವದಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣವಾಗುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

6 ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪನಿ, ಪೋಷ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೫-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಆದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಚಿಕಿತ್ಸೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ದೇಸಿಬಡ್ಡು, ಗುಪ್ತವ್ಯಾಧಿಬೇನೆ, ಹುರಕುರಕೆಜ್ಜ, ಗಜಕರ್ಣ, ಇಸಬು, ತದ್ದು, ಘಾಯುವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದಬೇನೆ, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಷನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟ ಜೋರಟಿಲೆ ಪರತ ತಕ್ಕೊಳ್ಳುತ್ತೇವೆ. ಮುತ್ತು ಹೆಚ್ಚಿನ ಮಾಹಿತಿಯ ಕ್ಯಾಟಲಾಗು ಬೇಕಾದಲ್ಲಿ ಪೋಷ್ಟ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ನೋಟಿಸ ಸಿಗುವವು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಷ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,

46 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ನಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸವಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು—ಜವಾನ್ ಬೀಸಣಿಗೆ 1, ತಾವಂತಿಗೆ ಹುವ್ವ 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಶರಟು ಗುಂಡಿಗಳು 4, ಜವಾನ್ ಕ್ನೈವ್ಸ್ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ 4—8—0.



ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,

9 5. ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಛಾಯಾಚಿತ್ರವೂ ಇದೆ. ಕ್ರಯ ೧೨ ಆಣೆ.

26 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಏಪ್ರಿಲ್ ತಾ|| ೬ ನೆಯ ಭಾನುವಾರ.

ಸರ್ಕಾರದುದ್ಯೋಗಗಳ ವಿನಿಯೋಗ.

ಸರ್ಕಾರವಿರುವುದು ಪ್ರಜೆಗಳಿಗಾಗಿ. ಪ್ರಜೆಗಳು ಕೊಟ್ಟ ಕಂದಾಯ ಕೌಳಿಗೆಗಳ ಹಣದಿಂದ ಸರ್ಕಾರದ ಉದ್ಯೋಗಿಗಳಿಗೆ ಸಲ್ಲುವ ಸಂಬಳವು ಅವರು ಪ್ರಜೆಗಳಿಗಾಗಿ ಮಾಡತಕ್ಕ ಸೇವೆಯ ಪ್ರತಿಫಲಕ್ಕಾಗಿಯೇ. ನಾವುಗಳು ಪ್ರಜಾಸೇವಕರು ಎಂದು ತಿಳಿದುಕೊಂಡು ಯಾರು ತ್ರಿಕರಣಶುದ್ಧಿಯಿಂದ ಉದ್ಯೋಗ ನಿರ್ವಾಹಮಾಡುವರೋ ಅವರೇ ಅಧಿಕಾರಪದವಿಗಳಿಗೆ ಅರ್ಹರು. ಅವರೇ ಪ್ರಜಾಗೌರವಕ್ಕೂ ಪ್ರಭುಕೃಪೆಗೂ ಪಾತ್ರರಾಗಲು ಅರ್ಹರಾದವರು. ಅಂಥವರುಗಳ ಸಂಖ್ಯೆಯು ಯಾವ ಪ್ರಭುತ್ವದಲ್ಲಿ ಹೆಚ್ಚಾಗಿರುವುದೋ ಅಲ್ಲಿ ಪ್ರಜೆಗಳ ಸೌಭಾಗ್ಯಕ್ಕೆ ಕೊರತೆಯಿಲ್ಲ; ದುರಾಪತ್ತುಗಳಿಗೆ ಎಡೆಯಿರುವುದಿಲ್ಲ. ಅಂಥ ಸರ್ಕಾರವನ್ನು ಪ್ರಜೆಗಳು ದೈವದಂತೆ ಕಂಡು ಸಂಮಾನಿಸುವರು. ಆ ಸರ್ಕಾರದ ಕಾರ್ಯವಿಶೇಷಗಳನ್ನು ಕುರಿತು ಪ್ರಜೆಗಳು ಸಂಶಯಪಡಲೂ ಭಯಪಡಲೂ ಕಾರಣವಿರುವುದಿಲ್ಲ. ಆದರೆ ದೌರ್ಭಾಗ್ಯವಶಾತ್ ಲೋಕದಲ್ಲಿ ಸೌಜನ್ಯವು ಕಡಿಮೆಯಾಗಿ ದೌಷ್ಟ್ಯವು ವೃದ್ಧಿಯಾಗುತ್ತಿರುವುದರಿಂದ ಆ ಸಾಮಾನ್ಯಗುಣಕ್ಕೆ ವ್ಯತಿರಿಕ್ತರಾಗಿರತಕ್ಕವರೇ ಸರ್ಕಾರದ ಉದ್ಯೋಗಸ್ಥಾನಗಳಿಗೆ ದೊರೆಯುವುದೆಂದರೆ ಸಾಧ್ಯವೆ? ಎಂದಿಗೂ ಇಲ್ಲ. ಹೀಗಾಗಿರುವುದರಿಂದಲೇ ಸರ್ಕಾರದ ಕೆಲಸಗಾರರಲ್ಲಿ ಪಕ್ಷಪಾತ, ಸ್ವಾರ್ಥೈಕಸಾಧನೆ, ದುರಭಿಮಾನ ಮೊದಲಾದುವುಗಳು ಹೆಚ್ಚಲು ಅವಕಾಶವಾಗಿರುತ್ತದೆ. ಇದರಮೇಲೆ ಜಾತಿಮತವೈಷಮ್ಯಗಳ ನೀಡಾಗಿರುವ ದೇಶದಲ್ಲಿ ಮೇಲೆಕಂಡ ದೋಷಗಳ ಪ್ರಾಬಲ್ಯದ ಜತೆಗೆ ಯಾವುದಾದರೊಂದೇ ಒಂದು ಜನವರ್ಗದವರೇ ಅಧಿಕಾರ ಪದವಿಗಳನ್ನೆಲ್ಲಾ ಆಕ್ರಮಿಸಿಕೊಂಡಿರುವುದಾದರೆ ಪರಸ್ಪರ ಭೀತಿಗೂ ಅವಕಾಶವಿಲ್ಲದಂತೆ ಅಲ್ಲಿ ನಡೆಯುವ ಸ್ವೇಚ್ಛಾವೃತ್ತಿಗಳಿಗೆ ಮಿತಿಯುಂಟೆ? ಒಬ್ಬರು ಮಾಡಿದ ಲೋಪಗಳನ್ನು ಮತ್ತೊಬ್ಬರು ಸ್ವಜಾತ್ಯಭಿಮಾನದಿಂದ ಮುಚ್ಚಿಕೊಳ್ಳಲವಕಾಶವಿಲ್ಲದಂತೆ ಬೇರೆಬೇರೆ ಜನವರ್ಗಗಳ ಜನರುಗಳು ಅಧಿಕಾರಪದವಿಗಳಲ್ಲಿದ್ದರೆ ಪರಸ್ಪರ ಭೀತಿಯಿಂದಲಾದರೂ ಸ್ವೇಚ್ಛಾವೃತ್ತಿಗೆ ಸ್ವಲ್ಪಮಟ್ಟಿಗೆ ನಿರೋಧವುಂಟಾಗಬಹುದು. ಅಲ್ಲದೆ ಸರ್ಕಾರವು ಪ್ರಜೆಗಳದಾಗಿರುವಾಗ ಅದರ ಭಾರವನ್ನು ಹೊರುವುದಕ್ಕೆ ಪ್ರತಿಯೊಬ್ಬ ಪ್ರಜೆಗೂ ಬಾಧ್ಯತೆಯಿದೆ. ಆ ಬಾಧ್ಯತೆಯನ್ನು ಅವರು ಅರಿತುಕೊಂಡು ಉಪಯೋಗಿಸಿಕೊಳ್ಳುವಂತಾದರೇನೆಯೇ ಸರ್ಕಾರದ ಕಾರ್ಯವು ತಕ್ಕಮಟ್ಟಿಗಾದರೂ ನಿರ್ದುಷ್ಟವೂ ಸುಗಮವೂ ಆಗುವುದು. ಈ ಕಾರಣದಿಂದ ನಾನಾ ಜನವರ್ಗಗಳ ಪ್ರಾತಿನಿಧ್ಯವು ಸರ್ಕಾರದ ಕಾರ್ಯನಿರ್ವಾಹಕ್ಕೆ ಅವಶ್ಯಕವೆಂದು ಸಿದ್ಧವಾಗುವುದು. ಮತ್ತು ಸರ್ಕಾರಿಯ ಉದ್ಯೋಗವು ಒಂದು ಕುಲಕಸುಬು ಅಲ್ಲ. ಅದನ್ನು ಇಂಥ ಒಂದಾನೊಂದು ಜಾತಿಯವರೇ ವಹಿಸಿ ನಿರ್ವಹಿಸಬೇಕೆಂದು ಯಾವ ಶಾಸ್ತ್ರವಾದರೂ ಶಾಸನಮಾಡಿರುವುದಿಲ್ಲ. ಈಗಣ ವೃತ್ತಿವ್ಯಭಿಚರಣ ಕಾಲದಲ್ಲಂತೂ ಅಂಥ ನಿರ್ಬಂಧನವನ್ನು ಇತರರ ಮೇಲೆ ಕಲ್ಪಿಸುವುದು ಪರಿಹಾಸಾಸ್ಪದವೇ ಸರಿ. ಇದಲ್ಲದೆ ಸರ್ಕಾರದ ಉದ್ಯೋಗನಿರ್ವಾಹಕ್ಕೆ ವಿದ್ಯಾಯೋಗ್ಯತೆಯೊಂದೇ ಮುಖ್ಯವಲ್ಲ. ವಿದ್ಯೆಯ ಯೋಗ್ಯತೆಯು ಕಾಲುಭಾಗವಾಗಿದ್ದರೆ ಸತ್ಯಸಂಧತೆ, ಶಾಂತಿ, ದಾಂತಿ, ನಿಷ್ಪಕ್ಷಪಾತ, ನಿಸ್ಪೃಹತೆ, ಮೊದಲಾದ ಸದ್ಗುಣಗಳು ಮುಕ್ಕಾಲುಭಾಗವಾಗಿರಬೇಕು. ವಿದ್ಯೆ ಕಲಿತರೆ ಬರುವುದು. ಸದ್ಗುಣಗಳು ನಿಸರ್ಗವಾಗಿ ಬರತಕ್ಕುವು; ಪರಂಪರೆಯಾಗಿ ಲಭ್ಯವಾಗತಕ್ಕುವು. ಒಬ್ಬ ತಿರಿಪಗಾರನ ಮಗನು ಹೇಗೋ ಕಷ್ಟಪಟ್ಟು ಪುಸ್ತಕವಿದ್ಯೆಯನ್ನು ಕಲಿತು ಪರೀಕ್ಷೆಯಲ್ಲಿ ಕೃತಾರ್ಥನಾಗಿ ಬಂದುಬಿಟ್ಟರೆ ಅವನ ವಿದ್ಯೆಯೊಂದನ್ನೇ ಮುಖ್ಯವಾಗೆಣಿಸಿ ದೊಡ್ಡ ಅಧಿಕಾರಪದದಲ್ಲಿ ಕುಳ್ಳಿರಿಸಿಬಿಟ್ಟರೆ, ನಿಸ್ಪೃಹತ್ವಾದಿ ವಿಶಿಷ್ಟ ಗುಣಗಳಿಲ್ಲದೆ ಧನಾಶಾಪರನಾಗಿರುವ ಅಂಥವನಿಂದ ಸರ್ಕಾರದ ಕಾರ್ಯವು ಪ್ರಜಾಪೀಡನೆಗವಕಾಶವಿಲ್ಲದೆ ನಿರ್ವಂಚನೆಯಿಂದ ಸಾಗುವುದೆಂದು ಹೇಳಲಾದೀತೆ? ವಿಶೇಷ ವಿದ್ಯೆಯಿಲ್ಲದಿದ್ದರೂ ಉತ್ತಮಗುಣಾತಿಶಯದಿಂದಲಂಕೃತರಾದನೇಕರು ಪ್ರಜಾಪೀಡೆಗವಕಾಶವಿಲ್ಲದಂತೆ ಉದ್ಯೋಗನಿರ್ವಾಹಮಾಡಿರುವ ದೃಷ್ಟಾಂತಗಳಿರುವುದಿಲ್ಲವೆ? ಆದರೆ ಗುಣವೇ ಸಾಕೆಂದು ವಿದ್ಯೆಯ ಯೋಗ್ಯತೆಯನ್ನು ಧಿಕ್ಕರಿಸತಕ್ಕುದಲ್ಲ. ಈ ಕಾಲದಲ್ಲಿ ವಿದ್ಯಾಪರೀಕ್ಷೆಯೊಂದನ್ನಿಟ್ಟುಕೊಂಡು ಗುಣಪರೀಕ್ಷೆಯ ಅವಶ್ಯಕತೆಯನ್ನೇ ಇಟ್ಟುಕೊಳ್ಳದೆ ಸರ್ಕಾರದ ಉದ್ಯೋಗಗಳನ್ನು ವಿನಿಯೋಗಿಸುತ್ತಿರುವುದು ಬಹಳಾನರ್ಥಕ್ಕೆ ಎಡೆಗೊಟ್ಟಿರುತ್ತದೆ. ಇದರಿಂದ ಉದ್ಯೋಗಿಗಳಲ್ಲಿ ತ್ರಿಕರಣಶುದ್ಧಿಯ ಕೊರತೆಯು ವಿಪರೀತವಾಗಿ ಹೆಚ್ಚಿ, ಅವರುಗಳ ಅನ್ಯಾಯಪ್ರವರ್ತನೆಗೆ ಪ್ರಜೆಗಳು ಬಲಿಬೀಳುವುದೇ ಹೆಚ್ಚಾಗಿದೆ. ಇದನ್ನು ಬಹು ದೂರದೃಷ್ಟಿಯಿಂದ ಪ್ರಭುಗಳು ತಪ್ಪಿಸದಿದ್ದರೆ ದೇಶಕ್ಕೆ ಅನೇಕ ಮುಖಗಳಾದ ಅನರ್ಥಗಳುಂಟಾಗುವುವು.

ಸರ್ಕಾರದ ಉದ್ಯೋಗಗಳಿಗೆ ಒಂದೇಒಂದು ಜನವರ್ಗದವರನ್ನೇ ಹೆಚ್ಚಾಗಿ ಸೇರಿಸಿ, ಇತರ ಪ್ರಜೆಗಳನ್ನು ಸೇರಿಸಲವಕಾಶಮಾಡದಿರುವುದು ಸರಿಯಲ್ಲವೆಂಬ ತತ್ತ್ವವು ಪ್ರಭುತ್ವದವರ ಗಮನಕ್ಕೆ ಈ ಮೊದಲೇ ಬಂದುಹೋಗಿದೆ. ಆದರೆ ಇದುವರೆಗೆ ನಡೆದುಹೋಗಿರುವ ಔದಾಸೀನ್ಯದಿಂದ ಅನೇಕ ಜನವರ್ಗಗಳವರು ವಿದ್ಯಾಬುದ್ಧಿಗಳಲ್ಲಿ ಹಿಂದೆಬಿದ್ದುಹೋಗಿರುವುದರಿಂದ, ಮುಂದಾದ ಹಿಂದಾದವರನ್ನೆಲ್ಲಾ ಒಂದು ಸಾಲಿಗೆ ತಂದು ನಿಲ್ಲಿಸುವುದಕ್ಕೆ ಎಷ್ಟೋ ಪ್ರಯತ್ನಪಡಬೇಕಾಗಿ ಬಂದಿದೆ. ದುರ್ಬಲವಾಗಿ ಅಥವಾ ಅಂಗಹೀನವಾಗಿ ಹುಟ್ಟಿದ ತನ್ನ ಮಕ್ಕಳು ಮರಿಗಳ ವಿಷಯದಲ್ಲಿ ಉಳಿದ ಬಲಾಢ್ಯಗಳಾದ ಮಕ್ಕಳುಗಳಿಗಿಂತಲೂ ಹೆಚ್ಚಾದ ಅಕ್ಕರೆಯನ್ನು ಪಶು ಪಕ್ಷಿ ಮೃಗಾದಿಗಳೂ ಮಾನವಜಾತಿಯೂ ಸಹ ತೋರಿಸುತ್ತಿರುವ ನಿಸರ್ಗಗುಣದಂತೆ ಪ್ರಭುತ್ವದವರು ಕೂಡ ಹಿಂದೆ ಬಿದ್ದುಹೋಗಿರುವ ಜನವರ್ಗಗಳ ಮೇಲೆ ಅಭಿಮಾನವಿಟ್ಟು ಅವರ ಅಭ್ಯುನ್ನತಿಗಾಗಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿರುವುದು ಉಚಿತವಾಗಿಯೇ ಇರುತ್ತದೆ. ಈ ಸೌಕರ್ಯಗಳನ್ನು ನಮ್ಮ ಮೈಸೂರು ಸರ್ಕಾರದವರು ಮಾತ್ರವೇ ಅಲ್ಲದೆ ನೆರೆಯ ಬೊಂಬಾಯಿ ಮದ್ರಾಸು ಸರ್ಕಾರಗಳು ಕೂಡ ಕಲ್ಪಿಸಿರುತ್ತವೆ.

ಸರ್ಕಾರದ ದೊಡ್ಡ ದೊಡ್ಡ ಪದವಿಗಳಿಗೆ ನಿರಲು ಅರ್ಹರಾದವರನ್ನು ಆರಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರದವರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನೇರ್ಪಡಿಸಿರುವರಷ್ಟೆ. ಈ ಪರೀಕ್ಷೆಗೆ ಮೊದಮೊದಲು ಮೈಸೂರು ದೇಶದವರು ಮಾತ್ರವೇ ಅಲ್ಲದೆ ಹೊರಗಣ ವಿದ್ಯಾರ್ಥಿಗಳೂ ವಿಶೇಷವಾಗಿ ಬಂದು ಈ ದೇಶದ ವಿದ್ಯಾಧಿಕ ಜನವರ್ಗದ ವಿದ್ಯಾರ್ಥಿಗಳಿಗಿಂತ ವಿದ್ಯಾಬುದ್ಧಿಗಳಲ್ಲಿ ಅಧಿಕರಾಗಿದ್ದ ಅವರುಗಳು ಇವರನ್ನು ಹಿಂದು ಬೀಳಿಸಿ, ತಾವೇ ಹೆಚ್ಚಾಗಿ ಕೃತಾರ್ಥರಾಗುತ್ತಲಿದ್ದುದರಿಂದ ಈ ದೇಶದವರಿಗೆ ಪಿಗ್ಗಿ ಬೀಳುವಂತಾಯಿತು. ಅದರ ಮೇಲೆ ಇಲ್ಲಿಯವರ ರೋದನವು ಹೆಚ್ಚಾಗಲು ಪ್ರಭುತ್ವದವರು ಮೈಸೂರು ದೇಶದ ಸಿವಿಲ್‌ಸರ್ವೀಸ್ ಪರೀಕ್ಷೆಗೆ ಮೈಸೂರಿನ ಹೊರಗಣವರನ್ನು ಸೇರಿಸುವುದನ್ನೇ ತಪ್ಪಿಸಿಬಿಟ್ಟರು. ಈಚೆಗೆ ಒಳದೇಶದಲ್ಲಿ ಮತ್ತೊಂದು ತೆರದ ರೋದನವುಂಟಾಯಿತು. ಈ ದೇಶದ ಪ್ರಜೆಗಳಲ್ಲಿ ವಿದ್ಯೆಯಲ್ಲಿ ಬಹುಕಾಲದಿಂದ ಮುಂದಾದ ಜನವರ್ಗದವರೊಡನೆ ಹಿಂದುಳಿದಿರುವ ಅನೇಕ ಜನವರ್ಗಗಳವರು ಪೈಪೋಟಿ ಮಾಡಲು ಅಸಮರ್ಥರಾಗಿರುವುದರಿಂದ ಪರೀಕ್ಷೆಯಲ್ಲಿ ಅವರನ್ನು ಮೀರಿಸಿ ಇತರರು ಮುಂದಕ್ಕೆ ಬರುವುದು ಪ್ರಯಾಸವಾಗಿದೆ. ಈ ಸಹಜವಾದ ಕಾರಣವನ್ನು ತಿಳಿದು ಗೌರ್ನಮೆಂಟಿನವರು ಪ್ರೊಬೇಷನರಿ ಸ್ಥಾನಗಳಲ್ಲಿ "ಎ" ಭಾಗದವುಗಳನ್ನೆಲ್ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರುಗಳಿಗೂ, "ಬಿ" ಭಾಗದುವುಗಳನ್ನು ಹಿಂದುಳಿದ ಜನವರ್ಗಗಳವರಿಗೂ ವಿನಿಯೋಗಿಸಲು ಏರ್ಪಾಟುಮಾಡಿದ್ದಾರೆ. ಮತ್ತೂ ವಿದ್ಯೆಯಲ್ಲಿ ಮುಂದಾಗಿರುವ ಜನವರ್ಗಗಳವರು ಯಾವ ಪರೀಕ್ಷೆಗಾಗಲೀ ಉದ್ಯೋಗಸ್ಥಾನಗಳಿಗಾಗಲೀ ಹೊಂದಿರಬೇಕಾದ ಯೋಗ್ಯತೆಯಲ್ಲಿ ಒಂದು ಮೆಟ್ಟಿಲು ಕಡಿಮೆಯಾಗಾದರೂ ಹಿಂದುಳಿದವರ ಯೋಗ್ಯತೆಯು ಇರಬಹುದೆಂದು ಏರ್ಪಡಿಸಿದ್ದಾರೆ. ಇದರ ಮೇಲೆ ನಮ್ಮ ಪ್ರಭುತ್ವದವರು ಸಿವಿಲ್ ಸರ್ವೀಸಿನ ಸ್ಥಿತಿಯ ನ್ಯೂನಾತಿರೇಕವನ್ನು ಪರಿಹರಿಸಿ, ಎಲ್ಲ ಜನವರ್ಗದವರಿಗೂ ರಾಜ್ಯಕಾರ್ಯಭಾರದ ಹೊರೆಯನ್ನು ಹೊರಲು ಸಮನಾದ ಅಂಗವಿರುವಂತೆ ಮಾಡಬೇಕೆಂಬ ಘನತರವಾದುದ್ದೇಶದಿಂದ ಈ ವಿಷಯದಲ್ಲಿ ಮಾಡಬೇಕಾದ ಕಾರ್ಯಗಳನ್ನು ಸೂಚಿಸುವುದಕ್ಕಾಗಿ ಒಂದು ಸಂಘವನ್ನು ಕಳೆದವರ್ಷ ಏರ್ಪಡಿಸಿ, ಅದಕ್ಕೆ ನಿಷ್ಪಕ್ಷಪಾತಿಗಳೂ ದೂರದರ್ಶಿಗಳೂ ಮುಖ್ಯ ನ್ಯಾಯಾಧಿಪತಿಗಳೂ ಆದ ಸರ್ ಲೀಸ್ಲೆ ಮಿಲ್ಲರ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಈ ಸಂಘದವರು ಗೌರ್ನಮೆಂಟಿನವರಿಗೆ ನಿವೇದಿಸುವುದಕ್ಕಿರುವ ವರದಿಯು ನ್ಯಾಯಕ್ಕೆ ಲೋಪವಿಲ್ಲದಂತೆಯೂ ಪಕ್ಷಪಾತಕ್ಕೆಡೆಯಿಲ್ಲದಂತೆಯೂ ಇರುವುದೆಂದು ಪ್ರಭುತ್ವದವರು ನಿರೀಕ್ಷಿಸುವಂತೆ ಪ್ರಜೆಗಳೂ ನಿರೀಕ್ಷಿಸಿಕೊಂಡಿರುವರು.

ಆದರೆ ಹಿಂದುಳಿದ ಜನವರ್ಗಗಳವರ ವಿದ್ಯಾಪ್ರೋತ್ಸಾಹಕ್ಕೆಂದು ಗೌರ್ನಮೆಂಟಿನವರು ಪ್ರತ್ಯೇಕವಿದ್ಯಾರ್ಥಿವೇತನಗಳಿಗಾಗಿ ೧ ಲಕ್ಷ ರೂ. ಗಳನ್ನು ಕೊಟ್ಟುದನ್ನು ನೋಡಿಯೇ ಸೈರಿಸಲಾರದೆ ಬೊಬ್ಬೆಯಿಟ್ಟುಕೊಂಡು ಕಡೆಗೆ ಸುಮ್ಮನಾದ ಸಂಪದಭ್ಯುದಯ ಪತ್ರಿಕಾಕೂಟದವರು, ಈಗ ಏರ್ಪಟ್ಟು ಏರ್ಪಡಲೂ ಇರುವ ಸಿವಿಲ್ ಸರ್ವೀಸ್ ಸ್ಕೀಮಿನ ವಿಷಯವಾಗಿ ಮತ್ತೊಂದಾವೃತ್ತಿ ಅಸೂಯಾಗ್ನಿಯ ಹೊಗೆಯನ್ನು ಬೀರಲು ಆರಂಭಿಸಿದಂತೆ ಕಾಣುತ್ತಿದೆ. ಕಳೆದ ತಿಂಗಳು ತಾ|| ೨೫ ರ ಸಂಪದಭ್ಯುದಯ ಸಂಚಿಕೆಯಲ್ಲಿ "ಕ್ಲಾರ್ಕ್ ಕೆಲಸ ಮೊದಲುಗೊಂಡು ಅ|| ಕಮಿಷನರ್ ಕೆಲಸದವರೆಗೂ ಪೋಟಾಪೋಟಿ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಮಾತ್ರ ದೊರೆಯುವಂತೆ ಮಾಡಿದರೆ ನಮ್ಮ ಪಬ್ಲಿಕ್ ಸರ್ವಿಸ್ಸು ಅತ್ಯುತ್ತಮವಾದ ಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ. . . . . . . ನಾಮಿನೇಷನ್ ಪದವಿಗೆ ಲೇಶವೂ ಅವಕಾಶ ಕೊಡಕೂಡದು. . . . . ನಾಮಿನೇಷನ್ನನ್ನು ವಜಾಮಾಡುವ ವಿಷಯವು ನಮ್ಮ ಖಾವಂದರವರ ಪರ್ಯಾಲೋಚನೆಗೆ ಬಂದಿರುವುದಾಗಿ ತಿಳಿಯಬರುತ್ತದೆ" ಎಂದು ಮೊದಲಾಗಿ ಬರೆದುಕೊಂಡು ಇತರ ಸರ್ವಜನವರ್ಗಗಳವರ ಏಳ್ಗೆಯ ವಿಷಯದಲ್ಲಿ ತನಗಿರುವ ಅಸಹನೆಯನ್ನು ಕಕ್ಕಿಕೊಂಡಿರುತ್ತದೆ. ಇಂಥ ಅಸೂಯಾಂಧರ ಸಂಕಲ್ಪಗಳೆಲ್ಲಾ ಈಡೇರುವುದಾದರೆ ರಾಜ್ಯಗಳೆಲ್ಲಾ ನರಕಸಾಮ್ರಾಜ್ಯವೇ ಆದೀತು. ಪೂರ್ವಾಪರ ಕಷ್ಟಸುಖಾನುಭವಗಳ ಪರ್ಯಾಲೋಚನೆಯು ಸಂಪೂರ್ಣವಾಗಿರುವ ನಮ್ಮ ಶ್ರೀಮನ್ಮಹಾರಾಜರ ಪ್ರಭುತ್ವದವರ ನ್ಯಾಯಧರ್ಮಪಥದಲ್ಲಿಟ್ಟ ಹಜ್ಜೆಯು ಎಂದಿಗೂ ಚ್ಯುತವಾಗುವುದಿಲ್ಲವೆಂದು ಪ್ರಜೆಗಳು ನಂಬಲು ವಿಶೇಷಾವಕಾಶವಿರುವುದು. ಅದಕ್ಕೆ ಭಂಗವಿಲ್ಲವೆಂದು ನಾವೂ ಧೈರ್ಯದಿಂದ ಹೇಳಬಲ್ಲೆವು.

ಸಿದ್ಧಾರ್ಥಿಸಂವತ್ಸರವು.

ಕಳೆದ ಕಾಳಯುಕ್ತಿ ನಾಮಸಂವತ್ಸರದಲ್ಲಿ ಯುದ್ಧತಾಪದ ಜತೆಗೆ ಇಂಪ್ಲುಯೆಂಜಾದ ಮಹಾನರ್ಥವೂ, ದುರ್ಭಿಕ್ಷದ ಪೀಡೆಯೂ ದೇಶಕ್ಕೆ ಉಂಟಾಗಿದ್ದುದರಿಂದ ಅನಿಷ್ಟಕರಣದಲ್ಲಿ ಪ್ರಖ್ಯಾತವಾದಂತೆಯೇ ಯುದ್ಧವು ಅದೇ ವರ್ಷದಲ್ಲಿ ವಿರಾಮಗೊಂಡ ಮಹಾಫಲದಿಂದ ಸತ್ಕರಣದಲ್ಲಿಯೂ ಚಿರಸ್ಮರಣೀಯವಾಗಿರುವುದೆಂಬುದಕ್ಕೆ ಸಂಶಯವಿಲ್ಲ. ಈಗ ಕಳೆದ ಮಂಗಳವಾರದಿಂದ ಆರಂಭಗೊಂಡಿರುವ ಸಿದ್ಧಾರ್ಥಿನಾಮ ಸಂವತ್ಸರದಲ್ಲಿ ಸಕಲ ದೇಶಸಂಘವೂ, ಶಾಶ್ವತಸಂಧಿಯೂ ಜರುಗುವುದಾದರೆ ಜಗತ್ತೆಲ್ಲವೂ ಸಿದ್ಧಾರ್ಥವಾಗುವುದರಲ್ಲಿ ಅಡ್ಡಿಯಿಲ್ಲ. ಈ ಸಂವತ್ಸರದ ಹೆಸರು ತತ್ಕಾರಣದಿಂದ ಅನ್ವರ್ಥವೆನಿಸಿಕೊಳ್ಳದೆ ಹೋಗಲಾರದು. ನಮ್ಮ ಸಿದ್ಧಾಂತಿಗಳು ಗುಣಿಸಿರುವ ಪ್ರಕಾರ ಈ ವರ್ಷದಲ್ಲಿ ಕುಜನು ರಾಜನಾಗಿಯೂ, ಸೂರ್ಯನು ಮಂತ್ರಿಯಾಗಿಯೂ ಸೇನಾಧಿಪತಿಯಾಗಿಯೂ ಇರುವುದರಿಂದ ಭೂಪಾಲಕರುಗಳು ಪರಸ್ಪರ ವೈರವೃದ್ಧಿಯುಳ್ಳವರಾಗಿ ದೇಶದಲ್ಲಿ ಚೋರಶಸ್ತ್ರಾಗ್ನಿಭಯಗಳು ಹೆಚ್ಚಾಗಿರುವುವೆಂದೂ; ಪ್ರಜೆಗಳಿಗೆ ಕ್ಷಾಮದಿಂದಲೂ ರೋಗಗಳಿಂದಲೂ ಕಲಹಗಳಿಂದಲೂ ಅನರ್ಥಗಳು ಹೆಚ್ಚಾಗಿರುವುವೆಂದೂ; ಶನಿಯು ವರ್ಷಾಧಿಪತಿಯೂ ಮೇಘಾಧಿಪತಿಯೂ ಆಗಿರುವುದರಿಂದ ಕೆಲಕೆಲ ಪ್ರದೇಶಗಳಲ್ಲಿ ಅಕಾಲವೃಷ್ಟಿಯೂ, ಮಧ್ಯದೇಶದಲ್ಲಿ ಜಲಪ್ರಳಯವೂ, ಹಿಂಗಾರುಮಳೆಯೂ ಆಗುವುವೆಂದೂ; ಚಂದ್ರನು ಧಾನ್ಯಾಧಿಪನಾಗಿರುವುದರಿಂದ ದನಕರುಗಳಿಗೆ ವ್ಯಾಧಿಯು ವಿಶೇಷವಾಗಿಲ್ಲದೆ ಸಮೃದ್ಧವಾಗಿ ಹಾಲನ್ನು ಕರೆಯುವುವೆಂದೂ; ಧಾನ್ಯಾದಿಗಳ ಸುಭಿಕ್ಷವುಂಟಾಗುವುದೆಂದೂ; ಯಮಧರ್ಮನು ಪಶುನಾಯಕನಾಗಿರುವುದರಿಂದ ಆ ಜಾತಿಗೆ ತೃಣಜಲಸಮೃದ್ಧತೆಯು ಕಡಿಮೆಯಾಗಿ ರೋಗಬಾಧೆಯೂ ಹಾಲು ಬೆಣ್ಣೆಗಳ ಬೆಲೆಯ ಹೆಚ್ಚುಗೆಯೂ ಉಂಟಾಗುವುದೆಂದೂ; ಸತ್ಫಲದುಷ್ಫಲಗಳು ಮಿಶ್ರವಾಗಿಯೇ ಇರುವುವೆಂದೂ; ಸುಖಕ್ಕಿಂತ ಕಷ್ಟವೇ ಮಿಗಿಲಾಗಿರುವುದೆಂದೂ; ೩ ಭಾಗ ಬೆಳಸಾಗುವುದೆಂದೂ; ಹೆಸರು, ತೊಗರಿ, ಕಡಲೆ ಮೊದಲಾದ ಕಾಳುಗಳೂ, ಹರಳು ಮೊದಲಾದ ಎಣ್ಣೆಯ ಬೀಜಗಳೂ ಸಮೃದ್ಧವಾಗಿ ಬೆಳೆಯುವುವೆಂದೂ; ಕಾರ್ತಿಕಮಾಸದಲ್ಲಿ ಕಾಲುಭಾಗದಷ್ಟು ಚಂದ್ರಗ್ರಹಣವಾಗುವುದೆಂದೂ; ಯೂರೋಪು, ಚೀನಾ, ಜಪಾನ್ ಈ ಕಡೆಗಳಲ್ಲಿ ಭೂಕಂಪನವಾಗುವುದೆಂದೂ ಹೇಳಲ್ಪಟ್ಟಿದೆ. ಈಶ್ವರಸಂಕಲ್ಪದಂತೆ ಆಗಬೇಕಾದುದು ಆಗಿಯೇ ತೀರುತ್ತದೆ. ಪ್ರಜೆಗಳು ಸ್ವಮತಾಚಾರಗಳಲ್ಲಿ ಶ್ರದ್ಧೆಯಿಟ್ಟು ಧರ್ಮಕರ್ಮತತ್ಪರರಾಗಿ ಪರಹಿತಪರಾಯಣರಾಗಿ ಶಾಂತಿಯಿಂದಿದ್ದರೆ ಪರ್ವತದಂತೆ ಬರುವ ಕಷ್ಟಗಳೂ ಅರಳೆಯಂತೆ ಹಾರಿಹೋಗುವುವು. ನಡೆಯುವ ವರ್ಷವು ನಮ್ಮ ಪತ್ರಿಕಾ ವಾಚಕವರ್ಗಕ್ಕೆಲ್ಲಾ ಸುಖಪ್ರದವಾಗಿರಲೆಂದು ಕೋರುವೆವು.

ಲಾರ್ಡ್ ಸಿಂಹರವರ ಔತಣದ ಸಭೆ.

ಸರ್ ಸಿಂಹರವರಿಗೆ ಲಾರ್ಡ್ ಪದವಿಯು ಕೊಡಲ್ಪಟ್ಟುದರ ಸಂತೋಷಾರ್ಥವಾಗಿ ಅವರಿಗೆ ಒಂದು ಔತಣವು ಕಳೆದ ತಾ|| ೭ ರ ರಾತ್ರಿ ಲಂಡನ್ನಿನ ಶಾವಾಯಿಯ ಹೋಟೇಲಿನಲ್ಲಿ ನಡೆಯಿಸಲ್ಪಟ್ಟಿತು. ಅದಕ್ಕೆ ಮಿ|| ಎಚ್. ಎಚ್. ಆಗಾಖಾನ್, ಲಾರ್ಡ್ ಕಾರ್ಮೈಕೇಲ್, ಫಿಷರ್, ಚಾರ್ಮ್ಸ್, ಲಾಮಿಂಗ್ಟನ್ ಮೊದಲಾದ ಅನೇಕ ಪ್ರಮುಖಯೂರೋಪ್ಯರೂ, ಸರ್ ಚಾವನಗರ, ಭೂಪೇಂದ್ರನಾಥಬಾಸು ಮೊದಲಾದ ಭಾರತೀಯರೂ ದಯಮಾಡಿಸಿದ್ದರು. ಬಿಕನೀರ್ ಮಹಾರಾಜರು ಸಭಾಧ್ಯಕ್ಷರಾಗಿದ್ದರು. ಮಹಾರಾಜರು ಮೊಟ್ಟಮೊದಲು ಲಾರ್ಡ್ ಸಿಂಹರವರ ಗುಣಾತಿಶಯವನ್ನು ಕುರಿತು ಬಹು ಪ್ರಶಸ್ತವಾದ ಭಾಷಣವನ್ನು ದೀರ್ಘವಾಗಿ ಮಾಡಿದರು. ಆಗ ಭರತಖಂಡದ ಸ್ಥಿತಿಗತಿಗಳು, ಅದರ ರಾಜಕೀಯಾಕಾಂಕ್ಷೆ, ಈಗಣ ಮಾಂಟೆಗ್ ಚೆಲ್ಮ್ಸ್‌ಫರ್ಡ್ ಸಂಸ್ಕರಣ, ಅವುಗಳ ವಿಷಯಕ್ಕಾಗಿ ಇಂಡೋ ಬ್ರಿಟಿಷ್ ಸಂಘದವರು ಮಾಡತಕ್ಕ ಉಪಟಲ ಇವುಗಳನ್ನೆಲ್ಲಾ ಕುರಿತು ವಸ್ತುಸ್ಥಿತಿಯನ್ನು ಚೆನ್ನಾಗಿ ಪ್ರತಿಪಾದಿಸಿದರು. ಆಗ್ಗೆ- ಮಾಂಟೆಗ್ ಸಂಸ್ಕರಣಗಳು ಭಾರತೀಯ ಸಂಸ್ಥಾನಾಧಿಪತಿಗಳೆಲ್ಲರಿಗೂ ಹರ್ಷವನ್ನುಂಟುಮಾಡಿರುವುವು. ಅವರುಗಳು ಇವಕ್ಕೆ ವಿರುದ್ಧವಾಗಿರುವರೆಂದು ಹೇಳಿರುವ ಮಾತು ಅಸಹಜವಾದುದು, ಕೆಲಮಂದಿ ಅತಿವಾದಿಗಳು ಹೀನಿಗೆ ಬಂದು ಆಂದೋಳನ ಸೂಚಕವಾದ ಪ್ರಸಂಗವನ್ನು ಮಾಡುತ್ತಿರುವರು. ಇದು ಲಾಭಕರವಾದುದಲ್ಲ. ಈಗಣ ಸಂಸ್ಕರಣ ರಚನೆಯಿಂದ ಮಿ|| ಮಾಂಟೆಗರೂ, ಲಾರ್ಡ್ ಚೆಲ್ಮ್ಸ್‌ಫರ್ಡರೂ ಸಹ ಭರತಖಂಡಕ್ಕೆ ಬಲವತ್ತರವಾದ ಸಾಮ್ರಾಜ್ಯವಿಧಾನವನ್ನೇರ್ಪಡಿಸಿದ ಆಂಗ್ಲಪುರುಷಸಿಂಹರೆಂದು ತಲೆತಲಾಂತರದವರೆಗೂ ಭಾರತೀಯರಿಂದ ಸ್ಮರಿಸಲ್ಪಡುವರು ಎಂದು ಹೇಳಿದರು.

ಬಳಿಕ ಲಾರ್ಡ್ ಸಿಂಹರವರು ಗಂಭೀರವಾದ ಭಾಷಣವೊಂದನ್ನು ಮಾಡಿ ತಮ್ಮನ್ನು ಗೌರವಿಸಿದ ಸಾರ್ವಭೌಮರು ಭರತಖಂಡವನ್ನೇ ಸನ್ಮಾನಿಸಿರುವರೆಂದೂ ಈಗ ಇಲ್ಲಿ ಸೇರಿರುವ ಮಹನೀಯರು ಸಹ ಭರತಖಂಡದ ಸನ್ಮಾನಾರ್ಥವಾಗಿಯೇ ಆಗಮಿಸಿರುವರೆಂದೂ ಹೇಳಿ ರಾಜಕೀಯ ಸಂಸ್ಕರಣ ವಿಷಯದಲ್ಲಿ ಭಾರತೀಯರು ಈಗ ಪ್ರತಿಕೂಲರಾದವರ ಅಭಿಪ್ರಾಯವನ್ನು ಕೇಳಿ ಅದರಂತೆ ನಡೆದರೆ ಬಹಳ ಆಶಾಭಂಗವಾಗಿ ಹೋಗುವುದೆಂತಲೂ, ಭರತಖಂಡದ ಪರಿಪಾಲನ ವಿಷಯದಲ್ಲಿ ಆಂಗ್ಲಪ್ರಭುತ್ವದವರ ಅಭಿಪ್ರಾಯವು ಎಷ್ಟು ಉದಾರವಾಗಿರುವುದೆಂಬುದನ್ನು ತೋರಿಸುವುದಕ್ಕೆ ತನಗೆ ಕೊಡಲ್ಪಟ್ಟಿರುವ ಉಪಮಂತ್ರಿಪದವಿಯೇ ನಿದರ್ಶನವಾಗಿರುವುದೆಂತಲೂ, ಆಂಗ್ಲಪರಿಪಾಲನವೆಂದರೆ ನಿರಂಕುಶತ್ವ, ಆಕ್ರಮಣ, ಸಾಮರ್ಥ್ಯ ಇವುಗಳ ರೂಪವಾಗಿದ್ದುಕೊಂಡು, ಎಲ್ಲ ಸರ್ಕಾರಿ ಉದ್ಯೋಗಗಳನ್ನೂ ತಾವೇ ಗುತ್ತಿಗೆಗೆ ತೆಗೆದುಕೊಳ್ಳುವುದಾದರೆ ಅದಕ್ಕೆ ನಾವು ಪ್ರತಿಕೂಲರೇ ಆಗಿರುವೆವು. ಹಾಗೆ ನಾವು ಮಾಡದಿದ್ದರೆ ನಾವು ಕಲಿತವಿದ್ಯೆಗೆ ಸಾರ್ಥಕ್ಯವೇ ಉಂಟಾಗುವುದಿಲ್ಲ. ಈಗಣ ರಾಜಕೀಯಸಂಸ್ಕರಣಗಳಿಂದ ಇಂಡ್ಯಾ ಪ್ರಭುತ್ವಕ್ಕೂ ದೇಶೀಯ ಸಂಸ್ಥಾನಗಳಿಗೂ ಸಂಬಂಧವು ಮತ್ತಷ್ಟು ಸಮೀಪಗತವಾಗುವುದು. ಸ್ಟೇಟ್ ಸೆಕ್ರೆಟರಿ, ಇಂಡ್ಯಾ ಪ್ರಭುತ್ವ, ಪ್ರಾಂತಿಕ ಪ್ರಭುತ್ವ-ಇವರುಗಳ ಅಧಿಕಾರವೆಲ್ಲಾ ಸಾಧ್ಯವಾದಷ್ಟು ಅಧಿಕವಾಗಿ ವಿಭಾಗಿಸಲ್ಪಟ್ಟಿರುವುದು. ಸ್ಥಾನಿಕ ಸ್ವಪರಿಪಾಲನೆಗೆ ಸಂಪೂರ್ಣ ಸ್ವಾತಂತ್ರ್ಯವು ದೊರೆಯುವುದು. ಸಿವಿಲ್, ಮಿಲಿಟರಿ ಶಾಖೆಗಳಲ್ಲಿ ದೊಡ್ಡದೊಡ್ಡ ಪದವಿಯು ಭಾರತೀಯರಿಗೂ ದೊರೆಯುವುವು. ಚಾರಿತ್ರಾನಿಕಾಭ್ಯುದಯವಾಗುವುದು. ಶಾಸನಸಭಾನಿಯೋಜಕರ ಸಂಖ್ಯೆಯು ಹೆಚ್ಚುವುದು. ಬಹುಮಟ್ಟಿಗೆ ಅಧಿಕಾರವು ನಿರಂಕುಶಾಧಿಕಾರಿಗಳ ಹಸ್ತದಿಂದ ಪ್ರಜಾಪ್ರತಿನಿಧಿಗಳ ವಶಕ್ಕೆ ಬರುವುದು. ಅದುಕಾರಣ ಈ ಸಂಸ್ಕರಣಗಳು ನೀರಸವಾದುವುಗಳಲ್ಲ ತಿರಸ್ಕರಣೀಯಗಳಲ್ಲ. ಆಂಗ್ಲದೇಶದ ಮೇಲೆ ಭಾರತೀಯರು ವಿಶ್ವಾಸವನ್ನು ಬಿಡಕೂಡದು. ಅಂಥ ವಿಶ್ವಾಸಕ್ಕೆ ಆಂಗ್ಲದೇಶವು ಸಂಪೂರ್ಣ ಪಾತ್ರವಾದುದೆಂಬುದಕ್ಕೆ ಅನೇಕ ನಿದರ್ಶನಗಳಿವೆ" ಎಂದು ಹೇಳಿದರು.

ಎಚ್. ಎಚ್. ಆಗಾಖಾನರು ಭಾಷಣಮಾಡುವಾಗಲೂ ರಾಜಕೀಯ ಸಂಸ್ಕರಣ ರಚನೆಗಾಗಿ ಮಾಂಟೆಗ್‌ರವರನ್ನು ಕೊಂಡಾಡಿ, ಈ ಸಂಸ್ಕರಣವು ೨೦-೮-೧೭ ನೆ ಪ್ರಕಟನೆಗೆ ಅನುಗುಣವಾಗಿರುವುದೆಂದೂ ಈ ಸಂಸ್ಕರಣವಿಷಯಕವಾದ ಬಿಲ್ಲು ಬೇಗನೆ ವಿಧಿಯಾಗುವಂತೆ ಮಾಡಬೇಕೆಂದೂ, ಭರತಖಂಡವು ಆಂಗ್ಲಸಾಮ್ರಾಜ್ಯದ ಅಧಿವೇಶನಗಳಂತೆ ಇರಬೇಕೆಂಬುದೇ ಭಾರತೀಯರ ಮುಖ್ಯಾಶಯವೆಂದೂ, ರಾಜಭಕ್ತಿ ವಿಷಯದಲ್ಲಿ ಹಿಂದೂ ಮಹಮ್ಮದೀಯರೀರ್ವರೂ ಸಮಾನಸಮರಸತೆಯಿಂದಿರುವರೆಂದೂ, ಡಾ|| ವಿಲ್ಸನ್‌ರವರ ಸ್ವಯಂನಿರ್ಣಯ ಸಿದ್ಧಾಂತವನ್ನು ಮಹಮ್ಮದೀಯ ದೇಶಕ್ಕೆ ಅನುವರ್ತಿಸಬೇಕೆಂದೂ ಅನೇಕ ಶತಮಾನಗಳಿಂದ ವಾಸಮಾಡಿಕೊಂಡಿರುವ ಅವರ ದೇಶದಿಂದ ಮಹಮ್ಮದೀಯರನ್ನು ಹೊರಕ್ಕೆ ಓಡಿಸಲೂ ಕೂಡದು, ಅವರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲೂ ಕೂಡದು, ಅವರನ್ನು ಪರಾಧೀನಗೊಳಿಸಲೂಕೂಡದು ಎಂದೂ, ಭರತಖಂಡದ ರಾಜಕೀಯ ಸಂಬಂಧದಲ್ಲಿ ಪ್ರತ್ಯೇಕ ಪ್ರಾತಿನಿಧ್ಯವಿರತಕ್ಕುದು ಅವಶ್ಯಕವೆಂದು ಮೇಧಾವಿಗಳಾದ ಗೋಖಲೆಯವರು ಹಿಂದೆ ನಿರ್ಧರಿಸಿದ್ದರು. ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯವಿರುವುದು ಐಕಮತ್ಯಕ್ಕೂ ಸೌಖ್ಯಾಭಿವೃದ್ಧಿಗೂ ಸಾಧಕವಾಗುವೆಂದೂ, ಪ್ಯಾರಿಸ್ ಪಟ್ಟಣದ ಸಂಧಿಸಭೆಯಲ್ಲಿ ಮಹಮ್ಮದೀಯರ ಇಷ್ಟಾರ್ಥವನ್ನು ಪರಿಪೂರಣ ಮಾಡಿಕೊಡುವ ವಿಷಯದೊಳಗೆ ಬಿಕನೀರ್ ಮಹಾರಾಜರೂ ಲಾರ್ಡ್ ಸಿಂಹರೂ ದೃಢವಾದ ಏಕಾಭಿಪ್ರಾಯವನ್ನು ವ್ಯಕ್ತಪಡಿಸಿರುವುದಕ್ಕಾಗಿ ನಾನು ಕೃತಜ್ಞನೆಂದೂ ಹೇಳಿ, ಲಾರ್ಡ್ ಸಿಂಹರ ಆಯುರಾರೋಗ್ಯವನ್ನು ಕೋರಿದರು.

ಕಡೆಗೆ ಈ ಔತಣಕ್ಕಾಗಿಯೇ ಪ್ಯಾರಿಸಿನಿಂದ ಲಂಡನ್ನಿಗೆ ಬಂದಿದ್ದ ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೆಗ್‌ರವರು ಭಾಷಣಮಾಡುವಾಗ, ಸಂಸ್ಕರಣ ವಿಷಯದಲ್ಲಿ ಬಹುದೂರ ಉದಾರವಾಗಿ ಮಾತನಾಡಿ ಕ್ರಮೇಣ ಭರತಖಂಡದ ಅಧಿಕಾರವನ್ನು ಸಿವಿಲ್‌ಸರ್ವೀಸಿನವರ ಹಸ್ತದಿಂದ ಭಾರತೀಯರ ವಶಪಡಿಸುವುದೇ ೨೦-೮-೧೭ ನೆ ತಾ|| ನ ಪ್ರಕಟನೆಯ ಅಭಿಪ್ರಾಯವೆಂದೂ, ಈಗಣ ಸಂಸ್ಕರಣ ಸಂಕಲ್ಪವಾದರೂ ಅದೇ ಆಗಿರುವುದೆಂದೂ ಹೀಗಿರುವಲ್ಲಿ ಈ ಮಹಾ ಪ್ರಯತ್ನದಲ್ಲಿ ಭಾಗಿಗಳಾಗಿರುವವರನ್ನು ಸುಮ್ಮನೆ ನಿಂದಿಸುತ್ತ ಕುಳಿತುಕೊಳ್ಳುವುದರಲ್ಲಿ ಫಲವಿಲ್ಲವೆಂದೂ, ಇಂಗ್ಲೀಷರು ಭರತಖಂಡಕ್ಕೆ ಅಪರಿಮಿತವಾದ ಮಹೋಪಕಾರಗಳನ್ನು ಮಾಡಿದ್ದರೂ ವಿದ್ಯಾವಿಷಯದಲ್ಲಿ ಮಾತ್ರ ಅವರು ಮಾಡಿರುವ ಕೆಲಸವು ಬಹು ಸ್ವಲ್ಪವಾಗಿರುವುದೆಂದೂ ಪಾರಿಶ್ರಾಮಿಕಾಭಿವೃದ್ಧಿಯು ಶೈಶವಾವಸ್ಥೆಯಲ್ಲೇ ಇರುವುದೆಂದೂ, ನಿನ್ನೆ ತಾನೇ ಇನ್‌ಫ್ಲುಯೆಂಜಾ ಜ್ವರದಿಂದ ಆ ದೇಶದಲ್ಲಿ ೬೦ ಲಕ್ಷ ಜನರು ಮಡಿದುದಕ್ಕೆ ಅಲ್ಲಿಯ ದಾರಿದ್ರ್ಯವೇ ಕಾರಣವೆಂದೂ, ವಿದ್ಯೆ, ಆರೋಗ್ಯ, ಕರಿಕ್ರಮ ಈ ಶಾಖೆಗಳ ಅಧಿಕಾರವನ್ನು ಭಾರತೀಯರ ಕೈಗೇ ಕೊಟ್ಟರೆ ಅವು ಅಭಿವೃದ್ಧಿಗೊಳ್ಳುವುವೆಂದೂ ಹೇಳಿ, ಈ ಮಧ್ಯೆ ಪ್ರತ್ಯೇಕಪ್ರಾತಿನಿಧ್ಯ ವಿಷಯದಲ್ಲೂ ಅವರು ಕೆಲ ಮಾತುಗಳನ್ನಾಡಿದುದರ ಭಾವವನ್ನು ನೋಡಲಾಗಿ ಈ ವಿಷಯವಾಗಿ ಅವರ ಮನೋಭಾವಗಳು ಪೂರ್ವದಲ್ಲಿದ್ದ ಸ್ಥಿತಿಯನ್ನು ಬಿಟ್ಟು ಸ್ವಲ್ಪ ಮಾರ್ಪುಗೊಂಡಂತೆ ವ್ಯಕ್ತವಾಯಿತು. ಈ ಸಂದರ್ಭದಲ್ಲಿ ಅವರು ಹೀಗೆ ಹೇಳಿದರು.—"ಪ್ರಜಾಪ್ರತಿನಿಧಿಗಳು ಶಾಸನ ಸಭೆಗಳಲ್ಲಿರುವುದಕ್ಕೆ ಇತರ ವಿಧಾನಗಳಾವುವೂ ಉಪಕರಿಸದೆ ಹೋದರೆ, ಪ್ರತ್ಯೇಕ ಪ್ರತಿನಿಧಿಗಳ ನ್ಯಾಮಿಸುವಿಕೆಯ ಏರ್ಪಾಟನ್ನು ಮಾಡಬಹುದು. ಆದರೆ ಹಾಗಲ್ಲದೆ ದೇಶವನ್ನು ಸುಲಭವಾಗಿ ಪರಿಪಾಲಿಸುವುದಕ್ಕೆ ಭಿನ್ನಭಿನ್ನ ಸಂಘಗಳನ್ನಾಗಿ ವಿಭಾಗಿಸುವುದರಿಂದ ಸೌಕರ್ಯವು ಹೆಚ್ಚುವುದೆಂಬ ಭಾವದಿಂದ ಈ ಪ್ರತ್ಯೇಕ ಪ್ರಾತಿನಿಧ್ಯವು ಸೂಚಿಸಲ್ಪಡುತ್ತಲಿದೆಯೆಂಬ ಅನುಮಾನವು ಹುಟ್ಟುತ್ತಿದೆ. ಹಾಗಿದ್ದರೆ ಎಷ್ಟುಮಾತ್ರಕ್ಕೂ ಅದು ಇಷ್ಟವಾದುದಲ್ಲ" ಎಂದು ಹೇಳಿರುತ್ತಾರೆ. ಈ ವಿಷಯದಲ್ಲಿ ಇನ್ನೂ ಸ್ವಲ್ಪವಾಗಿರುವ ಸಂಶಯವು ಮಿ|| ಮಾಂಟೆಗ್‌ರವರನ್ನು ಬಿಟ್ಟು ತೊಲಗುವಂತೆ ಮಾಡಿದರೆ ಪ್ರತ್ಯೇಕ ಪ್ರಾತಿನಿಧ್ಯ ತಪ್ಪವೂ ಜಯಶೀಲವಾಗದೆ ಹೋಗುವುದಿಲ್ಲವೆಂದು ಊಹಿಸಬಹುದಾಗಿದೆ.

ಒಳದೇಶದ ವೃತ್ತಾಂತಗಳು.

ಚೀಫ್‌ಜಡ್ಜರಾದ ಸರ್ ಲೀಸ್ಲೆಮಿಲ್ಲರ್‌ರವರು ಪುನಃ ಅಸ್ವಸ್ಥರಾಗಿರುವರೆಂದು ಕೇಳಿ ವಿಷಾದಿಸುತ್ತೇವೆ.

ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಬಾಳೆಹಳ್ಳಿಯೂ ನರಸಿಂಹರಾಜಪುರವೂ ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಆಲೂರೂ ತಾಲ್ಲೂಕುಗಳಾಗಿ ಮಾಡಲ್ಪಡುವುದರಲ್ಲಿವೆ.

ರಾಜಧಾನಿಯಲ್ಲೂ ಈ ಡಿಸ್ಟ್ರಿಕ್ಟಿನಲ್ಲೂ ಮತ್ತೆ ಮಳೆಯು ಬೀಳಲಿಲ್ಲ. ಉತ್ತರಾಭಾದ್ರ ಮಳೆಯಲ್ಲಿ ಬಿತ್ತಲ್ಪಟ್ಟಿರುವ ಜೋಳದ ಪೈರು ಬಲು ಸೊಂಪಾಗಿ ಬಂದಿದೆ, ಆದರೆ ಮಳೆಯಿಲ್ಲದೆ ಒಣಗುತ್ತಿವೆ.

ಅರಮನೆಯ ಕಂಟ್ರೋಲರಾದ ಮ|| ಬಿ. ರಾಮಕೃಷ್ಣರಾಯರಿಗೆ ಈ ತಾ|| ೯ ರಿಂದ ೩ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದು. ತದನಂತರ ಇವರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುವುದಾಗಿ ತಿಳಿಯುತ್ತೇವೆ.

ರೈಲ್ವೆಸೂಪರಿಂಟೆಂಡೆಂಟ್ ಇಂಜಿನಿಯರಾದ ಮ|| ಅನಂತಾಚಾರ್‌ರವರಿಗೂ ರೈಲ್ವೆ ವರ್ಕ್‌ಷಾಪ್ ಕಟ್ಟಡದ ಕಂಟ್ರಾಕ್ಟರ ಕಡೆಯ ಒಬ್ಬ ಮನುಷ್ಯನಿಗೂ ವಾಗ್ವಾದ ನಡೆದು ಆ ಮನುಷ್ಯನು ಇಂಜಿನಿಯರ ಮೈಮೇಲೆ ಬಿದ್ದು ಅತ್ಯಾಚಾರ ನಡೆಸಿ ತಲೆಯನ್ನು ತಪ್ಪಿಸಿಕೊಂಡು ಹೋಗಿರುವುದಾಗಿ ವರ್ತಮಾನವಿದೆ.

ರಾಜಧಾನಿಯಲ್ಲಿ ಮ್ಯುನಿಸಿಪಾಲಿಟಿಯವರು ಪ್ರತಿ ಮೊಹಲ್ಲೆಯಲ್ಲೂ ಎರಡೆರಡು ಅಂಗಡಿಗಳನ್ನಿಡಿಸಿ, ಅಕ್ಕಿಯನ್ನು ರೂ. ಗೆ ೬ ಸೇರಿನಂತೆಯೂ, ರಾಗಿಯನ್ನು ೧೦ ಸೇರಿನಂತೆಯೂ ಮಾರಿಸುತ್ತಿದ್ದಾರೆ. ಅತ್ಯಂತ ತೊಂದರೆಯಾಗಿರುವ ಸೀಮೆಯೆಣ್ಣೆಗೂ ಇದೇ ಏರ್ಪಾಟನ್ನು ಮಾಡಿದರೆ ಅನುಕೂಲವಾದೀತು.

ಬೆಂಗಳೂರಲ್ಲಿ ಸಾರಾಯಿ ಬಟ್ಟಿಯನ್ನಿಳಿಸುವ ಸರ್ಕಾರಿ ಕಾರ್ಯಾಲಯದ ಹೆಂಚುಗಳನ್ನು ಯಾವನೋ ಒಬ್ಬನು ಬಗೆದು ಒಳಕ್ಕಿಳಿದು ೪೦೦೦ ರೂ. ಬೆಲೆಯ ಭಂಗಿಯ ಸೊಪ್ಪನ್ನು ಕಳವುಮಾಡಿಕೊಂಡು ಹೋದನು. ಈಗ ಪೋಲೀಸರು ಆ ಕಾರ್ಯಾಲಯದ ಆಳುಗಳಲ್ಲಿ ಮೂವರನ್ನು ಅನುಮಾನದ ಮೇಲೆ ಹಿಡಿದಿರುತ್ತಾರೆ.

ಸರ್ದಾರ್ ಕಾಂತರಾಜ ಅರಸಿನವರ ದೇಹಾರೋಗ್ಯವು ದಿನಕ್ರಮೇಣ ಅಭಿವೃದ್ಧಿಯಾಗುತ್ತಿದೆ. ಪ್ರತಿನಿತ್ಯದಲ್ಲೂ ಸಾಯಂಕಾಲದಲ್ಲಿ ಮೋಟಾರಿನಲ್ಲಿ ಕುಳಿತು ವಾಯುವಿಹಾರಾರ್ಥವಾಗಿ ಹೊರಗೆ ಸಂಚರಿಸುವರು. ಡಾ|| ಆರ್ಮ್‌ಗಂ ಮೊದಲಿಯಾರರು ಬೆಂಗಳೂರಿಂದ ಬಂದು ಸರದಾರರ ಆರೋಗ್ಯವನ್ನು ನೋಡಿಕೊಂಡು ಮೊನ್ನೆಯದಿನ ಹಿಂದಿರುಗಿಹೋದರು.

ಶಿವಮೊಗ್ಗ ಡಿಸ್ಟ್ರಿಕ್ಟ್ ಆಕ್ಟಿಂಗ್ ಅ|| ಕಮಿಷನರು ಮತ್ತು ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ವಿ. ಎಸ್. ರಾಜಗೋಪಾಲಾಚಾರ್‌ರವರು ೬ ತಿಂಗಳ ಕಾಲದವರೆಗೆ ಅಮಲ್ದಾರರಾಗಿ ಹಿಂದಕ್ಕೆ ಹಾಕಲ್ಪಟ್ಟಿರುವುದರಿಂದ ಇವರ ಬದಲಿ ೧ನೆಯ ತ|| ಪೋಲೀಸ್ ಇನ್ಸ್‌ಪೆಕ್ಟರ್ ಮಿ|| ಒಡ್ಡಾರ್ಟಿಯವರು ಶಿವಮೊಗ್ಗ ಡಿ|| ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರು ಮತ್ತು ಪೋಲೀಸ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಡೂರು ಡಿಸ್ಟ್ರಿಕ್ಟಿನ ಆಕ್ಟಿಂಗ್ ಡಿ|| ಕಮಿಷನರಾದ ಮ|| ಸಿ. ದೇವರಾಜ ಅರಸಿನವರಿಗೆ ಈ ತಾ|| ೩ ರಿಂದ ೩ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ ಶ್ರೀಮನ್ಮಹಾರಾಜರ ಪ್ರೈವೆಟ್ ಸೆಕ್ರೆಟರಿಯವರಾದ ಮ|| ಕೆ. ಮೈಲಾರ್‌ರಾವ್, ಬಿ.ಎ., ಬಿ.ಎಲ್., ರವರು ಮ|| ಅರಸಿನವರ ರಜಾಕಾಲದಲ್ಲಿ ಅಥವಾ ಬೇರೊಂದಪ್ಪಣೆಯಾಗುವವರೆಗೂ ಕಡೂರು ಡಿ|| ಆಕ್ಟಿಂಗ್ ಡೆ|| ಕಮಿಷನರಾಗಿ ನಿಯಮಿಸಲ್ಪಟ್ಟಿರುವರು.

ಗರ್ಭಿಣಿಯರಾಗಿರುವ ಸೌಭಾಗ್ಯವತಿ ಯುವರಾಣಿಯವರ ಸೀಮಂತಪ್ರಸ್ತವು ಈ ತಾ|| ೧೫ ರಲ್ಲಿ ನೆರವೇರಿಸಲ್ಪಟ್ಟು ಅನಂತರ ಶ್ರೀಮನ್ಮಹಾರಾಜರವರ ಮತ್ತು ರಾಣಿವಾಸದವರ ಸ್ವಾರಿಗಳು ಉದಕಮಂಡಲಕ್ಕೆ ಚಿತ್ತೈಸುವುದಾಗಿ ತಿಳಿಯುತ್ತೇವೆ. ಸೌ|| ಯುವರಾಣಿಯವರ ಗರ್ಭಸುಧಾಸಾಗರದಲ್ಲಿ ಪುತ್ರರತ್ನವು ಸುಖವಾಗಿ ಜನಿಸಿ ರಾಜಕುಟುಂಬಕ್ಕೂ ಸಂಸ್ಥಾನದ ಸಕಲಪ್ರಜೆಗಳಿಗೂ ಹರ್ಷವನ್ನುಂಟುಮಾಡಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ಭಾರತೀಯರಿಂದಲೇ ಸ್ಥಾಪಿತವಾಗಿ ಭಾರತೀಯರ ಸಾಹಸದಿಂದಲೇ ನಡೆಯಿಸಲ್ಪಡುತ್ತಿರುವ ಕಾರ್ಲೇಕರ್ ಸರ್ಕಸ್ ಕಂಪೆನಿಯವರು ಕಳೆದ ೮-೧೦ ದಿನಗಳಿಂದಲೂ ರಾಜಧಾನಿಯ ಎಂಪೈರ್ ಹೋಟಲಿನ ಕಾಂಪೌಂಡಿನಲ್ಲಿ ಹಾಕಲ್ಪಟ್ಟಿರುವ ತಮ್ಮ ದೊಡ್ಡ ಗುಡಾರಗಳಲ್ಲಿ ಆಟಗಳನ್ನು ಆಡುತ್ತಿದ್ದಾರೆ. ಇವರ ಕಂಪೆನಿಯಲ್ಲಿ ಸಿಂಹ, ಹುಲಿ, ಆನೆ, ಕುದುರೆ, ಗಿಣಿ ಮೊದಲಾದ ಪಶುಪಕ್ಷಿ ಮೃಗಗಳ ಸಾಧನೆಯು ಬಹು ಶ್ಲಾಘನೀಯವಾಗಿದೆ. ಪುರಜನರು ತಂಡೋಪತಂಡವಾಗಿ ಹೋಗಿ ನೋಡಿ ಕಂಪೆನಿಯವರನ್ನು ಚೆನ್ನಾಗಿ ಪ್ರೋತ್ಸಾಹಿಸುತ್ತಿದ್ದಾರೆ.

ಕಡೂರು ಡಿ|| ಮೂಡಗೆರೆಯಲ್ಲಿರುವ ಮೆಸರ್ಸ್ ಎಂ. ಡಿ. ಹುಸೇನ್ ಮತ್ತು ಸಹೋದರರುಗಳು ತಾವು ಸ್ವಂತವಾಗಿ ಉಣ್ಣೆದಾರದಿಂದ ಕಸೂತಿ ಮಾಡಿಸುತ್ತಿರುವ ಕಾಲುಚೀಲಗಳ ೧ ಜತೆಯನ್ನು ಕಳುಹಿಸಿಕೊಟ್ಟಿರುವರು. ನಾವು ಅದನ್ನು ವಿಶ್ವಾಸದಿಂದ ಸ್ವೀಕರಿಸಿ ಪರೀಕ್ಷಿಸಿದುದರಲ್ಲಿ ಪರದೇಶದವುಗಳಿಗಿಂತ ಗಟ್ಟಿಯಾಗಿಯೂ ಬಹಳ ಬಾಳಿಕೆಯಾಗಿಯೂ ಬೆಲೆ ಸುಲಭವಾಗಿಯೂ ಇರುವುದಾಗಿ ಕಂಡುಬಂದಿರುತ್ತದೆ. ಅಲ್ಲದೆ ಈ ಉಣ್ಣೆದಾರವು ಸ್ವದೇಶದ್ದೇಯಾಗಿದ್ದಲ್ಲಿ ಶ್ಲಾಘ್ಯವೇ ಸರಿ. ಇವರಿಗೆ ಸ್ವದೇಶೀಯರೆಲ್ಲರೂ ಪ್ರೋತ್ಸಾಹವನ್ನು ಅಗತ್ಯವಾಗಿ ಕೊಡತಕ್ಕುದಾಗಿದೆ.

ಕೈಗಾರಿಕೆ ಮತ್ತು ವ್ಯಾಪಾರ ಕಮಿಟಿಯ ಸೆಕ್ರೆಟರಿಯವರಾದ ಮ|| ಎಂ. ಎನ್. ಬಾಳರಾಜಅರಸಿನವರಿಗೆ ಈ ತಾ|| ೨ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೩ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿದೆಯಾದುದರಿಂದ ಸಂಪದಭ್ಯುದಯ ಸಮಾಜದ ಅ|| ಸೆಕ್ರೆಟರಿಯಾದ ಮ|| ಎಂ. ಎಸ್. ರಾಮಚಂದ್ರರಾಯರು ಕೈಗಾರಿಕೆ ಮತ್ತು ವ್ಯಾಪಾರ ಕಮಿಟಿಯ ಸೆಕ್ರೆಟರಿಯಾಗಿಯೂ, ಚಿಂತಾಮಣಿ ಸಬ್‌ಡಿವಿಜನ್ ಆಫೀಸರಾದ ಮಿ|| ಅಬ್ದುಲ್‌ಹಕ್‌ರವರು ಸಂಪದಭ್ಯುದಯ ಸಮಾಜದ ಆಕ್ಟಿಂಗ್ ಸೆಕ್ರೆಟರಿಯಾಗಿಯೂ, ಅ|| ಕಮಿಷನರ್ ಮ|| ಚಕ್ರಪಾಣಿ ಅಯ್ಯಂಗಾರರು ಚಿಂತಾಮಣಿ ಸಬ್‌ಡಿವಿಜನ್ ಆಫೀಸರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಭರತಖಂಡದ ವೃತ್ತಾಂತಗಳು.

ರೌಲತ್‌ಶಾಸನವನ್ನುದ್ದೇಶಿಸಿ ಈಗ ಭಾರತೀಯರು ಸತ್ಯಾಗ್ರಹದೀಕ್ಷೆಯನ್ನು ಧರಿಸುತ್ತಿರುವುದು ಅಪಾಯಕರವೆಂದು ಅಮೃತಬಜಾರ್ ಪತ್ರಿಕೆಯು ಎಚ್ಚರಿಕೆಗೊಟ್ಟಿರುತ್ತದೆ.

ಮದ್ರಾಸಿಗೆ ಹೊಸ ಗೌರ್ನರವರು ಬರುವವರೆಗೂ ಕೌನ್ಸಿಲಿನ ಸೀನಿಯರ್ ಮೆಂಬರು ಆ|| ಸರ್ ಅಲಗ್ಸಾಂಡರ್ ಕಾರ್ಡ್ಯೂರವರು ಆಕ್ಟಿಂಗ್ ಗೌರ್ನರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಳೆದವಾರ ವೈಸ್ರಾಯರು ಹೈದರಾಬಾದ್ ಸಂಸ್ಥಾನಕ್ಕೆ ಬಂದು ೩ ದಿವಸ ನೈಜಾಮರವರ ಆತಿಥ್ಯದಲ್ಲಿದ್ದು ಬಹು ವಿಜೃಂಭಣೆಯಿಂದ ಗೌರವಿಸಲ್ಪಟ್ಟು ಬೇಟೆಯನ್ನಾಡಿಕೊಂಡು ತೆರಳಿದರು.

ರೌಲತ್‌ಶಾಸನವು ಪ್ರಜಾಭಿಪ್ರಾಯಕ್ಕೆ ವಿರುದ್ಧವಾಗಿ ಏರ್ಪಟ್ಟುದರಿಂದ ಆ|| ಎಂ. ಎ. ಜಿನ್ನಾರವರು ತಮ್ಮ ಸಾಮ್ರಾಜ್ಯಶಾಸನ ಸಭಾಸಭ್ಯತ್ವಕ್ಕೆ ಪರಿತ್ಯಾಗಪತ್ರವನ್ನು ಬರೆದು ವೈಸ್‌ರಾಯರಿಗೆ ಕಳುಹಿಸಿಬಿಟ್ಟರು.

ಮದರಾಸಿನಿಂದ ಹೊರಡುತ್ತಿದ್ದ ಇಂಡಿಯನ್ ಪೇಟ್ರಿಯಟ್ ಪತ್ರಿಕೆಯ ಪ್ರಕಟನೆಯನ್ನು ಅದರ ಯಜಮಾನರಾಗಿದ್ದ ಮದರಾಸ್ ಪ್ರೆಸಿಡೆನ್ಸಿ ಅಸೋಸಿಯೇಷನ್ನಿನವರು ಕಳೆದ ತಿಂಗಳು ತಾ|| ೨೦ ರಿಂದ ನಿಲ್ಲಿಸಿಬಿಟ್ಟಿದ್ದಾರೆ.

ರೌಲತ್‌ಶಾಸನಕ್ಕೆ ವಿರುದ್ಧವಾಗಿ ಸತ್ಯಾಗ್ರಹದೀಕ್ಷೆಗೊಂಡು ಉತ್ಸವ ಮಾಡಿಕೊಳ್ಳಲು ಪ್ರಯತ್ನಿಸಿದ ಹೈದರಾಬಾದ್ ಸ್ವರಾಜ್ಯಸಂಘದವರಿಗೆ ಅಲ್ಲಿಯ ಪೋಲೀಸ್ ಸೂಪರಿಂಟೆಂಡೆಂಟರು ಅಂಥ ಉತ್ಸವವನ್ನು ಮಾಡಿದರೆ ಶಾಂತಿಗೆ ಭಂಗವಾಗುವುದೆಂದು ಹೇಳಿ ತಡೆಯ ಅಪ್ಪಣೆಯನ್ನು ಕೊಟ್ಟಿರುವರು.

ಮದರಾಸಿನಲ್ಲಿ ಟ್ರಾಂವೆ ಕಂಪೆನಿಯ ಕೆಲಸಗಾರರೆಲ್ಲಾ ತಮಗೆ ಸಂಬಳವನ್ನು ಹೆಚ್ಚಿಸಿಕೊಡಬೇಕೆಂಬುದೇ ಮೊದಲಾದ ಕೆಲವು ಸೌಕರ್ಯಗಳನ್ನು ಕೋರಿಕೊಂಡು, ಅದನ್ನು ಕಂಪೆನಿಯವರು ನಡೆಯಿಸಿಕೊಡದೆ ಹೋದುದರಿಂದ ಕೆಲಸವನ್ನು ಬಿಟ್ಟು ಮುಷ್ಕರಹಿಡಿದು ಕುಳಿತುಬಿಟ್ಟಿದ್ದಾರೆ. ಈ ಕಾರಣದಿಂದ ೨೫ ದಿನಗಳಿಂದಲೂ ಟ್ರಾಂಬಂಡಿಗಳ ಸಂಚಾರವೇ ಅಟ್ಟಾಗಿ ಪ್ರಜೆಗಳು ಬಲು ತೊಂದರೆ ಪಡುತ್ತಿದ್ದಾರೆ.

ವಿದೇಶದ ವೃತ್ತಾಂತಗಳು.

ಪ್ರೆ|| ವಿಲ್ಸನ್‌ರವರು ಕಳೆದ ತಾ|| ೧೮ ರಲ್ಲಿ ಪ್ಯಾರಿಸ್ ಪಟ್ಟಣಕ್ಕೆ ಬಂದು ಸೇರಿದರು.

ಬ್ರಿಟಿಷ್ ಸರ್ಕಾರಕ್ಕೆ ಈಗ ಪ್ರತಿವರ್ಷವೂ ಲೋಹಮಾರ್ಗಗಳಿಂದ ೧೦ ಕೋಟಿ ಪೌನುಗಳಷ್ಟು ನಷ್ಟವಾಗುತ್ತಿದೆ.

ಜರ್ಮನರು ಇನ್ನು ಮುಂದೆ ಸಬ್‌ಮೆರೀನುಗಳನ್ನು ನಿರ್ಮಿಸಲೇ ಕೂಡದೆಂದು ಸಂಧಿಸಭೆಯವರು ನಿರ್ಬಂಧಿಸಿದ್ದಾರೆ.

ಮಿತ್ರಮಂಡಲಿಯ ವೈಮಾನಿಕರು ಜರ್ಮನಿಯಮೇಲೆ ಹಲವುಸಲ ಹೋಗಿ ಸಿಡಿಮದ್ದುಗಳನ್ನು ಹಾಕಿದುದರಿಂದ ಜರ್ಮನರಿಗೆ ೩೩೫೦೦೦೦೦ ಮಾರ್ಕುಗಳ ನಷ್ಟವುಂಟಾಗಿದೆಯಂತೆ.

ಪ್ಯಾರಿಸ್ ಸಂಧಿಸಭೆಯವರು ಕೋರಿಯಾ ರಾಜ್ಯಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರೆಂಬ ವೃಥಾ ಪ್ರವಾದದಿಂದ ಅಲ್ಲಿಯ ಪ್ರಜೆಗಳು ದೊಂಬಿಯೆದ್ದಿದ್ದಾರೆ. ಸೈನಿಕರಿಗೂ ಪ್ರಜೆಗಳಿಗೂ ಬಡಿದಾಟವಾಗಿ ಅನೇಕರು ಸತ್ತರು.

ಚೀನಾದೇಶದಿಂದ ಜರ್ಮನರು ೧೯೦೦ ನೆ ವರ್ಷದಲ್ಲಿ ಹೊತ್ತುಕೊಂಡು ಹೋಗಿದ್ದ ಖಗೋಳಶಾಸ್ತ್ರದ ಉಪಕರಣಗಳನ್ನೆಲ್ಲಾ ಮರಳಿ ಕೊಟ್ಟುಬಿಡುವುದಕ್ಕೆ ಒಪ್ಪಿಕೊಂಡು ತಕ್ಕ ಏರ್ಪಾಟುಗಳನ್ನು ಮಾಡುತ್ತಿದ್ದಾರೆ.

ಇದುವರೆಗೆ ಪಶ್ಚಿಮರಂಗದಲ್ಲಿದ್ದ ಜರ್ಮನ್ ಸೈನ್ಯಾಧಿಪತಿಗಳಿಗೆಲ್ಲಾ ಜರ್ಮನಿಯನ್ನು ಬಿಟ್ಟು ಹೊರಕ್ಕೆ ಹೋಗದಂತೆ ಅಪ್ಪಣೆಯಾಗಿದೆ. ಇದನ್ನು ನೋಡಲಾಗಿ ಅವರೆಲ್ಲಾ ಸೈನಿಕನ್ಯಾಯಾಧಿಕಾರಿಗಳ ವಿಚಾರಣೆಗೆ ಗುರಿಮಾಡಲ್ಪಡುವಂತೆ ಕಾಣುತ್ತದೆ,

ಐರ್ಲಂಡಿನ ಸಿನ್‌ಫೆಯಿನರುಗಳನ್ನು ಪ್ರಭುತ್ವದವರೂ ಸೆರೆಯಲ್ಲಿಟ್ಟಿದ್ದಾರೆ. ಅಂಥವರಲ್ಲಿ ಒಬ್ಬನಾದ ಬಾರ್ಟನ್‌ರವರು ಡಬ್ಲಿನ್‌ಪಟ್ಟಣದ ಕಾರಾಗೃಹದಿಂದ ಎಷ್ಟೋ ಸೈನಿಕರ ಕಾವಲಿದ್ದರೂ ತಪ್ಪಿಸಿಕೊಂಡು ಹೋಗಿರುವರು; ಇನ್ನೂ ಸಿಕ್ಕಿಲ್ಲ.

ಪಶ್ಚಿಮರಣರಂಗದ ಆಂಗ್ಲಸೇನಾ ಮುಖ್ಯದಳಪತಿಗಳಾಗಿ ಅದ್ವಿತೀಯ ರಣಕೌಶಲವನ್ನು ಪ್ರದರ್ಶಿಸಿದ ಸರ್ ಡಗ್ಲಸ್‌ಹೇಗ್‌ರವರಿಗೆ ಆಂಗ್ಲಪ್ರಭುತ್ವದವರು ಗ್ರೇಟ್‌ಬ್ರಿಟನ್ನಿನ ಸರ್ವಸೇನೆಗಳ ಮುಖ್ಯಾಧ್ಯಕ್ಷತೆಯನ್ನೂ, ಫೀಲ್ಡ್ ಮಾರ್ಷಲ್ ಪದವಿಯನ್ನೂ ಕೊಟ್ಟು ಗೌರವಿಸಿದರು.

ಜರ್ಮನರು ಸಂಧಿಸಭೆಗೆ ತಮ್ಮ ಪ್ರತಿನಿಧಿಗಳನ್ನಾಗಿ ಕೌಂಟ್‌ಬ್ರಾಕ್‌ಡಾರ್ಫ್, ವಾರಿಬ್ಗ್, ಡಾಕ್ಟರ್‌ಡೇವಿಡ್, ಹೇರುಜೇಸ್ಬರ್ಟ್ಸ್, ಕಾರ್ಲ್‌ಮಾಕ್ಸ್ ವಾರ್ಬರ್, ಪ್ರೊಫೆಸರ್ ಸ್ಕೂಕಿಂಗ್, ಹೇರ್ ಎಡೋಲ್ಫ್ ಮ್ಯೂಲರ್ ಇಷ್ಟುಮಂದಿಗಳನ್ನು ಕಳುಹಿಸಿಕೊಡಲು ಗೊತ್ತುಮಾಡಿದ್ದಾರೆ.

ಸಂಧಿಸಭೆಗೆ ತಮ್ಮ ಪ್ರತಿನಿಧಿಗಳನ್ನಾಗಿ ಜರ್ಮನರು ಬವೇರಿಯಾ, ಸ್ಯಾಕ್ಸನಿ, ವರ್ಟೆಂಬರ್ಗ್ ಸಂಸ್ಥಾನಗಳ ಮುಖ್ಯೋದ್ಯೋಗಿಗಳನ್ನು ಸ್ವಾ ಸೈನಿಕ ಸಂಘಾಧ್ಯಕ್ಷನಾದ ಮೇಜರ್ ಜನರಲ್ ವಾನ್‌ಪ್ರೆಸ್ಲರ್ ಎಂಬುವವರನ್ನೂ ತಮ್ಮ ಪ್ರತಿನಿಧಿಯನ್ನಾಗಿ ಕಳುಹಿಸಿಕೊಡಲು ನಿರ್ಧರಿಸಿದ್ದಾರೆ.

ಇಂಗ್ಲೀಷ್ ಗೌರ್ನಮೆಂಟಿನವರು ಹೊಗೆಬಂಡಿಗಳನ್ನು ಎಲೆಕ್ಟ್ರಿಕ್ ಇಂಜನ್ನಿನಿಂದ ನಡೆಯಿಸುವುದಕ್ಕಾಗಿ ದೊಡ್ಡದೊಡ್ಡ ಇಂಜನ್ನುಗಳನ್ನು ನಿರ್ಮಿಸಿ ಉಪಯೋಗಮಾಡಿದುದರಲ್ಲಿ ಬಹಳ ಅನುಕೂಲವೆಂದು ಕಂಡುಬಂದಿದೆ. ಅದುಕಾರಣ ಮುಂದೆ ಎಲೆಕ್ಟ್ರಿಕ್ ಇಂಜನ್ನುಗಳನ್ನೇ ಹೆಚ್ಚಿಸಬೇಕೆಂದು ಯೋಚಿಸಿದ್ದಾರೆ.

ಟೆಲಿಫೋನಿನ ಮೂಲಕ ಒಂದು ಕಡೆಯಿಂದ ಮತ್ತೊಂದು ಕಡೆ ಮಾತನಾಡುವ ಕೆಲಸವು ದಿನದಿನಕ್ಕೆ ಬಹಳ ವೃದ್ಧಿಗೊಳ್ಳುತ್ತಿದೆ. ಈಗಣ ರಚನೆಯಿಂದ ೧೨ ಸಾವಿರ ಮೈಲಿಗಳ ದೂರಕ್ಕೆ ಈ ಯಂತ್ರದ ದ್ವಾರಾ ಮಾತನಾಡುವುದು ಸಾಧ್ಯವಾಗಿದೆ. ಇನ್ನು ಮುಂದೆ ೧೮ ಸಾವಿರ ಮೈಲಿಗಳ ದೂರದಲ್ಲಿರುವವರೊಡನೆ ಮಾತನಾಡಬಹುದಂತೆ.

ಈಜಿಪ್ಟ್‌ದೇಶದ ಪ್ರಜೆಗಳಲ್ಲಿ ಕೆಲವರು ಜಾತೀಯವಾದಿಗಳು ತಮಗೆ ಸ್ವರಾಜ್ಯವನ್ನು ಕೊಡಬೇಕೆಂದು ಕೇಳಿಕೊಳ್ಳಲು ಲಂಡನ್ ಪಟ್ಟಣಕ್ಕೆ ಹೊರಡಲು ಪ್ರಯತ್ನಿಸಿದುದರಿಂದ ಅದಕ್ಕೆ ಆಂಗ್ಲಾಧಿಕಾರಿಗಳು ಅವಕಾಶವನ್ನು ಕೊಡದೆ ಸಂಧಿಸಭೆ ಮುಗಿದಮೇಲೆ ಇಬ್ಬರು ಮಂತ್ರಿಗಳು ಹೋಗಬಹುದೆಂದು ತಿಳಿಯಿಸಿದುದರಿಂದ ಗದ್ದಲವೆದ್ದು ಈಗ ಅಲ್ಲಿ ಸೈನಿಕಶಾಸನವನ್ನು ಪ್ರಕಟಿಸಿದ್ದಾರೆಂದು ಸುದ್ದಿ ಬಂದಿದೆ.

ಸರ್ವಜಾತಿ ಸಂಮೇಳನ ಸಂಘವನ್ನು ಪ್ರಥಮ ಸಂಧಿವಿಷಯ ಚರ್ಚೆಯಲ್ಲೇ ಸೇರಿಸುವುದಕ್ಕೆ ವಿಲ್ಸನ್ನರ ಅಭಿಪ್ರಾಯದಂತೆ ಫ್ರೆಂಚರೂ ಇಂಗ್ಲೀಷರೂ ಒಪ್ಪಿದರು. ಅತ್ಯಂತ ಮುಖ್ಯ ವಿಷಯಗಳು ೧೫ ದಿನಗಳೊಳಗಾಗಿ ಚರ್ಚಿಸಲ್ಪಟ್ಟು ಮುಗಿಯುವುವು. ಆದಕಾರಣ ವಿಲ್ಸನ್ನರ ಮತ್ತೂ ಕ್ಲೆಮೆಂಕೋರವರ ಇಷ್ಟದಂತೆ ಲಾಯಡ್ ಜಾರ್ಜರು ಲಂಡನ್ನಿಗೆ ಹೋಗಬೇಕಾದುದನ್ನೂ ಬಿಟ್ಟು ಪ್ಯಾರಿಸ್ಸಿನಲ್ಲೇ ನಿಂತಿದ್ದಾರೆ.

ಜರ್ಮನಿಯ ಕೈಸರು ಸ್ವದೇಶವನ್ನು ಬಿಟ್ಟು ಹಾಲೆಂಡಿಗೆ ಓಡಿಹೋಗುವಾಗ ಸರ್ಕಾರದ ಬೊಕ್ಕಸಕ್ಕೆ ಸೇರಿದ್ದ ೬೦ ಮೋಟಾರುಗಳನ್ನು ಗುಟ್ಟಿನಿಂದ ತೆಗೆದುಕೊಂಡು ಹೋಗಿರುವರಂತೆ. ಇವುಗಳ ಬೆಲೆ ೪ ಲಕ್ಷರೂ. ಸರ್ಕಾರಿ ಸೊತ್ತನ್ನು ಹೀಗೆ ರಹಸ್ಯವಾಗಿ ಸಾಗಿಸಿಕೊಂಡು ಹೋಗಿರುವುದಕ್ಕಾಗಿ ಅವರಮೇಲೆ ಕಳವಿನ ತಪ್ಪಿತಕ್ಕಾಗಿ ವ್ಯಾಜ್ಯವನ್ನು ಹೂಡಬೇಕೆಂದು ಈಗಣ ಜರ್ಮನ್ ಪ್ರಭುತ್ವದವರು ಯೋಚಿಸುತ್ತಿರುವರು.

ಜರ್ಮನರು ಪುನಃ ಏರ್ಪಟ್ಟ ತಾತ್ಕಾಲಿಕ ಸಂಧಿನಿಬಂಧನೆಗೂ ಒಪ್ಪಿದರು. ಮಿತ್ರಮಂಡಲಿಯವರಿಗೆ ತಮ್ಮ ವ್ಯಾಪಾರಿ ನೌಕಾದಳವನ್ನೊಪ್ಪಿಸುವುದಕ್ಕೆ ಒಪ್ಪಿ ಇದುವರೆಗೆ ೧೮೦೦೦೦೦ ಟನ್ನುಗಳ ಭಾರವಾಹಕಗಳಾದ ೧೫೦ ಹಡಗುಗಳನ್ನು ಒಪ್ಪಿಸಿದ್ದಾರೆ. ಹೀಗೆ ಮಾಡಲು ಜರ್ಮನರು ಒಪ್ಪಿಕೊಂಡುದರಿಂದ ಇವರ ದೇಶಕ್ಕೆ ಆಹಾರಸಾಮಗ್ರಿ ಮೊದಲಾದುವುಗಳನ್ನು ಕಳುಹಿಸಿಕೊಡಲು ಮಿತ್ರಮಂಡಲಿಯವರು ಅಂಗೀಕರಿಸಿದ್ದಾರೆ.

ಕ್ಲೆಮೆಂಕೋರವರನ್ನು ಕೊಲ್ಲಲು ಪ್ರಯತ್ನಿಸಿದ ಕಾಟಿನ್ ಎಂಬುವನ ವಿಚಾರಣೆಯೆಲ್ಲಾ ಮುಗಿದಿತು. ಅವನು ಅರಾಜಕರ ಗುಂಪಿಗೆ ಸೇರಿದವನೆಂಬುದೂ, ಆತನು ಮನಃಪೂರ್ವಕವಾಗಿಯೇ ಕ್ಲೆಮೆಂಕೋರವರನ್ನು ಕೊಲ್ಲಲು ಉದ್ದೇಶಿಸಿದ್ದನೆಂಬುದೂ, ಆತನು ಒಂದುವೇಳೆ ಈಗ ಸಿಕ್ಕಿಬೀಳದಿದ್ದರೆ ಮತ್ತೆಯೂ ಅವರ ಕೊಲೆಗೆ ಪ್ರಯತ್ನಪಡುತ್ತಿದ್ದನೆಂಬುದೂ ಗೊತ್ತಾಯಿತು. ಆತನಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಆದರೆ ಅಪೀಲು ಮಾಡಿಕೊಂಡಿದ್ದಾನೆ.

ಆಂಗ್ಲವಿಮಾನ ದಳದವರು ಈಗ ಒಂದು ವಿಮಾನದಿಂದ ಮತ್ತೊಂದು ಯಾನಕ್ಕೆ ಆಕಾಶವಾರ್ತೆಯನ್ನು ಕಳುಹಿಸುವ ಉತ್ತರವನ್ನು ತರಿಸಿಕೊಳ್ಳುವ ಏರ್ಪಾಟುಗಳನ್ನು ಮಾಡಿಕೊಂಡಿದ್ದಾರೆ. ೧೩೦೦೦ ಪೌನುಗಳ ಭಾರವನ್ನು ಹೊತ್ತು ಗಂಟೆಗೆ ೧೦೦ ಮೈಲಿಗಳಂತೆ ಪ್ರಯಾಣಮಾಡಬಲ್ಲ ವಿಮಾನಗಳನ್ನು ನಿರ್ಮಿಸಿ ಪ್ರಯಾಣಮಾಡಿ ಪರೀಕ್ಷಿಸಿಯೂ ಇದ್ದಾರೆ. ೨೦೦೦೦ ಪೌನಿನ ಭಾರವನ್ನು ಹೊರುವ ಒಂದು ವಿಮಾನವನ್ನೂ ಕೂಡ ನಿರ್ಮಿಸಿದ್ದಾರೆ. ಇವಕ್ಕಿಂತಲೂ ಹೆಚ್ಚು ಭಾರವನ್ನು ಹೊರುವ ವಿಮಾನಗಳನ್ನೂ ಕಟ್ಟುವುದರಲ್ಲಿದ್ದಾರೆ.

ಸಂಧಿಸಭೆಯ ಮುಂದೆ ಚೀನಾ ಪ್ರತಿನಿಧಿಗಳು ಜಪಾನರಮೇಲೆ ದೂರು ಹೇಳಿಕೊಂಡಿರುವರು. ಅವರಲ್ಲಿ ಜಪಾನರು ತಿರುಗಿ ಕಿಯಾಚೋವನ್ನು ತಮಗೆ ಕೊಡದಿರುವುದು. ೧೯೧೫ ನೆ ವರ್ಷದಲ್ಲಿ ತಮಗೆ ಯುದ್ಧದ ಬೆದರಿಕೆಯನ್ನು ಹಾಕಿ ಇಕ್ಕಟ್ಟಿನಲ್ಲಿ ಸಿಕ್ಕಿಸಿಕೊಂಡು ೨೧ ನಿಬಂಧನೆಗಳುಳ್ಳ ಪತ್ರಕ್ಕೆ ಬಲವಂತದಿಂದ ರುಜುಹಾಕಿಸಿಕೊಂಡಿರುವುದು. ೧೯೧೪-೧೫ ನೆ ವರ್ಷದಲ್ಲೇ ಚೈನರು ಮಿತ್ರಮಂಡಲಿ ಕಡೆಗೆ ಸೇರಿ ಯುದ್ಧದಲ್ಲಿ ಸೇರಬೇಕೆಂದಿದ್ದರೂ ಜಪಾನರು ಅದಕ್ಕೆ ಅಭ್ಯಂತರಪಡಿಸಿದುದು. ಇವುಗಳನ್ನೆಲ್ಲಾ ಹೇಳಿದುದಲ್ಲದೆ, ೧ ಲಕ್ಷ ಸೈನಿಕರುಳ್ಳ ತಮ್ಮ ಒಂದು ಮಹಾಸೈನ್ಯವು ಯೂರೋಪುರಂಗಕ್ಕೆ ಹೊರಡಲು ಸಿದ್ಧವಾಗಿದ್ದಿತೆಂದೂ, ಅವರನ್ನು ಕಳುಹಿಸುವುದಕ್ಕೆ ಹಡಗುಗಳು ಇಲ್ಲದೆಹೋದುದರಿಂದ ಅವಕಾಶವಾಗಲಿಲ್ಲವೆಂದೂ ಹೇಳಿರುವರು.

ಮೈಸೂರು ಸೀಮೆಯ ರೆವಿನ್ಯೂ ಕಮಿಷನರವರ ಆಫೀಸು.

ಪ್ರಸಿದ್ಧ ಪತ್ರಿಕೆ.

ತಾರೀಖು 24 ನೆಯ ಮಾರ್ಚಿ 1919.

ಈಗಿನ ಕಾಲಸ್ಥಿತಿಯಲ್ಲಿ ಆಹಾರಕ್ಕೆ ಒದಗತಕ್ಕ ಧಾನ್ಯಗಳನ್ನು ಸಾಧ್ಯವಾದಷ್ಟು ಹೆಚ್ಚಾಗಿ ಒದಗಿಸಬೇಕಾದ ಅವಶ್ಯಕತೆ ಇರುವುದರಿಂದ ವಾಣೀವಿಲಾಸಸಾಗರದ (ಮಾರಿಕಣಿವೆ ಕಲಾವು) ನಾಲೆಗಳ ಕೆಳಗಿನ ಜಮೀನುಗಳಲ್ಲಿ ಕೈಗಾರಿಕೆಗೆ ಉಪಯೋಗವಾಗುವ ಬೆಳೆಗಳನ್ನು ಬಿಟ್ಟು ಆಹಾರ ಧಾನ್ಯಗಳನ್ನೇ ಬೆಳೆಯಲು ಈ ಕೆಳಗೆ ಕಂಡ ರಿಯಾಯತಿಗಳು ತೋರಿಸಲ್ಪಡುವುವು. ಸದರಿ ರಿಯಾಯತಿಗಳು 1919 ನೆ ಇಸವಿ ಜೂನ್ ಮಾಹೆ ಅಖೈರೊಳಗಾಗಿ ಬರುವ ದರಖಾಸ್ತುಗಳಿಗೆ ಮಾತ್ರವೇ ಅನ್ವಯಿಸುವುವು.

1. ಬ್ಲಾಕಿಗೆ ಸೇರಿದ ಜಮೀನುಗಳಲ್ಲಿ ವಾಮೂಲಿನಂತೆ ಕೈಗಾರಿಕೆಗೆ ಸಂಬಂಧಿಸಿದ ಬೆಳೆಗಳನ್ನು (ಅಂದರೆ ಕಬ್ಬು, ಬಾಳೆ, ಹತ್ತಿ ವಗೈರೆ) ಬೆಳೆಯದೆ, ಈ ಸಾಲಿನಲ್ಲಿ ಆಹಾರ ಧಾನ್ಯಗಳನ್ನು ಬೆಳೆದದ್ದೇ ಆದರೆ ಅಂಥಾ ಜಮೀನಿನ ಮೇಲಿನ ನೀರು ಸಂದಿಯನ್ನು ಈ ಸಾಲಿಗೆ ಮಾಫ್ ಮಾಡಲಾಗುವುದು. 2. ಬ್ಲಾಕಿನಲ್ಲಿ ಸೇರಿದ ಜಮೀನುಗಳಲ್ಲಿ ವಾಮೂಲಿನಂತೆ ಮೂರನೆ ಒಂದು ಭಾಗದಲ್ಲಿ ಮಾತ್ರವೇ ಭತ್ತದ ಬೆಳೆಯನ್ನಿಡಬೇಕೆಂಬ ನಿರ್ಬಂಧವನ್ನು ಈ ಸಾಲಿನ ಮಟ್ಟಿಗೆ ತೆಗೆದುಹಾಕಿ ಪೂರಾ ಜಮೀನಿಗೂ ಭತ್ತದ ಬೆಳೆಗಾಗಿ ನೀರನ್ನು ಕೊಡಲಾಗುವುದು. 3. ನಾಲಾ ಮೇಲ್‌ಭಾಗದಲ್ಲಿರುವ ಜಮೀನುಗಳಲ್ಲಿ ಬಾವಿ ಆಸರೆಯಿಂದ ಮುಸ್ಕಿ ಬೆಳೆಯನ್ನು ತೆಗೆಯುವುದಕ್ಕಾಗಿ ತೋಡಿರತಕ್ಕ ಬಾವಿಗಳಿಗೆ ನಾಲಾ ಏರಿಯನ್ನು ಕಡಿದು ಮುಫತ್ತಾಗಿ ನೀರನ್ನು ಹಾಯಿಸಿಕೊಳ್ಳಲು ಈ ಸಾಲಿಗೆ ಮಾತ್ರ ಅಪ್ಪಣೆಕೊಡಲ್ಪಡುವುದು. 4. ಜೋಳ, ರಾಗಿ, ನವಣೆ ಮೊದಲಾದ ಮುಸ್ಕಿ ಬೆಳೆಗಳಿಗೆ ನೀರು ಹಾಯಿಸಿ ಬೆಳಸಕೂಡದೆಂದು ಅಪ್ಪಣೆಮಾಡಲ್ಪಟ್ಟಿರುವ ಪ್ರದೇಶವಲ್ಲೆಲ್ಲಾ ಅಪ್ಪಣೆಯನ್ನು ತೆಗೆದು ಸದರಿ ಬೆಳೆಗಳಿಗೆ ಈ ಸಾಲಿನಲ್ಲಿ ಮಾತ್ರ ಆದಾಯಿಸಿ ತರೀಖು ನೀರು ಸರಬರಾಯಿ ಮಾಡಲ್ಪಡುವುದು. 5. ಆಹಾರ ದಿನಸಿಗಳನ್ನು ಬೆಳೆಯತಕ್ಕ ರೈತರಿಗೆ ಫಸಲ ಜಮೀನುಗಳನ್ನು ಒಂದು ವರುಷಕ್ಕೆ ಮಾತ್ರ ಹಂಗಾಮಿ ತರೀಖು ಮುಫತ್ತಾಗಿ ಕೊಡಲಾಗುವುದು ಮತ್ತು ಅಂಥಾ ಜಮೀನುಗಳಿಗೆ ಮುಫತ್ತಾಗಿ ನೀರು ಸರಬರಾಯಿ ಮಾಡಲಾಗುವುದು. ಖಾಯಂ ಸಾಗುವಳಿಗೆ ಫಸಲ ಜಮೀನನ್ನು ಅಪೇಕ್ಷಿಸುವವರಿಗೆ ಹರಾಜಿಲ್ಲದೆ ಮುನಾಸಬ್ ಕಿಮ್ಮತ್ತು ತೆಗೆದುಕೊಂಡು ಜಮೀನನ್ನು ಕೆಳಗೆ ಕಂಡ ಷರತ್ತುಗಳಿಗೊಳಪಡಿಸಿ ಕೊಡಲಾಗುವುದು.

(a) ಜಮೀನು ಖರೀದಿಯನ್ನು ಡೆಪ್ಯುಟಿ ಕಮೀಷನರವರಿಗೆ ಸೂಕ್ತ ತೋರಿದಂತೆ ಕಂತುಪ್ರಕಾರ ಮೂರು ವರ್ಷಗಳಲ್ಲಿ ವಸೂಲು ಮಾಡಿಕೊಳ್ಳಬಹುದು. (b) ಮೊದಲನೆ ಸಾಲಿನಲ್ಲಿ ಕಂದಾಯ ಮತ್ತು ನೀರು ಸಂದಿಯ ಮೊಬಲಗುಗಳನ್ನು ಮಾಫ್ ಮಾಡಲಾಗುವುದು. ನೀರು ಸಂದಿಯ ಮೊಬಲಗಿನಲ್ಲಿ 2 ನೆ ಸಾಲಿನಲ್ಲಿ ಮೂರನೆ ಒಂದು ಭಾಗವನ್ನೂ, 3 ನೆ ಸಾಲಿನಲ್ಲಿ ಮೂರರಲ್ಲಿ 2 ಭಾಗವನ್ನೂ, 4 ನೆ ಸಾಲಿನ ಲಾಗಾಯತು ಪೂರಾ ಮೊಬಲಗನ್ನೂ ವಸೂಲು ಮಾಡಿಕೊಳ್ಳಲಾಗುವುದು (c) ಮೊದಲನೆ ಮತ್ತು ಎರಡನೆ ಸಾಲುಗಳಲ್ಲಿ ಆಹಾರದ ಬೆಳೆಗಳನ್ನು ಮಾತ್ರವೇ ಬೆಳೆಯತಕ್ಕದ್ದು.

ಕೆ. ಆರ್. ಶ್ರೀನಿವಾಸಯ್ಯಂಗಾರ್, ರೆವಿನ್ಯೂ ಕಮೀಷನರ್.

ಪತ್ರವ್ಯವಹಾರ.

2

ವೀರಶೈವ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವದೇನೆಂದರೆ:—

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಕನ್ನಡ ಇಂಗ್ಲೀಷ್ ಲೋವರ್ ಸೆಕೆಂಡರೀ ಪರೀಕ್ಷೆಗಳಿಗೆ ಬೆಂಗಳೂರು ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲ್ ಮಾಸ್ತರುಗಳಿಗೂ ಸಹ ಬೆಂಗಳೂರು ಊರುಬಾಗಿಲು ಶ್ರೀಸಾಪ್ ಕಳ್ಳೆಪ್ಪನವರು ವಾಮೂಲ್‌ಪ್ರಕಾರ ಊಟಕ್ಕೂ ಮತ್ತು ವಾಸಕ್ಕೂ ಏರ್ಪಡಿಸಿರುತ್ತಾರೆ. ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ೮ ದಿವಸ ಮುಂದಾಗಿ ಬರೆದು ತಿಳಿಸಬೇಕು.

B. K. Thammiah.

ಈ ತಿಂಗಳಲ್ಲಿ ನಡೆಯುವ ಕನ್ನಡ ಇಂಗ್ಲೀಷು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಮೈಸೂರು ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಮೈಸೂರು ಹಳೇ ಅಗ್ರಹಾರದಲ್ಲಿರುವ ಮ॥ ರಾ॥ ಭಕ್ತ ಸೋಮಶೇಖರಯ್ಯನವರು ವಾಮೂಲಿನ ಪ್ರಕಾರ - ಮುರುಘರಾಜೇಂದ್ರ ಶ್ರೀ ವೀರಶೈವಮತ ಸಂವರ್ಧಿನೀಸಭಾ ಪರವಾಗಿ ಊಟಕ್ಕೂ ವಾಸಕ್ಕೂ ಏರ್ಪಡಿಸಿರುವುದರಿಂದ ಬರತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಮುಂದಾಗಿ ಮೇಲ್ಕಂಡವರಿಗೆ ತಿಳಿಸಬೇಕಾಗಿ ಈ ಮೂಲಕ ಸೂಚಿಸಿದೆ.

(Sd) ಆಸ್ಥಾನಮಹಾವಿದ್ವಾನ್, ಕರಿಬಸವಶಾಸ್ತ್ರಿ.
ಅಜೀವಸಭಾಧ್ಯಕ್ಷ.
M. S. V. M. S. Sabha.

೧೯೧೯ ನೆ ಇಸವಿ ಏಪ್ರಿಲ್ ತಾರೀಖು 21 ರ ಲಾಗಾಯ್ತು ನಡೆಯುವ ಇಂಗ್ಲೀಷು ಮತ್ತು ಕನ್ನಡ ಲೋವರ್ ಸೆಕೆಂಡರೀ ಪರೀಕ್ಷೆಗೆ ತುಮಕೂರು ಸೆಂಟರಿಗೆ ಬರತಕ್ಕ ವೀರಶೈವ ಮತ್ತು ಇತರ ವಿದ್ಯಾರ್ಥಿಗಳಿಗೆ ತುಮಕೂರಿನ ವೀರಶೈವ ಸಮಾಜದಿಂದ ಈಶ್ವರಾರ್ಪಣವಾಗಿ ಊಟಕ್ಕೂ ಮತ್ತು ವಾಸಕ್ಕೂ ತಕ್ಕ ಏರ್ಪಾಡು ಮಾಡಲ್ಪಟ್ಟಿರುವುದರಿಂದ ಬರತಕ್ಕ ವಿದ್ಯಾರ್ಥಿಗಳು ಆಯಾ ಪಾಠಶಾಲೆಗಳ ಮುಖ್ಯೋಪಾಧ್ಯಾಯರಿಂದ ಈ ಕೆಳಗೆ ಕಂಡ ಅಡ್ರಸ್ಸಿಗೆ ಇದೇ ಮಾಹೆ 15 ನೆ ತಾರೀಖಿನ ಒಳಗಾಗಿ ತಲುಪುವಂತೆ ಅಪ್ಲಿಕೇಷನ್ ಕಳುಹಿಸಿಕೊಡಬೇಕಾಗಿ ಕೋರಿದೆ. ಅಲ್ಲದೆ ಮೇಲ್ಕಂಡ ತಾರೀಖಿನ ಒಳಗಾಗಿ ಅಪ್ಲಿಕೇಷನ್ ಇಲ್ಲದೆ ಬರತಕ್ಕ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯಲಾರದು. ಚಾಪೆ ಹಾಸಿಗೆ ಜೊತೆಯಲ್ಲಿ ತರಬೇಕು.

ಬಾವಿಕಟ್ಟೆ ಚನ್ನಬಸಪ್ಪನವರು, ಜವಳಿ ಅಂಗಡಿ ವೀರಣ್ಣನವರು,
ತುಮಕೂರು.

ಔದಾರ್ಯ.

ಶಿರಾ ತಾಲ್ಲೂಕು ಕಳ್ಳಂಬೆಳ್ಳ ಗ್ರಾಮದಲ್ಲಿರುವ ಚಿಕ್ಕಹಾಲೇಗೌಡರೆಂಬುವರು ತಮ್ಮ ಗ್ರಾಮದಲ್ಲಿ ಎ. ವಿ. ಸ್ಕೂಲ್ ಕಟ್ಟುವುದಕ್ಕಾಗಿ ಒಂದುಸಾವಿರ ರೂಪಾಯಿಗಳನ್ನು ನಗದಾಗಿ ಕೊಟ್ಟು ಮಾಸ್ತರುಗಳ ವಾಸದ ಮನೆಗಳನ್ನು ಕಟ್ಟತಕ್ಕ ಬಗ್ಗೆ ಐನೂರು ರೂಪಾಯಿಗಳ ವಾಗ್ದಾನಮಾಡಿ, ಸ್ಕೂಲಿಗೆ ಸಂಬಂಧಪಟ್ಟಂತೆ ಅಗ್ರಿಕಲ್‌ಚರ್ ಫಾರಂಗಾಗಿ ಸುಮಾರು ಒಂದು ಸಾವಿರದ ಐನೂರು ರೂಪಾಯಿ ಅಂದಾಜು ಬಾಳತಕ್ಕ ಹನ್ನೊಂದು ಎಕರೆ ಜಮೀನನ್ನು ಸರ್ಕಾರಕ್ಕೆ ಧರ್ಮಾರ್ಥವಾಗಿ ಒಪ್ಪಿಸಿರುತ್ತಾರೆ. ಅಲ್ಲದೆ ಇವರು ವಿದ್ಯಾರ್ಥಿಗಳ ಹಾಸ್ಟೆಲ್ ಒಂದನ್ನು ಏರ್ಪಡಿಸಬೇಕೆಂದು ಪ್ರಯತ್ನಮಾಡುತ್ತಿದ್ದಾರೆ. ಇವರ ಮೇಲ್ಪಂಕ್ತಿಯನ್ನು ಮಹನೀಯರನೇಕರು ಅವಲಂಬಿಸಿ, ಇವರ ಪ್ರಯತ್ನವನ್ನು ಸಫಲಗೊಳಿಸಬೇಕಾಗಿರುತ್ತೆ.

ಮಹಾಶಯರೆ! ಇಲ್ಲಿನೋಡಿ !!

ಅಚ್ಚುಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಸ್ಟೇಜು ಸೇರಿ	1—0—0.
200 ಕ್ಕೆ ... ... ,, ,,	1—12—0.
300 ಕ್ಕೆ ... ... ,, ,,	2—4—0.

ವಿಳಾಸ—ಡಿ. ಹೆಚ್. ಮಸ್ತಾನ್‌ಸಾಹೇಬ್, ಅಂಡ್ ಕೊ,
8 ಮರಡಿಹಳ್ಳಿ—ಚಿತ್ರದುರ್ಗ ಡಿ॥.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರಿ ಸೋಪು

ಗಂಧೆ, ಮೊಡವೆ, ಹುಳ್ಳಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

9 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

13 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

16

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಆದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶಕಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ವಾಸಿಯಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೊ,
9 ಸಾಹುಕಾರಪೇಟೆ, ಮದರಾಸ್.

ಇಂಗ್ಲೀಷ್ ಡಾಕ್ಟರುಗಳು ಮುಖ್ಯವಾದ ಕಲ್ಪದಲ್ಲಿ ತಯಾರಿಸಲ್ಪಟ್ಟ

ಸುಖಾನಂದ

(ಎಂಬ ಮರ್ಮದ ಚೀಲವು). ೪

ಸಾಧಾರಣವಾಗಿ ಈ ಪ್ರಪಂಚದಲ್ಲಿ (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಉಪಕಿ, ಪರಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಉಪಯೋಗಿಸುವ ವಿಧ ಚೀಲದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ 1 ಕ್ಕೆ 1—4—0 ರೂಪಾಯಿ.

ವಿಳಾಸ:—ರಾಸ್ ಬ್ರಾಚ್ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗೆಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಿನಿ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ಸೆಗಣಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2.14.0. 25 ಕ್ಕೆ 5.5.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
17 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಏಪ್ರಿಲ್ ತಾ॥ ೬ ರಿಂದ ೧೯೧೯ ನೆಯ ಏಪ್ರಿಲ್ ತಾ॥ ೧೨ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಚೈತ್ರ ಶು॥ ಷಷ್ಠಿಯಿಂದ ಚೈತ್ರ ಶು॥ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
6	ಭಾನು	ಷಷ್ಠಿ	17.27	ಮೃಗಶಿ	25.1	24
7	ಸೋಮ	ಸಪ್ತಮಿ	12.59	ಆರಿದ್ರಾ	22.27	25
8	[1] ಮಂಗಳ	ಅಷ್ಟ	9.21	ಪುನ	20.46	26
9	[2] ಬುಧ	ನವಮಿ	6.44	ಪುಷ್ಯ	20.6	27
10	ಗುರು	ದಶಮಿ	5.13	ಆಶ್ಲೇ	20.33	28
11	[3] ಶುಕ್ರ	ಏಕಾದ	4.56	ಮಘಾ	22.18	29
12	[4] ಶನಿ	ದ್ವಾದಶಿ	5.55	ಪುಬ	25.14	30

(1) ಸ್ಮಾರ್ತ ಶ್ರೀರಾಮನವಮಿ. (2) ವೈಷ್ಣವ ಶ್ರೀರಾಮನವಮಿ. (3) ಸರ್ವತ್ರ ಏಕಾದಶಿ. (4) ಶನಿಪ್ರದೋಷ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಶರದುಪಗತರಾಜಮಂಡಲಹಿತೈಷಾ | ಭುವನಪಥಕೃತಾವಕಾಶಾ ಪಕ್ಷಜ್ಞ ನಕ್ಷತ್ರನೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೈತ್ರ್ಯೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಏಪ್ರಿಲ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೧೫

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹಳೆಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ನಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತ್ರೀಶಿವಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಶತಕಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ.) ೨೦

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯಕರ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ !!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮಾಯವಾಗುವದು ಅಥವಾ ಅದರೊಳಗೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಔಷಧದ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕದಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

7 ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪನಿ, ಪೋಸ್ಟ್ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಚಿ ಜಡ್ಡು, ಗುಪ್ತವ್ಯವಬೇನೆ, ಹುರಳುಕಜ್ಜಿ, ಗಜಕರ್ಣ, ಇಸಬು, ಕಜ್ಜಿ, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವು ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಮಾತ್ರೆಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಹೊಟೆ ಹೊರಟರೆ ಸರಕ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದರ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಸಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
47 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.



ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸವಾಗುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು— ಜಪಾನ್ ಬೀಸಣಿಗೆ 1, ಶಾವಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಕೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಹರಟು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4—8—0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
10 5. ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅಪ್ಪಟವಾದ ಚರಿತ್ರೆ, ಬೋಧಕರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

27 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಏಪ್ರಿಲ್ ತಾ|| ೧೩ ನೆಯ ಭಾನುವಾರ.

ಸತ್ಯಾಗ್ರಹವು.

ಬೇಡಬೇಡವೆಂದು ನಿರೋಧಿಸುತ್ತಿದ್ದರೂ ಪ್ರಭುತ್ವದವರು ರೌಲತ್ ಶಾಸನವನ್ನು ಏರ್ಪಡಿಸಿದುದರಿಂದ, ಅದನ್ನು ಸತ್ಯಾಗ್ರಹ ವ್ರತದೀಕ್ಷೆಯಿಂದ ಉಪಸಂಹರಿಸಿಕೊಳ್ಳುವಂತೆ ಮಾಡಬೇಕೆಂಬ ಯತ್ನವು ಭರತಖಂಡದ ಕೆಲವರಲ್ಲಿ ಹುಟ್ಟಿದೆ. ಇದಕ್ಕೆ ಮ|| ಗಾಂಧಿಯವರೇ ಅಧ್ವರ್ಯುಗಳಾಗಿದ್ದಾರೆ. ದಕ್ಷಿಣಾಫ್ರಿಕಾದ ಪ್ರಭುತ್ವದವರಿಂದ ಅಲ್ಲಿಯ ಭಾರತೀಯರಿಗೆ ಉಂಟುಮಾಡಲ್ಪಟ್ಟಿದ್ದ ಅಗೌರವಕರಗಳಾದ ಸಂಕಟಗಳನ್ನು ತೊಲಗಿಸುವುದಕ್ಕೂ ಬೊಂಬಾಯಿ ಆಧಿಪತ್ಯದ ಖೈರಾಜಿಲ್ಲೆಯ ರೈತರ ಇಷ್ಟಾರ್ಥಪೂರಣಮಾಡಿಸುವುದಕ್ಕೂ ಮ|| ಗಾಂಧಿಯವರ ಸತ್ಯಾಗ್ರಹವ್ರತಾಚರಣೆಯು ಸಾಧಕವಾಗಿ ಪರಿಣಮಿಸಿದುದರಿಂದ, ಅದು ಈಗ ರೌಲತ್ ಶಾಸನದ ಉಪಸಂಹರಣಕ್ಕೂ ಸಾಧಕವಾದೀತೆಂದು ಎಣಿಸಲ್ಪಟ್ಟಿದೆ. ತಾನು ಯಾವುದನ್ನು ಸತ್ಯವಾದುದು ಧರ್ಮವಾದುದು ಎಂದು ತಿಳಿದಿರುವನೋ ಅದನ್ನು ಎಷ್ಟುಮಾತ್ರಕ್ಕೂ ಬಿಡದೆಯೂ, ಯಾವುದನ್ನು ಅಸತ್ಯವಾದುದು ಅಧರ್ಮವಾದುದು ಎಂದು ತಿಳಿದಿರುವನೋ ಅದನ್ನು ಎಷ್ಟುಮಾತ್ರಕ್ಕೂ ಅನುಮೋದಿಸದೆಯೂ ಇರುವುದಕ್ಕೆ ಬಿಗಿಪಟ್ಟನ್ನು ಹಿಡಿದು, ಆ ಪಟ್ಟನ್ನು ಕಾಪಾಡಿಕೊಳ್ಳುವೆಡೆಯಲ್ಲಿ ಯಾವಯಾವ ಈತಿಬಾಧೆಗಳನ್ನಾದರೂ ಸ್ವಾರ್ಥತ್ಯಾಗಗಳನ್ನಾದರೂ ನಿಷ್ಪ್ರತೀಕಾರ ಬುದ್ಧಿಯಿಂದ ತಾಳಿಕೊಂಡಿರುವುದೇ ಸತ್ಯಾಗ್ರಹವ್ರತವೆಂದು ಹೇಳಲ್ಪಡುತ್ತಿದೆ. ಮಾಡಿದವರಿಗೆ ಪ್ರತಿಯಾಗಿ ಮಾಡುವುದಾಗಲೀ ಆಡಿದವರಿಗೆ ಪ್ರತಿಯಾಗಿ ಆಡುವುದಾಗಲೀ ಒಂದಕ್ಕೆರಡರಷ್ಟು ಜೋಡಿಸುವುದಾಗಲೀ ಸತ್ಯಾಗ್ರಹವ್ರತಲಕ್ಷಣವಲ್ಲ. ಸತ್ಯಾಗ್ರಹಪಾತ್ರತೆಗೆ ಸ್ವಾರ್ಥತ್ಯಾಗವೇ ಪ್ರಧಾನಗುಣವು. "ಸತ್ಯಾಗ್ರಹವೆಂದರೆ ಪ್ರೇಮವೆಂದು ತಿಳಿದುಕೊಳ್ಳಬೇಕು. ಅಪಕಾರಿಗಳಿಗೂ ಉಪಕಾರಮಾಡುವುದೇ ಸತ್ಯಾಗ್ರಹದ ಅಭಿಪ್ರಾಯವು. ಸತ್ಯಾಗ್ರಹಿಗಳಿಗೆ ಆತ್ಮಬಲ-ಆತ್ಮವಿಶ್ವಾಸ ಆತ್ಮನಿಗ್ರಹಗಳೇ ಮುಖ್ಯ ಸಾಧನಗಳು" ಎಂದು ಮ|| ಗಾಂಧಿಯವರೇ ಉಪದೇಶಿಸಿರುವರು. ಸತ್ಯಾಗ್ರಹವು ಭರತಖಂಡಕ್ಕೆ ಅನಾದಿಸಿದ್ಧವಾದುದೆಂದು, ಪುರಾಣೇತಿಹಾಸಗಳಲ್ಲಿ ಪ್ರತಿಪಾದಿತವಾಗಿರುವ ಪ್ರಹ್ಲಾದ, ವಿಭೀಷಣ, ಹರಿಶ್ಚಂದ್ರ, ಭೀಷ್ಮ, ದಧೀಚಿ, ರಾಮ, ಶಿಬಿ ಮೊದಲಾದವರ ಚರಿತ್ರೆಗಳನ್ನು ಉದಾಹರಣವಾಗಿ ಹೇಳುತ್ತಿರುವರು. ಇವುಗಳನ್ನೆಲ್ಲಾ ಗಮನಿಸಿದರೆ ಸತ್ಯಾಗ್ರಹದೀಕ್ಷೆಯು ಮೊಹರಂ ಹಬ್ಬದಲ್ಲಿ ವೇಷವನ್ನು ಕಳೆದು ಕುಣಿಯುವಷ್ಟು ಸರ್ವಸುಲಭವಾದ ಕಾರ್ಯವಲ್ಲವೆಂದು ಯಾರೊಬ್ಬರಿಗೂ ತೋರದೆ ಇರಲಾರದು. ನುಣ್ಣಗೆ ಬೋಳಿಸಿದ ತಲೆಬುರುಡೆಯಮೇಲೆ ತುಂಬಿದ ಕೊಡವನ್ನು ಹೊತ್ತು, ಎರಡು ಕೈಗಳಲ್ಲೂ ಪಿಟೀಲನ್ನು ಬಾರಿಸುತ್ತ, ಬಾಯಲ್ಲಿ ಹಾಡುತ್ತ, ನಿಶಿತವಾದ ಧಾರೆಯುಳ್ಳ ಕತ್ತಿಗಳಿಂದ ಏರ್ಪಡಿಸಿರುವ ಏಣಿಯ ಮೆಟ್ಟಲುಗಳನ್ನು ಗೆಜ್ಜೆಸರ ಕಟ್ಟಿದ ಕಾಲುಗಳಿಂದ ತಾಳಗತಿಗನುಸಾರವಾಗಿ ಏರುವ ಭಾರಣೆಯ ವಿದ್ಯೆಗಾರನ ಸಾಹಸಕ್ಕಿಂತ ಎಷ್ಟೋ ಮೇಲಾದ ಸಾಹಸಸ್ಥೈರ್ಯಧೈರ್ಯಗಳು ಸತ್ಯಾಗ್ರಹ ದೀಕ್ಷಾಬದ್ಧನಿಗೆ ಇರಬೇಕೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪ್ರಹ್ಲಾದನು ತಾನು ನಂಬಿದುದನ್ನು ಬಿಡದಿರುವುದಕ್ಕೆ ಬದ್ಧದೀಕ್ಷನಾಗಿ ಮಾತ್ರ ಇದ್ದನಲ್ಲದೆ ಅದನ್ನು ಬಿಡಿಸುವುದಕ್ಕಾಗಿ ತನ್ನ ತಂದೆಯು ಎಷ್ಟು ಶಿಕ್ಷೆಗಳನ್ನು ಕೊಟ್ಟರೂ ಅದಕ್ಕೆ ಮುಳಿಯದೆ, ಅಥವಾ ಪ್ರತಿಕ್ರಿಯೆಯನ್ನು ಮಾಡಬೇಕೆಂದು ಮನಸ್ಸಿನಲ್ಲೂ ಕೂಡ ಎಣಿಸದೆ ಇದ್ದುದರಿಂದ ಅವನ ದೃಢನಿಷ್ಠೆಯವು ಈಶ್ವರಪ್ರಸನ್ನತಾರೂಪದಿಂದ ಫಲಿಸಿತು. ಶ್ರೀರಾಮನುಕೂಡ ಪಿತೃವಾಕ್ಯಪರಿಪಾಲನರೂಪ ಸತ್ಯಪ್ರತಿಜ್ಞೆಗೆ ಬದ್ಧನಾಗಿ, ಅದರಿಂದ ವನವಾಸ ರಾಜ್ಯಪರಿತ್ಯಾಗರೂಪ ನಾನಾ ವಿಧಕ್ಲೇಶನಷ್ಟಗಳಿಗೆ ಗುರಿಯಾದರೂ ಸ್ಥೈರ್ಯದಿಂದ ಅನುಭವಿಸಿದನೇ ಹೊರತು ಕೈಕೇಯಿಯನ್ನೇ ಆಗಲೀ ತಂದೆಯನ್ನೇ ಆಗಲೀ ಕುರಿತು ಮನಸ್ಸಿನಲ್ಲೂ ಕೂಡ ಲೇಶವೂ ವಿರೋಧವನ್ನೆಣಿಸಲಿಲ್ಲ. ಅದರಿಂದ ಅವನೂ ಚರಿತಾರ್ಥನಾದನು. ಉಳಿದ ಹರಿಶ್ಚಂದ್ರಾದಿಗಳ ವಿಷಯವೂ ಹೀಗೆಯೇ ಇರುವುದು. ಆದರೆ ಆ ಶ್ರೀರಾಮಾದಿ ಮಹಾತ್ಮರುಗಳು ಭೂಮಿಯಲ್ಲಿ ಅವತರಿಸಿದ್ದಮಾತ್ರಕ್ಕೇ ಅವರೂ ಮನುಷ್ಯರು ಈಗಣವರೂ ಮನುಷ್ಯರೆ? ಅವರು ನಡೆಯಿಸಿದ ಸತ್ಯಧರ್ಮಾಚರಣೆಗಳೆಲ್ಲಾ ಈಗಣವರಿಗೂ ಸುಲಭವು ಎಂದು ಎಣಿಸುವುದು ಹಾಸ್ಯಾಸ್ಪದವಲ್ಲವೆ? ದೇಹವು ನಶ್ವರವು, ಐಹಿಕಸುಖಗಳೆಲ್ಲಾ ಕ್ಷಣಿಕಗಳು, ಅವುಗಳಲ್ಲಿ ಪರಾಙ್ಮುಖರಾಗಿ ನಿರುಪಮ ಶಾಶ್ವತಬ್ರಹ್ಮಾನಂದವನ್ನು ಸಾಧಿಸುವುದೇ ಮಾನವನ ಪರಮಪುರುಷಾರ್ಥವೆಂದು ನಂಬಿ ಆಚರಿಸಿ, ಜಗತ್ತಿಗೆಲ್ಲಾ ಮಾರ್ಗದರ್ಶಕರಾದ ಆ ಮಹಾಪುರುಷರೆಲ್ಲಿ? ಐಹಿಕದೇಹಸುಖಗಳಿಗಾಗಿಯೇ ಅಹೋರಾತ್ರಿ ನಾಮುಂದು ತಾಮುಂದೆಂದು ಬಡಿದಾಡುತ್ತ, ಇಹಲೋಕದಲ್ಲಿ ಸುಖವಾಗಿ ಬಾಳುವುದೇ ಸ್ವರ್ಗ ದುಃಖವನ್ನನುಭವಿಸುವುದೇ ನರಕವೆಂಬ ಭಾವವಿಟ್ಟುಕೊಂಡು, ಸತ್ಯಶೌಚಾದಿಗಳಿಗೆಲ್ಲಾ ತ್ರಿಕರಣದಲ್ಲೂ ದೂರರಾಗಿ, ದೇಹಯಾತ್ರಾಸೇವನೆಯನ್ನೇ ಪರಮಪುರುಷಾರ್ಥವನ್ನಾಗಿ ಮಾಡಿಕೊಂಡಿರುವ ಪಾಮರಲೋಕವೆಲ್ಲಿ? ಮಂತ್ರಶಕ್ತಿಯೂ ಶಾಸ್ತ್ರಜ್ಞಾನಶಕ್ತಿಯೂ ಅಗಾಧವಾಗಿದ್ದರೂ ಅವುಗಳು ಅಪಾತ್ರದಲ್ಲಿ ವಿನಿಯೋಗಿಸಲ್ಪಟ್ಟರೆ ಸತ್ಫಲಕ್ಕೆ ಪ್ರತಿಯಾಗಿ ದುಷ್ಫಲವನ್ನೇ ಕೊಡುವುದುಂಟು. ಈ ಕಾರಣದಿಂದಲೇ ಪ್ರತಿಯೊಂದು ಶಾಸ್ತ್ರಗ್ರಂಥಗಳ ಅಂತ್ಯದಲ್ಲೂ ಅದನ್ನು ಅಪಾತ್ರದಲ್ಲಿ ವಿನಿಯೋಗಿಸಬಾರದೆಂಬ ಎಚ್ಚರಿಕೆಯ ವಚನವೊಂದು ಹೇಳಲ್ಪಟ್ಟೇ ಇರುವುದು. ಸತ್ಯಾಗ್ರಹವು ಮಹಾವ್ರತವಾಗಿದ್ದರೆ ಇದರ ಉಪದೇಶವಿಷಯದಲ್ಲೂ ಪಾತ್ರಾಪಾತ್ರವಿಮರ್ಶೆಯು ಅತ್ಯವಶ್ಯಕವಲ್ಲವೆ?

ಪ್ರಕೃತದಲ್ಲಿ ಭರತಖಂಡದ ರಾಜಕೀಯ ವಾತಾವರಣವು ಪ್ರಕ್ಷುಬ್ಧವಾಗಿರುತ್ತದೆ. ನೂತನ ರಾಜಕೀಯಸಂಸ್ಕರಣ ಸಂಘಟನೆಯು ಸಂಧಿದಶೆಯು ಪ್ರಾಪ್ತವಾಗಿರುತ್ತದೆ. ಯುದ್ಧಸಂಬಂಧದಿಂದಲೂ, ದುರ್ಭಿಕ್ಷದ ಹಾವಳಿಯಿಂದಲೂ ಪ್ರಜೆಗಳು ನೊಂದಿರುತ್ತಾರೆ. ಮನಸ್ಸಿಗೆ ಶಾಂತಿಯಿಲ್ಲ. ಇದರಮೇಲೆ ಪ್ರಭುತ್ವದವರಮೇಲೆ ಯಾವುದಾದರೊಂದು ಕಾರಣವನ್ನು ನೆಪಮಾಡಿಕೊಂಡು ಅಸಮಾಧಾನವನ್ನೇ ಪ್ರದರ್ಶನಪಡಿಸುವ ಸ್ವಭಾವದ ಕೆಲ ವೃತ್ತಪತ್ರಿಕೆಗಳು ಬೇರೆ ಪ್ರಕ್ಷೋಭೆಗೊಳಿಸಿರುತ್ತವೆ. ಇಂಥ ಸಮಯದಲ್ಲಿ ಏನೊಂದನ್ನೂ ಅರಿಯದೆ ತಮ್ಮ ಹೊಟ್ಟೆಬಟ್ಟೆಯ ಪಾಡಿನಲ್ಲಿ ನಿರತರಾಗಿರುವ ಪ್ರಜೆಗಳಿಗೆಲ್ಲಾ ರೌಲತ್ ಶಾಸನವನ್ನು ಮಹಾಭೂತವನ್ನಾಗಿ ವಿವರಿಸಿ ಹೇಳಿ, ಭಯವನ್ನು ಹುಟ್ಟಿಸಿ, ಉದ್ವಿಗ್ನರನ್ನಾಗಿ ಮಾಡಿ, ಅವರಿಗೆಲ್ಲಾ ಸತ್ಯಾಗ್ರಹದೀಕ್ಷೆಯನ್ನು ಕೊಡಿಸಲು ಪ್ರಯತ್ನಿಸುವುದು ಸಮಂಜಸವೆ? ಎಷ್ಟೋ ಸಹಸ್ರಾರುವರ್ಷಗಳಿಂದಲೂ ಶಾಸ್ತ್ರವಿಧಿತವಾಗಿ ಬಂದಿರುವ ಐಹಿಕಾಮುಷ್ಮಿಕಸಾಧಕಗಳಾದ ವ್ರತಗಳನ್ನೇ ಈಗಣವರು ಮೂಲೆಗೊತ್ತಿ ಉದರಬ್ರಹ್ಮಿಗಳಾಗಿ ಕುಳಿತಿರುವಾಗ, ಅಂಥವರಿಗೆಲ್ಲಾ ನೂತನ ವ್ರತೋಪವಾಸಾದಿಗಳನ್ನು ವಿಧಿಸಿ ಉಪದೇಶಿಸುವುದಕ್ಕೆ ಹೊರಟರೆ ಅವು ಫಲಿಸುವುವೆ? ಈ ಸತ್ಯಾಗ್ರಹವ್ಯಾಪನೆಯು ಎಷ್ಟುಮಟ್ಟಿಗೆ ಫಲವನ್ನು ಕೊಡುವುದೆಂಬುದಕ್ಕೆ ಕಳೆದ ತಿಂಗಳು ಕೊನೆಯಲ್ಲಿ ದಿಲ್ಲಿಪಟ್ಟಣದೊಳಗೆ ನಡೆದ ಅನರ್ಥವು ಒಂದು ಸೂಚನೆಯಾಗಿರುತ್ತದೆ. ಈ ಅನರ್ಥವಿವರಣವನ್ನು ಕೆಲವು ಪತ್ರಿಕೆಗಳು ತಪ್ಪಾಗಿಯೂ ಉತ್ಪ್ರೇಕ್ಷೆಯಿಂದಲೂ ಪ್ರಕಟಿಸಿರುತ್ತವೆ. ಸ್ಥಲಾಧಿಕಾರಿಗಳು ನಿಜಸ್ಥಿತಿಯನ್ನು ಪ್ರಜೆಗಳ ತಿಳಿವಿಕೆಗಾಗಿ ಪ್ರಕಟಿಸಿದ್ದಾರೆ. ಅದರ ಮುಖ್ಯಾಭಿಪ್ರಾಯವನ್ನು ನಾವು ಇಲ್ಲಿ ಕೊಟ್ಟಿರುತ್ತೇವೆ.

'ಮಾರ್ಚಿ ೩೦ ನೆ ತಾ|| ಭಾನುವಾರದದಿನ ದಿಲ್ಲಿಪಟ್ಟಣದಲ್ಲಿ ರೌಲತ್ ಶಾಸನದ ವಿಷಯವಾಗಿ ತಮ್ಮ ಅಸಮಾಧಾನವನ್ನು ತೋರಿಸುವುದಕ್ಕಾಗಿ ಬೆಳಗ್ಗೆ ಅಂಗಡಿಗಳ ಬಾಗಿಲುಗಳೆಲ್ಲಾ ಮುಚ್ಚಲ್ಪಟ್ಟುವು. ಕೆಲ ಮಂದಿಗಳು ತಂತಮ್ಮ ಅಂಗಡಿ ಬಾಗಿಲುಗಳನ್ನು ತೆರೆದುಕೊಂಡಿರುವಲ್ಲಿ ಇತರರು ಬಲವಂತಮಾಡಿ ಅವರುಗಳ ಅಂಗಡಿಗಳನ್ನೂ ೧೦|| ಗಂಟೆಯ ಹೊತ್ತಿನಲ್ಲಿ ಮುಚ್ಚಿಸಿದರು. ಮತ್ತೂ ಈ ಬಲಾತ್ಕಾರಪಡಿಸತಕ್ಕ ಜನರು ಬೀದಿಯಲ್ಲಿ ಓಡಾಡುತ್ತಿದ್ದ ಟಾಂಗಾ ಬಂಡಿಗಳನ್ನು ತಡೆಯುತ್ತಲೂ, ಮಾರ್ಗಸ್ಥರನ್ನು ಬರಿಯ ಕಾಲಿನಲ್ಲೇ ನಡೆಯಬೇಕೆಂದು ಹೇಳಿ ಬಲಾತ್ಕಾರಪಡಿಸುತ್ತಲೂ ಬಂದರು. ಈ ಗದ್ದಲವನ್ನು ಪೊಲೀಸರು ನೋಡಿ ಶಾಂತಿರಕ್ಷಣೆಗಾಗಿ ಮುಂಜಾಗ್ರತೆ ತೆಗೆದುಕೊಂಡು ತಕ್ಕ ಏರ್ಪಾಟುಗಳನ್ನು ಮಾಡಿದರು. ಮಧ್ಯಾಹ್ನ ೧|| ಗಂಟೆಯ ಹೊತ್ತಿಗೆ ಗುಂಪಿನ ಜನರು ಹೊಗೆಬಂಡಿ ನಿಲ್ದಾಣದ ಕಡೆಗೆ ಸಾಗಿ ಸುತ್ತಿಕೊಂಡರು. ಕೆಲರು ಒಳಕ್ಕೆ ಹೋಗಿ ೩ ನೆ ತರಗತಿ ಪ್ರಯಾಣಿಕರಿಗಾಗಿ ತಿಂಡಿ ಸಾಮಾನುಗಳನ್ನು ಮಾರುತ್ತಿದ್ದ ಅಂಗಡಿಯವನನ್ನು ಬಾಗಿಲು ಮುಚ್ಚೆಂದು ಬಲಾತ್ಕರಿಸಲು ಪ್ರಯತ್ನಿಸಿದರು. ಅತನು ಅದಕ್ಕೆ ಒಪ್ಪದೆ ಹೋಗಲಾಗಿ ಅವನ ಮೇಲೆಬಿದ್ದು ಜಗಳವಾಡಲುಪಕ್ರಮಿಸಿದರು. ಅಲ್ಲಿದ್ದ ಪೊಲೀಸರು ಇದನ್ನು ನೋಡಿ, ಗುಂಪಿನವರನ್ನೆಲ್ಲಾ ಹೊರಕ್ಕೆ ಹೊರಡಿಸಿ, ಇಬ್ಬರನ್ನು ಹಿಡಿದು ಬಂಧಿಸಿದರು. ಹೊರಗಿದ್ದ ಗುಂಪಿನವರೆಲ್ಲಾ ತಮ್ಮ ಕಡೆಯ ಅವರಿಬ್ಬರನ್ನು ಬಿಡಿಸಿಕೊಳ್ಳಲಿಕ್ಕಾಗಿ ನೂರಾರುಮಂದಿಗಳು ಗುಂಪುಗುಂಪಾಗಿ ಗದ್ದಲಮಾಡಿಕೊಂಡು ಒಳಕ್ಕೆ ನುಗ್ಗಿಹೋದರು. ಇದರಿಂದ ಸ್ಟೇಷನ್ನಿನ ಕೆಲಸವೆಲ್ಲಾ ನಿಂತುಹೋಗುವಂತಾಯಿತು. ಸ್ಟೇಷನ್ನಿನವರು ತಮಗೆ ಸಹಾಯವನ್ನು ಕೋರಿಕೊಳ್ಳಲಾಗಿ ಅಲ್ಲಿದ್ದ ಪೊಲೀಸರೂ ಪ್ಲಾಟ್‌ಫಾರಮ್ಮಿನಮೇಲೆ ನಿಂತಿದ್ದ ಇಂಗ್ಲೀಷ್ ಸೋಲ್ಜರುಗಳೂ ಮೆಸಪೊಟೋಮಿಯಾದಿಂದ ತಮ್ಮ ತಮ್ಮ ಮನೆಗಳಿಗೆ ತೆರಳಲು ಸಿದ್ಧರಾಗಿ ಅಲ್ಲೇ ನಿಂತಿದ್ದ ೨೦೦ ಮಂದಿ ಮಣಿಪುರದ ಗೂರ್ಖಾ ಸಿಪಾಯಿಗಳೂ ಕೂಡ ಸೇರಿ ಗುಂಪಿನ ಜನರನ್ನೆಲ್ಲಾ ಹೊರಕ್ಕೆ ಓಡಿಸಿದರು. ಅದರೂ ಪ್ರಜೆಗಳಲ್ಲಿ ಶಾಂತಿಯೇ ಆಗಲೀ ಭೀತಿಯೇ ಆಗಲೀ ಕಾಣಲಿಲ್ಲ. ಅವರು ಏನೋ ಪ್ರಮಾದವನ್ನುಂಟುಮಾಡುವವರಾಗಿಯೇ ತೋರುತ್ತಿದ್ದರು. ಆಗ ಸ್ಪೆಷಲ್ ಅಧಿಕಾರಿಗಳು ಕೋಟೆಯ ಸೇನಾಧಿಕಾರಿಗಳ ಸಹಾಯವನ್ನು ಕೋರಿಕೊಂಡರು. ಅವರು ೨೦-೩೦ ಮಂದಿ ಸೋಲ್ಜರುಗಳನ್ನು ಸ್ಟೇಷನ್ನಿಗೆ ಕಳುಹಿಸಿಕೊಟ್ಟರು. ಮತ್ತೂ ಪೊಲೀಸ್ ಸೂಪರಿಂಟೆಂಡೆಂಟರು ಕೆಲ ಮಂದಿ ಅಶ್ವಸೈನ್ಯದವರೊಡನೆ ಅಲ್ಲಿಗೆ ಬಂದರು. ಅಷ್ಟರಲ್ಲಿ ಪ್ರಜೆಗಳು ಅಲ್ಲಿನ ಅ|| ಸೂಪರಿಂಟೆಂಡೆಂಟರನ್ನೂ ಸೋಲ್ಜರನ್ನೂ ಮುತ್ತಿಕೊಂಡಿದ್ದರು. ಒಬ್ಬ ಸೋಲ್ಜರಿನ ಕೈಯಲ್ಲಿದ್ದ ತುಪಾಕಿಯನ್ನು ಗುಂಪಿನವನೊಬ್ಬನು ಸೆಳೆದುಕೊಳ್ಳಲು ಪ್ರಯತ್ನಿಸಿ ಏಟನ್ನು ತಿಂದನು. ಗುಂಪನ್ನು ಚದರಿಸಲು ಪೊಲೀಸರು ಮೊದಲಾದವರು ಮಾಡಿದ ಪ್ರಯತ್ನವು ವ್ಯರ್ಥವಾಯಿತು. ಸ್ಥಿತಿಯು ಕಠಿನವಾಗುತ್ತ ಬಂದಿತು. ಅದನ್ನು ಶಾಂತಪಡಿಸುವುದಕ್ಕಾಗಿ ಸೂಪರಿಂಟೆಂಡೆಂಟರು ತುಪಾಕಿಗಳನ್ನು ಹಾರಿಸುವುದಕ್ಕೆ ಅಪ್ಪಣೆಮಾಡಿ ಪ್ರಜೆಗಳನ್ನು ಕ್ವೀನ್ಸ್ ತೋಟದಕಡೆಗೆ ಸಾಗುವುದಕ್ಕೆ ಆಜ್ಞಾಪಿಸಿದರು. ಅದರಮೇಲೆ ಗುಂಪಿನವರು ಇಟ್ಟಿಗೆಗಳನ್ನೂ ಕಲ್ಲುಗಳನ್ನೂ ಇವರುಗಳಮೇಲೆ ಬೀರುವುದಕ್ಕೆ ಪ್ರಾರಂಭಿಸಿದರು. ಅಡಿಷನಲ್ ಜಿಲ್ಲಾ ಮೇಜಿಸ್ಟ್ರೇಟು, ಪೊಲೀಸು ಸೂಪರಿಂಟೆಂಡೆಂಟು, ಅ|| ಸೂಪರಿಂಟೆಂಡೆಂಟು, ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟು ಮೊದಲಾಗಿ ಅನೇಕರಿಗೆ ಕಲ್ಲುಗಳ ಏಟು ಬಿದ್ದುವು. ಕಠಿನ ಪ್ರತೀಕಾರವಿಲ್ಲದೆ ಭಯಪಡಿಸಿಯೇ ಗುಂಪನ್ನು ಚದರಿಸಬೇಕೆಂದು ಅಧಿಕಾರಿಗಳು ೨ ಗಂಟೆಯಹೊತ್ತು ಸಾಹಸಪಟ್ಟರೂ ಫಲವಾಗದಿದ್ದುದರಮೇಲೆ ಇನ್ನು ಸ್ಥಿತಿಯು ಭಯಂಕರವಾಗುವುದೆಂದು ತಿಳಿದು ೨ ತುಪಾಕಿಗಳನ್ನು ಜನರಮೇಲೆ ಹಾರಿಸುವುದಕ್ಕೆ ಅಪ್ಪಣೆಮಾಡಿದರು. ೨ ಗುಂಡುಗಳೇಟಿಗೆ ಇಬ್ಬರು ನೆಲಕ್ಕುರುಳಿದರು. ಅದರಮೇಲೆ ಉಳಿದವರೆಲ್ಲಾ ಹಿಂದೆಗೆದು ಓಡುವುದಕ್ಕುಪಕ್ರಮಿಸಿದರು. ಅವರನ್ನೆಲ್ಲಾ ಪೊಲೀಸರು ಕ್ವೀನ್ಸ್ ತೋಟದೊಳಕ್ಕೆ ಓಡಿಸಿದರು. ಟೌನ್‌ಹಾಲಿನವರೆಗೂ ಪೊಲೀಸರು ಕಾವಲಾಗಿ ನಿಲ್ಲಿಸಲ್ಪಟ್ಟರು. ಕ್ವೀನ್ಸ್ ತೋಟದ ಸುತ್ತಲೂ ಗೂರ್ಖಾಸೈನಿಕರು ನಿಲ್ಲಿಸಲ್ಪಟ್ಟರು. ಚಾಂದಿನೀಚೌಕದ ಹತ್ತಿರ ಬೇರೆ ಜನರ ಗುಂಪು ಭಯಂಕರವಾಗಿದ್ದಿತು. ಟೌನ್‌ಹಾಲಿನ ಹತ್ತಿರ ೨ ಗುಂಡು ಹಾರಿದ ಸುದ್ದಿಯನ್ನು ಕೇಳಿ ಪೊಲೀಸ್ ಸೂಪರಿಂಟೆಂಡೆಂಟರು ಅಲ್ಲಿಗೆ ಹೋದರು. ಅಲ್ಲಿ ೧೫ ಮಂದಿ ಪೊಲೀಸರನ್ನೂ ೧೫ ಮಂದಿ ಸೋಲ್ಜರುಗಳನ್ನೂ ಪ್ರಜೆಗಳು ಸುತ್ತುಗಟ್ಟಿ ಕಲ್ಲಿನ ಮಳೆಯನ್ನು ಸುರಿಸುತ್ತಿದ್ದರು. ಕ್ವೀನ್ಸ್ ತೋಟದ ಪ್ರಜೆಗಳು ಬಹಳ ಅವಾಂತರವನ್ನು ಮಾಡುತ್ತ ಇರಲು ಪೊಲೀಸರಿಗೂ ಸೋಲ್ಜರುಗಳಿಗೂ ಕಲ್ಲಿನ ಏಟುಗಳು ಅಪಾಯಕರವಾಗಿ ಬೀಳುವುವೆಂದು ಕಂಡುಬಂದಾಗ ಮತ್ತೊಂದುಸಲ ಪ್ರಜೆಗಳಮೇಲೆ ಗುಂಡನ್ನು ಹಾರಿಸುವುದಕ್ಕೆ ಅಪ್ಪಣೆಮಾಡಲಾಯಿತು. ೨-೩ ಗುಂಡಿನೇಟುಗಳು ತಗುಲಿ ಮೂವರು ಸತ್ತರು. ಇನ್ನು ಕೆಲವರಿಗೂ ಏಟು ಬಿದ್ದಿರಬಹುದು. ಅಷ್ಟಕ್ಕೆ ಗದ್ದಲವೆಲ್ಲಾ ಅಡಗಿತು. ಗುಂಪಿನವರೆಲ್ಲಾ ತಮ್ಮ ತಮ್ಮ ಮನೆಗಳಿಗೆ ಹೋಗಿ ಸೇರಿಕೊಂಡರು. ತಾ|| ೧ ರ ವರೆಗೆ ಗೊತ್ತಾದಮಟ್ಟಿಗೆ ಒಟ್ಟು ೮ ಮಂದಿ ಗುಂಡಿನೇಟಿನಿಂದ ಸತ್ತರೆಂತಲೂ, ೧೨ ಅಥವಾ ೧೩ ಮಂದಿಗಳು ವೈದ್ಯಾಲಯದಲ್ಲಿ ಚಿಕಿತ್ಸೆಗೊಳ್ಳುತ್ತಿರುವರೆಂತಲೂ, ಮಕ್ಕಳು ಮರಿಗಳಾರಿಗೂ ಏಟೂ ಬಿದ್ದಿಲ್ಲ ಸಾಯಲೂ ಇಲ್ಲವೆಂತಲೂ, ಯಂತ್ರದ ಫಿರಂಗಿಗಳನ್ನು ತರಿಸಿದ್ದ ಮಾತು ನಿಜವಾದರೂ ಅದು ಉಪಯೋಗಿಸಲ್ಪಡಲೇ ಇಲ್ಲವೆಂತಲೂ, ಸೋಲ್ಜರುಗಳೂ ದೇಶೀಯ ಪದಾತಿ ದಳದವರೂ ಶಾಂತಿಯಿಂದಲೇ ಕೆಲಸವನ್ನೆಲ್ಲಾ ನಡೆಯಿಸಿದರೆಂತಲೂ ಆ ಪ್ರಕಟನೆಯಲ್ಲಿ ಹೇಳಲ್ಪಟ್ಟಿದೆ.

ಸ್ವಾಮಿ ಶ್ರದ್ಧಾನಂದರವರು (ಮಹಾತ್ಮಾ ಮುನ್ಷಿರಾಮ್‌ರವರು) ದಿಲ್ಲಿಯಲ್ಲಿ ಆ ದಿನ ಸತ್ಯಾಗ್ರಹಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಆ ದಿನದ ಚರ್ಯೆಯನ್ನು ವೃತ್ತಪತ್ರಿಕೆಗಳಿಗೆ ಬರೆದಿರುವುದರಲ್ಲಿ ವೈದ್ಯಶಾಲೆಯೊಳಗೆ ಇನ್ನೂ ೧೧ ಮಂದಿಗಳು ಬಿದ್ದಿರುವರೆಂದೂ, ಅವರಲ್ಲಿ ಮೂವರು ಬಾಲಕರೆಂದೂ, ಸತ್ತವರ ೮ ಹೆಣಗಳು ಇಷ್ಟರೊಳಗಾಗಿ ಭೂಸ್ಥಾಪಿತವಾದುವೆಂದೂ, ೩೦ ಮಂದಿಗಳು ಏಟನ್ನು ತಿಂದು ತಂತಮ್ಮ ಮನೆಗಳಲ್ಲಿರುವರೆಂದೂ, ಇನ್ನೂ ೨೦ ಮಂದಿಗಳು ಏನಾದರೋ ಗೊತ್ತಾಗಿಲ್ಲವೆಂದು ಪ್ರಜೆಗಳು ತಿಳಿದಿರುವರೆಂದೂ, ತಿಳಿಯಿಸಿದ್ದಾರೆ. ಮತ್ತೂ ಸರ್ಕಾರದವರೇ ಮೊದಲು ಪ್ರಜೆಗಳ ಮೇಲೆ ಗುಂಡನ್ನು ಹೊಡೆಯಿಸಿದರೆಂದು ಹೇಳಿರುತ್ತಾರೆ. ಇವೆರಡು ಪ್ರಕಟನೆಗಳಲ್ಲೂ ಒಂದಕ್ಕೊಂದಕ್ಕೆ ಸ್ವಲ್ಪ ಹೆಚ್ಚು ಕಡಿಮೆಯಿದ್ದರೂ ದಿಲ್ಲಿಯ ಸತ್ಯಾಗ್ರಹ ದೀಕ್ಷಾಕರುಗಳು ಆತ್ಮನಿಗ್ರಹವನ್ನು ಮಾಡಿಕೊಳ್ಳಲಾರದೆ ಕೋಪತಾಪಗಳಿಗೂ ಪ್ರತಿಕ್ರಿಯೆ ಮಾಡುವುದಕ್ಕೂ ಇತರರನ್ನು ಬಲಾತ್ಕರಿಸುವುದಕ್ಕೂ ಯತ್ನಿಸಿದ ವಿಷಯವು ಮಾತ್ರ ಸಿದ್ಧವಾಗಿರುತ್ತದೆ. ಇದು ಸತ್ಯಾಗ್ರಹಸಂಕಲ್ಪದ ಮೂಲಕ್ಕೇ ವಿರುದ್ಧವಾದುದು ಘಾತಕ್ಯಕವಾದುದು ಎಂಬುದನ್ನೂ ಈ ದೀಕ್ಷೆಯ ಪುರೋಹಿತರುಗಳೇ ಒಪ್ಪದೆ ಇರಲಾರರು. ಸತ್ಯಾಗ್ರಹಿಗಳ ಪ್ರಯತ್ನವೆಲ್ಲಾ ಇಂಥ ಪರಿಣಾಮವನ್ನೇ ಹುಟ್ಟಿಸುತ್ತ ಬಂದರೆ ಮ|| ಗಾಂಧಿಯವರಿಗೆ ಇದುವರೆಗೆ ಈ ವ್ರತಮೂಲಕದಿಂದ ಉಂಟಾಗಿದ್ದ ಗೌರವಪ್ರತಿಷ್ಠೆಗಳಿಗೆಲ್ಲಾ ಭಂಗಬರದೆ ಹೋಗುವುದಿಲ್ಲ. ಇದನ್ನು ತಿಳಿದೆಯೇ ಮ|| ಗಾಂಧಿಯವರು ಏಪ್ರಿಲ್ ತಾ|| ೩ ರಲ್ಲಿ ಮದರಾಸು ಸತ್ಯಾಗ್ರಹ ಸಭಾಧ್ಯಕ್ಷರಾಗಿದ್ದ ಮ|| ಎಸ್. ಕಸ್ತೂರಿ ರಂಗಯ್ಯಂಗಾರರಿಗೆ ಬೊಂಬಾಯಿಯಿಂದ ಒಂದು ತಂತ್ರೀವಾರ್ತೆಯನ್ನು ಕೊಟ್ಟು, ಅದರಲ್ಲಿ—"ದಿಲ್ಲಿಯೊಳಗೆ ನಡೆದ ಗದ್ದಲದಿಂದ ಸತ್ಯಾಗ್ರಹಿಗಳ ಮನಸ್ಸು ದೃಢವಾಗಿರಬೇಕು. ಅವರು ಚಂಚಲಚಿತ್ತರಾಗಬಾರದು. ಭಾನುವಾರ ಮದ್ರಾಸಿನಲ್ಲಿ ನಡೆಯುವ ಸತ್ಯಾಗ್ರಹ ಸಭೆಯಲ್ಲಿ ಉಪನ್ಯಾಸಗಳು ಆಗ್ರಹಭಾವವಿಲ್ಲದೆ ನಡೆಯಿಸಲ್ಪಡಬೇಕು. ನಮ್ಮ ಪ್ರಯತ್ನವು ಘನತರವೂ ಪವಿತ್ರವೂ ಆಗಿರುವುದರಿಂದ ಆಗ್ರಹಪ್ರಕಟನದ ಮೂಲಕ ಅದಕ್ಕೆ ಕಳಂಕವನ್ನುಂಟುಮಾಡಿಕೊಳ್ಳಬಾರದು" ಎಂದು ಎಚ್ಚರಿಕೆಯನ್ನು ಹೇಳಿರುತ್ತಾರೆ. ಇನ್ನುಮುಂದಾದರೂ ದಿಲ್ಲಿಯಲ್ಲಿ ನಡೆದಂಥ ಅನಾಹುತಕ್ಕೆ ಸತ್ಯಾಗ್ರಹದೀಕ್ಷಿತರು ಅವಕಾಶವನ್ನು ಕೊಡದಿರುವುದು ಮೇಲು. ಸತ್ಯಾಗ್ರಹವು ನಿಜವಾಗಿ ಫಲಿಸಬೇಕಾದರೆ ಆ ವ್ರತದೀಕ್ಷಿತರ ಚರ್ಯೆಗಳು ಪ್ರಭುತ್ವದವರ ಮನಸ್ಸಿನಲ್ಲಿ ಕನಿಕರವನ್ನು ಹುಟ್ಟಿಸಬೇಕು. ಇಲ್ಲವೆ ಪ್ರಭುತ್ವದವರಿಗೆ ಅಂಥ ಬುದ್ಧಿಪ್ರೇರಣೆಯು ದೈವಕಟಾಕ್ಷದಿಂದ ಲಭಿಸಬೇಕು. ಹಾಗಾಗುವುದಕ್ಕೆ ತಕ್ಕ ಸಾತ್ತ್ವಿಕನಿಯಮಗಳನ್ನು ತಪಶ್ಚರಣದಂತೆ ಸತ್ಯಾಗ್ರಹದೀಕ್ಷಿತರು ಆಚರಿಸಿ ಚರಿತಾರ್ಥರಾಗಬೇಕು. ಪ್ರಹ್ಲಾದ ಮೊದಲಾದವರುಗಳು ಹೀಗೆ ಮಾಡಿದರೇ ಹೊರತು ಹೆದರಿಸಿ ಪ್ರತಿರೋಧಿಸಿ ಇಷ್ಟಾರ್ಥವನ್ನು ಹೊಂದಲಿಲ್ಲ. ಸತ್ಯಾಗ್ರಹದೀಕ್ಷಿತರು ಬಾಹ್ಯಪಟಾಟೋಪದ ಬೆದರಿಕೆಯಿಂದ ಮೆರೆದು, ಪ್ರಭುತ್ವದವರನ್ನು ಅಂಜಿಸಿ ಇಷ್ಟಾರ್ಥವನ್ನು ಪಡೆಯುತ್ತೇವೆಂದು ನೆನೆದರೆ ಅದು ಪ್ರಭುತ್ವದವರ ಮನಸ್ಸನ್ನು ಮತ್ತಷ್ಟು ಕಠಿನಗೊಳಿಸಿ ಇನ್ನಷ್ಟು ಅನರ್ಥವನ್ನೇ ಉಂಟುಮಾಡಿ, ತನ್ನ ನಾಮವನ್ನು ಸತ್ಯಾಗ್ರಹವೆಂಬುದಕ್ಕೆ ಪ್ರತಿಯಾಗಿ ದುರಾಗ್ರಹವೆನ್ನಿಸಿಕೊಂಡೀತೇ ಹೊರತು ಮತ್ತೇನೂ ಇಲ್ಲ. ಅಲ್ಲದೆ ಸತ್ಯಾಗ್ರಹಿಗಳು ಆತ್ಮನಿಗ್ರಹಶಕ್ತಿಯಿಲ್ಲದ ಸಾಮಾನ್ಯಜನರನ್ನೆಲ್ಲಾ ಈ ದೀಕ್ಷೆಗೆ ಒಳಗಾಗುವಂತೆ ಬಲವಂತಪಡಿಸುವುದು ಕೂಡ ಅನರ್ಥಕಾರಿಯು. ಶಾಂತದಾಂತರಲ್ಲದ ಮನುಷ್ಯರುಗಳು ಈ ಅಸಿಪತ್ರವ್ರತವನ್ನಾಚರಿಸಿ ಉತ್ತೀರ್ಣರಾಗುವುದು ಅಸಂಭವ. ದೇಶದಲ್ಲಿ ಆತ್ಮನಿಗ್ರಹವುಳ್ಳ ಜನರು ಬಹು ವಿರಳ. ಅದುಕಾರಣವೇ ಈ ಸತ್ಯಾಗ್ರಹವ್ರತವು ಕಾಲೋಚಿತವಾದುದಲ್ಲವೆಂದು ಭರತಖಂಡದ ಹಿತೈಷಿಗಳಾದ ಅ|| ಬ್ಯಾನರ್ಜಿ, ವಾಚಾ ಮೊದಲಾದ ಅನೇಕಾನೇಕ ಮಹಾಜನರು ಅಭಿಪ್ರಾಯಪಟ್ಟು ಜನರಿಗೆ ಎಚ್ಚರಿಕೆ ಹೇಳಿರುವರು. ಪ್ರಮುಖ ದೇಶಭಕ್ತರನೇಕರು ಈಗ್ಗೂ ಸತ್ಯಾಗ್ರಹವ್ರತಕ್ಕೆ ರುಜುಹಾಕಿರುವುದಿಲ್ಲ. ಇದುವರೆಗೆ ಅನುಮತಿ ಕೊಟ್ಟಿದ್ದವರಲ್ಲೂ ಕೆಲಕೆಲವರು ಕಳೆದುಕೊಳ್ಳುತ್ತಿರುವರು. ಬೊಂಬಾಯಿಯ ಸುಪ್ರಸಿದ್ಧ ದೇಶಭಕ್ತರಾದ ಮ|| ಪಿ. ಕೆ. ತಿಲಾಂಗ್‌ರವರು ಮೊದಲಾದ ಕೆಲವರು ಹೀಗೆ ತಮ್ಮ ರುಜುಗಳನ್ನು ಹಿಂದೆಗೆದುಕೊಂಡರೆಂದು ಪ್ರಕಟವಾಗಿದೆ. ಮದ್ರಾಸಿನ ಪ್ರಸಿದ್ಧ ದೇಶಭಕ್ತರಲ್ಲಿ ಸರ್ ಶಿವಸ್ವಾಮಯ್ಯರೇ ಮೊದಲಾದ ಕೆಲವರು ಸತ್ಯಾಗ್ರಹದ ದಾರಿಯನ್ನು ಅನುಮೋದಿಸದೆ, ರೌಲತ್ ಶಾಸನದ ಉಪಸಂಹಾರಕ್ಕಾಗಿ ಸಾರ್ವಭೌಮರಲ್ಲಿ ವಿಜ್ಞಾಪಿಸಿ ಅಪ್ಪಣೆಮಾಡಿಸಬೇಕೆಂದು ಸ್ಟೇಟ್ ಸೆಕ್ರೆಟರಿಯವರಿಗೆ ಪ್ರಾರ್ಥನೆಮಾಡಿರುವರು. ಈ ದೂರದರ್ಶಿಗಳೆಲ್ಲರ ಹಿತವಾದಗಳನ್ನು ಗಮನಿಸಿದರೂ ಸದ್ಯಃ ಸತ್ಯಾಗ್ರಹವ್ರತದೀಕ್ಷೆಯ ಗೊಂದಲವನ್ನೆಬ್ಬಿಸುವುದು ವ್ಯರ್ಥವೆಂತಲೇ ಗೊತ್ತಾಗುವುದು.

ಅಲ್ಲದೆ ರೌಲತ್ ಶಾಸನವೇರ್ಪಟ್ಟುದಕ್ಕಾಗಿ ರೈತರು ವರ್ತಕರು ಕಸಬುದಾರರು ಮೊದಲಾದ ಸಾಮಾನ್ಯಪ್ರಜೆಗಳಾರೂ ಭಯಪಡಬೇಕಾದುದಿಲ್ಲ. ಇಂಥ ಪ್ರಜೆಗಳ ರಕ್ಷಣೆಗಾಗಿಯೇ ಆ ಶಾಸನವು ಹುಟ್ಟಿದೆ. ಆ ಶಾಸನವು ನಿಷೇಧಿಸಿರುವಂಥ ರಾಜದ್ರೋಹದದಾರಿಯಲ್ಲಿ ಯಾರು ಕಾಲಿಡುವರೋ ಅಂಥ ದುರ್ಮಾರ್ಗಿಗಳನ್ನು ಶಿಕ್ಷಿಸುವುದಕ್ಕಾಗಿ ಅದು ಹುಟ್ಟಿದೆ. ಆ ದಾರಿಯಲ್ಲಿರುವವರಿಗೆ ಅದು ಭೀತಿಯನ್ನುಂಟುಮಾಡಬಹುದೇಹೊರತು ಇತರರಿಗೆ ಅದರ ಉದಯದಿಂದ ಯಾವ ಉಪದ್ರವವೂ ಸಂಘಟಿಸುವುದಿಲ್ಲ. ಈ ಕಾರಣದಿಂದಲೂ ಪ್ರಜಾಸಾಮಾನ್ಯವು ಸತ್ಯಾಗ್ರಹ ಪಟಾಟೋಪದಗೊಂದಲದಲ್ಲಿ ಸಿಕ್ಕಿಕೊಳ್ಳಬೇಕಾದ ಅವಶ್ಯಕತೆಯಿರುವುದಿಲ್ಲ. ಹೀಗಿರುವಲ್ಲಿ ಈ ಶಾಸನದ ವಿಷಯವಾಗಿ ಸಾಮಾನ್ಯ ಪ್ರಜೆಗಳ ಮನಸ್ಸಿನಲ್ಲೆಲ್ಲಾ ಭೀತಿಯೂ ಅಸಮಾಧಾನವೂ ಹುಟ್ಟುವಂತೆ ಮಾಡುವುದಕ್ಕೆ ಸುಳ್ಳುಸುದ್ದಿಗಳನ್ನು ಉಪನ್ಯಾಸಗಳ ಮೂಲಕವೂ ಪತ್ರಿಕಾಪ್ರಕಟನ ಮೂಲಕವೂ ಹರಡತಕ್ಕವರು ಪ್ರಜಾದ್ರೋಹಿಗಳಲ್ಲದೆ ದೇಶಹಿತಕಾರಿಗಳೆಂದು ಹೇಳಿಸಿಕೊಳ್ಳಲು ಅರ್ಹರಲ್ಲ. ಅಂಥವರ ಮಾತುಗಳಿಗೆ ಸಾಮಾನ್ಯಪ್ರಜೆಗಳು ಮರುಳಾಗಬಾರದು. ದೇಶದಲ್ಲಿ ಯಾವ ತೆರದಿಂದಲಾದರೂ ಅಸಮಾಧಾನವನ್ನು ಹಬ್ಬಿಸಿ, ಪ್ರಭುತ್ವದವರ ಕಾರ್ಯಕ್ಕೆ ತೊಡಕನ್ನೂ, ಅಧಿಕಾರಿಮಂಡಲಿಗೆ ಕಿರುಕುಳವನ್ನೂ ಹೆಚ್ಚಿಸಿ, ಇಲ್ಲಿಯ ಅಧಿಕಾರಿಮಂಡಲದ ಕಾರ್ಯನಿರ್ವಾಹ ಧೋರಣೆಯಲ್ಲಿ ನ್ಯೂನತೆಯುಂಟೆಂದು ಸೀಮೆಯಲ್ಲಿರುವ ಸಾಮ್ರಾಜ್ಯಪ್ರಭುತ್ವದವರ ಕಿವಿಗೆ ಬೀಳುವಂತೆ ಮಾಡಿದರೆ ತಮ್ಮ ಕಾರ್ಯಸಾಧನೆಗನುಕೂಲವಾಗುವುದೆಂದು ಭ್ರಮಿಸಿರುವ ಕೆಲವುಜನರು "ತಿಗುಳನು ತಾಕೆಡುತ್ತ ವಿಳುನೆರೆಯನ್ನೂ ಕೆಡಿಸಿದನು" ಎಂಬ ಗಾದೆಗೆ ಸರಿಯಾಗಿ ಮಾಡುತ್ತಿದ್ದಾರೆ. ಅಂಥವರುಗಳ ಮಾತಿಗೆ ದೇಶಶಾಂತಿಯನ್ನು ಕೋರುವ ಜನರಾರೂ ಮರುಳಾಗಬಾರದು.

ರೌಲತ್ ಶಾಸನದ ಸಂಬಂಧವಾಗಿ ಪ್ರಜೆಗಳಲ್ಲಿ ದುರಭಿಪ್ರಾಯವನ್ನು ಹುಟ್ಟಿಸುವುದಕ್ಕಾಗಿ ಕೆಲರು ಮಾಡುತ್ತಿರುವ ಜಘನ್ಯಪ್ರಯತ್ನವನ್ನು ಖಂಡಿಸುವುದಕ್ಕಾಗಿ ಇಂಡ್ಯಾ ಸರ್ಕಾರದವರು ಏಪ್ರಿಲ್ ತಾ|| ೫ ರಲ್ಲಿ ಒಂದು ಪ್ರಕಟನೆಯನ್ನು ಮಾಡಿರುತ್ತಾರೆ. ಏನೆಂದರೆ—"ಈ ಶಾಸನದ ವಿಷಯವಾಗಿ ಸಾಮಾನ್ಯಜನರಲ್ಲಿ ದುರಭಿಪ್ರಾಯವನ್ನು ಹುಟ್ಟಿಸುವುದಕ್ಕೆ ಪ್ರಯತ್ನಿಸಿರುವರೆಂಬ ಸಂಗತಿಯು ನಿರಾಧಾರವಾಗಿಲ್ಲ. ದಿಲ್ಲಿಯಲ್ಲಿ ಅನೇಕಜನರು ಇಂಥವರುಗಳ ಮಾತನ್ನೇ ನಂಬುತ್ತಿರುವರೆಂದು ಕಾಣುತ್ತದೆ. ಮೂರುನಾಲ್ಕುಮಂದಿಗಳು ಯಾವಲ್ಲಾದರೂ ಸೇರಿ ಮಾತನಾಡುತ್ತಿರುವುದನ್ನು ಕಂಡರೆ ಯಾವ ಪೊಲೀಸುದ್ಯೋಗಿಯಾದರೂ ಯಾವ ಅಧಿಕಾರಿಯ ಅಪ್ಪಣೆಯನ್ನೂ ಪಡೆಯದೆಯೇ ಅವರನ್ನು ಹಿಡಿದು ಸೆರೆಹಾಕುವುದಕ್ಕೆ ಈ ಶಾಸನವು ಅಧಿಕಾರವನ್ನು ಕೊಟ್ಟಿರುತ್ತದೆ ಎಂದು ಅನೇಕರಲ್ಲಿ ಅಭಿಪ್ರಾಯ ಹುಟ್ಟಿದೆ. ಇಂಥ ಅಭಿಪ್ರಾಯವೇ ದಿಲ್ಲಿಯಲ್ಲಿ ನಿನ್ನೆ ತಾನೇ ನಡೆದ ಗದ್ದಲಕ್ಕೆ ಕಾರಣವು. ಅಂಥ ಸ್ವಭಾವದ ನಿಬಂಧನೆ ಯಾವುದೂ ಈ ಶಾಸನದಲ್ಲಿಲ್ಲವೆಂಬುದನ್ನು ಹೇಳಬೇಕಾಗಿಲ್ಲ. ತಕ್ಕ ಅಧಿಕಾರಿಯಿಂದ ಅಧಿಕಾರಪತ್ರವನ್ನು ಪಡೆಯದೆ ಪೊಲೀಸರು ಯಾರನ್ನೂ ಹಿಡಿದು ವಿಚಾರಣೆ ಮಾಡಲು ಅಧಿಕಾರವನ್ನು ಕೊಡುವ ನಿಬಂಧನೆಯು ಈ ಶಾಸನದಲ್ಲಿಲ್ಲ. ಅಂಥ ಅಧಿಕಾರವುಳ್ಳುದು ೩೪ ನೆಯ ಸೆಕ್ಷನ್ನಿನ ೧ನೆ ನಿಬಂಧನೆಯ ಪ್ರಕಾರ ೧ ಮಾತ್ರ ಇದೆ. ಅದಕ್ಕೂ ಕೂಡ ಸ್ಥಳೀಕಪ್ರಭುತ್ವದವರ ಅಧಿಕಾರಪತ್ರಿಕೆಯಿದ್ದೇ ತೀರಬೇಕಾಗಿದೆ. ಮತ್ತೂ ಹಾಗೆ ಹಿಡಿಯುವಾಗ ಅಪರಾಧಿಗೆ ಮೊದಲೇ ನೋಟೀಸು ಕೊಡಲ್ಪಡುತ್ತದೆ. ಅಲ್ಲದೆ ಯಾವುದಾದರೊಂದು ಪ್ರಾಂತದಲ್ಲಿ ಅರಾಜಕಪ್ರಯತ್ನವು ವಿಶೇಷವಾಗಿ ಪ್ರಬಲಿಸಿಕೊಂಡಿದೆಯೆಂಬ ಸಂಗತಿಯು ವೈಸ್ರಾಯರಿಗೂ ಅವರ ಕೌನ್ಸಿಲ್ಲಿಗೂ ಗೊತ್ತಾಗಿ ಅವರು ಅದನ್ನು ನಿರ್ಧರಪಡಿಸಿದಲ್ಲದೆ ಈ ಶಾಸನವನ್ನು ಆ ಪ್ರಾಂತಕ್ಕೆ ವ್ಯವಹಾರಗೊಳಿಸಲು ಅಪ್ಪಣೆ ಮಾಡುವ ಹಾಗೂ ಇಲ್ಲ" ಎಂದು ಪ್ರಕಟಿಸಿರುತ್ತಾರೆ. ಬಾಧ್ಯರಲ್ಲದ ಜನರು ದುರಭಿಪ್ರಾಯವನ್ನು ದೇಶದಲ್ಲಿ ಹಬ್ಬಿಸಿ ಅನರ್ಥವನ್ನು ಮಾಡುತ್ತಿರುವುದನ್ನು ತಪ್ಪಿಸಿ ಶಾಂತಿಯನ್ನು ಕಾಪಾಡುವ ಕಷ್ಟಕ್ಕಾಗಿಯೇ ಪ್ರಭುತ್ವದವರು ಇಂಥ ಪ್ರಕಟನವನ್ನು ಮಾಡುವ ಹೊತ್ತು ಬಂದಿರುತ್ತದೆ.

ಸತ್ಯಾಗ್ರಹವು ದುರಾಗ್ರಹಕ್ಕೆ ತಿರುಗಿತು.

ರೌಲತ್ ಶಾಸನವನ್ನು ನಿರೋಧಿಸುವುದಕ್ಕೆ ಮಾತ್ರವೆಂದು ಆರಂಭಿಸಲ್ಪಟ್ಟ ಸತ್ಯಾಗ್ರಹವ್ರತವು ಈಗ ಇತರ ರಾಜಶಾಸನಗಳ ಧಿಕ್ಕಾರಕ್ಕೂ ತೊಡಗಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಸಾಮ್ರಾಜ್ಯಶಾಸನ ಸಭೆಯಿಂದ ವರ್ಷಾಂತರಗಳ ಹಿಂದೆ ಏರ್ಪಡಿಸಲ್ಪಟ್ಟು ವ್ಯವಹಾರದಲ್ಲಿರುವ ದೇಶರಕ್ಷಕ ಶಾಸನ ಮುದ್ರಣಶಾಸನಗಳನ್ನು ಕೂಡ ವಿರೋಧಿ ನಡೆಯಬೇಕೆಂದು ಬೊಂಬಾಯಿ ಪ್ರಾಂತದ ಕೆಲವರು ಪ್ರಮುಖರೇ ಈಗ ಪ್ರಯತ್ನಿಸಿರುವರೆಂದು ವಾರ್ತೆಗಳು ಬರುತ್ತಿವೆ. ರಾಜದ್ರೋಹಕರಗಳೆಂದು ಯಾವಯಾವ ಪತ್ರಿಕೆಗಳನ್ನೂ ಗ್ರಂಥಗಳನ್ನೂ ಸರ್ಕಾರದವರು ಇದುವರೆಗೆ ಸ್ವಾಧೀನಪಡಿಸಿಕೊಂಡು, ಇನ್ನುಮೇಲೆ ಅವನ್ನು ಯಾರೂ ಮಾರಲಾಗದು, ಕೊಳ್ಳಲಾಗದು, ಪ್ರಕಟಿಸಲಾಗದು, ಎಂದು ಶಾಸನಮಾಡಿದ್ದರೋ ಅಂಥ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಬಹಿರಂಗವಾಗಿಯೇ ಮಾರಲೂ ಪ್ರಕಟಿಸಲೂ ಬೊಂಬಾಯಿ ಸತ್ಯಾಗ್ರಹ ಸಂಘದವರು ನಿರ್ಧಾರಮಾಡಿ, ಅದರಂತೆ ನಡೆಯಿಸಲು ಉದ್ಯುಕ್ತರಾಗಿರುವುದಲ್ಲದೆ, ಅಂಥ ಗ್ರಂಥಗಳನ್ನು ಮಾರುವವರು ಅವುಗಳಮೇಲೆ ತಮ್ಮ ರುಜುವನ್ನು ಹಾಕಿಯೇ ಮಾರುತ್ತಿದ್ದಾರೆ. ಗಾಂಧಿ, ಸರೋಜಿನೀದೇವಿ, ಸೋಬಾನಿ, ಲಕ್ಷ್ಮೀದಾಸರಂಥವರೇ ಈ ಮಾರಾಟಕ್ಕೆ ನಿಂತಿದ್ದಾರೆ. ಇವರಲ್ಲಿದ್ದ ಪ್ರತಿಗಳನ್ನು ಸರ್ಕಾರದವರು ಶೋಧಿಸಿ ತೆಗೆದುಕೊಂಡುಬಿಟ್ಟರೆ, ಅಂಥವುಗಳನ್ನು ಬರೆದಾದರೂ ಮಾರಾಟಮಾಡಬೇಕೆಂದೂ ಹಿಡಿದು, ಕಾರಾಗೃಹಕ್ಕೆ ಕಳುಹಿಸಿದರೆ ತಂಟೆಮಾಡದೆ ಹೋಗುವುದಕ್ಕೂ ಸಿದ್ಧರಾಗಿರಬೇಕೆಂದೂ ನಿರ್ಧರಿಸಿಕೊಂಡಿದ್ದಾರೆ. ವೃತ್ತಪತ್ರಿಕೆಗಳನ್ನು ಹೊಸದಾಗಿ ಹೊರಡಿಸಿ, ಅವುಗಳನ್ನು ರಿಜಿಸ್ಟರ್ ಮಾಡಿಸದೆಯೇ ಬರೆದೇ ಹಂಚಬೇಕೆಂದೂ, ಸತ್ಯಾಗ್ರಹ ಪ್ರಕಟನೆಗೇ ಒಂದು ಚಿಕ್ಕ ವೃತ್ತಪತ್ರಿಕೆಯನ್ನು ಪ್ರಕಟಿಸಬೇಕೆಂದೂ ಸಿದ್ಧಮಾಡಿಕೊಂಡಿದ್ದಾರೆ. ಕಳೆದ ಸೋಮವಾರದಿಂದ ಗಾಂಧಿಯವರೇ ಸಂಪಾದಕರಾಗಿ 'ಸತ್ಯಾಗ್ರಹ' ಎಂಬ ಹೆಸರಿನ ಒಂದು ವರ್ತಮಾನ ಪತ್ರಿಕೆಯನ್ನು ರಿಜಿಸ್ಟರ್ ಮಾಡಿಸದೆಯೇ ಪ್ರಕಟಿಸುತ್ತಿದ್ದಾರೆ. ಮನಸ್ಸಾಕ್ಷಿಗೆ ಹೆದರಬೇಕೇ ಹೊರತು ಇನ್ನಾವುದಕ್ಕೂ ಭಯಪಡಬಾರದೆಂಬುದೇ ಇವರುಗಳ ಸಿದ್ಧಾಂತವಾಕ್ಯವಾಗಿದೆ. ಯಾರು ಯಾರ ಕೈಗೆ ಇಂಥ ಪ್ರಕಟನಪತ್ರಗಳು ದೊರೆಯುವುವೋ ಅವರೆಲ್ಲಾ ಅಂಥ ಇನ್ನು ಕೆಲಕೆಲ ಪ್ರತಿಗಳನ್ನು ಬರೆದು ಕಳುಹಿಸುತ್ತ ಹೀಗೆ ದೇಶದಲ್ಲೆಲ್ಲಾ ಈ ಚಳವಳಿಯನ್ನು ಹಬ್ಬಿಸಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. ಕಳೆದ ತಾ|| ೮ ರಲ್ಲಿ ಬೊಂಬಾಯಿಯೊಳಗೆ ಇಂಥ ಗ್ರಂಥಗಳ ಮಾರಾಟಕ್ಕೆ ಉಪಕ್ರಮವಾಯಿತು. ೨ ಆಣೆ ಬಾಳುವ ಪುಸ್ತಕಗಳಿಗೆ ಕೆಲರು ೫-೧೦ ರೂ. ಗಳನ್ನು ಕೂಡ ಕೊಟ್ಟು ತೆಗೆದುಕೊಳ್ಳುತ್ತಿದ್ದಾರಂತೆ. ಜಮುನಾದಾಸ್ ದ್ವಾರಕಾದಾಸ್‌ರವರು ಕೂಡ ಸ್ವತಃ ಇಂಥ ಪುಸ್ತಕಗಳನ್ನು ಬೀದಿಯಲ್ಲಿ ನಿಂತು ಮಾರುತ್ತಿದ್ದರಂತೆ. ಇದನ್ನು ನೋಡಲಾಗಿ ದೇಶಭಕ್ತರೆಂದು ಹೇಳಿಸಿಕೊಳ್ಳತಕ್ಕ ಕೆಲವರೇ ದೇಶದಲ್ಲಿ ಅಶಾಂತಿಯನ್ನು ಹಬ್ಬಿಸುವುದಕ್ಕೆ ಕೈಯಾರ ಮನಸಾರ ಎಷ್ಟು ಪ್ರಯತ್ನಪಡುತ್ತಿರುವರೆಂಬುದು ವ್ಯಕ್ತವಾಗುತ್ತಿದೆ. ಅರಿಯದ ಜನರಿಗೆಲ್ಲಾ ದುರ್ಬೋಧೆಮಾಡಿ ಶಾಸನಾತಿಕ್ರಮಣ ಮಾಡುವ ಚಾಳಿಯನ್ನು ಕಲಿಸಿಬಿಟ್ಟರೆ, ಬರುಬರುತ್ತ ಆ ದಾರಿಯು ಪ್ರಬಲಿಸಿ, ಎಷ್ಟು ಮಹಾನರ್ಥವನ್ನು ಮಾಡುವುದೆಂಬುದನ್ನು ಹೇಳಬೇಕಾಗಿಲ್ಲ. ಸರ್ಕಾರದವರ ಮೇಲೆ ಹಠತೊಟ್ಟು ಈ ದೇಶದ ಮುಂದಾಳುಗಳೆನ್ನಿಸಿಕೊಳ್ಳುವ ಕೆಲವರು ಇಂಥ ಮುಂಗೋಪದ ಅತ್ಯಾಚಾರಗಳಿಗೆ ಪ್ರೋತ್ಸಾಹಿಸುತ್ತಿರುವುದು ಪರಮಾನ್ಯಾಯವಾಗಿರುತ್ತದೆ. ದೇಶಶಾಂತಿ ರಕ್ಷಣೆಯ ಬಾಧ್ಯತೆಯನ್ನು ಹೊತ್ತಿರುವ ಪ್ರಭುತ್ವದವರು ತಮ್ಮ ಆಜ್ಞಾಭಂಗವೂ ದೇಶಶಾಂತಿಭಂಗವೂ ಆಗುತ್ತಿರುವುದನ್ನು ನೋಡಿಕೊಂಡು ಸುಮ್ಮನೆ ಎಂದಿಗೂ ಇರಲಾರರು. 'ಆಜ್ಞಾಭಂಗೋನರೇಂದ್ರಾಣಾಮಶಸ್ತ್ರವಧಮುಚ್ಯತೆ' ಎಂಬ ನೀತಿಯು ವ್ಯಕ್ತವಾಗಿರುವುದು. ಈ ಹುಡುಗಾಟಿಕೆಯ ಅನರ್ಥವನ್ನೆಲ್ಲಾ ನೋಡಿ ಜಪಮ ಸುಮ್ಮನಿರುವುದಕ್ಕೆ ಸಾಮ್ರಾಜ್ಯಪ್ರಭುತ್ವವು ಬಳೆಗಳನ್ನು ತೊಟ್ಟುಕೊಂಡಿರುವುದಿಲ್ಲ. ಮುಂದೆ ಏನೇನನರ್ಥಗಳು ಪ್ರಾಪ್ತವಾಗಲಿಕ್ಕಿರುವುವೋ ಗೊತ್ತಾಗುವುದಿಲ್ಲ. ಉಂಟಾಗುವ ದುಷ್ಪರಿಣಾಮಕ್ಕೆ ಇದರ ಮೂಲಕರ್ತರೇ ಬಾಧ್ಯರುಗಳು. ಅವರಮೇಲೆಯೇ ಇದರ ಅನಿಷ್ಟವು ಬೀಸಿಕೊಂಡು ಹೋದರೆ ಚಿಂತೆಯಿಲ್ಲ. ಪಾಪವಮಾಡುವವನೊಬ್ಬನಾದರೆ ಫಲವನ್ನನುಭವಿಸುವವರು ಅನೇಕಮಂದಿಗಳಾಗುವಂತಾದರೆ ಅದಕ್ಕಾಗಿ ಎಲ್ಲರೂ ವ್ಯಥೆಪಡಬೇಕಾಗುವುದು.

ಸತ್ಯಾಗ್ರಹ ವ್ಯಾಪನೆ.

ದಿಲ್ಲಿಯಲ್ಲಿ ಸತ್ಯಾಗ್ರಹ ಸಂಬಂಧವಾದ ಅನರ್ಥವು ನಡೆದಬಳಿಕ ಆ ಪಟ್ಟಣದಲ್ಲಿ ಎಲ್ಲವೂ ಶಾಂತವಾಗಿದೆ. ಕಳೆದ ತಾ|| ೬ ನೆ ಭಾನುವಾರ ಭರತಖಂಡದ ಮುಖ್ಯಪಟ್ಟಣಗಳಾದ ಬೊಂಬಾಯಿ, ಕಲ್ಕತ್ತಾ, ಕರಾಚಿ, ಪೂನಾ, ಸಿಮ್ಲಾ, ದಿಲ್ಲಿ, ಲಾಹೋರ್, ಮದ್ರಾಸು, ಅಲಹಾಬಾದು, ಲಕ್ನೋ, ಮೊದಲಾದ ಕಡೆಗಳಲ್ಲೂ ಅನೇಕ ಡಿಸ್ಟ್ರಿಕ್ಟು ತಾಲ್ಲೂಕು ಮುಖ್ಯಪಟ್ಟಣಗಳಲ್ಲೂ ಸತ್ಯಾಗ್ರಹ ನಿಮಿತ್ತವಾದ ಉಪವಾಸ ದೈವಪ್ರಾರ್ಥನೆಗಳೂ, ಸಭೆಗಳೂ, ಕೀರ್ತನೆಗಳೂ, ಉತ್ಸವಗಳೂ ನಡೆದಿರುತ್ತವೆ. ಕಲ್ಕತ್ತಾದಲ್ಲಿ ಪೊಲೀಸರಿಗೂ ಗುಂಪಿನವರಿಗೂ ಜಗಳವಾಗಿ ಏಟಿನಿಂದ ಕೆಲ ಪೊಲೀಸರು ವೈದ್ಯಶಾಲೆಗೆ ಸಾಗಿಸಲ್ಪಟ್ಟರು. ಬೊಂಬಾಯಿಯಲ್ಲಿ ೮ ಮಂದಿಗಳನ್ನು ಪೊಲೀಸರು ಗದ್ದಲಮಾಡಿದ ತಪ್ಪಿಗಾಗಿ ಸೆರೆಹಿಡಿದಿರುವರು. ಈ ಸತ್ಯಾಗ್ರಹವೆಂಬ ಹೆಸರಿನ ಗೋಮುಖವ್ಯಾಘ್ರದ ಸತ್ವವ್ಯಾಪನೆಗಾಗಿ ಹಲವರು ಬಲು ಸುಳ್ಳುಸುದ್ದಿಗಳನ್ನು ಪ್ರಕಟಿಸಿ ಜನರ ಮನಸ್ಸನ್ನು ಕೆಡಿಸುತ್ತಿರುವರೆಂಬ ಸಂಗತಿಯು ಹೊರಪಟ್ಟಿರುತ್ತದೆ. ಗೌರ್ನಮೆಂಟಿನವರು ಇದರ ಸಂಬಂಧವಾಗಿ ಮಾಡಿರುವ ಪ್ರಕಟನೆಯಿಂದ ಅದು ಸಿದ್ಧವಾಗಿರುತ್ತದೆ. ಮದರಾಸಿನಲ್ಲಿ ಕೆಲವರು ಜನರನ್ನು ರೇಗಿಸುವುದಕ್ಕಾಗಿ ಮಾಡಿದ ಪ್ರಕಟನೆಗಳೂ ಉಪದೇಶಗಳೂ ಯಾವ ರೀತಿಯಲ್ಲಿದ್ದುವೆಂಬುದು ಅಲ್ಲಿಯ ಪತ್ರಿಕೆಗಳಿಂದ ಗೊತ್ತಾಗುತ್ತದೆ. ಏನೆಂದರೆ—"ಈ ದಿವಸ ಎಲ್ಲರೂ ಅಂಗಡಿಗಳನ್ನು ಮುಚ್ಚಿಬಿಡಿರಿ. ಸಂಧಿಯು ಮುಗಿದುದರಿಂದ ಎಲ್ಲರೂ ಹೀಗೆ ಮಾಡಬೇಕಾಗಿದೆ. ಹಾಗೆ ಮಾಡದೆ ಇದ್ದವರ ಮೇಲೆ ಬಂದೂಕುಗಳು ಹಾರಿಸಲ್ಪಡುವುವು" "ಹೊಸ ಗೌರ್ನರವರು ಮುಂದಣ ವಾರದಲ್ಲಿ ಬರುವರು. ಅವರ ಗೌರವಾರ್ಥವಾಗಿ ಅಂಗಡಿಗಳನ್ನು ಮುಚ್ಚಿರಿ" "ವಿಚಾರಣೆ ಗಿಚಾರಣೆಯೊಂದೂ ಇಲ್ಲದೆ ಪೊಲೀಸರು ತಮಗೆ ಆಗದಿದ್ದ ಯಾರನ್ನಾದರೂ ಹಿಡಿಯುವುದಕ್ಕೂ ಸೆರೆಯಲ್ಲಿಡುವುದಕ್ಕೂ ಊರು ಬಿಟ್ಟು ಓಡಿಸುವುದಕ್ಕೂ ಹುಟ್ಟಿರುವ ಹೊಸ ಆಕ್ಟು ಹುಟ್ಟಡಗಿಹೋಗುವಂತೆ ಮಾಡುವುದಕ್ಕೆ ಸಿದ್ಧವಾಗಿರಿ. ಈ ಆಕ್ಟಿನಿಂದ ನಿಮಗೆ ಬಾಧೆಯಿಲ್ಲವೆಂದು ತಿಳಿಯಬೇಡಿರಿ. ಏಕೆಂದರೆ ಯಾವ ಪೊಲೀಸುದ್ಯೋಗಿಗಾದರೂ ನಿಮ್ಮ ಮೇಲೆ ಅನುಮಾನ ಬಂದರೆ ನಿಮಗೆ ಬೇಕಾದ ಹಿಂಸೆಯನ್ನು ಕೊಡಬಲ್ಲನು. ಪೊಲೀಸಿನವನು ನಿಮ್ಮ ಹೆಂಡಿರನ್ನು ಮೋಹಿಸಿದರೆ, ನಿಮ್ಮನ್ನು ಮೊದಲು ಸೆರೆಮನೆಗೆ ಕಳುಹಿಸಿ ಬಳಿಕ ನಿಮ್ಮ ಹೆಂಡಿರನ್ನು ತಾನು ಹಾರಿಸಿಕೊಂಡು ಹೋಗುವುದಕ್ಕೆ ಈ ಶಾಸನವು ಅನುಕೂಲಪಡಿಸಿಕೊಡುತ್ತದೆ. ದಾರಿಯಲ್ಲಿ ಇಬ್ಬರುಮೂವರು ಸೇರಿ ನಿಂತಿದ್ದರೆ ಅವರ ಮೇಲೆ ತುಪಾಕಿ ಗುಂಡನ್ನು ಹಾರಿಸುವುದಕ್ಕೆ ಈ ಶಾಸನವು ದಾರಿಮಾಡಿಕೊಟ್ಟಿದೆ. ದಿಲ್ಲಿಯಲ್ಲಿ ನಿಷ್ಕಾರಣವಾಗಿ ನಿರಪರಾಧಿಗಳಾದ ಮಹಮ್ಮದೀಯರನ್ನು ಪೊಲೀಸರು ಅನ್ಯಾಯವಾಗಿ ತುಪಾಕಿಗುಂಡಿನಿಂದ ಸುಟ್ಟರು" ಇತ್ಯಾದಿ ವಾರ್ತೆಗಳನ್ನು ಹರಡಿ ಜನರನ್ನು ಮನಸ್ಸು ಕೆಡಿಸಿ ತಮ್ಮ ಗುಂಪಿಗೆ ಸೇರಿಸಿಕೊಳ್ಳಲು ಪ್ರಯತ್ನಿಸಿರುವರಂತೆ. ದೇಶೋಪದ್ರವಕಾರಕವಾದ ಈ ದುರುಳುತನವನ್ನು ನಿರುಪಾಧಿಕವಾಗಿ ಹೀಗೆಯೇ ಹಬ್ಬಗೊಟ್ಟರೆ ಅದು ದೇಶಕ್ಕೆ ಮಹಾನರ್ಥವನ್ನು ಮಾಡದೆ ಇರಲಾರದು. ಇದನ್ನು ಕ್ಷಮ್ಯವಾದುದೆಂದು ಯಾವ ರಾಜನೀತಿಜ್ಞನೂ ಹೇಳಲಾರನು.

ಒಳದೇಶದ ವೃತ್ತಾಂತಗಳು.

ಮಿ|| ಉಟ್ಕಾರವರನ್ನು ಮೈಸೂರು ಬ್ರಿಟಿಷ್ ರೆಸಿಡೆಂಟರ ಅಸಿಸ್ಟೆಂಟರನ್ನಾಗಿ ಇಂಡ್ಯಾ ಗೌರ್ನಮೆಂಟಿನವರು ಏರ್ಪಡಿಸಿದ್ದಾರೆ.

ನಮ್ಮ ಸರ್ಕಾರದವರು ವರ್ಷಕ್ಕೆ ೫೨ ಸಾವಿರ ರೂ. ಗಳ ವೆಚ್ಚವುಳ್ಳ ಒಂದು ಹೊಸ ಡಿ. ಪಿ. ಡಬ್ಲ್ಯು. ಶಾಖೆಯನ್ನು ಸ್ಥಾಪಿಸಿದ್ದಾರೆ.

ಸಬ್ ಅಸಿಸ್ಟೆಂಟ್ ಫಾರೆಸ್ಟ್ ಕನ್ಸರ್ವೇಟರಾಗಿದ್ದ ಮಿ|| ಸಿ. ಅಬ್ದುಲ್‌ಜಬ್ಬಾರ್‌ರವರು ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಕೆಲಸಕ್ಕೆ ಹೆಚ್ಚಿಸಲ್ಪಟ್ಟಿದ್ದಾರೆ.

ಚೀಫ್‌ಜಡ್ಜರಾದ ಸರ್ ಲೆಸ್ಲಿಮಿಲ್ಲರ್‌ರವರು ತುಂಬಾ ಅಸ್ವಸ್ಥರಾಗಿದ್ದರಷ್ಟೆ. ಈಗ ಅವರು ಗುಣಮುಖವಾಗಿದ್ದಾರೆಂದು ತಿಳಿಯಿಸುವುದಕ್ಕೆ ಸಂತೋಷಿಸುತ್ತೇವೆ.

ಬರುವ ತಾ|| ೧೬ ರಿಂದ ಮೈಸೂರು ಅರಸೀಕೆರೆ ಲೋಹಮಾರ್ಗದಲ್ಲಿ ಮೈಸೂರ ನರಸೀಪುರಗಳ ಮಧ್ಯದಲ್ಲಿ ೨ ಬಂಡಿಗಳು ಹೋಗಿ ಬರುವುದಕ್ಕೆ ಏರ್ಪಾಟಾಗಿರುವುದು.

ನಮ್ಮ ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿರುವ ಮಿ|| ಟಿ. ಡೆನ್ಹಾಂ ಎಂ. ಎ. ರವರ ಉದ್ಯೋಗದವಧಿಯು ಇನ್ನೂ ೧ ವರ್ಷಕಾಲ ಹೆಚ್ಚಿಸಲ್ಪಟ್ಟಿದೆಯೆಂದು ಕೇಳುತ್ತೇವೆ.

ಚನ್ನಪಟ್ಟಣ ತಾಲ್ಲೂಕು ತಿಟ್ಟಮಾರನಹಳ್ಳಿ ವೆಂಕಟೇಗೌಡರು, ಈ ವರ್ಷ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಚನ್ನಪಟ್ಟಣಕ್ಕೆ ಬರತಕ್ಕ ಸಮಸ್ತ ವಿದ್ಯಾರ್ಥಿಗಳಿಗೂ ಊಟಕ್ಕೆ ಗ|| ಹಾಸ್ಟಲಿನಲ್ಲಿ ಏರ್ಪಾಟುಮಾಡಿರುವುದಾಗಿ ತಿಳಿಸಿರುತ್ತಾರೆ.

ಬೆಂಗಳೂರಿನಲ್ಲಿ ಆಭರಣದಾಸೆಗಾಗಿ ಮಾರ್ವಾಡಿ ಹೆಣ್ಣುಮಗುವನ್ನು ಕೊಂದ, ನಾಗ, ಯಶೋದಾ ಎಂಬಿಬ್ಬರಿಗೆ ಸೆಷನ್ಸ್ ಜಡ್ಜರು ಮಾಡಿದ್ದ ಮರಣದಂಡನೆಯನ್ನು ಅಪ್ಪೀಲ್ ಕೋರ್ಟಿನಲ್ಲಿ ರೆಸಿಡೆಂಟರು ಮರಣಾಂತ ದ್ವೀಪಾಂತರವಾಸಶಿಕ್ಷೆಗೆ ಇಳಿಸಿದರು.

ನಮ್ಮ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾದ ಮ|| ಎಚ್. ವಿ. ನಂಜುಂಡಯ್ಯನವರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ. ಆ ಕೆಲಸಕ್ಕೆ ಕಲ್ಕತ್ತಾದ ವಿಶ್ವವಿದ್ಯಾಲಯದ ಪ್ರೊಫೆಸರಾದ ಮ|| ವ್ರಜೇಂದ್ರಲಾಲಸೀಲ್ ಎಂ. ಎ. ರವರು ನಿಯಮಿಸಲ್ಪಡುವರೆಂದು ಕೇಳುತ್ತೇವೆ.

ಹಾಸನ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿದ್ದ ಡಾ|| ಜಗನ್ನಾಥಪಿಳ್ಳೆಯವರು ಅಸ್ವಸ್ಥರಾಗಿರುವ ತಮ್ಮ ಪತ್ನಿಯವರನ್ನು ನೋಡಿಕೊಂಡು ಹೋಗುವುದಕ್ಕಾಗಿ ೩ ದಿನಗಳ ರಜದಮೇಲೆ ರಾಜಧಾನಿಗೆ ಬಂದಿದ್ದು ಕಳೆದ ಬುಧವಾರ ಅರಸೀಕೆರೆ ರೈಲುಬಂಡಿಯಲ್ಲಿ ಹಾಸನಕ್ಕೆ ಹಿಂದಿರುಗಿ ಪ್ರಯಾಣಮಾಡಿ ಹೊರಟರು. ಬಂಡಿಯು ಯಡತೊರೆ ಸ್ಟೇಷನ್ನನ್ನು ತಲುಪಿದಾಗ ಡಾ|| ಪಿಳ್ಳೆಯವರು ಬಂಡಿಯಲ್ಲಿ ಮೃತರಾಗಿರುವುದನ್ನು ರೈಲಿನವರು ತಿಳಿದು ಶವವನ್ನು ಬಂಡಿಯಿಂದ ಹೊರಗೆ ತೆಗೆಸಿ ಮೈಸೂರಿನಲ್ಲಿರುವ ಅವರ ಮನೆಯವರಿಗೆ ವರ್ತಮಾನವನ್ನು ಕೊಟ್ಟುದರ ಮೇಲೆ ಅವರ ಕಡೆಯವರು ಮಾರನೆಯದಿನ ಜಟಕಾ ಬಂಡಿಯನ್ನು ತೆಗೆದುಕೊಂಡು ಹೋಗಿ ಶವವನ್ನು ರಾಜಧಾನಿಗೆ ಸಾಗಿಸಿಕೊಂಡು ಬಂದು ದಹನಮಾಡಿದರು. ಡಾ|| ಪಿಳ್ಳೆಯವರಿಗೆ ಜ್ವರವು ಬಂದು ನಿಶ್ಶಕ್ತರಾಗಿದ್ದಾಗ್ಯೂ ಗುರುವಾರದ ದಿವಸ ಕೆಲಸದ ಮೇಲೆ ಹೋಗುವುದಕ್ಕಾಗಿ ಪ್ರಯಾಣಮಾಡಿದರೆಂದು ತಿಳಿಯಬರುತ್ತದೆ. ಇವರಿಗೆ ಪ್ರಾಯಶಃ ೫೦ ವರ್ಷ ವಯಸ್ಸಾಗಿರಬಹುದು, ಮತ್ತು ೬-೮ ವರ್ಷ ವಯಸ್ಸಿನ ಒಬ್ಬ ಮಗನೂ ಲಗ್ನವಾಗಿರತಕ್ಕ ಮೂವರು ಹೆಣ್ಣುಮಕ್ಕಳೂ ಎರಡನೆಯ ಹೆಂಡತಿಯೂ, ವೃದ್ಧತಾಯಿಯೂ ಇರುವರು. ಇವರು ಬಹಳ ಸ್ನೇಹಪರರೂ, ನಿಗರ್ವಿಗಳೂ, ದಯಾಪರರೂ ಆಗಿದ್ದು ಕೆಲಸಮಾಡಿದ ಸ್ಥಳಗಳಲ್ಲೆಲ್ಲಾ ವಿಶೇಷ ಜನಾನುರಾಗವನ್ನು ಸಂಪಾದಿಸಿದ್ದರು. ಇವರ ಅಕಾಲಮರಣದಿಂದ ಇವರ ಕುಟುಂಬಕ್ಕೆ ಮಾತ್ರವಲ್ಲದೆ ಇವರನ್ನು ಕಂಡು ಕೇಳಿದವರಿಗೆಲ್ಲಾ ಅಪಾರವಾದ ದುಃಖವುಂಟಾಗಿರುವುದು. ಮೃತರ ಆತ್ಮಕ್ಕೆ ಶಾಂತಿಯೂ ಇವರ ಕುಟುಂಬಕ್ಕೆ ದುಃಖಸಮಾಧಾನವೂ ಉಂಟಾಗಲೆಂದು ಬಯಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಕೂಚ್‌ಬಿಹಾರ್ ಮಹಾರಾಜರು ಸಪತ್ನೀಪರಿವಾರವಾಗಿ ಲಂಡನ್ನಿಗೆ ಸೇರಿದರು.

ಈ ಸಲದ ಮದ್ರಾಸು ವಿಶ್ವವಿದ್ಯಾಲಯದಲ್ಲಿ ಕೆ. ಗೌರೀಅಮ್ಮಾಳ್ ಎಂಬ ನಾರೀಮಣಿಯು ಎಂ. ಎ. ಪರೀಕ್ಷೆಯಲ್ಲಿ ೩ ನೆಯ ತರಗತಿಯೊಳಗೆ ಉತ್ತೀರ್ಣಳಾಗಿದ್ದಾಳೆ.

ಮಂತ್ರಾಲಯದ ಸಮೀಪದಲ್ಲಿ ತುಂಗಭದ್ರಾ ತೀರದೊಳಗೆ ಈ ವರ್ಷದ ಮಧ್ವಮತ ಸಮ್ಮೇಳನವು ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷತೆಯಿಂದ ಇದೇ ತಿಂಗಳು ತಾ|| ೧೯-೨೦-೨೧ ರಲ್ಲಿ ನಡೆಯುವುದಾಗಿದೆ.

ಅ|| ಪಂಡಿತ ಮದನಮೋಹನ ಮಾಳವ್ಯರವರು ರೌಲತ್ ಶಾಸನ ಸಂಬಂಧದಲ್ಲಿ ಸಾಮ್ರಾಜ್ಯಶಾಸನಸಭೆಯಲ್ಲಿ ನಡೆದ ಚರ್ಚಾವೈಖರಿಯನ್ನು ಕಂಡು ಜುಗುಪ್ಸೆಗೊಂಡು ಅಲ್ಲಿನ ತಮ್ಮ ಸಭಿಕತ್ವಕ್ಕೆ ರಾಜೀನಾಮೆಯನ್ನು ಬರೆದು ವೈಸ್ರಾಯರಿಗೆ ಕಳುಹಿಸಿಕೊಟ್ಟರು.

ಮ|| ಗಾಂಧಿಯವರನ್ನು ತಮ್ಮ ಆಧಿಪತ್ಯಕ್ಕೆ ಕಾಲಿಕ್ಕಕೂಡದೆಂದು ಪಂಜಾಬು ಸರ್ಕಾರದವರು ವಿಧಿಸಿದ್ದಾರೆ. ಬೊಂಬಾಯಿಯಿಂದ ಪಂಜಾಬಿಗೆ ಪ್ರಯಾಣಮಾಡುತ್ತಿದ್ದ ಅವರನ್ನು ಪೊಲೀಸರು ಮಧ್ಯಮಾರ್ಗದಲ್ಲಿ ತಡೆದು ಅವರ ಮನೆಗೆ ಕರೆದುಕೊಂಡು ಹೋಗಿ ಸೇರಿಸಿಬಿಟ್ಟರು. ಬೊಂಬಾಯಿ ಸರ್ಕಾರದವರಾದರೋ ಬೊಂಬಾಯಿಯನ್ನು ಬಿಟ್ಟು ಎಲ್ಲಿಗೂ ಹೋಗದಂತೆ ಅವರಿಗೆ ಆಜ್ಞೆ ಮಾಡಿದ್ದಾರೆ.

ಪೂನಾ ಪಟ್ಟಣದಲ್ಲಿರುವ ಭಂಡಾರ್ಕರ್ ಇನ್‌ಸ್ಟಿಟ್ಯೂಟಿನಲ್ಲಿ ಕಳೆದ ತಾ|| ೧ನೆ ದಿನ ಸರ್ ರಾಮಕೃಷ್ಣಭಂಡಾರ್ಕರ್, ಶ್ರೀಮಂತ ಬಾಲಸಾಹೇಬ ಪಂತ ಪ್ರತಿನಿಧಿ, ವೈದ್ಯ, ಮಜುಂದಾರ್ ಮೊದಲಾದ ೧೫೦ ಮಂದಿ ಸಭಿಕರು ಸೇರಿದ್ದರು. ಮಹಾಭಾರತವನ್ನು ವಿಸ್ತಾರವಾದ ವ್ಯಾಖ್ಯೆಯೊಡನೆ ಮುದ್ರಿಸುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸಿದರು. ಆ ಸಂಘದಲ್ಲಿ ಸರ್ ಭಂಡಾರ್ಕರ್‌ರವರು, ಸರ್ ರವೀಂದ್ರನಾಥಠಾಕೂರ್‌ರವರು, ಸರ್ ಆಶುತೋಷಮುಖರ್ಜಿಯವರು, ಅನಿಬೆಸೆಂಟಮ್ಮನವರು, ಮೊದಲಾದ ಕೆಲವರು ಸಭಿಕರಾಗಿ ಮಾಡಲ್ಪಟ್ಟರು. ಇವರು ಮಾಡುವ ಮಹಾಭಾರತ ಪ್ರಕಾಶನ ಕಾರ್ಯಕ್ಕಾಗಿ ವರ್ಷಕ್ಕೆ ೬ ಸಾವಿರ ರೂ. ಗಳನ್ನು ಸಹಾಯವಾಗಿ ಕೊಡಬೇಕೆಂದು ನಿರ್ಧರಿಸಿದರು. ಈ ಕಾರ್ಯಕ್ಕಾಗಿ ಸೇರಿದ್ದವರಲ್ಲೇ ಕೆಲವರು ಸಾವಿರಾರು ರೂ. ಗಳನ್ನು ವರ್ಗಣಿಕೊಟ್ಟರು.

ಮೈಸೂರು ಸೀಮೆಯ ರೆವಿನ್ಯೂಕಮಿಷನರವರ ಆಫೀಸ್.

ಪ್ರಸಿದ್ಧ ಪತ್ರಿಕೆ.

ತಾರೀಖು 7 ನೆ ಏಪ್ರಿಲ್ 1919.

ಈ ಸಾಲಿಗೆ ಬೇಕಾಗುವಷ್ಟು ಆಹಾರಧಾನ್ಯಗಳೂ ಮೇವೂ ಒದಗುವುದು ಕಷ್ಟವಾಗಿರುವುದರಿಂದ ಬೇಗ ಕಟಾವಿಗೆ ಬರತಕ್ಕ ಆಹಾರ ಧಾನ್ಯಗಳನ್ನೂ ಮೇವನ್ನೂ ಬೆಳೆಯಲು ಸರಕಾರದವರು ಈ ಕೆಳಗೆ ಕಾಣಿಸಿರುವ ನಿಯಮಗಳನ್ನೂ ಏರ್ಪಾಡುಗಳನ್ನೂ ಮಂಜೂರು ಮಾಡಿರುತ್ತಾರೆ:—

(1) ಅಕಾರಕಂಡ ಬಂಜರು ಜಮೀನುಗಳನ್ನು ಕೆಳಗೆ ಕಂಡ ಷರತ್ತುಗಳಿಗೆ ಒಳಪಡಿಸಿ ಮೊದಲ ದರಖಾಸ್ತುದಾರರಿಗೆ ಹರಾಜಿಲ್ಲದೆ ಕಿಮ್ಮತ್ತು ತೆಗೆದುಕೊಂಡು ಜಮೀನನ್ನು ಕೊಡಲಾಗುವುದು:— (i) ಜಮೀನಿನಲ್ಲಿರುವ ಮಾಲ್ಕಿಯ ಅಂದಾಜವು ಅಕಾರದ ಐದರಷ್ಟಕ್ಕಿಂತ ಹೆಚ್ಚಾಗಿಲ್ಲದಿದ್ದರೆ ಅರ್ಧಮಾಲ್ಕಿ ಕಿಮ್ಮತ್ತು ತೆಗೆದುಕೊಂಡು ಜಮೀನನ್ನು ಕೊಡಲಾಗುವುದು.

(ii) ಸಾಗುವಳಿ ಚೀಟಿಯನ್ನು ಕೊಟ್ಟ ಮೇಲೆ ಬರುವ ಆಯಾಂಕಾಲದಲ್ಲಿ ಆಹಾರಧಾನ್ಯಗಳನ್ನೇ ಬೆಳೆಯಬೇಕು. ಮತ್ತು ತರುವಾಯ ಐದುವರ್ಷಗಳ ವರಿಗೂ ತಪ್ಪದೆ ಆಹಾರಧಾನ್ಯಗಳನ್ನೇ ಬೆಳೆಯುತ್ತಿರಬೇಕು.

(2) ಆಕಾರಕಂಡ ಬಂಜರು ಜಮೀನುಗಳು ಎಷ್ಟು ವರ್ಷಗಳಿಂದಲಾದರೂ ಬಂಜರಿರಲಿ ಏಕ್‌ಸಾಲ್ ಸಾಗುವಳಿಯ ನಿಯಮಗಳಿಗನುಗುಣವಾಗಿ ಮೂರುವರ್ಷಗಳ ಮಟ್ಟಿಗೆ ಹಂಗಾಮಿ ಸಾಗುವಳಿಗೆ ಕೊಡಲಾಗುವುದು. ಹಾಗೆ ಕೊಡಲ್ಪಟ್ಟ ಜಮೀನುಗಳ ಮೇಲಿನ ಕಂದಾಯದ ಪೈಕಿ ಅರ್ಧವನ್ನು ಸಾಲ್ ಶುರುವಿನಲ್ಲಿ ಮುಂಗಡವಾಗಿಯೇ ಕೊಟ್ಟುಬಿಡಬೇಕು. ಉಳಿದ ಅರ್ಧವನ್ನು ಇತರ ಕಂದಾಯದ ಜೊತೆಯಲ್ಲಿ ಕಿಸ್ತುಕಾಲದಲ್ಲಿ ಕೊಡಬೇಕು. ಸಾಗುವಳಿಗೆ ತೆಗೆದುಕೊಂಡವನು ಜಮೀನಿನಲ್ಲಿರುವ ಮರ, ಕಟ್ಟಡ, ಮುಂತಾದವುಗಳ ತಂಟೆಗೆ ಹೋಗಕೂಡದು. ಮತ್ತು ಅವುಗಳ ಸಂಬಂಧವಾಗಿ ಏನು ಲುಕ್ಸಾನಾದರೂ ಅದನ್ನು ಕಟ್ಟಿಕೊಡಲು ಬದ್ಧರಾಗಿರಬೇಕು. ಮೂರುವರ್ಷಗಳು ಮುಗಿಯುವುದರೊಳಗೆ ಜಮೀನನ್ನು ಬಿಟ್ಟುಬಿಡಬೇಕೆಂದು ಇಷ್ಟವಾದರೆ ಸಕಾಲದಲ್ಲಿ ರಾಜೀನಾಮೆ ಕೊಟ್ಟುಬಿಡಬಹುದು.

(3) ಗೋಮಾಳ ಮತ್ತು ಖರಾಬು ಜಮೀನುಗಳನ್ನು ಸಾಗುವಳಿಗೆ ವಿಲೆ ಪಡಿಸಲು ಯಾವ ಅಭ್ಯಂತರವೂ ಇಲ್ಲದಿರುವ ಸಂದರ್ಭಗಳಲ್ಲಿ ಹಂಗಾಮಿ ಸಾಗುವಳಿಗೆ ಕೊಡಲು ಡೆಪ್ಯುಟಿಕಮಿಷನರವರಿಗೂ, ಸಬ್‌ಡಿವಿಜನ್ ಆಫೀಸರವರಿಗೂ ಅಧಿಕಾರವನ್ನು ಕೊಟ್ಟಿರುತ್ತದೆ. ಹಾಗೆ ಕೊಡುವವರಲ್ಲಿ ಗ್ರಾಮಸ್ಥರೇ ಒಟ್ಟಿಗೆ ಸೇರಿ ಸಾಗುವಳಿ ಮಾಡಿಕೊಳ್ಳಲು ಅಪೇಕ್ಷಿಸಿದರೆ ಇತರರಿಗೆ ಕೊಡುವುದಕ್ಕೆ ಬದಲಾಗಿ ಅವರಿಗೇ ಕೊಡಬೇಕು. ಯಾರಿಗೆ ಸಾಗುವಳಿಗೆ ಕೊಟ್ಟರೂ ಈ ಕೆಳಗೆ ಕಂಡ ಷರತ್ತುಗಳಿಗೆ ಅವರು ಬದ್ಧರಾಗಿರಬೇಕು (i) ಮೂರುವರ್ಷಗಳ ಮಟ್ಟಿಗೆ ಮಾತ್ರವೇ ಕೊಡಲಾಗುವುದು. (ii) ಮೊದಲವರ್ಷ ಕಂದಾಯವೇನನ್ನೂ ಕೊಡಬೇಕಾದುದಿಲ್ಲ. ಎರಡನೇ ವರ್ಷ ಗ್ರಾಮದಲ್ಲಿನ ಅದೇ ತರಹ ಜಮೀನಿಗೆ ಬಿದ್ದಿರುವದರಂತೆ ಆಗುವ ಕಂದಾಯದಲ್ಲಿ ಅರ್ಧವನ್ನೂ, ಮೂರನೆಯ ವರ್ಷ ಪೂರಾ ಕಂದಾಯವನ್ನೂ ಕೊಡಬೇಕು. (iii) ಆಹಾರಧಾನ್ಯಗಳನ್ನು ಮಾತ್ರವೇ ಬೆಳೆಯಬೇಕು. ಅಂಥಾ ಧಾನ್ಯಗಳು ಹುಲುಸಾಗಿ ಬೆಳೆಯಲು ಜಮೀನು ಹಸನಾಗುವಂತೆ ಮಾಡುವ ಗೊಬ್ಬರಕ್ಕೆ ಲಾಯಖಾದ ಫಸಲನ್ನು ಬೆಳೆಯಬಹುದು. (iv) ಜಮೀನಿನಲ್ಲಿರತಕ್ಕ ಮರ, ಕಟ್ಟಡ, ವಗೈರೆಗಳ ತಂಟೆಗೆ ಹೋಗಕೂಡದು. ಮತ್ತು ಅವುಗಳ ಸಂಬಂಧವಾಗಿ ಏನು ಲುಕ್ಸಾನಾದರೂ ಕಟ್ಟಿಕೊಡಲು ಹಿಡುವಳಿದಾರರು ಬದ್ಧರಾಗಿರಬೇಕು.

(4) ಜಾರಿಯಲ್ಲಿ ಇಲ್ಲದೇಲೂ ಮುಂದೆ ಮೂರು ವರ್ಷಗಳೊಳಗಾಗಿ ದುರಸ್ತುಮಾಡಿಸುವ ಸಂಭವವಿಲ್ಲದೇಲೂ ಇರುವ ಒಡೆದುಹೋದ ಕೆರೆ ಅಂಗಳಗಳನ್ನೂ, ಯಾವ ಆಕ್ಷೇಪಣೆಯೂ ಇಲ್ಲದಿದ್ದರೆ ಡೆಪ್ಯುಟಿಕಮೀಷನರವರಾಗಲಿ, ಸಬ್‌ಡಿವಿಜನ್ ಆಫೀಸರವರಾಗಲಿ ಹರಾಜಿಲ್ಲದೆ ಹಂಗಾಮಿ ಸಾಗುವಳಿಗೆ ಅಪ್ಪಣೆಕೊಡುತ್ತಾರೆ.

(5) ಅಮೃತಮಹಲ್ ಕಾವಲು ಜಮೀನುಗಳಪೈಕಿ 124303 ಎಕರೆಗಳಷ್ಟು ಪ್ರದೇಶವನ್ನು ಸಾಗುವಳಿಗೆ ವಿಲೆವಾರಿಸುವುದಕ್ಕಾಗಿ ರೆವಿನ್ಯೂ ಇಲಾಖೆಯವರ ಸುಪರ್ದಿಗೆ ಕೊಟ್ಟಿರುತ್ತದೆ.

(6) ಶ್ರೀ ರಾಮದೇವರ ಉತ್ತರ[illegible] ಕಾಲುವೆಗಳ ಕೆಳಗಿರುವ 2900 ಎಕರೆ ಜಮೀನು[illegible] ರಾಗಿ ಮತ್ತು ಬೇಗ ಬೆಳೆಯತಕ್ಕ ಇತರ ಫಸಲುಗಳಿಗೆ ಹತ್ತು [illegible]ನಗಳಿಗೊಂದು ಸಾರಿ ಮುಫತ್ತಾಗಿ ನೀರನ್ನು ಹರಿಸಿಕೊಳ್ಳಲು ಅಪ್ಪ[illegible] ಕೊಡಲಾಗುವುದು.

(7) ವ್ಯವಸಾಯದ ಇಲಾಖೆಯವರು ಬೀಜದ ಕಾಳನ್ನು ಕೊಂಡುಕೊಂಡು ರೈತರಿಗೆ ಸರಬರಾಯಿ ಮಾಡತಕ್ಕ ಏರ್ಪಾಡು ಮಾಡುತ್ತಾರೆ.

(8) ಎಲ್ಲಿ ಮೇವಿನ ಕೊರತೆಯುಂಟಾಗಬಹುದೋ ಅಲ್ಲೆಲ್ಲಾ ರೈತರು ಸ್ಟೇಟ್ ಫಾರೆಸ್ಟುಗಳಿಂದ ಮುಫತ್ತಾಗಿ ಹುಲ್ಲನ್ನು ಕೊಯಿದುಕೊಂಡುಹೋಗಿ ದಾಸ್ತಾನು ಇಟ್ಟುಕೊಳ್ಳಲು ಅಪ್ಪಣೆ ಕೊಡಲಾಗುವುದು.

ಕೆ. ಆರ್. ಶ್ರೀನಿವಾಸಯ್ಯಂಗಾರ್, ರೆವಿನ್ಯೂ ಕಮಿಷನರ್.

ಪತ್ರವ್ಯವಹಾರ.

ಜಾಹೀರಾತು.

ವೀರಶೈವ ವಾಚನಮಂದಿರ ಆಲೂರ ತಾ|| ಹಾಸನಜಿಲ್ಲಾ ಇದರ ೧೩ ನೇ ಧಾರ್ಮಿಕಮಹೋತ್ಸವವು ತಾ|| ೭-೫-೧೯ ನೇ ಇಸವಿ ದಿನ ನೆರವೇರುವುದು. ಆ ಕಾಲಕ್ಕೆ ಕೆಳಗೆ ತೋರಿಸಿದ ವಿಷಯಗಳನ್ನು ಉಪನ್ಯಾಸಕ್ಕಿಟ್ಟಿದೆ. ಈ ವಿಷಯಗಳನ್ನು ಮೇ ಆಖೈರವೊಳಗಾಗಿ ನಮ್ಮ ಕಡೆಗೆ ಉತ್ತಮರೀತಿಯಿಂದ ತಯಾರಿಸಿ ಕಳಿಸಿಕೊಡಬೇಕು.

(ಉಪನ್ಯಾಸಕ್ಕಿಟ್ಟ ವಿಷಯಗಳು)

೧. ಮಿಶ್ರವಿವಾಹನಿಷೇಧ	ಬಹುಮಾನ ರೂ. ೨.
೨. ಬಾಲ ಹಾಗೂ ವೃದ್ಧವಿವಾಹದಿಂದ ಸಮಾಜಕ್ಕಾಗುವ ಹಾನಿ	ರೂ. ೨.
೩. ದೀಕ್ಷಾ (ಉಪನಯನ)	ರೂ. ೩
೪. ವೀರಶೈವ ಮತಸ್ಥಾಪಕರಾದ ಪಂಚಪೀಠಾಚಾರ್ಯರ ವರ್ಧಂತಿಗಳು	ರೂ. ೩.
೫. ವಿದ್ಯಾಭಿವೃದ್ಧಿ	ರೂ. ೨.

ಶಿ. ವಿ. ಕಂಬಳಿ ಚೇರಮನ್,
ವೀರಶೈವ ವಾಚನಮಂದಿರ, ಆಲೂರ (ಹಾಸನಜಿಲ್ಲಾ).

4

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀವಟಿಗೆಯ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ:—ಮರ್ಕಂಟೈಲ್ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಮಹಾಶಯರೇ! ಇಲ್ಲಿನೋಡಿ !!

ಅಚ್ಚಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಸ್ಟೇಜು ಸೇರಿ	1—0—0.
200 ಕ್ಕೆ ... ... „ „	1—12—0.
300 ಕ್ಕೆ ... ... „ „	2—4—0.

ವಿಳಾಸ—ಡಿ. ಹೆಚ್. ಮಸ್ತಾನ್‌ಸಾಹೇಬ್, ಅಂಡ್ ಕೊ,
4 ಮರಡಿಹಳ್ಳಿ—ಚಿತ್ರದುರ್ಗ ಡಿ||.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಬೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

10 ನಮ್ಮ ವಿಳಾಸ:—ಪೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

14 ವಿಳಾಸ—ಎಂ. ಎಂ. ಹರ್ಡೀಕರ್ ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 17

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೋತ್ಕಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರುಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ಪ್ರತ್ಯಕ್ಷಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಪಿ. ಎ. ಎಸ್. ವಾಣಿ ಅಂಡ್ ಕೊ,
10 ಸಾಹುಕಾರಪೇಟೆ, ಮದರಾಸ್.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುವು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



12 ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೇರೆ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:— ರಾಸ್ ವಾಚ್ ಅಂಡ್ ಕೊ,
10 ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀಶಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಔನ್ಸು ಸೀಸೆಗೆ 4 ಆಣೆ, ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
18 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಏಪ್ರಿಲ್ ತಾ|| ೧೩ ರಿಂದ ೧೯೧೯ ನೆಯ ಏಪ್ರಿಲ್ ತಾ|| ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಚೈತ್ರ ಶು|| ತ್ರಯೋದಶಿಯಿಂದ ಚೈತ್ರ ಬ|| ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
13	[1] ಭಾನು	ತ್ರಯೋ	8.14	ಉಫ	29.23	1
14	[2] ಸೋಮ	ಚತು	11.36	ಹಸ್ತ	34.34	2
15	[3] ಮಂಗಳ	ಪೌರ್ಣ	15.57	ಚಿತ್ತ	40.38	3
16	ಬುಧ	ಪಾಡ್ಯ	21.0	ಸ್ವಾತಿ	47.10	4
17	ಗುರು	ಬಿದಿಗೆ	26.11	ವಿಶಾಖಾ	53.51	5
18	ಶುಕ್ರ	ತದಿಗೆ	31.13	ಅನೂ	58.58	6
19	[4] ಶನಿ	ಚೌತಿ	35.37	ಜ್ಯೇಷ್ಠ	60	7

(1) ವಣಗಡಿ ರಂಗಸ್ವಾಮಿ ರಥ, ತೊಂಡನೂರು ನಾರಾಯಣಸ್ವಾಮಿ ರಥ. (2) ಪೂರ್ಣಿಮಾ ತಿಥಿ. (3) ಬಿಳಿಗಿರಿ ರಂಗಸ್ವಾಮಿ ರಥ. (4) ಸಂಕಟಹರಚತುರ್ಥಿ, ಶುಭಪ್ರದ ಗೌರೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಪ್ರಕಾಶಾವತಾರಾ ಪಶ್ಯಜ್ಜನಹೃತ್ತಮೋಹರಾ ಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ | ಸ್ತೋಮಾಭೀಷ್ಟದಶೀಲ ಮಾಕಲಿತ ಸಾದ್ಗುಣ್ಯಾಲವಾಲಂ ವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾರಾತ್ಕುಲಂ | ಪ್ರೇಮಂಚೆತ್ತಿಳಿಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೇಯ ಇಸವಿ ಏಪ್ರಿಲ್ ತಾರೀಖು ೨೦ ನೇಯ ಭಾನುವಾರ. (ಸಂಚಿಕೆ ೧೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ಶಕ್ತಿಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಚ್. ಆರ್. ಚರಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 21

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

[illegible] ಬಡದಾಟವಾಗಿ ಅನೇಕ
ನಪುಂಸಕತ್ವ[illegible]. ದೆ|| ಕವಿರಾಜನರಿಗೂ ಅ||
ಪುರುಷನ [illegible]ವಾದ ವಿಟುಗಳು [illegible] ನಿರ್ಬಲತೆ

[illegible] ಕ್ಷೋಭಿಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ, ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ ವಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೩—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೬ ನೇ ಇಸ್ವಿಯ ೨೫ ನೇ
ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೫ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇವೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಉದರರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗೈ, ಇಬ್ಬಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಸ್ಮೆಜಡ್ಡು, ಗುದ್ದವ್ಯಸಬೇನೆ, ಮರಕಳಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್

ಮನ್ಮಹಾರಾಜರವರ ಧರ್ಮಾಸಕ್ತಿ[illegible]ಖರ್ಚು ಬರುವದು. ಒಂದರಿಂದ
ಧರ್ಮ ಶೇಖರ' ವೆಂದೂ ನಮ್ಮ ಶ್ರೀಮನ್ಮಹಾರಾಣಿಯವರು ಆಣೆ ಖ
ಮತ್ತು ದೈವಭಕ್ತಿಯನ್ನು ನೋಡಿ ಅವರಿಗೆ 'ಧರ್ಮಲಕ್ಷ್ಮಿ' ಎಂದು
ಬಿರುದುಗಳನ್ನು ದಯಪಾಲಿಸಿರುತ್ತಾರೆ. ಇವುಗಳನ್ನು ಶ್ರೀಮನ್ಮಹಾರಾಜರ
[illegible] ಮಹಾರಾಣಿಯವರೂ ವಿಶ್ವಾಸದಿಂದ ಅಂಗೀಕರಿಸಿರುತ್ತಾರೆ.
ಮೂಗಿನೊಳಗಿನ ಪೀ[illegible]ಕಂಠೀರವ ಎಂಬ ಹೆಸರಿನ ವಾರಪತ್ರಿಕೆಯು ಪ್ರತಿ
ಲೋಣ, ಮತ್ತು ಕಣ್ಣುನೋ[illegible]ಕ್ರಮಿಸಿದೆ. ಇದರ ೩ ಸಂಚಿಕೆಗಳನ್ನು
ಲಿಸಿ, ಅಜೀರ್ಣ, ಹೊಟ್ಟೆಶೂಲಿ, [illegible] ದೇಶಸೇವೆ ಭಾಷಾಸೇವೆಗಳನ್ನು
ವಾತಶೂಲಿ, ರೇಸ್ಮೆಜಡ್ಡು, ಗುದ್ದವ್ಯಸಬೇನೆ, ಹು[illegible]ಶಕ್ಕೆ ಅನುಸಾರ
ಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮು[illegible] ಉದ್ದೇಶ
ದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, [illegible]

ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ಶೇರ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ತೋರಿದರೆ ಪರತ ತಕ್ಕೊಳ್ಳು

ಗಳನ್ನೂ, ಪ್ರಯಾಣೋತ್ಕಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದುವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರುಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುವು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೇರೆ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು— ಹಾಕುವದ—

ಗಳು ಕಟ್ಟಿರುತ್ತೆ

ವಿದೇಶದ ವೃತ್ತಾಂತಗಳು.

ಸಂಧಿಸಭೆಯವರ ೧ ವಿಮಾನವು ಲಂಡನ್ ಪಟ್ಟಣದಿಂದ ಪ್ಯಾರಿಸ್ಸಿಗೆ (೨೦೦ ಮೈಲಿಗಳ ದೂರ) ೮೦ ನಿಮಿಷಗಳ ಕಾಲದೊಳಗಾಗಿ ಹೋಗಿ ಸೇರಿರುತ್ತದೆ.

ಫ್ರಾನ್ಸ್ ಮುಖ್ಯ ಮಂತ್ರಿ ಕ್ಲೆಮೆಂಕೋರವರನ್ನು ತುಪಾಕಿ ಗುಂಡಿನಿಂದ ಹೊಡೆದ ಕಾಟಿನ್ ಎಂಬುವನಿಗೆ ಮರಣಶಿಕ್ಷೆಯು ವಿಧಿಸಲ್ಪಟ್ಟಿತಷ್ಟೆ. ಮಿ|| ಕ್ಲೆಮೆಂಕೋರವರೇ ಕನಿಕರಗೊಂಡು ಕೊಟ್ಟ ಅಭಿಪ್ರಾಯದಮೇರೆಗೆ ಅತನ ಶಿಕ್ಷೆಯು ೧೦ ವರ್ಷದ ಕಾರಾಗೃಹವಾಸಶಿಕ್ಷೆಗೆ ಇಳಿಯಿಸಲ್ಪಟ್ಟಿತು.

ಲಾರ್ಡ್ ಸಿನ್ಹರವರ ಔತಣದ ಸಭೆಯಲ್ಲಿ ಮಿ|| ಮಾಂಟೆಗ್ಯುರವರು ಭಾಷಣಮಾಡುವಾಗ್ಗೆ ಭರತಖಂಡದ ಸಂಸ್ಕರಣದೊಳಗೆ ಪ್ರತ್ಯೇಕ ಪ್ರಾತಿನಿ[illegible]ವನ್ನು ಇನ್ನೂ ಸ್ವಲ್ಪ ಸಂಶಯವಾಗಿಯೇ ಅಭಿಪ್ರಾಯಪಟ್ಟಿರುವ [illegible] ಟೈಮ್ಸ್ ಪತ್ರಿಕೆಯು ಚರ್ಚಿಸಿ, ಮಹಮ್ಮದೀಯ[illegible]ನು ಇವರು ಅಂಗೀಕರಿಸಿ, ಭರ

ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು [illegible] ಹಿಂ ಜಪಾನ್ ಬೀಸಣಿಗೆ 1, ಚಾಮಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಗೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಹರಳು ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1. ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ 4—8—0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
12 5. ಇರುಳಪ್ಪನ ಬೀದಿ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಏಪ್ರಿಲ್ ತಾ|| ೨೦ ನೆಯ ಭಾನುವಾರ.

ದುರಾಗ್ರಹವು ಶ್ರೇಯಸ್ಕರವಲ್ಲ.

ದಿಲ್ಲಿಯಲ್ಲಿ ಪ್ರಾಣಹಾನಿಗಳಾಗುವ ಮಟ್ಟಿಗೆ ಗದ್ದಲವು ನಡೆದ ಸ್ವಲ್ಪ ಕಾಲದಲ್ಲಿಯೇ ಉತ್ತರ ಹಿಂದೂಸ್ಥಾನದ ಇನ್ನು ಕೆಲ ಕಡೆ ದಿಲ್ಲಿಯ ಅನಾಹುತಕ್ಕಿಂತಲೂ ಹೆಚ್ಚಿನ ಅನರ್ಥಗಳು ಸಂಭವಿಸಿರುವ ಸುದ್ದಿಯು ತುಂಬಾ ವಿಷಾದಕರವಾಗಿದೆ. ಅವುಗಳ ಆದ್ಯಂತ ವಾರ್ತೆಗಳನ್ನು ಈ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಸತ್ಯಾಗ್ರಹ ವ್ಯಾಜದಿಂದ ಭರತಖಂಡದಲ್ಲಿ ಎಂಥ ಅನರ್ಥಕಾರಿ ಪ್ರಯತ್ನಗಳು ನಡೆಯುತ್ತಿವೆಯೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ಭರತಖಂಡದ ಪ್ರಜೆಗಳು ಅತ್ಯಂತ ರಾಜಭಕ್ತಿಯಿಂದ ಕಳೆದ ಯುದ್ಧಕಾಲದಲ್ಲಿ ಯೂರೋಪಿನ ರಣರಂಗಕ್ಕೆ ಸೈನಿಕರಾಗಿ ಹೋಗಿ ಅತುಲ ಪರಾಕ್ರಮವನ್ನು ತೋರಿಸಿ ಜಗತ್ತಿನ ಮೆಚ್ಚುಗೆಯನ್ನೆಲ್ಲಾ ಸಂಪಾದಿಸಿ, ಸಾಮ್ರಾಜ್ಯಪ್ರಭುತ್ವದವರ ಮನಸ್ಸನ್ನು ಸೂರೆಮಾಡಿ, ಅವರ ಸಾನುಭೂತಿಯನ್ನು ಅನೇಕ ವಿಧದಲ್ಲಿ ಸ್ವದೇಶಕ್ಕೆ ಉಂಟುಮಾಡಿಕೊಳ್ಳಲು ದಾರಿಮಾಡಿಕೊಟ್ಟು ಚಿರಸ್ಮರಣೀಯರಾದರು. ಅವರು ಹಾಗೆ ಉಂಟುಮಾಡಿಕೊಟ್ಟ ಕೀರ್ತಿಪ್ರತಿಷ್ಠಾ ಗೌರವಾದಿಗಳಿಗೆಲ್ಲಾ ಮಸಿ ಹತ್ತಿಸುವ ಕೆಲಸವು ಈಗಣ ಗದ್ದಲದಿಂದ ಆಗುತ್ತಿದೆಯೆಂಬುದನ್ನು ತಿಳಿದು ಪ್ರತಿಯೊಬ್ಬ ದೇಶಾಭಿಮಾನಿಯೂ ವ್ಯಥೆಪಡುವಂತಾಗಿರುವುದು. ಸತ್ಯಾಗ್ರಹವೆಂಬ ಪವಿತ್ರವ್ರತವು ಶಾಂತ್ಯಾದಿ ಸುಗುಣಗಳಿಲ್ಲದ ದುರಾಗ್ರಹಿಗಳ ಹಸ್ತಗತವಾದುದರಿಂದ ಸತ್ಯಾಗ್ರಹನಾಮಕ್ಕೇ ಅಲ್ಲದೆ ಅದರ ಪ್ರವರ್ತಕರಾದ ಮ|| ಗಾಂಧಿಯವರಿಗೂ ಸಹ ಅಗೌರವವುಂಟಾಗುವಂತಾಯಿತು. ದೇಶಕಾಲಸ್ಥಿತಿಗೆ ಸತ್ಯಾಗ್ರಹವು ಅನುಗುಣವಾದುದಲ್ಲವೆಂದು ಅನುಭವಿಗಳು ಈ ಚಳವಳದ ಆದಿಯಲ್ಲೇ ಮಾಡಿದ ಸೂಚನೆಯು ನಿಜವೆಂದು ದೃಷ್ಟಾಂತವಾಯಿತು. ಈಗಣ ಪರ್ಯವಸಾನವನ್ನು ಕೇಳಿ ಮ|| ಗಾಂಧಿಯವರು ಕೂಡ ಪಶ್ಚಾತ್ತಾಪಗೊಳ್ಳದೆ ಇರಲಾರರು. ಈಗ ವ್ಯಥೆಪಟ್ಟು ಪ್ರಯೋಜನವೇನು? ಪ್ರಭುತ್ವದ ಶಾಸನಗಳನ್ನು ಧಿಕ್ಕರಿಸಿ ತಾವೂ ನಡೆದು, ಸಾಮಾನ್ಯ ಪ್ರಜೆಗಳಿಗೂ ಹಾಗೆ ನಡೆಯುವುದಕ್ಕೆ ಬೋಧಿಸಿಬಿಟ್ಟು, ಕಡೆಗೆ ಅದರ ಪರಿಣಾಮವನ್ನು ಕಂಡು ವಿಷಾದಿಸಿದರೆ ಫಲವೇನು? ತಮ್ಮನ್ನು ಸರ್ಕಾರದವರು ಹಿಡಿದು ನಿರ್ಬಂಧವಾಸಕ್ಕೆ ಗುರಿಮಾಡಿದಾಗ ತಮ್ಮ ಇಷ್ಟಾರ್ಥಸಿದ್ಧಿಯಾಯಿತೆಂದು ಮ|| ಗಾಂಧಿಯವರೇ ಹೇಳಿ ಹಿಗ್ಗುತ್ತಿರುವಾಗ, ಅವರ ನಿರ್ಬಂಧವಾಸಶಿಕ್ಷೆಯನ್ನು ಕಂಡು ಪ್ರಜೆಗಳು ಉದ್ರೇಕಗೊಳ್ಳಬೇಕಾದ ಕಾರಣವೇನು? ಸಾತ್ವಿಕ ವ್ರತದೀಕ್ಷಾಬದ್ಧರಾದ ಸತ್ಯಾಗ್ರಹಿಗಳು ಶಾಸನಕ್ಕೆ ವಿರುದ್ಧವಾಗಿ ಇತರರನ್ನು ಅಂಗಡಿ ಮುಚ್ಚಿರೆಂದೂ ಬಂಡಿಯನ್ನು ಬಿಟ್ಟಿಳಿದು ನಡೆಯಿರೆಂದೂ ಮೊದಲಾಗಿ ಹೇಳಿ ಇತರರನ್ನು ಬಲಾತ್ಕರಿಸಲು ಪ್ರಯತ್ನಿಸುವುದೂ, ಸರ್ಕಾರದವರು ತಕ್ಕ ಕಾರಣಗಳಿಂದ ಸೆರೆಹಿಡಿದ ಜನರನ್ನು ಬಿಡಿಸಿಕೊಳ್ಳುವುದಕ್ಕಾಗಿ ಕಲಹಮಾಡುವುದೂ, ಸರ್ಕಾರಿ ಕಟ್ಟಡಗಳು ಆಂಗ್ಲಪ್ರಜೆಗಳು ಮೊದಲಾದವರನ್ನು ವಿನಾಶಗೊಳಿಸುವುದೂ ಸಹ ಕ್ಷಮ್ಯಗಳಾದ ಅಪರಾಧಗಳೇ? ಇವುಗಳಿಂದೆಲ್ಲಾ ಸರ್ಕಾರವನ್ನು ಬೆದರಿಸಲಾದೀತೆ? ಈ ಪುಂಡಾಟಗಳಿಂದ ಪ್ರಜೆಗಳಿಗೆ ಶ್ರೇಯಸ್ಸುಂಟಾದೀತೆ? ವರ್ತಕರು, [illegible]ಗಾರರು, ಕಸಬುಗಾರರು ಮೊದಲಾದ ಪ್ರಜೆಗಳಿಗೆಲ್ಲಾ [illegible]ಲತ್ ಶಾಸನದಂಥ ಕಠಿನಶಾಸನಗಳು ನೂರೆಂಟು ಹುಟ್ಟಿದರೆತಾನೇ ಬಾಧಕವೇನು? ಅವೆಲ್ಲಾ ಈ ಪ್ರಜೆಗಳ ಹಿತಕ್ಕಾಗಿಯೇ ಹೊರತು ಅಹಿತಕ್ಕಲ್ಲ. ಇಂಥ ಶಾಸನವು ಹಿಂದೆ ಹುಟ್ಟಿದ ಮೇಲೆಯೇ ಬಂಗಾಳಾ ಪಂಜಾಬುಗಳಲ್ಲಿ ೩ ವರ್ಷಗಳ ಕೆಳಗೆ ನಡೆಯುತ್ತಿದ್ದ ಕೊಲೆ ಸುಲಿಗೆ ಮೊದಲಾದ ಅನಿಷ್ಟದೌರ್ಜನ್ಯಗಳು ಅಡಗಿಹೋದುವು. ಅದರಿಂದುಂಟಾದ ಶಾಂತಿಯನ್ನು ಪ್ರಜೆಗಳು ಅನುಭವಿಸುವಂತಾಯಿತು. ಈ ರೌಲತ್ ಶಾಸನದ ಫಲವೂ [illegible] ಪ್ರಜೆಗಳು ತಿಳಿದುಕೊಳ್ಳಬೇಕು. ರಾಜ [illegible] ವೃತ್ತಿಗಳಲ್ಲಿ ಪ್ರವರ್ತಿಸಿದವ [illegible] ಕೊಡುವಲ್ಲಿ—"ಅರಾಜಕವಿಪ್ಲವವು ಭರತಖಂಡದಲ್ಲಿ ಹೆಚ್ಚಿಕೊಂಡುದರಿಂದ ನೂತನ ಶಾಸನವನ್ನು ಏರ್ಪಡಿಸಬೇಕಾಗಿ ಬಂದುದಕ್ಕಾಗಿ ಸ್ಟೇಟ್ ಸೆಕ್ರಟರಿಯವರು ವಿಷಾದಿಸುತ್ತಾರೆ. ಎಲ್ಲಿ ಅರಾಜಕವಿಪ್ಲವವು ಹುಟ್ಟಿ ಹಬ್ಬಿಕೊಳ್ಳುವಂತಿರುವುದೋ ಅಂಥ ಕಡೆಯಲ್ಲಿ ಮಾತ್ರ ಈ ಶಾಸನವನ್ನು ಪ್ರಯೋಗಿಸಿ ಶಾಂತಿಯನ್ನು ಕಾಪಾಡುವುದಕ್ಕಾಗಿ ಅಸಾಧಾರಣಾಧಿಕಾರವು ತಮಗಿರಬೇಕೆಂದು ಭರತಖಂಡದ ಸರ್ಕಾರದವರು ಗಟ್ಟಿಯಾಗಿ ನಂಬಿರುವುದರಿಂದ, ರೌಲತ್ ಸಂಘದವರ ವರದಿಯ ಅಭಿಪ್ರಾಯವನ್ನೂ ಇಂಡ್ಯಾ ಸರ್ಕಾರದವರ ಅಭಿಪ್ರಾಯವನ್ನೂ ನಿರಾಕರಿಸಿ ರೌಲತ್ ಶಾಸನವನ್ನು ತೆಗೆದುಹಾಕಿಸಿ ಬಿಡಬೇಕೆಂದು ಚಕ್ರವರ್ತಿಯವರನ್ನು ಕೋರಿಕೊಳ್ಳಲು ಸ್ಟೇಟ್ ಸೆಕ್ರಟರಿಯವರು ಅಂಗೀಕರಿಸುವುದಿಲ್ಲ" ಎಂದು ಉತ್ತರಕೊಟ್ಟಿದ್ದಾರೆ. ಇದರ ಮೇಲಿಂದ ಭಾರತೀಯರು ಇಂಡ್ಯಾ ಪ್ರಭುತ್ವದವರ ಸಂಕಲ್ಪಕ್ಕೆ ವಿರುದ್ಧವಾಗಿ ಚಳವಳವನ್ನು ನಡೆಯಿಸಿ ಸೀಮೆಯ ಪ್ರಭುತ್ವದವರಿಂದ ಇಷ್ಟಾರ್ಥ ಪಡೆದುಕೊಳ್ಳುತ್ತೇವೆಂದು ಮಾಡುವ ಪ್ರಯತ್ನಕ್ಕೆ ಫಲವೇನೂ ಇಲ್ಲವೆಂಬುದು ಸಿದ್ಧವಾಗಿದೆ. ವೈಸ್ರಾಯ್ ಚೆಲ್ಮ್ಸ್‌ಫರ್ಡ್‌ರವರೂ, ಸ್ಟೇಟ್ ಸೆಕ್ರಟರಿ ಮಿ|| ಮಾಂಟೆಗ್ಯೂರವರೂ ಸಹ ಭಾರತೀಯರ ವಿಷಯದಲ್ಲಿ ಇದುವರೆಗೂ ಹೃದಯಪೂರ್ವಕವಾದ ಸಾನುಭೂತಿಯನ್ನು ವಹಿಸಿ, ನೂತನ ರಾಜಕೀಯ ಸಂಸ್ಕರಣಗಳನ್ನು ಏರ್ಪಡಿಸಲು ಬಹು ಶ್ರಮಪಟ್ಟಿರುವರು. ಈಗಣ ಕೆಲ ಮುಂಗೋಪಿಗಳು ದುಷ್ಟಚಲನವಲನವನ್ನು ಹುಟ್ಟಿಸಿ ಹಬ್ಬಿಸಿ, ಅಧಿಕಾರಿಗಳಮೇಲೂ ಯೂರೋಪ್ಯ ಪ್ರಜೆಗಳ ಮೇಲೂ ಧಿಕ್ಕಾರ ಅಸಹ್ಯಭಾವನೆ ದ್ವೇಷ ಮೊದಲಾದುವುಗಳು ಪ್ರಜಾಸಾಮಾನ್ಯದಲ್ಲಿ ಹುಟ್ಟುವಂತೆ ಮಾಡಿ, ಅದರಿಂದ ಸಾರ್ವಭೌಮ ಪ್ರತಿನಿಧಿಗಳ ಮನಸ್ಸು ಕೆಟ್ಟುಹೋಗುವಂತೆ ಮಾಡುತ್ತಿರುವುದನ್ನು ನೋಡಿದರೆ ತುಂಬಾ ಸಂಕಟವಾಗುತ್ತದೆ. ಈ ಸಮಯದಲ್ಲಿ ಭರತಖಂಡದೊಳಗೆ ಉಂಟುಮಾಡಲ್ಪಡುವ ಗದ್ದಲಗಳು ಈ ದೇಶದ ಸ್ವಪರಿಪಾಲನಾನರ್ಹತೆಗೆ ತಕ್ಕ ಚಿಹ್ನೆಗಳೆಂದು ಇತರರು ಆಡಿಕೊಳ್ಳುವ ಮಾತಿಗೆ ಸಾಕ್ಷ್ಯವನ್ನು ಒದಗಿಸಿಕೊಟ್ಟಂತಾಗಿರುತ್ತದೆ. ಇನ್ನಾದರೂ ಪ್ರಜಾಪ್ರಮುಖರೂ ಸಾಮಾನ್ಯಪ್ರಜೆಗಳೂ ಈ ಹಾಳು ದುರಾಗ್ರಹಕ್ಕೆ ತಿಲತರ್ಪಣವನ್ನು ಕೊಟ್ಟು ಶಾಂತರಾಗಿದ್ದರೆ ಕ್ಷೇಮವಾದೀತು. ಹಾಗಲ್ಲದೆ ಮತ್ತೆ ಮುಷ್ಕರವನ್ನೂ ಅನಾಗರಕತನವನ್ನೂ ತೋರಿಸುತ್ತ ಪ್ರಭುತ್ವದವರ ಮೇಲೆ ದ್ವೇಷವನ್ನು ಸಾಗಿಸುತ್ತ ಬಂದರೆ, ಬಂಗಾಳಾಗೌರ್ನರು ಮೊನ್ನೆ ತಾನೇ ಒಂದು ಕಡೆ ಹೇಳಿರುವಂತೆ ಈ ದುಷ್ಪ್ರಯತ್ನದಲ್ಲಿ ಯಾರುಯಾರು ಸೇರಿರುವರೆಂದು ಗೊತ್ತಾಗುವುದೋ ಅಂಥವರನ್ನೆಲ್ಲಾ ಎಲ್ಲತರದ ಶಾಸನಗಳ ಬಲದಿಂದಲೂ ಅಡಗಿಸಿಬಿಡುವುದಕ್ಕೆ ಹಿಂದೆಗೆಯಲಾರರು. ಮತ್ತು "ಇನ್ನುಮೇಲೆ ಈ ಗದ್ದಲವು ಜರುಗದಂತೆ ಮಾಡುವುದಕ್ಕಾಗಿ ಎಷ್ಟು ಕಠಿಣತರವಾದ ಶಾಸನಗಳನ್ನಾದರೂ ಉಪಯೋಗಿಸುವುದು ಅವಶ್ಯಕವೆಂದು ಸಭಾಸಹಿತರಾದ ಗೌರ್ನರ್ ಜನರಲ್‌ರವರು ತಿಳಿದಿರುವರು. ಪ್ರಜೆಗಳನ್ನು ಹಿಂಸಿಸುವುದಕ್ಕೆ ಅಥವಾ ಗದ್ದಲವನ್ನು ಹೆಚ್ಚಿಸುವುದಕ್ಕೆ ಉದ್ದೇಶಪೂರ್ವಕವಾಗಿ ಯಾರಾದರೂ ಪ್ರಯತ್ನಪಟ್ಟರೆ ಅದನ್ನಡಗಿಸುವುದಕ್ಕೆ ತಮ್ಮ ಸೈನ್ಯಬಲವನ್ನೆಲ್ಲಾ ಉಪಯೋಗಿಸುವುದರಲ್ಲಿ ವೈಸ್ರಾಯರು ಎಷ್ಟುಮಾತ್ರವೂ ಹಿಂದೆಗೆಯರು" ಎಂದು ಭರತಖಂಡದ ಸರ್ಕಾರದವರು ನಿನ್ನೆತಾನೇ ಒಂದು ಪ್ರಕಟನೆಯನ್ನು ಮಾಡಿರುತ್ತಾರೆ. ೧೮೦೪ನೆ ವರ್ಷದ ಶಿಕ್ಷಾರ್ಥವಾದ ಪೋಲೀಸನ್ನು ಏರ್ಪಡಿಸುವ ಶಾಸನ, ದೇಶರಕ್ಷಕಶಾಸನ, ಇವುಗಳನ್ನೂ ಉಪಯೋಗಿಸುವರು. ೧೮೦೪ ನೆ ವರ್ಷದ ಸ್ಟೇಟ್ ಅಫೆನ್ಸಸ್ ರೆಗ್ಯುಲೇಷನ್ ಆಕ್ಟನ್ನು ಪಂಜಾಬು ಆಧಿಪತ್ಯದ ಕೆಲಭಾಗಗಳಲ್ಲಿ ಉಪಯೋಗಿಸುವುದಕ್ಕೆ ಆಗಲೇ ಅಪ್ಪಣೆಮಾಡಿರುವರು. ಇದನ್ನೆಲ್ಲಾ ನೋಡುವಲ್ಲಿ ಸರ್ಕಾರದವರು ಈ ಗದ್ದಲವನ್ನು ಅಡಗಿಸುವಲ್ಲಿ ಸ್ವಲ್ಪವೂ ಸಾಲುಮಾಡುವುದಿಲ್ಲವೆಂಬುದು ಸಿದ್ಧವಾಗಿದೆ. ಅದುಕಾರಣ ಈ ಸಮಯದಲ್ಲಿ ಸರ್ಕಾರದ ಮೇಲೆ ಪ್ರತಿಭಟಿಸುವುದು ಬೆಂಕಿಯೊಡನೆ ಸರಸವಾಡಿದಂತೆಯೇ ಸರಿ. ಈ ದುಷ್ಟಕ್ಷಾಮಕಾಲದಲ್ಲಿ ಪ್ರಜೆಗಳು ತಮ್ಮ ವ್ಯಾಪಾರಾದಿ ಉದ್ಯೋಗಗಳಲ್ಲಿ ನಿರತರಾಗಿ ಕಾಲಯಾಪನೆ ಮಾಡುವುದನ್ನು ಬಿಟ್ಟು ಧನಮಾನ ಪ್ರಾಣಗಳ ಹಾನಿಗೆ ಸಾಧಕವಾದ ದುಷ್ಟ ಕೋಲಾಹಲಗಳಲ್ಲಿ ತೊಡಗುವುದು ಎಂದಿಗೂ ಶ್ರೇಯಸ್ಕರವಾಗಲಾರದು.

ಈಚೆಗೆ ಮ|| ಗಾಂಧಿಯವರು ತ[illegible] ಕೊಟ್ಟಿರುವ [illegible] ಅಂಟಿಸಿದ್ದ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

1

ಎಲೆಕ್ಟ್ರಿಕ್ [illegible]

ಇದು ವಿದ್ಯುಚ್ಛಕ್ತಿಯ ಬೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಮಹಾಶಯರೆ! ಇಲ್ಲಿನೋಡಿ!!

ಅಚ್ಚುಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಸ್ಟೇಜು ಸೇರಿ 1—0—0.
200 ಕ್ಕೆ ... ... ,, ,, 1—12—0.
300 ಕ್ಕೆ ... ... ,, ,, 2—4—0.

ವಿಳಾಸ—ಡಿ. ಹೆಚ್. ಮಸ್ತಾನ್ ಸಾಹೇಬ್, ಅಂಡ್ ಕೊ,
4 ಮರಡಿಹಳ್ಳಿ—ಚಿತ್ರದುರ್ಗ ಡಿ||.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಬೇನೆಯೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೊ,
10 ಸಾಹುಕಾರಪೇಟೆ, ಮದರಾಸ್.

ಸತ್ಯಾಗ್ರಹದ ಗದ್ದಲ.

ಮ|| ಗಾಂಧಿಯವರು ಸತ್ಯಾಗ್ರಹೋಪದೇಶಕ್ಕಾಗಿ ದಿನಕ್ಕೊಂದು ಪ್ರಾಂತಕ್ಕೆ ಹೋಗುತ್ತಿದ್ದರು. ಅವರನ್ನು ಹಾಗೆ ಸ್ವೇಚ್ಛೆಯಿಂದ ಸಂಚಾರಗೊಳ್ಳಲು ಬಿಡುವುದು ಅನರ್ಥಕಾರಿಯೆಂದೋ ಏನೋ ಪಂಜಾಬು ಸರ್ಕಾರದವರು ಗಾಂಧಿಯವರನ್ನು ತಮ್ಮ ಪ್ರಾಂತಕ್ಕೆ ಪ್ರವೇಶಿಸಲಾಗದೆಂದು ಆಜ್ಞೆಮಾಡಿ, ಅದನ್ನು ಗಾಂಧಿಯವರು ದಿಲ್ಲಿಯಕಡೆಗೆ ಪ್ರಯಾಣಮಾಡಿ ಹೋಗುತ್ತಿರುವಾಗಲೇ ಕೋಸಿಕಾಲಾ ಎಂಬ ನಿಲ್ದಾಣದ ಹತ್ತಿರ ಅವರಿಗೆ ಕೊಟ್ಟರು. ಅದನ್ನು ಅವರು ಧಿಕ್ಕರಿಸಿಬಿಟ್ಟು ಮುಂದಕ್ಕೆ ಪ್ರಯಾಣಮಾಡಿದರು. ಸರ್ಕಾರದ ಆಜ್ಞೆಯನ್ನು ಅವರು ಹೀಗೆ ಉಲ್ಲಂಘಿಸಿದ ಕಾರಣದಿಂದ ಅವರನ್ನು ಹಿಡಿದು ಹಿಂದಕ್ಕೆ ಕಳುಹಿಸುವುದಕ್ಕೆ ಅಪ್ಪಣೆಯಾದುದರಿಂದ ಪೋಲೀಸರು ದಿಲ್ಲಿಗೆ ಸಮೀಪದಲ್ಲಿರುವ ಪಾವಲ್ ನಿಲ್ದಾಣದ ಹತ್ತಿರ ತಾ|| ೯ ರಲ್ಲಿ ಹಿಡಿದರು. ನೀವು ಪಂಜಾಬು ಆಧಿಪತ್ಯವನ್ನು ಪ್ರವೇಶಿಸಲಾಗದು ಎಂದು ಪಂಜಾಬು ಲೆ|| ಗೌರ್ನರೂ, ದಿಲ್ಲಿಯನ್ನು ನೀವು ಪ್ರವೇಶಿಸಕೂಡದು ಎಂದು ದಿಲ್ಲಿ ಚೀಫ್ ಕಮಿಷನರೂ, ನೀವು ಬೊಂಬಾಯಿ ಆಧಿಪತ್ಯವನ್ನು ಬಿಟ್ಟು ಹೊರಕ್ಕೆ ಎಲ್ಲಿಯೂ ಹೋಗಕೂಡದೆಂದು ಇಂಡ್ಯಾ ಸರ್ಕಾರದವರೂ ಮಾಡಿದ್ದ ಅಪ್ಪಣೆಗಳನ್ನು ಗಾಂಧಿಯವರ ಕೈಗೆ ಕೊಟ್ಟರು. ಬಳಿಕ ಅವರನ್ನು ಬೇರೊಂದು ಬಂಡಿಯಲ್ಲಿ ಕುಳ್ಳಿರಿಸಿ ಬೊಂಬಾಯಿಗೆ ಸಾಗಿಸಿದರು.

ದಿಲ್ಲಿ.

ಗಾಂಧಿಯವರು ತಮ್ಮ ಪಟ್ಟಣಕ್ಕೆ ಬರುವರೆಂದು ತಿಳಿದು ಅವರನ್ನು ಸ್ವಾಗತಿಸುವುದಕ್ಕಾಗಿ ದಿಲ್ಲಿಯ ನಿಲ್ದಾಣದಲ್ಲಿ ಸೇರಿದ್ದ ಸಾವಿರಾರು ಪ್ರಜೆಗಳಿಗೆ ಗಾಂಧಿಯವರನ್ನು ಪೋಲೀಸರು ಹಿಡಿದರೆಂಬ ಸುದ್ದಿಯು ಮುಟ್ಟಲಾಗಿ ಅವರು ಹತಾಶರಾದುದಲ್ಲದೆ ಆಗ್ರಹಪರವಶರಾದರು. ಬೆಳಗಾಗುವುದರೊಳಗೆ ಈ ಸುದ್ದಿಯು ಊರೆಲ್ಲಾ ವ್ಯಾಪಿಸಿತು. ಟಾಂಗಾ ಬಂಡಿಯವರ ಹೊರತು ಉಳಿದವರೆಲ್ಲಾ ಮುಷ್ಕರಹಿಡಿದು ಕೆಲಸಕ್ಕೆ ಬಾರದೆ ನಿಂತರು. ಅಂಗಡಿ ಮುಂಗಟ್ಟುಗಳೆಲ್ಲಾ ಮುಚ್ಚಲ್ಪಟ್ಟುವು. ಪ್ರಾಣಾಪಾಯಕರವಾದ ಗದ್ದಲವೇನೂ ನಡೆಯಲಿಲ್ಲ.

ಅಮೃತಸರ.

ದೇಶರಕ್ಷಕಶಾಸನದ ಪ್ರಕಾರ ಪಂಜಾಬು ಪ್ರಭುತ್ವದವರು ಡಾಕ್ಟರ್ ಸೈಯುದ್ದೀನ್, ಕಿಚಲೂ, ಡಾಕ್ಟರ್ ಸತ್ಯಪಾಲ್ ಈ ಮೂರು ಮಂದಿಗಳನ್ನು ತಾ|| ೧೦ ನೆ ಬೆಳಗ್ಗೆ ಹಿಡಿಯಿಸಿ ಮೋಟಾರಿನಲ್ಲಿ ಕುಳ್ಳಿರಿಸಿ, ಹೊಗೆಬಂಡಿಯಮೇಲೆ ಹೊರಕ್ಕೆ ಸಾಗಿಸಿಬಿಟ್ಟರು. ಈ ಸುದ್ದಿಯು ೧೧ ಗಂಟೆಯೊಳಗಾಗಿ ಊರಲ್ಲೆಲ್ಲಾ ಹಬ್ಬಿತು. ಮತ್ತೂ ಗಾಂಧಿಯವರನ್ನು ಹಿಡಿದರೆಂಬ ಸುದ್ದಿಯೂ ಮುಟ್ಟಿದ್ದಿತು. ೧೦-೨೦ ಸಾವಿರ ಮಂದಿ ಪ್ರಜೆಗಳು ಕೋರ್ಟು ಕಚೇರಿಗಳ ಕಡೆಗೆ ಆಗ್ರಹದಿಂದ ನುಗ್ಗಲಾರಂಭಿಸಿದರು. ಅಲ್ಲಿಯ ಕಾವಲಿನವರು ಹಿಂದಕ್ಕೆ ಹೊರಡಿರೆಂದು ಜನರ ಗುಂಪಿಗೆ ಆಜ್ಞಾಪಿಸಲು ಅವರು ಲಕ್ಷ್ಯಮಾಡಲಿಲ್ಲ. ಅಷ್ಟೇ ಅಲ್ಲದೆ ಇಟ್ಟಿಗೆಗಳನ್ನೂ ಕಲ್ಲುಗಳನ್ನೂ ಬೀರಲಾರಂಭಿಸಿದರು. ಅಷ್ಟರಲ್ಲಿ ಜಿಲ್ಲಾ ಮೇಜಿಸ್ಟ್ರೇಟರು ಬಂದು ತುಪಾಕಿಗಳನ್ನು ಹಾರಿಸಲು ಅಪ್ಪಣೆಮಾಡಿದರು. ಗುಂಪಿನವರು ಊರಿನಕಡೆಗೆ ೨ ಶಾಖೆಗಳಾಗಿ ಒಡೆದುಕೊಂಡರು. ಒಂದು ಗುಂಪು ರೈಲ್ವೆ ಸ್ಟೇಷನ್ನಿನ ಕಡೆಗೆ ಸಾಗಿತು. ಅವರ ಕೈಯಲ್ಲಿ ದೊಣ್ಣೆಗಳೂ ಕಲ್ಲುಗಳೂ ಇದ್ದುವು. ಇವರು ಒಳಕ್ಕೆ ನುಗ್ಗಿ ಅಲ್ಲಿದ್ದ ರಾಬಿನ್‌ಸನ್ ಎಂಬ ಗಾರ್ಡನ್ನು ದೊಣ್ಣೆಯಿಂದ ಬಲವಾಗಿ ಹೊಡೆದು ಸಾಯಿಸಿದರು. ಸಾಮಾನಿನ ಮನೆಗೆ ಬೆಂಕಿಯಿಕ್ಕಿ ಸುಟ್ಟರು. ಅಷ್ಟರಲ್ಲಿ ಒಂದು ಹೊಗೆಬಂಡಿಯಲ್ಲಿ ಗೂರ್ಖಾಸೈನಿಕರು ಬರಲು, ಅವರು ಗುಂಪಿನವರನ್ನು ಬೆದರಿಸಿ ಚದರಿಸಿ ಸ್ಟೇಷನ್ನನ್ನು ರಕ್ಷಿಸಿದರು. ಬಳಿಕ ಗುಂಪಿನವರು ಟೇಲಿಗ್ರಾಂ ಕಂಬದ ತಂತಿಗಳನ್ನು ಕತ್ತರಿಸಿಹಾಕುವುದಕ್ಕೂ ರೈಲ್ವೆ ಕಂಬಿಗಳನ್ನು ಕಿತ್ತುಹಾಕುವುದಕ್ಕೂ ತೊಡಗಿದರು. ಇದರಿಂದ ಮೇಲುಬಂಡಿಯು ಬರುವುದಕ್ಕೆ ತಡವೂ ಆಯಿತು. ೨ ನೆ ಗುಂಪಿನವರು ಊರಿನೊಳಕ್ಕೆ ನುಗ್ಗಿದರಷ್ಟೆ. ಅವರು ಬಹಳ ಹಾವಳಿಮಾಡಿದರು. ಟೌನ್‌ಹಾಲನ್ನೂ, ಟೇಲಿಗ್ರಾಂ ಆಫೀಸನ್ನೂ, ನೇಷನಲ್ ಬ್ಯಾಂಕ್ ಆಫೀಸನ್ನೂ, ಅಲಯನ್ಸ್ ಬ್ಯಾಂಕ್ ಆಫೀಸನ್ನೂ ಕೆಡಹಿ, ಅವುಗಳಮೇಲೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಯಿಕ್ಕಿ ಸುಟ್ಟುಬಿಟ್ಟರು. ಮಿಷನ್ ದೇವಾಲಯವನ್ನೂ ಪಂಜಾಬು ರಿಲಿಜಿಯಸ್ ಡಿಪೋವನ್ನೂ ಇನ್ನು ಕೆಲ ಕಟ್ಟಡಗಳನ್ನೂ ಹೀಗೆಯೇ ಹಾಳ್ಮಾಡಿದರು. ನೇಷನಲ್ ಬ್ಯಾಂಕಿನ ಉದ್ಯೋಗಿಗಳಾದ ಸ್ಟೂಅರ್ಟ್, ಮತ್ತೂ ಸ್ಕಾಟ್ ಎಂಬ ಇಬ್ಬರು ಯೂರೋಪ್ಯರೂ, ಅಲಯನ್ಸ್ ಬ್ಯಾಂಕಿನ ಏಜಂಟ್ ಮಿ|| ಜಿ. ಎಮ್. ಥಾಮ್ಸನ್‌ರವರೂ ಸಹ ಗುಂಪಿನವರಿಂದ ಕೊಲ್ಲಲ್ಪಟ್ಟರು. ಇವರು ಕೊಲ್ಲಲ್ಪಡುವುದಕ್ಕೆಮುಂಚೆ ತಮ್ಮಲ್ಲಿದ್ದ ತುಪಾಕಿಯಿಂದ ಗುಂಪಿನ ಕೆಲವರನ್ನು ಸುಟ್ಟರು. ಇನ್ನು ಕೆಲ ಯೂರೋಪ್ಯರನ್ನು ಪೋಲೀಸರು ಕಾಪಾಡಿದರು. ಕೆಲ ಮಂದಿ ಯೂರೋಪ್ಯರನ್ನು ಹಿಂದೂ ದೊಡ್ಡಮನುಷ್ಯರುಗಳು ತಮ್ಮ ಮನೆಯಲ್ಲಿ ಅವಿಸಿಟ್ಟು ರಕ್ಷಿಸಿದರು. ಪೋಲೀಸರು ಬಹು ಜಾಗರೂಕತೆಯಿಂದ ಯೂರೋಪ್ಯರನ್ನು ಕಾಪಾಡಿದರು. ಒಟ್ಟು ೫ ಮಂದಿ ಯೂರೋಪ್ಯರು ಕೊಲ್ಲಲ್ಪಟ್ಟರೆಂದು ಗೊತ್ತಾಗಿದೆ. ಸಣ್ಣಸಣ್ಣ ಗುಂಪಿನ ಜನರು ಬೀದಿಬೀದಿಗಳಲ್ಲಿ ನುಗ್ಗಿ ಹಾಳ್ಮಾಡಲುಪಕ್ರಮಿಸಿದರು. ಪ್ರಭುತ್ವದವರು ಸೈನಿಕರನ್ನೂ ಪೋಲೀಸರನ್ನೂ ತಂದು ನಿಲ್ಲಿಸಿ ಪಟ್ಟಣವನ್ನೆಲ್ಲಾ ರಕ್ಷಿಸುವ ಏರ್ಪಾಟು ಮಾಡಿದರು. ಸೈನಿಕರು ಗುಂಪಿನವರ ಹಾವಳಿಯನ್ನಡಗಿಸಿ ಅವರನ್ನು ಚದರಿಸುವ ಸಂದರ್ಭದಲ್ಲಿ ಹಾರಿಸಿದ ಗುಂಡುಗಳಿಂದಲೂ ಇತರ ಕಾರಣಗಳಿಂದಲೂ ಪ್ರಜೆಗಳಲ್ಲಿ ಕೊಲ್ಲಲ್ಪಟ್ಟವರ ಸಂ[illegible] ೨೦ ರಿಂದ ಮೂವತ್ತರೊಳಗೆ ಇರಬಹುದೆಂದು ಎಣಿಸಲ್ಪಟ್ಟಿದೆ. [illegible]ಗಿನ ಏರ್ಪಾಟು ಸಮರ್ಪಕವಾಗಿದ್ದುದರಿಂದ [illegible]ಪುರ ಲಾಹೋರುಗಳ ಮಧ್ಯದ [illegible] ಸಾಗಿಹೋಗಿ, ಹಾವ[illegible] ಕೊಂಡೂ ನಡೆಯಲಿಲ್ಲ. ಸ್ಥಿತಿಯು ಭಯಂಕರವಾಗಿಯೇ ಇದ್ದಿತು. ಜನರು ಗುಂಪಾಗಿ ಸಾಗುತ್ತಲೇ ಇದ್ದರು. ಸಾಯಂಕಾಲ ಮತ್ತೊಂದು ಸಲ ತುಪಾಕಿಗಳನ್ನು ಹಾರಿಸಬೇಕಾಯಿತು. ಆ ದಿವಸವೆಲ್ಲಾ ಹಾರಿಸಿದ ಗುಂಡುಗಳಿಂದ ಬಹುಶಃ ಇಬ್ಬರು ಸತ್ತು ೪-೫ ಮಂದಿಗೆ ಗಾಯವಾಗಿರುವುದೆಂದು ಸರ್ಕಾರದವರು ಪ್ರಕಟಿಸಿದ್ದಾರೆ. ತಾ|| ೧೧ ರಲ್ಲಿಯೂ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟೇ ಇದ್ದುವು. ಪ್ರಜೆಗಳು ಗುಂಪುಕೂಡಿ ಮೆರವಣಿಗೆಯಾಗಿ ಹೋಗಕೂಡದೆಂದೂ, ಮೀರಿಹೋದರೆ ಬಲಾತ್ಕಾರದಿಂದ ಚದರಿಸಿ ಹಿಂದಕ್ಕೆ ಕಳುಹಲ್ಪಡುವರೆಂದೂ ಪೋಲೀಸು ಡೆ|| ಕಮಿಷನರು ಪ್ರಸಿದ್ಧಪತ್ರಿಕೆಗಳನ್ನು ಮುದ್ರಿಸಿ ಹಂಚಿದರು. ಊರಿನಲ್ಲೆಲ್ಲಾ ಸೋಲ್ಜರುಗಳೂ ಕುದುರೆ ಸ್ವಾರರೂ ಪೋಲೀಸರೂ ಸೈನಿಕರೂ ಕಾವಲು ಮಾಡುತ್ತಿದ್ದರು. ಸಾಯುಧಮೋಟಾರುಬಂಡಿಗಳು ಕಚೇರಿಗಳನ್ನೂ ಬ್ಯಾಂಕುಗಳನ್ನೂ ಕಾಯುತ್ತಿದ್ದುವು. ತಾ|| ೧೦ ರ ರಾತ್ರಿ ಒಂದು ಸೈನಿಕವಿಮಾನವು ಮೇಲ್ಗಡೆಯಲ್ಲಿ ಹಾರುತ್ತ ಪಟ್ಟಣದ ಸ್ಥಿತಿಯನ್ನು ಅವಲೋಕಿಸುತ್ತಿದ್ದಿತು. ಮೋಟಾರುಬಂಡಿಗಳನ್ನಿಟ್ಟುಕೊಂಡಿದ್ದವರೆಲ್ಲಾ ತಂತಮ್ಮ ಬಂಡಿಗಳನ್ನು ಯೂರೋಪ್ಯಪ್ರಜೆಗಳಿಗೆ ಕೊಟ್ಟು ಅವರ ಪ್ರಾಣರಕ್ಷಣೆಗೆ ಸಹಾಯಮಾಡಿದರು. ಮೇಲೆ ಕಂಡ ಗದ್ದಲವು ಆಕಸ್ಮಿಕವಾಗಿ ಸಂಭವಿಸಿದರೂ ಪ್ರಭುತ್ವದವರು ಮಾಡಿದ ಮುಂಜಾಗರೂಕತೆಯ ಏರ್ಪಾಟುಗಳಿಂದ ಲಾಹೋರಿನಲ್ಲಿ ವಿಶೇಷಾನರ್ಥಗಳಿಗೆ ಅವಕಾಶವಾಗಲಿಲ್ಲ. ಆ ಪಟ್ಟಣದಲ್ಲಿದ್ದ ಆಂಗ್ಲೋದ್ಯೋಗಿಗಳನ್ನೆಲ್ಲಾ ಸೈನಿಕರ ಮನೆಸಾಲಿಗೆ ಕರೆಯಿಸಿಟ್ಟು ಕಾಪಾಡಿದರು. ತಾ|| ೧೧ ರಲ್ಲೂ ಜನರು ಗುಂಪು ಗುಂಪಾಗಿ ಉತ್ಸವಮಾಡಿಕೊಂಡರು. ಆದರೆ ಪುಂಡಾಟಗಳೇನೂ ಇರಲಿಲ್ಲ. ಹಿಂದಣ ದಿನ ಕೊಲ್ಲಲ್ಪಟ್ಟವರ ಶವಗಳನ್ನು ಸಂಸ್ಕಾರಕ್ಕಾಗಿ ಆಡಂಬರದಿಂದ ಮೆರೆಯಿಸಿಕೊಂಡು ಹೋಗಬೇಕೆಂದವರಿಗೆ ಅಧಿಕಾರಿಗಳು ಅಪ್ಪಣೆಕೊಡಲಿಲ್ಲ. ಸೌಮ್ಯವಾಗಿ ಶವಸಂಸ್ಕಾರ ಮಾಡಿಕೊಳ್ಳುವೆವೆಂದವರಿಗೆ ಅವಕಾಶಕೊಟ್ಟರು. ತಾ|| ೧೨ರಲ್ಲಿ ಲಾಹೋರಿನೊಳಗೆ ಮತ್ತೆ ಜನರ ಗುಂಪು ಕೋಲಾಹಲ ಮಾಡುತ್ತ ಸರ್ಕಾರದ ಆಜ್ಞೆಯನ್ನು ಮೀರಿ ಅಶಾಂತಿಯನ್ನು ಹುಟ್ಟಿಸುತ್ತಿದ್ದುದರಿಂದ ತುಪಾಕಿಗಳನ್ನು ಹಾರಿಸಬೇಕಾಯಿತು. ಅಮೃತಸರದಲ್ಲಿ ಇಬ್ಬರು ಸತ್ತರು. ಮತ್ತೆ ತಾ|| ೧೪ರಲ್ಲಿ ಗದ್ದಲ ಹೆಚ್ಚಾಗಲು ತುಪಾಕಿಯೇಟಿನಿಂದ ಕೆಲ ಮಂದಿ ಸತ್ತರು. ಅಂತೂ ಈ ನಗರದಲ್ಲಿ ಗುಂಡಿನೇಟಿನಿಂದ ಒಟ್ಟು ೨೦೦ ಮಂದಿಗಳು ಸತ್ತರಂತೆ. ಈಗ ಸರ್ಕಾರದವರು ಅಮೃತಸರದಲ್ಲೂ ಲಾಹೋರಿನಲ್ಲೂ ಇದೇ ೧೯೧೯ನೆ ಸಂವತ್ಸರದ ೧ನೆ ಆರ್ಡಿನೆನ್ಸ್ ನೂತನ ಶಾಸನವನ್ನು ಉಪಯೋಗಿಸಲು ಅಪ್ಪಣೆಮಾಡಿದ್ದಾರೆ. ಈ ಸೈನಿಕಶಾಸನವು ಇದೇ ತಿಂಗಳು ತಾ|| ೧೫ನೆ ಅರ್ಧರಾತ್ರಿಯಿಂದ ಅಲ್ಲಿ ವ್ಯವಹಾರಕ್ಕೆ ತರಲ್ಪಟ್ಟಿದೆ. ಆದರೆ ಅಪರಾಧಿಗಳೆಂದು ಹಿಡಿಯಲ್ಪಟ್ಟವರನ್ನು ಸೈನಿಕಾಧಿಕಾರಿಗಳ ಮುಂದೆ ವಿಚಾರಣೆಗೊಳಗುಮಾಡದೆ ಮೂರು ಮಂದಿಗಳುಳ್ಳ ಒಂದು ಸಂಘದವರ ವಿಚಾರಣೆಗೆ ಒಳಪಡಿಸುವರು.

ತಾ||						
13	¹ಭಾನು	ತ್ರಯೋ	8.14	ಉಫ	[illegible]	[illegible]
14	²ಸೋಮ	ಚತು	11.36	ಹಸ್ತ	34.34	2
15	³ಮಂಗಳ	ಪೌರ್ಣ	15.57	ಚಿತ್ತ	40.38	3
16	ಬುಧ	ಪಾಡ್ಯ	21.0	ಸ್ವಾತಿ	47.10	4
17	ಗುರು	ಬಿದಿಗೆ	26.11	ವಿಶಾಖಾ	53.51	5
18	ಶುಕ್ರ	ತದಿಗೆ	31.13	ಅನೂ	58.58	6
19	⁴ಶನಿ	ಚೌತಿ	35.37	ಜ್ಯೇಷ್ಠ	60	7

(1) ಮಾಗಡಿ ರಂಗಸ್ವಾಮಿಯ ರಥ, ತೊಂಡನೂರು ನಾರಾಯಣಸ್ವಾಮಿಯ ರಥ. (2) ಪೂರ್ಣಿಮಾ ತಿಥಿ. (3) ಬಿಳಿಗಿರಿ ರಂಗಸ್ವಾಮಿಯ ರಥ. (4) ಸಂಕಟಹರಚತುರ್ಥಿ, ಶುಭಪ್ರದ ಗೌರೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬೊಂಬಾಯಿ.

ಮ|| ಗಾಂಧಿಯವರನ್ನು ಹಿಂದಕ್ಕೆ ಕಳುಹಿಸುತ್ತಿರುವರೆಂಬ ವಾರ್ತೆಯು ಬೊಂಬಾಯಿಗೆ ಬಂದಕೂಡಲೇ ಜನರು ಗುಂಪುಕೂಡಿದರು. ಸಾಯಂಕಾಲದ ಹೊತ್ತಿಗೆ ಗುಂಪಿನ ಜನರು ಸರ್ಕಾರದ ಜನರನ್ನು ಕಂಡರೆ ಕಲ್ಲನ್ನು ಬೀರಲುಪಕ್ರಮಿಸಿದರು. ಒಂದೆರಡು ಸಭೆಗಳಾಗಿ ಸತ್ಯಾಗ್ರಹವನ್ನು ಶಾಂತಿಯಿಂದ ಸಾಗಿಸಬೇಕೆಂದು ನಿರ್ಧಾರಮಾಡಿದರು. ಅಲ್ಲಿಗೆ ಗಾಂಧಿಯವರೂ ಬಂದಿದ್ದು ಇತರರಿಗೆ ಹಿಂಸೆಕೊಡದಂತೆ ಶಾಂತಿಯಿಂದ ಸತ್ಯಾಗ್ರಹವನ್ನು ಸಾಗಿಸಬೇಕೆಂದು ಮೊದಲಾಗಿ ಭಾಷಣಮಾಡಿದರು. ಆದಿನ ಮಧ್ಯಾಹ್ನದಿಂದ ಅಂಗಡಿಗಳು ಮುಚ್ಚಲ್ಪಟ್ಟು ಸ್ವಲ್ಪ ಗದ್ದಲವಾಯಿತು. ಟ್ರಾಂ ಬಂಡಿಗಳು ಮೊದಲಾದುವುಗಳ ಮೇಲೆ ಕಲ್ಲುಗಳನ್ನು ಎಸೆದರು. ಸೈನ್ಯವನ್ನು ಕರೆಯಿಸಬೇಕಾಯಿತು. ಗುಂಪಿನ ಬಳಿಗೆ ಬಂದ ಸರ್ಕಾರಿಯುದ್ಯೋಗಿಗಳ ಮೇಲೆ ಕಲ್ಲಿನ ಮಳೆ ಸುರಿಯಿತು. ಬಹು ಜನರು ದೊಣ್ಣೆಗಳನ್ನು ಹಿಡಿದುಕೊಂಡು ಮೇಲೆ ಸಾಗಿಹೋದರು. ಆಗ ತುಪಾಕಿಗಳನ್ನು ಹಾರಿಸಲು ಅಪ್ಪಣೆಮಾಡಿದರು. ಗದ್ದಲವನ್ನು ಹೆಚ್ಚಿಸುತ್ತಿದ್ದ ಪ್ರಮುಖರಲ್ಲಿ ಕೆಲವರನ್ನು ಸರ್ಕಾರದವರು ಹಿಡಿದರು. ಈಚೆಗೆ ಅಲ್ಲಿಯ ಸ್ಥಿತಿಗತಿಗಳು ಶಾಂತವಾಗಿರುತ್ತವೆ.

ಅಹಮ್ಮದಾಬಾದು.

ಇಲ್ಲೂ ಸತ್ಯಾಗ್ರಹಿಗಳು ಇತರರ ಅಂಗಡಿಗಳನ್ನು ಮುಚ್ಚಿಸುವುದೂ ಬಂಡಿಗಳನ್ನು ಇಳಿದು ನಡೆಯಿಸಿರೆಂದು ಇತರರನ್ನು ಬಲಾತ್ಕರಿಸುವುದೂ ಹೆಚ್ಚಾಯಿತು. ಕಲ್ಲಿನಮಳೆಗಳು ಸುರಿದುವು. ಇಬ್ಬರು ಯೂರೋಪ್ಯರಿಗೆ ಬಲವಾದಪೆಟ್ಟು ಬಿದ್ದುವು. ಒಂದು ಯಂತ್ರಾಲಯದ ಸುತ್ತಲೂ ಸೀಮೆಯೆಣ್ಣೆಯನ್ನು ಸುರಿದು ಹೊತ್ತಿಸಿಬಿಟ್ಟರು. ಪೋಲೀಸರು ಗುಂಪಿನವರನ್ನು ಚದರಿಸಲು ಪ್ರಯತ್ನಿಸಿಯೂ ವಿಫಲರಾದ ಬಳಿಕ ತುಪಾಕಿಗಳನ್ನು ಹಾರಿಸಿದರು. ಪ್ರಜೆಗಳಲ್ಲಿ ೭ ಮಂದಿಗೆ ಏಟುಬಿದ್ದಿತು. ಒಬ್ಬ ಪೋಲೀಸಾಳು ಸತ್ತನು. ೨ ಸರ್ಕಾರಿ ಕಟ್ಟಡಗಳು (ತಂತೀಆಫೀಸು ಕಲೆಕ್ಟರಾಫೀಸು) ಸುಡಲ್ಪಟ್ಟುವು. ತಂತೀವಾರ್ತೆಯ ಕಂಬಗಳನ್ನು ಕೀಳಿಸಿ ತಂತಿಗಳನ್ನು ಕತ್ತರಿಸಿಹಾಕಿದರು. ತುಪಾಕಿಯೇಟಿನಿಂದ ಕೆಲ ಪ್ರಾಣನಷ್ಟವಾದ ಮೇಲೆ ಶಾಂತಿಯುಂಟಾಯಿತು. ಒಟ್ಟಿಗೆ ಇಲ್ಲಿ ೨೫೦ ಮಂದಿಗಳು ಗುಂಡಿನೇಟಿನಿಂದ ಸತ್ತಿರುವರಂತೆ.

ಕಲಕತ್ತಾ.

ಇಲ್ಲಿ ಹಿಂದೂ ಮಹಮ್ಮದೀಯರೀರ್ವರೂ ಸೇರಿ ಯೋಚನೆಮಾಡಿಕೊಂಡು ಅಂಗಡಿಗಳನ್ನು ಮುಚ್ಚಿ ಬಂಡಿಗಳನ್ನು ಬೀದಿಗಳಲ್ಲಿ ಓಡಾಡಗೊಡದಂತೆ ಮಾಡಿದರು. ಚೌಕಗಳಲ್ಲಿ ಉಪನ್ಯಾಸಗಳನ್ನು ಮಾಡಿ ಪ್ರಜೆಗಳು ಕೋಪಾವೇಶಗೊಂಡು ಹಾವಳಿಮಾಡದೆ ಶಾಂತಿಯಿಂದ ಸತ್ಯಾಗ್ರಹವ್ರತವನ್ನು ಸಾಗಿಸಬೇಕೆಂದು ಬೋಧಿಸಿದರು. ಆದರೆ ಅದು ನಡೆಯಲಿಲ್ಲ. ಹಾವಳಿಯು ಬಹಳ ಹೆಚ್ಚಾಯಿತು. ಪ್ರಜೆಗಳಿಗೂ ಪೋಲೀಸರಿಗೂ ಬಡಿದಾಟವಾಗಿ ಅನೇಕ ಜನರು ಸತ್ತರು. ಬಹು ಜನಕ್ಕೆ ಏಟುಬಿದ್ದುವು. ಡೆ|| ಕಮಿಷನರಿಗೂ ಅ|| [illegible]ನರಿಗೂ ಬಲವಾದ ಏಟುಗಳು ಬಿದ್ದುವು. [illegible] ಮುಖ್ಯ ಮನುಷ್ಯರುಗಳನ್ನು ಬರಮಾಡಿಕೊಂಡು ಹಿತೋಪದೇಶಮಾಡಿದರು. ಆದರಮೇಲೆ ಪ್ರಜೆಗಳು ಸಭೆಸೇರಿ, ಗಾಂಧಿಯವರು ಎಲ್ಲರೂ ಶಾಂತವಾಗಿರಬೇಕೆಂದು ಹೇಳಿ ಕಳುಹಿಸಿದ್ದ ಸಂದೇಶವನ್ನು ಓದಿ ಸುಮ್ಮನಾದರು. ಆಮಕಾರಣ ಇಲ್ಲಿ ಅನರ್ಥಗಳೇನೂ ನಡೆಯಲಿಲ್ಲ.

[illegible] ಸರ್ವಲೋಕರೆ [illegible] ಮೊದಲಾದವು [illegible] ಸ್ವೇಚ್ಛಾಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. [illegible]

ವಿಳಾಸ—ವೈದ್ಯ ವಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನ್ನಡ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ [illegible]
ಸಟೀಕ ವಿರಕ್ತರ [illegible] [illegible]
[illegible] [illegible]
[illegible] [illegible]
[illegible] [illegible]
ಹರದಾಸ [illegible]
[illegible] [illegible]
ಷಟ್ಸ್ಥಲ [illegible] (ಮುಕ್ತಿಸಾಧನ) [illegible]
[illegible] [illegible]

ಅಂಚೆಯವೆಚ್ಚ ಬೇರೆ.

ಒಳದೇಶದ ವೃತ್ತಾಂತಗಳು.

ನೀಲಗಿರಿಗೆ ದಯಮಾಡಿಸಿದ್ದ ಆಕ್ಟಿಂಗ್ ದಿವಾನರು ಮರಳಿ ಬೆಂಗಳೂರಿಗೆ ಬಂದರು.

ಅ|| ಕಮಿಷನರ್ ಮ|| ಬಿ. ರಾಜೋಜಿರಾವ್ ಬಿ. ಎ. ಯವರು ಬೆಂಗಳೂರು ಮ್ಯುನಿಸಿಪಾಲಿಟಿಯ ಚೀಫ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ.

ನಂಜನಗೂಡಿನಲ್ಲಿ ಅ|| ಸರ್ಜನರಾಗಿದ್ದ ಡಾ|| ಟಿ. ಎಸ್. ಸಿದ್ದಪ್ಪನವರು ಹಾಸನ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ವರ್ಗಮಾಡಲ್ಪಟ್ಟಿರುವರು.

ಅರಮನೆಯಲ್ಲಿ ಶ್ರೀಮದ್ಯುವರಾಜ್ಞಿಯವರ ಸೀಮಂತಮಹೋತ್ಸವವು ಕಳೆದ ಬುಧವಾರದಿಂದ ೪-೫ ದಿನಗಳವರೆಗೆ ಬಹು ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು.

ನಾಳೆಯೋ ಅಥವಾ ಬುಧವಾರವೋ ಶ್ರೀಮನ್ಮಹಾರಾಜರು ಸರ್ದಾರ್ ಕಾಂತರಾಜ ಅರಸಿನವರೇ ಮೊದಲಾದ ಬಂಧುವರ್ಗದವರೊಡನೆ ನೀಲಗಿರಿಗೆ ದಯಮಾಡಿಸುವವರಾಗಿದ್ದಾರೆ.

ಜಿಂದ್ ಸಂಸ್ಥಾನದ ಪ್ರಭುಗಳು ಈ ವಾರ ರಾಜಧಾನಿಗೆ ದಯಮಾಡಿಸಿ ಶ್ರೀಮನ್ಮಹಾರಾಜರವರ ಆತಿಥ್ಯದಲ್ಲಿ ಚಾಮರಾಜನಗರದ ತಾಲ್ಲೂಕಿನ ಕಾಡಿಗೆ ಹೋಗಿ ಬೇಟೆಯನ್ನು ನಡೆಯಿಸಿಕೊಂಡು ನೀಲಗಿರಿಗೆ ತೆರಳುವವರಾಗಿದ್ದಾರೆ.

ರಾಜಧಾನಿಯಲ್ಲಿರುವ ಅರಸು ಬಾಲಿಕಾ ಬೋರ್ಡಿಂಗ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ಮ|| ಸುಬ್ಬರಾಜ ಅರಸಿನವರು ಇನ್ನೂ ಸಣ್ಣವಯಸ್ಸಿನವರಾಗಿದ್ದಾಗ್ಯೂ ಪೆನ್‌ಷನ್ನಿನಮೇಲೆ ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟಿರುವುದಾಗಿ ತಿಳಿಯುತ್ತೇವೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಮೊದಲನೆ ಗ್ರಾಜ್ಯುಯೇಟಾದ ಸೌ|| ಜನಕ ಲಕ್ಷ್ಮಿ ಅಮ್ಮ ಎಂಬಾಕೆಯನ್ನು ಮುಂದಣ ವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಕಳುಹಿಸಿಕೊಡಲು ವಿದ್ಯಾರ್ಥಿವೇತನವನ್ನು ನಮ್ಮ ಸರ್ಕಾರದವರು ಕೊಡುವವರಾಗಿದ್ದಾರೆಂದು ಕೇಳುತ್ತೇವೆ.

ಮೈಸೂರು ಅರಸೀಕೆರೆ ಲೋಹಮಾರ್ಗದಲ್ಲಿ ೨ ಬಂಡಿಗಳನ್ನು ಬಿಡುವ ಏರ್ಪಾಟು ಇನ್ನೂ ವ್ಯವಹಾರಕ್ಕೆ ಬಂದಿಲ್ಲ. ಪ್ರಯಾಣಿಕರ ಸಂದಣಿಯು ಬಲು ಹೆಚ್ಚಾಗಿರುವುದರಿಂದ ಎಷ್ಟು ಬೇಗನೆ ೨ ಬಂಡಿಗಳ ಏರ್ಪಾಟನ್ನು ಮಾಡಿದರೆ ಅಷ್ಟು ಅನುಕೂಲವಾಗುವುದು.

ಹಾಸನದ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರಾದ ಮ|| ಬಿ. ತಿರುಮಲಾಚಾರರನ್ನು ವಿದ್ಯಾಭ್ಯಾಸ ಶಾಖಾ ಇನ್|| ಜನರಲ್‌ರವರು ತಮ್ಮ ಪರ್ಸನಲ್ ಅಸಿಸ್ಟೆಂಟರನ್ನಾಗಿ ನಿಯಮಿಸಿಕೊಂಡಿದ್ದಾರೆ. ಮ|| ರಿಡ್ಡಿಯವರು ಬ್ರಹ್ಮದ್ವೇಷಿಗಳಾಗಿದ್ದರೆ ಇಂಥ ನಿಯಮನವನ್ನು ಮಾಡಿಕೊಳ್ಳುತ್ತಿದ್ದರೆ?

ಕಳೆದವಾರ ೨-೩ ದಿನಗಳಿಂದ ಮೋಡವು ಆವರಿಸುತ್ತಿದ್ದು ಗುರುವಾರ ರಾತ್ರಿ ೮ ಗಂಟೆ ಹೊತ್ತಿನಲ್ಲಿ ಹದವಾದ ಮಳೆಯಾಯಿತು. ಒಂದು ಸಿಡಿಲು ಬಹು ಗರ್ಜನೆಯಿಂದ ಎಲ್ಲಿಯೋ ಅಪ್ಪಳಿಸಿತು. ಈ ಮಳೆಯು ಮೈಸೂರು ತಾಲ್ಲೂಕಿನ ಪೂರ್ವಭಾಗ ದಕ್ಷಿಣಭಾಗದ ಗ್ರಾಮಗಳಿಗೆಲ್ಲಾ ಆಗಿರುವುದೆಂದು ಕೇಳುತ್ತೇವೆ.

ಧಾನ್ಯದ ಮಾರಾಟಕ್ಕೆ ಮ್ಯುನಿಸಿಪಾಲಿಟಿಯವರು ರಾಜಧಾನಿಯಲ್ಲಿ ತಕ್ಕ ಏರ್ಪಾಟುಮಾಡಿ ಸೀಮೆಯೆಣ್ಣೆ ಮಾರಾಟವನ್ನು ಕ್ರಮಪಡಿಸದೆ ಹೋಗಿರುವುದು ಅನ್ಯಾಯವಾಗಿದೆ. ಇದಕ್ಕೆ ಸಂಬಂಧಪಟ್ಟ ದೂರು ವಾಚಾಮಗೋಚರವಾಗಿದೆ. ಅದರ ಮಾರಿಕೆಯ ಯಾಜಮಾನ್ಯವನ್ನೂ ಮ್ಯುನಿಸಿಪಾಲಿಟಿಯವರೇ ವಹಿಸಿಕೊಂಡು ಕೆಲಕಾಲ ನಡೆಯಿಸಿದರೆ ಪ್ರಜೆಗಳು ಕೃತಜ್ಞರಾಗುವರು.

ವಿದ್ಯಾರ್ಥಿನೀ ವೇತನಗಳು ಸರ್ಕಾರದ ಸಹಾಯವನ್ನು ಪಡೆಯುತ್ತಿರುವ ಬಾಲಿಕಾ ಪಾಠಶಾಲೆಗಳಿಗೆಲ್ಲಾ ಅನ್ವಯಿಸುವಂತೆ ಮಾಡಬೇಕೆಂದು ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರು ಸೂಚಿಸಿದ್ದ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿ ಪರಸ್ಥಳದ ವಿದ್ಯಾರ್ಥಿನಿಯರಿಗೆ ೧೨ ರೂ. ಗಳಂತೆಯೂ ಸ್ಥಳದ ವಿದ್ಯಾರ್ಥಿನಿಯರಿಗೆ ೮ ರೂ. ಗಳಂತೆಯೂ ಕೊಡಬಹುದೆಂದು ತೀರ್ಮಾನಿಸಿರುತ್ತಾರೆ.

ಅರಮನೆಯುದ್ಯೋಗದಿಂದ ನಿವೃತ್ತರಾದ ಮ|| ಬಿ. ರಾಮಕೃಷ್ಣರಾಯರನ್ನು ಅರಮನೆಯ ಬೇರೆಬೇರೆ ಶಾಖೆಯ ಉದ್ಯೋಗಿಗಳೆಲ್ಲಾ ಕಳೆದ ಗುರುವಾರ ವಸಂತಮಹಲಿನಲ್ಲಿ ಅಲ್ಪಾಹಾರ ಸಂಗೀತಶ್ರವಣ ಐಂದ್ರಜಾಲಿಕವಿದ್ಯಾ ಅಂಗಸಾಧನಪ್ರದರ್ಶನ ಮೊದಲಾದ ವಿನೋದಗಳಿಂದ ಸಂತೋಷಪಡಿಸಿ, ಅವರಲ್ಲಿ ತಮಗಿದ್ದ ಪ್ರೀತಿ ವಿಶ್ವಾಸಗಳನ್ನು ತೋರ್ಪಡಿಸಿದರು. ಪುರಪ್ರಮುಖರೂ ಅಧಿಕಾರಿಗಳೂ ವಿದ್ವಾಂಸರೂ ಬರಮಾಡಲ್ಪಟ್ಟಿದ್ದರು.

ಬೆಂಗಳೂರು ಪಟ್ಟಣದಲ್ಲಿ ಪರೀಕ್ಷಾರ್ಥವಾಗಿ ಏರ್ಪಡಿಸಿದ್ದ ಕಲೆಕ್ಟಿಂಗ್ ಸೇವಿಂಗ್ಸ್ ಬ್ಯಾಂಕಿನ ಕ್ರಮವು ಸಾರ್ಥಕವಾದ ರೀತಿಯಲ್ಲಿ ನಡೆದಿರುವುದರಿಂದ ಸರ್ಕಾರದವರು ಅದನ್ನು ಶಾಶ್ವತ ಮಾಡಿರುವದಲ್ಲದೆ, ಈ ಕ್ರಮವನ್ನು ಮೈಸೂರು ಪಟ್ಟಣದಲ್ಲಿಯೂ ಕೋಲಾರದ ಚಿನ್ನದ ಗಣಿಯ ಪ್ರದೇಶವೂ ಸೇರಿ ಬೌರಿಂಗುಪೇಟೆಯಲ್ಲಿಯೂ ಒಂದು ವರ್ಷದವರೆಗೆ ಪರೀಕ್ಷಾರ್ಥವಾಗಿ ಆಚರಣೆಗೆ ತರತಕ್ಕದೆಂದು ಅಪ್ಪಣೆ ಮಾಡಿರುತ್ತಾರೆ.

ಕಾಶೀಕ್ಷೇತ್ರದ ಭಾರತ ಧರ್ಮ ಮಹಾಮಂಡಲದವರು ನಮ್ಮ ಶ್ರೀಮನ್ಮಹಾರಾಜರವರ ಧರ್ಮಾಸಕ್ತಿಯನ್ನು ಕಂಡು ಅವರಿಗೆ "ಭಾರತ ಧರ್ಮ ಶೇಖರ" ವೆಂದೂ ನಮ್ಮ ಶ್ರೀಮನ್ಮಹಾರಾಣಿಯವರ ಔದಾರ್ಯ ಮತ್ತು ದೇವಭಕ್ತಿಯನ್ನು ನೋಡಿ ಅವರಿಗೆ "ಧರ್ಮಲಕ್ಷ್ಮಿ" ಎಂದೂ ಬಿರುದುಗಳನ್ನು ದಯಪಾಲಿಸಿರುತ್ತಾರೆ. ಇವುಗಳನ್ನು ಶ್ರೀಮನ್ಮಹಾರಾಜರವರೂ [illegible] ಮಹಾರಾಣಿಯವರೂ ವಿಶ್ವಾಸದಿಂದ ಅಂಗೀಕರಿಸಿರುತ್ತಾರೆ.

[illegible] ಕಂಠೀರವ ಎಂಬ ಹೆಸರಿನ ವಾರಪತ್ರಿಕೆಯು ಪ್ರತಿ [illegible]

[illegible] 24 ನೆಯ ತಾ|| ಸೊಳಗಾಗಿ ಮುಜರಾಯಿ ಸೂಪರಿಂಟೆಂಡೆಂಟರಿಗಾಗಲಿ, ಆಯುರ್ವೇದಿಕ ಕಾಲೇಜಿನ ಹೆಡ್ಮಾಸ್ಟರಿಗಾಗಲಿ ಬರೆದುಕೊಳ್ಳಬೇಕು.

ಮೈಸೂರು ಅರ್ಥಸಾಧಕಪತ್ರಿಕೆಯ ಸಂಪಾದಕರು ಸರ್ಕಾರದ ರಿವಿನ್ಯೂ ಹುಟ್ಟುವಳಿಯನ್ನು ಪ್ರತಿ ತಿಂಗಳಲ್ಲೂ ತಮ್ಮ ಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಅದರ ವಿವರಣವನ್ನು ಕಳುಹಿಸಿಕೊಡಬೇಕೆಂದು ಕಂಟ್ರೋಲರಿಗೆ ಬರೆದುಕೊಂಡಿದ್ದರು. ಮುಖ್ಯವಾದ ಇಂಥ ವಿವರಣವನ್ನು ಸರ್ಕಾರಿಗೆಜಟ್ಟಿನಲ್ಲಿ ಪ್ರಕಟಿಸುವುದು ಪ್ರಜೆಗಳಿಗೆ ಉಪಯೋಗಕರವೆಂದು ಮೈಸೂರು ವಾಣಿಜ್ಯ ಸಂಘಾಧ್ಯಕ್ಷರೂ ಅಭಿಪ್ರಾಯಕೊಟ್ಟಿದ್ದರು. ಇದರಮೇಲೆ ಸರ್ಕಾರದವರು ಸಾಲದ ಬಾಬುಗಳ ಹೊರತು ಸರ್ಕಾರಿ ಮುಖ್ಯ ಆಯವ್ಯಯಗಳ ಪಟ್ಟಿಯನ್ನು ಆಯಾ ತಿಂಗಳಲ್ಲಿ ಸರ್ಕಾರದ ಗೆಜಟ್ಟಿನಲ್ಲಿ ಪ್ರಕಟಿಸುವುದಕ್ಕೆ ಅಪ್ಪಣೆಮಾಡಿದ್ದಾರೆ. ಈ ಲೆಕ್ಕದ ವಿವರಣೆಯ ಮಾದ್ರಿಯನ್ನು ಗೆಜಟ್ಟಿನಲ್ಲಿ ಪ್ರಕಟಿಸಿದ್ದಾರೆ. ಪ್ರತಿತಿಂಗಳಲ್ಲಿಯೂ ಆಯಾ ಶಾಖೆಯಿಂದ ಆದ ಉತ್ಪತ್ತಿಯೆಷ್ಟು, ಆಯಾ ಶಾಖೆಗೆ ಆದ ವ್ಯಯವೆಷ್ಟು? ಕಳೆದವರ್ಷ ಅದೇ ತಿಂಗಳಲ್ಲಿ ಆಗಿದ್ದ ಆಯವ್ಯಯ, ಈ ವರ್ಷದ ಅದೇ ತಿಂಗಳ ಆಯವ್ಯಯ, ಒಂದು ವರ್ಷಕ್ಕೆಲ್ಲಾ ಏರ್ಪಟ್ಟಿದ್ದ ಆಯವ್ಯಯದ ಬಡ್ಜೆಟ್ಟು, ಇಷ್ಟು ವಿವರಣಗಳನ್ನು ಈ ಪಟ್ಟಿಯಿಂದ ತಿಳಿದುಕೊಳ್ಳಬಹುದಾಗಿದೆ.

ಭರತಖಂಡದ ವೃತ್ತಾಂತಗಳು.

ಮಿತವಾದಿಗಳ ರಾಯಭಾರಪಕ್ಷದಲ್ಲಿ ಸೀಮೆಗೆ ಹೋಗಲು ಅ|| ಶ್ರೀನಿವಾಸಶಾಸ್ತ್ರಿಗಳು ಒಪ್ಪಿದ್ದಾರೆ. ಇವರು ಹೋಗುವ ವಿಷಯದಲ್ಲಿ ನಮಗೆ ಸಂಪೂರ್ಣ ವಿಶ್ವಾಸವುಂಟೆಂದು ಮದರಾಸು ಲಿಬರಲ್ ಸಂಘ (ಇದಕ್ಕೆ ಸರ್ ಶಿವಸ್ವಾಮಯ್ಯರೇ ಮೊದಲಾದನೇಕರು ಸೇರಿದ್ದಾರೆ) ದವರು ಒಪ್ಪಿರುತ್ತಾರೆ.

ಸತ್ಯಾಗ್ರಹಿಗಳ ನ್ಯೂನಾತಿರೇಕಗಳು ಮನದಟ್ಟಾದುದರಿಂದ ಅವನ್ನು ತಿದ್ದಿಕೊಳ್ಳುವುದಕ್ಕಾಗಿ ಮ|| ಗಾಂಧಿಯವರು ಬೊಂಬಾಯಿಯಿಂದ ಕಳೆದ ತಾ|| ೧೪ರಲ್ಲಿ ತಮ್ಮ ಅನುಯಾಯಿಗಳಿಗೆ ಒಂದು ನಿರೂಪವನ್ನು ಕೊಟ್ಟಿದ್ದಾರೆ. ಏನೆಂದರೆ—"ಈ ಕೆಳಗಣ ಆಜ್ಞೆಯನ್ನು ತಪ್ಪದೆ ಪರಿಪಾಲಿಸಬೇಕೆಂದು ನಿಮ್ಮನ್ನು ಕೋರುತ್ತೇನೆ. ಈ ವಿಧಾನಗಳಲ್ಲಿ ಕೆಲ ವಿಷಯವನ್ನು ಮಾರ್ಪಗೊಳಿಸಿಕೊಳ್ಳಬಹುದು. ಉಳಿದ ಸತ್ಯಾಗ್ರಹಸೂತ್ರಗಳೆಲ್ಲಾ ಅನುಲ್ಲಂಘನೀಯಗಳಾದುವುಗಳು. ಪಟ್ಟಣಬೀದಿಗಳಲ್ಲಿ ಉತ್ಸವಮಾಡುವುದಾಗಲೀ ಯಾವಸಂದರ್ಭದಲ್ಲೇ ಆಗಲಿ ಅಂಗಡಿಗಳನ್ನು ಮುಚ್ಚಿ ಕೆಲಸಗಳನ್ನು ನಿಲ್ಲಿಸಿಬಿಡುವುದಾಗಲೀ, ಪ್ರಜೆಗಳೆಲ್ಲರೂ ಸೇರಿ ಸಭೆ ಮೊದಲಾದುವುಗಳನ್ನು ನಡೆಯಿಸುವುದಾಗಲೀ ಇವುಗಳನ್ನು ಸತ್ಯಾಗ್ರಹ ಸಭೆಯವರ ಅಪ್ಪಣೆಯಿಲ್ಲದೆ ನಡೆಯಿಸಕೂಡದು. ಪೋಲೀಸರ ಅಪ್ಪಣೆಯನ್ನು ಪರಿಪಾಲಿಸಬೇಕು. (ಕಾನೂನುಗಳನ್ನೇ ಮೀರಿ ನಡೆಯಬೇಕೆಂದು ಮೊದಮೊದಲು ಬೋಧಿಸಿ ತಾವೇ ಹಾಗೆ ನಡೆದು ದಾರಿಮಾಡಿಕೊಟ್ಟ ಗಾಂಧಿಯವರು ಈಗ ಪೋಲೀಸರ ಆಜ್ಞೆಗೆ ಸರ್ವರೂ ವಿಧೇಯರಾಗಿರಬೇಕೆಂದು ಹೇಳುವಂತಾದುದು ಯಾವುದರ ಪ್ರಭಾವವೊ?) ದೌರ್ಜನ್ಯ, ಕಲ್ಲುಗಳನ್ನು ಬೀರುವುದು, ವ್ಯಾಪಾರಕ್ಕೂ ಟ್ರಾಂಬಂಡಿಗಳ ತಿರುಗಾಟಕ್ಕೂ ಅಡ್ಡಿಪಡಿಸುವುದು, ಸಭೆಗಳಲ್ಲಿ ಯಾವ ಮನುಷ್ಯನನ್ನಾಗಲೀ ಉದ್ದೇಶಿಸಿ ತೀವ್ರವಾಗಿ ಆಕ್ಷೇಪಿಸುವುದು, ಚಪ್ಪಾಳೆಗಳನ್ನು ತಟ್ಟುವುದು, ಸಮ್ಮತಿಯನ್ನೋ ಅಸಮ್ಮತಿಯನ್ನೋ ತೋರಿಸುವಾಗ ಸಾಮಾನ್ಯತರದ ಮನೋಭಾವಗಳನ್ನು ವ್ಯಕ್ತಪಡಿಸುವುದು, ಇವುಗಳನ್ನೆಲ್ಲಾ ಬಿಟ್ಟುಬಿಡಬೇಕು. ನಾಚಿಕೆ, ಸಂಕೋಚ ಎಂಬ ಮಾತುಗಳನ್ನು ಉಪನ್ಯಾಸ ಮಧ್ಯಕಾಲದಲ್ಲಿ ಕೂಗಿ ಹೇಳಕೂಡದು. ಸಂಪೂರ್ಣ ಶಾಂತರಾಗಿರಬೇಕು. ಸತ್ಯಾಗ್ರಹ ಸಭೆಯ ವಾಲಂಟಿಯರ ಆಜ್ಞೆಗಳನ್ನು ಸಂಪೂರ್ಣವಾಗಿ ಶಿರಸಾವಹಿಸಬೇಕು."

ಕಳೆದ ತಾ|| ೯ ರಲ್ಲಿ ಬಂಗಾಳಾ ನಿಯಮನಿರ್ಮಾಣಸಭೆಯು ಕೂಡಿದ್ದಾಗ್ಗೆ ಗ್ರಾಮಪಂಚಾಯತಿ ಬಿಲ್ಲಿನ ವಿಷಯವು ಚರ್ಚಿಸಲ್ಪಡುತ್ತಿರುವ ಸಂಭರ್ದದಲ್ಲಿ ಅ|| ಅಂಬಿಕಾಚರಣ ಮಜುಂದಾರರು - ಈ ಕಾರ್ಯದಿಂದ ಪ್ರಜೆಗಳಿಗೆ ಹಿತವಾಗಬೇಕಾಗಿದ್ದರೆ ಈ ಪಂಚಾಯತಿಯ ಸಭಿಕರನ್ನು ಆಗಾಗ್ಗೆ ಬದಲಾಯಿಸುತ್ತಿರಬೇಕು. ಅನ್ಯಾಯವೂ ಕೆಡುಕೂ ಸಂಭವಿಸದಂತೆ ಮಾಡುವುದಕ್ಕೆ ಇದು ಒಳ್ಳೆಯುಪಾಯ. ಈಗ ಏರ್ಪಟ್ಟಿರುವ ಆನರರಿ ಮೇಜಿಸ್ಟ್ರೇಟರುಗಳ ವಿಧಾನದಲ್ಲಿ ಕಲ್ಕತ್ತಾ ಪಟ್ಟಣದ ಹೊರತು ಉಳಿದ ಪಟ್ಟಣಗಳಲ್ಲಿ ಈ ಮೇಜಿಸ್ಟ್ರೇಟರುಗಳ ಚರ್ಯೆಗಳು ಅನುಮಾನಕರವಾಗಿವೆಯೆಂದು ತಿಳಿಯಿಸುವುದಕ್ಕೆ ನಾನು ವಿಷಾದಪಡುತ್ತೇನೆ" ಎಂದು ಹೇಳಿದರು. ಒಂದಾನೊಂದುಸಲ ಭರತಖಂಡದ ದೇಶೀಯಮಹಾಸಭೆಯ ಅಧ್ಯಕ್ಷತೆಯನ್ನೇ ವಹಿಸಿದವರಾಗಿದ್ದು ಈಗಲೂ ಸ್ವರಾಜ್ಯವಾದಿಗಳಾಗಿರುವ ಅ|| ಮಜುಂದಾರರು ಬೆಂಚ್ ಮ್ಯಾಜಿಸ್ಟ್ರೇಟರುಗಳ ವಿಷಯದಲ್ಲಿ ಇಂಥ ಅಭಿಪ್ರಾಯವನ್ನು ಹೊರಪಡಿಸಿದುದನ್ನು ಕಂಡು ಅದೇ ಸಭೆಯ ಸಭಿಕರಾದ ಇನ್ನಿಬ್ಬರು ಖಂಡಿಸುವಾಗ್ಗೆ ಈ ಸ್ವಲ್ಪ ವಿಷಯದಲ್ಲೂ ಭಾರತೀಯರು ಪರಿಪಾಲನ ಸಾಮರ್ಥ್ಯವನ್ನು ತೋರಿಸಲಶಕ್ತರಾಗಿರುವರೆಂದು ಅಭಿಪ್ರಾಯಪಟ್ಟುದು ನೂತನ ರಾಜಕೀಯ ಸಂಸ್ಕರಣಗಳು ಒದಗಲಿಕ್ಕಿರುವ ಈ ಸಮಯಕ್ಕೆ ಬಹಳ ಅನಿಷ್ಟಕವಾಗಿರುವುದೆಂದು ಹೇಳಿದರು. ಅದಕ್ಕೆ ಮಜುಂದಾರರು ಖಂಡನೆಯನ್ನು ಹೇಳುವಾಗ್ಗೆ ನಾನು ಸತ್ಯವನ್ನು ಮುಚ್ಚಿ ಬೇರೆ ವಿಧವಾಗಿ ಹೇಳುವ ರಾಜಕೀಯ ಪಕ್ಷಕ್ಕೆ ಸೇರಿದವನಲ್ಲವೆಂದು ನುಡಿದರು. ಅ|| ಮಜುಂದಾರರು ಆನರರಿ ಮೇಜಿಸ್ಟ್ರೇಟರ ವಿಷಯದಲ್ಲಿ ಪಟ್ಟಿರುವ ಅಭಿಪ್ರಾಯವು ಬಂಗಾಳಾ ವಿಷಯಕ್ಕೆ ಮಾತ್ರವೇ ಅಲ್ಲದೆ ಭರತಖಂಡದ ಅನೇಕ ಭಾಗಗಳ ಆ|| ಮ್ಯಾಜಿಸ್ಟ್ರೇಟರಲ್ಲಿ ಬಹುಭಾಗಕ್ಕೆ ಸಂಬಂಧಿಸಿರುವುದೆಂದು ಹೇಳಿದರೂ ತಪ್ಪಾಗದು.

ವಿದೇಶದ ವೃತ್ತಾಂತಗಳು.

ಸಂಧಿಸಭೆಯವರ ೧ ವಿಮಾನವು ಲಂಡನ್ ಪಟ್ಟಣದಿಂದ ಪ್ಯಾರಿಸ್ಸಿಗೆ (೨೦೦ ಮೈಲಿಗಳ ದೂರ) ೮೦ ನಿಮಿಷಗಳ ಕಾಲದೊಳಗಾಗಿ ಹೋಗಿ ಸೇರಿರುತ್ತದೆ.

ಫ್ರಾನ್ಸ್ ಮುಖ್ಯ ಮಂತ್ರಿ ಕ್ಲೆಮೆಂಕೋರವರನ್ನು ತುಪಾಕಿ ಗುಂಡಿನಿಂದ ಹೊಡೆದ ಕಾಟಿನ್ ಎಂಬುವನಿಗೆ ಮರಣಶಿಕ್ಷೆಯು ವಿಧಿಸಲ್ಪಟ್ಟಿತಷ್ಟೆ. ಮಿ|| ಕ್ಲೆಮೆಂಕೋರವರೇ ಕನಿಕರಗೊಂಡು ಕೊಟ್ಟ ಅಭಿಪ್ರಾಯದಮೇರೆಗೆ ಆತನ ಶಿಕ್ಷೆಯು ೧೦ ವರ್ಷದ ಕಾರಾಗೃಹವಾಸಶಿಕ್ಷೆಗೆ ಇಳಿಯಿಸಲ್ಪಟ್ಟಿತು.

ಲಾರ್ಡ್ ಸಿಹ್ನರವರ [illegible] ಸಭೆಯಲ್ಲಿ ಮಿ|| ಮಾಂಟೆಗ್‌ರವರು ಭಾಷಣಮಾಡುವಾಗ್ಗೆ ಭರತಖಂಡದ ಸಂಸ್ಕರಣದೊಳಗೆ ಪ್ರತ್ಯೇಕ ಪ್ರಾತಿನಿ[illegible]ವನ್ನು ಇನ್ನೂ ಸ್ವಲ್ಪ ಸಂಶಯವಾಗಿಯೇ ಅಭಿಪ್ರಾಯಪಟ್ಟಿರುವ [illegible] ಪತ್ರಿಕೆಯು ಚರ್ಚಿಸಿ, ಮಹಮ್ಮದೀಯ [illegible]ನು ಇವರು ಅಂಗೀಕರಿಸಿ, ಭರ[illegible]



[illegible] ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು [illegible] ಜವಾನ್ ಬೀಸಣಿಗೆ 1, ಶಾಮಂತಿಗೆ ಹುವ್ವು 1, ಸೆಂಟ್ ಭಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಗೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಶರಟು ಗುಂಡಿಗಳು 4, ಜವಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ 4—8—0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
12 5. ಇರುಳಪ್ಪನ ಬೀದಿ, ಮದರಾಸ್.

ಕೊಳ್ಳುವುದಕ್ಕಾಗಿ ಸಂಧಿಸಭೆಗೆ ಅವರ ಪ್ರತಿನಿಧಿಗಳನ್ನು ಬರಮಾಡಿಕೊಳ್ಳುವುದಕ್ಕೆ ಏರ್ಪಾಟಾಗಿರುವುದು. ಮತ್ತು ಸ್ಮಟ್ಸ್‌ರವರ ಸೂಚನೆಯಂತೆ ಹಂಗೇರಿಯಾ ಪ್ರಭುತ್ವದವರು ಜಕೋಸ್ಲಾವಕಿಯಾ, ರುಮೇನಿಯಾ ಯುಗೋಸ್ಲಾವಿಯಾ, ಜರ್ಮನ್ ಆಸ್ಟ್ರಿಯಾ ದೇಶಗಳ ಪ್ರತಿನಿಧಿಗಳನ್ನು ಒಂದು ಸಭೆಗೆ ಬರಮಾಡಿಕೊಂಡು ಅವರೆಲ್ಲರ ಅಭಿಪ್ರಾಯಗಳನ್ನೂ ತಿಳಿದುಕೊಂಡು ಬರಲು ಒಪ್ಪಿರುವರು.

ಭರತಖಂಡ, ಪರ್ಷಿಯಾ, ಚೀನಾ, ಜಪಾನು ಮೊದಲಾದ ಪೂರ್ವದೇಶಗಳಲ್ಲಿ ತಮ್ಮ ಉದ್ಯಮವನ್ನು ವ್ಯಾಪನೆಗೊಳಿಸುವುದಕ್ಕಾಗಿ ಬೋಲ್ಶೆವಿಕ್ಕರು ಪ್ರಯತ್ನಿಸಿ, ಇದಕ್ಕಾಗಿ ಮಾಸ್ಕೋ ಪಟ್ಟಣದಲ್ಲಿ ಒಂದು ಪ್ರತಿಷ್ಠಾಪನೆಯನ್ನು ಮಾಡಿರುವರೆಂದೂ, ಇದರಲ್ಲಿ ಪರ್ಷಿಯಾ, ತುರ್ಕಿ ದೇಶಗಳೊಳಗೆ ವಿಪ್ಲವೋದ್ಯಮವನ್ನು ಹರಡುವುದಕ್ಕೆ ಬೇರೆಬೇರೆ ಪ್ರತಿನಿಧಿಗಳು ನಿಯುಕ್ತರಾಗಿರುವರೆಂದೂ, ಇವರುಗಳು ಆಯಾ ದೇಶಗಳಲ್ಲಿ ಸಂಘಗಳನ್ನು ಸ್ಥಾಪಿಸಿ ಪತ್ರಿಕೆಗಳನ್ನು ಆಯಾ ದೇಶಭಾಷೆಗಳಲ್ಲಿ ಪ್ರಕಟಿಸಿ, ತಮ್ಮ ತತ್ತ್ವಗಳನ್ನು ಹರಡಲಿಕ್ಕಿರುವರೆಂದೂ, ಅನೇಕ ಪಟ್ಟಣಗಳಲ್ಲಿ ಶಾಖಾಸಂಘಗಳು ಸ್ಥಾಪಿಸಲ್ಪಡಲಿಕ್ಕೆ ಇರುವುವೆಂದೂ, ಓರೆಂಬರ್ಗ್‌ನಲ್ಲಿ ಈಗಾಗಲೇ ಇಂಥ ಸಂಘವೊಂದು ಸ್ಥಾಪಿಸಲ್ಪಟ್ಟಿದೆಯೆಂದೂ, ತಾಸ್ಕೆಂಟ್ ಮಾರ್ಗವಾಗಿ ಈ ವಿಪ್ಲವೋದ್ಯಮಗಾರರು ಕಳುಹಿಸಲ್ಪಡುವರೆಂದೂ ಲಂಡನ್ ಟೈಮ್ಸ್ ಪತ್ರಿಕೆಗೆ ಸುದ್ದಿ ತಿಳಿದಿರುವುದು.

ಕಳೆದ ತಾ|| ೫ ರಲ್ಲಿ ಬವೇರಿಯಾ ಪ್ರಭುತ್ವದವರು ಸೋವಿಯಟ್ ಪ್ರಜಾಪ್ರಭುತ್ವವನ್ನು ಪ್ರಕಟಿಸಿದರು. ಈ ಸೋವಿಯಟ್ ಪಕ್ಷದವರು ಹಿಂದಣ ಪ್ರಜಾಪ್ರಭುತ್ವದವರ ಪಾರ್ಲಿಮೆಂಟಿನ ಕಾರ್ಯಾಲಯವನ್ನು ವಶಪಡಿಸಿಕೊಂಡರು. ಇವರ ನೂತನ ಪ್ರಭುತ್ವ ಪ್ರಕಟನ ಪತ್ರಿಕೆಗಳು ಬೀದಿಗಳಲ್ಲೆಲ್ಲಾ ಅಂಟಿಸಲ್ಪಟ್ಟಿದ್ದುವು. ಅಲ್ಲಿಯ ಸ್ವತಂತ್ರ ಸಾಂಘಿಕವಾದಿಗಳು ಈ ಸ್ಪಾರ್ಟಕಸ್ ಪಕ್ಷದೊಡನೆಯೇ ಸೇರಿಬಿಟ್ಟರು. ಇದುವರೆಗೆ ಮುಖ್ಯಮಂತ್ರಿಯಾಗಿದ್ದ ಹೇರ್ ಆಫ್‌ಮನ್ನಿನ ಪಕ್ಷವನ್ನು ವಹಿಸುವುದಕ್ಕೆ ಸೈನಿಕರಿಗೂ ಮನಸ್ಸಿಲ್ಲವಾಗಿದೆ. ನೂತನ ಪ್ರಭುತ್ವವು ದೇಶದ ಅನೇಕ ಪ್ರಜೆಗಳಿಗೆ ವಿರುದ್ಧವಾಗಿರುವಂತೆ ಕಾಣುತ್ತದೆ. ಜನರು ಕೋಪಾವೇಶಗೊಂಡಿದ್ದಾರೆ. ಈಗಿನ ಪ್ರಭುತ್ವ ಪಕ್ಷದ ಸೈನಿಕರು ತಂತಿ ಅಂಚೆಗಳ ಕಾರ್ಯಾಲಯಗಳನ್ನೂ ವೃತ್ತಪತ್ರಿಕಾ ಕಾರ್ಯಾಲಯಗಳನ್ನೂ ಆಕ್ರಮಿಸಿಕೊಂಡಿದ್ದಾರೆ. ಯಂತ್ರಾಲಯಗಳ ಕೆಲಸಗಾರರೆಲ್ಲಾ ಮುಷ್ಕರ ಹಿಡಿದು ಕೆಲಸ ಬಿಟ್ಟಿದ್ದಾರೆ. ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿವೆ.

ಪತ್ರವ್ಯವಹಾರ.

ಉತ್ಸವಗಳು.

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ಅಡ್ಡಪಾಲಕಿಯುತ್ಸವವು.
ಧಾರವಾಡ ಡಿಸ್ಟ್ರಿಕ್ಟ್ ಲಕ್ಷ್ಮೇಶ್ವರ.

ತಾ|| ೨೦ ನೇ ಮಾರ್ಚಿ ಸನ್ ೧೯೧೯ ನೆ ಇಸಂ ದಿವಸ ಗುರುವಾರದ ಬೆಳಗ್ಗೆ ಜಗದ್ಗುರುಗಳ ಸ್ವಾರಿಯನ್ನು ಅಡ್ಡಪಾಲಕಿ ವಗೈರೆ ಮಹೋತ್ಸವದೊಡನೆ ಬರಮಾಡಿಕೊಳ್ಳಲು ಊರೆಲ್ಲಾ ಧ್ವಜಪತಾಕೆಗಳಿಂದಲೂ ಚಳಿರುತೋರಣಗಳಿಂದಲೂ ಪೂರ್ವದಲ್ಲೇ ಅಲಂಕರಿಸಲ್ಪಟ್ಟಿದ್ದಿತು. ಸ್ಥಳಪರಸ್ಥಳಗಳಿಂದ ಕೂಡಿದ ಭಕ್ತಸಂದಣಿಯು ಹತ್ತೆಂಟು ಸಾವಿರದವರೆಗೆ ಇತ್ತು. ಆ ಗುರುವಾರ ಪ್ರಾತಃಕಾಲ ೮ ಗಂಟೆಗೆ ಸರಿಯಾಗಿ ಅಡ್ಡಪಾಲಕಿ ಮಹೋತ್ಸವವು ಹೊರಟು ಪೇಟೆಯಿಂದ ವಿರಕ್ತಮಠಕ್ಕೆ ೧೧|| ಗಂಟೆಗೆ ತಲ್ಪಿತು. ಆಗ ಶೃಂಗರಿಸಲ್ಪಟ್ಟಿದ್ದ ಸುವರ್ಣಮಯ ಸಿಂಹಾಸನದಲ್ಲಿ ಜಗದ್ಗುರುಗಳು ಮಂಡಿತರಾದರು. ಮಂಗಳವು ಮಾಡಲ್ಪಟ್ಟಿತು. ಅನಂತರ ಜಗದ್ಗುರುಗಳು ನಮ್ಮೂರಿಗೆ ಚಿತ್ತೈಸಿದ ಆನಂದಪ್ರದರ್ಶನಾರ್ಥವಾದ ಭಾಷಣಗಳುಜರುಗಿದುವು. ಮಹೋತ್ಸವ ಕಾರ್ಯವು ಪೂರೈಸಿತು. ನಂತರ ಉತ್ಸವಕ್ಕೆ ಬಂದ ನಮ್ಮ ಊರ ಶಿರಸ್ತೇದಾರರಿಗೂ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಸಾಹೇಬರಿಗೂ ಸಂಭಾವನಾರೂಪದ ಆಶೀರ್ವಾದವು ಜಗದ್ಗುರುಗಳ ಸನ್ನಿಧಿಯಿಂದ ದಯಪಾಲಿಸಲ್ಪಟ್ಟಿತು. ಬಳಿಕ ಜಗದ್ಗುರುಗಳ ಸನ್ನಿಧಿಯಲ್ಲಿ ನಮ್ಮ ಮಿರಜ ಸರಕಾರದ ಸರ್ ಗಂಗಾಧರರಾವ ಬಾಳಾಸಾಹೇಬರಿಗೂ ಅವರ ಪುತ್ರಪೌತ್ರಾದಿಗಳಿಗೂ ಶ್ರೀಗುರುನಾಥನು ಆಯುರಾರೋಗ್ಯಾಭಿವೃದ್ಧಿಯನ್ನಿತ್ತು ಕಾಯಲೆಂದು ಜಯಘೋಷವಾಗಿ ಸಭೆಯ ಕಾರ್ಯವು ಜರುಗಿತು. ಆ ದಿವಸ ಪರಸ್ಥಳಗಳಿಂದ ಬಂದಿದ್ದ ಯಾವತ್ತು ಜನಗಳಿಗೆ ವೀರಶೈವ ಮಹಾಶಯರನೇಕರು ಅನ್ನಸಂತರ್ಪಣೆಮಾಡಿ ಯಶೋವಂತರಾದರು. ಅನಂತರ ಆ ಊರಲ್ಲಿ ಜಗದ್ಗುರುಗಳ ಪಾದಪೂಜೆಗಾಗಿ ಬಿನ್ನಹಗಳು ಕೆಲ ವೀರಶೈವ ಮಹನೀಯರಿಂದ ಮಾಡಲ್ಪಟ್ಟು ಗುರುಕಾಣಿಕೆಯು ಯಾವತ್ತು ವೀರಶೈವರಿಂದ ವಸೂಲುಮಾಡಲ್ಪಟ್ಟಿತು. ಜಗದ್ಗುರುಗಳ ಮುಕ್ಕಾಂ ನಮ್ಮೂರಿನಲ್ಲಿ ಇದಿನೈದು ದಿವಸವಾಗಿ ಅನಂತರ ಹಾವೇರಿ ಭಕ್ತಮಹಾಶಯರ ಕೋರಿಕೆ ಮೇರೆಗೆ ತಾರೀಖು ೨ ಏಪ್ರಿಲ್ ಸನ್ ೧೯೧೯ ಇಸ್ವಿ ರಾತ್ರಿ ಇಲ್ಲಿಂದ ದಯಮಾಡಿಸಲ್ಪಟ್ಟಿತು. ಈ ಜಗದ್ಗುರುಗಳ ಆಗಮನ ಮಹೋತ್ಸವ ಇತ್ಯಾದಿ ಕಾರ್ಯದಲ್ಲಿ ಶ್ರೀಮಂತ ಬಾಣಗೌಡರು ಬಹದ್ದೂರ ದೇಸಾಯರು, ದೊಡ್ಡಬಸಪ್ಪಾ ಶೆಟ್ಟಿ, ವಿರೂಪಾಕ್ಷಪ್ಪಾ ಕೊಟಗಿ, ಶಿವಯ್ಯನವರು ಸವಣೂರಮಠ, ಬಸಪ್ಪಾ ಗೇದಿ, ಅಡಿವೆಪ್ಪಾ ಟಂಕದಕಟ್ಟಿ ವ ಗುರುಬಸಪ್ಪಾ ಪಿಲ್ಲಿ ಇತ್ಯಾದ್ಯನೇಕರು ವಿಶೇಷದತ್ತತೆಯನ್ನು ವಹಿಸಿ ತಮ್ಮ ಅಶೇಷವಾದ ಭಕ್ತಿಯನ್ನು ತೋರಿಸಿ ಸರ್ವಭಕ್ತಾದಿಗಳಿಗೆ ಜಗದ್ಗುರುಪಾದಸನ್ನಿಧಿಯು ಸುಲಭಸಾಧ್ಯವಾಗುವಂತೆ ಮಾಡಿದ್ದಕ್ಕಾಗಿ ಜಗದ್ಗುರುಗಳು ಅವರನ್ನು ಕಾಯಲೆಂದು ಪ್ರಾರ್ಥಿಸಿ ವಿರಮಿಸುವೆನು.

ಮಠಸೇವಕ.

ಹಾವೇರಿ.

ಇದೇ ತಿಂಗಳು ೪ ನೇ ತಾರೀಖು ಶುಕ್ರವಾರ ಮುಂಜಾನೆ ೮ ಗಂಟೆಗೆ ಜಗದ್ಗುರು ಶ್ರೀಮನ್ನಿರಂಜನ ಮುರುಘರಾಜೇಂದ್ರ ಸ್ವಾಮಿಗಳವರು ಹಾವೇರಿಗೆ ದಯಮಾಡಿಸಿದ್ದರು. ಊರೊಳಗಿನ ಯಾವತ್ತು ಬೀದಿಗಳು ಶೃಂಗರಿಸಲ್ಪಟ್ಟಿದ್ದು ಸ್ಥಳಿಕ ದೊಡ್ಡ ನಾಮದಾರರು ಇತರ ಪುರವಾಸಿಗಳು ಮತ್ತು ಸುತ್ತುಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತಜನರು ಶ್ರೀಗಳವರನ್ನು ಸಕಲ ಬಿರುದಾವಳಿ ಸಮೇತ ಅಡ್ಡಪಾಲಕಿ ಉತ್ಸವದಿಂದ ಎದಿರ್ಗೊಂಡು ಕರೆತಂದರು. ಸದ್ಯಕ್ಕೆ ದುಷ್ಕಾಳದಿನ ಶುರುವಾದ್ದರಿಂದ ಶ್ರೀಗಳವರ ಆಗಮನವು ಚಿರಸ್ಮರಣೀಯವಾಗಲೆಂದು [illegible] ರ ಶನಿವಾರ ರವಿವಾರ 3 ದಿವಸಗಳನಂತರ [illegible] ಸೋಮವಾರ ಶ್ರೀ ಗು[illegible]

ಇಲ್ಲಿನೋಡಿ !!

ಅಚ್ಚುಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಸ್ಟೇಜು ಸೇರಿ	1—0—0.
200 ಕ್ಕೆ ... ... ,, ,,	1—12—0.
300 ಕ್ಕೆ ... ... ,, ,,	2—4—0.

ವಿಳಾಸ—ಡಿ. ಹೆಚ್. ಮಸ್ತಾನ್ ಸಾಹೇಬ್, ಅಂಡ್ ಕೊ.,
4 ಮರಡಿಹಳ್ಳಿ—ಚಿತ್ರದುರ್ಗ ಡಿ||.

ಶ್ರೀಮದ್ವೀರಶೈವ ಸಮಾಜದ ಸಕಲ ವಿದ್ವಜ್ಜನರಿಗೆ ಅರಿಕೆ ಮಾಡಿಕೊಳ್ಳುವದೇನಂದರೆ:—

ಮಹನೀಯರೆ, ನಮ್ಮ ಸಮಾಜದಲ್ಲಿ ನಡೆಯುವ ವಿವಾಹಾದಿ ಎಲ್ಲಾ ಶುಭ ಶೋಭನಾದಿಗಳ ಕಾಲಗಳಲ್ಲಿ ನಮ್ಮ ನಾರೀಮಣಿಯರು ರಾಮ, ಸೀತೆ, ಕೃಷ್ಣ, ಲಕ್ಷ್ಮಿ, ಮೊದಲಾದ ಶಿವೇತರ ಸಂಬಂಧವಾದ ಹಾಡುಗಳನ್ನು ಹಾಡುವದು ವೀರಶೈವ ಸನಾತನಧರ್ಮಕ್ಕೂ ಮತ ಸಿದ್ಧಾಂತಕ್ಕೂ ಸದಾಚಾರಕ್ಕೂ ವಿರೋಧವಾಗಿರುವದಲ್ಲದೆ ಎಷ್ಟು ಕೊರತೆಗೆ ಈಡುಮಾಡಿದೆ ಎಂಬುವದು ಸರ್ವ ವ್ಯಕ್ತವಾಗಿರುವದಷ್ಟೆ. ಆದಾಗ್ಯೂ ಇದುವರೆಗೂ ಈ ಲೋಪವನ್ನು ಪರಿಹರಿಸಲು ಯಾರೂ ಪ್ರಯತ್ನಿಸದಿರುವದು ಬಹಳ ಶೋಚನೀಯವಾಗಿದೆ. ಈಗಿನ ಪಾಠಶಾಲೆಗಳಲ್ಲಿ ವಿದ್ಯಾರ್ಥಿಕ ಜನವರ್ಗದವರು ತಮ್ಮ ಅಂದರೆ ವಿಷ್ಣು ಸಂಬಂಧವಾದ ಕೀರ್ತನೆಗಳನ್ನೇ ಉಳ್ಳ ಹಾಡಿನ ಪುಸ್ತಕಗಳನ್ನು ಪಠ್ಯಪುಸ್ತಕ (ಟೆಕ್ಸ್ಟ) ಗಳನ್ನಾಗಿ ನಿಯಮಿಸಿಕೊಂಡು ಬೋಧಿಸುತ್ತಿರುವದೇ ಈ ನ್ಯೂನತೆಗೆ ಮೂಲ ಕಾರಣವಾಗಿದೆ. ಆದಕಾರಣ ಶಿವಸಂಬಂಧವಾದ ಹಾಡುಗಳ ಪುಸ್ತಕಗಳನ್ನು ಬರೆಯಿಸಿ ಸರ್ಕಾರದವರು ಪಾಠಶಾಲೆಗಳಲ್ಲಿ ಇವುಗಳನ್ನು ಸಹ ಉಪಯೋಗಿಸುವಂತೆ ಕೇಳಿಕೊಂಡು ಕಾರ್ಯಸಿದ್ಧಿಯನ್ನು ಮಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಲ್ಲವೆ? ಆದ್ದರಿಂದ ಮೇಲ್ಕಂಡಂತೆ ಎಲ್ಲಾ ವಿವಾಹಾದಿ ಶುಭಕಾಲಗಳಲ್ಲೂ ಹಾಡಲು ಉಪಯೋಗವಾಗುವಂತೆಯೂ ಬಾಲಕಿಯರಿಗೆ ಸುಲಭವಾಗಿ ತಿಳಿಯುವಂತೆಯೂ, ಗಾನಕ್ಕೆ ಯೋಗ್ಯವಾಗಿ ಇರುವಂತೆಯೂ ಸಹ ಸರಳವಾದ ಶೈಲಿಯಲ್ಲಿ 3 ಅಥವಾ ೪ ಚರಣಗಳಿಂದಲಾ, ಪಲ್ಲವಿಗಳಿಂದಲೂ, ಕೂಡಿದ ನಾನಾ ರಾಗಗಳಲ್ಲಿ ಕನಿಷ್ಠ ಪಕ್ಷ 75 ಹಾಡುಗಳುಳ್ಳ ಒಂದು ಹಾಡಿನ ಪುಸ್ತಕವನ್ನು ಶ್ರೀ ಸರ್ವೇಶ ಪರಮೇಶ್ವರರ ಶ್ರೀ ಪಂಚಾಚಾರ್ಯರ ಪುರಾತನ ಪ್ರಮಥ ಶ್ರೀ ಪ್ವರ ಪರವಾಗಿ ಬರೆದು ನನ್ನಲ್ಲಿಗೆ ಕಳಿಸತಕ್ಕವರಿಗೆ ಅತ್ಯಂತ ಉತ್ತಮವಾಗಿ ಕಂಡುಬರುವ ಹಾಡಿನ ಪುಸ್ತಕಕ್ಕೆ 30—0—0 (ಮೂವತ್ತು) ರೂಪಾಯಿಗಳ ಒಂದು ಬಹುಮಾನವು ಕೊಡಲ್ಪಡುವದು. ಮತ್ತು ಶ್ರೀಮತ್ ಪರಶಿವನ ಮತ್ತು ಶಿವಾಂಶೀಭೂತರಾದ ಪ್ರಮಥರಪರವಾಗಿ ಗಾನರೂಪದಿಂದ ನೂತನವಾಗಿರುವ ಕೀರ್ತನೆಗಳನ್ನೂ, ಸ್ತೋತ್ರಗಳನ್ನೂ, ಮಂಗಳಗಳನ್ನೂ, ಸೇರಿಸಿ ನಿತ್ಯೋಪಯೋಗಕ್ಕೆ ಅನುಕೂಲಿಸುವಂತೆ ಕನಿಷ್ಠ ಪಕ್ಷ 50 ಹಾಡುಗಳಿಂದ ಕೂಡಿದ ಒಂದು ಕೀರ್ತನಾ ಪುಸ್ತಕವನ್ನು ಬರೆದು ನನ್ನಲ್ಲಿಗೆ ಕಳುಹಿಸತಕ್ಕವರಿಗೆ ಅತ್ಯಂತ ಉತ್ತಮವಾಗಿ ಕಂಡುಬರುವ ಲೇಖನಕ್ಕೆ 20.0.0 (ಇಪ್ಪತ್ತು) ರೂಪಾಯಿಗಳ ಬಹುಮಾನವೂ ಸಹ ಕೊಡಲ್ಪಡುತ್ತದೆ. ಈ ಬಹುಮಾನಗಳೆರಡನ್ನೂ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹೆಸರಿನಲ್ಲಿ ಕೊಡುವದಲ್ಲದೆ ಇವುಗಳೆರಡನ್ನೂ ನಾನು ಮುದ್ರಣಮಾಡಿಸಿದ ತರುವಾಯ ಆಯಾ ಲೇಖಕರಿಗೆ (20) ಪ್ರತಿಗಳನ್ನು ಉಚಿತವಾಗಿ ಕಳುಹಿಸುತ್ತೇನೆ. ಈ ವಿಚಾರವನ್ನು ಮಹನೀಯರಾದ ತಾವುಗಳು ದಯವಿಟ್ಟು ಅವಗಾಹನೆಗೆ ತಂದುಕೊಂಡು ಈ ಸಂಬಂಧವಾದ ಎಲ್ಲಾ ತಪಶೀಲುಗಳನ್ನು ನನ್ನಿಂದ ತಿಳಿದುಕೊಂಡು ಮೇಲ್ಕಂಡ ಎರಡು ಲೇಖನಗಳನ್ನು ಸಹ ನನಗೆ ಸಿದ್ಧಾರ್ಥಿ ಸಂ|| ದ ವಿಜಯದಶಮಿ ಒಳಗಾಗಿ ಕಳುಹಿಸಿಕೊಟ್ಟು ಬಹುಮಾನವನ್ನು ಹೊಂದುವರ ಮೂಲಕ ಈ ವಿಚಾರದಲ್ಲಿ ನಮ್ಮ ಸಮಾಜಕ್ಕೆ ಉಂಟಾಗಿರುವ ಕೊರತೆಯನ್ನು ದಯವಿಟ್ಟು ಪರಿಹರಿಸಲು ಕೋರುತ್ತೇನೆ.

ತುಮಕೂರು } ಸಮಾಜ ಸೇವಕ. ಜಿ. ಕೆ. ಗುರುಸಿಂಗಾರ್ಯ,
ಪ್ಲೀಡರ್.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

15 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

MADRAS
MAIL
WAT

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ [illegible]

ರಿಜಿಸ್ಟರ್ ಮಾಡಲ್ಪಟ್ಟಿರುವ
ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಎ. ಎ. ಎಸ್. ಪಾಣಿ ಅಂಡ್ ಕೊ,
10 ಸಾಹುಕಾರಪೇಟೆ, ಮದರಾಸ್.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಧೆ, ಮೊಡವೆ, ಬಜ್ಜಿ, ಕುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

11 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

28 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವೂ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂಬು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೆಳೆಯಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
19 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಏಪ್ರಿಲ್ ತಾ|| ೨೦ ರಿಂದ ೧೯೧೯ ನೆಯ ಏಪ್ರಿಲ್ ತಾ|| ೨೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಚೈತ್ರ ಬ|| ಪಂಚಮಿಯಿಂದ ಚೈತ್ರ ಬ|| ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	[illegible]
13	[1]ಭಾನು	ತ್ರಯೋ[illegible]				
14	[2]ಸೋಮ	ಚತು	11-36	ಹಸ್ತ	34-34	2
15	[3]ಮಂಗಳ	ಪೌರ್ಣ	15-57	ಚಿತ್ತ	40-38	3
16	ಬುಧ	ಪಾಡ್ಯ	21-0	ಸ್ವಾತಿ	47-10	4
17	ಗುರು	ಬಿದಿಗೆ	26-11	ವಿಶಾಖಾ	53-51	5
18	ಶುಕ್ರ	ತದಿಗೆ	31-13	ಅನೂ	58-58	6
19	[4]ಶನಿ	ಚೌತಿ	35-37	ಜ್ಯೇಷ್ಠ	60	7

(1) ಮಾಗಡಿ ರಂಗಸ್ವಾಮಿ ರಥ, ತೊಂಡನೂರು ನಾರಾಯಣಸ್ವಾಮಿ ರಥ. (2) ಪೂರ್ಣಿಮಾ ತಿಥಿ. (3) ಬಿಳಿಗಿರಿ ರಂಗಸ್ವಾಮಿ ರಥ. (4) ಸಂಕಟಹರಚತುರ್ಥಿ, ಶುಭಪ್ರದ ಗೌರೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪದಭಕ್ತಾವಕಾರಾ ಪಕ್ಷಜ್ಞ ಸದ್ವೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರಾಕ್ಯಪಾಲಂಪಲಂ ||
ಶೀಮಾಶೀತಯಶಃಪ್ರಕಾಶವಿಭುಲಂ ಸದ್ವೃತ್ತ ಮಾಲಾಕುಲಂ | ಪ್ರೇಮಂಬಿತ್ತಿಕೆಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಏಪ್ರಿಲ್ ತಾರೀಖು ೨೭ ನೆಯ ಭಾನುವಾರ. (ಸಂಚಿಕೆ ೧೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹೊಸಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 22

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಪರಂಗಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಭಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಬೈಶನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ, ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಶ್ರಮದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ತೊಡಲು ಅಥವಾ ಅದರೊಂದಿಗೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅವ್ಯಕ್ತನು ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವದಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವದಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

8 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಷ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ
ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲ್ಯೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಜಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡಪರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲ್ಯೂಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿವಶೂಲಿ, ಮೂಗಿನೊಳಗಿನ ಪೀನಸಿ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ನೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿಜಡ್ಡು, ಗುದ್ದವ್ಯಸಬೇನೆ, ಹುಣ್ಣುತಜ್ಜು, ಗಜಕರ್ಣ, ಇಸಬು, ತಮ್ಮ, ಛಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೂರಬೀಳೋಣ, ಸಣ್ಣ ಕೂಸುಗಳಿಗೆ ವೃದ್ಧರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಕೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಕ್ಕ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ಕೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ತೋರಿದರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದರ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯು ಕೋಟಿನ ಸಿಗುವವು. ನಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
19 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

29 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

MADRAS
MAIL
WATCH
WITH 15
PRESENTS

ಮದರಾಸ್ ಮೇಲ್ ವಾಚ್, ೬ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ, ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು—ಜವಾನ್ ಬೀಸಣಿಗೆ 1, ಶಾಮಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಗೆ 1, ಉತ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಹರಳು ಗುಂಡಿಗಳು 4, ಜವಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಅಂತು 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ 4—8—0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
12 6. ಇರುಳಪ್ಪನ ಬೀದಿ, ಮದರಾಸ್.

ಕೊಳ್ಳುವುದಕ್ಕಾಗಿ ಸಂಧಿಸಭೆಗೆ ಅವರ ಪ್ರತಿನಿಧಿಗಳನ್ನು ಬರಮಾಡಿಕೊಳ್ಳುವುದಕ್ಕೆ ಏರ್ಪಾಡಾಗಿರುವುದು. ಮತ್ತು ಸ್ಮಟ್ಸ್‌ರವರ ಸೂಚನೆಯಂತೆ ಹಂಗೇರಿಯಾ ಪ್ರಭುತ್ವದವರು ಜಕೋಸ್ಲಾವಕಿಯಾ, ರುಮೇನಿಯಾ ಯುಗೋಸ್ಲಾವಿಯಾ, ಜರ್ಮನ್ ಆಸ್ಟ್ರಿಯಾ ದೇಶಗಳ ಪ್ರತಿನಿಧಿಗಳನ್ನು ಒಂದು ಸಭೆಗೆ ಬರಮಾಡಿಕೊಂಡು ಅವರೆಲ್ಲರ ಅಭಿಪ್ರಾಯಗಳನ್ನೂ ತಿಳಿದುಕೊಂಡು ಬರಲು ಒಪ್ಪಿರುವರು.

ಭರತಖಂಡ, ಪರ್ಷಿಯಾ, ಚೀನಾ, ಜಪಾನು ಮೊದಲಾದ ಪೂರ್ವದೇಶಗಳಲ್ಲಿ ತಮ್ಮ ಉದ್ಯಮವನ್ನು ವ್ಯಾಪನಗೊಳಿಸುವುದಕ್ಕಾಗಿ ಬೋಲ್ಷೆವಿಕ್ಕರು ಪ್ರಯತ್ನಿಸಿ, ಇದಕ್ಕಾಗಿ ಮಾಸ್ಕೋ ಪಟ್ಟಣದಲ್ಲಿ ಒಂದು ಪ್ರತಿಷ್ಠಾಪನೆಯನ್ನು ಮಾಡಿರುವರೆಂದೂ, ಇದರಲ್ಲಿ ಪರ್ಷಿಯಾ, ತುರ್ಕಿ ದೇಶಗಳೊಳಗೆ ವಿಪ್ಲವೋದ್ಯಮವನ್ನು ಹರಡುವುದಕ್ಕೆ ಬೇರೆಬೇರೆ ಪ್ರತಿನಿಧಿಗಳು ನಿಯುಕ್ತರಾಗಿರುವರೆಂದೂ, ಇವರುಗಳು ಆಯಾ ದೇಶಗಳಲ್ಲಿ ಸಂಘಗಳನ್ನು ಸ್ಥಾಪಿಸಿ ಪತ್ರಿಕೆಗಳನ್ನು ಆಯಾ ದೇಶಭಾಷೆಗಳಲ್ಲಿ ಪ್ರಕಟಿಸಿ, ತಮ್ಮ ತತ್ವಗಳನ್ನು ಹರಡಲಿಕ್ಕಿರುವರೆಂದೂ, ಅನೇಕ ಪಟ್ಟಣಗಳಲ್ಲಿ ರಾಜಾಸಂಘಗಳು ಸ್ಥಾಪಿಸಲ್ಪಡಲಿಕ್ಕೆ ಇರುವುವೆಂದೂ, ಓರೆಂಬರ್ಗ್‌ನಲ್ಲಿ ಈಗಾಗಲೇ ಇಂಥ ಸಂಘವೊಂದು ಸ್ಥಾಪಿಸಲ್ಪಟ್ಟಿದೆಯೆಂದೂ, ತಾಷ್ಕೆಂಟ್ ಮಾರ್ಗವಾಗಿ ಈ ವಿಪ್ಲವೋದ್ಯಮಗಾರರು ಕಳುಹಿಸಲ್ಪಡುವರೆಂದೂ ಲಂಡನ್ ಟೈಮ್ಸ್ ಪತ್ರಿಕೆಗೆ ಸುದ್ದಿ ತಿಳಿದಿರುವುದು.

ಕಳೆದ ತಾ|| ೫ ರಲ್ಲಿ ಬವೇರಿಯಾ ಪ್ರಭುತ್ವದವರು ಸೋವಿಯಟ್ ಪ್ರಜಾಪ್ರಭುತ್ವವನ್ನು ಪ್ರಕಟಿಸಿದರು. ಈ ಸೋವಿಯಟ್ ಪಕ್ಷದವರು ಹಿಂದಣ ಪ್ರಜಾಪ್ರಭುತ್ವದವರ ಪಾರ್ಲಿಮೆಂಟಿನ ಕಾರ್ಯಾಲಯವನ್ನು ವಶಪಡಿಸಿಕೊಂಡರು. ಇವರ ನೂತನ ಪ್ರಭುತ್ವ ಪ್ರಕಟನ ಪತ್ರಿಕೆಗಳು ಬೀದಿಗಳಲ್ಲೆಲ್ಲಾ ಅಂಟಿಸಲ್ಪಟ್ಟಿದ್ದುವು. ಅಲ್ಲಿಯ ಸ್ವತಂತ್ರ ಸಾಂಘಿಕವಾದಿಗಳು ಈ ಸ್ಪಾರ್ಟಕಸ್ ಪಕ್ಷದೊಡನೆಯೇ ಸೇರಿಬಿಟ್ಟರು. ಇದುವರೆಗೆ ಮುಖ್ಯ ಮಂತ್ರಿಯಾಗಿದ್ದ ಹೇರ್ ಆಫ್‌ಮೆನ್ನಿನ ಪಕ್ಷವನ್ನು ವಹಿಸುವುದಕ್ಕೆ ಸೈನಿಕರಿಗೂ ಮನಸ್ಸಿಲ್ಲವಾಗಿದೆ. ನೂತನ ಪ್ರಭುತ್ವವು ದೇಶದ ಅನೇಕ ಪ್ರಜೆಗಳಿಗೆ ವಿರುದ್ಧವಾಗಿರುವಂತೆ ಕಾಣುತ್ತದೆ. ಜನರು ಕೋಪಾವೇಶಗೊಂಡಿದ್ದಾರೆ. ಈಗಿನ ಪ್ರಭುತ್ವ ಪಕ್ಷದ ಸೈನಿಕರು ತಂತಿ ಅಂಚೆಗಳ ಕಾರ್ಯಾಲಯಗಳನ್ನೂ ವೃತ್ತಪತ್ರಿಕಾ ಕಾರ್ಯಾಲಯಗಳನ್ನೂ ಆಕ್ರಮಿಸಿಕೊಂಡಿದ್ದಾರೆ. ಯಂತ್ರಾಲಯಗಳ ಕೆಲಸಗಾರರೆಲ್ಲಾ ಮುಷ್ಕರ ಹಿಡಿದು ಕೆಲಸ ಬಿಟ್ಟಿದ್ದಾರೆ. ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿವೆ.

ಪತ್ರವ್ಯವಹಾರ.

ಉತ್ಸವಗಳು.

ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ
ಮಹಾಸ್ವಾಮಿಯವರ ಅಡ್ಡಪಾಲಕಿಯುತ್ಸವವು.
ಧಾರವಾಡ ಡಿಸ್ಟ್ರಿಕ್ಟ್ ಲಕ್ಷ್ಮೇಶ್ವರ.

ತಾ|| ೨೦ ನೇ ಮಾರ್ಚ್ ಸನ್ ೧೯೨೪ ನೆ ಇಸವಿ ದಿವಸ ಗುರುವಾರದ ದಿವಸ ಜಗದ್ಗುರುಗಳ ಸ್ವಾಮಿಯನ್ನು ಅಡ್ಡಪಾಲಕಿ ಪಗೈರೆ ಮಹೋತ್ಸವದೊಡನೆ ಬರಮಾಡಿಕೊಳ್ಳಲು ಊರೆಲ್ಲಾ ಧ್ವಜಪತಾಕೆಗಳಿಂದಲೂ ಚಿರುತೋರಣಗಳಿಂದಲೂ ಪೂರ್ವದಲ್ಲೇ ಅಲಂಕರಿಸಲ್ಪಟ್ಟಿದ್ದಿತು. ಸ್ಥಳಸ್ಥಳಗಳಿಂದ ಕೂಡಿದ ಭಕ್ತಸಂದಣಿಯು ಹತ್ತೆಂಟು ಸಾವಿರವರೆಗೆ ಇತ್ತು. ಆ ಗುರುವಾರ ಪ್ರಾತಃಕಾಲ ೮ ಗಂಟೆಗೆ ಸರಿಯಾಗಿ ಅಡ್ಡಪಾಲಕಿ ಮಹೋತ್ಸವವು ಹೊರಟು ಪೇಟೆಯಿಂದ ವಿರಕ್ತಮಠಕ್ಕೆ ೧೧|| ಗಂಟೆಗೆ ತಲ್ಪಿತು. ಆಗ ಶೃಂಗರಿಸಲ್ಪಟ್ಟಿದ್ದ ಸುವರ್ಣಮಯ ಸಿಂಹಾಸನದಲ್ಲಿ ಜಗದ್ಗುರುಗಳು ಮಂಡಿತರಾದರು. ಮಂಗಳವು ಮಾಡಲ್ಪಟ್ಟಿತು. ಅನಂತರ ಜಗದ್ಗುರುಗಳು ಸಮ್ಮುಖಗೆ ಚಿತ್ತೈಸಿದ ಆನಂದಪ್ರದರ್ಶನಾರ್ಥವಾದ ಭಾಷಣಗಳುಜರುಗಿದುವು. ಮಹೋತ್ಸವ ಕಾರ್ಯವು ಪೂರೈಸಿತು. ನಂತರ ಉತ್ಸವಕ್ಕೆ ಬಂದ ನಮ್ಮ ಊರ ಶಿರಸ್ತೇದಾರರಿಗೂ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಸಾಹೇಬರಿಗೂ ಸಂಭಾವನಾರೂಪದ ಆಶೀರ್ವಾದವು ಜಗದ್ಗುರುಗಳ ಸನ್ನಿಧಿಯಿಂದ ದಯಪಾಲಿಸಲ್ಪಟ್ಟಿತು. ಬಳಿಕ ಜಗದ್ಗುರುಗಳ ಸನ್ನಿಧಿಯಲ್ಲಿ ನಮ್ಮ ಮಿರಜ ಸರಕಾರದ ಸರ್ ಗಂಗಾಧರರಾವ ಬಾಳಾಸಾಹೇಬರಿಗೂ ಅವರ ಪುತ್ರಪೌತ್ರಾದಿಗಳಿಗೂ ಶ್ರೀಗುರುನಾಥನು ಆಯುರಾರೋಗ್ಯಾಭಿವೃದ್ಧಿಯನ್ನಿತ್ತು ಕಾಯಲೆಂದು ಜಯಘೋಷವಾಗಿ ಸಭೆಯ ಕಾರ್ಯವು ಜರುಗಿತು. ಆ ದಿವಸ ಪರಸ್ಥಳಗಳಿಂದ ಬಂದಿದ್ದ ಯಾವತ್ತು ಜನಗಳಿಗೆ ವೀರಶೈವ ಮಹಾಶಯರನೇಕರು ಅನ್ನಸಂತರ್ಪಣೆಮಾಡಿ ಯಶೋವಂತರಾದರು. ಅನಂತರ ಆ ಊರಲ್ಲಿ ಜಗದ್ಗುರುಗಳ ಪಾದಪೂಜೆಗಾಗಿ ಬಿನ್ನಹಗಳು ಕೆಲ ವೀರಶೈವ ಮಹನೀಯರಿಂದ ಮಾಡಲ್ಪಟ್ಟು ಗುರುಕಾಣಿಕೆಯು ಯಾವತ್ತು ವೀರಶೈವರಿಂದ ವಸೂಲುಮಾಡಲ್ಪಟ್ಟಿತು. ಜಗದ್ಗುರುಗಳ ಮುಕ್ಕಾಂ ನಮ್ಮ ಊರಿನಲ್ಲಿ ಇದಿನೈದು ದಿವಸವಾಗಿ ಅನಂತರ ಹಾವೇರಿ ಭಕ್ತಮಹಾಶಯರ ಕೋರಿಕೆ ಮೇರೆಗೆ ತಾರೀಖು ೨ ಏಪ್ರಿಲ್ ಸನ್ ೧೯೨೪ ಇಸ್ವಿ ರಾತ್ರಿ ಇಲ್ಲಿಂದ ದಯಮಾಡಿಸಲ್ಪಟ್ಟಿತು. ಈ ಜಗದ್ಗುರುಗಳ ಆಗಮನ ಮಹೋತ್ಸವ ಇತ್ಯಾದಿ ಕಾರ್ಯದಲ್ಲಿ ಶ್ರೀಮಂತ ಪಾನಗೌಡರು ಬಹದ್ದೂರ ದೇಸಾಯರು, ದೊಡ್ಡಬಸಪ್ಪ ಶೆಟ್ಟಿ, ವಿರೂಪಾಕ್ಷಪ್ಪ ಕೊಟಗಿ, ಶಿವಯ್ಯನವರು ಸವನೂರಮಠ, ಬಸಪ್ಪಾ ಗೇದಿ, ಅಡಿವೆಪ್ಪಾ ಟಂಕದಶೆಟ್ಟಿ ವ ಗುರುಸ್ವಾಮಿಸಿಲ್ಕಿ ಇತ್ಯಾದ್ಯನೇಕರು ವಿಶೇಷದ ಶ್ರದ್ಧೆಯನ್ನು ವಹಿಸಿ ತಮ್ಮ ಅಶೇಷವಾದ ಭಕ್ತಿಯನ್ನು ತೋರಿಸಿ ಸರ್ವಭಕ್ತಾದಿಗಳಿಗೆ ಜಗದ್ಗುರುಪಾದಸನ್ನಿಧಿಯು ಸುಲಭಸಾಧ್ಯವಾಗುವಂತೆ ಮಾಡಿದ್ದಕ್ಕಾಗಿ ಜಗದ್ಗುರುಗಳು ಅವರನ್ನು ಕಾಯಲೆಂದು ಪ್ರಾರ್ಥಿಸಿ ವಿರಮಿಸುವನು.

ಮಠಸೇವಕ.

ಹಾವೇರಿ.

ಇದೇ ತಿಂಗಳು ೪ ನೇ ತಾರೀಖು ಶುಕ್ರವಾರ ಮುಂಜಾನೆ ೮ ಗಂಟೆಗೆ ಜಗದ್ಗುರು ಶ್ರೀನಿರಂಜನ ಮುರುಘರಾಜೇಂದ್ರ ಸ್ವಾಮಿಗಳವರು ಹಾವೇರಿಗೆ ದಯಮಾಡಿಸಿದ್ದರು. ಊರೊಳಗಿನ ಯಾವತ್ತು ಬೀದಿಗಳು ಶೃಂಗರಿಸಲ್ಪಟ್ಟಿದ್ದು ಸ್ಥಳಿಕ ದೊಡ್ಡ ನಾಮದಾರರು ಇತರ ಪುರವಾಸಿಗಳು ಮತ್ತು ಸುತ್ತುಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತಜನರು ಶ್ರೀಗಳವರನ್ನು ಸಕಲ ಬಿರುದಾವಳಿ ಸಮೇತ ಅಡ್ಡಪಾಲಕಿ ಉತ್ಸವದಿಂದ ಇದಿರ್ಗೊಂಡು ಕರೆತಂದರು. ಸದ್ಯಕ್ಕೆ ದುಸ್ಸಾಹದಿನ ಸುರುವಾದ್ದರಿಂದ ಶ್ರೀಗಳವರ ಆಗಮನವು ಚಿರಸ್ಮರಣೀಯವಾಗಲೆಂದು ಹಾವೇರಿ [illegible], ಮದರಾಸ್. ರ ಶನಿವಾರ ರವಿವಾರ 3 ದಿವಸಗಳ [illegible] ಸೇಮಾಡಿ ಶ್ರೀ [illegible]

ಇಲ್ಲಿನೋಡಿ !!

ಅಚ್ಚಕಪ್ಪು ಮಸಿಪೊಟ್ಟಣಗಳು.

100 ಪೊಟ್ಟಣಗಳಿಗೆ ಪೋಸ್ಟೇಜು ಸಹ	1—0—0.
200 ಕ್ಕೆ ... ... ,, ,,	1—12—0.
300 ಕ್ಕೆ ... ... ,, ,,	2—4—0.

ವಿಳಾಸ—ಡಿ. ಹೆಚ್. ಮಸ್ತಾನ್ ಸಾಹೇಬ್, ಅಂಡ್ ಕೊ,
4 ಮರಡಿಹಳ್ಳಿ—ಚಿತ್ರದುರ್ಗ ಡಿ||.

ಶ್ರೀಮದ್ವೀರಶೈವ ಸಮಾಜದ ಸಕಲ ವಿದ್ವಜ್ಜನರಿಗೆ ಅರಿಕೆ ಮಾಡಿಕೊಳ್ಳುವದೇನೆಂದರೆ:—

ಮಹನೀಯರೆ, ನಮ್ಮ ಸಮಾಜದಲ್ಲಿ ನಡೆಯುವ ವಿವಾಹಾದಿ ಎಲ್ಲಾ ಶುಭ ಶೋಭನಾದಿಗಳ ಕಾಲಗಳಲ್ಲಿ ನಮ್ಮ ನಾರೀಮಣಿಯರು ರಾಮ, ಸೀತೆ, ಕೃಷ್ಣ, ಲಕ್ಷ್ಮಿ, ಮೊದಲಾದ ಇತರ ಸಂಬಂಧವಾದ ಹಾಡುಗಳನ್ನು ಹಾಡುವದು ವೀರಶೈವ ಸನಾತನಧರ್ಮಕ್ಕೂ ಮತ ಸಿದ್ಧಾಂತಕ್ಕೂ ಸದಾಚಾರಕ್ಕೂ ವಿರೋಧವಾಗಿರುವದಲ್ಲದೆ ಎಷ್ಟು ಕೊರತೆಗೆ ಈಡುಮಾಡಿದೆ ಎಂಬುವದು ಸರ್ವ ವ್ಯಕ್ತವಾಗಿರುವದಷ್ಟೆ. ಆದಾಗ್ಯೂ ಇದುವರೆಗೂ ಈ ಲೋಪವನ್ನು ಪರಿಹರಿಸಲು ಯಾರೂ ಪ್ರಯತ್ನಿಸದಿರುವದು ಬಹಳ ಶೋಚನೀಯವಾಗಿದೆ. ಈಗಿನ ಪಾಠಶಾಲೆಗಳಲ್ಲಿ ವಿದ್ಯಾರ್ಥಿ ಜನವರ್ಗದವರು ತಮ್ಮ ಅಂತರಂಗ ನಿಮ್ಮ ಸಂಬಂಧವಾದ ಕೀರ್ತನೆಗಳನ್ನೇ ಉಳ್ಳ ಹಾಡಿನ ಪುಸ್ತಕಗಳನ್ನು ಪಠ್ಯಪುಸ್ತಕ (ಟೆಕ್ಸ್ಟ್) ಗಳನ್ನಾಗಿ ನಿಯಮಿಸಿಕೊಂಡು ಬೋಧಿಸುತ್ತಿರುವದೇ ಈ ನ್ಯೂನತೆಗೆ ಮೂಲ ಕಾರಣವಾಗಿದೆ. ಆದಕಾರಣ ಶಿವಸಂಬಂಧವಾದ ಹಾಡುಗಳ ಪುಸ್ತಕಗಳನ್ನು ಬರೆಯಿಸಿ ಸರ್ಕಾರದವರು ಪಾಠಶಾಲೆಗಳಲ್ಲಿ ಇವುಗಳನ್ನು ಸಹ ಉಪಯೋಗಿಸುವಂತೆ ಕೇಳಿಕೊಂಡು ಕಾರ್ಯಸಿದ್ಧಿಯನ್ನು ಮಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಲ್ಲವೆ? ಅದ್ದರಿಂದ ಮೇಲ್ಕಂಡಂತೆ ಎಲ್ಲಾ ವಿವಾಹಾದಿ ಶುಭಕಾಲಗಳಲ್ಲಿ ಹಾಡಲು ಉಪಯೋಗವಾಗುವಂತೆಯೂ ಬಾಲಕಿಯರಿಗೆ ಸುಲಭವಾಗಿ ತಿಳಿಯುವಂತೆಯೂ, ಗಾನಕ್ಕಿಂಬಾಗಿ ಇರುವಂತೆಯೂ ಸಹ ಸರಳವಾದ ಶೈಲಿಯಲ್ಲಿ 3 ಅಥವಾ 5 ಚರಣಗಳಿಂದಲೂ, ಪಲ್ಲವಿಗಳಿಂದಲೂ, ಕೂಡಿದ ನಾನಾ ರಾಗಗಳಲ್ಲಿ ಕನಿಷ್ಠ ಪಕ್ಷ 75 ಹಾಡುಗಳುಳ್ಳ ಒಂದು ಹಾಡಿನ ಪುಸ್ತಕವನ್ನು ಶ್ರೀ ಪಾರ್ವತೀ ಪರಮೇಶ್ವರರ ಶ್ರೀ ಪಂಚಾಚಾರ್ಯರ ಪುರಾತನ ಪ್ರಮಥ ಶ್ರೀ ಶರಣರ ಪರವಾಗಿ ಬರೆದು ನನ್ನಲ್ಲಿಗೆ ಕಳಿಸತಕ್ಕವರಿಗೆ ಅತ್ಯಂತ ಉತ್ತಮವಾಗಿ ಕಂಡುಬರುವ ಹಾಡಿನ ಪುಸ್ತಕಕ್ಕೆ 30—0—0 (ಮೂವತ್ತು) ರೂಪಾಯಿಗಳ ಒಂದು ಬಹುಮಾನವು ಕೊಡಲ್ಪಡುವದು. ಮತ್ತು ಶ್ರೀಮತ್ ಪರಶಿವನ ಮತ್ತು ಶಿವಂತೀಭೂತರಾದ ಪ್ರಮುಖರಾಗಿ ಗಾನರೂಪದಿಂದ ನೂತನವಾಗಿರುವ ಕೀರ್ತನೆಗಳನ್ನೂ ಸ್ತೋತ್ರಗಳನ್ನೂ ಮಂಗಳಗಳನ್ನೂ ಸೇರಿಸಿ ನಿತ್ಯೋಪಯೋಗಕ್ಕೆ ಅನುಕೂಲಿಸುವಂತೆ ಕನಿಷ್ಠಪಕ್ಷ 50 ಹಾಡುಗಳಿಂದ ಕೂಡಿದ ಒಂದು ಕೀರ್ತನಾ ಪುಸ್ತಕವನ್ನು ಬರೆದು ನನ್ನಲ್ಲಿಗೆ ಕಳುಹಿಸತಕ್ಕವರಿಗೆ ಅತ್ಯಂತ ಉತ್ತಮವಾಗಿ ಕಂಡುಬರುವ ಲೇಖನಕ್ಕೆ 20.0.0 (ಇಪ್ಪತ್ತು) ರೂಪಾಯಿಗಳ ಬಹುಮಾನವೂ ಸಹ ಕೊಡಲ್ಪಡುತ್ತದೆ. ಈ ಬಹುಮಾನಗಳೆರಡನ್ನೂ ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹೆಸರಿನಲ್ಲಿ ಕೊಡುವದಲ್ಲದೆ ಇವುಗಳೆರಡನ್ನೂ ನಾನು ಮುದ್ರಣಮಾಡಿಸಿದ ತರುವಾಯ ಆಯಾ ಲೇಖಕರಿಗೆ (20) ಪ್ರತಿಗಳನ್ನು ಉಚಿತವಾಗಿ ಕಳುಹಿಸುತ್ತೇನೆ. ಈ ವಿಚಾರವನ್ನು ಮಹನೀಯರಾದ ತಾವುಗಳು ದಯವಿಟ್ಟು ಅವಗಾಹನೆಗೆ ತಂದುಕೊಂಡು ಈ ಸಂಬಂಧವಾದ ಎಲ್ಲಾ ತಪಶೀಲುಗಳನ್ನು ನನ್ನಿಂದ ತಿಳಿದುಕೊಂಡು ಮೇಲ್ಕಂಡ ಎರಡು ಲೇಖನಗಳನ್ನು ಸಹ ನನಗೆ ಸಿದ್ಧಾರ್ಥಿ ಸಂ|| ದ ವಿಜಯದಶಮಿ ಒಳಗಾಗಿ ಕಳುಹಿಸಿಕೊಟ್ಟು ಬಹುಮಾನವನ್ನು ಹೊಂದುವದರ ಮೂಲಕ ಈ ವಿಚಾರದಲ್ಲಿ ನಮ್ಮ ಸಮಾಜಕ್ಕೆ ಉಂಟಾಗಿರುವ ಕೊರತೆಯನ್ನು ದಯವಿಟ್ಟು ಪರಿಹರಿಸಲು ಕೋರುತ್ತೇನೆ.

ತುಮಕೂರು } ಸಮಾಜ ಸೇವಕ. ಜಿ. ಕೆ. ಗುರುಲಿಂಗಾರ್ಯ,
ಪ್ಲೀಡರ್.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೇರಿಕಾದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಛಾಯಾಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

15 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾನೇ [illegible] ಗ್ಯಾರ್.

MADRAS
MAIL
WATCH

ರಿಜಿಸ್ಟರ್ ಮಾಡಲ್ಪಟ್ಟಿರುವ [illegible] ಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇನೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
10 ಸಾಹುಕಾರಪೇಟೆ, ಮದರಾಸ್.

ದರ್ಬಾರ್ ಸೋಪು.

ಈ ಸೋಪನ್ನು ಕೊಡಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಧೆ, ನೊಡವೆ, ಬಿಜ್ಜ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

11 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನ ಬೀದಿ, ಮದರಾಸು.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

28 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವು ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತನಾಶ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಟು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2.14.0. 25 ಕ್ಕೆ 5.5.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
19 ವೈದ್ಯಶಾಲಾ, ಮೈಸೂರು.

೧೯೨೪ ನೆಯ ಇಸವಿ ಏಪ್ರಿಲ್ ತಾ|| ೧೩ ರಿಂದ ೧೯೨೪ ನೆಯ ಏಪ್ರಿಲ್ ತಾ|| ೧೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೬ ನೆಯ ರಕ್ತಾಕ್ಷಿನಾಮ ಸಂವತ್ಸರದ ಚೈತ್ರ ಬ|| ಪಂಚಮಿಯಿಂದ ಚೈತ್ರ ಬ|| ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಇಂಗ್ಲೀಷ್ ಹೊಸ ತಿಂಗಳು
13	¹ಭಾನು	ಪ್ರತಿಪ	[illegible]	[illegible]	[illegible]	[illegible]
14	²ಸೋಮ	ಚತು	11-36	ಹಸ್ತ	34-34	2
15	³ಮಂಗಳ	ಪೌರ್ಣ	15-57	ಚಿತ್ತ	40-38	3
16	ಬುಧ	ಪಾಡ್ಯ	21-0	ಸ್ವಾತಿ	47-10	4
17	ಗುರು	ಬಿದಿಗೆ	26-11	ವಿಶಾಖಾ	53-51	5
18	ಶುಕ್ರ	ತದಿಗೆ	31-13	ಅನೂ	58-58	6
19	⁴ಶನಿ	ಚೌತಿ	35-37	ಜ್ಯೇಷ್ಠ	60	7

(1) ಮಾಗಡಿ ರಂಗಸ್ವಾಮಿ ರಥಃ, ತೊಂಡನೂರು ನಾರಾಯಣಸ್ವಾಮಿ ರಥಃ. (2) ಪೂರ್ಣಿಮಾ ತಿಥಿಃ. (3) ಬಿಳಿಗಿರಿ ರಂಗಸ್ವಾಮಿ ರಥಃ. (4) ಸಂಕಟಹರಚತುರ್ಥಿ, ಶುಭಪ್ರದ ಗೌರೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ಲಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜ ಸಪ್ತ ತ್ರವೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾಶೀತಯಶಃಪ್ರತಾಪವಿಭವಂ ಸದ್ವೃತ್ತವಾಲಾಕುಲಂ | ಪ್ರೇಮಂಚಿತ್ರಿಲೆಯಂಸದಾಪೂರಿಲೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೨೪ ನೆಯ ಇಸವಿ ಏಪ್ರಿಲ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೧೨

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ನೃಪಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಪಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಸ್ತೋತ್ರೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರ್ಯಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಕತ್ರಯ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 22

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರವೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಸ್ಸಂಸರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಹಸ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಬೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಮಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ ಪಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ರೋಗಲು ಅಥವಾ ಅದರಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅನ್ಯತರ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣಬರುವದು. ನಿಮಾಣ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೀ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

8 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಷ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೫-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಇವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧ ಎಷ್ಟು ಮೌಲ್ಯವಾದ್ದು ಅದೇ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗವಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ನೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದದ್ವನಬೇನೆ, ಹುರಕುಜಜ್ಜ, ಗಜಕರ್ಣ, ಇಸಬು, ತಮ್ಮ, ಭಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರದಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೂರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಮಾತ್ರೆಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದೇಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ತೋರಿದರೆ ಪರತ ತಕ್ಕೊಳ್ಳು

ಕ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದರ ತೂರ್ತು ದೊರೆಯಲಿಕ್ಕಿಲ್ಲ. ಅನುಮಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯು ತೋಟಿಕ ಸಿಗುವವು. ನಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
49 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

29 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮದರಾಸ್ ಮೇಲ್ ವಾಚ್, ೫ ವರುಷಗಳ ಗ್ಯಾರಂಟಿ.

ಇದು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ

MADRAS
MAIL
WATCH
WITH 15
PRESENTS

ಮಾತ್ರ, ಈ ಚಿತ್ರದಲ್ಲಿ ಕಾಣಿಸಿರುವ 12 ಬಹುಮಾನಗಳನ್ನು ಕೊಡುವೆವು— ಜವಾನ್ ಬೀಸಣಿಗೆ 1, ಕಾಮಂತಿಗೆ ಹುವ್ವು 1, ಸೆಂಟ್ ಬಾಟಲ್ 1, ಬಾಚಣಿಗೆ 1, ಸರಪಣಿ 1, ಗೆಜ್ಜೆ ಅಡ್ಡಿಗೆ 1, ಉಕ್ತರಮುಖಿ 1, ಮುಖ ನೋಡಿಕೊಳ್ಳುವ ಕನ್ನಡಿ 1, ಹೇರಾಯಿಲ್ ಸೀಸೆ 1, ಹರಟು ಗುಂಡಿಗಳು 4, ಜವಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಉಂಗುರ 1, ಇವುಗಳು 12 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ 4—8—0.

ವಿಳಾಸ:—ವಿ. ಎ. ಕೃಷ್ಣ ಅಂಡ್ ಕೊ,
12 ೩. ಇರುಳಪ್ಪನ ಬೀದಿ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಏಪ್ರಿಲ್ ತಾ॥ ೨೭ ನೆಯ ಭಾನುವಾರ.

ಪ್ರಜಾಪ್ರತಿನಿಧಿಗಳ ಆರಿಸುವಿಕೆ.

ಮೂರು ವರ್ಷಕ್ಕೊಂದುಸಲ ಪ್ರಜಾಪ್ರತಿನಿಧಿ ಸಭೆಯ ಸಭಿಕರನ್ನು ಆರಿಸುವ ಪದ್ಧತಿಯ ಪ್ರಕಾರ ಈಗ ಅದರ ಕಾಲವು ಸಮೀಪಗತವಾಗುತ್ತದೆ. ಸಭಿಕರಾಗಲೂ ಓಟನ್ನು ಕೊಡಲೂ ಅರ್ಹರಾದ ಪ್ರಜೆಗಳ ಹೆಸರುಗಳ ಪಟ್ಟಿಯು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿತವಾಗಿದೆ. ತಮ್ಮ ನಿಜವಾದ ಕಷ್ಟಸುಖಗಳ ಅನುಭವವನ್ನು ಪಡೆದು ಸರಿಯಾಗಿ ಅವನ್ನು ಪ್ರಭುತ್ವದವರ ಮುಂದೆ ನಿವೇದಿಸಬಲ್ಲ ತಮ್ಮ ನಂಬುಗೆಗೆ ಪಾತ್ರರಾದ ಜನರಿಗೇ ತಮ್ಮಗಳ ಓಟುಗಳನ್ನು ಕೊಟ್ಟು ತಮ್ಮ ಹಿತವನ್ನೂ ದೇಶಹಿತವನ್ನೂ ಸಾಧಿಸಿಕೊಳ್ಳುವ ಕಡೆಗೆ ಪ್ರಜೆಗಳು ಮನಸ್ಸುಕೊಡಬೇಕು. ದಾಕ್ಷಿಣ್ಯಾದಿಗಳಿಗೆ ಬದ್ಧರಾಗಿ ಸ್ವಾರ್ಥಪರರಿಗೋ ಅಥವಾ ವಿಷಯಜ್ಞಾನವಿಲ್ಲದವರಿಗೋ ಓಟುಗಳನ್ನು ಕೊಟ್ಟುಬಿಟ್ಟರೆ ಅಂಥವರುಗಳಿಂದ ತುಂಬಿದ ಪ್ರಜಾಪ್ರತಿನಿಧಿ ಸಭೆಯಿಂದ ದೇಶಕ್ಕೆ ನಿಜವಾದ ಹಿತವು ಆಗಲಾರದು. ಕೆಲ ಸಂದರ್ಭಗಳಲ್ಲಿ ಓಟನ್ನು ಕೊಟ್ಟ ಜನರಿಗೇ ವಿರುದ್ಧ ಫಲವುಂಟಾಗುವುದೂ ಉಂಟು. ಈಗಣ ಡಿಸ್ಟ್ರಿಕ್ಟ್‌ಬೋರ್ಡು, ತಾಲ್ಲೂಕುಬೋರ್ಡು, ಮ್ಯುನ್ಸಿಪಾಲಿಟಿ ಮೊದಲಾದುವುಗಳಲ್ಲೆಲ್ಲಾ ಪ್ರಾತಿನಿಧ್ಯವು ಸಕ್ರಮವಾಗಿಲ್ಲವೆಂಬ ವಿಷಯವು ಎಲ್ಲರಿಗೂ ತಿಳಿದೇ ಇದೆ. ಆದರೆ ನಾಮಿನೇಷನ್ನಿನ ಏರ್ಪಾಟಿನಿಂದ ಗೌರ್ನಮೆಂಟಿನವರು ಆ ಲೋಪವನ್ನು ಸ್ವಲ್ಪಮಟ್ಟಿಗೆ ಕಡಿಮೆಮಾಡಿದ್ದಾರೆ. ಸಭಿಕರುಗಳನ್ನು ಆರಿಸುವಿಕೆಯ ಕ್ರಮವು ಮ್ಯುನ್ಸಿಪಾಲಿಟಿಗಳಲ್ಲಿ ಕಟ್ಟುನಿಟ್ಟಾಗಿ ನಡೆದರೂ ಉಳಿದ ತಾಲ್ಲೂಕುಬೋರ್ಡು ಮೊದಲಾದುವುಗಳ ಸಭಿಕರ ಆರಿಸುವಿಕೆಯು ನಿರ್ದಾಕ್ಷಿಣ್ಯವಾಗಿಯೂ, ನ್ಯಾಯಸಮ್ಮತವಾಗಿಯೂ ಸರ್ವತ್ರ ನಡೆಯುತ್ತಿರುವುದೆಂದು ಹೇಳಲಾಗುವುದಿಲ್ಲ. ತಾಲ್ಲೂಕುಬೋರ್ಡಿನ ಮತ್ತೂ ಡಿಸ್ಟ್ರಿಕ್ಟ್‌ಬೋರ್ಡಿನ ಸಭಿಕರನ್ನಾರಿಸುವ ಸಭೆಗಳು ಗ್ರಾಮಗಳಿಗೆ ದೂರವಾಗಿರುವ ತಾಲ್ಲೂಕು ಡಿಸ್ಟ್ರಿಕ್ಟು ಮುಖ್ಯಪಟ್ಟಣಗಳಲ್ಲಿ ಕೂಡುವುದರಿಂದಲೂ, ಅಲ್ಲಿಯ ಅಧ್ಯಕ್ಷರುಗಳು ಸರ್ಕಾರದ ಅಧಿಕಾರಿಗಳೇ ಆಗಿರುವುದರಿಂದಲೂ, ಈ ಸಭೆಗಳ ಚರ್ಯೆಗಳೂ ವಿಧಿವಿಧಾನಗಳೂ ಓಟನ್ನು ಕೊಡುವ ರೈತರೇ ಮೊದಲಾದವರಿಗೆ ಚೆನ್ನಾಗಿ ತಿಳಿದಿಲ್ಲದಿರುವುದರಿಂದಲೂ, ಆ ಸಭಾಧ್ಯಕ್ಷರ ದಾಕ್ಷಿಣ್ಯಾದಿಗಳಿಗೆ ರೈತರುಗಳು ಬದ್ಧರಾಗುತ್ತಿರುವುದರಿಂದಲೂ, ಓಟು ಕೊಡುವ ಪ್ರತಿಯೊಬ್ಬ ಪ್ರಜೆಯೂ ತನ್ನ ಇಷ್ಟಬಂದವರಿಗೇ ಓಟನ್ನು ಕೊಡುವ ಸ್ವಾತಂತ್ರ್ಯವನ್ನು ನಿರ್ನಿರೋಧವಾಗಿ ಉಪಯೋಗಿಸಿಕೊಳ್ಳಲವಕಾಶಹೊಂದಿರುತ್ತಾನೆಂದು ಹೇಳುವುದು ಕಷ್ಟ. ಸ್ಥಲಾಧಿಕಾರಿಗಳು ತಮ್ಮ ಇಷ್ಟಬಂದವರಿಗೇ ಸಭಿಕತ್ವವನ್ನು ಕೊಡಿಸಿಕೊಡಬೇಕೆಂದು ಸಂಕಲ್ಪಿಸಿಕೊಂಡುಬಿಟ್ಟರೆ ಅದು ಊರ್ಜಿತವಾಗದೆ ಹೋಗಲು ಅವಕಾಶವೇ ಇಲ್ಲ. ಅಧಿಕಾರಿಗಳಿಗೆ ಪ್ರತ್ಯಕ್ಷ ವಿರುದ್ಧವಾಗಿ ತಮ್ಮ ಮನೋರಥವನ್ನು ಈಡೇರಿಸಿಕೊಳ್ಳಬಲ್ಲ ನೈತಿಕಧೈರ್ಯವು ನಮ್ಮ ಪ್ರಜೆಗಳಲ್ಲಿ ಇನ್ನೂ ಹುಟ್ಟಿಲ್ಲವೆಂಬ ಸಂಗತಿಯು ಸರ್ವರಿಗೂ ಗೊತ್ತೇ ಇದೆ. ಹೀಗಿರುವಲ್ಲಿ ಪ್ರಜಾಪ್ರತಿನಿಧಿಸಭೆಯ ಸಭಿಕರನ್ನು ಆರಿಸುವ ಕೆಲಸವೂ ಸಹ ಪ್ರಜಾಸ್ವಾತಂತ್ರ್ಯಕ್ಕೆ ಅಡ್ಡಿಯಿಲ್ಲದಂತೆ ನಿಷ್ಪಕ್ಷಪಾತ ನಿರ್ದಾಕ್ಷಿಣ್ಯಗಳಿಂದ ಈಡೇರುವುದೆಂದು ಹೇಳುವುದು ಹೇಗೆ? ಪ್ರಜಾಸ್ವಾತಂತ್ರ್ಯಕ್ಕೆ ಅಡ್ಡಿಯಿಲ್ಲದಂತೆ ಅವರವರ ಪ್ರತಿನಿಧಿಗಳ ಆರಿಸುವಿಕೆಯು ನಡೆ[illegible] ಪ್ರತಿನಿಧಿಗಳ ಮುಖೇನ ಪ್ರಜೆಗಳ ಇಷ್ಟಾರ್ಥಗಳು [illegible] ಚರ್ಚಿತವಾಗುವಂಥ ಸ್ಥಿತಿಯು ಪ್ರಾಪ್ತವಾಗುವವರೆಗೂ ಪ್ರಜಾಪ್ರತಿನಿಧಿಸಭೆಯೂ ಅದರ ಕಾರ್ಯಗಳೂ ಸರ್ವಪ್ರಜಾಹಿತಕರವಾಗಿಯೇ ಈಡೇರುವುವೆಂದು ಹೇಳಲಾಗುವುದಿಲ್ಲ. ಒಂದೊಂದು ವಿಶಿಷ್ಟ ವರ್ಗದವರ ಬಾಯೇ ಸಭೆಯಲ್ಲಿ ಮುಂದಾಗಿರುವುದಾದರೆ ಇತರರುಗಳ ನಿಜವಾದ ಇಷ್ಟವು ಸಭೆಯಲ್ಲಿ ಜಯಶೀಲವಾಗಲಾರದು. ದೃಷ್ಟಾಂತಕ್ಕಾಗಿ-ರೈತರ ಹೊರತು ಉಳಿದ ಅಧಿಕಾದಾಯವುಳ್ಳ ಸರ್ಕಾರಿ ಉದ್ಯೋಗಿಗಳು ವಕೀಲರು ಕಸಬುಗಾರರು ಮೊದಲಾದವರಮೇಲೆ ಆದಾಯದ ಮೇಲಣ ತೆರಿಗೆಯನ್ನು ವಿಧಿಸಬೇಕೆಂದು ಈಗ ಸರ್ಕಾರದವರು ಮಾಡಿರುವ ಪ್ರಯತ್ನಕ್ಕೆ ಪ್ರಜಾಪ್ರತಿನಿಧಿಸಭೆಯಲ್ಲೂ ನಿಯಮನಿರ್ಮಾಣಸಭೆಯಲ್ಲೂ ದೇಶದೊಳಗೆ ಹೆಚ್ಚು ಸಂಖ್ಯಾಕರಾದ ಬೇಸಾಯಗಾರರ ಪ್ರತಿನಿಧಿಗಳೇ ಸಂಖ್ಯಾನುಗುಣವಾಗಿ ಅಧಿಕವಾಗಿದ್ದರೆ ನ್ಯಾಯವಾದ ಈ ಹೊಸ ತೆರಿಗೆಯನ್ನು ವಿಧಿಸುವ ವಿಷಯದಲ್ಲಿ ಉತ್ಸಾಹಕರವಾದ ಮತ್ತೂ ಸಹಾಯಕವಾದ ಅಭಿಪ್ರಾಯಗಳು ಸಭೆಯಿಂದ ಬರದೆ ಇರುತ್ತಿರಲಿಲ್ಲ.

ಪ್ರತ್ಯೇಕ ಪ್ರಾತಿನಿಧ್ಯವು ಪ್ರಭುತ್ವದವರಿಂದ ಅಂಗೀಕೃತವಾಗಿ ನಡೆಯಿಸಿಕೊಡಲ್ಪಡುವವರೆಗೂ ಪ್ರಜೆಗಳು ತಮ್ಮತಮ್ಮ ಜೊಗಸೆಯಿಂದ ತಾವು ನೀರನ್ನು ಕುಡಿಯುವುದೇ ಹಿತವೆಂಬುದನ್ನು ತಿಳಿದಿದ್ದರೆ ತಮ್ಮ ಕಷ್ಟಸುಖಗಳಿಗೆ ಭಾಗಿಗಳಾಗಿರುವ ತಂತಮ್ಮ ವಿಶ್ವಾಸಪಾತ್ರರಾದ ಜನರನ್ನೇ ತಮ್ಮ ಪ್ರತಿನಿಧಿಗಳನ್ನಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೆಚ್ಚುಹೆಚ್ಚಾಗಿ ಸೇರಿಸುವುದಕ್ಕಾಗಿ ಅಂಥವರುಗಳಿಗೇ ಓಟನ್ನು ಕೊಡುತ್ತ ಬರಬೇಕು. ದಾಕ್ಷಿಣ್ಯಾದಿಗಳಿಗೆ ಒಳಪಟ್ಟು ಅಸಲಿಗೆ ಮೋಸಬರುವಂಥ ಕೆಲಸವನ್ನು ಮಾಡಿಕೊಳ್ಳಬಾರದು. ಪ್ರಜೆಗಳು ತಮಗಿಷ್ಟವಿದ್ದವರಿಗೆ ಓಟು ಕೊಡುವುದಕ್ಕೆ ಅಡ್ಡಿ ಮಾಡಲು ಯಾವ ಅಧಿಕಾರಿಗೂ ಹಕ್ಕಿರುವುದಿಲ್ಲ. ತಮ್ಮ ಊರ ತಮ್ಮ ಜನರ ಕಷ್ಟಸುಖಗಳನ್ನು ಚೆನ್ನಾಗಿ ಅರಿತು ಅವನ್ನು ಕೂಲಂಕಷವಾಗಿ ಪ್ರಭುತ್ವದವರ ಕಣ್ಣಮುಂದಿಟ್ಟು ಚರ್ಚಿಸಲು ಸಾಮರ್ಥ್ಯವುಳ್ಳ ಜನರು, ಇತರರ ದಾಕ್ಷಿಣ್ಯಕ್ಕಾಗಿ ಅವರಿಗೆ ತಾವು ಸ್ಥಲಕೊಟ್ಟು ನಮಗೇಕೆ ಈ ಪಡುಪಾಟು ಎಂದು ತಟಸ್ಥರಾಗಿರಬಾರದು. ಸ್ವಜನಕ್ಕಾಗಿಯೂ ಸ್ವದೇಶಕ್ಕಾಗಿಯೂ ಕಷ್ಟಪಟ್ಟು ಹಿತವನ್ನು ಸಾಧಿಸಿಕೊಳ್ಳುವುದಕ್ಕಿಂತ ಸದ್ಧರ್ಮವು ಮತ್ತೊಂದಿಲ್ಲ. ಸ್ವಪ್ರತಿಷ್ಠಾಕಾಮಿಗಳು ಚತುರುಪಾಯದಿಂದಲೂ ತಾವು ಸಭಿಕರಾಗಿ ಹೋಗುವುದಕ್ಕೆ ಪ್ರಯತ್ನಿಸುವುದುಂಟು. ಆತ್ಮಹಿತವೇ ಗುರಿಯಾಗುಳ್ಳ ಅವರುಗಳು "ಹೊಳೆಯನ್ನು ದಾಟಿದಮೇಲೆ ಅಂಬಿಗನಿಗೆ ಮಿಂಡ" ನೆಂದು ಹೇಳುವ ಗಾಥೆಯಂತೆ ಮೊದಲು ಯಾರನ್ನಾಶ್ರಯಿಸಿ, ಯಾರ ಓಟುಗಳನ್ನು ಪಡೆಯಲು ವಿನಯ ಸ್ನೇಹಾದಿಗಳನ್ನು ನೆರೆಯಿಸಿರುವರೋ ಅಂಥವರುಗಳಿಗೆ ಹಿತಕರವಾಗಿ ಕೆಲಸಮಾಡುವುದು ಹಾಗಿರಲಿ, ಕಡೆಗೆ ಎರಡು ಬಗೆಯುವುದಕ್ಕೂ ಹಿಂಜರಿಯುವುದಿಲ್ಲ. ಅದುಕಾರಣ,ಇನ್ನು ಮುಂದೆ ಮೂರು ವರ್ಷಗಳವರೆಗೆ ಪ್ರಜಾಪ್ರತಿನಿಧಿಸಭೆಯಿಂದ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಯಾರ ಪ್ರಾತಿನಿಧ್ಯವು ತಮಗೆ ಇದ್ದರೆ ಅನುಕೂಲವೋ ಅಂಥವರುಗಳನ್ನೇ ಮುಂದಕ್ಕೆ ನಿಲ್ಲಿಸಿ, ಅವರುಗಳಿಗೇ ಓಟುಗಳನ್ನು ಕೊಡಲು ಪ್ರಜೆಗಳು ಉದಾಸೀನಮಾಡಬಾರದೆಂದು ಎಚ್ಚರಿಸುತ್ತೇವೆ. ಅವರವರು ತಮಗೆ ಬೇಕಾದವರಿಗೆ ಓಟುಗಳನ್ನು ಕೊಟ್ಟು ತಮ್ಮತಮ್ಮ ವರ್ಗಪ್ರಾತಿನಿಧ್ಯವಿರುವಂತೆ ಮಾಡಿಕೊಳ್ಳಬಹುದೆಂದು ಶ್ರೀಮನ್ಮಹಾರಾಜರವರೇ ಅಪ್ಪಣೆಕೊಟ್ಟಿರುವುದನ್ನು ಪ್ರಜೆಗಳು ವ್ಯರ್ಥಮಾಡಬಾರದು.

ಮೈಸೂರು ಸಂಸ್ಥಾನದ
೧೯೧೯-೨೦ ನೆಯ ವರ್ಷದ ಆಯವ್ಯಯ.

ನಿರೀಕ್ಷಿತವಾಗಿರತಕ್ಕ ಈ ವರ್ಷದ ಆಯವ್ಯಯಗಳ ಪಟ್ಟಿಯ ಪುಸ್ತಕವು ಮುದ್ರಿತವಾಗಿ ಸರ್ಕಾರದಿಂದ ಕಳುಹಿಸಲ್ಪಟ್ಟಿರುವುದನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ನಾಳೆ ನಡೆಯುವ ಪ್ರಜಾಪ್ರತಿನಿಧಿಸಭೆಯಲ್ಲಿ ಇದರ ಸಂಬಂಧವಾದ ಚರ್ಚೆಗಳೂ ನಡೆಯಬೇಕಾಗಿವೆ. ಈ ಲೆಕ್ಕದ ಪ್ರಕಾರ ಸಂಸ್ಥಾನಕ್ಕೆ ನಡೆಯುವ ವರ್ಷದಲ್ಲಿ ಉತ್ಪತ್ತಿಯು ೩೦೪೪೮೦೦೦ ರೂ. ವೆಚ್ಚವು ೩೪೪೧೪೦೦೦ ರೂ. ಎಂದರೆ ಉತ್ಪತ್ತಿಗಿಂತ ವೆಚ್ಚವು ೩೯೬೬೦೦೦ ರೂ. ನಷ್ಟು ಹೆಚ್ಚಾಗುವುದು. ಹಿಂದಣವರ್ಷದಲ್ಲಿ ಉತ್ಪತ್ತಿಯು ೨೯೯೧೨೦೦೦ ರೂ. ವೆಚ್ಚವು ೩೧೭೪೭೦೦೦ ರೂ. ಆಗಿದ್ದಿತು. ಈ ವರ್ಷದ ವೆಚ್ಚವು ಇಷ್ಟು ಹೆಚ್ಚಾಗುವುದಕ್ಕೆ ಕ್ಷಾಮನಿವಾರಣೆಯ ಕಾರ್ಯಗಳಿಗಾಗಿ ೧೯॥ ಲಕ್ಷ, ವಿದ್ಯಾಭ್ಯಾಸಶಾಖೆಗೆ ಹಿಂದಣವರ್ಷಕ್ಕಿಂತ ೫॥ ಲಕ್ಷದಷ್ಟು ಹೆಚ್ಚುಹಣ ಎಂದರೆ ಒಟ್ಟು ೪೧೭೪೦೦೦ ರೂ. ಗಳು ಲೋಕಲ್‌ಬೋರ್ಡು ಮೊದಲಾದವುಗಳ ಗ್ರಾಂಟಿಗೆ ಕಳೆದವರ್ಷಕ್ಕಿಂತ ೨॥ ಲಕ್ಷದಷ್ಟು ಹೆಚ್ಚು, ಹೀಗೆ ಕೆಲಭಾಗಗಳ ವ್ಯಯವು ಹೆಚ್ಚಾದುದೇ ಕಾರಣವಾಗಿದೆ. ವಿದ್ಯಾಶಾಖಾ ವ್ಯಯವು ಹೆಚ್ಚಾದುದೂ, ಕ್ಷಾಮನಿವಾರಣಾರ್ಥವಾಗಿ ತೆಗೆದಿರುವ ಹಣದ ವೆಚ್ಚವೂ ಲೋಕಲ್‌ಬೋರ್ಡುಗಳ ಗ್ರಾಂಟನ್ನು ಸಹ ಹೆಚ್ಚಿಸಿದುದೂ ಯಾರಿಗೂ ಅಸಮಾಧಾನವನ್ನುಂಟುಮಾಡುವಹಾಗಿಲ್ಲ. ಸಂಪದಭ್ಯುದಯ ಸಮಾಜದ ಸಂಬಂಧದ ವ್ಯಯವು ೨ ಲಕ್ಷವೂ ೩೧ ಸಾವಿರದಿಂದ ೨ ಲಕ್ಷಕ್ಕೆ, ಇಳಿಸಲ್ಪಟ್ಟಿದೆ. ವ್ಯವಸಾಯಶಾಖೆಯ ವೆಚ್ಚವು ೫ ಲಕ್ಷದ ೪೦ ಸಾವಿರದಿಂದ ೬ ಲಕ್ಷದ ೩೫ ಸಾವಿರಕ್ಕೆ ಹೆಚ್ಚಿಸಲ್ಪಟ್ಟಿದೆ. ಕೈಗಾರಿಕೆ ಮತ್ತೂ ವ್ಯಾಪಾರಶಾಖೆಯ ವೆಚ್ಚವು ಬಹಳ ಕಡಿಮೆಮಾಡಲ್ಪಟ್ಟಿದೆ. ಎಂದರೆ ಕಳೆದ ವರ್ಷ ೩೭೧೦೦೦ ವೆಚ್ಚವಾಗಿರುವಲ್ಲಿ ಈ ವರ್ಷ ೮೮೦೦೦ ವನ್ನು ಮಾತ್ರ ವೆಚ್ಚಮಾಡಲು ಗೊತ್ತುಮಾಡಿದ್ದಾರೆ. ವೈದ್ಯಶಾಖೆಯ ವೆಚ್ಚವು ೭೪೯೦೦೦ ರೂ. ಎಂದರೆ ಕಳೆದ ವರ್ಷಕ್ಕಿಂತ ೫೩ ಸಾವಿರದಷ್ಟೇ ಹೆಚ್ಚಾಗಿರುವುದೂ, ಆರೋಗ್ಯರಕ್ಷಣಶಾಖೆಗೆ ೧೧೭೦೦೦ ರೂ. ಎಂದರೆ ಕಳೆದ ವರ್ಷಕ್ಕಿಂತ ೪೯ ಸಾವಿರದಷ್ಟು ಕಡಿಮೆಮಾಡಿರುವುದೂ ಸಹ ಅತೃಪ್ತಿಕರವಾಗಿವೆ. ಅತಿ ಮುಖ್ಯವಾದ ಈ ಶಾಖೆಗಳ ಸಹಾಯವು ಪ್ರಜೆಗಳಿಗೆ ಬಹಳ ಕಡಿಮೆಯಾಗಿರುವಾಗ ಅದನ್ನು ಹೆಚ್ಚಿಸುವುದನ್ನು ಬಿಟ್ಟು ಮತ್ತಷ್ಟು ಹಿಡಿತವನ್ನೇ ಮಾಡುವುದು ಸರಿಯಾದುದಲ್ಲ. ಪೊಲೀಸ್‌ಶಾಖೆಯ ವೆಚ್ಚವು ಬಹುಶಃ ೨ ಲಕ್ಷದಷ್ಟು ಹೆಚ್ಚಿಸಲ್ಪಟ್ಟಿದೆ. ಇದು ಆವಶ್ಯಕವಾದುದೇ ಸರಿ. ಕಟ್ಟಡ ಮೊದಲಾದವುಗಳ ವೆಚ್ಚವನ್ನು ಹೋದವರ್ಷಕ್ಕಿಂತ ಈ ವರ್ಷ ೫॥ ಲಕ್ಷಕ್ಕಿಂತ ಮಿಗಿಲಾಗಿಯೇ ಕಡಿಮೆಮಾಡಿ, ನೀರಾವರಿಗೆ ೨ ಲಕ್ಷದಷ್ಟು ಹೆಚ್ಚಿಸಿದ್ದಾರೆ. ಇದು ವಿಹಿತವಾಗಿದೆ. ಆದರೂ ಕಟ್ಟಡ ಮೊದಲಾದುವುಗಳಿಗೆ ೨೮೨೭೦೦೦ ರೂ. ಗಳೂ, ನೀರಾವರಿ ಕೆಲಸಗಳಿಗೆ ೧೯೪೦೦೦೦ ರೂ. ಗಳೂ ಏರ್ಪಟ್ಟಿರುವುದು ಸಮಾಧಾನಕರವಾಗಿಲ್ಲ. ನೀರಾವರಿಗೇ ಹೆಚ್ಚು ವೆಚ್ಚಮಾಡಲ್ಪಡುವಂತಾಗಬೇಕು. ಹಣವು ಸಾಲದುದರಿಂದಲೋ ಏನೋ ಈ ವರ್ಷ ಲೋಹಮಾರ್ಗಗಳಿಗಾಗಿ ಕೇವಲ ೬೩೦೦೦ ರೂ. ಗಳನ್ನು ಮಾತ್ರ ಗೊತ್ತುಮಾಡಿದ್ದಾರೆ. ಉತ್ಪತ್ತಿಯ ವಿವರಣಗಳನ್ನು ನೋಡುವಲ್ಲಿ-ಭೂಗಂದಾಯವು ಕಳೆದ ವರ್ಷಕ್ಕಿಂತ ೮೩೯೦೦೦ ದಷ್ಟು ಹೆಚ್ಚು, ಎಂದರೆ ಒಟ್ಟು ೧೧೧೫೭೦೦೦ ರೂ. ಗಳಾಗಿವೆ. ಅಬಕಾರೀಶಾಖೆಯ ಉತ್ಪತ್ತಿಯು ೪೧ ಲಕ್ಷವಾಗಿದೆ. ಎಂದರೆ ಹಿಂದಣ ವರ್ಷಕ್ಕಿಂತ ೧೦೩೯೦೦೦ ರೂ. ನಷ್ಟು ಹೆಚ್ಚು. ಮುದ್ರಾದ್ರವ್ಯಶಾಖೆಯ ಆದಾಯವು ೬೮ ಲಕ್ಷವಾಗಿದೆ. ಇದು ಕಳೆದ ವರ್ಷಕ್ಕಿಂತ ೭೯೩೦೦೦ ರೂ. ಹೆಚ್ಚು. ಕಾವೇರೀ ವಿದ್ಯುಚ್ಛಕ್ತಿಶಾಖೆಯ ಆದಾಯವು ೧೪೨೬೦೦೦ ರೂ. ಎಂದರೆ ಹಿಂದಣವರ್ಷಕ್ಕಿಂತ ೧| ಲಕ್ಷ ಹೆಚ್ಚು. ಗಂಧದ ಎಣ್ಣೆ ಯಂತ್ರಾಲಯದ ಆಯವು ಮಾತ್ರ ಕಳೆದ ವರ್ಷಕ್ಕಿಂತ ಈ ಸಲ ೩೬೨೦೦೦ ರೂ. ಕಡಿಮೆಯೆಂದು ನಿರ್ಣಯಿಸಲ್ಪಟ್ಟಿದೆ. ಕಳೆದ ವರ್ಷ ಇದರ ಆದಾಯವು ೮೪೪೦೦೦ ರೂ. ಆಗಿರುವಲ್ಲಿ, ಈ ವರ್ಷದಲ್ಲಿ ೪೮೨೦೦೦ ರೂ. ಎಂದು ಹೇಳಲ್ಪಟ್ಟಿದೆ. ಇಷ್ಟು ಕಡಿಮೆಯಾಗುವ ಸಂಭವವೇನೋ ಗೊತ್ತಾಗಲಿಲ್ಲ. ಉಳಿದ ಶಾಖೆಗಳ ಆಯಗಳು ಸ್ವಲ್ಪಮಟ್ಟಿಗೆ ಹೆಚ್ಚೋ ಕಡಿಮೆಯೋ ಆಗಿವೆ.

ಸತ್ಯಾಗ್ರಹ

ಮ॥ ಗಾಂಧಿಯವರು ಕೇವಲ ಸಾತ್ವಿಕಭಾವದಿಂದ ಸತ್ಯಾಗ್ರಹವನ್ನು ದುರುದ್ದೇಶವಿಲ್ಲದೆ ಭರತಖಂಡದಲ್ಲಿ ಆರಂಭಿಸಿದರೂ, ಅವರು ಅದೂರಾಲೋಚನೆಯಿಂದ ಶಾಸನೋಲ್ಲಂಘನೆಮಾಡುವ ಬೋಧೆಯನ್ನು ಪ್ರಜೆಗಳಿಗೆ ಮಾಡಿದುದರಿಂದ ಅದು ವಿಪರೀತಾವಸ್ಥೆಗೆ ದಾರಿಮಾಡಿಕೊಟ್ಟಿತು. ಇದನ್ನೆಲ್ಲಾ ನೋಡಿ ಗಾಂಧಿಯವರೇ ಈಗ ಪಶ್ಚಾತ್ತಾಪಪಟ್ಟು ಕೃತಕರ್ಮಕ್ಕೆ ದೇಹತ್ಯಾಗ ಪ್ರಾಯಶ್ಚಿತ್ತವನ್ನೇ ಮಾಡಿಕೊಳ್ಳುತ್ತೇನೆಂದು ಹೇಳುವಹೊತ್ತು ಅವರಿಗೆ ಬಂದಿತು. ದೇಶದಲ್ಲಿ ವಿಪ್ಲವವನ್ನೂ ಕೊಲೆಸುಲಿಗೆಯನ್ನೂ ಅಶಾಂತಿಯನ್ನೂ ಹೆಚ್ಚಿಸಬೇಕೆಂದು ಒಳಗೊಳಗೇ ಹೊಂಚುಹಾಕಿಕೊಂಡಿರುವ ಕೆಲ ದುರುಳರಿಗೆ ಸತ್ಯಾಗ್ರಹದ ಚಳವಳಿಯ ಸುಸಂಧಿಯು ಒಂದು ವಿಧದಲ್ಲಿ ಉಪಕರಿಸುವಂತಾಯಿತು. ಪ್ರಭುತ್ವದವರು ಬರಿಯ ಸಾಮೋಪಾಯವನ್ನೇ ಮಾಡುತ್ತ ವಿಳಂಬವನ್ನು ಎಣಿಸುತ್ತ ಕುಳಿತಿದ್ದರೆ ಇಷ್ಟು ಹೊತ್ತಿಗೆ ಉತ್ತರ ಹಿಂದೂಸ್ಥಾನದ ಎಲ್ಲ ಪಟ್ಟಣಗಳೂ ದುರುಳರಿಂದ ಸೂರೆಮಾಡಲ್ಪಟ್ಟು ಎಷ್ಟೆಷ್ಟು ಅನಾಹುತಗಳಾಗುತ್ತಿದ್ದುವೋ ಅದನ್ನು ಊಹಿಸುವುದೇ ಕಷ್ಟವಾಗುತ್ತಿದ್ದಿತು. ತಕ್ಕ ಜಾಗರೂಕತೆಯನ್ನು ವಹಿಸಿ ಪ್ರಭುತ್ವದವರು ದರ್ಪದಿಂದ ದಂಡಭಯವನ್ನು ತೋರಿಸಿದುದರಿಂದಲೇ ಕೋಲಾಹಲವು ಶಾಂತವಾಗುವಂತಾಯಿತು. ಈಗ ಉತ್ತರ ಹಿಂದೂಸ್ಥಾನ ಬೊಂಬಾಯಿ ಮೊದಲಾದ ಕಡೆಗಳಲ್ಲೆಲ್ಲಾ ನಾಲ್ಕಾರು ದಿನಗಳಿಂದಲೂ ಸರ್ವವೂ ಶಾಂತಸ್ಥಿತಿಯಲ್ಲಿದೆ. ಇಂಡ್ಯಾ ಪ್ರಭುತ್ವದವರೂ ಸ್ಥಾನಿಕ ಪ್ರಭುತ್ವದವರೂ ಸಹ ಬೇರೆಬೇರೆ ಪ್ರಕಟನಗಳ ಮೂಲಕ--ಸರ್ಕಾರದವರು ರೌಲಟ್‌ಶಾಸನವನ್ನು ಮಾಡಬೇಕಾಗಿ ಬಂದ ಸಂದರ್ಭವನ್ನೂ, ಅದರಿಂದ ಸಾಧುಪ್ರಜೆಗಳಿಗೆ ಭೀತಿಯೇನೂ ಇಲ್ಲದಿರುವುದನ್ನೂ, ವಿಪ್ಲವೋದ್ದೇಶದ ಜನರು ಸುಳ್ಳುಸುದ್ದಿಗಳನ್ನು ಅದರ ವಿಷಯವಾಗಿ ಹುಟ್ಟಿಸಿ ದೇಶದ ಜನರನ್ನು ರೇಗಿಸಿ ಅನರ್ಥಕಾರ್ಯವಮಾಡುತ್ತಿರುವುದನ್ನೂ, ಅದರಿಂದಲೇ ಈಗ ಸರ್ಕಾರದವರು ದಂಡೋಪಾಯವನ್ನು ವಹಿಸಿ ಕೆಲ ಪ್ರಜೆಗಳನ್ನು ಕೊಂದು ಶಾಂತಿರಕ್ಷಣೆ ಮಾಡಬೇಕಾಗಿ ಬಂದ ವಿಷಾದವನ್ನೂ, ಮುಂದೆ ಇಂಥ ಅನರ್ಥಕ್ಕೆಡೆಗೊಡದೆ ಶಾಂತಿರಕ್ಷಣೆಗಾಗಿ ಪ್ರಭುತ್ವದವರಿಗೆ ಪ್ರಜೆಗಳು ಸಹಾಯಮಾಡಬೇಕಾದ ಆವಶ್ಯಕತೆಯನ್ನೂ ವಿವರಿಸಿರುವರು. ಮಹಾಜನರುಗಳನ್ನು ಸಭೆಗೆ ಬರಮಾಡಿಕೊಂಡು ಪ್ರತ್ಯಕ್ಷವಾಗಿಯೂ ಈ ವಿಷಯಗಳನ್ನು ಸ್ಫುಟಪಡಿಸುತ್ತಿರುವರು. ಮ॥ ಗಾಂಧಿಯವರು ಈಗ ತಾವಾಗಿ ಒಂದರಹಿಂದೊಂದು ಸಂದೇಶಗಳನ್ನು ಪ್ರಜೆಗಳಿಗೆ ಪ್ರಕಟಿಸುತ್ತ, ಅವರು ಮಾಡಿದ ಅತ್ಯಾಚಾರಗಳನ್ನು ಧಿಕ್ಕರಿಸಿ, "ನೀವು ಈ ಚರ್ಯೆಗಳಿಂದ ಸತ್ಯಾಗ್ರಹವನ್ನು ಅವಮಾನಪಡಿಸಿದುದಲ್ಲದೆ ನನ್ನನ್ನೂ ಅಗೌರವಪಡಿಸಿದಂತಾಯಿತು. ನೀವು ಹೀಗೆ ಮಾಡುವುದಕ್ಕಿಂತಲೂ ನನ್ನನ್ನೇ ಒಂದು ಬಾಕುವಿನಿಂದ ತಿವಿದುಕೊಂದಿದ್ದರೆ ನನಗೆ ವಿಷಾದವಾಗುತ್ತಿರಲಿಲ್ಲ. ಇನ್ನು ಮುಂದೆ ಯಾರೂ ದೌರ್ಜನ್ಯವನ್ನಾಚರಿಸಕೂಡದು. ನಾನು ಹಿಂದೆ ಬೋಧಿಸಿದ್ದಂತೆ ಶಾಸನೋಲ್ಲಂಘನೆಯ ಕಾರ್ಯವನ್ನು ಕೆಲ ಕಾಲದವರೆಗೂ ಯಾರೂ ಮಾಡಕೂಡದು" ಎಂದು ಮೊದಲಾಗಿ ಹೇಳಿ ಶಾಂತಿಸ್ಥಾಪನೆಗೆ ಪಾಡುಪಡುತ್ತಿದ್ದಾರೆ

ಆನಿಬೆಸೆಂಟಮ್ಮನವರು ಈಗ ಮತ್ತೊಂದು ಅವಸ್ಥೆಗೆ ಇಳಿದಿದ್ದಾರೆ. ರೌಲಟ್ ಶಾಸನವನ್ನು ಸತ್ಪ್ರಜೆಗಳಾರೂ ತಿರಸ್ಕರಿಸಲಾರರೆಂದೂ, ಈ ದೇಶದ ಕೆಲ ಭಾಗಗಳಲ್ಲಿ ವಿಪ್ಲವಕಾರಕ ಪ್ರಯತ್ನಗಳು ಇದ್ದೇ ಇವೆಯೆಂದೂ, ಅಂಥವರಿಂದ ಉಂಟಾಗುವ ಕ್ರೌರ್ಯವನ್ನು ಅಡಗಿಸುವುದರಲ್ಲಿ ಪ್ರಜೆಗಳೆಲ್ಲರೂ ಸರ್ಕಾರಕ್ಕೆ ಸಹಾಯಮಾಡಬೇಕೆಂದೂ, ಸತ್ಯಾಗ್ರಹ ಪ್ರಯತ್ನದಿಂದ ಗದ್ದಲವೂ ಅಶಾಂತಿಯೂ ಹತ್ಯಗಳೂ ಹೆಚ್ಚುವುದರಿಂದ ನಾನು ಅದನ್ನು ನಿಷೇಧಿಸುತ್ತೇನೆಂದೂ ಪ್ರಕಟಿಸಿಕೊಂಡಿದ್ದಾರೆ. ಹೀಗೆ ಅಮ್ಮನವರ ನುಡಿ ನಡೆಗಳು ಬದಲಾಯಿಸುತ್ತಿರುವುದನ್ನು ಕಂಡು ಅವರನ್ನು ಲೋಕಮಾತೆಯೆಂದು ನಿನ್ನೆ ಮೊನ್ನೆವರೆಗೂ ಸಂಬೋಧಿಸಿ ಅವರ ಶಿಲಾಮೂರ್ತಿಯನ್ನು ಸ್ಥಾಪಿಸಿ ಪೂಜಿಸುತ್ತಿದ್ದವರೆಲ್ಲಾ ಈಗ ನಿಬ್ಬೆರಗಾಗಿದ್ದಾರೆ. ಮತ್ತೊಂದು ಸಲ ಅಮ್ಮನವರು ಈ ಜನರ ವಾಗ್ಬಾಣತತಿಗೆ ಗುರಿಯಾಗಿದ್ದಾರೆ. ರೌಲಟ್ ಶಾಸನನಿರೋಧಕ್ಕಾಗಿ ಸತ್ಯಾಗ್ರಹ ವ್ರತಾನುಷ್ಠಾನವು ತಕ್ಕುದಲ್ಲವೆಂದು ಈಗ ಅನೇಕಾನೇಕರು ಅಭಿಪ್ರಾಯಪಡುತ್ತಿದ್ದಾರೆ. ಮದ್ರಾಸು ನ್ಯಾಷನಲ್ ಲೀಗಿನವರು ಸಭೆಗೂಡಿ ಹೀಗೆ ತೀರ್ಮಾನಮಾಡಿದ್ದಾರೆ. ಪಂಜಾಬಿನ ಮಹಮ್ಮದೀಯ ಪ್ರಮುಖರನೇಕರು ಒಂದು ಪ್ರಕಟನಪತ್ರವನ್ನು ಹೊರಡಿಸಿ ಅದರಲ್ಲಿ "ಸತ್ಯಾಗ್ರಹವೆಂಬುದು ನಮ್ಮ ದೇಶದ ಪರಿಸ್ಥಿತಿಗೆ ಎಷ್ಟುಮಾತ್ರಕ್ಕೂ ಸರಿಯಾದುದಲ್ಲ. ನಮ್ಮ ಜನರೆಲ್ಲರೂ ತಂತಮ್ಮ ವ್ಯಾಪಾರಾದಿಗಳಲ್ಲಿ ನಿರತರಾಗಿರಬೇಕು. ದೇಶೀಯರೆಲ್ಲರೂ ಮುಖ್ಯವಾಗಿ ಮಹಮ್ಮದೀಯರೆಲ್ಲರೂ ಈ ಸತ್ಯಾಗ್ರಹ ಪ್ರಯತ್ನವನ್ನು ಬಿಟ್ಟು ಸರ್ಕಾರದಧಿಕಾರಿಗಳ ಆಜ್ಞೆಯಂತೆ ನಡೆದು ದೇಶಶಾಂತಿಯನ್ನು ಕಾಪಾಡುವುದಕ್ಕೆ ಪ್ರಯತ್ನಪಡಬೇಕು" ಎಂದು ಸ್ಫುಟಪಡಿಸಿದ್ದಾರೆ. ಇದರಂತೆಯೇ ಕಲ್ಕತ್ತಾದ ಮಾರ್ವಾಡಿ ಜನಸಂಘದವರೂ ಸಹ ಸತ್ಯಾಗ್ರಹ ಪ್ರಯತ್ನವನ್ನು ಖಂಡಿಸಿ ಒಂದು ನಿರ್ಧಾರವನ್ನು ಮಾಡಿ ತಮ್ಮ ಜನರಿಗೆಲ್ಲಾ ಪ್ರಕಟನಪತ್ರವನ್ನು ಕಳುಹಿಸಿದ್ದಾರೆ. ಶಾಸನಗಳನ್ನು ಉಲ್ಲಂಘಿಸುವ ಕಾರ್ಯವನ್ನು ಯಾರೂ ಮಾಡಲಾಗದೆಂದು ಗಾಂಧಿಯವರೇ ಪ್ರಕಟಿಸಿದುದರಿಂದ ಬಹಿಷ್ಕೃತ ಗ್ರಂಥಗಳ ಮಾರಾಟವೂ, ರಿಜಿಸ್ಟರಿಲ್ಲದ ವೃತ್ತಪತ್ರಗಳ ಪ್ರಕಟನವೂ ಸಹ ನಿಂತುಹೋಗಿವೆ.

ಕೆಲವು ಕಾಲದವರೆಗೆ ಸತ್ಯಾಗ್ರಹ ವ್ರತಾಚರಣವನ್ನು ನಿಲ್ಲಿಸಬೇಕೆಂತಲೂ ಅದುಕಾರಣ ತಮ್ಮ ಅನುಚರರು ಶಾಂತಿಯನ್ನು ಸ್ಥಾಪಿಸುವುದರಲ್ಲಿ ಪ್ರಭುತ್ವದವರಿಗೆ ಸಹಾಯಮಾಡಬೇಕೆಂತಲೂ ಗಾಂಧಿಯವರು ಒಂದು ಪ್ರಕಟನವನ್ನು ಮಾಡಿದ್ದಾರೆ. ಆದರೆ ಸ್ವದೇಶೀವ್ರತವನ್ನು ಆಚರಿಸಬೇಕೆಂದು ಮತ್ತೊಂದು ಸಂದೇಶವನ್ನು ಪ್ರಕಟಿಸಿದ್ದಾರೆ. ಭರತಖಂಡದಲ್ಲೇ ಹುಟ್ಟಿದ ಹತ್ತಿ ಉಣ್ಣೆ ರೇಷ್ಮೆಗಳಿಂದ ಈ ದೇಶದ ಕೈಮಗ್ಗಗಳಿಂದಲೇ ನೆಯ್ದ ವಸ್ತ್ರಗಳನ್ನೇ ನಾನು ಇನ್ನುಮುಂದೆ ಧರಿಸುತ್ತೇನೆಂದು ದೈವಸಾಕ್ಷಿಯಾಗಿ ಭೀಕರ ಪ್ರಮಾಣವನ್ನು ಅವರು ಮಾಡಿರುವುದಲ್ಲದೆ ಇದುವರೆಗೆ ತಮ್ಮಲ್ಲಿದ್ದ ವಿದೇಶ ವಸ್ತ್ರಗಳನ್ನೆಲ್ಲಾ ಸುಟ್ಟುಬಿಟ್ಟಿದ್ದಾರೆ. ತಮ್ಮ ಅನುಚರರಿಗೆಲ್ಲಾ ಹಾಗೆಯೇ ಮಾಡಲು ಬೋಧಿಸಿದ್ದಾರೆ. ಪರದೇಶದವರ ಷೇರುಗಳೊಡನೆ ಸ್ವದೇಶದವರು ಭರತಖಂಡದಲ್ಲಿ ಸ್ಥಾಪಿಸಿರುವ ಯಂತ್ರಾಲಯಗಳಲ್ಲಿ ನೆಯ್ದ ಬಟ್ಟೆಯು ಕೂಡ ಸ್ವದೇಶೀಯ ವಶಗಳಾಗುವುದಿಲ್ಲವೆಂದು ಹೇಳಿದ್ದಾರೆ. ಈ ವ್ರತದ ಪರಿಣಾಮವು ಹೇಗಾಗುವುದೋ ನೋಡಬೇಕು.

ಒಳದೇಶದ ವೃತ್ತಾಂತಗಳು.

ಕಡೂರು ಡಿಸ್ಟ್ರಿಕ್ಟ್ ಡಿ॥ ಕಮಿಷನರ್ ಛಾರ್ಜನ್ನು ಮ॥ ಕೆ. ಮೈಲಾರಿರಾವ್‌ರವರು ಕಳೆದ ತಾ॥ ೭ ರಲ್ಲಿ ವಹಿಸಿಕೊಂಡರು.

ರಾಜಧಾನಿಯಲ್ಲಿರುವ ಧರ್ಮಪ್ರಕಾಶ ಡಿ॥ ಬನುಮಯ್ಯನವರ ಪಾಠಶಾಲೆಯು ಬರುವ ಜೂನ್ ತಿಂಗಳಿಂದ ಹೈಸ್ಕೂಲಾಗಿ ಮಾಡಲ್ಪಡುವುದು.

ಈ ವಾರದಲ್ಲಿ ರಾಜಧಾನಿಗೆ ದಯಮಾಡಿಸುವರೆಂದು ನಿರ್ಧರಿಸಲ್ಪಟ್ಟಿದ್ದ ಜಿಂದ್‌ಸಂಸ್ಥಾನದ ಮಹಾರಾಜರು ಏನೋ ಅನಿವಾರ್ಯಗಳಿಂದ ಬರಲಿಲ್ಲ.

ನಾಳೆ ಸೋಮವಾರದಿಂದ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಆ॥ ದಿವಾನ್ ಮ॥ ಎ. ಆರ್. ಬಾನರ್ಜಿಯವರ ಅಧ್ಯಕ್ಷತೆಯಿಂದ ಪ್ರಜಾಪ್ರತಿನಿಧಿ ಸಭೆಯು ನಡೆಯುವುದಾಗಿದೆ.

ಬರುವ ಮೇ ತಾ॥ ೨ನೆ ಶುಕ್ರವಾರ (ವೈಶಾಖ ಬಹುಳ ೨) ರೋಹಿಣೀ ನಕ್ಷತ್ರವಿರುವುದರಿಂದ ಆದಿನವೇ ಶ್ರೀ ಬಸವೇಶ್ವರಜಯಂತ್ಯುತ್ಸವವು ಅಶೇಷ ವೀರಶೈವ ಮಹಾಜನರಿಂದ ಆಚರಿಸಲ್ಪಡತಕ್ಕುದಾಗಿದೆ.

ಮಿ॥ ಹಂಫ್ರಿಹರ್ಸ್ಟ್‌ರವರು ಅನಿಶ್ಚಯವಾಗಿ ಕೌನ್ಸಿಲರಾಗಿರುವವರೆಗೆ ತುಮಕೂರು ಡಿಸ್ಟ್ರಿಕ್ಟ್ ಡಿ॥ ಕಮಿಷನರಾದ ಮ॥ ಎ. ಸುಬ್ರಹ್ಮಣ್ಯಯ್ಯರ್‌ರವರು ಆ॥ ಪೊಲೀಸ್ ಇ॥ ಜನರಲ್‌ರವರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಳೆದ ಭಾನುವಾರ ಹಗಲು ರಾಜಧಾನಿಯಲ್ಲಿ ಒಳ್ಳೇ ಮಳೆಯಾಯಿತು. ಗ್ರಾಮಾಂತರಗಳ ಮೇಲೆ ಬಿದ್ದಿರುವ ಈ ಮಳೆಯಿಂದ ಜೋಳದ ಪೈರಿಗೆ ಬಹಳ ಅನುಕೂಲವಾಯಿತು. ಇನ್ನೂ ಮಳೆ ಬರುವ ಲಕ್ಷಣವಿದೆ.

ವೈಶಾಖಶುದ್ಧ ೨ ಗೆ ಬೆಂಗಳೂರಿಗೆ ದಯಮಾಡಿಸುವುದೆಂದು ವಾರ್ತೆಯಿದ್ದ ಚಿತ್ರದುರ್ಗದ ಶ್ರೀಜಗದ್ಗುರು ಮಹಾಸ್ವಾಮಿಯವರ ಸ್ವಾರಿಯು ಮೇ ತಾ॥ ೧೮ ನೆಯ ಭಾನುವಾರ ದಯಮಾಡುವುದೆಂದು ನಿಷ್ಕೃಷ್ಟವಾಗಿದೆ.

ಬರುವ ನವಂಬರ್ ತಿಂಗಳಲ್ಲಿ ವೈಸ್‌ರಾಯರು ಪತ್ನೀಸಮೇತರಾಗಿ ನಮ್ಮ ದೇಶಕ್ಕೆ ದರ್ಶನವನ್ನೀಯುವವರಾಗಿದ್ದಾರೆಂದೂ, ಅವರ ಸತ್ಕಾರಕ್ಕೆ ತಕ್ಕ ಏರ್ಪಾಟನ್ನು ನಮ್ಮ ಪ್ರಭುತ್ವದವರು ಮಾಡಲು ನಿರ್ಧರಿಸಿರುವರೆಂದೂ ಕೇಳುತ್ತೇವೆ.

ಬೆಂಗಳೂರು ಸಿಟಿ ಮ್ಯುನ್ಸಿಪಾಲಿಟಿಯಲ್ಲಿ ತಮ್ಮ ಕೌನ್ಸಿಲರಿಗಿರಿಗೆ ರಾಜೀನಾಮೆ ಕೊಟ್ಟ ಮಿ॥ ಚೆಂಗಯ್ಯಶೆಟ್ಟಿ ಬಿ.ಎ. ಯವರ ಸ್ಥಾನಕ್ಕೆ ಅವರ ಕುಲದವರಾದ ಜವಳಿ ವರ್ತಕರು ಮ॥ ಪಿ. ಸುಬ್ಬರಾಮಶೆಟ್ಟರು ನಿಯಮಿಸಲ್ಪಟ್ಟಿದ್ದಾರೆ. ಆದರೆ ರಾಜಧಾನಿಯ ಮ್ಯುನಿಸಿಪಾಲಿಟಿಯವರು ಬಿಡುವಾದ ಮ॥ ಎಂ. ಎನ್. ಸುಬ್ಬಣ್ಣನವರ ಸ್ಥಾನಕ್ಕೆ ಬೇರೆ ಕುಲದವರನ್ನು ನಿಯಮಿಸಿಕೊಳ್ಳಲು ಕಾರಣವೇನಿದ್ದಿತೋ ತಿಳಿಯದು!

ಕಳೆದ ಮಾರ್ಚಿ ತಾ॥ ೩೧ಕ್ಕೆ ಕಡೆಯಾದ ೧ ವರ್ಷಕಾಲದಲ್ಲಿ ಮೈಸೂರು ಅರಸೀಕೆರೆ ಲೋಹಮಾರ್ಗದಿಂದ ೪೯೩೩೩೧ ರೂ.ಗಳ ವರಮಾನವಾಗಿದೆ. ಮಾರ್ಚಿ ತಾ॥ ೩೧ಕ್ಕೆ ಕಡೆಯಾದ ೧ ವಾರ ಕಾಲದಲ್ಲಿ ೧೦೬೬೯ ರೂ.ಗಳ ಉತ್ಪತ್ತಿಯಾಗಿದೆ. ಟಿಕೆಟು ಪರಿಶೋಧನೆ ಮೊದಲಾದುವುಗಳನ್ನು ಜಾಗರೂಕತೆಯಿಂದ ಮಾಡುವ ಮತ್ತೂ ನಿಸ್ಪೃಹವಾದ ಯೋಗ್ಯತೆಯುಳ್ಳ ನೌಕರಮಾನೇರುಗಳ ಸಂಖ್ಯೆಯು ಹೆಚ್ಚಿದರೆ ಈ ಮಾರ್ಗದ ಉತ್ಪತ್ತಿಯು ಇನ್ನು ಕೆಲಭಾಗ ಹೆಚ್ಚುವುದು.

ರಾಜಧಾನಿಯ ಮ್ಯುನ್ಸಿಪಾಲಿಟಿಗೆ ವೈಸ್‌ಪ್ರೆಸಿಡೆಂಟರನ್ನು ಕೌನ್ಸಿಲರುಗಳೇ ಆರಿಸಬೇಕಾಗಿದ್ದರೂ ಅದು ನಿಷ್ಫಲವಾಗಿ ಹೋಗಲಾಗಿ, ಈಗ ಸರ್ಕಾರದವರು ಸರ್ದಾರ್ ಗೋಪಾಲಕೃಷ್ಣೇ ಅರಸಿನವರನ್ನು ವೈಸ್‌ಪ್ರೆಸಿಡೆಂಟರನ್ನಾಗಿ ನಿಯಮಿಸಿದ್ದಾರೆ. ಇದರಿಂದ ಕೌನ್ಸಿಲಿಗೆ ಭೂಷಣವಾದಂತಾಯಿತು. ಇದಕ್ಕೆ ಮ॥ ಅರಸಿನವರು ಒಪ್ಪಿದುದು ವಿಶೇಷವೇ ಸರಿ. ರಾಜಬಂಧುವರ್ಗದವರು ಪ್ರಜಾಸೇವಾಕಾರ್ಯದಲ್ಲಿ ಹೀಗೆ ಮುಂದುವರಿಯುವುದು ಶ್ರೀಮನ್ಮಹಾರಾಜರಿಗೂ ಅವರ ಪ್ರಜಾವರ್ಗಕ್ಕೂ ಸಂತೋಷಪ್ರದವು.

ರೆವಿನ್ಯೂ ಆಫೀಸರುಗಳಿಗೆ ಪ್ರಜೆಗಳು ಬರೆದುಕೊಂಡ ಅರ್ಜಿಗಳನ್ನು ಅವರು ಸ್ವತಃ ತೆಗೆದುಕೊಳ್ಳಬೇಕೆಂದು ರೆವಿನ್ಯೂ ಮ್ಯಾನ್ಯುಯಲಿನಲ್ಲಿ ವಿಧಿಯಿದೆ. ಆದರೆ ಅಂಥ ಅರ್ಜಿಗಳು ಕೆಲವನ್ನು ಗುಮಾಸ್ತೆಯರುಗಳು ತೆಗೆದುಕೊಂಡಿರುವರೆಂಬ ಸಂಗತಿಯು ಸರ್ಕಾರದವರ ಗಮನಕ್ಕೆ ಬಂದು ಇತಃಪರಃ ರೆವಿನ್ಯೂ ಅಧಿಕಾರಿಗಳು ಹಾಗೆ ಮಾಡಿಸದೆ ಸ್ವತಃ ಅರ್ಜಿಗಳನ್ನು ತೆಗೆದುಕೊಂಡು, ಕೊನೆಯ ಅಪ್ಪಣೆ ಅಡಗಿರುವ ಇಂಡಾರಸ್ಮುಗಳನ್ನು ಅರ್ಜೀದಾರರಿಗೆ ಕೊಡಬೇಕೆಂದು ಖಂಡಿತವಾದ ಅಪ್ಪಣೆಯನ್ನು ಮಾಡಿರುತ್ತಾರೆ.

ಈ ಕೆಳಗೆ ಹೇಳುವಂತೆ ಡಿ॥ ಕಮಿಷನರುಗಳ ವರ್ಗಾವರ್ಗಿಯು ಅಪ್ಪಣೆಮಾಡಲ್ಪಟ್ಟಿದೆ. ಮಿ॥ ಎಚ್. ಬೌರಿಂಗ್‌ರವರು ಬೆಂಗಳೂರಿಂದ ಮೈಸೂರಿಗೆ. ಮಿ॥ ಟಿ. ಚೊಕ್ಕಣ್ಣನವರು ಮೈಸೂರಿಂದ ಬೆಂಗಳೂರಿಗೆ. ಮಿ॥ ವೆಂಕೋಬರಾಯರು ಕೋಲಾರದಿಂದ ಹಾಸನಕ್ಕೆ, ಮಿ॥ ಸಿ. ವೆಂಕಟರಂಗಯ್ಯರು ಹಾಸನದಿಂದ ಚಿತ್ರದುರ್ಗಕ್ಕೆ, ಮಿ॥ ಜಹಿರುದ್ದಿನ್ ಮೆಕ್ಕೆಯವರು ಚಿತ್ರದುರ್ಗದಿಂದ ಕೋಲಾರಕ್ಕೆ, ಮಿ॥ ಎ. ನಾರಾಯಣಯ್ಯಂಗಾರರು ತುಮಕೂರಿಗೆ, ಅವರು ರಜಾದಿಂದ ಬಂದು ಉದ್ಯೋಗವನ್ನು ವಹಿಸಿಕೊಳ್ಳುವವರೆಗೆ ನಂಜನಗೂಡು ಸಬ್ ಡಿವಿಜನ್ ಆಫೀಸರ್ ಮಿ॥ ಸಿರ್ಸಿ ಅನಂದರಾವ್‌ರವರು ತುಮಕೂರು ಡಿಸ್ಟ್ರಿಕ್ಟ್ ಛಾರ್ಜನ್ನು ವಹಿಸಿರುವರು.

ರಾಜಧಾನಿಯಲ್ಲಿರುವ ಅರಸುಗಳ ಬಾಲಿಕಾ ಪಾಠಶಾಲೆಯಾರಂಭವಾದ ಮೊದಲು ಇದುವರೆಗೆ ಅದರ ಮ್ಯಾನೇಜಿಂಗ್ ಕಮಿಟಿಯ ಕಾರ್ಯದರ್ಶಿತ್ವವನ್ನು ಲೋಕಹಿತೈಷಿ ಮ॥ ನಂಜುಂಡರಾಜೇ ಅರಸಿನವರು ವಹಿಸಿದ್ದರು. ಸರ್ವತೋಮುಖವಾದ ಅದರ ಏಳ್ಗೆಗೆ ಅಹರ್ನಿಶಿಯೂ ಇವರು ವಹಿಸಿದ್ದ ಶ್ರದ್ಧೆಯೇ ವಿಶೇಷತಃ ಕಾರಣವಾಗಿದ್ದಿತು. ಈಗ ಅವರು ವಾರ್ಧಕ್ಯದ ದೆಸೆಯಿಂದ ಕಾರ್ಯದರ್ಶಿತ್ವವನ್ನು ಬಿಟ್ಟುಕೊಟ್ಟರು. ರಾಜಬಂಧುಗಳು ಆ ಪಾಠಶಾಲೆಯ ಉಪಾಧ್ಯಾಯರುಗಳು ಮೊದಲಾದವರೆಲ್ಲಾ ಮ॥ ಅರಸರನ್ನು ಅತ್ಯಾಹಾರಾದಿಗಳಿಂದ ಸತ್ಕರಿಸಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈಗ ಸರ್ದಾರ್ ಗೋಪಾಲಕೃಷ್ಣೇ ಅರಸಿನವರು ಕಾರ್ಯದರ್ಶಿತ್ವವನ್ನು ವಹಿಸಿದ್ದಾರೆ.

ರಾಜಧಾನಿಯ ಮ್ಯುನ್ಸಿಪಾಲಿಟಿಯವರು ಮನೆಗಂದಾಯವನ್ನು ೫ ವರ್ಷಕ್ಕೊಂದು ಸಲದಂತೆ ಮಾಡಬೇಕಾದ ವಿಧಿಯಂತೆ ಪುನರ್ನಿರ್ಣಯ ಮಾಡಿಸಲು ಏರ್ಪಡಿಸಿರುವರೆಂದು ಕೇಳುತ್ತೇವೆ. ದುರ್ಭಿಕ್ಷದ ಹಾವಳಿಯಿಂದ ಜನರು ತತ್ತರಿಸುತ್ತಿರುವ ಇಂಥ ಸಮಯದಲ್ಲಿ ಈ ಪುನರ್ನಿರ್ಣಯದ ಏರ್ಪಾಟನ್ನು ಮಾಡಿರುವುದು ದುರ್ಭಿಕ್ಷದಲ್ಲಿ ಅಧಿಕಮಾಸದಂತಾಗಿರುವುದು. ಪ್ರಜಾಪ್ರತಿನಿಧಿಗಳಾಗಿರುವ ಕೌನ್ಸಿಲರುಗಳು ಊರಿನ ಸ್ಥಿತಿಗತಿಯನ್ನು ತಿಳಿದೂ ಇಂಥ ಏರ್ಪಾಟಿಗೆ ಹೇಗೆ ಒಪ್ಪಿದರೋ ತಿಳಿಯದು. ಹಿಂದಣ ಕಂದಾಯಗಳು ಏಳುವುದೇ ಕಷ್ಟವಾಗಿರುವಾಗ ಹೊಸದಾಗಿ ಇನ್ನಷ್ಟು ಕಂದಾಯವನ್ನು ಹೆಚ್ಚಿಸುವ ಏರ್ಪಾಟು ದಯಾಹೀನವಾಗಿದೆ. ಮುಂದಣ ವರ್ಷದವರೆಗಾದರೂ ಇದನ್ನು ನಿಲ್ಲಿಸುವುದುತ್ತಮ.

ಭರತಖಂಡದ ವೃತ್ತಾಂತಗಳು.

ಲಾಹೋರು ದಿಲ್ಲಿ ಮೊದಲಾದ ಹಲವು ಕಡೆಗಳಲ್ಲಿ ಸಂಶಯಾಸ್ಪದರಾದ ಜನರನೇಕರನ್ನು ಸರ್ಕಾರದವರು ಹಿಡಿದು ಸೆರೆಯಲ್ಲಿಡುತ್ತಿದ್ದಾರೆ.

ನಿರ್ಬಂಧದಲ್ಲಿರುವ ಮಹಮ್ಮದಾಲಿ ಷೌಕತಾಲಿಗಳನ್ನು ಬಿಟ್ಟುಕೊಡುವುದಕ್ಕೆ ಸರ್ಕಾರದವರು ಒಪ್ಪಲಿಲ್ಲವೆಂದು ಗೊತ್ತಾಗುತ್ತದೆ.

ಪಂಜಾಬಿನಲ್ಲಿ ಲಾಲ್‌ದುನಿಚಂದ್, ಹರಿಕಿಷನ್‌ಲಾಲ್, ಪಂಡಿತ ರಾಮಭುಜದತ್ತ ಇವರುಗಳನ್ನು ಸರ್ಕಾರದವರು ಹಿಡಿದು ಪ್ರವಾಸಶಿಕ್ಷೆ ವಿಧಿಸಿ, ಎಲ್ಲಿಗೋ ಸಾಗಿಸಿದ್ದಾರೆ.

ಮದ್ರಾಸಿನ ಸ್ವದೇಶಮಿತ್ರನ್, ಹಿಂದೂನೇಶನ್ ಎಂಬ ಪತ್ರಿಕೆಗಳು ಹೊಣೆಯಹಣವನ್ನು ಕಟ್ಟಿ ಪ್ರಕಟಗೊಳ್ಳಬೇಕೆಂದು ಅಲ್ಲಿಯ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅಪ್ಪಣೆಮಾಡಿದ್ದಾರೆ.

ಸಾಮ್ರಾಜ್ಯಶಾಸನ ಸಭೆಯಲ್ಲಿ ಮಧ್ಯಪ್ರಾಂತದ ಪ್ರತಿನಿಧಿತ್ವದಿಂದ ಸಭಿಕರಾಗಿದ್ದ ಆ॥ ಬಿ. ಡಿ. ಶುಕುಲ್‌ರವರು ರೌಲಟ್‌ಶಾಸನಕ್ಕೆ ಅಸಮ್ಮತಿಯನ್ನು ತೋರಿಸಿ ತಮ್ಮ ಸಭಿಕತ್ವಕ್ಕೆ ರಾಜೀನಾಮೆ ಕೊಟ್ಟರು.

ಇದುವರೆಗೆ ನಡೆದ ಗದ್ದಲದ ಸಂಬಂಧದಲ್ಲಿ ಸರ್ಕಾರದವರು ಲಾಹೋರಿನಲ್ಲಿ ೬೦ ಮಂದಿ ಪ್ರಮುಖರನ್ನೂ, ಅಮೃತಸರದಲ್ಲಿ ತಾ॥ ೧೮-೧೯ ಇವೆರಡು ದಿನಗಳಲ್ಲೇ ೮೯ ಮಂದಿಗಳನ್ನೂ ಸೆರೆಹಿಡಿದಿರುವರೆಂದು ಪ್ರಕಟವಾಗಿದೆ.

ಉತ್ತರ ಹಿಂದೂಸ್ಥಾನದಲ್ಲಿ ಹಿಂದೆ ನಡೆದ ಗದ್ದಲದ ಸಂದರ್ಭದಲ್ಲಿ ಗುಜರಾನ್‌ವಾಲದ ಹತ್ತಿರ ಗುಂಪಿನ ಜನರು ಲೋಹಮಾರ್ಗದ ಸೇತುವನ್ನು ಹಾಳ್ಮಾಡಿದುದರಿಂದ ಅವರ ಮೇಲ್ಗಡೆಯಲ್ಲಿ ಒಂದು ವಿಮಾನವು ಹೋಗಿ ಸಿಡಿಮದ್ದನ್ನು ಹಾಕಿ ಚದರಿಸಿತು.

ಕಲ್ಕತ್ತಾದ ಅಮೃತಬಜಾರ್ ಪತ್ರಿಕೆಯು ಮುದ್ರಣಶಾಸನದ ಪ್ರಕಾರ ಹೊಣೆಗಾಗಿ ಕಟ್ಟಿದ್ದ ೫೦೦೦ ರೂ.ಗಳನ್ನು ಸರ್ಕಾರದವರು ವಶಪಡಿಸಿಕೊಂಡು ಮುಂದೆ ಪತ್ರಿಕೆಯು ಪ್ರಕಟಿತವಾಗಬೇಕಾದರೆ ೧೦೦೦೦ ರೂ.ಗಳ ಹೊಣೆಯನ್ನು ಕಟ್ಟಬೇಕೆಂದು ಆಜ್ಞೆಮಾಡಿದ್ದಾರೆ.

ಅಹಮ್ಮದಾಬಾದಿನಲ್ಲಿ ಸರ್ಕಾರದವರು ಸೈನಿಕಶಾಸನವನ್ನು ಪ್ರಕಟಿಸಿದ್ದರು. ಈಚೆಗೆ ಮ॥ ಗಾಂಧಿಯವರು ಹೋಗಿ ಹಿತೋಪದೇಶಮಾಡಿದುದರಿಂದಲೂ ಸರ್ಕಾರದವರ ಪ್ರಯತ್ನದಿಂದಲೂ ಎಲ್ಲವೂ ಶಾಂತವಾಗಿದೆ. ಅದರ ಮೇಲೆ ಸರ್ಕಾರದವರು ಸೈನಿಕಶಾಸನವನ್ನು ಉಪಸಂಹರಿಸಿಕೊಂಡರು.

ಕಳೆದ ತಾ॥ ೧೫ರಲ್ಲಿ ಲಾಹೋರಿನಿಂದ ರಾವಲ್ಪಿಂಡಿಕಡೆಗೆ ಹೋಗುವ ಪ್ರಯಾಣಿಕರ ಹೊಗೆಬಂಡಿಗೆ ತುಂಬಾ ಅಪಾಯವನ್ನುಂಟುಮಾಡಬೇಕೆಂದು ಯಾರೋ ದುಷ್ಟರು ಲೋಹಮಾರ್ಗದ ಮೇಲೆ ಕಟ್ಟಿಹಾಕಿದ್ದರು. ಒಬ್ಬ ಪ್ರಯಾಣಿಕನಿಗೂ ಗಾರ್ಡಿಗೂ ಮಾತ್ರ ಸ್ವಲ್ಪ ಏಟುಬಿದ್ದಿತು. ವಿಶೇಷಾನರ್ಥವೇನೂ ಆಗಲಿಲ್ಲ.

ಅಮೃತಸರದಲ್ಲಿ ನಿಷೇಧಿಸಲ್ಪಟ್ಟ ಸಭೆಯೊಂದನ್ನು ನಡೆಯಿಸುವುದಕ್ಕೆ ಬಲಾತ್ಕಾರದಿಂದ ಪ್ರಯತ್ನಿಸಿದ ಪ್ರಮುಖರನ್ನು ಪೊಲೀಸರು ಹಿಡಿದರು. ಉಳಿದವರನ್ನೆಲ್ಲಾ ಚದರಿಹೋಗಿರೆಂದು ಸೈನಿಕರೂ ಪೊಲೀಸರೂ ಹೇಳಿದ ಮಾತನ್ನು ಕೇಳದೆ ಧಿಕ್ಕರಿಸಿ ಹಾವಳಿಮಾಡಲುಪಕ್ರಮಿಸಿದುದರಿಂದ ತುಪಾಕಿಗಳನ್ನು ಹಾರಿಸಿ ಅನೇಕರನ್ನು ಕೊಲ್ಲಬೇಕಾಯಿತು.

ಹಿಂದೀಸಾಹಿತ್ಯ ಸಮ್ಮೇಳನದ ವಾರ್ಷಿಕಾಧಿವೇಶನವು ಬೊಂಬಾಯಿಯಲ್ಲಿ ಪಂಡಿತ ಮದನಮೋಹನಮಾಳವೀಯರ ಅಧ್ಯಕ್ಷತೆಯಿಂದ ಕೂಡಿದ್ದಿತು. ಬರೋಡಾ ಮಹಾರಾಜರೇ ಮೊದಲಾದ ಅನೇಕ ಪ್ರಮುಖರು ನೆರೆದಿದ್ದರು. ಹಿಂದೀಭಾಷೆಯನ್ನು ಭರತಖಂಡದಲ್ಲಿ ಜಾತೀಯಭಾಷೆಯನ್ನಾಗಿ ಮಾಡಲು ನಾನಾತರದ ಪ್ರಯತ್ನಗಳನ್ನು ಮಾಡಲು ನಿರ್ಧಾರವಾಯಿತು.

ಹಿಂದೆ ನಡೆದ ಗದ್ದಲದಲ್ಲಿ ಪ್ರಜೆಗಳು ಯೂರೋಪ್ಯರಮೇಲೂ ಸರ್ಕಾರದ ಉದ್ಯೋಗಿಗಳ ಮೇಲೂ ಎಷ್ಟು ಕ್ರೋಧಾವೇಶಗೊಂಡು ಅತ್ಯಾಚಾರಗಳನ್ನು ನಡೆಯಿಸಿದರೆಂಬ ಸಂಗತಿಯು ಇತ್ತೀಚೆಗೆ ಬರುತ್ತಿರುವ ವಿವರಣಗಳಿಂದ ಸ್ಪಷ್ಟವಾಗುತ್ತಿದೆ. ಅವನ್ನೆಲ್ಲಾ ಕೇಳುವಲ್ಲಿ ದಂಡೋಪಾಯದಿಂದ ಪ್ರಭುತ್ವದವರು ಅಶಾಂತಿಯನ್ನು ಅಡಗಿಸಿದುದೇ ಕ್ಷೇಮವಾಯಿತೆಂದು ನಿಸ್ಸಂಶಯವಾಗಿ ಹೇಳಬೇಕಾಗುತ್ತದೆ.

ಬೋಲ್ಷಿವಿಕ್ಕರು ತಮ್ಮ ಪ್ರತಿನಿಧಿಗಳ ಮೂಲಕ ಭರತಖಂಡದಲ್ಲಿ ವಿಪ್ಲವವನ್ನುಂಟುಮಾಡಿಸುವ ಉದ್ದೇಶದಿಂದ ಬೊಂಬಾಯಿಗೆ ೨೫೦೦೦ ಪೌನುಗಳ ಹಣವನ್ನು ಕಳುಹಿಸಿಕೊಟ್ಟಿದ್ದರೆಂದೂ ಅದರ ಫಲವಾಗಿಯೇ ಈ ದೇಶದಲ್ಲಿ ಮಾರ್ಚಿ ಏಪ್ರಿಲ್ ತಿಂಗಳಲ್ಲಿ ಬೋಲ್ಷಿವಿಕ್ ಕಾರ್ಯಕ್ರಮವು ನಡೆಯಿಸಲ್ಪಡಲಿಕ್ಕಿದೆಯೆಂದೂ ವಾರ್ತೆಯುಂಟಾಗಿದ್ದಿತು. ಈಗಣ ಆಂದೋಳನವು ಅದರೊಡನೇ ಏಕೀಭವಿಸಿದೆಯೋ ಹೇಗೋ ಎಂದು ಬೊಂಬಾಯಿಯ ಟೈಮ್ಸ್ ಆಫ್ ಇಂಡ್ಯಾ ಪತ್ರಿಕೆಯು ಹೇಳಿರುತ್ತದೆ.

ಲಾಹೋರಿನ ಟ್ರಿಬ್ಯೂನ್ ಪತ್ರಿಕಾಕರ್ತರಾದ ಕಾಳೀನಾಥರಾಯರವರನ್ನು ಸರ್ಕಾರದವರು ಹಿಡಿದು ಎಲ್ಲಿಗೋ ಸಾಗಿಸಿರುವರು. ಲಾಹೋರಿನಲ್ಲಿ ಸೈನಿಕಶಾಸನದ ಪ್ರಕಾರ ವಿರುದ್ಧವಾಗಿ ನಡೆದವರನ್ನು ಸೆರೆಹಿಡಿದು ರಾಜವೀಧಿಗಳಲ್ಲಿ ಅವರನ್ನು ಮೆರೆಯಿಸುತ್ತಿರುವುದಲ್ಲದೆ ಕುದುರೆ ಚಾಟಿಯಿಂದ ಹೊಡೆಯುವಂತೆ ಏರ್ಪಡಿಸಿರುವರೆಂದು ತಾ॥ ೧೯ನೆ ತಂತ್ರೀವಾರ್ತೆಯು ಹೇಳುತ್ತದೆ. ಅಲ್ಲದೆ ಯಾರು ಅಂಗಡಿಗಳನ್ನು ತೆರೆಯದೆ ಮುಚ್ಚಿಕೊಂಡಿರುವರೋ ಅಂಥವರ ಅಂಗಡಿ ಬಾಗಿಲುಗಳನ್ನು ಒಡೆದು ಒಳಗಿರುವ ಸಾಮಾನುಗಳು ಸೈನಿಕ ಶಾಸನಪ್ರಕಾರ ಸರ್ಕಾರಕ್ಕೆ ವಶಪಡಿಸಿಕೊಳ್ಳಲ್ಪಡುವುವೆಂದು ಪ್ರಕಟಿಸಲ್ಪಟ್ಟಿದೆ.

ಕಳೆದ ತಾ॥ ೧೩ರಲ್ಲಿ ಕಾಬೂಲಿನಲ್ಲಿ ಒಂದು ದರ್ಬಾರು ನಡೆಯಿತು. ಅದರಲ್ಲಿ ಹಿಂದಣ ಅಮೀರರನ್ನು ಕೊಲ್ಲುವುದಕ್ಕೆ ನಸ್ರುಲ್ಲಾಖಾನರೇ ರಹಸ್ಯ ಪ್ರಯತ್ನವನ್ನು ಮಾಡಿದ್ದರೆಂತಲೂ ಕೋರ್ಟು ಸೇವಕನು ಈ ಪ್ರಯತ್ನಕ್ಕೆ ಸೇರಿದ್ದನೆಂತಲೂ, ಆಫ್ಘನ್ ಕರ್ನಲು ಅಮೀರರ ಹತ್ಯವನ್ನು ಮಾಡಿದನೆಂತಲೂ ವಿಚಾರಣೆಯಿಂದ ನಿಶ್ಚೈಸಲ್ಪಟ್ಟ ಕಾರಣ ಮೊದಲನೆಯ ಅಪರಾಧಿಯಾದ ನಸ್ರುಲ್ಲಾಖಾನನಿಗೆ (ಗತಿಸಿದ ಅಮೀರರ ಸೋದರ) ಜೀವಾಂತ ಕಾರಾಗೃಹವಾಸ ಶಿಕ್ಷೆಯೂ, ಉಳಿದಿಬ್ಬರಿಗೆ ಮರಣದಂಡನೆಯೂ ವಿಧಿಸಲ್ಪಟ್ಟಿತು. ನಸ್ರುಲ್ಲಾಖಾನನನ್ನು ಪ್ರಭುವನ್ನಾಗಿ ಅಂಗೀಕರಿಸದೆ ಹೋದುದಕ್ಕಾಗಿ ಸೆರೆಯಿಡಲ್ಪಟ್ಟಿದ್ದವರಿಗೆಲ್ಲಾ ಬಿಡುಗಡೆಯಾಯಿತು. ಈಗಣ ಹೊಸ ಅಮೀರರ ಸ್ಥಿತಿಯು ಬಹಳ ಬಲವತ್ತರವಾಗಿದೆಯೆಂದು ತಿಳಿಯಬರುತ್ತದೆ.

ವಿದೇಶದ ವೃತ್ತಾಂತಗಳು.

ಈಗ ಏರ್ಪಟ್ಟಿರುವ ಸಂಧಿಪತ್ರವು ೩೫೦ ಪುಟಗಳುಳ್ಳದಾಗಿದೆಯಂತೆ.

ಬವೇರಿಯಾದ ಮುಖ್ಯಪಟ್ಟಣವು ಸ್ಪಾರ್ಟಕಸ್ಸರ ಹಸ್ತಗತವಾಯಿತು.

ಸೈಬೇರಿಯಾದಲ್ಲಿ ಅರಾಜಕವು ನಾಶಮಾಡಲ್ಪಟ್ಟು ಸುಪ್ರಭುತ್ವವು ಸ್ಥಾಪಿತವಾಗಿದೆ.

ಬರ್ಲಿನ್ನಿನಲ್ಲಿ ಪ್ರಜೆಗಳ ಅಶಾಂತಿಯು ಮಿತಿಮೀರಿರುವುದರಿಂದ ಸೈನಿಕಶಾಸನವು ಸಾರಲ್ಪಟ್ಟಿದೆ.

ಜರ್ಮನಿಯಿಂದ ಯುದ್ಧನಷ್ಟ ಪರಿಹಾರಕ್ಕಾಗಿ ೬೦೦ ಕೋಟಿ ಪೌನುಗಳನ್ನು ಸಂಧಿಸಭೆಯವರು ವಿಧಿಸಲು ಕೊನೆ ತೀರ್ಮಾನವನ್ನು ಮಾಡಿರುವರೆಂದು ಪ್ರಕಟವಾಗಿದೆ.

ಸಂಧಿಸಭೆಗಾಗಿ ವಾರ್ಸೇಲ್ಸ್ ನಗರಕ್ಕೆ ಜರ್ಮನಿಯಿಂದ ಬರತಕ್ಕ ಪ್ರತಿನಿಧಿಗಳ ಸಂಖ್ಯೆಯು ವಿಶೇಷವಾಗಿಯೇ ಇದೆ. ಅವರ ಬಿಡಾರಗಳಿಗೆ ತಕ್ಕ ಸ್ಥಲವು ಏರ್ಪಡಿಸಲ್ಪಡುತ್ತಿದೆ.

ಡಾಕ್ಟರ್ ವಿಲ್ಸನ್‌ರವರು ಸ್ವದೇಶದ ಅವಸರ ಕಾರ್ಯಗಳಿಗಾಗಿ ಸ್ವದೇಶಕ್ಕೆ ಮರಳಿ ಪ್ರಯಾಣಮಾಡಿದ್ದಾರೆ. ಆದರೆ ಅವರು ಅಸಮಾಧಾನದಿಂದ ಹೊರಟುಹೋದರೆಂಬ ಸುದ್ದಿಯು ಹೇಗೋ ಹುಟ್ಟಿದೆ.

ಮಿತ್ರಮಂಡಲಿಯ ಇತರ ರಾಷ್ಟ್ರಗಳೆಲ್ಲಾ ಇಂಗ್ಲೆಂಡಿಗೆ ಕಳೆದ ಮಾರ್ಚ ೩೧ ನೆ ತಾರೀಖಿನವರೆಗೆ ಕೊಡಬೇಕಾಗಿದ್ದ ಸಾಲದ ಶೇಷವು ೧೫೦ ಕೋಟಿ ಚಿಲ್ಲರೆ ಪೌನುಗಳಾಗಿಯೂ, ಆಂಗ್ಲಾಧಿನಿವೇಶಗಳು ಕೊಡಬೇಕಾದ ಸಾಲವು ೮೯೬೦೦೦ ಪೌನುಗಳಾಗಿಯೂ ಇದ್ದುವು.

ಹಂಗೇರಿಯಲ್ಲಿ ರಷ್ಯನರ ಬಲವು ಹೆಚ್ಚಿದ ಬಳಿಕ ರಷ್ಯಾ ಹಂಗೇರಿಗಳು ಜರ್ಮನಿಯವರೊಡನೆ ಕೂಡಿ ಮಿತ್ರಮಂಡಲಿಯಮೇಲೆ ಯುದ್ಧಕ್ಕೆ ಬೀಳಬೇಕೆಂತಲೂ ಈ ಸಂದರ್ಭದಲ್ಲಿ ಬೋಲ್ಷಿವಿಕ್ಕರು ತಕ್ಷಣವೇ ೫೦ ಲಕ್ಷ ಸೈನ್ಯವನ್ನು ಜರ್ಮನರ ವಶಪಡಿಸುವುದಕ್ಕೆ ಸಿದ್ಧರಾಗಿರುವರೆಂತಲೂ, ಬೋಲ್ಷಿವಿಕ್ಕರು ಲೆನಿನ್‌ರವರಿಗೆ ಬರೆದಿದ್ದರಂತೆ.

ರೊಮೇನಿಯನ್ನರಿಗೂ ಬೋಲ್ಷಿವಿಕ್ಕರಿಗೂ ಯುದ್ಧವಾಗಿ, ರೊಮೇನಿಯನ್ನರು ಸೋತು ಬಸ್ಸರೇಬಿಯಾದ ಕಡೆಗೆ ಓಡುತ್ತಿರುವರಂತೆ. ಬೋಲ್ಷಿವಿಕ್ಕರು ದಕ್ಷಿಣದಲ್ಲಿ ಬೇಗಬೇಗನೆ ಮುಂದುವರಿಯುತ್ತ ಕ್ರಿಮಿಯಾವನ್ನೆಲ್ಲಾ ವಶಪಡಿಸಿಕೊಂಡರು. ಸೆಬಾಸ್ಟಪೂಲನ್ನು ಆಕ್ರಮಿಸುತ್ತಿದ್ದಾರೆ. ಈಚೆಗೆ ಬಸ್ಸರೇಬಿಯಾದ ಕಡೆ ಬೋಲ್ಷಿವಿಕ್ಕರಿಗೆ ವಿಶೇಷ ಪರಾಜಯವಾದ ವಾರ್ತೆ ಬಂದಿದೆ.

ಈಗಣ ಸರ್ವಜಾತಿ ಸಂಯೋಗಸಂಘದ ವಿಧಾನಪ್ರಕಾರ ಯೂರೋಪುಖಂಡದ ಒಳ ಆಡಳಿತದಲ್ಲಿ ಅಮೇರಿಕನ್ನರು ಸಂಬಂಧಪಟ್ಟುಕೊಳ್ಳದೆ ಮನ್ರೋಸಿದ್ಧಾಂತದಪ್ರಕಾರ ತಮ್ಮಷ್ಟಿಗೆ ತಾವು ಇರುವ ತತ್ವವನ್ನು ಕುರಿತು ನಿಬಂಧನೆಯಲ್ಲಿ ೧ ಸಂವರಣವನ್ನು ಪ್ರೆ॥ ವಿಲ್ಸನ್‌ರವರು ಏರ್ಪಡಿಸಿ, ತಾವು ದೂರಸ್ಥರಾಗಿರಲು ಯೋಚಿಸಿರುವರೆಂದು ತಂತ್ರೀವಾರ್ತೆ ಬಂದಿದೆ. ಪರ್ಯವಸಾನವು ತಿಳಿಯುವವರೆಗೂ ಪರಸ್ಪರ ವಿರುದ್ಧವಾದ ಈ ತಂತ್ರೀವಾರ್ತೆಗಳಲ್ಲಿ ಆವುದನ್ನೂ ಸಿದ್ಧಾಂತವೆಂದು ಹೇಳಲಾಗುವುದಿಲ್ಲ.

ರಷ್ಯಾಚಕ್ರವರ್ತಿಯೂ ಪತ್ನಿಯೂ ಕೊಲ್ಲಲ್ಪಟ್ಟುದು ಸುಳ್ಳೆಂದೂ ಅವರು ಸೆರೆಯಲ್ಲಿಡಲ್ಪಟ್ಟಿರುವರೆಂದೂ ಕೆಲ ದಿನಗಳ ಹಿಂದೆ ಒಂದು ತಂತ್ರೀವಾರ್ತೆ ಬಂದಿದ್ದಿತು. ಈಗ ಕಾನ್ಸ್ಟಾಂಟಿನೋಪಲ್ಲಿನಿಂದ ತಾ॥ ೨೧ ರಲ್ಲಿ ಬಂದಿರುವ ಒಂದು ತಂತ್ರೀವಾರ್ತೆಯಿಂದ ಜಾರರ ಚಿಕ್ಕಪ್ಪನವರಾದ ಗ್ರಾಂಡ್ ಡ್ಯೂಕ್ ನಿಕೋಲಸ್‌ರವರೂ, ಜಾರರ ತಾಯಿ ಮೊದಲಾದ ರಾಜಕುಟುಂಬದವರೂ ಸಹ ಇಂಗ್ಲಿಷ್ ಯುದ್ಧದ ಹಡಗಾದ ಮಾರ್ಲ್‌ಬರೋವನ್ನು ಹತ್ತಿ, ಪ್ರಿಂಕಿಪೋಯಾಲ್ಸರಿಗೆ ಬಂದಿರುವರೆಂದೂ ಇಷ್ಟರಲ್ಲೇ ಇಂಗ್ಲೆಂಡಿಗೆ ಹೋಗುವರೆಂದೂ ಗೊತ್ತಾಗುತ್ತದೆ.

ಸಂಧಿಸಭೆಗೆ ಜರ್ಮನಿಯಿಂದ ಬರುವ ಪ್ರತಿನಿಧಿಗಳಿಗೆ ಆಹ್ವಾನಪತ್ರವು ಕಳುಹಿಸಲ್ಪಟ್ಟಿದೆ. ಅಲ್ಲಿಂದ ೨೦೦ ಮಂದಿ ಪ್ರತಿನಿಧಿಗಳು ಬರುವಂತಿದೆ. ಅವರು ಈ ವಾರದೊಳಗೇ ಬಂದು ಸೇರುವವರಾಗಿದ್ದಾರೆ. ಸಂಧಿಪತ್ರದ ಪರ್ಯಾಲೋಚನೆಗೆ ಅವರಿಗೆ ೧ ವಾರ ಅವಕಾಶವು ಕೊಡಲ್ಪಡುವುದು. ಹಸ್ತಾಕ್ಷರವನ್ನು ಹಾಕುವುದಕ್ಕೆ ೧ ವಾರವಾಗಬಹುದು. ಅಂತೂ ೧ ಪಕ್ಷದೊಳಗೆ ಸಂಧಿಸಭಾಕಾರ್ಯಗಳೆಲ್ಲಾ ಮುಗಿಯುವುವೆಂದು ಹೇಳಲ್ಪಟ್ಟಿದೆ. ಜರ್ಮನರು ಸಂಧಿನಿಬಂಧನೆಗಳಿಗೆ ಒಪ್ಪದೆ ತಿರಸ್ಕರಿಸಿಬಿಟ್ಟರೆ ಅವರ ಸೈನ್ಯಗಳನ್ನು ತಡೆದು ಮುಂದಣ ಕೆಲಸವನ್ನು ಮಾಡುವುದಕ್ಕೆ ಫ್ರೆಂಚರಿಗೆ ಇಂಗ್ಲೀಷರೂ ಅಮೇರಿಕನ್ನರೂ ಸಹಾಯಮಾಡಬೇಕೆಂದು ಉಪಸಂಘದವರು ನಿರ್ಣಯಿಸಿದ್ದಾರೆ.

ಮೈಸೂರು ದೇಶದ ಫುಡ್ ಕಂಟ್ರೋಲರ್ ಮತ್ತು ಸಿವಿಲ್ ಸಪ್ಲೈಸ್ ಆಫೀಸು ಬೆಂಗಳೂರು 19 ನೇ ಏಪ್ರೀಲ್ 1919.

ನೋಟೀಸ್.

ಮದರಾಸು ಅಧಿಪತ್ಯದ ಸಿವಿಲ್ ಸಪ್ಲೈಸ್ ಡೈರೆಕ್ಟರವರು ಅವರ 1919 ನೇ ಇಸ್ವಿ ಏಪ್ರೀಲ್ ತಿಂಗಳಿನ 4 ನೇ ನಂಬರು ನೋಟಿಫಿಕೇಷನ್‌ನಲ್ಲಿ ಇತಃಪರಃ ಆ ಅಧಿಪತ್ಯದಲ್ಲಿ ನದೀಮುಖಜ ಭೂಮಿಗಳಿರತಕ್ಕ ಡಿಸ್ಟ್ರಿಕ್ಟುಗಳಿಂದ ಅಕ್ಕಿ ರಫ್ತುಗತಕ್ಕದ್ದಕ್ಕೆ ಮಾಡಿರತಕ್ಕ ಏರ್ಪಾಟುಗಳನ್ನು ಪ್ರಸಿದ್ಧಪಡಿಸಿರುತ್ತಾರೆ. ಆ ಏರ್ಪಾಟುಗಳ ಪೈಕಿ ಮೈಸೂರು ಸಂಸ್ಥಾನಕ್ಕೆ ಸಂಬಂಧಪಡತಕ್ಕ ಮುಖ್ಯವಾದ ಏರ್ಪಾಟು ಯಾವುದೆಂದರೆ–ಗೋದಾವರಿ ಡಿಸ್ಟ್ರಿಕ್ಟಿನ ಒಂದು ತಾಲ್ಲೂಕಿನಲ್ಲಿರತಕ್ಕ ಮಿಲ್ಲುಗಳ ಪೈಕಿ ನೇಮಕವಾಗಿರುವ ಯಾವುದೋ ಒಂದು ಮಿಲ್ಲಿನಿಂದ ಮೈಸೂರು ಸಂಸ್ಥಾನದ ವರ್ತಕರು ಅಕ್ಕಿ ತರಬೇಕೆಂದು ಇದುವರೆಗೆ ಮಾಡಿದ್ದ ಏರ್ಪಾಟನ್ನು ತಪ್ಪಿಸಿ ನದೀಮುಖಜ ಭೂಮಿಯನ್ನು ಒಳಕೊಂಡಿರತಕ್ಕ ಗುಂಟೂರು ಗೋದಾವರಿ ಮತ್ತು ಕೃಷ್ಣಾ ಡಿಸ್ಟ್ರಿಕ್ಟುಗಳ ಪೈಕಿ ಯಾವುದರಿಂದಲಾದರೂ ಅಕ್ಕಿ ತರಿಸಿಕೊಳ್ಳಬಹುದೆಂದು ಮಾಡಿರತಕ್ಕದ್ದಾಗಿದೆ. ಬೆಜವಾಡದಲ್ಲಿರುವ ಸಿವಿಲ್ ಸಪ್ಲೈಸ್ ಡೆಪ್ಯುಟಿ ಡೈರೆಕ್ಟರವರು ಈ ಡಿಸ್ಟ್ರಿಕ್ಟುಗಳಿಂದ ಅವರು ಗೊತ್ತುಮಾಡುವ ಖರೀದಿಗೆ ಅಕ್ಕಿಯನ್ನು ರಫ್ತುಮಾಡತಕ್ಕದ್ದಕ್ಕೆ ಟೆಂಡರುಗಳನ್ನು ತರಿಸಿಕೊಳ್ಳುತ್ತಾರೆ. ಅವರು ಗೊತ್ತುಮಾಡುವ ಖರೀದಿಯು ಈಗ ವಿಧಿಸಿರುವ ಕೆಳಗೆ ಕಂಡ ಅಚ್ಚೆರುದರ್ಜೆ ಖರೀದಿಗೆ ಮೀರುವದಿಲ್ಲ. ಕುಮುದಲು ಅಕ್ಕಿ 1 ನೇ ನಂಬರು ರಹಂ 2 ಮಣದ ಒಂದು ಚೀಲಕ್ಕೆ ಗೋಣೀಚೀಲ ಸಹಿತ ಗಡಂಗಿನಲ್ಲಿ ದಾವತಿ ಆಗತಕ್ಕದ್ದಕ್ಕೆ ರೂ. 11—12—0 ಐಟೋಹನ ಅಕ್ಕಿ ಇಟಿಹ ರೂ. 11—4—0 ಡೆಪ್ಯುಟಿ ಡೈರೆಕ್ಟರು ಯಾರಯಾರ ಟೆಂಡರುಗಳನ್ನು ಒಪ್ಪಿಕೊಂಡಿರುತ್ತಾರೋ ಅವರುಗಳಿಂದಮಾತ್ರ ಅಕ್ಕಿಯನ್ನು ತರಿಸಿಕೊಳ್ಳಲು ಅವರು ಅವಕಾಶಕೊಡುತ್ತಾರೆ. ಡೆಪ್ಯುಟಿ ಡೈರೆಕ್ಟರವರು ಅಕ್ಕಿಯನ್ನು ಕೊಂಡುಕೊಡತಕ್ಕ ಏಜಂಟರೆಂದು ಖಂಡಿತವಾಗಿಯೂ ಭಾವಿಸಕೂಡದು. ಅವರು ಮಾಡತಕ್ಕ ಕೆಲಸವು ಮಾರುವವರು ಮತ್ತು ಕೊಳ್ಳುವವರನ್ನು [illegible] ಮಾಡುವದು ಮಾತ್ರವೇ ಆಗಿದೆ. ನದೀಮುಖಜ ಭೂಮಿಯನ್ನು ಒಳಕೊಂಡಿರುವ ಮೇಲ್ಕಂಡ ಡಿಸ್ಟ್ರಿಕ್ಟುಗಳಿಂದ ಸಂಸ್ಥಾನಕ್ಕೆ ಆಮದು ಮಾಡಿಕೊಳ್ಳಬಹುದಾದ ಅಕ್ಕಿಯ ಮೊತ್ತವು ಇದುವರಿಗೆ ಇದ್ದಷ್ಟೇ ಅಂದರೆ 2 ಮಣ ತೂಕವಿರುವ 9520 ಮೂಟೆಗಳಾಗಿದೆ.

ಕೆ. ಮಾಥ್ಯೂ, ಫುಡ್ ಕಂಟ್ರೋಲರವರು ಮತ್ತು
ಸಿವಿಲ್ ಸಪ್ಲೈ ಡೆರೆಕ್ಟರವರು.

ಪತ್ರವ್ಯವಹಾರ.

ಹಾವೇರಿ.

ಈ ದಿವಸ ಈ ಊರ ಶ್ರೀ ಹುಕ್ಕೇರಿ ಮಠದಲ್ಲಿ ವೀರಶೈವ ಸಾರ್ವಜನಿಕ ಸಭೆಯು ಸೇರಿ ಇದೇ ಮಠದಲ್ಲಿ "ಶ್ರೀ ಸಿದ್ಧಲಿಂಗೇಶ್ವರಲಾಯಬ್ರರಿ" ಎಂಬ ಹೆಸರಿನಿಂದ ಸ್ಥಾಪಿಸಲ್ಪಟ್ಟಿತು. ಇದರ ಉಪಯೋಗವನ್ನು ನಮ್ಮ ತಾಲೂಕಿನೆಲ್ಲಾ ಮಾಡಿಕೊಡಬೇಕೆಂದು ನಮ್ಮ ಆಶೆಯಿದೆ ಅದ್ದರಿಂದ ತಾಲೂಕಿನಲ್ಲಿರತಕ್ಕಂಥ ಶ್ರೀಮಂತರು ಸಂಪೂರ್ಣವಾಗಿ ಸಹಾಯ ಮಾಡಬೇಕು. ಸೆಕ್ರೆಟರಿ.

ಶ್ರೀಮಾನ್, ಡಾಕ್ಟರ್ ಟಿ. ಯಸ್. ಸಿದ್ದಪ್ಪ,
L. M. & S. ರವರು.

ಈ ಮಹನೀಯರು ಹಾಸನದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ನಂಜನಗೂಡಿನಿಂದ ದಯಮಾಡಿಸಿದ್ದರಿಂದ ಈ ಪುರನಿವಾಸಿಗಳು ಕಳೆದ 16 ನೇತಾರೀಖು ಗುರುವಾರ ಇಲ್ಲಿನ ಸಾಹುಕಾರ್ ಸೀತಾರಾಮಶೆಟ್ಟರವರ ಛತ್ರದಲ್ಲಿ ಸಭೆಸೇರಿ ಶ್ರೀಯುತರ ನಿಷ್ಪಕ್ಷಪಾತವಾದ ನಡತೆಯನ್ನು ಕುರಿತು ಅಭಿನಂದಿಸಿದರು. ಆ ಕಾಲದಲ್ಲಿ ಆಸ್ಥಾನ ಸಂಗೀತ ವಿದ್ವಾನ್, ಶ್ರೀಯುತ ಚಿಕ್ಕರಾಮರಾಯರವರ ಸಂಗೀತವು ಸರ್ವಜನ ಶ್ಲಾಘ್ಯವಾಗಿ ನೆರವೇರಿತಲ್ಲದೆ ಪುರಪ್ರಮುಖರೆಲ್ಲರೂ ನೆರೆದು ಬಂದಿದ್ದರು. ಇದಲ್ಲದೆ ಚಿತ್ರಶ್ರೀ ವೇದಮೂರ್ತಿ ಯಜ್ಞೇಶ್ವರಶಾಸ್ತ್ರಿಗಳವರೇ ಮೊದಲಾದ ವೈದಿಕರೂ ಸಬ್ ರಿಜಿಸ್ಟ್ರಾರವರೇ ಮೊದಲಾದ ಅಧಿಕಾರಿಗಳೂ ವರ್ತಕರಲ್ಲಿ ಧನಿಕಯುಳ್ಳ ಶ್ರೀಯುತ ಪಾಪಣ್ಣನವರೇ ಮೊದಲಾದ ಮುನ್ಸಿಪಲ್ ಕೌನ್ಸಿಲರ್‌ಗಳೂ ಶ್ರೀ

ಯುವತರನ್ನು ಪ್ರತ್ಯೇಕವಾಗಿ ಸ್ವಗೃಹಗಳಿಗೆ ಬರಮಾಡಿಕೊಂಡು ವಿಶೇಷವಾಗಿ ಸತ್ಕರಿಸಿದರೆಂದು ಕೇಳುವೆವು. ಮ|| ರಾ|| ಪುಟ್ಟಮಾದಯ್ಯನವರೇ ಮೊದಲಾದ ವೀರಶೈವ ಪ್ರಮುಖರಾದರೂ ಅತಿಶಯವಾಗಿ ಆದರಿಸಿ ಶ್ರೀಯುವತರ ವಿಷಯದಲ್ಲಿ ಸ್ವಜನಾಭಿಮಾನವನ್ನು ತೋರ್ಪಡಿಸಿದುದಾದರೂ ಸ್ತುತ್ಯವೇ ಸರಿ. ಈ ಸಂತೋಷದಲ್ಲಿ ಮುಂದಾಳಾಗಿ ನಿಂದ ಮಹಮದೀಯ ದೊಡ್ಡ ಮನುಷ್ಯರಾದ ಸಾಹುಕಾರ್, ಮಿ|| ಜಿ. ಸಾಬ್‌ಜಾನ್ ಸಾಹೇಬರೂ ವೈಶ್ಯರಲ್ಲಿ ವೃದ್ಧರೂ ಗಣ್ಯರೂ ಆದ ಶ್ರೀ ಚಿಕ್ಕಪುಟ್ಟಸ್ವಾಮಿಶೆಟ್ಟರವರೂ ಭಾವಸಾರ ಕ್ಷತ್ರಿಯರಲ್ಲಿ ಮಾನ್ಯರಾದ ಶ್ರೀ|| ನಾಯಕ ನರಸಿಂಗರಾಯರವರೂ ಅಭಿನಂದನೀಯರೇ ಸರಿ. ಡಾಕ್ಟರವರು ಇಂತಹ ಘನತೆಗೆ ಅಕ್ಷರಶಃ ಅರ್ಹರಾಗಿದ್ದರೆಂಬುದನ್ನು ತಿಳಿಸಲು ನಾವಾದರೂ ಆನಂದಿಸುವೆವು. ಸತ್ಯವಾದಿ.

ವೀರಶೈವ ತರುಣರ ೩ ನೆಯ ಸಮ್ಮೇಲನ, ಹೊನ್ನತ್ತಿ.

ಈ ೩ ನೆಯ ಸಮ್ಮೇಲನವು ಧಾರವಾಡ ಜಿಲ್ಲಾ ರಾಣೇಬೆನ್ನೂರ ತಾಲೂಕ ಹೊನ್ನತ್ತಿ ಕ್ಷೇತ್ರದಲ್ಲಿ ಮೇ ತಿಂಗಳ ೭-೮ ತಾರೀಖುಗಳಲ್ಲಿ ಕೂಡುವದು. ಇದರಲ್ಲಿ ಯಾವ ತರದ ರಾಜಕೀಯ ವಿಷಯಗಳು ಚರ್ಚಿಸಲ್ಪಡುವದಿಲ್ಲ. ಆದ್ದರಿಂದ ಯಾವತ್ತು ವೀರಶೈವ ಬಾಂಧವರು ಈ ಸಭೆಗೆ ಅತ್ಯಗತ್ಯವಾಗಿ ದಯಮಾಡಿಸಬೇಕೆಂದು ಸವಿನಯ ಪ್ರಾರ್ಥನೆಯದೆ.

ಈ ಸಭೆಯ ಅಧ್ಯಕ್ಷಸ್ಥಾನವನ್ನು ಮ|| ರಾ|| ರಾ|| ಎಮ್. ಬಸವರಾಧ್ಯ, ಬಿ. ಎ. ಬಿ. ಎಲ್. ಸಿಟಿ ಮ್ಯಾಜಿಸ್ಟ್ರೇಟ ಬೆಂಗಳೂರ ಇವರು ಸ್ವೀಕರಿಸಲಿಕ್ಕೆ ಒಪ್ಪಿಕೊಂಡಿರುತ್ತಾರೆ.

ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು.

೧. ವೀರಶೈವ ಧರ್ಮ ವಿಚಾರವು, ಧರ್ಮಗ್ರಂಥಗಳ ಸಂಶೋಧನವು, ೨. ಸಮಾಜಸೇವೆ, ೩. ವಿದ್ಯಾಪ್ರಸಾರ, ೪. ವರ್ತಮಾನ-ಮಾಸಿಕ ಪತ್ರಗಳ ಮಹತ್ವವು, ೫. ವ್ಯಾಪಾರ, ಒಕ್ಕಲತನ, ಕೈಗಾರಿಕೆ ಇವುಗಳ ಉನ್ನತಿಯ ಉಪಾಯಗಳು.

ಈ ವಿಷಯಗಳನ್ನು ಕುರಿತು ಭಾಷಣಮಾಡಲಿಚ್ಛಿಸುವವರು ಮೇ ತಿಂಗಳ ೪ ನೇ ತಾರೀಖಿನೊಳಗಾಗಿ ಬರೆದು ಕಾರ್ಯದರ್ಶಿಗಳ ಕಡೆಗೆ ಕಳಿಸಬೇಕು.

ಪ್ರತಿನಿಧಿಗಳ ಫೀ ರೂ. ೧. ಇವರಿಗೆ ಊಟದ ಹಾಗು ಇಳುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗುವದು. ಆದರೆ ಅವರು ತಮ್ಮ ಹಾಸಿಗೆ ತಂಬಿಗೆಗಳನ್ನು ತರತಕ್ಕದ್ದು. ಪ್ರತಿನಿಧಿಗಳಾಗಿ ಬರತಕ್ಕವರು ಮೇ ತಿಂಗಳ ೧ ನೇ ತಾರೀಖಿನೊಳಗಾಗಿ ಕಾರ್ಯದರ್ಶಿಗಳಿಗೆ ತಿಳಿಸಬೇಕು.

ಹೊನ್ನತ್ತಿ ಕ್ಷೇತ್ರವು ರಾಣೇಬೆನ್ನೂರು ಸ್ಟೇಶನದಿಂದ ೬ ಮೈಲಿನ ಮೇಲಿದ್ದು ಆ ಸ್ಟೇಶನ ಮೇಲೆ ಮೇ ತಿಂಗಳ ೫-೬-೭ ತಾರೀಖುಗಳ ದಿವಸ ಬಂಡಿಗಳ ವ್ಯವಸ್ಥೆಯನ್ನು ಇಡುವೆವು.

ಇಲ್ಲಿಗೆ ಬರತಕ್ಕ ರೇಲ್ವೆ ಗಾಡಿಗಳ ವೇಳೆ.

ಧಾರವಾಡ ಮತ್ತು ಗದಗ ಕಡೆಯಿಂದ ಬರತಕ್ಕವು:—	ಮೇಲ್ ಸಂಜೆ ೬ ಗಂಟೆ. ಪ್ಯಾಸೆಂಜರ ಬೆಳಗಿನ ೬|| ಗಂಟೆ.
ಹರಿಹರ ದಾವಣಗೆರೆಗಳ ಕಡೆಯಿಂದ ಬರತಕ್ಕವು:—	ಮೇಲ್ ಮುಂಜಾನೆ ೮ ಗಂಟೆ. ಪ್ಯಾಸೆಂಜರ ರಾತ್ರಿ ೮|| ಗಂಟೆ.

ಗುರುಸಿದ್ಧಪ್ಪಾ ಸಾಂಬ್ರಾಣಿ ಮತ್ತು ಚನವೀರಗೌಡಾ ಹೊನ್ನತ್ತಿ,
ಕಾರ್ಯದರ್ಶಿಗಳು.
ವೀ. ತ. ಸಮ್ಮೇಲನ ಹೊನ್ನತ್ತಿ.

ಶ್ರೀಮದ್ವೀರಶೈವ ಸಮಾಜದ ಸಕಲ ವಿದ್ವಜ್ಜನರಿಗೆ ಅರಿಕೆ ಮಾಡಿಕೊಳ್ಳುವದೇನಂದರೆ:—

ಮಹನೀಯರೇ, ನಮ್ಮ ಸಮಾಜದಲ್ಲಿ ನಡೆಯುವ ವಿವಾಹಾದಿ ಎಲ್ಲಾ ಶುಭ ಶೋಭನಾದಿಗಳ ಕಾಲಗಳಲ್ಲಿ ನಮ್ಮ ನಾರೀಮಣಿಯರು ರಾಮ, ಸೀತೆ, ಕೃಷ್ಣ, ಲಕ್ಷ್ಮಿ, ಮೊದಲಾದ ಶಿವೇತರ ಸಂಬಂಧವಾದ ಹಾಡುಗಳನ್ನು ಹಾಡುವದು ವೀರಶೈವ ಸನಾತನಧರ್ಮಕ್ಕೂ ಮತ ಸಿದ್ಧಾಂತಕ್ಕೂ ಸದಾಚಾರಕ್ಕೂ ವಿರೋಧವಾಗಿರುವದಲ್ಲದೆ ಎಷ್ಟು ಕೊರತೆಗೆ ಈಡುಮಾಡಿದೆ ಎಂಬುವದು ಸರ್ವ ಶ್ರುತವಾಗಿರುವದಷ್ಟೆ. ಆದಾಗ್ಯೂ ಇದುವರೆಗೂ ಈ ಲೋಪವನ್ನು ಪರಿಹರಿಸಲು ಯಾರೂ ಪ್ರಯತ್ನಿಸದಿರುವದು ಬಹಳ ಶೋಚನೀಯವಾಗಿದೆ. ಈಗಿನ ಪಾಠಶಾಲೆಗಳಲ್ಲಿ ವಿದ್ಯಾರ್ಥಿ ಜನವರ್ಗದವರು ತಮ್ಮ ಅಂದರೆ ವಿಷ್ಣು ಸಂಬಂಧವಾದ ಕೀರ್ತನೆಗಳನ್ನೇ ಉಳ್ಳ ಹಾಡಿನ ಪುಸ್ತಕಗಳನ್ನು ಪಠ್ಯಪುಸ್ತಕ (ಟೆಕಸ್ಟ) ಗಳನ್ನಾಗಿ ನಿಯಮಿಸಿಕೊಂಡು ಬೋಧಿಸುತ್ತಿರುವದೇ ಈ ನ್ಯೂನತೆಗೆ ಮೂಲ ಕಾರಣವಾಗಿದೆ. ಆದಕಾರಣ ಶಿವಸಂಬಂಧವಾದ ಹಾಡುಗಳ ಪುಸ್ತಕಗಳನ್ನು ಬರೆಯಿಸಿ ಸರ್ಕಾರದವರು ಪಾಠಶಾಲೆಗಳಲ್ಲಿ ಇವುಗಳನ್ನು ಸಹ ಉಪಯೋಗಿಸುವಂತೆ ಕೇಳಿಕೊಂಡು ಕಾರ್ಯಸಿದ್ಧಿಯನ್ನು ಮಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಲ್ಲವೆ? ಆದ್ದರಿಂದ ಮೇಲ್ಕಂಡಂತೆ ಎಲ್ಲಾ ವಿವಾಹಾದಿ ಶುಭಕಾಲಗಳಲ್ಲೂ ಹಾಡಲು ಉಪಯೋಗವಾಗುವಂತೆಯೂ ಬಾಲಕಿಯರಿಗೆ ಸುಲಭವಾಗಿ ತಿಳಿಯುವಂತೆಯೂ, ಗಾನಕ್ಕನುಕೂಲವಾಗಿ ಇರುವಂತೆಯೂ ಸಹ ಸರಳವಾದ ಶೈಲಿಯಲ್ಲಿ 3 ಅಥವಾ 5 ಚರಣಗಳಿಂದಲೂ, ಪಲ್ಲವಿಗಳಿಂದಲೂ, ಕೂಡಿದ ನಾನಾ ರಾಗಗಳಲ್ಲಿ ಕನಿಷ್ಠ ಪಕ್ಷ 75 ಹಾಡುಗಳುಳ್ಳ ಒಂದು ಹಾಡಿನ ಪುಸ್ತಕವನ್ನು ಶ್ರೀ ಪಾರ್ವತೀ ಪರಮೇಶ್ವರರ ಶ್ರೀ ಪಂಚಾಚಾರ್ಯರ ಪುರಾತನ ಪ್ರಮಥ ಶ್ರೀ ಶರಣರ ಪರವಾಗಿ ಬರೆದು ನನ್ನಲ್ಲಿಗೆ ಕಳಿಸತಕ್ಕವರಿಗೆ ಅತ್ಯಂತ ಉತ್ತಮವಾಗಿ ಕಂಡುಬರುವ ಹಾಡಿನ ಪುಸ್ತಕಕ್ಕೆ 30—0—0 (ಮೂವತ್ತು) ರೂಪಾಯಿಗಳ ಒಂದು ಬಹುಮಾನವು ಕೊಡಲ್ಪಡುವದು. ಮತ್ತು ಶ್ರೀಮತ್ ಪರಶಿವನ ಮತ್ತು ತದಂಶೀಭೂತರಾದ ಪ್ರಮಥರಪರವಾಗಿ ಗಾನರೂಪದಿಂದ ನೂತನವಾಗಿರುವ ಕೀರ್ತನೆಗಳನ್ನೂ ಸ್ತೋತ್ರಗಳನ್ನೂ ಮಂಗಳಗಳನ್ನೂ ಸೇರಿಸಿ ನಿತ್ಯೋಪಯೋಗಕ್ಕೆ ಅನುಕೂಲಿಸುವಂತೆ ಕನಿಷ್ಠ ಪಕ್ಷ 50 ಹಾಡುಗಳಿಂದ ಕೂಡಿದ ಒಂದು ಕೀರ್ತನಾ ಪುಸ್ತಕವನ್ನು ಬರೆದು ನನ್ನಲ್ಲಿಗೆ ಕಳುಹಿಸತಕ್ಕವರಿಗೆ ಅತ್ಯಂತ ಉತ್ತಮವಾಗಿ ಕಂಡುಬರುವ ಲೇಖನಕ್ಕೆ 20.0.0 (ಇಪ್ಪತ್ತು) ರೂಪಾಯಿಗಳ ಬಹುಮಾನವೂ ಸಹ ಕೊಡಲ್ಪಡುತ್ತದೆ. ಈ ಬಹುಮಾನಗಳೆರಡನ್ನೂ ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹೆಸರಿನಲ್ಲಿ ಕೊಡುವದಲ್ಲದೆ ಇವುಗಳೆರಡನ್ನೂ ನಾನು ಮುದ್ರಣಮಾಡಿಸಿದ ತರುವಾಯ ಆಯಾ ಲೇಖಕರಿಗೆ (20) ಪ್ರತಿಗಳನ್ನು ಉಚಿತವಾಗಿ ಕಳುಹಿಸುತ್ತೇನೆ. ಈ ವಿಚಾರವನ್ನು ಮಹನೀಯರಾದ ತಾವುಗಳು ದಯವಿಟ್ಟು ಅವಗಾಹನೆಗೆ ತಂದುಕೊಂಡು ಈ ಸಂಬಂಧವಾದ ಎಲ್ಲಾ ತಪಶೀಲುಗಳನ್ನು ನನ್ನಿಂದ ತಿಳಿದುಕೊಂಡು ಮೇಲ್ಕಂಡ ಎರಡು ಲೇಖನಗಳನ್ನು ಸಹ ನನಗೆ ಸಿದ್ಧಾರ್ಥಿ ಸಂ||ದ ವಿಜಯದಶಮಿ ಒಳಗಾಗಿ ಕಳುಹಿಸಿಕೊಟ್ಟು ಬಹುಮಾನವನ್ನು ಹೊಂದುವದರ ಮೂಲಕ ಈ ವಿಚಾರದಲ್ಲಿ ನಮ್ಮ ಸಮಾಜಕ್ಕೆ ಉಂಟಾಗಿರುವ ಕೊರತೆಯನ್ನು ದಯವಿಟ್ಟು ಪರಿಹರಿಸಲು ಕೋರುತ್ತೇನೆ.

ತುಮಕೂರು. } ಸಮಾಜ ಸೇವಕ, ಜಿ. ಕೆ. ಗುರುಸಂಗಾರ್ಯ,
ಪ್ಲೀಡರ್.

ಮರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ಮರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ; ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—11—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

12 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

19

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತನ್ನಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಶುಭಾಶುಭಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇವರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೊ,
12 ಸಾಹುಕಾರಪೇಟೆ, ಮದರಾಸ್.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

16 ವಿಳಾಸ—ಎಂ. ಎಂ. ಹರ್ಡೆಕರ್ ದಾವಣಗೆರೆ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇದಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುನಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರುವುದಿಲ್ಲ. ಇವರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
12 ಇರುಳಪ್ಪನಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಪರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
20 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಏಪ್ರಿಲ್ ತಾ|| ೨೭ ರಿಂದ ೧೯೧೯ ನೆಯ ಮೇ ತಾ|| ೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಚೈತ್ರ ಬ|| ದ್ವಾದಶಿಯಿಂದ ವೈಶಾಖ ಶು|| ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
27	ಭಾನು	ದ್ವಾದಶಿ	30-7	ಪೂಭಾ	11-54	15
28	¹ಸೋಮ	ತ್ರಯೋ	24-53	ಉಭಾ	8-46	16
29	²ಮಂಗಳ	ಚತು	19-12	ರೇವತಿ	5-9	17
30	³ಬುಧ	ಅಮಾ	13-7	ಅಶ್ವಿನಿ	1-14	18
1	ಗುರು	ಪಾಡ್ಯ	7-0	ಕೃತ್ತಿಕ	52-46	19
2	⁴ಶುಕ್ರ	ಬಿ°ತಿ	0-58	ಉಪರಿ	54-1	20
3	ಶನಿ	ತದಿಗೆ	49-45	ಮೃಗಶಿ	45-26	21

(1) ಮಾಸಶಿವರಾತ್ರಿ, ಶ್ರೀ ಶ್ವೇತವರಾಹ ಜಯಂತಿ, ಶ್ರೀರಂಗದಲ್ಲಿ ರಂಗನಾಥಸ್ವಾಮಿ ರಥ. (2) ಅಮಾವಾಸ್ಯಾ ತಿಥಿ. (3) ಕರಗವ್ರತಂ, ಕೃಷ್ಣಾಪುರದ ಸಂತಾನಗೋಪಾಲಕೃಷ್ಣಸ್ವಾಮಿ ರಥ. (4) ತ್ರೇತಾಯುಗಾದಿ ವಾರ್ತಾಕ ಗೌರೀವ್ರತಂ, ಅರುಣಗಿರಿ ವೆಂಕಟರಮಣಸ್ವಾಮಿ ರಥ, ಬಸವೇಶ್ವರಜಯಂತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಶರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಮೇ ತಾರೀಖು ೪ ನೆಯ ಭಾನುವಾರ. (ಸಂಚಿಕೆ ೧೮

REGISTERED NO. M. 124.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 23

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚ ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧— ೦—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦— ೫—೦
ಹಂಡಾಸಿ	೦— ೪—೦
ವ್ರತಪಂಚಕ	೦— ೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಜೊತೆಯಲು ಅಥವಾ ಅದರಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅನ್ಯ ತಾಪ ಗುಣವಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣವಾಗುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

9 ಪತ್ತೆ:—ಎ. ಆರ್. ಬ್ರದರ್ಸ್ ಮತ್ತು ಕಂಪನಿ, ಪೋಸ್ಟ ನಿಪ್ಪಾಣಿ ಜಿ. ಬೆಳಗಾಂವ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.



ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಐಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷದವು ಎಷ್ಟು ಮೌಲ್ಯವಾದದ್ದು ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅನ್ಮತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರಧಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ, ಮೊದಲಾದ ರೋಗವು, ಕಣ್ಣಿನೊಳಗೆ ಹೂವ ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲಿಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದ್ದವ್ವನಬೇನೆ, ಹುಂಕುಳಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಮಾತ್ರೆಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತವೆ. ಒಂದು ಕಾಲುಶೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ಶೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವವು. ನಮ್ಮ ಔಷಧದ ಪೋಟ ಹೊರತು ಪಡಕ ತಕ್ಕೊಳ್ಳಬೇಕು ತ್ತೇವ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಒಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯು ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಜಿಂ. ಮುಲ್ಲಾ, ಸಂಪಾದಕ ಅರ್ಕಶಫಾ,
50 ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

30 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	0—12—0.
12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಅಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವದಿಲ್ಲ. ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಯೂ ಕೆಡುವದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿಸಹಿತ



ಕ್ರಯ 1 ಕ್ಕೆ 5—8—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
13 ಇರುಳಪ್ಪನ ಬೀದಿ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮೇ ತಾ|| ೪ ನೆಯ ಭಾನುವಾರ.

ಪ್ರಜಾಪ್ರತಿನಿಧಿಸಭೆ.

ಬೇಸಗೆ ಕಾಲದಲ್ಲಿ ಕೂಡಬೇಕಾಗಿ ಏರ್ಪಟ್ಟಿರುವ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಗಳಲ್ಲಿ ೩ ನೆಯದು ಕಳೆದ ಸೋಮವಾರದಿಂದ ರಾಜಧಾನಿಯಲ್ಲಿ ಆಕ್ಟಿಂಗ್ ದಿವಾನರಾದ ಮ|| ಎ. ಆರ್. ಬಾನರ್ಜಿಯವರ ಅಧ್ಯಕ್ಷತೆಯಿಂದ ಕೂಡಿ ೫ ದಿನಗಳ ಕಾಲ ನಡೆದಿತು. ಸಭೆಗೆ ಬರಬೇಕಾಗಿದ್ದ ಪ್ರಜಾಪ್ರತಿನಿಧಿಗಳಲ್ಲಿ ಅರ್ಧಭಾಗ ಎಂದರೆ ಬಹುಶಃ ೧೨೫-೧೩೦ ಮಂದಿಯಷ್ಟು ಮಾತ್ರ ಬಂದಿದ್ದರು. ಇದು ಪ್ರತಿನಿಧಿಗಳಿಗೆ ಸಭಾಕಾರ್ಯದಲ್ಲಿರುವ ವಿಶೇಷ ಪ್ರೀತಿಗೆ ದೃಷ್ಟಾಂತವಾಗಿಲ್ಲ. ಕೌನ್ಸಿಲರುಗಳಲ್ಲಿ ಮ|| ಚಂದ್ರಶೇಖರಯ್ಯರ ಹೊರತು ಮ|| ಪಿ. ರಾಘವೇಂದ್ರರಾಯರೂ, ಮಿ|| ಮಿರ್ ಹಂಜಾಹುಸೇನ್ ಸಾಹೇಬರೂ, ಶಾಖೆಗಳ ಮುಖ್ಯಾಧಿಕಾರಿಗಳೂ, ಚೀಫ್ ಕೋರ್ಟ್ ಜಡ್ಜಿಗಳೂ, ಡಿ|| ಕಮಿಷನರುಗಳೂ, ಸೆಕ್ರೆಟರಿಗಳೂ ರಾಜಧಾನಿಯ ಹಲವು ಮಂದಿ ದೊಡ್ಡ ಮನುಷ್ಯರೂ, ಪತ್ರಿಕಾಪ್ರತಿನಿಧಿಗಳೂ ಸಹ ದಯಮಾಡಿಸಿದ್ದರು. ಸಭೆಯು ಮಧ್ಯಾಹ್ನ ೧೨ ಗಂಟೆಗೆ ಸರಿಯಾಗಿ ಪ್ರಾರಂಭಿಸಲ್ಪಟ್ಟಿತು. ಅಧ್ಯಕ್ಷರು ತಮ್ಮ ಭಾಷಣವನ್ನು ಆಂಗ್ಲ ಭಾಷೆಯಲ್ಲಿ ಸ್ಫುಟವಾಗಿ ಓದಿದರು. ಬಳಿಕ ಮಿ|| ಅಬ್ಬಾಸ್ ಖಾನರು ಪ್ರತಿನಿಧಿಗಳ ಪಕ್ಷದ ವಂದನೆಗಳನ್ನು ಶ್ರೀಮನ್ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ಸಮರ್ಪಿಸಿದರು. ದಿವಾನರ ಭಾಷಣದ ಭಾಷಾಂತರವನ್ನು ಕನ್ನಡದಲ್ಲಿ ರೆವಿನ್ಯೂ ಸೆಕ್ರೆಟರಿಯವರಾದ ಮ|| ಬಿ. ರಾಮಸ್ವಾಮಯ್ಯನವರು ಓದಿದರು. ಬಳಿಕ ಪ್ರತಿನಿಧಿಗಳ ಪಕ್ಷದಿಂದ ಮ|| ಎಚ್. ಕೃಷ್ಣಶಾಸ್ತ್ರಿಗಳೂ ಮ|| ಅಣ್ಣಯ್ಯಪಂಡಿತರೂ ಸಹ ದಿವಾನರ ಉಪನ್ಯಾಸದಲ್ಲಿ ಸೂಚಿಸಲ್ಪಟ್ಟಿದ್ದ ದೇಶಹಿತಕರಗಳಾದ ಏರ್ಪಾಟುಗಳನ್ನು ಕುರಿತು ಅಭಿನಂದನೆಯನ್ನು ತಿಳಿಯಿಸಿದುದಲ್ಲದೆ ಪ್ರಜೆಗಳಿಂದ ಎತ್ತತಕ್ಕ ಕಂದಾಯಗಳು ಪ್ರಜೆಗಳಿಗೆ ಭಾರವಾಗಿಲ್ಲದಂತೆಯೂ, ಹಾಗೆ ಎತ್ತಲ್ಪಟ್ಟ ಹಣವು ದುಂದುವೆಚ್ಚಕ್ಕೆ ಈಡಾಗದೆ ಪ್ರಜಾಹಿತಕ್ಕೇ ವಿನಿಯುಕ್ತವಾಗುವಂತೆಯೂ, ಬೊಕ್ಕಸವನ್ನು ಯಾವಾಗಲೂ ಪರಿಪುಷ್ಟವಾಗಿಟ್ಟುಕೊಂಡಿರುವಂತೆಯೂ ಮಾಡುವಲ್ಲಿ ಗೌರ್ನಮೆಂಟಿನವರು ವ್ಯಗ್ರರಾಗಬೇಕಾದ ವಿಷಯವನ್ನು ಸೂಚಿಸಿದುದು ಪ್ರಕೃತಕಾಲಕ್ಕೆ ಸಮಂಜಸವಾಗಿದ್ದಿತು. ಬಳಿಕ ಪ್ರತಿನಿಧಿಗಳು ಕೊಟ್ಟಿದ್ದ ವಿಷಯಗಳ ಚರ್ಚೆಗೆ ಆರಂಭವಾಯಿತು. ದಿವಾನರು ಮಾಡಿದ ಭಾಷಣದಲ್ಲಿ ಕಂಡಿರುವ ವಿಷಯಗಳಲ್ಲಿ ಮುಖ್ಯವಾದ ಕೆಲ ಭಾಗಗಳನ್ನು ಈ ಪತ್ರದ ಬೇರೆ ಕಡೆಯಲ್ಲಿ ಮುದ್ರಿಸಿದ್ದೇವೆ.

ದಿವಾನರ ಭಾಷಣದಲ್ಲಿ ಸರ್ಕಾರದ ಆಯವ್ಯಯವನ್ನು ಕುರಿತು ಆಡಿರುವ ಕೆಲ ಮಾತುಗಳೂ ಈ ವಿಷಯವಾಗಿ ಸಭಿಕರಲ್ಲಿ ಕೆಲರು ವಿಶೇಷವಾಗಿ ನಡೆಯಿಸಿದ ಚರ್ಚೆಯೂ ಸಂಸ್ಥಾನಕ್ಕೆ ಹಿತಕರವಾದ ಪರಿಣಾಮವನ್ನುಂಟುಮಾಡಲೆಂದು ನಿರೀಕ್ಷಿಸುತ್ತೇವೆ. ಬರುಬರುತ್ತ ಸಂಸ್ಥಾನದ ಆದಾಯ ಭಾಗವು ವೃದ್ಧಿಯಾಗುತ್ತಿದೆ. ಆದರೇನು ? ವ್ಯಯವು ಕೂಡ ಅದರೊಡನೆ ಹೆಚ್ಚುತ್ತಿದೆ. ಹೀಗೆ ವ್ಯಯವು ಹೆಚ್ಚಿದುದರಲ್ಲಿ ಸಂಸ್ಥಾನಕ್ಕೆ ಶಾಶ್ವತ ಲಾಭವನ್ನು ಕೊಡತಕ್ಕ ನೀರಾವರಿಯ ಕೆಲಸ ಲೋಹಮಾರ್ಗಸ್ಥಾಪನೆ ಮೊದಲಾದುವುಗಳಿಗಾಗಿಯೇ ಹೆಚ್ಚು ಭಾಗವು ವಿನಿಯೋಗವಾದರೆ ಬಾಧಕವೇನೂ ಇಲ್ಲ. ರಾಜ್ಯಭಾರ ನಿರ್ವಾಹಕಾರ್ಯಕ್ಕೆ ತಗಲುವ ವೆಚ್ಚಗಳು ವಿಪರೀತವಾಗಿ ಬೆಳೆಯುತ್ತಿದ್ದರೆ ಅದಕ್ಕಾಗಿ ವ್ಯಥೆಪಟ್ಟು ಖಂಡಿಸದೆ ಇರುವುದಕ್ಕಾಗುವುದಿಲ್ಲ. ಈಗ್ಗೆ ಹತ್ತು ವರ್ಷಗಳ ಕೆಳಗೆ ಸಂಸ್ಥಾನದ ಉತ್ಪತ್ತಿಯು ೧೯೩೧೪೦೦೦ ರೂ.ಗಳಾಗಿದ್ದು ಬರುಬರುತ್ತ ಪ್ರತಿವರ್ಷದಲ್ಲೂ ಹೆಚ್ಚಿ ಕಳೆದ ೧೯೧೭-೧೮ ನೆ ವರ್ಷದಲ್ಲಿ ಉತ್ಪತ್ತಿಯು ೩೦೫೭೪೦೦೦ ರೂ.ಗಳಾಗಿರುತ್ತವೆ. ವೆಚ್ಚವಾದರೋ ೧೯೦೭-೦೮ ನೆ ವರ್ಷದಲ್ಲಿ ೧೯೦೯೬೦೦೦ ರೂ.ಗಳಾಗಿದ್ದು, ಕಳೆದ ವರ್ಷದಲ್ಲಿ ೩೦೪೦೦೦೦೦ ರೂ.ಗಳ ವರೆಗೆ ಹೆಚ್ಚಿರುತ್ತದೆ. ಹೀಗೆ ವೆಚ್ಚವು ಹೆಚ್ಚಿಕೊಂಡಿರುವುದಕ್ಕೆ ವಿದ್ಯಾಭ್ಯಾಸ ಶಾಖೆ ನೀರಾವರಿ ಶಾಖೆ ಮೊದಲಾದುವುಗಳಿಗೆ ಧನವ್ಯಯವನ್ನು ಹೆಚ್ಚು ಹೆಚ್ಚಾಗಿ ಮಾಡುತ್ತ ಬಂದಿರುವುದು ಕೆಲಮಟ್ಟಿಗೆ ಕಾರಣವಾಗಿದ್ದರೂ ರಾಜ್ಯಕಾರ್ಯನಿರ್ವಾಹಕ್ಕಾಗಿ ಏರ್ಪಟ್ಟಿರುವ ಉದ್ಯೋಗಿಗಳ ಸಂಬಳದ ಹೆಚ್ಚಳಿಕೆ ವಿಚ್ಛಿಕವಾದ ಇತರ ಧನವ್ಯಯ ಇವುಗಳು ಮಿತವಾಗಿಲ್ಲದ ಕಾರಣದಿಂದ ವೆಚ್ಚವು ಹೆಚ್ಚಾಗತಕ್ಕ ಭಾಗಗಳು ಕೆಲವಿರುತ್ತವೆ. ಇಂಡ್ಯಾ ಗೌರ್ನಮೆಂಟಿನಿಂದ ಕಳುಹಿಸಿಕೊಡಲ್ಪಟ್ಟಿದ್ದ ಮಿ|| ದತ್ತರವರು ನಮ್ಮ ಸಂಸ್ಥಾನದ ಆಯವ್ಯಯ ಸ್ಥಿತಿಗತಿಗಳನ್ನು ಪರಿಶೋಧಿಸಿ ಕೊಟ್ಟಿರುವ ವರದಿಯಲ್ಲಿ " ಹುಟ್ಟುವಳಿಗೆ ಖರ್ಚು ಹಾಕುವ ವೆಚ್ಚದ ಈಗಣ ಸ್ಕೇಲು ತೃಪ್ತಿಕರವಾಗಿದೆಯೆಂದು ನಾನು ಹೇಳಲಾರೆನು. ಈ ಖರ್ಚು ಕಳೆದ ೫ ವರ್ಷಗಳಲ್ಲಿ ವಿಶೇಷವಾಗಿ ಹೆಚ್ಚಿದೆಯೆಂದು ಕಂಡುಬರುತ್ತದೆ. ಅದು ಸಂಸ್ಥಾನದ ಸಾಲೀಯಾನಾ ಹುಟ್ಟುವಳಿಯ ಹೆಚ್ಚುಗೆಗೆ ತಕ್ಕಂತೆ ಇದೆಯೆಂಬುದನ್ನಾಗಲೀ ಅಥವಾ ಈ ಹೆಚ್ಚಾದ ವೆಚ್ಚವು ಸಂಸ್ಥಾನದ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಎಷ್ಟುಮಟ್ಟಿಗೆ ನಿಜವಾಗಿ ಸಹಾಯಮಾಡಿದೆಯೆಂಬುದನ್ನಾಗಲೀ ನಾನು ಹೇಳಲು ಅಶಕ್ತನಾಗಿದ್ದೇನೆ'' ಎಂದು ಅಭಿಪ್ರಾಯಪಟ್ಟಿದ್ದಾರೆ. ಅನನುಗುಣವಾದ ವೆಚ್ಚವು ನಮ್ಮ ಪ್ರಭುತ್ವದಲ್ಲಿ ನಡೆಯುತ್ತಿದೆಯೆಂಬುದು ಅವರ ಈ ಸಾಕ್ಷ್ಯದಿಂದಲೇ ಗೊತ್ತಾಗುತ್ತದೆ. ಆದರೆ ಇದಕ್ಕೆ ನಮ್ಮ ಪ್ರಭುತ್ವದವರು ವಿಶೇಷವಾಗಿ ಗಮನಕೊಟ್ಟಿರುತ್ತೇವೆಂದು ಹೇಳಿರುವುದು ತೃಪ್ತಿಕರವಾಗಿದೆ. ಹೀಗಿದ್ದರೂ ಫೈನಾನ್ಷಿಯಲ್ ಸೆಕ್ರೆಟರಿಯವರು ಕೆಲವು ಸಲ ಪಡುತ್ತಿರುವ ಅಭಿಪ್ರಾಯಗಳನ್ನು ನೋಡಿದರೆ ಸರ್ಕಾರದವರು ಈ ಸಂಬಂಧವಾಗಿ ನಡೆಯಿಸುವ ಯತ್ನಗಳು ಸಫಲವಾದಾವೆಂದು ಊಹಿಸಲು ನಮಗೆ ಧೈರ್ಯವಿಲ್ಲ. ಸಂಸ್ಥಾನದವರು ಏರ್ಪಡಿಸುವ ಫೈನಾನ್ಷಿಯಲ್ ಕಮಿಟಿಯು ಹೆಚ್ಚು ಮುತುವರ್ಜಿ ವಹಿಸಿ ನಿರ್ದಾಕ್ಷಿಣ್ಯದಿಂದ ಕೆಲಸಮಾಡಿದರೆ, ಆ ಸಂಘವು ಮಾಡುವ ವರದಿಯನ್ನು ಸರ್ಕಾರದವರು ಗೌರವಿಸಿದರೆ ಸ್ವಲ್ಪಮಟ್ಟಿಗಾದರೂ ಫಲವಾದೀತು. ಈಗಣ ಪ್ರಭುತ್ವವಿಧಾನದಲ್ಲಿ ಏಕರಣೆಯೂ ಬಿಗಿಯೂ ದರ್ಪವೂ ಕಡಿಮೆಯಾಗಿವೆ. ನಿರ್ವಂಚನೆಯಿಂದಲೂ ಬಿಡುವಿಲ್ಲದೆಯೂ ಕೆಲಸಮಾಡಿ ತಾವು ಪಡೆಯುವ ಸಂಬಳಕ್ಕೆ ದ್ರೋಹಮಾಡದಿರುವ ಉದ್ಯೋಗಿಗಳು ಕೆಲವಿದ್ದರೆ ಬಾಹ್ಯಾಡಂಬರದಿಂದ ಕೊಂಚಕಾಲ ಹಾಗೂ ಹೀಗೂ ಕೆಲಸವನ್ನು ದಬ್ಬಿಕೊಂಡು ಹೋಗುತ್ತ ಕಾಲಹರಣವನ್ನೂ ಸರ್ಕಾರದ ಸಂಬಳಕ್ಕೆ ದ್ರೋಹವನ್ನೂ ಮಾಡತಕ್ಕವರು ಇಲ್ಲದೆ ಇಲ್ಲ. ಹೀಗಿದ್ದರೂ ಸಂಬಳಗಳು ಅವರ ಕೆಲಸಗಳಿಗೆ ಮೀರಿದಷ್ಟೇ ದೊರೆಯುತ್ತಿರುತ್ತವೆ. ಅಧಿಕಾರಿಗಳ ಸಂಖ್ಯೆಯೂ ಸಂಬಳ ಸಾರಿಕೆಗಳ ಮೊತ್ತವೂ ಹೆಚ್ಚುತ್ತಿದ್ದರೂ ಪ್ರಜೆಗಳ ದೂರುಗಳೂ ಕಷ್ಟಗಳೂ ವಿನ್ನಹಗಳೂ ವ್ಯವಸ್ಥೆಯಾಗುವುದು ಮಾತ್ರ ಪೂರ್ವಕ್ಕಿಂತಲೂ ಈಗ ಕಡಿಮೆಯಾಗಿಯೇ ಇರುತ್ತದೆ. ಇದು ಶೋಚನೀಯವಲ್ಲವೆ? ಹೊಸಹೊಸದಾಗಿ ಉದ್ಯೋಗಸ್ಥಾನಗಳನ್ನು ಕಲ್ಪಿಸುವುದರಲ್ಲಿ ನಮ್ಮ ಪ್ರಭುತ್ವದವರು ಲೇಶವೂ ಹಿಂದುಮುಂದೆ ನೋಡುವಹಾಗಿಲ್ಲ. ಈ ವರ್ಷ ಮತ್ತೆ ಸಿವಿಲ್ ಸರ್ವೀಸ್ ಪರೀಕ್ಷೆಯ ಏರ್ಪಾಟನ್ನಿಟ್ಟಿದ್ದಾರೆ. ಇದಕ್ಕೆ ನಿಜವಾದ ಅವಶ್ಯಕತೆಯು ಎಷ್ಟುಮಟ್ಟಿಗಿದ್ದಿತೋ ನಾವರಿಯೆವು.

ಭಾಷಣದ ಕೊನೆಯಲ್ಲಿ ದಿವಾನರವರು ಅಪ್ಪಣೆಕೊಡಿಸಿರುವುದರೊಳಗೆ ಪ್ರಕೃತದಲ್ಲಿ ಗೌರ್ನಮೆಂಟಿನವರ ಪರ್ಯಾಲೋಚನೆಗೆ ಒಳಪಟ್ಟಿರುವ ಸಂಗತಿಗಳನೇಕವು ತಿಳಿಯಿಸಲ್ಪಟ್ಟಿವೆ. ಸಿವಿಲ್ ಸರ್ವೀಸನ್ನು ಕ್ರಮಪಡಿಸುವುದು, ಸರ್ಕಾರದುದ್ಯೋಗಸ್ಥಾನಗಳಿಗೆ ಎಲ್ಲ ಜನವರ್ಗದವರನ್ನೂ ತಕ್ಕಂತೆ ಸೇರಿಸುವುದು, ಮಲೆನಾಡಿನ ಪುನೋವೃದ್ಧಿ, ಪ್ರಜಾರೋಗ್ಯಾಭಿವರ್ಧನ, ಸಂಪದಭ್ಯುದಯದ ಶಾಶ್ವತವಾದ ಏರ್ಪಾಟು ಹಿಂದುಳಿದವರ ವಿದ್ಯಾಭಿವೃದ್ಧಿ ಪ್ರಯತ್ನ ಮೊದಲಾದುವುಗಳು ನಿರ್ದುಷ್ಟವಾದ ರೀತಿಯಲ್ಲಿ ಸಂಸ್ಕರಿಸಲ್ಪಡುವುವೆಂದು ನಿರೀಕ್ಷಿಸುತ್ತೇವೆ.

ಸಭೆಯಲ್ಲಿ ವಿಷಯಚರ್ಚೆಗಳನ್ನು ನಡೆಯಿಸುವಾಗ್ಗೆ ಕೆಲಕೆಲವರ ಮಾತುಗಳು ಪಕ್ಷಾಭಿಮಾನದಿಂದ ಮುಂದಾಗಿರುವುವೇ ಹೊರತು ಇತರಾನೇಕ ಪ್ರತಿನಿಧಿಗಳು ಸ್ವತಂತ್ರಾಭಿಪ್ರಾಯವನ್ನು ಕೊಡುವಷ್ಟು ಸಾಮರ್ಥ್ಯವನ್ನು ತೋರಿಸದಿರುವುದು ಪರಿತಾಪಕರವಾಗಿದೆ. ಮ|| ಎ. ಆರ್. ಬಾನರ್ಜಿಯವರು ಸಭಾಕಾರ್ಯನಿರ್ವಾಹದಲ್ಲಿ ತುಂಬಾ ಸರಳತನವನ್ನು ತೋರಿಸಿರುತ್ತಾರೆ. ಪ್ರತಿಯೊಬ್ಬ ಪ್ರತಿನಿಧಿಗಳೂ ದಾಕ್ಷಿಣ್ಯಾದಿಗಳಿಗೆ ವಶರಾಗದೆ ದೇಶಹಿತವನ್ನೇ ಗುರಿಯಾಗಿಟ್ಟುಕೊಂಡು ನ್ಯಾಯಕ್ಕಾಗಿ ಹೋರಾಡುವಷ್ಟು ಶಕ್ತರಾಗುವವರೆಗೂ ಪ್ರಜಾಪ್ರತಿನಿಧಿ ಸಭಾಕಾರ್ಯಗಳು ನಿರ್ದುಷ್ಟವೆನಿಸಿಕೊಳ್ಳಲಾರವು.

ಕಳೆದವಾರ ಕೂಡಿದ್ದ
ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರು ಮಾಡಿದ ಭಾಷಣವು.

ಮಹಾಶಯರೆ,—ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರರವರ ಪರವಾಗಿ ತಮ್ಮನ್ನು ಪ್ರಜಾಪ್ರತಿನಿಧಿ ಸಭೆಯ ಚಾಲ್ತಿ ವರ್ಷದ ಈ ಎರಡನೆಯ ಅಧಿವೇಶನಕ್ಕೆ ಸಂತೋಷದಿಂದ ಬರಮಾಡಿಕೊಳ್ಳುವ ಗೌರವವು ನನ್ನದಾಗಿದೆ. ಪ್ರತಿ ವರ್ಷವೂ ಎರಡನೆಯ ಅಧಿವೇಶನ ನಡಿಸುವುದನ್ನು ಮಂಜೂರ್ಮಾಡಿ ಶ್ರೀಮನ್ಮಹಾರಾಜರವರು 1916 ನೆಯ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ದಯಪಾಲಿಸಿದ ರಾಜಾಜ್ಞಾ ಪತ್ರದ ಮೇರೆಗೆ ನಡೆದಿರುವ ಅಧಿವೇಶನಗಳಲ್ಲಿ ಇದು ಮೂರನೆಯದು—ಸಂಸ್ಥಾನದ ಬಜೆಟ್ಟಿನ ಪರ್ಯಾಲೋಚನೆಯು ಈ ಅಧಿವೇಶನದ ಮುಖ್ಯ ಕಾರ್ಯಗಳಲ್ಲಿ ಒಂದಾಗಿರುವುದೆಂಬುದು ತಮಗೆ ತಿಳಿದೇಯಿದೆ. ಈ ಸಭೆಯ ಹಿಂದಿನ ದಸರಾ ಅಧಿವೇಶನದ ಕಾಲದಲ್ಲಿ ಸ್ಥಿತಿಗತಿಗಳು ಕೇವಲ ನಿರುತ್ಸಾಹಕರವಾಗಿದ್ದುದರಿಂದ, ಆ ಅಧಿವೇಶನವನ್ನು ಇದಕ್ಕಿದ್ದ ಹಾಗೆಯೇ ನಿಲ್ಲಿಸಬೇಕಾಗಿ ಬಂದಿತು.

ಯುದ್ಧ.—ಹಿಂದೆ ಈ ಸಭೆ ಸೇರಿದಂದಿನಿಂದ ಈಚೆಗೆ ನಾಲ್ಕು ವರ್ಷಗಳಿಗೆ ಹೆಚ್ಚಾಗಿ ಪ್ರಪಂಚದ ನೆಮ್ಮದಿಯನ್ನು ಭಂಗಪಡಿಸಿದ್ದ ಘೋರಯುದ್ಧದಲ್ಲಿ ಮಿತ್ರಮಂಡಲಿಯವರ ಸೈನ್ಯಗಳಿಗೆ ಮೇಲೆ ಮೇಲೆ ಜಯವುಂಟಾಗಿ ಯುದ್ಧವು ನಿಂತು ಕಳೆದ ನವಂಬರ್ 11 ನೆಯ ತಾರೀಖಿನಲ್ಲಿ ಉಭಯ ಪಕ್ಷದವರೂ ಯುದ್ಧವಿಶ್ರಾಂತಿಯನ್ನು ಸಾರಿದರು. ಯುದ್ಧದಲ್ಲಿ ಸೇರಿದ್ದ ಜನಾಂಗಗಳು ಈಗ ಸಭೆಸೇರಿ ಸಮಾಧಾನದ ಷರತ್ತುಗಳನ್ನು ಚರ್ಚಿಸುತ್ತಿರುವರು. ಪ್ರಪಂಚದ ಚರಿತ್ರೆಯಲ್ಲಿ ಹಿಂದೆ ಯಾವಾಗಲೂ ಇಷ್ಟು ಮಹತ್ತರವೂ ಮುಖ್ಯವೂ ಆದ ಕಾರ್ಯವು ಯಾವ ಸಭೆಯ ಪರ್ಯಾಲೋಚನೆಗೂ ಬಂದುದಿಲ್ಲ. ಈ ಮಹಾ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವ ಅದ್ವಿತೀಯವಾದ ಗೌರವವು ಸಾಮಂತ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾ ದೇಶಕ್ಕೂ ಲಭಿಸಿರುತ್ತದು. ಸಂಧಿಪತ್ರವು ಶೀಘ್ರದಲ್ಲಿಯೇ ಅಂಗೀಕರಿಸಲ್ಪಟ್ಟು ದಯಾಧರ್ಮಗಳ ಉದಾರವಾದ ಉದ್ದೇಶಗಳೂ ಮತ್ತು ಜನಾಂಗಗಳ ಅನುಮತಿಯನ್ನನುಸರಿಸಿ ರಾಜ್ಯಭಾರ ಕ್ರಮವು ಏರ್ಪಡುವಿಕೆಯೂ ಸಹ ಮೊದಲಿಗಿಂತಲೂ ಸ್ಥಿರವಾದ ಅಸ್ತಿಭಾರದ ಮೇಲೆ ನೆಲೆಗೊಂಡು ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಸೌಹಾರ್ದವೂ ಸಾಮರಸ್ಯವೂ ಶಾಶ್ವತವಾಗಿ ನಿಲ್ಲುತ್ತವೆಂಬುವ ಭರವಸೆಯು ಉಂಟಾಗಲೆಂದು ಎಲ್ಲರ ಸಂಗಡ ನಾವೂ ಹಾರೈಸೋಣ.—ಯುದ್ಧದ ಎರಡು ಸಾಲಗಳಿಗಾಗಿ ಮೈಸೂರು ಸರ್ಕಾರದ ಸಿಲ್ಕಿನಿಂದ ಕೊಟ್ಟಿರುವ 65 ಲಕ್ಷ ರೂಪಾಯಿಗಳಲ್ಲದೆ ಯುದ್ಧದ ಖರ್ಚಿಗಾಗಿ ನಾವು ಒಟ್ಟಿನಲ್ಲಿ 74 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಮ್ಮ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳೂ ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನವರೂ ಯುದ್ಧರಂಗದಲ್ಲಿ ಕಡೆಯವರೆಗೂ ಕಾದುತ್ತಿದ್ದರು ; ಯುದ್ಧವಿಶ್ರಾಂತಿಯು ಸಾರಲ್ಪಡುವುದಕ್ಕೆ ಕೊಂಚ ಮೊದಲು ನಮ್ಮ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳು ಒಂದು ಕದನದಲ್ಲಿ ಸೇರಿ ಬಹಳ ಪರಾಕ್ರಮವನ್ನು ತೋರಿಸಿ ಘನವಾದ ಜಯವನ್ನು ಹೊಂದಿದರು ; ಆ ಹೋರಾಟದಲ್ಲಿ ನಮ್ಮ ಸೈನ್ಯದ ಜನರನೇಕರು ಮೃತಪಟ್ಟಿದ್ದು ವಿಷಾದಕರವಾದ ಅಂಶವಾಗಿದೆ. ಸಾರ್ವಭೌಮ ಸರ್ಕಾರದವರು ಪ್ಯಾಲೆಸ್ಟೈನ್ ಪ್ರಾಂತ್ಯದ ರಕ್ಷಣೆಗಾಗಿ ಇಟ್ಟಿರುವ ತಮ್ಮ ಆಕ್ರಮಣ ಸೈನ್ಯಕ್ಕೆ ನಮ್ಮ ಇಂಪೀರಿಯಲ್ ಸರ್ವಿಸ್ ಲಾನ್ಸರುಗಳನ್ನೂ ಚುನಾಯಿಸಿ ಸೇರಿಸಿಕೊಂಡಿರುವ ಸಂಗತಿಯನ್ನು ಕೇಳಿ ನಾವು ಸಂತೋಷಪಡುವೆವು. ನಮ್ಮ ಯೋಧರು ಯುದ್ಧರಂಗದಲ್ಲಿ ಶ್ಲಾಘನೀಯವಾದ ಪರಾಕ್ರಮವನ್ನು ತೋರಿರುವುದಕ್ಕೆ ಅವರು ಇದುವರೆಗೆ ಸಂಪಾದಿಸಿರುವ ಅನೇಕ ಬಿರುದುಗಳು ಸಾಕಾದಷ್ಟು ನಿದರ್ಶನಗಳಾಗಿರುವುವು. ಅವುಗಳ ಜತೆಗೆ ಬೇರೆ ನಿದರ್ಶನವು ಬೇಕಾಗಿದ್ದಲ್ಲಿ ಆಕ್ರಮಣ ಸೈನ್ಯದ ಭಾಗವಾಗಿ ಚುನಾಯಿಸಲ್ಪಟ್ಟಿರುವುದೂ ಮತ್ತೊಂದು ಸಂಪೂರ್ಣ ನಿದರ್ಶನವಾಗಿರುವುದು.

ಸಾಮಾನ್ಯ ಸ್ಥಿತಿ.—ಕಳೆದ ಸಲ ಇನ್‌ಫ್ಲುಯಂಜಾ ರೋಗವು ಪ್ರಬಲವಾಗಿ ಹರಡಿ ಸಂಸ್ಥಾನದಲ್ಲೆಲ್ಲಾ ಕ್ಷೋಭೆಯನ್ನೂ ಪ್ರಾಣಹಾನಿಯನ್ನೂ ಉಂಟುಮಾಡಿದ್ದು ತಮಗೆಲ್ಲ ಚೆನ್ನಾಗಿ ಜ್ಞಾಪಕವಿರುವುದು. ಆಕಸ್ಮಾತ್ತಾಗಿ ಹುಟ್ಟಿ ಹಬ್ಬಿದ ಈ ರೋಗವನ್ನು ತಡೆಯಲು ನಾವು ಸಿದ್ಧವಾಗಿರಲಿಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಗಿದೆ. ಆದಕಾರಣ ನಿವಾರಣೋಪಾಯಗಳನ್ನು ಏರ್ಪಡಿಸಿ ಸರಿಯಾಗಿ ನಡಿಸುವುದಕ್ಕೆ ಸ್ವಲ್ಪ ಸಾವಕಾಶವಾಯಿತು. ಒಟ್ಟು ಪ್ರಜಾಸಂಖ್ಯೆಯಲ್ಲಿ ಸೇಕಡ 2.9 ರಷ್ಟು ಜನ ಎಂದರೆ, ಒಟ್ಟು 1,66,000 ಜನಗಳು ಈ ಸಾಂಕ್ರಾಮಿಕ ರೋಗದಿಂದ ಸತ್ತರೆಂದು ಗೊತ್ತುಮಾಡಲ್ಪಟ್ಟಿದೆ. ಪ್ರಜೆಗಳಿಗೆ ತಕ್ಕ ಸಹಾಯವನ್ನು ಕೊಡುವುದಕ್ಕಾಗಿ ಸರ್ಕಾರದವರು 81,000 ರೂಪಾಯಿಗಳನ್ನು ಖರ್ಚು ಮಾಡಿದರು. ಟವನುಗಳಲ್ಲಿಯೂ ಗ್ರಾಮಾಂತರಗಳಲ್ಲಿಯೂ ವೈದ್ಯಚಿಕಿತ್ಸೆ, ಸಾಂಕ್ರಾಮಿಕ ರೋಗಗಳ ನಿವಾರಣೆ, ಸ್ಥಳನೈರ್ಮಲ್ಯ ಮತ್ತು ಪ್ರಜೆಗಳ ಆರೋಗ್ಯ ಈ ಬಾಬುಗಳಿಗೆ ಸಮರ್ಪಕವಾದ ಏರ್ಪಾಡುಗಳನ್ನು ಶೀಘ್ರವಾಗಿಯೂ ಅವಶ್ಯಕವಾಗಿಯೂ ಮಾಡಬೇಕಾಗಿರುವುದೆಂದು ಈ ರೋಗದಿಂದ ಸರ್ಕಾರದವರಿಗೆ ಎಂದಿಗಿಂತಲೂ ಸ್ಪಷ್ಟವಾಗಿ ಅನುಭವಕ್ಕೆ ಬಂದಿರುವುದು. 1919 ನೇ ಇಸವಿ ಫೆಬ್ರವರಿ 18 ನೇ ತಾರೀಖು ಸರ್ಕಾರೀ ಹುಕುಮಿನ ಮೂಲಕ ನೇಮಕವಾದ ಕಮಿಟಿಯವರು ಪ್ರಕೃತದಲ್ಲಿ ಈ ವಿಷಯಗಳನ್ನೆಲ್ಲಾ ಕುರಿತು ವಿಚಾರಮಾಡುತ್ತಿರುವರು. ಅವರ ರಿಪೋರ್ಟು ತಲಪಿದ ಕೂಡಲೆ ಈ ಉದ್ದೇಶವು ನೆರವೇರುವಂತೆ ತಕ್ಕ ಚುರುಕಾದ ಏರ್ಪಾಡುಗಳನ್ನು ನಡಿಸಲು ಸರ್ಕಾರದವರು ಸಿದ್ಧರಾಗಿರುವರು.

ಕಾಲಸ್ಥಿತಿ ಮತ್ತು ಆಹಾರಧಾನ್ಯಗಳ ಸ್ಥಿತಿ.—ಕಳೆದ ವರ್ಷವೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಪ್ರತಿ ತಿಂಗಳಲ್ಲೂ ಮಳೆಬೆಳೆಗಳ ಸ್ಥಿತಿಯು ವ್ಯಾಕುಲವನ್ನುಂಟುಮಾಡುತ್ತಲೇ ಇದ್ದಿತು. ಪ್ರಸ್ಥಭೂಮಿಯಾದ ಮೈಸೂರು ಸಂಸ್ಥಾನವು ಈಗಲೇ ಅಲ್ಲ, ಯಾವಾಗ್ಗೂ ಹೀಗೆ ಚಿಂತೆಯನ್ನುಂಟುಮಾಡುತ್ತಲೇ ಬಂದಿದೆ.

1918 ನೆಯ ವರ್ಷದಲ್ಲಿ ಮುಂಗಾರು ಹಿಂಗಾರು ಮಳೆಗಳೆರಡೂ ಶುದ್ಧಾಂಗವಾಗಿ ತಪ್ಪಿಹೋದವು. ಸಂಸ್ಥಾನದ ಮುಖ್ಯ ಆಹಾರದ ಧಾನ್ಯಗಳಿಂದ ಸಾಗುವಳಿಯಾಗಿದ್ದ ಒಟ್ಟು ವಿಸ್ತೀರ್ಣವು ಮೊದಲಿಗಿಂತ ಬಹಳ ಮಟ್ಟಿಗೆ ಕಮ್ಮಿಯಾಗಿದ್ದಿತು. ಧರೀದಿಗಳು ಸುಮ್ಮನೆ ಹೆಚ್ಚುತ್ತ ಬಂದವು. ಆಹಾರದ ಧಾನ್ಯಗಳ ಸರಬರಾಯಿಯೂ ಕಮ್ಮಿಯಾದ್ದರಿಂದ ಜನರಿಗೆ ಹೆಚ್ಚು ಕಷ್ಟವಾಗುತ್ತಾ ಬಂತು. ಆದುದರಿಂದ ಸರ್ಕಾರದವರು ದಾಸ್ತಾನುಗಳು, ಅವುಗಳ ಹಂಚಿಕೆ, ಮತ್ತು ಧಾನ್ಯಗಳ ಪರಮಾವಧಿ ಬೆಲೆಯನ್ನು ಗೊತ್ತುಮಾಡುವುದು ಇವುಗಳನ್ನೆಲ್ಲಾ ತಮ್ಮ ಹತೋಟಿಗೆ ತೆಗೆದುಕೊಳ್ಳಬೇಕಾಯಿತು. ಆಹಾರಧಾನ್ಯಗಳ ವಿಷಯದಲ್ಲಿ ಉಂಟಾಗಿರುವ ಈ ಸ್ಥಿತಿಯನ್ನು ಮೇಲ್ಪಡಿಸುವುದಕ್ಕಾಗಿ ಸರ್ಕಾರದವರು ಆಗಿಂದಾಗ್ಗೆ ಮಾಡಿರುವ ಏರ್ಪಾಡುಗಳನ್ನೆಲ್ಲಾ ನ್ಯಾಯವಿಧಾಯಕ ಸಭೆಯ ಕಳೆದ ಮೀಟಿಂಗಿನಲ್ಲಿ ನಾವು ಮೊದಲೇ ಪೂರ್ತಿಯಾಗಿ ವಿವರಿಸಿರುವೆವು. ಆ ಭಾಷಣದ ಕನ್ನಡ ತರ್ಜುಮೆಯನ್ನು ಪ್ರಕಟಿಸಬೇಕೆಂದು ಈಚೆಗೆ ಹುಕುಂ ಮಾಡಿರುವುದರಿಂದ ತಮಗೆಲ್ಲಾ ಆ ವಿವರಗಳು ತಿಳಿದುಬರುವುವೆಂದು ನಾವು ಎಣಿಸುತ್ತೇವೆ. ಕಷ್ಟನಿವಾರಣೆ ಮತ್ತು ಆಹಾರದ ಸರಬರಾಯಿಯ ಬಗ್ಗೆ ಈಗ ಮಾಡುತ್ತಿರುವ ಏರ್ಪಾಡುಗಳು ಮುಂದಿನ ಮಳೆಗಳಾಗುವವರೆಗೂ ಬಹುಮಟ್ಟಿಗೆ ಜನಗಳಿಗೆ ಸಹಾಯಕರವಾಗಿ ಪರಿಣಮಿಸುವುವೆಂದು ಎಣಿಸುವುದಕ್ಕೆ ಸಾಕಾದಷ್ಟು ಕಾರಣಗಳಿವೆ. ಮಾರಿಕಣಿವೆ ಮತ್ತು ಕನ್ನಂಬಾಡಿಯ ನಾಲೆಗಳ ಕೆಳಗೂ ಕೆರೆಗಳ ಅಂಗಳಗಳಲ್ಲಿಯೂ ಆಹಾರದ ಧಾನ್ಯಗಳನ್ನು ಬೆಳೆಯಲು ಸರ್ಕಾರದವರು ಕೊಟ್ಟಿರುವ ಪ್ರೋತ್ಸಾಹಗಳನ್ನೂ ಅನುಕೂಲ್ಯಗಳನ್ನೂ ರೈತರು ವಿಶೇಷವಾಗಿ ಉಪಯೋಗಿಸಿಕೊಳ್ಳುವರೆಂತಲೂ, ಬೀಜದ ಕಾಳು ಮತ್ತು ಗೊಬ್ಬರವನ್ನು ಕೊಳ್ಳುವುದಕ್ಕೆ ಧಾರಾಳವಾಗಿ ಮುಂಗಡಗಳನ್ನು ಕೊಡುವಂತೆ ಈಚೆಗೆ ಮಂಜೂರಾಗಿರುವ ಸೌಕರ್ಯಗಳಿಂದಲೂ ಮತ್ತು ಬಂಜರು ಜಮೀನುಗಳ ಮೇಲೂ ಬೆಳೆಗಳು ಪೂರ್ತಿಗಳು ಕೆಟ್ಟುಹೋಗಿರುವ ಜಮೀನುಗಳ ಮೇಲೂ ತರೀ ಕಂದಾಯವನ್ನು ಮನ್ನಾ ಮಾಡಿರುವುದರಿಂದಲೂ ಸಹ ಈ ಅನಾವೃಷ್ಟಿಕಾಲದಲ್ಲಿ ಜನರಿಗೆ ತಕ್ಕಮಟ್ಟಿಗೆ ಸಹಾಯವಾಗುವುದೆಂತಲೂ ನಾವು ನಿಜವಾಗಿ ನಿರೀಕ್ಷಿಸುತ್ತೇವೆ.

ಬಂಡವಾಳದ ಖರ್ಚು.—ನಮ್ಮ ಬಂಡವಾಳದ ಕಾಂಗಾರಿಗಳನ್ನು ಪೂರೈಸುವುದಕ್ಕೆ ಸಾಧ್ಯವಾದಷ್ಟುಮಟ್ಟಿಗೆ ಜಾಗ್ರತೆಯಾಗಿ ಸೆಕ್ಯೂರಟಿಗಳನ್ನು 80 ಲಕ್ಷದವರೆಗೆ ಮಾರಿಬಿಡಬೇಕೆಂದು ಮಿ|| ದತ್ತರವರು ಸಲಹೆಯನ್ನು ಕೊಟ್ಟಿದ್ದರು. ಮತ್ತು 1919-20 ರಲ್ಲಿ ಸಾಲಮಾಡದೆ 60 ಲಕ್ಷ ರೂಪಾಯಿಗಳನ್ನು ಬಂಡವಾಳದ ಖರ್ಚಿಗಾಗಿ ನಾವು ಒದಗಿಸಬಹುದೆಂದು ಅವರು ಅಂದಾಜಾ ಮಾಡಿದ್ದರು. ನಮ್ಮ ಬಜೆಟ್ ಅಂದಾಜವನ್ನು ಅದಕ್ಕನುಸಾರವಾಗಿ ತಯಾರು ಮಾಡಿದೆಯಲ್ಲದೆ, ಸಾಲಮಾಡದೆಯೇ 90 ಲಕ್ಷಗಳನ್ನು ಬಂಡವಾಳದ ಖರ್ಚಿಗೆ ಒದಗಿಸಿದೇವೆ ; ಆದರೆ (1) ಬಡಾವಣೆ ಕೆಲಸಗಳಿಗೂ ಅಭಿವೃದ್ಧಿ ಕೆಲಸಗಳಿಗೂ ಖರ್ಚು ಜಾಸ್ತಿಯಾಗುತ್ತಿರುವುದು ; (2) ಸಾಲಗಳ ಮೇಲಿನ ಬಡ್ಡಿ ; (3) ಡಿಪ್ರೀಸಿಯೇಷನ್ ಖರ್ಚುಗಳು ; (4) ಬೇರೆ ಬೇರೆ ಉದ್ದೇಶದಿಂದ ಇಟ್ಟಿರುವ ರಿಜರ್ವ್‌ಗಳು ಎಂದರೆ ಕ್ಷಾಮ ಮುಂತಾದವುಗಳಿಗಾಗಿ ತೆಗೆದಿಟ್ಟಿರುವ ಹಣ ; ಇವುಗಳನ್ನು ಒದಗಿಸುವುದಕ್ಕೆ ಸಾಕಾದಷ್ಟು ಹೆಚ್ಚಿಗೆ ಹಣವು ನಮ್ಮ ಸಾಲಿಯಾನಾ ಹುಟ್ಟುವಳಿ ಮತ್ತು ಖರ್ಚು ಲೆಕ್ಕಗಳಲ್ಲಿ ಒದಗುವಂತೆ ಆಯವ್ಯಯದ ಅಂದಾಜನ್ನು ನಾವು ಕ್ರಮಪಡಿಸಬೇಕಾಗಿದೆ—ಈಗಾಗಲೇ ನಡೆಯುತ್ತಿರುವ ಅಥವಾ ಪ್ರಾರಂಭಿಸಿರುವ ಕಾಂಗಾರಿಗಳ ವಿಷಯದಲ್ಲಿ ಖರ್ಚನ್ನು ಕಡಮೆಮಾಡುವುದು ಸರಿಯಾದ ಮಾರ್ಗವಲ್ಲ. ಮೇಲೆ ನಮೂದಿಸಿದ ನಾಲ್ಕು ಬಾಬುಗಳಲ್ಲಿ ಮಾಡಬೇಕಾಗುವ ನಿರ್ಬಂಧವಾದ ಖರ್ಚುಗಳನ್ನು ಒದಗಿಸುವುದಕ್ಕೆ ಸಾಮಾನ್ಯ ಪ್ರಮಾಣದಷ್ಟು, ಎಂದರೆ 50 ಲಕ್ಷಗಳಷ್ಟು, ಸರ್‌ಪ್ಲಸ್ ಹಣವು ಉಳಿಯುವಂತೆ ನಮ್ಮ ಮುಂದಿನ ಬಜೆಟ್‌ಗಳನ್ನು ತಯಾರು ಮಾಡುವುದೂ ಸಹ ನಮ್ಮ ಕರ್ತವ್ಯವಾಗಿದೆ. ಅಲ್ಲದೆ ನಮ್ಮ ಉತ್ಪತ್ತಿಯ ಬಾಬುಗಳಿಗೆ ಗಮನಕೊಡಬೇಕೆಂತಲೂ ಖರ್ಚನ್ನು ಇನ್ನೂ ತಪಸೀಲಾಗಿ ಪರಿಶೀಲಿಸಬೇಕೆಂತಲೂ ನಮಗೆ ತೋರುತ್ತದೆ.

ತಿದ್ದುಪಾಟಾದ ಅಂದಾಜಾಗಳು.—ಚಾಲ್ತಿ ವರ್ಷದ ಜಮಾಬಾಬುಗಳ ತಿದ್ದುಪಾಟಾದ ಅಂದಾಜಾಗಳಲ್ಲಿ ಬಜೆಟ್ಟಿಗಿಂತ 3½ ಲಕ್ಷ ಹೆಚ್ಚಾಗಿದೆ. ಇದು ಕೆಲವು ಬಾಬುಗಳಲ್ಲಿ ಹೆಚ್ಚಾಗಿಯೂ ಮತ್ತು ಕೆಲವು ಬಾಬುಗಳಲ್ಲಿ ಕಡಮೆಯಾಗಿಯೂ ಹುಟ್ಟುವಳಿಯಾಗುವುದರ ನಿವ್ವಳ ಫಲಿತಾಂಶವಾಗಿದೆ. ಜಮೀನುಕಂದಾಯ, ಫಾರೆಸ್ಟು, ಗಣಿಗಳ ಉತ್ಪತ್ತಿ, ಕೃಷ್ಣರಾಜಸಾಗರ ಕಾಂಗಾರಿಗಳು ಮತ್ತು ಕಾವೇರೀ ಪವರ್ ಏರ್ಪಾಡು, ಈ ಬಾಬುಗಳಲ್ಲಿ ಬಜೆಟ್ಟಿಗಿಂತ ಕಡಮೆಯಾಗಿಯೂ, ಅಬ್ಕಾರಿ, ಅಸ್ಸೆಸ್ಡ್‌ಟ್ಯಾಕ್ಸ್, ಹುಟ್ಟುವಳಿ, ರೈಲ್ವೆಗಳು ಮತ್ತು ಗಂಧದ ಎಣ್ಣೆ ಕಾರ್ಖಾನೆ, ಈ ಬಾಬುಗಳಲ್ಲಿ ಬಜೆಟ್ ಅಂದಾಜಾಕ್ಕಿಂತ ಹೆಚ್ಚಾಗಿಯೂ ಹುಟ್ಟುವಳಿ ಉಂಟಾಗಿದೆ.—ಖರ್ಚುಬಾಬಿನಲ್ಲಿ ಜನರಲ್ ಆಡಳಿತ, ಸ್ಯಾನಿಟೇಷನ್ ಮತ್ತು ಸಿವಿಲ್ ಕಾಂಗಾರಿಗಳಿಗೆ ಸಂಬಂಧಪಟ್ಟ ಖರ್ಚು ಬಜೆಟ್ ಸಂಖ್ಯೆಗಳಿಗಿಂತಲೂ ಹೆಚ್ಚಾಗಿದೆ. ಭಾರೀ ಹೆಚ್ಚು ವರಿಗಳಿಗೆ ಇನ್‌ಫ್ಲುಯೆನ್‌ಜಾ, ಆಹಾರಧಾನ್ಯಗಳ ಹತೋಟಿಗಾಗಿ ಮಾಡಿದ ಏರ್ಪಾಡು, ಯುದ್ಧದ ಮತ್ತು ಕ್ಷಾಮದ ಭತ್ಯಗಳು ಕಾರಣಗಳಾಗಿವೆ.—ವಿದ್ಯಾಭ್ಯಾಸ, ಹುಟ್ಟುವಳಿಗೆ ಖರ್ಚುಬೀಳುವ ನೀರಾವರಿ ಕಾಂಗಾರಿಗಳು, ವ್ಯವಸಾಯ ಮತ್ತು ಸೈನ್ಯ, ಈ ಬಾಬುಗಳಲ್ಲಿ ತೆಗೆದಿಟ್ಟ ಹಣವು ಖರ್ಚಾಗದೆ ಉಳಿಯುವುದೆಂಬ ನಿರೀಕ್ಷಣೆ ಇರುತ್ತದೆ. ಈ ಅಂದಾಜಾಗಳಿಂದ ಬಜೆಟ್ಟಿನಲ್ಲಿ ದಾಖಲಾಗಿರುವ 41,000 ರೂಪಾಯಿಗಳಿಗೆ ಬದಲಾಗಿ 49,000 ರೂಪಾಯಿಗಳ ನಿವ್ವಳ ಸರ್‌ಪ್ಲಸ್ ಬಂದಂತಾಯಿತು. ಮುಂದಿನ ವರ್ಷದ ಬಜೆಟ್ಟಿನ ಮೇರೆಗೆ ಅಂದಾಜಾಗಿರುವ ವರಮಾನದಲ್ಲಿ ತೋರಿಬರುವ ಬದಲಾವಣೆಗಳಿಂದ 5⅓ ಲಕ್ಷ ರೂಪಾಯಿಗಳು ಹೆಚ್ಚಿರುತ್ತವೆ. ಲ್ಯಾಂಡ್ ರೆವಿನ್ಯೂ, ಫಾರೆಸ್ಟು, ಎಕ್ಸೈಜು, ಈ ಬಾಬುಗಳಲ್ಲಿ ಹೆಚ್ಚಿಗೆ ಕಂಡುಬಂದಿರುವದು ಅಲ್ಲದೆ ಕೈಗಾರಿಕೆ ಕಾರ್ಖಾನೆಗಳಲ್ಲೂ ಹೆಚ್ಚಿಗೆ ಕಂಡುಬಂದಿರುವುದು. ಕಾರ್ಖಾನೆಗಳು ನಿವ್ವಳ 1 ಲಕ್ಷ ರೂಪಾಯಿಗಳ ವರಮಾನವನ್ನು ಕೊಡುವುದಾಗಿ ಬಜೆಟ್ಟಿನಲ್ಲಿ ತೋರಿಸಿರುತ್ತದೆ. ಇದು ಬಹುಮಟ್ಟಿಗೆ ಸಂತೋಷವನ್ನೂ ಪ್ರತ್ಯಾಶೆಯನ್ನೂ ಉಂಟುಮಾಡುವ ಅಂಶವಾಗಿದೆ.—ಖರ್ಚುಭಾಗದಲ್ಲಿ ಪ್ರಾಯೇಣ ಎಲ್ಲಾ ಮೇಜರ್ ಹೆಡ್ಡುಗಳಲ್ಲೂ ಹಾಲೀ ಇರುವ ಲೋಪಗಳನ್ನು ಸರಿಪಡಿಸುವುದರ ನಿಮಿತ್ತವಾಗಿ ಮತ್ತು ಅಭಿವೃದ್ಧಿ ಕಾರ್ಯಗಳ ನಿಮಿತ್ತವಾಗಿ, ಎಂದರೆ ಎಕ್ಸಿಕ್ಯೂಟಿವ್ ಮತ್ತು ಜುಡಿಷಲ್ ಕೆಲಸಗಳನ್ನು ಬೇರೆಪಡಿಸುವ ಏರ್ಪಾಡನ್ನು ಇತರ ಕಡೆಗಳಲ್ಲಿ ಪ್ರಚಾರಕ್ಕೆ ತರುವುದು, ಪೋಲೀಸು ಇಲಾಖೆಯ ಪುನರ್ವ್ಯವಸ್ಥೆ, ವೈದ್ಯ ಸಹಾಯವನ್ನು ಹೆಚ್ಚಿಸುವುದು, ವಿದ್ಯಾಭ್ಯಾಸಕ್ಕಾಗಿ ಹೆಚ್ಚಾಗಿ ಹಣವನ್ನು ಒದಗಿಸುವುದು. ಪಟ್ಟಣಗಳಲ್ಲೂ ಗ್ರಾಮಾಂತರ ಪ್ರದೇಶಗಳಲ್ಲೂ ಜನೋಪಯುಕ್ತ ಅಭಿವೃದ್ಧಿ ಕಾರ್ಯಗಳನ್ನು ನಡೆಯಿಸುವುದು ಮುಂತಾದವುಗಳಿಗಾಗಿ, ತಕ್ಕಮಟ್ಟಿಗೆ ಹೆಚ್ಚು ಮೊಬಲಗನ್ನು ತೋರಿಸಿದೆ.

ಪ್ರಕೃತದ ದ್ರವ್ಯೋಪಪತ್ತಿ.—ಚಾಲ್ತಿ ಸಾಲಿನ ತಿದ್ದುಪಡಿಯಾದ ಅಂದಾಜಾಗಳಿಂದ ತಿಳಿಯಬರುವಮಟ್ಟಿಗೆ ಪ್ರಕೃತದ ಉಪಪತ್ತಿಯ ಸ್ಥಿತಿಯು ಹೇಗಿರುವುದೆಂದರೆ, 299-12 ಲಕ್ಷ ರೂಪಾಯಿಗಳ ವರಮಾನವೂ, ಹುಟ್ಟುವಳಿಗೆ ವಜಾ ಹಾಕಬೇಕಾದ 298-63 ಲಕ್ಷ ಖರ್ಚು ತೋರಿಬರುತ್ತವೆ. ಈ ಅಂದಾಜಾಗಳಿಗೂ ಬಜೆಟ್ಟಿನಲ್ಲಿ ನಮೂದು ಮಾಡಿದ್ದ ಅಂದಾಜುಗಳಿಗೂ ಬಹಳ ವ್ಯತ್ಯಾಸವಿಲ್ಲ. ವರಮಾನ ಮತ್ತು ವರಮಾನಕ್ಕೆ ಹಾಕಬೇಕಾದ ಖರ್ಚು, ಇವುಗಳಲ್ಲಿ ಮೊದಲಿನ ಬಜೆಟ್ಟಿನಲ್ಲಿ ನಮೂದು ಮಾಡಿದ್ದುದಕ್ಕೂ ತಿದ್ದುಪಡಿಯಾದ ಅಂದಾಜಾಗಳಲ್ಲಿರುವದಕ್ಕೂ ವ್ಯತ್ಯಾಸವು 79,000 ರೂ. ಮತ್ತು 71,000 ರೂಪಾಯಿ ಆಗಿರುವುದು. ಲ್ಯಾಂಡ್ ರೆವಿನ್ಯೂ ಮತ್ತು ಫಾರೆಸ್ಟು ಬಾಬುಗಳಲ್ಲಿ ವರಮಾನವು ಚಾಲ್ತಿ ಸಾಲಿನಲ್ಲಿ ವಿಶೇಷವಾಗಿ ಕಡಮೆ ಬಿದ್ದುದನ್ನೂ ಅಸ್ಸೈನ್‌ಡ್‌ಟ್ರ್ಯಾಕ್ಟ್, ಎಂದರೆ ಬೆಂಗಳೂರ್ ಲಷ್ಕರ್ ಪ್ರದೇಶದ ಹುಟ್ಟುವಳಿಯ ಪ್ರಯುಕ್ತ ವರಮಾನವು ವಿಶೇಷವಾಗಿ ಹೆಚ್ಚಿರುವುದನ್ನೂ ಗಣನೆಗೆ ತಂದುಕೊಂಡು, ನಷ್ಟ ಕೊಡುವ ಕಾಂಗಾರಿಗಳ ಬಾಬಿನಲ್ಲಿ ಕ್ರಮವಾದ ನಿವ್ವಳ ವರಮಾನಕ್ಕೆ ಅವಕಾಶ ಕೊಟ್ಟಲ್ಲಿ, ವಾಡಿಕೆಯಾದ ಸಾಲೀಯಾನಾ ಹುಟ್ಟುವಳಿಯನ್ನು 300 ಲಕ್ಷ ರೂಪಾಯಿಗಳನ್ನಾಗಿ ಅಂಗೀಕರಿಸಬಹುದು.—ಚಾಲ್ತಿ ಸಾಲಿನಲ್ಲಿ ಸರ್ವಿಸ್ ಹೆಡ್ಡುಗಳಲ್ಲಿ ಪಾವತಿಯಾಗುವ ಒಟ್ಟು ಮೊಬಲಗು 315-63 ಲಕ್ಷ ರೂಪಾಯಿಗಳಾಗುವವು.—ಈ ವರುಷದಲ್ಲಿ ಪ್ರತ್ಯೇಕವಾಗಿ ಒಂದೇ ಸಲದ ಖರ್ಚಾಗಿ ಪಬ್ಲಿಕ್ ವರ್ಕ್ಸು ಬಾಬಿನಲ್ಲಿ ಕುಮಾರಪಾರ್ಕನ್ನು ಕೊಂಡುಕೊಳ್ಳುವುದಕ್ಕಾಗಿಯೂ ಮತ್ತು ಮೈಸೂರು ಅತಿಥಿ ಭವನಕ್ಕಾಗಿಯೂ 6 ಲಕ್ಷವನ್ನೂ, ಯುದ್ಧದ ಮತ್ತು ಕ್ಷಾಮದ ಭತ್ಯಕ್ಕಾಗಿಯೂ ಆಹಾರಧಾನ್ಯಗಳ ಬೆಲೆಯನ್ನು ಹತೋಟಿಯಲ್ಲಿ ತರುವ ಮತ್ತು ಸರಬರಾಯಿ ಮಾಡುವದಕ್ಕಾಗಿ ಇಟ್ಟಿರುವ ಶಿಬ್ಬಂದಿಗಾಗಿ 4½ ಲಕ್ಷ ರೂಪಾಯಿಗಳನ್ನೂ ಇದಲ್ಲದೆ ಇನ್‌ಫ್ಲುಯಂಜಾ ವ್ಯಾಧಿಯ ನಿವಾರಣೆಗಾಗಿ ತಗಲಿದ ವಿಶೇಷ ಖರ್ಚುಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡಲ್ಲಿ ಇಲಾಖೆಗಳಲ್ಲಿಯೂ ಮತ್ತು ರಿಜರ್ವಿಗಾಗಿಯೂ ಕ್ರಮಪ್ರಕಾರದ ಖರ್ಚು 306 ಲಕ್ಷ ರೂಪಾಯಿಗಳು ಆಗುವವೆಂದು ಇಟ್ಟುಕೊಳ್ಳಬಹುದು. ಬಂಡವಾಳದ ಕಾಮಗಾರಿಗಳ ಮೇಲಣ ಬಡ್ಡಿ ನಷ್ಟದ ಬಗ್ಗೆ 9 ಲಕ್ಷ ರಿಜರ್ವ್ ಮೊಬಲಿಗೆ ಖರ್ಚು ಹಾಕಬೇಕಾಗಿರುವ 4 ಲಕ್ಷ ರೂಪಾಯಿಗಳನ್ನು ಈ ಕೊನೆ ಮೊಬಲಗಿನ ಪೈಕಿ ವಜಾಹಾಕಬೇಕಾಗಿದೆ. ಈ ರೀತಿಯಲ್ಲಿ ಕ್ರಮಪ್ರಕಾರದ ಸಾಲಿಯಾನಾ ನಿವ್ವಳ ಖರ್ಚು 302 ಲಕ್ಷ ರೂಪಾಯಿಗಳಾಗುವವು. ಎಂದರೆ 2 ಲಕ್ಷ ರೂಪಾಯಿಗಳಷ್ಟು ಮೊಬಲಗು ಖರ್ಚಿಗೆ ಸಾಲದೆ ಹೋಗುವುದು. ಬರುವ ವರುಷದಲ್ಲಿ 3,04,98,000 ರೂಪಾಯಿಗಳ ಹುಟ್ಟುವಳಿಯನ್ನು ಅಂದಾಜು ಮಾಡಿರುತ್ತೇವೆ. ಮತ್ತು ಈ ಹುಟ್ಟುವಳಿಗೆ ಖರ್ಚುಹಾಕಬೇಕಾದ ಮೊತ್ತವನ್ನು 3,06,08,000 ರೂಪಾಯಿಗಳನ್ನಾಗಿ ಅಂದಾಜು ಮಾಡಿದ್ದೇವೆ. ಇದರಿಂದ ಒಟ್ಟಿನಲ್ಲಿ 1,10,000 ಸಾಲದೆ ಹೋದಂತಾಯಿತು.—ಚಾಲ್ತಿ ಸಾಲಿನ ಕೊನೆಯೊಳಗೆ ಸಂಸ್ಥಾನದ ನಿವ್ವಳ ಆಸ್ತಿಯು 639.75 ಲಕ್ಷ ರೂಪಾಯಿಗಳಷ್ಟು ಆಗುವುದು. ಮುಂದಿನ ವರುಷದಲ್ಲಿ ಅದಕ್ಕೆ ಇನ್ನು 4 ಲಕ್ಷದಷ್ಟು ಹೆಚ್ಚಿಗೆ ಜಮೆಯಾಗುವುದು.—ಚಾಲ್ತಿ ಸಾಲಿನ ಅಖೈರಿನೊಳಗಾಗಿ ಲಾಭಕರವಾದ ಕಾಂಗಾರಿಗಳಿಗೆ ಮೂಲಧನರೂಪದಲ್ಲಿ ಖರ್ಚು ಆಗುವುದು 704 ಲಕ್ಷವಾಗುವದೆಂದು ಅಂದಾಜುಮಾಡಿದೆ. ಮುಂದಿನ ವರುಷದಲ್ಲಿ ಕಾಂಗಾರಿಗಳಿಗೆ ಖರ್ಚು 90 ಲಕ್ಷವೆಂದು ಗೊತ್ತುಮಾಡಿದೆಯಾಗಿ 1920 ನೇ ವರುಷದ ಜೂನ್ 30 ನೇ ತಾರೀಖಿಗೆ ಈ ರೀತಿಯ ಕಾಂಗಾರಿಗಳಿಗಾಗಿ ಸರ್ಕಾರದವರು ಒದಗಿಸಿರುವುದು ಒಟ್ಟು 794 ಲಕ್ಷ ರೂಪಾಯಿಗಳಾಗುವವು.

ಉಪಸಂಹಾರ.—ಸಂಸ್ಥಾನದ ಆಯವ್ಯಯದ ಪ್ರಕೃತಸ್ಥಿತಿಯನ್ನು ಕುರಿತು ಮೇಲೆ ತಿಳಿಸಿದ ಸಂಗ್ರಹವಾದ ವಿವರಣೆಯಿಂದ ನಮ್ಮ ದ್ರವ್ಯೋಪಪತ್ತಿಯು ಒಳ್ಳೆಯ ಸ್ಥಿತಿಯಲ್ಲಿರುವುದೆಂದು ನಿಮಗೆ ತೃಪ್ತಿಕರವಾಗಿ ತಿಳಿಯಬಂದಿರಬಹುದೆಂದು ನಾವು ಎಣಿಸುತ್ತೇವೆ. ಆದರೂ ಹುಟ್ಟುವಳಿ ಲೆಕ್ಕದಿಂದ ಮುಂದೆ ಕೊಡಬೇಕಾಗಿ ಬರುವ ಹೆಚ್ಚಿನ ಖರ್ಚುಬಾಬುಗಳನ್ನು ವಿಶೇಷ ಗಮನದೊಡನೆ ಪರೀಕ್ಷಿಸುವುದು ಆವಶ್ಯಕವು.—ಬರುವ ದಸರಾ ಸಮಯದಲ್ಲಿ ಕ್ರಮಪ್ರಕಾರವಾಗಿ ನಡೆಯುವ ಈ ಸಭೆಯ ವಾರ್ಷಿಕ ಅಧಿವೇಶನದಲ್ಲಿ ಪರ್ಯಾಲೋಚನೆಗೆ ಬರುವ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನು ಈ ಅಧಿವೇಶನದಲ್ಲಿ ಚರ್ಚಿಸುವುದು ಅನಾವಶ್ಯಕ. ಆರೆದ ರಾಜ್ಯಾಡಳಿತ ಎಲ್ಲಾ ಭಾಗಗಳಲ್ಲಿಯೂ ಖರ್ಚಿಗೆ ಹೆಚ್ಚು ಹೆಚ್ಚಾಗಿ ಹಣಬೇಕಾಗುತ್ತಿರುವ ವಿಷಯವನ್ನೂ, ಖರ್ಚು ತಗಲುವ ಯಾವ ಏರ್ಪಾಡುಗಳನ್ನು ಮಾಡಬೇಕೆಂದೇ ಆಗಲಿ ಹೇಳುವ ಸಲಹೆಗಳನ್ನು ತಾರತಮ್ಯವನ್ನರಿತು ಚರ್ಚಿಸುವುದು ಅವಶ್ಯಕವೆಂಬುದನ್ನೂ ತಮ್ಮ ಗಮನಕ್ಕೆ ತರಬೇಕಾದುದು ಅವಶ್ಯಕವಾಗಿದೆ. ಹೀಗೆ ಮಾಡಿದಲ್ಲಿ ಒಂದೇ ಸಮವಾದ ಅಭಿವೃದ್ಧಿಯೂ ಮೇಲ್ಮೆಯೂ ಇದುವರೆಗೆ ಮೈಸೂರು ಸಂಸ್ಥಾನದ ರಾಜ್ಯಭಾರದಲ್ಲಿ ಮುಖ್ಯಲಕ್ಷಣಗಳಾಗಿದ್ದಂತೆ ಮುಂದಕ್ಕೂ ಸ್ವಲ್ಪವೂ ಕಡಮೆಯಾಗದೆಯೂ ಸರ್ಕಾರದವರಿಗೆ ದ್ರವ್ಯದ ವಿಷಯದಲ್ಲಿ ಚಿಂತೆಗೆ ಕಾರಣವಿಲ್ಲದೆಯೂ ನಡೆದುಬರುವುವು.—ಉತ್ಕೃಷ್ಟವಾದ ಉದ್ದೇಶಗಳೂ ಏರ್ಪಾಡುಗಳೂ ನಮ್ಮಲ್ಲಿ ಬೇಕಾದಷ್ಟು ಇರುವುವು. ಪ್ರಾಜ್ಞರೂ ಪ್ರಜಾಹಿತಾತ್ಪರರೂ ಆದ ಶ್ರೀಮನ್ಮಹಾರಾಜ ಸಾಹೇಬರವರ ಅಪ್ಪಣೆಯನ್ನು ಅನುಸರಿಸಿ ಕ್ರಮಗತರಾದ ರಾಜ್ಯನಿರ್ವಾಹಕರು ಮೈಸೂರು ದೇಶದ ಅಮಿತವಾದ ಸಂಪತ್ತನ್ನು ವೃದ್ಧಿಪಡಿಸಲು ಪ್ರಾರಂಭಿಸಿ ನಡೆಸತೊಡಗಿದ ಕಾರ್ಯಗಳಲ್ಲಿ ನಾವೂ ಉದ್ಯುಕ್ತರಾಗಿರುವೆವು. ಇನ್ನು ಕೊಂಚಕಾಲದ ವರೆಗೆ ಹಿಂದೆ ಪ್ರಾರಂಭಿಸಿದ ಕಾರ್ಯಗಳನ್ನು ಸ್ಥಿರಪಡಿಸುವುದೇ ನಮ್ಮ ಮುಖ್ಯೋದ್ದೇಶವಾಗಿರಬೇಕು. ಸರ್ ಎಂ. ವಿಶ್ವೇಶ್ವರಯ್ಯನವರಿಂದಲೂ ಅವರ ಹಿಂದೆ ಇದ್ದ ವಿಖ್ಯಾತರಾದ ದಿವಾನರವರುಗಳಿಂದಲೂ, ಉಂಟಾದ ಅಭಿವೃದ್ಧಿ ವಿಷಯಕವಾದ ಉತ್ಸಾಹವು ಕುಂದದೆ ಇರುವಂತೆ ಅದನ್ನು ಕಾಪಾಡಿಕೊಂಡು, ಹಿಂದೆ ಅನೇಕ ವರ್ಷಗಳ ಕಾಲದಿಂದ ಈ ಸಭೆಯಲ್ಲಿ ದಿವಾನರುಗಳು ಮಾಡಿದ ಭಾಷಣಗಳಲ್ಲಿ ಪದೇ ಪದೇ ಸೂಚಿಸಲ್ಪಟ್ಟ ಏರ್ಪಾಡು ಮತ್ತು ಪ್ರಾಜೆಕ್ಟುಗಳ ಪೈಕಿ ಕೆಲವುಗಳ ವಿಷಯದಲ್ಲಿಯಾದರೂ ಸ್ಥಿರವಾದ ತಕ್ಕಷ್ಟು ಫಲಿತಾಂಶಗಳನ್ನು ತೋರಿಸಲು ಸಮರ್ಥರಾದರೆ, ಸರ್ಕಾರದವರು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಎಲ್ಲರ ವಿಶ್ವಾಸಕ್ಕೂ ಪಾತ್ರರಾಗುವರು.

ಈ ಕೆಳಗೆ ಕಂಡ ವಿಷಯಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ ಎಂದೂ, ಅವುಗಳನ್ನು ಕುರಿತು ಸರ್ಕಾರದವರ ಉದ್ದೇಶಗಳು ಶೀಘ್ರದಲ್ಲಿ ಪ್ರಕಟಿಸಲ್ಪಡುವುವು ಎಂದೂ ತಮಗೆ ತಿಳಿಸಲಪೇಕ್ಷಿಸುತ್ತೇವೆ:—(1) ದ್ರವ್ಯೋಪಪತ್ತಿಯ ಸ್ಥಿತಿಯನ್ನು ಕುರಿತು ಒಂದು ತಪಸೀಲಾದ ಪರಿಶೀಲನ. (2) ಮೈಸೂರು ಸಿವಿಲ್ ಸರ್ವೀಸನ್ನು ಉತ್ತಮಪಡಿಸುವುದು. (3) ಎಲ್ಲಾ ದರ್ಜೆಗಳ ಸರ್ಕಾರದ ನೌಕರರ ಚುನಾವಣೆಯ ಏರ್ಪಾಡು. (4) ಸರ್ಕಾರೀ ಕಟ್ಟಡಗಳು ಮತ್ತು ರಸ್ತೆಗಳನ್ನು ಕಾಪಾಡುವ ಕ್ರಮವನ್ನು ಮೇಲುಪಡಿಸುವುದು. (5) ಸಣ್ಣ ಕೆರೆಗಳ ದುರಸ್ತಿನ ವಿಷಯದ ಏರ್ಪಾಡನ್ನು ಕ್ರಮಪಡಿಸುವುದು. (6) ವಿದ್ಯಾಭ್ಯಾಸದ ಪದ್ಧತಿಯನ್ನು ಒಟ್ಟಿನಲ್ಲಿ ವಿಚಾರಮಾಡುವುದು. ಮಂಜೂರಾದ ಕಾರ್ಯಕ್ರಮಗಳನ್ನು ಅನುಸರಿಸಿ ನಡೆದಿರುವ ಕೆಲಸಗಳನ್ನು ಸ್ಥಿರಪಡಿಸುವುದು, ಮತ್ತು ಮುಂದೆ 5 ವರ್ಷಗಳ ಕಾಲದಲ್ಲಿ ಎಲ್ಲಾ ವರ್ಗದ ವಿದ್ಯಾಭ್ಯಾಸದ ವಿಷಯವನ್ನು ಕುರಿತು, ಮುಖ್ಯವಾಗಿ ಹಿಂದುಳಿದ ಪಂಗಡಗಳ ವಿದ್ಯಾಭ್ಯಾಸವನ್ನೂ ಕೈಗಾರಿಕೆ ಮತ್ತು ಕಸಬುದಾರಿ ವಿದ್ಯಾಭ್ಯಾಸ ಮುಂತಾದುವುಗಳನ್ನೂ ಕುರಿತು ಮಾಡುವ ಅಭಿವೃದ್ಧಿಯ ಏರ್ಪಾಡು (7) ಮಲೆನಾಡು ಆಡಳಿತವನ್ನು ಉತ್ತಮಪಡಿಸುವುದು. (8) ಡಿಸ್ಟ್ರಿಕ್ಟ್ ಆಡಳಿತವನ್ನು ಕ್ರಮಪಡಿಸುವುದು. (9) ಸಂಪದಭ್ಯುದಯ ಸಮಾಜದ ಖಾಯಂ ಏರ್ಪಾಡಿನ ವಿಷಯ. (10) ವೈದ್ಯ ಸಹಾಯವನ್ನು ಹೆಚ್ಚಿಸುವುದು ಮತ್ತು ಜನಾರೋಗ್ಯಕ್ಕೆ ತಕ್ಕ ಏರ್ಪಾಡನ್ನು ಮಾಡುವುದು. (11) ಪ್ರಜಾಪ್ರತಿನಿಧಿ ಸಭೆಯ ಪರಿಷ್ಕರಣ. (12) ಕಸಬುದಾರಿ ಕೆಲಸಗಳಿಗೆ ಹಣ ಒದಗಿಸುವುದು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಈ ದಿವಸ ನೀಲಗಿರಿಗೆ ದಯಮಾಡಿಸುವವರಾಗಿದ್ದಾರೆ.

ಈ ತಿಂಗಳು ತಾ|| ೯ ರಲ್ಲಿ ಬೆಂಗಳೂರಿನಲ್ಲಿ ಮೈಸೂರು ನಿಯಮನಿರ್ಮಾಣ ಸಭೆಯು ಕೂಡುವುದು.

ಬೆಂಗಳೂರು ಮೈಸೂರು ಪಟ್ಟಣಗಳ ಮನೆ ಕೈಗಾರಿಕೆಯ ಸ್ಥಾಪನೆಗಳು ವಿದ್ಯಾಶಾಖೆಯವರ ಮೇಲ್ವಿಚಾರಣೆಗೆ ಒಳಪಡಿಸಲ್ಪಟ್ಟಿರುತ್ತವೆ.

ಬೀಜದಧಾನ್ಯಗಳನ್ನು ರೈತರಿಗೆ ಸುಲಭವಾಗಿ ಒದಗಿಸಿಕೊಡುವುದಕ್ಕಾಗಿ ನಮ್ಮ ಸರ್ಕಾರದವರು ವ್ಯವಸಾಯಶಾಖೆಯವರ ವಶಕ್ಕೆ ೨೦ ಸಾವಿರ ರೂ.ಗಳನ್ನು ಕೊಟ್ಟಿದ್ದಾರೆ.

ರಾಜಧಾನಿಯಲ್ಲಿ ಕಳೆದವಾರವೆಲ್ಲಾ ಮಳೆಯು ಬೀಳಲಿಲ್ಲ. ಮೋಡಗಳ ಸಂಚಾರವು ಮಾತ್ರ ಕಾಣುತ್ತಿದೆ. ಸುತ್ತುಮುತ್ತಣ ತಾಲೂಕುಗಳಲ್ಲಿ ಅಲ್ಲಲ್ಲಿ ಮಳೆಯಾಗಿದೆ.

ರಾಜಧಾನಿಯಲ್ಲಿ ಅಕ್ಕಿಯನ್ನು ರೂ.ಗೆ ೬ ಸೇರಿನಂತೆಯೂ ರಾಗಿಯನ್ನು ೧೦ ಸೇರಿನಂತೆಯೂ ಮ್ಯುನಿಸಿಪಾಲಿಟಿಯವರು ಇದುವರೆಗೆ ಮಾರಿಸುತ್ತಿದ್ದರು. ಕಳೆದ ವಾರದಿಂದ ರಾಗಿಯನ್ನು ರೂ.ಗೆ ೮ ಸೇರಿನಂತೆ ಮಾರಿಸಲು ಏರ್ಪಡಿಸಿದ್ದಾರೆ. ರಾಗಿಯು ಸರ್ಕಾರದವರಿಗೂ ಕೂಡ ದೊರೆಯುವುದು ದುರ್ಲಭವಾಗಿದೆ. ಅಕ್ಕಿಯು ಮಾತ್ರ ೬ ಸೇರಿನಂತೆಯೇ ಮಾರಲ್ಪಡುತ್ತಿದೆ.

ಹುಣಸೂರು ತಾ|| ಬನಕುಪ್ಪೆಯ ಬಳಿಯಣ ಒಂದು ಗ್ರಾಮದಲ್ಲಿ ಪ್ರಬಲನಾದ ಒಬ್ಬ ರೈತನ ಹತ್ತಿರ ೫೦೦ ಪಲ್ಲಾ ರಾಗಿಯು ದಾಸ್ತಾನಾಗಿದ್ದರೂ ಸರ್ಕಾರದವರು ಆತನಿಂದ ೨೫ ಪಲ್ಲಾ ರಾಗಿಯನ್ನು ಮಾತ್ರ ತೆಗೆದುಕೊಂಡು ಉಳಿದ ರೈತರಲ್ಲಿದ್ದ ರಾಗಿಯನ್ನು ರೂಲ್ಸಿನ ಪ್ರಕಾರ ಅವರವರ ಕುಟುಂಬಕ್ಕೆ ತಕ್ಕಷ್ಟನ್ನೂ ಬಿಡದೆ ವಶಪಡಿಸಿಕೊಂಡುದರಿಂದ ಆ ಬಡ ರೈತರೆಲ್ಲಾ ಹೊಟ್ಟೆಗಿಲ್ಲದೆ ಹಾಹಾಕಾರ ಪಡುತ್ತಿರುವರೆಂದು ಒಬ್ಬ ಬಾತ್ಮೀದಾರರು ತಿಳಿಸಿರುತ್ತಾರೆ.

ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ ಶೆಟ್ಟರು ಬೆಂಗಳೂರು ಮ್ಯುನಿಸಿಪಲ್ ಪ್ರೆಸಿಡೆಂಟ್‌ಗಿರಿಯಿಂದ ತಮಗೆ ವಿಶ್ರಾಂತಿಯನ್ನು ಬರುವ ಜೂನ್ ತಿಂಗಳಿನಿಂದ ಕೊಡಿಸಿಕೊಡಬೇಕೆಂದೂ, ಪ್ರೆಸಿಡೆಂಟರನ್ನು ಮ್ಯುನಿಸಿಪಲ್ ಕೌನ್ಸಿಲರುಗಳೇ ಆರಿಸಿಕೊಳ್ಳುವಂತೆ ಮಾಡಬೇಕೆಂದೂ, ಗೌರ್ನಮೆಂಟಿಗೆ ಬಿನ್ನಯಿಸಿಕೊಂಡಿದ್ದಂತೆಯೂ, ಆದರಮೇಲೆ ಬರುವ ನವಂಬರ್ ತಿಂಗಳವರೆಗೂ ಆ ಕೆಲಸದಲ್ಲೇ ಇದ್ದು ಸರ್ಕಾರಕ್ಕೆ ಸಹಾಯಮಾಡಬೇಕೆಂದು ಗೌರ್ನಮೆಂಟಿನವರಿಂದ ಕೋರಲ್ಪಟ್ಟಿರುವರೆಂದೂ ಕೇಳುತ್ತೇವೆ.

ಡಿ|| ಕಮಿಷನರ್ ಮ|| ಚೊಕ್ಕಣ್ಣನವರು ಬೆಂಗಳೂರಿಗೂ, ಮಿ|| ಬ್ರಿಂಗ್‌ರವರು ಮೈಸೂರಿಗೂ ವರ್ಗಾಯಿಸಲ್ಪಟ್ಟಿದ್ದರಷ್ಟೆ. ಇವರಲ್ಲಿ ಮ|| ಚೊಕ್ಕಣ್ಣನವರಿಗೆ ಬದಲು ರಜದಮೇಲಿದ್ದ ಮ|| ಎಂ. ಎ. ನಾರಾಯಣಯ್ಯಂಗಾರರು ಬೆಂಗಳೂರು ಡಿ||ಗೆ ವರ್ಗಾಯಿಸಲ್ಪಟ್ಟು ಮ|| ಶಿರ್ಕಿ ಆನಂದರಾಯರು ತುಮಕೂರು ಡಿ|| ಡೆ|| ಕ|| ರವರಾಗಿ ನಿಯಮಿಸಲ್ಪಟ್ಟಿರುವರು. ಇತರ ಡೆ|| ಕಮಿಷನರುಗಳ ವರ್ಗಾವರ್ಗಿಯು ಸದ್ಯದಲ್ಲಿ ತಪ್ಪಿಸಲ್ಪಟ್ಟಿರುವುದು. ಮ|| ಚೊಕ್ಕಣ್ಣನವರು ಯಾವ ಸ್ಥಾನಕ್ಕೆ ನಿಯಮಿಸಲ್ಪಟ್ಟಿರುವರೆಂಬುದು ಇನ್ನೂ ಗೊತ್ತಾಗಲಿಲ್ಲವು.

ನಮ್ಮ ಕೌನ್ಸಿಲರಾದ ಮ|| ಕೆ. ಎಸ್. ಚಂದ್ರಶೇಖರಯ್ಯರವರ ತಂದೆಯವರಾದ ದಿವಾನ್ ಬಹದ್ದೂರ್ ಎ. ಶಂಕರಯ್ಯರ್‌ರವರು ತಿರುಚನಾಪಲ್ಲಿಯಲ್ಲಿ ಕಳೆದ ಶುಕ್ರವಾರ ವಿಧಿವಶರಾದರು. ಇವರು ಕೊಚ್ಚಿ ಸಂಸ್ಥಾನದಲ್ಲಿ ದಿವಾನ್ ಪೇಷ್ಕಾರ್ ಪದವಿಯನ್ನು ನಿರ್ವಹಿಸಿದವರು. ಇವರು ಕಡೆಯತನಕಲೂ ಕೇವಲ ಪೂರ್ವಾಚಾರ ಪರಾಯಣರಾಗಿದ್ದುದಲ್ಲದೆ ಈಗಣ ಸ್ವರಾಜ್ಯೋದ್ಯಮ ಸತ್ಯಾಗ್ರಹವ್ರತ ಸಂಬಂಧವನ್ನೂ ಹೊಂದಿದವರಾಗಿದ್ದರು. ಇವರು ಗತಿಸಿದುದರಿಂದಲೇ ಮ|| ಚಂದ್ರಶೇಖರಯ್ಯರವರು ಈ ಸಲದ ಪ್ರಜಾಪ್ರತಿನಿಧಿಸಭೆಗೆ ಬರಲಾಗಲಿಲ್ಲವೆಂದು ಕೇಳುತ್ತೇವೆ.

ಭರತಖಂಡದ ವೃತ್ತಾಂತಗಳು.

ಪಂಜಾಬು ಅಧಿಪತ್ಯದಲ್ಲಿ ಸೈನಿಕ ಶಾಸನಕ್ಕೆ ವಿರುದ್ಧವಾಗಿ ಪ್ರವರ್ತಿಸಿದವರನ್ನು ಸರ್ಕಾರದವರು ಹಿಡಿದು ವಿಚಾರಣೆಗೊಳಪಡಿಸಿ ಅರ್ಥದಂಡ ಕಾರಾಗೃಹವಾಸ ಮರಣದಂಡನೆ, ದ್ವೀಪಾಂತರವಾಸ ಛಡಿಯೇಟು ಮೊದಲಾದ ಶಿಕ್ಷೆಗಳನ್ನು ಕೊಡಿಸುತ್ತಿದ್ದಾರೆ.

ಅಂಚೆಯಲ್ಲಿ ಕಳುಹಿಸಲ್ಪಡುವ ಪಾರ್ಸೆಲ್ಲುಗಳ ದರವು ಇದೇ ತಿಂಗಳು ತಾ|| ೧೬ ರಿಂದ ೨೦ ತೊಲೆ ತೂಕದೊಳಗಿರುವವುಗಳಿಗೆ ೨ ಆಣೆಯಂತೆಯೂ ಅದಕ್ಕೆ ಮೇಲ್ಪಟ್ಟು ೮೦೦ ತೊಲೆಯೊಳಗಿರುವುವುಗಳಿಗೆ ಪ್ರತಿ ೪೦ ತೊಲೆಗೂ ೩ ಆಣೆಯಂತೆಯೂ ಛಾರ್ಜು ತೆಗೆದುಕೊಳ್ಳಲ್ಪಡುವುದು.

ಸರ್ಕಾರದಾಜ್ಞೆಯ ಮೇರೆಗೆ ಕಲ್ಕತ್ತಾ ಅಮೃತಬಜಾರ್ ಪತ್ರಿಕಾ ಪ್ರಚಾರಕರಾದ ಮೃಣಾಳಿನೀಕಾಂತ ಘೋಷ್‌ರವರು ೧೦೦೦೦ ರೂ.ಗಳನ್ನು ಹೊಣೆಗಾಗಿ ಸರ್ಕಾರದಲ್ಲಿ ಕಟ್ಟಿದರು. ವಸುಮತೀ ಪತ್ರಿಕೆಯ ಸಂಪಾದಕರಾದ ಉಪೇಂದ್ರನಾಥ ಮುಖರ್ಜಿಯವರು ೧೦೦೦ ರೂ. ಗಳನ್ನು ಹೊಣೆಗಾಗಿ ಕಟ್ಟಿದರು.

ದಿಲ್ಲಿಯಿಂದ ಪ್ರಕಟವಾಗುತ್ತಿರುವ ವಿಜಯ ಎಂಬ ಮತ್ತು ಕಾಂಗ್ರೆಸ್ ಎಂಬ ಇಂಕ್ವಿಲಬ್ ಎಂಬ ದೇಶಭಾಷಾ ಪತ್ರಿಕೆಗಳು ಪಂಜಾಬಿಗೆ ಬರಕೂಡದೆಂದು ಅಲ್ಲಿಯ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಕಳೆದ ಏಪ್ರಿಲ್ ತಾ|| ೧೩ ರಲ್ಲಿ ಪ್ರಕಟಿತವಾದ ಇಂಕ್ವಿಲಬ್ ಪತ್ರಿಕೆಯ ಪ್ರತಿಗಳನ್ನೆಲ್ಲಾ ಸರ್ಕಾರದವರು ವಶಪಡಿಸಿಕೊಂಡಿದ್ದಾರೆ.

ಲಾಹೋರ್ ಎಡ್ವರ್ಡ್ ಚಕ್ರವರ್ತಿ ವೈದ್ಯ ಕಲಾಶಾಲಾ ವಿದ್ಯಾರ್ಥಿಗಳು ರಾಜದ್ರೋಹಭಾವದಿಂದ ಪ್ರವರ್ತಿಸುತ್ತಿರುವರೆಂದು ತೋರಿಬಂದ ಕಾರಣ ಅಂಥ ಸಂಶಯಾಸ್ಪದರಾದ ವಿದ್ಯಾರ್ಥಿಗಳು ಪ್ರತಿದಿನವೂ ಬೆಳಗಿನ ೭ ರಿಂದ ೧೧ ಗಂಟೆಯವರೆಗೂ ಮಧ್ಯಾಹ್ನ ೩ ರಿಂದ ೭ ಗಂಟೆವರೆಗೂ ಸೈನಿಕೋದ್ಯೋಗಿಗಳ ಇದಿರಿಗೆ ಕರೆದಾಗ ಸಿದ್ಧರಾಗಿರಬೇಕೆಂದು ವಿಧಿಸಲ್ಪಟ್ಟಿದ್ದಾರೆ.

ಭಾರತ ರಾಜಕೀಯ ಸಂಸ್ಕರಣ ವಿಷಯವಾಗಿ ಸೀಮೆಯಲ್ಲಿ ರಾಯಭಾರವನ್ನು ನಡೆಯಿಸುವುದಕ್ಕಾಗಿ ಅನೇಕ ಪಕ್ಷಗಳವರು ಹೊರಟೂ ಹೊರಡುತ್ತಲೂ ಇದ್ದಾರೆ. ಇವುಗಳಲ್ಲಿ ಇದುವರೆಗೆ ಗೊತ್ತಾಗಿರುವ ಪಕ್ಷಗಳು ಯಾವುವೆಂದರೆ—ಮಿತವಾದಿಗಳು, ಉಗ್ರಪಕ್ಷದವರು, ಸ್ವರಾಜ್ಯಸಂಘದವರು, ನಾಯರ್ ಪಕ್ಷದವರು, ಮಹಮ್ಮದೀಯ ಸಂಘದವರು, ಆಂಗ್ಲೋ ಹಿಂದೂಪಕ್ಷದವರುಗಳು.

ಮದರಾಸು ಸರ್ಕಾರದ ಔದ್ಯೋಗಿಕ ಶಾಖೆಯವರು ಕಲ್ಲಿಕೋಟೆಯಲ್ಲಿ ಸಾಂಕೇತಿಕ ಕಲಾಶಾಲೆಯನ್ನು ಇಷ್ಟರಲ್ಲೇ ಸ್ಥಾಪಿಸುವುದರಲ್ಲಿದ್ದಾರೆ. ಇಲ್ಲಿ ಓದತಕ್ಕವರಿಗೆ ಸಾಬೂನು ಮೇಣದ ಬತ್ತಿ ಮೊದಲಾದವುಗಳನ್ನು ನಿರ್ಮಿಸುವ ಜ್ಞಾನವು ಉಂಟಾಗುವಂತೆ ಮಾಡಲು ತಕ್ಕ ಏರ್ಪಾಟಾಗುವುದು. ಮುಂದೆ ದಿನಕ್ರಮೇಣ ಭರತಖಂಡದಲ್ಲಿ ಸಾಬೂನಿನ ಕೈಗಾರಿಕೆಯು ಬಹಳ ಅಭಿವೃದ್ಧಿಗೊಳ್ಳುವುದೆಂದೂ ವಿದೇಶದ ಸಾಮಗ್ರಿಗಳ ಮೇಲೆ ಪೈಪೋಟಿಗೆ ನಿಲ್ಲುವಷ್ಟು ಅಭಿವೃದ್ಧಿಗೊಳ್ಳುವುದೆಂದೂ ನೆನ್ನೆ ಮೊನ್ನೆವರೆಗೂ ಕಾಸ್ಟಿಕ್ ಸೋಡಾ (ಸಾಬೂನಿನ ನಿರ್ಮಾಣಕ್ಕೆ ಅವಶ್ಯಕವಾದ ವಸ್ತು) ವನ್ನು ವಿದೇಶಗಳಿಂದ ತರಿಸಿಕೊಳ್ಳುತ್ತಿದ್ದ ಭರತಖಂಡವು ಈಗ ಅದನ್ನು ತಾನೇ ವಿಶೇಷವಾಗಿ ನಿರ್ಮಿಸಿ ವಿದೇಶಗಳಿಗೂ ಕೂಡ ಕಳುಹಿಸಿಕೊಡುವ ಸ್ಥಿತಿಗೆ ಬಂದಿದೆಯೆಂದೂ ಗೊತ್ತಾಗುತ್ತದೆ.

ಬೊಂಬಾಯಿಯಿಂದ ಪ್ರತಿದಿನವೂ ಪ್ರಕಟವಾಗುತ್ತಿದ್ದ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಹಾರ್ನಿಮನ್ ಎಂಬ ಐರೋಪ್ಯರನ್ನು ಇಂಡ್ಯಾ ಸರ್ಕಾರದವರು ಈ ದೇಶವನ್ನು ಬಿಟ್ಟು ಕೂಡಲೇ ಸೀಮೆಗೆ ಹೊರಟುಹೋಗಬೇಕೆಂದು ಬೊಂಬಾಯಿ ಸರ್ಕಾರದವರ ಮೂಲಕ ಆಜ್ಞೆಮಾಡಿಸಿ, ಕಳೆದ ತಾ|| ೨೭ ರಲ್ಲಿ ಹಡಗನ್ನು ಹತ್ತಿಸಿ ಸಾಗಿಸಿಬಿಟ್ಟರು. ಅವರು ಹೊಣೆಗಾಗಿ ಕಟ್ಟಿದ್ದ ಹಣವನ್ನು ಸರ್ಕಾರಕ್ಕೆ ಸೇರಿಸಿ ಇನ್ನುಮುಂದೆ ಆ ಪತ್ರಿಕೆಯಲ್ಲಿ ಪ್ರಕಟಿಸತಕ್ಕ ವಿಷಯಗಳನ್ನೆಲ್ಲಾ ಪ್ರಭುತ್ವದವರಿಗೆ ಮೊದಲೇ ತೋರಿಸಿ ಪ್ರಕಟಿಸಬೇಕೆಂದು ಪತ್ರಿಕಾ ಕಾರ್ಯನಿರ್ವಾಹಕರಿಗೆ ಅಪ್ಪಣೆಮಾಡಿದರು. ಅದರ ಮೇಲೆ ಹಾಗೆ ಮಾಡುವುದಕ್ಕೆ ಇಷ್ಟವಿಲ್ಲದೆ ಆ ಪತ್ರಿಕೆಯ ಯಜಮಾನರುಗಳು ಸದ್ಯಃ ಪತ್ರಿಕಾಪ್ರಕಟನವನ್ನೇ ನಿಲ್ಲಿಸಿಬಿಟ್ಟರು. ಈ ಪತ್ರವು ಗತಿಸಿದ ಸರ್ ಫಿರೋಜ್‌ಷಾ ಮೇಥಾರವರಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದು. ಸ್ವದೇಶೀಯರಿಂದ ಆಂಗ್ಲಭಾಷೆಯಲ್ಲಿ ದಿನ ಪತ್ರಿಕೆಯಾಗಿ ಹೊರಟವುಗಳಲ್ಲಿ ಇದೇ ಮೊದಲನೆಯದು. ಇದಕ್ಕೆ ಮುಂಚೆ ಹಾರ್ನಿಮನ್‌ರವರು ಸ್ಟೇಟ್ಸ್‌ಮನ್ ಪತ್ರಿಕೆಗೆ ಉಪಸಂಪಾದಕರಾಗಿದ್ದರು. ಇವರ ಲೇಖನ ಪ್ರಭಾವದಿಂದ ಬೊಂಬಾಯಿ ಅಧಿಪತ್ಯದಲ್ಲಿ ಉಗ್ರಮತವಾದವು ಹೆಚ್ಚಿತು. ಇತ್ತೀಚೆಗೆ ಅದರಲ್ಲಿ ಪ್ರಜೆಗಳೊಳಗೆ ಸರ್ಕಾರದ ವಿಷಯವಾಗಿ ಅಲಕ್ಷ್ಯಭಾವವನ್ನು ಹುಟ್ಟಿಸುವ ಅಬದ್ಧವಾರ್ತೆಗಳೂ ಉದ್ರೇಕಕವ್ಯಾಸಗಳೂ ಬಹಳವಾಗಿ ಬರುತ್ತಿದ್ದುವು. ನಿರಂಕುಶವಾದ ಅದರ ಬರವಣಿಗೆಗಳು ಆ ಪತ್ರಿಕೆಗೆ ಇಂಥ ಅವಸ್ಥೆಯನ್ನು ತಂದಿಕ್ಕಿದುವು.

ವಿದೇಶದ ವೃತ್ತಾಂತಗಳು.

ಪೋಲಂಡಿನ ವಿಲ್ನಾಪಟ್ಟಣವು ಬೋಲ್ಷೆವಿಕ್ಕರ ಹಸ್ತದಿಂದ ಬಿಡುಗಡೆಯಾಯಿತು. ಅವರು ಸೋತರು.

ಪ್ರೆ|| ವಿಲ್ಸನ್ನರವರು ಅಮೇರಿಕಾಕ್ಕೆ ಹೋಗಿರುವುದಿಲ್ಲ. ಪ್ಯಾರಿಸ್ಸಿನಲ್ಲೇ ನಿಂತು ಸಂಧಿ ಸಭಾಕಾರ್ಯದಲ್ಲಿ ನಿರತರಾಗಿದ್ದಾರೆ.

ಇಟಲಿಗೂ ಆಸ್ಟ್ರಿಯಾಕ್ಕೂ ಜರ್ಮನಿಗೂ ಮಧ್ಯದ ಎಲ್ಲೆಕಟ್ಟು ಇಟಲಿಯವರ ಕೋರಿಕೆಯಂತೆಯೇ ಬ್ರೆನ್ನರ್ ಕಣಿವೆಗೆ ಉತ್ತರದಲ್ಲಿರುವಂತೆ ಸಮಾಧಾನವು ಕುದುರಿತೆಂದು ಪ್ರಕಟವಾಗಿದೆ.

ಪ್ರೆ|| ವಿಲ್ಸನ್ನರವರು ಸರ್ವಜಾತಿ ಸಂಯೋಗ ಸಂಘಕ್ಕಾಗಲೀ ಆ ಸಂಘದ ಮುಖ್ಯ ಸೂತ್ರಗಳಿಗೇ ಆಗಲೀ ಯಾವ ಮಾತ್ರಕ್ಕೂ ಭಂಗಪಡಿಸುವವರಾಗಿಲ್ಲವೆಂಬುದಾಗಿ ಲಂಡನ್ನಿನ ಅಧಿಕಾರಿಗಳಿಗೆ ತಂತ್ರೀವಾರ್ತೆಯು ಬಂದಿರುವುದಂತೆ.

ರೊಮೇನಿಯನ್ ಸೈನ್ಯವು ಮುಂದಕ್ಕೆ ಜಯಶೀಲವಾಗಿ ನುಗ್ಗಿದುದರಿಂದ ಹಂಗೇರಿಯ ಸೋವಿಯಟ್ಟುಗಳಿಗೆ ಕಷ್ಟಸ್ಥಿತಿಯು ಪ್ರಾಪ್ತವಾಗಿದೆ. ಜಕೋಸ್ಲಾವಕ್ಕರೂ ದಕ್ಷಿಣಸ್ಲಾವು ಸೈನ್ಯಗಳೂ ಸಹ ಬುಡಾಪೆಸ್ಟ್ ನಗರದ ಮೇಲೆ ಸಾಗಿಹೋಗಿ ಕಸೋಲಿ ಪ್ರಭುತ್ವವನ್ನು ಸ್ಥಾಪಿಸುವವರಾಗಿದ್ದಾರೆಂದು ಪ್ರಕಟವಾಗಿದೆ.

ಸಂಧಿಸಭೆಗೆ ಜರ್ಮನಿಯ ಪ್ರತಿನಿಧಿಗಳು ಹೋಗುವುದು ಅಲ್ಲಿಯ ಕೆಲರಿಗೆ ಇಷ್ಟವಿಲ್ಲ. ಆದರೆ ಈಗಣ ಪ್ರಭುತ್ವದವರು ಮಾತ್ರ ಅದಕ್ಕೆ ಒಪ್ಪುವುದಿಲ್ಲ. ಈಗಾಗಲೇ ಮಂತ್ರಿಮಂಡಲದಲ್ಲಿ ೪ ಮಂದಿ ಪ್ರಮುಖರೂ, ಇತರರು ಕೆಲವರೂ ಸೇರಿ ೭೫ ಮಂದಿಗಳು ವಾರ್ಸೇಲ್ಸ್ ಪಟ್ಟಣಕ್ಕೆ ಬಂದು ಸೇರಿದ್ದಾರೆ. ಮಿತ್ರಮಂಡಲಿಯವರು ಏರ್ಪಡಿಸಿದ್ದ ಸಂಧಿ ನಿಬಂಧನೆಗಳಿಗೆಲ್ಲಾ ಜರ್ಮನ್ ಪ್ರತಿನಿಧಿಗಳು ಒಪ್ಪಿದರೆಂದು ಪ್ಯಾರಿಸ್ಸಿನಿಂದ ವಾರ್ತೆಗಳು ಬರುತ್ತಿರುವುವು.

ಪತ್ರವ್ಯವಹಾರ.

ನಂಜನಗೂಡುಟವನ್ ಮ್ಯುನಿಸಿಪಲ್ ಎಲೆಕ್ಷನ್ ವಿಷಯವನ್ನು ತಮ್ಮ ಘನತರವಾದ ಪತ್ರಿಕೆಗೆ ಮೊದಲೇ ತಿಳಿಸಿತ್ತಷ್ಟೆ. ರೂಲ್ಸುಮೇರೆ ಎಲೆಕ್ಟ್ ಆಗಬೇಕಾದವರು 9 ಜನವಂತಲೂ, 10 ಜನರನ್ನು ಎಲೆಕ್ಟ್ ಮಾಡಿದ್ದು ರೂಲ್ಸಿಗೆ ವಿರೋಧವಂತಲೂ, ತಿಳಿದುಬಂದಿದ್ದರ ಮೇಲೆ ಎಲೆಕ್ಟ್ ಆದ 10 ಜನರ ಪೈಕಿ ಒಬ್ಬರ ಹೆಸರನ್ನು ತೆಗೆದುಹಾಕಿ ಇನ್ನೊಬ್ಬ ಬ್ರಾಹ್ಮಣರ ಹೆಸರನ್ನು ನಮೂದುಮಾಡಿಕೊಂಡಿರುವದಾಗಿಯೂ ತಿಳಿಯಬಂದಿದೆ. ಈ

ಚುನಾವಣೆಗಳಲ್ಲಿ ನಡೆದ ಅಕ್ರಮಗಳನ್ನು ಮೊದಲೇ ತಿಳಿಸಿದೆ. ಈಗ ಒಬ್ಬರ ಹೆಸರನ್ನು ತೆಗೆದುಹಾಕಿ ಇನ್ನೊಬ್ಬರ ಹೆಸರನ್ನು ನಮೂದುಮಾಡಿಕೊಳ್ಳುವದು ಯಾವನ್ಯಾಯವೋ ಗೊತ್ತಾಗುವದಿಲ್ಲ. ಈ ಚುನಾವಣೆಯನ್ನು ಸರ್ಕಾರದವರು ಅಂಗೀಕಾರಮಾಡುವ ಪಕ್ಷದಲ್ಲಿ ಈ ಮುನಿಸಿಪಾಲಿಟಿಗೆ 9 ಜನ ಬ್ರಾಹ್ಮಣರೂ 5 ಜನ ಇತರರೂ ಮೆಂಬರುಗಳಂತೆ ಆಗುತ್ತವೆ. ಈ 5 ಜನ ಇತರರೂ ಮೇಲ್ಕಂಡ 9 ಜನ ಬ್ರಾಹ್ಮಣರ ಮಾತಿಗೆ ವಿಟೋ ಎಂಬುವವರಾಗಿದ್ದಾರೆಯೇ ಹೊರತು ತಮ್ಮ ಸ್ವತಂತ್ರವಾದ ಅಭಿಪ್ರಾಯವನ್ನು ಕೊಡುವವರಾಗಿಲ್ಲ. ಗೌರ್ನಮೆಂಟ್ ನಾಮಿನೇಷನ್ನಿಗೆ ಕಳುಹಿಸಿಕೊಡುವ ಮೆಂಬರುಗಳಲ್ಲಿ ಕೆಲವರು ಮೇಲ್ಕಂಡ ಬ್ರಾಹ್ಮಣರಿಗೆ ಅಧೀನರಾಗಿಲ್ಲವೆಂದೂ ಇವರನ್ನು ಹೇಗಾದರೂ ಮುನಿಸಿಪಾಲಿಟಿಗೆ ಸೇರಿಸಿಕೊಳ್ಳಬಾರದೆಂದೂ ಇವರುಗಳು ಯೋಚಿಸಿಕೊಂಡು ಏನೋ ದುರ್ಬೋಧನೆ ಹೇಳಿ ಇವರ ಹೆಸರನ್ನು ತೆಗೆದುಹಾಕಿಸಿ ತಮಗೆ ಅಧೀನರಾಗಿರುವವರ ಹೆಸರನ್ನು ನಮೂದುಮಾಡಿಸಿದಂತೆ ತಿಳಿಯಬರುತ್ತದೆ. ವಾಚಕಮಹಾಶಯರೆ! ನೋಡಿದಿರಾ? ಇವರ ಮಾತು ಎಲ್ಲೆಲ್ಲೂ ನಡೆಯುತ್ತಾ ಇದೆ. ಇವರಿಗೆ ಎದುರೇ ಇಲ್ಲ. ಈ ಮೇಲ್ಕಂಡ ಚುನಾವಣೆಯನ್ನೂ ಮತ್ತು ನಾಮಿನೇಷನ್ನನ್ನೂ ಸರ್ಕಾರದವರು ಮಂಜೂರ್ ಮಾಡುವ ಪಕ್ಷದಲ್ಲಿ ನಂಜನಗೂಡು ಮುನಿಸಿಪಾಲ್ಟಿಯು ಬ್ರಾಹ್ಮಣರಪಾಲೇ ಆಗಿಹೋಗುತ್ತದೆ. ಈಗಲೇ ಇವರು ಮಾಡುವ ಕೆಲಸಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಮುಂದಂತೂ ಹೇಳಬೇಕಾದ್ದೇ ಇರುವದಿಲ್ಲ! ಈ ಕಾರಣಗಳನ್ನೆಲ್ಲಾ ತಾವು ಪತ್ರಿಕೆಯಲ್ಲಿ ಪ್ರಕಟಿಸುವ ದ್ವಾರಾ ಸರ್ಕಾರದವರ ಗಮನಕ್ಕೆ ತಂದು ಈ ಎಲೆಕ್ಷನ್ ರದ್ದುಪಡಿಸಿ ಡಿವಿಜನ್ ವಾರ್ಡ್ ಎಲೆಕ್ಷನ್ ಆಗುವಂತೆ ಮಾಡಿದಲ್ಲಿ ಈ ಪುರವಾಸಿಗಳಲ್ಲಿ ಬಹುಜನಗಳ ಕ್ಷೇಮಕ್ಕೆ ತಾವು ಸಹಾಯ ಮಾಡಿದಂತೆ ಆಗುತ್ತದೆ. ಸತ್ಯವಾದಿ.

ದ್ವೇಷಿಗಳು ಯಾರು?

ನಂಜನಗೂಡಿನಲ್ಲಿ ಡಾಕ್ಟರಾಗಿದ್ದ ಮಹಾರಾಜಶ್ರೀ ಟಿ. ಯಸ್. ಸಿದ್ದಪ್ಪನವರು ಪ್ರಮೋಷನ್ ಮೇಲೆ ಹಾಸನ ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟರು. ಈ ಟವನ್ನಿನಲ್ಲಿ ಒಂದು ಕ್ಲಬ್ ಇದೆ. ಈ ಕ್ಲಬ್ಬಿಗೆ ಮೇಲ್ಕಂಡ ಡಾಕ್ಟರವರು 1 ನೇ ತರಗತಿ ಮೆಂಬರಾಗಿ ಮಾಸೆಯಾನಾ ಮೂರು ರೂಪಾಯಿ ಮೇರೆ ಕೊಡುತ್ತಾ ಇದ್ದರೆಂದು ತಿಳಿಯಬರುತ್ತದೆ. ಮೇಲ್ಕಂಡ ಡಾಕ್ಟರವರು ವಿನಾ ಉಳಿದವರೆಲ್ಲಾ ಬ್ರಾಹ್ಮಣರಾಗಿರುತ್ತಾರೆ. ಈ ಮೆಂಬರುಗಳಲ್ಲಿ ಕೆಲವರು ಸರ್ಕಾರದ ಉದ್ಯೋಗಿಗಳೂ, ಕೆಲವರು ವಕೀಲರೂ ಮತ್ತು ಮ್ಯುನಿಸಿಪಲ್ ಮೆಂಬರುಗಳೂ ಆಗಿರುತ್ತಾರೆ. ಈ ಮೆಂಬರುಗಳಲ್ಲಿ ಸರ್ಕಾರದ ಉದ್ಯೋಗದಲ್ಲಿರತಕ್ಕವರು ವರ್ಗವಾದಲ್ಲಿ ಮೆಂಬರುಗಳೆಲ್ಲಾ ಸೇರಿ ಅಂಥಾವರಿಗೆ ಎಂಟರ್‌ಟೇನ್‌ಮೆಂಟ್ ಕೊಡುವುದು ಈ ಕ್ಲಬ್ಬು ಸ್ಥಾಪಿತವಾದ ಲಾಗಾಯ್ತು ನಡೆದುಬರುತ್ತಾ ಇದೆ. ಆದರೆ ಈ ಕ್ಲಬ್ಬಿನವರು ಮೇಲ್ಕಂಡ ಡಾಕ್ಟರವರಿಗೆ ಯಾವ ಎಂಟರ್‌ಟೇನ್‌ಮೆಂಟನ್ನು ಮಾಡಿ ಸತ್ಕರಿಸಲಿಲ್ಲ. ಕಾಲರಾ ಡ್ಯೂಟಿಗೆ 15 ದಿವಸ ಅಥವಾ ಒಂದು ತಿಂಗಳು ಮಾತ್ರ ಬಂದಿದ್ದ ಬ್ರಾಹ್ಮಣ ಡಾಕ್ಟರಿಗೆ ಮೇಲ್ಕಂಡವರ ಎಂಟರ್‌ಟೇನ್‌ಮೆಂಟು (Entertainment) ದೊರಕಿತು. ಡಾಕ್ಟರು ಸಿದ್ದಪ್ಪನವರು ಲಿಂಗಾಯತರಾದ್ದರಿಂದ ಅವರ ಸತ್ಕಾರವು ಇವರಿಗೆ ದೊರಕಲಿಲ್ಲ. ಆದರೆ ಇವರು ಸತ್ಕಾರ ಮಾಡಿದ್ದರೆ ಡಾಕ್ಟರವರಿಗೆ ದೊಡ್ಡ ಕೀರ್ತಿಯೂ ಅಥವಾ ಪ್ರತಿಷ್ಠೆಯೂ ಬಂದಂತೆ ಆಗುತ್ತಿರಲಿಲ್ಲ. ಇದನ್ನು ನೋಡಿದರೆ ಇವರ ಗುಣಗಳು ಚೆನ್ನಾಗಿ ವ್ಯಕ್ತಪಡುವದಿಲ್ಲವೆ? ವಾಚಕ ಮಹಾಶಯರೆ! ಯಾರು ದ್ವೇಷಮಾಡತಕ್ಕವರು? ಬ್ರಾಹ್ಮಣರೆ? ಅಥವಾ ಇತರರೆ? ಬ್ರಹ್ಮದ್ವೇಷವು ಹೆಚ್ಚಿತೆಂದು ಪ್ರತಿಕ್ಷಣದಲ್ಲಿಯೂ ಕೂಗತಕ್ಕ ಈ ಜನಗಳ ಗುಣಗಳನ್ನು ನೋಡಿದಿರಾ! ಈ ಜನಗಳು ಇತರರನ್ನು ದ್ವೇಷಿಸುತ್ತಾರೋ ಅಥವಾ ಇತರರು ಇವರನ್ನು ದ್ವೇಷಿಸುತ್ತಾರೋ ಅದನ್ನು ಮೇಲ್ಕಂಡ ವಿಷಯದಿಂದ ತಾವೆ ತಿಳಿದುಕೊಳ್ಳಬಹುದು. ಅದರೇನು? ಈ ಪುರವಾಸಿಗಳಲ್ಲಿ ಬ್ರಾಹ್ಮಣರ ವಿನಾ ಬಾಕಿಯವರೆಲ್ಲರೂ ಸೇರಿ ಮೇಲ್ಕಂಡ ಡಾಕ್ಟರವರನ್ನು ಎರಡು ದಿವಸ ಮ॥ ರಾ॥ ಸೀತಾರಾಮಶ್ರೇಷ್ಠಿಯವರ ಸತ್ರದಲ್ಲಿ ಸಂಗೀತ ಮೊದಲಾದವುಗಳಿಂದ ಸತ್ಕರಿಸಿದರು. ಮೇಲ್ಕಂಡ ಕ್ಲಬ್ಬಿನವರು ಹಂಚಿಕೊಂಡು ಒಂದೊಂದು ದಿವಸ ಕೆಲಕೆಲರು ಅಲ್ಲಿಗೆ ಬಂದು ಕೂತಿದ್ದು ದಯಮಾಡಿಸಿದರು. ಪುರವಾಸಿ.

ಫೋಟೋಲಾಕೆಟ್ಸ್.



ಈ ಪ್ರಕಾರ ಫಡಿಯಾರದ ಸರಪಳಿಗೆ ಹಚ್ಚುವ ಲಾಕೇಟಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೋಚಗಳೂ, ಅಪೂರ್ವವಾದ ಅತ್ಯಂತ ಪ್ಯಾನ್ಸಿಯಾದ್ದು. ಆದರಿಂದ ತಮ್ಮ ಇಷ್ಟ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ಪ್ರದರಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ, ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರ ಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮುಸಲಮಾನರ ಧರ್ಮದ ಜಗದಾದಪೀರಸಾಹೇಬ ಅಜಮೀರದ ಛಾಜಾವಲಿ, ಮುಂತಾದ ಬೇರೆ ಪಂಥದ ಅನೇಕ ದೇವತಾ ಮತ್ತು ಸಾಧೂ ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೆ. ಲಾಕೇಟಾದಲ್ಲಿ ೨, ಬ್ರೋಚದಲ್ಲಿ ೧, ಫೋಟೋ ಇರುವವೂ ಕ್ರಯ ಗಿಲ್ಟಬ್ರೋಚವೂ ೬, ೮, ಆಣೆ. ರೋಲಗೋಲ್ಡ ಬ್ರೋಚವೂ ರೂ. ೧—೨—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳಿಯವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿಪುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವೂ ಕ್ರಯ ರೂ. ೧—೧೨—೦ ಪಾವಲಿ ಆಕಾರದ ಫ್ರೇಮ ಮತ್ತು ಗ್ಲ್ಯಾಸು ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ಕಿತ್ತಿ ಆಕಾರವೂ, ಅಥವಾ ಗುಂಡ ಆಕಾರವೂ ಇರುವವುಗಳ ಕ್ರಯ ರೂ. ೧-೪-೦ ೧—೮—೨.

ಇವುಗಳ ಪೂರ್ವ ನಮ್ಮ ಕಾರಖಾನಾದಲ್ಲಿ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸಂದರ್ಶನಲಾಭ, ೪ ಪಂಚಮುಖದ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಶರಭಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾಲಕೇರಿ ಶಿವಮಠದ ಹುಚ್ಚಪ್ಪನವರೂ ಸಿರಸಂಗಿ ಸರದೇಸಾಯಿ, ರುದ್ರಗವಡರು ಮುಂತಾದ ಅನೇಕ ಸಾಧೂ ಸತ್ಪುರುಷರದೂ ಫೋಟೋ ಸಿಗುತ್ತವೆ. ಕ್ರಯ ಪೋಲಸ್ಕೆಪ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಪ್ರತಿಪಂಥ ಊರಿಗೆ ಮಾರಾಟಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟ್ಯಾಂಪ್ ಕಳುಹಿಸಿ ಕೊಟ್ಟು ಕ್ಯಾಟ್ಲಾಗ ಬುಕ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.

ದಿ ಶಾರದಾ ಫೋಟೋ ಕಂಪನಿಯ ಮಾಲಕ,
3 ಗಂಗಪ್ಪಾ ಪೇರಗೇ ಸೋಲಾಪುರ ಸಿಟಿ.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತರಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ತೊನವೆ, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

13 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನವೀದಿ, ಮದರಾಸು.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 20

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇವರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
13 ಸಾಹುಕಾರಪೇಟೆ, ಮದರಾಸ್.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ್, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ಣಾಕೃತಿಯ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

17 ವಿಳಾಸ—ಎಂ. ಎಂ. ಹರ್ಡೀಕರ್ ದಾವಣಗೆರೆ.

ಸೀಮೆ ತಲೆದಿಂಬುಗಳು.



ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟ ತೋರುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
13 ಇರುಳಪ್ಪನವೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೀದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕ್ಷಯ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ. ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
21 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮೇ ತಾ॥ ೪ ರಿಂದ ೧೯೧೯ ನೆಯ ಮೇ ತಾ॥ ೧೦ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ವೈಶಾಖ ಶು॥ ಪಂಚಮಿಯಿಂದ ವೈಶಾಖ ಶು॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
4	[1] ಭಾನು	ಪಂಚ	45-8	ಆರಿದ್ರಾ	42-41	22
5	ಸೋಮ	ಷಷ್ಠಿ	41-22	ಪುನ	40-44	23
6	[2] ಮಂಗಳ	ಸಪ್ತಮಿ	38-41	ಪುಷ್ಯ	39-54	24
7	ಬುಧ	ಅಷ್ಟಮಿ	37-7	ಆಶ್ಲೇ	40-7	25
8	[3] ಗುರು	ನವಮಿ	36-45	ಮಖಾ	41-49	25
9	ಶುಕ್ರ	ದಶಮಿ	37-39	ಪುಫ	44-10	27
1	[4] ಶನಿ	ಏಕಾದ	39-48	ಉಫ	48-0	28

(1) ಲಾವಣ್ಯಗೌರೀವ್ರತಂ, ಶಂಕರಜಯಂತಿ, ಸಾಲಿಗ್ರಾಮದಲ್ಲಿ ಯೋಗಾನೃಸಿಂಹಸ್ವಾಮಿ ರಥಃ. (2) ಶ್ರೀರಂಗಪಟ್ಟಣದಲ್ಲಿ ರಂಗಮುಡೀ ಉತ್ಸವಃ. (3) ಸೌರ ಶ್ರೀರಾಮನವಮಿ. (4) ಜನಾರ್ದನಸ್ವಾಮಿ ರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೈತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸೆ ೧೯೧೯ ನೆಯ ಇಸವಿ ಮೇ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೧೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 24

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ. ಒಂದಾಣೆ ಸ್ಟ್ಯಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
[illegible]	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

10 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಷ್ಟ ನಿಪ್ಪಾಣಿ ಜಿ. ಬೆಳಗಾಂವ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 21

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇವರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
14 ಸಾಹುಕಾರಪೇಟೆ, ಮದರಾಸ್.

5 ಎಲೆಕ್ಟ್ರಿಕ್ ದೀಪ.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿಸಹಿತ

ಕ್ರಯ 1 ಕ್ಕೆ 5—8—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
14 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಬಣ್ಣದ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

31 ವಿಳಾಸ—ಎಂ. ಎಂ. ಹರ್ಡೀಕರ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮೇ ತಾ|| ೧೧ ನೆಯ ಭಾನುವಾರ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಹೊರಬಿದ್ದ ಕೆಲ ವಿಷಯಗಳು.

ಈ ಸಲ ನಡೆದ ಚರ್ಚೆಗಳಲ್ಲಿ ಕೆಲವನ್ನು ಕುರಿತು ಇಲ್ಲಿ ಪ್ರಸ್ತಾಪಿಸುವವರಾಗಿದ್ದೇವೆ. ಮ|| ಬಿ. ನರಸಿಂಗರಾಯರು ಸಂಸ್ಥಾನದಲ್ಲಿ ಆಹಾರಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರದವರು ಕೊಟ್ಟ ರಿಯಾಯಿತಿಗಳನ್ನು ಎಷ್ಟುಮಂದಿಗಳು ಉಪಯೋಗಿಸಿಕೊಂಡರು? ಎಷ್ಟು ತಕಾವಿ ಸಾಲವು ಕೊಡಲ್ಪಟ್ಟಿತು? ಎಂದು ಮೊದಲಾಗಿ ಮಾಡಿದ ಪ್ರಶ್ನೆಗೆ ಗೌರ್ನಮೆಂಟಿನವರು ಇದುವರೆಗಣ ನಮ್ಮ ಅನುಭವದಿಂದ ವಿಶೇಷ ಜನರು ಆ ರಿಯಾಯಿತಿಗಳನ್ನು ಉಪಯೋಗಿಸಿಕೊಂಡಂತೆ ಕಂಡುಬಂದಿರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಕೇಳಿದರೆ ವಿಷಾದವಾಗುತ್ತದೆ. ಕಳೆದ ೧೯೧೮ನೆ ವರ್ಷದಲ್ಲಿ ಸಂಸ್ಥಾನದೊಳಗೂ ಹೊರಗೂ ಮಳೆಬೆಳೆಗಳು ಕಡಿಮೆಯಾಗಿ ವರ್ಷಕ್ಕೆ ತಕ್ಕಷ್ಟು ಆಹಾರ್ಯವಸ್ತುಗಳು ಉತ್ಪನ್ನವಾಗಿಲ್ಲವೆಂದು ಗೊತ್ತಾದಮೇಲೆ ತಮ್ಮ ದೇಶದ ಪ್ರಜೆಗಳಾರೂ ಉಪವಾಸದಿಂದ ಸಾಯದಂತೆ ಮಾಡುವುದಕ್ಕಾಗಿ ಸರ್ಕಾರದವರು ಹೊರಗಣಿಂದ ಧಾನ್ಯಗಳನ್ನು ತರಿಸಿಕೊಳ್ಳುವುದಕ್ಕೂ, ದೇಶದೊಳಗೆ ಬೇಗನೆ ಕೈಸೇರುವ ಬೆಳಸನ್ನಿಡಲು ರೈತರಿಗೆ ತಕ್ಕ ಸಹಾಯ ಪ್ರೋತ್ಸಾಹಗಳನ್ನು ಮಾಡುವುದಕ್ಕೂ ಮೈಮರೆಯಲಿಲ್ಲ. ಬೀಜದ ಕಾಳುಗಳು ಗೊಬ್ಬರ ಮೊದಲಾದುವುಗಳನ್ನು ಕೊಳ್ಳುವುದಕ್ಕೆ ರೈತರಿಗೆ ಮುಂಗಡವಾಗಿ ಹಣವನ್ನು ಸಾಲವಾಗಿ ಕೊಡುತ್ತೇವೆಂದು ತಿಳಿಯಿಸಿದರು. ದೊಡ್ಡದೊಡ್ಡ ಜಲಾಶಯಗಳ ಕೆಳಗೆ ಬೇಗ ಕೈಸೇರುವ ಪೈರುಗಳನ್ನಿಟ್ಟು ಬೇಸಗೆ ಸಾಗುವಳಿ ಮಾಡುವವರಿಗೂ ಮೇವನ್ನು ಬೆಳೆಯುವವರಿಗೂ ಕಂದಾಯವಿಲ್ಲದಂತೆ ಭೂಮಿಯನ್ನು ಕೊಡುವುದೇ ಮೊದಲಾದ ಸೌಕರ್ಯಗಳನ್ನು ಒದಗಿಸುತ್ತೇವೆಂದು ತಿಳಿಯಿಸಿದರು. ಬೇಗನೆ ಕೈಸೇರುವ ಬೆಳಸಿನ ವ್ಯವಸಾಯದ ವಿಧಾನಗಳನ್ನೆಲ್ಲಾ ಪ್ರಕಟಿಸಿದರು. ಇಷ್ಟೆಲ್ಲಾ ಪ್ರಜೆಗಳ ಹಿತಕ್ಕೂ ಅನುಕೂಲ್ಯಕ್ಕೂ ಸರ್ಕಾರದವರಿಂದ ಮಾಡಲ್ಪಟ್ಟರೂ ಅವುಗಳನ್ನು ತಕ್ಕಷ್ಟು ಮಂದಿ ರೈತರು ಉಪಯೋಗಿಸಿಕೊಳ್ಳಲಿಲ್ಲವೆಂದರೆ ಸಖೇದಾಶ್ಚರ್ಯವಲ್ಲವೆ? ಹೀಗೆ ಆದುದಕ್ಕೆ ರೈತರಲ್ಲಿ ದುರ್ಭಿಕ್ಷಭೀತಿಯಿಲ್ಲವೆಂಬ ಕಾರಣವನ್ನೇ ಆಗಲೀ ಅವರಲ್ಲಿರುವ ಉಪೇಕ್ಷೆಯ ಕಾರಣವನ್ನೇ ಆಗಲೀ ಹೇಳುವುದು ಯುಕ್ತವಾಗಿ ನಮಗೆ ತೋರುವುದಿಲ್ಲ. ಅವರಲ್ಲಿ ಹಗಲಿಗೆ ಹೇಗೆ ರಾತ್ರಿಗೆ ಹೇಗೆಂದು ಆಹಾರಕ್ಕಾಗಿ ತಾಪತ್ರಯ ಪಡತಕ್ಕವರು ಅನೇಕಾನೇಕರಿದ್ದಾರೆ. ಆದರೆ ಸರ್ಕಾರದವರು ನಮ್ಮ ಹಿತಾರ್ಥವಾಗಿಯೂ ದೇಶಹಿತಾರ್ಥವಾಗಿಯೂ ಯಾವ ಯಾವ ಅನುಕೂಲ್ಯಗಳನ್ನು ಕಲ್ಪಿಸಿದ್ದಾರೆ, ಅವನ್ನು ನಾವು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳತಕ್ಕವರು ವಿರಳರಾಗಿರುವುದೇ ಈ ಲೋಪಕ್ಕೆ ಕಾರಣವೆಂದು ತೋರುತ್ತದೆ. ನಮ್ಮ ರೈತರಲ್ಲಿ ಅಕ್ಷರಸ್ಥರು ಅತ್ಯಂತ ವಿರಳರೆಂಬುದು ಗೊತ್ತೇ ಇದೆ. ಅಲ್ಲದೆ ಅವರಲ್ಲಿ ಸೋಂಬೇರಿತನವೂ ಹೆಚ್ಚು. ಬಡಿದೆಬ್ಬಿಸಿದರೂ ಏಳದವನು ಕಿವಿಗೆ ಕೇಳಿಸದ ಉದಯರಾಗದಿಂದ ಏಳುವುದುಂಟೆ? ಸರ್ಕಾರದವರು ಗೆಜೆಟ್ಟಿನಲ್ಲಿ ಪ್ರಕಟಿಸುವ ವಿಷಯಗಳು ಸಾವಿರಕ್ಕೊಬ್ಬ ರೈತನಿಗೂ ಗೊತ್ತಾಗುವುದಿಲ್ಲ. ಹೀಗಿರುವಾಗ ರೈತರಮೇಲೆ ತಪ್ಪನ್ನು ಹೊರಿಸಿ ದೂರುವುದು ಸಮಂಜಸವಾಗಲಾರದು. ಪ್ರತಿ ಗ್ರಾಮಗಳಲ್ಲೂ ಇಂಥ ಪ್ರಕಟನೆಗಳನ್ನು ಚಾವಡಿಗಳಲ್ಲಿ ಅಂಟಿಸಿ ಅಲ್ಲಿಯ ಪಟೇಲ್ ಶ್ಯಾನುಭೋಗರುಗಳು ಪ್ರಕಟನೆಯ ಸಂಗತಿಗಳನ್ನು ರೈತರಿಗೆಲ್ಲಾ ಒತ್ತಿ ಹೇಳುವಂತೆ ಏರ್ಪಡಿಸಿದ್ದರೆ, ಅದರ ಪರಿಣಾಮವು ಈಗ ಹೇಳಲ್ಪಡುವ ಉತ್ತರದಲ್ಲಿ ಕಂಡ ಸ್ಥಿತಿಗೆ ಎಂದಿಗೂ ಬರುತ್ತಿರಲಿಲ್ಲವೆಂದು ಎಣಿಸುತ್ತೇವೆ. ಸರ್ಕಾರದವರು ಪ್ರಸಿದ್ಧಪತ್ರಿಕಾ ಪ್ರಕಟನವನ್ನು ಗೆಜೆಟ್ಟಿನಲ್ಲಿ ಮಾಡಿಸಿ ವಿಜೃಂಭಣೆಮಾಡಿದ ಮಾತ್ರದಿಂದಲೇ ಚರಿತಾರ್ಥತೆಯನ್ನು ಭಾವಿಸಿಕೊಳ್ಳದೆ ನಿಜವಾಗಿ ಪ್ರಜೆಗಳಿಗೆ ಆ ಪ್ರಕಟನೆಯ ಲಾಭವಾಗುವಂತೆ ಮಾಡುವುದಕ್ಕೆ ಅವಶ್ಯಕಗಳಾದ ಪ್ರಯತ್ನಗಳನ್ನು ನಡೆಸುವುದರ ಕಡೆಗೆ ವಿಶೇಷ ಲಕ್ಷ್ಯಕೊಡುವವರಾಗಬೇಕೆಂದು ನಮ್ಮ ನಿವೇದನೆಯಾಗಿರುತ್ತದೆ.

ಪ್ರಜಾಪ್ರತಿನಿಧಿಗಳಾಗಿ ಸಭೆಗೆ ಬರತಕ್ಕವರಿಗೆ ರೈಲ್ವೆ ಛಾರ್ಜುಗಳನ್ನು ಸರ್ಕಾರದವರು ಕೊಡಿಸಿಕೊಡಬೇಕೆಂದು ಮ|| ಗಳಾದ ಕರಣಿಕ ಕೃಷ್ಣಮೂರ್ತಿಯವರೂ ಇನ್ನೂ ಒಬ್ಬಿಬ್ಬ ಸಭಿಕರೂ ಸಭೆಯಲ್ಲಿ ಕೇಳಿಕೊಂಡರು. ಇದನ್ನು ಯೋಚನೆಮಾಡುವುದಾಗಿ ದಿವಾನರು ಉತ್ತರಕೊಟ್ಟಿದ್ದಾರೆ. ಪ್ರಜಾಪ್ರತಿನಿಧಿಗಳೆಲ್ಲಾ ಗೌರವಾರ್ಥವಾಗಿ ಕೆಲಸಮಾಡತಕ್ಕ ಉಪಪನ್ನ ಜನರೇ ಆಗಿರುತ್ತಾರೆ. ಅವರು ಸಭಾಕಾರ್ಯಕ್ಕಾಗಿ ರಾಜಧಾನಿಗೆ ಬಂದಾಗ್ಗೆ ಅವರುಗಳ ಊಟ ಉಪಚಾರ ವಸತಿ ಮೊದಲಾದುವುಗಳಿಗೆಲ್ಲಾ ಸರ್ಕಾರದವರೇ ಏರ್ಪಾಟುಮಾಡಿಕೊಡುತ್ತಿದ್ದಾರೆ. ಹೆಚ್ಚುಕಾಲ ಅಖಂಡವಾಗಿ ಪ್ರತಿನಿಧಿಗಳಾಗಿ ಬರುತ್ತಿರುವವರಿಗೆ ಆಯುಧಧಾರಣೆಯ ಕಾನೂನಿನ ವಿನಾಯತಿಯೇ ಮೊದಲಾದ ಗೌರವಗಳನ್ನೂ ಕೊಟ್ಟಿರುತ್ತಾರೆ. ಇವುಗಳ ಜತೆಗೆ ರೈಲ್ವೆ ಛಾರ್ಜನ್ನು ಕೂಡ ಅವರಿಗೆ ಸರ್ಕಾರದವರು ಕೊಡಿಸುವುದು ಮಹತ್ತರವಾದ ಕಾರ್ಯವೇನೂ ಅಲ್ಲ. ಆದರೆ ಸರ್ಕಾರಕ್ಕೆ ಮಿತವ್ಯಯಬೋಧೆಯನ್ನು ಮಾಡಿ ಒಂದು ಕಡೆಯಲ್ಲಿ ಎಚ್ಚರಿಸುತ್ತಿರುವ ಪ್ರತಿನಿಧಿಗಳೇ ಮತ್ತೊಂದು ಕಡೆಯಲ್ಲಿ ತಮ್ಮ ಹಿತಕ್ಕಾಗಿ ಇಂಥ ನೂತನ ವ್ಯಯಭಾರವನ್ನು ಹೆಚ್ಚಿಸಲು ಬೇಡುವುದು ಯಾವ ಧರ್ಮವು? ದೇಶಸೇವೆಗಾಗಿ ಪ್ರಜಾಪ್ರತಿನಿಧಿ ಸಭೆಯ ಸಭಿಕತ್ವದಂಥ ಗೌರವವನ್ನು ವಹಿಸಿ, ತಮ್ಮ ಎಷ್ಟೋ ಸ್ವಂತದ ಕಾರ್ಯಗಳನ್ನೂ ಬಿಟ್ಟು ಈ ಸಭೆಗಾಗಿ ಬರತಕ್ಕ ಗೌರವಶಾಲಿಗಳಿಗೆ ಈ ರೈಲ್ವೆ ಛಾರ್ಜಿನ ಭಾರವನ್ನು ತಾವೇ ವಹಿಸಿಕೊಳ್ಳುವಂಥ ಸ್ವಾರ್ಥತ್ಯಾಗವನ್ನು ಮಾಡುವುದೊಂದು ದೊಡ್ಡ ಭಾರವೆ? ಈ ಸ್ವಂತದ ಲಾಭವನ್ನು ಅವರು ತಾವಾಗಿ ಕೇಳಿಕೊಳ್ಳಬೇಕೆ? ಸರ್ಕಾರದ ಉದ್ಯೋಗಿಗಳಿಗಾಗಿ ಆಗುತ್ತಿರುವ ಮುಂದಿನ ವೆಚ್ಚವನ್ನು ಕಡಿಮೆಮಾಡಿಸುವುದಕ್ಕೆ ಸ್ವಾರ್ಥತ್ಯಾಗದ ತಮ್ಮ ಉದಾಹರಣಗಳಿಂದ ಪ್ರತಿನಿಧಿಗಳು ಪ್ರಯತ್ನಿಸುತ್ತಿದ್ದರೆ ಅದು ಅವರುಗಳಿಗೆ ಭೂಷಣವಾಗಿರುವುದು. ಕೇಳಿಕೊಂಡು ಒಂದು ಗೌರವವನ್ನು ಮಾಡಿಸಿಕೊಳ್ಳುವುದು ತಾನಾಗಿ ಲಭಿಸುವಷ್ಟು ಗೌರವಕ್ಕೆ ಎಂದಿಗೂ ಸಮನಾಗಲಾರದು.

ಇನ್ನೊಬ್ಬ ಸಭಿಕರು ಅಮಲ್ದಾರರುಗಳ ಬತ್ಯವನ್ನು ಹೆಚ್ಚಿಸಬೇಕೆಂದು ಕೇಳಿದ ವಿಷಯವು ಮತ್ತೂ ವಿಚಿತ್ರವಾಗಿರುವುದು. ಸರ್ಕಾರದುದ್ಯೋಗಿಗಳಿಗಾಗಿ ಕೊಡಲ್ಪಡುವ ಬತ್ಯಗಳು ವರ್ಷೇ ವರ್ಷೇ ಹೆಚ್ಚುತ್ತಿರುವಲ್ಲಿ ಅದನ್ನು ಆಕ್ಷೇಪಿಸಿ ಮಿತಗೊಳಿಸಬೇಕಾದುದು ತಮ್ಮ ಕರ್ತವ್ಯವೆಂಬುದನ್ನು ಅರಿತುಕೊಳ್ಳದೆ ಉದ್ಯೋಗಿಗಳ ಪೋಷಕರೇ ಇವರಾಗಿರುವಂತೆ ಪ್ರತಿನಿಧಿಗಳು ನಡೆದುಕೊಳ್ಳುವುದು ನ್ಯೂನತೆಯಲ್ಲವೆ? ಸರ್ಕಾರದ ಉದ್ಯೋಗಿಗಳ ಪರವಾಗಿ ಪ್ರತಿನಿಧಿಗಳು ಇಂಥ ವಿಷಯಗಳನ್ನು ಕೋರಿಕೊಳ್ಳಬೇಕಾದುದಿಲ್ಲವೆಂದು ದಿವಾನರು ಕೊಟ್ಟ ಉತ್ತರವು ಇನ್ನು ಮುಂದೆ ಈ ತೆರದಲ್ಲಿ ಪ್ರವರ್ತಿಸತಕ್ಕವರಿಗೆ ಗುಣಪಾಠವಾಗಲೆಂದು ನಿರೀಕ್ಷಿಸುತ್ತೇವೆ.

ಸಂಧಿಸಭೆ.

ಸಂಧಿಸಭೆಯೊಳಗಣ ಉಪಸಭೆಯವರು ಕಿಯಾಚೋ ವಿಷಯವನ್ನು ಜಪಾನರಿಗೆ ಅನುಕೂಲವಾಗಿ ತೀರ್ಮಾನಿಸಿರುವರು. ಈ ಕಿಯಾಚೋವು ಚೀನಾಕ್ಕೆ ಸೇರಿದ್ದುದು. ಇದನ್ನು ಜರ್ಮನರು ವಶಪಡಿಸಿಕೊಂಡಿದ್ದರು. ಯುದ್ಧಾರಂಭವಾದಾಗ ಜಪಾನರು ಇದನ್ನು ಅವರಿಂದ ಕಿತ್ತುಕೊಂಡರು. ಯುದ್ಧ ಮುಗಿದಕೂಡಲೇ ಚೀನರಿಗೆ ಒಪ್ಪಿಸಿಬಿಡುವುದಾಗಿ ಹೇಳುತ್ತಿದ್ದರು. ಈಗ ಆ ಮಾತೇ ಇಲ್ಲ. ತಮಗೇ ಸೇರಿರಬೇಕೆಂದು ಹೇಳುತ್ತಿರುವರು. ಅದಕ್ಕನುಸಾರವಾಗಿಯೇ ಉಪಸಭೆಯವರು ನಿರ್ಣಯಿಸಿರುವುದನ್ನು ನೋಡಿದರೆ "ಬಲಿನಾಂದುರ್ಬಲಾನಾಂಚ ಸ್ವತಂತ್ರೋಪಿಸ್ವಧಾಸ್ಥಿತಾ" ಎಂಬ ವಚನವು ಯಥಾರ್ಥವೆಂದು ಹೇಳಬೇಕಾಗುತ್ತದೆ. ಇದರಿಂದ ಚೀನರಿಗೆ ತುಂಬಾ ಆಶಾಭಂಗವೂ ಅತೃಪ್ತಿಯೂ ಉಂಟಾಗಿದೆಯೆಂಬುದಕ್ಕೆ ಸಂಶಯವಿಲ್ಲ.

ಕಳೆದ ವಾರದಲ್ಲಿ ವ್ಯಕ್ತವಾದ ಸಂಧಿಸಭಾ ವಿಷಯಗಳೊಳಗೆ ಇಟಲಿ ಸಂಗತಿಯೊಂದು ಪ್ರಧಾನವಾಗಿದೆ. ಆಡ್ರಿಯಾಟಿಕ್ ಸಮುದ್ರದ ಪೂರ್ವ ತೀರದಲ್ಲಿ ಆಸ್ಟ್ರಿಯಾಕ್ಕೂ ಹಂಗೇರೀ ದಕ್ಷಿಣಭಾಗಕ್ಕೂ ಮುಖ್ಯ ರೇವೆಯ ಪಟ್ಟಣವಾಗಿರುವ ಫ್ಯೂಮ್ ಎಂಬ ಪಟ್ಟಣವು ತಮಗೆ ಸೇರಬೇಕೆಂದು ಇಟಲಿಯವರು ಹಟತೊಟ್ಟಿದ್ದಾರೆ. ಇದು ಅನ್ಯಾಯವಾಗಿದೆ. ಯುದ್ಧಕಾರಣದಿಂದ ಇಟಲಿಗೆ ಇತರ ಮಿತ್ರಮಂಡಲಿಯವರಂತೆಯೇ ಅಧಿಕ ನಷ್ಟಸಂಭವಿಸಿದ್ದರೂ ಕಡೆಕಡೆಗೆ ಫಲಿತ ಅಧಿಕವಾಗಿಯೇ ಪ್ರಾಪ್ತವಾಗಿದೆ. ಹೇಗೆಂದರೆ—ಇಟಲಿದೇಶದ ಟ್ರೆಂಟಿನೋ ಪ್ರಾಂತವು ಶತ್ರುಬಾಧೆಯಿಂದ ಸಂಪೂರ್ಣವಾಗಿ ಮುಕ್ತವಾಯಿತು. ಆಡ್ರಿಯಾಟಿಕ್ ಸಮುದ್ರದ ಮುಖ್ಯ ರೇವೆಯಾದ ಟ್ರೀಸ್ಟಿ ಪಟ್ಟಣವೂ, ಪೋಲಾ ಎಂಬ ನೌಕಾಶ್ರಯಸ್ಥಾನವೂ ಇಟಲಿಯ ವಶವಾಗಿರುವುವು. ಆಲ್ಪ್ಸ್ ಪರ್ವತಪ್ರಾಂತದ ಇಟಲಿ ಎಲ್ಲೆಕಟ್ಟು ವಿಸ್ತರಿಸಿತು. ಇಷ್ಟೆಲ್ಲಾ ಸಾಲದೆ ಫ್ಯೂಮ್ ಪಟ್ಟಣವನ್ನು ಇಟಲಿಯು ಅಪೇಕ್ಷಿಸುತ್ತಿದೆ. ಇದಕ್ಕೆ ಮಗ್ಗುಲ ಶತ್ರುವಾಗಿದ್ದ ಆಸ್ಟ್ರಿಯಾ ಹಂಗೇರಿದೇಶವು ಈಗ ಛಿನ್ನಭಿನ್ನವಾಗಿ ಹೋಯಿತು. ಇನ್ನು ಆ ದೇಶದ ಭಯವು ಇಟಲಿಗೆ ಇಲ್ಲವೇ ಇಲ್ಲ. ಆಸ್ಟ್ರಿಯಾದಿಂದ ಹಂಗೇರಿಯು ಬೇರೆಯಾಗಿದೆ. ಹೊಸದಾಗಿ ಸ್ಲಾವ್ ರಾಷ್ಟ್ರಗಳು ಏರ್ಪಟ್ಟಿವೆ. ಈ ರಾಷ್ಟ್ರಗಳೆಲ್ಲಾ ಮಿತ್ರಮಂಡಲಿ ಪಕ್ಷಕ್ಕೆ ಸೇರಿವೆ. ಫ್ಯೂಮ್‌ಪಟ್ಟಣವು ನ್ಯಾಯವಾಗಿ ಈ ರಾಷ್ಟ್ರಗಳಿಗೆಲ್ಲಾ ರೇವೆಯಾಗಿರಬೇಕಾದುದು ಧರ್ಮವು. ಇಂತಹದನ್ನು ಇಟಲಿಯೊಂದಕ್ಕೆ ಕೊಟ್ಟುಬಿಟ್ಟರೆ ಆ ರಾಷ್ಟ್ರಗಳಿಗೆಲ್ಲಾ ವಿಪರೀತ ನಷ್ಟವು ಸಂಭವಿಸುವುದು. ಹೀಗೆ ಮಾಡುವುದಕ್ಕೆ ಪ್ರೆ|| ವಿಲ್ಸನ್‌ರವರಿಗೆ ಇಷ್ಟವಿಲ್ಲ. ಇಂಗ್ಲೀಷ್ ಪ್ರೆಂಚ್ ದೇಶದವರೂ ಒಪ್ಪುತ್ತಿಲ್ಲ. ಇವರುಗಳು ಎಷ್ಟು ಹಿತಬೋಧೆ ಮಾಡಿದರೂ ಇಟಲಿಯ ಮಂತ್ರಿ ಸೀನಿಯರ್ ಅರ್ಲಾಂಡೋರವರು ಹಿಡಿದಹಟ್ಟನ್ನು ಬಿಡದೆ ಇದ್ದಾರೆ. ತಮ್ಮ ಇಷ್ಟಕ್ಕೆ ವಿರುದ್ಧವಾಗಿ ತೀರ್ಮಾನವಾದರೆ ತಾವು ಸಂಧಿಸಭಾ ಸಂಬಂಧವನ್ನೇ ಕಳೆದುಕೊಳ್ಳುವುದಾಗಿ ಹೆದರಿಸಿದರು. ಆದರೆ ಪ್ರೆ|| ವಿಲ್ಸನ್‌ರವರು ಫ್ಯೂಮನ್ನು ಸರ್ವರ ಉಪಯೋಗಕ್ಕೂ ಅರ್ಹವಾಗಿರುವ ರೇವೆಯನ್ನಾಗಿ ಮಾಡದೆ ಜಗೋಸ್ಲಾವುಗಳಿಗೆ ಒಪ್ಪಿಸಿಬಿಡಬೇಕೆಂದು ತೀರ್ಮಾನಿಸಿದ್ದಾರೆ. ಇಂಗ್ಲೀಷರಿಗೂ ಫ್ರೆಂಚರಿಗೂ ಅದನ್ನು ಸರ್ವೋಪಯೋಗ್ಯವನ್ನಾಗಿ ಮಾಡಬೇಕೆಂಬ ಇಷ್ಟವಿದೆ. ಪ್ರೆ|| ವಿಲ್ಸನ್‌ರವರ ಅಭಿಪ್ರಾಯವನ್ನು ಇಟಲಿ ಸರ್ಕಾರದವರೂ ಪ್ರಜೆಗಳೂ ಕೇಳಿ ಕುಪಿತರಾಗಿ, ತಮ್ಮ ಪ್ರತಿನಿಧಿಯನ್ನು ಸಂಧಿಸಭೆಯಿಂದ ಹಿಂದಿರುಗಿ ಬಂದುಬಿಡಬೇಕೆಂದು ತಂತ್ರೀವಾರ್ತೆ ಕೊಟ್ಟರು. ಅದರ ಮೇಲೆ ಇಟಲಿ ರಾಯಭಾರಿಗಳೆಲ್ಲಾ ಪ್ಯಾರಿಸ್ಸನ್ನು ಬಿಟ್ಟು ರೋಮು ಪಟ್ಟಣಕ್ಕೆ ಹೊರಟು ಹೋಗಿದ್ದಾರೆ. ಮುಂದೆ ಇದು ಹೇಗೆ ಪರ್ಯವಸನ್ನವಾಗುವುದೋ ನೋಡಬೇಕು. ಪತ್ರಿಕೆಗಳು ಇದರಿಂದ ಮಿತ್ರಮಂಡಲಿಯ ಮೈತ್ರಿಗೆ ಭಂಗವೇನೂ ಬರುವುದಿಲ್ಲವೆಂದೂ ಇಟಲಿಯು ಮತ್ತೆ ಕೂಡಿಯೇ ಕೊಡುವುದೆಂದೂ ನಂಬುಗೆಯಿಂದ ಹೇಳುತ್ತಿವೆ. ಇಂಗ್ಲೀಷ್ ಪ್ರೆಂಚ್ ಮಂತ್ರಿಗಳು ಸಂಧಿಸಭೆಗೆ ಬರಬೇಕೆಂದು ಇಟಲಿ ರಾಯಭಾರಿಗಳಿಗೆ ಆಹ್ವಾನವನ್ನು ಕೊಟ್ಟಿದ್ದಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಭಾನುವಾರ ನೀಲಗಿರಿಗೆ ದಯಮಾಡಿಸಿತು.

ನಮ್ಮ ಆಕ್ಟಿಂಗ್ ದಿವಾನರು ಬೊಂಬಾಯಿಗೆ ಕಳೆದವಾರ ಪ್ರಯಾಣ ಮಾಡಿದ್ದು ಬಂದರೆಂದು ಕೇಳುತ್ತೇವೆ.

ಮಿ|| ಪಿ. ಎಫ್. ಬೌರಿಂಗ್‌ರವರು ಕಳೆದ ಬುಧವಾರ ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಛಾರ್ಜನ್ನು ವಹಿಸಿಕೊಂಡರು.

ತಕಾವಿ ಸಾಲಗಳಿಗೂ ಆಹಾರಧಾನ್ಯಗಳನ್ನು ಕೊಳ್ಳುವುದಕ್ಕೂ ನಮ್ಮ ಗೌರ್ನಮೆಂಟಿನವರು ೨|| ಲಕ್ಷ ರೂ. ಗಳನ್ನು ಅಪ್ಪಣೆಮಾಡಿದ್ದಾರೆ.

ಗುಂಡ್ಲುಪೇಟೆ ತಾ|| ಪಡಗೂರಿನಲ್ಲಿ ಒಂದು ವಾಚಕಶಾಲೆಯು ಕಳೆದ ತಾ|| 25-4-19 ರಲ್ಲಿ ಸ್ಥಾಪಿಸಲ್ಪಟ್ಟಿರುವುದಾಗಿ ಆ ಸ್ಥಳೀಕರೊಬ್ಬರು ತಿಳಿಸಿರುತ್ತಾರೆ.

ನಮ್ಮ ಸಂಸ್ಥಾನದ ಎಗ್ಜಿಕ್ಯುಟೀವ್ ಕೌನ್ಸಿಲಿನಲ್ಲಿ ೩ ನೆ ಸ್ಥಾನವು ತಾತ್ಕಾಲಿಕವಾಗಿದ್ದಿತು. ಅದು ಈಗ ಶಾಶ್ವತವಾಗಿ ೩ ನೆ ಸ್ಥಾನವಾಗಿ ಮಾಡಲ್ಪಟ್ಟಿದೆ.

ಸ್ವಲ್ಪವೂ ಬೆಳೆಯಾಗದ ತರೀ ಭೂಮಿಗಳ ಕಂದಾಯದಲ್ಲಿ ಅರ್ಧವನ್ನು ಬಿಟ್ಟುಬಿಡುವುದಾಗಿ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಸಂಪೂರ್ಣವಾಗಿ ಬಿಡಬೇಕಾದುದೇ ಧರ್ಮವು.

ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷತೆಯಿಂದ ಹಾಸನದಲ್ಲಿ ೫ ನೆ ಕರ್ಣಾಟಕ ಸಾಹಿತ್ಯ ಸಂಮೇಳನವು ಕಳೆದ ತಾ|| ೬ ರಲ್ಲಿ ಆರಂಭಿಸಲ್ಪಟ್ಟು ಯಥಾವಿಧಿಯಾಗಿ ಜರುಗಿತೆಂದು ಕೇಳಿದೆವು.

ಬಸವೇಶ್ವರ ಜಯಂತ್ಯುತ್ಸವವು ಕಳೆದ ವೈಶಾಖ ಶುದ್ಧ ೨ ನೆಯ ದಿನ ರಾಜಧಾನಿಯ ದೊಡ್ಡಪೇಟೆ ಬಸವೇಶ ದೇವಾಲಯದಲ್ಲೂ ಹಳೆ ಅಗ್ರಹಾರದ ಮಹಾದೇವ ದೇವಾಲಯದಲ್ಲೂ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಅಗ್ರಹಾರದಲ್ಲಿ ಆಗ್ಗೆ ಮ|| ಶೆಟ್ಟಿಪ್ಪ ಸಿದ್ದಪ್ಪನವರ ಕರ್ತೃತ್ವದಿಂದ ವೇ|| ಶಿವಪ್ಪ ಶಾಸ್ತ್ರಿಗಳಿಂದ ಶಿವಕಥಾ ಕಾಲಕ್ಷೇಪವು ನೆರವೇರಿತು.

ರಾಜಧಾನಿಯ ಪಂಚಾನನ ಕುಲಸ್ಥರುಗಳು ಸ್ಥಳಪರಸ್ಥಳದ ತಮ್ಮ ಜನರಿಂದಲೂ ಇತರ ಕೆಲ ಧರ್ಮಾತ್ಮರಿಂದಲೂ ಅನೇಕಾನೇಕ ರತ್ನಗಳನ್ನೂ ಸುವರ್ಣವನ್ನೂ ಧನವನ್ನೂ ಶೇಖರಿಸಿ ೭-೮ ಸಾವಿರ ರೂ. ಬೆಲೆ ಬಾಳುವ ರತ್ನಕಿರೀಟವೊಂದನ್ನು ನಿರ್ಮಿಸಿ ಕಳೆದ ಭಾನುವಾರ ಮಂಡಿಬೀದಿಯ ಕಾಳಿಕಾಂಬೆಗೆ ಧಾರಣಮಾಡಿಸಿ ಅದರ ಉತ್ಸವವನ್ನು ವಿಶೇಷ ವೈಭವದಿಂದ ನಡೆಯಿಸಿದರು.

ಮ|| ಗಳಾದ ಬಿ. ಆರ್. ರಾಮಚಂದ್ರರಾವ್, ಎಂ. ಕೆ. ಸೀತಾರಾಮಶೆಟ್ಟಿ, ಸಿ. ರಾಜಗೋಪಾಲರಾವ್, ಟಿ. ವೆಂಕಟರಂಗಂ, ಎಚ್. ಬಾಲಕೃಷ್ಣಯ್ಯ, ಕೆ. ರಂಗಸ್ವಾಮಿ ಅಯ್ಯಂಗಾರ್, ಎಚ್. ಪಿ. ನಾರಾಯಣರಾವ್, ಕೆ. ಶ್ರೀನಿವಾಸಾಚಾರ್ಯ, ಬಿ. ಪೂರ್ಣಸಿಂಗ್, ಅಬ್ದುಲ್‌ಖಾದರ್, ಟಿ. ಸಿ. ನಾಗಳ ವೀರಯ್ಯ, ಬಿ. ತಿರುಮಲಾಚಾರ್, ಇವರುಗಳನ್ನು ನಮ್ಮ ಗೌರ್ನಮೆಂಟಿನವರು ರೆ|| ಪ್ರೊಬೇಷನರುಗಳನ್ನಾಗಿ ನಿಯಮಿಸಿದ್ದಾರೆ.

ಹುಣಸೂರು ತಾಲ್ಲೂಕಿನಲ್ಲಿ ಮಾದಹಳ್ಳಿ ಮಠವೆಂಬ ಮಠವಿದೆ. ಇದು ಉಜ್ಜಯಿನೀ ಶಾಖೆಗೆ ಸೇರಿದುದು. ಇದರಲ್ಲಿ ಕೆಲವು ಕಾಲದಿಂದ ಅಧಿಕಾರಿಗಳೇ ಇಲ್ಲದಿದ್ದು ಮೊನ್ನೆ ವರ್ಷ ಇಬ್ಬರಿಗೆ ಪಟ್ಟಚರಮೂರ್ತಿಗಳ ಅಧಿಕಾರವಾಯ್ತು. ಈ ಸುತ್ತಿನ ಭಕ್ತಮಂಡಲಿ ಮೇಲೆ ಆಚಾರ ವಿಚಾರಣೆ ನಡೆಸುವ ಅಧಿಕಾರವು ಈ ಮಠಕ್ಕಿದೆ. ಆದರೆ ಈಗಿರುವ ಅಧಿಕಾರಿಗಳಿಗೆ ವಿದ್ಯಾವಿಶ್ವಾಸಾಮರ್ಥ್ಯವಿಲ್ಲದಿರುತ್ತಿರಲಿಂದ ಮತಾಚಾರಸಂಬಂಧವಾಗಿ ಕೊಟ್ಟ ಅರ್ಜಿಗಳು ವರ್ಷಾಂತರವಾದರೂ ಇತ್ಯರ್ಥವಾಗದೆ ಮಠದಲ್ಲಿ ದುರಾಚಾರ ಸಾಂಕರ್ಯಗಳು ಬೆಳೆಯುವುದಕ್ಕೆ ಆಸ್ಪದವಾಗಿದೆಯೆಂದು ಆ ಸುತ್ತಿನ ಮತಾಭಿಮಾನಿಗಳೊಬ್ಬರು ತಿಳಿಯಪಡಿಸಿದ್ದಾರೆ. ಆಚಾರ ವಿಚಾರಣೆಯ ಮಠಗಳ ಸ್ಥಿತಿಯು ಹೀಗಿರುವುದು ನಿಂದ್ಯವು.

ಭರತಖಂಡದ ವೃತ್ತಾಂತಗಳು.

ರಾಮನಗರದಲ್ಲಿ ಉದ್ರೇಕಪೂರಿತರಾದ ಪ್ರಜೆಗಳು ಜಾರ್ಜ್ ಸಾರ್ವಭೌಮರ ವಿಗ್ರಹವನ್ನು ಸುಟ್ಟುಹಾಕಿದರೆಂದು ಪಯೊನೀರ್ ಪತ್ರಿಕಾ ವಿಲೇಖನು ಬರೆದಿದ್ದಾನೆ.

ಬರೋಡಾ ಸಂಸ್ಥಾನದಲ್ಲಿ ನೂತನ ವಿಶ್ವವಿದ್ಯಾಲಯ ಸ್ಥಾಪನೆಮಾಡಲು ಪ್ರಯತ್ನವು ನಡೆಯುತ್ತಿದೆ. ತಿರುವಾಂಕೂರಿನವರೂ ತಮ್ಮಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಳ್ಳಲು ಯೋಚಿಸಿದ್ದಾರೆ.

ಪಂಜಾಬಿನ ಗದ್ದಲದಲ್ಲಿ ತಮ್ಮ ಪ್ರಜೆಗಳಾರೂ ಸೇರಬಾರದೆಂದೂ ಕಾಬೂಲಿನಿಂದ ಭರತಖಂಡಕ್ಕೆ ಹೋಗಬೇಕೆನ್ನುವವರಿಗೆ ಅಪ್ಪಣೆಚೀಟಿಯನ್ನು ಕೊಡಬಾರದೆಂದೂ ಅಫ್ಘಾನಿಸ್ಥಾನ್ ಅಮೀರರು ಪ್ರಕಟಿಸಿದ್ದಾರೆ.

ಪಂಜಾಬಿನಲ್ಲಿ ಇನ್ನು ಮುಂದೆ ಯಾವ ತೊಂದರೆಗಳಾದರೂ ಸಂಭವಿಸಿದರೆ ಅವನ್ನು ತಡೆಯುವುದಕ್ಕೆ ಸರ್ವಸಹಾಯವನ್ನೂ ಮಾಡುತ್ತೇನೆಂದು ಕಪೂರ್ಥಲಾ ಮಹಾರಾಜರವರು ಪಂಜಾಬು ಲೆ|| ಗೌರ್ನರವರಿಗೆ ತಿಳಿಯಪಡಿಸಿದ್ದಾರೆ.

ಅಫ್ಘಾನಿಸ್ಥಾನದ ಸ್ಥಿತಿಗತಿಗಳು ವಿಷಮವಾಗಿರುವ ವಾರ್ತೆ ಬಂದಿದೆ. ಈಗಣ ಅಮೀರನು ಹೊರಗೆ ಆಂಗ್ಲರ ಮಿತ್ರರಂತೆ ನಟಿಸಿ ಒಳಗೆ ಶತೃತ್ವಪೂರ್ಣನಾಗಿರುವನೆಂದು ಸುದ್ದಿಬಂದಿದೆ. ಇಂಗ್ಲೀಷ್ ಸೈನ್ಯಗಳು ಸಿದ್ಧವಾಗುತ್ತಿರುವಂತೆ ವಾರ್ತೆಯಿದೆ.

ಆನಿಬೆಸೆಂಟಮ್ಮನವರ ಮತವೂ ಅವರ ನ್ಯೂ ಇಂಡಿಯಾ ಪತ್ರಿಕೆಯ ಭಾವಗಳು ಈಗ ಮಾರ್ಪಟ್ಟಿರುವುದರಿಂದ ಬೇಸತ್ತು ಕುಂಭಕೋಣದ ಜನರನೇಕರು ಒಂದು ಸಭೆಗೂಡಿ, ಇನ್ನುಮುಂದೆ ನ್ಯೂ ಇಂಡಿಯಾ ಪತ್ರಿಕೆಯನ್ನು ತರಿಸಕೂಡದೆಂದು ನಿರ್ಧಾರಮಾಡಿಕೊಂಡರು.

ಭರತಖಂಡದಿಂದ ಸೋಲ್ಜರುಗಳನೇಕರು ಇಷ್ಟರಲ್ಲೇ ಸ್ವದೇಶಕ್ಕೆ ಹಿಂದಿರುಗಿ ಹೋಗುವವರಾಗಿದ್ದರು. ಆದರೆ ಉತ್ತರ ಹಿಂದೂಸ್ಥಾನದಲ್ಲಿ ಹೊಸಗದ್ದಲದ ಅನಾಹುತಗಳಾಗುತ್ತಿರುವುದನ್ನು ಕಂಡು ಇದೆಲ್ಲಾ ಶಾಂತವಾಗುವವರೆಗೆ ಅವರುಗಳು ತಮ್ಮ ಪ್ರಯಾಣವನ್ನು ನಿಲ್ಲಿಸಿಬಿಟ್ಟರು.

ಲಾಹೋರಿನಲ್ಲಿ ವರ್ತಕರು ಆಹಾರ ಧಾನ್ಯಗಳ ಬೆಲೆಯನ್ನು ವಿಪರೀತವಾಗಿ ಹೆಚ್ಚಿಸಲು, ಅಧಿಕಾರಿಗಳು ಸೈನಿಕಶಾಸನ ಪ್ರಕಾರ ಅವುಗಳ ಬೆಲೆಯನ್ನಿಳಿಸುವಂತೆ ಮಾಡಿದರು. ಇದರಿಂದ ಬಡಬಗ್ಗರಿಗೆ ಅನುಕೂಲವಾಗಲಾಗಿ, ಅವರು ಸೈನಿಕಶಾಸನಕ್ಕೆ ಜಯವಾಗಲಿ ಎಂದು ಘೋಷಮಾಡುತ್ತಿರುವರಂತೆ.

ಮಿ|| ಜಿನ್ನಾರವರು ಹೈದರಾಬಾದಿಗೆ ಮೊನ್ನೆತಾನೇ ಹೋಗಿರಲು, ಅಲ್ಲಿ ಅವರು ರಾಜಕೀಯ ಸಭೆಯನ್ನು ಕೂಡಿಸುವರೆಂದು ನೈಜಾಮರಿಗೆ ತಿಳಿಯಬಂದುದರಿಂದ ಅಂಥ ಯಾವ ಸಭೆಯನ್ನೂ ತಮ್ಮ ದೇಶದಲ್ಲಿ ಕೂಡಿಸಲಾಗದೆಂದೂ ತಮ್ಮ ಅಪ್ಪಣೆಯಿಲ್ಲದೆ ತಮ್ಮ ಸಂಸ್ಥಾನದ ಯಾವ ಭಾಗದಲ್ಲೂ ಸಂಚರಿಸಕೂಡದೆಂದೂ ಜಿನ್ನಾರವರಿಗೆ ಅಪ್ಪಣೆಮಾಡಿ ಕಳುಹಿಸಿದರಂತೆ.

ಸರ್ಕಾರದವರ ಅಧಿಕಾರವನ್ನು ಅಣಗಿಸಿಬಿಡುವುದಕ್ಕಾಗಿ ಪ್ರಯತ್ನಿಸುತ್ತಲಿರುವರೆಂದು ಯಾರಮೇಲೆ ಅನುಮಾನ ತೋರಿದರೂ ತತ್‌ಕ್ಷಣವೇ ಅಂಥವರನ್ನು ವಾರಂಟಿಲ್ಲದೆಯೇ ಅಧಿಕಾರಿಗಳು ಹಿಡಿಯುವುದಕ್ಕೆ ಅನುಕೂಲವಾಗುವಂತೆ ದೇಶರಕ್ಷಕಶಾಸನಕ್ಕೆ ನೂತನ ನಿಬಂಧನೆಯನ್ನು ಗೌರ್ನರ್ ಜನರಲ್‌ರವರು ಏರ್ಪಡಿಸಿರುವರೆಂದು ಸರ್ಕಾರಿ ಗೆಜೆಟ್ಟಿನಿಂದ ವ್ಯಕ್ತವಾಗುತ್ತದೆ.

ಭರತಖಂಡದ ಕೋರಿಕೆಗಳನ್ನು ಆಂಗ್ಲಮಹಾಜನರ ಮುಂದೆ ನಿವೇದಿಸುವುದಕ್ಕಾಗಿ ಕಳೆದ ವಾರದಲ್ಲಿ ಅನೇಕರು ಸೀಮೆಗೆ ಪ್ರಯಾಣಮಾಡಿದ್ದಾರೆ. ಈ ವಾರದಲ್ಲೂ ಮುಂದಣವಾರದಲ್ಲೂ ಇನ್ನೂ ಕೆಲರು ಹೋಗುವವರಾಗಿದ್ದಾರೆ. ಕಳೆದವಾರ ಡಾ|| ನಾಯರ್‌ರವರೂ, ನರಸಿಹ್ಮಚಿಂತಾಮಣಿ ಕೇಳ್ಕರ್‌ರವರೂ, ಆನಿಬೆಸೆಂಟಮ್ಮನವರೂ, ವಾಡಿಯಾರವರೂ, ಜೂರ್ನ್ಸ್ಕರ್‌ರವರೂ, ಯಾಕೋಬ್‌ಹುಸೇನರೂ ಪ್ರಯಾಣಮಾಡಿದ್ದಾರೆ.

ಲಾಹೋರು ಮೊದಲಾದ ಕಡೆಯಲ್ಲಿ ಮರಳಿ ಅಶಾಂತಿಯೂ ವಿಪ್ಲವಯತ್ನವೂ ಹರಡದಂತೆ ಮಾಡಲು ಕಟ್ಟುನಿಟ್ಟಾದ ಕಠಿನ ಶಾಸನಗಳನ್ನು ಸರ್ಕಾರದವರು ವಿಧಿಸಿದ್ದಾರೆ. ಈಚೆಗೂ ಒಂದೆರಡು ಕಡೆ ಸ್ವಲ್ಪ ಗದ್ದಲವು ಕಾಣಿಸಿಕೊಂಡಿದ್ದಿತು. ಭೀತಿಯಿಂದ ಉಂಟಾಗಿರುವ ಅಲ್ಲಿಯ ಶಾಂತಿಯು ಯಾವಾಗ ಮಾಯಕಳಿಸಿಕೊಂಡೀತೋ ಹೇಳಲಾಗುವುದಿಲ್ಲ. ತುಂಟರು ಅಸತ್ಯಗಳಾದ ಪ್ರಕಟನೆಗಳನ್ನು ಮಾಡಿ ಸಾತ್ವಿಕಪ್ರಜೆಗಳ ಮನಸ್ಸನ್ನು ಕೆಡಿಸುತ್ತಿರುವುದರಿಂದ ಸರ್ಕಾರದವರು ಬೇರೆ ಬೇರೆ ಪ್ರಕಟನೆಗಳನ್ನು ಮಾಡಿ ನಿಜಸ್ಥಿತಿಯನ್ನು ತಿಳಿಯಪಡಿಸುತ್ತಿದ್ದಾರೆ.

ಕಾಶೀ ಮಹಾರಾಜರು ಮೊನ್ನೆ ವಾರದಲ್ಲಿ ಒಂದು ದರ್ಬಾರನ್ನು ನಡೆಯಿಸಿ, ಅಲ್ಲಿ ಉಪನ್ಯಾಸಮಾಡುವಾಗ್ಗೆ—ರೌಲತ್ ಶಾಸನದ ವಿಷಯವಾಗಿ ಪ್ರಜೆಗಳು ತೊಂದರೆಪಡುತ್ತಲಿದ್ದಾರೆಂತಲೂ ರಾಜಭಕ್ತಿ ಪೂರ್ಣರಾದ ಭಾರತೀಯರಾರಿಗೂ ಆ ಶಾಸನದಿಂದ ಯಾವ ಕಷ್ಟವೂ ಉಂಟಾಗುವುದಿಲ್ಲವೆಂತಲೂ, ಅದುಕಾರಣ ಆ ಶಾಸನವು ನಮ್ಮನ್ನು ಏನುಮಾಡುವುದೋ ಎಂದು ಪ್ರಜೆಗಳು ಭಯಪಡುವುದು ಅಜ್ಞತನವೆಂತಲೂ, ಪ್ರಜೆಗಳು ಈಗಿನಂತೆ ಆಂದೋಳನವನ್ನು ಮಾಡುತ್ತಿದ್ದರೆ ಶಾಸನವನ್ನೇರ್ಪಡಿಸುವುದೂ ಪ್ರಭುತ್ವವನ್ನು ಮಾಡುವುದೂ ಕೂಡ ಕಷ್ಟವೆಂತಲೂ ಹೇಳಿದರು.

ಉತ್ತರ ಹಿಂದೂಸ್ಥಾನದಲ್ಲಿ ಪ್ರತಿದಿನವೂ ಪ್ರಮುಖರನೇಕರನ್ನು ಹಿಡಿಯುವುದು ಪ್ರವಾಸಕ್ಕೆ ಕಳುಹಿಸುವುದು ಮೊದಲಾದ ಕಾರ್ಯಗಳು ವಿಶೇಷವಾಗಿ ನಡೆಯುತ್ತಿರುವುದು ಖೇದಕರವಾಗಿದೆ. ಇಂಥ ಸ್ಥಿತಿಯು ಯುದ್ಧ ಮುಗಿದ ಈಗಣ ಶಾಂತವಾತಾವರಣದಲ್ಲಿ ಭರತಖಂಡಕ್ಕೆ ಪ್ರಾಪ್ತವಾಗಿರುವುದು ದುರ್ದೈವವು. ಅಲ್ಲದೆ ಹಿಂದ್‌ಭಾಸಿ ಪತ್ರಿಕಾಕರ್ತರಾದ ಜೀತ್‌ಮಲ್ ಪರಶುರಾಮ್‌ರವರೂ, ಅಲದಿನಾರ್ ಪತ್ರಿಕಾಧಿಪತಿ ಷೇಕ್ ಅಬ್ದುಲ್ ಮಜೀದ್‌ರವರೂ, ಜೋತ್ರಾಮುಹರ್‌ಬ್ರಾಯಿಯವರೂ, ಜೀತಾನಂದ್‌ರವರೂ ಸಹ ಹಿಡಿಯಲ್ಪಟ್ಟಿದ್ದಾರೆ. ಅಲಹಾಬಾದಿನಿಂದ ಪ್ರಕಟನಾಗುತ್ತಿರುವ ಇಂಡಿಪೆಂಡೆಂಟ್ ಪತ್ರಿಕಾಪ್ರಕಟನಕ್ಕೆ ೨೦೦೦ ರೂ. ಹೊಣೆಯು ಕೇಳಲ್ಪಟ್ಟಿದೆ.

ವಿದೇಶದ ವೃತ್ತಾಂತಗಳು.

ರಷ್ಯಾದ ಮಾಸ್ಕೋ ಪಟ್ಟಣದಲ್ಲಿ ಕ್ಷಾಮದ ಬಾಧೆಯನ್ನು ಸೈರಿಸಲಾರದೆ ಪ್ರಜೆಗಳು ಮಾಡಿದ ಗದ್ದಲದಲ್ಲಿ ೮ ಸಾವಿರ ಜನರು ಕೊಲ್ಲಲ್ಪಟ್ಟಿರುವರು.

ಲಂಡನ್ ಸಂಧಿನಿಬಂಧನೆಯ ಪ್ರಕಾರ ಇಟಲಿಯವರು ಗ್ರೀಕರಿಗೆ ಬೇಕಾದ ಸಹಾಯವನ್ನೆಲ್ಲಾ ಮಾಡುವುದಕ್ಕೆ ನಿಶ್ಚಯಿಸಿಕೊಂಡಿರುವರೆಂದು ಪ್ರಕಟವಾಗಿದೆ.

ರಷ್ಯಾದಲ್ಲಿರುವ ಸೋವಿಯಟ್ ಪ್ರಭುತ್ವವನ್ನು ಲೆನಿನ್ನರೂ ಟ್ರಾಟ್ಸ್ಕಿಯವರೂ ಸಹ ನಾಶಗೊಳಿಸಿ, ರಷ್ಯಾವನ್ನೇ ಬಿಟ್ಟು ಹೊರಟುಹೋಗಲು ನಿಶ್ಚಯಿಸಿಕೊಂಡಿರುವರಂತೆ.

ಬೋಲ್ಷೆವಿಕ್ಕರು ಸೈಬೀರಿಯಾ ಲೋಹಪಥವನ್ನು ಧ್ವಂಸಮಾಡಲು ಪ್ರಯತ್ನಿಸಿದರು. ಆದರೆ ಸೈಬೀರಿಯನ್ನರೂ ಜೆಕ್ಕರೂ ಅದನ್ನು ತಡೆಯುವುದಕ್ಕೆ ಬಹು ಪ್ರಯತ್ನಮಾಡಿರುವರು.

ಪ್ರಪಂಚದಲ್ಲಿ ಇದುವರೆಗೆ ನಿರ್ಮಿಸಲ್ಪಟ್ಟಿರುವ ಹಡಗುಗಳಲ್ಲೆಲ್ಲಾ ಅಗ್ರೇಸರವಾಗಿ ಜರ್ಮನರ ಅಧೀನದಲ್ಲಿರುವ "ಇಂಪರೇಟರ್" ಎಂಬ ಹಡಗು ಮಿತ್ರಮಂಡಲಿಯವರ ವಶಗೊಳಿಸಲ್ಪಡುವುದೆಂದು ಲಂಡನ್ ತಂತ್ರೀವಾರ್ತೆಯು ಹೇಳಿರುತ್ತದೆ.

ಪರ್ಷಿಯಾದ ಪ್ರತಿನಿಧಿಗಳು ತಮ್ಮ ಸ್ವಾಧೀನದಿಂದ ತಪ್ಪಿಹೋಗಿರುವ ಕರ್ಡಿಸ್ಥಾನ್, ಟ್ರಾನ್ಸ್‌ಕಕೇಷಿಯಾ ಭಾಗಗಳನ್ನು ಮರಳಿ ತಮ್ಮ ದೇಶಕ್ಕೆ ಸೇರಿಸಿಕೊಡಬೇಕೆಂದೂ, ತಮ್ಮ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದೂ ಸಂಧಿಸಭೆಯವರಿಗೆ ಬಿನ್ನೈಸಿಕೊಂಡಿರುವರಂತೆ. ಇದು ಅನ್ಯಾಯವಾದ ಕೋರಿಕೆಯೆಂತಲೂ, ಸಂಧಿಸಭೆಯವರು ಇದನ್ನು ಪರ್ಯಾಲೋಚನೆಗೆ ಇಟ್ಟುಕೊಳ್ಳದೆ ನಾನಾರಾಷ್ಟ್ರ ಸಂಮೇಳನಸಭೆಯ ವಿಚಾರಕ್ಕಾಗಿ ಕಳುಹಿಸಿಕೊಡುವರೆಂತಲೂ ಲಂಡನ್ ಟೈಮ್ಸ್ ಪತ್ರಿಕೆಯು ಬರೆದಿರುವುದನ್ನು ನೋಡಿ ಪರ್ಷಿಯಾ ಪ್ರತಿನಿಧಿಗಳು ಆಶಾಭಂಗಗೊಂಡಿದ್ದಾರೆ.

ಟೋಲುಗೇಟುಗಳ ಹರಾಜು.

ನಂಜನಗೂಡು ಟೌನ್ ಮ್ಯುನಿಸಿಪಲ್ ಕೌನ್ಸಿಲ್ ಆಫೀಸಿನಿಂದ—

ಸನ್ 1919–20 ನೇ ಸಾಲಿನಲ್ಲಿ ನಂಜನಗೂಡು ಟೌನ್ ಮ್ಯುನಿಸಿಪಲ್ ಸರಹದ್ದಿನೊಳಗೆ ಬರತಕ್ಕ ಗಾಡಿಗಳಮೇಲೆ ಸುಂಕ ವಸೂಲ್ಮಾಡಿಕೊಳ್ಳುವ ಹಕ್ಕನ್ನು ಕಂಟ್ರಾಕ್ಟು ಕೊಡುವ ಬಗ್ಗೆ ಸೀಲ್ಡ್ ಟೆಂಡರುಗಳು ಈ ಬಾಗಾಯ್ತು 1919 ನೇ ಇಸವಿ ಮೇ ಮಾಹೆ 16 ನೇ ತಾರೀಖು ಶುಕ್ರವಾರದ ದಿನ ಮಧ್ಯಾಹ್ನ 1 ಗಂಟೆವರವಿಗೂ ನಂಜನಗೂಡು ಸಬ್‌ಡಿವಿಜನ್ ಅಸಿಸ್ಟೆಂಟು ಕಮಿಷನರ್ ಮತ್ತು ಮ್ಯುನಿಸಿಪಲ್ ಪ್ರೆಸಿಡೆಂಟ್ ಸಾಹೇಬರವರಿಂದಲಾಗಲೀ ಅಥವಾ ವೈಸ್‌ಪ್ರೆಸಿಡೆಂಟ್‌ರವರಿಂದಲಾಗಲೀ ಟೌನ್ ಮ್ಯುನಿಸಿಪಲ್ ಆಫೀಸಿನಲ್ಲಿ ತೆಗೆದುಕೊಳ್ಳಲ್ಪಡುತ್ತವೆ. ಇಷ್ಟ ಉಳ್ಳವರು ತಾವು ಮಾಹೆಯಾನ ಎಷ್ಟು ಮೊಬಲಿಗೆ ಕಂಟ್ರಾಕ್ಟುಮಾಡಲು ಒಪ್ಪುತ್ತಾರೋ ಆ ಮೊಬಲಗನ್ನು ಟೆಂಡರಿನಲ್ಲಿ ನಮೂದಿಸಿ ಖಾತರಿಬಗ್ಗೆ 100 ರೂಪಾಯಿಗಳನ್ನು ನಗದಾಗಿಯಾಗಲಿ ಅಥವಾ ನೋಟಾಗಿಯಾಗಲೀ ಟೆಂಡರ ಜೊತೆಯಲ್ಲಿ ತಮ್ಮ ಪೂರ್ತಿಯಾದ ವಿಳಾಸ ಸಮೇತ ಹಾಜರ್ಮಾಡಬೇಕು. ಮೈಸೂರು ಗೆಜೆಟ್ಟಿನಲ್ಲಿ ಪಬ್ಲಿಷ್‌ಮಾಡಿರುವ ಷರತ್ತುಗಳಮೇಲೆ ನಡೆದುಕೊಳ್ಳಲು ಕಂಟ್ರಾಕ್ಟುದಾರನು ಬದ್ಧನಾಗಿರಬೇಕು.

ಬಾಕಿ ವಿಚಾರವನ್ನು ಮ್ಯುನಿಸಿಪಲ್ ಆಫೀಸಿಗೆ ಬರೆದು ತಿಳಿದುಕೊಳ್ಳಬಹುದು.

ತಾ|| 9-5-1919.

E. Rama Rao,
For President.

ಪ್ರಜಾಪ್ರತಿನಿಧಿಸಭೆಯಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ ಕೆಲವು.

ಪ್ರ.—ಮಳೆಯ ಅಭಾವದಿಂದ ಆಹಾರಕ್ಕೆ ತಪ್ಪುವುಂಟಾಗಿರುವ ಡಿಸ್ಟ್ರಿಕ್ಟುಗಳು ಎಷ್ಟು?

ಉ.—ಕೋಲಾರ, ತುಮಕೂರು, (ಕೆಲ ತಾಲ್ಲೂಕುಗಳ ಹೊರತು) ಬೆಂಗಳೂರು (ಕೆಲಭಾಗ) ಶಿವಮೊಗ್ಗ ಕೆಲ ತಾಲ್ಲೂಕುಗಳ ಹೊರತು ಈ ಡಿಸ್ಟ್ರಿಕ್ಟುಗಳಲ್ಲಿ ಸ್ವಲ್ಪ ತೊಂದರೆಯೆಂಬುವರದಿ ಬಂದಿದೆ.

ಪ್ರ.—ಫಸಲಾಗದ ಹೊಲ ಗದ್ದೆ ತೋಟಗಳ ಕಂದಾಯವನ್ನು ಬಿಡಬೇಕೆಂದು ಡಿ|| ಕಮಿಷನರುಗಳು ಮಾಡಿದ ವರದಿಯ ಮೇಲೆ ಸರ್ಕಾರದವರು ಏನುಮಾಡಿದರು?

ಉ.—ಆ ವರದಿಯು ಬಂದಿದೆ. ಆ ವಿಚಾರವಾಗಿ ಕಳೆದ ಏಪ್ರಿಲ್ ತಾ|| ೨೪ ರಲ್ಲಿ ಸರ್ಕಾರಿ ಅಪ್ಪಣೆಯಾಗಿದೆ.

ಪ್ರ.—ತರೀಬಂಜರು ರಿವಿಷನ್ ವಿಷಯದಲ್ಲಿ ನಿಯುಕ್ತವಾಗಿದ್ದ ಸಂಘದ ವರದಿಯ ಮೇಲೆ ಸರ್ಕಾರವು ಏನುಮಾಡಿದೆ?

ಉ.—ಪರ್ಯಾಲೋಚನೆಯಲ್ಲಿದೆ. ಇಷ್ಟರಲ್ಲೇ ಅಪ್ಪಣೆಯು ಕೊಡಲ್ಪಡುವುದು.

ಪ್ರ.—ಸರ್ಕಾರದವರು ಆಹಾರಧಾನ್ಯಗಳ ಕಂಟ್ರೋಲಿಂಗ್ ಶಾಖೆಯನ್ನು ಏರ್ಪಡಿಸಿದ ಬಳಿಕ ಎಷ್ಟು ಬೆಲೆ ಬಾಳುವ ಧಾನ್ಯಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಂಡರು?

ಉ.—ಆರಂಭದಿಂದ ಕಳೆದ ಮಾರ್ಚಿ ತಿಂಗಳ ಕೊನೆವರೆಗೆ ೨೮೪೪೩ ಪಲ್ಲಾ ಬತ್ತವನ್ನೂ ೪೫೨ ಪಲ್ಲಾ ಅಕ್ಕಿಯನ್ನೂ ೪೦೯೪೬ ಪಲ್ಲಾ ರಾಗಿಯನ್ನೂ ವಶಪಡಿಸಿಕೊಂಡಿದ್ದಾರೆ. ಅವುಗಳ ಬೆಲೆಯು ಇನ್ನೂ ನಿರ್ಧಾರವಾಗಿಲ್ಲ.

ಪ್ರ.—ಇದರ ಮಾರಾಟದಿಂದ ಎಷ್ಟು ಲಾಭಬಂದಿದೆ

ಉ.—ಲಾಭಕ್ಕಾಗಿ ಮಾರುವುದಿಲ್ಲ. ಬಿದ್ದಿರುವ ಅಸಲಿಗೇ ಮಾರಾಟಮಾಡುತ್ತಿದೆ. ಕೆಲವೇಳೆ ಧಾನ್ಯಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವ ವೆಚ್ಚದ ಭಾರವನ್ನು ಸರ್ಕಾರವೇ ವಹಿಸಿದೆ.

ಪ್ರ.—ಈ ಸಂಬಂಧದಲ್ಲಿ ಕೋರ್ಟಿಗೆ ಹೋಗಿರುವ ವ್ಯಾಜ್ಯಗಳೆಷ್ಟು? ತೀರ್ಮಾನವಾಗಿರುವುವುಗಳೆಷ್ಟು?

ಉ.—ವ್ಯಾಜ್ಯಗಳು ೧೬೭. ಅವುಗಳಲ್ಲಿ ತೀರ್ಮಾನವಾದುವು ೧೧೪.

ಪ್ರ.—ಅಕ್ಕಿ ರಾಗಿಗಳು ಕಷ್ಟದಿಂದ ದೊರೆಯುತ್ತಿರುವುದರಿಂದ ಪ್ರಜೆಗಳಿಗೆ ಉಂಟಾಗಿರುವ ಕಷ್ಟಗಳು ಸರ್ಕಾರಕ್ಕೆ ತಿಳಿದಿವೆಯೆ? ಹಾಗಿದ್ದರೆ ಅದರ ನಿವಾರಣೆಗೆ ಏನು ಏರ್ಪಾಟನ್ನು ಮಾಡಿದ್ದಾರೆ.

ಉ.—ಧಾನ್ಯದ ಮೇಲಣ ಬೆಲೆಯ ನಿರ್ಬಂಧವನ್ನು ತೆಗೆದುಹಾಕಿದ ಮೇಲೆ ಸ್ಥಿತಿಯು ಉತ್ತಮವಾಗಿದೆಯೆಂದು ಗೊತ್ತಾಗಿದೆ.

ಪ್ರ.—ಆಹಾರಧಾನ್ಯಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವಿಕೆ ಅವುಗಳ ಬೆಲೆಯ ನಿರ್ಬಂಧ ಇವುಗಳ ಮೂಲಕ ಗ್ರಾಮಗಳ ಜನರಿಗೂ ಕೊಂಡುಕೊಳ್ಳುವವರಿಗೂ ಎಷ್ಟು ಕಷ್ಟಗಳುಂಟಾಗಿದೆಯೆಂಬುದು ಸರ್ಕಾರಕ್ಕೆ ತಿಳಿದಿದೆಯೆ?

ಉ.—ಅಧಿಕಪ್ರತಿಕೂಲವಾದ ಕ್ಷಾಮಸ್ಥಿತಿಯನ್ನು ನಿವಾರಿಸುವುದಕ್ಕಾಗಿಯೂ ಬಹು ಪ್ರಜೆಗಳ ಇಷ್ಟಾನುಸಾರವಾಗಿಯೂ ಆಹಾರಧಾನ್ಯಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವುದೇ ಮೊದಲಾದ ನಿರ್ಬಂಧವನ್ನು ಮಾಡಲಾಯಿತು. ಇದರಿಂದ ಪ್ರಜೆಗಳಿಗೆ ಯಾವ ಕಷ್ಟವೂ ಉಂಟಾದಂತೆ ಸರ್ಕಾರದವರು ಎಣಿಸಿಲ್ಲ. ಇದಕ್ಕೆ ಪ್ರತಿಯಾಗಿ ಮಾಡಿರುವ ಏರ್ಪಾಟುಗಳಲ್ಲಿ ಅಲ್ಪಸ್ವಲ್ಪ ಕೊರತೆಗಳಿದ್ದರೂ ಅವುಗಳಿಂದ ಬೆಳೆಮಾಡಿದವರೂ ವರ್ತಕರುಗಳೂ ಮಿತವಾದ ಲಾಭವನ್ನು ಹೊಂದುವಂತೆ ಮಾಡುವುದಕ್ಕೂ ಪ್ರಜೆಗಳಿಗೆ ತಕ್ಕಷ್ಟು ಆಹಾರ್ಯವಸ್ತುಗಳು ದೊರೆಯುವಂತೆ ಮಾಡುವುದಕ್ಕೂ ಅನುಕೂಲವಾಯಿತು.

ಪ್ರ.—ಮೈಸೂರು ಅಕ್ಕಿಯ ಯಂತ್ರಾಲಯಗಳವರೊಡನೆ ಮೈಸೂರು ಮ|| ಪ್ರೆಸಿಡೆಂಟರು ಮಾಡಿಕೊಂಡಿರುವ ಒಪ್ಪಂದಗಳೇನು? ಅವನ್ನು ತೋರಿಸುವಿರಾ? ಆ ಒಪ್ಪಂದಗಳಿಂದ ಇತರ ಸಣ್ಣ ವ್ಯಾಪಾರಗಳಿಗೆ ಬಾಧಕವುಂಟಾಗಿರುವುದು ಸರ್ಕಾರದವರಿಗೆ ಗೊತ್ತೆ? ಈ ಒಪ್ಪಂದಗಳಿಂದ ಯಂತ್ರಾಲಯ ಕರ್ತರುಗಳು ಅಕ್ರಮವಾದ ಪ್ರಯೋಜನಗಳನ್ನು ಹೊಂದುತ್ತಿಲ್ಲವೆ?

ಉ.—ಆಹಾರ್ಯವಸ್ತುಗಳ ಕಂಟ್ರೋಲರು ಕೆಲ ಒಪ್ಪಂದಗಳನ್ನು ಮಾಡಿಕೊಂಡಿರುವುದುಂಟು. ಅವನ್ನು ತೋರಿಸಲಾಗುವುದಿಲ್ಲ. ಈ ಒಪ್ಪಂದದ ಮೂಲಕ ಯಂತ್ರಾಲಯ ಕರ್ತರುಗಳು ಅನ್ಯಾಯವಾದ ಲಾಭವನ್ನು ಹೊಂದಲು ಅವಕಾಶವಿಲ್ಲದಂತೆ ಸರ್ಕಾರದವರು ಮಾಡುವರು.

ಪ್ರ.—ಆಹಾರ್ಯವಸ್ತುಗಳ ಕಂಟ್ರೋಲಿಂಗ್ ಶಾಖೆಯನ್ನು ಶಾಶ್ವತವಾಗಿಡುವರೆ?

ಉ.—ಇಲ್ಲ. ಎಷ್ಟು ಕಾಲದವರೆಗೆ ಜನರ ಸೌಕರ್ಯಕ್ಕಾಗಿ ಇದಬೇಕೆಂದು ತೋರುವುದೋ ಅಲ್ಲಿಯವರೆಗೆ ಮಾತ್ರ ಇಟ್ಟಿರುವರು.

ಪ್ರ.—ವ್ಯಾಸಂಗ ನಡೆಯುತ್ತಿರುವ ವರ್ಷದ ಮಧ್ಯಕಾಲದಲ್ಲಿ ಉಪಾಧ್ಯಾಯರುಗಳನ್ನು ವಿದ್ಯಾಭ್ಯಾಸಶಾಖೆಯವರು ವಿಶೇಷವಾಗಿ ವರ್ಗಾವರ್ಗ ಮಾಡುತ್ತಿರುವುದು ಈಚೆಗೆ ಹೆಚ್ಚಿಕೊಂಡಿರುವುದು ಸರ್ಕಾರಕ್ಕೆ ಗೊತ್ತೆ? ಇದರಿಂದ ಬೋಧನೆಯ ಕೆಲಸಕ್ಕೆ ತೊಂದರೆಯುಂಟಾಗುತ್ತಿರುವುದರಿಂದ ಅದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಯಾವ ಏರ್ಪಾಟನ್ನು ಮಾಡುವವರಾಗಿದ್ದಾರೆ?

ಉ.—ಅಕ್ರಮವಾಗಿ ವರ್ಗಾವರ್ಗಿ ನಡೆಯುತ್ತಲಿರುವಂತೆ ಕಂಡುಬರುವುದಿಲ್ಲ. ಅವಶ್ಯಕತೆ ಯುಂಟಾದಾಗಲಾಗ ಮಾಡಲ್ಪಟ್ಟರೆ ಅದರಿಂದ ಬೋಧನೆಯ ಕೆಲಸಕ್ಕೆ ಅಡ್ಡಿಯುಂಟಾಗದಂತೆ ಮಾಡಲು ಎಚ್ಚರಿಕೆ ತೆಗೆದುಕೊಳ್ಳಲ್ಪಡುವುದು.

ಪ್ರ.—ಪಟೇಲ್ ಶ್ಯಾನುಭೋಗರ ಪೋಟಿಗೆಯು ಜವಾನ್ ಕಂದಾಯದಲ್ಲಿ ಸೇರಿದೆಯೊ? ಸೇರಿಸಿದ್ದರೆ ಯಾವ ದಾಮಾಷಾಯಪ್ರಕಾರ?

ಉ.—ಈ ಪ್ರಶ್ನೆಯು ಸ್ಪಷ್ಟವಾಗಿಲ್ಲ. ಭೂಕಂದಾಯವನ್ನು ವಿಧಿಸುವಲ್ಲಿ ಪೋಟಿಗೆಯನ್ನು ಗಣನೆಗೆ ತಂದುಕೊಂಡಿದೆಯೆ? ಎಂಬುದು ಪ್ರಶ್ನಾರ್ಥವಾಗಿದ್ದ ಪಕ್ಷದಲ್ಲಿ ಹಾಗೆ ತೆಗೆದುಕೊಂಡಿಲ್ಲವೆಂಬುದೇ ಉತ್ತರ.

ಪ್ರ.—ಒಕ್ಕಲಿಗರಲ್ಲಿ ಕಳೆದ ವರ್ಷ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿಗಳೆಷ್ಟು? ತೇರ್ಗಡೆಹೊಂದಿರುವರೆಷ್ಟು?

ಉ.—ಇಂಗ್ಲೀಷ್ ಲೋ|| ಸೆ|| ಪರೀಕ್ಷೆಗೆ ೯೯ ಮಂದಿ ಹೋಗಿದ್ದು ೨೫ ಮಂದಿ ತೇರ್ಗಡೆಯಾಗಿ ೨೦ ಮಂದಿಗಳು ನಾಲ್ಕನೆ ಫಾರಮ್ಮಿನಲ್ಲಿ ಓದುತ್ತಿದ್ದಾರೆ. ಕನ್ನಡ ಲೋ|| ಸೆ|| ಪರೀಕ್ಷೆಗೆ ೩೨೪ ಮಂದಿ ಹೋಗಿದ್ದು ೭೫ ಮಂದಿ ಉತ್ತೀರ್ಣರಾಗಿ ಇಬ್ಬರು ಅಪ್ಪರ್ ಸೆಕೆಂಡರಿಯಲ್ಲಿ ಓದುತ್ತಿದ್ದಾರೆ.

ಪ್ರ.—ನಮ್ಮ ದೇಶದಲ್ಲಿರುವ ಕಾರಖಾನೆಗಳೆಷ್ಟು?

ಉ.—೨೦ ಜನಕ್ಕೆ ಕಡಿಮೆಯಿಲ್ಲದಷ್ಟು ಜನರು ಕೆಲಸಮಾಡುತ್ತಿರುವ ಕರ್ಮಾಗಾರಗಳಿಗೆ ಕಾರಖಾನೆಗಳೆಂದು ಕರೆದರೆ ಅಂಥವುಗಳು ೭೭ ಇವೆ.

ಪ್ರ.—ಅವುಗಳಲ್ಲಿ ಸರ್ಕಾರದವು ಎಷ್ಟು? ಎಷ್ಟರಲ್ಲಿ ಕೆಲಸ ನಡೆಯುತ್ತಿದೆ? ಎಷ್ಟರಲ್ಲಿ ಇಲ್ಲ.

ಉ.—೬ ಯಂತ್ರಶಕ್ತಿಯಿಂದ ಕೆಲಸಮಾಡುವ ಕರ್ಮಾಗಾರಗಳಿಗೆ ಯಂತ್ರಸ್ಥಾಪನೆಗಾಗಿ ೧೧೯ ಕಾರಖಾನೆಗಳಿಗೆ ಸರ್ಕಾರದಿಂದ ಸಹಾಯವಾಗಿದೆ. ಅವುಗಳಲ್ಲಿ ಹಲವು ಕಾರಖಾನೆಗಳಲ್ಲಿ ಕೆಲಸವು ಚೆನ್ನಾಗಿ ನಡೆಯುತ್ತಿದೆ. ಕೆಲವುಗಳಲ್ಲಿ ಕಾಲದೋಷದಿಂದಲೂ ಎಣ್ಣೆಯ ಅಭಾವದಿಂದಲೂ ಕೆಲಸವು ನಿಂತುಹೋಗಿದೆ.

ಪ್ರ.—ಈ ಕಾರಖಾನೆಗಳ ಸ್ಥಿತಿಗತಿಯನ್ನು ವಿಚಾರಮಾಡಿ ಸರಿಯಾಗಿ ಕೆಲಸ ನಡೆಯುವಂತೆಯೂ ಲಾಭಪ್ರದವಾಗುವಂತೆಯೂ ಮಾಡುವುದಕ್ಕೆ ಸರ್ಕಾರದವರು ಯೋಚಿಸಿರುವರೆ? ಹಾಗೆ ಮಾಡಲು ಇದು ಸಕಾಲವಲ್ಲವೆ?

ಉ.—ಇದಕ್ಕಾಗಿ ಸರ್ಕಾರದವರು ಪ್ರತ್ಯೇಕವಾದ ಶಾಖೆಯನ್ನೇರ್ಪಡಿಸಿರುವರು. ಪ್ರಾರ್ಥಿಸಿದಾಗ ತಕ್ಕ ಸಹಾಯವನ್ನು ಸರ್ಕಾರದ ಶಿಲ್ಪವಾಣಿಜ್ಯ ಶಾಖೆಯವರು ಸಹಾಯಮಾಡುವರು.

ಪ್ರ.—ಮಲೆನಾಡು ಪ್ರಜಾಸಂಖ್ಯೆಯನ್ನೂ ಅಲ್ಲಿಯ ರೆವಿನ್ಯೂ ಫಾರೆಸ್ಟು ಮೊದಲಾದ ಶಾಖಾ ಉತ್ಪತ್ತಿಯನ್ನೂ ಗಮನಿಸಿದರೆ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯ ದಾಮಾಷಾಕ್ಕಿಂತಲೂ ಮಲೆನಾಡಿನ ವರಮಾನವು ಹೆಚ್ಚೆಂದು ತೋರುವುದಿಲ್ಲವೆ? ಆದರೆ ಆ ಮಲೆನಾಡಿನ ಅಭಿವೃದ್ಧಿಗಾಗಿ ಸರ್ಕಾರವು ಮಾಡುವ ವೆಚ್ಚವು ಒಟ್ಟು ದಾಮಾಷಾಕ್ಕೆ ಕಡಿಮೆಯೆಂದು ತೋರುವುದಿಲ್ಲವೆ?

ಉ.—ಲೆಕ್ಕವನ್ನು ನೋಡುವಲ್ಲಿ ಶಿವಮೊಗ್ಗ ಕಡೂರು ಡಿಸ್ಟ್ರಿಕ್ಟುಗಳ ಪ್ರತಿಯೊಬ್ಬ ಪ್ರಜೆಗೂ ಮಾಡಿರುವ ವೆಚ್ಚವು ಬಯಲುಸೀಮೆಯ ತುಮಕೂರು ಚಿತ್ರದುರ್ಗ ಕೋಲಾರ ಡಿಸ್ಟ್ರಿಕ್ಟುಗಳಲ್ಲಿರುವ ಪ್ರತಿಯೊಬ್ಬ ಪ್ರಜೆಗಾಗಿಯೂ ಮಾಡಿರುವ ವೆಚ್ಚಕ್ಕಿಂತಲೂ ಹೆಚ್ಚಾಗಿಯೇ ಇವೆಯೆಂದು ಗೊತ್ತಾಗುವುದು. ಸರ್ಕಾರದವರು ಮಲೆನಾಡಿನ ಅಭಿವೃದ್ಧಿಗೆ ವಿಶೇಷವಾಗಿ ಗಮನಕೊಟ್ಟಿದ್ದಾರೆ. ಇನ್ನೂ ಅದರ ಗ್ರಾಂಟನ್ನು ಹೆಚ್ಚಿಸಲೂ ಇಷ್ಟವುಳ್ಳವರಾಗಿದ್ದಾರೆ.

ಪ್ರ.—ಆಹಾರಪದಾರ್ಥಗಳನ್ನು ಹೆಚ್ಚಿಸುವುದಕ್ಕಾಗಿ ೧೯೧೮ ನೆ ಸೆಪ್ಟೆಂಬರ್ ತಾ|| ೨೧ ರಲ್ಲಿ ಸರ್ಕಾರದವರು ರಿಯಾಯಿತಿ ತೋರಿಸಿ ಪ್ರಕಟಿಸಿದ ಅಪ್ಪಣೆ ಮೇರೆಗೆ ಪ್ರಜೆಗಳಿಂದ ದರಖಾಸ್ತು ಮಾಡಲ್ಪಟ್ಟಿರುವ ಭೂಮಿಯ ಪರಿಮಿತಿಯೆಷ್ಟು? ಬೀಜದ ಧಾನ್ಯ ಗೊಬ್ಬರ ಮುಂತಾದುವುಗಳನ್ನು ಕೊಳ್ಳಲು ಕೊಡಲ್ಪಟ್ಟ ತಕಾವಿ ಸಾಲಗಳು ಎಷ್ಟು? ಈ ಏರ್ಪಾಟುಗಳು ಸಾಲದೆ ಇದ್ದರೆ ಕ್ಷಾಮನಿವಾರಣೆಯ ಬಗೆಗೆ ಮತ್ತಾವ ಏರ್ಪಾಟುಗಳನ್ನು ಮಾಡಬೇಕೆಂದಿರುವಿರಿ?

ಉ.—ಕಳೆದ ೬ ತಿಂಗಳ ಕಾಲದಲ್ಲಿ ಸರ್ಕಾರಕ್ಕೆ ಉಂಟಾಗಿರುವ ಅನುಭವದಿಂದ ಈಗ ಕೊಟ್ಟಿರುವ ರಿಯಾಯತಿಗಳನ್ನು ಬಹುಜನರು ಉಪಯೋಗಿಸಿಕೊಂಡೇ ಇಲ್ಲ. ಇದರ ನಿಜಸ್ಥಿತಿ ತಿಳಿಯುವ ಬಗೆಗಾಗಿ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ವರದಿ ಬಂದಮೇಲೆ ಆ ವಿಷಯಕ್ಕೆ ಉತ್ತರವು ಕೊಡಲ್ಪಡುವುದು.

ಪ್ರ.—ಸಭೆಗೆ ಬರತಕ್ಕ ಪ್ರಜಾಪ್ರತಿನಿಧಿಗಳು ಮಾಡುವ ಕೆಲಸವು ಗೌರವಾರ್ಥವಾದುದರಿಂದ ಇವರುಗಳಿಗೆ ಸಭೆಗೆ ಹೋಗಿ ಬರುವುದಕ್ಕೆ ೨ ನೆ ತರಗತಿಯ ಟಿಕೀಟುಗಳೆರಡರ ಮತ್ತೂ ಅವರ ಸೇವಕನಿಗಾಗಿ ಒಂದು ೩ ನೆ ತರಗತಿಯ ಟಿಕೇಟಿನ ಛಾರ್ಜನ್ನು ಪ್ರತಿಯೊಬ್ಬರಿಗೂ ಕೊಡಿಸಿಕೊಡಬೇಕು.

ಉ.—ಹೀಗೆ ಮಾಡುವುದಕ್ಕೆ ೧೨ ಸಾವಿರ ರೂ. ಗಳ ವೆಚ್ಚವು ಹಿಡಿಯುವುದೆಂದು ಹೇಳಿ, ಪರ್ಯಾಲೋಚನೆಗೆ ಇಟ್ಟುಕೊಳ್ಳಲ್ಪಟ್ಟಿತು.

ಪ್ರ.—ಸರ್ಕಾರದವರಿಂದ ಏರ್ಪಡಿಸಲ್ಪಡುವ ಕಮಿಟಿಯ ಮೆಂಬರುಗಳಿಗೆ ಬತ್ಯವು ಕೊಡಲ್ಪಟ್ಟರೂ ಅದು ಒಂದೇ ವಿಧವಾಗಿರುವುದಿಲ್ಲ. ಅದನ್ನು ಒಂದೇ ಸಮನಾಗಿ ಮಾಡಬೇಕು.

ಉ.—ಈಗ ಮಾಡಿರುವ ಏರ್ಪಾಟಿನಲ್ಲಿ ಗೆಜೆಟೆಡ್ ಆಫೀಸರುಗಳಿಗೂ ಇತರ ಮೆಂಬರುಗಳಿಗೂ ಬತ್ಯವು ಒಂದೇ ವಿಧವಾಗಿದೆ. ಇದರ ಪರಿಣಾಮವನ್ನು ಕೆಲಕಾಲ ಪರೀಕ್ಷಿಸಿ ನೋಡೋಣ.

ಪ್ರ.—ವಿದ್ಯಾಭ್ಯಾಸಕ್ಕಾಗಿ ಧರ್ಮಾರ್ಥವಾಗಿ ಸರ್ಕಾರದ ಬೊಕ್ಕಸದಲ್ಲಿ ಹೆಚ್ಚಿನ ಬಡ್ಡಿಯ ಪ್ರಾಪ್ತಿಗಾಗಿ ಇಡಲ್ಪಡುವ ಹಣದ ಮೊತ್ತವು ೩ ಸಾವಿರಕ್ಕೆ ಕಡಿಮೆಯಿರಕೂಡದೆಂದು ಈಗ ಏರ್ಪಟ್ಟಿರುವ ನಿರ್ಬಂಧದಲ್ಲಿ ಆ ಮೊತ್ತವನ್ನು ೧ ಸಾವಿರಕ್ಕೆ ಕಡಿಮೆಯಿಲ್ಲದಿರಬೇಕೆಂದು ಏರ್ಪಡಿಸಬೇಕು.

ಉ.—ಪರೀಕ್ಷಾರ್ಥವಾಗಿ ೩ ವರ್ಷಗಳವರೆಗೆ ಹಾಗೆಯೇ ೧ ಸಾವಿರಕ್ಕೆ ಇಳಿಸಲ್ಪಡುವುದು. ಈ ಬದಲಾವಣೆಯಿಂದ ಹೆಚ್ಚು ಹಣವು ಬರುವಂತಾದರೆ ಶಾಶ್ವತಪಡಿಸಲಾಗುವುದು.

ಪ್ರ.—ಇಂಜನಿಯರಿಂಗ್ ಇಲಾಖೆಯಲ್ಲಿ ಕಂಟ್ರಾಕ್ಟರುಗಳು ಡಿಪಾಜಿಟ್ಟು ಇಟ್ಟಿದ ಹಣಕ್ಕೆ ಬಡ್ಡಿ ಕೊಡಿಸುವಂತಾಗಬೇಕು.

ಉ.—ಆ ಡಿಪಾಜಿಟ್ ಹಣವನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು ಅಲ್ಲಿಯ ಪಾಸ್ ಬುಕ್ಕನ್ನು ಇಂ|| ಇಲಾಖೆಯಲ್ಲಿ ಡಿಪಾಜಿಟ್ ಮಾಡಿದರೆ ಬಡ್ಡಿಯು ಸಿಕ್ಕುವುದು.

ಪ್ರ.—ಅಮಲ್ದಾರರುಗಳ ಬತ್ಯವನ್ನು ಹೆಚ್ಚಿಸಬೇಕು.

ಉ.—ಅಮಲ್ದಾರರು ಮೊದಲಾದ ಸರ್ಕಾರಿ ಉದ್ಯೋಗಿಗಳ ಪರವಾಗಿ ಇಂಥ ಪ್ರಶ್ನೆಗಳನ್ನು ಪ್ರಜಾಪ್ರತಿನಿಧಿಗಳು ಕೇಳಬೇಕಾದುದಿಲ್ಲ.

ಪ್ರ.—ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಮನೆ ಕಟ್ಟಿಕೊಳ್ಳುವವರಿಗೆ ಸಾಲಕೊಡಲು ಏರ್ಪಡಿಸಿರುವಂತೆ ಸಂಸ್ಥಾನದ ಎಲ್ಲಾ ಪುರ ಗ್ರಾಮಗಳಿಗೂ ಏರ್ಪಡಿಸಿ ಕೊಡಬೇಕು.

ಉ.—ತಾಲ್ಲೂಕು ಡಿಸ್ಟ್ರಿಕ್ಟ್ ಬೋರ್ಡುಗಳು ಈ ಸಂಬಂಧವಾಗಿ ನಿರ್ಧಾರವನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಪರ್ಯಾಲೋಚಿಸಲ್ಪಡುವುದು.

ಪ್ರ.—ಡಿ|| ಕಮಿಷನರ ತೀರ್ಮಾನದ ಮೇಲೆ ರೆವಿನ್ಯೂ ಕಮಿಷನರಲ್ಲಿ ಮಾಡಿದ ಅಪೀಲನ್ನು ಅವರು ಮಾತ್ರ ವಿಚಾರಿಸಿ ತೀರ್ಮಾನಿಸುವರು. ಆ|| ರೆ|| ಕಮಿಷನರ ತೀರ್ಮಾನದ ಮೇಲೂ ಅಪೀಲ್ ಮಾಡಿಕೊಳ್ಳುವುದಕ್ಕೆ ಮದ್ರಾಸು ಬೊಂಬಾಯಿ ಮೊದಲಾದ ಕಡೆಗಳಲ್ಲಿರುವಂತೆ ರೆವಿನ್ಯೂ ಬೋರ್ಡನ್ನು ಏರ್ಪಡಿಸಿ, ಆ ಬೋರ್ಡಿನಲ್ಲಿ ರೆ|| ಕಮಿಷನರು, ಸರ್ವೆ ಸೂಪರಿಂಟೆಂಡೆಂಟರು ಮತ್ತೊಬ್ಬ ಅನೌದ್ಯೋಗಿಕ ಸಭಿಕರೂ ಸಹ ಇರುವಂತೆ ಮಾಡಬೇಕು.

ಉ.—ಹೀಗೆ ಏರ್ಪಡಿಸುತ್ತ ಹೋದರೆ ಅಪೀಲುಗಳಿಗೆ ಕೊನೆಯಿಲ್ಲದೆಯೇ ಹೋಗುವುದು. ಸಾಧ್ಯವಲ್ಲ.

ಪ್ರ.—ನದೀ ಕಾಲ್ವೆಗಳ ಕೆಳಗಣ ಭೂಮಿಗಳಿಗೆ ಹಾಕಲ್ಪಟ್ಟಿರುವ ತರೀ ಕಂದಾಯದ ದರದಂತೆಯೇ ನಂಬಿಕೆಗಾಸ್ಪದವಲ್ಲದ ಕೆರೆ ಕೆಳಗಣ ಭೂಮಿಗಳಿಗೂ ಕಂದಾಯವನ್ನು ಹಾಕಿಸಿರುವುದನ್ನು ತಪ್ಪಿಸಿ ಎರಡಕ್ಕೂ ವ್ಯತ್ಯಾಸವನ್ನು ಏರ್ಪಡಿಸಬೇಕು.

ಉ.—ಈ ವಿಷಯವು ರಿ|| ಸರ್ವೆ ಸೆಟ್ಲ್‌ಮೆಂಟಿನ ಕಾಲದಲ್ಲಿ ವ್ಯವಸ್ಥೆಯಾಗಬೇಕು.

ಪ್ರ.—ಈಗಣ ರಿಮಿಷನ್ ರೂಲು ಸಮರ್ಪಕವಾಗಿಲ್ಲ. ಒಂದೆರಡು ಆಣೆ ಬೆಳೆಯಾಗಿದ್ದರೂ ರಿಮಿಷನ್ ಆಗುತ್ತಲಿಲ್ಲ. ಸುತರಾಂ ಬೆಳೆಹೋದರೆ ಮಾತ್ರ ರಿಮಿಷನ್ ಆಗುತ್ತದೆ. ಇದನ್ನು ಸಂಪಡಿಸಬೇಕು.

ಉ.—ಈ ವಿಷಯದ ವಿಮರ್ಶೆಗೆ ಏರ್ಪಟ್ಟಿದ್ದ ಕಮಿಟಿಯವರ ವರದಿಯು ಬಂದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಪ್ರ.—ಚಿಕ್ಕ ಕೆರೆಗಳ ಜೀರ್ಣೋದ್ಧಾರಕ್ಕಾಗಿ ರೈತರು ಕೊಡಬೇಕಾದ ಹಣವನ್ನು ಒಂದೇ ಕಂತಿಗೆ ಎತ್ತುತ್ತಿದ್ದಾರೆ. ಇದು ಬಹಳ ಕಷ್ಟವನ್ನು ತಂದಿಕ್ಕಿದೆ. ಇನ್ನುಮುಂದೆ ೫ ಕಿಸ್ತುಗಳಲ್ಲಿ ರೆವಿನ್ಯೂ ಕಂದಾಯದ ಜತೆಗೆ ಎತ್ತುವಂತೆ ಮಾಡಬೇಕು.

ಉ.—ಈ ಕಂಟ್ರಿಬ್ಯೂಷನ್ ಹಣವನ್ನು ೩ ವರ್ಷಗಳ ವರೆಗೆ ೩ ಕಿಸ್ತುಗಳಲ್ಲಿ ಎತ್ತುವಂತೆ ಅಪ್ಪಣೆಮಾಡುತ್ತೇವೆ.

ಪ್ರ.—ರೀ ಸರ್ವೆ ಸೆಟ್ಲ್‌ಮೆಂಟ್ ಆದ ಮೇಲೂ ತರೀ ಬಾಗಾಯತು ಭೂಮಿಗಳ ಮೇಲೆಲ್ಲಾ ಇರಿಗೇಷನ್ ಸೆಸ್ಸನ್ನು ಎತ್ತುವುದೇನೋ ನ್ಯಾಯ. ಮಳೆ ನೀರಿನ ಸಹಾಯದಿಂದ ಆಗುವ ತರೀಬಾಗಾಯತು ಭೂಮಿಗಳ ಮೇಲೆ ಇರಿಗೇಷನ್ ಸೆಸ್ಸನ್ನು ಎತ್ತುತ್ತಿರುವುದು ಅನ್ಯಾಯವಾಗಿದೆ. ಅದನ್ನು ತಪ್ಪಿಸಬೇಕು. ಮತ್ತು ಇರಿಗೇಷನ್ ಸೆಸ್ಸು ಎತ್ತಲ್ಪಡುತ್ತಿರುವ ಕೆರೆಗಳ ಮತ್ತು ಕಾಲ್ವೆಗಳ ಜೀರ್ಣೋದ್ಧಾರದ ಕೆಲಸವನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು.

ಉ.—ಇದು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ೨ ತಿಂಗಳೊಳಗೆ ಉತ್ತರ ಕೊಡಲ್ಪಡುವುದು.

ಪ್ರ.—ಆದಾಯದ ಮೇಲಣ ತೆರಿಗೆಯನ್ನು ಇನ್ನು ೩ ವರ್ಷ ಕಾಲದ ವರೆಗೆ ವಿಧಿಸದಿರುವಂತೆ ಮಾಡಿಕೊಡಬೇಕು.

ಉ.—ಹಾಕಬಹುದೆಂದು ಈ ಮೊದಲೇ ಸಭೆಯಲ್ಲಿ ಇತ್ಯರ್ಥವಾಗಿ ಹೋಗಿರುವುದರಿಂದ ಪುನಃ ಇದನ್ನು ಎತ್ತಬೇಕಾದುದಿಲ್ಲ.

ಪ್ರ.—ಮದ್ಯಪಾನ ಶಾಖೆಯ ಆಡಳಿತದ ಮೇಲ್ವಿಚಾರಣೆಗಾಗಿ ಡಿ|| ಕಮಿಷನರ ಸಹಾಯಕ್ಕೆ ಪ್ರಜಾಪಕ್ಷದ ಸಭಿಕರುಳ್ಳ ಒಂದೊಂದು ಕಮಿಟಿಯನ್ನೇರ್ಪಡಿಸಿ ಕೊಡಬೇಕು.

ಉ.—ಸ್ಪಷ್ಟವಾಗಿ ಅದರ ವಿವರಣವನ್ನು ಬರೆದುಕೊಟ್ಟರೆ ಯೋಚಿಸುತ್ತೇವೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮೇ ತಾ|| ೧೧ ನೆಯ ಭಾನುವಾರ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಹೊರಬಿದ್ದ ಕೆಲ ವಿಷಯಗಳು.

ಈ ಸಲ ನಡೆದ ಚರ್ಚೆಗಳಲ್ಲಿ ಕೆಲವನ್ನು ಕುರಿತು ಇಲ್ಲಿ ಪ್ರಸ್ತಾಪಿಸುವವರಾಗಿದ್ದೇವೆ. ಮ|| ಬಿ. ನರಸಿಂಗರಾಯರು ಸಂಸ್ಥಾನದಲ್ಲಿ ಆಹಾರಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರದವರು ಕೊಟ್ಟ ರಿಯಾಯತಿಗಳನ್ನು ಎಷ್ಟುಮಂದಿಗಳು ಉಪಯೋಗಿಸಿಕೊಂಡರು? ಎಷ್ಟು ತಕಾವಿ ಸಾಲವು ಕೊಡಲ್ಪಟ್ಟಿತು? ಎಂದು ಮೊದಲಾಗಿ ಮಾಡಿದ ಪ್ರಶ್ನೆಗೆ ಗೌರ್ನಮೆಂಟಿನವರು ಇದುವರೆಗಣ ನಮ್ಮ ಅನುಭವದಿಂದ ವಿಶೇಷ ಜನರು ಆ ರಿಯಾಯಿತಿಗಳನ್ನು ಉಪಯೋಗಿಸಿಕೊಂಡಂತೆ ಕಂಡುಬಂದಿರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಕೇಳಿದರೆ ವಿಷಾದವಾಗುತ್ತದೆ. ಕಳೆದ ೧೯೧೮ನೆ ವರ್ಷದಲ್ಲಿ ಸಂಸ್ಥಾನದೊಳಗೂ ಹೊರಗೂ ಮಳೆಬೆಳೆಗಳು ಕಡಿಮೆಯಾಗಿ ವರ್ಷಕ್ಕೆ ತಕ್ಕಷ್ಟು ಆಹಾರ್ಯವಸ್ತುಗಳು ಉತ್ಪನ್ನವಾಗಿಲ್ಲವೆಂದು ಗೊತ್ತಾದಮೇಲೆ ತಮ್ಮ ದೇಶದ ಪ್ರಜೆಗಳಾರೂ ಉಪವಾಸದಿಂದ ಸಾಯದಂತೆ ಮಾಡುವುದಕ್ಕಾಗಿ ಸರ್ಕಾರದವರು ಹೊರಗಣಿಂದ ಧಾನ್ಯಗಳನ್ನು ತರಿಸಿಕೊಳ್ಳುವುದಕ್ಕೂ, ದೇಶದೊಳಗೆ ಬೇಗನೆ ಕೈಸೇರುವ ಬೆಳಸನ್ನಿಡಲು ರೈತರಿಗೆ ತಕ್ಕ ಸಹಾಯ ಪ್ರೋತ್ಸಾಹಗಳನ್ನು ಮಾಡುವುದಕ್ಕೂ ಮೈಮರೆಯಲಿಲ್ಲ. ಬೀಜದ ಕಾಳುಗಳು ಗೊಬ್ಬರ ಮೊದಲಾದುವುಗಳನ್ನು ಕೊಳ್ಳುವುದಕ್ಕೆ ರೈತರಿಗೆ ಮುಂಗಡವಾಗಿ ಹಣವನ್ನು ಸಾಲವಾಗಿ ಕೊಡುತ್ತೇವೆಂದು ತಿಳಿಯಿಸಿದರು. ದೊಡ್ಡದೊಡ್ಡ ಜಲಾಶಯಗಳ ಕೆಳಗೆ ಬೇಗ ಕೈಸೇರುವ ಪೈರುಗಳನ್ನಿಟ್ಟು ಬೇಸಗೆ ಸಾಗುವಳಿ ಮಾಡುವವರಿಗೂ ಮೇವನ್ನು ಬೆಳೆಯುವವರಿಗೂ ಕಂದಾಯವಿಲ್ಲದಂತೆ ಭೂಮಿಯನ್ನು ಕೊಡುವುದೇ ಮೊದಲಾದ ಸೌಕರ್ಯಗಳನ್ನು ಒದಗಿಸುತ್ತೇವೆಂದು ತಿಳಿಯಿಸಿದರು. ಬೇಗನೆ ಕೈಸೇರುವ ಬೆಳಸಿನ ವ್ಯವಸಾಯದ ವಿಧಾನಗಳನ್ನೆಲ್ಲಾ ಪ್ರಕಟಿಸಿದರು. ಇಷ್ಟೆಲ್ಲಾ ಪ್ರಜೆಗಳ ಹಿತಕ್ಕೂ ಅನುಕೂಲ್ಯಕ್ಕೂ ಸರ್ಕಾರದವರಿಂದ ಮಾಡಲ್ಪಟ್ಟರೂ ಅವುಗಳನ್ನು ತಕ್ಕಷ್ಟು ಮಂದಿ ರೈತರು ಉಪಯೋಗಿಸಿಕೊಳ್ಳಲಿಲ್ಲವೆಂದರೆ ಸಖೇದಾಶ್ಚರ್ಯವಲ್ಲವೆ? ಹೀಗೆ ಆದುದಕ್ಕೆ ರೈತರಲ್ಲಿ ದುರ್ಭಿಕ್ಷಭೀತಿಯಿಲ್ಲವೆಂಬ ಕಾರಣವನ್ನೇ ಆಗಲೀ ಅವರಲ್ಲಿರುವ ಉಪೇಕ್ಷೆಯ ಕಾರಣವನ್ನೇ ಆಗಲೀ ಹೇಳುವುದು ಯುಕ್ತವಾಗಿ ನಮಗೆ ತೋರುವುದಿಲ್ಲ. ಅವರಲ್ಲಿ ಹಗಲಿಗೆ ಹೇಗೆ ರಾತ್ರಿಗೆ ಹೇಗೆಂದು ಆಹಾರಕ್ಕಾಗಿ ತಾಪತ್ರಯ ಪಡತಕ್ಕವರು ಅನೇಕಾನೇಕರಿದ್ದಾರೆ. ಆದರೆ ಸರ್ಕಾರದವರು ನಮ್ಮ ಹಿತಾರ್ಥವಾಗಿಯೂ ದೇಶಹಿತಾರ್ಥವಾಗಿಯೂ ಯಾವ ಯಾವ ಅನುಕೂಲ್ಯಗಳನ್ನು ಕಲ್ಪಿಸಿದ್ದಾರೆ, ಅವನ್ನು ನಾವು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳತಕ್ಕವರು ವಿರಳರಾಗಿರುವುದೇ ಈ ಲೋಪಕ್ಕೆ ಕಾರಣವೆಂದು ತೋರುತ್ತದೆ. ನಮ್ಮ ರೈತರಲ್ಲಿ ಅಕ್ಷರಸ್ಥರು ಅತ್ಯಂತ ವಿರಳರೆಂಬುದು ಗೊತ್ತೇ ಇದೆ. ಅಲ್ಲದೆ ಅವರಲ್ಲಿ ಸೋಂಬೇರಿತನವೂ ಹೆಚ್ಚು. ಬಡಿದೆಬ್ಬಿಸಿದರೂ ಏಳದವನು ಕಿವಿಗೆ ಕೇಳಿಸದ ಉದಯರಾಗದಿಂದ ಏಳುವುದುಂಟೆ? ಸರ್ಕಾರದವರು ಗೆಜೆಟ್ಟಿನಲ್ಲಿ ಪ್ರಕಟಿಸುವ ವಿಷಯಗಳು ಸಾವಿರಕ್ಕೊಬ್ಬ ರೈತನಿಗೂ ಗೊತ್ತಾಗುವುದಿಲ್ಲ. ಹೀಗಿರುವಾಗ ರೈತರಮೇಲೆ ತಪ್ಪನ್ನು ಹೊರಿಸಿ ದೂರುವುದು ಸಮಂಜಸವಾಗಲಾರದು. ಪ್ರತಿ ಗ್ರಾಮಗಳಲ್ಲೂ ಇಂಥ ಪ್ರಕಟನೆಗಳನ್ನು ಚಾವಡಿಗಳಲ್ಲಿ ಅಂಟಿಸಿ ಅಲ್ಲಿಯ ಪಟೇಲ್ ಶ್ಯಾನುಭೋಗರುಗಳು ಪ್ರಕಟನೆಯ ಸಂಗತಿಗಳನ್ನು ರೈತರಿಗೆಲ್ಲಾ ಒತ್ತಿ ಹೇಳುವಂತೆ ಏರ್ಪಡಿಸಿದ್ದರೆ, ಅದರ ಪರಿಣಾಮವು ಈಗ ಹೇಳಲ್ಪಡುವ ಉತ್ತರದಲ್ಲಿ ಕಂಡ ಸ್ಥಿತಿಗೆ ಎಂದಿಗೂ ಬರುತ್ತಿರಲಿಲ್ಲವೆಂದು ಎಣಿಸುತ್ತೇವೆ. ಸರ್ಕಾರದವರು ಪ್ರಸಿದ್ಧಪತ್ರಿಕಾ ಪ್ರಕಟನವನ್ನು ಗೆಜೆಟ್ಟಿನಲ್ಲಿ ಮಾಡಿಸಿ ವಿಜೃಂಭಣೆಮಾಡಿದ ಮಾತ್ರದಿಂದಲೇ ಚರಿತಾರ್ಥತೆಯನ್ನು ಭಾವಿಸಿಕೊಳ್ಳದೆ ನಿಜವಾಗಿ ಪ್ರಜೆಗಳಿಗೆ ಆ ಪ್ರಕಟನೆಯ ಲಾಭವಾಗುವಂತೆ ಮಾಡುವುದಕ್ಕೆ ಅವಶ್ಯಕಗಳಾದ ಪ್ರಯತ್ನಗಳನ್ನು ನಡೆಸುವುದರ ಕಡೆಗೆ ವಿಶೇಷ ಲಕ್ಷ್ಯಕೊಡುವವರಾಗಬೇಕೆಂದು ನಮ್ಮ ನಿವೇದನೆಯಾಗಿರುತ್ತದೆ.

ಪ್ರಜಾಪ್ರತಿನಿಧಿಗಳಾಗಿ ಸಭೆಗೆ ಬರತಕ್ಕವರಿಗೆ ರೈಲ್ವೆ ಛಾರ್ಜುಗಳನ್ನು ಸರ್ಕಾರದವರು ಕೊಡಿಸಿಕೊಡಬೇಕೆಂದು ಮ|| ಗಳಾದ ಕರಣಿಕ ಕೃಷ್ಣಮೂರ್ತಿಯವರೂ ಇನ್ನೂ ಒಬ್ಬಿಬ್ಬ ಸಭಿಕರೂ ಸಭೆಯಲ್ಲಿ ಕೇಳಿಕೊಂಡರು. ಇದನ್ನು ಯೋಚನೆಮಾಡುವುದಾಗಿ ದಿವಾನರು ಉತ್ತರಕೊಟ್ಟಿದ್ದಾರೆ. ಪ್ರಜಾಪ್ರತಿನಿಧಿಗಳೆಲ್ಲಾ ಗೌರವಾರ್ಥವಾಗಿ ಕೆಲಸಮಾಡತಕ್ಕ ಉಪಪನ್ನ ಜನರೇ ಆಗಿರುತ್ತಾರೆ. ಅವರು ಸಭಾಕಾರ್ಯಕ್ಕಾಗಿ ರಾಜಧಾನಿಗೆ ಬಂದಾಗ್ಗೆ ಅವರುಗಳ ಊಟ ಉಪಚಾರ ವಸತಿ ಮೊದಲಾದುವುಗಳಿಗೆಲ್ಲಾ ಸರ್ಕಾರದವರೇ ಏರ್ಪಾಟುಮಾಡಿಕೊಡುತ್ತಿದ್ದಾರೆ. ಹೆಚ್ಚುಕಾಲ ಅಖಂಡವಾಗಿ ಪ್ರತಿನಿಧಿಗಳಾಗಿ ಬರುತ್ತಿರುವವರಿಗೆ ಆಯುಧಧಾರಣೆಯ ಕಾನೂನಿನ ವಿನಾಯತಿಯೇ ಮೊದಲಾದ ಗೌರವಗಳನ್ನೂ ಕೊಟ್ಟಿರುತ್ತಾರೆ. ಇವುಗಳ ಜತೆಗೆ ರೈಲ್ವೆ ಛಾರ್ಜನ್ನು ಕೂಡ ಅವರಿಗೆ ಸರ್ಕಾರದವರು ಕೊಡಿಸುವುದು ಮಹತ್ತರವಾದ ಕಾರ್ಯವೇನೂ ಅಲ್ಲ. ಆದರೆ ಸರ್ಕಾರಕ್ಕೆ ಮಿತವ್ಯಯಬೋಧೆಯನ್ನು ಮಾಡಿ ಒಂದು ಕಡೆಯಲ್ಲಿ ಎಚ್ಚರಿಸುತ್ತಿರುವ ಪ್ರತಿನಿಧಿಗಳೇ ಮತ್ತೊಂದು ಕಡೆಯಲ್ಲಿ ತಮ್ಮ ಹಿತಕ್ಕಾಗಿ ಇಂಥ ನೂತನ ವ್ಯಯಭಾರವನ್ನು ಹೆಚ್ಚಿಸಲು ಬೇಡುವುದು ಯಾವ ಧರ್ಮವು? ದೇಶಸೇವೆಗಾಗಿ ಪ್ರಜಾಪ್ರತಿನಿಧಿ ಸಭೆಯ ಸಭಿಕತ್ವದಂಥ ಗೌರವವನ್ನು ವಹಿಸಿ, ತಮ್ಮ ಎಷ್ಟೋ ಸ್ವಂತದ ಕಾರ್ಯಗಳನ್ನೂ ಬಿಟ್ಟು ಈ ಸಭೆಗಾಗಿ ಬರತಕ್ಕ ಗೌರವಶಾಲಿಗಳಿಗೆ ಈ ರೈಲ್ವೆ ಛಾರ್ಜಿನ ಭಾರವನ್ನು ತಾವೇ ವಹಿಸಿಕೊಳ್ಳುವಂಥ ಸ್ವಾರ್ಥತ್ಯಾಗವನ್ನು ಮಾಡುವುದೊಂದು ದೊಡ್ಡ ಭಾರವೆ? ಈ ಸ್ವಂತದ ಲಾಭವನ್ನು ಅವರು ತಾವಾಗಿ ಕೇಳಿಕೊಳ್ಳಬೇಕೆ? ಸರ್ಕಾರದ ಉದ್ಯೋಗಿಗಳಿಗಾಗಿ ಆಗುತ್ತಿರುವ ದುಂದಿನ ವೆಚ್ಚವನ್ನು ಕಡಿಮೆಮಾಡಿಸುವುದಕ್ಕೆ ಸ್ವಾರ್ಥತ್ಯಾಗದ ತಮ್ಮ ಉದಾಹರಣಗಳಿಂದ ಪ್ರತಿನಿಧಿಗಳು ಪ್ರಯತ್ನಿಸುತ್ತಿದ್ದರೆ ಅದು ಅವರುಗಳಿಗೆ ಭೂಷಣವಾಗಿರುವುದು. ಕೇಳಿಕೊಂಡು ಒಂದು ಗೌರವವನ್ನು ಮಾಡಿಸಿಕೊಳ್ಳುವುದು ತಾನಾಗಿ ಲಭಿಸುವಷ್ಟು ಗೌರವಕ್ಕೆ ಎಂದಿಗೂ ಸಮನಾಗಲಾರದು.

ಇನ್ನೊಬ್ಬ ಸಭಿಕರು ಅಮಲ್ದಾರರುಗಳ ಬತ್ಯವನ್ನು ಹೆಚ್ಚಿಸಬೇಕೆಂದು ಕೇಳಿದ ವಿಷಯವು ಮತ್ತೂ ವಿಚಿತ್ರವಾಗಿರುವುದು. ಸರ್ಕಾರದುದ್ಯೋಗಿಗಳಿಗಾಗಿ ಕೊಡಲ್ಪಡುವ ಬತ್ಯಗಳು ವರ್ಷೇ ವರ್ಷೇ ಹೆಚ್ಚುತ್ತಿರುವಲ್ಲಿ ಅದನ್ನು ಆಕ್ಷೇಪಿಸಿ ಮಿತಗೊಳಿಸಬೇಕಾದುದು ತಮ್ಮ ಕರ್ತವ್ಯವೆಂಬುದನ್ನು ಅರಿತುಕೊಳ್ಳದೆ ಉದ್ಯೋಗಿಗಳ ಪೋಷಕರೇ ಇವರಾಗಿರುವಂತೆ ಪ್ರತಿನಿಧಿಗಳು ನಡೆದುಕೊಳ್ಳುವುದು ನ್ಯೂನತೆಯಲ್ಲವೆ? ಸರ್ಕಾರದ ಉದ್ಯೋಗಿಗಳ ಪರವಾಗಿ ಪ್ರತಿನಿಧಿಗಳು ಇಂಥ ವಿಷಯಗಳನ್ನು ಕೋರಿಕೊಳ್ಳಬೇಕಾದುದಿಲ್ಲವೆಂದು ದಿವಾನರು ಕೊಟ್ಟ ಉತ್ತರವು ಇನ್ನು ಮುಂದೆ ಈ ತೆರದಲ್ಲಿ ಪ್ರಶ್ನಿಸತಕ್ಕವರಿಗೆ ಗುಣಪಾಠವಾಗಲೆಂದು ನಿರೀಕ್ಷಿಸುತ್ತೇವೆ.

ಸಂಧಿಸಭೆ.

ಸಂಧಿಸಭೆಯೊಳಗಣ ಉಪಸಭೆಯವರು ಕಿಯಾಚೋ ವಿಷಯವನ್ನು ಜಪಾನರಿಗೆ ಅನುಕೂಲವಾಗಿ ತೀರ್ಮಾನಿಸಿರುವರು. ಈ ಕಿಯಾಚೋವು ಚೀನಾಕ್ಕೆ ಸೇರಿದ್ದುದು. ಇದನ್ನು ಜರ್ಮನರು ವಶಪಡಿಸಿಕೊಂಡಿದ್ದರು. ಯುದ್ಧಾರಂಭವಾದಾಗ ಜಪಾನರು ಇದನ್ನು ಅವರಿಂದ ಕಿತ್ತುಕೊಂಡರು. ಯುದ್ಧ ಮುಗಿದಕೂಡಲೇ ಚೀನರಿಗೆ ಒಪ್ಪಿಸಿಬಿಡುವುದಾಗಿ ಹೇಳುತ್ತಿದ್ದರು. ಈಗ ಆ ಮಾತೇ ಇಲ್ಲ. ತಮಗೇ ಸೇರಿರಬೇಕೆಂದು ಹೇಳುತ್ತಿರುವರು. ಅದಕ್ಕನುಸಾರವಾಗಿಯೇ ಉಪಸಭೆಯವರು ನಿರ್ಣಯಿಸಿರುವುದನ್ನು ನೋಡಿದರೆ "ಬಲಿನಾಂದುರ್ಬಲಾನಾಂಚ ಕೃತಯೋಪಿದ್ಭಿನ್ನಾ ಕಾಃ" ಎಂಬ ವಚನವು ಯಥಾರ್ಥವೆಂದು ಹೇಳಬೇಕಾಗುತ್ತದೆ. ಇದರಿಂದ ಚೀನರಿಗೆ ತುಂಬಾ ಆಶಾಭಂಗವೂ ಅತೃಪ್ತಿಯೂ ಉಂಟಾಗಿದೆಯೆಂಬುದಕ್ಕೆ ಸಂಶಯವಿಲ್ಲ.

ಕಳೆದ ವಾರದಲ್ಲಿ ವ್ಯಕ್ತವಾದ ಸಂಧಿಸಭಾ ವಿಷಯಗಳೊಳಗೆ ಇಟಲಿ ಸಂಗತಿಯೊಂದು ಪ್ರಧಾನವಾಗಿದೆ. ಅಡ್ರಿಯಾಟಿಕ್ ಸಮುದ್ರದ ಪೂರ್ವ ತೀರದಲ್ಲಿ ಆಸ್ಟ್ರಿಯಾಕ್ಕೂ ಹಂಗೇರೀ ದಕ್ಷಿಣಭಾಗಕ್ಕೂ ಮುಖ್ಯ ರೇವೆಯ ಪಟ್ಟಣವಾಗಿರುವ ಫ್ಯೂಮ್ ಎಂಬ ಪಟ್ಟಣವು ತಮಗೆ ಸೇರಬೇಕೆಂದು ಇಟಲಿಯವರು ಹಠತೊಟ್ಟಿದ್ದಾರೆ. ಇದು ಅನ್ಯಾಯವಾಗಿದೆ. ಯುದ್ಧಕಾರಣದಿಂದ ಇಟಲಿಗೆ ಇತರ ಮಿತ್ರಮಂಡಲಿಯವರಂತೆಯೇ ಅಧಿಕ ನಷ್ಟಸಂಭವಿಸಿದ್ದರೂ ಕಡೆಕಡೆಗೆ ಫಲವು ಅಧಿಕವಾಗಿಯೇ ಪ್ರಾಪ್ತವಾಗಿದೆ. ಹೇಗೆಂದರೆ— ಇಟಲಿದೇಶದ ಟ್ರೆಂಟಿನೋ ಪ್ರಾಂತವು ಶತ್ರುಬಾಧೆಯಿಂದ ಸಂಪೂರ್ಣವಾಗಿ ಮುಕ್ತವಾಯಿತು. ಅಡ್ರಿಯಾಟಿಕ್ ಸಮುದ್ರದ ಮುಖ್ಯ ರೇವೆಯಾದ ಟ್ರೀಸ್ಟಿ ಪಟ್ಟಣವೂ, ಪೋಲಾ ಎಂಬ ನೌಕಾಶ್ರಯಸ್ಥಾನವೂ ಇಟಲಿಯ ವಶವಾಗಿರುವುವು. ಅಲಪ್ಸ್ ಪರ್ವತಪ್ರಾಂತದ ಇಟಲಿ ಎಲ್ಲೆಕಟ್ಟು ವಿಸ್ತರಿಸಿತು. ಇಷ್ಟೆಲ್ಲಾ ಸಾಲದೆ ಫ್ಯೂಮ್ ಪಟ್ಟಣವನ್ನೂ ಇಟಲಿಯು ಅಪೇಕ್ಷಿಸುತ್ತಿದೆ. ಇದಕ್ಕೆ ಮುನ್ನ ಬಲ ಶತ್ರುವಾಗಿದ್ದ ಆಸ್ಟ್ರಿಯಾ ಹಂಗೇರಿದೇಶವು ಈಗ ಛಿನ್ನಭಿನ್ನವಾಗಿ ಹೋಯಿತು. ಇನ್ನು ಆ ದೇಶದ ಭಯವು ಇಟಲಿಗೆ ಇಲ್ಲವೇ ಇಲ್ಲ. ಆಸ್ಟ್ರಿಯಾದಿಂದ ಹಂಗೇರಿಯು ಬೇರೆಯಾಗಿದೆ. ಹೊಸದಾಗಿ ಸ್ಲಾವ್ ರಾಷ್ಟ್ರಗಳು ಏರ್ಪಟ್ಟಿವೆ. ಈ ರಾಷ್ಟ್ರಗಳೆಲ್ಲಾ ಮಿತ್ರಮಂಡಲಿ ಪಕ್ಷಕ್ಕೆ ಸೇರಿವೆ. ಫ್ಯೂಮ್ ಪಟ್ಟಣವು ನ್ಯಾಯವಾಗಿ ಈ ರಾಷ್ಟ್ರಗಳಿಗೆಲ್ಲಾ ರೇವೆಯಾಗಿರಬೇಕಾದುದು ಧರ್ಮವು. ಇಂತಹದನ್ನು ಇಟಲಿಯೊಂದಕ್ಕೆ ಕೊಟ್ಟುಬಿಟ್ಟರೆ ಆ ರಾಷ್ಟ್ರಗಳಿಗೆಲ್ಲಾ ವಿಪರೀತ ನಷ್ಟವು ಸಂಭವಿಸುವುದು. ಹೀಗೆ ಮಾಡುವುದಕ್ಕೆ ಪ್ರೆ|| ವಿಲ್ಸನ್ ರವರಿಗೆ ಇಷ್ಟವಿಲ್ಲ. ಇಂಗ್ಲೀಷ್ ಫ್ರೆಂಚ್ ದೇಶದವರೂ ಒಪ್ಪುತ್ತಿಲ್ಲ. ಇವರುಗಳು ಎಷ್ಟು ಹಿತಬೋಧೆ ಮಾಡಿದರೂ ಇಟಲಿಯ ಮಂತ್ರಿ ಸೀನಿಯರ್ ಆರ್ಲಾಂಡೋರವರು ಹಿಡಿದಪಟ್ಟನ್ನು ಬಿಡದಿದ್ದಾರೆ. ತಮ್ಮ ಇಷ್ಟಕ್ಕೆ ವಿರುದ್ಧವಾಗಿ ತೀರ್ಮಾನವಾದರೆ ತಾವು ಸಂಧಿಸಭಾ ಸಂಬಂಧವನ್ನೇ ಕಳೆದುಕೊಳ್ಳುವುದಾಗಿ ಹೆದರಿಸಿದರು. ಆದರೆ ಪ್ರೆ|| ವಿಲ್ಸನ್ ರವರು ಫ್ಯೂಮನ್ನು ಸರ್ವರ ಉಪಯೋಗಕ್ಕೂ ಅರ್ಹವಾಗಿರುವ ರೇವೆಯನ್ನಾಗಿ ಮಾಡದೆ ಜಗೋಸ್ಲಾವುಗಳಿಗೆ ಒಪ್ಪಿಸಿಬಿಡಬೇಕೆಂದು ತೀರ್ಮಾನಿಸಿದ್ದಾರೆ. ಇಂಗ್ಲೀಷರಿಗೂ ಫ್ರೆಂಚರಿಗೂ ಅದನ್ನು ಸರ್ವೋಪಯೋಗ್ಯವನ್ನಾಗಿ ಮಾಡಬೇಕೆಂಬ ಇಷ್ಟವಿದೆ. ಪ್ರೆ|| ವಿಲ್ಸನ್ ರವರ ಅಭಿಪ್ರಾಯವನ್ನು ಇಟಲಿ ಸರ್ಕಾರದವರೂ ಪ್ರಜೆಗಳೂ ಕೇಳಿ ಕುಪಿತರಾಗಿ, ತಮ್ಮ ಪ್ರತಿನಿಧಿಯನ್ನು ಸಂಧಿಸಭೆಯಿಂದ ಹಿಂದಿರುಗಿ ಬಂದುಬಿಡಬೇಕೆಂದು ತಂತ್ರೀವಾರ್ತೆ ಕೊಟ್ಟರು. ಅದರ ಮೇಲೆ ಇಟಲಿ ರಾಯಭಾರಿಗಳೆಲ್ಲಾ ಪ್ಯಾರಿಸ್ಸನ್ನು ಬಿಟ್ಟು ರೋಮು ಪಟ್ಟಣಕ್ಕೆ ಹೊರಟು ಹೋಗಿದ್ದಾರೆ. ಮುಂದೆ ಇದು ಹೇಗೆ ಪರ್ಯವಸಾನವಾಗುವುದೋ ನೋಡಬೇಕು. ಪತ್ರಿಕೆಗಳು ಇದರಿಂದ ಮಿತ್ರಮಂಡಲಿಯ ಮೈತ್ರಿಗೆ ಭಂಗವೇನೂ ಬರುವುದಿಲ್ಲವೆಂದೂ ಇಟಲಿಯು ಮತ್ತೆ ಕೂಡಿಯೇ ಕೊಡುವುದೆಂದೂ ನಂಬುಗೆಯಿಂದ ಹೇಳುತ್ತಿವೆ. ಇಂಗ್ಲೀಷ್ ಫ್ರೆಂಚ್ ಮಂತ್ರಿಗಳು ಸಂಧಿಸಭೆಗೆ ಬರಬೇಕೆಂದು ಇಟಲಿ ರಾಯಭಾರಿಗಳಿಗೆ ಆಹ್ವಾನವನ್ನು ಕೊಟ್ಟಿದ್ದಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಭಾನುವಾರ ನೀಲಗಿರಿಗೆ ದಯಮಾಡಿಸಿತು.

ನಮ್ಮ ಆಕ್ಟಿಂಗ್ ದಿವಾನರು ಬೊಂಬಾಯಿಗೆ ಕಳೆದವಾರ ಪ್ರಯಾಣ ಮಾಡಿದ್ದು ಬಂದರೆಂದು ಕೇಳುತ್ತೇವೆ.

ಮಿ|| ಪಿ. ಎಫ್. ಬೌರಿಂಗ್‌ರವರು ಕಳೆದ ಬುಧವಾರ ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಛಾರ್ಜನ್ನು ವಹಿಸಿಕೊಂಡರು.

ತಕಾವಿ ಸಾಲಗಳಿಗೂ ಆಹಾರಧಾನ್ಯಗಳನ್ನು ಕೊಳ್ಳುವುದಕ್ಕೂ ನಮ್ಮ ಗೌರ್ನಮೆಂಟಿನವರು ೨|| ಲಕ್ಷ ರೂ. ಗಳನ್ನು ಅಪ್ಪಣೆಮಾಡಿದ್ದಾರೆ.

ಗುಂಡ್ಲುಪೇಟೆ ತಾ|| ಪಡಗೂರಿನಲ್ಲಿ ಒಂದು ವಾಚಕಶಾಲೆಯು ಕಳೆದ ತಾ|| 26-4-19 ರಲ್ಲಿ ಸ್ಥಾಪಿಸಲ್ಪಟ್ಟಿರುವುದಾಗಿ ಆ ಸ್ಥಳೀಕರೊಬ್ಬರು ತಿಳಿಸಿರುತ್ತಾರೆ.

ನಮ್ಮ ಸಂಸ್ಥಾನದ ಎಗ್ಜಿಕ್ಯುಟೀವ್ ಕೌನ್ಸಿಲಿನಲ್ಲಿ ೩ ನೆ ಸ್ಥಾನವು ತಾತ್ಕಾಲಿಕವಾಗಿದ್ದಿತು. ಅದು ಈಗ ಶಾಶ್ವತವಾಗಿ ೩ ನೆ ಸ್ಥಾನವಾಗಿ ಮಾಡಲ್ಪಟ್ಟಿದೆ.

ಸ್ವಲ್ಪವೂ ಬೆಳೆಯಾಗದ ತರೀ ಭೂಮಿಗಳ ಕಂದಾಯದಲ್ಲಿ ಅರ್ಧವನ್ನು ಬಿಟ್ಟುಬಿಡುವುದಾಗಿ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಸಂಪೂರ್ಣವಾಗಿ ಬಿಡಬೇಕಾದುದೇ ಧರ್ಮವು.

ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷತೆಯಿಂದ ಹಾಸನದಲ್ಲಿ ೫ ನೆ ಕರ್ಣಾಟಕ ಸಾಹಿತ್ಯ ಸಂಮೇಳನವು ಕಳೆದ ತಾ|| ೬ ರಲ್ಲಿ ಆರಂಭಿಸಲ್ಪಟ್ಟು ಯಥಾವಿಧಿಯಾಗಿ ಜರುಗಿತೆಂದು ಕೇಳಿದೆವು.

ಬಸವೇಶ್ವರ ಜಯಂತ್ಯುತ್ಸವವು ಕಳೆದ ವೈಶಾಖ ಶುದ್ಧ ೨ ನೆಯ ದಿನ ರಾಜಧಾನಿಯ ದೊಡ್ಡಪೇಟೆ ಬಸವೇಶ ದೇವಾಲಯದಲ್ಲೂ ಹಳೆ ಅಗ್ರಹಾರದ ಮಹಾದೇವ ದೇವಾಲಯದಲ್ಲೂ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಅಗ್ರಹಾರದಲ್ಲಿ ಆಗ್ಗೆ ಮ|| ಶೆಟ್ಟಪ್ಪ ಸಿದ್ಧಪ್ಪನವರ ಕರ್ತೃತ್ವದಿಂದ ವೇ|| ಶಿವಪ್ಪ ಶಾಸ್ತ್ರಿಗಳಿಂದ ಶಿವಕಥಾ ಕಾಲಕ್ಷೇಪವು ನೆರವೇರಿತು.

ರಾಜಧಾನಿಯ ಪಂಚಾನನ ಕೆಲಸ್ಥರುಗಳು ಸ್ಥಲವರಸ್ಥಲದ ತಮ್ಮ ಜನರಿಂದಲೂ ಇತರ ಕೆಲ ಧರ್ಮಶ್ರದ್ಧರಿಂದಲೂ ಅನೇಕಾನೇಕ ರತ್ನಗಳನ್ನೂ ಸುವರ್ಣವನ್ನೂ ಧನವನ್ನೂ ಶೇಖರಿಸಿ ೭-೮ ಸಾವಿರ ರೂ. ಬೆಲೆ ಬಾಳುವ ರತ್ನಕಿರೀಟವೊಂದನ್ನು ನಿರ್ಮಿಸಿ ಕಳೆದ ಭಾನುವಾರ ಮುಂಡಿಬೀದಿಯ ಕಾಳಿಕಾಂಬೆಗೆ ಧಾರಣಮಾಡಿಸಿ ಅದರ ಉತ್ಸವವನ್ನು ವಿಶೇಷ ವೈಭವದಿಂದ ನಡೆಯಿಸಿದರು.

ಮ|| ಗಳಾದ ಬಿ. ಆರ್. ರಾಮಚಂದ್ರರಾವ್, ಎಂ. ಕೆ. ಸೀತಾರಾಮಶೆಟ್ಟಿ, ಸಿ. ರಾಜಗೋಪಾಲರಾವ್, ಟಿ. ವೆಂಕಟರಂಗಂ, ಎಸ್. ಬಾಲಕೃಷ್ಣಯ್ಯ, ಕೆ. ರಂಗಸ್ವಾಮಿ ಅಯ್ಯಂಗಾರ್, ಎಚ್. ಪಿ. ನಾರಾಯಣರಾವ್, ಕೆ. ಶ್ರೀನಿವಾಸಾಚಾರ್ಯ, ಬಿ. ಪೂರ್ಣಸಿಂಗ್, ಅಬ್ದುಲ್‌ಖಾದರ್, ಟಿ. ಸಿ. ನಾಗಲಿಂಗಯ್ಯ, ಬಿ. ತಿರುಮಲಾಚಾರ್, ಇವರುಗಳನ್ನು ನಮ್ಮ ಗೌರ್ನಮೆಂಟಿನವರು ಲೆ|| ಪ್ರೊಬೇಷನರುಗಳನ್ನಾಗಿ ನಿಯಮಿಸಿದ್ದಾರೆ.

ಹುಣಸೂರು ತಾಲ್ಲೂಕಿನಲ್ಲಿ ಮಾದಹಳ್ಳಿ ಮಠವೆಂಬ ಮಠವಿದೆ. ಇದು ಉಜ್ಜಯಿನೀ ಶಾಖೆಗೆ ಸೇರಿದುದು. ಇದರಲ್ಲಿ ಕೆಲವು ಕಾಲದಿಂದ ಅಧಿಕಾರಿಗಳೇ ಇಲ್ಲದಿದ್ದು ಮೊನ್ನೆ ವರ್ಷ ಇಬ್ಬರಿಗೆ ಪಟ್ಟಚರಮೂರ್ತಿಗಳ ಅಧಿಕಾರವಾಯ್ತು. ಈ ಸುತ್ತಿನ ಭಕ್ತಮಂಡಲಿ ಮೇಲೆ ಆಚಾರ ವಿಚಾರಣೆ ನಡೆಸುವ ಅಧಿಕಾರವು ಈ ಮಠಕ್ಕಿದೆ. ಆದರೆ ಈಗಿರುವ ಅಧಿಕಾರಿಗಳಿಗೆ ವಿದ್ಯಾದಿಸ್ವಸಾಮರ್ಥ್ಯವಿಲ್ಲದಿರುತ್ತಿರಿಂದ ಮಠಾಚಾರಸಂಬಂಧವಾಗಿ ಕೊಟ್ಟ ಅರ್ಜಿಗಳು ವರ್ಷಾಂತರವಾದರೂ ಇತ್ಯರ್ಥವಾಗದೆ ಮಠದಲ್ಲಿ ದುರಾಚಾರ ಸಾಂಕರ್ಯಗಳು ಬೆಳೆಯುತ್ತಿದಕ್ಕೆ ಆಸ್ಪದವಾಗಿದೆಯೆಂದು ಆ ಸುತ್ತಿನ ಮತಾಭಿಮಾನಿಗಳೊಬ್ಬರು ತಿಳಿಯಪಡಿಸಿದ್ದಾರೆ. ಆಚಾರ ವಿಚಾರಣೆಯ ಮಠಗಳ ಸ್ಥಿತಿಯು ಹೀಗಿರುವುದು ನಿಂದ್ಯವು.

ಭರತಖಂಡದ ವೃತ್ತಾಂತಗಳು.

ರಾಮನಗರದಲ್ಲಿ ಉದ್ರೇಕಪೂರಿತರಾದ ಪ್ರಜೆಗಳು ಚಾರ್ಜ್ ಸಾರ್ವಭೌಮರ ವಿಗ್ರಹವನ್ನು ಸುಟ್ಟುಹಾಕಿದರೆಂದು ಪಯನೀರ್ ಪತ್ರಿಕಾ ವಿಲೇಖನು ಬರೆದಿದ್ದಾನೆ.

ಬರೋಡಾ ಸಂಸ್ಥಾನದಲ್ಲಿ ನೂತನ ವಿಶ್ವವಿದ್ಯಾಲಯ ಸ್ಥಾಪನೆಮಾಡಲು ಪ್ರಯತ್ನವು ನಡೆಯುತ್ತಿದೆ. ತಿರುವಾಂಕೂರಿನವರೂ ತಮ್ಮಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಳ್ಳಲು ಯೋಚಿಸಿದ್ದಾರೆ.

ಪಂಜಾಬಿನ ಗದ್ದಲದಲ್ಲಿ ತಮ್ಮ ಪ್ರಜೆಗಳಾರೂ ಸೇರಬಾರದೆಂದೂ ಕಾಬೂಲಿನಿಂದ ಭರತಖಂಡಕ್ಕೆ ಹೋಗಬೇಕೆನ್ನುವವರಿಗೆ ಅಪ್ಪಣೆಚೀಟಿಯನ್ನು ಕೊಡಬಾರದೆಂದೂ ಅಫ್ಘಾನಿಸ್ಥಾನ್ ಅಮೀರರು ಪ್ರಕಟಿಸಿದ್ದಾರೆ.

ಪಂಜಾಬಿನಲ್ಲಿ ಇನ್ನು ಮುಂದೆ ಯಾವ ತೊಂದರೆಗಳಾದರೂ ಸಂಭವಿಸಿದರೆ ಅವನ್ನು ತಡೆಯುವುದಕ್ಕೆ ಸರ್ವಸಹಾಯವನ್ನೂ ಮಾಡುತ್ತೇನೆಂದು ಕಪೂರ್ಥಲಾ ಮಹಾರಾಜರವರು ಪಂಜಾಬು ಲೆ|| ಗೌರ್ನರವರಿಗೆ ತಿಳಿಯಪಡಿಸಿದ್ದಾರೆ.

ಅಫ್ಘಾನಿಸ್ಥಾನದ ಸ್ಥಿತಿಗತಿಗಳು ವಿಷಮವಾಗಿರುವ ವಾರ್ತೆ ಬಂದಿದೆ. ಈಗಣ ಅಮೀರನು ಹೊರಗೆ ಆಂಗ್ಲರ ಮಿತ್ರರಂತೆ ನಟಿಸಿ ಒಳಗೆ ಶತೃತ್ವವುಳ್ಳವನಾಗಿರುವನೆಂದು ಸುದ್ದಿ ಬಂದಿದೆ. ಇಂಗ್ಲೀಷ್ ಸೈನ್ಯಗಳು ಸಿದ್ಧವಾಗುತ್ತಿರುವಂತೆ ವಾರ್ತೆಯಿದೆ.

ಆನಿಬೆಸೆಂಟಮ್ಮನವರ ಮತ್ತೂ ಅವರ ನ್ಯೂ ಇಂಡಿಯಾ ಪತ್ರಿಕೆಯ ಭಾವಗಳು ಈಗ ಮಾರ್ಪಟ್ಟಿರುವುದರಿಂದ ಬೇಸತ್ತು ಕೆಂಬ್ಳಕೋಣದ ಜನರನೇಕರು ಒಂದು ಸಭೆಗೂಡಿ, ಇನ್ನುಮುಂದೆ ನ್ಯೂ ಇಂಡಿಯಾ ಪತ್ರಿಕೆಯನ್ನು ತರಿಸಕೂಡದೆಂದು ನಿರ್ಧಾರಮಾಡಿಕೊಂಡರು.

ಭರತಖಂಡದಿಂದ ಸೋಲ್ಜರುಗಳನೇಕರು ಇಷ್ಟರಲ್ಲೇ ಸ್ವದೇಶಕ್ಕೆ ಹಿಂದಿರುಗಿ ಹೋಗುವವರಾಗಿದ್ದರು. ಆದರೆ ಉತ್ತರ ಹಿಂದೂಸ್ಥಾನದಲ್ಲಿ ಹೊಸ ಗದ್ದಲದ ಅನಾಹುತಗಳಾಗುತ್ತಿರುವುದನ್ನು ಕಂಡು ಇದೆಲ್ಲಾ ಶಾಂತವಾಗುವವರೆಗೆ ಅವರುಗಳು ತಮ್ಮ ಪ್ರಯಾಣವನ್ನು ನಿಲ್ಲಿಸಿಬಿಟ್ಟರು.

ಲಾಹೋರಿನಲ್ಲಿ ವರ್ತಕರು ಆಹಾರ ಧಾನ್ಯಗಳ ಬೆಲೆಯನ್ನು ವಿಪರೀತವಾಗಿ ಹೆಚ್ಚಿಸಲು, ಅಧಿಕಾರಿಗಳು ಸೈನಿಕಶಾಸನ ಪ್ರಕಾರ ಅವುಗಳ ಬೆಲೆಯನ್ನಿಳಿಸುವಂತೆ ಮಾಡಿದರು. ಇದರಿಂದ ಬಡಬಗ್ಗರಿಗೆ ಅನುಕೂಲವಾಗಲಾಗಿ, ಅವರು ಸೈನಿಕಶಾಸನಕ್ಕೆ ಜಯವಾಗಲಿ ಎಂದು ಘೋಷಮಾಡುತ್ತಿರುವರಂತೆ.

ಮಿ|| ಜಿನ್ನಾರವರು ಹೈದರಾಬಾದಿಗೆ ಮೊನ್ನೆತಾನೇ ಹೋಗಿರಲು, ಅಲ್ಲಿ ಅವರು ರಾಜಕೀಯ ಸಭೆಯನ್ನು ಕೂಡಿಸುವರೆಂದು ನೈಜಾಮರಿಗೆ ತಿಳಿಯ ಬಂದುದರಿಂದ ಅಂಥ ಯಾವ ಸಭೆಯನ್ನೂ ತಮ್ಮ ದೇಶದಲ್ಲಿ ಕೂಡಿಸಲಾಗದೆಂದೂ ತಮ್ಮ ಅಪ್ಪಣೆಯಿಲ್ಲದೆ ತಮ್ಮ ಸಂಸ್ಥಾನದ ಯಾವ ಭಾಗದಲ್ಲೂ ಸಂಚರಿಸಕೂಡದೆಂದೂ ಜಿನ್ನಾರವರಿಗೆ ಅಪ್ಪಣೆಮಾಡಿ ಕಳುಹಿಸಿದರಂತೆ.

ಸರ್ಕಾರದವರ ಅಧಿಕಾರವನ್ನು ಅಡಗಿಸಿಬಿಡುವುದಕ್ಕಾಗಿ ಪ್ರಯತ್ನಿಸುತ್ತಲಿರುವರೆಂದು ಯಾರಮೇಲೆ ಅನುಮಾನ ತೋರಿದರೂ ತತ್ಕ್ಷಣವೇ ಅಂಥವರನ್ನು ವಾರಂಟಿಲ್ಲದೆಯೇ ಅಧಿಕಾರಿಗಳು ಹಿಡಿಯುವುದಕ್ಕೆ ಅನುಕೂಲವಾಗುವಂತೆ ದೇಶರಕ್ಷಕಶಾಸನಕ್ಕೆ ನೂತನ ನಿಬಂಧನೆಯನ್ನು ಗೌರ್ನರ್ ಜನರಲ್‌ರವರು ಏರ್ಪಡಿಸಿರುವರೆಂದು ಸರ್ಕಾರಿ ಗೆಜೆಟ್ಟಿನಿಂದ ವ್ಯಕ್ತವಾಗುತ್ತದೆ.

ಭರತಖಂಡದ ಕೋರಿಕೆಗಳನ್ನು ಆಂಗ್ಲಮಹಾಜನರ ಮುಂದೆ ನಿವೇದಿಸುವುದಕ್ಕಾಗಿ ಕಳೆದ ವಾರದಲ್ಲಿ ಅನೇಕರು ಸೀಮೆಗೆ ಪ್ರಯಾಣಮಾಡಿದ್ದಾರೆ. ಈ ವಾರದಲ್ಲೂ ಮುಂದಣವಾರದಲ್ಲೂ ಇನ್ನೂ ಕೆಲರು ಹೋಗುವವರಾಗಿದ್ದಾರೆ. ಕಳೆದವಾರ ಡಾ|| ನಾಯರ್‌ರವರೂ, ನರಸಿಂಹಚಿಂತಾಮಣಿ ಕೇಳ್ಕರ್‌ರವರೂ, ಆನಿಬೆಸೆಂಟಮ್ಮನವರೂ, ವಾಡಿಯಾರವರೂ, ಜೂಜ್ಸ್ಕರ್‌ರವರೂ, ಯಾಕೂಬ್‌ಹುಸೇನರೂ ಪ್ರಯಾಣಮಾಡಿದ್ದಾರೆ.

ಲಾಹೋರು ಮೊದಲಾದ ಕಡೆಯಲ್ಲಿ ಮರಳಿ ಅಶಾಂತಿಯೂ ವಿಪ್ಲವಯತ್ನವೂ ಹರಡದಂತೆ ಮಾಡಲು ಕಟ್ಟುನಿಟ್ಟಾದ ಕಠಿನ ಶಾಸನಗಳನ್ನು ಸರ್ಕಾರದವರು ವಿಧಿಸಿದ್ದಾರೆ. ಈಚೆಗೂ ಒಂದೆರಡು ಕಡೆ ಸ್ವಲ್ಪ ಗದ್ದಲವು ಕಾಣಿಸಿಕೊಂಡಿದ್ದಿತು. ಭೀತಿಯಿಂದ ಉಂಟಾಗಿರುವ ಅಲ್ಲಿಯ ಶಾಂತಿಯು ಯಾವಾಗ ಮಂಕಳಿಸಿಕೊಂಡೀತೋ ಹೇಳಲಾಗುವುದಿಲ್ಲ. ತುಂಟರು ಅಸತ್ಯಗಳಾದ ಪ್ರಕಟನೆಗಳನ್ನು ಮಾಡಿ ಸಾತ್ವಿಕಪ್ರಜೆಗಳ ಮನಸ್ಸನ್ನು ಕೆಡಿಸುವುದರಿಂದ ಸರ್ಕಾರದವರು ಬೇರೆ ಬೇರೆ ಪ್ರಕಟನೆಗಳನ್ನು ಮಾಡಿ ನಿಜಸ್ಥಿತಿಯನ್ನು ತಿಳಿಯಪಡಿಸುತ್ತಿದ್ದಾರೆ.

ಕಾಶೀ ಮಹಾರಾಜರು ಮೊನ್ನೆ ವಾರದಲ್ಲಿ ಒಂದು ದರ್ಬಾರನ್ನು ನಡೆಯಿಸಿ, ಅಲ್ಲಿ ಉಪನ್ಯಾಸಮಾಡುವಾಗ್ಗೆ—ರೌಲಟ್ ಶಾಸನದ ವಿಷಯವಾಗಿ ಪ್ರಜೆಗಳು ತೊಂದರೆಪಡುತ್ತಲಿದ್ದಾರೆಂತಲೂ ರಾಜಭಕ್ತಿಪೂರ್ಣರಾದ ಭಾರತೀಯರಾರಿಗೂ ಆ ಶಾಸನದಿಂದ ಯಾವ ಕಷ್ಟವೂ ಉಂಟಾಗುವುದಿಲ್ಲವೆಂತಲೂ, ಅದುಕಾರಣ ಆ ಶಾಸನವು ನಮ್ಮನ್ನು ಏನುಮಾಡುವುದೋ ಎಂದು ಪ್ರಜೆಗಳು ಭಯಪಡುವುದು ಅಜ್ಞತನವೆಂತಲೂ, ಪ್ರಜೆಗಳು ಈಗಿನಂತೆ ಆಂದೋಳನವನ್ನು ಮಾಡುತ್ತಿದ್ದರೆ ಶಾಸನವನ್ನೇರ್ಪಡಿಸುವುದೂ ಪ್ರಭುತ್ವವನ್ನು ಮಾಡುವುದೂ ಕೂಡ ಕಷ್ಟವೆಂತಲೂ ಹೇಳಿದರು.

ಉತ್ತರ ಹಿಂದೂಸ್ಥಾನದಲ್ಲಿ ಪ್ರತಿದಿನವೂ ಪ್ರಮುಖರನೇಕರನ್ನು ಹಿಡಿಯುವುದು ಪ್ರವಾಸಕ್ಕೆ ಕಳುಹಿಸುವುದು ಮೊದಲಾದ ಕಾರ್ಯಗಳು ವಿಶೇಷವಾಗಿ ನಡೆಯುತ್ತಿರುವುದು ಖೇದಕರವಾಗಿದೆ. ಇಂಥ ಸ್ಥಿತಿಯು ಯುದ್ಧ ಮುಗಿದ ಈಗಣ ಶಾಂತವಾತಾವರಣದಲ್ಲಿ ಭರತಖಂಡಕ್ಕೆ ಪ್ರಾಪ್ತವಾಗಿರುವುದು ದುರ್ದೈವವು. ಅಲ್ಲದೆ ಹಿಂದ್‌ಭಾಷಿ ಪತ್ರಿಕಾಕರ್ತರಾದ ಜೀತ್‌ಮಲ್ ಪರಶುರಾಮ್‌ರವರೂ, ಅಲಬಿರ್ ಪತ್ರಿಕಾಧಿಪತಿ ಷೇಕ್ ಅಬ್ದುಲ್ ಮಜೀದ್‌ರವರೂ, ಚೋತ್ರಾಮುಮಶತ್ಬ್ಯಾಯಿಯವರೂ, ಜೇತಾನಂದ್‌ರವರೂ ಸಹ ಹಿಡಿಯಲ್ಪಟ್ಟಿದ್ದಾರೆ. ಅಲಹಾಬಾದಿನಿಂದ ಪ್ರಕಟನವಾಗುತ್ತಿರುವ ಇಂಡಿಪೆಂಡೆಂಟ್ ಪತ್ರಿಕಾಪ್ರಕಟನಕ್ಕೆ ೨೦೦೦ ರೂ. ಜಾಮೀನು ಕೇಳಲ್ಪಟ್ಟಿದೆ.

ವಿದೇಶದ ವೃತ್ತಾಂತಗಳು.

ರಷ್ಯಾದ ಮಾಸ್ಕೋ ಪಟ್ಟಣದಲ್ಲಿ ಕ್ಷಾಮದ ಬಾಧೆಯನ್ನು ಸೈರಿಸಲಾರದೆ ಪ್ರಜೆಗಳು ಮಾಡಿದ ಗದ್ದಲದಲ್ಲಿ ೮ ಸಾವಿರ ಜನರು ಕೊಲ್ಲಲ್ಪಟ್ಟಿರುವರು.

ಲಂಡನ್ ಸಂಧಿನಿಬಂಧನೆಯ ಪ್ರಕಾರ ಇಟಲಿಯವರು ಗ್ರೀಕರಿಗೆ ಬೇಕಾದ ಸಹಾಯವನ್ನೆಲ್ಲಾ ಮಾಡುವುದಕ್ಕೆ ನಿಶ್ಚಯಿಸಿಕೊಂಡಿರುವರೆಂದು ಪ್ರಕಟವಾಗಿದೆ.

ರಷ್ಯಾದಲ್ಲಿರುವ ಸೋವಿಯಟ್ ಪ್ರಭುತ್ವವನ್ನು ಲೆನಿನ್ನರೂ ಟ್ರಾಟ್ಸ್ಕಿಯವರೂ ಸಹ ನಾಶಗೊಳಿಸಿ, ರಷ್ಯಾವನ್ನೇ ಬಿಟ್ಟು ಹೊರಟುಹೋಗಲು ನಿಶ್ಚಯಿಸಿಕೊಂಡಿರುವರಂತೆ.

ಬೋಲ್ಷೆವಿಕ್ಕರು ಸೈಬೀರಿಯಾ ಲೋಹಮಾರ್ಗವನ್ನು ಧ್ವಂಸಮಾಡಲು ಪ್ರಯತ್ನಿಸಿದರು. ಆದರೆ ಸೈಬೀರಿಯನ್ನರೂ ಜಪಾನರೂ ಅದನ್ನು ತಡೆಯುವುದಕ್ಕೆ ಬಹು ಪ್ರಯತ್ನಮಾಡಿರುವರು.

ಪ್ರಪಂಚದಲ್ಲಿ ಇದುವರೆಗೆ ನಿರ್ಮಿಸಲ್ಪಟ್ಟಿರುವ ಹಡಗುಗಳಲ್ಲೆಲ್ಲಾ ಅಗ್ರೇಸರವಾಗಿ ಜರ್ಮನರ ಅಧೀನದಲ್ಲಿರುವ "ಇಂಪರೇಟರ್" ಎಂಬ ಹಡಗು ಮಿತ್ರಮಂಡಲಿಯವರ ವಶಗೊಳಿಸಲ್ಪಡುವುದೆಂದು ಲಂಡನ್ ತಂತ್ರೀವಾರ್ತೆಯು ಹೇಳುತ್ತದೆ.

ಪರ್ಷಿಯಾದ ಪ್ರತಿನಿಧಿಗಳು ತಮ್ಮ ಸ್ವಾಧೀನದಿಂದ ತಪ್ಪಿಹೋಗಿರುವ ಕರ್ಡಿಸ್ಥಾನ್, ಟ್ರಾನ್ಸ್‌ಕಕೇಷಿಯಾ ಭಾಗಗಳನ್ನು ಮರಳಿ ತಮ್ಮ ದೇಶಕ್ಕೆ ಸೇರಿಸಿಕೊಡಬೇಕೆಂದೂ, ತಮ್ಮ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದೂ ಸಂಧಿಸಭೆಯವರಿಗೆ ಬಿನ್ನೈಸಿಕೊಂಡಿರುವರಂತೆ. ಇವು ಅನ್ಯಾಯವಾದ ಕೋರಿಕೆಯೆಂತಲೂ, ಸಂಧಿಸಭೆಯವರು ಇದನ್ನು ಪರ್ಯಾಲೋಚನೆಗಿಟ್ಟುಕೊಳ್ಳದೆ ನಾನಾರಾಷ್ಟ್ರ ಸಂಮೇಳನಸಭೆಯ ವಿಚಾರಕ್ಕಾಗಿ ಕಳುಹಿಸಿಕೊಡುವರೆಂತಲೂ ಲಂಡನ್ ಟೈಮ್ಸ್ ಪತ್ರಿಕೆಯು ಬರೆದಿರುವುದನ್ನು ನೋಡಿ ಪರ್ಷಿಯಾ ಪ್ರತಿನಿಧಿಗಳು ಆಶಾಭಂಗಗೊಂಡಿದ್ದಾರೆ.

ಟೋಲುಗೇಟುಗಳ ಹರಾಜು.

ನಂಜನಗೂಡು ಟವನ್ ಮ್ಯುನಿಸಿಪಲ್ ಕೌನ್ಸಿಲ್ ಆಫೀಸಿನಿಂದ—

ಸನ್ 1919-20 ನೇ ಸಾಲಿನಲ್ಲಿ ನಂಜನಗೂಡು ಟವನ್ ಮ್ಯುನಿಸಿಪಲ್ ಸರಹದ್ದಿನೊಳಗೆ ಬರತಕ್ಕ ಗಾಡಿಗಳಮೇಲೆ ಸುಂಕಾ ವಸೂಲ್ಮಾಡಿಕೊಳ್ಳುವ ಹಕ್ಕನ್ನು ಕಂಟ್ರಾಕ್ಟು ಕೊಡುವ ಬಗ್ಗೆ ಸೀಲ್ಡ್‌ಟೆಂಡರುಗಳು ಈ ಲಾಗಾಯ್ತು 1919 ನೇ ಇಸವಿ ಮೇ ಮಾಹೆ 16 ನೇ ತಾರೀಖು ಶುಕ್ರವಾರದದಿನ ಮಧ್ಯಾಹ್ನ 1 ಗಂಟೆವರಿವಿಗೂ ನಂಜನಗೂಡು ಸಬ್‌ಡಿವಿಜನ್ ಅಸಿಸ್ಟೆಂಟು ಕಮಿಷನರ್ ಮತ್ತು ಮ್ಯುನಿಸಿಪಲ್ ಪ್ರೆಸಿಡೆಂಟ್ ಸಾಹೇಬರವರಿಂದಲಾಗಲೀ ಅಥವಾ ವೈಸ್‌ಪ್ರೆಸಿಡೆಂಟ್‌ರವರಿಂದಲಾಗಲೀ ಟವನ್ ಮ್ಯುನಿಸಿಪಲ್ ಆಫೀಸಿನಲ್ಲಿ ತೆಗೆದುಕೊಳ್ಳಲ್ಪಡುತ್ತವೆ. ಇಷ್ಟ ಉಳ್ಳವರು ತಾವು ಮಾಯಿದಾನ ಎಷ್ಟು ಮೊಬಲಿಗ್ಗೆ ಕಂಟ್ರಾಕ್ಟುಮಾಡಲು ಒಪ್ಪುತ್ತಾರೋ ಆ ಮೊಬಲಗನ್ನು ಟೆಂಡರಿನಲ್ಲಿ ನಮೂದಿಸಿ ಖಾತರಿಬಗ್ಗೆ 100 ರೂಪಾಯಿಗಳನ್ನು ನಗದಾಗಿಯಾಗಲಿ ಅಥವಾ ನೋಟಾಗಿಯಾಗಲೀ ಟೆಂಡರ ಜೊತೆಯಲ್ಲಿ ತಮ್ಮ ಪೂರ್ತಿಯಾದ ವಿಳಾಸ ಸಮೇತ ಹಾಜರ್ಮಾಡಬೇಕು. ಮೈಸೂರು ಗೆಜೆಟ್ಟಿನಲ್ಲಿ ಪಬ್ಲಿಷ್‌ಮಾಡಿರುವ ಷರತ್ತುಗಳಮೇರೆ ನಡೆದುಕೊಳ್ಳಲು ಕಂಟ್ರಾಕ್ಟುದಾರನು ಬದ್ಧನಾಗಿರಬೇಕು.

ಬಾಕಿ ವಿಚಾರವನ್ನು ಮ್ಯುನಿಸಿಪಲ್ ಆಫೀಸಿಗೆ ಬರೆದು ತಿಳಿದುಕೊಳ್ಳಬಹುದು.

ತಾ|| 9-5-1919.

E. Rama Rao,
For President.

ಪ್ರಜಾಪ್ರತಿನಿಧಿಸಭೆಯಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ ಕೆಲವು.

ಪ್ರ.—ಮಳೆಯ ಅಭಾವದಿಂದ ಆಹಾರಕ್ಕೆ ತಪ್ಪಲುಂಟಾಗಿರುವ ಡಿಸ್ಟ್ರಿಕ್ಟುಗಳು ಎಷ್ಟು?

ಉ.—ಕೋಲಾರ, ತುಮಕೂರು, (ಕೆಲ ತಾಲ್ಲೂಕುಗಳ ಹೊರತು) ಬೆಂಗಳೂರು (ಕೆಲಭಾಗ) ಶಿವಮೊಗ್ಗ ಕೆಲ ತಾಲ್ಲೂಕುಗಳ ಹೊರತು ಈ ಡಿಸ್ಟ್ರಿಕ್ಟುಗಳಲ್ಲಿ ಸ್ವಲ್ಪ ತೊಂದರೆಯೆಂದು ವರದಿ ಬಂದಿದೆ.

ಪ್ರ.—ಫಸಲಾಗದ ಹೊಲ ಗದ್ದೆ ತೋಟಗಳ ಕಂದಾಯವನ್ನು ಬಿಡಬೇಕೆಂದು ಡಿ|| ಕಮಿಷನರುಗಳು ಮಾಡಿದ ವರದಿಯ ಮೇಲೆ ಸರ್ಕಾರದವರು ಏನುಮಾಡಿದರು?

ಉ.—ಆ ವರದಿಯು ಬಂದಿದೆ. ಆ ವಿಚಾರವಾಗಿ ಕಳೆದ ಏಪ್ರಿಲ್ ತಾ|| ೨೪ ರಲ್ಲಿ ಸರ್ಕಾರಿ ಅಪ್ಪಣೆಯಾಗಿದೆ.

ಪ್ರ.—ತರೀಬಂಜರು ರಿಮಿಷನ್ ವಿಷಯದಲ್ಲಿ ನಿಯುಕ್ತವಾಗಿದ್ದ ಸಂಘದ ವರದಿಯ ಮೇಲೆ ಸರ್ಕಾರವು ಏನುಮಾಡಿದೆ?

ಉ.—ಪರ್ಯಾಲೋಚನೆಯಲ್ಲಿದೆ. ಇಷ್ಟರಲ್ಲೇ ಅಪ್ಪಣೆಯು ಕೊಡಲ್ಪಡುವುದು.

ಪ್ರ.—ಸರ್ಕಾರದವರು ಆಹಾರಧಾನ್ಯಗಳ ಕಂಟ್ರೋಲಿಂಗ್ ಶಾಖೆಯನ್ನು ಏರ್ಪಡಿಸಿದ ಬಳಿಕ ಎಷ್ಟು ಬೆಲೆ ಬಾಳುವ ಧಾನ್ಯಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಂಡರು?

ಉ.—ಆರಂಭದಿಂದ ಕಳೆದ ಮಾರ್ಚಿ ತಿಂಗಳೊಳಗೆ ೫೪೪೫ ಪಲ್ಲಾ ಬತ್ತವನ್ನೂ ೧೫೫೦ ಪಲ್ಲಾ ಅಕ್ಕಿಯನ್ನೂ ೧೦೯೮೬ ಪಲ್ಲಾ ರಾಗಿಯನ್ನೂ ವಶಪಡಿಸಿಕೊಂಡಿದ್ದಾರೆ. ಅವುಗಳ ಬೆಲೆಯು ಇನ್ನೂ ನಿರ್ಧರವಾಗಿಲ್ಲ.

ಪ್ರ.—ಇದರ ಮಾರಾಟದಿಂದ ಎಷ್ಟು ಲಾಭಬಂದಿದೆ

ಉ.—ಲಾಭಕ್ಕಾಗಿ ಮಾರುವುದಿಲ್ಲ. ಬಿದ್ದಿರುವ ಅಸಲಿಗೇ ಮಾರಾಟಮಾಡುತ್ತದೆ. ಕೆಲವೇಳೆ ಧಾನ್ಯಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವ ವೆಚ್ಚದ ಭಾರವನ್ನು ಸರ್ಕಾರವೇ ವಹಿಸಿದೆ.

ಪ್ರ.—ಈ ಸಂಬಂಧದಲ್ಲಿ ಕೋರ್ಟಿಗೆ ಹೋಗಿರುವ ವ್ಯಾಜ್ಯಗಳೆಷ್ಟು? ತೀರ್ಮಾನವಾಗಿರುವುವುಗಳೆಷ್ಟು?

ಉ.—ವ್ಯಾಜ್ಯಗಳು ೧೬೭. ಅವುಗಳಲ್ಲಿ ತೀರ್ಮಾನವಾದುವು ೧೧೪.

ಪ್ರ.—ಅಕ್ಕಿ ರಾಗಿಗಳು ತಕ್ಕಷ್ಟು ದೊರೆಯದಿರುವುದರಿಂದ ಪ್ರಜೆಗಳಿಗೆ ಉಂಟಾಗಿರುವ ಕಷ್ಟಗಳು ಸರ್ಕಾರಕ್ಕೆ ತಿಳಿದಿದೆಯೆ? ಹಾಗಿದ್ದರೆ ಅದರ ನಿವಾರಣೆಗೆ ಏನು ಏರ್ಪಾಟನ್ನು ಮಾಡಿದ್ದಾರೆ.

ಉ.—ಧಾನ್ಯದ ಮೇಲಣ ಬೆಲೆಯ ನಿರ್ಬಂಧನವನ್ನು ತೆಗೆದುಹಾಕಿದ ಮೇಲೆ ಸ್ಥಿತಿಯು ಉತ್ತಮವಾಗಿದೆಯೆಂದು ಗೊತ್ತಾಗಿದೆ.

ಪ್ರ.—ಆಹಾರಧಾನ್ಯಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವಿಕೆ ಅವುಗಳ ಬೆಲೆಯ ನಿರ್ಬಂಧ-ಇವುಗಳ ಮೂಲಕ ಗ್ರಾಮಗಳ ಜನರಿಗೂ ಕೊಂಡುಕೊಳ್ಳುವವರಿಗೂ ಎಷ್ಟು ಕಷ್ಟಗಳುಂಟಾಗಿದೆಯೆಂಬುದು ಸರ್ಕಾರಕ್ಕೆ ತಿಳಿದಿದೆಯೆ?

ಉ.—ಅಧಿಕವಾದ ದುರ್ಭಿಕ್ಷಸ್ಥಿತಿಯನ್ನು ನಿವಾರಿಸುವುದಕ್ಕಾಗಿಯೂ ಬಹು ಪ್ರಜೆಗಳ ಇಷ್ಟಾನುಸಾರವಾಗಿಯೂ ಆಹಾರಧಾನ್ಯಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವುದೇ ಮೊದಲಾದ ನಿರ್ಬಂಧವನ್ನು ಮಾಡಲಾಯಿತು. ಇದರಿಂದ ಪ್ರಜೆಗಳಿಗೆ ಯಾವ ಕಷ್ಟವೂ ಉಂಟಾದಂತೆ ಸರ್ಕಾರದವರು ಎಣಿಸಿಲ್ಲ. ಇದಕ್ಕೆ ಪ್ರತಿಯಾಗಿ ಮಾಡಿರುವ ಏರ್ಪಾಟುಗಳಲ್ಲಿ ಅಲ್ಪಸ್ವಲ್ಪ ಕೊರತೆಗಳಿದ್ದರೂ ಅವುಗಳಿಂದ ಬೆಳೆಮಾಡಿದವರೂ ದಳ್ಳಾಳಿಗಳೂ ಮಿತಿಮೀರಿ ಲಾಭವನ್ನು ಹೊಂದದಂತೆ ಮಾಡುವುದಕ್ಕೂ ಪ್ರಜೆಗಳಿಗೆ ತಪ್ಪದೆ ಆಹಾರ್ಯವಸ್ತುಗಳು ದೊರೆಯುವಂತೆ ಮಾಡುವುದಕ್ಕೂ ಅನುಕೂಲವಾಯಿತು.

ಪ್ರ.—ಮೈಸೂರು ಅಕ್ಕಿಯ ಯಂತ್ರಾಲಯಗಳವರೊಡನೆ ಮೈಸೂರು ಮ್ಯು|| ಪ್ರೆಸಿಡೆಂಟರು ಮಾಡಿಕೊಂಡಿರುವ ಒಪ್ಪಂದಗಳೇನು? ಅವನ್ನು ತೋರಿಸಬಹುದಾ? ಆ ಒಪ್ಪಂದಗಳಿಂದ ಇತರ ಸಣ್ಣ ವ್ಯಾಪಾರಿಗಳಿಗೆ ಬಾಧಕವುಂಟಾಗಿರುವುದು ಸರ್ಕಾರದವರಿಗೆ ಗೊತ್ತೆ? ಈ ಒಪ್ಪಂದಗಳಿಂದ ಯಂತ್ರಾಲಯ ಕರ್ತರುಗಳು ಅತ್ಯಧಿಕವಾದ ಪ್ರಯೋಜನಗಳನ್ನು ಹೊಂದುತ್ತಿಲ್ಲವೆ?

ಉ.—ಆಹಾರ್ಯವಸ್ತುಗಳ ಕಂಟ್ರೋಲರು [illegible] ಒಪ್ಪಂದಗಳನ್ನು ಮಾಡಿಕೊಂಡಿರುವುದುಂಟು. ಅವನ್ನು ತೋರಿಸಲಾಗುವುದಿಲ್ಲ. ಈ ಒಪ್ಪಂದದ ಮೂಲಕ ಯಂತ್ರಾಲಯ ಕರ್ತರುಗಳು ಅತ್ಯಧಿಕವಾದ ಲಾಭವನ್ನು ಹೊಂದಲು ಅವಕಾಶವಿಲ್ಲದಂತೆ ಸರ್ಕಾರದವರು ಮಾಡುವರು.

ಪ್ರ.—ಆಹಾರ್ಯವಸ್ತುಗಳ ಕಂಟ್ರೋಲಿಂಗ್ ಶಾಖೆಯನ್ನು ಶಾಶ್ವತವಾಗಿಡುವರೆ?

ಉ.—ಇಲ್ಲ. ಎಷ್ಟು ಕಾಲದವರೆಗೆ ಜನರ ಸೌಕರ್ಯಕ್ಕಾಗಿ ಇಡಬೇಕೆಂದು ತೋರುವುದೋ ಅಲ್ಲಿಯವರೆಗೆ ಮಾತ್ರ ಇಟ್ಟಿರುವರು.

ಪ್ರ.—ವ್ಯಾಸಂಗ ನಡೆಯುತ್ತಿರುವ ವರ್ಷದ ಮಧ್ಯಕಾಲದಲ್ಲಿ ಉಪಾಧ್ಯಾಯರುಗಳನ್ನು ವಿದ್ಯಾಭ್ಯಾಸಶಾಖೆಯವರು ವಿಶೇಷವಾಗಿ ವರ್ಗಾವರ್ಗ ಮಾಡುತ್ತಿರುವುದು ಈಚೆಗೆ ಹೆಚ್ಚಿಕೊಂಡಿರುವುದು ಸರ್ಕಾರಕ್ಕೆ ಗೊತ್ತೆ? ಇದರಿಂದ ಬೋಧನೆಯ ಕೆಲಸಕ್ಕೆ ತೊಂದರೆಯುಂಟಾಗುತ್ತಿರುವುದರಿಂದ ಅದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಯಾವ ಏರ್ಪಾಟನ್ನು ಮಾಡುವವರಾಗಿದ್ದಾರೆ?

ಉ.—ಅತ್ಯವಶ್ಯವಾಗಿ ವರ್ಗಾವರ್ಗಿ ನಡೆಯುತ್ತಲಿರುವಂತೆ ಕಂಡುಬರುವುದಿಲ್ಲ. ಅವಶ್ಯಕತೆಯುಂಟಾದಾಗಲೂ ಮಾಡಲ್ಪಟ್ಟರೆ ಅದರಿಂದ ಬೋಧನೆಯ ಕೆಲಸಕ್ಕೆ ಅಡ್ಡಿಯುಂಟಾಗದಂತೆ ಮಾಡಲು ಎಚ್ಚರಿಕೆ ತೆಗೆದುಕೊಳ್ಳಲ್ಪಡುವುದು.

ಪ್ರ.—ಪಟೇಲ್ ಶ್ಯಾನುಭೋಗರ ಪೋಟಗಿಯು ಜಮೀನ್ ಕಂದಾಯದಲ್ಲಿ ಸೇರಿದೆಯೊ? ಸೇರಿಸಿದ್ದರೆ ಯಾವ ದಾಮಾಷಾಯ ಪ್ರಕಾರ?

ಉ.—ಈ ಪ್ರಶ್ನೆಯು ಸ್ಪಷ್ಟವಾಗಿಲ್ಲ. ಭೂಕಂದಾಯವನ್ನು ವಿಧಿಸುವಲ್ಲಿ ಪೋಟಗಿಯನ್ನು ಗಣನೆಗೆ ತಂದುಕೊಂಡಿದೆಯೆ? ಎಂಬುದು ಪ್ರಶ್ನಾರ್ಥವಾಗಿದ್ದ ಪಕ್ಷದಲ್ಲಿ ಹಾಗೆ ತೆಗೆದುಕೊಂಡಿಲ್ಲವೆಂಬುದೇ ಉತ್ತರ.

ಪ್ರ.—ಒಕ್ಕಲಿಗರಲ್ಲಿ ಕಳೆದ ವರ್ಷ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿಗಳೆಷ್ಟು? ತೇರ್ಗಡೆಹೊಂದಿರುವರೆಷ್ಟು?

ಉ.—ಇಂಗ್ಲೀಷ್ ಲೋ|| ಸೆ|| ಪರೀಕ್ಷೆಗೆ ೯೯ ಮಂದಿ ಹೋಗಿದ್ದು ೨೫ ಮಂದಿ ತೇರ್ಗಡೆಯಾಗಿ ೨೦ ಮಂದಿಗಳು ನಾಲ್ಕನೆ ಫಾರಮ್ಮಿನಲ್ಲಿ ಓದುತ್ತಿದ್ದಾರೆ. ಕನ್ನಡ ಲೋ|| ಸೆ|| ಪರೀಕ್ಷೆಗೆ ೩೨೪ ಮಂದಿ ಹೋಗಿದ್ದು ೭೫ ಮಂದಿ ಉತ್ತೀರ್ಣರಾಗಿ ಇಬ್ಬರು ಅಪ್ಪರ್ ಸೆಕೆಂಡರಿಯಲ್ಲಿ ಓದುತ್ತಿದ್ದಾರೆ.

ಪ್ರ.—ನಮ್ಮ ದೇಶದಲ್ಲಿರುವ ಕಾರಖಾನೆಗಳೆಷ್ಟು?

ಉ.—೨೦ ಜನಕ್ಕೆ ಕಡಿಮೆಯಿಲ್ಲದಷ್ಟು ಜನರು ಕೆಲಸಮಾಡುತ್ತಿರುವ ಕರ್ಮಾಗಾರಗಳಿಗೆ ಕಾರಖಾನೆಗಳೆಂದು ಕರೆದರೆ ಅಂಥವುಗಳು ೭೮ ಇವೆ.

ಪ್ರ.—ಅವುಗಳಲ್ಲಿ ಸರ್ಕಾರದವು ಎಷ್ಟು? ಎಷ್ಟರಲ್ಲಿ ಕೆಲಸ ನಡೆಯುತ್ತಿದೆ? ಎಷ್ಟರಲ್ಲಿ ಇಲ್ಲ.

ಉ.—೬ ಯಂತ್ರಶಕ್ತಿಯಿಂದ ಕೆಲಸಮಾಡುವ ಕರ್ಮಾಗಾರಗಳಿಗೆ ಯಂತ್ರಸ್ಥಾಪನೆಗಾಗಿ ೧೧೫ ಕಾರಖಾನೆಗಳಿಗೆ ಸರ್ಕಾರದಿಂದ ಸಹಾಯಮಾಡಲಾಗಿದೆ. ಅವುಗಳಲ್ಲಿ ಹಲವು ಕಾರಖಾನೆಗಳಲ್ಲಿ ಕೆಲಸವು ಚೆನ್ನಾಗಿ ನಡೆಯುತ್ತಿದೆ. ಕೆಲವುಗಳಲ್ಲಿ ಕಾಲದೋಷದಿಂದಲೂ ಎಚ್ಚರಿಯ ಅಭಾವದಿಂದಲೂ ಕೆಲಸವು ನಿಂತುಹೋಗಿದೆ.

ಪ್ರ.—ಈ ಕಾರಖಾನೆಗಳ ಸ್ಥಿತಿಗತಿಯನ್ನು ವಿಚಾರಮಾಡಿ ಸರಿಯಾಗಿ ಕೆಲಸ ನಡೆಯುವಂತೆಯೂ ಲಾಭಪ್ರದವಾಗುವಂತೆಯೂ ಮಾಡುವುದಕ್ಕೆ ಸರ್ಕಾರದವರು ಯೋಚಿಸಿರುವರೆ? ಹಾಗೆ ಮಾಡಲು ಇದು ಸಕಾಲವಲ್ಲವೆ?

ಉ.—ಇದಕ್ಕಾಗಿ ಸರ್ಕಾರದವರು ಪ್ರತ್ಯೇಕವಾದ ಶಾಖೆಯನ್ನೇರ್ಪಡಿಸಿರುವರು. ಪ್ರಾರ್ಥಿಸಿದಾಗ ತಕ್ಕ ಸಹಾಯವನ್ನು ಸರ್ಕಾರದ ಶಿಲ್ಪವಾಣಿಜ್ಯ ಶಾಖೆಯವರು ಸಹಾಯಮಾಡುವರು.

ಪ್ರ.—ಮಲೆನಾಡು ಪ್ರಜಾಸಂಖ್ಯೆಯನ್ನೂ ಅಲ್ಲಿಯ ರೆವಿನ್ಯೂ ಫಾರೆಸ್ಟು ಮೊದಲಾದ ಶಾಖಾ ಉತ್ಪತ್ತಿಯನ್ನೂ ಗಮನಿಸಿದರೆ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯ ದಾಮಾಷಾಕ್ಕಿಂತಲೂ ಮಲೆನಾಡಿನ ವರಮಾನವು ಹೆಚ್ಚೆಂದು ತೋರುವುದಿಲ್ಲವೆ? ಆದರೆ ಆ ಮಲೆನಾಡಿನ ಅಭಿವೃದ್ಧಿಗಾಗಿ ಸರ್ಕಾರವು ಮಾಡುವ ವೆಚ್ಚವು ಒಟ್ಟು ದಾಮಾಷಾಕ್ಕೆ ಕಡಿಮೆಯೆಂದು ತೋರುವುದಿಲ್ಲವೆ?

ಉ.—ಲೆಕ್ಕವನ್ನು ನೋಡುವಲ್ಲಿ ಶಿವಮೊಗ್ಗ ಕಡೂರು ಡಿಸ್ಟ್ರಿಕ್ಟುಗಳ ಪ್ರತಿಯೊಬ್ಬ ಪ್ರಜೆಗೂ ಮಾಡಿರುವ ವೆಚ್ಚವು ಬಯಲುಸೀಮೆಯ ತುಮಕೂರು ಚಿತ್ರದುರ್ಗ ಕೋಲಾರ ಡಿಸ್ಟ್ರಿಕ್ಟುಗಳಲ್ಲಿರುವ ಪ್ರತಿಯೊಬ್ಬ ಪ್ರಜೆಗಾಗಿಯೂ ಮಾಡಿರುವ ವೆಚ್ಚಕ್ಕಿಂತಲೂ ಹೆಚ್ಚಾಗಿಯೇ ಇದೆಯೆಂದು ಗೊತ್ತಾಗುವದು. ಸರ್ಕಾರದವರು ಮಲೆನಾಡಿನ ಅಭಿವೃದ್ಧಿಗೆ ವಿಶೇಷವಾಗಿ ಗಮನಕೊಟ್ಟಿದ್ದಾರೆ. ಇನ್ನೂ ಅದರ ಗ್ರಾಂಟನ್ನು ಹೆಚ್ಚಿಸಲೂ ಇಷ್ಟವುಳ್ಳವರಾಗಿದ್ದಾರೆ.

ಪ್ರ.—ಆಹಾರಪದಾರ್ಥಗಳನ್ನು ಹೆಚ್ಚಿಸುವುದಕ್ಕಾಗಿ ೧೯೧೮ ನೆ ಸೆಪ್ಟೆಂಬರ್ ತಾ|| ೨೧ ರಲ್ಲಿ ಸರ್ಕಾರದವರು ರಿಯಾಯಿತಿ ತೋರಿಸಿ ಪ್ರಕಟಿಸಿದ ಅಪ್ಪಣೆ ಮೇರೆಗೆ ಪ್ರಜೆಗಳಿಂದ ದರಖಾಸ್ತು ಮಾಡಲ್ಪಟ್ಟಿರುವ ಭೂಮಿಯ ಪರಿಮಿತಿಯೆಷ್ಟು? ಬೀಜದ ಧಾನ್ಯ ಗೊಬ್ಬರ ಮುಂತಾದುವುಗಳನ್ನು ಕೊಳ್ಳಲು ಕೊಡಲ್ಪಟ್ಟ ತಕಾವಿ ಸಾಲಗಳು ಎಷ್ಟು? ಈ ಏರ್ಪಾಟುಗಳು ಸಾಲದೆ ಇದ್ದರೆ ಕ್ಷಾಮನಿವಾರಣೆಯ ಬಗೆಗೆ ಮತ್ತಾವ ಏರ್ಪಾಟುಗಳನ್ನು ಮಾಡಬೇಕೆಂದಿರುವಿರಿ?

ಉ.—ಕಳೆದ ೬ ತಿಂಗಳ ಕಾಲದಲ್ಲಿ ಸರ್ಕಾರಕ್ಕೆ ಉಂಟಾಗಿರುವ ಅನುಭವದಿಂದ ಈಗ ಕೊಟ್ಟಿರುವ ರಿಯಾಯತಿಗಳನ್ನು ಬಹುಜನರು ಉಪಯೋಗಿಸಿಕೊಂಡೇ ಇಲ್ಲ. ಇದರ ನಿಜಸ್ಥಿತಿ ತಿಳಿಯುವ ಬಗೆಗಾಗಿ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ವರದಿ ಬಂದಮೇಲೆ ಆ ವಿಷಯಕ್ಕೆ ಉತ್ತರವು ಕೊಡಲ್ಪಡುವುದು.

ಪ್ರ.—ಸಭೆಗೆ ಬರತಕ್ಕ ಪ್ರಜಾಪ್ರತಿನಿಧಿಗಳು ಮಾಡುವ ಕೆಲಸವು ಗೌರವಾರ್ಥವಾದುದರಿಂದ ಇವರುಗಳಿಗೆ ಸಭೆಗೆ ಹೋಗಿ ಬರುವುದಕ್ಕೆ ೨ ನೆ ತರಗತಿಯ ಟಿಕೇಟುಗಳೆರಡರ ಮತ್ತೂ ಅವರ ಸೇವಕನಿಗಾಗಿ ಒಂದು ೩ ನೆ ತರಗತಿಯ ಟಿಕೇಟಿನ ಛಾರ್ಜನ್ನು ಪ್ರತಿಯೊಬ್ಬರಿಗೂ ಕೊಡಿಸಿಕೊಡಬೇಕು.

ಉ.—ಹೀಗೆ ಮಾಡುವುದಕ್ಕೆ ೧೨ ಸಾವಿರ ರೂ. ಗಳ ವೆಚ್ಚವು ಹಿಡಿಯುವುದೆಂದು ಹೇಳಿ, ಪರ್ಯಾಲೋಚನೆಗೆ ಇಟ್ಟುಕೊಳ್ಳಲ್ಪಟ್ಟಿತು.

ಪ್ರ.—ಸರ್ಕಾರದವರಿಂದ ಏರ್ಪಡಿಸಲ್ಪಡುವ ಕಮಿಟಿಯ ಮೆಂಬರುಗಳಿಗೆ ಬತ್ಯವು ಕೊಡಲ್ಪಟ್ಟರೂ ಅದು ಒಂದೇ ವಿಧವಾಗಿರುವುದಿಲ್ಲ. ಅದನ್ನು ಒಂದೇ ಸಮನಾಗಿ ಮಾಡಬೇಕು.

ಉ.—ಈಗ ಮಾಡಿರುವ ಏರ್ಪಾಟಿನಲ್ಲಿ ಗೆಜೆಟೆಡ್ ಆಫೀಸರುಗಳಿಗೂ ಇತರ ಮೆಂಬರುಗಳಿಗೂ ಬತ್ಯವು ಒಂದೇ ವಿಧವಾಗಿದೆ. ಇದರ ಪರಿಣಾಮವನ್ನು ಕೆಲಕಾಲ ಪರೀಕ್ಷಿಸಿ ನೋಡೋಣ.

ಪ್ರ.—ವಿದ್ಯಾಭ್ಯಾಸಕ್ಕಾಗಿ ಧರ್ಮಾರ್ಥವಾಗಿ ಸರ್ಕಾರದ ಬೊಕ್ಕಸದಲ್ಲಿ ಹೆಚ್ಚಿನ ಬಡ್ಡಿಯ ಪ್ರಾಪ್ತಿಗಾಗಿ ಇಡಲ್ಪಡುವ ಹಣದ ಮೊತ್ತವು ೩ ಸಾವಿರಕ್ಕೆ ಕಡಿಮೆಯಾಗಿರಕೂಡದೆಂದು ಈಗ ಏರ್ಪಟ್ಟಿರುವ ನಿರ್ಬಂಧದಲ್ಲಿ ಆ ಮೊತ್ತವನ್ನು ೧ ಸಾವಿರಕ್ಕೆ ಕಡಿಮೆಯಿಲ್ಲದಿರಬೇಕೆಂದು ಏರ್ಪಡಿಸಬೇಕು.

ಉ.—ಪರೀಕ್ಷಾರ್ಥವಾಗಿ ೩ ವರ್ಷಗಳವರೆಗೆ ಹಾಗೆಯೇ ೧ ಸಾವಿರಕ್ಕೆ ಇಳಿಸಲ್ಪಡುವುದು. ಈ ಬದಲಾವಣೆಯಿಂದ ಹೆಚ್ಚು ಹಣವು ಬರುವಂತಾದರೆ ಶಾಶ್ವತಪಡಿಸಲಾಗುವುದು.

ಪ್ರ.—ಇಂಜನಿಯರಿಂಗ್ ಇಲಾಖೆಯಲ್ಲಿ ಕಂಟ್ರಾಕ್ಟರುಗಳು ಡಿಪಾಜಿಟ್ಟು ಕಟ್ಟಿದ ಹಣಕ್ಕೆ ಬಡ್ಡಿ ಕೊಡಿಸುವಂತಾಗಬೇಕು.

ಉ.—ಆ ಡಿಪಾಜಿಟ್ ಹಣವನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು ಅಲ್ಲಿಯ ಪ್ಯಾಸ್ ಬುಕ್ಕನ್ನು ಇಂ|| ಇಲಾಖೆಯಲ್ಲಿ ಡಿಪಾಜಿಟ್ ಮಾಡಿದರೆ ಬಡ್ಡಿಯು ಸಿಕ್ಕುವುದು.

ಪ್ರ.—ಅಮಲ್ದಾರರುಗಳ ಬತ್ಯವನ್ನು ಹೆಚ್ಚಿಸಬೇಕು.

ಉ.—ಅಮಲ್ದಾರರು ಮೊದಲಾದ ಸರ್ಕಾರಿ ಉದ್ಯೋಗಿಗಳ ಪರವಾಗಿ ಇಂಥ ಪ್ರಶ್ನೆಗಳನ್ನು ಪ್ರಜಾಪ್ರತಿನಿಧಿಗಳು ಕೇಳಬೇಕಾದುದಿಲ್ಲ.

ಪ್ರ.—ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಮನೆ ಕಟ್ಟಿಕೊಳ್ಳುವವರಿಗೆ ಸಾಲಕೊಡಲು ಏರ್ಪಡಿಸಿರುವಂತೆ ಸಂಸ್ಥಾನದ ಎಲ್ಲ ಪುರ ಗ್ರಾಮಗಳಿಗೂ ಏರ್ಪಡಿಸಿ ಕೊಡಬೇಕು.

ಉ.—ತಾಲ್ಲೂಕು ಡಿಸ್ಟ್ರಿಕ್ಟ್ ಬೋರ್ಡುಗಳು ಈ ಸಂಬಂಧವಾಗಿ ನಿರ್ಧರವನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಪರ್ಯಾಲೋಚಿಸಲ್ಪಡುವುದು.

ಪ್ರ.—ಡಿ|| ಕಮಿಷನರ ತೀರ್ಮಾನದ ಮೇಲೆ ರೆವಿನ್ಯೂ ಕಮಿಷನರಲ್ಲಿ ಮಾಡಿದ ಅಪ್ಪೀಲನ್ನು ಅವರು ಮಾತ್ರ ವಿಚಾರಿಸಿ ತೀರ್ಮಾನಿಸುವರು. ಆ|| ರೆ|| ಕಮಿಷನರ ತೀರ್ಮಾನದ ಮೇಲೂ ಅಪ್ಪೀಲ್ ಮಾಡಿಕೊಳ್ಳುವುದಕ್ಕೆ ಮದ್ರಾಸು ಬೊಂಬಾಯಿ ಮೊದಲಾದ ಕಡೆಗಳಲ್ಲಿರುವಂತೆ ರೆವಿನ್ಯೂ ಬೋರ್ಡನ್ನು ಏರ್ಪಡಿಸಿ, ಆ ಬೋರ್ಡಿನಲ್ಲಿ ರೆ|| ಕಮಿಷನರು, ಸರ್ವೆ ಸೂಪರಿಂಟೆಂಡೆಂಟರು ಮತ್ತೊಬ್ಬ ಅನುದ್ಯೋಗಿಕ ಸಭಿಕರೂ ಸಹ ಇರುವಂತೆ ಮಾಡಬೇಕು.

ಉ.—ಹೀಗೆ ಏರ್ಪಡಿಸುತ್ತ ಹೋದರೆ ಅಪ್ಪೀಲುಗಳಿಗೆ ಕೊನೆಯಿಲ್ಲದೆಯೇ ಹೋಗುವುದು. ಸಾಧ್ಯವಲ್ಲ.

ಪ್ರ.—ನದೀ ಕಾಲುವೆಗಳ ಕೆಳಗಣ ಭೂಮಿಗಳಿಗೆ ಹಾಕಲ್ಪಟ್ಟಿರುವ ತರೀ ಕಂದಾಯದ ದರದಂತೆಯೇ ನಂಬಿಕೆಗಾಸ್ಪದವಲ್ಲದ ಕೆರೆ ಕೆಳಗಣ ಭೂಮಿಗಳಿಗೂ ಕಂದಾಯವನ್ನು ಹಾಕಿರುವುದನ್ನು ತಪ್ಪಿಸಿ ಎರಡಕ್ಕೂ ವ್ಯತ್ಯಾಸವನ್ನು ಏರ್ಪಡಿಸಬೇಕು.

ಉ.—ಈ ವಿಷಯವು ರಿ|| ಸರ್ವೆ ಸೆಟ್ಲಮೆಂಟಿನ ಕಾಲದಲ್ಲಿ ವ್ಯವಸ್ಥೆಯಾಗಬೇಕು.

ಪ್ರ.—ಈಗಣ ರಿಮಿಷನ್ ರೂಲು ಸಮರ್ಪಕವಾಗಿಲ್ಲ. ಒಂದೆರಡು ಆಣೆ ಬೆಳೆಯಾಗಿದ್ದರೂ ರಿಮಿಷನ್ ಆಗುತ್ತಲಿಲ್ಲ. ಸುತರಾಂ ಬೆಳೆಹೋದರೆ ಮಾತ್ರ ರಿಮಿಷನ್ ಆಗುತ್ತದೆ. ಇದನ್ನು ಸರಿಪಡಿಸಬೇಕು.

ಉ.—ಈ ವಿಷಯದ ವಿಮರ್ಶೆಗೆ ಏರ್ಪಟ್ಟಿದ್ದ ಕಮಿಟಿಯವರ ವರದಿಯು ಬಂದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಪ್ರ.—ಚಿಕ್ಕ ಕೆರೆಗಳ ಜೀರ್ಣೋದ್ಧಾರಕ್ಕಾಗಿ ರೈತರು ಕೊಡಬೇಕಾದ ಹಣವನ್ನು ಒಂದೇ ಕಂತಿಗೆ ಎತ್ತುತ್ತಿದ್ದಾರೆ. ಇದು ಬಹಳ ಕಷ್ಟವನ್ನು ತಂದಿಕ್ಕಿದೆ. ಇನ್ನುಮುಂದೆ ೫ ಕಿಸ್ತುಗಳಲ್ಲಿ ರೆವಿನ್ಯೂ ಕಂದಾಯದ ಜತೆಗೆ ಎತ್ತುವಂತೆ ಮಾಡಬೇಕು.

ಉ.—ಈ ಕಂಟ್ರಿಬ್ಯೂಷನ್ ಹಣವನ್ನು ೩ ವರ್ಷಗಳ ವರೆಗೆ ೩ ಕಿಸ್ತುಗಳಲ್ಲಿ ಎತ್ತುವಂತೆ ಅಪ್ಪಣೆಮಾಡುತ್ತೇವೆ.

ಪ್ರ.—ರೀ ಸರ್ವೆ ಸೆಟ್ಲಮೆಂಟ್ ಆದ ಮೇಲೂ ತರೀ ಬಾಗಾಯಿತು ಭೂಮಿಗಳ ಮೇಲೆಲ್ಲಾ ಇರಿಗೇಷನ್ ಸೆಸ್ಸನ್ನು ಎತ್ತುವುದೇನೋ ನ್ಯಾಯ. ಮಳೆ ನೀರಿನ ಸಹಾಯದಿಂದ ಆಗುವ ತರೀಬಾಗಾಯತು ಭೂಮಿಗಳ ಮೇಲೆ ಇರಿಗೇಷನ್ ಸೆಸ್ಸನ್ನು ಎತ್ತುತ್ತಿರುವುದು ಅನ್ಯಾಯವಾಗಿದೆ. ಅದನ್ನು ತಪ್ಪಿಸಬೇಕು. ಮತ್ತು ಇರಿಗೇಷನ್ ಸೆಸ್ಸು ಎತ್ತಲ್ಪಡುತ್ತಿರುವ ಕೆರೆಗಳ ಮತ್ತು ಕಾಲುವೆಗಳ ಜೀರ್ಣೋದ್ಧಾರದ ಕೆಲಸವನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು.

ಉ.—ಇದು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ೨ ತಿಂಗಳೊಳಗೆ ಉತ್ತರ ಕೊಡಲ್ಪಡುವುದು.

ಪ್ರ.—ಆದಾಯದ ಮೇಲಣ ತೆರಿಗೆಯನ್ನು ಇನ್ನು ೩ ವರ್ಷ ಕಾಲದ ವರೆಗೆ ವಿಧಿಸದಿರುವಂತೆ ಮಾಡಿಕೊಡಬೇಕು.

ಉ.—ಹಾಕಬಹುದೆಂದು ಈ ಮೊದಲೇ ಸಭೆಯಲ್ಲಿ ಇತ್ಯರ್ಥವಾಗಿ ಹೋಗಿರುವುದರಿಂದ ಪುನಃ ಇದನ್ನು ಎತ್ತಬೇಕಾದುದಿಲ್ಲ.

ಪ್ರ.—[illegible] ಶಾಖೆಯ ಆಡಳಿತದ ಮೇಲ್ವಿಚಾರಣೆಗಾಗಿ ಡಿ|| ಕಮಿಷನರ ಸಹಾಯಕ್ಕೆ ಪ್ರಜಾಪಕ್ಷದ ಸಭಿಕರುಳ್ಳ ಒಂದೊಂದು ಕಮಿಟಿಯನ್ನೇರ್ಪಡಿಸಿ ಕೊಡಬೇಕು.

ಉ.—ಸ್ಪಷ್ಟವಾಗಿ ಅದರ ವಿವರಣವನ್ನು ಬರೆದುಕೊಟ್ಟರೆ ಯೋಚಿಸುತ್ತೇವೆ.

ಪ್ರ.—ಮದದ್ರವ್ಯ ಶಾಖೆಯ ಕಂಟ್ರಾಕ್ಟು ದರಖಾಸ್ತುಗಳ ವಿಲೇವಾರಿಗಾಗಿ ಅಮಲ್ದಾರರ ಸಹಾಯಕ್ಕೆ ಪ್ರಜಾಪಕ್ಷದ ಸಭಿಕರುಳ್ಳ ಕಮಿಟಿಗಳನ್ನೇರ್ಪಡಿಸಬೇಕು.

ಉ.—ಆಗಲಾರದು.

ಪ್ರ.—ಅಡಕೆಯ ಮೇಲಣ ತೆರುಗೆಯನ್ನು ಅದರ ವ್ಯಾಪಾರದ ಸೌಕರ್ಯದ ಏರ್ಪಾಡಿಗಾಗಿಯೇ ವಿನಿಯೋಗಿಸುವಂತೆ ಮಾಡಬೇಕು.

ಉ.—ಅಡಕೆಯ ಮಾರಾಟಕ್ಕೆ ಯಾವ ಕಡೆ ಸರಿಯಾದ ಗಿರಾಕಿಯದೆಯೆಂಬುದನ್ನು ತಿಳಿದು ಸುದ್ದಿ ಕೊಡುವುದಕ್ಕಾಗಿ ಬೊಂಬಾಯಿ ಮೊದಲಾದ ಕಡೆಗೆ ಪ್ರಯಾಣಮಾಡತಕ್ಕವರ ಪ್ರಯಾಣದ ವೆಚ್ಚಕ್ಕೇ ಇದು ವಿನಿಯೋಗಿಸಲ್ಪಡುವುದು.

ಪ್ರ.—ಗ್ರಾಮಾಭಿವೃದ್ಧಿ ಕಾರ್ಯಗಳನ್ನು ವಾರಕ್ಕೆ ಅರ್ಧ ದಿನವಾದರೂ ಪ್ರತಿಯೊಬ್ಬನೂ ಮಾಡುವಂತೆ ನಿರ್ಬಂಧವನ್ನಿಡಬೇಕು.

ಉ.—ಅಂಥ ನಿರ್ಬಂಧವನ್ನು ಅಪೇಕ್ಷಿಸುವ ಗ್ರಾಮಗಳಿಗೆ ಏರ್ಪಡಿಸಬಹುದು.

ಪ್ರ.—ಇನಾಂ ಗ್ರಾಮಗಳಿಗೆ ಸಂಬಂಧಿಸಿದ ವಿಚಾರಗಳು ಇನ್ನೂ ವ್ಯವಸ್ಥೆಯಾಗಲಿಲ್ಲ.

ಉ.—ಇದಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ಕಮಿಟಿಯ ವರದಿ ಬಂದಿದೆ. ಬೇಗನೆ ಅಪ್ಪಣೆಮಾಡುತ್ತೇವೆ. ಸಾವಕಾಶವಾದರೆ ಮುಂದಣ ಸಭೆಯಲ್ಲಿ ಚರ್ಚಾ ಪಕತಮಾಡಿ.

ಪ್ರ.—ಪಟೇಲ್ ಶ್ಯಾನುಭೋಗರ ಪೋಟಿಗೆಯನ್ನು ಹೆಚ್ಚಿಸಿಕೊಡಬೇಕು. ಅವರ ಸಾವಿಲ್ವಾರಿನ ಸಂಗತಿಯೂ ವ್ಯವಸ್ಥೆಯಾಗಲಿಲ್ಲ.

ಉ.—ಪೋಟಿಗೆ ಹೆಚ್ಚಿಸುವುದು ಸುಲಭವಲ್ಲ. ಬಹಳ ಹಣಬೇಕು. ಸಾವಿಲ್ವಾರಿನ ವಿಷಯದಲ್ಲಿ ಬೇಗನೆ ಅಪ್ಪಣೆಕೊಡುವೆವು.

ಪ್ರ.—ರೈತರು ಸ್ವಂತದ ಬಾವಿಯ ನೀರಿನಿಂದ ಕೈತೋಟ ಮಾಡಿಕೊಂಡರೆ ಬಾಗಾಯತ್ ಕಂದಾಯಹಾಕುತ್ತಿರುವ ಪದ್ಧತಿಯನ್ನು ತಪ್ಪಿಸಬೇಕು.

ಉ.—ಅಂಥ ಸಂದರ್ಭವು ಎಲ್ಲಿ ನಡೆದಿದೆಯೋ ಅಂಥವರು ಅರ್ಜಿ ಬರೆದುಕೊಂಡರೆ ತಪ್ಪಿಸಿಕೊಡುವುದಲ್ಲದೆ ವಸೂಲಾಗಿದ್ದ ಕಂದಾಯವನ್ನು ಹಿಂತಿರಿಗಿ ಕೊಡಿಸುತ್ತೇವೆ.

ಪ್ರ.—ತಕಾವಿ ಸಾಲಗಳು ಬೇಗ ಬೇಗನೆ ಕೊಡಲ್ಪಡುವುದಿಲ್ಲ.

ಉ.—ಹಾಗೆ ಎಲ್ಲಿ ಸಾವಕಾಶವಾಗಿರುವುದೋ ತಿಳಿಸಿ ಅರ್ಜಿಕೊಟ್ಟರೆ ಕ್ರಮಪಡಿಸಿಕೊಡುವೆವು.

ಪ್ರ.—೧೫ ಎಕರೆಯೆಂಬುದನ್ನು ತಪ್ಪಿಸಿ ೫ ಎಕರೆ ಕಾಫಿ ಬೆಳೆ ಜಮೀನನ್ನಾದರೂ ಮಾಡಿಕೊಳ್ಳಲು ರೈತರಿಗೆ ಅವಕಾಶವಿರುವಂತೆ ಮಾಡಿಕೊಡಬೇಕು.

ಉ.—ಕಸ್ಕಿ ಭೂಮಿಯಂತೆ ೬ ಎಕರೆಯ ಪರಿಮಾಣವಧಿಯನ್ನು ಇದಕ್ಕೂ ಏರ್ಪಡಿಸಲು ಯೋಚಿಸುತ್ತೇವೆ.

ಪ್ರ.—ಗ್ರಾಮಾಂತರಗಳಲ್ಲಿ ಗೋಮಾಳಗಳು ನಿಶ್ಶೇಷವಾಗುತ್ತಿವೆ. ಹುಲ್ಲುಬನ್ನಿಯನ್ನು ತಪ್ಪಿಸಿಕೊಡಬೇಕು.

ಉ.—ಫಾರೆಸ್ಟುಗಳಲ್ಲಿ ತೆಗೆದುಕೊಳ್ಳಲ್ಪಡುವ ರುಸುಮನ್ನು ತಪ್ಪಿಸಲಾಗುವುದಿಲ್ಲ. ಹುಲ್ಲುಬನ್ನಿ ಸಂಗತಿಯನ್ನು ಯೋಚನೆಮಾಡುತ್ತೇವೆ.

ಪ್ರ.—ಮುತ್ತುಗದ ಮತ್ತೂ ಬೀಡಿಯ ಎಲೆಗಳನ್ನು ಕಾಡುಗಳ ಆದಾಯದ ಪಟ್ಟಿಗೆ ಸೇರಿಸಿರುವುದನ್ನು ತಪ್ಪಿಸಬೇಕು.

ಉ.—ಮುತ್ತುಗದ ಎಲೆಯನ್ನು ಸೇರಿಸುವುದಿಲ್ಲ. ಸುಮ್ಮನೆ ಸಾಗಿಸಿಕೊಳ್ಳಬಹುದು. ಬೀಡಿಯೆಲೆಗೆ ಹಾಗೆ ಮಾಡಲಾಗುವುದಿಲ್ಲ.

ಪ್ರ.—ಛಾಪಾಕಾಗದವನ್ನು ಕೊಂಡುಕೊಳ್ಳುವವರ ರುಜುವನ್ನು ವೆಂಡರುಗಳು ತೆಗೆದುಕೊಳ್ಳುವಂತೆ ಏರ್ಪಡಿಸಬೇಕು.

ಉ.—ಯೋಚನೆಮಾಡುತ್ತೇವೆ.

ಪ್ರ.—ಸಂಬಳದ ಸ್ಟಾಂಪ್ ವೆಂಡರುಗಳನ್ನು ಏರ್ಪಡಿಸಬೇಕು. ಹಾಗಾದರೆ ಅವರು ಗೊತ್ತಾದ ಸ್ಥಳದಲ್ಲಿ ಯಾವಾಗಲೂ ಇರುವಂತೆ ಆಗುತ್ತದೆ.

ಉ.—ಅದು ಸಾಧ್ಯವಲ್ಲ. ಆದರೆ ಇಷ್ಟು ಗಂಟೆಕಾಲ ಇಂಥ ಸ್ಥಳದಲ್ಲೇ ವೆಂಡರು ಇದ್ದೇತೀರಬೇಕೆಂದು ವಿಧಿಸುವುದನ್ನು ಆಲೋಚಿಸುತ್ತೇವೆ.

ಸ್ವೀಕಾರ.

ತಿಪ್ಪೂರಿನ ಮ|| ಸಿದ್ಧಪ್ಪನವರ ಕುಮಾರ ಚಿ|| ಚೆನ್ನವೀರಪ್ಪನಿಗೂ ಮ|| ಹಗಲಚುಕ್ಕಿ ವೀರಪ್ಪನವರ ಕುಮಾರ್ತಿ ಚಿ|| ಸೌ|| ಪರ್ವತಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಕೈ|| ವೀರಸಂಗಪ್ಪನವರ ಸ್ಮಾರಕಕ್ಕಾಗಿ ತೆಗೆದ ೩ ರೂ. ಗರನಪ್ಪಿ ಬ್ಯಾಂಕ್ ಏಜಂಟ್ ಮ|| ಬಸಪ್ಪನವರ ಮೂಲಕವೂ ಮ|| ಮೈಸೂರುಶಿವಪ್ಪನವರು ತಮ್ಮ ಪ್ರೇಮಪುತ್ರಿಯನ್ನು ಹೆಂಕನಕೋಟೆ ಮ|| ಚಿಕ್ಕಮಲ್ಲಪ್ಪನವರ ಕುಮಾರ ಚಿ|| ವೀರಪ್ಪನವರಿಗೆ ಕೊಟ್ಟು ವಿವಾಹಮಾಡಿದಾಗ್ಗೆ ಕೈ|| ವೀರಸಂಗಪ್ಪನವರ ಹೆಸರಿನ ಮೇಲೆ ತೆಗೆದ ಅಗ್ರತಾಂಬೂಲದ ಬಾಬ್ತು ೧ ರೂ. ಯನ್ನೂ ವಿಶ್ವಾಸದಿಂದಸ್ವೀಕರಿಸಿರುತ್ತೇವೆ.

ಮತ್ತಲಿನ ಮ|| ಸಾಲಿ ಬಸವಲಿಂಗಪ್ಪನವರು ಶಿವೈಕ್ಯರಾದ ತಮ್ಮ ಮಾತೃಶ್ರೀ ಸಿದ್ಧಮ್ಮನವರ ೧೩ ನೆಯ ದಿನದಲ್ಲಿ ಆರಾಧನೆಯ ಸಂಬಂಧವಲ್ಲಿ ಕೈ|| ವ್ಯ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ತೆಗೆದು ಕಳುಹಿದ ೧ರೂ. ಯನ್ನು ಸ್ವೀಕರಿಸಿದ್ದೇವೆ. ಪ. ಪ್ರ.

ಪತ್ರವ್ಯವಹಾರ.

ಮೈಸೂರ ಸ್ಟಾರ್ ಪತ್ರಿಕಾಕರ್ತರ ಸ|| ಕ್ಕೆ,

ಅಯ್ಯಾ, ಕಳೆದ ಬಿದಿಗೆ ಶುಕ್ರವಾರದ ದಿವಸ ರೋಹಿಣೀ ನಕ್ಷತ್ರದಲ್ಲಿ ಶ್ರೀ ಬಸವೇಶ್ವರಜಯಂತೀ ಮಹೋತ್ಸವವು ಮೈಸೂರು ಹಳೆ ಅಗ್ರಹಾರದಲ್ಲಿರುವ ಶ್ರೀ ಚಿಕ್ಕಬಸವೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ ಮಹಾರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ಸಾಯಂಕಾಲ ಬಸವೇಶ್ವರ ಪುರಾಣವೂ ದೀಪಾರಾಧನೆ ಮಹಾ ಮಂಗಳಾರತಿ ಮುಂತಾದವುಗಳೂ ವಿಧಿ ಪೂರ್ವಕವಾಗಿ ವೇ. ಗುರುಶಾಂತಶಾಸ್ತ್ರಿಗಳಿಂದಲೂ ಮ|| ಬಸವರಾಜಪ್ಪನವರಿಂದಲೂ ಸಹ ಅತಿವಿಜೃಂಭಣೆಯಿಂದ ನೆರವೇರಿತು. ಆ ಕಾಲಗಳಲ್ಲಿ ಕೆಲ ವೀರಶೈವ ಮಹನೀಯರುಗಳು ದಯಮಾಡಿ ದೇವತಾದರ್ಶನದಿಂದ ಆನಂದಭರಿತರಾದರು. ಸಾಯಂಕಾಲದಲ್ಲಿ ಅರಮನೆ ಖಾಸಾಸಮುಖದ ಇಲಾಖಾ ಭಕ್ಷಿ ಮ|| ರಾ|| ಮುದ್ದರಾಜೇ ಅರಸಿನವರು ಸಹ ದಯಮಾಡಿ ಅಲ್ಲಿನ ಏರ್ಪಾಡುಗಳನ್ನೆಲ್ಲಾ ತಿಳಿದು ದೇವರ ದರ್ಶನಮಾಡಿ ಬಹಳ ಸಂತೋಷಪಟ್ಟು ತೆರಳಿದರು. ಇದೇ ರೀತಿಯಾಗಿ ಪ್ರತಿವರ್ಷದಲ್ಲಿಯೂ ತಪ್ಪದೆ ನಡೆಸಿಕೊಂಡು ಬರಬೇಕೆಂಬುದಾಗಿ ವೀರಶೈವ ಮಹನೀಯರೆಲ್ಲರನ್ನೂ ವಿನಯಪೂರ್ವಕವಾಗಿ ಪ್ರಾರ್ಥಿಸುವ,

ಬಸವೇಶ್ವರ ಭಕ್ತ.

ಕಾರ್ಲೇಕರ್ ಗ್ರಾಂಡ್ ಸರ್ಕಸ್, ಚನ್ನಪಟ್ಟಣ.

ಈ ಸರ್ಕಸಿನವರು ತಮ್ಮ ಕಡೆಯ ಪ್ರದರ್ಶನವನ್ನು ಇದೇ ಶನಿವಾರ ೨೬ ರಲ್ಲಿ ತೋರಿಸಿದರು. ಇದರಲ್ಲಿ ಅತ್ಯದ್ಭುತವಾದ ಸಾಧಕಗಳನ್ನು ತೋರಿಸಿ, ಅರೇಬಿಯಾ, ಇಟಲಿ ಮೊದಲಾದ ಪ್ರಾಂತ್ಯಗಳಲ್ಲಿ ಒಳ್ಳೆ ಹೆಸರನ್ನು ಪಡೆದಿರುವ, ವೀರಶೈವ ಮತಸ್ಥರೂ ಆದ ಕೊಲ್ಹಾಪುರದ ಸೋದರರ (ಸಾವಲರಾಮು) ಎಂಬುವರಿಗೆ ಇಲ್ಲಿನ ಕೆಲವು ಪ್ರಮುಖರು ಸೇರಿ ಒಂದು ಭಂಗಾರದ ಪದಕವನ್ನು (ಮೆಡಲು) ಮ|| ರಾ|| ಕೆ. ಎಚ್. ರಾಮಯ್ಯ, ಬಾರ್ಅಟ್ ಲಾ ರವರ ಮೂಲಕ ಕೊಡಿಸಿದರು. ಮ|| ರಾ|| ರಾಮಯ್ಯನವರು ಕಾಡುಮೃಗಗಳು ಕೂಡ ತಕ್ಕ ಶಿಕ್ಷಣೆಯಿಂದ ತಮ್ಮ ದುಷ್ಟಸ್ವಭಾವವನ್ನು ಬಿಟ್ಟಿರುವಹಾಗೆ ಮನುಷ್ಯರೂ ಕೂಡ ಸರಿಯಾದ ಶಿಕ್ಷೆಯಿಂದ ಒಳ್ಳೆ ಮಾರ್ಗಕ್ಕೆ ಬರುವರು. ಆದುದರಿಂದ ಎಲ್ಲರೂ ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷೆಯನ್ನು ಕೊಟ್ಟು ವಿದ್ಯಾವಂತರನ್ನಾಗಿ ಮಾಡತಕ್ಕದ್ದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಅಲ್ಲದೆ ದುಷ್ಟಮೃಗಗಳು ಜಾತಿಯಲ್ಲಿ ಎಷ್ಟೇ ಬೇರೆಬೇರೆಯಾದಾಗ್ಗೂ ಇಲ್ಲಿ ತಮ್ಮ ಬದ್ಧದ್ವೇಷಗಳನ್ನು ಬಿಟ್ಟು ಒಂದಕ್ಕೊಂದು ಸಹೋದರರೀತಿಯಲ್ಲಿರುವಹಾಗೆ ನಾವುಗಳೆಲ್ಲರೂ ನಮ್ಮ ಜಾತಿದ್ವೇಷಗಳನ್ನೆಲ್ಲಾ ಬಿಟ್ಟು ಏಕೀಭವಿಸಿರಬೇಕೆಂದು ಉಪನ್ಯಾಸಮಾಡಿ, ಪುರಜನಗಳ ಪರವಾಗಿ ಮ|| ರಾ|| ಪ್ರೊಫೆಸರ್ ಶಂಕರರಾಯರನ್ನು ವಂದಿಸಿ, ಮ|| ರಾ|| ಸಾವಲರಾಮುರವರಿಗೆ ಪದಕವನ್ನು ದಯಪಾಲಿಸಿದರು. ಇದೇ ಕಾಲದಲ್ಲಿ ಇಲ್ಲಿನ ಸಾಹುಕಾರರಾದ ಮ|| ರಾ|| ಟಿ. ಶಾಸ್ತ್ರಿ ಗುರುಕಾರರು, ಒಳ್ಳೇ ಸಾಧಕಗಳನ್ನು ತೋರಿಸಿದ ೬ ವರ್ಷದ ಮಗು ಪಾರ್ವತಿ ಎಂಬುವಳಿಗೆ, ಕೆಲವು ಬಟ್ಟೆಗಳನ್ನೂ ಒಂದು ಭಂಗಾರದ ಉಂಗುರವನ್ನೂ ಬಹುಮಾನವಾಗಿತ್ತರು. ಮ|| ರಾ|| ಸಾವಲರಾಮುರವರಿಗೆ ಬೆಂಗಳೂರಿನ ವೀರಶೈವರೂ ಇತರರೂ ಇದೇ ರೀತಿಯಲ್ಲಿ ಪ್ರೋತ್ಸಾಹಮಾಡುವರೆಂದು ನಂಬಿರುತ್ತೇನೆ.

ಟಿ. ಎಸ್. ಶಿವನಂಜಪ್ಪ,
ಬೆಂಗಳೂರು ವೀರಶೈವ ತರುಣರ ಸಂಘದ ಕಾರ್ಯದರ್ಶಿ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಡವೆ, ಬಜ್ಜಿ, ಕುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

14 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

18 ವಿಳಾಸ—ಎಂ. ಎಂ. ಹರ್ಡೆಕರ್ ದಾವಣಗೆರೆ.

ಫೋಟೋಲಾಕೇಟ್ಸು.



ಈ ಪ್ರಕಾರ ಘಡಿಯಾರದ ಸರಗಳಿಗೆ ಹಚ್ಚುವ ಲಾಕೇಟುಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೂಚುಗಳೂ, ಅಪೂರ್ವವಾದ ಅತ್ಯಂತ ಪ್ಯಾಷನಯಾದ್ದು ಆದರಿಂದ ತಮ್ಮ ಇಷ್ಟ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ಪುದರಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ, ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರ ಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮಹಮದೀಯ ಧರ್ಮದ ಜಗದಾದಪೀರಸಾಹೇಬ ಅಜಮೀರದ ಖಾಜಾವಲಿ, ಮುಂತಾದ ಬೇಕಾದ ಅನೇಕ ದೇವತಾ ಮತ್ತು ಸಾಧೂ ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೇ. ಲಾಕೇಟಾದಲ್ಲಿ ೨, ಬ್ರೂಚದಲ್ಲಿ ೧, ಫೋಟೋ ಇರುವವೂ ಕ್ರಯ ಗಿಲ್ಟಬ್ರೂಚವೂ ೬, ೮, ಆಣೆ. ರೋಲಗೋಲ್ಡ ಬ್ರುಚವೂ ರೂ. ೧—೨—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳೀವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿವುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವು ಕ್ರಯ ರೂ. ೧—೧೨—೦ ಪಾವಲಿ ಆಕಾರದ ಪ್ಲೇನ ಮತ್ತು ಪ್ಯಾನ್ಸಿ ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ಚಿತ್ರ ಆಕಾರವೂ, ಅಥವಾ ಗುಂಡ ಆಕಾರವೂಇರುವವುಗಳ ಕ್ರಯ ರೂ. ೧-೪-೦ ೧—೮—೦.

ಇವುಗಳ ಹೊರತ ನಮ್ಮ ಕಾರಖಾನಾದಲ್ಲಿ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸುದರ್ಶನಲಾಭ, ೪ ಪಂಚಮುಖದ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಶರಭಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾವೇರಿ ಕಮತಗಿ ಹುಚ್ಚಪ್ಪನವರೂ ಸಿರಸಂಗಿ ಸರದೇಶಾಯಿ, ರುದ್ರಗವಡ್ರು ಮುಂತಾದ ಅನೇಕ ಸಾಧೂ ಸತ್ಪುರುಷರದೂ ಫೋಟೋ ಸಿಗುತ್ತವೆ. ಕ್ರಯ ಪೋಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಪ್ರತಿವಂದ ಊರಿಗೆ ಮಾರಾಟಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟಾಂಪ್ ಕಳುಹಿಸಿ ಕೆಟಲಾಗ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.

ದಿ ಶಾರದಾ ಫೋಟೋ ಕಂಪನಿಯ ಮಾಲಕ,
೩ ಗಂಗಪ್ಪಾ ಚೌರಗೇ ಸೋಲ್ಲಾಪುರ ಸಿಟಿ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವವದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇವಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
14 ಇರುಳಪ್ಪನಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
22 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮೇ ತಾ|| ೧೧ ರಿಂದ ೧೯೧೯ ನೆಯ ಮೇ ತಾ|| ೧೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ವೈಶಾಖ ಶು|| ದ್ವಾದಶಿಯಿಂದ ವೈಶಾಖ ಬ|| ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ವೃಷ
11	[1]ಭಾನು	ದ್ವಾದಶಿ	43-9	ಹಸ್ತ	53-2	29
12	ಸೋಮ	ತ್ರಯೋ	47-23	ಚಿತ್ತ	58-56	30
13	ಮಂಗಳ	ಚತು	52-16	ಸ್ವಾತಿ	60	31
14	[2]ಬುಧ	ಪೌರ್ಣ	57-38	ಸ್ವಾತಿ	5-41	1
15	[3]ಗುರು	ಪಾಡ್ಯ	60	ವಿಶಾಖಾ	12-17	2
16	ಶುಕ್ರ	ಪಾಡ್ಯ	2-33	ಅನೂ	18-38	3
17	ಶನಿ	ಬಿದಿಗೆ	7-0	ಜ್ಯೇಷ್ಠ	24-14	4

(1) ಮಳೂರು ಅಪ್ರಮೇಯಸ್ವಾಮಿ ರಥಃ. (2) ಅರ್ಧನಾರೀಶ್ವರ ವ್ರತಂ, ಶ್ರೀ|| ಭಂ|| ಗರುಡೋತ್ಸವಃ, ಶಾ|| ನೃಸಿಂಹಸ್ವಾಮಿ ರಥಃ, ವಿಷ್ಣುಪದ ಪುಣ್ಯಕಾಲಃ. (3) ಶ್ರೀ ಲಕ್ಷ್ಮೀರಮಣಸ್ವಾಮಿ ರಥಃ, ಕಾಂಚ್ಯಾಂ ಗರುಡೋತ್ಸವಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಯೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

(ಸಂಪುಟ ೩೧) ಮೈಸೂರ್ ಸ್ಟಾರ್ ಸನ್ ೧೯೧೯ ನೇಯ ಇಸವಿ ಮೇ ತಾರೀಖು ೧೮ ನೇಯ ಭಾನುವಾರ. (ಸಂಚಿಕೆ ೨೦)

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ರಚನಾರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕಿನ್ನೀತಿ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಲ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 25

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಹ್ಲಾದಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಗಟಕೂಲಿ, ವಾತರೋಗವು ಮುಂತಾದವು ಅತ್ಯಾಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಹುಟ್ಟು ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಟೀಕ ಶತಕತ್ರಯ	೧—೦—೦
ಟೀಕ ವೀರಶೈವ ವಿವಾಹವಿಧಿಃ	೦—೮—೦
ವಪೂಜಾವಿಧಿಃ	೦—೧೦—೦
ರುಶೀಲಚರಿತ್ರೆ	೦—೫—೦
ಂದಾಸಿ	೦—೪—೦
ಕಪಂಚಕ	೦—೨—೦
ಷ್ಟ ಉಪಿದ್ಯಾ (ಮುಕ್ತಿಸಾಧನ)	೦—೨—೦
ಮಕಂಟಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕ.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ವೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ನೊದಲು ಅಥವಾ ಅದರಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳೆಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ನಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ನಾಕಿನಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

11 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಸ್ಟ ನಿಪ್ಪಾಣಿ ಜಿ. ಬೆಳಗಾಂವ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

22

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೀತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯಾಶ್ಚರ್ಯಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವುವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡರ್ಜ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೊ,
15 ಸಾಹುಕಾರಪೇಟೆ, ಮದರಾಸ್.

ಎಲೆಕ್ಟ್ರಿಕ್ ದೀಪ.

6



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಗೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ:—ಮಹಾರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	0—12—0.
12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಗೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿಸಹಿತ



ಕ್ರಯ 1 ಕ್ಕೆ 5—8—0.

ವಿಳಾಸ:— ರಾಸ್ ವಾಚ್ ಅಂಡ್ ಕೊ,
15 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೩೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ವಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

32 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಪ್ರ.—ಮದದ್ರವ್ಯ ಶಾಖೆಯ ಕಂಟ್ರಾಕ್ಟು ದರಖಾಸ್ತುಗಳ ವಿಲೇವಾರಿಗಾಗಿ ಅಮಲ್ದಾರರ ಸಹಾಯಕ್ಕೆ ಪ್ರಜಾಪಕ್ಷದ ಸಭಿಕರುಳ್ಳ ಕಮಿಟಿಗಳನ್ನೇರ್ಪಡಿಸಬೇಕು.

ಉ.—ಆಗಲಾರದು.

ಪ್ರ.—ಅಡಕೆಯ ಮೇಲಣ ತೆರುಗೆಯನ್ನು ಅದರ ವ್ಯಾಪಾರದ ಸೌಕರ್ಯದ ಏರ್ಪಾಡಿಗಾಗಿಯೇ ವಿನಿಯೋಗಿಸುವಂತೆ ಮಾಡಬೇಕು.

ಉ.—ಅಡಕೆಯ ಮಾರಾಟಕ್ಕೆ ಯಾವ ಕಡೆ ಸರಿಯಾದ ಗಿರಾಕಿಯಿದೆಯೆಂಬುದನ್ನು ತಿಳಿದು ಸುದಿ ಕೊಡುವುದಕ್ಕಾಗಿ ಬೊಂಬಾಯಿ ಮೊದಲಾದ ಕಡೆಗೆ ಪ್ರಯೋಜನವಾದತಕ್ಕವರ ಪ್ರಯಾಣದ ವೆಚ್ಚಕ್ಕೇ ಇದು ವಿನಿಯೋಗಿಸಲ್ಪಡುವುದು.

ಪ್ರ.—ಗ್ರಾಮಾಭಿವೃದ್ಧಿ ಕಾರ್ಯಗಳನ್ನು ವಾರಕ್ಕೆ ಅರ್ಧ ದಿನವಾದರೂ ಪ್ರತಿಯೊಬ್ಬನೂ ಮಾಡುವಂತೆ ನಿರ್ಬಂಧವನ್ನಿಡಬೇಕು.

ಉ.—ಅಂಥ ನಿರ್ಬಂಧವನ್ನು ಅಪೇಕ್ಷಿಸುವ ಗ್ರಾಮಗಳಿಗೆ ಏರ್ಪಡಿಸಬಹುದು.

ಪ್ರ.—ಇನಾಂ ಗ್ರಾಮಗಳಿಗೆ ಸಂಬಂಧಿಸಿದ ವಿಚಾರಗಳು ಇನ್ನೂ ವ್ಯವಸ್ಥೆಯಾಗಲಿಲ್ಲ.

ಉ.—ಇದಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ಕಮಿಟಿಯ ವರದಿ ಬಂದಿದೆ. ಬೇಗನೆ ಅವಗಣನೆಮಾಡುತ್ತೇವೆ. ಸಾವಕಾಶವಾದರೆ ಮುಂದಣ ಸಭೆಯಲ್ಲಿ ಜ್ಞಾಪಕಮಾಡಿ.

ಪ್ರ.—ಪಟೇಲ್ ಶ್ಯಾನುಭೋಗರ ಪೋಟಿಗೆಯನ್ನು ಹೆಚ್ಚಿಸಿಕೊಡಬೇಕು. ಅವರ ಸಾದಿಲ್ವಾರಿನ ಸಂಗತಿಯೂ ವ್ಯವಸ್ಥೆಯಾಗಲಿಲ್ಲ.

ಉ.—ಪೋಟಿಗೆ ಹೆಚ್ಚಿಸುವುದು ಸುಲಭವಲ್ಲ. ಬಹಳ ಹಣಬೇಕು. ಸಾದಿಲ್ವಾರಿನ ವಿಷಯದಲ್ಲಿ ಬೇಗನೆ ಅಪ್ಪಣೆಕೊಡುವೆವು.

ಪ್ರ.—ರೈತರು ಸ್ವಂತದ ಬಾವಿಯ ನೀರಿನಿಂದ ಕೈತೋಟ ಮಾಡಿಕೊಂಡರೆ ಬಾಗಾಯತ್ ಕಂದಾಯಹಾಕುತ್ತಿರುವ ಪದ್ಧತಿಯನ್ನು ತಪ್ಪಿಸಬೇಕು.

ಉ.—ಅಂಥ ಸಂದರ್ಭವು ಎಲ್ಲಿ ನಡೆದಿದೆಯೋ ಅಂಥವರು ಅರ್ಜಿ ಬರೆದುಕೊಂಡರೆ ತಪ್ಪಿಸಿಕೊಡುವುದಲ್ಲದೆ ವಸೂಲಾಗಿದ್ದ ಕಂದಾಯವನ್ನು ಹಿಂತಿರುಗಿ ಕೊಡಿಸುತ್ತೇವೆ.

ಪ್ರ.—ತಕಾವಿ ಸಾಲಗಳು ಬೇಗ ಬೇಗನೆ ಕೊಡಲ್ಪಡುವುದಿಲ್ಲ.

ಉ.—ಹಾಗೆ ಎಲ್ಲಿ ಸಾವಕಾಶವಾಗಿರುವುದೋ ತಿಳಿಸಿ ಅರ್ಜಿಕೊಟ್ಟರೆ ಕ್ರಮಪಡಿಸಿಕೊಡುವೆವು.

ಪ್ರ.—೧೫ ಎಕರೆಯೆಂಬುದನ್ನು ತಪ್ಪಿಸಿ ೫ ಎಕರೆ ಕಾಫಿ ಬೆಳೆ ಜಮೀನನ್ನಾದರೂ ಮಾಡಿಕೊಳ್ಳಲು ರೈತರಿಗೆ ಅವಕಾಶವಿರುವಂತೆ ಮಾಡಿಕೊಡಬೇಕು.

ಉ.—ಕೃಷಿ ಭೂಮಿಯಂತೆ ೬ ಎಕರೆಯ ಪರಮಾವಧಿಯನ್ನು ಇದಕ್ಕೂ ಏರ್ಪಡಿಸಲು ಯೋಚಿಸುತ್ತೇವೆ.

ಪ್ರ.—ಗ್ರಾಮಾಂತರಗಳಲ್ಲಿ ಗೋಮಾಳಗಳು ನಿಶ್ಶೇಷವಾಗುತ್ತಿವೆ. ಹುಲ್ಲುಬನ್ನಿಯನ್ನು ತಪ್ಪಿಸಿಕೊಡಬೇಕು.

ಉ.—ಫಾರೆಸ್ಟುಗಳಲ್ಲಿ ತೆಗೆದುಕೊಳ್ಳಲ್ಪಡುವ ರುಸುಮನ್ನು ತಪ್ಪಿಸಲಾಗುವುದಿಲ್ಲ. ಹುಲ್ಲುಬನ್ನಿ ಸಂಗತಿಯನ್ನು ಯೋಚನೆಮಾಡುತ್ತೇವೆ.

ಪ್ರ.—ಮುತ್ತುಗದ ಮತ್ತೂ ಬೀಡಿಯ ಎಲೆಗಳನ್ನು ಕಾಡುಗಳ ಆದಾಯದ ಪಟ್ಟಿಗೆ ಸೇರಿಸಿರುವುದನ್ನು ತಪ್ಪಿಸಬೇಕು.

ಉ.—ಮುತ್ತುಗದ ಎಲೆಯನ್ನು ಸೇರಿಸುವುದಿಲ್ಲ. ಸುಮ್ಮನೆ ಸಾಗಿಸಿಕೊಳ್ಳಬಹುದು. ಬೀಡಿಯೆಲೆಗೆ ಹಾಗೆ ಮಾಡಲಾಗುವುದಿಲ್ಲ.

ಪ್ರ.—ಛಾಪಾಕಾಗದವನ್ನು ಕೊಂಡುಕೊಳ್ಳುವವರ ರುಜುವನ್ನು ವೆಂಡರುಗಳು ತೆಗೆದುಕೊಳ್ಳುವಂತೆ ಏರ್ಪಡಿಸಬೇಕು.

ಉ.—ಯೋಚನೆಮಾಡುತ್ತೇವೆ.

ಪ್ರ.—ಸಂಬಳದ ಸ್ಟಾಂಪ್ ವೆಂಡರುಗಳನ್ನು ಏರ್ಪಡಿಸಬೇಕು. ಹಾಗಾದರೆ ಅವರು ಗೊತ್ತಾದ ಸ್ಥಳದಲ್ಲಿ ಯಾವಾಗಲೂ ಇರುವಂತೆ ಆಗುತ್ತದೆ.

ಉ.—ಅದು ಸಾಧ್ಯವಲ್ಲ. ಆದರೆ ಇಷ್ಟು ಗಂಟೆಕಾಲ ಇಂಥ ಸ್ಥಳದಲ್ಲೇ ವೆಂಡರು ಇದ್ದೇ ತೀರಬೇಕೆಂದು ವಿಧಿಸುವುದನ್ನು ಆಲೋಚಿಸುತ್ತೇವೆ.

ಸ್ವೀಕಾರ.

ತಿಪ್ಟೂರಿನ ಮ॥ ಸಿದ್ದಪ್ಪನವರ ಕುಮಾರ ಚಿ॥ ಚೆನ್ನವೀರಪ್ಪನಿಗೂ ಮ॥ ಹಗಲಹುಕ್ಕಿ ವೀರಪ್ಪನವರ ಕುಮಾರಿ ಚಿ॥ ಸೌ॥ ಪರ್ವತಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಕೈ॥ ವೀರಸಂಗಪ್ಪನವರ ಸ್ಮಾರಕಕ್ಕಾಗಿ ತೆಗೆದ ೩ ರೂ. ಗಳನ್ನು ಬ್ಯಾಂಕ್ ಏಜಂಟ್ ಮ॥ ಬಸಪ್ಪನವರ ಮೂಲಕವೂ ಮ॥ ಮೈಸೂರುಶಿವಪ್ಪನವರು ತಮ್ಮ ಪ್ರೇಮಪುತ್ರಿಯನ್ನು ಡೆಂಕಣಿಕೋಟೆ ಮ॥ ಚಿಕ್ಕಮಲ್ಲಪ್ಪನವರ ಕುಮಾರ ಚಿ॥ ವೀರಪ್ಪನವರಿಗೆ ಕೊಟ್ಟು ವಿವಾಹಮಾಡಿದಾಗ್ಗೆ ಕೈ॥ ವೀರಸಂಗಪ್ಪನವರ ಹೆಸರಿನ ಮೇಲೆ ತೆಗೆದ ಅಗ್ರತಾಂಬೂಲದ ಬಾಬ್ತು ೧ ರೂ. ಯನ್ನೂ ವಿಶ್ವಾಸದಿಂದಸ್ವೀಕರಿಸಿರುತ್ತೇವೆ.

ಮತ್ತಲಿನ ಮ॥ ಸಾಲಿ ಬಸವಲಿಂಗಪ್ಪನವರು ಶಿವೈಕ್ಯರಾದ ತಮ್ಮ ಮಾತೃಶ್ರೀ ಸಿದ್ದಮ್ಮನವರ ೧೩ ನೆಯ ದಿನದಲ್ಲಿ ಆರಾಧನೆಯ ಸಂಬಂಧವಲ್ಲಿ ಕೈ॥ ವ್ಯ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ತೆಗೆದು ಕಳುಹಿದ ೧ರೂ. ಯನ್ನೂ ಸ್ವೀಕರಿಸಿದ್ದೇವೆ. ಪ. ಪ್ರ.

ಪತ್ರವ್ಯವಹಾರ.

ಮೈಸೂರ ಸ್ಟಾರ್ ಪತ್ರಿಕಾಕರ್ತರ ಸ॥ ಕ್ಕೆ,

ಅಯ್ಯಾ, ಕಳೆದ ಬಿದಿಗೆ ಶುಕ್ರವಾರದ ದಿವಸ ರೋಹಿಣೀ ನಕ್ಷತ್ರದಲ್ಲಿ ಶ್ರೀ ಬಸವೇಶ್ವರಜಯಂತೀ ಮಹೋತ್ಸವವು ಮೈಸೂರು ಹಳೆ ಅಗ್ರಹಾರದಲ್ಲಿರುವ ಶ್ರೀ ಚಿಕ್ಕಬಸವೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ ಮಹಾರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ಸಾಯಂಕಾಲ ಬಸವೇಶ್ವರ ಪುರಾಣವೂ ದೀಪಾರಾಧನೆ ಮಹಾ ಮಂಗಳಾರತಿ ಮುಂತಾದವುಗಳೂ ವಿಧಿ ಪೂರ್ವಕವಾಗಿಯೇ. ಗುರುಶಾಂತಶಾಸ್ತ್ರಿಗಳಿಂದಲೂ ಮ॥ ಬಸವರಾಜಪ್ಪನವರಿಂದಲೂ ಸಹ ಅತಿವಿಜೃಂಭಣೆಯಿಂದ ನೆರವೇರಿತು. ಆ ಕಾಲಗಳಲ್ಲಿ ಕೆಲ ವೀರಶೈವ ಮಹನೀಯರುಗಳು ದಯಮಾಡಿ ದೇವತಾದರ್ಶನದಿಂದ ಆನಂದಭರಿತರಾದರು. ಸಾಯಂಕಾಲದಲ್ಲಿ ಅರಮನೆ ಖಾಸಾಗಮುಖದ ಅಲಾಖಾ ಭಕ್ತಿ ಮ॥ ರಾ॥ ಮುದ್ದರಾಜೇ ಅರಸಿನವರು ಸಹ ದಯಮಾಡಿ ಅಲ್ಲಿನ ಏರ್ಪಾಡುಗಳನ್ನೆಲ್ಲಾ ತಿಳಿದು ದೇವರ ದರ್ಶನಮಾಡಿ ಬಹಳ ಸಂತೋಷಪಟ್ಟು ತೆರಳಿದರು. ಇದೇ ರೀತಿಯಾಗಿ ಪ್ರತಿವರ್ಷದಲ್ಲಿಯೂ ತಪ್ಪದೆ ನಡೆಸಿಕೊಂಡು ಬರಬೇಕೆಂಬುದಾಗಿ ವೀರಶೈವ ಮಹನೀಯರೆಲ್ಲರನ್ನೂ ವಿನಯಪೂರ್ವಕವಾಗಿ ಪ್ರಾರ್ಥಿಸುವ,

ಬಸವೇಶ್ವರ ಭಕ್ತ.

ಕಾರ್ಲೆಕರ್ ಗ್ರ್ಯಾಂಡ್ ಸರ್ಕಸ್, ಚನ್ನಪಟ್ಟಣ.

ಈ ಸರ್ಕಸಿನವರು ತಮ್ಮ ಕಡೆಯ ಪ್ರದರ್ಶನವನ್ನು ಇದೇ ಶನಿವಾರ ೨೭ ರಲ್ಲಿ ತೋರಿಸಿದರು. ಇದರಲ್ಲಿ ಅತ್ಯದ್ಭುತವಾದ ಸಾಧಕಗಳನ್ನು ತೋರಿಸಿ, ಅರೇಬಿಯಾ, ಇಟಲಿ ಮೊದಲಾದ ಪ್ರಾಂತ್ಯಗಳಲ್ಲಿ ಒಳ್ಳೆ ಹೆಸರನ್ನು ಪಡೆದಿರುವ, ವೀರಶೈವ ಮತಸ್ಥರೂ ಆದ [illegible] (ಸಾವಲರಾಮು) ಎಂಬುವರಿಗೆ ಇಲ್ಲಿನ ಕೆಲವು ಪ್ರಮುಖರು ಸೇರಿ ಒಂದು ಭಂಗಾರದ ಪದಕವನ್ನು (ಮೆಡಲು) ಮ॥ ರಾ॥ ಕೆ. ಎಚ್. ರಾಮಯ್ಯ, ಬಾರ್ ಅಟ್ ಲಾ ರವರ ಮೂಲಕ ಕೊಡಿಸಿದರು. ಮ॥ ರಾ॥ ರಾಮಯ್ಯನವರು ಕಾಡು ಮೃಗಗಳು ಕೂಡ ತಕ್ಕ ಶಿಕ್ಷಣೆಯಿಂದ ತಮ್ಮ ದುಷ್ಟಸ್ವಭಾವವನ್ನು ಬಿಟ್ಟಿರುವಹಾಗೆ ದುಷ್ಟರೂ ಕೂಡ ಸರಿಯಾದ ಶಿಕ್ಷೆಯಿಂದ ಒಳ್ಳೆ ಮಾರ್ಗಕ್ಕೆ ಬರುವರು. ಆದುದರಿಂದ ಎಲ್ಲರೂ ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷೆಯನ್ನು ಕೊಟ್ಟು ವಿದ್ಯಾವಂತರನ್ನಾಗಿ ಮಾಡತಕ್ಕದ್ದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಅಲ್ಲದೆ ದುಷ್ಟಮೃಗಗಳು ಜಾತಿಯಲ್ಲಿ ಎಷ್ಟೇ ಬೇರೆಬೇರೆಯಾದಾಗ್ಗೂ ಇಲ್ಲಿ ತಮ್ಮ ಬದ್ಧದ್ವೇಷಗಳನ್ನು ಬಿಟ್ಟು ಒಂದಕ್ಕೊಂದು ಸಹೋದರರೀತಿಯಲ್ಲಿರುವಹಾಗೆ ನಾವುಗಳೆಲ್ಲರೂ ನಮ್ಮ ಜಾತಿದ್ವೇಷಗಳನ್ನೆಲ್ಲಾ ಬಿಟ್ಟು ಏಕೀಭವಿಸಿರಬೇಕೆಂದು ಉಪನ್ಯಾಸಮಾಡಿ, ಪುರಜನಗಳ ಪರವಾಗಿ ಮ॥ ರಾ॥ ಪ್ರೊಫೆಸರ್ ಶಂಕರರಾಯರನ್ನು ವಂದಿಸಿ, ಮ॥ ರಾ॥ ಸಾವಲರಾಮರವರಿಗೆ ಪದಕವನ್ನು ದಯಪಾಲಿಸಿದರು ಇದೇ ಕಾಲದಲ್ಲಿ ಇಲ್ಲಿನ ಸಾಹುಕಾರರಾದ ಮ॥ ರಾ॥ ಟಿ. ಶಾಸ್ತ್ರಿ ಗುರುಕಾರರು, ಒಳ್ಳೇ ಸಾಧಕಗಳನ್ನು ತೋರಿಸಿದ ೬ ವರ್ಷದ ಮಗು ಪಾರ್ವತಿ ಎಂಬುವಳಿಗೆ, ಕೆಲವು ಬಟ್ಟೆಗಳನ್ನೂ ಒಂದು ಭಂಗಾರದ ಉಂಗುರವನ್ನೂ ಬಹುಮಾನವಾಗಿತ್ತರು. ಮ॥ ರಾ॥ ಸಾವಲರಾಮರವರಿಗೆ ಬೆಂಗಳೂರಿನ ವೀರಶೈವರೂ ಇತರರೂ ಇದೇ ರೀತಿಯಲ್ಲಿ ಪ್ರೋತ್ಸಾಹಮಾಡುವರೆಂದು ನಂಬಿರುತ್ತೇನೆ.

ಟಿ. ಎಸ್. ಶಿವನಂಜಪ್ಪ,
ಬೆಂಗಳೂರು ವೀರಶೈವ ತರುಣರ ಸಂಘದ ಕಾರ್ಯದರ್ಶಿ.

DURBAR
SOAP

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

14 ನಮ್ಮ ವಿಳಾಸ:—ಪೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

18 ವಿಳಾಸ—ಎಂ. ಎಂ. ಹರ್ಡೆಕರ್ ದಾವಣಗೆರೆ.

ಫೋಟೋಲಾಕೇಟ್ಸ್.

ಈ ಪ್ರಕಾರ ಘಡಿಯಾರದ ಸರಪಳಿಗೆ ಹಚ್ಚುವ ಲಾಕೇಟುಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೂಚುಗಳೂ, ಅಪೂರ್ವವಾದ ಅತ್ಯಂತ ಪ್ಯಾಸ್ನಿಯಾದ್ದು ಆದರಿಂದ ತಮ್ಮ ಇಚ್ಛಿತ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ವುದರಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ, ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರ ಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮಹಮದೀಯ ಧರ್ಮದ ಜಗದಾದಪೀರಸಾಹೇಬ ಅಜಮೀರದ ಖ್ವಾಜಾವಲಿ, ಮುಂತಾದ ಬೇಕವುಳ್ಳದ ಅನೇಕ ದೇವತಾ ಮತ್ತು ಸಾಧೂ ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೇ. ಲಾಕೇಟೂದಲ್ಲಿ ೨, ಬ್ರೂಚದಲ್ಲಿ ೧, ಫೋಟೋ ಇರುವವೂ ಕ್ರಯ ಗಿಲ್ಟಬ್ರೂಚವೂ ೬, ೮, ಆಣೆ. ರೋಲಗೋಲ್ಡ ಬ್ರೂಚವೂ ರೂ. ೧—೨—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳೀವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿವುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವು ಕ್ರಯ ರೂ. ೧—೧೨—೦ ಪಾವಲಿ ಆಕಾರದ ಪ್ಲೇನ ಮತ್ತು ಪ್ಯಾನ್ಸಿ ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ತತ್ತಿ ಆಕಾರವೂ, ಅಥವಾ ಗುಂಡ ಆಕಾರವೂಇರುವವುಗಳ ಕ್ರಯ ರೂ. ೧-೪-೦ ೧—೮—೦.

ಇವುಗಳ ಪೂರ್ತ ನಮ್ಮ ಕಾರಖಾನಾದಲ್ಲಿ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸುದರ್ಶನಲಾಭ, ೪ ಪಂಚಮುಖದ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಶರಭಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾವೇರಿ ಸಮತಗಿ ಹುಚ್ಚಪ್ಪನವರೂ ಸಿರಸಂಗಿ ಸರದೇಸಾಯಿ, ರುದ್ರಗವಡ್ರು ಮುಂತಾದ ಅನೇಕ ಸಾಧೂ ಸತ್ಪುರುಷರದೂ ಫೋಟೋ ಸಿಗುತ್ತವೆ. ಕ್ರಯ ಫುಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಪ್ರತಿಯೊಂದು ಊರಿಗೆ ಮಾರಾಟಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟ್ಯಾಂಪ್ ಕಳುಹಿಸಿ ಕೊಟ್ಟು ಕ್ಯಾಟ್ಲಾಗ ಬುಕ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.

ದಿ ಶಾರದಾ ಫೋಟೋ ಕಂಪನಿಯ ಮಾಲಕ,
8 ಗಂಗಪ್ಪಾ ಬೇರಗೇ ಸೊಲ್ಲಾಪುರ ಸಿಟಿ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.



ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇವಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
14 ಇರುಳಪ್ಪನಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲುಡಿಸನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
22 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮೇ ತಾ॥ ೧೧ ರಿಂದ ೧೯೧೯ ನೆಯ ಮೇ ತಾ॥ ೧೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ವೈಶಾಖ ಶು॥ ದ್ವಾದಶಿಯಿಂದ ವೈಶಾಖ ಬ॥ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ವೃಷ
11	[1]ಭಾನು	ದ್ವಾದಶಿ	43-9	ಹಸ್ತ	53-2	29
12	ಸೋಮ	ತ್ರಯೋ	47-23	ಚಿತ್ತ	58-56	30
13	ಮಂಗಳ	ಚತು	52-16	ಸ್ವಾತಿ	60	31
14	[2]ಬುಧ	ಪೌರ್ಣ	57-38	ಸ್ವಾತಿ	5-41	1
15	[3]ಗುರು	ಪಾಡ್ಯ	60	ವಿಶಾಖಾ	12-17	2
16	ಶುಕ್ರ	ಪಾಡ್ಯ	2-33	ಅನೂ	18-38	3
17	ಶನಿ	ಬಿದಿಗೆ	7-0	ಜ್ಯೇಷ್ಠ	24-14	4

(1) ಮಳೂರು ಅಪ್ರಮೇಯಸ್ವಾಮಿ ರಥಃ. (2) ಅರ್ಧನಾರೀಶ್ವರ ವ್ರತಂ, ಶ್ರೀ॥ ಭೂ॥ ಗರುಡೋತ್ಸವಃ, ಪಾ॥ ನೃಸಿಂಹಸ್ವಾಮಿ ರಥಃ, ವಿಷ್ಣುಪದ ಪುಣ್ಯಕಾಲಃ. (3) ಶ್ರೀ ಲಕ್ಷ್ಮೀರಮಣಸ್ವಾಮಿ ರಥಃ, ಕಾಂಚ್ಯಾಂ ಗರುಡೋತ್ಸವಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮರ್ಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಮೇ ತಾರೀಖು ೧೮ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ರಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳೀ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಲ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 25

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಚಟಕೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ಆರೋಗ್ಯವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಹುಟ್ಟು ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ ಬನವಾಸಿ ಉತ್ತರಕನಡಾ ಡಿ॥.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಕ ಶತಕತ್ರಯ	೧— ೦—೦
ಕ ವೀರಶೈವ ವಿವಾಹವಿಧಿಃ	೦— ೮—೦
ವಪೂಜಾವಿಧಿಃ	೦—೧೦—೦
ರುಶೀಲಚರಿತ್ರೆ	೦— ೫—೦
ದಾಸಿ	೦— ೪—೦
ತಪಂಚಕ	೦— ೨—೦
ಯವಿದ್ಯಾ (ಮುಕ್ತಿಸಾಧನ)	೦— ೨—೦
ಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ತೊಡಲು ಅಥವಾ ಆದಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸುವಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣಬರುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವವು.

11 ಪತ್ತೆ:—ವ್ಹಿ. ಆರ್. ಬ್ರದರ್ಸ್ ಮತ್ತು ಕಂಪನಿ, ಪೋಷ್ಟ ನಿಪ್ಪಾಣಿ ಜಿ. ಬೆಳಗಾಂವ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 22

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿವೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಿತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಮಂದ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
15 ಸಾಹುಕಾರಪೇಟೆ, ಮದರಾಸ್.

6

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಗೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ:—ಮುತುರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಬಲೆಯಂತಿರುವ ಬನಿಯರ್ನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಗೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿಸಹಿತ



ಕ್ರಯ 1 ಕ್ಕೆ 5—8—0.

ವಿಳಾಸ:— ರಾಸ್ ವಾಚ್ ಅಂಡ್ ಕೊ,
15 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇವೆ. ಕ್ರಯ ೧೨ ಆಣೆ.

32 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮೇ ತಾ|| ೧೮ ನೆಯ ಭಾನುವಾರ.

ವಿದ್ಯಾಶಾಖೆಯ ವರದಿ.

೧೯೧೭-೧೮ ನೇ ವರ್ಷದಲ್ಲಿ ಮೈಸೂರು ಸಂಸ್ಥಾನದೊಳಗೆ ವಿದ್ಯಾಭ್ಯಾಸ ಶಾಖೆಯಿಂದ ನಡೆದಿರುವ ಕಾರ್ಯಗಳ ವರದಿಯು ಮುದ್ರಿತವಾಗಿ ಅದರೊಂದು ಪ್ರತಿಯು ನಮ್ಮ ಹಸ್ತಗತವಾಗಿದೆ. ವರದಿಯಲ್ಲಿ ಕಂಡ ಅನೇಕಾನೇಕ ವಿಷಯಗಳು ಮೈಸೂರಿನ ಪ್ರತಿಯೊಬ್ಬ ಅಭಿಮಾನಿಗೂ ಸಂತೋಷವನ್ನುಂಟುಮಾಡಲು ಸಾಧಕವಾಗಿವೆ. ಸತ್ವರಾಭಿವೃದ್ಧಿಯನ್ನು ಹೊಂದುತ್ತಿರುವ ನಮ್ಮ ದೇಶದ ವಿದ್ಯಾವಿಧಾನವು ಈ ವಿಷಯದಲ್ಲಿ ಶ್ರೀಮನ್ಮಹಾರಾಜರವರಿಂದ ಕೊಡಲ್ಪಟ್ಟಿರುವ ವಿಶೇಷಾವಧಾನವನ್ನು ಕೆಲಕಾಲದೊಳಗಾಗಿ ಬಲುಮಟ್ಟಿಗೆ ಸಫಲಗೊಳಿಸಲು ಸಾಧಕವಾಗದೆ ಇರಲಾರದೆಂದು ನಂಬಲು ಅವಕಾಶವನ್ನುಂಟುಮಾಡುತ್ತಿದೆ. ಈ ವರದಿಯಿಂದ ಗೊತ್ತಾಗುವ ಅಭಿವೃದ್ಧಿ ಕ್ರಮಗಳೇನೆಂದರೆ—ಸಂಸ್ಥಾನದೊಳಗೆಲ್ಲಾ ೧೯೧೬-೧೭ ನೆ ವರ್ಷದಲ್ಲಿ ಒಟ್ಟು ೭೪೫೭ ಪಾಠಶಾಲೆಗಳಿದ್ದು ೧೯೧೭-೧೮ ರಲ್ಲಿ ಆ ಸಂಖ್ಯೆಯು ೯೬೫೪ ಕ್ಕೆ ಹೆಚ್ಚಿತು. ಎಂದರೆ ೨೧೯೭ ಶಾಲೆಗಳು ಹೆಚ್ಚಿದುವು. ಅಲ್ಲಿ ಓದುತ್ತಿರುವವರ ಸಂಖ್ಯೆಯು ೩೦೧೯೪೮ ರಿಂದ ೩೫೮೬೭೨ ಕ್ಕೆ ಹೆಚ್ಚಿತು. ಎಂದರೆ ೫೬೭೨೪ ಮಂದಿಗಳು ಹೆಚ್ಚಿದಂತಾಯಿತು. ಶಾಲೆಗೆ ಹೋಗಿ ಓದತಕ್ಕ ವಯಸ್ಸಿನ ಬಾಲಕರ ಸಂಖ್ಯೆಯಲ್ಲಿ ೧೦೦ ಕ್ಕೆ ೬೨.೨ ಮಂದಿಯು ಹಿಂದಣ ವರ್ಷದಲ್ಲಿ ಓದುತ್ತಿದ್ದರು. ಪ್ರಸಕ್ತ ವರ್ಷದಲ್ಲಿ ಅಂಥವರ ಸಂಖ್ಯೆಯು ೧೦೦ ಕ್ಕೆ ೬೮ ರಷ್ಟಾಗಿದೆ. ಓದತಕ್ಕ ವಯಸ್ಸಿನ ಬಾಲಿಕೆಯರ ಸಂಖ್ಯೆಯು ಹಿಂದಣ ವರ್ಷದಲ್ಲಿ ೧೦೦ ಕ್ಕೆ ೧೩.೩ ಇದ್ದುದು ಈ ವರ್ಷದಲ್ಲಿ ೧೪.೨ ಕ್ಕೆ ವೃದ್ಧಿಯಾಗಿರುತ್ತದೆ. ಶಾಖೆಯ ವೆಚ್ಚವು ೧೯೧೬-೧೭ರಲ್ಲಿ ೩೨೯೭೫೬೧ ಆಗಿರಲು ಪ್ರಸಕ್ತವರ್ಷದಲ್ಲಿ ೩೧೪೩೪೪೭ ರೂ. ಎಂದರೆ ೧|| ಲಕ್ಷಕ್ಕಿಂತಲೂ ಅಧಿಕವಾಗಿ ಕಡಿಮೆಬಿದ್ದಿರುತ್ತದೆ. ಆದರೆ ಕೊಡಲ್ಪಟ್ಟಿರುವ ಗ್ರಾಂಟಿನ ಮೊತ್ತವು ಹಿಂದಣ ವರ್ಷ ೩೭೬೫೪೦ ಇದ್ದುದು ಕಳೆದವರ್ಷ ೪೫೩೭೬೯ಕ್ಕೆ ಎಂದರೆ ೭೭೨೨೯ ರೂ.ನಷ್ಟು ಹೆಚ್ಚಾಗಿರುತ್ತದೆ. ವೆಚ್ಚವನ್ನು ಹಂಚಿಹಾಕಿದರೆ ಹಿಂದಣ ವರ್ಷ ಪ್ರತಿಯೊಬ್ಬ ವಿದ್ಯಾರ್ಥಿಗೂ ತಲೆಗೆ ೦-೯-೩ ಯಂತೆ ಬಿದ್ದಿದ್ದುದು ಪ್ರಸಕ್ತವರ್ಷದಲ್ಲಿ ೦-೮-೯ ಬಿದ್ದಂತಾಗಿರುವುದು. ಮತ್ತು ಸಂಸ್ಥಾನದ ವಿಸ್ತೀರ್ಣಕ್ಕೆ ಒಟ್ಟು ಪಾಠಶಾಲೆಗಳನ್ನು ಹಂಚಿಹಾಕಿದರೆ ಹಿಂದಣ ವರ್ಷ ೩ ಚದರ ಮೈಲಿಗೆ ಒಂದು ಶಾಲೆಯಂತೆ ಇರುತ್ತಿದ್ದುದು ಈ ವರ್ಷದಲ್ಲಿ ೨||| ಚದರ ಮೈಲಿಗೆ ಒಂದು ಪಾಠಶಾಲೆಯಿದ್ದಂತಾಗಿದೆ. ಒಟ್ಟು ಪ್ರಜಾಸಂಖ್ಯೆಗೆ ಶಾಲೆಗಳನ್ನು ಹಂಚಿಹಾಕಿದರೆ ೬೦೦ ಮಂದಿಗಳಿಗೆ ಒಂದೊಂದು ಶಾಲೆಯು ಇದ್ದಂತಾಗುವುದು. ಸಂಸ್ಥಾನದ ಎಲ್ಲ ಪಾಠಶಾಲೆಗಳಲ್ಲೂ ಓದುವ ಹುಡುಗರಲ್ಲಿ ೧೦೦ ಕ್ಕೆ ೮೮.೫೪ ರಷ್ಟು ಬಾಲ ತರಗತಿಗಳಲ್ಲಿಯೂ ೧೦೦ ಕ್ಕೆ ೯.೮೮ ರಷ್ಟು ಮಧ್ಯಮ ತರಗತಿಗಳಲ್ಲಿಯೂ ೧.೫೮ ರಷ್ಟು ಹೈಸ್ಕೂಲು ತರಗತಿಗಳಲ್ಲಿಯೂ ಇದ್ದಾರೆ. ಓದುತ್ತಿರುವ ವಿದ್ಯಾರ್ಥಿನಿಯರಲ್ಲಿ ೧೦೦ ಕ್ಕೆ ೯೪.೨೩ ರಷ್ಟು ಬಾಲ ತರಗತಿಗಳಲ್ಲಿಯೂ ೫.೫೭ ರಷ್ಟು ಮಧ್ಯಮ ತರಗತಿಗಳಲ್ಲಿಯೂ ೦.೨೦ ರಷ್ಟು ಹೈಸ್ಕೂಲುಗಳಲ್ಲಿಯೂ ಇದ್ದಾರೆ.

ಮಧ್ಯಮ ಮತ್ತು ಪ್ರೌಢ ತರಗತಿಗಳ ವಿದ್ಯಾಭ್ಯಾಸಕ್ಕಿಂತಲೂ ಬಾಲ ವಿದ್ಯಾಭ್ಯಾಸವು ಸಂಸ್ಥಾನದಲ್ಲಿ ಶೀಘ್ರಾಭಿವೃದ್ಧಿಗೊಳ್ಳುತ್ತಿರುವುದೆಂಬುದು ವರದಿಯಿಂದ ಗೊತ್ತಾಗುತ್ತದೆ. ಇದು ಇಷ್ಟವಾದುದೇ ಸರಿ. ಪ್ರಜಾಸಾಮಾನ್ಯದಲ್ಲಿ ವಿದ್ಯಾಪ್ರಸಾರ ಪ್ರಯತ್ನವು ಉತ್ತರದಿಂದ ನಡೆಯುತ್ತಿದೆಯೆಂಬುದಕ್ಕೆ ಇದು ದೃಷ್ಟಾಂತವು. ಈ ಬಾಲ ತರಗತಿಗಳ ಶಾಲೆಗಳು ಹಿಂದಣ ವರ್ಷಕ್ಕಿಂತ ಪ್ರಸಕ್ತವರ್ಷದಲ್ಲಿ ೧೯೫೪ ಹೆಚ್ಚಾದುವು. ಅವುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ಹಿಂದಣ ವರ್ಷಕ್ಕಿಂತ ೨೧೧೪೫ ರಷ್ಟು ಹೆಚ್ಚಿತು. ಸಂಸ್ಥಾನದಲ್ಲೆಲ್ಲಾ ಪ್ರಸಕ್ತವರ್ಷದಲ್ಲಿ ಬಾಲಪಾಠಶಾಲೆಗಳ ಒಟ್ಟು ಸಂಖ್ಯೆಯು ೮೨೦೭ ಆಗಿದ್ದಿತೆಂದೂ, ಅವುಗಳಲ್ಲಿ ಓದುತ್ತಿರುವ ಒಟ್ಟು ಹುಡುಗರ ಸಂಖ್ಯೆಯು ೨೩೩೬೨೫ ಎಂದೂ ಗೊತ್ತಾಗುವುದು. ಈ ಒಟ್ಟು ಸಂಖ್ಯೆಯಲ್ಲಿ ಕಾಲುಭಾಗದಷ್ಟು ಎಂದರೆ ೫೪೦೪೫ ಮಂದಿಗಳು ವೀರಶೈವರ ಬಾಲಕರೇ ಆಗಿರುವರೆಂಬುದನ್ನು ವರದಿಯಿಂದ ತಿಳಿಯುವುದಕ್ಕೆ ಆನಂದವಾಗುತ್ತದೆ. ವೀರಶೈವರು ತಮ್ಮ ಬಾಲಕರ ವಿದ್ಯಾಭಿವೃದ್ಧಿಯ ಕಡೆಗೆ ಹೆಚ್ಚಾದ ಗಮನವನ್ನು ಈಗ ಕೊಡುತ್ತಿರುವರೆಂಬುದಕ್ಕೆ ಇದು ನಿದರ್ಶನವಾಗಿದೆ. ಆದರೆ ಮಧ್ಯಮ ಪ್ರೌಢ ತರಗತಿಗಳಲ್ಲೂ ಇತರ ಕಲಾಕೌಶಲ್ಯಾಭ್ಯಾಸದಲ್ಲೂ ಇವರುಗಳ ಸಂಖ್ಯೆಯು ಬಹಳ ಕಡಿಮೆಯಾಗಿರುವುದು ವಿಷಾದಕರವಾಗಿದೆ. ಬಾಲ ತರಗತಿಗಳಲ್ಲಿ ಓದುತ್ತಿರುವ ಬ್ರಾಹ್ಮಣ ವಿದ್ಯಾರ್ಥಿಗಳ ಸಂಖ್ಯೆಯು ೧೯೪೭೨ ಆಗಿಯೂ, ಮಹಮ್ಮದೀಯ ಬಾಲರ ಸಂಖ್ಯೆಯು ೨೫೨೨೯ ಆಗಿಯೂ, ನಿಮ್ನಜಾತಿ ಬಾಲರ ಸಂಖ್ಯೆಯು ೧೨೫೩೫ ಆಗಿಯೂ ಇರುತ್ತದೆ. ಹಿಂದುಳಿದವರ ವಿದ್ಯಾಪ್ರೋತ್ಸಾಹಕ್ಕಾಗಿ ನಮ್ಮ ಗೌರ್ನಮೆಂಟಿನವರು ಕೊಡುತ್ತಿರುವ ಪ್ರೋತ್ಸಾಹವೂ ಮಾಡುತ್ತಿರುವ ಪ್ರಯತ್ನಗಳೂ ಸಫಲಮಾರ್ಗದಲ್ಲಿವೆಯೆಂಬುದನ್ನು ಮೇಲಣ ವಿವರವೂ ತಿಳಿಸುತ್ತಿದೆ. ಇನ್ನೂ ಈ ಭಾಗದಲ್ಲಿ ಹೆಚ್ಚಾದ ಪ್ರಯತ್ನಗಳನ್ನು ಮಾಡಬೇಕೆಂದು ವಿದ್ಯಾಶಾಖಾಧ್ಯಕ್ಷರು ಮಾಡಿರುವ ಸೂಚನೆಯನ್ನು ಗೌರ್ನಮೆಂಟಿನವರು ಅಂಗೀಕರಿಸಿರುವುದು ನ್ಯಾಯವಾಗಿದೆ.

ನಿರ್ಬಂಧವಿದ್ಯಾಭ್ಯಾಸ ಪದ್ಧತಿಯು ಸಂಸ್ಥಾನದಲ್ಲಿ ಪ್ರಸಕ್ತವರ್ಷ ಮತ್ತಷ್ಟು ಅಭಿವೃದ್ಧಿಗೊಂಡಿದೆ. ಹೊಸದಾಗಿ ೧೭ ಸೆಂಟರುಗಳಲ್ಲಿ ಈ ಪದ್ಧತಿಯು ಸ್ಥಾಪಿತವಾಗಿದೆ. ಈ ಪದ್ಧತಿಯು ಈಗ ೬|| ಲಕ್ಷ ಪ್ರಜೆಗಳಿಗೆ ವರ್ತಿಸಲ್ಪಟ್ಟಿದೆ. ೬೮ ಸೆಂಟರುಗಳಲ್ಲಿ ಇದು ವ್ಯವಹಾರದಲ್ಲಿದೆ. ನಿರ್ಬಂಧ ಪದ್ಧತಿಯು ಎಲ್ಲೆಲ್ಲಿ ವ್ಯವಹಾರಕ್ಕೆ ತರಲ್ಪಟ್ಟಿದೆಯೋ ಅಲ್ಲಿ ೧೨೨೦೭ ಮಂದಿ ಬಾಲಕರು ಹೊಸದಾಗಿ ಶಾಲೆಗಳಿಗೆ ಸೇರಿಸಲ್ಪಟ್ಟಿದ್ದಾರೆ. ಹುಡುಗರನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಿಯೇ ತೀರಬೇಕೆಂದು ಮಕ್ಕಳ ತಾಯ್ತಂದೆಗಳಿಗೆ ಎಚ್ಚರಿಕೆಯು ಕೊಡಲ್ಪಟ್ಟಿರುವುದರ ಸಂಖ್ಯೆಯು ೧೯೭೨ ಆಗಿರುತ್ತದೆ. ಅದನ್ನು ಮೀರಿ ಶಾಸನಕ್ಕೆ ವಿರುದ್ಧವಾಗಿ ನಡೆದುಕೊಂಡುದಕ್ಕಾಗಿ ೧೧ ಮಂದಿಗಳು ಪ್ರಾಸಿಕ್ಯೂಷನ್ ಮಾಡಲ್ಪಟ್ಟು ೩ ಮಂದಿ ಪೋಷಕರಿಗೆ ಶಿಕ್ಷೆಯು ಪ್ರಸಕ್ತವರ್ಷದಲ್ಲಿ ವಿಧಿಸಲ್ಪಟ್ಟಿದೆ. ಶಿಕ್ಷಣ ಸಾಮರ್ಥ್ಯವುಳ್ಳ ಬೋಧಕರನ್ನು ಅಣಿಮಾಡುವುದಕ್ಕಾಗಿ ಪ್ರಯತ್ನಗಳು ಕೂಡ ಸಮರ್ಪಕವಾಗಿ ನಡೆದಿವೆ. ಗೌರ್ನಮೆಂಟ್ ಮತ್ತು ಗ್ರಾಂಟಿನೇಡ್ ಶಾಲೆಗಳ ಉಪಾಧ್ಯಾಯರುಗಳನ್ನು ಟ್ರೇನಿಂಗಿಗೆ ಸೇರಿಸಿದುದಲ್ಲದೆ ಸ್ವಂತವಾಗಿ ಟ್ರೇನಿಂಗಿಗೆ ಹೋಗುವ ೧೦೦ ಮಂದಿಗಳಿಗೆ ತಲೆಗೆ ೬ ರೂ.ನಂತೆ ವಿದ್ಯಾರ್ಥಿವೇತನವನ್ನು ಕೊಡಲು ಏರ್ಪಾಟಾಗಿದ್ದಿತು. ಸಂಸ್ಥಾನದೊಳಗೆಲ್ಲಾ ಇರುವ ೧೧ ಟ್ರೇನಿಂಗ್ ಶಾಲೆಗಳಲ್ಲಿ ಒಟ್ಟು ೪೮೭ ಮಂದಿ ಗಂಡುಸರೂ ೪೦ ಮಂದಿ ಹೆಂಗುಸರೂ ಅಭ್ಯಾಸಮಾಡಿದರು. ಅದರ ಹಿಂದಣ ವರ್ಷ ಈ ಸಂಖ್ಯೆಯು ೪೩೩, ೩೨ ಆಗಿದ್ದಿತು. ಸಂಸ್ಥಾನದೊಳಗೆಲ್ಲಾ ಈಗ ಟ್ರೇನಿಂಗ್ ಪಡೆದ ಉಪಾಧ್ಯಾಯರು ೧೪೫೪ ಮಂದಿಯೂ, ಅದನ್ನು ಪಡೆಯದಿರುವ ಉಪಾಧ್ಯಾಯರು ೨೯೧೯ ಮಂದಿಗಳಾಗಿಯೂ ಇದ್ದಾರೆ.

ಕೈಗಾರಿಕೆಯ ಶಾಲೆಗಳು ಸಂಸ್ಥಾನದಲ್ಲೆಲ್ಲಾ ಹಿಂದಣ ವರ್ಷ ಬಾಲಕರವು ೨೨, ಬಾಲಿಕೆಯರವು ೪ ಇದ್ದುವು. ಈ ವರ್ಷ ಬಾಲಕರವು ಮತ್ತಿನ್ನೆರಡು ಹೆಚ್ಚಿದುವು. ಬಾಲಿಕೆಯರದು ಒಂದು ಕಡಿಮೆಯಾಯಿತು. ಇವುಗಳಲ್ಲಿ ಓದುತ್ತಿರುವ ಬಾಲ ಬಾಲಿಕೆಯರ ಸಂಖ್ಯೆಯು ಹಿಂದಣ ವರ್ಷ ೧೫೨೬ ಇದ್ದುದು ಪ್ರಸಕ್ತವರ್ಷದಲ್ಲಿ ೧೬೨೭ ಕ್ಕೂ ಅವರಲ್ಲಿ ಬಾಲಿಕೆಯರ ಸಂಖ್ಯೆಯು ೧೮೩ ರಿಂದ ೨೧೧ ಕ್ಕೂ ಹೆಚ್ಚಿರುವುದು. ಕೈಗಾರಿಕೆಯನ್ನು ಕಲಿಯುವುದಕ್ಕೆ ನಮ್ಮ ದೇಶದ ಜನರು ತಕ್ಕಷ್ಟು ಕುತೂಹಲಪಡುತ್ತಲಿಲ್ಲವೆಂಬುದನ್ನು ಈ ಮೇಲಣ ಸಂಖ್ಯೆಯು ವ್ಯಕ್ತಪಡಿಸುತ್ತಿದೆ. ಬರಿಯ ಪುಸ್ತಕ ವಿದ್ಯೆಗಿಂತಲೂ ಕಲಾಕೌಶಲಗಳು ಸಂಪದಭಿವೃದ್ಧಿಗೂ ಸ್ವತಂತ್ರಜೀವಿಕೆಗೂ ವಿಶೇಷ ಸಾಧಕವಾಗುವುವೆಂಬ ವಿಷಯವು ನಮ್ಮ ಜನರಿಗೆ ಇನ್ನೂ ತಿಳಿದುಬಂದಿಲ್ಲ. ಇದು ವಿಷಾದಕರವು. ಈಗ ಓದುತ್ತಿರುವ ವಿದ್ಯಾರ್ಥಿಗಳಲ್ಲೂ ಎಲ್ಲಾ ಸ್ಥಲಗಳ ಕೈಗಾರಿಕೆಯ ಮತ್ತು ಇಂಜನಿಯರಿಂಗಿನ ಶಾಲೆಗಳೊಳಗೆ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳ ಸಂಖ್ಯೆಯೇ ಇತರರೆಲ್ಲರಿಗಿಂತಲೂ ಮಿಗಿಲಾಗಿದೆ. ಸಂಖ್ಯೆಯಲ್ಲಿ ೨ ನೆಯವರು ಮಹಮ್ಮದೀಯರಾಗಿಯೂ ೩ ನೆಯವರು ಕ್ರೈಸ್ತರಾಗಿಯೂ ೪ ನೆಯವರು ವೈಶ್ಯರಾಗಿಯೂ ೫ ನೆಯವರು ವೀರಶೈವರಾಗಿಯೂ ೬ ನೆಯವರು ಒಕ್ಕಲಿಗರಾಗಿಯೂ ಇದ್ದಾರೆ. ಉಳಿದವರಲ್ಲಿ ಎಲ್ಲೋ ಕೆಲವರು ಒಬ್ಬಿಬ್ಬರು ಮಾತ್ರ ಈ ತರಗತಿಗಳಲ್ಲಿ ಸೇರಿ ಅಭ್ಯಾಸಮಾಡುತ್ತಿದ್ದಾರೆ. ದೇಶದಲ್ಲಿ ಕಸಬುದಾರ ಜನರೇ ಹೆಚ್ಚಾಗಿದ್ದರೂ ಅವರುಗಳ ಮಕ್ಕಳುಗಳು ಕೈಗಾರಿಕೆಯ ಶಾಲೆಗಳಲ್ಲಿ ತಕ್ಕಷ್ಟು ಸೇರಿ ಓದದೆ ಇರುವಂತಾಗಿರುವುದೇತಕ್ಕೋ ತಿಳಿಯುವುದಿಲ್ಲ. ಈ ಶಾಲೆಗಳಲ್ಲಿರುವ ಕೈಗಾರಿಕೆಗಳು ಅಷ್ಟು ಆಕರ್ಷಣೀಯವಾಗಿಲ್ಲವೋ ಅಥವಾ ಜನರ ವಿದ್ಯಾರ್ಜನ ಪ್ರಯತ್ನದಲ್ಲೇ ವಿಮುಖತೆಯಿರುವುದೋ ಗೊತ್ತಾಗುವುದಿಲ್ಲ. ಅಂತು ಪರಿಶ್ರಾಮಿಕ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು ತುಂಬಿತುಳುಕುವಂತಾಗುವವರೆಗೂ ದೇಶದ ಸಂಪದಭ್ಯುದಯ ಪ್ರಯತ್ನಗಳು ವಿಕಸಿತವಾಗಲಾರವು. ಸಂಸ್ಥಾನದೊಳಗೆಲ್ಲಾ ಹಿಂದಣ ವರ್ಷ ಸಂಸ್ಕೃತ ಪಾಠಶಾಲೆಗಳು ೫೩ ಇದ್ದು ಪ್ರಸಕ್ತವರ್ಷದಲ್ಲಿ ೬೪ ಆಗಿರುತ್ತವೆ. ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯು ೨೩೫೭ ರಿಂದ ೨೫೬೬ ಕ್ಕೆ ವೃದ್ಧಿಗೊಂಡಿರುತ್ತದೆ. ಕುರುಡಮೂಗರು ಮೊದಲಾದ ಅಂಗಹೀನರ ಶಾಲೆಗಳು ಸಂಸ್ಥಾನದಲ್ಲಿ ಎರಡೇ ಇರುತ್ತ ಅವುಗಳಲ್ಲಿರುವ ಬಾಲರ ಸಂಖ್ಯೆಯು ಹಿಂದಣ ವರ್ಷ ೬೫ ಇದ್ದುದು ಈ ವರ್ಷ ೪೨ ಆಗಿರುತ್ತದೆ. ವ್ಯವಸಾಯ ಪಾಠಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ೪೦ ರಿಂದ ೫೪ ಕ್ಕೆ ವೃದ್ಧಿಯಾಗಿದೆ.

ನಿಮ್ನಜಾತಿ ಜನರ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ಬಹಳ ಪ್ರೋತ್ಸಾಹವನ್ನು ಕಲ್ಪಿಸುತ್ತಿದ್ದಾರೆ. ಅವರುಗಳಿಗಾಗಿಯೇ ಏರ್ಪಟ್ಟಿರುವ ಪಾಠಶಾಲೆಗಳ ಸಂಖ್ಯೆಯು ೩೪೯ ರಿಂದ ೪೯೬ ಕ್ಕೂ ಅವುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ೧೦೫೨೧ ರಿಂದ ೧೨೩೫೮ ಕ್ಕೂ ವೃದ್ಧಿಹೊಂದಿದೆ. ಇವರ ಕೆಲವು ಶಾಲೆಗಳಲ್ಲಿ ಕೈಗಾರಿಕೆಯ ವಿದ್ಯಾಭ್ಯಾಸಕ್ಕೂ ಏರ್ಪಾಟು ಮಾಡಲ್ಪಟ್ಟಿದೆ. ಹಿಂದುಳಿದ ಜನವರ್ಗಗಳ ವಿದ್ಯಾಪ್ರೋತ್ಸಾಹಕ್ಕಾಗಿ ಏರ್ಪಡಿಸಲ್ಪಟ್ಟಿರುವ ವಿದ್ಯಾರ್ಥಿ ವೇತನಗಳಿಗಾಗಿ ಸರ್ಕಾರದವರು ಕೊಟ್ಟಿರುವ ೧ ಲಕ್ಷ ರೂ.ಗಳಲ್ಲಿ ಇವರಿಗೂ ಕೆಲಭಾಗವು ದೊರೆಯುವುದಲ್ಲದೆ ಇವರಿಗಾಗಿಯೇ ಮತ್ತಿನ್ನರ್ಧ ಲಕ್ಷ ರೂ.ಗಳು ಕೊಡಲ್ಪಟ್ಟಿರುತ್ತವೆ. ಇವರುಗಳ ಪಾಠಶಾಲೆಗಳ ಕಟ್ಟಡಕ್ಕಾಗಿಯೇ ೨೫೦೦೦ ರೂ.ಗಳು ಅಪ್ಪಣೆಮಾಡಲ್ಪಟ್ಟಿವೆ. ಮೈಸೂರಿನಲ್ಲಿ ಪಂಚಮರ ಬೋರ್ಡಿಂಗ್ ಸ್ಕೂಲಲ್ಲದೆ ಪ್ರಸಕ್ತವರ್ಷದಲ್ಲಿ ತುಮಕೂರಿನಲ್ಲೂ ಚಿಕ್ಕಮಗಳೂರಿನಲ್ಲೂ ಒಂದೊಂದು ಬೋರ್ಡಿಂಗುಗಳನ್ನು ಕಟ್ಟಲು ಅಪ್ಪಣೆಮಾಡಲ್ಪಟ್ಟಿತು. ಮತ್ತು ಮೈಸೂರಿನಲ್ಲಿ ಪಂಚಮರಿಗಾಗಿಯೇ ೫೦೦೦೦ ರೂ.ಗಳ ವೆಚ್ಚದಿಂದ ಸೆಂಟರಲ್ ಪಂಚಮ ಇನ್‌ಸ್ಟಿಟ್ಯೂಟೊಂದನ್ನು ಏರ್ಪಡಿಸಲಾಗಿರುವುದು. ಇದರಲ್ಲಿ ಕೈಗಾರಿಕೆಯ ವಿದ್ಯಾಭ್ಯಾಸಕ್ಕೂ ಕೂಡ ಅವಕಾಶಮಾಡಲ್ಪಟ್ಟಿರುವುದು. ಮಹಮ್ಮದೀಯರ ವಿದ್ಯಾಭ್ಯಾಸಕ್ಕೂ ಸರ್ಕಾರದವರು ವಿಶೇಷ ಪ್ರೋತ್ಸಾಹವನ್ನು ಮಾಡಿರುವರು. ಅವರ ಶಾಲೆಗಳು ೬೦೧ ರಿಂದ ೮೧೫ ಕ್ಕೆ ವೃದ್ಧಿಗೊಂಡಿರುವುವು. ಅವರ ವಿದ್ಯಾಭ್ಯಾಸಕ್ಕಾಗಿಯೇ ೧೯೨೯೩ ರೂ.ಗಳು ವೆಚ್ಚವಾಗಿರುವುವು. ೪೧೯೪ ಮಂದಿ ಮಹಮ್ಮದೀಯ ಬಾಲ ಬಾಲೆಯರು ಓದುತ್ತಿರುವರು.

ಹೀಗೆಯೇ ಸರ್ವ ಪ್ರಜೆಗಳ ವಿದ್ಯಾಭಿವೃದ್ಧಿಗಾಗಿಯೂ ಮುಖ್ಯವಾಗಿ ಹಿಂದುಳಿದವರ ವಿದ್ಯಾಭ್ಯುದಯಕ್ಕಾಗಿಯೂ ಗೌರ್ನಮೆಂಟಿನವರು ಮಾಡುತ್ತಿರುವ ಸಾಹಸ ಪ್ರೋತ್ಸಾಹಗಳೂ ಅವುಗಳಿಂದ ಈಗಾಗಲೇ ತೋರಬರುತ್ತಿರುವ ಅಭಿವೃದ್ಧಿ ಲಕ್ಷಣಗಳೂ ಈ ವರದಿಯಲ್ಲಿ ಅನೇಕ ವಿಧವಾಗಿ ವ್ಯಕ್ತವಾಗಿರುತ್ತವೆ. ಈಗಣ ವಿದ್ಯಾಭ್ಯಾಸ ಶಾಖಾಧ್ಯಕ್ಷರಾಗಿರುವ ಮ|| ರಾಮಲಿಂಗ ರಡ್ಡಿ ಎಂ.ಎ. ಯವರು ಶ್ರೀಮನ್ಮಹಾರಾಜರ ಪವಿತ್ರೋದ್ದೇಶಕ್ಕನುಗುಣವಾಗಿ ಸಂಸ್ಥಾನದ ಸಾರ್ವತ್ರಿಕ ವಿದ್ಯಾಪ್ರಸಾರಕ್ಕಾಗಿ ಸಾಧ್ಯವಾದಷ್ಟು ಸಾಹಸಗಳನ್ನೆಲ್ಲಾ ಮಾಡುತ್ತಿರುವುದು ಅಭಿನಂದನೀಯವಾಗಿದೆ. ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಮ|| ರಾಮಲಿಂಗ ರಡ್ಡಿಯವರು ಪ್ರಶಂಸನೀಯರಾಗಿ ಸಹಾಯ ಮಾಡಿರುವರೆಂದು ನಮ್ಮ ಗೌರ್ನಮೆಂಟಿನವರು ಅವರ ಸಾಮರ್ಥ್ಯಾತಿಶಯಕ್ಕೂ ಪ್ರಯತ್ನವಿಶೇಷಕ್ಕೂ ಮೆಚ್ಚಿ ರಿಕಾರ್ಡು ಮಾಡಿರುವುದಲ್ಲದೆ ಇದೇ ತೆರದ ಪ್ರಯತ್ನಗಳಿಂದ ಮುಂದೆಯೂ ಹಿಂದುಳಿದವರ ವಿದ್ಯಾಪ್ರೋತ್ಸಾಹವನ್ನು ಚೆನ್ನಾಗಿ ನಡೆಯಿಸುವರೆಂದು ನಂಬಿ ನಿರೀಕ್ಷಿಸುವುದಾಗಿ ತಮ್ಮ ಅಭಿಪ್ರಾಯವನ್ನು ಈ ವರದಿಯ ಮೇಲೆ ಪ್ರಕಟಿಸಿರುತ್ತಾರೆ. ಮ|| ಸಿ. ರಾಮಲಿಂಗ ರಡ್ಡಿಯವರು ಹೊರಗಣ ದೇಶದವರಾದರೂ ತಮ್ಮ ವಿದ್ಯಾವೈದುಷ್ಯಾದಿಗಳ ಶಕ್ತಿಯನ್ನು ಈ ದೇಶದವರ ವಿದ್ಯಾಭ್ಯುದಯ ಪ್ರಯತ್ನಗಳಿಗೆ ವಿನಿಯೋಗಿಸಿ, ಇಲ್ಲಿನವರ ಚಿರಸ್ಮರಣೆಗೂ ಉತ್ತಮ ಕೀರ್ತಿ ಪ್ರತಿಷ್ಠೆಗಳಿಗೂ ಪಾತ್ರರಾಗುವಂತಾದುದನ್ನು ಕಂಡು ಗುಣಗ್ರಾಹಿಗಳಾದ ಸಜ್ಜನರೆಲ್ಲರೂ ಸಂತೋಷಿಸದಿರಲಾರರು.

ಒಳದೇಶದ ವೃತ್ತಾಂತಗಳು.

ವಿದ್ಯಾಭ್ಯಾಸದ ಇ|| ಜನರಲ್‌ರವರಾದ ಮ|| ಸಿ. ಆರ್. ರಡ್ಡಿಯವರು ೫ ವಾರಗಳ ಪ್ರಿವಿಲೆಜ್‌ರಜವನ್ನು ತೆಗೆದುಕೊಳ್ಳುವುದಾಗಿ ವರ್ತಮಾನವಿದೆ.

ಹೆಬ್ಬಾಳ ಕ್ಷೇತ್ರದಲ್ಲೇರ್ಪಟ್ಟಿರುವ ವ್ಯವಸಾಯ ಪಾಠಶಾಲೆಯ ಮೊದಲನೆಯ ವರ್ಷದ ತರಗತಿಯು ಬರುವ ಜುಲೈ ತಾ|| ೧ ರಿಂದ ಆರಂಭಿಸಲ್ಪಡುವುದು.

ಉದಕಮಂಡಲಕ್ಕೆ ಚಿತ್ತೈಸಿದ್ದ ಶ್ರೀಮನ್ ಮಹಾರಾಜರವರ ಸ್ವಾರಿಯು ಕಳೆದ ಮಂಗಳವಾರ ರಾಜಧಾನಿಗೆ ದಯಮಾಡಿಸಿ ನೆನ್ನೆಯ ದಿನ ಉದಕಮಂಡಲಕ್ಕೆ ಹಿಂದಿರುಗಿ ಚಿತ್ತೈಸುವುದಾಗಿದ್ದಿತು.

ಮೈಸೂರು ಡಿ|| ಡೆಪ್ಯುಟಿ ಕಮಿಷನರಾಗಿದ್ದ ಮ|| ಟಿ. ಚೊಕ್ಕಣ್ಣನವರು ಸೀನಿಯರ್ ಅಸಿಸ್ಟೆಂಟ್ ಕಮಿಷನರ ತರಗತಿಗಿಳಿಸಲ್ಪಟ್ಟು ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರರಾಗಿ ನಿಯಮಿಸಲ್ಪಟ್ಟಿರುವುದಾಗಿ ತಿಳಿಯುತ್ತೇವೆ.

ಮೈಸೂರು ಮತ್ತು ಮದ್ದಿಗಿರಿ ಟವನ್ ಮ್ಯುನಿಸಿಪಲ್ ಎಲ್ಲೆಯೊಳಗೆ ಮಕ್ಕಳುಗಳಿಗೆ ಬಲವಂತದಿಂದ ಸಿಡುಬನ್ನು ಹಾಕುವ ಕಾಲದ ಅವಧಿಯು ಬರುವ ಜುಲೈ ತಾ|| ೧ ರಿಂದ ಇನ್ನೂ ೩ ವರ್ಷದವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ರಾಜಧಾನಿಯಲ್ಲಿ ಕ್ಷುದ್ರ ರೋಗಾದಿಗಳೇನೂ ಇಲ್ಲ. ಪ್ರತಿನಿತ್ಯದಲ್ಲೂ ಮೋಡವು ಕವಿದುಕೊಂಡು ಮಿಂಚು ಗುಡುಗಿನಿಂದ ಆರ್ಭಟಿಸಿ ನಾಲ್ಕು ಹನಿ ಮಾತ್ರ ಉದುರಿ ಮಾಯವಾಗುತ್ತಿದೆ. ಆದರೆ ಇತರ ಕಡೆ ಮಳೆಯಾಗುತ್ತಿರುವುದಾಗಿ ಕೇಳುತ್ತೇವೆ.

ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾಕ್ಟರ್ ಸಿ. ಎ. ನಂಜಪ್ಪನವರು ಈ ತಾ|| ೨೫ರಲ್ಲಿ ಸೀಮೆಗೆ ಪ್ರಯಾಣಮಾಡುವುದಕ್ಕಾಗಿ ಈ ತಾ|| ೨೦ ರಲ್ಲಿ ಬೆಂಗಳೂರಿಗೆ ಹೊರಡುವರು. ಇವರು ಬರುವವರೆಗೆ ಇದೇ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾದ ಡಾ|| ನಾರಾಯಣರಾಯರು ಮೆಡಿಕಲ್ ಆಫೀಸರಾಗಿರುವಂತೆ ಏರ್ಪಾಟಾಗಿದೆ.

ಅಫ್‌ಗಾನ್‌ಸ್ಥಾನ್.

ಈ ದೇಶದ ಈಗಣ ಸ್ಥಿತಿಗತಿಗಳನ್ನು ಕುರಿತು ಈ ಕೆಳಗಣ ಲೇಖನವು ಪ್ರಜೆಗಳ ತಿಳಿವಿಕೆಗಾಗಿ ಪ್ರಕಟಿತವಾಗಿದೆ.

ಕಳೆದ ಫೆಬ್ರವರಿ ತಿಂಗಳಲ್ಲಿ ಕೊಲ್ಲಲ್ಪಟ್ಟ ಅಮೀರ್ ಹಬೀಬುಲ್ಲಾಖಾನರು ಅಮೀರ್ ಅಬ್ದುಲ್ ರಹಿಮಾನ್‌ಖಾನ್‌ರವರ ಪುತ್ರರು. ಇವರು ೧೮೭೨ನೆ ವರ್ಷದ ಜುಲೈ ತಾ|| ೩ ರಲ್ಲಿ ಜನಿಸಿದರು. ೧೯೦೧ನೆ ಅಕ್ಟೋಬರ್ ತಾ|| ೩ರಲ್ಲಿ ಸಿಂಹಾಸನಾರೋಹಣ ಮಾಡಿದರು. ಅಲ್ಲಿಂದ ೧೮ ವರ್ಷಗಳಕಾಲ ರಾಜ್ಯಪರಿಪಾಲನೆ ಮಾಡಿ ೧೯೧೯ನೆ ವರ್ಷದ ಫೆಬ್ರವರಿ ತಾ|| ೨೦ರಲ್ಲಿ ಜಲಾಲಾಬಾದಿನ ಸಮೀಪದ ಡೇರ್‌ಮಾನಿನ ಹತ್ತಿರ ಕೊಲ್ಲಲ್ಪಟ್ಟರು. ಇವರಿಗೆ ೬ ಮಂದಿ ಪುತ್ರರು ಇರುವರು. ಅವರಲ್ಲಿ ಮೊದಲನೆಯ ಇನಾಯತುಲ್ಲಾಖಾನರು ೧೮೮೮ನೆ ವರ್ಷದ ಅಕ್ಟೋಬರ್ ತಾ|| ೨೦ರಲ್ಲೂ, ೨ನೇ ಹಯಾತುಲ್ಲಾಖಾನರು ೧೮೯೦ ನೆ ವರ್ಷದ ಜೂನ್ ತಾ|| ೧ರಲ್ಲೂ, ೩ನೇ ಅಮಾನುಲ್ಲಾಖಾನರು ೧೮೯೨ನೆ ಅಕ್ಟೋಬರ್ ತಾ|| ೪ರಲ್ಲೂ, ೪ನೆ ಹಬೀಬುಲ್ಲಾಖಾನರು ೧೮೯೫ನೆ ಡಿಸೆಂಬರ್ ತಾ|| ೨೭ರಲ್ಲೂ, ೫ನೆ ಒಬೇದುಲ್ಲಾಖಾನರು ೧೯೦೫ನೆ ತಾ|| ೧೮ ರಲ್ಲೂ, ೬ನೆ ಅಸದುಲ್ಲಾಖಾನರು ೧೯೧೦ನೇ ಮೇ ತಾ|| ೨೩ ರಲ್ಲೂ ಜನಿಸಿದರು. ಇವರಲ್ಲದೆ ಗತಿಸಿದ ಅಮೀರ್ ಹಬೀಬುಲ್ಲಾಖಾನರಿಗೆ ನಸರುಲ್ಲಾಖಾನ್, ಅಮನುಲ್ಲಾಖಾನ್, ಮಹಮುದ್ ಉಮ್ಮರ್‌ಖಾನ್, ಗುಲಾಂಅಲೀಖಾನ್ ಎಂಬ ೪ ಮಂದಿ ಸಹೋದರರು. ಅಫ್‌ಗಾನ್‌ಸ್ಥಾನದ ಅಮೀರರಿಗೆ ಭರತಖಂಡದ ಸರ್ಕಾರದವರು ವರ್ಷಕ್ಕೆ ೧೮|| ಲಕ್ಷ ರೂ. ಕಪ್ಪವನ್ನು ಕೊಡುತ್ತಿರುವರು. ಈ ಅಫ್‌ಗಾನ್‌ಸ್ಥಾನದಲ್ಲಿ ೬೫ ಲಕ್ಷ ಜನಸಂಖ್ಯೆಯಿರುವುದು. ಅದು ಹೆಚ್ಚಾಗಿ ಪರ್ವತಪ್ರದೇಶವು ಒಟ್ಟು ೯೨೦೦೦ ಸೈನ್ಯವಿರುವುದು. ಅದರಲ್ಲಿ ೧೮೦೦೦ ಅಶ್ವಸೈನ್ಯವೂ, ಫಿರಂಗಿಗಳು ೩೯೬ ಇರುವುವು. ಅಮೀರರ ಕೈಕೆಳಗಣ ಉಮರಾವುಗಳು (ಸಾಮಂತರು) ಸೇನಾಸಹಾಯವನ್ನು ಅವಶ್ಯಕತೆ ಬಿದ್ದಾಗ ಮಾಡುವವರಾದಕಾರಣ ಅಲ್ಲಿಯ ಸೇನಾಬಲವು ಹೆಚ್ಚಾಗುವುದು. ಫೆಬ್ರವರಿ ತಿಂಗಳಲ್ಲಿ ಹಬೀಬುಲ್ಲಾಖಾನರು ಕೊಲ್ಲಲ್ಪಟ್ಟ ಬಳಿಕ ಅವರ ಮೊದಲನೆ ಸಹೋದರನಾದ ನಸರುಲ್ಲಾಖಾನರು ಪ್ರಭುತ್ವವನ್ನು ತನ್ನ ಹಸ್ತಗತಮಾಡಿಕೊಂಡು ಮುಖ್ಯಸೇನಾಪತಿಯ ಮತ್ತೂ ಗತಿಸಿದ ಅಮೀರರ ಜ್ಯೇಷ್ಠಪುತ್ರನಾದ ಇನಾಯತುಲ್ಲಾಖಾನರ ಮತ್ತೂ ಜಲಾಲಾಬಾದಿನ ಪ್ರಾಂತದ ಸರ್ಕಾರಿ ಮುಖ್ಯಾಧಿಕಾರಿಗಳ ಅನುಮತಿಯಮೇಲೆ ತಾನು ಅಮೀರನಾದೆನೆಂದು ಪ್ರಕಟಿಸಿಕೊಂಡನು. ಸತ್ತುಹೋದ ಅಮೀರರ ೩ನೆ ಮಗನಾದ ಅಮನುಲ್ಲಾಖಾನನು ಕಾಬೂಲ್ ಪ್ರಾಂತದಲ್ಲಿ ತಾನೇ ಅಮೀರನೆಂದು ಪ್ರಕಟಿಸಿಕೊಂಡನು. ಆ ಬಳಿಕ ನಸರುಲ್ಲಾಖಾನನು ಸಿಂಹಾಸನ ಪರಿತ್ಯಾಗಮಾಡಿ ಸಿವಿಲ್ ಅಧಿಕಾರಿಗಳು, ಸೈನಿಕಾಧಿಕಾರಿಗಳು, ಮತಪ್ರತಿನಿಧಿಗಳು——ಇವರುಗಳೊಡನೆ ಸ್ನೇಹಭಾವದಿಂದಿರುತ್ತೇನೆಂದೂ. ಅಮನುಲ್ಲಾಖಾನನ ಪ್ರಭುತ್ವವನ್ನು ಅಂಗೀಕರಿಸುತ್ತೇನೆಂದೂ ಪ್ರಮಾಣ ಮಾಡಿದನು. ಅನಂತರ ಮೃತರಾದ ಅಮೀರರ ಕುಮಾರರುಗಳಾದ ಇನಾಯತುಲ್ಲಾಖಾನ್ ಹಯಾತಲ್ಲಖಾನರೊಡನೆ ಈ ನಸರುಲ್ಲಾಖಾನನೂ ಸೆರೆಯಲ್ಲಿ ಇಡಲ್ಪಟ್ಟನು. ಕಳೆದ ಏಪ್ರಿಲ್ ತಾ|| ೧೩ರಲ್ಲಿ ಈಗಣ ಅಮೀರನು ಕಾಬೂಲ್ ಪಟ್ಟಣದ ಹತ್ತಿರ ಒಂದು ದರ್ಬಾರನ್ನು ಮಾಡಿ ತನ್ನ ತಂದೆಯಾದ ಹಬೀಬುಲ್ಲಾಖಾನರನ್ನು ನಸರುಲ್ಲಾಖಾನನು ಕೊಲ್ಲಿಸಿದನಾದಕಾರಣ ಅವನಿಗೆ ಜನ್ಮಾಂತ ದೇಶಬಹಿಷ್ಕಾರಶಿಕ್ಷೆಯನ್ನು ವಿಧಿಸಿದೆಯೆಂದು ಪ್ರಕಟಿಸಿದನು. ಮತ್ತೂ ತನ್ನ ಕೈಯಾರ ಹಬೀಬುಲ್ಲಾಖಾನರನ್ನು ಕೊಂದನೆಂದು ಕರ್ನಲ್‌ಷಾ ಅಲಿಜಾನಿಗೆ ಮರಣದಂಡನೆಯನ್ನು ವಿಧಿಸಿದನು. ಇದಾದಬಳಿಕ ಅಮೀರ್ ಅಮನುಲ್ಲಾಖಾನನ ಚರ್ಯೆಯನ್ನು ಕುರಿತು ಅಫ್‌ಗಾನ್‌ಸ್ಥಾನ್ ದೇಶದಲ್ಲೆಲ್ಲಾ ತರತರವಾದ ವ್ಯಾಖ್ಯಾನಗಳಿಗೆ ಆರಂಭವಾಯಿತು. ಈ ಅಮನುಲ್ಲಾಖಾನನೇ ತನ್ನ ತಂದೆಯಾದ ಹಿಂದಣ ಅಮೀರರನ್ನು ಕೊಲ್ಲಿಸಿದನೆಂದು ಪ್ರಜೆಗಳು ಹೇಳಲುಜ್ಜುಗಿಸಿದರು. ದೇಶದಲ್ಲಿ ವಿರೋಧವು ಪ್ರಬಲಿಸಿತು. ಅಮೀರರನ್ನು ಕೊಲ್ಲಿಸಿದವನಮೇಲೆ ಹಗೆಯನ್ನು ತೀರಿಸಿಕೊಳ್ಳುವುದಕ್ಕೆ ಪ್ರಜೆಗಳು ಉದ್ಯುಕ್ತರಾದರು. ಆಗ ಅಮನುಲ್ಲಾಖಾನನ ಸ್ಥಿತಿಯು ಬಹಳ ಅಪಾಯಾಸ್ಪದವಾಯಿತು. ನಿಜವಾಗಿ ಹಬೀಬುಲ್ಲಾಖಾನರನ್ನು ಕೊಂದವರಿಗೆ ಶಿಕ್ಷೆಯೇ ಆಗಲಿಲ್ಲವೆಂದು ಪ್ರಜೆಗಳು ಬಹಿರಂಗವಾಗಿ ಕೂಗಲಾರಂಭಿಸಿದರು. ಅದರಮೇಲೆ ಅಮನುಲ್ಲಾಖಾನನು ಭರತಖಂಡದಮೇಲೆ ಯುದ್ಧವನ್ನು ಪ್ರಾರಂಭಿಸಿ ಪ್ರಜೆಗಳ ದೃಷ್ಟಿಯನ್ನು ದೇಶದ ಒಳಕೋಟಲೆಯಿಂದ ತಪ್ಪಿಸಿ ಈ ಕಡೆಗೆ ತಿರುಗಿಸುವುದಕ್ಕೆ ಯೋಚಿಸಿಕೊಂಡನು. ಇದರಮೇಲೆ ಅಫ್‌ಗಾನ್‌ಸ್ಥಾನಕ್ಕೂ ಭರತಖಂಡಕ್ಕೂ ಯುದ್ಧವು ಪ್ರಾಪ್ತವಾಗಿದೆ.

ಭರತಖಂಡದ ವಾಯವ್ಯದ ಎಲ್ಲೆಕಟ್ಟಿನ ಪ್ರಾಂತದಲ್ಲಿ ಮೊನ್ನೆ ಬುಧವಾರದವರೆಗೂ ಯಾವ ವಿಧವಾದ ಹೋರಾಟವೂ ಜರುಗಿದ ವಾರ್ತೆಯು ಸಿಮ್ಲಾಕ್ಕೆ ಬರಲಿಲ್ಲವೆಂದು ಪಯೋನಿಯರ್ ಪತ್ರಿಕೆಯು ಹೇಳಿದ್ದಿತು. ಭರತಖಂಡದಿಂದ ವಿಶೇಷವಾಗಿ ಧನವನ್ನು ಕೊಳ್ಳೆಹೊಡೆಯುವುದಕ್ಕೆ ಅವಕಾಶವಾಗುವುದೆಂಬ ಉದ್ದೇಶದಿಂದ ಅಫ್‌ಗಾನ್‌ಸ್ಥಾನದವರಲ್ಲಿ ಈಗ ಒಗ್ಗಟ್ಟು ಹೆಚ್ಚಾಗಿದೆ. ಆದರೆ ಅಮನುಲ್ಲಾಖಾನನಿಗೆ ವಿರುದ್ಧವಾಗಿರುವ ಪಕ್ಷದವರು ಕೂಡ ಅಲ್ಲಿರುವುದರಿಂದ ಅವರ ಪ್ರಾಬಲ್ಯದಿಂದ ದೇಶದಲ್ಲಿ ಒಡಕು ಹುಟ್ಟುವಂತಿದೆ. ಈ ಸಂದರ್ಭದಲ್ಲಿ ಪರಸ್ಪರ ಶತೃತ್ವವೃದ್ಧಿಯಾಗದಂತೆ ಮಾಡುವುದಕ್ಕೆ ಏನೇನನ್ನು ಮಾಡಬಹುದೋ ಅದನ್ನೆಲ್ಲಾ ಮಾಡದರು. ತನ್ನ ತಂದೆಯನ್ನು ಕೊಂದ ಹಂತಕನಮೇಲೆ ವಿಧಿಸಿದ ಶಿಕ್ಷೆಯನ್ನು ಗಮನಿಸಿದರೆ ಈಗಣ ಅಮೀರ್ ಅಮನುಲ್ಲಾಖಾನನು ಬಹಳ ಅಪಾಯವನ್ನುಂಟುಮಾಡತಕ್ಕವನೆಂದು ತೋರುತ್ತದೆ. ಈತನು ನ್ಯಾಯವಾದ ಮಾತುಗಳನ್ನು ಕೇಳುವಂಥ ಸ್ಥಿತಿಯಲ್ಲಿರುವುದಿಲ್ಲ. ಆತನಾಗಿ ಕಾಲುಕೆರೆದು ಕದನಕ್ಕೆ ಕರೆದಾಗ ಅವನಪೇಕ್ಷೆಯಂತೆ ಮಾಡುವುದೇ ಉಳಿದಿರತಕ್ಕ ವಿಷಯವಾಗಿದೆ. ಈಗಣ ನವೀನ ಯುದ್ಧಕ್ರಮದ ಅನುಭವವು ಅಫ್ಘನ್ನರಿಗೆ ಇರುವುದಿಲ್ಲ. ಕಳೆದ ೩-೪ ವರ್ಷಗಳಿಂದಲೂ ಭರತಖಂಡದ ಎಲ್ಲೆಕಟ್ಟಿನ ಸ್ಥಲಗಳಲ್ಲಿ ಮೋಟಾರುಗಳ ಪ್ರಯಾಣಸೌಕರ್ಯ ಮೊದಲಾದ ಏರ್ಪಾಟುಗಳು ಚೆನ್ನಾಗಿ ನಡೆದಿರುತ್ತವೆ. ಆ ಪ್ರಾಂತದಲ್ಲಿ ವಿಶೇಷವಾಗಿ ಕೆಲಸಮಾಡಿ ಅನುಭವಪಡೆದಿರುವ ವಿಮಾನಗಳ ಸಹಾಯವು ನಮಗೆ ಅಧಿಕವಾಗಿರುವುದು. ಮೋಟಾರುಬಂಡಿಗಳ ಮೂಲಕ ಸೈನ್ಯಗಳನ್ನು ತ್ವರ್ಯವಾಗಿ ಒಂದು ಕಡೆಯಿಂದ ಮತ್ತೊಂದುಕಡೆಗೆ ಸಾಗಿಸುವುದಕ್ಕೆ ಅವಕಾಶವು ಹೆಚ್ಚಾಗಿರುವುದು. ಪರ್ವತಗಳಲ್ಲಿ ಅವಿತುಕೊಂಡಿರುವ ಶತೃಸೈನ್ಯಗಳನ್ನು ತಡಕಿ ಗೊತ್ತುಮಾಡುವುದಕ್ಕೆ ವಿಮಾನಗಳ ಸಹಾಯವು ಅನುಕೂಲ್ಯವಾಗಿದೆ. ಚಿಕ್ಕಚಿಕ್ಕ ಗುಡ್ಡಗಳ ಗುಹೆಗಳಲ್ಲಿಯೂ ಕಣಿವೆಗಳಲ್ಲಿಯೂ ಶತೃಗಳು ಅಡಗಿಕೊಂಡಿದ್ದರೂ ವಿಮಾನಗಳ ಮೂಲಕ ಆ ಸ್ಥಲಗಳನ್ನು ಗೊತ್ತುಮಾಡಿಕೊಳ್ಳಬಹುದು. ಆ ಶತೃಗಳೆಲ್ಲಾ ವೈಮಾನಿಕರ ಸಿಡಿಮದ್ದಿನೇಟಿಗೆ ಗುರಿಯಾಗಲೇಬೇಕಾಗುವುದು. ಇದಲ್ಲದೆ ನಮ್ಮ ಸೈನ್ಯಗಳಿಗೆ ವಾಯುವಾರ್ತಾ ನಿರ್ಮಾಣಸ್ಥಲಗಳು ಕೂಡ ವಿಶೇಷವಾಗಿ ಸಹಾಯಮಾಡುತ್ತವೆ. ಇದರಮೇಲೆ ಯೂರೋಪುಖಂಡದಲ್ಲಿ ಇನ್ನೂ ಬಿಡುಗಡೆಮಾಡಲ್ಪಡದಿರುವ ಸೈನ್ಯವು ನಮಗೆ ೨೦ ಲಕ್ಷವಿದೆ. ಅವಶ್ಯಕವಾದರೆ ನಮ್ಮ ಸೈನಿಕಾಧಿಕಾರಿಗಳು ಆ ಸೈನ್ಯವನ್ನು ಕರೆಯಿಸಿಕೊಳ್ಳಬಹುದು. ಅಲ್ಲದೆ ಅಧಿನಿವೇಶನಗಳ ಸೈನ್ಯಗಳು ಕೂಡ ಈಗ ಭರತಖಂಡದ ಮಾರ್ಗವಾಗಿಯೇ ಈಗ ಸ್ವದೇಶಗಳಿಗೆ ಹೋಗುತ್ತಿವೆ. ಅವಶ್ಯಕವಾದರೆ ಆ ಸೈನ್ಯಗಳನ್ನು ಕೂಡ ನಾವು ಇಲ್ಲಿಗೆ ಉಪಯೋಗಿಸಿಕೊಳ್ಳಬಹುದು. ಅದುಕಾರಣ ಧೈರ್ಯದಿಂದ ಈಗಣ ಪರಿಸ್ಥಿತಿಗಳನ್ನು ನಾವು ನೋಡುತ್ತಿರಬಹುದು. ಉದ್ದೇಶಪೂರ್ವಕವಾಗಿ ಈಗಣ ಅಮೀರನು ಭರತಖಂಡದಮೇಲೆ ಯುದ್ಧಕ್ಕೆ ಹೊರಟಿರುವನು. ಹಿಂದೆ ವಧಿಸಲ್ಪಟ್ಟ ಅಮೀರ್ ಹಬೀಬುಲ್ಲಾಖಾನರನ್ನು ಹೇಗಾದರೂ ಮಾಡಿ ಆಂಗ್ಲರ ಮಿತ್ರತ್ವದಿಂದ ಬಿಡಿಸಬೇಕೆಂದು ಜರ್ಮನ್ ಪಕ್ಷೀಯರು ಬಹಳ ಪ್ರಯತ್ನಗಳನ್ನು ಕಾಬೂಲಿನಲ್ಲಿ ನಡೆಯಿಸಿದರು. ಆದರೆ ಅವೆಲ್ಲವೂ ಭಂಗವಾದುವೆಂದು ಗೊತ್ತಾಗುತ್ತದೆ. ಇದಕ್ಕೆ ಕಾರಣವು ಯಾವುದೇ ಆಗಿದ್ದರೂ ಪ್ರತಿಫಲವು ಕಡೆಗೆ ವ್ಯಕ್ತವಾಗಿದೆ. ಭರತಖಂಡವು ವಿಪ್ಲವಮಯವಾಗಿರುವುದೆಂತಲೂ ಅದು ತನ್ನ ದೇಶಕ್ಕೂ ಬರುವುದೋ ಏನೋ ಎಂಬುದಾಗಿ ಈಗಣ ಹೊಸ ಅಮೀರನು ತನ್ನ ದೇಶದಲ್ಲಿ ಪ್ರಕಟಿಗೊಳಿಸಿರುವಂತೆ ಗೊತ್ತಾಗುತ್ತದೆ. ಭರತಖಂಡದಲ್ಲಿ ಪ್ರಜೆಗಳ ಮತಸ್ವಾತಂತ್ರ್ಯವೂ ಆಸ್ತಿಯೂ ಬಹಳ ಅಪಾಯಕರಸ್ಥಿತಿಯಲ್ಲಿದೆಯೆಂದು ಅಮೀರನು ತನ್ನ ಪ್ರಜೆಗಳಿಗೆ ಬೋಧಿಸುತ್ತಿರುವನು. ಮೂವರು ಮನುಷ್ಯರಾದರೂ ಒಂದು ಕಡೆ ಕೂಡಿ ಮಾತನಾಡಲಾಗದಂತೆಯೂ, ಮಹಮ್ಮದೀಯರು ತಂತಮ್ಮ ಮಸೀದಿಗಳಿಗೆ ಹೋಗದಂತೆಯೂ ಹಿಂದೂಗಳು ತಮ್ಮ ದೇವಾಲಯಗಳಿಗೆ ಪ್ರವೇಶಿಸದಂತೆಯೂ ಭರತಖಂಡದಲ್ಲಿ ಮಾಡಲ್ಪಟ್ಟಿರುವುದೆಂದು ಸುಳ್ಳಾದ ಪ್ರಕಟನೆಗಳನ್ನು ಅಮೀರನು ತನ್ನ ದೇಶದಲ್ಲಿ ಹರಡುತ್ತಿರುವನು. ಸಿಖ್‌ಜನರು ಆಂಗ್ಲರ ಸೈನ್ಯದಮೇಲೆ ತಿರುಗಿಬಿದ್ದು ಸುಟ್ಟುಹಾಕಿದರೆಂದೂ ಜರ್ಮನರು ಮರಳಿ ಯುದ್ಧವನ್ನು ಮಾಡಲು ಸಿದ್ಧರಾಗಿರುವರೆಂದೂ, ಆಂಗ್ಲರು ಧ್ವಂಸಮಾಡಲ್ಪಟ್ಟರೆಂದೂ ಸುಳ್ಳುಸುದ್ದಿಗಳನ್ನು ಹರಡಿರುವನು. ಭರತಖಂಡದಲ್ಲೂ ಕೂಡ ಈ ಸುಳ್ಳುಸುದ್ದಿಗಳನ್ನು ಹರಡಿಸಲು ಅಮೀರನು ಪ್ರಯತ್ನಿಸಿ ಕೆಲ ಪ್ರತಿಪತ್ರಿಕೆಗಳನ್ನು ಸಿದ್ಧಪಡಿಸಿದುದೂ ಗೊತ್ತಾಗಿರುವುದು. ಕಡೆಗೆ ಅನುಕೂಲವಾದ ವೃತ್ತಪತ್ರಿಕೆಗಳಿಗೆ ಹಣದಾಸೆಯನ್ನು ತೋರಿಸಿ ಇಂಥ ಸುಳ್ಳುಸುದ್ದಿಗಳನ್ನು ಪ್ರಕಟಿಸಲು ಯತ್ನಿಸಿದನು. ಇಂಥ ಅಸತ್ಯಪ್ರಕಟನೆಗಳನ್ನು ನಂಬಿ ಮಹಮ್ಮದೀಯರೂ ಭಾರತೀಯರೂ ಕೂಡ ತನಗೆ ಸಹಾಯಕರಾಗಿ ನಿಲ್ಲಲೆಂಬುದೇ ಅಮೀರನ ಈ ಪ್ರಯತ್ನದ ಹೇತುವಾಗಿರುತ್ತದೆ. ಇವೆಲ್ಲಾ ಎಷ್ಟು ಸುಳ್ಳೆಂಬುದು ಭಾರತೀಯರೆಲ್ಲರಿಗೂ ಗೊತ್ತೇ ಇದೆ. ಇಂಥ ವ್ಯರ್ಥವಾದ ಆಸೆಯಿಂದ ಆಂಗ್ಲಪ್ರಭುತ್ವಾಶ್ರಯದಲ್ಲಿರುವ ಭಾರತೀಯ ಪ್ರಜೆಗಳನ್ನು ತನ್ನ ಕಡೆಗೆ ತಿರುಗಿಸಿಕೊಳ್ಳಬಲ್ಲೆನೆಂಬ ದುರ್ಭ್ರಾಂತಿಯಿಂದ ಅಮೀರನು ಕಳೆದ ತಾ|| ೯ ರಲ್ಲಿ ಯುದ್ಧವನ್ನಾರಂಭಿಸಿರುವನು. ಈಗಾಗಲೇ ನಾವು ಶತೃಗಳನ್ನು ಅನೇಕ ಸ್ಥಲಗಳಿಂದ ಹಿಂಪಕ್ಕೋಡಿಸಿ, ಅವರ ಪ್ರದೇಶಗಳು ಕೆಲವನ್ನು ವಶಪಡಿಸಿಕೊಂಡಿದ್ದೇವೆ. ನಮ್ಮ ವಿಮಾನಸೈನ್ಯದಿಂದ ಅವರ ಅನೇಕ ಸಾಮಗ್ರಿಗಳನ್ನು ಧ್ವಂಸಮಾಡಿದ್ದೇವೆ. ಮೊನ್ನೆತಾನೇ ಮಹಾಪ್ರಬಲ ಶತೃಗಳನ್ನು ಸೋಲಿಸಿ ಪ್ರಬಲವಿಜಯವನ್ನು ಪಡೆದಿರುವ ನಮ್ಮ ಮೇಲೆ ಅಮೀರನು ಕತ್ತಿಗಟ್ಟಿರುವುದು ಬೆಂಕಿಯಮೇಲೆ ಪತಂಗವು ಹಾರಿ ಮುತ್ತಿದಂತಾಗಿರುತ್ತದೆ. ಇದು ಅಮೀರನ ವಿನಾಶಕ್ಕಾಗಿ ತಟಸ್ಥವಾಗಿದೆ. ಆಂಗ್ಲಪ್ರಭುತ್ವಕ್ಕೆ ಅಸಾಧಾರಣವಾದ ಸೈನಿಕಸಂಪತ್ತಿಯಿದೆ. ಇಷ್ಟರಲ್ಲೇ ಅಮೀರನಿಗೆ ತಕ್ಕ ಪ್ರಾಯಶ್ಚಿತ್ತವಾಗುವುದು. ಅದುಕಾರಣ ಭಾರತೀಯರು ಅಮೀರನ ಸುಳ್ಳುಸುದ್ದಿಗಳನ್ನು ನಂಬದೆಯೂ ದೇಶದ ಶಾಂತಿಗೆ ಭಂಗತಂದುಕೊಳ್ಳದಂತೆಯೂ ಪ್ರವರ್ತಿಸುವವರಾಗಬೇಕೆಂದು ವೈಸ್ರಾಯರು ತಮ್ಮ ತಾ|| ೧೦ ರ ಪ್ರಕಟನೆಯಿಂದ ಸಕಲ ಪ್ರಜೆಗಳಿಗೂ ತಿಳಿಯಪಡಿಸಿದ್ದಾರೆ.

ಈ ರೀತಿಯಲ್ಲಿ ಭರತಖಂಡದ ಪ್ರಭುತ್ವದವರು ಮಾಡಿರುವ ಪ್ರಕಟನವನ್ನು ನೋಡಿದರೆ ಅಫ್ಘಾನ್‌ಸ್ಥಾನವು ನಮ್ಮ ಪ್ರಭುತ್ವದವರನ್ನು ಕದನಕ್ಕೆ ತಾನೇ ಕರೆದಿದೆಯೆಂದು ಗೊತ್ತಾಗುತ್ತದೆ. ಗತಿಸಿದ ಹಬೀಬುಲ್ಲಾಖಾನರು ಪ್ರಬಲರಾದ ಆಂಗ್ಲರಲ್ಲಿ ನಿರ್ಮಲಮೈತ್ರಿಯಿಂದ ನಡೆದುಕೊಂಡು ಕಳೆದ ಯುದ್ಧಕಾಲದಲ್ಲೂ ತಮ್ಮ ತಾಟಸ್ಥ್ಯವನ್ನು ಕಾಪಾಡಿಕೊಂಡುದರಿಂದ ತಮ್ಮ ಗೌರವವನ್ನೂ ದೇಶಸೌಖ್ಯವನ್ನೂ ಕಾಪಾಡಿಕೊಂಡರು. ಅವರ ಜತೆಗೇ ಅಫ್ಘಾನ್ ದೇಶದ ಸ್ವಾತಂತ್ರ್ಯಗೌರವ ಸಂಪತ್ತಿಯು ನಾಶವಾಗುವ ಯೋಗವಿದ್ದಿತೋ ಏನೋ ಎಂದು ಈಗಣ ಪರಿಸ್ಥಿತಿಗಳಿಂದ ಯೋಚಿಸಬೇಕಾಗುತ್ತದೆ. ಈಗಣ ಅಮೀರನು ಆಂಗ್ಲರಮೇಲೆ ಇಷ್ಟು ಹಮ್ಮಿನಿಂದ ನಡೆದುಕೊಳ್ಳುವುದಕ್ಕೆ ಒಳಗೆ ಯಾವುದಾದರೂ ಪ್ರೇರಣೆಯೂ ಬೆಂಬಲವೂ ಇದೆಯೋ ಹೇಗೋ ಗೊತ್ತಾಗುವುದಿಲ್ಲ. ನಮ್ಮ ಪ್ರಭುತ್ವದವರಿಗಂತೂ ಅಫ್ಘಾನ್‌ಸ್ಥಾನವನ್ನು ವಶಪಡಿಸಿಕೊಳ್ಳಬೇಕೆಂಬ ಕಾಂಕ್ಷೆಯೇನೂ ಇರುವುದಿಲ್ಲ. ವಿನಾಬಂದರೆ ಸುಮ್ಮನೆ ಇರತಕ್ಕವರಾಗಿಯೂ ಇಲ್ಲ. ತುರ್ಕಿದೇಶವು ಜರ್ಮನರ ಪ್ರೋದ್ಬಲದಿಂದ ಇಂಗ್ಲೀಷರ ಮೈತ್ರಿಯನ್ನು ತೃಣೀಕರಿಸಿ ಯುದ್ಧಕ್ಕೆ ನಿಂತು ಕಡೆಗೆ ಪರಾಜಿತವಾಗಿ, ಹೇಳಿದಂತೆ ನಡೆದುಕೊಳ್ಳಬೇಕಾದ ಅಸ್ವತಂತ್ರಸ್ಥಿತಿಗೆ ಬಂದು ಕುಳಿತಿರುವುದು. ಅಫ್ಘಾನ್‌ಸ್ಥಾನದ ಗತಿಯೂ ಹಾಗೇ ಆಗುವ ಹೊತ್ತು ಬಂದಿದೆಯೋ ಏನೋ. ಪ್ರಪಂಚದಲ್ಲಿ ಮಹಮ್ಮದೀಯ ಪ್ರಭುತ್ವಸ್ವಾತಂತ್ರ್ಯಕ್ಕೇ ಒಂದು ಕಡೆಯಿಂದ ಲಕ್ತೆಯೊದಗಿಸುವ ದುಷ್ಕಾಲವಾಗಿ ಇದು ಕಾಣುತ್ತಿದೆ. ಇಂಥ ಸ್ಥಿತಿಯನ್ನು ತುರುಷ್ಕಪ್ರಪಂಚವು ತಾನಾಗಿ ತಂದುಕೊಂಡುದು ವಿಷಾದಸ್ಥಾನವು. ವೈಸ್ರಾಯರು ಅಪ್ಪಣೆಕೊಡಿಸಿರುವಂತೆ ಪ್ರಬಲವಾದ ಆಂಗ್ಲರಮೇಲೆ ಬಡಸಾಯಿಯಾದ ಅಫ್ಘಾನ್‌ಸ್ಥಾನವು ಕೈಮಾಡಿದರೆ ಬೆಂಕಿಯಮೇಲೆ ಹಾರಿದ ಪತಂಗದಂತೆ ದಗ್ಧವಾಗಿ ಹೋಗುವುದೇನೋ ನಿಜ. ಅದರ ಯೋಗವೆಲ್ಲಾ ಹಬೀಬುಲ್ಲಾಖಾನರ ಜತೆಯಲ್ಲಿಯೇ ಅಸ್ತವಾದಂತೆ ಕಾಣುತ್ತಿದೆ. “ವಿನಾಶಕಾಲೇ ವಿಪರೀತಬುದ್ಧಿ!” ಎಂಬಂತೆ ಅಮೀರನ ಕಡೆಗಾಲಕ್ಕೆ ಇಂಥ ದುರ್ಬುದ್ಧಿಯು ಹುಟ್ಟಿದೆ. ಇಷ್ಟನ್ನೆಲ್ಲಾ ಯೋಚಿಸಿಕೊಳ್ಳುವಷ್ಟು ವಿವೇಕವು ಭಾರತೀಯರಿಗೆ ಇಲ್ಲ. ಅಮೀರನ ಪೊಳ್ಳುಹರಟೆಗಳಿಗೆ ಮರುಳಾಗಿ ಆಂಗ್ಲರಮೇಲೆ ಹಗೆತನವನ್ನು ತೊಟ್ಟು ಅಫ್ಘಾನ್‌ಸ್ಥಾನದವರ ಪಕ್ಷಕ್ಕೆ ಸೇರತಕ್ಕ ಭಾರತಿಯರು ಇರಲಾರರೆಂಬುದೇ ನಮ್ಮ ನಂಬುಗೆ. ಆದರೆ ಇಲ್ಲೂ ಜಾಲ್ಮರಾದ ಕೆಲವರ ವಿಪ್ಲವೋದ್ದೇಶದ ಸಂಚು ಇದ್ದೇ ಇದೆಯೆಂಬ ಸಂದೇಹವಿರುವುದರಿಂದ ಅಂಥವರೇನಾದರೂ ಈ ಸಮಯದಲ್ಲಿ ಸ್ವಲ್ಪ ಕದಲಾಡಿದರೆ ತಕ್ಕ ಪ್ರಾಯಶ್ಚಿತ್ತವು ಅವರಿಗೂ ಆಗದೆ ಹೋಗುವುದಿಲ್ಲ. ಆದರೆ ಅಂಥ ವ್ಯರ್ಥಪ್ರಯತ್ನದಿಂದ ಸ್ವಾಮಿದ್ರೋಹ ದೇಶದ್ರೋಹವನ್ನು ಮಾಡಿದರೆಂಬ ಅಪಖ್ಯಾತಿಯ ಕಳಂಕವನ್ನು ದೇಶಕ್ಕೆ ಅಂಟಿಸಬಾರದು. ಆಂಗ್ಲಪ್ರಭುತ್ವವು ನಮಗೆ ದೊರೆಯುವುದಕ್ಕೆ ಮುಂಚೆ ನಮ್ಮ ದೇಶವು ಎಷ್ಟು ನಷ್ಟಕಷ್ಟಗಳನ್ನನುಭವಿಸುತ್ತಿದ್ದಿತೆಂಬುದನ್ನು ಆಲೋಚಿಸಬಲ್ಲವರಿಗೆ ಈಗಣ ಆಂಗ್ಲಪ್ರಭುತ್ವದ ಕೈಕೆಳಗಣ ಸುಖವು ವ್ಯಕ್ತವಾಗುವುದು. ಇದನ್ನು ಬಿಟ್ಟು ಅಫ್ಘನ್ನರಂಥವರ ಪಕ್ಷವನ್ನು ವಿಷಮಸಮಯಗಳಲ್ಲಿ ವಹಿಸುವುದೆಂದರೆ ಗಂಗಾಶ್ರಯವನ್ನು ಬಿಟ್ಟು ಕುಂಟೆಯನ್ನು ನಂಬಿಕೊಳ್ಳುವಂಥ ಪ್ರಯತ್ನವೇ ಸರಿ. ಇಂಥ ಹುಚ್ಚುತನಕ್ಕೆ ಯಾವ ಭಾರತೀಯರೂ ಬಲಿಯಾಗಲಾರರು.

ಅಫ್ಘಾನ್‌ಸ್ಥಾನಕ್ಕೆ ಸಂಬಂಧಿಸಿದ ಇತರ ವಿಷಯಗಳು.

ಈ ದೇಶದಲ್ಲಿದ್ದ ಯೂರೋಪ್ಯರೆಲ್ಲರೂ ದೇಶವನ್ನು ಬಿಟ್ಟು ಹೋದರು.

ಕಳೆದ ತಾ|| ೯ ರಲ್ಲಿ ಭರತಖಂಡದ ಸರ್ಕಾರದವರು ಪೆಷಾವರ್ ಪಟ್ಟಣದಲ್ಲಿ ಸೈನಿಕಶಾಸನವನ್ನು ಪ್ರಕಟಿಸಿದರು.

ಪೆಷಾವರ್ ಪಟ್ಟಣದಲ್ಲಿರುವ ಅಫ್ಘನ್ ಪೋಸ್ಟುಮಾಸ್ಟರು ಕೆಲಕಾಲದಿಂದ ತನ್ನ ಉದ್ಯೋಗಲಕ್ಷಣಕ್ಕೆ ವಿರುದ್ಧವಾಗಿ ಶಾಂತಿಯನ್ನು ಭಂಗಗೊಳಿಸತಕ್ಕ ಪ್ರಕಟನಪತ್ರಗಳನ್ನು ಹಂಚುತ್ತಿರುವನು. ಆತನು ಆಂದೋಳನಕ್ಕೆ ಮೂಲಭೂತನಾಗಿರುತ್ತಾನೆ. ಈತನು ರಾಜ್ಯಾಂಗಕ್ಕೆ ಯಾವ ವಿಧದಿಂದಲೂ ಸಂಬಂಧಿಸಿದ ರಾಯಭಾರಿಯಾಗಿರುವುದಿಲ್ಲ. ಅಫ್ಘನ್ ಅಂಚೆಯಾಫೀಸಿಗೆ ಈತನು ಅಧಿಕಾರಿ. ಅಫ್ಘಾನ್‌ಸ್ಥಾನದ ಸೌಕರ್ಯಾರ್ಥವಾಗಿ ಪೆಷಾವರಿನಲ್ಲಿ ಅವರ ಅಂಚೆಮನೆ ಇಡುವುದಕ್ಕೆ ಇಂಡ್ಯಾ ಸರ್ಕಾರದವರು ಅವಕಾಶಕೊಟ್ಟಿದ್ದರು. ಈ ಪೋಸ್ಟುಮಾಸ್ಟರು ಬಂದ ಕೆಲ ಕಾಲದೊಳಗಾಗಿಯೇ ತನ್ನ ಉದ್ಯೋಗವನ್ನು ಬಿಟ್ಟು ಪೆಷಾವರ್ ಪಟ್ಟಣದೊಳಗಿರುವ ಅಫ್ಘನ್ ತುಂಟರೊಡನೆ ಸೇರಿಕೊಂಡನು. ಆ ತುಂಟರು ಆಯುಧಪಾಣಿಗಳಾದ ಅಫ್ಘನ್ನರ ವಂಶೀಯರು. ಈತನು ಅವರೊಡನೆ ಸೇರಿ ಆಂಗ್ಲರಮೇಲೆ ಬಹಿರಂಗವಾಗಿ ವಿಪ್ಲವವನ್ನೆಬ್ಬಿಸಿದನು. ಆಂಗ್ಲಪ್ರಭುತ್ವದವರು ಒಬ್ಬರಿಗೂ ತಿಳಿಯದಂತೆಯೇ ಸನ್ನಾಹಮಾಡಿಕೊಂಡಿದ್ದು ಮಧ್ಯಾಹ್ನದಹೊತ್ತಿನಲ್ಲಿ ಸುತ್ತಲೂ ಮುತ್ತಿಗೆಹಾಕಿ, ಆ ಪೋಸ್ಟುಮಾಸ್ಟರನ್ನೂ ಆತನ ಪರಿವಾರವನ್ನೂ ಸೆರೆಹಿಡಿದರು.

ಈಚೆಗೆ ಜಲಾಲಾಬಾದಿಗೂ ಥಕ್ಕಾಕ್ಕೂ ಮಧ್ಯದಲ್ಲಿರುವ ಸಿಕ್‌ಗ್ರಹಿಲಿನ ಹತ್ತಿರ ಅಫ್ಘನ್‌ಸೈನಿಕರೂ ಬೆಟ್ಟಗಾಡು ನಿವಾಸಿಗಳ ಗುಂಪೂ ಕೂಡಿಸಲ್ಪಟ್ಟಿರುವುದೆಂಬ ಸಂಗತಿಯು ಗೊತ್ತಾಗಿದೆ. ಕೋಹಟ್ಟು ಪಟ್ಟಣದಲ್ಲಿರುವ ಹಳಬರಾದ ಅಫ್ಘನ್ನರು ಯುದ್ಧದಲ್ಲಿ ಇಷ್ಟವುಳ್ಳವರಾಗಿಲ್ಲ. ತರುಣರಿಗೆ ಮಾತ್ರ ಯುದ್ಧದಲ್ಲಿ ಆಸೆಯಿರಬಹುದು. ವಜೀರ್‌ಸ್ಥಾನದಲ್ಲಿ ಶಾಂತಿಯೇ ಇದೆ. ಲಾಂಡಿಕೋಟಾಲುಪ್ರಾಂತದ ಪಟ್ಟಣಗಳನ್ನು ಆಂಗ್ಲವಿಮಾನದಳವು ರಕ್ಷಿಸುತ್ತಿರುವಾಗ ಅಫ್ಘನ್ನರು ಆ ವಿಮಾನಗಳಮೇಲೆ ತುಪಾಕಿ ಗುಂಡುಗಳನ್ನು ಹಾರಿಸಿದರು.

ಯುದ್ಧಾರಂಭ.

ಅಫ್ಘನ್ನರು ೮ ಸಾವಿರ ಅಫ್ಘನ್ ಕಾಲುಬಲವನ್ನೂ ೮ ಫಿರಂಗಿಗಳನ್ನೂ ೩ ಸಾವಿರ ಲಷ್ಕರ್ ಜಾತಿಯವರನ್ನೂ ಲಾಂಡಿಕೊಟಾಲ್ ಕೋಟೆಗೆ ಉತ್ತರದಲ್ಲಿ ಸೇರಿಸಿಕೊಂಡಿದ್ದರು. ಮತ್ತೂ ಜಲವಸತಿಯ ಅನುಕೂಲವುಳ್ಳ ಬಾಗುಪಟ್ಟಣದ ಮತ್ತೂ ಸ್ಪರ್ಸ್‌ಪಟ್ಟಣದ ಬಳಿಯಲ್ಲೂ ಕೂಡ ಅವರು ಮುಖ್ಯ ಸೇನಾಶಿಬಿರವನ್ನೇರ್ಪಡಿಸಿಕೊಂಡು ಕಡೆಗೆ ಆಂಗ್ಲರ ಅಧಿಪತ್ಯಕ್ಕೊಳಪಟ್ಟ ಭರತಖಂಡದ ಎಲ್ಲೆಯೊಳಕ್ಕೆ ತಾ|| ೯ ರಲ್ಲಿ ನುಗ್ಗಿ ಬಂದರು. ಅವರನ್ನು ತರುಬುವುದಕ್ಕಾಗಿ ಇಂಗ್ಲೀಷರು ತಮ್ಮ ಜೋಣಿಯ ದಳವನ್ನು ಕ್ರೋಕರ್ ಎಂಬ ಸೇನಾಪತಿಯ ಅಧೀನದಲ್ಲಿ ಕೈಬರ್‌ಕಣಿವೆಯ ಬಳಿಗೆ ಕಳುಹಿಸಿಕೊಟ್ಟರು. ಈ ಸೈನ್ಯವು ಶತೃಗಳಮೇಲೆ ಬಿದ್ದು ಯುದ್ಧಮಾಡಿ ಅಫ್‌ಕಲ್ ಎಂಬ ಗ್ರಾಮದಲ್ಲಿ (ಇದು ನಮ್ಮವರ ಎಲ್ಲೆಯೊಳಗಿರುವುದು.) ಬಂದು ನೆಲಸಿಕೊಂಡಿದ್ದ ಅವರನ್ನೆಲ್ಲಾ ಅಲ್ಲಿಂದ ಓಡಿಸಿ ತಾವು ಆಕ್ರಮಿಸಿ, ಲಾಂಡಿಕೊಟಾಲಿಗೆ ಪಶ್ಚಿಮದ ಕಣಿವೆಯಲ್ಲಿದ್ದು ಸಾಗಿ ಹೋಗುತ್ತಿದೆ. ಅಲ್ಲಿಯ ಕೆಲ ಮುಖ್ಯಸ್ಥಾನಗಳನ್ನು ಈ ಸೈನ್ಯವು ವಶಪಡಿಸಿಕೊಂಡಿತು. ಈ ಸುತ್ತಿನಲ್ಲಿ ಪ್ರಥಮತಃ ನಡೆದ ಯುದ್ಧದಲ್ಲಿ ಇಂಗ್ಲೀಷ್ ಸೇನೆಗೆ ವಿಮಾನದಳವು ತುಂಬಾ ಸಹಾಯಮಾಡಿತು. ನಮ್ಮಕಡೆಯವರು ಉದ್ದೇಶಗೊಂಡಿದ್ದ ಸ್ಥಾನಗಳನ್ನೆಲ್ಲಾ ವಶಪಡಿಸಿಕೊಂಡರು. ನಷ್ಟವು ಕೊಂಚವೇ ಆಗಿರುವುದು. ವಿಮಾನಗಳು ಸಿಡಿಮದ್ದಿನ ಏಟುಗಳಿಂದಲೂ ಫಿರಂಗಿಗುಂಡುಗಳ ಸುರಿಮಳೆಯಿಂದಲೂ ಶತೃಗಳನ್ನು ಮೊದಲಸಲಕ್ಕೆ ಎದೆಬಿರಿಯಿಸಿ ಮುಖಗೆಡಿಸಿಬಿಟ್ಟಿರುವುವು. ಈ ಸೈನ್ಯವು ಕೈಬರಿನ ಬಳಿಯಲ್ಲಿ ನೆಲಸಿರುವ ಆಂಗ್ಲಸೈನ್ಯದೊಡನೆ ಇಷ್ಟರಲ್ಲೇ ಕಲೆತಿರಬೇಕು.

ಸಂಧಿ ನಿಬಂಧನೆಗಳು.

೧೮ ರಾಷ್ಟ್ರಗಳವರು ಸೇರಿ ಕಳೆದ ನಾಲ್ಕು ತಿಂಗಳುಗಳಿಂದಲೂ ಚರ್ಚಿಸಿ ನಿರ್ಧರಿಸಿ ೩೫೦ ಪುಟಗಳ ವಿಸ್ತಾರವಾದ ಸಂಧಿ ನಿಬಂಧನೆಗಳನ್ನು ಕಳೆದ ತಾ|| ೭ರಲ್ಲಿ ಜರ್ಮನ್ ಪ್ರಭುತ್ವ ಪ್ರತಿನಿಧಿಗಳಿಗೆ ಕೊಟ್ಟಿದ್ದಾರೆ. ಅವುಗಳ ವಿವರಣೆಯು ಕಳೆದ ವಾರ ಸೀಮೆಯಿಂದ ಬಂದಿರುವ ತಂತ್ರೀವಾರ್ತೆಗಳಿಂದ ಕೆಲವಟ್ಟಿಗೆ ಗೊತ್ತಾಗುತ್ತದೆ. ಇದರಲ್ಲಿ ಎಲ್ಲಕ್ಕೂ ಮೊದಲನೆಯ ನಿಬಂಧನೆಯು ಸರ್ವಜಾತಿ ಸಮ್ಮೇಳನ ಸಂಘ ಸ್ಥಾಪನೆಯಾಗಿರುವುದು ಪ್ರಶಸ್ತವಾಗಿರುತ್ತದೆ. ಮುಖ್ಯವಾಗಿ ಮುಂದೆ ಯುದ್ಧವೇ ಸಂಭವಿಸದಂತೆ ಮಾಡುವುದಕ್ಕೆ ಪುರುಷ ಯತ್ನದಲ್ಲಿ ಯಾವುದು ಸಾಧ್ಯವೋ ಕರ್ತವ್ಯವೋ ಅದನ್ನೆಲ್ಲಾ ಈ ನಿಬಂಧನೆಗಳ ರೂಪದಲ್ಲಿ ನಿರ್ಧರಿಸಿದ್ದಾರೆ. ಮಹಾ ಯುದ್ಧೋತ್ಪಾದನದಿಂದ ಲೋಕದ ಪ್ರಳಯಕ್ಕೆ ಕಾರಣಭೂತರಾದ ಜರ್ಮನರ ರಾಜಸಬಲವನ್ನು ನಿರ್ಮೂಲಮಾಡುವುದರಿಂದಲೇ ಜಗತ್ತಿನಲ್ಲಿ ಚಿರಶಾಂತಿಯುಂಟಾಗುವುದೆಂದು ಮಿತ್ರಮಂಡಲಿಯವರು ನಿರ್ಧರಿಸಿಕೊಂಡು ಈ ನಿಬಂಧನೆಗಳನ್ನೇರ್ಪಡಿಸಿದ್ದಾರೆ. ಜರ್ಮನರು ಮಹಾದುರಾಶೆಯಿಂದ ಮಾಡಿದ ಅಪರಾಧಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ಈ ಸಂಧಿನಿಬಂಧನೆಗಳು ವಿಧಿಸಿರುವುವೆಂದು ಹೇಳುವಲ್ಲಿ ಅಡ್ಡಿಯಿರುವುದಿಲ್ಲ. ಅವರ ವಿಷಯದಲ್ಲಿ ಉಕ್ತವಾಗಿರುವ ನಿಬಂಧನೆಗಳೇನೆಂದರೆ——

ಯುದ್ಧಕ್ಕೆ ಮುಖ್ಯಕಾರಣನಾದ ಜರ್ಮನ್ ಚಕ್ರವರ್ತಿಯು ವಿಚಾರಣೆಗೊಳಪಟ್ಟು ಶಿಕ್ಷಿತನಾಗಬೇಕು. ಯುದ್ಧನಿಯಮಗಳನ್ನು ಮೀರಿ ಅತ್ಯಾಚಾರಗಳನ್ನು ನಡೆಯಿಸಿದ ಅವರ ಸೇನಾಪತಿಗಳು ಮೊದಲಾದವರು ವಿಚಾರಣೆಯಿಂದ ಶಿಕ್ಷಿತರಾಗಬೇಕು. ಜರ್ಮನಿಯಲ್ಲಿರುವ ನಿರ್ಬಂಧಸೇನಾಕಲ್ಪನಪದ್ಧತಿಯು ತೆಗೆದುಹಾಕಲ್ಪಡಬೇಕು. ಅವರ ರಾಜ್ಯರಕ್ಷಣೆಗೆ ಯಾವಾಗಲೂ ೧ ಲಕ್ಷ ಸೈನ್ಯಮಾತ್ರವೇ ಇರಬೇಕು. ಮುಖ್ಯಸೇನಾಪತಿಗೆ ಆಲೋಚನ ಸಂಘವು ಇರಕೂಡದು. ಜರ್ಮನರ ಕಾಲ್ಬಲವೂ ಸಬ್‌ಮೆರೀನುಗಳೂ ಬಹಳ ಕಡಿಮೆ ಮಾಡಲ್ಪಡಬೇಕು. ಅವರ ಯುದ್ಧನೌಕಾವಿಮಾನಗಳನ್ನು ಮಿತ್ರಮಂಡಲಿಯವರಿಗೊಪ್ಪಿಸಿ ಬಿಡಬೇಕು. ಯಾವತೆರದ ವಿಮಾನಗಳನ್ನೂ ಅವರು ೬ ತಿಂಗಳವರೆಗೂ ಕಟ್ಟಿಕೊಡದು. (ಅವರು ಮರಳಿ ಯುದ್ಧಕ್ಕೆ ನಿಂತುಕೊಳ್ಳಲು ಅವಕಾಶವಿಲ್ಲದಂತೆ ಮಾಡುವುದಕ್ಕಾಗಿ ಈ ನಿಬಂಧನೆಗಳು ಮಾಡಲ್ಪಟ್ಟಿವೆ) ಜರ್ಮನರು ಮಿತ್ರಮಂಡಲಿಯ ಪ್ರಜೆಗಳಿಗೂ ಅವರ ಆಸ್ತಿಗೂ ಉಂಟುಮಾಡಿದ ನಷ್ಟಕ್ಕೆ ಪರಿಹಾರವನ್ನು ಕಟ್ಟಿಕೊಡಬೇಕು. ಬೆಲ್ಜಿಯಮ್ಮಿನಿಂದ ಅವರು ದೋಚಿಕೊಂಡು ಹೋಗಿರುವ ಸೊತ್ತುಗಳನ್ನೆಲ್ಲಾ ಮರಳಿ ಕೊಟ್ಟುಬಿಡಬೇಕು. ೩೦ ವರ್ಷಗಳ ಕಾಲದೊಳಗೆ ಅವರು ೫೦೦ ಕೋಟಿ ಪೌನುಗಳ ಪರಿಹಾರದ್ರವ್ಯವನ್ನು ಮಿತ್ರಮಂಡಲಿಯವರು ಗೊತ್ತುಮಾಡುವ ಅಧಿಕಾರಿಗಳ ವಶಕ್ಕೆ ಒಪ್ಪಿಸಬೇಕು. ಅದರಲ್ಲಿ ೧೦೦ ಕೋಟಿ ಪೌನುಗಳನ್ನು ೧೯೨೧ನೇ ವರ್ಷ ಮುಗಿಯುವುದರೊಳಗೆ ಸಲ್ಲಿಸಬೇಕು. ಜರ್ಮನರು ಮಿತ್ರಮಂಡಲಿದೇಶದಲ್ಲಿ ಹಾಳ್ಮಾಡಿರುವ ಪ್ರದೇಶಗಳನ್ನೂ ಸಾಮಗ್ರಿಗಳನ್ನೂ ಅವರೇ ಪೂರ್ವದಂತೆ ನಿರ್ಮಿಸಿಕೊಡಬೇಕು. ಅವರು ಸಮುದ್ರಗಳಲ್ಲಿ ಮುಳುಗಿಸಿದ ಹಡಗುಗಳಿಗೂ ದೋಣಿಗಳಿಗೂ ಪ್ರತಿಯಾಗಿ ಹಡಗುಗಳನ್ನೂ ದೋಣಿಗಳನ್ನೂ ಕೂಡಲೆಯೇ ಆಗಲೀ ಕಾಲಕ್ರಮದಲ್ಲಿಯೇ ಆಗಲೀ ಕೊಡಬೇಕು. ೫ ವರ್ಷಗಳವರೆಗೂ ವರ್ಷಕ್ಕೆ ೨ ಲಕ್ಷ ಟನ್ನುಗಳ ಭಾರವನ್ನು ಹೊರುವಷ್ಟು ಹಡಗುಗಳನ್ನು ಕಟ್ಟಿ ಮಿತ್ರಮಂಡಲಿಯವರಿಗೆ ಕೊಡಬೇಕು. ಜರ್ಮನಿಯಲ್ಲಿ ಉತ್ಪನ್ನವಾಗುವ ಕಲ್ಲಿದ್ದಲಲ್ಲಿ ಸ್ವಲ್ಪಭಾಗವನ್ನು ಫ್ರಾನ್ಸ್, ಇಟಲಿ, ಬೆಲ್ಜಿಯಂ ದೇಶಗಳವರಿಗೆ ಅವರು ಗೊತ್ತುಮಾಡುವ ಬೆಲೆಗೆ ನಿರ್ಬಂಧದಿಂದ ಕೊಟ್ಟೇತೀರಬೇಕು. ಸಂಧಿಯಾದ ಕಾಲದಲ್ಲಿ ಜರ್ಮನಿದೇಶದೊಳಗೆ ಸಿದ್ಧವಾಗಿದ್ದ ರಂಗಿನ ಮತ್ತೂ ರಾಸಾಯನಿಕವಾದ ವಸ್ತುಗಳಲ್ಲಿ ಕೆಲಭಾಗವನ್ನು ಮಿತ್ರಮಂಡಲಿಗೆ ಕೊಡಬೇಕು. ಮತ್ತೂ ಮುಂದೆ ನಿರ್ಮಿತವಾಗುವ ಆ ವಸ್ತುಗಳಲ್ಲಿ ¼ ಭಾಗವನ್ನು ೧೯೨೫ನೆ ವರ್ಷದವರೆಗೂ ಪ್ರತಿವರ್ಷದಲ್ಲೂ ಕೊಡುತ್ತಿರಬೇಕು. ಜರ್ಮನರು ತಮ್ಮ ಲೋಹಮಾರ್ಗಗಳನ್ನೂ ಜಲಮಾರ್ಗಗಳನ್ನೂ ಮಿತ್ರಮಂಡಲಿಯವರ ವ್ಯಾಪಾರಕ್ಕೂ ಸೈನಿಕರ ಗಮನಾಗಮನಗಳಿಗೂ ಉಪಯೋಗಿಸಿಕೊಳ್ಳಲು ಅನುಕೂಲಪಡಿಸಿಕೊಡಬೇಕು. ಜರ್ಮನರ ಅಧಿನಿವೇಶಗಳೆಲ್ಲಾ ಮಿತ್ರಮಂಡಲಿಯ ಪಾಲನೆಗೊಳಪಟ್ಟಿರಬೇಕು. ಅಲ್ಸಸ್‌ಲೊರೈನ್‌ಪ್ರಾಂತವು ಅವುಗಳಲ್ಲಿರುವ ಕಲ್ಲಿದ್ದಲ ಗಣಿಗಳೊಡನೆ ಫ್ರೆಂಚರಿಗೆ ಸೇರಿಸಲ್ಪಡಬೇಕು. ಇತ್ಯಾದಿ.

ಈ ನಿಬಂಧನೆಗಳೆಲ್ಲಾ ಪರಾಜಿತರಾದವರ ಮೇಲೆ ಜಯಶೀಲರು ಹೊರಿಸತಕ್ಕ ನಿಬಂಧನೆಗಳಿಗನುಗುಣವಾಗಿಯೇ ಇವೆ. ಕೃತಕರ್ಮ ಫಲಾನುಭವಕ್ಕೆ ಸಿದ್ಧವಾಗಿರುವ ಜರ್ಮನಿಯು ವಿಷದಂತವನ್ನು ಮುರಿಸಿಕೊಂಡ ಕಾಳಸರ್ಪಕ್ಕೆ ಸಮನಾಗಿದೆ. ಈ ನಿಬಂಧನೆಗಳು ಜರ್ಮನರಿಗೆ ಬಹು ಕಠಿನಗಳಾಗಿ ತೋರುತ್ತಿದ್ದರೂ ಎಂಥ ಕಠಿನ ನಿಬಂಧನೆಗಳಾದರೂ ಈಗ ತಲೆಯೆತ್ತಿ ವಹಿಸಿಕೊಳ್ಳದಿದ್ದರೆ ಸರ್ವನಾಶವು ಉತ್ತರಕ್ಷಣದಲ್ಲೇ ಅವರಿಗೆ ಸಿದ್ಧವಾಗಿರುವುದು. ಮಾಡಿದುಣ್ಣೋ ಮಹಾರಾಯ ಎಂಬ ಗಾಥೆಯಂತೆ ಈಗ ಅವರ ಅವಸ್ಥೆಯು ಆಗಿರುತ್ತದೆ. ನೂರಾರು ವರ್ಷಗಳಿಂದಲೂ ಜರ್ಮನಿಯು ಪರರಾಜ್ಯ ಪರದ್ರವ್ಯಾಪಹಾರಣಕ್ಕೆ ಬದ್ಧಕಂಕಣವಾಗಿದ್ದಿತು. ಆಸ್ಟ್ರಿಯಾ, ಡೆನ್ಮಾರ್ಕು, ಫ್ರಾನ್ಸು, ರಷ್ಯಾ, ಪೋಲಾಂಡ್ ದೇಶಗಳಿಂದ ರಾಜ್ಯಾಪಹರಣವನ್ನೂ ದ್ರವ್ಯಾಪಹರಣವನ್ನೂ ಮಾಡಿ ತನ್ನ ಮಹಾಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡಿದ್ದಿತು. ಅನ್ಯಾಯಾರ್ಜಿತವಾಗಿದ್ದ ಆ ಸೊತ್ತು ಎಲ್ಲಿಯವರೆಗೆ ಬಾದೀತು. ಅದಕ್ಕೆ ಈಗ ವಿನಾಶಕಾಲ ಒದಗಿತು. ಇದರಲ್ಲಿ ಆಶ್ಚರ್ಯವೇನು? ಜರ್ಮನಿಗೆ ಪರಿಣಾಮದಲ್ಲಿ ಇಂಥ ಅವಸ್ಥೆಯುಂಟಾದುದಕ್ಕೆ ಪ್ರಪಂಚದಲ್ಲಿ

ಯಾರೂ ಖೇದಪಡಲಾರರು. ಜರ್ಮನಿಗೇ ಜಯವಾಗಿದ್ದರೆ ಜಗತ್ತೇ ಪರಿತಪಿಸುವಂಥ ಅವಸ್ಥೆಯು ಬರುತ್ತಿದ್ದಿತೆಂಬುದಕ್ಕೆ ಅವರಿಂದ ಜಿತವಾಗಿ ಕೆಲಕಾಲ ಅವರ ಘನಕ್ಕೆ ಸಿಕ್ಕಿಹೋಗಿದ್ದ ಬೆಲ್ಜಿಯಂ ಫ್ರಾನ್ಸ್ ಮೊದಲಾದ ದೇಶಗಳ ಅವಸ್ಥೆಯೇ ದೃಷ್ಟಾಂತವಾಗಿದೆ. ಕೃಪಾಳುವಾದ ಜಗದೀಶನು ಜಗತ್ತಿಗೆ ಅಂಥ ಅನಿಷ್ಟವು ಸಂಭವಿಸದಂತೆ ಮಾಡಿದುದಕ್ಕಾಗಿ ವಂದಿಸಬೇಕಾಗಿರುವುದು. ಲೋಕಕಲ್ಯಾಣದ ಜತೆಗೆ ತಮ್ಮ ಕಲ್ಯಾಣವೂ ಆಗಲೆಂದು ಬಯಸುವುದೇ ಸಜ್ಜನ ಧರ್ಮವೆಂಬುದನ್ನು ಒಗೆದು ಇನ್ನಾದರೂ ತಮ್ಮ ಪೂರ್ವದುರು ಜಗಳಿಗೆ ತಿಲಾಂಜಲಿಯನ್ನಿತ್ತು ಮಿತ್ರಮಂಡಲಿಯವರ ಸಂಧಿ ನಿಬಂಧನೆಗಳಿಗೊಪ್ಪಿದರೆ ಅವರಿಗೇ ಉತ್ತರೋತ್ತರ ಕಲ್ಯಾಣವುಂಟು. ಲೋಕಮೈತ್ರಿಯನ್ನು ಸಂಪಾದಿಸಿಕೊಂಡು ನಾಲ್ಕರಂತೆ ಸುಖಸಂಪತ್ತಿಯಿಂದ ಬಾಳಬಹುದು.

ಶ್ರೀ ಬಸವೇಶ್ವರಜಯಂತ್ಯುತ್ಸವವು.

ಹಿರೇಕೆರೂರು.

ಇದೇ ವೈಶಾಖಶುದ್ಧ ೩ ಶುಕ್ರವಾರದ ದಿವಸ ವೀರಶೈವಮಠ ಸುಧಾರಕರಿಂದ ಶ್ರೀಬಸವೇಶ್ವರರ ಜಯಂತ್ಯುತ್ಸವವು ಬಹುವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಆದಿವಸ ಪ್ರತಿಯೊಬ್ಬ ವೀರಶೈವರೂ ತಮ್ಮತಮ್ಮ ಗೃಹಗಳಲ್ಲಿ ಶ್ರೀಬಸವೇಶ್ವರ ಜಯಂತಿಯ ಹಬ್ಬವನ್ನು ಕೇವಲ ಆದರದಿಂದ ನಡೆಸಿದರು.

ಒಬ್ಬ ವೀರಶೈವ.

ಹರಪನಹಳ್ಳಿ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿಯಲ್ಲಿ ಇದೇ ಸಿದ್ಧಾರ್ಥಿ ಸಂವತ್ಸರದ ವೈಶಾಖ ಶುದ್ಧ ೩ ಶುಕ್ರವಾರ ಶ್ರೀ ಬಸವಜಯಂತ್ಯುತ್ಸವವು ಅತಿ ವಿಜೃಂಭಣೆಯಿಂದ ಜರುಗಿತೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಸಾಯಂಕಾಲವಾಗುತ್ತಲೇ ಇಲ್ಲಿಯ ವೀರಶೈವ ವಿದ್ಯಾರ್ಥಿಗಳು ಶ್ರೀ ಬಸವೇಶ್ವರನ ಪಟವನ್ನು ಪುಷ್ಪಸಮಾಲೆಯಿಂದ ಅಲಂಕರಿಸಿ ಶ್ರೀ ಪೇಟೆಯ ಬಸವೇಶ್ವರನ ದೇವಸ್ಥಾನಕ್ಕೆ ಉತ್ಸವದೊಡನೆ ತೆರಳಿ ಅಲ್ಲಿ ಶಿವಭಜನೆಯನ್ನು ಮಾಡಿ ದೇವರಿಗೆ ಮಂಗಳಾರತಿಯನ್ನು ಮಾಡಿದ ತರುವಾಯ ಇಲ್ಲಿಯ ಹೈಸ್ಕೂಲ್ ಮತ್ತು ಕಾಲೇಜಿನ ವಿದ್ಯಾರ್ಥಿಗಳು, “ಬಸವೇಶ್ವರ” ವೀರಶೈವ ಮತದ ಪ್ರಾಚೀನತ್ವ, ಆಚಾರ, ಭಕ್ತಿ, ವಿದ್ಯಾ, ಐಕಮತ್ಯ ಈ ವಿಷಯಗಳ ಮೇಲೆ ಬಹಳ ಸರಸವಾಗಿ ಭಾಷಣಮಾಡಿದರು. ತರುವಾಯ ಬಂದವರೆಲ್ಲರಿಗೂ, ಪ್ರಸಾದವನ್ನು ಕೊಟ್ಟು, ಜಯಘೋಷದೊಡನೆ ಸಭೆಯು ಮುಕ್ತಾಯಗೊಂಡಿತು.

ಪ್ರತ್ಯಕ್ಷದರ್ಶಿ.

ಶಿಡ್ಲಘಟ್ಟ.

ಇದೇ ವೈಶಾಖಶುದ್ಧ ೩ ಶುಕ್ರವಾರದದಿನ ಇಲ್ಲಿನ ವೀರಶೈವರೆಲ್ಲರೂ ಹಬ್ಬವನ್ನು ಆಚರಿಸಿ ತಮ್ಮತಮ್ಮ ಶಕ್ತ್ಯನುಸಾರ ಅನ್ನದಾನಮಾಡಿದ್ದಲ್ಲದೆ ಶ್ರೀಬಸವೇಶ್ವರ ದೇವಾಲಯದಲ್ಲಿ ರುದ್ರಾಭಿಷೇಕ ಸಹಸ್ರನಾಮಾರ್ಚನಾದಿ ವಿಶೇಷ ಪೂಜಾದಿಗಳನ್ನು ನಡಿಸಿ ಶಿವಭಜನೆಯಮೂಲಕ ದೇವರ ಉತ್ಸವವನ್ನು ಮಾಡಿ ನೆರೆದಿದ್ದ ಸಮಸ್ತಜನರಿಗೂ ಪಾನಕಪನಿವಾರಗಳನ್ನು ವಿನಿಯೋಗಿಸಿದರು. ಅಲ್ಲಿ ಸೇರಿದ್ದ ವೀರಶೈವ ಮಹಾಜನರಿಗೂ ಮತ್ತು ಶ್ರೀದೇವರ ಭಕ್ತರಾದ ಇತರ ವರ್ಣಾಶ್ರಮದ ಮುಖಂಡರುಗಳಿಗೂಸಹ ಮನಸ್ಸಂತೋಷವಾಗುವಂತೆ ಪೇಟೆ ಯಜಮಾನ್ ಮ|| ಎಸ್|| ಹಂಪಯ್ಯನವರಿಂದ ಶ್ರೀಜಯಂತಿಯ ಉದ್ದೇಶವನ್ನು ಕುರಿತು ಉಪನ್ಯಾಸಮಾಡಲ್ಪಟ್ಟಿತು. ಈ ಊರಿನಲ್ಲಿ ಈ ಉತ್ಸವದ ಆಚರಣೆಯು ಇದೇ ಪ್ರಥಮವಾದ್ದರಿಂದ ಮುಂದೆ ಶ್ರೀಬಸವೇಶ್ವರ ಜಯಂತಿ ಉತ್ಸವದ ಆಚರಣೆಯನ್ನು ವೀರಶೈವ ಮಂಡಲಿಯ ಜತೆಗೆ ಇತರ ಮುಖಂಡರೂ ಸೇರಿ ನಡಿಸಲು ನಿರ್ಧರಿಸಿದ್ದಲ್ಲದೆ ವೀರಶೈವ ಮತಾಭಿವೃದ್ಧಿ ವಿಚಾರವಾದ ಎಲ್ಲಾ ವಿಷಯಗಳನ್ನೂ ಅರಿಯಲು ಸಾಧನವಾಗಿರುವ ಮೈಸೂರು ಸ್ಟಾರ್ ಪತ್ರಿಕೆಗಳನ್ನು ನಾಲ್ಕಾರು ಈ ಊರಿಗೆ ಬರುವಂತೆ ಮಾಡಬೇಕೆಂದು ತೀರ್ಮಾನಿಸಿ ಮಹಾಮಂಗಳಾರತಿಯಾದನಂತರ ಸಭೆಯು ಮುಗಿಸಲ್ಪಟ್ಟಿತು.

ಒಬ್ಬ ಭಕ್ತ.

ಕಾನಕಾನಹಳ್ಳಿ.

ಈ ಕಸಬಾಪೇಟೆಯಲ್ಲಿರುವ ದೇಶದ ಬಸವೇಶ್ವರ ದೇವಸ್ಥಾನದಲ್ಲಿ ಇದೇ ಸಿದ್ಧಾರ್ಥಿ ಸಂವತ್ಸರದ ವೈಶಾಖ ಶುದ್ಧ ಬಿದಿಗೆ ಶುಕ್ರವಾರ ಬ್ರಾಹ್ಮೀಕಾಲ ನಂದಿಧ್ವಜ ಮತ್ತು ಗುರುಮಾಹೇಶ್ವರರುಗಳಸಮೇತ ನದಿಯಿಂದ ಛತ್ರಚಾಮರ ವಾದ್ಯವೈಭವದಿಂದ ಅಗ್ರೋದಕವನ್ನು ತಂದು ಅಭಿಷೇಕಾನಂತರ ಮಹಾ ರುದ್ರಾಭಿಷೇಕವೂ ಸಹಸ್ರನಾಮ ಪಾರಾಯಣ ಸಹಸ್ರ ಬಿಲ್ವಾರ್ಚನೆ ಷೋಡಶೋಪಚಾರ ಪೂಜಾ ಮಂಗಳಾರ್ತಿಯೂ ಅನಂತರ ಬಂದಿದ್ದ ಭಕ್ತ ಮಾಹೇಶ್ವರರುಗಳಿಗೆ ಭೋಜನವೂ ಸಾಯಂಕಾಲ ಆರು ಘಂಟೆಗೆ ನಂದಿಧ್ವಜಸಮೇತವಾದ ಉತ್ಸವವೂ ರಾತ್ರಿ 11 ಘಂಟೆಯವರೆಗೂ ಬಹಳ ವಿಜೃಂಭಣೆಯಿಂದ ಜರುಗಿತು. ಈ ಉತ್ಸವಕಾಲದಲ್ಲಿ ಸಾಧಾರಣ ಅಯ್ನೂರು ಜನಗಳವರೆಗೂ ಬಂದಿದ್ದರು. ತದನಂತರ ಮಹಾ ಮಂಗಳಾರ್ತಿಯಾದಮೇಲೆ ಪ್ರಸಾದ ತೆಗೆದುಕೊಂಡು ಬಂದಿದ್ದ ಪ್ರೇಕ್ಷಕರು ಅವರವರ ಮನೆಗಳಿಗೆ ತೆರಳಿದರು. ಇದಕ್ಕಾಗಿ ಮ|| ರಾ|| ಶೆಟ್ಟರು ಚನ್ನಪ್ಪನವರು ಪಂಡಿತ ನಂಜುಂಡಪ್ಪನವರು ದೊಡ್ಡಮನೆ ಪುಟ್ಟಣ್ಣಯ್ಯನವರು ಗುರುಕಾರ್ ಚನ್ನಬಸವಯ್ಯನವರು ಗಂಡೆಗೆ ಗಂಗಶೆಟ್ಟಪ್ಪನವರು ಬೈರನಹಳ್ಳಿ ಮರಿಯಪ್ಪನವರು ನೀಲಕಂಠಪ್ಪನವರು ತಿ|| ನಂಜುಂಡಪ್ಪನವರು ಇವರುಗಳು ದೈವಭಕ್ತಿಯಿಂದ ಕಳೆದ ವರ್ಷದಿಂದಲೂ ಬಸವೇಶ್ವರಜಯಂತಿ ಮಹೋತ್ಸವವನ್ನು ನಡೆಯಿಸುತ್ತಾ ಬಂದಿದ್ದಾರೆ. ಮುಂದೆಯೂ ಸಹ ಇದೇ ಮೇರೆಗೆ ಚ್ಯುತಿಯಿಲ್ಲದೆ ಇನ್ನೂ ಅತ್ಯಂತ ವಿಜೃಂಭಣೆಯಿಂದ ನಾಲ್ಕಾರು ದಿವಸಗಳು ನಡೆಯುವಂತೆ ಏರ್ಪಾಡು ಮಾಡುತ್ತಾರೆಂಬುದಾಗಿ ನಂಬಿದ್ದೇನೆ. ಮತ್ತು ಮ|| ರಾ|| ಪಂಡಿತ ನಂಜುಂಡಪ್ಪನವರು ಇದೇ ಕಾರ್ಯಕ್ಕಾಗಿ ಬಹಳ ಮಟ್ಟಿಗೆ ಶ್ರದ್ಧೆವಹಿಸಿ ದೇಹಶ್ರಮ ಅರ್ಥಶ್ರಮಗಳನ್ನೂ ಗಣನೆಗೆತಾರದೆ ದೇವರ ಸೇವಾಸಕ್ತರಾಗಿ ಕಾರ್ಯವನ್ನಾಗ ಮಾಡಿದರು.

ಹಿಂದುಳಿದ ಜನೋಪಕಾರಿಣೀ ಸಂಘ.

ಈ ಸಂಘಕ್ಕೆ ಚಂದಾದಾರರಾದವರಿಗೆ ಪ್ರತಿವರ್ಷವೂ ಅವರ ಮನೆಯಲ್ಲಿ ಶಿಶುವು ಜನಿಸಿದಕೂಡಲೆ ಜನನದ ಟಿಪ್ಪಣಿಯನ್ನು ತಿಳಿಸಿದರೆ ಚನ್ನಾಗಿ ಶೋಧಿಸಿ ಜಾತಕ ಪತ್ರಿಕೆಯನ್ನು ತಯಾರುಮಾಡಿ ಕಳಿಸುತ್ತೇವೆ. ಸ್ತ್ರೀಯರ ಋತುಕಾಲವನ್ನು ತಿಳಿಸಿದರೆ ಋತುಜಾತಕ ಫಲವನ್ನು ಬರೆದು ಕಳಿಸುತ್ತೇವೆ. ಚಂದಾದಾರರ ಮನೆಯಲ್ಲಿ ವಿವಾಹ ಕಾರ್ಯಗಳು ಜರಿಗಿದರೆ ಒಂದು ಪತ್ರ ಬರೆದಕೂಡಲೆ ಬಲವಾದ ವಿವಾಹ ಮುಹೂರ್ತವನ್ನು ಶೋಧಿಸಿ ಲಗ್ನಪತ್ರಿಕೆಯನ್ನು ತಯಾರುಮಾಡಿ ಕಳಿಸುತ್ತೇವೆ. ತಮ್ಮ ಬಂಧುಮಿತ್ರರಿಗೆ ಕಳುಹಿಸತಕ್ಕ ವಿವಾಹಮಹೋತ್ಸವ ಪತ್ರಿಕೆಗಳನ್ನು ಪ್ರಿಂಟುಮಾಡಿಸಿ ಕಳುಹಿಸುತ್ತೇವೆ. ಮನೆಯಲ್ಲಿ ಯಾರಿಗಾದರೂ ಕಾಯಿಲೆ ಆದರೆ ಅವರ ಜನ್ಮ ನಕ್ಷತ್ರವನ್ನೂ ಹೆಸರನ್ನೂ ತಿಳಿಸಿದರೆ ಸದರಿಯವರ ಕಾಯಿಲೆಯು ಎಷ್ಟು ದಿವಸಕ್ಕೆ ಗುಣವಾಗುವ ಕ್ರಮವನ್ನೂ ಅದಕ್ಕೆ ಶಾಂತಿಮಾಡುವ ಕ್ರಮವನ್ನೂ ತಕ್ಕ ಔಷಧವನ್ನು ಸಹ ಕಳ್ಸಿಕೊಡುತ್ತೇವೆ. ಚಂದಾದಾರರು ತಾವು ವ್ಯಾಪಾರಮಾಡುವ ವಿಷಯವನ್ನು ತಿಳಿಸಿದರೆ ಪ್ರತಿತಿಂಗಳಲ್ಲಿ ಎಲ್ಲಾ ಪದಾರ್ಥಗಳ ತೇಜಮಂದಿ ಆಗುವ ವಿಷಯವನ್ನು ಚನ್ನಾಗಿ ಬರೆದು ತಿಳಿಸುತ್ತೇವೆ. ಚಂದಾದಾರರಿಗೆ ಪ್ರತಿತಿಂಗಳಲ್ಲಿ ಉಂಟಾಗುವ ಸುಖದುಃಖ ಲಾಭನಷ್ಟ ಮುಂತಾದ ಫಲಗಳನ್ನು ಬರೆದು ಕಳಿಸುತ್ತೇವೆ. ವ್ಯವಹಾರ ಉದ್ಯೋಗ ಕನ್ಯಾವರರ ಸಾಲಾವಳಿ ಅಂತರಂಗ ವಿಷಯಗಳು ಇನ್ನೂ ತಮಗೆ ಬೇಕಾದ ವಿಷಯಗಳನ್ನು ತಿಳಿಸಿದರೆ ಅವುಗಳಿಗೆಲ್ಲ ತಕ್ಕ ಫಲಿತಾರ್ಥಗಳನ್ನು ಬರೆದು ಕಳಿಸುತ್ತೇವೆ. ಪ್ರತಿವರುಷವೂ ಪಂಚಾಂಗವನ್ನು ಕಳಿಸುತ್ತೇವೆ. ತಮಗೆ ಬೇಕಾದ ಸಾಮಾನುಗಳಿಗೆ ಬರೆದರೆ ಕಂಪೆನಿಗಳಿಗೆ ಬರೆದು ತರಿಸಿಕೊಡುತ್ತೇವೆ. ಹಿಂದುಳಿದ ಜನರನ್ನು ವೃದ್ಧಿಗೆತರಬೇಕೆಂದು ಚಂದಾಬಾಬ್ತು ತೀರ ಕಡಮೆಯಿಟ್ಟಿರುತ್ತೇವೆ. ಈಸಂಘದಿಂದ ಬಂದ ಹಣವನ್ನು ಹಿಂದುಳಿದ ಬಾಲಕರ ಅಂಗ್ಲೇಯ ವಿದ್ಯಾ ಫಂಡಿಗೆ ಉಪಯೋಗಿಸುವ ಏರ್ಪಾಟು ಮಾಡಿರುತ್ತೇವೆ. ಪತ್ರವ್ಯವಹಾರಕ್ಕೆ ಅರ್ಧಾಣೆ ಸ್ಟಾಂಪುಯಿಟ್ಟು ಕಳಿಸಬೇಕು. ಲೋಕಬಾಂಧವರೇ ದಯಮಾಡಿ ಈಮಹಾಸಂಘಕ್ಕೆ ಚಂದಾದಾರರಾಗಿ ತಮ್ಮ ಆಪ್ತರಿಗೂ ಚಂದಾದಾರರಾಗುವಂತೆ ಹೇಳಿ ಸಹಾಯಮಾಡಬೇಕು. ಮೊದಲು ತಮಗೆ ಬೇಕಾದ ವಿಷಯವನ್ನು ಬರೆದು ಚಂದಾಹಣಕ್ಕೆ ವಿ. ಪಿ. ಮಾಡಿ ಕಳಿಸುತ್ತೇವೆ. ೧ ವರುಷಕ್ಕೆ ಚಂದಾ ರೂ. ೫—೦—೦.

ವಿಳಾಸ—ಸೆಕ್ರೆಟರಿ, ಹಿಂದುಳಿದ ಜನೋಪಕಾರಿಣೀ ಸಂಘ,
ಹರಪನಹಳ್ಳಿ (ಜಿಲ್ಲೆ ಬಳ್ಳಾರಿ).

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ತೊಡಸು, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

15 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

19 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

ಫೋಟೋಲಾಕೇಟ್ಸ್.



ಈ ಪ್ರಕಾರ ಘಡಿಯಾರದ ಸರಗಳಿಗೆ ಹಚ್ಚುವ ಲಾಕೇಟುಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೂಚುಗಳೂ, ಅಪೂರ್ವವಾದ ಅತ್ಯಂತ ಪ್ಯಾಷ್ನಿಯಾದ್ದು ಆದರಿಂದ ತಮ್ಮ ಇಷ್ಟ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ವಿಧದಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ, ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರ ಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮಹಮದೀಯ ಧರ್ಮದ ಜಗದಾದಪೀರಸಾಹೇಬ ಅಜಮೀರದ ಖ್ವಾಜಾವಲಿ, ಮುಂತಾದ ಬೇಕವುಳ್ಳದ ಅನೇಕ ದೇವತಾ ಮತ್ತು ಸಾಧೂ ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೆ. ಲಾಕೇಟಾದಲ್ಲಿ ೨, ಬ್ರೂಚದಲ್ಲಿ ೧, ಫೋಟೋ ಇರುವವೂ ಕ್ರಯ ಗಿಲ್ಟಬ್ರೂಚವೂ ೬, ೮, ಆಣೆ. ರೋಲಗೋಲ್ಡ ಬ್ರೂಚವೂ ರೂ. ೧—೨—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳಿಯವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿವುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವು ಕ್ರಯ ರೂ. ೧—೧೨—೦ ಪಾವಲಿ ಆಕಾರದ ಪ್ಲೇನ ಮತ್ತು ಪ್ಯಾನ್ಸಿ ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ತಕ್ತಿ ಆಕಾರವೂ, ಅಥವಾ ಗುಂಡ ಆಕಾರವೂಇರುವವುಗಳ ಕ್ರಯ ರೂ. ೧-೪-೦ ೧—೮—೦.

ಇವುಗಳ ಪೂರ್ತ ನಮ್ಮ ಕಾರಖಾನಾದಲ್ಲಿ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸುದರ್ಶನಲಾಥ, ೪ ಪಂಚಮುಖ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಶರಭಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾಳಕೇರಿ ಅಮರಗಿ ಹುಚ್ಚಪ್ಪನವರೂ ಸಿರಸಂಗಿ ಸರದೇಶಾಯಿ, ರುದ್ರಗವಡ್ರು ಮುಂತಾದ ಅನೇಕ ಸಾಧೂ ಸತ್ಪುರುಷರದೂ ಫೋಟೋ ಸಿಗುತ್ತವೆ. ಕ್ರಯ ಪೋಸ್ಟ್‌ಸೈಜ ರೂ. ೧ ಕ್ಯಾಬಿನೆಟ ೮ ಆಣೆ.

ಸೂಚನಾ:—ಪ್ರತಿಯೊಂದು ಊರಿಗೆ ಮಾರಾಟಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟಾಂಪ್ ಕಳುಹಿಸಿ ಕೊಟ್ಟು ಕ್ಯಾಟ್ಲಾಗ ಬುಕ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.

ದಿ ಶಾರದಾ ಫೋಟೋ ಕಂಪನಿಯ ಮಾಲಕ,
೮ ಗಂಗಪ್ಪಾ ಬೇರಗೇ ಸೊಲ್ಲಾಪುರ ಸಿಟಿ.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟ ತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
15 ಇರುಳಪ್ಪನಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-14-0. 25 ಕ್ಕೆ 5-5-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
23 ವೈದ್ಯಶಾಲಾ, ಮೈಸೂರು.

೧೯೧೯ ನೆಯ ಇಸವಿ ಮೇ ತಾ|| ೧೮ ರಿಂದ ೧೯೧೯ ನೆಯ ಮೇ ತಾ|| ೨೪ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ವೈಶಾಖ ಬ|| ತದಿಗೆಯಿಂದ ವೈಶಾಖ ಬ|| ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
18	ಭಾನು	ತದಿಗೆ	10-36	ಮೂಲ	29-0	5
19	[1] ಸೋಮ	ಚೌತಿ	12-41	ಪೂಷಾ	32-35	6
20	ಮಂಗಳ	ಪಂಚ	13-41	ಉಷಾ	34-55	7
21	[2] ಬುಧ	ಷಷ್ಠಿ	13-30	ಶ್ರವಣ	36-3	8
22	ಗುರು	ಸಪ್ತಮಿ	12-1	ಧನಿಷ್ಠ	35-54	9
23	ಶುಕ್ರ	ಅಷ್ಟಮಿ	9-23	ಶತಭಿಷ	34-54	10
24	ಶನಿ	ನವಮಿ	5-41	ಪೂಭಾ	32-26	11

(1) ಮಾರಹಳ್ಳಿ ನೃಸಿಂಹಸ್ವಾಮಿ ರಥ, ಕಂಚಿ ವರದರಾಜಸ್ವಾಮಿ ರಥ. (2) ಮೇಲುಕೋಟೆಯಲ್ಲಿ ಪಲ್ಲವೋತ್ಸವಾರಂಭ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪತ್ರಜ್ಞನಕ್ಷತ್ರಮೋಹರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೨) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಮೇ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೨೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಕತ್ರಯ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟ ತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
16 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಶೋಧ! (ಗುಣ ಬಾರದಿದ್ದರೆ ಹಣ ಪರತು.) ಹೊಸ ಶೋಧ!!

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ)

ಅಮೃತಜೀವನಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ನೋವು ಅಥವಾ ಆದಮೇಲೆ ಧಾತು ಬೀಳುವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವುದು. ಬಹು ದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವುವು. ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅನ್ಯತಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೆ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸುವಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ ಬಹು ದಿವಸದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣವಾಗುವದು. ನಿದಾನ ಒಂದು ಸಾರಿಯಾದರು ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ೧ ರೂ. ೧೨ ಆಣೆ. ೩ ಡಬ್ಬಿಗಳಿಗೆ ೪ ರೂ. ೮ ಆಣೆ. ೧೨ ಡಬ್ಬಿಗಳಿಗೆ ೧೫ ರೂ. ಮೇಲೆ ಒಂದು ಡಬ್ಬಿ ಉಚಿತ ಕೊಡಲ್ಪಡುವದು.

12 ಪತ್ತೆ:—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ, ಪೋಸ್ಟ ನಿಪ್ಪಾಣಿ ಜಿ. ಬೆಳಗಾಂವ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

23

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶಕಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ, ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
16 ಸಾಹುಕಾರಪೇಟೆ, ಮದರಾಸ್.

7

ಎಲೆಕ್ಟ್ರಿಕ್ ದೀಪ.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ—ಮಹಾರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಬಲೆಯಂತಿರುವ ಬನಿಯನ್.



ಈಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	0—12—0.
12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿಸಹಿತ

ಕ್ರಯ 1 ಕ್ಕೆ 5—8—0.

ವಿಳಾಸ:— ರಾಸ್ ವಾಚ್ ಅಂಡ್ ಕೊ,
16 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಅವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

33 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಮೇ ತಾ|| ೨೫ ನೆಯ ಭಾನುವಾರ.

ಶ್ರೀಮಜ್ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು.

ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಆಗಮನಮಹೋತ್ಸವವು ಬೆಂಗಳೂರು ಪಟ್ಟಣದಲ್ಲಿ ಎಷ್ಟು ವಿಜೃಂಭಣೆಯಿಂದ ಜರುಗಿರುವುದೆಂಬುದು ಈ ಪತ್ರಿಕೆಯ ಬೇರೆಕಡೆಯಲ್ಲಿ ಮುದ್ರಿಸಿರುವ ನಮ್ಮ ವರದಿಗಾರರ ಲೇಖನದಿಂದ ಸುವ್ಯಕ್ತವಾಗುವುದು. ಬೆಂಗಳೂರು ನಿವಾಸಿಗಳಾದ ವೀರಶೈವ ಮಹಾಜನರ ಗುರುಭಕ್ತಿ ಮತಧರ್ಮನಿಷ್ಠೆಗಳಿಗೆ ಇದು ಭೂಷಣವಾಗಿ ಕೀರ್ತಿಪ್ರದವಾಯಿತೆಂಬುದಕ್ಕೆ ಸಂಶಯವಿಲ್ಲ. ಈ ದಕ್ಷಿಣಭಾಗಕ್ಕೆ ಇದುವರೆಗೆ ಶ್ರೀಗಳವರ ಆಗಮನವಾಗಿರಲಿಲ್ಲವಾದುದರಿಂದ ಅವರ ದರ್ಶನೌತ್ಸುಕ್ಯದಿಂದ ಭಕ್ತಸಂದೋಹವು ವಿಶೇಷವಾಗಿಯೇ ನೆರೆದಿತ್ತೆಂದು ಕಾಣುತ್ತದೆ. ಇದು ಲಗ್ನಗಳ ಕಾಲವಲ್ಲದಿದ್ದರೆ ಈಗಿಗಿಂತಲೂ ಜನರು ಹೆಚ್ಚಾಗಿಯೇ ಸೇರುತ್ತಿದ್ದರು. ಮತೀಯರಲ್ಲಿ ಭಕ್ತಿಭಾವವೂ ಧರ್ಮಾಭಿಮಾನವೂ ಇನ್ನೂ ಎಷ್ಟು ಜಾಗರೂಕವಾಗಿವೆಯೆಂಬುದಕ್ಕೆ ಬೆಂಗಳೂರಿನ ಉತ್ಸವಸಮಾರಂಭವು ಒಂದು ನಿದರ್ಶನವೆಂದು ಹೇಳಬಹುದು. ಶ್ರೀಗಳವರ ದಕ್ಷಿಣದೇಶ ಸಂಚಾರವು ಈ ಪ್ರಾಂತದ ಭಕ್ತಜನರಲ್ಲಿ ಮತ್ತಷ್ಟು ಧರ್ಮಜಾಗರೂಕತೆಯನ್ನೂ ಆಸ್ತಿಕ್ಯವನ್ನೂ ಅಭಿವೃದ್ಧಿಗೊಳಿಸಲು ಸಾಧಕವಾಗಲೆಂದು ಕೋರುತ್ತೇವೆ.

ನಮ್ಮ ವಿಲೇಖಕರ ವರದಿಯನ್ನು ನೋಡಲಾಗಿ ಪರೋಕ್ಷ ಪರಾಸಹನೆಯಿಂದ ಕೆಲವುಜನರು ಜಗದ್ಗುರುಗಳ ಆಗಮನಕ್ಕೆ ಇಲ್ಲದ ತೊಂದರೆಗಳನ್ನೂ ಅವರ ಗೌರವಕ್ಕೆ ಕುಂದನ್ನೂ ಉಂಟುಮಾಡಿ ತಾವು ಸಂತೋಷಿಸಬೇಕೆಂಬ ಉದ್ದೇಶದಿಂದಲೇ ಕೆಲ ಹೇಯಪ್ರಯತ್ನಗಳನ್ನು ಮಾಡಿದರೆಂಬುದು ಗೊತ್ತಾಗುತ್ತದೆ. ವಿದ್ಯಾಗಂಧವಿಲ್ಲದ-ಲೋಕಸ್ವಭಾವವನ್ನರಿಯದ-ಅನಾಗರಕರಾದ ಅಜ್ಞಜನರು ಇಂಥ ಕುತ್ಸಿತಯತ್ನಗಳಲ್ಲಿ ತೊಡಗಿದರೆ ಅದೊಂದು ಆಶ್ಚರ್ಯವಲ್ಲ. ವಿದ್ಯಾಧಿಕರೆಂದೆನ್ನಿಸಿಕೊಳ್ಳುವ ನಾಗರಕರಾದ ಸುಪ್ರತಿಷ್ಠಿತಜನರೇ ಇಂಥ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದರೆಂದು ಕೇಳಿದರೆ ಯಾರಿಗೆತಾನೇ ಆಶ್ಚರ್ಯವೂ ವಿಷಾದವೂ ಉಂಟಾಗದೆ ಇದ್ದೀತು? ಸ್ವಮತದಲ್ಲೂ ಸ್ವಮತಾಚಾರ್ಯರಲ್ಲೂ ಪ್ರಾಮಾಣ್ಯ ಗೌರವಬುದ್ಧಿಗಳು ಪ್ರತಿಯೊಬ್ಬ ಆಸ್ತಿಕನಿಗೂ ಇರಬೇಕಾದುದು ಸದ್ಧರ್ಮವು. ಆದರೆ ಅವುಗಳಿದ್ದ ಮಾತ್ರಕ್ಕೇ ಪರಮತಾಸಹನೆಯಿರಬೇಕಾದ ಅವಶ್ಯಕತೆಯೇನು? ಇಂಥ ಪರಮತಾಸಹನೆಯಿಂದಲೇ ಭರತಖಂಡದಲ್ಲಿ ಅನೈಕಮತ್ಯವು ಹಬ್ಬಿ ದೇಶವು ಅಧೋಗತಿಗೀಡಾಯಿತು. ಪಾಶ್ಚಾತ್ಯ ವಿದ್ಯಾಸಂಸ್ಕಾರ ಬಲದಿಂದ ಇಂಥ ಸಂಕುಚಿತ ಭಾವಗಳೆಲ್ಲಾ ಮೂಲೋತ್ಪಾಟಿತವಾಗಿ ಸರ್ವಸಹೋದರಭಾವವು ಬೆಳೆದು ಅದರಿಂದ ಐಕ್ಯವು ಹೆಪ್ಪುಗಟ್ಟಿ ದೇಶೋದ್ಧಾರವಾಗುವುದೆಂದು ಅನೇಕರು ಹೇಳುತ್ತಿರುವರು. ನಂಬಿ ನಿರೀಕ್ಷಿಸುತ್ತಲೂ ಇರುವರು. ಆದರೆ ಈ ದುರದೃಷ್ಟದ ಭರತಖಂಡಕ್ಕೆ ಯಾವ ವಿದ್ಯಾಸಂಪತ್ತಿಯೊದಗಿದರೂ ಯಾವ ನಾಗರಕತಾಪ್ರಾಪ್ತಿಯಾದರೂ ಮಾತ್ಸರ್ಯಪಿಶಾಚದ ಉಚ್ಚಾಟನವು ಮಾತ್ರ ಎಂದಿಗೂ ಆಗುವುದಿಲ್ಲವೆಂಬುದಕ್ಕೆ ಹೀಗೆ ಒಂದೊಂದು ದೃಷ್ಟಾಂತವು ಸಂಭವಿಸುತ್ತಲೇ ಇರುವುದು. ಕೊಳಕಲು ಬಚ್ಚಲಿನ ಮೇಲೆ ಹೂವಿನ ಬಳ್ಳಿಯನ್ನು ಹಬ್ಬಿಸಿ ಮುಚ್ಚಿದರೂ ಒಳಗಣ ನಾತವು ಹೇಗಾದರೂ ಹೊರಬೀಳದೆ ಇರುವುದುಂಟೆ? ಎಷ್ಟು ದೊಡ್ಡ ವಿದ್ವತ್ತಿದ್ದರೇನು? ಎಷ್ಟು ಅಧಿಕಾರವಿದ್ದರೇನು? ಎಷ್ಟು ಗೌರವವಿದ್ದರೆತಾನೇ ಏನು? ಮಯ್ಯುಂಡ ಹುಟ್ಟುಗುಣವು ಮಾಜಿಹೋಗುವುದು ಅಸಾಧ್ಯವಲ್ಲವೆ?

ದೇಶದಲ್ಲಿ ವಿದ್ಯಾಧಿಕರಾಗಿ ಸನ್ನೀತಿ ಸದಾಚಾರಗಳಲ್ಲಿ ಇತರರಿಗೆಲ್ಲಾ ಮಾರ್ಗದರ್ಶಕರಾಗಿರಬೇಕಾದವರು ತ್ರಿಮತಸ್ಥಬ್ರಾಹ್ಮಣರೇ ಆಗಿರುತ್ತಾರೆ. "ಸರ್ವೇಜನಾಸ್ಸುಖಿನೋಭವಂತು" ಎಂದು ಅವರು ಸಂಧ್ಯಾವಂದನ ಕಾಲಗಳಲ್ಲೆಲ್ಲಾ ಭಗವತ್ಸಾಕ್ಷಿಯಾಗಿ ಲೋಕಹಿತವನ್ನು ಕೋರತಕ್ಕವರಾಗಿರುವರೆಂದು ಹೇಳಿಕೊಳ್ಳುತ್ತಾರೆ. ಸತ್ಯ, ಶೌಚ, ಆರ್ಜವ, ಅಹಿಂಸೆ, ಅಸ್ತೇಯ ಪರಹಿತ ಮೊದಲಾದ ಸದ್ಗುಣಗಳು ಅವರ ಮುಖ್ಯ ಧರ್ಮಗಳೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ. ನಿಜವಾಗಿ ಇಂಥ ಗುಣಗಳ ಆಢ್ಯತೆಯಿಂದ ವಂದ್ಯರಾಗಿರತಕ್ಕ ಬ್ರಾಹ್ಮಣರು ದೇಶಮಧ್ಯದಲ್ಲಿ ಇಲ್ಲದೆ ಇಲ್ಲ. ಆದರೆ ಅಂಥವರ ಸಂಖ್ಯೆಯು ಮೃಗ್ಯವಾಗುತ್ತ ಬರುತ್ತಲಿದೆ. ಪರಹಿಂಸೆ, ಅಸತ್ಯ, ಅಶೌಚ, ಅಸೂಯಾಳುತ್ವ, ಕೌಟಿಲ್ಯ, ವಿಘ್ನಸಂತೋಷ, ಮೊದಲಾದ ದುರ್ಗುಣಗಳ ಖನಿಗಳಾದವರೇ ಹೆಚ್ಚುತ್ತಲಿದ್ದಾರೆ. ಇಂಥವರ ಮುಂದಾಳುತನವೂ ಆಧಿಕ್ಯವೂ ಆಧಿಪತ್ಯವೂ ಪ್ರಬಲಿಸಿದ ದೇಶದಲ್ಲಿ ಸುಖಶಾಂತಿಸಮೃದ್ಧಿಗಳುಂಟಾಗುವ ಬಗೆಹೇಗೆ? ದ್ವೇಷದಿಂದ ದ್ವೇಷವೂ ಸ್ನೇಹದಿಂದ ಪ್ರೀತಿಯೂ ವೃದ್ಧಿಯಾಗುವುದು ಸಹಜವು. ಒಳಗೆ ಮಹಾದ್ವೇಷವನ್ನು ತುಂಬಿಟ್ಟುಕೊಂಡು ಸಮಯಬಿದ್ದಾಗ ಅದನ್ನು ಕಾರುವ ಜನರು ಲೋಕಪ್ರಿಯರಾಗುವುದು ಹೇಗೆ? ಅಂಥವರು ತಮ್ಮ ದುರ್ಗುಣದಿಂದ ಲೋಕದ್ವೇಷವನ್ನು ಸಂಪಾದಿಸಿಕೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ತಮ್ಮ ದೋಷವನ್ನು ತಾವು ತಿದ್ದಿಕೊಂಡು ಲೋಕಪ್ರಿಯರಾಗುವುದಕ್ಕೆ ಶಕ್ತಿಯಿಲ್ಲದವರು ತಮ್ಮ ದುರ್ಗುಣವನ್ನು ಕಂಡು ಬೇಸತ್ತು ಉದಾಸೀನರಾದವರನ್ನು ಕಂಡು ಬ್ರಹ್ಮದ್ವೇಷಿಗಳೆಂದು ಹೆಸರಿಕ್ಕುವುದರಲ್ಲಿ ಹುರುಳೇನಿರುವುದು?

ಮೈಸೂರು ದೇಶದ ಒಟ್ಟು ಜನಸಂಖ್ಯೆಯಲ್ಲಿ ಲಿಂಗಧಾರಿಗಳು ⅛ ಭಾಗದಷ್ಟಿರುವರು. ಇವರೆಲ್ಲರಿಗೂ ಶ್ರೀ ಚಿತ್ರದುರ್ಗದ ನಿರಂಜನ ಪೀಠಾಧಿಪತಿಗಳು ಪೂಜ್ಯರಾಗಿರುವರು. ಅವರ ಗೌರವಪ್ರತಿಷ್ಠೆಗಳೂ ಕೀರ್ತ್ಯಪಕೀರ್ತಿಗಳೂ ಮಾನಾಪಮಾನಗಳೂ ತಮ್ಮ ಸಮಾಜಕ್ಕೇ ಸಂಬಂಧಪಟ್ಟುವೆಂದು ಇವರೆಲ್ಲರೂ ತಿಳಿದಿರುವರು. ಹೀಗಿರುವಾಗ, ಅಂಥ ಗುರುಗಳಿಗೆ ಯಾವುದಾದರೊಂದು ಪ್ರಯತ್ನದಿಂದ ಗೌರವಭಂಗವನ್ನು ಮಾಡಬೇಕೆಂದು ಯೋಚಿಸುವವರು ನಿಜವಾಗಿ ವೀರಶೈವ ಸಮಾಜದ ಮೇಲೆಯೇ ಹಗೆಯನ್ನು ಸಾಧಿಸಿದವರಾಗುವುದಿಲ್ಲವೆ? ಹೀಗೆ ಅವರು ಹಗೆಯನ್ನು ಸಾಧಿಸಿದರೆ ಅವರಿಗೆ ಪ್ರತಿಪಕ್ಷವೊಂದು ಸಿದ್ಧವಾಗುವುದು ಸಹಜವೇತಾನೆ? ತಮ್ಮ ಹೊರತು ಇತರರನ್ನೆಲ್ಲಾ ಧಾರ್ಮಿಕ ವಿಷಯದಲ್ಲಿ ತುಚ್ಛತನದಿಂದ ಕಂಡು ಕುಗ್ಗಿಸಬೇಕೆಂದು ಯತ್ನಿಸುವವರನ್ನು ಸ್ವಾಭಿಮಾನದ ಗುರ್ತನ್ನರಿತ ಹಿಂದುಳಿದ ಪ್ರಜೆಗಳಲ್ಲಿ ಯಾರುತಾನೇ ಸಹಜಪ್ರೀತಿಯನ್ನು ಹೊಂದಲವಕಾಶಕಾಶವಿದ್ದೀತು? ಇದರಿಂದ ಪರಸ್ಪರ ದ್ವೇಷಗಳು ದಿನಕ್ರಮೇಣ ವೃದ್ಧಿಯಾಗುತ್ತ ಬರುವುದಕ್ಕೆ ಸರ್ಕಾರದ ಅಧಿಕಾರ ಪದಾರೂಢರೂ ಕೂಡ ಪ್ರತ್ಯಕ್ಷಾಪ್ರತ್ಯಕ್ಷವಾಗಿ ಸಹಾಯಮಾಡುತ್ತ ಬಂದರೆ ಅದು ದೇಶದ ಹಿತಕ್ಕೆ ಸಾಧಕವಾದೀತೆ? ಸರ್ವಪ್ರಜೆಗಳಲ್ಲೂ ಅವರವರ ಮತಕುಲಧರ್ಮಪ್ರೀತಿಯೂ, ಆಸ್ತಿಕ್ಯವೃದ್ಧಿಯೂ ಆಗುವಂತೆ ಮಾಡುವುದಕ್ಕೆ ಪ್ರಭುತ್ವದವರು ಸಾಧ್ಯವಾದಷ್ಟು ಸಹಾಯಪ್ರೋತ್ಸಾಹಗಳನ್ನು ಮಾಡುತ್ತ ಬರಬೇಕು. ಇಂಥ ಕೆಲಸವು ತಮ್ಮ ಉದ್ಯೋಗಿಗಳ ಕಡೆಯಿಂದ ಸರಿಯಾಗಿ ನಡೆಯದಿದ್ದರೆ ಪ್ರಭುಗಳೇ ಸ್ವತಃ ಪ್ರವರ್ತಿಸಿ ಆಯಾ ಮತದವರ ಸ್ವಾತಂತ್ರ್ಯಗೌರವಗಳನ್ನು ಕಾಪಾಡುವುದರ ಮೂಲಕ ಸರ್ವಪ್ರಜೆಗಳಲ್ಲೂ ಸುಖಶಾಂತಿಗಳು ಅಭಿವೃದ್ಧಿಯಾಗುವಂತೆ ಮಾಡುವುದು ಅತ್ಯವಶ್ಯಕವು.

ಶ್ರೀಚಿತ್ರದುರ್ಗದ ಜಗದ್ಗುರು ಪೀಠಕ್ಕೆ ಶೃಂಗೇರಿ ಮಠಕ್ಕೆ ಇರುವ ಬಿರುದಾವಳಿಗಳ ಮರ್ಯಾದೆಯೆಲ್ಲಾ ಅನೂಚಾನವಾಗಿ ಸಲ್ಲುತ್ತ ಬಂದಿದೆ. ಅದನ್ನು ಶ್ರೀ ಮುಮ್ಮಡಿ ಕೃಷ್ಣರಾಜ ಪ್ರಭುಗಳು ಕೂಡ ತಮ್ಮ ಸನ್ನದುಗಳನೇಕಗಳಲ್ಲಿ ಘಂಟಾಘೋಷವಾಗಿ ಹೇಳಿದ್ದಾರೆ. ಅವೆಲ್ಲಾ ಈ ಪೀಠಕ್ಕೆ ಈಗಲೂ ಭರತಖಂಡದ ಆಂಗ್ಲಪ್ರಭುತ್ವ ರಕ್ಷಿತಪ್ರದೇಶಗಳಲ್ಲೂ ಅನೇಕ ಹಿಂದೂ ಸಂಸ್ಥಾನಗಳಲ್ಲೂ ನಡೆದುಬರುತ್ತಿವೆ. ಈ ಮೈಸೂರು ದೇಶದಲ್ಲಿಯೂ ಅವನ್ನೆಲ್ಲಾ ಉಪಯೋಗಿಸಿಕೊಳ್ಳಲು ಇವರಿಗೆ ಹಕ್ಕುಂಟೆಂದು ಚೀಫ್ ಕಮಿಷನರು ೧೮೬೯ ನೆ ವರ್ಷದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ದೇಶದಲ್ಲಿಯೂ ಸಕಲ ಬಿರುದಾವಳಿಗಳನ್ನು ಚಿತ್ರದುರ್ಗದ ಸ್ವಾಮಿಗಳವರು ಉಪಯೋಗಿಸಿಕೊಳ್ಳುವುದರಲ್ಲಿ ಮುಕ್ಕಾಲು ಮೂರುವೀಸಪಾಲಿನ ಪ್ರಜೆಗಳೆಲ್ಲಾರಿಗೂ ಹೊಟ್ಟೆಯನೋವಿಲ್ಲ. ವೀಸಪಾಲಿನಷ್ಟಿರುವ ವಿದ್ಯಾಧಿಕರೆನಿಸಿಕೊಳ್ಳುವ ಕೆಲ ಜನರಿಗೆ ಪರಮತಸಹನೆಯೆಂಬ ಸಾತ್ವಿಕಭಾವವಿಲ್ಲದಕಾರಣದಿಂದ ಹೊಟ್ಟೆಯುರಿಯುತ್ತಿದೆ. ಆ ಪುಣ್ಯಪುರುಷರುಗಳ ಪ್ರಭಾವದಿಂದ ಈ ಪೀಠದ ಸ್ವಾಮಿಗಳವರಿಗೆ ನಿಶ್ಚಿಂತೆಯ ಕಾಲವೇ ವಿರಳವಾಗಿದೆ. ಅವರು ಹೊರಕ್ಕೆ ಹೊರಟರೆ ತೀರಿತು; ಸರ್ಕಾರಕ್ಕೆ ಅರ್ಜಿಯಮೇಲರ್ಜಿ. ತಮ್ಮ ವಿದ್ಯಾಬುದ್ಧಿ ಶಕ್ತಿಗಳನ್ನೆಲ್ಲಾ ಹೀಗೆ ಪರರ ಪೀಡನೆಗೇ ಅವರುಗಳು ಉಪಯೋಗಿಸುತ್ತ ಬಂದಿದ್ದಾರೆ. ಇಂಥವರ ಪುಂಡು ಅರ್ಜಿಗಳಿಗೆ ಮೇಲ್ಪಟ್ಟ ಅಧಿಕಾರಪದಾರೂಢರೂ ಕೂಡ ಕಿವಿಜೋತುಬಿಡುವಂತಾದರೆ, ಮತಾಧಿಕಾರಿಗಳ ಯತ್ನವು ಇದಿರಾಗಿ ಬೀಸುವ ಗಾಳಿಗೆ ನುಗ್ಗುವಂತೆಯೇ ತಾನೆ? ಇಂಥ ಜಂಜಾಟವನ್ನು ಈ ಪೀಠದವರು ಬಹುಕಾಲದಿಂದ ಅನುಭವಿಸಿಕೊಂಡು ಬಂದಿರುವರು. ಈಗಣ ಮಹಾಸ್ವಾಮಿಗಳ ದೃಢಯತ್ನದಿಂದ ಇಂಥ ಕ್ಷುದ್ರಯತ್ನಗಳಿಗೊಂದಕ್ಕೂ ಅವಕಾಶವಿಲ್ಲದಂಥ ಅಪ್ಪಣೆಗಳು ಕೆಲವು ನಮ್ಮ ಪ್ರಭುತ್ವದವರಿಂದ ೧೯೦೭-೧೯೦೮ ನೆ ವರ್ಷದಲ್ಲಿ ಹುಟ್ಟಿರುವುವು. ಅವುಗಳನ್ನೆಲ್ಲಾ ಆಯಾ ಕಾಲದಲ್ಲೇ ನಾವು ಈ ಪತ್ರಿಕೆಯ ದ್ವಾರಾ ಪ್ರಕಟಿಸಿರುವೆವಾದರೂ ಪ್ರಸಕ್ತಸಮಯಕ್ಕೆ ಅವಶ್ಯಕವಾಗಿ ತಿಳಿಯಬೇಕಾದ ಕೆಲ ಭಾಗಗಳನ್ನು ಅವುಗಳಿಂದ ಉದ್ಧರಿಸಿ ಇಲ್ಲಿ ಮುದ್ರಿಸಿರುತ್ತೇವೆ.

ಅಡ್ಡಪಲ್ಲಕ್ಕಿಯ ಬಿರುದಿನ ವಿಷಯವಾಗಿ ನಮ್ಮ ಗೌರ್ನಮೆಂಟಿನಿಂದ ೧೯೦೭ನೆ ಇಸವಿ ಮೇ ತಾ|| ೨೮ರಲ್ಲಿ ಹುಟ್ಟಿರುವ ನಂ. ೫೫೪೭-೫೮ ಮುಜ್ರಾಯಿ ಎಫ್. ೫೪ನೆ ಅಪ್ಪಣೆಯಲ್ಲಿ "ಅಡ್ಡಪಲ್ಲಕ್ಕಿ ವಿನಾ ೧೮೬೯ನೆ ಇಸವಿ ಸೆಪ್ಟಂಬರ್ ೨೦ನೆ ಮಕ್ಕಾಂ ಛೀಫ್ ಕಮಿಷನರ ರಹದಾರಿಯಲ್ಲಿ ಕಂಡ ಉಳಿದ ಸಕಲ ಬಿರುದುಗಳನ್ನೂ ಮುರುಘಮಠದವರು ಉಪಯೋಗಿಸಬಹುದೆಂದು ಶ್ರೀಮನ್ಮಹಾರಾಜರು ಅಪ್ಪಣೆ ಮಾಡಿರುತ್ತಾರೆ" ಎಂದು ಹೇಳಲ್ಪಟ್ಟಿದೆ.

ಛೀಫ್ ಕಮಿಷನರ ೧೮೬೯ನೆ ಇಸವಿ ರಹದಾರಿಯಲ್ಲಿ ಹೀಗಿದೆ.— "ಮೈಸೂರು ಸೀಮೆ ಗಡಿಗಳ ಅಮಿಲ್ ಕಿಲ್ಲೇದಾರ್ ಠಾಣಾದಾರ್ ವಗೈರೆರಿಗೆ ಬರಸಿ ಕಳುಹಿಸಿದ ನಿರೂಪ ಅದಾಗಿ. ಚಿತ್ರದುರ್ಗದಲ್ಲಿರುವ ಶ್ರೀಮತ್ ನಿರಂಜನ ಮುರಿಗಾರಾಜೇಂದ್ರ ಸ್ವಾಮಿಗಳವರು ಮೈಸೂರು ಸೀಮೆಯಲ್ಲಿ ಶಿಷ್ಯಾರ್ಜನೆ ಉದ್ದಿಶ್ಯ ಸಂಚಾರ ಹೊರಡುವುದರಿಂದ ಇವರ ಅಮರಹಾ ಅರತಕ್ಕ ಸಲ್ಲತಕ್ಕು ವಿವರ—೧೫೦ ಅಯ್ಯಗಳು, ೨೦೦ ಶೂದ್ರಜವಾನರು ವಗೈರೆ, ೪ ಆನೆ, ೮ ಒಂಟೆ, ೮೦ ಕುದುರೆಗಳು, ೧ ಅಡ್ಡಪಾಲಕಿ, ೧ ಸಾದಾಪಾಲಕಿ, ೧ ಮ್ಯಾನ, ೧ ಮಕರತೋರಣ, ೧ ನಂದಿಧ್ವಜ, ೨ ಶ್ವೇತಛತ್ರ, ೨ ಪಂಚದೀವಟಿಗೆ, ೨ ಮೊಹರ್ಛಾಲು, ೨ ವೇಟ್‌ಪಾವಡ, ೨ ಕುದುರೆಮೇಲಿನ ಡಂಕ, ೨ ಕಾವಿನಿಶಾನಿ, ೨ ಮಾಯಿಮರಾತಬು, ೨ ಚಂದ್ರವಾದ್ಯ, ೨ ಉಡುಕುವಾದ್ಯ, ೨ ಚಾಮರ, ೨ ಬಿಚ್ಚಪರಂಗು, ೨ ರವುಡು, ೨ ತಲೆಗೆಕಟ್ಟಿ ಬಾರಿಸುವ ಚಂದ್ರವಾದ್ಯ, ೨ ತಲೆಗೆಕಟ್ಟಿ ಬಾರಿಸುವ ಸೂರ್ಯವಾದ್ಯ, ೨ ಹಸರು ಕೆಂಪು ಹಳದಿ ಹಸ್ತಾಗಿರಿ, ೨ ಚಂದ್ರಗಾವಿಉಡಾಸು, ೨ ಹಗಲುದೀವಟಿಗೆ, ೨ ಜಾಗಟೆ, ೨ ಶಂಖ, ೨ ಕಾವಿಜಾಂಡ್ಯ, ೨ ಪಟಾಪಟಿಜಾಂಡ್ಯ, ೫೦ ಬೆಳ್ಳಿಕಟ್ಟಿಗೆ, ೫೦ ಹಸರುಕಟ್ಟಿಗೆ, ೨೦ ಬಂದೂಕುಗಳು, ೪೦ ಹತ್ಯಾರುಗಳು, ೩೦ ಚಕ್ಕಡಾಬಂಡಿ, ೪೦ ಬಲ್ಲೆಡವಾಲಿ."

ಕ್ಲಾರ್ಕಸಾಹೇಬರ ಸೈನಾಗಿದೆ.

ಮೇಲೆ ಕಂಡ ಛೀಫ್ ಕಮಿಷನರ ಆರ್ಡರಿನಲ್ಲಿ ಅಡ್ಡಪಾಲಕಿಯ ಮರ್ಯಾದೆಯು ನಡೆಯಿಸಿಕೊಡಲ್ಪಟ್ಟಿದ್ದರೂ, ಆಂಗ್ಲಾಧಿಕಾರಿಗಳ ಪ್ರಾಬಲ್ಯವು ತಪ್ಪಿ ತ್ರಿಮತಸ್ಥಾಧಿಕಾರಿಗಳ ಪ್ರಾಬಲ್ಯವು ಮೈಸೂರು ದೇಶದಲ್ಲಿ ಹೆಚ್ಚುತ್ತ ಬಂದಂತೆ ಶ್ರೀಮುರುಘಮಠದ ಮಾಮೂಲು ಮರ್ಯಾದೆಗಳಿಗೂ ಚಕ್ರಪ್ರಯೋಗವಾಗುತ್ತ ಬಂದಿತು. ಅದರಿಂದಲೇ ೧೯೦೭ನೆ ಇಸವಿಯ ಅಪ್ಪಣೆಮೇರೆಗೆ ಅಡ್ಡಪಲ್ಲಕ್ಕಿಯ ಮರ್ಯಾದೆಯು ತಪ್ಪಿಸಲ್ಪಟ್ಟಿತು. ಇಷ್ಟು ಅಪ್ಪಣೆ ಆದುದಕ್ಕೂ ಸೈರಿಸದೆ, ಶೃಂಗೇರಿ, ಕೂಡಲಿಶೃಂಗೇರಿ, ಉತ್ತರಾದಿ, ವ್ಯಾಸರಾಯ, ರಾಘವೇಂದ್ರರಾಯ, ಪರಕಾಲ ಮೊದಲಾದ ಮಠಗಳ ಪ್ರತಿನಿಧಿಗಳು ಗೌರ್ನಮೆಂಟಿಗೆ ಅರ್ಜಿ ಬರೆದುಕೊಂಡು ಅವನ್ನೂ ತಪ್ಪಿಸಲೂ ಶ್ರೀಮುರುಘಮಠದವರ ಮರ್ಯಾದೆಗೆ ಭಂಗಪಡಿಸಲೂ ಯತ್ನಿಸಿದರು. ಆಗ ೧೯೦೭ನೆ ಇಸವಿ ಆಗಸ್ಟ್ ತಾ|| ೯ ರಲ್ಲಿ ಮತ್ತೊಂದು ಗೌರ್ನಮೆಂಟ್ ಅಪ್ಪಣೆಯಾಯಿತು. ಅದರಲ್ಲಿ— "ಮುರುಘಮಠದ ಸ್ವಾಮಿಗಳು ಬಿರುದಾವಳಿಗಳಿಲ್ಲದೆ ಪಾದಚಾರಿಗಳಾಗಿ ಬರಬೇಕೆಂದು ೧೮೩೩ನೆ ಇಸವಿಯಲ್ಲಿ ಚಿತ್ರದುರ್ಗದ ಡಿವಿಜನ್ ಸೂಪರಿಂಟೆಂಡೆಂಟರಿಂದ ಅಪ್ಪಣೆಯಾಗಿದೆಯೆಂದು ನೀವು ಹೇಳುವುದು ಅಂಗೀಕಾರವಾದದ್ದಲ್ಲ. ಯಾವ ಪಟ್ಟಣದ ರಾಜವೀಧಿಗಳಲ್ಲೇ ಆಗಲಿ ಒಬ್ಬರು ಬರಬಹುದೆಂದೂ ಮತ್ತೊಬ್ಬರು ಬರಬಾರದೆಂದೂ ವಿಧಿಸಲು ಗೌರ್ನಮೆಂಟಿನವರಿಗೆ ಅಭಿಪ್ರಾಯವಿಲ್ಲ.........ಮುರುಘಮಠದವರು ಚಿತ್ರದುರ್ಗ ಟವನ್ನಿಗೆ ಪ್ರವೇಶಮಾಡುವುದನ್ನು ನಿಲ್ಲಿಸಬೇಕೆಂದು ನೀವು ಹೇಳಿಕೊಂಡಪ್ರಕಾರ ಆರ್ಡರ್ ಕೊಡಲು ಆಗುವದಿಲ್ಲ" ಎಂದು ಅಪ್ಪಣೆ ಮಾಡಿದರು. ಇದು ಕೊನೆಗಂಡಮೇಲೆ ತ್ರಿಮತಸ್ಥರ ಮಠಗಳ ಏಜಂಟರುಗಳು ಮತ್ತೊಂದು ಅರ್ಜಿಯನ್ನು ಗೌರ್ನಮೆಂಟಿಗೆ ಬರೆದು ರಹದಾರಿಯಲ್ಲಿಲ್ಲದ ಪಂಚಕಲಶವನ್ನುಪಯೋಗಿಸುತ್ತಾರೆಂದು ಶ್ರೀಮುರುಘಮಠದವರ ಮೇಲೆ ದೂರಿಕೊಂಡರು. ಗೌರ್ನಮೆಂಟಿನವರು ಅದಕ್ಕೇ ಕಿವಿಜೋತು, ೧೯೦೮ನೆ ಮೇ ತಾ|| ೮ರ ಅಪ್ಪಣೆಮೇರೆಗೆ ಅದನ್ನೂ ತಪ್ಪಿಸಿಬಿಟ್ಟರು. (ಸೋಸಲೆ ವ್ಯಾಸರಾಯ ಮಠದವರಿಗೆ ಪಂಚಕಲಶವನ್ನುಪಯೋಗಿಸುವ ಮಾಮೂಲು ಇಲ್ಲದೆ ಇದ್ದರೂ ಅವರು ಹೊಸದಾಗಿ ತಾವೇ ಅದನ್ನು ಉಪಯೋಗಿಸಿಕೊಂಡರೂ, ಅವರ ಮೇಲೆ ಇತರರು ಎಷ್ಟೋ ತಕರಾರು ಬರೆದರೂ, ಅಧಿಕಾರಿಗಳು ಕಂಡರೂ ಕಾಣದಂತೆ ಕೇಳಿದರೂ ಕೇಳದಂತೆ ನಟಿಸಿ ಸಾಗಿಸಿಕೊಂಡೇ ಬರುತ್ತಿದ್ದಾರೆ) ಬಿರುದುಗಳ ವಿಷಯವು ಒಂದು ವಿಧದಲ್ಲಿ ಕೊನೆಮುಟ್ಟಿದುದರಿಂದ ತ್ರಿಮತಸ್ಥರು ಆ ದಾರಿಯನ್ನು ಬಿಟ್ಟು ಮತ್ತೊಂದು ವಿಧದಲ್ಲಿ ಶ್ರೀಮುರುಘಮಠದ ಮೇಲೆ ದಾಳಿಯಿಡ ಉಪಕ್ರಮಿಸಿದರು. ಜಗದ್ಗುರುಪದವನ್ನು ಇವರು ಉಪಯೋಗಿಸಿಕೊಳ್ಳುತ್ತಿರುವರೆಂದೂ ಅದು ಕೂಡದೆಂದೂ, ಇತರ ಮತಗಳ ಮಠ ದೇವಾಲಯಗಳ ಮುಂದೆ ಇವರು ವಾದ್ಯವನ್ನು ನಿಲ್ಲಿಸಬೇಕೆಂದೂ, ವೇದಘೋಷವನ್ನು ಮಠದವರು ಮಾಡಿಸಿಕೊಳ್ಳಕೂಡದೆಂದೂ, ಊರೂರಿಗೆ ಲೈಸೆನ್ಸನ್ನು ಪಡೆದು ಪ್ರವೇಶಿಸಬೇಕೆಂದೂ ಮೊದಲಾಗಿ ಹೇಳಿಕೊಂಡು ಅರ್ಜಿಕೊಟ್ಟರು. ಇದು ೧೯೦೮ನೆ ಇಸವಿಯಲ್ಲಿ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಮೂಡಿತು. ಗುಬ್ಬಿ ತಾ|| ಅಮಲ್ದಾರರು ಅದಕ್ಕೆ ಕಿವಿಜೋತು "ಗೌರ್ನಮೆಂಟ್ ರಹದಾರಿ ಹುಟ್ಟಿದ ಮಾತ್ರದಿಂದ ಅದರಲ್ಲಿ ಕಂಡ ಎಲ್ಲಾ ಬಿರುದಾವಳಿಗಳನ್ನೂ ಸರ್ವತ್ರ ನಿರಾತಂಕವಾಗಿ ಉಪಯೋಗಿಸಬಹುದೆಂಬ ಅರ್ಥವಾಗುವುದಿಲ್ಲವೆಂದು ವ್ಯಾಖ್ಯಾನಮಾಡಿ ಆ ಫಿರ್ಯಾದಿಗಳಿಗೇ ಅನುಕೂಲವಾಗಿ ಅಪ್ಪಣೆಮಾಡಿದರು. ಇದರ ಮೇಲೆ ಶ್ರೀ ಮಠದವರು ಗೌರ್ನಮೆಂಟಿಗೆ ಮತ್ತೆ ದೂರಿಟ್ಟುಕೊಳ್ಳಬೇಕಾಯಿತು. ಅದರ ಮೇಲೆ ಗೌರ್ನಮೆಂಟಿನವರು ೧೯೦೮ನೆ ಡಿಶಂಬರ್ ತಾ|| ೧೨ರಲ್ಲಿ ಮಾಡಿದ ನಂ. ೪೫೦-೯ ಮುಜ ೬೫-೦೮-೯ ರ ಅಪ್ಪಣೆಯಲ್ಲಿ ಹೀಗೆ ಇದೆ— "ರಹದಾರಿಯಲ್ಲಿ ಕಂಡ ಬಿರುದುಗಳು ಮಠಕ್ಕೆ ಸಲ್ಲತಕ್ಕುವೆಂದು ಶ್ರೀಮನ್ಮಹಾರಾಜರವರು ಪರ್ಯಾಲೋಚಿಸಿ, ದಯಮಾಡಿ ಮರಳಿ ನಡಿಸಿಕೊಟ್ಟಿರುವುದರಿಂದ ಸ್ವಾಮಿಗಳು ಆ ಬಿರುದುಗಳೊಡನೆ ಉತ್ಸವಮಾಡಿಕೊಂಡು ಹೋಗಲು ಅವರಿಗೆ ಹಕ್ಕಿರುತ್ತದೆ. ಮತ್ತೂ ಇಂಥ ಅವರ ಹಕ್ಕನ್ನು ಕಾಪಾಡಿಕೊಂಡು ಬರುವುದು ಎಲ್ಲ ಅಧಿಕಾರಿಗಳ ಕರ್ತವ್ಯವಾಗಿದೆ. ಈ ಹಕ್ಕು ಇತರ ಪಂಗಡದವರ ಹಕ್ಕಿನ ಸಂಬಂಧವಾಗಿ ಸರ್ಕಾರದಿಂದ ಖಂಡಿತವಾಗಿ ಕೊಡಲ್ಪಟ್ಟ ಅಪ್ಪಣೆಗೆ ಮತ್ತು ಸಿವಿಲ್ ಕೋರ್ಟಿನ ತೀರ್ಮಾನಗಳಿಗೆ ವಿರುದ್ಧವಾಗಿದ್ದ ಹೊರತು ಮಠದವರು ಬಿರುದುಗಳೊಡನೆ ರಾಜವೀಧಿಗಳಲ್ಲಿ ಉತ್ಸವಮಾಡಿಸಿಕೊಂಡು ಹೋಗಲು ಆ ರಹದಾರಿಯೇ ದೃಢವಾದ ಆಧಾರವಾಗಿರುತ್ತದೆ......... ಒಂದು ಮತದ ಜನರು ಮತ್ತೊಂದು ಮತದ ಜನರ ಪೂಜಾಸ್ಥಲಗಳ ಮುಂದೆ ಉತ್ಸವಮಾಡಿಕೊಂಡು ಹೋಗುವಾಗ್ಗೆ ವಾದ್ಯವನ್ನು ನಿಲ್ಲಿಸತಕ್ಕದು ಸರ್ಕಾರದವರ ತಾತ್ಪರ್ಯವಾಗಿದೆಯೇ ವಿನಾ ಹಿಂದೂ ಜನರಲ್ಲೇ ಒಂದು ಪಂಗಡದವರು ಮತ್ತೊಂದು ಪಂಗಡದವರ ದೇವಸ್ಥಾನದ ಇದಿರಿಗೆ ಉತ್ಸವಮಾಡಿಕೊಂಡು ಹೋಗುವಾಗ್ಗೆ ವಾದ್ಯವನ್ನು ನಿಲ್ಲಿಸಬೇಕೆಂಬ ಅಭಿಪ್ರಾಯವಲ್ಲವೆಂಬಂಶವನ್ನು ಈ ಸಂಬಂಧದಲ್ಲಿ ವಿವರಿಸಿ ಹೇಳುವುದು ಅವಶ್ಯಕವಾಗಿದೆ...... ದೇವಸ್ಥಾನಗಳೆದಿರಿಗೆ ಸ್ವಾಮಿಗಳು ವಾದ್ಯವನ್ನು ನಿಲ್ಲಿಸಬೇಕೆಂಬ ಆಕ್ಷೇಪವು ಮೇಲೆ ತಿಳಿಸಿರುವ ಕಾರಣದಿಂದ ನಿಲ್ಲತಕ್ಕದಾಗಿಲ್ಲ.........ಉತ್ಸವಗಳು ಮೊದಲಾದವುಗಳ ಸಂಬಂಧದಲ್ಲಿ ಮಾಮೂಲನ್ನು ವಿಚಾರಿಸುವಾಗ್ಗೆ ಸಿವಿಲ್ ಕೋರ್ಟಿನ ಡಿಕ್ರಿಗಳ ಅಥವಾ ಸರ್ಕಾರಿಯ ಹಿಂದಣ ಆರ್ಡರುಗಳ ಆಧಾರದ ಮೇಲೆ ಹುಟ್ಟಿರುವ ಮಾಮೂಲನ್ನು ಮುಖ್ಯವಾಗಿ ಗೌರವಿಸಬೇಕೆಂದು ಸರ್ಕಾರದ ಅಭಿಪ್ರಾಯವೇ ಹೊರತು ಅದಕ್ಕೆ ವಿರುದ್ಧವಾಗಿ ಹೊಸದಾಗಿ ವಿಚಾರಿಸಿ ಇತ್ಯರ್ಥಮಾಡಬೇಕಾಗಿರುವ ಮತ್ತೂ ಯಾವನೋ ಒಬ್ಬನಿಂದ ಹೊಸದಾಗಿ ಮಾಡಲ್ಪಡುವ ಮಾಮೂಲಲ್ಲವೆಂಬುದನ್ನು ತಿಳಿಸಬೇಕಾದ ಅವಶ್ಯಕತೆಯಿಲ್ಲ. ಲಿಂಗಾಯತರು ರಾಜವೀಧಿಗಳಲ್ಲಿ ವೇದವನ್ನು ಹೇಳಕೂಡದೆಂದು ಡಿ|| ಕಮಿಷನರು ತಾವು ಮಾಡಿರುವ ಅಡ್ಡಿಯನ್ನು ಸಾಧಿಸಿ ಬರೆದಿರುವ ಕಾರಣಗಳು ಸರ್ಕಾರದವರಿಗೆ ಒಡಂಬಡುವುದಿಲ್ಲ.........ರಾಜವೀಧಿಗಳಲ್ಲಿ ಹೇಳತಕ್ಕ ಅಧ್ಯಯನವು ಬ್ರಾಹ್ಮಣರ ಹಕ್ಕನ್ನು ಉಲ್ಲಂಘಿಸಿದಂತಾಗುವುದಿಲ್ಲ. ಇಂಥ ಹಕ್ಕನ್ನು ಸರ್ಕಾರವಾಗಲಿ ಲಾ ಕೋರ್ಟಾಗಲಿ ಸಾಧಿಸಿಕೊಡಲಾರದು. ಆದುಕಾರಣ ಸರ್ಕಾರದವರು ರಾಜವೀಧಿಗಳಲ್ಲಿ ಲಿಂಗಾಯತರಿಗೆ ವೇದವನ್ನು ಹೇಳಿಕೊಳ್ಳಲು ಅಡ್ಡಿಯಿರಬಾರದೆಂದು ಅಪ್ಪಣೆಮಾಡಿದ್ದಾರೆ. ಸ್ವಾಮಿಗಳು ಜಗದ್ಗುರುವೆಂಬ ಶಬ್ದವನ್ನು ಬಿರುದಾಗಿ ಉಪಯೋಗಿಸುತ್ತಾರೆಂದು ಡಿ|| ಕಮಿಷನರು ಪಡುವ ಅಭಿಪ್ರಾಯವನ್ನು ಸರ್ಕಾರದವರು ಒಪ್ಪುವುದಿಲ್ಲ. ಸ್ವಾಮಿಗಳು ಜಗದ್ಗುರುಗಳೆಂದು ತಾವೇ ಕರೆದುಕೊಳ್ಳಲೂ, ಮತ್ತು ಅವರ ಶಿಷ್ಯರು ಆ ರೀತಿಯಲ್ಲಿ ಅವರನ್ನು ಹೊಗಳಲೂ ಅಭ್ಯಂತರವಿರುವುದಿಲ್ಲ. ಆದರೆ ಆ ಶಬ್ದದಿಂದ ಕೂಡಿದ ಬಾವುಟವು ಬಿರುದಾಗುವುದಾದ ಪ್ರಯುಕ್ತ ಅದು ರಹದಾರಿಯಲ್ಲಿ ಕಾಣಿಸಲ್ಪಟ್ಟಿಲ್ಲವಾದ ಪ್ರಯುಕ್ತ ಅಂಥ ಬಾವುಟವನ್ನು ಉಪಯೋಗಿಸಲಾಗದು."

ಮೇಲೆ ಕಂಡ ಸರ್ಕಾರಿ ಅಪ್ಪಣೆಗಳಿಂದ ಶ್ರೀ ಮಠದವರ ಉತ್ಸವಕ್ಕೆ ಭಂಗತರಲು ಕ್ಷುದ್ರಪ್ರಯತ್ನಗಳಿಗೆ ಅವಕಾಶವಿಲ್ಲವೆಂದು ಸಿದ್ಧವಾಗಿದ್ದರೂ, ಬೆಂಗಳೂರಿನಲ್ಲಿ ಮರಳಿ ಅಂಥ ಪ್ರಯತ್ನಗಳು ಮತ್ತೆ ನಡೆದಿರುವುದನ್ನು ನೋಡಿದರೆ ಈ ಹಾವಳಿಯು ಈಗ್ಗೇ ಕೊನೆಮುಟ್ಟುವಂತೆ ಕಾಣುವುದಿಲ್ಲ. ಪರಮತಾಸಹನೆಯಿಂದ ಇಂಥ ಕ್ಷುದ್ರವಿಘ್ನಗಳಿಗೆ ತಲೆಹಾಕುವವರನ್ನು ಪ್ರಭುತ್ವದವರು ಕಠಿನವಾಗಿ ಶಿಕ್ಷಿಸಿ ಭೀತಿ ಹುಟ್ಟಿಸಿದಲ್ಲದೆ ಈ ಮಾತ್ಸರ್ಯವರ್ಧಕಗಳಾದ ಪ್ರಯತ್ನಗಳು ಕೊನೆಮುಟ್ಟುವುದಿಲ್ಲ. ಗೌರ್ನಮೆಂಟಿನವರು ತಟಸ್ಥರಾಗಿದ್ದು ದ್ವೇಷಾಸೂಯಾಭಿವೃದ್ಧಿಗೆ ಅವಕಾಶಕೊಡುವುದು ಶ್ರೇಯಸ್ಕರವಲ್ಲ.

ಪೋಲೀಸರೂ ಸ್ಪೆಷಲ್ ಮ್ಯಾಜಿಸ್ಟ್ರೇಟರೂ ಸೇರಿ ಚಪ್ಪರಗಳಮೇಲೆ ಕಾಣಿಸಿದ್ದ ಶ್ರೀಮನ್ಮಹಾರಾಜ ಎಂಬ ಅಕ್ಷರಗಳನ್ನು ಕತ್ತರಿಸಿಬಿಟ್ಟುದೂ ಈ ವಿಷಯವಾಗಿ ಈ ಉದ್ಯೋಗಿಗಳು ಕಂಡಕಂಡವರನ್ನೆಲ್ಲಾ ಎಕ್ಸ್‌ಪ್ಲನೇಷನ್ ಕೊಡಬೇಕೆಂದು ತೊಂದರೆಪಡಿಸುತ್ತಿದ್ದುದೂ ವಿಚಿತ್ರವಾಗಿದೆ. ಸರ್ಕಾರದವರೇ ಅನ್ಯಾಯವಾದ ಇಂಥ ಕುಹಕ ವಿಷಯಗಳಿಗೆ ಅವಕಾಶಮಾಡಿಕೊಡುವುದು ತಪ್ಪು. ಶ್ರೀಮನ್ಮಹಾರಾಜ ಎಂಬ ಪದವನ್ನು ಶ್ರೀ ಮಠದವರೇ ಆಗಲೀ ಅವರ ಭಕ್ತಮಂಡಲಿಯೇ ಆಗಲೀ ಈ ಬೆಂಗಳೂರಿನಲ್ಲಿ ಮಾತ್ರವೇ ಉಪಯೋಗಿಸಿಲ್ಲ. ಆ ಪದಪ್ರಯೋಗವು ಅನೂಚಾನವಾಗಿ ಅವರಿಗೆ ಬಂದಿದೆ. ವಿಚಾರಮಾಡಿದರೆ ಜಗದ್ಗುರುಪದಕ್ಕಿಂತಲೂ ಮಹಾರಾಜೋಪಪದವು ಅಭೀಷ್ಟವಾದುದಲ್ಲ. ಸಂಪ್ರದಾಯಸಿದ್ಧವಾಗಿ ಬಂದಿರುವ ಪ್ರಯೋಗವಾಗಿರುವುದರಿಂದ ಗತಾನುಗತಿಕವಾಗಿ ಉಪಯೋಗಿಸಲ್ಪಡುತ್ತಿದೆ. ಸರ್ಕಾರದಲ್ಲಿ ನಡೆದಿರುವ ಕರಸ್ಪಾಂಡೆನ್ಸುಗಳಲ್ಲೆಲ್ಲಾ ಈ ಪದದ ಪ್ರಯೋಗವಿದೆ. ಶ್ರೀ ಮುಮ್ಮಡಿಕೃಷ್ಣರಾಜಪ್ರಭುಗಳು ೧೮೪೧ನೆ ಇಸವಿ ಜುಲೈ ತಾ|| ೨೭ ರಲ್ಲಿ ಶ್ರೀ ಜಗದ್ಗುರು ಸನ್ನಿಧಿಗೆ ಬರೆದುಕೊಂಡಿರುವ ವಿಜ್ಞಾಪನಪತ್ರದಲ್ಲಿ "ಶ್ರೀ ವೀರಶೈವ ಮತಸ್ಥಾಪನಾಚಾರ್ಯವರ್ಯ...ಶ್ರೀಮಚ್ಚಿನ್ಮೂಲಾದ್ರಿ ಪ್ರಭುಶೂನ್ಯಪೀಠಾರೂಢರಾದಂಥ ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಮುರಿಗರಾಜೇಂದ್ರ ಸ್ವಾಮಿಗಳವರ ಸನ್ನಿಧಾನಕ್ಕೆ...ಮಹೀಶೂರ ರತ್ನಸಿಂಹಾಸನಾರೂಢರಾದಂಥ ಕೃಷ್ಣರಾಜವೊಡೆಯರವರು ಮಾಡುವ ಸಾಷ್ಟಾಂಗ ನಮಸ್ಕಾರ" ಎಂದು ಅವರೇ ಬರೆದುಕೊಂಡಿದ್ದಾರೆ. ಸರ್ಕಾರದಿಂದ ಹುಟ್ಟಿರುವ ಎಷ್ಟೋ ರಹದಾರಿಗಳ ಮೇಲೆಲ್ಲಾ ಹೀಗೆಯೇ ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಎಂಬ ಪದಪ್ರಯೋಗವಾಗಿರುವುದು ಅದ್ಯಾಪಿ ಸಿದ್ಧವಾಗಿದೆ. ಇದುವರೆಗೆ ನಡೆದಿರುವ ಅನೇಕ ಸ್ಥಲಗಳ ಉತ್ಸವಕಾಲಗಳಲ್ಲೂ ಕಮಾನುಗಳಮೇಲೆ ಹೀಗೆಯೇ ಬರೆಯಲ್ಪಟ್ಟಿದ್ದಿತು. ಹೀಗಿದ್ದರೂ ತಮ್ಮ ಅಧಿಕಾರವನ್ನೂ ಶಕ್ತಿಯನ್ನೂ ಪರರ ಪೀಡೆಗಾಗಿ ಉಪಯೋಗಿಸಬಾರದೆಂದು ತಿಳಿದುಕೊಳ್ಳಲಾರದವರಿಗೆ ಮಾತ್ರ ಇದು ದೋಷವಾಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ. ಇಂಥ ವಿಷಯಗಳಿಗೆ ಸರ್ಕಾರದವರೇ ಪ್ರೋದ್ಬಲರಾಗುವುದು ಭೂಷಣಾಸ್ಪದವಲ್ಲ.

ಬೆಂಗಳೂರಿನಲ್ಲಿ ಉತ್ಸವಕಾರ್ಯವೇನೋ ನಡೆದುಹೋದರೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅನಾಲೋಚಿತವಾದ ಅಪ್ಪಣೆಯಿಂದ ಒಂದುದಿನ ಉತ್ಸವವು ಮುಂದಕ್ಕೆ ತಡೆದುಬಿದ್ದ ಕಾರಣ ಲಕ್ಷಾಂತರಜನರು ಹತಾಶರಾಗಿ ತೊಂದರೆಪಟ್ಟ ವಿಷಯವು ಮರೆಯತಕ್ಕುದಾಗಿಲ್ಲ. ಇದರ ಉತ್ತರವಾದಿತ್ವವು ಸ್ಥಲಾಧಿಕಾರಿಗಳಿಗೇ ಸೇರಿದುದು. ಈ ಸಮಯದಲ್ಲಿ "ಉತ್ಸವವು ನಿಂತರೂ ಸರಿ; ಅನ್ಯಾಯವಾದ ಡಿ|| ಮ್ಯಾಜಿಸ್ಟ್ರೇಟರ ಆರ್ಡರನ್ನು ಹಿಂದಿರುಗಿಸಿಕೊಳ್ಳುವಂತೆ ಮಾಡಿಯೇ ತೀರಬೇಕು" ಎಂದು ಭಕ್ತಜನರು ಮಾಡಿದ ಮನಸ್ಥೈರ್ಯವು ಅಭಿನಂದನೀಯವಾಯಿತು. ಸರ್ಕಾರದುದ್ಯೋಗಿಗಳು ತಮ್ಮ ಉದ್ಯೋಗ ಧರ್ಮನಿರ್ವಾಹದಲ್ಲಿ ಸ್ವಮತಪಕ್ಷಪಾತ ಪರಮತಾಸಹನೆಗಳಿಗೀಡಾಗದೆ ಕಾರ್ಯಭಾರವನ್ನು ಜರುಗಿಸುವ ಕಾಲವು ಇನ್ನೆಂದಿಗೆ ಬರುವುದೋ ತಿಳಿಯಲಿಲ್ಲ. ಅದು ಬರುವವರೆಗೂ ದೇಶದಲ್ಲಿ ದುರ್ಬಲರಾದ ಪ್ರಜೆಗಳಿಗೆ ಶಾಂತಿಸುಖಗಳಿಲ್ಲ. ಅಬಲರಿಗೆ ಅಭಯಹಸ್ತರೂಪರಾಗಿರುವ ಶ್ರೀಮನ್ಮಹಾರಾಜರವರು ಈ ವಿಷಯಗಳನ್ನೆಲ್ಲಾ ತಮ್ಮ ದಿವ್ಯಚಿತ್ತಕ್ಕೆ ತಂದು, ವಿದ್ಯಾಧಿಕಜನರ ಆಧಿಕ್ಯದಿಂದಲೂ ದುರಭಿಮಾನದಿಂದಲೂ ಸಾಮಾನ್ಯಪ್ರಜೆಗಳಿಗೆ ಎಷ್ಟು ಕಷ್ಟನಷ್ಟಗಳೂ ಅತೃಪ್ತಿಯೂ ಪ್ರಾಪ್ತವಾಗುತ್ತಿರುವುವೆಂಬುದನ್ನು ಗಮನಿಸಿ ಈ ಅನರ್ಥಬೀಜವು ಉತ್ತರತ್ರ ಪ್ರಬಲಿಸದಂತೆ ತಕ್ಕ ಏರ್ಪಾಟನ್ನು ಮಾಡುವುದು ಅತ್ಯಾವಶ್ಯಕವೆಂಬುದನ್ನು ಹೇಳಬೇಕಾಗಿಲ್ಲ.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರ ವರ್ಧಂತಿಯು ಈ ದಿವಸ ನಡೆಯುವುದಾಗಿದೆ.

ಶ್ರೀಮನ್ಮಹಾರಾಜರವರ ೩೬ ನೆ ವರ್ಷ ವರ್ಧಂತ್ಯುತ್ಸವವು ಜೂನ್ ತಾ|| ೯ ರಲ್ಲಿ ನಡೆಯುವುದಾಗಿದೆ.

ಶ್ರೀಮನ್ಮಹಾರಾಜರವರ ಸ್ವಾರಿಯು ಈ ತಿಂಗಳ ಕೊನೆಯಲ್ಲಿ ರಾಜಧಾನಿಗೆ ನೀಲಗಿರಿಯಿಂದ ದಯಮಾಡಿಸುವುದಾಗಿದೆಯೆಂದು ಕೇಳುತ್ತೇವೆ.

ಯುದ್ಧದ ಕಾರಣದಿಂದ ನಿಂತುಹೋಗಿದ್ದ ಕುದುರೆಜೂಜನ್ನು ರಾಜಧಾನಿಯಲ್ಲಿ ವರ್ಧಂತ್ಯುತ್ಸವವು ನಡೆದ ಬಳಿಕ ನೆರವೇರಿಸಲು ಏರ್ಪಾಟು ಜರುಗುತ್ತಿವೆ.

ನೆಲ್ಲುಹುಲ್ಲಿನಿಂದ ಸುತ್ತಿ ನೀರಿಗೆ ಉರುಳಿಸಲ್ಪಟ್ಟಿದ್ದ ೪ ಶವಗಳು (೩ ಹೆಂಗುಸರವು, ೧ ಗಂಡುಸಿನದು) ರಾಜಧಾನಿಯ ಮೋಚಿಕ್ಯಾಂಪ್ ಕಂದಕದಲ್ಲಿದ್ದುವು. ಶನಿವಾರ ತೇಲಿದುವು. ಪೋಲೀಸರು ವಿಚಾರಿಸುತ್ತಿದ್ದಾರೆ.

ಕಳೆದ ಗುರುವಾರ ರಾತ್ರಿ ರಾಜಧಾನಿಯಲ್ಲಿ ಹದವಾದ ಮಳೆಯು ಚೆನ್ನಾಗಿ ನಡೆಯಿಸಿತು. ಒಣಗಿಹೋಗಿದ್ದ ಕಾರಂಜಿಕೆರೆಗೆ ಅರ್ಧನೀರು ಬಂದಿದೆ. ಜೋಳದಪೈರಿಗೆ ಈ ಮಳೆಯು ಚೆನ್ನಾಗಿ ಅನುಕೂಲಿಸಿತು.

ಫೈನಾನ್ಷಿಯಲ್ ಸೆಕ್ರೆಟರಿ ಡಿ|| ಬ|| ಜಿ. ಎಸ್. ಚಕ್ರವರ್ತಿಯವರು ಬರುವ ಜೂನ್ ತಿಂಗಳ ಕೊನೆಗೆ ನಮ್ಮ ಸಂಸ್ಥಾನದ ಸರ್ವಿಸ್ಸಿನಿಂದ ನಿವೃತ್ತರಾಗಿ ಇಂಡ್ಯಾ ಗೌರ್ನಮೆಂಟ್ ಸರ್ವಿಸ್ಸಿಗೆ ಹಿಂದಿರುಗಿ ಹೋಗುವವರಾಗಿದ್ದಾರೆಂದು ಕೇಳುತ್ತೇವೆ.

ಡಾ|| ಟಿ. ಎಸ್. ಸಿದ್ದಪ್ಪನವರು ತಮ್ಮ ಕುಮಾರಿಯನ್ನು ಕೊತ್ತೀಗಾಲದ ಮ|| ಶಿವಲಿಂಗದೇವರ ಕುಮಾರ ರಾ|| ಪುಟ್ಟಸ್ವಾಮಿಯೆಂಬ, ಬಿ.ಎ., ಪರೀಕ್ಷೆಗೆ ಹೋಗಿರುವ ವಿದ್ಯಾರ್ಥಿಗೆ ಕೊಟ್ಟು ವಿವಾಹಮಹೋತ್ಸವವನ್ನು ಕಳೆದ ಬುಧವಾರ ರಾಜಧಾನಿಯಲ್ಲಿ ನಡೆಯಿಸಿದರು. ಆಕಾಲದಲ್ಲಿ ಮೈಸೂರು ವಿದ್ಯಾಭಿವೃದ್ಧಿ ಫಂಡಿಗೆ ವಧುವಿನ ಪಕ್ಷದಿಂದ ೫ ರೂ. ವರನ ಪಕ್ಷದಿಂದ ೫ ರೂ. ಗಳುಕೊಡಲ್ಪಟ್ಟುವು.

ಬೆಂಗಳೂರಿಗೆ ಶ್ರೀಮನ್ಮಹಾನಿರಂಜನ ಜಗದ್ಗುರು ಸ್ವಾಮಿಗಳವರ ಆಗಮನ.

(ನಮ್ಮ ಸ್ವಕೀಯ ವಿಲೇಖಕರಿಂದ)

ಚಿತ್ರದುರ್ಗದ ಶ್ರೀ ಜಗದ್ಗುರು ಪೀಠಾಧಿಪತಿಗಳು ಬೆಂಗಳೂರು ಪಟ್ಟಣಕ್ಕೆ ಬಹು ದೀರ್ಘಕಾಲದಿಂದಲೂ ದಯಮಾಡಿಸಿರಲಿಲ್ಲ. ಈಗಣ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಅಧಿಕಾರಾರೂಢರಾದಮೇಲೆ ಸ್ವದೇಶ ವಿದೇಶಗಳಲ್ಲಿ ವಿಶೇಷವಾಗಿ ಸಂಚರಿಸಿ, ಮಠದ ಪ್ರಾಚೀನಗೌರವಗಳನ್ನು ಉದ್ಧರಿಸಿ, ಸ್ವಮತಾಭ್ಯುದಯಕ್ಕೂ ವಿಶೇಷ ಸಹಾಯಮಾಡಿ, ಸ್ವಮತ ಪರಮತಗಳವರೆಲ್ಲಾ ತಮಗಿರುವ ಪ್ರೀತಿ ವಿಶ್ವಾಸಗಳಿಂದ ಎಲ್ಲರ ಮನಸ್ಸನ್ನೂ ಆಕರ್ಷಿಸಿ ಸಂಮಾನಿತರಾಗಿ, ಕೀರ್ತಿವೈಭವದಿಂದ ವಿರಾಜಿಸುತ್ತ, ಅಸಾಧಾರಣವಾದ ಪಾಂಡಿತ್ಯಪ್ರತಿಭೆಯಿಂದಲೂ ತಪಸ್ಸಿದ್ಧಿಯಿಂದಲೂ ಲೋಕಾನುಗ್ರಹವನ್ನು ಮಾಡುತ್ತಿರುವುದನ್ನು ನೋಡಿಯೂ ಕೇಳಿಯೂ ಬೆಂಗಳೂರಿನ ವೀರಶೈವ ಮಹಾಜನರು ಅಂಥ ಶ್ರೀ ಮಹಾಸ್ವಾಮಿಗಳ ಸ್ವಾರಿಯನ್ನು ತಮ್ಮ ಪಟ್ಟಣಕ್ಕೆ ಬಿಜಯಮಾಡಿಸಿಕೊಂಡು, ಸೇವಿಸಿ, ಧನ್ಯರಾಗಬೇಕೆಂಬ ಲವಲವಿಕೆಯಿಂದ ಕಳೆದ ವರ್ಷವೇ ಶ್ರೀ ಮಹಾಸ್ವಾಮಿ ಪಾದದಲ್ಲಿ ಬಿನ್ನಯಿಸಿಕೊಂಡು, ಜಗದ್ಗುರುಗಳ ಗೌರವಕ್ಕೆ ತಕ್ಕಂತೆ ಸತ್ಕಾರದ ಏರ್ಪಾಟುಗಳನ್ನುಮಾಡಲು ತಕ್ಕ ಪ್ರಯತ್ನವನ್ನು ನಡೆಯಿಸಿದರು. ಇಲ್ಲಿಯ ವೀರಶೈವರೆಲ್ಲರೂ ಭಕ್ತ್ಯತಿಶಯದಿಂದ ಶಕ್ತಿವಂಚನೆಯಿಲ್ಲದೆ ಧನಸಹಾಯ ಮಾಡಿದರು. ಎಲ್ಲ ಪೇಟೆಗಳ ಶೆಟ್ಟರು ಯಜಮಾನರುಗಳೂ ಇತರ ವೀರಶೈವಪ್ರಮುಖರೂ ಒಮ್ಮನಸ್ಸಿನಿಂದ ಈ ಗುರುಸೇವಾಕಾರ್ಯದಲ್ಲಿ ಬದ್ಧಕಂಕಣರಾಗಿ ನಿಂತಿದ್ದರು. ಪರಸ್ಥಲಗಳಿಂದ ಬರುವ ಸ್ವಮತಜನರ ಭೋಜನ ಸೌಕರ್ಯಗಳಿಗಾಗಿ ೨೦೦ ಪಲ್ಲ ಅಕ್ಕಿಯ ಲವಾಜಮೆಯವರೆಗೆ ಕೂಡಿಸಿದ್ದರು. ಪ್ರತ್ಯೇಕವಾಗಿ ಕೆಲ ಬಿಡಾರಗಳನ್ನು ಹೊರಗಣಿಂದ ಬರುವವರಿಗೆ ಏರ್ಪಡಿಸಿದ್ದುದಲ್ಲದೆ ೫ ಕಡೆ ಅನ್ನಸತ್ರಗಳನ್ನಿಟ್ಟು ಮೃಷ್ಟಾನ್ನಭೋಜನವು ಎರಡು ಹೊತ್ತೂ ನಡೆಯುವಂತೆ ಮಾಡಿದ್ದರು. ನೂರಾರುಮಂದಿ ವಾಲಂಟಿಯರುಗಳನ್ನೇರ್ಪಡಿಸಿ, ನಿಲ್ದಾಣದಲ್ಲೇ ಅವರು ಕಾದಿದ್ದು ಬಂದವರನ್ನು ಇದಿರ್ಗೊಂಡು ಬಿಡಾರದಲ್ಲಿಳಿಯಿಸಿ ಸತ್ಕರಿಸುವಂತೆ ಏರ್ಪಾಟು ಮಾಡಿದ್ದರು. ಶ್ರೀ|| ಶ್ರೀಗಳವರ ಬಿಡಾರಕ್ಕೆ ರಾ|| ಬ|| ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸತ್ರವು ಅನುಕೂಲಪಡಿಸಲ್ಪಟ್ಟಿದ್ದಿತು. ಸತ್ರದ ಉತ್ತರಭಾಗದ ಆವರಣದೊಳಗೆ ದರಬಾರಿಗಾಗಿ ವಿದ್ಯುದ್ದೀಪಾವಳಿವಿರಾಜಿತವಾದ ದೊಡ್ಡ ಚಪ್ಪರವು ಶೃಂಗಾರಭರಿತವಾಗಿ ನಿರ್ಮಿಸಲ್ಪಟ್ಟಿದ್ದಿತು. ಮೇ ತಿಂಗಳು ತಾ|| ೧೮ ರ ಬೆಳಗ್ಗೆ ಶ್ರೀ|| ಜಗದ್ಗುರುಗಳವರ ಪುರಪ್ರವೇಶ ಮಹೋತ್ಸವವು ಜರುಗತಕ್ಕುದೆಂದು ಗೊತ್ತುಮಾಡಲ್ಪಟ್ಟಿದ್ದಿತು. ಆದರೆ ಮೇ ತಾ|| ೨ ಕ್ಕೇ ದಯಮಾಡಿಸುವುದೆಂದು ವೃತ್ತಪತ್ರಿಕೆಗಳಲ್ಲಿ ಹೇಗೋ ಪ್ರಕಟವಾಗಿದ್ದ ವಾರ್ತೆಯನ್ನು ನಂಬಿ ಹೈದರಾಬಾದು ಮೊದಲಾದ ದೂರದೇಶಗಳ ಅನೇಕ ಭಕ್ತಾದಿಗಳು ಆ ಕಾಲಕ್ಕೆ ಮುಂಚೆಯೇ ಬಂದು, ಮರಳಿ ಹೋಗುವುದಕ್ಕಿಲ್ಲದೆ ನಂಜನಗೂಡು ಮೊದಲಾದ ಕಡೆಗಳಲ್ಲಿಗೆ ಹೋಗಿ ಪ್ರೇಕ್ಷಣೀಯ ಸ್ಥಲಗಳನ್ನು ನೋಡುತ್ತ ಕಾಲಯಾಪನೆಮಾಡಿಕೊಂಡು ತಾ|| ೧೮ ನೆ ದಿನವನ್ನು ನಿರೀಕ್ಷಿಸುತ್ತಿದ್ದರು. ಶ್ರೀ|| ಶ್ರೀಗಳವರ ಸ್ವಾರಿಯು ಚಿತ್ರದುರ್ಗದಿಂದ ಮೇ ತಾ|| ೫ ರಲ್ಲಿಯೇ ಬೆಂಗಳೂರನ್ನು ಕುರಿತು ಪ್ರಯಾಣಮಾಡಿತು. ತಾ|| ೧೫ ರಿಂದ ವಿಶೇಷವಾಗಿ ಜನಸ್ತೋಮವು ಬೆಂಗಳೂರಿಗೆ ಬರಲಾರಂಭಿಸಿತು. ಶ್ರೀ|| ಅಥಣಿ ನಿರಂಜನ ಚರವರ್ಯ ಸಿದ್ಧಲಿಂಗಸ್ವಾಮಿಗಳು, ಶ್ರೀ ಬೇಲೂರ ಮಹಾಸ್ವಾಮಿಗಳು ಮೊದಲಾದ ಅನೇಕಾನೇಕ ಪಟ್ಟಚರಮೂರ್ತಿಗಳೂ, ವೈದಿಕ ವಿದ್ವನ್ಮಂಡಲಿಯವರು ನೂರಾರುಮಂದಿಗಳೂ ಶ್ರೀಗಳ ಆಗಮನ ನಿರೀಕ್ಷಣೆಯಿಂದ ಉಚಿತವಾದ ಬಿಡಾರಗಳಲ್ಲಿಳಿದುಕೊಂಡಿದ್ದರು. ತಾ|| ೧೭ ನೆ ಶನಿವಾರ ಮಧ್ಯಾಹ್ನ ಶ್ರೀ ಜಗದ್ಗುರುಗಳ ಸ್ವಾರಿಯು ನೆಲಮಂಗಲದಿಂದ ಹೊರಟು ಸಾಯಂಕಾಲ ೬ ಗಂಟೆಯಹೊತ್ತಿಗೆ ಬೆಂಗಳೂರ ಪುರಬಹಿರ್ಭಾಗಕ್ಕೆ ಬಂದು ಸೇರಿತು. ಪೋಲೀಸಧಿಕಾರಿಗಳು ತಾಲ್ಲೂಕು ಎಲ್ಲೆಯಲ್ಲೇ ಇದಿರ್ಗೊಂಡು ಬಿಜಮಾಡಿಸಿದರು. ಉಕ್ತಡದ ಬಳಿಯಲ್ಲಿ ಅನೇಕ ಪಟ್ಟಚರಮೂರ್ತಿಗಳೂ ಸ್ಥಲ ಪರಸ್ಥಲದ ಕೆಲ ಪ್ರಮುಖರೂ ಫಲಪುಷ್ಪಾದಿಸಮೇತರಾಗಿ ಕಾದಿದ್ದು, ಸಾ|| ನಮಸ್ಕೃತಿಪೂರ್ವಕವಾಗಿ ಶ್ರೀಗಳವರನ್ನು ಸೇವಿಸಿ, ಊರಹೊರಗಣ ಮ|| ಎನ್. ವೆಂಕಟಸ್ವಾಮಿರಾಜು ಅಂಡ್ ಸನ್ಸರವರ ಉದ್ಯಾನದಲ್ಲಿ ಏರ್ಪಡಿಸಿದ್ದ ತಾತ್ಕಾಲಿಕವಾದ ಬಿಡಾರಕ್ಕೆ ಸ್ವಾಮಿಗಳ ಸ್ವಾರಿಯನ್ನು ಕರೆತಂದರು. ಅಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು, ಮ|| ಮುನ್ಸೀಫ್ ವೀರಬಸವಯ್ಯನವರೇ ಮೊದಲಾದನೇಕರು ಕಾದಿದ್ದು ಪ್ರಣತಿಪೂರ್ವಕವಾಗಿ ಸ್ವಾರಿಯನ್ನು ಬಿಜಮಾಡಿಸಿಕೊಂಡರು. ಅಲ್ಲಿಗೆ ಬಂದಿದ್ದ ಸರ್ವರನ್ನೂ ಶ್ರೀಗಳವರು ಪ್ರಸನ್ನ ಕರುಣಾಕಟಾಕ್ಷದಿಂದನುಗ್ರಹಿಸಿ ಮಂದಹಾಸದಿಂದಕುಶಲಪ್ರಶ್ನಗಳನ್ನು ಮಾಡಿ ಆಶೀರ್ವದಿಸಿದರು. ಅದರ ಮರುದಿನ ಬೆಳಗಿನ ೮ ಗಂಟೆಗೆ ಪುರಪ್ರವೇಶ ಮಹೋತ್ಸವವು ನಡೆಯತಕ್ಕುದೆಂದು ನಿರ್ಧರಿಸಲ್ಪಟ್ಟಿತು.

ಉತ್ಸವದ ಸನ್ನಾಹ.

ಶ್ರೀ ಜಗದ್ಗುರುಗಳವರು ತಮ್ಮ ಬಿಡಾರದಿಂದ ಮ್ಯಾನದಮೇಲೆ ಹೊರಟು ಎಲಹಂಕ ಗೇಟಿನ ಪೋಲೀಸ್ ಠಾಣದ ಬಳಿಗೆ ದಯಮಾಡಿಸಿ, ಅಲ್ಲಿ ಮ್ಯುನಿಸಿಪಾಲಿಟಿಯವರಿಂದ ಹಾಕಿಸಲ್ಪಟ್ಟಿದ್ದ ಹಸರುವಾಣಿ ಚಪ್ಪರದಲ್ಲಿ ಪಲ್ಲಕ್ಕಿಯನ್ನಾರೋಹಿಸಿ ಪುರಪ್ರವೇಶಮಾಡತಕ್ಕುದೆಂದು ನಿರ್ಧಾರವಾಗಿದ್ದಿತು. ಆ ಚಪ್ಪರದ ಬಳಿಗೆ ಸ್ವಾಮಿಗಳ ಇಸ್ತಿಕ್ಬಾಲಿಗಾಗಿ ಮ್ಯುನಿಸಿಪಲ್ ಅಧಿಕಾರಿಗಳು, ಸ್ಥಲಿಕಾಧಿಕಾರಿಗಳು, ಪೆನ್ಷನ್ ಆಫೀಸರುಗಳು, ಮ್ಯು|| ಕೌನ್ಸಿಲರುಗಳು, ಪುರಪ್ರಮುಖರು ಮೊದಲಾದ ಮಹಾಜನರಿಗೆಲ್ಲಾ ಆಹ್ವಾನಪತ್ರಿಕೆಗಳನ್ನು ಮುಂದಿನದಿನವೇ ಕೊಟ್ಟಿದ್ದರು. ಸ್ವಾಮಿಗಳ ಸ್ವಾರಿಯು ದಯಮಾಡಿಸುವ ಬೀದಿಗಳಿಗೆಲ್ಲಾ ನೀರಿನ ಚಳಯವನ್ನು ಕೊಡಿಸಿ ತಂಪುಮಾಡಿದ್ದರು. ಅದಕ್ಕೆ ಮುಂಚೆ ೨-೩ ಹದ ಒಳ್ಳೆಯ ಮಳೆಯಾಗಿದ್ದುದರಿಂದ ಬೆಂಗಳೂರಿನ ವಾಯುಗುಣವು ಸರ್ವರಿಗೂ ಹಿತಕರವಾಗಿದ್ದಿತು. ಎಲಹಂಕ ಪೋಲೀಸು ಠಾಣದಿಂದ ದೊಡ್ಡಪೇಟೆಯ ಚೌಕದವರೆಗೂ ಅಲ್ಲಿಂದ ಚಿಕ್ಕಪೇಟೆ ಅರಳೆಪೇಟೆಗಳ ಮಾರ್ಗವಾಗಿ ತೋಟದಪ್ಪನವರ ಸತ್ರದವರೆಗೂ ಉತ್ಸವಾರ್ಥವಾಗಿ ಏರ್ಪಡಿಸಿದ್ದ ಬೀದಿಗಳಲ್ಲಿ ಅಲ್ಲಿಗಲ್ಲಿಗೆ ದೊಡ್ಡದೊಡ್ಡ ಚಪ್ಪರಗಳೂ ಕಮಾನುಗಳೂ ಬಹುಶಃ ೨೦ ಕ್ಕೆ ಕಡಿಮೆಯಿಲ್ಲದೆ ಅಂದವಾಗಿ ನಿರ್ಮಿಸಲ್ಪಟ್ಟಿದ್ದುವು. ಅವುಗಳಮೇಲೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರುಗಳವರ ಸುಸ್ವಾಗತವನ್ನು ಬಯಸುವ ಅಕ್ಷರಾವಳಿಗಳೂ ಪತಾಕೆಗಳೂ ಕದಳೀಸ್ತಂಭಗಳೂ ಅಲಂಕೃತವಾಗಿದ್ದುವು. ಅಲ್ಲಿಗಲ್ಲಿಗೆ ನಾನಾವಿಧದ ತೋರಣಗಳು ಕಟ್ಟಲ್ಪಟ್ಟು, ದಾರಿಯುದ್ದಕ್ಕೂ ಉಭಯಪಾರ್ಶ್ವಗಳಲ್ಲೂ ಬಾಳೆಯಕಂಬಗಳ ಪಙ್ಕ್ತಿಯನ್ನು ನೆಟ್ಟಿದ್ದುದು ಬಹು ಮಂಗಳಕರವಾಗಿ ಕಾಣುತ್ತಿದ್ದಿತು. ಅಂಗಡಿಕಾರರನೇಕರು ತಮ್ಮ ಷಾಪುಗಳ ಮತ್ತು ಮನೆಗಳ ಬಾಗಿಲುಗಳನ್ನೂ ಮಾಡಿಗಳನ್ನೂ ತಳಿರ್ತೋರಣ ಜಗದ್ಗುರುಗಳ ಭಾವಚಿತ್ರ ಪಟ್ಟಪೀತಾಂಬರಾದಿವಸ್ತ್ರ ಪುಷ್ಪಮಾಲೆ ಮೊದಲಾದುವುಗಳಿಂದ ಅತಿ ವಿಚಿತ್ರವಾಗಿ ಅಲಂಕರಿಸಿದ್ದರು. ಬೆಂಗಳೂರು ಪಟ್ಟಣ ವೀಧಿಗಳ ಈ ಅಲಂಕಾರ ಶೋಭೆಯು ಅಭೂತಪೂರ್ವವಾಗಿರುವುದೆಂದು ಸ್ಥಳಿಕರನೇಕರು ಹೇಳಿಕೊಂಡು ಸಂತೋಷಿಸುತ್ತಿದ್ದರು.

ಜನಸ್ತೋಮ.

ಮೈಸೂರುದೇಶದ ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಅನೇಕಾನೇಕ ವೀರಶೈವ ಭಕ್ತಮಾಹೇಶ್ವರರು ಬಂದು ನೆರೆದಿದ್ದುದಲ್ಲದೆ ಹೊರಗಣ ಹುಬ್ಬಳ್ಳಿ, ಧಾರವಾಡ, ಬಿಜಾಪುರ, ಬೆಳಗಾಂವಿ, ಬಳ್ಳಾರಿ, ಕೊಡಗು, ಸೊಲ್ಲಾಪುರ ಮೊದಲಾದ ಜಿಲ್ಲೆಗಳಿಂದಲೂ ಕೊಲ್ಲಾಪುರ, ಪುಣೆ, ಮಿರಜ, ಸಾಂಗಲಿ, ಸತಾರಾ ಮೊದಲಾದ ಸಂಸ್ಥಾನಗಳ ಕಡೆಯಿಂದಲೂ ಹೈದರಾಬಾದು ದೇಶದಿಂದಲೂ ಸಾವಿರಾರುಗಟ್ಟಲೆಯಾಗಿ ಜನರು ಬಂದು ನೆರೆದಿದ್ದರು. ಬೆಂಗಳೂರಿಗೆ ಬರುವ ಎತ್ತಣ ಹೊಗೆಬಂಡಿಗಳಲ್ಲೂ ತಾ|| ೧೬-೧೮ ರಲ್ಲಿ ವೀರಶೈವಸ್ತೋಮವೇ ಮಿಗಿಲಾಗಿತ್ತು. ಸ್ಪೆಷಲ್ ಟ್ರೇನುಗಳಿಗಾಗಿ ದಾವಣಗೆರೆ, ತುಮಕೂರು, ಗುಬ್ಬಿ, ತಿಪಟೂರು ಮೊದಲಾದ ಕಡೆಯವರು ಮುಂದಾಗಿ ಹಣವನ್ನು ಕೊಟ್ಟು ಕೇಳಿಕೊಂಡರೂ ರೈಲ್ವೆ ಕಂಪೆನಿಯವರು ತಮ್ಮಲ್ಲಿ ಹೆಚ್ಚಿಗೆ ಬಂಡಿಗಳೂ ಇಂಜನ್ನುಗಳೂ ಇಲ್ಲದಿದ್ದ ಕಾರಣದಿಂದ ಸ್ಪೆಷಲ್ ಬಂಡಿಗಳನ್ನು ಒದಗಿಸಿಕೊಡಲಾರೆವೆಂದು ಹೇಳಿದರು. ಈ ಕಾರಣದಿಂದ ಪ್ರತಿಯೊಂದು ಬಂಡಿಯಲ್ಲೂ ೧ ಕ್ಕೆ ನಾಲ್ಕರಷ್ಟು ಜನರು ಮಿತಿಮೀರಿ ತುಂಬಿ ಸಾಗಿಬರಬೇಕಾಯಿತು. ತಾ|| ೧೭ ನೆ ರಾತ್ರಿಯಲ್ಲಿ ಬಂದ ಬಂಡಿಗಳಲ್ಲಿ ವೀರಶೈವರ ಹೊರತು ಇತರ ಪ್ರಯಾಣಿಕರೇ ವಿರಳರಾಗಿ ಹೋಗಿದ್ದರು. ಹೀಗಾಗಿ ಬೆಂಗಳೂರಿನ ಪ್ರತಿಯೊಂದು ಬೀದಿಯೂ ವೀರಶೈವ ಮಯವಾಗಿಹೋಯಿತು. ಮೈಸೂರು ದೇಶದವರು ೫೦ ಸಾವಿರ ಹೊರಗಣ ಪ್ರಾಂತದವರು ೫೦ ಸಾವಿರ ಹೀಗೆ ಒಂದು ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಜನರು ಸೇರಿದ್ದರೆಂದು ನಿಸ್ಸಂಶಯವಾಗಿ ಹೇಳಬಹುದು. ಇಷ್ಟು ಜನಸ್ತೋಮವು ಬೆಂಗಳೂರಲ್ಲಿ ಹಿಂದೆ ಯಾವಾಗ್ಗೂ ಸೇರಿದುದನ್ನು ನಾವು ಕಣ್ಣಾರ ಕಂಡದ್ದಿಲ್ಲವೆಂದು ಈ ಊರಿನ ಅನೇಕಾನೇಕ ವೃದ್ಧರು ಕೂಡ ಹೇಳುತ್ತಿದ್ದರು. ಹೀಗೆ ಹೊರಗಣಿಂದ ಬಂದು ಸೇರಿದ ಜನಸ್ತೋಮವೇ ಅಲ್ಲದೆ ಬೆಂಗಳೂರಿನ ಮತ್ತೂ ಕಂಟೋನ್ಮೆಂಟಿನ ಎಲ್ಲಾ ಕೋಮುಗಳ ಸ್ತ್ರೀ ಪುರುಷರು ಮಕ್ಕಳು ಮಂಗಳಾದಿಯಾಗಿ ಎಷ್ಟೋ ಸಹಸ್ರ ಪ್ರಜೆಗಳು ವಸ್ತ್ರಾಭರಣಾಲಂಕೃತರಾಗಿ ತಾ|| ೧೮ ನೆ ಬೆಳಗಿನ ೭ ಗಂಟೆಯೊಳಗಾಗಿ ಉತ್ಸವವಾಗತಕ್ಕ ಬೀದಿಗಳ ಅಂಗಡಿಗಳು ಮಾಡಿಗಳು ಮೊದಲಾದ ಕಡೆಗಳಲ್ಲೆಲ್ಲಾ ಕಾಲಿಡಲು ಸ್ಥಳವಿಲ್ಲದಂತೆ ತಾವನ್ನು ಹವಣಿಸಿಕೊಂಡು ನಿಂತುಬಿಟ್ಟಿದ್ದರು. ಗಟ್ಟಿಮುಟ್ಟಾದ ಜನರು ಉತ್ಸವದ ಜತೆಯಲ್ಲೇ ಸಾಗಿಬರುವುದಕ್ಕಾಗಿ ಬೀದಿಗಳಲ್ಲೇ ದಟ್ಟೈಸಿದ್ದರು. ಈ ಜನಪ್ರವಾಹವು ಶ್ರೀಗಳವರ ಬಿಡಾರದ್ವಾರದವರೆಗೂ ಎಲ್ಲ ಬೀದಿಗಳಲ್ಲೂ ಅಖಂಡವಾಗಿ ಹರಿಯುತ್ತಿತ್ತು. ಎಲಹಂಕ ಗೇಟು ಪೋಲೀಸು ಸ್ಟೇಷನ್ನಿನ ಮುಂದಣ ಚೌಕವು ಎಳ್ಳನ್ನು ಹಾಕಿದರೂ ಕೆಳಕ್ಕೆ ಇಳಿಯದಷ್ಟು ಜನಸಾಂದ್ರತೆಯಿಂದ ಬಹು ಮನೋಹರವಾಗಿ ತೋರುತ್ತಿತ್ತು. ಆ ಚೌಕದ ಮಧ್ಯದ ಚಪ್ಪರದಲ್ಲಿ ಆಹೂತರಾಗಿದ್ದ ಅಧಿಕಾರಿಗಳೇ ಮೊದಲಾದವರು ನಿರೀಕ್ಷಿಸಿಕೊಂಡಿದ್ದರು.

ಅನಿರೀಕ್ಷಿತವಾದ ಆಶಾಭಂಗ.

ಜಗದ್ಗುರುಗಳ ಸ್ವಾರಿಯು ಚಿತ್ತೈಸುವುದಕ್ಕೆ ಗೊತ್ತಾಗಿದ್ದ ೮ ಗಂಟೆಯ ಗಡುಬವು ಮುಗಿಯಿತು. ೯ ಆಯಿತು. ೧೦ ಗಂಟೆಯೂ ಆಯಿತು. ಕಟ್ಟಕಡೆಗೆ ಸ್ವಾಮಿಗಳ ಸ್ವಾರಿಯು ಬರುವುದಿಲ್ಲವೆಂಬ ಸುದ್ದಿಯು ಹೇಗೋ ಹೊರಬಿದ್ದ ಕೂಡಲೆ ಅಕಸ್ಮಾತ್ ದೊಡ್ಡ ಸಿಡಿಮದ್ದು ತಮ್ಮ ಮಧ್ಯದಲ್ಲಿ ಬಿದ್ದರೆಹೇಗೋ ಹಾಗೆ ಜನರು ಗಾಬರಿಗೊಂಡರು. ಅವರಲ್ಲಿ ನಾನಾತರದ ವಿಚಾರಗಳು ಹುಟ್ಟಿದುವು. ವಿಧವಿಧವಾದ ಗುಸುಗುಸುಲಾಟಗಳು ಮೊಳೆತವು. ಎಲ್ಲರ ಮುಖಗಳೂ ನಿಸ್ತೇಜಗಳಾದವು. ಇಂಥ ಉತ್ಸವಕ್ಕೆ ಕಲ್ಲುಹಾಕಿ ಧರಕತ್ತುಮಾಡಲು ಯಾರಿಗೆ ಏನು ಬಂದಿತಪ್ಪಾ! ದೇವರು ಕಣ್ಣುಮುಚ್ಚಿಕೊಂಡಿದ್ದಾನಲ್ಲಾ! ನಾವು ನೂರಾರು ಗಾವುದದಿಂದ ಅರಸಿಕೊಂಡು ಬಂದಿದ್ದದ್ದೆಲ್ಲಾ ಮಣ್ಣುಪಾಲಾಯಿತೇ! ಅಯ್ಯೋ ಗುರುವೆ! ಎಂದು ನಾನಾವಿಧವಾಗಿ ಹಂಬಲಿಸುತ್ತಲೂ, ಶ್ರೀ ಗುರುವಿನಪ್ಪಣೆಯಾದರೆ ನೂರು ತಲೆಗಳನ್ನಾದರೂ ಅರ್ಪಿಸಿ ಉಳಿದವರು ಜಗದ್ಗುರು ಮಹೋತ್ಸವವನ್ನು ಸಾಗಿಸಿ ನಲಿದಾಡುವಂತೆಯಾದರೂ ಮಾಡುವೆವಲ್ಲಾ! ಎಂದು ವಿಧವಿಧವಾಗಿ ಪ್ರಲಾಪಿಸುತ್ತಲೂ, ಕವಡೆಯ ರಾಶಿಗೆ ಕಲ್ಲಿಟ್ಟಂತೆ ಜನಸ್ತೋಮವು ಚದರಿಹೋಯಿತು. ಅನೇಕರು ನಿಜಕಾರಣವೇನೆನ್ನುವದನ್ನು ತಿಳಿಯುವುದಕ್ಕಾಗಿಯೂ, ಸ್ವಾಮಿ ಪಾದದರ್ಶನಕ್ಕಾಗಿಯೂ, ಅವರ ಬಿಡಾರಕ್ಕೇ ಹೋಗಿ ಕವಿದರು. ಕೆಲರಿಗೆ ಮಾತ್ರ ಶ್ರೀ ಪಾದದರ್ಶನವು ಲಭಿಸಿತು. ವಿಚಾರಮಾಡಿದ ಬಳಿಕ ಉತ್ಸವಭಂಗಕ್ಕಾಗಿ ಏರ್ಪಟ್ಟಿದ್ದ

ಧೂಮಕೇತು.

ಯಾವುದೆಂಬುವದು ಗೊತ್ತಾಯಿತು. ಏನೆಂದರೆ— ಅಲ್ಲಿಯ ಡಿ|| ಮ್ಯಾಜಿಸ್ಟ್ರೇಟರು ಉತ್ಸವವನ್ನು ನಡಸಲಿಕ್ಕೆ ಒಂದು ಲೈಸನ್ಸನ್ನು ತೆಗೆದುಕೊಳ್ಳಿರೆಂದು ಶ್ರೀಮಠದ ಉದ್ಯೋಗಿಗಳಿಗೆ ಮುಂದಾಗಿ ತಿಳಿಸಿದರಂತೆ. ನಮಗೆ ರಹದಾರಿಯಲ್ಲಿ ಕಂಡ ಬಿರುದುಗಳನ್ನು ಉಪಯೋಗಿಸಿಕೊಂಡು ಉತ್ಸವಗೊಳ್ಳಲಿಕ್ಕೆ ರಹದಾರಿಯೇ ಹುಟ್ಟಿರುವುದರಿಂದ ಲೈಸೆನ್ಸನ್ನು ಆಯಾಪೂರಿಗೆ ಬೇರೆಬೇರೆ ತೆಗೆದುಕೊಳ್ಳುವ ಪದ್ಧತಿಯೂ ಅವಶ್ಯಕತೆಯೂ ಇಲ್ಲದಿರುವದರಿಂದ ನಾವು ಲೈಸೆನ್ಸಿಗಾಗಿ ಅರ್ಜಿಯನ್ನು ಹಾಕುವವರಾಗಿಲ್ಲವೆಂದು ನಿರಾಕರಿಸಿಬಿಟ್ಟರಂತೆ. ಬಳಿಕ ಡಿ|| ಮ್ಯಾಜಿಸ್ಟ್ರೇಟರು ಬೆಂಗಳೂರು ಶೆಟ್ಟರು ಯಜಮಾನರುಗಳಿಗೆ ಬೋಧಿಸಿ ಉತ್ಸವವನ್ನು ಪೋಲೀಸು ಬಂದೋಬಸ್ತು ವಗೈರೆಯಿಂದ ಸುರಕ್ಷಿತವಾಗಿ ನಡೆಸಿಕೊಳ್ಳುವುದಕ್ಕೆ ನೀವು ಒಂದು ಲೈಸೆನ್ಸನ್ನು ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳಿ, ಸ್ಥಳದ ಮುಖ್ಯಾಧಿಕಾರಿಗಳಾದ ತಮ್ಮ ಮಾತನ್ನು ಮೀರಲಾರದ ಅವರುಗಳಿಂದ ತಾ|| ೧೭ರಲ್ಲಿ ಒಂದು ಅರ್ಜಿಯನ್ನು ಬರಮಾಡಿಕೊಂಡು, ಅದರಮೇಲೆ ಲೈಸೆನ್ಸನ್ನು ಆ ದಿನ ಸಾಯಂಕಾಲದಲ್ಲಿ ಅರ್ಜಿದಾರರಿಗೆ ಕೊಟ್ಟರು. ಅದನ್ನು ಆ ದಿನ ರಾತ್ರಿ ನೋಡಿದ ಪ್ರಮುಖಜನರು ಅದರಲ್ಲಿ ಒಂದಾನೊಂದು ದೋಷವಿರುವುದನ್ನು ಕಂಡುಕೊಂಡರು. ಉತ್ಸವದ ಜತೆಗೆ ಸ್ಪೆಷಲ್ ಮ್ಯಾಜಿಸ್ಟ್ರೇಟರೊಬ್ಬರು ಬರುವರೆಂದೂ, ಮಧ್ಯದಲ್ಲೇನಾದರೂ ತೊಡಕುಗಳು ಬಂದರೆ ಆ ಮ್ಯಾಜಿಸ್ಟ್ರೇಟರು ಅಲ್ಲೇ ಮಾಡುವ ತೀರ್ಮಾನದಂತೆ ಸ್ವಾಮಿಗಳು ನಡೆದುಕೊಳ್ಳತಕ್ಕುದೆಂದೂ ಅದರಲ್ಲಿ ನಮೂದಿತ್ತು. ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ಜತೆಗೆ ಹಾಕಿ ಕಳಿಸುವದೂ, ಅವರು ಹೇಳಿದಂತೆ ದಾರಿಯಲ್ಲಿ ನಡೆದುಕೊಳ್ಳಬೇಕೆಂಬುದೂ ಇವೆರಡೂ ಡಿ|| ಕಮಿಷನರ ಆರ್ಡರಿನಲ್ಲಿ ಸೇರಿದ್ದುದರಿಂದ ಈ ನೂತನವಿಧಾನದ ಆರ್ಡರು ಭಯಂಕರವಾಗಿ ತೋರಿತು. ಏಕೆಂದರೆ—ಜತೆಯಲ್ಲಿ ಬರುವ ಸ್ಪೆಷಲ್ ಮ್ಯಾಜಿ

ಸ್ಪೆಟರು ಮಾಡುವ ಸೂಚನೆಗಳು ಹೇಗಿರುವುವೋ ! ಅದನ್ನು ಅನುಸರಿಸದೆ ಹೋಗಬೇಕಾಗಿ ಬಂದರೆ ಏನೇನು ತೊಂದರೆಗಳು ಸಂಭವಿಸುವುವೋ ಎಂದು ಯೋಚಿಸಬೇಕಾಯಿತು. ಅತ್ಯಂತ ವ್ಯಾಪಕಾರ್ಥವುಳ್ಳ ಆ ವಾಕ್ಯವನ್ನು ಅಧಿಕಾರಿಗಳು ಹಿಂದಿರಿಗಿಸಿಕೊಳ್ಳದಿದ್ದರೆ ಉತ್ಸವವನ್ನು ಮಾಡಿಸಲೇ ಬಾರದೆಂತಲೂ, ಹೀಗೆ ಲೈಸೆನ್ಸನ್ನು ಪಡೆಯುವ ಸಂಪ್ರದಾಯವು ಹಿಂದಣ ಗೌರ್ನಮೆಂಟ್ ಪ್ರೊಸೀಡಿಂಗ್ಸಿಗೆ ವಿರುದ್ಧವಾದುದೆಂತಲೂ ಅಭಿಜ್ಞಜನರು ನಿರ್ಧರಿಸಿ, ಶ್ರೀಗಳವರಿಗೆ ಬಿನ್ನಯಿಸಿಕೊಂಡು, ಡಿ|| ಕಮಿಷನರ ಆರ್ಡರು ರದ್ದಾಗುವವರೆಗೆ ಸ್ವಾರಿಯು ಬಿಜಯಮಾಡಿಸಲಾಗದೆಂದೂ, ಆರ್ಡರಿನ ಸಾಧಕ ಬಾಧಕಗಳನ್ನೂ ಸ್ಪುತಪಡಿಸಿಕೊಂಡರು. ಭಕ್ತರ ಪ್ರಾರ್ಥನೆಗಾಗಿಯೇ ಇಂಥ ವಿಷಯಗಳಿಗೆಲ್ಲಾ ಒಳಪಟ್ಟು ನಡೆದುಕೊಳ್ಳಬೇಕಾಗಿರುವ ಶ್ರೀಗಳವರು ಅದಕ್ಕೂ ಒಪ್ಪಿ ನಿಲ್ಲಬೇಕಾಯಿತು. ಅದರಿಂದಲೇ ಆ ದಿನದ ಉತ್ಸವವು ಭಂಗವಾಯಿತು. ಉತ್ಸವದರ್ಶನಾರ್ಥವಾಗಿಯೇ ಬಂದಿದ್ದ ಪ್ರಜೆಗಳಲ್ಲಿ ನಿರಾಶಾಮೂಲಕವಾಗಿ ಅಸಮಾಧಾನಾಗ್ನಿಯು ಕ್ಷಣಕ್ಷಣಕ್ಕೆ ಪ್ರಜ್ವಲಿಸಹತ್ತಿತು. ನಿಷ್ಕಾರಣವಾಗಿ ಸ್ಥಲಾಧಿಕಾರಿಗಳಿಂದ ಕೊಡಲ್ಪಟ್ಟ ಶಾಸನವನ್ನು ಕುರಿತು ೧೦-೨೦ ಸಹಸ್ರ ಜನರು ಖುದ್ದಾಗಿ ಹೋಗಿ ದಿವಾನರಲ್ಲಿ ಬಿನ್ನಯಿಸಿಕೊಳ್ಳಲು ಸಿದ್ಧರಾದರು. ಶ್ರೀಮನ್ಮಹಾರಾಜರ ಸನ್ನಿಧಿಗೆ ವಿಜ್ಞಾಪನೆಗಳನ್ನೆಲ್ಲಾ ಟೇಲಿಗ್ರಾಮಿನ ಮೂಲಕ ಬಿನ್ನಯಿಸಿಕೊಳ್ಳಲು ಅನೇಕರು ಆತುರಿಸಿದರು. ಆದರೆ ಡಿ|| ಕಮಿಷನರ ವಿಚಾರಶೀಲತೆಯಮೇಲೆ ಭರವಸವಿಟ್ಟು ಶ್ರೀಗಳವರೂ ಮತ್ತೂ ಸಮಾಜದ ಮುಂದಾಳುಗಳೂ ಮಾಡಿದ ಹಿತೋಪದೇಶದಿಂದ ಪ್ರಜಾಸ್ತೋಮವು ಆತ್ಮನಿಗ್ರಹವನ್ನು ಮಾಡಿಕೊಂಡುದು ಗಮನೀಯವಾಯಿತು. ಈ ಪರಿಸ್ಥಿತಿಗಳೆಲ್ಲಾ ತದನಂತರ ಡಿ|| ಕಮಿಷನರ್ ಮಿ|| ನಾರಾಯಣಯ್ಯಂಗಾರರಲ್ಲಿ ನೂತನ ವಿಪರ್ಯಯವನ್ನುಂಟುಮಾಡಿರಬೇಕೆಂದು ಕಾಣುತ್ತದೆ.

ಆರ್ಡರು ರದ್ದಾಯಿತು.

ತಾ|| ೧೮ ನೆಯ ದಿನ ಡಿ|| ಕಮಿಷನರಲ್ಲಿ ಮಠಾಭಿಮಾನಿಗಳು ಕೆಲರು ಹೋಗಿ ಚರ್ಚೆ ನಡೆಯಿಸಿದರು. ಕಡೆಗೆ ಮಠದ ಸರ್ವಾಧಿಕಾರಿಗಳಿಂದ ರಹದಾರಿಯೇ ನಮಗೆ ಲೈಸನ್ಸಾಗಿರುವಾಗ ಪ್ರತ್ಯೇಕವಾದ ಲೈಸನ್ಸು ಬೇಕಾದುದಲ್ಲವೆಂಬ ವಿಷಯಕ್ಕೆ ಒಂದು ಅರ್ಜಿಯನ್ನು ಡಿ|| ಮ್ಯಾಜಿಸ್ಟ್ರೇಟರು ತೆಗೆದುಕೊಂಡು, ಅದರ ಮೇಲೆ ಮೊದಲದಿನದ ಆರ್ಡರನ್ನು ರದ್ದುಮಾಡಿ, ತಕ್ಕ ಪೋಲೀಸು ಉಸ್ತುವಾರಿ ಮೊದಲಾದುವುಗಳಿಂದ ಉತ್ಸವವು ನಿಷ್ಕಂಟಕವಾಗಿ ಮರುದಿವಸ ಸಾಗುವಂತೆ ಆರ್ಡರ್ ಮಾಡಿದರು. ಆ ದಿನ ಭಾನುವಾರವಾಗಿದ್ದರೂ ಡಿ|| ಕಮಿಷನರು ಈ ವಿಷಯವನ್ನು ಕೊನೆಮುಟ್ಟಿಸುವುದಕ್ಕೆ ಮನಸ್ಸುಕೊಟ್ಟು ಅನುಕೂಲವಾದ ಆರ್ಡರನ್ನು ಮಾಡಿ ಮರುದಿನ ಉತ್ಸವವು ನಡೆಯುವುದಕ್ಕೆ ದಾರಿಮಾಡಿದರು. ಪರಪ್ರೇರಣೆಗೊಳಪಟ್ಟೋ ಅಥವಾ ಸ್ವಬುದ್ಧಿ ಸಂಕೋಚದಿಂದಲೋ ಸಂದಿಗ್ಧವಾದ ಆರ್ಡರನ್ನು ಮೊದಲುದಿವಸ ಕೊಡದಿದ್ದರೆ, ಗೊತ್ತಾಗಿದ್ದ ತಾ|| ೧೮ನೆಯ ದಿನವೇ ಉತ್ಸವ ನಡೆದು ಪ್ರಜೆಗಳ ಉತ್ಸಾಹಭಂಗಕ್ಕೆ ಲೇಶವೂ ಅವಕಾಶವಿಲ್ಲದೆ ಡಿ|| ಕಮಿಷನರಿಗೆ ಒಳ್ಳೆಯ ಯಶೋಲಾಭವಾಗುತ್ತಿತ್ತು. ಅದು ತಪ್ಪಿತು. ಡಿ|| ಕಮಿಷನರ ೨ನೆಯ ಆರ್ಡರು ಹುಟ್ಟಿದ ಕೂಡಲೇ ಉತ್ಸವವನ್ನು ಮರುದಿನ ಬೆಳೆಯಿಸುವುದು ನಿರ್ಧರವಾಯಿತು. ಕೂಡಲೇ ಊರಿನಲ್ಲೆಲ್ಲಾ ಟಾಂಟಾಂ ಹೊಡೆಯಿಸಿ ಬೆಳಗಿನ ೮ ಗಂಟೆಗೆ ಉತ್ಸವವಾಗುವುದೆಂದು ಸಾರಿಸಿದರು. ನಿಜಸ್ಥಿತಿಯನ್ನು ತಿಳಿಯದೆ ನಿರಾಶೆಗೊಂಡು ಪ್ರಯಾಣೋನ್ಮುಖರಾಗಿದ್ದ ಜನರೆಲ್ಲಾ ನಿಂತುಬಿಟ್ಟರು.

೧೯ ನೆ ತಾ|| ನ ಉತ್ಸವ.

ಬೆಂಗಳೂರಿನ ಸತ್ಕಾರಕ ಸಂಘದವರು ಆ ರಾತ್ರಿಯೆಲ್ಲಾ ಪ್ರಯತ್ನಪಟ್ಟು ಮರಳಿ ನೂತನವಾಗಿ ಬಾಳೆಕಂಬಗಳಿಂದಲೂ ತೋರಣಗಳಿಂದಲೂ ಪುರವೀಥಿಗಳನ್ನು ಮೊದಲದಿನದಂತೆಯೇ ಮತ್ತೆ ಶೃಂಗರಿಸಿದರು. ಹೊಗೆಬಂಡಿಯಲ್ಲಿ ಎಡೆಯಿಲ್ಲದ ಕಾರಣದಿಂದ ಉದ್ದಕ್ಕೂ ಸ್ಟೇಷನ್ನುಗಳಲ್ಲಿ ನಿನ್ನೆದಿನ ಉಳಿದುಹೋಗಿದ್ದ ಜನರೆಲ್ಲಾ ಬಹುಶಃ ಮತ್ತೆ ೩-೪ ಸಾವಿರದಷ್ಟು ಆ ದಿನಕ್ಕೆ ಬಂದು ಸೇರಿದರು. ಬೀದಿಗಳೆಲ್ಲಾ ಮುಂದಣ ದಿನಕ್ಕಿಂತಲೂ ಮಿಗಿಲಾಗಿ ಅಲಂಕೃತರಾದ ಜನರಿಂದ ಕಿಕ್ಕಿರಿದು ಸುಶೋಭಿತವಾಗಿದ್ದುವು. ಮ್ಯು|| ಚಪ್ಪರದ ಬಳಿಯಲ್ಲಿ ಮ್ಯು|| ಅಧಿಕಾರಿಗಳೂ, ಕೌನ್ಸಿಲರುಗಳೂ, ಸಿವಿಲ್ ಅಧಿಕಾರಿಗಳೂ, ಪೋಲೀಸ್ ಸೂಪರಿಂಟೆಂಡೆಂಟು ಮೊದಲಾದ ಅಧಿಕಾರಿಗಳೂ, ಕೆಲ ಪೆನ್ಷನ್ಡ್ ಆಫೀಸರುಗಳೂ ಇದ್ದರು. ಜನಸಾಂದ್ರತೆಯು ಯಾವ ಪೋಲೀಸಧಿಕಾರಿಗಳಿಗೂ ಅಭೇದ್ಯವಾಗಿತ್ತು. ಬೆಳ್ಳಿಯ ಚಿತ್ರಕೆಲಸದಿಂದಲೂ ಭಂಗಾರದ ಕಲಶ, ಗೊಂಡೆ, ಮೊತೆ, ಸಿಂಹಮುಖ, ಮೊದಲಾದುವುಗಳಿಂದಲೂ ಅತಿ ಮನೋಹರವಾಗಿದ್ದ ಪಲ್ಲಕ್ಕಿಯು ಪುಷ್ಪಮಾಲಾವಿರಾಜಿತವಾಗಿ ಮಂಟಪಮಧ್ಯದಲ್ಲಿಡಲ್ಪಟ್ಟಿತ್ತು. ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಕೃಷ್ಣರಾಯರು ಕೈಯಲ್ಲಿ ಒಂದು ಕವರನ್ನು ಹಿಡಿದುಕೊಂಡು, ಅದರೊಳಗಿದ್ದ ಒಂದು ಕಾಗದವನ್ನು ಆಗಾಗ್ಗೆ ಹೊರಕ್ಕೆ ಸೆಳೆಯುತ್ತ, ಒರೆಯಿಂದ ಕತ್ತಿಯನ್ನು ಹಿರಿಯುವವರಂತೆ ತೋರುತ್ತ ಅಡ್ಡಾಡುತ್ತಿದ್ದರು. ಶ್ರೀಶ್ರೀಗಳವರ ಸ್ವಾರಿಯು ಮ್ಯಾನದ ಮೇಲೆ ೮||| ಗಂಟೆಯ ಹೊತ್ತಿಗೆ ಅಲ್ಲಿಗೆ ಬಿಜಮಾಡಿತು. ಮಹಾಜಯಘೋಷವು ಪ್ರಜೆಗಳಿಂದ ನಡೆಸಲ್ಪಟ್ಟಿತು. ವಾದ್ಯಗಳು ಭೋರ್ಗರೆದುವು. ಶ್ರೀಗಳವರು ನಿತ್ಯಗಟ್ಟಲೆಯಂತೆ ಸನ್ಯಾಸಿಗಳಿಗೆ ವಿಹಿತವಾದ ಸಾಧಾರಣ ಕಾಷಾಯವಸ್ತ್ರಗಳನ್ನೇ ಧರಿಸಿದ್ದರಲ್ಲದೆ ಯಾವ ಜರತಾರಿ ಬಟ್ಟೆಗಳನ್ನೂ ಹೊದೆದಿರಲಿಲ್ಲ. ವಿಭೂತಿ ತ್ರಿಪುಂಡ್ರವಿರಾಜಿತಫಾಲರಾಗಿಯೂ, ರುದ್ರಾಕ್ಷಮಾಲಾಲಂಕೃತಕಂಠರಾಗಿಯೂ ಇದ್ದರು. ಪಲ್ಲಕ್ಕಿಯನ್ನೇರಿದಾಗ ಮತ್ತೆ ಮಹಾಘೋಷವಾಯಿತು. ರತ್ನಖಚಿತವಾದ ಹಾವುಗೆಯು ಮುಂಗಡೆಯಲ್ಲಿಡಲ್ಪಟ್ಟಿದ್ದಿತು. ಪೇಟೆಯ ಯಜಮಾನ್ ಮ|| ಬಸವಪ್ಪನವರು ಪುಷ್ಪಮಾಲಿಕೆಯನ್ನೂ ಫಲವನ್ನೂ ಅರ್ಪಿಸಿದರು. ಬಳಿಕ ಮ್ಯು|| ಪ್ರೆಸಿಡೆಂಟರಾದ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಅಲ್ಲಿದ್ದ ಮ್ಯು|| ಕೌನ್ಸಿಲರುಗಳನ್ನು ಒಬ್ಬೊಬ್ಬರನ್ನಾಗಿ ಶ್ರೀಗಳವರಿಗೆ ಪರಿಚಯ ಮಾಡಿಸುವಷ್ಟರಲ್ಲಿ ಜನಪ್ರವಾಹವು ಮಿತಿಮೀರಿ ನುಗ್ಗಿದುದರಿಂದ ಉಳಿದವರೆಲ್ಲರ ಪರಿಚಯ ಮಾಡಿಸುವುದೇ ಮೊದಲಾದ ಕೆಲಸಗಳಿಗೆ ಅವಕಾಶವಾಗದೆ ಉತ್ಸವವನ್ನು ಕೂಡಲೇ ಮುಂದಕ್ಕೆ ಬೆಳೆಯಿಸಬೇಕಾಯಿತು.

ಉತ್ಸವವೈಖರಿ.

ಎಲ್ಲಕ್ಕೂ ಮುಂದೆ ಶ್ರೀಮಠದ ೨ ಒಂಟೆಗಳೂ ಅವುಗಳ ಹಿಂದೆ ಕಲಾಬತ್‌ಹೌದಾಹೊದಿಸಿದ ೨ ಆನೆಗಳೂ, ಅಲಂಕೃತವಾದ ನಿಡಿಕುದುರೆಗಳೂ, ಅವುಗಳ ಹಿಂದೆ ಸಾಯುಧರಾದ ಕುದುರೆ ಸ್ವಾರರೂ, ಥಂಕಾದ ಕುದುರೆಗಳೂ, ಅವರ ಹಿಂದೆ ಕತ್ತಿಗಳನ್ನು ಧರಿಸಿದ ಭಟರೂ ಇದ್ದರು. ಇವರುಗಳ ಹಿಂದೆ ಒಂದು ಬ್ಯಾಂಡಿನ ಸೆಟ್ಟೂ, ಅವರ ಹಿಂದೆ ಕರಡಿವಾದ್ಯಗಳ ಗತ್ತಿಗೆ ಸರಿಯಾಗಿ ಕುಣಿಯುತ್ತಿದ್ದ ೪ ನಂದಿಧ್ವಜಗಳೂ, ಅವರ ಹಿಂದೆ ಭಂಗಾರದ ಮತ್ತು ಬೆಳ್ಳಿಯ ನಾಗಸ್ವರವನ್ನು ಅತ್ಯಂತ ಕರ್ಣಶ್ರಾವ್ಯವಾಗಿ ನುಡಿಸುತ್ತಿದ್ದ ವಾದ್ಯಗಾರರುಗಳ ೨ ಗುಂಪುಗಳೂ, ಅವರ ಹಿಂದೆ ದೇಶದ ಮರ್ಯಾದಾರ್ಥವಾದ ವಾರನಾರಿಯರ ಗುಂಪೂ, ಅವರ ಹಿಂದೆ ಮತ್ತೊಂದು ವಾದ್ಯಗಾರರ ಸೆಟ್ಟೂ, ಅವರ ಹಿಂದೆ ಅಧಿಕಾರಿಗಳ ಮತ್ತು ದೊಡ್ಡಮನುಷ್ಯರ ಗುಂಪೂ, ಅವರ ಹಿಂದೆ ಶ್ರೀಮಠದ ಮಾಯಿಮುರಾಶಬು, ಸೂರ್ಯವಾದ್ಯ, ಚಂದ್ರವಾದ್ಯ, ಉಡುಕುವಾದ್ಯ, ಶಂಖ, ಬೆಳ್ಳಿಕಟ್ಟಿಗೆ, ಹಸುರುಕಟ್ಟಿಗೆ, ವೇಟುಪಾವಡ, ಉಡಾಸುಪಾವುಡ ಮೊದಲಾದುವುಗಳೂ, ಅವರ ಹಿಂದೆ ಅಧ್ಯಯನ ಮಾಡುತ್ತಿದ್ದ ವೈದಿಕರ ಗುಂಪೂ, ಅವರ ಹಿಂದೆ ಹಗಲುದೀವಟಿಗೆ ಮಕರತೋರಣಗಳೂ, ಪಟ್ಟಚರಮೂರ್ತಿಗಳ ಸಂದೋಹವೂ, ಶ್ರೀಗಳವರ ಪಲ್ಲಕ್ಕಿಯ ಉಭಯಪಾರ್ಶ್ವಗಳಲ್ಲೂ ಶ್ವೇತಛತ್ರಚಾಮರಗಳೂ ಮುರ್ಛಾಲುಗಳೂ, ಹಿಂಗಡೆ ಬಾಡಿಗಾರ್ಡು ಕುದುರೆಗಳೂ ಇದ್ದುವು. ಈ ಸಾಲು ಬಹುಶಃ || ಮೈಲಿಗೆ ಕಡಿಮೆಯಿಲ್ಲದಷ್ಟಿದ್ದಿತು. ಉತ್ಸವದ ಜತೆಯಲ್ಲೇ ಬಹುಸಾಂದ್ರವಾದ ಜನಪ್ರವಾಹವು ಸಾಗುತ್ತಿದ್ದುದರಿಂದ ಉತ್ಸವವು ಅತಿ ಪ್ರಯಾಸದಿಂದ ಹಜ್ಜೆಯ ಮೇಲೆ ಹಜ್ಜೆಯಿಟ್ಟು ಬಲು ತಡವಾಗಿ ಸಾಗಬೇಕಾಯಿತು. ಎರಡುಪಕ್ಕಗಳಲ್ಲೂ ಪೋಲೀಸರು ಸಾಲುಕೈಗಳನ್ನು ಕಟ್ಟಿ ಜನರ ನುಗ್ಗಾಟವನ್ನು ತಡೆಯುವುದಕ್ಕೆ ಬಲವಾದ ಏರ್ಪಾಟನ್ನು ಮಾಡಿದ್ದರು. ಪೋಲೀಸಧಿಕಾರಿಗಳೆಲ್ಲಾ ಜಾಗರೂಕರಾಗಿದ್ದುಕೊಂಡು ಸಾಧ್ಯಂತವಾಗಿ ನಿರಪಾಯವಾಗಿ ಉತ್ಸವವನ್ನು ಸಾಗಿಸಲು ತೆಗೆದುಕೊಂಡ ಶ್ರಮವು ಸಾರ್ಥಕವೂ ಅಭಿನಂದನೀಯವೂ ಆಯಿತು. ಉತ್ಸವವು ೯ ಗಂಟೆಗೆ ಆರಂಭಗೊಂಡು ದಕ್ಷಿಣಮುಖವಾಗಿ ದೊಡ್ಡಪೇಟೆ ಚೌಕಕ್ಕೆ ಬಂದು ಬಿಡಾರವಾದ ತೋಟದಪ್ಪನವರ ಸತ್ರಕ್ಕೆ ಮುಟ್ಟುವ ಹೊತ್ತಿಗೆ ಮಧ್ಯಾಹ್ನ ೧೨|| ಗಂಟೆಯಾಯಿತು. ದಾರಿಯುದ್ದಕ್ಕೂ ವೀರಶೈವರಿಗಿಂತಲೂ ಹೆಚ್ಚಾಗಿ ಮುಲ್ತಾನಿ ಮಾರ್ವಾಡಿ ಮೊದಲಾದ ವರ್ತಕಮಹಾಜನರನೇಕರು ತಂತಮ್ಮಂಗಡಿಗಳ ಮುಂದೆ ಶ್ರೀಗಳವರಿಗೆ ಫಲಪುಷ್ಪಾದಿಗಳನ್ನರ್ಪಿಸಿ ಆಶೀರ್ವಾದಪಾತ್ರರಾಗುತ್ತಿದ್ದುದು ಪ್ರೇಕ್ಷಣೀಯವಾಗಿದ್ದಿತು. ಶ್ರೀಗುರುಪಾದದರ್ಶನೋತ್ಸುಕರಾಗಿ ನಿಂತಿದ್ದ ಅಪರಿಮಿತ ಜನಸ್ತೋಮವು ಅಪರದಕ್ಷಿಣಾಮೂರ್ತಿಯಂತೆ ಪ್ರಸನ್ನವದನಮಂಡಲದಿಂದ ವಿಭ್ರಾಜಿತವಾಗಿದ್ದ ಶ್ರೀದಿವ್ಯತೇಜೋಗುರುಮೂರ್ತಿಯನ್ನು ಸಂದರ್ಶಿಸಿದ ಕೂಡಲೇ ಬದ್ಧಾಂಜಲಿಗಳಾಗಿ ನಮಿಸುತ್ತಲೂ, ಕರಾಸ್ಫಾಲನಮಾಡುತ್ತಲೂ, ಕೆಲಭಕ್ತೋತ್ತಮರು ಆನಂದನಿರ್ಭರದಿಂದ ಗುರುಸ್ತುತಿ ಪದಗಳನ್ನು ಹಾಡಿ ನರ್ತಿಸುತ್ತಲೂ, ಕೆಲರು ಪುಷ್ಪಾಂಜಲಿಗಳನ್ನು ಮಾಡುತ್ತಲೂ, ಕೆಲರು ಅಲ್ಲಿಗಲ್ಲಿಗೆ ಇಡುಗಾಯಿಗಳನ್ನು ಹಾಕುತ್ತಲೂ, ಕೆಲರು ಕರ್ಪೂರದಾರತಿಗಳನ್ನೆತ್ತುತ್ತಲೂ ಪರಿಪರಿಯಿಂದ ತಮ್ಮ ಭಕ್ತಿಯನ್ನರ್ಪಿಸಿ ಧನ್ಯಂಮನ್ಯರಾಗುತ್ತಿದ್ದರು. ಮಂದಹಾಸ ಕರುಣಾಕಟಾಕ್ಷಗಳಿಂದ ಶ್ರೀಗಳವರು ಉಭಯಪಾರ್ಶ್ವಗಳಲ್ಲಿಯೂ ನಿಂತಿರುವ ಜನರನ್ನು ಅನುಗ್ರಹಿಸುತ್ತಿದ್ದರು. ದೊಡ್ಡಪೇಟೆ ಚೌಕದಲ್ಲೊಂದುಕಡೆಯೂ ಚಿಕ್ಕಪೇಟೆಯಲ್ಲೊಂದುಕಡೆಯೂ ಮಹಮ್ಮದೀಯ ಪ್ರಮುಖರು ಫಲಪುಷ್ಪಾದಿಗಳನ್ನರ್ಪಿಸಿ, ಮುದ್ರಿತವಾಗಿ ಚೌಕಟ್ಟಿನಲ್ಲಿ ಸೇರಿಸಿದ್ದ ವಿಜ್ಞಾಪನ ಪತ್ರಿಕೆಯನ್ನೋದಿ ಸಮರ್ಪಿಸಿದರು. ಅವಕ್ಕೆ ಶ್ರೀಗಳವರು ಉರುದು ಭಾಷೆಯಲ್ಲೇ ಕೊಟ್ಟ ಪ್ರತ್ಯುತ್ತರವನ್ನು ಮಹಮ್ಮದೀಯ ಮಹಾಜನರು ಕೇಳಿ ಅತಿಶಯವಾಗಿ ಆನಂದಿಸಿದರು. ಉತ್ಸವವೈಖರಿಯನ್ನೂ ಅಪರಿಮಿತ ಜನಸ್ತೋಮದ ಓಲೈಸುವಿಕೆಯಿಂದ ಅದಕ್ಕುಂಟಾಗಿದ್ದ ಅಸಾಧಾರಣ ಶೋಭೆಯನ್ನೂ ನೋಡಿದ ಪುರಜನರು ಇಂಥ ವೈಭವವನ್ನು ನಮ್ಮ ಜನ್ಮದಾರಭ್ಯ ಕಂಡು ಕೇಳಿದುದಿಲ್ಲವೆಂದು ಆಡಿಕೊಳ್ಳುತ್ತಲಿದ್ದರು. ಈ ವೈಭವವನ್ನೆಲ್ಲಾ ನೋಡಿ ಸೈರಿಸಲಾರದೆ ಮುಖಕ್ಕೆ ಹೊಗೆ ಸುತ್ತಿದಂತೆ ಕಾಣಬರುತ್ತಿದ್ದವರೂ ಅಲ್ಲಲ್ಲಿಗೆ ಕೆಲವರು ಇಲ್ಲದೆ ಇರಲಿಲ್ಲ. ಉತ್ಸವವು ಬಿಡಾರವನ್ನು ಸೇರಿದ ಕೂಡಲೇ ಆವರಣದೊಳಗೆ ದರ್ಬಾರಿಗಾಗಿ ಏರ್ಪಡಿಸಿದ್ದ ಮಂಟಪದ ಪಶ್ಚಿಮಭಾಗದ ಜಗತಿಯ ಮೇಲೆ ಇಡಲ್ಪಟ್ಟಿದ್ದ ಸುವರ್ಣಪೀಠವನ್ನು ಶ್ರೀಗಳವರು ಮಂಡಿಸಿದರು. ಆಗ ಉಂಟಾದ ಪ್ರಜೆಗಳ ಜಯಧ್ವನಿಯೂ ವಾದ್ಯಘೋಷವೂ ದಿಙ್ಮಂಡಲವನ್ನು ಭೇದಿಸಿದುವು. ಒಡನೆ ಬಂದಿದ್ದ ಜನಸ್ತೋಮದಲ್ಲಿ ಎಲ್ಲೋ ಅತ್ಯಲ್ಪಭಾಗಕ್ಕೆ ಮಾತ್ರ ಮಂಟಪವು ಎಡೆಗೊಟ್ಟಿತು. ಉಳಿದವರೆಲ್ಲಾ ಹೊರಗೇ ಬಿಸಿಲಿನಲ್ಲೇ ನಿಲ್ಲಬೇಕಾಯಿತು. ಶ್ರೀಗಳವರು ಸಭಿಕರನ್ನುದ್ದೇಶಿಸಿ ಸಂಕ್ಷೇಪವಾದ ಭಾಷಣವನ್ನು ಮಾಡಿ, ಅತ್ಯಂತ ಭಕ್ತಿವಿಶ್ವಾಸಗಳಿಂದ ಶ್ರೀಗುರು ಪೀಠಸೇವಾಕಾರ್ಯವು ವಿಚಕ್ಷಣತೆಯಿಂದ ಆ ದಿವಸ ನಡೆಯಿಸಲ್ಪಟ್ಟುದಕ್ಕಾಗಿ ತಮ್ಮ ಚಿತ್ತಕ್ಕುಂಟಾಗಿರುವ ಆನಂದವನ್ನು ಪ್ರದರ್ಶನಪಡಿಸಿ, ಸರ್ವರಿಗೂ ಕಲ್ಯಾಣವನ್ನು ಕೋರಿ ಅನುಗ್ರಹಿಸಿದರು. ಎಲ್ಲರೂ ಅಪ್ಪಣೆ ಪಡೆದು ಸ್ವಸ್ಥಾನಗಳಿಗೆ ತೆರಳಿದರು.

ಸಾಯಂಕಾಲದ ದರ್ಬಾರು.

ಸ್ವಸ್ಥಾನಗಳಿಗೆ ತೆರಳಲು ಸಿದ್ಧರಾಗಿದ್ದ ಜನಗಳಿಗೆ ದರ್ಶನಾಶೀರ್ವಾದವನ್ನು ಕೊಡುವುದಕ್ಕಾಗಿ ಆ ದಿನ ಸಾಯಂಕಾಲವೂ ಮರುದಿನ ಸಾಯಂಕಾಲವೂ ಶ್ರೀಗಳವರು ದರ್ಬಾರು ಮಂಟಪಕ್ಕೆ ದಯಮಾಡಿಸಿ ಪೀಠಾರೋಹಣ ಮಾಡಿದಕೂಡಲೇ ಯಥಾಶಕ್ತಿಯಿಂದ ಕಾಣಿಕೆಗಳು ಭಕ್ತಜನರಿಂದ ಅರ್ಪಿಸಲ್ಪಟ್ಟುವು. ತಾ|| ೨೦ ರ ರಾತ್ರಿಯ ದರ್ಬಾರಿಗೆ ಈ ಊರಿನ ಮಹಮ್ಮದೀಯ ಪ್ರಮುಖರನೇಕರು ವಾದ್ಯವೈಭವದೊಡನೆ ಬೀದಿಯಲ್ಲಿ ಉತ್ಸವಗೊಂಡು ಹೋಗಿ ಸಭಾಮಧ್ಯದಲ್ಲಿ ಶ್ರೀಗಳವರ ದರ್ಶನವನ್ನು ಪಡೆದು ಫಲಪುಷ್ಪಾದಿಗಳನ್ನೊಪ್ಪಿಸಿ ಶ್ರೀಗಳವರ ಸರ್ವಸಮಾನದೃಷ್ಟಿ ತಪೋವೈಭವ ಪಾಂಡಿತ್ಯ ಕ್ರಿಯಾಸಿದ್ಧಿ ಮೊದಲಾದುವುಗಳ ವಿಷಯವಾಗಿ ತಮುಗಳಿಗೆ ಅವರಲ್ಲಿರುವ ಪ್ರೀತಿಮರ್ಯಾದೆಗಳನ್ನು ವ್ಯಕ್ತಪಡಿಸಿದರು.

ಸೈನಿಕಮರ್ಯಾದೆ.

ಹಿಂದೆ ಎಂದರೆ ೧೮೮೭ ನೆ ಇಸವಿ ಫಿಬ್ರವರಿ ತಾ|| ೧೩ ನೆ ಗುರುವಾರ ಇದೇ ಜಗದ್ಗುರು ಪೀಠದ ಮಹಾಸ್ವಾಮಿಗಳವರು ರಾಜಧಾನಿಗೆ ದಯಮಾಡಿಸಿದ್ದಾಗ್ಗೆ ತಾ|| ೧೦ ನೆ ಫಿಬ್ರವರಿ ೧೮೮೭ ನೆ ಇಸವಿಯಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜೊಡೆಯರವರು ಕೊಟ್ಟಿದ್ದ ಅಪ್ಪಣೆ ಪ್ರಕಾರಕ್ಕೆ ಆನೆ ಬೆಳ್ಳಿನಗಾರಿ ನಿಶಾನಿಆನೆ ಬೆಳ್ಳಿಬಾಳೆ ಬಾಜಾಬಜಂತ್ರಿಗಳು ಮೊದಲಾದವನ್ನು ಇಸ್ತಕಬಾಲಿಗೆ ಕಳುಹಿಸಿ, ಸಮಸ್ತ ಬಿರುದಾವಳಿಗಳೊಂದಿಗೆ ಬರಮಾಡಿಕೊಂಡು ೧೧ ತೋಪುಗಳ ಮರ್ಯಾದೆಯನ್ನು ಮಾಡಿಸಿ, ಪ್ರಥಮದಿನದ ಧೂಳಿಪಾದಪೂಜೆಗೆ ೫೦೦ ವರಹಗಳ ಭಿಕ್ಷೆಯನ್ನು ಕೊಡಿಸಿದ್ದುದಲ್ಲದೆ ಅವರನ್ನು ಚಮರ್ಬಾಪಟ್ಟಿ ತೋಟದಲ್ಲಿಳಿಸಿ, ಅವರು ರಾಜಧಾನಿಯಲ್ಲಿರುವವರೆಗೆ ದಿನ ೧ ಕ್ಕೆ ೧|| ಸಾವಿರ ಜನರ ಲವಾಜಮೆಯನ್ನು ಗಣಾರಾಧನೆ ಬಗ್ಗೆ ಅಪ್ಪಣೆಕೊಡಿಸಿದ್ದರು. ಆ ಮಾಮೂಲನ್ನನುಸರಿಸಿ ಈಗಲೂ ಉಚಿತವಾದ ಮಿಲಟರಿ ಆನರುಗಳನ್ನು ಕೊಡಿಸಿಕೊಡಬೇಕೆಂದು ಬೆಂಗಳೂರು ಭಕ್ತರುಗಳಿಂದ ಶ್ರೀಮನ್ಮಹಾರಾಜರವರ ಸರ್ಕಾರಕ್ಕೆ ಪ್ರಾರ್ಥನೆಯು ಮಾಡಲ್ಪಟ್ಟಿದ್ದಿತು. ಈ ವಿಜ್ಞಾಪನ ಪತ್ರವು ತೀರ ಸಾವಕಾಶವಾಗಿ ಕೊಡಲ್ಪಟ್ಟ ಕಾರಣದಿಂದಲೋ ಏನೋ ಅದರ ಫಲಿತಾರ್ಥವು ಇನ್ನೂ ಗೊತ್ತಾಗಿರುವುದಿಲ್ಲ. ಆ ಮರ್ಯಾದೆಗಳು ಬರುವವರೆಗೂ ಉತ್ಸವವನ್ನು ನಿಲ್ಲಿಸುವುದಾದರೆ ಉತ್ಸವಾರ್ಥವಾಗಿ ಬಂದ ಲಕ್ಷಾಂತರ ಜನರಿಗೆ ಆಶಾಭಂಗವಾಗುವುದೆಂಬ ಕಾರಣದಿಂದ ಸದ್ಯದ ಉತ್ಸವವು ಶ್ರೀ ಮಠದ ಬಿರುದಾವಳಿಗಳಿಂದಲೇ ನಡೆಯಿಸಲ್ಪಟ್ಟಿತು. ಮುಂದೆ ನಡೆಯಿಸಬೇಕೆಂದು ಬೆಂಗಳೂರಿನವರು ಯೋಚಿಸಿರುವ ಇನ್ನೂ ೨-೩ ಉತ್ಸವಗಳ ಕಾಲಕ್ಕಾದರೂ ಸರ್ಕಾರಿ ಮರ್ಯಾದೆಗಳು ಬಂದಾವೆಂಬ ನಿರೀಕ್ಷಣೆಯಿದೆ.

ಪರಮತಾಸಹನೆ.

ಶ್ರೀಗಳ ಸ್ವಾರಿಯು ಬೆಂಗಳೂರಿಗೆ ದಯಮಾಡಿಸುವುದೆಂದು ಪ್ರಕಟವಾದಾರಭ್ಯ ಕ್ರಿಮಸ್ಥರಲ್ಲಿ ಕೆಲವರು ನಾನಾಕಾರಣಗಳನ್ನು ಹೇಳಿಕೊಂಡು ಅವರ ಸ್ವಾರಿಯು ಬರಲಾಗದೆಂದೂ, ಅವರಿಗೆ ಯಾವುದಾದರೂ ಒಂದು ವಿಧದಲ್ಲಿ ತೊಂದರೆಯನ್ನೋ ಅಪಮಾನವನ್ನೋ ಉಂಟುಮಾಡಬೇಕೆಂದೂ ಉದ್ದೇಶಿಸಿಕೊಂಡು ನೂರಾರು ಅರ್ಜಿಗಳನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೊದಲಾದ ಅಧಿಕಾರಿಗಳಿಗೆ ಬರೆದುಕೊಂಡಿದ್ದರಂತೆ. ಹಾಗೆ ಬರೆದುಕೊಂಡ ಅರ್ಜಿಗಳೊಳಗೆ ಒಂದರಲ್ಲಿ ಈ ಸ್ವಾಮಿಗಳು ನಮ್ಮ ಮಠದ ಮುಂದೆ ಉತ್ಸವವಾಗಿ ಬಂದಾಗ್ಗೆ ಪಲ್ಲಕ್ಕಿಯಿಂದಿಳಿದು ನಡೆದುಹೋಗಬೇಕೆಂದು ಕಾಣಿಸಲ್ಪಟ್ಟಿತ್ತು. ಈ ಅರ್ಜಿಗೆ ೧-೨ ಸಾವಿರ ರೂ. ಗಳ ಸಂಬಳವನ್ನು ತಿನ್ನುತ್ತಿದ್ದು ರಿಟೈರಾಗಿರುವ ಅಧಿಕಾರಿಗಳು ಕೆಲವರು ರುಜುಮಾಡಿದ್ದರು. ಹಾಗೆ ಕತೆ ಅಂಗ್ಲವಿದ್ಯಾವೈದುಷ್ಯ ಮೊದಲಾದವುಗಳು ಹೆಚ್ಚಿದ ಹಾಗೆ ಸಹೋದರಭಾವ ಐಕಮತ್ಯ ಪರಮತಸಹನೆಗಳು ವೃದ್ಧಿಯಾಗುವುವೆಂದು ವಾದಿಸುವವರ ಮಾತು ಬರೀ ಭ್ರಾಂತಿಯೆಂದು ಅವರ ಈ ಕೃತ್ಯವು ನಿದರ್ಶನಪಡಿಸುವುದು. ಆದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಇಂಥ ನ್ಯಾಯಹೀನವಾದ ಅರ್ಜಿಗಳಾಧಾರದ ಮೇಲೆ ನ್ಯಾಯಬದ್ಧವಾದ ಕಾರ್ಯಕ್ಕೆ ವಿಘ್ನವನ್ನು ಕಲ್ಪಿಸುವುದಕ್ಕೆ ಆಧಾರವಿಲ್ಲದೆಹೋದುದರಿಂದಲೋ ಏನೋ ಅವರು ಈ ಅರ್ಜಿಗಳಿಗೆಲ್ಲಾ ಕಸದ ಬುಟ್ಟಿಯನ್ನು ತೋರಿಸಿದರು. ಅದ್ದರಿಂದ ಈ ಅರ್ಜಿಗಳೆಲ್ಲಾ ಉತ್ಸವಕ್ಕೆ ಯಾವ ತಡೆಯನ್ನೂ ಕಲ್ಪಿಸಲಾರದೆಹೋದುವು.

ಸ್ಪೆಷಲ್ ಮ್ಯಾಜಿಸ್ಟ್ರೇಟರ ಹುರುಕು.

ಯಾವುದೊಂದು ವಿಧದಲ್ಲೂ ಸೂಡು ಹಾಕುವುದಕ್ಕೆ ಸ್ಥಲವು ದೊರೆಯದಿಲ್ಲವಾಗಿ ಇದೊಂದು ಸಂಧಿಯಾದರೂ ಅನುಕೂಲಿಸುವುದೆಂದು ಯೋಚಿಸಿದರೋ ಏನೋ ಎಂಬಂತೆ, ಬೀದಿಗಳಲ್ಲಿ ಹಾಕಿರುವ ಚಪ್ಪರಗಳ ಮೇಲ್ಗಡೆಯಲ್ಲಿ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರುವೆಂದು ಅಕ್ಷರಗಳನ್ನು ಅಂಟಿಸಿದ್ದುದು ಒಂದು ದೊಡ್ಡ ಅಪರಾಧವನ್ನಾಗಿ ಈದಂಡಾಧಿಕಾರಿಗಳು ಯೋಚಿಸಿದರು. ರಹದಾರಿಯಲ್ಲಿ ಕಾಣಲ್ಪಡದಿರುವ ಮಹಾರಾಜ ಎಂಬ ಬಿರುದು ಇಲ್ಲಿ ಉಪಯೋಗಿಸಲ್ಪಟ್ಟಿತೆಂದು ಅವರು ಸಿದ್ಧಾಂತಿಸಿರಬೇಕು. ಸ್ಪೆಷಲ್ ಮ್ಯಾಜಿಸ್ಟ್ರೇಟರು ಉತ್ಸವಾರಂಭಕ್ಕೆ ಮುಂಚೆ ಹಿಡಿದುಕೊಂಡು ತಿರುಗುತ್ತಿದ್ದ ಕವರಿನಲ್ಲಿ ಇದಕ್ಕೆ ಸಂಬಂಧಪಟ್ಟ ಆರ್ಡರು ಇದ್ದಿತೆಂದು ಕಾಣುತ್ತದೆ. ಉತ್ಸವಾರಂಭವಾದ ಕೂಡಲೇ ಅವರು ಅದನ್ನು ಹೊರಹಾಕಿ ಚಪ್ಪರಗಳ ಮೇಲಿದ್ದ ಸದರಿ ಮಹಾರಾಜ ಎಂಬ ಶಬ್ದವನ್ನು ಅಳಿಸಿಬಿಡಿಸಿದರೆಂದು ಒಂದು ವಾರ್ತೆಯೂ, ಅದು ಇರಬಹುದೆಂದು ಡಿ|| ಕಮಿಷನರು ಆರ್ಡರ್ ಮಾಡಿದರೆಂದೂ, ಅದರ ಮೇಲೆ ಮತ್ತೆ ಹಾಗೆಯೇ ಅಂಟಿಸಿದರೆಂಬ ಮತ್ತೊಂದು ವಾರ್ತೆಯೂ, ಇಂಥ ಶಬ್ದವನ್ನುಪಯೋಗಿಸಲು ಆಧಾರವೇನೆಂದು ಕೇಳಲ್ಪಟ್ಟಿರುವುದೆಂಬ ಇನ್ನೊಂದು ವಾರ್ತೆಯೂ ಹಬ್ಬಿದವು. ಇಷ್ಟರ ಹೊರತು ಅನ್ಯಾವ ಕೆಲಸವೂ ನಡೆಯಲಿಲ್ಲ.

ಮುಂದೆ ನಡೆದ ಸಂಗತಿಗಳನ್ನು ಶ್ರುತಪಡಿಸಿಕೊಳ್ಳುತ್ತೇನೆ.

ದಾವಣಗೆರೆ.

ಈ ಊರಲ್ಲಿ ಕಳೆದ ವರ್ಷ ಹೈಸ್ಕೂಲ್ ಬಾಯಂ ಆಗಿ IV ಫಾರಂ ಮಾತ್ರ ಆರಂಭವಾಗಿತ್ತಷ್ಟೆ. ಈ ವರ್ಷ ಇದರ ಜೊತೆಗೆ V ಫಾರಮನ್ನು ಆರಂಭ ಮಾಡುತ್ತಾರೆ. ಸದರಿ ಹೈಸ್ಕೂಲಲ್ಲಿ ಅಭ್ಯಾಸಮಾಡುವ ಮೈಸೂರು ಸೀಮೆಯ ವೀರಶೈವ ಬಡವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಸ್ಥಾಪಿಸಲ್ಪಟ್ಟಿರುವ ಶ್ರೀ ಜಯದೇವ ಬೋರ್ಡಿಂಗಿನಲ್ಲಿ ಫ್ರೀಯಾಗಿ ಊಟಕ್ಕೂ ವಸತಿಗೂ ಏರ್ಪಡಿಸಲ್ಪಡುವುದು. ಇಷ್ಟವುಳ್ಳವರು ಈ ತಿಂಗಳು ತಾ|| ೩೧ ರೊಳಗಾಗಿ ತಲುಪುವಂತೆ ಅಪ್ಲಿಕೇಷನ್ ಬರಕೊಳ್ಳತಕ್ಕದ್ದು.

ದಾವಣಗೆರೆ.
19—5—1919 } ಸೆಕ್ರೆಟರಿ ವೀರಶೈವ ವಿದ್ಯಾವರ್ಧಕಸಂಘದ ಫಂಡ್
ದಾವಣಗೆರೆ.

ನೋಟೀಸು.

ವೀರಶೈವಾಶ್ರಮ—ಮೈಸೂರು.

ಈ ವೀರಶೈವಾಶ್ರಮವು ಬರುವ ಜೂನ್ ಮಾಹೆ ತಾ|| 3 ರಲ್ಲಿ ತೆರೆಯಲ್ಪಡುತ್ತದೆ. ಅಲ್ಲಿಗೆ ಸೇರಲು ಅಪೇಕ್ಷಿಸತಕ್ಕ ವಿದ್ಯಾರ್ಥಿಗಳು ತಮ್ಮ ಅಪ್ಲಿಕೇಷನ್ ಫಾರಂಗಳನ್ನು ಈ ಮಾಹೆ ತಾ|| 31 ರ ಒಳಗಾಗಿ ಇಲ್ಲಿಗೆ ಬಂದು ಸೇರುವಂತೆ ರವಾನಿಸಿಕೊಡಬೇಕು. ಅರ್ಧಾಣಾ ಸ್ಟಾಂಪನ್ನು ರವಾನಿಸಿದಲ್ಲಿ ಅಪ್ಲಿಕೇಷನ್ ಫಾರಂ ರವಾನಿಸಲ್ಪಡುತ್ತದೆ.

N. BASAPPA,
Secretary.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಬಿಜ್ಜ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

16 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಮೇ ತಾ|| ೨೫ ರಿಂದ ೧೯೧೯ ನೆಯ ಮೇ ತಾ|| ೩೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ವೈಶಾಖ ಬ|| ದಶಮಿಯಿಂದ ಜ್ಯೇಷ್ಠ ಶು|| ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
25	ಭಾನು	ದಶಮಿ	1-8	ಉಪರಿ	55-8	12
26	¹ಸೋಮ	ದ್ವಾದಶಿ	50-27	ರೇವತಿ	25-58	13
27	²ಮಂಗಳ	ತ್ರಯೋ	44-15	ಅಶ್ವಿನಿ	21-57	14
28	ಬುಧ	ಚತು	38-3	ಭರಣಿ	17-46	15
29	³ಗುರು	ಅಮಾ	31-53	ಕೃತ್ತಿಕ	13-37	16
30	⁴ಶುಕ್ರ	ಪಾಡ್ಯ	26-5	ರೋಹಿಣಿ	9-41	17
31	ಶನಿ	ಬಿದಿಗೆ	20-45	ಮೃಗಶಿರ	6-4	18

(1) ಮಾಧ್ವ ಶ್ರೀ ವೈಷ್ಣವಾನಾಂ ಏಕಾದಶೀ. (2) ಮಾಸಶಿವರಾತ್ರಿ, 8, ಪ್ರದೋಷಃ. (3) ಸರ್ವತ್ರಅಮಾವಾಸ್ಯಾ. (4) ಪುನ್ನಾಗ ಗೌರೀವ್ರತಂ.

ಮೈಸೂರ್: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಪಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಳಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಜೂನ್ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೩ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಕವಚ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿ ಸ್ಕ್ರೂ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಚೆಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟ ತೋರುವುದಿಲ್ಲ. ಇವುಗಳಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
17 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಟೀಕ ಶತಕತ್ರಯ	೧—೦—೦
ಟೀಕ ವೀರಶೈವ ವಿವಾಹವಿಧಿಃ	೦—೮—೦
ವಪೂಜಾವಿಧಿಃ	೦—೧೦—೦
ಾರುಶೀಲಚರಿತ್ರೆ	೦—೩—೦
ರಿದಾಸಿ	೦—೪—೦
ತಪಂಚಕ	೦—೨—೦
ಷ್ಯಲವಿದ್ಯಾ (ಮುಕ್ತಿಸಾಧನ)	೦—೨—೦
ರುಶಂಕರೇಶ್ವರ ಕವಚಂ	೦—೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.



ಈಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವವು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ	1 ಕ್ಕೆ	0—12—0.
	12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವದಿಲ್ಲ. ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿಸಹಿತ



ಕ್ರಯ 1 ಕ್ಕೆ 5—8—0.

ವಿಳಾಸ:— ರಾಸ್ ವಾಚ್ ಅಂಡ್ ಕೊ,
17 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೩೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

34 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

24

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನನಾಮ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಶುಭಾಶುಭಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚುಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯವಶ್ಯಕ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶ ರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅತ್ಯುಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

20 ವಿಳಾಸ—ಎಂ. ಎಂ. ಹರ್ಡೇಕರ್ ದಾವಣಗೆರೆ.

8

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ.

ಕ್ರಯ 1 ಕ್ಕೆ ರೂ. 1—8—0

ವಿಳಾಸ—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.



4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲುಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1.8.0. 12 ಕ್ಕೆ 2.13.0. 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
24 ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜೂನ್ ತಾ|| ೧ ನೆಯ ಭಾನುವಾರ.

ರಾ|| ಬ|| ಕಂದುಕೂರಿ ವೀರೇಶ ಲಿಂಗಂಪಂತುಲು ಯವರ ಮೃತ್ಯು.

ಇವರು ಆಂಧ್ರದೇಶೀಯರಾದರೂ ಭರತಖಂಡಕ್ಕೇ ರತ್ನಪ್ರಾಯರಾಗಿದ್ದವರು. ಇವರ ಪರಿಶುದ್ಧ ಚರಿತ್ರವು ಭಾರತೀಯರಿಗೆಲ್ಲಾ ಮನನಯೋಗ್ಯವಾಗಿರುವುದು. ಇವರು ೧೮೪೮ ನೆ ಇಸವಿ ಏಪ್ರಿಲ್ ತಾ|| ೧೬ ರಲ್ಲಿ ರಾಜಮಹೇಂದ್ರದಲ್ಲಿ ಜನಿಸಿದರು. ಈಗ ಅವರಿಗೆ ೭೧ನೆ ವಯಸ್ಸು. ಇವರಿಗೆ ಪೂರ್ವಜನ್ಮಸಂಸ್ಕಾರವಿಶೇಷದಿಂದ ಲಬ್ಧವಾಗಿದ್ದ ಮೇಧಾವಿಶೇಷವು ಪೂರ್ವವಯಸ್ಸಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವಾಗಲೇ ಇವರನ್ನು ನೂತನ ಗ್ರಂಥರಚನೆಗೆ ಪ್ರೋತ್ಸಾಹಿಸಿತು. ಸಂಘದಲ್ಲಿ ಬಹುಕಾಲದಿಂದ ಬೇರುಬಿಟ್ಟುಕೊಂಡಿದ್ದ ಮೂಢ ದುರಾಚಾರಗಳ ಹಿಂಸೆಯು ಪ್ರಜಾಸಾಮಾನ್ಯಕ್ಕೆ ದುರ್ಭರವಾಗಿದ್ದುದೂ, ಬಾಲವಿತಂತುಗಳ ದುರವಸ್ಥೆಯು ವಾಚಾಮಗೋಚರವಾಗಿದ್ದುದೂ ಸಹ ಇವರ ಮನಸ್ಸಿಗೆ ಬಲವಾಗಿ ನಾಟಿದುದರಿಂದ ಅವುಗಳ ಮೂಲೋತ್ಪಾಟನೆಗಾಗಿ ಇವರು ತಮ್ಮ ಸಹಜ ಸ್ಥೈರ್ಯಧೈರ್ಯ ಸಾಹಸಗಳಿಂದ ನಡುಕಟ್ಟಿ ನಿಂತರು. ಅಸಾಧಾರಣವಾದ ಭೌತಿಕ ಸಂಪದ್ವೈಭವವು ತಮಗಿಲ್ಲದಿದ್ದರೂ ಆ ಮಹಾಕಾರ್ಯದಲ್ಲಿ ಇವರು ಜಯಶೀಲರಾದುದಕ್ಕೆ ದೃಢಮನಸ್ಸೂ ಆತ್ಮವಿಶ್ವಾಸವೂ, ಬದ್ಧದೀಕ್ಷೆಯೂ, ಸತ್ಯಸಂಕಲ್ಪವೂ, ಪರಿಶುದ್ಧವರ್ತನವೂ, ಸ್ವಾರ್ಥತ್ಯಾಗವೂ ಮುಖ್ಯಸಾಧನಗಳಾಗಿದ್ದುವು. ಇವರು ತಮ್ಮ ಯೌವನೋದಯದಲ್ಲೇ ಗ್ರಂಥರಚನೆಗಾರಂಭಿಸಿ, ಸಂಘದುರಾಚಾರಗಳಲ್ಲಿ ಹೇಯಬುದ್ಧಿಯು ದೇಶೀಯರಲ್ಲಿ ಮೂಡುವಂತೆ ಮಾಡುವುದಕ್ಕೆ ಸಾಧಕಗಳಾದ ಸಾಮಾಜಿಕ ಕಾದಂಬರಿಗಳನ್ನೂ, ಪ್ರಹಸನಗಳನ್ನೂ ನಾಟಕಗಳನ್ನೂ ಬರೆಯುವುದಕ್ಕೆ ಉಜ್ಜುಗಿಸಿದರು. ಹೀಗೆ ಅವರು ಬರೆದ ನೂರಾರು ಗ್ರಂಥಗಳು ಅನ್ಯಭಾಷೆಗಳಲ್ಲೆಲ್ಲಾ ಪರಿವರ್ತಿತವಾಗಿ, ದೇಶದಲ್ಲಿ ನೂತನ ವಿಕಾಸವನ್ನು ಹುಟ್ಟಿಸಿ, ಬಲುಮಟ್ಟಿಗೆ ಜಯಶೀಲವಾಗಿ, ಆಚಂದ್ರಾರ್ಕವಾದ ಲೋಕೋಪಕಾರವನ್ನು ಮಾಡುತ್ತ ಮೆರೆಯುತ್ತಿರುವುವು. ಇವರ ಪಾಂಡಿತ್ಯವೂ ಅನುಪಮಶೋಧನಶಕ್ತಿಯೂ ಸಂಸಕವಿತಾಕೌಶಲವೂ ಅಗಾಧಸಂವಿಧಾನ ನೈಪುಣ್ಯವೂ ಲೋಕೋತ್ತರವಾಗಿದ್ದುವು. ಆಂಧ್ರದೇಶದಲ್ಲಿ ಇವರು ಸಂಗ್ರಹಿಸಿದ್ದಷ್ಟು ಶಿವಶೆಗಮಗ್ರಂಥಗಳನ್ನು ಇನ್ನಾರೂ ಶೇಖರಿಸಿರಲಿಲ್ಲ. ಆಂಧ್ರಕವಿಚರಿತ್ರದ ಪ್ರಥಮಭಾಗವನ್ನು ಇವರು ಬರೆದು ಮುದ್ರಿಸಿ ಪ್ರಕಟಿಸಿರುವುದಲ್ಲದೆ ದ್ವಿತೀಯಭಾಗವನ್ನು ಮುದ್ರಿಸುವುದಕ್ಕಾಗಿಯೇ ಈ ಕಡುಬೇಸಗೆಯ ಕಾಲದಲ್ಲೂ ಮದ್ರಾಸಿಗೆ ಬಂದು ಕುಳಿತಿದ್ದರು. ದೇಹದಾರ್ಢ್ಯವಿಲ್ಲದಿದ್ದರೂ ವಾರ್ಧಕ್ಯದ ಅಶಕ್ತಿಯು ತುಂಬಿತುಳುಕುತ್ತಿದ್ದರೂ ದೇಹಾಭಿಮಾನವನ್ನು ಲೇಶವೂ ಇಟ್ಟುಕೊಳ್ಳದೆ ಗ್ರಂಥರಚನೆಯ ತಪಸ್ಸಿನಲ್ಲೇ ಕಡೆಯ ಗಳಿಗೆಯವರೆಗೂ ಇದ್ದು ಅಂತ್ಯಕಾಲದಲ್ಲಿ ವಿಷಮಜ್ವರವು ಪೀಡಿಸುತ್ತಿದ್ದರೂ ಲಕ್ಷಿಸದೆ ಲೇಖನಿಯನ್ನು ಹಿಡಿದುಕೊಂಡೇ ಕಳೆದ ಬುಧವಾರ ತಮ್ಮ ಭೌತಿಕಶರೀರವನ್ನು ಬಿಟ್ಟರು! ವಿದ್ಯಾಗಂಧವಿಲ್ಲದೆಯೂ ದುರಾಚಾರಕ್ಕೆ ಬಲಿಯಾಗಿಯೂ ಇದ್ದ ಆಂಧ್ರದೇಶವು ಈಗಣ ಪ್ರಬುದ್ಧಸ್ಥಿತಿಗೆ ಬರುವುದಕ್ಕೆ ಈ ಮಹನೀಯರು ಮೊಟ್ಟಮೊದಲು ಮಾಡಿದ ಉದ್ಬೋಧನ ಶಕ್ತಿಯೇ ಮುಖ್ಯ ಸಾಧನವು. ವಂಗದೇಶದ ಅಭ್ಯುದಯಕ್ಕೆ ರಾಜಾರಾಮಮೋಹನರಾಯಿರವರೂ ವಿದ್ಯಾಸಾಗರರೂ ಹೇಗೆ ಕಾರಣರೋ ಹಾಗೆ ಆಂಧ್ರದೇಶಕ್ಕೆ ಈ ಮಹನೀಯರು ಸಮುದ್ಧಾರಕರೆಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ವಿತಂತುಗಳನ್ನು ಉದ್ಧರಿಸುವುದಕ್ಕಾಗಿ ಇವರು ಪ್ರತ್ಯೇಕ ವಿದ್ಯಾಲಯವನ್ನು ಸ್ಥಾಪಿಸಿ, ನಿರ್ಗತಿಕರಾದ ಅವರುಗಳಿಗೆ ಅನ್ನಬಟ್ಟೆಗಳ ಸಹಾಯವನ್ನು ಮಾಡಿಕೊಟ್ಟು, ಅವರುಗಳಿಗೆ ಪುನರ್ವಿವಾಹವನ್ನು ನಡೆಯಿಸುವ ಪ್ರಯತ್ನಕ್ಕೆ ಕೈಹಾಕಿ, ಅದರಿಂದ ಸ್ವಸಮಾಜದವರ ಬಹಿಷ್ಕಾರಕ್ಕೂ, ನಾನಾವಿಧವಾದ ಹಿಂಸೆಗಳಿಗೂ ಗುರಿಯಾದರೂ, ಹಿಡಿದ ಪಟ್ಟನ್ನು ಬಿಡದೆ ಎಷ್ಟೋ ದೂರ ತಮ್ಮ ಸಂಕಲ್ಪಕ್ಕೆ ಜಯವನ್ನು ತಂದುಕೊಂಡರು. ಈಗಣಕಾಲದಲ್ಲೇ ವಿತಂತೂದ್ವಾಹಕ್ಕೆ ವಿಪರೀತವಾದ ಅಡ್ಡಿಗಳೂ ಆ ಕಾರ್ಯದಲ್ಲಿ ಮುಂದಾಳುಗಳಾದವರಿಗೆ ಎಷ್ಟೋ ಕಷ್ಟಗಳೂ ತಟ್ಟುತ್ತಿರುವಾಗ, ಈಗ್ಗೆ ಅರ್ಧ ಶತಮಾನದ ಹಿಂದೆ ಅಂಥ ನಷ್ಟಕಷ್ಟಗಳೂ ಹಿಂಸೆಗಳೂ ಸಂಘ ಸಂಸ್ಕರಣೇಚ್ಛುಗಳಿಗೆ ಎಷ್ಟುಮಟ್ಟಿಗಿರಬಹುದೆಂಬುದನ್ನು ಹೇಳಬೇಕಾಗಿಲ್ಲ. ಅವುಗಳನ್ನೆಲ್ಲಾ ಇವರು ಧೈರ್ಯದಿಂದ ತಾಳಿಕೊಂಡು ಕೃತಕೃತ್ಯರಾದರು. ಇವರು ತಮ್ಮ ಕಾರ್ಯನಿರ್ವಹಣದಲ್ಲಿ ಎಷ್ಟುಮಟ್ಟಿಗೆ ಪ್ರಜಾನಿಷ್ಠುರಗಳಿಗೂ ಖಂಡನಕ್ಕೂ ಪಾತ್ರರಾಗಬೇಕಾಯಿತೆಂಬುದನ್ನು ಅವರು ಸ್ವತಃ ಬರೆದುಕೊಂಡಿರುವ ೮೦೦ ಪುಟಗಳುಳ್ಳ ಅವರ ಜೀವಿತಚರಿತ್ರದಿಂದ ವ್ಯಕ್ತವಾಗುತ್ತಿರುವುದು. ಕಡೆಗೆ ಇವರು ಪಟ್ಟ ಕಷ್ಟಗಳೆಲ್ಲವೂ ಸಾರ್ಥಕವಾದುವು. ಇವರು ಮಾಡಿದ ಉಪದೇಶವನ್ನು ನಂಬಿ ತೋರಿಸಿಕೊಟ್ಟ ಮಾರ್ಗದಲ್ಲಿ ಹಜ್ಜೆಯನ್ನಿಟ್ಟು ನಡೆಯತಕ್ಕವರು ಈಗ ಲಕ್ಷೋಪಲಕ್ಷರಾಗಿದ್ದಾರೆ. ಇವರು ಶ್ರೀಮಂತರಲ್ಲದಿದ್ದರೂ ಸಮಾಜೋದ್ಧಾರಕ್ಕಾಗಿಯೂ, ವಿತಂತೂದ್ಧಾರಕ್ಕಾಗಿಯೂ, ದಾನಧರ್ಮ ಪರೋಪಕಾರಗಳಿಗಾಗಿಯೂ ಲಕ್ಷಾಂತರ ರೂ. ಗಳನ್ನು ವಿನಿಯೋಗಿಸಿ, ಕಟ್ಟಕಡೆಗೆ ತಮ್ಮ ೪೧|| ಸಾವಿರ ರೂ. ಗಳ ಆಸ್ತಿಯನ್ನು ತಮ್ಮಿಂದ ಪ್ರತಿಷ್ಠಿತವಾಗಿರುವ ಟವರ್ ಹಾಲು, ವಾಚಕಶಾಲೆ, ಬ್ರಾಹ್ಮಮಂದಿರ, ಗ್ರಂಥಭಾಂಡಾಗಾರ, ಅನಂದಾಶ್ರಮ, ಪಾಠಶಾಲೆ ಇತ್ಯಾದಿ ಧರ್ಮಸಂಸ್ಥಾಪನೆಗಳಿಗೆ ವಿನಿಯೋಗಿಸಲು ದಾನಶಾಸನವನ್ನು ಬರೆದಿಟ್ಟು ಹೋಗಿರುತ್ತಾರೆ.

ಇವರು ಬ್ರಾಹ್ಮಣಮತದಲ್ಲಿ ಹುಟ್ಟಿದ್ದರೂ ತಮ್ಮ ಸಂಸ್ಕರಣ ಕಾರ್ಯದೀಕ್ಷೆಯಿಂದ ಸಮಾಜದವರ ಖಂಡನೆಗೊಳಗಾಗಿ ಜುಗುಪ್ಸೆಗೊಂಡೋ ಏನೋ ಬ್ರಹ್ಮಸಮಾಜವನ್ನು ಸೇರಿ, ಜನ್ನಿವಾರವನ್ನು ಕಿತ್ತುಹಾಕಿ, ಬ್ರಾಹ್ಮಣೇತರರಲ್ಲೂ ಸಾತ್ವಿಕಾಹಾರವನ್ನು ಪರಿಗ್ರಹಿಸುತ್ತ, ಏಕೇಶ್ವರೋಪಾಸನೆಯನ್ನೂ ಸರ್ವಮಾನವ ಸೌಭ್ರಾತೃತ್ವವನ್ನೂ ವಾಕ್ಕಿನಲ್ಲೂ ಕಾರ್ಯದಲ್ಲೂ ಲೋಕಕ್ಕೆ ಬೋಧಿಸುತ್ತಿದ್ದರು. ಅವರ ಮತವಿಷಯವು ಹೇಗಾದರೂ ಇರಲಿ. ಅವರು ದೇಶಕ್ಕಾಗಿ ಮಾಡಿದ ಉಪಕಾರವು ಆಚಂದ್ರಾರ್ಕಸ್ಮರಣೀಯವಾಗಿರುವುದು. ಆದರಿಂದಲೇ ಅವರು ಧನ್ಯಜನ್ಮರು. ಇಂಥ ಆಧುನಿಕಪುರುಷರತ್ನವನ್ನು ಹೆತ್ತಿದ್ದ ಆಂಧ್ರಮಾತೆಯೂ ಧನ್ಯಳು. ನಮ್ಮ ಕರ್ನಾಟಕಮಾತೆಯ ಗರ್ಭವು ಇಂಥ ಪವಿತ್ರಮುಕ್ತಾಫಲವನ್ನು ಪಡೆಯುವ ಪುಣ್ಯವನ್ನು ಎಂದಿಗೆ ಪಡೆಯುವುದೋ ಕಾಣಲಿಲ್ಲ. ದೇಶಸೇವೆ, ಭಾಷಾಸೇವೆ, ಸಮಾಜಸೇವೆಗಳನ್ನು ನಿಷ್ಕಪಟಭಕ್ತಿಯಿಂದ ಆಚರಿಸಿ, ಆಂಧ್ರಲೋಕದ ಮೇಲೆಲ್ಲಾ ತನ್ನ ಉಪಕಾರಧ್ವಜವನ್ನು ಸ್ಥಾಪಿಸಿ, ತನ್ನ ಹುಟ್ಟನ್ನು ಸಾರ್ಥಕಪಡಿಸಿಕೊಂಡು ಕೀರ್ತಿಕಾಯವನ್ನು ಇಹಲೋಕದಲ್ಲಿ ಬಿಟ್ಟು ಪರಮಪದವನ್ನು ಹೊಂದಿದ ಈ ಪುರುಷರತ್ನದ ಜೀವಿತಪ್ರಕಾಶವು ಭಾರತೀಯರಿಗೆಲ್ಲಾ ಮಾರ್ಗದರ್ಶಕವಾಗಿರಲಿ.

ಶುಭೋದಯ.

ಧಾರವಾಡದಲ್ಲಿ ಪ್ರಕಟಿತವಾಗುತ್ತಿರುವ ಶುಭೋದಯವೆಂಬ ವಾರಪತ್ರದ ಏಪ್ರಿಲ್ ತಾ|| ೧೮ ರ ಸಂಚಿಕೆಯಲ್ಲಿ ಆರ್. ಶ್ರೀನಿವಾಸಾಚಾರ್ಯ ಎಂಬ ಹೆಸರಿನಿಂದ ಅಂಕಿತವಾಗಿ "ಅಲ್ಲಮನ ಹಾಗೂ ಬಸವನ ವೃತ್ತಾಂತವೇನು?" ಎಂಬ ಶಿರೋಲೇಖನದಿಂದ ಒಂದಾನೊಂದು ಬರವಣಿಗೆಯು ಪ್ರಸಿದ್ಧವಾಗಿದ್ದಿತು. ಅದರಲ್ಲಿ ಕಂಡ ವಿಚಾರಗಳು ಅಲ್ಲಮ ಪ್ರಭುವಿನ ಮತ್ತು ಬಸವೇಶನ ವಿಷಯದಲ್ಲಿ ತುಚ್ಛಭಾವವನ್ನು ಹುಟ್ಟಿಸುವುದಕ್ಕೆ ಸಾಧಕಗಳಾಗಿಯೂ, ವೀರಶೈವರ ಮನಸ್ಸಿಗೆ ಖೇದವನ್ನೂ ಆ ಸಮಾಜಕ್ಕೆ ಅವಮಾನವನ್ನೂ ಹುಟ್ಟಿಸತಕ್ಕುವಾಗಿಯೂ ಇದ್ದಕಾರಣ, ಅದರ ಖಂಡನೆಯು ಮತಸ್ಥರಿಂದ ಯಾವುದಾದರೊಂದು ರೀತಿಯಲ್ಲಿ ಆಗತಕ್ಕದು ಅಪರಿಹಾರ್ಯವಾಗಿದ್ದಿತು. ಆದರೆ ಪ್ರತಿಲೇಖನರೂಪದಿಂದ ಅದರ ಖಂಡನಮಾಡುವುದಕ್ಕಿಂತಲೂ, ನ್ಯಾಯಸ್ಥಾನದಲ್ಲಿ ಅದರ ಹುರುಳನ್ನು ಹೊರಹಾಕಿಸಿ ಖಂಡನೆಗೊಳಿಸುವುದೇಮೇಲೆಂದು ಧರ್ಮಶ್ರದ್ಧಾಳುಗಳಾದ ಹುಬ್ಬಳ್ಳಿಯ ಮ|| ಪಾವಟೆ ಸಿದ್ಧರಾಮಪ್ಪ, ಬಿ.ಎ.; ಎಲ್.ಎಲ್.ಬಿ. ಯವರು ಯೋಚಿಸಿ, ಅದನ್ನು ಬರೆದ ಶ್ರೀನಿವಾಸಾಚಾರ್ಯರೆಂಬುವರ ಮೇಲೂ, ಪತ್ರಿಕೆಯಲ್ಲಿ ಮುದ್ರಿಸಿಕೊಟ್ಟ ಮ|| ಯಶವಂತರಾವ ಜಠಾರಯವರ ಮೇಲೂ, ಪತ್ರಿಕಾಸಂಪಾದಕರಾದ ಮ|| ವಾಸುದೇವಾಚಾರ್ಯ ಕೆರೂರಯವರ ಮೇಲೂ ಕ್ರಿ|| ಪ್ರೊ|| ೫೦೦-೫೦೧ನೆ ಸೆಕ್ಷನ್ನುಗಳ ತಪ್ಪಿತವನ್ನು ಮಾಡಿರುವರೆಂದು ಧಾರವಾಡದ ಹುಜೂರ್ ಡಿಪ್ಯುಟಿ ಕಲೆಕ್ಟರವರ ಕೋರ್ಟಿನಲ್ಲಿ ಮಾನನಷ್ಟಕ್ಕಾಗಿ ವ್ಯಾಜ್ಯವನ್ನು ಹೂಡಿದರು. ಕಳೆದ ತಿಂಗಳಲ್ಲಿ ಅದರ ವಿಚಾರಣೆಗಾರಂಭವಾಗಿ ಫಿರ್ಯಾದಿಯ ಮತ್ತೂ ಅವರ ಪರ ರಾ|| ಬ|| ರುದ್ರಗೌಡರ ಸಾಕ್ಷ್ಯವು ನಡೆದ ಬಳಿಕ ಮುದ್ರಾಪಕರಾದ ಮ|| ಜಠಾರರವರು-ಆರ್. ಶ್ರೀನಿವಾಸಾಚಾರ್ಯ ಎಂಬ ಹೆಸರಿನಿಂದ ಶುಭೋದಯದಲ್ಲಿ ಮುದ್ರಿತವಾಗಿರುವ ಬರವಣಿಗೆಯು ವೀರಶೈವ ಸಮಾಜಕ್ಕೆ ಅವಮಾನಕರವಾದುದೆಂದು ಒಪ್ಪಿಕೊಂಡು ಅಂತಹದನ್ನು ಮುದ್ರಿಸಿದುದಕ್ಕಾಗಿ ವೀರಶೈವ ಸಮಾಜದವರ ಕ್ಷಮೆಯನ್ನು ಲಿಖಿತಮೂಲಕವಾಗಿ ಕೋರಿಕೊಂಡುದರಿಂದಲೂ, ಅದನ್ನು ಫಿರ್ಯಾದಿಗಳು ಸಮಾಜದವರ ಪಕ್ಷದಿಂದ ಒಪ್ಪಿ ಅಂಗೀಕರಿಸಿದುದರಿಂದಲೂ ಕೋರ್ಟಿನವರು ಅವರನ್ನು ದೋಷಮುಕ್ತರನ್ನಾಗಿ ಮಾಡಿ ಬಿಟ್ಟುಕೊಟ್ಟರು. ಶುಭೋದಯ ಸಂಪಾದಕರೂ ಸಹ ಕ್ಷಮೆಯನ್ನು ಬೇಡಿಕೊಳ್ಳಲು ಸಿದ್ಧರಾಗಿ, ಆ ವಿಷಯವನ್ನು ಕೋರ್ಟಿಗೆ ಬಿನ್ನಯಿಸಿಕೊಂಡು ಮುಂದಕ್ಕೆ ಹೀರಿಂಗ್ ಇಡಿಸಿಕೊಂಡರು. ಅದಕ್ಕಾಗಿ ಹುಬ್ಬಳ್ಳಿಗೆ ಹೋಗಿ ಫಿರ್ಯಾದಿಗಳೊಡನೆ ಮಾತುಕತೆಗಳನ್ನು ನಡೆಯಿಸಿದರು. ಕ್ಷಮಾಪಣೆಯ ನಿಬಂಧನೆಗಳ ವಿಷಯದಲ್ಲಿ ಫಿರ್ಯಾದಿ ಅಪರಾಧಿಗಳ ಅಭಿಪ್ರಾಯಗಳು ಕೂಡಿಬರಲಿಲ್ಲವಾದುದರಿಂದ ಅದು ನಡೆಯದೆ, ಈಗ ಮುಂದಣವಿಚಾರಣೆಯು ಕೋರ್ಟಿನಲ್ಲಿ ನಡೆಯುತ್ತಿರುವುದು. ೩ ನೆ ಅಪರಾಧಿ ಶ್ರೀನಿವಾಸಾಚಾರ್ಯ ಎಂಬುವವರಾರೋ ಎಲ್ಲಿದ್ದಾರೋ ಗೊತ್ತೇ ಆಗಿಲ್ಲ. ವಾರಂಟು ಹುಟ್ಟಿದೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ನೀಲಗಿರಿಯಿಂದ ಕಳೆದ ಬುಧವಾರ ರಾಜಧಾನಿಗೆ ದಯಮಾಡಿಸಿದರು.

ಈ ವಾರದಲ್ಲಿ ಅರಮನೆಯೊಳಗೆ ರಾಜಬಂಧುವರ್ಗದವರ ೨ ವಿವಾಹ ಮಹೋತ್ಸವಗಳು ನಡೆಯುವುವಾಗಿವೆಯೆಂದು ಕೇಳಿದೆವು.

ಬೆಂಗಳೂರು ಭಾರತೀ ಬುಕ್ ಡಿಪೋವಿನ ಪ್ರಕಟನಪತ್ರವನ್ನು ಈ ಸಂಚಿಕೆಯೊಡನೆ ಹಂಚಿರುತ್ತೇವೆ. ವಾಚಕರು ಅತ್ತಕಡೆ ಗಮನಿಸುವವರಾಗಲಿ.

ಮಿ|| ಥಿಯೊಬಾಲ್ಡ್ ರವರು ಕಳೆದ ಗುರುವಾರ ವಾರ್ಧಕ್ಯದಿಂದ ರಾಜಧಾನಿಯಲ್ಲಿರುವ ತಮ್ಮ ಮನೆಯಲ್ಲಿ ಕಾಲವಾದರು. ಇವರು ಬೇಟೆಯಲ್ಲಿ ಹೆಸರುಗೊಂಡಿದ್ದರು.

ಮೈಸೂರು ಬೆಂಗಳೂರು ಪಟ್ಟಣಗಳ ಮ್ಯುನಿಸಿಪಾಲಿಟಿಗಳಲ್ಲಿ ಅಖಂಡವಾಗಿ ೨೦ ವರ್ಷ ಕೌನ್ಸಿಲರಾಗಿದ್ದ ದೊಡ್ಡ ಮನುಷ್ಯರುಗಳು ಲೈಸೆನ್ಸಿನ ಆವಶ್ಯಕತೆಯಿಲ್ಲದೆ ಆಯುಧಗಳನ್ನುಪಯೋಗಿಸಿಕೊಳ್ಳಬಹುದೆಂದು ಸರ್ಕಾರದ [illegible]ಗಿದೆ.

ಸರ್ದಾರ್ ಕಾಂತರಾಜ ಅರಸಿನವರು ತಮ್ಮ ರಜಾವನ್ನು ಮುಗಿಸಿಕೊಂಡು ಮುಂದಣ ಜುಲೈ ತಿಂಗಳಲ್ಲಿ ದಿವಾನ್‌ಗಿರಿಯನ್ನು ವಹಿಸಿಕೊಳ್ಳುವವರಾಗಿದ್ದಾರೆಂದೂ, ಮ|| ಬಾನರ್ಜಿಯವರು ರಜಾದಮೇಲೆ ಹೋಗುವವರಾಗಿದ್ದಾರೆಂದೂ ಕೇಳುತ್ತೇವೆ.

ಈ ಸಲ ನಮ್ಮ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಹೋಗಿದ್ದವರಲ್ಲಿ ಬಿ. ಎ. ತರಗತಿಯವರು ೧೦೦ ಕ್ಕೆ ೭೫ ರಂತೆಯೂ, ಪ್ರವೇಶಪರೀಕ್ಷೆಯ ತರಗತಿಯವರು ೧೦೦ ಕ್ಕೆ ೩೦ ರಂತೆಯೂ, ಬಿ. ಎಸ್. ಸಿ. ತರಗತಿಯ ೫೨ ಮಂದಿಗೆ ೧೨ ಮಂದಿಯೂ ಉತ್ತೀರ್ಣರಾಗಿದ್ದಾರೆ.

ಲಷ್ಕರ್ ಮೊಹಲ್ಲಾ ಕಸಬೆ ಗೋಪಾಲಯ್ಯನ ಸಂದಿಯ ಮೂಲೆಯಲ್ಲಿ ಆಗತಾನೇ ಹುಟ್ಟಿದ ಒಂದು ಶಿಶುವು ಬಟ್ಟೆಯಲ್ಲಿ ಸುತ್ತಿ ಬಿಸಾಡಲ್ಪಟ್ಟಿದ್ದಿತು. ಪ್ರಾಣವಿರಲಿಲ್ಲ. ಪೊಲೀಸರು ಬಂದು ಮಹಜರು ಮಾಡಿ ಸಾಗಿಸಿದರು. ಬಹುಶಃ ಇದು ಯಾವಳೋ ವಿಧವೆಯ ಕೃತ್ಯವಾಗಿರಬೇಕು.

ಮಿ|| ಟಿ. ಡೆನ್ಹಾಂರವರು ಉದ್ಯೋಗದಿಂದ ವಿಶ್ರಾಂತರಾಗಿ ಸೀಮೆಗೆ ದಯಮಾಡುವರೆಂದೂ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಪದವಿಗೆ ಅರ್ಥಸಾಧಕ ಸಭೆಯ ವಿದ್ಯಾಭ್ಯಾಸಶಾಖಾ ಸಂಘದ ಕಾರ್ಯದರ್ಶಿಗಳಾದ ಮ|| ವಿ. ಸುಬ್ರಹ್ಮಣ್ಯಯ್ಯರವರು ನಿಯಮಿಸಲ್ಪಡುವರಾಗಿದ್ದಾರೆಂದೂ ಪ್ರಕಟವಾಗಿದೆ.

ಶ್ರೀ ನಿರಂಜನಜಗದ್ಗುರು ಸಂಸ್ಥಾನ ವಿಷಯವಾಗಿ ಗೌರ್ನಮೆಂಟಿನ ಮಿಲಟಿಂಮರ್ಯಾದೆಗೆ ಬರೆದುಕೊಂಡಿದ್ದ ಅರ್ಜಿಗೆ ಕಳೆದವಾರ ಸರ್ಕಾರ ಅಪ್ಪಣೆಯು ಬಂದಿತೆಂದೂ ಶಿವಗಂಗೆ ಮೊದಲಾದ ಮಠಗಳಿಗಿರುವಷ್ಟು ಗೌರ್ನಮೆಂಟ್ ಮರ್ಯಾದೆಗಳು ಈ ಸಂಸ್ಥಾನಕ್ಕೂ ಸಲ್ಲುವಂತೆಯಾಗಿರುವುದೆಂದೂ ಕೇಳುತ್ತೇವೆ.

ನಮ್ಮ ದೇಶದಿಂದ ಹೊರಕ್ಕೆ ಗೋಧುವೆಯೂ ಕಡಲೆಯೂ ಲೈಸನ್ಸಿಲ್ಲದೆ ಸಾಗಿಸಲ್ಪಡಕೂಡದೆಂದೂ, ಹೊಗೆಬಂಡಿಗಳ ಮೂಲಕ ಅವನ್ನು ಸಾಗಿಸಬೇಕಾದವರು ಆಹಾರದ ಕಂಟ್ರೋಲರಿಂದಲೂ, ಬಂಡಿಮಾರ್ಗಗಳಲ್ಲಿ ಕಳುಹಿಸಬೇಕಾದವರು ಡಿ|| ಕಮಿಷನರಿಂದಲೂ ಅಪ್ಪಣೆಚೀಟಿಯನ್ನು ಪಡೆಯಬೇಕೆಂದೂ ಸರ್ಕಾರದಪ್ಪಣೆಯಾಗಿದೆ.

ಕಳೆದ ಸಂಚಿಕೆಯಲ್ಲಿ ತಿಳಿಯಿಸಲ್ಪಟ್ಟಿದ್ದ ಪೂರ್ಣಯ್ಯನ ಛತ್ರದಲ್ಲಿ ಬಿದ್ದಿದ್ದ ೪ ಶವಗಳ ಸಂಬಂಧವಾದ ಕೊಲೆಯು ಸಂತೆಪೇಟೆ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಪಕ್ಕದ ಸಂದಿನಲ್ಲಿ ನಡೆಯಿಸಲ್ಪಟ್ಟಿತೆಂದೂ, ಅದನ್ನು ಪೊಲೀಸರು ಗೊತ್ತುಮಾಡಿರುವುದಲ್ಲದೆ ತತ್ಸಂಬಂಧದ ಅಪರಾಧಿಯನ್ನು ಹಿಡಿದಿರುವರೆಂದೂ ಕೇಳುತ್ತೇವೆ.

ಸೋಮವಾರದ ದಿನ ರಾಜಧಾನಿಯಲ್ಲಿ ಮೂರುಜಾವಕ್ಕೆ ಆರಂಭವಾದ ಮಳೆಯು ಆ ರಾತ್ರಿಯೆಲ್ಲಾ ಸುರಿಯಿತು. ಕೆರೆಕಟ್ಟೆಗಳಿಗೆ ನೀರು ಬಂದುದಲ್ಲದೆ ಜೋಳ ಮೊದಲಾದ ಪೈರುಗಳಿಗೆ ಅನುಕೂಲವಾಯಿತು. ಲಷ್ಕರ್ ಮೊಹಲ್ಲಾದ ದೊಡ್ಡ ಬಚ್ಚಲಿನಲ್ಲಿ ಮಳೆಯ ನೀರು ತುಂಬಿ ಹರಿಯುವಾಗ ಅದರ ಸೆಳವಿಗೆ ಸಿಕ್ಕಿ ಒಬ್ಬ ಮುಸಲ್ಮಾನರ ಹುಡುಗನೂ ಒಂದು ಹಸುವೂ ಕೊಚ್ಚಿ ಸ್ವಲ್ಪ ದೂರ ಹೋಗಿದ್ದರು. ಅಷ್ಟರಲ್ಲಿ ಜನರು ಸೆಳೆದುಹಾಕಿದುದರಿಂದ ಪ್ರಾಣಾಪಾಯವೇನೂ ಆಗಲಿಲ್ಲ.

ಬೆಂಗಳೂರಿಗೆ ದಯಮಾಡಿಸಿರುವ ಶ್ರೀಮಜ್ಜಗದ್ಗುರುಗಳ ಮಹಾಪಾದಪೂಜೆಯೂ ಭಿಕ್ಷೆಯೂ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಮನೆಯಲ್ಲಿ ಕಳೆದ ಭಾನುವಾರ ನಡೆದುವು. ಈ ದಿವಸ ಮ|| ಬಾಪಣ್ಣನವರ ಎಂ. ಬಸವಪ್ಪನವರ ಮನೆಯಲ್ಲಿ ನಡೆಯುವುದಾಗಿದೆ. ಇನ್ನು ಕೆಲಕಡೆ ಆಗುವ ಪಾದಪೂಜೆಗಳನ್ನು ತೀರಿಸಿಕೊಂಡು ಶ್ರೀಗಳವರು ಮುಂದಕ್ಕೆ ದಯಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ. ಈ ವಾರದಲ್ಲಿ ಶ್ರೀಗಳವರ ೨-೩ ಉಪನ್ಯಾಸಗಳು ನಡೆಯುವಂತೆ ಏರ್ಪಾಟಾಗಿರುವುದು.

ವೀರನಗೆರೆ ವೈದ್ಯಶಾಲೆಯು ಡಾ|| ಕೃಷ್ಣಸ್ವಾಮಯ್ಯಂಗಾರರ ಛಾರ್ಜಿನಲ್ಲಿದೆ. ಪ್ರಜಾಪ್ರಿಯರಾದ ಈ ವೈದ್ಯರ ಹಸ್ತಸಿದ್ಧಿ ಸಾತ್ವಿಕಗುಣಾತಿಶಯಗಳಿಂದ ಅವರಿದ್ದ ಕಡೆಗೆ ರೋಗಿಗಳು ಅಪರಿಮಿತವಾಗಿ ನುಗ್ಗುವುದು ಪ್ರಸಿದ್ಧವಾಗಿದೆ. ಈ ಕಾರಣದಿಂದ ಆ ವೈದ್ಯಶಾಲೆಯಲ್ಲಿ ರಾತ್ರಿ ೮ ಗಂಟೆಯವರೆಗೂ ಕೆಲಸ ನಡೆಯುವುದು ಪದ್ಧತಿಯಾಗಿದೆ. ಈ ಮಧ್ಯೆ ಮ್ಯುನ್ಸಿಪಾಲಿಟಿಯವರು ಆ ವೈದ್ಯಾಲಯಕ್ಕೆ ಇಡಿಸಿದ್ದ ವಿದ್ಯುಚ್ಛಕ್ತಿ ದೀಪಗಳನ್ನು ತೆಗೆದುಹಾಕಿಸಿಬಿಡಬೇಕೆಂದು ಮಾಡಿದ್ದ ಯೋಚನೆಯು ಅನಾಲೋಚಿತವಾಗಿಯೂ ಪ್ರಜೆಗಳ ಮನಸ್ಸಿಗೆ ಬೇಸರಿಕೆಯೂ ಆಗಿತ್ತು. ಕಳೆದ ಮ್ಯು|| ಮೀಟಿಂಗಿನಲ್ಲಿ ಕೌನ್ಸಿಲರುಗಳು ಈ ವಿಷಯವನ್ನು ಚರ್ಚಿಸಿ, ಅಲ್ಲಿಯ ವಿದ್ಯುದ್ದೀಪಗಳನ್ನು ಶಾಶ್ವತವಾಗಿರಿಸುವುದಕ್ಕೆ ತೀರ್ಮಾನವನ್ನು ಮಾಡಿದುದು ಈ ಉತ್ತರಭಾಗದ ೨ ಮೊಹಲ್ಲೆಯ ಪ್ರಜೆಗಳಿಗೂ ತುಂಬಾ ಸಮಾಧಾನಕರವಾಗಿದೆಯೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಈ ಜೂನ್ ತಾ|| ೧ ರಿಂದ ಮೈಸೂರು ಅರಸಿಕೆರೆ ಲೋಹಮಾರ್ಗದಲ್ಲಿ ಬಂಡಿಗಳ ತಿರುಗಾಟವು ಈ ರೀತಿಯಲ್ಲಿ ಏರ್ಪಾಟಾಗಿದೆ. ಮೈಸೂರಿಂದ ಮಧ್ಯಾಹ್ನ ೧ ಗಂಟೆಗೆ ಹೊರಟ ಬಂಡಿಯು ಅರಸೀಕೆರೆಗೆ ರಾತ್ರಿ ೯|| ಗಂಟೆಗೂ, ಅಲ್ಲಿಂದ ನಡುರಾತ್ರಿ ೨|| ಗಂಟೆಗೆ ಬಿಟ್ಟ ಬಂಡಿಯು ಮೈಸೂರಿಗೆ ಬೆಳಗಿನ ೧೧ ಗಂಟೆಗೂ ಬಂದು ಸೇರುವುದು. ೨ ನೆ ಬಂಡಿಯನ್ನು ಬಿಡುವ ಏರ್ಪಾಟನ್ನು ಇನ್ನೂ ಮಾಡದಿರುವುದು ಅನ್ಯಾಯವಾಗಿದೆ. ಬೆಂಗಳೂರು ಚಿಕ್ಕಬಳ್ಳಾಪುರ ಬೌರಿಂಗ್‌ಪೇಟೆಗಳ ಮಧ್ಯದಲ್ಲಿ ಬಂಡಿಗಳ ತಿರುಗಾಟವು ಹೀಗೆ ಬದಲಾಯಿಸಲ್ಪಟ್ಟಿದೆ.—ಬೆಂಗಳೂರಿಂದ ಬೆಳಗಿನ ೮||| ಗಂಟೆಗೆ ಹೊರಟ ಬಂಡಿಯು ಮಧ್ಯಾಹ್ನ ೧೨-೪೨ ಕ್ಕೆ ಚಿಕ್ಕಬಳ್ಳಾಪುರಕ್ಕೂ ಸಾಯಂಕಾಲ ೬-೫೦ ಕ್ಕೆ ಬೌರಿಂಗ್‌ಪೇಟೆಗೂ, ಅಲ್ಲಿಂದ ಬೆಳಗಿನ ೬ ಗಂಟೆಗೆ ಹೊರಟ ಬಂಡಿಯು ಮಧ್ಯಾಹ್ನ ೧೨-೨೩ ಕ್ಕೆ ಚಿಕ್ಕಬಳ್ಳಾಪುರಕ್ಕೂ, ಸಾಯಂಕಾಲ ೬-೫೦ ಕ್ಕೆ ಬೆಂಗಳೂರಿಗೂ ಸೇರುವುವು.

ಅಫ್ಘಾನಿಸ್ಥಾನದ ಯುದ್ಧ.

ಆಂಗ್ಲಜನರ ಶಕ್ತಿಸಾಮರ್ಥ್ಯಗಳನ್ನು ತಿಳಿಯದೆ ಕೆಣಕಿದ ಅಮೀರ್ ಅಮನುಲ್ಲಾಖಾನನ ಸೈನಿಕರು ಇಂಗ್ಲಿಷ್ ವೈಮಾನಿಕರ ಸಿಡಿಮದ್ದಿನ ಮಳೆಯ ಬಿಸಿಯನ್ನು ಕಂಡು ಎಂದೂ ಅನುಭವಿಸದ ಆದರ ವಿಪತ್ತಿನಿಂದ ದಿಗ್ಭ್ರಮೆಗೊಂಡು ಮೊದಲಸಲಕ್ಕೇ ಮುಖಕೆಡು ಸೋತುಹೋದರು. ಇಂಗ್ಲೀಷರ ನೂತನ ಯುದ್ಧೋಪಕರಣಗಳ ಮುಂದೆ ತಮ್ಮ ಆಟವೇನೂ ಸಾಗುವುದಿಲ್ಲವೆಂದು ಈಗಾಗಲೇ ಆಫ್ಘನ್ ಸೈನಿಕರಿಗೆ ಗೊತ್ತಾಗಿಹೋದುದರಿಂದ ಅವರು ಈಗ ಪೌರುಷದಿಂದ ಮುಂದಕ್ಕೆ ಹಲಿಯನ್ನೇ ಹಾಕದಿದ್ದಾರೆ. ಅಮೀರರ ಗರ್ವಾಂಧತೆಗೆ ಈಗಾಗಲೇ ಅಂಜನಪ್ರಯೋಗವಾಗಿ ಅವರ ಜಯಭ್ರಮೆಯ ಪರೆಯು ಹರಿದಂತೆ ಕಾಣುತ್ತದೆ. ಅವರು ಸಂಧಿಯನ್ನಪೇಕ್ಷಿಸಿ ಅದಕ್ಕಾಗಿ ಪ್ರಯತ್ನಿಸಿರುವರೆಂಬ ವಾರ್ತೆಗಳು ಬಂದಿವೆ. ಸಿಮ್ಲಾದಲ್ಲಿ ಆಫ್ಘನ್ ರಾಯಭಾರಿಯಾಗಿರುವ ಅಬ್ದುಲ್‌ರಹಿಮಾನ್‌ಖಾನರೊಡನೆ ಇನ್ನು ೪೦ ಮಂದಿ ಆಫ್ಘನ್ನರೂ ಕೆಲಸೈನಿಕರೂ ಸಹ ಆಂಗ್ಲಸೇನಾಪಡೆಯ ಬಳಿಗೆ ಬಂದು, ಯುದ್ಧದ ವಿಶ್ರಾಂತಿಯನ್ನು ಕೋರುತ್ತಿರುವರೆಂಬ ಅಮೀರರ ಅಭಿಪ್ರಾಯವನ್ನು ತಿಳಿಯಪಡಿಸುವುದಕ್ಕಾಗಿ ತಾವು ಬಂದಿರುವೆವೆಂದು ಹೇಳಿಕೊಂಡರು. ಅವರಿಗೆ ಅಮೀರರಿಂದ ಕ್ರಮವಾದ ಅಧಿಕಾರಪತ್ರಿಕೆಯು ಕೊಡಲ್ಪಟ್ಟಿದೆಯೆ? ಇಲ್ಲವೆ? ಎಂಬುದನ್ನು ಪರೀಕ್ಷಿಸಿ ತಿಳಿಯುವುದಕ್ಕಾಗಿ ಸೇನಾಧಿಕಾರಿಗಳು ಇವರನ್ನು ಪಿಷಾವರಿಗೆ ಕಳುಹಿಸಿಕೊಟ್ಟರು. ಅಲ್ಲಿ ವಿಚಾರಿಸುವಲ್ಲಿ ಅಮೀರರಿಂದ ಇವರು ಯಾವ ಅಧಿಕಾರ ಪತ್ರವನ್ನೂ ತಂದಿಲ್ಲವೆಂಬುದು ವ್ಯಕ್ತವಾಯಿತು. ಆದರಿಂದ ಇವರ ಪ್ರಯತ್ನವು ಎಷ್ಟುಮಟ್ಟಿಗೆ ಶುದ್ಧವಾದುದೆಂಬ ವಿಷಯದಲ್ಲಿ ಸಂಶಯವೇ ಇರುವುದು. ಅಮೀರರ ತಾಯಿಯಾದ ಹಜರತ್‌ಬೀಬಿಯವರು ಜಲಾಲಾಬಾದಿಗೆ ಮೊನ್ನೆವಾರದಲ್ಲಿ ಬಂದಿರುವರೆಂದೂ ಆ ರಾಯಭಾರರೊಡನೆ ಸೈನಿಕಾಧಿಕಾರಿಗಳೂ ಬಂದಿರುವರೆಂದೂ ತಿಳಿಯಬಂದಿರುವುದರಿಂದ, ಇದು ನ್ಯಾಯವಾದ ಸಂಧಿರಾಯಭಾರವಾಗಿರಬೇಕೆಂದು ಕೆಲರು ಯೋಚಿಸುತ್ತಾರೆ. ಅಶಾಂತಿಭಯಪಿಷ್ಟವಾದ ತಮ್ಮ ದೇಶದಿಂದ ಹೊರಬಿದ್ದು ನಿಶ್ಚಿಂತೆಯಿಂದ ಎಲ್ಲಾದರೂ ಕಾಲ ಕಳೆಯಬೇಕೆಂದು ಈ ವಿಧವೆಯು ಏನಾದರೂ ಬಂದಿದ್ದಾಳೋ ಏನೋ ಗೊತ್ತಾಗುವುದಿಲ್ಲ. ಆಫ್ಘನ್ನರು ಯುದ್ಧವಿಶ್ರಾಂತಿಯನ್ನು ಕೋರುವ ನೆಪದಿಂದ ತಮ್ಮ ಯುದ್ಧಸನ್ನಾಹವನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಈ ಆಟವನ್ನು ಕಟ್ಟಿದ್ದಾರೋ ಅದನ್ನೂ ಹೇಳಲಾಗುವುದಿಲ್ಲ. ಆದರೆ ಇದನ್ನೆಲ್ಲಾ ನಂಬಿ ಆಂಗ್ಲಸೈನಿಕರೂ ಇಂಡ್ಯಾ ಗೌರ್ನಮೆಂಟಿನವರೂ ಮೋಸಹೋಗುವರಾಗಿಲ್ಲ. ಇವರ ಸನ್ನಾಹವು ಜಾಗರೂಕವಾಗಿಯೇ ಇದೆ.

ಸಿಮ್ಲಾದಲ್ಲಿದ್ದ ಆಫ್ಘನ್ ರಾಯಭಾರಿ ಸರ್ದಾರ್ ಅಬ್ದುಲ್‌ರಹಿಮಾನ್‌ರವರೂ ಅವರ ಪರಿವಾರದವರೂ ಸಹ ಅವರ ಸ್ವದೇಶಕ್ಕೆ ಕಳುಹಲ್ಪಟ್ಟರು. ಅಮೀರರು ತಮ್ಮ ಉದ್ದೇಶವನ್ನು ನಿಸ್ಸಂಶಯವಾಗಿ ವ್ಯಕ್ತಪಡಿಸುವವರೆಗೂ ಯುದ್ಧವನ್ನು ನಿಲ್ಲಿಸಲಾಗುವುದಿಲ್ಲವೆಂದು ಹಿಂದೂಸ್ಥಾನ ಸರ್ಕಾರದವರು ಕಾಬೂಲಿಗೆ ತಿಳಿಯಪಡಿಸಿರುವರು. ರಾಯಭಾರಿ ವರ್ಗದಲ್ಲಿ ಬಂದಿದ್ದ ಇತರರೆಲ್ಲಾ ಪಿಷಾವರಿನಲ್ಲೇ ಇಳಿಯಿಸಲ್ಪಟ್ಟಿರುವರು. ಅಬ್ದುಲ್‌ರಹಿಮಾನ್‌ಖಾನರನ್ನು ಇಂಡ್ಯಾ ಸರ್ಕಾರದವರು ಕಳುಹಿಸಿಬಿಟ್ಟ ಬಳಿಕ ರಾಯಭಾರಿ ವರ್ಗದವರಾದ ಸರ್ದಾರ್ ಹಬಿಬುಲ್ಲಾಖಾನ್ ಕರ್ನಲ್ ಅಹಮ್ಮದ್ ಅಲಿ ಎಂಬುವರುಗಳು ಅಮೀರರ ಹಸ್ತಾಕ್ಷರವನ್ನು ಹಾಕಿರುವ ಅಧಿಕಾರ ಪತ್ರವನ್ನು ತೋರಿಸಿದರಂತೆ. ಅದರಲ್ಲಿ ಹೀಗಿರುವುದು—"ಪೋಸ್ಟಾಫೀಸ್ ಸೂಪರಿಂಟೆಂಡೆಂಟ್ ಹಬೀಬುಲ್ಲಾಖಾನ್ ಮತ್ತು ಅಹಮ್ಮದ್ ಅಲಿಖಾನ್‌ರವರ ಸ|| ಕ್ಕೆ. ಯುದ್ಧವಿಶ್ರಾಂತಿಗಾಗಿಯೂ ಸಂಧಿಯನ್ನು ಪರಿಷ್ಕರಿಸುವುದಕ್ಕಾಗಿಯೂ ಇಂಡ್ಯಾ ಸರ್ಕಾರದ ವಿದೇಶಾಂಗ ಕಾರ್ಯದರ್ಶಿಯವರು ಅಬ್ದುಲ್‌ರಹಿಮಾನ್‌ಖಾನರೊಡನೆ ಅವರು ಇಲ್ಲಿಗೆ ಹಿಂತಿರುಗಿ ಪ್ರಯಾಣಮಾಡಿ ಬರುವುದಕ್ಕೆ ಮುಂಚೆಯೇ ಚರ್ಚಿಸಿದರೆಂದು ನನಗೆ ತಿಳಿದುಬಂದಿದೆ. ಆದುದರಿಂದ ಅಲ್ಲಿಯ ಪರಿಸ್ಥಿತಿಗಳು ಸಂಧಿಗೆ ಅನುಕೂಲವಾಗಿದ್ದರೆ ಯುದ್ಧರಂಗಕ್ಕೆ ಹೋಗಿ ಸಂಧಿನಿಬಂಧನೆಗಳನ್ನು ಚರ್ಚಿಸಬೇಕೆಂದು ನಿಮ್ಮನ್ನು ಕೋರುತ್ತೇನೆ. ಅದಕ್ಕಾಗಿ ಆಗಬೇಕಾದುದೇನೋ ಅದನ್ನು ತಿಳಿದು ನನಗೆ ವ್ಯಕ್ತಪಡಿಸಬೇಕು. ಆ ವಿಷಯದಲ್ಲಿ ನಿಮಗೆ ಅಧಿಕಾರಪತ್ರವನ್ನು ಕೊಡುತ್ತೇನೆ." ಈ ಪತ್ರವನ್ನು ಆಫ್ಘನ್ ರಾಯಭಾರಿಗಳಿಬ್ಬರೂ ಮೊದಲೇ ಏಕೆ ತೋರಿಸಲಿಲ್ಲವೋ ಗೊತ್ತಾಗಲಿಲ್ಲ. ಆದರೆ ಈ ಪತ್ರವನ್ನು ತಮ್ಮ ಪ್ರತಿನಿಧಿಗಳಿಗಾಗಿ ಆಫ್ಘನ್ ಪ್ರಭುತ್ವದವರು ಕಳುಹಿಸಿಕೊಟ್ಟಿದ್ದಾರೆಯೇ ಹೊರತು ಇಂಡ್ಯಾ ಸರ್ಕಾರಕ್ಕೆ ಕೊಡಲು ಉದ್ದೇಶಿಸಲ್ಪಟ್ಟಿರುವುದಾಗಿಲ್ಲವೆಂದು ಇಂಡ್ಯಾ ಸರ್ಕಾರದವರು ಯೋಚಿಸಿರುವುದು ನ್ಯಾಯವಾಗಿದೆ. ಮೇಲೆ ಕಂಡ ಈ ಇಬ್ಬರು ಪ್ರತಿನಿಧಿಗಳನ್ನೂ ಕೂಡ ಅವರ ದೇಶಕ್ಕೆ ಹಿಂದಿರುಗಿ ಕಳುಹಿಸಿಬಿಟ್ಟರು. ತಮ್ಮ ಯುದ್ಧಕಾರ್ಯವನ್ನು ಇಂಗ್ಲೀಷರು ಬಲವಾಗಿ ಸಾಗಿಸುತ್ತಲೇ ಇರುವರು. ಆಫ್ಘನ್ನರ ಶೌರ್ಯವೇ ಆಗಲೀ ಕಪಟಯುಕ್ತಿಗಳೇ ಆಗಲೀ ಇಂಗ್ಲೀಷರ ಮುಂದೆ ಸಾಗುವ ಹಾಗಿಲ್ಲ. ಆಫ್ಘನ್ನರು ಶರಣಾಗತರಾದ ಹೊರತು ಅವರಿಗೆ ಉಳಿಗಾಲವಿಲ್ಲ. ಇದುವರೆಗೆ ಅವರು ಪಿಷಾವರ್ ಪಟ್ಟಣದಲ್ಲಿ ಕಲ್ಲೋಲವನ್ನೆಬ್ಬಿಸಬೇಕೆಂದು ಯೋಚಿಸಿದ್ದರು. ಅದು ನೆರವೇರಲಿಲ್ಲ. ಖೈಬರ್ ಕಣಿವೆಯನ್ನು ಹಿಡಿದುಕೊಳ್ಳಬೇಕೆಂದು ಸಾಹಸಪಟ್ಟರು. ಅದೂ ಸಫಲವಾಗಲಿಲ್ಲ. ದೇಶದ ಎಲ್ಲೆಕಟ್ಟಿನಲ್ಲಿರುವ ಪರ್ವತವಾಸಿಗಳನ್ನು ತಮ್ಮ ಕಡೆಗೆ ಸೇರಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟರು. ಅದೂ ನೆರವೇರುವ ಹಾಗೆ ಕಾಣುವುದಿಲ್ಲ. ನೂತನ ಸೈನ್ಯಾಧಿಕಾರಿಯಾದ ನಾದಿರ್‌ಖಾನನು ಎಲ್ಲೆಕಟ್ಟಿನಲ್ಲಿರುವ ಜನರ ಗುಂಪುಗಳ ಸಹಾಯದಿಂದ ಖಾಸ್ತ ಕಣಿವೆಗಳನ್ನು ಹಿಡಿಯಬೇಕೆಂದು ಪ್ರಯತ್ನಿಸಿ ವಿಫಲನಾದನು. ಎಲ್ಲೆಕಟ್ಟಿನಲ್ಲಿರುವ ಪರ್ವತನಿವಾಸಿಗಳಲ್ಲಿ ಕೆಲ ಮಹಮಂದರ ಹೊರತು ಉಳಿದವರಾರೂ ಆಫ್ಘನ್ನರೊಡನೆ ಕೂಡಿಕೊಳ್ಳಲಿಲ್ಲ. ಮತ್ತೇನೆಂದರೆ ಕೊಲೆಸುಲಿಗೆಗಳಿಗೇ ಕಾದಿರುವ ಅಫ್ರಿದಿಗಳು ಮಹಮಂದರು ಮೊದಲಾದ ಬೆಟ್ಟಗಾಡುಜನರು ಸಮಯ ಸಿಕ್ಕಿದುದೇ ಸಾಕೆಂದು, ಅಂಜಂಜುತ್ತಿದ್ದ ಆಫ್ಘನ್ ಸೈನಿಕರ ಮೇಲೆ ಬಿದ್ದು ಕೈಗೆ ಸಿಕ್ಕಿದಷ್ಟನ್ನು ದೋಚಿಕೊಂಡರು.

ಆಫ್ಘನ್ನರಿಗೆ ತಮ್ಮ ಬೆಟ್ಟಗಾಡು ಜನರ ಸಹಾಯದಿಂದ ಇಂಗ್ಲೀಷರ ಮೇಲೆ ಯುದ್ಧಮಾಡಿ ಒಂದು ಸಮುದ್ರತೀರ ಪಟ್ಟಣವನ್ನು (ಕರಾಚಿಯನ್ನು) ಹಿಡಿದುಕೊಳ್ಳಬೇಕೆಂಬ ಉದ್ದೇಶವಿರುವುದೆಂದು ತಂತೀವಾರ್ತೆಯ ಮೂಲಕ ತಿಳಿದಿರುವುದೆಂದು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಇಂಥ ಉದ್ದೇಶದಿಂದ ಕೂಡಿದ ಆಫ್ಘನ್ನರಿಗೆ ಒಂದುಕಡೆ ಬೋಲ್ಷೆವಿಕ್ಕರ ಪ್ರೇರಣೆಯೂ ಮತ್ತೊಂದುಕಡೆ ಭರತಖಂಡದ ಉತ್ತರಭಾಗದ ಅಶಾಂತಿಚಿಹ್ನೆಗಳೂ ಈಗಣ ಯುದ್ಧಾಭಿನಿವೇಶವನ್ನುಂಟುಮಾಡಿರಬೇಕೆಂದು ಊಹಿಸಿದರೆ ತಪ್ಪಾಗಲಾರದು. ಕಾಬೂಲಿಗೂ ಬೋಲ್ಷೆವಿಕ್ಕರಿಗೂ ಪರಸ್ಪರ ಕಾಗದಪತ್ರಗಳು ನಡೆಯುತ್ತಿದ್ದುವಂತೆ. ಪಾಪ! ಬೊಲ್ಷೆವಿಕ್ಕರಿಗೆ ತಮ್ಮ ರಷ್ಯಾದಲ್ಲೇ ಉಳಿದುಕೊಳ್ಳುವುದು ಕಷ್ಟವಾಗಿದೆ. ಮಿತ್ರಮಂಡಲಿ ಸೈನ್ಯದೊಡನೆಯೂ ಫಿನ್ನಿಷ್ ಸೈನ್ಯದೊಡನೆಯೂ ಕಾದಾಡುತ್ತ ಭೂಜಲಗಳ ಮೇಲೆಲ್ಲಾ ಪರಾಜಿತರಾಗುತ್ತಿದ್ದಾರೆ. ಅವರ ರಾಜಧಾನಿಯಾದ ಪೆಟ್ರೋಗ್ರೇಡ್ ಪಟ್ಟಣವೇ ಅವರ ಕೈತಪ್ಪಿಹೋಗುವಂತೆ ಕಾಣುತ್ತದೆ. ಇಂಥ ಸ್ಥಿತಿಯಲ್ಲಿ ಬೋಲ್ಷೆವಿಕ್ಕರು ಆಫ್ಘನ್ನರಿಗೆ ಸಹಾಯ ಮಾಡಿ ಇಂಗ್ಲೀಷರನ್ನು ಸೋಲಿಸಿ ಜಯಸಂಪಾದನೆ ಮಾಡಿಕೊಳ್ಳುವುದೆಂದರೆ ಆಕಾಶಕ್ಕೆ ಏಣಿಹಾಕಿ ಚಂದ್ರಮಂಡಲವನ್ನು ಹಿಡಿಯುವುದಕ್ಕೆ ಪ್ರಯತ್ನಿಸಿದಂತೆಯೇ ಸರಿ. ಈಗಲಾದರೂ ಅಫ್ಘಾನಿಸ್ಥಾನ ಪ್ರಭುತ್ವದ ಅಧಿಕಾರವೆಲ್ಲಾ ಅಮೀರರ ಹಸ್ತದಿಂದ ಸೇನಾಪತಿಯಾದ ಸಾಲೆಮಹಮ್ಮದ್‌ಖಾನನ ಹಸ್ತಗತವಾಗುತ್ತಲಿದೆಯಂತೆ. ಈತನು ಗತಿಸಿದ ಅಮೀರರ ವಿಶ್ವಾಸಕ್ಕೆ ಪಾತ್ರನಾದವನು. ಇವನು ಈಗಣ ಅಮೀರರೊಡನೆ ಕೂಡ ಕೆಲಸಮಾಡುತ್ತಿದ್ದರೂ ಹಿಂದಣ ಅಮೀರರ ಹತ್ಯೆಯಲ್ಲಿ ಈತನ ಸಂಬಂಧವೇನೂ ಇರಲಿಲ್ಲವೆಂದು ದೇಶೀಯರೆಲ್ಲರೂ ನಂಬಿರುತ್ತಾರೆ. ಈಗಣ ಅಮೀರ್ ಅಮನುಲ್ಲಾಖಾನನ ಮೇಲೆ ಬರಬರುತ್ತ ಪ್ರಜೆಗಳ ವಿರುದ್ಧಭಾವವು ಪ್ರಬಲಿಸುತ್ತಿದೆ. ಆದರೆ ಸೇನಾಪತಿ ಸಾಲೆಮಹಮ್ಮದ್‌ರವರ ಸಾಹಚರ್ಯವು ಅಮೀರರಿಗಿರುವುದರಿಂದ ಪ್ರಜೆಗಳು ಅಮೀರರ ಮೇಲೆ ತಿರುಗಿಬೀಳಲು ಯತ್ನಿಸಿಲ್ಲವೆಂದು ಗೊತ್ತಾಗುತ್ತದೆ. ಆದರೆ ಭರತಖಂಡದ ಮೇಲೆ ದಾಳಿಯಿಡಬೇಕೆಂಬುದು ಈಗಣ ಅಮೀರರ ಉದ್ದೇಶವೋ, ಅಥವಾ ಸೇನಾಪತಿ ಸಾಲೆಮಹಮ್ಮದನ ಉದ್ದೇಶವೋ ಗೊತ್ತಾಗಲಿಲ್ಲ. ಅಮೀರ್ ಅಮನುಲ್ಲಾಖಾನನು ತನ್ನ ಚಿಕ್ಕಪ್ಪನಿಗೆ ಸಹಾಯಕನಾಗಿ ತನ್ನ ಜನಕನನ್ನು ಕೊಲ್ಲಿಸಿದ ಪಾತಕಕ್ಕೆ ಗುರಿಯಾಗಿರುವನೆಂದು ತಿಳಿಯಲ್ಪಟ್ಟಿದ್ದಾನೆ. ಅಂಥ ಪಾತಕಕ್ಕೆ ತಕ್ಕ ಪ್ರಾಯಶ್ಚಿತ್ತವನ್ನನುಭವಿಸುವುದಕ್ಕಾಗಿಯೇ ವಿನಾಶಕಾಲೇ ವಿಪರೀತಬುದ್ಧಿಃ ಎಂಬಂತೆ ಅವನಿಗೆ ಇಂಗ್ಲೀಷರ ಮೇಲೆ ಹಗೆತನವನ್ನು ಸಾಧಿಸುವ ಬುದ್ಧಿಯು ಹುಟ್ಟಿ, ಕೃತಕರ್ಮಕ್ಕೆ ಪ್ರಾಯಶ್ಚಿತ್ತವನ್ನು ಅನುಭವಿಸುವ ಹೊತ್ತು ಬಂದಿದೆ. ಆ ಪಾಪಿಯ ಸತತಾಸಂಜ್ಞ "ಪಾತಕೋಽಪ್ಯೋಹಸಂಸರ್ಗಾದ್ಧಾತಮುದ್ಧರಕಾಡನಂ" ಎಂಬಂತೆ ಸೇನಾಪತಿ ಸಾಲೆಮಹಮ್ಮದನಿಗೂ ಆತನ ಸೈನ್ಯಕ್ಕೂ ಪರಾಭವವು ತಪ್ಪುವಹಾಗಿಲ್ಲ. ಇನ್ನಾದರೂ ಆಫ್ಘನ್ನರು ಎಚ್ಚೆತ್ತು ಆಂಗ್ಲರಿಗೆ ಶರಣಾಗತರಾಗಿ ತಮ್ಮನ್ನೂ ತಮ್ಮ ದೇಶವನ್ನೂ ಭವಿಷ್ಯದ್ವಿಪತ್ತಿನಿಂದ ಕಾಪಾಡಿಕೊಳ್ಳುವುದು ಮೇಲು. ಇಲ್ಲದಿದ್ದರೆ ವಿನಾಶವು ಎಂದಿಗೂ ತಪ್ಪದು. ಹೈದರಾಬಾದ್ ನೈಜಾಂರವರೂ, ನೇಪಾಳ, ಕಪರ್ಥಲಾ, ಬಿಕನೀರ್, ಜಿಂದ್, ನಭಾ ಮೊದಲಾದ ಉತ್ತರಹಿಂದೂಸ್ಥಾನದ ಅನೇಕ ಸಂಸ್ಥಾನಗಳ ಪ್ರಭುಗಳೂ ಆಫ್ಘನ್ನರಮೇಲಣ ಯುದ್ಧಕ್ಕಾಗಿ ಇಂಡ್ಯಾ ಸರ್ಕಾರದವರಿಗೆ ಸಹಾಯವಾಗಿ ತಮ್ಮ ಸೈನ್ಯಗಳನ್ನೂ ಆಸ್ತಿಗಳನ್ನೂ ಒಪ್ಪಿಸಲು ಸಿದ್ಧರಾಗಿರುವೆವೆಂದು ತಿಳಿಯಪಡಿಸಿಕೊಂಡಿದ್ದಾರೆ. ಇವರ ಸಹಾಯದ ಆವಶ್ಯಕತೆಯೇ ಇಲ್ಲದೆ ಆಫ್ಘನ್ನರನ್ನು ಲೀಲಾಮಾತ್ರದಲ್ಲಿ ಚೂರ್ಣೀಕೃತಗೊಳಿಸುವ ಬಲವು ಆಂಗ್ಲಸರ್ಕಾರಕ್ಕಿರುವುದೆಂಬುದನ್ನು ಲೋಕವೇ ಬಲ್ಲುದು. ಹೀಗಿರುವಲ್ಲಿ ಅಫ್ಘಾನಿಸ್ಥಾನದವರು ಅವಿವೇಕದಿಂದ ತಮ್ಮ ಗೋರಿಯನ್ನು ತಾವೇ ತೋಡಿಕೊಳ್ಳುವಂಥ ಪ್ರಯತ್ನವನ್ನು ಮಾಡುತ್ತಿರುವುದನ್ನು ಕಂಡರೆ ಕನಿಕರವುಂಟಾಗುತ್ತದೆ. ಅವರಿಗೆ ಈಗಲಾದರೂ ಎಚ್ಚರು ಉಂಟಾಗಲೆಂದು ಭರತಖಂಡದ ಅನೇಕ ಭಾಗಗಳಲ್ಲಿರುವ ಆಫ್ಘನ್ ಜನರು ಸಭೆಗಳನ್ನು ಮಾಡಿ ಈಗಣ ಆಫ್ಘನ್ ಪ್ರಭುತ್ವದವರ ಯುದ್ಧಪ್ರಯತ್ನಕ್ಕೆ ತಮ್ಮ ವಿಮುಖತ್ವವನ್ನು ವ್ಯಕ್ತಪಡಿಸುತ್ತಿದ್ದಾರೆ. ಬೊಂಬಾಯಿಯಲ್ಲಿ ಕೂಡಿದ್ದ ಇಂಥ ಆಫ್ಘನ್ನರ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಸಮ್ಮದ್‌ಖಾನ್ ಪಟೇಲ್‌ರವರು ಭಾಷಣಮಾಡುವಾಗ—ಆಂಗ್ಲಪ್ರಭುತ್ವದವರು ಆಫ್ಘನ್ ಅಮೀರರೊಡನೆ ಬಹುಕಾಲಾರಭ್ಯ ಸ್ನೇಹಭಾವದಿಂದಿದ್ದುದು ಮಾತ್ರವೇ ಅಲ್ಲದೆ ಧನಸಹಾಯವನ್ನೂ ಮಾಡುತ್ತಿದ್ದರು. ಅಬ್ದುಲ್ ರಹಿಮಾನ್‌ಖಾನರ ಕಾಲದಲ್ಲಿ ವರ್ಷಕ್ಕೆ ೬ ಲಕ್ಷ ರೂ. ಗಳನ್ನು ಕೊಡುತ್ತಿದ್ದರು. ಹಬೀಬುಲ್ಲಾಖಾನರ ಕಾಲದಲ್ಲಿ ೧೨ ಲಕ್ಷದಂತೆ ಕೊಡಲು ಏರ್ಪಡಿಸಿದರು. ಯೂರೋಪಿನ ಮಹಾಯುದ್ಧವು ನಡೆಯುತ್ತಿದ್ದಾಗ ಅಫ್ಘಾನಿಸ್ಥಾನದ ಸವಿಾಕರಣಕ್ಕಾಗಿ ೧ ಕೋಟಿ ರೂ. ಗಳನ್ನು ಕೊಟ್ಟು ನಾನಾರೀತಿಯಿಂದ ಸಹಾಯಗೊಳಿಸಿದರು. ಇಂಥ ಉಪಕಾರಿಗಳಾದ ಆಂಗ್ಲಮಹನೀಯರ ಮೇಲೆ ಆಫ್ಘನ್ ಪ್ರಭುತ್ವದವರು ಯುದ್ಧವನ್ನು ಪ್ರಕಟಿಸಿದುದು ಬಹಳ ನಿಂದ್ಯವು" ಎಂದು ಹೇಳಿದರು. ಲಾಹೋರಿನಲ್ಲಿ ಕೂಡಿದ್ದ ಆಫ್ಘನ್ ಸಭೆಯವರೂ ಹೀಗೆಯೇ ಅಮೀರರ ಚರ್ಯೆಯನ್ನು ಖಂಡಿಸಿ ನಿರ್ಧಾರಮಾಡಿರುತ್ತಾರೆ. ಪರರ ಮಾತನ್ನು ನಂಬದಿದ್ದರೆ ಸ್ವಜನರ ಈ ಬುದ್ಧಿವಾದನ್ನಾದರೂ ಅಮೀರರು ನಂಬಿ ಯುದ್ಧಶಾಂತಿಮಾಡಿಕೊಂಡರೆ ಅವರಿಗೇ ಕ್ಷೇಮವಾಗುವುದು.

ಸಂಧಿಸಭೆ.

ಜರ್ಮನಿಗೆ ವಿಧಿಸಿರುವ ಸಂಧಿನಿಬಂಧನೆಗಳಲ್ಲಿ ಮುಖ್ಯವಾದುವುಗಳನ್ನು ಹಿಂದೆ ನಾವು ತಿಳಿಸಿರುತ್ತೇವಷ್ಟೆ. ಅವುಗಳನ್ನು ನೋಡುವಲ್ಲಿ ಹಿಂದೆ ರಷ್ಯನರ ಮೇಲೆ ಜರ್ಮನರು ಬ್ರೆಸ್ಟ್‌ಲಿಟೋವಿಸ್ಕಿನಲ್ಲಿ ವಿಧಿಸಿದ ಸಂಧಿನಿಬಂಧನೆಗಳಿಗಿಂತಲೂ ಇವೇನೂ ಕಠಿನವಾಗಿಲ್ಲ. ಒಂದುವೇಳೆ ಜರ್ಮನರೇ ಗೆದ್ದಿದ್ದು ಮಿತ್ರಮಂಡಲಿಯವರು ಸೋತುಹೋಗಿದ್ದರೆ ಅವರು ಈಗಣ ಸಂಧಿನಿಬಂಧನೆಗಳಿಗಿಂತಲೂ ದ್ವಿಗುಣ ತ್ರಿಗುಣ ಕಠಿನಗಳಾದ ನಿಬಂಧನೆಗಳನ್ನು ವಿಧಿಸುತ್ತಿದ್ದರೆಂಬುದಕ್ಕೆ ಸಂಶಯವೇ ಇಲ್ಲ. ಈಗ ತಮಗೆ ವಿಧಿಸಲ್ಪಟ್ಟಿರುವ ನಿಬಂಧನೆಗಳನ್ನು ಜರ್ಮನ್ ಪ್ರತಿನಿಧಿಗಳು ನೋಡಿ ಬೆಬ್ಬೆರಗಾದವರಂತೆ ನಟಿಸಿದಾರೆ. ಆ ಪ್ರತಿನಿಧಿಗಳಲ್ಲಿ ಮುಖ್ಯರಾದ ಕೌಂಟ್‌ರಾಂಟ್ಜೂರವರು ಸಂಧಿನಿಬಂಧನೆಗಳನ್ನು ಈಗಿರುವ ರೀತಿಯಲ್ಲೇ ನಾವು ಒಪ್ಪಲಾರೆವೆಂದು ಹೇಳಿರುವುದಲ್ಲದೆ ಅವುಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸತಕ್ಕ ೮-೧೦ ಲೇಖನಗಳನ್ನು ಸಂಧಿಸಭಾಧ್ಯಕ್ಷರಾದ ಕ್ಲೆಮೆಂಕೋರವರಿಗೆ ಬರೆದು ಕಳುಹಿಸಿದ್ದಾರೆ. ಅವುಗಳ ಮುಖ್ಯಾಭಿಪ್ರಾಯವೇನೆಂದರೆ—"ಜರ್ಮನ್ ದೇಶದಲ್ಲಿ ಕೆಲಭಾಗವನ್ನು ಆಕ್ರಮಿಸಿಕೊಳ್ಳುವುದಕ್ಕೆ ಮಾಡಿರುವ ಏರ್ಪಾಟು ಪ್ರೆ|| ವಿಲ್ಸನ್‌ರವರ ೧೪ ಸೂತ್ರಗಳಿಗೆ ವಿರುದ್ಧವಾಗಿದೆ. ಮಿತ್ರಮಂಡಲಿಯವರಿಂದ ಆಕ್ರಮಿಸಲ್ಪಡುವುವೆಂದು ತಿಳಿಯಿಸಿರುವ ಪ್ರಾಂತಗಳೊಳಗೆ ಸಾರಬೇಸಿನ್, ಮಾರ್ಸ್‌ನೆಟ್ಟ್, ಯೂಪೆನ್, ಮಾಲ್ಮೇಡಿ-ಇವುಗಳಿಗೆ ಸಂಬಂಧಪಟ್ಟ ಏರ್ಪಾಟುಗಳೊಂದೂ ಸರಿಯಾಗಿಲ್ಲ. ಇವುಗಳನ್ನು ಕುರಿತು ಚರ್ಚಿಸಬೇಕಾಗಿದೆ. ಸಾರಬೇಸಿನನ್ನು ತಾತ್ಕಾಲಿಕವಾಗಿಯಾದರೂ ಇತರರಿಗೆ ಕೊಡಲಾಗುವುದಿಲ್ಲ. ಅಲ್ಲಿರುವವರೆಲ್ಲಾ ಜರ್ಮನರೇ. ಅವರಿಗೆ ಜರ್ಮನಿಯ ಸಂಬಂಧವನ್ನು ತಪ್ಪಿಸುವ ಏರ್ಪಾಟು ಸರಿಯಾದುದಲ್ಲ. ೧೫ ವರ್ಷಗಳು ತುಂಬಿದ ನಂತರ ಪರಿಹಾರ ದ್ರವ್ಯವನ್ನು ಸಲ್ಲಿಸಿದ ಬಳಿಕ ಮರಳಿ ಸಾರಬೇಸಿನ್ನನ್ನು ಜರ್ಮನಿಗೆ ಒಪ್ಪಿಸಿಬಿಡುವೆವೆಂದು ಹೇಳಲ್ಪಟ್ಟಿದೆ. ಅಷ್ಟು ಹಣವನ್ನು ಜರ್ಮನರು ಕೊಡಿಸುವುದು ಕಷ್ಟ. ಒಂದು ವೇಳೆ ಜರ್ಮನಿಗೆ ಅಷ್ಟು ಹಣವು ಕೂಡಿದರೂ ಅದನ್ನು ನಷ್ಟಪ್ರತ್ಯಾಮ್ನಾಯವಾಗಿ ಇದಕ್ಕೆ ಒಪ್ಪಿಸಲು ಸಾಧ್ಯವಾಗುವುದಿಲ್ಲ. ಫ್ರಾನ್ಸಿನ ಗಣಿಗಳನ್ನು ಸುಟ್ಟುಹಾಕಿದುದಕ್ಕಾಗಿ ಸ್ವಲ್ಪ ನಷ್ಟಪರಿಹಾರವನ್ನು ಕೊಟ್ಟಲ್ಲದೆ ತೀರದೆಂಬುದು ನಮಗೆ ಗೊತ್ತು. ಆ ಗಣಿಗಳ ಪ್ರದೇಶವು ಉತ್ತಮಸ್ಥಿತಿಗೆ ತರಲ್ಪಡುವವರೆಗೆ ಸಾರಬೇಸಿನ್ನಿನ ಗಣಿಗಳಿಂದ ಕಲ್ಲಿದ್ದಲನ್ನು ಫ್ರಾನ್ಸಿಗೆ ಒದಗಿಸಿಕೊಡಬೇಕೆಂದು ಏರ್ಪಡಿಸಿದರೆ ಚೆನ್ನಾಗಿರುವುದು. ಮಿತ್ರಮಂಡಲಿಯವರು ತಿಳಿಯಿಸಿರುವ ಪ್ರಕಾರ ರಾಷ್ಟ್ರಾಕ್ರಮಣ ನಡೆದುಬಿಟ್ಟರೆ ಒಳ್ಳೆಯ ಫಲವತ್ತಾದ ಪ್ರದೇಶಗಳನೇಕವನ್ನು ಜರ್ಮನಿಯು ಕಳೆದುಕೊಳ್ಳುವಂತಾಗುವುದು. ಆಲೂಗಡ್ಡೆ ಮತ್ತು ಆಹಾರದ ಧಾನ್ಯ ಇವುಗಳನ್ನು ೧೦೦ ಕ್ಕೆ ೨೦ ರಷ್ಟನ್ನೂ, ಕಲ್ಲಿದ್ದಲನ್ನು $\frac{1}{3}$ ಭಾಗದಷ್ಟನ್ನೂ ಜರ್ಮನಿಯು ಕಳೆದುಕೊಂಡಂತಾಗುವುದು. ಕಬ್ಬಿಣದಲ್ಲೂ ಮುಕ್ಕಾಲುಪಾಲು ನಷ್ಟವಾಗುವುದು. ಇದರಿಂದಲೂ ಅಧಿನಿವೇಶನಗಳನ್ನೆಲ್ಲಾ ಜರ್ಮನಿಯು ಕಳೆದುಕೊಳ್ಳುವುದರಿಂದಲೂ ವ್ಯಾಪಾರದ ಹಡಗುಗಳನ್ನು ಕೊಟ್ಟುಬಿಡುವುದರಿಂದಲೂ ಬೇಕಾದ ಹಸಿಯಪದಾರ್ಥಗಳನ್ನು ಹೊರಗಣಿಂದ ತರಿಸಿಕೊಳ್ಳುವ ಶಕ್ತಿಯಿಲ್ಲದೆ ಹೋಗುವುದರಿಂದಲೂ, ಆರ್ಥಿಕಕ್ಷಾಮವು ನಮಗೆ ಪ್ರಾಪ್ತವಾಗಿ ನಮ್ಮ ಯಂತ್ರಮುಗಳೆಲ್ಲಾ ಹಾಳಾಗುವುವು. ಆಹಾರಪದಾರ್ಥಗಳನ್ನು ವಿಶೇಷವಾಗಿ ಹೊರಗಣಿಂದಲೇ ತರಿಸಿಕೊಳ್ಳಬೇಕಾಗುವುದು. ಹಡಗುಗಳನ್ನೂ ವ್ಯಾಪಾರವನ್ನೂ ನಂಬಿ ಜೀವನಯಾತ್ರೆ ಮಾಡುತ್ತಿರುವ ಲಕ್ಷಾಂತರ ಪ್ರಜೆಗಳಿಗೆ ಉದ್ಯೋಗವನ್ನೇ ಆಗಲೀ ಆಹಾರವನ್ನೇ ಆಗಲೀ ಒದಗಿಸಿಕೊಡುವ ಶಕ್ತಿಯು ಪ್ರಭುತ್ವದವರಿಗೆ ಇಲ್ಲದೆಹೋಗುವುದು. ಅದರ ಮೇಲೆ ಅನೇಕ ಜರ್ಮನರು ಜೀವನಾರ್ಥವಾಗಿ ದೇಶವನ್ನು ಬಿಟ್ಟು ಅನ್ಯದೇಶಗಳಿಗೆ ಹೊರಟುಹೋಗಬೇಕಾಗಿ ಬರುವುದು. ಆದರೆ ಬಲಾಢ್ಯಗಳಾದ ಇತರ ದೇಶಗಳು ತಮ್ಮಲ್ಲಿಗೆ ಜರ್ಮನರನ್ನು ಸೇರಿಸದೆ ಬಹಿಷ್ಕರಿಸುವುದರಿಂದ ಅದೂ ಸಾಧ್ಯವಾಗುವುದಿಲ್ಲ. ಆದುಕಾರಣ ಸಂಧಿಪತ್ರಕ್ಕೆ ಹಸ್ತಾಕ್ಷರವನ್ನು ಹಾಕುವುದೆಂದರೆ ಲಕ್ಷಾಂತರ ಜರ್ಮನರ ವಿನಾಶಕ್ಕೆ ಒಪ್ಪುವಂತೆಯೇ ಸರಿ. ಇದುವರೆಗೆ ನಡೆಯುತ್ತಿದ್ದ ಯುದ್ಧದಿಂದಲೇ ಜರ್ಮನ್ ಪ್ರಜೆಗಳ ಆರೋಗ್ಯವೆಲ್ಲಾ ಕೆಟ್ಟುಹೋಗಿದೆ. ಅದರ ಮೇಲೆ ಮತ್ತೂ ಕ್ಷಾಮಬಾಧೆ ಹುಟ್ಟುವಂತಾದರೆ ಅದನ್ನು ನಿವಾರಿಸುವುದಕ್ಕೆ ಯಾರಿಂದಲೂ ಆಗದು. ಕೋಂಟಿನನ್ನು ಬೆಲ್ಜಿಯಮ್ಮಿಗೆ ಒಪ್ಪಿಸಿಬಿಡಬೇಕೆಂಬ ಮಾತು ಚೆನ್ನಾಗಿಲ್ಲ. ಅಲ್ಲಿಯ ಪ್ರಜೆಗಳು ಜರ್ಮನರಲ್ಲವೆಂದು ಯಾರೂ ಹೇಳಲಾರರು. ಅಲ್ಲಿಯ ಪ್ರಜಾಭಿಪ್ರಾಯವನ್ನು ತೆಗೆದುಕೊಂಡು ಹಾಗೆ ಮಾಡಲಾಗುವುದೆಂದು ಮಾಡಿರುವ ಸೂಚನೆಯು ಸರಿಯಾದುದಲ್ಲ. ನಷ್ಟಪರಿಹಾರಕ್ಕಾಗಿ ಕೆಲದ್ರವ್ಯವನ್ನು ಕೊಡಲು ನಾವು ಒಪ್ಪಿಕೊಳ್ಳುತ್ತೇವೆ. ಯುದ್ಧಕ್ಕೆ ನಾವೇ ಕಾರಣಭೂತರೆಂದು ಒಪ್ಪಿಕೊಳ್ಳುವ ಮೂಲಕ ನಾವು ಈ ನಷ್ಟವನ್ನು ಕೊಡಲು ಅಂಗೀಕರಿಸುವುದಿಲ್ಲ. ಯುದ್ಧಕ್ಕೆ ನಾವು ಕಾರಣಭೂತರೆಂದು ಒಪ್ಪಿಕೊಳ್ಳದೆಯೇ ನಷ್ಟಪರಿಹಾರವನ್ನು ಕೊಡುತ್ತೇವೆ." ಈ ರೀತಿಯಾದ ಜರ್ಮನ್ ಪ್ರತಿನಿಧಿಗಳ ಅಭಿಪ್ರಾಯವನ್ನೆಲ್ಲಾ ಕುರಿತು ಚರ್ಚಿಸಿ ಮುಂದಣ ಏರ್ಪಾಟನ್ನು ನಿರ್ಧರಿಮಾಡುವುದಕ್ಕೆ ಸಂಧಿಸಭೆಯವರು ೧೩ ಉಪಸಂಘಗಳನ್ನು ಏರ್ಪಡಿಸಿದರು. ಸಂಧಿನಿಬಂಧನೆಗಳನ್ನು ಕೇಳಿ ಜರ್ಮನ್ ಪ್ರಜೆಗಳು ಖಂಡಿಸುತ್ತ ತಮ್ಮ ದೇಶದಲ್ಲಿ ಕೋಲಾಹಲವನ್ನು ಮಾಡಲಾರಂಭಿಸಿದರು. ಮಿತ್ರಮಂಡಲಿಯವರನ್ನು ಮನಸ್ಸಿಗೆ ಬಂದಂತೆ ದೂಷಿಸುತ್ತಲೂ ಪರಿಹಾಸಮಾಡುತ್ತಲೂ ಇರುವರೆಂದು ತಂತೀವಾರ್ತೆಗಳು ಬಂದಿರುವುವು. ಆದರೆ ಅಲ್ಲಿಯ ಸ್ವತಂತ್ರ ಸಾಂಘಿಕವಾದಿಗಳು ಮಾತ್ರ ಸಂಧಿನಿಬಂಧನೆಗಳು ಕಠಿನವಾಗಿವೆಯೆಂದು ಹೇಳಿದರೂ, ಸಂಧಿಯನ್ನು ನಾವು ಅಂಗೀಕರಿಸದೆ ಬಿಡಲಾಗುವುದಿಲ್ಲವೆಂದು ತಿಳಿಯಿಸಿರುತ್ತಾರೆ. ಅಲ್ಲಿಯ ಮುಖ್ಯಮಂತ್ರಿಯವರಾದ ಷಿಡ್‌ಮೆನ್‌ರವರು ಪ್ರಭುತ್ವದವರ ದೃಷ್ಟಿಯಲ್ಲಿ ಸಂಧಿಯು ಅಂಗೀಕಾರಕ್ಕೆ ಅರ್ಹವಾಗಿಲ್ಲವೆಂದು ತಮ್ಮ ಸಭೆಯಲ್ಲಿ ಉಪನ್ಯಾಸ ಮಾಡಿದಾಗ ಸಭಿಕರೆಲ್ಲಾ ಹರ್ಷಧ್ವನಿ ಮಾಡಿದರಂತೆ.

ಆದರೇನು? ಎರಡು ಪಕ್ಷದವರೂ ಕೂಡಿ ಸಂಧಿನಿಬಂಧನೆಗಳ ವಿಷಯವಾಗಿ ಚರ್ಚಿಸಿದರೆ ಕೆಲಕೆಲ ಭಾಗಗಳು ಸುಲಭವಾಗಬಹುದೇ ಹೊರತು ಮತ್ತೇನೂ ಇಲ್ಲ. ಜರ್ಮನರು ಬಿಗಿಪಟ್ಟನ್ನು ಹಿಡಿದು ಸಂಧಿನಿಬಂಧನೆಗೆ ಒಪ್ಪದೆ ಹೋದರೆ ಮರಳಿ ಯುದ್ಧವನ್ನು ಮಿತ್ರಮಂಡಲಿಯವರು ಆರಂಭಿಸಿ, ಜರ್ಮನಿಗೆ ಸರ್ವನಾಶವನ್ನು ಉಂಟುಮಾಡುವುದು ಖಂಡಿತ. ಈಗ ಮಿತ್ರಮಂಡಲಿಯವರು ಜರ್ಮನರಮೇಲೆ ವಿಧಿಸಿರುವ ನಿಬಂಧನೆಗಳು ಅವರನ್ನು ಮೂಲೋತ್ಪಾಟನ ಮಾಡುವುದಕ್ಕೂ ಹಗೆಯನ್ನು ತೀರಿಸಿಕೊಳ್ಳುವುದಕ್ಕೂ ಅಲ್ಲ. ಹಾಗಿದ್ದರೆ ಇದುವರೆಗೆ ಜರ್ಮನಿ ದೇಶಕ್ಕೆ ಹೊರಗಣಿಂದ ಯಾರೂ ಹೋಗಬಾರದಂತೆ ಮಾಡಿದ್ದ ನಿರ್ಬಂಧಗಳನ್ನೆಲ್ಲಾ ಕೂಡಲೇ ತೊಲಗಿಸಿಬಿಡುವುದಕ್ಕೆ ಅವರು ಒಪ್ಪುತ್ತಿರಲಿಲ್ಲ. ಸಂಧಿಪತ್ರಕ್ಕೆ ಜರ್ಮನರು ರುಜುಹಾಕಿಬಿಟ್ಟರೆ ಉತ್ತರಕ್ಷಣದಲ್ಲೇ ಹಿಂದೆ ಅವರದೇಶಕ್ಕೆ ಉಂಟುಮಾಡಿದ್ದ ಗಮನಾಗಮನ ನಿರೋಧವನ್ನು ತಪ್ಪಿಸುವುದಕ್ಕೂ ತಿಂಗಳೊಂದಕ್ಕೆ ೩ ಲಕ್ಷ ಟನ್ನುಗಳ ಆಹಾರ್ಯಧಾನ್ಯವನ್ನೂ ೭ ಲಕ್ಷ ಟನ್ನುಗಳ ಕೊಬ್ಬಿನ ವಸ್ತುಗಳನ್ನೂ ಜರ್ಮನಿಯು ಹೊರಗಣಿಂದ ತರಿಸಿಕೊಳ್ಳುವುದಕ್ಕೂ, ತಿಂಡಿಗೆ ಬೇಕಾದ ಪದಾರ್ಥಗಳನ್ನು ಜರ್ಮನಿಗೆ ಯಾವ ದೇಶದವರಾದರೂ ಕಳುಹಿಸಿಕೊಡುವುದಕ್ಕೂ ಅವಕಾಶಮಾಡಿಕೊಡುವುದಾಗಿ ಮಿತ್ರಮಂಡಲಿಯವರು ತಿಳಿಸಿರುತ್ತಾರೆ. ಮತ್ತೂ ತಟಸ್ಥದೇಶದವರೊಡನೆ ವ್ಯಾಪಾರಗಳನ್ನು ನಡೆಯಿಸಿಕೊಳ್ಳಲೂ ಅವಕಾಶವನ್ನು ಕೊಡುತ್ತಾರೆ. ಹೀಗೆ ಮಾಡಿರುವುದು ಮಿತ್ರಮಂಡಲಿಯವರ ಉದಾರಭಾವವನ್ನು ವ್ಯಕ್ತಪಡಿಸುತ್ತದೆ. ಜರ್ಮನರು ತಮ್ಮ ದೌಷ್ಟ್ಯವನ್ನು ಕುರಿತು ಪಶ್ಚಾತ್ತಾಪಪಟ್ಟು ಸೌಜನ್ಯಕ್ಕೆ ಬರುವಂತೆ ಮಾಡಬೇಕೆಂಬುದೇ ಮಿತ್ರಮಂಡಲಿಯವರ ಉದ್ದೇಶವೇ ಹೊರತು ಇಂಥ ನಿಬಂಧನೆಗಳಿಂದ ಜರ್ಮನಿಯನ್ನು ನಾಮಾವಶೇಷಮಾಡಬೇಕೆಂಬುದಲ್ಲ. ಇದನ್ನು ತಿಳಿದುಕೊಂಡು ಜರ್ಮನರು ಸರಿಯಾಗಿ ನಡೆದುಕೊಂಡರೆ ಜರ್ಮನರಿಗೆ ನಾನಾದೇಶ ಸಂಮೇಳನದಲ್ಲಿ ಉಚಿತಸ್ಥಾನವನ್ನು ಕೂಡ ಮಿತ್ರಮಂಡಲಿಯವರು ಕೊಡುವರು. ಪರಿಶುದ್ಧಭಾವವುಳ್ಳವರು ಸರ್ವಜಾತಿಸಮ್ಮೇಳನದಲ್ಲಿ ಸೇರಿರಬೇಕೇ ಹೊರತು ದುರುದ್ದೇಶಪೂರಿತ ದುರಾತ್ಮರು ಅಲ್ಲಿದ್ದರೆ ಆ ಸಮ್ಮೇಳನದ ಉದ್ದೇಶವು ಸಫಲವಾಗಲಾರದು. ಪ್ರಪಂಚದ ಇದಿರಿಗೆ ಜರ್ಮನರು ತಮ್ಮ ಪರಿಶುದ್ಧಭಾವವನ್ನು ನಂಬುಗೆ ಹುಟ್ಟುವಂತೆ ತೋರ್ಪಡಿಸಿಕೊಂಡಮೇಲೆಯೇ ಸಂಘದಲ್ಲಿ ಅವರಿಗೆ ಉಚಿತಸ್ಥಾನಮರ್ಯಾದೆಯು ದೊರೆಯುವುದು. ಈಗ ಅವರು ತಮ್ಮ ಪ್ರವರ್ತನದಿಂದ ಆ

ಟೋಲುಗೇಟುಗಳ ಹರಾಜು.

ನಂಜನಗೂಡು ಟವನ್ ಮ್ಯುನಿಸಿಪಲ್ ಕೌನ್ಸಿಲ್ ಆಫೀಸಿನಿಂದ:-

ಈ ಮಾಹೆ 16 ನೆ ತಾರೀಖಿನಲ್ಲಿ ನಡೆಯಬೇಕಾಗಿದ್ದ ನಂಜನಗೂಡು ಟವನ್ 1919-20 ನೆ ಸಾಲಿನ ಟೋಲುಗೇಟು ಹರಾಜು ಕೆಲವು ಅನಿವಾರ್ಯಗಳ ಸಬಬ್ ಆ ದಿನ ನಡೆಯಲಿಲ್ಲವಾದಕಾರಣ, 1919 ನೆ ಜೂನ್ ಮಾಹೆ 7 ನೆ ತಾರೀಖು ಶನಿವಾರದ ದಿನ ಇಟ್ಟುಕೊಂಡಿರುತ್ತೆ. ಆ ದಿನದ ಮಧ್ಯಾಹ್ನ 1 ಗಂಟೆವರವಿಗೂ ಮ್ಯುನಿಸಿಪಲ್ ಆಫೀಸಿನಲ್ಲಿ ಸೀಲ್ಡ್‌ಟೆಂಡರುಗಳು ತೆಗೆದುಕೊಳ್ಳಲ್ಪಡುತ್ತವೆ. ಇಷ್ಟಪಟ್ಟವರು ತಾವು ಎಷ್ಟು ಮೊಬಲಿಗ್ಗೆ ಕಂಟ್ರಾಕ್ಟ್ ಕೊಡಲು ಒಪ್ಪುತ್ತಾರೋ ಆ ಮೊಬಲಗನ್ನು ಟೆಂಡರಿನಲ್ಲಿ ನಮೂದಿಸಿ ಖಾತರಿ ಬಗ್ಗೆ 100 ರೂಪಾಯಿಗಳನ್ನು ನಗದಾಗಿಯಾಗಲಿ ಅಥವ ನೋಟಾಗಿಯಾಗಲಿ ಟೆಂಡರ ಜತೆಯಲ್ಲಿ ತಮ್ಮ ಪೂರ್ತಿಯಾದ ವಿಳಾಸ ಸಮೇತ ಹಾಜರ್ಮಾಡಬೇಕು. 1-5-1919 ನೆ ಮರ್ಕೂಂ ಮೈಸೂರು ಕನ್ನಡ ಗೆಜೆಟ್ಟಿನಲ್ಲಿ ಪಬ್ಲಿಷ್‌ಮಾಡಿರುವ ಷರತ್ತುಗಳ ಮೇರೆ ನಡೆದುಕೊಳ್ಳಲು ಕಂಟ್ರಾಕ್ಟ್‌ದಾರನು ಬದ್ಧನಾಗಿರಬೇಕು.

ಬಾಕಿ ವಿಚಾರವನ್ನು ಮ್ಯುನಿಸಿಪಲ್ ಆಫೀಸಿಗೆ ಬರೆದು ತಿಳಿದುಕೊಳ್ಳಬಹುದು.

ತಾರೀಖು 24-5-1919, } E. RAMA RAO.
ನಂಜನಗೂಡು. } For President.

ಮೈಸೂರು ದೇಶದ ಫುಡ್‌ಕಂಟ್ರೋಲರ್ ಮತ್ತು ಸಿವಿಲ್ ಸಪ್ಲೈಸ್ ಡೈರೆಕ್ಟರವರ ಆಫೀಸು ಬೆಂಗಳೂರು.

ತಾರೀಖು 29 ನೆ ಮೇ 1919.

ನೋಟೀಸ್.

1919 ನೆ ಜೂನ್ ತಿಂಗಳಲ್ಲಿ 2,500 ಟನ್‌ಗಳಿಗೆ ಕಮ್ಮಿ ಇಲ್ಲದಷ್ಟು ಬರ್ಮಾ ಅಕ್ಕಿಯನ್ನೂ, 300 ಟನ್‌ಗಳಿಗೆ ಕಮ್ಮಿ ಇಲ್ಲದಷ್ಟು ನೆಲ್ಲೂರು ಅಕ್ಕಿಯನ್ನೂ, ಮದ್ರಾಸ್ ಅಧಿಪತ್ಯದ ನದೀಮುಖಭೂಮಿಯನ್ನೊಳಕೊಂಡಿರತಕ್ಕ ಡಿಸ್ಟ್ರಿಕ್ಟ್‌ಗಳಿಂದ ತರಿಸತಕ್ಕದ್ದಕ್ಕೆ ಸೀಲ್‌ಮಾಡಿ ಟೆಂಡರುಗಳನ್ನು ಕಳುಹಿಸಬಹುದು.

ಟೆಂಡರುಗಳು ಕೆಳಗೆ ದಸ್ಕತ್ತುಮಾಡಿರುವವರಿಗೆ 1919 ನೆ ಇಸ್ವಿ ಜೂನ್ 5 ನೆ ತಾರೀಖಿಗೆ ಮೀರದಂತೆ ತಲಪಬೇಕು.

ಹೆಚ್ಚು ವಿಷಯಗಳನ್ನು ತಿಳಿಯಬೇಕಾದರೆ ಕೆಳಗೆ ದಸ್ಕತ್ತು ಮಾಡಿರುವವರಿಗೆ ಬರೆದುಕೊಳ್ಳಬಹುದು.

ಕೆ. ಮಾರ್ಥ,
ಫುಡ್‌ಕಂಟ್ರೋಲರವರು, ಮತ್ತು ಸಿವಿಲ್‌ಸಪ್ಲೈ ಡೈರೆಕ್ಟರವರು.

ದಕ್ಕೆ ಅನರ್ಹತೆಯನ್ನು ತೋರ್ಪಡಿಸಿಕೊಂಡಿದ್ದಾರೆ. ಕಾಲಕ್ರಮದಲ್ಲಿ ಅವರು ತಮ್ಮ ಹೃದಯವು ಮಾರ್ಪಾಟಗೊಂಡಿತೆಂಬುದನ್ನು ವ್ಯಕ್ತಪಡಿಸಿಕೊಳ್ಳಬೇಕು. ಹಾಗೆ ಮಾಡಿಕೊಳ್ಳುವುದಕ್ಕಾಗಿಯೇ ಅವರು ಪ್ರಸಕ್ತ ಸಂಧಿಪತ್ರಕ್ಕೆ ಹಸ್ತಾಕ್ಷರವನ್ನು ಹಾಕುವುದರ ಹೊರತು ಬೇರೆ ಮಾರ್ಗವೇ ಇಲ್ಲ. ಅವರು ಈಗ ಸಂಧಿಪತ್ರಕ್ಕೆ ರುಜುಮಾಡದಿದ್ದರೆ ಏನಾಗುವುದೆಂಬುದನ್ನು ಲಾರ್ಡ್ ಕರ್ಜನ್‌ರವರು ಲಂಡನ್ನಿನ ಒಂದು ಸಭೆಯಲ್ಲಿ ಹೀಗೆ ಹೇಳಿರುತ್ತಾರೆ—"ಜರ್ಮನರು ಸಂಧಿಪತ್ರಕ್ಕೆ ರುಜುಮಾಡಲು ನಿರಾಕರಿಸಿದರೆ ಮಿತ್ರಮಂಡಲಿಯವರು ತಮ್ಮ ಕರ್ತವ್ಯವನ್ನು ನಡೆಯಿಸಲು ಸಿದ್ಧರಾಗಿಯೇ ಇದ್ದಾರೆ. ನಾವು ಈಗ ವಿಧಿಸಿರುವ ನಿಬಂಧನೆಗಳನ್ನು ತಗ್ಗಿಸಲು ಲೇಶಮಾತ್ರವೂ ಅವಕಾಶವಿಲ್ಲ. ಜರ್ಮನರು ಸಂಧಿಯನ್ನು ನಿರಾಕರಿಸಿದರೆ ನಮ್ಮ ಕೈಯ್ಯಲ್ಲಿ ಆಯುಧವಿರುವುದು. ಜರ್ಮನಿಯನ್ನು ನಾಲ್ಕು ದಿಕ್ಕಿನಿಂದಲೂ ಕಟ್ಟಿಹಾಕಬಲ್ಲೆವು. ಬೇಕಾದರೆ ನಮ್ಮ ಸೈನ್ಯಗಳಿಂದ ಜರ್ಮನರನ್ನು ಹಿಂಗಟ್ಟಿ ಮುರಿಹಾಕುವಷ್ಟು ಶಕ್ತಿಯು ನಮಗಿರುವುದು. ಆಲಸ್ಯವನ್ನು ಮಾಡತಕ್ಕದ್ದಲ್ಲ. ಮುಖ್ಯಸೂತ್ರಗಳಿಗೆ ಸಂಬಂಧಪಟ್ಟ ವಿಷಯವನ್ನು ಎಷ್ಟುಮಾತ್ರಕ್ಕೂ ವ್ಯತ್ಯಾಸಮಾಡುವುದಿಲ್ಲವೆಂಬಂಶವನ್ನು ಜರ್ಮನರು ಖಚಿತವಾಗಿ ತಿಳಿದುಕೊಳ್ಳಬೇಕು. ಜರ್ಮನರು ಒಂದು ವೇಳೆ ಗೆದ್ದಿದ್ದರೆ ಇದಕ್ಕಿಂತಲೂ ಅತ್ಯಂತ ಕಠಿನಗಳಾದ ನಿಬಂಧನೆಗಳನ್ನು ನಮ್ಮ ಮೇಲೆ ವಿಧಿಸುತ್ತಿದ್ದರು. ನಾವು ವಿಧಿಸಿರುವ ನಿಬಂಧನೆಗಳು ಎಷ್ಟೋ ಸುಕರವಾಗಿಯೇ ಇವೆ" ಎಂದು ಹೇಳಿರುತ್ತಾರೆ. ಜನರಲ್ ಫಾಕ್‌ರವರು ಸರ್ವಸನ್ನಾಹವನ್ನೂ ಮಾಡಿಕೊಂಡಿರುವುದಕ್ಕಾಗಿ ಸೇನಾಮುಖಕ್ಕೆ ಹೋಗಿ ಬಂದರು. ಇದರಿಂದ ಮಿತ್ರಮಂಡಲಿಯವರು ಯುದ್ಧಕ್ಕೂ ಸಿದ್ಧರಾಗಿಯೇ ಇರುವರೆಂಬುದು ಗೊತ್ತಾಗುತ್ತದೆ. ಈಚೆಗೆ ಮಿತ್ರಮಂಡಲಿಯವರು ಜರ್ಮನರ ಲೇಖನಗಳಿಗೆ ಕೊಟ್ಟಿರುವ ಪ್ರತ್ಯುತ್ತರದ ಲೇಖನವನ್ನು ಅವರಿಗೆ ಕಳುಹಿಸಿಕೊಟ್ಟಿದ್ದಾರೆ. ಜರ್ಮನರೇ ಯುದ್ಧಕ್ಕೆ ಬಾಧ್ಯರೆಂಬುದೂ ನಷ್ಟಪರಿಹಾರವನ್ನು ಕೊಡದಿದ್ದರೆ ತೀರದು ಎಂಬ ವಿಷಯವೂ, ಅವರ ಆಕ್ಷೇಪಣೆಗಳಿಗೆಲ್ಲಾ ತಕ್ಕ ಸಮಾಧಾನಗಳೂ ಅದರಲ್ಲಿ ಖಂಡಿತವಾಗಿ ತಿಳಿಯಿಸಲ್ಪಟ್ಟಿವೆ. ಇನ್ನು ಸ್ವಲ್ಪ ಚರ್ಚೆ ನಡೆಯಿಸುವುದಕ್ಕೆ ಕಾಲವ್ಯವಧಿಯನ್ನು ಹೆಚ್ಚಿಸಿಕೊಡಬೇಕೆಂದು ಜರ್ಮನ್ ಪ್ರತಿನಿಧಿಗಳು ಕೇಳಿಕೊಂಡುದರಮೇಲೆ ಮೇ ತಾರೀಖು ೨೯ ರ ವರೆಗೆ ಕಾಲವನ್ನು ಮಿತ್ರಮಂಡಲಿಯವರು ಕೊಟ್ಟಿದ್ದರು. ಅಷ್ಟರೊಳಗೆ ತಮ್ಮ ನಿಶ್ಚಿತಾಭಿಪ್ರಾಯವನ್ನು ಜರ್ಮನರು ತಿಳಿಸಬೇಕಾಗಿದ್ದರು. ಬಹುಶಃ ಜೂನ್ ತಿಂಗಳ ಮಧ್ಯಭಾಗದೊಳಗಾಗಿ ಸಂಧಿಕಾರ್ಯವು ಕೊನೆಮುಟ್ಟುವುದೆಂದು ನಿರೀಕ್ಷಿಸಲ್ಪಟ್ಟಿದೆ. ಜರ್ಮನಿಗೆ ಸೇರಿದ ಲಸ್ ನಾರ್ಜ ಪಟ್ಟಣದಲ್ಲಿ ೧ ಲಕ್ಷ ಮಂದಿ ಸ್ವತಂತ್ರಸಾಂಘಿಕವಾದಿಗಳು ಸಭೆಗೂಡಿ ಸಂಧಿಪತ್ರಕ್ಕೆ ಜರ್ಮನ್ ಪ್ರತಿನಿಧಿಗಳು ರುಜುಮಾಡಿಯೇ ತೀರಬೇಕೆಂದು ನಿರ್ಧರಮಾಡಿದರು. ಇನ್ನೊಂದು ವಾರದೊಳಗಾಗಿ ಜರ್ಮನರು ಯುದ್ಧಕ್ಕೋ ಮೈತ್ರಿಗೋ ನಿಂತವರಾಗಿಯೇ ತೀರಬೇಕು. ಜನರಲ್ ಫಾಕ್‌ರವರು ಸೇನಾಪರೀಕ್ಷೆಯನ್ನು ಮಾಡಿಕೊಂಡು ಬಂದು ಪ್ರೆ. ವಿಲ್ಸನ್ನರವರನ್ನು ಕಂಡುಕೊಂಡು ಸಂಭಾಷಿಸಿದರು. ಮಿತ್ರಮಂಡಲಿ ಸೈನ್ಯಗಳು ಜರ್ಮನಿ ಕಡೆಗೆ ತೆರಳಲು ಸಿದ್ಧವಾಗಿವೆ.

ಪತ್ರವ್ಯವಹಾರ.

ಹೊನ್ನತ್ತಿಯಲ್ಲಿ ನಡೆದ ವೀರಶೈವ ತರುಣರ 3 ನೇ ಸಮ್ಮೇಳನ.

ಸ್ವಾಮಿ,—

ಈ ಸಮ್ಮೇಳನವು ಇದೇ ತಿಂಗಳು 7.8 ನೇ ತಾರೀಖುಗಳ ದಿವಸ ರಾಣೇಬೆನ್ನೂರು ತಾಲೂಕು ಹೊನ್ನತ್ತಿ ಕ್ಷೇತ್ರದಲ್ಲಿ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರ ಉದಾರಾಶ್ರಯದಿಂದ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾದ ಮ॥ ಬಸವಾರಾಧ್ಯ ಬಿ. ಎ., ಬಿ. ಎಲ್., ಇವರ ಅಧ್ಯಕ್ಷತೆಯಲ್ಲಿ ಕೂಡಿತು. ಈ ಸಮ್ಮೇಳನಕ್ಕೆ ಬೆಂಗಳೂರು, ಮೈಸೂರು, ಕೊಡಗು, ಧಾರ್ವಾಡ, ಹುಬ್ಬಳ್ಳಿ, ಬ್ಯಾಡಗಿ, ಹಾವೇರಿ, ಗೋಕಾಕ, ಮದರಾಸು ಮೊದಲಾದ ಕಡೆಯಿಂದ ಸುಮಾರು ನೂರು ಜನ ಕಾಲೇಜ್ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳೂ, ಇತರ ದೊಡ್ಡಮನುಷ್ಯರೂ ಪ್ರತಿನಿಧಿಗಳಾಗಿಯೂ ಸುಮಾರು 600-700 ರ ವರೆಗೆ ಪ್ರೇಕ್ಷಕರಾಗಿಯೂ ಬಂದಿದ್ದರು.

ಶ್ರೀ ಹೊನ್ನಮ್ಮದೇವಿಯ ಮಂದಿರದ ಎದುರಿನ ಪಟಾಂಗಣದಲ್ಲಿ ಅಧ್ಯಕ್ಷರ ಆಗಮನವಾಗಿ, ಸಭೆಯ ಕೆಲಸವು ಪ್ರಾರಂಭವಾಯಿತು. ಮೊದಲು ಸ್ವಾಗತಮಂಡಲದ ಅಧ್ಯಕ್ಷರಾದ ಮ॥ ಚನ್ನವೀರಸ್ವಾಮಿ ಒಡೆಯರ ಇವರ ಸ್ವಾಗತಪರ ಭಾಷಣವಾದ ಬಳಿಕ ಅಧ್ಯಕ್ಷರ ಚುನಾವಣೆಯಾಗಿ ಅವರು ಸುಮಾರು ಒಂದು ಗಂಟೆವರೆಗೆ ವೀರಶೈವರ ಏಳ್ಗೆಯ ಬಗ್ಗೆ ತಮ್ಮ ಅನುಭವಿಕ ವಿಚಾರಗಳನ್ನು ವಿಸ್ತಾರವಾಗಿ ಹೇಳಿದರು.

ಮಾರನೆಯ ದಿನ ವಿದ್ಯಾಪ್ರಸಾರ ಸಮಾಜದ ಸೇವೆಗಳ ಮೇಲೆ ಭಾಷಣಗಳಾಗಿ, ಕೆಲವು ತರುಣರು ತಮ್ಮ ವಿರಾಮಕಾಲಗಳಲ್ಲಿ ಸ್ವಲ್ಪ ಕಾಲವನ್ನಾದರೂ ಸಮಾಜಸೇವೆಗೆ ವೆಚ್ಚಮಾಡುವೆವೆಂತಲೂ, ಬೇರೆ ಕೆಲವರು ತಾವು ಪ್ರೌಢವಯಸ್ಕರಾಗುವವರೆಗೆ ಲಗ್ನವಾಗುವುದಿಲ್ಲವೆಂತಲೂ ಪ್ರತಿಜ್ಞೆಯನ್ನು ಮಾಡಿದರು. ಅನಂತರ ಮೈಸೂರಿನ ಎಕನಾಮಿಕ್ ಲೆಕ್ಚರರಾದ ಮ॥ ಎಚ್. ಕೆ. ಮಲ್ಲಪ್ಪನವರು ಅತ್ಯುತ್ತಮವಾಗಿ ಭಾಷಣಮಾಡಿದರು. ತರುವಾಯ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರು ಎಲ್ಲಾ ವಿಷಯಗಳನ್ನೂ ಗರ್ಭೀಕರಿಸಿ ಭಾಷಣ ಮಾಡಿದ ನಂತರ ಯಾವತ್ತು ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

೧೩ ನೇ ಧಾರ್ಮಿಕ ಮಹೋತ್ಸವ.

ಧಾರವಾಡ ಜಿಲ್ಲಾ ಹಾನಗಲ್ಲ ತಾ॥ ಪೇಟೆ ಆಲೂರ ಗ್ರಾಮದಲ್ಲಿ ತಾರೀಖು ೭-೮ ನೇ ದಿವಸಗಳಲ್ಲಿ ವೀರಶೈವ ವಾಚನಮಂದಿರದ ೧೩ ನೇ ಧಾರ್ಮಿಕಮಹೋತ್ಸವವು ಶ್ರೀ ವೀರಭದ್ರ ದೇವಾಲಯದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಬಾಳೆ ತಳಿರು ತೋರಣಗಳಿಂದ ಶೃಂಗರಿಸಿದ ಸಭಾಮಂಟಪದ ಮುಖ್ಯಮುಖ್ಯ ಭಾಗದಲ್ಲಿ ಪಂಚಮ ಜಾರ್ಜ ಬಾದಶಹರ ಶ್ರೀಮನ್ನಿರಂಜನ ಕುಮಾರಸ್ವಾಮಿಯವರ ಸತ್ಪುರುಷಮಾಲಿಕಾ ಶ್ರೀಮಂತ ಶಿರಸಂಗೀಕರ ಶ್ರೀಮಂತ ವಾರದ ವಗೈರೆ ಪುಣ್ಯಾತ್ಮರ ಭಾವಚಿತ್ರಗಳು ಪ್ರೇಕ್ಷಕರ ದೃಷ್ಟಿಯನ್ನು ಆಕರ್ಷಿಸುವಂತೆ ಪುಷ್ಪಹಾರಗಳಿಂದ ಕಂಗೊಳಿಸುತ್ತಿದ್ದವು. ಇಂಥಾ ಮಂಗಲಕರವಾದ ಸಭೆಗೆ ಶ್ರೀಯುತ ಚನ್ನವೀರಪ್ಪ, ಮುರಗೆಪ್ಪ, ಹೇಮಶೆಟ್ಟಿ, ಬೆಂಚ ಮ್ಯಾಜಿಸ್ಟ್ರೇಟ, ಶಿರ್ಸಿ ಈ ಮಹನೀಯರು ಅಧ್ಯಕ್ಷಸ್ಥಾನವನ್ನು ವಹಿಸಿ ಸಭೆಯ ಕಾರ್ಯವನ್ನು ಸಾಗಿಸುತ್ತಿದ್ದರು. ಈ ಮಹೋತ್ಸವಕ್ಕೆ ವೇ॥ ಬಸವಲಿಂಗಶಾಸ್ತ್ರಿಗಳು ಬಿದರಿ, ವೇ॥ ಶ್ರೀ ಶೈಲನಾಥಶಾಸ್ತ್ರಿಗಳು, ವೇ॥ ತೋಟಮ್ಮನವರು, ದೊಡ್ಡಮಠ, ಶಿರ್ಸಿ ರಾವಸಾಹೇಬ, ಚನ್ನಬಸವಶೆಟ್ಟರು ಕುರುಬಗೊಂಡ, ಮಿ. ಬಸವನಹಾಳ, ಮಿ. ಹಂಚಿನಹಾಳ, ಮಿ. ಮನಗೂರ, ಮಿ. ಯಾದಿಹಾಳ, ಮಿ. ಹರ್ಡೇಕರ, ಶ್ರೀಯುತ ನವಲಗುಂದ ಬಸೆಟ್ಟೆಪ್ಪನವರು ಶಿರ್ಸಿ, ಹಾಗೂ ಇನ್ನಿತರ ತಾಲೂಕಿನ ಪ್ರಮುಖರು ಸಹ ಆಗಮಿಸಿದ್ದರು. ಈ ಪ್ರಕಾರ ಸಭೆಯ ಮಂದಿರವು ಜನಸಮೂಹದಿಂದ ಒಳ್ಳೇ ವಿರಾಜಮಾನವಾಗಿತ್ತು. ಸಭೆಯ ಕಾರ್ಯಕ್ರಮ ಪ್ರಕಾರ ಈಶಸ್ತೋತ್ರವು ಹೇಳಲ್ಪಟ್ಟನಂತರ ಬಾಲವೃದ್ಧವಿವಾಹ, ಪಂಚಪೀಠಾಚಾರ್ಯರುಗಳ ಐಕಮತ್ಯವು, ದೀಕ್ಷೆ, ವಿದ್ಯಾ ಈ ವಿಷಯಗಳ ವ್ಯಾಖ್ಯಾನಗಳು ಹೇಳಲ್ಪಟ್ಟವು. ಇಷ್ಟಾದಮೇಲೆ ಚನಶೆಟ್ಟರು ಇವರು ಈಗ ನಡೆದಿರುವ ಸಂಧಿಸಭೆಯ ಕಾರ್ಯವು ಬೇಗನೆ ಮುಗಿದು ಪಂಚಮಜಾರ್ಜ ಬಾದಶಹರ ಪ್ರಭುತ್ವವು ಜಗತ್ತಿನಲ್ಲಿ ಬೆಳೆದು ದೇಶದಲ್ಲಿ ಶಾಂತತೆಯು ಹೆಚ್ಚಲೆಂದು ಭಾಷಣಮಾಡಿದನಂತರ ಶ್ರೀ ಈಶಸ್ತೋತ್ರವನ್ನು ಸಭಿಕರೆಲ್ಲರೂ ಆನಂದದಿಂದ ಮಾಡಿದರು. ತರುವಾಯ ಅಧ್ಯಕ್ಷರ ಭಾಷಣ ಆಭಾರ ಸೂಚನೆಗಳಾದನಂತರ ರಾಷ್ಟ್ರಗೀತವಾಗಿ ಸುಗಂಧ ತಾಂಬೂಲ ವಿನಿಯೋಗದೊಡನೆ ಸಭೆ ಮುಗಿಯಿತು.

ಓರ್ವ ಸಮಾಜಸೇವಕ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ನಡಿಸಲ್ಪಟ್ಟ ಶ್ರೀಮದ್ಯುವರಾಜರವರ ವರ್ಧಂತ್ಯುತ್ಸವವು.

ಈ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳ ಅಮಲ್ದಾರರುಗಳೂ ಮ್ಯುನಿಸಿಪಲ್ ಪ್ರೆಸಿಡೆಂಟುಗಳೂ ಕಳೆದ ತಾ॥ ೨೫ ರಲ್ಲಿ ಎಲ್ಲಾ ದೇವಸ್ಥಾನಗಳಲ್ಲೂ, ಮಸೀದಿಗಳಲ್ಲೂ ದೇವರ ಪೂಜೆಗೂ ಪ್ರಾರ್ಥನೆಗೂ ಏರ್ಪಡಿಸಿದ್ದರು. ಕೆಲ ಕಡೆ ಭೋಜನಕೂಟಗಳಿಗೇರ್ಪಾಡಾಗಿದ್ದಿತು. ಆ ದಿವಸ ಪ್ರಾತಃಕಾಲದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಆಟಪಾಟಗಳೂ, ಸಾಯಂಕಾಲದಲ್ಲಿ ಜನರ ಕುಸ್ತಿಯೂ ನಡಿಸಲ್ಪಟ್ಟವು. ಸಾಯಂಕಾಲದಲ್ಲಿ ಸ್ಥಳೀಯಾಧಿಕಾರಿಗಳ ಮತ್ತು ಗ್ರಾಮಪಾಠಶಾಲೆಗಳುಪಾಧ್ಯಾಯರುಗಳ ಅಧ್ಯಕ್ಷತೆಯಲ್ಲಿ ಜನರು ಸಭೆಸೇರಿ, ಶ್ರೀಮದ್ಯುವರಾಜರವರು ಸಂಸ್ಥಾನದ ಅಭಿವೃದ್ಧಿಯನ್ನು ಕೋರಿ ಎಲ್ಲಾ ಜನಾಂಗದವರ ಏಳಿಗೆಗಾಗಿ ಅವಿಶ್ರಾಂತಶ್ರಮವನ್ನು ವಹಿಸಿರುವುದನ್ನು ಕುರಿತು ಕನ್ನಡ ಮತ್ತು ಹಿಂದುಸ್ಥಾನಿ ಭಾಷೆಗಳಲ್ಲಿ ಅವರ ಗುಣಕಥನವು ಮಾಡಲ್ಪಟ್ಟಿತು. ಪ್ರತಿಯೊಂದು ತಾಲ್ಲೂಕಿನಿಂದಲೂ ಶ್ರೀಯವರಿಗೆ ಅಭಿನಂದನ ತಂತ್ರೀವಾರ್ತೆಗಳು ಕಳುಹಲ್ಪಟ್ಟವು. ಪ್ರಜೆಗಳು ಶ್ರೀಮದ್ಯುವರಾಜರ ವರ್ಧಂತ್ಯುತ್ಸವವನ್ನು ಇಷ್ಟು ವೈಭವದಿಂದಲೂ ಉತ್ಸಾಹದಿಂದಲೂ ನಡಿಸುತ್ತಿರುವುದನ್ನೋಡಿದರೆ ಅವರುಗಳಿಗೆ ಶ್ರೀಯವರ ಮೇಲಿರುವ ಸಹಜವಾದ ಭಕ್ತಿವಿಶ್ವಾಸವು ವ್ಯಕ್ತವಾಗುತ್ತದೆ.

ಚಿತ್ರದುರ್ಗದ ಟವನ್ನಿನಲ್ಲಿ ಈ ವರ್ಧಂತ್ಯುತ್ಸವವು ಇನ್ನೂ ಅತಿಶಯವಾದ ವೈಭವದಿಂದ ನಡಿಸಲ್ಪಟ್ಟಿತು. ಅಲ್ಲಿಯ ಸ್ತ್ರೀಯರುಗಳೂ ಈ ಉತ್ಸವದಲ್ಲಿ ಭಾಗಿಗಳಾಗಿರಲು ಸರ್ಕಾರಿಯ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಸುಬ್ಬಮ್ಮನವರು ಮತ್ತು ಕಮಿಟಿ ಮೆಂಬರುಗಳಾದ ಮ॥ ಅನಂತಸೆಟ್ಟರು ಮ॥ ಸಿದ್ಧನಂಜಪ್ಪನವರು ಮತ್ತು ಮ॥ ಜಡೆ ಸುಬ್ಬರಾಯರು ಇವರುಗಳಿಂದ ತಕ್ಕೇರ್ಪಾಟು ಮಾಡಲ್ಪಟ್ಟಿದ್ದಿತು. ಈ ಊರಿನ ದೊಡ್ಡಮನುಷ್ಯರುಗಳು ಡೆ॥ ಕಮಿಷನರ್ ಮಿ॥ ಜಹಬರ್ಟ್ ಮೆಕ್ಕೆ ಬಿ. ಎ., ಯವರ ಅಧ್ಯಕ್ಷತೆಯಲ್ಲಿ ಸಾಯಂಕಾಲ ೪ ಗಂಟೆಗೆ ಚಾಮರಾಜೇಂದ್ರ ಮೆಮೋರಿಯಲ್ ಹಾಲಿನಲ್ಲಿ ಸಭೆ ಸೇರಿದ್ದರು. ಆಗ ಪುಷ್ಪಮಾಲಿಕೆಯಿಂದ ಅಲಂಕೃತವಾದ ಶ್ರೀಮದ್ಯುವರಾಜರವರ ಭಾವಚಿತ್ರಪಟವು ಉನ್ನತಾಸನದಮೇಲೆ ಇಡಲ್ಪಟ್ಟು ಬಾಲಿಕೆಯರಿಂದ ಮಂಗಳವು ಹಾಡಲ್ಪಟ್ಟಿತು. ಅನಂತರ ಅಧ್ಯಕ್ಷರು ಆ ದಿವಸ ಸಭೆಸೇರಿರುವ ಉದ್ದೇಶವನ್ನು ಇಂಗ್ಲೀಷಿನಲ್ಲಿ ಸಂಕ್ಷೇಪವಾಗಿ ಅಪ್ಪಣೆಕೊಡಿಸಿದಮೇಲೆ ಕನ್ನಡ ಮತ್ತು ಉರುದುಭಾಷೆಗಳಲ್ಲಿ ರಚಿಸಲ್ಪಟ್ಟಿದ್ದ ಪದ್ಯಗಳು ಹೇಳಲ್ಪಟ್ಟವು. ಕಾಲೋಚಿತವಾದ ಭಾಷಣಗಳು ಕನ್ನಡ ಮತ್ತು ಉರುದುಭಾಷೆಯಲ್ಲಿ ಮಾಡಲ್ಪಟ್ಟು ಆ ಏರ್ಪಾಟುಗಳಲ್ಲಿ ಗೆದ್ದವರಿಗೆ ಪಾರಿತೋಷಕವು ಕೊಡಲ್ಪಟ್ಟಮೇಲೆ ಸಭಿಕರೆಲ್ಲರೂ ಎದ್ದುನಿಂತುಕೊಂಡು "ಶ್ರೀಮದ್ಯುವರಾಜರವರಿಗೆ ೩೧ ನೆಯ ವರ್ಷದ ವರ್ಧಂತ್ಯುತ್ಸವವು ನಡೆದುದಕ್ಕಾಗಿ ಇಲ್ಲಿ ನೆರೆದಿರುವ ನಾವುಗಳೆಲ್ಲರೂ ವಿಶೇಷ ರಾಜಭಕ್ತಿಯಿಂದ ಅಭಿನಂದಿಸುತ್ತೇವಲ್ಲದೆ ಅವರಿಗೆ ಆಯುರಾರೋಗ್ಯಾದಿ ಸಕಲ ಸಂಪದಭಿವೃದ್ಧಿಯನ್ನು ಜಗದೀಶನು ಅನುಗ್ರಹಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ" ಎಂಬಂಶವನ್ನು ಶ್ರೀಯವರಿಗೆ ತಂತ್ರೀವಾರ್ತೆಯ ಮೂಲಕ ಶ್ರುತಪಡಿಸಬೇಕಾಗಿಯೂ, ಯುವರಾಜರ ವರ್ಧಂತ್ಯುತ್ಸವದ ಜ್ಞಾಪನಾರ್ಥವಾಗಿ ಜೋಗಿಮಟ್ಟಿ ರಸ್ತೆಯು ನಿರ್ಮಿಸಲ್ಪಟ್ಟು "ನರಸಿಂಹರಾಜ ಸುಪಂಥ" ಎಂದು ಕರೆಯಲ್ಪಡಬೇಕಾಗಿಯೂ ನಿರ್ಧರಿಸಲ್ಪಟ್ಟು ಶ್ರೀಮನ್ಮಹಾರಾಜ ಯುವರಾಜರುಗಳ ಶ್ರೀಯಃಪ್ರಾರ್ಥನೆಯ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬ ಉತ್ಸವಭಾಗಿ.

ಫೋಟೋಲಾಕೆಟ್ಸ್.



ಈ ಪ್ರಕಾರ ಘಡಿಯಾರದ ಸರಪಳಿಗೆ ಹಚ್ಚುವ ಲಾಕೇಟುಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೂಚುಗಳೂ, ಅಪೂರ್ವವಾದ ಅತ್ಯಂತ ಫ್ಯಾನ್ಸಿಯಾದ್ದು ಆದರಿಂದ ತಮ್ಮ ಇಚ್ಛಿತ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ಪದರಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ, ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರ ಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮಹಮದೀಯ ಧರ್ಮದ ಜಗದಾದಪೀರಸಾಹೇಬ ಅಜಮೀರದ ಖಾಜಾವಲಿ, ಮುಂತಾದ ಬೇಕವುಳ್ಳದ ಅನೇಕ ದೇವತಾ ಮತ್ತು ಸಾಧು ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೆ. ಲಾಕೇಟಾದಲ್ಲಿ ೨, ಬ್ರೂಚದಲ್ಲಿ ೧, ಫೋಟೋ ಇರುವವೂ ಕ್ರಯ ಗಿಲ್ಟಬ್ರೂಚವೂ ೬, ೮, ಆಣೆ. ರೋಲಗೋಲ್ಡ ಬ್ರುಚವೂ ರೂ. ೧—೩—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳಿಯವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿವುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವು ಕ್ರಯ ರೂ. ೧—೧೩—೦ ಪಾವಲಿ ಆಕಾರದ ಪ್ಲೇನ ಮತ್ತು ಪ್ಯಾನ್ಸಿ ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ಶಕ್ತಿ ಆಕಾರವೂ, ಅಥವಾ ಗುಂಡ ಆಕಾರವೂ ಇರುವವುಗಳ ಕ್ರಯ ರೂ. ೧-೪-೦ ೧—೮—೦.

ಇವುಗಳ ಪೂರ್ತ ನಮ್ಮ ಕಾರಖಾನಾದಲ್ಲಿ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸುದರ್ಶನಲಾಭ, ೪ ಪಂಚಮುಖದ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಶರಭಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾವೇರಿ ಕಮತಗಿ ಹುಚ್ಚಪ್ಪನವರೂ ಸಿರಸಂಗಿ ಸರದೇಸಾಯಿ, ರುದ್ರಗವಡ್ರು ಮುಂತಾದ ಅನೇಕ ಸಾಧು ಸತ್ಪುರುಷರವೂ ಫೋಟೋ ಸಿಗುತ್ತವೆ. ಕ್ರಯ ಫುಲಸ್ಕೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಪ್ರತಿವಂದ ಊರಿಗೆ ಮಾರಾಟಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟ್ಯಾಂಪ್ ಕಳುಹಿಸಿ ಕೊಟ್ಟು ಕ್ಯಾಟ್ಲಾಗ ಬುಕ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.

ದಿ ಶಾರದಾ ಫೋಟೋ ಕಂಪನಿಯ ಮಾಲಕ,
ಗಂಗಪ್ಪಾ ಬೇರಗೇ ಸೋಲ್ಲಾಪುರ ಸಿಟಿ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:— ಏ. ಎ. ಎಸ್. ಪಾಣಿ ಅಂಡ್ ಕೊ,
17 ಸಾಹುಕಾರಪೇಟೆ, ಮದರಾಸ್.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 26

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗಕ್ಕವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೩ ರೂ. ೧೩ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ಕುರಿ, ನವೆ, ಮಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

17 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಜೂನ್ ತಾ॥ ೧ ರಿಂದ ೧೯೧೯ ನೆಯ ಜೂನ್ ತಾ॥ ೭ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಜ್ಯೇಷ್ಠ ಶು॥ ತದಿಗೆಯಿಂದ ಜ್ಯೇಷ್ಠ ಶು॥ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
1	[1] ಭಾನು	ತದಿಗೆ	16-6	ಆರಿದ್ರಾ	3-18	19
2	ಸೋಮ	ಚೌತಿ	12-16	ಪುನ	1-13	20
3	[2] ಮಂಗಳ	ಪಂಚ	9-29	ಪುಷ್ಯ	0-6	21
4	ಬುಧ	ಷಷ್ಠಿ	7-46	ಆಶ್ಲೇ	0-4	22
5	ಗುರು	ಸಪ್ತಮಿ	7-15	ಮಖಾ	1-16	23
6	ಶುಕ್ರ	ಅಷ್ಟಮಿ	8-4	ಪೂಫ	3-39	24
7	ಶನಿ	ನವಮಿ	10-5	ಉಫ	7-15	25

(1) ಕದಲೀಗೌರೀವ್ರತಂ. (2) ಸ್ಕಂದಪಂಚಮಿ ದಗ್ಧಯೋಗಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]
[ಅಂಚೆವೆಚ್ಚ ಸೇರಿ ೩-೪-೦]

ಬಸವ ಸಮಿತಿ
ಬೆಂಗಳೂರು

REGISTERED NO. M. 124.

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಜೂನ್ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೨೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೩ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣಾರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಕಿಲ್ಲೀಕೆ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೩ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೩ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸೀಮೆ ತಲೆದಿಂಬುಗಳು.

ಈ ದಿಂಬುಗಳು ನೋಡಲಿಕ್ಕೆ ಚೀಲದಂತೆ ಕಾಣುವವು. ಇವಕ್ಕೆ ಬಾಯಿಂದ ಗಾಳಿಯನ್ನು ತುಂಬಿಸಿ ಹಾಕಿದರೆ ತಲೆದಿಂಬಾಗುವುದು. ತಿಗಣೆ ಮುಂತಾದವುಗಳು ಸೇರಲು ಅವಕಾಶವಿಲ್ಲ. ಪ್ರಯಾಣಿಕರು ಜೇಬಿನಲ್ಲಿ ಇಟ್ಟುಕೊಂಡು ಹೋಗಬಹುದು. ಇದು ಪ್ರತಿಯೊಬ್ಬರಿಗೂ ಉಪಯೋಗವಾದದ್ದು. ನಾರು, ಅರಳೆ, ಮುಂತಾದ ದಿಂಬುಗಳಿಗಿಂತಲೂ ಬಹು ಚೆನ್ನಾಗಿರುವದು. ಭಾರವಿರುವದಿಲ್ಲ. ಕ್ರಯ 1 ಕ್ಕೆ ರೂ. 1—0—0.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
18 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಿಂದಾಸಿ	೦—೪—೦
ವ್ರತರಂಜಿಕೆ	೦—೩—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೩—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	0—12—0.
12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಗುವುದಿಲ್ಲ. ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಓರಟು ಕೆಲಸವನ್ನಾದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,

ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
18 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೩೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೩ ಆಣೆ.

35 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

25

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೋತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚಾಗಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, [illegible] ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೩ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂಬುದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತದಲ್ಲಿಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ [illegible] ಹೋಗುತ್ತವೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ತಮಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
25 ವೈದ್ಯಶಾಲಾ, ಮೈಸೂರು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ ೮ ಆಣೆ.

21 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:— ಏ. ಎ. ಎಸ್. ಪಾಣಿ ಅಂಡ್ ಕೊ,
18 ಸಾಹುಕಾರಪೇಟೆ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜೂನ್ ತಾ|| ೮ ನೆಯ ಭಾನುವಾರ.

ಸರ್ಕಾರದ ಮರ್ಯಾದೆ.

ಚಿತ್ರದುರ್ಗದ ಶ್ರೀಮನ್ಮಹಾನಿರಂಜನ ಜಗದ್ಗುರು ಪೀಠದ ಮಹಾಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಿದ ಸಂದರ್ಭದಲ್ಲಿ ಸರ್ಕಾರದಿಂದ ನಡೆಯಿಸಿಕೊಡಬೇಕಾದ ಮರ್ಯಾದೆಗಳನ್ನು ಕುರಿತು ಬರೆದುಕೊಳ್ಳಲ್ಪಟ್ಟಿದ್ದ ಅರ್ಜಿಗಳಮೇಲೆ ಗೌರ್ನಮೆಂಟಿನವರಿಂದ ಕೊಡಲ್ಪಟ್ಟಿರುವ ಉತ್ತರವನ್ನು ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಈ ಉತ್ತರದಿಂದ ನಮ್ಮ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಸರ್ವಮತಗಳಮೇಲೂ ಸಮಾನದೃಷ್ಟಿಯಿಟ್ಟು ಆಯಾ ಮತಗಳ ಸ್ವಾತಂತ್ರ್ಯಗೌರವಗಳನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದು ಹೇಗೆ ನಿರ್ಧರಿಸಿಕೊಂಡಿರುವರೋ ಅದು ಗೊತ್ತಾಗುವುದು. ಈ ಅವರ ಉದಾರಸಂಕಲ್ಪವನ್ನು ಕುರಿತು ನಾವು ಅಭಿನಂದಿಸದೆ ಇರಲಾರೆವು.

ಆದರೆ ಈ ಸಂದರ್ಭದಲ್ಲಿ ನಮ್ಮ ಪ್ರಭುತ್ವದವರ ಗಮನಕ್ಕಾಗಿ ಒತ್ತಿ ಹೇಳಬೇಕಾದ ವಿಚಾರವೊಂದಿರುವುದು. ಅದನ್ನು ಉದಾರಚಿತ್ತದಿಂದಲೇ ಅವರು ಪರಿಭಾವಿಸಿ ನ್ಯಾಯಕ್ಕೆ ಕೊರತೆಯಿಲ್ಲದಂತೆ ಈಡೇರಿಸಿಕೊಡದೆ ಇರಲಾರರೆಂಬ ಭರವಸೆಯಿಂದ ಇಲ್ಲಿ ಶ್ರುತಪಡಿಸುವೆವು. ಅದೇನೆಂದರೆ—ಈ ಚಿತ್ರದುರ್ಗದ ಜಗದ್ಗುರುಪೀಠಕ್ಕೆ ಬಹು ದೀರ್ಘಕಾಲದಿಂದಲೂ ಶೃಂಗಗಿರಿ ಪೀಠಕ್ಕೆ ಸಲ್ಲತಕ್ಕ ಮರ್ಯಾದೆಗಳೆಲ್ಲಾ ಸಲ್ಲುತ್ತ ಬಂದಿದ್ದುವೆಂಬುದು ಸರ್ಕಾರದಲ್ಲಿರುವ ಹಿಂದಣ ರಿಕಾರ್ಡುಗಳಿಂದೆಲ್ಲಾ ಸಿದ್ಧವಾಗಿದೆ. ಅಂಥ ಅನೂಚಾನವಾಗಿ ಬಂದಿದ್ದ "ಮಾಮೂಲು" ಮರ್ಯಾದೆಗಳೊಳಗೂ ಅಡ್ಡಪಲ್ಲಕ್ಕಿಯ ಬಿರುದು ೧೯೦೭ನೆ ಇಸವಿಯ ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಪ್ರಕಾರ ತಪ್ಪಿಸಲ್ಪಟ್ಟಿರುವುದು. ಅದರಿಂದಾದ ನೋವು ವೀರಶೈವ ಪ್ರಜೆಗಳ ಮನಸ್ಸಿನಲ್ಲಿ ಇನ್ನೂ ಇದ್ದೇ ಇರುವುದು. ಯಾವ ಕಾಲಕ್ಕೆ ಅದು ಪರಿಹೃತವಾಗುವುದೋ ಗೊತ್ತಾಗಲಿಲ್ಲ. ಅದು ಹಾಗಿರುತ್ತ, ಈಗ ಕೊಟ್ಟಿರುವ ಅಪ್ಪಣೆಯಲ್ಲಿ ಉಳಿದ ಮರ್ಯಾದೆಗಳನ್ನಾದರೂ ಶೃಂಗಗಿರಿ ಪೀಠದ ಮರ್ಯಾದೆಗಳಿಗೆ ಸಮನಾಗಿ ಸಲ್ಲಿಸುವಂತೆ ಮಾಡುವುದು ಧರ್ಮವಾಗಿಲ್ಲವೆ? ಏಕೆಂದರೆ—ಅದ್ವೈತ ಮತಸ್ಥಾಪನಾಚಾರ್ಯರಾದ ಶಂಕರಾಚಾರ್ಯರ ಮುಖ್ಯ ಪೀಠವಾದ ಶೃಂಗೇರಿ ಸಂಸ್ಥಾನಕ್ಕೆ ವಿಶೇಷವಾದ ಸನ್ಮಾನಗಳು ನಡೆಯುತ್ತಿರುವಾಗ, ಅದರ ಶಾಖಾ ಮತಗಳಿಗೆ ಕಡಿಮೆ ತರಗತಿಯ ಮರ್ಯಾದೆಗಳು ನಡೆದರೂ ಬಾಧಕವಿಲ್ಲ. ಮುಖ್ಯ ಮತಕ್ಕಾಗುತ್ತಿರುವ ಮರ್ಯಾದೆಯು ಆ ಮತ ಸಾಮಾನ್ಯಕ್ಕೂ ಸಂತೃಪ್ತಿಕರವಾಗಿಯೇ ಇರುತ್ತದೆ, ಪರಕಾಲ ಮತಕ್ಕೆ ವಿಶಿಷ್ಟಮರ್ಯಾದೆಗಳು ಸಲ್ಲುತ್ತಿರುವುದರಿಂದ, ಉಳಿದ ಶ್ರೀ ವೈಷ್ಣವ ಗುರುಪೀಠಗಳಿಗೆ ಯತ್ಕಿಂಚಿತ್ ಕಡಿಮೆಯಾದ ಮರ್ಯಾದೆಗಳು ಸಂದರೂ ಆ ಮತಸ್ಥರ ಮನೋವೇದನೆಗೆ ಅವಕಾಶವಿರುವುದಿಲ್ಲ. ಮಾಧ್ವಮತವಿಷಯವೂ ಹಾಗೆಯೇ ಇದೆ. ಮುಖ್ಯವಾದ ಉತ್ತರಾದಿ ಮತಕ್ಕೆ ಹೆಚ್ಚಿನ ಮರ್ಯಾದೆಗಳೆಲ್ಲಾ ಸಲ್ಲುತ್ತಿರುವುದರಿಂದ ಅದೇ ಮತದ ವ್ಯಾಸರಾಯ ರಾಘವೇಂದ್ರ ಮತಗಳಿಗೆ ಕಡಿಮೆತರಗತಿಯ ಮರ್ಯಾದೆಗಳು ಸಂದರೂ ಆ ಮತದವರಿಗೆ ಅಷ್ಟೇನೂ ಕೊರತೆಯೆನ್ನಿಸುವುದಿಲ್ಲ. ವೀರಶೈವಮತದಲ್ಲೂ ಕೂಡ ಈ ದುರ್ಗದ ಮತದ ಹೊರತು ಇತರ ಯಾವುದೊಂದು ಆಚಾರ್ಯಪೀಠಕ್ಕೇ ಆದರೂ ಉತ್ತಮವರ್ಗದ ವಿಶಿಷ್ಟ ಮರ್ಯಾದೆಗಳು ನಡೆಯುತ್ತಿದ್ದು ಇದಕ್ಕೆ ಕಡಿಮೆ ತರಗತಿಯ ಮರ್ಯಾದೆಗಳು ಸಲ್ಲುವಂತಾಗಿದ್ದರೂ ಮತಸ್ಥರು ಅಷ್ಟೇನೂ ಕೊರಗಬೇಕಾದುದಿರಲಿಲ್ಲ. ಹಾಗಿಲ್ಲದೆ ಇತರ ವೀರಶೈವ ಮುಖ್ಯಪೀಠಗಳೆಲ್ಲಕ್ಕಿಂತಲೂ ಅತಿಶಯವಾದ ಮರ್ಯಾದೆಯನ್ನನುಭವಿಸುತ್ತಿರುವ ಈ ಪೀಠಕ್ಕೆ ಇತರ ಮತತ್ರಯದ ಮುಖ್ಯಪೀಠಗಳಿಗೆ ಸಲ್ಲುತ್ತಿರುವಂಥ ಗೌರವವನ್ನು ಸಲ್ಲಿಸದಿರುವುದು ಅಧರ್ಮವಲ್ಲವೆ?

ವೀರಶೈವ ಮತವು ಇತರ ಮತಗಳಂತೆಯೇ ಒಂದು ಸ್ವತಂತ್ರ ಮತವಾಗಿರುವುದು. ಇದರ ಮುಖ್ಯಾಚಾರ್ಯ ಪೀಠಗಳು ಅನೂಚಾನವಾದ ಮರ್ಯಾದೆಯಿಂದ ಗೌರವಿಸಲ್ಪಡುತ್ತಾ ಬಂದಿರುವುವು. ಎಷ್ಟೋ ಸಂದರ್ಭದಲ್ಲಿ "ಮಾಮೂಲನ್ನು" ಗೌರವಿಸಲು ದತ್ತಚಿತ್ತರಾಗಿರುವ ನಮ್ಮ ಪ್ರಭುತ್ವದವರು, ವೀರಶೈವ ಗುರುಪೀಠಗಳ ವಿಷಯದಲ್ಲಿ ಆ ಮಾಮೂಲಿಗೆ ಗೌರವವನ್ನು ತೋರಿಸದೆ ಹೋಗುವುದು ಆಶ್ಚರ್ಯಕರವಾಗಿರುವುದು. ಈ ಮತದ ಪ್ರಜೆಗಳು ಮೈಸೂರು ದೇಶದಲ್ಲಿ ೮ ಲಕ್ಷ ವಿರುವರು; ಹೊರಗೆ ೩೫ ಲಕ್ಷವಿರುವರು ಅಲ್ಲದೆ ಈ ಮತದ ಭಕ್ತಕೋಟಿಗೆ ಸೇರಿರುವ ಜನರ ಸಂಖ್ಯೆಯು ಕೋಟ್ಯಂತರವಾಗಿರುವುದು. ಶ್ರೀ ಚಿತ್ರದುರ್ಗ ಜಗದ್ಗುರು ಪೀಠಕ್ಕೆ ನಮ್ಮ ಪ್ರಜಾರಂಜಕ ಪ್ರಭುತ್ವದವರಿಂದ ನ್ಯಾಯಾನುಸಾರವಾಗಿ ತೋರಿಸಲ್ಪಡುವ ಗೌರವವು ಮೇಲ್ಕಂಡ ಪ್ರಜಾಕೋಟಿಗೆಲ್ಲಾ ಎಷ್ಟು ಮನಸ್ಸಮಾಧಾನವನ್ನುಂಟುಮಾಡಬಲ್ಲುದೋ ಅಷ್ಟು ಅಸಮಾಧಾನವು ಅದರ ಮರ್ಯಾದಾಲೋಪದ ಅಪ್ಪಣೆಯಿಂದುಂಟಾಗುವುದು ಸಹಜವು. ಕೆಲಕಾಲದಿಂದೀಚೆಗೆ ವೀರಶೈವ ಗುರುಪೀಠಗಳು ತಮ್ಮ ಪ್ರಾಚೀನಮರ್ಯಾದೆಗಳನ್ನುಳಿಸಿಕೊಂಡು ಈ ದೇಶದಲ್ಲಿ ಬಾಳುವುದು ಅತಿಶಯ ಕಷ್ಟವಾಗಿ ಬಂದಿರುವುದು. ವಿನೀತರೂ, ರಾಜಭಕ್ತಿಧುರಂಧರರೂ, ನಂಬುಗೆಯ ಪ್ರಜೆಗಳೂ, ಹೆಚ್ಚಿನ ಸಂಖ್ಯಾಕರೂ ಆದ ವೀರಶೈವರು ಕೇವಲ ಧರ್ಮಶ್ರದ್ಧಾಳುಗಳಾಗಿರುವುದರಿಂದ, ಇತರ ವಿಷಯದಲ್ಲಿ ಎಷ್ಟು ಕಷ್ಟನಿಷ್ಠುರಗಳೂ, ತೊಂದರೆಗಳೂ ತಮಗೆ ಸಂಭವಿಸಿದರೂ ತಾಳಿಕೊಳ್ಳಬಲ್ಲರು; ತಮ್ಮ ಧಾರ್ಮಿಕವಿಷಯದಲ್ಲೂ ಧರ್ಮಗುರುಗಳವಿಷಯದಲ್ಲೂ ಉಂಟುಮಾಡಲ್ಪಡುವ ಕೊರತೆಯನ್ನು ಮಾತ್ರ ಅವರು ಅತ್ಯಂತ ದುರ್ಭರವಾಗಿ ತಿಳಿದುಕೊಳ್ಳುವರು. ಪ್ರಜಾರಂಜನೆಯೇ ಮುಖ್ಯ ಕರ್ತವ್ಯವಾಗುಳ್ಳ ನಮ್ಮ ಸಂಮಾನ್ಯ ಪ್ರಭುತ್ವದವರು ಈ ನಿಜತತ್ವವನ್ನು ಪರಿಭಾವಿಸಿ, ಶ್ರೀ ಚಿತ್ರದುರ್ಗ ಪೀಠಕ್ಕೆ ಪೂರ್ವಾರಭ್ಯ ಸಲ್ಲುತ್ತ ಬಂದಿರುವ ಗೌರವಗಳಿಗೆ ಅನುಗುಣವಾದ ಮರ್ಯಾದೆಯನ್ನು ಸಲ್ಲಿಸುವ ವಿಷಯದಲ್ಲಿ ಈಗಣ ಅಪ್ಪಣೆಯನ್ನು ಪುನರ್ವಿಮರ್ಶೆಮಾಡಿ, ಲಕ್ಷೋಪಲಕ್ಷ ಪ್ರಜೆಗಳ ಮನಸ್ಸಿಗೆ ನಿಷ್ಕಾರಣವಾಗಿ ಉಂಟಾಗಿರುವ ನೋವನ್ನು ಪರಿಹರಿಸುವ ಮೂಲಕ ಅವರಲ್ಲಿ ನಿರತಿಶಯವಾದ ಕೃತಜ್ಞತೆಯೂ, ಇತೋಪ್ಯತಿಶಯವಾದ ರಾಜನಿಷ್ಠೆಯೂ, ಅಭಿವೃದ್ಧಿಗೊಳ್ಳುವಂತೆ ಅಪ್ಪಣೆಮಾಡುವವರಾಗಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ಆರೋಗ್ಯಭಾಗ್ಯದಿಂದಿರುವ ಸರ್ದಾರ್ ಕಾಂತರಾಜ ಅರಸಿನವರು ಕಳೆದ ವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿ, ಅಲ್ಲಿಂದ ಮದ್ರಾಸಿಗೆ ತೆರಳಿದರು.

ಶ್ರೀಮಚ್ಚಕ್ರವರ್ತಿಯವರ ವರ್ಧಂತೀ ಮಹೋತ್ಸವಾರ್ಥವಾಗಿ ಕಳೆದ ಮಂಗಳವಾರ ಎಲ್ಲಾ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ರಜಾ ಕೊಡಲ್ಪಟ್ಟಿದ್ದಿತು.

ಬರುವ ತಾ|| ೧೦ ರಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಅ|| ದಿವಾನರವರ ಅಧ್ಯಕ್ಷತೆಯಿಂದ ಸಂಪದಭ್ಯುದಯ ಸಮಾಜದ ವಾರ್ಷಿಕಾಧಿವೇಶನವು ಜರುಗುವುದಾಗಿದೆ.

ಅಫ್ಘನ್ ಯುದ್ಧದಲ್ಲಿ ಇಂಡ್ಯಾ ಸರ್ಕಾರದವರಿಗೆ ನಾವು ತಕ್ಕಷ್ಟು ಸಹಾಯವನ್ನು ಮಾಡಲು ಸಿದ್ಧರಾಗಿರುವೆವೆಂದು ನಮ್ಮ ಸರ್ಕಾರದವರು ವೈಸ್ರಾಯರಿಗೆ ತಿಳಿಯಪಡಿಸಿಕೊಂಡಿದ್ದಾರೆ.

ನಾಳೆ ಸೋಮವಾರ ಪದ್ಧತಿಯಂತೆ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ೩೬ ನೆ ವರ್ಷ ವರ್ಧಂತೀ ಪ್ರಯುಕ್ತವಾದ ಉತ್ಸವಗಳೆಲ್ಲಾ ವೈಭವದಿಂದ ಜರುಗುವುದಕ್ಕೆ ಏರ್ಪಾಟಾಗಿದೆ. ಮುಖ್ಯಾಧಿಕಾರಿಗಳನೇಕರು ರಾಜಧಾನಿಗೆ ಬಂದೂ ಬರುತ್ತಲೂ ಇದ್ದಾರೆ.

ಬಾಲಿಕಾ ಪಾಠಶಾಲೆಗಳ ಇನ್ಸ್‌ಪೆಕ್ಟ್ರೆಸ್ಸಿಗಾಗಿ ೩ ಮಂದಿ ವಿದ್ಯಾವತಿಯರನ್ನು ೭೫ ರೂ. ನಿಂದ ೧೨೫ ರೂ. ವರೆಗಣ ಸಂಬಳದಿಂದ ನಮ್ಮ ಸರ್ಕಾರದವರು ಗೊತ್ತುಮಾಡಿದ್ದಾರೆ. ಇವರಿಗೆ ಬೇಕಾದ ಉಪಕರಣಗಳಿಗೆ ೧|| ಸಾವಿರ ರೂ. ಗಳ ವೆಚ್ಚವಲ್ಲದೆ ಪ್ರತಿವರ್ಷವೂ ಈ ಏರ್ಪಾಟಿಗಾಗಿ ೧೭೦೦೦ ರೂ. ಗಳ ವೆಚ್ಚಮಾಡಲು ಸರ್ಕಾರದಪ್ಪಣೆಯಾಗಿದೆ.

ರಾಜಧಾನಿಯಲ್ಲಿ ವರ್ಧಂತ್ಯುತ್ಸವ ಸಮಯದಲ್ಲಿ ನಡೆಯುತ್ತಿದ್ದ ಕುದುರೆಯ ಪಂದ್ಯವು ಯುದ್ಧದ ದೆಸೆಯಿಂದ ನಿಂತುಹೋಗಿದ್ದಿತು. ಆದರೆ ಈ ವೇಳೆ ಈ ತಾ|| ೧೦ ಮತ್ತು ೧೨ ರಲ್ಲಿ ಕುದುರೆಯ ಪಂದ್ಯವು, ತಾ|| ೧೪ ರಲ್ಲಿ ಜಂಬಾನಾಪಂದ್ಯವೂ, ಜಟ್ಕಾಬಂಡಿ ಕುದುರೆಯ ಪಂದ್ಯವೂ, ತಾ|| ೧೧ ಮತ್ತು ೧೩ ರಲ್ಲಿ ಕುದುರೆಯ ಪ್ರದರ್ಶನವೂ ನಡಿಯಲೇರ್ಪಾಟಾಗಿದೆ.

ಹಾಸನದ ಡಿ|| ಪೊಲೀಸ್ ಸೂಪರಿಂಟೆಂಡೆಂಟರಾದ ಮಿ|| ಮಹಮದ್ ಪೀರ್, ಬಿ.ಎ., ಯವರು ಮೈಸೂರು ಮ್ಯುನಿಸಿಪಾಲಿಟಿಯ ಚೀಫ್ ಆಫೀಸರಾಗಿ ನಿಯಮಿಸಲ್ಪಟ್ಟುದರಿಂದ ಬೆಂಗಳೂರು ಡಿ|| ಎಕನಾಮಿಕ್ ಸೂಪರಿಂಟೆಂಡೆಂಟರಾದ ಮ|| ಜಿ. ಶಾಂತವೀರಪ್ಪ, ಬಿ. ಎ., ಯವರು ೫ ನೆಯ ತ|| ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿ ನಿಯಮಿಸಲ್ಪಟ್ಟು ಹಾಸನ ಡಿ|| ಪೊಲೀಸ್ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಕಳೆದ ಗುರುವಾರ ಹಗಲಿನಲ್ಲಿ ಅತ್ಯುತ್ತಮವಾದ ಮಳೆಯಾಯಿತು. ಈ ಡಿಸ್ಟ್ರಿಕ್ಟಿನ ಅನೇಕ ಭಾಗಗಳಲ್ಲಿ ನಿಂತಿರುವ ಜೋಳವೇ ಮೊದಲಾದ ಪೈರುಗಳು ಉತ್ತಮಸ್ಥಿತಿಯಲ್ಲಿವೆ. ಕೆಲವು ಕಡೆ ಜೋಳದಪೈರು ಅಳುಮಟಕ್ಕೆ ಹಾಲಕ್ಕಿಯು ತಿನೆಗೂಡಿರುತ್ತವೆ. ಮುಂಗಾರು ಸರಿಯಾಗಿ ನಡೆಯುವುದಿಲ್ಲವೆಂದು ಸಿದ್ಧಾಂತಿಗಳು ಪಂಚಾಂಗದಲ್ಲಿ ಬರೆದಿದ್ದಾರೆ. ದೈವಾನುಕೂಲ್ಯವು ಹೀಗಾಗಿ ಪ್ರಜೆಗಳಿಗೆ ಧೈರ್ಯವನ್ನುಂಟುಮಾಡಿದೆ.

ರಾಜಧಾನಿಯಲ್ಲಿ ನಡೆದಿರುವ ಬಡಾವಣೆಗಳೆಲ್ಲಾ ದಕ್ಷಿಣ ಪಶ್ಚಿಮದಿಕ್ಕುಗಳಲ್ಲೇ ಆಗಿದ್ದಿತು. ಪೂರ್ವೋತ್ತರದಿಕ್ಕುಗಳಲ್ಲಿ ಪುರಾಭಿವೃದ್ಧಿಯಾಗದಿರುವ ಲೋಪವನ್ನು ನಮ್ಮ ಶ್ರೀಮನ್ಮಹಾರಾಜರು ಪರಿಹರಿಸಲು ಈಗ ಮನಗೊಟ್ಟಿದ್ದಾರೆ. ಅವರ ಸೂಚನೆಯಂತೆ ಟ್ರಸ್ಟ್‌ಬೋರ್ಡಿನವರು ಕೆಲಸಮಾಡಲು ವ್ಯಗ್ರರಾಗಿದ್ದಾರೆ. ಶ್ರೀರಂಗಪಟ್ಟಣದ ಮಾರ್ಗದ ಈಶಾನ್ಯದಿಕ್ಕಿನ ಬೀರೆಯ ಮೇಲೂ ಹೊಸ ಮನೆಗಳನ್ನು ಕಟ್ಟಲು ಅವಕಾಶವು ಮಾಡಲ್ಪಡುತ್ತಿದೆ. ವೀರನಗೆರೆ ಬಡಾವಣೆಗಾಗಿ ಈ ವರ್ಷಕ್ಕೆ ೧|| ಲಕ್ಷ ರೂ. ಗಳನ್ನೂ ಶ್ರೀರಂಗಪಟ್ಟಣದ ಮಾರ್ಗದ ಇಕ್ಕೆಲದ ಬಡಾವಣೆಗಾಗಿ ೧೬೦೮೩೫ ರೂ. ಗಳನ್ನೂ ವೆಚ್ಚಮಾಡಲು ಸರ್ಕಾರದವರು ಅನುಮತಿಕೊಟ್ಟಿದ್ದಾರೆ.

ಮೊಟಾರುಗಳು ಬಂದಮೇಲೆ ಅಧಿಕಾರಿಗಳ ಸರ್ಕೀಟು ಹೆಸರಿಗೆ ಮಾತ್ರ ನಡೆಯುತ್ತಿರುವುದೆಂಬ ದೂರು ಪ್ರಬಲವಾಗಿದೆ. ಗ್ರಾಮಾಂತರಗಳಿಗೆ ಮುಖ್ಯಾಧಿಕಾರಿಗಳು ಹೋಗಿ ವಿಚಾರಿಸುವುದೇ ಅಭಾವವಾಗಿದೆ. ಇನ್ನು ಮುಂದೆ ಸಬ್ ಡಿವಿಜನಲ್ ಆಫೀಸರೂ ಡಿ|| ಕಮಿಷನರುಗಳೂ ಕಡೇಪಕ್ಷ ತಮ್ಮ ಇನ್ಸ್‌ಪೆಕ್ಷನ್ನಿಗಾಗಿ ಒಂದೊಂದು ಕುದುರೆಯನ್ನಾದರೂ ಇಟ್ಟುಕೊಳ್ಳಬೇಕೆಂದೂ, ಸಂಸ್ಥಾನದ ಚೀಫ್ ಕಮ್ಯಾಂಡರು ಇಂಥ ಕುದುರೆಗಳನ್ನು ಅವರುಗಳಿಗೆ ಒದಗಿಸಿಕೊಟ್ಟು ಕಂತುವಾಗಿ ಅವುಗಳ ಬೆಲೆಯನ್ನು ತೆಗೆದುಕೊಳ್ಳಬೇಕೆಂದೂ ಸರ್ಕಾರಿ ಅಪ್ಪಣೆಯಾಗಿರುವುದಾಗಿ ಕೇಳುತ್ತೇವೆ. ಮನಮುಟ್ಟಿ ಮೈಬಗ್ಗಿಸಿ ಕೆಲಸ ಮಾಡದ ಅಧಿಕಾರಿಗಳಿಂದ ಕೆಲಸಮಾಡಿಸುವುದಕ್ಕೆ ಈ ಬಡಕುದುರೆಗಳಿಂದಾದೀತೆ?

ಸಾರ್ವಭೌಮರ ವರ್ಧಂತಿಯ ದಿವಸ ಪದ್ಧತಿಯಮೇರೆ ಭಾರತೀಯರನೇಕರಿಗೆ ಕೊಡಲ್ಪಟ್ಟ ಬಿರುದುಗಳ ಪಟ್ಟಿಯು ಪ್ರಕಟಿತವಾಗಿದೆ. ಅವುಗಳೊಳಗೆ ನಮ್ಮ ಮೈಸೂರಿನಲ್ಲಿರುವವರೊಳಗೆ ರೆಸಿಡೆಂಟರಾದ ಮಿ|| ಕಾಬ್‌ರವರಿಗೂ ಚೀಫ್‌ಜಡ್ಜರಾದ ಸರ್ ಲೀಸ್ಲಿಮಿಲ್ಲರ್‌ರವರಿಗೂ ಸಿ. ಬಿ. ಐ. ಎಂಬ ಬಿರುದೂ, ಮೈಸೂರು ಮಡಕೇರಿ ಮೇಲ್ ಕಂಟ್ರಾಕ್ಟರಾದ ಮಿ|| ಕಾಲಂಜಿಯವರಿಗೆ ಖಾನ್‌ಸಾಹೇಬ್ ಎಂಬ ಬಿರುದೂ, ಬೆಂಗಳೂರು ಕಂಟೋನ್ಮೆಂಟಿನ ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರಾದ ಮಿ|| ಗುಲಾಂ ಮಹಮ್ಮದ್ ಸರ್ದಾರ್‌ರವರಿಗೆ ಖಾನ್‌ಬಹದ್ದೂರ್ ಬಿರುದೂ, ಬೆಂಗಳೂರು ದಂಡಿನ ಮ್ಯು|| ಕೌನ್ಸಿಲರಾದ ಮ|| ಬಿ. ವಿ. ವೆಂಕಟಸ್ವಾಮಿ ನಾಯಡುರವರಿಗೆ ರಾವ್‌ಸಾಹೇಬ್ ಎಂಬ ಬಿರುದೂ ಪ್ರಾಪ್ತವಾಗಿರುತ್ತವೆ.

ಶ್ರೀಮಜ್ಜಗದ್ಗುರುಸ್ವಾಮಿಯು ಬೆಂಗಳೂರು ಪುರಪ್ರವೇಶಮಾಡಿದಾಗ ಅಲ್ಲಿಯ ಮಹಮ್ಮದೀಯ ಮಹಾಜನರ ಪಕ್ಷದಿಂದ ಒಪ್ಪಿಸಲ್ಪಟ್ಟ ವಿಜ್ಞಾಪನಪತ್ರದ ತಾತ್ಪರ್ಯ.

"ಅತ್ಯಂತ ಸಂಮಾನ್ಯರೂ ದಾನಶೂರರೂ ಮಹನೀಯರೂ ಶೂನ್ಯಪೀಠಾಧಿಪತಿಗಳೂ ಆದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ವಿಜ್ಞಾಪನೆ:—

ತಾವು ಬೆಂಗಳೂರಿಗೆ ದಯಮಾಡಿಸಿದುದರಿಂದ ಈ ಪಟ್ಟಣವು ಪುಷ್ಪಭರಿತವಾದ ದೇವಲೋಕ ನಂದನವನದಂತೆ ಶೋಭಿತವಾಗಿ ನಮಗೆ ಪರಮಾನಂದವನ್ನುಂಟುಮಾಡಿರುವುದು. ಬಹುಕಾಲದಿಂದಲೂ ನಮ್ಮ ಕಣ್ಣುಗಳು ತಾವು ಯಾವ ಮಾರ್ಗದಿಂದ ದಯಮಾಡಿಸುವಿರೋ ಎಂಬ ಕುತೂಹಲದಿಂದ ನಿರೀಕ್ಷಿಸುತ್ತಿದ್ದುವು. ಈಗ ಅವುಗಳ ಆಸೆಯು ಫಲಿಸಿತು. ತಮ್ಮ ಈ ದಿವಸದ ಉತ್ಸವವನ್ನು ನೋಡಲಾಗಿ ಸ್ವರ್ಗಲೋಕದಲ್ಲಾಗುವ ದೇವದೂತರ ಉತ್ಸವದಂತೆ ಕಾಣಿಸುತ್ತಿದೆ. ತಾವು ಜಯದೇವ ನಾಮಕರಾದ ಜಗದ್ಗುರುಗಳಾಗಿದ್ದೀರಿ. ತಾವು ಪರಮಪವಿತ್ರ ಜೀವಿತರು. ತಾವು ಶೂನ್ಯಸಿಂಹಾಸನವನ್ನಲಂಕರಿಸಿದ ಬಳಿಕ ಶ್ರೀ ಮುರುಘರಾಜೇಂದ್ರಾಧಿಕಾರ ಪದವಿಗೆ ವಿಶೇಷ ಮರ್ಯಾದೆಯನ್ನೂ ಕೀರ್ತಿಯನ್ನೂ ತಂದು ಅದಕ್ಕೆ ಕೇವಲ ಅಲಂಕಾರಭೂತರಾಗಿರುತ್ತೀರಿ. ಎಲ್ಲಾ ಭೂಪತಿಗಳೂ ತಮ್ಮ ಮುಂದೆ ವಿನಯದಿಂದ ಶಿರವನ್ನು ಬಗ್ಗಿಸುತ್ತಾರೆ. ಅದುಕಾರಣ ನೀವು ಕೇವಲ ಸನ್ಯಾಸಿಗಳಾಗಿರದೆ ಒಂದು ತೆರದಲ್ಲಿ ಸಾರ್ವಭೌಮರೇ ಆಗಿರುತ್ತೀರಿ. ಪ್ರಾಚೀನವಾದ ಈ ಗುರುಪೀಠವನ್ನು ಏರಿದ ಸಂತತಿಯಲ್ಲಿ ತಾವು ಮಹಾಜ್ಞಾನಿಗಳೂ ಪಂಡಿತರೂ ತಪಸ್ವಿಗಳೂ ಪರಿಶುದ್ಧಚರಿತರೂ ಆಗಿರುತ್ತೀರಿ. ನೀವು ಜಗದ್ಗುರುತ್ವಕ್ಕೆ ಸರ್ವಥಾ ಒಪ್ಪತಕ್ಕವರಾಗಿದ್ದೀರಿ. ಆದುದರಿಂದಲೇ ಭರತಖಂಡದಲ್ಲಿರುವ ಎಲ್ಲಾ ರಾಜ್ಯಗಳೂ ನಿಮಗೆ ವಿಶೇಷ ಮರ್ಯಾದೆಯನ್ನು ಮಾಡುತ್ತಿವೆ. ಈ ಭರತಖಂಡದಲ್ಲಿ ಚಕ್ರವರ್ತಿಗಳಾಗಿದ್ದ ಷಾಹ‌ಅಲಂಘೀರ್ (ಔರಂಗ್‌ಜೇಬ್)ರವರು ನಿಮ್ಮ ಪೀಠದವರನ್ನು ತಮ್ಮ ಗುರುವೆಂದು ಭಾವಿಸಿ ಶಿಕ್ಷಾಶಿಲೆಗಳನ್ನು ಗೌರವಾರ್ಥವಾಗಿ ಒಪ್ಪಿಸಿರುತ್ತಾರೆ. ಹೈದರಾಬಾದ್ ನವಾಬರಾದ ನಿಜಾಮರು ನಿಮ್ಮ ಪೀಠಕ್ಕೆ ಶೂನ್ಯಛತ್ರವನ್ನು ಮರ್ಯಾದಾರ್ಥವಾಗಿ ಅರ್ಪಿಸಿರುತ್ತಾರೆ. ಹೀಗೆ ಬಹು ಪೂರ್ವಕಾಲದಿಂದಲೂ ಅನೇಕ ರಾಜಾಧಿರಾಜರುಗಳ ಮರ್ಯಾದೆಯು ತಮ್ಮ ಪೀಠಕ್ಕೆ ಸಲ್ಲುತ್ತ ಬಂದಿರುವುದಲ್ಲದೆ ಬಿಜಾಪುರದ ನಬಾಬರುಗಳ ಆಸ್ಥಾನದಲ್ಲೂ ತಮ್ಮ ಮರ್ಯಾದೆಯು ಅಸಾಧಾರಣ ರೀತಿಯಿಂದ ನಡೆಯುತ್ತಿದ್ದಿತು. ತಮ್ಮ ಗುರುಪೀಠ ಮರ್ಯಾದೆಯನ್ನು ಸಂಭಾವಿಸದೆ ಇರುವ ಯಾವೊಬ್ಬನ ರಾಜನೇ ಆಗಲೀ ಚಕ್ರವರ್ತಿಯೇ ಆಗಲೀ ಯಾರೂ ಇರುವುದಿಲ್ಲ. ಅಲ್ಲದೆ ಈಗಣ ಆಂಗ್ಲಪ್ರಭುತ್ವದವರು ಕೂಡ ತಮ್ಮನ್ನು ಸಂಬೋಧಿಸುವ ಕಾಲದಲ್ಲಿ ರಿಕಾರ್ಡುಗಳೊಳಗೆ ವಿಶೇಷ ಮರ್ಯಾದಾವಚನಗಳನ್ನೇ ಉಪಯೋಗಿಸುತ್ತಿದ್ದಾರೆ. ನಮ್ಮ ಮೈಸೂರು ಸರ್ಕಾರದಲ್ಲೂ ಸಹ ಹಗಲೂ ರಾತ್ರಿ ನಿಮ್ಮ ಗುರುಪೀಠದ ಮರ್ಯಾದೆಯ ವಿಷಯಕವಾದ ಚರ್ಚೆಯೇ ನಡೆಯುತ್ತಿದೆ. ನೀವು ಅನೇಕ ಸ್ಥಲಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿ, ಎಲ್ಲಾ ಮತ ಜಾತಿ ವಿದ್ಯಾರ್ಥಿಗಳಿಗೆ ನೀವು ಸಹಾಯಕರಾಗಿರುತ್ತೀರಿ. ಪ್ರತಿಯೊಂದು ವಿದ್ಯಾರ್ಥಿಯ ಕಷ್ಟವನ್ನು ನಿವಾರಣೆ ಮಾಡುವಲ್ಲಿ ನಿಮ್ಮ ಸಹಾಯವು ಆಯುಧಭಯದಿಂದ ಸಂರಕ್ಷಿಸುವ ಗುರಾಣಿಯ ರೂಪದಿಂದಿರುತ್ತದೆ. ತಾವು ಹೈದರಾಬಾದಿಗೆ ದಯಮಾಡಿಸಿದ್ದ ಕಾಲದಲ್ಲಿ ಅಲ್ಲಿದ್ದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಅನೇಕ ಸಹಾಯ ಪ್ರೋತ್ಸಾಹಗಳನ್ನು ಮಾಡಿರುತ್ತೀರಿ. ಪ್ರತಿಯೊಂದು ದೇಶದಲ್ಲೂ ನಿಮ್ಮ ಸ್ಕಾಲರ್ಷಿಪ್ಪುಗಳೂ ವಿದ್ಯಾರ್ಥಿಭವನಗಳೂ ವ್ಯವಸ್ಥಿತರೀತಿಯಿಂದ ನಡೆಯುತ್ತಿವೆ. ನಿಮ್ಮ ಈ ತೆರನಾದ ಸಾನುಭೂತಿಯು ವೀರಶೈವಮತವೊಂದರಮೇಲೆಯೇ ಅಲ್ಲದೆ ಇತರ ಅನೇಕ ಮತಗಳಮೇಲೂ ಸಹ ತೋರಿಸಲ್ಪಡುತ್ತಲಿದೆ. ಮಹಾಜ್ಞಾನಿಗಳಾಗಿರುವ ಓ ಜಗದ್ಗುರು ಮಹಾಸ್ವಾಮಿಗಳೆ! ತಾವು ಜಯದೇವನಾಮದಿಂದ ಭೂಮಿಗೆ ಬಂದಿರುವ ಜಗದೀಶ್ವರಾವತಾರವೇ ಆಗಿರುತ್ತೀರಿ. ತಮ್ಮ ಈ ಮುರುಘರಾಜೇಂದ್ರ ಗುರುಪೀಠಾಧಿಪತ್ಯವು ಸರ್ವರಿಗೂ ಸಂತೋಷಪ್ರದವಾಗಿ ಚಿರಕಾಲವಿರಬೇಕೆಂದು ಕೋರುತ್ತೇವೆ. ಮುಸಲ್ಮಾನರಲ್ಲಿ ಈ ರೀತಿಯಾಗಿ ತಮ್ಮ ಶ್ಲಾಘನೆಯು ಏತಕ್ಕೆ ಮಾಡಲ್ಪಡುತ್ತದೆಯೆಂದರೆ ಆ ಜನರಲ್ಲಿ ತಮ್ಮ ಪ್ರೀತಿ ವಿಶ್ವಾಸಗಳು ಅಧಿಕವಾಗಿರುವುದರಿಂದ ನಾವು ನಮ್ಮ ಸಹೋದರರಲ್ಲಿ ತಮ್ಮ ವಿಷಯಕವಾಗಿ ಹೀಗೆ ಪ್ರತಿಪಾದಿಸತಕ್ಕವರಾಗಿದ್ದೇವೆ.

ಷೇಖ್ ಹೈದರ್, ಮಹಮ್ಮದ್ ಅಬ್ದುಲ್ಲಾ, ಅಬ್ದುಲ್‌ಕರೀಂ, ಅಬ್ದುಲ್‌ರಹಿಮಾನ್, ಸೈಯದ್‌ಖಾಸಿಂ ಕಲ್ಯಾಣ್, ಹಜರತ್‌ನಸ್ತರ್, ಮೊದಲಾದ ಪುರನಿವಾಸಿಗಳು ಎಂದಿದೆ.

ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರಿ ಪ್ರೊಸೀಡಿಂಗ್ಸು.

ಆರ್ಡರ್ ನಂ. 3705-11 Muz: 646. 18. 10.

ಬೆಂಗಳೂರು ತಾ|| 27 ನೆಯ ಮೆ 1919.

ಚಿತ್ರದುರ್ಗದ ಮುರುಗಿಮಠದ ಸ್ವಾಮಿಗಳವರ ಸ್ವಾರಿಯು ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟ್‌ಗಳ ಮಾರ್ಗವಾಗಿ ಕೊಡಗಿಗೆ ಸಂಚಾರ ಹೊರಡುವುದರಿಂದ, ಪ್ರಯಾಣದ ಸಂಬಂಧವಾಗಿ ಒಂದು ರಹದಾರಿಯು ಅಪ್ಪಣೆಯಾಗಬೇಕೆಂದೂ, ಶ್ರೀಗಳ ಸ್ವಾರಿಯು ಬೆಂಗಳೂರು ಪಟ್ಟಣಕ್ಕೆ ಪ್ರವೇಶ ಮಾಡುವಾಗ್ಗೆ ಸರ್ಕಾರದಿಂದ ಸ್ವಾಗತವೂ, ಉಚಿತವಾದ ಮೊಬಲಗಿನಿಂದ ಕೂಡಿದ ಮೊದಲನೆಯ ದಿನದ ಭಿಕ್ಷೆಯೂ ನಡಿಸಿಕೊಡಲ್ಪಡಬೇಕಾಗಿ ಆ ಮಠದ ಏಜಂಟರೂ ಮತ್ತು ಕೆಲ ಭಕ್ತರುಗಳೂ ಸರ್ಕಾರಕ್ಕೆ ಬಿನ್ನೈಸಿಕೊಂಡಿರುತ್ತಾರೆ.

ಈ ಮಠಕ್ಕೆ ಸಲ್ಲಬೇಕಾದ ಬಿರುದುಗಳು ಮೊದಲಾದವುಗಳ ವಿಚಾರದಲ್ಲಿ ಸರ್ಕಾರದಿಂದ ಕೊಡಲ್ಪಟ್ಟು ಈಗ ಆಚರಣೆಯಲ್ಲಿರುವ ಅಪ್ಪಣೆಯಲ್ಲಿ ಕಂಡಿರುವ ಪ್ರಕಾರ ಬಿರುದುಗಳನ್ನು ಪರಿವಾರದೊಡನೆ ಉಪಯೋಗಿಸಲು ಅವರಿಗೆ ರಹದಾರಿಯು ಮೊದಲೇ ಕೊಡಲ್ಪಟ್ಟಿರುತ್ತದೆ. ಸರ್ಕಾರದಿಂದ ಸ್ವಾಗತವು ಮಾಡಲ್ಪಡುವ ವಿಚಾರದಲ್ಲಿ ಸರಕಾರಿಯಪ್ಪಣೆಯ ನಿರೀಕ್ಷಣೆಯಿಂದ ಸ್ವಾಮಿಗಳು ಕಳೆದ ತಾ|| 19-5-1919 ರ ದಿವಸ ಉತ್ಸವಪೂರ್ವಕವಾಗಿ ಬೆಂಗಳೂರುಪಟ್ಟಣವನ್ನು ಪ್ರವೇಶಮಾಡಿ ಬೆಂಗಳೂರಲ್ಲಿ ವಸತಿಮಾಡಿರುವುದಾಗಿಯೂ, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರೂ ಮತ್ತು ಸ್ಥಳೀಯಾಧಿಕಾರಿಗಳೂ ಉತ್ಸವ ಹೊರಟ ಮಾರ್ಗಗಳಲ್ಲಿ ಅವಶ್ಯಕವಾದ ಪೊಲೀಸ್‌ಏರ್ಪಾಟುಗಳನ್ನು ಮಾಡಿದ್ದು, ಉತ್ಸವವು ಸಮರ್ಪಕವಾಗಿ ನಡೆದಿರುವುದಾಗಿಯೂ ತಿಳಿಯಬಂದಿದೆ. ಅರ್ಜ

ಪು-೨೩
ಸಂ-೩೨

ರರ ಪ್ರಾರ್ಥನೆಯ ಮೇರೆಗೆ ಪುರಪ್ರವೇಶಕಾಲದಲ್ಲಿ ಸರ್ಕಾರದಿಂದ ಮಾ ಲ್ಪಡಬೇಕಾದ ಸ್ವಾಗತದ ವಿಚಾರದಲ್ಲಿ ಯಾವ ಸ್ಪೆಷಲ್ ಆರ್ಡರನ್ನು ಈಗ ಮಾಡಬೇಕಾದ ಅವಶ್ಯಕತೆಯಿಲ್ಲದಿರುವುದಾದರೂ, ಶ್ರೀಮನ್ ಮಹಾರಾ ಸರಕಾರದವರು ಈ ವಿಷಯವನ್ನು ಸಾವಧಾನದಿಂದ ಪರ್ಯಾಲೋಚಿಸದೆ ಟ್ಟಿಲ್ಲವು. ಮತ್ತು ಈ ಮಠದ ಮರ್ಯಾದೆಯನ್ನೂ ಘನತೆಯನ್ನೂ ಗಮನಿಸಿ ಮುರುಗಿಮಠದ ಸ್ವಾಮಿಗಳಿಗೆ ಸರ್ಕಾರದಿಂದ ಸ್ವಾಗತವು ನಡೆಯಿಸಲ್ಪಡುವುದ ಕ್ಕಾಗಿ ಅವರು ಈ ಪಕ್ಕದಲ್ಲಿ ಹೇಳಲ್ಪಟ್ಟಿರುವ ಮಠಾಧಿಪತಿಗಳ ಸಂಗಡ ಸೇ ಸಲ್ಪಡಬೇಕಾಗಿಯೂ, ಈ ತರಗತಿಗೆ ಗೊತ್ತುಮಾಡಲ್ಪಟ್ಟಿರುವ ಎಲ್ಲಾ ಮರ್ಯಾದೆಗಳೂ ಅಂದರೆ—ಮೊದಲನೆಯ ದಿನದ ಭಿಕ್ಷೆ 75 ರೂ. ಉತ್ಸವಕಾಲದಲ್ಲಿ 6 ಸಿಲೇದಾರ್ ಕುದುರೆಗಳ ಮಿಲಿಟರಿ ಮರ್ಯಾದೆ, ಬ್ಯಾಂಡು ಮತ್ತು ಮಾಮೂಲು ಅಸ್ತಕಪಾಲೂ ಸಹ ಪಟ್ಟಣದೊಳ ಕ್ಕೆ ಸ್ವಾಗತಮಾಡಿಸಲ್ಪಡುವ ಕಾಲದಲ್ಲಿ ನಡಿಸಲ್ಪಡಬೇಕಾಗಿಯೂ ಅಪ್ಪಣೆ ಮಾಡಲ್ಪಟ್ಟಿದೆ.

ವಗಂಗಾಮಠ, ವ್ಯಾಸ
ರಾಯಮಠ, ವಾನಮಾ
ಮಲೆಮಠ, ಅಹೋಬಲ
ಮಠ

ಸರಕಾರದ ಸೆಕ್ರಿಟರಿ,
ಮುಜರಾಯಿಶಾಖೆ ರುಜುವಾಗಿದೆ ಎಂದು

ಪಿ ಕಳುಹಲ್ಪಡತಕ್ಕದು:—
ಸಂಸ್ಥಾನದ ಮುಜರಾಯಿ ಸೂಪರಿಂಟೆಂಡೆಂಟರು.
ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರು.
ಮೈಸೂರು ಸೇನೆಯ ಚೀಫ್ ಕಮ್ಯಾಂಡೆಂಟರು.
ಬೆಂಗಳೂರು ಮ್ಯು|| ಕೌನ್ಸಿಲಿನ ಆನರರಿ ಪ್ರೆಸಿಡೆಂಟರು.
*ಸರ್ಕಾರಿಯ ಕಂಟ್ರೋಲರು.

ಶ್ರೀಮನ್ಮಹಾನಿರಂಜನ ಜಗದ್ಗುರುಗಳವರು, ಬೆಂಗಳೂರು.

(ನಮ್ಮ ಸ್ವಕೀಯ ವಿಲೇಖಕರಿಂದ)

ಪ್ರತಿ ದಿನವೂ ಸಾಯಂಕಾಲ ೭ ಗಂಟೆಯಾದ ಬಳಿಕ ತೋಟದಪ್ಪನವರ ಸತ್ರದ ಆವರಣದಲ್ಲಿ ಹಾಕಲ್ಪಟ್ಟಿರುವ ಸಭಾಮಂಟಪದಲ್ಲಿ ಶ್ರೀ|| ಶ್ರೀಗಳವರ ಅಧ್ಯಕ್ಷತೆಯಿಂದ ಸಭೆಯು ಸೇರುತ್ತಿರುವುದು. ವಿದ್ವಜ್ಜನರಿಂದ ಧಾರ್ಮಿಕವಿಷಯೋಪನ್ಯಾಸಗಳು ನಡೆಯುತ್ತಿರುವುವು. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರ ಪ್ರಾರ್ಥನೆಯ ಮೇರೆಗೆ ಶ್ರೀಗಳವರು ಅದೇ ಸಭಾಮಂಟಪದಲ್ಲಿ ಮೇ ತಾ|| ೩೦ ನೆ ಶುಕ್ರವಾರ "ಆನಂದಂಬ್ರಹ್ಮ" ಎಂಬ ವಿಷಯವನ್ನಧಿಕರಿಸಿ ಪ್ರೌಢವಾದ ಉಪನ್ಯಾಸವನ್ನು ಮಾಡಿದರು. ಇದರ ಪೀಠಿಕಾಭಾಗದ ವಿವರಣವೇ ಹೆಚ್ಚು ಕಾಲವನ್ನು ಹಿಡಿದುದರಿಂದ ಮುಂದಣ ಭಾಗವು ಇನ್ನೂ ೧-೨ ಉಪನ್ಯಾಸಗಳಲ್ಲಿ ತೀರಬಹುದಾಗಿದೆ. ಆ ದಿನದ ಸಭೆಗೆ ಮ|| ಕರ್ಪೂರ ಶ್ರೀನಿವಾಸರಾಯರು, ರಾ|| ಬ|| ಆರ್. ನರಸಿಂಹಾಚಾರ್ಯರು, ಮುಜರಾಯಿ ಸೆಕ್ರೆಟರಿ ಮ|| ಅರುವಾಮುದಯ್ಯಂಗಾರರು ಮೊದಲಾದ ಅನೇಕ ವಿದ್ವಜ್ಜನರೂ, ಅಧಿಕಾರಿಗಳೂ, ಸ್ವಮತ ಪರಮತದ ಅನೇಕ ಪ್ರಮುಖರೂ ಸಹ ಸಭೆಯ ತುಂಬಾ ಬಹುಶಃ ೨೦೦೦ ಮಂದಿಗವರೆಗೆ ನೆರೆದಿದ್ದರು. ಪ್ರತಿಪಾದಿತ ವಿಷಯವು ಪಂಡಿತಜನೈಕಸಾಧ್ಯವಾಗಿದ್ದರೂ, ಸರ್ವರಿಗೂ ಬೋಧೆಯಾಗುವಂತೆ ಶ್ರೀಗಳವರು ನಿರೂಪಿಸಿದುದನ್ನು ಕಂಡು ಸಭಿಕರೆಲ್ಲಾ ಆನಂದಿಸಿದರು. ಗುಳ್ಳೆದ ಗುಡ್ಡದ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಶಂಕರಶಾಸ್ತ್ರಿಗಳು ಕರ್ಮಯೋಗ ಜ್ಞಾನಯೋಗಗಳ ವಿಷಯವಾಗಿಯೂ, ವೇ|| ಸಿರಸಿ ಗುರುಶಾಂತಶಾಸ್ತ್ರಿಗಳು ಭಕ್ತಿಯೋಗವಿಷಯವಾಗಿಯೂ, ವೇ|| ಸುತ್ತೂರು ಶಾಂತವೀರಶಾಸ್ತ್ರಿಗಳು ವೀರಶೈವ ಮತವಿಷಯವಾಗಿಯೂ ಉಪನ್ಯಾಸಗಳನ್ನು ಬೇರೆಬೇರೆ ದಿನಗಳಲ್ಲಿ ಮಾಡಿದರು. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರ ಕೋರಿಕೆಯಮೇರೆಗೆ ಕಳೆದ ತಾ|| ೩ ನೆ ಮಂಗಳವಾರ ರಾ|| ಬ|| ಪ್ರಾಕ್ತನ ವಿಮರ್ಶನ ವಿಚಕ್ಷಣ ಆರ್. ನರಸಿಂಹಾಚಾರ್ಯ ಎಂ. ಎ. ಯವರು "ವೀರಶೈವಕವಿಗಳು" ಎಂಬ ವಿಷಯವಾಗಿ ೨ ಗಂಟೆಗಳ ಕಾಲ ಅದೇ ಸಭಾಮಂಟಪದಲ್ಲಿ ಸುಶ್ರಾವ್ಯವಾದ ಭಾಷಣವನ್ನು ಮಾಡಿದರು. ರೆವಿನ್ಯೂ ಸೆಕ್ರೆಟರಿ ಮ|| ಬಿ. ರಾಮಸ್ವಾಮಿಯವರು, ಸೀನಿಯರ್ ಸರ್ಜನ್ ಡಾ|| ಆರ್ಮುಗಂ ಮೊದಲಿಯಾರು, ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ಬಿ. ಬಸವಾರಾಧ್ಯರು, ಮೊದಲಾದ ನೂರಾರು ಮಂದಿ ಅಧಿಕಾರಿಗಳೂ ಸಾವಿರಾರು ಮಂದಿ ಸ್ವಮತ ಪರಮತದ ದೊಡ್ಡ ಮನುಷ್ಯರೂ ಕಿಕ್ಕಿರಿಯುವಂತೆ ಸಭೆಯನ್ನಲಂಕರಿಸಿದ್ದರು.

ಆರಂಭದಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ರಾ|| ಬ|| ಆರ್. ನರಸಿಂಹಾಚಾರ್ಯರ ಯೋಗ್ಯತಾವಿಶೇಷಗಳನ್ನು ವರ್ಣಿಸಿ, ಸಭಿಕರಿಗೆ ಪರಿಚಯಮಾಡಿಸಿಕೊಟ್ಟು, ವಿದ್ಯಾಭಿವೃದ್ಧಿ ಫಂಡ್ ಸಂಘದವರ ಪ್ರಾರ್ಥನೆಯಮೇರೆ ಈ ದಿವಸದ ಉಪನ್ಯಾಸವನ್ನು ಮಾಡುವುದಕ್ಕೆ ಅವರು ಒಪ್ಪಿಕೊಂಡು ಬಂದಿರುವುದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಬಳಿಕ ರಾ|| ಬ|| ನರಸಿಂಹಾಚಾರ್ಯರವರು ಎದ್ದುನಿಂತು—ವೀರಶೈವ ಸಿದ್ಧಾಂತ ಸಾರಾವಾರಪಾರಂಗತರಾದ ಶ್ರೀ ಸ್ವಾಮಿಗಳವರೂ ಸಾಹಿತ್ಯಧುರೀಣರಾದ ಅನೇಕ ವೀರಶೈವ ವಿದ್ವಜ್ಜನರೂ ನೆರೆದಿರುವ ಈ ಮಹಾಸಭೆಯ ಮುಂದೆ ವೀರಶೈವ ಕವಿವಿಷಯವನ್ನು ಕುರಿತು ಉಪನ್ಯಾಸ ಮಾಡುವುದಕ್ಕೆ ನಾನು ಅಳವಳಗೊಂಡಿರುವೆನಾದರೂ, ಅವರುಗಳು ನನ್ನನ್ನು ಪ್ರೀತಿಸದೆ ಇರತಕ್ಕವರಲ್ಲವೆಂಬ ನಂಬುಗೆಯಿಂದ ನಾನು ಉಪನ್ಯಾಸವನ್ನಾರಂಭಿಸುತ್ತೇನೆ. ಈ ಕರ್ನಾಟಕ ಸಾಹಿತ್ಯಸಮುದ್ರದಲ್ಲಿ ಅನರ್ಘಗಳಾದ ಅಗಣಿತ ರತ್ನಗಳಿರುತ್ತವೆ. ಅವುಗಳಲ್ಲಿ ಕೆಲವುಗಳನ್ನಾದರೂ ಆಯ್ದು ತಮ್ಮಗಳ ಮುಂದೆ ಇಡುತ್ತೇನೆಂದು ಹೇಳಿ ಉಪನ್ಯಾಸವನ್ನಾರಂಭಿಸಿದರು. ಈ ಪೀಠಿಕಾಭಾಗದಲ್ಲಿ ಅವರು ಅಪ್ಪಣೆಕೊಡಿಸಿದ ಪ್ರತಿವಚನವೂ ಅವರ ನಿಸರ್ಗಸಿದ್ಧವಾದ ವಿನಯಸದ್ಗುಣಕ್ಕೂ, ಸಂಪೂರ್ಣವಿದ್ಯೆಯ ಗಾಂಭೀರ್ಯಕ್ಕೂ ಒಪ್ಪುವಂತಿದ್ದುವು. ಬಳಿಕ ಅವರು ಮಾಡಿದ ಉಪನ್ಯಾಸದ ಪ್ರತಿಯೊಂದಂಶವನ್ನೂ ಯಥಾವತ್ತು ಇಲ್ಲಿ ವಿಸ್ತರಿಸಿ ಬರೆದರೆ ಸ್ಟಾರ್ ಪತ್ರದ ೧-೨ ಸಂಚಿಕೆಗಳೇ ತುಂಬಿಹೋಗಬಹುದಾದುದರಿಂದ ಕೆಲಕೆಲ ಮುಖ್ಯ ಭಾಗಗಳನ್ನು ಮಾತ್ರ ಇಲ್ಲಿ ಬರೆದು ಕಳುಹಿಸಿರುತ್ತೇನೆ.

ಮ|| ಆಚಾರ್ಯರವರು ವೀರಶೈವ ಸಾಹಿತ್ಯವನ್ನು ೨ ಭಾಗವನ್ನಾಗಿ ಮಾಡಿ, ಅವುಗಳಲ್ಲಿ ಸಂಸ್ಕೃತ ಸಾಹಿತ್ಯಭಾಗವನ್ನು ಕುರಿತು ಮೊದಲೂ, ಕರ್ನಾಟಕ ಸಾಹಿತ್ಯಭಾಗವನ್ನು ಕುರಿತು ಬಳಿಕವೂ ವಿವರಿಸಿದರು. ಸಂಸ್ಕೃತ ಗ್ರಂಥಕರ್ತೃಗಳ ಪಜ್ಞ್ತಿಯಲ್ಲಿ ವೀರಶೈವಾಚಾರಪ್ರದೀಪಿಕಾಕರ್ತರಾದ ಗುರುದೇವ ವಿನಳು, ಕ್ರಿ|| ಶ|| ೧೩೫೦ ರಲ್ಲಿದ್ದರೆಂದೂ, ಅವರಿಗೆ ಕನ್ನಡದಲ್ಲೂ ಪಾಂಡಿತ್ಯವಿದ್ದಿತೆಂದೂ, ಶಿವಪಂಚಸ್ತವಕ್ಕೆ ವ್ಯಾಖ್ಯಾನವನ್ನು ಬರೆದಿರುವರೆಂದೂ ಪಂಡಿತತ್ರಯರು (ಶ್ರೀಪತಿ, ಮಂಚಣ, ಮಲ್ಲಿಕಾರ್ಜುನ ಪಂಡಿತರು) ಸಂಸ್ಕೃತಾಂಧ್ರಭಾಷೆಗಳೆರಡರಲ್ಲೂ ಉದ್ದಾಮಪಂಡಿತರಾಗಿದ್ದು ಸ್ವತಂತ್ರಗ್ರಂಥಗಳನ್ನು ಬರೆದಿರುವರೆಂದೂ, ಕ್ರಿಯಾಸಾರ ಕರ್ತೃಗಳಾದ ನೀಲಕಂಠ ಶಿವಾಚಾರ್ಯರು ಆ ಗ್ರಂಥದ ೧೯ ನೆ ಪ್ರಕರಣದ ಕೊನೆಯಲ್ಲಿ "ಕೃತಕಲಾಸಂವಿಧಾ ಲಿಂಗಸ್ಯ ದೀಕ್ಷಾಪೂರ್ವಕಧಾರಣಮಿಹಾಗಮಪ್ರಕಾರೋ ಭಾಷಾಪ್ರ ದೇಶ್ಯಕೃತೇವಲೋಕನೀಯಃ" ಎಂದು ಹೇಳಿರುವ ಕಾರಣ, ಅವರು ಕರ್ನಾಟಭಾಷೆಯಲ್ಲೂ ಗ್ರಂಥವನ್ನು ಬರೆದಿರಬೇಕೆಂಬುದು ಸಿದ್ಧವಾಗುವುದೆಂದೂ, ಕ್ರಿ|| ಶ|| ೧೭೦೦ ರಲ್ಲಿ ಸೋಮಶೇಖರ ರಾಜನ ಬಳಿಯಲ್ಲಿ ಅಮಾತ್ಯನಾಗಿದ್ದ ನಿರ್ವಾಣಮಂತ್ರಿಯು ಕ್ರಿಯಾಸಾರಸರ್ವಸ್ವಭೂಷಣವೆಂಬ ಹೆಸರಿನಿಂದ ಕ್ರಿಯಾಸಾರದ ವ್ಯಾಖ್ಯಾನವನ್ನು ಬರೆದಿರುವನೆಂದೂ, ಅತನೇ ಶಿವಪೂಜಾವಿಧಾನವೆಂಬುದನ್ನೂ ರಚಿಸಿರುವನೆಂದೂ, ವಿಜಯನಗರದ ಪ್ರಭುವಾಗಿದ್ದ ದೇವರಾಯನಲ್ಲಿ ಮಂತ್ರಿಯಾಗಿದ್ದ ಮಗ್ಗೆಮಾಯಿದೇವರು (೧೪೩೦-೪೦ ರಲ್ಲಿದ್ದವರು) ಸಂಸ್ಕೃತದಲ್ಲಿ ಅನುಭವಸೂತ್ರವನ್ನೂ, ಕನ್ನಡದಲ್ಲಿ ಶತಕತ್ರಯವನ್ನೂ ಬರೆದಿರುವರೆಂದೂ, ಅದೇ ದೇವ ರಾಯನ ಬಳಿಯಲ್ಲಿ ಮಂತ್ರಿಯಾಗಿದ್ದ ಗುರುರಾಜಕವಿಯು ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರವೆಂಬ ಉತ್ಕೃಷ್ಟವಾದ ಗ್ರಂಥವನ್ನು ಬರೆದಿರುವನೆಂದೂ, ಓಹಿಲಾರ್ಯನ ವಂಶೀಯನಾದ ಜ್ಯೋತಿರ್ನಾಥನು ಶೈವರತ್ನಾಕರವನ್ನೂ, ಶಿವಯೋಗೀಶ್ವರನು ಸಿದ್ಧಾಂತಶಿಖಾಮಣಿಯನ್ನೂ, ಸಂಪಾದನೆಯ ಸಿದ್ಧವೀರಣ್ಣನು ಅನಾದಿ ವೀರಶೈವ ಚಿಂತಾಮಣಿಯನ್ನೂ, ೧೬೦೦ ರಲ್ಲಿದ್ದ ಶಂಕರಾರ್ಯನು ಸಂಸ್ಕೃತ ಬಸವೇಶಪುರಾಣವನ್ನೂ, ಮರಿತೋಂಟದಾರ್ಯರು ವೀರಶೈವಾನಂದ ಚಂದ್ರಿಕೆಯನ್ನೂ, ನೀಲಕಂಠ ನಾಗನಾಥಾಚಾರ್ಯರು ಅನಾದಿ ವೀರಶೈವಾಚಾರ ಸಾರಾಸಂಗ್ರಹವನ್ನೂ, ೧೫೩೦ ರಲ್ಲಿದ್ದ ಗುರುಸಿದ್ಧದೇಶಿಕನ ಶಿಷ್ಯ ಚನ್ನಬಸವೇಶನು ವೀರಶೈವೋತ್ಕರ್ಷಪ್ರದೀಪಿಕೆಯನ್ನೂ, ೧೫೬೦ ರಲ್ಲಿದ್ದ ವಿರಕ್ತ ತೋಂಟದಾರ್ಯರು ಪಾಲ್ಕುರಿಕೆ ಸೋಮೇಶ್ವರಪುರಾಣ, ಶಬ್ದಮಂಜರಿ, ಮೊದಲಾದ ಕೆಲವು ಗ್ರಂಥಗಳನ್ನೂ, ಮಲ್ಲಣಾರ್ಯನು ಶಿವಜ್ಞಾನದೀಪಿಕೆಯನ್ನೂ, ನಿಟ್ಟೂರ ನಂಜಯ್ಯನು ವೇದಾಂತಸಾರವೀರಶೈವ ಚಿಂತಾಮಣಿಯನ್ನೂ ಬರೆದಿರುವರೆಂದೂ, ಇವರಲ್ಲಿ ಕೆಲರು ಕೇವಲ ಸಂಸ್ಕೃತ ಭಾಷೆಯಲ್ಲೇ ಅಲ್ಲದೆ ದೇಶಭಾಷೆಯಲ್ಲೂ ಅಸಾಧಾರಣ ಪಾಂಡಿತ್ಯವನ್ನು ಹೊಂದಿದ್ದರೆಂದೂ, ಸ್ವತಂತ್ರಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿದ್ದರೆಂದೂ ಹೇಳಿ, ನಿಟ್ಟೂರ ನಂಜಯನೆಂಬ ಹೆಸರನ್ನು ಮಿ|| ಕಿಟಲ್ ಸಾಹೇಬರು ಅರಿಯದ ದೋಷದಿಂದ ನಿಸೂರ ಸಂಜಯ್ಯನೆಂದು ಶಬ್ದಮಣಿದರ್ಪಣದಲ್ಲಿ ತಪ್ಪಾಗಿ ಮುದ್ರಣಮಾಡಿಸಿ ಬಿಟ್ಟಿರುವರೆಂದೂ ಹೇಳಿದರು.

ಬಳಿಕ ಕನ್ನಡದಲ್ಲಿ ವ್ಯಾಖ್ಯಾನವನ್ನು ಬರೆದಿರುವ ಕೆಲ ಕವಿಗಳ ಹೆಸರುಗಳನ್ನು ವರ್ಣಿಸುವುದಕ್ಕುಪಕ್ರಮಿಸಿ ಹೀಗೆ ಹೇಳಿದರು—ಮೂಗೂರು ಮಠದ ಗುರುನಂಜೇದೇವರು ಯಜುರ್ವೇದದ ಭಟ್ಟಭಾಸ್ಕರವ್ಯಾಖ್ಯಾನವನ್ನು ಕನ್ನಡಕ್ಕೆ ಪರಿವರ್ತಿಸಿರುವರು. ಮಲಬಾರ್ ಪ್ರಾಂತದ ಕುಂಟಿಕಾಪುರದಲ್ಲಿದ್ದ ಕಾಶೀಕಾಂಡದ ಚೆನ್ನವೀರದೇವ ಎಂಬುವವನು (ಇವರು ಶಿವಲೆಂಕ ಮಂಚಣಪಂಡಿತ ವಂಶೀಯರು) ಸಾರಸ್ವತ ವ್ಯಾಕರಣವನ್ನು ಕನ್ನಡದಲ್ಲಿ ಬರೆದಿರುವನು. ಉಜ್ಜನೀಶನು ಸಿದ್ಧಾಂತಶಿಖಾಮಣಿಗೆ ಕನ್ನಡದ ಟೀಕೆಯನ್ನೂ, ಪೋಲನ ಕಾಲದಲ್ಲಿದ್ದ ಮಲ್ಲಿಕಾರ್ಜುನ ಕವಿಯು ಶಂಕರಾರ್ಯಕೃತ ಬಸವಪುರಾಣವನ್ನು ಕನ್ನಡದಲ್ಲಿ ಬರೆದಿರುವನು. ೧೬೩೪ ರಲ್ಲಿದ್ದ ಸೋಸಲೆ ವೀರಣಾರಾಧ್ಯನು ಮಹಿಮ್ನಸ್ತವ ವ್ಯಾಖ್ಯೆಯನ್ನೂ, ಚೋಳ ರೇಣುಕ ಸಂವಾದ ಮೊದಲಾದುವುಗಳನ್ನೂ ಬರೆದಿದ್ದಾನೆ. ೧೫೩೦ ನೆ ವರ್ಷದಲ್ಲಿದ್ದ ಗುಬ್ಬಿ ಮಲ್ಲಣಾರ್ಯನು ತನ್ನ ವೀರಶೈವಾಮೃತ ಪುರಾಣದಲ್ಲಿ ಏಕಾಂತದ ಬಸವೇಶ್ವರನನ್ನು ಸ್ತೋತ್ರಮಾಡಿದ್ದಾನೆ. ಚಾಮರಾಜನಗರದ ತಾ|| ಜೋಡಿಕೆಂಪನಪುರದಲ್ಲಿರುವ ಒಂದು ಶಿಲಾಶಾಸನದಲ್ಲಿ ಏಕಾಂತದ ಬಸವೇಶನಿಗೆ ಕೊಡಲ್ಪಟ್ಟಿರುವ ವಿಶೇಷಣಗಳಲ್ಲಿ ಶ್ರುತಿಸ್ಮೃತೀತಿಹಾಸಾದಿವ್ಯಾಖ್ಯಾನಕರ್ತೃವೆಂದು ಹೇಳಲ್ಪಟ್ಟಿರುವುದರಿಂದ ಈತನಿಗೆ ಸಂಸ್ಕೃತದಲ್ಲಿ ಅದ್ಭುತ ಪಾಂಡಿತ್ಯವಿದ್ದಿತೆಂದು ಗೊತ್ತಾಗುತ್ತದೆ. ಬಸವೇಶ್ವರ ಪುರಾಣದಲ್ಲಿ ವರ್ಣಿತನಾಗಿರುವ ಏಕಾಂತದ ರಾಮಯ್ಯನ ಪವಾಡವು ಧಾರವಾಡದ ಜಿಲ್ಲಾ ಅಬ್ಬಲೂರಿನಲ್ಲಿರುವ ಒಂದು ಶಿಲಾಶಾಸನದಲ್ಲೂ ಹೇಳಲ್ಪಟ್ಟಿದೆ. ಈತನ ವಂಶಿಕನೇ ಏಕಾಂತದ ಬಸವೇಶನು, ಎಂಬುದಾಗಿ ಆಚಾರ್ಯರು ಆ ವಿಷಯವನ್ನು ಮುಗಿಸಿ, ಬಳಿಕ ಕನ್ನಡದ ಗ್ರಂಥಕರ್ತೃಗಳಾದ ಕವಿಗಳ ವಿಷಯವನ್ನು ಹೇಳುವುದಕ್ಕೆ ಉಪಕ್ರಮಿಸಿ, ಕೆರೆಯ ಪದ್ಮರಸರ ವಂಶವಿಷಯವನ್ನು ಎತ್ತಿಕೊಂಡು, ತಮ್ಮ ಕವಿಚರಿತ್ರದ ಪ್ರಥಮಭಾಗದಲ್ಲಿ ವರ್ಣಿಸಿರುವ ಸಂಗತಿಗಳನ್ನು ಎಂದರೆ—ಪದ್ಮರಸನ ತಾತನಾದ ಸಕಲೇಶಮಾದರಸನು (೧೧೬೫) ಶ್ರೀಶೈಲಕ್ಕೆ ಹೋಗಿ ಅಲ್ಲಿದ್ದ ತನ್ನ ತಾತನಾದ ಮಲ್ಲರಸನನ್ನು ಕಾಣಲು, ಆತನು—ನೀನು ಇನ್ನೂ ಐವತ್ತು ವರ್ಷ ಭೂಮಿಯಲ್ಲಿದ್ದು ಕಲ್ಯಾಣದೊಳಗೆ ಧರ್ಮೋದ್ಧಾರಾರ್ಥವಾಗಿ ಹುಟ್ಟುವ ಬಸವನೊಡನೆ ಕಾಲವನ್ನು ಕಳೆಯಬೇಕು ಎಂದು ಹೇಳಲಾಗಿ ಹಿಂದಿರುಗಿ ಬಂದನು, ಎಂದು ಹೇಳಿ, ಆ ಪದ್ಮರಸನ ಮಹಾಪಾಂಡಿತ್ಯ ಆತನು ನರಸಿಂಹಬಲ್ಲಾಳನಲ್ಲಿ ಮಂತ್ರಿಯಾಗಿದ್ದುದು ಮೊದಲಾದ ವಿಷಯಗಳನ್ನೂ ಆತನ ಸಮಕಾಲೀನರಾದ ಪಂಡಿತರ ಹೆಸರುಗಳನ್ನೂ, ಪದ್ಮರಸರು ಮಾಡಿರುವ ಗ್ರಂಥಗಳ ವಿಷಯವನ್ನೂ, ಅವುಗಳಲ್ಲಿನ ಮಾದರಿಯ ಪದ್ಯಗಳನ್ನೂ ಹೇಳಿ, ಆ ಪದ್ಮರಸರ ಕಾಲದಿಂದ ಇದುವರೆಗೂ ವೀರಶೈವ ಕವಿಗಳು ಅಖಂಡವಾಗಿ ಇದ್ದುಕೊಂಡೇ ಬಂದಿದ್ದಾರೆಂತಲೂ, ಅವರ ಹೆಸರುಗಳನ್ನೂ ಗ್ರಂಥಸ್ವರೂಪವನ್ನೂ ವಿವರಿಸಲು ಆರಂಭಿಸಿದರೆ ೮ ದಿನಗಳಾದರೂ ಮುಗಿಯುವುದಿಲ್ಲವೆಂತಲೂ, ಈ ವೀರಶೈವ ಕವಿಗಳ ಗ್ರಂಥಗಳಲ್ಲಿ ಲೌಕಿಕವಿಷಯವು ಬಹಳ ಕಡಿಮೆಯಾಗಿರುತ್ತ ಪಾರಲೌಕಿಕ ವಿಷಯಗಳೇ ತುಂಬಿರುವುವೆಂತಲೂ, ಅದರಲ್ಲೂ ಷಟ್ಸ್ಥಲ ಅಷ್ಟಾವರಣ ವಿಷಯಗಳೇ ತುಂಬಿರುವುವೆಂತಲೂ, ಕರ್ಮ ಜ್ಞಾನ ಭಕ್ತಿ ಈ ಸಂಬಂಧವಾದ ವಿವರಣಗಳು ಅಧಿಕವಾಗಿರುವುವೆಂತಲೂ, ಭಕ್ತಾದಿಷಟ್ಸ್ಥಲಗಳು ೧೦೧ ಸ್ಥಲಗಳಾಗಿರುವುವೆಂತಲೂ, ಅವುಗಳ ವಿವರಣವು ಅನೇಕ ಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವುದೆಂತಲೂ, ಆ ನೂರೊಂದು ಸ್ಥಲಗಳಿಗೆ ಈ ಮತದಲ್ಲಿ ಅತ್ಯಂತ ಪ್ರಾಶಸ್ತ್ಯವು ಎಷ್ಟು ಮಟ್ಟಿಗಿದೆಯೆಂಬುದಕ್ಕೆ ನೂರೊಂದಪ್ಪ ಎಂಬ ಹೆಸರನ್ನು ಅನೇಕರಿಗೆ ಕಟ್ಟಿರುವುದೇ ದೃಷ್ಟಾಂತವಾಗಿದೆಯೆಂತಲೂ, ಇನ್ನು ಕೆಲ ಗ್ರಂಥಗಳಲ್ಲಿ ಶಿವನ ಪಂಚವಿಂಶತಿಲೀಲೆಗಳೂ, ಲೌಕಿಕವಿಷಯಕ ಗ್ರಂಥಗಳೊಳಗೆ ಕಾಲಜ್ಞಾನವೆಂಬ ಭಾಗವೂ ಹೇಳಲ್ಪಟ್ಟಿರುವುದೆಂತಲೂ ಹೇಳಿ, ಕವಿಪರಂಪರೆಯನ್ನೂ ಅವರುಗಳ ಗ್ರಂಥದ ಹೆಸರು ಅವುಗಳಲ್ಲಿರುವ ಕವಿತಾಶೈಲಿ ಮೊದಲಾದುವನ್ನೂ ಸಂಕ್ಷೇಪವಾಗಿ ಹೇಳತೊಡಗಿದರು. ತಾವು ಈಗ ಮುದ್ರಣಮಾಡಿಸುತ್ತಿರುವ ಕವಿಚರಿತ್ರದ ದ್ವಿತೀಯಭಾಗವನ್ನೇ ಬಿಚ್ಚಿ ಅಲ್ಲಿಗಲ್ಲಿಗೆ ಪದ್ಯಗಳನ್ನೋದಿ ಉದ್ಧರಿಸಿದರು. ಬಸವೇಶನ ಕಾಲದಲ್ಲೇ ಇದ್ದ ಕೆಲ ಕವಿಗಳ ಹೆಸರುಗಳನ್ನು ಹೇಳುವಾಗ ಮಧ್ಯದಲ್ಲಿ ನಿಜಗುಣರ ಹೆಸರೂ ಬಂದಿತು. (ವಿವೇಕಚಿಂತಾಮಣ್ಯಾದಿ ಗ್ರಂಥಕರ್ತರೆ ಅವರು? ಎಂದು ಶ್ರೀಗಳವರು ಉಪನ್ಯಾಸಕರನ್ನು ಪ್ರಶ್ನೆಮಾಡಲಾಗಿ—ಅಲ್ಲ; ಆಗಿದ್ದ ನಿಜಗುಣನೇ ಬೇರೆ, ವಿವೇಕಚಿಂತಾಮಣ್ಯಾದಿಗ್ರಂಥಕರ್ತರೇ ಬೇರೆ ಎಂದರು. ಇವರ ಕಾಲವಾವುದು? ಎಂದು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಪ್ರಶ್ನೆಮಾಡಲಾಗಿ ಕ್ರಿ. ಶ. ೧೫೦೦ ಎಂದು ತಾವು ನಿರ್ಧರಿಸಿರುವುದಾಗಿ ಉಪನ್ಯಾಸಕರು ಅಪ್ಪಣೆ ಕೊಡಿಸಿದರು. ಬಳಿಕ ಗುಬ್ಬಿ ಮಲ್ಲಣಾರ್ಯ, ಗುರುಭಕ್ತಾಂಡಾರ್ಯಚರಿತ್ರಕರ್ತ ಪ್ರಾಣಭೂಷಣ ಪೆಮ್ಮಿಶೆಟ್ಟಿ, ಕಬ್ಬಿಗರ ಕೈಪಿಡಿಯನ್ನು ಬರೆದಿರುವ ನುಗ್ಗೆಹಳ್ಳಿ ರಾಯಣಮಂತ್ರಿ ಲಿಂಗಪ್ಪ, ಕೊಂಡಗುಳಿ ಕೇಶಿರಾಜ, ಮರುಗದೇವ, ಮಹಾದೇವಿಯಕ್ಕ, ಸೊನ್ನಲಿಗೆ ಸಿದ್ಧರಾಮ—ಇವರುಗಳ ವಿದ್ವತ್ತು ಜ್ಞಾನಾಧಿಕ್ಯ ಕವಿತಾಶೈಲಿ ಮೊದಲಾದುವುಗಳನ್ನು ವಿವರಿಸಿದರು. ಬಳಿಕ ವೀರಶೈವರ ವಚನಶಾಸ್ತ್ರಗಳ ವಿಷಯವನ್ನು ಹೇಳುವುದಕ್ಕುಪಕ್ರಮಿಸಿದರು—ಈ ಗ್ರಂಥಗಳನ್ನು ಬರೆದವರು ತಮ್ಮ ಅನುಭವಪರಿಪಾಕವನ್ನೇ ಪರೀವಾಹರೂಪವಾಗಿ ಹರಿಸಿದಂತೆ ಇರುತ್ತವೆ. ಅವುಗಳು ಶ್ರೋತೃಮಂಡಲಕ್ಕೆ ಪುಳಕೋದ್ಗಮವನ್ನುಂಟುಮಾಡುವಷ್ಟು ಶಕ್ತಿಮತ್ತಾಗಿವೆ. ಗ್ರಂಥಕರ್ತೃಗಳಲ್ಲಿದ್ದ ಭಕ್ತ್ಯತಿಶಯವೂ, ವೈರಾಗ್ಯದಾರ್ಢ್ಯವೂ, ಸಂಸಾರಜಿಹಾಸೆಯೂ ಹೊರಕ್ಕೆ ಉಕ್ಕಿ ಬಂದಿರುವಂತೆ ಅವುಗಳಲ್ಲಿ ಗೋಚರವಾಗುತ್ತಿದೆ. ಈ ವಚನಗ್ರಂಥಕರ್ತೃಗಳೊಳಗೆ ಸಕಲೇಶಮಾದರಸರೇ ಅಗ್ರಣಿಗಳು. ಜನಸಾಮಾನ್ಯಕ್ಕೂ ಅರ್ಥವಾಗುವಂತೆ ಸ್ವಾನುಭವವನ್ನು ವಿವರಿಸಬೇಕೆಂಬುದೇ ಈ ವಚನ ಗ್ರಂಥಕರ್ತೃಗಳ ಉತ್ತಮೋದ್ದೇಶವಾಗಿತ್ತು. ತನ್ನನ್ನು ನಾಯಿಕೆಯನ್ನಾಗಿಯೂ ಶಿವನನ್ನು ನಾಯಕನನ್ನಾಗಿಯೂ ಭಾವಿಸಿ (ಶರಣಸತಿಲಿಂಗಪತಿನ್ಯಾಯ) ಅನೇಕರು ರಸವತ್ತಾಗಿ ಬರೆದಿದ್ದಾರೆ ಎಂದು ಹೇಳಿ, ಕೂಡಲ ಸಂಗಮೇಶ್ವರಾಂಕಿತವಾಗಿರುವ ಬಸವೇಶ್ವರನ ವಚನಗಳಲ್ಲೂ, ಕೂಡಲ ಚನ್ನಬಸವಾಂಕಿತವಾಗಿರುವ ಚೆನ್ನಬಸವೇಶ್ವರ ವಚನದಲ್ಲೂ, ಪ್ರಭುದೇವ, ಸಿದ್ಧರಾಮದೇವ, ಮಡಿವಳಮಾಚಿದೇವ, ಮಹಾದೇವಿಯಕ್ಕ, ಸೊಡ್ಡಳಬಾಚರಸ, ಅಜಗಣ್ಣ, ನಿಜಗುಣದೇವ, ಪಂಡಿತಮಲ್ಲಿಕಾರ್ಜುನ, ಸಿಮ್ಮಲಿಗೆಯ ಚೆನ್ನಯ್ಯ, ರಾಮನಾಥ, ಶುದ್ಧಸೋಮೇಶ್ವರ, ಶಂಭುಜಕ್ಕೇಶ್ವರ, ಎಂಬ ಬಸವೇಶ್ವರನ ಕಾಲೀನರು ಎಂದರೆ ೧೧೬೦ ರಿಂದ ೧೨೦೦ ವರ್ಷದೊಳಗೆ ಇದ್ದ ಗ್ರಂಥಕರ್ತೃಗಳ ಸಂಗತಿಯನ್ನು ಸ್ವಾರಸ್ಯವಾದ ಒಂದೊಂದುದಾಹರಣ ವಚನಗಳಿಂದ ನಿರೂಪಿಸಿದರು. ಪ್ರತಿಯೊಂದು ವಚನದಲ್ಲಿಯೂ ಕಂಡ ಉತ್ಕೃಷ್ಟಾಭಿಪ್ರಾಯಗಳನ್ನು ಸಭಿಕರು ಕೇಳಿ ಆನಂದದಿಂದ ಪದೇಪದೇ ಕರತಾಡನವನ್ನು ಮಾಡುತ್ತಿದ್ದರು.

ಬಳಿಕ ಷಟ್ಪದಿಕಾವ್ಯಗಳನ್ನೂ ಚಂಪೂಪ್ರಬಂಧಗಳನ್ನೂ ರಚಿಸಿದ ಕವಿಗಳ ವರ್ಣನೆಗಾರಂಭಿಸಿ, ಕುಮಾರಪದ್ಮರಸ, ರಾಘವಾಂಕ, ಪಾಲ್ಕುರಿಕೆಸೋಮ, ಸೋಮರಾಜ, ಭೀಮಕವಿ—ಇವರುಗಳ ವಿದ್ವತ್ತು, ಅವರು ರಚಿಸಿರುವ ಗ್ರಂಥಗಳು ಅವರಿದ್ದ ಕಾಲಗಳನ್ನು ಹೇಳಿ, ಅನಂತರ ವಿಜಯನಗರದ ಇಮ್ಮಡಿದೇವರಾಯರಕಾಲದ ಕವಿಗಳನ್ನು ವರ್ಣಿಸುವಾಗ್ಗೆ (೧೪೧೯-೧೪೪೬) ಮಹಾಲಿಂಗದೇವ, ಲಕ್ಕಣ್ಣದಂಡೇಶ, ಜಕ್ಕಣಾರ್ಯ, ಚಾಮರಸ, ಇವರುಗಳ ಸಂಗತಿಯನ್ನೂ, ಬಳಿಕ (೧೬೭೨-೧೬೭೮) ತೋಂಟದ ಸಿದ್ಧಲಿಂಗದೇವರ ಚರಿತ್ರವನ್ನೂ, ಅವರಿಂದ ರಚಿತವಾದ ಷಟ್ಸ್ಥಲಜ್ಞಾನಸಾರಾಮೃತದ ವಿಷಯವನ್ನೂ, ಇವರ ಸಮಾಧಿಯಾಗಿರುವ ಎಡೆಯೂರಿನ ದೇವಾಲಯದಲ್ಲಿ ಟಿಪ್ಪುಸುಲ್ತಾನನ ಅಮಿಲ ಜಾಫರ್‌ಖಾನ್ ಎಂಬುವನು ವಿಶಾಸಹಾಕಿ ಒಪ್ಪಿಸಿರುವ ಗಂಟೆಯು ನೇತುಹಾಕಲ್ಪಟ್ಟಿರುವ ಸಂಗತಿಯನ್ನೂ, ದಳವಾಯಿ ಬಸವರಾಜಯ್ಯನ ಹೆಂಡತಿ ಮಿನಾಕ್ಷಮ್ಮನ ವಿಶಾಸ ಹಾಕಿರುವ ಮತ್ತೊಂದು ಗಂಟೆಯು ಅಲ್ಲಿ ನೇತುಹಾಕಲ್ಪಟ್ಟಿರುವುದನ್ನೂ ಹೇಳಿ, ಆಮೇಲೆ ಗುಬ್ಬಿ ಮಲ್ಲಣಾರ್ಯರ ಪ್ರಸ್ತಾಪವನ್ನು ತೆಗೆದು, ಗುಬ್ಬಿಗೆ ಅಮರಗುಂಡಕ್ಷೇತ್ರವೆಂದು ಹೆಸರಿತ್ತೆಂದೂ, ಮಲ್ಲಣಾರ್ಯರ ಪರಂಪರೆಯು ವಿದ್ವತ್ಪರಂಪರೆಯಾಗಿದ್ದಿತೆಂದೂ, ಅಮರಗುಂಡದ ಮಲ್ಲಿಕಾರ್ಜುನಪಂಡಿತಾರಾಧ್ಯರು ಅಲ್ಲಿ ಪುರಾಣವನ್ನು ಓದುತ್ತಿರುವಾಗ್ಗೆ ಪ್ರತಿದಿನವೂ ೨ ಗುಬ್ಬಚ್ಚಿಗಳು ತಪ್ಪದೆ ಬಂದು ಕುಳಿತು ಕೇಳುತ್ತಿದ್ದು, ಪುರಾಣ ಪೂರ್ಣವಾದ ದಿವಸ ಅಲ್ಲೇ ಸತ್ತುಬಿದ್ದುವೆಂತಲೂ, ಅಲ್ಲಿಂದೀಚೆಗೆ ಆ ಊರಿಗೆ ಗುಬ್ಬಿಯೆಂಬ ಹೆಸರು ಬಂದಿತೆಂತಲೂ ಐತಿಹ್ಯವಿರುವುದಾಗಿ ಅಪ್ಪಣೆಕೊಡಿಸಿದರು. ತದನಂತರ ರೇವಣಸಿದ್ಧೇಶ್ವರಪುರಾಣಕರ್ತೃಗಳಾದ ಚತುರ್ಮುಖಬೊಮ್ಮರಸನ ವಿಷಯವನ್ನು ಹೇಳಿ, ವಿವೇಕ ಚಿಂತಾಮಣ್ಯಾದಿ ಕರ್ತೃಗಳಾದ ನಿಜಗುಣರ ಕಾಲವನ್ನು ಹೇಳುವಾಗ್ಗೆ—ಇವರು ತಮ್ಮ ಗ್ರಂಥದಲ್ಲಿ ಅಮಲಾನಂದರ ಕಲ್ಪತರುವೆಂಬ ಗ್ರಂಥದ ಹೆಸರನ್ನು ಉದಹರಿಸಿಕೊಂಡಿರುತ್ತಾರೆಂತಲೂ, ಆ ಅಮಲಾನಂದರು ೧೨೫೦ ನೆ ವರ್ಷದಲ್ಲಿದ್ದವರಾದ ಕಾರಣ, ಆ ಗ್ರಂಥವೇ ಬಸವೇಶನ ಈಚೆಗೆ ಹುಟ್ಟಿರುವುದೆಂತಲೂ, ಅಂಥ ಗ್ರಂಥವನ್ನು ಆಧಾರವಾಗಿ ತೆಗೆದುಕೊಂಡು ಬರೆದಿರುವ ನಿಜಗುಣರು ಅವರಿಂದೀಚೆಗಿದ್ದವರೆಂಬುದು ಸಿದ್ಧವಾಗಿಯೇ ಇರುವುದೆಂತಲೂ ವ್ಯಕ್ತಪಡಿಸಿದರು. ಇದು ನಿಜಗುಣರ ಕಾಲದ ವಿಷಯದಲ್ಲಿ ಸಂಶಯಪಡುತ್ತಿದ್ದ ಅನೇಕರಿಗೆ ಸಮಾಧಾನಕರವಾಗಿದ್ದಿತು ಬಳಿಕ ಈಚೆಗೆ ಕೈ|| ಬಸವಪ್ಪಶಾಸ್ತ್ರಿಗಳ ಕಾಲದವರೆಗೂ ಪ್ರಸಿದ್ಧರಾಗಿದ್ದು ಹೋಗಿರುವ ವೀರಶೈವ ಗ್ರಂಥಕರ್ತೃಗಳ ಮತ್ತೂ ಅವರ ಗ್ರಂಥಗಳ ಹೆಸರುಗಳನೇಕವನ್ನು ಹೇಳಿ ಮುಗಿಸಿದುದಲ್ಲದೆ, [illegible]ಕಾಲದಲ್ಲಿ ನಮ್ಮ ಶ್ರೀಮನ್ಮಹಾರಾಜರು, ಮತ್ತೂ ಶ್ರೀ ಮುರುಘೇಂದ್ರ ವಿದ್ಯಾಪೀಠಾಧಿಪರಂಥ ಕೆಲಕೆಲರು ಸ್ವಲ್ಪಮಟ್ಟಿಗೆ ಕನ್ನಡದ ವಿದ್ವಾಂಸರಿಗೆ ಪ್ರೋತ್ಸಾಹಪಡಿಸಿ ಪೋಷಣೆಮಾಡುತ್ತಿದ್ದರೂ ಪೂರ್ವಕಾಲದಲ್ಲಿದ್ದಷ್ಟು ಪೋಷಣೆಯು ಈ ಭಾಷೆಯ ಪಂಡಿತರಿಗೆ ಇರುವುದಿಲ್ಲವೆಂತಲೂ, ಉಪಪತ್ತಿಯುಳ್ಳವರು ಆ ವಿದ್ವಾಂಸರಿಗೆ ಸಹಾಯಮಾಡುವುದು ಅವಶ್ಯಕವೆಂತಲೂ, ಈ ಮತದ ಹಲವರಲ್ಲಿ ತಾಳಪ್ರತಿಯ ಗ್ರಂಥಗಳು ಅನೇಕವಾಗಿರುವುವೆಂತಲೂ, ಅವನ್ನೆಲ್ಲಾ ಕಾಲಕ್ರಮದಲ್ಲಿ ಹಾಳಾಗಿಹೋಗಗೊಡಿಸದಂತೆ ಕಾಪಾಡುವುದು ಮತಸ್ಥರಿಗೆಲ್ಲಾ ಅವಶ್ಯಕ ಕರ್ತವ್ಯವೆಂತಲೂ, ಅಂಥ ಪ್ರತಿಗಳನ್ನೆಲ್ಲಾ ಶೇಖರಿಸಿ ಬೆಂಗಳೂರಿನಲ್ಲೋ ಮೈಸೂರಿನಲ್ಲೋ ಒಂದು ಗ್ರಂಥಭಾಂಡಾಗಾರವನ್ನೇರ್ಪಡಿಸಿಡಬೇಕೆಂತಲೂ, ಈ ಗ್ರಂಥಗಳೆಲ್ಲವೂ ಅಮೋಘವಾದ ರತ್ನಗಳಾಗಿರುವುವೆಂತಲೂ, ಅವು ಬೀಳಾಗಿ ಹೋದರೆ ಸಮಾಜಕ್ಕೆ ಬಹಳ ನಷ್ಟವಾಗುವುದೆಂತಲೂ, ಅವನ್ನು ಶಾಶ್ವತವಾಗಿರುವಂತೆ ಮಾಡುವುದಕ್ಕಾಗಿ ಪಂಡಿತರ ಮುಖದಿಂದ ಪರಿಶೋಧಿಸಿ ಮುದ್ರಣಮಾಡಿಸುವುದೋ ಅಥವಾ ಪ್ರತ್ಯಂತರಗಳನ್ನು ಬರೆಯಿಸಿ ಇಡಿಸುವುದೋ ಮಾಡಲ್ಪಡಬೇಕೆಂತಲೂ, ಮತ್ತೂ ಪೂರ್ವಿಕರು ಧಾರ್ಮಿಕವಿಷಯವಾಗಿ ಬರೆದಿರುವ ಗ್ರಂಥಗಳಂಥವುಗಳನ್ನೇ ಈಗಣ ಪಂಡಿತರೂ ಕವಿಗಳೂ ಬರೆಯುವುದಕ್ಕೆ ತೊಡಗುವುದಕ್ಕಿಂತ ಈಗಣ ಕಾಲಕ್ಕೆ ಅವಶ್ಯಕಗಳಾದ ವಿಚಾರಗಳ ಗ್ರಂಥಗಳನ್ನು ನೂತನವಾಗಿ ಬರೆದು ಪ್ರಕಟಿಸುವಂತೆ ಮಾಡಬೇಕೆಂತಲೂ ಹೇಳಿದ ಉಪದೇಶ ವಚನಗಳು ಸರ್ವರಿಗೂ ಮನನೀಯವಾಗಿದ್ದುವು.

ಪರಿಸಮಾಪ್ತಿಯಲ್ಲಿ ಶ್ರೀ ಮುರುಘಮಠದ ವಿಷಯವಾಗಿ ನಾಲ್ಕು ವಾಕ್ಯಗಳನ್ನು ಹೇಳಿದರು. ಅದೇನೆಂದರೆ—ಕೆಲವರು ಇದನ್ನು ಮುರುಗಿ ಎಂದು ಕರೆಯುತ್ತಲೂ, ಆ ಅಬದ್ಧಶಬ್ದಕ್ಕೆ ಸರಿಯಾಗಿ, ಮೂರು ಗಿಕಾರಗಳು ಸೇರಿ ಮುರುಗಿಯೆಂದು ಹೆಸರುಂಟಾಗಿರುವುದೆಂದು ತಪ್ಪಾದ ವ್ಯಾಖ್ಯಾನಮಾಡುತ್ತಲೂ ಇದ್ದಾರೆ. ಅದು ಯುಕ್ತವಲ್ಲ. ಇದು ಮುರುಘನ್ ಎಂಬ ದ್ರಾವಿಡ ಶಬ್ದಾಧಾರದಿಂದ ಹುಟ್ಟಿದುದು. ತಮಿಳಿನಲ್ಲಿ ಮುರುಘನ್ ಎಂದರೆ ಷಣ್ಮುಖನ ಹೆಸರು. ಕುಮಾರಸ್ವಾಮಿಯ ಪರಂಪರೆಯಿಂದಲೇ ಈ ಪೀಠವು ಬಂದಿರುವುದರಿಂದ ಇದಕ್ಕೆ ಮುರುಘಪೀಠವೆಂಬ ಹೆಸರು ಬಂದಿದೆ. ಬ್ರಹ್ಮನಿಗೆ ಹೇಳಲ್ಪಟ್ಟಿರುವ ಚತುರ್ಮುಖತ್ವವು ಅವನ ಸರ್ವತೋಮುಖ ವಿದ್ಯಾಪ್ರಸಾರವನ್ನು ವಿಶದಪಡಿಸುವಹಾಗೆ, ಷಣ್ಮುಖ ಶಬ್ದವು ಷಟ್ಛಾಸ್ತ್ರಪಾರಂಗತತ್ವವನ್ನೂ, ದ್ವಾದಶಬಾಹುಗಳು ಘನತರೌದಾರ್ಯವನ್ನೂ ಸೂಚನೆಮಾಡತಕ್ಕ ಅಂಗಗಳಾಗಿರುವುದರಿಂದ, ಈಗಣ ಮುರುಘೇಂದ್ರ ಪೀಠಾಧಿಪತಿಗಳು ಶಾಸ್ತ್ರಪಾರಂಗತತ್ವದಲ್ಲೂ ಉದಾರಗುಣದಲ್ಲೂ ಷಣ್ಮುಖ ದ್ವಾದಶಬಾಹು ಸಮೇತ ಕುಮಾರಸ್ವಾಮಿಯ ಅಪರಾವತಾರತ್ವವನ್ನು ವ್ಯಕ್ತಪಡಿಸಿರುವರೆಂತಲೂ ಹೇಳಿ, ಆ ಅರ್ಥವನ್ನೇ ವ್ಯಕ್ತಪಡಿಸುವಂತೆ ತಾವು ರಚಿಸಿದ್ದ ಒಂದು ಶ್ಲೋಕವನ್ನು ಓದಿ ಉಪನ್ಯಾಸವನ್ನು ಮುಗಿಸಿದರು.

ಈ ಉಪನ್ಯಾಸದಿಂದ ಅನೇಕ ನೂತನ ವಿಷಯಗಳನ್ನು ಕೇಳಿದ ಕಾರಣ ಸಭಿಕರು ಪಟ್ಟ ಆಹ್ಲಾದಕ್ಕೆ ಪಾರವಿಲ್ಲದೆ ಇತ್ತು. ಇವರ ಉಪನ್ಯಾಸವು ೧-೨ ಗಂಟೆಗಳ ಕಾಲದಲ್ಲಿ ಹೇಳಿ ಮುಗಿಸಲ್ಪಟ್ಟಿತಾದರೂ ಅದರಲ್ಲಿ ಕಂಡವಿಷಯಗಳ ಸಂಗ್ರಹವನ್ನು ಮಾಡುವುದಕ್ಕೆ ಮ|| ಆಚಾರ್ಯರು ವಿನಿಯೋಗಿಸಿರುವ ಕಾಲವು ೩೦-೩೫ ವರ್ಷಗಳ ಮಿತಿಯುಳ್ಳುದಾಗಿರುವುದು. ಅವರು ಪಟ್ಟಿರುವ ಶ್ರಮಕ್ಕೆ ಪ್ರತಿಫಲವನ್ನು ಮಾಡಲು ಕರ್ನಾಟಕ ಜಗತ್ತಿಗೇ ಸಾಮರ್ಥ್ಯವಿಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗುವುದಿಲ್ಲ. ಅವರು ಕವಿಚರಿತರಚನೆಯ ಮೂಲಕ ಭೂತಲದಲ್ಲಿ ಸ್ಥಾಪಿಸಿರುವ ಅತ್ಯುಜ್ವಲಕೀರ್ತಿಯೇ ಅವರ ಶ್ರಮಕ್ಕೆ ತಕ್ಕ ಫಲವೆಂದು ಅವರೂ ನಾವೂ ಕೂಡ ಭಾವಿಸಬೇಕಾಗಿರುವುದು.

ಉಪನ್ಯಾಸವೆಲ್ಲಾ ಮುಗಿದ ಬಳಿಕ ಶ್ರೀ ಜಗದ್ಗುರುಗಳವರು ಮ॥ ಆಚಾರ್ಯರಿಗೆ ೩-೪ ಭಾಷೆಗಳೊಳಗೆ ಇರುವ ಪಾಂಡಿತ್ಯಮಹತ್ತ್ವವನ್ನೂ ಪ್ರಾಚೀನವಿಷಯ ಪರಿಶೋಧನದಲ್ಲಿ ಇರುವ ಅಗಾಧಶಕ್ತಿ, ಅಸಾಧಾರಣ ಕೌತೂಹಲ ದೇಶಭಾಷಾಭಿಮಾನಗಳನ್ನೂ ವರ್ಣಿಸಿ, ಈ ಕಾರಣದಿಂದಲೇ ಶ್ರೀಮನ್ಮಹಾರಾಜರು ಅವರಿಗೆ ಕೊಟ್ಟಿರುವ 'ಪ್ರಾಕ್ತನವಿಮರ್ಶನವಿಚಕ್ಷಣ' ಎಂಬ ಬಿರುದು ಅನ್ವರ್ಥವಾಗಿರುವುದನ್ನೂ ವರ್ಣಿಸಿ ಕೊಂಡಾಡಿ, ಅವರು ಇನ್ನೂ ದೀರ್ಘಕಾಲ ಇದೇ ತೆರದ ಉದ್ಯಮದಿಂದ ದೇಶಭಾಷೆಗೆ ಅಮೋಘವಾದ ಫಲವನ್ನು ಉಂಟುಮಾಡುತ್ತ ಸಕಲ ಶ್ರೇಯಸ್ಸನ್ನೂ ಹೊಂದುವವರಾಗಲೆಂದು ಶುಭವಾದಮಾಡಿ ಕೈಮುಟ್ಟಿ ಪುಷ್ಪಮಾಲಿಕೆಯನ್ನನುಗ್ರಹಿಸಿದರು. ಸಭಿಕರೆಲ್ಲರೂ ಜಯಘೋಷವನ್ನು ಮಾಡಿದರು. ಆ ದಿನವು ಶ್ರೀಮಜ್ಜಾರ್ಜ್ ಸಾರ್ವಭೌಮರವರ ವರ್ಧಂತ್ಯುತ್ಸವದಿವಸವಾಗಿದ್ದ ಪ್ರಯುಕ್ತ, ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯಿಂದ ಆ ದಿನ ಪ್ರಾತಃಕಾಲದಲ್ಲಿ ಸನ್ನಿಧಿಯ ಶಿವಾರ್ಚನಾಸಮಯದೊಳಗೆ ಮಹಾರುದ್ರಾಭಿಷೇಕಪೂರ್ವಕ ಸಾಂಗಾರ್ಚನೆಯೂ ಶಿವಗಣಾರಾಧನೆಯೂ ನಡೆದುದನ್ನು ಶ್ರೀಗಳವರು ಅಪ್ಪಣೆಕೊಡಿಸಿ, ಈಗ ನೆರೆದಿರುವ ಮಹಾಸಭಾಮಧ್ಯದಲ್ಲಿ ನಾವೆಲ್ಲರೂ ಏಕಕಂಠ್ಯದಿಂದ ಅವರ ಶ್ರೇಯೋಲಾಭವನ್ನು ಕೋರಿ ಜಯಘೋಷವನ್ನು ಮಾಡಬೇಕೆಂದೂ, ಧರ್ಮಪ್ರಭುಗಳಾದ ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯನ್ನೂ ಕೂಡ ಸರ್ವರೂ ಮಾಡಬೇಕೆಂದೂ ಅಪ್ಪಣೆ ಕೊಡಿಸಿದರು. ಸರ್ವರೂ ಎದ್ದು ನಿಂತು ಮೂರು ಮೂರು ವೇಳೆ ಮಹಾಜಯಘೋಷವನ್ನು ಮಾಡಿ ಆನಂದದಿಂದ ತೆರಳಿದರು.

ಪಾದಪೂಜಾಭಿಕ್ಷೆಗಳು.

ಮೊಟ್ಟಮೊದಲು ಶ್ರೀಗಳವರನ್ನು ದಿ॥ ಬ॥ ಕೆ. ಪಿ. ಪುಟ್ಟಣ್ಣಸೆಟ್ಟಿ ಸಿ. ಐ. ಇ. ಯವರು ತಮ್ಮ ಮನೆಗೆ ಸಕಲ ಮರ್ಯಾದೆಯಿಂದ ಬರಮಾಡಿಕೊಂಡು ಮಹಾ ಪಾದಪೂಜೆಯನ್ನೂ ಗಣಾರಾಧನೆಯನ್ನೂ ನಡೆಯಿಸಿ ಶ್ರೀಗಳವರಿಗೆ ೧೨೫೦ ರೂ. ಗಳನ್ನು ಕಾಣಿಕೆಯಾಗಿ ಸಮರ್ಪಿಸಿದರು. ಊದುಬತ್ತೀಸಾಪ್ ಮ॥ ಕಳ್ಳೆಪ್ಪನವರು ನಡೆಯಿಸಿದ ಪಾದಪೂಜೆಯಲ್ಲಿ ೫೦೦ ರೂ. ಗಳನ್ನು ಸಮರ್ಪಿಸಿದರು. ಮ॥ ಪಾಪಣ್ಣನವರ ಎಂ. ಬಸಪ್ಪನವರು ಕಳೆದ ಭಾನುವಾರ ಸಕಲ ಮರ್ಯಾದೆಗಳೊಡನೆ ಅರಳೇಪೇಟೆ, ಚಿಕ್ಕಪೇಟೆ, ಕೋಟೆ, ಚಾಮರಾಜಪೇಟೆಗಳ ಮಾರ್ಗವಾಗಿ ಶ್ರೀಗಳವರನ್ನು ಪಲ್ಲಕ್ಕಿಯ ಉತ್ಸವದೊಡನೆ ಬರಮಾಡಿಕೊಂಡು ವಿಜೃಂಭಣೆಯಿಂದ ಪಾದಪೂಜಾ ಗಣಾರಾಧನೆಗಳನ್ನು ನಡೆಯಿಸಿ, ತಮ್ಮ ಪಾದ ನ್ಯಾಸದಿಂದ ಶ್ರೀಗಳು ತಮ್ಮ ಗೃಹವನ್ನು ಪವಿತ್ರಗೊಳಿಸಿದ ಸ್ಮರಣಾರ್ಥವಾಗಿ ತಮ್ಮ ತಂದೆಗಳ ಹೆಸರಿನ ಮೇಲೆ ವೀರಶೈವ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವುದಕ್ಕಾಗಿ ೫೦೦೦ ರೂ. ಗಳನ್ನು ಸರ್ಕಾರಿ ಖಜಾನೆಯಲ್ಲಿ ಇಡಲು ವಾಗ್ದಾನಮಾಡಿ ನಮಸ್ಕರಿಸಿದುದಲ್ಲದೆ ೩೦೫ ರೂ. ಗಳನ್ನು ಪಾದಕಾಣಿಕೆಗಾಗಿ ಸಮರ್ಪಿಸಿದರು. ಕಳೆದ ತಾ॥ ೫ ರಲ್ಲಿ ಡಾಕ್ಟರ್ ಬಿ. ನಂಜಪ್ಪನವರೂ ಶುಕ್ರವಾರ ಮ॥ ಆರ್. ಪುಟ್ಟಣ್ಣ ಬಿ. ಎ. ಬಿ. ಎಲ್. ರವರೂ ತಂತಮ್ಮ ಮನೆಗಳಿಗೆ ಶ್ರೀಗಳವರನ್ನು ಬರಮಾಡಿಕೊಂಡು ಮಹಾ ಭಕ್ತಿವೈಭವದಿಂದ ಅರ್ಚನಾದಿಗಳನ್ನು ನಡೆಯಿಸಿ ಕಾಣಿಕೆಗಳನ್ನು ಉದಾರವಾಗಿಯೇ ಸಮರ್ಪಿಸಿದರು. ಈ ವಾರದಲ್ಲೂ ಮುಂದಣ ವಾರದಲ್ಲೂ ಇನ್ನೂ ಹಲವರ ಮನೆಗಳಲ್ಲಿ ಪಾದಪೂಜಾಭಿಕ್ಷೆಗಳು ನಡೆಯುವುವಾಗಿವೆ.

ಸ್ವೀಕಾರ.

ಶಿವಗಂಗೆಯಲ್ಲಿರುವ ಸಾಹುಕಾರ್ ಲಿಂಗಪ್ಪನವರ ಕುಮಾರ ಮ॥ ರೇವಣ್ಣನವರ ಮನೆಯ ಲಗ್ನದಲ್ಲಿ ಕೈ॥ ವೀರಸಂಗಪ್ಪನವರ ಸ್ಮಾರಕಾರ್ಥವಾಗಿ ತೆಗೆದ ಅಗ್ರತಾಂಬೂಲದ ಬಾಬತು ೧ ರೂ. ಯನ್ನು ಗುಬ್ಬಿ ಯಜಮಾನರು ರೇವಣ್ಣನವರ ಮೂಲಕ ಸ್ವೀಕರಿಸಿರುತ್ತೇವೆ.

ಕಳೆದ ವೈಶಾಖ ಮಾಸದಲ್ಲಿ ಶಿರಾದಲ್ಲಿ ನಡೆದ ಮ॥ ಮರಿಯಪ್ಪನವರ ಕುಮಾರ ಚನ್ನಬಸವಯ್ಯನ ಶಿವದೀಕ್ಷಾ ವಿವಾಹಮಹೋತ್ಸವಗಳಲ್ಲಿ ಕೈ॥ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ತೆಗೆದ ೧ ರೂ. ಇದೇ ಊರಿನ ಮ॥ ರುಮಾಲೆ ನಂಜುಂಡಪ್ಪನವರ ಮಗ ಶ್ರೀಕಂಠಪ್ಪನ ವಿವಾಹಮಹೋತ್ಸವದಲ್ಲಿ ಕೈ॥ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ತೆಗೆದ ೧ ರೂ. ಅಂತು ೨ ರೂ. ಗಳನ್ನು ಸ್ವೀಕರಿಸಿರುತ್ತೇವೆ. ಈ ಮಹೋತ್ಸವಗಳು ಶಿರಾ ಹೋಬಳಿ ಹಂಚಯ್ಯನವರ ಮಠದ ಪಟ್ಟಾಧ್ಯಕ್ಷ ಸಿದ್ಧಪ್ಪದೇವರ ಮತ್ತು ಶಿರಾ [illegible] ಮಠದ ಆಚಾರಿ ರಾಚಯ್ಯನವರ ಪೌರೋಹಿತ್ಯದಿಂದ ಕ್ರಮವಾಗಿ ನಡಿಸಲ್ಪಟ್ಟವು. ಅಲ್ಲದೆ ಈ ಕಾಲದಲ್ಲಿ ವಿದ್ಯಾಭಿವೃದ್ಧಿ ಮೊದಲಾದ ವಿಷಯಗಳ ಮೇಲೆ ಉಪನ್ಯಾಸಗಳು ನಡಿಸಲ್ಪಟ್ಟವು. ಪ. ಪ್ರ.

ಪತ್ರವ್ಯವಹಾರ.

ಚಾಮರಾಜನಗರದ ತಾ॥ ಮೂಡನಾಕೂಡು ಸ್ಕೂಲಿನ ಬೇನಾಮ್ ಅರ್ಜಿ.

ನಮ್ಮ ಸ್ಕೂಲ್ಮಾಸ್ಟರಾಗಿರುವ ಮ॥ ರಾ॥ ಕೆ. ಎಸ್. ಚಂದ್ರಶೇಖರಯ್ಯ ಎಂಬುವರು ಬಂದ ಮೇಲೆ ಸ್ಕೂಲು ತುಂಬಾ ಅಭಿವೃದ್ಧಿಗೆ ಬಂದಿರುವುದಲ್ಲದೆ ಜನಾನುರಾಗಿಗಳಾಗಿ ತುಂಬಾ ಪ್ರೋತ್ಸಾಹದಿಂದ ಸಂಸಾರ ಸಮೇತರಾಗಿ ಇಲ್ಲೇ ವಾಸಮಾಡಿಕೊಂಡು ಕೆಲಸಮಾಡುತ್ತಾ ಇದ್ದಾರೆ ಯಾವನೋ ಅಸೂಯಾಪರನಾದ ಪುಂಡು ಮನುಷ್ಯನು ಮತ್ಸರದಿಂದ ಇಲ್ಲದ ದೋಷಾರೋಪಣೆಗಳನ್ನು ಕಲ್ಪಿಸಿ ವಿದ್ಯಾಭ್ಯಾಸದ ಇಲಾಖೆಗೆ ಬೇನಾಮ್ ಅರ್ಜಿಯನ್ನು ಕೊಟ್ಟಿದ್ದಾನೆ. ನಮ್ಮ ಗ್ರಾಮದಲ್ಲಿ ಪಾರ್ಟಿ ವಗೈರೆ ಇಲ್ಲ. ಐಕಮತ್ಯದಿಂದಿದ್ದಾರೆ. ಅವಶ್ಯಕವಿದ್ದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ತಾಲ್ಲೋಕ್ ಮ್ಯಾಜಿಸ್ಟ್ರೇಟ್‌ರವರ ಮುಖಾಂತರ ತಿಳಿಯಬಹುದು. ಇಂಥಾ ಬೇನಾಮು ಅರ್ಜಿಗಳಿಗೆ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರುಗಳು ಖಂಡಿತವಾಗಿ ಗಮನ ಕೊಡಲಾರರೆಂದು ನಂಬಿದ್ದೇನೆ. ಸತ್ಯವಾದಿ.

ಬೇರೂರು.

ಪೂರ್ವಾರ್ಜಿತ ಸುಕೃತ ವಿಶೇಷದಿಂದ ಭಾಗ್ಯಶಾಲಿಗಳಾದ ಪುಣ್ಯಾತ್ಮರು ತಮ್ಮಿಂದಾರ್ಜಿಸಲ್ಪಟ್ಟ ದ್ರವ್ಯಕ್ಕೆ ಸದ್ವಿನಿಯೋಗಭೋಗಗಳೇ ವಿಭೂಷಣಗಳೆಂಬಂಶವನ್ನೂ ಮತ್ತು ಜನ್ಮಸಾರ್ಥಕತೆಗೆ ಧರ್ಮಸಂಗ್ರಹವು ಇಹಪರಗಳಲ್ಲಿಯೂ ಪರಮ ಸುಖಪ್ರದವಾಗಿರುವುದೆಂಬ ಮುಖ್ಯ ತತ್ವವನ್ನೂ ಶಾಸ್ತ್ರವಿಚಾರ ಸ್ವಾನುಭವಗಳಿಂದ ತಿಳಿದವರಾದುದರಿಂದಲೇ ವಿವೇಕಿಗಳು ಬಹುಪ್ರಕಾರದಿಂದನ್ನದಾನ ವಿದ್ಯಾದಾನ ಭೂದಾನ ಕೂಪತಟಾಕಾದಿ ನಿರ್ಮಾಣ ಮೊದಲಾದ ಧರ್ಮಕಾರ್ಯಗಳನ್ನು ಆಚರಿಸುತ್ತಿರುವುದು ಲೋಕಮಾನ್ಯವಾದ ಸಂಗತಿಯಾಗಿರುತ್ತದಷ್ಟೆ. ಅದರಂತೆ ಯುಕ್ತಾಯುಕ್ತವಿಚಾರತತ್ಪರರಾಗಿ ಇರುವ ಬೇರೂರು ಮ॥ ರಾ॥ ಎಸ್. ಸರ್ವಜ್ಞಪ್ಪಯ್ಯನವರು ತಮ್ಮ ೬೦ ನೆಯ ವರ್ಷದ ಉಗ್ರಶಾಂತಿಯನ್ನು ಇದೇ ಸಿದ್ಧಾರ್ಥಿನಾಮ ಸಂವತ್ಸರದ ವೈಶಾಖ ಬ॥ ೬ ಬುಧವಾರ ಶುಭಮುಹೂರ್ತದಲ್ಲಿ ವಿಧ್ಯುಕ್ತಪ್ರಕಾರವಾಗಿ ಪೂಜ್ಯರಾದ ಗುರುಗಳಿಂದಲೂ, ವೇ॥ ಸಂಪಿಗೆ ಸಿದ್ಧಲಿಂಗಶಾಸ್ತ್ರಿಗಳವರೇ ಮೊದಲಾದ ಪುರೋಹಿತರಿಂದಲೂ, ಉಗ್ರಶಾಂತಿ ಕಾರ್ಯವನ್ನು ನೆರವೇರಿಸಿದುದಲ್ಲದೆ ಇದೇ ಸಮಯದಲ್ಲಿ ಅಂದರೆ ವೈಶಾಖ ಬ॥ ೭ ಗುರುವಾರ ಪೂರ್ವಾಹ್ಣದಲ್ಲಿ ಶಾಂತಿಕಾರ್ಯವನ್ನು ಸಾಂಗಗೊಳಿಸಿದ ನಂತರ ತಮ್ಮ ಪುತ್ರಿ ಗಿರಿಜಮ್ಮನಿಗೆ ಧರ್ಮಾರ್ಥವಾಗಿ ೩೦೦೦ ರೂ. ಬೆಲೆ ಬಾಳುವ ಮನೆ ೧ ೧೦೦೦ ರೂ. ಬೆಲೆ ಬಾಳುವ ತರಿ ಜಮೀನು ೧ ೨೦೦ ರೂ. ಬೆಲೆ ಬಾಳುವ ತರೀ ಗದ್ದೆ ೧ ೨೦೦೦ ರೂ. ಬೆಲೆ ಬಾಳುವ ಆಭರಣಗಳು ಸಹ ತಮ್ಮ ಗೃಹಕ್ಕೆ ದಯಮಾಡಿಸಿದ ಭಕ್ತಮಾಹೇಶ್ವರರ ಸನ್ನಿಧಿಯಲ್ಲಿ ತ್ರಿಕರಣ ಪೂರ್ವಕವಾಗಿ ದಾನ ಮಾಡಿದರು. ಮತ್ತು ೮ ಶುಕ್ರವಾರ ಪ್ರಾತಃಕಾಲ ಶ್ರೀ ರುದ್ರಾಭಿಷೇಕ ಮಹಾಪೂಜಾ ಮಹೇಶ್ವರಾರಾಧನೆ ಮೊದಲಾದ ಕಾರ್ಯವನ್ನು ಭಕ್ತಿಯಿಂದ ಈಶ್ವರಾರ್ಪಿತವಾಗಿ ನಡೆಯಿಸಿ ಸರ್ವರನ್ನೂ ಸಂತೋಷಪಡಿಸಿದರು. ಮತ್ತೊಂದು ವಿಶೇಷವೇನೆಂದರೆ. 'ದುರ್ಭಿಕ್ಷೇ ಚಾನ್ನದಾತಾರಂ' ಎಂಬಂತೆ ಇಂತಹ ಕ್ಷಾಮಗಾಲದಲ್ಲಿ ಪ್ರತಿನಿತ್ಯವೂ ಭಕ್ತಮಾಹೇಶ್ವರರುಗಳಿಗೆ ಅನ್ನದಾನವನ್ನು ಮಾಡಿ ಭೂರಿ ದಕ್ಷಿಣೆ ಮೊದಲಾದ ಸದ್ವಿನಿಯೋಗವನ್ನು ಕೇವಲ ಉಲ್ಲಾಸದಿಂದಲೂ ನಿರ್ಮಲ ಚಿತ್ತದಿಂದಲೂ ಆಚರಿಸಿದುದು ಅಭಿನಂದನೀಯವಾಗಿರುತ್ತದೆ. ಈ ಶುಭ ಸಮಯದಲ್ಲಿ ಮ॥ ರಾ॥ ಕೈ॥ ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ೨ ರೂ. ಗಳನ್ನು ಕಳುಹಿಸಿಕೊಟ್ಟು ತಮ್ಮ ಸಹಜವಾದ ಧರ್ಮಾಭಿಮಾನವನ್ನು ವ್ಯಕ್ತಗೊಳಿಸಿದರು. ಇಂತಹ ಧರ್ಮ ಕಾರ್ಯಗಳನ್ನಾಚರಿಸಿ ಮಾರ್ಗದರ್ಶಕರಾಗಿರುವ ಮ॥ ರಾ॥ ಎಸ್. ಸರ್ವಜ್ಞಪ್ಪಯ್ಯನವರಿಗೂ ಅವರ ಅಶೇಷ ಕುಟುಂಬಿಗಳಿಗೂ ಭಕ್ತವತ್ಸಲನಾದ ಶ್ರೀ ವಿಶ್ವೇಶ್ವರಮೂರ್ತಿಯು ದೀರ್ಘಾಯುರಾರೋಗ್ಯಾದಿ ಸುಖಪರಂಪರೆಗಳನ್ನೂ ಧನಕನಕವಸ್ತುವಾಹನಾದಿ ಮಹದೈಶ್ವರ್ಯವನ್ನೂ ಕರುಣಿಸಲೆಂದು ಬಯಸುವ. ವೀರಶೈವ ಮತಾಭಿಮಾನಿ.

[ಮೇಲ್ಕಂಡ ೨ ರೂ. ಯನ್ನು ಸ್ವೀಕರಿಸುತ್ತೇವೆ. ಪ. ಪ್ರ.]

ಶ್ರೀಮದ್ವೀರಶೈವ ಧರ್ಮೋದ್ಧಾರಿಣೀ ಸಭಾ, ಗುಣಮಠಕಲ್.

ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಕೃಪಾಪೋಷಿತರಾದ ನೈಜಾಂ ಇಲಾಖಾ ಜಿಲ್ಲಾ ಗುಲ್ಬರ್ಗಾ ಪೈಕಿ ಗುಣಮಠಕಲ್ ಶ್ರೀ ಶಾಂತವೀರಸ್ವಾಮಿಗಳವರ ಆಶೀರ್ವಾದಬಲದಿಂದ ಶ್ರೀ ಸಿದ್ಧಾರ್ಥಿ ಸಂವತ್ಸರದ ವೈಶಾಖ ಬಹುಳ ೫ ಮಂಗಳವಾರದಿಂದ ಮೂರು ದಿನಗಳವರೆಗೆ ಮ. ರಾಜೇಶ್ರೀ ಪಕೀರಪ್ಪ ಯಾದಗಿರಿ ಇವರ ಅಧ್ಯಕ್ಷತೆಯಿಂದ ಸಭಾಕಾರ್ಯಗಳು ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟವು. ಈ ಸಭೆಗೆ ದಾವಣಗೆರೆ ಶ್ರೀ ಮೃತ್ಯುಂಜಯಸ್ವಾಮಿಗಳು ಇಟ್ಟಿಗಿ ಮಠದ ಶ್ರೀಯವರು ಇನ್ನೂ ಅನೇಕ ಸ್ಥಳದ ಮೂರ್ತಿಗಳು ಭಕ್ತಮಾಹೇಶ್ವರರು ಸಂಸ್ಕೃತಪಾಠಶಾಲಾಧ್ಯಾಪಕರುಗಳು ತಮ್ಮ ವಿದ್ಯಾರ್ಥಿಗಳೊಡನೆ ದಯಮಾಡಿಸಿದ್ದರು. ಒಟ್ಟು ಸಭಾಜನಗಳ ಸಂಖ್ಯೆಯು ಸುಮಾರಾಗಿ 5 ಸಾವಿರಗಳವರೆಗೆ ನೆರೆದಿತ್ತು. ಸದರಿ ಸಭೆಯಲ್ಲಿ ಶ್ರೀ ಮೃತ್ಯುಂಜಯಸ್ವಾಮಿಗಳವರು ನೈತಿಕ ಧಾರ್ಮಿಕ ವಿಷಯವಾಗಿ ಮಾಡಿದ ಭಾಷಣಗಳು ಜನಗಳಿಗೆ ಹೃದಯಂಗಮವಾಗಿ ಸರ್ವರ ನೇತ್ರಗಳಿಂದಲೂ ಆನಂದಬಾಷ್ಪಗಳು ಸುರಿಯುತ್ತಿದ್ದವು. ಶ್ರೀ ಶಾಂತವೀರಸ್ವಾಮಿಗಳವರು ನೈಜಾಂ ಇಲಾಖೆಯಲ್ಲಿ ವಿದ್ಯಾವಿಷಯದಲ್ಲಿ ಹಿಂದುಳಿದಿರುವ ತಮ್ಮ ಜನಾಂಗವನ್ನು ಇಂಗ್ಲೀಷ್ ವಿದ್ಯಾಭ್ಯಾಸದಿಂದ ಮುಂದಕ್ಕೆತರುವ ವಿಷಯದಲ್ಲಿ ಮಾಡಿದ ಭಾಷಣವು ಎಲ್ಲರ ಮನಸ್ಸಿಗೂ ಆನಂದವನ್ನುಂಟುಮಾಡಿತು. ಮತ್ತು ಇದೇ ವಿಷಯದಲ್ಲಿ ಒಂದು ದೊಡ್ಡ ಫಂಡನ್ನು ಶೇಖರಿಸುವ ವಿಷಯದಲ್ಲಿ ಇದೇ ವರುಷ ಯಾದಗಿರಿಯಲ್ಲಿ ಮಹಾಸಭೆಯನ್ನು ಮಾಡಬೇಕೆಂದು ಶ್ರೀಯವರು ಅಪ್ಪಣೆಕೊಡಿಸಿದ್ದನ್ನು ಸರ್ವರೂ ಅನುಮೋದಿಸಿದ್ದಲ್ಲದೆ ಸದರಿ ಸಭೆಗೆ 7 ಜನ ಆಶ್ರಯದಾತರು—1 ಮತ್ತು 2 ನೇ ವರ್ಗದ ಮೆಂಬರುಗಳು ಸಹ ಸೇರಿಸಲ್ಪಟ್ಟು 7300—0—0 ರೂಪಾಯಿಗಳವರೆಗೆ ಚಂದಾ ಮೊಬಲಗು ಶೇಖರಿಸಲ್ಪಟ್ಟಿತು. ಸದರಿ ಮೊಬಲಗನ್ನು ಸಹಾಯಮಾಡಿದ ಮಹನೀಯರ ಹೆಸರುಗಳು ರಿಪೋರ್ಟಿನಲ್ಲಿ ತಿಳಿಸಲ್ಪಡುತ್ತದೆ. ನಾರಾಯಣಪೇಟೆ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳು ಮಾಡಿದ ಭಾಷಣವನ್ನು ಈ ಊರಿನ ವಿದ್ಯಾರ್ಥಿಗಳೂ ಮತ್ತು ಮಹಮದೀಯ ಜನಗಳು ಉರುದು ಭಾಷೆಯಲ್ಲಿ ಕನ್ನಡ ಭಾಷೆಯಲ್ಲಿಯೂ ಸಹ ಮಾಡಿದ ಭಾಷಣಗಳನ್ನೂ ಕೇಳಿ ಶ್ರೀಯವರಿಗೆ ಚಿತ್ತೋಲ್ಲಾಸವಾಗಿ ಎಲ್ಲರಿಗೂ ವೇತನಗಳು, ಮೆಡಲುಗಳು ಸಹ ಯಥೋಚಿತವಾಗಿ ಕೊಡಲ್ಪಟ್ಟವು. ನಾರಾಯಣಪೇಟೆ ಪಾಠಶಾಲಾಧ್ಯಾಪಕರು ಸಿದ್ಧಲಿಂಗಸ್ವಾಮಿಗಳು ವಿದ್ಯಾರ್ಥಿಗಳಿಗೆ ಪಾಠಹೇಳುವುದರಲ್ಲಿ ತೋರಿಸಿರುವ ಮೆಹನತ್ತಿಗಾಗಿ ಇವರಿಗೆ ಸಭೆಯಲ್ಲಿ ಬಹುಮಾನವು ಕೊಡಲ್ಪಟ್ಟಿತು. ಹೈದರಾಬಾದ್ ಹೈಕೋರ್ಟಿನ ವಕೀಲರಾದ ಮ॥ ಬಾಪೂರಾವ್‌ಯವರು ಮತ್ತು ಗುರುಶಾಂತಪ್ಪ ಶಂಕರಪ್ಪ ತುಂಬರ್ಜಿ ಬಿ. ಎ. ಎಲ್ ಎಲ್. ಬಿ. ಸೊಲ್ಲಾಪೂರ್ ಇವರುಗಳು ಈ ಸಭಾ ವಿಷಯದಲ್ಲಿ ತೋರಿಸಿದ ಪ್ರೀತಿಯು ಅಪೂರ್ವವಾದದ್ದೆಂದು ಎಲ್ಲರೂ ಕೊಂಡಾಡಿದರು. ಸಾಯಂಕಾಲದವರೆಗೆ ಸಭಾಕಾರ್ಯಗಳು ಮುಗಿಸಲ್ಪಟ್ಟು ನಮ್ಮ ಸಾರ್ವಭೌಮ ಸರ್ಕಾರಕ್ಕೂ ನೈಜಾಂ ಸರ್ಕಾರದವರಿಗು ಸಹ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತಾ ಶ್ರೀಯವರಿಂದ ಆಶೀರ್ವಾದವನ್ನು ಪಡೆದು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಜೊಪ್ಪಣ್ಣ, ಶರಣಪ್ಪ,
ನಾರಾಯಣಪೇಟೆ ವ್ಯವಸ್ಥಾಪಕ.

ಫೋಟೋ ಲಾಕೆಟ್ಸ್.

ಈ ಪ್ರಕಾರ ಘಡಿಯಾರದ ಸರಗಳಿಗೆ ಹಚ್ಚುವ ಲಾಕೇಟುಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೂಚಗಳೂ, ಅಪೂರ್ವವಾದ ಅತ್ಯಂತ ಸ್ವಾಭಾವಿಕವಾದ್ದು ಆದರಿಂದ ತಮ್ಮ ಇಚ್ಛಿತ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ಪುದರಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ, ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರ ಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮಹಮದೀಯ ಧರ್ಮದ ಜಗದಾವಪೀರಸಾಹೇಬ ಅಜಮೀರದ ಖಾಜಾವಲಿ, ಮುಂತಾದ ಬೇಕವುಳ್ಳದ ಅನೇಕ ದೇವತಾ ಮತ್ತು ಸಾಧೂ ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೇ. ಲಾಕೇಟಿನಲ್ಲಿ ೨, ಬ್ರೂಚದಲ್ಲಿ ೧, ಫೋಟೋ ಇರುವವೂ ಕ್ರಯ ಗಿಲ್ಟಬ್ರೂಚವೂ ೬, ೮, ಆಣೆ. ರೋಲಗೋಲ್ಡ ಬ್ರೂಚವೂ ರೂ. ೧—೨—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳಿಯವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿವುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವು ಕ್ರಯ ರೂ. ೧—೧೨—೦ ಪಾವಲಿ ಆಕಾರದ ಪ್ಲೇನ ಮತ್ತು ಪ್ಯಾಕ್ಸ್ ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ಹೃತ್ತ ಆಕಾರವೂ, ಅಥವಾ ಗುಂಡ ಆಕಾರವೂಇರುವವುಗಳ ಕ್ರಯ ರೂ. ೧-೪-೦ ೧—೮—೦.

ಇವುಗಳ ಪೂರ್ವ ನಮ್ಮ ಕಾರಖಾನಾದಲ್ಲಿ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸುದರ್ಶನಚಕ್ರ, ೪ ಪಂಚಮುಖದ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಗರುಡಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾಳಕೇರಿ ಕಮತಗಿ ಹುಚ್ಚಪ್ಪನವರೂ ಸಿರಸಂಗಿ ಶರದೇಶಾಯಿ, ರುದ್ರಗವಡ್ರು ಮುಂತಾದ ಅನೇಕ ಸಾಧೂ ಸತ್ಪುರುಷರದೂ ಫೋಟೋ ಸಿಗುತ್ತವೆ. ಕ್ರಯ ಪೂಲಸ್ಕೆಪ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಪ್ರತಿವಂದ ಊರಿಗೆ ಮಾರಾಟಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟಾಂಪ್ ಕಳುಹಿಸಿ ಫೊಟೊ ಕ್ಯಾಟ್ಲಾಗಬುಕ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.

ದಿ ಶಾರದಾ ಫೋಟೋ ಕಂಪನಿಯ ಮಾಲಕ,
5 ಗಂಗಪ್ಪಾ ಜೇರಗೇ ಸೋಲ್ಲಾಪುರ ಸಿಟಿ.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 27

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ನಾಸಿರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಬಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

18 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಜೂನ್ ತಾ॥ ೮ ರಿಂದ ೧೯೧೯ ನೆಯ ಜೂನ್ ತಾ॥ ೧೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಜ್ಯೇಷ್ಠ ಶು॥ ದಶಮಿಯಿಂದ ಜ್ಯೇಷ್ಠ ಬ॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
8	ಭಾನು	ದಶಮಿ	13-13	ಹಸ್ತ	12-0	26
9	[1]ಸೋಮ	ಏಕಾದ	17-23	ಚಿತ್ತ	17-39	27
10	[2]ಮಂಗಳ	ದ್ವಾದಶಿ	22-12	ಸ್ವಾತಿ	24-0	28
11	ಬುಧ	ತ್ರಯೋ	27-17	ವಿಶಾಖಾ	30-39	29
12	ಗುರು	ಚತು	32-13	ಅನೂ	37-5	30
13	ಶುಕ್ರ	ಪೌರ್ಣ	36-34	ಜ್ಯೇಷ್ಠ	43-0	31
14	ಶನಿ	ಪಾಡ್ಯ	40-18	ಮೂಲ	47-58	1

(1) ದ್ವಾದಶೀ ತಿಥಿಃ, ಸರ್ವತ್ರ ನಿರ್ಜಲೈಕಾದಶೀ, ಚಾಮರಾಜೇಶ್ವರ ರಥಃ, ಶ್ರೀಮನ್ಮಹಾರಾಜರವರ ವರ್ಧಂತಿ. (2) ಪ್ರದೋಷಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೭) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಜೂನ್ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೭೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ಸವಿಸ್ತಾರವಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪುಟಸಿದ್ಧಿ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
19 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹಂಪಾಷಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕಲೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವವು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಗುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಬಿರಟು ಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,

ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
19 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

36 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 26

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾಲ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದೆ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಸೂರ್ಯೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.



ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ನಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಇದೆಯೆಂದು ತಾವೇ ಹೇಳುವಿರಿ. ವಿಷಜ್ವರ, ಘೋರತರ ನಾಲ್ಕರ ಜ್ವರಗಳು, ಸನ್ನಿಪಾತ [illegible]ಗಳು ಶೀಘ್ರ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. [illegible]ತ್ರಾಣದ ತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇವಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸೂರ್ಯೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0,

ನಮ್ಮ ವಿಳಾಸ:—ಶ್ರೀ ಸೀತಾರಾಘವ
26 ವೈದ್ಯಶಾಲಾ, ಮೈಸೂರು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

22 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಮದರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ಕೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ದರ್ಜ 1 ಕ್ಕೆ 5 ರೂಪಾಯಿ.
ನಮ್ಮ ವಿಳಾಸ:— ಎ. ಎ. ಎಸ್. ವಾಣಿ ಅಂಡ್ ಕೊ,
19 ಸಾಹುಕಾರಪೇಟೆ. ಮದರಾಸ್

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಸಿವಿಲ್ ಅಪಾಯಿಂಟ್‌ಮೆಂಟ್ಸ್.

ಜನರಲ್.

ರಾಜಾಜ್ಞಾಪತ್ರಿಕೆ.

ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಕೆ. ಸಿ. ಐ. ಇ. ಯವರು ಉದ್ಯೋಗದಿಂದ ನಿವೃತ್ತರಾದ ಕಾರಣ ಮೈಸೂರು ಸಂಸ್ಥಾನದ ದಿವಾನ್ ಪದವಿಯು ಖಾಲಿಯಾದುದರಿಂದ ನಾವು ರಾಜಸೇವಾಧುರೀಣ ಸರ್ದಾರ್ ಕಾಂತರಾಜ ಅರಸಿನವರು ಸಿ. ಎಸ್. ಐ. ಯವರ ರಾಜಭಕ್ತಿಯಲ್ಲಿಯೂ, ಕಾರ್ಯದಕ್ಷತೆಯಲ್ಲಿಯೂ, ವಿವೇಚನೆಯಲ್ಲಿಯೂ, ಕೇವಲ ವಿಶ್ವಾಸವಿಟ್ಟು ಮೈಸೂರು ಸಂಸ್ಥಾನದ ದಿವಾನ್ ಪದವಿಗೆ ಮೇಲ್ಕಂಡ ರಾಜಸೇವಾಧುರೀಣ ಸರ್ದಾರ್ ಮೈಸೂರು ಕಾಂತರಾಜ ಅರಸಿನವರು, ಸಿ. ಎಸ್. ಐ. ಯವರನ್ನು ಈ ಮೂಲಕ ನೊಕರೂರ್ ಮಾಡಿರುತ್ತೇವೆ; ಮತ್ತು ಉದ್ಯೋಗ ಪ್ರಯುಕ್ತ ಮಂತ್ರಾಲೋಚನಾ ಸಭಾಧ್ಯಕ್ಷರಾಗಿ ಇರುವಂತೆ ಸಹ ಮೇಲ್ಕಂಡ ರಾಜಸೇವಾಧುರೀಣ ಸರ್ದಾರ್ ಮೈಸೂರು ಕಾಂತರಾಜ ಅರಸಿನವರು, ಸಿ. ಎಸ್. ಐ., ಯವರನ್ನು ನೊಕರೂರ್ ಮಾಡಿರುತ್ತೇವೆ.

ಇದೇ 1919 ನೆಯ ಇಸವಿ ಜೂನ್ 9 ನೆ ತಾರೀಖಿನ ದಿವಸ ಮೈಸೂರಲ್ಲಿ ನಮ್ಮ ಮೊಹರ್ ದಸ್ತ್‌ಖತ್ ಸಹಿ ಕೊಡಲ್ಪಟ್ಟಿರುತ್ತದೆ.

ಕೃಷ್ಣರಾಜ ಒಡೆಯರ್.

ನಂ. 1614—ಸಿ. ಬಿ. 154-18-1, ತಾರೀಖು 9 ನೆಯ ಜೂನ್ 1919.

ಶ್ರೀಮನ್ಮಹಾರಾಜಾ ಸಾಹೇಬ್ಬಹದೂರವರು ಸರ್ ಎಂ. ವಿಶ್ವೇಶ್ವರಯ್ಯ, ಕೆ. ಸಿ. ಐ. ಇ., ಯವರಿಗೆ ಮೈಸೂರು ಸಂಸ್ಥಾನದ ನೌಕರಿಯಿಂದ ನಿವೃತ್ತರಾಗಲು ಅಪ್ಪಣೆಯನ್ನು ಕೊಡುವುದರಲ್ಲಿ, ಪ್ರಖ್ಯಾತರಾದ ಈ ಆಫೀಸರುಗಳು ಸಂಸ್ಥಾನಕ್ಕೆ ಮಾಡಿರುವ ಮಹದುಪಕಾರಗಳು ಮಹಾಸ್ವಾಮಿಯವರ ದಿವ್ಯಚಿತ್ತಕ್ಕೆ ಬಂದಿರುವುದೆಂಬ ಅಂಶವನ್ನು ಲಿಖಿತ ಮೂಲಕ ತಿಳಿಯಪಡಿಸಲು ಇಚ್ಛಿಸುತ್ತಾರೆ. ಸರ್ ಎಂ. ವಿಶ್ವೇಶ್ವರಯ್ಯನವರು ಬೊಂಬಾಯಿ ಅಧಿಪತ್ಯದ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಬಹುಕಾಲ ಚೆನ್ನಾಗಿ ನೌಕರಿಯನ್ನು ಮಾಡಿದರು; ಅನಂತರ 1909 ನೆ ಇಸವಿ ನವಂಬರು ತಿಂಗಳಲ್ಲಿ ಮೈಸೂರು ಸರ್ಕಾರದ ಚೀಫ್ ಇಂಜನಿಯರಾಗಿ ನೇಮಿಸಲ್ಪಟ್ಟರು. ಆ ಮೇಲೆ ಮೂರು ವರ್ಷಗಳ ತರುವಾಯ ಮಿ॥ ಟಿ. ಆನಂದರಾವ್, ಸಿ. ಐ. ಇ., ಯವರು ರಿಟೈರಾದಾಗ ಮೈಸೂರುಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟು ಆರು ವರ್ಷಗಳಿಗಿಂತಲೂ ಹೆಚ್ಚಾದ ಕಾಲದವರೆಗೆ ಅತಿಶಯವಾದ ಸಾಮರ್ಥ್ಯದಿಂದ ಸಂಸ್ಥಾನದ ಆಡಳಿತಗಳನ್ನು ನಡಿಸಿದರು. ಈ ಕಾಲದಲ್ಲೆಲ್ಲಾ ಸರ್ ಎಂ. ವಿಶ್ವೇಶ್ವರಯ್ಯನವರು ಸಂಸ್ಥಾನದ ಸಂಪದಭಿವೃದ್ಧಿಗಾಗಿ ಶ್ರಮೆಯನ್ನರಿಯದ ಉತ್ಸಾಹದಿಂದಲೂ ಅನನ್ಯವಾದ ಶ್ರದ್ಧೆಯಿಂದಲೂ ಕೆಲಸಮಾಡಿದರು. ಸಂಸ್ಥಾನದ ದಿವಾನರಾಗಿ [illegible] ದಳಿತದಲ್ಲಿ ವಿದ್ಯಾಭ್ಯಾಸ, ನೀರಾವರಿ ಕಾಂಗಾರಿಗಳು, ರೈಲ್ವೆಗಳು ಮತ್ತು ಕೈಗಾರಿಕೆ ಬಾಬುಗಳಲ್ಲಿ ವಿಶೇಷ ಫಲದಾಯಕವಾದ ಅಭಿವೃದ್ಧಿಗಳುಂಟಾದವು. ಮತ್ತು ಇವರು ಸಂಸ್ಥಾನದ ಸಂಪತ್ಕರವಾದ ಭಾವೀಭಿವೃದ್ಧಿಗೆ ಶಾಶ್ವತವಾದ ಅಸ್ತಿಭಾರವನ್ನು ಹಾಕಿರುವರು. ರಿಟೈರಾದ ಮೇಲೆಯೂ ಸರ್ ಎಂ. ವಿಶ್ವೇಶ್ವರಯ್ಯನವರ ವಿಷಯದಲ್ಲಿ ಶ್ರೀಮನ್ಮಹಾರಾಜರವರಿಗೂ ಅವರ ಎಲ್ಲಾ ಪ್ರಜೆಗಳಿಗೂ ಗೌರವವೂ ಶ್ರೇಯಸ್ಕಾಂಕ್ಷೆಯೂ ಇದ್ದೇ ಇರುವವು.

ಸರ್ ಎಂ. ವಿಶ್ವೇಶ್ವರಯ್ಯನವರು ಮಾಡಿದ ಅಮೋಘವಾದ ನೌಕರಿಯ ವಿಷಯದಲ್ಲಿ ತಮ್ಮ ಮೆಚ್ಚಿಕೆಯನ್ನು ತೋರಿಸುವುದಕ್ಕಾಗಿ ಶ್ರೀಮನ್ಮಹಾರಾಜರವರು ಅವರಿಗೆ ಮಾಹೆಯಾನಾ 1,250 ರೂಪಾಯಿಗಳ ಸ್ಪೆಷಲ್ ಪೆನ್‌ಷನ್ನು ಸಲ್ಲತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜೂನ್ ತಾ॥ ೧೫ ನೆಯ ಭಾನುವಾರ.

ಸಂಪದಭ್ಯುದಯ ಸಮಾಜ.

ಕಳೆದ ಮಂಗಳವಾರದಿಂದ ಇದರ ವಾರ್ಷಿಕಾಧಿವೇಶನವು ಆಕ್ಟಿಂಗ್ ದಿವಾನರ ಅಧ್ಯಕ್ಷತೆಯಿಂದ ೩ ದಿನಗಳವರೆಗೆ ನಡೆಯಿತು. ಕೌನ್ಸಿಲರು ಶಾಖಾಮುಖ್ಯಾಧಿಕಾರಿಗಳು ಡಿ॥ ಕಮಿಷನರುಗಳು, ಕಮಿಟಿಗಳ ಸೆಕ್ರೆಟರಿಗಳು, ಎ॥ ಸೂಪರಿಂಟೆಂಡೆಂಟರುಗಳು, ಸಮಾಜದ ಸಭಿಕರುಗಳು ಅನೇಕ ಮಂದಿ ಸ್ಥಳೀಯಾಧಿಕಾರಿಗಳು ಪುರಜನರು ಸಹ ನೆರೆದಿದ್ದರು. ಆದರೂ ಸಭೆಗೆ ಕಳೆದ ವರ್ಷ ನೆರೆದಿದ್ದಷ್ಟು ಜನರು ಸೇರಿರಲಿಲ್ಲ. ದಿವಾನರು ತಮ್ಮ ಪ್ರಾರಂಭ ಭಾಷಣದಲ್ಲಿ ಈ ಸಮಾಜದ ಜನ್ಮಾರಭ್ಯದ ಚರಿತ್ರವನ್ನೂ ಅದಕ್ಕೆ ಸರ್ ವಿಶ್ವೇಶ್ವರಯ್ಯನವರು ಜೀವಕಳೆಯನ್ನು ತುಂಬಿ ತನ್ಮೂಲಕ ದೇಶಕ್ಕೆ ಮಾಡಿದ ಮಹೋಪಕಾರವನ್ನೂ ವರ್ಣಿಸಿ, ಈ ಸಮಾಜವನ್ನು ಸಂಸ್ಥಾನದ ಪ್ರಭುತ್ವದ ಇತರ ಶಾಖೆಗಳ ಜತೆಗೆ ಒಂದು ಶಾಶ್ವತಶಾಖೆಯನ್ನಾಗಿ ಮಾಡಬೇಕಾಗಿರುವ ಸಂಕಲ್ಪವನ್ನು ತಿಳಿಯಿಸಿ, ಅದರ ಸ್ವರೂಪವನ್ನು ಸ್ಥೂಲತರವಾಗಿ ವಿಮರ್ಶಿಸಿದರು. ಆ ರೀತಿಗಳೇನೆಂದರೆ— ಡಿಸ್ಟ್ರಿಕ್ಟಿಗೊಬ್ಬೊಬ್ಬರಂತೆ ಇರುವ ಎಕನಾಮಿಕ್ ಸೂಪರಿಂಟೆಂಡೆಂಟರುಗಳನ್ನು ತೆಗೆದುಹಾಕಿ ಬಿಡುವುದು; ಪ್ರತ್ಯೇಕವಾಗಿರುವ ಡಿಸ್ಟ್ರಿಕ್ಟ್ ತಾಲ್ಲೂಕು ಪ್ರೋಗ್ರೆಸ್ ಕಮಿಟಿಗಳನ್ನೆಲ್ಲಾ ಎತ್ತಿಹಾಕಿ ಬಿಟ್ಟು, ಅವುಗಳು ಮಾಡುತ್ತಿದ್ದ ಕಾರ್ಯಭಾರವನ್ನೆಲ್ಲಾ ಈಗಣ ಡಿಸ್ಟ್ರಿಕ್ಟು ತಾಲ್ಲೂಕು ಬೋರ್ಡುಗಳಿಗೇ ವಹಿಸಿಬಿಡುವುದು; ಗ್ರಾಮಾಂತರಗಳಲ್ಲಿ ನಡೆಯಬೇಕಾದ ಕೃಷಿ ಶಿಲ್ಪ ವಾಣಿಜ್ಯಾದ್ಯಭಿವೃದ್ಧಿ ಕಾರ್ಯಗಳನ್ನು ಅಲ್ಲಲ್ಲಿಯ ಗ್ರಾಮಪಂಚಾಯತಿಯವರೇ ನಡೆಯಿಸಿಕೊಂಡು ಹೋಗುವುದು; ಪ್ರತಿ ಡಿಸ್ಟ್ರಿಕ್ಟಿನ ಈ ಕೆಲಸಗಳಿಗೆಲ್ಲಾ ಸೂತ್ರಧಾರಕರಾಗಿ ಸೂಪರಿಂಟೆಂಡೆಂಟರಿಗೆ ಪ್ರತಿಯಾಗಿ ಒಬ್ಬೊಬ್ಬ ಸೆಕ್ರೆಟರಿಗಳಿರುವುದು; ಮತ್ತು ಈ ಸಮಾಜದ ವಿದ್ಯಾಭ್ಯಾಸ ಮೊದಲಾದ ಶಾಖಾ ಕಮಿಟಿಗಳಿಗೆ ಪ್ರತಿಯಾಗಿ ಮೂರು ಬೋರ್ಡುಗಳೂ, ಶಾಸ್ತ್ರಶೋಧನ ಶಾಖೆಗೆ ಮತ್ತೊಂದು ಬೋರ್ಡೂ ಏರ್ಪಟ್ಟು, ಅವುಗಳಿಗೆ ಡಿಸ್ಟ್ರಿಕ್ಟು ಬೋರ್ಡುಗಳಿಂದಲೂ ಸರ್ಕಾರದಿಂದಲೂ ಆರಿಸಲ್ಪಟ್ಟ ಕೆಲ ಕೆಲರುಗಳು ಸಭಿಕರಾಗಿರುವುದು. ಇವಕ್ಕೆ ಸರ್ಕಾರಿಯುದ್ಯೋಗಿಯೊಬ್ಬೊಬ್ಬರು ಅಧ್ಯಕ್ಷರಾಗಿರುವರು. ಈ ಬೋರ್ಡುಗಳೆಲ್ಲಕ್ಕೂ ಮುಖ್ಯ ಚಾಲಕವಾಗಿ ಮತ್ತೊಂದು ಸಂಘವು ದಿವಾನರಧ್ಯಕ್ಷತೆಯಿಂದ ಏರ್ಪಡುವುದು. ಕೌನ್ಸಿಲರುಗಳೂ ಮತ್ತು ಮೇಲೆ ಕಂಡ ನಾಲ್ಕು ಬೋರ್ಡುಗಳಿಂದ ಆರಿಸಲ್ಪಟ್ಟ ಕೆಲ ಪ್ರತಿನಿಧಿಗಳೂ ಸಹ ಅದಕ್ಕೆ ಸಭಿಕರಾಗಿರುವರು. ಈ ರೀತಿಯಾದ ಏರ್ಪಾಟನ್ನು ಒಳಗೊಂಡಿರುವ ಮಸೂದೆಯಮೇಲೆ ಸಮ್ಮೇಳನದ ಸಭಿಕರು ಚರ್ಚೆಯನ್ನು ನಡೆಯಿಸಿ, ತಾವು ಮಾಡಿದ ನಿರ್ಧಾರವನ್ನು ಗೌರ್ನಮೆಂಟಿಗೆ ಕಳುಹಿಸಿಕೊಟ್ಟಿರುವರೆಂದೂ, ಇದರ ಮೇಲೆ ಕೌನ್ಸಿಲರುಗಳು ಕೊಟ್ಟ ಅಭಿಪ್ರಾಯವು ಸೇರಿ ಶ್ರೀಮನ್ಮಹಾರಾಜರವರ ಸನ್ನಿಧಿಯ ಪರಾಂಬರಿಕೆಗೆ ಹೋಗಿ ಅವರಿಂದ ಅನುಮೋದಿತವಾದ ರೀತಿಯಲ್ಲಿ ಅದು ವ್ಯವಹರಣೆಗೆ ಬರುವುದಾಗಿದೆಯೆಂದೂ ಕೇಳುತ್ತೇವೆ.

ಈ ಹೊಸ ಬದಲಾವಣೆಯಿಂದ ಈ ಸಮಾಜದ ಸಂಬಂಧದಲ್ಲಿ ಸರ್ಕಾರಕ್ಕೆ ಆಗುತ್ತಿದ್ದ ವೆಚ್ಚದಲ್ಲಿ ಸ್ವಲ್ಪ ಭಾಗವು ಕಡಿಮೆಯಾಗುವ ಪ್ರಯೋಜನದ ಜತೆಗೆ ಅನುದ್ಯೋಗಿಕ ಸಭಾಸದರೇ ಹೆಚ್ಚಾಗುಳ್ಳ ಡಿಸ್ಟ್ರಿಕ್ಟು ಬೋರ್ಡು ಮೊದಲಾದುವುಗಳಿಗೆ ಇದರ ಕಾರ್ಯನಿರ್ವಾಹಮಾಡುವ ಸ್ವಾತಂತ್ರ್ಯವನ್ನು ಹೆಚ್ಚಾಗಿ ವಹಿಸುವಂತಾಗುವುದರಿಂದ, ದಿನಕ್ರಮೇಣ ಈ ಭಾಗದಲ್ಲಿ ಪ್ರಜೆಗಳ ಸ್ವಕೀಯಯತ್ನಗಳೇ ಆಧಾರವಾಗಿರುವಂತೆ ಮಾಡಲು ಅನುಕೂಲವಾಗುವ ಪ್ರಯೋಜನವೊಂದು ತೋರುವುದು. ಇದುವರೆಗಿದ್ದ ಏರ್ಪಾಟಿನಲ್ಲಿ ರೆವಿನ್ಯೂ ಅಧಿಕಾರಿಗಳ ಕೆಲಸವೇ ಈ ಭಾಗದಲ್ಲೂ ಹೆಚ್ಚಾಗಿರುತ್ತಿದ್ದಿತು. ಇನ್ನುಮುಂದೆಯೂ ಹಾಗೆಯೇ ಆಗುವುದು. ಡಿಸ್ಟ್ರಿಕ್ಟು ಬೋರ್ಡು ಮೊದಲಾದುವುಗಳು ಸಮರ್ಥವಾಗಿ ಕೆಲಸಮಾಡುವಂತಾದರೆ ಸರ್ವಪ್ರಜೆಗಳ ಅಭ್ಯುದಯಕ್ಕೂ ಸಾಧಕವಾಗಿ ಈ ಸಮಾಜದ ಕೆಲಸಗಳು ನಡೆಯುವಂತೆ ಮಾಡಿಕೊಳ್ಳಬಹುದು.

ಪ್ರಜಾಪ್ರತಿನಿಧಿಗಳನ್ನಾರಿಸುವುದು.

ಮೂರು ವರ್ಷಕ್ಕೊಂದುಸಲದಂತೆ ಪ್ರಜಾಪ್ರತಿನಿಧಿಸಭೆಯ ಸಭಿಕರನ್ನಾರಿಸುವ ಕೆಲಸವು ಈಸಲ ನಡೆಯಬೇಕಾಗಿರುವುದು ಗೊತ್ತಿದೆಯಷ್ಟೆ. ಈ ಜೂನ್ ತಿಂಗಳಲ್ಲೇ ಅದು ಎಲ್ಲ ಡಿಸ್ಟ್ರಿಕ್ಟು ತಾಲ್ಲೂಕುಗಳಲ್ಲೂ ನಡೆಯುವುದಾಗಿದೆ. ಪ್ರಜೆಗಳ ಅಭಿಮತಕ್ಕೆ ವಿರುದ್ಧವಾಗದಂತೆ ಪ್ರಭುತ್ವ ಕಾರ್ಯನಿರ್ವಾಹ ಮಾಡಬೇಕೆಂಬುದು ನಮ್ಮ ಶ್ರೀಮನ್ಮಹಾರಾಜರ [illegible] ಅವರ ಪ್ರಭುತ್ವದವರ ಸತ್ಯಸಂಕಲ್ಪವಾಗಿರುವುದರಿಂದಲೇ [illegible] ಸಾಧಕವಾಗಿ ಪ್ರಜಾಪ್ರತಿನಿಧಿಸಭೆಯು ಸ್ಥಾಪಿಸಲ್ಪಟ್ಟಿದೆ. [illegible] ಸಹಾಯವು ಸರ್ಕಾರಕ್ಕೆ ಹೆಚ್ಚಬೇಕೆಂತಲೇ ಅದರ ಪ್ರತಿನಿಧಿಗಳನ್ನು ನಿಯಮನಿರ್ಮಾಣಸಭೆ ಸಂಪದಭ್ಯುದಯ ಸಮಾಜ ಮೊದಲಾದುವುಗಳಿಗೆ ಸೇರಿಸಿಕೊಳ್ಳುತ್ತಿರುವುದಲ್ಲದೆ ವರ್ಷಕ್ಕೊಂದುಸಲ ಕೂಡುತ್ತಿದ್ದ ಈ ಸಭೆಯನ್ನು ೨ ಸಲ ಕೂಡುವಂತೆ ಮಾಡಿಯೂ ಅದನ್ನು ಪ್ರೋತ್ಸಾಹಿಸಿರುತ್ತಾರೆ. ಈ ಕಾರಣದಿಂದ ಇದು ಸಂಸ್ಥಾನದ ಬಹು ಪ್ರಮುಖಾಂಗವಾಗಿರುತ್ತದೆ. ಎಂದರೆ ಸಂಸ್ಥಾನವನ್ನೆಲ್ಲಾ ಒಂದು ದೇಹವಾಗಿ ಎಣಿಸಿದರೆ ಇದನ್ನು ಮುಖವನ್ನಾಗಿ ಅಂಗೀಕರಿಸಬಹುದು. ಮುಖವು ದೇಹಪೋಷಣೆಗೆ ಅವಶ್ಯಕವಾದ ಆಹಾರವನ್ನೆಲ್ಲಾ ದೇಹದೊಳಕ್ಕೆ ಸಾಗಿಸುವ ದ್ವಾರವಾಗಿರುವುದಲ್ಲದೆ ದೇಹದ ಕಷ್ಟಸುಖಗಳನ್ನು ತನಗೆ ಬೇಕಾದವರೊಡನೆ ತಿಳಿಯಿಸಿಕೊಳ್ಳುವ ದ್ವಾರವಾಗಿಯೂ ಇರುತ್ತದೆ. ಈ ಸಭೆಯು ಕೂಡ ಹಾಗೆಯೇ, ಸಂಸ್ಥಾನದ ಪ್ರಜೆಗಳೆಲ್ಲರ ಹಿತಕ್ಕೋಸ್ಕರ ಮಾಡಬೇಕಾದ ಏರ್ಪಾಟುಗಳ ಸೂಚನೆಯನ್ನೆಲ್ಲಾ ಪ್ರಭುತ್ವದವರು ಈ ಸಭೆಯ ಮೂಲಕದಿಂದಲೇ ನಿವೇದಿಸುವುದಲ್ಲದೆ, ಸಕಲ ಪ್ರಜೆಗಳ ಮನೋಗತವನ್ನೂ ಈ ಸಭಾದ್ವಾರದಿಂದಲೇ ತಾವು ತಿಳಿದುಕೊಳ್ಳುವವರಾಗಿದ್ದಾರೆ. ಇಂಥ ಸಭೆಯು ನಿಜವಾಗಿ ಪ್ರಜಾಪ್ರತಿನಿಧಿಗಳ ಸಭೆಯಾಗಿರಬೇಕಾದರೆ ಸಕಲ ಪ್ರಜೆಗಳ ಪ್ರತಿನಿಧಿಗಳನ್ನೂ ಅದು ಹೊಂದಿರಬೇಕು. ಹಾಗಿರಬೇಕಾದರೆ ಪ್ರತ್ಯೇಕಪ್ರಾತಿನಿಧ್ಯತತ್ತ್ವವು ಇರಬೇಕು. ಸರ್ಕಾರದವರು ಆ ತತ್ತ್ವವನ್ನು ತಾವು ಯುಕ್ತವೆಂದು ಒಪ್ಪಿದ್ದರೂ, ಪ್ರಜೆಗಳು ತಂತಮ್ಮ ನಂಬುಗೆಗೆ ಅರ್ಹರಾಗಿ ತಮಗೆ ಬೇಕಾದ ಪ್ರಜೆಗಳನ್ನು ತಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸಬಹುದೆಂದು ಹೇಳಿರುತ್ತಾರೆ. ಆ ಕಾರಣದಿಂದ ರೋಗಿಯು ತನ್ನ ರೋಗದ ವಿವರಣವನ್ನು ವೈದ್ಯನ ಮುಂದೆ ತಾನೇ ವಿವರವಾಗಿ ಹೇಳಿಕೊಳ್ಳುವಂತೆ ಇತರರ ಮುಖೇನ ಹೇಳಿಸುವುದು ಹೇಗೆ ಸಂಪೂರ್ಣವಾಗಿರಲಾರದೋ ಅದನ್ನು ಪರಿಭಾವಿಸಿ, ತಂತಮ್ಮ ವರ್ಗಗಳ ಕಷ್ಟಸುಖಗಳ ಅನುಭವವನ್ನು ಚೆನ್ನಾಗಿ ತಿಳಿದಿರುವ ತಮ್ಮೊಳಗಣ ಪ್ರಜೆಗಳಲ್ಲಿ ಮಾತುಗಾರಗಳಾಗಿರುವವರನ್ನೇ ತಮ್ಮಗಳ ಪ್ರತಿನಿಧಿಯನ್ನಾಗಿ ಆರಿಸಿ ಕಳುಹಿಸಬೇಕಾದ ಭಾರವು ಇವರುಗಳಮೇಲೆಯೇ ಬಿದ್ದಿರುವುದು. ಅದನ್ನು ಇವರು ಸರಿಯಾಗಿ ನಡೆಯಿಸದೆ ಹೋದರೆ ಆತ್ಮದ್ರೋಹವನ್ನು ಮಾಡಿಕೊಂಡಂತಾಗುವುದಲ್ಲದೆ ಸರ್ಕಾರದವರು ಇವರಿಗಾಗಿ ಅನುಗ್ರಹಿಸಿಕೊಟ್ಟ ಅವಕಾಶವನ್ನೂ ಉಪಯೋಗಿಸಿಕೊಳ್ಳದೆ ವ್ಯರ್ಥಮಾಡಿಕೊಂಡಂತಾಗುವುದು.

೫೦ ರೂ. ಗೆ ಮೇಲ್ಪಟ್ಟು ಕಂದಾಯವನ್ನು ಕೊಡತಕ್ಕ ೧೮ ವರ್ಷ ವಯಸ್ಸಿಗೆ ಮೇಲ್ಪಟ್ಟ ಪ್ರತಿಯೊಬ್ಬ ಮನುಷ್ಯನೂ ಯಾವ ಜಾತಿಯವನಾಗಿದ್ದರೂ ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಬರಲೂ ಅಥವಾ ಅಂಥ ಮೆಂಬರಾಗಿ ಬರಬೇಕೆನ್ನುವವರಿಗೆ ತನ್ನ ಸಮ್ಮತಿಯನ್ನು ಕೊಡಲೂ ಅಧಿಕಾರವುಳ್ಳವನಾಗಿರುತ್ತಾನೆ. ಆದುಕಾರಣ ತಮ್ಮ ನಿಜವಾದ ಕಷ್ಟಸುಖಗಳನ್ನು ತಮ್ಮ ಸರ್ಕಾರದ ಮುಂದೆ ಹೇಳಿಕೊಂಡು ಅದಕ್ಕೆ ತಕ್ಕ ಪರಿಹಾರವನ್ನು ಕಲ್ಪಿಸಿಕೊಳ್ಳುವ ಮೂಲಕ ದೇಶಹಿತವನ್ನು ಮಾಡಲು ಎಲ್ಲ ಜನವರ್ಗದವರೂ ಪ್ರಯತ್ನಶೀಲರಾಗಬೇಕು. ಮೆಂಬರಾಗಿ ಬರಲು ಬಿ.ಎ.,ಬಿ.ಎಲ್. ಪ್ಯಾಸುಮಾಡಿದ ಇಂಗ್ಲೀಷ್‌ಬಲ್ಲ ವಿದ್ವಾಂಸರೇ ಆಗಿರಬೇಕೆಂಬ ಆವಶ್ಯಕತೆಯೇನೂ ಇರುವುದಿಲ್ಲ. ಇರುವ ಕಷ್ಟಸುಖಗಳೆನ್ನು ಬಾಯ್ಬಿಟ್ಟು ಹೇಳಿಕೊಳ್ಳುವಷ್ಟು ಸಾಮರ್ಥ್ಯವಿದ್ದರೆ ಸಾಕು. ತಾವು ಹೇಳುವ ಕೇಳುವ ವಿಷಯಗಳ ಪೂರ್ವಾಪರ ಜ್ಞಾನವಿದ್ದರೆ ಸಾಕು. ದಿವಾನರು ಅವನ್ನು ಅತ್ಯಾದರದಿಂದಲೂ ಗೌರವಪೂರ್ವಕವಾಗಿಯೂ ಕೇಳಿ ಪರಿಹಾರವನ್ನು ಸೂಚಿಸುವರು. ಆದುಕಾರಣ ಯಾವುದೊಂದು ಭಯವಾಗಲೀ ಚಿಂತೆಯಾಗಲೀ ಪಟ್ಟು ಹಿಂದೆಗೆಯ ಬೇಕಾಗಿರುವುದಿಲ್ಲ. ಮತ್ತು ತಮಗೆ ಬೇಕಾದ ಜನರಿಗೆ ತಮ್ಮ ಓಟನ್ನು ಕೊಡುವ ವಿಷಯದಲ್ಲಿ ಯಾರ ದಾಕ್ಷಿಣ್ಯಕ್ಕೇ ಆಗಲೀ ದರ್ಪಕ್ಕೇ ಆಗಲೀ ಹೆದರಿಕೆಗೇ ಆಗಲೀ ಒಳಪಟ್ಟು, ತಮ್ಮ ಇಷ್ಟವಿಲ್ಲದಿದ್ದವರಿಗೆ ಓಟನ್ನು ಕೊಡಬೇಕಾದುದಿಲ್ಲ. ಇದನ್ನು ಸಕಲ ಪ್ರಜೆಗಳೂ ಗಮನಿಸಿ ತಮ್ಮ ಓಟುಗಳನ್ನು ಕೊಡುವಲ್ಲಿ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು.

ಈಗಣ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರತಿನಿಧಿಗಳಾಗಿ ಬರುತ್ತಿರುವವರು ಸಂಸ್ಥಾನದ ಸರ್ವವರ್ಗ ಪ್ರಜಾಸಂಖ್ಯೆಯ ನಿಜವಾದ ಪ್ರಾತಿನಿಧ್ಯಕ್ಕೆ ಅನುಗುಣರಾಗಿಲ್ಲ. ಒಂದೆರಡು ತೆರದ ಜನವರ್ಗದವರೇ ಹೆಚ್ಚಾಗಿ ಬರುತ್ತ ಅನೇಕಾನೇಕ ಜನವರ್ಗದವರ ಪ್ರಾತಿನಿಧ್ಯವು ಅಲ್ಲಿ ಇರುವುದೇ ಇಲ್ಲ. ಪ್ರಜಾಪ್ರತಿನಿಧಿಸಭಾ ಸಭಿಕರಾಗಿರುವ ಮ॥ ಎಂ. ಸುಬ್ಬಯ್ಯ ಬಿ.ಎ. ಯವರು ಒಕ್ಕಲಿಗರ ಪತ್ರಿಕೆಯೊಳಗೆ ಈ ಸಂಬಂಧವಾಗಿ ಒಂದು ಲೇಖನವನ್ನು ತಕ್ಕ ನಿದರ್ಶನಗಳೊಡನೆ ಬರೆದಿರುತ್ತಾರೆ. ಅದರಲ್ಲಿ ಅವರು ಹೇಳಿರುವುದೇನೆಂದರೆ—ಪ್ರಜಾಪ್ರತಿನಿಧಿ ಸಭೆಯ ಸಭಿಕರ ಒಟ್ಟು ಸಂಖ್ಯೆ ೨೬೩. ಇದರಲ್ಲಿ ತ್ರಿಮತಸ್ಥ ಬ್ರಾಹ್ಮಣ ಪ್ರತಿನಿಧಿಗಳ ಸಂಖ್ಯೆಯೇ ಅರ್ಧಕ್ಕಿಂತ ಹೆಚ್ಚು. ಎಂದರೆ ೧೩೭. ಉಳಿದ ಜನವರ್ಗಗಳೊಳಗೆ ಒಕ್ಕಲಿಗರು ೩೪, ಲಿಂಗಾಯತರು ೩೦, ವೈಶ್ಯರು ೧೭, ಜೈನರು ೫, ಇತರ ಹಿಂದುಗಳು ೧೪ ಅಂತೂ ಈ ಇತರ ಜನವರ್ಗ ಸಭಿಕರ ಸಂಖ್ಯೆಯೆಲ್ಲಾ ಸೇರಿದರೆ ಅರ್ಧಕ್ಕಿಂತ ಕಡಮೆ ಎಂದರೆ ೧೨೬ ಆಗಿರುವುದು. ಸಂಸ್ಥಾನದಲ್ಲಿರುವ ಒಟ್ಟು ಜನರ ಸಂಖ್ಯೆಯು ೫೮ ಲಕ್ಷವಾಗಿರುತ್ತೆ. ಅದರಲ್ಲಿ ಒಕ್ಕಲಿಗರ ಸಂಖ್ಯೆಯು ೧೩೩೦೦೦೦, •ಲಿಂಗಾಯತರು ೭೨೯೦೦೦, ಹೊಲೆಯರು ೬೧೩೦೦೦, ಮಹಮ್ಮದೀಯರು ೩೧೪೦೦೦, ಕುರುಬರು ೪೦೩೦೦೦, ಮಾದಿಗರು ೩೦೮೦೦೦ ಗೊಲ್ಲರು, ೧೫೦೦೦೦, ಬಣಜಿಗರು ೧೩೨೦೦೦, ಬೇಡರು ೧೬೮೦೦೦, ಬೆಸ್ತರು ೧೫೬೦೦೦, ಬ್ರಾಹ್ಮಣರು ೧೯೪೦೦೦, ಪಾಂಚಾಳರು ೧೨೮೦೦೦, ನೇಟೀವ್ ಕ್ರೈಸ್ತರು ೪೬೦೦೦, ಜೈನರು ೧೭೦೦೦ ಈ ಮೇಲೆಕಂಡ ಜನಸಂಖ್ಯೆಗೆ ಅನುಗುಣವಾಗಿ [illegible] ಪ್ರತಿನಿಧಿಗಳು [illegible] ಸಭೆಗೆ ಬಂದಿದ್ದರೆ—ಒಕ್ಕಲಿಗರು ೬೦, ಲಿಂಗಾಯತರು ೩೩, ಕುರುಬರು ೧೮, ಮಹಮ್ಮದೀಯರು ೨೦, ಹೊಲೆಯರು ೩೦ ಮಾದಿಗರು ೧೫, ಬೇಡರು ೧೮, ಬೆಸ್ತರು ೯, ಪಾಂಚಾಳರು ೪, ಗೊಲ್ಲರು ೫, ಬಣಜಿಗರು ೧೦, ಬ್ರಾಹ್ಮಣರು ೯, ವೈಶ್ಯರು ೨, ಕ್ರೈಸ್ತರು ೩, ಜೈನರು ೧, ಹೀಗೆ ಪ್ರತಿನಿಧಿ ಸಂಖ್ಯೆಗಳಿರಬೇಕಾಗಿದ್ದಿತು ಎಂದು ಹೇಳಿರುತ್ತಾರೆ. ಇದನ್ನು ನೋಡುವಲ್ಲಿ ಈಗ ಮೆಂಬರಾಗಿ ಬರುತ್ತಿರುವವರ ಸಂಖ್ಯೆಯ ಹೋಲಿಕೆಯು ಅವರವರ ಒಟ್ಟು ಸಂಖ್ಯೆಗೆ ಎಷ್ಟು ಅನನುಗುಣವಾಗಿದೆಯೆಂಬುದು ಪ್ರತಿಯೊಬ್ಬರಿಗೂ ಗೊತ್ತಾಗುತ್ತದೆ. ಎಷ್ಟೋ ಜನವರ್ಗದವರು ತಾವು ಇತರ ಪ್ರಜೆಗಳಿಗೆ ಸಮವಾಗಿ ಸರ್ಕಾರಕ್ಕೆ ಕಂದಾಯಗಳನ್ನು ಕೊಡುತ್ತಲಿರುವವರಾದರೂ ತಮ್ಮ ಜನವರ್ಗದ ಒಬ್ಬೊಬ್ಬ ಪ್ರತಿನಿಧಿಯನ್ನಾದರೂ ಈಸಭೆಗೆ ಕಳುಹಿಸಿಕೊಡಲಾರದೆ ಅನಾಮಧೇಯ ಸ್ಥಿತಿಯಲ್ಲಿ ಬಾಳುತ್ತಿದ್ದಾರೆಂಬುದನ್ನು ನೋಡಿದರೆ ವಿಷಾದವಾಗುತ್ತದೆ. ತಾಲ್ಲೂಕು ಅಮಲ್ದಾರರುಗಳಲ್ಲಿ ಕೆಲವರು ಪ್ರತಿನಿಧಿಗಳ ಚುನಾವಣೆಯ ಏರ್ಪಾಟನ್ನು ನಿಷ್ಪಕ್ಷಪಾತವಾಗಿಯೂ ಪ್ರಜೆಗಳ ಸ್ವಾತಂತ್ರ್ಯಕ್ಕೆ ಭಂಗಬಾರದಂತೆಯೂ ನಡೆಯಗೊಡಿಸುವಲ್ಲಿ ನ್ಯಾಯವನ್ನನುಸರಿಸದೆ ಕುತಂತ್ರಗಳನ್ನು ಮಾಡುತ್ತಿರುವರೆಂದು ಈಗಾಗಲೇ ನಮ್ಮ ಕಿವಿಗೆ ಸುದ್ದಿಗಳು ಬಿದ್ದಿರುತ್ತವೆ. ಅಂಥ ಕೆಟ್ಟತನಗಳು ಎಲ್ಲಿ ನಡೆಯಿಸಲ್ಪಡುತ್ತಲಿವೆಯೋ ಅಲ್ಲಿಯ ಪ್ರಮುಖ ರೈತರುಗಳು ಆ ವಿಷಯವನ್ನು ನಿರ್ಭಯವಾಗಿ ಮೇಲ್ಪಟ್ಟ ಉದ್ಯೋಗಿಗಳಿಗೆ ಬರೆದು, ತಮ್ಮ ಓಟುಗಳನ್ನು ತಮಗೆ ಬೇಕಾದ ಜನವರ್ಗದವರಿಗೇ ಕೊಡುವವಿಷಯದಲ್ಲಿ ಧೈರ್ಯದಿಂದಲೂ ನೀತಿಯಿಂದಲೂ ನಡೆದುಕೊಳ್ಳುವವರಾಗಬೇಕೆಂದೂ, ಅಂಥ ಸ್ಪರ್ಧೆಯು ಹುಟ್ಟದಿರುವ ಜನವರ್ಗವು ಕಲ್ಪಾಂತವಾದರೂ ಮುಂದಕ್ಕೆ ಬರಲಾರದೆಂದೂ ಒತ್ತಿ ಹೇಳುವೆವು.

ಒಳದೇಶದ ವೃತ್ತಾಂತಗಳು.

ಬರುವ ತಾ॥ ೨೦ ರಲ್ಲಿ ನಿಯಮನಿರ್ಮಾಣ ಸಭೆಯು ಬೆಂಗಳೂರಿನಲ್ಲಿ ಕೂಡುವುದಾಗಿದೆ.

ಇನ್ನು ಮುಂದೆ ಬೆಂಗಳೂರು ಆಂಗ್ಲಸೈನ್ಯಸ್ಥಾನಗಳಿಗೆ ಮುಖ್ಯಪ್ರದೇಶವಾಗಿ ಮಾಡಲ್ಪಡುವುದೆಂದೂ ವೈಮಾನಿಕದಳವೂ ಅಲ್ಲಿಗೆ ತಂದು ಇಡಲ್ಪಡುವುವೆಂದೂ ಕೇಳುತ್ತೇವೆ.

ಆ॥ ದಿವಾನ್ ಬಾನರ್ಜಿಯವರು ಕಳೆದ ಗುರುವಾರ ಸಾಯಂಕಾಲ ಸಂಪದಭ್ಯುದಯ ಸಮಾಜದ ಸಭಿಕರೆ ಮೊದಲಾದವರಿಗೆಲ್ಲಾ ಗಾರ್ಡನ್ ಪಾರ್ಟಿ ಮಾಡಿಸಿ ಸಂತೋಷಪಡಿಸಿದರು.

ದರ್ಬಾರಿನಲ್ಲಿ ನಡುಕಟ್ಟಬೇಕಾದ ಸಿಬ್ಬಂಧವನ್ನು ಸೀನಿಯರ್ ಸರ್ಜನ್ ಡಾ॥ ಆರ್ಮುಗಂ ಮೊದಲಿಯಾರರಿಗೆ ಕಳೆದ ವರ್ಧಂತ್ಯುತ್ಸವ ಸಮಯದಲ್ಲಿ ಶ್ರೀಮನ್ಮಹಾರಾಜರು ಅಪ್ಪಣೆ ಕೊಡಿಸಿದರು.

ಮುಂಗಾರಿನ ಮಳೆ ಬೆಳೆಗಳು ನಮ್ಮ ಡಿಸ್ಟ್ರಿಕ್ಟಿನಲ್ಲಿ ತುಂಬಾ ಸುಮುಖವಾಗಿರುವುದರಿಂದ ಪ್ರಜೆಗಳು ಧೈರ್ಯಗೊಂಡಿದ್ದಾರೆ. ರಾಜಧಾನಿಯಲ್ಲಿ ಕಳೆದವಾರ ದೊಡ್ಡ ಮಳೆಗಳಾಗದಿದ್ದರೂ ಮೋಡಮುಚ್ಚಿ ಸಣ್ಣ ತುಂತುರು ಆಗಾಗ್ಗೆ ಬೀಳುತ್ತ ಗಾಳಿಯು ವಿಶೇಷವಾಗಿ ಬೀಸುತ್ತಿದೆ.

ವರ್ಧಂತೀ ಮಹೋತ್ಸವ ಸಮಯದಲ್ಲಿ ನಡೆಯತಕ್ಕ ನಾನಾತರದ [illegible] ಪಂದ್ಯಗಳೇ ಮೊದಲಾದ ವಿನೋದಗಳು ಕಳೆದ ವಾರದಲ್ಲೆಲ್ಲಾ ವಿಜೃಂಭಣೆಯಿಂದ ನಡೆದುವು. ಅನೇಕಮಂದಿ ಯೂರೋಪ್ಯಾಧಿಕಾರಿಗಳೂ ದೇಶೀಯಾಧಿಕಾರಿಗಳೂ ಬಂದು ಅವುಗಳಲ್ಲಿ ಭಾಗಿಗಳಾಗಿದ್ದರು.

ಸಂಸ್ಥಾನದ ಅನೇಕ ಭಾಗಗಳಿಂದ ನೂರಾರು ಸ್ಕೌಟ್ಸ್ (ಬಾಲಭಟೋದ್ಯಮದವರು) ಗಳು ಬಂದಿದ್ದರು. ಅವರುಗಳ ವಾರ್ಷಿಕಾಧಿವೇಶನವು ಕಳೆದ ಗುರುವಾರ ಬೆಳಗ್ಗೆ ರಾಜಧಾನಿಯ ಟೌನ್ ಹಾಲಿನಲ್ಲಿ ನಡೆಯಿತು. ಶ್ರೀಮದ್ಯುವರಾಜರವರು ಆಗ್ಗೆ ದಯಮಾಡಿಸಿ ಅಧ್ಯಕ್ಷರಾಗಿದ್ದರು. ಅಧಿಕಾರಿ ಮಂಡಲಿಯವರೂ ಪುರಪ್ರಮುಖರುಗಳೂ ಬಂದಿದ್ದರು.

ಚಕ್ರವರ್ತಿಯವರ ವರ್ಧಂತೀಮಹೋತ್ಸವಕಾಲದ ಬಿರುದಾವಳಿ ಪ್ರದಾನದಲ್ಲಿ ನಮ್ಮ ದೇಶದ ಕೈಗಾರಿಕೆಯ ಶಾಖಾಮುಖ್ಯಾಧ್ಯಕ್ಷರಾದ ಮಿ॥ ಚಾಟರ್ಟನ್‌ರವರಿಗೆ ಸರ್ ಬಿರುದೂ, ಡಾಕ್ಟರ್ ಮಿಸ್ ಗೋವಿಂದರಾಜುಲು ಯವರಿಗೆ ಎಂ. ಬಿ. ಇ. ಬಿರುದೂ ಪ್ರಾಪ್ತವಾಗಿವೆಯೆಂಬುದನ್ನು ತಿಳಿಯಿಸುವುದಕ್ಕೆ ಸಂತೋಷಿಸುತ್ತೇವೆ.

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವದ ದಿವಸ ಬೆಂಗಳೂರಿನಲ್ಲಿರುವ ಶ್ರೀಮನ್ನಿರಂಜನ ಜಗದ್ಗುರುಗಳು ತಮ್ಮ ಬಿಡಾರದಲ್ಲಿ ಶ್ರೀಮನ್ಮಹಾರಾಜವಂಶದ ಶ್ರೇಯಸ್ಸನ್ನು ಕೋರಿ ಏಕಾದಶವಾರ ರುದ್ರಾಭಿಷೇಕವನ್ನೂ ಗಣಸಮಾರಾಧನೆಯನ್ನೂ ನಡೆಯಿಸಿದುದಲ್ಲದೆ ಆ ಸಾಯಂಕಾಲ ತಮ್ಮ ಮಠದ ಆನೆಯಮೇಲೆ ಅಂಬಾರಿಯನ್ನಿಟ್ಟು ಶೃಂಗರಿಸಿ ಅದರಲ್ಲಿ ಶ್ರೀಮನ್ಮಹಾರಾಜ ಸಹೋದರರ ಛಾಯಾಚಿತ್ರಗಳನ್ನಿಟ್ಟು ಅಲಂಕರಿಸಿ ವಾದ್ಯವೈಭವಗಳೊಡನೆಯೂ ಭಕ್ತಮಂಡಲಿಯೊಡನೆಯೂ ಬೆಂಗಳೂರು ಪುರವೀಧಿಗಳಲ್ಲಿ ಉತ್ಸವಮಾಡಿಸಿದರೆಂದು ಕೇಳಿ ಸಂತೋಷಿಸುತ್ತೇವೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು.

ಶ್ರೀಮನ್ಮಹಾರಾಜರವರ ೩೬ ನೆ ವರ್ಷ ವರ್ಧಂತ್ಯುತ್ಸವವು ಕಳೆದ ಸೋಮವಾರ ಅತಿ ವೈಭವದಿಂದ ಜರುಗಿತು. ಪದ್ಧತಿಯಂತೆ ಬೆಳಗಿನ ೭ ಗಂಟೆಗೆ ಅವರಿಗೆ ಮಂಗಳಸ್ನಾನವಾಗುತ್ತಿರಲು ೩೬ ಗುಂಡುಗಳು ಹಾರಿಸಲ್ಪಟ್ಟುವು. ೧೦॥ ಗಂಟೆಗೆ ಅರಮನೆಯ ವಿವಾಹಮಂಟಪದ ಸಭಾಂಗಣದಲ್ಲಿ ದರಬಾರು ನಡೆಯಿತು. ಶ್ರೀಮನ್ಮಹಾರಾಜರು ತಮ್ಮ ಗುರುಪಾದಪೂಜೆಯನ್ನು ಮುಗಿಸಿಕೊಂಡು ಶ್ರೀಮದ್ಯುವರಾಜರ ಸಮೇತ ದಯಮಾಡಿಸಿ, ಭದ್ರಪೀಠಗಳನ್ನಲಂಕರಿಸಿದರು. ಅವರ ಬಲಗಡೆಯಲ್ಲಿ ದಿವಾನರು ಕೌನ್ಸಿಲರು ಮೊದಲಾದ ಸರ್ವಾಧಿಕಾರಿಗಳೂ ಎಡಗಡೆಯಲ್ಲಿ ರಾಜಬಂಧುವರ್ಗದವರೂ ವೈದಿಕಮಂಡಲಿಯವರೂ ಅವರ ಪಕ್ಕದಲ್ಲಿ ಶೆಟ್ಟಿವರ್ತಕರು ಮೊದಲಾದ ಪುರಪ್ರಮುಖರೂ ಕುಳಿತಿದ್ದರು. ಮುಂಭಾಗದಲ್ಲಿ ಗಾನಕಲಾಕೋವಿದರು ತಮ್ಮ ವಿದ್ವತ್ಪ್ರದರ್ಶನ ಮಾಡುತ್ತಿದ್ದರು. ದೇವಾಲಯ [illegible] ಮೊದಲಾದ ಕಡೆಯ ಫಲಮಂತ್ರಾಕ್ಷತೆಗಳೂ ಕಿಲ್ಲತ್ತುಗಳೂ [illegible] ಸಲ್ಪಟ್ಟ ಬಳಿಕ ಸುವಾಸಿನಿಯರ ಸೇಸೆಯೂ, ವೈದಿಕರ ಆಶೀರ್ವಾದವೂ ನಡೆದುವು. ಉಳಿದ ಸಭಿಕರೆಲ್ಲಾ ಮುಜರೆ ಮಾಡಿದರು. ಸರ್ವರಿಗೂ ಅರಮನೆಯಿಂದ ಪುಷ್ಪಹಾರ ತಾಂಬೂಲಗಳು ಹಂಚಲ್ಪಟ್ಟುವು. ೧೧॥ ಗಂಟೆಗೆ ಸಭಾಕಾರ್ಯವು ಮುಗಿದಿತು. ಸಾಯಂಕಾಲ ೫॥ ಗಂಟೆಗೆ ಅಲಂಕೃತವಾಗಿದ್ದ ರಾಜವೀಧಿಗಳಲ್ಲಿ ಶ್ರೀಮನ್ಮಹಾರಾಜರೂ ಯುವರಾಜರೂ ಅತ್ಯುತ್ಕೃಷ್ಟವಾದ ವಸ್ತ್ರಾಭರಣಾದಿಗಳಿಂದ ವಿಭೂಷಿತರಾಗಿ ದಿವ್ಯಾಶ್ವಗಳನ್ನೇರಿ ಚತುರಂಗಬಲಸಮೇತರಾಗಿ ಮೆರವಣಿಗೆಯಾಗಿ ಹೊರಟರು. ಈ ಸಲದ ಉತ್ಸವದಲ್ಲಿ ಸೈನಿಕರ ಸಂಖ್ಯೆ ಹೆಚ್ಚಾಗಿಯೇ ಇದ್ದಿತು. ಅವರ ಹೊಸ ಉಡುಪುಗಳೆಲ್ಲಾ ಬಹು ರಮ್ಯವಾಗಿದ್ದುವು. ಸರ್ಕಾರದ ಅಧಿಕಾರಿಗಳೆಲ್ಲರೂ ಮತ್ತು ರಾಜಬಂಧುವರ್ಗದವರೂ ಪುರಪ್ರಮುಖರೂ ತುಂಬಾ ನೆರೆದು ಜತೆಯಲ್ಲಿ ಹೋಗುತ್ತಿದ್ದುದು ಉತ್ಸವವೈಖರಿಯನ್ನು ಹೆಚ್ಚಿಸಿದ್ದಿತು. ದಾರಿಯುದ್ದಕ್ಕೂ ಅಲ್ಲಿಗಲ್ಲಿಗೆ ಪುರಪ್ರಮುಖರು ತಮ್ಮ ಅಂಗಡಿಮನೆಗಳ ಮುಂದೆಯೂ ಮ್ಯು॥ ಕೌನ್ಸಿಲರುಗಳು ಸೆಂಟರಲ್ ಪೋಲೀಸ್‌ಠಾಣದ ಮುಂದಣ ತಮ್ಮ ಚಪ್ಪರದಲ್ಲೂ ಒಪ್ಪಿಸಿದ ಫಲಪುಷ್ಪಹಾರಾದಿಗಳನ್ನು ಶ್ರೀಮನ್ಮಹಾರಾಜ ಸಹೋದರರು ಸ್ವೀಕರಿಸುತ್ತ ಸಾಯಂಕಾಲ ೭ ಗಂಟೆಗೆ ದೊಡ್ಡ ಬಂಗಲೆಯನ್ನು ಸೇರಿದರು. ವಿದ್ಯುಚ್ಛಕ್ತಿಯ ಬೆಳಕಿನಿಂದ ಹಗಲಿನಂತಿದ್ದ ಅಲ್ಲಿಯ ಬಯಲಿನಲ್ಲಿ ಸೈನಿಕರ ಮರ್ಯಾದೆಗಳನ್ನು ಶ್ರೀಮನ್ಮಹಾರಾಜರು ಸ್ವೀಕರಿಸಿ ದೀಪೋತ್ಸವದ ವೈಭವದಲ್ಲಿ ಮರಳಿ ಉತ್ಸವಗೊಂಡು ಅರಮನೆಯನ್ನು ಸೇರುವ ಹೊತ್ತಿಗೆ ರಾತ್ರಿ ೯॥ ಗಂಟೆಯಾಯಿತು. ೨ ವೇಳೆಯೂ ದಾರಿಯುದ್ದಕ್ಕೂ ಹತ್ತಾರು ಸಾವಿರ ಪ್ರಜೆಗಳು ಸೇರಿ ದರ್ಶನೀಯವಾದ ಈ ಉತ್ಸವವನ್ನು ನೋಡಿ ಆನಂದಪಟ್ಟರು. ಆ ದಿನ ರಾತ್ರಿಯೂ ಇನ್ನೆರಡು ರಾತ್ರಿಗಳೂ ಅರಮನೆಯಲ್ಲಿ ದರಬಾರೂ ಮುಜರೆಗಳೂ ನಡೆದುವು.

ಈ ಮಹೋತ್ಸವ ಪ್ರಯುಕ್ತವಾಗಿ ರಾಜಧಾನಿಯಲ್ಲಿ ಎಲ್ಲ ಮತದ ದೇವಾಲಯಗಳಲ್ಲೂ ಆರಾಧನೆಗಳೂ ಶ್ರೇಯಃಪ್ರಾರ್ಥನೆಗಳೂ ನಡೆದುವು. ಪ್ರತಿಯೊಂದು ಪಾಠಶಾಲೆಗಳಲ್ಲೂ ಆ ದಿನ ಬೆಳಗ್ಗೆ ಹುಡುಗರ ವ್ಯಾಯಾಮ ಕ್ರೀಡೆಗಳು ಜರುಗಿದುವು. ಎಲ್ಲಾ ಬಾಲಬಾಲೆಯರಿಗೂ ತಿಂಡಿಗಳು ಹಂಚಲ್ಪಟ್ಟುವು. ಇದಕ್ಕಾಗಿ ಅರಮನೆಯಿಂದ ೨ ಸಾವಿರ ರೂಪಾಯಿಗಳು ಕೊಡಲ್ಪಟ್ಟಿದ್ದುವು. ಸಂಸ್ಥಾನದ ಎಲ್ಲಕಡೆಯೂ ರಾಜಭಕ್ತಿಧುರಂಧರರಾದ ಪ್ರಜೆಗಳು ಅನೇಕ ತೆರದಿಂದ ಈ ಮಹೋತ್ಸವವನ್ನು ನಡೆಯಿಸಿ ಆನಂದಪಟ್ಟಿರುವರೆಂಬುದಕ್ಕೆ ಸಂಶಯವಿಲ್ಲ. ಶ್ರೀಮನ್ಮಹಾರಾಜರವರಿಗೆ ವಯಸ್ಸು ಅಭಿವೃದ್ಧಿಗೊಳುತ್ತ ಬಂದಂತೆಲ್ಲಾ ಅವರ ಪ್ರಜಾರಂಜಕಸದ್ಗುಣಗಳು ಅಭಿವೃದ್ಧಿಗೊಳ್ಳುತ್ತ ಬರುತ್ತಲಿವೆ. ಅದಕ್ಕೆ ಪ್ರತಿಫಲವಾಗಿ ಪ್ರಜೆಗಳ ರಾಜನಿಷ್ಠೆಯೂ ವೃದ್ಧಿಗೊಳ್ಳುತ್ತಿದೆ. ಈ ಪರಸ್ಪರ ಸಾಂಗತ್ಯದಿಂದ ದೇಶವು ದಿನೇದಿನೇ ಸುಖಶಾಂತಿ ಸಂಪತ್ತುಗಳಿಂದ ವಿಕಾಸ ಹೊಂದುತ್ತಿದೆ. ಇದೇ ತೆರದ ಸಂಪತ್ತಿಯು ಚಿರಕಾಲ ನಮ್ಮ ದೇಶಕ್ಕೆ ವೃದ್ಧಿಗೊಳ್ಳುತಿರಲೆಂದು ಸರ್ವಪ್ರಜೆಗಳೊಡನೆ ನಾವೂ ಕೋರುತ್ತೇವೆ.

ಸಂಧಿಸಭೆ.

ಜರ್ಮನರು ಸಂಧಿಪತ್ರ ನಿಬಂಧನೆಗಳ ವಿಷಯವಾಗಿ ಇನ್ನು ೩-೪ ಲೇಖನಗಳನ್ನು ಸಂಧಿಸಭಾಧ್ಯಕ್ಷರ ಬಳಿಗೆ ಕಳುಹಿಸಿಕೊಟ್ಟಿದ್ದರು. ಅವುಗಳಲ್ಲಿ ಅವರು ತಿಳಿಯಿಸಿರುವ ಮುಖ್ಯ ವಿಷಯಗಳೇನೆಂದರೆ— ಜರ್ಮನಿದೇಶವನ್ನು ಕೂಡಲೇ ನಾನಾದೇಶಸಂಘದಲ್ಲಿ ಸೇರಿಸಬೇಕು. ಜರ್ಮನಿಯ ಅಧಿನಿವೇಶನಗಳನ್ನು ನಾನಾದೇಶಸಂಘಾಧಿಕಾರಕ್ಕೆ ಒಳಪಡಿಸಿ ಪರಿಪಾಲಿಸುವ ಬಾಧ್ಯತೆಯನ್ನು ಜರ್ಮನರಿಗೊಪ್ಪಿಸಬೇಕು. ಕೈಜರನನ್ನು ಮಿತ್ರಮಂಡಲಿಯವರಿಗೆ ವಶಪಡಿಸುವುದಕ್ಕೆ ಜರ್ಮನರು ಒಪ್ಪುವುದಿಲ್ಲ. ಯುದ್ಧನಷ್ಟಪರಿಹಾರಕ್ಕಾಗಿ ಜರ್ಮನರು ೧೯೨೭ ನೆ ವರ್ಷದಲ್ಲಿ ೧೦೦ ಕೋಟಿ ಪೌನುಗಳನ್ನು ಕೊಡುವರು. ಬಳಿಕ ವರ್ಷೇವರ್ಷೇ ಕಂತುಗಳ ಪ್ರಕಾರ ೫ ವರ್ಷಗಳವರೆಗೆ ಸಲ್ಲಿಸಿ ಅಂತೂ ಒಟ್ಟು ೬೦೦ ಕೋಟಿ ಪೌನುಗಳನ್ನು ನಷ್ಟಪರಿಹಾರವಾಗಿ ಸಲ್ಲಿಸುವರು.

ಇವುಗಳೆಲ್ಲಾ ಸಂಧಿನಿಬಂಧನೆಯನ್ನು ಕೊನೆಮುಟ್ಟಿಸುವ ಮಾರ್ಗದಲ್ಲಿರುವುದಿಲ್ಲವೆಂಬುದನ್ನು ವ್ಯಕ್ತಪಡಿಸುತ್ತಿವೆ. ಮುಂದೆ ಮರಳಿ ಯುದ್ಧವು ಭೀಕರವಾಗಿ ನಡೆಯುವ ರೀತಿಯೇ ಕಾಣುತ್ತದೆ. ಜರ್ಮನಿಯಲ್ಲಿ ಈಗ ಮಿತ್ರಮಂಡಲಿಯವರು ಆಕ್ರಮಿಸಿಕೊಂಡಿರುವ ದೇಶಭಾಗಗಳಲ್ಲಿರುವ ಫ್ರೆಂಚ್ ಸೈನ್ಯಗಳೆರಡಕ್ಕೆ ಅಧಿಪತಿಯಾಗಿರುವ ಜನರಲ್ ಫಾಯಾಲಿಯವರು ಮುಂದೆ ಜರ್ಮನಿಯಮೇಲೆ ಸೈನ್ಯವನ್ನು ಸಾಗಿಸುವ ವಿಧಾನವನ್ನು ಕುರಿತು ಆಲೋಚಿಸಿಕೊಂಡು ಹೋಗುವುದಕ್ಕಾಗಿ ಪ್ಯಾರಿಸ್ ಪಟ್ಟಣಕ್ಕೆ ಬಂದಿದ್ದರು. ಜರ್ಮನಿ ಪಶ್ಚಿಮಪ್ರಾಂತದಲ್ಲಿ ಮಿತ್ರಮಂಡಲಿ ಸೈನ್ಯಗಳು ಮುಂದಕ್ಕೆ ಸಾಗುವ ಲಕ್ಷಣವು ಬಲವಾಗಿ ಕಾಣಿಸುತ್ತಿದೆ. ಜೂನ್ ತಾ॥ ೧೫ ರೊಳಗಾಗಿ ಸಂಧಿಪತ್ರಕ್ಕೆ ಕೈಬರಹವಾಗದಿದ್ದರೆ ಯುದ್ಧವೇ ಸಿದ್ಧವಾಗಬಹುದೆಂದು ಸುದ್ದಿಯಿದೆ. ಜರ್ಮನರು ಸಂಧಿಪತ್ರಕ್ಕೆ ರುಜುಮಾಡದಿದ್ದರೆ ಅವರಮೇಲೆ ದಂಡೆತ್ತುವುದಕ್ಕೆ ಮಾರ್ಷಲ್ ಫಾಕ್‌ರವರಿಗೆ ಅಧಿಕಾರವನ್ನು ಕೊಡಬೇಕೆಂದೂ ಒಂದು ಕ್ಷಣವೂ ತಡಮಾಡಕೂಡದೆಂದೂ ಫ್ರೆಂಚರ ಅಭಿಪ್ರಾಯವಾಗಿದೆ. ಸಂಧಿವಿಷಯದಲ್ಲಿ ಮಿತ್ರಮಂಡಲಿಯವರೆಲ್ಲಾ ಒಂದೇ ಅಭಿಪ್ರಾಯದಲ್ಲಿದ್ದಾರೆ.

ಈಗಣ ಸಂಧಿಸಭಾಪ್ರಯತ್ನವು ಸಫಲವಾದೀತೆ? ಎಂದು ಪ್ರಪಂಚವೆಲ್ಲವೂ ವಿಚಾರಮಾಡುತ್ತಿದೆ. ಆದರೆ ಸಂಧಿನಿಬಂಧನಪತ್ರವು ತಮ್ಮ ಕೈಗೆ ಕೊಡಲ್ಪಟ್ಟಂದಿನಿಂದಲೂ ಜರ್ಮನರು ಹೊರಗೆಡಹಿರುವ ಅಭಿಪ್ರಾಯಗಳು ಸಂಧಿಕಾರ್ಯವನ್ನು ಕೊನೆಮುಟ್ಟಿಸುವ ರೀತಿಯಲ್ಲಿ ಕಾಣುತ್ತಲಿಲ್ಲ. ಫ್ರಾನ್ಸಿಗೆ ಬಂದಿದ್ದ ಜರ್ಮನ್ ಪ್ರತಿನಿಧಿಗಳೆಲ್ಲಾ ತಮ್ಮ ಪ್ರತ್ಯುತ್ತರಗಳನ್ನು ಲಿಖಿತಮೂಲಕವಾಗಿ ಸಂಧಿಸಭೆಯವರಿಗೆ ಕೊಟ್ಟುಬಿಟ್ಟು ಬಂದ ದಾರಿ ಹಿಡಿದು ಹೊರಟುಹೋದರು. ಅವರೆಲ್ಲರೂ ಹೋಗುವಾಗ ಅವರ ಪ್ರಮುಖರಾದ ರಾಂಟ್ಸುಯವರು ತಮ್ಮ ಜತೆಯ ಪ್ರತಿನಿಧಿಗಳಿಗೆ ಹೀಗೆ ಹೇಳಿಕಳುಹಿಸಿದರಂತೆ— “ಈಗಣ ಸಂಧಿನಿಬಂಧನೆಗಳು ಬಲುಮಟ್ಟಿಗೆ ಮಾರ್ಪಟ್ಟಿಲ್ಲದೆ ನಾನು ಸಂಧಿಪತ್ರದಮೇಲೆ ಕೈಬರಹವನ್ನು ಹಾಕತಕ್ಕವನಲ್ಲವೆಂಬುದನ್ನು ನೀವು ಬರ್ಲಿನ್ನಿನ ಪ್ರಜೆಗಳಿಗೆ ತಿಳಿಯಿಸಿರಿ, ಇತರರಾರಾದರೂ ಕೈಬರಹವನ್ನು ಹಾಕಿದರೆ ಹಾಕಿಕೊಳ್ಳುವರೇನೊ; ನಾನು ಮಾತ್ರ ಹಾಕುವವನಲ್ಲ” ಎಂದು ಹೇಳಿಕಳುಹಿಸಿರುವರಂತೆ. ಇತ್ತ ಮಿತ್ರಮಂಡಲಿಯವರು ಹೇಗೆ ಬಿಗಿಯಾಗಿರುವರೆಂಬುದು ಗೊತ್ತೇ ಇದೆ. ಅವರು ಯುದ್ಧಕ್ಕೂ ಸಿದ್ಧರಾಗಿಯೇ ಇದ್ದಾರೆ. ಆಂಗ್ಲಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರು ಮೊನ್ನೆತಾನೇ ವೇಲ್ಸ್ ಸೈನಿಕರಿಗೆ ಉಪನ್ಯಾಸಮಾಡುವಾಗ ಹೀಗೆ ಹೇಳಿರುವರು—“ಅಯ್ಯಗಳಿರಾ! ಜರ್ಮನರು ಸಂಧಿಪತ್ರದಮೇಲೆ ಕೈಬರಹ ಹಾಕುವುದಿಲ್ಲವೆಂದು ಹೇಳಿರುವರು. ಅದನ್ನು ಹಾಕಿಯೇ ತೀರುವಂತೆ ನೀವು ಮಾಡಿಸಬೇಕು. ಸಂಧಿಪತ್ರಕ್ಕೆ ವರ್ಸೇಲೀಸ್ ಪಟ್ಟಣದಲ್ಲಿ ನೀವು ಕೈಬರಹವನ್ನು ಹಾಕದಿದ್ದರೆ ಆ ಕೆಲಸವು ಮುಂದೆ ಬರ್ಲಿನ್ ಪಟ್ಟಣದಲ್ಲೇ ನಡೆಯುವುದೆಂದು ನಾವು ಅವರಿಗೆ ಪ್ರತ್ಯುತ್ತರವನ್ನು ಕೊಟ್ಟಿರುವೆವು. ನಾವು ಅದಕ್ಕೆ ಎಷ್ಟುಮಾತ್ರವೂ ಹಿಂದೆಗೆಯುವುದಿಲ್ಲ. ಪ್ರಪಂಚದ ಭವಿಷ್ಯತ್ಸೌಖ್ಯವು ಜರ್ಮನರ ವಿಷಯವಾಗಿ ಈಗ ವಿಧಿಸಬೇಕಾದ ಸಂಧಿನಿಬಂಧನೆಯ ಮೇಲೆ ಆಧಾರಪಟ್ಟುಕೊಂಡಿದೆ. ನೀವು ರಣರಂಗವನ್ನು ಮತ್ತೆ ಪ್ರವೇಶಿಸಬೇಕಾಗಿ ಬಂದು ನಿಮ್ಮ ರಜವು ತೆಗೆದುಹಾಕಲ್ಪಟ್ಟು, ಸ್ವದೇಶಕ್ಕೆ ನೀವು ಪ್ರಯಾಣಮಾಡಲು ಆಲಸ್ಯವಾದುದೇ ಆದರೆ ಅದಕ್ಕೆ ನಾನೊಬ್ಬನೇ ಬಾಧ್ಯನೆಂದು ನೀವು ತಿಳಿಯಬೇಕು. ತುಪಾಕಿಗಳನ್ನು ಶತೃಗಳಮೇಲೆ ಪ್ರಯೋಗಿಸುವ ಸೈನ್ಯವನ್ನು ಸಿದ್ಧಪಡಿಸಿರಿ. ಈಗ ಸಿದ್ಧವಾಗಿರುವ ಸಂಧಿಪತ್ರದಮೇಲೆ ಜರ್ಮನರ ಕೈಬರಹವು ನಿಮ್ಮ ಸಹಾಯದಿಂದ ಬಿದ್ದೇತೀರುವಂತೆ ಮಾಡಿರಿ. ಆಗ ಪ್ರಪಂಚದಲ್ಲೆಲ್ಲಾ ಶಾಂತಿಯು ನೆಲಸಬಲ್ಲುದು” ಎಂದು ಹೇಳಿರುವುದನ್ನು ನೋಡಿದರೆ ಜರ್ಮನಿಯಮೇಲೆ ದಾಳಿಯಿಡುವುದಕ್ಕೆ ಮಿತ್ರಮಂಡಲಿಯವರು ಎಷ್ಟುಮಟ್ಟಿಗೆ ಸಿದ್ಧರಾಗಿ ತಮ್ಮ ಸೈನಿಕರನ್ನು ಹುರಿದುಂಬಿಸುತ್ತಿರುವರೆಂಬುದು ಗೊತ್ತಾಗುವುದು. ಜರ್ಮನರು ತಿಳಿಸಿರುವ ಅಭಿಪ್ರಾಯಗಳ ಮೇರೆಗೆ ಸಂಧಿನಿಬಂಧನೆಗಳಲ್ಲಿ ಎಲ್ಲೋ ಕೆಲಸಣ್ಣ ವಿಷಯಗಳನ್ನು ಮಾರ್ಪುಗೊಳಿಸಲು ಮಿತ್ರಮಂಡಲಿಯವರು ಸಿದ್ಧರಾಗಿರುವರೇ ಹೊರತು, ನಷ್ಟಪರಿಹಾರ ಸೇನಾಪರಿಮಿತಿಯನ್ನು ತಗ್ಗಿಸುವುದು ಅಧಿನಿವೇಶನಗಳನ್ನು ಬಿಟ್ಟುಕೊಡುವುದು ಮೊದಲಾದ ಪ್ರಮುಖ ವಿಷಯಗಳಲ್ಲಿ ಸ್ವಲ್ಪವೂ ವ್ಯತ್ಯಾಸಮಾಡಲು ಒಪ್ಪುವವರಾಗಿಲ್ಲ. ಈ ವಿಷಯದಲ್ಲಿ ಅಮೇರಿಕಾ, ಇಂಗ್ಲೀಷ್, ಫ್ರೆಂಚ್ ಪ್ರತಿನಿಧಿಗಳು ದೃಢವಾದ ಒಂದೇ ಅಭಿಪ್ರಾಯವುಳ್ಳವರಾಗಿದ್ದಾರೆ. ಮುಖ್ಯಮಂತ್ರಿ ಲಾಯಿಡ್‌ಜಾರ್ಜರು ಹೇಳಿರುವಂತೆ ಜರ್ಮನರಮೇಲೆ ಮತ್ತೆ ಯುದ್ಧಮಾಡಿ ಅವರ ಬರ್ಲಿನ್ ಪಟ್ಟಣದಲ್ಲಿ ಸಂಧಿಪತ್ರಕ್ಕೆ ಕೈಬರಹ ಬೀಳುವಂತೆ ಮಾಡಿದಲ್ಲದೆ ಪ್ರಯೋಜನವಿಲ್ಲವೆಂದು ಫ್ರಾನ್ಸ್ ದೇಶದವರ ದೃಢನಿಶ್ಚಯವಾಗಿದೆ. ಸಂದರ್ಭಗಳು ಹೀಗಿರುವಾಗ ಸಂಧಿಯು ನಡೆದು ಯುದ್ಧವು ನಿಕ್ಷೇಪವಾಗುವುದೆಂದು ಎಣಿಸಲು ಅವಕಾಶವು ಕಡಿಮೆಯಾಗಿರುತ್ತದೆ. ಆದರೂ ಸಂಧಿ ನಡೆಯದೆ ಹೋಗುವುದಿಲ್ಲವೆಂದು ಅನೇಕರು ನಂಬುತ್ತಾರೆ. ಆ ನಿರೀಕ್ಷಣೆಯಿಂದಲೇ ಸಂಧಿಮಹೋತ್ಸವವನ್ನು ನಡೆಯಿಸುವುದಕ್ಕೆ ಅನೇಕ ತರದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಲಂಡನ್ ಪಟ್ಟಣದಲ್ಲಿ ಥೇಮ್ಸ್ ನದಿಯಲ್ಲಿ ೩೦೦ ಹಡಗುಗಳನ್ನು ಧ್ವಜಪತಾಕಾದಿಗಳಿಂದ ಅಲಂಕರಿಸಿ ಅಭೂತಪೂರ್ವವಾದ ಉತ್ಸವವನ್ನು ಮಾಡಿಕೊಂಡು ಹೋಗಲು ಸನ್ನಾಹವಾಗಿದೆ. ಹೀಗೆಯೇ ಹಲವುಕಡೆ ಯತ್ನಗಳು ನಡೆದಿರುತ್ತವೆ. ಆದರೆ ಪರ್ಯವಸಾನವು ಹೇಗಾಗುವುದೋ ನೋಡಬೇಕು. ಒಂದುವೇಳೆ ಸಂಧಿ ನಡೆಯದೆ ಮರಳಿ ಯುದ್ಧಕ್ಕೆ ಆರಂಭವಾದರೆ ಜಯಾಪಜಯಗಳು ಹೇಗಾಗುವುವೆಂಬುವನ್ನು ಊಹಿಸುವುದಕ್ಕೆ ಮೊದಲು ಉಭಯಪಕ್ಷದ ಬಲಾಬಲಗಳನ್ನು ವಿಮರ್ಶೆಮಾಡಬೇಕಾಗುವುದು. ಈಗಲಾದರೊ ಮಿತ್ರಮಂಡಲಿಯವರ ಬಲವು ಭೂಮಿಯಮೇಲೂ ಸಮುದ್ರದಮೇಲೂ ಬಹಳ ದೃಢತರವಾಗಿರುವುದು. ಅಮೇರಿಕನ್ನರ ಸೈನ್ಯವು ಇನ್ನೂ ಕಟ್ಟಳಿಯದೆ ಇದೆ ಆಂಗ್ಲರು ತಮ್ಮ ಸೈನ್ಯವನ್ನು ಇನ್ನೂ ಬಲಪಡಿಸುತ್ತಲೇ ಇದ್ದಾರೆ. ಜರ್ಮನರಾದರೊ ಜರ್ಝರಿತರಾಗಿದ್ದಾರೆ. ಅವರ ಸೇನಾಬಲವು ಕ್ಷೀಣಿಸಿಹೋಗಿರುವುದಲ್ಲದೆ ಪ್ರಜೆಗಳ ಏಕಮತ್ಯವನ್ನೂ ಹಾಳ್ಮಾಡಿಕೊಂಡಿದ್ದಾರೆ. ದೇಶವು ಉಲ್ಲೋಲಕಲ್ಲೋಲವಾಗಿದೆ. ಅಂತಃಶತೃಗಳು ಹೆಚ್ಚಿಹೋಗಿವೆ. ಅಲ್ಲದೆ ತಮ್ಮ ಸೈನ್ಯದಲ್ಲಿ ಬಹುಭಾಗವನ್ನು ಮಿತ್ರಮಂಡಲಿಯವರಿಗೆ ಒಪ್ಪಿಸಿಬಿಟ್ಟಿರುವುದಲ್ಲದೆ ದೇಶದಲ್ಲಿ ಕೆಲ ಭಾಗವನ್ನೂ ಮಿತ್ರಮಂಡಲಿಗೆ ಒಪ್ಪಿಸಿಬಿಟ್ಟಿದ್ದಾರೆ. ಇವೆಲ್ಲ ಕಾರಣಗಳಿಂದಲೋ ಏನೋ ಅವರು ಯುದ್ಧವನ್ನು ಅಪೇಕ್ಷಿಸುತ್ತಲಿಲ್ಲವಂತೆ. ಇಂಥ ಸ್ಥಿತಿಯಿರುವಾಗ ಸಂಧಿಮುರಿದುಹೋಯಿತೆಂಬುದು ಸಿದ್ಧವಾದಕೂಡಲೇ ಮಿತ್ರಮಂಡಲಿಯವರು ತಮ್ಮಸೈನ್ಯಗಳನ್ನು ಜರ್ಮನಿಯಮೇಲೆ ನುಗ್ಗಿಸುವರೆಂಬುದಕ್ಕೆ ಲೇಶವೂ ಸಂಶಯವಿಲ್ಲ. ಅಷ್ಟೇ ಅಲ್ಲದೆ ಎಲ್ಲ ಕಡೆಯಿಂದಲೂ ಸಮುದ್ರದ ದಾರಿಯನ್ನು ಪೂರ್ವದಂತೆಯೇ ಕಟ್ಟಿಬಿಟ್ಟು ಜರ್ಮನಿಗೆ ಹೊರಗಣಿಂದ ಸಾಮಗ್ರಿಗಳೊಂದೂ ಸಾಗದಂತೆ ತಡೆದುಬಿಡುವರು. ಆದರೆ ಮಗ್ಗುಲಲ್ಲಿರುವ ಸ್ವೀಡನ್ ಡೆನ್ಮಾರ್ಕ್ ದೇಶಗಳು ಪೂರ್ವದಂತೆ ಸಮುದ್ರನಿರೋಧದ ವಿಷಯದಲ್ಲಿ ತಾವು ನಡೆದುಕೊಳ್ಳಲಾರೆವೆಂದು ತಿಳಿಯಿಸಿರುವರೆಂದು ವಾರ್ತೆಯಿದೆ. ಆದರೆ ಹುಚ್ಚುಹೊಳೆ ಬಂದಾಗ ಜೇನಿಹುಲ್ಲುಗಳ ತಡೆಯೊಂದು ಗಣವೆ? ಅದರಂತೆ ಈ ಸಣ್ಣದೇಶಗಳ ಅಂಗೀಕಾರಾನಂಗೀಕಾರಗಳು ಅಷ್ಟೇನೂ ಗಣ್ಯತೆಗೆ ಬರಲಾರವು. ನೌಕಾಸೈನ್ಯದಲ್ಲಿ ಅದ್ವಿತೀಯ ಬಲವುಳ್ಳ ಆಂಗ್ಲರೂ ಅವರಂತೆಯೇ ಅಮೇರಿಕಾ, ಫ್ರಾನ್ಸ್, ಇಟಲಿ, ಜಪಾನ್ ಮೊದಲಾದ ದೊಡ್ಡದೊಡ್ಡ ರಾಜ್ಯಗಳೂ ದೃಢವಾಗಿ ನಿಂತುಕೊಳ್ಳುವಾಗ ಇತರ [illegible]ದಿರಾಜ್ಯಗಳು ಯಾವುವೂ ಪ್ರತಿಭಟಿಸಿ ಬಾಳಲಾರವು. ಆದರೆ ರಷ್ಯನ್ ಬೋಲ್ಷೆವಿಕ್ಕರೂ ಜರ್ಮನ್ ಬೋಲ್ಷೆವಿಕ್ಕರೂ ಒಂದಾಗಿ ಬಾಲ್ಕನ್ ಸಂಸ್ಥಾನಗಳನ್ನೂ ಹಂಗೇರಿ ಸೋವಿಯಟ್ಟುಗಳನ್ನೂ ಕೂಡಿಸಿಕೊಂಡು ಒಟ್ಟಿಗೆ ಮಿತ್ರಮಂಡಲಿಯನ್ನು ಪ್ರತಿಭಟಿಸಬೇಕೆಂಬ ರಹಸ್ಯಪ್ರಯತ್ನಗಳನ್ನು ಮಾಡುತ್ತಿರುವಂತೆ ಸುದ್ದಿಗಳು ಬಂದಿವೆ. ಆದರೆ ಕಳೆದವಾರದ ರಷ್ಯಾ ವಾರ್ತೆಗಳನ್ನು ನೋಡುವಲ್ಲಿ ಬೋಲ್ಷೆವಿಕ್ಕರ ಹಾವಳಿಯು ದಕ್ಷಿಣ ರಷ್ಯಾದೊಳಗೂ ಎಲ್ಲಾ ಕಡೆಯಲ್ಲೆಲ್ಲಾ ತಗ್ಗಿಹೋಗುತ್ತಿರುವುದೆಂದೂ ಪೆಟ್ರೊಗ್ರೇಡು ಅವರ ಕೈತಪ್ಪಿಹೋಗಿರುವುದೆಂದೂ, ಬಾಲ್ಷೆವಿಕ್ಕರು ಬಹಳ ಸೈನ್ಯಗಳನ್ನೂ ಆಯುಧಸಾಮಗ್ರಿಗಳನ್ನೂ ಕಳೆದುಕೊಂಡು ಸೋತು ಪಲಾಯನಗೊಳ್ಳುತ್ತಿರುವರೆಂದೂ, ಅವರ ಜಲಸೈನ್ಯಕ್ಕೂ ಅಪಜಯವೂ ನಷ್ಟವೂ ಪ್ರಾಪ್ತವಾಯಿತೆಂದೂ ಗೊತ್ತಾಗುತ್ತದೆ. ಅವರ ನಿರ್ಮೂಲನಕ್ಕೆ ಇನ್ನೂ ಪ್ರಬಲವಾದ ಯತ್ನಗಳನ್ನು ಮಿತ್ರಮಂಡಲಿಯವರು ಮಾಡುತ್ತಲೇ ಇದ್ದಾರೆ. ರಷ್ಯಾದಲ್ಲಿ ಬೋಲ್ಷೆವಿಕ್ಕರ ಅಪಜಯವು ಸಂಪೂರ್ಣವಾದ ಕೂಡಲೇ ಅವರ ಪ್ರತಿಶಕ್ತಿಗಳಾದ ರಷ್ಯಾ ಪ್ರಜೆಗಳಿಂದ ಒಂದು ಪ್ರಜಾಸತ್ತಾತ್ಮಕಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವಂತೆ ಮಾಡಲು ಮಿತ್ರಮಂಡಲಿಯವರು ಪ್ರಯತ್ನಿಸಿದ್ದಾರೆ. ಇದು ನಡೆಯುವ ಸೂಚನೆಗಳೂ ಕಂಡುಬರುತ್ತಿವೆ. ಆದುಕಾರಣ ಬೋಲ್ಷೆವಿಕ್ಕರ ಒತ್ತಾಸೆಯಿಂದ ಜರ್ಮನರು ಜಯದುಂದುಭಿಯನ್ನು ಬಾರಿಸುವರೆಂದು ಹೇಳುವುದಕ್ಕೆ ಆಗುವುದಿಲ್ಲ. ಆಗ್ಗೆ ಜರ್ಮನಿಯು ಸಂಪೂರ್ಣ ಪರಾಜಿತವಾಗಿ ಇದ್ದ ದೇಶವನ್ನೂ ಕಳೆದುಕೊಂಡು ಇನ್ನೂ ಅಪರಿಮಿತ ನಷ್ಟಕಷ್ಟಗಳನ್ನನುಭವಿಸಿ ಈಗಿಂತಲೂ ಕಠಿನವಾದ ನಿಬಂಧನೆಗಳಿಗೆ ತಲೆಬಾಗಿ ಒಪ್ಪಿಕೊಳ್ಳಬೇಕಾಗುವುದೇ ನಿಶ್ಚಯ. ಅಂಥ ಸ್ಥಿತಿಯನ್ನು ಜರ್ಮನರು ತಂದುಕೊಳ್ಳದಿರುವುದೇ ಮೇಲು.

ಇನ್ನು ಆಸ್ಟ್ರಿಯಾದ ಮತ್ತು ತುರ್ಕಿ ಬಲ್ಗೇರಿಯಾ ಚೀನಾ ಮೊದಲಾದವುಗಳ ವಿಷಯವು ಹೇಗಾಗುವುದೆಂಬುದನ್ನು ಮುಂದೆ ನೋಡಬೇಕು. ಸಂಧಿಸಭೆಯವರು ಆಸ್ಟ್ರಿಯಾದವರಿಗೆ ಸಂಧಿನಿಬಂಧನೆಗಳನ್ನು ಕೊಟ್ಟಿದ್ದಾರೆ. ಅವನ್ನು ಆಲೋಚಿಸಿ ಉತ್ತರ ಹೇಳುವುದಕ್ಕೆ ಅವರಿಗೆ ೧೫ ದಿನಗಳ ಅವಕಾಶವನ್ನು ಕೊಟ್ಟಿದ್ದಾರೆ. ಆ ಸಂಧಿನಿಬಂಧನೆಗಳ ಪತ್ರವನ್ನು ಆಸ್ಟ್ರಿಯನ್ ರಾಯಭಾರಿ ಹೇರ್‌ರೆನ್ನರ್‌ರವರು ತಾ॥ ೨ ರಲ್ಲಿ ಸ್ವದೇಶಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಈಚೆಗೆ ಅತ್ತಣಿಂದ ಬಂದಿರುವ ಸುದ್ದಿಗಳನ್ನು ನೋಡಲಾಗಿ, ಅಲ್ಲಿಯ ಮಂತ್ರಿವರ್ಗದವರು ಸಂಧಿನಿಬಂಧನೆಗಳನ್ನೆಲ್ಲಾ ಓದಿನೋಡಿ ಚರ್ಚಿಸಿದರೆಂದೂ, ಅವುಗಳು ಎಷ್ಟುಮಾತ್ರಕ್ಕೂ ನೆರವೇರಿಸಲು ಅಸಾಧ್ಯವಾದುವುಗಳಾದಕಾರಣ ಅಂಗೀಕಾರಾರ್ಹವಲ್ಲವೆಂದು ಏಕಕಂಠದಿಂದ ನಿರ್ಧರಿಸಿರುವರೆಂದೂ ಗೊತ್ತಾಗುತ್ತದೆ. ಆದರೆ ಅವರ ನಿಷ್ಕೃಷ್ಟಾಭಿಪ್ರಾಯವಾದ ಉತ್ತರವು ಮಿತ್ರಮಂಡಲಿಗೆ ಇನ್ನೂ ತಿಳಿಯಿಸಲ್ಪಟ್ಟಿಲ್ಲ. ಮುಂದೆ ಬಲ್ಗೇರಿಯಾ ತುರ್ಕಿ ಮೊದಲಾದುವುಗಳ ಸಂಧಿವಿಷಯವು ಹೇಗಾಗುವುದೋ ತಿಳಿಯಲಿಲ್ಲ. ಚೀನಾ [illegible] ಕಿಯಾಚೊ, ಷಾಂಟಿಂಗ್‌ಗಳ ವಿಷಯವನ್ನು ತಮಗನುಕೂಲವಾಗಿ ತೀರ್ಮಾನಿಸದಿದ್ದರೆ ಸಂಧಿನಿಬಂಧನೆಗೆ ತಮ್ಮ ಪ್ರತಿನಿಧಿಗಳು ಕೈಬರಹವನ್ನು ಹಾಕಬಾರದೆಂದು ಅಭಿಪ್ರಾಯಕೊಡುತ್ತಿದ್ದಾರೆ. ಇದರಿಂದ ಸಂಧಿಸಭಾಕಾರ್ಯಗಳು ಇನ್ನೂ ವಿಶೇಷ ವಿಷಮಾವಸ್ಥೆಯಲ್ಲೇ ಇವೆಯೆಂಬುದು ಗೊತ್ತಾಗುತ್ತದೆ. ಇವರಮೇಲೆ ಮಿತ್ರಮಂಡಲಿಯವರ ಬ್ರಿಟನ್, ಫ್ರಾನ್ಸ್, ಅಮೇರಿಕಾ ರಾಜ್ಯಗಳಲ್ಲಿ ಕೆಲಸಗಾರರ ಮತ್ತೂ ಉದ್ಯೋಗಿಗಳ ಕಟ್ಟುಪಾಡುಗಳೂ ಮುಷ್ಕರಗಳೂ ದಿನದಿನಕ್ಕೆ ಪ್ರಬಲಿಸುತ್ತಿವೆ. ತಮಗೆ ಸಂಬಳಗಳನ್ನು ಹೆಚ್ಚುಮಾಡಿಕೊಡಬೇಕೆಂದೂ, ಗೆಯ್ಯುವ ಕಾಲದ ಪರಿಮಿತಿಯನ್ನು ಕಡಿಮೆಮಾಡಿಕೊಡಬೇಕೆಂದೂ ಮೊದಲಾಗಿ ಹೇಳುತ್ತ ಕೆಲಸಕ್ಕೆ ಹೋಗದೆ ಹಠತೊಟ್ಟು ನಿಂತುಬಿಡುತ್ತಿದ್ದಾರೆ. ಇಂಥ ಜನಗಳು ಫ್ರಾನ್ಸ್ ಜಿಲ್ಲೆಯೊಂದರಲ್ಲೇ ೨೦ ಲಕ್ಷ ಇರುವರೆಂದು ತಿಳಿಯಬಂದಿದೆ. ಇಂಗ್ಲೆಂಡಿನಲ್ಲಿ ೫೦ ಸಾವಿರ ಮಂದಿ ಪೋಲೀಸರು ಮುಷ್ಕರಹಿಡಿದು ನಿಂತುಬಿಟ್ಟಿದ್ದಾರೆ. ಅಮೇರಿಕಾದಲ್ಲಿ ರಾಜದ್ರೋಹಿಗಳ ಹಾವಳಿಯು ಹೆಚ್ಚುತ್ತಿದೆ. ಅಲ್ಲಲ್ಲಿ ಸಿಡಿಮದ್ದುಗಳ ಪ್ರಯೋಗವಾಗಿ ಪ್ರಮುಖರಾದ ಸರ್ಕಾರಿ ಉದ್ಯೋಗಿಗಳು ಏಟುತಿಂದಿದ್ದಾರೆ. ಕೆಲ ಪ್ರಾಣಹಾನಿಗಳೂ ಆಗಿವೆ. ಪೋಲೀಸರು ಮುಖ್ಯೋದ್ಯೋಗಿಗಳ ಮನೆಗಳನ್ನು ಕಾವಲಿಟ್ಟು ಕಾಯುತ್ತಿದ್ದಾರೆ. ಇಂಥ ಗೃಹಕಲಹಗಳ ಬೇಗೆಯು ಬೇರೆ ಮಿತ್ರಮಂಡಲಿಯವರನ್ನು ದಹಿಸುತ್ತಿದೆ. ಇವೆಲ್ಲ ಪರಿಸ್ಥಿತಿಗಳನ್ನು ಪರ್ಯಾಲೋಚಿಸಿದರೆ ಪ್ರಪಂಚಕ್ಕೆ ಶಾಂತಿಯುಂಟಾಗುವ ಕಾಲವು ಇನ್ನು ಸಮೀಪಿಸಿಲ್ಲವೆಂದು ಹೇಳಬೇಕಾಗುತ್ತದೆ.

ಅಫ್ಘನ್ ಯುದ್ಧ.

ಅಫ್ಘಾನಿಸ್ಥಾನದ ಅಮೀರನು ಒಳಗೊಳಗೇ ಬೋಲ್ಷೆವಿಕ್ ನಾಯಕನಾದ ಲೆನಿನ್ನನೊಡನೆ ಪತ್ರವ್ಯವಹಾರವನ್ನು ನಡೆಯಿಸುತ್ತಿರುವನೆಂದು ಗೊತ್ತಾಯಿತು. ನಮ್ಮವರು ಯುದ್ಧವನ್ನು ಸಾಗಿಸುತ್ತಲೇ ಇದ್ದಾರೆ. ಅಫ್ಘನ್ನರು ಕೆಲಕಡೆ ಹಿಮ್ಮೆಟ್ಟುತ್ತಿದ್ದಾರೆ. ಕೆಲಕಡೆ ನಮ್ಮವರ ಶಿಬಿರವನ್ನು ಮುತ್ತಿ ನಿಷ್ಫಲರಾಗುತ್ತಿದ್ದಾರೆ. ಸ್ಪಿನ್ ಬಾಲ್ಡಕ್ ಎಂಬ ಅಫ್ಘನ್ ಕೋಟೆಯು ನಮ್ಮವರ ವಶವಾಯಿತು. ಇಂಗ್ಲೀಷ್ ವಿಮಾನಗಳು ಅಫ್ಘನ್ನರ ಜಲಾಲಾಬಾದ್ ಪಟ್ಟಣದಮೇಲೂ ಕಾಬೂಲ್‌ಪಟ್ಟಣದಮೇಲೂ ಸಿಡಿಮದ್ದುಗಳನ್ನು ಸುರಿಸಿ ಹಲವು ಕಟ್ಟಡಗಳನ್ನು ಧ್ವಂಸಮಾಡಿವೆ. ಇದರಿಂದ ಕಾಬೂಲಿನಲ್ಲಿದ್ದ ಮದ್ದಿನ ಉಗ್ರಾಣವು ಸುಟ್ಟು ಭಯಂಕರ ಶಬ್ದದೊಡನೆ ಹಾರಿ ಪ್ರಜೆಗಳ ಎದೆಯನ್ನು ಬಿರಿಯಿಸಿತು. ಅಫ್ಘನ್‌ಪ್ರಜೆಗಳಲ್ಲನೇಕರು ತಮ್ಮ ಅಮೀರನ ವರ್ತನದ ವಿಷಯದಲ್ಲಿ ಅಸಮಾಧಾನಪಡುತ್ತಿದ್ದಾರೆ. ಈ ಮಧ್ಯೆ ಅಮೀರ್ ಅಮನುಲ್ಲಾಖಾನನು ಮೇ ತಾ॥ ೨೮ ರಲ್ಲಿ ಒಂದು ಲೇಖನವನ್ನು ಬರೆದು ವೈಸ್‌ರಾಯರ ಬಳಿಗೆ ಕಳುಹಿಸಿಕೊಟ್ಟಿರುವನು. ಅದು ಜೂನ್ ತಾ॥ ೩ ರಲ್ಲಿ ವೈಸ್‌ರಾಯರಿಗೆ ಸೇರಿತು. ಅದರಲ್ಲಿರುವ ಮುಖ್ಯಾಭಿಪ್ರಾಯವೇನೆಂದರೆ—ಏನೋ ಕೆಲವು ತಪ್ಪುಅಭಿಪ್ರಾಯಗಳಿಂದ ಕೆಲವು ಅಸಂಗತಕಾರ್ಯಗಳು ನಡೆದುಹೋಗಿ ಕಡೆಗೆ ಅವು ಯುದ್ಧಾರಂಭದಲ್ಲಿ ಪರಿಣಮಿಸಿವೆ. ಉತ್ತರಹಿಂದೂಸ್ಥಾನದಲ್ಲಿ ನಡೆದ ಕೆಲವು ಗಲಬಿಲಿಯನ್ನು ಕೇಳಿ ನಾವು ನಮ್ಮ ಎಲ್ಲೆಕಟ್ಟೆಯನ್ನು ರಕ್ಷಿಸಿಕೊಳ್ಳುವುದಕ್ಕೆ ಕೆಲ ಸೈನಿಕರನ್ನು ಕಳುಹಿಸಿಕೊಡಬೇಕಾಯಿತು. ಆ ಸೈನ್ಯಗಳ ಅಧಿಕಾರಿಯು ಸ್ವರಕ್ಷಣೆಗಾಗಿ ಕೆಲ ಕಂದಕಗಳನ್ನು ತೋಡಿಕೊಳ್ಳುವಾಗ ನಮ್ಮ ದೇಶಕ್ಕೆ ಸೇರಿದ ಪ್ರದೇಶವೆಂದು ಭ್ರಮಿಸಿ, ಭರತಖಂಡಕ್ಕೆ ಸೇರಿದ್ದ ಭೂಭಾಗದಲ್ಲಿ ನುಗ್ಗಿ ಕಂದಕಗಳನ್ನು ತೋಡಿದನು. ಅದರಮೇಲೆ ಇಂಗ್ಲೀಷ್‌ಸೈನ್ಯಗಳು ಅಫ್ಘಾನಿಸ್ಥಾನಕ್ಕೆ ನುಗ್ಗಿದುವು. ಈ ಸಂಗತಿಯನ್ನು ನಾನು ಹೇಗೋ ಭಾವಿಸಿಕೊಂಡು ಯುದ್ಧವನ್ನು ಪ್ರಕಟಿಸಬೇಕಾಯಿತು. ಈ ಮಧ್ಯೆ ಇಂಡ್ಯಾದಲ್ಲಿದ್ದ ತನ್ನ ಪ್ರತಿನಿಧಿ ಅಬ್ದುಲ್ ರಹಿಮಾನನು ಕಾಬೂಲಿಗೆ ಬಂದು ಅಲ್ಲಿರುವ ವಿದೇಶಾಂಗಮಂತ್ರಿಯನ್ನು ಕಾಣಲಾಗಿ ಆತನು ಯುದ್ಧವನ್ನು ನಿಲ್ಲಿಸಬೇಕೆಂದು ತನಗೆ ಹೇಳಿದನೆಂಬುದಾಗಿ ತಿಳಿಸಿರುತ್ತಾನೆ. ಆದುಕಾರಣ ಈಗ ಜರುಗಿದ ಸಂಗತಿಗಳು ಆಕಸ್ಮಿಕವೂ ಅಸಂಗತವೂ ಆಗಿರುತ್ತವೆ. ಆದುದರಿಂದಲೇ ನಾವು ಇದನ್ನು ಮತಯುದ್ಧವನ್ನಾಗಿ ಪ್ರಕಟಿಸಿರುವುದಿಲ್ಲ. ನಮ್ಮ ಕೌನ್ಸಿಲ್ಲಿನವರು ಕೂಡ ಯುದ್ಧವನ್ನು ಕೂಡಲೇ ನಿಲ್ಲಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಆ ಕಾರ್ಯವನ್ನು ತಿಳಿಯಿಸುವುದಕ್ಕಾಗಿಯೇ ತಮ್ಮ ಬಳಿಗೆ ಒಬ್ಬ ಪ್ರತಿನಿಧಿಯನ್ನು ಕಳುಹಿಸಿಕೊಟ್ಟಿದ್ದರು. ವಿಚಾರಾಂತರ್ಯಕ್ಕಾಗಿ ನಮ್ಮ ನಿಮಗೆ [illegible]

ರೈವ ಸ್ನೇಹವನ್ನು ಈಗ ಕೆಡಿಸಿಕೊಂಡು ಸದಾ ಮನೋವೇದನೆಗಾಕರವಾದ ಶತ್ರುತ್ವವನ್ನು ತಂದಿಕ್ಕಿಕೊಳ್ಳುವುದು ಶ್ರೇಯಸ್ಕರವಲ್ಲ. ಈ ಲೇಖನವು ಮನಃಪೂರ್ವಕವಾಗಿ ಬರೆಯಲ್ಪಟ್ಟಿದೆಯೆಂಬುದಕ್ಕೆ ಅದರಲ್ಲಿರುವ ನನ್ನ ಮಾತುಗಳೂ ಮತ್ತು ನನ್ನ ಈ ಅಭಿಪ್ರಾಯವು ತಿಳಿದಕೂಡಲೇ ಯುದ್ಧವನ್ನು ನಿಲ್ಲಿಸಿಬಿಡಬೇಕೆಂದು ನನ್ನ ಸೇನಾಪತಿಗಳಿಗೆಲ್ಲಾ ನಾನು ಕಳುಹಿಸಿಕೊಟ್ಟಿರುವ ಆಜ್ಞಾಪತ್ರಗಳೂ ಕೂಡ ನಿಮಗೆ ನಿದರ್ಶನಗಳಾಗಿರುವವೆಂದು ನಂಬುತ್ತೇನೆ. ಇಂಗ್ಲೀಷರೊಡನೆ ಐಹಿಕಸ್ನೇಹಸಂಬಂಧವನ್ನು ಬಿಟ್ಟುಬಿಡಬೇಕೆಂದು ನನ್ನ ಪ್ರಭುತ್ವದವರು ಎಂದಿಗೂ ಯೋಚಿಸಿರುವುದಿಲ್ಲ. ಪೂರ್ವಸಂಬಂಧವನ್ನೂ ಸ್ನೇಹಧರ್ಮವನ್ನೂ ಕೆಡಿಸಿಕೊಳ್ಳುವುದಕ್ಕೆ ಅವರು ಯಾವಾಗಲೂ ಅಪೇಕ್ಷಿಸುವುದಿಲ್ಲ. ಅದುಕಾರಣ ಉಭಯರಿಗೂ ಶಾಶ್ವತಸಂಧಿಯನ್ನೇ ಅವರು ಕೋರುತ್ತಿದ್ದಾರೆ. ಸಾಧ್ಯವಾದಷ್ಟು ಬೇಗನೆ ಎರಡು ಪಕ್ಷದ ಪ್ರತಿನಿಧಿಗಳನ್ನೂ ಯಾವುದಾದರೊಂದು ಸ್ಥಲದಲ್ಲಿ ಕೂಡಿಸಿದರೆ ಉಭಯಪಕ್ಷಕ್ಕೂ ಅನುಕೂಲವಾದ ಸಂಧಿಯು ನಡೆದುಹೋಗುವುದು" ಎಂದು ಬರೆದಿದ್ದನು.

ಇದಕ್ಕೆ ವೈಸ್ರಾಯರು ಬರೆದು ಕಳುಹಿಸಿದ ಉತ್ತರದಲ್ಲಿ ಹೀಗೆ ತಿಳಿಯಿಸಿರುತ್ತಾರೆ—ಉಭಯಪಕ್ಷಕ್ಕೂ ಸಂಧಿಯನ್ನು ಜರುಗಿಸಲು ನೀವು ಮನಃಪೂರ್ವಕವಾಗಿ ಪ್ರಯತ್ನಿಸಿರುವಿರೆಂಬುದನ್ನು ತಿಳಿದು ನಾನು ಸಂತೋಷಿಸುತ್ತೇನೆ. ಇದುವರೆಗೆ ಜರುಗಿದುದೆಲ್ಲಾ ತಪ್ಪು ಅಭಿಪ್ರಾಯದಿಂದ ಜರುಗಿತೆಂದು ಹೇಳಿ ಆ ತಪ್ಪಿತವನ್ನು ಸುಮ್ಮನೆ ಮನ್ನಿಸಿ ಬಿಡಲಾಗುವುದಿಲ್ಲ. ಯಾವುದಾದರೂ ತಪ್ಪು ಅಭಿಪ್ರಾಯವುಂಟಾಗಿದ್ದರೆ ಅದು ಭರತಖಂಡದ ರಾಜಕೀಯಸ್ಥಿತಿಯನ್ನು ಚೆನ್ನಾಗಿ ಅರಿತುಕೊಳ್ಳದಿರುವುದರಿಂದಲೂ ಆಂಗ್ಲಪ್ರಭುತ್ವದವರ ಮನೋಭಾವವನ್ನೂ ಶಕ್ತಿಸಾಮರ್ಥ್ಯಗಳನ್ನೂ ಚೆನ್ನಾಗಿ ಗ್ರಹಿಸಿಕೊಳ್ಳಲಾರದೆ ಹೋಗಿರುವುದರಿಂದಲೂ ಸಂಭವಿಸಿರಬೇಕು. ಎಂದು ಹೇಳಿ, ಆಫ್ಘನ್ನರು ಮೊದಲಿನಿಂದಲೂ ಮಾಡುತ್ತ ಬಂದಿರುವ ತಪ್ಪಿತಗಳ ಪರಂಪರೆಯನ್ನು ಆ ಲೇಖನದಲ್ಲಿ ವಿವರಿಸಿ, ಅವೇ ಬೆಳೆದು ಕಡೆಗೆ ಯುದ್ಧಾರಂಭರೂಪವಾಗಿ ಹೇಗೆ ಪರಿಣಮಿಸಿತೆಂಬುದನ್ನು ತಿಳಿಯಪಡಿಸಿ, ಅಮೀರರು ನಿಜವಾಗಿಯೂ ಬೇಕೆನ್ನುತಲೇ ಯುದ್ಧಸನ್ನಾಹವನ್ನು ಸಾಂಗವಾಗಿ ಹೇಗೆ ಮಾಡಿದರೆಂಬುದಕ್ಕೂ ನಿದರ್ಶನವನ್ನು ತೋರಿಸಿಕೊಟ್ಟು, ಕಟ್ಟಕಡೆಗೆ ಅಮೀರರು ಈಗಲಾದರೂ ವಿವೇಕವನ್ನು ತಂದುಕೊಂಡು ಸ್ನೇಹಭಾವವನ್ನು ತೋರಿಸಿದುದು ಸಂತೋಷಕರವೆಂದೂ, ಯುದ್ಧವನ್ನು ಕೊನೆಮುಟ್ಟ ಸಾಗಿಸುವುದಕ್ಕೆ ತಮಗೆ ನ್ಯಾಯವಾದ ಅನೇಕ ಕಾರಣಗಳಿದ್ದಾಗ್ಯೂ ಗತಿಸಿದ ಅಮೀರರ ಒಳ್ಳೆತನವನ್ನೂ ಸ್ನೇಹಭಾವವನ್ನೂ ಗಮನಿಸಿ, ಈಗಣ ಅಮೀರರು ತಮ್ಮ ಚಿಕ್ಕತನದಲ್ಲಿ ನಡೆಯಿಸಿದ ತಪ್ಪಿತಕ್ಕಾಗಿ ತಾವು ಪರಿತಪಿಸಿ, ಇಂಗ್ಲೀಷರೊಡನೆ ಯಾವಾಗಲೂ ನಾವು ಸ್ನೇಹದಿಂದಿರುವುದಕ್ಕೆ ಕೋರುತ್ತೇವೆಂದು ಮನಃಪೂರ್ವಕವಾಗಿ ತಮಗೆ ಬರೆದು ಕೇಳಿಕೊಂಡಿರುವುದಕ್ಕಾಗಿ ಸಂತೋಷಿಸಿ, ಯುದ್ಧ ನಿಲ್ಲಬೇಕಾದರೆ ಈ [illegible] ಸಂಧಿನಿಬಂಧನೆಗಳಿಗೆ ನೀವು ಒಳಪಟ್ಟು ನಡೆದುಕೊಳ್ಳಬೇಕೆಂದು ತಿಳಿಯಿಸಿರುತ್ತಾರೆ. ಆ ನಿಬಂಧನೆಗಳೇನೆಂದರೆ—

೧. ತಮ್ಮ ಎಲ್ಲೆಕಟ್ಟಿನ ಪ್ರಾಂತಗಳಲ್ಲಿ [illegible] ನುಗ್ಗಿರುವ ತಮ್ಮ ಸೈನ್ಯಗಳನ್ನೆಲ್ಲಾ ಅಮೀರರು ಹಿಂದಕ್ಕೆ ಕರೆಯಿಸಿಕೊಳ್ಳಬೇಕು. ತಮಗೆ ಈಗಲು ನಿಲ್ಲಿರುವ ಇಂಗ್ಲೀಷ್ ಸೈನ್ಯಕ್ಕೆ ೨೦ ಮೈಲಿಗಳ ದೂರದೊಳಗೆ ಯಾವುದೊಂದು ಆಫ್ಘನ್ ಸೈನ್ಯವೂ ಇರಕೂಡದು.

೨. ಇಂಗ್ಲೀಷ್ ಸೈನ್ಯವು ಈಗ ಆಫ್ಘಾನಿಸ್ಥಾನದ ಯಾವಯಾವ ಪ್ರದೇಶಗಳಲ್ಲಿವೆಯೋ ಅಲ್ಲಲ್ಲೇ ಅವು ಇರಬೇಕು. ಅವರಿಗೆ ಅವಶ್ಯಕವೆಂದು ತೋರುವ ಯುದ್ಧಸನ್ನಾಹಗಳನ್ನು ಮಾಡಿಕೊಳ್ಳಲು ಅವರಿಗೆ ಪೂರ್ಣಸ್ವಾತಂತ್ರ್ಯವಿರಬೇಕು.

೩. ಈ ನಿಬಂಧನೆಗಳಿಗೊಪ್ಪಿ ಎದುವರೆಗೆ ಆಫ್ಘನ್ನರು ಇರುವರೋ ಅಲ್ಲಿಯವರೆಗೂ ಇಂಗ್ಲೀಷರು ಆಫ್ಘನ್ನರ ಮೇಲೆ ಯುದ್ಧವನ್ನು ನಡೆಯಿಸುವುದಿಲ್ಲ. ಮತ್ತು ಆಂಗ್ಲ ವೈಮಾನಿಕರು ಆಫ್ಘನ್ ದೇಶದಲ್ಲಿ ಸಿಡಿಮದ್ದುಗಳನ್ನು ಪ್ರಯೋಗಿಸುವುದಿಲ್ಲ. ಆದರೆ ತಾತ್ಕಾಲಿಕ ಸಂಧಿನಿಬಂಧನೆಯನ್ನು ಮೀರಿ ಆಫ್ಘನ್ನರು ಎಲ್ಲಾದರೂ ಯುದ್ಧಸನ್ನಾಹವನ್ನು ಮಾಡಿಕೊಳ್ಳುತ್ತಿದ್ದರೆ ಅವರನ್ನು ಪರೀಕ್ಷಿಸುವುದಕ್ಕಾಗಿ ಆಂಗ್ಲವೈಮಾನಿಕರು ಅವರಿಷ್ಟಬಂದ ಕಡೆ ಆಫ್ಘನ್ ದೇಶದ ಮೇಲೆ ಸಂಚರಿಸುವುದಕ್ಕೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಅಂಥ ವೈಮಾನಿಕರ ಮೇಲೆ ಯಾವ ಆಫ್ಘನ್ನನೂ ಯಾವ ತರದ ಬಾಧೆಯನ್ನೂ ಉಂಟುಮಾಡದಿರುವುದಕ್ಕೆ ಅಮೀರರು ಹೊಣೆಯಾಗಿರಬೇಕು. ಯಾವ ವೈಮಾನಿಕನಾದರೂ ಬಲವಂತವಾಗಿ ಯಾವ ಪ್ರದೇಶದಲ್ಲಾದರೂ ಇಳಿಯಬೇಕಾಗಿ ಬಂದರೆ ಅಲ್ಲಿ ಅವರಿಗೆ ಯಾವ ತರದ ಉಪದ್ರವವೂ ಸಂಭವಿಸದಂತೆ ಮಾಡಲು ಅಮೀರರು ಹೊಣೆಯಾಗಬೇಕು.

೪. ಅಲ್ಲದೆ ಅಮೀರರು ಡ್ಯೂರಾಂಡ್ ಎಲ್ಲೆಯ ಪ್ರಾಂತದಲ್ಲಿರುವ ತಮ್ಮ ಸೈನ್ಯಕ್ಕೆ ಯುದ್ಧವನ್ನು ನಿಲ್ಲಿಸಬೇಕೆಂಬ ಆಜ್ಞೆಯನ್ನು ಕೂಡಲೇ ಕೊಡಬೇಕು. ಅವರು ಒಂದು ವೇಳೆ ಅಮೀರರ ಉತ್ತರವನ್ನು ಅತಿಕ್ರಮಿಸಿ ನಡೆದರೆ ಅವರಿಗೆ ಆಫ್ಘಾನಿಸ್ಥಾನದಲ್ಲಿ ಮರಳಿ ಬಂದು ಸೇರಲು ಅವಕಾಶವನ್ನು ಕೊಡುವುದಿಲ್ಲವೆಂದು ತಿಳಿಯಪಡಿಸಬೇಕು.

೫. ಈ ಮೇಲೆಕಂಡ ನಿಬಂಧನೆಗಳು ಎಷ್ಟು ಸುಲಭವಾಗಿಯೂ ಮಿತ್ರಭಾವದಿಂದ ಸೂಚಿಸಲ್ಪಟ್ಟುವಾಗಿಯೂ ಇವೆಯೆಂಬುದನ್ನು ಅಮೀರರು ತಿಳಿದ ಕೂಡಲೇ ಅವರೂ ಇಂಥ ಮಿತ್ರಭಾವದಿಂದಲೇ ಅಂಗೀಕರಿಸಬೇಕು. ಹಾಗೆ ಅವರು ಒಪ್ಪಿ ನಡೆದುಕೊಂಡರೆ ಕೂಡಲೇ ನಾವು ನಮ್ಮ ಪ್ರತಿನಿಧಿಗಳೂ ಅವರ ಪ್ರತಿನಿಧಿಗಳೂ ಒಂದು ಕಡೆ ಕಲೆತು ತಾತ್ಕಾಲಿಕ ಸಂಧಿಯನ್ನೇರ್ಪಡಿಸಿಕೊಳ್ಳಲೂ, ಅದು ನಡೆದ ಮೇಲೆ ಶಾಶ್ವತ ಸಂಧಿಯೇರ್ಪಾಡಿಗೂ ನಾವು ತಕ್ಕ ಯತ್ನವನ್ನು ಮಾಡುವೆವು ಎಂದು ತಿಳಿಯಪಡಿಸಿದ್ದಾರೆ. ಇದಕ್ಕೆ ಅಮೀರರ ಉತ್ತರವು ಇನ್ನೂ ಬಂದಿತೋ ಇಲ್ಲವೋ ಅದು ಪ್ರಕಟಿತವಾಗಿಲ್ಲ. ಯುದ್ಧವು ಮಾತ್ರ ಸಾಮಾನ್ಯವಾಗಿ ನಡೆಯುತ್ತಲೇ ಇದೆ. ಕೆಲ ಆಫ್ಘನ್ ಸೇನಾಪತಿಗಳಿಗೆ ಯುದ್ಧವನ್ನು ನಿಲ್ಲಿಸಿಬಿಡಿರೆಂದು ಅಮೀರರ ಕಡೆಯ ಆಜ್ಞಾಪತ್ರಗಳು ಬಂದಿವೆಯೆಂದು ಪ್ರಕಟಿತವಾಗಿದೆ.

ಪತ್ರವ್ಯವಹಾರ.

ಕಾಶೀ ವಿದ್ಯಾರ್ಥಿಮಂದಿರ.

ಈ ವರ್ಷ ಕಾಶೀಕ್ಷೇತ್ರದಲ್ಲಿರುವ ನಮ್ಮ ವೀರಶೈವ ವಿದ್ಯಾರ್ಥಿ ಮಂದಿರದಿಂದ ಕೆಳಗೆ ಬರೆದವರು ಈ ವರ್ಷ ಕಲ್ಕತ್ತಾ ಮತ್ತು ಬನಾರಸ್ ಸಂಸ್ಕೃತ ಕಾಲೇಜುಗಳಲ್ಲಿ ಆಯಾಯ ಶಾಸ್ತ್ರಗಳಲ್ಲಿ ಪ್ಯಾಸಾಗಿರುವರು. ಕಲ್ಕತ್ತಾ ಗೌರ್ನಮೆಂಟ್ ಕಾಲೇಜದಿಂದ ಸಾಂಖ್ಯತೀರ್ಥದಲ್ಲಿ—೧. ಜಗದೀಶಶಾಸ್ತ್ರಿಗಳು ಸೊಲ್ಲಾಪುರ. ಕಾವ್ಯತೀರ್ಥದಲ್ಲಿ—೧. ಮಲ್ಲಿನಾಥದೇವರು ೨. ಸಂಗಮೇಶ್ವರಶಾಸ್ತ್ರಿಗಳು ಸೊಲ್ಲಾಪುರ. ನ್ಯಾಯಮಧ್ಯಮ—೧. ಸಂಗಮೇಶ್ವರಶಾಸ್ತ್ರಿಗಳು ಸೊಲ್ಲಾಪುರ. ಕಾವ್ಯಮಧ್ಯಮದಲ್ಲಿ—೧. ಸಂಗಮೇಶ್ವರಶಾಸ್ತ್ರಿಗಳು ಮಸಗುಪ್ಪಿ. ವ್ಯಾಕರಣ ಆದ್ಯದಲ್ಲಿ—೧. ಬಸವರಾಜಶಾಸ್ತ್ರಿಗಳು ಪಗಡದಿನ್ನಿ. ಬನಾರಸ ಗೌರ್ನಮೆಂಟ್ ಕಾಲೇಜದಿಂದ ನ್ಯಾಯಮಧ್ಯಮದಲ್ಲಿ ಗೌರೀಶಂಕರಶಾಸ್ತ್ರಿಗಳು ಕಾವ್ಯ ಸಾಂಖ್ಯತೀರ್ಥ. ತಿಲಭಾಂಡೇಶ್ವರ ಬನಾರಸ್‌ಸಿಟಿ.

ಈ ಸೀಮೆಯ ವೀರಶೈವರಲ್ಲಿ ಪ್ರಸಿದ್ಧರಾದ ಶ್ರೀಮಂತ ರಾಜಾ ಶಿವಶಂಕರರಾವ್ ನಾ॥ ಗ್ರಾ॥ ಉಮ್ಮಳೀ ಚೆಳ್ಳಿಗನೂರು ಇವರಿಗೆ ರಾ॥ ಗದಾರ ಮ॥ ಶಾ॥ ವರ್ಷಸಗೌಡರು ತಮ್ಮ ಸುಪುತ್ರಿಯಾದ ಸೌ॥ ಕೌ॥ ವೀರಮ್ಮನವರನ್ನು ಕೊಟ್ಟು, ಸ್ವಗೃಹದಲ್ಲಿ ಇದೇ ಸಿ॥ ನಾ॥ ಸಂ॥ ವೈ॥ ಕೃ॥ ೧೨ ಚಂದ್ರವಾರ ಮಿಥುನಲಗ್ನದಲ್ಲಿ ನಾಯಕಲ್ಲು ವೇ॥ ಬಸವರಾಜಶಾಸ್ತ್ರಿಗಳಿಂದ ವಿದ್ಯಾವಿಹೀನತೆಯಿಂದ ರೂಢಿಯಲ್ಲಿ ಬಂದ ನಿಷಿದ್ಧ ಕರ್ಮಗಳನ್ನು ದೂರ ಮಾಡಿ, ಶಾಸ್ತ್ರೋಕ್ತವಿಧಿಯಿಂದಲೇ ಲಗ್ನಕಾರ್ಯವನ್ನೆಲ್ಲಾ ನೆರವೇರಿಸಿ ಮಾರನೆ ದಿನ ಅಂದರೆ ಮಂಗಳವಾರ ೩ ಘಂಟೆಯಲ್ಲಿ ವಿಪ್ರಮುಖರೊಡನೆ ತಳಿರುತೋರಣದಿಂದಲಂಕೃತವಾದ ವಿವಾಹಮಂಟಪದಲ್ಲಿ ಸಭೆಯನ್ನೇರ್ಪಡಿಸಿದ ಬಳಿಕ ಸದರಿ ಶಾಸ್ತ್ರಿಗಳು ದೀಕ್ಷಾ ಲಗ್ನ ಗರ್ಭಾಧಾನ ಮುಂತಾದ ಕಾರ್ಯಗಳನ್ನು ವಿಧ್ಯುಕ್ತವಾಗಿ ನೆರವೇರಿಸಬೇಕೆಂಬದಾಗಿ ಯುಕ್ತಿಯುಕ್ತವಾಗಿಯೂ ಸಪ್ರಮಾಣವಾಗಿಯೂ ಸಂಭಾಷಣಮಾಡಿದಬಳಿಕ ನಾಯಕಲ್ಲು ಹೋ॥ ನಾ॥ ಸಂಗಾರೆಡ್ಡಿ ಇವರು ಮೈಸೂರು ಮಠೋದ್ಧಾರಕರಾದ ಕೈ॥ ವೈ॥ ಯಜಮಾನರಾದ ವೀರಸಂಗಪ್ಪನವರ ಹೆಸರಿನಮೇಲೆ ಅಗ್ರತಾಂಬೂಲ ತೆಗೆಯುವಂತೆ ಸೂಚಿಸಲು ಸದರಿ ಶ್ರೀಮಂತರು ಅನುಮತಿಕೊಟ್ಟದಲ್ಲದೆ ಮೇಲ್ಕಂಡ ಯಜಮಾನರ ಸ್ಮಾರಕಫಂಡಿಗೆ ೨ರೂ. ಮತ್ತು ಶಿವಯೋಗಮಂದಿರಕ್ಕೆ ೨ರೂ. ರವಾನಿಸುವಂತೆ ಶಾಸ್ತ್ರಿಗಳಿಗೆ ಒಪ್ಪಿಸಿದರು. ಪ್ರತ್ಯಕ್ಷದರ್ಶಿ.

[ಮೇಲ್ಕಂಡ ೨ ರೂ. ಬಂದಿವೆ. ಪ. ಪ್ರ.]

ಶ್ರೀ ಕೆಳದೀ ಪಟ್ಟದಸ್ವಾಮಿಗಳ ಶಿವೈಕ್ಯ.

ಶ್ರೀಮತ್ ಮಹಾ ಕೆಳದಿ ಸಂಸ್ಥಾನದ ಹಿರೇಮಠದ ಪಟ್ಟಾಧ್ಯಕ್ಷರು ವೈಶಾಖ ಬಹುಳ ಅಮಾವಾಸ್ಯೆ ಗುರುವಾರ ಸುಮಾರು ೧೦ ಘಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲಿಕ್ಕೆ ಬಹಳ ವಿಷಾದವಾಗುತ್ತದೆ. ಇವರು ಲಿಂಗೈಕ್ಯರಾಗುವದು ೮ ದಿವಸಗಳಿರುವಾಗ ಕಾಯಿಲೆಯು ಪ್ರಾರಂಭವಾಯಿತು. ಕಾಯಿಲೆಯಾದಂದಿನಿಂದ ಶ್ರೀಗಳವರು ಪ್ರಾಪಂಚಿಕ ವ್ಯಾಪಾರಗಳನ್ನೆಲ್ಲಾ ಬಿಟ್ಟು ಯಾವಾಗಲೂ ಶಿವಧ್ಯಾನದಲ್ಲಿಯೇ ಮಗ್ನರಾಗಿರುತ್ತಿದ್ದರು. ಇವರು ಗುರುವಾರ ಪ್ರಾತಃಕಾಲಕ್ಕೆ ಸ್ನಾನಾದಿ ನಿತ್ಯಕರ್ಮಗಳನ್ನು ಜರುಗಿಸಿ ಸುಮಾರು ೭॥ ಘಂಟೆಗೆ ಹೊರಕ್ಕೆ ದಯಮಾಡಿಸಿದವರು ಆಡಮಾಡದೆ ಮತ್ತೆ ಸ್ನಾನಕ್ಕೆ ಹೋಗಿ ಸ್ನಾನಮಾಡಿ ತಮ್ಮ ಅನುಷ್ಠಾನಗೃಹಕ್ಕೆ ದಯಮಾಡಿಸಿ ತಮ್ಮ ನಿತ್ಯ ಕರ್ಮಗಳನ್ನು ವಿಧ್ಯುಕ್ತವಾಗಿ ನೆರವೇರಿಸಿ, ಗುತ್ತಲದ ಶ್ರೀಗಳವರ ಪಾದತೀರ್ಥವನ್ನು ಸ್ವೀಕರಿಸಿ ಸ್ವಲ್ಪ ಪ್ರಸಾದವನ್ನು ತೆಗೆದುಕೊಂಡು ಎಲ್ಲಾ ಕ್ರಮಗಳನ್ನೂ ಮುಗಿಸಿದ ಬಳಿಕ ಶಿವಾರ್ಚನೆಗೆ ಕೂತಿದ್ದ ಸ್ಥಳದಲ್ಲಿಯೇ ಕೂತುಕೊಂಡು ಗುತ್ತಲದ ಶ್ರೀಗಳವರಿಗೆ ತಮ್ಮ ಮುಂಭಾಗದ ಆಸನದಲ್ಲಿ ಮುಹೂರ್ತಮಾಡಿಸಿ ಹಸ್ತಾಂಜಲಿ ಬದ್ಧರಾಗಿ ತಮ್ಮ ಅವಸಾನಕಾಲವು ಸಮೀಪಿಸಿತೆಂದೂ, ತಮ್ಮ ಅಪರಾಧವನ್ನು ಕ್ಷಮಿಸಿ ತಮ್ಮನ್ನು ಉದ್ಧರಿಸಬೇಕೆಂದೂ ಶ್ರೀಗಳವರ ಪಾದಕ್ಕೆರಗಿದರು. ಸ್ವಾಮಿಗಳಿಂದ ವರದಹಸ್ತವು ಮಸ್ತಕದಮೇಲೆ ಬರುವವರೆಗೆ ಮೇಲಕ್ಕೇಳಲಿಲ್ಲ. ಆಮೇಲೆ ಶ್ರೀಗಳವರ ಕಡೆಯಿಂದ ತಾರಕೋಪದೇಶವನ್ನು ಹೊಂದಿ ದೇಹಕ್ಕೆ ಪ್ರಣವಸಂಬಂಧವನ್ನು ಮಾಡಿಸಿಕೊಂಡು ಶ್ರೀಗಳವರಿಗೆ ನನ್ನ ದೇಹವನ್ನು ಮೊದಲೇ ಗೊತ್ತುಮಾಡಿದ ಗದ್ದಿಗೆ ಮನೆಯಲ್ಲಿಯೇ ಸಮಾಧಿಮಾಡಬೇಕೆಂತಲೂ, ವಾದ್ಯಘೋಷ ವಗೈರೆ ವೈಭವಗಳನ್ನು ಮಾಡಕೂಡದೆಂತಲೂ ಆಜ್ಞೆಮಾಡಿಕೊಂಡು [illegible] ಶಿವಘೋಷದೊಡನೆ ಶಿವಸ್ಮರಣೆಯನ್ನು ಮಾಡುತ್ತ ಶಿವಸಾನ್ನಿಧ್ಯವನ್ನು ಹೊಂದಿದರು. ಇವರು ಮಲೆನಾಡಿನವರಾದಾಗ್ಯೂ, ಮಹಾಸಭೆಗಳಿಗೂ ಶಿವಯೋಗಮಂದಿರ, ಬಳ್ಳಾರಿ ಬೆಂಗಳೂರು ಧಾರವಾಡ ಜಿಲ್ಲಾ ಬಿಜಾಪುರ ಜಿಲ್ಲಾ ಮುಂತಾದ ಕಡೆಗಳಿಗೂ ಸಂಚರಿಸಿ ಧಾರ್ಮಿಕ ಹಾಗೂ ವಿದ್ಯಾವಿಷಯಕವಾಗಿ ಉಪನ್ಯಾಸಗಳನ್ನು ಕೊಟ್ಟು ಜನರಲ್ಲಿ ಜಾಗ್ರತೆಯನ್ನು ಹುಟ್ಟಿಸುತ್ತಿದ್ದರು. ಇವರು ಕೆಳದಿಯಲ್ಲಿ ತಮ್ಮದೊಂದು ಉಪನ್ಯಾಸದಲ್ಲಿ ಹೇಳಿದ್ದೇನೆಂದರೆ ಎಲ್ಲಿ ಪ್ರಿಯ ಶಿಷ್ಯರೇ ತನುವನ್ನು ಸಮಾಜವೆಂಬ ಗುರುವಿಗೂ ಮನವನ್ನು ಲಿಂಗವೆಂಬ ಬೋಧಕ ಗುರುವಿಗೂ, ಧನವನ್ನು ಸಮಾಜಫಂಡೆಂಬ ಜಂಗಮ ಗುರುವಿಗೂ ದಾನಮಾಡಿರೆಂದು ಬೋಧಿಸುತ್ತಿದ್ದರಲ್ಲದೆ ಸ್ವತಃ ತಾವೂ ಹಾಗೆಮಾಡಿ ತೋರಿಸುತ್ತಿದ್ದರು. ಇವರ ಕಾಲಕ್ಕೆ ಮಠವು ಒಳ್ಳೇ ಅಭಿವೃದ್ಧಿಸ್ಥಿತಿಗೆ ಬಂದಿತ್ತು. ಮಠದ ವಾರ್ಷಿಕ ಉತ್ಪನ್ನವು ಸುಮಾರು ೬-೭ ಸಾವಿರವಿದ್ದು ಇದೆಲ್ಲ ಬಡವಿದ್ಯಾರ್ಥಿಗಳಿಗೂ ಪರೋಪಕಾರಕ್ಕೂ ಧರ್ಮಕಾರ್ಯಕ್ಕೂ ವಿನಿಯೋಗವಾಗುತ್ತಿತ್ತು. ಇವರು ಕೇವಲ ಸಾತ್ವಿಕರೂ ಸದಾಚಾರ ಧುರಂಧರರೂ ತಪಸ್ವಿಗಳೂ ಆಗಿದ್ದರು. ಇವರು ಶಿವಮೊಗ್ಗಾ ಸ್ಟೂಡೆಂಟ್ಸ್ ಹೋಮಿನ ಸಂಬಂಧದಿಂದ ಎಲ್ಲರ ಕಡೆಗೆ ಸಂಚರಿಸಿ ಬಹಳ ಹಣವನ್ನು ಶೇಖರಿಸಿ ಕೊಟ್ಟರಲ್ಲದೆ ಇವರಿಂದಲೂ ಬಹು ದೊಡ್ಡ ರಕಂ ಮುಟ್ಟಿರುತ್ತದೆ. ಇವರ ವಯಸ್ಸು ೪೨. ಇವರಿಗೆ ಆಶ್ರಮವಾಗಿ ೩೭ ವರ್ಷವಾಗಿರುತ್ತದೆ. ಕೆಳದೀ ಸಂಸ್ಥಾನ ಹಿರೇಮಠದ ಏಜಂಟುದಾರ ಸಾಗರಕೆರೆ ಕೋಡಿ ಮಠದ ಗುರುಲಿಂಗಯ್ಯನವರು.

ದಾವಣಗೆರೆ.

ಮೈಸೂರು ಸೀಮೆಯವರಾದ ವೀರಶೈವ ಬಡವಿದ್ಯಾರ್ಥಿಗಳಿಗೆ ಸೂಚನೆ:—

೧. ಚಿತ್ರದುರ್ಗ ಶಿವಮೊಗ್ಗ ಡಿಸ್ಟ್ರಿಕ್ಟುಗಳ ಹೈಸ್ಕೂಲುಗಳಲ್ಲಿ ವಿದ್ಯಾಭ್ಯಾಸಮಾಡುವ ಸದರಿ ಡಿಸ್ಟ್ರಿಕ್ಟುಗಳ ವಿದ್ಯಾರ್ಥಿಗಳಿಗೂ ಮತ್ತು ಕಾಲೇಜುಗಳಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೂ ಸಹ ಸ್ಕಾಲರ್‌ಶಿಪ್ ದೊರೆಯುತ್ತದೆ. ೨. ಚಿತ್ರದುರ್ಗ ಶಿವಮೊಗ್ಗ ಕಡೂರು ಮತ್ತು ತುಂಕೂರು ಡಿಸ್ಟ್ರಿಕ್ಟುಗಳ ವಿದ್ಯಾರ್ಥಿಗಳು ದಾವಣಗೆರೆ ಅಪ್ಪರ್‌ಸೆಕೆಂಡರಿ ಕ್ಲಾಸಿನಲ್ಲಿ ಸೇರಿ ಅಭ್ಯಾಸಮಾಡತಕ್ಕವರಿಗೆ ಪುಸ್ತಕಗಳ ಸಹಾಯವು ದೊರೆಯುತ್ತದೆ. ೩. ವಿದ್ಯಾರ್ಥಿಗಳು ಅಪ್ಲಿಕೇಷನ್ನಲ್ಲಿ ಸಂಪೂರ್ಣ ವಿಳಾಸ ಮತ್ತು ವಯಸ್ಸು ವಗೈರೆ ಬರೆಯತಕ್ಕದ್ದು. ೪. ತಾವು ಕೇವಲ ಬಡವರೆಂಬುದಕ್ಕೆ ತಮ್ಮ ಗ್ರಾಮದ ಮುಖ್ಯ ಮಹಾಜನರಿಂದ ಸರಟಿಫಿಕೇಟ್ ಮಾಡಿಸಿ ತಿಳಿಸತಕ್ಕದ್ದು. ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯು ಫಂಡಿನ ನೇಮಗಳಿಗೆ ಒಳಪಟ್ಟಿರತಕ್ಕದ್ದು. ೫. ಈ ಫಂಡಿನ ಸಹಾಯವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳು ಈ ಮಾಹೆ ತಾ॥ ೨೫ ರೊಳಗಾಗಿ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು.

ದಾವಣಗೆರೆ.
3-6-1919.
ಸೆಕ್ರೆಟರಿ.
ವೀರಶೈವ ವಿದ್ಯಾವರ್ಧಕಸಂಘದ ಫಂಡ್,
ದಾವಣಗೆರೆ

ನೋಟೀಸ್.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಜನರಲ್ ಕಮಿಟಿಯ ಮೀಟಿಂಗು 1919 ನೇ ಇಸವಿ ಜೂನ್ ತಾ॥ 29 ನೆ ಭಾನುವಾರ ಸಾಯಂಕಾಲ 5 ಘಂಟೆಗೆ ಸರಿಯಾಗಿ ಬೆಂಗಳೂರಲ್ಲಿರುವ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ನಡೆಯಬೇಕೆಂದು ನಿರ್ಧರವಾಗಿರುವದರಿಂದ ತಾವು ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

ಮೀಟಿಂಗಿನಲ್ಲಿನ ವಿಷಯಗಳು.

(1) ಆಡಿಟರುಗಳ ರಿಪೋರ್ಟ್, (2) ಸೆಕ್ರೆಟರಿಯವರ ರಿಪೋರ್ಟ್, (3) ಲಿಸ್ಟ—ಕಳೆದ ಜನರಲ್ ಕಮಿಟಿ ಮೀಟಿಂಗು ತಾ॥ 9-6-1918 ರಿಂದ ತಾ॥ 29-6-1919 ರ ವರಿಗೆ, (4) 1919 ನೇ ಮೈಸೂರು ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಫಂಡ್ ಸಭೆಯ ಪರವಾಗಿ ಮೆಂಬರನ್ನು ಚುನಾಯಿಸುವದು. (5) ಆಫೀಸ್ ಬೇರರ್ಸ್ಸನ್ನೂ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳನ್ನೂ ಚುನಾಯಿಸುವದು. (6) ಇತರ ವಿಷಯಗಳು (ಯಾವದಾದರೂ ಮೆಂಬರುಗಳಿಂದ ಮೀಟಿಂಗಿನಲ್ಲಿ ಇಡಲ್ಪಟ್ಟರೆ).

ಬೆಂಗಳೂರು.
28.5.19.
ಜಿ. ಪರಮಶಿವಯ್ಯ, ಬಿ. ಎ., ಎಲ್ ಎಲ್. ಬಿ.
ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆ.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ)

1 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 28

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕ ಬಿಸಿಥಿ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

19 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಜೂನ್ ತಾ॥ ೧೫ ರಿಂದ ೧೯೧೯ ನೆಯ ಜೂನ್ ತಾ॥ ೨೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಜ್ಯೇಷ್ಠ ಬ॥ ಬಿದಿಗೆಯಿಂದ ಜ್ಯೇಷ್ಠ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
15	ಭಾನು	ಬಿದಿಗೆ	42-33	ಪೂಷಾ	5-20	1
16	ಸೋಮ	ತದಿಗೆ	43-36	ಉಷಾ	55-4	2
17	ಮಂಗಳ	ಚೌತಿ	43-22	ಶ್ರವಣ	56-2	3
18	ಬುಧ	ಪಂಚ	41-52	ಧನಿಷ್ಠ	56-11	4
19	[1] ಗುರು	ಷಷ್ಠಿ	38-55	ಶತಭಿಷ	55-8	5
20	ಶುಕ್ರ	ಸಪ್ತಮಿ	35-32	ಪೂಭಾ	53-7	6
21	ಶನಿ	ಅಷ್ಟಮಿ	30-57	ಉಭಾ	50-13	7

(1) ವಾಣೀವಿಲಾಸದವರ ವರ್ಧಂತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವ ನತ್ಯಾತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರಾಮ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪುರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಜೂನ್ ತಾರೀಖು ೨೨ ನೆಯ ಭಾನುವಾರ. (ಸಂಚಿಕೆ ೨೫

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ, ಜಂಗಮರ [illegible] ಳನ್ನೂ ನಿರೂಪಿಸುವ ಶಿವನಿಕ್ಷ್ಯ ಪ್ರಶ್ನೆಯನ್ನು ದೃಢಪಟ್ಟಿರುವುದು. ಪ್ರಪಂಚಕ್ಕೆ ಅದ್ಭುತಪೂರ್ವವಾದ [illegible] ಶಿವವನ್ನೂ ನಷ್ಟವನ್ನೂ ಉಂಟುಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟ ತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
20 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಟೀಕ ಶತಕತ್ರಯ	೧—೦—೦
ಟೀಕ ವೀರಶೈವ ವಿವಾಹವಿಧಿ	೦—೮—೦
ವಪೂಜಾವಿಧಿ	೦—೧೦—೦
ಬಾರುಶೀಲಚರಿತ್ರೆ	೦—೫—೦
ವಾಸಿ	೦—೪—೦
ಪಂಚಕ	೦—೨—೦
ಲವಿದ್ಯಾ (ಮುಕ್ತಿಸಾಧನ)	೦—೨—೦
ಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿ ರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	0—12—0.
12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ, ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
20 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

37 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

27

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರುಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸ್ತವ್ಯ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ॥ ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ಸೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
27 ವೈದ್ಯಶಾಲಾ, ಮೈಸೂರು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚೆನ್ನಾಗಿ ತಿಳಿಯುವಂತೆ ಬಹು ಯುಕ್ತಿಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

23 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಎ. ಎ. ಎಸ್. ಪಾಣಿ ಅಂಡ್ ಕೊ,
20 ಸಾಹುಕಾರಪೇಟೆ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜೂನ್ ತಾ|| ೨೨ ನೆಯ ಭಾನುವಾರ.

ಬೆಳ್ಳಿಯ ನಾಣ್ಯಗಳ ಕೊರತೆ.

ದೇಶದಲ್ಲಿ ಈಚೀಚೆಗೆ ಬೆಳ್ಳಿಯ ಬೆಲೆಯು ಹೆಚ್ಚಿಕೊಂಡಿರುವುದಲ್ಲದೆ ಬೆಳ್ಳಿಯ ನಾಣ್ಯಗಳಿಗೆ ಕೊರತೆಯು ವಿಶೇಷವಾಗಿ ಸಂಭವಿಸಿ, ಅದಕ್ಕೆ ಪ್ರತಿಯಾಗಿ ಪ್ರಭುತ್ವದವರು ವ್ಯವಹಾರಕ್ಕೆ ಒದಗಿಸಿಕೊಟ್ಟಿರುವ ೧ ರೂ. ೨|| ರೂ. ನ ನೋಟುಗಳನ್ನು ಬಳಸುವಲ್ಲಿ ಪ್ರಜೆಗಳು ಎಷ್ಟು ಕಷ್ಟನಷ್ಟಗಳನ್ನನುಭವಿಸುತ್ತಿರುವರೆಂಬುದು ಸರ್ವರಿಗೂ ಅನುಭವವಿದಿತವಾಗಿರುವುದರಿಂದ ನಾವು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ. ಬೆಳ್ಳಿಯ ಕೊರತೆಯು ಪ್ರಪಂಚಕ್ಕೆಲ್ಲಾ ತೊಂದರೆಯನ್ನು ತಂದಿಕ್ಕಿದೆ. "ನಾರ್ತ್ ಚೈನಾಹೆರಾಲ್ಡ್" ಎಂಬ ಪತ್ರಿಕೆಯಲ್ಲಿ ಬೆಳ್ಳಿಗೆ ಈಗ ಬೆಲೆಯು ಹೆಚ್ಚಿಕೊಂಡಿರುವುದರ ಕಾರಣವು ದೀರ್ಘವಾದ ಲೇಖನದಿಂದ ವಿವರಿಸಲ್ಪಟ್ಟಿದೆ. ಅದನ್ನು ನೋಡುವಲ್ಲಿ ಬೆಳ್ಳಿಯ ಬೆಲೆಯು ಈಗಳೇ ಇಳಿಯುವಂತೆ ಕಾಣುವುದಿಲ್ಲ. ಮತ್ತಷ್ಟು ಹೆಚ್ಚಲೇಬಹುದು. ಪೂರ್ವದಂತೆ ತೊಲಾ ೧ಕ್ಕೆ ೮-೧೦ ಆಣೆಯ ಬೆಲೆಗೆ ಅದು ಇಳಿಯುವ ಸಂಭವವೇ ತೋರುವುದಿಲ್ಲ. ಬೆಳ್ಳಿಯ ಹೆಚ್ಚು ಬೆಲೆಗೆ ಕಾರಣವನ್ನು ಆ ಪತ್ರಿಕೆಯ ತಿಳಿಸಿರುವುದೇನೆಂದರೆ—೧೯೧೬-೧೭ ನೆ ವರ್ಷದಲ್ಲಿ ಯುದ್ಧವು ನಡೆಯುತ್ತಿದ್ದ ದೇಶಗಳೊಳಗೆ ಚಿನ್ನದ ನಾಣ್ಯಗಳ ಬಳಕೆಯನ್ನು ತಪ್ಪಿಸಿಬಿಟ್ಟುದರಿಂದ ಬೆಳ್ಳಿಯ ನಾಣ್ಯಗಳನ್ನು ಎರಕಹೊಯ್ಯುವುದಕ್ಕಾಗಿ ಟಂಕಸಾಲೆಗೆ ಬೆಳ್ಳಿಯು ಹೆಚ್ಚು ಹೆಚ್ಚಾಗಿ ಬೇಕಾಯಿತು. ಅದರ ಮೇಲೆ ೧೯೧೫ ನೆ ವರ್ಷದಾರಭ್ಯ ಈಚೆಗೆ ಪ್ರಪಂಚದಲ್ಲಿ ವರ್ಷೇವರ್ಷೇ ಭೂಗರ್ಭದಿಂದ ಉತ್ಪತ್ತಿಯಾಗುತ್ತ ಬಂದ ಈ ರಜತಲೋಹಕ್ಕಿಂತಲೂ ಎರಕ ಹೊಯ್ಯುವ ಬೆಳ್ಳಿಯ ಪರಿಮಿತಿಯು ಹೆಚ್ಚಾಗುತ್ತ ಬಂದಿತು. ಕೆಲವು ಕಾಲ ಹೀಗಾಗಬೇಕಾದುದು ದುರ್ನಿವಾರವೆಂಬುದನ್ನು ಅಧಿಕಾರಿಗಳು ತಿಳಿದುಕೊಂಡಿರುವರು. ಹೆಚ್ಚು ಹೆಚ್ಚಾಗಿ ಈ ಬೆಳ್ಳಿಯ ನಾಣ್ಯಗಳು ಅಣಿಮಾಡಲ್ಪಟ್ಟರೂ, ಇವು ಪ್ರಪಂಚದ ಜನರಿಗೆ ಎಷ್ಟುಮಟ್ಟಿಗೆಬೇಕೋ ಅಷ್ಟಕ್ಕೆ ಅವು ಸಾಲವು. ಸಮುದ್ರದಲ್ಲಿ ಒಂದು ಬಟ್ಟಿನಷ್ಟು ಮಾತ್ರವೇ ಎಂದು ತಿಳಿಯಬೇಕು. ೧೯೧೭ ನೆ ವರ್ಷದ ಬೇಸಗೆಯಲ್ಲಿ ಮತ್ತೊಂದು ತೊಂದರೆಯು ಸಂಭವಿಸಿತು. ಅದೇನೆಂದರೆ—ಅಮೇರಿಕಾ ಮೊದಲಾದ ದೇಶಗಳು ಭರತಖಂಡದಿಂದಲೂ ಚೀನಾದೇಶದಿಂದಲೂ ಕೊಂಡುಕೊಂಡ ಸರಕುಗಳಿಗಾಗಿ ಹಣವನ್ನು ಕೊಡುವುದಕ್ಕೆ ಬಹಳ ಬೆಳ್ಳಿಯು ಅವರಿಗೆ ಬೇಕಾಯಿತು. ೧೯೧೮ ನೆ ವರ್ಷದಲ್ಲಿ ಅಮೇರಿಕಾದಿಂದ ಅಧಿಕವಾಗಿ ಹೊರಕ್ಕೆ ಸಾಗಿಹೋದ ಬೆಳ್ಳಿಯಲ್ಲಿ ೧೦೦ ಕ್ಕೆ ೮೦ ಪಾಲಿನಷ್ಟು ಭರತಖಂಡಕ್ಕೂ ಚೀನಾಕ್ಕೂ ಕೊಡಬೇಕಾದ ಹಣಕ್ಕಾಗಿಯೇ ಸಂದಿರುವುದು. ಎಂದರೆ ೧೯೧೮ ನೆ ವರ್ಷದಲ್ಲಿ ಅವರು ಪೂರ್ವದೇಶಗಳಿಂದ ತರಿಸಿಕೊಂಡ ಸಾಮಗ್ರಿಗಳಿಗಾಗಿಯೇ ೨೮೩೬೭೯೧೨೯ ಡಾಲರಿನಷ್ಟನ್ನು ಕೊಟ್ಟಿರುವರು. ಯುದ್ಧಕಾಲಕ್ಕೆ ಮುಂಚೆ ಅಮೇರಿಕನ್ನರು ಭರತಖಂಡದ ವ್ಯಾಪಾರಕ್ಕಾಗಿ ವರ್ಷ ೧ ಕ್ಕೆ ವಿನಿಯೋಗಿಸುತ್ತಿದ್ದುದು ಈ ಮೇಲೆ ಕಂಡ ಮೊತ್ತದಲ್ಲಿ ೧೦೦ ಕ್ಕೆ ೬೦ ರಷ್ಟು ಮಾತ್ರವಾಗಿರುತ್ತಿದ್ದಿತು. ಆ ಕಾಲದಲ್ಲಿ ಇಂಥ ಹಣವನ್ನೆಲ್ಲಾ ಲಂಡನ್ ಪಟ್ಟಣದ ದ್ವಾರಾ ಸಲ್ಲಿಸುತ್ತಿದ್ದರು. ಎಂದರೆ ಭಾರತೀಯರು ಇಂಗ್ಲಾಂಡಿಗೂ, ಅಮೇರಿಕನ್ನರು ಭರತಖಂಡಕ್ಕೂ ಹಣವನ್ನು ಸಲ್ಲಿಸಬೇಕಾದವರಾಗಿರುತ್ತಿದ್ದುದರಿಂದ, ಅಮೇರಿಕನ್ನರು ಭಾರತೀಯರಿಗೆ ಸಲ್ಲಿಸಬೇಕಾದುದನ್ನು ಲಂಡನ್ನಿನಲ್ಲಿರುವ ಇಂಗ್ಲೀಷರಿಗೆ ಈ ಭಾರತೀಯರು ಸಲ್ಲಿಸಬೇಕಾದುದಕ್ಕೆ ಅಲ್ಲಿಯೇ ಸಲ್ಲಿಸಿ ಹೀಗೆ ಪರಸ್ಪರ ಲೆಕ್ಕವನ್ನು ಸರಿಮಾಡಿಕೊಳ್ಳುತ್ತಿದ್ದರು. ೧೯೧೮ ನೆ ವರ್ಷದಲ್ಲಿ ಈ ಲೋಹಕ್ಕೆ ಉಂಟಾದಷ್ಟು ಪ್ರಾಮುಖ್ಯವು ಪ್ರಪಂಚದ ಚರಿತ್ರೆಯಲ್ಲಿ ಮತ್ತಾವಾಗಲೂ ಸಂಭವಿಸಿದ್ದಂತೆ ಕಾಣುವುದಿಲ್ಲ. ೧೮೯೧ ನೆ ವರ್ಷದಿಂದ ಈಚೆಗೆ ೧೯೧೮ ವರ್ಷದಲ್ಲಿ ಉತ್ಪತ್ತಿಯಾದಷ್ಟು ಕಡಿಮೆ ತೂಕದ ಬೆಳ್ಳಿಯು ಮತ್ತಾವಾಗಲೂ ಹುಟ್ಟಿದುದಿಲ್ಲ. ಹೀಗೆ ಉತ್ಪತ್ತಿಯು ಕಡಿಮೆಯಾದುದರ ಜತೆಗೆ ಬೆಳ್ಳಿಗೆ ಗಿರಾಕಿಯು ಹೆಚ್ಚಿಕೊಂಡುದೂ ಸೇರಿಕೊಂಡು, ಅದರ ಬೆಲೆಯು ಮಿತಿಮೀರಿ ಹೋಗಲು ಕಾರಣವಾಯಿತು. ಆ ವರ್ಷ ಪ್ರಪಂಚದಲ್ಲೆಲ್ಲಾ ಬೆಳ್ಳಿಯು ೬೭೫೦೦೦೦೦೦ ಔನ್ಸು ಉಪಯೋಗಿಸಲ್ಪಟ್ಟಿದೆ. ಇಷ್ಟು ಬೆಳ್ಳಿಯ ಬಳಕೆಯು ಮತ್ತಾವ ವರ್ಷದಲ್ಲೂ ನಡೆದುದಿಲ್ಲ. ಆದರೆ ಉತ್ಪತ್ತಿಯು ಮಾತ್ರ ಹೆಚ್ಚಲಿಲ್ಲ. ಪ್ರತಿವರ್ಷದಲ್ಲೂ ಬೆಳ್ಳಿಯ ಉತ್ಪತ್ತಿಯು ಪ್ರಪಂಚದಲ್ಲೆಲ್ಲಾ ೨೦ ಕೋಟಿ ಔನ್ಸಿಗೆ ಕಡಿಮೆಯಿಲ್ಲದೆ ಆಗುತ್ತಿದ್ದುದು ಈಗ ೧೮-೧೯ ಕೋಟಿ ಔನ್ಸಿಗೆ ಇಳಿದುಹೋಗಿದೆ. ಇನ್ನೂ ಹೀಗೆಯೇ ಕಡಿಮೆಬಿದ್ದುಹೋಗಬಹುದೆಂಬ ಊಹೆಯುಂಟಾಗಿದೆ. ಅದುಕಾರಣ ಅಮೇರಿಕಾ ಮೊದಲಾದ ದೇಶಗಳವರು ತಮ್ಮ ಪರಿಶ್ರಾಮಿಕೋದ್ಯೋಗ ಮೊದಲಾದುವುಗಳಿಗೆ ಬೆಳ್ಳಿಯನ್ನು ಮೊದಲು ಉಪಯೋಗಿಸುತ್ತಿದ್ದುದರಲ್ಲಿ ಮುಕ್ಕಾಲು ಭಾಗದಷ್ಟನ್ನೇ ಉಪಯೋಗಿಸಿಕೊಳ್ಳಬೇಕೆಂದು ಈಗ ಕಟ್ಟುಸಿಟ್ಟನ್ನು ಮಾಡಿಕೊಂಡಿದ್ದಾರೆ. ಜರ್ಮನಿಗೆ ಬೆಳ್ಳಿಯನ್ನು ಕಳುಹಿಸಿ ಕೊಡಲೇ ಬಾರದೆಂದು ಕಟ್ಟಪ್ಪಣೆಮಾಡಿದ್ದಾರೆ. ಪ್ರಪಂಚದವರೆಲ್ಲಾ ಈ ಲೋಹವನ್ನು ಮಿತವಾಗಿ ಉಪಯೋಗಿಸುವ ಹೊತ್ತು ಬಂದಿರುತ್ತದೆ. ಅಮೇರಿಕಾದಲ್ಲಿ ಯುದ್ಧಾರಂಭವಾದಮೇಲೆ ಗೃಹಕೃತ್ಯಗಳಿಗೂ ಕೈಗಾರಿಕೆಗಳಿಗೂ ಬೆಳ್ಳಿಯನ್ನು ಉಪಯೋಗಿಸುವುದನ್ನು ನಿರ್ಬಂಧಾಜ್ಞೆಯಮೂಲಕ ತಪ್ಪಿಸಿಬಿಟ್ಟಿದ್ದರು. ಯುದ್ಧವು ನಿಂತುಹೋದ ಬಳಿಕ ಆ ನಿರ್ಬಂಧವು ತೊಲಗಿಸಲ್ಪಟ್ಟಿತು. ಹೊರಕ್ಕೆ ಬೆಳ್ಳಿಯನ್ನು ಸಾಗಿಸಕೂಡದೆಂಬ ನಿರ್ಬಂಧವನ್ನು ಕೂಡ ಅವರು ಆಗ ಮಾಡಿದ್ದರು. ಈಗತಾನೇ ಅದನ್ನೂ ತಪ್ಪಿಸಿದ್ದಾರೆ. ಆದರೇನು? ಅಲ್ಲಿಂದ ಹೊರಕ್ಕೆ ಬರುವ ಬೆಳ್ಳಿಯು ಕಡಿಮೆಯಾಗಿಯೂ ಗಿರಾಕಿಯು ಹೆಚ್ಚಾಗಿಯೂ ಇರುವುದರಿಂದ ಬೆಲೆಯು ಕಡಿಮೆಯಾಗುವುದೆಂಬ ಆಸೆಗೆ ಅವಕಾಶವಿರುವುದಿಲ್ಲ.

ಈ ಕಾರಣಗಳಿಂದ ಬೆಳ್ಳಿಯ ಬೆಲೆಹೆಚ್ಚುಗೆಯನ್ನು ಕಂಡು ಅದನ್ನು ಭಾರತೀಯರು ಆಭರಣಾದಿ ಸಾಮಗ್ರಿಗಳಿಗಾಗಿ ಕರಗಿಸುವುದು ಸ್ವಲ್ಪಮಟ್ಟಿಗೆ ಕಡಿಮೆಯಾಗಬಹುದಾದರೂ, ನಾಣ್ಯಗಳ ಬಳಕೆಗಾಗಿ ಅದು ನಮ್ಮ ಭರತಖಂಡಕ್ಕೆ ವಿಶೇಷವಾಗಿ ಬಂದೇ ತೀರಬೇಕಾಗಿದೆ. ಸರ್ಕಾರದವರು ೧-೨|| ರೂ. ನ ನೋಟುಗಳ ವ್ಯವಹಾರವನ್ನು ಮೂಲೆಗೊತ್ತಿ, ರೂ. ಗಳ ವ್ಯವಹಾರವನ್ನು ಪೂರ್ವದಂತೆ ಸಮೃದ್ಧವಾಗಿ ನಡೆಯಿಸಿಕೊಡುವುದು ಅತ್ಯಾವಶ್ಯಕವಾಗಿದೆ. ಬೆಳ್ಳಿಯ ಬೆಲೆಯು ಬಹಳ ಕಡಿಮೆಯಾಗಿದ್ದ ಕಾಲದಲ್ಲಿ ಅಖಂಡವಾಗಿ ಬಹುವರ್ಷ ಟಂಕಸಾಲೆಯ ಮೂಲಕ ಭರತಖಂಡದ ಸರ್ಕಾರದವರು ಬೆಳ್ಳಿಯ ನಾಣ್ಯಗಳ ಮುದ್ರಣದ ಮೂಲಕ ವಿಶೇಷಲಾಭವನ್ನು ಸಂಪಾದಿಸಿರುತ್ತಾರೆ. ಈಗ ಲಾಭವಿಲ್ಲದಿದ್ದರೂ ಅಸಲಿನ ಬೆಲೆಗಾದರೂ ಬೆಳ್ಳಿಯ ನಾಣ್ಯಗಳನ್ನು ಮುದ್ರಿಸಿ ಸಮೃದ್ಧವಾಗಿ ದೇಶಕ್ಕೆ ಉಪಯೋಗಿಸಿಕೊಡದಿದ್ದರೆ ಪ್ರಜೆಗಳ ಕಷ್ಟವು ಕೊನೆಗಾಣುವುದಿಲ್ಲ. ಇನ್ನು ಮುಂದೆ ಪ್ರಪಂಚದಲ್ಲಿ ಬೆಳ್ಳಿಯ ಉತ್ಪತ್ತಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಹೊಸದಾರಿಯೇನೆಂಬುದನ್ನು ಗೊತ್ತುಪಡಿಸುವುದೇ ಪ್ರಪಂಚದ ಮುಂದೆ ಮುಖ್ಯಸಮಸ್ಯೆಯಾಗಿ ಕುಳಿತುಕೊಂಡಿದೆ. ಅದು ಸಾಧಿಸಿದರೆ ಬೆಳ್ಳಿಯ ಕ್ಷಾಮವು ತಪ್ಪುವುದು. ಇಲ್ಲದಿದ್ದರೆ ನಮ್ಮ ನಾಣ್ಯಗಳಿಗೆ ಬೆಳ್ಳಿಯ ಸ್ಥಾನವು ಕೂಡ ತಪ್ಪಿ ಸಂಕರಲೋಹಗಳೇ ಗತಿಯಾದಾವೋ ಏನೋ ಎಂದು ಭಯಪಡಬೇಕಾಗುವುದು.

ಆಲಿಸೋದರರುಗಳು.

ಮಹಮ್ಮದಾಲಿ ಷೌಕತಾಲಿ ಎಂಬ ಇಬ್ಬರು ಮಹಮ್ಮದೀಯಸೋದರರು ದಿಲ್ಲಿಯಲ್ಲಿ ಕಾಮರೇಡ್ ಎಂಬ ಪತ್ರಿಕೆಯ ಸಂಪಾದಕರಾಗಿದ್ದು ರಾಜದ್ರೋಹಾಪರಾಧಕ್ಕೆ ಗುರಿಯಾಗಿ ೪-೫ ವರ್ಷಗಳ ಕೆಳಗೆ ನಿರ್ಬಂಧನಿವಾಸದಲ್ಲಿಡಲ್ಪಟ್ಟಿದ್ದರು. ಇವರು ಮತ್ತೆ ಏಪ್ರಿಲ್ ತಿಂಗಳಲ್ಲಿ - ಆಂಗ್ಲಪ್ರಭುತ್ವದವರು ಮಹಮ್ಮದೀಯರ ರಾಜ್ಯವಿಷಯವನ್ನು ಮುಸಲ್ಮಾನರ ಕೋರಿಕೆಯ ಪ್ರಕಾರ ನಡೆಯಿಸದಿದ್ದರೆ ಮಹಮ್ಮದೀಯರು ದೇಶಾಂತರಗತವಾಗುವುದೋ ಅಥವಾ ಕತ್ತಿಹಿಡಿದು ಹೋರಾಡುವುದೋ ಇವೆರಡರ ಹೊರತು ಉಪಾಯಾಂತರವೇನೂ ಇಲ್ಲ" ಎಂದು ಮೊದಲಾಗಿ ಬರೆದು [illegible] ಪತ್ರವನ್ನು ಪ್ರಕಟಿಸಕೂಡದೆಂದು ಇಂಡ್ಯಾಸರ್ಕಾರದವರು [illegible] ಜಿಲ್ಲಾ ರೂ ಗುಟ್ಟಾಗಿ ಅದನ್ನು ಭರತಖಂಡದ ಮಹಮ್ಮದೀಯರಲ್ಲೆಲ್ಲಾ [illegible]ವಾಗಿ ಮಾಡುವುದಕ್ಕೆ ಯತ್ನಿಸಿದರು. ಆದರೆ ವರ್ತಮಾನ ಪತ್ರಿಕೆಗಳಾವುವೂ [illegible] ದನ್ನು ಮುದ್ರಿಸಲಿಲ್ಲ. ಈ ಮಧ್ಯೆ ಈ ಸೋದರರುಗಳು ಮೇ ತಿಂಗಳಲ್ಲಿ ಚಿಂದ್ವಾರಾ ಡಿ|| ಕಮಿಷನರಿಗೆ ಒಂದು ಲೇಖನವನ್ನು ಬರೆದುಕೊಂಡು ಇನ್ನುಮುಂದೆ ನಾವುಗಳು ಸರ್ಕಾರದ ಆಜ್ಞೆಯಂತೆ ನಿರ್ಬಂಧವಾಸದಲ್ಲಿರಲಾರೆವೆಂದು ತಿಳಿಯಪಡಿಸಿದುದಲ್ಲದೆ, ಬಹಿರಂಗವಾಗಿ ಮಸೀದಿಗಳ ಗೋಡೆಗಳ ಮೇಲೆ ನಾವು ಸರ್ಕಾರಿ ಅಪ್ಪಣೆಯನ್ನು ಉಲ್ಲಂಘಿಸುತ್ತೇವೆಂದು ಬರೆದು ಪ್ರಕಟಿಸಿದರು. ಮತ್ತು ಅಫ್ಘನ್ ಯುದ್ಧವು ಆರಂಭಿಸಿದ ಬಳಿಕ, ಮಹಮ್ಮದೀಯರೆಲ್ಲರೂ ಅಫ್ಘನ್ ಅಮೀರರಿಗೆ ಸರ್ವವಿಧದ ಸಹಾಯವನ್ನೂ ಮಾಡಬೇಕೆಂದು ಮುಸಲ್ಮಾನರನ್ನು ಈ ಸಹೋದರರು ಪ್ರೇರಿಸಿದರೆಂಬುದಕ್ಕೆ ಸಾಕ್ಷ್ಯಗಳು ದೊರೆದಿರುತ್ತವೆ. ಆ ರೀತಿಯಲ್ಲಿ ಈ ಸೋದರರುಗಳು ಕೆಲ ವೃತ್ತಪತ್ರಿಕೆಗಳಿಗೂ ಮಹಮ್ಮದೀಯ ಪ್ರಮುಖರಿಗೂ ಬರೆದ ಲೇಖನಗಳು ಸಿಕ್ಕಿರುತ್ತವೆ. ಇಂಥ ಇನ್ನು ಕೆಲ ಕಾರಣಗಳಿಂದ ಈ ಸೋದರರುಗಳು ಆಂಗ್ಲಪ್ರಭುತ್ವದವರ ಮೇಲೆ ತೀವ್ರವಾಗಿ ದಂಡನ್ನೆಬ್ಬಿಸುವ ಪ್ರಯತ್ನವನ್ನು ಮಾಡುತ್ತಿರುವರೆಂಬುದು ಗೊತ್ತಾದುದರಿಂದ ಇಂಥವರು ಸ್ವೇಚ್ಛೆಯಿಂದ ನಡೆದುಕೊಳ್ಳಲು ಅವಕಾಶ ಕೊಡುವುದಾದರೆ ಪ್ರಮಾದವುಂಟಾಗುವುದೆಂದು ತಿಳಿದು ಇಂಡ್ಯಾ ಸರ್ಕಾರದವರು ೧೮೧೮ ನೆ ಸಂವತ್ಸರದ ೩ ನೆ ನಿಬಂಧನೆ ಪ್ರಕಾರ ಇವರುಗಳನ್ನು ಹಿಡಿದು ಸೆರೆಮನೆಯಲ್ಲಿಡಬೇಕೆಂದು ನಿರ್ಧರಿಸಿ ಅವರನ್ನು ಹಿಡಿದು ಬಟುಲ್ ಕಾರಾಗೃಹದಲ್ಲಿ ಸೇರಿಸಿಬಿಟ್ಟರು.

ಈ ಮಧ್ಯೆ ಆಲಿಸೋದರರುಗಳ ವಿಷಯದಲ್ಲಿ ಭರತಖಂಡದ ಹಿಂದೂ ಮಹಮ್ಮದೀಯ ಪ್ರಮುಖರನೇಕರು ಅಭಿಮಾನ ತೋರಿಸಿ ಅವರ ನಿರ್ಬಂಧನಿವಾಸ ವಿಮೋಚನೆಗಾಗಿ ಇಂಡ್ಯಾ ಪ್ರಭುತ್ವದವರನ್ನು ಪ್ರಾರ್ಥನೆಮಾಡಿಕೊಂಡಿದ್ದರು. ಆದರೆ ಪ್ರಭುತ್ವದವರು ಅವರ ಪ್ರಾರ್ಥನೆಗಳಿಗೆ ಗಮನವಿತ್ತು ವಿಮೋಚನೆಗೆ ಅವಕಾಶವನ್ನು ಕೊಡುವ ಸ್ಥಿತಿಯು ಬರುವಷ್ಟರಲ್ಲಿ ಮತ್ತೆ ಈ ಸೋದರರುಗಳ ವರ್ತನವು ಸಂಪೂರ್ಣ ರಾಜದ್ರೋಹಭರಿತವಾಗಿ ಕಂಡುಬಂದುದು ವಿಷಾದಕರವಾಯಿತು. ಇವರ ವರ್ತನವು ನಿಜವಾಗಿಯೂ ಹೀಗಿದ್ದರೆ ಇವರ ಪಕ್ಷವನ್ನು ಯಾವೊಬ್ಬ ರಾಜಭಕ್ತ ಭಾರತೀಯನೇ ಆಗಲೀ ಮಹಮ್ಮದೀಯನೇ ಆಗಲೀ ಸಮರ್ಥಿಸಲಾರನೆಂಬುದು ಖಂಡಿತ.

ಒಳದೇಶದ ವೃತ್ತಾಂತಗಳು.

ಮೈಸೂರು ದೇಶದಲ್ಲಿ ಕಳೆದ ಸಲ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಗೆ ಹೋಗಿದ್ದ ೫೦ ಮಂದಿ ವೀರಶೈವ ವಿದ್ಯಾರ್ಥಿಗಳಲ್ಲಿ ೧೭ ಮಂದಿಗಳು ಉತ್ತೀರ್ಣರಾಗಿದ್ದಾರೆ.

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಬಿರುಗಾಳಿ ಮೋಡಗಳ ಸಂಚಾರದ ಹೊರತು ಮಳೆಯು ಬೀಳಲಿಲ್ಲ. ಕೆಲಕಡೆಯ ಜೋಳದ ರಾಗಿಯ ಪೈರುಗಳಿಗೆ ಮಳೆಯು ಬೇಕಾಗಿದೆ.

ಧಾರವಾಡದ ಶುಭೋದಯ ಪತ್ರಸಂಪಾದಕರ ಮೇಲೆ ಅಲ್ಲಿಯ ದಂಡಾಧಿಕಾರಿಗಳ ಮುಂದೆ ನಡೆಯುತ್ತಿರುವ ಮಾನನಷ್ಟದ ವ್ಯಾಜ್ಯದಲ್ಲಿ ಫಿರ್ಯಾದಿ ಪಕ್ಷದ ಸಾಕ್ಷ್ಯಗಳ ವಾಙ್ಮೂಲವೆಲ್ಲಾ ಮುಗಿದು ಅಪರಾಧಿಗಳ ಮೇಲೆ ಛಾರ್ಜು ಮಾಡಲ್ಪಟ್ಟಿದೆ. ಮುಂದೆ ಅವರಪಕ್ಷದ ಸಾಕ್ಷ್ಯಗಳು ನಡೆಯತಕ್ಕುವಾಗಿವೆ.

ರಾಜಧಾನಿಯ ಹಳೆಅಗ್ರಹಾರದಲ್ಲಿರುವ ಕಿಂದೂರು ಮಠವೆಂದು ಹೆಸರಾಗಿರುವ ಮುರುಘಸಮಯದ ವಿರಕ್ತಮಠದ ಸ್ವಾಮಿಗಳು ತಾವು ಪರಿಪಾಲಿಸುತ್ತಿದ್ದ ೧೨ ವರ್ಷದ ವಟುವಿಗೆ ಶಿವದೀಕ್ಷಾ ಸಂಸ್ಕಾರ ಕರ್ಮವನ್ನೂ ಆಶ್ರಮಪ್ರದಾನವನ್ನೂ ಕಳೆದ ಬುಧವಾರ ನಡೆಯಿಸಿದುದಲ್ಲದೆ ಅದಕ್ಕೆ ಅಂಗವಾಗಿ ಉದಾರವಾದ ಗಣಸಮಾರಾಧನೆಯನ್ನೂ ಮರುದಿನ ನೂತನ ಸ್ವಾಮಿಯ ಮೆರೆವಣಿಗೆಯನ್ನೂ ವಿಭವದಿಂದ ಜರುಗಿಸಿದರು.

ಕೈ|| ಶಿರಸಂಗಿ ದೇಶಾಯಿಯರ ಮರಣಶಾಸನದ ವಿಷಯದಲ್ಲಿ ಅವರ ಪತ್ನಿ ಸುಂದರಾಬಾಯಿಯವರು ಪ್ರಿವಿಕೌನ್ಸಿಲವರೆಗೂ ಹತ್ತಿ ಮಾಡಿದ ವ್ಯಾಜ್ಯವು ಧರ್ಮಕರ್ತನ ಉದ್ದೇಶಕ್ಕೆ ಅನುಗುಣವಾಗಿಯೇ ತೀರ್ಮಾನಗೊಂಡುದು ಗೊತ್ತಿದಿಯಷ್ಟೆ. ಅದರ ಮೇಲೆ ಮತ್ತೆ ಬಾಯಿಯವರು ತಾವು ಸಾಯುವವರೆಗೂ ಸ್ವತ್ತಿನ ಯಾಜಮಾನ್ಯವು ತಮ್ಮಧೀನದಲ್ಲೇ ನಡೆಯುವಂತೆ ಆಗಬೇಕೆಂದು ಮತ್ತೊಂದು ವ್ಯಾಜ್ಯವನ್ನು ಹೂಡಿದ್ದರು. ಅದೂ ಕೂಡ ಇವರಿಗೆ ವಿರುದ್ಧವಾಗಿ ಧರ್ಮಕರ್ತನ ಉದ್ದೇಶದಂತೆ ಟ್ರಸ್ಟಿಯ ಅಧೀನದಲ್ಲೇ ಅದು ನಡೆಯತಕ್ಕುದೆಂದು ತೀರ್ಮಾನವಾಯಿತೆಂದು ಕೇಳುತ್ತೇವೆ. ಇನ್ನಾದರೂ ಸುಂದರಾಬಾಯಿಯವರು ವಿವೇಕವನ್ನು ತಂದುಕೊಂಡು ಮೌನದಿಂದಿದ್ದರೆ ಗೌರವವುಂಟು.

ಮ|| ಎಂ. ವೆಂಕಟಕೃಷ್ಣಯ್ಯನವರು ದೀರ್ಘಕಾಲ ಮರಿಮಲ್ಲಪ್ಪನವರ ಪಾಠಶಾಲೆಯ ಮುಖ್ಯೋಪಾಧ್ಯಾಯರಾಗಿದ್ದುದರಿಂದ ಅವರಲ್ಲಿ ಅಭ್ಯಾಸಮಾಡಿದ ಮತ್ತೂ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ಕಳೆದವಾರ ಅವರನ್ನು ಆ ಪಾಠಶಾಲೆಯಲ್ಲಿ ಅಲ್ಪಾಹಾರಾದಿಗಳಿಂದ ಪರಿತೃಪ್ತಿಪಡಿಸಿ, ರಥದಮೇಲೆ ಕುಳ್ಳಿರಿಸಿ ತಾವೇ ಅದನ್ನು ಎಳೆದುಕೊಂಡು ರತ್ನಾವಳಿ ನಾಟಕಶಾಲೆಯ ಮಂಟಪವನ್ನು ಸೇರಿಸಿ, ಅಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ವಿಜ್ಞಾಪನಪತ್ರಸಮರ್ಪಣವನ್ನು ಮಾಡಿ ಸಂತೋಷಪಡಿಸಿದರು. ಅಲ್ಲಿಯ ಸಭೆಗೆ ೩ ನೆ ಕೌನ್ಸಿಲರ್ ಮಿ|| ಹಂಚಾಹುಸೇನ್ ಸಾಹೇಬರು ಅಧ್ಯಕ್ಷರಾಗಿದ್ದರು. ವಿದ್ಯಾರ್ಥಿಗಳ ಈ ಗುರುಭಕ್ತಿಯು ಅನುಕರಣೀಯವಾದುದು.

ಸಂಧಿಸಭೆ.

ಸಂಧಿನಿಬಂಧನೆಗಳ ವಿಷಯದಲ್ಲಿ ಜರ್ಮನರು ಕೊಟ್ಟಿದ್ದ ಪ್ರತ್ಯುತ್ತರವನ್ನು ಕುರಿತು ಸಂಧಿಸಭೆಯವರು ಚೆನ್ನಾಗಿ ಚರ್ಚೆಮಾಡಿ ತಮ್ಮ ಪ್ರತ್ಯುತ್ತರವನ್ನು ಕಳೆದ ವಾರದಲ್ಲಿ ಜರ್ಮನರಿಗೆ ಕಳುಹಿಸಿಕೊಟ್ಟಿರುವರು. ಇದಕ್ಕೆ ಅವರ ಅಭಿಪ್ರಾಯವನ್ನು ೮ ದಿನಗಳೊಳಗಾಗಿ ಕೊಡಬೇಕೆಂದೂ, ಅಷ್ಟರೊಳಗೇ ತಾತ್ಕಾಲಿಕಸಂಧಿಯ ಅವಧಿಯು ಮುಗಿಸಲ್ಪಡುವುದೆಂದೂ, ಅವರು ಸಂಧಿಪತ್ರಕ್ಕೆ ಕೈಬರಹ ಹಾಕುವುದರ ಹೊರತು ಇನ್ನಾವ ಚರ್ಚೆಗೂ ನಿಲ್ಲಲಾಗದೆಂದೂ, ಮುಂದೆ ಯಾವ ಉತ್ತರಪ್ರತ್ಯುತ್ತರಗಳಿಗೂ ಅವಕಾಶ ಕೊಡಲ್ಪಡುವುದಿಲ್ಲವೆಂದೂ ಕೈಬರಹ ಹಾಕದಿದ್ದರೆ ಬರುವ ತಾ|| ೨೮ ರಲ್ಲಿ ಮತ್ತೆ ಯುದ್ಧಾರಂಭವು ಮಾಡಲ್ಪಡುವುದೆಂದೂ ಜನರಲ್ ಫಾಕ್‌ರವರ ಸೈನ್ಯವು ಜರ್ಮನಿಯ ಮೇಲೆ ಸಾಗುವುದು ಖಂಡಿತವೆಂದೂ ಮಿತ್ರಮಂಡಲಿಯವರು ಈ ಪ್ರತ್ಯುತ್ತರದ ಜತೆಯಲ್ಲಿಯೇ ಬರೆದು ಕಳುಹಿಸಿದ್ದಾರಂತೆ. ಈ ಪ್ರತ್ಯುತ್ತರ ಪತ್ರವನ್ನು ಸಭಾಧ್ಯಕ್ಷ ಕ್ಲೆಮೆಂಕೋರವರೂ, ಡಾ|| ವಿಲ್ಸನ್‌ರವರೂ, ಲಾಯಿಡ್ ಜಾರ್ಜ್‌ರವರೂ, ಬಾರನ್ ಸೋನಿನೋರವರೂ ಸಹ ಚೆನ್ನಾಗಿ ಪರಿಶೀಲಿಸಿರುವರು. ಕಳೆದ ಸೋಮವಾರವೇ ಇದನ್ನು ಜರ್ಮನರಿಗೆ ಕಳುಹಿಸಿಕೊಟ್ಟರು. ಜರ್ಮನರು ಸಂಧಿಪತ್ರಕ್ಕೆ ಕೈಬರಹ ಹಾಕುವರೋ ಇಲ್ಲವೋ ಎಂಬುದು ನಿರ್ಧಾರವಾಗುವವರೆಗೂ ಪ್ರೆ|| ವಿಲ್ಸನ್‌ರವರು ಫ್ರಾನ್ಸಿನಲ್ಲೇ ಇರುವುದಕ್ಕೆ ನಿಶ್ಚಯಿಸಿಕೊಂಡಿದ್ದಾರೆ.

ಈಗ ಮಿತ್ರಮಂಡಲಿಯವರು ಕಡೆಯ ಪ್ರತ್ಯುತ್ತರವಾಗಿ ತಿಳಿಯಿಸಿರುವ ಮೊದಲಿನದಲ್ಲಿ ಜರ್ಮನರ ಕೋರಿಕೆಯಂತೆ ಕೆಲ ಮಾರ್ಪುಗಳು ಮಾಡಲ್ಪಟ್ಟಿ ವಿಕಾರಸಂಹಾರವೇ ಮೊದಲಾದ ಮುಖ್ಯವಿಷಯಗಳಲ್ಲಿ ಮಾತ್ರ ಲೇಶವೂ ಸುಖವನ್ನನುಭವಿಸಲು ಇಚ್ಛೆಯನ್ನು [illegible] ವಿಲ್ಲ. ಮಾರ್ಪುಯೋಗಿಸ[illegible]ಗೆ ಮದನೋದ್ಭವ [illegible] ಪ್ರಯೋಗಿಸಬೇಕು [illegible] ಮಂಡಲಿಯವರು [illegible] ರೂ. [illegible] ಯಿಸಿರುವ ಅಭಿಪ್ರಾಯಗಳನ್ನು ನೋಡಿದರೆ ಜರ್ಮನರ ವಿಷ[illegible] ಉದಾರಚಿತ್ತದಿಂದಲೂ ಲೋಕಕಲ್ಯಾಣೇಚ್ಛೆಯಿಂದಲೂ ಅವರು ಹೇಗೆ ಸದ್ಭಾವಪ್ರೇರಿತರಾಗಿ ಸಂಧಿನಿಬಂಧನೆಗಳನ್ನೇರ್ಪಡಿಸಿರುವರೆಂಬುದು ಚೆನ್ನಾಗಿ ವ್ಯಕ್ತವಾಗುತ್ತಿದೆ. ಅದರ ಮುಖ್ಯಭಾಗಗಳು ಕೆಲವನ್ನು ಇಲ್ಲಿ ಕೊಟ್ಟಿರುತ್ತೇವೆ.

- ಸಂಧಿನಿಬಂಧನೆಗಳು ಕಠಿನವಾಗಿವೆಯೆಂದು ಜರ್ಮನರು ಆಕ್ಷೇಪಿಸುತ್ತಾರೆ. ತಾವು ನಾಗರಕತೆಯುಳ್ಳವರೆಂದು ಹೇಳಿಕೊಳ್ಳುತ್ತ ಮನಃಪೂರ್ವಕವಾಗಿ ಯುದ್ಧಕ್ಕಿಳಿಯುವುದಕ್ಕಿಂತಲೂ ಮಾನವಸಂಘಕ್ಕೆ ಮಾಡತಕ್ಕ ದ್ರೋಹವು ಮತ್ತೊಂದಿರುವುದಿಲ್ಲ. ಅಂಥ ಯುದ್ಧವನ್ನು ಪ್ರಾರಂಭಿಸುವುದಕ್ಕಾಗಿ ಜರ್ಮನರು ಬುದ್ಧಿಪೂರ್ವಕವಾಗಿ ಬಹುಕಾಲದಿಂದಲೂ ಒಳಗೊಳಗೇ ಸರ್ವಸನ್ನಾಹವನ್ನೂ ಮಾಡಿಕೊಂಡು ಯುದ್ಧವನ್ನು ಪ್ರಕಟಿಸಿದರು. ಆ ಯುದ್ಧದಿಂದ ೭೦ ಲಕ್ಷ ಮಂದಿ ಮಾನವರು ಹತರಾದರು. ೨ ಕೋಟಿ ಮಂದಿಗಳು ವಿಕಲಾಂಗರಾದರು. ಎಷ್ಟೋ ಕುಟುಂಬಗಳು ಅನಾಥರಾದರು. ಎಷ್ಟೋಮಂದಿ ಹೆಂಗುಸರು ವಿತಂತುಗಳಾದರು. ಯುದ್ಧಕ್ಕಾಗಿ ಮಾಡಲ್ಪಟ್ಟ ಸಾಲವು ೩೦ ಕೋಟಿಪೌನಿಗೆ ಮಿಂಚಿತು. ಜರ್ಮನರು ಅವಲಂಬಿಸಿದ ಅಧರ್ಮವಾದ ಯುದ್ಧಪದ್ಧತಿಯಿಂದ ಎಷ್ಟೋ ಮಂದಿಗಳು ಸರ್ವಸ್ವವನ್ನೂ ಕಳೆದುಕೊಂಡು ತಲೆಮರೆಯಿಸಿಕೊಳ್ಳುವುದಕ್ಕೆ ಗುಡಿಸಲೂ ಇಲ್ಲದ ದುರ್ಗತಿಗೆ ಗುರಿಯಾದರು. ಈಗ ನಡೆಯತಕ್ಕ ಸಂಧಿಯು ನ್ಯಾಯಾಧಾರವುಳ್ಳುದಾಗಿರಬೇಕು. ಪ್ರಪಂಚದಲ್ಲಿ ಸ್ವಾತಂತ್ರ್ಯಕ್ಕೆ ಭಂಗಬಾರದಂತೆ ಮಾಡುವುದಕ್ಕಾಗಿ ತಮ್ಮ ಧನ ಪ್ರಾಣಗಳನ್ನು ತೃಣಗಣ್ಯಮಾನವಾಗಿ ಬಲಿಯರ್ಪಿಸುವುದಕ್ಕೆ ಸಿದ್ಧರಾಗಿದ್ದವರೆಲ್ಲರಿಗೂ, ಅದರಲ್ಲಿ ಹತರಾಗಿಹೋದವರಿಗೂ, ಬದುಕಿರುವವರಿಗೂ, ಅವರ ಮಕ್ಕಳುಮರಿಗಳಿಗೂ ನಾವು ಕೃತಘ್ನತೆಯನ್ನರ್ಪಿಸಲಾರೆವು. ಜರ್ಮನರು ಈ ಯುದ್ಧವನ್ನು ಆರಂಭಿಸಿದುದು ಮಹಾಪರಾಧವೆಂದು ನಾವು ಭಾವಿಸಿರುತ್ತೇವೆ. ಅದುಕಾರಣ ಜರ್ಮನರಿಂದ ಪ್ರಪಂಚಕ್ಕೆ ಉಂಟಾದ ಮಹಾನಷ್ಟವನ್ನು ತಮಗೆ ಶಕ್ತಿಯಿರುವ ಮಟ್ಟಿಗೂ ಜರ್ಮನರೇ ಪೂರ್ತಿಮಾಡಬೇಕೆಂಬ ನಿಯಮವನ್ನು ನಾವು ಮುಖ್ಯವಾಗಿ ಏರ್ಪಡಿಸಿರುತ್ತೇವೆ. ಆ ಜರ್ಮನರಲ್ಲೂ ಯುದ್ಧಕ್ಕೆ ಮುಖ್ಯ ಕಾರಣಭೂತರಾದವರನ್ನು ನ್ಯಾಯಶಾಸ್ತ್ರಾನುಸಾರವಾಗಿ ವಿಚಾರಣೆಮಾಡಿ ಶಿಕ್ಷಿಸುವುದಕ್ಕಾಗಿ ಅಂಥವರನ್ನು ಮಿತ್ರಮಂಡಲಿಯವರ ವಶಕ್ಕೆ ಜರ್ಮನರು ಒಪ್ಪಿಸಬೇಕು. ಮತ್ತು ಕೆಲವರ್ಷಗಳವರೆಗೆ ಜರ್ಮನರು ತಮ್ಮ ಕೆಲವು ಸುಖಾನುಭವಗಳನ್ನು ಪರಿತ್ಯಜಿಸಬೇಕು. ಅದು ಅವರ ಅಪರಾಧಕ್ಕೆ ಪ್ರಾಯಶ್ಚಿತ್ತವು. ಇವನ್ನೆಲ್ಲಾ ಜರ್ಮನರಿಗೆ ಕಷ್ಟವೆಂದು ಹೇಳುವಿರಾ? ಆ ಕಷ್ಟವನ್ನು ಅವರೇ ತಂದಿಟ್ಟುಕೊಂಡರು. ಅವರು ಮಾಡಿದ ಕರ್ಮಫಲವನ್ನು ಅವರೇ ಅನುಭವಿಸಬೇಕು. ಆ ಫಲವನ್ನು ಇತರರು ಹೇಗೆ ಅನುಭವಿಸುವರು? ಜರ್ಮನಿಯಲ್ಲಿ ಈಗ ವಿಪ್ಲವವುಂಟಾಗಿದೆ. ಇನ್ನುಮುಂದೆ ಆ ದೇಶದಲ್ಲಿ ಉತ್ತಮಪರಿಸ್ಥಿತಿಗಳುಂಟಾಗಬಹುದು. ಈಗಣ ವಿಪ್ಲವವು ಯುದ್ಧಫಲಿತಾಂಶವನ್ನು ನಿವಾರಣೆ ಮಾಡಲಾರದು. ಯುದ್ಧದಲ್ಲಿ ಜರ್ಮನಿಯು ಸೋತು ಪಲಾಯನಗೊಳ್ಳುವವರೆಗೂ ಈ ವಿಪ್ಲವವು ಜರ್ಮನಿಯಲ್ಲಿ ತಲೆದೋರಲಿಲ್ಲ. ತಮಗೇ ವಿಜಯವು ಪ್ರಾಪ್ತವಾಗುವುದೆಂಬ ಆಸೆಯು ಅವರಿಗೆ ಸಂಪೂರ್ಣವಾಗಿ ತೊಲಗಿಹೋಗುವವರೆಗೂ ಈ ವಿಪ್ಲವವು ಅವರಲ್ಲಿ ಮೂಡಲಿಲ್ಲ. ಮತ್ತು ಜರ್ಮನ್ ಪ್ರಭುತ್ವದವರು ಮೊದಲು ಯುದ್ಧಕ್ಕೆ ಇಳಿದಾಗ ಜರ್ಮನ್ ಪ್ರಜೆಗಳು ಅದಕ್ಕೆ ಪ್ರತಿಕೂಲಭಾವವನ್ನು ತೋರಿಸಲಿಲ್ಲ. ಅವರು ಪ್ರಭುಗಳೊಡನೆಯೇ ಕೂಡಿಕೊಂಡಿದ್ದರು. ಪ್ರಭುತ್ವವಿಧಾನವನ್ನೇ ಅವರೂ ಪ್ರತಿ[illegible] ದರು. ಹೀಗಿರುವಲ್ಲಿ ಎಲ್ಲಾ ಆಗಿ ಮುಗಿದ ಮೇಲೆ ಈಗ ಪ್ರಜೆಗಳು ಹಿಂದಣ ಪ್ರಭುತ್ವವನ್ನು ತೊಲಗಿಸಿಬಿಟ್ಟವೆಂದಮಾತ್ರಕ್ಕೇ ಅವರ ಹೊಣೆಗಾರಿಕೆಯು ಹೇಗೆ ತೊಲಗಿಹೋದೀತು? ನಾವು ಸೂಚಿಸಿರುವ ಸಂಧಿನಿಬಂಧನೆಗಳು ಕೇವಲ ನ್ಯಾಯಾಧಾರದ ಮೇಲೆಯೇ ಏರ್ಪಟ್ಟಿವೆ. ಪ್ರತ್ಯೇಕ ರಾಷ್ಟ್ರಗಳ ಏರ್ಪಾಟುಗಳೂ ಕೂಡ ಮುಂದೆ ಯೂರೋಪುಖಂಡದಲ್ಲಿ ಮತ್ತೆ ಯುದ್ಧಗಳು ಹುಟ್ಟದಂತೆ ಮಾಡುವುದಕ್ಕಾಗಿಯೇ ಮಾಡಲ್ಪಟ್ಟಿವೆ. ಅದುಕಾರಣ ಈ ಕೆಳಗೆ ವಿವರಿಸಿರುವ ಕೆಲವು ಮಾರ್ಪುಗಳ ಹೊರತು ಮತ್ತಾವ ಬದಲಾವಣೆಯನ್ನು ಮಾಡುವುದಕ್ಕೂ ನಾವು ಅಂಗೀಕರಿಸಲಾರೆವು. ಜರ್ಮನಿಯಲ್ಲಿ ಸಂಪದಭಿವೃದ್ಧಿಯುಂಟಾಗದಂತೆ ತಡೆಯಬೇಕೆಂಬುದು ನಮ್ಮ ಅಭಿಮತವಲ್ಲ. ವ್ಯಾಪಾರದಲ್ಲೂ ಕೈಗಾರಿಕೆಯಲ್ಲೂ ಜರ್ಮನರು ವಿಪರೀತವಾದ ವಿಧಾನಗಳನ್ನು ಅವಲಂಬಿಸದ ಹಾಗೆ ಸಂಧಿನಿಬಂಧನೆಗಳನ್ನು ಅನುಸರಿಸಿದರೆ ಅಂತರ್ಜಾತೀಯ ವ್ಯಾಪಾರದಲ್ಲಿ ಮತ್ತೆ ಅವರು ಪ್ರವೇಶಿಸುವುದಕ್ಕೆ ನಾವು ಯಾವ ಅಭ್ಯಂತರವನ್ನೂ ಮಾಡತಕ್ಕವರಲ್ಲ. ಜರ್ಮನರಿಂದ ನಷ್ಟಪಟ್ಟಿರುವ ದೇಶಗಳಿಗೆ ಸದುಪಾಯಗಳನ್ನು ಕಲ್ಪಿಸಲು ಅಭ್ಯಂತರವಾಗಿರುವ ಮಟ್ಟಿಗೂ ಜರ್ಮನರಿಗೆ ನಾವು ಸದುಪಾಯವನ್ನು ಕಲ್ಪಿಸಿಕೊಡುವೆವು. ಅವಶ್ಯಪದಾರ್ಥಗಳನ್ನು ಹೊರಗಣಿಂದ ತರಿಸಿಕೊಳ್ಳುವುದರಲ್ಲೂ ತಮ್ಮ ಸರಕನ್ನು ಹೊರಕ್ಕೆ ವಿಕ್ರಯಿಸುವುದರಲ್ಲೂ ಜರ್ಮನರಿಗೆ ಅನುಕೂಲವು ಮಾಡಿಕೊಡಲ್ಪಡುವುದು. ಯುದ್ಧದಿಂದ ಉಂಟಾಗಿರುವ ಪರಸ್ಪರಾಗ್ರಹಭಾವವು ಬೇಗನೆ ಶಾಂತವಾಗಿ ಹೋಗಬೇಕೆಂದೂ, ಜರ್ಮನಿಯವರೂ ಇತರ ದೇಶದವರೂ ಸಹ ದುರಾಶೆಯಿಲ್ಲದಂತೆ ತಮಗೆ ಅವಶ್ಯಕವಾದಷ್ಟು ಸಾಮಾನುಗಳನ್ನು ನಿರ್ಮಿಸಿಕೊಂಡು ಸುಖಪಡಬೇಕೆಂದೂ ನಾವು ಕೋರುತ್ತೇವೆ. ಈ ನಮ್ಮ ಉದ್ದೇಶವನ್ನು ಸ್ಪಷ್ಟಪಡಿಸುವುದಕ್ಕಾಗಿ ಸಾಂಪತ್ತಿಕ ಸಂಧಿನಿಬಂಧನೆಗಳಲ್ಲಿ ಕೆಲ ಸುಧಾರಣೆಗಳನ್ನು ಮಾಡಿದ್ದೇವೆ. ಸಂಧಿನಿಬಂಧನೆಯನ್ನು ಬರೆಯುವುದರಲ್ಲಿ ನಮಗಿದ್ದ ಮುಖ್ಯಸಂಕಲ್ಪದಲ್ಲಿ ಯಾವ ಮಾರ್ಪನ್ನು ಮಾಡಲೂ ಅವಕಾಶವಿಲ್ಲ. ಜರ್ಮನರು ನಷ್ಟಪರಿಹಾರವನ್ನು ಕೊಟ್ಟಲ್ಲದೆ ತೀರದು. ತತ್ಸಂಬಂಧಗಳಾದ ನಿಬಂಧನೆಗಳನ್ನು ತಿದ್ದಲು ಆಗುವುದಿಲ್ಲ. ಆದರೆ ಆ ಪರಿಹಾರದ್ರವ್ಯವನ್ನು ಸಲ್ಲಿಸಲು ಅವರಿಗೆ ಅತ್ಯಂತ ಕಷ್ಟವಾಗದ ರೀತಿಯಲ್ಲಿ ಅದನ್ನು ಬರಮಾಡಿಕೊಳ್ಳಲು ಸುಕರವಾದ ಏರ್ಪಾಟನ್ನು ಮಾಡಲು ನಾವು ಒಪ್ಪುತ್ತೇವೆ ಅವರು ಕೊಡಬೇಕಾದ ಒಟ್ಟು ಮೊತ್ತವನ್ನು ಬೇಗನೆ ನಿರ್ಧರಿಸುವುದಕ್ಕಾಗಿಯೂ ಅವರಿಂದ ಆಯಾ ದೇಶಗಳಿಗೆ ಉಂಟಾಗಿರುವ ನಷ್ಟಗಳನ್ನು ನಿರೂಪಿಸುವುದಕ್ಕಾಗಿಯೂ ಅವಕಾಶವನ್ನು ಉಂಟುಮಾಡಿಕೊಡುತ್ತೇವೆ. ಜರ್ಮನರ ಪ್ರಶ್ನೆಗಳಿಗೆ ಇದಕ್ಕಿಂತಲೂ ಬೇರೆ ನಾವು ಕೊಡಬೇಕಾದ ಪ್ರತ್ಯುತ್ತರವೇನೂ ಇರುವುದಿಲ್ಲ. ನಾವು ಬಹು ಚೆನ್ನಾಗಿ ವಿಚಾರಮಾಡಿಯೇ ಸಾಧ್ಯವಾದಷ್ಟು ತಿದ್ದುಪಾಟುಗಳನ್ನೆಲ್ಲಾ ನಿಬಂಧನೆಗಳಲ್ಲಿ ಮಾಡಿರುತ್ತೇವೆ. ಈಗ ತಿಳಿಯಿಸಿರುವ ತಿದ್ದುಪಾಟಾದ ನಿಬಂಧನೆಗಳಿಗೆಲ್ಲಾ ಜರ್ಮನರು ಒಪ್ಪಿ ಕೈಬರಹವನ್ನು ಹಾಕುವುದಕ್ಕೆ ನಾವು ಸಿದ್ಧರಾಗಿದ್ದೇವೆಂದು ಅವರು ೫ ದಿನಗಳೊಳಗಾಗಿ ತಮ್ಮ ಪ್ರತಿನಿಧಿಗಳ ದ್ವಾರಾ ತಿಳಿಯಪಡಿಸದಿದ್ದರೆ ತಾತ್ಕಾಲಿಕ ಸಂಧಿನಿಬಂಧನೆಯ ಗಡುಬವು ಅಲ್ಲಿಗೆ ಮುಗಿದುಹೋಗುವುದು. ನಾವು ಸೂಚಿಸಿರುವ ಸಂಧಿನಿಬಂಧನೆಗಳು ವ್ಯವಹಾರಕ್ಕೆ ಬರುವಂತೆ ಮಾಡುವುದಕ್ಕೆ ನಮಗೆ ಸೂಕ್ತವೆಂದುತೋರಿದ ವಿಧಾನವನ್ನು ನಾವು ಆ ಬಳಿಕ ಅವಲಂಬಿಸುವೆವು.

ಜರ್ಮನರು ಈ ಯುದ್ಧಾರಂಭಕ್ಕೆ ಬಾಧ್ಯರು ಎಂಬುದಕ್ಕೆ ಯುದ್ಧಪ್ರಕಟನಕ್ಕೆ ಸ್ವಲ್ಪ ಹಿಂದಣ ಕಾಲವಾದ ಜುಲೈ ತಿಂಗಳಲ್ಲಿ ಜರುಗಿರುವ ಚರ್ಯೆಯು ಮಾತ್ರವೇ ಆಧಾರವಲ್ಲ. ನಿರಂಕುಶರಾದ ಅಧಿಕಾರಿಗಳ ಪಾಲನೆಯ ಕೆಳಗೆ ಜರ್ಮನರಿಗೆ ಸಕಲ ಪ್ರಪಂಚ ಯಾಜಮಾನ್ಯವನ್ನೂ ಸಂಪಾದಿಸಿಕೊಳ್ಳಬೇಕೆಂಬ ದುರಾಶೆಯು ಬಹುಕಾಲಕ್ಕೆ ಹಿಂದೆಯೇ ಹುಟ್ಟಿದ್ದಿತು. ಜರ್ಮನರ ಈಗಣ ವಿಪ್ಲವದಿಂದ ಇದು ನಿಶ್ಚಯವೆಂದು ದೃಢಪಟ್ಟಿರುವುದು. ಪ್ರಪಂಚಕ್ಕೆಲ್ಲಾ ಅಭೂತಪೂರ್ವವಾದ ಮಹಾಸಂತಾಪವನ್ನೂ ನಷ್ಟವನ್ನೂ ಉಂಟುಮಾಡಿದವರಿಗೆ ಇಂಥ ಶಿಕ್ಷೆಯನ್ನು ವಿಧಿಸುವುದು ಅನ್ಯಾಯವಲ್ಲ. ಹೀಗೆ ಮಾಡಿದರೆ ಮುಂದೆ ಇಂಥ ಅಕ್ರಮವನ್ನು ಇನ್ನಾವ ದೇಶಾಧಿಪತಿಗಳೂ ನಡೆಯಿಸದಿರುವುದಕ್ಕೆ ಅವರಿಗೆಲ್ಲಾ ಇದು ಗುಣಪಾಠವಾಗಿರುವುದು. ಈ ಅಪರಾಧಕ್ಕೆಲ್ಲಾ ಕಾರಕರಾದವರನ್ನು ಅವರ ಸ್ವದೇಶೀಯರೇ ವಿಚಾರಿಸುತ್ತೇವೆಂಬುದಕ್ಕೆ ನಾವು ಒಪ್ಪುವುದಿಲ್ಲ. ಅತ್ಯಂತ ಘನತರವಾದ ಅಂತರ್ಜಾತೀಯ ವಿಧಾನವನ್ನನುಸರಿಸಿ ಕೈಜರನ ವಿಚಾರಣೆಯು ನಡೆಯಿಸಲ್ಪಡುವುದು. ವಿಚಾರಣಕಾಲದಲ್ಲಿ ತನಗೆ ಬೇಕಾದ ವಿಷಯವನ್ನೆಲ್ಲಾ ಹೇಳಿಕೊಳ್ಳುವುದಕ್ಕೆ ಪರಿಪೂರ್ಣ ಸ್ವಾತಂತ್ರ್ಯವು ಆತನಿಗೆ ಕೊಡಲ್ಪಡುವುದು. ಮತ್ತೂ ಆದರಮೇಲೆ ಮಾಡಲ್ಪಡುವ ತೀರ್ಮಾನವು ಅತ್ಯಂತ ಶ್ರೇಷ್ಠರೀತಿಯಲ್ಲಿರುವಂತೆಯೇ ಮಾಡಲ್ಪಡುವುದು. ಡಾಕ್ಟರ್ ವಿಲ್ಸನ್‌ರವರು ಸೂಚಿಸಿದ ೧೪ ಸೂತ್ರಗಳಿಗೆ ಸಂಧಿನಿಬಂಧನೆಗಳು ಅನುಗುಣವಾಗಿಲ್ಲವೆಂದು ತೋರಿಸಿಕೊಡುವುದಕ್ಕೆ ಜರ್ಮನ್ ಪ್ರತಿನಿಧಿಗಳು ಮಾಡಿದ ಪ್ರಯತ್ನವು ನಮಗೆ ರುಚಿಸಲಿಲ್ಲ. ಜರ್ಮನರು ಮುಂದೆ ದಿನಕ್ರಮೇಣ ನಾನಾದೇಶಸಂಘದಲ್ಲಿ ತಮಗೆ ಉಚಿತವಾದ ಸ್ಥಾನವನ್ನು ಪಡೆದುಕೊಳ್ಳುವುದರಲ್ಲಿ ನಮ್ಮ ಆಕ್ಷೇಪಣೆಯೇನೂ ಇರುವುದಿಲ್ಲ. ಜರ್ಮನರು ಬಿಟ್ಟುಕೊಟ್ಟ ದೇಶಭಾಗಗಳಲ್ಲಿ ವಾಸಿಸುವ ಸ್ವಲ್ಪ ಸಂಖ್ಯಾಕರಾದ ಜರ್ಮನರು ಸತ್ಪವರ್ತನವುಳ್ಳವರಾಗಿದ್ದರೆ ಅವರ ಸ್ವಾತಂತ್ರ್ಯವು ಕಾಪಾಡಲ್ಪಡುವುದು. ಸೇನೆಯನ್ನು ಕಡಿಮೆಮಾಡಬೇಕೆಂಬ ನಿಬಂಧನೆಗೆ ಜರ್ಮನರು ಒಪ್ಪಿದ ಕೂಡಲೇ ಇತರ ದೇಶಗಳ ಸೇನೆಗಳೂ ತಗ್ಗಿಸಲ್ಪಡುವುವು. ಜರ್ಮನರ ಅಧಿನಿವೇಶಗಳು ಅವರ ಕೈತಪ್ಪಿ ಹೋಗುವುದರಿಂದ ಅವರ ಸಾಮ್ರಾಜ್ಯಾಭಿವೃದ್ಧಿಗೆ ಯಾವ ಕುಂದೂ ಉಂಟಾಗಲಾರದು. ಆ ಅಧಿನಿವೇಶಗಳಲ್ಲಿರುವ ಅವರ ವ್ಯಾಪಾರವು ಬಹಳ ಸ್ವಲ್ಪ. ೧೯೧೩ ನೆ ವರ್ಷದಲ್ಲಿ ಅವರ ಸಾಮ್ರಾಜ್ಯದ ಒಟ್ಟು ವ್ಯಾಪಾರದಲ್ಲಿ ೧೦೦ ಕ್ಕೆ ೧|| ಯಷ್ಟೂ ಆ ಅಧಿನಿವೇಶಗಳಲ್ಲಾಗಿರುವುದಿಲ್ಲ. ಮತ್ತೂ ಆ ಅಧಿನಿವೇಶಗಳಿಂದ ಅವರು ಸಾಗಿಸಿಕೊಂಡು ಹೋಗುವ ಆಹಾರಾದಿವಸ್ತುಗಳು ಕೂಡ ೧೦೦ ಕ್ಕೆ ೩ ರಷ್ಟು ಮಾತ್ರವೇ ಆಗಿದೆ. ಮತ್ತೂ ತಮ್ಮ ಜನ್ಮದೇಶದಿಂದ ಆ ಅಧಿನಿವೇಶಗಳಿಗೆ ಹೋಗುವ ಜರ್ಮನರಿಗೆ ಅಲ್ಲಿ ವಸತಿಯು ಕೂಡ ಸ್ವಲ್ಪವೇ ಇರುವುದು. ಅದುಕಾರಣ ಈ ವಿಷಯಗಳನ್ನೆಲ್ಲಾ ಆಲೋಚಿಸಿಯೇ ನಾವು ನಿಬಂಧನೆಗಳಲ್ಲಿ ಜರ್ಮನ್ ಅಧಿನಿವೇಶಗಳ ಪರಿಪಾಲನೆಯ ಏರ್ಪಾಟನ್ನು ಸೂಚಿಸಿರುತ್ತೇವೆ. ಈ ವಿಧಾನವೇ ಚೀನಾದಲ್ಲಿರುವ ಜರ್ಮನ್ ಆಸ್ತಿವಿಷಯದಲ್ಲೂ ಅನುವರ್ತಿಸುವುದಾಗಿದೆ.

ಇನ್ನು ಜರ್ಮನರ ಸೈನ್ಯವನ್ನು ಕ್ರಮಕ್ರಮವಾಗಿ ತಗ್ಗಿಸಿಕೊಂಡು ಹೋಗುವುದಕ್ಕೆ ನಾವು ಒಪ್ಪುತ್ತೇವೆ. ೩ ತಿಂಗಳೊಳಗಾಗಿ ಅವರು ೨ ಲಕ್ಷ ಸೈನ್ಯವನ್ನು ತೆಗೆದುಬಿಡಬೇಕು. ಆ ಬಳಿಕ ಇನ್ನೆಷ್ಟನ್ನು ಎಷ್ಟುಕಾಲದಲ್ಲಿ ಕಡಿಮೆಮಾಡಬೇಕೋ ಅದನ್ನು ಮಿತ್ರಮಂಡಲೀ ಸೇನಾನಾಯಕರು ನಿರ್ಣಯಿಸುವರು. ಹೇಗಾದರೂ ೧೯೨೦ ನೆ ಮಾರ್ಚಿ ತಿಂಗಳ ಕೊನೆಯೊಳಗಾಗಿ ಸೈನಿಕೋದ್ಯೋಗಿಗಳ ಸಂಖ್ಯೆಯೂ ಫಿರಂಗಿ ಮೊದಲಾದ ಯುದ್ಧಸಾಮಗ್ರಿಗಳ ಸಂಖ್ಯೆಯೂ ಇಷ್ಟಕ್ಕಿಂತ ಹೆಚ್ಚಾಗಿರಕೂಡದೆಂದು ನಿರ್ಧರಿಸಲ್ಪಡುವುದು. ಕೋಟೆಗಳನ್ನು ಒಡೆದುಹಾಕುವುದಕ್ಕೆ ಕೊಟ್ಟ ಕಾಲಾವಧಿಯಲ್ಲಿ ತಿದ್ದುಪಾಟನ್ನು ಮಾಡಿರುವೆವು. ನೌಕಾದಳದ ವಿಷಯದಲ್ಲಿ ಜರ್ಮನರು ಮಾಡಿರುವ ಸೂಚನೆಯನ್ನೊಪ್ಪಲಾರೆವು. ಆ ವಿಷಯದಲ್ಲಿ ನಾವು ಚೆನ್ನಾಗಿ ಆಲೋಚಿಸಿಯೇ ನಿಬಂಧನೆಗಳನ್ನೇರ್ಪಡಿಸಿರುವುದರಿಂದ ಅದನ್ನು ಜರ್ಮನರು ಒಪ್ಪಿಯೇ ತೀರಬೇಕು. ಮಿತ್ರಮಂಡಲಿಯವರ ಪಂಚಾಯತಿಯಲ್ಲಿ ಕಲೆತು ಕೆಲಸಮಾಡುವುದಕ್ಕೆ ಜರ್ಮನ್ ಪಂಚಾಯತಿಯೊಂದನ್ನು ಸ್ಥಾಪಿಸಬೇಕೆಂಬ ಜರ್ಮನರ ಕೋರಿಕೆಯನ್ನು ನಾವು ಒಪ್ಪುತ್ತೇವೆ. ಜರ್ಮನರು ಇತರರ ಸಾಲವನ್ನು ತೀರಿಸುವುದಕ್ಕೆ ಮೊದಲೇ ಮಿತ್ರಮಂಡಲಿಯವರ ಸಾಲವನ್ನು ತೀರಿಸಬೇಕು. ಜರ್ಮನರು ಈಗ ಕೊಡುವ ಅಭಯಗಳೂ ವಾಗ್ದಾನಗಳೂ ಬಹಳ ಸ್ಪಷ್ಟವಾಗಿರಬೇಕು. ಸಂಶಯಕ್ಕೆ ಲೇಶವೂ ಅವಕಾಶವಿರಕೂಡದು. ಎಂದು ಹೇಳಿ ರಾಷ್ಟ್ರವಿಭಾಗ, ರಾಷ್ಟ್ರಾಕ್ರಮಣ, ಲೋಹಮಾರ್ಗಸ್ವಾಮ್ಯ ಮೊದಲಾದ ವಿಷಯಗಳ ಮಾರ್ಪುಗಳನ್ನೆಲ್ಲಾ ಅದರಲ್ಲಿ ವಿವರಿಸಿರುವರು.

ಅಫ್ಘನ್ ಯುದ್ಧ.

ಅಮೀರರು ವೈಸ್‌ರಾಯರ ಪತ್ರಕ್ಕೆ ಉತ್ತರವಾಗಿ ಕಳುಹಿಸಿದ ಪತ್ರವು ತಾ|| ೧೩ ರಲ್ಲಿ ಸಿಮ್ಲಾಕ್ಕೆ ಬಂದು ಸೇರಿದೆ. ಅದರ ವಿವರಣವು ಇನ್ನೂ ಹೊರಬಿದ್ದಿಲ್ಲ. ಅಫ್ಘನ್‌ಸ್ಥಾನದ ಸರಹದ್ದುಗಳೊಳಗೆ ಯುದ್ಧಕಾರ್ಯಗಳು ನಡೆಯುತ್ತಲೇ ಇವೆ. ಶತ್ರುಗಳನ್ನು ಸೋಲಿಸಿ ನಮ್ಮವರು ಡಾಕ್ಕಾಸಿ ಎಂಬ ಊರನ್ನೂ ವಿದಾಕು ಎಂಬುದನ್ನೂ ಇನ್ನು ಕೆಲ ಗ್ರಾಮಗಳನ್ನೂ ವಶಪಡಿಸಿಕೊಂಡಿದ್ದಾರೆ. ಜಾಂಡೋಲಾ ಎಂಬ ಮತ್ತೊಂದು ಸೈನಿಕ ಮುಖ್ಯಸ್ಥಾನವನ್ನು ಕೂಡ ನಮ್ಮವರು ಸಾಹಸಪಟ್ಟು ೫೦೦೦ ಮಂದಿ ಮಷೂದ್ ಜನರ ಸಮೇತ ವಶಪಡಿಸಿಕೊಂಡಿದ್ದಾರೆ. ಕೆಲ ಕಡೆ ಶತ್ರುಸೈನಿಕರು ನಮ್ಮವರ ಸ್ಥಾನಗಳನ್ನು ತಾವೇ ಮುತ್ತಿ ಯುದ್ಧವನ್ನು ನಡೆಯಿಸುತ್ತಿದ್ದಾರೆ. ಆದರೆ ಅವರಿಗಾಗುತ್ತಿರುವ ಪರಾಜಯವೂ ನಷ್ಟವೂ ಮಿಗಿಲಾಗಿವೆ.

ಭರತಖಂಡದ ವೃತ್ತಾಂತಗಳು.

ಭರತಖಂಡದ ರಾಜ್ಯಾಂಗಸಂಸ್ಕರಣ ವಿಧಿಯ ಬಿಲ್ಲು ಲಂಡನ್ನಿನ ಪ್ರಜೆಗಳ ಪಾರ್ಲಿಮೆಂಟಿನಲ್ಲಿ ೨ನೆ ಸಲ ಓದಲ್ಪಟ್ಟಿತು. ಅದರ ಮುಖ್ಯಸ್ವರೂಪವನ್ನು ಇಂಡ್ಯಾಸರ್ಕಾರದವರು ಪ್ರಕಟಿಸಿದ್ದಾರೆ.

ಲಾಹೋರಿನ ಟ್ರಿಬ್ಯೂನ್ ಪತ್ರಿಕೆಯ ಕರ್ತರಾದ ಕಾಳೀನಾಥರಾಯರವರು ರಾಜದ್ರೋಹಾಪರಾಧಕ್ಕಾಗಿ ಸೈನಿಕವಿಚಾರಣೆಗೊಳಪಡಿಸಲ್ಪಟ್ಟಿದ್ದು ೧ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟರು.

ಈಗಿರುವ ಬೊಂಬಾಯಿ ಪಟ್ಟಣಕ್ಕೆ ಇನ್ನು ಸುತ್ತುಮುತ್ತಣ ೭ ಮೈಲಿಯಗಲದ ಪ್ರದೇಶವನ್ನು ಸೇರಿಸಿಕೊಳ್ಳಲು ಅಲ್ಲಿಯ ಮ್ಯುನಿಸಿಪಾಲಿಟಿಯವರು ನಿಶ್ಚಯಿಸಿದ್ದಾರೆ. ಆ ಬೊಂಬಾಯಿ ದ್ವೀಪಕ್ಕೂ ಹೊರಗಣ ಪ್ರದೇಶಗಳಿಗೂ ದೊಡ್ಡ ಸುರಂಗಗಳ ದ್ವಾರಾ ಸಂಬಂಧವನ್ನು ಕಲ್ಪಿಸುವ ಅಗಾಧ ಪ್ರಯತ್ನವು ನಡೆದಿದೆ.

ಹೈದರಾಬಾದ್ ಸಂಸ್ಥಾನಕ್ಕೆ ಕೆಲಕಾಲದಿಂದ ಮುಖ್ಯಮಂತ್ರಿಯೇ ಇರಲಿಲ್ಲ. ಈಗ ಸಯ್ಯದ್‌ಅಲಿ ಇಮಾಂರವರು ಈ ಸ್ಥಳಕ್ಕೆ ನಿಯಮಿಸಲ್ಪಡುವರೆಂಬ ವಾರ್ತೆಯು ಪ್ರಬಲವಾಗಿದ್ದಿತು. ಆದರೆ ಅವರು ಮಂತ್ರಿಗಳಾಗಿ ಮಾಡಲ್ಪಟ್ಟಿಲ್ಲವೆಂದೂ, ಸಂಸ್ಥಾನದ ಉದ್ಯೋಗಿಗಳಲ್ಲಿ ಕೆಲರನ್ನು ಆರಿಸಿ ಒಂದು ಕಾರ್ಯಕಾರಿ ಸಂಘವನ್ನು ಸ್ಥಾಪಿಸಿ ಅದಕ್ಕೆ ಸರ್ ಆಲಿಇಮಾಂರವರನ್ನು ಅಧ್ಯಕ್ಷರನ್ನಾಗಿ ನಿಯಮಿಸುವವರಾಗಿದ್ದಾರೆಂದು ಗೊತ್ತಾಗಿದೆ.

ಪಂಜಾಬಿಗೆ ಈಗ ಹೊಸದಾಗಿ ಲೆಫ್ಟಿನೆಂಟ್ ಗೌರ್ನರಾಗಿ ಬಂದಿರುವ ಸರ್ ಎಡ್ವರ್ಡ್ ಮಾಕ್ಲೆನ್‌ರವರ ಕಾರ್ಯಭಾರವು ಲೋಕಪ್ರಿಯವಾಗಿ ತೋರುತ್ತಿದೆ. ಇದಕ್ಕೆ ಮುಂಚೆ ಆ ದೇಶದಲ್ಲಿ ಹಲವುಕಡೆ ಪ್ರಕಟಿಸಿದ್ದ ಸೈನಿಕ ಶಾಸನವನ್ನು ಇವರು ತೊಲಗಿಸಿ ಕೆಲ ಲೋಹಮಾರ್ಗಪರಿಸರದ ಪಟ್ಟಣಗಳಲ್ಲಿ ಮಾತ್ರ ಅದನ್ನುಳಿಸಿರುವಂತೆ ಅಪ್ಪಣೆಮಾಡಿದ್ದಾರೆ. ಇದನ್ನು ಇಂಡ್ಯಾಸರ್ಕಾರದವರೂ ಒಪ್ಪಿದ್ದಾರೆ. ಮತ್ತು ಹೊರಗಣ ವಕೀಲರು ಆ ಅಧಿಪತ್ಯಕ್ಕೆ ವಾದಿಸಲು ಬರಲಾಗದೆಂದು ಮಾಡಿದ್ದ ಅಪ್ಪಣೆಯನ್ನು ತೆಗೆದುಬಿಟ್ಟಿದ್ದಾರೆ.

ಪಂಜಾಬು ಲೆ|| ಗೌರ್ನರವರು ನೊನ್ನೆವಾರ ಅಮೃತಸರದಲ್ಲಿ ತಮ್ಮ ಮೊದಲನೆ ದರಬಾರನ್ನು ನಡೆಯಿಸಿ, ೨ ತಿಂಗಳ ಹಿಂದೆ ದುರ್ವರ್ತನದಿಂದ ಆ ಪಟ್ಟಣಕ್ಕೆ ದುಷ್ಕೀರ್ತಿಯನ್ನು ತಂದ ಅಪರಾಧಿಗಳನ್ನು ಈಗ ತಾವು ಕ್ಷಮಿಸುತ್ತೇವೆಂದೂ, ಮುಂದೆ ಇಂಥ ಅಪರಾಧ ನಡೆಯಲಿಕ್ಕೂ, ಅದಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸುವುದಕ್ಕೂ ಅವಕಾಶವುಂಟಾಗಬಾರದೆಂದೂ ಹೇಳಿ ಅಂಥ ವಿಷಮಸಮಯದಲ್ಲಿ ಪ್ರಜೆಗಳಿಗೆ ಆಶ್ರಯವನ್ನಿತ್ತು ಆದರೋಪಚಾರಗಳನ್ನು ಮಾಡಿದ ರಾಜಭಕ್ತಿಧುರಂಧರರಾದ ೫೦ ಮಂದಿಗೆ ಬಹುಮಾನವನ್ನು ಕೊಡಲು ಅಪ್ಪಣೆ ಮಾಡಿದರು.

ಮ|| ಎಂ. ಶ್ರೀನಿವಾಸರಾವ್ ಎಂಬುವವರೂ ಮ|| ವಿಠಲರಾವ್ ಎಂಬುವವರೂ ಸಹ ಕರ್ನಾಟಕ ಭಾಷೆಯ ಸಂಕ್ಷಿಪ್ತಲಿಪಿವಿಧಾನ (ಷಾರ್ಟ್ ಹ್ಯಾಂಡ್‌ರೈಟಿಂಗ್) ವನ್ನು ನಿರ್ಮಿಸಿ ಒಪ್ಪಿಸಿದುದಕ್ಕಾಗಿ ಮದ್ರಾಸ್ ಪ್ರಭುತ್ವದವರು ಮೊದಲನೆಯವರಿಗೆ ೫೦೦ ರೂ. ಗಳ ಪ್ರಥಮ ಬಹುಮಾನವನ್ನೂ ೨ ನೆಯವರಿಗೆ ೨೫೦ ರೂ. ನ ದ್ವಿತೀಯ ಬಹುಮಾನವನ್ನೂ ಕೊಟ್ಟುದಲ್ಲದೆ ಅವರು ರಚಿಸಿಕೊಟ್ಟಿರುವ ಈ ವಿಧಾನದ ಗ್ರಂಥವನ್ನು ಸರ್ಕಾರದವರೇ ಮುದ್ರಿಸಿ ಪ್ರಕಟಿಸಲು ಅಪ್ಪಣೆಮಾಡಿದ್ದಾರೆ. ಅದರ ಸ್ವಾತಂತ್ರ್ಯವೆಲ್ಲಾ ಸರ್ಕಾರಕ್ಕೇ ಸೇರಿರುವುದು. ಕನ್ನಡಭಾಷೆಯ ಸಂಕ್ಷಿಪ್ತಲಿಪಿನಿರ್ಣಯ ವಿಷಯದಲ್ಲಿ ಇಷ್ಟು ಪರಿಶ್ರಮಪಟ್ಟು ಕೃತಾರ್ಥರಾದ ಈ ಮಹಾಶಯರುಗಳ ವಿಷಯದಲ್ಲಿ ಕನ್ನಡಿಗರೆಲ್ಲರೂ ಕೃತಜ್ಞರು.

ಬೊಂಬಾಯಿಯಲ್ಲಿ ಹಿಂದೆ ೫ ವರ್ಷ ಕಾಲ ಗೌರ್ನರಾಗಿದ್ದು ಈಗ ಮದ್ರಾಸು ಗೌರ್ನರಾಗಿರುವ ಲಾರ್ಡ್ ವೆಲ್ಲಿಂಗ್ಟನ್‌ರವರ ಸ್ಮಾರಕಚಿಹ್ನವೊಂದನ್ನು ಸ್ಥಾಪಿಸುವುದಕ್ಕಾಗಿ ಬೊಂಬಾಯಿಯಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಕೂಡಿದ್ದ ಸಭೆಯಲ್ಲಿ ನಿರ್ಧಾರವಾಗಿದ್ದ ಪ್ರಕಾರ ಏರ್ಪಟ್ಟಿದ್ದ ಸಂಘದವರು ಪ್ರಯತ್ನಿಸಿದುದರಲ್ಲಿ ಮಿ|| ಹಿಸ್ಸನ್‌ರವರು ೨೫೦೦೦, ಗ್ವಾಲಿಯರ್ ಮಹಾರಾಜರು ೧೫೦೦೦, ರಾಜಪಿಪ್ಪಲದ ಮಹಾರಾಜರು ೫೦೦೦, ಬರೋಡಾಮಹಾರಾಜರು ೨೦೦೦, ಸರ್ ಸಾಸೂನ್‌ಡಾವೈದ್ ಬಾರ್ಟ್‌ರವರು ೧೦೦೦೦, ಇ. ಡಿ. ಸಾಸೂನ್ ಕಂಪೆನಿಯವರು ೧೦೦೦೦, ವಾಲಿಸ್ ಕಂಪೆನಿಯವರೂ, ಬೊಂಬಾಯಿಕಂಪೆನಿಯವರೂ ಸಹ ೭೫೦೦, ಕಿಲಿಕ್ ನಿಕ್ಸನ್ ಕಂಪೆನಿಯವರು ೭೫೦೦, ಸರ್ ಥಾಮಸ್ ಬಿರ್ಕೆಟ್‌ರವರು ೫೦೦೦ ಡೇವಿಡ್‌ಸಾಸೂನ್ ಕಂಪೆನಿಯವರು ೭೫೦೦ ಸರ್ ಕರೀಂಬಾಯಿ ಇಬ್ರಾಹಿಂ ಅಂಡ್‌ಸನ್ಸ್‌ರವರು ೭೫೦೦ ಸರ್ ನಸರ್ವಾಂಜಿ ವಕೀಲ್‌ರವರು ೨೦೦೦೦ ಹೀಗೆ ಚಂದಾ ಕೊಟ್ಟಿರುತ್ತಾರೆ.

ಆನಿಬೆಸೆಂಟಮ್ಮನವರು ಲಂಡನ್ನಿಗೆ ಹೋಗಿ ಸೇರಿದರು. ಅಲ್ಲಿ ರೂಟರ್ ಪ್ರತಿನಿಧಿಯು ಅವರನ್ನುಕಂಡು ಸಂಭಾಷಿಸುವಲ್ಲಿ ಈಗಣ ನೂತನ ರಾಜಕೀಯ ಸಂಸ್ಕರಣದ ಬಿಲ್ಲನ್ನು ಅಂಗೀಕರಿಸತಕ್ಕವರ ಸಂಖ್ಯೆಯನ್ನು ಹೆಚ್ಚಿಸಿ ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೊಗ್‌ರವರಿಗೆ ಸಹಾಯಮಾಡುವ ನಿಮಿತ್ತವಾಗಿ ನಾನು ಇಲ್ಲಿಗೆ ಬಂದಿದ್ದೇನೆ. ಭರತಖಂಡವು ಆಂಗ್ಲಸಾಮ್ರಾಜ್ಯಾಧೀನವಾಗಿಯೇ ಇರಬೇಕು. ಶಾಸನವನ್ನತಿಕ್ರಮಿಸದ ಆಂದೋಲನವನ್ನು ನಡೆಯಿಸಬೇಕೆಂಬುದು ನಮ್ಮ ಅನುಚರರ ಉದ್ದೇಶವು. ಭರತಖಂಡದಲ್ಲಿರುವ ವಿಪ್ಲವೋದ್ಯಮಕಾರಕರಿಗೆ ಜರ್ಮನರು ವಿಶೇಷವಾಗಿ ಧನಸಹಾಯ ಮಾಡುತ್ತಿದ್ದಾರೆ. ಭರತಖಂಡವು ಆತ್ಮಸಂರಕ್ಷಣೆಗೆ ತಕ್ಕ ಅರ್ಹತೆಯನ್ನು ಪಡೆದುಕೊಳ್ಳುವವರೆಗೆ ಅದು ಸಂಪೂರ್ಣಸ್ವರಾಜ್ಯಕ್ಕರ್ಹವಾಗಲಾರದು. ಆದರೆ ತಕ್ಕಷ್ಟು ಅವಕಾಶವನ್ನಿತ್ತರೆ ಅದು ೪೦ ವರ್ಷ ಕಾಲದಲ್ಲಿ ವಿದೇಶೀಯರ ಸಹಾಯವಿಲ್ಲದೆ ಬಾಳುವಷ್ಟು ಪ್ರಯತ್ನವನ್ನು ಮಾಡಬಲ್ಲುದು. ಭರತಖಂಡದ ಅಪಾಯವೆಲ್ಲವೂ ಅದರ ಬಡತನದಿಂದಲೇ ಪ್ರಾಪ್ತವಾಗುತ್ತಿದೆ ಎಂದು ಅಭಿಪ್ರಾಯ ಕೊಟ್ಟಿರುವರು.

ವಿದೇಶದ ವೃತ್ತಾಂತಗಳು.

ಫ್ರಾನ್ಸಿನಲ್ಲಿ ಕೆಲಸಗಾರರಿಗೂ ಸರ್ಕಾರದವರಿಗೂ ಒಡಂಬಡಿಕೆಗಳು ಕುದುರಿದುದರಿಂದ ಮುಷ್ಕರವು ಶಾಂತವಾಗಿ ಕೂಲಿಗಾರರು ಕೆಲಸಕ್ಕೆ ಸೇರುತ್ತಿದ್ದಾರೆ.

ಬೋಲ್ಷೆವಿಕ್ ನಾಯಕನಾದ ಲೆನಿನ್ ಎಂಬಾತನು ಸೈನಿಕವಿಚಾರಣೆಗೊಳಪಡಿಸಲ್ಪಟ್ಟಿದ್ದು ವಿಚಾರಾಂತ್ಯದಲ್ಲಿ ಮರಣದಂಡನೆ ವಿಧಿಸಲ್ಪಟ್ಟನು. ಈ ಕಾರಣದಿಂದ ಜರ್ಮನಿಯ ಸ್ಪಾರ್ಟಕಸ್ಟರ ರೋಷವು ಉದ್ರೇಕಗೊಂಡಿದೆ.

ಬಲವಾದ ಸೇನಾರಕ್ಷೆಯೊಡನೆ ೬೬ ಮಂದಿ ತುರ್ಕಿ ಯುದ್ಧದ ಬಂದಿಗಳನ್ನು ಮಾಲ್ಟಾದೇವಿಗೆ ಕರೆದುಕೊಂಡು ಹೋಗಿದ್ದಾರೆ. ಆರ್ಮೀನಿಯನ್ ಕ್ರೈಸ್ತರ ಹತ್ಯ ಮತ್ತು ಇತರ ವಿಧವಾದ ವಿದ್ರೋಹಚಿಂತನೆ ಇವುಗಳಿಗೆ ಇವರೇ ಕಾರಣಭೂತರಂತೆ.

ನೌಕಾದಳಾಧ್ಯಕ್ಷರಾದ ಅಡ್ಮಿರಲ್ ಸರ್ ಡೇವಿಡ್ ಬಿಯಾಟಿಯವರಿಗೂ ಫೀಲ್ಡ್ ಮಾರ್ಷಲ್ ಸರ್ ಡಗ್ಲಸ್‌ಹೇಗ್‌ರವರಿಗೂ ಅವರು ಯುದ್ಧಕಾಲದಲ್ಲಿ ತೋರಿಸಿದ ಪರಾಕ್ರಮಕ್ಕಾಗಿ ಮೆಚ್ಚಿ ನಮ್ಮ ಸಾರ್ವಭೌಮರವರು ಆರ್ಡರ್ ಆಫ್ ಮೆರಿಟ್ ಎಂಬ ಘನತರವಾದ ಪ್ರಶಸ್ತಿಯನ್ನು ಕಳೆದ ವಾರ ದಯಪಾಲಿಸಿದರು.

ಬೊಂಬಾಯಿ ಕ್ರಾನಿಕಲ್ ಪತ್ರಿಕಾಸಂಪಾದಕರಾಗಿದ್ದ ಮಿ|| ಹಾರ್ನಿಮನ್‌ರವರನ್ನು ಈ ದೇಶದಿಂದ ಬಿಡಿಸಿ ಸೀಮೆಗೆ ಸಾಗಿಸಿಬಿಟ್ಟರಷ್ಟೆ. ಈಗ ಅವರು ಅಲ್ಲಿಯ ಹೆಚ್. ಜಿ. ವೇಲ್ಸ್, ಲಂಚಿ ಇವರುಗಳ ಯಾಜಮಾನ್ಯದಿಂದ ನಡೆಯಿಸಲ್ಪಡುತ್ತಿರುವ ರಿಪಬ್ಲಿಕನ್ ಎಂಬ ಪತ್ರಿಕೆಯ ಸಂಪಾದಕರಾಗಿ ಸ್ವೀಕರಿಸಲ್ಪಡುವವರಾಗಿದ್ದಾರೆಂದು ಪ್ರಕಟವಾಗಿದೆ.

ಅಮೇರಿಕನ್ನರು ಮುಂದೆ ತಮ್ಮ ನೌಕಾದಳವನ್ನು ಲೋಕೋತ್ತರವನ್ನಾಗಿ ಮಾಡುವುದಕ್ಕಾಗಿ ಮತ್ತೆ ೧೨ ಯುದ್ಧದ ಹಡಗುಗಳನ್ನು ಕಟ್ಟಬೇಕೆಂದು ಕೆಲ ತಿಂಗಳುಗಳ ಕೆಳಗೆ ಉದ್ದೇಶಿಸಿದ್ದರು. ಆದರೆ ಈಗ ಆ ಕಾರ್ಯವನ್ನು ಮಾಡಲಾಗದೆಂದೂ, ನಾನಾದೇಶಸಂಘದ ಏರ್ಪಾಟಿನಮೇಲೆ ನಂಬುಗೆಯನ್ನಿಟ್ಟು ನಡೆದುಕೊಳ್ಳಬೇಕೆಂದೂ ಆ ದೇಶದ ನೌಕಾದಳ ಕಾರ್ಯದರ್ಶಿಯವರು ಸೂಚಿಸಿರುತ್ತಾರೆ.

ಸಂಧಿರಾಯಭಾರಕ್ಕೋಸ್ಕರ ತುರ್ಕಿಯ ಪ್ರತಿನಿಧಿಗಳಾಗಿ ಈಗಣ ಮುಖ್ಯಮಂತ್ರಿ ದಾಮದ್‌ರವರು ಪೂರ್ವದಮಂತ್ರಿ ಪೀರಿಯೋಪಾಷಾರವರು ಸಭಾಧ್ಯಕ್ಷರಾದ ಟ್ಯೂಫಿಕ್ ಪಾಷಾರವರು ಮೊದಲಾದ ಕೆಲವರು ತುರ್ಕಿ ಪ್ರಭುತ್ವದವರ ಅಪೇಕ್ಷೆಯ ಪ್ರಕಾರ ಮಿತ್ರಮಂಡಲಿಯವರಿಂದ ಪ್ಯಾರಿಸ್ ಪಟ್ಟಣಕ್ಕೆ ಬರಮಾಡಿಕೊಳ್ಳಲ್ಪಟ್ಟಿದ್ದಾರೆ. ಇವರನ್ನು ಗೌರವದಿಂದ ಬರಮಾಡಿಕೊಳ್ಳುವುದಕ್ಕೆ ತಕ್ಕ ಏರ್ಪಾಟು ಮಾಡಲ್ಪಟ್ಟಿದ್ದಿತು. ಈ ತುರ್ಕಿ ಪ್ರತಿನಿಧಿಗಳೊಡನೆ ಮುಖಾಮುಖಿಯಾಗಿ ಸಂಧಿವಿಷಯವನ್ನು ಕುರಿತು ಮಾತನಾಡುವುದಕ್ಕೆ ಮಿತ್ರಮಂಡಲಿಯವರು ಒಪ್ಪುವಂತೆ ಕಾಣುತ್ತಿದೆ. ಇಂಥ ಅವಕಾಶವನ್ನು ಇತರ ಶತ್ರುರಾಯಭಾರಿಗಳಿಗೂ ಮಿತ್ರಮಂಡಲಿಯವರು ಕೊಟ್ಟಿಲ್ಲ.

ರಷ್ಯಾದಲ್ಲಿ ಉತ್ತರಭಾಗದ ಸೈನ್ಯವು ಬೋಲ್ಷೆವಿಕ್ಕರ ಸೈನ್ಯವನ್ನು ಪೆಸ್ಕಾಪಿಗೆ ಪೂರ್ವದಲ್ಲಿ ಅನೇಕ ಗ್ರಾಮಗಳಿಂದ ಓಡಿಸಿ ೧೦೦೦ ಮಂದಿಗಳನ್ನು ಸೆರೆಹಿಡಿದಿತು. ಬಹಳ ಯುದ್ಧಸಾಮಗ್ರಿಯೂ ದೊರೆದಿತು. ಇಂಗ್ಲೀಷ್ ಸೇನಾಪತಿ ಜನರಲ್ ಡಂಕಿನ್‌ರವರ ಸೈನ್ಯವು ಬಹು ಉತ್ಸಾಹದಿಂದ ಮುಂದಕ್ಕೆ ಸಾಗುತ್ತಿದೆ. ರಷ್ಯನ್ ವಾಲಂಟಿಯರ್ ಸೈನ್ಯವು ಬೋಲ್ಷೆವಿಕ್‌ಸೈನ್ಯದಲ್ಲಿ ೫೦೦೦ ಮಂದಿಯನ್ನೂ ಅವರ ೬೦ ತುಪಾಕಿಗಳನ್ನೂ ವಶಪಡಿಸಿಕೊಂಡು ಅವರ ೨ ಅಶ್ವಸೈನ್ಯಗಳನ್ನೂ ೩ ಪದಾತಿ ಸೈನ್ಯಗಳನ್ನೂ ಧ್ವಂಸಮಾಡಿತು. ಈ ವಾಲಂಟಿಯರ್ ಸೈನ್ಯದೊಡನೆ ರಷ್ಯಾ ಕೋಸಕ್‌ಸೈನ್ಯವೂ ಕೂಡಿ ಬೋಲ್ಷೆವಿಕ್ಕರನ್ನು ಅಟ್ಟಿಕೊಂಡು ಹೋಗುತ್ತಿದ್ದಾರೆ. ಸೈಬೇರಿಯಾದಲ್ಲೂ ಬೋಲ್ಷೆವಿಕ್ಕರಿಗೆ ಪರಾಜಯವಾಗುತ್ತಿದೆ. ಅವರು ಗ್ಲಾಜಾವ್‌ಪಟ್ಟಣವನ್ನು ಕಳೆದುಕೊಂಡರು. ಬೂಜಾಲಕ್ಕಿಗೆ ದಕ್ಷಿಣದಲ್ಲಿ ಬೋಲ್ಷೆವಿಕ್ಕರು ಸೋತು ಓಡಿದುದಲ್ಲದೆ ತಮ್ಮ ೨೦೦೦೦ ಮಂದಿ ಸೈನಿಕರನ್ನೂ ಕಳೆದುಕೊಂಡರು. ಇವರನ್ನೆಲ್ಲಾ ಉರಲ್‌ಕಾಸಕ್ಕಿನವರು ಸೆರೆಹಿಡಿದರು.

ಸಂಧಿಸಭೆಯವರು ಚೀನರ ಷಾಂಟಂಗ್ ಪಟ್ಟಣ ವಿಷಯವನ್ನು ಜಪಾನರಿಗೆ ಅನುಕೂಲವಾಗಿ ತೀರ್ಮಾನಮಾಡಿದುದರಿಂದ ಚೀನಾದೇಶೀಯರಿಗೆ ಜಪಾನರಮೇಲೆ ದ್ವೇಷವು ದಿನದಿನಕ್ಕೆ ಹೆಚ್ಚುತ್ತಿದೆ. ಪ್ರತಿ ಪಟ್ಟಣದ ವೀಧಿಯಲ್ಲೂ ವಿದ್ಯಾರ್ಥಿಗಳು ಉಪನ್ಯಾಸಮಾಡುತ್ತ ಪ್ರಜೆಗಳ ಮನಸ್ಸನ್ನು ರೇಗಿಸುತ್ತಿದ್ದಾರೆ. ಪಿಕಿಂಗ್‌ಪಟ್ಟಣದಲ್ಲಿ ಪೊಲೀಸರು ೧೦೦೦ ಮಂದಿ ವಿದ್ಯಾರ್ಥಿಗಳನ್ನು ಹಿಡಿದು ನಿರ್ಬಂಧದಲ್ಲಿಟ್ಟಿರುವರು. ಹೀಗೆ ಪೊಲೀಸರು ಮಾಡಿದುದರಿಂದ ಕೋಪಗೊಂಡು ಕೆಲ ಪಟ್ಟಣಗಳ ಬ್ಯಾಂಕುಗಳೂ ಪಾಠಶಾಲೆಗಳೂ ಮುಚ್ಚಲ್ಪಟ್ಟವು. ಜಪಾನರ ಸಾಮಗ್ರಿಗಳನ್ನು ಚೀನರು ಸುಟ್ಟುಹಾಕುತ್ತಿರುವರು. ಈ ಗದ್ದಲವನ್ನು ನೋಡಿ ಪೊಲೀಸರು ವಿದ್ಯಾರ್ಥಿಗಳನ್ನು ಬಿಟ್ಟುಬಿಟ್ಟರು. ಕೆಲ ಕಡೆ ವಿದೇಶದ ಪೊಲೀಸರಿಗೂ ಪ್ರಜೆಗಳಿಗೂ ಬಡಿದಾಟವಾಯಿತು. ಕೆಲಕಡೆ ಜಪಾನ್ ಪ್ರಜೆಗಳನ್ನು ಹೊಡೆದು ಕೊಂದಿರುವರು. ಗದ್ದಲವನ್ನಡಗಿಸುವುದಕ್ಕೆ ೨೦ ಸಾವಿರ ಮಂದಿ ವಿದ್ಯಾರ್ಥಿಗಳೂ ಅನೇಕ ಮಂದಿ ಐಚ್ಛಿಕಸೇವಕರೂ ಪ್ರಯತ್ನಿಸಿದ್ದಾರೆ. ಚೀನಾ ಮಂತ್ರಿಮಂಡಲದಲ್ಲಿ ಜಪಾನ್ ಪಕ್ಷಪಾತಿಗಳಾಗಿದ್ದವರೆಲ್ಲಾ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಆದರೆ ಈಚೆಗೆ ಗದ್ದಲವೆಲ್ಲಾ ಶಾಂತವಾಗುತ್ತಿದೆ. ಚೀನಾ ಸರ್ಕಾರದವರು ನಿಜಸ್ಥಿತಿಯನ್ನು ವಿಚಾರಮಾಡುವಲ್ಲಿ ಸಂಗತಿ ಸಂದರ್ಭಗಳನ್ನು ಸರಿಯಾಗಿ ತಿಳಿದುಕೊಳ್ಳದವರಿಂದಲೇ ಈ ಗದ್ದಲವು ಹುಟ್ಟಿತೆಂದು ಗೊತ್ತಾಯಿತು. ಚೀನಾ ಜಪಾನ್ ಸರ್ಕಾರಗಳೆರಡೂ ಬಹಳ ಅನ್ಯೋನ್ಯಭಾವದಿಂದ ಕೆಲಸ ಮಾಡುತ್ತಿವೆ. ಸಂಧಿಪತ್ರದಲ್ಲಿ ಕೈಬರಹಗಳು ಬಿದ್ದಕೂಡಲೇ ಜಪಾನರು ಚೀನಾದೇಶದಲ್ಲಿ ಆಕ್ರಮಿಸಿಕೊಂಡಿರುವ ಕಿಯಾಚೋ ಮೊದಲಾದುವುಗಳನ್ನೆಲ್ಲಾ ಚೀನಾದವರಿಗೇ ಕೊಟ್ಟುಬಿಡಲು ಒಪ್ಪಿಕೊಂಡಿದ್ದಾರೆ. ಚೀನಾದೇಶದಲ್ಲಿರುವ ಜಪಾನರ ರಕ್ಷಣೆಗಾಗಿ ಜಪಾನರು ಅಲ್ಲಿಗೆ ಕೆಲವು ಹಡಗುಗಳನ್ನು ಕಳುಹಿಸಿಕೊಟ್ಟಿದ್ದಾರೆ. ತಮ್ಮ ಕಡೆ ಇವರು ಸೇರಲಿಲ್ಲವೆಂದು ಚೀನಾದ ಉತ್ತರಪ್ರಾಂತದವರು ಮಾತ್ರ ಜಪಾನರಮೇಲೆ ಆಗ್ರಹಗೊಂಡಿದ್ದಾರಂತೆ.

ಶ್ರೀಮನ್ಮಹಾನಿರಂಜನ ಜಗದ್ಗುರುಪ್ರಶಂಸಾ.

ದ್ವಾದಶಮಂಜರೀ.

(ಬೆಂಗಳೂರಿನಲ್ಲಿ ಒಪ್ಪಿಸಲ್ಪಟ್ಟುದು.)

ವಾರ್ಧಕಷಟ್ಪದಿ || ಪ್ರಥಮರಂ ಕಲ್ಯಾಣನಗರಿಗೆಯ್ತರಲಂದು | ವಿಭವದಿಂ ಬಸವೇಶಮುಖ್ಯಸತ್ಪಮಥರ್ಕ | ಳಭಿನಮಿಸಿ ಭಕ್ತಿಯಿಂ ಸತ್ಕರಿಸಿ ಕೃತಕೃತ್ಯರಾದರಾಪ್ರಭುದೇವನ || ಅಭಿನವಪರಾವತಾರನೆನಿಪ್ಪ ಜಯದೇವ |
ವಿಭು ಜಗದ್ಗುರುವಿಂದು ಕಲ್ಯಾಣನಗರಿಯೆಂ | ಬಭಿಧಾನವಾಂತಿರ್ಪ ಪುರಕಿದಕ್ಕೆಯ್ದಿಯಮ್ಮಂ ಕೃತಾರ್ಥರನೆಸಗಿದಂ || ೧ ||

,, ಪರಿಸಮುದ್ಧರ ಸಿದ್ಧಿಯಾಂತಿರ್ದ್ದುಮಪರಶಂ | ಕರನಾಗಿಯುಂ ಬಸವರಾಜನಲ್ಲಮವಿಭುವ | ನಂರ ಚಾಹ್ಯೋ[illegible]ಗಳಿಂ ಪರಿತೃಪ್ತಿಗೊಳಿಸಲಾರದೆ ಭಕ್ತಿಯಿಂ || ಬೆರೆಯುತಾತ್ಮಾರ್ಪಣಮಹೆಸಗಿದರೆನಿಪ್ಪರಿವ | ಶಿರುವಾಸಿಸ

ರ್ನ್ಯಾವದೆಂತು ನಿಮಗತ್ಯಂತ | ಪರಿತೃಪ್ತಿಗೊಳಿಸಲಾರ್ಪೆವು ಬಸವನಂತಿರಾತ್ಮಾರ್ಪಣವನೆಸಗಿದಪೆವು || ೨ ||

ಕಂದಪದ್ಯಂ || ಭವದೀಯಭವ್ಯಮೂರ್ತಿಯ | ನವಲೋಕಿಸಿ ಧನ್ಯವಾದುವೆಮ್ಮಯ ಕಣ್ಗಳ್ || ಕವೆ ನಿಮ್ಮಂಘ್ರಿಯ ಸೊಂಕಿಂ | ಪವಿತ್ರಮಾದತ್ತು ಬೆಂಗಳೂರ್ನಗರವರಂ || ೩ ||

ಭಾಮಿನೀಷಟ್ಪದಿ || ಎಂದು ಧರ್ಮಗ್ಲಾನಿ ಸಮನಿಪು | ದೆಂದು ಗಣನಾಥರ್ಪೊಡವಿಗೈ | ತಂದು ಧರ್ಮವನುದ್ಧರಿಪರೆಂದೆಂಬ ಶಿವವಾಕ್ಯಂ || ಇಂದು ನಿಮ್ಮಧಿಕಾರದಿಂ ಪೆಂ | ಪೊಂದುತಿಹ ಶಿವಸಮಯದುನ್ನತಿ | ಯಿಂದೆ ದೃಷ್ಟಮದಾಗಿ ಯೆಮ್ಮಂ ತುಷ್ಟಿಗೊಳಿಸುತುದು || ೪ ||

,, ಗುರುತೆ ಗುತ್ತಮವಿದ್ಯೆಯೇ ತಿರು | ಳರಿಯ ಲಂತಹ ಬಿಜ್ಜೆಯಿಲ್ಲದ | ಗುರುಗಳೆಲ್ಲಂ ಬುವಿಗೆ ಭಾರಾರ್ಥದ ಮಹಾಗುರುಗಳ್ || ಪಿರಿಯಬಿಜ್ಜೆಗೆ ಜಾನಸಿರಿಗಾ | ನಿರುಪಮಮಹೋದಾರಗುಣಕಾ | ಕರೆನಿಪ ನಿಮ್ಮೊಳ್ ಜಗದ್ಗುರುನಾಮ ಮನ್ವರ್ಥಂ || ೫ ||

ವಾರ್ಧಕಷಟ್ಪದಿ || ಶ್ರೀಮದಲ್ಲಮಗುರುಪರಂಪರಾಗತಮಹಾ | ದ್ವಾಮಶುಭಪೀಠಮಂ ನೀಮಡರ್ದ್ದಂದಿನಿಂ | ಭೂಮಹಿತವಿಖ್ಯಾತಿವೈಭವಂ ಪ್ರಾಚೀನಗೌರವೋದ್ಧೃತಿಯು ಮದಕೆ || ಸೀಮೆಯೊಳ್ನಂದುದಂ ಕಂಡು ಭಕ್ತಸ್ತೋಮ | ಮಾನೋದಮಾಂತಿಹುದು ತಮ್ಮಯ ನಿರೀಕ್ಷೆ ಫಲ | ಗಾಮಿಯಾದುದೆನುತ್ತೆ ಜಯದೇವಮುನಿಪುಂಗವಾಚೇಂದ್ರ ಭಕ್ತಾಬ್ಧಿಚಂದ್ರ || ೬ ||

,, ದೇಶದೇಶಂಗಳೊಳ್ ಸಂಚರಿಸಿ ಬಹುಳವಿ | ದ್ಯಾಶಾಲೆಗಳ ನಂತೆ ವಿದ್ಯಾರ್ಥಿನಿಲಯಮುಮಂ | ನಾಶಮಹುವಿಮಾಗಿರ್ದ ಮಠಗಳುದ್ಧಾರಮುಮಂ ಲೇಸನೆಸಿಯಿರ್ಪ ಮತ್ತಂ || ಈಶಮತಶಿಷ್ಟಮುಂ ಭಕ್ತಸಂತಾನಮುಮ | ದೇಶಿಸುತೆ ನಿಜಸಮಯಮುಮಂ ಸಮುದ್ಧರಿಪೆನೆಂ | ಬಾಶೆಯಿಂ ನೀಮೆಸಗಿದನುಪಮ ಮಹಾಕಾರ್ಯಮಾಗಳುಂ ಸುಫಲಪ್ರದಂ || ೭ ||

ಕಂದಪದ್ಯಂ || ಶರಧಿ ಮುಗಿಲ್ಗೀವ್ವಾನೀರ್ | ವರೆಯೊಳ್ ಮಳೆಯಾಗಿ ಸುರಿದು ಬೆಳಸಾಗಿಪವೊಲ್ || ಗುರುವರ ನಿಮಗೀಭಕ್ತರ್ | ನೆರೆದರ್ಪಿಪ ಕಾಣ್ಕೆ ಮತಕೆ ಹಿತಕರಮಕ್ಕುಂ || ೮ ||

ಭಾಮಿನೀಷಟ್ಪದಿ || ನಾಡಜನ ರದರಿಂದೆ ನಿಮ್ಮಂ | ಬೇಡಿ ಬಿನ್ನಪಮಾಡಿ ಕರೆದೊ | ಯ್ದಾಡರದ ಸಮ್ಮುದದೆ ಭಕ್ತಿಯ ನೀಡಿ ಸೇವಿಪುದು || ನೋಡೆ ಸಹಜಂ ಸಾರ್ಥಮೋಪುದು | ಕಾಡಿ ಧನಮಂ ಸುಲಿದು ಮಠದೊಳ್ | ಕೂಡಿಡುವ ಗುರುನಾಮಕರ್ ನಿಮಗೆಂತು ಸರಿವರ್ಪರ್ || ೯ ||

ವಾರ್ಧಕಷಟ್ಪದಿ || ವಿದ್ಯಾದಿಯೋಗ್ಯತಾತ್ಪರ್ಯಂ ಮಠಾಧ್ಯಕ್ಷ | ರುದ್ಯಮಕ್ಕೆಯ್ದೆ ಲೆಂಕಾಮಠಕ್ಕಂ ಮತಕೆ | ಮುದ್ಯದ್ವಿಭೂತಿ ಸಮನಿಪುದೆಂಬುದಂ ನಿಮ್ಮ ಪೀಠಾಧಿಪತ್ಯದಿಂದೆ || ಅದ್ಯತನಜನರರಿದು ನಡೆಕೊಂಡೊಡದು ಮತಕೆ | ಸದ್ಯಃಫಲಂಗೊಟ್ಟು ಸಲಹುವುದು ಗುರುಕುಲ | ಕ್ಕಾದ್ಯಮಾದ್ಯದ್ವಿನಾಶಪಪ್ರಯಂಕರ ಭಕ್ತಮಂದಾರ ಯಮಿಶೇಖರಾ || ೧೦ ||

ಚಂ|| ವೃ|| ಜಯಜಯ ಭಕ್ತವೃಂದಭವಭೀತಿನಿವಾರಕ ಮುಕ್ತಿದಾಯಕಾ | ಜಯಜಯ ಯೋಗಿರಂಜನ ನಿರಂಜನ ಜಂಗಮವೃಂದನಾಯಕಾ || ಜಯಜಯ ಕಾಲಕಾಮಮದಮರ್ದ್ದನ ಮಾನಿತಶಾಂತಿಭೂಷಣಾ | ಜಯ ಜಯದೇವ ನಿರ್ಮಲಿನಭಾವ ಸುಧಾಮಯದಿವ್ಯಭಾಷಣಾ || || ೧೧ ||

ಕಂ|| ಚಿರಕಾಲಂ ನಿಮ್ಮ ಜಗ | ದ್ಗುರುತಾಶ್ರಯ ದಿರ್ಕೆ ವೀರಶೈವಸಮಾಜ || ಕ್ಕುರುತರಸಕಲಾಭ್ಯುದಯಂ | ದೊರೆಕೊಳ್ಗೆ ಭವತ್ಕೃಪಾಕಟಾಕ್ಷದ ಬಲದಿಂ || || ೧೨ ||

ಶ್ರೀಗುರುಚರಣಾರಾಧಕ
ಎನ್. ಆರ್. ಕರಿಬಸವಶಾಸ್ತ್ರಿ, ಆಸ್ಥಾನವಿದ್ವಾನ್.

ಸ್ವೀಕಾರ.

ಕಳೆದ ವೈಶಾಖಮಾಸದಲ್ಲಿ ನಾಯಕಲ್ಲು ಗೋಸಾಮಿ ಚನ್ನಪ್ಪನವರ ಪುತ್ರ ಚಿ|| ಚಂದ್ರಾಯನಿಗೂ ರೊಟ್ಟಿಡಿಗೆ ಬಸವನಗೌಡರ ಪುತ್ರಿ ಸೌ|| ಚನ್ನಮ್ಮನಿಗೂ ನಡೆದ ವಿವಾಹದಲ್ಲಿ ಶ್ರೀ|| ವೈ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ತೆಗೆದ ೧ ರೂ. ವೇ|| ಬಸವರಾಜಶಾಸ್ತ್ರಿಗಳ ಮೂಲಕವೂ, ಹೊನ್ನುಡಿಕೆಯಲ್ಲಿ ತಾ|| 1.6.19 ರಲ್ಲಿ ನಡೆದ ಗುಬ್ಬಿ ಹೊಸಹಳ್ಳಿ ಒರೇಮಠದ ಚನ್ನದೇವರ ಪುತ್ರಿ ಹುಚ್ಚವೀರಮ್ಮನಿಗೂ ಗುಬ್ಬಿಪೇಟೆ ನವಲೆ ಚನ್ನಮಲ್ಲಶೆಟ್ಟರ ಪುತ್ರ ಬಸಪ್ಪನಿಗೂ ಜರುಗಿದ ವಿವಾಹದಲ್ಲಿ ಅಗ್ರತಾಂಬೂಲಕ್ಕಾಗಿ ತೆಗೆದ ೧ ರೂ. ಯನ್ನು ಹೊನ್ನಶೆಟ್ಟಿಹಳ್ಳಿಪ್ಪನವರ ಮೂಲಕವೂ, ಬಿದರಹಳ್ಳಿ ಸದಾಶಿವಪ್ಪನವರ ಮಗಳು ಸೌ|| ಗಿರಿಜಮ್ಮನನ್ನು ಪಾಳ್ಯದಲ್ಲಿರುವ ವಾಟೀರು ಸುಬ್ಬಣ್ಣನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ೧ ರೂ. ಕಾಡಪ್ಪನವರ ಮೂಲಕವೂ ಸ್ವೀಕರಿಸಿರುತ್ತೇವೆ. ಪ. ಪ್ರ.

ಪತ್ರವ್ಯವಹಾರ.

ಇದೇ ಸಿದ್ಧಾರ್ಥಿನಾಮ ಸಂವತ್ಸರದ ವೈಶಾಖ ಬಹುಳ ಪ್ರತಿಪತ್ ಶುಕ್ರವಾರ ಚಿಕ್ಕಮಗಳೂರು ತಾಲ್ಲೋಕು ಬಸವನಹಳ್ಳಿ ಮಾಗಣಿ ಒರೇಕೊಳಲೆಗ್ರಾಮದ ಶ್ರೀ ನಾರಳಂಕೇಮಠದ ವೇ|| ಮಲ್ಲೇದೇವರಯ್ಯನವರ ಪುತ್ರ ಶಂಕರಪ್ಪಶಾಸ್ತ್ರಿಗಳು ನೂತನವಾಗಿ ನಿರ್ಮಿಸಿರುವ ಉಮಾಮಹೇಶ್ವರ ಭವನದ ಪ್ರವೇಶಮಹೋತ್ಸವವನ್ನು ನಲ್ಲೂರು ಮಠದ ವೇ|| ನಂಜುಂಡಶಾಸ್ತ್ರಿಗಳು ಮುಗುಳುವಳ್ಳಿ ಮಠದ ವೇ|| ಮುಪ್ಪಿನಯ್ಯಶಾಸ್ತ್ರಿಗಳು ಇವರುಗಳಿಂದ ವಿಧಿವತ್ತಾಗಿ ನೆರವೇರಿಸಿ, ಈ ಕಾರ್ಯಕ್ಕಾಗಿ ದಯಮಾಡಿಸಿದ ಮಹಾಜನಂಗಳಿಗೆ ಸಂತರ್ಪಣೆ ನಡೆಯಿಸಲಾಯಿತು. ಬಳಿಗೆ ಶನಿವಾರ ಸದರಿ ಗೃಹದಲ್ಲಿ ಪಂಚಬ್ರಹ್ಮಕಲಶಸ್ಥಾಪನೆಯು ಸದರಿ ಶಾಸ್ತ್ರಿಗಳಿಂದ ನೆರವೇರಿ ಬಂದ ವಟುಗಳಿಗೆ ಶಿವದೀಕ್ಷಾಸಂಸ್ಕಾರವು ಆಗಮೋಕ್ತವಾಗಿ ನೆರವೇರಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ದಯಮಾಡಿಸಿದ ಮಹನೀಯರು ಶ್ರೀಮನ್ನಿರಂಜನ ಶಂಕರದೇವರ ಮಠದ ಶ್ರೀ ಶಂಕರಸ್ವಾಮಿಗಳು ಆಣೂರು ಮಠದ ಶ್ರೀ ಚರಮೂರ್ತಿಗಳು ಬಸಗ್ಗಣಿ ಮಠದ ಶ್ರೀ ಪಟ್ಟದಸ್ವಾಮಿಗಳು, ತಗಡೂರು ಮಠದ ಶ್ರೀ ಪಟ್ಟದಸ್ವಾಮಿಗಳು ಮಾಗಡಿ ಮಠದ ವೇ|| ಮಲ್ಲಿಕಾರ್ಜುನಯ್ಯನವರು ಸಕ್ಕರಾಯಪಟ್ಟಣದ ಮಠದ ವೇ|| ಶಿವನಂಜಯ್ಯನವರು ಐರವಳ್ಳಿ ಮಠದ ವೇ|| ರುದ್ರಯ್ಯನವರು ವೇ|| ಪಂಚಾಕ್ಷರಯ್ಯನವರು ಹೊಸ ಮಠದ ವೇ|| ನಂಜಪ್ಪಯ್ಯನವರು ಚನ್ನಗೌಡನಹಳ್ಳಿ ವೇ|| ಪುಟ್ಟಯ್ಯನವರು, ಸಣ್ಣಯ್ಯನವರು ಸಿದ್ಧಲಿಂಗಯ್ಯನವರು ಇನ್ನೂ ಅನೇಕ ಸಹಸ್ರಾರು ಮಹಾಜನಗಳು ಸಭಾ ಸೇರಿದ ವೇಳೆಯಲ್ಲಿ ಶ್ರೀಮನ್ನಿರಂಜನ ಶಂಕರದೇವರ ಮಠದ ಶ್ರೀ ಶಂಕರಸ್ವಾಮಿಗಳವರು ವೀರಶೈವವಿದ್ಯಾಭಿವೃದ್ಧಿ ವಿಷಯವಾಗಿ ನೀತಿ, ಭಕ್ತಿ, ಜ್ಞಾನ, ವೈರಾಗ್ಯ, ಮತಧರ್ಮವಿಷಯಗಳನ್ನು ಶ್ರೋತೃ ಜನಮನೋರಂಜನವಾಗುವಂತೆ ವೇದಾಗಮಾದಿಪ್ರಮಾಣದಿಂದ ಬೋಧಿಸಿ, ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ವಿಷಯವಾಗಿ ಫಂಡಿಗೂ ಸ್ಟಾರ್‌ಪತ್ರಿಕಾ ಚಿರಜೀವಿತೆಗೂ, ಸಹ ಧನ ಸಹಾಯವನ್ನು ಮಾಡುವಂತೆ ಭಾಷಣಮಾಡಿದರು. ಈ ಫಂಡಿಗೆ ಸದರಿ ಗೃಹಕರ್ತೃಗಳಾದ ಶಂಕರಪ್ಪಶಾಸ್ತ್ರಿಗಳು ವಿದ್ಯಾಫಂಡಿಗೆ (೪) ರೂಪಾಯಿಗಳನ್ನೂ, ಸ್ಟಾರ್ ಪತ್ರಿಕರ್ತರಿಗೆ (೨) ರೂಪಾಯಿಗಳನ್ನೂ ಕೊಡಲೊಪ್ಪಿದರು ಅನಂತರ ಸಭೆ ಬರಖಾಸ್ತಾಗಿ ಬಂದಿದ್ದ ಭಕ್ತಮಾಹೇಶ್ವರ ಮಹಾಜನಗಳಿಗೆಲ್ಲಾ ಸಂತರ್ಪಣೆ ಎರಡು ದಿವಸದವರಿಗೂ ಅವಿಚ್ಛಿನ್ನವಾಗಿ ನಡೆದಿತು.

ಪ್ರತ್ಯಕ್ಷದರ್ಶಿ.

ನಂಜನಗೂಡು.

ಮಹಾಶಯರೆ! ವ್ಯಕ್ತಿವಿಷಯವನ್ನು ಬರೆದು ಬಾಧಕಪಡಿಸುವುದು ಬಲ್ಲವರಿಗೆ ಸಲ್ಲದುದಾದರೂ ದುರಹಂಕಾರಿಗಳ ದುರ್ನಡತೆಯು ನಮ್ಮ ಮೌನವನ್ನು ಭಂಗಪಡಿಸುತ್ತಿರುವುದು. ಸರ್ಕಾರ ನೌಕರರಾದ ಅಧಿಕಾರಿಗಳು ಪಂಗಡಗಳ ಪಕ್ಷಪಾತದಿಂದ ಅತ್ಯಾಚಾರವನ್ನು ನೆರವೇರಿಸಿ, ಸ್ಥಳೀಯರ ಜಾತಿದ್ವೇಷಕ್ಕೆ ಅವಕಾಶಕೊಟ್ಟು ಸಮರ್ಥರೆಂದು ಮೇಲಣ ಅಧಿಕಾರಿಗಳಿಂದ ಬಾಯಿಬಡಿಯುವಂತಾದರೆ— "ಧರ್ಮೋವನಾಂತರ್ಗತಃ" ಎಂದು ಸಜ್ಜನರು ಸಾರಬಾರದೆ? ಧಿಕ್! ದುರ್ಬುದ್ಧಿಯೆ!

ಕೆಲವು ದಿನಗಳಿಗೆ ಮೊದಲು ಇಬ್ಬರು ವೀರಶೈವ ತರುಣರು ಇಲ್ಲಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನಕ್ಕೆ ದರ್ಶನಾರ್ಥವಾಗಿ ಬಂದಿದ್ದರೆಂದೂ, ಅಲ್ಲಿಯ ಒಬ್ಬ ಅಧಿಕಾರಿಯು ಆ ತರುಣಪ್ರವಾಸಿಗಳನ್ನು ಯಾವುದೋ ದೇವರನ್ನು ಮುಟ್ಟಿದರೆಂಬ ನೆವದಿಂದ ಅತ್ಯನುಚಿತದಿನಲ್ಲಿಟ್ಟು ಸಂಪ್ರೋಕ್ಷಣೆ ಎಂಬ ಮುಂತಾಗಿ ಹಲವು ರೂಪಾಯಿಗಳನ್ನು ಸುಲಿದುಕೊಂಡರೆಂದೂ ಪ್ರಬಲ ವರ್ತಮಾನವಿರುವುದು. ಅದೇ ಅಧಿಕಾರಿಯು ಇಲ್ಲಿನ ಮತ್ತೊಬ್ಬ ವರ್ತಕರನ್ನು ಜಾತಾಚೌಟದಲ್ಲಿ ದೇವಸ್ಥಾನಕ್ಕೆ ಬಂದರೆಂಬ ಪ್ರಮಾದದ ಮೇಲೆ ಸ್ವೇಚ್ಛೆಯಾಗಿ ಬೈದು ಅವಮಾನಪಡಿಸಿ ತಾವೇ ಕ್ರಿಮಿನಲ್ ಕೇಸನ್ನು ಮಾಡಿರುವುದಾಗಿಯೂ ಯತ್ನವಿಲ್ಲದೆ ಗಣ್ಯರಾದ ಆ ವರ್ತಕರು ನಿಜಸ್ಥಿತಿಯನ್ನು ಕುರಿತು ಅಧಿಕಾರಿಯ ಮೇಲೆಯೂ ಕ್ರಿಮಿನಲ್ ವ್ಯಾಜ್ಯವನ್ನು ಹೂಡಿರುವರೆಂದೂ ಕೇಳುತ್ತೇವೆ. ಹೀಗೆ ಪಂಗಡಗಳ ದ್ವೇಷವು ಅನಿವಾರ್ಯದ ಮೂಲದಲ್ಲಿಲ್ಲವೇನು? ಅಧಿಕಾರಿಗಳು ಕೆಲವು ಮಂದಿ ಬ್ರಾಹ್ಮಣತರುಣರ ಮುಖಸ್ತುತಿಗೋ ತಿಂಡಿಕೂಟಗಳ ಅಪೇಕ್ಷೆಗೋ ಮರುಳಾಗಬಾರದೆಂದು ನಾವು ವಿಜ್ಞಾಪಿಸುವೆವು. ಮೇಲ್ಕಂಡ ವರ್ತಮಾನಗಳು ಇಲ್ಲಿನ ಹಿಂದುಳಿದವರ ಮನಸ್ಸಿನಲ್ಲಿ ಅತೀವ ಅಸಹ್ಯವನ್ನೂ ವಿಷಾದವನ್ನೂ ಉಂಟುಮಾಡಿರುವುವು. ನಿಷ್ಪಕ್ಷಪಾತಿಗಳಾದ ಅಮಲ್ದಾರರಿಂದಲೂ ಡೆಪ್ಯುಟಿಕಮಿಷನರ್‌ರವರಿಂದಲೂ ಕ್ರಿಮಿನಲ್ ವ್ಯಾಜ್ಯಕ್ಕೆ ಅವಕಾಶಕೊಟ್ಟ ಅಧಿಕಾರಿಗಳನ್ನು ಸಹಸ್ರಾವಧಿ ಯಾತ್ರಿಕರ ಮತ್ತು ನಮ್ಮ ಜಾವಂದರವರ ಮೆಚುಗೆಯನ್ನು ಪಡೆದಿರುವಂತಹ ಸ್ಥಳದಲ್ಲಿ ಇಟ್ಟಿರುವುದು ಸರಿಯೆ?

ದೇವಾಲಯದ ಪೇಷ್ಕಾರರನ್ನು ನಾವು ಪ್ರಾರ್ಥಿಸುವುದಿಷ್ಟೇ. ಮೇಲ್ಕಂಡ ವಿಷಯಗಳು ಸುಳ್ಳಾಗಿದ್ದಲ್ಲಿ ದಯವಿಟ್ಟು ನಿಜಸ್ಥಿತಿಯನ್ನು ಬರೆದು ಕಳುಹಿಸುವುದರ ಮೂಲಕ ಪ್ರಜೆಗಳ ಮತ್ತು ಪ್ರಭುವರ್ಗದವರ ಮೆಚ್ಚುಗೆಗೆ ಪಾತ್ರರಾಗಲಿ; ಇಲ್ಲವಾದಲ್ಲಿ ನಾವು ಸಾಮಾನ್ಯರೂ ನಿಜವೆಂದೇ ನಂಬುವೆವು. ಆಶ್ರಯದಿಂದಲೂ ಅಧಿಕಾರಿಗಳ ಬಾಂಧವ್ಯದಿಂದಲೂ ಎಲ್ಲವನ್ನೂ ನುಂಗಬಹುದೆಂದು ಪ್ರತೀತಿ ಇರುವುದು. ಒಂದು ವೇಳೆ ಈ ವಿಷಯದಲ್ಲಿಯೂ ಸಂಭವವಾಗಬಹುದಾದರೆ ಪರಿಣಾಮವು ಅಷ್ಟೇನೂ ಹಿತಕಾರಿಯಾಗಲಾರದು. ಮುಖ್ಯವಾಗಿ ಭಗವಂತನ ಸಾನ್ನಿಧ್ಯದಲ್ಲಿ ಸಮದರ್ಶಿಗಳಾಗಿ ಭಕ್ತಾದಿಗಳಿಗೆ ಅನುಕೂಲ್ಯಗಳನ್ನು ಕಲ್ಪಿಸಿ ಕೀರ್ತಿಯನ್ನೂ ಪುಣ್ಯವನ್ನೂ ಪಡೆಯುವ ಅಧಿಕಾರಿಗಳಿರಬೇಕೆಂದು ನಾವು ಸರ್ವರ ಪರವಾಗಿಯೂ ಪ್ರಾರ್ಥಿಸುವೆವು.

ಸತ್ಯವಾದಿ.
ನಂಜನಗೂಡು.

ಒಂದು ತಿಂಗಳವರಿಗೆ ಮಾತ್ರ. 1
ಇನಾಂ. 12 ಸೆಂಟ್‌ಬಾಟ್ಲಿಗಳು. ಇನಾಂ.
ಬೆಸ್ಟ್ ಪೌಂಟನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟನ್ ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಡಜನ್ ರೋಸ್ ಸೆಂಟ್‌ಬಾಟ್ಲಿಗಳು ಇನಾಂ ಕೊಡಲ್ಪಡುತ್ತೆ.
ಬಹುಮಾನಸಹಿತ ಕ್ರಯ ಪೇನಾ 1 ಕ್ಕೆ ರೂ. 1—4—0.
ವಿಳಾಸ:—ಟಿ. ರಾಮಚಂದ್ರ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಫೋಟೋಲಾಕೇಟ್ಸ್.

ಈ ಪ್ರಕಾರ ಘಡಿಯಾರದ ಸರಗಳಿಗೆ ಹಚ್ಚುವ ಲಾಕೇಟಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೂಚಗಳೂ, ಅಪೂರ್ವವಾದ ಅತ್ಯಂತ ಪ್ರಾಸ್ಪ್ಯಯುಳ್ಳದ್ದು ಆದರಿಂದ ತಮ್ಮ ಇಚ್ಛೆಯ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ಪೂದದಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ, ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮಹಮದೀಯ ಧರ್ಮದ ಜಂದಾಪೀರಸಾಹೇಬ ಅಜಮೀರದ ಖ್ವಾಜಾವಲಿ, ಮುಂತಾದ ಬೇಕವುಳ್ಳದ ಅನೇಕ ದೇವತಾ ಮತ್ತು ಸಾಧೂ ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೇ. ಲಾಕೇಟಾದಲ್ಲಿ ೨, ಬ್ರೂಚದಲ್ಲಿ ೧, ಫೋಟೋ ಇರುವವೂ ಕ್ರಯ ೧ಲ್ಲ ಬ್ರೂಚವೂ ೬, ೮, ಆಣೆ. ರೋಲಗೋಲ್ಡ ಬ್ರೂಚವೂ ರೂ. ೧—೨—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳಿಯವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿವುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವು ಕ್ರಯ ರೂ. ೧—೧೨—೦ ಪಾವಲಿ ಆಕಾರದ ಪ್ಲೇನ ಮತ್ತು ಪ್ಯಾನ್ಸಿ ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ತಿತ್ತಿ ಆಕಾರವೂ, ಅಥವಾ ಗುಂಡ ಆಕಾರವೂ ಇರುವವುಗಳ ಕ್ರಯ ರೂ. ೧-೪-೦ ೧—೮—೦.

ಇವುಗಳ ಪೂರ್ತ ನಮ್ಮ ಕಾರಖಾನಾದಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸುದರ್ಶನಲಾಭ, ೪ ಪಂಚಮುಖದ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಶರಭಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾವೇರಿ ಕಮತಗಿ ಹುಚ್ಚಪ್ಪನವರೂ ಸಿರಸಂಗಿ ಸರದೇಸಾಯಿ, ರುದ್ರಗವಡ್ರು, ಮುಂತಾದ ಅನೇಕ ಸಾಧೂ ಸತ್ಪುರುಷರದೂ ಫೋಟೋ ಸಿಗುತ್ತವೆ. ಕ್ರಯ ಪೂಲಸ್ಕೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಪ್ರತಿನಂದ ಊರಿಗೆ ಮಾರಾಟನಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟಾಂಪ್ ಕಳುಹಿಸಿ ಕೊಟ್ಟು ಕ್ಯಾಟ್ಲಾಗಬುಕ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.
ದಿ ಶಾರದಾ ಫೋಟೋ ಕಂಪನಿಯ ಮಾಲಕ,
6 ಗಂಗಪ್ಪಾ ಜೇಸಗೇ ಸೋಲ್ಲಾಪುರ ಸಿಟಿ.

ಸುಸಮಯ! ಜಾಗ್ರತೆಮಾಡಿ. ಸುಸಮಯ!!
ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.
ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿಸಲಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟಕರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಒಂದು ಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗವ ಪುಸ್ತಕದ ಬೆಲೆ 0—3—0 ಮಾತ್ರ ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ)
2 ಜೆ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಪರತ.) 20
ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಮದನೋದ್ಭವಗುಳಿಗೆ.
ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.
ನಪುಂಸಕತ್ವಾರಿ ತೈಲವು.
ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.
ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.
ನಮ್ಮ ದರ್ಬಾರ್ ಸೋಪು
ಗಂದೆ, ನೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.
3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.
20 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಜೂನ್ ತಾ|| ೨೨ ರಿಂದ ೧೯೧೯ ನೆಯ ಜೂನ್ ತಾ|| ೨೮ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಜ್ಯೇಷ್ಠ ಬ|| ನವಮಿಯಿಂದ ಆಷಾಢ ಶು|| ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
22	ಭಾನು	ನವಮಿ	25-45	ರೇವತಿ	46-44	8
23	ಸೋಮ	ದಶಮಿ	19-57	ಅಶ್ವಿನಿ	42-45	9
24	[1] ಮಂಗಳ	ಏಕಾದ	13-50	ಭರಣಿ	38-30	10
25	ಬುಧ	ದ್ವಾದಶಿ	7-38	ಕೃತ್ತಿಕ	34-16	11
26	ಗುರು	ತ್ರಯೋ	1-28	ರೋಹಿ	53-55	12
27	[2] ಶುಕ್ರ	ಅಮಾ	50-0	ಮೃಗಶಿರ	26-34	13
28	ಶನಿ	ಪಾಡ್ಯ	45-9	ಆರಿದ್ರಾ	23-32	14

(1) ದ್ವಾದಶೀ ತಿಥಿ, ಸರ್ವತ್ರ ಸಾರ್ವೇಕಾದಶಿ. (2) ಸರ್ವತ್ರಮಾವಾಸ್ಯಾ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ಲ್ಯಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಭಾನುವಾರ ಪ್ರಕಟಸಲ್ಪಡುವುದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೈಷಾ | ಘನಪಥಕೃತಾವತಾರಾ ಪಕ್ಯಜ ಸಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಜೂನ್ ತಾರೀಖು ೨೯ ನೆಯ ಭಾನುವಾರ. (ಸಂಚಿಕೆ ೨೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೮ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.
ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.
ಕ್ರಯ ಡಬ್ಬ 1 ಕ್ಕೆ 1—0—0. ರೂ.
ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.
ವಿಳಾಸ:—ರಾಸ್ ವಾಚ್ ಅಂಡ್ ಕೊ,
21 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಟೀಕ ಶತಕತ್ರಯ	೧—೦—೦
ಟೀಕ ವೀರಶೈವ ವಿವಾಹವಿಧಿ	೦—೮—೦
ವಪೂಜಾವಿಧಿ	೦—೧೦—೦
ರುಶೀಲಶಾಸ್ತ್ರ	೦—೫—೦
ರಿದಾಸಿ	೦—೪—೦
ತಪಂಚಕ	೦—೨—೦
ಲುವಿದ್ಯಾ (ಮುಕ್ತಿಸಾಧನ)	೦—೨—೦
ರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.

ಈಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.
ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.
ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.
ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು.



ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,
ಕ್ರಯ 1 ಕ್ಕೆ 5—8—0.
ವಿಳಾಸ:—ರಾಸ್ ವಾಚ್ ಅಂಡ್ ಕೊ,
21 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.
ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇವೆ. ಕ್ರಯ ೧೨ ಆಣೆ.
38 ವಿಳಾಸ—ಎಂ. ಎಂ. ಹರ್ಡೀಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 28
ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.
ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.
ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.
ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದೆ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೋಕ್ಷೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.
ವಿಳಾಸ—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.
1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲುಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2-13.0, 25 ಕ್ಕೆ 5.3.0.
ನಮ್ಮ ವಿಳಾಸ:—ಶ್ರೀ ಸೀತಾರಾಘವ
28 ವೈದ್ಯಶಾಲಾ, ಮೈಸೂರು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.
ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.
ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.
23 ವಿಳಾಸ—ಎಂ. ಎಂ. ಹರ್ಡೀಕರ್, ದಾವಣಗೆರೆ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ
ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.
ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.
ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
31 ಸಾಹುಕಾರಪೇಟೆ, ಮದರಾಸ್

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜೂನ್ ತಾ|| ೨೯ ನೆಯ ಭಾನುವಾರ.

ನಿಯಮನಿರ್ಮಾಣಸಭೆ.

(ಗ್ರಾಮಾಂತರಗಳ ಯೋಗಕ್ಷೇಮ)

ಕಳೆದ ತಾ|| ೨೦ ರಲ್ಲಿ ಬೆಂಗಳೂರಿನೊಳಗೆ ಅ|| ದಿವಾನ್ ಮ|| ಬಾನರ್ಜಿ ಯವರ ಅಧ್ಯಕ್ಷತೆಯಿಂದ ಕೂಡಿದ್ದ ನಿಯಮನಿರ್ಮಾಣ ಸಭೆಯೊಳಗೆ ನಡೆದ ಚರ್ಚೆಗಳಲ್ಲಿ ಪ್ರಜಾಪಕ್ಷದ ಸಭಿಕರು ಕೆಲವರು ನಡೆಯಿಸಿದ ಚರ್ಚೆಗಳು ಮುಖ್ಯವಾಗಿದ್ದುವು. ಅವುಗಳಲ್ಲೂ ರಾ||ಸಾ|| ಚನ್ನಯ್ಯನವರು ಗ್ರಾಮಾಂತರಗಳ ಯೋಗಕ್ಷೇಮವನ್ನು ಪ್ರಭುತ್ವದವರು ವಿಶೇಷವಾಗಿ ಗಮನಿಸಬೇಕೆಂದು ಹೇಳಿದ ಉಪಪಾದನೆಗಳು ಗಮನೀಯವಾಗಿದ್ದುವು. ಸರ್ಕಾರಕ್ಕೆ ಬರತಕ್ಕ ಉತ್ಪತ್ತಿಯಲ್ಲಿ ಹೆಚ್ಚಿನಭಾಗವು ಗ್ರಾಮಾಂತರದ ಜನಗಳಿಂದಲೇ ಬರುತ್ತದೆ. ಆದರೆ ಅದರಲ್ಲಿನ ವಿಶೇಷಭಾಗವು ಪಟ್ಟಣನಿವಾಸಿಗಳ ಹಿತಕ್ಕಾಗಿಯೇ ಉಪಯೋಗಿಸಲ್ಪಡುತ್ತಿದೆ. ಗ್ರಾಮಾಂತರದ ರೈತರು ಸರ್ಕಾರಕ್ಕೆ ತೆರುತ್ತಿರುವಷ್ಟು ಕಂದಾಯಕಾಣಿಕೆಗಳಿಗೆ ತಕ್ಕಷ್ಟು ಪ್ರತಿಫಲವು ಸರ್ಕಾರದಿಂದ ಅವರಿಗೆ ಆಗುತ್ತಿರುವುದಿಲ್ಲ. ಗ್ರಾಮಾಂತರಗಳಿಗೆ ಸರಿಯಾದ ಮಾರ್ಗಗಳಿಲ್ಲ. ಅವರಿಗೆ ವೈದ್ಯಸಹಾಯವೂ, ವಿದ್ಯಾಭ್ಯಾಸ ಸೌಕರ್ಯವೂ, ಆರೋಗ್ಯದೇರ್ಪಾಟೂ ಎಷ್ಟುಮಾತ್ರಕ್ಕೂ ಸಾಲವು. ಪ್ರಭುತ್ವದವರು ಮೊದಲು ಈ ಲೋಪಗಳನ್ನು ನಿವಾರಣೆಮಾಡಿಕೊಡಬೇಕು. ವೆಚ್ಚಕ್ಕೆ ಹಣಸಾಲದಿದ್ದರೆ ಆದಾಯದ ಮೇಲಣ ತೆರಿಗೆ ಮೊದಲಾದುವುಗಳನ್ನು ವಿಧಿಸಿ ಶ್ರೀಮಂತರಿಂದಲೂ ಸರ್ಕಾರಕ್ಕೆ ತಕ್ಕಷ್ಟು ವರಮಾನವಾಗುವಂತೆ ಮಾಡಿಕೊಳ್ಳಬೇಕು ಎಂದು ಮೊದಲಾಗಿ ಹೇಳಿದರು. ರಾ|| ಸಾ|| ಚನ್ನಯ್ಯನವರು ಪ್ರತಿಪಾದಿಸಿರುವ ಈ ವಿಷಯವು ಸಂಪೂರ್ಣವಾದ ನಿಜಸ್ಥಿತಿಯಾಗಿರುವುದು. ಇದನ್ನು ಅಯಥಾರ್ಥವೆಂದಾಗಲೀ ಉತ್ಪ್ರೇಕ್ಷೆಯೆಂದಾಗಲೀ ಅನ್ಯಾಯವೆಂದಾಗಲೀ ಯಾರೂ ಹೇಳಲಾರರು. ಇಂಥ ವಿಷಯವನ್ನು ಪ್ರಭುತ್ವದವರು ಮುಖ್ಯವನ್ನಾಗಿ ಎಣಿಸದೆ ಇದುವರೆಗೆ ಉದಾಸೀನ ಮಾಡಿರುವುದೇ ತಪ್ಪಾಗಿರುವುದು. ಇನ್ನಾದರೂ ಅದಕ್ಕೆ ವಿಶೇಷ ಲಕ್ಷ್ಯವನ್ನು ಕೊಡದಿದ್ದರೆ ಗ್ರಾಮಾಂತರದವರ ವಿಷಯದಲ್ಲಿ ಅವರು ಕನಿಕರವಿಲ್ಲದವರೆಂತಲೇ ಭಾವಿಸಲ್ಪಡುವರಲ್ಲದೆ ಕೃತಘ್ನತಾದೋಷಕ್ಕೂ ಪಾತ್ರರಾಗಬೇಕಾಗುವುದು.

ಪ್ರಭುತ್ವದವರು ತಾವು ನಡೆಯಿಸುವ ಪ್ರತಿಯೊಂದು ದೇಶಾಭ್ಯುದಯ ಕಾರ್ಯಗಳಲ್ಲೂ ಪಟ್ಟಣಿಗರನ್ನು ಸ್ವಂತದ ಮಕ್ಕಳಂತೆಯೂ ಗ್ರಾಮಾಂತರದ ಪ್ರಜೆಗಳನ್ನು ಹೆರರ ಮಕ್ಕಳಂತೆಯೂ ಕಾಣುತ್ತಿರುವರೆಂದು ಈಗ ಅನೇಕರು ಬಾಯ್ಬಿಟ್ಟು ಹೇಳಿಕೊಳ್ಳುವ ಸ್ಥಿತಿ ಬಂದಿರುತ್ತದೆ. ಹೀಗಿರುವುದು ಸುಳ್ಳಲ್ಲ. ಪಟ್ಟಣಿಗರಿಗೆ ವಿದ್ಯೆ, ವೈದ್ಯ, ಆರೋಗ್ಯ, ದೀಪ, ನೀರು, ಮಾರ್ಗ ಇತ್ಯಾದಿಗಳ ಸೌಕರ್ಯಗಳನ್ನು ಸರ್ಕಾರದವರೇ ವಿಶೇಷ ವ್ಯಯದಿಂದ ೧ ಕ್ಕೆ ನಾಲ್ಕರಷ್ಟನ್ನು ಮಾಡಿಕೊಡುತ್ತಿರುವರು. ಗ್ರಾಮಾಂತರದ ಜನರು ಊರುಗಳಿಗೆ ಹೋಗುವ ದಾರಿಗಳಿಗಾಗಲೀ ಓದುವ ಶಾಲೆಗಳಿಗಾಗಲೀ ಕುಡಿಯುವ ನೀರಿಗಾಗಲೀ ಮತ್ತಾವ ವಿಧದ ಏರ್ಪಾಟಿಗಾಗಲೀ ಸರ್ಕಾರದವರನ್ನು ಪ್ರಾರ್ಥಿಸಿದರೆ "ನೀವೆಷ್ಟು ಹಣವನ್ನು ಅದಕ್ಕಾಗಿ ಕೊಡುವಿರಿ?" ಎಂಬುದೇ ಸರ್ಕಾರದವರ ಮೊದಲನೆ ಉತ್ತರವಾಗಿರುತ್ತದೆ. ಪಟ್ಟಣಗಳಲ್ಲಿ ಬೀದಿಬೀದಿಗಳಿಗೆ ಪಾಠಶಾಲೆಗಳಿವೆ. ಗ್ರಾಮಾಂತರಗಳಲ್ಲಾದರೂ ಊರಿಗೊಂದೊಂದೂ ಇರುವುದಿಲ್ಲ. ನಗರಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವಸತಿಗೃಹಗಳನ್ನು ಸರ್ಕಾರದವರೇ ಕಟ್ಟಿಸಿಕೊಟ್ಟಿದ್ದಾರೆ. ಗ್ರಾಮಾಂತರಗಳಲ್ಲಾದರೋ ಪಾಠಶಾಲೆಗಳನ್ನೂ ಕೂಡ ರೈತರುಗಳೇ ಕಟ್ಟಿಸಿಕೊಳ್ಳಬೇಕಾಗಿದೆ. ಪುರನಿವಾಸಿಗಳಿಗೆ ಮೊಹಲ್ಲೆಗೊಂದೊಂದು ವೈದ್ಯಾಲಯವಿದ್ದರೆ ಗ್ರಾಮಾಂತರದವರಿಗೆ ಭವರೋಗವೈದ್ಯನೇ ದಿಕ್ಕಾಗಿದ್ದಾನೆ. ನಾಗರಕರು ದಿವ್ಯವಾದ ಉದ್ಯಾನಗಳ ವಿಹಾರಸೌಭಾಗ್ಯವನ್ನನುಭವಿಸುತ್ತಿದ್ದರೆ ಗ್ರಾಮಾಂತರದವರಿಗೆ ಗೋಮಾಳಗಳ ಉಳಿಗಾಲವೂ ಕೂಡ ಇರುವುದಿಲ್ಲ. ಪಟ್ಟಣಗಳಲ್ಲಿ ಇದ್ದ ಮನೆಗಳನ್ನು ಕಿತ್ತು ಇಲ್ಲದ ಮನೆಗಳನ್ನು ಹುಟ್ಟಿಸಿ ಅಲಂಕರಿಸುವುದಕ್ಕೆ ಲಕ್ಷಾಂತರ ರೂ. ಗಳು ನೀರಿಗಿಂತ ಕಡೆಯಾಗಿ ವೆಚ್ಚಮಾಡಲ್ಪಡುತ್ತಿದ್ದರೂ ಗ್ರಾಮಾಂತರದವರಿಗೆ ಗಾಳಿಬೆಳಕಿಗೆ ಆಶ್ರಯವಿರುವಂಥ ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೂ ಸರ್ಕಾರದ ಸಹಾಯವಿಲ್ಲ. ಇತ್ಯಾದಿ ಪಕ್ಷಪಾತಗಳು ಏತಕ್ಕೆ ನಡೆಯಬೇಕು ? ಇದು ಅನ್ಯಾಯವಲ್ಲವೆ ? ಇದು ಪರಿಹರಿಸಲು ಸಾಧ್ಯವಾದುದಲ್ಲವೆ ? ನಗರಪ್ರಜೆಗಳಂತೆಯೇ ಗ್ರಾಮೀಣಪ್ರಜೆಗಳನ್ನೂ ಕಾಪಾಡತಕ್ಕುದು ಪ್ರಭುತ್ವದ ಧರ್ಮವಲ್ಲವೆ ? ಆದಾಗ್ಯೂ ಈ ವಿಷಯವನ್ನು ಅವರು ಉಪೇಕ್ಷೆಮಾಡುತ್ತಲಿರುವುದು ಧರ್ಮವಾಗಿಲ್ಲ. ಪ್ರಜಾಪ್ರತಿನಿಧಿಸಭೆಯಲ್ಲೂ ನಿಯಮನಿರ್ಮಾಣಸಭೆಯಲ್ಲೂ ಗ್ರಾಮಾಂತರದ ರೈತರ ಹಿತಾಪೇಕ್ಷಿಗಳಾದ-ಅವರ ಕಷ್ಟಸುಖಗಳನ್ನು ಅವರ ಸಹವಾಸಾದಿಗಳಿಂದ ಅನುಭವಿಸಿದ-ಪ್ರತಿನಿಧಿಗಳು ವಿಶೇಷವಾಗಿರುತ್ತಿದ್ದರೆ ಗ್ರಾಮಾಂತರದವರ ದುರವಸ್ಥೆಯು ಇಷ್ಟು ಮಟ್ಟಿಗಿರುತ್ತಿರಲಿಲ್ಲ. ರೈತರ ಹಿತಚಿಂತನೆಯನ್ನು ಮಾಡತಕ್ಕ ಪ್ರತಿನಿಧಿಗಳ ಸಂಖ್ಯೆಯು ಸರ್ಕಾರಿ ಸಭೆಗಳಲ್ಲಿ ಹೆಚ್ಚಬೇಕು. ಗ್ರಾಮಾಂತರಗಳಿಗೆ ಬೇಕಾದ ಸೌಲಭ್ಯಗಳನ್ನು ಕುರಿತು ಪದೇಪದೇ ಸರ್ಕಾರದ ಕಿವಿಗೆ ಕೂಗಿಹೇಳುವವರು ಹೆಚ್ಚಾಗಬೇಕು. ಹಾಗಲ್ಲದೆಹೋದರೆ ಇನ್ನು ಶತಮಾನಕಾಲವಾದರೂ ಗ್ರಾಮಾಂತರದವರ ಕಷ್ಟಗಳು ನೀಗಲಾರವು. ರಾ|| ಸಾ|| ಚನ್ನಯ್ಯನವರೂ ಅವರಂತೆಯೇ ಇನ್ನು ಕೆಲ ಸಭಿಕರೂ ಈ ವಿಷಯವನ್ನು ಇಷ್ಟಕ್ಕೇ ಬಿಡದೆ ಬಿಗಿಪಟ್ಟಿನಿಂದ ಹಿಡಿದು ಪ್ರಭುತ್ವದವರ ಗಮನಕ್ಕೆ ಪದೇಪದೇ ತರುತ್ತ ಬರುವವರಾದರೆ, ಅದರಿಂದ ನಮ್ಮ ಗ್ರಾಮಾಂತರಗಳಿಗೆ ಮಹೋಪಕಾರವನ್ನು ಮಾಡಿದ ಕೀರ್ತಿಗೂ ಗ್ರಾಮಾಂತರದ ಜನರ ಕೃತಜ್ಞತೆಗೂ ಅವರು ಪಾತ್ರರಾಗುವರು. ಮ|| ಎಂ. ಬಸವಯ್ಯ ಬಿ. ಎ, ಬಿ. ಎಲ್., ರವರೂ, ಮ|| ಎಂ. ಸುಬ್ಬಯ್ಯ ಬಿ. ಎ. ಯವರೂ ಸಹ ಗ್ರಾಮಾಂತರದವರ ಹಿತಾಭಿವೃದ್ಧಿ ವಿಷಯವನ್ನು ಪ್ರತಿಯೊಂದು ರಾಜಕೀಯಸಭೆಗಳಲ್ಲೂ ಚರ್ಚಿಸದೆ ಬಿಡುವುದಿಲ್ಲ. ಇತರ ಸಭಿಕರುಗಳೂ ಸಹ ದೇಶಸಂಪತ್ತಿಗೆ ವಿಶೇಷತಃ ಕಾರಣಭೂತರಾಗಿರುವ ರೈತಜನರುಗಳ ಕ್ಷೇಮಚಿಂತನೆಯ ವಿಷಯದಲ್ಲಿ ಶ್ರದ್ಧೆಯನ್ನು ವಹಿಸಿ ಕೆಲಸಮಾಡುತ್ತ ಬಂದರೆ, ನಮ್ಮ ದೇಶದ ಗ್ರಾಮಾಂತರಗಳು ಮಾದರಿ ಸಂಸ್ಥಾನವೆಂದು ಹೇಳಿಸಿಕೊಳ್ಳುವ ನಮ್ಮ ದೇಶವನ್ನು ಬಹಿರಲಂಕರಣದಲ್ಲಿ ಮಾತ್ರವೇ ಅಲ್ಲದೆ ಅಂತಸ್ಸ್ವರೂಪದಲ್ಲೂ ಮಾದರಿಯೆನಿಸುವಂತೆ ಮಾಡಲು ಸಾಧಕವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಸಂಧಿಸಭೆ.

ಜರ್ಮನರು ಸಂಧಿಪತ್ರಕ್ಕೆ ಕೈಬರಹವನ್ನು ಹಾಕುವುದಿಲ್ಲವೆಂಬ ಸುದ್ದಿಯೇ ಬಲವಾಗಿ ಹೊರಬಿದ್ದಿತು. ಆದರೆ ಮಿತ್ರಮಂಡಲಿಯಲ್ಲಿ ಅನೇಕರು ಎಂದಿಗೂ ಹಾಗಾಗುವುದಿಲ್ಲವೆಂದು ನಂಬಿದ್ದರು. ಏಕೆಂದರೆ ಶತ್ರುಗಳ ಬಲಾಬಲವು ಅವರಿಗೆ ಚೆನ್ನಾಗಿ ಗೊತ್ತಾಗಿದ್ದಿತು. ನಯಮಾರ್ಗದಿಂದ ಅದು ಸಾಧ್ಯವಾಗದಿದ್ದರೆ ಭಯಮಾರ್ಗದಿಂದಲಾದರೂ ಸಾಧಿಸಿಕೊಳ್ಳಬಲ್ಲೆವೆಂಬ ಧೈರ್ಯವು ಅವರಿಗಿದ್ದಿತು. ಅದಕ್ಕೆ ತಕ್ಕಂತೆ ಶತ್ರುಗಳನ್ನು ಅಂಜಿಸಲು ಸರ್ವಸನ್ನಾಹವನ್ನೂ ಮಾಡಿಕೊಂಡಿದ್ದರು. ಸಂಧಿಪತ್ರಕ್ಕೆ ಜರ್ಮನರು ಕೈಬರಹ ಹಾಕಲಿಲ್ಲವೆಂದು ಸಿದ್ಧವಾದ ಕೂಡಲೇ ಪಶ್ಚಿಮದಿಕ್ಕಿನಿಂದ ಜರ್ಮನಿಗೆ ನುಗ್ಗುವುದಕ್ಕೆ ಜನರಲ್ ಫಾಕ್‌ರವರು ೭|| ಲಕ್ಷ ಸೈನ್ಯವನ್ನು ಸಿದ್ಧಗೊಳಿಸಿ ನಿಲ್ಲಿಸಿದ್ದರು. ನುಗ್ಗಿದ ಮೂರು ಗಂಟೆಗಳೊಳಗಾಗಿ ಎಸ್ಸೆಲ್ ಜಿಲ್ಲೆಯೊಳಗೆ ಒಳ್ಳೆ ಆಯಪಟ್ಟಿನ ಜಾಗವಾದ ಫ್ರಾಂಕ್‌ಫರ್ಟ್ ಪಟ್ಟಣವನ್ನು ಹಿಡಿದುಕೊಳ್ಳಲು ಹವಣಿಸಿದ್ದರು. ಜಲಮಾರ್ಗದಿಂದ ನುಗ್ಗಿ ಜರ್ಮನಿಯನ್ನು ಮುತ್ತುವುದಕ್ಕೆ ಬಾಲ್ಟಿಕ್‌ಸಮುದ್ರಮಾರ್ಗದಿಂದ ಇಂಗ್ಲೀಷರ ೧೨ ಕ್ರ್ಯೂಯಿಜರುಗಳೂ ಅನೇಕ ಡಿಸ್ಟ್ರಾಯರುಗಳೂ ಕಳುಹಿಸಲ್ಪಟ್ಟಿದ್ದುವು. ಆಕಾಶಮಾರ್ಗದಲ್ಲಿ ಹೋಗಿ ವಿಮಾನಗಳನ್ನು ಪರಿಶೋಧಿಸುವುದಕ್ಕಾಗಿ ೨ ಇಂಗ್ಲೀಷ್ ವಿಮಾನಗಳು ಜರ್ಮನರ ಹೆಲಿಗೋಲ್ಯಾಂಡ್, ಕೀಲ್‌ಕಾಲ್ವೆ, ಬರ್ಲಿನ್‌ಪಟ್ಟಣ-ಈ ಕಡೆಗಳಲ್ಲೆಲ್ಲಾ ಸಂಚರಿಸಿಕೊಂಡು ಹೋದುವು. ಇದರಮೇಲೆ ಜರ್ಮನಿಗೆ ಸಾಗಿಸಿಕೊಡುತ್ತಿದ್ದ ಆಹಾರಾದಿ ಸಾಮಗ್ರಿಗಳನ್ನೆಲ್ಲಾ ತಡೆದುಬಿಡುವುದಕ್ಕೂ ಮಿತ್ರಮಂಡಲಿಯವರು ಏರ್ಪಡಿಸಿದ್ದರು. ಅಮೇರಿಕಾದಿಂದ ಅನೇಕಾಹಾರಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಜರ್ಮನ್ ಹಡಗುಗಳನ್ನು ಸಂಧಿ ಜರುಗುವವರೆಗೂ ಬಿಟ್ಟುಕೊಡುವುದಿಲ್ಲವೆಂದು ಹೇಳಿ ಡೌನ್ಸಿನ ಹತ್ತಿರ ತಡೆದುಬಿಟ್ಟರು. ಇವುಗಳ ಮೇಲೆ ಜರ್ಮನಿಯೊಳಗೆ ಯುದ್ಧದಿಂದ ಬೇಸತ್ತ ಜನರು ಹೊಟ್ಟೆಗಿಲ್ಲದೆಯೂ ಉದ್ಯೋಗವಿಲ್ಲದೆಯೂ ತಾಪತ್ರಯಪಡುತ್ತಿರುವ ಜನರೂ ಸಹ ಹೇಗಾದರೂ ಸಂಧಿ ನಡೆದುಹೋದರೆ ಸಾಕೆಂದು ಒತ್ತರಪಡಿಸುವವರಾಗಿದ್ದರು. ಅವರ ಪ್ರಭುತ್ವದಲ್ಲಿ ಒಮ್ಮತವಿರಲಿಲ್ಲ. ಅವರಲ್ಲಿನ ಇಂಡಿಪೆಂಡೆಂಟ್ ಪಕ್ಷದವರು ಸಂಧಿಗೇ ಅನುಕೂಲರಾಗಿದ್ದರು. ಅವರ ಸ್ವಕೀಯ ಸೇನಾಶಕ್ತಿಯು ಮಿತ್ರಮಂಡಲಿಯನ್ನು ಪ್ರತಿಭಟಿಸುವಮಟ್ಟಿಗಿಲ್ಲವೆಂಬುದು ಅವರಿಗೇ ಗೊತ್ತಾಗಿದ್ದಿತು. ಅದುಕಾರಣ, ಅವರು ಬರಿಯ ಹಠದಿಂದ ಪ್ರಯೋಜನವಿಲ್ಲವೆಂದೂ, ಸಾಧ್ಯವಾದಮಟ್ಟಿಗೂ ಸಂಧಿನಿಬಂಧನೆಗಳ ಬಿಗಿಯನ್ನು ಕಡಿಮೆಮಾಡಿಸುವುದಕ್ಕೆ ಹೋರಾಡಿ ನೋಡುವೆವೆಂದೂ ಪ್ರಯತ್ನಿಸಿದ್ದು, ಇನ್ನು ಎಳೆದಾಡುವುದರಲ್ಲಿ ಲಾಭವಿಲ್ಲವೆಂಬುದು ಗೊತ್ತಾದ ಕೂಡಲೇ ನಿರುಪಾಯರಾಗಿ ಸಂಧಿಪತ್ರಕ್ಕೆ ಕೈಬರಹವನ್ನು ಹಾಕುವುದನ್ನೇ ನಿರ್ಧರಿಸಿದರು. ಅವರು ಹಾಗೆ ನಿರ್ಧರಿಸಿದರೆಂಬ ಸುದ್ದಿಯು ಲಂಡನ್ ಪಟ್ಟಣಕ್ಕೆ ತಾ|| ೨೩ ರ ಸಾಯಂಕಾಲವೇ ಗೊತ್ತಾಯಿತು. ತಾ|| ೨೮ ರಲ್ಲಿ ಅದು ನೆರವೇರಬಹುದೆಂದು ೨೩ ನೆ ತಾ|| ಸಾಯಂಕಾಲ ೬|| ಗಂಟೆ ಹೊತ್ತಿನಲ್ಲಿ ಅಧಿಕಾರಪೂರ್ವಕವಾಗಿ ಇಂಗ್ಲೀಷರು ಪ್ರಕಟಿಸಿದರು. ತಾ|| ೨೩ ನೆ ರಾತ್ರಿಯಲ್ಲಿ ಪ್ಯಾರಿಸ್ಸಿನಿಂದ ಪ್ರಕಟಿತವಾದ ತಂತ್ರೀವಾರ್ತೆಯಲ್ಲಿ ಜರ್ಮನ್ ಪ್ರತಿನಿಧಿಗಳು ಸಂಧಿನಿಬಂಧನೆಗಳಿಗೆ ಒಪ್ಪಿ ಹಸ್ತಾಕ್ಷರವನ್ನು ಹಾಕಲು ಸಿದ್ಧರಾಗಿರುವರೆಂದೂ, ಆದರೆ ಆ ಪ್ರತಿನಿಧಿಗಳು ನೂರಾರು ಮಂದಿ ಇರುವುದರಿಂದ ಅವರಿಗೆ ಇರುವ ಅಧಿಕಾರಾದಿ ಯೋಗ್ಯತೆಗಳ ಯಾಥಾರ್ಥ್ಯವನ್ನು ನಿರ್ಧರಿಸಿ ಕೆಲಸವನ್ನು ಜರುಗಿಸುವುದಕ್ಕೆ ತಾ|| ೨೮ ರವರೆಗೆ ಸಾಧ್ಯವಾಗಲಾರದೆಂದೂ ತಿಳಿಯಿಸಲ್ಪಟ್ಟಿತು. ಅದರಿಂದೀಚೆಗೆ ಬಂದಿರುವ ತಂತ್ರೀವರ್ತಮಾನಗಳಿಂದ ಗೊತ್ತಾಗುವುದೇನೆಂದರೆ—ಜರ್ಮನಿ ರಾಜ್ಯಾಂಗದಲ್ಲಿ ಮಂತ್ರಿಮಂಡಲದ ಬದಲಾವಣೆಯಾಯಿತು. ಸಂಧಿಯು ಕೂಡದೆಂದು ಹೇಳತಕ್ಕವರು ಉದ್ಯೋಗಗಳನ್ನು ಬಿಟ್ಟು ಆ ಸ್ಥಾನಗಳನ್ನು ಸಂಧಿಯನ್ನು ಅಪೇಕ್ಷಿಸತಕ್ಕವರಿಗೆ ಬಿಟ್ಟುಕೊಟ್ಟರು. ಷಿಡ್ಮನ್ ಮಂತ್ರಿವರ್ಗದವರು ತಾತ್ಕಾಲಿಕವಾಗಿ ರಾಜ್ಯಕಾರ್ಯನಿರ್ವಾಹಮಾಡುತ್ತಿರುವರು. ನಾಸ್ಕೆ, ಸ್ಮಿಟ್, ವಿಸ್ಸೆಲ್, ಡೇವಿಡ್, ಎರ್ಜ್‌ಬರ್ಗರ್—ಈ ಪ್ರಮುಖರುಗಳು ಕೂಡಿ ನೂತನ ಮಂತ್ರಿವರ್ಗವನ್ನು ಏರ್ಪಡಿಸುವವರಾಗಿದ್ದಾರೆ. ಇವರೆಲ್ಲಾ ಸಂಧಿಕಾಂಕ್ಷಿಗಳು. ಅಲ್ಲದೆ ಷಿಡ್ಮನ್‌ರವರ ಮಂತ್ರಿವರ್ಗದಲ್ಲೂ ಕೂಡ ಸಂಧಿಯನ್ನು ಒಪ್ಪುವುದಕ್ಕೆ ೮ ಮಂದಿಗಳೂ ಒಪ್ಪದಿರುವುದಕ್ಕೆ ೭ ಮಂದಿಗಳೂ ಅಭಿಮತವನ್ನು ಕೊಟ್ಟರು. ಅದರಮೇಲೆ ಷಿಡ್ಮನ್‌ರವರು ರಾಜೀನಾಮೆ ಕೊಟ್ಟರು. ಆ ಸ್ಥಲಕ್ಕೆ ಹೇರ್‌ನೋಸ್ಕಿಯವರು ಬರುವಂತಿದೆ. ಕೌಂಟ್‌ರಾಂಟ್ಜೌರವರು ಕೂಡ ರಾಜೀನಾಮೆ ಕೊಟ್ಟವರ ಗುಂಪಿನಲ್ಲೇ ಸೇರಿದರು. ಕಟ್ಟಕಡೆಗೆ ಸಿದ್ಧವಾದ ಸಂಧಿಪತ್ರವು ೪೧೭ ಪುಟಗಳುಳ್ಳದಾಗಿದೆ. ಅದು ಇಂಗ್ಲೀಷ್ ಫ್ರೆಂಚ್ ಭಾಷೆಗಳೆರಡರಲ್ಲೂ ಮುದ್ರಿತವಾಗಿದೆ. ಸೀಮೆಯಿಂದ ತಂತ್ರೀವಾರ್ತೆಗಳು ಬಹಳ ತಡವಾಗಿ ಬರುತ್ತಿರುವುದರಿಂದ ಸಂಧಿಪತ್ರಕ್ಕೆ ಕೈಬರಹ ಬಿದ್ದ ವಾರ್ತೆಯು ಇನ್ನೂ ಈ ದೇಶಕ್ಕೆ ಬಂದಿಲ್ಲ. ಸ್ಥಿತಿಗತಿಗಳನ್ನು ಪರ್ಯಾಲೋಚಿಸಿದರೆ ಇಷ್ಟರಲ್ಲೇ ಆ ಕಾರ್ಯವು ಮುಗಿದಿರಬೇಕೆಂದು ಹೇಳಬಹುದಾಗಿದೆ.

ಅಫ್ಘನ್ ಯುದ್ಧವೂ, ಅಮೀರರ ಪ್ರತ್ಯುತ್ತರವೂ.

ಸಂಧಿಯನ್ನು ಅಪೇಕ್ಷಿಸಿ ಅಮೀರರು ಬರೆದುಕೊಂಡಿದ್ದ ಲೇಖನವನ್ನೂ ಅದಕ್ಕೆ ನಮ್ಮ ವೈಸ್ರಾಯರು ಕೊಟ್ಟಿದ್ದ ಉತ್ತರವನ್ನೂ ನಾವು ಹಿಂದೆ ಪ್ರಕಟಿಸಿರುತ್ತೇವಷ್ಟೆ. ಇದಕ್ಕೆ ಮರಳಿ ಅಮೀರರು ತಾ|| ೧೧ ರಲ್ಲಿ ಬರೆದು ಕಳುಹಿಸಿದ ಲೇಖನವು ವೈಸ್ರಾಯರಿಗೆ ಕಳೆದ ತಾ|| ೧೮ ರಲ್ಲಿ ಸೇರಿತು. ಆ ಬರೆವಣಿಗೆಯು ತುಂಬಾ ಸ್ನೇಹಭಾವವನ್ನು ಸೂಚಿಸತಕ್ಕುದಾಗಿದೆ. ಹೇಗೆಂದರೆ—"ಘನತೆಯೊಂದಿದ ಆಂಗ್ಲಪ್ರಭುತ್ವದಲ್ಲಿ ಭರತಖಂಡದ ವೈಸ್ರಾಯರಾಗಿಯೂ ನನ್ನ ಗೌರವಣೀಯ ಮಿತ್ರರಾಗಿಯೂ ಇರುವ ಲಾರ್ಡ್ ಚೆಲಮ್ಸ್‌ಫರ್ಡ್‌ರವರಿಗೆ—ತಾವು ತಾ|| 3-6-9 (ರಮ್ಜಾನ್ ತೇದಿ 4) ರಲ್ಲಿ ದಯಾಪೂರ್ವಕವಾಗಿ ಬರೆದ ಲೇಖನವು ನನಗೆ ಸೇರಿತು. ಅದರಲ್ಲಿ ನೀವು ತಾತ್ಕಾಲಿಕ ಯುದ್ಧವಿಶ್ರಾಂತಿಗಾಗಿ ಸುಲಭವಾದ ನಿಬಂಧನೆಗಳನ್ನು ಸೂಚಿಸಿಯೂ, ಸ್ವಾಮಿದ್ರೋಹಿಗಳ ಕೊಲೆಗೆ ಗುರಿಯಾಗಿ ಕೀರ್ತಿಶೇಷರಾದ ನಮ್ಮ ತಂದೆಯವರನ್ನು ಹೊಗಳಿಯೂ, ನಿಜವಾದ ಸ್ನೇಹಭಾವವನ್ನು ವ್ಯಕ್ತಪಡಿಸಿಯೂ, ಭೀಕರ ರಕ್ತಪಾತದ ನಿರೋಧವನ್ನು ನಿವಾರಿಸುವ ಸತ್ಸಂಕಲ್ಪದಿಂದಲೂ ಬರೆದಿರುತ್ತೀರಿ. ನಮ್ಮ ತಂದೆಯವರು ಭಗವತ್ಸಂಕಲ್ಪದಂತೆ ದೇವಸನ್ನಿಧಿಯನ್ನು ಸೇರಿದರು. ಬಹುವರ್ಷಗಳಿಂದ ನಮ್ಮ ತಂದೆಯವರಿಗೂ ಆಂಗ್ಲಪ್ರಭುತ್ವದವರಿಗೂ ದೃಢವಾದ ಸ್ನೇಹವಿದ್ದಿತು. ಎಲ್ಲ ದೇಶಗಳಲ್ಲೂ ಶಾಂತಿಯನ್ನು ಸ್ಥಾಪಿಸುವುದೇ ಆಂಗ್ಲಜನರ ಮುಖ್ಯಸಂಕಲ್ಪವು. ಆ ಪ್ರಭುತ್ವದ ಮುಖ್ಯೋದ್ಯೋಗಿಗಳೆಲ್ಲರೂ ಎಲ್ಲ ಸಂದರ್ಭಗಳಲ್ಲೂ ಅಂಥ ಭಾವವನ್ನೇ ವ್ಯಕ್ತಪಡಿಸಿ ತಮ್ಮ ರಾಜನೀತಿಜ್ಞತೆಯನ್ನು ಲೋಕದಲ್ಲೆಲ್ಲಾ ಉಪಯೋಗಿಸಿ ಪ್ರಶಂಸಾಪಾತ್ರರಾಗಿದ್ದಾರೆ" ಎಂದು ಮೊದಲಾಗಿ ಪೀಠಿಕೆಯನ್ನಾರಂಭಿಸಿ, ಯುದ್ಧಾರಂಭವಾದ ವಿಷಯದಲ್ಲಿ ವೈಸ್ರಾಯರು ಬರೆದಿದ್ದ ಮಾತುಗಳ ಸುದ್ದಿಯನ್ನೇ ಎತ್ತಿಕೊಳ್ಳದೆ, ಆಂಗ್ಲಪ್ರಭುತ್ವದವರು ಸರ್ವಶಕ್ತಿಸಂಪನ್ನರೆಂದೂ, ಅಫ್ಘನ್ನರಿಗೆ ಎಂಥ ಏರ್ಪಾಟುಗಳೂ ಇಲ್ಲವೇ ಇಲ್ಲವೆಂದೂ, ವೈಸ್ರಾಯರು ಮಾಡಿರುವ ಸೂಚನೆಯು ಯಥಾರ್ಥವಾದುದೆಂದೂ ಬರೆದು, ಈಗಣ ಮಹಾಯುದ್ಧದ ದೆಸೆಯಿಂದ ಪ್ರಪಂಚದಲ್ಲೆಲ್ಲಾ ಹೊಸದಾಗಿ ಸ್ವಾತಂತ್ರ್ಯಾಪೇಕ್ಷೆಯು ಪ್ರಬಲಿಸಿರುವುದರಿಂದ ಅಫ್ಘನ್ನರಿಗೂ ಕೂಡ ಅದು ಪ್ರಬಲವಾಗಿರುವುದೆಂದು ಹೇಳಿ, ಈಗಣ ತಾತ್ಕಾಲಿಕ ಯುದ್ಧವಿಶ್ರಾಂತಿಯ ಮೂಲಕವಾಗಿ ನಮ್ಮ ನಮ್ಮ ಮಧ್ಯದಲ್ಲಿ ಪೂರ್ವದಂತೆಯೇ ದೃಢಸ್ನೇಹವು ನೆಲಸಬೇಕೆಂದು ಕೋರಿ, ಕಡೆಗೆ—"ನಾನು ಕಳೆದ ತಾ|| ೨೮ ರಲ್ಲಿ ನಿಮಗೆ ಬರೆದುಕೊಂಡ ರಾಯಸದ ಜತೆಯಲ್ಲೇ ನನ್ನ ಸೈನಿಕರಿಗೆ ನಾನು ಮಾಡಿರುವ ಅಪ್ಪಣೆಯ ಪ್ರತಿಯನ್ನೂ ಕಳುಹಿಸಿಕೊಟ್ಟಿದ್ದೆನು. ಅದರಿಂದಲೇ ಇದುವರೆಗಣ ಇಷ್ಟು ಪ್ರಯೋಜನವು ಸಿದ್ಧಿಸಿರುವುದು. ನೀವು ತಾತ್ಕಾಲಿಕ ಸಂಧಿಗಾಗಿ ಸೂಚಿಸಿರುವ ನಿಬಂಧನೆಗಳು ಕನಿಕರವನ್ನೇ ಸೂಚಿಸುತ್ತಿವೆ. ಆದರೆ ಅದರಲ್ಲಿ ಕೆಲವುಗಳು ಆಚರಣೆಗೆ ಸಾಧ್ಯವಾಗಿಲ್ಲ. ಹೇಗೆಂದರೆ—ಅಫ್ಘನ್‌ಸೈನ್ಯವು ಆಂಗ್ಲಸೈನ್ಯವಿರುವ ಸ್ಥಲದಿಂದ ೨೦ ಮೈಲಿಯೊಳಗೆ ಇರಕೂಡದೆಂಬ ನಿಬಂಧನೆಯ ಪ್ರಕಾರ ನಡೆದುಕೊಳ್ಳಬೇಕಾದರೆ ಅನೇಕ ಗ್ರಾಮಗಳನ್ನೇ ಅಫ್ಘನ್ನರು ಬಿಟ್ಟುಹೋಗಬೇಕಾಗುವುದು. ಮತ್ತೂ ಅಫ್ಘನ್‌ದೇಶದಮೇಲೆ ಸಂಚರಿಸುವ ಆಂಗ್ಲವೈಮಾನಿಕರಿಗೆ ಅಪಾಯವುಂಟಾಗದಂತೆ ಹೊಣೆಯಾಗಿರಬೇಕೆಂದರೆ ಅದು ಅಸಾಧ್ಯವು. ಏಕೆಂದರೆ—ಅಫ್ಘನ್‌ದೇಶದ ಪ್ರತಿಯೊಬ್ಬ ಪ್ರಜೆಯ ವಶದಲ್ಲೂ ತುಪಾಕಿಯಿರುವುದು. ಅವರುಗಳಿಗೆ ವಿಮಾನದ ಸುದ್ದಿ ಬಿದ್ದಕೂಡಲೇ ಆಗ್ರಹವೂ ಭಯವೂ ಕೂಡ ಉಂಟಾಗುವುದು ಸಹಜವಾಗಿದೆ. ಶಾಶ್ವತ ಸಂಧಿನಿಬಂಧನೆಯನ್ನು ಚರ್ಚಿಸುವುದಕ್ಕಾಗಿ ನನ್ನ ಪ್ರತಿನಿಧಿಗಳನ್ನು ರಾವಲ್ಪಿಂಡಿಗೆ ಕಳುಹಿಸಿಕೊಡಲು ನೀವು ಮಾಡಿರುವ ಸೂಚನೆಗೆ ನನ್ನ ಆಕ್ಷೇಪಣೆಯೇನೂ ಇಲ್ಲ. ಅದಕ್ಕಾಗಿ ಅಫ್ಘಾನ್‌ಸ್ಥಾನದ ದೇಶೀಯಮಂತ್ರಿಯಾದ ಸರ್ದಾರ್ ಆಲಿ ಅಹಮ್ಮದ್‌ಖಾನರನ್ನೂ ಇನ್ನು ೮ ಮಂದಿಗಳನ್ನೂ ಪ್ರತಿನಿಧಿಗಳನ್ನಾಗಿ ಆರಿಸಿರುವೆನು. ನಿಮ್ಮ ತಾತ್ಕಾಲಿಕ ಸಂಧಿವಿಶ್ರಾಂತಿನಿಬಂಧನೆಗಳನ್ನು ಅಭ್ಯಂತರವಿಲ್ಲದೆ ನಾನು ಅಂಗೀಕರಿಸುವುದರಿಂದಲೇ ನನಗಿರುವ ಸದ್ಭಾವವು ನಿಮಗೆ ವಿದಿತವಾಗಬಹುದು. ಹಿಂದೆ ಜರುಗಿಹೋದುದನ್ನು ಕ್ಷಮಿಸಿ ತಾವು ಚೆನ್ನಾಗಿ ಆಲೋಚಿಸಿ ಮುಂದಣ ಕಾರ್ಯವನ್ನು ನೆರವೇರಿಸಿದರೆ ನಮಗೂ ನಿಮಗೂ ದೃಢವಾದ ಸ್ನೇಹಭಾವವು ನೆಲೆಗೊಳ್ಳುವುದು. ಮತ್ತೂ ಉಭಯದೇಶಗಳಿಗೂ ಕ್ಷೇಮವಾಗುವುದು" ಈ ಲೇಖನಕ್ಕೆ ತಾ|| ೨೨ ರಲ್ಲಿ ಬರೆದ

ವೈಸ್ರಾಯರ ಪ್ರತ್ಯುತ್ತರದಲ್ಲಿ

ಅಮೀರರು ಮೈತ್ರಿಯಿಂದ ಬರೆದ ಲೇಖನವನ್ನು ಅಭಿನಂದಿಸಿ, ತಾತ್ಕಾಲಿಕ ಸಂಧಿನಿಬಂಧನೆಗಳಲ್ಲಿ ಯಾವ ತಿದ್ದುಪಾಡನ್ನೂ ಮಾಡಲಾಗುವುದಿಲ್ಲವೆಂದು ತಿಳಿಯಿಸಿರುವುದಲ್ಲದೆ, ನಮ್ಮ ಸೈನ್ಯಕ್ಕೆ ೨೦ ಮೈಲಿಗಳ ದೂರದೊಳಗೆ ಇರುವ ಗ್ರಾಮಸ್ಥರುಗಳನ್ನೆಲ್ಲಾ ಬಿಡಿಸಿ ಕಳುಹಿಸಿಬಿಡಬೇಕೆಂಬುದು ನಮ್ಮ ನಿಬಂಧನೆಯಲ್ಲಿ ಕಂಡ ವಾಕ್ಯಗಳಿಗೆ ಅರ್ಥವಲ್ಲವೆಂದೂ, ಅಫ್ಘನ್ ಸರ್ಕಾರಿ ಸೈನಿಕರು ಯಾರೂ ೨೦ ಮೈಲಿಯೊಳಗೆ ಇರಕೂಡದೆಂಬುದು ನಮ್ಮ ಆಶಯವೇ ಹೊರತು ಸಾಮಾನ್ಯಪ್ರಜೆಗಳೂ ಸಹ ಇರಕೂಡದೆಂಬುದು ತಮ್ಮ ಇಷ್ಟವಲ್ಲವೆಂದೂ ತಿಳಿಸಿರುವುದಲ್ಲದೆ—"ಈಗ ಜಾಮರ್ಡ್‌ಪೀವರ್ ಕೋಟೆಗಳ ಹತ್ತಿರದಲ್ಲಿ ಮಾತ್ರವೇ ಅಫ್ಘನ್ ಸೈನಿಕರಿದ್ದಾರೆ. ಅವರನ್ನು ಕೂಡ ಹಿಂದಕ್ಕೆ ಕರೆಯಿಸಿಕೊಳ್ಳಬೇಕು. ನಮ್ಮ ಎಲ್ಲೆಕಟ್ಟಿನ ಹತ್ತಿರದಲ್ಲಿ ಯಾವೊಬ್ಬ ಅಫ್ಘನ್ ಸೈನಿಕನೂ ಇರಲಾಗದು. ಹಾಗೆ ಒಬ್ಬನಿದ್ದರೂ ಯುದ್ಧವು ನಿಲ್ಲಿಸಲ್ಪಡಲಾರದು. ಗ್ರಾಮಸ್ಥಪ್ರಜೆಗಳು ನಮ್ಮ ಸೈನ್ಯದ ಸಮೀಪಕ್ಕೆ ಬಂದು ಗುಂಪುಕೂಡಲಾಗದು. ಹಾಗೆ ಅವರು ಬಂದು ಕೂಡಿ ತೊಂದರೆಪಡಿಸಿದರೆ ಅವರನ್ನು ಕೊಂದುಹಾಕುವುದಕ್ಕೆ ನಮ್ಮ ಸೈನಿಕರಿಗೆ ಅಪ್ಪಣೆಮಾಡಲ್ಪಟ್ಟಿದೆ. ವಿಮಾನಗಳ ವಿಷಯವಾಗಿ ಯಾರೂ ಆಗ್ರಹಪಡದಂತೆ ಅಮೀರರು ತಮ್ಮ ಪ್ರಜೆಗಳಿಗೆ ಕಠಿನಶಾಸನವನ್ನು ಪ್ರಕಟಿಸಿದರೆ ಸಾಕು. ಹಾಗೆ ಶಾಸನಮಾಡಿದ ಮೇಲೂ ಯಾವ ಅಫ್ಘನ್ ಪ್ರಜೆಯಾದರೂ ವೈಮಾನಿಕರಿಗೆ ತೊಂದರೆಕೊಟ್ಟರೆ ಅಂಥವರಮೇಲೆ ಗುಂಡು ಹಾರಿಸುವುದಕ್ಕೆ ನಮ್ಮ ವೈಮಾನಿಕರಿಗೆ ಅಪ್ಪಣೆಕೊಡಲ್ಪಟ್ಟಿದೆ. 'ನಾನು ತಾತ್ಕಾಲಿಕ ಸಂಧಿಯನ್ನು ಕೋರಿದ್ದೇನೆ; ಅದು ಕಾರಣ ನನ್ನ ಪ್ರಜೆಗಳೆಲ್ಲರೂ ಶಾಂತಿಯನ್ನು ವಹಿಸಿರಬೇಕು' ಎಂಬುದಾಗಿ ಅಮೀರರು ಕಠಿನಾಜ್ಞೆಯನ್ನು ಸಾರಿಸಿ ಎಚ್ಚರಿಸಬೇಕೆಂದು ನಾವು ಕೋರಿರುವೆವು. ಆ ವಿಷಯವನ್ನು ಕುರಿತು ಅಮೀರರು ಯಾವ ಪ್ರತ್ಯುತ್ತರವನ್ನೂ ಕೊಟ್ಟಿಲ್ಲ. ಇದುವರೆಗೆ ಅಮೀರರು ಆ ರೀತಿ ಮಾಡದಿದ್ದರೆ ಇನ್ನಾದರೂ ಕೂಡಲೇ ಅಮೀರರು ತಮ್ಮ ಪ್ರಜೆಗಳಿಗೆ ಅಪ್ಪಣೆಮಾಡಬೇಕು. ಏಕೆಂದರೆ ಸಂಧಿಯಾಲೋಚನೆಗಳು ಒಂದು ಕಡೆ ನಡೆಯುತ್ತಿರುವಾಗ ಬೇರೊಂದುಕಡೆ ಪ್ರಜೆಗಳು ಅವಾಂತರವನ್ನು ನಡೆಯಿಸುತ್ತಿರುವಂತೆ ಆಗಕೂಡದು. ತಾತ್ಕಾಲಿಕ ಸಂಧಿನಿಬಂಧನೆಗಳಿಗೆಲ್ಲಾ ಅಮೀರರು ಅಂಗೀಕರಿಸುವರೆಂಬ ನಂಬುಗೆಯಿಂದ ರಾವಲ್ಪಿಂಡಿಯಲ್ಲಿ ಅಫ್ಘನ್ ರಾಯಭಾರಿಗಳಿಗೆ ಸ್ವಾಗತಮಾಡುವುದಕ್ಕೆ ನಾನು ಏರ್ಪಾಟನ್ನು ಮಾಡಿಸುತ್ತೇನೆ. ನಮ್ಮ ಕಡೆಯ ಪ್ರತಿನಿಧಿಗಳ ಸಂಘಕ್ಕೆ ಭರತಖಂಡ ಪ್ರಭುತ್ವದ ವಿದೇಶ ಕಾರ್ಯದರ್ಶಿ ಸರ್ ಹಾಮಿಲ್ಟನ್ ಗ್ರಾಂಟ್‌ರವರನ್ನು ಅಧ್ಯಕ್ಷರನ್ನಾಗಿ ನಿಯಮಿಸಿದ್ದೇನೆ. ಮತ್ತೆ ಪೂರ್ವದಂತೆಯೇ ಉಭಯರ ಮಧ್ಯದಲ್ಲೂ ಶಾಂತಿಯೂ ಮೈತ್ರಿಯೂ ನೆಲೆಗೊಳ್ಳಲೆಂದು ನಿಮ್ಮಂತೆಯೇ ನಾನೂ ಕೂಡ ಅಪೇಕ್ಷಿಸುತ್ತೇನೆ" ಎಂದು ವೈಸ್ರಾಯರು ಬರೆದು ಕಳುಹಿಸಿದ್ದಾರೆ.

ಒಳದೇಶದ ವೃತ್ತಾಂತಗಳು.

ಲೇಡಿ ಡಾಕ್ಟರಾಗಿದ್ದ ಮಿಸ್. ಅಯ್ಯಾಚಮ್ಮಾಳ್‌ರವರು ಪಾರ್ಶ್ವವಾಯುಗ್ರಸ್ತರಾಗಿದ್ದು ಕಳೆದವಾರ ಗತಿಸಿದರೆಂದು ಕೇಳಿ ವಿಷಾದಿಸುತ್ತೇವೆ.

ಬೆಂಗಳೂರಿನ ಹತ್ತಿರದ ಹೆಬ್ಬಾಳದಲ್ಲಿರುವಂತೆಯೇ ರಾಜಧಾನಿಯ ಉತ್ತರಭಾಗದಲ್ಲಿಯೂ ಒಂದು ವ್ಯವಸಾಯ ಪರೀಕ್ಷಾಕ್ಷೇತ್ರವನ್ನು ಸ್ಥಾಪಿಸಲು ಪ್ರಯತ್ನವು ನಡೆದಿದೆ.

ಮೊನ್ನೆಯದಿನ ಬೆಂಗಳೂರಲ್ಲಿ ೧|| ಅಂಗುಲ ಮಳೆಯಾಯಿತು. ದಂಡಿನ ಪೊಲೀಸು ಕಾನೆಸ್ಟೇಬಲು ವಾಂತಿಭೇದಿ ರೋಗದಿಂದ ಸತ್ತನು. ಗುಬ್ಬಿಹಳ್ಳಿಯಲ್ಲೂ ಈ ರೋಗವು ಪ್ರಾಪ್ತವಾಗಿದೆ.

ಮೈಸೂರು ಮ್ಯುನಿಸಿಪಾಲಿಟಿಯಿಂದ ಈ ವರ್ಷದ ಪ್ರಜಾಪ್ರತಿನಿಧಿಸಭೆಗೆ ಮ|| ಗಳಾದ ಮಹಮದ್‌ಸೇಟರು, ಎಂ. ವೆಂಕಟಕೃಷ್ಣಯ್ಯನವರು, ಎ. ಕೃಷ್ಣರಾಯರು, ಅಣ್ಣಯ್ಯಪಂಡಿತರು, ಈ ನಾಲ್ವರೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ಚಳಿಯು ವಿಶೇಷವಾಗಿದೆ. ಆಗಾಗ್ಯೆ ಮೋಡವಾದುತ್ತಿದ್ದರೂ ಮಳೆಮಾತ್ರವಿಲ್ಲ. ನಿಂತಿರುವ ಜೋಳದ ಪೈರಿಗೆ ಮಳೆಯು ಅವಶ್ಯಕವಾಗಿದೆ. ಕ್ಷುದ್ರೋಗವೇನೂ ಇಲ್ಲದಿದ್ದರೂ ಕೆಂಬಲು ನೆಗಡಿ ಜ್ವರ ರೋಗಗಳು ಮಾತ್ರ ವಿಶೇಷವಾಗಿವೆ.

ರೆ|| ಕಮಿಷನರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ೬ ವಾರಗಳರಜಾ ಪಡೆದುಕೊಂಡಿರುವುದರಿಂದ ಮಿ|| ಕೆ. ಚಾಂಡಿಯವರು ತಮ್ಮ ಎಕ್ಸೈಜ್ ಕಮಿಷನರ ಪದವಿಯೊಡನೆ ರೆ|| ಕಮಿಷನರ ಕೆಲಸವನ್ನೂ ನೋಡಿಕೊಳ್ಳುವಂತೆ ಅಪ್ಪಣೆಮಾಡಲ್ಪಟ್ಟಿದ್ದಾರೆ.

ಕರ್ನಲ್ ದೇಶರಾಜೇ ಅರಸಿನವರು ಬರುವ ಜುಲೈ ತಿಂಗಳಿಂದ ಸಂಸ್ಥಾನದ ಸೈನ್ಯದ ಚೀಫ್ ಕಮ್ಯಾಂಡೆಂಟ್ ಪದವಿಯಿಂದ ನಿವೃತ್ತರಾಗುವುದರಿಂದ ಆ ಸ್ಥಾನಕ್ಕೆ ರೆಜಿಮೆಂಟ್‌ದಾರ್ ಮೇಜರ್ ಸರದಾರ್ ಚಾಮರಾಜ ಅರ್ಸ್ ಬಹದ್ದೂರ್‌ರವರು ನಿಯಮಿಸಲ್ಪಟ್ಟಿರುವರು.

ಮೈಸೂರು ಸರ್ಕಾರದವರು ಮೂಲಧನಕ್ಕೆ ಶೇಕಡಾ ೬ ರಂತೆ ಬಡ್ಡಿಯನ್ನು ಕೊಡಲು ಭರವಸೆ ಕೊಟ್ಟಿರುವ ಮೇಲೆ ಬೆಂಗಳೂರು ಹೊಸೂರು ಲೋಹಮಾರ್ಗಸ್ಥಾಪನೆಗಾಗಿ ೧೮ ಲಕ್ಷ ರೂ. ಡಿಬೆಂಚರ್ ಸಾಲವನ್ನು ಕೊಡಿಸಲು ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡಿನವರು ತೀರ್ಮಾನಿಸಿರುವರು.

ಸಕಲೇಶಪುರ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರಾದ ಮ|| ಪಿ. ಗೋಪಾಲರಾಜ ಅರಸಿನವರಿಗೆ ಈ ತಾ|| ೨೫ ರಿಂದ ೬ ತಿಂಗಳ ರಜವು ಕೊಡಲ್ಪಟ್ಟಿರುವುದರಿಂದ ಮೈಸೂರು ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿದ್ದ ಮ|| ಜಿ. ನಾರಾಯಣರಾಯರು ಸಕಲೇಶಪುರ ಸಬ್‌ಡಿವಿಜನ್ ಅ|| ಕಮಿಷನರಾಗಿ ನಿಯಮಿಸಲ್ಪಟ್ಟಿರುವರು.

ಮಧುವನಹಳ್ಳಿಯ ವೇ|| ಬಿ. ಮಹಾದೇವಶಾಸ್ತ್ರಿಗಳು ಕೆಲತಿಂಗಳಿಂದ ಕ್ಷಯರೋಗಗ್ರಸ್ತರಾಗಿದ್ದು ಮೊನ್ನೆ ಗುರುವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮುಡುಕುತೊರೆ ವೀರಶೈವಮತಸಂವರ್ಧಿನೀ ಸಭೆಗೆ ಉಪಾಧ್ಯಕ್ಷರಾಗಿದ್ದುಕೊಂಡು ಮತಾಭ್ಯುದಯಕಾಂಕ್ಷಿಗಳಾಗಿ ಅಹರ್ನಿಶಿಯೂ ಕೆಲಸಮಾಡುತ್ತಿದ್ದರು.

ರಾಜಧಾನಿಯ ಕೃಷ್ಣರಾಜೇಂದ್ರ ವೈದ್ಯಾಲಯದಲ್ಲಿ ಮೆಡಿಕಲ್ ಆಫೀಸರಾಗಿದ್ದ ಡಾ|| ಸಿ. ಎ. ನಂಜಪ್ಪನವರು ಇನ್ನುಕೆಲ ವೈದ್ಯಭಾಗಗಳ ಜ್ಞಾನಸಂಪಾದನೆಗಾಗಿ ಕಳೆದ ತಾ|| ೨೦ ರಲ್ಲಿ ಇಲ್ಲಿಂದ ಸೀಮೆಗೆ ಪ್ರಯಾಣಮಾಡುವುದಕ್ಕಾಗಿ ಬೊಂಬಾಯಿಗೆ ತೆರಳಿದರು. ಅವರ ಸ್ಥಾನದಲ್ಲಿ ಡಾ|| ಬಿ. ಕೆ. ನಾರಾಯಣರಾಯರು ನಿಯಮಿಸಲ್ಪಟ್ಟಿದ್ದಾರೆ.

ಹಿಡುವಳಿಯ ಭೂಮಿಗಳನ್ನು ಸರ್ಕಾರದವರು ವಶಪಡಿಸಿಕೊಳ್ಳುವಾಗ್ಗೆ ಅದರಲ್ಲಿರುವ ಗಂಧದಮರಗಳಿಗಾಗಿ ಸ್ವಲ್ಪ ಪ್ರತಿಫಲವನ್ನು ಹಿಡುವಳಿದಾರರಿಗೆ ಸರ್ಕಾರದವರು ಕೊಡುತ್ತಿರುವ ಪದ್ಧತಿಯಂತೆಯೇ ಕಾಫಿತೋಟಗಳ ಭೂಮಿಯನ್ನು ವಹಿಸಿಕೊಳ್ಳುವಾಗಲೂ, ಅದರಲ್ಲಿರುವ ಗಂಧದ ಮರಗಳ ವಿಷಯವಾಗಿ ಹೀಗೆಯೇ ನಡೆದುಕೊಳ್ಳತಕ್ಕುದೆಂದು ಸರ್ಕಾರದ ಅಪ್ಪಣೆಯಾಗಿದೆ.

ಸಂಸ್ಥಾನದ ಫೈನಾನ್ಸಿಯಲ್ ಸೆಕ್ರೆಟರಿಯವರಾಗಿದ್ದ ದಿ|| ಬ|| ಜ್ಞಾನಶರಣ ಚಕ್ರವರ್ತಿಯವರು ಬರುವ ಜುಲೈ ತಿಂಗಳಲ್ಲಿ ನಮ್ಮ ಸಂಸ್ಥಾನದ ಉದ್ಯೋಗದಿಂದ ನಿವೃತ್ತರಾಗಿ ಸ್ವದೇಶವಾದ ಬಂಗಾಳಕ್ಕೆ ಪ್ರಯಾಣಮಾಡುವವರಾಗಿದ್ದಾರೆ. ಅವರ ಸ್ಥಾನಕ್ಕೆ ಕಂಟ್ರೋಲರ್ ಮ|| ಎಂ. ಎನ್. ಕೃಷ್ಣರಾಯರು ನಿಯಮಿಸಲ್ಪಟ್ಟಿದ್ದಾರೆ. ಡಿ|| ಕಂಟ್ರೋಲರಾಗಿದ್ದ ಮ|| ಟಿ. ಸತ್ಯರಾಜಚೆಟ್ಟಿಯವರು ಕಂಟ್ರೋಲರಾಗಿ ಮಾಡಲ್ಪಟ್ಟಿದ್ದಾರೆ.

ಈಜಿಪ್ಟಿನ ರಣರಂಗಕ್ಕೆ ಹೋಗಿ ಶೌರ್ಯವನ್ನು ತೋರಿಸಿದ ನಮ್ಮ ಸಂಸ್ಥಾನದ ಇಂಪೀರಿಯಲ್ ಲ್ಯಾನ್ಸರ್ಸ್ ಸೈನಿಕರಲ್ಲಿ ರಿಸಲ್ದಾರ್ ಬಿ. ಪಿ. ಕೃಷ್ಣೇಅರಸಿನವರಿಗೆ ಮಿಲಿಟರಿಕ್ರಾಸ್ ಬಿರುದೂ, ಜಮೇದಾರ್ ಅಬ್ದುಲ್ ಗಫೂರ್‌ಖಾನರಿಗೆ ೨ನೆ ತರಗತಿ ಇಂಡಿಯನ್ ಆರ್ಡರ್ ಆಫ್ ಮೆರಿಟ್ ಬಿರುದೂ, ದಫೇದಾರ್ ಶಂಕರರಾವ್, ದಫೇದಾರ್ ಅಬ್ದುಲ್‌ರಜಾಕ್, ಇಮಾಮದಲ್ಲಿ, ಸಯ್ಯದ್ ಅಬ್ದುಲ್‌ಸತ್ತಾರ್ ಇವರುಗಳಿಗೆಲ್ಲಾ ಇಂಡಿಯನ್ ಡಿಸ್ಟಿಂಗ್ವಿಷ್ಡ್ ಸರ್ವಿಸ್ ಮೆಡಲೂ ಕೊಡಲ್ಪಟ್ಟಿವೆ.

ಮ|| ಜಿ. ಶಾಂತವೀರಪ್ಪ, ಬಿ. ಎ., ಯವರು ಹಾಸನ ಡಿ|| ಪೊಲೀಸ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವುದರಿಂದ ದೇವನಹಳ್ಳಿ ತಾ|| ಅಮಲ್ದಾರ್ ಮ|| ಪಿ. ಎಸ್. ಪೂರ್ಣಯ್ಯ, ಬಿ. ಎ., ಯವರು ಡಿ|| ಎಕನಾಮಿಕ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟಿರುವರಲ್ಲದೆ ಮೈಸೂರು ಡಿ|| ಎಕನಾಮಿಕ್ ಸೂಪರಿಂಟೆಂಡೆಂಟರಾದ ಮ|| ಶ್ರೀನರಸಿಂಹಶಾಸ್ತ್ರಿಗಳವರು ಬೆಂಗಳೂರು ಡಿ|| ಎ|| ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

೧೯ನೇ ತಾರೀಖಿನ ಸಂಪದಭ್ಯುದಯ ಸಂಚಿಕೆಯಲ್ಲಿ ಚೈತನ್ಯಾರಾಧ್ಯ ಎಂಬುವವರ ಹೆಸರಿನಿಂದ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳೇ ಮೊದಲಾದ ಗುರುಪರಂಪರೆಯವರ ವಿಷಯವಾಗಿ ಪ್ರಕಟಿತವಾಗಿರುವ ಲೇಖನದ ಖಂಡನರೂಪವಾಗಿ ನಮ್ಮ ಬಳಿಗೆ ೨ ಲೇಖನಗಳು ಬಂದಿವೆ. ಆರಾಧ್ಯರ ಲೇಖನದ ಅವಿಚಾರಮೂಲಕತ್ವವನ್ನು ಅವರ ಪಂಗಡದ ವಿದ್ಯಾಧಿಕಜನರೇ ಹೊರಗೆಡಹಿ, ಸಮಾಜದಲ್ಲಿ ಅಂತಃಕಲಹಕ್ಕೆ ದಾರಿಕೊಡಲಿಕ್ಕಿರುವ ಈ ದುಷ್ಪ್ರಯತ್ನವನ್ನು ನಂದಿಸಲೆಂಬ ನಿರೀಕ್ಷಣೆಯಿಂದ ಖಂಡನದ ಆ ಲೇಖನಗಳನ್ನು ಸದ್ಯಃ ಪ್ರಕಟಿಸದೆ ತಡೆಹಿಟ್ಟುಕೊಂಡಿದ್ದೇವೆ.

ಇದುವರೆಗೆ ಬೆಂಗಳೂರು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಏರ್ಪಡಿಸಿ ಪರೀಕ್ಷಿಸಿದಂತೆಯೇ ಬರುವ ಅಕ್ಟೋಬರ್ ತಾ|| ೧ ರಿಂದ ಮೈಸೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ರೆವಿನ್ಯೂ ಆಫೀಸರುಗಳಿಂದ ಕ್ರಿಮಿನಲ್ ಅಧಿಕಾರವನ್ನು ಬೇರ್ಪಡಿಸುವ ಪದ್ಧತಿಯು ವ್ಯವಹಾರಕ್ಕೆ ತರಲ್ಪಡುವುದು. ಅದಕ್ಕಾಗಿ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ರಾಜಧಾನಿಯ ಮತ್ತು ಮೈಸೂರು ತಾಲ್ಲೂಕಿನ ಎಲ್ಲಾ ತರಗತಿಯ ಕ್ರಿಮಿನಲ್ ವ್ಯಾಜ್ಯಗಳೂ ವಿಚಾರಿಸಲ್ಪಡುವಂತೆಯೂ, ರಾಜಧಾನಿಯಲ್ಲೇ ಸ್ಥಾಪಿಸಲ್ಪಡುವ ಮತ್ತೊಂದು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೈಸೂರು ಸಿಟಿ ಮತ್ತು ತಾಲ್ಲೂಕಿನ ಹೊರತು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳ ಫಸ್ಟ್‌ಕ್ಲಾಸ್ ವ್ಯಾಜ್ಯಗಳೂ ತಿ|| ನರಸೀಪುರದ ತಾಲ್ಲೂಕಿನ ೨-೩ ನೆ ಕ್ಲಾಸಿನ ಕ್ರಿಮಿನಲ್ ವ್ಯಾಜ್ಯಗಳೂ ಸಹ ವಿಚಾರಿಸಲ್ಪಡುವಂತೆಯೂ, ಹುಣಸೂರಿನಲ್ಲಿ ಸ್ಥಾಪಿಸಲ್ಪಡುವ ೨ನೆ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹುಣಸೂರು, ಹೆಗ್ಗಡದೇವನಕೋಟೆ, ಎಡತೊರೆ ತಾಲ್ಲೂಕುಗಳ ಕೇಸುಗಳೂ, ಮಂಡ್ಯದಲ್ಲಿ ಸ್ಥಾಪಿಸಲ್ಪಡುವ ೨ ನೆ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಂಡ್ಯ, ಮಳವಳ್ಳಿ, ನಾಗಮಂಗಲ ತಾಲ್ಲೂಕುಗಳ ವ್ಯಾಜ್ಯಗಳೂ, ನಂಜನಗೂಡಿನಲ್ಲಿ ಸ್ಥಾಪಿಸಲ್ಪಡುವ ೨ನೆ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳ ವ್ಯಾಜ್ಯಗಳೂ, ಫ್ರೆಂಚ್‌ರಾಕ್ಸಿನಲ್ಲಿ ಸ್ಥಾಪಿಸಲ್ಪಡುವ ೨ನೆ ತರಗತಿ ಕೋರ್ಟಿನಲ್ಲಿ ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ ತಾಲ್ಲೂಕುಗಳ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ವ್ಯಾಜ್ಯಗಳೂ ವಿಚಾರಿಸಲ್ಪಡುವಂತೆಯೂ, ಕಡೂರು ಡಿಸ್ಟ್ರಿಕ್ಟಿನ ಚಿಕ್ಕಮಗಳೂರಿನಲ್ಲಿ ಸ್ಥಾಪಿಸಲ್ಪಡುವ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಆ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳ ಫಸ್ಟ್‌ಕ್ಲಾಸ್ ವ್ಯಾಜ್ಯಗಳೂ, ಚಿಕ್ಕಮಗಳೂರು, ಮೂಡಗೆರೆ ತಾಲ್ಲೂಕುಗಳ ೨-೩ ನೆ ತರಗತಿಯ ವ್ಯಾಜ್ಯಗಳೂ, ತರೀಕೆರೆಯಲ್ಲಿ ಸ್ಥಾಪಿಸಲ್ಪಡುವ ೨ನೆ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತರೀಕೆರೆ, ಕೊಪ್ಪ, ಕಡೂರು ತಾಲ್ಲೂಕುಗಳ ಮತ್ತೂ ನರಸಿಂಹರಾಜಪುರ, ಶೃಂಗೇರಿ ಈ ಸಬ್‌ತಾಲ್ಲೂಕುಗಳ ವ್ಯಾಜ್ಯಗಳೂ ವಿಚಾರಿಸಲ್ಪಡುವಂತೆಯೂ ಅಪ್ಪಣೆಯಾಗಿದೆ.

ಭರತಖಂಡದ ವೃತ್ತಾಂತಗಳು.

ಕಳೆದವಾರ ಮದ್ರಾಸಾಧಿಪತ್ಯದ ಕೊಯಮತ್ತೂರು, ಶಾಲ್ಯ, ಕಡಪ, ಕರ್ನೂಲು, ನೆಲ್ಲೂರು, ಗುಂಟೂರು, ವೆಲ್ಲೂರು, ಕಾಕಿನಾಡ, ಗೋಪಾಲಪುರ, ವಿಶಾಖಪಟ್ಣ ಮೊದಲಾದ ಕಡೆಗಳಲ್ಲೆಲ್ಲಾ ಮಳೆಯಾಗಿದೆ.

ಸಂಸ್ಥಾನಾಧಿಪತಿಗಳ ಮಹಾಸಭೆಯು ಈ ವರ್ಷ ದಿಲ್ಲಿ ಪಟ್ಟಣದಲ್ಲಿ ಬರುವ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಆರಂಭವಾಗಿ ಬಹುಶಃ ೧ ಪಕ್ಷಕಾಲ ಜರುಗುವುದಾಗಿದೆ. ಸಂಸ್ಥಾನಾಧಿಪತಿಗಳಿಗೆಲ್ಲಾ ಈಗಿನಿಂದಲೇ ಆಹ್ವಾನಪತ್ರಗಳು ಕಳುಹಿಸಲ್ಪಡುತ್ತಿವೆ.

ಭರತಖಂಡದ ಸರ್ಕಾರದವರು ೩೪೫ ಕೋಟಿ ರೂ. ಗಳ ಸಾಲವನ್ನು ಸೇಕಡಾ ೫ ರೂ. ಬಡ್ಡಿಯಮೇಲೆ ಈ ದೇಶೀಯರಿಂದಲೇ ತೆಗೆಯಲು ಪ್ರಯತ್ನಿಸಿದ್ದಾರೆ. ಯುದ್ಧಕಾಲದಲ್ಲೇ ವಿಶೇಷವಾಗಿ ಸಾಲವು ಕೂಡಿರುವಾಗ್ಗೆ ಈಗ ಕೂಡುವುದರಲ್ಲಿ ಸಂಶಯವೇನೂ ಇಲ್ಲ.

ವೈಸ್ರಾಯರ ಎಗ್ಜಿಕ್ಯೂಟೀವ್ ಕೌನ್ಸಿಲ್ಲಿನಲ್ಲಿ ಸಭಿಕರಾಗಿದ್ದ ಸರ್ ಶಂಕರನ್‌ನಾಯರ್‌ರವರು ತಮ್ಮ ಪದವಿಯನ್ನು ಪರಿತ್ಯಾಗಮಾಡಿಬಿಟ್ಟರಷ್ಟೆ. ಅವರು ಈ ತಿಂಗಳ ಕೊನೆಯೊಳಗಾಗಿ ಮದ್ರಾಸಿಗೆ ಬಂದು ಬಳಿಕ ತಮ್ಮ ಕುಮಾರರಾದ ಆರ್. ಎಂ. ಪಾಲಕ್‌ರವರೊಡನೆ ಇಂಗ್ಲೆಂಡಿಗೆ ಪ್ರಯಾಣಮಾಡುವವರಾಗಿದ್ದಾರೆ.

ಕಲ್ಕತ್ತಾದಲ್ಲಿ ದಿನಪತ್ರಿಕೆಯಾಗಿ ಪ್ರಚುರವಾಗುತ್ತಿರುವ ಕಲಕತ್ತಾ ಸಮಾಚಾರ ಎಂಬ ಪತ್ರಿಕೆಯ ಪ್ರಕಟನಕ್ಕೆ ೨೦೦೦ ರೂ. ಹೊಣೆ ಕಟ್ಟಬೇಕೆಂದು ಅಲ್ಲಿಯ ಸರ್ಕಾರದವರು ಅಪ್ಪಣೆಮಾಡಿದುದರಿಂದ ಅದರ ಯಜಮಾನರುಗಳು ಸಭೆಗೂಡಿ ಚರ್ಚಿಸಿ, ಪತ್ರಿಕಾಪ್ರಕಟನವನ್ನೇ ನಿಲ್ಲಿಸಿಬಿಡಬೇಕೆಂದು ಗೊತ್ತುಮಾಡಿದುದರಿಂದ ಅದು ನಿಂತುಹೋಯಿತು.

ಸೀಮೆಯಲ್ಲಿರುವ ಡಾಕ್ಟರ್ ನಾಯರ್‌ರವರಿಗೆ ಸಹಾಯಮಾಡುವುದಕ್ಕಾಗಿ ಮದ್ರಾಸಿನಿಂದ ಕೂರ್ಮಾ ವೆಂಕಟರೆಡ್ಡಿನಾಯುಡುಯವರು ಈ ಮೊದಲೇ ತೆರಳಿದರಷ್ಟೆ. ಈಗ ದಿ|| ಬ|| ಪಾ|| ರಾಮರಾಯಣಿಯವರು ಮದ್ರಾಸು ಭೂಸ್ವಾಮಿಗಳ ಪಕ್ಷವಾಗಿ ಕೆಲಸಮಾಡುವುದಕ್ಕೂ, ಮ|| ದೊರೈರಾಜುರವರು ಬ್ರಾಹ್ಮಣೇತರ ಜನವರ್ಗ ಪಕ್ಷವಾಗಿ ಕೆಲಸಮಾಡುವುದಕ್ಕೂ ಮೊನ್ನೆದಿನ ಮದ್ರಾಸಿನಿಂದ ಸೀಮೆಗೆ ಪ್ರಯಾಣಮಾಡಿದರು.

ನೈಷಧಕಾವ್ಯಕ್ಕೆ ಜೀವಾತು ನಾಮಕವ್ಯಾಖ್ಯಾನವನ್ನು ಬರೆದ ಮಹಾಮಹೋಪಾಧ್ಯಾಯ ಕೋಲಾಚಲ ಮಲ್ಲಿನಾಥರ ವಂಶೀಯರು ಈಗೂ ಬಳ್ಳಾರಿಯಲ್ಲಿ ಪ್ರಬಲರಾಗಿಯೇ ಇದ್ದಾರೆ. ಆ ವಂಶೀಯರಾದ ಕೋಲಾಚಲಂ ಶ್ರೀನಿವಾಸರಾವ್ ಎಂಬುವವರು ಬೆನ್ನುಪಣಿಯ ರೋಗದಿಂದ ಕಳೆದವಾರ ವಿಧಿವಶರಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರೂ ಕೂಡ ವಿದ್ವಾಂಸರಾಗಿದ್ದು ಕೆಲವು ಆಂಧ್ರನಾಟಕಗಳನ್ನು ಬರೆದಿದ್ದಾರೆ.

ಬೊಂಬಾಯಿಪಟ್ಟಣದ ಜನಸಂಖ್ಯೆ ಈಗ್ಗೆ ೧೦ ವರ್ಷಗಳ ಕೆಳಗೆ ೯|| ಲಕ್ಷದಷ್ಟಿದ್ದಿತು. ಈಗ ೧೨|| ಲಕ್ಷದಷ್ಟಾಗಿದೆ. ಅಲ್ಲಿ ಸಾಂಕ್ರಾಮಿಕ ರೋಗಗಳ ಹಾವಳಿಯು ವಿಪರೀತವಾಗಿದೆ. ಆರೋಗ್ಯರಕ್ಷಣೆಗೂ ಸಮೃದ್ಧವಾಗಿ ಕುಡಿಯುವ ನೀರನ್ನೊದಗಿಸುವುದಕ್ಕೂ ಪ್ರಬಲವಾದ ಏರ್ಪಾಟುಗಳನ್ನು ಮಾಡಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ಯೋಚಿಸಿದ್ದಾರೆ. ಇದಕ್ಕಾಗಿ ೨-೩ ಕೋಟಿ ದ್ರವ್ಯವು ಹಿಡಿಯಬಹುದೆಂದು ಯೋಚಿಸಲ್ಪಟ್ಟಿದೆ.

ಜರ್ಮನಿ, ಆಸ್ಟ್ರಿಯಾ, ಹಂಗೇರಿ, ತುರ್ಕಿ, ಬಲ್ಗೇರಿಯಾ ಮೊದಲಾದ ಶತ್ರುದೇಶಗಳಲ್ಲಾಗಲೀ ಆ ದೇಶಗಳಿಗೆ ಸಂಬಂಧಿಸಿದ ಅಧಿನಿವೇಶನಗಳಲ್ಲಾಗಲೀ ವಾಸಮಾಡಿಕೊಂಡಿರುವ ಪ್ರಜೆಗಳೊಡನೆ, ಭರತಖಂಡ ನಿವಾಸಿಗಳಾರೂ ಯಾವ ತೆರದ ವ್ಯಾಪಾರವನ್ನೂ ನಡೆಯಿಸಕೂಡದೆಂದು ಇದುವರೆಗೂ ಸರ್ಕಾರದವರು ಪ್ರಕಟಿಸಿದ್ದರು. ಈಗ ಪ್ರತ್ಯೇಕವಾದ ಅಪ್ಪಣೆ ಪಡೆದು ಯಾರಾದರೂ ಯಾವ ದೇಶೀಯರೊಡನಾದರೂ ವ್ಯಾಪಾರವನ್ನು ನಡೆಯಿಸಬಹುದೆಂದು ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ಕುಂಡಾಲಾ, ಕಾನ್ಪೂರುಗಳ ಮಧ್ಯದ ಲೋಹಮಾರ್ಗದಲ್ಲಿ ದಿಲ್ಲಿಗೆ ಹೋಗುತ್ತಿದ್ದ ಪ್ರಯಾಣಿಕರ ಬಂಡಿಗೂ ದಿಲ್ಲಿಯಿಂದ ಬರುತ್ತಿದ್ದ ಒಂದು ಸಾಮಾನು ಬಂಡಿಗೂ ತಾ|| ೧೯ ರಲ್ಲಿ ಢಕ್ಕಾಮುಕ್ಕಿಯಾಗಿ ೨ ಬಂಡಿಗಳಿಗೂ ಕಂಬಿಗಳಿಗೂ ನಷ್ಟವಾದುದಲ್ಲದೆ ಕೆಲ ಪ್ರಾಣಹಾನಿಯೂ ಆಯಿತು. ಕೆಲಕಾಲ ಆ ದಾರಿಯಲ್ಲಿ ಬಂಡಿಗಳ ತಿರುಗಾಟಕ್ಕೆ ಅಡ್ಡಿಯಾಯಿತು. ಇಬ್ಬರು ಡ್ರೈವರೂ ಇಂಜನುಗಳಲ್ಲಿ ಕೆಲಸಮಾಡುತ್ತಿದ್ದ ಮೂವರೂ, ಪ್ರಯಾಣಿಕರಲ್ಲಿ ೮ ಜನವೂ ಒಟ್ಟು ೧೩ ಮಂದಿಗಳು ಸತ್ತರೆಂದೂ ೩೨ ಮಂದಿಗೆ ಗಾಯವಾಯಿತೆಂದೂ ಪ್ರಕಟಿತವಾಗಿದೆ.

ಭರತಖಂಡದಲ್ಲಿ ರಾಜದ್ರೋಹಾಪರಾಧಿಗಳೆಂದು ವೃತ್ತಪತ್ರಿಕಾ ಸಂಪಾದಕರು ಮೊದಲಾದನೇಕರನ್ನು ಸೈನಿಕವಿಚಾರಣೆಗೊಳಪಡಿಸಿ ಕಠಿನವಾಗಿ ಶಿಕ್ಷಿಸುತ್ತಿರುವುದರಿಂದ, ಇದನ್ನು ಖಂಡಿಸುತ್ತಲೂ, ಈ ಶಿಕ್ಷೆಯಮೇಲೆ ಪ್ರಿವಿಕೌನ್ಸಿಲಿಗೆ ಅಪೀಲ್‌ಮಾಡಿ ಅಲ್ಲಿ ತೀರ್ಮಾನವಾಗುವವರೆಗೂ ಶಿಕ್ಷೆಯನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿಯೂ ಇಂಡ್ಯಾ ಸಂಘದವರೂ ದೇಶೀಯಮಹಾಸಭಾಧ್ಯಕ್ಷರಾದ ಪಂಡಿತ ಮದನಮೋಹನರವರೂ ಸಹ ಸೀಮೆಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೂ, ಲಾರ್ಡ್ ಸಿಹ್ನರಿಗೂ, ಭೂಪೇಂದ್ರನಾಥ ಬಾಸುರವರಿಗೂ ಆಂಗ್ಲ ಮುಖ್ಯಮಂತ್ರಿಯವರಿಗೂ ತಂತ್ರೀವಾರ್ತೆಗಳನ್ನು ಕಳುಹಿಸಿದ್ದಾರೆ.

ಬೊಂಬಾಯಿಯಲ್ಲಿ ಈಗ್ಗೆ ೨೦ ದಿನಗಳ ಕೆಳಗೆ ಎರಡೇ ದಿನದಲ್ಲಿ ೧೫ ಇಂಚು ಮಳೆಯಾಯಿತು. ಆ ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವ ಜಲಾಶಯವಿರುವ ಪರ್ವತಪ್ರಾಂತದಲ್ಲಿ ೩೦ ಅಂಗುಲ ಮಳೆ ಬಿದ್ದಿತು. ಕಳೆದ ವರ್ಷವೆಲ್ಲಾ ೨೮ ಅಂಗುಲ ಮಳೆ ಬಿದ್ದಿರುವಲ್ಲಿ ಈ ವರ್ಷ ಮುಂಗಾರಿನಲ್ಲೇ ಒಂದುವಾರದೊಳಗಾಗಿ ಇಷ್ಟು ಮಳೆಬಿದ್ದುದು ಆಶ್ಚರ್ಯಕರವಾಗಿದೆ. ಈಗ ಅಲ್ಲಿ ಪುನಃ ಮಳೆಯೇ ಇಲ್ಲ. ಭರತಖಂಡ ಸರ್ಕಾರದ ವಾಯುಗುಣ ಪರಿಶೋಧನ ಶಾಖೆಯವರು ಮಾಡಿರುವ ವರದಿಯನ್ನು ನೋಡಿದರೆ ಇದುವರೆಗೆ ಬಿದ್ದ ಅಕಾಲಿಕ ವೃಷ್ಟಿಯು ಮೋಸದುದೆಂದೂ, ಜೂನ್ ಜುಲೈ ತಿಂಗಳಲ್ಲಿ ಉತ್ತಮವಾಗಿ ಮಳೆಯಾಗುವ ಭರವಸೆಯಿಲ್ಲವೆಂದೂ ಹೇಳಿರುತ್ತಾರೆ. ಮಾರ್ವಾರ್, ಕಾಥೇವಾಡಿ, ಗುಜರಾತಿ, ಬಂಗಾಳಾ ಮೊದಲಾದ ಕಡೆಗಳಲ್ಲೂ ದಕ್ಷಿಣದೇಶದಲ್ಲೂ ಮದ್ರಾಸಾಧಿಪತ್ಯದ ಸಮುದ್ರತೀರಪಟ್ಟಣಗಳಲ್ಲೂ ಇದುವರೆಗೆ ಬಿದ್ದಿರುವ ಮಳೆಯಿಂದ ಎಷ್ಟೋ ಅನುಕೂಲವಾಗಿದೆ. ಕಳೆದ ವರ್ಷ ಜ್ಯೇಷ್ಠ ಆಷಾಢಮಾಸಗಳಲ್ಲೂ ಕೂಡ ಮಳೆಗಳು ಬಿದ್ದಿರಲಿಲ್ಲ.

ವಿದೇಶದ ವೃತ್ತಾಂತಗಳು.

ಬೆಲ್ಜಿಯಮ್ಮಿನವರು ತಮ್ಮ ಸೇನೆಯನ್ನು ಶಾಂತಿಕಾಲಗಳಲ್ಲಿ ೧ ಲಕ್ಷವೂ ಯುದ್ಧಕಾಲದಲ್ಲಿ ೩|| ಲಕ್ಷವೂ ಇರುವಂತೆ ಮಾಡಬೇಕೆಂದು ನಿರ್ಧರಿಸಿದ್ದಾರೆ.

ಚೀನಾ ರಾಜ್ಯದ ಅಧ್ಯಕ್ಷರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು. ಅದನ್ನು ಅಂಗೀಕರಿಸಲು ನಮಗೆ ಅಧಿಕಾರವಿಲ್ಲವೆಂದು ಅಲ್ಲಿಯ ಪಾರ್ಲಿಮೆಂಟಿನವರು ನಿರಾಕರಿಸಿದರು.

ಪ್ರೆಸಿಡೆಂಟ್ ವಿಲ್ಸನ್‌ರವರು ಬೆಲ್ಜಿಯಂ ದೇಶದ ಬ್ರಸಲ್ಸ್ ಪಟ್ಟಣಕ್ಕೆ ಹೋಗಿ ಅಲ್ಲಿಯ ಪ್ರಭುಗಳ ಆತಿಥ್ಯವನ್ನು ಪರಿಗ್ರಹಿಸಿ, ಅಲ್ಲಿಯ ರಣರಂಗಸ್ಥಳ ಮೊದಲಾದುವುಗಳನ್ನು ಪರಾಂಬರಿಸಿದರು.

ಹಾಕರ್ ಎಂಬ ವೈಮಾನಿಕ ಶಿರೋಮಣಿಯು ಅಟ್ಲಾಂಟಿಕ್ ಮಹಾಸಾಗರವನ್ನು ದಾಟುವ ಶಪಥವನ್ನು ಕಟ್ಟಿ ವಿಫಲಮನೋರಥನಾದನಷ್ಟೆ. ಈಗ ಮತ್ತೊಂದು ಸಲ ಕೇಪ್ಟನ್ ಅಲ್ಕಾಕ್, ಲೆ|| ಬ್ರೌನ್ ಎಂಬಿಬ್ಬರು ನಡೆಯಿಸಿ ಜಯಶೀಲರಾಗಿ ಆಂಗ್ಲಪ್ರಭುಗಳೇ ಮೊದಲಾದವರಿಂದೆಲ್ಲಾ ಸನ್ಮಾನಿಸಲ್ಪಡುತ್ತಿದ್ದಾರೆ.

ನಮ್ಮ ವೈಸ್ರಾಯರ ಪತ್ನಿಯವರಿಗೂ ಅವರ ಕುಮಾರರಿಗೂ ಲಂಡನ್ ಪಟ್ಟಣದ ಇಂಡ್ಯಾ ಆಫೀಸಿನಲ್ಲಿ ಸ್ಟೇಟ್ ಸೆಕ್ರೆಟರಿ ಮಾಂಟೆಗ್ ದಂಪತಿಗಳು ಒಂದು ಔತಣವನ್ನು ಮಾಡಿಸಿದರು. ಆಗ್ಗೆ ಭಾರತೀಯರಾಗಿ ಬಿಕನೀರ್ ಮಹಾರಾಜರು, ಕಪೂರ್ಥಲಾ ಮಹಾರಾಜರು, ಲಿಮ್ಡಿ ಸಂಸ್ಥಾನದ ಠಾಕೂರ್ ಸಾಹೇಬರು, ಇಚಲಕರಂಜಿ ರಾಜರು, ಲಾರ್ಡ್ ಸಿಹ್ನರವರೇ ಮೊದಲಾದನೇಕರು ಕರೆಯಲ್ಪಟ್ಟಿದ್ದರು.

ವರ್ಸೇಲ್ಸ್ ಪಟ್ಟಣದಲ್ಲಿ ಸಂಧಿಕಾರ್ಯಕ್ಕಾಗಿ ಬಂದಿರುವ ಜರ್ಮನ್ ರಾಯಭಾರಿಗಳು ತಾ|| ೧೬ ರ ರಾತ್ರಿ ಮೋಟಾರುಬಂಡಿಗಳಲ್ಲಿ ಕುಳಿತು ಹೋಗುತ್ತಿದ್ದಾಗ ಫ್ರೆಂಚ್ ಪ್ರಜೆಗಳು ಗುಂಪುಗುಂಪಾಗಿ ಸೇರಿ ಪರಿಹಾಸವಚನಗಳನ್ನು ಆರಚುತ್ತಲೂ ಚಪ್ಪಾಳೆ ತಟ್ಟುತ್ತಲೂ ಕಲ್ಲುಗಳನ್ನು ಅವರಮೇಲೆ ಎಸೆದರು. ಕೆಲರಿಗೆ ಏಟುಗಳು ಬಿದ್ದುವು. ಜರ್ಮನ್ ಸ್ತ್ರೀಯರಿಬ್ಬರು ಪ್ರಾಣಭಯದಿಂದ ನಾಲಗೆಯನ್ನು ನೀಡಿಕೊಂಡು ವಿಕಾರವಾಗಿ ಕೂಗಿಕೊಂಡರು. ಹೀಗೆ ಫ್ರಾನ್ಸ್ ಪ್ರಜೆಗಳು ಜರ್ಮನ್ ಪ್ರತಿನಿಧಿಗಳ ವಿಷಯದಲ್ಲಿ ನಡೆದುಕೊಂಡುದನ್ನು ಫ್ರಾನ್ಸ್ ಪ್ರಭುತ್ವದವರು ಒಪ್ಪಲಿಲ್ಲ. ಇದಕ್ಕೆ ಅವಕಾಶವನ್ನಿತ್ತ ಪೊಲೀಸಧಿಕಾರಿಯನ್ನು ಕೆಲಸದಿಂದ ತೊಲಗಿಸಿದುದಲ್ಲದೆ ಆ ವಿಷಯವನ್ನು ಮುಖ್ಯ ಮಂತ್ರಿ ಕ್ಲೆಮೆಂಕೋರವರು ಜರ್ಮನ್ ಪ್ರತಿನಿಧಿಗಳಿಗೆ ತಿಳಿಯಪಡಿಸಿ ತಮ್ಮ ಕ್ಷಮಾಪಣೆಯನ್ನು ನಿವೇದಿಸಿರುತ್ತಾರೆ.

ಆಂಗ್ಲಪ್ರಭುತ್ವದವರು ಈಗ ವಿಜಯಋಣವೆಂಬುದಾಗಿ ಒಂದು ದೊಡ್ಡ ಸಾಲವನ್ನು ಮಾಡುವುದಕ್ಕೆ ಸೀಮೆಯಲ್ಲಿ ಪ್ರಯತ್ನಿಸಿದ್ದಾರೆ. ಈಗಾಗಲೇ ಬಹಳ ಹಣವು ಕೂಡಿದೆ. ಇದರ ಆರಂಭಕಾಲದಲ್ಲಿ ಸಾರ್ವಭೌಮರು ಪ್ರಜೆಗಳ ಪ್ರೋತ್ಸಾಹಾರ್ಥವಾಗಿ ಒಂದು ಪ್ರಕಟನವನ್ನು ಮಾಡಿ ಅದರೊಳಗೆ ಹೀಗೆ ಹೇಳಿದ್ದಾರೆ—"ಯುದ್ಧವು ಜರುಗುತ್ತಿದ್ದಾಗ ನಾನು ಪ್ರಜೆಗಳನ್ನು ಪ್ರೋತ್ಸಾಹಿಸುತ್ತಲೇ ಇದ್ದೆನು. ವಿಜಯವನ್ನು ಸಂಪಾದಿಸುವುದಕ್ಕಾಗಿ ಸರ್ವರೂ ಏಕಮತ್ಯದಿಂದ ಕೆಲಸಮಾಡಬೇಕೆಂದು ಆಗ ಪ್ರೋತ್ಸಾಹಿಸುತ್ತಿದ್ದೆನು. ಈಗ ನಾನು ಪ್ರೋತ್ಸಾಹಿಸುವುದು ವಿಜಯಸಂಪಾದನಾರ್ಥವಾಗಿ ಅಲ್ಲ. ಈಗ ಉಂಟಾಗಿರುವ ಶಾಂತಿಯನ್ನು ದೃಢಪಡಿಸುವ ಪ್ರಯತ್ನಕ್ಕಾಗಿ ಹಣವು ಬೇಕಾಗಿರುವುದರಿಂದ ಎಲ್ಲರೂ ಸಾಲರೂಪವಾಗಿ ಕೊಟ್ಟು ಆ ಕಾರ್ಯಕ್ಕೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ. ಅನೇಕ ದೀರ್ಘಕಾಲ ಯುದ್ಧವು ನಡೆದು ಭಗವದನುಗ್ರಹದಿಂದ ಈಗ ಶಾಂತಿಯು ನೆಲಸುವಂತೆ ಕಾಣುತ್ತಿದೆ. ಯುದ್ಧಕಾಲದಲ್ಲಿ ಪ್ರಜೆಗಳು ದೇಶಭಕ್ತಿಯನ್ನೂ ಸ್ವಾರ್ಥತ್ಯಾಗವನ್ನೂ ವ್ಯಕ್ತಪಡಿಸಿದಂತೆಯೇ ಈಗಲೂ ತೋರಿಸಬೇಕು. ಆಂಗ್ಲಸಾಮ್ರಾಜ್ಯಕ್ಕೂ ಪ್ರಜೆಗಳ ಸೌಖ್ಯಕ್ಕೂ ಮೂಲಾಧಾರವಾದ ಸಾಂಪತ್ತಿಕಸ್ಥಿತಿಯು ನಿರುಪದ್ರವವಾಗಿಲ್ಲದಿದ್ದರೆ ಮೇಲ್ಮೆಯುಂಟಾಗಲಾರದು. ಅದುಕಾರಣ ಈಗಣ ವಿಜಯಋಣಪತ್ರಗಳನ್ನು ಪ್ರಜೆಗಳು ವಿಶೇಷವಾಗಿ ಕೊಂಡುಕೊಳ್ಳುವರಾಗಬೇಕು."

ಪತ್ರವ್ಯವಹಾರ.

ಹಾವೇರಿ.

ಕರ್ನಾಟಕ ಕೊಣ್ಣೂರ ನಾಟಕಮಂಡಲಿಯವರು ಹಾವೇರಿಗೆ ಬಂದು ೧|| ತಿಂಗಳಾಯಿತು. ಇಷ್ಟರಲ್ಲಿ ಅವರು ಎಷ್ಟೋ ಪ್ರಯೋಗಗಳನ್ನು ಮಾಡಿ ತೋರಿಸಿದರು. ತಾ|| ೨೧-೬-೧೯ ಶನಿವಾರ ದಿವಸ "ಶನಿಪ್ರಭಾವ"ವೆಂಬ ಪ್ರಯೋಗವನ್ನು ಮಾಡಿ ತೋರಿಸಿದರು. ಅದರಲ್ಲಿ ಮುಖ್ಯ ಸ್ತ್ರೀಪಾರ್ಟ ಮಾಡಿದಂಥ ವೀರಪ್ಪಗೌಡ ಪಾಟೀಲ ಸಾ|| ಕಿನಮೂಗಬಸ ತಾಲ್ಲೂಕ ಬೈಲಹೊಂಗಲ ಜಿಲ್ಲಾ ಬೆಳಗಾವ ಇವರು ಬಹಳ ಚಿಕ್ಕವಯಸ್ಸಿನ (೧೬ ವರ್ಷದ) ಬಾಲಕರು ಇದ್ದು, ತಮ್ಮ ಗಾನದಲ್ಲಿಯೂ, ಹಾವಭಾವಗಳಲ್ಲಿಯೂ ತಮ್ಮ ಪ್ರಾವೀಣ್ಯವನ್ನು ತೋರಿಸಿದರು. ಆದ್ದರಿಂದ ಅದೇ ದಿವಸ ಇಲ್ಲಿಯ ವೀರಶೈವ ತರುಣಸಂಘದವರು ಆನಂದಭರಿತರಾಗಿ ಮಿ|| ವೀರಪ್ಪಗೌಡ ಇವರಿಗೆ ಒಂದು ಸುವರ್ಣಪದಕವನ್ನು ಬಹುಮಾನವಾಗಿ ಸಮರ್ಪಿಸಿದರು.

ಭಾಷಾಭಿಮಾನಿ.

ನೈಜಾಂ ಇಲಾಖಾ ತಾಲ್ಲೂಕು ದೇವದುರ್ಗ.

ಮಾಚೇನೀಲಗಲ್ಲು ದೇಶಿಕೇಂದ್ರ ಶಾಂತಮಲ್ಲೇಶ್ವರ ಸ್ವಾಮಿಗಳ ಮಠದಲ್ಲಿ ಜಾಗಟಿಗಲ್ಲು ಗೂಳಪ್ಪನ ವಿವಾಹವು ಕಲ್ಲೂರು ಪೌರಾಣಿಕ ಸಣಗೂರಯ್ಯನವರ ಪೌರೋಹಿತ್ಯದಿಂದ ಜರುಗಿಸಲ್ಪಟ್ಟಿತು. ಮರುದಿವಸ ಮಠದ ಶ್ರೀಗಳವರ ಅಪ್ಪಣೆ ಪ್ರಕಾರ ಚಿಕ್ಕದೊಂದು ಸಭೆ ನಡೆಯಿತು. ಆ ಸಭೆಯಲ್ಲಿ ಶಿ|| ಸಂಗೀತವಿದ್ವಾನ್ ಬಸವಯ್ಯನವರು ಶರಣಪ್ಪನವರು ಕೊ|| ಭೀಮಪ್ಪನವರು ಇವರೇ ಮೊದಲಾದ ಶ್ರೀಮಂತರನೇಕರು ಇದು ಸಮಾಜೋನ್ನತಿಗೆ ಮುಖ್ಯಕಾರ್ಯವೆಂದು ಭಾವಿಸಿ ನೆರೆದಿದ್ದರು. ಆಗ ಸರ್ವರ ಕೋರಿಕೆಯ ಮೇರೆ ಮಠದ ಶ್ರೀಗಳವರು ಸಭಾಧ್ಯಕ್ಷತ್ವವನ್ನು ವಹಿಸಿದರು. ತತ್ಸಮಯದಲ್ಲಿ ರಾಜಕೀಯ ವಿದ್ಯಾರ್ಥಿಗಳ ಕಡೆಯಿಂದ ಸದರಿ ಪೌರಾಣಿಕರು ಸಭಾಧ್ಯಕ್ಷರ ಸ್ತವನವನ್ನೂ ನಮ್ಮ ಹೈದರಾಬಾದ್ ಮೀರಉಸ್ಮಾನ್ ಅಲಿಖಾನ್ ಬಹದ್ದೂರು ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ನಡೆಯಿಸಿದರು. ಬಳಿಕ ಮೇಲೆ ಕಾಣಿಸಿದ ಮ|| ಶರಣಪ್ಪನವರ ಅನುಜ ಶಿವರಾಚಪ್ಪನು ಬಾಲ್ಯವಿವಾಹ ಮಾಡಕೂಡದೆಂಬ ವಿಷಯವಾಗಿಯೂ ಮ|| ಭೀಮಪ್ಪನವರ ಸುಪುತ್ರ ಸಿದ್ಧಲಿಂಗಪ್ಪನು ಹಂದರ್ದಿ (ಅಂದರೆ ಭೂತದಯಾಳುತನವೆಂದರ್ಥ) ವಿಷಯದಲ್ಲೂ ಶಿ|| ಸಂಗೀತ ಬಸವಯ್ಯನವರ ಅನುಜ ಎನ್. ಈಶ್ವರಯ್ಯನವರು ವಿದ್ಯಾವಿಷಯದಲ್ಲಿ, ಕೆ. ಪಿ. ಕಲ್ಲೂರು ಗೌ|| ರೇವಣಸಿದ್ಧಪ್ಪನು ಮಿತವ್ಯಯದ ಮೇಲೂ ಬರೆದಿದ್ದ ಭಾಷಣಗಳನ್ನು ಉರ್ದುವಿನಿಂದಲೂ ಉರ್ದು ತಿಳಿಯದವರಿಗೆ ಕನ್ನಡದಿಂದಲೂ ಸೊಗಸಾಗಿ ತಿಳಿಯುವಂತೆ ಹೇಳಿ ಆನಂದಪಡಿಸಿದರು. ಇಂಥ ಸಭೆಗಳನ್ನು ಆಗಾಗ್ಗೆ ನಡೆಯಿಸಿದರೆ ಸಮಾಜದಲ್ಲಿ ಧರ್ಮಸಾಧನೆ ವಿದ್ಯಾರ್ಜನೆಗಳಿಗೆ ಜಾಗರೂಕತೆಯುಂಟಾಗುವುದೆಂದು ಸಭಿಕರೆಲ್ಲರೂ ಹೇಳುತ್ತ ಸಭೆಯನ್ನು ಮುಗಿಸಿದರು.

ಸಮಾಜಾಭಿಮಾನಿ.

ಸಿದ್ಧಾಪುರ.

ಮೊಳಕಾಲ್ಮುರು ತಾಲ್ಲೂಕು ಸಿದ್ಧಾಪುರದಲ್ಲಿ ತಾ|| ೯ನೆ ಸೋಮವಾರ ದಿವಸ ಕೆಳಗೆ ಕಂಡ ಮೆಂಬರುಗಳು ಮತ್ತು ರೈತರು ಅನೇಕ ಉತ್ಸವದಿಂದ ಶ್ರೀಮದ್ ಜಾರ್ಜ್ ಚಕ್ರವರ್ತಿಯವರ ಫೋಟೋವನ್ನೂ ಶ್ರೀಮನ್ಮಹಾರಾಜರವರ ಫೋಟೋವನ್ನೂ ಹಾಗೂ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಫೋಟೋವನ್ನೂ ಬ್ಯಾಂಡು ವಾದ್ಯಗಳಿಂದಲೂ ಪುರಪ್ರಮುಖರಿಂದಲೂ ರೈತರಿಂದಲೂ ಶಾಲಾಬಾಲಕರಿಂದಲೂ ಠೀವಿ ಉತ್ಸವಮಾಡಿದರು. ಸಾಲುಸಾಲಾಗಿ ಕಟ್ಟಿರುವ ಕದಳೀಸ್ತಂಭಗಳಿಂದ ಬಾಜಾರುಬೈನುಗಳು ಅತಿ ಮನೋಹರವಾಗಿ ಕಂಗೊಳಿಸುತ್ತಿದ್ದುವು. ಅದರ ಪೈಕಿ ನಡುಬಾಜಾರದಲ್ಲಿರುವ ಶ್ರೀವೀರಭದ್ರ ದೇವಸ್ಥಾನದ ಮುಂದೆ ನಾಲ್ಕು ಫೋಟೋಗಳಿಗೂ ಯಜಮಾನರು ಹುವ್ವಿನಹಾರಗಳನ್ನು ಹಾಕಿದರು. ಕಮಿಟಿಮೆಂಬರುಗಳಾದ ಜಾನುವಾಳೆ ಹನುಮಂತರಾವ್ ಸ್ವಾ|| ರಾಘವೇಂದ್ರರಾವ್ ಯಜಮಾನರ ಮಕ್ಕಳು ಗಡಿಗಿ ಗಂಗಪ್ಪನವರು ಮಠದ ಗವಿಯಪ್ಪನವರು ದೊಡ್ಡವೀರಭದ್ರಯ್ಯ ವೈದ್ಯವೀರಭದ್ರಯ್ಯ, ಮುರಳುಸಿದ್ದಯ್ಯನವರುಗಳು ಹಾಜರಿದ್ದು ಮಹಾರಾಜರವರ ಯುವರಾಜರವರ ಗುಣಕಥನವನ್ನು ಮಾಡಿದರು. ಈ ವರ್ಷ ಈಗಲೇ ಪರಮೇಶ್ವರನ ಅನುಗ್ರಹದಿಂದ ವಿಶೇಷ ಮಳೆಬಂದು ಕೆರೆಗೆ ೩ ತಿಂಗಳ ನೀರು ಬಂದಿರುತ್ತದೆ. ಈ ಊರಿನ ರೈತರ ಪೈಕಿ ಬಳ್ಳಾರಿ ಶ್ರೀಮಂತ ಗಡಿಗಿ ವೀರಭದ್ರಪ್ಪನವರ ಜಮೀನು ಬಹಳವಾಗಿರುತ್ತದೆ. ಇದನ್ನು ಹಿಂದಿನಿಂದಲೂ ಯಜಮಾನರು ನಿಗಾಕೊಟ್ಟು ಮಾಡಿಸುತ್ತಾರೆ. ಯಜಮಾನರು ಶ್ರೀಮದ್ವೀರಶೈವಮತಕ್ಕೆ ಸ್ಟಾರ್ ಪತ್ರಿಕೆಯು ದಿನಮಣಿಯಂತೆ ಶೋಭಿಸುವುದಾಗಿ ಭಾಷಣಮಾಡಿ ಹೇಳಿದರು. ಪರಮೇಶ್ವರನು ನಮ್ಮ ಮಹಾರಾಜರವರಿಗೂ ಯುವರಾಜರವರಿಗೂ ಚಿರಾಯುರಾರೋಗ್ಯವನ್ನೀಯಲೆಂದು ಕೋರುವ, ಚಂದಾದಾರ.

[ಇದರಂತೆ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವನ್ನು ವಿಜೃಂಭಣೆಯಿಂದ ನಡೆಯಿಸಿದ ಪತ್ರವ್ಯವಹಾರಗಳನ್ನು ಚಿಕ್ಕಮಗಳೂರು, ಬೇಲೂರು, ಗುಂಟೂರು, ಚೇಲೂರು ಮೊದಲಾದ ಕಡೆಗಳವರು ವಿಶ್ವಾಸವಿಟ್ಟು ಬರೆದು ಕಳುಹಿಸಿಕೊಟ್ಟಿರುವುದಕ್ಕಾಗಿ ವಂದಿಸುತ್ತೇವೆ. ಆದರೆ ಕಾಲಾತೀತವಾಗಿ ಬಂದಿರುವುದರಿಂದ ಪ್ರಕಟಿಸಲಾರೆವೆಂದು ವಿಷಾದದಿಂದ ತಿಳಿಸುತ್ತೇವೆ. ಪ. ಪ್ರ.]

ಗುಂಡ್ಲುಪೇಟೆ ತಾ|| ಪಡಗೂರು.

ಈ ಗ್ರಾಮವು ೩೬೦ ಮನೆಗಳು ಮತ್ತು ೧೫೩೦ ಪ್ರಜಾಸಂಖ್ಯೆಯುಳ್ಳದಾಗಿದೆ. ನೇಕಡ ೫ ರಂತೆಯೂ ವಿದ್ಯೆಬಲ್ಲವರು ದೊರೆಯುವುದಿಲ್ಲ. ಈ ಗ್ರಾಮದಲ್ಲಿ ಉತ್ತಮರಿಗೋಸ್ಕರ ಒಂದು ಗ್ರ್ಯಾಂಟ್ ಸ್ಕೂಲು ಮಾತ್ರ ೨೦ ವರ್ಷಗಳಿಂದಲೂ ಇದೆ. ಈ ಸ್ಕೂಲನ್ನು ಸರ್ಕಾರಿ ಮಾಡಿಕೊಡಬೇಕೆಂದು ಇನ್ಸ್ಪೆಕ್ಟರುಗಳಿಗೆ ರುಬುರೂಬು ಅರಿಕೆಮಾಡಿದಾಗಲೆಲ್ಲಾ ಬೇರೆಕಟ್ಟಡ ಕಟ್ಟಿಕೊಟ್ಟರೆ ಸರ್ಕಾರಿಮಾಡಿಕೊಡುತ್ತೇವೆಂದು ಅಪ್ಪಣೆ ದಯಪಾಲಿಸುತ್ತಿದ್ದಾರೆ. ಇಷ್ಟು ದೊಡ್ಡ ಗ್ರಾಮವಾಗಿದ್ದಾಗ್ಯೂ ಈಗಣ ಕಟ್ಟಡವು ಬೆಳಕು ಗಾಳಿಗೆ ಅವಕಾಶವಿಲ್ಲದೆ ಚಿಕ್ಕದಾಗಿ ತುಂಬಾ ತೊಂದರೆಯಾಗಿರುವುದರಿಂದ ಬಾಲಕರ ಸಂಖ್ಯೆ ಹೆಚ್ಚಲವಕಾಶವಿಲ್ಲವಾಗಿದೆ. ಬೇರೆ ಕಟ್ಟಡವಾದರೆ ೧೦೦ ಬಾಲಕರುಗಳು ಸೇರಲು ಅಭ್ಯಂತರವಿಲ್ಲ. ಬೇರೆ ಕಟ್ಟಡ ಕಟ್ಟುವುದಾದರೆ ತಮ್ಮ ಜಮೀನಿನಲ್ಲಿ ಸ್ಥಳ ಕೊಡುತ್ತೇನೆಂದು ಮ|| ಕಾಳಪ್ಪನವರು ವಾಗ್ದಾನಮಾಡಿರುತ್ತಾರೆ. ಈ ವಿಷಯಕ್ಕೆ ಗ್ರಾಮಸ್ಥರು ತುಂಬಾ ಗಮನಕೊಡಬೇಕಾಗಿ ಅರಿಕೆ. ಮತ್ತು ಹಾಲಿ ಗರ್ಲ್ಸ್‌ಸ್ಕೂಲಿಗೋಸ್ಕರ ಗ್ರಾಮಸ್ಥರು ಒಂದುನೂರು ರೂಪಾಯಿ ಚಂದಾ ವಸೂಲ್ಮಾಡಿ ಕಟ್ಟಡ ಕಟ್ಟಲು ಪ್ರಾರಂಭಿಸಿರುತ್ತಾರೆ. ಇದರಂತೆ ಬಾಯ್ಸ್‌ಸ್ಕೂಲ್ಗೂ ಮುತುವರ್ಜಿ ವಹಿಸ[illegible]. ಎಲ್ಲಾ ಗ್ರಾಮಗಳಲ್ಲಿಯೂ ರೀಡಿಂಗ್‌ರೂಂ ಮತ್ತು ಲೈಬ್ರರಿ ಸ್ಥಾಪಿತವಾಗಿರುವುದಾಗಿ ಪತ್ರಿಕೆಗಳಿಂದ ಓದುತ್ತೇವೆ. ಅದರಂತೆ ಮ|| ಪ|| ವಡೇರಪ್ಪನವರ ಮುತುವರ್ಜಿಯಿಂದ ಈ ಗ್ರಾಮದಲ್ಲಿ 25-4-19 ರಲ್ಲಿ ಒಂದು ರೀಡಿಂಗ್‌ರೂಂ ಸ್ಥಾಪಿತವಾಗಿ ನಡೆಯುತ್ತಲಿದೆ. ಈ ರೂಮಿಗೆ ಮ|| ಮು|| ಸುಬ್ಬಣ್ಣನವರು ತಮ್ಮ ಮನೆಯನ್ನು ಉಚಿತವಾಗಿ ಕೊಟ್ಟಿರುವುದಲ್ಲದೆ 4 ರೂ. ಬಾಳುವ ಹಲಗೆಯನ್ನು ಕೊಟ್ಟಿರುತ್ತಾರೆ. ಮತ್ತು ಈ ಕೆಳಗೆ ಕಂಡ ಮಹನೀಯರು ಚಂದಾಕೊಡಲು ವಾಗ್ದಾನಮಾಡಿರುವುದಲ್ಲದೆ ಕೆಲವರು ಕೊಟ್ಟಿರುತ್ತಾರೆ. ಸದರೀ ಮಹನೀಯರುಗಳು ಮ|| ಪ|| ವಡೇರಪ್ಪನವರು 6-0-0, ಶ್ಯಾ|| ನಂಜುಂಡಯ್ಯನವರು 3-4-0, ಮಾ|| ವೆಂಕಟರಮಣಯ್ಯನವರು 3-4-0, ಶ್ಯಾ|| ಚಿಕ್ಕದೇವಯ್ಯನವರು 1-0-0, ಯಜಮಾನ್ ದೇವಪ್ಪನವರು 1-0-0, ಯಜಮಾನ್ ಮಲ್ಲಶೆಟ್ಟರು 1-0-0, ಪುಟ್ಟಬಸಪ್ಪಶೆಟ್ಟರು 1-0-0, ಬಸವಶೆಟ್ಟರು 2-8-0, ಪ|| ವೀರಣ್ಣನವರು 1-0-0, ಜವಳಿ ಸಾ|| ಬಸವಲಿಂಗಶೆಟ್ಟರು 1-0-0, ಮರಿಮಲ್ಲಯ್ಯನ ಬಸಪ್ಪನವರು 1-0-0, ಮೂಡಲಹಟ್ಟಿ ಮಲ್ಲಪ್ಪನವರು 2-0-0, ಕ|| ಮೆಂ|| ಹೊನ್ನಪ್ಪನವರು 1-0-0, ಶೆಟ್ಟಪ್ಪನವರು 1-0-0, ಮಲ್ಲಶೆಟ್ಟರವೀರಶೆಟ್ಟರು 1-0-0, ಸಂಗೀತದ ತೋಟಿಶೆಟ್ಟರು 0-8-0, ಸ್ಕೂ|| ಮಾ|| ಯಂ. ಮಾದಯ್ಯನವರು 5-8-0, ಪಂಚರು 2-0-0. ಇದೂ ಅಲ್ಲದೆ ಲೈಬ್ರರಿ ಸ್ಥಾಪಿಸಲು ಚಂದಾ ಪ್ರಾರಂಭಮಾಡಿರುತ್ತಾರೆ. ಪ್ರತ್ಯಕ್ಷದರ್ಶಿ.

ಅಮರಾಪುರ

ಶ್ರೀಮನ್ಮಹಾ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಸುಮಾರು ೩ ವರ್ಷಗಳ ಹಿಂದೆ ಅಮರಾಪುರಕ್ಕೆ ಚಿತ್ತೈಸಿದ್ದಾಗ್ಗೆ ಮಹಾಸನ್ನಿಧಿ ಕೃಪಾಪೋಷಿತರಾದ ಶ್ರೀ ಮೃತ್ಯುಂಜಯ ಸ್ವಾಮಿಗಳು ಸದರಿ ಗ್ರಾಮದಲ್ಲಿ (ಲಿಂಗಾಯತ) ವೀರಶೈವ ಮಹಾಜನಗಳು ಸಭೆಸೇರಿ ಅವರುಗಳಿಗೆ ವಾರಕೊಮ್ಮೆ ಹಿತೋಪದೇಶವನ್ನು ನಡೆಸಬೇಕೆಂದು ಅಪ್ಪಣೆ ಕೊಡಿಸಿ ಆ ದಿವಸ ಸಭೆಯ ಅಧ್ಯಕ್ಷತೆಯನ್ನು ತಾವೇ ವಹಿಸಿ ಇಲ್ಲಿನ ವೀರಶೈವಮಂಡಳಿಗೆಲ್ಲಾ ತಿಳಿಯಪಡಿಸಿ ಹಿತೋಪದೇಶಸಂಘವನ್ನು ನಡೆಸುವುದಕ್ಕೆ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಂದ ಆಶೀರ್ವಾದದಪ್ಪಣೆಯನ್ನು ಕೊಡಿಸಿದರು. ಅಂದಿನಿಂದ ಹಿತೋಪದೇಶಸಂಘದ ಬಲದಿಂದ ಇಲ್ಲಿನ ಅಮೋಘವಾದ ಕಾರ್ಯವನ್ನು ನಡೆಸುವುದಕ್ಕೆ ಹಿತೋಪದೇಶಸಂಘವೇ ಕಾರಣವಾಗಿ ಶ್ರೀಶಿವಲಿಂಗಪ್ರತಿಷ್ಠಾ ಶ್ರೀಬಸವೇಶ್ವರ ಸಂಪ್ರೋಕ್ಷಣ ರಥೋತ್ಸವಾದಿ ಮಹೋತ್ಸವಗಳು ನಡೆಸುವುದಕ್ಕೆ ಪೂರ್ವಾರ್ಜಿತ ಸುಕೃತವಿಶೇಷದಿಂದ ಭಾಗ್ಯಶಾಲಿಗಳಾದ ಪುಣ್ಯಾತ್ಮರು ತಮ್ಮಿಂದಾರ್ಜಿಸಲ್ಪಟ್ಟ ದ್ರವ್ಯಕ್ಕೆ ಅನ್ನದಾನ ವಿದ್ಯಾದಾನ ಭೂದಾನ ಕೂಪತಟಾಕಾದಿನಿರ್ಮಾಣ ಶಿವಲಿಂಗಪ್ರತಿಷ್ಠಾ ಶಿವಾಲಯ ಜೀರ್ಣೋದ್ಧಾರ ಮೊದಲಾದ ಧರ್ಮಕಾರ್ಯಗಳನ್ನು ಆಚರಿಸುವುದೇ ಕರ್ತವ್ಯವೆಂದು ಅರಿತವರಾದ ಇಲ್ಲಿರುವ ವೀರಶೈವ ಮಹಾಜನರು ತಮ್ಮ ಗ್ರಾಮದಲ್ಲಿ ಹಿಂದೆ ಮರದಿಂದ ಕಟ್ಟಲ್ಪಟ್ಟಿದ್ದ ಬಸವೇಶ್ವರ ದೇವಾಲಯವು ಜೀರ್ಣವಾಗಿದ್ದದ್ದರಿಂದ ಸುಮಾರು ೩-೪ ವರ್ಷಗಳಿಂದ ೫-೬ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಶಿಲಾಮಯವಾಗಿ ಕಟ್ಟಿಸಿ ಪುರೋಹಳಂಕದಲ್ಲಿ ಕೈ|| ಶ್ರವಣಗೇರಿ ಶಿವಣ್ಣನು ಕಟ್ಟಿಸಿದ ಧರ್ಮಸತ್ರದಲ್ಲಿ ಮೂರು ಅಂಕಣ ಶಿವಾಲಯವನ್ನು ಸಹ ನಿರ್ಮಿಸಿ ಧರ್ಮಸತ್ರವನ್ನು ಈತನ ಪುತ್ರ ಕರಿಬಸಪ್ಪನು ಶ್ರೀ ಬಸವೇಶ್ವರ ದೇವರಿಗೆ ಒಪ್ಪಿಸಿದ ಕಾರಣ ವೀರಶೈವದೈವದವರು ಅದಕ್ಕನುಮೋದಿಸಿ ಆ ಶಿವಾಲಯದಲ್ಲಿ ಶ್ರೀ ಶಿವಲಿಂಗಪ್ರತಿಷ್ಠೆಯೂ ದೇವಾಲಯ ನಿರ್ಮಾಣವೂ ಶ್ರೀ ಬಸವೇಶ್ವರ ಸಂಪ್ರೋಕ್ಷಣೆಯೂ ರಥೋತ್ಸವವೂ ಅಗ್ನಿಕೊಂಡವೂ ಈ ಮಹಾಕಾರ್ಯಗಳು ಇದೇ ಸಿದ್ಧಾರ್ಥಿ ಸಂ|| ವೈಶಾಖ ಶು|| ೧೫ ಗೆ ನಡೆಯತಕ್ಕ ರಥೋತ್ಸವ ಕಾರ್ಯದ ಜತೆಯಲ್ಲಿ ಅದೇ ಶುಭಮುಹೂರ್ತದಲ್ಲಿ ವಿಧ್ಯುಕ್ತಪ್ರಕಾರವಾಗಿ ಪೂಜ್ಯಪಾದರಾದ ೩-೪ ಜನ ಚರಪಟ್ಟಾಧಿಕಾರಿಗಳಿಂದಲೂ ಹಂಪಸಮುದ್ರದಲ್ಲಿ ಇರುವ ಕಾಶೀನಂಜುಂಡ ಶಾಸ್ತ್ರಿಗಳು ಪುರೋಹಿತರು ಮೊದಲಾದವರಿಂದಲೂ ಸಾಂಗವಾಗಿ ನೆರವೇರಿಸುವುದಕ್ಕೆ ಆರಂಭಿಸಿ ಇದೇ ವೈಶಾಖ ಶುದ್ಧ ೬ ಲಾಗಾಯತು ಪ್ರಥಮ ಗಣಪತಿಪೂಜಾ ಪುಣ್ಯಾಹ ಆಲಯಪ್ರತಿಷ್ಠಾ ವಾಸ್ತುಪೂಜಾ ಶು|| ೭ ಮಂಗಳವಾರ ಮೃತ್ಸಂಗ್ರಹಣ ಅಂಕುರಾರೋಪಣ ಧ್ವಜಾರೋಹಣಾದಿ ಕಾರ್ಯಗಳು ಶು|| ೮ ಬುಧವಾರ ಪ್ರಧಾನದೇವತಾದಿ ಕಲಶಸ್ಥಾಪನ ಅಥವಾ ಸಪ್ರಧಾನ ದೇವತಾಹೋಮಾದಿ ಕಾರ್ಯಗಳು ಶು|| ೯ ಗುರುವಾರ ಶ್ರೀ ಶಿವಲಿಂಗಸ್ಥಾಪನ ಪ್ರಾಣಪ್ರತಿಷ್ಠಾ ಅಷ್ಟಬಂಧನಾದಿ ಕಾರ್ಯಗಳು ಶು|| ೧೦ ಶುಕ್ರವಾರ ಸುವರ್ಣಾಭಿಷೇಕವೂ ಕಲಶಾಭಿಷೇಕವೂ ಮಹಾಗಣಾರಾಧನೆಯು ಸಹ ನಡಿಸಿಕೊಂಡು ಇದೇ ದಿನ ಮತ್ತು ಶ್ರೀ ಬಸವೇಶ್ವರ ದೇವಾಲಯದಲ್ಲಿ ಪ್ರಥಮ ವಿಘ್ನೇಶ್ವರಪೂಜಾ ಸ್ವಸ್ತಿನಾಂದಿ ಶು|| ೧೧ ಶನಿವಾರ ಅಂಕುರಾರ್ಪಣ ಮಂಟಪದೇವತಾಪ್ರತಿಷ್ಠೆ ಕಲಶಸ್ಥಾಪನೆ ಶು|| ೧೨ ಭಾನುವಾರ ಸಂಪ್ರೋಕ್ಷಣೆಯೂ ವೀರಶೈವ ವಟುಗಳಿಗೆ ಶಿವದೀಕ್ಷಾಸಂಸ್ಕಾರವು ಮಹಾಮಂತ್ರೋಪದೇಶವು ಶು|| ಸೋಮವಾರ ಗಣಪತಿಪೂಜಾ ಧ್ವಜಾರೋಹಣಾದಿ ಕಾರ್ಯಗಳು ಶು|| ೧೪ ಮಂಗಳವಾರ ಕಲ್ಯಾಣೋತ್ಸವ ಪಂಚಕಲಶಸ್ಥಾಪನೆ ಶು|| ೧೫ ಬುಧವಾರ ಬ್ರಹ್ಮರಥೋತ್ಸವ ಬ|| ೧ ಗುರುವಾರ ಅಗ್ನಿಕೊಂಡ ದೇವತೋತ್ಸವಾದಿ ಕಾರ್ಯಗಳು ಬ|| ೨ ಶುಕ್ರವಾರ ವಸಂತೋತ್ಸವ ಧ್ವಜಾರೋಹಣ ಬ|| ೩ ಶನಿವಾರ ಕಲಶವಿಸರ್ಜನೆ ಕಂಕಣವಿಸರ್ಜನೆಯಿಂತಿಷ್ಟು ಕಾರ್ಯಗಳು ವಿಧಿಪ್ರಕಾರ ಸಾಂಗವಾಗಿ ನಡಿಸಲ್ಪಟ್ಟುವು. ಅಮರಾಪುರದ ನಿವಾಸಿಗಳಾದ ವೀರಶೈವ ಮಹಾಜನಗಳಲ್ಲಿ ಮುಖ್ಯಮುಖ್ಯಸ್ತರನ್ನು ಏರ್ಪಡಿಸಿಕೊಂಡದ್ದು ಪಟೇಲ್ ಲಿಂಗನಗೌಡರು ಮೇನೇಜರು ಗುಂಚಿಕಾರು ಇಂಡಿಪುಜ್ಜನಪ್ಪನವರು ಉಕ್ಕುಬುದ್ಧನಾಗಪ್ಪಣ್ಣಶೆಟ್ಟಿ ರಾಮಲಿಂಗಪ್ಪಣ್ಣ ಕೋಡಿಹಳ್ಳಿ ಯರಗುಂಟೆಪ್ಪಣ್ಣ ಯಲಸಣ್ಣಪ್ಪಣ್ಣ ಈ ಐದುಮೆಂಬರುಗಳು ಕಾರ್ಯದರ್ಶಿ ಕಂಟ್ರ್ಯಾಕ್ಟು ಅಮರಾಪುರದಲ್ಲಿ ಇರುವ ಮಧ್ಯಶೀರ್ಷದ ಮಲ್ಲಪ್ಪಣ್ಣ ಧರ್ಮಕರ್ತ ಕಬ್ಬಿಣದಂಗಡಿ ವೀರಭದ್ರಪ್ಪಣ್ಣ ಈ ಮಹತ್ಕಾರ್ಯಕ್ಕೆ ಇವರುಗಳನ್ನು ಮುಂದುಮಾಡಿ ಇವರುಗಳ ಹೇಳಿಕೆಯಂತೆ ಅನ್ಯಮತದಿಂದ ಇನ್ನು ಮುಂತಾದ ವೀರಶೈವ ಮಹಾಜನಗಳು ಒಬ್ಬರಿಗೊಬ್ಬರು ಈ ಸತ್ಕಾರ್ಯಕ್ಕೆ ತನುಮನಧನಗಳನ್ನು ಸಹ ಸೂರೆಗೊಟ್ಟು ಅತ್ಯಾನಂದವುಂಟಾಗುವಂತೆ ಹದಿಮೂರು ದಿವಸ ಆಗಮಕಾರ್ಯಗಳಲ್ಲಿ ನಡಿಯತಕ್ಕ ಉತ್ತಮಹೋತ್ಸವಕ್ಕೆ ಸಂತೋಷದೊಡನೆ ಕಾರ್ಯಗಳು ನಡೆಸುತ್ತಾ ಬಂದುದಲ್ಲದೆ ಮತ್ತು ವಿಶೇಷವೇನೆಂದರೆ ದುರ್ಭಿಕ್ಷೆ ಚಾನ್ನದಾಕಾರಂ ಎಂಬಂತೆ ಇಂಥ ದುರ್ಭಿಕ್ಷ ಕಾಲದಲ್ಲಿ ೧೩ ದಿವಸ ಮಹಾಗಣಾರಾಧನೆಯು ಸಹ ನಡೆಯಿತು. ಅಬ್ಮೆರು ೫-೬ ಸಾವಿರ ಬಡಜನರಿಗೆ ಅನ್ನದಾನವನ್ನು ಮಾಡಿ ಬಂದಂಥ ಹರಗುರುಜಂಗಮಕ್ಕೆ ಯೋಗ್ಯತಾನುಸಾರ ಭೂರಿದಕ್ಷಿಣೆ ಮೊದಲಾದ ಸದ್ವಿನಿಯೋಗವನ್ನು ಕೇವಲ ಉಲ್ಲಾಸದಿಂದಲೂ ನಿರ್ಮಲಚಿತ್ತದಿಂದಲೂ ಆಚರಿಸಿದುದು ಅಭಿನಂದನೀಯವಾಗಿರುತ್ತದೆ.

ಪ್ರತ್ಯಕ್ಷದರ್ಶಿ.

ಒಂದು ತಿಂಗಳವರೆಗೆ ಮಾತ್ರ. 2

ಇನಾಂ. 12 ಸೆಂಟ್‌ಬಾಟ್ಲಿಗಳು. ಇನಾಂ.

ಬೆಸ್ಟ್ ಪೌಂಟೆನ್‌ಪೇನಾ

ಈ ನಕ್ಷೆಯಲ್ಲಿ ಕಾಣುವ ಪೌಂಟೆನ್ ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ವಾಕುಗಳು ಮುತ್ತುಗಳಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಡಜನ್ ರೋಸ್ ಸೆಂಟ್‌ಬಾಟ್ಲಿಗಳು ಇನಾಂ ಕೊಡಲ್ಪಡುತ್ತೆ.

ಬಹುಮಾನಸಹಿತ ಕ್ರಯ ಪೇನಾ 1 ಕ್ಕೆ ರೂ. 1—4—0.

ವಿಳಾಸ:—ಟಿ. ರಾಮಚಂದ್ರ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಫೋಟೋಲಾಕೇಟ್ಸ್.

ಈ ಪ್ರಕಾರ ಘಡಿಯಾರದ ಸರಳಿಗೆ ಹಚ್ಚುವ ಲಾಕೇಟಗಳೂ, ಮತ್ತು ಕೋಟಿನ ಕಾಲರಮೇಲೆ ಹಚ್ಚುವ ಬ್ರೂಚಗಳೂ, ಅಪೂರ್ವವಾದ ಅತ್ಯಂತ ಪ್ಯಾನ್ಸಿಯಾದ್ದು ಆದರಿಂದ ತನ್ನ ಇಚ್ಛಿತ ದೇವರ ಆಕಾರವೂ, ಅಥವಾ ಸತ್ಪುರುಷರ ಆಕಾರವೂ ದರ್ಶನ ಆಗುತ್ತದೆ. ಈ ಫೊಟದಲ್ಲಿ ಶ್ರೀ ಶಿವಪಂಚಾಯತನ, ಶ್ರೀ ಬಸವೇಶ್ವರ, ಶ್ರೀ ನಂಜನಗೂಡು ಶ್ರೀಕಂಠೇಶ್ವರ. ಶ್ರೀ ಚಾಮುಂಡಾದೇವಿ, ಜೈನರ ಗೋಮಟೇಶ್ವರ ಸ್ವಾಮಿ, ಮುಂತಾದ ದೇವರವೂ, ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಶ್ರೀ ಶೃಂಗೇರಿ ಶಂಕರಾಚಾರ್ಯ ಶ್ರೀ ಶಾರದಾಂಬಾದೇವಿ, ಮಹಮದೀಯ ಧರ್ಮದ ಜಗದಾಬಪೀರಸಾಹೇಬ ಅಜಮಾರದ ಭಾಜಾವಲಿ, ಮುಂತಾದ ಬೇಕತ್ತಳ್ಳದ ಅನೇಕ ದೇವತಾ ಮತ್ತು ಸಾಧೂ ಸತ್ಪುರುಷರವೂ ಫೋಟೋ ಕೂಡ ಸಿಗುತ್ತವೆ. ಲಾಕೇಟಾದಲ್ಲಿ ೨, ಬ್ರೂಚದಲ್ಲಿ ೧, ಫೋಟೋ ಇರುವವೂ ಕ್ರಯ ಗಿಲ್ಟುಬ್ರೂಚವೂ ೬, ೮, ಆಣೆ. ರೋಲಗೋಲ್ಡ ಬ್ರೂಚವೂ ರೂ ೧—೨—೦, ೧—೮—೦, ಪ್ರತಿ ಒಂದಕ್ಕೆ ಲಾಕೇಟದ ಕ್ರಯ ಬೆಳ್ಳೀವೂ ಅರ್ಧ ರೂಪಾಯಿ ಆಕಾರವೂ ಸುಂದರವಾದ ನಕ್ಷಿ ಪುಳ್ಳವುಗಳ ಕ್ರಯ ರೂ. ೧—೧೪—೦ ಸಣ್ಣವೂ ಪಾವಲಿ ಆಕಾರವೂ ಅತ್ಯಂತ ಮೋಹಕವೂ ಆದವು ಕ್ರಯ ರೂ. ೧—೧೨—೦ ಪಾವಲಿ ಆಕಾರದ ಪ್ಲೇನ ಮತ್ತು ಪ್ಯಾನ್ಸಿ ಕ್ರಯ ರೂ. ೧—೮—೦ ರೋಲಗೋಲ್ಡ ೧ ರೂಪಾಯಿ ಸೈಜ ತತ್ತಿ ಆಕಾರವೂ, ಅಥವಾ ಗುಂಡ ಆಕಾರವೂ ಇರುವವುಗಳ ಕ್ರಯ ರೂ. ೧-೪-೦ ೧—೮—೦.



ಇವುಗಳ ಪೂರ್ತ ನಮ್ಮ ಕಾರಖಾನಾದಲ್ಲಿ ಶ್ರೀ ಕಾಶೀಕ್ಷೇತ್ರದರ್ಶನ, ೨ ಸೊಲ್ಲಾಪುರ ಸಿದ್ಧರಾಮೇಶ್ವರ, ೩ ಶ್ರೀ ವಿಷ್ಣು ಸುದರ್ಶನಲಾಭ, ೪ ಪಂಚಮುಖದ ಪರಮೇಶ್ವರ, ೫ ವೀರಶೈವ ಶಿವಯೋಗಿ ಸಂಘ, ೬ ಕಲ್ಯಾಣ ಬಸವೇಶ್ವರ, ೭ ಶರಭಾವತಾರ, ೮ ವೀರಶೈವ ರಾಜಸಮೂಹ, ೯ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿ, ಹಾನಗಲ್ಲ, ಹಾಲಕೇರಿ ಕಮತಗಿ ಹುಚ್ಚಪ್ಪನವರೂ ಸಿರಸಂಗಿ ಸರದೇಸಾಯಿ, ರುದ್ರಗವಡ್ರು ಮುಂತಾದ ಅನೇಕ ಸಾಧೂ ಸತ್ಪುರುಷರದೂ ಫೋಟೋ ಸಿಗುತ್ತವೆ. ಕ್ರಯ ಪೂಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಪ್ರತಿವಂದ ಊರಿಗೆ ಮಾರಾಟಮಾಡುವ ಏಜಂಟರು ಬೇಕು. ರೂ. ೦—೧—೦ ಸ್ಟ್ಯಾಂಪ್ ಕಳುಹಿಸಿ ಕೊಟ್ಟು ಕ್ಯಾಟ್ಲಾಗ ಬುಕ್ ಮತ್ತು ಏಜಂಟರ ನಿಯಮ ತರಿಸಿಕೊಳ್ಳಿರಿ.

ದಿ ಶಾರದಾ ಫೋಟೋ ಕಂಪನಿಯ ಮಾಲಕ,
7 ಗಂಗಪ್ಪಾ ಜೇರಗೇ ಸೋಲ್ಲಾಪುರ ಸಿಟಿ.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತ)

3 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 30

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೆಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗಸ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಣಮೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

21 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಜೂನ್ ತಾ|| ೨೯ ರಿಂದ ೧೯೧೯ ನೆಯ ಜುಲೈ ತಾ|| ೫ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಷಾಢ ಶು|| ಬಿದಿಗೆಯಿಂದ ಆಷಾಢ ಶು|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುಮಾಸ
29	[1] ಭಾನು	ಬಿದಿಗೆ	41-16	ಪುನ	21-15	15
30	ಸೋಮ	ತದಿಗೆ	38-19	ಪುಷ್ಯ	19-50	16
1	[2] ಮಂಗಳ	ಚೌತಿ	36-32	ಆಶ್ಲೇ	19-35	17
2	ಬುಧ	ಪಂಚ	35-53	ಮಖಾ	20-23	18
3	ಗುರು	ಷಷ್ಠಿ	36-31	ಪುಭ	22-32	19
4	[3] ಶುಕ್ರ	ಸಪ್ತಮಿ	38 33	ಉಭ	25-51	20
5	ಶನಿ	ಅಷ್ಟಮಿ	41-38	ಹಸ್ತ	30-21	21

(1) ಪವ್ವಾಲ್ ಪ್ರಾರಂಭ. (2) ದೇಶರಾಜೇ ಅರಸಿನವರ ಕುಮಾರರ ವರ್ಧಂತಿ. (3) ಆಷಾಢಶುಕ್ರವಾರ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾಖಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಜುಲೈ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೨೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋ ಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತ ಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾ ಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚ ತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭ ಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿ ುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀ ಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಪ್ರಾವರಣ, ಕರಣಹಸು , ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತ ಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗ ಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾ ುರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗ ನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾ ಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ೀಕೆ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಶತಕಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತ ಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆ ು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
22 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ೀಕ ಶತಕತ್ರಯ	೧— ೦—೦
ೀಕ ವೀರಶೈವ ವಿವಾಹವಿಧಿ	೦— ೮—೦
ಪೂಜಾವಿಧಿ	೦—೧೦—೦
ರುಶೀಲಶಾಸ್ತ್ರ	೦— ೫—೦
ದಾಸಿ	೦— ೪—೦
ಪಂಚಕ	೦— ೨—೦
ಲವಿದ್ಯಾ (ಮುಕ್ತಿಸಾಧನ)	೦— ೨—೦
ಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.

ಈಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ	1 ಕ್ಕೆ	0—12—0.
	12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಸು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
22 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯುಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

39 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

29

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಧೂಮಕೇತೂತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೈಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
29 ವೈದ್ಯಶಾಲಾ, ಮೈಸೂರು.

ಮಹಾತತ್ವಜ್ಞಾನಿಗಳಾದ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.

ಧರ್ಮದ ನಿಜತತ್ವವು, ವೇದಾಂತದ ರಹಸ್ಯವು, ಚನ್ನಾಗಿ ತಿಳಿಯುವಂತೆ ಬಹು ಯುಕ್ತಿ ಯುಕ್ತವಾಗಿಯೂ, ಸುಲಭವಾಗಿಯೂ, ಜಪಾನ, ಅಮೆರಿಕಾ ದೇಶಗಳಲ್ಲಿ ಬೋಧಿಸಿ ಅತಿ ಘನತೆಯನ್ನು ಹೊಂದಿದ ಶ್ರೀ ಸ್ವಾಮಿ ರಾಮತೀರ್ಥರ ಅದ್ವಿತೀಯವಾದ ಉಪನ್ಯಾಸಗಳು ಈ ವರೆಗೂ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿಲ್ಲವಾದುದರಿಂದ ಇಲ್ಲಿನ ಕರ್ನಾಟಕ ಗ್ರಂಥಪ್ರಸಾರಕ ಸಂಘದವರು ಅವುಗಳನ್ನು ಪ್ರಕಟಿಸಲುಪಕ್ರಮಿಸಿರುತ್ತಾರೆ.

ಈ ಮೊದಲನೆಯ ಭಾಗದಲ್ಲಿ ಶ್ರೀ ಸ್ವಾಮಿಗಳವರ ಹೃದಯಂಗಮವಾದ ಚರಿತ್ರೆಯೂ, ಅತ್ಯಂತ ಮನನೀಯವಾದ ಸುಖದ ವಾಸಸ್ಥಾನ, ಕಾರ್ಯಸಿದ್ಧಿಯ ಮರ್ಮ ಎಂಬ ಉಪನ್ಯಾಸಗಳೂ, ಪೂರ್ವಾಶ್ರಮದ ಸುಂದರವಾದ ಭಾವಚಿತ್ರವೂ, ಅಡಕವಾಗಿವೆ. ಕ್ರಯ. ೮ ಆಣೆ.

24 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
33 ಸಾಹುಕಾರಪೇಟೆ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜುಲೈ ತಾ॥ ೬ ನೆಯ ಭಾನುವಾರ.

ಮಹಾಸಂಧಿಮಹೋತ್ಸವ.

ಸಂಶಯಾಸ್ಪದವಾಗಿದ್ದ ಸಂಧಿಕಾರ್ಯವು ಸಮಾಪ್ತವಾಗಿಹೋದುದು ಜಗತ್ತಿಗೆಲ್ಲಾ ಸಂತೋಷಕರವಾಗಿದೆ. ಯುದ್ಧಾಗ್ನಿಯಿಂದ ಬೆಂದು ಕರಿಮುರಿಗೊಂಡಿದ್ದ ಲೋಕಕ್ಕೆ ಈಗ ಭಗವತ್ಕೃಪಾರಸ ಪರಿಷೇಚನವು ದೊರೆತು ತಾಪಶಾಂತಿಯನ್ನು ಮಾಡಿಕೊಳ್ಳಲು ಆಸ್ಪದವಾಯಿತು. ನೂತನ ವರ್ಷಾರಂಭಕಾಲದಲ್ಲಿ ನಾವು ನಿರೀಕ್ಷಿಸಿ ಕೋರಿದಂತೆಯೇ ಸಿದ್ಧಾರ್ಥಿಸಂವತ್ಸರವು ಸಂಧಿನಿರ್ವರ್ತನ ಸಂಬಂಧದಿಂದ ಇಷ್ಟಾರ್ಥಸಿದ್ಧಿಯನ್ನು ಜಗತ್ತಿಗೆ ಉಂಟುಮಾಡಿದ ಕಾರಣ, ಅದು ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡು ಚಿರಸ್ಮರಣೀಯವಾಯಿತು. ಸ್ಥಿರವಾರದ ದಿವಸ ನಡೆದಿರುವ ಈ ಮಹಾಸಂಧಿಯು ಸ್ಥಿರವಾಗಿಯೇ ಉಳಿದು, ತನ್ಮೂಲಕ ಲೋಕದ ಶಾಂತಿಸೌಖ್ಯಗಳು ರೂಢಮೂಲವಾಗುವಂತೆ ಅನುಗ್ರಹಿಸಲೆಂದು ಕೃತಜ್ಞತಾಬದ್ಧರಾದ ನಾವೆಲ್ಲರೂ ಭಕ್ತವತ್ಸಲನಾದ ಜಗದೀಶನನ್ನು ಮತ್ತೊಮ್ಮೆ ಪ್ರಾರ್ಥಿಸೋಣ.

ಸಂಧಿಯು ಈಗ ನಡೆದುಹೋಗಿದ್ದರೂ ಜರ್ಮನರು ಅದಕ್ಕೆ ಮನಃಪೂರ್ವಕವಾಗಿ ಒಪ್ಪಿರುವರೆಂದು ಹೇಳಲಾಗುವುದಿಲ್ಲ. ಲೋಕಶಾಂತಿಯು ಮಿತ್ರಮಂಡಲಿಯ ಗುರಿಯಾಗಿದ್ದಂತೆ ಜರ್ಮನರಿಗಿರುವುದಿಲ್ಲ. ಅವರಿಗೆ ಸ್ವಾರ್ಥಸಾಧನೆಯೇ ಲಕ್ಷ್ಯವಾಗಿ ನಿಂತಿದೆ. ಅದರಮೇಲೆ ಮಾತ್ಸರ್ಯಪಿಶಾಚವು ಅವರ ಮೈತುಂಬಿನಿಂತಿದೆ. ಯುದ್ಧಾರಂಭಕಾಲದಲ್ಲಿ ಯಾವ ಸರ್ವೋತ್ಕೃಷ್ಟತತ್ತ್ವದಿಂದ ಆಂಗ್ಲರೇ ಮೊದಲಾದ ಮಿತ್ರಮಂಡಲೀ ಮಹಾರಾಷ್ಟ್ರಗಳವರು ಆ ಯುಧ್ಧವನ್ನು ಪರಿಗ್ರಹಿಸಿದರೋ ಆ ತತ್ತ್ವರಕ್ಷಣೆಗಾಗಿಯೇ ಕಡೆತನಕವೂ ಕೆಲಸಮಾಡಿದ್ದಾರೆ. ಅವರ ಆ ಸದ್ಧರ್ಮಪ್ರಭಾವದಿಂದಲೇ ಜಗದೀಶನ ಬೆಂಬಲವು ದೊರೆದು ಅವರ ಸಂಕಲ್ಪವು ನಿರರ್ಗಳವಾಗಿ ಸಾಗುವಂತಾಯಿತು.

ಜರ್ಮನರು ಇನ್ನೂ ತಮ್ಮ ಕ್ಷುಲ್ಲಕತನವನ್ನೂ ವಿಶ್ವಾಸಘಾತಕತನವನ್ನೂ ಲೋಕಕ್ಕೆ ಪರಿಪರಿಯಿಂದ ತೋರಿಸುತ್ತಲಿರುವುದು ಜಗತ್ತಿಗೆಲ್ಲಾ ಅಸಹ್ಯವನ್ನುಂಟುಮಾಡುತ್ತಿದೆ. ಹೊಸಹೊಸದಾಗಿ ಅವರು ತೋರಿಸುವ ದ್ರೋಹಾಚರಣಗಳಿಂದ ಮಿತ್ರಮಂಡಲಿಯವರ ಮನಸ್ಸು ಮತ್ತಷ್ಟು ಪೆಡಸೇ ಆಗುತ್ತಿರುವುದು. ಇಂಥ ದುರ್ಗುಣಗಳಿಂದಲೇ ಇದುವರೆಗೆ ಇಹಪರಗಳೆರಡನ್ನೂ ಅವರು ಕೆಡಿಸಿಕೊಂಡರು. ಮುಂದೆಯೂ ಹಾಗೆಯೇ ನಡೆದರೆ ಈಗಣ ಅವರ ಅಧಃಪತನಕ್ಕೆ ನಿಲುಗಡೆಯೇ ಇಲ್ಲದೆ ಪಾತಾಳವನ್ನೇ ಕಾಣಬೇಕಾಗುವುದು.

ಜರ್ಮನರಲ್ಲಿ ದೌರ್ಜನ್ಯದ ಹುಟ್ಟಡಗಿ ಸದ್ಗುಣಗಳು ವಿಕಾಸಗೊಂಡು ಪವಿತ್ರವಾದ ನಡತೆಯು ಹೊರಹೊಮ್ಮುತ್ತ ಬಂದಂತೆಲ್ಲಾ ಜಗತ್ತಿನಲ್ಲಿ ಅವರ ಸಾಖ್ಯವು ಹೆಚ್ಚುವಲ್ಲಿ ಅಡ್ಡಿಯಿಲ್ಲ. ಅವರು ಸಂಪತ್ತಿನಲ್ಲಿ ಮುಂದಾಗಿ ಬರುವುದಕ್ಕೆ ಮಿತ್ರಮಂಡಲಿಯವರು ಅಡ್ಡಿಯೇನನ್ನೂ ಮಾಡಿರುವುದಿಲ್ಲ. ಸೌಜನ್ಯದಿಂದ ಅವರು ಪ್ರವರ್ತಿಸುವವರಾದರೆ ಅವರ ವ್ಯಾಪಾರ ಕೈಗಾರಿಕೆ ಮೊದಲಾದುವುಗಳಿಗೂ, ಅವರ ದ್ರವ್ಯಾರ್ಜನೆಗೂ ಜಗತ್ತಿನಲ್ಲೆಲ್ಲಾ ಬಾಗಿಲನ್ನು ತೆರೆದಿಟ್ಟಿರುವರು. ಅದನ್ನು ಬಿಟ್ಟು ಮೊದಲಿನಂತೆ ಕಪಟಭಾವವನ್ನೇ ಅವರು ವ್ಯಕ್ತಪಡಿಸುತ್ತ ಬಂದರೆ ಅವರ ಉಣ್ಣುವ ಬಾಯಿಗೆ ಅವರೇ ಮಣ್ಣನ್ನು ಹಾಕಿಕೊಳ್ಳುವರು. ಈಗಣ ಸಂಧಿನಿಬಂಧನೆಗಳಲ್ಲಿ ಮರಳಿ ಜರ್ಮನರು ಯುದ್ಧಾರಂಭಮಾಡಲು ಅವಕಾಶವಿಲ್ಲದಂತೆ ಅವರ ಕೈಕಾಲುಗಳನ್ನು ಕಟ್ಟಿಹಾಕಿರಬೇಕೆಂಬ ತತ್ತ್ವವೊಂದಕ್ಕೇ ಮಿತ್ರಮಂಡಲಿಯವರು ಹೆಚ್ಚಾಗಿ ಲಕ್ಷ್ಯವನ್ನು ಕೊಟ್ಟಿರುವಂತೆ ಕಾಣುವುದು. ಅದು ನ್ಯಾಯವಾಗಿರುತ್ತದೆ. ಆದಕ್ಕಾಗಿ ಜರ್ಮನರು ಅಸಮಾಧಾನಪಟ್ಟು ಪ್ರಯೋಜನವಿಲ್ಲ. ನೂತನಮಾರ್ಗದಲ್ಲಿ ಅವರು ಸ್ನೇಹದಿಂದ ನಡೆದು ಸರ್ವಜಾತಿ ಸಂಮೇಳನದಲ್ಲಿ ಸೇರುವುದಕ್ಕೆ ತಮಗೂ ಮಿತ್ರಮಂಡಲಿಯವರು ಕೊಟ್ಟಿರುವ ಅವಕಾಶವನ್ನು ಸಫಲಗೊಳಿಸಿಕೊಂಡರೆ ಶ್ರೇಯಸ್ಸುಂಟು.

ಜರ್ಮನರು ಸಂಧಿಗೆ ಒಪ್ಪಿ ಕೈಬರಹವನ್ನು ಹಾಕಿ ಮುಗಿಸಿರುವುದರಿಂದ ಇನ್ನು ಆ ಪಕ್ಷದ ಆಸ್ಟ್ರಿಯಾ ಮೊದಲಾದ ರಾಜ್ಯಗಳೊಡನೆ ನಡೆಯಬೇಕಾದ ಸಂಧಿಕಾರ್ಯವು ಅಷ್ಟೇನೂ ಭಾರವಾಗಿರಲಾರದು. ಅವರು ಮುಷ್ಕರವನ್ನು ಮಾಡಿ ಪ್ರತಿಭಟಿಸುವುದು ಅಸಂಭವ. ಆದುಕಾರಣ ಆಸ್ಟ್ರಿಯಾ, ಬಲ್ಗೇರಿಯಾ, ತುರ್ಕಿ ರಾಜ್ಯಗಳ ಸಂಧಿಕಾರ್ಯಗಳು ಇಷ್ಟರಲ್ಲೇ ಜರುಗಿಹೋಗುವುದರಲ್ಲಿ ಸಂಶಯವೇನೂ ತೋರುವುದಿಲ್ಲ. ಚೀನರೂ ಸಂಧಿಪತ್ರಕ್ಕೆ ರುಜುಹಾಕಿದರು. ಇವೆಲ್ಲಾ ಮುಗಿದುಹೋದಬಳಿಕ ಬೋಲ್ಷೆವಿಕ್ಕರ ಆಟವು ಇನ್ನೆಷ್ಟುಕಾಲ ನಡೆದೀತು ? ಆ ಪಾಪಿಗಳು ಈಗಾಗಲೇ ಕಂಠಗತಪ್ರಾಣರಾಗಿದ್ದಾರೆ. ಅವರೂ ಸ್ವಲ್ಪಕಾಲದಲ್ಲೇ ಶರಣಾಗತರಾಗುವುದು ಖಂಡಿತವು. ಅಫ್ಘಾನಿಸ್ಥಾನದ ವಿಷಯವೂ ಕೊನೆಸೇರಿ ಬಂದಿದೆ. ಅವರೂ ಸಂಧಿಗಾಗಿ ಆಂಗ್ಲರಬಳಿ ಬೇಡಿಕೊಂಡಿದ್ದಾರೆ. ಅದೂ ಇಷ್ಟರಲ್ಲೇ ನಡೆದುಹೋಗುವಂತಿದೆ.

ಹೀಗೆ ಮಹಾಸಂಧಿಗಳು ಸರ್ವತ್ರ ನಡೆದ ಈ ಸುಸಮಯವು ಪ್ರಪಂಚದ ಹಿತಕ್ಕೆ ಶುಭವನ್ನುಂಟುಮಾಡುವ ನೂತನಯುಗದ ಸುಸಂಧಿಯಾಗಿರುತ್ತದೆ. ಯುದ್ಧಮೂಲಕದಿಂದ ಜಗತ್ತಿಗೆ ತನ್ನ ಘೋರರೂಪವನ್ನು ವ್ಯಕ್ತಗೊಳಿಸಿದ್ದ ಜಗದೀಶನು ತನ್ನ ನಿಸರ್ಗಮಹಾನುಕಂಪದಿಂದ ಈಗ ಶಾಂತರೂಪವನ್ನು ತಾಳಿ ನಮ್ಮನ್ನು ಅನುಗ್ರಹಿಸಿದ್ದಾನೆ. ಈ ಭಾಗ್ಯವು ನಮಗೆ ಲಭಿಸಿದುದಕ್ಕಾಗಿ ಆತನಲ್ಲಿ ನಮಗಿರುವ ಅತ್ಯಂತ ಭಕ್ತಿಯನ್ನೂ, ತಮ್ಮ ಸದ್ಧರ್ಮ ತಪಃಪ್ರಭಾವದಿಂದ ಮಿತ್ರಮಂಡಲಿಯವರು ಜಗದೀಶಪ್ರಸನ್ನತೆಯನ್ನು ಸಂಪಾದಿಸಿಕೊಂಡುದರಿಂದ ಅವರಲ್ಲಿ ನಮಗಿರುವ ರಾಜನಿಷ್ಠೆಯನ್ನೂ ಶಕ್ತಿವಂಚನೆಯಿಲ್ಲದೆ ವ್ಯಕ್ತಪಡಿಸುವ ಕಾಲವು ಈಗ ಒದಗಿರುತ್ತದೆ. ಪ್ರಪಂಚದವರೆಲ್ಲಾ ಈ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಸಾಗಿಸಲು ಏರ್ಪಾಟುಮಾಡಿಕೊಂಡಿದ್ದಾರೆ. ಅದನ್ನು ನೆರವೇರಿಸಲು ಅವಕಾಶವನ್ನು ನಮ್ಮ ಪ್ರಭುತ್ವದವರೂ ಕಲ್ಪಿಸಿಕೊಟ್ಟಿರುತ್ತಾರೆ. ಅಂಥ ಉತ್ಸವವನ್ನು ಬರುವ ಆಗಸ್ಟ್ ತಾ॥ ೪ ರಿಂದ ೩ ದಿನಗಳವರೆಗೆ ನಡೆಯಿಸಬಹುದಾಗಿದೆ. ಈ ವಿಷಯವಾಗಿ ನಮ್ಮ ವೈಸ್ರಾಯರು ಹೀಗೆ ಪ್ರಕಟನೆಮಾಡಿದ್ದಾರೆ—"ನಮ್ಮ ಚರಿತ್ರದಲ್ಲಿ ಪ್ರಾರಂಭವಾಗಿರುವ ಈ ನೂತನ ಶಕಕ್ಕೆ ತಕ್ಕ ರೀತಿಯಲ್ಲಿ ನಾವು ಈ ಉತ್ಸವಗಳನ್ನು ಜರುಗಿಸಬೇಕು. ಭರತಖಂಡದಲ್ಲಿ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೂ ಪ್ರಜೆಗಳು ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ವ್ಯಕ್ತಪಡಿಸುವುದಕ್ಕಾಗಿ ಪ್ರತ್ಯೇಕ ದಿನಗಳು ಏರ್ಪಡಿಸಲ್ಪಡುವುವು. ಈ ಉತ್ಸವಗಳಲ್ಲಿ ಬಡವರೂ ಭಾಗ್ಯವಂತರೂ, ವೃದ್ಧರೂ, ಹರೆಯದವರೂ, ಸೈನಿಕರೂ, ಇತರರೂ ಸಹ ಎಂದರೆ ಸರ್ವಪ್ರಜೆಗಳೂ ಅಂಗವಾಗಿ ಸೇರಿ ನಡೆಯಿಸುವಂತೆ ಏರ್ಪಾಟಾಗಬೇಕು" ಎಂದು ತಿಳಿಯಿಸಿರುತ್ತಾರೆ. ಭಾರತೀಯರೆಲ್ಲರೂ ತಮ್ಮ ನಿಸರ್ಗವಾದ ರಾಜಭಕ್ತಿವಿಶೇಷದಿಂದ ಈ ಉತ್ಸವಗಳನ್ನು ತಂತಮ್ಮ ಕಡೆಗಳಲ್ಲಿ ಅಸಾಧಾರಣ ರೀತಿಯಿಂದ ನೆರವೇರಿಸಿ, ತಮ್ಮ ಕೃತಜ್ಞತಾ ರಾಜನಿಷ್ಠೆಗಳನ್ನು ವ್ಯಕ್ತಪಡಿಸುವವರಾಗಬೇಕು.

ದೈವಕೃಪೆಯಿಂದ ಯುದ್ಧದ ತೊಡಕುಗಳೆಲ್ಲವೂ ತಪ್ಪಿದುದರಿಂದ ಇನ್ನು ಮೇಲೆ ಎಲ್ಲದೇಶಗಳಲ್ಲೂ ಶಿಲ್ಪವಾಣಿಜ್ಯಗಳು ನಿರಾತಂಕವಾಗಿ ನಡೆಯುವುದಕ್ಕೂ, ಹೇರಳವಾಗಿ ಸರಕುಗಳು ಒಂದು ಕಡೆಯಿಂದ ಮತ್ತೊಂದುಕಡೆಗೆ ಸಾಗುವುದಕ್ಕೂ, ಅವಕಾಶವಾಗಿರುವುದರಿಂದಲೂ, ನಮ್ಮ ದೇಶದಲ್ಲಿ ಹಲವು ಕಡೆ ಮುಂಗಾರಿನ ಮಳೆಬೆಳೆಗಳು ಅನುಕೂಲವಾಗಿ ತೋರುತ್ತಿರುವುದರಿಂದಲೂ ಪದಾರ್ಥಗಳ ಬೆಲೆಯು ಇಳಿದುಹೋಗುವ ಸಂಭವವು ವಿಶೇಷವಾಗಿರುತ್ತದೆ. ಇದರಿಂದ ಮುಂದೆ ಸುಖಶಾಂತಿಯ ದಿನಗಳನ್ನು ನಾವು ಕಾಣಬಹುದಾಗಿದೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘದ ವಾರ್ಷಿಕ ಸಮ್ಮೇಳನ.

ಕಳೆದ ತಾ॥ ೨೯ರ ಸಾಯಂಕಾಲ ಬೆಂಗಳೂರು ಧರ್ಮಪ್ರವರ್ತಕ ರಾ॥ ಬ॥ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ದಿ॥ ಬ॥ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರವರ ಅಧ್ಯಕ್ಷತೆಯಿಂದ ಈ ಸಮ್ಮೇಳನವು ಜರುಗಿತು. ಸಕಲಪರಸ್ಥಳಗಳಿಂದ ಜನರಲ್ ಕಮಿಟಿ ಮೆಂಬರುಗಳು ಮ॥ ಗಳಾದ ಆರ್ ಪುಟ್ಟಣ್ಣ, ಬಿ.ಎ.,ಬಿ.ಎಲ್., ರವರು, ಎಂ. ಬಸವಯ್ಯ, ಬಿ.ಎ.,ಬಿ.ಎಲ್., ರವರು, ಬಿ. ಬಸವಾರಾಧ್ಯ, ಬಿ.ಎ.,ಬಿ.ಎಲ್., ರವರು, ಜಿ. ರುದ್ರಪ್ಪ, ಎಂ.ಎ., ಬ್ಯಾ॥ ಅಟ್‌ಲಾ ರವರು, ಪಿ. ಮಹಾದೇವಯ್ಯ, ಬಿ.ಎ.,ಬಿ.ಎಲ್., ರವರು, ಎಚ್. ಕೆ. ವೀರಬಸವಯ್ಯ, ಬಿ. ಎ., ಬಿ ಎಲ್., ರವರು, ಜಿ. ಶಾಂಕವೀರಪ್ಪ, ಬಿ. ಎ ರವರು, ಜಿ. ಮಲ್ಲಿಕಾರ್ಜುನಯ್ಯ, ಬಿ. ಎ., ಯವರು, ಎಂ.ಪಿ. ಭೋಗಯ್ಯ, ಬಿ.ಎ ಬಿ.ಎಲ್., ರವರು, ಅ॥ ಕನ್ಸರ್ವೇಟ್ ರೇವಣ್ಣನವರು, ಜಿ. ಪರಮಶಿವಯ್ಯ, ಬಿ. ಎ., ಎಲ್.ಎಲ್. ಬಿ., ಅಡ್ವೋಕೇಟ್‌ಯವರು, ಆರ್. ಮಲ್ಲಪ್ಪ, ಬಿ.ಎ., ಯವರು, ಯಜಮಾನ್ ಬಸವಪ್ಪನವರು, ವೀರಭದ್ರಶೆಟ್ಟರು, ಡಾ॥ ಟಿ.ಎಸ್. ನಂಜಪ್ಪನವರು, ಡಾ॥ ಟಿ. ಎಸ್. ಸಿದ್ದಪ್ಪನವರು, ಎನ್. ಬಸಪ್ಪನವರು, ವೈ. ವಿರೂಪಾಕ್ಷಯ್ಯನವರು, ಎನ್. ಆರ್. ಕರಿಬಸವಶಾಸ್ತ್ರಿಗಳು, ಪ್ಲೀಡರ್ ಸಿದ್ಧನಂಜಪ್ಪನವರು, ಟಿ. ನಂಜಪ್ಪನವರು, ಸಾ॥ ಬುಳ್ಳಪ್ಪನವರು ಮೊದಲಾದ ನೂರಾರು ಮಂದಿಗಳು ಸಭೆಯನ್ನಲಂಕರಿಸಿದ್ದರು. ಸಂಘದ ಗೌರವಕಾರ್ಯದರ್ಶಿಗಳಾದ ಜಿ. ಪರಮಶಿವಯ್ಯನವರು ೧೯೧೮-೧೯ನೆ ವರ್ಷದ ಕಾರ್ಯಕ್ರಮಗಳ ವರದಿಯನ್ನು ಓದಿದರು. ಆಡಿಟರುಗಳ ವರದಿಯೂ ಓದಲ್ಪಟ್ಟು ಸಭಿಕರಿಂದ ಲೆಕ್ಕಪತ್ರಗಳು ಒಪ್ಪಲ್ಪಟ್ಟುವು. ಮುಂದಣ ವರ್ಷದಲ್ಲಿ ಸಂಘದ ಅಧ್ಯಕ್ಷಪದವಿಗೆ ದಿ॥ ಬ॥ ಕೆ. ಪಿ. ಪುಟ್ಟಣ್ಣಶೆಟ್ಟರು, ಉಪಾಧ್ಯಕ್ಷತ್ವಕ್ಕೆ ಮ॥ ಆರ್. ಪುಟ್ಟಣ್ಣನವರು ಕಾರ್ಯದರ್ಶಿ ಪದವಿಗೆ ಮ॥ ಜಿ. ಪರಮಶಿವಯ್ಯನವರು ಕೋಶಾಧ್ಯಕ್ಷತೆಗೆ ಮ॥ ಪಿ.ಎಂ. ಬಸವಪ್ಪನವರು, ಮ್ಯಾನೇಜಿಂಗ್‌ಕಮಿಟಿಗೆ ಮ॥ ಯಜಮಾನ್ ಬಸವಪ್ಪನವರೇ ಮೊದಲಾದ ೧೨ ಮಂದಿಗಳು ಆರಿಸಲ್ಪಟ್ಟರು. ಸಂಘದ ಪಕ್ಷದಿಂದ ಪ್ರಜಾಪ್ರತಿನಿಧಿ ಸಭೆಗೆ ಮ॥ ಜಿ. ಪರಮಶಿವಯ್ಯನವರೂ, ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡಿಗೆ ಮ॥ ಟಿ. ನಂಜಪ್ಪನವರೂ ಪ್ರತಿನಿಧಿಗಳಾಗಿ ಕಳುಹಿಸಲ್ಪಡುವಂತೆ ಸಭಿಕರಿಂದ ಆರಿಸಲ್ಪಟ್ಟರು. ಅಧ್ಯಕ್ಷರಿಗೆ ವಂದನೆಯನ್ನರ್ಪಿಸುವುದರ ಜತೆಗೆ ಸಭಾಕಾರ್ಯವು ಪರಿಸಮಾಪ್ತವಾಯಿತು.

ಓದಲ್ಪಟ್ಟ ವರದಿಯನ್ನು ಕೇಳಲಾಗಿ ಕಳೆದ ವರ್ಷದಲ್ಲಿ ೨೨೨೨ ರೂ.ಗಳನ್ನು ವಿದ್ಯಾರ್ಥಿವೇತನ ಮೊದಲಾದುವುಗಳಿಗಾಗಿ ಸಂಘದವರು ವೆಚ್ಚಮಾಡಿರುವರೆಂತಲೂ ಸ್ವಲ್ಪ ಹೆಚ್ಚುಕಡಿಮೆ ಅಷ್ಟೇ ವರಮಾನವಾಗಿರುವಂತೆಯೂ ಗೊತ್ತಾಗುತ್ತದೆ. ಮ್ಯಾನೇಜಿಂಗ್ ಕಮಿಟಿಯವರೇ ಆಗಲೀ ಜನರಲ್ ಕಮಿಟಿಯವರೇ ಆಗಲೀ ಫಂಡಿಗೆ ಧನಶೇಖರವನ್ನು ಮಾಡಲು ಲೇಶವೂ ಪ್ರಯತ್ನಪಟ್ಟಂತೆ ತೋರುವುದಿಲ್ಲ. ಇದು ಅತ್ಯಂತ ವಿಷಾದಕರವಾಗಿದೆ. ಮುಖ್ಯವಾಗಿ ಜನರಲ್ ಕಮಿಟಿ ಮೆಂಬರುಗಳಾದರೂ ತಾವು ತಾವು ಫಂಡಿಗೆ ವಾಗ್ದಾನಮಾಡಿರುವ ಹಣವನ್ನೆಲ್ಲಾ ಮೊದಲು ಸಾಂಗವಾಗಿ ಸಲ್ಲಿಸಿಬಿಟ್ಟು ಇತರರನ್ನೆಲ್ಲಾ ಅದನ್ನು ಸಲ್ಲಿಸಿಬಿಡುವುದಕ್ಕೆ ಒತ್ತರಮಾಡುವುದು ಅವಶ್ಯಕವಾಗಿದೆ. ಅಲ್ಲಲ್ಲಿ ಲಗ್ನಕಾಲಗಳಲ್ಲಿ ಕೆಲ ಮಹನೀಯರ ಉತ್ತೇಜನದಿಂದ ಫಂಡಿನ ಕಾಣಿಕೆಗಳನ್ನು ಎತ್ತಿಸುತ್ತಿರುವುದರಿಂದ ಫಂಡಿಗೆ ಅಷ್ಟೊ ಇಷ್ಟು ಹೊಸಹಣವು ಬಂದು ಸೇರಲು ಮಾರ್ಗವಾಗಿದೆಯೇ ಹೊರತು ಮತ್ತೇನೂ ಕಾಣುವುದಿಲ್ಲ. ಎಲ್ಲಕಡೆಯವರೂ ಲಗ್ನಕಾಲದ ಕಾಣಿಕೆಗಳನ್ನು ತಪ್ಪದೆ ಎತ್ತಿಸಿ ಸೆಕ್ರೆಟರಿಯವರಿಗೆ ಕಳುಹಿಸುತ್ತ ಬಂದರೆ ಕೀರ್ತಿಯೂ ಪುಣ್ಯವೂ ಬರುವುದು. ಮಹಾಭಿಮಾನಿಗಳೂ ಉತ್ಸಾಹಶೀಲರೂ ಆದ ವೀರಶೈವಮಹಾಜನರು ತಂತಮ್ಮ ಕಡೆಯಲ್ಲಿ ಸಭೆಸೇರಿ, ಫಂಡಿಗೆ ಧನಶೇಖರವನ್ನು ಮಾಡಲು ಪ್ರಯತ್ನಿಸಿ, ಸಂಘದ ಅಧ್ಯಕ್ಷರಿಗೆ ಆಹ್ವಾನಪತ್ರವನ್ನು ಬರೆದು ಪ್ರಾರ್ಥಿಸಿಕೊಂಡರೆ ಅವಶ್ಯಕವಾಗಿ ಅವರು ದಯಮಾಡಿಸುವರು. ಸಕಲಭಾಗದ ವೀರಶೈವ ಪ್ರಮುಖರೂ ಶಕ್ತಿವಂಚನೆಯಿಲ್ಲದೆ ಪ್ರಯತ್ನಿಸಿದರೆ ಫಂಡನ್ನು ೧ ವರ್ಷ ಕಾಲದೊಳಗಾಗಿ ಲಕ್ಷ ರೂ. ಗೆ ಮುಟ್ಟಿಸುವುದು ಅಸಾಧ್ಯವಲ್ಲ. ತಕ್ಕ ಪ್ರಯತ್ನವನ್ನು ಮುಂದಾಳುಗಳು ಮಾಡದಿರುವುದೇ ದೊಡ್ಡ ಲೋಪವಾಗಿದೆ. ನಡೆಯುವ ವರ್ಷದಲ್ಲಿ ಈ ಲೋಪವು ತಕ್ಕಮಟ್ಟಿಗಾದರೂ ಕಡಿಮೆಯಾದೀತೆಂದು ನಿರೀಕ್ಷಿಸುತ್ತೇವೆ.

ಕುಚೇಷ್ಟೆ.

ವೀರಶೈವ ಮಠದ ಪ್ರಾಚೀನಾಚಾರ್ಯರುಗಳು ವಾದಮುಖದಿಂದಲೂ ಮಹತ್ತ್ವಾತಿಶಯದಿಂದಲೂ ಶಿವಾಧಿಕ್ಯವನ್ನೂ ಶಿವಮತ ಸಿದ್ಧಾಂತವನ್ನೂ ಜಗತ್ತಿನಲ್ಲಿ ಪ್ರಕಾಶಪಡಿಸಿ ರಾಜಾಧಿರಾಜರುಗಳಿಂದ ಸಂಮಾನಿತರಾಗಿ ಜಗದ್ಗುರುತ್ವವನ್ನು ಚಿರಕಾಲದಿಂದ ಅನುಭವಿಸಿ, ತಮ್ಮ ಅನುಯಾಯಿ ಗುರುಪರಂಪರೆಯೂ ಅದನ್ನನುಭವಿಸಿಕೊಂಡು ಹೋಗುವಂತೆ ಮಾಡಿರುತ್ತಾರೆ. ಸಾಧಾರಸಿದ್ಧವಾದ ಅದನ್ನು ಆಧುನಿಕ ಪ್ರಭುತ್ವಗಳವರೂ ಅನುಮೋದಿಸಿ, ಆ ಪ್ರಾಚೀನ ಗೌರವಗಳನ್ನು ಕಾಪಾಡುತ್ತಲಿದ್ದಾರೆ. ಹೀಗಿರುವಲ್ಲಿ ಪರೋತ್ಕರ್ಷಾಸಹನವೇ ಬ್ರಾಹ್ಮಣ್ಯಕ್ಕೆ ಲಕ್ಷಣವೆಂದು ಜಗತ್ತಿಗೆ ತೋರಿಸುವುದಕ್ಕೆ ಉಪಕ್ರಮಿಸಿದಂತಿರುವ ಕೆಲ ಪ್ರಾಣಿಗಳು ಕುಚೇಷ್ಟೆಗೆ ಪ್ರಯತ್ನಿಸಿ ಲೋಕದ ಜುಗುಪ್ಸೆಗೆ ಪಾತ್ರರಾಗುತ್ತಿದ್ದಾರೆ. ಇದು ಅವರ ತಪ್ಪಲ್ಲ. ಭೃಗು ದಧೀಚಿ ಗೌತಮಾದಿ ಮಹರ್ಷಿ ಶಾಪವಶದಿಂದ ಕಲಿಯುಗದಲ್ಲಿ ಶಿವನನ್ನೂ ಶಿವಭಕ್ತರನ್ನೂ ನಿಂದಿಸತಕ್ಕವರೂ ದ್ವೇಷಿಸತಕ್ಕವರೂ ಸಹ ಬ್ರಾಹ್ಮಣ ವರ್ಗದಲ್ಲಿಯೂ ಹುಟ್ಟುವರೆಂದು ವೇದವ್ಯಾಸರು “ದಧೀಚಶಾಪನಿರ್ದಗ್ಧಾಃ ಪುರಾದಕ್ಷಾಧ್ವರೇ ದ್ವಿಜಾಃ | ನಿಂದಂತಿಚ ಮಹಾದೇವಂ ತಮಸಾವಿಷ್ಟಚೇತಸಃ | ವೃಥಾಧರ್ಮಂ ಚರಿಷ್ಯಂತಿಕಲೌತಸ್ಮಿನ್ಯುಗಾಂತಿಮೇ | ಯೇಚಾನ್ಯೇಶಾಪನಿರ್ದಗ್ಧಾ ಗೌತಮಸ್ಯ ಮಹಾತ್ಮನಃ | ಸರ್ವೇತೈವಿಚರಿಷ್ಯಂತಿಬ್ರಾಹ್ಮಣಾದ್ಯಾಸುಯೋನಿಷು” ಎಂಬುದಾಗಿಯೂ, ದಧೀಚದತ್ತಶಾಪವಿವರಣ ಸಮಯದಲ್ಲಿ “ಭವಿಷ್ಯಥತ್ರಯೀಬಾಹ್ಯಾಸ್ಸರ್ವೇಪೀಶ್ವರವಿದ್ವಿಷಃ | ನಿಂದಂತೋಹ್ಯೈಶ್ವರಂಮಾರ್ಗಂಕುಶಾಸ್ತ್ರಸಕ್ತಮಾನಸಾಃ” ಇತ್ಯಾದಿಯಾಗಿಯೂ ಹೇಳಿರುವುದರಿಂದ ಬ್ರಹ್ಮವರ್ಗಕ್ಕೆ ಕಳಂಕವನ್ನು ತರತಕ್ಕವರು ಕೆಲರು ಅವರ್ಗದಲ್ಲಿಯೂ ಸಂಜನಿಸಿರುವುದುಂಟು. ಅವರ ಕೃತ್ಯಗಳು ಮಹರ್ಷಿಶಾಪಫಲವಾಗಿರುವುವು. ಪ್ರಕೃತದಲ್ಲಿ ಬೆಂಗಳೂರು ತುಳಸಿತೋಟದಲ್ಲಿರುವ ಉ. ಪಿ. ಕೃಷ್ಣಮಾಚಾರ್ಯ ಎಂಬುವರು ಒಂದು ಪ್ರಸಿದ್ಧಿಪತ್ರಿಕೆಯನ್ನು ಪ್ರಕಟಿಸಿ, “ಸದ್ಯಃ ಬೆಂಗಳೂರಿಗೆ ಬಂದಿರುವ ಚಿತ್ರದುರ್ಗದ ಮುರುಘರಾಜೇಂದ್ರಸ್ವಾಮಿಗಳು ತ್ರಿಮತಸ್ಥ ಬ್ರಾಹ್ಮಣಸಂಪ್ರದಾಯಗಳಿಗೆ ವಿರುದ್ಧವಾದ ಅಭಿಪ್ರಾಯಗಳನ್ನು ಕೊಡುತ್ತಿರುವರು, ಇವರ ಜಗದ್ಗುರುತ್ವವು ಅನೂಚಾನವಾಗಿ ಬಂದುದಲ್ಲ” ಎಂದು ಮೊದಲಾಗಿ ಆಕ್ಷೇಪಿಸಿ ವಾದಕ್ಕೆ ಕರೆದಿರುತ್ತಾರೆ.

ಬಿರುದಾವಳಿಗಳನ್ನು ಕೊಡುವ ಉಪರಮಿಸುವ ವಿಷಯದಲ್ಲಿ ಅಧಿಕೃತರಾದವರ ವಿಚಾರಕ್ಕೆ ಅರ್ಹವಾದ ಈ ವಿಷಯದಲ್ಲಿ ಬಾಯಿ ಹಾಕುವುದಕ್ಕೆ ಯಾವವಿಧದಿಂದಲೂ ಯೋಗ್ಯತೆಯಿಲ್ಲದೆ “ಯೇನಕೇನಪ್ರಕಾರೇಣ ಪ್ರಸಿದ್ಧಪುರುಷೋಭವೇತ್” ಎಂಬಂತೆ ಪ್ರವರ್ತಿಸಿರುವ ಆಚಾರ್ಯರ ಚೇಷ್ಟಾವಚನಗಳನ್ನು ಶ್ರೀಜಗದ್ಗುರುಗಳವರು ತೃಣೀಕರಿಸಿದುದು ಅವರ ಗೌರವಕ್ಕೆ ತಕ್ಕುದಾಗಿರುತ್ತದೆ. ಈ ಆಚಾರ್ಯ ನಾಮಧಾರಿಗಳ ಪ್ರವರ್ತನವು ಅವರ ಸಜಾತೀಯರಾದ ದೊಡ್ಡಮನುಷ್ಯರಿಗೇ ಎಷ್ಟು ಜುಗುಪ್ಸೆಯನ್ನುಂಟುಮಾಡಿದೆಯೆಂಬುದಕ್ಕೆ ಮೈಸೂರು ನಿಯಮನಿರ್ಮಾಣಸಭಾ ಸಭಿಕತ್ವವೇ ಮೊದಲಾದ ಉಚ್ಚಸ್ಥಾನಗಳನ್ನಡರಿ ಪ್ರಸಿದ್ಧರಾಗಿರುವ ಮ॥ ಬಿ. ಕೆ. ಗರುಡಾಚಾರ್ಯರವರು ದಿ॥ ಬ॥ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರ ಹೆಸರಿಗೆ ಈ ಸಂಬಂಧವಾಗಿ ಬರೆದು ಕಳುಹಿಸಿರುವ ಪತ್ರವೇ ನಿದರ್ಶನವಾಗಿರುತ್ತದೆ. ಅದನ್ನು ಇವರಡಿಯಲ್ಲಿ ಪ್ರಕಟಿಸಿರುತ್ತೇವೆ.

B. K. GARUDACHAR.

BANGALORE CITY,
26th June, 1919.

SIR,

I came to know only yesterday that a person by name U. P. Krishnamachar had published a notice dated 23rd instant in which he has said that a challenge was sent to the Sri Swamigal, that no reply was received and the public may form their own judgement. In the said notice I find printed "Tholasithotam, Bangalore City." This may in the minds of some persons give rise to a suspecion that those conected with the Institution must have had something to do with the matter. I assure you, sir, that any one connected with the Institution had any previous information or anything to do with either the sending of the challenge or publication of the notice. I am sure you are aware that we are opposed to have recourse or to have any sort of connection with such matters or to give the least offence to any person whoever he may be. On enquiry I find that this Krishnamachar is a Madrassee who has no manner of connection with us. He may have been putting up in Tholasithottam temporarily as any other stranger. Since he has left his residence at "Tholasithottam." This letter may be shown to the Sri Swamigal and it may be published if you think it necessary.

Yours sincerely,
B. K. GARUDACHAR.

To
Dewan Bahadur
K. P. Puttanna Chettiar, Esq.

ಈ ಲೇಖನದ ತಾತ್ಪರ್ಯವೇನೆಂದರೆ:—“ಕೆಲ ವಿಷಯಗಳನ್ನು ಕುರಿತು ಪ್ರತ್ಯಕ್ಷವಾಗಿ ವಾದಿಸಲು ಅವಕಾಶವನ್ನು ಕೊಡಬೇಕೆಂದು ರಿಜಿಸ್ಟರ್ ಕಾಗದಗಳನ್ನು ಶ್ರೀಸ್ವಾಮಿಗಳಿಗೆ ಬರೆದಿದ್ದುದಕ್ಕೆ ಯಾವ ಉತ್ತರವೂ ಬರಲಿಲ್ಲವೆಂದೂ, ಜನಗಳೇ ತೀರ್ಮಾನವನ್ನು ಹೇಳಬಹುದು ಎಂದೂ ಈ ತಾ॥ 23 ರಲ್ಲಿ ಒಂದು ನೋಟೀಸನ್ನು ಉ. ಪಿ. ಕೃಷ್ಣಮಾಚಾರ್ ಎಂಬುವರು ಪ್ರಕಟಿಸಿರುತ್ತಾರೆ. ಈ ನೋಟೀಸಿನಲ್ಲಿ “ತೊಳಸಿತೋಟ, ಬೆಂಗಳೂರು ಸಿಟಿ” ಎಂದು ಅವರ ವಾಸಸ್ಥಾನವು ಮುದ್ರಿತವಾಗಿದೆ. ಹೀಗಿರುವುದರಿಂದ ಈ ಸಂಸ್ಥೆಗೆ (ತೋಟಕ್ಕೆ) ಸಂಬಂಧಪಟ್ಟವರು ಈ ವಿಚಾರದಲ್ಲಿ ಭಾಗಿಗಳಾಗಿರಬೇಕೆಂಬ ಸಂಶಯವು ಕೆಲ ಜನರ ಮನಸ್ಸಿನಲ್ಲಿ ಹುಟ್ಟಬಹುದು. ವಾದಕ್ಕೆ ಕರೆದಿರುವ ವಿಚಾರದಲ್ಲಾಗಲೀ ಈ ನೋಟೀಸನ್ನು ಪ್ರಕಟಿಸಿರುವುದರ ವಿಚಾರದಲ್ಲಾಗಲೀ ಈ ಸಂಸ್ಥೆಗೆ ಸಂಬಂಧಪಟ್ಟ ಜನರಿಗೆ ಇದಕ್ಕೆ ಮೊದಲು ಯಾವ ಸಂಗತಿಯೂ ತಿಳಿಯದು, ಮತ್ತು ಯಾವ ಸಂಬಂಧವೂ ಇಲ್ಲ, ಎಂದು ನಾನು ತಮಗೆ ಬರವಸೆಯಿಂದ ಹೇಳುತ್ತೇನೆ. ಇಂತಹ ವಿಚಾರಗಳಲ್ಲಿ ನಾವುಗಳು ಪ್ರವೇಶಿಸತಕ್ಕವರಲ್ಲವೆಂಬುದಷ್ಟೇ ಅಲ್ಲದೆ ಅವುಗಳನ್ನು ನಿರೋಧಿಸತಕ್ಕವರೇ ಆಗಿದ್ದೇವೆಂಬುದೂ ಯಾರ ಮನಸ್ಸಿಗೂ ಲೇಶವೂ ಖೇದವನ್ನುಂಟುಮಾಡುವವರಲ್ಲವೆಂಬುದೂ ತಮಗೆ ತಿಳಿದೇ ಇದೆ ಎಂದು ನಾನು ದೃಢವಾಗಿ ಬಲ್ಲೆನು. ವಿಚಾರಮಾಡಿದುದರ ಮೇಲೆ ಈ ಕೃಷ್ಣಮಾಚಾರಿಯು ಮದ್ರಾಸಿನವನೆಂದು ತಿಳಿಯಬಂದಿತು. ಈತನಿಗೂ ನಮ್ಮಗಳಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ಇತರ ಪರಸ್ಥಳಿಕರಂತೆ ಈತನೂ ತೊಳಸಿತೋಟದಲ್ಲಿ ಅನಿತ್ಯವಾಗಿ ವಾಸವಾಗಿರಬಹುದು. ಈಗ ತೊಳಸಿತೋಟವನ್ನು ಬಿಟ್ಟುಹೋಗಿರುತ್ತಾನೆ. ಈ ಲೇಖನವನ್ನು ಶ್ರೀ ಸ್ವಾಮಿಗಳವರಿಗೆ ತೋರಿಸುವುದಲ್ಲದೆ, ನಿಮಗವಶ್ಯಕವಾಗಿ ತೋರಿದಲ್ಲಿ ಪ್ರಕಟಿಸಲೂಬಹುದು.

ತಮ್ಮ ವಿಶ್ವಾಸಿ,
ಬಿ. ಕೆ. ಗರುಡಾಚಾರ್.

ಶ್ರೀಜಗದ್ಗುರುಗೌರವ.

ಶ್ರೀಮನ್ಮಹಾನಿರಂಜನ ಜಗದ್ಗುರುಗಳು ಬೆಂಗಳೂರು ಮೈಸೂರು ಪಟ್ಟಣಗಳಿಗೆ ದಯಮಾಡಿಸುವ ಸಂದರ್ಭದಲ್ಲಿ ಮೈಸೂರು ಪ್ರಭುತ್ವದವರಿಂದ ನಡೆಯಿಸಿ ಕೊಡಲ್ಪಡಲು ಹೊಸದಾಗಿ ಅಪ್ಪಣೆಯಾಗಿರುವ ಮರ್ಯಾದೆಯ ವಿಷಯ ಮೊದಲಾದುವುಗಳನ್ನು ಕುರಿತು ಹಲವುಕಡೆ ವೀರಶೈವಜನರು ಸಭೆಯನ್ನು ಕೂಡಿಸಿ, ತಮ್ಮ ಆಕ್ಷೇಪವನ್ನು ಕುರಿತು ನಿರ್ಧಾರಮಾಡಿ ಶ್ರೀಮನ್ಮಹಾರಾಜರವರ ಸನ್ನಿಧಿಗೆ ಕಳುಹಿಸಿಕೊಟ್ಟು ಕೊಡುತ್ತಲೂ ಇರುವರೆಂಬ ಸಂಗತಿಯು ಇದುವರೆಗೆ ನಮ್ಮ ಬಳಿಗೆ ಬಂದಿರುವ ಅನೇಕ ಪತ್ರವ್ಯವಹಾರಗಳಿಂದ ವಿದಿತವಾಗುತ್ತದೆ. ಕರ್ತವ್ಯಾಕರ್ತವ್ಯಗಳನ್ನೂ ಸ್ಥಿತಿಗತಿಗಳನ್ನೂ ಚೆನ್ನಾಗಿ ಪರಿಶೀಲಿಸುವ ಶಕ್ತಿಯು ಶ್ರೀಮನ್ಮಹಾರಾಜರವರಿಗೆ ಸಂಪೂರ್ಣವಾಗಿ ಜಗದೀಶ್ವರನಿಂದ ಅನುಗ್ರಹಿಸಲ್ಪಟ್ಟಿರುವ ಕಾರಣದಿಂದ, ಅವರ ನಿರ್ದುಷ್ಟಪ್ರಜಾರಂಜಕತ್ವದ ಮೇಲೆ ಸಂಪೂರ್ಣವಾದ ಭರವಸೆಯನ್ನಿಟ್ಟು ಇದರ ಪರ್ಯಾಲೋಚನವನ್ನು ಅವರ ಸರ್ವಜ್ಞಮನೋದೃಷ್ಟಿ ವಿಮರ್ಶನೆಯೇ ಒಪ್ಪಿಸಿ ಅವರ ಕೃಪಾಕಟಾಕ್ಷವನ್ನು ಹಾರೈಸುತ್ತ, ನಿಸರ್ಗವಾದ ತಮ್ಮ ರಾಜಭಕ್ತಿಯಿಂದ ಶಾಂತವಾಗಿರುವುದೇ ವೀರಶೈವರಿಂದ ಉಚಿತವಾದುದೆಂದು ಪ್ರಕೃತದಲ್ಲಿ ನಾವು ಸೂಚಿಸಬೇಕಾಗಿರುವುದು. ಬರಿಯ ಗದ್ದಲವನ್ನು ಮಾಡಿಕೊಳ್ಳುವುದರ ಕಡೆಗೆ ನಮ್ಮ ಸಮಾಜಬಾಂಧವರು ಮನಸ್ಸು ಕೊಡದೆ ಇರುವವರಾಗಬೇಕು. ಶ್ರೀಗುರು ಸಂಸ್ಥಾನದ ಪ್ರಾಚೀನಗೌರವಬಾಧ್ಯತೆಗಳನ್ನು ಕಾಪಾಡುವ ಭಾರವು ಶ್ರೀಮನ್ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ಸೇರಿದೆ. ಇದುವರೆಗೆ ನಡೆದಿರುವ ಗೌರವರಕ್ಷಣೆಯ ಕಾರ್ಯಗಳಲ್ಲವೂ ಅನುಕೂಲಕವಾದುವುಗಳೇ. ಮುಂದಾದರೂ ಅವುಗಳ ಅಭಿವೃದ್ಧಿಯು ಅವರ ವಿಚಾರಶಕ್ತಿ ಕೃಪಾಪ್ರಸಾದಗಳನ್ನೇ ಅವಲಂಬಿಸಿರುತ್ತವೆ.

ಸಂಧಿ ನೆರವೇರಿತು.

ನಾವು ಕಳೆದ ಸಂಚಿಕೆಯಲ್ಲಿ ನಿರೀಕ್ಷಿಸಿದ್ದಂತೆಯೇ ಸಂಧಿಕಾರ್ಯವು ಜರುಗಿಹೋಯಿತೆಂಬ ಸಂತೋಷವಾರ್ತೆಯು ಕಳೆದ ವಾರದಲ್ಲಿ ಬಂದಿದೆ. ೧೯೧೪ ನೆ ಜುಲೈ ತಾ॥ ೪ ನೆಯ ದಿನವು ಯುದ್ಧಾರಂಭ ಕಾರಣದಿಂದ ಜಗಚ್ಚರಿತ್ರದಲ್ಲಿ ವಿಖ್ಯಾತವಾಗಿರುವಂತೆಯೇ ೧೯೧೯ ನೆ ಜೂನ್ ತಾ॥ ೨೮ ನೆಯ ದಿನವು ಸಂಧಿನಿರ್ವರ್ತನ ಸಂಬಂಧದಿಂದ ಆಚಂದ್ರಾರ್ಕಸ್ಮರಣೀಯವಾಗಿ ಉಳಿಯುವಂತಾಯಿತು. ಲೋಕಶಾಂತ್ಯಾಯತನವಾದ ಈ ಸಂಧಿಕಾರ್ಯವು ಫ್ರಾನ್ಸಿನ ವರ್ಸೇಲ್ಸ್ ಪಟ್ಟಣದಲ್ಲಿ ಜರುಗಿದುದರಿಂದ ಅದು ಕೂಡ ಚಾರಿತ್ರಿಕ ಪ್ರಾಮುಖ್ಯವನ್ನು ಪಡೆದುಕೊಂಡಿತು. ಆ ಪಟ್ಟಣವಾದ್ಯಂತವೂ ತಾರೀಖು ೨೮ ನೆಯ ದಿನ ಬಹು ವಿಧದಿಂದ ಶೃಂಗರಿಸಲ್ಪಟ್ಟಿದ್ದಿತು. ಎಲ್ಲೆಲ್ಲೂ ಮಂಗಳವಾದ್ಯಗಳಾಗುತ್ತಿದ್ದುವು. ನರ್ತನಗಳೂ ಕುದುರೆಸ್ವಾರರ ಓಡಾಟವೂ ಧ್ವಜಪತಾಕೆಗಳ ಹಾರಾಟವೂ ಎತ್ತೆತ್ತಲೂ ಕಾಣುತ್ತಿದ್ದುವು. ಪ್ರಜೆಗಳು ಬೇರೆಬೇರೆ ಕಡೆಗಳಿಂದ ಈ ಪಟ್ಟಣಕ್ಕೆ ಬಂದು ಅಪರಿಮಿತವಾಗಿ ತುಂಬಿದರು. ಸಂಧಿ ಜರುಗಿದ ಮಹಾಭವನದ ಹೊರಗೂ ಒಳಗೂ ಮಾಡಿದ್ದ ಶೃಂಗಾರವು ಅಭೂತಪೂರ್ವವಾಗಿದ್ದಿತು. ಆ ಭವನದ ಸಭಾಮಂಟಪದಲ್ಲಿ ದೇಶದೇಶಗಳ ಪ್ರತಿನಿಧಿಗಳಿಗೆ ಪ್ರತ್ಯೇಕವಾದ ಆಸನಗಳು ಉನ್ನತವಾದ ಜಗತಿಯ ಮೇಲೆ ಏರ್ಪಡಿಸಲ್ಪಟ್ಟಿದ್ದುವು. ಮತ್ತೊಂದು ದೊಡ್ಡ ಜಗತಿಯಮೇಲೆ ನಾನಾದೇಶಗಳ ಪ್ರಮುಖ ರಾಜ್ಯಾಂಗವೇತ್ತೃಗಳಿಗೂ ಸೈನಿಕ ನೌಕಾಧಿಕಾರಿಗಳಿಗೂ ಆಸನಗಳನ್ನೇರ್ಪಡಿಸಿದ್ದರು. ಮತ್ತೊಂದುಕಡೆ ಪ್ರಮುಖನಾರೀಮಣಿಗಳಿಗೂ ವೃತ್ತಪತ್ರಿಕಾ ಪ್ರತಿನಿಧಿಗಳಿಗೂ ಸ್ಥಳವನ್ನೇರ್ಪಡಿಸಿದ್ದರು. ಇಂಥ ಸಭಾಂಗಣಕ್ಕೆ ಮೊತ್ತಮೊದಲು ಮಿತ್ರಮಂಡಲಿಯ ರಾಯಭಾರಿಗಳೆಲ್ಲರೂ ಬಂದು ತಂತಮ್ಮ ಪೀಠಗಳನ್ನಲಂಕರಿಸಿದರು. ಬಳಿಕ ಜರ್ಮನ್ ರಾಯಭಾರಿಗಳಿಬ್ಬರೂ (ಹೆರ್‌ಮುಲ್ಲರ್ ಎಂಬ ವಿದೇಶಾಂಗಮಂತ್ರಿ, ಹೇರ್‌ಬೆಲ್ ಎಂಬ ಉತ್ತರಪ್ರತ್ಯುತ್ತರಗಳನ್ನು ನಡೆಯಿಸುವ ಮಂತ್ರಿ) ಬಂದು ಕುಳಿತರು. ಇವರೇ ಜರ್ಮನ್ ಪಕ್ಷದಿಂದ ಸಂಧಿಪತ್ರಕ್ಕೆ ಕೈಬರಹವನ್ನು ಹಾಕಲು ಬಂದಿದ್ದವರು. ಸಭಾಂಗಣವೆಲ್ಲವೂ ಸಭಿಕರಿಂದ ಕಿಕ್ಕಿರಿಸಿಹೋಗಿದ್ದಿತು. ಮೂರುಜಾವದ ೩ ಗಂಟೆ ೫ ನಿಮಿಷದಲ್ಲಿ ಫ್ರಾನ್ಸ್ ಮುಖ್ಯಮಂತ್ರಿ ಕ್ಲೆಮೆಂಕೋರವರು ಸಭಾಕಾರ್ಯಕ್ರಮವನ್ನು ಆರಂಭಿಸಿದರು. ಮಿತ್ರಮಂಡಲಿ ಪಕ್ಷದ ಐಕ್ಯಪ್ರಭುತ್ವದವರು ಸಂಧಿನಿಬಂಧನೆಗಳನ್ನು ಅಂಗೀಕರಿಸಿರುವರೆಂದೂ, ಅದರಂತೆಯೇ ಅವರು ನಡೆದುಕೊಳ್ಳುವರೆಂದೂ ಕ್ಲೆಮೆಂಕೋರವರು ನುಡಿದರು. ಬಳಿಕ ಜರ್ಮನರು ಮೊದಲು ಇದಕ್ಕೆ ಕೈಬರಹವನ್ನು ಹಾಕಬೇಕೆಂದು ತಿಳಿಯಪಡಿಸಿ ಆ ಜರ್ಮನ್ ಪ್ರತಿನಿಧಿಗಳನ್ನು ಕರೆದರು. ಆ ಕೂಡಲೇ ಜರ್ಮನರ ಕಡೆಯಿಂದ ಏನೋ ಒಂದು ತೆರದ ಶಬ್ದವು ಕೇಳಬಂದಿತು. ಬಳಿಕ ಅವರುಗಳು ಎದ್ದು ಬಂದು ೩ ಗಂಟೆ ೧೨ ನಿಮಿಷಗಳ ಸಮಯದಲ್ಲಿ ಕೈಬರವನ್ನು ಸಂಧಿಪತ್ರಕ್ಕೆ ಹಾಕಿದರು. ಆ ಬಳಿಕ ಅದೇ ಪತ್ರಕ್ಕೆ ಕ್ರಮವಾಗಿ ಅಮೇರಿಕಾಧ್ಯಕ್ಷರಾದ ವಿಲ್ಸನ್‌ರವರೂ ಇತರ ಅಮೇರಿಕನ್ ರಾಯಭಾರಿಗಳೂ, ಆಂಗ್ಲಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರೂ ಇತರ ರಾಯಭಾರಿಗಳೂ, ತದನಂತರ ಫ್ರೆಂಚ್, ಜಪಾನ್, ಇಟಲಿ ರಾಯಭಾರಿಗಳೂ ಸಹ ಕೈಬರಹವನ್ನು ಹಾಕಿದರು. ಇದೆಲ್ಲಾ ೩-೪೫ ರೊಳಗೆ ಮುಗಿದಿತು. ಬಳಿಕ ಸಂಧಿಕಾರ್ಯಕ್ರಮವು ಮುಗಿದಿತೆಂದು ಸಭಾಧ್ಯಕ್ಷರಾದ ಕ್ಲೆಮೆಂಕೋರವರು ಹೇಳಿದರು. ಜರ್ಮನ್ ಪ್ರತಿನಿಧಿಗಳು ತಂತಮ್ಮ ಸ್ಥಳಗಳಿಗೆಹೋಗಿ ಕುಳಿತರು. ಸಭೆಯವರೆಲ್ಲರೂ ಹರ್ಷಧ್ವನಿಮಾಡಿದರು. ಈ ಮಹಾನಂದೋತ್ಸವವನ್ನು ದಶದಿಕ್ಕುಗಳಿಗೂ ಉದ್ಘೋಷಿಸಿ ಹೇಳುತ್ತಿರುವುವೋ ಎಂಬಂತೆ ಹೊರಗೆ ಫಿರಂಗಿಗಳ ಮಹಾಘೋಷಕ್ಕೆ ಆರಂಭವಾಯಿತು. ಸಂಧಿಪತ್ರದಮೇಲೆ ಆಯಾದೇಶಗಳ ಮುದ್ರಿಕೆಗಳೂ ಕೂಡ ಒತ್ತಲ್ಪಟ್ಟುವು. ಈ ಸಂಧಿಪತ್ರದಲ್ಲಿ ಆಂಗ್ಲದೇಶ ಪಕ್ಷದ ಕೈಬರಹವನ್ನು ಹಾಕಿದವರುಗಳು—ಲಾಯಿಡ್‌ಜಾರ್ಜ್, ಬೋನರ್ಲಾ, ಲಾರ್ಡ್ ಮಿಲ್ಲರ್, ಬಾರ್ನ್ಸ್, ಬಾಲ್ಫರ್‌ರವರುಗಳು. ಇವರನಂತರ ಅಧಿನಿವೇಶಗಳ ರಾಯಭಾರಿಗಳೂ ಕೈಬರಹವನ್ನು ಹಾಕಿದರು. ದಕ್ಷಿಣಾಫ್ರಿಕಾ ಪಕ್ಷದಿಂದ ಜನರಲ್ ಸ್ಮಟ್ಸ್‌ರವರೂ ಜನರಲ್ ಬೋಥಾರವರೂ, ಭರತಖಂಡದ ಪಕ್ಷದಿಂದ ಮಾಂಟೆಗ್‌ರವರೂ ಬಿಕನೇರ್ ಮಹಾರಾಜರವರೂ ಸಹ ಹಸ್ತಾಕ್ಷರವನ್ನು ಹಾಕಿದ ಬಳಿಕ ಕಟ್ಟಕಡೆಗೆ ಜಕೋಸ್ಲಾವಕ್ಕರ ಪ್ರತಿನಿಧಿಗಳು ಹಾಕಿರುವರು. ಇದಾದ ಮೇಲೆ ರೈನ್, ಪೋಲಿಷ್ ದೇಶಗಳ ಒಡಂಬಡಿಕೆಯ ಪತ್ರಗಳಿಗೂ ಕೈಬರಹ ಮಾಡಲ್ಪಟ್ಟಿತು. ಸಭಾಕಾರ್ಯವು ಮುಗಿದ ಬಳಿಕ ಮೊತ್ತಮೊದಲನೆಯ ಮೋಟಾರುಬಂಡಿಯಲ್ಲಿ ಕ್ಲೆಮೆಂಕೋರವರು ಪ್ರೆ॥ ವಿಲ್ಸನ್‌ರವರು ಲಾಯಿಡ್ ಜಾರ್ಜ್‌ರವರು—ಈ ಮೂವರೂ ಒಟ್ಟಿಗೆ ಕುಳಿತು ತೆರಳಿದರು. ಹೊರಗೆ ಉದ್ದಕ್ಕೂ ನಿಂತಿದ್ದ ಪ್ರಜೆಗಳು ಅತ್ಯಂತೋತ್ಸಾಹದಿಂದ ಇವರಿಗೆ ಸ್ವಾಗತಮಾಡಿ ಅಪರಿಮಿತ ಜಯಘೋಷದಿಂದ ಗೌರವಿಸಿದರು. ವಿಮಾನಗಳು ಆಕಾಶಮಾರ್ಗದಲ್ಲಿ ಉದ್ದಕ್ಕೂ ಹಾರಿಕೊಂಡು ಹೋಗುತ್ತಿದ್ದುವು.

ಸಂಧಿಕಾರ್ಯವು ಈ ಪ್ರಕಾರದಿಂದ ಮುಗಿದಿತೆಂಬ ವಾರ್ತೆಯು ಆ ದಿನ ಸಾಯಂಕಾಲ ಹರಡಿದ ಕೂಡಲೇ ಫ್ರಾನ್ಸ್ ದೇಶದಲ್ಲೆಲ್ಲಾ ಅಪರಿಮಿತವಾದ ಉತ್ಸವಗಳು ನಡೆದುವು. ಆಂಗ್ಲದೇಶದಲ್ಲಿ ಅಷ್ಟೊಂದು ಕೋಲಾಹಲವು ನಡೆಯದಿದ್ದರೂ ನಮ್ಮ ಸಾರ್ವಭೌಮರು ತಮ್ಮ ಸಂತೃಪ್ತಿಯನ್ನು ಹೀಗೆ ಪ್ರಕಟಿಸಿದರು—“ಸಂಧಿಪತ್ರದಮೇಲೆ ಎಲ್ಲ ದೇಶೀಯರ ಕೈಬರಹವೂ ಬಿದ್ದಿತೆಂಬ ಸುದ್ದಿಯನ್ನು ಆಂಗ್ಲಸಾಮ್ರಾಜ್ಯದ ಸಕಲ ಭಾಗಗಳವರೂ ಕೃತಜ್ಞತೆಯಿಂದ ಅಭಿನಂದಿಸುವರು. ಪ್ರಪಂಚವನ್ನೆಲ್ಲಾ ಕ್ಷೋಭೆಗೊಳಿಸಿ ಯೂರೋಪುಖಂಡವನ್ನು ನಾಶಗೊಳಿಸಿದ ಘೋರಯುದ್ಧವು ಈ ಸಂಧಿಯಿಂದ ಕೊನೆಮುಟ್ಟಿತು. ಸ್ವಾತಂತ್ರ್ಯಾದರ್ಶದ ವಿಜಯಕ್ಕೆ ಇದು ನಿದರ್ಶನವು. ಇದು ನನ್ನ ಪ್ರಜೆಗಳಿಗೆ ಉಂಟಾದ ಆನಂದವನ್ನೂ ಕೃತಜ್ಞತೆಯನ್ನೂ ವ್ಯಕ್ತಪಡಿಸುವುದು. ಮುಂದೆ ಬರುವ ಶಾಂತಿಸಂವತ್ಸರಗಳು ನನ್ನ ಪ್ರಜೆಗಳ ಸೌಖ್ಯವನ್ನೂ ಸೌಭಾಗ್ಯವನ್ನೂ ಅಭಿವೃದ್ಧಿಗೊಳಿಸಲಿ ಎಂಬುದಾಗಿ ನಾನು ಕೋರುತ್ತೇನೆ.”

ಸಂಧಿಕಾರ್ಯವು ನೆರವೇರಿಹೋದರೂ, ನಿಬಂಧನೆಗಳಂತೆ ಜರ್ಮನರೆಲ್ಲಾ ನಡೆದುಕೊಳ್ಳುವರೆ ? ಎಂಬುದು ಸಂದೇಹಾಸ್ಪದವಾಗಿ ಇತ್ತೀಚಿನ ಅವರ ನಡತೆಗಳಿಂದ ಗೊತ್ತಾಗುತ್ತದೆ. ಜರ್ಮನಿಯಲ್ಲಿ ಈಗ ಸ್ಥಾಪಿತವಾಗಿರುವ ಪ್ರಭುತ್ವವು ಜರ್ಮನರೆಲ್ಲರಿಂದಲೂ ಅನುಮೋದಿತವಾಗಿಲ್ಲ. ಅಲ್ಲೀ ಬೇರೆಬೇರೆ ಪಕ್ಷಗಳು ಹುಟ್ಟಿವೆಯೆಂಬುದು ಗೊತ್ತಾಗಿಯೇ ಇದೆಯಷ್ಟೆ. ಈಗಣ ಜರ್ಮನ್ ಪ್ರಭುತ್ವದವರೇನೊ ಅನ್ಯಥಾ ನಿರ್ವಾಹವಿಲ್ಲವೆಂದು ಸಂಧಿಗೆ ಒಪ್ಪಿ ಕೈಬರಹವನ್ನು ಹಾಕಿದರು. ಉಳಿದ ಪಕ್ಷಗಳವರು ಒಪ್ಪಿಲ್ಲ. ತಾತ್ಕಾಲಿಕ ಸಂಧಿಯ ಗಡುಬವು ಮುಗಿದು ಸಂಧಿಪತ್ರಕ್ಕೆ ಜರ್ಮನ್ ಪ್ರಭುತ್ವದವರು ಒಪ್ಪಿ ಹಸ್ತಾಕ್ಷರವನ್ನು ಹಾಕುವರೆಂಬ ಸಂಗತಿಯು ಹೊರಬಿದ್ದ ಕೂಡಲೇ, ಮಿತ್ರಮಂಡಲಿಯ ವಶಪಡಿಸಲ್ಪಡಬೇಕಾಗಿ ಸ್ಕಾಪ ನದಿಯಲ್ಲಿ ಜರ್ಮನರ ಕಾವಲಿನಲ್ಲೇ ಸೆರೆಯಾಗಿ ಇರಿಸಲ್ಪಟ್ಟಿದ್ದ ಜರ್ಮನ್ ಯುದ್ಧನಾವೆಗಳಲ್ಲಿ ಬಹುಶಃ ೫೦ ಕ್ಕೆ ಕಡಿಮೆಯಿಲ್ಲದಷ್ಟು ಅವುಗಳ ನಾಯಕನಾಗಿದ್ದ ರೇರ್ ಅಡ್ಮಿರಲ್ ವಾನ್‌ರೂಟರ್ ಎಂಬುವನ ಅಪ್ಪಣೆಯಂತೆ ತೂತುಕೊರೆದು ಕಳೆದ ತಾ॥ ೨೧ ರಲ್ಲಿ ಸಮುದ್ರದಲ್ಲಿ ಮುಳುಗಿಸಲ್ಪಟ್ಟುವು. ಅವು ಮುಳುಗಿಸಲ್ಪಡುತ್ತಿರುವುದನ್ನು ಕಂಡಾಗ ಆಂಗ್ಲ ನೌಕಾದಳದವರು ಜರ್ಮನರ ಮೇಲೆ ತುಪಾಕಿಗುಂಡನ್ನು ಹೊಡೆದು ತಡೆದುದಲ್ಲದೆ ಆ ಹಡಗುಗಳಿಂದ ನೀರಿಗೆ ದುಮುಕಿ ಈಜುತ್ತಿದ್ದ ಜರ್ಮನ್ ಸೈನಿಕರಲ್ಲಿ ೫೦೦೦ ಮಂದಿಗಳನ್ನು ತಮ್ಮ ಹಡಗುಗಳಿಗೆ ಅತ್ಯಂತ ಪ್ರಯಾಸದಿಂದ ಏರಿಸಿಕೊಂಡು ದಡಸೇರಿಸಿದರು. ಆಗ ಅವರುಗಳು ಕೈಯಲ್ಲಿ ಬಿಳಿಯ ಬಾವುಟಗಳನ್ನು ಹಿಡಿದಿದ್ದರು. ಆಗಲೂ ಅವರು ಅಹಂಕಾರಭಾವವನ್ನೇ ವ್ಯಕ್ತಪಡಿಸುತ್ತಿದ್ದರು. ಈ ಸಂದರ್ಭದಲ್ಲಿ ೬ ಮಂದಿ ಜರ್ಮನರು ಸತ್ತಿರುವರು. ೧೦ ಮಂದಿ ಗುಂಡಿನೇಟುಗಳಿಂದ ಗಾಯಗೊಂಡಿದ್ದಾರೆ. ವಾನ್‌ರೂಟರನ್ನು ಇಂಗ್ಲೀಷರು ಹಿಡಿದು ಇಂಥ ದ್ರೋಹಕೃತ್ಯವನ್ನು ನೀನು ಮಾಡಬಹುದೆ ? ಎಂದು ಕೇಳಿದಾಗ, ದಿಟ್ಟತನದಿಂದ ಅವನು ಹೇಳಿರುವುದೇನೆಂದರೆ— ನೌಕಾದಳವನ್ನು ಎಂದಿಗೂ ಶತ್ರುಗಳ ಸ್ವಾಧೀನಪಡಿಸಕೂಡದು ಎಂಬುದಾಗಿ ಪದಭ್ರಷ್ಟನಾದ ಕೈಜರನು ಯುದ್ಧಾರಂಭಕಾಲದಲ್ಲೇ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದ್ದನು. ಅದನ್ನನುಸರಿಸಿ ನಾನು ಈ ಕೆಲಸವನ್ನು ಮಾಡಿದ್ದೇನೆ. ಇಂಥ ಸ್ಥಿತಿ ಪ್ರಾಪ್ತವಾದರೆ ಆಂಗ್ಲದೇಶೀಯ ನಾವಿಕನೂ ಕೂಡ ಹೀಗೆಯೇ ಮಾಡುವನೆಂದು ನಾನು ತಿಳಿಯುತ್ತೇನೆ ಎಂಬುದಾಗಿ ಹೇಳಿರುವನು. ಈ ವಾನ್‌ರೂಟರನು ಶರೀರಕ್ಕೆ ಆರೋಗ್ಯವಿಲ್ಲವೆಂಬ ನೆವದಿಂದ ಕೆಲ ವಾರಗಳ ಹಿಂದೆ ಬರ್ಲಿನ್ ಪಟ್ಟಣಕ್ಕೆ ಹೋಗಿದ್ದು ಬೇಗನೆ ಹಿಂದಿರುಗಿ ಬಂದಿದ್ದನಂತೆ. ಸಂಧಿ ಜರುಗಿಹೋಗಿ ಬಿಟ್ಟಬಳಿಕ ಈ ಹಡಗುಗಳನ್ನೆಲ್ಲಾ ಮಿತ್ರಮಂಡಲಿಯವರು ವಶಪಡಿಸಿಕೊಂಡುಬಿಡುವರೆಂಬ ಹೊಟ್ಟೆಕಿಚ್ಚಿನಿಂದ ಜರ್ಮನರು ತಾತ್ಕಾಲಿಕ ಯುದ್ಧನಿಬಂಧನೆಗಳಿಗೆ ವ್ಯತಿರಿಕ್ತವಾಗಿ ಇಂಥ ಮೋಸದ ಕೆಲಸಗಳನ್ನು ಮಾಡಿರುತ್ತಾರೆ. ಇದಕ್ಕೂ ಮತ್ತೆ ಬೇರೆ ನಷ್ಟಪರಿಹಾರವನ್ನು ಮಿತ್ರಮಂಡಲಿಯವರು ವಿಧಿಸದೆ ಬಿಡರು. ಈಗ ಮುಳುಗಿಸಲ್ಪಟ್ಟ ಹಡಗುಗಳೆಲ್ಲಾ ಬಹುಶಃ ೬ ಕೋಟಿ ಪೌನುಗಳ ಬೆಲೆಬಾಳತಕ್ಕುವೆಂದು ಎಣಿಸಲ್ಪಟ್ಟಿವೆ. ಮತ್ತೂ ಜರ್ಮನ್ ತೀರದಲ್ಲಿದ್ದ ಇನ್ನು ಕೆಲ ಯುದ್ಧನಾವೆಗಳನ್ನೂ ಜರ್ಮನರು ಹೀಗೆಯೇ ಮುಳುಗಿಸಿಬಿಟ್ಟರೆಂಬ ವಾರ್ತೆ ಬಂದಿದೆ. ಅದರ ನಿಜಸ್ಥಿತಿಯು ಇನ್ನೂ ದೃಢವಾಗಿಲ್ಲ. ಇದಲ್ಲದೆ ಜರ್ಮನರು ಮತ್ತೊಂದು ರೀತಿಯಲ್ಲಿ ದ್ವೇಷಮಾತ್ಸರ್ಯವನ್ನು ಹೊರಗೆಡಹಿದ್ದಾರೆ. ಅದೇನೆಂದರೆ—೧೮೭೦ ರಲ್ಲಿ ನಡೆದ ಫ್ರಾಂಕೋ ಜರ್ಮನ್ ಯುದ್ಧದಲ್ಲಿ ಜರ್ಮನರು ಜಯವನ್ನು ಪಡೆದು ಕಿತ್ತುಕೊಂಡು ಹೋಗಿದ್ದ ಫ್ರೆಂಚ್ ಧ್ವಜಪತಾಕೆಯನ್ನು ತಮ್ಮ ಬರ್ಲಿನ್ ಪಟ್ಟಣದಲ್ಲಿಟ್ಟುಕೊಂಡಿದ್ದರು. ಅದನ್ನು ಈಗ ಮರಳಿ ಫ್ರಾನ್ಸಿನವರಿಗೆ ಒಪ್ಪಿಸಿಬಿಡಬೇಕಾಗಿ ಸಂಧಿನಿಬಂಧನೆಯಲ್ಲಿ ಕಾಣಿಸಲ್ಪಟ್ಟಿರುವುದು. ಆದರೆ ಆ ಪತಾಕೆಯನ್ನು ಜರ್ಮನ್ ಅಧಿಕಾರಿಗಳಲ್ಲಿ ಕೆಲರು ಬಹಿರಂಗಸ್ಥಳದಲ್ಲಿ ಮನಃಪೂರ್ವಕವಾಗಿ ಸುಟ್ಟುಬಿಟ್ಟರೆಂದು ಗೊತ್ತಾಗಿರುತ್ತದೆ. ಹೀಗೆಯೇ ಜರ್ಮನರು ಇನ್ನೂ ನಾನಾಪ್ರಕಾರವಾಗಿ ಸಣ್ಣಪುಟ್ಟ ದುಷ್ಕಾರ್ಯಗಳನ್ನು ನಡೆಯಿಸುತ್ತಿರುವುದರಿಂದ ಅವರ ದೌರ್ಜನ್ಯ ನಿರ್ಮುಕ್ತಿಯಾಗುವ ರೀತಿಯು ಇನ್ನೂ ಕಾಣಿಸುತ್ತಲಿಲ್ಲ. ಇದನ್ನೆಲ್ಲಾ ನೋಡಿದರೆ ಮಿತ್ರಮಂಡಲಿಯವರಿಗೆ ಇವರ ಮೇಲೆ ಸಂಶಯವು ಇನ್ನೂ ಹೆಚ್ಚುವುದು ಸಹಜವಾಗಿರುತ್ತದೆ. ಅದು ಕಾರಣವೇ ಸಂಧಿಪತ್ರದ ಮೇಲೆ ಜರ್ಮನರ ಕೈಬರಹವು ಬಿದ್ದ ಮಾತ್ರದಿಂದಲೇ ಮಿತ್ರಮಂಡಲಿಯವರು ಜರ್ಮನರ ವಿಷಯದಲ್ಲಿ ವಿಧಿಸಿದ್ದ ಸಮುದ್ರದ ಕಟ್ಟಾಟವನ್ನಾಗಲೀ, ತಮ್ಮ ವಶದಲ್ಲಿಟ್ಟುಕೊಂಡಿರುವ ಜರ್ಮನ್ ಬಂದಿಗಳನ್ನಾಗಲೀ ಬಿಟ್ಟುಕೊಡುವರೆಂದು ತೋರುವುದಿಲ್ಲ. ಇದನ್ನು ಹಾವಾಸ್ ವಾರ್ತಾಪ್ರಕಟನ ಸಂಘದವರು ಸ್ಪಷ್ಟವಾಗಿ ಹೇಳಿದ್ದಾರೆ. ಈಗಣ ಸಂಧಿನಿಯಮಗಳು ಜರ್ಮನ್ ಪಾರ್ಲಿಮೆಂಟಿನವರಿಂದಲೂ ಮಿತ್ರಮಂಡಲೀ ಪ್ರಜೆಗಳಿಂದಲೂ ಅಂಗೀಕರಿಸಲ್ಪಟ್ಟ ಬಳಿಕವೇ ಈ ವಿಷಯಗಳೆಲ್ಲಾ ಆಲೋಚಿಸಲ್ಪಡುವುವಾಗಿವೆ. ಸಂಧಿನಿಬಂಧನೆಗಳನ್ನು ಈಗಣ ಜರ್ಮನ್ ಪ್ರಭುತ್ವದವರು ಅಂಗೀಕರಿಸಿದುದರಿಂದಲೇ ಮುಳಿಸಿಕೊಂಡು ಲುಡೆಂಡಾರ್ಫ್ ಸೇನಾನಿಯ ಸ್ಥಾನದಲ್ಲಿದ್ದ ಗ್ರೀನರ್ ಎಂಬುವನೂ ವಿಯನ್ನಾದಲ್ಲಿ ಜರ್ಮನ್ ರಾಯಭಾರಿಯಾಗಿದ್ದ ವೇಡೆಲ್ ಎಂಬುವನೂ ವಾನ್‌ಹಿಂಡೆನ್‌ಬರ್ಗನೂ ಕೂಡ ತಂತಮ್ಮ ಪದವಿಗಳಿಗೆ ರಾಜೀನಾಮೆಯನ್ನು ಕೊಟ್ಟುಬಿಟ್ಟಿರುವರಂತೆ. ಇದನ್ನು ನೋಡುವಲ್ಲಿ ಜರ್ಮನ್ ಪ್ರಮುಖರ ಅಂತರುದ್ದೇಶಗಳು ಇನ್ನೂ ಎಷ್ಟು ದುಷ್ಟವಾಗಿವೆಯೆಂಬುದು ಗೊತ್ತಾಗುವುದು. ಬರ್ಲಿನ್ ಪಟ್ಟಣದಲ್ಲಿ ಕೂಲಿಕಾರರ ಮುಷ್ಕರವು ಮತ್ತೆ ಪ್ರಬಲಿಸುತ್ತಿದೆ. ಹಾಂಬರ್ಗ್ ಪಟ್ಟಣದಲ್ಲಿ ಸ್ಪಾರ್ಟಿಕಿಸ್ಟರ ಹಾವಳಿಯು ಅಧಿಕವಾಗಿರುವುದರಿಂದ ಅದನ್ನಡಗಿಸುವುದಕ್ಕೆ ಸೈನಿಕಶಾಸನವನ್ನು ಪ್ರವೇಶಗೊಳಿಸಿದ್ದಾರೆ. ಜರ್ಮನ್ ವೃತ್ತಪತ್ರಿಕೆಗಳು ಕೂಡ ಗುಣಾಂತರವನ್ನು ಹೊಂದಿದಂತೆ ಕಾಣುವುದಿಲ್ಲ. ತಮ್ಮ ತಪ್ಪನ್ನು ಅವು ಒಪ್ಪಿಕೊಳ್ಳುವುದೇ ಇಲ್ಲ. ತಮಗೆ ಮಿತ್ರಮಂಡಲಿಯವರು ಉಂಟುಮಾಡಿದ ಕೇಡನ್ನು ಜರ್ಮನರು ಎಂದಿಗೂ ಮರೆಯುವುದಿಲ್ಲವೆಂದು ಹೇಳಿ ಕೆಲ ಪತ್ರಗಳು ಮಚ್ಚರವನ್ನೇ ವ್ಯಕ್ತಪಡಿಸಿರುತ್ತವೆ. ಈಗಣ ಸಂಧಿಗೆ ಒಪ್ಪಿದ ಜರ್ಮನ್ ಪ್ರಭುತ್ವವು ಉಳಿದಿರುವವರೆಗೆ ಮಾತ್ರವೇ ಸಂಧಿಯೂ ಉಳಿಯುವುದೆಂದು ಒಂದು ಜರ್ಮನ್ ಪತ್ರಿಕೆಯು ಶಕುನವನ್ನು ಹೇಳಿರುತ್ತದೆ. ಸಂಧಿನಡೆದ ದಿವಸ ಜರ್ಮನ್ ಮುಖ್ಯಪಟ್ಟಣದಲ್ಲಿ ಬಹಳ ದೊಂಬಿಯೂ ಕಳ್ಳತನಗಳೂ ನಡೆದು ಅತೃಪ್ತಿಯು ತೋರ್ಪಡಿಸಲ್ಪಟ್ಟಿತಂತೆ. ಮತ್ತೂ ಜರ್ಮನರ ದುರುದ್ದೇಶವನ್ನು ವ್ಯಕ್ತಪಡಿಸುವ ಮತ್ತೊಂದು ಸಂಗತಿಯು ಹೊರಬಿದ್ದಿದೆ. ಅದೇನೆಂದರೆ— ಜರ್ಮನ್ ಅಧಿಕಾರಿಗಳು ಸೈಲೀಸಿಯಾದಿಗೆ ಕಳುಹಿಸಿಕೊಟ್ಟಿದ್ದ ಒಂದು ತಂತ್ರಿವಾರ್ತೆಯು ಪೋಲಿಷ್ ಸೇನಾಪತಿಗಳ ಕೈಗೆ ಸಿಕ್ಕಿತಂತೆ. ಅದರಲ್ಲಿ ಜರ್ಮನರು ತಮ್ಮ ದೇಶದ ಪೂರ್ವಭಾಗದಲ್ಲಿ ಇಷ್ಟರಲ್ಲೇ ಪ್ರಕಟಿಸಲಿಕ್ಕಿರುವ ಯುದ್ಧಕ್ಕೆ ಜರ್ಮನ್ ಪ್ರಭುತ್ವದವರು ಸಹಾಯವನ್ನು ಮಾಡುವುದಾಗಿ ತಿಳಿಯಿಸಲ್ಪಟ್ಟಿರುವುದಂತೆ. ಇದರಿಂದ ಜರ್ಮನರು ಸಂಧಿನಿಬಂಧನೆಯನ್ನು ಉಲ್ಲಂಘಿಸುವಲ್ಲಿ ಈಗಾಗಲೇ ಎಷ್ಟುಮಟ್ಟಿಗೆ ಪ್ರಯತ್ನವನ್ನು ಜರುಗಿಸುತ್ತಿರುವರೆಂಬುದುದನ್ನು ಕುರಿತು ಪೋಲಿಷ್ ಸೇನಾಪತಿಯು ಸಂಧಿಸಭಾಧ್ಯಕ್ಷ ಕ್ಲೆಮೆಂಕೋರವರಿಗೆ ತಿಳಿಯಪಡಿಸಿರುವನು. ನಿಬಂಧನೆಗಳಿಗೆ ವಿರುದ್ಧವಾಗಿ ಜರ್ಮನರು ನಡೆದುಕೊಳ್ಳದೆ ತಪ್ಪುವರಲ್ಲವೆಂಬುದನ್ನು ಕ್ಲೆಮೆಂಕೋರವರೇ ಮೊದಲಾದವರೆಲ್ಲಾ ಊಹಿಸಿಯೇ ಇದ್ದಾರೆ. ಆದಕ್ಕಾಗಿ ತಕ್ಕ ಪ್ರತಿಕ್ರಿಯೆಯನ್ನು ಮಾಡಲು ತಕ್ಕಷ್ಟು ಸೈನ್ಯವನ್ನು ತಾವು ಸಿದ್ಧಪಡಿಸಿಕೊಂಡಿರಬೇಕೆಂದು ಮಿತ್ರಮಂಡಲಿಯವರು ನಿರ್ಧರಿಸಿರುವಂತೆ ಕಾಣುತ್ತದೆ. ಆದನ್ನು ಕ್ಲೆಮೆಂಕೋರವರು ಬಾಯ್ಬಿಟ್ಟೇ ಹೇಳಿದ್ದಾರೆ. ಜರ್ಮನರ ದುಷ್ಟಸಂಕಲ್ಪವನ್ನು ಕುರಿತು ರೂಟರ್ ವಾರ್ತಾದಾಯಕನು ಮತ್ತೊಂದು ಸುದ್ದಿಯನ್ನು ತಿಳಿಸಿರುತ್ತಾನೆ. ಏನೆಂದರೆ—“ಮತ್ತೆ ಯುದ್ಧವು ಜರುಗಿದರೆ ಜರ್ಮನರು ಪೋಸೆನ್ ರಾಷ್ಟ್ರವನ್ನು ಜಯಿಸಿ ಪೂರ್ವರಂಗದಲ್ಲಿ ತಾವು ಸುರಕ್ಷಿತವಾಗಿರುವರೇ ಹೊರತು ಪಶ್ಚಿಮರಂಗದಲ್ಲಿ ಅವರು ಜಯಶಾಲಿಗಳಾಗುವುದಿಲ್ಲ. ಆದರೂ ಅಪಮಾನಕರವಾದ ಸಂಧಿಗೆ ಒಪ್ಪಿಕೊಳ್ಳುವುದಕ್ಕಿಂತಲೂ ಅಪಜಯವೇ ಉತ್ತಮವಾದುದು” ಎಂದು ವಾನ್‌ಹಿಂಡೆನ್‌ಬರ್ಗರು ಹೇಳಿರುವರಂತೆ. ಇದಕ್ಕನುಸಾರವಾಗಿ ಸೈಲೇಸಿಯಾದಲ್ಲಿ ಉತ್ತರಭಾಗದೊಳಗೆ ಇರುವ ಜರ್ಮನರ ಕರ್ಮಾಗಾರಗಳು ಮದ್ದುಗುಂಡುಗಳನ್ನು ನಿರ್ಮಿಸುತ್ತಿರುವರೆಂದೂ, ಪೋಲರ ಮೇಲೆ ಬೀಳುವುದಕ್ಕೆ ಜರ್ಮನರು ಪ್ರಯತ್ನಿಸುತ್ತಿರುವರೆಂದೂ, ಪೋಲಂಡಿನವರು ತಿಳಿಯಪಡಿಸಿರುವ ವಾರ್ತೆಯು ಜರ್ಮನರ ದುಸ್ಸಂಕಲ್ಪವನ್ನು ವ್ಯಕ್ತಪಡಿಸುತ್ತದೆ. ಈ ಸಂದರ್ಭಗಳನ್ನೆಲ್ಲಾ ಪರ್ಯಾಲೋಚಿಸಿಯೇ, ಮುಂದೆ ಯಾವಾಗಲಾದರೂ ಜರ್ಮನರು ಫ್ರಾನ್ಸಿನಮೇಲೆ ತಮ್ಮ ಹಗೆತನವನ್ನು ತೀರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿ ದಂಡಯಾತ್ರೆಯನ್ನು ಮಾಡಿದರೆ ಆಗ್ಗೆ ಅಮೇರಿಕಾದವರು ಫ್ರಾನ್ಸ್‌ದೇಶಕ್ಕೆ ಸಹಾಯಮಾಡಬೇಕೆಂಬುದಾಗಿ ಆಗಿರುವ ಸಂಧಿಪತ್ರಕ್ಕೆ ಪ್ರೆ॥ ವಿಲ್ಸನ್‌ರವರು ಒಪ್ಪಿಹಸ್ತಾಕ್ಷರವನ್ನು ಹಾಕಿರುವರಂತೆ. ನಾನಾದೇಶ ಸಂಮೇಳನವು ಲೋಕರಕ್ಷಣವನ್ನು ಮಾಡಲು ಸಮರ್ಥವಾಯಿತೆಂಬ ನಂಬುಗೆಯು ಫ್ರಾನ್ಸಿಗೆ ಒದಗುವವರೆಗೂ ಈ ತೆರನಾದ ಫ್ರಾನ್ಸ್ ಅಮೇರಿಕಾಗಳ ಒಡಂಬಡಿಕೆಯು ಊರ್ಜಿತವಾಗಿಯೇ ಇರಬೇಕೆಂದು ಏರ್ಪಡಿಸಿಕೊಂಡಿದ್ದಾರೆ.

ಜರ್ಮನರ ಹುಟ್ಟುಗುಣವು ಎಂತಹದೆಂಬುದನ್ನು ಆಂಗ್ಲಜನರು ಗುರ್ತಿಸಿರುವಂತೆ ಇನ್ನಾರೂ ಗುರ್ತಿಸಿರಲಾರರು. ಆದರಿಂದಲೇ ತಾತ್ಕಾಲಿಕ ಯುದ್ಧವಿಶ್ರಾಂತಿ ಕಾಲದಲ್ಲಿ ಜರ್ಮನರ ಯುದ್ಧನೌಕೆಗಳನ್ನೆಲ್ಲಾ ಈಗಲೇ ನಾವು ಸ್ವಾಧೀನಪಡಿಸಿಕೊಂಡುಬಿಡಬೇಕೆಂದು ಇಂಗ್ಲೀಷ್ ಪ್ರತಿನಿಧಿಗಳೂ ಅವರ ನೌಕಾದಳಾಧಿಪತಿಗಳೂ ಸಹ ಪಟ್ಟುಹಿಡಿದು ಸೂಚಿಸಿದರು. ಆದರೆ ಆಗ ಫ್ರಾನ್ಸ್ ದೇಶದಲ್ಲಿ ಯುದ್ಧದಿಂದ ಜನರ ನಾಶವು ವಿಪರೀತವಾಗಿ ಆಗುತ್ತಿದ್ದುದರಿಂದ ಹೇಗಾದರೂ ಮಾಡಿ ಯುದ್ಧವನ್ನು ಬೇಗನೆ ಮುಗಿಸಿಬಿಡಬೇಕೆಂಬ ಆತುರವು ಫ್ರೆಂಚರಿಗೆ ಇದ್ದುದರಿಂದ ಜರ್ಮನರ ಹಡಗುಗಳನ್ನೆಲ್ಲಾ ವಶಪಡಿಸಿಕೊಳ್ಳಬೇಕಾದ ಅವಶ್ಯಕತೆಯಿಲ್ಲವೆಂದು ಫ್ರೆಂಚ್ ಸೇನಾಧಿಕಾರಿಗಳು ಅಭಿಪ್ರಾಯಪಟ್ಟರು. ಅವನ್ನೆಲ್ಲಾ ವಶಪಡಿಸಬೇಕೆಂದು ಹಠತೊಟ್ಟು ನಿರ್ಬಂಧಿಸಿದರೆ ಯುದ್ಧವು ಬೇಗನೆ ನಿಲ್ಲಲಾರದೆಂದು ತೋರಿತೆಂತಲೂ ಯುದ್ಧವು ಬೇಗನೆ ಮುಗಿಯಬೇಕೆಂದು ಮುಖ್ಯದಳಪತಿ ಮಾರ್ಷಲ್ ಫಾಕರವರೂ ಕೂಡ ಅಪೇಕ್ಷಿಸಿದರೆಂತಲೂ (ಅವರು ಹಾಗೆ ಅಪೇಕ್ಷೆಪಟ್ಟುದು ಸುಳ್ಳೆಂದು ಒಂದು ವಾರ್ತೆಯಿರುವುದು) ಆದನ್ನೇ ಅಮೇರಿಕನ್ ದಳಪತಿಯೂ ಅನುಮೋದಿಸಿದರೆಂತಲೂ ಈಗ ಗೊತ್ತಾಗಿರುತ್ತದೆ. ಇಂಗ್ಲೀಷರ ಮಾತನ್ನು ಸ್ವಲ್ಪ ಆಗ ಅಲಕ್ಷ್ಯ ಮಾಡಿದುದರ ಫಲವನ್ನು ಈಗ ಮಿತ್ರಮಂಡಲಿಯವರು ಅನುಭವಿಸಬೇಕಾಯಿತು. ಆಂಗ್ಲರ ದೂರದೃಷ್ಟಿಯನ್ನನುಸರಿಸಿ ಫ್ರೆಂಚರೂ ಅಮೇರಿಕನ್ನರೂ ಆಗ ನಡೆದುಕೊಂಡಿದ್ದರೆ ಜರ್ಮನರು ತಮ್ಮ ಹಡಗುಗಳನ್ನು ಈಗ ಮುಳುಗಿಸಿಬಿಡಲು ಅವಕಾಶವೇ ಆಗುತ್ತಿರಲಿಲ್ಲ. ಈಗಲೂ ಮಿಂಚಿಹೋದುದೇನೂ ಇಲ್ಲ. ವಶಪಡಿಸಿಕೊಂಡ ಜರ್ಮನರ ಹಡಗುಗಳನ್ನೆಲ್ಲಾ ಮುಳುಗಿಸಿಬಿಡಬೇಕೆಂದು ಇದಕ್ಕೆ ಮುಂಚೆಯೇ ಮಿತ್ರಮಂಡಲಿಯವರಲ್ಲಿ ಅಭಿಪ್ರಾಯ ಹುಟ್ಟಿದ್ದಿತು. ಅದನ್ನು ಈಗ ಜರ್ಮನರೇ ಮಾಡಿದಂತಾಯಿತು. ಮತ್ತು ಇದರಿಂದ ಜರ್ಮನರು ವಿಶ್ವಾಸಘಾತಕತನ ಮಾಡುವ ಸ್ವಭಾವವನ್ನು ಇನ್ನೂ ಬಿಡಲಿಲ್ಲವೆಂಬುದಕ್ಕೆ ಅವರೇ ಮತ್ತೊಂದು ಉದಾಹರಣೆಯನ್ನು ತೋರಿಸಿಕೊಟ್ಟಂತಾಯಿತು. ಇದರ ಆಧಾರದಿಂದ ಮತ್ತಷ್ಟು ಕಟ್ಟುನಿಟ್ಟುಗಳನ್ನು ಜರ್ಮನರ ವಿಷಯದಲ್ಲಿ ಮಿತ್ರಮಂಡಲಿಯವರು ವಿಧಿಸುವುದಕ್ಕೂ, ಎಚ್ಚರಿಕೆಯಿಂದಿರುವುದಕ್ಕೂ ಆಸ್ಪದವಾಯಿತು. ಜರ್ಮನರು ಸಂಧಿನಿಬಂಧನೆಗಳನ್ನು ಹೀಗೆಯೇ ಮೀರುತ್ತ ಬಂದರೆ ಅವರು ಸಮೂಲ ನಾಶವಾಗುವುದೇ ಖಂಡಿತ. ತಮ್ಮ ನಿರಂಕುಶಾಚರಣವನ್ನೂ ಮೋಸವನ್ನೂ ಇನ್ನೂ ದೂರೀಕರಿಸಲು ಅವರು ಪ್ರಯತ್ನಿಸದಿದ್ದರೆ, ಮಿತ್ರಮಂಡಲಿಗೆ ಹೀಗೆಯೇ ಅನಪೇಕ್ಷಿತವಾದ ತೊಂದರೆಗಳನ್ನು ಕಲ್ಪಿಸಿ ಶ್ರಮಗೊಳಿಸುವವರಾದರೆ, ಜರ್ಮನರಿಗೇ ಅದರಿಂದ ವಿಪರೀತ ನಷ್ಟಕಷ್ಟಗಳು ಸಂಭವಿಸಿ ಅವರ ದೇಶವು ನಾಮಾವಶೇಷವಾಗುವ ಹೊತ್ತು ಬಾರದೆ ಇರದು. ಅವರು ಇಲ್ಲಿಂದಾಚೆಗೆ ತಮ್ಮ ನಡತೆಯನ್ನು ಶುದ್ಧಪಡಿಸಿಕೊಳ್ಳುವುದಕ್ಕೆ ಯತ್ನಿಸುವರೆಂಬುದನ್ನು ತೋರ್ಪಡಿಸಿಕೊಂಡರೇನೆಯೋ ಅವರಿಗೆ ನಾನಾದೇಶಸಂಮೇಳನದಲ್ಲಿ ಸ್ಥಾನವು ದೊರೆಯಬಹುದು. ಇಲ್ಲದೆಹೋದರೆ ಅದಕ್ಕೂ ಸೊನ್ನೆ ಸುತ್ತಿಹೋಗುವುದು. ಭವಿಷ್ಯತ್ಕಷ್ಟನಷ್ಟಗಳನ್ನೆಲ್ಲಾ ಈಗಣ ಪ್ರಷ್ಯನ್ ಪ್ರಭುತ್ವದವರು ಸ್ವಲ್ಪಮಟ್ಟಿಗೆ ಯೋಚಿಸಿಕೊಂಡು ಇರಬಹುದು. ಅನುಕಾರಣದಿಂದಲೇ ಅವರು ತಮ್ಮ ಪ್ರಜೆಗಳಿಗಾಗಿ ಒಂದು ಪ್ರಕಟನೆಯನ್ನು ಮಾಡಿ “ಸಂಧಿನಿಬಂಧನೆಗಳನ್ನು ಹೇಗಾದರೂ ಸಫಲವಾಗುವಂತೆ ಮಾಡುವುದಕ್ಕೆ ನೀವೆಲ್ಲರೂ ಪ್ರಯತ್ನಿಸಬೇಕು. ಹಾಗಿಲ್ಲದೆ ನಮ್ಮ ದೇಶದಲ್ಲಿ ಅಶಾಂತಿಯೇ ಬೆಳೆಯುತ್ತಿದ್ದರೆ ಪರದೇಶದವರು ನಮ್ಮಲ್ಲಿಗೆ ನುಗ್ಗಬಹುದು” ಎಂದು ತಿಳಿಯಪಡಿಸಿದ್ದಾರೆ. ಇಂಥ ಪ್ರಕಟನೆಯನ್ನು ನೋಡಿದ ಮೇಲಾದರೂ ಜರ್ಮನರು ವಿವೇಕವನ್ನು ತಂದುಕೊಂಡು ದುಷ್ಪ್ರಯತ್ನಗಳನ್ನು ಬಿಟ್ಟು ಮಾತ್ಸರ್ಯವನ್ನೂ ತ್ಯಜಿಸಿ, ಸ್ನೇಹಭಾವದಿಂದ ಮಿತ್ರಮಂಡಲಿಯವರೊಡನೆ ನಡೆದುಕೊಳ್ಳುವಂತಾದರೆ ಅವರಿಗೇ ಶ್ರೇಯಸ್ಸುಂಟು. ಜರ್ಮನರ ವಾಗ್ದಾನಮಾತ್ರವನ್ನು ಮಿತ್ರಮಂಡಲಿಯವರು ನಂಬಿ ಮೋಸಹೋಗುವವರಾಗಿಲ್ಲ. ಅವರು ಸಹಸ್ರಾಕ್ಷರಾಗಿದ್ದೇ ಇರುವರು.

ಅಫ್ಘಾನಿಸ್ಥಾನ.

ಅಮೀರರೊಡನೆ ಸಂಧಿಯು ಇಷ್ಟರಲ್ಲೇ ನಡೆದುಹೋಗಬಹುದಾಗಿದೆ. ಆದರೆ ಇವರು ಇಂಗ್ಲೀಷರೊಡನೆ ಮನಃಪೂರ್ವಕವಾಗಿ ಯುದ್ಧಮಾಡುವುದಕ್ಕೆ ಪ್ರಯತ್ನಿಸಿ ಎಷ್ಟು ಸಂಧಾನಗಳನ್ನು ಹತ್ತಿ ಕಡೆಗೆ ಹತಾಶರಾಗಿ ಸಂಧಿಪ್ರಾರ್ಥನೆ ಮಾಡುವ ಸ್ಥಿತಿಗೆ ಬಂದರೆಂಬ ವಿಷಯವಾಗಿ ವಿವರಣೆಗಳು ಈಗ ಹೊರಬಿದ್ದಿರುತ್ತವೆ. ಅದೇನೆಂದರೆ—ಯುದ್ಧವನ್ನಾರಂಭಿಸುವಾಗ್ಗೆ ಅಮೀರರು ರಷ್ಯನ್ ಬೋಲ್ಷೆವಿಕ್ಕರ ಸಹಾಯವನ್ನು ಕೋರಿ ತಾಷ್‌ಕೆಂಟ್ ಪಟ್ಟಣಕ್ಕೆ ತಮ್ಮ ಕಡೆಯ ಕೆಲರನ್ನು ಕಳುಹಿಸಿಕೊಟ್ಟರು. ಬೋಲ್ಷೆವಿಕ್ಕರ ಕಡೆಯ ಕಮರಾಫ್ ಎಂಬುವವನು ಇವರೊಡನೆ ಕುಳಿತು ಮಾತನಾಡುವಾಗ್ಗೆ ಅಮೀರರ ಸಹಾಯಕ್ಕಾಗಿ ತಾವು ೨ ಸೈನ್ಯಗಳನ್ನು ಕಳುಹಿಸಿ ಕೊಡುವುದಾಗಿಯೂ, ಅವರ ವೆಚ್ಚದ ಭಾರವನ್ನೆಲ್ಲಾ ಅಮೀರರೇ ವಹಿಸಿಕೊಳ್ಳಬೇಕೆಂಬುದಾಗಿಯೂ ತಿಳಿಯಪಡಿಸಿದನಂತೆ. ಆದಕ್ಕೆ ಅಮೀರರ ಕಡೆಯ ರಾಯಭಾರಿಗಳು ತಮಗೆ ಜನಸಹಾಯವು ಬೇಕಾಗಿಲ್ಲವೆಂತಲೂ ಧನಸಹಾಯವು

ಮಾತ್ರ ಬೇಕೆಂತಲೂ ತಿಳಿಸಿದರು. ಅದರ ಮೇಲೆ ಈಮರಾಫನು ತನ್ನ ದೇಶದ ನೋಟುಗಳು ಕೆಲವನ್ನು ಕೊಟ್ಟನು. ಅಸ್ಥಿರವಾದ ಬೋಲ್ಷೆವಿಕ್ ಪ್ರಭುತ್ವದ ಆ ಚೂರು ಕಾಗದಗಳನ್ನು ಕಾಬೂಲಿನವರು ಏನುಮಾಡಿಕೊಂಡಾರು? ಅದುಕಾರಣ ಅವರು ನೋಟುಗಳು ತಮ್ಮ ದೇಶದಲ್ಲಿ ಚಲಾವಣೆಯಾಗಲಾರವಾದುದರಿಂದ ಅವು ಬೇಕಿಲ್ಲವೆಂತಲೂ ಚಿನ್ನ ಬೆಳ್ಳಿಯ ನಾಣ್ಯಗಳ ರೂಪವಾಗಿರಬೇಕೆಂತಲೂ ಹೇಳಿದರು. ಅವು ಈಮರಾಫಿನ ಕೈಯಲ್ಲಿರಲಿಲ್ಲ. ಅವನು ಬಂದ ದಾರಿಹಿಡಿದು ಹೋದನು. ಈ ಕಾಬೂಲ್ ರಾಯಭಾರಿಗಳಿಗೂ ಬಂದ ದಾರಿಗೆ ಸುಂಕವಿಲ್ಲವಾಯಿತು. ಮುಖವನ್ನು ಸಪ್ಪಗೆ ಮಾಡಿಕೊಂಡು ಹಿಂದಿರುಗಿದರು. ಈ ಸಂಗತಿಯು ಬಹಳ ಗುಟ್ಟಾಗಿಡಲ್ಪಟ್ಟಿತಾದರೂ ಕಡಕಡೆಗೆ ಬಯಲಾಯಿತು. ಅದುವರೆಗೆ ಕಾಬೂಲ್ ಪಟ್ಟಣದ ಅರಮನೆಯಲ್ಲಿ ವಾಸಮಾಡಿಕೊಂಡು ಸಮಯ ಸಿಕ್ಕಿದಾಗಲೆಲ್ಲಾ ಅಮೀರರಿಗೆ ಕೆಟ್ಟ ಸಲಹೆಗಳನ್ನು ಕೊಡುತ್ತಿದ್ದ ೬ ಮಂದಿ ರಷ್ಯನ್ ಅಧಿಕಾರಿಗಳನ್ನು ಆ ಕೂಡಲೇ ಅರಮನೆಯಿಂದ ಹೊರಪಡಿಸಿ, ಎಲ್ಲೋ ಒಂದು ಹಾಳ್ಮನೆಯಲ್ಲಿಟ್ಟು ಪ್ರತಿಯೊಬ್ಬರಿಗೂ ದಿನಕ್ಕೆ ಕೆಲವಾಣೆಗಳನ್ನು ಆಹಾರಾರ್ಥವಾಗಿ ಕೊಡಲು ಏರ್ಪಡಿಸಿದರಂತೆ. ಬಳಿಕ ಅಮೀರರು ಇಷ್ಟರಿಂದಲೇ ಹತಾಶರಾಗದೆ ಬೋಖಾರಾದ ಅಮೀರರಬಳಿಗೆ ಒಂದು ರಾಯಭಾರವನ್ನು ಕಳುಹಿಸಿದರು. ಅವರು ಒಂದು ದರ್ಬಾರನ್ನು ನಡೆಯಿಸಿ, ಕಾಬೂಲ್ ರಾಯಭಾರಿಗಳನ್ನು ಅಲ್ಲಿಗೆ ಮರ್ಯಾದೆಯಿಂದ ಬರಮಾಡಿಕೊಂಡು, ಅವರುಗಳ ಮುಖದಿಂದ ಅಮೀರರ ಸಂಕಲ್ಪವನ್ನು ಕೇಳಿ, ಅಮನುಲ್ಲಾಖಾನರಿಗೆ ತಮ್ಮೊಡನೆ ಸಾಂಘಿಕಮತಸಂಬಂಧವಾದ ಸಖ್ಯವು ಬೇಕಾಗಿದ್ದರೆ ನಾವು ಉಭಯರೂ ಮಹಮ್ಮದೀಯ ಮತಸ್ಥರೇ ಆಗಿರುವುದರಿಂದ ಇದುವರೆಗೇ ಅದು ಸಂಭವಿಸಿರುವುದೆಂತಲೂ, ಆಂಗ್ಲಜನರೊಡನೆ ಕಾದಾಡುವುದಕ್ಕಾಗಿ ನಮ್ಮ ಮೈತ್ರಿಯನ್ನು ಅಮೀರರು ಕೋರುವವರಾಗಿದ್ದರೆ, ಆಂಗ್ಲಜನರೊಡನೆ ನಮಗೆ ಮೈತ್ರಿಯಿರುವುದರಿಂದ ಅವರ ಮೇಲೆ ನೀವು ನಡೆಯಿಸುವ ದಂಡಯಾತ್ರೆಯಲ್ಲಿ ನಾವು ಸಾನುಭೂತಿಯನ್ನು ತೋರಿಸಲಾರೆವೆಂತಲೂ, ಅದಕ್ಕೆ ಪ್ರವೇಶಿಸುವುದೇ ಇಲ್ಲವೆಂತಲೂ, ಅಮನುಲ್ಲಾಖಾನರನ್ನು ಕೈಯೊಳಗಣ ಕೀಲುಬೊಂಬೆಯಂತೆ ಆಟವಾಡಿಸುತ್ತಿರುವ ಬೋಲ್ಷೆವಿಕ್ಕರೊಡನೆ ಬೋಖಾರಾದವರು ಎಂದಿಗೂ ಸೇರುವುದಿಲ್ಲವೆಂತಲೂ, ಆ ಬೊಲ್ಷೆವಿಕ್ಕರು ಬಹಳ ದುರಹಂಕಾರಿಗಳೆಂತಲೂ ಹೇಳಿ ಮಂಗಳಾರತಿ ಮಾಡಿ ಕಳುಹಿಸಿಬಿಟ್ಟರು. ಕಪೋಲದೀಕ್ಷೆಯನ್ನು ಮಾಡಿಸಿಕೊಂಡವರಂತೆ ಕಾಬೂಲ್ ರಾಯಭಾರಿಗಳು ತಲೆಬಗ್ಗಿಸಿಕೊಂಡು ಸ್ವಸ್ಥಾನಕ್ಕೆ ಬಂದು ಸೇರಿಕೊಂಡರು. ಈ ಸುದ್ದಿಯನ್ನು ಕೇಳಿ ಅಮೀರರು ಎದೆಗೆಟ್ಟುಹೋದರು. ೨ ಕಡೆಯೂ ಅವರಿಗೆ ಸ್ವರೂಪನಾಶವಾಯಿತು. ತನ್ನ ಅವಿವೇಕವು ತನಗೆ ಗೊತ್ತಾಯಿತು. ಇನ್ನು ಆತ್ಮವಿನಾಶ ಮಾಡಿಕೊಳ್ಳುವುದು ಸರಿಯಲ್ಲವೆಂದು ಆಗಲಾದರೂ ಅಮೀರರು ಯೋಚಿಸಿದುದು ವಿಹಿತವೇ ಆಯಿತು. ಆ ಬಳಿಕವೇ ನಿರುಪಾಯರಾಗಿ ನಮ್ಮ ವೈಸ್ರಾಯರೊಡನೆ ಸಂಧಿಗೆ ಪ್ರಯತ್ನಿಸಿದುದು. ಇಷ್ಟರಲ್ಲೇ ಈ ಸಂಧಿಯೂ ನೆರವೇರುವ ಚಿಹ್ನಗಳು ವ್ಯಕ್ತವಾಗಿರುತ್ತವೆ.

ಪತ್ರವ್ಯವಹಾರ.

ವಾಚನಾಲಯ.

ಮುದ್ದೇಬಿಹಾಳದ ಪ್ರಸಿದ್ಧ ಮುಂದಾಳುಗಳಾದ ರಾವಸಾಹೇಬ ಗುರುಲಿಂಗಪ್ಪನವರು ವೋಟಿಗಿ ಇವರು ನಮ್ಮ ಬಾಸಗತ ಸ್ವಾಮಿನಾ ವಾಚನಾಲಯವನ್ನು ತಾ|| ೩೦-೬-೧೯ ನೇ ದಿವಸ ನೋಡಿ, ಆನಂದಭರಿತರಾಗಿ ಎರಡು ನೂರು ಒಂದುರೂಪಾಯಿಗಳನ್ನು ದೇಣಿಗೆ ಕೊಟ್ಟರೆಂದು ತಿಳಿಸಲು ಆನಂದವೆನಿಸುವದು. ಜಾಯಿಂಟ ಕಾರ್ಯದರ್ಶಿ.

ಡಿ|| ಬೆಳಗಾವ ಮು-ಹೂಲಿ.

(ವೀರಶೈವ ತರುಣರ ಸಮ್ಮೇಲನ)

ಇದೇ ತಾ|| ೭-೬-೧೯೧೯ ನೆ ಇಸವಿ ಶನಿವಾರ ಸಾಯಂಕಾಲದ ೬ ಘಂಟೆಗೆ ಇಲ್ಲಿಯ ಸಾಂಬಯ್ಯನ ಮಠದಲ್ಲಿ ಮ|| ರಾ|| ರಾ|| ದುಂಡಪ್ಪನವರು ಸೋಮಪ್ಪನವರು ಬಾಳಿ ಮು-ಮನ್ನೋಳ್ಳಿ ಇವರ ಅಧ್ಯಕ್ಷತೆ ಕೆಳಗೆ ಸಭೆ ಸೇರಿ ನಡೆದ ವಿಷಯಗಳು—

೧. ವಿದ್ಯೆ—ಶ್ರೀ|| ರಾ|| ರಾ|| ಬಸವಲಿಂಗಯ್ಯನವರು ಗೊರವನಕೊಳ್ಳ ಶಾಂತವೀರಮಠ, ೨. ಧಾರ್ಮಿಕಸುಧಾರಣೆ ರಾ|| ರಾ|| ಬಸವಣ್ಣೆಪ್ಪಾ ಗೋರೋಬಾಳ, ೩. ವೀರಶೈವ ಸಮಾಜದ ಮೂಲತತ್ವ ರಾ|| ರಾ|| ಮಲ್ಲಪ್ಪ ಕೌಜಲಗಿ, ೪. ಆಚಾರದ ಏಕತೆ ರಾ|| ರಾ|| ಶಿವಮೂರ್ತಪ್ಪ ಗೋರೋಬಾಳ, ೫. ವೀರಶೈವ ಎಸ್. ಎಮ್. ಸಿದ್ಧಾಂತಿ ಹಿರೇಮಠ.

ಮೇಲಿನ ವಿಷಯಗಳಮೇಲೆ ಭಾಷಣಗಳಾಗಿ ಎಸ್. ಎಮ್. ಸಿದ್ಧಾಂತಿಗಳು ಹಿರೇಮಠ ಇವರು "ಲಿಂಗ" ಈ ವಿಷಯವನ್ನು ಅನೇಕ ವೇದಾಗಮ ಪುರಾಣಗಳ ಆಧಾರದಿಂದ ತಿಳಿಸಿ ಲಿಂಗವು ಪಂಚಸೂತ್ರದಿಂದ ಕೂಡಿಯೇ ಇರಬೇಕೆಂದು ಸಶಾಸ್ತ್ರಾಧಾರದಿಂದ ಬಲವತ್ತರ ಪ್ರಮಾಣಗಳೊಡನೆ ಸಿದ್ಧಗೊಳಿಸಿದ್ದಲ್ಲದೆ ವಸ್ತುಪ್ರದರ್ಶನದಿಂದ ಸ್ಪಷ್ಟೀಕರಣಮಾಡಿ ಹೇಳಿದಮೇಲೆ ಅಧ್ಯಕ್ಷರು ಪುಷ್ಟೀಕರಿಸಿ ಭಾಷಣಮಾಡಲು ಸಭೆ ೯ ಘಂಟೆ ಸುಮಾರಕ್ಕೆ ವಿಸರ್ಜನೆಯಾಯಿತು. ಜಗದ್ಗುರು ವಿದ್ಯಾರಾಧ್ಯ ವಾಚನಾಲಯದ ಸೆಕ್ರೆಟರಿ.

ಮದ್ರಾಸು ಪ್ರಾಂತದ ವೀರಶೈವರ ಆಂಗ್ಲೇಯ ಪ್ರೌಢ ವಿದ್ಯಾರ್ಥಿಗಳು.

ಈ ವರ್ಷ ಮದ್ರಾಸು ವೀರಶೈವಾಶ್ರಮದಲ್ಲಿ ವೀರಶೈವ ವಿದ್ಯಾರ್ಥಿಗಳ ಪೈಕಿ ಅನಂತಪುರದ ಚೋಗಪ್ಪನು ಬಿ.ಎ. ಆನರ್ಸ್ ಪರೀಕ್ಷೆಯಲ್ಲಿಯೂ, ಹಸುಮನಹಳ್ಳಿ ಕುಮಾರರಡ್ಡಿಯು ಬಿ.ಎ. ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿರುತ್ತಾರೆ. ಹರಪನಹಳ್ಳಿ ತೆಲಗಿಮಠದ ಬ್ರಂ|| ಶ್ರೀ|| ಸಿದ್ಧಾಂತಿ ಹೊಳೆಬಸವಶಾಸ್ತ್ರಿಗಳವರ ಚಿ|| ಗಳ ಪೈಕಿ ಸಿದ್ಧಯ್ಯ ನಂಜುಂಡಯ್ಯ ಇವರಿಬ್ಬರೂ ಯಿಂಟ್ರಮಿಡಿಯೇಟ್ (ಎಫ್. ಎ.) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿ.ಎ. ಕ್ಲಾಸಿಗೆ ಬಂದಿರುತ್ತಾರೆ. ಷಡಕ್ಷರಯ್ಯ ಸದಾಶಿವಯ್ಯ ಇವರಿಬ್ಬರೂ ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜೂನಿಯರ್ ಇಂಟ್ರಮಿಡಿಯೇಟ್ (ಎಫ್. ಎ.) ಕ್ಲಾಸಿಗೆ ಬಂದಿರುತ್ತಾರೆ. ಇವರ ಪೈಕಿ ಸದಾಶಿವಯ್ಯನು ಒಂದೇ ವರುಷದ ಪರೀಕ್ಷೆಯಲ್ಲಿ ಇಂಗ್ಲಿಷಿನಲ್ಲಿ 61 ಮಾರ್ಕುಗಳು ತೆಲುಗಿನಲ್ಲಿ 84 ಮಾರ್ಕುಗಳು ಏ. ಟಿ. ಸಿ. ಯಲ್ಲಿ 74 ಮಾರ್ಕುಗಳು ಇಂಗ್ಲೀಷು ಹಿಸ್ಟರಿಯಲ್ಲಿ 55 ಮಾರ್ಕುಗಳು ಈ ರೀತಿಯಾಗಿ ಹೈಯಸ್ಟ ಮಾರ್ಕುಗಳನ್ನು ಪಡೆದದ್ದು ಶ್ಲಾಘನೀಯವಾಗಿದೆ. ಚಂದ್ರಶೇಖರಯ್ಯನು ಕಳೆದ ವರುಷ ಇಂಟ್ರಮಿಡಿಯೇಟ್ ಪರೀಕ್ಷೆಯಲ್ಲಿ ಹಿಸ್ಟರಿಗ್ರೂಪಿನಲ್ಲಿ ಮಾತ್ರ ಪಾಸಾಗಿರುತ್ತಾನೆ. ನೆಲ್ಕುದ್ರಿ ಬೋರಣ್ಣನವರ ಮೂಗಪ್ಪನು ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಇಂಟ್ರಮಿಡಿಯೇಟ್ ಕ್ಲಾಸಿಗೆ ಬಂದಿರುತ್ತಾನೆ. ಮತ್ತು ನೆಲ್ಕುದ್ರಿ ಬೋರಣ್ಣನವರ ಗುರುಬಸಪ್ಪನು ಕಳೆದ ವರುಷ ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ಕಾಯಿಲೆದೆಸೆಯಿಂದ ಇಂಟ್ರಮಿಡಿಯೇಟ್ ಕ್ಲಾಸಿನಲ್ಲಿ ಸೇರಲಿಲ್ಲ. ಈ ವರುಷ ಇಂಟ್ರಮಿಡಿಯೇಟ್ ಕ್ಲಾಸಿಗೆ ಸೇರುತ್ತಾನೆ. ಈಗೀಗ ಮದ್ರಾಸು ಇಲಾಖೆಯಲ್ಲಿ ವೀರಶೈವ ಬಾಲರು ಪ್ರೌಢವಿದ್ಯಾಭ್ಯಾಸ ಮಾಡಲು ಮಾರ್ಗವಾಗಿದೆ. ಇದೇ ಪ್ರಕಾರ ಮದ್ರಾಸು ಇಲಾಖೆಯಲ್ಲಿ ಅನೇಕ ವೀರಶೈವ ಬಾಲಕರು ಪ್ರೌಢವಿದ್ಯಾಭ್ಯಾಸ ಮಾಡುವುದಕ್ಕೆ ಹೆಚ್ಚಾಗಿ ಗಮನಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ವಿದ್ಯಾಭಿಮಾನಿ.

ಧಾರವಾಡ ಜಿಲ್ಹಾ ನಲವಡಿ ಗ್ರಾಮದಲ್ಲಿ "ಸಮಾಜ ಸೇವಾಸಂಘ" ಎಂಬ ಹೆಸರಿನ ಲೋಕೋಪಯುಕ್ತ ಸಂಸ್ಥೆಯು ಸ್ಥಾಪಿಸಲ್ಪಟ್ಟು ಒಂದು ವರ್ಷ ಮುಗಿಸಿ ಎರಡನೇ ವರ್ಷವು ಪ್ರಾರಂಭವಾಗಿದೆ. ಸದರ ಸಂಸ್ಥೆಯ ದ್ವಿತೀಯ ವಾರ್ಷಿಕವರ್ಧಂತ್ಯುತ್ಸವವು ಮೊನ್ನೆ ಆದಿತ್ಯವಾರ ತಾ|| ೨೨-೬-೧೯೧೯ ನೇ ದಿವಸ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಸಂಘದ ವಾಚನಾಲಯವೂ ಮತ್ತು ಶ್ರೀ ಮಾರುತೀ ದೇವಾಲಯವೂ ಬಹು ವಿಧವಾಗಿ ಶೃಂಗರಿಸಲ್ಪಟ್ಟಿದ್ದವು. ವರ್ಧಂತ್ಯುತ್ಸವದ ಸಭೆಯು ಸಂಜೆಯ ಆರು ಗಂಟೆಗೆ ಆರಂಭವಾಗಿ ಸುಮಾರು ರಾತ್ರಿ ೧೧ ಗಂಟೆಯವರೆಗೆ ನಡೆಯಿತು. ಸಭೆಗೆ ಸ್ಥಳ ಪರಸ್ಥಳದ ೬೦೦-೭೦೦ ಜನರು ಕೂಡಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ಸಂಘದ ವಾಯಿಸ್‌ಪ್ರೆಸಿಡೆಂಟರಾದ ಮ|| ರಾ|| ರಾ|| ಫಕೀರಪ್ಪ ತಮ್ಮಪ್ಪ ನಲವಡಿ ವಕೀಲ ಧಾರವಾಡ ಇವರು ವಹಿಸಿದ್ದರು. ಸಮಾಜ ಸೇವಾ ಸಂಘದ ೧೯೧೮-೧೯೧೯ ನೇ ಸಾಲಿನ ರಿಪೋರ್ಟಿನ ಛಾಪಿಸಿದ ಪ್ರತಿಗಳು ಸಭೆಗೆಲ್ಲಾ ಹಂಚಲ್ಪಟ್ಟವು. ಸದರ ರಿಪೋರ್ಟನ್ನು ಸಂಘದ ಸನ್ಮಾನಿತ ಸೆಕ್ರೆಟರಿಯವರ ಪತಿಯಿಂದ ಧಾರವಾಡ ವಿಕ್ಟೋರಿಯಾ ಹಾಯಸ್ಕೂಲಿನ ೬ ನೇ ಇಯತ್ತೆಯ ವಿದ್ಯಾರ್ಥಿ ಕೃಷ್ಣಗೌಡಾ ಕೆಂಚನಗೌಡಾ ಪಾಟೀಲ ಇವರು ಓದಿ ಹೇಳಿದರು. ಆ ಮೇಲೆ ಸಭಾಧ್ಯಕ್ಷರು ದೇವನಗೌಡಾ ಲಿಂಗನಗೌಡಾ ಪಾಟೀಲ ಮಿ. ಬಸವಯ್ಯ ರಾಚಯ್ಯ ಸುರಹಟ್ಟಿಮಠ ಮಿ|| ಕೆಂಚನಗೌಡಾ ಶಿರಕನಗೌಡಾ ಪಾಟೀಲ ಮೊದಲಾದವರ ಮಹತ್ವದ ಭಾಷಣಗಳಾಗಿ ಕೆಳಗೆ ಕಾಣಿಸಿದ ಠರಾವುಗಳು ಸರ್ವಾನುಮತದಿಂದ ಪಾಸಾಯಿತು.

೧ ನೇದು—ಇಲ್ಲಿ ಸಹಕಾರೀ ಸಂಘದ ರಾತ್ರೀ ಶಾಲೆಗೆ ಧನಸಹಾಯಮಾಡಿದ ಸರ್ ವಿಠ್ಠಲದಾಸ ಠಾಕರಸೀ ಮಹನೀಯರ ಆಭಾರ ಮನ್ನಿಸೋಣ. ೨ ನೇದು—ಮುನ್ನಿನ ಇನ್‌ಫ್ಲೂಯೆಂಝಾ ರೋಗದ ಉಪದ್ರವವಿದ್ದಾಗ ೩೦೦-೪೦೦ ಜನರಿಗೆ ಸಾಲುವಷ್ಟು ಔಷಧವನ್ನು ಕಳಿಸಿ ಸಹಾಯ ಮಾಡಿದ ಮುಂಬೈ ಸಮಾಜ ಸೇವಾಸಂಘದ ಆಭಾರ ಮನ್ನಿಸೋಣ. ೩ ನೇದು—ಈ ವರ್ಷದ ಮುಂಬೈ ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿ ಪಾಸಾದ ಮಿ. ತಮ್ಮಪ್ಪ ಬಸಪ್ಪ ಭದ್ರಾಪೂರ ಮಿ. ದೇವನಗೌಡಾ ಲಿಂಗನಗೌಡಾ ಪಾಟೀಲ, ಈ ಇಬ್ಬರು ಪದವೀಧರರ ಅಭಿನಂದನ. ೪ ನೇದು—ಯೂರೋಪದ ಮಹಾಯುದ್ಧದಲ್ಲಿ ನ್ಯಾಯಪಕ್ಷಪಾತಿಗಳಾದ ಜಾರ್ಜ್ ಬಾದಶಹರವರಿಗೆ ಯಶಃಪ್ರಾಪ್ತಿಯಾದ ಬಗ್ಗೆ ಜಾರ್ಜ ಬಾದಶಹರ ಮತ್ತು ಹಿಂದೂಸ್ಥಾನ ಸರಕಾರದ ಅಭಿನಂದನ.

ಸಮಾಜಸೇವಕ.

ಬಳ್ಳಾರಿ ಜಿಲ್ಹಾ ಕಸಬಾ ಹರಪನಹಳ್ಳಿಯಲ್ಲಿರುವ ತಾಲ್ಲೂಕು ಬೋರ್ಡು ಮೆಂಬರ್ ಶ್ರೀಮಂತ ನೆಲ್ಕುದ್ರಿ ಬೋರಣ್ಣನವರ ಕೊಟ್ರೂರು ಬಸಪ್ಪನವರು ಇದೇ ವೈಶಾಖ ಬ|| ೬ ಬುಧವಾರ ಕನ್ಯಾಲಗ್ನದಲ್ಲಿ ತಮ್ಮ ಗೃಹದೊಳು ತಮ್ಮ ಪುತ್ರ ಚಿ|| ಗುರುಬಸಪ್ಪ ಹುಚ್ಚಪ್ಪನವರ ದತ್ತಪುತ್ರ ಮೂಗಪ್ಪ ವಗೈರೆ ಇವರ ವಿವಾಹಗಳನ್ನು ಇದೇ ಗ್ರಾಮದ ಮ|| ರಾ|| ವೆ|| ತೆಲಗಿ ಹರಪನಹಳ್ಳಿ ಮಠದ ಶಿವರುದ್ರಶಾಸ್ತ್ರಿಗಳಿಂದಲೂ ಈ ಗ್ರಾಮದ ಮ|| ರಾ|| ವೆ|| ಕಲ್ಲುಮಠದ ಕೊಟ್ರಯ್ಯನವರಿಂದಲೂ ವಿಧ್ಯುಕ್ತಪ್ರಕಾರವಾಗಿ ಸಾಂಗವಾಗಿ ನೆರವೇರಿಸಿದರು. ಈ ವಿವಾಹಕಾರ್ಯಗಳಿಗೆ ಇಸಾಮುದ್ರದ ಮಠದ ಶ್ರೀ ಪಟ್ಟದಸ್ವಾಮಿಗಳು, ಉಜ್ಜನಿ ಸಂಸ್ಥಾನದ ಕಾರಭಾರಿಗಳಾದ ಶ್ರೀ ಶಿರಿಪ್ಪಿ ಚರ ಪಟ್ಟದ ಸ್ವಾಮಿಗಳು, ಸಾಂತಿ ಹಿರೇಮಠದ ಶ್ರೀ ಪಟ್ಟದ ಸ್ವಾಮಿಗಳು, ಎಲಬುರ್ಗಿ ಮಠದ ಶ್ರೀ ಪಟ್ಟದ ಸ್ವಾಮಿಗಳು ತಮ್ಮ ತಮ್ಮ ಪರಿವಾರದೊಡನೆ ದಯಮಾಡಿಸಿದ್ದರು. ಮತ್ತು ಕೊಟ್ಟೂರಿಂದ ಮ|| ರಾ|| ಬಣಕಾರುದೇವರಮನೆ ಕೊಟ್ಟೂರು ಬಸಪ್ಪನವರೇ ಮೊದಲಾದ ಪ್ರಮುಖಜನರು ಆಗಮಿಸಿದ್ದರು ಮತ್ತು ದಾವಣಗೇರಿ, ರಾಣೆಬೆನ್ನೂರು, ಚನ್ನಗಿರಿ, ಕೂಲಹಳ್ಳಿ, ಬೆಳೋಡು, ಉಲ್ಪತ್ತಿ ಮೊದಲಾದ ಗ್ರಾಮಗಳಿಂದ ಬಂಧುಗಳು ಪರಸ್ಥಳದಿಂದ ಅನೇಕ ಆಪ್ತಜನರೂ ಭಕ್ತಮಹೇಶ್ವರರೂ ಆಗಮಿಸಿದ್ದರು. ಧಾರಾಮುಹೂರ್ತದ ದಿವಸ ನೆರೆದಿದ್ದ ಮಾಹೇಶ್ವರರಿಗೆಲ್ಲ ಉದಾರವಾಗಿ ದಕ್ಷಿಣೆಯೂ ಫಲದಾನವೂ ಕೊಡಲ್ಪಟ್ಟವು. ಪ್ರತಿದಿವಸವೂ ಸಹಸ್ರಾರು ಜನರವರೆಗೂ ಮೃಷ್ಟಾನ್ನಭೋಜನವು ಜರುಗುವಂತೆ ಚೆನ್ನಾಗಿ ಏರ್ಪಾಟು ಮಾಡಿದ್ದರು. ಮಾರನೆದಿವಸ ಅತ್ಯಂತ ರಮಣೀಯವಾಗಿಯೂ ನೇತ್ರಾನಂದಕರವಾಗಿಯೂ ರಚಿಸಲ್ಪಟ್ಟ ವಿವಾಹಮಂಟಪದಲ್ಲಿ ತಾಲ್ಲೂಕು ಅಮಲ್ದಾರರೇ ಮೊದಲಾದ ಯಾವತ್ತು ಸರ್ಕಾರಿ ಉದ್ಯೋಗಸ್ಥರೂ ಮಠದ ಯಾವತ್ತು ಸದ್ಗೃಹಸ್ಥರೂ ಕೂಡಿದ ಸಮಯದಲ್ಲಿ ಇಂಪಾದ ನೃತ್ಯಗೀತ ಮುಂತಾದವುಗಳು ಸಭಿಕರ ಮನಸ್ಸಂತೋಷವುಂಟಾಗುವಂತೆ ಜರುಗಿದವು. ಈ ಪುರದಲ್ಲಿರುವ ಬ್ರಾಹ್ಮಣ, ವೈಶ್ಯರು, ಜೈನರು, ಅಕ್ಕಸಾಲಿಗರೇ ಮೊದಲಾದ ಯಾವತ್ತು ಮತಸ್ಥರಿಗೂ ಮೃಷ್ಟಾನ್ನಭೋಜನ ಸಾಮಗ್ರಿಗಳು ಕೊಡಲ್ಪಟ್ಟವು. ಮಾರನೇದಿನ ೯ ಸಾವಿರ ಪ್ರಜಾಸಂಖ್ಯೆವುಳ್ಳ ಈ ಊರಿನಲ್ಲಿರುವ ಬಡವರೇ ಮೊದಲಾದ ಯಾವತ್ತು ಜಾತಿಯ ಜನರೆಲ್ಲರೂ ೨ ಘಂಟೆಗೆ ಸರಿಯಾಗಿ ಭೋಜನಕ್ಕೆ ಬರುವಂತೆ ಪುರಮಾದ್ಯಂತ ಡಂಗುರವನ್ನು ಹೊಡಿಸಿದ್ದರು. ಆ ದಿವಸ ಮಧ್ಯಾಹ್ನ ೨ ಘಂಟೆಗೆ ಸರಿಯಾಗಿ ೨ ಫರ್ಲಾಂಗಿನವರಿಗೂ ಕಿಕ್ಕಿರಿಯುವಂತೆ ೨ ಸಾಲಾಗಿ ಜನರನ್ನು ಕೂಡಿಸಿ ಮೃಷ್ಟಾನ್ನವನ್ನು ಹಾಕಿಸಿದರು. ಈ ಭೋಜನದ ಸಮಯದಲ್ಲಿ ಅಮಲ್ದಾರರೇ ಮೊದಲಾದ ಅನೇಕ ಸದ್ಗೃಹಸ್ಥರು ಬಂದು ನೋಡಿ ತುಂಬಾ ಸಂತೋಷಭರಿತರಾದರು. ಇಂಥಾ ವೀರಕ್ಷಾಮಕಾಲದಲ್ಲಿ ಇಷ್ಟು ಮಂದಿ ಬಡವರಿಗೆ ಅನ್ನವನ್ನು ಹಾಕಿದ್ದು ತುಂಬಾ ಶ್ಲಾಘನೀಯವಾದದ್ದು. ಕೀರ್ತಿಪ್ರದವಾದದ್ದು. ಇದೇ ವೈಶಾಖ ಬ|| ೭ ಗುರುವಾರ ಬೆಳಿಗ್ಗೆ ಮಿಥುನಲಗ್ನದಲ್ಲಿ ಇವರಿಂದ ಸ್ಥಾಪಿಸಲ್ಪಟ್ಟ ತೆಲಗಿ ಹರಪನಹಳ್ಳಿ ಮಠದಲ್ಲಿ ಆ ಮಠದ ಬ್ರ|| ಶ್ರೀ|| ಸಿದ್ಧಾಂತಿ ವಿರೂಪಾಕ್ಷಶಾಸ್ತ್ರಿಗಳ ಪುತ್ರ ಪಂಚಾಕ್ಷರಯ್ಯ ಎಂಬ ವಟುವಿಗೂ ಮತ್ತೊಂದು ಪರಸ್ಥಳದ ವಟುವಿಗೂ ಮಾಹೇಶ್ವರ ದೀಕ್ಷಾಕಾರ್ಯವು ಸಾಂಗವಾಗಿ ಜರಗಿತು. ಈ ದೀಕ್ಷಾಕಾರ್ಯಕ್ಕೆ ಮೇಲ್ಕಂಡ ಯಾವತ್ತು ಶ್ರೀಗಳವರೂ ಸದ್ಗೃಹಸ್ಥರೂ ಆಗಮಿಸಿದ್ದರು.

ಓರ್ವ ಪ್ರತ್ಯಕ್ಷದರ್ಶಿ.

ಒಂದು ತಿಂಗಳವರಿಗೆ ಮಾತ್ರ. 3

ಇನಾಂ. 12 ಸೆಂಟ್‌ಬಾಟ್ಲಿಗಳು. ಇನಾಂ.

ಬೆಸ್ಟ್ ಪೌಂಟೆನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟೆನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಡಜನ್ ರೋಸ್ ಸೆಂಟ್‌ಬಾಟ್ಲಿಗಳು ಇನಾಂ ಕೊಡಲ್ಪಡುತ್ತೆ.

ಬಹುಮಾನಸಹಿತ ಕ್ರಯ ಪೇನಾ 1 ಕ್ಕೆ ರೂ. 1—4—0.

ವಿಳಾಸ:—ಟಿ. ರಾಮಚಂದ್ರ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷ್ನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲಿ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ, ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ.)

4 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 31

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಆಟಿಸೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಭಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

22 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಜುಲೈ ತಾ|| ೬ ರಿಂದ ೧೯೧೯ ನೆಯ ಜುಲೈ ತಾ|| ೧೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಷಾಢ ಶು|| ನವಮಿಯಿಂದ ಆಷಾಢ ಶು|| ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
6	[1] ಭಾನು	ನವಮಿ	45-39	ಚಿತ್ತ	35-48	22
7	[2] ಸೋಮ	ದಶಮಿ	50-33	ಸ್ವಾತಿ	42-13	23
8	[3] ಮಂಗಳ	ಏಕಾದ	55-14	ವಿಶಾಖಾ	48-37	24
9	ಬುಧ	ದ್ವಾದಶಿ	60	ಅನೂ	55-11	25
10	[4] ಗುರು	ದ್ವಾದಶಿ	0-31	ಜ್ಯೇಷ್ಠ	60	26
11	[5] ಶುಕ್ರ	ತ್ರಯೋ	4-52	ಜ್ಯೇಷ್ಠ	1-7	27
12	ಶನಿ	ಚತು	8-24	ಮೂಲ	6-16	28

(1) ಸುದರ್ಶನಾಳ್ವಾರ್ ತಿರುನಕ್ಷತ್ರಂ. (2) ಕೆಂ|| ಬ|| ಅಮ್ಮಣ್ಣೀಯವರ ವರ್ಧಂತಿ. (3) ಸ್ಮಾರ್ತಪ್ರಥಮ ೧೧, ಗೋಪದ್ಮವ್ರತ, ಚಾತುರ್ಮಾಸವ್ರತಾರಂಭ. (4) ಪ್ರದೋಷ, ಶ್ರೀರಂಗದಲ್ಲಿ ಜ್ಯೇಷ್ಠಾಭಿಷೇಕ, ಶಯನದ್ವಾದಶಿ. (5) ಆಷಾಢ ಶುಕ್ರವಾರಂ, ಶ್ರೀರಂಗದಲ್ಲಿ ತಿರುಪ್ಪಾವಾಡೆ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಭೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರೇಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಜುಲೈ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೨೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೪-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೪ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೪-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೪-೦.

ಸೌಂದರಪುರಾಣಂ-೧-೪-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
23 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಾದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.

ಈಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,

ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
23 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇವೆ. ಕ್ರಯ ೧೨ ಆಣೆ.

40 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 30

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚುಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಾಗಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದ ವಿಷಯ, ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

23 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೆಳೆತ ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
30 ವೈದ್ಯಶಾಲಾ, ಮೈಸೂರು.

ಒಂದು ತಿಂಗಳವರಿಗೆ ಮಾತ್ರ. 4

ಇನಾಂ. 12 ಸೆಂಟ್‌ಬಾಟ್ಲಿಗಳು. ಇನಾಂ.

ಬೆಸ್ಟ್ ಪೌಂಟೆನ್‌ಪೇನಾ.

ಈ ನಕ್ಷೆಯಲ್ಲಿ ಕಾಣುವ ಪೌಂಟೆನ್‌ಪೇನಾವಿಗೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಮುತ್ತುಗಳಹಾಗೆ ಮುದ್ದಾಗಿ ಬರೆಯುವದು. ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಡಜನ್ ರೋಸ್ ಸೆಂಟ್‌ಬಾಟ್ಲಿಗಳು ಇನಾಂ ಕೊಡಲ್ಪಡುತ್ತೆ.

ಬಹುಮಾನಸಹಿತ ಕ್ರಯ ಪೇನಾ 1 ಕ್ಕೆ ರೂ. 1—4—0.

ವಿಳಾಸ:—ಟಿ. ರಾಮಚಂದ್ರ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜುಲೈ ತಾ|| ೧೩ ನೆಯ ಭಾನುವಾರ.

ಮುಖ್ಯಮಂತ್ರಿ ಪದವಿಗೆ ಸರ್ದಾರ್ ಕಾಂತರಾಜ ಅರಸ್ ಸಿ.ಎಸ್.ಐ. ರವರ ಸುಸ್ವಾಗತವು.

ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್ ಬಿ.ಎ., ಸಿ.ಎಸ್.ಐ.ರವರು ನಾಳೆಯದಿವಸ ಮೈಸೂರು ಸಂಸ್ಥಾನದಮುಖ್ಯಮಂತ್ರಿಪದವಿಯನ್ನು ವಹಿಸಿಕೊಳ್ಳುವವರಾಗಿದ್ದಾರೆ. ರಾಜವಂಶದಲ್ಲಿ ಶ್ರದ್ಧಾಭಿಮಾನಗಳನ್ನು ವಹಿಸಿ ರಾಜಬಂಧುವರ್ಗದವರ ಶ್ರೇಯೋಭಿವೃದ್ಧಿಯನ್ನು ಹಾರೈಸುತ್ತಿರುವ ಮೈಸೂರು ನಾಡಿನವರಿಗೆಲ್ಲಾ ಈ ಶುಭವಾರ್ತೆಯು ಅತ್ಯಂತ ಸಂತೋಷ ಸಂಭ್ರಮಗಳನ್ನುಂಟುಮಾಡುವುದೆಂಬುದಕ್ಕೆ ಸಂಶಯವಿಲ್ಲ. ಕಳೆದ ನಾಲ್ಕಾರು ತಿಂಗಳುಗಳಿಂದಲೂ ಇವರು ತೀವ್ರವಾದ ರೋಗಯಾತನೆಗೆ ಗುರಿಯಾಗಿದ್ದುದು ದೇಶೀಯರನ್ನೆಲ್ಲಾ ಚಿಂತಾಸಮುದ್ರದಲ್ಲಿ ಮುಳುಗಿಸಿದ್ದಿತು. ಈಗ ಸಂಪೂರ್ಣಾರೋಗ್ಯವನ್ನು ಪಡೆದು ಮಂತ್ರಿಪದವಿಯನ್ನಡರುವಂತೆ ಅನುಗ್ರಹಿಸಿದುದಕ್ಕಾಗಿ ಪ್ರಜೆಗಳು ಭಗವಂತನನ್ನು ಕೃತಜ್ಞತಾಭಕ್ತಿಗಳಿಂದ ಅಭಿವಂದಿಸುತ್ತಿರುವರು.

ಪ್ರಜೆಗಳು ಸರ್ದಾರ್ ಕಾಂತರಾಜ ಅರಸಿನವರನ್ನು ಅತಿಶಯವಾಗಿ ಪ್ರೀತಿಸಿ ಅವರ ಮಂತ್ರಿತ್ವವನ್ನು ಅಪೇಕ್ಷಿಸುತ್ತಿರುವುದಕ್ಕೆ ಅವರ ಸಮೀಪ ರಾಜಬಾಂಧವ್ಯ ಕಾರಣವೊಂದೇ ಮುಖ್ಯವಲ್ಲ; ಅವರಲ್ಲಿರುವ ಯೋಗ್ಯತಾವಿಶೇಷಗಳೂ ಸದ್ಗುಣಾವಳಿಗಳೂ ಕೂಡ ಕಾರಣಗಳಾಗಿರುತ್ತವೆ. ಇವರು, ಕೈ|| ಚಾಮರಾಜೇಂದ್ರ ಒಡೆಯರವರ ಪಟ್ಟಮಹಿಷಿಯರೂ ಈಗಣ ನಮ್ಮ ಮಹಾಮಾತೃಶ್ರೀಯವರೂ ಆದ ವಾಣೀವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿಯವರ ಸಹೋದರರೂ, ನಮ್ಮ ಮಹಾಪ್ರಭುಗಳ ಜ್ಯೇಷ್ಠ ಸಹೋದರಿಯರಾದ ರಾಜಕುಮಾರಿ ಶ್ರೀ ಜಯಲಕ್ಷ್ಮಣ್ಣಿಯವರ ಭರ್ತೃಗಳೂ ಆಗಿರುವರೆಂಬುದನ್ನು ಸರ್ವರೂ ಬಲ್ಲರಷ್ಟೆ. ಇವರ ಪಿತೃಗಳಾದ ಕಳಲೆ ನರಸೇಅರಸಿನವರು ಕೈ|| ಮುಮ್ಮಡಿ ಕೃಷ್ಣರಾಜೊಡೆಯರವರ ಕಾಲದಲ್ಲಿ ಸ್ವಲ್ಪದಿನ ಮೈಸೂರು ದಿವಾನಗಿರಿಯನ್ನು ಮಾಡಿದ್ದರೆಂಬ ಕೇಳಿಕೆಯೂ ಉಂಟು. ಹೀಗೆ ಮಂತ್ರಿತ್ವವನ್ನು ಕೂಡ ಮಾಡಿದ ರಾಜಬಂಧುವರ್ಗದ ಉತ್ತಮವಂಶದಲ್ಲಿ ಜನಿಸಿದ ಇವರು ವಂಶೀಯಘನತೆಯ ಜತೆಗೆ ವಿದ್ಯಾಸಂಪತ್ತಿಯನ್ನು ಕೂಡ ಚೆನ್ನಾಗಿ ಸಂಪಾದಿಸಿಕೊಂಡಿರುವರು. ೧೮೭೦ನೆ ವರ್ಷದ ಸೆಪ್ಟೆಂಬರ್ ತಾ|| ೨೦ ರಲ್ಲಿ ಜನಿಸಿದ ಇವರು ತಮ್ಮ ಸಣ್ಣವಯಸ್ಸಿನಲ್ಲೇ ಪಿತೃವಿಯೋಗವನ್ನು ಪಡೆದರೂ, ಜನನಿಯವರು ಕೊಡಿಸಿದ ಸಚ್ಛಿಕ್ಷಣಪ್ರಭಾವದಿಂದ ಮೈಸೂರು ರಾಯಲ್ ಸ್ಕೂಲಿನಲ್ಲಿ ಬಾಲವಿದ್ಯೆಯನ್ನಭ್ಯಸಿಸಿ, ಬಳಿಕ ಮಹಾರಾಜರವರ ಆಂಗ್ಲ ಕಲಾಶಾಲೆಯಲ್ಲಿ ಓದಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನಿತ್ತು, ತಮ್ಮ ೨೦ನೆ ವಯಸ್ಸಿನಲ್ಲಿ ಎಂದರೆ ೧೮೯೦ ನೆ ವರ್ಷದಲ್ಲಿ ಎಫ್.ಎ. ಪರೀಕ್ಷೆಯಲ್ಲುತ್ತೀರ್ಣರಾಗಿ, ತಮ್ಮ ವಿದ್ಯಾಪ್ರೇಮ, ಬುದ್ಧಿಕೌಶಲ್ಯಾದಿಗಳಿಂದ ಶ್ರೀಮಚ್ಚಾಮರಾಜೊಡೆಯರವರ ವಿಶೇಷಾಭಿಮಾನಗಳಿಗೆ ಪಾತ್ರರಾಗಿ, ಅವರಪ್ಪಣೆಯ ಮೇರೆಗೆ ಮದ್ರಾಸಿಗೆ ಹೋಗಿ ಅಲ್ಲಿಯ ಕ್ರಿಶ್ಚಿಯನ್ ಕಲಾಶಾಲೆಯಲ್ಲಿ ಬಿ.ಎ. ಪರೀಕ್ಷೆಗೆ ಓದಿ ೧೮೯೩ ನೆಯ ವರ್ಷದಲ್ಲಿ ಆಂಗ್ಲಭಾಷೆಯೊಳಗೂ ಚರಿತ್ರ ಅರ್ಥಶಾಸ್ತ್ರಗಳೊಳಗೂ ಅತ್ಯುತ್ತಮ ತರಗತಿಯಲ್ಲಿ ಉತ್ತೀರ್ಣರಾಗಿ ಬಂದರು. ಮೈಸೂರು ರಾಜವಂಶೀಯರಲ್ಲೆಲ್ಲಾ ಇವರೇ ಮೊದಲನೆಯ ಗ್ರ್ಯಾಜುಯೇಟರಾದುದರಿಂದ, ಶ್ರೀಮನ್ಮಹಾರಾಜರವರಿಗೂ ಅವರ ಬಂಧುವರ್ಗದವರಿಗೂ ಅತಿಶಯ ಸಂತೋಷವುಂಟಾಯಿತು. ಮರುವರ್ಷವೇ ಇವರನ್ನು ರಾಜಕೀಯ ವಿದ್ಯಾಶಿಕ್ಷಣೆಯಲ್ಲನುರಿಸುವುದಕ್ಕಾಗಿ ಬಿ. ತರಗತಿ ಪ್ರೊಬೇಷನರಿ ಅ|| ಕಮಿಷನರ ಪದವಿಗೆ ಶ್ರೀಮಚ್ಚಾಮರಾಜೊಡೆಯರವರು ನಿಯಮಿಸಿದರು. ಬಳಿಕ ಮಹಾರಾಣಿ ರೀಜೆಂಟರ ಬಳಿಯಲ್ಲಿ ಕೆಲಕಾಲ ಅ|| ಪ್ರೈ|| ಸೆಕ್ರೆಟರಿಗಳಾಗಿದ್ದು, ೧೯೦೨ನೆ ವರ್ಷದಿಂದ ಡಿಸ್ಟ್ರಿಕ್ಟ್ ಡಿ|| ಕಮಿಷನರಾಗಿ ೮-೯ ವರ್ಷಗಳ ಕಾಲ ಅತ್ಯಂತ ಸಾಮರ್ಥ್ಯದಿಂದ ಅದನ್ನು ನೆರವೇರಿಸಿ, ೧೯೧೨ನೆ ವರ್ಷದಲ್ಲಿ ಮುದದ್ರವ್ಯಶಾಖೆಯ ಮುಖ್ಯಾಧಿಕಾರಿಗಳಾಗಿ ಮಾಡಲ್ಪಟ್ಟರು. ಎಕ್ಸಿಕ್ಯುಟಿವ್ ಕೌನ್ಸಿಲರಾಗಿದ್ದ ಕೈ|| ದಳವಾಯಿ ದೇವರಾಜ ಅರಸಿನವರು ಸ್ವರ್ಗವಾಸಿಗಳಾದ ಕೂಡಲೇ ೧೯೧೩ನೆ ವರ್ಷದಲ್ಲಿ ಇವರು ಅವರ ಸ್ಥಾನದಲ್ಲಿ ೨ ನೆ ಕೌನ್ಸಿಲರಾಗಿ ನಿಯುಕ್ತರಾದರು. ಮ|| ಹೆಚ್. ವಿ. ನಂಜುಂಡಯ್ಯನವರು ಉದ್ಯೋಗನಿವೃತ್ತರಾದ ಬಳಿಕ ಇವರು ೧ನೆ ಕೌನ್ಸಿಲರಾಗಿ ಕಳೆದ ೬ ತಿಂಗಳವರೆಗೂ ಅದೇ ಪದವಿಯಲ್ಲಿದ್ದು, ಸರ್ ವಿಶ್ವೇಶ್ವರಯ್ಯನವರು ದಿವಾನಗಿರಿಯಿಂದ ೬ ತಿಂಗಳ ವಿಶ್ರಾಂತಿಯನ್ನು ಪಡೆದುಕೊಂಡಾಗ, ಇವರು ಆ ಪದವಿಗೆ ಆಕ್ಟಿಂಗಾಗಿ ನಿಯಮಿಸಲ್ಪಟ್ಟರು. ಆದರೂ ದೇಹಾನಾರೋಗ್ಯ ನಿಮಿತ್ತದಿಂದ ಅದನ್ನನುಭವಿಸಲು ಅವಕಾಶವಾಗಲಿಲ್ಲ. ಕಳೆದ ಜೂನ್ ತಾ|| ೧೦ ರಲ್ಲಿ ಸರ್ ವಿಶ್ವೇಶ್ವರಯ್ಯನವರು ಮಂತ್ರಿಪದವಿಯಿಂದ ನಿವೃತ್ತರಾದಕಾರಣ ಇವರ ಯೋಗ್ಯತಾವಿಶೇಷಗಳ ಮೇಲೆ ಒರೆವಸೆಯಿಟ್ಟು ನಮ್ಮ ಶ್ರೀಮನ್ಮಹಾರಾಜರವರು ಇವರನ್ನು ಮಂತ್ರಿಪದವಿಗೆ ನಿಯಮಿಸಿದರು. ಆದರೂ ಇನ್ನು ಸ್ವಲ್ಪಕಾಲ ಇವರಿಗೆ ದೇಹಾರೋಗ್ಯಾರ್ಥವಾಗಿ ವಿಶ್ರಾಂತಿ ಬೇಕಾಗಿದ್ದುದರಿಂದ ಇದುವರೆಗೆ ಮ|| ಬಾನರ್ಜಿಯವರು ಆಕ್ಟಿಂಗ್ ದಿವಾನರಾಗಿ ನಿಯಮಿಸಲ್ಪಟ್ಟಿದ್ದರು. ಮ|| ಅರಸಿನವರಿಗೆ ಸಂಪೂರ್ಣಾರೋಗ್ಯವು ಪ್ರಾಪ್ತವಾಗಿರುವುದರಿಂದ ನಾಳೆದಿನ ಮಂತ್ರಿಪದವಿಯನ್ನು ವಹಿಸುವವರಾಗಿದ್ದಾರೆ.

ಕೈ|| ಚಾಮರಾಜೊಡೆಯರವರು ಮ|| ಅರಸಿನವರ ವಿದ್ಯಾವೈದುಷ್ಯವನ್ನು ನೋಡಿ ಸಂತೋಷಪಟ್ಟರೇ ವಿನಾ, ಇವರ ಕಾರ್ಯನಿರ್ವಾಹಕಶಕ್ತಿಯನ್ನು ನೋಡಿ ಆನಂದಿಸುವಷ್ಟುಕಾಲ ಅವರು ಜೀವಿಸಿರಲಿಲ್ಲ. ಈಗ ನಮ್ಮನ್ನಾಳುತ್ತಿರುವ ಶ್ರೀಮನ್ಮಹಾರಾಜರವರಾದರೂ ಇವರ ಉದ್ಯೋಗನಿರ್ವಾಹ ವೈಚಕ್ಷಣ್ಯವನ್ನು ಸ್ವತಃ ಅರಿತು ಸಂತೃಪ್ತರಾದುದರಿಂದಲೇ ಇವರಿಗೆ "ರಾಜಸೇವಾಧುರೀಣ" ಎಂಬ ಪ್ರಶಸ್ತಿಯನ್ನು ಅನುಗ್ರಹಿಸಿ, ಉನ್ನತಾಧಿಕಾರಗಳಿಗೆ ಏರಿಸಿ, ಕಡೆಗೆ ಅತ್ಯುಚ್ಚತರವಾದ ಮಂತ್ರಿಪದವಿಯನ್ನೂ ದಯಪಾಲಿಸಿದರು. ನಮ್ಮ ಸಾರ್ವಭೌಮ ಸರ್ಕಾರದವರು ಸಹ ಮ|| ಅರಸಿನವರ ಯೋಗ್ಯತಾವಿಶೇಷಗಳನ್ನು ಪುರಸ್ಕರಿಸಿ ಸಿ. ಎಸ್. ಐ. ಎಂಬ ಉತ್ಕೃಷ್ಟವಾದ ಪ್ರಶಸ್ತಿಯನ್ನಿತ್ತು ಸನ್ಮಾನಿಸಿರುವರು. ಮ|| ಅರಸಿನವರು ತಮ್ಮ ವಂಶದ ಉನ್ನತಿಗೆ ಸಹಜವಾದ ಗುರುದೈವಭಕ್ತಿ ಸದಾಚಾರಶ್ರದ್ಧೆ, ಪ್ರಾಣಿದಯೆ, ಪ್ರಜಾವಾತ್ಸಲ್ಯ, ಸತ್ಯಸಂಧತೆ ಮೊದಲಾದ ಗುಣಗಳಿಂದ ವಿಖ್ಯಾತರಾಗಿರುವರು. ವಿದ್ಯಾಧಿಕ್ಯಕ್ಕೆ ತಕ್ಕ ನಯವಿನಯಾದಿ ಸದ್ಗುಣಗಳಿಂದ ಸಂಪೂರ್ಣವಾಗಿ ಅಲಂಕೃತರಾಗಿರುವರು. ಇದುವರೆಗೆ ಇವರು ನಿರ್ವಾಹಮಾಡಿದ ಅಧಿಕಾರಗಳಲ್ಲೆಲ್ಲಾ ದೀನದಯೆಯನ್ನೂ ನ್ಯಾಯಪಕ್ಷವನ್ನೂ ಸುವಿಚಾರಶೀಲತೆಯನ್ನೂ ನಿಸ್ಪೃಹತೆಯನ್ನೂ ಚೆನ್ನಾಗಿ ವ್ಯಕ್ತಪಡಿಸಿರುವರು. ರಾಜಸೇವಾಧುರೀಣತೆಯ ಜತೆಗೆ ಲೋಕಸೇವಾಪರತೆಯೂ ಕೂಡ ಇವರಿಗೆ ಅಚ್ಚುಮೆಚ್ಚಾಗಿರುವುದು. ಹೆಚ್ಚುಕಾಲ ಸರ್ಕಾರದ ಕೆಲಸವನ್ನು ಮಾಡಿ ಅಧಿಕವಾದ ಪೆನ್ಷನ್ನಿನ ಮೂಲಕ ದ್ರವ್ಯಾರ್ಜನೆ ಮಾಡಿಕೊಳ್ಳಬೇಕೆಂಬ ದುರಾಸೆಯಾಗಲೀ ರಾಜಾಸ್ಥಾನದಲ್ಲಿ ಅಲಭ್ಯವಾಗಿರುವ ಗೌರವವನ್ನು ಹೊಸದಾಗಿ ಪಡೆದುಕೊಳ್ಳಬೇಕೆಂಬ ಆವಶ್ಯಕತೆಯಾಗಲೀ ಇವರಿಗೆ ಇರುವುದೆಂದು ಹೇಳಲು ಆಗುವುದಿಲ್ಲ. ಆ ಸಂಪತ್ತಿಗಳೆಲ್ಲಾ ಇವರಿಗೆ ಇದಕ್ಕೆ ಮುಂಚೆಯೇ ಸಿದ್ಧಿಸಿರುತ್ತವೆ. ಮುಖ್ಯವಾಗಿ ಸ್ವದೇಶಸೇವೆಗೆ ತಮ್ಮ ವಿದ್ಯಾಬುದ್ಧಿಗಳನ್ನೂ ಅಧಿಕಾರ ಶಕ್ತಿಗಳನ್ನೂ ವಿನಿಯೋಗಿಸಿ, ಸಕಲ ಪ್ರಜೆಗಳನ್ನೂ ಮುಂದಕ್ಕೆ ತಂದು, ಆ ಮೂಲಕ ಧನ್ಯಜನ್ಮರಾಗಬೇಕೆಂಬ ಯಶಃಕಾಂಕ್ಷೆಯೊಂದೇ ಇವರಿಗೆ ಇರುವುದೆಂದು ಹೇಳಲು ಅಡ್ಡಿಯಿರುವುದಿಲ್ಲ. ಇಂಥ ನಿಸ್ಪೃಹಶಿಖಾಮಣಿಗಳಾದ ರಾಜವಂಶೀಯರು ಮುಖ್ಯ ಮಂತ್ರಿಪದವಿಗೆ ಬಂದುದು ಮೈಸೂರು ರಾಜ್ಯದ ಆಧುನಿಕ ಚರಿತ್ರದಲ್ಲಿ ಗಮನೀಯವಾದ ವಿಷಯವಾಗಿರುತ್ತದೆ. ಇವರು ದೀರ್ಘಕಾಲ ಈ ಮಂತ್ರಿಪದವಿಯನ್ನು ಪ್ರಜಾರಂಜಕವಾಗುವಂತೆ ನಿರ್ವಹಿಸಿ, ನಿರತಿಶಯವಾದ ಕೀರ್ತಿಗೆ ಭಾಜನರಾಗುವಂತೆ ಜಗದೀಶ್ವರನು ಅನುಗ್ರಹಿಸಲೆಂದೂ, ಬ್ರಾಹ್ಮಣರ ಹೊರತು ಇತರರಿಗೆ ದುಷ್ಪ್ರಾಪ್ಯವೆಂದು ಭಾವಿಸುವಂತೆ ಆಗಿದ್ದ ಮುಖ್ಯಮಂತ್ರಿ ಪದವಿಯನ್ನು ಅಲಂಕರಿಸಿ ಇವರು ರಾಜಭಕ್ತರಾದ ಮೈಸೂರು ಪ್ರಜೆಗಳ ಮನಸ್ಸಂತೋಷಪಡಿಸಿದಂತೆಯೇ ಮುಂದಣ ತಮ್ಮ ಉದ್ಯೋಗನಿರ್ವಾಹ ಕೌಶಲ್ಯದಿಂದಲೂ ಸರ್ವಪ್ರಜಾಸಂಮಾನನನ್ನೂ ಪ್ರಭುಚಿತ್ತಾನುಮೋದನವನ್ನೂ ಪಡೆಯುವವರಾಗಲೆಂದೂ, ಇವರ ದಿವಾನಗಿರಿಯು ದೇಶಕ್ಕೆ ಸರ್ವತೋಮುಖವಾದ ಕ್ಷೇಮಲಾಭಗಳನ್ನುಂಟುಮಾಡುವಂತಾಗಲೆಂದೂ ಕೋರಿ ಇವರನ್ನು ಸಂಸ್ಥಾನದ ಮುಖ್ಯಮಂತ್ರಿಪೀಠಕ್ಕೆ ದೇಶೀಯರ ಪರವಾಗಿಯೂ, ಮುಖ್ಯವಾಗಿ ವೀರಶೈವ ಸಮಾಜದ ಪರವಾಗಿಯೂ ನಾವು ಸುಸ್ವಾಗತ ಮಾಡುತ್ತೇವೆ.

ಪ್ರಜಾಪ್ರತಿನಿಧಿಸಭೆಯ ತಿದ್ದುಪಾಟು.

ಪ್ರಜಾಪ್ರತಿನಿಧಿ ಸಭೆಯ ಸಭಿಕರುಗಳನ್ನು ಯಾವ ನಿಬಂಧನೆಯ ಮೇರೆಗೆ ಆರಿಸಬೇಕೆಂಬುದನ್ನು ಕುರಿತು ಸರ್ಕಾರದವರು ಕಳೆದ ಜೂನ್ ತಾ|| ೨೦ ರಲ್ಲಿ ಒಂದು ಪ್ರಕಟನೆಯನ್ನು ಮಾಡಿರುತ್ತಾರೆ. ಈ ಸಭೆಯ ರಚನೆ ಮತ್ತು ನಡವಳಿಕೆಯ ಕ್ರಮ ಇತ್ಯಾದಿ ವಿಷಯಗಳಲ್ಲಿ ಸುಧಾರಣೆಮಾಡಬೇಕೆಂದು ಸಭಿಕರು ಪದೇಪದೇ ಪ್ರಭುತ್ವದವರನ್ನು ಪ್ರಾರ್ಥಿಸುತ್ತಿದ್ದರು. ಅಂಥವರುಗಳ ಅಭಿಪ್ರಾಯವನ್ನೂ ಮತ್ತು ಇದಕ್ಕಾಗಿ ನಿಯುಕ್ತಗಳಾದ ೨ ಸ್ಪೆಷಲ್ ಕಮಿಟಿಗಳ ಅಭಿಪ್ರಾಯಗಳನ್ನೂ ಸಹ ಪ್ರಭುತ್ವದವರು ಪರ್ಯಾಲೋಚಿಸಿ, ಈಗಣ ಅಪ್ಪಣೆಯನ್ನು ಮಾಡಿರುವುದಾಗಿ ತಿಳಿಯಪಡಿಸಿದ್ದಾರೆ. ಇದರಲ್ಲಿ ಕಂಡ ಮುಖ್ಯ ವ್ಯತ್ಯಾಸಗಳೇನೆಂದರೆ—ಈಗಿರತಕ್ಕ ಪ್ರತಿನಿಧಿಗಳ ಸಂಖ್ಯೆಯನ್ನು ಕಡಿಮೆಮಾಡಿಲ್ಲ. ತಾಲ್ಲೂಕುಗಳಿಂದ ಬರತಕ್ಕ ಪ್ರತಿನಿಧಿಗಳ ಸಂಖ್ಯೆಯನ್ನು ನಾಲ್ಕು ವಿಧವಾಗಿ ವಿಂಗಡಿಸಿ, ತಾ||ಗಳಿಂದ ಬರತಕ್ಕ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಿ, ಮ್ಯುನಿಸಿಪಾಲಿಟಿಗಳಿಂದ ಬರುತ್ತಿದ್ದ ಪ್ರತಿನಿಧಿಗಳ ಸಂಖ್ಯೆಯನ್ನು ಕಡಿಮೆಮಾಡಿದ್ದಾರೆ. ಹೇಗೆಂದರೆ—ಪ್ರಜಾಸಂಖ್ಯೆ, ಉತ್ಪತ್ತಿಯ ಪರಿಮಾಣ, ವಿಸ್ತೀರ್ಣ ಇವುಗಳ ವ್ಯತ್ಯಾಸಗಳನ್ನನುಸರಿಸಿ, ತಾಲ್ಲೂಕುಗಳನ್ನು ೧-೨-೩-೪ ತರಗತಿಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಮೊದಲನೆ ತರಗತಿಗೆ ಬೆಂಗಳೂರು, ಬೌರಿಂಗ್‌ಪೇಟೆ, ಕೋಲಾರ, ತುಮಕೂರು, ಮೈಸೂರು, ಹುಣಸೂರು, ಶ್ರೀರಂಗಪಟ್ಟಣ, ಮಂಡ್ಯ, ಹಾಸನ, ಮಂಜರಾಬಾದು, ಚೆನ್ನರಾಯಪಟ್ಣ, ತೀರ್ಥಹಳ್ಳಿ, ಶಿವಮೊಗ್ಗ, ಸಾಗರ, ಸೊರಬ, ಚಿಕ್ಕಮಗಳೂರು, ಕಡೂರು, ಕೊಪ್ಪ—ಈ ೧೮ ತಾಲ್ಲೂಕುಗಳನ್ನು ಸೇರಿಸಿ, ಇವುಗಳಲ್ಲಿ ಪ್ರತಿಯೊಂದೂ ಮೂರು ಮೂರು ಮಂದಿಗಳನ್ನು ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸಬಹುದೆಂದೂ, ೨ನೆ ತರಗತಿಗೆ ದೊಡ್ಡಬಳ್ಳಾಪುರ, ಹೊಸಕೋಟೆ, ಕಾನಕಾನಹಳ್ಳಿ, ಮಾಗಡಿ, ಮುಳಬಾಗಲು, ಶ್ರೀನಿವಾಸಪುರ, ಗೌರಿಬಿದನೂರು, ಸಿದ್ಲಘಟ್ಟ, ಕುಣಿಗಲು, ಮದ್ದಗಿರಿ, ಸೀರ್ಯ, ಗುಬ್ಬಿ, ತಿಪಟೂರು, ಎಡತೊರೆ, ಚಾಮರಾಜನಗರ, ನಂಜನಗೂಡು, ಬೇಲೂರು, ಅರಸೀಕೆರೆ, ಶಿಕಾರಿಪುರ, ಚೆನ್ನಗಿರಿ, ಮೂಡಿಗೆರೆ, ತರೀಕೆರೆ, ಹಿರಿಯೂರು, ದಾವಣಗೆರೆ, ಚಳ್ಳಕೆರೆ, ಚಿತ್ರದುರ್ಗ—ಈ ೨೬ ತಾಲ್ಲೂಕುಗಳನ್ನು ಸೇರಿಸಿ, ಇವುಗಳಲ್ಲಿ ಪ್ರತಿಯೊಂದೂ ಇಬ್ಬಿಬ್ಬರು ಪ್ರತಿನಿಧಿಗಳಂತೆ ಆರಿಸಿ ಕಳುಹಿಸಬಹುದೆಂದೂ, ೩ನೆ ತರಗತಿಗೆ—ನೆಲಮಂಗಲ, ದೇವನಹಳ್ಳಿ, ಆನೆಕಲ್ಲು, ಚಿಂತಾಮಣಿ, ಮಾಲೂರು, ಚೆನ್ನಪಟ್ಣ, ಚಿಕ್ಕಬಳ್ಳಾಪುರ, ಬಾಗೆಪಲ್ಲಿ, ಪಾವಗಡ, ಚಿಕ್ಕನಾಯಕನಹಳ್ಳಿ, ಹೆಗ್ಗಡದೇವನಕೋಟೆ, ಮಳವಳ್ಳಿ, ನಾಗಮಂಗಲ, ಕೃಷ್ಣರಾಜಪೇಟೆ, ಗುಂಡ್ಲುಪೇಟೆ, ತಿ|| ನರಸೀಪುರ, ಅರಕಲಗೂಡು, ಹೊಳೆನರಸೀಪುರ, ಹೊನ್ನಾಳಿ, ನಗರ, ಹೊಳಲಕೆರೆ, ಹೊಸದುರ್ಗ, ಜಗಳೂರು, ಮೊಳಕಾಲ್ಮುರು—ಈ ೨೪ ತಾಲ್ಲೂಕುಗಳನ್ನು ಸೇರಿಸಿ, ಇವುಗಳೂ ಸಹ ಪ್ರತಿಯೊಂದೂ ಇಬ್ಬಿಬ್ಬರಂತೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬಹುದೆಂದೂ, ಸಬ್ ತಾಲ್ಲೂಕುಗಳಾಗಿರುವ ಕ್ಲೋಸ್‌ಪೇಟೆ, ಗುಡಿಬಂಡೆ, ಹಿರೋಡೆ, ಆಲೂರು, ಕೊರಟಿಗೆರೆ, ತುರುವೇಕೆರೆ, ನರಸಿಂಹರಾಜಪುರ, ಕುಂಸಿ, ಹರಿಹರ—ಈ ೯ ರಲ್ಲಿ ಪ್ರತಿಯೊಂದೂ ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸಿ ಕಳುಹಿಸಬಹುದೆಂದೂ, ಈ ಸಬ್ ತಾಲ್ಲೂಕುಗಳು ತಾಲ್ಲೂಕುಗಳಾಗಿಯೇ ಮಾಡಲ್ಪಡುವುದಾದರೆ ಅವಕ್ಕೂ ತಲೆಗೆ ಇಬ್ಬಿಬ್ಬರಂತೆ ಪ್ರತಿನಿಧಿಗಳು ಗೊತ್ತಾಗತಕ್ಕದ್ದೆಂದೂ ವಿಧಿಸಿರುತ್ತಾರೆ. ಈ ಪ್ರಕಾರ ತಾಲ್ಲೂಕು ಪ್ರತಿನಿಧಿಗಳ ಒಟ್ಟು ಸಂಖ್ಯೆಯು ೧೬೩ ಅಥವಾ ೧೭೦ ಆಗಿರಬೇಕು.

ಇನ್ನು ಮ್ಯುನಿಸಿಪಾಲಿಟಿಗಳಿಂದ ಆರಿಸಲ್ಪಡಬೇಕಾದ ಪ್ರತಿನಿಧಿಗಳ ಸಂಖ್ಯೆಯು ಎಷ್ಟೆಂದರೆ—ಹೊಸ ಮ್ಯುನಿಸಿಪಲ್ ವಿಧಿಯಪ್ರಕಾರ ಸಂಸ್ಥಾನದ ಸಿಟಿ, ಟೌನ್, ಮೈನರ್ ಮ್ಯುನಿಸಿಪಾಲಿಟಿಗಳೆಂಬ ಮೂರು ತರಗತಿಗಳ ವಿಭಜನೆಯನ್ನನುಸರಿಸಿ ಪ್ರತಿನಿಧಿ ಸಂಖ್ಯೆಯನ್ನು ಗೊತ್ತುಮಾಡಿದ್ದಾರೆ. ಹೇಗೆಂದರೆ—ಬೆಂಗಳೂರು, ಮೈಸೂರು ಇವೆರಡೂ ಸಿಟಿ ಮ್ಯುನಿಸಿಪಾಲಿಟಿಗಳಾಗಿರುವುದರಿಂದ ಇವು ಪ್ರತಿಯೊಂದೂ ನಾಲ್ಕು ನಾಲ್ಕು ಮಂದಿ ಪ್ರತಿನಿಧಿಗಳನ್ನೂ, ಶಿವಮೊಗ್ಗ, ತುಮಕೂರು, ದಾವಣಗೆರೆ, ಕೋಲಾರ, ಚೆನ್ನಪಟ್ಟಣ—ಇವೈದೂ ಪ್ರಜಾಸಂಖ್ಯೆಯ ಪ್ರಾಮುಖ್ಯವನ್ನು ಪಡೆದಿರುವ ಟೌನ್ ಮ್ಯುನಿಸಿಪಾಲಿಟಿಗಳಾಗಿರುವುದರಿಂದ ಇವು ಪ್ರತಿಯೊಂದೂ ಇಬ್ಬಿಬ್ಬರು ಪ್ರತಿನಿಧಿಗಳನ್ನೂ, ಉಳಿದ ೨೪ ಸಾಮಾನ್ಯ ಟೌನ್ ಮ್ಯುನಿಸಿಪಾಲಿಟಿಗಳು ಪ್ರತಿಯೊಂದೂ ಒಬ್ಬೊಬ್ಬರನ್ನಂತೆಯೂ, ೩೦೦೦ ಕ್ಕೆ ಕಡಿಮೆಯಿಲ್ಲದ ಪ್ರಜಾಸಂಖ್ಯೆಯುಳ್ಳ ೨೯ ಮ್ಯುನಿಸಿಪಾಲಿಟಿಗಳು ಪ್ರತಿಯೊಂದೂ ಒಬ್ಬೊಬ್ಬರನ್ನಂತೆಯೂ ಪ್ರತಿನಿಧಿಗಳನ್ನು ಆರಿಸಿ ಒಟ್ಟು—೮+೧೦+೨೪+೨೯=೭೧ ಮಂದಿಗಳನ್ನು ಕಳುಹಿಸಿಕೊಡಬೇಕು. ಮೊದಲು ಈ ಮ್ಯುನಿಸಿಪಲ್ ಪ್ರತಿನಿಧಿಗಳ ಸಂಖ್ಯೆಯು ಒಟ್ಟು ೧೧೫ ಆಗಿರುತ್ತಿದ್ದಿತು.

ಇನ್ನು ಡಿಸ್ಟ್ರಿಕ್ಟ್ ಬೋರ್ಡು ಪ್ರತಿನಿಧಿಗಳ ಸಂಖ್ಯೆಯಾದರೋ ಮೊದಲಿದ್ದಂತೆಯೇ ಒಂದೊಂದಕ್ಕೆ ಇಬ್ಬಿಬ್ಬರಾಗಿ ಒಟ್ಟು ೧೬ ಮಂದಿಗಳು ಆರಿಸಲ್ಪಟ್ಟು ಬರಬೇಕು.

ಇನ್ನು ನಾನಾ ಉದ್ಯೋಗಗಳ ಮತ್ತು ವರ್ಗಗಳ ಪ್ರಾತಿನಿಧ್ಯವನ್ನು ಸಭೆಯಲ್ಲಿ ಹೆಚ್ಚಿಸಬೇಕೆಂಬುದನ್ನು ಸರ್ಕಾರದವರು ಹಿತವೆಂದು ಒಪ್ಪಿಕೊಂಡಿದ್ದರೂ ಹಾಗೆ ವಿಂಗಡಿಸಿ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದು ಅಸಾಧ್ಯವೆಂದು ತಾವೇ ೨ ಮಾತಿನಲ್ಲಿ ಸಿದ್ಧಾಂತಮಾಡಿಬಿಟ್ಟು, ಪಂಗಡಗಳಿಗೆ ಸಂಬಂಧಪಟ್ಟ ಸಂಘಗಳೆಂದು ಹೇಳಿ ಮಹಮ್ಮದೀಯರಿಗೆ ೬, ಒಕ್ಕಲಿಗರಿಗೆ ೧, ಲಿಂಗಾಯತರಿಗೆ ೧, ವೈಶ್ಯರಿಗೆ ೧, ಯೂರೋಪಿಯನ್ ಮತ್ತು ಆಂಗ್ಲೋ ಇಂಡಿಯನ್ನರಿಗೆ ೧—ಹೀಗೆ ಒಟ್ಟು ೧೦ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಅಧಿಕಾರಗಳನ್ನು ಅನಷ್ಟು ಜನ ಸಂಘಗಳಿಗೂ ಕೊಟ್ಟಿದ್ದಾರೆ. ಮತ್ತು ಕಸಬುದಾರಿ ಸಂಘಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟಿರುತ್ತೇವೆಂದು ತೋರಿಸುವುದಕ್ಕಾಗಿ ವಕೀಲರ ಸಂಘಗಳಿಗೆ ೨, ಪ್ಲಾಂಟರು (ತೋಟಿಗಾರರ ಸಂಘ) ಗಳಿಗೆ ೨, ಗಣಿಯ ಬೋರ್ಡಿಗೆ ೧, ಉಳಿದ ಕೈಗಾರಿಕೆ, ವ್ಯಾಪಾರ, ವ್ಯವಸಾಯದ ಸಂಘಗಳಿಗೆ ೩, ಒಟ್ಟು ೧೦, ಅಥವಾ ಇನ್ನೇನಾದರೂ ಹೆಚ್ಚಿಗೆಬೇಕಾಗಿದ್ದರೆ ಮತ್ತೆರಡು. ಅಂತು ಅಂಗೀಕೃತ ಸಂಘಗಳೆಲ್ಲಾ ೨೨ ಮಂದಿ ಸಭಿಕರನ್ನು ಕಳುಹಿಸಬೇಕು. ಇವಲ್ಲದೆ ಮೈಸೂರು ವಿಶ್ವವಿದ್ಯಾಲಯಸಂಘ ಪ್ರತಿನಿಧಿಗಳಾಗಿ ೨, ಮೈಸೂರು ವಾಣಿಜ್ಯಸಂಘ ಪ್ರತಿನಿಧಿಗಳಾಗಿ ೨, ಅಂತೂ ಒಟ್ಟು ಈ ಪ್ರತ್ಯೇಕ ಸಂಘಗಳೆಲ್ಲಾ ೨೬ ಮಂದಿ ಪ್ರತಿನಿಧಿಗಳನ್ನು ಆರಿಸಿ ಕಳುಹಿಸತಕ್ಕದೆಂದು ವಿಧಿಸಿರುತ್ತಾರೆ.

ಮೇಲೆಕಂಡ ವಿವರಣೆಯ ಪ್ರಕಾರ ಏರ್ಪಡುವ ಪ್ರತಿನಿಧಿಗಳ ಒಟ್ಟು ಸಂಖ್ಯೆಯು ೨೭೮ ಆಗುವುದು. ಇನ್ನುಮುಂದೆ ನಡೆಯಬೇಕಾದ ಚುನಾವಣೆಯೆಲ್ಲಾ ಹೀಗೆಯೇ ನಡೆಯಬೇಕಾಗಿದೆ.

ತಾಲ್ಲೂಕು ಬೋರ್ಡುಗಳು, ಡಿಸ್ಟ್ರಿಕ್ಟು ಬೋರ್ಡುಗಳು, ಮ್ಯುನಿಸಿಪಾಲಿಟಿಗಳು—ಇವುಗಳಿಗೆಲ್ಲಾ ಈಗ ವಿಧಿಸಿರುವ ಪರಮಾವಧಿಯ ಸಂಖ್ಯೆಯೇ ಬಹಳ ಕಡಿಮೆಯಾಗಿರುವುದರಿಂದ ಪ್ರಜಾಪ್ರತಿನಿಧಿ ಸಭಾಸಭಿಕರ ಸಂಖ್ಯಾಪರಿಮಿತಿಯನ್ನು ಇನ್ನೂ ತಗ್ಗಿಸಲು ಸಾಧ್ಯವಲ್ಲವೆಂದು ಸರ್ಕಾರದವರು ಈ ಅಪ್ಪಣೆಯಲ್ಲಿ ಅಭಿಪ್ರಾಯಪಟ್ಟಿರುವುದು ಯುಕ್ತವಾಗಿರುತ್ತದೆ. ಆದರಂತೆಯೇ ಮ್ಯುನಿಸಿಪಾಲಿಟಿಗಳ ಪ್ರತಿನಿಧಿಗಳ ಸಂಖ್ಯೆಯನ್ನು ತಗ್ಗಿಸಿದುದರ ಕಾರಣವಾದರೂ ಒಪ್ಪತಕ್ಕದಾಗಿದೆ. ಆದರೆ ವೃತ್ತ್ಯಂತರದ ಜನರುಗಳ ಪ್ರಾತಿನಿಧ್ಯವು ತಕ್ಕಷ್ಟು ಇಲ್ಲದಿರುವಂತೆ ಮಾಡಿರುವ ಭಾಗವು ಮಾತ್ರ ಸಮಂಜಸವಾಗಿಲ್ಲ. ವ್ಯವಸಾಯಾದಿ ಮುಖ್ಯೋದ್ಯೋಗಿಜನರುಗಳ ಸಂಖ್ಯೆಯು ದೇಶದಲ್ಲಿ ಅತ್ಯಧಿಕವಾಗಿರುವಾಗ ಅವರುಗಳಿಗೆ ತಕ್ಕಷ್ಟು ಪ್ರಾತಿನಿಧ್ಯವು ಕೊಡಲ್ಪಡಲಿಲ್ಲ. ತಾಲ್ಲೂಕು ಬೋರ್ಡು, ಮ್ಯುನಿಸಿಪಾಲಿಟಿ ಮೊದಲಾದುವುಗಳ ವಿಭಜನೆಯ ಸಂದರ್ಭದಲ್ಲೆಲ್ಲಾ ಸರ್ಕಾರದವರು ಪ್ರಜಾಸಂಖ್ಯೆಗೆ ಗಮನವನ್ನು ಕೊಟ್ಟು, ಈ ಸಂಘಪ್ರಾತಿನಿಧ್ಯದಲ್ಲಿ ಮಾತ್ರ ಅದನ್ನು ಲಕ್ಷಿಸದೆಯೇ ಹೋಗಿದ್ದಾರೆ. ಅದರಲ್ಲೂ ಮತ್ತೊಂದು ದೊಡ್ಡ ಲೋಪವನ್ನು ಮಾಡಿದ್ದಾರೆ. ಮಹಮ್ಮದೀಯರಿಗೆ ೬ ಸ್ಥಳಗಳನ್ನು ಕೊಟ್ಟು ಒಕ್ಕಲಿಗರು ಮೊದಲಾದ ೪ ಸಂಘಗಳಿಗೂ ನಾಲ್ಕೇ ಸ್ಥಾನವನ್ನು ಕೊಟ್ಟಿದ್ದಾರೆ. ಇದರಲ್ಲಿ ಔಚಿತ್ಯವು ಹೇಗೆ ತೋರಿತೋ ಕಾಣೆವು. ಈ ಏರ್ಪಾಟಿಗೆ ಜನಸಂಖ್ಯಾಪರಿಮಾಣವೇ ಆಧಾರವೆಂದು ಹೇಳಲಾಗುವುದಿಲ್ಲ. ಹಾಗಿದ್ದರೆ ಒಕ್ಕಲಿಗರಿಗೂ ಲಿಂಗಾಯತರಿಗೂ ಹೆಚ್ಚು ಭಾಗಗಳು ಬರಬೇಕಾಗಿತ್ತು. ವೈಶ್ಯರನ್ನೂ ಯೂರೋಪಿಯನ್ನರನ್ನೂ ಅವರ ಸಮಾನತೆಯಲ್ಲಿ ಸೇರಿಸುವುದಕ್ಕೆ ಅವಕಾಶವೇ ಆಗುತ್ತಿರಲಿಲ್ಲ. ಆಯಾಜನವರ್ಗಗಳ ಅಂಗೀಕೃತಸಂಘ ಸಂಖ್ಯೆಯನ್ನನುಸರಿಸಿ ಈಗಣ ವಿತಿಯನ್ನೇರ್ಪಡಿಸಿರುವುದಾದರೆ, "ಒಂದೇಬಗೆಯ ಪ್ರಯೋಜನಾಂಶವುಳ್ಳ ಸಂಘಗಳನ್ನು ಒಟ್ಟುಗೂಡಿಸುವ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ" ಎಂಬುದಾಗಿ ಇದೇ ಅಪ್ಪಣೆಯಲ್ಲಿ ಸರ್ಕಾರದವರು ಹೇಳಿರುವ ಮಾತಿಗೆ ಅಂತರಾರ್ಥವೇನು? ಮಹಮ್ಮದೀಯರ ೬ ಸಂಘಗಳಿಗೂ ಪ್ರತ್ಯಪ್ರತ್ಯೇಕವಾಗಿ ೬ ಮಂದಿ ಸಭಿಕರ ಆರಿಸುವಿಕೆಗೆ ಅವಕಾಶಕೊಟ್ಟಿರುವಾಗ, ವಿಸ್ತಾರ ಜನಸಂಖ್ಯೆಯುಳ್ಳ ಒಕ್ಕಲಿಗರು ಮೊದಲಾದವರು ಕೂಡ ಬೇರೆಬೇರೆ ಕಡೆ ಬೇರೆಬೇರೆ ಸಂಘಗಳನ್ನಿಟ್ಟುಕೊಂಡರೆ ಅವಕ್ಕೆಲ್ಲಾ ಪ್ರತ್ಯೇಕ ಪ್ರತಿನಿಧಿಗಳನ್ನಾರಿಸಿ ಕಳುಹಿಸುವ ಅಧಿಕಾರವನ್ನು ಕೊಟ್ಟೇತೀರಬೇಕಲ್ಲವೆ? ಈ ವಿಷಯವನ್ನು ಬೇರೆಬೇರೆ ಜನವರ್ಗಗಳವರೆಲ್ಲಾ ಗಮನಿಸಬೇಕು. ವೀರಶೈವರಲ್ಲೂ ನಗರ ಡಿವಿಜನ್, ಮೊದಲಾದ ಕಡೆಗಳಲ್ಲಿ ಬೇರೆಬೇರೆ ರಿಜಿಸ್ಟರಾದ ಸಂಘಗಳನ್ನೇರ್ಪಡಿಸಿಕೊಂಡಿರುವುದರಿಂದ ಅವರುಗಳೂ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಪ್ರಯತ್ನಿಸುವವರಾಗಬೇಕು. ಅಲ್ಲದೆ ತಂತಮ್ಮ ಜನಗಳ ವಿದ್ಯಾಭಿವೃದ್ಧಿಗಾಗಿ ಜೈನರು, ಪಂಚಾಳರು, ದೇವಾಂಗದವರು, ಕುಂಚಟಿಗರು, ಕುರುಬರು, ಭವಸಾರಕ್ಷತ್ರಿಯರು ಮೊದಲಾದ ಜನವರ್ಗಗಳವರೆಲ್ಲಾ ಒಂದೊಂದು ಸಂಘಗಳನ್ನೇರ್ಪಡಿಸಿಕೊಂಡು ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿ, ತಂತಮಗೆ ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯವಿರುವಂತೆ ಮಾಡಿಕೊಳ್ಳಬೇಕು. ಮತ್ತು ಇಂಥ ಸಂಘಗಳ ಪ್ರಾತಿನಿಧ್ಯತತ್ವವನ್ನು ಅಂಗೀಕರಿಸುವಲ್ಲಿ ಸರ್ಕಾರದವರು ಸಹ ಸ್ವಲ್ಪ ಉದಾರಚಿತ್ತರಾಗಿರಬೇಕು. ಹಿಂದುಳಿದವರನ್ನು ರಾಜಕೀಯಾಂಗದಲ್ಲೂ ಮುಂಬರಿಸುವುದಕ್ಕೆ ಅದೇ ಉಪಾಯವು. ಹೆಚ್ಚು ಬಿಕ್ಕಟ್ಟನ್ನು ಆ ವಿಷಯದಲ್ಲಿ ವಿಧಿಸಿದರೆ ಅವರನ್ನು ಮುಂಬರಿಸುವಲ್ಲಿ ಸರ್ಕಾರಕ್ಕೆ ಉದಾರ ಹೃದಯವಿಲ್ಲವೆಂದು ಭಾವಿಸಲು ಅವಕಾಶವಾಗುವುದು.

ಅದುಕಾರಣ ಅಂಥ ಅಂಗೀಕೃತ ಸಂಘಗಳಿಂದ ಪ್ರತಿನಿಧಿಗಳನ್ನಾರಿಸಿ ಕಳುಹಿಸುವಾಗ್ಗೆ ಸಂಘದ ಸಭಿಕರಲ್ಲಿ ಅರ್ಧಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಜನರು ಹಾಜರಿರಬೇಕೆಂಬ ಈಗಣ ನಿಯಮವನ್ನು ಇನ್ನಷ್ಟು ಸಡಿಲಮಾಡಿಕೊಡಬೇಕು. ಎಂದರೆ ೧೦೦ ಕ್ಕೆ ಕಾಲುಭಾಗಕ್ಕಿಂತ ಕಡಿಮೆಯಾಗಿರಕೂಡದೆಂದು ವಿಧಿಸಿದರೆ ಉಚಿತವಾಗುವುದು. ಉಳಿದ ನಿರ್ಬಂಧಗಳೆಲ್ಲಾ ಇರಬಹುದು.

ಮುಖ್ಯವಾಗಿ ಪ್ರಜಾಪ್ರತಿನಿಧಿ ಸಭೆಯು ಸರ್ವ ಪ್ರಜೆಗಳ ಪ್ರಾತಿನಿಧ್ಯವುಳ್ಳುದಾಗಿರಬೇಕೆಂಬುದೇ ಶ್ರೀಮನ್ಮಹಾರಾಜರ ಮತ್ತೂ ಅವರ ಪ್ರಭುತ್ವದವರ ಉದ್ದೇಶವಾಗಿರುವುದರಿಂದಲೇ ಈ ಸಭೆಯ ರಚನೆ ಮೊದಲಾದುವುಗಳಲ್ಲಿ ಅವಶ್ಯಕಗಳಾದ ಸಂಸ್ಕರಣಗಳನ್ನು ಆಗಾಗ್ಗೆ ಮಾಡಲು ಸರ್ಕಾರದವರು ವ್ಯಗ್ರರಾಗಿರುತ್ತಾರೆ. ಅವರ ಸಂಕಲ್ಪವನ್ನು ಸಾರ್ಥಕಪಡಿಸುವ ಭಾರವು ಪ್ರಜೆಗಳ ಕೈಯಲ್ಲಿದೆ. ಒಂದೇಒಂದು ಜನವರ್ಗದವರೇ ಈ ಸಭೆಯಲ್ಲಿ ಹೆಚ್ಚಾಗಿ ಬರುವಂತೆ ಮಾಡಿದರೆ ಸರ್ಕಾರದವರ ಉದ್ದೇಶವು ನೆರವೇರುವುದಿಲ್ಲ. ಜನಸಂಖ್ಯೆಗೆ ಸರಿಹೋಗುವಂತೆ ಪ್ರತಿಯೊಂದು ವರ್ಗದವರೂ ತಮ್ಮತಮ್ಮ ನಂಬುಗೆಗೆ ಆಸ್ಪದರಾದ ಸ್ವಜನರನ್ನೇ ತಾಲ್ಲೂಕು, ಡಿಸ್ಟ್ರಿಕ್ಟು, ಮ್ಯುನಿಸಿಪಲ್ ಬೋರ್ಡುಗಳಿಗೆಲ್ಲೆಲ್ಲಾ ಪ್ರತಿನಿಧಿಗಳನ್ನಾಗಿ ಆರಿಸಿ ಬರುವಂತೆ ಮಾಡುವುದರಲ್ಲಿ ಸಾಹಸಪಡುವವರಾಗಬೇಕು. ಹಾಗೆ ಮಾಡದೆ ಹೋದರೆ ಹಿಂದಾಳುಗಳು ಕಲ್ಪಾಂತದವರೆಗೂ ಹಿಂದಾಳುಗಳಾಗಿಯೇ ಇರಬೇಕಾಗುವುದು. ಸರ್ಕಾರದವರು ಇತರುಗಳ ಉದ್ಧಾರಕ್ಕಾಗಿ ಮಾಡಿಕೊಡುವ ದಾರಿಯೆಲ್ಲಾ ವ್ಯರ್ಥವಾಗಿ ಹೋಗಿ ಅವರೂ ಪಶ್ಚಾತ್ತಾಪಪಡಬೇಕಾಗುವುದು.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಸುತ್ತಮುತ್ತಣ ಕಡೆಯಲ್ಲೂ ಈಗಣ ಪುನರ್ವಸು ಮಳೆಯು ಸ್ವಲ್ಪಮಟ್ಟಿಗೆ ನಡೆದು ಬೆಳಸಿಗೆ ಅನುಕೂಲವಾಯಿತು.

ಮೈಸೂರು ಡಿಸ್ಟ್ರಿಕ್ಟಿನ ಎಡತೊರೆ ತಾ|| ಕೆಲ ಗ್ರಾಮಗಳಲ್ಲಿ ವಾಂತಿಭೇದಿ ರೋಗವು ವಿರಳವಾಗಿ ಕಾಣಿಸಿಕೊಂಡಿದೆ. ಪ್ಲೇಗೂ ಕೂಡ ತಲೆಯೆತ್ತಿರುವ ವರ್ತಮಾನವಿದೆ.

ರಾಜಸೇವಾಧುರೀಣ ಸರದಾರ್ ಕಾಂತರಾಜ ಅರಸ್, ಬಿ.ಎ., ಸಿ.ಎಸ್.ಐ. ಯವರು ನಾಳೆಯ ದಿವಸ ರಾಜಧಾನಿಯಲ್ಲಿ ದಿವಾನಗಿರಿಯ ಭಾರ್ಜನ್ನು ವಹಿಸಿಕೊಳ್ಳುವವರಾಗಿದ್ದಾರೆ.

ಮ|| ಎ ಆರ್. ಬಾನರ್ಜಿಯವರು ತಾ. ೧೫ ರಿಂದ ಈ ತಿಂಗಳ ಕೊನೆಯವರೆಗೂ ಸ್ಪೆಷಲ್ ಡ್ಯೂಟಿಯಮೇಲಿದ್ದು ಆ ಬಳಿಕ ೨ ತಿಂಗಳಕಾಲ ರಜಾದ ಮೇಲೆ ಹೋಗುವವರಾಗಿದ್ದಾರೆ.

ಬರುವ ಅಕ್ಟೋಬರ್ ತಿಂಗಳವರೆಗೂ ಮ|| ನರಸಿಂಹಶಾಸ್ತ್ರಿಗಳೇ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರಾಗಿರುವಂತೆ ಡಿಸ್ಟ್ರಿಕ್ಟ್ ಡಿ|| ಕಮಿಷನರ್ ಇಪ್ಪದ ಮೇರೆಗೆ ಏರ್ಪಡಿಸಲ್ಪಟ್ಟಿದಾರೆ.

ಈಸಲ ನವರಾತ್ರಿಯ ಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವ ವಸ್ತುಪ್ರದರ್ಶನಕ್ಕೆ ಮೈಸೂರು ಸಂಸ್ಥಾನದಲ್ಲಿ ನಿರ್ಮಿತವಾದ ವಸ್ತುಗಳನ್ನು ಮಾತ್ರವೇ ಸ್ವೀಕರಿಸುವುದಾಗಿ ಪ್ರಕಟವಾಗಿದೆ. ಪ್ರದರ್ಶನವು ಅಕ್ಟೋಬರ್ ೧ ರಲ್ಲಿ ಆರಂಭಿಸಲ್ಪಡುವುದು.

ಪ್ರಜಾಪ್ರತಿನಿಧಿಸಭೆಗೆ ಶ್ರೀರಂಗಪಟ್ಟಣದ ತಾಲ್ಲೂಕಿನಿಂದ ಮ|| ಗಳಾದ ಜವರಯ್ಯರವರು, ಅರಕೆರೆ ಶ್ರೀನಿವಾಸಯ್ಯಂಗಾರ್ಯರು, ಪುರುಷೋತ್ತಮಾನಂದಗಿರಿ ಬಾವಾಜಿಯವರು ಸಹ ಹೆಚ್ಚು ಓಟುಗಳನ್ನು ಪಡೆದು ಮೆಂಬರುಗಳಾಗಿ ಆರಿಸಲ್ಪಟ್ಟಿರುತ್ತಾರೆ.

ಮಿ|| ಟಿ. ಡೆನ್ಹಾಂರವರು ವಿಶ್ವವಿದ್ಯಾಲಯ ಸಂಬಂಧದ ಸ್ಪೆಷಲ್ ಡ್ಯೂಟಿಯಮೇಲೆ ನಿಯಮಿಸಲ್ಪಟ್ಟಿದ್ದಾರೆ. ಸಂಪದಭ್ಯುದಯ ಸಮಾಜದ ವಿದ್ಯಾಶಾಖಾ ಸಂಘದ ಕಾರ್ಯದರ್ಶಿ ಮ|| ವಿ. ಸುಬ್ರಹ್ಮಣ್ಯಯ್ಯರವರು ವಿಶ್ವವಿದ್ಯಾಲಯದ ರಿಜಿಸ್ಟ್ರಾರಾಗಿ ನಿಯಮಿಸಲ್ಪಟ್ಟಿರುವರು.

ಮದ್ರಾಸಾಧಿಪತ್ಯದಲ್ಲಿ ಕೆಲಕಡೆ ಅಂತ್ಯಜರಿಗೆ ಅಮಲ್ದಾರಿ ಮೊದಲಾದ ಸರ್ಕಾರದಧಿಕಾರಗಳು ಕೂಡ ಕೊಡಲ್ಪಟ್ಟವೆ. ಬೊಂಬಾಯಿ ಆಧಿಪತ್ಯದಲ್ಲಿ ಪುಣೆ, ಧಾರ್ವಾಡ ಈ ಪಟ್ಟಣಗಳ ಮ್ಯುನಿಸಿಪಲ್ ಬೋರ್ಡುಗಳಲ್ಲಿ ಅಂತ್ಯಜರೊಬ್ಬೊಬ್ಬರನ್ನು ಕೌನ್ಸಿಲರಾಗಿ ನಾಮಿನೇಟ್ ಮಾಡಿ ಸೇರಿಸಿಕೊಂಡಿದಾರೆ. ನಮ್ಮ ಮೈಸೂರು ಗೌರ್ನಮೆಂಟಿನವರು ಕೂಡ ರಾಜಧಾನಿಯ ಮ್ಯುನಿಸಿಪಾಲಿಟಿಗೆ ಅರ್ಹತೆಯುಳ್ಳ ಅಂತ್ಯಜರೊಬ್ಬರನ್ನು ಕೌನ್ಸಿಲರಾಗಿ ಪರಿಗ್ರಹಿಸಲಾದೀತೆ? ಎಂದು ಬೋರ್ಡಿನವರನ್ನು ಕೇಳಿರುವುದಾಗಿ ವರ್ತಮಾನವಿದೆ.

ರಾಜಧಾನಿಯ ಮಹಾಜನರು ಕಳೆದ ತಾ. ೧೧ ನೆ ಶುಕ್ರವಾರ ಸಾಯಂಕಾಲ ಟೌನ್‌ಹಾಲಿನಲ್ಲಿ ಲೋಕಹಿತೈಷಿ ಹೆಚ್. ನಂಜುಂಡರಾಜ ಅರಸಿನವರ ಅಧ್ಯಕ್ಷತೆಯಿಂದ ಸಭೆಸೇರಿ ಶ್ರೀಮಾನ್ ಸರ್ದಾರ್ ಕಾಂತರಾಜಅರಸಿನವರಿಗೆ ದಿವಾನಗಿರಿಯು ಪ್ರಾಪ್ತವಾದುದಕ್ಕಾಗಿ ತಮ್ಮ ಸಂತೋಷವನ್ನು ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ತಂತ್ರೀವಾರ್ತೆಯಮೂಲಕ ತಿಳಿಯಿಸತಕ್ಕದೆಂದೂ, ಮ|| ಅರಸಿನವರಿಗೆ ಒಂದು ಎಂಟರ್‌ಟೇನ್‌ಮೆಂಟನ್ನು ಕೊಟ್ಟು ತಮ್ಮ ಅಭಿನಂದನವನ್ನು ಅರ್ಪಿಸತಕ್ಕದೆಂದೂ, ಅದಕ್ಕಾಗಿ ಕೆಲವರು ಡೆಪ್ಯುಟೇಷನ್ನಿನ ಮೂಲಕ ಸರ್ದಾರರನ್ನು ಪ್ರಾರ್ಥಿಸಿಕೊಳ್ಳಬೇಕೆಂದೂ ನಿರ್ಧರಿಸಿರುವರು

ಆಂಗ್ಲಮುಖ್ಯಮಂತ್ರಿ ಲಾಯಿಡ್ ಜಾರ್ಜ್‌ರವರು.

ಇವರು ಸಂಧಿಕಾರ್ಯವನ್ನೆಲ್ಲಾ ಮುಗಿಸಿಕೊಂಡು ಪಾರಿಸ್ಸಿನಿಂದ ಲಂಡನ್ ಪಟ್ಟಣಕ್ಕೆ ಹೋಗಿ ಸೇರಿದಾಗ್ಗೆ ಕಳೆದ ವಾರ ಅಲ್ಲಿ ಇವರಿಗೆ ನಡೆದ ಮರ್ಯಾದೆಗಳು ಚಕ್ರವರ್ತಿಗಳಿಗೂ ಕೂಡ ದುರ್ಲಭವೆನಿಸುವಷ್ಟು ಲೋಕೋತ್ತರಗಳಾಗಿದ್ದುವು. ಈ ಮಂತ್ರಿವರ್ಯರು ಆಂಗ್ಲದೇಶದ ಇತರ ಪ್ರತಿನಿಧಿಗಳೊಡನೆ ಕೂಡಿ ಲಂಡನ್ ಪಟ್ಟಣದ ವಿಕ್ಟೋರಿಯಾ ನಿಲ್ದಾಣಕ್ಕೆ ಹೋಗಿ ಇಳಿದಾಗ ಅಲ್ಲಿ ನಮ್ಮ ಚಕ್ರವರ್ತಿಯವರು ಪತ್ನೀಸಮೇತರಾಗಿ ತಮ್ಮ ಯುವರಾಜರು ಇತರ ಮಂತ್ರಿಮಂಡಲದವರು ಮೊದಲಾದವರೊಡನೆ ಕೂಡಿ ಕಾದಿದ್ದು ಇದಿರ್ಗೊಂಡು ಸ್ವಾಗತಿಸಿ ಅಲ್ಲಿಂದ ತಮ್ಮ ಬಕಿಂಗ್‌ಹ್ಯಾಂ ಅರಮನೆಗೆ ಕರೆದುಕೊಂಡು ಹೋಗಿ ಸನ್ಮಾನಿಸಿದರು. ಊರಿನ ಪ್ರಜೆಗಳೆಲ್ಲರೂ ದಾರಿಯುದ್ದಕ್ಕೂ ಕಾದಿದ್ದು ಮಾಡಿದ ಹರ್ಷೋದ್ಘೋಷಗಳು ಅಸಾಧಾರಣವಾಗಿದ್ದುವು. ಡೌನಿಂಗ್‌ಬೀದಿಗೆ ಉತ್ಸವವು ಬಂದಾಗ್ಗೆ ಉಪನ್ಯಾಸ ಮಾಡಬೇಕೆಂದು ಪ್ರಜೆಗಳೆಲ್ಲಾ ಸಂತೋಷದಿಂದ ಬಲಪಡಿಸಲಾಗಿ ಲಾಯಿಡ್ ಜಾರ್ಜ್‌ರವರು ಹರ್ಷನಿರ್ಭರದಿಂದ ಸಣ್ಣದೊಂದುಪನ್ಯಾಸಮಾಡಿ, ಪ್ರಜೆಗಳಾದ ನೀವೆಲ್ಲರೂ ಮಾಡಿದ ಸ್ವಾರ್ಥತ್ಯಾಗಗಳಿಂದ ಮಿತ್ರಮಂಡಲಿಗೆ ಜಯವೂ, ಜಗಚ್ಛಾಂತಿಗೆ ಸಾಧಕವಾದ ಸಂಧಿಯೂ ಜರುಗಿತೆಂದು ಹೇಳಿದರು. ಜುಲೈ ತಾ|| ೩ ರಲ್ಲಿ ಕಾಮನ್ಸ್ ಸಭೆಯಲ್ಲಿ ಲಾಯಿಡ್ ಜಾರ್ಜ್‌ರವರು ಸಂಧಿನಿಬಂಧನೆಯ ವಿಷಯವಾಗಿ ಘನತರವಾದ ಉಪನ್ಯಾಸಮಾಡಿದರು. ನಿಬಂಧನೆಗಳ ಮುಖ್ಯಭಾಗಗಳ ತತ್ವವನೆಲ್ಲಾ ಶ್ರುತಪಡಿಸಿದರು. ಯುದ್ಧದಲ್ಲಿ ಇಂಗ್ಲೀಷರಿಗೆ ಒದಗಿದ್ದ ಮುಖ್ಯಭಾಗವನ್ನು ವಿವರಿಸುವಾಗ್ಗೆ—ಆಂಗ್ಲಸಾಮ್ರಾಜ್ಯವು ರಣರಂಗಗಳಿಗಾಗಿ ೭೭ ಲಕ್ಷ ಸೈನಿಕರನ್ನು ಒದಗಿಸಿತು. ೮|| ಅರ್ಬುದದ ಸೌನುಗಳ ಯುದ್ಧಋಣವನ್ನು ಒದಗಿಸಿಕೊಟ್ಟಿತು. ಯುದ್ಧದಲ್ಲಿ ೩೦ ಲಕ್ಷಕ್ಕೆ ಮಿಂಚಿಯೇ ನಮ್ಮಸೈನಿಕರು ಸತ್ತರು. ಅಲ್ಲದೆ ನಾವಿಕರಲ್ಲಿ ೧೫ ಸಾವಿರ ಮಂದಿ ಸತ್ತರು. ನಮ್ಮ ನೌಕಾದಳವೂ ವರ್ತಕನೌಕಾದಳವೂ, ಸಮುದ್ರವನ್ನೆಲ್ಲಾ ರಕ್ಷಿಸಿದುವು. ಅಲ್ಲದಿದ್ದರೆ ಯುದ್ಧವು ೬ ತಿಂಗಳಲ್ಲೇ ಮುಗಿದುಹೋಗುತ್ತಿದ್ದಿತು. ತುರ್ಕಿದೇಶದ ಮೇಲಣ ಮುತ್ತಿಗೆಯ ಭಾರವೆಲ್ಲಾ ಇಂಗ್ಲೀಷರ ಮೇಲೆಯೇ ಬಿದ್ದಿತು. ಹೀಗೆ ನಾವು ಮಾಡಿದ ಸಾಹಸವು ನಿಷ್ಫಲವಾಗಲಿಲ್ಲ. ಪ್ರಜೆಗಳೆಲ್ಲರೂ ಏಕೀಭವಿಸಿ ಕೆಲಸಮಾಡಿದರೆ ಎಂತಹ ಭಾರವಾದ ಕಾರ್ಯವನ್ನಾದರೂ ಹೀಗೆಯೇ ಸಾಧಿಸಬಹುದು. ಈಗ ಆಂಗ್ಲಸಾಮ್ರಾಜ್ಯದ ಬಾಧ್ಯತೆಯು ಅಪಾರವಾಗಿರುತ್ತದೆ. ಪ್ರಪಂಚಕ್ಕೆಲ್ಲಾ ಆಶ್ಚರ್ಯವನ್ನುಂಟುಮಾಡುವಂತೆ ಇದುವರೆಗೆ ನಮ್ಮ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದ ಭೂಭಾಗದ ಜತೆಗೆ ಈಗ ಮತ್ತೆ ೮ ಲಕ್ಷ ಚದರಮೈಲಿಗಳ ಪ್ರದೇಶವು ನಮಗೆ ಲಭಿಸಿದೆ. ಎಂದು ಮೊದಲಾಗಿ ಹೇಳಿದುದಲ್ಲದೆ ಕೈಜರನನ್ನು ಲಂಡನ್ ಪಟ್ಟಣದಲ್ಲೇ ವಿಚಾರಣೆ ನಡೆಯಿಸುವುದಕ್ಕೆ ಮಾಡಿರುವ ಏರ್ಪಾಟು, ಅವರ ಸಬ್‌ಮೆರೀನುಗಳಿಂದಲೂ ವಿಮಾನಗಳಿಂದಲೂ ಪಟ್ಟಣಗಳ ಪ್ರಜೆಗಳಿಗೂ ವ್ಯಾಪಾರಿ ಹಡಗುಗಳಿಗೂ ದ್ರೋಹವನ್ನಾಚರಿಸಿದ ದುರುಳರ ವಿಚಾರಣೆಗೆ ಏರ್ಪಾಟುಮಾಡಿರುವುದನ್ನೂ ಕುರಿತು ಭಾಷಣಮಾಡಿ ಕಡೆಗೆ-ಇನ್ನೇನು ಸಂಧಿಯಾಗಿ ಮುಗಿದಿತಲ್ಲಾ! ಎಂದು ನಾವೆಲ್ಲರೂ ಸಂತೋಷದಿಂದ ಮೈಮರೆತು ಕುಳಿತುಕೊಳ್ಳಬಾರದು. ಇದುವರೆಗಣ ಕಷ್ಟವನ್ನು ನಾವುಗಳು ತಾಳ್ಮೆಯಿಂದಲೂ ಉತ್ಸಾಹದಿಂದಲೂ ಹೇಗೆ ದಾಟಿದೆವೋ ಅಂಥ ಉತ್ಸಾಹವನ್ನೇ ಮುಂದೆಯೂ ತಾಳಿ, ಒಬ್ಬರಿಗೊಬ್ಬರು ಸಹಾಯಮಾಡಿ ನಮ್ಮ ಸಾಮ್ರಾಜ್ಯವೆಲ್ಲವೂ ಶಕ್ತಿವಂಚನೆಯಿಲ್ಲದೆ ಲೋಕಶಾಂತಿರಕ್ಷಣೆಗಾಗಿ ಕೆಲಸಮಾಡುತ್ತ ಬರಬೇಕು. ಎಂದು ಉಪದೇಶಿಸಿದರು. ಸಭಿಕರೆಲ್ಲರೂ ಆನಂದಪಟ್ಟರು. ಮತ್ತೂ ಲೋಕಚರಿತ್ರದಲ್ಲೆಲ್ಲಾ ಅಸಾಧಾರಣವಾದ ಘನಕಾರ್ಯವನ್ನು ನಿರ್ವಹಿಸಿದರೆಂದು ಆ ಮಂತ್ರಿಪುಂಗವರನ್ನು ಸರ್ ಎಡ್ವರ್ಡ್ ಕಾರ್ಸನ್‌ರವರೂ, ಆ ಡಂಕನ್‌ರವರೂ ಕೂಡ ಸಭಿಕರ ಪಕ್ಷವಾಗಿ ಕೊಂಡಾಡಿ, ಅವರು ತಕ್ಕ ಸಮಯದಲ್ಲಿ ತೋರಿಸಿದ ಧೈರ್ಯಸ್ಥೈರ್ಯ ಸಾಹಸಗಳನ್ನು ಕೊಂಡಾಡಿ, ಆಂಗ್ಲಜಾತಿಯೆಲ್ಲವೂ ನಿಮಗೆ ಕೃತಜ್ಞವಾಗಿರುವುದೆಂದು ಶ್ರುತಪಡಿಸಿದರು. ಈಗಣ ಕಾಲದ ಲೋಕೋತ್ತರ ಪುರುಷರಲ್ಲಿ ಲಾಯಿಡ್ ಜಾರ್ಜ್‌ರಂತೆ ಗಣ್ಯರಾದವರು ಅತಿ ವಿರಳರು.

ಭರತಖಂಡದ ವೃತ್ತಾಂತಗಳು.

ಮದ್ರಾಸು ಹೈಕೋರ್ಟಿನ ಜಡ್ಜರಾಗಿದ್ದ ಅಬ್ದುಲ್ ರಹೀಮ್‌ರವರು ಅಲ್ಲಿಯ ಮುಖ್ಯ ನ್ಯಾಯಾಧೀಶರಾಗಿ ನಿಯಮಿಸಲ್ಪಟ್ಟಿದ್ದಾರೆ.

ಅಫ್ಘಾನಿಸ್ಥಾನದ ಅಮೀರರು ಬರೆದಿರುವ ಮತ್ತೊಂದು ಪತ್ರವು ಕೂಡ ಕಳೆದವಾರ ವೈಸ್ರಾಯರ ಬಳಿಗೆ ಬಂದಿದೆ.

ಪಂಜಾಬು ಸರ್ಕಾರದವರು ತಮ್ಮ ದೇಶದಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರ ಸಂಬಳವನ್ನು ೪೫ ರೂ ನಿಂದ ೧೧೦ ರೂ.ಗಳ ವರೆಗೆ ನಿರ್ಣಯಿಸಿದ್ದಾರೆ.

ಭರತಖಂಡದಲ್ಲಿ ಸಂಧಿಮಹೋತ್ಸವಗಳನ್ನು ಜರುಗಿಸಬೇಕೆಂಬುದನ್ನು ಆಲೋಚಿಸಿ ನಿರ್ಧರಿಸುವುದಕ್ಕಾಗಿ ವೈಸ್ರಾಯರು ಒಂದು ಸಂಘವನ್ನೇರ್ಪಡಿಸಿದ್ದಾರೆ.

ಹಿಂದೂಸ್ಥಾನ ಸರ್ಕಾರದವರು ಹೊಸದಾಗಿ ತೆಗೆಯಲು ಕಳೆದ ತಾ|| ೨ ರಿಂದ ಆರಂಭಿಸಿರುವ ಸಾಲಕ್ಕೆ ಕಳೆದ ತಾ|| ೪ ರ ವರೆಗೆ 518387000 ರೂಗಳು ಕೂಡಿದ್ದುವು.

ಬೊಂಬಾಯಿಯಲ್ಲಿ ೫ ಕೋಟಿ ರೂ. ಬಂಡವಾಳದಿಂದ ಒಂದು ಇಂಡಿಯನ್ ಎಕ್ಸ್‌ಛೇಂಜ್ ಬ್ಯಾಂಕೂ ಮತ್ತೊಂದು ಬ್ಯಾಂಕು ೧ ಕೋಟಿ ರೂ. ಬಂಡವಾಳದಿಂದಲೂ ಸ್ವಲ್ಪಕಾಲದಲ್ಲೇ ಸ್ಥಾಪಿಸಲ್ಪಡುವುದಾಗಿವೆ.

ಬರುವ ಸೆಪ್ಟಂಬರ್ ತಿಂಗಳಿನಿಂದ ವ್ಯವಹಾರಕ್ಕೆ ಬರುವ ನಕ್ಷತ್ರದ ಗುರ್ತಿನ ಭಂಗಾರದ ಚಿಕ್ಕ ನಾಣ್ಯಗಳನ್ನು ಕಲಕತ್ತಾ ಟಂಕಸಾಲೆಯಲ್ಲಿ ಮುದ್ರಿಸುತ್ತಿದ್ದಾರೆ. ದೊಡ್ಡದೊಡ್ಡ ಫರ್ಮುಗಳ ವರ್ತಕರು ಈಗಲೇ ಬರೆದು ಕೇಳಿಕೊಂಡರೆ ತಕ್ಕ ಬೆಲೆಗೆ ಕೊಡಲು ಏರ್ಪಡಿಸಿದ್ದಾರೆ.

ಈಗ ಮದ್ರಾಸು ಪಟ್ಟಣದಲ್ಲಿ ಅಲ್ಲಿಯ ಪ್ರಜಾಸಂಖ್ಯೆಯೊಳಗೆ ೧೦೦೦ ಕ್ಕೆ ೪೬.೯ ಯಷ್ಟು ಮರಣಗಳು ಒಂದೊಂದು ವಾರದಲ್ಲಿ ಸಂಭವಿಸುತ್ತಿವೆ. ವಾಂತಿಭೇದಿ, ಪ್ಲೇಗು, ಇನ್‌ಫ್ಲುಯಂಜಾ ಈ ಮೂರು ಭೀಕರ ರೋಗಗಳು ಹಾವಳಿಮಾಡುತ್ತಿವೆ. ಇನ್‌ಫ್ಲುಯಂಜಾ ೧ ರಿಂದಲೇ ಕಳೆದ ವಾರದಲ್ಲಿ ೨೩ ಮರಣಗಳಾಗಿವೆ.

ಕಳೆದ ತಾ|| ೬ನೆಯ ದಿನ ಪ್ರಪಂಚದ ಮೇಲಿರುವ ಆಂಗ್ಲಸಾಮ್ರಾಜ್ಯದ ದೇಶಗಳಲ್ಲಿರುವ ಕ್ರೈಸ್ತ ದೇವಾಲಯಗಳಲ್ಲೆಲ್ಲಾ ಯುದ್ಧಶಾಂತಿಯನ್ನೂ ಸಂಧಿ ಸಮಾಪ್ತಿಯನ್ನೂ ಅನುಗ್ರಹಿಸಿದುದಕ್ಕಾಗಿ ಕೃತಜ್ಞತೆಯಿಂದ ಭಗವಂತನಿಗೆ ಪ್ರಾರ್ಥನೆಯನ್ನು ಸಮರ್ಪಿಸುವ ಕೆಲಸವು ಸಾರ್ವಭೌಮರ ಅಪ್ಪಣೆ ಪ್ರಕಾರ ನಡೆದಿತು.

ವಿದೇಶ ವಿಷಯಗಳು.

ಸಂಧಿನಿಬಂಧನೆಗಳಂತೆ ಎಲ್ಲ ಕಾರ್ಯಗಳನ್ನೂ ತ್ವರ್ಯವಾಗಿ ನಡೆಯಿಸಲು ಜರ್ಮನ್ ರಾಜ್ಯಾಂಗಸಭೆಯವರು ಒಪ್ಪಿ ತಿಳಿಯಪಡಿಸಿದ್ದಾರೆ.

ಸೀಮೆಯಲ್ಲಿ ಈಗ ಬೆಳ್ಳಿಯು ಸಮೃದ್ಧವಾಗಿ ಒದಗುತ್ತಿರುವುದರಿಂದ ಅದರ ಬೆಲೆಯು ಜೂನ್ ತಾ|| ೩೦ ರಿಂದ ಇಳಿಯುತ್ತಿದ್ದಿತು. ಮತ್ತೆ ಬೆಲೆಯು ಸ್ವಲ್ಪ ಏರುತ್ತಿದೆ.

ಸೀಮೆಯಿಂದ ಕಲ್ಕತ್ತಾಕ್ಕೆ ೬|| ಲಕ್ಷ ಡಾಲರುಗಳ ಭಂಗಾರವೂ, ಚೀನಾಕ್ಕೆ ೧೩೦೦೦ ಡಾಲರು ಭಂಗಾರವೂ ಜಪಾನಿಗೆ ೫ ಲಕ್ಷ ಡಾಲರು ಭಂಗಾರವೂ, ಕಳುಹಿಸಲ್ಪಟ್ಟಿವೆ.

ರಷ್ಯಾದಲ್ಲಿ ಡೆನಿಕನ್ ಸೇನಾಪತಿಯ ಸೈನ್ಯಗಳು ಜಯದಮೇಲೆ ಜಯವನ್ನು ಪಡೆದು ಬೋಲ್ಷವಿಕ್ಕರನ್ನು ಸೋಲಿಸಿ ಅಟ್ಟಿಕೊಂಡು ಹೋಗುತ್ತಿವೆ. ಅವರು ನೀಸ್ಟರ್ ನದಿಯನ್ನು ದಾಟಿದ್ದಾರೆ.

ನಮ್ಮ ತಂದೆಯವರನ್ನು ಅಗೌರವಪಡಿಸಬಾರದೆಂದೂ ಬೇಕಿದ್ದರೆ ನಾವು ನಿಮ್ಮ ಅಧೀನದಲ್ಲಿರುವೆವೆಂದೂ, ಕೈಜರರ ೫ ಮಂದಿ ಚಿಕ್ಕಮಕ್ಕಳುಗಳು ನಮ್ಮ ಸಾರ್ವಭೌಮರವರಿಗೆ ಬರೆದು ಪ್ರಾರ್ಥಿಸಿಕೊಂಡಿದ್ದಾರೆ

ಬಲ್ಗೇರಿಯಾ, ಆಸ್ಟ್ರಿಯಾ, ತುರ್ಕಿ—ಈ ದೇಶಗಳೊಡನೆ ಮಾಡಿಕೊಳ್ಳಬೇಕಾದ ಸಂಧಿಯನ್ನು ಫ್ರಾನ್ಸು, ಅಮೇರಿಕಾ, ಇಂಗ್ಲೆಂಡ್, ಇಟಲಿ, ಜಪಾನ್ ಈ ದೇಶಗಳ ಪ್ರತಿನಿಧಿಗಳು ಒಬ್ಬೊಬ್ಬರಂತೆ ೫ ಮಂದಿಗಳು ಸೇರಿ ನಡೆಯಿಸುವರು.

ಜರ್ಮನಿದೇಶದಲ್ಲಿ ಅನೇಕ ಪಟ್ಟಣಗಳೊಳಗೆ ಪ್ರಜೆಗಳೂ ಕೂಲಿಜನರೂ ವಿಪ್ಲವವನ್ನೆಬ್ಬಿಸಿರುತ್ತಾರೆ. ಅದನ್ನಡಗಿಸುವುದಕ್ಕೆ ಪ್ರಭುತ್ವದವರು ಹಲವು ಕಡೆ ಸೈನಿಕಶಾಸನವನ್ನು ವ್ಯವಹಾರಕ್ಕೆ ತಂದಿದ್ದಾರೆ. ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನು ಯಾರೂ ಮಾರಕೂಡದೆಂದು ಪ್ರಕಟಿಸಿದ್ದಾರೆ.

ಯುದ್ಧಕಾಲದಲ್ಲಿ ಒಬ್ಬರಿಗೊಬ್ಬರು ಮಾಡಿದ ಸಹಾಯವನ್ನು ಕುರಿತು ಪರಸ್ಪರ ಅಭಿನಂದನಪರವಾದ ತಂತ್ರೀವಾರ್ತೆಗಳನ್ನು ನಮ್ಮ ಸಾರ್ವಭೌಮರೂ, ಫ್ರೆಂಚ್, ಅಮೇರಿಕಾಗಳ ಅಧ್ಯಕ್ಷರುಗಳೂ ಕಳುಹಿಸಿಕೊಂಡು ಸಂತೋಷವನ್ನೂ ಅಭಿನಂದನೆಗಳನ್ನೂ ತಿಳಿಯಿಸಿ, ದೃಢಮೈತ್ರಿಯನ್ನು ಕೋರಿಕೊಂಡಿದ್ದಾರೆ.

ಸಂಧಿಸಭೆಯವರು ಜರ್ಮನಿಯೊಡನೆ ಸಂಧಿರಾಯಭಾರವನ್ನು ನಡೆಯಿಸುತ್ತಿದ್ದಾಗ ಮಾಂಟಿನೀಗ್ರೋ ದೇಶದವರು ತಮಗೂ ಆ ಸಭೆಯಲ್ಲಿ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೇಳಿಕೊಂಡರು. ಮಿತ್ರಮಂಡಲಿಯವರು ಅದನ್ನು ನಿರಾಕರಿಸಿಬಿಟ್ಟುದರಿಂದ ಮಾಂಟಿನೀಗ್ರೋದವರು ಅದಕ್ಕೆ ತಮ್ಮ ಅಸಮ್ಮತಿಯನ್ನು ತಿಳಿಯಪಡಿಸಿದರಂತೆ. ಬಡವನಕೋಪ ದವಡೆಗೆ ಮೂಲ.

ಮುಂದೇನಾದರೂ ಜರ್ಮನರು ಫ್ರಾನ್ಸ್ ದೇಶದಮೇಲೆ ದಾಳಿಯಿಡುವರಾದರೆ ಫ್ರಾನ್ಸಿಗೆ ಸಹಾಯಮಾಡುವುದಕ್ಕೆ ಅಮೇರಿಕನ್ನರೂ ಇಂಗ್ಲೀಷರೂ ಒಪ್ಪಿ ಆ ವಿಷಯವಾಗಿ ತಮ್ಮಗಳ ಮಧ್ಯೆ ಒಂದು ಒಡಂಬಡಿಕೆಯನ್ನು ಈಗತಾನೇ ಮಾಡಿಕೊಂಡಿದ್ದಾರೆ. ಇದನ್ನು ಅಮೇರಿಕಾ-ಇಂಗ್ಲೆಂಡ್ ಪ್ರಭುತ್ವಗಳವರು ಅನುಮೋದಿಸಿದ ಬಳಿಕ ಸರ್ವದೇಶ ಸಮ್ಮೇಳನದವರ ಅನುಮೋದನೆಗೆ ಕಳುಹಿಸಿಕೊಡುವರು.

ಜರ್ಮನ್ ಕೈಜರರು ಸೈನಿಕರನ್ನು ಹುರಿದುಂಬಿಸಿ ಜಾಗರೂಕತೆಗೊಳಿಸುವವರೆಗೂ ಅವರು ಮಾಡಿದ ರಾಜಕೀಯ ಕಾರ್ಯಗಳಿಗೆಲ್ಲಾ ನಾನೇ ಉತ್ತರವಾದಿಯಾಗಿದ್ದೇನೆ. ಅದುಕಾರಣ ಕೈಜರರನ್ನು ಬಿಟ್ಟು ನನ್ನನ್ನು ವಿಚಾರಣೆಗೊಳಪಡಿಸಿ, ಅಪರಾಧವಿದ್ದರೆ ಶಿಕ್ಷಿಸಬಹುದೆಂದು ವಾನ್‌ಬೆತ್ಮನ್ ಹಾಲ್ವೆಗ್‌ರವರು ಸಂಧಿಸಭಾಧ್ಯಕ್ಷರಿಗೆ ಬರೆದು ತಿಳಿಯಪಡಿಸಿದ್ದಾರೆ. ಇವರು ಹಿಂದೆ ಜರ್ಮನ್ ಮುಖ್ಯಮಂತ್ರಿಯಾಗಿದ್ದವರು.

ಸಂಧಿಯಾದುದರ ಸಂತೋಷಮಹೋತ್ಸವವನ್ನು ಲಂಡನ್‌ಪಟ್ಟಣದಲ್ಲಿ ಬರುವ ತಾ|| ೧೯ ರಿಂದ ಆರಂಭಿಸುವರು. ಅಮೇರಿಕಾ ದೇಶದ ಸೈನ್ಯಗಳೂ ಇಂಗ್ಲೀಷ್ ಫ್ರೆಂಚ್ ಸೈನ್ಯಗಳೂ ಸಹ ಅದರಲ್ಲಿ ಭಾಗಿಗಳಾಗುವುವು. ಆ ದಿವಸ ಭರತಖಂಡದಲ್ಲೂ ಎಲ್ಲ ಕಾರ್ಯಾಲಯಗಳೂ ಮುಚ್ಚಲ್ಪಡುವುವು. ಯಾವ ದಿವಸ ಭರತಖಂಡದಲ್ಲಿ ಉತ್ಸವಗಳನ್ನು ನಡೆಯಿಸಬೇಕೆಂಬುದನ್ನು ಮುಂದೆ ವೈಸ್ರಾಯರು ಪ್ರಕಟಿಸುವವರಾಗಿದ್ದಾರೆ.

ಈ ತಿಂಗಳ ಕೊನೆಯೊಳಗಾಗಿ ಆಸ್ಟ್ರಿಯಾದವರು ಸಂಧಿಪತ್ರಕ್ಕೆ ತಮ್ಮ ಕೈಬರಹವನ್ನು ಹಾಕಬಹುದು. ಬಲ್ಗೇರಿಯಾ ಸಂಧಿಯು ಕೂಡ ಬೇಗನೆ ಮುಗಿದುಹೋಗುವಂತಿದೆ. ದೇಶದೇಶಗಳ ಎಲ್ಲೆಕಟ್ಟುಗಳ ವಿಷಯವೆಲ್ಲಾ ಇದುವರೆಗೇ ಬಹುಭಾಗವು ಇತ್ಯರ್ಥವಾಗಿದೆ. ಆಸ್ಟ್ರಿಯಾ ಸಂಧಿನಿಬಂಧನೆಯಲ್ಲಿ ಕಂಡ ಕೆಲ ವಿಷಯಗಳು ರುಮೇನಿಯನ್ನರಿಗೆ ಸ್ವಲ್ಪ ವಿರುದ್ಧವಾಗಿರುವ ಪ್ರಯುಕ್ತ ಅವರು ಅಸಮಾಧಾನಪಟ್ಟಿದ್ದಾರೆ. ಅವರ ಮುಖ್ಯಮಂತ್ರಿಯು ಬುಖಾರೆಸ್ಟ್ ಪಟ್ಟಣಕ್ಕೆ ಹಿಂದಿರಿಗಿ ಹೋಗಿದ್ದಾರೆ.

ಬೋಲ್ಷೆವಿಕ್ಕರು ಪೆಟ್ರೋಗ್ರೇಡಿನಲ್ಲಿ ಮೊನ್ನೆ ತಾನೇ ೮೦೦ ಮಂದಿ ಪ್ರಜೆಗಳನ್ನು ಹಿಡಿದು ಸೆಂಟ್‌ಪೀಟರ್ ಸೆಂಟ್‌ಪಾಲ್ ದುರ್ಗಗಳ ಹತ್ತಿರ ಕೊಂದುಹಾಕಿ ಆ ಹೆಣಗಳನ್ನು ನೀವಾ ನದಿಯಲ್ಲಿ ಬಿಸುಡಿದರು. ಅಲ್ಲದೆ ೧೮೦೦೦ ಮಂದಿ ವಿದೇಶೀಯರನ್ನು ಹಿಡಿದು ಸೆರೆಹಾಕಿಕೊಂಡಿರುವರು. ತಮಗೆ ಪ್ರತಿಕೂಲವಾಗಿ ಪ್ರಯತ್ನಮಾಡುತ್ತಿದ್ದರೆಂಬ ಕಾರಣದಿಂದ ಇವರುಗಳನ್ನು ಬೋಲ್ಷೆವಿಕ್ಕರು ಹೀಗೆ ಹಿಂಸೆಪಡಿಸಿರುವರು. ಆ ಪಟ್ಟಣದಿಂದ ತಲೆತಪ್ಪಿಸಿಕೊಂಡು ಓಡಿಬಂದ ಜನರು ಈ ಸುದ್ದಿಯನ್ನು ಹೇಳಿದ್ದಾರೆ.

ಸಂಧಿಸಭಾಧ್ಯಕ್ಷರಾದ ಎಂ. ಕ್ಲೆಮೆನ್ಸೋರವರು ಸಂಧಿಗಾಗಿ ಬಂದಿದ್ದ ತುರ್ಕಿ ರಾಯಭಾರಿಗಳಿಗೆ ಒಂದು ಪ್ರತ್ಯುತ್ತರವನ್ನು ಬರೆದು - ನೀವು ಬರೆದು ತಿಳಿಸಿರುವ ಸಂಗತಿಗಳನ್ನೆಲ್ಲಾ ನಾವು ಸಾವಧಾನವಾಗಿ ಪರ್ಯಾಲೋಚಿಸುತ್ತೇವೆ. ತತ್‌ಕ್ಷಣವೇ ಕಾರ್ಯವನ್ನು ಕೊನೆಮುಟ್ಟಿಸಲು ಸಾಧ್ಯವಿಲ್ಲ. ನೀವುಗಳು ಪ್ಯಾರಿಸ್ಸಿನಲ್ಲಿ ವಿಶೇಷಕಾಲ ಇರಬೇಕಾದುದಿಲ್ಲ. ಸ್ವದೇಶಕ್ಕೆ ತೆರಳಬಹುದು. ನಮ್ಮ ನಿಮ್ಮ ಮಧ್ಯದ ವ್ಯವಹಾರಗಳನ್ನು ಬಗೆಹರಿಸಿಕೊಳ್ಳುವ ವಿಷಯವಾಗಿ ನಿಮ್ಮ ಪ್ರಭುತ್ವದವರೊಡನೆ ಪತ್ರವ್ಯವಹಾರವನ್ನು ಬಳೆಯಿಸುತ್ತೇವೆ ಎಂದು ತಿಳಿಯಪಡಿಸಿರುವರು.

ಲಂಡನ್ನಿನಿಂದ ಅಟ್ಲಾಂಟಿಕ್ ಸಾಗರವನ್ನು ದಾಟಿಕೊಂಡು ಅಮೇರಿಕಾದ ಮಿನೋಲಾ ಪಟ್ಟಣಕ್ಕೆ ಹೋಗುವ ಪಂಥದಮೇಲೆ ಒಂದು ವಿಮಾನವು ೩೦ ಮಂದಿಗಳನ್ನು ಕುಳ್ಳಿರಿಸಿಕೊಂಡು ಪ್ರಯಾಣಮಾಡಿತು. ಅದು ೮೦ ಅಡಿಗಳ ಅಗಲವೂ ೬೪೯ ಅಡಿಗಳ ಉದ್ದವೂ ಇದೆ. ಇದು ಮಾಡತಕ್ಕ ಪ್ರಯಾಣದ ದೂರವು ೩೧೦೦ ಮೈಲಿಗಳಾಗುತ್ತದೆ. ಇಷ್ಟು ದೂರವನ್ನು ಅದು ೧೦೮ ಗಂಟೆಗಳೂ ೧೨ ನಿಮಿಷಗಳ ಕಾಲದಲ್ಲಿ ದಾಟಿ ಗೊತ್ತಾಗಿದ್ದ ಸ್ಥಾನವನ್ನು ಸೇರಿತು. ಮಧ್ಯದಲ್ಲಿ ಎಲ್ಲೂ ಇಳಿಯಲೇ ಇಲ್ಲ. ಹೀಗೆ ಪ್ರಯಾಣ ಮಾಡಿದ ವಿಮಾನಗಳಲ್ಲಿ ಇದೇ ಮೊದಲನೆಯದು. ಇದನ್ನು ನಡೆಯಿಸಿದವರು ಮೇಜರ್ ಸ್ಕಾಟ್‌ರವರು.

ಸಂಧಿಸಭೆಗಾಗಿ ಸೇರಿದ್ದ ೨೩ ರಾಜ್ಯಗಳವರು ಹಾಲಂಡಿನಿಂದ ಹಿಂದಣ ಕೈಜರನನ್ನು ಹೊರಕ್ಕೆ ಬಿಟ್ಟುಕೊಡಬೇಕೆಂದು ಹಾಲಂಡ್ ಪ್ರಭುತ್ವದವರಿಗೆ ಇಷ್ಟರಲ್ಲೇ ಖಂಡಿತವಾದ ಲೇಖನವೊಂದನ್ನು ಬರೆದು ತಿಳಿಯಿಸುವವರಾಗಿದ್ದಾರೆ. ಕೈಜರನನ್ನು ಲಂಡನ್‌ಪಟ್ಟಣದಲ್ಲಿ ವಿಚಾರಣೆ ನಡೆಸುವುದಕ್ಕೆ ಏರ್ಪಡಿಸಿದ್ದಾರೆ. ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸು, ಇಟಲಿ, ಜಪಾನ್ ಈ ೫ ರಾಜ್ಯಗಳ ೫ ಮಂದಿ ಪ್ರತಿನಿಧಿಗಳು ವಿಚಾರಣಕರ್ತರಾಗಿ ಕುಳಿತುಕೊಳ್ಳುವರು. ಮರಣದಂಡನೆಯನ್ನು ವಿಧಿಸದೆ ಜನ್ಮಾಂತ ನಿರ್ಬಂಧ ನಿವಾಸದ ಶಿಕ್ಷೆಯನ್ನು ಕೈಜರರಿಗೆ ವಿಧಿಸಬೇಕೆಂದಿದ್ದಾರೆ. ಒಂದು ಇಂಗ್ಲಿಷ್ ಹಡಗಿನಲ್ಲಿ ಕುಳ್ಳಿರಿಸಿ ಅವರನ್ನು ಕರತರುತ್ತಾರೆ.

ಲಂಡನ್ ಪಟ್ಟಣದ ಎಸ್ಸೆಕ್ಸ್‌ಹಾಲಿನಲ್ಲಿ ತುರ್ಕಿ ಸಂಧಿನಿಬಂಧನೆಗಳನ್ನು ಆಲೋಚಿಸುವುದಕ್ಕಾಗಿ ಸೇರಿದ್ದ ಮಹಮ್ಮದೀಯರ ಸಭೆಯಲ್ಲಿ ಯಾಕೂಬ್ ಹುಸೇನ್‌ರವರು ಭಾಷಣಮಾಡುವಾಗ್ಗೆ—ತುರ್ಕಿ ಸಾಮ್ರಾಜ್ಯವನ್ನು ಸ್ವತಂತ್ರವನ್ನಾಗಿಸಬೇಕು. ಅದಕ್ಕೆ ಥ್ರೇಸು, ಚಿಕ್ಕ ಏಷ್ಯಾಗಳೂ ಕೂಡ ಸೇರಿರಬೇಕು. ತುರ್ಕಿ ಸುಲ್ತಾನರು ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲೇ ಇದ್ದುಕೊಂಡು ಅದನ್ನು ಪಾಲಿಸುತ್ತಿರಬೇಕು. ಮೆಸೊಪೊಟೇಮಿಯಾ, ಅರ್ಮೀನಿಯಾ, ಸಿರಿಯಾ, ಪಾಲಸ್ತೀನು, ಅರೇಬಿಯಾಗಳು ಸ್ವತಂತ್ರರಾಷ್ಟ್ರಗಳಾಗಿ ಏರ್ಪಟ್ಟು ತುರ್ಕಿ ಸುಲ್ತಾನರ ಯಾಜಮಾನ್ಯದ ಕೆಳಗೆ ಅಧಿನಿವೇಶಗಳಂತೆ ಪಾಲಿಸಲ್ಪಡುತ್ತ ಬರುವಂತಾಗಬೇಕು. ಹೀಗಾದರೆ ಪ್ರಪಂಚದ ಮಹಮ್ಮದೀಯರೆಲ್ಲಾ ಸಂತೋಷಿಸುವರು ಎಂದು ಹೇಳಿದರು.

ಫ್ರಾನ್ಸ್ ಅಧ್ಯಕ್ಷರಾದ ಪಾಯಿಂಕೇರ್‌ರವರು ಅಮೇರಿಕಾದ ಅಧ್ಯಕ್ಷರಾದ ಡಾ|| ವಿಲ್ಸನ್‌ರವರೇ ಮೊದಲಾದ ವಿದೇಶಗಳ ರಾಯಭಾರಿಗಳಿಗೆಲ್ಲಾ ಒಂದು ಘನತರವಾದ ಔತಣವನ್ನು ಮಾಡಿಸಿದರು. ಅಗ್ಗ ವಿಲ್ಸನ್‌ರವರು ಭಾಷಣಮಾಡುವಾಗ—"ಸಂಧಿನಿಬಂಧನೆಗಳು ನ್ಯಾಯಬದ್ಧಗಳಾಗಿವೆ. ಅವನ್ನು ಉಲ್ಲಂಘಿಸಲಾಗುವುದಿಲ್ಲ. ಆಸ್ಟ್ರಿಯಾ, ತುರ್ಕಿ, ಬಲ್ಗೇರಿಯಾ ದೇಶಗಳೊಡನೆ ಸಂಧಿ ಜರುಗುವುದಕ್ಕೂ ನಾವು ಈಗಳಂತೆಯೇ ಏಕೀಭವಿಸಿರುವುದು ಅವಶ್ಯಕ. ಮತ್ತೂ ಸಂಧಿನಿಬಂಧನೆಗಳು ವ್ಯವಹಾರಕ್ಕೆ ಬರುವಂತೆ ಮಾಡಲು ನಾವುಗಳೆಲ್ಲಾ ಮುಂದೆ ತಕ್ಕ ಕೃಷಿಯನ್ನು ಮಾಡಬೇಕು. ಇನ್ನೇನು ಸಂಧಿಯಾಗಿ ಮುಗಿದಿತೆಂದು ಗರ್ವಪಟ್ಟು ಸುಮ್ಮನೆ ಕುಳಿತಿರಲಾಗದು. ಯುದ್ಧದ ಹಡಗುಗಳನ್ನು ತೂತು ಕೊರೆದು ಮುಳುಗಿಸಿದುದೂ, ಫ್ರೆಂಚ್ ಪತಾಕೆಯನ್ನು ಸುಟ್ಟುದೂ--ಇದನ್ನೆಲ್ಲಾ ನೋಡಿದರೆ ಜರ್ಮನರಿಗೆ ಇನ್ನೂ ಕೃತಾಪರಾಧಕ್ಕೆ ಪಶ್ಚಾತ್ತಾಪ ಹುಟ್ಟಿರುವುದೆಂದು ಹೇಳಲಾಗುವುದಿಲ್ಲ. ಮಿತ್ರಮಂಡಲಿಯವರೆಲ್ಲಾ ಮುಂದೆಯೂ ಹೀಗೆಯೇ ಕೂಡಿ ಕೆಲಸಮಾಡಿದರೆ ಜಗತ್ತಿಗೆ ನಿಜವಾದ ಶಾಂತಿಯು ಲಭಿಸುವುದು" ಎಂದು ಹೇಳಿದರು. ಡಾ|| ವಿಲ್ಸನ್‌ರವರು ಸ್ವದೇಶಕ್ಕೆ ತೆರಳಿದರು.

ಶ್ರೀ|| ವೈ. ವೀರಸಂಗಪ್ಪನವರ ಅಗ್ರತಾಂಬೂಲದ ಬಾಬತು ಬಂದ ಮೊಬಲಗು.

(1) ಚಳ್ಳಕೆರೆ ತಾ|| ಕೊರ್ಲಕುಂಟೆಯಲ್ಲಿ ಕಳೆದ ಜ್ಯೇಷ್ಠ ಶು|| ೧೦ ರಲ್ಲಿ ವಿಧ್ಯುಕ್ತವಾಗಿ ನಡೆದ ಸಿದ್ದೇಶ್ವರದುರ್ಗದ ಸ್ಕೂಲ್ಮಾಸ್ಟರ್ ಮ|| ಜಿ. ಶಾಂತವೀರಪ್ಪ ದೊಡ್ಡಲಿಂಗಪ್ಪ ಇವರ ವಿವಾಹಕಾಲದಲ್ಲಿ ತೆಗೆದ ರೂ. ೩. (2) ಮಾಗಡಿ ತಾ|| ತಾವರೆಕೆರೆಯಲ್ಲಿರುವ ಮ|| ಮೈಸೂರು ಗುರುಕಾರ್ ಚಿಕ್ಕಮುರುಡಪ್ಪನವರ ಕುಮಾರ ಸಿದ್ಧರಾಮಯ್ಯನಿಗೂ ಅದೇ ಊರಿನ ಮ|| ಮಲ್ಲಪ್ಪಶೆಟ್ಟರ ಕುಮಾರ್ತಿ ದೇವೀರಮ್ಮನಿಗೂ ನಡೆದ ವಿವಾಹದಲ್ಲಿ ತೆಗೆದ ರೂ. ೧. (3) ತುಮಕೂರು ಮ|| ಸಾಹುಕಾರ ರೇವಣ್ಣನವರ ಮಗಳು ಸೌ|| ಸಿದ್ಧಬಸಮ್ಮನನ್ನು ಮ|| ಮಂಡಿ ಚಂದ್ರಪ್ಪನವರಿಗೆ ಕೊಟ್ಟು ನಡಿಸಿದ ವಿವಾಹದಲ್ಲಿ ತೆಗೆದ ರೂ. ೧ ಮ|| ಹೊನ್ನಸೆಟ್ಟಿಪ್ಪರವರ ಮೂಲಕ. (4) ತುಮಕೂರಿನ ಪ್ಲೀಡರ್ ಮ|| ಗುರುಸಂಗಾರ್ಯರು ತಮ್ಮ ಮಾತೃಶ್ರೀಯವರು ಕೈಲಾಸವಾಸಿಗಳಾದುದರಿಂದ ಅವರ 11 ನೆಯ ದಿನದ ಆರಾಧನೆ ಕಾಲದಲ್ಲಿ ತೆಗೆದ ರೂ. ೧. (5) ಬಳ್ಳಾರಿ ಜಿಲ್ಲಾ ಹರಪನಹಳ್ಳಿಯಲ್ಲಿರುವ ತಾಲೂಕು ಬೋರ್ಡ್ ಮೆಂಬರು ಶ್ರೀಮಂತ ನೆಲ್ಲುದ್ರಿ ಬೋರಣ್ಣನವರ ಕೊಟ್ಟೂರು ಬಸಪ್ಪನವರು ತಮ್ಮ ಗೃಹದಲ್ಲಿ ನಡಿಸಿದ ವಿವಾಹಮಹೋತ್ಸವದ ಕಾಲದಲ್ಲಿ ತೆಗೆದ ರೂ. ೪. (6) ಮ|| ಗೋವನಕಟ್ಟೆ ಮಠದ ಮುಪ್ಪಿನಯ್ಯನವರ ಮಗನಿಗೂ ಮ|| ಬೆಳಗೋಡು ಮಠದ ಬಸವಯ್ಯನವರ ಮಗಳಿಗೂ ನಡೆದ ವಿವಾಹದಲ್ಲಿ ವರನಕಡೆಯಿಂದ ರೂ. ೧. ವಧುವಿನ ಕಡೆಯಿಂದ ೮ ಆಣೆ. ಹಾಸನ ಡಿ|| ಬೆಳಗೋಡು ಮ|| ಜಿ. ಬಸೆಟ್ಟಪ್ಪನವರ ಮೂಲಕ.

[ಮೇಲ್ಕಂಡ ಮೊಬಲಗುಗಳನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಪ. ಪ್ರ.]

ಪತ್ರವ್ಯವಹಾರ.

ಕುಣಿಗಲ್ ತಾಲ್ಲೋಕ್ ಅಮೃತೂರು.

ಈ ಗ್ರಾಮದ ಎ. ವಿ. ಸ್ಕೂಲ್ ಹೆಡ್ಮಾಸ್ಟರಾಗಿದ್ದ ಶಿವರಾಮಯ್ಯ ಎಂಬುವರು 1919 ನೇ ಏಪ್ರೇಲಿನಲ್ಲಿ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗೆ 15 ಹುಡುಗರನ್ನು ಕಳುಹಿಸಿದ್ದರು. ಇವರಲ್ಲಿ 2 ಹುಡುಗರು ಪ್ಯಾಸಾಗಿರುತ್ತಾರೆ. ಮತ್ತು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ 7 ಹುಡುಗರು ಹೋಗಿದ್ದರು. ಅವರಲ್ಲಿ 2 ಹುಡುಗರು ಪ್ಯಾಸಾಗಿರುತ್ತಾರೆ. ಈ ರಿಜಲ್ಟನ್ನು ನೋಡಿದರೆ ನಮ್ಮಗಳಿಗೆ ಬಹಳ ವ್ಯಸನವಾಗುತ್ತದೆ. ಅಮೃತೂರಿಗೆ ಸ್ಕೂಲು ಬಂದ ಲಾಗಾಯ್ತು ಇಂಥಾ ರಿಜಲ್ಟನ್ನು ನಾವು ಯಾವ ವರುಷವೂ ನೋಡಿರಲಿಲ್ಲ. ಇವರ ಕಾಲದಲ್ಲಿಯೇ 1918 ನೇ ಏಪ್ರೇಲಿನಲ್ಲಿ ಕಳುಹಿಸಿದ್ದ ಹುಡುಗರ ಪೈಕಿ ಒಂದು ಎರಡು ವರುಷ ಕ್ಲಾಸಿನಲ್ಲಿದ್ದ ಹುಡುಗರು ಪ್ಯಾಸಾದರೇ ಹೊರತು ಹೊಸದಾಗಿ ಕಳುಹಿಸಿದ್ದ ಹುಡುಗರಲ್ಲಿ ಒಬ್ಬನೂ ಪ್ಯಾಸಾಗಲಿಲ್ಲ. ಈ ವರುಷದ ರಿಜಲ್ಟನ್ನು ನೋಡಿದರೆ ನಮ್ಮ ಮಕ್ಕಳಿಗೆ ವಯಸ್ಸು ಕಳೆಯುವುದಕ್ಕೆ ಸ್ಕೂಲಿಗೆ ಕಳುಹಿಸುವಂತೆ ಆಗಿರುತ್ತದೆ. ಇದರಿಂದ ಮುಂದೆಯೂ ಇದೇ ರೀತಿಯಾದೀತೆಂದು ನಮ್ಮಗಳಿಗೆ ಬಹಳ ಭಯವಾಗಿದೆ. ಆದ್ದರಿಂದ ಎಜ್ಯುಕೇಷನ್ ಡಿಪಾರ್ಟ್ಮೆಂಟಿನವರು ತುಂಬಾ ನಿಗಾ ಕೊಟ್ಟು ನಮ್ಮ ಸ್ಕೂಲಿನ ಅಭಿವೃದ್ಧಿಯನ್ನು ಹೆಚ್ಚಿಸಿ ನಮ್ಮಗಳ ಮನಸ್ಸನ್ನು ಸಂತೋಷಪಡಿಸುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಬಾತ್ಮಿದಾರ್.

ಶಿವಲಿಂಗಪ್ರತಿಷ್ಠೆ.

ಬಾಗೇಪಳ್ಳಿ ತಾಲ್ಲೋಕು ಬೀಚಗಾನಹಳ್ಳಿ ಎಂಬ ಗ್ರಾಮದಲ್ಲಿ ಇದೇ ಸಿದ್ಧಾರ್ಥಿನಾಮಸಂವತ್ಸರ ಜ್ಯೇಷ್ಠ ಬಹುಳ ೧೦ ಸೋಮವಾರ ತಾರೀಖು (23-6-19) ಮ|| ರಾ|| ಗೋಳಿಕರಿಯಪ್ಪನವರ ಧರ್ಮಪತ್ನಿಯವರಾದ ದೊಡ್ಡವೀರಮ್ಮನವರು ಮತ್ತು ಚಿಕ್ಕವೀರಮ್ಮನವರು ಮುಜರಾಯಿ ಇಲಾಖೆಗೆ ಸಂಬಂಧಪಟ್ಟು, ಅನಾದಿಪ್ರಸಿದ್ಧಿಯನ್ನು ಹೊಂದಿ ಕಾಲಾಂತರಗಳಿಂದ ಶಿಥಿಲವಾಗಿದ್ದ ಶಿವದೇವಾಲಯವನ್ನು ವಿಶೇಷ ದ್ರವ್ಯಸಹಾಯಮಾಡಿ ನೂತನವಾಗಿ ಕಟ್ಟಿಸಿ ಜೀರ್ಣೋದ್ಧಾರಮಾಡಿಸಿ, ಪ್ರತಿಷ್ಠಾ ಕಾಲದಲ್ಲಿ ಬಂದ ಅನೇಕ ಭಕ್ತ ಮಾಹೇಶ್ವರ ಮೊದಲಾದ ಸಮಸ್ತ ವೀರಶೈವ ಮಹಾಜನರಿಗೂ ಮತ್ತು ಅನೇಕ ಪರಮತೀಯರಿಗೂ ಯಥೋಚಿತವಾಗಿ ಮಾನ ಮರ್ಯಾದೆಯಿಂದಲೂ ಮತ್ತು ಸಂತರ್ಪಣೆಯೇ ಮೊದಲಾದ ಅನೇಕ ಸತ್ಕಾರಗಳಿಂದಲೂ, ಸಂತೋಷಗೊಳಿಸಿ, ಆಗಮಿಕರಾದ ತ್ಯಾಮಗೊಂಡ್ಲು ವೇ|| ಸಿದ್ಧಲಿಂಗಶಾಸ್ತ್ರಿಗಳಿಂದಲೂ, ಗುಡಿಬಂಡೆ ವೇ|| ಮಲ್ಲಿಕಾರ್ಜುನಶಾಸ್ತ್ರಿಗಳಿಂದಲೂ, ನಾಮಗೊಂಡ್ಲು ವೇ|| ಕುಮಾರಶಾಸ್ತ್ರಿಗಳೇ ಮೊದಲಾದ ಅನೇಕ ವೈದಿಕರಿಂದ ಆಗಮೋಕ್ತವಾಗಿ ಅಂಬಿಕಾ, ಗಣಪತಿ, ವೀರಭದ್ರ, ಚಂಡಿಕೇಶ್ವರ, ನವಗ್ರಹ ಮೊದಲಾದ ವಿಗ್ರಹಗಳ ಪ್ರತಿಷ್ಠಾ ಕಾರ್ಯವನ್ನ ಸಾಂಗಗೊಳಿಸಿ, ಸಮಸ್ತ ಸಭಿಕರ ಹೃದಯವನ್ನೂ ಆಕರ್ಷಣೆಮಾಡುವುದರಲ್ಲಿ ಸಮರ್ಥರಾಗಿಯೂ ವಿವೇಕಶಾಲಿಗಳಾಗಿಯೂ ಇರುವ ಗುಡಿಬಂಡೆ ತಾಲ್ಲೋಕು ಸ್ಕೂಲ್ ಸೂಪರವೈಜರು ಮ|| ಕೇಶವಯ್ಯನವರಿಂದ ಸ್ವಾರಸ್ಯವಾಗಿ ಶಿವಕಥಾ ಕಾಲಕ್ಷೇಪವನ್ನು ಮಾಡಿಸಿ ನೆರೆದಿದ್ದ ಸಮಸ್ತ ಸಭಿಕರನ್ನೂ ಆನಂದಗೊಳಿಸಿ, ಸತ್ಕೀರ್ತಿಯನ್ನು ಪಡೆದ ಸಹೋದರಿ ದೊಡ್ಡವೀರಮ್ಮನವರಿಗೂ ಮತ್ತು ಚಿಕ್ಕವೀರಮ್ಮನವರಿಗೂ ಮತ್ತು ಈ ಪ್ರತಿಷ್ಠಾ ಕಾರ್ಯಕ್ಕೆ ಮುಂದಾಳುಗಳಾಗಿ ನಿಂತು ಅಧ್ಯಕ್ಷತೆಯನ್ನು ವಹಿಸಿದ್ದ ಸಹೋದರಿಯವರ ತಂದೆಯವರಾದ ಕೊಡಿಕೊಂಡೆ ಮ|| ರಾ|| ಕುಟಾಗೋಳ್ಲು ಮುದ್ದಪ್ಪನವರಿಗೂ ಸಹ ಪರಮೇಶ್ವರನು ಆಯುರಾರೋಗ್ಯೈಶ್ವರ್ಯಗಳನ್ನು ಕೊಟ್ಟು ಕಾಪಾಡಲೆಂದು ಆಶಿಸುತ್ತಿರುವ, ಪ್ರತ್ಯಕ್ಷದರ್ಶಿ.

ಮಾರ್ಗದರ್ಶಕರು ಬೇಕು.

ಒಂದು ದೇಶವು ಅಭಿವೃದ್ಧಿಗೆ ಬರಬೇಕಾದರೆ ಮಾರ್ಗದರ್ಶಕರು ಬೇಕು ದೇಶದಲ್ಲಿರುವ ಜನಾಂಗಗಳೂ, ಜನಾಂಗಗಳಲ್ಲಿರುವ ಪಂಗಡಗಳೂ ಅಭಿವೃದ್ಧಿಗೆ ಬಂದಲ್ಲಿ ದೇಶವು ಅಭಿವೃದ್ಧಿಗೆ ಬಂದಿತೆಂದು ಗೊತ್ತಾಗುತ್ತದೆ. ಮಾರ್ಗದರ್ಶಕರ ಹೊರ್ತು ಜನಾಂಗಗಳ ಮತ್ತು ಪಂಗಡಗಳ ಅಭಿವೃದ್ಧಿಯಾಗಲಾರದು. ಮಾರ್ಗದರ್ಶಕರೂ ಸಹ ಕಾಲಕ್ಕನುಗುಣವಾಗಿ ಇರಬೇಕು. ಬಹುದಿವಸಗಳಿಂದಲೂ ಪುರಾಣಪ್ರಸಿದ್ಧರೇ ಮಾರ್ಗದರ್ಶಕರಾಗಿದ್ದಾರೆಯೇ ಹೊರ್ತು ಕಾಲಕ್ಕೆ ತಕ್ಕಂಥ ಮಾರ್ಗದರ್ಶಕರು ಇಲ್ಲದೆ ಇದ್ದಾರೆ. ಕೆಲವು ವರ್ಷಗಳಿಂದ ಮಾತ್ರ ಅಲ್ಲಲ್ಲಿ ಒಬ್ಬೊಬ್ಬರ ಸುದ್ದಿಯನ್ನು ಕೇಳುತ್ತಾ ಎಚ್ಚರಗೊಳ್ಳುತ್ತಿದೇವೆ. ಮಧ್ಯೆ ಕೆಲವು ಕಾಲ ಕುಂದಕ ಬಂದಿತ್ತೆಂದು ಗೊತ್ತಾಗುತ್ತದೆ. ಈ ಕುಂದಕಕ್ಕೆ ಕಾರಣ ಸರ್ವತ್ರ ವಿದ್ಯೆ ಹರಡುವುದರಲ್ಲಿ ಸ್ವಾರ್ಥರಾಗಿದ್ದದ್ದೇ ಎಂದು ತೋರುತ್ತದೆ ಪುರಾಣಪ್ರಸಿದ್ಧರ ಪೈಕಿ ಪಂಚಮರಲ್ಲಿಯೂ ಸಹ ನಂದ, ತಿರುಪ್ಪಾಣಿಯಾಳ್ವಾರ್, ಚೊಕ್ಕಮೇಳಾಳ್ವಾರ್, ಹರಳಯ್ಯ, ದಿವಾಕರ, ವೀರಬಾಹು ಮೊದಲಾದ ಮಹನೀಯರುಗಳೂ ಅರುಂಧತಿ, ಮಾಯಾವತಿ ಮುಂತಾದ ಮಹಿಳೆಯರೂ ಮಾರ್ಗದರ್ಶಕರಿದ್ದರು, ಮತ್ತು ಶಂಕರಾಚಾರ್ಯರಿಗೂ ಸಹ ಒಬ್ಬ ಪಂಚಮನೇ ಉಪದೇಶಕನಾಗಿದ್ದನು. ಹೀಗಿರುವಲ್ಲಿ ಈಗಲಾದರೂ ಸ್ವಾರ್ಥತೆಯನ್ನು ಬಿಟ್ಟು ಹಿಂದುಳಿದವರನ್ನ ಪ್ರೋತ್ಸಾಹಿಸುತ್ತಲೂ, ಪಂಚಮರನ್ನ ಹತ್ತಿರಕ್ಕೆ ಸೇರಿಸಿಕೊಳ್ಳುತ್ತಲೂ, ಅವರಿಗೆಲ್ಲಾ ವಿದ್ಯೆಯನ್ನು ಹರಡುತ್ತಲೂ, ಅವರಲ್ಲಿ ಆಗಬಹುದಾದ ಮಾರ್ಗದರ್ಶಕರನ್ನು ನೋಡಲು ಪ್ರೀತಿಯಿಂದ ಪ್ರಯತ್ನಿಸುವುದು ಮುಂದುವರಿದಂಥ ವಿದ್ಯಾವಂತರ ಮುಖ್ಯ ಕರ್ತವ್ಯವಾಗಿರುತ್ತದೆ. ನಮ್ಮ ಪ್ರಭುಗಳು ಇದಕ್ಕೆಲ್ಲಾ ತಕ್ಕ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟೇ ಇರುತ್ತಾರೆ. ಈ ಅನುಕೂಲಗಳನ್ನೆಲ್ಲಾ ಮುಖ್ಯವಾಗಿ ನಮ್ಮ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ಉಪಯೋಗಿಸಿ ಆದಷ್ಟು ಸರ್ವತ್ರ ವಿದ್ಯೆ ಹರಡಲು ಜಾಗ್ರತೆ ದಾರಿಗೆ ತಂದು ಕೀರ್ತಿಯುತರಾಗಬೇಕಾಗಿ ಕೋರಿಕೆ.

ಮಾರ್ಗದರ್ಶಕರ ನಿರೀಕ್ಷಕ.

ಬ್ರಹ್ಮದ್ವೇಷಿಗಳು.

ಅಯ್ಯಾ! ಈಚೆಗೆ ಅನೇಕ ಪತ್ರಿಕೆಗಳಲ್ಲಿ - ಬ್ರಹ್ಮದ್ವೇಷ - - ಬ್ರಹ್ಮದ್ವೇಷಿ - ಎಂದು ಬರೆಯುತ್ತಿರುವುದು ಬಹು ವಾಡಿಕೆಯಾಗಿದೆ. ಇದರರ್ಥವು ಬ್ರಹ್ಮನನ್ನು ದ್ವೇಷಿಸುವುದು, ಮತ್ತು ದ್ವೇಷಿಸುವವರು ಎಂದಾಗುತ್ತದೆ. ಸಾಧಾರಣವಾಗಿ ಪ್ರಪಂಚದಲ್ಲಿನ ಯಾವ ಮತದವರೂ ಬ್ರಹ್ಮನನ್ನು ಅಂದರೆ ದೇವರನ್ನು ದ್ವೇಷಿಸಬೇಕೆಂದು ಹೇಳುವುದಿಲ್ಲ. ರಾಕ್ಷಸರೂ ಕೂಡ ದೇವತಾರಾಧನೆಯಲ್ಲಿ ನಿರತರಾಗಿ ಇರುತ್ತಿದ್ದರೆನ್ನುವುದನ್ನು ನಾವೆಲ್ಲರೂ ಓದಿಕೊಂಡೇ ಇದ್ದೇವೆ. ಈಗಿನ ಕಾಲದಲ್ಲಿ ನಮ್ಮ ದೇಶದಲ್ಲಿ ಎಲ್ಲರಿಂದಲೂ ದೂಷಿಸಲ್ಪಟ್ಟಿರುವ ಪಂಚಮರೂ ಕೂಡ ದೇವತಾರಾಧನೆಯಲ್ಲಿ ನಿರತರಾಗಿಯೇ ಇದ್ದಾರೆ. ಹೀಗಿರುವಲ್ಲಿ ಈ ನವನಾಗರಿಕತೆಯ ಕಾಲದಲ್ಲಿ ಬ್ರಹ್ಮದ್ವೇಷವೆನ್ನುವ ಶಬ್ದವು ನಮ್ಮ ದೇಶದವರಿಗೆ ಬಹು ಹೀನವಾಗಿ ಕಾಣುತ್ತದೆ. ಯಾಕೆಂದರೆ—ಇಂಥಾ ಮಾತುಗಳು ಮಾದಕಪದಾರ್ಥಗಳನ್ನು ಸೇವಿಸುವವರು ದೇವರನ್ನು ಮರೆತು ತಾವೇ ದೇವರು, ತಾವೇ ಸರ್ವಸ್ವವು ಎಂದುಕೊಳ್ಳುವವರ ಮಾತುಗಳಂತಿರುತ್ತವೆ. ಪತ್ರಿಕೆಗಳಲ್ಲಿ ಬರೆಯುವುದನ್ನು ನೋಡಿದರೆ, ಅವರಂತೆ ಮಾನವರಲ್ಲಿ ಇನ್ನೂ ಕೆಲವರು ಏನನ್ನೋ ಹೆಚ್ಚಾಗಿ ಗ್ರಹಿಸಿ ಮದೋನ್ಮತ್ತರಾಗಿ ತಮ್ಮನ್ನು ತಾವೇ ಬ್ರಹ್ಮರೆಂತ ಅಂದುಕೊಳ್ಳುತ್ತಾ ಬ್ರಹ್ಮನನ್ನು ಮರೆತು ನಿಜವಾಗಿಯೂ ಬ್ರಹ್ಮದ್ವೇಷಿಗಳಾಗಿ ತಮ್ಮನ್ನು ಯಾರಾದರೂ ದ್ವೇಷಿಸಿದಲ್ಲಿ ಅವರನ್ನು ಬ್ರಹ್ಮದ್ವೇಷಿಗಳೆಂದು ಅಂದುಕೊಳ್ಳುತ್ತಿರುವಂತೆ ತೋರುತ್ತದೆ. ಆದುದರಿಂದ ಈ ನಾಸ್ತಿಕರಾದ ಬ್ರಹ್ಮರನ್ನು ಮದದಿಂದ ಇಳಿಸುವುದಕ್ಕೆ ಆಸ್ತಿಕರೆಲ್ಲಾ ಪ್ರಯತ್ನಪಡೋಣ. ಯಾಕೆಂದರೆ—ಅವರು ಅಮದೋನ್ಮತ್ತತೆಯಿಂದ ಚನ್ನಾಗಿ ಓದಿ ಕೆಲಸಗಳನ್ನು ಮಾಡಿ ಎಂದು ಬುದ್ಧಿವಾದ ಹೇಳುವುದನ್ನು ಬಿಟ್ಟು, ಓದುವುದನ್ನೇ ಬಿಟ್ಟು ನಶ್ಯ, ಸೇಂದಿ, ಸರಾಯಿ, ಅವಲಕ್ಕಿ ಇಂಥಾ ಅಂಗಡಿಗಳನ್ನು ಇಡಿರಿ, ಎಂದು ವಿದ್ಯಾರ್ಥಿಗಳಿಗೆ ಹೇಳಲಿಕ್ಕಾರಂಭಿಸಿದ್ದಾರೆ. ವಿದ್ಯೆ ಹರಡುವವರನ್ನೆಲ್ಲಾ ಬೈಯ್ಯುವುದಕ್ಕೂ ಸಹ ಪ್ರಾರಂಭಿಸಿದ್ದಾರೆ. ಆದ ಪ್ರಯುಕ್ತ ಮೈಮರೆತಿರುವ ಆ ನಾಸ್ತಿಕರನ್ನೆಲ್ಲಾ ನಾವೆಲ್ಲರೂ ಆಸ್ತಿಕರನ್ನಾಗಿ ಮಾಡಲು ತಕ್ಕ ಪ್ರಯತ್ನ ಮಾಡೋಣ. ಒಬ್ಬ ಆಸ್ತಿಕ.

ಗಾಡಿಕೊಪ್ಪದಲ್ಲಿ ನಿರ್ಬಂಧ ವಿದ್ಯಾಭ್ಯಾಸ.

ಶಿವಮೊಗ್ಗಾ ತಾಲ್ಲೋಕು ಗಾಡಿಕೊಪ್ಪಕ್ಕೆ ನಮ್ಮ ದಯಾಳು ಸರ್ಕಾರದವರು ಗ್ರಾಂಟ್ ಸ್ಕೂಲನ್ನು ಮಂಜೂರುಮಾಡಿ 3-4 ವರುಷವಾದರೂ ವಿದ್ಯಾಭಿವೃದ್ಧಿಯು ಹೀನಸ್ಥಿತಿಯಲ್ಲಿಯೇ ನಿದ್ರಿಸುತ್ತ ಇತ್ತು. ಈಗ ವರ್ಗವಾಗಿ ಬಂದಿರುವ ಸ್ಕೂಲು ಮಾಸ್ಟರು ಎಸ್. ಲಿಂಗಪ್ಪನವರು ಮೇ ತಾ|| 22 ನೆ ಗುರುವಾರ ಸಾಯಂಕಾಲ 3 ಗಂಟೆಯಲ್ಲಿ ಪಟೇಲರು ಮೆಂಬರುಗಳು ಮೊದಲಾದ ಗ್ರಾಮಸ್ಥರನ್ನು ಸೇರಿಸಿ ಸಭಾಮಾಡಿ, 18 ನೆ ತಾ|| ಸ್ಟಾರು ಇವುಗಳಲ್ಲಿ ಪ್ರಕಟವಾಗಿರುವ ನಮ್ಮ ದಿವಾನ್ ಸಾಹೇಬರವರು ಕೊಟ್ಟಿರುವ ವಿದ್ಯಾಭಿವೃದ್ಧಿಯ ಭಾಷಣವನ್ನು ಮತ್ತು ಗ್ರಾಮಾಭಿವೃದ್ಧಿಯನ್ನು ಸಹ ಓದಿ ಹೇಳಿದರು. ಗ್ರಾಮಸ್ಥರು ಬಾಲಕರನ್ನು ಸ್ಕೂಲಿಗೆ ಕಳುಹಿಸುವುದಕ್ಕೆ ನಮ್ಮಿಂದ ಸಾಧ್ಯವಾಗಲಾರದು. ನಮಗೆ ಅನೇಕ ಕೆಲಸ; ಕಳುಹಿಸುವುದಿಲ್ಲವೆಂದು ಚರ್ಚೆ ಮಾಡಿದರು. ಅವರಿಗೆ ತಕ್ಕ ನೀತಿಮಾರ್ಗಗಳನ್ನೂ ಮತ್ತು ವಿದ್ಯಾಭಿವೃದ್ಧಿಯಿಂದ ಆಗುವ ಸೌಕರ್ಯಗಳನ್ನು ಸಹ ಹೇಳಿದರು. ಅದಕ್ಕೂ ಸಹ ಒಪ್ಪಲಿಲ್ಲವಾದ್ದರಿಂದ ನೀವುಗಳು ಬಾಲಕರನ್ನು ಸ್ಕೂಲಿಗೆ ಕಳಿಸದೆ ಇದ್ದರೆ 25 ರೂಪಾಯಿ ಜುಲ್ಮಾನೆ ವಿಧಿಸಲ್ಪಡುವುದಾಗಿ ಒಂದು ಕರಾರು ಪತ್ರವನ್ನು ಬರೆದು ಇಟ್ಟರು. ಅನಂತರ ಸ್ವಲ್ಪ ಭಯಸ್ಥರಾಗಿ ತಲೆಬಾಗಿ 16 ಜನರು ಬಾಲಕರನ್ನು ಕಳುಹಿಸುವುದಾಗಿ ಕರಾರು ಪತ್ರಕ್ಕೆ ರುಜುಮಾಡಿದರು. ಇನ್ನು ಉಳಿದವರು ಚರ್ಚೆ ಮಾಡುತ್ತ ಇದ್ದಾರೆ. ಈ ಮಾಸ್ತರೇ ಇನ್ನು 3-4 ವರುಷ ಇದ್ದರೆ ಗ್ರಾಮಾಭಿವೃದ್ಧಿಯೂ ವಿದ್ಯಾಭಿವೃದ್ಧಿಯೂ ಸಹ ಆಗುವುದಕ್ಕೆ ತುಂಬಾ ಅನುಕೂಲವಾಗುತ್ತದೆ. ಬಾಲಕರಿಂದ ಗುರುಪ್ರಾರ್ಥನೆ ದೇವತಾಪ್ರಾರ್ಥನೆಯನ್ನೂ ಮಂಗಳವನ್ನೂ ಹೇಳಿಸಿ, ತರುವಾಯ ಸಭಾಧ್ಯಕ್ಷರಿಗೂ ಸಭಿಕರಿಗೂ ಗಂಧಪುಷ್ಪ ತಾಂಬೂಲ ಹಂಚಲ್ಪಟ್ಟು ಸಭೆಯು 6 ಘಂಟೆಗೆ ಜಯಧ್ವನಿಯಿಂದ ಬರಖಾಸ್ತಾಯಿತು. ಈ ಜೂನ್ ತಿಂಗಳು 9 ರಲ್ಲಿ ಅಸಿಸ್ಟೆಂಟ್ ಡೆಪ್ಟಿ ಇನ್ಸ್ಪೆಕ್ಟರ್ ಸಾಹೇಬರವರಿಂದ ಶ್ರೀಮನ್ ಮಹಾರಾಜ ಸಾಹೇಬರವರ ಭಾವಚಿತ್ರ ಫೋಟೋವನ್ನು ತಂದು ಗ್ರಾಮಸ್ಥರಿಂದ 6 ರೂಪಾಯಿ ಚಂದಾ ವಸೂಲುಮಾಡಿ ಬಾಲಕರಿಗೆ ಮಿಠಾಯಿಯನ್ನು ತಂದು ಕದಳಿ ಕಂಬಗಳಿಂದಲೂ ತಳಿರುತೋರಣಗಳಿಂದಲೂ ಸ್ಕೂಲ್ ಮುಂಭಾಗವನ್ನು ಶೃಂಗರಿಸಿ ಫೋಟೋವನ್ನು ಪುಷ್ಪಗಳಿಂದ ಅಲಂಕರಿಸಿ ಗ್ರಾಮಸ್ಥರನ್ನು ಬರಮಾಡಿಕೊಂಡು ವಾದ್ಯಘೋಷವನ್ನು ಮಾಡಿ, ಪಿಟೀಲನ್ನು ತಬಲವನ್ನು ಸಹ ತರಿಸಿ ಸಂಗೀತ ಹಾಡುಗಳನ್ನು ಬಾಲಕರಿಂದ ಹೇಳಿಸಿ ತರುವಾಯ ವಿದ್ಯಾಭಿವೃದ್ಧಿಯನ್ನು ಕುರಿತು ಉಪನ್ಯಾಸಮಾಡಿದರು. ಗ್ರಾಮಸ್ಥರು ತುಂಬಾ ಸಂತೋಷಪಟ್ಟರು. ಬಾಲಕರಿಗೆ ಮಿಠಾಯಿಯೂ ಸಭಿಕರಿಗೆ ಗಂಧಪುಷ್ಪ ತಾಂಬೂಲಾದಿಗಳೂ ಹಂಚಲ್ಪಟ್ಟ ತರುವಾಯ ಪ್ರಜೆಗಳು ನಮ್ಮ ಶ್ರೀಮನ್ ಮಹಾರಾಜರವರಿಗೆ ಯಾವಾಗಲೂ ಜಯವಾಗಲೆಂದು ಜಯಧ್ವನಿಯನ್ನು ಮಾಡಿಕೊಂಡು ಹೊರಟುಹೋದರು.

ಪುರವಾಸಿ.

ಇನ್ಫ್ಲುಯನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 1

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲು ೧ಕ್ಕೆ ೦—೮—೦ ವಿ. ಪಿ. ಚಾರ್ಜು ೦—೪—೨.
ಡಜನ್ ೧ (ಬಾಟ್ಲುಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಡಿಸನ್ನು ಬಾಟ್ಲು ೧ಕ್ಕೆ ರೂ. ೨—೮—೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕಟೌನ್ ಮದರಾಸು.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷ್ನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟಕರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ಸತ್ಕೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ. ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ)

5 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 32

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.
ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
23 ಸಾಹುಕಾರಪೇಟೆ, ಮದರಾಸ್.

೧೯೧೯ ನೆಯ ಇಸವಿ ಜುಲೈ ತಾ|| ೧೩ ರಿಂದ ೧೯೧೯ ನೆಯ ಜುಲೈ ತಾ|| ೧೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಷಾಢ ಶು|| ಪೌರ್ಣಿಮೆಯಿಂದ ಆಷಾಢ ಬ|| ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿ.ಕ ಮಾಸ
13	ಭಾನು	ಪೌರ್ಣ	10-47	ಪೂಷಾ	10-21	29
14	ಸೋಮ	ಪಾಡ್ಯ	11-57	ಉಷಾ	13-13	30
15	1 ಮಂಗಳ	ಬಿದಿಗೆ	11-51	ಶ್ರವಣ	14-51	31
16	2 ಬುಧ	ತದಿಗೆ	10-28	ಧನಿಷ್ಠ	15-16	1
17	ಗುರು	ಚೌತಿ	8-53	ಶತಭಿಷ	14-33	2
18	3 ಶುಕ್ರ	ಪಂಚ	4-21	ಪೂಭಾ	12-46	3
19	4 ಶನಿ	ಷಷ್ಠಿ	0-2	ಉಭಾ	55-9	4

(1) ಮೇಲುಕೋಟೆಯಲ್ಲಿ ಮಹಾಭಿಷೇಕ ಮತ್ತು ಕಲ್ಯಾಣೋತ್ಸವ. (2) ದಕ್ಷಿಣಾಯನ ಪುಣ್ಯಕಾಲ. (3) ಟೀಕಾಚಾರರ ಪುಣ್ಯದಿನ, ಆಡಿಶುಕ್ರವಾರ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ. (4) ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ಯಬ್ಜ ನಕ್ಷತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಜುಲೈ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಚ್ಚಿ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
24 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧— ೦—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦— ೫—೦
ಹರಿದಾಸಿ	೦— ೪—೦
ವೃಷಪಂಚಕ	೦— ೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
24 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

41 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

31

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಒರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಕೋಶೋತ್ಪತ್ತಿ ವಿಚಾರ, ಕೋಟೀಚಕ್ರ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಣವೆ, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

24 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸ

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುವಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
31 ವೈದ್ಯಶಾಲಾ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.
ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
24 ಸಾಹುಕಾರಪೇಟೆ, ಮದರಾಸ್.

ಶುಭವಾರ್ತೆ! **ಸಂತೋಷವಾರ್ತೆ!!**

ಶ್ರೀಮದ್ಯುವರಾಜರವರಿಗೆ ಪುತ್ರೋತ್ಸವವು.

ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್‌ರವರ ಧರ್ಮಪತ್ನಿಯವರ ಗರ್ಭಸುಧಾಂಬುಧಿಯಲ್ಲಿ ಸತ್ಪುತ್ರರತ್ನಜನನವು ಕಳೆದ ಶುಕ್ರವಾರ ಸಾಯಂಕಾಲ ೬-೨೦ ಗಂಟೆಗೆ ಆಯಿತೆಂಬ ಶುಭವಾರ್ತೆಯನ್ನು ತಿಳಿಯಿಸಲು ಅತ್ಯಂತ ಸಂತೋಷವುಳ್ಳವರಾಗಿದ್ದೇವೆ. ಶ್ರೀ ಜಗದೀಶ್ವರನು ಮೈಸೂರು ರಾಜವಂಶವನ್ನು ಈ ಸಂತಾನರತ್ನಜ್ಯೋತಿಯಿಂದ ಬೆಳಗುವಂತೆ ಅನುಗ್ರಹಿಸಿದುದಕ್ಕಾಗಿ ಸಂಸ್ಥಾನದ ಸಕಲ ಪ್ರಜೆಗಳೊಡನೆ ನಾವೂ ಸಂತೋಷಿಸಿ ವೀರಶೈವ ಸಮಾಜದ ಪರವಾಗಿ ಆನಂದಾಭಿನಂದನಗಳನ್ನು ಶ್ರೀಮನ್ಮಹಾರಾಜ ಸಹೋದರರ ಸನ್ನಿಧಿಯಲ್ಲಿ ಈ ಮೂಲಕವಾಗಿ ಸಮರ್ಪಿಸುತ್ತೇವೆ.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜುಲೈ ತಾ|| ೨೦ ನೆಯ ಭಾನುವಾರ.

ನೂತನೋತ್ಸವಗಳು.

ಈಗಣ ಸಮಯವು ಪ್ರಪಂಚಕ್ಕೆಲ್ಲಾ ನೂತನಯುಗವನ್ನು ಉಂಟುಮಾಡುವ ಮಹೋತ್ಸವಕಾಲವಾಗಿರುವುದು. ಜಗದ್ಭೀಕರವಾದ ಯುದ್ಧವು ಕೊನೆಗಂಡು, ಲೋಕವೆಲ್ಲಾ ಪೂರ್ವದಂತೆ ಚೇತರಿಸಿಕೊಂಡು ಶಾಂತಿಸೌಖ್ಯಗಳನ್ನು ಅನುಭವಿಸುವುದಕ್ಕೆ ಸಾಧನವಾದ ಶಾಶ್ವತಸಂಧಿಯು ಉಭಯಪಕ್ಷದವರಿಗೂ ಉಂಟಾದ ಮಹೋತ್ಸವವು ಎಲ್ಲಕ್ಕೂ ಮೊದಲನೆಯದಾಗಿರುವುದು. ಯುದ್ಧಪರಿತಾಪದ ಜತೆಗೆ ಕಳೆದ ೧-೨ ವರ್ಷಗಳಲ್ಲಿ ಮಳೆಬೆಳೆಗಳು ಕಡಿಮೆಯಾದುದರಿಂದ ದುರ್ಭಿಕ್ಷವು ಕಾಲಿಕ್ಕಿ, ಆದರಿಂದ ಅಭೂತಪೂರ್ವಗಳಾದ ದುರ್ಭರಸಂಕಟಗಳನ್ನು ಅನುಭವಿಸಿದ ಪ್ರಜೆಗಳು ಈ ಸಲದ ಮುಂಗಾರಿನ ಸುಲಕ್ಷಣದಿಂದ ಪಚ್ಚೆಮರಳುತ್ತಿರುವ ಪೈರುಗಳನ್ನೂ, ಕೆಲ ನೂತನಧಾನ್ಯಗಳು ಆಗಲೇ ಮಾರಾಟಕ್ಕೆ ಬಂದುದನ್ನೂ, ಬೆಲೆಯ ಇಳಿಯುವಿಕೆಯನ್ನೂ, ಕಂಡು ಸಮಾಧಾನಮನಸ್ಕರಾಗಲವಕಾಶವಾಗಿರುವುದು ೨ ನೆಯ ಮಹೋತ್ಸವವು. ಸ್ವದೇಶ ವಿದೇಶಗಳ ವ್ಯಾಪಾರವು ಇನ್ನು ಮೇಲೆ ನಿರರ್ಗಳವಾಗಿ ನಡೆದು ಪದಾರ್ಥಗಳ ಬೆಲೆಯು ಪೂರ್ವದ ಸ್ಥಿತಿಗೆ ಇಳಿಯಲವಕಾಶವಾಯಿತೆಂದು ತಿಳಿದು ಬಡಬಗ್ಗರಾದಿಯಾಗಿ ಸರ್ವರೂ ನಿರೀಕ್ಷಿಸಲವಕಾಶವಾದುದು ೩ ನೆಯ ಮಹೋತ್ಸವವು. ಇವುಗಳ ಜತೆಗೆ ರಣದೇವತೆಗೆ ಬಲಿಯಾದವರು ಹೋಗುತ ಕಳೆದುಳಿದ ಸೈನಿಕರು ಜಯಲಕ್ಷ್ಮಿಯ ಕಟಾಕ್ಷಕ್ಕೆ ಪಾತ್ರರಾಗಿ ತಂತಮ್ಮ ದೇಶಗಳಿಗೆ ಬಂದು ಸ್ವಕೀಯರಿಗೆ ಮುಖಬಿಂಬವನ್ನು ತೋರಿಸಿ ಪರಸ್ಪರವಾಗಿ ಮಹಾನಂದ ಪಡುವ ವಿಶೇಷೋತ್ಸವವು ಸಾಮಾನ್ಯವಾಗಿರುವುದಿಲ್ಲ. ನೂತನ ರಾಜಕೀಯ ಸಂಸ್ಕರಣ ಪ್ರಾಪ್ತಿಯ ಸುಮುಖತ್ವವನ್ನು ಕಂಡು ನಲಿದಾಡುವಂಥ ಸ್ಥಿತಿಯು ಭರತಖಂಡಕ್ಕೆ ಪ್ರಾಪ್ತವಾಗಿರುವುದುಕೂಡ ಗಣನೀಯವಾದ ಮಹೋತ್ಸವವೇ. ಇಂಥ ಮಹೋತ್ಸವಗಳು ದೇಶದಲ್ಲೆಲ್ಲಾ ತುಂಬಿ ತುಳುಕುತ್ತಿರುವಾಗ ನಮ್ಮ ಮೈಸೂರು ಸಂಸ್ಥಾನವು ಅದಕ್ಕೆ ಭಿನ್ನವಾಗಿದ್ದೀತೆ? ಇಲ್ಲೂ ಕೂಡ ನವನವೋತ್ಸವಗಳು ಮಿಗಿಲಾಗಿಯೇ ಇರುವುವು. ಸಂಸ್ಥಾನದ ಮಂತ್ರಿಪದವಿಯಲ್ಲಿ ನೂತನವಾಗಿ ಕಂಡುಬಂದಿರುವ ಬದಲಾವಣೆಯು ದೇಶದಲ್ಲೆಲ್ಲಾ ಅನಿರ್ವಚನೀಯವಾದ ಒಂದು ಸಂತೃಪ್ತಿಯನ್ನು ಪಡೆದಂತೆ ಉಲ್ಲಾಸವನ್ನುಂಟುಮಾಡಿರುವುದು. ಇದಕ್ಕೆ ಕಾರಣವಿಲ್ಲದೆ ಇಲ್ಲ. ಹಿಂದೆ ಈ ಮಂತ್ರಿಪದವಿಗೆ ಬಂದಿದ್ದವರಲ್ಲಿ ಸಿ. ರಂಗಾಚಾರ್ಯರೂ, ಸರ್ ಶೇಷಾದ್ರಿ ಅಯ್ಯರೂ, ವಿ. ಪಿ. ಮಾಧವರಾಯರೂ ಸಹ ಪರದೇಶೀಯರು; ಸರ್ ಕೃಷ್ಣಮೂರ್ತಿಗಳೂ, ಟಿ. ಆನಂದರಾಯರೂ, ಸರ್ ವಿಶ್ವೇಶ್ವರಯ್ಯನವರೂ ಸಹ ಸ್ವದೇಶೀಯರೇ ಆಗಿದ್ದರೂ ಮ|| ಸರ್ದಾರ್ ಕಾಂತರಾಜಅರಸಿನವರಿಗಿರುವಷ್ಟು ಮೈಸೂರುದೇಶದ ಪ್ರಾಚೀನಸಂಬಂಧವೂ, ರಾಜವರ್ಗ ಬಾಂಧವ್ಯರೂಪ ವಿಶೇಷಲಕ್ಷಣವೂ ಅವರಿಗಿರಲಿಲ್ಲ. ದೇಶದ ಸಕಲ ಪ್ರಜೆಗಳನ್ನೂ ಸಮತೋಲನೆಯಿಂದ ಅಭಿವೃದ್ಧಿಗೆ ತರುವ ವಿಷಯದಲ್ಲಿ ಶ್ರೀಮನ್ಮಹಾರಾಜಸಹೋದರರಿಗೆ ಇರುವಷ್ಟು ಬಾಧ್ಯತೆಯೂ ಅಭಿಮಾನವೂ ಇತರರಾರಿಗೂ ಇರುವುದಿಲ್ಲವೆಂಬುದು ಸಿದ್ಧವು. ರಕ್ತಸಂಬಂಧದಿಂದ ಆ ವಿಶಿಷ್ಟಗುಣವು ಈಗಣ ನಮ್ಮ ದಿವಾನರಲ್ಲೂ ಅನುಸ್ಯೂತವಾಗಿರುವುದರಿಂದ, ದೇಶೋದ್ಧಾರದ ವಿಷಯದಲ್ಲಿ ಬದ್ಧಕಂಕಣರಾಗಿರುವ ಮೂರ್ತಿದ್ವಯದ ಜತೆಗೆ ನಮ್ಮ ಸರ್ದಾರರೂ ಮಿಳಿತರಾದುದು, ಲೋಕಕಲ್ಯಾಣಕ್ಕಾಗಿ ತ್ರಿಮೂರ್ತಿಗಳ ಆವಿರ್ಭಾವವಾದಂತೆ ನಮ್ಮ ದೇಶದ ಭಾಗ್ಯೋದಯಕ್ಕಾಗಿ ಶ್ರೀಮನ್ಮಹಾರಾಜ, ಶ್ರೀಮದ್ಯುವರಾಜ, ಶ್ರೀಮತ್ ಕಾಂತರಾಜರೆಂಬ ರಾಜತ್ರಯದ ಸಂಯೋಗವು ಲಭಿಸಿತೆಂದು ಭಾವಿಸಬೇಕಾಗಿರುವುದು. ರಾಜ (ಚಂದ್ರ) ನೊಬ್ಬನೇ ಲೋಕಾಹ್ಲಾದಕನಾಗಿರುವಾಗ ರಾಜತ್ರಯದ ಲೋಕಾಹ್ಲಾದಕತ್ವದ ಪರಿಮಿತಿಯನ್ನು ಹೇಳಲಾದೀತೆ? ಈ ಮೂರ್ತಿತ್ರಯದ ಆಧಿಪತ್ಯತ್ರಯವು ಮೈಸೂರು ಸಂಸ್ಥಾನಕ್ಕೆ ವಿಶೇಷಾಭ್ಯುದಯಕರವಾಗುವುದೆಂಬುದು ವಿಶೇಷಮಹೋತ್ಸವಸ್ಥಾನವಾಗಿದೆ.

ಇದೆಲ್ಲಕ್ಕೂ ಮಿಗಿಲಾದುದು ನಮ್ಮ ರಾಜವಂಶದಲ್ಲಿ ಕುಲದೀಪಕವಾದ ಸಂತಾನರತ್ನವು ಶ್ರೀಮದ್ಯುವರಾಜರವರಿಗೆ ಸಂಭವಿಸಿದ ವಿಷಯವಾಗಿರುತ್ತದೆ. ದೇಶೀಯರೆಲ್ಲರೂ ಪ್ರತಿಕ್ಷಣದಲ್ಲೂ ನಿರೀಕ್ಷಿಸುತ್ತ, ಶ್ರೀ ಜಗದ್ರಕ್ಷಕ ಶ್ರೀಕಂಠೇಶ್ವರನನ್ನೂ ಶ್ರೀ ಜಗದಂಬಾ ಚಾಮುಂಡೇಶ್ವರಿಯನ್ನೂ ಕುರಿತು ಮಾಡುತ್ತಿದ್ದ ಪ್ರಾರ್ಥನೆಯು ಈಗ ಸಫಲವಾದಂತಾಯಿತು. ಸಂಧಿಮಹೋತ್ಸವಾನುಭವದಿನಗಳಲ್ಲೇ ಈ ರಾಜಪುತ್ರೋತ್ಸವಾನಂದಾನುಭವವನ್ನೂ ಮಾಡುವ ಯೋಗವು ಮೈಸೂರು ಪ್ರಜೆಗಳಿಗೆ ಲಭಿಸಿದುದು ಈ ದೇಶೀಯರ ಭಾಗ್ಯೋದಯವಾಗಿರುವುದು. ಇಂಥ ಮಹೋತ್ಸವಪರಂಪರೆಯನ್ನು ನಮ್ಮಗಳಿಗೆ ಅನುಗ್ರಹಿಸಿದ ಜಗದೀಶನಿಗೆ ಕೃತಜ್ಞತೆಯಿಂದ ವಂದನೆಗಳನ್ನರ್ಪಿಸೋಣ.

ಶಿಕ್ಷೆಯನ್ನು ಮನ್ನಿಸುವುದು.

ಸಂಧಿಯು ನಡೆದುಹೋದುದರ ಸಂತೋಷಾರ್ಥವಾಗಿಯೂ ಗೌರವಾರ್ಥವಾಗಿಯೂ ನಮ್ಮ ಚಕ್ರವರ್ತಿಯವರು ಭರತಖಂಡದಲ್ಲಿರುವ ಕಾರಾಗೃಹನಿವಾಸಿಗಳ ಶಿಕ್ಷೆಯನ್ನು ಕಡಿಮೆಮಾಡುವ ಮತ್ತೂ ಪೂರ್ಣವಾಗಿ ಮನ್ನಿಸಿಬಿಟ್ಟುಬಿಡುವ ಕೃಪೆಯನ್ನು ತೋರಿಸಿರುತ್ತಾರೆಂಬುದನ್ನು ತಿಳಿಯಿಸಲು ಸಂತೋಷಿಸುತ್ತೇವೆ. ಅದರ ವಿವರಣವು ಹೇಗೆಂದರೆ—೧ ತಿಂಗಳ ಕಾರಾಗೃಹಶಿಕ್ಷೆ ವಿಧಿಸಲ್ಪಟ್ಟು ಅದರಲ್ಲಿ ಸ್ವಲ್ಪ ಕಾಲವನ್ನನುಭವಿಸಿರುವ ಬಂದಿಗಳನ್ನೆಲ್ಲಾ ಕೂಡಲೇ ಬಿಟ್ಟುಬಿಡಬೇಕು. ೧ ತಿಂಗಳಿಗೆ ಮೇಲೆ ೬ ತಿಂಗಳುಗಳಿಗೆ ಕಡಿಮೆಯಿಲ್ಲದ ಕಾರಾಗೃಹವಾಸಶಿಕ್ಷೆಯನ್ನು ಹೊಂದಿರುವ ಬಂದಿಗಳಿಗೆ ೧೫ ದಿನಗಳ ಕಾಲದ ಶಿಕ್ಷೆಯು ತಗ್ಗಿಸಲ್ಪಡಬೇಕು. ೧ ವರ್ಷ ಕಾರಾಗೃಹವಾಸಶಿಕ್ಷೆಯನ್ನು ಹೊಂದಿದವರಿಗೆ ವರ್ಷಕ್ಕೆ ೧ ತಿಂಗಳಂತೆ ಕಡಿಮೆಹಾಕಲ್ಪಡಬೇಕು. ಅದರಂತೆ ಅಂಡಮಾನ್ ದ್ವೀಪವಾಸದ ಶಿಕ್ಷೆಯನ್ನು ಹೊಂದಿರುವವರ ಶಿಕ್ಷೆಯೂ ವರ್ಷಕ್ಕೆ ೧ ತಿಂಗಳಂತೆ ಶಿಕ್ಷಾಕಾಲವು ಕಡಿಮೆಮಾಡಲ್ಪಡಬೇಕು. ಆದರೆ ಹೀಗೆ ಮನ್ನಿಸಲ್ಪಡುವವರೆಲ್ಲಾ ಸತ್ಪವರ್ತನೆಯುಳ್ಳವರಾಗಿದ್ದಿರಬೇಕು. ಮತ್ತೂ ಹೀಗೆ ಬಿಡಲ್ಪಡುವ ಗಂಡಸರ ಒಟ್ಟು ಸಂಖ್ಯೆಯು ೧೦೦ ಕ್ಕೆ ೧೦ ಕ್ಕಿಂತ ಹೆಚ್ಚಾಗಕೂಡದು. ಸಾಮಾನ್ಯವಾದ ತಪ್ಪಿತವನ್ನು ಮಾಡಿ ಶಿಕ್ಷಿತರಾಗಿರುವ ಸ್ತ್ರೀಯರನ್ನೆಲ್ಲಾ ಬಿಟ್ಟುಬಿಡಬೇಕು. ದ್ವೀಪಾಂತರವಾಸಶಿಕ್ಷೆಗೊಳಪಟ್ಟಿರುವವರಲ್ಲಿ ೪೦೦ ಮಂದಿಯನ್ನು ಬಿಡುಗಡೆ ಮಾಡಬೇಕು. ಮತ್ತು ೧೦೦ ರೂ. ಗಳಿಗೆ ಒಳಪಟ್ಟ ಸಾಲದ ಹಣವನ್ನು ತೀರಿಸಲಾರದೆ ಸಿವಿಲ್ ಕಾರಾಗೃಹವಾಸವನ್ನನುಭವಿಸುತ್ತಿರುವವರನ್ನೆಲ್ಲಾ ಬಿಡುಗಡೆಮಾಡಿ, ಅವರ ಸಾಲವನ್ನು ಸರ್ಕಾರದವರೇ ಕೊಟ್ಟು ತೀರಿಸಬೇಕು. ಈ ರೀತಿಯಾಗಿ ದಯಾಪೂರ್ವಕವಾದ ಅಪ್ಪಣೆಯನ್ನು ಮಾಡಿದ ನಮ್ಮ ಸಾರ್ವಭೌಮರು ಭಾರತೀಯರ ಚಿರಕೃತಜ್ಞತೆಗೂ ವಂದನೆಗೂ ಪಾತ್ರರಾಗಿದ್ದಾರೆ.

ಕೈಜರರ ವಿಚಾರಣೆ.

ಜಗತ್ತಿನವರೆಲ್ಲರೂ ಈಗ ಕೈಜರ್ ವಿಚಾರಣೆಯ ವಿಷಯವನ್ನೇ ಮುಖ್ಯವಾಗಿ ಚರ್ಚಿಸುತ್ತಿದ್ದಾರೆ. ಕೈಜರರನ್ನು ಹಿಡಿದುತಂದಂತೆ ಇದುವರೆಗೂ ಸುದ್ದಿಬಂದಿಲ್ಲ. ಆದರೆ ಅವರ ವಿಚಾರಣೆಯನ್ನು ನಡೆಯಿಸುವ ವಿಧಾನವನ್ನು ಕುರಿತು ಯೂರೋಪಿನ ವರ್ತಮಾನಪತ್ರಿಗಳು ತರತರವಾಗಿ ಊಹೆಗಳನ್ನು ಮಾಡುತ್ತಿವೆ. ವಿಚಾರಣೆಗಾಗಿ ಕೈಜರರನ್ನು ಕಳುಹಿಸಿಕೊಡಬೇಕೆಂದು ಮಿತ್ರಮಂಡಲಿಯವರೇನೋ ಬರೆಯುವರು. ಆದರೆ ಕೈಜರು ಬರುವ ವಿಷಯದಲ್ಲಿ ನನಗೆ ಸ್ವಲ್ಪ ಅನುಮಾನವಿರುವುದೆಂದು ಜನರಲ್ ಸೀಲಿಯವರು ಕಳೆದ ತಾ|| ೨೯ ರಲ್ಲಿ ನುಡಿದಿರುವರು. ಈ ಸಂದೇಹವನ್ನು ವೃತ್ತಪತ್ರಿಕೆಗಳು ಲಕ್ಷ್ಯಮಾಡಿಲ್ಲ. ಅದು ಮಿತ್ರಮಂಡಲಿಗೂ ಹಾಲೆಂಡಿಗೂ ಸಂಬಂಧಿಸಿದ ವಿಷಯವೆಂದು ಪತ್ರಿಕೆಗಳು ಬರೆದಿರುತ್ತವೆ. ಮಿತ್ರಮಂಡಲಿಯವರು ಸಣ್ಣಸಣ್ಣ ರಾಷ್ಟ್ರಗಳ ಸಂರಕ್ಷಣಭಾರವನ್ನು ವಹಿಸಿರುವ ಕಾರಣದಿಂದ ಅವರು ಆ ತಮ್ಮ ಅಧಿಕಾರದಿಂದ ಕೈಜರನ್ನು ದೇಶದಿಂದ ಹೊರಕ್ಕೆ ಕಳುಹಿಸಬೇಕೆಂದು ಹಾಲೆಂಡಿನವರಿಗೆ ಬರೆಯುವರು. ಹಾಗೆ ಮಾಡುವುದರಲ್ಲಿ ಹಾಲೆಂಡಿನವರಿಗೆ ಇರತಕ್ಕ ಸ್ವತಂತ್ರವಾದ ಬಾಧ್ಯತೆಗಳನ್ನೆಲ್ಲಾ ಮಿತ್ರಮಂಡಲಿಯವರು ರಕ್ಷಿಸಿಯೇ ಇರುವರು. ಹೀಗೆ ಮಿತ್ರಮಂಡಲಿಯವರು ಹಾಲೆಂಡಿಗೆ ಬರೆಯತಕ್ಕ ಪತ್ರವು ಅಂತ್ಯಸಂದೇಶ ರೂಪವಾಗಿಯಾಗಲೀ ಯುದ್ಧಕ್ಕೆ ಆಹ್ವಾನರೂಪವಾಗಿಯಾಗಲೀ ಇರುವುದಿಲ್ಲವೆಂದು ಆ ಪತ್ರಿಕೆಗಳೇ ಅಭಿಪ್ರಾಯಪಟ್ಟಿರುತ್ತವೆ. ವಿಚಾರಣೆಯಲ್ಲಿ ಕೈಜರು ದೋಷಿಯೆಂಬುದು ಸಿದ್ಧವಾದರೆ ಆತನಿಗೆ ಮರಣದಂಡನೆಯನ್ನೋ ಅಥವಾ ಜೀವಾಂತ ದ್ವೀಪಾಂತರವಾಸಶಿಕ್ಷೆಯನ್ನೋ ವಿಧಿಸಬೇಕೆಂದು ಕೆಲವರು ಬರೆದಿರುತ್ತಾರೆ. ಮರಣದಂಡನೆಯನ್ನು ವಿಧಿಸಬೇಕು. ಇಲ್ಲದಿದ್ದರೆ ಸಂಪೂರ್ಣವಾಗಿ ಆತನನ್ನು ಬಿಟ್ಟುಬಿಡಬೇಕು. ಇವೆರಡರಹೊರತು ಮೂರನೆ ಮಾರ್ಗವಾವುದೂ ಕೂಡದೆಂದು ಇನ್ನೊಬ್ಬರು ಬರೆದಿದ್ದಾರೆ. ಯುದ್ಧಕ್ಕೆ ಕಾರಣಭೂತರಾದ ಕೈಜರಗೇ ಮೊದಲಾದವರನ್ನು ವಿಚಾರಣೆಮಾಡಿಯೇ ತೀರಬೇಕೆಂದು ಇಂಗ್ಲೀಷ್ ಫ್ರೆಂಚ್ ಬೆಲ್ಜಿಯಂ ಪ್ರತಿನಿಧಿಗಳು ಪಟ್ಟುಹಿಡಿದರು. ಅದಕ್ಕೆ ಮೊದಮೊದಲು ಅಮೇರಿಕಾದವರು ಒಪ್ಪಿರಲಿಲ್ಲ. ಕಡೆಗೆ ಅವರೂ ಒಪ್ಪಿದರು. ಲಂಡನ್ನಿನಲ್ಲಿ ವಿಚಾರಣೆಯು ನಡೆಯುವುದು. ಲಂಡನ್ ಟವರಿನಲ್ಲಿ ಕೈಜರರನ್ನು ಇಡುವರೆಂದು ವಾರ್ತಾಪ್ರಚಾರಕ ಸಂಘದವರು ಪ್ರಕಟಿಸಿದ್ದಾರೆ. ವೆಸ್ಟ್‌ಮಿನ್‌ಸ್ಟರ್‌ಹಾಲು, ರಾಯಲ್‌ಗ್ಯಾಲರಿ, ಲಾರ್ಡ್‌ಸಭಾಮಂದಿರ, ಮಿಡಲ್‌ಟೆಂಪಲ್‌ಹಾಲು ಮೊದಲಾದ ಯಾವುದಾದರೊಂದು ಭವನದಲ್ಲಿ ವಿಚಾರಣೆ ನಡೆಯುವುದು. ಇಂಗ್ಲೀಷು, ಫ್ರಾನ್ಸು, ಅಮೇರಿಕಾ, ಇಟಲಿ, ಜಪಾನ್ ಈ ೫ ದೇಶಗಳ ಒಬ್ಬೊಬ್ಬ ನ್ಯಾಯಮೂರ್ತಿಗಳು ವಿಚಾರಣೆಯ ಕರ್ತರಾಗಿ ಕುಳಿತುಕೊಳ್ಳುವರು. ಅವರಿಗೆಲ್ಲಾ ಇಂಗ್ಲೀಷ್ ನ್ಯಾಯಮೂರ್ತಿಯೇ ಅಧ್ಯಕ್ಷರಾಗಿರುವರು. ಮರಣದಂಡನೆಯನ್ನು ಕೈಜರರಿಗೆ ವಿಧಿಸದೆ ಜೀವಾಂತ ನಿರ್ಬಂಧ ದ್ವೀಪಾಂತರನಿವಾಸಶಿಕ್ಷೆಯು ವಿಧಿಸಲ್ಪಡುವುದೆಂದು ಪತ್ರಿಕೆಗಳು ಹೇಳುತ್ತಿರುವುವು. ಹಾಗೆ ಆಗುವುದಿಲ್ಲವೆಂದೂ ನ್ಯಾಯಮೂರ್ತಿಗಳ ವಿಚಾರಕ್ಕೂ ನಿರ್ಧಾರಕ್ಕೂ ಅದು ಸಂಬಂಧಪಟ್ಟುದಾಗಿರುವುದೆಂದೂ ಇನ್ನು ಕೆಲ ಪತ್ರಿಕೆಗಳು ಹೇಳಿರುವುವು.

ಈ ಮಧ್ಯೆ ವಾನ್ ಹಿಂಡನ್‌ಬರ್ಗ್ ರವರು (ಜರ್ಮನಿಯ ಮುಖ್ಯ ಸೇನಾಪತಿ) ಫ್ರೆಂಚರ ಮಾರ್ಷಲ್ ಫಾಕ್‌ರವರಿಗೆ ಒಂದು ಪತ್ರವನ್ನು ಬರೆದು— ಕೈಜರರನ್ನು ಹಾಲೆಂಡಿನಲ್ಲಿ ಬಹಿಷ್ಕರಿಸಬೇಕೆಂದು ಹಾಲೆಂಡಿನವರನ್ನು ಕೋರಿಕೊಳ್ಳಬೇಕೆಂದು ಮಿತ್ರಮಂಡಲಿಯವರು ಮಾಡಿರುವ ಉದ್ದೇಶವನ್ನು ಬಿಟ್ಟುಬಿಡುವಂತೆ ನೀವು ಮಾಡಬೇಕೆಂದೂ, ಕೈಜರಿಗೆ ಪ್ರತಿಯಾಗಿ ವಿಚಾರಣೆಗೆ ಒಳಪಡುವುದಕ್ಕೂ ಎಂಥ ಶಿಕ್ಷೆಯನ್ನಾದರೂ ಅನುಭವಿಸುವುದಕ್ಕೂ ನಾನು ಸಿದ್ಧನಾಗಿರುತ್ತೇನೆಂತಲೂ ತಿಳಿಯಪಡಿಸಿಕೊಂಡಿರುವರು. ಇದಲ್ಲದೆ ಕೈಜರರ ಸಹೋದರರಾದ ಯುವರಾಜ ಹೆನ್ರಿಯವರು ನಮ್ಮ ಸಾರ್ವಭೌಮರಿಗೆ ಒಂದು ಪತ್ರವನ್ನು ಬರೆದುಕೊಂಡು ಅದರಲ್ಲಿ—ಯುದ್ಧವು ಸಂಭವಿಸದಿರುವಂತೆ ಮಾಡಲು ಕೈಜರು ಸಕಲ ವಿಧವಾಗಿಯೂ ಪ್ರಯತ್ನಿಸಿದರೆಂತಲೂ ಈ ಸಂಗತಿಯನ್ನು ರುಜುವಾತುಮಾಡಿಕೊಡುವುದಕ್ಕೂ, ಯುದ್ಧಕಾರಣವನ್ನು ವಿಚಾರಿಸುವುದಕ್ಕೂ ನಾನು ಪ್ರತ್ಯಕ್ಷವಾಗಿ ತಮ್ಮ ಸನ್ನಿಧಿಗೆ ಬರುವವನಾಗಿದ್ದೇನೆಂತಲೂ ಶ್ರುತಪಡಿಸಿಕೊಂಡಿರುವರು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಟ್ಟಣದಲ್ಲೂ ಆ ಡಿಸ್ಟ್ರಿಕ್ಟಿನ ಎಲ್ಲಕಡೆಯೂ ಹದವಾದ ಮಳೆಗಳು ನಡೆದಿವೆಯೆಂದು ಕೇಳಿ ಸಂತೋಷಿಸುತ್ತೇವೆ.

ಮಿ|| ಎಫ್. ಎಂ. ಅಬ್ದುಲ್ ಖುದ್ದೂಸ್‌ಸಾಬರು ಚನ್ನಪಟ್ಟಣದ ಮ್ಯು|| ಕೌನ್‌ಸಿಲ್ ವೈಸ್‌ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿದ್ದಾರೆ.

ಮ|| ಬಿ. ಕೃಷ್ಣಪ್ಪ ಎಂ. ಎ. ಯವರು ರಾಜಧಾನಿಯಲ್ಲಿರುವ ಮಹಾರಾಜ ಕಾಲೇಜಿಗೆ ಕನ್ನಡದ ಅಸಿಸ್ಟೆಂಟ್ ಪ್ರೊಫೆಸರಾಗಿ ನಿಯಮಿಸಲ್ಪಟ್ಟಿದ್ದಾರೆ.

ವೈಸ್ರಾಯರು ಡಿಸಂಬರ್ ತಿಂಗಳಲ್ಲಿ ಮೈಸೂರಿಗೆ ಬರುವರೆಂಬ ಪ್ರವಾದವಿದ್ದಿತು. ಅದು ತಪ್ಪಿ ನವಂಬರ್ ತಾ|| ೨೪ ರಲ್ಲಿ ಅವರು ಇಲ್ಲಿಗೆ ದಯಮಾಡಿಸುವರೆಂದು ಗೊತ್ತಾಗುತ್ತದೆ.

ಸಂಧಿ ಜರುಗಿದ ಸಂತೋಷೋತ್ಸವಾಚರಣೆಯ ಸಂಬಂಧದಲ್ಲಿ ನಿನ್ನೆ ತಾ|| ೧೯ ನೆಯ ಶನಿವಾರ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ರಜಾ ಕೊಡಲ್ಪಟ್ಟಿದ್ದಿತು.

ಸರ್ದಾರ್ ಕಾಂತರಾಜ ಅರಸಿನವರು ಕಳೆದ ಸೋಮವಾರ ದಿವಾನಗಿರಿಯನ್ನು ವಹಿಸಿಕೊಂಡು ಅಂದಿನಿಂದ ರಾಜಧಾನಿಯಲ್ಲೇ ಇದ್ದು ಕಳೆದ ಗುರುವಾರ ಮೋಟಾರಿನಮೇಲೆ ಬೆಂಗಳೂರಿಗೆ ದಯಮಾಡಿಸಿದರು.

ರಾಜಪುತ್ರೋತ್ಸವಾನಂದಸೂಚಕವಾಗಿ ಸಕ್ಕರೆಯು ಬಂಡಿಗಳಲ್ಲಿ ತುಂಬಿಸಲ್ಪಟ್ಟು ನಾಳೆಯದಿನ ರಾಜಧಾನಿಯ ಎಲ್ಲ ಬೀದಿಗಳಲ್ಲೂ ಹಂಚಿಸಲ್ಪಡಲೇರ್ಪಾಟಾಗಿರುವುದಾಗಿ ತಿಳಿಯಬರುತ್ತದೆ.

ಶಿವಮೊಗ್ಗೆಯಿಂದ ಭಟ್ಕಲ್ಲಿಗೂ, ಮೈಸೂರಿನಿಂದ ಕೊಡಗಿಗೂ ಲೋಹಮಾರ್ಗವನ್ನು ಹಾಕುವ ಸಂಬಂಧವಾದ ಸರ್ವೆ ಕೆಲಸವು ಮುಗಿದಿತು. ಭಟ್ಕಲ್ ರೇವೆಯ ನಿರ್ಮಾಣದ ವಿಷಯವಾಗಿ ಕೆಲಸವು ನಡೆಯುತ್ತಿದೆ.

ಕಂಚಿಯ ಪ್ರತಿವಾದಿ ಭಯಂಕರಮಠದ ಶ್ರೀವೈಷ್ಣವಗುರುಗಳು ರಾಜಧಾನಿಗೆ ಬಂದಿರುತ್ತಾರೆ ಸಂಸ್ಕೃತ ಪಾಠಶಾಲೆಯಲ್ಲೂ, ಟವನ್‌ಹಾಲಿನಲ್ಲೂ ರತ್ನಾವಳಿ ನಾಟಕಭವನದಲ್ಲೂ ಅವರ ೩ ಉಪನ್ಯಾಸಗಳು ನಡೆದುವು.

ಪ್ರಜಾಪ್ರತಿನಿಧಿಸಭೆಗೆ ಮೈಸೂರು ತಾ|| ಬೋರ್ಡಿನಿಂದ ಮ|| ಅಡ್ವೋಕೇಟ್ ಕೃಷ್ಣಸ್ವಾಮಿರಾಯರು, ನಾಗವಾಲದ ಪಟೇಲ್ ಲಿಂಗಣ್ಣನವರು, ಮೈಸೂರು ಸಾ|| ಚನ್ನಪ್ಪನವರು ಸಹ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾರೆ.

ನಮ್ಮ ಹೊಸ ದಿವಾನರವರು ತಮ್ಮ ಪ್ರೈವೇಟ್ ಸೆಕ್ರಟರಿ ಸ್ಥಾನಕ್ಕೆ ಮ|| ಸಿ. ರಂಗನಾಥರಾವ್ ಸಾಹೇಬ್ ಬಿ. ಎ. ಬಿ. ಎಲ್. ರನ್ನೂ, ಅ|| ಪ್ರೈವೇಟ್ ಸೆಕ್ರಟರಿ ಸ್ಥಾನಕ್ಕೆ ಮಿ|| ಎಸ್. ಸದಾಶಿವರಾವ್ ಬಿ. ಎ. ಬಿ. ಎಲ್. ರವರನ್ನೂ ನಿಯಮಿಸಿಕೊಂಡಿದ್ದಾರೆ.

ಮೈಸೂರು ಮಹಾಜನರ ಪ್ರಾರ್ಥನೆಯಂತೆ ದಿವಾನ್ ಕಾಂತರಾಜ ಅರಸಿನವರು ವಿಜ್ಞಾಪನಪತ್ರವನ್ನು ಸ್ವೀಕರಿಸಲು ಅನುಮತಿಯನ್ನು ಕೊಟ್ಟರೆಂದು ಕೇಳುತ್ತೇವೆ. ಬೆಂಗಳೂರು ಮಹಾಜನರೂ ಸಹ ವಿಜ್ಞಾಪನಪತ್ರವನ್ನರ್ಪಿಸಿ ಮರ್ಯಾದಿಸಬೇಕೆಂದು ಪ್ರಯತ್ನಿಸಿದ್ದಾರೆ.

ಮ|| ಎ. ಆರ್. ಬಾನರ್ಜಿಯವರ ಆಕ್ಟಿಂಗ್ ದಿವಾನಗಿರಿಯಲ್ಲಿ ಅವರ ಅ|| ಪ್ರೈವೇಟ್ ಸೆಕ್ರಟರಿಯವರಾಗಿದ್ದ ಮ|| ಬಿ. ಪುಟ್ಟಯ್ಯ ಬಿ.ಎ.ಯವರು ಈಗ ಅವರ ಹಿಂದಣ ಉದ್ಯೋಗವಾದ ಗೌರ್ನಮೆಂಟ್ ಪ್ರೆಸ್ ಅ|| ಸೂಪರಿಂಟೆಂಡೆಂಟ್ ಕೆಲಸಕ್ಕೆ ವರ್ಗಾಯಿಸಲ್ಪಟ್ಟರು.

ಸೀಮೆಗೆ ದಯಮಾಡಿಸಿದ ಡಾಕ್ಟರ್ ಸಿ. ಎ. ನಂಜಪ್ಪನವರ ೭ ವರ್ಷ ವಯಸ್ಸಿನ ಏಕಪುತ್ರನು ಮಧ್ಯಮಾರ್ಗದಲ್ಲಿ ವಿಧಿವಶನಾದನೆಂದು ವರ್ತಮಾನ ಬಂದಿರುವುದು. ಡಾಕ್ಟರವರಿಗೆ ಉಂಟಾದ ಈ ಪುತ್ರವಿಯೋಗ ದುಃಖಕ್ಕಾಗಿ ಸಂಸ್ಥಾನದ ಅನೇಕ ಪ್ರಜೆಗಳು ಅನುತಪಿಸುವರು.

ವೈಸ್ರಾಯರ ಎಕ್ಸಿಕ್ಯುಟಿವ್ ಕೌನ್‌ಸಿಲ್ಲಿನಲ್ಲಿ ಸರ್ ಶಂಕರನ್ ನಾಯರ್‌ರವರು ಬಿಟ್ಟ ಸ್ಥಾನಕ್ಕೆ ನಮ್ಮ ದೇಶದ ಆಕ್ಟಿಂಗ್ ದಿವಾನರಾಗಿದ್ದ ಮ|| ಎ. ಆರ್. ಬಾನರ್ಜಿಯವರು ನಿಯಮಿಸಿಕೊಳ್ಳಲ್ಪಡುವವರಾಗಿದ್ದಾರೆಂಬ ವಾರ್ತೆಯಿದೆ. ಸರ್ ವಿಶ್ವೇಶ್ವರಯ್ಯನವರು ಕೆಲಸಬಿಟ್ಟಾಗಲೂ ಇದೇ ತೆರದ ಮತ್ತೊಂದು ಸುದ್ದಿ ಹುಟ್ಟಿದ್ದು ಶಾಂತವಾಯಿತು.

ಸಂಪದಭ್ಯುದಯ ಸಮಾಜದ ಶಾಖೆಯಾದ ವಿದ್ಯಾಭ್ಯಾಸ ಕಮಿಟಿಯ ಸೆಕ್ರೆಟರಿಯವರಾಗಿದ್ದ ಮ|| ವಿ. ಸುಬ್ರಹ್ಮಣ್ಯ ಅಯ್ಯರ್‌ರವರು ಮೈಸೂರು ವಿಶ್ವವಿದ್ಯಾಲಯದ ಆಕ್ಟಿಂಗ್ ರೆಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟುದರಿಂದ ಶಿವಮೊಗ್ಗ ಹೈಸ್ಕೂಲ್ ಹೆಡ್ಮಾಸ್ಟರಾದ ಮ|| ಶ್ರೀನರಸಿಂಹಯ್ಯ, ಎಂ.ಎ., ಎಲ್.ಟಿ. ಯವರು ವಿದ್ಯಾಭ್ಯಾಸ ಕಮಿಟಿಯ ಆಕ್ಟಿಂಗ್ ಸೆಕ್ರೆಟರಿಯವರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಒಕ್ಕಲಿಗರು ಸ್ಕೂಲುಗಳಲ್ಲಿ ಓದುತ್ತಿರುವ ತಮ್ಮ ಒಕ್ಕಲಿಗರ ವಿದ್ಯಾರ್ಥಿಗಳ ವಾಸಕ್ಕೂ ಊಟಕ್ಕೂ ಬಹಳ ತೊಂದರೆಯಾಗಿರುವುದನ್ನು ನೋಡಿ ಕಳೆದ ಗುರುವಾರ ರಾತ್ರಿ ಅರಸೀಕೆರೆ ಮ|| ಚೌಡಯ್ಯನವರ ಮನೆಯಲ್ಲಿ ರಾವ್‌ಸಾಹೇಬ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಬರುವ ಆಗಸ್ಟ್ ತಿಂಗಳಿಂದ ಒಂದು ಹಾಸ್ಟಲನ್ನೇರ್ಪಡಿಸಬೇಕೆಂದು ನಿರ್ಧರಿಸಿ ಪಾತ್ರೆಪದಾರ್ಥಗಳನ್ನು ಕೊಳ್ಳಲು ಚಂದಾಪಟ್ಟಿಯು ಹಾಕಲ್ಪಟ್ಟಿರುವುದು ಎಂದು ಒಬ್ಬ ಒಕ್ಕಲಿಗದೊಡ್ಡಮನುಷ್ಯರು ತಿಳಿಸಿರುತ್ತಾರೆ.

ಉತ್ತರದೇಶದ ವೀರಶೈವರಲ್ಲಿ ಈ ಸಲ ೧೬ ಮಂದಿಗಳು ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂದು ಕೇಳುವುದಕ್ಕೆ ಸಂತೋಷವಾಗುತ್ತದೆ. ಅದರಲ್ಲೂ ಮ|| ಗುರುಸಿದ್ದಪ್ಪಗುಗ್ಗರಿ ಎಂಬುವವರು (೨೧ ವರ್ಷ ವಯಸ್ಸಿನವರು) ಪ್ರಥಮತರಗತಿಯಲ್ಲಿ ಅತ್ಯುತ್ತಮವಾಗಿ ತೇರ್ಗಡೆ ಹೊಂದಿ ಒಳ್ಳೆ ಮೇಧಾವಿತೆಯನ್ನು ವ್ಯಕ್ತಪಡಿಸಿರುತ್ತಾರೆ. ಅವರನ್ನು ಸೀಮೆಗೆ ಕಳುಹಿಸಿ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಓದಿಸಬೇಕೆಂಬ ಪ್ರಯತ್ನವನ್ನು ಅಲ್ಲಿಯ ಸಮಾಜಬಾಂಧವರು ನಡೆಯಿಸಿರುವುದು ಸ್ತುತ್ಯವಾಗಿದೆ.

ಈ ಕೆಳಗೆ ಕಂಡಂತೆ ತಾಲ್ಲೂಕು ಅಮಲ್ದಾರರುಗಳ ವರ್ಗಾವರ್ಗಿಯು ಮಾಡಲ್ಪಟ್ಟಿರುತ್ತದೆ—ಮ|| ದ್ವಾರಕನಾಥಯ್ಯಂಗಾರರು ಎಡತೊರೆಯಿಂದ ಹೊನ್ನಾಳಿಗೆ. ಮ|| ಕೆ. ಮಲ್ಲರಾಜೆ ಅರಸಿನವರು ಹೊನ್ನಾಳಿಯಿಂದ ಮಾಗಡಿಗೆ. ಮ|| ಎಂ. ಎಸ್. ನಾರಾಯಣರಾಯರು ಮಾಗಡಿಯಿಂದ ಬೆಂಗಳೂರಿಗೆ. ಮ|| ಟಿ. ವಿ. ರಾಮಶಾಸ್ತ್ರಿಗಳು ಹಿರೋಡೆಯಿಂದ ಎಡತೊರೆಗೆ. ಮ|| ಎ. ಕೃಷ್ಣರಾಯರು ಫ್ರೆಂಚ್‌ರಾಕ್ಸಿಗೆ, ಮ|| ಜಿ. ಮಲ್ಲಿಕಾರ್ಜುನಯ್ಯನವರು ತಿಪಟೂರಿನಿಂದ ದೇವನಹಳ್ಳಿಗೆ. ಮ|| ಎಚ್. ಸಿ. ಸುಬ್ಬರಾಯರು ಗುಡಿಬಂಡೆಯಿಂದ ತಿಪಟೂರಿಗೆ. ಮ|| ಸಿ. ಎಲ್. ಕೃಷ್ಣಮೂರ್ತಿಯವರು ಕೋಲಾರ ಡಿಸ್ಟ್ರಿಕ್ಟ್ ಆಫೀಸಿನಿಂದ ಗುಡಿಬಂಡೆಗೆ.

ನಿನ್ನೆದಿವಸ ಸಂಧಿಮಹೋತ್ಸವ ಸಂಬಂಧವಾಗಿ ರಾಜಧಾನಿಯಲ್ಲಿ ನಡೆಯಿಸಿದ ಕಾರ್ಯಗಳೊಳಗೆ ಬಡಬಗ್ಗರಿಗೆ ಅಕ್ಕಿಯನ್ನೂ ಬಟ್ಟೆಬರೆಗಳನ್ನೂ ಹಂಚಲು ಏರ್ಪಡಿಸಿದ್ದುದು ಪ್ರಶಸ್ತವಾಗಿದ್ದಿತು. ಇದನ್ನು ಹಂಚುವುದಕ್ಕಾಗಿ ಲಷ್ಕರ್‌ಮೊಹಲ್ಲಾ ಹಳೆ ಬಾಡಿಗಾರ್ಡ್ ಲೈನಿನ ಬಳಿಯಲ್ಲಿಗೆ ೧೨ ಪಲ್ಲ ಅಕ್ಕಿ ೧೦೦ ಬಟ್ಟೆಗಳೂ, ಟವನ್‌ಹಾಲಿನ ಬಳಿಗೆ ೯ ಪಲ್ಲ ಅಕ್ಕಿ ೯೦ ಬಟ್ಟೆಗಳೂ, ಸಂಸ್ಕೃತಪಾಠಶಾಲೆಯ ಬಳಿಗೆ ೭ ಪಲ್ಲ ಅಕ್ಕಿ ೭೦ ಬಟ್ಟೆಗಳೂ ಕೊಡಲ್ಪಟ್ಟಿದ್ದುವು. ಲಷ್ಕರ್‌ಮೊಹಲ್ಲಾವಿಗೆ ಮಿ|| ಗಳಾದ ಮಹಮ್ಮದ್‌ಸೇಟರೂ, ಪುರುಷೋತ್ತಮಾನಂದಗಿರಿಬಾವಾಜಿಯವರೂ, ಟವನ್‌ಹಾಲಿನ ಬಳಿಗೆ ಸಾ|| ದೊಡ್ಡಯ್ಯನವರೂ, ವೀರಣ್ಣನವರೂ, ಪಾಠಶಾಲೆಯ ಬಳಿಗೆ ಸಾ|| ಬಸುಮಯ್ಯನವರೂ, ಸಾ|| ತಿಮ್ಮಯ್ಯನವರೂ ಹಂಚುವಿಕೆಗಾಗಿ ನಿಯಮಿಸಲ್ಪಟ್ಟಿದ್ದರು.

ಮೈಸೂರು ಚೀಫ್‌ಕೋರ್ಟಿನ ಚೀಫ್‌ಜಡ್ಜರಾದ ಸರ್ ಲೆಸ್ಲಿ ಮಿಲ್ಲರ್‌ರವರಿಗೆ ಬರುವ ತಾ|| ೧೫ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವಾರಭ್ಯ ೬ ತಿಂಗಳ ರಜವು ಕೊಡಲ್ಪಟ್ಟಿರುವುದರಿಂದ ಈ ಕಾಲದಲ್ಲಿ ೧ನೆಯ ಕೌನ್ಸಿಲರಾದ ಮ|| ಚಂದ್ರಶೇಖರಯ್ಯರ್‌ರವರು ಚೀಫ್‌ಜಡ್ಜರಾಗಿಯೂ, ೨ನೆಯ ಕೌನ್ಸಿಲರಾದ ಮ|| ಪಿ. ರಾಘವೇಂದ್ರರಾಯರು ೧ನೆಯ ಕೌನ್ಸಿಲರಾಗಿಯೂ, ೩ನೆಯ ಕೌನ್ಸಿಲರಾದ ಮಿ|| ಹಂಚಾಹುಸೇನ್‌ರವರು ೨ನೆಯ ಕೌನ್ಸಿಲರಾಗಿಯೂ ರೆ|| ಕಮಿಷನರಾದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ೩ನೆಯ ಕೌನ್ಸಿಲರಾಗಿಯೂ, ಎಕ್ಸೈಜ್ ಕಮಿಷನರಾದ ಮಿ|| ಚಾಂಡಿಯವರು ರೆವಿನ್ಯೂಕಮಿಷನರಾಗಿಯೂ, ಬೆಂಗಳೂರು ಡಿ|| ಡೆ|| ಕಮಿಷನರಾದ ಮ|| ಎಂ. ಎ. ನಾರಣಯ್ಯಂಗಾರ್‌ರವರು ಎಕ್ಸೈಜ್ ಕಮಿಷನರಾಗಿಯೂ ಆಕ್ಟಿಂಗಾಗಿ ನಿಯಮಿಸಲ್ಪಟ್ಟಿರುವರು.

ಪ್ರಜಾಪ್ರತಿನಿಧಿಸಭೆಗೆ ಶ್ರೀರಂಗಪಟ್ಟಣದ ತಾಲ್ಲೂಕು ಬೋರ್ಡಿನಿಂದ ಪ್ರತಿನಿಧಿಗಳಾಗಿ ಬರಲು ಎಲೆಕ್ಷನ್ನಿಗೆ ನಿಂತಿದ್ದ ೧೪ ಮಂದಿಗಳಲ್ಲಿ ಮ|| ಗಳಾದ ಜವರಯ್ಯನವರಿಗೆ ೧೬೫, ಅರಕೆರೆ ಶ್ರೀನಿವಾಸಯ್ಯಂಗಾರರಿಗೆ ೧೦೮, ಪುರುಷೋತ್ತಮಾನಂದಗಿರಿಬಾವಾಜಿಯವರಿಗೆ ೯೯, ಬಿ. ನರಸಿಂಗರಾಯರಿಗೆ ೭೫, ವೀಣೆ ರಂಗಸ್ವಾಮಯ್ಯಂಗಾರರಿಗೆ ೬೪. ಉಳಿದವರಿಗೆಲ್ಲಾ ಇದಕ್ಕೆ ಕಡಿಮೆಯಾಗಿ ಓಟುಗಳು ದೊರೆದುದರಿಂದ ಮೇಲಿನ ಮೂವರು ಮಾತ್ರ ಆರಿಸಲ್ಪಟ್ಟಂತಾಯಿತು. ಕೆಲ ಕಾಲದಿಂದಲೂ ತಪ್ಪದೆ ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿ ಬರುತ್ತಿದ್ದ ಒಬ್ಬೊಬ್ಬರಿಗೆ ಈ ಎಲೆಕ್ಷನ್ನಿನಲ್ಲಿ ಜಯವು ಸಿಕ್ಕದೆ ಹೋಗಿರುವುದರಿಂದಲೂ, ಇತರರಿಗೆ ಆ ಸ್ಥಲವು ಸಿಕ್ಕಿದುದರಿಂದಲೂ ಅದನ್ನು ಸೈರಿಸಲಾರದೆ ಹೊಟ್ಟೆಕಿಚ್ಚಿನಿಂದ ಪತ್ರಿಕೆಗಳಲ್ಲಿ ಕೂಗಿಕೊಳ್ಳುವುದಕ್ಕೆ ಆರಂಭಮಾಡಿರುವುದನ್ನು ನೋಡಿದರೆ ಅವರುಗಳ ಪರೋತ್ಕರ್ಷಾಸಹನವು ವ್ಯಕ್ತವಾಗುತ್ತದೆ.

ಮೈಸೂರು ಸಂಸ್ಥಾನದ ರೆವಿನ್ಯೂ ಸರ್ವೆಶಾಖೆಗೆ ಮೋಜಣಿದಾರರುಗಳು ಹೆಚ್ಚಾಗಿ ಬೇಕಾಗಿರುವುದರಿಂದ ಅಂಥವರನ್ನು ಆಣೆಮಾಡುವುದಕ್ಕಾಗಿ ಬರುವ ಆಗಸ್ಟ್ ತಾರೀಖಿನಿಂದ ಬೆಂಗಳೂರಿನಲ್ಲಿ ಒಂದು ಸರ್ವೆತರಗತಿಯನ್ನು ೩ ತಿಂಗಳ ಕಾಲ ಸ್ಥಾಪಿಸಿರುವುದಕ್ಕೆ ಸರ್ಕಾರದವರು ಏರ್ಪಡಿಸಿದ್ದಾರೆ. ಇದಕ್ಕೆ ಸೇರಿ ಓದಲಿಷ್ಟವುಳ್ಳವರು ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಾದರೂ ಉತ್ತೀರ್ಣರಾಗಿರಬೇಕು. ದೃಢಾಂಗವೂ ಶ್ರಮಸಹಿಷ್ಣುತೆಯೂ ನೇತ್ರಪಾಟವವೂ ಚೆನ್ನಾಗಿರುವವರಾಗಿರಬೇಕು. ಫೀಜನ್ನು ತೆಗೆದುಕೊಳ್ಳದೆ ವಿದ್ಯಾಭ್ಯಾಸವು ಮಾಡಿಸಲ್ಪಡುವುದಲ್ಲದೆ ತಿಂಗಳಿಗೆ ೭ ರೂ ನಂತೆ ವಿದ್ಯಾರ್ಥಿವೇತನವು ಕೊಡಲ್ಪಡುತ್ತದೆ. ಅಭ್ಯಾಸ ಮುಗಿದು ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ೧೨ ರೂ. ವೇತನದ ಮೇಲೆ ಪ್ರೊ|| ಮೋಜಣಿದಾರಿ ಕೆಲಸವು ಕೊಡಲ್ಪಡುವುದು. ಕಾರ್ಯನಿರ್ವಾಹವನ್ನು ಚೆನ್ನಾಗಿ ತೋರ್ಪಡಿಸಿಕೊಂಡರೆ ಸಂಬಳವು ಬೇಗಬೇಗನೆ ೧೫-೨೦ ರ ವರೆಗೂ ಹೆಚ್ಚಿಸಲ್ಪಡುವುದು. ಸೇರಲಿಷ್ಟವುಳ್ಳವರು ಜುಲೈ ತಾ|| ೩೦ ರೊಳಗಾಗಿ ಬೆಂಗಳೂರಲ್ಲಿರುವ ರೆವಿನ್ಯೂ ಸರ್ವೆ ಡೆ|| ಸೂಪರಿಂಟೆಂಡೆಂಟ್‌ರವರಿಗೆ ಬರೆದುಕೊಳ್ಳುವುದಲ್ಲದೆ ತಾ|| ೨೫ ನೆಯ ದಿನ ಮಧ್ಯಾಹ್ನ ೧೨ ಗಂಟೆಯೊಳಗಾಗಿ ಅವರ ಆಫೀಸಿಗೆ ಪ್ರತ್ಯಕ್ಷವಾಗಿ ಹೋಗಿರಬೇಕು.

ಸಂಧಿಮಹೋತ್ಸವಾನಂದ ಪ್ರದರ್ಶನಕ್ಕಾಗಿ ನಿನ್ನೆದಿನ ನಮ್ಮ ಸಂಸ್ಥಾನದೊಳಗೆ ಆಚರಿಸಬೇಕಾದ ವಿಧಾನಗಳನ್ನು ನಮ್ಮ ಸರ್ಕಾರದವರು ಪ್ರಕಟಿಸಿದ್ದುದರಲ್ಲಿ—ಆ ದಿನ ಸರ್ಕಾರಿ ಕಟ್ಟಡಗಳ ಮೇಲೂ ಪ್ರಜೆಗಳ ದೊಡ್ಡಮನೆಗಳ ಮೇಲೂ ಧ್ವಜಪತಾಕೆಗಳನ್ನು ಎತ್ತಿಕಟ್ಟಬೇಕು, ದೇವಾಲಯಗಳಲ್ಲೆಲ್ಲಾ ವಿಶೇಷ ಪೂಜಾಪ್ರಾರ್ಥನೆಗಳು ನಡೆಸಲ್ಪಡಬೇಕು. ರಾತ್ರಿ ದೀಪೋತ್ಸವವು ನಡೆಯಬೇಕು. ಬೀದಿಗಳಲ್ಲಿ ದೇವರುಗಳ ಮೆರವಣಿಗೆಯೂ ಭಜನೆ ಮುಂತಾದವರ ಕೀರ್ತನೆಗಳೂ ನಡೆಯಬೇಕು. ಡಿಸ್ಟ್ರಿಕ್ಟು ತಾಲ್ಲೂಕು ಮುಖ್ಯಸ್ಥಲಗಳಲ್ಲೆಲ್ಲಾ ಸಭೆಗಳನ್ನು ಕೂಡಿಸಿ ಸಂಧಿಯ ಮಹತ್ವವನ್ನೂ ಮಿತ್ರಮಂಡಲಿಗಾದ ಜಯದ ಪ್ರಯೋಜನಗಳನ್ನೂ, ಸಂಧಿನಿಬಂಧನೆಗಳ ವಿವರಣವನ್ನೂ ವಿವರಿಸಿ ಉಪನ್ಯಾಸ ಮಾಡಬೇಕು ಎಂದು ತಿಳಿಯಿಸಲ್ಪಟ್ಟಿದೆ. ಯುದ್ಧಶಾಂತಿಯೂ ಮಿತ್ರಮಂಡಲಿಯ ವಿಜಯವೂ ಶಾಶ್ವತಸಂಧಿಯೂ ಜರುಗಿರುವುದರಿಂದ ಲೋಕಕ್ಕೆಲ್ಲಾ ಪರಿತಾಪಶಾಂತಿಯುಂಟಾಗುವಂತಾಯಿ. ಆದುದರಿಂದ ಈ ಸಮಯದಲ್ಲಿ ಲೋಕವೇ ಸಂತೋಷಪಟ್ಟು ಭಗವಂತನಲ್ಲಿ ಕೃತಜ್ಞತೆಯನ್ನರ್ಪಿಸುತ್ತಿರುವಾಗ ರಾಜಭಕ್ತಿ ದೈವಭಕ್ತಿ ನಿರತರಾದ ಮೈಸೂರು ಪ್ರಜೆಗಳು ರಾಜಾಜ್ಞೆಯನ್ನು ಶಿರಸಾವಹಿಸಿ, ನಿರೀಕ್ಷಣೆಗಿಂತಲೂ ಅಧಿಕವಾಗಿಯೇ ಸಂತೋಷೋತ್ಸವಗಳನ್ನು ನಿನ್ನೆಯ ದಿವಸ ಸಂಸ್ಥಾನದ ಎಲ್ಲಕಡೆಯೂ ನಡೆಯಿಸಿರುತ್ತಾರೆಂಬುದಕ್ಕೆ ಸಂಶಯವಿಲ್ಲ.

ಭರತಖಂಡದ ವೃತ್ತಾಂತಗಳು.

ಬೊಂಬಾಯಿ ಗೌರ್ನರು ಬರುವ ತಾ|| ೨೯ ಕ್ಕೆ ಧಾರವಾಡಕ್ಕೆ ದಯಮಾಡಿಸುವವರಾಗಿದ್ದಾರೆ.

ಕರಾಚಿ ಪಟ್ಟಣದಲ್ಲಿ ವಿಮಾನಗಳ ಶಾಲೆಯನ್ನು ನಿರ್ಮಿಸುವುದಕ್ಕಾಗಿ ೨|| ಲಕ್ಷ ಚದರಗಜದ ಭೂಮಿಯು ವಿನಿಯೋಗಿಸಲ್ಪಡುವುದಾಗಿದೆ.

ಈ ವರ್ಷದ ದೇಶೀಯಮಹಾಸಭೆಯನ್ನು ಮದ್ರಾಸು ಅಧಿಪತ್ಯದ ನೆಲ್ಲೂರಿನಾದ ಪಟ್ಟಣದಲ್ಲಿ ನಡೆಯಿಸಬೇಕೆಂದು ಆಂಧ್ರದೇಶೀಯರು ಪ್ರಯತ್ನಿಸಿದ್ದಾರೆ.

ಭರತಖಂಡದಲ್ಲಿ ಸರ್ಕಾರದವರು ತೆಗೆದುಕೊಳ್ಳಲು ಏರ್ಪಡಿಸಿರುವ ಹೊಸಸಾಲಕ್ಕೆ ಕಳೆದ ತಾರೀಖು ೮ ರವರೆಗೆ ೬೦೯೫೫೦೦ ರೂ. ಗಳು ಬಂದಿದ್ದುವು.

ಭರತಖಂಡದಲ್ಲಿ ಕಳೆದ ಏಪ್ರಿಲ್ ತಿಂಗಳ ಕೊನೆಯ ಕಾಲದೊಳಗೆ ಒಂದೆಕರೆಗೆ ೪೦೦ ಪೌನು ತೂಕವುಳ್ಳ ಅಂಡಿಗೆಗಳು 3071000 ರಷ್ಟು ಹತ್ತಿಯು ಉತ್ಪನ್ನವಾಗುವುದೆಂದು ಲೆಕ್ಕಹಾಕಲ್ಪಟ್ಟಿದೆ. ಒಟ್ಟು 20497000 ಎಕರೆಗಳ ಭೂಮಿಯಲ್ಲಿ ಹತ್ತಿಯ ವ್ಯವಸಾಯವು ಮಾಡಲ್ಪಟ್ಟಿದೆ.

ನಿನ್ನೆದಿನ ನಡೆದ ಸಂಧಿಮಹೋತ್ಸವ ಸಂಬಂಧವಾಗಿ ಮದ್ರಾಸಿನಲ್ಲಿ ಬಡಬಗ್ಗರಿಗೆ ಅತ್ಯುದಾರವಾಗಿ ಅನ್ನದಾನಮಾಡಿಸಿ, ಅದನ್ನು ಮದ್ರಾಸು ಗೌರ್ನರವರು ಪ್ರತ್ಯಕ್ಷವಾಗಿ ನೋಡಲು ಏರ್ಪಡಿಸಿದ್ದರು. ಇದೇ ತೆರದ ಏರ್ಪಾಟನ್ನು ಅವರ ಪತ್ನಿಯವರು ಆ ದಿನ ನೀಲಗಿರಿಯಲ್ಲಿ ಮಾಡಿಸಿದ್ದರು.

ಲಾಹೋರಿನಲ್ಲಿ ಪ್ರಕಟವಾಗುತ್ತಿದ್ದ ಟ್ರಿಬ್ಯೂನ್ ಪತ್ರಿಕೆಯ ಸಂಪಾದಕರಾದ ಬಾಬೂ ಕಾಳೀನಾಥರಾಯರವರು ಸೈನಿಕವಿಚಾರಣೆಗೆ ಗುರಿಯಾಗಿ ೨ ವರ್ಷ ಕಠಿನಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿದ್ದರು. ಅನೇಕಾನೇಕರ ಪ್ರಾರ್ಥನೆಗೆ ಕಿವಿಗೊಟ್ಟು ವೈಸ್ರಾಯರು ಅದನ್ನು ೩ ತಿಂಗಳ ಸಾಧಾರಣ ಕಾರಾಗೃಹಶಿಕ್ಷೆಗೆ ತಗ್ಗಿಸಿದರು. ಸರ್ಕಾರದಿಂದ ಹೊಣೆಯಾದಹಣವು ಕೇಳಲ್ಪಟ್ಟುದರ ಮೇಲೆ ಸದ್ಯಃ ಆ ಪತ್ರಿಕಾಪ್ರಕಟನವು ನಿಲ್ಲಿಸಲ್ಪಟ್ಟಿದೆ.

ಸರ್ ಶಂಕರನ್ ನಾಯರ್‌ರವರು ಕಲ್ಕತ್ತೆಯಿಂದ ಕಳೆದ ತಾ|| ೧೧ ರಲ್ಲಿ ಮದ್ರಾಸಿಗೆ ಬಂದರು. ಮದ್ರಾಸು ಅಧಿಪತ್ಯಕ್ಕೆ ಅವರು ಪ್ರವೇಶಿಸಿದ ಕೂಡಲೇ ಮುಖ್ಯಮುಖ್ಯವಾದ ನಿಲ್ದಾಣಗಳಲ್ಲೆಲ್ಲಾ ಪ್ರಜೆಗಳು ಅವರನ್ನು ಪುಷ್ಪಹಾರಾದಿಗಳನ್ನರ್ಪಿಸಿ ಗೌರವಿಸಿದರು. ಮದ್ರಾಸು ನಿಲ್ದಾಣದಲ್ಲಿ ಪ್ರಾಂತಿಕ ಕಾಂಗ್ರೆಸ್‌ಸಂಘದವರೂ, ಮಹಾಜನಸಭೆಯವರೂ, ಸಂಘಸಂಸ್ಕರಣ ಸಭೆಯವರೂ, ನಿಮ್ನಜಾತ್ಯುದ್ಧಾರಕ ಸಭೆಯವರೂ ಸಾವಿರಾರು ಮಂದಿ ಇತರ ಪ್ರಜೆಗಳೂ ಕಾದಿದ್ದು ವಾದ್ಯಘೋಷದಿಂದಲೂ ಪುಷ್ಪಹಾರಾದಿ ಸಮರ್ಪಣೆಯಿಂದಲೂ ಮರ್ಯಾದಿಸಿದರು.

ಭರತಖಂಡಕ್ಕೆ ಆರ್ಯರು ಪ್ರವೇಶಿಸುವುದಕ್ಕೆ ಪೂರ್ವದಲ್ಲಿ ಇಲ್ಲಿದ್ದ ಆದಿಮನಿವಾಸಿಗಳಾದ ಅನಾರ್ಯರ ಅಥವಾ ಪಂಚಮರ ಪೂರ್ವದ ಮತ್ತೂ ಈಗಣ ಸ್ಥಿತಿಗತಿಯನ್ನು ವಿವರಿಸುವ ಗ್ರಂಥವೊಂದನ್ನು ಅಸುರಪುರಾಣವೆಂಬ ಹೆಸರಿನಿಂದ ಪ್ರಕಟಿಸಲು ದಕ್ಷಿಣ ಹೈದರಾಬಾದಿನ ಮಾ. ವೆಂ. ಭಾಗ್ಯರೆಡ್ಡಿಯೆಂಬುವವರುದ್ದೇಶಪಟ್ಟಿದ್ದಾರೆ. ಬಹಳ ಹಿಂದೆಬಿದ್ದು ಅಸ್ಪೃಶ್ಯರೆಂದು ಗಣಿಸಲ್ಪಟ್ಟಿರುವ ೬ ಕೋಟಿ ಸಂಖ್ಯಾಕರಾದ ಈ ಪಂಚಮರ ಪೂರ್ವೋನ್ನತ್ಯ, ಬುದ್ಧಿಕುಶಲತೆ, ಶೂರತ್ವ, ರಾಜಭಕ್ತಿ, ದೇಶಭಕ್ತಿ, ದೈವಭಕ್ತಿ, ಮೊದಲಾದ ವಿಷಯಕಗಳಾದ ಇತಿಹಾಸಗಳನ್ನು ಯಾರಾದರೂ ಸಂಗ್ರಹಿಸಿ ಕಳುಹಿಸಿಕೊಟ್ಟರೆ ಪಂಚಮರ ಅಭ್ಯುದಯಕ್ಕೆ ಸಾಧಕವಾಗಿ ಆ ಗ್ರಂಥದಲ್ಲಿ ಮುದ್ರಿಸಲ್ಪಡುವುವೆಂದು ರೆಡ್ಡಿಯವರು ಕೋರಿರುತ್ತಾರೆ.

ಮೊನ್ನೆ ವಾರ ನಡೆದ ಬೊಂಬಾಯಿ ನಿಯಮನಿರ್ಮಾಣಸಭೆಯಲ್ಲಿ ಅಂತ್ಯಜರ ಉದ್ಧಾರದ ವಿಷಯಕವಾಗಿ ೨ ವಿಷಯಗಳು ಬಂದಿದ್ದುವು. ೧ ನೆಯದು—ಅವರನ್ನು ಮ್ಯುನ್ಸಿಪಲ್‌ಬೋರ್ಡು ಡಿಸ್ಟ್ರಿಕ್ಟುಬೋರ್ಡು ಮೊದಲಾದುವುಗಳ ಸಭಿಕತನಕ್ಕೆ ಅಂತ್ಯಜರಲ್ಲಿ ಅರ್ಹರಾದವರನ್ನು ನಾಮಿನೇಷನ್ನಿನ ಮೂಲಕ ಸೇರಿಸಬೇಕೆಂಬುದು ಇದನ್ನು ಆ|| ಪರಾಂಜಪೆಯವರು ಸೂಚಿಸಿದರು. ಚರ್ಚೆ ನಡೆದು ಈ ವಾದಕ್ಕೆ ಬಹು ಮತಗಳು ದೊರೆತುದರಿಂದ ಇದು ನಿರ್ಧಾರವಾಯಿತು. ಅಂತ್ಯಜರಿಗೆ ಲೋಕಲ್‌ಬೋರ್ಡು ಅಥವಾ ಮ್ಯು|| ಬೋರ್ಡುಗಳಿಗೆ ಸೇರಿದ ಧರ್ಮಸತ್ರಗಳನ್ನೂ ಬಾವಿಗಳನ್ನೂ ಉಪಯೋಗಿಸಿಕೊಳ್ಳಲು ಅವಕಾಶವಾಗುವಂತೆ ಸರ್ಕಾರದವರು ಅಪ್ಪಣೆಮಾಡಬೇಕು. ಅಥವಾ ಇವರಿಗಾಗಿ ಬೋರ್ಡುಗಳವರು ಪ್ರತ್ಯೇಕವಾದ ಸತ್ರಗಳನ್ನೂ ಭಾವಿಗಳನ್ನೂ ಸ್ಥಾಪಿಸಿಕೊಡುವಂತೆ ಬೋರ್ಡುಗಳಿಗೆ ಅಪ್ಪಣೆಮಾಡಬೇಕು ಎಂಬ ಸೂಚನೆಯನ್ನು ಆ|| ಬೆಲ್ವಿಯವರು ತಂದಿದ್ದರು. ಅದಕ್ಕೆ ಹೆಚ್ಚಿನ ಮತಗಳು ದೊರೆಯದೆ ಹೋದುದರಿಂದ ಬಿದ್ದುಹೋಯಿತು.

ಕಲಕತ್ತಾದಲ್ಲಿ ಆರ್ಯಸಾಹಿತ್ಯ ಸಮಾಜವೆಂಬುದು ಸ್ಥಾಪಿತವಾಗಿದೆ. ಸಂಸ್ಕೃತ, ಬಂಗಾಳಿ, ಹಿಂದಿ, ಮರಾಟಿ, ಗುಜರಾತಿ, ತೆಲುಗು, ತಮಿಳು, ಕನ್ನಡ, ಮಲಯಾಳ, ಗುರುಮುಖಿ—ಇವೇ ಮೊದಲಾದ ದೇಶೀಯಭಾಷೆಗಳ ಅಭಿವೃದ್ಧಿಗಾಗಿ ಆ ಭಾಷೆಗಳ ಪಾಠಶಾಲೆಗಳನ್ನು ಸ್ಥಾಪಿಸುವುದು. ಸುಲಭವಾದ ವ್ಯಾಕರಣಕೋಶ ಗ್ರಂಥಗಳನ್ನು ರಚಿಸಿ ಮುದ್ರಿಸುವುದು. ಉಪನ್ಯಾಸಗಳನ್ನು ಕೊಡಿಸುವುದು. ದೇಶಭಾಷಾಗ್ರಂಥಗಳನ್ನು ಶೇಖರಿಸುವುದು. ದೇಶಭಾಷೆಯಿಂದ ಶಸ್ತ್ರವೈದ್ಯಚಿಕಿತ್ಸಾದಿಗಳನ್ನು ಕಲಿಸುವ ವೈದ್ಯಪಾಠಶಾಲೆಗಳನ್ನು ಸ್ಥಾಪಿಸುವುದು. ಒಂದು ಮುದ್ರಾಲಯವನ್ನು ಸ್ಥಾಪಿಸಿ ಮಾಸಪತ್ರಿಕೆಗಳನ್ನೂ ಗ್ರಂಥಗಳನ್ನೂ ಮುದ್ರಿಸುವುದು. ಉತ್ತಮ ಗ್ರಂಥಗಳನ್ನು ಭಾಷಾಂತರಮಾಡಿಸುವುದು—ಇತ್ಯಾದಿ ಕಾರ್ಯಗಳನ್ನು ಸಾಧಿಸಬೇಕೆಂಬುದೇ ಸಮಾಜದ ಉದ್ದೇಶವಾಗಿದೆ. ಈ ಮಹಾಕಾರ್ಯನಿರ್ವರ್ತನೆಗಾಗಿ ದೇಶೀಯರ ದ್ರವ್ಯಸಾಹಾಯ್ಯವನ್ನು ಸಮಾಜದ ಕಾರ್ಯದರ್ಶಿ ಮ|| ಜ್ಞಾನೇಂದ್ರಕುಮಾರ ಕಾರ್ಯಾರ್ಣವ ಎ. ಐ. ಎ. ಎಸ್. ಸಿ. ರವರು ಕೋರಿರುತ್ತಾರೆ

ವಿದೇಶ ವಿಷಯಗಳು.

ಅಮೇರಿಕಾಧ್ಯಕ್ಷರು ತಮ್ಮ ದೇಶದ ರಾಜ್ಯಾಂಗಸಭೆಯಲ್ಲಿ ಸಂಧಿಪತ್ರವನ್ನು ಸಭಿಕರ ಅನುಮೋದನೆಗಾಗಿ ಉಪಪಾದಿಸಿದರು.

ಜರ್ಮನಿಯ ಅಧ್ಯಕ್ಷರು ಸ್ವದೇಶದಲ್ಲಿ ಸಂಧಿಪತ್ರದಮೇಲೆ ತಮ್ಮ ಕೈಬರೆಹವನ್ನು ಹಾಕಿದರು. ಮತ್ತು ಮಿತ್ರಮಂಡಲಿಯವರು ತಮ್ಮ ದೇಶದ ಮೇಲೆ ವಿಧಿಸಿರುವ ನೌಕಾನಿರ್ಬಂಧವನ್ನು ಕೂಡಲೇ ತೊಲಗಿಸುವುದಲ್ಲದೆ ಸೆರೆಯಿಟ್ಟುಕೊಂಡಿರುವ ಜರ್ಮನರನ್ನು ಬಿಟ್ಟುಕೊಡಬೇಕೆಂದು ಮಿತ್ರಮಂಡಲಿಯವರಿಗೆ ಬರೆದುಕೊಂಡಿರುವರು.

ನಾನಾದೇಶಸಂಘದ ಸಭ್ಯತೆಯನ್ನು ಆಸ್ಟ್ರಿಯಾದವರು ಕೋರಿಕೊಳ್ಳಲಾಗಿ, ನಿಮ್ಮ ದೇಶದೊಳಗೆ ಸಕ್ರಮವಾದ ಪರಿಪಾಲನವು ಏರ್ಪಟ್ಟು ಅವರು ಸಂಧಿನಿಬಂಧನೆಗಳನ್ನೆಲ್ಲಾ ಸರಿಯಾಗಿ ವ್ಯವಹಾರಕ್ಕೆ ತಂದರೆ ನೀವು ನಾನಾದೇಶಸಂಘದ ಸಭಿಕರಾಗಿ ಅಂಗೀಕರಿಸಲ್ಪಡುವಿರಿ ಎಂಬುದಾಗಿ ಅವರಿಗೆ ಮಿತ್ರಮಂಡಲಿಯವರು ಉತ್ತರಕೊಟ್ಟಿದ್ದಾರೆ.

ಕಳೆದ ತಾ|| ೧೯ ರಲ್ಲಿ ಸಂಧಿಮಹೋತ್ಸವವನ್ನು ಲಂಡನ್ ಪಟ್ಟಣದಲ್ಲಿ ನಡೆಯಿಸುವುದಕ್ಕೆ ಅಸಾಧಾರಣಗಳಾದ ಏರ್ಪಾಟುಗಳನ್ನು ಮಾಡಿದ್ದರು. ಪಟ್ಟಣದಲ್ಲಿ ೧೮ ಸಾವಿರ ಮಂದಿ ಪ್ರಮುಖ ಸ್ತ್ರೀ ಪುರುಷರುಗಳು ಉತ್ಸವವಾಗಿ ಹೊರಟರು. ಮಹಾಸೈನ್ಯವು ಸೇರಿರುವುದು. ರಾತ್ರಿ ದೀಪೋತ್ಸವವೂ ಮದ್ದಿನಗೋಟಿಗಳೂ ಅಭೂತಪೂರ್ವವಾಗಿ ನಡೆದುವು. ಪ್ಯಾರಿಸ್ ಪಟ್ಟಣದಲ್ಲಿ ಕಳೆದ ತಾ|| ೧೪ ರಲ್ಲಿ ಈ ಉತ್ಸವವು ನಡೆಯಿತು. ಅಲ್ಲಿಯ ಮೆರವಣಿಗೆಯಲ್ಲಿ ೮೫ ಸಾವಿರ ಮಂದಿ ಪ್ರಮುಖ ಸ್ತ್ರೀಪುರುಷರು ಸೇರಿದ್ದರು. ಪುರಾಲಂಕಾರವೂ ವಿನೋದದ ಆಟಪಾಟಗಳೂ ಅದ್ಭುತವಾಗಿದ್ದುವು.

ಜರ್ಮನಿದೇಶದೊಳಗಣ ರೈನ್ ಪ್ರಾಂತವನ್ನು ಮಿತ್ರಮಂಡಲಿಯವರು ಈಗ ಆಕ್ರಮಿಸಿಕೊಂಡಿರುವರಷ್ಟೆ. ಇದರ ರಕ್ಷಣೆಯ ಏರ್ಪಾಟು ಹೇಗೆ ಮಾಡಲ್ಪಟ್ಟಿರುವುದೆಂಬುದರ ವಿವರಣವು ಈಗ ಪ್ರಕಟಿತವಾಗಿದೆ. ಅದರಪ್ರಕಾರ ಅಲ್ಲಿ ಅಂತರ್ಮಿತ್ರ ರೈನ್‌ಲಂಡ್ ಹೈಕಮಿಷನರ್ ಎಂಬ ಹೆಸರಿನಿಂದ ಒಂದು ಸಿವಿಲಿಯನ್ ಸಂಘವನ್ನೇರ್ಪಡಿಸುವರು. ಅಲ್ಲಿರುವ ಮಿತ್ರಮಂಡಲೀ ಸೈನ್ಯದ ಸಂರಕ್ಷಣೆಗೆ ಅವಶ್ಯಕಗಳಾದ ಆಜ್ಞೆಗಳನ್ನು ಕೊಡಲು ಈ ಸಂಘಕ್ಕೆ ಅಧಿಕಾರವು ಕೊಡಲ್ಪಡುವುದು. ಅಲ್ಲಿರುವ ಜರ್ಮನ್ ಕೋರ್ಟುಗಳು ಪೂರ್ವದಂತೆಯೇ ಸಿವಿಲ್ ಕ್ರಿಮಿನಲ್ ವ್ಯಾಜ್ಯಗಳನ್ನು ವಿಚಾರಿಸುವುವು. ಸಿವಿಲ್ ಪರಿಪಾಲನೆಯೆಲ್ಲವೂ ಜರ್ಮನರ ಅಧೀನವಾಗಿಯೇ ಇರುವುದು. ಹೈಕಮಿಷನರವರಿಗೆ ಅವಶ್ಯಕವೆಂದು ತೋರಿದಾಗ ಈ ಆಕ್ರಮಿತ ಪ್ರಾಂತವೆಲ್ಲವೂ ಠಕ್ಕುಂದೆ ಮುತ್ತಿಗೆಹಾಕಲ್ಪಟ್ಟ ಪ್ರದೇಶವೆಂಬುದಾಗಿ ಹೇಳಬಹುದು.

ಜರ್ಮನಿಯಲ್ಲಿ ಅವರ ನ್ಯಾಷನಲ್ ಅಸೆಂಬ್ಲಿಯು ನೆರೆದಿದ್ದಾಗ ಅಲ್ಲಿಯ ಸಭಿಕರನೇಕರು—ಬಲಾತ್ಕಾರದಿಂದಲೇ ನಾವು ಸಂಧಿಪತ್ರಕ್ಕೆ ಕೈಬರಹವನ್ನು ಹಾಕಬೇಕಾಯಿತು ಎಂದು ಹೇಳಿದಾಗ ಇತರ ಸಭಿಕರೆಲ್ಲಾ ಸಂತೋಷಪಟ್ಟರಂತೆ. ಜರ್ಮನರು ಮರಳಿ ಸ್ವಾತಂತ್ರ್ಯವನ್ನು ಹೊಂದುವ ದಿನವು ತಪ್ಪದೆ ಒಂದಾನೊಂದು ದಿವಸ ಬಂದೇಬರುವುದು ಎಂದು ಇನ್ನು ಕೆಲವರು ನುಡಿದರು. ವಿದೇಶಮಂತ್ರಿಯಾದ ಹೇರ್‌ಮುಲ್ಲರ್‌ರವರು ಮಾತನಾಡುವಾಗ— "ಸಂಧಿಯು ಸಮರ್ಪಕವಾಗಿಲ್ಲವೆಂಬುದಾಗಿ ನಾವು ಯಾವಾಗಲೂ ಅಸಮ್ಮತಿಯನ್ನೇ ವ್ಯಕ್ತಪಡಿಸುವೆವು. ನಮ್ಮದೇಶಕ್ಕೆ ಮಿತ್ರಮಂಡಲಿಯವರು ಹಾಕಿರುವ ಮುತ್ತಿಗೆಯ ಬಾಧೆಯನ್ನು ತಪ್ಪಿಸಿಕೊಳ್ಳುತ್ತೇವೆಂಬ ಆಸೆಯಿಂದ ನಾವು ಸಂಧಿಪತ್ರಕ್ಕೆ ಕೈಬರೆಹವನ್ನು ಹಾಕುವವರಾಗಿದ್ದೇವೆ" ಎಂದು ನುಡಿದರು. ಇದರಿಂದ ಜರ್ಮನರು ಈಗಲೂ ರಿಂಗ್‌ಮ್ಯಾಸ್ಟರ ಭಯದಿಂದ ಹೇಳಿದಂತೆ ನಡೆದುಕೊಳ್ಳುವ ಸರ್ಕಸ್ಸಿನ ಮೃಗಗಳಂತಿರುವರೆಂಬುದು ವ್ಯಕ್ತವಾಗುವುದು.

ಸರ್ಕಾರಿ ಪ್ರಕಟನೆ.

ಕರ್ನಲ್ ಜೆ. ದೇಶರಾಜೇಅರಸಿನವರಿಗೆ ೧೯೧೯ ನೇ ಜುಲೈ ೧ ನೇ ತಾರೀಖಿನ ಲಾಗಾಯತು ನೌಕರಿಯಿಂದ ವಿಶ್ರಾಂತಿಯನ್ನು ಪಡೆಯಲು ಅನುಮತಿಯನ್ನೀಯುವ ಸಮಯದಲ್ಲಿ ಶ್ರೀಮನ್ ಮಹಾರಾಜಸಾಹೇಬ್ ಬಹದೂರರವರು ಅತಿ ದೀರ್ಘವಾದ ೩೪ ವರುಷಗಳ ಕಾಲದಲ್ಲಿ ಸದರೀಯವರು ಮಿಲಿಟರಿ ಇಲಾಖೆಯಲ್ಲಿ ಮಾಡಿದ ಅಮೌಲ್ಯವಾದ ಪರಿಶ್ರಮಕ್ಕೆ ಪುರಸ್ಕಾರಪೂರ್ವಕವಾದ ಅನುಮೋದನವನ್ನು ದಯಪಾಲಿಸಿರುತ್ತಾರೆ.

ಕರ್ನಲ್ ದೇಶರಾಜೇಅರಸಿನವರು ೧೮೮೪ ನೆ ಆಗಸ್ಟ್ ೧೦ ನೆ ತಾರೀಖಿನಲ್ಲಿ ಮಿಲಿಟರಿ ಇಲಾಖೆಯಲ್ಲಿ ಅಟಾಚಿಯಾಗಿ ಸರ್ಕಾರಿ ನೌಕರಿಯನ್ನು ಸೇರಿದರು. ಸ್ವಲ್ಪ ಕಾಲದ ತರುವಾಯ ೧೮೮೫ನೆ ಜೂನ್ ತಿಂಗಳಲ್ಲಿ ಸಂಸ್ಥಾನದಲ್ಲಿನ ನೌಕರಿಗೆ ರಾಜೀನಾಮೆ ಕೊಟ್ಟು ಮದರಾಸು ಮಿಲಿಟರಿ ಇಲಾಖೆಯನ್ನು ಸೇರಿದರು. ೧೮೮೭ನೆ ಡಿಸೆಂಬರ್ ೧೪ನೆ ತಾರೀಖಿನಲ್ಲಿ ಮದರಾಸು ಸರ್ಕಾರದವರು ಇವರ ನೌಕರಿಯನ್ನು ಸಂಸ್ಥಾನಕ್ಕೆ ಹಂಗಾಮಿಯಾಗಿ ವರ್ಗಾಯಿಸಿಕೊಟ್ಟರು. ಆಗ ಇವರನ್ನು ಮಿಲಿಟರಿ ಸೆಕ್ರಿಟರಿಯವರಿಗೆ ಅಸಿಸ್ಟೆಂಟರನ್ನಾಗಿಯೂ ಶ್ರೀಮನ್ ಮಹಾರಾಜಾಸಾಹೇಬ್ ಬಹದೂರರವರಿಗೆ ಏಡಿಕಾಂಗ್ ಆಗಿಯೂ ನೇಮಕ ಮಾಡಲಾಯಿತು. ೧೮೯೦ನೆ ಡಿಸೆಂಬರ್ ತಿಂಗಳಲ್ಲಿ ಮದರಾಸು ಸರ್ಕಾರದ ನೌಕರಿಗೆ ರಾಜೀನಾಮೆಯನ್ನು ಕೊಟ್ಟರು. ೧೮೯೪ನೆ ಮಾರ್ಚಿ ೧ನೆ ತಾರೀಖಿನಲ್ಲಿ ಇಂಪೀರಿಯಲ್ ಸರ್ವಿಸ್ ರಿಜಮೆಂಟಿನ ಕಮಾಂಡೆಂಟರಾಗಿ ನೇಮಿಸಲ್ಪಟ್ಟರು. ಮತ್ತು ಅದೇ ವರುಷದ ಅಕ್ಟೋಬರ್ ತಿಂಗಳಲ್ಲಿ ಮೈಸೂರು ಸೈನ್ಯದಲ್ಲಿ ಲೆಫ್ಟಿನೆಂಟ್ ಕರ್ನಲ್ ಹುದ್ದೆಯು ಕೊಡಲ್ಪಟ್ಟಿತು. ೧೮೯೭ನೆ ಆಗಸ್ಟ್ ೨೬ ರಲ್ಲಿ ಜವಾಬ್ದಾರಿಯ ಸ್ಥಾನವಾದ ಮೈಸೂರು ಸಂಸ್ಥಾನದ ಸೈನ್ಯದ ಚೀಫ್ ಕಮ್ಯಾಂಡೆಂಟರ ಪದವಿಗೆ ಬಂದರು. ಆ ಪದವಿಯಲ್ಲಿ ಸ್ವಲ್ಪ ಕಡಮೆ ೨೨ ವರುಷಗಳ ಕಾಲದವರೆಗೆ ಎಡೆಬಿಡದೆ ಇರುತ್ತಿದ್ದರು.

ಎರಡು ಸಂದರ್ಭಗಳಲ್ಲಿ ಇವರು ಯುದ್ಧಪ್ರಸಕ್ತಿಯಲ್ಲಿ ರಣರಂಗದಲ್ಲಿದ್ದರು. ಎಂದರೆ- ೧೮೮೭ನೆ ಸೆಪ್ಟಂಬರ್ ಲಾಗಾಯತು ೧೮೮೭ನೆ ಅಕ್ಟೋಬರ್ ತಿಂಗಳವರೆಗೆ ಬರ್ಮಾ ಯುದ್ಧದ ಕಾಲದಲ್ಲಿ ಬರ್ಮಾದಲ್ಲೂ ೧೯೧೪ನೆ ಅಕ್ಟೋಬರ್ ಲಾಗಾಯತು ೧೯೧೬ನೆ ಜನವರಿ ವರೆಗೆ ಯೂರೋಪಿನ ಮಹಾ ಯುದ್ಧದಲ್ಲಿ ಈಜಿಪ್ಟಿನಲ್ಲೂ ಮಿಲಿಟರಿ ಸರ್ವಿಸನ್ನು ಮಾಡಿದರು. ಈಜಿಪ್ಟಿನಲ್ಲಿ ಸೇನಾಧಿಪತಿಯಾಗಿದ್ದ ಜನರಲ್ ಜೆ. ಸಿ. ಮಾಕ್ಸ್‌ವೆಲ್ ಯವರ ರಿಪೋರ್ಟಿನಲ್ಲಿ ಇವರ ಹೆಸರು ಪ್ರಸ್ತಾವ ಮಾಡಲ್ಪಟ್ಟಿರುವುದು.

೧೯೦೬ನೆ ವರುಷದಲ್ಲಿ ಮಹಾರಾಜ ಚಕ್ರವರ್ತಿಯವರು ಇವರನ್ನು ರಾಯಲ್ ವಿಕ್ಟೋರಿಯನ್ ಆರ್ಡರ್ ಎಂಬ ಪ್ರತಿಷ್ಠಾ ಪದವಿಯ ಮೆಂಬರು ದರ್ಜೆಗೆ ನೇಮಕಮಾಡಿದರು. ೧೯೧೧ನೆ ವರುಷದಲ್ಲಿ ಸಿ.ಐ.ಈ. ಎಂಬ ಬಿರುದನ್ನು ಪಡೆದರು. ಮತ್ತು ಅದೇ ವರುಷದಲ್ಲಿ ಶ್ರೀಮನ್ ಮಹಾರಾಜಸಾಹೇಬ್ ಬಹದೂರರವರು ಇವರಿಗೆ ತಕ್ಕ ಬಿಲ್ಲತ್ತಿನೊಡನೆ ಕರ್ನಲ್-ಆನ್-ದಿ-ಸ್ಟಾಫ್ ಎಂಬ ಬಿರುದನ್ನು ದಯಪಾಲಿಸಿದರು. ೧೯೧೬ನೆ ಆಗಸ್ಟ್ ತಿಂಗಳಲ್ಲಿ ಯುದ್ಧದಲ್ಲಿ ಇವರು ಮಾಡಿದ ಮೆಹನತ್ತಿಗೆ ಪುರಸ್ಕಾರರೂಪವಾಗಿ ಮಹಾರಾಜ ಚಕ್ರವರ್ತಿಯವರು ಬ್ರಿಟಿಷ್ ಸೈನ್ಯದಲ್ಲಿ ಲೆಫ್ಟಿನೆಂಟ್ ಕರ್ನಲಿನ ಗೌರವಾರ್ಥದ ಅಂಕಿತವನ್ನು ದಯಪಾಲಿಸಿದರು. ಮತ್ತು ೧೯೧೮ನೆ ವರುಷದ ಜೂನ್ ತಿಂಗಳಲ್ಲಿ ಗಂಡಭೇರುಂಡ ಬಿರುದಾವಳಿಯ ಮೊದಲನೆ ತರಗತಿಯ ರತ್ನಪದಕವನ್ನು ಇವರಿಗೆ ಭೂಷಣವನ್ನಾಗಿ ದಯಪಾಲಿಸಿದರು.

ಕರ್ನಲ್ ದೇಶರಾಜೇ ಅರಸಿನವರು ನೌಕರಿಯಿಂದ ವಿಶ್ರಾಂತರಾಗಲು ಅವರಿಗೆ ಅನುಮತಿಯನ್ನು ದಯಪಾಲಿಸುವುದರಿಂದ ಮೈಸೂರು ದೇಶದಲ್ಲೂ ಹೊರಗೂ ಅತ್ಯಂತ ಗೌರವಾಸ್ಪದರಾದ ಯೋಧವರ್ಯರ ನೌಕರಿಯು ತಮಗೆ ತಪ್ಪುತ್ತಿರುವುದೆಂಬ ಅಂಶವು ಶ್ರೀಮನ್ ಮಹಾಸ್ವಾಮಿಗಳವರ ಚಿತ್ತದಲ್ಲಿ ತೋರುತ್ತಲೇ ಇರುವುದು.

ಸಿ. ಎಸ್. ಬಾಲಸುಂದರಂ ಅಯ್ಯರ್,
ಮೈಸೂರು ಸರ್ಕಾರದ ಚೀಫ್ ಸೆಕ್ರಿಟರಿ.

ನೋಟೀಸ್.

ತುಂಕೂರು I ನೇ ಮುನ್‌ಸೀಫ್ ಕೋರ್ಟಿನಲ್ಲಿ 1918–1919 ನೇ
ಇಸ್ವಿ O.S. ನಂಬರ್ 1291.

ವಾದಿ.—ತುಂಕೂರು ತಾಲ್ಲೋಕು ಬೆಳ್ಳಾವಿಯಲ್ಲಿರುವ ವೀರಶೈವಮಠದ ಶ್ರೀ ಕಾರದ ಸ್ವಾಮಿಗಳ ದೇವಸ್ಥಾನದ ಧರ್ಮಕರ್ತರೂ ಮತ್ತು ಇದರ ವಿಶಿಷ್ಟ ಆಡಳಿತವನ್ನು ಸಹ ನಡಿಸತಕ್ಕವರಾದ ಸುಮಾರು 55 ವರ್ಷದ (ಗಟ್ಟಪ್ಪನವರ ವೀರಣ್ಣನವರ ಮಕ್ಕಳು) ಗ ವಿ. ಚನ್ನಪ್ಪ.

V.S.

ಪ್ರತಿವಾದಿ.—ಡಿಟೋ ಬೆಳ್ಳಾವಿಯಲ್ಲಿ ಹಾಲಿಕೊಟ್ಟಿ ಕೆರೆಯಿಂದ ಬಂದು ವಾಸವಾಗಿರುವ ಅವಧೂತ ಸುಬ್ಬಣ್ಣ ಸುಮಾರು 38 ವರ್ಷ.

ಮೇಲ್ಕಂಡ ಮೊಖದಮಾದಲ್ಲಿ ಗ. ವಿ. ಚನ್ನಪ್ಪ ಎಂಬ ವಾದಿಯು ಸುಬ್ಬಣ್ಣ ಎಂಬ ಪ್ರತಿವಾದಿಯ ಮೇಲೆ, ಬೆಳ್ಳಾವಿಯಲ್ಲಿ ಕೆರೆಯೇರಿ ಹಿಂದೆ ಇರುವ ಶ್ರೀಕಾರದ ಸ್ವಾಮಿಯವರ ಗದ್ದುಗೆಯಲ್ಲಿ ಸದರಿ ವಾದಿಯು ಕಟ್ಟಿಸಿರುವ ಶ್ರೀ ಶಿವಲಿಂಗ ದೇವಸ್ಥಾನಕ್ಕೆ ಸೇರಿರುವ ಸದರಿ ದಾವ ನಿವೇಶನವನ್ನು ವಾದಿಯ ಸ್ವಾಧೀನಕ್ಕೆ ಕೊಡಿಸಬೇಕೆಂದೂ, ಸದರಿ ನಿವೇಶನದಲ್ಲಿ ಪ್ರತಿವಾದಿಯು ಅಕ್ರಮವಾಗಿ ಕಟ್ಟಿಸಿರುವ ಗೋಡೆ ಮತ್ತು ಇತರ ಕಟ್ಟಡಗಳನ್ನು ಸಹ ಕಿತ್ತುಹಾಕಿಸಬೇಕೆಂದೂ ಸಹ ದಾವಾ ಮಾಡಿರುತ್ತಾನೆ. ಸದರಿ ದಾವೆಯು 1919ನೇ ಇಸವಿ ಜುಲೈ ತಿಂಗಳ 28ನೇ ತಾರೀಖಿಗೆ ಹಿಯರಿಂಗ್ ಇಡಲ್ಪಟ್ಟಿರುತ್ತೆ. ಈ ಮೊಖದ್ದಮೆಗೆ ಸಾಕ್ಷಿಗಾರರಾಗಿ ಸೇರಲು ಇಷ್ಟವಿರುವವರು ಸದರಿ ತಾರೀಖಿನ ದಿವಸ ಹಗಲು 11 ಘಂಟೆಗೆ ಈ ಕೋರ್ಟಿಗೆ ಹಾಜರಾಗತಕ್ಕದ್ದು.

1919 ನೇ ಇಸವಿ ಜುಲೈ ತಿಂಗಳು 19ನೇ ತಾರೀಖು.

C. ABDULGHANI,
I Munsiff.

ಅಮೇರಿಕಾಧ್ಯಕ್ಷರಾದ ಡಾ|| ವಿಲ್ಸನ್‌ರವರು ತಮ್ಮ ದೇಶಕ್ಕೆ ಹೋಗಿ ಸೇರಿದರು. ದಡದಲ್ಲಿ ಅನೇಕ ಯುದ್ಧನೌಕೆಗಳು ಇಪ್ಪತ್ತೊಂದು ಗುಂಡುಗಳನ್ನು ಹಾರಿಸಿ ಮರ್ಯಾದಿಸಿದುವು. ಲಕ್ಷಾಂತರ ಪ್ರಜೆಗಳು ಅತ್ಯಂತ ಸಂತೋಷದಿಂದ ಸ್ವಾಗತಿಸಿದರು. ಉಪಾಧ್ಯಕ್ಷರೂ ಮಂತ್ರಿಮಂಡಲದವರೂ ಸಹ ಗೌರವಿಸಿದರು. ವಿಲ್ಸನ್‌ರವರು ಹಡಗಿನಿಂದಿಳಿದೊಡನೆಯೇ ಒಂದು ಉಪನ್ಯಾಸವನ್ನು ಕೊಟ್ಟು, ಅಮೇರಿಕಾ ಪ್ರಜೆಗಳು ನಾನಾರಾಷ್ಟ್ರಸಂಘಸ್ಥಾಪನೆಗೆ ಅನುಕೂಲರಾಗಿರುವರೆಂಬ ವಿಷಯದಲ್ಲಿ ತಮ್ಮ ನಂಬುಗೆಯನ್ನು ವ್ಯಕ್ತಪಡಿಸಿದರು. ಮತ್ತೂ ಸಂಧಿನಿಬಂಧನೆಗಳನ್ನು ಪ್ರಜೆಗಳು ಚೆನ್ನಾಗಿ ಪರ್ಯಾಲೋಚಿಸಿದರೆ ಅವು ಬಹಳ ನ್ಯಾಯಸಮ್ಮತವಾಗಿರುವುವೆಂತಲೂ, ಕ್ರಮವಾಗಿ ಅದರಂತೆ ನಡೆಯಿಸಲ್ಪಡುವುವಾದರೆ ರಕ್ತವನ್ನು ಕೋಡಿಹರಿಸುವ ಮಹೋಪದ್ರವವು ಲೋಕದಲ್ಲಿ ಎಂದಿಗೂ ಸಂಭವಿಸದಂತೆ ಮಾಡಿ ಅದು ರಕ್ಷಿಸಬಲ್ಲುದೆಂಬುದಾಗಿಯೂ ನುಡಿದರು. ಮತ್ತೂ ಒಬ್ಬಾನೊಬ್ಬ ಪತ್ರಿಕಾವಿಲೇಖಕನೊಡನೆ ಡಾ|| ವಿಲ್ಸನ್‌ರವರು ಸಂಭಾಷಿಸುವಾಗ್ಗೆ—ಜರ್ಮನರು ಸಂಧಿನಿಬಂಧನೆಗಳಂತೆ ನಡೆಯಿಸಬೇಕಾದ ಕಾರ್ಯಗಳನ್ನೆಲ್ಲಾ ಮಾಡಿ ಮುಗಿಸುವವರೆಗೂ ಅಮೇರಿಕಾ ಸೈನ್ಯವು ಜರ್ಮನಿಯಲ್ಲಿರಬೇಕು. ಜರ್ಮನಿಯ ವ್ಯಾಪಾರವು ಅಭಿವೃದ್ಧಿಹೊಂದುವುದಕ್ಕೆ ಅದಷ್ಟು ಬೇಗನೆ ಮಿತ್ರಮಂಡಲಿಯವರು ಅವರೊಡನೆ ವ್ಯಾಪಾರವನ್ನಾರಂಭಿಸಬೇಕು. ಅಮೇರಿಕಾದವರು ಯೂರೋಪುದೇಶಗಳವರಿಗೆ ತಕ್ಕಷ್ಟು ಧನಸಹಾಯವನ್ನು ಮಾಡಬೇಕು - ಎಂದು ಹೇಳಿದರು.

'ಎರಡು'

'ಎರಡು' ಎಂಬ ಸಂಖ್ಯೆಯು ಬಹಳ ವಿಶೇಷವಾದದ್ದೆಂದು ನೆನಸಬೇಕು. ಲೋಕವ್ಯವಹಾರಕ್ಕೆ ಸಹ ಇದು ಅತ್ಯವಶ್ಯಕವೆಂದು ಸರ್ವರೂ ತಿಳಿದಿರುವ ಸಂಗತಿಯೇ. ಎರಡಿಲ್ಲದೆ ಲೋಕವೇ ಪ್ರವರ್ತಿಸದು. ವಿಶ್ವಸ್ವರೂಪಿಯಾದ ಭಗವಂತನು ಆದಿಯಲ್ಲಿ ತಾನು ಏಕಾಂಗಿಯಾಗಿರಲು ಎರಡಿಲ್ಲದೆ ಸೌಂದರ್ಯವಿಲ್ಲವೆಂದು ನೋಡಿ ತಾನೊರ್ವ ಪ್ರತ್ಯೇಕನಿದ್ದು ವಿಶ್ವವನ್ನು ಪ್ರತ್ಯೇಕವಾಗಿ ಸೃಷ್ಟಿಸಿ ಎರಡಾಯಿತೆಂದು ಹರ್ಷಿತನಾದನು. ಅನಂತರ ವಿಶ್ವದಲ್ಲಿಯೂ ಎರಡಿಲ್ಲದೆ ಸುಂದರವಾಗಿ ಕಾಣಿಸದೆಂದು ಅಲ್ಲಿರುವ ಸಕಲ ವಸ್ತುಗಳನ್ನೂ, ಜೀವಜಂತುಗಳನ್ನೂ, ಬೇರೆ ಅನೇಕ ಸಂಗತಿಗಳನ್ನು ಸಹ ಎರಡೆರಡಾಗುಂಟುಮಾಡಿದನು. ಆಗಲೇ ಸೃಷ್ಟಿಕರ್ತನು 'ಎರಡೇ' ಅತ್ಯುತ್ಕೃಷ್ಟವಾದದ್ದು ಎಂದು ತೋರಿಸಿದನು. ಹೆಣ್ಣು ಮತ್ತು ಗಂಡು ಎಂಬದಾಗಿ ಎರಡುಮಾಡಿದನು. ವರ್ಷವೆಂಬ ಕಾಲವನ್ನು ಎರಡುಭಾಗ ಮಾಡಿ ಈ ಕಾಲದ ಒಂದು ಭಾಗದಲ್ಲಿ ಸೂರ್ಯನು ಉತ್ತರದಿಕ್ಕಿನಲ್ಲಿಯೂ ಮತ್ತೊಂದರಲ್ಲಿ ದಕ್ಷಿಣದಲ್ಲಿಯೂ ಸಂಚರಿಸುವಂತೆ ಸೃಜಿಸಲು ಉತ್ತರಾಯಣ ದಕ್ಷಿಣಾಯನವೆಂಬ ಎರಡು ಆಯನಗಳಾದುವು. ಪ್ರತಿತಿಂಗಳೂ ಎರಡು ಭಾಗವಾಗಿ ಶುಕ್ಲಪಕ್ಷ ಕೃಷ್ಣಪಕ್ಷವೆಂಬಿವು ಪಕ್ಷಗಳಾದುವು. ದಿನವು ಸಹ ಹಗಲು ರಾತ್ರಿಗಳೆಂಬ ಎರಡುಭಾಗಗಳಾದವು. ಇವುಗಳ ಭೇದಾಭೇದಗಳನ್ನು ಸ್ಪಷ್ಟೀಕರಿಸಲು ಕತ್ತಲೆ ಬೆಳಕು ಎಂಬೆರಡು ಉಂಟಾದುವು. ಇವುಗಳ ಪ್ರಕಾಶಕ್ಕಾಗಿ ಸೂರ್ಯಚಂದ್ರರೆಂದು ಎರಡು ವಸ್ತುಗಳು ನಿರ್ಮಿಸಲ್ಪಟ್ಟುವು. ಇವೆಲ್ಲವೂ ಎರಡೆರಡಾಗಿಯೇ ಲೋಕವನ್ನು ಸುಂದರಗೊಳಿಸಿದವು. ಇದಲ್ಲದೆ ಸೃಷ್ಟಿಸಲ್ಪಟ್ಟಂಥ ಈ ಲೋಕವು ಸುಂದರವಾಗಿ ಪ್ರವರ್ತಿಸುವಂತೆ ಲೋಕವ್ಯವಹಾರಕ ವಿದ್ಯಮಾನಗಳು ಎರಡೆರಡಾಗಿ ಶೋಭಿಸಿದುವು. ದೈತ್ಯರು ದೇವತೆಗಳು ಎರಡು ಪಕ್ಷ. ಸ್ವರ್ಗ ನರಕವೆಂಬಿವು ಎರಡು. ಲಾಭಾಲಾಭ, ಜಯಾಪಜಯ, ಮಾನಾಪಮಾನ, ಸುಖ ದುಃಖ, ಧನಿಕ ದರಿದ್ರ, ಜನನ ಮರಣ, ಶೀತೋಷ್ಣ, ಶತ್ರು ಮಿತ್ರ, ಸತ್ಯಾಸತ್ಯ, ಶಿಕ್ಷೆ ರಕ್ಷೆ, ದಂಡನೆ ವಿಮೋಚನೆ, ನಿದ್ರೆ ಜಾಗರ, ಸಜ್ಜನ ದುರ್ಜನ, ಮುಖ್ಯ ಶಿಷ್ಯ, ಪರೋಕ್ಷ ಅಪರೋಕ್ಷ, ಉಚ್ಚ ತುಚ್ಛ, ಇವೆಲ್ಲವೂ ಎರಡೇ ಆಗಿರುವವಲ್ಲದೆ ಬೇರೊಂದಿಲ್ಲ. ಹೀಗಿರದಿದ್ದರೆ ಲೋಕಪ್ರವರ್ತನೆಯಾಗದಾದ ಕಾರಣದಿಂದಲೇ ಇಂತಾದವು. ಇವು ಪರಸ್ಪರ ವಿರುದ್ಧಭಾವದವುಗಳಾಗಿದ್ದಾಗ್ಯೂ ಈ ವಿರೋಧಸ್ವಭಾವವೇ ಲೋಕವ್ಯವಹಾರಕ್ಕೆ ಮುಖ್ಯೋಪಾಯ. ಯಾತಕೆಂದರೆ ಇವಲ್ಲಿ ಒಂದಿಲ್ಲದಿದ್ದರೆ ಮತ್ತೊಂದಿರದು. ಇದ್ದರೂ ನಾಮರಹಿತವಾಗಿರುವುದು. ಅಂದರೆ ಸರ್ವವೂ ಒಂದೇ ಎಂತಾಯಿತು. ಅರ್ಥಾತ್ ಪ್ರಳಯ. ಅಂದರೆ ದೇವರು. ಆದದರಿಂದ ಸೃಷ್ಟಿಕರ್ತನಾದ ದೇವರು ತಾನೊಬ್ಬನೇ ಅಲ್ಲದೆ ಬೇರೊಬ್ಬನಿಲ್ಲ. ಎರಡಿದ್ದರೆ ದೇವರಲ್ಲ. ಈ ಕಾರಣಕ್ಕಾಗಿ ತಾನೊರ್ವನೇ ಒಬ್ಬನಾಗಿದ್ದು ಸಕಲವನ್ನುಂಟುಮಾಡಿ ತನ್ನ ನಿರ್ಮಾಣದ ಶೋಭೆಗಾಗಿ ಅನ್ಯವಾದದ್ದೆಲ್ಲವನ್ನೂ ಎರಡಾಗಿ ನಿರ್ಮಿಸಿದನು. ಈ 'ಎರಡು' ಎಂಬುದರ ಶ್ರೇಷ್ಠತೆಯನ್ನು ಮತ್ತೂ ನೋಡಬೇಕಾದರೆ ನಮ್ಮ ಅವಯವಗಳೇ ಸಾಕ್ಷಿ. ಕಣ್ಣೆರಡು ಕಾಲೆರಡು ಕೈಯೆರಡು ಕಿವಿಗಳೆರಡು ಬಾಯೊಂದಂತೆ ನೆನಸಿದರೂ ಮೇಲ್ದವಡೆ ಕೀಳ್ದವಡೆಗಳೆಂಬಿವೆರಡು (ಈ ಎರಡು ಭಾಗಗಳಿಲ್ಲದಿರಲು ಬಾಯಿಯು ನಿಷ್ಫಲ.) ಮೂಗೊಂದಾದರೂ ಹೊಳ್ಳೆಗಳೆರಡು. ಪಕ್ಷಿಗಳನ್ನೀಕ್ಷಿಸಲು ಅವುಗಳ ಮುಖ್ಯ ಬಲವಾಗಿರುವ ಪಕ್ಷಗಳು ಎರಡೇ. ಹೀಗೆ ಎರಡೆರಡಾಗುಳ್ಳ ನಮ್ಮ ಅವಯವಗಳು ಈ ದೇಹವೆಂಬ ಪಿಂಡಾಂಡದ ಕಾರ್ಯಪ್ರವರ್ತನೆಗಾಗಿಯೂ ಸೌಂದರ್ಯಕ್ಕಾಗಿಯೂ ನಿರ್ಮಿಸಲ್ಪಟ್ಟುವು. ತದ್ರೀತಿಯಲ್ಲಿ ಜಗತ್ತೆಂಬ ಬ್ರಹ್ಮಾಂಡದಲ್ಲಿಯೂ ಸಕಲವೂ ಎರಡೆರಡಾಗಿ ನಿರ್ಮಿಸಲ್ಪಟ್ಟಿವೆ. ಆದದರಿಂದ ಈ 'ಎರಡು' ಎಂಬ ಸಂಖ್ಯೆಯ ಮಹತ್ವವನ್ನು ಬಲ್ಲವರು ಮತ್ತೂ ಹಲವುಬಗೆಯಾಗಿ ಶ್ಲಾಘಿಸುವರು. ಅದಾಗ್ಯೂ ಅದು ಸಾಕಾಗದು.

ಈ 'ಎರಡು' ಜನಿಸಲು ಲೋಕವ್ಯವಹಾರವು ಪ್ರಾರಂಭವಾಯಿತು. ಮತಸ್ಥಾಪಕರು ಎದ್ದರು. ದ್ವೈತ ಅದ್ವೈತವೆಂದು ಎರಡನ್ನು ಕೆಲವರು ವಾದಿಸುತ್ತಾರೆ. ಮಗ ಪಂಚಭೂತಾತ್ಮಕವೆಂಬ ಎರಡನ್ನು ಬೇರೆಯವರು ಬೋಧಿಸುತ್ತಾರೆ. ತಾಯಿ ಮಗ ಎಂಬದಾಗಿ ಬೇರೊಬ್ಬರು ಹೇಳುತ್ತಾರೆ. ದೇವರು ಮತ್ತು ಪ್ರವಾದಿ ಎಂಬ ಎರಡರ ವಿಷಯ ಮತ್ತೊಬ್ಬರ ಕಲ್ಪನೆ. ಈ ಪ್ರಕಾರ ಇಲ್ಲಿಯೂ 'ಎರಡು' ಮಹತ್ವವನ್ನು ಹೊಂದಿದಂತಾಯಿತು. ರಾಜಗೃಹವನ್ನು ಪ್ರವೇಶಿಸಲು, ಹೌದು, ಅಲ್ಲವೆನ್ನುವವರ ಪಕ್ಷಗಳು ಎರಡು. ಆಗಬಹುದು ಆಗಕೂಡದು ಎಂದು ವಾದಿಸುವವರ ಪಕ್ಷಗಳು ಎರಡು. ಪ್ರಭುಗಳು ಸಾಮಾನ್ಯರು ಎಂಬುವವರು ಸೇರಿ ಉಂಟಾದ ನ್ಯಾಯಾಲಯಗಳು ಎರಡು. ಯುದ್ಧರಂಗವೊಳಪೊಗಲು ಹಠದಿಂದಾದರೂ ಮತ್ಸರದಿಂದಾದರೂ ದ್ವೇಷದಿಂದಾದರೂ ಸತ್ಯಧರ್ಮಪರಿಪಾಲನೆಗಾದರೂ ಒಮ್ಮೆಗೆ ಯುದ್ಧಕ್ಕಾಗಿ ಸರ್ವಸನ್ನಾಹಯುಕ್ತನಾಗಿ ಸಿದ್ಧರಾಗಿದ್ದು ಅನಂತರ ಯುದ್ಧವು ಬೇಕು, ಬೇಡವೆನ್ನುವವರ ಪಕ್ಷಗಳು ಎರಡು ಕಾಣುತ್ತವೆ. ದೃಷ್ಟಾಂತವಾಗಿ, ಕುರುಕ್ಷೇತ್ರದಲ್ಲಿ ಯುದ್ಧಕ್ಕೆಂದು ಹೊರಟುಬಂದ ಅರ್ಜುನನು ನಂತರ ಯುದ್ಧವೇ ಬೇಡವೆಂದು ಎರಡು ಪಕ್ಷಗಳನ್ನುಂಟುಮಾಡಿದನು. ಈ ಪ್ರಕಾರ ನಮ್ಮ ಮನಸ್ಸನ್ನು ಯಾರಲ್ಲಿ ತಿರುಗಿಸಿನೋಡಿದರೂ ಅನಾದಿಯಿಂದ ಇಂದಿನವರೆಗೆ 'ಎರಡು' ಆಗಿರುವ ವಿಷಯಗಳೇ ಶೋಭಿಸುವದು ಕಾಣುತ್ತವೆ. ನಮ್ಮ ಶರೀರವನ್ನು ಸಹ ಬಲ್ಲವರು 'ದೇಹ' ಮತ್ತು 'ಆತ್ಮ' ಎಂಬದಾಗಿ 'ಎರಡು' ಆಗಿ ತೋರಿಸಿದರು. ಆತ್ಮವನ್ನು ಸಹ ಬೇರೆಕೆಲವರು 'ಜೀವಾತ್ಮ' ಮತ್ತು 'ಪರಮಾತ್ಮ' ಎಂತ ಎರಡು ಭಾಗಗಳಾಗಿ ಸೂಚಿಸಿದರು. 'ಸಜೀವಿ' 'ನಿರ್ಜೀವಿ' ಗಳು ಎಂಬ 'ಎರಡು' ಭೇದಗಳು ಸೃಷ್ಟಿಯಲ್ಲುಂಟಾದವು. ಅಂದ ಮೇಲೆ 'ಎರಡ'ರ ವಿನಾ ಲೋಕವ್ಯವಹಾರಗಳೇ ನಡೆಯವು ಎಂಬುವದು ಇನ್ನಿನ ನಿನ್ನಿನ ಮಾತಲ್ಲ. ಅನಾದಿಯಿಂದ ನಡೆದುಬಂದ ಮಹತ್ವವಾದ ಸಂಗತಿ. ಈ ಎರಡರ ಪರಸ್ಪರ ಮಿತ್ರಸ್ವಭಾವದಿಂದಾಗಲಿ ಶತ್ರುತ್ವದಿಂದಾಗಲಿ ನಂತರ ಮೂರು, ನಾಲ್ಕು, ಹೀಗೆ ಅನಂತ ವಸ್ತುಗಳೂ ಸಂಗತಿಗಳೂ ಉಂಟಾಗಿ ಲೋಕವೆಂಬಾಗಿ ಅದರಲ್ಲಿ ಅನೇಕಾನೇಕ ಕಾರ್ಯಾಕಾರ್ಯಗಳು ಸಂಭವಿಸಿ ಈ ಲೋಕಪ್ರವರ್ತನೆಯು ಶೋಭಿಸುವುದಾಯಿತು. ಈ ರೀತಿಯಲ್ಲಿ ದ್ವಂದ್ವಭಾವವುಳ್ಳದ್ದಾಗಿ ಸರ್ವವನ್ನೂ ನಿರ್ಮಿಸಿ ತಾನೊರ್ವ ಮಾತ್ರ ಇವುಗಳಿಂದ ನಿರ್ಲೇಪನಾಗಿದ್ದು ದ್ವಂದ್ವಾತೀತನೆನಿಸಿ, 'ಒಂದು' ಎಂತಲೂ 'ಅನಂತ' ಎಂತಲೂ ನಾಮವನ್ನು ಧರಿಸಿ ಮೆರೆಯುವ ಶ್ರೀಮದ್ಭಗವಂತನನ್ನು ಸದಾ ಪ್ರಾರ್ಥಿಸುವ. ಕಂಠೀರವ.

ಪತ್ರವ್ಯವಹಾರ.

ನಂಜನಗೂಡುತಾ|| ದೇಮಾರಹಳ್ಳಿ ಗ್ರಾಂಟ್‌ಸ್ಕೂಲಿನ ವಿಷಯ.

ನಮ್ಮ ಸ್ಕೂಲ್ ಮಾಸ್ಟರಾಗಿರುವ ಮ|| ಡಿ. ಲಿಂಗಣ್ಣಯ್ಯನವರು ಬಂದಮೇಲೆ ಸ್ಕೂಲು ತುಂಬಾ ಅಭಿವೃದ್ಧಿಗೆ ಬಂದಿರುವುದಲ್ಲದೆ ಜನಾನುರಾಗಿಗಳಾಗಿ ತುಂಬಾ ಪ್ರೋತ್ಸಾಹದಿಂದ ಇಲ್ಲೇ ವಾಸಮಾಡಿಕೊಂಡು ಕೆಲಸಮಾಡುತ್ತಾ ಇದ್ದಾರೆ. ಮತ್ತು ಜುಲೈ ೭ ನೇ ಸೋಮವಾರ ನಮ್ಮ ಸ್ಕೂಲಿನಲ್ಲಿ ಶ್ರೀಮನ್ ಮಹಾರಾಜರವರ ಪಟವನ್ನು ಪೂಜಿಸಿ ಗ್ರಾಮದ ಎಲ್ಲಾ ಪ್ರಜೆಗಳೂ ಮತ್ತು ಮೆಂಬರುಗಳೂ ಮ|| ಕೆಂಪನಂಜಪ್ಪನವರೂ ಮ|| ಪಟೇಲ್ ಶಿವಬಸಪ್ಪನವರೂ ಸ್ಕೂಲ್ ಬಾಲಬಾಲಕಿಯರೂ ಓಲಗದ ಸಮೇತ ಗ್ರಾಮದ ಎಲ್ಲಾ ಬೀದಿಗಳಲ್ಲೂ ಉತ್ಸವವನ್ನು ನಡೆಸಿದ ನಂತರ ಸ್ಕೂಲಲ್ಲಿ ಎಲ್ಲಾ ಪ್ರಜೆಗಳಿಗೂ ಗಂಧ ತಾಂಬೂಲ ಕೊಟ್ಟು ಬಾಲಕಬಾಲಕಿಯರಿಗೆ ತಿಂಡಿಯನ್ನು ಹಂಚಿ ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯೋಭಿವೃದ್ಧಿಯನ್ನು ಪ್ರಾರ್ಥಿಸಿ ತುಂಬಾ ಸಂತೋಷವಾಗಿ ಜಯಘೋಷವನ್ನು ಮಾಡಿ ಸಭೆಯನ್ನು ಮುಗಿಸಿದರು.

ವಿದ್ಯಾಭಿಮಾನಿ.

ಸತ್ಯವಾದಿಯ ಲೇಖನವು ಅಸತ್ಯವಾಗಿದೆ.

ಜುಲೈ ೩ ನೇ ತಾರೀಖಿನ ಪತ್ರಿಕೆಯಲ್ಲಿ ಸತ್ಯವಾದಿ ಎಂಬುವರ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ಎಂಬ ಹೆಡ್ಡಿಂಗಿನ ಬರವಣಿಗೆಯಲ್ಲಿ ಅಸತ್ಯವೂ, ಪೌರಾಣಿಕವೂ ಇದೆಯೇ ವಿನಾ ಮತ್ತೇನೂ ಇಲ್ಲ. ಇವರು ಪಂಚಮರ ಹುಡುಗರು ಎ. ವಿ. ಸ್ಕೂಲುಗಳಿಗೆ ಸೇರಿದ್ದರಿಂದ ಚಿತ್ರದುರ್ಗ, ಶೃಂಗೇರಿಗಳಲ್ಲಿ ಗಲಾಟೆಯಾಗಿದೆ ಎಂದು ಬರೆಯುತ್ತಾರೆ. ಚಿತ್ರದುರ್ಗದವರು ರಾಜಾಜ್ಞೆಯನ್ನು ಶಿರಸಾವಹಿಸಿ, ಈ ಆಜ್ಞೆಯು ಶಾಸ್ತ್ರಸಮ್ಮತವೆಂದು ಅರಿತುಕೊಂಡು ತಮ್ಮ ಮಕ್ಕಳನ್ನೆಲ್ಲಾ ಪುನಃ ಸ್ಕೂಲಿಗೆ ಕಳುಹಿಸುತ್ತಾ. ಪಂಚಮಹುಡುಗರನ್ನು ಪ್ರೋತ್ಸಾಹಿಸುತ್ತಿರುವುದು ತಿಳಿದುಕೊಳ್ಳದೆ ಈ ರೀತಿ ಸುಳ್ಳುಬರವಣಿಗೆಯನ್ನು ಬರೆದಿರುತ್ತಾರೆ. ಇವರು ಬರವಣಿಗೆಯಲ್ಲಿ ಜಾತಿಸಂಕರವಾಗುತ್ತೆಂಬ ಪೌರಾಣಿಕ ಅಭಿಪ್ರಾಯವನ್ನು ಒರೆದಿರುತ್ತಾರೆ. ಇವರಿಗೆ ವರ್ಣಗಳು ಗುಣಕರ್ಮಸ್ವಭಾವದಿಂದಾಗುತ್ತೆನ್ನುವ ವೇದಮತದ ಪರಿಚಯವಿಲ್ಲದಂತೆ ಕಾಣುತ್ತದೆ. ಮತ್ತು ಬ್ರಹ್ಮಚಾರಿಗಳೆಲ್ಲರೂ ಒಂದೇ ಸಂಗಡಕ್ಕೆ ಸೇರಿದವರೆನ್ನುವುದೂ ಗೊತ್ತಿಲ್ಲದೇ ಇದೆ. ಅವರು ಹಾಗೆ ಬರೆದ ಮಾತ್ರಕ್ಕೇ ಪ್ರಾಜ್ಞರೂ, ಶಾಸ್ತ್ರವನ್ನು ತಿಳಿದವರೂ, ಪಂಚಮೋದ್ಧಾರಕರೂ ಎಂದು ಹೆಸರು ಪಡೆದಂಥ ಸಾಧ್ವೀ ಪತ್ರಿಕಾಕರ್ತರು ಇಂಥವುಗಳನ್ನು ಪ್ರಚುರಪಡಿಸಿದ್ದಕ್ಕಾಗಿ ಬಹು ವಿಷಾದವಾಗುತ್ತದೆ. ಪ್ರಾಯಶಃ ಇದಕ್ಕೆ ಅವರ ವಯಸ್ಸಿನ ಅರಿವು ಮರವೇ ಕಾರಣವು ಆಗಿರಬೇಕು. ಇವರು ಸುಮ್ಮನೆ ವಿಶ್ರಾಂತಿ ತೆಗೆದುಕೊಂಡರೆ ಒಳ್ಳೆಯದೆಂತ ತೋರುತ್ತದೆ.

ಆರ್ಯಧರ್ಮಸೇವಕ

ಇದೇ ಸಂವತ್ಸರದ ಜ್ಯೇಷ್ಠ ಬಹುಳ ೬ ಗುರುವಾರ ಶಿರಾದಲ್ಲಿ ಇರುವ ರಾ|| ಬರಮಣ್ಣನವರ ಪುತ್ರಿ ಸೌ|| ಗುಂಡಮ್ಮನಿಗೂ ಗುಬ್ಬಿ ತಾಲ್ಲೂಕು ಚನ್ನಿಗಪ್ಪನ ಪಾಳ್ಯದ ಬರಮಯ್ಯನವರ ಪುತ್ರ ಚಿ|| ಪುಟ್ಟಯ್ಯನಿಗೂ ನಡೆದ ವಿವಾಹದಲ್ಲಿ ಕೈ|| ವೈ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ೧ ರೂ ವಿದ್ಯಾಫಂಡಿಗಾಗಿ ೨ ರೂಪಾಯಿಗಳು ಇದೇ ಶಿರಾದಲ್ಲಿರುವ ರಾ|| ಅರಿನಗುರುಬಸಪ್ಪನವರ ಪುತ್ರಿ ಸೌ|| ಸಿದ್ಧರಾಮಕ್ಕನಿಗೂ ತುಮಕೂರು ತಾ|| ಕ್ಯಾತಸಂದ್ರದಲ್ಲಿರುವ ರಾ|| ಚನ್ನಪ್ಪನವರ ಪುತ್ರ ಚಿ|| ಸಿದ್ಧಪ್ಪನಿಗೂ ಜ್ಯೇಷ್ಠ ಬಹುಳ ೯ ಭಾನುವಾರ ನಡೆದ ವಿವಾಹದಲ್ಲಿ ಕೈ|| ವೈ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ೧ ರೂ. ವಿದ್ಯಾಫಂಡಿಗಾಗಿ ೪ ರೂ. ಸಹ ಈ ಎರಡು ಲಗ್ನಗಳೂ ವೇ|| ಶಿರಾ ಹೋಳಿನ ಹಂಪಯ್ಯನವರ ಮಠದ ಪಟ್ಟಾಧ್ಯಕ್ಷ ಸಿದ್ಧಪ್ಪದೇವರು ನೇ|| ಶಿರಾ ಕೋಡಿಗುಣೀಮಠ ರಾಚಯ್ಯನವರು ಇವರುಗಳಿಂದ ವಿಧಿವತ್ತಾಗಿ ನೆರವೇರಿಸಲ್ಪಟ್ಟಿತು. ಈ ಕಾರ್ಯಕ್ಕಾಗಿ ದಯಮಾಡಿಸಿದ್ದ ಭಕ್ತಮಾಹೇಶ್ವರರ ಸಭೆಯಲ್ಲಿ ಕೈ|| ವೈ|| ವೀರಸಂಗಪ್ಪನವರ ವಿಷಯವಾಗಿಯೂ ವೀರಶೈವ ವಿದ್ಯಾಭಿವೃದ್ಧಿ ವಿಷಯವಾಗಿಯೂ ಮೇಲೆ ನಮೂದಿರುವ ಉಭಯರೂ ಶ್ರೋತೃಜನಮನೋರಂಜನವಾಗುವಂತೆ ಭಾಷಣಮಾಡಲು ಸರ್ವರೂ ಸಂತೋಷಪಟ್ಟು ನಂತರ ನೆರೆದಿದ್ದ ಭಕ್ತಮಾಹೇಶ್ವರರಿಗೆಲ್ಲಾ ಫಲತಾಂಬೂಲಾದಿಗಳು ನಡೆಸಲ್ಪಟ್ಟು ಸಭಾಭಂಗವಾಯಿತು. ವಿದ್ಯಾಫಂಡಿಗಾಗಿ ಬಂದ ೬ ರೂಪಾಯಿ ಬೆಂಗಳೂರು ಫಂಡಿನ ಸೆ|| ಜಿ. ಕೆ. ರುದ್ರಾರಾಧ್ಯರಿಗೂ ಅಗ್ರತಾಂಬೂಲದ ಬಾಬತು ೨ ರೂಪಾಯಿ ಸ್ಟಾರ್ ಪತ್ರಿಕಾಕರ್ತರಿಗೂ ಮನಿಯಾರ್ಡರ್ ಮಾಡಿದೆ.

ಮತಾಭಿಮಾನಿ.

[ನೋಲ್ಕಂಡ ೨ ರೂ. ಬಂದಿದೆ. ಪ. ಪ್ರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೋಸ್ಕರ ಅನೇಕತಾಲ್ಲೂಕು ಗ್ರಾಮಾದಿಗಳಲ್ಲಿ ಜರಗುವ ಲಗ್ನಾದಿಕಾರ್ಯಗಳಲ್ಲಿ ತೆಗೆಯತಕ್ಕ ಕಾಣಿಕೆಯನ್ನು ಗ್ರಾಮಾಭಿಮಾನಿಗಳು ಕಳುಹಿಸದೆ ಗ್ರಾಮಸಂಬಂಧವಾದ ದುರ್ವ್ಯಾಜ್ಯಗಳಿಗೂ ಹಾಗೂ ಹತ್ತುಜನಗಳ ಮೊತ್ತರೂಪವಾದ ಧನಕೋಶಕ್ಕೂ ಸಹ ಉಪಯೋಗಿಸಿ ಮಹತ್ಕಾರ್ಯಕ್ಕೆ ವಿಘ್ನಕಾರಿಗಳಾಗುತ್ತಾರೆ. ಕೆಲವು ಪೇಟೆ ಮನೆಗಳಲ್ಲಿ ಲಗ್ನಾದಿ ಕಾರ್ಯಗಳಲ್ಲಿ ಫಂಡಿಗೆ ತೆಗೆಸತಕ್ಕ ಪ್ರಯತ್ನವನ್ನೇ ಮರೆತು ಸ್ವಗ್ರಾಮಸಂಬಂಧವಾದ ಧನಕೋಶಕ್ಕೆ ಮನಸ್ಸು ಮಾಡಿ ಈ ಫಂಡಿಗೆ ಗಮನಕೊಡದ ಕಾರಣ ಕೇವಲ ಧನಸಹಾಯವಿಲ್ಲದಂತೆ ಕಾಣುತ್ತದೆ. ಕೆಲವುಕಡೆ ತೆಗೆಸಿದರೂ ಅಲ್ಲೇ ತಳಗುವದರಿಂದಲೂ ಮತ್ತಷ್ಟು ಕಡಿಮೆಯಾಗಿದೆ. ಈ ಲೋಪಗಳಿಗೆ ಈ ಫಂಡಿನ ಮುಖ್ಯಾಧಿಕಾರಿಗಳು ಪೀಠಾಧಿಕಾರಿಗಳೂ ಆಯಾಯ ಗ್ರಾಮದ ಮಠಸ್ಥರಿಗೂ ಶೆಟ್ಟರು ಯಜಮಾನರಿಗೂ ಪ್ರತಿ ಸಂವತ್ಸರದಲ್ಲಿ ಜರಗುವ ಲಗ್ನಾದಿ ಕಾರ್ಯಗಳಲ್ಲಿ ಅವಶ್ಯಕವಾಗಿ ತೆಗೆಸಬೇಕೆಂದು ಕಟ್ಟಪ್ಪಣೆ ಮಾಡಿದ ಹೊರತು ಫಂಡಿಗೆ ಧನಕೋಶವಾಗಲಾರದು. ಸೂಪಂನಾಸ್ತಿ ಘೃತಂನಾಸ್ತಿ ಶಾಕನಾಕವಿವರ್ಜಿತಃ। ಅಧ್ಯಕನ್ಯಾವಿವಾಹೇ ತುಕೇವಲಂತಮಟಧ್ವನಿಃ॥ ಎಂಬಂತೆ ವಾದ್ಯಧ್ವನಿ ಮಾತ್ರ ಹೆಚ್ಚು. ಧನಕೋಶ ಕಡಿಮೆಯಾಗುತ್ತದೆ. ತನುವಿದು ಶಾಶ್ವತಮಲ್ತಂ। ಧನಧಾನ್ಯ ಸಮೃದ್ಧಿಯೆಂಬುದುಂ ಸ್ಥಿರಮಲ್ತಂ॥ ಸನಿಹದೊಳಾದಿಹನಂತಕ। ನೇತಂ ವಿರಚಿಪುದು ಧರ್ಮಸಂಪಾದನಮಂ॥ ಎಂಬ ನೀತಿಯನ್ನಾದರೂ ಸ್ಮರಿಸಿ ಇಹಪರಗಳಲ್ಲಿ ಕೀರ್ತಿಭೋಗಗಳಿಗಾದರೂ ಮನವರಿತು ಸತ್ಪಾತ್ರದಾನ ಮಾಡಬಾರದೆ? ಪ್ರತಿಯೊಂದು ಲಗ್ನಗಳಲ್ಲೂ ಶಕ್ತ್ಯನುಸಾರ ತೆಗೆಸುತ್ತಾ ಬಂದಲ್ಲಿ ಇವರಿಗೆ ಒಂದು ಲಕ್ಷದೊಂದು ಅತಿಶಯವೆ? ಪ್ರಕೃತ ಮೈಸೂರು ಡಿ|| ಎಡತೊರೆ ಕೈ|| ಬಳಿಚಿಕ್ಕಬಸವಣ್ಣನವರು ಹತ್ತುಎಕರೆ ಗದ್ದೆಯನ್ನು ವೀರಶೈವ ವಿದ್ಯಾರ್ಥಿಗಳ ಅಶನಕ್ಕಾಗಿ ಕೊಟ್ಟರೆಂಬ ಸಂಗತಿ ಕರ್ಣಪಥವಿಹಾರಿಯಾದದ್ದೆ? ವಿನಾ ಮತ್ತೇನೂ ಕಾಣಲಿಲ್ಲ. ಈ ಫಂಡಿನ ಮುಖ್ಯಾಧಿಕಾರಿಗಳು ಇತ್ತಕಡೆ ಗಮನ ಕೊಟ್ಟಲ್ಲಿ ವಿದ್ಯಾರ್ಥಿಗಳ ಅಭಿವೃದ್ಧಿ ಅಪೇಕ್ಷಿತವಯಾಗಲು ಸಂದೇಹವಿಲ್ಲ.

ಮತಾಭಿಮಾನಿ

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 2

ತಲೆನೋವು, ಕೆಮ್ಮಲು, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲು ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲುಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ. ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ)

6 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 33

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲು ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೯ ನೆಯ ಇಸವಿ ಜುಲೈ ತಾ|| ೨೦ ರಿಂದ ೧೯೧೯ ನೆಯ ಜುಲೈ ತಾ|| ೨೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಷಾಢ ಬ|| ಅಷ್ಟಮಿಯಿಂದ ಆಷಾಢ ಬ|| ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಆಟಿಕ ಮಾಸ
20	ಭಾನು	ಅಷ್ಟಮಿ	49-16	ರೇವತಿ	6-50	5
21	[1] ಸೋಮ	ನವಮಿ	43-14	ಅಶ್ವಿನಿ	3-1	6
22	ಮಂಗಳ	ದಶಮಿ	37-11	ಕೃತ್ತಿಕೆ	54-44	7
23	[2] ಬುಧ	ಏಕಾದ	31-0	ರೋಹಿಣಿ	50-38	8
24	ಗುರು	ದ್ವಾದಶಿ	24-48	ಮೃಗಶಿರ	46-47	9
25	ಶುಕ್ರ	ತ್ರಯೋ	19-22	ಆರಿದ್ರಾ	43-34	10
26	[3] ಶನಿ	ಚತು	14-35	ಪುನ	41-0	11

(1) ಮೇಲುಕೋಟೆಯಲ್ಲಿ ಕೃಷ್ಣರಾಜಮುಡೀರಥಃ. (2) ಸರ್ವತ್ರೈಕಾದಶಿ, ಅಗಸ್ತ್ಯೋದಯಃ. (3) ಭೀಮನ ಅಮಾವಾಸ್ಯಾ, ಜ್ಯೋತಿಸ್ತಂಭವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ। ಘನಪಥಕೃತಾವತಾರಾ ಪಶ್ಯಜ್ಞ ನಶ್ಯತ ಮೋಹರಾಜೀಯಾತ್॥
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ। ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂಮಲಂ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ। ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೧) ಮೈಸೂರ್ ಸ್ಟಾರ್ ೧೯೧೯ ನೆಯ ಇಸವಿ ಜುಲೈ ತಾರೀಖು ೨೭ ನೆಯ ಭಾನುವಾರ. (ಸಂಚಿಕೆ ೩೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಗಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.



ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆ ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
25 ಇರುಳಪ್ಪನಬೀದಿ, ಮದರಾಸ್.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಕ ಶತಕತ್ರಯ	೧—೦—೦
ಕ ವೀರಶೈವ ವಿವಾಹವಿಧಿ।	೦—೮—೦
ಪೂಜಾವಿಧಿ।	೦—೧೦—೦
ಮುಖೀಚರಿತ್ರೆ	೦—೫—೦
ವಾಸಿ	೦—೪—೦
ಪಂಚಕ	೦—೨—೦
ವಿದ್ಯಾ (ಮುಕ್ತಿಸಾಧನ)	೦—೨—೦
ಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಲೆಯಂತಿರುವ ಬನಿಯನ್.



ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
25 ಇರುಳಪ್ಪನ ಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೩೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

42 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

32

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣಾದ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಶೋಭೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ದರ್ಬಾರ್ ಸೋಪು.



ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಕಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

25 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೀದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
32 ವೈದ್ಯಶಾಲಾ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.



ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8-ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಎ. ಎ. ಎಸ್. ಪಾಣಿ ಅಂಡ್ ಕೊ,
25 ಸಾಹುಕಾರಪೇಟೆ, ಮದರಾಸ್.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಜುಲೈ ತಾ|| ೨೭ ನೆಯ ಭಾನುವಾರ.

ರಾಜಪುತ್ರೋತ್ಸವ ಸಮಾರಂಭಗಳು.

ಮೈಸೂರು ಸಂಸ್ಥಾನವೆಲ್ಲವೂ ಶ್ರೀಮದ್ಯುವರಾಜ ಪುತ್ರೋತ್ಸವಾನಂದ ಸಮುದ್ರದಲ್ಲಿ ಈಗ ಮುಳುಗಾಡುತ್ತಿದೆ. ಇದಕ್ಕೆಲ್ಲಾ ಮೂಲಸ್ಥಾನವಾಗುವ ರಾಜಧಾನಿಯ ಮತ್ತೂ ಅರಮನೆಯ ಮಂಗಳಾನಂದ ವೈಭವವನ್ನು ವರ್ಣಿಸಲಳವಲ್ಲ. ಪುತ್ರೋದಯಕ್ಕೆ ಪೂರ್ವದಿಂದಲೇ ಕುಲದೇವತಾಲಯ ಮೊದಲಾದ ಕಡೆಗಳಲ್ಲಿ ನಡೆಯುತ್ತಿದ್ದ ಪೂಜಾಪುರಸ್ಕಾರಗಳೂ ಜಪಹೋಮಾದಿ ಕರ್ಮಗಳೂ ದಾನಧರ್ಮಾದಿಗಳೂ ಅಖಂಡವಾಗಿ ನಡೆಯುತ್ತಲೇ ಇವೆ. ಪ್ರಸವದಿನದಿಂದೀಚೆಗೆ ೧೨ ದಿನಗಳವರೆಗೂ ನಡೆಯಬೇಕಾದ ವಿಧಿವತ್ಕರ್ಮಗಳೆಲ್ಲಾ ರಾಜಯೋಗ್ಯವಾಗಿ ನಡೆಯಿಸಲ್ಪಡುತ್ತಿವೆ. ಸಂತೋಷ ಪ್ರದರ್ಶನದ ತಂತ್ರೀವಾರ್ತೆಗಳು ಸಾವಿರಗಟ್ಟಲೆಯಾಗಿ ಶ್ರೀಮನ್ಮಹಾರಾಜ ಸಹೋದರರ ಸನ್ನಿಧಿಗೆ ಬಂದು ಸುರಿಯುತ್ತಿವೆ. ಆಸ್ಥಾನ ಕವಿವರ್ಗವು ತಮ್ಮ ಬುದ್ಧಿಕುಶಲತೆಯನ್ನೆಲ್ಲಾ ವಿವಿಧವಾಗಿ ವ್ಯಕ್ತಪಡಿಸುವ ಕವಿತಾ ಕುಸುಮಮಾಲೆಗಳನ್ನು ಮಹಾರಾಜ ಸನ್ನಿಧಿಗೆ ಸಮರ್ಪಿಸುತ್ತಿದ್ದಾರೆ. ಯಾಚಕಾವಳಿಯು ಬಾಯ್ದೆರೆದು ಕುಳಿತುಕೊಂಡಿದೆ. ಪುರೋಹಿತರ ಸೂಲಗಿತ್ತಿಯರುಗಳ ಆಶ್ರಿತಸೇವಕಾವಳಿಯ ಧನಯೋಗವು ಉಚ್ಚದಶೆಗೆ ಬಂದಿದೆ. ಬಡಬಗ್ಗರು ಈ ಕ್ಷಾಮಕಾಲದಲ್ಲಿ ಅಕ್ಕಿಯನ್ನೂ ಬಟ್ಟೆಬರೆಯನ್ನೂ ಸಹಾಯಪಡೆದು ರಾಜವಂಶವನ್ನು ಹಾಡಿಹರಸುತ್ತಿದ್ದಾರೆ. ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲಾ ಹಣ್ಣು ಸಕ್ಕರೆ ಲಾಡುಗಳನ್ನು ಸವಿದ ಸಿಹಿಬಾಯಲ್ಲಿ ಜಯಘೋಷಮಾಡುತ್ತಿದ್ದಾರೆ. ಪುರಜನರ ಮುಖಮಂಡಲಗಳೆಲ್ಲಾ ಆನಂದತುಂದಿಲಗಳಾಗಿವೆ. ಇದುವರೆಗೆ ಸಂತೆಪೇಟೆಯ ವರ್ತಕರುಗಳು ಸಕ್ಕರೆ ಮೂಟೆಗಳನ್ನು ಬಂಡಿಗಳಲ್ಲಿ ತುಂಬಿಸಿ ಊರಿನಲ್ಲೆಲ್ಲಾ ಹಂಚಿಸಿದರು. ಅರಮನೆಯವರು ಕಳೆದ ಗುರುವಾರ ಡೋಲೋತ್ಸವದ ದಿನ ಸಕ್ಕರೆಯನ್ನು ಸಕಲ ಪ್ರಜೆಗಳಿಗೂ ಹಂಚಿಸಿದರು. ತ್ರಿಮತಸ್ಥ ಬ್ರಾಹ್ಮಣರಿಗೆ ಮಾತ್ರ ಅರಮನೆಯಿಂದ ಮೃಷ್ಟಾನ್ನಭೋಜನವು ನಡೆಯಿಸಲ್ಪಡಬಹುದೆಂದು ತಿಳಿದು ಪುರಪ್ರಮುಖರೆಲ್ಲಾ ಚಂದಾಹಣವನ್ನು ಕೂಡಿಸಿ ಸಕಲ ಜನವರ್ಗದ ಬಡಬಗ್ಗರಿಗೂ ೨-೩ ಕಡೆಯಲ್ಲಿ ಅನ್ನದಾನ ಮಾಡಿಸಲು ಏರ್ಪಡಿಸಿಕೊಂಡಿದ್ದಾರೆ. ಇವರಂತೆ ಸಂಸ್ಥಾನದ ಎಲ್ಲ ಕಡೆಯೂ ನಾನಾತರವಾಗಿ ಸಂತೋಷೋತ್ಸವಗಳು ನಡೆಯುತ್ತಲಿವೆಯೆಂಬುದಕ್ಕೆ ಸಂಶಯವಿಲ್ಲ. ಇಷ್ಟಕ್ಕೆಲ್ಲಾ ಮೂಲಕಾರಣವಾಗಿರುವುದು ಒಂದಾನೊಂದು ಸಂತಾನರತ್ನವೆನ್ನುವಾಗ ಆದರ ಪೂರ್ವಾರ್ಜಿತ ತಪಃಫಲವು ಎಷ್ಟು ಪ್ರಬಲತರವಾಗಿರಬಹುದು! ಮೈಸೂರು ದೇಶದ ಪಾಲ್ಯಪಾಲಕರ ಪರಸ್ಪರ ವಿಶ್ವಾಸ ಸಂಬಂಧವು ಎಷ್ಟು ದೃಢತರವಾದುದೆಂದು ಹೇಳಬಹುದು! ಅಂಥ ಸಂತಾನರತ್ನಕ್ಕೂ ಪ್ರಭುಪ್ರಜಾಮಧ್ಯದ ವಿಶ್ವಾಸಕ್ಕೂ ಸಕಲ ವಿಧವಾದ ಅಭ್ಯುದಯವನ್ನೂ ಜಗದೀಶ್ವರನು ಅನುಗ್ರಹಿಸಲಿ.

ಕಳೆದವಾರ ಅರಮನೆಯಲ್ಲಿ ಪುತ್ರೋತ್ಸವ ಸಂಬಂಧವಾಗಿ ನಡೆದ ಕಾರ್ಯಗಳೊಳಗೆ ತಾ|| ೨೪ ನೆ ಗುರುವಾರದ ದಿವಸ ನಡೆದ ಡೋಲೋತ್ಸವವು ಮುಖ್ಯವಾಗಿದ್ದಿತು. ಆದಿನ ಬೆಳಗಿನ ೯|| ಗಂಟೆಗೆ ಅರಮನೆಯ ಅಂಬಾವಿಲಾಸದಲ್ಲಿ ದರಬಾರು ನಡೆದಿತು. ಶ್ರೀಮನ್ಮಹಾರಾಜರವರು ರಜತಾಸನವನ್ನು ಅಲಂಕರಿಸಿರುವಲ್ಲಿ ಶ್ರೀಮದ್ಯುವರಾಜರವರು ಭದ್ರಪೀಠವನ್ನಲಂಕರಿಸಿ, ಸ್ವಸ್ತಿವಾಚನಾದಿ ಕರ್ಮಗಳನ್ನು ನೆರವೇರಿಸಿದರು. ಗಾಯಕ ಶಿಖಾಮಣಿಗಳಿಂದ ಸಂಗೀತವು ನಡೆಯುತ್ತಿದ್ದಿತು. ಹೊರಗೆ ವಾದ್ಯಗಳು ಘೋರ್ಗರೆಯುತ್ತಿದ್ದುವು. ಜಾತಕರ್ಮವು ವಿಧ್ಯುಕ್ತವಾಗಿ ನೆರವೇರಿತು. ತೊಟ್ಟಿಲನ್ನು ತೂಗಿಸುವ ಶಾಸ್ತ್ರವು ಅಂತಃಪುರದಲ್ಲಿ ನೆರವೇರಿತು. ಶ್ರೀಮನ್ಮಹಾರಾಜರಿಗೂ ಶ್ರೀಮದ್ಯುವರಾಜರವರಿಗೂ ಪುಷ್ಪಹಾರಗುಚ್ಛಗಳು ಸಮರ್ಪಿಸಲ್ಪಟ್ಟ ಬಳಿಕ ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲ ಶರ್ಕರಾಖಂಡಗಳು ವಿನಿಯೋಗಿಸಲ್ಪಟ್ಟುವು. ಸಭಿಕ ಪ್ರಮುಖರಿಗೆ ರಾಜಪುತ್ರ ಸಂದರ್ಶನವು ಮಾಡಿಸಲ್ಪಟ್ಟಿತು. ಸರ್ವರೂ ಸಂತಾನರತ್ನಕ್ಕೆ ದೀರ್ಘಾಯುರಾರೋಗ್ಯಗಳನ್ನು ಕೋರಿದರು. ಆದಿನ ಮಧ್ಯಾಹ್ನದಲ್ಲಿ ಅರಮನೆಯಿಂದ ಪ್ರತಿ ಮೊಹಲ್ಲೆಗೂ ಸಕ್ಕರೆ ತುಂಬಿದ ಬಂಡಿಗಳು ಕಳುಹಿಸಲ್ಪಟ್ಟು ಉದಾರವಾಗಿ ಎಲ್ಲ ಕಡೆಯೂ ಹಂಚಲ್ಪಟ್ಟಿತು.

ಮುಂದಣ ಮಂಗಳವಾರ ಅರಮನೆಯಲ್ಲಿ ನಾಮಕರಣಮಹೋತ್ಸವವು ನಡೆಯಿಸಲ್ಪಡುವುದಾಗಿದೆ. ಆ ದಿನ ಸಂಸ್ಥಾನದ ಸಕಲ ಕೋರ್ಟು ಕಚೇರಿ ಪಾಠಶಾಲೆ ಮೊದಲಾದುವುಗಳಿಗೆಲ್ಲಾ ರಜಾ ಕೊಡಲ್ಪಡುವುದಕ್ಕೂ, ಮೈಸೂರು ಬೆಂಗಳೂರು ಪಟ್ಟಣಗಳೆರಡರಲ್ಲೂ ೨೧-೨೧ ಕುಶಾಲ್ ಫಿರಂಗಿಗಳು ಹಾರಿಸಲ್ಪಡುವುದಕ್ಕೂ, ಮೈಸೂರು ಬೆಂಗಳೂರು ಪಟ್ಟಣಗಳಲ್ಲಿರುವ ಮುಖ್ಯ ದೇವಾಲಯಗಳಲ್ಲೂ ಮಸೀದಿಗಳಲ್ಲೂ ವಿಶೇಷ ಪೂಜಾಪ್ರಾರ್ಥನೆಗಳು ನಡೆಯಿಸಲ್ಪಡುವುದಕ್ಕೆ ನೂರುನೂರು ರೂ. ಗಳಂತೆ ವೆಚ್ಚಮಾಡುವುದಕ್ಕೂ ಉಳಿದ ಡಿಸ್ಟ್ರಿಕ್ಟುಗಳಿಗೆಲ್ಲಾ ಪ್ರತಿಯೊಂದಕ್ಕೂ ಈ ಪೂಜಾಕಾರ್ಯಗಳಿಗಾಗಿ ೫೦ ರೂ. ನಂತೆ ವೆಚ್ಚಮಾಡಲಿಕ್ಕೂ ಅಪ್ಪಣೆಮಾಡಿರುವುದಲ್ಲದೆ ಸಂಸ್ಥಾನದ ಕಾರಾಗೃಹಗಳಲ್ಲಿರುವ ಬಂದಿಗಳಲ್ಲಿ ೧ ತಿಂಗಳೊಳಗಣ ಶಿಕ್ಷೆಯನ್ನನುಭವಿಸುತ್ತಿರುವವರನ್ನೆಲ್ಲಾ ಬಿಟ್ಟುಬಿಡುವುದಕ್ಕೂ ಅದಕ್ಕೆ ಮೇಲ್ಪಟ್ಟ ಕಾಲಶಿಕ್ಷಾನುಭವವನ್ನು ಮಾಡುತ್ತಿರುವವರಿಗೆ ವರ್ಷಕ್ಕೆ ೧ ತಿಂಗಳಂತೆ ಕಡಿಮೆಹಾಕುವುದಕ್ಕೂ ೧೦೦ ರೂ. ನೊಳಗಣ ತೆರಬೇಕಾಗಿ ಸಿವಿಲ್ ಜೈಲನ್ನು ಅನುಭವಿಸುತ್ತಿರುವ ನಿರ್ಗತಿಕರ ಸಾಲವನ್ನೆಲ್ಲಾ ಕೊಟ್ಟು ಅವರನ್ನೆಲ್ಲಾ ಬಿಡುಗಡೆಮಾಡುವುದಕ್ಕೂ ಎಲ್ಲಾ ಸರ್ಕಾರಿ ಮತ್ತೂ ಇತರ ದೊಡ್ಡದೊಡ್ಡ ಕಟ್ಟಡಗಳಮೇಲೆಲ್ಲಾ ಧ್ವಜಪತಾಕೆಗಳನ್ನೇರಿಸುವುದಕ್ಕೂ ಅಪ್ಪಣೆಮಾಡಿದ್ದಾರೆ. ಇವುಗಳ ಜತೆಗೆ ಮುಖ್ಯವಾಗಿ ಬಡಬಗ್ಗರಿಗೆ ಮೃಷ್ಟಾನ್ನಭೋಜನಗಳನ್ನು ಇಟ್ಟು ತೃಪ್ತಿಪಡಿಸುವುದಕ್ಕೂ ಕೂಡ ರಾಜಧಾನಿಯಲ್ಲಿ ಏರ್ಪಡಿಸುವುದು ಧರ್ಮವಾಗಿರುವುದು.

ಮುಖ್ಯವಾಗಿ ಹೊಸ ಅರಮನೆಯು ಕಟ್ಟಲ್ಪಟ್ಟೀಚೆಗೆ ಅದರಲ್ಲಿ ನಡೆದ ರಾಜಪುತ್ರೋದಯದಲ್ಲಿ ಇದೇ ಮೊದಲನೆಯದಾದುದರಿಂದ ಅಭೂತಪೂರ್ವವಾದ ವೈಭವವು ಈಗ ನಡೆಯುವುದೂ, ಶ್ರೀಮನ್ಮಹಾಮಾತೃಶ್ರೀಯವರ ಮತ್ತೂ ಶ್ರೀಮನ್ಮಹಾರಾಜರವರ ಆನಂದಕ್ಕೆ ಪಾರವೇ ಇಲ್ಲವೆಂಬುದೂ ಸಹಜವಾಗಿರುತ್ತದೆ. ಮೈಸೂರು ಸಂಸ್ಥಾನದ ಭವಿಷ್ಯದ್ರಾಜಪದವಿಯನ್ನು ಪಡೆಯುವ ಸುಯೋಗವನ್ನು ಹೊಂದಿರುವ ಸಕಲ ಪ್ರಜಾನಂದಕರವಾಗಿರುವ ಈ ಸುಕುಮಾರ ರಾಜಕುಮಾರರು ಜಗದೀಶ್ವರನ ಅನುಗ್ರಹದಿಂದಲೂ ಪ್ರಜೆಗಳ ಪುಣ್ಯಪರಿಪಾಕದಿಂದಲೂ ದೀರ್ಘಾಯುರಾರೋಗ್ಯಾದಿ ಸೌಭಾಗ್ಯಗಳನ್ನು ಪಡೆದು ಶುಕ್ಲಪಕ್ಷಚಂದ್ರನಂತೆ ಅಭಿವೃದ್ಧಿಗೊಂಡು ಆಹ್ಲಾದವನ್ನುಂಟುಮಾಡಲಿಯೆಂದು ಆತ್ಯಾನಂದ ವೈಭವದಿಂದ ಕೋರುತ್ತಿರುವೆವು.

ಕೀರ್ತಿಶೇಷರಾದ ಡಾಕ್ಟರ್ ಟಿ. ಎಂ. ನಾಯರ್‌ರವರು.

ಪ್ರಜಾಹಿತಾರ್ಥವಾಗಿ ತಮ್ಮ ತನುಮನೋಧನಾದಿಗಳನ್ನೆಲ್ಲಾ ಅರ್ಪಿಸಿರುವ ಭಾರತೀಯರು ಭರತಖಂಡದಲ್ಲಿ ವಿರಳರಾಗಿರುವರು. ಅಂಥವರಲ್ಲಿ ಡಾ|| ನಾಯರ್‌ರವರು ಗಣ್ಯರಾದವರು. ಈ ಮಹನೀಯರು ತನ್ನ ದೇಶೀಯರ ಉದ್ಧಾರಕ್ಕಾಗಿಯೇ ಸೀಮೆಗೆ ಹೋಗಿ ಕೆಲಸಮಾಡುತ್ತಿದ್ದು ಅಲ್ಲೇ ಕಳೆದ ತಾ|| ೧೭ ರಲ್ಲಿ ವಿಧಿವಶರಾದರೆಂಬ ವಾರ್ತೆಯು ಭಾರತೀಯರಿಗೆ ಅತ್ಯಂತವಾಗಿ ವಿಷಾದವನ್ನುಂಟುಮಾಡಿರುತ್ತದೆ. ಅವರ ಶಕ್ತಿಸಾಹಸಗಳ ಪರಿಚಯವುಳ್ಳ ವಿದ್ವಜ್ಜನರಂತೂ ಡಾಕ್ಟರ್‌ರವರ ಈ ಅಕಾಲಮರಣಕ್ಕಾಗಿ ಹತವಿಧಿಯನ್ನು ಶಪಿಸುತ್ತಲಿದ್ದಾರೆ. ಡಾಕ್ಟರ್‌ರವರ ಹಿಂಬಾಲಕರಂತೂ ಎದೆಯೊಡೆದು ಹೋಗಿದ್ದಾರೆ. ಇವರು ವೈದ್ಯವಿದ್ಯೆಯಲ್ಲಿ ಪಾಂಡಿತ್ಯವನ್ನು ಸಂಪಾದಿಸಿ, ಸೀಮೆಗೆ ಹೋಗಿ ಅಲ್ಲಿಯ ಎಡಿಂಬರೋ ಪಟ್ಟಣದ ಕಲಾಶಾಲೆಯಲ್ಲಿ ಉತ್ತಮವಾದ ವೈದ್ಯಪರೀಕ್ಷೆಯನ್ನು ಕೊಟ್ಟು, ಫ್ರಾನ್ಸ್ ದೇಶಕ್ಕೆ ಹೋಗಿ ಇನ್ನು ಕೆಲ ವೈದ್ಯಭಾಗಗಳನ್ನು ಓದಿ ಉತ್ತೀರ್ಣರಾಗಿ ಮದ್ರಾಸಿಗೆ ಬಂದು ವೈದ್ಯದಲ್ಲಿ ಅಸಾಧಾರಣ ಪಾಂಡಿತ್ಯವುಳ್ಳವರೆಂಬ ಪ್ರಖ್ಯಾತಿಯನ್ನು ಪಡೆದು ೧೮೯೭ನೆ ವರ್ಷದಲ್ಲಿ ವೈದ್ಯವೃತ್ತಿಗೆ ಆರಂಭಿಸಿದರು. ಮತ್ತೂ "ಆಂಟಿಸೆಪ್ಟಿಕ್" ಎಂಬ ವೈದ್ಯಪತ್ರಿಕೆಗೆ ಸಂಪಾದಕರಾಗಿ ಬಹುಕಾಲ ಅದನ್ನು ನಡೆಯಿಸಿದರು. ಯೂರೋಪಿನ ಮಹಾಯುದ್ಧವು ಆರಂಭವಾದ ಸಮಯದಲ್ಲಿ ಮದ್ರಾಸು ವೈದ್ಯನೌಕೆಯಲ್ಲಿ ಸೇರಿ ಪ್ರಜಾಸೇವೆಯನ್ನು ಕೆಲಕಾಲ ಮಾಡಿದರು. ಇವರು ಮದ್ರಾಸಿನಲ್ಲಿದ್ದ ಪ್ರಸಿದ್ಧ ವೈದ್ಯರಲ್ಲಿ ಒಬ್ಬರಾಗಿದ್ದರು. ಆ ವೈದ್ಯಭಾಗವೊಂದರಲ್ಲೇ ಇವರು ಇನ್ನೆಷ್ಟು ದೊಡ್ಡವರಾಗಿದ್ದರೂ, ಇವರಿಗೆ ಈಗಿದ್ದಷ್ಟು ಖ್ಯಾತಿಯೂ ಗೌರವವೂ ಸಂಭವಿಸಲವಕಾಶವಿರಲಿಲ್ಲ. ಇವರು ರಾಜಕೀಯ ವಿಷಯದಲ್ಲೂ ಅಸಾಧಾರಣ ಸಾಮರ್ಥ್ಯವನ್ನು ಪಡೆದಿದ್ದರು. ಆದರಲ್ಲಿ ತಮಗಿದ್ದ ಪರಿಜ್ಞಾನವನ್ನು ಇವರು ಅನುಪಮವಾದ ಚಮತ್ಕಾರಿಕ ಲೇಖನ ಸಾಮರ್ಥ್ಯದಿಂದಲೂ, ಅಸದೃಶವಾದ ವಕ್ತೃತ್ವಶಕ್ತಿಯಿಂದಲೂ ದೇಶವೇ ಆಶ್ಚರ್ಯಪಡುವಂತೆ ಉಪಯೋಗಿಸುತ್ತಿದ್ದರು. ಹಿಡಿದ ಕಾರ್ಯವನ್ನು ಸಾಧಿಸುವುದರಲ್ಲಿ ಇವರಿಗಿದ್ದ ದೃಢನಿಶ್ಚಯವೂ, ಧೈರ್ಯಸ್ಥೈರ್ಯಗಳೂ ಸಹ ಅವರ ನಿಜವಾದ ಸಾಮರ್ಥ್ಯವನ್ನು ಮತ್ತಷ್ಟು ಪ್ರೋಜ್ಜ್ವಲಗೊಳಿಸಿದ್ದುವು. ತನಗೆ ನ್ಯಾಯವೆಂದು ತೋರಿದ ವಿಷಯವನ್ನು ಸಮರ್ಥಿಸುವುದರಲ್ಲಿ ಬ್ರಹ್ಮನು ಪ್ರತಿಪಕ್ಷದವನಾಗಿ ಬಂದು ನಿಂತಿದ್ದರೂ ತೃಣದಂತೆ ತಿಳಿಯುತ್ತಿದ್ದರು. ಭರತಖಂಡದ ರಾಜಕೀಯ ಪಕ್ಷಗಳೊಳಗೆ ಲಾರ್ಡ್ ಕರ್ಜನ್‌ರವರ ಕಾಲದಲ್ಲಿ ಉಗ್ರಪಕ್ಷದಲ್ಲೆಲ್ಲಾ ಅತ್ಯುಗ್ರಪಕ್ಷದವರಾಗಿ ನಿಂತು ತಮ್ಮ ಅನುಪಮ ದೇಶವಾತ್ಸಲ್ಯವನ್ನು ಅನೇಕವೇಳೆ ವ್ಯಕ್ತಪಡಿಸಿದ್ದರು. ಅಲ್ಲದೆ ಇವರ ಪ್ರಜಾಹಿತಜೀವನವು ಮದ್ರಾಸು ಮ್ಯುನಿಸಿಪಾಲಿಟಿಯಲ್ಲೂ ಸುವ್ಯಕ್ತವಾಗಿದ್ದಿತು. ಮದ್ರಾಸು ಸ್ಥಾನಿಕಪರಿಪಾಲನೆಯ ಅಭಿವೃದ್ಧಿ ವಿಷಯದಲ್ಲಿ ಅವರು ಪಟ್ಟ ಶ್ರಮವು ಚಿರಸ್ಮರಣೀಯವಾಗಿರುವುವು ಕಾರ್ಪೋರೇಷನ್ನಿನ ವಿಷಯಗಳು ಅವರಿಗೆ ಕರತಲಾಮಲಕವಾಗಿದ್ದುವು. ಮದ್ರಾಸು ನಿಯಮನಿರ್ಮಾಣಸಭೆಯಲ್ಲೂ ಕೂಡ ಅವರು ತೋರಿಸಿದ ನ್ಯಾಯಪ್ರಿಯತೆಯೂ, ಉಜ್ವಲಸಾಮರ್ಥ್ಯವೂ ದೇಶೀಯರ ಪ್ರಶಂಸೆಗೆಲ್ಲಾ ಪಾತ್ರವಾಗಿರುವುವು. ಹೀಗೆ ದೇಶಹಿತಕಾರ್ಯಗಳಲ್ಲಿ ಅನಂತವಿಧವಾಗಿ ತಮ್ಮ ಜೀವಿತವನ್ನು ಚಿರಕಾಲ ಸವೆಸಿದುದರಿಂದ ಇವರು ಇಲ್ಲಿಯ ದೇಶಭಕ್ತ ಪ್ರಮುಖರೊಳ್ಳಬ್ಬರೆಂದು ಗಣಿಸಲ್ಪಡುತ್ತಿದ್ದರು.

ರಾಜಕೀಯ ವಿಷಯದಲ್ಲಿ ದೀರ್ಘಕಾಲ ತಾವು ಪಟ್ಟ ಪರಿಶ್ರಮದಿಂದ ದೇಶದಲ್ಲಿರುವ ನಿಜವಾದ ಲೋಪವಾವುದೆಂಬುವುದೂ ಅದರ ನಿವಾರಣೆಗಾಗಿ ಮಾಡಬೇಕಾದ ಅವಶ್ಯ ಕರ್ತವ್ಯವೇನೆಂಬುದೂ ಅವರಿಗೆ ಚೆನ್ನಾಗಿ ಗೊತ್ತಾಯಿತು. ಅದರಮೇಲೆ ಅವರು ಮಾಡಿದ ಸಿದ್ಧಾಂತವೇನೆಂದರೆ—ದೇಶದಲ್ಲಿ ಬಹುಪ್ರಜೆಗಳು ಅಜ್ಞಾನಪಂಕದಲ್ಲಿ ಮುಳುಗಿಹೋಗಿ ಕೆಲವೊಂದು ವರ್ಗದವರು ಮಾತ್ರ ವಿದ್ಯಾಬುದ್ಧಿ ವಿಕಾಸಗಳನ್ನು ಹೊಂದಿ ಅವರು ಮಾತ್ರವೇ ಮುಂಬರಿಯುತ್ತ ಇತರರೆಲ್ಲಾ ಕ್ಷಯಗ್ರಸ್ತರಂತಿರುವುದರಿಂದ, ಸರ್ವಾಂಗ ಪರಿಪುಷ್ಟಿಯಾದಲ್ಲದೆ ದೇಶಾಭ್ಯುದಯವು ಸಮಾಗ್ರವಾಗಿ ಆಗುವುದಿಲ್ಲ ಎಂಬುದಾಗಿ. ಇದಕ್ಕಾಗಿ ಅವರು ನಿಮ್ನಜಾತಿಯ ಜನರೇ ಮೊದಲಾದ ಹಿಂದುಳಿದವರನ್ನೆಲ್ಲಾ ಪ್ರಬೋಧಗೊಳಿಸುವುದಕ್ಕೆ ನಡುಕಟ್ಟಿ ನಿಂತರು. ಒಂದು ಸಂಘವನ್ನು ಸ್ಥಾಪಿಸಿ, ಅದರ ಮೂಲಕ ಜಸ್ಟಿಸ್ ಎಂಬ ಆಂಗ್ಲದೈನಿಕಪತ್ರಿಕೆಯನ್ನು ಪ್ರಕಟಿಸಲಾರಂಭಿಸಿ ಅದಕ್ಕೆ ತಾವೇ ಸಂಪಾದಕರಾಗಿ ನಿಂತರು. ತಮಿಳಿನಲ್ಲೂ ತೆಲುಗಿನಲ್ಲೂ ವೃತ್ತಪತ್ರಿಕೆಗಳನ್ನು ಪ್ರಕಟಿಸಲಾರಂಭಿಸಿದರು. ಈ ಪತ್ರಿಕೆಗಳ ಮೂಲಕವಾಗಿ ದೇಶಮಧ್ಯದಲ್ಲಿ ಹಿಂದುಳಿದ ಜನವರ್ಗಗಳೊಳಗೆ ಜಾಗರೂಕತೆಯೂ ಆತ್ಮೋದ್ಧಾರದೀಕ್ಷೆಯೂ ಹುಟ್ಟುವಂತೆ ಮಾಡಿದರು. ಅಲ್ಲಲ್ಲಿ ಮಹಾಸಭೆಗಳು ಜರುಗುವುದಕ್ಕೂ, ವಿದ್ಯಾವ್ಯಾಪನೆಗಾಗಿ ಸಾಹಸಪಡುವುದಕ್ಕೂ, ಅಂತ್ಯಜೋದ್ಧಾರಕ್ಕೂ ದಾರಿಮಾಡಿಕೊಟ್ಟರು. ತಮ್ಮ ಸರ್ವಸ್ವವನ್ನೂ ಈ ದೇಶೋದ್ಧಾರ ಕಾರ್ಯಕ್ಕೇ ಕಟ್ಟಕಡೆಗೆ ಒಪ್ಪಿಸಿ, ಅಹರ್ನಿಶಿಯೂ ಅದಕ್ಕಾಗಿಯೇ ಕೆಲಸಮಾಡುತ್ತಿದ್ದರು. ಹಿಂದುಳಿದವರಿಗೆ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂಬ ತತ್ವವನ್ನು ಜಗತ್ತಿನ ಕಣ್ಣಮುಂದೆ ಇಡುವುದರಲ್ಲಿ ಇವರು ತಮ್ಮ ಕೊನೆಯ ಗಳಿಗೆಯವರೆಗೂ ಶ್ರಮಪಟ್ಟರು. ತಮ್ಮ ದೇಹಾರೋಗ್ಯವನ್ನೂ ಲಕ್ಷಿಸದೆ ವಿದೇಶಕ್ಕೆ ಹೋಗಿ ಆ ಪರದೇಶದಲ್ಲಿ ತಮ್ಮ ಕಳೇಬರವನ್ನು ಬಿಟ್ಟುದೂ ಈ ಸಂಕಲ್ಪದ ನಿರ್ವರ್ತನೋದ್ದೇಶದಲ್ಲಿಯೇ. ಕೊನೆಕೊನೆಗೆ ಇವರು ಪ್ರತ್ಯೇಕ ಪ್ರಾತಿನಿಧ್ಯ ಸಾಧನೆಗಾಗಿಯೂ, ನಿಮ್ನಜನೋದ್ಧಾರಕ್ಕಾಗಿಯೂ ಅವಲಂಬಿಸಿದ ಮಾರ್ಗವು ಸ್ವಾರ್ಥಪರರಾದ ಕೆಲವರಿಗೆ ರುಚಿಸದೆ ಹೋದರೂ, ಇವರ ಕಾರ್ಯದೀಕ್ಷೆಯನ್ನೂ, ದೃಢಪ್ರಯತ್ನವನ್ನೂ, ಅಸಮಸಾಹಸವನ್ನೂ ನೋಡಿ ಪ್ರತಿಪಕ್ಷಿಗಳೂ ಕೂಡ ತಲೆದೂಗದೆ ಇರುತ್ತಿರಲಿಲ್ಲ. ಈ ಸಂಬಂಧದಲ್ಲಿ ಡಾ|| ನಾಯರ್‌ರವರ ಕೀರ್ತಿಯು ಭರತಖಂಡದಲ್ಲಿ ಮಾತ್ರವೇ ಅಲ್ಲದೆ ವಿದೇಶಗಳಲ್ಲೂ ವ್ಯಾಪಿಸುವಂತಾಯಿತು. ಈಗ ನಡೆಯತಕ್ಕ ರಾಜಕೀಯ ಸಂಸ್ಕರಣದಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ತತ್ವಾಂಗೀಕಾರಕ್ಕೆ ಎಡೆಯಿರುವಂತೆ ಮಾಡಬೇಕೆಂಬುದೇ ಇವರು ಈಗ ಸೀಮೆಗೆ ಹೋಗಿದ್ದುದರ ಉದ್ದೇಶವಾಗಿದ್ದಿತು. ಮೊದಲೊಂದುಸಲ ಕಳೆದವರ್ಷ ಇವರು ಸೀಮೆಗೆ ಹೋಗಿದ್ದು ದೇಹಾರೋಗ್ಯವನ್ನು ಮಾಡಿಕೊಂಡು, ತಮ್ಮ ಉದ್ದೇಶಸಾಧನೆಗಾಗಿಯೂ ಸ್ವಲ್ಪ ಪ್ರಯತ್ನಪಟ್ಟು ಈ ದೇಶಕ್ಕೆ ಬಂದಿದ್ದು, ಮರಳಿ ಇಂಗ್ಲಂಡಿಗೆ ಹೋಗಿ ಕೆಲಸಮಾಡುತ್ತಿದ್ದರು. ರಾಜಕೀಯಸಂಸ್ಕರಣದ ಬಿಲ್ಲನ್ನು ಕುರಿತು ವಿಚಾರಿಸುವುದಕ್ಕೆ ಇಂಗ್ಲಂಡಿನಲ್ಲಿ ಏರ್ಪಟ್ಟಿರುವ ಸಂಯುಕ್ತಸಂಘದ ಇದಿರಿಗೆ ಇವರ ಸಾಕ್ಷ್ಯವು ನಡೆಯಬೇಕಾಗಿದ್ದಿತು. ಇವರ ದೇಹಾನಾರೋಗ್ಯವನ್ನು ಆ ಸಂಘದವರು ತಿಳಿದು, ಬೇಗನೆ ಎಂದರೆ ತಾ|| ೧೮ ನೆಯ ದಿನವೇ ಅದು ಅವರಿದ್ದ ಸ್ಥಲದಲ್ಲೇ (ಕಮಿಷನ್ನಿನ ಮೂಲಕ) ಜರುಗಿಸುವುದಕ್ಕೆ ಏರ್ಪಡಿಸಿದ್ದರು. ಆದರೆ ಹತವಿಧಿ ವಿಲಾಸದಿಂದ ಅದಕ್ಕೂ ಅವಕಾಶವಿಲ್ಲದಂತೆ ತಾ|| ೧೭ ನೆ ಗುರುವಾರವೇ ಇವರು ಸ್ವರ್ಗಸ್ಥರಾಗಿ ಹೋದರು.

ಕಳೆದ ತಿಂಗಳಿಂದಲೂ ಇವರ ಆರೋಗ್ಯವು ಕೆಟ್ಟಿದೆಯೆಂದು ಸುದ್ದಿ ಭರತಖಂಡಕ್ಕೆ ಬರುತ್ತಿದ್ದಿತು. ಆದರೆ ಇಷ್ಟು ಅಕಾಲಿಕ ಮರಣವು ಸಂಭವಿಸುವುದೆಂಬ ನಿರೀಕ್ಷಣೆಯಿರಲಿಲ್ಲ. ಮೂತ್ರರೋಗದಿಂದ ಪೀಡಿತರಾಗಿ ನರಳುತ್ತಿದ್ದರು. ಇವರ ಮರಣದಿಂದ ಭರತಖಂಡಕ್ಕೆ ದೇಶಭಕ್ತ ಶಿರೋಮಣಿಯೊಬ್ಬನು ನಷ್ಟವಾದಂತಾಯಿತು. ಹಿಂದುಳಿದ ಜನರ ಉದ್ಧಾರಯತ್ನ ಯಂತ್ರದ ಒಂದು ಪ್ರಮುಖಚಕ್ರವೇ ಭಗ್ನವಾದಂತಾಯಿತು. ಭರತಖಂಡದ ನಿಜಸ್ಥಿತಿಯ ಚಿತ್ರವನ್ನೂ ಸ್ವದೇಶವಿದೇಶಗಳ ಕಣ್ಣಮುಂದೆ ನಿರ್ಭಯವಾಗಿ ಇಡುತ್ತಿದ್ದ ಛಾಯಾಗ್ರಾಹಿ ಯಂತ್ರವೊಂದು ಕಣ್ಮರೆಯಾದಂತಾಯಿತು. ದಿ|| ಬ|| ಪಿಟ್ಟಿತ್ಯಾಗರಾಯಶೆಟ್ಟರ ಬಲಭುಜವೇ ಕಡಿದುಬಿದ್ದಂತಾಯಿತು. ಮಾಡುವುದೇನು? ವಿಧಿಬಲವು ಅಪ್ರತಿಹತವಾದುದು. ಸ್ಥೂಲದೇಹ ಪರಿತ್ಯಾಗದ ಅಂತ್ಯಸಮಯದಲ್ಲೂ ಕೂಡ ದೀನಜನೋದ್ಧಾರವನ್ನೇ ನಿದಿಧ್ಯಾಸಮಾಡುತ್ತಿದ್ದ ಡಾ|| ನಾಯರ್‌ರವರ ಅಸ್ವಾರ್ಥಪರವಾದ ಪವಿತ್ರಾತ್ಮವು ತನ್ನ ದೇಹಾಂತರಸ್ವೀಕಾರರೂಪ ಪುನರ್ಜನ್ಮದಲ್ಲೂ ಕೂಡ ತನ್ನ ಪೂರ್ವಸಂಕಲ್ಪಿತೋದ್ದೇಶಸಾಧನೆಯನ್ನೇ ಮಾಡಲು ತನ್ನಂಥ ಇನ್ನು ಕೆಲವಾತ್ಮಗಳು ತನ್ನ ಜತೆಯಲ್ಲೇ ಅವತರಿಸುವಂತೆ ಮಾಡಿ, ಭರತಖಂಡೋದ್ಧಾರಕ್ಕೆ ಸಹಾಯಕರಾಗುವಂತೆ ಜಗದೀಶ್ವರನು ಅನುಗ್ರಹಿಸಲೆಂದೂ, ದಿವಂಗತ ಡಾ|| ನಾಯರ್‌ರವರ ಜನ್ಮಚರಿತಾದರ್ಶವು ಅವರ ಹಿಂಬಾಲಕರಿಗೆಲ್ಲಾ ಅವಲಂಬನವಾಗಿದ್ದು, ಡಾಕ್ಟರ್‌ರವರ ದೃಢಸಂಕಲ್ಪ ನಿರ್ವರ್ತನವನ್ನು ನಡೆಯಿಸುವುದಕ್ಕೆ ಮನೋದಾರ್ಢ್ಯವನ್ನೂ, ಧೈರ್ಯಸ್ಥೈರ್ಯಗಳನ್ನೂ ಅನುಗ್ರಹಿಸಲೆಂದೂ ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಮ್ಯುನಿಸಿಪಲ್ ಚೀಫ್ ಆಫೀಸರ ಕೆಲಸವನ್ನು ಮಿ|| ಮಹಮ್ಮದ್‌ಪೀರ್‌ರವರು ಕಳೆದ ಸೋಮವಾರ ವಹಿಸಿಕೊಂಡರು

ರಾಜಧಾನಿಯಲ್ಲೂ ಸುತ್ತುಮುತ್ತಣ ಪ್ರದೇಶಗಳಲ್ಲೂ ಕಳೆದವಾರವೂ ಹದವಾದ ಮಳೆಯಿಲ್ಲ. ಕೆಲಕಡೆ ಪೈರುಗಳು ಒಣಗುತ್ತಿವೆ. ಕಾವೇರಿ ನದಿಯಲ್ಲೂ ನೀರು ಕಡಿಮೆಯಾಗಿದೆ.

ಎಡತೊರೆ ತಾ|| ಅಮಲ್ದಾರರಾಗಿದ್ದ ಮ|| ದ್ವಾರಕನಾಥಯ್ಯಂಗಾರರು ಮ|| ಹಳಿಯೂರು ಪಟೇಲ್ ಚನ್ನೇಗೌಡರನ್ನು ಹೊಡೆದರೆಂಬ ವ್ಯಾಜ್ಯದ ವಿಚಾರಣೆಯು ಡಿಸ್ಟ್ರಿಕ್ಟ್ ಡಿ|| ಕಮಿಷನರಲ್ಲಿ ನಡೆದು ಅಮಲ್ದಾರರಿಗೆ ೧೦ ರೂ. ಅರ್ಥದಂಡವು ವಿಧಿಸಲ್ಪಟ್ಟಿತು.

ಶ್ರೀಮದ್ಯುವರಾಜರವರಿಗೆ ಪುತ್ರೋತ್ಸವವಾದ ಸುದ್ದಿಯನ್ನು ಕೇಳಿ ದಿವಾನ್ ಮ|| ಕಾಂತರಾಜ ಅರಸಿನವರು ರಾಜಧಾನಿಗೆ ಬಂದಿದ್ದು ಕಳೆದ ಸೋಮವಾರ ಬೆಂಗಳೂರಿಗೆ ದಯಮಾಡಿಸಿದರು. ನಾಮಕರಣಮಹೋತ್ಸವ ಸಮಯಕ್ಕೆ ಮರಳಿ ರಾಜಧಾನಿಗೆ ದಯಮಾಡಿಸುವವರಾಗಿದ್ದಾರೆ.

ಸಂಧ್ಯುತ್ಸವ ಸಂಬಂಧದಲ್ಲಿ ನಮ್ಮ ಮೈಸೂರು ಸರ್ಕಾರದವರು ಬೆಂಗಳೂರು ಸೆಂಟ್ರಲ್ ಜೈಲಿನಿಂದ ೧೧೨ ಮಂದಿ ಬಂದಿಗಳನ್ನು ಬಿಡುಗಡೆಮಾಡಿಸಿದರು. ಅವರಲ್ಲಿ ೧೦ ಮಂದಿ ಸ್ತ್ರೀಯರು. ಇಬ್ಬರು ಸಿವಿಲ್ ಬಂದಿಗಳು. ಅಲ್ಲದೆ ಇನ್ನು ೮೦ ಮಂದಿಗಳ ಶಿಕ್ಷಾನುಭವಕಾಲವನ್ನು ಕಡಿಮೆಮಾಡಿದರು.

ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರುಗಳು ಈ ವರ್ಷದ ಕಡೆಯವರೆಗೆ ಮಾತ್ರ ಇರುವರೆಂದೂ, ಆ ಬಳಿಕ ಆ ಉದ್ಯೋಗಗಳು ತಪ್ಪಿಸಲ್ಪಡುವುದು ಮಾತ್ರವೇ ಅಲ್ಲದೆ ಡಿಸ್ಟ್ರಿಕ್ಟ್ ತಾಲ್ಲೂಕು ಎಕನಾಮಿಕ್ ಕಮಿಟಿಗಳೂ ಕೂಡ ತಪ್ಪಿಸಲ್ಪಟ್ಟು ಡಿಸ್ಟ್ರಿಕ್ಟ್ ತಾಲ್ಲೂಕು ಬೋರ್ಡುಗಳಿಗೆ ಅವುಗಳ ಕಾರ್ಯಗಳು ವಹಿಸಲ್ಪಡುವುವೆಂದು ಕೇಳುತ್ತೇವೆ.

ಕಾವೇರೀ ವಿದ್ಯುಚ್ಛಕ್ತಿ ಕಾರ್ಯಾಲಯದಲ್ಲಿ ೫ನೆಯ ಸಲದ ಅಭಿವೃದ್ಧಿ ಕಾರ್ಯವೆಲ್ಲಾ ಮಾಡಿ ಮುಗಿಸಲ್ಪಟ್ಟಿತು. ಇದರಿಂದ ಹಿಂದೆ ಉತ್ಪತ್ತಿಯಾಗುತ್ತಿದ್ದ ಶಕ್ತಿಯ ಜತೆಗೆ ಮತ್ತೆ ೫೬೦೦ ಕುದುರೆ ಶಕ್ತಿಯನ್ನು ಹೆಚ್ಚಿಸಲು ಅವಕಾಶವಾಯಿತು. ಈ ಶಕ್ತಿಯು ಹುಟ್ಟುವುದಕ್ಕೆ ಆರಂಭವಾಗಿ ಇಲ್ಲಿಗೆ ೧೬ ವರ್ಷಗಳಾದುವು. ಅಲ್ಲಿಂದ ಇಲ್ಲಿಯವರೆಗೆ ಬಿಣ ಹುಟ್ಟುವಳಿಯು 14073273 ರೂಪಾಯಿಗಳಾಗಿರುವುವು. ಸರಾಸರಿ ವರ್ಷಕ್ಕೆ 879579 ರೂ. ಗಳಾದಂತಾಯಿತು.

ಕಳೆದ ಭಾನುವಾರ ಮೈಸೂರಿನ ವೀರಶೈವ ಮಹಾಜನರು ವೀರಶೈವಾಶ್ರಮದಲ್ಲಿ ಸಭೆಸೇರಿ, ಶ್ರೀಮದ್ಯುವರಾಜರವರಿಗೆ ಪುತ್ರೋತ್ಸವವಾದುದಕ್ಕಾಗಿ ತಮಗುಂಟಾದ ಆನಂದವನ್ನು ಕುರಿತು ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ತಂತ್ರೀವಾರ್ತೆಯನ್ನು ಕಳುಹಿಸಲೂ, ಶ್ರೀಮಾನ್ ಸರ್ದಾರ್ ಕಾಂತರಾಜ ಅರಸಿನವರಿಗೆ ದಿವಾನಗಿರಿಯು ಪ್ರಾಪ್ತವಾದುದಕ್ಕಾಗಿ ತಮ್ಮ ಸಮಾಜದವರಿಗುಂಟಾಗಿರುವ ಆನಂದವನ್ನು ಸರದಾರರಿಗೆ ತಮ್ಮ ಶ್ರೀಮೂಲಕ ವಿಜ್ಞಾಪಿಸಿಕೊಳ್ಳಲೂ ನಿರ್ಧರಿಸಿ, ಅದರಂತೆ ನೆರವೇರಿಸಿದರು.

ನಮ್ಮ ದೇಶದಲ್ಲಿರುವ ಸಬ್‌ರಿಜಿಸ್ಟ್ರಾರ್ ಆಫೀಸುಗಳನ್ನೆಲ್ಲಾ ಎರಡು ಭಾಗಮಾಡಿ ಭಾಗವೊಂದೊಂದಕ್ಕೆ ಒಬ್ಬೊಬ್ಬರನ್ನಂತೆ ಮೇಲ್ವಿಚಾರಣೆಯ ಅಧಿಕಾರಿಗಳನ್ನು ೨೫೦ ರಿಂದ ೪೦೦ ರೂ. ಗಳವರೆಗಣ ಸಂಬಳದಮೇಲೆ ಸರ್ಕಾರದವರು ನಿಯಮಿಸುವವರಾಗಿದ್ದಾರೆ. ಹೀಗೆ ಸಿಬ್ಬಂದಿಯನ್ನು ಹೆಚ್ಚಿಸಿದುದಕ್ಕೆ ತಕ್ಕ ಫಲವಾಗಬೇಕಾಗಿದ್ದರೆ ಈ ನೂತನಾಧಿಕಾರಿಗಳು ನಿದಾಕ್ಷಿಣ್ಯದಿಂದಲೂ ಸತ್ಯಸಂಧತೆಯಿಂದಲೂ ಕೆಲಸಮಾಡಿ ಹಲವು ರಿಜಿಸ್ಟ್ರಾರ್ ಆಫೀಸುಗಳಲ್ಲಿ ಹಾಡಹಗಲೇ ಲಂಚಗಳ ರೂಪವಾಗಿ ನಡೆಯುತ್ತಿರುವ ಸುಲಿಗೆಗಳನ್ನು ತಪ್ಪಿಸಬೇಕು.

ಮಂತ್ರಿಪದವಿಯಿಂದ ವಿಶ್ರಾಂತರಾಗಿ ೬೯ ವಯಸ್ಸಿನ ವಾರ್ಧಕ್ಯದಿಂದ ಅಸ್ವಸ್ಥರಾಗಿ ಕೆಲ ತಿಂಗಳಿಂದ ಹಾಸುಗೆ ಹಿಡಿದಿದ್ದ ಮ|| ಆನಂದರಾಯರವರು ಬೆಂಗಳೂರಿನಲ್ಲಿರುವ ತಮ್ಮ ಮನೆಯಲ್ಲಿ ಕಳೆದ ಭಾನುವಾರ ಬೆಳಗ್ಗೆ ಸ್ವರ್ಗವಾಸಿಗಳಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ. ಇವರ ಗೌರವಾರ್ಥವಾಗಿ ಸಂಸ್ಥಾನದ ಕೋರ್ಟು ಕಚೇರಿಗಳು ಪಾಠಶಾಲೆಗಳು ಮೊದಲಾದುವುಗಳಿಗೆಲ್ಲಾ ಕಳೆದ ಬುಧವಾರ ರಜಾ ಕೊಡಲ್ಪಟ್ಟಿದ್ದಿತು. ಇವರು ತಮ್ಮ ದೊಡ್ಡ ಆಸ್ತಿಯಲ್ಲಿ ⅓ ಭಾಗವನ್ನು ಧರ್ಮಕಾರ್ಯಕ್ಕಾಗಿ ವಿನಿಯೋಗಿಸಲು ಅವರು ಬರೆದಿಟ್ಟಿರುವರೆಂದು ಕೇಳುತ್ತೇವೆ.

ಸಂಧಿಮಹೋತ್ಸವಾಚರಣ ಸಂಬಂಧದಲ್ಲಿ ಬೆಂಗಳೂರು ಪೂರ್ಣಯ್ಯನವರ ಸತ್ರದಲ್ಲಿ ಮ|| ಎ. ರಾಮಚಂದ್ರರಾವ್ ಅಂಡ್ಕೊಯವರು ಬಡಬಗ್ಗರಿಗೆ ಉದಾರವಾಗಿ ಅನ್ನದಾನ ಮಾಡಿಸಿದರು. ಅದೇ ಸತ್ರದಲ್ಲಿ ದಿವಾನರೇ ಮೊದಲಾದ ಅನೇಕ ಮಹಾಜನಗಳು ಸಭೆಸೇರಿದ್ದರು. ಕಾಲೋಚಿತವಾಗಿ ಒಂದು ಉಪನ್ಯಾಸವನ್ನು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಮಾಡಿದರು. ರಾಜಪುತ್ರೋತ್ಸವಾನಂದಕ್ಕಾಗಿ ಸಭಿಕರಿಗೆಲ್ಲಾ ಸಕ್ಕರೆಯೂ ಲಾಡೂ ಹಂಚಲ್ಪಟ್ಟಿತು. ಮ್ಯುನಿಸಿಪಾಲಿಟಿಯವರು ಬಡಬಗ್ಗರಿಗೆ ೨೦೦೦ ಮಂದಿಗಳವರೆಗೂ ಅಕ್ಕಿಬಟ್ಟೆಗಳನ್ನು ಹಂಚಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಶಿವಮೊಗ್ಗೆಯ ಮ್ಯುನಿಸಿಪಾಲಿಟಿಯಿಂದ ಮ|| ಗಳಾದ ಅಡ್ವೊಕೇಟ್ ಸಿ. ಸುಬ್ಬರಾಯರೂ, ಅಡ್ವೊಕೇಟ್ ರಾಮಚಂದ್ರರಾಯರೂ, ನಗರ ಡಿವಿಜನ್ ಸಭೆಯಿಂದ ಮ|| ಜಿ. ಎಂ. ಕಾಡಪ್ಪನವರು, ಶಿವಮೊಗ್ಗಾ ತಾಲ್ಲೂಕು ಬೋರ್ಡಿನಿಂದ ಮ|| ಗಳಾದ ಪ್ಲೀಡರ್ ಅನಂತಯ್ಯನವರೂ, ಅಡ್ವೊಕೇಟ್ ಎಸ್. ಸೀತಾರಾಮಯ್ಯನವರೂ, ಅಡ್ವೊಕೇಟ್ ಎಸ್. ಆರ್. ಬಾಲಕೃಷ್ಣರಾಯರೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾರೆ. ಪ್ರಜಾಪ್ರತಿನಿಧಿ ಸಭಾಮಹೋತ್ಸವಕ್ಕೆ ತಂತಮ್ಮ ಮಕ್ಕಳನ್ನು ಕಳುಹಿಸಿಕೊಡುವ ಡಿಸ್ಟ್ರಿಕ್ಟ್ ಮಾತೆಯರಲ್ಲಿ ವಕೀಲಪುತ್ರರನ್ನು ಕಳುಹಿಸುವಲ್ಲಿ ಶಿವಮೊಗ್ಗಾ ಮಾತೆಗೇ ಪ್ರಧಾನಪಟ್ಟವೆಂದು ಮೇಲೆಕಂಡ ವಿದ್ಯಮಾನದಿಂದ ಕಾಣುತ್ತದೆ.

ಸಂಧಿಮಹೋತ್ಸವಾಚರಣಕ್ಕಾಗಿ ಬೆಂಗಳೂರು ಪುರವಾಸಿಗಳ ಸಭೆಯು ಅಲ್ಲಿಯ ಮ್ಯುನಿಸಿಪಲ್ ಅನರೆರಿ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ತಾ|| ೧೯ ನೆ ಶನಿವಾರ ಸಾಯಂಕಾಲ ದೊಡ್ಡಣ್ಣನವರ ಹಾಲಿನಲ್ಲಿ ನೆರೆದಿದ್ದಿತು. ಸಂಧಿಸಂತೋಷೋತ್ಸವದ ಜತೆಗೆ ರಾಜಪುತ್ರೋತ್ಸವದ ವಾರ್ತೆಯೂ ಬಂದ ಸುದ್ದಿಯನ್ನು ಕುರಿತು ಅದರಿಂದ ದೇಶದ ಸಕಲ ಪ್ರಜೆಗಳಿಗೂ ಸಂತೋಷ ಸಂಭ್ರಮಗಳು ಎಷ್ಟುಮಟ್ಟಿಗೆ ಉಂಟಾಗಿವೆಯೆಂಬುದಕ್ಕೆ ಆ ದಿವಸ ಬೆಂಗಳೂರು ನಗರದಲ್ಲಿ ನಡೆದಿರುವ ನಾನಾ ಪೂಜಾಪುರಸ್ಕಾರ ಸಂತೋಷೋತ್ಸವಾನ್ನದಾನಾದಿ ವೈಭವಗಳನ್ನು ವಿವರಿಸಿ ಹೇಳಿದುದಲ್ಲದೆ ಸರ್ಕಾರದಿಂದ ಪ್ರಕಟಿತವಾಗಿದ್ದ ಯುದ್ಧವಿಷಯ-ಸಂಧಿನಿಬಂಧನ ಮೊದಲಾದ ವಿಷಯಗಳ ಪತ್ರಿಕೆಯನ್ನು ಓದಿದನಂತರ ಜಯಘೋಷದೊಡನೆ ಸಭೆಯು ಮುಗಿದಿತು.

ಕಾಂಚಿಪ್ರತಿವಾದಿ ಭಯಂಕರಮಠದ ಅನಂತಾಚಾರ್ಯಸ್ವಾಮಿಗಳು ರಾಜಧಾನಿಯಲ್ಲಿ ೧೦ ದಿನಗಳ ಕಾಲ ನಿಂತು ಶ್ಲಾಘನೀಯವಾದ ಕೆಲ ಉಪನ್ಯಾಸಗಳನ್ನಿತ್ತು ಕಳೆದ ಬುಧವಾರ ರಾಜಧಾನಿಯಿಂದ ನಂಜನಗೂಡು ಮಾರ್ಗವಾಗಿ ಪ್ರಯಾಣ ಬೆಳಸಿದರು. ಇವರ "ಪ್ರತಿವಾದಿಭಯಂಕರ" ಎಂಬ ಸಂಪ್ರದಾಯದ ಪ್ರಶಸ್ತಿ ವಿಷಯದಲ್ಲಿ ಈ ಊರಿನ ಕೆಲ ಪಂಡಿತಜನರೇ ಅಸೂಯೆಪಟ್ಟರೆಂದು ಕೇಳುತ್ತೇವೆ. ಸದ್ವಿದ್ಯಾಪಾಠಶಾಲೆಯಲ್ಲಿ ಉಪನ್ಯಾಸ ಮಾಡುವುದಕ್ಕೆ ಈ ಸ್ವಾಮಿಗಳು ಹೋಗುವಾಗ್ಗೆ ತಮ್ಮ ಬಿರುದಾವಳಿಗಳನ್ನೆಲ್ಲಾ ಬಿಟ್ಟು ಪಾದಚಾರಿಗಳಾಗಿ ದಯಮಾಡಿಸಿದ್ದರು. ಇದರಿಂದ ಅವರ ಘನತೆಯು ಉಜ್ವಲವಾಯಿತೇಹೊರತು ಅಸಹನವನ್ನು ತೋರಿಸಿದವರಿಗೆ ಕೀರ್ತಿಯೇನೂ ಬರಲಿಲ್ಲ. "ಬೋಧ್ಧಾರೋಮತ್ಸರಗ್ರಸ್ತಾಃ" ಎಂಬ ನೀತಿವಚನವು ಸುಳ್ಳಲ್ಲ. ಸ್ವಾಮಿಗಳ ವಿದ್ವತ್ತಿಗೆ ಅನುಗುಣವಾಗಿ ಶಮದಮಾದಿಗಳೂ ಅವರಲ್ಲಿ ತುಂಬಿರುತ್ತವೆ.

ರಾಜಧಾನಿಯ ಶ್ರೀ ಶಾಕುಂತಲ ನಾಟಕದವರು ಶ್ರೀಮನ್ ಮಹಾರಾಜರವರ ಅಪ್ಪಣೆಯನ್ನು ಪಡೆದು ಆಸ್ಥಾನ ಸಂಗೀತ ವಿದ್ವಾಂಸರುಗಳಾದ ಮ|| ಬಿ. ರಾಚಪ್ಪನವರನ್ನು ಮತ್ತು ಮ|| ಚಿಕ್ಕರಾಮರಾಯರನ್ನು ಸಂಘಕ್ಕೆ ಸೇರಿಸಿಕೊಂಡು ಕಳೆದೆರಡು ತಿಂಗಳಿಂದಲೂ ನಾಟಕವನ್ನಾಡುತ್ತಿರುವರು. ಈ ವಿದ್ವಾಂಸರುಗಳು ಸೇರಿದುದರಿಂದ ನಿಸ್ತೇಜವಾಗಿದ್ದ ಸಂಘಕ್ಕೆ ಕಳೆಯು ಬಂದು ಪ್ರೇಕ್ಷಕರ ಮನಸ್ಸನ್ನಾಕರ್ಷಿಸುತ್ತ ಉತ್ಪತ್ತಿಯನ್ನು ಹೆಚ್ಚಿಸುತ್ತಿರುವುದು. ಇದರಂತೆ ಇನ್ನೂ ಕೆಲ ಸ್ತ್ರೀಪಾತ್ರಗಳನ್ನು ವಹಿಸತಕ್ಕವರು ಬದಲಾಯಿಸಲ್ಪಟ್ಟು ನೀತಿಬೋಧಕವಾದ ಹೊಸ ನಾಟಕಗಳು ಅಭಿನಯಿಸಲ್ಪಡುವಂತಾದರೆ ಈ ಸಂಘವು ಕ್ಷಿಪ್ರದಲ್ಲಿಯೇ ಬಹಳ ಪ್ರಖ್ಯಾತಿಗೆ ಬಂದು ಹೆಚ್ಚು ಆದಾಯಕರವಾಗುವುದರಲ್ಲಿ ಸಂದೇಹವಿಲ್ಲವಾದುದರಿಂದ ಈ ಸಂಘದ ಮೇಲ್ವಿಚಾರಕರಾದ ದೊಡ್ಡಮನುಷ್ಯರುಗಳು ಈ ಸೂಚನೆಯನ್ನು ಗಮನಿಸಿ ಅದರಂತೆ ಏರ್ಪಡಿಸುವರೆಂದು ನಿರೀಕ್ಷಿಸುತ್ತೇವೆ.

ನಾಯಿಗಳಿಗೆ ವಯಸ್ಸು ಹೆಚ್ಚಾಗುತ್ತ ಬಂದಂತೆ ಹುಚ್ಚು ಹಿಡಿಯುವುದುಂಟು. ಇಂಥ ನಾಯಿಗಳ ಉಪದ್ರವವು ಪ್ರಜೆಗಳಿಗಿಲ್ಲದಂತೆ ಮಾಡುವುದಕ್ಕಾಗಿಯೇ ದೊಡ್ಡದೊಡ್ಡ ಪಟ್ಟಣಗಳಲ್ಲಿ ವರ್ಷಕ್ಕೊಂದುಸಲ ಇಂಥ ಪೋಲಿನಾಯಿಗಳನ್ನು ಕೊಲ್ಲಿಸಲು ಏರ್ಪಡಿಸಿರುತ್ತಾರೆ. ಮೊದಮೊದಲು ಈ ಕೊಲ್ಲುವಿಕೆಯು ಬಹು ಭೀಕರವಾಗಿ ನಡೆಯುತ್ತಿತ್ತು. ಚಮ್ಮಾರಮಾಡಿ ಅವುಗಳ ಬುರುಡೆಯನ್ನು ಒನಕೆ ಪೆಟ್ಟಿನಿಂದ ಒಡೆದು ನಡುಬೀದಿಗಳಲ್ಲೇ ಸಾಯಿಸುವ ಪದ್ಧತಿಯಿದ್ದಿತು. ಆದನ್ನು ತಪ್ಪಿಸಿ ಈಚೆಗೆ ವಿಷಪ್ರಯೋಗದಿಂದ ಕೊಲ್ಲಿಸುತ್ತಿದ್ದರು. ಇದೂ ಕೂಡ ಸಂಕಟಪಡಿಸಿ ಆ ಪ್ರಾಣಿಗಳನ್ನು ಕೊಲ್ಲುವ ರೀತಿಯಾಗಿದ್ದಿತು ಸಂಕಟವಿಲ್ಲದೆ ಅಕಸ್ಮಾತ್ ಮರಣವಾಗುವ ರೀತಿಯನ್ನು ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರು ಈಗ ಏರ್ಪಡಿಸಿದ್ದಾರೆ. ಪೋಲಿನಾಯಿಗಳನ್ನು ಹಿಡಿತರಿಸಿ ಒಂದು ಮನೆಗೆ ಕೂಡಿ ಥಟ್ಟನೆ ವಿದ್ಯುಚ್ಛಕ್ತಿಯನ್ನು ಅವುಗಳಮೇಲೆ ಪ್ರಯೋಗಿಸಿ ಸಾಯಿಸುವಂತೆ ಮಾಡಿದ್ದಾರೆ.

ವೀರಶೈವ ಮಹಾಸಭೆಯು ೮ ಕಡೆಯಲ್ಲಿ ಇದುವರೆಗೆ ನಡೆದಿದ್ದರೂ ಮೈಸೂರು ರಾಜಧಾನಿಯಲ್ಲಿ ಒಂದು ಸಲವೂ ನಡೆದಿರಲಿಲ್ಲ. ಅದನ್ನು ಬರುವ ಡಿಸೆಂಬರ್ ತಿಂಗಳಲ್ಲಿ ಇಲ್ಲಿ ನಡೆಯಿಸುವಂತೆ ಮಾಡಬೇಕೆಂದು ಇಲ್ಲಿಯ ವೀರಶೈವ ಮಹಾಜನರು ಪರ್ಯಾಲೋಚಿಸಿರುವುದು ಪ್ರಶಸ್ತವಾದ ಯೋಚನೆಯಾಗಿರುತ್ತದೆ. ಬೀರೂರಿನ ಮಹಾಜನರು ಕಳೆದವರ್ಷ ಇದನ್ನು ತಮ್ಮಲ್ಲಿ ನಡೆಯಿಸಬೇಕಾಗಿದ್ದು ಅದು ಹೇಗೋ ತಪ್ಪಿಹೋಯಿತು. ಮುಂದೆ ಎಂದಾದರೂ ಅವರು ನಡೆಯಿಸಿ ವಾಗ್ದಾನವನ್ನು ಸಫಲಮಾಡಿಕೊಳ್ಳದೆ ಇರಲಾರರು. ಸದ್ಯಃ ಮೈಸೂರಿನವರು ಮಾಡಿರುವ ಸಂಕಲ್ಪವು ಶಿವಾನುಗ್ರಹದಿಂದ ಜಯಶೀಲವಾಗಿ ನೆರವೇರಲೆಂದು ಕೋರುತ್ತೇವೆ. ಇದರ ಪರ್ಯಾಲೋಚನೆಗಾಗಿ ಕಳೆದ ಬುಧವಾರ ಸಾಯಂಕಾಲ ವೀರಶೈವಾಶ್ರಮದ ಭವನದಲ್ಲಿ ಪ್ರಮುಖರಾದ ಕೆಲ ಜನರು ಡಾ|| ಟಿ. ಎಸ್. ಸಿದ್ದಪ್ಪನವರಧ್ಯಕ್ಷತೆಯಿಂದ ಸೇರಿ ನಡೆಯಿಸಿದ ಪ್ರಿಲಿಮಿನರಿ ಮೀಟಿಂಗಿನ ನಡವಳಿಕೆಗಳು ಉತ್ಸಾಹಕರವಾಗಿ ಜರುಗಿರುವುವೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಸ್ಥಳಪರಸ್ಥಳದ ಈ ಸುತ್ತಿನ ಸಮಾಜಬಾಂಧವರೆಲ್ಲರೂ ಈ ಮತಕಾರ್ಯಕ್ಕೆ ಸರ್ವವಿಧದಿಂದಲೂ ಸಹಾಯಮಾಡಿ ಕೀರ್ತಿಪುಣ್ಯಗಳನ್ನು ಪಡೆದುಕೊಳ್ಳುವವರಾಗಲೆಂದು ಪ್ರಾರ್ಥಿಸುತ್ತೇವೆ.

ರಾಜಧಾನಿಯಲ್ಲಿ ಓದತಕ್ಕ ಒಕ್ಕಲಿಗರ ವಿದ್ಯಾರ್ಥಿಗಳಿಗಾಗಿ ಒಂದು ನಿಲಯವನ್ನು ಏರ್ಪಡಿಸಿಕೊಡುವ ಸದುದ್ದೇಶದಿಂದ ಇಲ್ಲಿಯ ಒಕ್ಕಲಿಗವರ ಪ್ರಮುಖರು ರಾ|| ಸಾ|| ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದು ಪರ್ಯಾಲೋಚಿಸಿ, ಉದ್ದಿಷ್ಟಕಾರ್ಯಸ್ಥಾಪನೆ ಮಾಡಲು ನಿರ್ಧರಿಸಿದರು. ಆರಂಭಕಾರ್ಯದ ಅನುಕೂಲತೆಗಾಗಿ ಚಂದಾಪಟ್ಟಿಯ ಮೂಲಕ ಧನಕೋಶವನ್ನು ಮಾಡಲು ನಿಶ್ಚಯಿಸಿದರು. ಒಂದು ಮ್ಯಾನೇಜಿಂಗ್ ಕಮಿಟಿಯು ಏರ್ಪಟ್ಟಿರುವುದು. ತೊಡಲೇ ಕಾರ್ಯಾರಂಭವೂ ಮಾಡಲ್ಪಟ್ಟಿರುವುದು. ಮ್ಯು|| ಕೌನ್ಸಿಲರುಗಳಾದ ಮ|| ಎಂ. ಮಾದಪ್ಪನವರೂ, ಮ|| ಎಂ. ಎಲ್. ವಾಸುದೇವಯ್ಯನವರೂ ಮುಖಂಡರಾಗಿ ನಿಂತು ಮಂಡಿಮೊಹಲ್ಲಾ ಚೆಂಕಿ ಸವಾರ ಬೀದಿಯಲ್ಲಿ ಒಂದು ಕಟ್ಟಡವನ್ನು ಇದಕ್ಕಾಗಿ ಬಾಡಿಗೆಗೆ ಗೊತ್ತುಮಾಡಿರುವರು. ೪೦ ಮಂದಿ ವಿದ್ಯಾರ್ಥಿಗಳು ವಾಸಮಾಡಿಕೊಂಡಿರಲು ಅನುಕೂಲವಾಗಿರುವುದು. ಸೇರಲಿಚ್ಛೆಯುಳ್ಳ ಒಕ್ಕಲಿಗ ವಿದ್ಯಾರ್ಥಿಗಳು ಕೂಡಲೇ ಮೇಲೆ ಕಂಡ ದೊಡ್ಡಮನುಷ್ಯರುಗಳಿಗೆ ಬರೆದು ಬೇಕಾದ ವಿಷಯಗಳನ್ನು ತಿಳಿದುಕೊಳ್ಳಬಹುದು. ತಂತಮ್ಮ ಜನರ ವಿದ್ಯಾಭ್ಯಾಸ ಸೌಕರ್ಯಕ್ಕಾಗಿ ಪ್ರತಿಪಂಗಡದವರೂ ಹೀಗೆ ಏರ್ಪಾಟುಗಳನ್ನು ಮಾಡಿಕೊಳ್ಳುವುದು ಅತ್ಯವಶ್ಯಕ. ಏಕೆಂದರೆ ಗೌರ್ನಮೆಂಟಿನವರು ಪ್ರತ್ಯೇಕ ಪಂಗಡಗಳಿಗೆ ಬೇರೆಬೇರೆ ಸೌಕರ್ಯಗಳನ್ನು ಇನ್ನೂ ಮಾಡಿರುವುದಿಲ್ಲ.

ಭರತಖಂಡದ ವೃತ್ತಾಂತಗಳು.

ಸಂಧ್ಯುತ್ಸವ ಸಂದರ್ಭದಲ್ಲಿ ಲಾಹೋರಿನ ಕಾರಾಗೃಹಗಳಿಂದ ೩೦೦ ಮಂದಿ ಬಂದಿಗಳನ್ನು ಬಿಟ್ಟುಬಿಟ್ಟರು.

ಸಂಧ್ಯುತ್ಸವ ವಿಶೇಷಗಳು ಅತಿ ವೈಭವದಿಂದ ಭರತಖಂಡದ ಸಕಲ ಭಾಗಗಳಲ್ಲೂ ಕಳೆದ ೧೯ ರಲ್ಲಿ ಜರುಗಿಸಲ್ಪಟ್ಟಿರುವ ಸುದ್ದಿಗಳು ಎಲ್ಲ ವೃತ್ತಪತ್ರಿಕೆಗಳಲ್ಲೂ ಪ್ರಕಟವಾಗಿ ಬರುತ್ತಿವೆ.

ಅಫ್ಘಾನಿಸ್ಥಾನದಿಂದ ಕೆಲಪ್ರಭುತ್ವಪ್ರತಿನಿಧಿಗಳು ಸಂಧಿನಿಬಂಧನೆಗಳ ಚರ್ಚೆಗಾಗಿ ರಾಯಭಾರಿಗಳಾಗಿ ಇಂಗ್ಲೀಷ್ ಸೇನಾಪತ್ಯಗೆ ಬರುತ್ತಿದ್ದಾರೆ. ಅಫ್ಘಾನಿಸ್ಥಾನದ ಎಲ್ಲೆಕಾಡುಗಳಲ್ಲಿ ಕೆಲಕಡೆ ಇನ್ನೂ ಯುದ್ಧವು ನಡೆಯುತ್ತಲೇ ಇದೆ.

ಮರಳಿ ಸಿವಿಲ್ ವಿಧಿಗಳನ್ನು ಉಲ್ಲಂಘಿಸಿ ಸಾತ್ವಿಕನಿರೋಧಪದ್ಧತಿಯನ್ನು ತಾವು ವ್ಯವಹರಣೆಗೆ ತರುವುದಾಗಿ ಮ|| ಗಾಂಧಿಯವರು ಪ್ರಕಟಿಸಿದ್ದರು. ಆದರೆ ಬೊಂಬಾಯಿ ಗೌರ್ನರವರು ಮಾಡಿದ ಹಿತಬೋಧೆಯಮೇಲೆ ಗಾಂಧಿಯವರು ಆದನ್ನು ಸದ್ಯಃ ಬಿಟ್ಟುಕೊಟ್ಟರು.

ದಿವಾನ್ ಬಹದ್ದೂರ್ ಗೋವಿಂದದಾಸ್ ಚತುರ್ಭುಜದಾಸ್‌ರವರು ಮದ್ರಾಸ್ ಪ್ರಜೆಗಳ ಹಿತಕ್ಕಾಗಿ ಲಕ್ಷಾಂತರ ರೂ. ಗಳನ್ನು ಧರ್ಮಮಾಡಿದ್ದಾರೆ. ಅವರು ೩೫ ಸಾವಿರ ರೂ. ಗಳ ವೆಚ್ಚದಿಂದ ನಿರ್ಮಾಣಮಾಡಿಸಿ ತರಿಸಿ, ಮದ್ರಾಸ್ ಪಚ್ಚಪ್ಪ ಕಲಾಶಾಲೆಯ ಎದುರಿನ ಚೌಕದಲ್ಲಿ ಸ್ಥಾಪಿಸಿದ್ದ ಶ್ರೀ ಜಾರ್ಜ್ ಸಾರ್ವಭೌಮರ ಪ್ರತಿಮೆಯನ್ನು ಮದ್ರಾಸ್ ಗೌರ್ನರವರು ಸಂಧ್ಯುತ್ಸವದ ದಿನ (ತಾ|| ೧೯ ರಲ್ಲಿ) ಬಹಿರಂಗ ಪಡಿಸಿದರು.

ಬಿಕನೀರ್ ಮಹಾರಾಜರವರು ಕಳೆದ ತಾ|| ೧೭ ರಲ್ಲಿ ಬೊಂಬಾಯಿರೇವೆಗೆ ಬಂದಿಳಿದರು. ಅವರ ಇಷ್ಟಪ್ರಕಾರವೇ ಸ್ವಾಗತಸತ್ಕಾರಕ್ಕೆ ಆಡಂಬರಗಳು ಮಾಡಲ್ಪಟ್ಟಿರಲಿಲ್ಲ. ಸರ್ ವಾಚಾ, ಸರ್ ಕರೀಂಭಾಯಿ ಮೊದಲಾದ ಪ್ರಮುಖರು ದಡದಲ್ಲಿ ಇದಿರ್ಗೊಂಡು ಮರ್ಯಾದಿಸಿದರು. ತಾಜಮಹಲ್ ಹೋಟಲಿಗೆ ಹೋಗಿ ಇಳಿದುಕೊಂಡ ಮಹಾರಾಜರಿಗೆ ಆ ದಿನ ಸಾಯಂಕಾಲವೇ ಅಲ್ಲಿನ ನ್ಯಾಷನಲ್ ಲಿಬರಲ್ ಅಸೋಸಿಯೇಷನ್ನಿನವರು ವೈಭವದಿಂದ ಔತಣಮಾಡಿಸಿದರು. ಆ ರಾತ್ರಿಯೇ ಮಹಾರಾಜರು ತಮ್ಮ ಸಂಸ್ಥಾನಕ್ಕೆ ಪ್ರಯಾಣಮಾಡಿದರು. ತಾ|| ೧೯ ರಲ್ಲಿ ಅವರು ನಗರಪ್ರವೇಶಮಾಡಿದಾಗ ಪ್ರಜೆಗಳು ವೈಭವದಿಂದ ಸ್ವಾಗತಿಸಿದರು.

ವಿದೇಶ ವಿಷಯಗಳು.

ಜರ್ಮನರು ಫ್ರಾನ್ಸಿಗೆ ೧೦ ಕೋಟಿ ಫ್ರಾಂಕುಗಳನ್ನು ನಷ್ಟಪರಿಹಾರವಾಗಿ ಕೊಡಬೇಕಾಗಿದೆ.

ಹಾಲಂಡಿನಲ್ಲಿರುವ ಕೈಜರರಿಗೆ ದೇಹಾರೋಗ್ಯ ತಪ್ಪಿದೆ. ವೈದ್ಯರು ಸದಾ ಸಮೀಪದಲ್ಲೇ ಕಾದಿದ್ದಾರೆ.

ತಮ್ಮ ಪತಿಯನ್ನು ಹಾಲಂಡಿನಿಂದ ಬಹಿಷ್ಕರಿಸಲಾಗದೆಂದು ಕೈಜರ್ ಪತ್ನಿಯು ಹಾಲಂಡ್ ರಾಣಿಯವರನ್ನು ಬೇಡಿಕೊಂಡಿರುವರು.

ಈಗ ಲಂಡನ್ ಪಟ್ಟಣದಲ್ಲಿರುವ ಕಾಶ್ಮೀರಮಹಾರಾಜರು ಲಂಡನ್ ಪಟ್ಟಣದಿಂದ ಪ್ಯಾರಿಸ್ಸಿಗೆ ಆಕಾಶಮಾರ್ಗದಲ್ಲೇ ವಿಮಾನದಲ್ಲಿ ಕುಳಿತು ಹೋಗಿದ್ದರು.

ಸಂಧಿಕಾಲದಲ್ಲಿ ಜರ್ಮನ್ ರಾಯಭಾರದ ಅಧ್ಯಕ್ಷರಾಗಿ ವರ್ಸೇಲ್ಸಿಗೆ ಹೋಗಿದ್ದ ಬ್ಯಾರನ್ ವೇರ್ಸನರ್‌ರವರು ಫ್ರಾಂಸಿನಲ್ಲಿ ಜರ್ಮನ್ ರಾಯಭಾರಿಯಾಗಿರಲು ನಿಯಮಿಸಲ್ಪಟ್ಟಿದ್ದಾರೆ.

ದಕ್ಷಿಣ ಅಮೇರಿಕಾದ ಹತ್ತಿರ ದೊಡ್ಡ ಬಿರುಗಾಳಿ ಮಳೆಗಳಿಂದ ೬ ದೊಡ್ಡ ಹಡಗುಗಳು, ೮ ಸಣ್ಣ ಹಡಗುಗಳು, ೨೦೦ ದೋಣಿಗಳು ಮುಳುಗಿಹೋದುವು. ಬಹುಜನರು ಸತ್ತರು. ವಿಪರೀತ ನಷ್ಟವಾಗಿದೆ.

ಇಂಗ್ಲಂಡಿನಿಂದ ಭರತಖಂಡಕ್ಕೂ, ಇಂಗ್ಲಂಡಿನಿಂದ ದಕ್ಷಿಣಾಫ್ರಿಕಾಕ್ಕೂ ವಿಮಾನಗಳಮೇಲೆ ಹೋಗುವವರಿಗೆ ೧೦ ಸಾವಿರ ಪೌನುಗಳ ಬಹುಮಾನವನ್ನು ಕೊಡುತ್ತೇವೆಂದು ಲಂಡನ್ನಿನ ಡೇಲಿ ಎಕ್ಸ್‌ಪ್ರೆಸ್ ಪತ್ರಿಕಾಕರ್ತರು ಪ್ರಕಟಿಸಿದ್ದಾರೆ.

ಭರತಖಂಡದ ರಾಜಕೀಯಸಂಸ್ಕರಣದ ಬಿಲ್ಲಿನ ವಿಮರ್ಶೆಗೆ ಏರ್ಪಟ್ಟಿರುವ ಜಾಯಿಂಟ್ ಕಮಿಟಿಯವರು ಸಾಕ್ಷ್ಯವಿಚಾರಣೆಗೆ ಆರಂಭಿಸಿದ್ದಾರೆ. ಮೊದಲನೆ ಸಾಕ್ಷ್ಯವನ್ನು ಹಿಂದೆ ನಮ್ಮ ಕೋಶಾಧ್ಯಕ್ಷರಾಗಿದ್ದ ಸರ್ ಜೇಮ್ಸ್ ಮೆಸ್ಟನ್‌ರವರು ಕೊಟ್ಟಿದ್ದಾರೆ.

ಸಂಧ್ಯುತ್ಸವಗಳಿಗಾಗಿ ಲಂಡನ್ನಿನಲ್ಲಿ ಮಾಡಲ್ಪಟ್ಟ ದೀಪೋತ್ಸವ ಬಾಣಗಾರಿಕೆ ಮೊದಲಾದುವುಗಳಿಗಾಗಿ ಮಾಡಿದ ವೆಚ್ಚವು ಚಕ್ರವರ್ತಿಯವರ ಪಟ್ಟಾಭಿಷೇಕಕಾಲದಲ್ಲಿ ನಡೆಯಿಸಿದ ವೆಚ್ಚಕ್ಕೆ ನಾಲ್ಮಡಿ ಹೆಚ್ಚಾಗಿದ್ದಿತು. ಲಂಡನ್ ಬೀದಿಗಳಲ್ಲಿ ಉತ್ಸವ ಬರುವುದನ್ನು ನೋಡುವುದಕ್ಕಾಗಿ ಕಿಟಕಿಯೊಂದೊಂದಕ್ಕೆ ೨೦೦ ಗಿನಿಗಳ ಬಾಡಿಗೆಯನ್ನು ಜನರು ಗೊತ್ತುಮಾಡಿಕೊಂಡಿದ್ದರು.

ಇಟಲಿಯ ಕವೀಶ್ವರನಾದ ಗೇಬ್ರಿಲ್ಲಿಡಿ ಅನೂಂಜಿಯೊ ಎಂಬುವವನು ವಿಮಾನದಮೇಲೆ ಕುಳಿತು ರೋಮ್ ಪಟ್ಟಣದಿಂದ ಚಿಕ್ಕ ಏಸಿಯಾ, ಭರತಖಂಡ, ಟಾಂಕಿನ್, ಚೀನಾಗಳ ಮಾರ್ಗವಾಗಿ ಜಪಾನಿನ ಟೋಕಿಯೋ ಪಟ್ಟಣಕ್ಕೆ ೧೪ ದಿನಗಳೊಳಗಾಗಿ ಹೋಗಿ ಮುಟ್ಟಬೇಕೆಂದು ಪ್ರಯತ್ನಿಸಿದ್ದಾನೆ. ಈ ಆಕಾಶಸಂಚಾರವನ್ನನುಭವಿಸಿದ ನಂತರ ಮೇಲೆ ಕಂಡ ಕವೀಶ್ವರನು ಬರೆಯುವ ಕವಿತಾವೈಚಿತ್ರ್ಯಗಳು ಆಕರ್ಷಣೀಯವಾಗಿರುವುವೆಂಬುದಕ್ಕೆ ಸಂಶಯವಿಲ್ಲ.

ಷಾವಾಲ್ ಕಂಪೆನಿಯ ಭಾಗಸ್ವಾಮಿಯಾದ ಸಿ. ಡಬ್ಲ್ಯು. ವಾಲಾಸ್ ಎಂಬುವವನು ತನ್ನ ಮರಣಶಾಸನದಲ್ಲಿ ತನ್ನ ಇಬ್ಬರು ಮಕ್ಕಳುಗಳಲ್ಲಿ ಒಬ್ಬನಾದರೂ ಸರ್ ಬಿರುದನ್ನು ಪಡೆಯದಿದ್ದರೆ ೨|| ಲಕ್ಷ ಪೌನುಗಳ ಬೆಲೆಯ ತನ್ನ ಸೊತ್ತು ಅವರಿಗೆ ಸಲ್ಲಕೂಡದು. ಇಂಗ್ಲೀಷ್ ಸರ್ಕಾರದ ಬೊಕ್ಕಸಕ್ಕೂ ಭರತಖಂಡ ಸರ್ಕಾರದ ಬೊಕ್ಕಸಕ್ಕೂ ಸೇರಿಹೋಗಬೇಕೆಂದು ಬರೆದ್ದನು. ಹೀಗೆ ಬರೆಯುವುದು ತಪ್ಪಲ್ಲ. ಅದು ಲಾ ಪ್ರಕಾರ ಸಲ್ಲಬಹುದು ಎಂದು ನ್ಯಾಯಮೂರ್ತಿಗಳು ತೀರ್ಮಾನಿಸಿರುವರು. ಮಕ್ಕಳಿಗೆ ಗುಣಪಾಠವಾಗಿ ಎಚ್ಚರಿಸುವುದಕ್ಕೆ ಇನ್ನು ಮುಂದೆ ಅನೇಕರು ಮರಣಶಾಸನಗಳಲ್ಲಿ ಹೀಗೆಯೇ ಬರೆಯಬಹುದು.

ಪತ್ರವ್ಯವಹಾರ.

ಪುತ್ರೋತ್ಸವಾನಂದ.

(ಬೆಂಗಳೂರು).

ಶ್ರೀಮದ್ಯುವರಾಜರವರಿಗೆ ಪುತ್ರಸಂತಾನ ಪ್ರಾಪ್ತವಾದ ಸುದ್ದಿಯು ತಾ|| ೧೯ನೆ ಶನಿವಾರ ಬೆಳಗ್ಗೆ ಶ್ರುತವಾದೊಡನೆಯೇ ಬೆಂಗಳೂರಿನಲ್ಲಿರುವ ಚಿತ್ರದುರ್ಗದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ತಮಗುಂಟಾದ ಆನಂದವನ್ನು ಶ್ರೀಮನ್ಮಹಾರಾಜರ ಸನ್ನಿಧಿಗೆ ತಂತ್ರೀವಾರ್ತೆಯ ಮೂಲಕ ತಿಳಿಯಿಸಿ, ಶಿಶುಬಾಣಂತಿಯರ ಆಯುರಾರೋಗ್ಯವನ್ನು ಕುರಿತು ತಮ್ಮ ಚಿತ್ರದುರ್ಗದ ಬೃಹನ್ಮಠದಲ್ಲೂ ದೇಶಮಧ್ಯದಲ್ಲಿರುವ ತಮ್ಮ ಸಕಲ ಶಾಖಾಮಠಗಳಲ್ಲೂ ಪೂಜಾಪ್ರಾರ್ಥನ ಗಣಾರಾಧನಾದಿಗಳನ್ನು ನಡೆಯಿಸುವಂತೆ ಅಪ್ಪಣೆ ಮಾಡಿಸಿದರು. ತಮ್ಮ ಮುಕ್ಕಾಮಿನಲ್ಲಿ ಮಧ್ಯಾಹ್ನ ಮಹಾನ್ಯಾಸ ಏಕಾದಶವಾರ ಪೂರ್ವಕವಾಗಿ ರುದ್ರಾಭಿಷೇಕವೂ ಮಹಾಪೂಜೆಯೂ, ಶಿವಗಣಾರಾಧನೆಯೂ ನಡೆದ ಬಳಿಕ ಮಹಾರಾಜವಂಶಶ್ರೇಯಃಪ್ರಾರ್ಥನೆಯು ವೈದಿಕಸಭಾಮಧ್ಯದಲ್ಲಿ ನಡಸೋಣವಾಯಿತು. ಮತ್ತು ಅದೇ ದಿನ ಸಂಧಿಮಹೋತ್ಸವದ ದಿನವಾಗಿದ್ದುದರಿಂದ ಶ್ರೀ ಜಾರ್ಜ್ ಸಾರ್ವಭೌಮರ ಶ್ರೇಯಃಪ್ರಾರ್ಥನೆಯೂ ಕೂಡ ಆಚರಿಸಲ್ಪಟ್ಟಿತು. ಇವೆರಡು ಮಹೋತ್ಸವಗಳನ್ನೂ ಸಂಯುಕ್ತವಾಗಿ ನಡೆಯಿಸುವುದಕ್ಕೆ ಶ್ರೀ ಸ್ವಾಮಿಗಳು ಅಪ್ಪಣೆ ಮಾಡಿದ ಪ್ರಕಾರ ಮಧ್ಯಾಹ್ನಾತ್ಪರ ಶ್ರೀಮಠದ ೨ ಆನೆಗಳನ್ನು ಶೃಂಗರಿಸಿ, ಒಂದರ ಮೇಲೆ ಶ್ರೀ ಜಾರ್ಜ್ ಸಾರ್ವಭೌಮರ, ಮತ್ತೊಂದರ ಮೇಲೆ ಶ್ರೀಮನ್ಮಹಾರಾಜರವರ ಭಾವಚಿತ್ರಗಳನ್ನು ಪುಷ್ಪಮಾಲೆಗಳಿಂದ ಅಲಂಕರಿಸಿಟ್ಟು, ಮುಂಗಡೆಯಲ್ಲಿ ನಾನಾ ವಾದ್ಯವೈಭವಗಳೂ ಭಕ್ತಮಹಾಜನರೂ ವೀರಶೈವ ವಿದ್ಯಾರ್ಥಿವರ್ಗವೂ ಸೇರಿ ಅಲಂಕೃತವಾಗಿದ್ದ ಪುರವೀಧಿಗಳಲ್ಲಿ ಉತ್ಸವವು ಹೊರಡಿಸಲ್ಪಟ್ಟಿತು. ಪುತ್ರೋತ್ಸವಾನಂದ ಸೂಚಕವಾಗಿ ಉತ್ಸವದ ಹಿಂಗಡೆ ಬಂಡಿಯಲ್ಲಿ ಸಕ್ಕರೆಯನ್ನು ತುಂಬಿಸಿ ಶ್ರೀಮಠದವರು ಪಟ್ಟಣದಲ್ಲೆಲ್ಲಾ ಹಂಚುವಂತೆ ಏರ್ಪಡಿಸಿದ್ದರು. ಪುತ್ರೋತ್ಸವ ವಾರ್ತೆಯು ಪ್ರಜೆಗಳಿಗೆ ಕರ್ಣಾಮೃತವಾಗಿ ಪರಿಣಮಿಸಿತು. ಶರ್ಕರಾಸೇವನೆಯಿಂದ ಅದರ ಸವಿಯು ಮತ್ತಷ್ಟು ಆನಂದವನ್ನು ಹೆಚ್ಚಿಸಿ ಜಯಘೋಷವನ್ನು ಪ್ರಜೆಗಳ ಮುಖದಿಂದ ಹೊರಡಿಸುತ್ತಿತ್ತು. ಈ ಉತ್ಸವವು ಹಲವು ಬೀದಿಗಳಲ್ಲಿ ನಡೆದು ಸ್ವಸ್ಥಾನಕ್ಕೆ ಸೇರುವ ಹೊತ್ತಿಗೆ ರಾತ್ರಿ ೧೧ ಗಂಟೆಯಾಯಿತು. ಶ್ರೀ ಸ್ವಾಮಿಗಳ ಬಿಡಾರವಾಗಿರುವ ರಾ|| ಬ|| ತೋಟದಪ್ಪನವರ ಸತ್ರದ ಉಪ್ಪರಿಗೆಗಳೆಲ್ಲಾ ದೀಪಾವಳಿಯಿಂದ ಮನೋಹರವಾಗಿ ಬೆಳಗುತ್ತಿದ್ದುವು. ಉತ್ಸವದೊಡನೆ ಬಂದ ಮಹಾಜನರೆಲ್ಲರೂ ಸಭಾಂಗಣದಲ್ಲಿ ಶ್ರೀಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿದರು. "ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರು ಮಹಾಮಾತೃಶ್ರೀಯವರು ಮೊದಲಾದ ಸಕಲ ರಾಜಕುಟುಂಬದವರಿಗೂ ಅವರ ಅಶೇಷ ಪ್ರಜೆಗಳಿಗೂ ಅತ್ಯಂತ ಸಂತೋಷಪ್ರದವಾಗಿರುವ ಶ್ರೀಮದ್ಯುವರಾಜ ಪುತ್ರೋದಯೋತ್ಸವವು ನಮ್ಮ ವೀರಶೈವ ಜನವರ್ಗಕ್ಕೆಲ್ಲಾ ಅತಿಶಯ ಸಂತೋಷದಾಯಕವಾಗಿರುತ್ತದೆ. ರಾಜವಂಶಸಂತಾನಾಭಾವದ ಕೊರತೆಯು ಪ್ರಜೆಗಳ ಮನಸ್ಸನ್ನು ಅತಿಶಯವಾಗಿ ಕೊರೆಯುತ್ತಿತ್ತು. ಅದು ಜಗದೀಶ್ವರನ ಅನುಗ್ರಹದಿಂದಲೂ ಶ್ರೀಮನ್ಮಹಾರಾಜಸಹೋದರರ ಗುರುದೈವಭಕ್ತಿ ಸದ್ಧರ್ಮಾಚರಣಗಳ ಪ್ರಭಾವದಿಂದಲೂ ಈಗ ನಿವೃತ್ತವಾಗಿ ಎಲ್ಲರೂ ಈ ದಿನ ಆನಂದಮಹೋತ್ಸವವನ್ನು ಅನುಭವಿಸುವಂತಾಯಿತು." ಎಂದು ಮೊದಲಾಗಿ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ಬಸವಾರಾಧ್ಯ, ಬಿ. ಎ. ಬಿ. ಎಲ್. ರವರೂ ಮ|| ಹೆಚ್. ಕೆ. ಮಲ್ಲಪ್ಪನವರೂ ಸಹ ಉಪನ್ಯಾಸಗಳನ್ನು ಮಾಡಿದ ನಂತರ ಶ್ರೀ ಸ್ವಾಮಿಗಳವರು—"ನಮ್ಮ ಪ್ರಜಾರಂಜಕರಾದ ಶ್ರೀಮನ್ಮಹಾರಾಜರವರ ವಂಶದಲ್ಲಿ ಪುತ್ರೋತ್ಸವವುಂಟಾದುದು ದೇಶಾಭ್ಯುದಯಕ್ಕೆ ಶುಭಸೂಚನೆಯಾಗಿದೆ. ಶ್ರೀಮನ್ಮಹಾರಾಜರವರು ತಮ್ಮ ಸರ್ವಸಮದೃಷ್ಟಿಯಿಂದಲೂ, ನಿರ್ದುಷ್ಟಚರಿತ್ರದಿಂದಲೂ, ಆಸ್ತಿಕಭಾವದಿಂದಲೂ, ಸಾಧುಸಜ್ಜನಪ್ರೀತಿಯಿಂದಲೂ ಅತ್ಯಂತ ಪ್ರಜಾರಂಜಕರಾಗಿಯೂ ದೈವಾನುಗ್ರಹಕ್ಕೆ ಪಾತ್ರರಾಗಿಯೂ ಇರುತ್ತಾರೆ. ಸಹಜಸದ್ಭಕ್ತಿಯಿಂದ ಮಾಡಲ್ಪಡುವ ಪ್ರಾರ್ಥನೆಗಳು ಎಂದಿಗೂ ಹುಸಿಯುವುದಿಲ್ಲ. ಶ್ರೀ ರಾಜವಂಶದವರ ಮತ್ತು ಅವರ ಸಕಲ ಪ್ರಜೆಗಳ ಇಷ್ಟಾರ್ಥಗಳನ್ನು ಜಗದೀಶನು ಸಫಲಮಾಡಿ ಕೊಟ್ಟಿದ್ದಾನೆ. ಹೀಗೆಯೇ ನಮ್ಮ ರಾಜವಂಶದ ಸಕಲೇಷ್ಟಾರ್ಥಗಳನ್ನೂ ಪರಮೇಶನು ನೆರವೇರಿಸಿಕೊಡುತ್ತ ಬರಲೆಂದು ಕೋರುವುದೇ ನಮ್ಮಗಳ ಇಷ್ಟಾಶಯವಾಗಿರುತ್ತದೆ. ಇಂಥ ಸದ್ಧರ್ಮನಿರತ ಪ್ರಭುಗಳನ್ನು ಅವರ ಪ್ರಜೆಗಳು "ರಾಜಾಪ್ರತ್ಯಕ್ಷದೇವತಾ" ಎಂದು ತ್ರಿಕರಣಪೂರ್ವಕವಾಗಿ ಭಾವಿಸಿ ಓಲೈಸುವುದು ಆಶ್ಚರ್ಯವಲ್ಲ. ಅವರ ರಾಜಭಕ್ತಿಯೂ ಕೂಡ ತಕ್ಕ ಫಲವನ್ನು ಪ್ರಜೆಗಳಿಗೆ ಉಂಟುಮಾಡದೆ ಹೋಗುವುದಿಲ್ಲ. ಧರ್ಮಾಭಿಮಾನಿಗಳೂ ಸತ್ಯಸಂಧರೂ ದೂರದರ್ಶಿಗಳೂ ಆದ ಇಂಥ ಪ್ರಭುಗಳು ಪುರಾತನ ಕರ್ಣಾಟಕ ಸಿಂಹಾಸನವನ್ನಲಂಕರಿಸಿರುವುದು ದೇಶದ ಭಾಗ್ಯೋದಯವು. ಅವರ ಸಹಜಾತರಾದ ಶ್ರೀಮದ್ಯುವರಾಜರವರು ಪ್ರತಿಯೊಂದು ರಾಜಕಾರ್ಯದಲ್ಲೂ ಅಗ್ರಜರಿಗೆ ನೆರವಾಗಿ ವರ್ತಿಸುತ್ತ ಅತ್ಯಂತ ಪ್ರಜಾರಂಜಕರಾಗಿ ಪರಿಣಮಿಸಿರುವುದು ಹೆಚ್ಚಿನ ಭಾಗ್ಯೋದಯವು. ಇಂಥ ಸದ್ಗುಣಮಣಿಕರಂಡಕರಾಗಿರುವ ಪ್ರಭುಸಹೋದರರ ಸಚ್ಚರಿತ್ರವು "ಯಥಾ ರಾಜಾತಥಾಪ್ರಜಾಃ" ಎಂಬುಕ್ತಿಯಂತೆ ಸಕಲ ಪ್ರಜೆಗಳಿಗೂ ಮಾರ್ಗದರ್ಶಕವಾಗಿರಬೇಕು. ಜಗದೀಶ್ವರನು ನಮ್ಮ ಶ್ರೀಮನ್ಮಹಾರಾಜರವರಿಗೂ ಅವರ ಅನುಜಾತರಾದ ಶ್ರೀಮದ್ಯುವರಾಜರವರಿಗೂ ಸಕಲ ವಾಂಛಿತಾರ್ಥಸಿದ್ಧಿಯನ್ನೂ ದೀರ್ಘಾಯುರಾರೋಗ್ಯಗಳನ್ನೂ ಇತ್ತು, ಈಗ ಉದಯಿಸಿರುವ ರಾಜಪುತ್ರರತ್ನಕ್ಕೂ ಯುವರಾಜ್ಞಿಯವರಿಗೂ ದೀರ್ಘಾಯುರಾರೋಗ್ಯಗಳನ್ನು ಕೊಡುವುದಲ್ಲದೆ, ಇಂಥ ಸಂತಾನರತ್ನಗಳು ಇನ್ನುಮುಂದೆ ಇನ್ನೂ ವಿಶೇಷವಾಗಿ ಮೈಸೂರು ಅರಮನೆಯಲ್ಲಿ ಉದಯಿಸಿ ರಾಜವಂಶವನ್ನು ಬೆಳಗುವಂತೆ ಅನುಗ್ರಹಿಸಲಿ. ಶ್ರೀಮಜ್ಜಾರ್ಜ್ ಸಾರ್ವಭೌಮರವರ ಸದ್ಧರ್ಮಪ್ರಭಾವದಿಂದ ಶತ್ರುವಿಜಯವೂ ಮಹಾಸಂಧಿಯೂ ನಡೆದು ಲೋಕವೆಲ್ಲಾ ಶಾಂತಿಸಂತೋಷಗಳನ್ನನುಭವಿಸುವಂತೆ ಆಗಿರುವುದರಿಂದ, ಅವರ ಸಾಮ್ರಾಜ್ಯವು ಭೂತಲದಲ್ಲಿ ಚಿರಕಾಲ ತೇಜೋಭೂಯಿಷ್ಠವಾಗಿ ಬಾಳಲಿ, ಎಂದು ಈ ಸಂತೋಷಸಮಯದಲ್ಲಿ ನಿರತಿಶಯಪ್ರೇಮದಿಂದ ನಾವುಗಳೆಲ್ಲರೂ ಭಗವಂತನನ್ನು ಪ್ರಾರ್ಥಿಸೋಣ" ಎಂದು ಅಪ್ಪಣೆ ಕೊಡಿಸಿದನಂತರ ಸರ್ವರೂ ಶ್ರೀಮಚ್ಚಕ್ರವರ್ತಿಯವರನ್ನೂ, ಮೈಸೂರು ಶ್ರೀಮನ್ಮಹಾರಾಜರವರನ್ನೂ, ಶ್ರೀಮದ್ಯುವರಾಜರವರನ್ನೂ, ಸಂತಾನರತ್ನವನ್ನೂ ಕುರಿತು ಶ್ರೇಯಃಪ್ರಾರ್ಥನಾಪೂರ್ವಕ ತ್ರಿವಾರ ಜಯಘೋಷಗಳನ್ನು ಮಾಡಿದರು. ಸಭಾಕಾರ್ಯವು ಮುಗಿದಿತು.

ಪ್ರತ್ಯಕ್ಷದರ್ಶೀ.

ಯುದ್ಧಶಾಂತಿಯ ಸಂಬಂಧವಾಗಿ ಚಿತ್ರದುರ್ಗದಲ್ಲಿ ಆದ ಮಹೋತ್ಸವ ಸಮಾರಂಭ.

ಯುದ್ಧಶಾಂತಿಯ ಮಹೋತ್ಸವವು ಸರ್ಕಾರಿಯಪ್ಪಣೆಯಂತೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲೆಲ್ಲಾ ಆಚರಿಸಲ್ಪಡಲು ಡಿ|| ಕಮಿಷನರು ತಕ್ಕೇರ್ಪಾಟನ್ನು ಮಾಡಿದ್ದರು. ಚಿತ್ರದುರ್ಗ ಟವನ್ನಿನಲ್ಲಿ ಪ್ರಾತಃಕಾಲ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಸಿ. ಚೆನ್ನಕೇಶವಯ್ಯನವರು ದುರ್ಗದ ಬಡಜನಗಳಿಗೆ ಊಟಮಾಡಿಸುವುದು, ರಾತ್ರಿ ದೀಪೋತ್ಸವ ಮತ್ತು ಸುಡುಮದ್ದು ಕೊಡ

ಲಾದ ಉತ್ಸವಗಳು ನಡೆಯಲು ವಿಶೇಷವಾದೇರ್ಪಾಟನ್ನು ವಿಚಕ್ಷಣೆಯಿಂದ ಮಾಡಿದ್ದರು. ಬ್ರಿಟಿಷರಿಗೂ ಅವರ ಮಿತ್ರಮಂಡಲಿಗೂ ನಿರಂತರವಾದ ಸುಖ ಸಂಪತ್ತನ್ನು ಕೋರಿ ಬೆಳಿಗ್ಗೆ ಎಲ್ಲಾ ದೇವಸ್ಥಾನಗಳಲ್ಲೂ ಮಸೀತಿಗಳಲ್ಲೂ ಪೂಜೆ ಮತ್ತು ಪ್ರಾರ್ಥನೆಗಳು ನಡೆಸಲ್ಪಟ್ಟುವು. ಸ್ಕೂಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳು ನೂತನ ವಸ್ತ್ರಾಭರಣಗಳನ್ನು ಧರಿಸಿಕೊಂಡು ತಂತಮ್ಮ ಮಾಸ್ತರುಗಳನ್ನು ಮುಂದಿಟ್ಟುಕೊಂಡು ಸಾಲುಸಾಲಾಗಿ ಬಂದು ಬ್ರಿಟಿಷರ ಜಯಧ್ವಜಪತಾಕೆಗಳಿಗೆ ನಮಸ್ಕಾರಗಳನ್ನು ಮಾಡಿದನಂತರ ಅವರುಗಳಿಗೆ ಹಣ್ಣು ಮಿಠಾಯಿ ಕೊಡಲ್ಪಟ್ಟುವು. ಮಧ್ಯಾಹ್ನದಲ್ಲಿ ಪಬ್ಲಿಕ್ ಆಫೀಸ್ ಮುಂಭಾಗದ ಬೈಲಿನಲ್ಲಿ ಎಲ್ಲಾ ಸ್ಕೂಲುಗಳ ಮಕ್ಕಳುಗಳ ಆಟಪಾಟಗಳು ನಡೆಸಲ್ಪಟ್ಟುವು. ಈ ವಿನೋದವನ್ನು ನೋಡಲು ಊರಿನ ಜನರು ವಿಶೇಷವಾಗಿ ಬಂದಿದ್ದರು. ಆಗ ಡಿ|| ಕಮಿಷನರು ಶಾಂತಿಯ ವಿಚಾರದಲ್ಲಿ ಆಹ್ಲಾದ ಪ್ರಕಟನಪತ್ರಿಕೆಯನ್ನು ಓದಿ ಹೇಳಿದರು. ತರುವಾಯ ಅದೇ ವಿಚಾರವು ಕನ್ನಡದಲ್ಲಿ ಟ್ರೆಜರಿ ಅ|| ಕಮಿಷನರ್ ಮತ್ತು ಮ್ಯುನ್ಸಿಪಲ್ ಪ್ರೆಸಿಡೆಂಟ್ ಮ|| ಪಿ. ಸುಬ್ಬರಾವ್, ಬಿ. ಎ., ಬಿ. ಎಲ್., ರವರಿಂದ ಓದಿ ಹೇಳಲ್ಪಟ್ಟಿತು. ತರುವಾಯ ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು ತ್ರಿವಾರ ಜಯಘೋಷಧ್ವನಿಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀಗುರುಸಿದ್ಧ ವೃಷಭೇಂದ್ರ ಕೃಪಾಪೋಷಿತ ಶ್ರೀಮದ್ವೀರಶೈವ ಸಮಾಜಸುಧಾರಣಸಂಘ, ವಿರಕ್ತಮಠ, ಜಡೆ. ತಾ|| ಸೊರಬ.

ಮೇಲ್ಕಂಡ ಸಂಘವು ಏರ್ಪಟ್ಟು ಈಗ್ಗೆ ೧೧ ತಿಂಗಳುಗಳಾದವು. ಸಂಘದವರ ಸಭೆಯು ತಿಂಗಳಿಗೊಂದುಸಾರೆ ಪ್ರತಿತಿಂಗಳಲ್ಲಿಯೂ ನಮ್ಮ ಈ ಜಡೆ ವಿರಕ್ತಮಠದಲ್ಲಿ ನೆರವೇರಿಸಲ್ಪಡುತ್ತಿರುವುದು. ಈ ತಿಂಗಳಿನ ಸಭೆಯು ಇದೇ ಆಷಾಢ ಶುದ್ಧ ೧೦ ಸೋಮವಾರ ತಾ|| 7-7-19 ನೇ ದಿವಸ ಕೂಡಲ್ಪಟ್ಟಿತ್ತು. ಶ್ರೀಮತ್ ಶಾಂತಪುರದ ಮಠದ ಚರಮೂರ್ತಿಗಳೂ ಮತ್ತು ಈ ಪ್ರಾಂತದ ಮುಖ್ಯ ಮುಖ್ಯ ಜನಗಳೂ ಸಭೆಗೆ ಆಗಮಿಸಿದ್ದರು. ಸಭಿಕರ ಕೋರಿಕೆಯಂತೆ ಶ್ರೀ ಚರಮೂರ್ತಿಗಳವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಗಂಗಾಧರಶಾಸ್ತ್ರಿಗಳು ಶಿವಭಕ್ತಿಯ ವಿಷಯವಾಗಿ ರಮ್ಯವಾದ ಭಾಷಣಮಾಡಿದರು. ವಿರಕ್ತಮಠದ ಸರ್ವಾಧಿಕಾರಿಗಳಾದ ವೇ|| ಚನ್ನವೀರಯ್ಯನವರು ಗರ್ಭಾಧಾನಾದಿ ಷೋಡಶ ಕರ್ಮಗಳು ವೀರಶೈವರಿಗೆ ಅತ್ಯವಶ್ಯಕವೆಂಬ ವಿಷಯದಲ್ಲಿಯೂ ಈ ಕರ್ಮಗಳು ಮಧ್ಯೆ ಕೆಲವುಕಾಲ ವಿಧಿವತ್ತಾಗಿ ನಡೆಯದೆ ಕೆಲವು ಕಡೆಗಳಲ್ಲಿ ಬಿಟ್ಟುಹೋಗಿ ಇತ್ತೀಚೆಗೆ ಪ್ರಚಾರದಲ್ಲಿ ಬರುತ್ತಿರುವುದರಿಂದ ಕೆಲವರಿಗೆ ನವೀನವಾಗಿ ಕಂಡುಬಂದರೂ ವಿಧ್ಯುಕ್ತ ಗರ್ಭಾಧಾನಾದಿ ಕರ್ಮಗಳು ಆಚರಣೀಯಗಳೆಂಬ ವಿಷಯದಲ್ಲಿಯೂ ೨ ತಾಸಿನವರೆಗೆ ಸರ್ವರಿಗೂ ಅವಗಾಹನವಾಗುವಂತೆ ಉಪನ್ಯಾಸಮಾಡಿದರು. ಅನಂತರ ಯಾವತ್ತೂ ವೀರಶೈವರ ಪಕ್ಷದಿಂದ ಶುಭೋದಯಕಾರರಮೇಲೆ ಖಟ್ಲೆ ನಡೆಯಿಸುತ್ತಲಿರುವ ಮ|| ರಾ|| ಸಿದ್ಧರಾಮಪ್ಪನವರು ಪಾವಟೆ, ವಕೀಲ್, ಹುಬ್ಬಳ್ಳಿ ಇವರಿಗೆ ಜಯಪ್ರದವಾಗುವಂತೆ ಜಗದೀಶ್ವರನು ಕರುಣಿಸಲೆಂದು ಪ್ರಾರ್ಥಿಸಿ ಸರ್ವರೂ ಮೂರುಸಾರೆ ಜಯಘೋಷಮಾಡಿ ಶುಭೋದಯಪತ್ರಿಕೆ ಏಕಾಭಿಪ್ರಾಯದಿಂದ ಬಹಿಷ್ಕಾರ ಹಾಕಿದರು. ಅನಂತರ ಮಾಹೇಶ್ವರ ವಿದ್ಯಾರ್ಥಿಗಳಿಂದ ವೇದೋಕ್ತ ಪುಷ್ಪಾಂಜಲಿ ಪಠನಪೂರ್ವಕವಾಗಿ ಗುರುಗಳ ಮಂಗಳಾಚರಣೆಯು ಮಾಡಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಪ್ರೇಕ್ಷಕ.

ಕೊರಟಗೆರೆ ಸ|| ತಾ|| ತೀತದ ಗ್ರಾಮ.

ಈ ಗ್ರಾಮವು ಪೂರ್ವದಲ್ಲಿ ಒಂದು ಸಣ್ಣ ಹಳ್ಳಿಯಾಗಿದ್ದು ದಿನೇದಿನೇ ಪ್ರಜ್ವಲಿಸಿ ಈಗ ಸುಮಾರು 150 ಮನೆಗಳುಳ್ಳ ಒಂದು ಗ್ರಾಮವಾಗಿದೆ. ಈಗ್ಗೆ 15-20 ವರ್ಷಗಳ ಕೆಳಗೆ ಈ ಗ್ರಾಮದಲ್ಲಿ ವಿದ್ಯೆಯೆಂಬ ಗಂಧವೇ ಇರಲಿಲ್ಲ. ಇದನ್ನೆಲ್ಲಾ ನೋಡಿದ ಸಾ|| ಚಿಕ್ಕರಂಗಣ್ಣನವರು ಧರ್ಮಾರ್ಥವಾಗಿ ಒಂದು ಸ್ಕೂಲು ಮನೆಯನ್ನು ಕಟ್ಟಿಸಿಕೊಟ್ಟು ವಿದ್ಯಾಭ್ಯಾಸ ನಡೆಯಲೇರ್ಪಡಿಸಿದರು. ವಿದ್ಯಾಭ್ಯಾಸವು ಕಾಲಕ್ರಮೇಣ ಅಭಿವೃದ್ಧಿಯಾಗುತ್ತಾ ಬಂದು ಪ್ರಾರಂಭದಲ್ಲಿ 15 ಹುಡುಗರಿದ್ದದ್ದು 90 ಕ್ಕೆ ಹೆಚ್ಚಿರುವುದಲ್ಲದೆ ಇಬ್ಬರು ಉಪಾಧ್ಯಾಯರಾದರು. ಮತ್ತು ಗ್ರಾಮಸ್ಥರ ಉದಾರವಾದ ಸಹಾಯದಿಂದಲೂ ಸರ್ಕಾರದವರು ಕೊಟ್ಟ ನೆರವಿನಿಂದಲೂ ಸುಮಾರು ಮೂರುಸಾವಿರ ರೂಪಾಯಿ ಬಾಳತಕ್ಕ ಹೊಸ ಸ್ಕೂಲ್ ಕಟ್ಟಡವೂ ಕೂಡ ತಯಾರಾಯಿತು. ಮೇಲ್ಕಂಡ ಚಿಕ್ಕ ರಂಗಣ್ಣನವರು ಕಟ್ಟಿಸಿರುವ ಕಟ್ಟಡದಲ್ಲಿ ಸುಮಾರು ಮೂವತ್ತು ಮಂದಿ ವಿದ್ಯಾರ್ಥಿನಿಯರೂ, ಇಬ್ಬರು ಮಾಸ್ತರೂ ಈ ರೀತಿಯಾಗಿ ಉತ್ತಮರೀತಿಯಾಗಿ ವಿದ್ಯಾಭ್ಯಾಸ ನಡೆಯುತ್ತಿರುವುದನ್ನು ನಮ್ಮ ಕೊರಟಗೆರೆ ಸ|| ತಾ|| ಡೆಪ್ಯೂಟಿ ಅಮಲ್ದಾರ್ ಸಾಹೇಬರವರು ಪ್ರತ್ಯಕ್ಷವಾಗಿ ಕಂಡು, ಈ ಗ್ರಾಮದ ದೊಡ್ಡಮನುಷ್ಯರುಗಳನ್ನು ಸಭೆ ಸೇರಿಸಿ ಆಂಗ್ಲ (ಇಂಗ್ಲೀಷ್) ವಿದ್ಯಾಭ್ಯಾಸವು ಈ ನವನಾಗರಿಕ ಕಾಲಕ್ಕೆ ಅತಿ ಮುಖ್ಯವಾದದ್ದೆಂತಲೂ ನೀವುಗಳೆಲ್ಲಾ ಚಂದಾಹಾಕಿ ವರ್ಷ 1 ಕ್ಕೆ 120 ರೂ. ಗಳಂತೆ ಸರ್ಕಾರಕ್ಕೆ ಪಾವತಿಮಾಡಿ ನಿಮ್ಮ ಗ್ರಾಮದಲ್ಲಿ ಒಂದು ಇಂಗ್ಲೀಷ್ ಗ್ರ್ಯಾಂಟ್ ಸ್ಕೂಲನ್ನು ಓಪನ್ ಮಾಡಿಸಬೇಕೆಂತ ಉಪನ್ಯಾಸದ ಮೂಲಕ ತಿಳಿಸಿದ್ದನ್ನು ಗ್ರಾಮದ ಮಹನೀಯರುಗಳು ವಿಚಾರಕ್ಕೆ ತಂದು ಸಾಹುಕಾರ್ ಕಾಮಣ್ಣನವರು 200 ರೂಪಾಯಿ, ಕೋಡಿ ಮಲ್ಲೇಗೌಡರು 150, ಬೊಮ್ಮಣ್ಣನವರು 100, ಚಿಕ್ಕರಂಗಣ್ಣನವರು 100, ಜವಳಿ ಅಂಗಡಿ ಉಗ್ರಪ್ಪನವರು 100, ಜವಳಿ ಅಂಗಡಿ ರಾಮಯ್ಯನವರು 100, ವೀರೇಗೌಡರು 100, ಯಜಮಾನ್ ಭದ್ರಪ್ಪನವರು 50, ಕಂ|| ಕಾವಲಪ್ಪನವರು 50, ಭದ್ರಣ್ಣನವರು 25, ಚಿಕ್ಕವೀರಣ್ಣನವರು 25, ಉ|| ವೀರಭದ್ರಯ್ಯನವರು 25, ತಿಮ್ಮಪ್ಪನವರು 20, ಭಜಂತ್ರಿ ಪಾಪಣ್ಣನವರು 25 ರೂಪಾಯಿ. ಈ ರೀತಿ ಇನ್ನೂ ಅನೇಕ ಗ್ರಾಮದ ಮಹನೀಯರುಗಳು ಚಂದಾಹಾಕಿ 1330 ರೂ. ಮೂಲಧನವನ್ನಾಗಿ ಶೇಖರಿಸಿ, ಆ ಹಣವನ್ನು ಬಡ್ಡಿಗೆ ಕೊಟ್ಟು 120 ರೂ. ಗ್ರಾಂಟನ್ನು ಸರ್ಕಾರಕ್ಕೆ ಪಾವತಿಮಾಡಿ ಬಾಲಕರುಗಳಿಗೆ ಫೀಜಿಲ್ಲದಂತೆ ವ್ಯಾಸಂಗ ನಡೆಯಲೇರ್ಪಡಿಸಿರುವುದು ತೃಪ್ತಿಕರವಾದ ವಿಷಯವಾಗಿದೆ. ಅಲ್ಲದೆ ತಾ|| 17-7-19 ನೆ ಗುರುವಾರ ಎ. ವಿ. ಇಂಗ್ಲೀಷ್ ಸ್ಕೂಲಿನ ಪ್ರಾರಂಭಮಹೋತ್ಸವವು ಹೊಸ ಸ್ಕೂಲ್ ಕಟ್ಟಡದಲ್ಲಿ ಬಹು ವೈಭವದಿಂದ ಜರುಗಿತು. ಸಭೆಯವರು ಅನುಮೋದಿಸಿದಂತೆ ಸಾ|| ಕೋಡಿಮಲ್ಲೇಗೌಡರವರೇ ಅಗ್ರಾಸನಾಧಿಪತಿಗಳಾಗಿದ್ದರು. ಚಾ|| ಸ್ಕೂಲ್ ಹೆಡ್ಮಾಸ್ತರು ಹೆಚ್. ರುದ್ರಯ್ಯನವರು ಬ್ರಿಟಿಷ್‌ನವರಿಂದ ನಮಗುಂಟಾಗಿರುವ ಪ್ರಯೋಜನಗಳ ವಿಷಯವಾಗಿಯೂ ಅ|| ಮಾ|| ಸತ್ಯನಾರಾಯಣಶಾಸ್ತ್ರಿಗಳು ಆಂಗ್ಲವಿದ್ಯಾಭ್ಯಾಸದ ಅವಶ್ಯಕತೆಯ ವಿಷಯದಲ್ಲಿಯೂ, ಜವಳಿ ಅಂಗಡಿ ಟಿ. ವಿ. ಮುತ್ತಯ್ಯನವರು ಲೈಬ್ರರಿ, ರೀಡಿಂಗ್‌ರೂಂ ಇವುಗಳ ವಿಷಯದಲ್ಲಿಯೂ ಕಮಿಟಿ ಮೆಂಬರು ಉಗ್ರಪ್ಪನವರು ಸ್ಕೂಲಿನ ಸ್ಥಿತಿಗತಿಗಳ ವಿಚಾರದಲ್ಲಿಯೂ ಸರ್ವರಿಗೂ ಹೃದಯಂಗಮವಾಗುವಂತೆ ಉಪನ್ಯಸಿಸಿದರು. ಬಾಲಕಿಯರಿಂದ ಚಕ್ರವರ್ತಿಯವರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ ಅಧ್ಯಕ್ಷರವರ ಕೊನೆಯ ಭಾಷಣವೂ ನಡೆದ ನಂತರ ನೆರೆದಿದ್ದ ಸಭಿಕರಿಗೆಲ್ಲಾ ಸಕ್ಕರೆ, ಗಂಧ, ಪುಷ್ಪ ತಾಂಬೂಲಾದಿಗಳ ವಿನಿಯೋಗದಿಂದ ಸಭೆಯನ್ನು ಬರಖಾಸ್ತು ಮಾಡಿದರು.

ಪ್ರತ್ಯಕ್ಷದರ್ಶಿ.

೧ ವರುಷಕ್ಕೆ ಚಂದಾ ರೂ. ೨-೮-೦.

ವ್ಯಾಪಾರನಿರ್ಣಯಪ್ರಕಾಶಿಕೆ ಎಂಬ ಮಾಸಪತ್ರಿಕಾ.

ಇದು ವರ್ತಕರಿಗೂ, ವ್ಯವಸಾಯಗಾರರಿಗೂ ತುಂಬಾ ಅನುಕೂಲವಾಗಿರುವುದು. ಈ ಮಾಸಪತ್ರಿಕೆಯಲ್ಲಿ ಹತ್ತಿ, ಅರಳೆ, ಅಡಿಕೆ, ಬೆಲ್ಲ ಮೊದಲಾದ ಯಾವತ್ತು ಪದಾರ್ಥಗಳಿಗೂ ಎಲ್ಲಾ ಧಾನ್ಯಗಳಿಗೂ ಪ್ರತಿ ಮಾಸದಲ್ಲಿ ಆಗುವ ತೇಜಿಮಂದಿ ವಿಷಯವನ್ನು ವಿಶದವಾಗಿ ಬರೆಯುತ್ತದೆ. ಪದಾರ್ಥಗಳ ದಾಸ್ತಾ ಮಾಡುವ ಕಾಲ ಮಾರಾಟ ಮಾಡುವ ಕಾಲವನ್ನು ಚನ್ನಾಗಿ ಬರೆಯುತ್ತೆ. ಚಂದಾದಾರರಿಗೆ ಪ್ರತಿ ಮಾಸದಲ್ಲಿ ಉಂಟಾಗುವ ಲಾಭ, ಲುಕ್ಸಾನು, ದೇಹಪೀಡೆ, ಪರಿಹಾರಕ್ರಮ ಮೊದಲಾದ ಫಲಗಳನ್ನು ವರ್ತಕರಿಗೂ ವ್ಯವಸಾಯಗಾರರಿಗೂ ಬಹಳ ಉಪಯೋಗಕರವಾದ ನೂತನ ವಿಷಯಗಳನ್ನು ಬರೆಯುತ್ತೆ. ಮೊದಲು ಪ್ರತಿಮಾಸದ ತೇಜಿಮಂದಿ ನಿರ್ಣಯದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ.

ವಿಳಾಸ:—ಎಡಿಟರ್ ವ್ಯಾಪಾರನಿರ್ಣಯ ಪ್ರಕಾಶಿಕೆ,
1 ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

„ ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ ”

ಶ್ರೀ ಶಿವಯೋಗಿಗಳ ಸಂಘ:—ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಿಳೂರ, ಹಾನಗಲ್ಲ, ಹಾಳಕೇರಿ, ಬಿಡರೀ, ನಿಡಸೋಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೊ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೮ × ೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೊ ೧೮ × ೧೨ ಸೈಜ ಬಣ್ಣದ ಚಿತ್ರದ ಕ್ರಯ ೧ಪ್ರತಿಗೆ ರೂ. ೧. ಸಾದಾ ೮ ಆ.

ಹೊಸ ಫೋಟೊ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನಚಕ್ರ ಪಡಕೊಂಡ ಅತ್ಯಂತ ಸುಂದರವಾದ ಫೋಟೊ ಕ್ರಯ ಫೂಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಪಂಚಮುಖ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಸಂಗ್ರಹಕ್ಕೇ ಯೋಗ್ಯವಾದ ಚಿತ್ತಾನಂದದಾಯಕ ಫೋಟೊ ಕ್ರಯ ಫೂಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ವೀರಭದ್ರದೇವರು:—ವೀರಶ್ರೀಯಿಂದ ತುಂಬಿದ ತೇಜಃಪುಂಜವಾದ ಫೋಟೊ ಕ್ರಯ ಫೂಲ್ಲಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಕಾಶಿಕ್ಷೇತ್ರದರ್ಶನ:—ಇದರಲ್ಲಿ ಶಿವಚಿನ್ಹಾಂಕಿತ ನಕ್ಷೆದಲ್ಲಿ ೧ ಶ್ರೀ ವಿಶ್ವನಾಥ, ಶ್ರೀ ಅನ್ನಪೂರ್ಣಾದೇವಿ, ಶ್ರೀ ಸಾಕ್ಷಿವಿನಾಯಕ, ಶ್ರೀ ಕಾಲಭೈರವ ಇವೆ ಮೊದಲಾದ ಮುಖ್ಯ ೧೫ ದೇವತಾ ಫೋಟೊ ಇದ್ದ ಮೂಲಕ ಶ್ರೀ ಕ್ಷೇತ್ರ ಕಾಶಿಯ ನಿತ್ಯದರ್ಶನ ನಿತ್ಯ ಆಗುವವು. ಕ್ರಯ ಫೂಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ. ೧೪ × ೧೦ ಸೈಜದ ಹಾಳಿನ ಚಿತ್ರದ ಕ್ರಯ ೪ ಆಣೆ.

ಶ್ರೀ ಗೌರಿಗಜಾನನ ವಿನೋದ:—ಅತ್ಯಂತ ಚಿತ್ತಾಕರ್ಷಕನಾದ ಪಾರ್ವತಿ ಗಣಪತಿಯರ ಮೋಹಕ ಲೀಲಾದ ಫೋಟೊ ಕ್ರಯ ಕ್ಯಾಬಿನೆಟ ೮ ಆಣೆ.

ಶ್ರೀ ವೀರಶೈವ ರಾಜಸಮೂಹ:—ಇದರಲ್ಲಿ ಕೊಡುಗದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಒಡೆಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸದ್ಯದ ಪುಂಗನೂರ ಮತ್ತು ಗೋವಾಪ್ರಾಂತದ ಬಾಂದೆವಾಡಿ, ಸ್ವಾಂದಾದ ಅರಸರ ಫೋಟೊ ೯ ಇರುತ್ತಾವೆ. ಕ್ರಯ ಫೂಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಫೋಟೋಲಾಕೆಟ್ಸ.

ಸಭ್ಯಗೃಹಸ್ಥರು ಗಡಿಯಾರ ಸರಗಳಿಗೆ ಹಚ್ಚಿ ಉಪಯೋಗಿಸಲಿಕ್ಕೆ ಅತ್ಯಂತ ಯೋಗ್ಯವಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿಗಳ ಫೋಟೊ ಕೂಡ್ರಿಸಿದ ಅತಿ ಫ್ಯಾಸ್ನಿವಾದ ಬೆಳ್ಳಿ ಲಾಕೆಟಗಳೂ ಶಿಗುತ್ತವೆ. ಕ್ರಯ ಬೆಳ್ಳಿವು ಅರ್ಧ ರೂಪಾಯಿ ಆಕಾರವೂ ನಕ್ಷೆವೂ ರೂ. ೧—೧೪—೦, ಬೆಳ್ಳಿವೂ ಪಾವಲಿ ಆಕಾರ ನಕ್ಷೆವೂ ರೂ. ೧—೧೨—೦, ಬೆಳ್ಳಿವು ಪಾವಲಿ ಆಕಾರ ಸಾದಾ ಫ್ಯಾನ್ಸಿ ರೂ. ೧—೮—೦, ರೋಲಗೋಲ್ಡ ಭಂಗಾರವೂ ರೂಪಾಯಿ ಆಕಾರವೂ ಸಭೇದ ಸನ್ಮಾನನೀಯ ಸಭಾಸದರಿಗೆ ಮತ್ತು ಸಭೇದ ವ್ಯವಸ್ಥಾಪಕರಾದ ಹ್ಯಾಂಟ ಅರಿಗೆ ಕೋಟಿನಮೇಲೆ ಹಚ್ಚುವುದಕ್ಕೆ ಮೆಡಲದಂತೆ ಬಹು ಶೋಭಾಯಮಾನ ಇರುತ್ತವೆ. ಕ್ರಯ ೧ ಕ್ಕೆ ರೂ. ೧—೬—೦, ೧—೮—೦ ಆಣೆ.

ಫೋಟೊ ಬ್ರೂಚಪಿನ:—ಇವು ಕೋಟಿನ ಕಾಲರಮೇಲೆ ಹಚ್ಚುವವೂ ಇನ್ನು ಇವರಲ್ಲಿ ಬೇಕಾದ ದೇವರ, ಅಥವಾ ಸತ್ಪುರುಷರವೂ ೧ ಫೋಟೊ ಕೂಡ್ರಿಸಿ ಸಿಗುತ್ತದೆ. ಕ್ರಯ ಗಿಲ್ಟಬ್ರೂಚವು ೧೪ಕ್ಕೆ ೬ಆಣೆ, ೮ ಆ.

ಇವುಗಳ ಹೊರ್ತ ಶ್ರೀ ಸೊಲ್ಲಾಪುರ ಸಿದ್ಧರಾಮೇಶ್ವರ, ಹಂಪೆ ವಿರುಪಾಕ್ಷೇಶ್ವರ, ಕಲಬುರ್ಗ ಶರಣಬಸವೇಶ್ವರ, ಗೋಕರ್ಣದ ಮಹಾಬಲೇಶ್ವರ, ಶ್ರೀ ಭ್ರಮರಾಂಬಿಕಾದೇವಿ, ಶ್ರೀ ಕಾಶಿ ಅನ್ನಪೂರ್ಣಾ ಮುಂತಾದ ದೇವರವೂ ಮತ್ತು ಸಮಾಜಸೇವಕ್ಕೆ ಕಂಕಣಬದ್ಧರಾದ ಪ್ರಸಿದ್ಧ ಶ್ರೀಮನ್ನಿರಂಜನ ದಾವಣಗೇರಿ ಮೃತ್ಯುಂಜಯ ಶಿವಯೋಗಿ, ಶ್ರೀ ಗುರುಮಠಕಲ್ಲ ಶಾಂತವೀರಸ್ವಾಮಿ, ಮತ್ತು ೬೪ ನೇ ಪುರಾತನರೆಂಬ ಶ್ರೀ|| ಮಹಾತ್ಮಾ ಲಿಂಗಪ್ಪನವರು ಸಿರಸಂಗಿ ದೇಸಾಯಿ, ರಾ|| ಬ|| ರುದ್ರಗೌಡಾ ಆರಟಾಳ, ವಗೈರೆ ಫೋಟೊಗಳೂ ಸಿಗುತ್ತವೆ. ಕ್ರಯ ಫೂಲ್ಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಊರೂರಿಗೆ ಫೋಟೊ ಮತ್ತು ಲಾಕೇಟ ಮಾರಾಟ ಮಾಡುವ ಏಜಂಟರು ಬೇಕು. ಅಭಿಲಾಷೆವುಳ್ಳವರು ತ್ವರೆಪಟ್ಟು ೬ ಪೈ. ಟಿಕೀಟ ಕಳುಹಿಸಿ ಏಜಂಟ ನಿಯಮ ತರಿಸಿಕೊಳ್ಳಿರಿ.

ಗಂಗಪ್ಪಾ ಜೇರಗೆ ಮಾಲಕ,
1 ದಿ ಶಾರದಾ ಫೋಟೊ ಕಂಪನಿ, ಸೋಲ್ಲಾಪುರ ಸಿಟಿ.

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಪ್ರಾಶಸ್ತ್ಯವಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 3

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷ್ನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹು ಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ. ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತ.)

7 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 34

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೯ ನೆಯ ಇಸವಿ ಜುಲೈ ತಾ|| ೨೭ ರಿಂದ ೧೯೧೯ ನೆಯ ಆಗಷ್ಟ್ ತಾ|| ೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಷಾಢ ಬ|| ಅಮಾವಾಸ್ಯೆಯಿಂದ ಶ್ರಾವಣ ಶು|| ಷಷ್ಠಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ಮಾಸ
27	[1]ಭಾನು	ಅಮಾ	10.41	ಪುಷ್ಯ	39.3	12
28	ಸೋಮ	ಪಾಡ್ಯ	7.40	ಆಶ್ಲೇ	38.47	13
29	[2]ಮಂಗಳ	ಬಿದಿಗೆ	5.47	ಮಖಾ	39.2	14
30	[3]ಬುಧ	ತದಿಗೆ	5.5	ಹುಬ್ಬ	41.8	15
31	ಗುರು	ಚೌತಿ	5.40	ಉತ್ತ	44.10	16
1	[4]ಶುಕ್ರ	ಪಂಚ	7.30	ಹಸ್ತ	48.24	17
2	[5]ಶನಿ	ಷಷ್ಠಿ	10.3	ಚಿತ್ತ	53.41	18

(1) ಬುಧವ್ರತಾರಂಭ. (2) ಮಂಗಳಗೌರೀವ್ರತಂ. (3) ಸಂಪದ್ಗೌರೀವ್ರತಂ, ನಾಗರಚತುರ್ಥಿ. (4) ಗರುಡಪಂಚಮಿ, ಚಿತ್ರನೇಮಿವ್ರತಂ, ಆದಿಶುಕ್ರವಾರ. (5) ಶ್ರಾವಣಶನಿವಾರ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೨) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಆಗಸ್ಟ್ ತಾರೀಖು ೩ ನೆಯ ಭಾನುವಾರ. (ಸಂಚಿಕೆ ೩೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‍ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‍ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
26 ಇರುಳಪ್ಪನಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಸಂಪೂರ್ಣ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

43 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
26 ಇರುಳಪ್ಪನ ಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
33 ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‍ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

GOVERNMENT OF HIS HIGHNESS THE MAHARAJA OF MYSORE.

FINANCIAL SECRETARIAT.

NOTIFICATION

No. Fl. 708/G. F. 264—18 Dated 30-7-1919.

The following terms are offered to holders of the Mysore State Loan of 1906.

1. All promissory notes of the Mysore State Loan of 1906 now carrying interest at 4% per annum, will at the option of the holder be converted into new promissory notes of an equal amount carrying interest at 5½% with effect from 1st October 1919.

2. The new promissory notes will be repayable at par after 25 years from 1st October 1919. Government howoever reserve the right of repaying at par at any time after 10 years after re-issue subject to three months' previous notice boing given.

3. Those who desire to avail themselves of the privilege of conversion should tender their notes for conversion not later than the 30th September 1919 when interest will be paid on them at 4% up to the 30th September 1919 inclusive and new 5½% notes bearing interest from 1st October 1919 will be issued in lieu of them. The comptroller will issue subsidiary instructions for the guidance of holders of paper and of Treasuries as regards these transactions. "By ordor"

(Sd) M. N. KRISHNA RAO,
Financial Secretary to Government.

ಬೆಂಗಳೂರು ಸೆಂಟ್ರಲ್‌ಜೈಲ್.

ಸನ್ 1919 ನೇ ಇಸವಿ ಸೆಪ್ಟಂಬರ್ ಗುರ್ರೆ ತಾರೀಖು ಲಾಗಾಯ್ತು, ಡಿಶೆಂಬರ್ 31 ನೇ ತಾರೀಖುವರೆಗೆ ಆಗುವ ನಾಲ್ಕು ತಿಂಗಳ ಪರಿಯಂತ್ರ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸಜಾ ಅನುಭವಿಸುವ ಖೈದಿಗಳ ಉಪಯೋಗಕ್ಕಾಗಿ ಬೇಕಾಗುವ ಜಿನಸಿಯನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡಿಸಿಕೊಳ್ಳಲು ದರಖಾಸ್ತುಗಳು 1919 ನೇ ಇಸವಿ ಆಗಸ್ಟು ಮಾಹೆ 6 ನೇ ತಾರೀಖು ಬುಧವಾರ ಬೆಳಿಗ್ಗೆ 10 ಘಂಟೆವರಿಗೆ ಸದರಿ ಜೈಲ್ ಸೂಪರಿಂಟೆಂಡೆಂಟ್‌ರವರಿಂದ ಅವರ ಆಫೀಸ್‌ನಲ್ಲಿ ತೆಗೆದುಕೊಳ್ಳಲ್ಪಡುತ್ತವೆ. ಈ ವಿಷಯಕ್ಕೆ ಸಂಬಂಧಪಟ್ಟ ತಪ್ಸೀಲನ್ನು 1919 ನೇ ಇಸವಿ ಜೂನ್ ಮಾಹೆ 19 ನೇ ತಾರೀಖಿನ ಮೈಸೂರು ಗೆಜೆಟ್ 6 ನೇ ಭಾಗದ 180 ಮತ್ತು 181 ನೇ ಪುಟಗಳಲ್ಲಿ ಪ್ರಕಟಿಸಲ್ಪಟ್ಟಿರುತ್ತೆ.

Mahomed Obiedulla,
ಸೂಪರಿಂಟೆಂಡೆಂಟ್.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 35

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಲಾದ ಉತ್ಸವಗಳು ನಡೆಯಲು ವಿಶೇಷವಾದೇರ್ಪಾಟನ್ನು ವಿಚಕ್ಷಣೆಯಿಂದ ಮಾಡಿದ್ದರು. ಬ್ರಿಟಿಷರಿಗೂ ಅವರ ಮಿತ್ರಮಂಡಲಿಗೂ ನಿರಂತರವಾದ ಸುಖಸಂಪತ್ತನ್ನು ಕೋರಿ ಬೆಳಿಗ್ಗೆ ಎಲ್ಲಾ ದೇವಸ್ಥಾನಗಳಲ್ಲೂ ಮಸೀದಿಗಳಲ್ಲೂ ಪೂಜೆ ಮತ್ತು ಪ್ರಾರ್ಥನೆಗಳು ನಡೆಸಲ್ಪಟ್ಟುವು. ಸ್ಕೂಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳು ನೂತನ ವಸ್ತ್ರಾಭರಣಗಳನ್ನು ಧರಿಸಿಕೊಂಡು ತಂತಮ್ಮ ಮಾಸ್ಟರುಗಳನ್ನು ಮುಂದಿಟ್ಟುಕೊಂಡು ಸಾಲುಸಾಲಾಗಿ ಬಂದು ಬ್ರಿಟಿಷರ ಜಯಧ್ವಜಪತಾಕೆಗಳಿಗೆ ನಮಸ್ಕಾರಗಳನ್ನು ಮಾಡಿದನಂತರ ಅವರುಗಳಿಗೆ ಹಣ್ಣು ಮಿಠಾಯಿ ಕೊಡಲ್ಪಟ್ಟುವು. ಮಧ್ಯಾಹ್ನದಲ್ಲಿ ಪಬ್ಲಿಕ್ ಆಫೀಸ್ ಮುಂಭಾಗದ ಬೈಲಿನಲ್ಲಿ ಎಲ್ಲಾ ಸ್ಕೂಲುಗಳ ಮಕ್ಕಳುಗಳ ಆಟಪಾಟಗಳು ನಡೆಸಲ್ಪಟ್ಟುವು. ಈ ವಿನೋದವನ್ನು ನೋಡಲು ಊರಿನ ಜನರು ವಿಶೇಷವಾಗಿ ಬಂದಿದ್ದರು. ಆಗ ಡಿ|| ಕಮಿಷನರು ಶಾಂತಿಯ ವಿಚಾರದಲ್ಲಿ ಆಜ್ಞಾದ ಪ್ರಕಟನಪತ್ರಿಕೆಯನ್ನು ಓದಿ ಹೇಳಿದರು. ತರುವಾಯ ಅದೇ ವಿಚಾರವು ಕನ್ನಡದಲ್ಲಿ ಟ್ರಜರಿ ಅ|| ಕಮಿಷನರ್ ಮತ್ತು ಮ್ಯುನ್ಸಿಪಲ್ ಪ್ರೆಸಿಡೆಂಟ್ ಮ|| ಪಿ. ಸುಬ್ಬರಾವ್, ಬಿ. ಎ., ಬಿ. ಎಲ್., ರವರಿಂದ ಓದಿ ಹೇಳಲ್ಪಟ್ಟಿತು. ತರುವಾಯ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು ತ್ರಿವಾರ ಜಯಘೋಷಧ್ವನಿಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀಗುರುಸಿದ್ಧ ವೃಷಭೇಂದ್ರ ಕೃಪಾಪೋಷಿತ ಶ್ರೀಮದ್ವೀರಶೈವ ಸಮಾಜಸುಧಾರಣಸಂಘ, ವಿರಕ್ತಮಠ, ಜಡೆ. ತಾ|| ಸೊರಬ.

ಮೇಲ್ಕಂಡ ಸಂಘವು ಏರ್ಪಟ್ಟು ಈಗ್ಗೆ ೧೧ ತಿಂಗಳುಗಳಾದವು. ಸಂಘದವರ ಸಭೆಯು ತಿಂಗಳಿಗೊಂದುಸಾರೆ ಪ್ರತಿತಿಂಗಳಲ್ಲಿಯೂ ನಮ್ಮ ಈ ಜಡೆ ವಿರಕ್ತಮಠದಲ್ಲಿ ನೆರವೇರಿಸಲ್ಪಡುತ್ತಿರುವುದು. ಈ ತಿಂಗಳಿನ ಸಭೆಯು ಇದೇ ಆಷಾಢ ಶುದ್ಧ ೧೦ ಸೋಮವಾರ ತಾ|| 7-7-19 ನೇ ದಿವಸ ಕೂಡಲ್ಪಟ್ಟಿತ್ತು. ಶ್ರೀಮತ್ ಶಾಂತಪುರದ ಮಠದ ಚರಮೂರ್ತಿಗಳೂ ಮತ್ತೂ ಈ ಪ್ರಾಂತದ ಮುಖ್ಯ ಮುಖ್ಯ ಜನಗಳೂ ಸಭೆಗೆ ಆಗಮಿಸಿದ್ದರು. ಸಭಿಕರ ಕೋರಿಕೆಯಂತೆ ಶ್ರೀ ಚರಮೂರ್ತಿಗಳವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಗಂಗಾಧರಶಾಸ್ತ್ರಿಗಳು ಶಿವಭಕ್ತಿಯ ವಿಷಯವಾಗಿ ರಮ್ಯವಾದ ಭಾಷಣಮಾಡಿದರು. ವಿರಕ್ತಮಠದ ಸರ್ವಾಧಿಕಾರಿಗಳಾದ ವೇ|| ಚನ್ನವೀರಯ್ಯನವರು ಗರ್ಭಾಧಾನಾದಿ ಷೋಡಶ ಕರ್ಮಗಳು ವೀರಶೈವರಿಗೆ ಅತ್ಯವಶ್ಯಕವೆಂಬ ವಿಷಯದಲ್ಲಿಯೂ ಈ ಕರ್ಮಗಳು ಮಧ್ಯೆ ಕೆಲವುಕಾಲ ವಿಧಿವತ್ತಾಗಿ ನಡೆಯದೆ ಕೆಲವು ಕಡೆಗಳಲ್ಲಿ ಬಿಟ್ಟುಹೋಗಿ ಇತ್ತೀಚೆಗೆ ಪ್ರಚಾರದಲ್ಲಿ ಬರುತ್ತಿರುವುದರಿಂದ ಕೆಲವರಿಗೆ ನವೀನವಾಗಿ ಕಂಡುಬಂದರೂ ವಿಧ್ಯುಕ್ತ ಗರ್ಭಾಧಾನಾದಿ ಕರ್ಮಗಳು ಆಚರಣೀಯಗಳೆಂಬ ವಿಷಯದಲ್ಲಿಯೂ ೨ ತಾಸಿನವರೆಗೆ ಸರ್ವರಿಗೂ ಅವಗಾಹನವಾಗುವಂತೆ ಉಪನ್ಯಾಸಮಾಡಿದರು. ಅನಂತರ ಯಾವತ್ತೂ ವೀರಶೈವರ ಪಕ್ಷದಿಂದ ಶುಭೋದಯಕಾರರಮೇಲೆ ಖಟ್ಲೆ ನಡೆಯಿಸುತ್ತಲಿರುವ ಮ|| ರಾ|| ಸಿದ್ಧರಾಮಪ್ಪನವರು ಪಾವಟೆ, ವಕೀಲ್, ಹುಬ್ಬಳ್ಳಿ ಇವರಿಗೆ ಜಯಪ್ರದವಾಗುವಂತೆ ಜಗದೀಶ್ವರನು ಕರುಣಿಸಲೆಂದು ಪ್ರಾರ್ಥಿಸಿ ಸರ್ವರೂ ಮೂರುಸಾರಿ ಜಯಘೋಷಮಾಡಿ ಶುಭೋದಯಪತ್ರಿಕೆಗೆ ಏಕಾಭಿಪ್ರಾಯದಿಂದ ಬಹಿಷ್ಕಾರ ಹಾಕಿದರು. ಅನಂತರ ಮಾಹೇಶ್ವರ ವಿದ್ಯಾರ್ಥಿಗಳಿಂದ ವೇದೋಕ್ತ ಪುಷ್ಪಾಂಜಲಿ ಪಠನಪೂರ್ವಕವಾಗಿ ಗುರುಗಳ ಮಂಗಳಾಚರಣೆಯು ಮಾಡಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಪ್ರೇಕ್ಷಕ.

ಕೊರಟಗೆರೆ ಸ|| ತಾ|| ತೀತದ ಗ್ರಾಮ.

ಈ ಗ್ರಾಮವು ಪೂರ್ವದಲ್ಲಿ ಒಂದು ಸಣ್ಣ ಹಳ್ಳಿಯಾಗಿದ್ದು ದಿನೇದಿನೇ ಪ್ರಜ್ವಲಿಸಿ ಈಗ ಸುಮಾರು 150 ಮನೆಗಳುಳ್ಳ ಒಂದು ಗ್ರಾಮವಾಗಿದೆ. ಈಗ್ಗೆ 15.20 ವರ್ಷಗಳ ಕೆಳಗೆ ಈ ಗ್ರಾಮದಲ್ಲಿ ವಿದ್ಯೆಯೆಂಬ ಗಂಧವೇ ಇರಲಿಲ್ಲ. ಇದನ್ನೆಲ್ಲಾ ನೋಡಿದ ಸಾ|| ಚಿಕ್ಕರಂಗಣ್ಣನವರು ಧರ್ಮಾರ್ಥವಾಗಿ ಒಂದು ಸ್ಕೂಲು ಮನೆಯನ್ನು ಕಟ್ಟಿಸಿಕೊಟ್ಟು ವಿದ್ಯಾಭ್ಯಾಸ ನಡೆಯಲೇರ್ಪಡಿಸಿದರು. ವಿದ್ಯಾಭ್ಯಾಸವು ಕಾಲಕ್ರಮೇಣ ಅಭಿವೃದ್ಧಿಯಾಗುತ್ತಾ ಬಂದು ಪ್ರಾರಂಭದಲ್ಲಿ 15 ಹುಡುಗರಿದ್ದದ್ದು 90 ಕ್ಕೆ ಹೆಚ್ಚಿರುವುದಲ್ಲದೆ ಇಬ್ಬರು ಉಪಾಧ್ಯಾಯರಾದರು. ಮತ್ತು ಗ್ರಾಮಸ್ಥರ ಉದಾರವಾದ ಸಹಾಯದಿಂದಲೂ ಸರ್ಕಾರದವರು ಕೊಟ್ಟ ನೆರವಿನಿಂದಲೂ ಸುಮಾರು ಮೂರುಸಾವಿರ ರೂಪಾಯಿ ಬಾಳತಕ್ಕ ಹೊಸ ಸ್ಕೂಲ್ ಕಟ್ಟಡವೂ ಕೂಡ ತಯಾರಾಯ್ತು. ಮೇಲ್ಕಂಡ ಚಿಕ್ಕ ರಂಗಣ್ಣನವರು ಕಟ್ಟಿಸಿರುವ ಕಟ್ಟಡದಲ್ಲಿ ಸುಮಾರು ಮೂವತ್ತು ಮಂದಿ ವಿದ್ಯಾರ್ಥಿನಿಯರೂ, ಇಬ್ಬರು ಮಾಸ್ಟರೂ ಈ ರೀತಿಯಾಗಿ ಉತ್ತಮರೀತಿಯಾಗಿ ವಿದ್ಯಾಭ್ಯಾಸ ನಡೆಯುತ್ತಿರುವುದನ್ನು ನಮ್ಮ ಕೊರಟಗೆರೆ ಸ|| ತಾ|| ಡೆಪ್ಟೀ ಅಮಲ್ದಾರ್ ಸಾಹೇಬರವರು ಪ್ರತ್ಯಕ್ಷವಾಗಿ ಕಂಡು, ಈ ಗ್ರಾಮದ ದೊಡ್ಡಮನುಷ್ಯರುಗಳನ್ನು ಸಭೆ ಸೇರಿಸಿ ಆಂಗ್ಲ (ಇಂಗ್ಲೀಷ್) ವಿದ್ಯಾಭ್ಯಾಸವು ಈ ನವನಾಗರಿಕ ಕಾಲಕ್ಕೆ ಅತಿ ಮುಖ್ಯವಾದದ್ದೆಂತಲೂ ನೀವುಗಳೆಲ್ಲಾ ಚಂದಾಹಾಕಿ ವರ್ಷ 1 ಕ್ಕೆ 120 ರೂ. ಗಳಂತೆ ಸರ್ಕಾರಕ್ಕೆ ಪಾವತಿಮಾಡಿ ನಿಮ್ಮ ಗ್ರಾಮದಲ್ಲಿ ಒಂದು ಇಂಗ್ಲೀಷ್ ಗ್ರಾಂಟ್ ಸ್ಕೂಲನ್ನು ಓಪನ್ ಮಾಡಿಸಬೇಕೆಂತ ಉಪನ್ಯಾಸದ ಮೂಲಕ ತಿಳಿಸಿದ್ದನ್ನು ಗ್ರಾಮದ ಮಹನೀಯರುಗಳು ವಿಚಾರಕ್ಕೆ ತಂದು ಸಾಹುಕಾರ್ ರಾಮಣ್ಣನವರು 200 ರೂಪಾಯಿ, ಕೋಡಿ ಮಲ್ಲೇಗೌಡರು 150, ಬೊಮ್ಮಣ್ಣನವರು 100, ಚಿಕ್ಕರಂಗಣ್ಣನವರು 100, ಜವಳಿ ಅಂಗಡಿ ಉಗ್ರಪ್ಪನವರು 100, ಜವಳಿ ಅಂಗಡಿ ರಾಮಯ್ಯನವರು 100, ವೀರೇಗೌಡರು 100, ಯಜಮಾನ್ ಭದ್ರಪ್ಪನವರು 50, ಕಂ|| ಶಾವಲಪ್ಪನವರು 50, ಭದ್ರಣ್ಣನವರು 25, ಚಿಕ್ಕವೀರಣ್ಣನವರು 25, ಉ|| ವೀರಭದ್ರಯ್ಯನವರು 25, ತಿಮ್ಮಪ್ಪನವರು 20, ಭಜಂತ್ರಿ ಪಾಪಣ್ಣನವರು 25 ರೂಪಾಯಿ. ಈ ರೀತಿ ಇನ್ನೂ ಅನೇಕ ಗ್ರಾಮದ ಮಹನೀಯರುಗಳು ಚಂದಾಹಾಕಿ 1330 ರೂ. ಮೂಲಧನವನ್ನಾಗಿ ಶೇಖರಿಸಿ, ಆ ಹಣವನ್ನು ಬಡ್ಡಿಗೆ ಕೊಟ್ಟು 120 ರೂ. ಗ್ರಾಂಟನ್ನು ಸರ್ಕಾರಕ್ಕೆ ಪಾವತಿಮಾಡಿ ಬಾಲಕರುಗಳಿಗೆ ಫೀಜಿಲ್ಲದಂತೆ ವ್ಯಾಸಂಗ ನಡೆಯಲೇರ್ಪಡಿಸಿರುವುದು ತೃಪ್ತಿಕರವಾದ ವಿಷಯವಾಗಿದೆ. ಅಲ್ಲದೆ ತಾ|| 17-7-19 ನೆ ಗುರುವಾರ ಡಿಟೊ ಇಂಗ್ಲೀಷ್ ಸ್ಕೂಲಿನ ಪ್ರಾರಂಭಮಹೋತ್ಸವವು ಹೊಸ ಸ್ಕೂಲ್ ಕಟ್ಟಡದಲ್ಲಿ ಬಹು ವೈಭವದಿಂದ ಜರುಗಿತು. ಸಭೆಯವರು ಅನುಮೋದಿಸಿದಂತೆ ಶಾ|| ಕೋಡಿಮಲ್ಲೇಗೌಡರವರೇ ಅಗ್ರಾಸನಾಧಿಪತಿಗಳಾಗಿದ್ದರು. ಟಾ|| ಸ್ಕೂಲ್ ಹೆಡ್ಮಾಸ್ಟರು ಹೆಚ್. ರುದ್ರಯ್ಯನವರು ಬ್ರಿಟಿಷ್ಷರಿಂದ ನಮಗುಂಟಾಗಿರುವ ಪ್ರಯೋಜನಗಳ ವಿಷಯವಾಗಿಯೂ ಅ|| ಮಾ|| ಸೂರ್ಯನಾರಾಯಣಶಾಸ್ತ್ರಿಗಳು ಆಂಗ್ಲವಿದ್ಯಾಭ್ಯಾಸದ ಅವಶ್ಯಕತೆಯ ವಿಷಯದಲ್ಲಿಯೂ, ಜವಳಿ ಅಂಗಡಿ ಟಿ. ವಿ. ಮುತ್ತಯ್ಯನವರು ಲೈಬ್ರೆರಿ, ರೀಡಿಂಗ್‌ರೂಂ ಇವುಗಳ ವಿಷಯದಲ್ಲಿಯೂ ಕಮಿಟಿ ಮೆಂಬರು ಉಗ್ರಪ್ಪನವರು ಸ್ಕೂಲಿನ ಸ್ಥಿತಿಗತಿಗಳ ವಿಚಾರದಲ್ಲಿಯೂ ಸರ್ವರಿಗೂ ಹೃದಯಂಗಮವಾಗುವಂತೆ ಉಪನ್ಯಸಿಸಿದರು. ಬಾಲಕಿಯರಿಂದ ಚಕ್ರವರ್ತಿಯವರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ ಅಧ್ಯಕ್ಷರವರ ಕೊನೆಯ ಭಾಷಣವೂ ನಡೆದ ನಂತರ ನೆರೆದಿದ್ದ ಸಭಿಕರಿಗೆಲ್ಲಾ ಸಕ್ಕರೆ, ಗಂಧ, ಪುಷ್ಪ ತಾಂಬೂಲಾದಿಗಳ ವಿನಿಯೋಗದಿಂದ ಸಭೆಯನ್ನು ಬರಖಾಸ್ತು ಮಾಡಿದರು.

ಪ್ರತ್ಯಕ್ಷದರ್ಶಿ.

೧ ವರುಷಕ್ಕೆ ಚಂದಾ ರೂ. ೨-೮-೦.

ವ್ಯಾಪಾರನಿರ್ಣಯಪ್ರಕಾಶಿಕೆ ಎಂಬ ಮಾಸಪತ್ರಿಕಾ.

ಇದು ವರ್ತಕರಿಗೂ, ವ್ಯವಸಾಯಗಾರರಿಗೂ ತುಂಬಾ ಅನುಕೂಲವಾಗಿರುವುದು. ಈ ಮಾಸಪತ್ರಿಕೆಯಲ್ಲಿ ಹತ್ತಿ, ಅರಳೆ, ಅಡಿಕೆ, ಬೆಲ್ಲ ಮೊದಲಾದ ಯಾವತ್ತು ಪದಾರ್ಥಗಳಿಗೂ ಎಲ್ಲಾ ಧಾನ್ಯಗಳಿಗೂ ಪ್ರತಿ ಮಾಸದಲ್ಲಿ ಆಗುವ ತೇಜಿಮಂದಿ ವಿಷಯವನ್ನು ವಿಶದವಾಗಿ ಬರೆಯುತ್ತದೆ. ಪದಾರ್ಥಗಳ ದಾಸ್ತಾ ಮಾಡುವ ಕಾಲ ಮಾರಾಟ ಮಾಡುವ ಕಾಲವನ್ನು ಚನ್ನಾಗಿ ಬರೆಯುತ್ತೆ. ಚಂದಾದಾರರಿಗೆ ಪ್ರತಿ ಮಾಸದಲ್ಲಿ ಉಂಟಾಗುವ ಲಾಭ, ಲುಕ್ಸಾನು, ದೇಹಪೀಡೆ, ಪರಿಹಾರಕ್ರಮ ಮೊದಲಾದ ಫಲಗಳನ್ನು ವರ್ತಕರಿಗೂ ವ್ಯವಸಾಯಗಾರರಿಗೂ ಬಹಳ ಉಪಯೋಗಕರವಾದ ನೂತನ ವಿಷಯಗಳನ್ನು ಬರೆಯುತ್ತೆ. ಮೊದಲು ಪ್ರತಿಮಾಸದ ತೇಜಿಮಂದಿ ನಿರ್ಣಯದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ.

ವಿಳಾಸ:—ಎಡಿಟರ್ ವ್ಯಾಪಾರನಿರ್ಣಯ ಪ್ರಕಾಶಿಕೆ,
1 ಹರಪನಹಳ್ಳಿ ಜಿಲ್ಲಾ ಬಳ್ಳಾರಿ.

„ ವೀರಶೈವರಿಗೆ ಸಂಗ್ರಾಹ್ಯವಾದ ಫೋಟೊ ”

ಶ್ರೀ ಶಿವಯೋಗಿಗಳ ಸುಷು:—ಭಾಗ್ಯಶಾಲಿ ಜನರು ಹಣವು ಖರ್ಚು ಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಿಳೂರ, ಹಾನಗಲ್ಲ, ಹಾರಕೇರಿ, ಬಿದರೀ, ನಿಡಸೋಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೊ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೪ × ೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೊ ೧೮ × ೧೨ ಸೈಜ ಬಣ್ಣದ ಚಿತ್ರದ ಕ್ರಯ ೧ಪ್ರತಿಗೆ ರೂ. ೧. ಸಾದಾ ೮ ಆ.

ಹೊಸ ಫೋಟೊ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನಚಕ್ರ ಪಡೆಕೊಂಡ ಅತ್ಯಂತ ಸುಂದರವಾದ ಫೋಟೊ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಸಂಗ್ರಹಕ್ಕೇ ಯೋಗ್ಯವಾದ ಚಿತ್ತಾನಂದದಾಯಕ ಫೋಟೊ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ವೀರಭದ್ರದೇವರು:—ವೀರಶ್ರೀಯಿಂದ ತುಂಬಿದ ತೇಜಃಪುಂಜವಾದ ಫೋಟೊ ಕ್ರಯ ಫುಲ್ಲಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಕಾಶಿಕ್ಷೇತ್ರದರ್ಶನ:—ಇದರಲ್ಲಿ ಶಿವಚಿನ್ಹಾಂಕಿತ ನಕ್ಷೆದಲ್ಲಿ ೧ ಶ್ರೀ ವಿಶ್ವನಾಥ, ಶ್ರೀ ಅನ್ನಪೂರ್ಣಾದೇವಿ, ಶ್ರೀ ಸಾಕ್ಷಿವಿನಾಯಕ, ಶ್ರೀ ಕಾಲಭೈರವ ಇವೆ ಮೊದಲಾದ ಮುಖ್ಯ ೧೫ ದೇವತಾ ಫೋಟೊ ಇದ್ದ ಮೂಲಕ ಶ್ರೀ ಕ್ಷೇತ್ರ ಕಾಶೀಯ ನಿತ್ಯದರ್ಶನ ನಿತ್ಯ ಆಗುವವು. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ. ೧೪ × ೧೦ ಸೈಜದ ಹಾಳಿನ ಚಿತ್ರದ ಕ್ರಯ ೪ ಆಣೆ.

ಶ್ರೀ ಗೌರಿಗಜಾನನ ವಿನೋದ:—ಅತ್ಯಂತ ಚಿತ್ತಾಕರ್ಷಕವಾದ ಪಾರ್ವತಿ ಗಣಪತಿಯರ ಮೋಹಕ ಲೀಲಾದ ಫೋಟೊ ಕ್ರಯ ಕ್ಯಾಬಿನೆಟ ೮ ಆಣೆ.

ಶ್ರೀ ವೀರಶೈವ ರಾಜಸಮೂಹ:—ಇದರಲ್ಲಿ ಕೊಡುಗದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ವಡಿಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸದ್ಯದ ಪುಂಗನೂರ ಮತ್ತು ಗೋವಾಪ್ರಾಂತದ ಬಾಂದೆವಾಡಿ, ಸ್ಕೊಂದಾದ ಅರಸರ ಫೋಟೊ ೯ ಇರುತ್ತಾವೆ. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಫೋಟೋಲಾಕೇಟ್ಸ.

ಸದ್ಗೃಹಸ್ಥರು ಗಡಿಯಾರ ಸರಗಳಿಗೆ ಹಚ್ಚಿ ಉಪಯೋಗಿಸಲಿಕ್ಕೆ ಅತ್ಯಂತ ಯೋಗ್ಯವಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿಗಳ ಫೋಟೊ ಕೂಡ್ರಿಸಿದ ಅತಿ ಫ್ಯಾನ್ಸಿವಾದ ಬೆಳ್ಳಿ ಲಾಕೆಟಗಳೂ ಸಿಗುತ್ತವೆ. ಕ್ರಯ ಬೆಳ್ಳಿವು ಅರ್ಧ ರೂಪಾಯಿ ಆಕಾರವೂ ನಕ್ಷೆವೂ ರೂ. ೧—೧೪—೦, ಬೆಳ್ಳಿವೂ ಪಾವಲಿ ಆಕಾರ ನಕ್ಷೆವೂ ರೂ. ೧—೧೨—೦, ಬೆಳ್ಳಿವು ಪಾವಲಿ ಆಕಾರ ಸಾದಾ ಫ್ಯಾನ್ಸಿ ರೂ. ೧—೮—೦, ರೋಲಗೋಲ್ಡ ಭಂಗಾರವೂ ರೂಪಾಯಿ ಆಕಾರವೂ ಸಭೇದ ಸನ್ಮಾನನೀಯ ಸಭಾಸದರಿಗೆ ಮತ್ತು ಸಭೇದ ವ್ಯವಸ್ಥಾಪಕರಾದ ಹ್ಯಾಂಟ ಅಂಗಿಗೆ ಕೋಟಿನಮೇಲೆ ಹಚ್ಚುವುದಕ್ಕೆ ಮೆಡಲದಂತೆ ಬಹು ಶೋಭಾಯಮಾನ ಇರುತ್ತವೆ. ಕ್ರಯ ೧ ಕ್ಕೆ ರೂ. ೧—೬—೦, ೧—೮—೦ ಆಣೆ.

ಫೋಟೊ ಬ್ರೂಚಪಿನ:—ಇವು ಕೋಟಿನ ಕಾಲರಮೇಲೆ ಹಚ್ಚುವವೂ ಇದ್ದು, ಇವರಲ್ಲಿ ಬೇಕಾದ ದೇವರ, ಅಥವಾ ಸತ್ಪುರುಷರವೂ ೧ ಫೋಟೊ ಕೂಡ್ರಿಸಿ ಸಿಗುತ್ತದೆ. ಕ್ರಯ ಗಿಲ್ಟಬ್ರೂಚವು ೧ಕ್ಕೆ ೬ಆಣೆ, ೮ ಆ.

ಇವುಗಳ ಹೊರ್ತ ಶ್ರೀ ಸೊಲ್ಲಾಪುರ ಸಿದ್ಧರಾಮೇಶ್ವರ, ಹಂಪೆ ವಿರುಪಾಕ್ಷೇಶ್ವರ, ಕಲಬುರ್ಗ ಶರಣಬಸವೇಶ್ವರ, ಗೋಕರ್ಣದ ಮಹಾಬಲೇಶ್ವರ, ಶ್ರೀ ಭ್ರಮರಾಂಬಿಕಾದೇವಿ, ಶ್ರೀ ಕಾಶಿ ಅನ್ನಪೂರ್ಣಾ ಮುಂತಾದ ದೇವರವೂ ಮತ್ತು ಸಮಾಜಸೇವಕ್ಕೆ ಕಂಕಣಬದ್ಧರಾದ ಪ್ರಸಿದ್ಧ ಶ್ರೀಮನ್ನಿರಂಜನ ದಾವಣಗೇರಿ ಮೃತ್ಯುಂಜಯ ಶಿವಯೋಗಿ, ಶ್ರೀ ಗುರುಮಠಕಲ್ಲ ಶಾಂತವೀರಸ್ವಾಮಿ, ಮತ್ತು ೬೪ ನೇ ಪುರಾತನರೆಂಬ ಶ್ರೀ|| ಮಹಾತ್ಮಾ ಲಿಂಗಪ್ಪನವರು ಸಿರಸಂಗಿ ದೇಶಾಯಿ, ರಾ|| ಬ|| ರುದ್ರಗವುಡಾ ಅಂಟಾಳ, ವಗ್ಗೆರೆ ಫೋಟೊಗಳೂ ಸಿಗುತ್ತವೆ. ಕ್ರಯ ಫುಲ್ಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಊರೂರಿಗೆ ಫೋಟೊ ಮತ್ತು ಲಾಕೇಟ ಮಾರಾಟ ಮಾಡುವ ಏಜಂಟರು ಬೇಕು. ಅಭಿಲಾಷೆವುಳ್ಳವರು ತ್ವರೆಪಟ್ಟು ೬ ಪೈ. ಟಿಕೀಟ ಕಳುಹಿಸಿ ಏಜಂಟ ನಿಯಮ ತರಿಸಿಕೊಳ್ಳಿರಿ.

ಗಂಗಪ್ಪಾ ಬೇರಗೆ ಮಾಲಕ,
1 ದಿ ಶಾರದಾ ಫೋಟೊ ಕಂಪನಿ, ಸೋಲ್ಲಾಪುರ ಸಿಟಿ.

ಇನ್ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 3

ತಲೆನೋವು, ಕಜ್ಜಿ ತುರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ. ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು.

ಸುಸಮಯ ! ಜಾಗ್ರತೆಮಾಡಿ. ಸುಸಮಯ !!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷ್ನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ. ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ.)

7 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 34

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೯ ನೇಯ ಇಸವಿ ಜುಲೈ ತಾ|| ೨೭ ರಿಂದ ೧೯೧೯ ನೇಯ ಆಗಸ್ಟ್ ತಾ|| ೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೇಯ ಸಿದ್ಧಾರ್ಥಿನಾಮ ಸಂವತ್ಸರದ ಆಷಾಢ ಬ|| ಅಮಾವಾಸ್ಯೆಯಿಂದ ಶ್ರಾವಣ ಶು|| ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ಮಾಸ
27	[1] ಭಾನು	ಅಮಾ	10-41	ಪುಷ್ಯ	39-3	12
28	ಸೋಮ	ಪಾಡ್ಯ	7-40	ಆಶ್ಲೇ	38-47	13
29	[2] ಮಂಗಳ	ಬಿದಿಗೆ	5-47	ಮಖಾ	39-2	14
30	[3] ಬುಧ	ತದಿಗೆ	5-5	ಹುಬ್ಬ	41-8	15
31	ಗುರು	ಚೌತಿ	5-40	ಉತ್ತ	44-10	16
1	[4] ಶುಕ್ರ	ಪಂಚ	7-30	ಹಸ್ತ	48-24	17
2	[5] ಶನಿ	ಷಷ್ಠಿ	10-3	ಚಿತ್ತ	53-41	18

(1) ಬುಧವಕ್ರಾರಂಭಃ. (2) ಮಂಗಳಗೌರೀವ್ರತಂ. (3) ಸಂಪದ್ಗೌರೀವ್ರತಂ, ನಾಗರಚತುರ್ಥಿ. (4) ಗರುಡಪಂಚಮಿ, ಚಿತ್ರನೇಮಿವ್ರತಂ, ಆದಿಶುಕ್ರವಾರ. (5) ಶ್ರಾವಣಶನಿವಾರ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೇಯ ಇಸವಿ ಆಗಸ್ಟ್ ತಾರೀಖು ೩ ನೇಯ ಭಾನುವಾರ. (ಸಂಚಿಕೆ ೩೧

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹೊಸಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
26 ಇರುಳಪ್ಪನಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೩೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಪಂಚವರ್ಣ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

43 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,

ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
26 ಇರುಳಪ್ಪನ ಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪನಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
33 ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

GOVERNMENT OF HIS HIGHNESS THE MAHARAJA OF MYSORE.

FINANCIAL SECRETARIAT.

NOTIFICATION

No. Fl. 708/G. F. 264—18 Dated 30-7-1919.

The following terms are offered to holders of the Mysore State Loan of 1906.

1. All promissory notes of the Mysore State Loan of 1906 now carrying interest at 4% per annum, will at the option of the holder be converted into new promissory notes of an equal amount carrying interest at 5½% with effect from 1st October 1919.

2. The new promissory notes will be repayable at par after 25 years from 1st October 1919. Government howoever reserve the right of repaying at par at any time after 10 years after re-issue subject to three months' previous notice boing given.

3. Those who desire to avail themselves of the privilege of conversion should tender their notes for conversion not later than the 30th September 1919 when interest will be paid on them at 4% up to the 30th September 1919 inclusive and new 5½% notes bearing interest from 1st October 1919 will be issued in lieu of them. The comptroller will issue subsidiary instructions for the guidance of holders of paper and of Treasuries as regards these transactions. " By ordor "

(Sd) M. N. KRISHNA RAO,
Financial Secretary to Government.

ಬೆಂಗಳೂರು ಸೆಂಟ್ರಲ್‌ಜೈಲ್.

ಸನ್ 1919 ನೇ ಇಸವಿ ಸೆಪ್ಟಂಬರ್ ಗುರ್ರೆ ತಾರೀಖು ಲಾಗಾಯ್ತು, ಡಿಸೆಂಬರ್ 31 ನೇ ತಾರೀಖುವರೆಗೆ ಆಗುವ ನಾಲ್ಕು ತಿಂಗಳ ಪರಿಯಂತ್ರ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸಜಾ ಅನುಭವಿಸುವ ಖೈದಿಗಳ ಉಪಯೋಗಕ್ಕಾಗಿ ಬೇಕಾಗುವ ಜಿನಸಿಯನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡಿಸಿಕೊಳ್ಳಲು ದರಖಾಸ್ತುಗಳು 1919 ನೇ ಇಸವಿ ಆಗಸ್ಟು ಮಾಹೆ 6 ನೇ ತಾರೀಖು ಬುಧವಾರ ಬೆಳಿಗ್ಗೆ 10 ಘಂಟೆವರೆಗೆ ಸದರಿ ಜೈಲ್ ಸೂಪರಿಂಟೆಂಡೆಂಟ್‌ರವರಿಂದ ಅವರ ಆಫೀಸ್‌ನಲ್ಲಿ ತೆಗೆದುಕೊಳ್ಳಲ್ಪಡುತ್ತವೆ. ಈ ವಿಷಯಕ್ಕೆ ಸಂಬಂಧಪಟ್ಟ ತಪ್ಸೀಲನ್ನು 1919 ನೇ ಇಸವಿ ಜೂನ್ ಮಾಹೆ 19 ನೇ ತಾರೀಖಿನ ಮೈಸೂರು ಗೆಜೆಟ್ 6 ನೇ ಭಾಗದ 180 ಮತ್ತು 181 ನೇ ಪುಟಗಳಲ್ಲಿ ಪ್ರಕಟಿಸಲ್ಪಟ್ಟಿರುತ್ತೆ.

Mahomed Obiedulla,
ಸೂಪರಿಂಟೆಂಡೆಂಟ್.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 35

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಮೈಸೂರು ಸ್ಟಾರ್.

೧೯೧೯ ನೆಯ ಇಸವಿ ಆಗಸ್ಟ್ ತಾ|| ೩ ನೆಯ ಭಾನುವಾರ.

ಇನ್ಫ್ಲುಯೆಂಜಾ.

ಕಳೆದ ವರ್ಷ ನಮ್ಮ ಭರತಖಂಡದಲ್ಲಿ ವಿಪರೀತವಾಗಿ ಹಾವಳಿಮಾಡಿ ೬೦ ಲಕ್ಷ ಜನರನ್ನು ಆಹುತಿ ತೆಗೆದುಕೊಂಡ ಇನ್ಫ್ಲುಯೆಂಜಾ ವ್ಯಾಧಿಯು ಮರಳಿ ಈ ವರ್ಷವೂ ತಲೆಯಿಕ್ಕಿರುವಂತೆ ಕಾಣುತ್ತಿದೆ. ಬೊಂಬಾಯಿ ಮದ್ರಾಸು ಮೊದಲಾದ ಪಟ್ಟಣಗಳಲ್ಲಿ ಆಗಲೇ ಹಾವಳಿ ಮಾಡುತ್ತಿದೆ. ಆ ಪಟ್ಟಣಗಳ ಪುರಪಾಲಕ ಸಂಘದವರು ಅದರ ನಿರೋಧನೆಗೂ ವ್ಯಾಧಿಗ್ರಸ್ತರ ಉಪಚಾರ ಚಿಕಿತ್ಸಾದಿಗಳಿಗೂ ತಕ್ಕ ಪ್ರಯತ್ನಗಳನ್ನು ಮಾಡುತ್ತಿರುವುದಲ್ಲದೆ ಪ್ರಜೆಗಳು ಈ ಕಾಲದಲ್ಲಿ ರೋಗದ ಬಾಯಿಗೆ ತುತ್ತಾಗದಿರುವಂತೆ ಅನುಸರಿಸಬೇಕಾದ ಕ್ರಮಗಳನ್ನು ತಿಳಿಯಪಡಿಸಿಕೊಡುತ್ತಿದ್ದಾರೆ. ಭರತಖಂಡದ ಸರ್ಕಾರದವರು ಸಹ ಈ ಸಂಬಂಧವಾಗಿ ತಕ್ಕ ಪ್ರಕಟನೆಯನ್ನು ಮುಂದಾಗಿಯೇ ಮಾಡಿರುತ್ತಾರೆ. ನಮ್ಮ ಮೈಸೂರು ಸರ್ಕಾರದವರು ಸಹ ತಮ್ಮ ಪ್ರಜೆಗಳ ಹಿತಕ್ಕಾಗಿ ಎಚ್ಚರಿಕೆಯನ್ನು ಕೊಡುವ ಪ್ರಕಟನವನ್ನು ಮಾಡಿದ್ದಾರೆ.

ಕಳೆದ ವರ್ಷದಲ್ಲಿ ಈ ರೋಗವು ವ್ಯಾಪಿಸಿದ್ದಾಗಣ ಸ್ಥಿತಿಗತಿಗಳನ್ನು ನೆನಸಿಕೊಂಡರೆ ಸರ್ವರಿಗೂ ಎದೆಯು ಬಿರಿದುಹೋಗುತ್ತದೆ. ಪ್ಲೇಗಿಗಿಂತಲೂ ಈ ರೋಗವು ಅತ್ಯಂತ ಭಯಂಕರವೂ ಶೀಘ್ರವ್ಯಾಪಿಯೂ ಆಗಿರುವುದೆಂಬುದು ಸರ್ವರಿಗೂ ಅನುಭವವಿದಿತವಾಗಿದೆ. ಆದುಕಾರಣ ಇದನ್ನು ಯಾರೂ ಉಪೇಕ್ಷಿಸತಕ್ಕದ್ದಲ್ಲ. ದೈವವು ಮಾಡಿದಂತಾಗಲಿ ಎಂದು ಏನೊಂದೂ ಮುಂಜಾಗರೂಕತೆಯನ್ನು ತೆಗೆದುಕೊಳ್ಳದಿರುವುದು ಆತ್ಮಹತ್ಯೆಗೆ ಸಮಾನವಾದ ಪಾಪವಾಗುತ್ತದೆ. ಆದುಕಾರಣ ಸರ್ವರೂ ಎಚ್ಚರುಗೊಂಡು ಈ ವಿಷಯದಲ್ಲಿ ನಮ್ಮಗಳ ಹಿತಕ್ಕಾಗಿ ಸರ್ಕಾರದವರೂ ಅನುಭವಸ್ಥರಾದ ವೈದ್ಯರುಗಳೂ ಯಾವ ಯಾವ ಸೂಚನೆಗಳನ್ನು ಕೊಡುತ್ತಾರೋ ಅವನ್ನು ಅನುಸರಿಸಿ ನಡೆಯುವುದು ಕರ್ತವ್ಯವಾಗಿರುತ್ತದೆ. ನಮ್ಮ ಮೈಸೂರು ದೇಶದಲ್ಲೂ ಈಗಾಗಲೇ ಅಲ್ಲಲ್ಲಿ ರೋಗವು ತಲೆಹಾಕಿರುತ್ತದೆ. ಆದುಕಾರಣ ಎಲ್ಲರೂ ಎಚ್ಚರುಗೊಂಡಿರಬೇಕು.

ರೋಗಭಯವಿರುವ ಕಾಲದಲ್ಲಿ ಜನರು ವರ್ತಿಸಬೇಕಾದ ಕ್ರಮಗಳೇನೆಂದರೆ—ಇದು ಸಾಂಕ್ರಾಮಿಕ ರೋಗವಾದುದರಿಂದ ಇಂಥ ಕಾಲದಲ್ಲಿ ಬಹುಜನರು ಗುಂಪುಕೂಡುವ ನಾಟಕಾಲಯ ಮೊದಲಾದುವುಗಳಲ್ಲಿ ಸೇರಕೂಡದು. ನಿದ್ರಾಭಂಗವನ್ನೂ ಅತ್ಯಾಹಾರ ದುಷ್ಟಾಹಾರಸೇವನೆಗಳನ್ನೂ ಮಾಡಕೂಡದು. ಬಡತನದಿಂದ ಸ್ನಾನಪಾನಾದಿ ಶುದ್ಧಿಯಿಲ್ಲದವರನ್ನು ಈ ರೋಗವು ಬೇಗನೆ ಆಕ್ರಮಿಸುವುದಾದ ಕಾರಣ, ದೇಹವನ್ನೂ ಬಟ್ಟೆಬರೆಗಳನ್ನೂ ಚೊಕ್ಕಟವಾಗಿಟ್ಟುಕೊಂಡು, ತಂಗಳು ಮೊದಲಾದುವನ್ನು ತಿನ್ನದೆ, ಬಿಸಿಯಾಗಿಯೂ ಶುಚಿಯಾಗಿಯೂ ಇರುವ ಆಹಾರವನ್ನು ಮಿತವಾಗಿ ಸೇವಿಸುತ್ತಿರಬೇಕು. ಶೀತವಿಲ್ಲದೆಯೂ ಗಾಳಿಬೆಳಕಿಗೆ ಚೆನ್ನಾಗಿ ಅವಕಾಶವಿರುವುದಾಗಿಯೂ ಇರತಕ್ಕ ಮನೆಗಳಲ್ಲಿ ವಾಸಮಾಡಬೇಕು. ಪ್ರತಿದಿನವೂ ಶುದ್ಧವಾದ ಗಾಳಿಯಿರುವ ಊರಹೊರಗಣ ಬಯಲುಗಳಲ್ಲಿ ಸ್ವಲ್ಪಕಾಲ ವ್ಯಾಯಾಮವನ್ನು ಮಾಡುತ್ತಿರಬೇಕು. ದೇಹವನ್ನು ಚಳಿಗಾಳಿಗಳಿಗೆ ಬಿಡದೆ ಬೆಚ್ಚಗಿಟ್ಟುಕೊಳ್ಳಬೇಕು. ರೋಗ ಸೋಂಕಿ ನರಳುತ್ತಿರುವವರ ಮೂಗು ಬಾಯಿಗಳಿಂದ ಆಚೆಗೆ ಹೊರಡುತ್ತಿರುವ ಉಸುರಿನ ಜತೆಯಲ್ಲಿ ಈ ರೋಗದ ಸೂಕ್ಷ್ಮಬೀಜಗಳು ಹೊರಹೊರಡುತ್ತಿರುವುದರಿಂದ, ಆ ರೋಗಿಗಳು ಸೀನುವಾಗಲೂ ಕೆಮ್ಮುವಾಗಲೂ ಇತರರು ಅವರಿಗೆ ಅಭಿಮುಖವಾಗಿ ಸಮೀಪದಲ್ಲಿ ನಿಂತೂ ಕುಂತೂ ಇರಬಾರದು. ಆ ರೋಗಾಣುಗಳು ಉಚ್ಛ್ವಾಸಮಾರ್ಗವಾಗಿ ಇತರರ ದೇಹದೊಳಕ್ಕೂ ಸೇರಿ ಕೂಡಲೇ ಅಸ್ವಸ್ಥಗೊಳಿಸುವುವು. ಆದುಕಾರಣ ರೋಗಿಯ ಬಳಿಯಲ್ಲಿರಬೇಕಾದವರು ಅತಿ ಜಾಗರೂಕರಾಗಿ ಬಹುಶಃ 10-20 ಗಜಗಳ ದೂರದಲ್ಲಾದರೂ ಇರಬೇಕು. ಹಾಗೆ ಮಾಡದೆ ಮನೆಯವರೆಲ್ಲಾ ರೋಗಿಯನ್ನು ಬಳಸಿ ಸೇರಿಕೊಳ್ಳುವುದರಿಂದಲೇ ಒಂದು ಮನೆಯಲ್ಲಿ ಸರ್ವರೂ ಏಕಕಾಲದಲ್ಲಿ ರೋಗಪೀಡಿತರಾಗಿ ಮಲಗಿಕೊಳ್ಳುವರು. ಆರೋಗ್ಯಸೂತ್ರಗಳಿಗನುಸಾರವಾಗಿ ಆಹಾರಾದಿ ನಿಯಮಗಳನ್ನೂ ವ್ಯಾಯಾಮಗಳನ್ನೂ ಇಟ್ಟುಕೊಂಡಿರತಕ್ಕವರು ಈ ರೋಗಕ್ಕೆ ತುತ್ತಾಗುವುದೇ ಇಲ್ಲ. ಒಂದುವೇಳೆ ರೋಗಸಂಭವಿಸಿದರೂ ಅವರುಗಳಿಗೆ ಪ್ರಾಣಾಪಾಯವಾಗುವುದು ಅತ್ಯಂತ ವಿರಳ. ರೋಗವು ವ್ಯಾಪಿಸುವುದಕ್ಕೆ ಮುಂಚೆಯೂ ವ್ಯಾಪಿಸಿದ ಅನಂತರವೂ ಆ ರೋಗ್ಯಸೂತ್ರಗಳನ್ನು ಲಕ್ಷ್ಯಿಸದೆ ಮೌಢ್ಯದಿಂದ ನಡೆದುಕೊಳ್ಳುವವರಿಗೇ ಮರಣವು ಸಂಭವಿಸುವುದು ಹಲವುಕಡೆ ದೃಷ್ಟಾಂತವಾಗಿದೆ. ಈ ರೋಗವು ಬಾರದಂತೆ ತಡೆಯುವುದಕ್ಕಾಗಿ ಒಂದುತೆರದ ರಸದಿಂದ ಪ್ಲೇಗಿನ ನಿರೋಧಕ್ಕೆ ಇನಾಕ್ಯುಲೇಷನ್ ಮಾಡುವಂತೆ ಇದಕ್ಕೂ ಮಾಡಲು ವೈದ್ಯರು ಕಂಡುಹಿಡಿದಿದ್ದಾರೆ. ಆದರೆ ಅದರಿಂದಲೇ ಸಂಪೂರ್ಣವಾಗಿ ರೋಗನಿರೋಧವುಂಟಾಗುವುದೆಂದು ಹೇಳಲಾಗುವುದಿಲ್ಲ. ಮತ್ತು ದಾಲಚಿನ್ನಿ ದ್ರಾವಕದ ಒಂದೆರಡು ತೊಟ್ಟುಗಳನ್ನು ಸಕ್ಕರೆಯಲ್ಲೋ ಬಾಳೆಹಣ್ಣಿನ ತುಂಡಿನಲ್ಲೋ ಸೇರಿಸಿ ಪ್ರತಿದಿನವೂ ಒಂದೆರಡು ವೇಳೆಯಂತೆ ಸೇವಿಸುತ್ತಿದ್ದರೆ ಈ ರೋಗದ ಭಯವಿಲ್ಲವೆಂದು ಸರ್ಕಾರದ ಪ್ರಕಟನೆಯಿಂದ ಗೊತ್ತಾಗುತ್ತದೆ. ನಮ್ಮ ಸಂಬಾರದ ದಿನಸುಗಳಲ್ಲಿ ಮೆಣಸು, ಏಲಕ್ಕಿ, ಬೆಳ್ಳುಳ್ಳಿ ಇವುಗಳ ಸಂಬಂಧಪಟ್ಟ ಸಾರವು ಯಾವ ರೀತಿಯಿಂದಾದರೂ ಆಗಾಗ್ಗೆ ಸೇವಿಸಲ್ಪಡುತ್ತಿದ್ದರೆ ರೋಗಭಯವು ಕಡಿಮೆಯೆಂದು ನಮ್ಮ ವೈದ್ಯರುಗಳ ಅಭಿಪ್ರಾಯವಾಗಿರುವುದು. ಉಪ್ಪುಬೆರೆತ ನೀರಿನಿಂದ ಮೂಗಿನ ಒಳಗೆಗಳನ್ನೂ ಗಂಟಲನ್ನೂ ಆಗಾಗ್ಗೆ ಶುದ್ಧಿಮಾಡಿಕೊಳ್ಳುತ್ತಿದ್ದರೂ, ಬೆಳ್ಳುಳ್ಳಿ ಹಿಲಕನ್ನೋ ಕರ್ಪೂರವನ್ನೋ ಜೇಬಿನಲ್ಲಿಟ್ಟು ಆಗಾಗ್ಗೆ ಮೂಸುತ್ತಿದ್ದರೂ, ಈ ರೋಗಬೀಜಗಳ ವ್ಯಾಪನೆಗೆ ಅವಕಾಶವಿಲ್ಲವೆಂದು ಹಿಂದೂವೈದ್ಯರುಗಳು ಅಭಿಪ್ರಾಯಪಡುತ್ತಾರೆ. ಈ ರೋಗವು ವ್ಯಾಪಿಸಿದ ಕೂಡಲೇ ರೋಗಿಯಲ್ಲಿ ತಲೆನೋವು ಜ್ವರ ಮೈಕೈಭಾರ ಕೀಲುಗಳ ನೋವು ನಿಶ್ಶಕ್ತಿ ಚಳಿ ಆಕುಳಿಕೆ ಇವುಗಳೆಲ್ಲಾ ತೋರುವುವು. ಆ ಕೂಡಲೇ ರೋಗಿಯು ಗಾಳಿಗೆ ಮೈಯನ್ನು ಸ್ವಲ್ಪವೂ ಬಿಡದೆ ಹೊದ್ದುಕೊಂಡು ಚೆನ್ನಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳಲು ಮಲಗಿಕೊಳ್ಳಬೇಕು. ತಕ್ಕ ವೈದ್ಯರಿಗೆ ಹೇಳಿಕಳುಹಿಸಿ ಕೂಡಲೇ ಔಷಧವನ್ನು ತೆಗೆದುಕೊಳ್ಳಬೇಕು. ಅಥವಾ ಇದಕ್ಕಾಗಿ ಏರ್ಪಟ್ಟಿರುವ ಔಷಧಗಳನ್ನು ಮುಂದಾಗಿ ಪ್ರತಿಮನೆಗಳವರೂ ತರಿಸಿಟ್ಟುಕೊಂಡಿದ್ದು ರೋಗಚಿಹ್ನೆಯು ಕಂಡಕೂಡಲೇ ಅನುಪಾನ ಪ್ರಕಾರ ಕೊಡಬೇಕು. ಸುಲಭವಾಗಿ ಜೀರ್ಣವಾಗತಕ್ಕ ಹಾಲು ನೀರು ಬೆರಸಿ ಕಾಯಿಸಿದ ರವೆಗಂಜಿಯನ್ನು ಕುಡಿಯಲು ಕೊಡಬೇಕು. ಮೈಯಲ್ಲಿ ಎಷ್ಟು ಉರಿದುಂಬಿದರೂ ಸೆಕೆಯಾದರೂ ದೇಹವನ್ನು ಗಾಳಿಗೆ ಎಂದಿಗೂ ಬಿಡಕೂಡದು. ಎದೆಯ ಮೇಲೆ ಗಾಳಿ ಬೀಸುವುದಕ್ಕವಕಾಶಕೊಟ್ಟರೆ ಥಟ್ಟನೆ ನ್ಯುಮೋನಿಯಾ ಜ್ವರಕ್ಕೆ ತಿರುಗಿ ಎದೆನೋವೂ ಶ್ಲೇಷ್ಮವೂ ಹೆಚ್ಚಿ ಮೇಲುಚ್ಛ್ವಾಸ ಬರುವುದು. ಅದು ರೋಗಿಗೆ ವಿಷಮಾವಸ್ಥೆಯನ್ನು ತಂದಿಕ್ಕುವುದು. ಅದರಿಂದ ಪ್ರಾಣಾಪಾಯವಾಗುವುದು ಬಹಳ ಹೆಚ್ಚು. ಆದುಕಾರಣ ನ್ಯುಮೋನಿಯಾ ರೋಗಕ್ಕೆ ತಿರುಗುವುದಕ್ಕೆ ಅವಕಾಶ ಕೊಡದಂತೆ ರೋಗಿಯನ್ನು ಬೆಚ್ಚಗೆ ಒಂದು ಕಡೆ ಗಾಳಿಬೆಳಕಿರುವ ಕೊಟ್ಟಡಿಯಲ್ಲಿ ಹೊದ್ದಿಸಿ ಮಲಗಿಸಿರಬೇಕು.

ಸರ್ಕಾರದವರು ಪ್ರತಿಯೊಬ್ಬ ಪ್ರಜೆಯನ್ನೂ ತಮ್ಮ ಪ್ರೀತಿಯ ಮಕ್ಕಳಂತೆ ತಿಳಿದು ಅವರುಗಳನ್ನು ಇಂಥ ಸಾಂಕ್ರಾಮಿಕ ರೋಗೋಪದ್ರವಗಳ ಭೀತಿಯಿಂದ ತಪ್ಪಿಸಿ ಕಾಪಾಡುವುದಕ್ಕಾಗಿ ಎಷ್ಟೋ ಮುಂಜೆಚ್ಚರಿಕೆಗಳನ್ನು ತೆಗೆದುಕೊಂಡು ತಕ್ಕ ಏರ್ಪಾಟುಗಳನ್ನು ಮಾಡುತ್ತಿರುತ್ತಾರೆ. ಅವನ್ನು ಪ್ರಜೆಗಳು ಉಪೇಕ್ಷಿಸದೆ ಉಪಯೋಗಿಸಿಕೊಳ್ಳಬೇಕು. ಸರ್ಕಾರದವರು ಹೇಳುವ ಹಿತಬೋಧನೆಗಳನ್ನು ಕಿವಿಗೊಟ್ಟು ಕೇಳಿ ನಡೆದುಕೊಳ್ಳಬೇಕು. ಪ್ರತಿಯೊಬ್ಬ ಪ್ರಜೆಯೂ ತಮ್ಮ ಸಹೋದರ ಪ್ರಜೆಗಳಿಗೆ ಇಂಥ ಕಾಲಗಳಲ್ಲಿ ಸಹಾಯಮಾಡಿ, ಅವರಿಂದಾಗುವ ಸಹಾಯವನ್ನು ತಾವು ಪಡೆದುಕೊಳ್ಳುತ್ತ ಅಪಮೃತ್ಯುವನ್ನು ಇದಿರಿಸಿ ಉತ್ತೀರ್ಣರಾಗಬೇಕು. ಸರ್ಕಾರದವರಾದರೋ ಸಂಬಳದ ಜನರಿಂದಲೇ ಸಕಲ ಪ್ರಜೆಗಳ ಔಷಧೋಪಚಾರಾದಿಗಳನ್ನೂ ಮಾಡಿಸಿ ಮುಗಿಸಲಾರರು. ಧರ್ಮಬುದ್ಧಿಯುಳ್ಳ ವಿದ್ಯಾರ್ಥಿಗಳೂ ಸ್ವತಂತ್ರಪ್ರಜೆಗಳೂ ಗ್ರಾಮಾಧಿಕಾರಿಗಳೂ ಕುಲವರ್ಗಗಳ ಯಜಮಾನರುಗಳೂ ಪುಣ್ಯಬುದ್ಧಿಯುಳ್ಳವರುಗಳೂ ಸ್ವತಂತ್ರವೈದ್ಯರೂ—ಇಂಥವರೆಲ್ಲಾ ನಡುಕಟ್ಟಿನಿಂತು ಸಹೋದರಪ್ರಾಣಿಗಳ ಕಷ್ಟಕಾಲದಲ್ಲಿ ತಮ್ಮ ಕೈಯಿಂದಾಗುವಷ್ಟು ಆದರೋಪಚಾರಗಳನ್ನು ಮಾಡಲು ಸಿದ್ಧರಾಗಬೇಕು. ದೈವಕಟಾಕ್ಷದಿಂದ ಇದರ ಭೀತಿಯು ಇಷ್ಟಕ್ಕೇ ನಿವಾರಣೆಯಾಗಿಹೋದರೆ ಯಾವ ಚಿಂತೆಗೂ ಅವಕಾಶವಿರುವುದಿಲ್ಲ. ಆಗಸ್ಟ್ ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಅಂಥ ವಿಷಮಚಿಹ್ನೆಗಳೇನೂ ಪ್ರಬಲಿಸದಿದ್ದರೆ ಸಾಕು. ಆದರೂ ನಮ್ಮ ಪ್ರಭುತ್ವದವರು ಈ ಸಮಯದಲ್ಲಿ ನಗರನಿವಾಸಿಗಳನ್ನು ಎಚ್ಚರಿಸುವುದಕ್ಕೆ ನಾಲ್ಮಡಿಯಾಗಿ ಗ್ರಾಮಾಂತರದ ಜನರನ್ನು ಎಚ್ಚರಿಸಬೇಕು. ದೇಶಭಾಷೆಯ ಪ್ರಕಟನೆಗಳನ್ನು ಪ್ರತಿ ಗ್ರಾಮದಲ್ಲೂ ಹಂಚಿಸಬೇಕು. ಎಲ್ಲ ತಾಲ್ಲೂಕುಹೋಬಳಿಗಳ ಉದ್ಯೋಗಿಗಳ ಮೂಲಕ ಪ್ರತಿ ಗ್ರಾಮಕ್ಕೂ ತಕ್ಕ ಔಷಧಗಳನ್ನೂ ಅನುಪಾನಗಳನ್ನೂ ಒದಗಿಸಿಕೊಡುವುದಕ್ಕಾಗಿ ತಕ್ಕ ಏರ್ಪಾಟುಗಳನ್ನು ನಿರ್ಧರಿಸಿ, ಅವಶ್ಯಕವಿದ್ದರೆ ತಡವಾಗದಂತೆ ಕೂಡಲೇ ಒದಗಿಸಿಕೊಡಲು ಏರ್ಪಾಟು ಮಾಡಿದರೆ ಬಹು ಪ್ರಜೆಗಳು ನಿವಾರಣೀಯವಾದ ವಿಷಮಾವಸ್ಥೆಯಿಂದ ಉಳಿದು ಬದುಕಿಕೊಳ್ಳುವರು. ಪುರನಿವಾಸಿಗಳು ಕೂಡ ಮುಂಜಾಗರೂಕತೆಯಿಂದ ಇದ್ದು ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕಾಗಿರುವುದು.

ನಾಮಕರಣಮಹೋತ್ಸವ.

ಕಳೆದ ತಿಂಗಳು ತಾ|| ೨೯ ನೆ ಮಂಗಳವಾರ ಶ್ರೀಮದ್ಯುವರಾಜರವರ ಕುಮಾರ ಬಹದ್ದೂರರವರಿಗೆ ಜನನಾತ್ಪರ ೧೨ ನೆ ದಿನವಾದುದರಿಂದ ಆ ದಿನ ವಿಧ್ಯುಕ್ತವಾಗಿ ನಾಮಕರಣಮಹೋತ್ಸವವು ಶ್ರೀಮದ್ಯುವರಾಜರವರಿಂದ ಆಚರಿಸಲ್ಪಟ್ಟಿತು. ಆ ದಿವಸ ಬೆಳಗಿನ ೧೦ ಗಂಟೆಗೆ ಅರಮನೆಯ ಅಂಬಾವಿಲಾಸದಲ್ಲಿ ದರ್ಬಾರು ನಡೆಯಿಸಲ್ಪಟ್ಟಿತು. ವೈದಿಕ ಲೌಕಿಕ ಮಂಡಲಿಯೂ, ರಾಜಬಂಧುವರ್ಗದವರೂ, ಅಧಿಕಾರಿಗಳೂ ಮೊದಲಾದವರೆಲ್ಲಾ ಓಲೈಸಿರಲು, ಶ್ರೀಮನ್ಮಹಾರಾಜರವರು ಅಗ್ರಸ್ಥಲದಲ್ಲಿ ರಜತಪೀಠವನ್ನಲಂಕರಿಸಿದ್ದರು. ಶ್ರೀಮದ್ಯುವರಾಜರವರು ಹಸೆಮಣೆಯಮೇಲೆ ಕುಳಿತು ಪುರೋಹಿತ ಸಾಹಾಯ್ಯದಿಂದ ವಿಧ್ಯುಕ್ತಸ್ವಸ್ತಿವಾಚನಾದಿ ಕರ್ಮಗಳನ್ನು ಯಥಾಸಾಂಗವಾಗಿ ನೆರವೇರಿಸಿದರು. ಶ್ರೀಮನ್ಮಹಾರಾಜರವರ ಪಾದಪೂಜೆಯನ್ನು ಯುವರಾಜರು ಆಚರಿಸಿದ ಬಳಿಕ ಮಾಸನಾಮ ನಕ್ಷತ್ರನಾಮ ವ್ಯವಹಾರನಾಮಗಳ ಲೇಖನವೂ ಪೂಜಾಕ್ರಮವೂ ನಡೆದ ಬಳಿಕ ಮಠಗಳಿಂದಲೂ ದೇವಾಲಯಗಳಿಂದಲೂ ಬಂದಿದ್ದ ಕಿಲ್ಲತ್ತುಗಳೂ ಫಲಮಂತ್ರಾಕ್ಷತಗಳೂ ಆಶೀರ್ವಚನಗಳೂ ಸಮರ್ಪಿಸಲ್ಪಟ್ಟುವು. ಕುಲಪುರೋಹಿತರು ವ್ಯವಹಾರನಾಮವಾಗಿ ರಾಜಶಿಶುವಿಗೆ "ಜಯ ಚಾಮರಾಜ ಒಡೆಯರು" ಎಂಬ ಅಭಿಧಾನವು ಇಡಲ್ಪಟ್ಟಿರುವುದೆಂಬುದನ್ನು ಸಭಾಮಧ್ಯದಲ್ಲಿ ಶ್ರುತಪಡಿಸಿದರು. ಕೂಡಲೇ ೨೧ ಕುಶಲ ಫಿರಂಗಿಗಳು ಕೋಟೆ ಬು ದಕಡೆಯಿಂದ ಹಾರಿಸಲ್ಪಟ್ಟುವು. ಹೊರಗೆ ವಾದ್ಯಗಳು ಭೋರ್ಗರೆದುವು. ಬಳಿಕ ಆರ್ತ್ಯಕ್ಷತೆಯೂ ಶಾಸ್ತ್ರವೂ ನಡೆದಿತು. ಸರ್ದಾರ್ ಕಾಂತರಾಜ ಅರಸಿನವರು, ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರೇ ಮೊದಲಾದ ರಾಜಬಂಧು ಪ್ರಮುಖರನೇಕರು ಶ್ರೀಮದ್ಯುವರಾಜ ದಂಪತಿಗಳಿಗೂ ರಾಜಶಿಶುವಿಗೂ ಒಪ್ಪಿಸಲು ತಂದಿದ್ದ ಭಾರಿ ಭಾರಿ ಕಿಲ್ಲತ್ತುಗಳು ಅರ್ಪಿಸಲ್ಪಟ್ಟುವು. ಸಭಿಕರಿಗೆಲ್ಲಾ ಗಂಧ ತಾಂಬೂಲ ಪುಷ್ಪಮಾಲಾದಿಗಳು ವಿನಿಯೋಗಿಸಲ್ಪಟ್ಟು ಸಭೆಯು ಮುಗಿದಿತು. ಆ ದಿನ ಪಟ್ಟಣದಲ್ಲಿ ಬಡಬಗ್ಗರೇ ಮೊದಲಾಗಿ ಸಾವಿರಾರು ಜನರಿಗೆ ಅರಮನೆಯಿಂದಲೂ ಪ್ರಜೆಗಳಿಂದಲೂ ಮೃಷ್ಟಾನ್ನಭೋಜನಗಳು ಹಲವು ಕಡೆ ನಡೆಯಿಸಲ್ಪಟ್ಟುವು. ದೇವಾಲಯಗಳಲ್ಲಿ ಮಸೀದಿಗಳಲ್ಲೆಲ್ಲಾ ಪೂಜಾಪ್ರಾರ್ಥನೆಗಳು ಆಚರಿಸಲ್ಪಟ್ಟುವು. ಪಾಠಶಾಲೆಗಳಿಗೆಲ್ಲಾ ವಿಶ್ರಾಂತಿಯನ್ನು ಕೊಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರ ಆಟಗಳು ನಡೆಯಿಸಲ್ಪಟ್ಟುವು. ಕೆಲ ಕಡೆ ತಿಂಡಿಗಳು ಹಂಚಲ್ಪಟ್ಟುವು. ರಾತ್ರಿ ಅರಮನೆಯ ಹೊರಗೂ ಕಲ್ಯಾಣಿ ಮೈದಾನದಲ್ಲಿರುವ ಮುಖ್ಯಮುಖ್ಯ ಕಟ್ಟಡಗಳೂ ಕೋಟೆಯಬಾಗಿಲೂ ಸಹ ವಿದ್ಯುದ್ದೀಪಾವಳಿಯಿಂದ ಅಲಂಕರಿಸಲ್ಪಟ್ಟಿದ್ದುವು. ಪುರಜನರನೇಕರು ತಂತಮ್ಮ ಮನೆಗಳಲ್ಲಿ ಹಬ್ಬಗಳಂತೆ ಆಚರಿಸಿ ಆನಂದಪಟ್ಟು ರಾಜಕುಮಾರರ ದೀರ್ಘಾಯುರಾರೋಗ್ಯಗಳನ್ನು ಬಯಸಿ ಪ್ರಾರ್ಥನೆಗಳನ್ನು ಮಾಡಿದರು. ಮಿತ್ರಮಂಡಲಿಯ ದಿಗ್ವಿಜಯವೇ ತಮ್ಮ ಸಕಲೇಷ್ಟಾರ್ಥ ಜಯವೆಂದು ಪ್ರಪಂಚವೇ ಭಾವಿಸಿ ಭಗವತ್ಪ್ರಾರ್ಥನೆ ಮಾಡುತ್ತಿದ್ದುದಕ್ಕೆ ಅನುಸಾರವಾಗಿ ಶ್ರೀ ಜಗದೀಶ್ವರನು ಜಯ ವರವನ್ನು ನಮ್ಮವರಿಗೆ ಅನುಗ್ರಹಿಸಿದುದಕ್ಕಾಗಿ ಜಗತ್ತೇ ಆನಂದಪಡುತ್ತಿರುವ ಈಗಣ ಜಯಮಹೋತ್ಸವಸಮಯದಲ್ಲಿ, ಪವಿತ್ರವೂ ಪ್ರಸಿದ್ಧವೂ ಆದ ಮೈಸೂರು ರಾಜವಂಶವನ್ನು ಜಯಕರವಾಗಿ ಬೆಳಸಲು ಅವತರಿಸಿರುವ ಈ ರಾಜಪುತ್ರರತ್ನಕ್ಕೆ ಶ್ರೀಮನ್ಮಹಾರಾಜ ಸಹೋದರರೂ ಅವರ ಮಾತೃಶ್ರೀಯವರೂ ರಾಜಬಂಧುವರ್ಗದವರೂ ಸಹ ಶಿಶುವಿನ ಪಿತಾಮಹರ ನಾಮದ ಜತೆಗೆ ಜಯಶಬ್ದವನ್ನೂ ಉಪಪದವಾಗಿ ಸೇರಿಸಿ ಕರೆದುದು ಐತಿಹಾಸಿಕದೃಷ್ಟಿಯಿಂದ ಕಾಲೋಚಿತವಾಗಿರುತ್ತದೆ. ಈ ಪುತ್ರರತ್ನವು ಶುಕ್ಲಪಕ್ಷ ಬಾಲಚಂದ್ರನಂತೆ ದಿನದಿನಾಭಿವೃದ್ಧಿಗೊಂಡು ಸದ್ಗುಣ ಸದ್ವಿದ್ಯಾದಿಗಳ ಸಂಪೂರ್ಣತೆಯಿಂದ ಸಂಸ್ಥಾನಕ್ಕೆ ಸಕಲ ವಿಧದ ಶ್ರೇಯಸ್ಸನ್ನೂ ಉಂಟುಮಾಡಿ ಜಯಶೀಲವಾಗುವಂಥ ಭಾಗ್ಯವನ್ನು ಪಡೆದು "ಜಯಚಾಮರಾಜೇಂದ್ರ ಒಡೆಯರು" ಎಂಬ ಹೆಸರನ್ನು ಅನ್ವರ್ಥವಾಗಿ ಮಾಡಿಕೊಳ್ಳುವಂತಹ ಸಾಮರ್ಥ್ಯವನ್ನು ಜಗದೀಶ್ವರನೂ ಶ್ರೀ ಚಾಮುಂಡಾಂಬಿಕೆಯೂ ಅನುಗ್ರಹಿಸಲಿ ಎಂದು ಸಕಲ ಪ್ರಗಳೊಡನೆ ನಾವು ಪ್ರಾರ್ಥಿಸುವೆವು.

ಒಳದೇಶದ ವೃತ್ತಾಂತಗಳು.

ನಾಮಕರಣಮಹೋತ್ಸವಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದ ದಿವಾನ್ ಶ್ರೀ ಕಾಂತರಾಜ ಅರಸಿನವರು ಕಳೆದ ಬುಧವಾರ ಬೆಂಗಳೂರಿಗೆ ಪ್ರಯಾಣಮಾಡಿದರು.

ಅ|| ಕಮಿಷನರಾದ ಮಿ|| ಮೇಕ್ರಿಯವರು ಶ್ರೀಮದ್ಯುವರಾಜರ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ. ಮ|| ಸಿಂಗ್ರಾಚಾರ್ಯರು ಆಕ್ಟಿಂಗ್ ಪ್ರೈ|| ಸೆಕ್ರೆಟರಿಗಳಾಗಿದ್ದಾರೆ.

ಬೆಂಗಳೂರಿನ ಮ|| ಸಿ. ವಿ. ಬಲ್ಲಪ್ಪ ಎಂಬುವರನ್ನು ಮಣ್ಣಿನ ಪಾತ್ರೆಗಳ ನಿರ್ಮಾಣದ ಶಾಸ್ತ್ರವನ್ನು ಕಲಿತು ಬರಲು ವೇತನವನ್ನು ಕೊಟ್ಟು ನಮ್ಮ ಸರ್ಕಾರದವರು ಸೀಮೆಗೆ ಕಳುಹಿಸಿಕೊಟ್ಟಿದ್ದಾರೆ.

ನಾಮಕರಣ ಮಹೋತ್ಸವದ ದಿವಸ ಪುತ್ರೋತ್ಸವಾನಂದ ಗೌರವಾರ್ಥವಾಗಿಯೂ ದಯಾಪೂರ್ವಕವಾಗಿಯೂ ಮೈಸೂರು ಸರ್ಕಾರದವರು ತಮ್ಮ ಕಾರಾಗೃಹಗಳಲ್ಲಿದ್ದ ಬಂದಿಗಳಲ್ಲಿ ೭೬ ಮಂದಿಗಳನ್ನು ಬಿಡುಗಡೆಮಾಡಿಸಿದರು.

ಕಳೆದವಾರ ಗಾಳಿಯು ಬಹಳ ಹೆಚ್ಚು. ಮಳೆಯು ಅನುಕೂಲವಾಗಿ ಬಿದ್ದಿಲ್ಲ. ಮೋಡಮುಚ್ಚಿ ತುಂತುರುಗಳು ಉದುರುತ್ತಿವೆ. ಕಾವೇರೀ ನದಿಯಲ್ಲಿ ಮುಕ್ಕಾಲು ಪ್ರವಾಹ ಬಂದಿದೆ. ಹೊಸಜೋಳವು ಪೇಟೆಯಲ್ಲಿ ಮಾರಾಟಕ್ಕೆ ಬಂದಿದೆ. ರೂ. ಗೆ ೭ ಸೇರಿನಂತೆ ಮಾರಲ್ಪಡುತ್ತಿದೆ.

ಬೆಂಗಳೂರು ಡಿಸ್ಟ್ರಿಕ್ಟಿನಿಂದ ಪ್ರಜಾಪ್ರತಿನಿಧಿ ಸಭಾಸಭಿಕರು ಕಳುಹಿಸಿಕೊಡತಕ್ಕ ಸಬ್ಜೆಕ್ಟುಗಳ ಪರಿಶೀಲನೆಯ ಸಭೆಯು ಕಳೆದ ಮಂಗಳವಾರ ಡಿಸ್ಟ್ರಿಕ್ಟ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನೆರೆದಿದ್ದು ಸಬ್ಜೆಕ್ಟುಗಳ ಪಟ್ಟಿಯು ಏರ್ಪಟ್ಟಿತು. ಮೈಸೂರು ಡಿಸ್ಟ್ರಿಕ್ಟಿನದು ಶುಕ್ರವಾರದದಿವಸ ನಡೆಯಿತು.

ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘದ ಮಹಾಸಭೆಯು ಕಳೆದ ಮಂಗಳವಾರ ಮ|| ಸಿ. ಮಾರಪ್ಪನವರ ಅಧ್ಯಕ್ಷತೆಯಲ್ಲಿ ನೆರೆದಿದ್ದಿತು. ತಮ್ಮ ಜನವರ್ಗದವರ ಏಳ್ಗೆಗೆ ಸಾಧಕಗಳಾದ ಅನೇಕ ವಿಷಯಗಳಮೇಲೆ ಚರ್ಚೆ ನಡೆದು ಸಂಘದ ಪ್ರತಿನಿಧಿಯಾಗಿ ಪ್ರಜಾಪ್ರತಿನಿಧಿಸಭೆಗೆ ಮ|| ಬ್ಯಾರಿಸ್ಟರ್ ವಿಜಯದೇವರವರು ಆರಿಸಲ್ಪಟ್ಟರು.

ಮೈಸೂರಿನ ವಿಶ್ವವಿದ್ಯಾಲಯದ ಸೆನೇಟ್ ಸಭ್ಯತ್ವಕ್ಕೆ ಇದುವರೆಗೆ ಯಾವ ನಾರೀಮಣಿಯೂ ಆರಿಸಲ್ಪಟ್ಟಿರಲಿಲ್ಲ. ಈಗ ಮಹಾರಾಣೀ ಕಲಾಶಾಲೆಯ ಸೂಪರಿಂಟೆಂಡೆಂಟರಾದ ಶ್ರೀಮತಿ ಕೆ. ಡಿ. ರುಕ್ಮಿಣಿಯಮ್ಮನವರು ಸೇರಿಸಲ್ಪಟ್ಟಿರುವರು. ಮತ್ತು ಬೆಂಗಳೂರಿನಲ್ಲಿರುವ ಲಂಡನ್ ಮಿಷನ್ ಬಾಲಿಕಾ ಪಾಠಶಾಲಾ ಮುಖ್ಯೋಪಾಧ್ಯಾಯಿನಿಯರಾಗಿರುವ ಬಟ್ಲರ್ ಕನ್ಯೆಯವರೂ ಕೂಡ ಸಭಿಕೆಯರಾಗಿ ಸೇರಿಸಲ್ಪಟ್ಟಿದ್ದಾರೆ.

೧ ನೆ ಕೌನ್ಸಿಲರಾಗಿದ್ದು ಸ್ಪೆಷಲ್ ಡ್ಯೂಟಿಗೆ ನಿಯಮಿಸಲ್ಪಟ್ಟಿರುವ ಮ|| ಎ. ಆರ್. ಬಾನರ್ಜಿಯವರು ಸೀಮೆಗೆ ಹೋಗುವುದಕ್ಕಾಗಿ ಕಳೆದವಾರ ಬೆಂಗಳೂರಿನಿಂದ ಬೊಂಬಾಯಿಗೆ ಪ್ರಯಾಣಮಾಡಿದರು. ಮೈಸೂರು ಪ್ರಭುತ್ವಕ್ಕೆ ಸಂಬಂಧಪಟ್ಟ ಕೆಲ ಮುಖ್ಯ ವಿಷಯಗಳನ್ನು ಕುರಿತು ಸ್ಟೇಟ್‌ಸೆಕ್ರೆಟರಿಯವರೊಡನೆಯೂ ಸಾರ್ವಭೌಮ ಪ್ರಭುತ್ವದವರೊಡನೆಯೂ ಪರ್ಯಾಲೋಚಿಸುವುದಕ್ಕಾಗಿ ಇವರು ಪ್ರಯಾಣಮಾಡಿರುವರೆಂದು ಸುದ್ದಿಯಿದೆ.

ವೈಸ್ರಾಯರು ಪತ್ನೀಸಮೇತರಾಗಿ ಬರುವ ನವಂಬರ್ ತಿಂಗಳ ಕಡೆಯಲ್ಲಿ ದಿಲ್ಲಿಪಟ್ಟಣವನ್ನು ಬಿಟ್ಟುಹೊರಟು ಮೈಸೂರು ದೇಶಕ್ಕೆ ಬರುವರು. ಗೇರುಸೊಪ್ಪೆ ಜಲಪಾತವನ್ನು ಪರಾಮರಿಸಿಕೊಂಡು ಡಿಸೆಂಬರ್ ಮೊದಲನೆ

ವಾರದಲ್ಲಿ ರಾಜಧಾನಿಗೆಬಂದು ಆನೆಯಖೆಡ್ಡಾ ಮೊದಲಾದುವುಗಳನ್ನು ಪರಾಮರಿಸಿಕೊಂಡು, ಬೆಂಗಳೂರಿನಮಾರ್ಗವಾಗಿ ಮದ್ರಾಸಿಗೆ ದಯಮಾಡಿಸಿ ಅಲ್ಲಿಂದ ಕಲಕತ್ತಾಕ್ಕೆಹೋಗಿ ಶೀತಕಾಲದಲ್ಲಿ ೩ ವಾರಗಳನ್ನು ಅಲ್ಲಿ ಕಳೆಯುವರು.

ಈ ತಿಂಗಳು ತಾ|| ೨೬ ರಲ್ಲಿ ಬೆಂಗಳೂರು ಮೆಯೋ ಹಾಲಿನಲ್ಲಿ ದಕ್ಷಿಣ ಇಂಡ್ಯಾ ತೋಟಗಾರರ ಸಭೆಯು ಜರುಗುವುದು. ಅದರಲ್ಲಿ ಭರತಖಂಡಕ್ಕೆ ಬರುವ ತೇಯಿಲೆಯ ಮೇಲಣ ಸುಂಕ, ಕಾಫಿ ಮೇಲಣ ಸುಂಕ, ಕಾಫಿ ಬೀಜವನ್ನು ಗ್ರೀಸ್ ದೇಶೀಯರಿಗೆ ಮಾರುವುದು, ಸೈನಿಕರಿಗೆ ಈ ದೇಶದ ಕಾಫಿಯನ್ನೇ ಒದಗಿಸಿಕೊಡುವುದು, ತೋಟಗಳಲ್ಲಿ ವೈದ್ಯರ ಏರ್ಪಾಟು, ಲೋಹಮಾರ್ಗ ಸೌಕರ್ಯ, ಹಾಸನ-ಮಂಗಳೂರಿನ ಲೋಹಮಾರ್ಗಸ್ಥಾಪನೆ, ರೇವೆ, ಹಡಗಿನ ಬಾಡಿಗೆ ಮೊದಲಾದ ತಮ್ಮ ಲಾಭಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಚರ್ಚಿಸುವವರಾಗಿದ್ದಾರೆ.

ಭರತಖಂಡದ ವೃತ್ತಾಂತಗಳು.

ಪ್ರತಾಪ ಎಂಬ ಪತ್ರಿಕಾ ಸಂಪಾದಕರಾದ ರಾಧಾಕೃಷ್ಣರವರಿಗೆ ೧೮ ತಿಂಗಳ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿದ್ದಿತು. ಪಂಜಾಬು ಲೆ|| ಗೌರ್ನರವರು ಆ ಶಿಕ್ಷೆಯನ್ನು ೨ ತಿಂಗಳಿಗೆ ಇಳಿಸಿದರು.

ಪ್ರೊ|| ಕರ್ವೆಯವರು ಪುಣೆಯಲ್ಲಿ ಸ್ಥಾಪಿಸಿರುವ ಸ್ತ್ರೀ ವಿಶ್ವವಿದ್ಯಾಲಯದ ಫಂಡಿಗೆ ನಾಗಪೂರಿನ ಡಾಕ್ಟರ್ ವಿ. ಆರ್. ಲಾಂಡೆರವರು ೩೦ ಸಾವಿರ ರೂ. ಗಳನ್ನು ದಾನಮಾಡಿ ಮರಣಶಾಸನವನ್ನು ಬರೆದಿರುವರು.

ಮೂನಾ ಎಂಬ ಹಡಗಿನಮೇಲೆ ಭರತಖಂಡಕ್ಕೆ ಈಗ ೨೦ ಸೋಲ್ಜರ್ ಪಟಾಲಮ್ಮುಗಳು ಬರುತ್ತಿವೆ. ಈ ಹಡಗು ಬಹುಶಃ ಈ ತಿಂಗಳು ತಾ|| ೯ ಕ್ಕೆ ಬೊಂಬಾಯನ್ನು ಸೇರುವುದಾಗಿದ್ದಿತು. ದಾರಿಯಲ್ಲಿ ಈ ಹಡಗಿನೊಳಗೆ ಪ್ಲೇಗು ಕಾಣಿಸಿಕೊಂಡುದರಿಂದ ಮಾಲ್ಟಾದ ಹತ್ತಿರ ಇದನ್ನು ತಡೆದು ನಿಲ್ಲಿಸಿರುವರು.

ಮದ್ರಾಸು ಸರ್ಕಾರದ ಕಾರ್ಯನಿರ್ವಾಹಕ ಸಭೆಯಲ್ಲಿ ಸಭಿಕರಾಗಿದ್ದ ಆ|| ದಿ|| ಬ|| ಪಿ. ರಾಜಗೋಪಾಲಾಚಾರ್ಯರು ೩ ತಿಂಗಳ ರಜಾ ಪಡೆದು ಸೀಮೆಗೆ ತೆರಳುವುದರಿಂದ ಅವರ ಸ್ಥಾನಕ್ಕೆ ವೆಲ್ಲೂರು ಮ್ಯುನ್ಸಿಪಲ್ ಸಭಾಧ್ಯಕ್ಷರಾಗಿದ್ದ ಖಾನ್ ಬಹದೂರ್ ಹಬೀಬುಲ್ಲಾ ಸಾಹೇಬ್ ಬಹದ್ದೂರ್‌ರವರು ನಿಯಮಿಸಲ್ಪಟ್ಟಿದ್ದಾರೆ.

ಭರತಖಂಡದ ಸಾಮ್ರಾಜ್ಯಶಾಸನಸಭೆಯ ವಿದ್ಯಾಶಾಖಾ ಸಭಿಕರಾಗಿದ್ದ ಸರ್ ಶಂಕರನ್‌ನಾಯರ್‌ರವರು ಬಿಟ್ಟುಕೊಟ್ಟ ಸ್ಥಾನದಲ್ಲಿ ನಿಯಮಿಸಲ್ಪಟ್ಟಿರುವ ಆ|| ಮಿಯಾನ್ ಮಹಮ್ಮದ್ ಷಫಿಯವರು ಸಿಮ್ಲಾಕ್ಕೆ ಹೋದಾಗ ಅಲ್ಲಿರುವ ಭಾರತೀಯ ಪ್ರಮುಖರೂ ಇಂಡ್ಯಾ ಸರ್ಕಾರದ ವಿದ್ಯಾಶಾಖಾಧಿಕಾರಿಗಳೂ ಕೂಡ ನಿಲ್ದಾಣಕ್ಕೆ ಬಂದು ಸುಸ್ವಾಗಿಸಿ ಕರೆದುಕೊಂಡು ಹೋದರು. ತಾ|| ೨ ರಲ್ಲಿ ಷಫಿಯವರು ತಮ್ಮ ಅಧಿಕಾರವನ್ನು ವಹಿಸಿಕೊಂಡರು.

ಕಳೆದ ತಿಂಗಳ ಕೊನೆಯ ವಾರದಲ್ಲಿ ಬೊಂಬಾಯಿಯಲ್ಲಿ ದೊಡ್ಡ ಮಳೆಯಾಗಿರುವುದು. ೨೪ ಗಂಟೆಗಳ ಕಾಲ ಅಖಂಡವಾಗಿ ಕುಂಭೀಪಾತವಾಗಿ ಮಳೆಯು ಸುರಿದಿತು. ಒಟ್ಟು ೫ ಅಂಗುಲ ಮಳೆಯಾಗಿರುವುದು. ಕಳೆದ ಜೂನ್ ತಿಂಗಳು ತಾ|| ೧ರಿಂದ ಇದುವರೆಗೆ ಒಟ್ಟು ೪೮ ಅಂಗುಲ ಮಳೆಯಾಗಿರುವುದು. ೧೯೧೭ ನೆ ವರ್ಷದ ಇಷ್ಟು ಕಾಲದಲ್ಲಿ ೧೪ ಅಂಗುಲದಷ್ಟು ೧೯೧೬ ನೆ ವರ್ಷದ ಇಷ್ಟು ಕಾಲದಲ್ಲಿ ೨೭ ಅಂಗುಲದಷ್ಟೂ ಮಳೆಯಾಗಿದ್ದಿತು. ಇದನ್ನು ನೋಡಲಾಗಿ ಈ ವರ್ಷದಲ್ಲಿ ಆಗಿರುವ ಮಳೆಯು ಅಧಿಕವಾಗಿದೆಯೆಂದೇ ಹೇಳಬಹುದು.

ಸಿಂಧುದೇಶದಲ್ಲಿ ಗೋಧುವೆಯ ವ್ಯಾಪಾರಗಾರರು ಲಾಭದ ಆಸೆಯಿಂದ ಗೋಧುವೆಯ ಬೆಲೆಯನ್ನು ಬಹಳ ಏರಿಸಿದ್ದರು. ಇದರಿಂದ ಬಡಬಗ್ಗರ ಕಷ್ಟವು ಹೆಚ್ಚಲಾಗಿ ಅಲ್ಲಿಯ ಸಿವಿಲ್‌ಸಪ್ಲೈ ಕಮಿಷನರು ಪ್ರಯತ್ನಪಟ್ಟು ಬೆಲೆಯ ನಿರ್ಣಯವನ್ನು ಮಾಡಿ ಮಣ ೧ಕ್ಕೆ ೭ ರೂ. ಗಳ ಬೆಲೆಗಿಂತ ಹೆಚ್ಚಿಸಿ ಯಾರೂ ಮಾರಕೂಡದೆಂದು ಕಟ್ಟಪ್ಪಣೆ ಮಾಡಿದರು. ಮತ್ತು ಅವರ ಹಿತೋಪದೇಶವನ್ನು ಅಂಗೀಕರಿಸಿ ವರ್ತಕರು ಈಗ ರೂ. ಗೆ ೬|| ಸೇರಿನಂತೆ ಗೋಧುವೆಯನ್ನು ಮಾರಲುಪಕ್ರಮಿಸಿದ್ದಾರೆ.

ಸರ್ ಶಂಕರನ್‌ನಾಯರ್‌ರವರು ಸಂಯುಕ್ತಸಂಘದವರಿದಿರಿಗೆ ಭಾರತರಾಜಕೀಯ ಸಂಸ್ಕರಣ ವಿಷಯವಾಗಿ ಸಾಕ್ಷ್ಯವನ್ನು ಕೊಡಲಿಕ್ಕಾಗಿ ಕರೆಯಿಸಲ್ಪಟ್ಟು ಸೀಮೆಗೆ ಪ್ರಯಾಣಮಾಡಿದ್ದಾರೆ. ಕಳೆದ ತಾ|| ೨೬ ರಲ್ಲಿ ಇವರು ಬೊಂಬಾಯಿಗೆ ಹೋದರು. ಭಾನುವಾರದ ದಿನ ತಾಜಮಹಲ್ ಹೋಟೆಲಿನಲ್ಲಿ ಪಶ್ಚಿಮ ಇಂಡ್ಯಾ ಮಿತವಾದ ಸಂಘದವರು ಇವರಿಗೆ ಔತಣವನ್ನು ಮಾಡಿಸಿದರು. ಆ ಸಂಘದ ಅಧ್ಯಕ್ಷರಾದ ಸರ್ ಡಿ. ವಾಚಾರವರು, ಸರ್ ನಾರಾಯಣ ಚಂದ್ರವಾರ್ಕರ್‌ರವರು, ಗೋಕುಲದಾಸ್ ಪರೇಖ್‌ರವರು ಮೊದಲಾದವರು ಅತಿಥಿಗಳನ್ನು ಅಧಿಕವಾಗಿ ಗೌರವಿಸಿ ಸತ್ಕರಿಸಿದರು. ೩೦-೪೦ ವರ್ಷಗಳಿಂದಲೂ ಸರ್ ನಾಯರ್‌ರವರು ಮಾಡಿದ ದೇಶಸೇವೆಯನ್ನು ಸರ್ ವಾಚಾರವರು ಉಪನ್ಯಾಸದಲ್ಲಿ ಸಂಗ್ರಹಿಸಿ ಹೇಳಿ, ಅವರ ಪ್ರಯಾಣವು ಸುರಕ್ಷಿತವಾಗಿಯೂ ದೇಶಕ್ಕೆ ಲಾಭದಾಯಕವಾಗಿಯೂ ಪರಿಣಮಿಸಲೆಂದು ಕೋರಿದರು. ಸಭಿಕರೆಲ್ಲರೂ ಜಯಘೋಷವನ್ನು ಮಾಡಿ ವಂದಿಸಿದರು.

ಬೊಂಬಾಯಿ ಪಟ್ಟಣವು ಜನಸಂಖ್ಯೆಯಲ್ಲಿ ಬಹಳ ಅಭಿವೃದ್ಧಿಗೊಳ್ಳುತ್ತಿದೆ. ಅಲ್ಲಿಗೆ ಕುಡಿಯುವ ನೀರನ್ನು ತಕ್ಕಷ್ಟು ಒದಗಿಸುವುದು ಅಸಾಧ್ಯವಾಗುತ್ತಿದೆ. ಈಗ ಜಲದ ಕೊರತೆಯಿಂದ ಪುರನಿವಾಸಿಗಳು ಬಹಳ ತೊಂದರೆಯನ್ನನುಭವಿಸುತ್ತಿದ್ದಾರೆ. ಅಲ್ಲಿಗೆ ನೀರನ್ನು ಒದಗಿಸುವ ತಾನ್ಸಾ ಸರೋವರಕ್ಕೆ ಸಂಬಂಧಪಟ್ಟ ನೀರಿನ ಕಾಲ್ವೆಯ ಕಟ್ಟೆಯು ಕಿತ್ತುಹೋಗಿರುವುದರಿಂದ ಈಗ ಬಹಳ ತೊಂದರೆ ಸಂಭವಿಸಿದೆ. ದಿನ ೧ಕ್ಕೆ ಆ ಪಟ್ಟಣಕ್ಕೆ ೪|| ಕೋಟಿ ಗ್ಯಾಲನ್‌ಗಳ ನೀರು ಒದಗಿಸಲ್ಪಡುತ್ತಿದ್ದುದಕ್ಕೆ ಈಗ ೧|| ಕೋಟಿ ಗ್ಯಾಲನ್ನುಗಳು ಮಾತ್ರವೇ ಒದಗಿಸಲ್ಪಡಬೇಕಾಗಿ ಬಂದಿದೆ. ಅದರಿಂದ ಪಟ್ಟಣದ ಎಲ್ಲಾಕಡೆಗೂ ನೀರಿನ ಒದಗಿಸೋಣವು ಬಹಳ ಕಡಿಮೆಯಾಗಿದೆ. ದಿನಕ್ಕೆ ಕೆಲ ಗಂಟೆಗಳ ಕಾಲ ಮಾತ್ರ ನಲ್ಲಿಗಳಿಗೆ ನೀರನ್ನು ಬಿಡುತ್ತಿದ್ದಾರೆ. ಕಿತ್ತುಹೋಗಿರುವ ಕಟ್ಟೆಯನ್ನು ಸರಿಪಡಿಸುವ ಕೆಲಸವನ್ನು ಆರಂಭಿಸಿದ್ದಾರೆ. ನೆಟ್ಟಗಾದ ಬಳಿಕ ಯಥಾಪ್ರಕಾರ ನೀರು ಒದಗಬಹುದು.

ಕಳೆದವಾರ ಬೊಂಬಾಯಿ ಗೌರ್ನರವರು ಬೆಳಗಾಂ, ಧಾರ್ವಾಡ ಮೊದಲಾದ ಕರ್ನಾಟಕ ಭಾಗಗಳಲ್ಲಿ ಸಂಚರಿಸಿಕೊಂಡು ಹೋದರು. ಆಗ್ಗೆ ಬೆಳಗಾಂವಿನಲ್ಲಿ ಭಾರತೀಯರಿಗೂ ಪಾಶ್ಚಿಮಾತ್ಯರಿಗೂ ಹೆಚ್ಚು ಐಕಮತ್ಯವನ್ನೂ ಪರಸ್ಪರ ವಿಶ್ವಾಸವನ್ನೂ ಅಭಿವೃದ್ಧಿಗೊಳಿಸಲು ಸಾಧಕವಾದ ನೂತನಭವನವೊಂದನ್ನು ಪ್ರತಿಷ್ಠಾಪಿಸಿದರು. ಆಗ ಇಂಥ ಭವನಗಳಿರುವುದರಿಂದ ಅಧಿಕಾರಿಗಳೂ ಅನಧಿಕಾರಿಗಳೂ ಪದೇಪದೇ ಒಂದು ಕಡೆ ಕಲೆತು ಮಾತನಾಡಿ ಪರಸ್ಪರ ಪ್ರೀತಿವಿಶ್ವಾಸಗಳನ್ನು ಬಳೆಯಿಸಿಕೊಳ್ಳಲು ಸಾಧಕವಾಗುವುದೆಂದೂ, ಪರಸ್ಪರರ ಕಷ್ಟಗಳು ತೊಲಗಲು ಮಾರ್ಗವಾಗುವುದೆಂದೂ, ಭಿನ್ನಾಭಿಪ್ರಾಯಗಳು ಅಳಿದುಹೋಗುವುವೆಂದೂ, ಒಬ್ಬರ ಮನೋಭಾವಗಳನ್ನು ಒಬ್ಬರು ಅರಿಯದ ಕಾರಣದಿಂದ ಸಂಘಮಧ್ಯದಲ್ಲಿ ಉಂಟಾಗುವ ಅಪೋಹಗಳೆಲ್ಲಾ ಇಂಥ ಮಂದಿರಗಳಲ್ಲಿ ನಡೆಯುವ ಕೂಟಗಳಿಂದ ತೊಲಗಿಹೋಗುವುವೆಂದೂ ಪಾಶ್ಚಾತ್ಯರೂ, ಭಾರತೀಯರೂ ಆಗಾಗ್ಗೆ ಇಲ್ಲಿ ಕೂಡಿ ಇಷ್ಟಗೋಷ್ಠಿಗಳನ್ನು ನಡೆಯಿಸುವುದು ಉಭಯರಿಗೂ ಕ್ಷೇಮಕರವೆಂದೂ ಮೊದಲಾಗಿ ಉಪನ್ಯಾಸಮಾಡಿದರು.

ಮದರಾಸು ನಿಯಮನಿರ್ಮಾಣಸಭೆಯಲ್ಲಿ ಹೊಸದಾಗಿ ಮಾಡಿರುವ ಏರ್ಪಾಟಿನ ಪ್ರಕಾರ ಗೌರ್ನರು, ಅವರ ಕಾರ್ಯನಿರ್ವಾಹಕ ಸಭಾಸಭಿಕರು ಮೂವರು ಮತ್ತೂ ಅಡ್ವೋಕೇಟ್ ಜನರಲ್ಲರ ಸಮೇತ ಇನ್ನು ೧೦ ಮಂದಿ ಇತರರು ಅಧಿಕಾರಸಭ್ಯರಾಗಿರುವರು. ಇದುವರೆಗೆ ಈ ಸಂಖ್ಯೆಯು ೧೮ ಆಗಿರುತ್ತಿದ್ದಿತು. ಈಗ ೧೪ ಆಯಿತು. ಇದರಿಂದ ಉಳಿದ ೪ ಸ್ಥಾನಗಳು ಅನಧಿಕಾರಿಸಭಿಕರಿಗೇ ಕೊಡಲ್ಪಟ್ಟಂತಾಯಿತು. ಆದುಕಾರಣ ಈಗ ಏರ್ಪಟ್ಟ ನೂತನಸಭೆಯಲ್ಲಿ ಅನಧಿಕಾರಸಭಿಕರ ಒಟ್ಟು ಸಂಖ್ಯೆಯು ೩೩ ಆಯಿತು. ಇವರಲ್ಲಿ ಪ್ರಜೆಗಳಿಂದ ಆರಿಸಲ್ಪಡಬೇಕಾದವರು ೨೧ ಮಂದಿಗಳು. ಅವರಲ್ಲಿ ಈ ಸಲ ನಡೆದಿರುವ ಆರಿಸುವಿಕೆಯಿಂದ ೫ ಮಂದಿ ಮಾತ್ರವೇ ಬ್ರಾಹ್ಮಣರು ಬಂದಿದ್ದಾರೆ. ಉಳಿದವರಲ್ಲಿ ೪ ಮಂದಿ ಯೂರೋಪಿಯನ್ನರು, ೩ ಮಂದಿ ಮಹಮ್ಮದೀಯರು, ೮ ಮಂದಿ ಇತರ ಹಿಂದೂಗಳು, ಒಬ್ಬನು ಉನ್ನತಕುಲದ ಮಲಬಾರು ದೇಶೀಯರು. ಏತೇನ ಇವರಲ್ಲಿ ಒಟ್ಟು ಬ್ರಾಹ್ಮಣರ ಸಂಖ್ಯೆ ೫ ಆದರೆ ಇತರರ ಸಂಖ್ಯೆ ೧೬ ಆದಂತಾಯಿತು. ಗೌರ್ನಮೆಂಟಿನಿಂದ ನಾಮಿನೇಟ್ ಮಾಡಿ ಸೇರಿಸಲ್ಪಟ್ಟಿರುವ ಅನಧಿಕಾರಿ ಸಭಿಕರಲ್ಲಿ ಇಬ್ಬರೇ ಬ್ರಾಹ್ಮಣರಾಗಿದ್ದು ಉಳಿದ ೧೨ ಮಂದಿಗಳೂ ಇತರರೇ ಆಗಿದ್ದಾರೆ. ರಾಜಕೀಯ ಸಭೆಗಳಲ್ಲಿ ಈ ತೆರದ ಪರ್ಯವಸಾನವು ಕಾಣುತ್ತ ಬಂದರೆ ಪ್ರತ್ಯೇಕಪ್ರಾತಿನಿಧ್ಯಾಪೇಕ್ಷೆಯು ತಪ್ಪಿಯೇ ಹೋಗಬಹುದು.

ವಿದೇಶ ವಿಷಯಗಳು.

ಜರ್ಮನಿದೇಶವು ಇತರ ದೇಶೀಯರೊಡನೆಲ್ಲಾ ಉತ್ತರಪ್ರತ್ಯುತ್ತರಗಳನ್ನು ಪೂರ್ವದಂತೆ ನಡೆಯಿಸಿಕೊಳ್ಳಬಹುದೆಂದು ಏರ್ಪಾಟಾಯಿತು.

ಇಂಗ್ಲೆಂಡಿನ ಲಾರ್ಡ್ಸ್‌ಸಭೆಯವರೂ ಕೂಡ ಸಂಧಿಪತ್ರವನ್ನು ಏಕಕಂಠದಿಂದ ಒಪ್ಪಿದರು. ಮತ್ತೂ ಇಂಗ್ಲೀಷ್ ಫ್ರೆಂಚರ ಮಧ್ಯದಲ್ಲಿ ನಡೆದಿರುವ ಸಂಧಿಪತ್ರವನ್ನೂ ಕೂಡ ಅವರು ಅಂಗೀಕರಿಸಿದರು.

ಜರ್ಮನಿಯಲ್ಲಿರುವ ಅಮೇರಿಕಾ ಸೇನಾಧಿಕಾರಿ ಮೇಜರ್ ಕಾಕ್ರಿಲ್‌ರವರನ್ನು ಕೊಲ್ಲಲಿಕ್ಕೆ ಕೆಲ ಜರ್ಮನರು ಪ್ರಯತ್ನಿಸಿ ವಿಫಲರಾದರು. ಮೇಜರ್‌ರವರಿಗೆ ಪ್ರಮಾದವೇನೂ ಆಗಲಿಲ್ಲ. ಅಪರಾಧಿಗಳು ಸಿಕ್ಕಿಲ್ಲ.

ಪರೀಕ್ಷಾರ್ಥವಾಗಿ ಪ್ರಯಾಣಮಾಡುತ್ತಿದ್ದ ಒಂದಾನೊಂದು ಅಮೇರಿಕಾ ವಿಮಾನವು ಪೆಟ್ರೋಲೆಂಬ ಎಣ್ಣೆಯು ಹೊತ್ತಿಕೊಂಡ ಕಾರಣದಿಂದ ದಗ್ಧವಾಗಿಹೋಯಿತು. ಒಳಗಿದ್ದವರಲ್ಲಿ ೧೦ ಮಂದಿಗಳು ಸತ್ತರು. ೨೫ ಮಂದಿಗೆ ಗಾಯಗಳಾದುವು.

ಜರ್ಮನಿಯಲ್ಲಿ ೨ ಲಕ್ಷ ರಷ್ಯನರು ಬಂದಿಗಳಾಗಿದ್ದಾರೆ. ಅವರನ್ನು ಬಿಡಿಸಿಕೊಡಲು ಅವಕಾಶವಾಗುವವರೆಗೆ ಅವರನ್ನು ಪೋಷಿಸುವ ಭಾರವನ್ನು ಮಿತ್ರಮಂಡಲಿ ೫ ಮುಖ್ಯದೇಶಗಳವರು ವಹಿಸಿಕೊಳ್ಳಬೇಕೆಂದು ಆರ್ಥಿಕಸಂಘದವರು ನಿರ್ಣಯಿಸಿದ್ದಾರೆ

ಬೆಲ್ಜಿಯಮ್ಮಿನಲ್ಲಿ ನಡೆದ ಅಸಾಧಾರಣವಾದ ಸಂಧಿಮಹೋತ್ಸವಕ್ಕೆ ಫ್ರಾನ್ಸಿನ ಅಧ್ಯಕ್ಷರಾದ ಪಾಯಿಂಕೇರ್‌ರವರೂ ಮಾರ್ಷಲ್ ಫಾಕ್‌ರವರೂ ಸಹ ಕರೆಯಲ್ಪಟ್ಟು ಹೋಗಿದ್ದರು. ಅಲ್ಲಿಯ ಪ್ರಜೆಗಳು ಅತ್ಯಾನಂದಭಕ್ತಿಗಳಿಂದ ಇವರನ್ನು ಗೌರವಿಸಿ ಸತ್ಕರಿಸಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರು ಬರುವ ಅಕ್ಟೋಬರ್ ತಿಂಗಳಲ್ಲಿ ಕೆನಡಾ ದೇಶಕ್ಕೆ ದಯಮಾಡಿಸುವವರಾಗಿದ್ದಾರೆ. ಅಲ್ಲಿಂದ ಹಾಗೆಯೇ ಅಮೇರಿಕಾದ ಸಂಯುಕ್ತರಾಷ್ಟ್ರಗಳಿಗೂ ಬಂದು ಹೋಗುವಂತೆ ಮಾಡಬೇಕೆಂದು ಡಾ|| ವಿಲ್ಸನ್‌ರವರು ಕೋರಿಕೊಳ್ಳಲಾಗಿ ಅದಕ್ಕೆ ನಮ್ಮ ಸಾರ್ವಭೌಮರು ಒಪ್ಪಿಗೆಯನ್ನು ಕೊಟ್ಟಿದ್ದಾರೆ.

ಲಂಡನ್ ಪಟ್ಟಣದಲ್ಲಿ ನಡೆದ ಸಂಧ್ಯುತ್ಸವ ವಿನೋದಗಳಿಗಾಗಿ ೧೦ ಲಕ್ಷ ಪೌನುಗಳ ವೆಚ್ಚವಾಗಿರುವುದು. ಅಪಾಯವೇನೂ ಜರುಗದಂತೆ ಎಲ್ಲವೂ ಸಾಂಗವಾಯಿತು. ಆದರೆ ಆಸ್ಟ್ರೇಲಿಯಾದ ಲ್ಯೂಟನ್ನಿನ ಹತ್ತಿರ ಪುರಜನರು ತಿರುಗಾಡುತ್ತಿದ್ದ ಸ್ಥಳದಲ್ಲಿ ಸೈನಿಕರಿಗೆ ಪ್ರಾರ್ಥನೆ ಮಾಡಲು ಅವಕಾಶ ಕೊಡದೆ ಹೋದುದರಿಂದ ಅವರು ರೇಗಿ ಸ್ವಲ್ಪ ಹಾವಳಿಮಾಡಿದರು. ಅಲ್ಲಿಯ ಟೌನ್‌ಹಾಲಿಗೆ ಬೆಂಕಿಯಿಕ್ಕಿ ಸುಟ್ಟುಬಿಟ್ಟರು. ಮಗ್ಗುಲಲ್ಲಿದ್ದ ಬಹುಆಸ್ತಿಗೆ ನಷ್ಟವಾಯಿತು.

ಸಂಧಿನಿಬಂಧನೆಗಳಿಗೆ ಎಲ್ಲರ ಕೈಬರಹ ಬಿದ್ದಮೇಲೆ ಷ್ಯಾಂಟಂಗನ್ನು ಚೀನಾದವರಿಗೆ ಕೊಟ್ಟುಬಿಡುವೆವೆಂದು ಜಪಾನರು ಮಿತ್ರಮಂಡಲಿಗೆ ವಾಗ್ದಾನಮಾಡಿ ಅಭಯ ಕೊಟ್ಟರು. ಅಲ್ಲಿಯ ಲೋಹಮಾರ್ಗಗಳ ಮೇಲಿನ ಉತ್ಪತ್ತಿಯನ್ನನುಭವಿಸುವ ಮತ್ತು ಕಿಯಾಚೋವಿನ ಮೇಲ್ವಿಚಾರಣೆಯ ಭಾಗಗಳನ್ನು ಮಾತ್ರ ತಾವು ವಹಿಸಿಕೊಳ್ಳುವೆವೆಂದೂ ತಿಳಿಯಪಡಿಸಿದ್ದಾರೆ. ಇದರಿಂದ ಪ್ಯಾರಿಸ್ಸಿನಲ್ಲಿರುವ ಚೀನಾರಾಯಭಾರಿಗಳು ಸಂಧಿನಿಬಂಧನೆಗಳಿಗೆ ಕೈಬರಹವನ್ನು ಹಾಕಬಹುದೆಂದು ಹೇಳಿಕೊಳ್ಳುತ್ತಿದ್ದಾರೆ. ಟೀನ್‌ಸ್ಸಿನ ಮೇಲೆ ಆಸ್ಟ್ರಿಯನ್ನರಿಗೆ ಇದ್ದ ಸ್ವಾಮ್ಯವೆಲ್ಲವೂ ಮರಳಿ ಚೀನಾದವರಿಗೇ ಸೇರಿಹೋಗುವಂತೆ ಮಾಡಲ್ಪಟ್ಟಿರುವುದು.

ಲಂಡನ್ ಪಟ್ಟಣದ ಗೋಲ್ಡ್ಸ್‌ಗ್ರೀನಿನ ಹತ್ತಿರ ಮ|| ಟಿ. ಎಂ. ನಾಯರ್‌ರವರ ಶವದ ದಹನಕರ್ಮವು ಜರುಗಿತು. ಕೊರ್ಮಾ ವೆಂಕಟರೆಡ್ಡಿನಾಯುಡುರವರು, ದಿ|| ಬ|| ರಾಮಾರಾಯಣಿಯವರು, ಕೆಲವಲಪ್ಪ ಜಮೀಂದಾರರು, ಮೊದಲಿಯಾರರು, ಲಾರ್ಡ್ ಸಿಡನ್ಹಾಂರವರ ಪ್ರತಿನಿಧಿಯಾಗಿ ಫೆರ್ಗ್ಯುಸನ್‌ರವರು ಮೊದಲಾದವರು ಸ್ಮಶಾನಕ್ಕೆ ಹೋಗಿದ್ದರು. ಆಗ ರೆಡ್ಡಿನಾಯುಡುಯವರು ಟಿ. ಎಂ. ನಾಯರ್‌ರವರ ಯೋಗ್ಯತಾವಿಶೇಷಗಳನ್ನು ಕುರಿತು ಉಪನ್ಯಾಸ ಮಾಡಿದರು. ಯೂರೋಪಿಯನ್ ಸಂಘದವರು ಮದರಾಸ್ ಮೇಲ್ ಪತ್ರಿಕಾಕರ್ತರು ಮೊದಲಾದನೇಕರು ಪುಷ್ಪಮಾಲಿಕೆಗಳನ್ನು ಗೌರವಾರ್ಥವಾಗಿ ಕಳುಹಿಸಿಕೊಟ್ಟಿದ್ದರು. ಡಾ|| ನಾಯರ್‌ರವರ ಸ್ಮಾರಕಚಿಹ್ನವು ಮೃತರಾದ ಕೂಚ್‌ಬಿಹಾರ್ ಮಹಾರಾಜರವರಿಗೆ ಜರುಗಿರುವಂತೆ ನಡೆಯಿಸಲ್ಪಡುವುದೆಂದು ರೆಡ್ಡಿನಾಯುಡುರವರು ಸೂಚಿಸಿದರು.

ಆಸ್ಟ್ರಿಯಾದವರಿಗೆ ವಿಧಿಸಿರುವ ಸಂಧಿನಿಯಮಗಳು.

ಈ ಸಂಧಿಯ ಮುಖ್ಯಭಾಗಗಳು ಹೀಗಿರುತ್ತವೆ—ಆಸ್ಟ್ರಿಯಾಕ್ಕೂ ಹಂಗೇರಿ, ಜೆಕೋಸ್ಲಾವಾಕಿಯಾವಿಗೂ ಮಧ್ಯದಲ್ಲಿರುವ ಎಲ್ಲೆಕಟ್ಟಿಗೆ ಸಂಬಂಧಿಸಿದ ನಿಯಮಗಳು ಈಗ ವ್ಯತ್ಯಾಸಮಾಡಲ್ಪಟ್ಟಿವೆ. ಜರ್ಮನ್ ಭಾಷೆಯನ್ನು ಮಾತನಾಡುತ್ತಿರುವ ಪ್ರಜೆಗಳು ಇರತಕ್ಕ ರಾಷ್ಟ್ರಗಳನ್ನು ಆಸ್ಟ್ರಿಯಾದಲ್ಲಿ ಸೇರಿಸಿಬಿಡುವುದಕ್ಕಾಗಿ ಇಂಥ ಏರ್ಪಾಟು ಮಾಡಲ್ಪಟ್ಟಿತೆಂದು ತಿಳಿಯಸಲ್ಪಟ್ಟಿದೆ. ಡಾನ್ಯೂಬ್ ನದಿಗೆ ದಕ್ಷಿಣಭಾಗದಲ್ಲಿರುವ ಪ್ರೆಸ್ಬರ್ಗಿಗೆ ದಕ್ಷಿಣದಲ್ಲಿ ಎಲ್ಲೆಕಟ್ಟೆಯು ಈಗ ಏರ್ಪಡಿಸಲ್ಪಡುವುದು. ಆಸ್ಟ್ರಿಯನ್ ಸೈನ್ಯವು ೩೦ ಸಾವಿರಕ್ಕೆ ಮಿಗಿಲಾಗಿರಕೂಡದು. ಮೂರು ತಿಂಗಳ ಕಾಲದೊಳಗೆ ಸೇನಾಸಂಖ್ಯೆಯನ್ನು ಈ ಮಿತಿಗೆ ಇಳಿಯಿಸಬೇಕು. ನಿರ್ಬಂಧಸೈನಿಕತತ್ವವನ್ನು ತಪ್ಪಿಸಿಬಿಡಬೇಕು. ಇಚ್ಛೆಕಸೈನಿಕರನ್ನು ಸೇರಿಸಿಕೊಳ್ಳಬಹುದು. ಇದರಿಂದ ಸಾಧಾರಣ ಕಾಲದ ಸೇನಾಸಂಖ್ಯೆಯನ್ನು ತಗ್ಗಿಸುವುದಕ್ಕೆ ಅವಕಾಶವಾಗುವುದು. ಎಲ್ಲೆಕಟ್ಟುಗಳನ್ನು ಕಾಪಾಡಿಕೊಳ್ಳುವುದಕ್ಕೂ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕೂ ಮಾತ್ರ ಸೈನ್ಯವನ್ನು ಉಪಯೋಗಿಸಬೇಕು. ಹೆಚ್ಚಾಗಿರುವ ಯುದ್ಧಸಾಮಗ್ರಿಯನ್ನೆಲ್ಲಾ ಮಿತ್ರಮಂಡಲಿಗೆ ಒಪ್ಪಿಸಿಬಿಡಬೇಕು. ಮುಂದೆ ಅವಶ್ಯಕವಾದಷ್ಟು ಯುದ್ಧಸಾಮಗ್ರಿಯನ್ನು ಪ್ರತ್ಯೇಕವಾಗಿ ಒಂದೇ ಸ್ಥಳದಲ್ಲಿ ನಿರ್ಮಿಸಬೇಕು. ಅದನ್ನು ಹೊರಗಣಿಂದ ತರಿಸಿಕೊಳ್ಳುವುದಕ್ಕೇ ಆಗಲೀ ಇಲ್ಲಿಂದ ಹೊರಕ್ಕೆ ಕಳುಹಿಸಿಕೊಡುವುದಕ್ಕೇ ಆಗಲೀ ಮಾಡಕೂಡದು. ಆಸ್ಟ್ರಿಯಾದವರು ಕೊಡಬೇಕಾದ ನಷ್ಟಪರಿಹಾರದ ವಿವರವು ೧೯೨೧ ನೆ ವರ್ಷದ ಮೇ ತಾ|| ೨೧ ರಲ್ಲಿ ತಿಳಿಯಿಸಲ್ಪಡುವುದು. ಆ ಹಣವನ್ನು ಆಸ್ಟ್ರಿಯನ್ನರು ೩೦ ವರ್ಷಗಳಲ್ಲಿ ಕಂತುಗಟ್ಟಲೆ ಕೊಟ್ಟು ತೀರಿಸಬೇಕು. ೨ ತಿಂಗಳೊಳಗಾಗಿ ಆಸ್ಟ್ರಿಯನ್ನರು ವ್ಯಾಪಾರಿ ಹಡಗುಗಳನ್ನೂ ಮೀನುಹಿಡಿಯುವ ದೋಣಿಗಳನ್ನೂ ಮಿತ್ರಮಂಡಲಿಯ ಸ್ವಾಧೀನಪಡಿಸಬೇಕು. ನೂರಕ್ಕೆ ೨೦ ರಂತೆ ತಮ್ಮಲ್ಲಿರುವ ಹೊಳೆಯ ಹಡಗುಗಳನ್ನು ಕೂಡ ಅವರು ಕೊಟ್ಟುಬಿಡಬೇಕು. ಆಸ್ಟ್ರಿಯಾದವರು ಧ್ವಂಸಮಾಡಿರುವ ದೇಶಭಾಗಗಳನ್ನೆಲ್ಲಾ ಅವರು ಜೀರ್ಣೋದ್ಧಾರಮಾಡಿಕೊಡಬೇಕು. ಗೊತ್ತುಮಾಡಿದಷ್ಟು ಪ್ರಾಣಿಗಳನ್ನು ಇಟಲಿ, ಸರ್ವಿಯಾ, ರುಮೇನಿಯಾ ದೇಶಗಳಿಗೆ ೩ ತಿಂಗಳೊಳಗಾಗಿ ಆಸ್ಟ್ರಿಯನ್ನರು ಒಪ್ಪಿಸಬೇಕು. ಯುದ್ಧಕ್ಕೆ ಮುಂಚೆ ಇದ್ದ ರೀತಿಯಲ್ಲಿ ೫ ವರ್ಷಗಳೊಳಗಾಗಿ ಮರದ ಹಲಗೆ ಮೊದಲಾದ ಸಾಮಗ್ರಿಗಳನ್ನು ಮೇಲೆ ಕಂಡ ದೇಶಗಳಿಗೆ ಒದಗಿಸಿಕೊಡಬೇಕು. ಆಸ್ಟ್ರಿಯಾದವರು ೧೦ ವರ್ಷಗಳ ಕಾಲದಿಂದ ದಾಳಿಯಿಟ್ಟು ಹೋದ ಪ್ರದೇಶಗಳ ಕಡೆಯಿಂದ ಹೊತ್ತುಕೊಂಡು ಹೋಗಿರುವ ಚಿತ್ರವಸ್ತುಗಳು ಪಟಗಳು ಮೊದಲಾದ ಪದಾರ್ಥಗಳನ್ನೆಲ್ಲಾ ಅವರವರಿಗೆ ಕೊಟ್ಟುಬಿಡಬೇಕು. ಇಟಲಿಯವರಿಗೆ ಮಾತ್ರ ೧೮೬೦ ನೆ ವರ್ಷದಿಂದಲೂ ಅವರ ದೇಶದಿಂದ ಹೊತ್ತುಕೊಂಡು ಹೋಗಿರುವ ಸಾಮಗ್ರಿಗಳನ್ನೆಲ್ಲಾ ಕೊಟ್ಟುಬಿಡಬೇಕು. ಆಸ್ಟ್ರಿಯಾದಲ್ಲಿ ಕೆಲ ಭಾಗವನ್ನು ಆಕ್ರಮಿಸಿಕೊಂಡು ನಿಂತಿರುವ ಮಿತ್ರಮಂಡಲಿ ಸೈನ್ಯದ ವೆಚ್ಚದ ಭಾರವನ್ನೆಲ್ಲಾ ಆಸ್ಟ್ರಿಯಾವು ವಹಿಸಬೇಕು. ೧೯೨೧ ನೆ ವರ್ಷದ ಮೇ ತಾ|| ೨೧ ರೊಳಗಾಗಿ ಭಂಗಾರವನ್ನು ತಮ್ಮ ದೇಶದಿಂದ ಹೊರಕ್ಕೆಲ್ಲಿಗೂ ಕಳುಹಿಸಿಕೊಡಲಾಗದು, ಹೊಸದಾಗಿ ನಿರ್ಮಿಸಲ್ಪಡುವ ರಾಷ್ಟ್ರಗಳು ಯುದ್ಧಕ್ಕೆ ಮುಂಚೆ ಆಗಿದ್ದ ಸಾಲದ ಭಾರವನ್ನು ಹೊತ್ತುಕೊಳ್ಳಬೇಕು. ಮತ್ತೂ ನಷ್ಟಪರಿಹಾರಕ ಸಂಘದವರು ನಿರ್ಣಯಿಸುವ ಹಣವನ್ನು ತೆರುವ ಬಾಧ್ಯತೆಯನ್ನು ವಹಿಸಿಕೊಳ್ಳಬೇಕು. ಪೂರ್ವದ ಆಸ್ಟ್ರಿಯನ್ ಪ್ರಭುತ್ವದವರು ಮಾಡಿದ್ದ ಸಾಲವನ್ನು ತೀರಿಸುವ ಭಾರವನ್ನು ಈಗಣ ಆಸ್ಟ್ರಿಯನ್ ಪ್ರಜಾಪ್ರಭುತ್ವದವರು ಹೊತ್ತುಕೊಳ್ಳಬೇಕು. ತನ್ನ ಮಿತ್ರಮಂಡಲೀ ದೇಶಗಳಲ್ಲಿರುವ ಅಂತರ್ಜಾತೀಯ ಆರ್ಥಿಕಸಂಬಂಧವನ್ನೂ ವ್ಯಾಪಾರಸಂಬಂಧವನ್ನೂ ಆಸ್ಟ್ರಿಯಾವು ಬಿಟ್ಟುಬಿಡಬೇಕು. ಜರ್ಮನಿ, ಹಂಗೇರಿ, ಬಲ್ಗೇರಿಯಾ, ತುರ್ಕಿ ದೇಶಗಳ ವ್ಯವಹಾರಕ್ಕೆ ಇದು ಸಂಬಂಧಿಸುವುದು. ತುರ್ಕಿಯ ಸಾಲಕ್ಕಾಗಿ ಕೊಡಬೇಕಾಗಿರುವ ಚಿನ್ನವನ್ನು ಅವರಿಗೆ ಕೊಟ್ಟುಬಿಡಬೇಕು. ಬುಕಾರೆಸ್ಟ್, ಬ್ರೆಸ್ಟ್‌ಲಿಟೋವಿಸ್ಕ್ ಪಟ್ಟಣಗಳಲ್ಲಿ ನಡೆದಿರುವ ಒಡಂಬಡಿಕೆಗಳ ಪ್ರಕಾರ ಆಸ್ಟ್ರಿಯಾಕ್ಕೆ ಬಂದಿರುವ ಲಾಭಗಳನ್ನೆಲ್ಲಾ ಅದು ಬಿಟ್ಟುಬಿಡಬೇಕು. ಅದನ್ನು ಮಿತ್ರಮಂಡಲಿ ವಶಪಡಿಸಬೇಕು. ನೂತನ ಲೋಹಮಾರ್ಗಸ್ಥಾಪನ ವಿಷಯವನ್ನು ವ್ಯವಸ್ಥೆಗೊಳಿಸಲಿಕ್ಕೆ ಮಧ್ಯಸ್ಥಗಾರರು ನಿಯಮಿಸಲ್ಪಡುವರು." ಈ ರೀತಿಯಲ್ಲಿ ಏರ್ಪಡಿಸಲ್ಪಟ್ಟಿರುವ ಸಂಧಿನಿಬಂಧನೆಗಳನ್ನು ಉನ್ನತಸಂಘದವರು ಏರ್ಪಡಿಸಿ ಕಳೆದವಾರ ಆಸ್ಟ್ರಿಯನ್ನರ ಕಡೆಯ ಕೌನ್ಟ್‌ವೆನ್ನರ್‌ರವರ ವಶಕ್ಕೆ ಕೊಟ್ಟಿರುವರು. ೧೦ ದಿನಗಳೊಳಗಾಗಿ ಅವರು ಇದಕ್ಕೆ ಪ್ರತ್ಯುತ್ತರವನ್ನು ಕೊಡಬೇಕಾಗಿದೆ.

ಪುತ್ರೋತ್ಸವಾನಂದನ.

ಆಯುರಾರೋಗ್ಯೈಶ್ವರ್ಯಾಭಿವೃದ್ಧಿರಸ್ತು.

ಭಾಮಿನೀಷಟ್ಪದಿ.

ಪೆಂಪಿನಿಂ ಮೈಸೂರನಾಡಿನ | ಸಂಪದವೆ ರೂಪಾಂತುದೆಂಬಾ | ಸೊಂ
ಪಿಗಾಗರವೆನಿಪ ನರಸಿಂಹೇಂದ್ರಭೂಪತಿಗೆ || ಕೆಂಪುಚಲುವಾಂಬೋದರಾಬ್ಧಿ
ಯೊ | ಳಿಂಪಿನಿಂ ಪುತ್ರೇಂದುಬಿಂಬವ | ಲಂಪಿನಿಂದುದಯಿಸುತೆ ಬೀರಿತು
ತಂಪನೀಜಗಕೆ || ೧ ||

ತಾ ಕ ತಾ ತಾ ಸುತರನೆಂಬಿನಿ | ವಾತು ಬೀಳಲ್ಕಿವಗೆ ನಿಜತನು | ಜಾ
ತರಾಸೆಯ ಪೂರ್ಣಗೊಳಿಸುವನೆಂದು ಮನದಂದು || ಭೂತಳಾಧಿಪಜಾಮನೃಪ
ನೇ | ಜಾತನಾದನುಯ ಯುವಮಹೀಶಗೆ | ಪೂತುರೇ ಎನೆ ಜನವು ಬುಧಕರವೊ
ಗೆದುದೀಕ್ಷಿಸುವು || ೨ ||

ಲೋಕಕೋಪವನೆಬ್ಬಿಸುತ್ತಿಡಿಸಿ | ತೂಕಗೈಯಲ್ಕಾಸಿಗೇರಿಸೆ | ಯೇ
ಕದೇಶವು ರಾಜಮಾಳೆಯ ಕೋಪಕದು ಬಿಟ್ಟು || ಏಕಭಾವದಿನನುಜನೇಳ್ಗೆ
ಯ | ಚಾಕಚಕ್ಯತ ನೋಡಿ ಹಿಗ್ಗುವ | ನೇಕಗುಣಯುತ ಕೃಷ್ಣನೃಪನುಲ್ಲಾ
ಸಕಿಲ್ಲಳವು || ೩ ||

ಹುಟ್ಟಿನೇನಳಿಯೊಳಗೆ ಮಕ್ಕಳು | ಹುಟ್ಟಿದೊಡೆ ಫಲವೇನು ತಮ್ಮನು |
ಹುಟ್ಟಿಸಿದ ತಾಯ್ತಂದೆಗಳನೇ ತುಷ್ಟಿಪಡಿಸುವವು || ಪಟ್ಟದರಸರೊಳುದಿಸಲ
ವು ತಾಂ | ಪುಟ್ಟಿದೊಡನೆಯೆ ಪಲವುಬಗೆಯಲಿ | ಕೊಟ್ಟು ಸುಖಸಂಪದವನ
ಖಿಲಂಗಿಷ್ಟವೆನಿಸುವುವು || ೪ ||

ಮುಕ್ಕೆಳ್ಳನಿಸಿ ರಾಜವಂಶಕೆ | ತಕ್ಕುದೆಂಬಾನುಡಿಗೆ ಕಳಶವ | ನಿಕ್ಕು
ವಂದದೊಳೆಸೆವುದುತ್ಸಹನಿಂದುಜನಮನದೆ || ಅಕ್ಕರಿಂ ಗೌರೀಶರೀಶಿಶು |
ಗಕ್ಕುವಾರೋಗ್ಯವನು ಮೋಡದ | ನಕ್ಕತುಳದಾಯುವನು ಜನನಿಗ ಮಿ
ತ್ತು ರಕ್ಷಿಸುಗೆ || ೫ ||

ಸಲಿಸಿ ಜನವಿಪ್ರಾರ್ಥನವನು ಬಲು | ಗೆಲವನೀಯುತೆ ಮನಕೆ ಯುವನೃ
ಪ | ಗೊಲಿದು ಸುತಸಂತಾನವೇಳ್ಗೆಯನಿತ್ತು ಕರುಣಾರ್ದ್ರೆ || ಪಲಬಗೆಯದೇವ
ರುಗಳಿರುತಿರೆ | ಕುಲಕೆ ನಿನ್ನನೆ ದೈವವೆನ್ನುತೆ | ನಲಿವ ಭೂಪರನೊಲಿದು ಚಾ
ಮುಂಡಾಂಬೆ ನೀಂ ಸಲಹೌ || ೬ ||

H. Lingaraja Urs, *Muzrai Bhashi.*

ಶ್ರೀಮದ್ಯುವರಾಜಪುತ್ರೋತ್ಸವ ಪಂಚರತ್ನಂ.

|| ವಾರ್ಧಕಷಟ್ಪದಿ ||

ಸಿದ್ಧಾರ್ಥಿವರ್ಷದಾಷಾಢಕೃಷ್ಣದ ಷಷ್ಠಿ | ಬದ್ಧಿಸಿದ ಶುಕ್ರವಾರದ
ಧನುರ್ಲಗ್ನಸಂ | ಸಿದ್ಧಸುಮುಹೂರ್ತಮದು ಯುವರಾಜಪುತ್ರೋದಯೋ
ತ್ಸವದ ಸಂಬಂಧದಿಂ || ಶುದ್ಧಮಹ ಮೈಸೂರ ನಾಡಿಗೆಲ್ಲಂ ಸುಪ್ರ | ಸಿ
ದ್ಧಸಂಸ್ಮರಣೀಯದಿನಮಾದು ದಿಂದೆಮ್ಮ | ಸುದ್ಧಿಪ ಭೂಪಸೋದರರ ಬ
ಯಕೆಯು ಪೂರ್ಣವಾದು ದೆಮ್ಮಯ ಭಾಗ್ಯವು ||೧||

|| ಕಂದಪದ್ಯಂ ||

ಯದುವಂಶಸುಧಾಂಬುಧಿಯೊಳ್ | ಬಿದು ಪುಟ್ಟಿದ ನಿಂದು ನಾಡ
ಚಿಂತಾತಿಮಿರಂ || ಹದೆಗೆಟ್ಟೋಡಿತು ಸಜ್ಜನ | ಹೃದಯಚಕೋರಾಳಿ ನಲಿ
ದು ನರ್ತಿಸುತಿರ್ಪಂ ||೨||

ಬೆಳಗಿತು ವಿದ್ಯುದ್ದೀಪಾ | ವಳಿಯಿಂ ದರಮನೆಯ ಪುರಗು ತೆಗೆ
ಯದರಿಂದೇಂ || ತೊಳಗಿತ್ತೊಳಗುಂ ಪುರಗುಂ | ವಿಳಸಿತಸಂತಾನರತ್ನದೀ
ಪದಿ ನಿದೆರಿಂ ||೩||

ಮೈಸೂರಿನ ಪುರಮೊಂದೆರ | ದಾಸೌದಾಮಿನಿಯ ದೀಪ್ತಿಯಿಂ ಬೆಳ
ಗುಗು ಮೀ || ಭಾಸಿಪ ಯದುಕುಲವೀಪದಿ | ನೀಸಂಸ್ಥಾನಮೆ ಪಮಂತು
ಬೆಳಗುಗುಮಲ್ತೆ ||೪||

ಯದುವಂಶಕಲ್ಪತರು ಪ | ಣ್ತಿದು ತಮುಪಾಶ್ರಿತಜನರ್ ಸಫಲರ
ಪ್ಪುದದೇ || ನದುಬುಹಮ ಯಮ್ಮ ಸೌಭಾ | ಗ್ಯದ ಖನಿಯನಿದಂ ಕಿಡಂಗಿ
ಪೊರೆಗೆ ಮಹೇಶಂ ||೫||

ಯಚ್. ಆರ್. ಕೆಂಬಸವಶಾಸ್ತ್ರಿ, ಆಸ್ಥಾನ ವಿದ್ವಾನ್.

ಪತ್ರವ್ಯವಹಾರ.

ಸೋಲಾಪೂರ ವೀರಶೈವ ಮಹಿಳಾಜ್ಞಾನಮಂದಿರ.

ಈ ಸಂಸ್ಥೆಯ ಮೊದಲನೆ ವಾರ್ಷಿಕಸಭೆಯ ಸಮಾರಂಭವು ಶ್ರೀಮಂತ ಚನ್ನಬಸಪ್ಪ ಮಡಕಿ ಅವರ ರಮ್ಯವಾದ ಮೇಲುಮಂದಿರದಲ್ಲಿ ತಾರೀಖು ೨೦-೭-೧೯೧೯ (ಆಷಾಢ ಬಹುಳ ೮ ರವಿವಾರ) ಜರುಗಿತು. ಮಂದಿರವು ತಳಿರುತೋರಣ ಬಾಳೇಕಂಬಗಳಿಂದಲೂ, ಧ್ವಜಪತಾಕೆಗಳಿಂದಲೂ, ನೌಬತ್ತು ಮೊದಲಾದ ವಾದ್ಯವಿಶೇಷಗಳಿಂದಲೂ ಒಳ್ಳೆ ಶೋಭೆಯುಳ್ಳದ್ದಾಗಿದ್ದಿತು. ಸಭೆಗೆ ಸರಾಸರಿ ೨೦೦ ಕ್ಕಿಂತ ಹೆಚ್ಚಾಗಿ ಹೆಣ್ಣುಮಕ್ಕಳು ನಿಯಮಿತ ವೇಳೆಗೆ ಬಂದಿದ್ದರು. ಅಧ್ಯಕ್ಷಸ್ಥಾನವನ್ನು ಶ್ರೀ|| ಸೌ|| ಆನಂದೀಬಾಯಿ ದೀಕ್ಷಿತ ಮಿಸ್ಟ್ರೆಸ್ ಜಡ್ಜ ಇವರು ಅಲಂಕರಿಸಿದ್ದರು. ಪದ್ಧತಿಯಂತೆ ಕಾರ್ಯಕ್ರಮದ ಆರಂಭವಾಗಿ, ಮೊದಲು ಶ್ರೀ|| ಸೌ|| ಭಾಗೀರಥೀಬಾಯಿ ಕಟಾಪಿ, ಶ್ರೀ|| ಸೌ|| ಪಟ್ಟವ್ವಾಬಾಯಿ ಸರದಾರ, ರಾಧಾಬಾಯಿ ನಕ್ತೆ ಇವರು ಈಶ್ವರಸ್ತುತಿಯ ಪದಗಳನ್ನು ಕಿವಿಗಿಂಪಾಗುವಂತೆ ಹಾಡಿದರು. ಬಳಿಕ ಶ್ರೀ|| ಸೌ|| ಪಟ್ಟವ್ವಾಬಾಯಿ ಸರದಾರ, ಶ್ರೀ|| ಸೌ|| ತ್ರಿವೇಣೀಬಾಯಿ ವಿಶಾಮತಿ, ಶ್ರೀ|| ಸೌ|| ಅನ್ನಪೂರ್ಣಾಬಾಯಿ ಪತ್ರೆ ಇವರು "ರಾಷ್ಟ್ರಪದೇಚ್ಛೆ" ಈ ವಿಷಯದ ಮೇಲೆ ಗಾನರೂಪವಾಗಿ ಸಂವಾದವನ್ನು ಮಾಡಿದರು. ಇದು ಕೇಳುವವರ ಹೃದಯವನ್ನು ಕರಗಿಸಿತು. ಬಳಿಕ ಶ್ರೀ|| ಸೌ|| ಭಾಗೀರಥೀಬಾಯಿ ಕಟಾಪಿ ಇವರು "ಜ್ಞಾನಮಂದಿರ" ಈ ವಿಷಯದ ಮೇಲೆ ಸ್ವತಃ ಮಾಡಿ ತಂದಿದ್ದ ಪದವನ್ನು ಸ್ವತಃ ಹಾಡಿ ತೋರಿಸಿದರು. ಅದರಂತೆ ಶ್ರೀ|| ಸೌ|| ಸಂಗವ್ವಾಬಾಯಿ ಮಡಕಿ ಇವರು ಕನ್ನಡದಲ್ಲಿ ಮಾಡಿದ ಪದವನ್ನು ಸೌ|| ತ್ರಿವೇಣೀಬಾಯಿ ವಿಶಾಮತಿ ಇವರು ಹೇಳಿದರು. ಶ್ರೀ|| ಸೌ|| ನೀಲವ್ವಾಬಾಯಿ ಪತ್ರೆ ಇವರು ಮೇಲೆ ಹೇಳಿದ ಸಂವಾದದ ಭಾವಾರ್ಥವನ್ನು ಕನ್ನಡದಲ್ಲಿ ಎಲ್ಲರಿಗೂ ತಿಳಿಯುವಂತೆ ಹೇಳಿದರು. ಸೌ|| ಪಟ್ಟವ್ವಾಬಾಯಿ ಸರದಾರ ಇವರು "ಜ್ಞಾನಮಂದಿರ" ದ ಮೊದಲನೆ ವಾರ್ಷಿಕ ರಿಪೋರ್ಟನ್ನು ಓದಿದ ಬಳಿಕ ಶ್ರೀ|| ಸೌ|| ಸಂಗವ್ವಾಬಾಯಿ ಮಡಕಿ ಇವರು "ಸ್ತ್ರೀ ಶಿಕ್ಷಣದ ಪ್ರಗತಿಯಾಗುವದಕ್ಕವಶ್ಯಕವದೆ" ಈ ವಿಷಯವನ್ನು ಒಳ್ಳೆ ಕಳಕಳಿಯಿಂದ ಶ್ರೋತೃಗಳಾದ ಸರ್ವಭಗಿನಿಯರ ಮನಸ್ಸಿನಲ್ಲಿ ಚೆನ್ನಾಗಿ ಪ್ರತಿಬಿಂಬಿಸುವಂತೆ ಸುವ್ಯಕ್ತವಾಣಿಯಿಂದ ಹೇಳಿದರು. ಅಲ್ಲದೆ ಭಾಷಣದ ಸಮಾಪ್ತಿಯಾದ ಬಳಿಕ ನಮ್ಮನ್ನಾಳುವ ಬ್ರಿಟಿಸ್ ಸಾರ್ವಭೌಮರಿಗೆ ಅಭೂತಪೂರ್ವ ಜಯಪ್ರಾಪ್ತಿಯಾದುದರಿಂದ ತಮ್ಮ ಸಮಾಜಕ್ಕುಂಟಾದ ಮಹಾನಂದವನ್ನು ತಮ್ಮ ಭಾಷಣದಿಂದ ವ್ಯಕ್ತಗೊಳಿಸಿದರು. ಬಳಿಕ ಅಧ್ಯಕ್ಷಿಣೀಸಾಹೇಬರ ಭಾಷಣವು ಸುಶ್ರಾವ್ಯವಾಯಿತು. ಸೌ|| ಸಂಗವ್ವಾಬಾಯಿ ಮಡಕಿ ಇವರು ಅಧ್ಯಕ್ಷಿಣಿಯರ ಮತ್ತು ಸರ್ವಸಭ್ಯಭಗಿನಿಯರ ಆಭಾರವನ್ನು ಮನ್ನಿಸಿದ ಬಳಿಕ ಹರಿದ್ರಾಕುಂಕುಮ ತಾಂಬೂಲ ವಿನಿಯೋಗ ಮರ್ಯಾದೆಯು ಜರುಗಿ ಮಿಠಾಯಿಯು ಹಂಚಲ್ಪಟ್ಟು ಸಭೆಯ ವಿಸರ್ಜನವಾಯಿತು. ಸಭೆಯ ಆರಂಭಕಾಲದಲ್ಲಿ ಅಧ್ಯಕ್ಷಿಣಿಯರೊಡನೆ ಸರ್ವಸಭ್ಯ ಭಗಿನಿಯರ ಭಾವಚಿತ್ರ (ಫೋಟೋ) ವನ್ನು ತೆಗೆಯುವದರಲ್ಲಿ ಬಂದಿತು.

ಸೋಲಾಪೂರ; ಜ್ಞಾನಮಂದಿರದ ಸೆಕ್ರೆಟರಿ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಧೆ, ಮೊಡವೆ, ಬಜ್ಜೆ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ವಾಸಿಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

26 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಜೆಮ್ಸ್ ಮೊದಲಾದ ಡಿಕ್ಷ್ಣರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ ಅಂಚೆ ವೆಚ್ಚ ಬೇರೆ (ನೋಟ್-ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ.)

8 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಏ. ಎ. ಎಸ್. ಪಾಣಿ ಅಂಡ್ ಕೊ,
26 ಸಾಹುಕಾರಪೇಟೆ, ಮದರಾಸ್.

೧ ವರುಷಕ್ಕೆ ಚಂದಾ ರೂ. ೨-೮-೦.

ವ್ಯಾಪಾರನಿರ್ಣಯಪ್ರಕಾಶಿಕೆ ಎಂಬ ಮಾಸಪತ್ರಿಕಾ.

ಇದು ವರ್ತಕರಿಗೂ, ವ್ಯವಸಾಯಗಾರರಿಗೂ ತುಂಬಾ ಅನುಕೂಲವಾಗಿರುವುದು. ಈ ಮಾಸಪತ್ರಿಕೆಯಲ್ಲಿ ಹತ್ತಿ, ಅರಳೆ, ಅಡಿಕೆ, ಬೆಲ್ಲ ಮೊದಲಾದ ಯಾವತ್ತು ಪದಾರ್ಥಗಳಿಗೂ ಎಲ್ಲಾ ಧಾನ್ಯಗಳಿಗೂ ಪ್ರತಿ ಮಾಸದಲ್ಲಿ ಆಗುವ ತೇಜಿಮಂದಿ ವಿಷಯವನ್ನು ವಿಶದವಾಗಿ ಬರೆಯುತ್ತದೆ. ಪದಾರ್ಥಗಳ ದಾಸ್ತಾ ಮಾಡುವ ಕಾಲ ಮಾರಾಟ ಮಾಡುವ ಕಾಲವನ್ನು ಚೆನ್ನಾಗಿ ಬರೆಯುತ್ತೆ. ಚಂದಾದಾರರಿಗೆ ಪ್ರತಿ ಮಾಸದಲ್ಲಿ ಉಂಟಾಗುವ ಲಾಭ, ಲುಕ್ಸಾನು, ದೇಹಪೀಡೆ, ಪರಿಹಾರಕ್ರಮ ಮೊದಲಾದ ಫಲಗಳನ್ನು ವರ್ತಕರಿಗೂ ವ್ಯವಸಾಯಗಾರರಿಗೂ ಬಹಳ ಉಪಯೋಗಕರವಾದ ನೂತನ ವಿಷಯಗಳನ್ನು ಬರೆಯುತ್ತೆ. ಮೊದಲು ಪ್ರತಿಮಾಸದ ತೇಜಿಮಂದಿ ನಿರ್ಣಯದ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ.

ವಿಳಾಸ:—ಎಡಿಟರ್ ವ್ಯಾಪಾರನಿರ್ಣಯ ಪ್ರಕಾಶಿಕೆ,
2 ಹರಪನಹಳ್ಳಿ ಜಿಲ್ಲಾ ಬಳ್ಳಾರಿ.

"ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ"

ಶ್ರೀ ಶಿವಯೋಗಿಗಳ ಸಂಘ:—ಭಾಗ್ಯಶಾಲಿ ಜನರು ಹಣವು ಖರ್ಚು ಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಿಳೂರ, ಹಾನಗಲ್ಲ, ಹಾಳಕೇರಿ, ಬಿದರೀ, ನಿಡಸೋಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೋ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ಪ್ರತಿಗೆ ರೂ. ೧. ಸಾದಾ ೮ ಆ.

ಹೊಸ ಫೋಟೋ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರಕಮಲವನ್ನು ಪಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನಚಕ್ರ ಪಡಕೊಂಡ ಅತ್ಯಂತ ಸುಂದರವಾದ ಫೋಟೋ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದದಾಯಕ ಫೋಟೋ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ವೀರಭದ್ರದೇವರು:—ವೀರಶ್ರೀಯಿಂದ ತುಂಬಿದ ತೇಜಃಪುಂಜವಾದ ಫೋಟೋ ಕ್ರಯ ಫುಲ್ಲಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಕಾಶಿಕ್ಷೇತ್ರದರ್ಶನ:—ಇದರಲ್ಲಿ ಶಿವಚಿನ್ಹಾಂಕಿತ ನಕ್ಷೆಯಲ್ಲಿ ೧ ಶ್ರೀ ವಿಶ್ವನಾಥ, ಶ್ರೀ ಅನ್ನಪೂರ್ಣಾದೇವಿ, ಶ್ರೀ ಸಾಕ್ಷಿವಿನಾಯಕ, ಶ್ರೀ ಕಾಲಭೈರವ ಇವೆ ಮೊದಲಾದ ಮುಖ್ಯ ೧೫ ದೇವತಾ ಫೋಟೋ ಇದ್ದ ಮೂಲಕ ಶ್ರೀ ಕ್ಷೇತ್ರ ಕಾಶೀಯ ನಿತ್ಯದರ್ಶನ ನಿತ್ಯ ಆಗುವವು. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ. ೧೪×೧೦ ಸೈಜದ ಹಾಳಿನ ಚಿತ್ರದ ಕ್ರಯ ೪ ಆಣೆ.

ಶ್ರೀ ಗೌರಿಗಜಾನನ ವಿನೋದ:—ಅತ್ಯಂತ ಚಿತ್ತಾಕರ್ಷಕವಾದ ಪಾರ್ವತಿ ಗಣಪತಿಯರ ಮೋಹಕ ಲೀಲಾದ ಫೋಟೋ ಕ್ರಯ ಕ್ಯಾಬಿನೆಟ ೮ ಆಣೆ.

ಶ್ರೀ ವೀರಶೈವ ರಾಜಸಮೂಹ:—ಇದರಲ್ಲಿ ಕೊಡುಗದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಪಡಿಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸದ್ಯದ ಪುಂಗನೂರ ಮತ್ತು ಗೊವಾಪ್ರಾಂತದ ಬಾಂದೇವಾಡಿ, ಸ್ಟೊಂದಾದ ಅರಸರ ಫೋಟೋ ೯ ಇರುತ್ತಾವೆ. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಫೋಟೋಲಾಕೇಟ್ಸ.

ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚಿ ಉಪಯೋಗಿಸಲಿಕ್ಕೆ ಅತ್ಯಂತ ಯೋಗ್ಯವಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿಗಳ ಫೋಟೋ ಕೂಡ್ರಿಸಿದ ಅತಿ ಫ್ಯಾನ್ಸಿವಾದ ಬೆಳ್ಳಿ ಲಾಕೆಟಗಳೂ ಸಿಗುತ್ತವೆ. ಕ್ರಯ ಬೆಳ್ಳಿವು ಅರ್ಧ ರೂಪಾಯಿ ಆಕಾರವೂ ನಕ್ಷೆವೂ ರೂ. ೧—೧೪—೮, ಬೆಳ್ಳಿವು ಪಾವಲಿ ಆಕಾರ ನಕ್ಷೆವೂ ರೂ. ೧—೧೨—೦, ಬೆಳ್ಳಿವು ಪಾವಲಿ ಆಕಾರ ಸಾದಾ ಫ್ಯಾನ್ಸಿ ರೂ. ೧—೮—೦, ರೋಲಗೋಲ್ಡ ಭಂಗಾರವೂ ರೂಪಾಯಿ ಆಕಾರವೂ ಸಭೇದ ಸನ್ಮಾನನೀಯ ಸಭಾಸದರಿಗೆ ಮತ್ತು ಸಭೇದ ವ್ಯವಸ್ಥಾಪಕರಾದ ಹ್ಯಾಂಟಿ ಅರಿಗೆ ಕೋಟಿನಮೇಲೆ ಹಚ್ಚುವುದಕ್ಕೆ ಮೆಡಲದಂತೆ ಬಹು ಶೋಭಾಯಮಾನ ಇರುತ್ತವೆ. ಕ್ರಯ ೧ ಕ್ಕೆ ರೂ. ೧—೬—೦, ೧—೮—೦ ಆಣೆ.

ಫೋಟೋ ಬ್ರೂಚಪಿನ:—ಇವು ಕೋಟಿನ ಕಾಲರಮೇಲೆ ಹಚ್ಚುವವೂ ಇದ್ದು ಇದರಲ್ಲಿ ಬೇಕಾದ ದೇವರ, ಅಥವಾ ಸತ್ಪುರುಷರವೂ ೧ ಫೋಟೋ ಕೂಡ್ರಿಸಿ ಸಿಗುತ್ತದೆ. ಕ್ರಯ ಗಿಲ್ಟಬ್ರೂಚವು ೧ಕ್ಕೆ ೬ಆಣೆ, ೮ ಆ.

ಇವುಗಳ ಹೊರ್ತ ಶ್ರೀ ಸೊಲ್ಲಾಪುರ ಸಿದ್ಧರಾಮೇಶ್ವರ, ಹಂಪೆ ವಿರುಪಾಕ್ಷೇಶ್ವರ, ಕಲಬುರ್ಗ ಶರಣಬಸವೇಶ್ವರ, ಗೋಕರ್ಣದ ಮಹಾಬಲೇಶ್ವರ, ಶ್ರೀ ಭ್ರಮರಾಂಬಿಕಾದೇವಿ, ಶ್ರೀ ಕಾಶಿ ಅನ್ನಪೂರ್ಣಾ ಮುಂತಾದ ದೇವರವೂ ಮತ್ತು ಸಮಾಜಸೇವಕ್ಕೆ ಕಂಕಣಬದ್ಧರಾದ ಪ್ರಸಿದ್ಧ ಶ್ರೀಮನ್ನಿರಂಜನ ದಾವಣಗೇರಿ ಮೃತ್ಯುಂಜಯ ಶಿವಯೋಗಿ, ಶ್ರೀ ಗುರುಮಠಕಲ್ಲ ಶಾಂತವೀರಸ್ವಾಮಿ, ಮತ್ತು ೬೪ ನೇ ಪುರಾತನರೆಂಬ ಕೈ|| ಮಹಾತ್ಮಾ ಲಿಂಗಪ್ಪನವರು ಸಿರಸಂಗಿ ದೇಶಾಯಿ, ರಾ|| ಬ|| ರುದ್ರಗೌಡಾ ಅಂಟಾಳ, ವಗೈರೆ ಫೋಟೋಗಳೂ ಸಿಗುತ್ತವೆ. ಕ್ರಯ ಫುಲ್ಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಊರೂರಿಗೆ ಫೋಟೋ ಮತ್ತು ಲಾಕೇಟ ಮಾರಾಟ ಮಾಡುವ ಏಜಂಟರು ಬೇಕು. ಅಭಿಲಾಷೆವುಳ್ಳವರು ಪ್ರೈಸಪಟ್ಟಿ ೬ ಪೈ. ಟಿಕೇಟ ಕಳುಹಿಸಿ ಏಜಂಟ ನಿಯಮ ತರಿಸಿಕೊಳ್ಳಿರಿ.

ಗಂಗಪ್ಪಾ ಜೇರಗೆ ಮಾಲಕ,
2 ದಿ ಶಾರದಾ ಫೋಟೋ ಕಂಪನಿ, ಸೋಲ್ಲಾಪುರ ಸಿಟಿ.

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದು

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 4

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

33

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದಿ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ತೀವ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೧೯ ನೆಯ ಇಸವಿ ಆಗಸ್ಟ್ ತಾ|| ೩ ರಿಂದ ೧೯೧೯ ನೆಯ ಆಗಸ್ಟ್ ತಾ|| ೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಶ್ರಾವಣ ಶು|| ಸಪ್ತಮಿಯಿಂದ ಶ್ರಾವಣ ಶು|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ಮಾಸ
3	[1] ಭಾನು	ಸಪ್ತಮಿ	14-30	ಸ್ವಾತಿ	60	19
4	ಸೋಮ	ಅಷ್ಟಮಿ	19-13	ಸ್ವಾತಿ	0-3	20
5	[2] ಮಂಗಳ	ನವಮಿ	24-17	ವಿಶಾಖಾ	6-32	21
6	[3] ಬುಧ	ದಶಮಿ	29-16	ಅನೂ	13-2	22
7	ಗುರು	ಏಕಾದ	33-44	ಜ್ಯೇಷ್ಠ	19-9	23
8	[4] ಶುಕ್ರ	ದ್ವಾದಶಿ	37-22	ಮೂಲ	24-33	24
9	[5] ಶನಿ	ತ್ರಯೋ	39-56	ಪೂಷಾ	28-54	25

(1) ಶುಕ್ರವಕ್ರಾರಂಭಃ. (2) ಮಂಗಳಗೌರೀವ್ರತಂ. (3) ನಂಜನಗೂಡಿನಲ್ಲಿ ಬೆಳ್ಳಿ ಆನೇವಾಹನ. (4) ವರಮಹಾಲಕ್ಷ್ಮೀವ್ರತಂ, ಅಡಿಕುಶ್ರವಾರ. (5) ಶನಿಪ್ರದೋಷಃ, ಶ್ರಾವಣಶನಿವಾರ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಕೃಷಾ | ಘನಪಥಕೃತಾವತಾರಾ ಪತ್ಯಜ್ಜ ನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಆಗಸ್ಟ್ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೩೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯು ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಚೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.



ಡಾಬು 1 ಕ್ಕೆ ರೂ. 3—0—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
27 ಇರುಳಪ್ಪನಬೀದಿ, ಮದರಾಸ್.

ಮಹಾತ್ಮಗಾಂಧಿ.

ಅವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

44 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಬಲೆಯಂತಿರುವ ಬನಿಯನ್.

ಈಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿ ರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	0—12—0.
12 ಕ್ಕೆ	8—0—0.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸವಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
27 ಇರುಳಪ್ಪನ ಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.
5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಪು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0,



ನಮ್ಮ ವಿಳಾಸ:—ಶ್ರೀ ಸೀತಾರಾಘವ
34 ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲಚರಿತ್ರೆ	೦—೫—೦
ಹರಿಬಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

GOVERNMENT OF HIS HIGHNESS THE MAHARAJA OF MYSORE.

FINANCIAL SECRETARIAT.

NOTIFICATION

No. Fl. 708/G. F. 264—18 Dated 30-7-1919.

The following terms are offered to holders of the Mysore State Loan of 1906.

1. All promissory notes of the Mysore State Loan of 1906 now carrying interest at 4% per annum, will at the option of the holder be converted into new promissory notes of an equal amount carrying interest at 5½% with effect from 1st October 1919.

2. The new promissory notes will be repayable at par after 25 years from 1st October 1919. Government howoever reserve the right of repaying at par at any time after 10 years after re-issue subject to three months' previous notice boing given.

3. Those who desire to avail themselves of the privilege of conversion should tender their notes for conversion not later than the 30th September 1919 when interest will be paid on them at 4% up to the 30th September 1919 inclusive and new 5½% notes bearing interest from 1st October 1919 will be issued in lieu of them. The comptroller will issue subsidiary instructions for the guidance of holders of paper and of Treasuries as regards these transactions. "By ordor"

(Sd) M. N. KRISHNA RAO,
Financial Secretary to Government.

ಬೆಂಗಳೂರು ಸೆಂಟ್ರಲ್‌ಜೈಲ್.

ಸನ್ 1919 ನೇ ಇಸವಿ ಸೆಪ್ಟಂಬರ್ ಗುರ್ರೆ ತಾರೀಖು ಲಾಗಾಯ್ತು, ಡಿಸೆಂಬರ್ 31 ನೇ ತಾರೀಖುವರೆಗೆ ಆಗುವ ನಾಲ್ಕು ತಿಂಗಳ ಪರಿಯಂತ್ರ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸಜಾ ಅನುಭವಿಸುವ ಖೈದಿಗಳ ಉಪಯೋಗಕ್ಕಾಗಿ ಬೇಕಾಗುವ ಜಿನಸಿಯನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡಿಸಿಕೊಳ್ಳಲು ದರಖಾಸ್ತುಗಳು 1919 ನೇ ಇಸವಿ ಆಗಸ್ಟು ಮಾಹೆ 6 ನೇ ತಾರೀಖು ಬುಧವಾರ ಬೆಳಗ್ಗೆ 10 ಘಂಟೆವರಿಗೆ ಸದರಿ ಜೈಲ್ ಸೂಪರಿಂಟೆಂಡೆಂಟ್‌ರವರಿಂದ ಅವರ ಆಫೀಸ್‌ನಲ್ಲಿ ತೆಗೆದುಕೊಳ್ಳಲ್ಪಡುತ್ತವೆ. ಈ ವಿಷಯಕ್ಕೆ ಸಂಬಂಧಪಟ್ಟ ತಪ್ಸೀಲನ್ನು 1919 ನೇ ಇಸವಿ ಜೂನ್ ಮಾಹೆ 19 ನೇ ತಾರೀಖಿನ ಮೈಸೂರು ಗೆಜೆಟ್ 6 ನೇ ಭಾಗದ 180 ಮತ್ತು 181 ನೇ ಪುಟಗಳಲ್ಲಿ ಪ್ರಕಟಿಸಲ್ಪಟ್ಟಿರುತ್ತೆ.

Mahomed Obiedulla,
2 ಸೂಪರಿಂಟೆಂಡೆಂಟ್.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 36

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷರ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಸಿಟಿ ಕೋ ಆಪರೇಟಿವ್ ಬ್ಯಾಂಕ್ (ಲಿಮಿಟೆಡ್) ಮೈಸೂರು.

ಬೇಕಾಗಿದೆ.

ಮೈಸೂರಿನಲ್ಲಿರುವ ಸಿಟಿ ಕೋ ಆಪರೇಟಿವ್ ಬ್ಯಾಂಕಿಗೆ—

ಒಬ್ಬರು ಫುಲ್‌ಟೈಂ ಸೆಕ್ರೆಟರಿ 50 ರೂ. ಇಂದ 100 ರೂ. ವರೆಗೆ ತಲಬು
ಒಬ್ಬರು ಮ್ಯಾನೇಜರು 30 ,, ,, 50 ,, ,,
ಒಬ್ಬರು ಕ್ಯಾಷಿಯರ್ ಅಕೌಂಟೆಂಟ್ } 25 ,, ,, 40 ,, ,,

ಉಮೇದುವಾರರು ಮೈಸೂರು ದೇಶದವರಾಗಿಯೂ, ಕನ್ನಡ ಇಂಗ್ಲೀಷ್ ಮತ್ತು ಲೆಖ್ಖಾಚಾರಗಳನ್ನು ಚೆನ್ನಾಗಿ ಬಲ್ಲವರಾಗಿಯೂ ಇರಬೇಕಲ್ಲದೆ ಸೆಕ್ರೆಟರಿ ಕೆಲಸಕ್ಕೆ ಮಾತ್ರ S. S. L. C. ಪರೀಕ್ಷೆಯನ್ನಾಗಲೀ ಅಥವಾ ಅದಕ್ಕೆ ಸಮಾನವಾದ ಇನ್ಯಾವ ಪರೀಕ್ಷೆಯನ್ನಾಗಲಿ ಕೊಟ್ಟಿರಬೇಕು. ಮತ್ತು ಸಾಕಾದ ಸೆಕ್ಯೂರಿಟಿಗಳನ್ನು ಕೊಡಲೂ ಸಿದ್ಧರಾಗಿರಬೇಕು. ಅಪ್ಲಿಕೇಷನ್‌ಗಳು ಸದರಿ ಬ್ಯಾಂಕು ಸೆಕ್ರೆಟರಿಯವರಿಗೆ ಬರುವ ಸೆಪ್ಟೆಂಬರ್ ೧ನೇ ತಾರೀಖಿನೊಳಗಾಗಿ ತಲುಪತಕ್ಕದ್ದು.

ಸೂ:—ಪ್ರಾರಂಭದಲ್ಲಿ ತಲಬು ಯೋಗ್ಯತಾನುಸಾರವಾಗಿ ನಿಶ್ಚಯಿಸಲ್ಪಡುವುದು.

B. NARASIMHAIENGAR,
ಆನರರಿ ಸೆಕ್ರೆಟರಿ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಆಗಸ್ಟ್ ತಾ|| ೧೦ ನೆಯ ಭಾನುವಾರ.

ಆಹಾರ್ಯವಸ್ತುಗಳು.

ಪ್ರಪಂಚದಲ್ಲಿ ಬರುಬರುತ್ತ ಆಹಾರ್ಯವಸ್ತುಗಳ ಬೆಲೆಯು ವೃದ್ಧಿಯಾಗುತ್ತಲಿರುವುದೇ ಹೊರತು, ಇಳಿಯುತ್ತಲಿಲ್ಲ. ಎಲ್ಲ ಕಡೆಯೂ ಸುಭಿಕ್ಷವಾದರೆ ಅಲ್ಪಸ್ವಲ್ಪಮಾತ್ರ ಬೆಲೆಯು ಇಳಿಯಬಹುದೇ ಹೊರತು ಪೂರ್ವದಂತೆ ಪಲ್ಲ ೧ ಕ್ಕೆ ೨-೩ ರೂ. ನಂತೆ ರಾಗಿಯನ್ನೂ, ೮-೧೦ ರೂ. ನಂತೆ ಅಕ್ಕಿಯನ್ನೂ, ರೂ. ಗೆ ೮-೧೦ ಸೇರಿನಂತೆ ಬೆಣ್ಣೆಯನ್ನೂ ಹೀಗೆಯೇ ಇತರ ಪದಾರ್ಥಗಳನ್ನೂ ಸಹ ಅಗ್ಗವಾಗಿ ಪಡೆಯುವೆವೆಂಬುದು ಸರ್ವಥಾ ಅಸಂಭವವಾಗಿ ತೋರುತ್ತಿದೆ. ಲೋಹಮಾರ್ಗ ಜಲಮಾರ್ಗ ಯಾನಸೌಕರ್ಯಗಳು ಈಚೆಗೆ ಹೆಚ್ಚುತ್ತ ಬಂದುದರಿಂದ ಜಗತ್ತೆಲ್ಲಾ ಒಂದು ಕುಟುಂಬದಂತೆ ಪರಿಣಮಿಸುತ್ತಿದೆ. ಸಮೃದ್ಧವಾಗಿ ಧಾನ್ಯವು ಬೆಳೆದ ಕಡೆಯಿಂದ ಕ್ಷಾಮವು ವ್ಯಾಪಿಸಿರುವ ಕಡೆಗೆ ಅವು ಸಾಗಿಹೋಗಿ ಎರಡು ಸ್ಥಲಗಳನ್ನೂ ಸರಿಪಡಿಸಿಬಿಡುತ್ತವೆ. ಇದರಿಂದ ಬೆಳೆಯುವವರಿಗೆ ಲಾಭವೇ ಹೊರತು ಕೊಂಡು ತಿನ್ನುವ ಜನರೇ ಹೆಚ್ಚಾಗಿರುವ ಪ್ರಪಂಚಕ್ಕೆ ಅಷ್ಟು ಹಿತವಾಗುವುದಿಲ್ಲ. ಎಷ್ಟೇ ಧನಕನಕಗಳಿದ್ದರೂ ಜೀವನಕ್ಕೆ ಮುಖ್ಯಾಧಾರವಾಗಿರುವ ಆಹಾರ್ಯವಸ್ತುಗಳು ದುರ್ಲಭವಾದರೆ ಇತರ ಸಂಪತ್ತುಗಳೆಲ್ಲಾ ಹೇಗೆ ಶುಷ್ಕವಾಗಿಹೋಗುವುವೋ ಅದು ಕಳೆದ ೩-೪ ವರ್ಷಗಳ ಅನುಭವದಿಂದ ಜಗತ್ತಿಗೆಲ್ಲಾ ಗೊತ್ತಾಗಿಹೋಗಿದೆ. ಅದುಕಾರಣ ಈಗ ಪ್ರಪಂಚದ ಮೇಲಿರುವ ದೀರ್ಘದರ್ಶಿಗಳ ಗಮನವೆಲ್ಲಾ ಆಹಾರ್ಯಸಮಸ್ಯೆಯ ಕಡೆಗೆ ತಿರುಗಿರುತ್ತದೆ. ತಮ್ಮ ಜೀವಿತಕಾಲದ ಮುಖ್ಯ ಭಾಗವನ್ನೆಲ್ಲಾ ರಾಸಾಯನಿಕಶಾಸ್ತ್ರ ಪರಿಶೋಧನೆಗಾಗಿಯೇ ವಿನಿಯೋಗಿಸಿ ಲೋಕಪ್ರಸಿದ್ಧರಾಗಿರುವ ಕಲ್ಕತ್ತಾದ ಸರ್ ಪಿ. ಸಿ. ರಾಯಿಯವರು ಈ ಮುಖ್ಯಸಮಸ್ಯೆಯನ್ನು ಕುರಿತು ಕಳೆದವಾರ ಕಲ್ಕತ್ತಾದ ವಿಶ್ವವಿದ್ಯಾಲಯ ಭವನದಲ್ಲಿ ಒಂದು ಅಮೋಘವಾದ ಉಪನ್ಯಾಸವನ್ನು ಮಾಡಿರುತ್ತಾರೆ. ಆ ಉಪನ್ಯಾಸಶ್ರವಣಕ್ಕಾಗಿ ಅನೇಕಾನೇಕ ಸುಪ್ರಸಿದ್ಧ ವಿದ್ವಾಂಸರೂ ದೇಶಾಭಿಮಾನಿಗಳೂ ಆದ ಸಾವಿರಾರು ಮಂದಿಗಳು ಬಂದು ನೆರೆದಿದ್ದರು. ಆ ಉಪನ್ಯಾಸವು ಸರ್ವರಿಗೂ ಶ್ರೋತವ್ಯವಾಗಿರುವುದು. ಅದುಕಾರಣ ಇಲ್ಲಿ ಅದರ ಸಾರಾಂಶವನ್ನು ಕೊಟ್ಟಿರುತ್ತೇನೆ.—

"ಜಗತ್ತಿನ ಪ್ರಸ್ತುತಸ್ಥಿತಿಯನ್ನು ಅವಲೋಕಿಸಲಾಗಿ ನನ್ನ ದೃಷ್ಟಿಯನ್ನು ಆಹಾರ್ಯಸಮಸ್ಯೆಯ ಕಡೆಗೆ ತಿರುಗಿಸಬೇಕಾಗಿ ಬಂದಿರುವುದು. ಯುದ್ಧವು ನಡೆದ ೪ ವರ್ಷಗಳ ಕಾಲದಲ್ಲಿ ರಸಾಯನಶಾಸ್ತ್ರ ಸಂಬಂಧವಾದ ಮಾರ್ಪುಗಳು ಅತ್ಯದ್ಭುತವಾಗಿ ನಡೆದಿರುವುವು. ನಮ್ಮ ದೇಶದಲ್ಲಿ ಆಂಗ್ಲಪ್ರಭುತ್ವವು ಆರಂಭವಾದೀಚೆಗೆ ನಡೆಯಿಸುತ್ತ ಬಂದಿರುವ ವಿದ್ಯಾಭ್ಯಾಸ ಪದ್ಧತಿಯು ಒಂದೇ ಮಾರ್ಗವುಳ್ಳುದಾಗಿದೆ. ಅದನ್ನು ಅವರು ಈಗ ಉಪಸಂಹರಿಸಬೇಕು. ಈಗಣ ಅವರ ವಿಶ್ವವಿದ್ಯಾಲಯವು ಪ್ರತಿವರ್ಷವೂ ಕೆಲಮಂದಿ ಪಟ್ಟಾಂಚಿತರನ್ನು ನಿರ್ಮಿಸುವ ಯಂತ್ರರೂಪವಾಗಿ ಉಪಯೋಗಪಡುತ್ತಿದೆ. ಇಂಥ ಪಟ್ಟಾಂಚಿತರ ಮಾರಕಟ್ಟೆನಲ್ಲಿ ಎಷ್ಟುಮಾತ್ರದ ಬೆಲೆಯಿರುವುದೋ ಅದನ್ನು ಈಗ ವಿಚಾರಿಸಬೇಕಾಗಿದೆ. ಬಿ. ಎ., ಎಂ. ಎ., ಡಿಗ್ರಿಗಳನ್ನು ಹೊಂದಿದ ಬಳಿಕ ಅನೇಕಮಂದಿ ಪಟ್ಟಾಂಚಿತರು ತಮ್ಮ ಪರೀಕ್ಷಾವಿಜಯವನ್ನು ಕುರಿತು ಸಂತೋಷಿಸುವುದಕ್ಕೆ ಪ್ರತಿಯಾಗಿ ದುಃಖಪಡುತ್ತಿರುವರು. ಪರೀಕ್ಷೆಯಲ್ಲಿ ಒಂದುವೇಳೆ ಅಪಜಯವನ್ನು ಪಡೆದರೆ ಅವರು ಮರಳಿ ಸುಲಭವಾಗಿ ಕಲಾಶಾಲೆಗೆ ಸೇರಿ ಓದಬಹುದು. ಕೃತಾರ್ಥರಾದ ಬಳಿಕ ಮುಂದೇನು ಮಾಡಬೇಕೋ ಅವರಿಗೆ ತೋಚುವುದಿಲ್ಲ. ಇಂಥ ದುಸ್ಥಿತಿಯನ್ನು ನಿವಾರಿಸುವುದಕ್ಕೆ ಮಾರ್ಗವಾವುದೋ ಅದನ್ನು ಕಂಡುಹಿಡಿಯಬೇಕಾಗಿದೆ. ಇದುವರೆಗೆ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಕೃತಾರ್ಥರಾದ ಮಾತ್ರದಿಂದಲೇ ಅವರುಗಳಿಗೆ ತಿಂಡಿಗಾಗಿ ಹುಡುಕಿಕೊಂಡುಹೋಗಬೇಕಾದ ಅವಶ್ಯಕತೆಯಿರುತ್ತಿರಲಿಲ್ಲ. ಪರೀಕ್ಷೆಯಲ್ಲಿ ಉತ್ತೀರ್ಣರಾಗದವರುಗಳು ತಮ್ಮ ಜೀವಿತವೇ ವ್ಯರ್ಥವೆಂದು ಸಂತಾಪಪಡುತ್ತಿದ್ದರು. ವಂಗಜಾತೀಯರೆಲ್ಲರೂ ತಾವು ವಿಶ್ವವಿದ್ಯಾಲಯ ಪರೀಕ್ಷೆಯನ್ನು ಕೊಡುವುದಕ್ಕೇ ಹುಟ್ಟಿರುವೆವೆಂದು ತಿಳಿದಿದ್ದಂತೆ ತೋರುವುದು. ತಮ್ಮ ೫-೬ ನೆ ವಯಸ್ಸಿನಿಂದ ೨೫ ನೆ ವಯಸ್ಸಿನವರೆಗೂ ಪರೀಕ್ಷೆಯ ಡಿಗ್ರಿಗಳನ್ನು ಸಂಪಾದಿಸುವುದಕ್ಕಾಗಿಯೇ ಯುವಕರು ತಮ್ಮ ಜೀವಿತವನ್ನೆಲ್ಲಾ ಧಾರೆಯೆರೆದು, ಅದು ಲಭಿಸಿದ ಬಳಿಕ ಕಣ್ಣುಗಳು ಗುಳಿಬಿದ್ದು, ದೇಹವು ದುರ್ಬಲವಾಗಿ, ಮನಸ್ಸು ಚಪಲವಾಗಿ, ಎಲ್ಲತೆರದಿಂದಲೂ ಜೀರ್ಣರಾಗಿ ಹೋಗುತ್ತಿದ್ದರು. ಇಷ್ಟು ಕಷ್ಟಪಟ್ಟರೂ ಅಂಥವರಿಗೂ ಆಹಾರಸಮಸ್ಯೆಯು ಪರಿಷ್ಕೃತವಾಗುತ್ತಲಿಲ್ಲ. ದೇಶಾಭ್ಯುದಯವನ್ನು ಕೋರುವವರೆಲ್ಲರೂ ಈ ಆಹಾರಸಮಸ್ಯೆಯನ್ನು ದೀರ್ಘವಾಗಿ ಯೋಚಿಸಬೇಕು. ಸ್ವಾಮಿವಿವೇಕಾನಂದರವರು ತಮ್ಮ ದೇಶೀಯರನ್ನು ಕುರಿತು "ಹೊಟ್ಟೆಯನ್ನು ತುಂಬಿಕೊಳ್ಳುವ ಮಾರ್ಗವನ್ನು ಮೊದಲು ಹುಡುಕಿಕೊಳ್ಳಬೇಕು" ಎಂದು ಉಪದೇಶ ಮಾಡಿರುವರು. ನಾವು ತತ್ತ್ವವೇತ್ತೃಗಳೆಂದು ಕೆಲವರು ಹೇಳಿಕೊಳ್ಳುವರು. ಆದರೆ ಯಾವತತ್ತ್ವವೂ ಶುಷ್ಕದೇಹಿಗಳ ಮಧ್ಯದಲ್ಲಿ ಅಭಿವೃದ್ಧಿಗೊಳ್ಳಲಾರದು. ರವೀಂದ್ರನಾಥ ಠಾಕೂರ್‌ರವರೂ ಕೂಡ ಈ ಆಹಾರಸಮಸ್ಯೆಯನ್ನು ಕುರಿತು ಒತ್ತೊತ್ತಿ ಹೇಳಿರುವರು. ಓದಿ ಪರೀಕ್ಷೆ ಕೊಟ್ಟು ಪಟ್ಟಾಂಚಿತರಾದ ಕೂಡಲೇ ನಮ್ಮ ಯುವಕರು ವೃತ್ತಪತ್ರಿಕೆಗಳಲ್ಲೂ ಸರ್ಕಾರಿ ಗೆಜೆಟ್ಟುಗಳಲ್ಲೂ "ಬೇಕು, ಬೇಕು" ಎಂದು ತಿಳಿಯಿಸುವ ಪ್ರಕಟನೆಗಳ ಹಾದಿಯನ್ನೇ ನೋಡುತ್ತಲಿರುವರು. ಯಾವುವಾದರೊಂದು ಆಫೀಸಿನಲ್ಲಿ ಉದ್ಯೋಗಸ್ಥಾನವು ಬಿಡುವಾಗಿದ್ದರೆ ಅದರ ಪ್ರಾಪ್ತಿಗಾಗಿ ನೂರುಗಟ್ಟಲೆ ಅಪೇಕ್ಷಾಪತ್ರಗಳು ಬಂದು ದುಮ್ಮಿಕ್ಕುವುವು. ಪಟ್ಟಾಂಚಿತನ ಈಗಣ ಪೇಟೆಬೆಲೆಯು ೧೦೦ ಕ್ಕೆ ೪೪ ರಿಂದ ೫೦ ರ ವರೆಗೂ, ಎಂ. ಎ. ಎಂ. ಎಸ್. ಸಿ. ಪರೀಕ್ಷೆ ಕೊಟ್ಟಿರುವವರ ಪೇಟೆಬೆಲೆಯು ೧೦೦ ಕ್ಕೆ ೭೫ ರಿಂದ ೧೦೦ ರ ವರೆಗೂ ನಿಂತಿರುವಂತೆ ಕಾಣುತ್ತಿದೆ. ಆಂಗ್ಲಪ್ರಭುತ್ವದ ಆರಂಭಕಾಲದಲ್ಲಿ ಆಂಗ್ಲಭಾಷೆಯನ್ನು ಕಲಿತುಕೊಂಡರೆ ಸುಲಭವಾಗಿ ರಾಜಕೀಯೋದ್ಯೋಗಸ್ಥಾನಗಳನ್ನು ಪಡೆದುಕೊಳ್ಳಬಹುದೆಂದು ಅದರ ಅಭ್ಯಾಸವನ್ನು ಯುವಕರು ಮಾಡುತ್ತಿದ್ದರು. ಆಗ್ಗೆ ಅದೇ ಸರಿಯಾಗಿದ್ದಿತು. ಪ್ರತಿಮನುಷ್ಯನ ಬೆಲೆಯೂ ಆತನು ಕಲಿತ ಆಂಗ್ಲಶಬ್ದಗಳ ಇಯತ್ತೆಯನ್ನು ಅನುಸರಿಸಿ ನಿರ್ಣಯಿಸಲ್ಪಡುತ್ತಿದ್ದಿತು. ಕ್ರಮೇಣ ನಮ್ಮ ಭರತಖಂಡದಲ್ಲಿ ಪರ್ಷಿಯನ್ ಭಾಷೆಗೆ ಪ್ರತಿಯಾಗಿ ಆಂಗ್ಲಭಾಷೆಯು ಉಪಯೋಗಿಸಲ್ಪಡುತ್ತ ಬಂದಿತು. ಅದುಕಾರಣ ಸರ್ಕಾರಿಯುದ್ಯೋಗದ ನಿರ್ವಾಹಕ್ಕೆ ಆಂಗ್ಲಭಾಷಾ ಪರಿಚಯವು ಅವಶ್ಯಕವಾಗಿ ಪರಿಣಮಿಸಿತು. ಆಂಗ್ಲೇಯರು ಇತರ ರಾಷ್ಟ್ರಗಳನ್ನು ಸ್ವಾಧೀನಪಡಿಸಿಕೊಂಡಾಗಿನಿಂದಲೂ ವಂಗದೇಶೀಯರು ಉದ್ಯೋಗಗಳಿಗಾಗಿ ಅನ್ಯರಾಷ್ಟ್ರಗಳಿಗೆ ಹೋಗುತ್ತಲಿದ್ದರು. ಆಗ್ಗೆ ಅಂಥ ಸರ್ಕಾರಿ ಉದ್ಯೋಗಗಳನ್ನು ಪಡೆದ ವಿದ್ಯಾಧಿಕರುಗಳು ಅನೇಕಭೋಗಗಳನ್ನು ಅನುಭವಿಸುವುದಕ್ಕೆ ಅವಕಾಶವಿದ್ದಿತು. ಈಗಲಾದರೋ ಅಂಥ ವಿದ್ಯಾಧಿಕರುಗಳು ಸಾಮಾನ್ಯತಃ ನಿರಾಧಾರರಾಗುತ್ತಿದ್ದಾರೆ. ಈಗಣ ವಿದ್ಯಾಧಿಕರಿಗೆ ೩ ಮಾರ್ಗಗಳು ಮಾತ್ರ ಗೋಚರಿಸುತ್ತಿವೆ. ೧ ನೆಯದು ವಕೀಲರಾಗುವುದು, ೨ ನೆಯದು ಮುನ್ಸೀಫರಾಗುವುದು, ೩ ನೆಯದು ಡಾಕ್ಟರಾಗುವುದು.

ಈಗಣ ಅವಸ್ಥೆಯನ್ನು ನೋಡಿದರೆ ನಮ್ಮ ಯುವಕರು ನ್ಯಾಯಶಾಸ್ತ್ರ (ಲಾ) ಗಳನ್ನೋದುವುದನ್ನು ಕೆಲಕಾಲದವರೆಗೆ ಬಿಟ್ಟುಕೊಟ್ಟರೆ ಒಳ್ಳೆಯದು. ಏಕೆಂದರೆ—ವಕೀಲರುಗಳ ಸಂಖ್ಯೆಯು ಈಗಲೇ ಲೆಕ್ಕಕ್ಕೆ ಮಿಂಚಿಹೋಗಿದೆ. ಈ ನನ್ನ ಮಾತಿಗೆ ಬೇರೆ ಅರ್ಥವನ್ನು ಮಾಡಿಕೊಳ್ಳಲಾಗದು. ಪ್ರತಿದೇಶದಲ್ಲೂ ನ್ಯಾಯವಾದಿಗಳೇ ಅಭಿವೃದ್ಧಿಗೆ ಮೂಲಕಾರಣರು. ಎಡ್ಮಂಡ್ ಬರ್ಕ್ ಮಹಾಶಯನೂ ಕೂಡ ನ್ಯಾಯವಾದಿಗಳನ್ನು ಹೊಗಳಿರುವನು. ಬಂಗಾಳಾ ದೇಶದ ಅಭಿವೃದ್ಧಿಗೂ ನ್ಯಾಯವಾದಿಗಳೇ ಕಾರಕರು. ಕೀರ್ತಿಶೇಷರಾದ ಮನಮೋಹನಘೋಷ್, ಲಾಲಮೋಹನಘೋಷ್, ಆನಂದಮೋಹನಬೋಸ್, ಡಬ್ಲ್ಯು. ಸಿ. ಬಾನರ್ಜಿ ಇವರೆಲ್ಲಾ ನ್ಯಾಯವಾದಿಗಳೇ. ಈಗಣ ಸರ್ ಟಿ. ಎನ್. ಪಾಲಿತ್‌ರವರೂ, ಸರ್ ರಸವಿಹಾರಿಘೋಷ್ ಮೊದಲಾದ ವದಾನ್ಯವರೇಣ್ಯರೂ ಕೂಡ ನ್ಯಾಯವಾದಿಗಳೇ. ಆದುದರಿಂದ ನ್ಯಾಯಶಾಸ್ತ್ರಾಭ್ಯಾಸವನ್ನು ನಿಲ್ಲಿಸಿಬಿಡಬೇಕೆಂದು ನಾನು ಹೇಳಿದ ಮಾತ್ರದಿಂದ, ಆ ವೃತ್ತಿಯನ್ನು ತೃಣೀಕರಿಸುವುದು ನನ್ನ ಉದ್ದೇಶವೆಂದು ತಿಳಿಯಬಾರದು. ಆ ನ್ಯಾಯವಾದಿ ವೃತ್ತಿಯಲ್ಲಿ ಇದುವರೆಗೇ ಗಣನಾತೀತರಾದಷ್ಟು ನಮ್ಮ ದೇಶೀಯರು ತುಂಬಿರುವುದರಿಂದ ಅದರ ಗೌರವವು ತಗ್ಗಿಹೋಗುತ್ತಿದೆ. ಒಂದು ಸಬ್‌ಡಿವಿಜನ್ ಕೋರ್ಟಿನಲ್ಲಿ ಪ್ಲೀಡರುಗಳೆಲ್ಲರೂ ಕೂಡಿ ಬಾರ್‌ಲೈಬ್ರರಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಶ್ಯಕವಾದ ಮಾಸಿಕಧನವನ್ನು ಸಲ್ಲಿಸಲಾರದೆ ಮರಗಳ ಕೆಳಗೆ ಸೀಮೆಯೆಣ್ಣೆ ಪೆಟ್ಟಿಗೆಗಳ ಮೇಲೆ ಕುಳಿತು ಹರಟೆಬಡಿದುಕೊಂಡು ಹೋಗುತ್ತಿರುವರು. ಸಕ್ರಮವಾದ ಆಂದೋಳನವೇ ಶ್ರೇಯಸ್ಸಿಗೆ ಮುಖ್ಯಸಾಧನವಾಗುಳ್ಳ ಭರತಖಂಡದಲ್ಲಿ ನ್ಯಾಯಶಾಸ್ತ್ರದ ಅಮೂಲ್ಯತೆಯನ್ನು ಕುರಿತು ಹೆಚ್ಚಾಗಿ ಹೇಳಬೇಕಾದುದಿಲ್ಲ. ಆದರೂ ಸದ್ಯಃ ವಕೀಲರುಗಳಿಗೆ ಗೌರವವಾದ ಜೀವನೋಪಾಧಿಯು ದೊರೆಯುವಂತೆ ಮಾಡುವುದಕ್ಕಾಗಿ ಕೆಲಕಾಲದವರೆಗೆ ಹೊಸಹೊಸ ವಕೀಲರನ್ನು ನಿರ್ಮಿಸುವ ಪ್ರಯತ್ನವನ್ನು ತಪ್ಪಿಸಬೇಕು.

ನಮ್ಮಲ್ಲಿ ಸ್ವದೇಶಾಂದೋಳನವು ಪ್ರಾರಂಭವಾದ ಬಳಿಕ ದೇಶದ ಕೈಗಾರಿಕೆಗಳನ್ನು ಪುನರುದ್ಧಾರಮಾಡಬೇಕೆಂಬ ಕುತೂಹಲವು ದೇಶದಲ್ಲಿ ವ್ಯಾಪಿಸಿತು. ವಿಶ್ವವಿದ್ಯಾಲಯ ಪರೀಕ್ಷೆಯಲ್ಲುತ್ತೀರ್ಣರಾದವರು ಹಿಂದೆ ಬಿದ್ದರು. ನಿಜತತ್ತ್ವವನ್ನು ವಿಚಾರಮಾಡಿದರೆ ದೇಶಾಭ್ಯುದಯಕ್ಕಾಗಿ ಕೃಷಿಯನ್ನು ಮಾಡಿದವರೊಳಗೆ ಅನೇಕಾನೇಕರು ಉನ್ನತವಿದ್ಯಾಭ್ಯಾಸವನ್ನು ಮಾಡಿದವರೇ ಅಲ್ಲವೆಂದು ಗೊತ್ತಾಗುವುದು. ಮೇಧಾವಿಗಳಾದ ಕೇಶವಚಂದ್ರ ಸೇನ್‌ರವರೂ, ಪ್ರತಾಪಚಂದ್ರ ಮಜುಂದಾರ್‌ರವರೂ, ಮ್ಯುನ್ಸಿಪಲ್ ವ್ಯವಹಾರಗಳಲ್ಲಿ ದಕ್ಷರಾಗಿದ್ದ ನಳಿನೀವಿಹಾರ ಸರ್ಕಾರ್‌ರವರೂ, ಪಾರಿಶ್ರಾಮಿಕ ವಿಷಯದಲ್ಲಿ ಪ್ರಮುಖರಾಗಿರುವ ಸರ್ ಆರ್. ಎನ್. ಮುಕರ್ಜಿಯವರೂ, ಪ್ರಸಿದ್ಧ ಇಂಜನಿಯರಾದ ಜೆ. ಸಿ. ಬನರ್ಜಿಯವರೂ, ಕಲ್ಲಿದ್ದಲ ವರ್ತಕರಾದ ಎನ್. ಸಿ. ಸರ್ಕಾರ್‌ರವರೂ, ಲೋಹಮಾರ್ಗಶಾಖೆಯ ಉದ್ಯೋಗದಲ್ಲಿ ಸುಪ್ರಸಿದ್ಧಿ ಪಡೆದ ಎ. ಸಿ. ಘೋಷ್‌ರವರೂ ಸಹ ಉನ್ನತವಿದ್ಯಾಭ್ಯಾಸವನ್ನೇನೂ ಮಾಡಿದವರಲ್ಲ. ಆದರೂ ಅವರ ತಿಳಿವು ಅತ್ಯಂತವಾಗಿ ಪ್ರಕಾಶಿಸಿತು. ಅದು ಪ್ರಾಪಂಚಿಕ ವ್ಯವಹಾರಕ್ಕೂ ಅತಿಶಯವಾಗಿ ಉಪಯೋಗಿಸಿತು. ಪಟ್ಟಾಂಚಿತರಾದ ವಿದ್ಯಾಧಿಕರುಗಳಾದರೋ ಗುಮಾಸ್ತೆಯರುಗಳಂತೆ ಒಂದೇ ವಿಧವಾದ ಕೆಲಸವನ್ನು ಮಾತ್ರವೇ ಮಾಡಬಲ್ಲರು. ಈಗಣ ಗ್ರಾಮಾಂತರಗಳ ಸ್ಥಿತಿಯನ್ನು ಅವಲೋಕಿಸಿದರೆ ಅವರಲ್ಲೂ ಜ್ಞಾನಸಂಪಾದನ ಕುತೂಹಲವು ಹುಟ್ಟಿರುವಂತೆ ಕಾಣುತ್ತದೆ. ನಿಮ್ನಜಾತಿಯವರಲ್ಲೂ ಕೂಡ ಈಗ ವಿದ್ಯಾರ್ಜನಾಸಕ್ತಿಯು ಪ್ರಬಲಿಸುತ್ತಿದೆ. ಆದರೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತ ಬಂದಂತೆ ಕಲಾಶಾಲೆಗಳನ್ನೂ ಅಭಿವೃದ್ಧಿಪಡಿಸುವುದು ಸಾಧ್ಯವೆ? ಸಾಧ್ಯವಲ್ಲ. ಒಬ್ಬ ಮನುಷ್ಯನು ತನ್ನ ಮಕ್ಕಳೆಲ್ಲಾ ಪಟ್ಟಾಂಚಿತರಾಗಬೇಕೆಂದು ಏತಕ್ಕೆ ಸಂಕಲ್ಪಿಸಬೇಕೋ ತಿಳಿಯಲಿಲ್ಲ. ಮರ್ಯಾದೆಯಿಂದ ಜೀವಿಸುವುದಕ್ಕೆ ಸಾಧಕಗಳಾದ ಇತರ ಮಾರ್ಗಗಳೂ ಇತರ ವೃತ್ತಿಗಳೂ ಕಾಣಿಸುತ್ತಲೇ ಇರುವುವು. ಆಂಗ್ಲದೇಶದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯೊಳಗೆ ಉತ್ತೀರ್ಣರಾದವರೊಳಗೆ ೧೦೦ ಕ್ಕೆ ೧೦ ಮಂದಿ ಮಾತ್ರವೇ ಮುಂದಕ್ಕೆ ವಿಶ್ವವಿದ್ಯಾಲಯ ಪರೀಕ್ಷೆಗಳಿಗೆ ಓದುವರು. ಆದರೂ ಆ ದೇಶದಲ್ಲಿ ಈ ಪದ್ಧತಿಯಿಂದ ಯಾವ ಉಪದ್ರವವೂ ಸಂಭವಿಸಿಲ್ಲ. ಅಂಥ ಪದ್ಧತಿಯನ್ನು ನಾವೂ ಅನುಸರಿಸುವುದಾದರೆ ನಮ್ಮ ದೇಶದಲ್ಲಿ ಯಾವ ಉಪದ್ರವವು ಸಂಭವಿಸುವುದೋ ತಿಳಿಯುವುದಿಲ್ಲ.

ಈಗ ಜಾತೀಯಜೀವನದಲ್ಲಿ ಸಂದಿಗ್ಧಾವಸ್ಥೆಯು ಪ್ರಾಪ್ತವಾಗಿರುತ್ತದೆ. ನನ್ನ ವಾರ್ಧಕಾವಸ್ಥೆಯಲ್ಲಿ ನನಗೆ ಭಗವಂತನು ನಿರ್ಣಯಿಸಿ ಅನುಗ್ರಹಿಸಿರುವ ಸ್ವಲ್ಪ ಕಾಲದಲ್ಲಿ ನಾನು ರಸಾಯನ ಶಾಸ್ತ್ರವನ್ನು ಬಿಟ್ಟು ಆಹಾರಸಮಸ್ಯೆಯನ್ನು ಸಾಧಿಸುವುದಕ್ಕಾಗಿ ನನ್ನ ಅವಶಿಷ್ಟಕಾಲವನ್ನೆಲ್ಲಾ ವಿನಿಯೋಗಿಸುವೆನು. ದೇಶದ ಕಣ್ಣೆದಿರಿಗೆ ಕಟ್ಟಿ ನಿಂತಿರುವ ಈ ಆಹಾರ್ಯದ ಕೊರತೆಯ ರೂಪವಾದ ಮಹೋಪದ್ರವವನ್ನು ನಿಮ್ಮ ಅವಗಾಹನೆಗೆ ತರುವುದಕ್ಕಾಗಿ ನಾನು ಪ್ರಯತ್ನಿಸಿರುವೆನು. ಅದಕ್ಕಾಗಿ ಮಾಡಬೇಕಾದ ಕಾರ್ಯಸಾಧನೆಯ ಮಾರ್ಗವನ್ನು ನನ್ನ ಮತ್ತೊಂದು ಉಪನ್ಯಾಸದಲ್ಲಿ ವಿವರಿಸುತ್ತೇನೆ" ಎಂದು ಹೇಳಿ ಸಮಾಪ್ತಿಮಾಡಿ, ಕಡೆಗೆ ನಮ್ಮ ಯುವಕರು ನನ್ನ ಮಾತನ್ನು ಲಾಲಿಸಿ, ಕೆಲ ಕಾಲದವರೆಗೆ ಲಾ ಪರೀಕ್ಷೆಗೆ ಓದುವುದನ್ನು ತಡೆದಿಟ್ಟಿರಬೇಕೆಂದು ಎಚ್ಚರಿಸಿದರು. ಇವರು ಇಷ್ಟರಲ್ಲೇ ಮಾಡಬೇಕೆಂದಿರುವ ಉಪನ್ಯಾಸದಲ್ಲಿ ನಮ್ಮವರು ಆಹಾರ್ಯಸಮೃದ್ಧಿಯ ವಿಷಯವಾಗಿ ಕೈಕೊಳ್ಳಬೇಕಾದ ಮಾರ್ಗಗಳು ವರ್ಣಿಸಲ್ಪಡುವುವೆಂದು ಅದನ್ನು ಕುತೂಹಲದಿಂದ ಸರ್ವರೂ ನಿರೀಕ್ಷಿಸುತ್ತಿರುವರು.

ಮೇಲೆ ಕಂಡ ರಾಯಿರವರ ಉಪನ್ಯಾಸದಲ್ಲಿ-ಉನ್ನತವಿದ್ಯೆಯನ್ನು ಅಭ್ಯಾಸಮಾಡಿದವರ ಸಂಖ್ಯೆಯು ನಮ್ಮ ದೇಶದಲ್ಲಿ ದಿನೇದಿನೇ ಹೆಚ್ಚಿಹೋಗುತ್ತಲೂ ಅಂಥವರಿಗೆ ಸರಿಯಾದ ಜೀವನೋಪಾಧಿ ದೊರೆಯದೆಯೂ, ಆ ಉನ್ನತವಿದ್ಯೆಯ ಗೌರವವೂ ಪ್ರಯೋಜನವೂ ಹೇಗೆ ತಗ್ಗಿಹೋಗುತ್ತಲಿದೆಯೆಂಬ ನಿಜಸ್ಥಿತಿಯು ವರ್ಣಿತವಾಗಿದೆಯೇ ಹೊರತು ಅದರಲ್ಲಿ ಉತ್ಪ್ರೇಕ್ಷೆಯೇನೂ ಇರುವುದಿಲ್ಲ. ನಮಗೆ ಆಹಾರಸಮಸ್ಯೆಯು ದಿನೇದಿನೇ ಕಠಿನತರವಾಗಿ ಪರಿಣಮಿಸುತ್ತಿದೆ. ಅದುಕಾರಣವೇ ಸುಪ್ರಸಿದ್ಧ ರಾಸಾಯನಿಕ ಶಾಸ್ತ್ರಜ್ಞರಾದ ಮೇಲೆಕಂಡ ಸರ್ ರಾಯಿರವರೂ ಕೂಡ ತಮ್ಮ ದೃಷ್ಟಿಯನ್ನು ಈ ಸಮಸ್ಯೆಯ ಕಡೆಗೆ ತಿರುಗಿಸಿದ್ದಾರೆ. ಅವರ ಉಪದೇಶವನ್ನೂ ಮೇಲುಪಂಕ್ತಿಯನ್ನೂ ಅನುಸರಿಸಿ ಪ್ರಭುತ್ವದವರೂ ಪ್ರಜಾಪ್ರಮುಖರೂ ಸಹ ನಡೆದುಕೊಳ್ಳುವುದು ಶ್ರೇಯಸ್ಕರವು. ಉನ್ನತವಿದ್ಯೆಯನ್ನೇ ಲಕ್ಷ್ಯವಾಗಿಟ್ಟುಕೊಳ್ಳದೆ, ಕೃಷಿಶಿಲ್ಪಾದ್ಯಭಿವೃದ್ಧಿಗಳಿಗೆ ಸಹಾಯಕವಾಗುವಷ್ಟುಮಟ್ಟಿನ ವಿದ್ಯಾಭ್ಯಾಸವನ್ನು ಸರ್ವತ್ರ ಹರಡುವುದಕ್ಕೆ ವಿಶೇಷ ಪ್ರೋತ್ಸಾಹ ಸಾಹಾಯ್ಯಗಳನ್ನು ಮಾಡುವುದು ಪ್ರಭುತ್ವದವರ ಮುಖ್ಯಲಕ್ಷ್ಯವಾಗಿರಬೇಕು. ಪ್ರಜೆಗಳೂ ಅದನ್ನು ಗಮನದಲ್ಲಿಟ್ಟು ತಮ್ಮ ಮಕ್ಕಳಿಗೆ ನಾನಾವೃತ್ತಿಗಳಲ್ಲಿ ಪ್ರವೇಶಗೊಳಿಸುವುದನ್ನೇ ಗುರಿಯಾಗಿಟ್ಟುಕೊಂಡು ಅದಕ್ಕೆ ಬೇಕಾಗುವಷ್ಟು ವಿದ್ಯಾಭ್ಯಾಸವನ್ನು ತಪ್ಪದೆ ಕೊಡಿಸುವಲ್ಲಿ ತತ್ಪರರಾಗಬೇಕು. ತಕ್ಕಷ್ಟು ವಿದ್ಯಾವಂತರಾದ ಅಂಥ ಜನರು ಕೃಷಿಶಿಲ್ಪ ವಾಣಿಜ್ಯಾದಿಗಳಲ್ಲಿ ವಿಶೇಷವಾಗಿ ಪ್ರವರ್ತಿಸುತ್ತ ಬರುವಂತಾದರೆ ಪಾಶ್ಚಾತ್ಯದೇಶಗಳಂತೆ ನಮ್ಮ ದೇಶವೂ ಕೂಡ ದುರ್ಭರವಾದ ಆಹಾರ್ಯಸಮಸ್ಯೆಯ ಉಪದ್ರವವನ್ನು ಸ್ವಲ್ಪವೂ ಲಕ್ಷ್ಯೀಕರಿಸದೆ ಬಾಳಲು ಸಮರ್ಥವಾಗುವುದು.

ದುರ್ಭಿಕ್ಷದಮೇಲೆ ಅಧಿಕಮಾಸ.

ನಮ್ಮ ಭರತಖಂಡದಲ್ಲಿ ಆಹಾರ್ಯಾದಿ ಅಪಕ್ವವಸ್ತುಗಳ ಕೊರತೆಯಿಂದ ದೇಶವೇ ತಲ್ಲಣಿಸುವ ಹೊತ್ತು ಬಂದಿರುತ್ತದೆ. ಲಕ್ಷಾಂತರ ಜನರು ಹಗಲಿಗಾದರೆ ರಾತ್ರಿಗೆ ಹೇಗೆ? ಎಂದು ಪರಿತಪಿಸುತ್ತ ಅರೆಹೊಟ್ಟೆ ತಿಂದು ಕಾಲಯಾಪನೆ ಮಾಡುವುದಕ್ಕೂ ಅವಕಾಶವಿಲ್ಲದೆ ಸಾಯುತ್ತಿದ್ದಾರೆ. ಹೀಗಿರುವಾಗ್ಗೆ ನಮ್ಮ ಭರತಖಂಡದ ಸರ್ಕಾರದವರು ಬೆಲ್ಜಿಯಂ ದೇಶದವರಿಗೆ ಬೇಕಾದ ಅಪಕ್ವವಸ್ತುಗಳನ್ನು ಈ ದೇಶದಿಂದ ಸಾಗಿಸಿಕೊಳ್ಳುವುದಕ್ಕೆ ಸೌಕರ್ಯವನ್ನು ಒದಗಿಸಿಕೊಡಲು ಒಪ್ಪಿಕೊಂಡಿದ್ದಾರೆಂದು ಸೀಮೆಯಿಂದ ಬಂದಿರುವ ತಂತ್ರೀವಾರ್ತೆಯನ್ನು ನೋಡಲಾಗಿ ದುರ್ಭಿಕ್ಷದಮೇಲೆ ಅಧಿಕಮಾಸವು ಬಂದಂತಾಯಿತೆಂದು ನಿಟ್ಟುಸುರು ಬಿಡಬೇಕಾಗಿದೆ. ಬೆಲ್ಜಿಯಂದೇಶದ ದಯನೀಯಸ್ಥಿತಿಯು ಪ್ರಪಂಚಕ್ಕೇ ಗೊತ್ತಾಗಿದೆ. ಅದಕ್ಕೆ ಸಹಾಯಮಾಡಬೇಕಾದುದೂ ಧರ್ಮವೇ ಆಗಿದೆ. ಆದರೆ ಸಹಾಯಮಾಡುವುದೆಂದರೆ ತಾನು ಉಪವಾಸವಾಗಿದ್ದು ಪರರಿಗೆ ಸಹಾಯಮಾಡುವುದು ಸಾಧ್ಯವೆ? ನಮ್ಮ ದೇಶದಲ್ಲಿ ೨-೩ ವರ್ಷಗಳ ಹಿಂದೆ ಇದ್ದಂಥ ಸ್ಥಿತಿಯಾದರೂ ಈಗ ಇರುತ್ತಿದ್ದರೆ ಈ ದೇಶಕ್ಕೆ ಸಾಕಾಗುವಷ್ಟನ್ನು ಇಲ್ಲಿ ಉಳಿಸಿಕೊಂಡು ಹೆಚ್ಚಿನದನ್ನು ಪರದೇಶಕ್ಕೆ ಕಳುಹಿಸಿಕೊಟ್ಟರೆ ಅದಕ್ಕೆ ಯಾರೂ ಆಕ್ಷೇಪವನ್ನು ಮಾಡಲಾರರು. ಈಗ ಭರತಖಂಡವು ಅನಿರ್ವಚನೀಯವಾದಷ್ಟು ಕ್ಷಾಮಬಾಧೆಗೆ ಗುರಿಯಾಗಿರುವಾಗ, ಅದನ್ನು ತಪ್ಪಿಸಿಕೊಂಡು ಚೇತರಿಸಿಕೊಳ್ಳುವುದು ಎಂದಿಗೋ ಎಂದು ಹಂಬಲಿಸುತ್ತಿರುವಾಗ, ಈ ದೇಶದಲ್ಲಿ ಬೆಳೆದ ವಸ್ತುಗಳನ್ನೆಲ್ಲಾ ಈ ದೇಶದಲ್ಲೇ ಉಳಿಯಿಸಿ ದೇಶಕ್ಕೆಲ್ಲಾ ಸುಭಿಕ್ಷಸ್ಥಿತಿಯನ್ನು ಉಂಟುಮಾಡಿಕೊಡುವುದು ಪ್ರಭುತ್ವದವರಿಗೆ ಪ್ರಥಮ ಧರ್ಮವಾಗಿರುವಾಗ, ವಿದೇಶಕ್ಕೆ ನಮ್ಮಲ್ಲಿನ ಅಪಕ್ವಪದಾರ್ಥಗಳನ್ನು ಸಾಗಿಸುವುದಕ್ಕೆ ಅಂಗೀಕಾರವನ್ನು ಕೊಟ್ಟಿರುವುದನ್ನು ದೇಶೀಯರು ಒಪ್ಪುವರೆ? ತನ್ನ ಕ್ಷೇಮವನ್ನು ಮೊದಲು ನೋಡದೆ ಪರರ ಕ್ಷೇಮವನ್ನು ನೋಡುವುದು ಪ್ರಾಣಿಸಾಮಾನ್ಯ ಧರ್ಮವಾಗಿಲ್ಲ. ಈ ಸಂದರ್ಭದಲ್ಲಿ ಪ್ರಭುತ್ವದವರು ತೋರಿಸಿರುವ ಚರ್ಯೆಯಿಂದ ಅವರಿಗೆ ಭರತಖಂಡಕ್ಕಿಂತಲೂ ವಿದೇಶಕ್ಷೇಮವೇ ಆತ್ಮೀಯವಾದುದೆಂಬ ಪ್ರತ್ಯಯವಿದ್ದಂತೆ ಭಾಸವಾಗುವುದು.

ಒಳದೇಶದ ವೃತ್ತಾಂತಗಳು.

ಮೈಸೂರು ತಾಲ್ಲೂಕಿನ ಅಮಲ್ದಾರರಾಗಿದ್ದ ಮ|| ತಮ್ಮಾಜಿರಾಯರು ದೊಡ್ಡಬಳ್ಳಾಪುರಕ್ಕೆ ವರ್ಗಾಯಿಸಲ್ಪಟ್ಟು ಅಲ್ಲಿಯ ಅಮಲ್ದಾರರಾಗಿದ್ದ ಮ|| ಹೈದರಲ್ಲಿಖಾನರು ಇಲ್ಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ನಿನ್ನೆಯ ದಿನ ರಾಜಧಾನಿಯ ಟವನ್‌ಹಾಲಿನಲ್ಲೂ ಆವರಣದಲ್ಲೂ ಪದ್ಧತಿಯಂತೆ ಷಾಣ್ಮಾಸಿಕ ಫಲಪುಷ್ಪಪ್ರದರ್ಶನವು ಮನೋಹರವಾಗಿ ನೆರವೇರಿತು. ಈ ದಿನ ಸ್ತ್ರೀಯರು ಪ್ರದರ್ಶನಕ್ಕೆ ಹೋಗಲು ಏರ್ಪಡಿಸಿರುವರು.

ಸಂಸ್ಥಾನದಲ್ಲಿ ಮುಜರಾಯಿ ಸೆಕ್ರೆಟರಿ ಸ್ಥಾನವೇ ತಪ್ಪಿಸಲ್ಪಟ್ಟು, ಅಂಡರ್ ಸೆಕ್ರೆಟರಿ ಸ್ಥಾನವು ಉಳಿಯಿಸಲ್ಪಟ್ಟಿರುವುದರಿಂದ ಮ|| ಅರುವಾಮುದಯ್ಯಂಗಾರರು ಬೆಂಗಳೂರು ಡಿ|| ಕಮಿಷನರಾಗಿ ವರ್ಗಾಯಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ಹೊಸ ಅಪ್ಪಣೆಯ ಪ್ರಕಾರ ಪ್ರಜಾಪ್ರತಿನಿಧಿಸಭೆಗೆ ಮೈಸೂರು ವಿಶ್ವವಿದ್ಯಾಲಯ ಸಂಘದಿಂದ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಬೇಕಾದುದಕ್ಕಾಗಿ ರಾ|| ಬ|| ಎಂ. ಶ್ಯಾಮರಾಯರೂ, ರಾ|| ಬ|| ಎಂ. ಸಿ. ರಂಗಯ್ಯಂಗಾರರೂ ಆರಿಸಲ್ಪಟ್ಟಿದ್ದಾರೆ.

ನಂಜನಗೂಡಿನಿಂದ ಈರೋಡಿನವರೆಗೆ ಚಾಮರಾಜನಗರ, ಮರಹಳ್ಳಿಗಳ ಮೇಲೆ ಹಾಕಲ್ಪಡಲು ಯೋಚಿಸಿದ್ದ ಲೋಹಮಾರ್ಗದ ಕೆಲಸಕ್ಕೆ ಇಂಡ್ಯಾ ಸರ್ಕಾರದವರ ಅನುಮತಿಯು ದೊರೆತಿರುವುದರಿಂದ ಇಷ್ಟರಲ್ಲೇ ಆ ಕೆಲಸವನ್ನು ನಮ್ಮ ಸರ್ಕಾರದವರು ಆರಂಭಿಸುವುದರಲ್ಲಿದ್ದಾರೆ.

ಶ್ರೀಮದ್ಯುವರಾಜ ಪುತ್ರೋತ್ಸವಾನಂದ ಪ್ರದರ್ಶನಾರ್ಥವಾಗಿ ರಾಜಧಾನಿಯ ವರ್ತಕಮಹಾಜನರು ಚಂದಾಮೂಲಕ ಕೂಡಿಸಿದ್ದ ಹಣದಿಂದ ಬಡಬಗ್ಗರುಗಳಿಗೆಲ್ಲಾ ಹಲಿಬಾಡಿಗಾರ್ಡ್ ಕಟ್ಟಡದಲ್ಲೂ ಸಂತೆಬೀದಿಯಲ್ಲೂ ಮೃಷ್ಟಾನ್ನಭೋಜನವನ್ನು ಈ ದಿನ ಮಾಡಿಸಲು ಏರ್ಪಡಿಸಿದ್ದಾರೆ.

ಶ್ರೀಮನ್ಮಹಾರಾಜರವರು ಸಪರಿವಾರರಾಗಿ ಕಳೆದ ಬುಧವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿದ್ದು ಶ್ರಾವಣಗಾಗಿ ಈ ದಿವಸ ರಾಜಧಾನಿಗೆ ಬಂದು ಕೂಡಲೆ ಹಿಂದಿರುಗಿ ಚಿತ್ತೈಸುವವರಾಗಿರುವರು. ಶ್ರೀಮದ್ಯುವರಾಜರವರು ಕಳೆದ ಭಾನುವಾರವೇ ಬೆಂಗಳೂರಿಗೆ ದಯಮಾಡಿಸಿದರು.

ಮೈಸೂರು ಡಿಸ್ಟ್ರಿಕ್ಟ್ ಕಮಿಷನರ ಪರ್ಸನಲ್ ಅಸಿಸ್ಟೆಂಟಾಗಿದ್ದ ಮ|| ಮೃತ್ಯುಂಜಯಯ್ಯರ್‌ರವರು ಮುಜರಾಯಿ ಅಂಡರ್ ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ. ಮ|| ಎನ್. ಸುಂದರರಾಜಯ್ಯಂಗಾರರು ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರ ಪರ್ಸನಲ್ ಅಸಿಸ್ಟೆಂಟಾಗಿ ನಿಯಮಿಸಲ್ಪಟ್ಟಿದ್ದಾರೆ.

ಧಾರ್ಮಿಕರು ಸಂಸ್ಥಾನದಲ್ಲಿ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಲು ಪ್ರಯತ್ನಿಸಿದರೆ ಅಂಥ ಕಟ್ಟಡಗಳಿಗೆ ತಗಲುವ ಆದ್ಯಂತವ್ಯಯದಲ್ಲಿ ಅರ್ಧಭಾಗವನ್ನು ಸರ್ಕಾರದವರು ವಹಿಸುವಂತೆ ಅಪ್ಪಣೆ ಮಾಡಿದ್ದಾರೆ. ಇಂಥ ಕಾಲದಲ್ಲಿ ಧರ್ಮಬುದ್ಧಿಯುಳ್ಳ ಮಹನೀಯರು ವಿದ್ಯಾದಾನರೂಪಪುಣ್ಯಕ್ಕೆ ಭಾಗಿಗಳಾಗಲು ಹಿಂದೆಗೆಯಬಾರದು.

ಕಳೆದ ತಾ|| ೭ ನೆಯ ದಿನ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಫಲಪುಷ್ಪ ಪ್ರದರ್ಶನವು ಬಹಳ ವಿಜೃಂಭಣೆಯಿಂದ ನಡೆಯಿತು. ಅದರ ಸೂಪರಿಂಟೆಂಡೆಂಟರಾದ ಮ|| ಜವರಯ್ಯನವರು ಪ್ರದರ್ಶನಾರ್ಥವಾಗಿ ಮಾಡಿದ್ದ ತೋಟಗಳು ಬಹಳ ಮನೋಹರವಾಗಿಯೂ ತೃಪ್ತಿಕರವಾಗಿಯೂ ಇದ್ದುವು. ಪ್ರದರ್ಶಿತಗಳಾಗಿದ್ದ ಹಣ್ಣುಗಳೊಳಗೆ ಆಸ್ಟ್ರೇಲಿಯಾ ಜಾತಿಯ ದೇಶಕಿತ್ತಳೆಹಣ್ಣುಗಳು ಶ್ಲಾಘನೀಯಗಳಾಗಿದ್ದುವು. ಅವುಗಳಲ್ಲಿ ಬಿತ್ತಗಳೇ ಇಲ್ಲ.

ಇದೇ ತಿಂಗಳು ತಾ|| ೨೩-೨೪ ರಲ್ಲಿ ರಾಜಧಾನಿಯ ಟವನ್‌ಹಾಲಿನಲ್ಲಿ ರಾಜಕಾರ್ಯಪ್ರಸಕ್ತ ಮ|| ಬಿ. ರಾಮಕೃಷ್ಣರಾಯರವರ ಅಧ್ಯಕ್ಷತೆಯಿಂದ ಶ್ಯಾನುಭೋಗರ ಮಹಾಸಭೆಯು ನಡೆಯುವುದಾಗಿದೆ. ಶ್ಯಾನುಭೋಗರ ಶ್ರೇಯಶ್ಚಿಂತನೆಗಾಗಿ ದುಡಿಯುವ ಈ ಸಭೆಯು ಅವರಲ್ಲಿ ಕೆಲವರೊಳಗೆ ಇರುವ ಪ್ರಜಾಪೀಡನೆಯ ದುರ್ಗುಣವನ್ನು ನಿರ್ಮೂಲಮಾಡಲು ಸಮರ್ಥವಾಗುವುದಾದರೆ ಈ ಸಭೆಯು ದೇಶಕ್ಷೇಮಕ್ಕೆ ಸಹಾಯಮಾಡಿದಂತಾಗಿ ಸಕಲಜನರ ಪ್ರೀತಿಗೂ ಪಾತ್ರವಾದೀತು. ಸಮರ್ಥರಾದ ಮ|| ರಾಮಕೃಷ್ಣರಾಯರು ಅದಕ್ಕೆ ದಾರಿಹಾಕಿಕೊಡಲೆಂದು ಹಾರೈಸುವೆವು.

ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಸಕಲಬಿರುದಾವಳಿಗಳ ಸಮೇತ ಮಹೋತ್ಸವದೊಡನೆ ಕಳೆದ ಭಾನುವಾರ ಬೆಂಗಳೂರುಪೇಟೆಯಿಂದ ಕಂಟೋನ್ಮೆಂಟಿಗೆ ದಯಮಾಡಿಸಿ, ಅಲ್ಲಿಯ ಕಂಟ್ರ್ಯಾಕ್ಟರ್ ಮ|| ಎಂ.ಜಿ. ನಾಗಪ್ಪನವರ ಭವ್ಯಮಂದಿರದಲ್ಲಿದ್ದು ಅಲ್ಲಿಯ ಸರ್ವಭಕ್ತಮಂಡಲಿಯ ಸತ್ಕಾರದಲ್ಲಿ ೨ ದಿನಗಳಿದ್ದು, ಮಂಗಳವಾರದಿನ ಮ|| ಯು. ಸನವರು ಮ|| ನಾಗಪ್ಪನವರು ಹೊರತಾದ ಭಕ್ತಜನರ ಪ್ರಾರ್ಥನೆಯ ಮೇರೆ ಹಲಸೂರಿಗೆ ಸಕಲ ಮರ್ಯಾದೆಗಳೊಡನೆ ದಯಮಾಡಿಸಿತು. ಅಲ್ಲಿ ಪುರವೀಧಿಗಳ ಅಲಂಕಾರಗಳೂ ಸಕಲ ಜನವರ್ಗದವರೂ ತೋರಿಸಿದ ಭಕ್ತಿಭಾವನೆಗಳೂ ಅತ್ಯಂತ ವಿಶೇಷವಾಗಿದ್ದುವು. ಕಂಟೋನ್ಮೆಂಟಿನ ಕಲೆಕ್ಟರೂ, ಪೊಲೀಸ್ ಸೂಪರಿಂಟೆಂಡೆಂಟರೇ ಮೊದಲಾದ ಅಧಿಕಾರಿಗಳೂ ಉತ್ಸವಕಾಲಕ್ಕೆ ಎಲ್ಲ ಏರ್ಪಾಟುಗಳನ್ನೂ ಸಮೀಚೀನವಾಗಿ ಮಾಡಿಸಿದ್ದರು.

ಬೊಂಬಾಯಿ ಗೌರ್ನರಾದ ಸರ್ ಜಾರ್ಜ್ ಲಾಯಿಡ್‌ರವರು ಪತ್ನೀಸಮೇತರಾಗಿ ಕಳೆದ ತಿಂಗಳು ತಾ|| ೨೯ ರಲ್ಲಿ ಧಾರವಾಡಕ್ಕೆ ದಯಮಾಡಿಸಿದ್ದಾಗ್ಗೆ ಅಲ್ಲಿಯ ಮ್ಯುನ್ಸಿಪಲ್ ಡಿಸ್ಟ್ರಿಕ್ಟ್‌ಬೋರ್ಡುಗಳ ಪಕ್ಷದಿಂದ ಸನ್ಮಾನಪತ್ರಗಳು ಸಮರ್ಪಿಸಲ್ಪಟ್ಟನಂತರ ಲಿಂಗಾಯತ ವಿದ್ಯಾವರ್ಧಕ ಫಂಡ್‌ಸಂಘದ ಪಕ್ಷದಿಂದಲೂ ಒಂದು ಸನ್ಮಾನಪತ್ರವು ಅದರ ಚೇರ್ಮನ್ನರಾದ ಮ|| ಶಾಂತವೀರಪ್ಪಣ್ಣನವರಿಂದ ಓದಿ ಅರ್ಪಿಸಲ್ಪಟ್ಟಿತು. ಅದರೊಳಗೆ ಫಂಡಿನ ಚರಿತ್ರೆಯು ವರ್ಣಿಸಲ್ಪಟ್ಟದ್ದು ದರಲ್ಲಿ-ಪ್ರಕೃತ ಫಂಡಿಗೆ ೨ ಲಕ್ಷವೂ ೫ ಸಾವಿರ ರೂ.ಗಳು ಕೂಡಿರುವುವೆಂದೂ, ಒಂಟಿಮುರಿಯ ದೇಸಾಯರೊಬ್ಬರೇ ಅದಕ್ಕೆ ೫೫ ಸಾವಿರ ರೂ. ಗಳನ್ನು ಕೊಟ್ಟಿರುವರೆಂದೂ, ಈಚೆಗೆ ಮ|| ಸಿರಸಂಗಿ ದೇಸಾಯರು ವರ್ಷಕ್ಕೆ ೫೦ ಸಾವಿರದ ಉತ್ಪತ್ತಿಯಾಗುವ ಜಹಗೀರಿಯನ್ನು ಲಿಂಗಾಯತರ ವಿದ್ಯಾಭಿವೃದ್ಧಿ ಸಹಾಯಕ್ಕಾಗಿ ಕೊಟ್ಟಿರುವರೆಂದೂ ಈಗ ಈ ಫಂಡಿನಿಂದ ಲಿಂಗಾಯತ ವಿದ್ಯಾರ್ಥಿಗಳಿಗೆ ವರ್ಷ ೧ಕ್ಕೆ ೧೪ ಸಾವಿರ ರೂ. ಗಳನ್ನು ವೇತನರೂಪವಾಗಿ ಕೊಡುತ್ತಿದ್ದೇವೆಂದೂ ಮೊದಲಾಗಿ ಹೇಳಿದ್ದುದಲ್ಲದೆ ಮುಂಬೈ ಕರ್ನಾಟಕದ ವೀರಶೈವ ಸಮಾಜದವರು ಅಲ್ಲಿಯ ಕಾಲೇಜುಫಂಡಿಗೆ ೧ ಲಕ್ಷ ರೂ. ಗಳನ್ನು ಒದಗಿಸಿದುದು, ಯುದ್ಧಕಾಲಕ್ಕೆ ಸಾಮ್ರಾಜ್ಯ ಸರ್ಕಾರಕ್ಕೆ ಉದಾರವಾಗಿ ಧನಸಹಾಯಮಾಡಿದುದು, ಸಾಲವನ್ನು ಕೊಟ್ಟುದು, ಸೈನ್ಯಕ್ಕೆ ಜನರನ್ನು ಭರ್ತಿಮಾಡಿಕೊಟ್ಟುದು ಮೊದಲಾದ ವಿಷಯಗಳನ್ನು ವರ್ಣಿಸಿ, ಕಡೆಗೆ ರಾಜಕೀಯವಿದ್ಯೆಯನ್ನು ಓದಿ ಉತ್ತೀರ್ಣರಾದ ಲಿಂಗಾಯತ ಯುವಕರಿಗೆ ಸರ್ಕಾರಿ ನೌಕರಿಗಳನ್ನು ಹೆಚ್ಚುಹೆಚ್ಚಾಗಿ ಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ಉತ್ತೇಜನವನ್ನು ಕೊಡಬೇಕೆಂಬ ಪ್ರಾರ್ಥನೆಯೂ ಸಹ ಮಾಡಲ್ಪಟ್ಟಿದ್ದಿತು. ಇದಕ್ಕೆ ಗೌರ್ನರವರು ಉತ್ತರವನ್ನೀಯುವಾಗ್ಗೆ-ವೀರಶೈವರ ದಾತೃತ್ವ, ರಾಜನಿಷ್ಠೆ, ಉದ್ಯೋಗಪ್ರಿಯತೆಗಳನ್ನೂ ಅವರು ಲಿಂಗಾಯತರ ಒಂದು ಸೈನ್ಯವನ್ನೇರ್ಪಡಿಸಿ ಸರ್ಕಾರಕ್ಕೆ ಸಹಾಯಮಾಡಿದುದನ್ನೂ ಕೊಂಡಾಡಿ, ಓದಿ ಉತ್ತೀರ್ಣರಾಗಿ ಅರ್ಹತೆಯನ್ನು ಪಡೆದುಕೊಂಡ ಲಿಂಗಾಯತ ಜನರ ಹೆಸರನ್ನು ತಮ್ಮ ಪ್ರೈವೇಟ್ ಸೆಕ್ರೆಟರಿಗಳ ಬಳಿಗೆ ಕಳುಹಿಸಿಕೊಡುತ್ತಿದ್ದರೆ ಅವಕ್ಕೆ ಚೆನ್ನಾಗಿ ಲಕ್ಷ್ಯಕೊಡುವೆವು ಎಂದು ಹೇಳಿ, ಈ ವಿಧವಾದ ಅವರ ವಾಂಛೆಯು ಉಚಿತವಾದುದೆಂದು ಉತ್ತೇಜನ ಕೊಟ್ಟರು. ಮತ್ತೂ ತಮ್ಮ ಜನರ ಉನ್ನತಿಗಾಗಿ ಆಸೋಸಿಯೇಷನ್ನಿನವರು ಮಾಡುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿ ಅದಕ್ಕೆ ಜಯವನ್ನು ಕೋರಿದರು.

ಭರತಖಂಡದ ವೃತ್ತಾಂತಗಳು.

ಭರತಖಂಡದ ಸರ್ಕಾರದವರು ಹೊಸದಾಗಿ ಮಾಡುತ್ತಿರುವ ಸಾಲಕ್ಕೆ ಕಳೆದ ತಾ|| ೧ ರವರೆಗೆ ೧೧೭೪೫೨೩೦ ರೂ. ಗಳು ಕೂಡಿದ್ದುವು.

ಕಲ್ಕತ್ತಾದ ಕವಿರಾಜ ಎನ್. ಎನ್. ಸೇನ್‌ರವರ ಔಷಧಾಲಯದ ಲೇಬರೆಟರಿಯಲ್ಲಿ ಹೇಗೋ ಬೆಂಕಿ ಹೊತ್ತಿ ೧೦ ಸಾವಿರ ರೂ. ಗಳ ಸೊತ್ತು ನಷ್ಟವಾಯಿತು.

ಒಬ್ಬಾನೊಬ್ಬ ಭಾರತೀಯ ದಾತೃವು ಹಿಂದೂದೇಶ ವಿಶ್ವವಿದ್ಯಾಲಯಕ್ಕೆ ೧ ಲಕ್ಷ ರೂ. ಗಳನ್ನು ಕೈಮಗ್ಗಗಳ ಯಂತ್ರಾಲಯವೊಂದನ್ನು ಸ್ಥಾಪಿಸುವ ಕೆಲಸಕ್ಕೆಂಬುದಾಗಿ ದಾನಮಾಡಿರುತ್ತಾನೆ.

ಭಾವನಗರದ ಮಹಾರಾಜರು ಸ್ವರ್ಗಸ್ಥರಾದುದರಿಂದ ಅವರ ಮೈನರ್ ಕುಮಾರರಾದ ಮಹಾರಾಜಾ ಕೃಷ್ಣ ಕುಮಾರಸಿಂಗ್‌ರವರು ಕಳೆದ ತಿಂಗಳು ತಾ|| ೨೯ ರಲ್ಲಿ ಸಿಂಹಾಸನಾರೋಹಣವನ್ನು ಮಾಡಿದರು.

ಬರ್ಮಾ ಅಕ್ಕಿಯಮೇಲಣ ಪರಿಶೀಲನಾಧಿಕಾರವನ್ನು ಈಗಲೇ ತಪ್ಪಿಸಿಬಿಟ್ಟರೆ ಬೆಲೆಯು ಹೆಚ್ಚಿಹೋಗುವುದೆಂಬ ಕಾರಣದಿಂದ ಮುಂದಣ ಬೆಳೆ ಕೈಸೇರುವವರೆಗೂ ಅದರ ಮೇಲಣ ನಿರ್ಬಂಧವು ಈಗಿನಂತೆಯೇ ಇರತಕ್ಕದ್ದೆಂದು ಭರತಖಂಡದ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಇಂಪೀರಿಯಲ್ ಇಂಡಿಯನ್ ರಿಲೀಫ್‌ಫಂಡಿಗೆ ನಮ್ಮ ಮಹಾರಾಜರು ೧|| ಲಕ್ಷ, ಕಾಶ್ಮೀರದ ಮಹಾರಾಜರು ೧ ಲಕ್ಷ, ತಿರುವಾಂಕೂರು ಮಹಾರಾಜರು || ಲಕ್ಷ, ಮಾರ್ವಾರ್ ರಾಜ್ಯದ ರೀಜನ್ಸಿ ಕೌನ್ಸಿಲ್‌ನವರು ೭೪ ಸಾವಿರ, ಬರ್ದ್ವಾನ್ ಮಹಾರಾಜರು ೧೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಭರತಖಂಡದಲ್ಲಿ ಮುಖ್ಯವಾದ ಕೆಲವು ಪಟ್ಟಣಗಳಿಗೆ ಪರಸ್ಪರ ಅಂಚೆಯನ್ನು ವಿಮಾನಗಳ ಮೂಲಕ ಸಾಗಿಸುವ ಏರ್ಪಾಟನ್ನು ಇಂಡ್ಯಾ ಸರ್ಕಾರದವರು ಇಷ್ಟರಲ್ಲೇ ಮಾಡುವವರಾಗಿದ್ದಾರೆ. ಬೊಂಬಾಯಿಯಲ್ಲಿ ತಕ್ಕ ಪ್ರಯತ್ನಗಳು ಮಾಡಲ್ಪಡುತ್ತಿವೆ. ಮೊಟ್ಟಮೊದಲು ಈ ಪ್ರಯತ್ನವು ಬೊಂಬಾಯಿಗೂ ಕರಾಚಿಗೂ ಮಧ್ಯದಲ್ಲಿ ನಡೆಯುವುದಾಗಿದೆ.

ವೈಸ್ರಾಯರು ಕಳೆದ ತಿಂಗಳಲ್ಲಿ ಪೂನಾನಗರಕ್ಕೆ ಹೋಗಿದ್ದಾಗ್ಗೆ ಅಲ್ಲಿರುವ ಪೇಷ್ವೆಯವರ ಅರಮನೆಯಾದ ಶನಿವಾರವಾಡೆಯನ್ನು ಪರಾಮರಿಸಿ, ಆ ಪುರಾತನ ಭವನವನ್ನು ಪೂರ್ವಮಹತ್ವಕ್ಕೆ ತಕ್ಕಂತೆ ಶಾಶ್ವತವಾಗಿರಿಸಲು ಜೀರ್ಣೋದ್ಧಾರಮಾಡಬೇಕೆಂದು ಹೇಳಿ, ಅದಕ್ಕಾಗಿ ಇಂಡ್ಯಾ ಸರ್ಕಾರದ ಹಣದಿಂದ ೧೫ ಸಾವಿರ ರೂ. ಗಳನ್ನು ವೆಚ್ಚಮಾಡಲು ಅಪ್ಪಣೆಕೊಡಿಸಿದರು.

ಸಿಂಧುದೇಶದಲ್ಲಿ ಮೊನ್ನೆವಾರ ಅತಿವೃಷ್ಟಿಯಾಗಿ ಬಹಳಾನರ್ಥವನ್ನುಂಟುಮಾಡಿದೆ. ಕರಾಚಿಗೆ ಪೂರ್ವಭಾಗದಲ್ಲಿರುವ ಸಿಂಧುನದಿಯಲ್ಲಿ ವಿಪರೀತ ಪ್ರವಾಹವು ಬಂದಿದೆ. ಸುಜಾವಲ್ ಎಂಬ ಗ್ರಾಮವು ಮುಳುಗಿಹೋಗುವ ಸ್ಥಿತಿಯಲ್ಲಿದೆ. ಕೆಲ ಕಡೆ ಲೋಹಮಾರ್ಗವು ಕಿತ್ತುಹೋಗಿದೆ. ಅಂಚೆಯನ್ನೂ ಪ್ರಯಾಣಿಕರನ್ನೂ ಪ್ರಯಾಸದಿಂದ ಒಂದು ಕಡೆಯಿಂದ ಮತ್ತೊಂದುಕಡೆಗೆ ಸಾಗಿಸಿದರು.

ಕಳೆದ ತಾ|| ೨ ನೆಯ ದಿನ ಬೊಂಬಾಯಿಯಿಂದ ಸೀಮೆಗೆ ತೆರಳಿದ ಕೇಸರಿ ಹಿಂದ್ ಎಂಬ ಹಡಗಿನಲ್ಲಿ ಭರತಖಂಡದ ಕೆಲ ಪ್ರಮುಖರು ರಾಜ್ಯಕಾರ್ಯಾರ್ಥವಾಗಿ ಪ್ರಯಾಣಮಾಡಿದ್ದಾರೆ. ಅವರಲ್ಲಿ ಪ್ರಮುಖರು ಯಾರೆಂದರೆ—ಸರ್ ಶಂಕರನ್ ನಾಯರ್, ಡಾಕ್ಟರ್ ಸಪ್ರೂ, ಸಯ್ಯದ್ ಹಸೇನ್ ಇಮಾಂ, ರಂಗಸ್ವಾಮಿ ಅಯ್ಯಂಗಾರ್, ಎ. ಆರ್. ಬಾನರ್ಜಿ ಐ. ಸಿ. ಎಸ್., ವಿಪಿನಚಂದ್ರಪಾಲ್, ದಿ|| ಬ|| ರಾಜಗೋಪಾಲಾಚಾರ್, ಹೀರಾಬಾಯಿತಾತಾ, ತಾತಾಕನ್ಯೆ. ಈ ಕೊನೆಯ ನಾರೀಮಣಿಗಳಿಬ್ಬರೂ ನಿಯಮನಿರ್ಮಾಣಸಭೆಯಲ್ಲಿ ಸ್ತ್ರೀಯರಿಗೆ ಪ್ರಾತಿನಿಧ್ಯವಿರಬೇಕೆಂಬುದನ್ನು ಕುರಿತು ಸಂಸ್ಕರಣಸಭೆಯೆದಿರಿಗೆ ಸಾಕ್ಷ್ಯ ನುಡಿಯುವುದಕ್ಕಾಗಿ ಹೊರಟಿರುವವರು.

ಕಳೆದ ತಾ|| ೨ ರಲ್ಲಿ ಬೊಂಬಾಯಿಯಲ್ಲಿ ಪುರಪ್ರಮುಖರಾದ ಸರ್ ದಿನ್ಶಾ ಪೆಟಿಟ್‌ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಪಂಡಿತ ಮದನಮೋಹನ ಮಾಳವ್ಯರವರು ಪಂಜಾಬುದೇಶದ ಸ್ಥಿತಿಯನ್ನು ಕುರಿತು ಉಪನ್ಯಾಸ ಮಾಡಿದರು. ಪಂಜಾಬಿನ ಹಾವಳಿಯ ಸಮಯದಲ್ಲಿ ಬಾಧೆಪಟ್ಟಿರುವವರಿಗೆ ಸಹಾಯಮಾಡುವುದಕ್ಕಾಗಿಯೂ, ಆ ಸಂಬಂಧದಲ್ಲಿ ಶಿಕ್ಷಿತರ ವ್ಯಾಜ್ಯಗಳ ಅಪೀಲನ್ನು ಪ್ರಿವಿಕೌನ್ಸಿಲಿನಲ್ಲಿ ಮಾಡುವುದಕ್ಕಾಗಿಯೂ ಬೇಕಾದ ಹಣವನ್ನು ಚಂದಾ ಮೂಲಕ ಕೂಡಿಸಲು ನಿರ್ಧರವಾಯಿತು. ಅದಕ್ಕಾಗಿ ಏರ್ಪಟ್ಟ ಸಂಘಕ್ಕೆ ಸರ್ ದಿನ್ಶಾ ಪೇಟಿಟ್‌ರವರು ಅಧ್ಯಕ್ಷರಾಗಿ ಮಾಡಲ್ಪಟ್ಟರು. ಸರ್ ನಾರಾಯಣಚಂದ್ರವಾರ್ಕರೇ ಮೊದಲಾದ ಕೆಲವರು ಸಭಿಕರಾಗಿ ಮಾಡಲ್ಪಟ್ಟರು. ಫಂಡಿಗೆ ಆಗಲೇ ೫೦ ಸಾವಿರ ರೂ. ಗಳವರೆಗೆ ವಾಗ್ದಾನವಾಯಿತು.

ಭಲ್ಲಾತಾರ್ಕಫಲಂಮುಸ್ತಾ ಕಪಿಲಚ್ಛುಫಲಂತಥಾ | ರಾಲಸಿದ್ಧಾರ್ಥ ಏತೇಷಾಂ ಚೂರ್ಣಧೂಮಪ್ರಭಾವತಃ || ಮೂಷಿಕಾಮಶಕಾಮಕ್ಷಿಮತ್ಕುಣಾದಿಸಕೀಟಕಾಃ | ಪಲಾಯಂತೇಗೃಹಂಮುಕ್ತ್ವಾ ಯಥಾಯುದ್ಧೇಽತಿಕಾತರಾಃ || ಎಂದರೆ—ಗೇರುಬೀಜ, ಎಕ್ಕದಬೀಜ, ಕೊನ್ನಾರಿಗಡ್ಡೆ, ನಸುಗುನ್ನಿಬೀಜ, ಬಿಳಿಧೂಪ, ಬಿಳಿಸಾಸಿವೆ, ಇವುಗಳನ್ನೆಲ್ಲಾ ಕುಟ್ಟಿ ಮಾಡಿದ ಚೂರ್ಣವನ್ನು ಬೆಂಕಿಯಮೇಲೆ ಹಾಕಿ ಮನೆಯೊಳಗಿಟ್ಟು, ಎಲ್ಲಾ ಕಿಟಕಿ ಬಾಗಿಲುಗಳ ಕದಗಳನ್ನೂ ಹೊಚ್ಚಿ ಅರ್ಧಗಂಟೆಯವರೆಗೆ ಇಡಬೇಕು. ಹೀಗೆ ೩-೪ ದಿನಗಳವರೆಗೆ ಮಾಡಿದರೆ ಮನೆಯಲ್ಲಿರುವ ಇಲಿ, ಸೊಳ್ಳೆ, ಚಿಗಟ, ತಿಗುಣೆ ಮೊದಲಾದ ಪ್ರಾಣಿಗಳೆಲ್ಲಾ ನಿಶ್ಶೇಷವಾಗುವುವು. ಪ್ಲೇಗು, ಕಾಲರಾ ಮೊದಲಾದ ವಿಷದ ಸೋಂಕಿರುವ ಮನೆಗಳನ್ನೆಲ್ಲಾ ಹೀಗೆ ಶುದ್ಧಿಗೊಳಿಸಬೇಕು, ಎಂದು ಒಂದಾನೊಂದು ಪುರಾತನ ಗ್ರಂಥದಲ್ಲಿ ಪ್ರಮಾಣವಿರುವುದೆಂದು ಕಣಿವೆಕೆಳಗಣ ವೈದ್ಯರೊಬ್ಬರು ಪ್ರಕಟಿಸಿದ್ದಾರೆ.

ಈಗಣ ಮದ್ರಾಸ್ ಗೌರ್ನರವರಾದ ಲಾರ್ಡ್ ವಿಲ್ಲಿಂಗ್ಡನ್‌ರವರು ಮದರಾಸಿನ ನಿಯಮನಿರ್ಮಾಣಸಭೆಗೆ ಈಗತಾನೇ ಏರ್ಪಟ್ಟ ಸಭಿಕರಲ್ಲಿ ಸರ್ಕಾರದ ಪಕ್ಷವಾಗಿ ನಾಮಿನೇಟ್ ಮಾಡಲ್ಪಟ್ಟವರೊಳಗೆ ಪಂಚಮ ಜಾತಿಯವರೊಬ್ಬರನ್ನೂ ತಿಯ್ಯಾಜಾತಿಯವರೊಬ್ಬರನ್ನೂ ಆರಿಸಿ ಸೇರಿಸಿರುತ್ತಾರೆ. ಮಾತಿನಲ್ಲಿ ಪಂಚಮಾಭ್ಯುದಯವನ್ನು ಕೋರುವುದಕ್ಕಿಂತಲೂ ಕಾರ್ಯದಲ್ಲಿ ಹೀಗೆ ಅವರಿಗೆ ಪ್ರೋತ್ಸಾಹಪುರಸ್ಕಾರಗಳನ್ನು ಮದ್ರಾಸು ಸರ್ಕಾರದವರು ತೋರಿಸುತ್ತಿರುವುದನ್ನು ಕಂಡು ಆ ದೇಶದ ಅನೇಕ ವೃತ್ತಪತ್ರಿಕೆಗಳು ಸರ್ಕಾರದವರನ್ನು ಶ್ಲಾಘಿಸಿ ವಂದಿಸುತ್ತಿವೆ. ಕೆಲವು ಬೋರ್ಡುಗಳ ಮೆಂಬರ ಪದವಿಗೂ, ತಹಸೀಲ್ದಾರ್ ಪದವಿಗೂ ಕೂಡ ಪಂಚಮಜಾತಿಯ ವಿದ್ಯಾವಂತ ಜನರನ್ನು ಮದ್ರಾಸು ಸರ್ಕಾರದವರು ನಿಯಮಿಸಿಕೊಂಡಿರುವುದನ್ನು ಇದಕ್ಕೆ ಮುಂಚೆಯೇ ನಾವು ಪ್ರಕಟಿಸಿರುತ್ತೇವೆ. ಈಗ ಶಾಸನನಿರ್ಮಾಣಸಭೆಗೆ ಆರಿಸಿಕೊಳ್ಳಲ್ಪಟ್ಟಿರುವ ಪಂಚಮಜಾತಿಯ ಸಭಿಕರು ರಾಜನ್ ಎಂಬ ಗೃಹಸ್ಥರಾಗಿರುತ್ತಾರೆ. ಇವರು ಮದ್ರಾಸು ಪಟ್ಟಣದಲ್ಲಿ ವಾಸಮಾಡುವವರಾಗಿಯೂ ಒಂದಾನೊಂದು ಸೆಕೆಂಡರಿ ಪಾಠಶಾಲೆಯ ಉಪಾಧ್ಯಾಯರಾಗಿಯೂ ಇರುವರು. ತಿಯ್ಯಾಜಾತಿಯ ಪಕ್ಷದ ಸಭಿಕರಾದರೋ ಸಿ. ಕೃಷ್ಣನ್ ಎಂಬ ಗೃಹಸ್ಥರಾಗಿರುತ್ತಾರೆ. ಇವರು ವಕೀಲಿಕೆಯನ್ನು ಮಾಡುವ ಒಬ್ಬ ಶ್ರೀಮಂತರಾಗಿರುತ್ತಾರೆ. ಸರ್ಕಾರದವರಿಂದ ಮಾಡಲ್ಪಟ್ಟ ಇಂಥ ನಿಯಮನವು ಆ ನಿಮ್ನಜಾತಿಯವರ ಪುರೋವೃದ್ಧಿಗೆ ಸಾಧಕವಾಗಿ ಪರಿಣಮಿಸದಿರಲಾರದು

ವಿದೇಶ ವಿಷಯಗಳು.

ಇಂಗ್ಲೆಂಡಿನವರು ವಿಜಯದ ಸಾಲವೆಂಬುದಾಗಿ ಕೂಡಿಸುತ್ತಿರುವ ಫಂಡಿಗೆ ೭೭೮೦೦೦೦೦೦ ಪೌನುಗಳು ಕೂಡಿರುತ್ತವೆ.

ಪರ್ಷ್ಯಾದೇಶದ ಪ್ರಭುಗಳಾದ ಷಾರವರು ಇಷ್ಟರಲ್ಲೇ ಯೂರೋಪುದೇಶಗಳಿಗೆ ಪ್ರಯಾಣಮಾಡುವವರಾಗಿದ್ದಾರೆ. ಇವರ ಪ್ರಯಾಣಕ್ಕೆ ರಾಜಕೀಯ ವಿಷಯೋದ್ದೇಶವೇನೂ ಇಲ್ಲವಂತೆ.

ಸೀಮೆಯಲ್ಲಿ ಬೆಳ್ಳಿಯ ಬೆಲೆಯು ಏರುತ್ತಲೇ ಇದೆ. ಅದರ ಒದಗುವಿಕೆಯು ಬಹಳ ಕಡಿಮೆ. ಕೊಳ್ಳುವವರು ವಿಶೇಷವಾಗಿದ್ದಾರೆ. ಕಳೆದ ಜುಲೈ ತಾ|| ೨೬ ರಲ್ಲಿ ಸ್ಯಾನ್‌ಫ್ರಾನ್‌ಸಿಸ್ಕೊ ಪಟ್ಟಣದಿಂದ ಚೀನಾ ಜಪಾನ್ ದೇಶಗಳಿಗೆ ೨೦ ಲಕ್ಷ ಔನ್ಸುಗಳ ಬೆಳ್ಳಿಯು ಕಳುಹಿಸಲ್ಪಟ್ಟಿತು.

ಬೋಲ್ಷೆವಿಕ್ಕರ ಮೇಲೆ ರಷ್ಯಾ ದೇಶದಲ್ಲಿ ನಮ್ಮವರೂ ಅಲ್ಲಿನ ಸ್ವಚ್ಛಂದಸೈನಿಕರೂ ಪೋಲೆಂಡಿನವರೂ ಸಹ ಮಾಡುತ್ತಲಿರುವ ಯುದ್ಧದಲ್ಲಿ ಬೋಲ್ಷೆವಿಕ್ಕರು ಬಹಳ ಪರಾಜಿತರಾಗಿ ಓಡಿಹೋಗುತ್ತಿದ್ದಾರೆ. ನಮ್ಮ ಕಡೆಯ ಡೆನಿಕಿನ್ ಸೇನಾಪತಿಯ ಸೈನಿಕರು ಕಳೆದವಾರ ದೊಡ್ಡ ವಿಜಯವನ್ನು ಪಡೆದರು. ಕಾಮಿಷಿನ್ ಎಂಬ ಪಟ್ಟಣವನ್ನು ಅವರ ಕೈತಪ್ಪಿಸಿ ಹಿಡಿದುಕೊಂಡರು. ಆಗ ೫ ಸಾವಿರ ಮಂದಿ ಬೋಲ್ಷೆವಿಕ್ಕರೂ ೯ ತುಪಾಕಿಗಳೂ ಅನೇಕ ಯಂತ್ರದ ಫಿರಂಗಿಗಳೂ ಬಹಳ ಯುದ್ಧಸಾಮಗ್ರಿಗಳೂ ಸಹ ನಮ್ಮವರಿಗೆ ಸಿಕ್ಕಿರುವುವು. ಪೋಲರು ಪೂರ್ವಗೆಲಿಸಿಯಾ ಭಾಗವನ್ನು ಆಕ್ರಮಿಸಿ ಬೋಲ್ಷೆವಿಕ್ಕರನ್ನು ಅಟ್ಟುತ್ತಿದ್ದಾರೆ. ಬೋಲ್ಷೆವಿಕ್ಕರು ತಾವಿದ್ದ ಊರುಕೇರಿಗಳನ್ನು ಬಿಟ್ಟುಹೋಗುವಾಗ ಅವುಗಳಿಗೆ ಬೆಂಕಿಯಿಕ್ಕಿ ಜನರನ್ನು ಸುಟ್ಟು ಧ್ವಂಸಮಾಡಿ ಬಿಟ್ಟುಹೋಗುತ್ತಿದ್ದಾರೆ.

ಅಮೇರಿಕಾ ದೇಶದ ಚಿಕಾಗೋ ಪಟ್ಟಣದಲ್ಲಿ ನೀಗ್ರೋಜಾತಿಯ ಕೆಲ ಕಪ್ಪುಜನರು ಬಿಳೀಜನಗಳು ವಾಸಮಾಡುವ ಭಾಗಕ್ಕೆ ಹೋದ ತಪ್ಪಿತಕ್ಕಾಗಿ ಕೆಂಪುಜನರು ರೇಗಿ ಬಡಿದಾಟಕ್ಕಾರಂಭಿಸಲು, ಅದರ ಮೇಲೆ ಎರಡು ಪಕ್ಷದಲ್ಲೂ ಲಕ್ಷಾಂತರ ಜನರು ಕೂಡಿ ಆಯುಧಗಳನ್ನುಪಯೋಗಿಸಿ ಯುದ್ಧಮಾಡಿದರು. ಇದರಿಂದ ಉಭಯ ಪಕ್ಷದಲ್ಲೂ ಸತ್ತವರೂ ಏಟುತಿಂದವರೂ ಸೇರಿ ೧ ಸಾವಿರ ಮಂದಿಗಳಾಗಿರುವರು. ೪ ಸಾವಿರ ಮಂದಿ ಸರ್ಕಾರಿ ಸೈನಿಕರು ಬಂದು ಜಗಳವನ್ನು ನಿಲ್ಲಿಸಬೇಕಾಯಿತು. ನವನಾಗರಿಕರೆಂದು ಹೇಳಿಕೊಳ್ಳುವ ಮತ್ತು ಸರ್ವಜಾತಿ ಸಮ್ಮೇಳನವನ್ನೇರ್ಪಡಿಸಿ ಸರ್ವರ ಸ್ವಾತಂತ್ರ್ಯವನ್ನೂ ರಕ್ಷಿಸಲು ಬದ್ಧಕಂಕಣರಾಗಿರುವ ಕೆಂಪುಜನರು ಕಪ್ಪುತೊಗಲಿನ ಜನರನ್ನು ಇಷ್ಟು ಅವಮಾನಕರವಾಗಿಯೂ ವಿರೋಧಭಾವದಿಂದಲೂ ಕಾಣುವುದು ಅವರ ಗೌರವಕ್ಕೇ ಕಳಂಕವನ್ನು ತರುವುದಲ್ಲವೆ?.

ಜನರಲ್ ಫಾಕ್‌ರವರ ಅಸದೃಶ ಯುದ್ಧಕೌಶಲ ಪರಾಕ್ರಮಗಳಿಂದ ಮಿತ್ರಮಂಡಲಿಗೆ ದಿಗ್ವಿಜಯ ಪ್ರಾಪ್ತಿಯಾಯಿತಷ್ಟೆ. ಈ ಫ್ರಾನ್ಸ್ ಸೇನಾಪತಿಯನ್ನು ಉಚಿತರೀತಿಯಿಂದ ಗೌರವಿಸಿ ಸತ್ಕರಿಸುವ ಸಮಾರಂಭವು ಕಳೆದ ತಿಂಗಳ ಕೊನೆಯಲ್ಲಿ ಲಂಡನ್ ಪಟ್ಟಣದೊಳಗೆ ಇಂಗ್ಲೀಷರಿಂದ ಆಚರಿಸಲ್ಪಟ್ಟಿತು. ಲಂಡನ್ ಪುರವೀಧಿಗಳು ಮನೋಹರವಾಗಿ ಅಲಂಕರಿಸಲ್ಪಟ್ಟು ಅವುಗಳಲ್ಲಿ ಫಾಕ್ ಸೇನಾಪತಿಯವರು ತಕ್ಕ ಮರ್ಯಾದೆಗಳೊಡನೆ ಮೆರವಣಿಗೆ ಮಾಡಿಸಲ್ಪಟ್ಟರು. ಔತಣವು ಬಹು ವಿಜೃಂಭಣೆಯಿಂದ ನಡೆಯಿತು. ಅಲ್ಲಿಯ ನಗರಗೌರವಸ್ವಾತಂತ್ರ್ಯವು ಫಾಕ್‌ರವರಿಗೆ ಕೊಡಲ್ಪಟ್ಟಿತು. ಒಂದು ವಿಜ್ಞಾಪನ ಪತ್ರಿಕೆಯು ಅರ್ಪಿಸಲ್ಪಟ್ಟಿತು. ಪ್ರತ್ಯುತ್ತರವನ್ನು ಕೊಡುವಾಗ್ಗೆ ಆಂಗ್ಲಸೈನಿಕರ ಶೌರ್ಯಸಾಹಸಗಳನ್ನು ಫಾಕ್‌ರವರು ಬಹಳ ಕೊಂಡಾಡಿದರು. ನಮ್ಮ ಸಾರ್ವಭೌಮರು ಜನರಲ್ ಫಾಕ್‌ರವರಿಗೆ ಫೀಲ್ಡ್‌ಮಾರ್ಷಲ್ ಬಿರುದನ್ನು ಅನುಗ್ರಹಿಸಿ ಗೌರವಿಸಿದರು.

ಸಂಧಿನಿಯಮಗಳು ಲಾರ್ಡುಗಳ ಸಭೆಯಲ್ಲಿ ೨ನೆ ಆವೃತ್ತಿ ಓದಲ್ಪಡುವಾಗ್ಗೆ ಲಾರ್ಡ್ ಕರ್ಜನ್‌ರವರು ಉಪನ್ಯಾಸಮಾಡುತ್ತ ಕೈಸರರ ವಿಷಯದಲ್ಲಿ ಹೀಗೆ ಹೇಳಿದರು.—"ಚರಿತ್ರೆಯೊಳಗೆ ಇದುವರೆಗೆ ಶಿಕ್ಷಿತರಾಗಿರುವ ಸಾರ್ವಭೌಮರೊಡನೆ ಜರ್ಮನ್ ಕೈಸರನ್ನು ಹೋಲಿಸಿನೋಡುವುದಾದರೆ ಈತನಲ್ಲಿ ಮೊದಲನೆ ಚಾರ್ಲ್ಸ್‌ನ ಗುಣಗಳು ಕೆಲವೂ ನೆಪೋಲಿಯನ್ನನ ಗುಣಗಳು ಕೆಲವೂ ಕಾಣಬರುತ್ತಿವೆ. ಆದರೆ ಯುದ್ಧಕ್ರೌರ್ಯಗಳು ಎಷ್ಟುಂಟೋ ಅವಷ್ಟಕ್ಕೂ ಈತನೇ ಕಾರಣನಾಗಿದ್ದುದು ಮಾತ್ರವೇ ಅಲ್ಲದೆ ತನ್ನ ದೇಶವು ಅತ್ಯಂತ ವಿಷಮಸ್ಥಿತಿಯಲ್ಲಿದ್ದಾಗ್ಗೆ ನಾಚಿಕೆಯಿಲ್ಲದೆ ಅದನ್ನು ಬಿಟ್ಟುಬಿಟ್ಟು ಓಡಿಹೋದನು. ಇಂಥವನು ವೀರಶ್ರೇಷ್ಠನೆಂದಾಗಲೀ ತನ್ನ ದೇಶಾಭಿಮಾನಕ್ಕಾಗಿ ಪ್ರಾಣತ್ಯಾಗ ಮಾಡಿದವನೆಂದಾಗಲೀ ಹೇಳಿಸಿಕೊಳ್ಳಲಾರನು. ಜರ್ಮನ್ ದೇಶದ ಎಲ್ಲೆಯಲ್ಲಿ ಅತನು ಮರಳಿ ಕಾಣಿಸಿಕೊಂಡರೆ ಅದು ರಾಜಕೀಯ ವಿಪತ್ತಿಗೆ ಕಾರಣವಾಗುವುದು. ಯುದ್ಧವು ಸಂಭವಿಸುವುದಕ್ಕೆ ಕಾರಣವಾದ

ಸಿಟಿ ಕೋ ಆಪರೇಟಿವ್ ಬ್ಯಾಂಕ್ (ಲಿಮಿಟೆಡ್) ಮೈಸೂರು.

ಬೇಕಾಗಿದೆ.

ಮೈಸೂರಿನಲ್ಲಿರುವ ಸಿಟಿ ಕೋ ಆಪರೇಟಿವ್ ಬ್ಯಾಂಕಿಗೆ—

ಒಬ್ಬರು ಫುಲ್‌ಟೈಂ ಸೆಕ್ರೆಟರಿ	50 ರೂ. ಇಂದ 100 ರೂ. ವರಿಗೆ ತಲಬು
ಒಬ್ಬರು ಮ್ಯಾನೇಜರು	30 ,, ,, 50 ,, ,,
ಒಬ್ಬರು ಕ್ಯಾಷಿಯರ್ ಅಕೌಂಟೆಂಟ್	25 ,, ,, 40 ,, ,,

ಉಮೇದುವಾರರು ಮೈಸೂರು ದೇಶದವರಾಗಿಯೂ, ಕನ್ನಡ ಇಂಗ್ಲೀಷ್ ಮತ್ತು ಲೆಖ್ಖಾಚಾರಗಳನ್ನು ಚೆನ್ನಾಗಿ ಬಲ್ಲವರಾಗಿಯೂ ಇರಬೇಕಲ್ಲದೆ ಸೆಕ್ರೆಟರಿ ಕೆಲಸಕ್ಕೆ ಮಾತ್ರ S. S. L. C. ಪರೀಕ್ಷೆಯನ್ನಾಗಲೀ ಅಥವಾ ಅದಕ್ಕೆ ಸಮನಾದ ಇನ್ಯಾವ ಪರೀಕ್ಷೆಯನ್ನಾಗಲಿ ಕೊಟ್ಟಿರಬೇಕು. ಮತ್ತು ಸರಿಯಾದ ಸೆಕ್ಯುರಟಿಗಳನ್ನು ಕೊಡಲೂ ಸಿದ್ಧರಾಗಿರಬೇಕು. ಅಪ್ಲಿಕೇಷನ್‌ಗಳು ಸದರಿ ಬ್ಯಾಂಕು ಸೆಕ್ರೆಟರಿಯವರಿಗೆ ಬರುವ ಸೆಪ್ಟೆಂಬರ್ ೨ನೇ ತಾರೀಖಿನೊಳಗಾಗಿ ತಲಪತಕ್ಕದ್ದು.

ಸೂ:—ಪ್ರಾರಂಭದಲ್ಲಿ ತಲಬು ಯೋಗ್ಯತಾನುಸಾರವಾಗಿ ನಿಶ್ಚಯಿಸಲ್ಪಡುವುದು.

B. NARASIMHAIENGAR,
ಆನರರಿ ಸೆಕ್ರೆಟರಿ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಆಗಸ್ಟ ತಾ॥ ೧೦ ನೆಯ ಭಾನುವಾರ.

ಆಹಾರ್ಯವಸ್ತುಗಳು.

ಪ್ರಪಂಚದಲ್ಲಿ ಬರುಬರುತ್ತ ಆಹಾರ್ಯವಸ್ತುಗಳ ಬೆಲೆಯು ವೃದ್ಧಿಯಾಗುತ್ತಲಿರುವುದೇ ಹೊರತು, ಇಳಿಯುತ್ತಲಿಲ್ಲ. ಎಲ್ಲ ಕಡೆಯೂ ಸುಭಿಕ್ಷವಾದರೆ ಅಲ್ಪಸ್ವಲ್ಪಮಾತ್ರ ಬೆಲೆಯು ಇಳಿಯಬಹುದೇ ಹೊರತು ಪೂರ್ವದಂತೆ ಪಲ್ಲ ೧ ಕ್ಕೆ ೨-೩ ರೂ. ನಂತೆ ರಾಗಿಯನ್ನೂ, ೮-೧೦ ರೂ. ನಂತೆ ಅಕ್ಕಿಯನ್ನೂ, ರೂ. ಗೆ ೮-೧೦ ಸೇರಿನಂತೆ ಬೆಣ್ಣೆಯನ್ನೂ ಹೀಗೆಯೇ ಇತರ ಪದಾರ್ಥಗಳನ್ನೂ ಸಹ ಅಗ್ಗವಾಗಿ ಪಡೆಯುವೆವೆಂಬುದು ಸರ್ವಥಾ ಅಸಂಭವವಾಗಿ ತೋರುತ್ತಿದೆ. ಲೋಹಮಾರ್ಗ ಜಲಮಾರ್ಗ ಯಾನಸಾಕರ್ಯಗಳು ಈಚೆಗೆ ಹೆಚ್ಚುತ್ತ ಬಂದುದರಿಂದ ಜಗತ್ತೆಲ್ಲಾ ಒಂದು ಕುಟುಂಬದಂತೆ ಪರಿಣಮಿಸುತ್ತಿದೆ. ಸಮೃದ್ಧವಾಗಿ ಧಾನ್ಯವು ಬೆಳೆದ ಕಡೆಯಿಂದ ಕ್ಷಾಮವು ವ್ಯಾಪಿಸಿರುವ ಕಡೆಗೆ ಅವು ಸಾಗಿಹೋಗಿ ಎರಡು ಸ್ಥಲಗಳನ್ನೂ ಸಮಪಡಿಸಿಬಿಡುತ್ತವೆ. ಇದರಿಂದ ಬೆಳೆಯುವವರಿಗೆ ಲಾಭವೇ ಹೊರತು ಕೊಂಡು ತಿನ್ನುವ ಜನರೇ ಹೆಚ್ಚಾಗಿರುವ ಪ್ರಪಂಚಕ್ಕೆ ಅಷ್ಟು ಹಿತವಾಗುವುದಿಲ್ಲ. ಎಷ್ಟೇ ಧನಕನಕಗಳಿದ್ದರೂ ಜೀವನಕ್ಕೆ ಮುಖ್ಯಾಧಾರವಾಗಿರುವ ಆಹಾರ್ಯವಸ್ತುಗಳು ದುರ್ಲಭವಾದರೆ ಇತರ ಸಂಪತ್ತುಗಳೆಲ್ಲಾ ಹೇಗೆ ಶುಷ್ಕವಾಗಿಹೋಗುವುವೋ ಅದು ಕಳೆದ ೩-೪ ವರ್ಷಗಳ ಅನುಭವದಿಂದ ಜಗತ್ತಿಗೆಲ್ಲಾ ಗೊತ್ತಾಗಿಹೋಗಿದೆ. ಅದುಕಾರಣ ಈಗ ಪ್ರಪಂಚದ ಮೇಲಿರುವ ದೀರ್ಘದರ್ಶಿಗಳ ಗಮನವೆಲ್ಲಾ ಆಹಾರ್ಯಸಮಸ್ಯೆಯ ಕಡೆಗೆ ತಿರುಗಿರುತ್ತದೆ. ತಮ್ಮ ಜೀವಿತಕಾಲದ ಮುಖ್ಯ ಭಾಗವನ್ನೆಲ್ಲಾ ರಾಸಾಯನಿಕಶಾಸ್ತ್ರ ಪರಿಶೋಧನೆಗಾಗಿಯೇ ವಿನಿಯೋಗಿಸಿ ಲೋಕಪ್ರಸಿದ್ಧರಾಗಿರುವ ಕಲ್ಕತ್ತಾದ ಸರ್ ಪಿ. ಸಿ. ರಾಯಿಯವರು ಈ ಮುಖ್ಯಸಮಸ್ಯೆಯನ್ನು ಕುರಿತು ಕಳೆದವಾರ ಕಲ್ಕತ್ತಾದ ವಿಶ್ವವಿದ್ಯಾಲಯ ಭವನದಲ್ಲಿ ಒಂದು ಅಮೋಘವಾದ ಉಪನ್ಯಾಸವನ್ನು ಮಾಡಿರುತ್ತಾರೆ. ಆ ಉಪನ್ಯಾಸಶ್ರವಣಕ್ಕಾಗಿ ಅನೇಕಾನೇಕ ಸುಪ್ರಸಿದ್ಧ ವಿದ್ವಾಂಸರೂ ದೇಶಾಭಿಮಾನಿಗಳೂ ಆದ ಸಾವಿರಾರು ಮಂದಿಗಳು ಒಂದು ನೆರೆದಿದ್ದರು. ಆ ಉಪನ್ಯಾಸವು ಸರ್ವರಿಗೂ ಶ್ರೋತವ್ಯವಾಗಿರುವುದು. ಅದುಕಾರಣ ಇಲ್ಲಿ ಅದರ ಸಾರಾಂಶವನ್ನು ಕೊಟ್ಟಿರುತ್ತೇವೆ.—

“ಜಗತ್ತಿನ ಪ್ರಸ್ತುತಸ್ಥಿತಿಯನ್ನು ಅವಲೋಕಿಸಲಾಗಿ ನನ್ನ ದೃಷ್ಟಿಯನ್ನು ಆಹಾರ್ಯಸಮಸ್ಯೆಯ ಕಡೆಗೆ ತಿರುಗಿಸಬೇಕಾಗಿ ಬಂದಿರುವುದು. ಯುದ್ಧವು ನಡೆದ ೪ ವರ್ಷಗಳ ಕಾಲದಲ್ಲಿ ರಸಾಯನಶಾಸ್ತ್ರ ಸಂಬಂಧವಾದ ಮಾರ್ಪುಗಳು ಅತ್ಯದ್ಭುತವಾಗಿ ನಡೆದಿರುವುವು. ನಮ್ಮ ದೇಶದಲ್ಲಿ ಆಂಗ್ಲಪ್ರಭುತ್ವವು ಆರಂಭವಾದೀಚೆಗೆ ನಡೆಯಿಸುತ್ತ ಬಂದಿರುವ ವಿದ್ಯಾಭ್ಯಾಸ ಪದ್ಧತಿಯು ಒಂದೇ ಮಾರ್ಗವುಳ್ಳುದಾಗಿದೆ. ಅದನ್ನು ಅವರು ಈಗ ಉಪಸಂಹರಿಸಬೇಕು. ಈಗಣ ಅವರ ವಿಶ್ವವಿದ್ಯಾಲಯವು ಪ್ರತಿವರ್ಷವೂ ಕೆಲಮಂದಿ ಪಟ್ಟಾಂಚಿತರನ್ನು ನಿರ್ಮಿಸುವ ಯಂತ್ರರೂಪವಾಗಿ ಉಪಯೋಗಪಡುತ್ತಿದೆ. ಇಂಥ ಪಟ್ಟಾಂಚಿತರ ಮಾರಕಟ್ಟೆನಲ್ಲಿ ಎಷ್ಟುಮಾತ್ರದ ಬೆಲೆಯಿರುವುದೋ ಅದನ್ನು ಈಗ ವಿಚಾರಿಸಬೇಕಾಗಿದೆ. ಬಿ. ಎ., ಎಂ. ಎ., ಡಿಗ್ರಿಗಳನ್ನು ಹೊಂದಿದ ಬಳಿಕ ಅನೇಕಮಂದಿ ಪಟ್ಟಾಂಚಿತರು ತಮ್ಮ ಪರೀಕ್ಷಾವಿಜಯವನ್ನು ಕುರಿತು ಸಂತೋಷಿಸುವುದಕ್ಕೆ ಪ್ರತಿಯಾಗಿ ದುಃಖಪಡುತ್ತಿರುವರು. ಪರೀಕ್ಷೆಯಲ್ಲಿ ಒಂದುವೇಳೆ ಅಪಜಯವನ್ನು ಪಡೆದರೆ ಅವರು ಮರಳಿ ಸುಲಭವಾಗಿ ಕಲಾಶಾಲೆಗೆ ಸೇರಿ ಓದಬಹುದು. ಕೃತಾರ್ಥರಾದ ಬಳಿಕ ಮುಂದೇನು ಮಾಡಬೇಕೋ ಅವರಿಗೆ ತೋಚುವುದಿಲ್ಲ. ಇಂಥ ದುಸ್ಥಿತಿಯನ್ನು ನಿವಾರಿಸುವುದಕ್ಕೆ ಮಾರ್ಗವಾವುದೋ ಅದನ್ನು ಕಂಡುಹಿಡಿಯಬೇಕಾಗಿದೆ. ಇದುವರೆಗೆ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಕೃತಾರ್ಥರಾದ ಮಾತ್ರದಿಂದಲೇ ಅವರುಗಳಿಗೆ ತಿಂಡಿಗಾಗಿ ಹುಡುಕಿಕೊಂಡುಹೋಗಬೇಕಾದ ಅವಶ್ಯಕತೆಯಿರುತ್ತಿರಲಿಲ್ಲ. ಪರೀಕ್ಷೆಯಲ್ಲಿ ಉತ್ತೀರ್ಣರಾಗದವರುಗಳು ತಮ್ಮ ಜೀವಿತವೇ ವ್ಯರ್ಥವೆಂದು ಸಂತಾಪಪಡುತ್ತಿದ್ದರು. ವಂಗಜಾತೀಯರೆಲ್ಲರೂ ತಾವು ವಿಶ್ವವಿದ್ಯಾಲಯ ಪರೀಕ್ಷೆಯನ್ನು ಕೊಡುವುದಕ್ಕೇ ಹುಟ್ಟಿರುವೆವೆಂದು ತಿಳಿದಿದ್ದಂತೆ ತೋರುವುದು. ತಮ್ಮ ೫-೬ ನೆ ವಯಸ್ಸಿನಿಂದ ೨೫ ನೆ ವಯಸ್ಸಿನವರೆಗೂ ಪರೀಕ್ಷೆಯ ಡಿಗ್ರಿಗಳನ್ನು ಸಂಪಾದಿಸುವುದಕ್ಕಾಗಿಯೇ ಯುವಕರು ತಮ್ಮ ಜೀವಿತವನ್ನೆಲ್ಲಾ ಧಾರೆಯೆರೆದು, ಅದು ಲಭಿಸಿದ ಬಳಿಕ ಕಣ್ಣುಗಳು ಗುಳಿಬಿದ್ದು, ದೇಹವು ದುರ್ಬಲವಾಗಿ, ಮನಸ್ಸು ಚಪಲವಾಗಿ, ಎಲ್ಲತೆರದಿಂದಲೂ ಜೀರ್ಣರಾಗಿ ಹೋಗುತ್ತಿದ್ದರು. ಇಷ್ಟು ಕಷ್ಟಪಟ್ಟರೂ ಅಂಥವರಿಗೂ ಆಹಾರಸಮಸ್ಯೆಯು ಪರಿಷ್ಕೃತವಾಗುತ್ತಲಿಲ್ಲ. ದೇಶಾಭ್ಯುದಯವನ್ನು ಕೋರುವವರೆಲ್ಲರೂ ಈ ಆಹಾರಸಮಸ್ಯೆಯನ್ನು ದೀರ್ಘವಾಗಿ ಯೋಚಿಸಬೇಕು. ಸ್ವಾಮಿವಿವೇಕಾನಂದರವರು ತಮ್ಮ ದೇಶೀಯರನ್ನು ಕುರಿತು “ಹೊಟ್ಟೆಯನ್ನು ತುಂಬಿಕೊಳ್ಳುವ ಮಾರ್ಗವನ್ನು ಮೊದಲು ಹುಡುಕಿಕೊಳ್ಳಬೇಕು” ಎಂದು ಉಪದೇಶ ಮಾಡಿರುವರು. ನಾವು ತತ್ತ್ವವೇತ್ತೃಗಳೆಂದು ಕೆಲವರು ಹೇಳಿಕೊಳ್ಳುವರು. ಆದರೆ ಯಾವತತ್ತ್ವವೂ ಶುಷ್ಕದೇಹಿಗಳ ಮಧ್ಯದಲ್ಲಿ ಅಭಿವೃದ್ಧಿಗೊಳ್ಳಲಾರದು. ರವೀಂದ್ರನಾಥ ಠಾಕೂರ್‌ರವರೂ ಕೂಡ ಈ ಆಹಾರಸಮಸ್ಯೆಯನ್ನು ಕುರಿತು ಒಕ್ಕೊತ್ತಿಯೇಳಿರುವರು. ಓದಿ ಪರೀಕ್ಷೆ ಕೊಟ್ಟು ಪಟ್ಟಾಂಚಿತರಾದ ಕೂಡಲೇ ನಮ್ಮ ಯುವಕರು ವೃತ್ತಪತ್ರಿಕೆಗಳಲ್ಲೂ ಸರ್ಕಾರಿ ಗೆಜೆಟ್ಟುಗಳಲ್ಲೂ “ಬೇಕು, ಬೇಕು” ಎಂದು ತಿಳಿಯಿಸುವ ಪ್ರಕಟನೆಗಳ ಹಾದಿಯನ್ನೇ ನೋಡುತ್ತಲಿರುವರು. ಯಾವುದಾದರೊಂದು ಆಫೀಸಿನಲ್ಲಿ ಉದ್ಯೋಗಸ್ಥಾನವು ಬಿಡುವಾಗಿದ್ದರೆ ಅದರ ಪ್ರಾಪ್ತಿಗಾಗಿ ನೂರುಗಟ್ಟಲೆ ಅಪೇಕ್ಷಾಪತ್ರಗಳು ಬಂದು ದುಮ್ಮಿಕ್ಕುವುವು. ಪಟ್ಟಾಂಚಿತನ ಈಗಣ ಪೇಟೆಬೆಲೆಯು ೧೦೦ ಕ್ಕೆ ೪೪ ರಿಂದ ೫೦ ರ ವರೆಗೂ, ಎಂ. ಎ. ಎಂ. ಎಸ್. ಸಿ. ಪರೀಕ್ಷೆ ಕೊಟ್ಟಿರುವವರ ಪೇಟೆಬೆಲೆಯು ೧೦೦ ಕ್ಕೆ ೭೫ ರಿಂದ ೧೦೦ ರ ವರೆಗೂ ನಿಂತಿರುವಂತೆ ಕಾಣುತ್ತಿದೆ. ಆಂಗ್ಲಪ್ರಭುತ್ವದ ಆರಂಭಕಾಲದಲ್ಲಿ ಆಂಗ್ಲಭಾಷೆಯನ್ನು ಕಲಿತುಕೊಂಡರೆ ಸುಲಭವಾಗಿ ರಾಜಕೀಯೋದ್ಯೋಗಸ್ಥಾನಗಳನ್ನು ಪಡೆದುಕೊಳ್ಳಬಹುದೆಂದು ಅದರ ಅಭ್ಯಾಸವನ್ನು ಯುವಕರು ಮಾಡುತ್ತಿದ್ದರು. ಆಗ್ಗೆ ಅದೇ ಸರಿಯಾಗಿದ್ದಿತು. ಪ್ರತಿಮನುಷ್ಯನ ಬೆಲೆಯೂ ಆತನು ಕಲಿತ ಆಂಗ್ಲಶಬ್ದಗಳ ಇಯತ್ತೆಯನ್ನು ಅನುಸರಿಸಿ ನಿರ್ಣಯಿಸಲ್ಪಡುತ್ತಿದ್ದಿತು. ಕ್ರಮೇಣ ನಮ್ಮ ಭರತಖಂಡದಲ್ಲಿ ಪರ್ಷಿಯನ್ ಭಾಷೆಗೆ ಪ್ರತಿಯಾಗಿ ಆಂಗ್ಲಭಾಷೆಯು ಉಪಯೋಗಿಸಲ್ಪಡುತ್ತ ಬಂದಿತು. ಅದುಕಾರಣ ಸರ್ಕಾರಿ ಯುದ್ಯೋಗದ ನಿರ್ವಾಹಕ್ಕೆ ಆಂಗ್ಲಭಾಷಾ ಪರಿಚಯವು ಅವಶ್ಯಕವಾಗಿ ಪರಿಣಮಿಸಿತು. ಆಂಗ್ಲೇಯರು ಇತರ ರಾಷ್ಟ್ರಗಳನ್ನು ಸ್ವಾಧೀನಪಡಿಸಿಕೊಂಡಾಗಿನಿಂದಲೂ ವಂಗದೇಶೀಯರು ಉದ್ಯೋಗಗಳಿಗಾಗಿ ಅನ್ಯರಾಷ್ಟ್ರಗಳಿಗೆ ಹೋಗುತ್ತಲಿದ್ದರು. ಆಗ್ಗೆ ಅಂಥ ಸರ್ಕಾರಿ ಉದ್ಯೋಗಗಳನ್ನು ಪಡೆದ ವಿದ್ಯಾಧಿಕರುಗಳು ಅನೇಕಭೋಗಗಳನ್ನು ಅನುಭವಿಸುವುದಕ್ಕೆ ಅವಕಾಶವಿದ್ದಿತು. ಈಗಳಾದರೊ ಅಂಥ ವಿದ್ಯಾಧಿಕರುಗಳು ಸಾಮಾನ್ಯತಃ ನಿರಾಧಾರರಾಗುತ್ತಿದ್ದಾರೆ. ಈಗಣ ವಿದ್ಯಾಧಿಕರಿಗೆ ೩ ಮಾರ್ಗಗಳು ಮಾತ್ರ ಗೋಚರಿಸುತ್ತಿವೆ. ೧ ನೆಯದು ವಕೀಲರಾಗುವುದು, ೨ ನೆಯದು ಮುನ್ಸಿಫರಾಗುವುದು, ೩ ನೆಯದು ಡಾಕ್ಟರಾಗುವುದು.

ಈಗಣ ಅವಸ್ಥೆಯನ್ನು ನೋಡಿದರೆ ನಮ್ಮ ಯುವಕರು ನ್ಯಾಯಶಾಸ್ತ್ರ (ಲಾ) ಗಳನ್ನೋದುವುದನ್ನು ಕೆಲಕಾಲದವರೆಗೆ ಬಿಟ್ಟುಕೊಟ್ಟರೆ ಒಳ್ಳೆಯದು. ಏಕೆಂದರೆ—ವಕೀಲರುಗಳ ಸಂಖ್ಯೆಯು ಈಗಲೇ ಲೆಕ್ಕಕ್ಕೆ ಮಿಂಚಿಹೋಗಿದೆ. ಈ ನನ್ನ ಮಾತಿಗೆ ಬೇರೆ ಅರ್ಥವನ್ನು ಮಾಡಿಕೊಳ್ಳಲಾಗದು. ಪ್ರತಿದೇಶದಲ್ಲೂ ನ್ಯಾಯವಾದಿಗಳೇ ಅಭಿವೃದ್ಧಿಗೆ ಮೂಲಕಾರಣರು. ಎಡ್ಮಂಡ್ ಬರ್ಕ್ ಮಹಾಶಯನೂ ಕೂಡ ನ್ಯಾಯವಾದಿಗಳನ್ನು ಹೊಗಳಿರುವನು. ಬಂಗಾಳಾ ದೇಶದ ಅಭಿವೃದ್ಧಿಗೂ ನ್ಯಾಯವಾದಿಗಳೇ ಕಾರಕರು. ಕೀರ್ತಿಶೇಷರಾದ ಮನಮೋಹನಘೋಷ್, ಲಾಲಮೋಹನಘೋಷ್, ಆನಂದಮೋಹನಬೋಸ್, ಡಬ್ಲ್ಯು. ಸಿ. ಬಾನರ್ಜಿ ಇವರೆಲ್ಲಾ ನ್ಯಾಯವಾದಿಗಳೇ. ಈಗಣ ಸರ್ ಟಿ. ಎನ್. ಪಾಲಿತ್‌ರವರೂ, ಸರ್ ರಸವಿಹಾರಿಘೋಷ್ ಮೊದಲಾದ ವದಾನ್ಯವರೇಣ್ಯರೂ ಕೂಡ ನ್ಯಾಯವಾದಿಗಳೇ. ಅದುದರಿಂದ ನ್ಯಾಯಶಾಸ್ತ್ರಾಭ್ಯಾಸವನ್ನು ನಿಲ್ಲಿಸಿಬಿಡಬೇಕೆಂದು ನಾನು ಹೇಳಿದ ಮಾತ್ರದಿಂದ, ಆ ವೃತ್ತಿಯನ್ನು ತೃಣೀಕರಿಸುವುದು ನನ್ನ ಉದ್ದೇಶವೆಂದು ತಿಳಿಯಬಾರದು. ಆ ನ್ಯಾಯವಾದಿ ವೃತ್ತಿಯಲ್ಲಿ ಇದುವರೆಗೇ ಗಣನಾತೀತರಾದಷ್ಟು ನಮ್ಮ ದೇಶೀಯರು ತುಂಬಿರುವುದರಿಂದ ಅದರ ಗೌರವವು ತಗ್ಗಿಹೋಗುತ್ತಿದೆ. ಒಂದು ಸಬ್‌ಡಿವಿಜನ್ ಕೋರ್ಟಿನಲ್ಲಿ ಪ್ಲೀಡರುಗಳೆಲ್ಲರೂ ಕೂಡಿ ಬಾರ್‌ಲೈಬ್ರರಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಶ್ಯಕವಾದ ಮಾಸಿಕಧನವನ್ನು ಸಲ್ಲಿಸಲಾರದೆ ಮರಗಳ ಕೆಳಗೆ ಸೀಮೆಯೆಣ್ಣೆ ಪೆಟ್ಟಿಗೆಗಳ ಮೇಲೆ ಕುಳಿತು ಹರಟೆಬಡಿದುಕೊಂಡು ಹೋಗುತ್ತಿರುವರು. ಸಕ್ರಮವಾದ ಆಂದೋಳನವೇ ಶ್ರೇಯಸ್ಸಿಗೆ ಮುಖ್ಯಸಾಧನವಾಗುಳ್ಳ ಭರತಖಂಡದಲ್ಲಿ ನ್ಯಾಯಶಾಸ್ತ್ರದ ಅಮೂಲ್ಯತೆಯನ್ನು ಕುರಿತು ಹೆಚ್ಚಾಗಿ ಹೇಳಬೇಕಾದುದಿಲ್ಲ. ಆದರೂ ಸದ್ಯಃ ವಕೀಲರುಗಳಿಗೆ ಗೌರವವಾದ ಜೀವನೋಪಾಧಿಯು ದೊರೆಯುವಂತೆ ಮಾಡುವುದಕ್ಕಾಗಿ ಕೆಲಕಾಲದವರೆಗೆ ಹೊಸಹೊಸ ವಕೀಲರನ್ನು ನಿರ್ಮಿಸುವ ಪ್ರಯತ್ನವನ್ನು ತಪ್ಪಿಸಬೇಕು.

ನಮ್ಮಲ್ಲಿ ಸ್ವದೇಶಾಂದೋಳನವು ಪ್ರಾರಂಭವಾದ ಬಳಿಕ ದೇಶದ ಕೈಗಾರಿಕೆಗಳನ್ನು ಪುನರುದ್ಧಾರಮಾಡಬೇಕೆಂಬ ಕುತೂಹಲವು ದೇಶದಲ್ಲಿ ವ್ಯಾಪಿಸಿತು. ವಿಶ್ವವಿದ್ಯಾಲಯ ಪರೀಕ್ಷೆಯಲ್ಲುತ್ತೀರ್ಣರಾದವರು ಹಿಂದೆ ಬಿದ್ದರು. ನಿಜತತ್ತ್ವವನ್ನು ವಿಚಾರಮಾಡಿದರೆ ದೇಶಾಭ್ಯುದಯಕ್ಕಾಗಿ ಕೃಷಿಯನ್ನು ಮಾಡಿದವರೊಳಗೆ ಅನೇಕಾನೇಕರು ಉನ್ನತವಿದ್ಯಾಭ್ಯಾಸವನ್ನು ಮಾಡಿದವರೇ ಅಲ್ಲವೆಂದು ಗೊತ್ತಾಗುವುದು. ಮೇಧಾವಿಗಳಾದ ಕೇಶವಚಂದ್ರ ಸೇನ್‌ರವರೂ, ಪ್ರತಾಪಚಂದ್ರ ಮಜುಂದಾರ್‌ರವರೂ, ಮ್ಯುನ್ಸಿಪಲ್ ವ್ಯವಹಾರಗಳಲ್ಲಿ ದಕ್ಷರಾಗಿದ್ದ ನಳಿನೀವಿಹಾರ ಸರ್ಕಾರ್‌ರವರೂ, ಪಾರಿಶ್ರಾಮಿಕ ವಿಷಯದಲ್ಲಿ ಪ್ರಮುಖರಾಗಿರುವ ಸರ್ ಆರ್. ಎನ್. ಮುಕರ್ಜಿಯವರೂ, ಪ್ರಸಿದ್ಧ ಇಂಜನಿಯರಾದ ಜೆ. ಸಿ. ಬನರ್ಜಿಯವರೂ, ಕಲ್ಲಿದ್ದಲ ವರ್ತಕರಾದ ಎನ್. ಸಿ. ಸರ್ಕಾರ್‌ರವರೂ, ಲೋಹಮಾರ್ಗಶಾಖೆಯ ಉದ್ಯೋಗದಲ್ಲಿ ಸುಪ್ರಸಿದ್ಧಿ ಪಡೆದ ಎ. ಸಿ. ಘೋಷ್‌ರವರೂ ಸಹ ಉನ್ನತವಿದ್ಯಾಭ್ಯಾಸವನ್ನೇನೂ ಮಾಡಿದವರಲ್ಲ. ಆದರೂ ಅವರ ತಿಳಿವು ಅತ್ಯಂತವಾಗಿ ಪ್ರಕಾಶಿಸಿತು. ಅದು ಪ್ರಾಪಂಚಿಕ ವ್ಯವಹಾರಕ್ಕೂ ಅತಿಶಯವಾಗಿ ಉಪಯೋಗಿಸಿತು. ಪಟ್ಟಾಂಚಿತರಾದ ವಿದ್ಯಾಧಿಕರುಗಳಾದರೊ ಗುಮಾಸ್ತೆಯರುಗಳಂತೆ ಒಂದೇ ವಿಧವಾದ ಕೆಲಸವನ್ನು ಮಾತ್ರವೇ ಮಾಡಬಲ್ಲರು. ಈಗಣ ಗ್ರಾಮಾಂತರಗಳ ಸ್ಥಿತಿಯನ್ನು ಅವಲೋಕಿಸಿದರೆ ಅವರಲ್ಲೂ ಜ್ಞಾನಸಂಪಾದನ ಕುತೂಹಲವು ಹುಟ್ಟಿರುವಂತೆ ಕಾಣುತ್ತದೆ. ನಿಮ್ನಜಾತಿಯವರಲ್ಲೂ ಕೂಡ ಈಗ ವಿದ್ಯಾರ್ಜನಾಸಕ್ತಿಯು ಪ್ರಬಲಿಸುತ್ತಿದೆ. ಆದರೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತ ಬಂದಂತೆ ಕಲಾಶಾಲೆಗಳನ್ನೂ ಅಭಿವೃದ್ಧಿಪಡಿಸುವುದು ಸಾಧ್ಯವೆ? ಸಾಧ್ಯವಲ್ಲ. ಒಬ್ಬ ಮನುಷ್ಯನು ತನ್ನ ಮಕ್ಕಳೆಲ್ಲಾ ಪಟ್ಟಾಂಚಿತರಾಗಬೇಕೆಂದು ಏತಕ್ಕೆ ಸಂಕಲ್ಪಿಸಬೇಕೋ ತಿಳಿಯಲಿಲ್ಲ. ಮರ್ಯಾದೆಯಿಂದ ಜೀವಿಸುವುದಕ್ಕೆ ಸಾಧಕಗಳಾದ ಇತರ ಮಾರ್ಗಗಳೂ ಇತರ ವೃತ್ತಿಗಳೂ ಕಾಣಿಸುತ್ತಲೇ ಇರುವುವು. ಆಂಗ್ಲದೇಶದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯೊಳಗೆ ಉತ್ತೀರ್ಣರಾದವರೊಳಗೆ ೧೦೦ ಕ್ಕೆ ೧೦ ಮಂದಿ ಮಾತ್ರವೇ ಮುಂದಕ್ಕೆ ವಿಶ್ವವಿದ್ಯಾಲಯ ಪರೀಕ್ಷೆಗಳಿಗೆ ಓದುವರು. ಆದರೂ ಆ ದೇಶದಲ್ಲಿ ಈ ಪದ್ಧತಿಯಿಂದ ಯಾವ ಉಪದ್ರವವೂ ಸಂಭವಿಸಿಲ್ಲ. ಅಂಥ ಪದ್ಧತಿಯನ್ನು ನಾವೂ ಅನುಸರಿಸುವುದಾದರೆ ನಮ್ಮ ದೇಶದಲ್ಲಿ ಯಾವ ಉಪದ್ರವವು ಸಂಭವಿಸುವುದೋ ತಿಳಿಯುವುದಿಲ್ಲ.

ಈಗ ಜಾತೀಯಜೀವನದಲ್ಲಿ ಸಂದಿಗ್ಧಾವಸ್ಥೆಯು ಪ್ರಾಪ್ತವಾಗಿರುತ್ತದೆ. ನನ್ನ ವಾರ್ಧಕಾವಸ್ಥೆಯಲ್ಲಿ ನನಗೆ ಭಗವಂತನು ನಿರ್ಣಯಿಸಿ ಅನುಗ್ರಹಿಸಿರುವ ಸ್ವಲ್ಪ ಕಾಲದಲ್ಲಿ ನಾನು ರಸಾಯನ ಶಾಸ್ತ್ರವನ್ನು ಬಿಟ್ಟು ಆಹಾರಸಮಸ್ಯೆಯನ್ನು ಸಾಧಿಸುವುದಕ್ಕಾಗಿ ನನ್ನ ಅವಶಿಷ್ಟಕಾಲವನ್ನೆಲ್ಲಾ ವಿನಿಯೋಗಿಸುವೆನು. ದೇಶದ ಕಣ್ಣೆದಿರಿಗೆ ಕಟ್ಟಿ ನಿಂತಿರುವ ಈ ಆಹಾರ್ಯದ ಕೊರತೆಯ ರೂಪವಾದ ಮಹೋಪದ್ರವವನ್ನು ನಿಮ್ಮ ಅವಗಾಹನೆಗೆ ತರುವುದಕ್ಕಾಗಿ ನಾನು ಪ್ರಯತ್ನಿಸಿರುವೆನು. ಅದಕ್ಕಾಗಿ ಮಾಡಬೇಕಾದ ಕಾರ್ಯಸಾಧನೆಯ ಮಾರ್ಗವನ್ನು ನನ್ನ ಮತ್ತೊಂದು ಉಪನ್ಯಾಸದಲ್ಲಿ ವಿವರಿಸುತ್ತೇನೆ” ಎಂದು ಹೇಳಿ ಸಮಾಪ್ತಿಮಾಡಿ, ಕಡೆಗೆ ನಮ್ಮ ಯುವಕರು ನನ್ನ ಮಾತನ್ನು ಲಾಲಿಸಿ, ಕೆಲ ಕಾಲದವರೆಗೆ ಲಾ ಪರೀಕ್ಷೆಗೆ ಓದುವುದನ್ನು ತಡೆದಿಟ್ಟಿರಬೇಕೆಂದು ಎಚ್ಚರಿಸಿದರು. ಇವರು ಇಷ್ಟರಲ್ಲೇ ಮಾಡಬೇಕೆಂದಿರುವ ಉಪನ್ಯಾಸದಲ್ಲಿ ನಮ್ಮವರು ಆಹಾರ್ಯಸಮೃದ್ಧಿಯ ವಿಷಯವಾಗಿ ಕೈಕೊಳ್ಳಬೇಕಾದ ಮಾರ್ಗಗಳು ವರ್ಣಿಸಲ್ಪಡುವುವೆಂದು ಅದನ್ನು ಕುತೂಹಲದಿಂದ ಸರ್ವರೂ ನಿರೀಕ್ಷಿಸುತ್ತಿರುವರು.

ಮೇಲೆ ಕಂಡ ರಾಯಿರವರ ಉಪನ್ಯಾಸದಲ್ಲಿ-ಉನ್ನತವಿದ್ಯೆಯನ್ನು ಅಭ್ಯಾಸಮಾಡಿದವರ ಸಂಖ್ಯೆಯು ನಮ್ಮ ದೇಶದಲ್ಲಿ ದಿನೇದಿನೇ ಹೆಚ್ಚಿಹೋಗುತ್ತಲೂ ಅಂಥವರಿಗೆ ಸರಿಯಾದ ಜೀವನೋಪಾಧಿ ದೊರೆಯದೆಯೂ, ಆ ಉನ್ನತವಿದ್ಯೆಯ ಗೌರವವೂ ಪ್ರಯೋಜನವೂ ಹೇಗೆ ತಗ್ಗಿಹೋಗುತ್ತಲಿದೆಯೆಂಬ ನಿಜಸ್ಥಿತಿಯು ವರ್ಣಿತವಾಗಿದೆಯೇ ಹೊರತು ಅದರಲ್ಲಿ ಉತ್ಪ್ರೇಕ್ಷೆಯೇನೂ ಇರುವುದಿಲ್ಲ. ನಮಗೆ ಆಹಾರಸಮಸ್ಯೆಯು ದಿನೇದಿನೇ ಕಠಿನತರವಾಗಿ ಪರಿಣಮಿಸುತ್ತಿದೆ. ಅದುಕಾರಣವೇ ಸುಪ್ರಸಿದ್ಧ ರಾಸಾಯನಿಕ ಶಾಸ್ತ್ರಜ್ಞರಾದ ಮೇಲೆಕಂಡ ಸರ್ ರಾಯಿರವರೂ ಕೂಡ ತಮ್ಮ ದೃಷ್ಟಿಯನ್ನು ಈ ಸಮಸ್ಯೆಯ ಕಡೆಗೆ ತಿರುಗಿಸಿದ್ದಾರೆ. ಅವರ ಉಪದೇಶವನ್ನೂ ಮೇಲುಪಂಕ್ತಿಯನ್ನೂ ಅನುಸರಿಸಿ ಪ್ರಭುತ್ವದವರೂ ಪ್ರಜಾಪ್ರಮುಖರೂ ಸಹ ನಡೆದುಕೊಳ್ಳುವುದು ಶ್ರೇಯಸ್ಕರವು. ಉನ್ನತವಿದ್ಯೆಯನ್ನೇ ಲಕ್ಷ್ಯವಾಗಿಟ್ಟುಕೊಳ್ಳದೆ, ಕೃಷಿಶಿಲ್ಪಾದ್ಯಭಿವೃದ್ಧಿಗಗಳಿಗೆ ಸಹಾಯಕವಾಗುವಷ್ಟುಮಟ್ಟಿನ ವಿದ್ಯಾಭ್ಯಾಸವನ್ನು ಸರ್ವತ್ರ ಹರಡುವುದಕ್ಕೆ ವಿಶೇಷ ಪ್ರೋತ್ಸಾಹ ಸಾಹಾಯ್ಯಗಳನ್ನು ಮಾಡುವುದು ಪ್ರಭುತ್ವದವರ ಮುಖ್ಯಲಕ್ಷ್ಯವಾಗಿರಬೇಕು. ಪ್ರಜೆಗಳೂ ಅದನ್ನು ಗಮನದಲ್ಲಿಟ್ಟು ತಮ್ಮ ಮಕ್ಕಳಿಗೆ ನಾನಾವೃತ್ತಿಗಳಲ್ಲಿ ಪ್ರವೇಶಗೊಳಿಸುವುದನ್ನೇ ಗುರಿಯಾಗಿಟ್ಟುಕೊಂಡು ಅದಕ್ಕೆ ಬೇಕಾಗುವಷ್ಟು ವಿದ್ಯಾಭ್ಯಾಸವನ್ನು ತಪ್ಪದೆ ಕೊಡಿಸುವಲ್ಲಿ ತತ್ಪರರಾಗಬೇಕು. ತಕ್ಕಷ್ಟು ವಿದ್ಯಾವಂತರಾದ ಅಂಥ ಜನರು ಕೃಷಿಶಿಲ್ಪ ವಾಣಿಜ್ಯಾದಿಗಳಲ್ಲಿ ವಿಶೇಷವಾಗಿ ಪ್ರವರ್ತಿಸುತ್ತ ಬರುವಂತಾದರೆ ಪಾಶ್ಚಾತ್ಯದೇಶಗಳಂತೆ ನಮ್ಮ ದೇಶವೂ ಕೂಡ ದುರ್ಭರವಾದ ಆಹಾರ್ಯಸಮಸ್ಯೆಯ ಉಪದ್ರವವನ್ನು ಸ್ವಲ್ಪವೂ ಲಕ್ಷೀಕರಿಸದೆ ಬಾಳಲು ಸಮರ್ಥವಾಗುವುದು.

ದುರ್ಭಿಕ್ಷದಮೇಲೆ ಅಧಿಕಮಾಸ

ನಮ್ಮ ಭರತಖಂಡದಲ್ಲಿ ಆಹಾರ್ಯಾದಿ ಅಪಕ್ವವಸ್ತುಗಳ ಕೊರತೆಯಿಂದ ದೇಶವೇ ತಲ್ಲಣಿಸುವ ಹೊತ್ತು ಬಂದಿರುತ್ತದೆ. ಲಕ್ಷಾಂತರ ಜನರು ಹಗಲಿಗಾದರೆ ರಾತ್ರಿಗೆ ಹೇಗೆ? ಎಂದು ಪರಿತಪಿಸುತ್ತ ಅರಹೊಟ್ಟೆ ತಿಂದು ಕಾಲಯಾಪನೆ ಮಾಡುವುದಕ್ಕೂ ಅವಕಾಶವಿಲ್ಲದೆ ಸಾಯುತ್ತಿದ್ದಾರೆ. ಹೀಗಿರುವಾಗ್ಗೆ ನಮ್ಮ ಭರತಖಂಡದ ಸರ್ಕಾರದವರು ಬೆಲ್ಜಿಯಂ ದೇಶದವರಿಗೆ ಬೇಕಾದ ಅಪಕ್ವವಸ್ತುಗಳನ್ನು ಈ ದೇಶದಿಂದ ಸಾಗಿಸಿಕೊಳ್ಳುವುದಕ್ಕೆ ಸೌಕರ್ಯವನ್ನು ಒದಗಿಸಿಕೊಡಲು ಒಪ್ಪಿಕೊಂಡಿದ್ದಾರೆಂದು ಸೀಮೆಯಿಂದ ಬಂದಿರುವ ತಂತ್ರೀವಾರ್ತೆಯನ್ನು ನೋಡಲಾಗಿ ದುರ್ಭಿಕ್ಷದಮೇಲೆ ಅಧಿಕಮಾಸವು ಬಂದಂತಾಯಿತೆಂದು ನಿಟ್ಟುಸುರು ಬಿಡಬೇಕಾಗಿದೆ. ಬೆಲ್ಜಿಯಂದೇಶದ ದಯನೀಯಸ್ಥಿತಿಯು ಪ್ರಪಂಚಕ್ಕೇ ಗೊತ್ತಾಗಿದೆ. ಅದಕ್ಕೆ ಸಹಾಯಮಾಡಬೇಕಾದುದೂ ಧರ್ಮವೇ ಆಗಿದೆ. ಆದರೆ ಸಹಾಯಮಾಡುವುದೆಂದರೆ ತಾನು ಉಪವಾಸವಾಗಿದ್ದು ಹೆರರಿಗೆ ಸಹಾಯಮಾಡುವುದು ಸಾಧ್ಯವೆ? ನಮ್ಮ ದೇಶದಲ್ಲಿ ೨-೩ ವರ್ಷಗಳ ಹಿಂದೆ ಇದ್ದಂಥ ಸ್ಥಿತಿಯಾದರೂ ಈಗ ಇರುತ್ತಿದ್ದರೆ ಈ ದೇಶಕ್ಕೆ ಸಾಕಾಗುವಷ್ಟನ್ನು ಇಲ್ಲಿ ಉಳಿಸಿಕೊಂಡು ಹೆಚ್ಚಿನದನ್ನು ಪರದೇಶಕ್ಕೆ ಕಳುಹಿಸಿಕೊಟ್ಟರೆ ಅದಕ್ಕೆ ಯಾರೂ ಆಕ್ಷೇಪವನ್ನು ಮಾಡಲಾರರು. ಈಗ ಭರತಖಂಡವು ಅನಿರ್ವಚನೀಯವಾದಷ್ಟು ಕ್ಷಾಮಬಾಧೆಗೆ ಗುರಿಯಾಗಿರುವಾಗ, ಅದನ್ನು ತಪ್ಪಿಸಿಕೊಂಡು ಚೇತರಿಸಿಕೊಳ್ಳುವುದು ಎಂದಿಗೋ ಎಂದು ಹಂಬಲಿಸುತ್ತಿರುವಾಗ, ಈ ದೇಶದಲ್ಲಿ ಬೆಳೆದ ವಸ್ತುಗಳನ್ನೆಲ್ಲಾ ಈ ದೇಶದಲ್ಲೇ ಉಳಿಯಿಸಿ ದೇಶಕ್ಕೆಲ್ಲಾ ಸುಭಿಕ್ಷಸ್ಥಿತಿಯನ್ನು ಉಂಟುಮಾಡಿಕೊಡುವುದು ಪ್ರಭುತ್ವದವರಿಗೆ ಪ್ರಥಮ ಧರ್ಮವಾಗಿರುವಾಗ, ವಿದೇಶಕ್ಕೆ ನಮ್ಮಲ್ಲಿನ ಅಪಕ್ವಪದಾರ್ಥಗಳನ್ನು ಸಾಗಿಸುವುದಕ್ಕೆ ಅಂಗೀಕಾರವನ್ನು ಕೊಟ್ಟಿರುವುದನ್ನು ದೇಶೀಯರು ಒಪ್ಪುವರೆ? ತನ್ನ ಕ್ಷೇಮವನ್ನು ಮೊದಲು ನೋಡದೆ ಪರರ ಕ್ಷೇಮವನ್ನು ನೋಡುವುದು ಪ್ರಾಣಿಸಾಮಾನ್ಯ ಧರ್ಮವಾಗಿಲ್ಲ. ಈ ಸಂದರ್ಭದಲ್ಲಿ ಪ್ರಭುತ್ವದವರು ತೋರಿಸಿರುವ ಚರ್ಯೆಯಿಂದ ಅವರಿಗೆ ಭರತಖಂಡಕ್ಕಿಂತಲೂ ವಿದೇಶಕ್ಷೇಮವೇ ಆತ್ಮೀಯವಾದುದೆಂಬ ಪ್ರತ್ಯಯವಿದ್ದಂತೆ ಭಾಸವಾಗುವುದು.

ಒಳದೇಶದ ವೃತ್ತಾಂತಗಳು.

ಮೈಸೂರು ತಾಲ್ಲೂಕಿನ ಅಮಲ್ದಾರರಾಗಿದ್ದ ಮ॥ ತಮ್ಮಾಜಿರಾಯರು ದೊಡ್ಡಬಳ್ಳಾಪುರಕ್ಕೆ ವರ್ಗಾಯಿಸಲ್ಪಟ್ಟು ಅಲ್ಲಿಯ ಅಮಲ್ದಾರರಾಗಿದ್ದ ಮಿ॥ ಹೈದರಲ್ಲಿಖಾನರು ಇಲ್ಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ನಿನ್ನೆಯ ದಿನ ರಾಜಧಾನಿಯ ಟವನ್‌ಹಾಲಿನಲ್ಲೂ ಆವರಣದಲ್ಲೂ ಪದ್ಧತಿಯಂತೆ ಷಾಣ್ಮಾಸಿಕ ಫಲಪುಷ್ಪಪ್ರದರ್ಶನವು ಮನೋಹರವಾಗಿ ನೆರವೇರಿತು. ಈ ದಿನ ಸ್ತ್ರೀಯರು ಪ್ರದರ್ಶನಕ್ಕೆ ಹೋಗಲು ಏರ್ಪಾಡಿಸಿರುವರು.

ಸಂಸ್ಥಾನದಲ್ಲಿ ಮುಜರಾಯಿ ಸೆಕ್ರೆಟರಿ ಸ್ಥಾನವೇ ತಪ್ಪಿಸಲ್ಪಟ್ಟು, ಅಂಡರ್ ಸೆಕ್ರೆಟರಿ ಸ್ಥಾನವು ಉಳಿಯಿಸಲ್ಪಟ್ಟಿರುವುದರಿಂದ ಮ॥ ಆರುವಾಮುದಯ್ಯಂಗಾರರು ಬೆಂಗಳೂರು ಡಿ॥ ಕಮಿಷನರಾಗಿ ವರ್ಗಾಯಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ಹೊಸ ಅಪ್ಪಣೆಯ ಪ್ರಕಾರ ಪ್ರಜಾಪ್ರತಿನಿಧಿಸಭೆಗೆ ಮೈಸೂರು ವಿಶ್ವವಿದ್ಯಾಲಯ ಸಂಘದಿಂದ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಬೇಕಾದುದಕ್ಕಾಗಿ ರಾ॥ ಬ॥ ಎಂ. ಶ್ಯಾಮರಾಯರೂ, ರಾ॥ ಬ॥ ಎಂ. ಸಿ. ರಂಗಯ್ಯಂಗಾರರೂ ಆರಿಸಲ್ಪಟ್ಟಿದ್ದಾರೆ.

ನಂಜನಗೂಡಿನಿಂದ ಈರೋಡಿನವರೆಗೆ ಚಾಮರಾಜನಗರ, ಮರಹಳ್ಳಿಗಳ ಮೇಲೆ ಹಾಕಲ್ಪಡಲು ಯೋಚಿಸಿದ್ದ ಲೋಹಮಾರ್ಗದ ಕೆಲಸಕ್ಕೆ ಇಂಡ್ಯಾ ಸರ್ಕಾರದವರ ಅನುಮತಿಯು ದೊರೆತಿರುವುದರಿಂದ ಇಷ್ಟರಲ್ಲೇ ಆ ಕೆಲಸವನ್ನು ನಮ್ಮ ಸರ್ಕಾರದವರು ಆರಂಭಿಸುವುದರಲ್ಲಿದ್ದಾರೆ.

ಶ್ರೀಮದ್ಯುವರಾಜ ಪುತ್ರೋತ್ಸವಾನಂದ ಪ್ರದರ್ಶನಾರ್ಥವಾಗಿ ರಾಜಧಾನಿಯ ವರ್ತಕಮಹಾಜನರು ಚಂದಾಮೂಲಕ ಕೂಡಿಸಿದ್ದ ಹಣದಿಂದ ಬಡಬಗ್ಗರುಗಳಿಗೆಲ್ಲಾ ಹಳೆಬಾಡಿಗಾರ್ಡ್ ಕಟ್ಟಡದಲ್ಲೂ ಸಂತೆಬೀದಿಯಲ್ಲೂ ಮೃಷ್ಟಾನ್ನಭೋಜನವನ್ನು ಈ ದಿನ ಮಾಡಿಸಲು ಏರ್ಪಡಿಸಿದ್ದಾರೆ.

ಶ್ರೀಮನ್ಮಹಾರಾಜರವರು ಸಪರಿವಾರರಾಗಿ ಕಳೆದ ಬುಧವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿದ್ದು ಶ್ರಾವಣಿಗಾಗಿ ಈ ದಿವಸ ರಾಜಧಾನಿಗೆ ಬಂದು ಕೂಡಲೆ ಹಿಂದಿರುಗಿ ಚಿತ್ತೈಸುವವರಾಗಿರುವರು. ಶ್ರೀಮದ್ಯುವರಾಜರವರು ಕಳೆದ ಭಾನುವಾರವೇ ಬೆಂಗಳೂರಿಗೆ ದಯಮಾಡಿಸಿದರು.

ಮೈಸೂರು ಡಿಸ್ಟ್ರಿಕ್ಟ್ ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮ॥ ಮೃತ್ಯುಂಜಯಯ್ಯರ್‌ರವರು ಮುಜರಾಯಿ ಅಂಡರ್ ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ. ಮ॥ ಎನ್. ಸುಂದರರಾಜಯ್ಯಂಗಾರರು ಮೈಸೂರು ಡಿಸ್ಟ್ರಿಕ್ಟ್ ಡಿ॥ ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಧಾರ್ಮಿಕರು ಸಂಸ್ಥಾನದಲ್ಲಿ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಲು ಪ್ರಯತ್ನಿಸಿದರೆ ಅಂಥ ಕಟ್ಟಡಗಳಿಗೆ ತಗಲುವ ಆದ್ಯಂತವ್ಯಯದಲ್ಲಿ ಅರ್ಧಭಾಗವನ್ನು ಸರ್ಕಾರದವರು ವಹಿಸುವಂತೆ ಅಪ್ಪಣೆ ಮಾಡಿದ್ದಾರೆ. ಇಂಥ ಕಾಲದಲ್ಲಿ ಧರ್ಮಬುದ್ಧಿಯುಳ್ಳ ಮಹನೀಯರು ವಿದ್ಯಾದಾನರೂಪಪುಣ್ಯಕ್ಕೆ ಭಾಗಿಗಳಾಗಲು ಹಿಂಜರೆಯಬಾರದು.

ಕಳೆದ ತಾ॥ ೭ ನೆಯ ದಿನ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಫಲಪುಷ್ಪ ಪ್ರದರ್ಶನವು ಬಹಳ ವಿಜೃಂಭಣೆಯಿಂದ ನಡೆಯಿತು. ಅದರ ಸೂಪರಿಂಟೆಂಡೆಂಟರಾದ ಮ॥ ಜವರಯ್ಯನವರು ಪ್ರದರ್ಶನಾರ್ಥವಾಗಿ ಮಾಡಿದ್ದ ಏರ್ಪಾಟುಗಳು ಬಹಳ ಮನೋಹರವಾಗಿಯೂ ತೃಪ್ತಿಕರವಾಗಿಯೂ ಇದ್ದುವು. ಪ್ರದರ್ಶಿತಗಳಾಗಿದ್ದ ಹಣ್ಣುಗಳೊಳಗೆ ಆಸ್ಟ್ರೇಲಿಯಾ ಜಾತಿಯ ದೇಶ ಕಿತ್ತಲೆಹಣ್ಣುಗಳು ಶ್ಲಾಘನೀಯಗಳಾಗಿದ್ದುವು. ಅವುಗಳಲ್ಲಿ ಬಿತ್ತಗಳೇ ಇಲ್ಲ.

ಇದೇ ತಿಂಗಳು ತಾ॥ ೨೩-೨೪ ರಲ್ಲಿ ರಾಜಧಾನಿಯ ಟವನ್‌ಹಾಲಿನಲ್ಲಿ ರಾಜಕಾರ್ಯಪ್ರಸಕ್ತ ಮ॥ ಬಿ. ರಾಮಕೃಷ್ಣರಾಯರವರ ಅಧ್ಯಕ್ಷತೆಯಿಂದ ಶ್ಯಾನುಭೋಗರ ಮಹಾಸಭೆಯು ನಡೆಯುವುದಾಗಿದೆ. ಶ್ಯಾನುಭೋಗರ ಶ್ರೇಯೋಭಿವೃದ್ಧಿಗಾಗಿ ದುಡಿಯುವ ಈ ಸಭೆಯು ಅವರಲ್ಲಿ ಕೆಲವರೊಳಗೆ ಇರುವ ಪ್ರಜಾಪೀಡನೆಯ ದುರ್ಗುಣವನ್ನು ನಿರ್ಮೂಲಮಾಡಲು ಸಮರ್ಥವಾಗುವುದಾದರೆ ಈ ಸಭೆಯು ದೇಶಕ್ಷೇಮಕ್ಕೆ ಸಹಾಯಮಾಡಿದಂತಾಗಿ ಸಕಲ ಪ್ರಜೆಗಳ ಪ್ರೀತಿಗೂ ಪಾತ್ರವಾದೀತು. ಸಮರ್ಥರಾದ ಮ॥ ರಾಮಕೃಷ್ಣರಾಯರು ಅದಕ್ಕೆ ನಾಂದಿಹಾಕಿಕೊಡಲೆಂದು ಹಾರೈಸುವೆವು.

ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಸಕಲ ಬಿರುದಾವಳಿಗಳ ಸಮೇತ ಮಹೋತ್ಸವದೊಡನೆ ಕಳೆದ ಭಾನುವಾರ ಬೆಂಗಳೂರುಪೇಟೆಯಿಂದ ಕಂಟೋನ್ಮೆಂಟಿಗೆ ದಯಮಾಡಿಸಿ, ಅಲ್ಲಿಯ ಕಂಟ್ರ್ಯಾಕ್ಟರ್ ಮ॥ ಎಂ.ಜಿ. ನಾಗಪ್ಪನವರ ಭವ್ಯಮಂದಿರದಲ್ಲಿದ್ದು ಅಲ್ಲಿಯ ಸರ್ವಭಕ್ತಮಂಡಲಿಯ ಸತ್ಕಾರದಲ್ಲಿ ೨ ದಿನಗಳಿದ್ದು, ಮಂಗಳವಾರದದಿನ ಮ॥ ಯು. ಪಸನವರು ಮ॥ ನಾಗಪ್ಪನವರು ಮೊದಲಾದ ಭಕ್ತಜನರ ಪ್ರಾರ್ಥನೆಯ ಮೇರೆ ಹಲಸೂರಿಗೆ ಸಕಲ ಮರ್ಯಾದೆಗಳೊಡನೆ ದಯಮಾಡಿಸಿತು. ಅಲ್ಲಿ ಪುರವೀಧಿಗಳ ಅಲಂಕಾರಗಳೂ ಸಕಲ ಜನವರ್ಗದವರೂ ತೋರಿಸಿದ ಭಕ್ತಿ ಭಾವನೆಗಳೂ ಅತ್ಯಂತ ವಿಶೇಷವಾಗಿದ್ದುವು. ಕಂಟೋನ್ಮೆಂಟಿನ ಕಲೆಕ್ಟರೂ, ಪೊಲೀಸ್ ಸೂಪರಿಂಟೆಂಡೆಂಟರೇ ಮೊದಲಾದ ಅಧಿಕಾರಿಗಳೂ ಉತ್ಸವಕಾಲಕ್ಕೆ ಎಲ್ಲ ಏರ್ಪಾಟುಗಳನ್ನೂ ಸಮಾಚೀನವಾಗಿ ಮಾಡಿಸಿದ್ದರು.

ಬೊಂಬಾಯಿ ಗೌರ್ನರರಾದ ಸರ್ ಜಾರ್ಜ್ ಲಾಯಿಡ್‌ರವರು ಪತ್ನೀಸಮೇತರಾಗಿ ಕಳೆದ ತಿಂಗಳು ತಾ॥ ೨೯ ರಲ್ಲಿ ಧಾರವಾಡಕ್ಕೆ ದಯಮಾಡಿಸಿದ್ದಾಗ್ಗೆ ಅಲ್ಲಿಯ ಮ್ಯುನ್ಸಿಪಲ್ ಡಿಸ್ಟ್ರಿಕ್ಟ್‌ಬೋರ್ಡುಗಳ ಪಕ್ಷದಿಂದ ಸನ್ಮಾನಪತ್ರಗಳು ಸಮರ್ಪಿಸಲ್ಪಟ್ಟನಂತರ ಲಿಂಗಾಯತ ವಿದ್ಯಾವರ್ಧಕ ಫಂಡ್ ಸಂಘದ ಪಕ್ಷದಿಂದಲೂ ಒಂದು ಸನ್ಮಾನಪತ್ರವು ಅದರ ಚೇರ್ಮನ್ನರಾದ ಮ॥ ಶಾಂತವೀರಪ್ಪಣ್ಣನವರಿಂದ ಓದಿ ಅರ್ಪಿಸಲ್ಪಟ್ಟಿತು. ಅದರೊಳಗೆ ಫಂಡಿನ ಚರಿತ್ರೆಯು ವರ್ಣಿಸಲ್ಪಟ್ಟಿದ್ದುದರಲ್ಲಿ-ಪ್ರಕೃತ ಫಂಡಿಗೆ ೨ ಲಕ್ಷವೂ ೫೦ ಸಾವಿರ ರೂ.ಗಳು ಕೂಡಿರುವುವೆಂದೂ, ಒಂಟಿಮೂರಿಯ ದೇಸಾಯರೊಬ್ಬರೇ ಅದಕ್ಕೆ ೫೫ ಸಾವಿರ ರೂ. ಗಳನ್ನು ಕೊಟ್ಟಿರುವರೆಂದೂ, ಈಚೆಗೆ ಮ॥ ಸಿರಸಂಗಿ ದೇಸಾಯರು ವರ್ಷಕ್ಕೆ ೫೦ ಸಾವಿರದ ಉತ್ಪತ್ತಿಯಾಗುವ ಜಹಗೀರಿಯನ್ನು ಲಿಂಗಾಯತರ ವಿದ್ಯಾಭಿವೃದ್ಧಿ ಸಹಾಯಕ್ಕಾಗಿ ಕೊಟ್ಟಿರುವರೆಂದೂ ಈಗ ಈ ಫಂಡಿನಿಂದ ಲಿಂಗಾಯತ ವಿದ್ಯಾರ್ಥಿಗಳಿಗೆ ವರ್ಷ ೧ಕ್ಕೆ ೧೪ ಸಾವಿರ ರೂ. ಗಳನ್ನು ವೇತನರೂಪವಾಗಿ ಕೊಡುತ್ತಿದ್ದೇವೆಂದೂ ಮೊದಲಾಗಿ ಹೇಳಿದ್ದುದಲ್ಲದೆ ಮುಂಬೈ ಕರ್ನಾಟಕದ ವೀರಶೈವ ಸಮಾಜದವರು ಅಲ್ಲಿಯ ಕಾಲೇಜುಫಂಡಿಗೆ ೧ ಲಕ್ಷ ರೂ. ಗಳನ್ನು ಒದಗಿಸಿದುದು, ಯುದ್ಧಕಾಲಕ್ಕೆ ಸಾಮ್ರಾಜ್ಯ ಸರ್ಕಾರಕ್ಕೆ ಉದಾರವಾಗಿ ಧನಸಹಾಯಮಾಡಿದುದು, ಸಾಲವನ್ನು ಕೊಟ್ಟುದು, ಸೈನ್ಯಕ್ಕೆ ಜನರನ್ನು ಭರ್ತಿಮಾಡಿಕೊಟ್ಟುದು ಮೊದಲಾದ ವಿಷಯಗಳನ್ನು ವರ್ಣಿಸಿ, ಕಡೆಗೆ ರಾಜಕೀಯವಿದ್ಯೆಯನ್ನು ಓದಿ ಉತ್ತೀರ್ಣರಾದ ಲಿಂಗಾಯತ ಯುವಕರಿಗೆ ಸರ್ಕಾರಿ ನೌಕರಿಗಳನ್ನು ಹೆಚ್ಚು ಹೆಚ್ಚಾಗಿ ಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ಉತ್ತೇಜನವನ್ನು ಕೊಡಬೇಕೆಂಬ ಪ್ರಾರ್ಥನೆಯೂ ಸಹ ಮಾಡಲ್ಪಟ್ಟಿದ್ದಿತು. ಇದಕ್ಕೆ ಗೌರ್ನರರವರು ಉತ್ತರನ್ನೀಯುವಾಗ್ಗೆ ವೀರಶೈವರ ದಾತೃತ್ವ, ರಾಜನಿಷ್ಠೆ, ಉದ್ಯೋಗಪ್ರಿಯತೆಗಳನ್ನೂ ಅವರು ಲಿಂಗಾಯತರ ಒಂದು ಸೈನ್ಯವನ್ನೇರ್ಪಡಿಸಿ ಸರ್ಕಾರಕ್ಕೆ ಸಹಾಯಮಾಡಿದುದನ್ನೂ ಕೊಂಡಾಡಿ, ಓದಿ ಉತ್ತೀರ್ಣರಾಗಿ ಅರ್ಹತೆಯನ್ನು ಪಡೆದುಕೊಂಡ ಲಿಂಗಾಯತ ಜನರ ಹೆಸರನ್ನು ತಮ್ಮ ಪ್ರೈವೇಟ್ ಸೆಕ್ರೆಟರಿಗಳ ಬಳಿಗೆ ಕಳುಹಿಸಿಕೊಡುತ್ತಿದ್ದರೆ ಅದಕ್ಕೆ ಚೆನ್ನಾಗಿ ಲಕ್ಷ್ಯಕೊಡುವೆವು ಎಂದು ಹೇಳಿ, ಈ ವಿಧವಾದ ಅವರ ವಾಂಛೆಯು ಉಚಿತವಾದುದೆಂದು ಉತ್ತೇಜನ ಕೊಟ್ಟರು. ಮತ್ತೂ ತಮ್ಮ ಜನರ ಉನ್ನತಿಗಾಗಿ ಅಸೋಸಿಯೇಷನ್ನಿನವರು ಮಾಡುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿ ಅದಕ್ಕೆ ಜಯವನ್ನು ಕೋರಿದರು.

ಭರತಖಂಡದ ವೃತ್ತಾಂತಗಳು.

ಭರತಖಂಡದ ಸರ್ಕಾರದವರು ಹೊಸದಾಗಿ ಮಾಡುತ್ತಿರುವ ಸಾಲಕ್ಕೆ ಕಳೆದ ತಾ॥ ೧ ರವರೆಗೆ ೧೧೭೮೫೩೩೦ ರೂ. ಗಳು ಕೂಡಿದ್ದುವು.

ಕಲ್ಕತ್ತಾದ ಕವಿರಾಜ ಎನ್. ಎನ್. ಸೇನ್‌ರವರ ಔಷಧಾಲಯದ ಲೇಬರೆಟರಿಯಲ್ಲಿ ಹೇಗೋ ಬೆಂಕಿ ಹೊತ್ತಿ ೧೦ ಸಾವಿರ ರೂ. ಗಳ ಸೊತ್ತು ನಷ್ಟವಾಯಿತು.

ಒಬ್ಬಾನೊಬ್ಬ ಭಾರತೀಯ ದಾತೃವು ಹಿಂದೂದೇಶ ವಿಶ್ವವಿದ್ಯಾಲಯಕ್ಕೆ ೧ ಲಕ್ಷ ರೂ. ಗಳನ್ನು ಕೈಮಗ್ಗಗಳ ಯಂತ್ರಾಲಯವೊಂದನ್ನು ಸ್ಥಾಪಿಸುವ ಕೆಲಸಕ್ಕೆಂಬುದಾಗಿ ದಾನಮಾಡಿರುತ್ತಾನೆ

ಭಾವನಗರದ ಮಹಾರಾಜರು ಸ್ವರ್ಗಸ್ಥರಾದುದರಿಂದ ಅವರ ಮೈನರ್ ಕುಮಾರರಾದ ಮಹಾರಾಜಾ ಕೃಷ್ಣ ಕುಮಾರಸಿಂಗ್‌ರವರು ಕಳೆದ ತಿಂಗಳು ತಾ॥ ೨೯ ರಲ್ಲಿ ಸಿಂಹಾಸನಾರೋಹಣವನ್ನು ಮಾಡಿದರು.

ಬರ್ಮಾ ಅಕ್ಕಿಯಮೇಲಣ ಪರಿಶೀಲನಾಧಿಕಾರವನ್ನು ಈಗಲೇ ತಪ್ಪಿಸಿಬಿಟ್ಟರೆ ಬೆಲೆಯು ಹೆಚ್ಚಿಹೋಗುವುದೆಂಬ ಕಾರಣದಿಂದ ಮುಂದಣ ಬೆಳೆ ಕೈಸೇರುವವರೆಗೂ ಅದರ ಮೇಲಣ ನಿರ್ಬಂಧವು ಈಗಿನಂತೆಯೇ ಇರತಕ್ಕುದೆಂದು ಭರತಖಂಡದ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಇಂಪೀರಿಯಲ್ ಇಂಡಿಯನ್ ರಿಲೀಫ್‌ಫಂಡಿಗೆ ನಮ್ಮ ಮಹಾರಾಜರು ೧॥ ಲಕ್ಷ, ಕಾಶ್ಮೀರದ ಮಹಾರಾಜರು ೧ ಲಕ್ಷ, ತಿರುವಾಂಕೂರು ಮಹಾರಾಜರು ॥ ಲಕ್ಷ, ಮಾರ್ವಾರ್ ರಾಜ್ಯದ ರೀಜೆನ್ಸಿ ಕೌನ್ಸಿಲ್‌ನವರು ೭೫ ಸಾವಿರ, ಬದ್ವಾನ್ ಮಹಾರಾಜರು ೧೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಭರತಖಂಡದಲ್ಲಿ ಮುಖ್ಯವಾದ ಕೆಲವು ಪಟ್ಟಣಗಳಿಗೆ ಪರಸ್ಪರ ಅಂಚೆಯನ್ನು ವಿಮಾನಗಳ ಮೂಲಕ ಸಾಗಿಸುವ ಏರ್ಪಾಟನ್ನು ಇಂಡ್ಯಾ ಸರ್ಕಾರದವರು ಇಷ್ಟರಲ್ಲೇ ಮಾಡುವವರಾಗಿದ್ದಾರೆ. ಬೊಂಬಾಯಿಯಲ್ಲಿ ತಕ್ಕ ಪ್ರಯತ್ನಗಳು ಮಾಡಲ್ಪಡುತ್ತಿವೆ. ಮೊಟ್ಟಮೊದಲು ಈ ಪ್ರಯತ್ನವು ಬೊಂಬಾಯಿಗೂ ಕರಾಚಿಗೂ ಮಧ್ಯದಲ್ಲಿ ನಡೆಯುವುದಾಗಿದೆ.

ವೈಸ್ರಾಯರು ಕಳೆದ ತಿಂಗಳಲ್ಲಿ ಪೂನಾನಗರಕ್ಕೆ ಹೋಗಿದ್ದಾಗ್ಗೆ ಅಲ್ಲಿರುವ ಪೇಷ್ವೆಯವರ ಅರಮನೆಯಾದ ಶನಿವಾರವಾಡೆಯನ್ನು ಪರಾಮರಿಸಿ, ಆ ಪುರಾತನ ಭವನವನ್ನು ಪೂರ್ವಮಹತ್ವಕ್ಕೆ ತಕ್ಕಂತೆ ಶಾಶ್ವತವಾಗಿಸಲು ಜೀರ್ಣೋದ್ಧಾರಮಾಡಬೇಕೆಂದು ಹೇಳಿ, ಅದಕ್ಕಾಗಿ ಇಂಡ್ಯಾ ಸರ್ಕಾರದ ಹಣದಿಂದ ೧೫ ಸಾವಿರ ರೂ. ಗಳನ್ನು ವೆಚ್ಚಮಾಡಲು ಅಪ್ಪಣೆಕೊಡಿಸಿದರು.

ಸಿಂಧುದೇಶದಲ್ಲಿ ಮೊನ್ನೆವಾರ ಅತಿವೃಷ್ಟಿಯಾಗಿ ಬಹಳಾನರ್ಥವನ್ನುಂಟುಮಾಡಿದೆ. ಕರಾಚಿಗೆ ಪೂರ್ವಭಾಗದಲ್ಲಿರುವ ಸಿಂಧುನದಿಯಲ್ಲಿ ವಿಪರೀತ ಪ್ರವಾಹವು ಬಂದಿದೆ. ಸುಜಾವಲ್ ಎಂಬ ಗ್ರಾಮವು ಮುಳುಗಿಹೋಗುವ ಸ್ಥಿತಿಯಲ್ಲಿದೆ ಕೆಲ ಕಡೆ ಲೋಹಮಾರ್ಗವು ಕಿತ್ತುಹೋಗಿದೆ. ಅಂಚೆಯನ್ನೂ ಪ್ರಯಾಣಿಕರನ್ನೂ ಪ್ರಯಾಸದಿಂದ ಒಂದು ಕಡೆಯಿಂದ ಮತ್ತೊಂದುಕಡೆಗೆ ಸಾಗಿಸಿದರು.

ಕಳೆದ ತಾ॥ ೨ ನೆಯ ದಿನ ಬೊಂಬಾಯಿಯಿಂದ ಸೀಮೆಗೆ ತೆರಳಿದ ಕೇಸರಿ ಹಿಂದ್ ಎಂಬ ಹಡಗಿನಲ್ಲಿ ಭರತಖಂಡದ ಕೆಲ ಪ್ರಮುಖರು ರಾಜ್ಯಕಾರ್ಯಾರ್ಥವಾಗಿ ಪ್ರಯಾಣಮಾಡಿದ್ದಾರೆ. ಅವರಲ್ಲಿ ಪ್ರಮುಖರು ಯಾರೆಂದರೆ—ಸರ್ ಶಂಕರನ್ ನಾಯರ್, ಡಾಕ್ಟರ್ ಸಪ್ರೂ, ಸಯ್ಯದ್ ಹಸೇನ್ ಇಮಾಂ, ರಂಗಸ್ವಾಮಿ ಅಯ್ಯಂಗಾರ್, ಎ. ಆರ್. ಬಾನರ್ಜಿ ಐ. ಸಿ. ಎಸ್., ವಿಪಿನಚಂದ್ರಪಾಲ್, ದಿ॥ ಬ॥ ರಾಜಗೋಪಾಲಾಚಾರ್, ಹೀರಾಬಾಯಿತಾತಾ, ತಾತಾಕನ್ಯೆ. ಈ ಕೊನೆಯ ನಾರೀಮಣಿಗಳಿಬ್ಬರೂ ನಿಯಮನಿರ್ಮಾಣಸಭೆಯಲ್ಲಿ ಸ್ತ್ರೀಯರಿಗೆ ಪ್ರಾತಿನಿಧ್ಯವಿರಬೇಕೆಂಬುದನ್ನು ಕುರಿತು ಸಂಸ್ಕರಣಸಭೆಯದಿರಿಗೆ ಸಾಕ್ಷ್ಯ ನುಡಿಯುವುದಕ್ಕಾಗಿ ಹೊರಟಿರುವವರು.

ಕಳೆದ ತಾ॥ ೨ ರಲ್ಲಿ ಬೊಂಬಾಯಿಯಲ್ಲಿ ಪುರಪ್ರಮುಖರಾದ ಸರ್ ದಿನ್ಶಾಪೆಟಿಟ್‌ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಪಂಡಿತ ಮದನಮೋಹನ ಮಾಳವ್ಯರವರು ಪಂಜಾಬುದೇಶದ ಸ್ಥಿತಿಯನ್ನು ಕುರಿತು ಉಪನ್ಯಾಸ ಮಾಡಿದರು. ಪಂಜಾಬಿನ ಹಾವಳಿಯ ಸಮಯದಲ್ಲಿ ಬಾಧೆಪಟ್ಟಿರುವವರಿಗೆ ಸಹಾಯಮಾಡುವುದಕ್ಕಾಗಿಯೂ, ಆ ಸಂಬಂಧದಲ್ಲಿ ಶಿಕ್ಷಿತರ ವ್ಯಾಜ್ಯಗಳ ಅಪ್ಪೀಲನ್ನು ಪ್ರಿವಿಕೌನ್ಸಿಲ್ಲಿನಲ್ಲಿ ಮಾಡುವುದಕ್ಕಾಗಿಯೂ ಬೇಕಾದ ಹಣವನ್ನು ಚಂದಾ ಮೂಲಕ ಕೂಡಿಸಲು ನಿರ್ಧರವಾಯಿತು. ಅದಕ್ಕಾಗಿ ಏರ್ಪಟ್ಟ ಸಂಘಕ್ಕೆ ಸರ್ ದಿನ್ಶಾಪೆಟಿಟ್‌ರವರು ಅಧ್ಯಕ್ಷರಾಗಿ ಮಾಡಲ್ಪಟ್ಟರು. ಸರ್ ನಾರಾಯಣಚಂದ್ರಾವರ್ಕರೇ ಮೊದಲಾದ ಕೆಲವರು ಸಭಿಕರಾಗಿ ಮಾಡಲ್ಪಟ್ಟರು. ಫಂಡಿಗೆ ಆಗಲೇ ೫೦ ಸಾವಿರ ರೂ. ಗಳವರೆಗೆ ವಾಗ್ದಾನವಾಯಿತು.

ಭಲ್ಲಾತಾರ್ಕಫಲಂಮುಸ್ತಾ ಕಪಿಕಚ್ಛುಫಲಂತಥಾ । ರಾಲಸಿದ್ಧಾರ್ಥ ಏತೇಷಾಂ ಚೂರ್ಣಧೂಮಪ್ರಭಾವತಃ ॥ ಮೂಷಿಕಾಮಶಕಾಮಕ್ಷಿಮತ್ಕುಣಾದಿಷಕೀಟಕಾಃ । ಪಲಾಯಂತೇಗೃಹಂಮುಕ್ತ್ವಾ ಯಥಾಯುದ್ಧೇಽತಿಕಾತರಾಃ ॥ ಎಂದರೆ—ಗೇರುಬೀಜ, ಎಕ್ಕದಬೀಜ, ಕೊನ್ನಾರಿಗಡ್ಡೆ, ನಸುಗುನ್ನಿಬೀಜ, ಬಿಳಿಧೂಪ, ಬಿಳಿಸಾಸಿವೆ, ಇವುಗಳನ್ನೆಲ್ಲಾ ಕುಟ್ಟಿ ಮಾಡಿದ ಚೂರ್ಣವನ್ನು ಬೆಂಕಿಯಮೇಲೆ ಹಾಕಿ ಮನೆಯೊಳಗಿಟ್ಟು, ಎಲ್ಲಾ ಕಿಟಕಿ ಬಾಗಿಲುಗಳ ಕದಗಳನ್ನೂ ಹೊಚ್ಚಿ ಅರ್ಧಗಂಟೆಯವರೆಗೆ ಇಡಬೇಕು. ಹೀಗೆ ೩-೪ ದಿನಗಳವರೆಗೆ ಮಾಡಿದರೆ ಮನೆಯಲ್ಲಿರುವ ಇಲಿ, ಸೊಳ್ಳೆ, ಚಿಗಟ, ತಿಗಣೆ ಮೊದಲಾದ ಪ್ರಾಣಿಗಳೆಲ್ಲಾ ನಿಶ್ಶೇಷವಾಗುವುವು. ಪ್ಲೇಗು, ಕಾಲರಾ ಮೊದಲಾದ ವಿಷದ ಸೋಂಕಿರುವ ಮನೆಗಳನ್ನೆಲ್ಲಾ ಹೀಗೆ ಶುದ್ಧಿಗೊಳಿಸಬೇಕು, ಎಂದು ಒಂದಾನೊಂದು ಪುರಾತನ ಗ್ರಂಥದಲ್ಲಿ ಪ್ರಮಾಣವಿರುವುದೆಂದು ಕಣಿವೆಕೆಳಗಣ ವೈದ್ಯರೊಬ್ಬರು ಪ್ರಕಟಿಸಿದ್ದಾರೆ.

ಈಗಣ ಮದ್ರಾಸ್ ಗೌರ್ನರರಾದ ಲಾರ್ಡ್ ವಿಲ್ಲಿಂಗ್ಡನ್‌ರವರು ಮದರಾಸಿನ ನಿಯಮನಿರ್ಮಾಣಸಭೆಗೆ ಈಗತಾನೇ ಏರ್ಪಟ್ಟ ಸಭಿಕರಲ್ಲಿ ಸರ್ಕಾರದ ಪಕ್ಷವಾಗಿ ನಾಮಿನೇಟ್ ಮಾಡಲ್ಪಟ್ಟವರೊಳಗೆ ಪಂಚಮ ಜಾತಿಯವರೊಬ್ಬರನ್ನೂ ತಿಯ್ಯಾಜಾತಿಯವರೊಬ್ಬರನ್ನೂ ಆರಿಸಿ ಸೇರಿಸಿರುತ್ತಾರೆ. ಮಾತಿನಲ್ಲಿ ಪಂಚಮಾಭ್ಯುದಯವನ್ನು ಕೋರುವುದಕ್ಕಿಂತಲೂ ಕಾರ್ಯದಲ್ಲಿ ಹೀಗೆ ಅವರಿಗೆ ಪ್ರೋತ್ಸಾಹಪುರಸ್ಕಾರಗಳನ್ನು ಮದ್ರಾಸು ಸರ್ಕಾರದವರು ತೋರಿಸುತ್ತಿರುವುದನ್ನು ಕಂಡು ಆ ದೇಶದ ಅನೇಕ ವೃತ್ತಪತ್ರಿಕೆಗಳು ಸರ್ಕಾರದವರನ್ನು ಶ್ಲಾಘಿಸಿ ವಂದಿಸುತ್ತಿವೆ. ಕೆಲವು ಬೋರ್ಡುಗಳ ಮೆಂಬರ ಪದವಿಗೂ, ತಹಸೀಲ್ದಾರ್ ಪದವಿಗೂ ಕೂಡ ಪಂಚಮಜಾತಿಯ ವಿದ್ಯಾವಂತ ಜನರನ್ನು ಮದ್ರಾಸು ಸರ್ಕಾರದವರು ನಿಯಮಿಸಿಕೊಂಡಿರುವುದನ್ನು ಇದಕ್ಕೆ ಮುಂಚೆಯೇ ನಾವು ಪ್ರಕಟಿಸಿರುತ್ತೇವೆ. ಈಗ ಶಾಸನನಿರ್ಮಾಣಸಭೆಗೆ ಆರಿಸಿಕೊಳ್ಳಲ್ಪಟ್ಟಿರುವ ಪಂಚಮಜಾತಿಯ ಸಭಿಕರು ರಾಜನ್ ಎಂಬ ಗೃಹಸ್ಥರಾಗಿರುತ್ತಾರೆ. ಇವರು ಮದ್ರಾಸು ಪಟ್ಟಣದಲ್ಲಿ ವಾಸಮಾಡುವವರಾಗಿಯೂ ಒಂದಾನೊಂದು ಸೆಕೆಂಡರಿ ಪಾಠಶಾಲೆಯ ಉಪಾಧ್ಯಾಯರಾಗಿಯೂ ಇರುವರು. ತಿಯ್ಯಾಜಾತಿಯ ಪಕ್ಷದ ಸಭಿಕರಾದರೊ ಸಿ. ಕೃಷ್ಣನ್ ಎಂಬ ಗೃಹಸ್ಥರಾಗಿರುತ್ತಾರೆ. ಇವರು ವಕೀಲಿಕನವನ್ನು ಮಾಡುವ ಒಬ್ಬ ಶ್ರೀಮಂತರಾಗಿರುತ್ತಾರೆ. ಸರ್ಕಾರದವರಿಂದ ಮಾಡಲ್ಪಟ್ಟ ಇಂಥ ನಿಯಮನವು ಆ ನಿಮ್ನಜಾತಿಯವರ ಪುರೋವೃದ್ಧಿಗೆ ಸಾಧಕವಾಗಿ ಪರಿಣಮಿಸದಿರಲಾರದು

ವಿದೇಶ ವಿಷಯಗಳು.

ಇಂಗ್ಲೆಂಡಿನವರು ವಿಜಯದ ಸಾಲವೆಂಬುದಾಗಿ ಕೂಡಿಸುತ್ತಿರುವ ಫಂಡಿಗೆ ೭೬೮೦೦೦೦೦೦ ಪೌನುಗಳು ಕೂಡಿರುತ್ತವೆ.

ಪರ್ಷಿಯಾದೇಶದ ಪ್ರಭುಗಳಾದ ಷಾರವರು ಇಷ್ಟರಲ್ಲೇ ಯೂರೋಪು ದೇಶಗಳಿಗೆ ಪ್ರಯಾಣಮಾಡುವವರಾಗಿದ್ದಾರೆ. ಇವರ ಪ್ರಯಾಣಕ್ಕೆ ರಾಜಕೀಯ ವಿಷಯೋದ್ದೇಶವೇನೂ ಇಲ್ಲವಂತೆ.

ಸೀಮೆಯಲ್ಲಿ ಬೆಳ್ಳಿಯ ಬೆಲೆಯು ಏರುತ್ತಲೇ ಇದೆ. ಅದರ ಒದಗುವಿಕೆಯು ಬಹಳ ಕಡಿಮೆ. ಕೊಳ್ಳುವವರು ವಿಶೇಷವಾಗಿದ್ದಾರೆ. ಕಳೆದ ಜುಲೈ ತಾ॥ ೨೬ ರಲ್ಲಿ ಸ್ಯಾನ್‌ಫ್ರಾನ್‌ಸಿಸ್ಕೊ ಪಟ್ಟಣದಿಂದ ಚೀನಾ ಜಪಾನ್ ದೇಶಗಳಿಗೆ ೨೦ ಲಕ್ಷ ಔನ್ಸುಗಳ ಬೆಳ್ಳಿಯು ಕಳುಹಿಸಲ್ಪಟ್ಟಿತು.

ಬೋಲ್ಷವಿಕ್ಕರ ಮೇಲೆ ರಷ್ಯಾ ದೇಶದಲ್ಲಿ ನಮ್ಮವರೂ ಅಲ್ಲಿನ ಸ್ವಚ್ಛಂದಸೈನಿಕರೂ ಪೋಲೆಂಡಿನವರೂ ಸಹ ಮಾಡುತ್ತಲಿರುವ ಯುದ್ಧದಲ್ಲಿ ಬೋಲ್ಷವಿಕ್ಕರು ಬಹಳ ಪಂಚಕರಾಗಿ ಓಡಿಹೋಗುತ್ತಿದ್ದಾರೆ. ನಮ್ಮ ಕಡೆಯ ಡೆನಿಕಿನ್ ಸೇನಾಪತಿಯ ಸೈನಿಕರು ಕಳೆದವಾರ ದೊಡ್ಡ ವಿಜಯವನ್ನು ಪಡೆದರು. ಕಾಮಿಷಿನ್ ಎಂಬ ಪಟ್ಟಣವನ್ನು ಅವರ ಕೈತಪ್ಪಿಸಿ ಹಿಡಿದುಕೊಂಡರು. ಆಗ ೫ ಸಾವಿರ ಮಂದಿ ಬೋಲ್ಷವಿಕ್ಕರೂ ೯ ತುಪಾಕಿಗಳೂ ಅನೇಕ ಯಂತ್ರದ ಫಿರಂಗಿಗಳೂ ಬಹಳ ಯುದ್ಧಸಾಮಗ್ರಿಗಳೂ ಸಹ ನಮ್ಮವರಿಗೆ ಸಿಕ್ಕಿರುವುವು. ಪೋಲರು ಪೂರ್ವಗೆಲಿಷಿಯಾ ಭಾಗವನ್ನು ಆಕ್ರಮಿಸಿ ಬೋಲ್ಷವಿಕ್ಕರನ್ನು ಅಟ್ಟುತ್ತಿದ್ದಾರೆ. ಬೋಲ್ಷವಿಕ್ಕರು ತಾವಿದ್ದ ಊರುಕೇರಿಗಳನ್ನು ಬಿಟ್ಟುಹೋಗುವಾಗ ಅವುಗಳಿಗೆ ಬೆಂಕಿಯಿಕ್ಕಿ ಜನರನ್ನು ಸುಟ್ಟು ಧ್ವಂಸಮಾಡಿ ಬಿಟ್ಟುಹೋಗುತ್ತಿದ್ದಾರೆ.

ಅಮೇರಿಕಾ ದೇಶದ ಚಿಕಾಗೋ ಪಟ್ಟಣದಲ್ಲಿ ನೀಗ್ರೋಜಾತಿಯ ಕೆಲ ಕಪ್ಪುಜನರು ಬಿಳೀಜನಗಳು ವಾಸಮಾಡುವ ಭಾಗಕ್ಕೆ ಹೋದ ತಪ್ಪಿತಕ್ಕಾಗಿ ಕೆಂಪುಜನರು ರೇಗಿ ಬಡಿದಾಟಕ್ಕಾರಂಭಿಸಲು, ಅದರ ಮೇಲೆ ಎರಡು ಪಕ್ಷದಲ್ಲೂ ಲಕ್ಷಾಂತರ ಜನರು ಕೂಡಿ ಆಯುಧಗಳನ್ನುಪಯೋಗಿಸಿ ಯುದ್ಧಮಾಡಿದರು. ಇದರಿಂದ ಉಭಯ ಪಕ್ಷದಲ್ಲೂ ಸತ್ತವರೂ ಏಟುತಿಂದವರೂ ಸೇರಿ ೧ ಸಾವಿರ ಮಂದಿಗಳಾಗಿರುವರು. ೪ ಸಾವಿರ ಮಂದಿ ಸರ್ಕಾರಿ ಸೈನಿಕರು ಬಂದು ಜಗಳವನ್ನು ನಿಲ್ಲಿಸಬೇಕಾಯಿತು. ನವನಾಗರಿಕರೆಂದು ಹೇಳಿಕೊಳ್ಳುವ ಮತ್ತು ಸರ್ವಜಾತಿ ಸಮ್ಮೇಳನವನ್ನೇರ್ಪಡಿಸಿ ಸರ್ವರ ಸ್ವಾತಂತ್ರ್ಯವನ್ನು ರಕ್ಷಿಸಲು ಬದ್ಧಕಂಕಣರಾಗಿರುವ ಕೆಂಪುಜನರು ಕಪ್ಪುತೊಗಲಿನ ಜನರನ್ನು ಇಷ್ಟು ಅವಮಾನಕರವಾಗಿಯೂ ವಿರೋಧಭಾವದಿಂದಲೂ ಕಾಣುವುದು ಅವರ ಗೌರವಕ್ಕೇ ಕಳಂಕವನ್ನು ತರುವುದಲ್ಲವೆ?.

ಜನರಲ್ ಫಾಕ್‌ರವರ ಅಸದೃಶ ಯುದ್ಧಕೌಶಲ ಪರಾಕ್ರಮಗಳಿಂದ ಮಿತ್ರಮಂಡಲಿಗೆ ದಿಗ್ವಿಜಯ ಪ್ರಾಪ್ತಿಯಾಯಿತಷ್ಟೆ. ಈ ಫ್ರಾನ್ಸ್ ಸೇನಾಪತಿಯನ್ನು ಉಚಿತರೀತಿಯಿಂದ ಗೌರವಿಸಿ ಸತ್ಕರಿಸುವ ಸಮಾರಂಭವು ಕಳೆದ ತಿಂಗಳ ಕೊನೆಯಲ್ಲಿ ಲಂಡನ್ ಪಟ್ಟಣದೊಳಗೆ ಇಂಗ್ಲೀಷರಿಂದ ಆಚರಿಸಲ್ಪಟ್ಟಿತು. ಲಂಡನ್ ಪುರವೀಧಿಗಳು ಮನೋಹರವಾಗಿ ಅಲಂಕರಿಸಲ್ಪಟ್ಟು ಅವುಗಳಲ್ಲಿ ಫಾಕ್ ಸೇನಾಪತಿಯವರು ತಕ್ಕ ಮರ್ಯಾದೆಗಳೊಡನೆ ಮೆರವಣಿಗೆ ಮಾಡಿಸಲ್ಪಟ್ಟರು. ಔತಣವು ಬಹು ವಿಜೃಂಭಣೆಯಿಂದ ನಡೆಯಿತು. ಅಲ್ಲಿಯ ನಗರಗೌರವಸ್ವಾತಂತ್ರ್ಯವು ಫಾಕ್‌ರವರಿಗೆ ಕೊಡಲ್ಪಟ್ಟಿತು. ಒಂದು ವಿಜ್ಞಾಪನ ಪತ್ರಿಕೆಯು ಅರ್ಪಿಸಲ್ಪಟ್ಟಿತು. ಪ್ರತ್ಯುತ್ತರವನ್ನು ಕೊಡುವಾಗ್ಗೆ ಆಂಗ್ಲಸೈನಿಕರ ಶೌರ್ಯಸಾಹಸಗಳನ್ನು ಫಾಕ್‌ರವರು ಬಹಳ ಕೊಂಡಾಡಿದರು. ನಮ್ಮ ಸಾರ್ವಭೌಮರು ಜನರಲ್ ಫಾಕ್‌ರವರಿಗೆ ಫೀಲ್ಡ್‌ಮಾರ್ಷಲ್ ಬಿರುದನ್ನು ಅನುಗ್ರಹಿಸಿ ಗೌರವಿಸಿದರು.

ಸಂಧಿನಿಯಮಗಳು ಲಾರ್ಡುಗಳ ಸಭೆಯಲ್ಲಿ ೨ನೆ ಆವೃತ್ತಿ ಓದಲ್ಪಡುವಾಗ್ಗೆ ಲಾರ್ಡ್ ಕರ್ಜನ್‌ರವರು ಉಪನ್ಯಾಸಮಾಡುತ್ತ ಕೈಸರರ ವಿಷಯದಲ್ಲಿ ಹೀಗೆ ಹೇಳಿದರು.—“ಚರಿತ್ರೆಯೊಳಗೆ ಇದುವರೆಗೆ ಶಿಕ್ಷಿತರಾಗಿರುವ ಸಾರ್ವಭೌಮರೊಡನೆ ಜರ್ಮನ್ ಕೈಸರನನ್ನು ಹೋಲಿಸಿನೋಡುವುದಾದರೆ ಈತನಲ್ಲಿ ಮೊದಲನೆ ಚಾರ್ಲ್ಸಿನ ಗುಣಗಳು ಕೆಲವೂ ನೆಪೋಲಿಯನ್ನನ ಗುಣಗಳು ಕೆಲವೂ ಕಾಣಬರುತ್ತಿವೆ. ಆದರೆ ಯುದ್ಧಕಾರ್ಯಗಳು ಎಷ್ಟುಂಟೋ ಅವಷ್ಟಕ್ಕೂ ಈತನೇ ಕಾರಕನಾಗಿದ್ದುದು ಮಾತ್ರವೇ ಅಲ್ಲದೆ ತನ್ನ ದೇಶವು ಅತ್ಯಂತ ವಿಪನ್ನಸ್ಥಿತಿಯಲ್ಲಿದ್ದಾಗ್ಗೆ ನಾಚಿಕೆಯಿಲ್ಲದೆ ಅದನ್ನು ಬಿಟ್ಟುಬಿಟ್ಟು ಓಡಿಹೋದನು. ಇಂಥವನು ವೀರಶ್ರೇಷ್ಠನೆಂದಾಗಲೀ ತನ್ನ ದೇಶಾಭಿಮಾನಕ್ಕಾಗಿ ಪ್ರಾಣತ್ಯಾಗ ಮಾಡಿದವನೆಂದಾಗಲೀ ಹೇಳಿಸಿಕೊಳ್ಳಲಾರನು. ಜರ್ಮನ್ ದೇಶದ ಎಲ್ಲೆಯಲ್ಲಿ ಈತನು ಮರಳಿ ಕಾಣಿಸಿಕೊಂಡರೆ ಅದು ರಾಜಕೀಯ ವಿಪತ್ತಿಗೆ ಕಾರಣವಾಗುವುದು. ಯುದ್ಧವು ಸಂಭವಿಸುವುದಕ್ಕೆ ಕಾರಣವಾದ

ವಿಶ್ವಾಸಘಾತುಕತೆ, ಸ್ವಾಮಿದ್ರೋಹ ಇವುಗಳಿಗೆಲ್ಲಾ ಇತರರಿಗೆಲ್ಲರಿಗಿಂತಲೂ ಕೈಸರೇ ಮುಖ್ಯ ಕಾರಣಭೂತನೆಂಬುದಾಗಿ ಮಿತ್ರಮಂಡಲಿಯವರೆಲ್ಲರೂ ನಂಬಿರುವರು. ಪ್ರಪಂಚಕ್ಕೆಲ್ಲಾ ಸಂಭವಿಸಿದ ಭಯಂಕರಪ್ರಳಯದ ಪಾಪವೆಲ್ಲಾ ಆತನ ತಲೆಯ ಮೇಲೆಯೇ ಬೀಳದೆ ತಪ್ಪದು. ಕೈಸರು ಇದುವರೆಗೆ ತನ್ನ ಮಹೋನ್ನತ್ಯವನ್ನು ಕುರಿತು ಯಾವಾಗಲೂ ಇತರರೊಡನೆ ವಿಜೃಂಭಿಸಿ ಹೊಗಳಿಕೊಳ್ಳುತ್ತಲೇ ಇದ್ದನು. ಆತನ ಉಪನ್ಯಾಸಗಳನ್ನು ನೋಡಿದರೆ ಆತನು ತಾನೇ ಭಗವಂತನ ಪ್ರತ್ಯೇಕಾಭಿಮಾನಕ್ಕೆ ಪಾತ್ರನಾದ ಪುತ್ರನೆಂತಲೋ, ಭಗವಂತನೇ ಪ್ರತ್ಯಕ್ಷವಾಗಿ ಬಂದು ಆತನನ್ನು ಸಂರಕ್ಷಿಸುತ್ತಿದ್ದನೆಂತಲೋ ತೋರ್ಪಡುವುದು. ಅಂಥ ಮನುಷ್ಯನು ಈಗ ತಪ್ಪದೆ ವಿಚಾರಿಸಲ್ಪಟ್ಟು ಶಿಕ್ಷಿತನಾಗಿಯೇ ತೀರಬೇಕು. ಎಲ್ಲಿ ವಿಚಾರಣೆ ನಡೆಯಬೇಕೆಂಬುದು ಇನ್ನೂ ಇತ್ಯರ್ಥವಾಗಿಲ್ಲ. ಅದು ಬ್ರಿಟನ್ನಿನಲ್ಲೇ ಜರುಗುವುದು. ಆದರೆ ಲಂಡನ್ನಿನಲ್ಲೇ ನಡೆಯುವುದೆಂಬುದು ಸ್ಥಿರಪಟ್ಟಿಲ್ಲ."

ಪತ್ರವ್ಯವಹಾರ.

ದಾವಣಗೆರೆ ಹೈಸ್ಕೂಲ್ ಸ್ಥಿತಿ.

ನಮ್ಮನ್ನಾಳುವ ಶ್ರೀಮನ್ಮಹಾರಾಜ ಸರ್ಕಾರದವರ ಉದಾರ ಸಹಾಯದಿಂದ ಸಂಸ್ಥಾನದ ಸರ್ವಕಡೆಗಳಲ್ಲೂ ವಿದ್ಯಾಪ್ರಚುರವಾಗುತ್ತಾ, ನವೀನ ಕ್ರಮದಿಂದ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಹೊಂದಬೇಕೆಂದು ಅವಿಚ್ಛಿನ್ನವಾದ ಏರ್ಪಾಡುಗಳು ನಡೆಯಬೇಕೆಂದು ನಿರೀಕ್ಷಿಸುವೆವು. ನಾಗರಿಕರಾದ ಪಟ್ಟಣವಾಸಿಗಳು ವೃಥಾ ಕಾಲಕ್ಷೇಪ ಮಾಡದೆ ಕೈಗಾರಿಕೆ ವ್ಯಾಪಾರಾದಿಗಳಲ್ಲಿ ಉತ್ಸಾಹಶೀಲರಾಗಿಯೂ ಕೇವಲ ವಿದ್ಯಾಭ್ಯಾಸಕ್ಕೆ ಗಮನಕೊಡುವವರಾಗಿಯೂ ಇದ್ದಲ್ಲಿ ಶೀಘ್ರದಲ್ಲಿ ಅಭಿವೃದ್ಧಿಗೆ ಬರಲು ಮಾರ್ಗವಾಗುವದು. ಆದರೆ ಪುರನಿವಾಸಿಗಳಿಗೆ ಇಲ್ಲಿ ಮಾತ್ರ ವ್ಯಾಪಾರ, ಕೈಗಾರಿಕೆ ಇವುಗಳಲ್ಲಿ ಅಭಿರುಚಿ ಇದ್ದಂತೆ ತಮ್ಮ ಮಕ್ಕಳ ವಿದ್ಯಾಭ್ಯಾಸ ವಿಚಾರಣೆಯಿದ್ದ ಪಕ್ಷದಲ್ಲಿ ಇಲ್ಲಿ ಕಾಲೇಜು ಸ್ಥಾಪಿತವಾಗುತ್ತಿತ್ತು. ಈಗ ಹೈಸ್ಕೂಲ್ ಸ್ಥಾಪಿತವಾದ ಲಾಗಾಯಿತು ಎಷ್ಟು ಮಂದಿ ತೇರ್ಗಡೆ ಹೊಂದಿರುತ್ತಾರೆ? ಮತ್ತು ಹೈಸ್ಕೂಲಿನ ಟೀಚರುಗಳು ಮಾಡತಕ್ಕ ಕೆಲಸದ ನ್ಯೂನಾತಿರೇಕಗಳೇನು? ಎಂಬುದು ಇಲಾಖೆಯವರಿಗೆ ತಿಳಿದಿರುವುದೇ ಹೊರತು ಪುರನಿವಾಸಿಗಳಿಗೆ ತಿಳಿದಿಲ್ಲ. ಈಚೆಗೆ ನವೀನ ವಿದ್ಯಾಭ್ಯಾಸ ಕ್ರಮವು ಅನುಸರಣೀಯವಾದ ಸಂಗತಿ ನ್ಯಾಯವಾದದ್ದೆಂದು ಕೆಲವರಿಗೆ ಅಭಿಪ್ರಾಯವಿರಬಹುದು. ಆದರೆ ಕೇವಲ ಬಡ ವಿದ್ಯಾರ್ಥಿಗಳಿಗೆ ಅದು ತುಂಬಾ ತೊಂದರೆಯನ್ನುಂಟುಮಾಡಿದೆಯೆಂಬುದರಲ್ಲಿ ಸಂದೇಹವಿಲ್ಲ. ಮಾಸ್ಟರು ಧನಿಕರಾದ ವಿದ್ಯಾರ್ಥಿಗಳಿಗೆ ಪ್ರೈವೆಟ್ ಸ್ಕೂಲ್ ಏರ್ಪಡಿಸಿಕೊಂಡಿರುತ್ತಾರೆ. ಕಳುಹಿಸಲು ಒಪ್ಪದಿರುವ ಪೋಷಕರಿಗೆ ಮನೆಮನೆಗೂ ಬಂದು ಪ್ರೋತ್ಸಾಹಗೊಳಿಸಿ ತಮ್ಮ ಮನೆಗೆ ಕರೆದುಕೊಂಡುಹೋಗುತ್ತಾರೆ. ಆದರೆ ತಮ್ಮ ಬಾಲಕರು ಎಷ್ಟರಮಟ್ಟಿಗೆ ಅಭಿವೃದ್ಧಿಗೆ ಬಂದಿರುತ್ತಾರೆ? ಪಾಠಗಳು ಕ್ರಮವಾಗಿ ನಡೆಯುತ್ತವೆಯೆ? ಎಂದು ಯಾರೂ ಪರಿಶೀಲಿಸುವುದಿಲ್ಲ. ಇದಕ್ಕೆ ಕಾರಣವೇನಿರಬಹುದು! ಉಪಾಧ್ಯಾಯರಿಗೆ ತಾವು ಕೊಡುವ ಸಂಬಳಗಳಿಂದ ಅವರು ಚೆನ್ನಾಗಿ ಪಾಠ ಕಲಿಸುತ್ತಾರೆಂದು ತಿಳುವಳಿಕೆಯುಂಟಾಗಿದೆ. ಬಾಲಕರ ಸಂಖ್ಯೆ ದಿನೇದಿನೇ ಅಭಿವೃದ್ಧಿಯಾಗುತ್ತಲೂ ಅದಕ್ಕೆ ತಕ್ಕಷ್ಟು ಉಪಾಧ್ಯಾಯರುಗಳ ಸಂಖ್ಯೆಯೂ ಇರುವುದೇ ಹೊರತು ವಿದ್ಯಾಭಿವೃದ್ಧಿ ತೃಪ್ತಿಕರವಾಗಿಲ್ಲ. ಇಲಾಖೆಯವರಿಗೆ ತಿಳಿಸಲು ಮಾಸ್ಟರು ಎಲ್ಲಿ ನಮ್ಮ ಬಾಲಕರಿಗೆ ತೊಂದರೆ ಕೊಡುವರೋ ಎಂದು ಭೀತಿಪಡಬೇಕಾಗಿದೆ. ಮತ್ತು ಮಹನೀಯರಾದವರು ಗೌರವಭಾವದಿಂದ ವರ್ತಿಸಬೇಕೆಂದು ತಿಳಿದೂ ತಿಳಿಯದವರಂತೆ ಇರುತ್ತಾರೆ. ದಯಾಳು ಸರ್ಕಾರದವರು ಸುಮಾರು 6-7 ವರ್ಷಗಳಿಂದಲೂ ಇರುವ ಕೆಲವು ಜನ ಮಾಸ್ಟರನ್ನು ವರ್ಗಾಯಿಸಿದರೆ ಅಭಿವೃದ್ಧಿಗೆ ಬರಲು ಸಂದೇಹವಿಲ್ಲ. ಇಲಾಖೆಯವರಿಗೆ ಅರ್ಜಿಮೂಲಕ ತಿಳಿಸಲು ಹಿಂಜರಿಯುತ್ತಾ, ನ್ಯಾಯವಾದ ಕಾರಣ ವಿನಾ ಯಾವ ವಿಧದಲ್ಲೂ ಪೋಷಕರ ಅನುಮತಿಯಿಲ್ಲದೆ ಸ್ಕೂಲಿನಿಂದ ಬಾಲಕರನ್ನು ನಿಜಾವಾಡಲು ಕಾರಣವಿಲ್ಲವೆಂದು ಸರ್ವವಿದಿತವಾಗಿದ್ದಾಗ್ಯೂ ಯಾವದೋ ಒಂದು ವಿಧವಾದ ಭೀತಿಯಿಂದ ಇಲ್ಲಿ ಸುಮ್ಮನೆ ಕಾಟೇಷ್ಟಮಾಡುವ ತಂತ್ರಗಾರರಂತೆ ಇರುವವರ ದಾಕ್ಷಿಣ್ಯಕ್ಕೆ ಮರುಳಾಗಿರುವುದು ತರವಾದದ್ದಲ್ಲ. ಯಾರಾದರೂ ಪುರನಿವಾಸಿಗಳು ನಿರ್ದಾಕ್ಷಿಣ್ಯವಾಗಿ ಸ್ಕೂಲಿನ ವಿಷಯದಲ್ಲಿ ಮುತುವರ್ಜಿ ವಹಿಸಿ ವಿಚಾರಿಸಿದರೆ ಮೇಲ್ಕಂಡ ಲೋಪಗಳು ಸರಿಪಡಬಹುದು. ಕಮಿಟಿಮೆಂಬರುಗಳು ಇದಕ್ಕೆ ಗಮನ ಕೊಟ್ಟು ಹಿತಭಾಗಿಗಳಾಗಬೇಕೆಂದು ಈ ಮೂಲಕ ಪ್ರಾರ್ಥನೆ.

ವಿದ್ಯಾರ್ಥಿಗಳ ಹಿತಚಿಂತಕ.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಜೆಮ್ಮಿ ಮೊದಲಾದ ಡಿಕ್ಷನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲಿ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ಸತ್ಕಾರ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧನಾದ ಹಾಡಿನ ಪುಸ್ತಕಗಳನ್ನು ಪಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ.)

9 ಜೆ. ಕೆ. ಗುರುಸಂಗಾರ್ಯ

ಪ್ಲೀಡರ್, ತುಮಕೂರು.

ಮದರಾಸ್ ಗೌರ್ನಮೆಂಟಿನವರಿಂದ ರಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಶೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ವಾಣಿ ಅಂಡ್ ಕೊ,

37 ಸಾಹುಕಾರಪೇಟೆ, ಮದರಾಸ್.

„ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ"

ಶ್ರೀ ಶಿವಯೋಗಿಗಳ ಸುಘು:—ಭಾಗ್ಯಶಾಲಿ ಜನರು ಹಣವು ಖರ್ಚು ಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಿಳೂರ, ಹಾನಗಲ್ಲ, ಹಾಳಕೇರಿ, ಬಿದರೀ, ನಿದಸೋಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ತೆಗೆಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೋ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ಪ್ರತಿಗೆ ರೂ. ೧ ಸಾದಾ ೮ ಆ.

ಹೊಸ ಫೋಟೋ.

ಶ್ರೀ ವಿಷ್ಣು ಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನಚಕ್ರ ಪಡೆಕೊಂಡ ಅತ್ಯಂತ ಸುಂದರವಾದ ಫೋಟೋ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಪಂಚಮುಖ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಸಂಗ್ರಹಕ್ಕೇ ಯೋಗ್ಯವಾದ ಚಿತ್ತಾನಂದದಾಯಕ ಫೋಟೋ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ವೀರಭದ್ರದೇವರು:—ವೀರಶ್ರೀಯಿಂದ ತುಂಬಿದ ತೇಜಃಪುಂಜವಾದ ಫೋಟೋ ಕ್ರಯ ಫುಲ್ಲಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಕಾಶೀಕ್ಷೇತ್ರದರ್ಶನ:—ಇದರಲ್ಲಿ ಶಿವಚಿನ್ಹಾಂಕಿತ ನಕ್ಷೆದಲ್ಲಿ ೧ ಶ್ರೀ ವಿಶ್ವನಾಥ, ಶ್ರೀ ಅನ್ನಪೂರ್ಣಾದೇವಿ, ಶ್ರೀ ಸಾಕ್ಷಿವಿನಾಯಕ, ಶ್ರೀ ಕಾಲಭೈರವ ಇವೆ ಮೊದಲಾದ ಮುಖ್ಯ ೧೫ ದೇವತಾ ಫೋಟೋ ಇದ್ದ ಮೂಲಕ ಶ್ರೀ ಕ್ಷೇತ್ರ ಕಾಶೀಯ ನಿತ್ಯದರ್ಶನ ನಿತ್ಯ ಆಗುವವು. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ. ೧೪×೧೦ ಸೈಜದ ಹಾಳಿನ ಚಿತ್ರದ ಕ್ರಯ ೪ ಆಣೆ.

ಶ್ರೀ ಗೌರಿಗಜಾನನ ವಿನೋದ:—ಅತ್ಯಂತ ಚಿತ್ತಾಕರ್ಷಕವಾದ ಪಾರ್ವತಿ ಗಣಪತಿಯರ ಮೋಹಕ ಲೀಲಾದ ಫೋಟೋ ಕ್ರಯ ಕ್ಯಾಬಿನೆಟ ೮ ಆಣೆ.

ಶ್ರೀ ವೀರಶೈವ ರಾಜಸಮೂಹ:—ಇದರಲ್ಲಿ ಕೊಡುಗದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ, ವಡಿಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸಹ್ಯದ ಪುಂಗನೂರ ಮತ್ತು ಗೋವಾಪ್ರಾಂತದ ಬಾಂದೆವಾಡಿ, ಸ್ವೋಂದಾದ ಅರಸರ ಫೋಟೋ ೯ ಇರುತ್ತಾವೆ. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಫೋಟೋಲಾಕೇಟ್ಸ.

ಸದ್ಗೃಹಸ್ಥರು ಗಡಿಯಾರ ಸರಪಳಿಗೆ ಹಚ್ಚಿ ಉಪಯೋಗಿಸಲಿಕ್ಕೆ ಅತ್ಯಂತ ಯೋಗ್ಯವಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿಗಳ ಫೋಟೋ ಕೊಡ್ರಿಸಿದ ಅತಿ ಘ್ಯಾಸ್ನಿವಾದ ಬೆಳ್ಳಿ ಲಾಕೆಟಗಳೂ ಸಿಗುತ್ತವೆ. ಕ್ರಯ ಬೆಳ್ಳಿಯ ಅರ್ಧ ರೂಪಾಯಿ ಆಕಾರವೂ ನಕ್ಷೆವೂ ರೂ. ೧—೧೪—೦, ಬೆಳ್ಳಿಯ ಪಾವಲಿ ಆಕಾರ ನಕ್ಷೆವೂ ರೂ. ೧—೧೨—೦, ಬೆಳ್ಳಿಯ ಪಾವಲಿ ಆಕಾರ ಸಾದಾ ಘ್ಯಾನ್ಸಿ ರೂ. ೧—೮—೦, ರೋಲಗೋಲ್ಡ ಭಂಗಾರವೂ ರೂಪಾಯಿ ಆಕಾರವೂ ಸಭೇದ ಸನ್ಮಾನನೀಯ ಸಭಾಸದರಿಗೆ ಮತ್ತು ಸಭೇದ ವ್ಯವಸ್ಥಾಪಕರಾದ ಹ್ಯಾಂಟ ಅರರಿಗೆ ಕೋಟಿನಮೇಲೆ ಹಚ್ಚುವುದಕ್ಕೆ ಮೆಡಲದಂತೆ ಬಹು ಶೋಭಾಯಮಾನ ಇರುತ್ತವೆ. ಕ್ರಯ ೧ ಕ್ಕೆ ರೂ. ೧—೬—೦, ೧—೮—೦ ಆಣೆ.



ಫೋಟೋ ಬ್ರೂಚಪಿನ:—ಇವು ಕೋಟಿನ ಕಾಲರಮೇಲೆ ಹಚ್ಚುವವೂ ಇದ್ದು ಇವರಲ್ಲಿ ಬೇಕಾದ ದೇವರ, ಅಥವಾ ಸತ್ಪುರುಷರವೂ ೧ ಫೋಟೋ ಕೊಡ್ರಿಸಿ ಸಿಗುತ್ತದೆ. ಕ್ರಯ ಗಿಲ್ಟಬ್ರೂಚವು ೧ಕ್ಕೆ ೬ಆಣೆ, ೮ ಆ.

ಇವುಗಳ ಹೊರ್ತ ಶ್ರೀ ಸೊಲ್ಲಾಪುರ ಸಿದ್ಧರಾಮೇಶ್ವರ, ಹಂಪೆ ವಿರುಪಾಕ್ಷೇಶ್ವರ, ಕಲಬುರ್ಗ ಶರಣಬಸವೇಶ್ವರ, ಗೋಕರ್ಣದ ಮಹಾಬಲೇಶ್ವರ, ಶ್ರೀ ಭ್ರಮರಾಂಬಿಕಾದೇವಿ, ಶ್ರೀ ಕಾಶಿ ಅನ್ನಪೂರ್ಣ ಮುಂತಾದ ದೇವರವೂ ಮತ್ತು ಸಮಾಜಸೇವಕ್ಕೆ ಕಂಕಣಬದ್ಧರಾದ ಪ್ರಸಿದ್ಧ ಶ್ರೀಮನ್ನಿರಂಜನ ದಾವಣಗೇರಿ ಮೃತ್ಯುಂಜಯ ಶಿವಯೋಗಿ, ಶ್ರೀ ಗುರುಮಠಕಲ್ಲ ಶಾಂತವೀರಸ್ವಾಮಿ, ಮತ್ತು ೬೪ ನೇ ಪುರಾತನರೆಂಬ ಕೈ|| ಮಹಾತ್ಮಾ ಲಿಂಗಪ್ಪನವರು ಸಿರಸಂಗಿ ದೇಶಾಯಿ, ರಾ|| ಬ|| ರುದ್ರಗವುಡಾ ಅಂಟಾಳ, ವಗೈರೆ ಫೋಟೋಗಳೂ ಸಿಗುತ್ತವೆ. ಕ್ರಯ ಫುಲ್ಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಊರೂರಿಗೆ ಫೋಟೋ ಮತ್ತು ಲಾಕೇಟ ಮಾರಾಟ ಮಾಡುವ ಏಜಂಟರು ಬೇಕು. ಅಭಿಲಾಷೆವುಳ್ಳವರು ತ್ವರೆಪಟ್ಟು ೬ ಪೈ. ಟಿಕೀಟ ಕಳುಹಿಸಿ ಏಜಂಟ ನಿಯಮ ತರಿಸಿಕೊಳ್ಳಿರಿ.

ಗಂಗಪ್ಪಾ ಜೇರಗೆ ಮಾಲಕ,

3 ದಿ ಶಾರದಾ ಫೋಟೋ ಕಂಪನಿ, ಸೋಲ್ಲಾಪುರ ಸಿಟಿ.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

ನಮ್ಮ ವಿಳಾಸ:—ವೈರಂ ಅಂಡ್ ಕೊ,

27 3. ಇರುಳಪ್ಪನವೀದಿ, ಮದರಾಸು.

ಇನ್ಫ್ಲುಯನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಪ್ರಾಶ್ರಯಮಾಡುದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 5

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,

೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ.

34

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚಿಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

೧೯೧೯ ನೆಯ ಇಸವಿ ಆಗಸ್ಟ ತಾ|| ೧೦ ರಿಂದ ೧೯೧೯ ನೆಯ ಆಗಷ್ಟ ತಾ|| ೧೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಶ್ರಾವಣ ಶು|| ಚತುರ್ದಶಿಯಿಂದ ಶ್ರಾವಣ ಬ|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ಮಾಸ
10	ಭಾನು	ಚತು	41-16	ಉಷಾ	32-6	26
11	[1]ಸೋಮ	ಪೌರ್ಣ	14-18	ಶ್ರವಣ	34-1	27
12	[2]ಮಂಗಳ	ಪಾಡ್ಯ	40-0	ಧನಿಷ್ಠ	34-42	28
13	[3]ಬುಧ	ಬಿದಿಗೆ	37-32	ಶತಭಿಷ	34-12	29
14	[4]ಗುರು	ತದಿಗೆ	34-1	ಪೂಭಾ	32-38	30
15	[5]ಶುಕ್ರ	ಚೌತಿ	29-36	ಉತ್ತರಾ	30-10	31
16	[6]ಶನಿ	ಪಂಚ	14-27	ರೇವತಿ	26-57	32

(1) ಋಗ್ಯಜುರುಪಾಕರ್ಮ. (2) ಮಂಗಳಗೌರೀವ್ರತಂ. (3) ರಾ ವೇಂದ್ರಸ್ವಾಮಿಗಳ ಪುಣ್ಯದಿನ. (4) ಸಂಕಷ್ಟಚತುರ್ಥಿ. (5) ಅಧಿಶುಕ್ರ ವಾರ. (6) ಶ್ರಾವಣಶನಿವಾರ.

ಮೈಸೂರ್: ಪ್ಯ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ನಯಶೀಲರ್ಗುಣೀಕಾರಾ ಪರಮಧಿಕರಾಜಮಂಡಲಚಿತ್ರಾ | ಘನಪದಪಕ್ಷಕಾವಕಾರಾ ಪಕ್ಷ್ಮನಕ್ಷತ್ರ ಮೋಹರಾಜೇಯನ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ [illegible] | [illegible] ||
ಸೀಮಾತೀತಯಶಃಪ್ರತಾಪವಿಭವಂ [illegible] | [illegible] ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೇಯ ಇಸವಿ ಆಗಸ್ಟ್ ತಾರೀಖು ೧೭ ನೇಯ ಭಾನುವಾರ. (ಸಂಚಿಕೆ ೩೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ನೃಪಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷವಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇವು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿ. ಡಾಬು 1 ಕ್ಕೆ ರೂ. 3—0—0.



ವಿಳಾಸ:—ರಾಸ್ ವಾಚ್ ಅಂಡ್ ಕೊ,

28 ಇರುಳಪ್ಪನಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

45 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಬಲೆಯಂತಿರುವ ಬನಿಯನ್.



ಈಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ	0—12—0.
12 ಕ್ಕೆ	8—0—0

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸವಾಗುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,

28 ಇರುಳಪ್ಪನ ಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ಸೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ

35 ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿಃ	೦— ೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦— ೩—೦
ಹರಿದಾಸಿ	೦— ೪—೦
ವ್ರತಪಂಚಕ	೦— ೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦— ೨—೦
ಗುರುಶಂಕರೇಶ್ವರ ಶತಕಂ	೦— ೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural Department is always prepared to receve applications for advice in agricultural matters from the cultivators of Mysore and to furnish advice as promptly as possible. Applications should in the first instance be made to the local agricultural officer. A list of Agricultural officers with their respective Head quarters and Jurisdictions is given below for the information of intending applicants for advice.

Designation of officer.	Head quarter Station.	Jurisdiction.
Director of Agriculture.	Bangalore	Whole State.
Deputy Director of Agriculture.	Do.	Bangalore Dt.
Assistant Do.		Tumkur „ Mysore „ Kolar „ Shimoga „ Kadur „ Chitaldrug „ Hassan „

Agricultural Inspectors are also posted to Districts with Head quarters as follows:—

District.	Head quarter Stations.
Bangalore ...	Bangalore. Channapatna.
Tumkur ...	Tumkur. Tiptur.
Kolar ...	Kolar. Chickballapur.
Mysore ...	Mysore. Nanjungud.
Shimoga ...	Shimoga.
Chitaldrug ...	Chitaldrug. Davangere.
Kadur ...	Chickmagalur.
Hassan ...	Hassan. Holenarsipur.

A Depot for the sale of Implements, seed and manure is attached to each of the offices of the Agricultural Inspectors.

With regard to insect pests and fungoid diseases affecting agricultural crops their appearace sould be immediately reported to the Director of Agriculture direct at Bangalore and whenever practicable the reports should be accompanied by specimens of affected crops in various stages. In the case of insect pests specimens of live insects should be sent packed in perforated in cases with small quantities of infested plats so that they may reach the Director's office alive.

H. V. KRISHNAYYA,

3 *Offg. Director of Agriculture.*

ಇನ್ಫ್ಲುಯನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಪ್ರಾಶ್ರಯಮಾಡುದ್ದು.

ಸ್ವಚ್ಛವಾದ ಯೂಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 6

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲು ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,

೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಆಗಸ್ಟ್ ತಾ|| ೧೭ ನೆಯ ಭಾನುವಾರ.

ಅಫ್ಘಾನಿಸ್ಥಾನದೊಡನೆ ಸಂಧಿ ಜರುಗಿತು.

ಸಂಧಿರಾಯಭಾರವನ್ನು ನಡೆಯಿಸುವುದಕ್ಕಾಗಿ ಅಫ್ಘಾನಿಸ್ಥಾನದ ಅಮೀರರ ಕಡೆಯ ಪ್ರತಿನಿಧಿಗಳು ಭರತಖಂಡಕ್ಕೆ ಬಂದಿದ್ದರಷ್ಟೆ. ಅವರುಗಳು ರಾವಲ್ಪಿಂಡಿಯಲ್ಲಿ ಕುಳಿತು ಭರತಖಂಡದ ಸರ್ಕಾರದ ಕಡೆಯಿಂದ ನಿಯುಕ್ತರಾಗಿದ್ದ ಸರ್ ಹಾಮಿಲ್ಟನ್ ಗ್ರಾಂಟರೊಡನೆ ಸಂಧಿಪ್ರಸಂಗವನ್ನು ನಡೆಯಿಸಿದರು. ಮೊದಲು ಸರ್ ಗ್ರಾಂಟ್‌ರವರು ಭಾಷಣಮಾಡಲಾಗಿ, ಅದಕ್ಕೆ ಪ್ರತಿಯಾಗಿ ಅಮೀರರ ಕಡೆಯ ರಾಯಭಾರಿಗಳ ಪ್ರಮುಖರಾದ ಸರ್ದಾರ್ ಅಲೀ ಅಮದ್‌ಖಾನರು ಉತ್ತರಕೊಡುವಾಗ—"ಸಂಧಿಯನ್ನು ನಾವಾಗಿ ಕೋರಿಕೊಳ್ಳಲಿಲ್ಲ. ನೀವೇ ಹೇಳಿಕಳುಹಿಸಿದಿರಿ. ಸಿಮ್ಲಾನಗರದಲ್ಲಿದ್ದ ಅಫ್ಘನ್ ರಾಯಭಾರಿಯು ಆ ಪಟ್ಟಣವನ್ನು ಬಿಟ್ಟು ಹೋಗುವಾಗ ಅಫ್ಘನ್ನರು ಸಂಧಿಯನ್ನು ಅಪೇಕ್ಷಿಸುವರಾದರೆ ತಮ್ಮ ಪ್ರತಿನಿಧಿಗಳನ್ನು ಅದಕ್ಕಾಗಿ ಕಳುಹಿಸಿಕೊಡಬಹುದು" ಎಂದು ಇಂಡ್ಯಾ ಸರ್ಕಾರದವರು ಹೇಳಿಕಳುಹಿಸಿದ್ದರು. ಅದರಮೇಲೆ ಅಮೀರರು ತಮ್ಮ ಪ್ರತಿನಿಧಿಗಳನ್ನು ಸಂಧಿಗಾಗಿ ಕಳುಹಿಸಿಕೊಟ್ಟಿರುವರು. ಮದ್ದುಗುಂಡು, ಆಕಾಶವಿಮಾನ-ಇತ್ಯಾದಿ ಯುದ್ಧಪರಿಕರಗಳ ಸಂಪತ್ತಿನಲ್ಲಿ ಇಂಗ್ಲೀಷರು ಅಫ್ಘನ್ನರಿಗಿಂತ ದೊಡ್ಡವರಾಗಿರುವುದು ನಿಜ. ಆದರೇನು? ಇಂಗ್ಲೀಷರಂತೆಯೇ ಜರ್ಮನರೂ ಅಂಥ ಸಂಪತ್ತಿನಲ್ಲಿ ಅಧಿಕರಾಗಿಯೇ ಇದ್ದರು. ಇಂಗ್ಲೀಷರ ಕಡೆ ಅನೇಕ ರಾಷ್ಟ್ರಗಳು ಕೂಡಿಕೊಂಡುದರಿಂದ ಇಂಗ್ಲೀಷರೇ ಗೆದ್ದರು. ಇಂಗ್ಲೀಷರು ನಮ್ಮ ಅಫ್ಘನ್ ದೇಶದಮೇಲೆ ವಿಮಾನಗಳಿಂದ ಸಿಡಿಮದ್ದುಗಳನ್ನು ಹಾಕಿದಂತೆ ಜರ್ಮನರೂ ಲಂಡನ್ನಿನಮೇಲೆ ಹಾಕಿದ್ದರು. ಇಂಗ್ಲೀಷರ ಕಡೆ ಅನೇಕ ರಾಷ್ಟ್ರಗಳು ಸೇರಿದಂತೆ ಈಗ ಅಫ್ಘನ್ನರಕಡೆಯೂ ಅನೇಕರು ಕೂಡುವುದಕ್ಕೆ ಅವಕಾಶವಿದೆ. ಹಾಗಾಗುವುದಾದರೆ ಇಂಗ್ಲೀಷರು ಜಯಿಸುವರೆಂದು ಹೇಳಲಾಗುವುದಿಲ್ಲ. ಅಫ್ಘನ್ನರ ಸ್ನೇಹವು ಇಂಗ್ಲೀಷರಿಗೆ ಅವಶ್ಯಕವಾಗಿರುವಂತೆ ಇಂಗ್ಲೀಷರ ಸ್ನೇಹವು ಅಫ್ಘನ್ನರಿಗೆ ಅಷ್ಟು ಅವಶ್ಯಕವಾಗಿರುವುದಿಲ್ಲ. ಏಕೆಂದರೆ—ಈಗ ಯೂರೋಪುಯುದ್ಧವು ಮುಗಿದಿದ್ದರೂ ಬೋಲ್ಷೆವಿಕ್ಕರ ಉಪದ್ರವವು ಬಲವತ್ತರವಾಗುತ್ತಿದೆ. ಅಫ್ಘನ್ ರಾಜ್ಯವು ಅವರಿಗೂ ಭರತಖಂಡಕ್ಕೂ ಮಧ್ಯದಲ್ಲಿ ಅಡ್ಡಕಟ್ಟೆಯಾಗಿ ನಿಂತಿದೆ. ಈ ಕಟ್ಟೆಯ ತಡೆಯು ತಪ್ಪಿಹೋದರೆ ಬೋಲ್ಷೆವಿಕ್ ಪ್ರವಾಹವು ಭರತಖಂಡವನ್ನು ಮುಳುಗಿಸಿಬಿಡುವುದು. ಈಗ ನಮ್ಮ ನಿಮ್ಮಲ್ಲಿ ಗೌರವವಾದ ಸಂಧಿಯು ಜರುಗಿಹೋದರೆ ಬೋಲ್ಷೆವಿಕ್ ಪ್ರಳಯವು ಕಾಸ್ಪಿಯನ್ ಸಮುದ್ರವನ್ನು ದಾಟಿ ಬರಲಾರದು" ಎಂಬುದಾಗಿ ಆಡಿದ್ದ ಜಂಭದ ಮಾತುಗಳನ್ನು ಕೇಳಲಾಗಿ ಸಂಧಿಯು ಈ ಸಂದರ್ಭದಲ್ಲಿ ಜರುಗುವುದೋ ಇಲ್ಲವೋ ಎಂದು ಸಂಶಯವುಂಟಾಗುತ್ತಿದ್ದಿತು. ಆದರೆ ತಾ|| ೮ ರಲ್ಲಿ ಸಿಮ್ಲಾಪಟ್ಟಣದಿಂದ ಪ್ರಕಟಿತವಾಗಿರುವ ತಂತ್ರೀವಾರ್ತೆಯನ್ನು ನೋಡಲಾಗಿ ಎರಡು ಪಕ್ಷಗಳವರಿಗೂ ಸಂಧಿಯು ಕುದಿರಿ ಆ ದಿನ ಬೆಳಗ್ಗೆ ರಾವಲ್ಪಿಂಡಿಯಲ್ಲಿ ಉಭಯಪಕ್ಷದವರೂ ಸಂಧಿಪತ್ರಕ್ಕೆ ಕೈಬರೆಹವನ್ನುಹಾಕಿದರೆಂದು ಗೊತ್ತಾಗಿರುವುದು. ಹೀಗೆ ಪರ್ಯವಸಾನವುಂಟಾದದನ್ನು ಕೇಳಿ ಸಂತೋಷಿಸಬೇಕಾಗಿದೆ. ಅಫ್ಘನ್ ರಾಯಭಾರಿಯಮೇಲೆಕಂಡ ಮಾತನ್ನು ಕೇಳಲಾಗಿ ಆ ಜನರಲ್ಲಿ ಎಂಥ ಮೂಢಜ್ಞಾನವು ಇನ್ನೂ ಆವರಿಸಿಕೊಂಡಿದೆಯೆಂಬುದು ಗೊತ್ತಾಗುವುದು. ಲೋಕೈಕವೀರರೆನಿಸಿಕೊಂಡಿದ್ದ ದುರ್ಮದ ಜರ್ಮನರನ್ನೇ ತ್ರಾಹಿಯೆನಿಸಿದ ಆಂಗ್ಲಜನರ ಶಕ್ತಿಸಾಮರ್ಥ್ಯಗಳ ಪ್ರಮಾಣವು ಅಫ್ಘನ್ನರಿಗೆ ಇನ್ನೂ ಗೊತ್ತಾಗಿಲ್ಲ. "ಗಜಾಯತ್ರನಗಣ್ಯಂತೆ ಮಶಕಾನಾಂತುಕಾಕಥಾ" ಎಂಬಂತೆ ಕೈಜರರಂಥವರೇ ಮಣ್ಣುಮುಕ್ಕಿಹೋಗಿರುವಾಗ, ಅಮೀರ್ ಅಮಾನುಲ್ಲಾಖಾನರಂಥವರ ಪಾಡೇನೆಂಬುದನ್ನು ಕೂಪಕೂರ್ಮಗಳಂಥವರು ಹೇಗೆತಾನೇ ತಿಳಿಯಬಲ್ಲರು. ಸಂಧಿಗೆ,, ಅಮೀರರು ಒಡಂಬಡುವುದಾದರೆ ರಾಯಭಾರಿಗಳನ್ನು ಕಳುಹಿಸಿಕೊಡಲಿ" ಎಂದು ಒಂದು ವೇಳೆ ನಮ್ಮ ವೈಸ್ರಾಯರು ಹೇಳಿಕಳುಹಿಸಿದ್ದರೂ, ಅದು ಇಂಗ್ಲೀಷರಿಗೆ ಯುದ್ಧವಿಷಯದಲ್ಲಿ ಯಾವಾಗಲೂ ಅವರಿಗೆ ಇರುತ್ತಿರುವ ವಿಮುಖತೆಯನ್ನು ತೋರ್ಪಡಿಸಿ ಅವರ ಲೋಕಶಾಂತಿಕಾಮುಕತ್ವವನ್ನೂ ಮಹಮದೀಯ ಪ್ರಪಂಚದಮೇಲೆ ಅವರಿಗಿರುವ ವಿಶ್ವಾಸವನ್ನೂ ಬಹಿರಂಗಗೊಳಿಸುವುದೇ ಹೊರತು, ಅವರಲ್ಲಿ ದೌರ್ಬಲ್ಯವಿದ್ದಿತೆಂಬುದನ್ನು ಅದರಿಂದ ವಿವೇಕಿಗಳಾರೂ ಊಹಿಸಲಾರರು. ಅಫ್ಘನ್ ರಾಯಭಾರಿಯ ಬುರುಡೆ ಮಾತನ್ನು ಕೇಳಿ ಲೋಕವೇ ಪರಿಹಾಸಮಾಡುತ್ತಿದ್ದಿತು. ಅದನ್ನು ಒಂದು ದೊಡ್ಡದಾಗಿ ತಿಳಿದು ಇಂಗ್ಲೀಷರು ಕೆರಳಿಕೊಂಡಿದ್ದರೆ ಯುದ್ಧವನ್ನು ಬೆಳಸಿದಂತಾಗಿ ವೃಥಾ ಪ್ರಾಣಾದಿಹಾನಿಗಳಿಗೆ ಮತ್ತೆ ವಿಶೇಷಾವಕಾಶವಾಗುತ್ತಿದ್ದಿತು. ಅನಂತರ ಅಫ್ಘನ್ನಿನ ಅವಸ್ಥೆಯು ಹೇಗಾಗುತ್ತಿದ್ದಿತೆಂಬುದನ್ನು ಹೇಳಬೇಕಾಗಿರುವುದಿಲ್ಲ. ಆದರೂ ಪರಿಣಾಮವು ಬೇಂಟೆಯನ್ನಾಡಿ ನರಿಯನ್ನು ಕೊಂದಂತೆಯೇ ಆಗುತ್ತಿದ್ದಿತು. ಇದನ್ನು ತಿಳಿದೇ ಸಂಧಿಯು ಕೊನೆಮುಟ್ಟಿಹೋಗುವಂತೆ ನಮ್ಮ ವೈಸ್ರಾಯರು ಮಾಡಿದುದು ಆಂಗ್ಲೇಯರ ದೂರದರ್ಶಿತ್ವಕ್ಕೂ ಶಾಂತಿಪ್ರಿಯತೆಗೂ ಅನುಗುಣವಾದ ಕೃತ್ಯವಾಯಿತು. ಹೊಸ ಅಮೀರರಾದ ಅಮನುಲ್ಲಾಖಾನರು ಇನ್ನಾದರೂ ಸ್ವಬುದ್ಧಿಯಿಂದ ನಡೆದು ಕ್ಷೇಮವನ್ನು ಮಾಡಿಕೊಳ್ಳುವವರಾಗಲಿ. ಈಗ ನಡೆದಿರುವ ಸಂಧಿಯ ಒಡಂಬಡಿಕೆಗಳಲ್ಲಿ ಅಫ್ಘನ್ನರು ಇನ್ನು ಮುಂದೆ ಭರತಖಂಡದ ದ್ವಾರಾ ಮದ್ದುಗುಂಡು ಮೊದಲಾದುವುಗಳನ್ನು ತರಿಸಿಕೊಳ್ಳಲಾಗದೆಂದೂ ಅಮೀರರಿಗೆ ಇದುವರೆಗೆ ಸಲ್ಲಿಸುತ್ತಿದ್ದ ಸಾಂವತ್ಸರಿಕ ದ್ರವ್ಯವನ್ನು ಇನ್ನು ಸಲ್ಲಿಸಲವಶ್ಯಕವಿಲ್ಲವೆಂದೂ ಅಫ್ಘಾನಿಸ್ಥಾನಕ್ಕೂ ಭರತಖಂಡಕ್ಕೂ ಮಧ್ಯದ ಎಲ್ಲೆಯನ್ನು ಬ್ರಿಟಿಷ್ ಕಮಿಷನರು ನಿರ್ಣಯಿಸತಕ್ಕದೆಂದೂ ವ್ಯವಸ್ಥೆಯಾಗಿರುವುದಂತೆ. ಈ ನಿಯಮಗಳು ಅಷ್ಟೇನೂ ಕಠಿನಗಳಾಗಿರುವುದಿಲ್ಲ. ಅಫ್ಘನ್ ಪ್ರಭುತ್ವದವರು ತಮ್ಮ ನಡತೆಯನ್ನು ಮುಂದೆ ಸರಿಪಡಿಸಿಕೊಳ್ಳುವವರಾದರೆ ಮರಳಿ ತಮ್ಮ ಪೂರ್ವದ ಲಾಭಗಳನ್ನೆಲ್ಲಾ ಇಂಗ್ಲೀಷರಿಂದ ಪಡೆದುಕೊಳ್ಳಲೂ ಬಹುದು. ಮೊದಮೊದಲು ಎಷ್ಟು ಬಿಂಕದ ಮಾತುಗಳನ್ನಾಡಿದರೂ ಕಡೆಕಡೆಗೆ ಅಫ್ಘನ್ ರಾಯಭಾರಿ ಸರ್ದಾರ್ ಅಲಿ ಅಹಮ್ಮದ್ ಖಾನರು ವಿವೇಕದಿಂದ ನಡೆದುಕೊಂಡು ಸಂಧಿಯನ್ನು ಕೊನೆಮುಟ್ಟಿಸಿಕೊಂಡು ಹೋದುದು ಸಂತೋಷಕರವಾಯಿತು. ಅಮೀರ್ ಹಬೀಬುಲ್ಲಾಖಾನರ ಕಾಲದಂತೆಯೇ ಅಫ್ಘನ್ನರ ಇಂಡ್ಯಾ ಸರ್ಕಾರದವರ ಮಧ್ಯದಲ್ಲಿ ಮರಳಿ ಸ್ನೇಹವು ನೆಲಸಿ ಚಿರಕಾಲ ನಡೆದುಕೊಂಡು ಬರುವಂತೆ ಆಗಲಿ.

ಮದ್ರಾಸು ನಿಯಮನಿರ್ಮಾಣಸಭೆ.

ಹೊಸದಾಗಿ ಏರ್ಪಟ್ಟ ಈ ಶಾಸನಸಭಾ ಸಭಿಕರ ಪ್ರಥಮಸಮಾವೇಶವು ಕಳೆದ ತಾ|| ೧೨ ನೆಯ ದಿವಸ ಗೌರ್ನರಾದ ಲಾರ್ಡ್ ವಿಲ್ಲಿಂಗ್ಡನ್‌ರವರ ಅಧ್ಯಕ್ಷತೆಯಲ್ಲಿ ಕೂಡಿತು. ಹೊಸ ಮತ್ತು ಹಳೆಯ ಸಭಿಕರೆಲ್ಲಾ ಬಂದು ನೆರೆದಿದ್ದರು. ನೂತನ ಸಭಿಕರು ನಿಯಮಪ್ರಕಾರ ಪ್ರಮಾಣ ಮಾಡಿದರು. ವೈಸ್ರಾಯರಿಂದ ಅಂಗೀಕೃತಗಳಾದ ವಿಧಿಗಳ ವಿಷಯವು ಹೇಳಲ್ಪಟ್ಟನಂತರ ಮಹಮ್ಮದೀಯರ ವಿವಾಹ, ಅವುಗಳ ವಿಚ್ಛೇದ-ಇವುಗಳಿಗೆ ಸಂಬಂಧಪಟ್ಟ ವಿಧಿಯ ಮಸೂದೆಯು ಚರ್ಚಿಸಲ್ಪಟ್ಟಿತು. ಯುದ್ಧವು ಜಯಶೀಲವಾಗಿ ಪರಿಪೂರ್ತಿಯಾಗಿ ಜರ್ಮನರ ಕ್ರೌರ್ಯವು ನಿರ್ಮೂಲವಾದುದರಿಂದಲೂ, ಶಾಶ್ವತಸಂಧಿಯು ಜರುಗಿದುದರಿಂದಲೂ ತಮಗುಂಟಾದ ಸಂತೋಷವನ್ನು ಸಾರ್ವಭೌಮರಿಗೆ ತಿಳಿಯಿಸುವ ಮೊದಲ ತೀರ್ಮಾನವನ್ನು ಸಭಿಕರೆಲ್ಲರೂ ಏಕಕಂಠದಿಂದ ಮಾಡಿದರು. ಬಳಿಕ ಆ|| ಬಿ. ವಿ. ನರಸಿಮ್ಮಯ್ಯರ್‌ರವರು ಡಾಕ್ಟರ್ ನಾಯರ್‌ರವರ ಮೃತಿಯನ್ನು ಕುರಿತು ಅನುತಾಪಸೂಚಕವಾದತೀರ್ಮಾನವನ್ನು ಸಭೆಯ ಮುಂದಿಡುವಾಗ" ಡಾ|| ನಾಯರ್‌ರವರನ್ನು ಅರಿಯದವರು ಈ ದೇಶದಲ್ಲಿ ಯಾರೂ ಇಲ್ಲ. ೧೯೧೩ನೆ ವರ್ಷದಿಂದ ೧೯೧೭ ನೆ ವರ್ಷದವರೆಗೂ ಅವರು ಮದ್ರಾಸು ಕಾರ್ಪೊರೇಷನ್ನಿನ ಪ್ರತಿನಿಧಿಗಳಾಗಿ ನಿಯಮನಿರ್ಮಾಣ ಸಭೆಯಲ್ಲಿ ಕೆಲಸಮಾಡಿದರು. ಅವರು ರಾಜ್ಯಾಂಗ ವಿಷಯದಲ್ಲಿ ಪಡೆದಿದ್ದ ಜ್ಞಾನವು ನಿರತಿಶಯವಾದುದು. ಸ್ಥಾನಿಕ ಸ್ವಪರಿಪಾಲನ ವಿಷಯದಲ್ಲಿ ಅವರಿಗಿದ್ದ ಪ್ರಾವೀಣ್ಯವು ಅದ್ಭುತವಾಗಿದ್ದಿತು. ಅಂಥವರ ಮರಣದಿಂದ ನಮ್ಮ ದೇಶಕ್ಕೆ ಉಂಟಾದ ನಷ್ಟವು ಅಪಾರವಾಗಿರುವುದು ಎಂದು ಹೇಳಿ ಅವರ ಮರಣದಿಂದ ಈ ಸಭಿಕರಿಗುಂಟಾದ ಚಿಂತೆಯನ್ನು ಅವರ ಕುಟುಂಬದವರಿಗೆ ತಿಳಿಯಪಡಿಸುವರು ಎಂಬುದಾಗಿ ಉಪಪಾದಿಸಲಾಗಿ ಆ|| ಉಸ್ಮಾನ್‌ಸಾಹೇಬ್ ಬಹದ್ದೂರ್‌ರವರೂ, ಆ|| ಹಡ್‌ಸನ್‌ರವರೂಕೂಡ ಡಾಕ್ಟರ್‌ರವರ ಗುಣಾತಿಶಯವನ್ನೂ ಸಾಮರ್ಥ್ಯವಿಶೇಷವನ್ನೂ ಕುರಿತು ಪ್ರಶಂಸೆಮಾಡಿ ತೀರ್ಮಾನವನ್ನು ಬಲಪಡಿಸಲಾಗಿ ಸಭಿಕರೆಲ್ಲರಿಂದಲೂ ಅನುಮೋದಿತವಾಯಿತು. ಕಡೆಗೆ ಗೌರ್ನರವರು ಶಾಸನನಿರ್ಮಾಣ ಸಭಾನಿರ್ಮಾಣದ ವಿಷಯದಲ್ಲಿ ತಮ್ಮ ಉದಾರವಾದ ಅಭಿಪ್ರಾಯಗಳನ್ನು ಕುರಿತು ಒಂದು ಉಪನ್ಯಾಸ ಮಾಡಿದರು. ಅದರಲ್ಲಿ—"ಈ ನಿಯಮನಿರ್ಮಾಣ ಸಭೆಯಲ್ಲಿ ರೂಪಾಂತರ ವುಂಟಾಗಬೇಕೆಂದು ನಾನು ಕೋರುತ್ತೇನೆ. ಇದರಲ್ಲಿರುವ ಅಧಿಕಾರಿ ಸಭಿಕರ ಸಂಖ್ಯೆಗಿಂತ ಅನಧಿಕಾರಿ ಸಭಿಕರ ಸಂಖ್ಯೆಯು ಹೆಚ್ಚಾಗಿರುವಂತೆ ಆಗಬೇಕೆಂಬುದು ನನ್ನ ಅಪೇಕ್ಷೆ. ಈ ಪ್ರಕಾರವಾಗುವುದಾದರೆ ನಿಯಮನಿರ್ಮಾಣ ಸಭೆಯಲ್ಲಿ ಸರಿಯಾದ ಪ್ರಜಾಪ್ರಾತಿನಿಧ್ಯವುಂಟಾಗುವುದಲ್ಲದೆ ಈ ಆಧಿಪತ್ಯದಲ್ಲಿರುವ ಎಲ್ಲಜನಸಂಘಗಳ ಪ್ರತಿನಿಧಿಗಳಿಗೂ ಸಭಿಕರಾಗಿ ಬರಲು ಅವಕಾಶವಾಗುವುದು. ಇಷ್ಟರಲ್ಲೇ ಏರ್ಪಡುವುದಕ್ಕಿರುವ ರಾಜ್ಯಾಂಗ ಸಂಸ್ಕರಣಗಳನ್ನನುಸರಿಸಿಯೂ ಕೂಡ ಅನಧಿಕಾರ ಸಭಿಕರ ಸಂಖ್ಯೆಯು ಹೆಚ್ಚಿಸಲ್ಪಡುವುದಾಗಿದೆ. ನಾನು ಬೊಂಬಾಯಿಯಲ್ಲಿ ಆರುವರ್ಷಗಳ ಕಾಲ ಗೌರ್ನರ್‌ತನವನ್ನು ನಿರ್ವಹಿಸಿದೆನು. ಆಗ ಅಲ್ಲಿಯ ಶಾಸನಸಭೆಯಲ್ಲೂ ಅನಧಿಕಾರ ಸಭಿಕರ ಸಂಖ್ಯೆಯು ಹೆಚ್ಚಿಸಲ್ಪಟ್ಟಿತು. ಹಾಗೆ ಮಾಡಿದುದರಿಂದ ಅಂಥ ಅನಧಿಕಾರ ಸಭಿಕರ ಸಹಾಯದಿಂದ ರಾಜ್ಯಪರಿಪಾಲನವು ಚೆನ್ನಾಗಿ ಸಾಗಿತು. ಶಾಸನಸಭೆಯಲ್ಲಿ ಅನಧಿಕಾರ ಸಭಿಕರ ಸಂಖ್ಯೆಯು ಹೆಚ್ಚಿಸಲ್ಪಡುವುದೆಂದರೆ ಪರಿಪಾಲನದಲ್ಲಿ ಪ್ರಜೆಗಳ ಅಧಿಕಾರವನ್ನು ಹೆಚ್ಚಿಸುವುದೇ ಆಗುವುದು. ಮತ್ತು ಅದರಿಂದ ಅನಧಿಕಾರ ಸಭಿಕರ ಬಾಧ್ಯತೆಯು ಹೆಚ್ಚಿದಂತೆಯೂ ಆಗುವುದು" ಎಂದು ಹೇಳಿ ರಾಜ್ಯಾಂಗದಲ್ಲಿ ಪ್ರಜಾಭಿಪ್ರಾಯ ಪ್ರಾಮುಖ್ಯಕ್ಕೆ ಅವಕಾಶವನ್ನು ಹೆಚ್ಚಿಸುವುದರಲ್ಲಿ ತಮಗಿರುವ ಪ್ರೀತಿಯನ್ನು ವ್ಯಕ್ತಪಡಿಸಿದರು. ಮತ್ತು ಆ ಸಭೆಯಲ್ಲಿ ನಡೆದ ಚರ್ಚೆಗಳೊಳಗೆ ಸಭಾಕಾರ್ಯಗಳನ್ನು ಆಂಗ್ಲಭಾಷೆಯಲ್ಲೇ ಚರ್ಚಿಸಬೇಕೆಂದು ವಿಧಿಯಲ್ಲಿ ಸವರಣೆ ಮಾಡಬೇಕೆಂಬುದು ಚಂದಾಗಿದ್ದಿತು. ಇದನ್ನು ಆ|| ಅಡ್ವೋಕೇಟ್ ಜನರಲ್‌ರವರು ಸಭೆಯ ಮುಂದಿಟ್ಟರು. ಸಭಾಧ್ಯಕ್ಷರಾಗಿದ್ದ ಗೌರ್ನರವರು ಇದಕ್ಕೆ ಅನುಕೂಲವಾದ ಅಭಿಪ್ರಾಯವನ್ನು ಕೊಟ್ಟರು. "ಹಿಂದೆ ಒಂದು ಸಲ ದೇಶಭಾಷೆಯಲ್ಲಿ ಈ ಸಭೆಯೊಳಗೆ ಚರ್ಚಿಸಲು ಒಬ್ಬ ಸಭಿಕರು ಆರಂಭಿಸಲು, ಕಾರಣಾಂತರಗಳಿಂದ ಅದು ನಿಂತುಹೋದುದನ್ನುನಾನು ಕೇಳಿದ್ದೆನು. ಅದರಿಂದಲೂ ಈ ಆಧಿಪತ್ಯದಲ್ಲಿ ಅನೇಕ ದೇಶಭಾಷೆಗಳು ವ್ಯವಹಾರದಲ್ಲಿರುವುದರಿಂದಲೂ ಈ ಸಭೆಯಲ್ಲಿ ದೇಶಭಾಷೆಗಳೊಳಗೆ ಪ್ರಸಂಗಿಸುವುದು ಅಸಾಧ್ಯವೆಂದು ಸರ್ಕಾರದವರು ಯೋಚಿಸುತ್ತಿದ್ದರು. ಆ ಕಾರಣದಿಂದಲೇ ಅಡ್ವೋಕೇಟ್ ಜನರಲ್‌ರವರು ಈ ಸವರಣವನ್ನು ಉಪಪಾದಿಸುವುದು ಅವಶ್ಯಕವೆಂದು ನಾನು ತಿಳಿದೆನು. ಆದರೆ ಹಿಂದೆ ಈ ಸಭೆಯಲ್ಲಿ ಪ್ರಸಂಗವನ್ನು ದೇಶಭಾಷೆಯಲ್ಲಿ ನಡೆಯಿಸುವುದಕ್ಕೆ ಯಾರು ಪ್ರಯತ್ನಿಸಿದರೋ ಅವರೇ ಇದರ ಚರ್ಚೆಗೆ ಪ್ರತಿಕೂಲವಾಗಿ ಮಾತನಾಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇತರ ಸಭಿಕರೂ ಸಹ ಈ ವಿಷಯಕ್ಕೆ ವಿರುದ್ಧವಾಗಿ ಅಭಿಪ್ರಾಯ ಕೊಡುವುದಾದರೆ ಕಾರ್ಯನಿರ್ವಾಹಕ ಸಂಘದ ದ್ವಾರಾ ಈ ಸವರಣವು ಅನುಮೋದಿಸಲ್ಪಟ್ಟು ವ್ಯವಹಾರಕ್ಕೆ ಬರುವಂತೆ ಮಾಡಲ್ಪಡಬೇಕಾಗುವುದೆಂದು ಆ ಸಂಘದ ಪಕ್ಷದಿಂದ ನಿಮಗೆ ಇದನ್ನು ತಿಳಿಯಿಸುತ್ತೇನೆ" ಎಂದು ಹೇಳಿದ ಮಾತುಗಳನ್ನು ಕೇಳಲಾಗಿ, ದೇಶಭಾಷೆಗಳಲ್ಲಿ ಶಾಸನಸಭಾಪ್ರಸಂಗವನ್ನು ನಡೆಯಿಸಲು ಅವಕಾಶ ಕೊಡುವುದಕ್ಕೆ ಪ್ರಭುತ್ವದವರು ಎಷ್ಟುಮಾತ್ರಕ್ಕೂ ಅಂಗೀಕರಿಸುವುದಿಲ್ಲವೆಂಬುದು ವ್ಯಕ್ತವಾಯಿತು. ಇಂಗ್ಲೀಷಿನಲ್ಲೇ ಚರ್ಚೆನಡೆಯಬೇಕೆಂದು ಖಂಡಿತೋಕ್ತಿಯಿರುವಂತೆ ವಿಧಿಯಲ್ಲಿ ಸವರಣೆ ಮಾಡಬೇಕೆಂಬ ಈ ತೀರ್ಮಾನವನ್ನು ವಿರೋಧಿಸಿದವರಲ್ಲಿ ಆ|| ಬಿ. ವಿ. ನರಸಿಮ್ಮಯ್ಯರ್‌ರವರು ೧ನೆಯವರಾಗಿದ್ದರು. ಅವರು ಹೇಳಿದುದೇನೆಂದರೆ—ಈ ಸಲದ ಸಭೆಯಲ್ಲಿ ವಿವಾದಾಸ್ಪದ ವಿಷಯಗಳು ಚರ್ಚೆಗಿಡಲ್ಪಡುವುದಿಲ್ಲವೆಂದು ನಾವೆಲ್ಲರೂ ತಿಳಿದಿದ್ದೆವು. ಮತ್ತು ಈ ತೀರ್ಮಾನವು ಸಭೆಯ ಮುಂದಿಡಲ್ಪಡುವುದೆಂಬ ಸಂಗತಿಯು ನಮಗೆ ೨ ದಿನಗಳಿಗೆ ಮುಂಚೆ ಮಾತ್ರ ಗೊತ್ತಾಯಿತು. ಮೊದಲೇ ಗೊತ್ತಾಗಿದ್ದರೆ ಅನಧಿಕಾರಿ ಸಭಿಕರೆಲ್ಲಾ ಸೇರಿ ಆಲೋಚನೆ ಮಾಡಿಕೊಳ್ಳುತ್ತಿದ್ದೆವು. ಆದುಕಾರಣ ಇದರ ಚರ್ಚೆಯನ್ನು ಇನ್ನೊಂದು ಸಲಕ್ಕೆ ಇಡಬೇಕೆಂದು ವಾದಿಸಿದರು. ಮತ್ತೂ, ಇಂಗ್ಲೀಷು ಭಾಷೆಯನ್ನು ಅರಿಯದವರಿಗೂ ಈ ಸಭೆಯ ಸಭಿಕರಾಗಿ ಬರಲು ಅರ್ಹತೆಯಿರುವುದು. ಅಂಥವರು ಅನೇಕರಿರುವರು. ಈಗಣ ತೀರ್ಮಾನವು ವಿಧಿಯಾದರೆ ಅಂಥ ಸಂದರ್ಭಗಳಿಗೆಲ್ಲಾ ಅಸಂಬದ್ಧವಾಗುವುದು ಎಂದೂ ಹೇಳಿದರು. ಆ|| ಶಿವರಾವುರವರು-ಇದು ಶಾಸನವಾದರೆ ಇಂಗ್ಲೀಷು ಬಲ್ಲವರು ಮಾತ್ರವೇ ಶಾಸನನಿರ್ಮಾಣಸಭೆಗೆ ಸಭಿಕರಾಗಿ ಬರಲರ್ಹರು ಎಂದು ನಿರ್ಬಂಧವಿಟ್ಟಂತಾಗುವುದು. ಪ್ರಭುತ್ವದವರ ಅಭಿಪ್ರಾಯವು ಹಾಗಿರುವುದಿಲ್ಲ. ಸಭಿಕರಾಗಿ ಬರಲರ್ಹರಾದವರ ಸಂಖ್ಯೆಯು ಹೆಚ್ಚಬೇಕೆಂಬುದೇ ಅವರ ಉದ್ದೇಶವಾಗಿರುತ್ತದೆ. ಈಗಣ ತೀರ್ಮಾನವು ಆ ತತ್ವಕ್ಕೆ ವಿರುದ್ಧವಾಗಿರುತ್ತದೆ. ಆದುಕಾರಣ ಸದ್ಯಃ ಇದನ್ನು ನಿಲ್ಲಿಸಿ ಮುಂದಣ ಸಭೆಯ ಚರ್ಚೆಗಿಡುವುದು ಉಚಿತವೆಂದು ಹೇಳಿದರು. ಇದು ಸ್ವಲ್ಪ ವಿಷಯವಾದುದರಿಂದ ಮುಂದಣ ಸಭೆಯತನಕ ನಿಲ್ಲಿಸಬೇಕಾದ ಅವಶ್ಯಕತೆಯಿಲ್ಲವೆಂದು ಆ|| ರಿಚ್ಮಂಡ್‌ರವರು ವಾದಿಸಿದರು. ಇಂಗ್ಲೀಷನ್ನು ತಿಳಿಯದವರಾರೂ ಈ ಸಭೆಯ ಸಭಿಕರಾಗಿ ಬರಲಾರರೆಂಬುದನ್ನು ನಾನು ಅನುಭವಪೂರ್ವಕವಾಗಿ ಹೇಳುತ್ತೇನೆ. ಆದುಕಾರಣ ಅಡ್ವೋಕೇಟ್ ಜನರಲ್‌ರವರ ತೀರ್ಮಾನವನ್ನು ಅನುಮೋದಿಸುತ್ತೇವೆಂದು ದಿ|| ಬ|| ತ್ಯಾಗರಾಯಶೆಟ್ಟರೇ ಮೊದಲಾದ ಕೆಲವರು ಹೇಳಿ ಸಹಾಯೀಕರಿಸಿದರು. ಬಳಿಕ ಉಪಪಾದಕರಾದ ಅಡ್ವೋಕೇಟ್ ಜನರಲ್‌ರವರು ದೇಶಭಾಷಾಪ್ರಸಂಗಕ್ಕೆ ಈ ಸಭೆಯಲ್ಲಿ ಅವಕಾಶವಿತ್ತರೆ ಬಹಳ ತೊಂದರೆಗಳುಂಟಾಗುವುವೆಂಬುದನ್ನು ವಿವರಣಪೂರ್ವಕವಾಗಿ ತಿಳಿಯಿಸುವಾಗ್ಗೆ—ಈ ಆಧಿಪತ್ಯದಲ್ಲಿ ತೆಲುಗು, ತಮಿಳು, ಮಲೆಯಾಳ ಮೊದಲಾದ ಅನೇಕ ದೇಶಭಾಷೆಗಳಿರುವುವು. ಒಬ್ಬೊಬ್ಬ ಸಭಿಕರಿಗೆ ಒಂದೆರಡು ಭಾಷೆಗಳು ಮಾತ್ರ ತಿಳಿದಿರುವುವು. ಉಳಿದ ಭಾಷೆಯಲ್ಲಿ ಯಾರಾದರೂ ಮಾತನಾಡುವುದಕ್ಕುಪಕ್ರಮಿಸಿದರೆ ಇದು ಅವರಿಗೆ ತಿಳಿಯದೆಯೇ ಹೋಗುವುದು. ಸಭಿಕರೆಲ್ಲರಿಗೂ ಸ್ಪಷ್ಟವಾಗಿ ತಿಳಿದು ಚರ್ಚಿಸಲನುಕೂಲವಾಗಿರುವುದು ರಾಜಭಾಷೆಯಾದ ಇಂಗ್ಲೀಷೇ ಆಗಿರುವುದು. ಮತ್ತು ಈ ಸಂಬಂಧವಾದ ತೀರ್ಮಾನಗಳನ್ನೂ ಚರ್ಚೆಗಳನ್ನೂ ದೇಶಭಾಷೆಗಳಲ್ಲಿ ಸಿದ್ಧಪಡಿಸುವುದೂ ಸಹ ಬಹಳ ಕಷ್ಟವು, ಎಂದು ಹೇಳಿದರು. ಇದನ್ನು ಆ|| ದೇಶಿಕಾಚಾರರು ಅನುಮೋದಿಸಿದರು. ಆ ಬಳಿಕ ಈ ಸವರಣಲ್ಲಿ ಮತ್ತೊಂದು ಉಪಸವರಣವನ್ನಾದರೂ ಸೇರಿಸುವಂತೆ ಮಾಡಬೇಕೆಂದು ಆ|| ಬಿ. ವಿ. ನರಸಿಮ್ಮಯ್ಯರವರು ಉಪಸವರಣವನ್ನು ತಂದರು. ಅದೇನೆಂದರೆ—"ಸಾಮಾನ್ಯವಾಗಿ ಆಂಗ್ಲಭಾಷೆಯಲ್ಲೇ ಚರ್ಚೆನಡೆದರೂ ದೇಶಭಾಷೆಯಲ್ಲೂ ಕೂಡ ಕಾರ್ಯಕ್ರಮವು ಜರುಗಬಹುದು" ಎಂಬುದಾಗಿ. ಇದನ್ನು ಕೂಡ ಅನೇಕಸಭಿಕರು ನಿರೋಧಿಸಿದರು. ವಾದೋಪವಾದಗಳು ವಿಶೇಷವಾಗಿ ನಡೆದು, ಕಡೆಗೆ ಅಡ್ವೊಕೇಟ್ ಜನರಲ್ಲರ ತೀರ್ಮಾನವೇ ಅಂಗೀಕೃತವಾಯಿತು. ಇಂಗ್ಲೀಷಿನಲ್ಲೇ ಶಾಸನಸಭಾ ಪ್ರಸಂಗವು ನಡೆಯಬೇಕೆಂಬುದು ಸಿದ್ಧಾಂತವಾಯಿತು. ಇದು ದೇಶಭಾಷಾ ಪ್ರೇಮಿಗಳಿಗೆಲ್ಲಾ ವಿಷಾದಕರವಾಯಿತೆಂಬುದನ್ನು ಹೇಳಬೇಕಾಗಿಲ್ಲ. ವಸ್ತುಸ್ಥಿತಿಯನ್ನು ವಿಚಾರಮಾಡಿದರೆ ಹೀಗಾಗುವುದು ಸಹಜವೇ ಆಗಿರುತ್ತದೆ. ಏಕೆಂದರೆ—ಪ್ರಭುತ್ವದ ಮುಖ್ಯ ಸೂತ್ರಚಾಲಕರೂ ಶಾಸನಸಭಾಧ್ಯಕ್ಷರಾದ ಗೌರ್ನರುಗಳೂ ಆಂಗ್ಲರೇ ಆಗಿರುತ್ತಾರೆ. ಆ ಅಧಿಕಾರಾರೂಢರು ಆಗಾಗ್ಗೆ ಹೊಸಬರಾಗಿ ಈ ದೇಶಕ್ಕೆ ಬರುವವರಾದುದರಿಂದ ಅವರಿಗೆ ಇಲ್ಲಿಯ ದೇಶಭಾಷೆಗಳ ಪರಿಚಯವೇ ಇರುವುದಿಲ್ಲ. ಸ್ವಲ್ಪ ಕಾಲದೊಳಗೆ ಇಲ್ಲಿಯ ಅನೇಕಾನೇಕ ದೇಶಭಾಷೆಗಳ ಜ್ಞಾನವನ್ನು ಸಂಪಾದಿಸಿಕೊಳ್ಳುವುದೂ ಅವರಿಗೆ ಅಸಾಧ್ಯ. ಸಭೆಯ ಪ್ರಸಂಗಗಳೆಲ್ಲಾ ಸಭಾಧ್ಯಕ್ಷರಿಗೆ ತಿಳಿಯದಿದ್ದರೆ ಕಾರ್ಯವು ವ್ಯವಸ್ಥಿತವಾಗುವಹಾಗಿಲ್ಲ. ಆದುಕಾರಣ ಅವರಿಗೆ ಪರಿಚಿತವಾದ ಭಾಷೆಯಲ್ಲೇ ಕಾರ್ಯಕ್ರಮಗಳೆಲ್ಲಾ ಜರುಗಬೇಕಾಗಿರುತ್ತವೆ. ಅಡ್ವೋಕೇಟ್ ಜನರಲ್‌ರವರು ಹೇಳಿರುವ ಕಾರಣವೂ ಕೂಡ ನಿರಾಧಾರವಾಗಿರುವುದಿಲ್ಲ. ಆದುದರಿಂದ ಸದ್ಯಸ್ಥಿತಿಯಲ್ಲಿ ಇಂಥ ಪರಿಣಾಮವು ದೇಶಭಾಷಾಪ್ರಸಂಗ ವಿಷಯಕ್ಕೆ ಉಂಟಾದುದಕ್ಕಾಗಿ ಆಶ್ಚರ್ಯಪಡಬೇಕಾಗಿರುವುದಿಲ್ಲ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಸ್ವಾರಿಯು ಶ್ರಾವಣೆಗಾಗಿ ಕಳೆದ ಭಾನುವಾರ ರಾಜಧಾನಿಗೆ ಚಿತ್ತೈಸಿದ್ದು ಬುಧವಾರ ಹಿಂದಿರುಗಿ ಬೆಂಗಳೂರಿಗೆ ದಯಮಾಡಿಸಿತು.

ಶ್ರೀಮನ್ ಮಹಾನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಸ್ವಾರಿಯು ಸಕಲ ಮರ್ಯಾದೆಯೊಡನೆ ಈ ತಿಂಗಳು ತಾ|| ೨೦ ನೆಯ ಬುಧವಾರದ ದಿವಸ ಬೆಂಗಳೂರಿಂದ ಹೊರಟು ತಾ|| ೨೩ ನೆಯ ಶನಿವಾರದ ದಿವಸ ಬೌರಿಂಗ್ ಪೇಟೆಯನ್ನು ತಲುಪುವುದಾಗಿ ಗೊತ್ತಾಗಿರುವುದು.

ರಾಜಧಾನಿಯಲ್ಲಿ ಹಗಲೆಲ್ಲಾ ಬಿಸಿಲು ಕಾಯುತ್ತ ಸಾಯಂಕಾಲವಾದಕೂಡಲೇ ಹಿಮಬೀಳಲಿಕ್ಕಾರಂಭವಾಗಿರುತ್ತದೆ. ಇನ್‌ಫ್ಲೂಯಂಜಾ ರೋಗವು ಆರಂಭವಾಗಿರುವುದಾಗಿ ವರ್ತಮಾನವಿದೆ. ಮಳೆಯಿಲ್ಲದೆ ರಾಗಿಯಪೈರು ಒಣಗುವ ಸ್ಥಿತಿಗೆ ಬಂದಿರುತ್ತದೆ. ಕೂಡಲೇ ಮಳೆ ಬಾರದಿದ್ದಲ್ಲಿ ರಾಗಿಯ ಬೆಳಸು ಕೆಡುವ ಸಂಭವವಿದೆ. ಆದರೆ ನಿನ್ನೆಯದಿನ ಕೊಂಚಕೊಂಚವಾಗಿ ಮಳೆಯಾಗುತ್ತಿದ್ದಿತು.

ಶ್ರೀ ಶಾಕುಂತಲ ನಾಟಕಸಂಘದವರು ನಿನ್ನೆಯದಿನ ರಾತ್ರಿ ಟರ್ನ್‌ಹಾಲಿನಲ್ಲಿ ಮಂದಾರವಲ್ಲೀ ಪರಿಣಯವನ್ನು ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ತಕ್ಕಮಟ್ಟಿಗಿದ್ದಿತು. ಪಾತ್ರಗಳನ್ನು ವಹಿಸಿದ್ದವರಲ್ಲಿ ಕೆಲವರ ವಿನಾ ಉಳಿದವರೆಲ್ಲರೂ ತಂತಮ್ಮ ಪಾತ್ರವನ್ನು ಚೆನ್ನಾಗಿ ಅಭಿನಯಿಸಿದರು. ಸೀನರಿಗಳು ಪ್ರೇಕ್ಷಣೀಯವಾಗಿದ್ದುವು. ಆದರೆ ಈ ಸಂಘದವರು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಬೇಕಾದುದು ಅತ್ಯಾವಶ್ಯಕವಾಗಿದೆ.

ನಮ್ಮ ಸರ್ಕಾರದವರು ಆಯುರ್ವೇದ ಕಲಾಶಾಲೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಕೆಲವೇರ್ಪಾಟುಗಳನ್ನು ಮಾಡಿದ್ದಾರೆ. ಅದಕ್ಕಾಗಿ ಪ್ರತಿವರ್ಷವೂ ೩೮೦೩೫ ರೂ. ಗಳ ವೆಚ್ಚವು ಹಿಡಿಯುವುದು. ಈಗಳಾದರೊ ಈ ಕಲಾಶಾಲೆಗೆ ವರ್ಷ ೧ ಕ್ಕೆ ೮೯೨ ರೂ. ಗಳು ಮಾತ್ರವೇ ವೆಚ್ಚವಾಗುತ್ತಿವೆ. ಇನ್ನುಮೇಲೆ ಈ ಕಲಾಶಾಲೆಯಲ್ಲಿ ವೈದ್ಯದಲ್ಲಿ ಉನ್ನತವಿದ್ಯೆ ಸಾಮಾನ್ಯವಿದ್ಯೆ-ಇವೆರಡನ್ನೂ ಕಲಿಸುವರು. ಈ ಕಲಾಶಾಲೆಯ ಕಟ್ಟಡವನ್ನು ಮಾಡಿಸಲು ೭೦ ಸಾವಿರ ರೂ. ಗಳನ್ನು ಅಪ್ಪಣೆ ಮಾಡಿರುವರು. ಈ ಕಲಾಶಾಲೆಯ ಪ್ರಾರಂಭದ ವೆಚ್ಚಗಳಿಗಾಗಿ ೧೨೧೦೦ ರೂ. ಗಳನ್ನು ಅಪ್ಪಣೆಮಾಡಿರುವರು.

ಕೈಗಾರಿಕೆಯ ಡೈರೆಕ್ಟರವರಿಗೆ ಪರ್ಸನಲ್ ಅಸಿಸ್ಟೆಂಟರಾದ ಮ|| ಅನಂತ ಸುಬ್ರಹ್ಮಣ್ಯ ಅಯ್ಯರ್‌ರವರು ಈ ತಾ|| ೧೪ ರಲ್ಲಿ ಮೋಟಾರುಸೈಕಲ್ಲಿನಲ್ಲಿ ಕುಳಿತು ಬೆಂಗಳೂರು ಜೈಲ್ ರೋಡಿನಲ್ಲಿ ಬಹಳ ವೇಗವಾಗಿ ಹೋಗುತ್ತಿದ್ದುದರಿಂದ ಕಾವಲಿದ್ದ ಪೊಲೀಸು ಕಾನ್‌ಸ್ಟಬಲಿಗೆ ಸೈಕಲ್ಲು ತಾಕಿ ಅವನ ಎಡಗೈ ಮತ್ತು ಮೊಳಕಾಲಿಗೆ ಪೂರಾ ಪೆಟ್ಟು ಬೀಳಲು ಅಯ್ಯರ್‌ರವರು ಅವನನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ವಿಕ್ಟೋರಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಬಿಟ್ಟರು. ಸೈಕಲನ್ನು ಗೊತ್ತಾದ ವೇಗಕ್ಕಿಂತ ಹೆಚ್ಚಾಗಿ ನಡಿಸಿಕೊಂಡು ಹೋದುದಕ್ಕಾಗಿ ಮ|| ಅಯ್ಯರ್‌ರವರಮೇಲೆ ಪೊಲೀಸರು ಛಾರ್ಜ್‌ಮಾಡಿದ್ದಾರೆ. ಇದರ ಫಲಿತಾಂಶವೇನಾಗುತ್ತದೋ ನೋಡಬೇಕಾಗಿದೆ.

ರಾಜಧಾನಿಯ ಹಾರ್ಡಿಂಜ್ ಸರ್ಕಲ್ ಬಳಿಯಿರುವ ನಿಷತ್‌ಬಾಗ್ ಎಂಬ ಉದ್ಯಾನದಲ್ಲಿ ಪ್ರತಿ ಸೋಮವಾರ ಮತ್ತು ಬುಧವಾರ ಸಾಯಂಕಾಲಗಳಲ್ಲಿ ಹುಣ್ಣಿಮೆಯ ದಿವಸ ರಾತ್ರಿಯಲ್ಲೂ ಕರ್ನಾಟಕ, ಹಿಂದೂಸ್ಥಾನಿ ಆರ್ಕೆಸ್ಟ್ರಾ ಮತ್ತು ಇಂಗ್ಲೀಷ್ ಬ್ಯಾಂಡುಗಳು ಪುರನಿವಾಸಿಗಳ ವಿನೋದಾರ್ಥವಾಗಿ ನಡೆಯುವಂತೆ ಪ್ರಜಾರಂಜಕರಾದ ಶ್ರೀಮನ್ ಮಹಾರಾಜರವರಿಂದೇರ್ಪಡಿಸಲ್ಪಟ್ಟಿರುವುದು ಸರಿಯಷ್ಟೆ. ಈಗ ಪ್ರಭುಗಳ ಸ್ವಾರಿಯು ಬೆಂಗಳೂರಿಗೆ ಚಿತ್ತೈಸಿರುವುದರಿಂದ ಸದ್ಯದಲ್ಲಿ ಕರ್ನಾಟಕಬ್ಯಾಂಡ್ ಮಾತ್ರ ಪ್ರತಿ ಸೋಮವಾರ ಸಾಯಂಕಾಲ ೬ ರಿಂದ ೭ ಗಂಟೆಯವರೆಗೆ ನಡೆಯುವುದಾಗಿ ಏರ್ಪಟ್ಟಿರುವುದಲ್ಲದೆ ಈ ದಿವಸ ಸಾಯಂಕಾಲ ಬೆಂಗಳೂರು ಲಾಲ್‌ಬಾಗಿನಲ್ಲಿ ಹಿಂದೂಸ್ಥಾನಿ ಆರ್ಕೆಸ್ಟ್ರಾ ಬ್ಯಾಂಡು ನಡೆಯುವುದಾಗಿರುವುದು. ಇದರಿಂದ ಬೆಂಗಳೂರು ನಿವಾಸಿಗಳೂ ಶ್ರವಣಾನಂದವನ್ನನುಭವಿಸಲು ಅವಕಾಶವುಂಟಾದಂತಾಯಿತು.

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಟಾಟಾ ಶಾಸ್ತ್ರೀಯ ಪರಿಶೋಧನಾಲಯದ ೧೯೧೮-೧೯ ನೆ ವರ್ಷಕ್ಕೆ ಸಂಬಂಧಪಟ್ಟ ವರದಿಯು ಪ್ರಕಟಿತವಾಗಿದೆ. ಪರಿಶ್ರಮಾಭ್ಯುದಯಕ್ಕಾಗಿ ಅಲ್ಲಿ ನಡೆದಿರುವ ಪರಿಶೋಧನೆಗಳೆಲ್ಲಾ ಅದರಲ್ಲಿ ವರ್ಣಿಸಲ್ಪಟ್ಟಿವೆ. ಈಗ್ಗೆ ೧೦೦ ವರ್ಷಗಳಲ್ಲಿ ಮುದ್ರಿತವಾಗಿರುವ ಪುಸ್ತಕಗಳ ಕಾಗದಗಳು ಕೆಟ್ಟುಹೋಗುತ್ತಿರುವುದಕ್ಕೆ ಕಾರಣವೇನೆಂಬುದನ್ನು ಶೋಧಿಸಿ, ಹಳೆ ಚಿಂದಿಬಟ್ಟೆಗಳಿಂದ ಮಾಡಿದ ಕಾಗದಗಳು ಹಾಗಾಗುವುವೆಂದು ನಿರ್ಣಯಿಸಿದರು. ಇದನ್ನು ಕೆಲರು ಒಪ್ಪುವುದಿಲ್ಲ. ಕೆಲವು ತೆರದ ಎಣ್ಣೆಗಳು ಗ್ಲಿಸರೈನು ಇವುಗಳ ನಿರ್ಮಾಣದ ಪರಿಶೋಧನೆಗಳು ಜರುಗಿದುವು. ರಂಗುಗಳ ನಿರ್ಮಾಣವನ್ನೂ ಹಿಪ್ಪೆ ಹೂವಿನಿಂದ ತೈಲವನ್ನೆಳೆಸುವುದೂ ಅದರ ಉಪಯೋಗ, ವಾರ್ನೀಸಿನ ನಿರ್ಮಾಣ, ನೀರನ್ನು ಪರಿಶುಭ್ರಮಾಡುವ ರೀತಿ, ವಿಮಾನಗಳನ್ನು ಕಟ್ಟುವುದಕ್ಕೆ ನಮ್ಮ ದೇಶದ ಯಾವ ಯಾವ ಜಾತಿಯ ಮರಗಳು ಉಪಯೋಗಿಸುವುವು—ಇತ್ಯಾದಿ ಪರಿಶೋಧನೆಗಳು ಜರುಗಿರುವುವು. ಕಳೆದ ವರ್ಷ ಈ ಪರಿಶೋಧನಾಲಯ ಸಂಘಕ್ಕೆ ಆ|| ಬ್ರಿಟಿಷ್ ರೆಸಿಡೆಂಟ್ ಹೆಚ್. ವಿ. ಕಾಬ್‌ರವರು ಅಧ್ಯಕ್ಷರಾಗಿದ್ದರು. ಪುಸ್ತಕಗಳನ್ನಿಡುವುದಕ್ಕಾಗಿ ಕಟ್ಟಲ್ಪಡುತ್ತಿದ್ದ ಕಟ್ಟಡವು ಮುಗಿದಿತು. ಜೆ. ಎನ್. ಟಾಟಾರವರ ಶಿಲಾವಿಗ್ರಹದ ಕೆಲ ಭಾಗಗಳು ಬಂದಿವೆ. ಪೂರ್ತಿಯಾಗಿ ಬಂದನಂತರ ಪ್ರತಿಷ್ಠಿಸಲ್ಪಡುವುದು.

ಕಳೆದ ಮಂಗಳವಾರ ತಿ|| ನರಸಿಮ್ಮಪುರದ ಬಳಿಯಲ್ಲಿ ಕಪಿಲಾನದಿಯಲ್ಲಿ ಒಂದು ಭೀಕರವಾದ ಅಪಾಯವು ಸಂಭವಿಸಿತು. ನಂಜನಗೂಡಿಗೆ ಯಾತ್ರೆಗಾಗಿ ಬಂದಿದ್ದ ಕೆಲ ವೈಶ್ಯಜನರು ತಿ|| ನರಸಿಮ್ಮಪುರದಿಂದ ತಿರುಮಕೂಡಲಿಗೆ ಅಗಸ್ತ್ಯೇಶ್ವರ ದರ್ಶನಕ್ಕಾಗಿ ಹೋಗಲು ದೋಣಿಯಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದರು. ದೋಣಿಯು ದಡಕ್ಕೆ ಸೇರುವಷ್ಟರಲ್ಲಿ ಅದು ಹೇಗೋ ಮಗುಚಿಹೋಯಿತು. ಒಳಗೆ ೩೦ ಮಂದಿಯವರೆಗೂ ಕುಳಿತಿದ್ದರಂತೆ. ಅವರಲ್ಲಿ ೧೭ ಮಂದಿಗಳ ಶವಗಳು ದೊರೆದುವು. ಕೆಲವರುಬದುಕಿಬಂದರು. ದೋಣಿಯನ್ನು ನಡೆಯಿಸುತ್ತಿದ್ದವನು ಈಜಿಕೊಂಡು ಬರುತ್ತಿರುವಾಗ ಪ್ರಾಣಭೀತಿಯಿಂದ ಇತರರು ಅವನನ್ನು ತಬ್ಬಿಕೊಳ್ಳಲಾಗಿ ಅವನೂ ಮುಳುಗಿಹೋದನು. ಮಕ್ಕಳನ್ನು ಎತ್ತಿದ್ದವರು ಹಾಗೆಹಾಗೆಯೇ ಗತಪ್ರಾಣರಾಗಿ ಇಟ್ಟತೊಟ್ಟ ಆಭರಣ ವಸ್ತ್ರಾದಿಗಳ ಸಮೇತ ದಡದಮೇಲೆ ಸೆಳೆದುಹಾಕಿ ಮಲಗಿಸಲ್ಪಟ್ಟಿದ್ದುದನ್ನು ಊರಿನವರೆಲ್ಲಾ ನೋಡಿ ಕಣ್ಣೀರನ್ನು ಪ್ರವಾಹರೂಪವಾಗಿ ಸುರಿಸಿದರು. ಇನ್ನೂ ಒಂದೆರಡು ಹೆಣಗಳು ಸಿಕ್ಕಿಲ್ಲನೆಂಬ ವಾರ್ತೆಯಿದೆ. ದೋಣಿ ಮುಳುಗಿದುದಕ್ಕೆ ಬೇರೆಬೇರೆ ಕಾರಣಗಳನ್ನು ಹೇಳುತ್ತಿದ್ದಾರೆ. ಒಂದು ದೋಣಿಯಲ್ಲಿ ತೂತುಬಿದ್ದು ನೀರು ತುಂಬುತ್ತಿದ್ದುದನ್ನು ಕಂಡು ಪ್ರಯಾಣಿಕರೆಲ್ಲಾ ಮಗ್ಗುಲಿನ ಬೇರೊಂದು ದೋಣಿಗೆ ಹೋಗಿ ಸೇರಿಬಿಟ್ಟುದರಿಂದ ಭಾರವು ಹೆಚ್ಚಾಗಿ ಮಗುಚಿತೆಂತಲೂ, ಹೊಳೆಯೊಳಗೆ ಮುರಿದು ಬಿದ್ದುಹೋಗಿದ್ದ ಒಂದು ಮರಕ್ಕೆ ದೋಣಿಯು ಬಡಿದುದರಿಂದ ಮಗುಚಿತೆಂತಲೂ ಹೇಳಿಕೊಳ್ಳುತ್ತಾರೆ. ಅಂತೂ ನಡೆದ ಅಪಾಯವು ಬಹಳ ಹೃದಯಭೇದಕವಾಗಿದ್ದಿತು. ಮೈಸೂರಿಂದ ಪೊಲೀಸಧಿಕಾರಿಗಳೇ ಮೊದಲಾದವರು ಹೋಗಿ ವಿಚಾರಣೆಮಾಡಿಕೊಂಡು ಬಂದರು. ಇಂಥ ಮುಖ್ಯಸ್ಥಳದಲ್ಲಿ ಸರ್ಕಾರದವರು ಸೇತುವನ್ನು ಕಟ್ಟಿಸದಿರುವುದರಿಂದ ಇಂಥ ಅನರ್ಥವು ಸಂಭವಿಸುವುದಕ್ಕವಕಾಶವಿರುವುದು.

ಭರತಖಂಡದ ವೃತ್ತಾಂತಗಳು.

ಕ್ಷಾಮಪೀಡಿತರಾದ ಜನರ ಉಪಯೋಗಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಕ್ಷಾಮದ ನಿಧಿಯಿಂದ ಉಪಯೋಗಿಸಿ, ಅವರುಗಳಿಗೆ ಬಟ್ಟೆಬರೆಗಳನ್ನು ತೆಗೆದುಕೊಡತಕ್ಕುದೆಂದು ಮಧ್ಯಪ್ರಾಂತದ ಸರ್ಕಾರದವರು ಅಪ್ಪಣೆಮಾಡಿ ಆ ದುರದೃಷ್ಟ ರಿಕ್ತಜನರಿಗೆ ತುಂಬಾ ಉಪಕಾರಮಾಡಿದರು.

ಬೊಂಬಾಯಿಂದ ಜಪಾನಿನ ಯೋಕಾಹಾಮಾ ಪಟ್ಟಣಕ್ಕೆ ಹೋಗುತ್ತಿದ್ದ ನಾಗನಾಮಾರ್ ಎಂಬ ಹಡಗಿನಲ್ಲಿದ್ದ ಪ್ರಯಾಣಿಕರಲ್ಲಿ ಇಬ್ಬರು ಜಪಾನರಲ್ಲಿ ಒಬ್ಬನು ಪ್ಲೇಗುತಗುಲಿ ಸತ್ತನು. ಆ ಹಡಗನ್ನು ಪ್ರತ್ಯೇಕಿಸಿ ಪರೀಕ್ಷೆಮಾಡಲಾಗಿ ಅದರೊಳಗೆ ಸತ್ತುಬಿದ್ದಿದ್ದ ಇಲಿಗಳು ಬಹಳ ಸಿಕ್ಕಿದುವು. ಅವುಗಳಲ್ಲಿ ಪ್ಲೇಗು ಕ್ರಿಮಿಗಳಿದ್ದುವೆಂದು ವೈದ್ಯರು ಕಂಡುಹಿಡಿದರೆಂಬುದಾಗಿ ಜಪಾನ್ ಪತ್ರಿಕೆಗಳು ಬರೆದಿವೆ

ಪಂಜಾಬಿನ ಹಾವಳಿಯ ಸಂಬಂಧದಲ್ಲಿ ಅಪರಾಧಿಗಳ ವಿಚಾರಣೆಗಾಗಿ ಪ್ರತ್ಯೇಕವಾದ ಸೈನಿಕ ನ್ಯಾಯವಿಚಾರಣ ಸಂಘವನ್ನು ಸ್ಥಾಪಿಸಿದ್ದರಷ್ಟೆ. ಅವರು ಇದುವರೆಗೆ ೧೧೪ ಕೇಸುಗಳಲ್ಲಿ ೮೫೨ ಮಂದಿಯನ್ನು ವಿಚಾರಿಸಿದರು. ೫೮೧ ಮಂದಿಯನ್ನು ಶಿಕ್ಷಿಸಿದರು. ೨೭೧ ಮಂದಿಯನ್ನು ಬಿಡುಗಡೆ ಮಾಡಿದರು. ಪ್ರಭುಗಳಮೇಲೆ ಯುದ್ಧಪ್ರಯತ್ನ ಮಾಡಿದರೆಂಬ ತಪ್ಪಿತದಿಂದ ೩೧೫ ಮಂದಿಗಳು ಶಿಕ್ಷಿತರಾದರು.

ಕಾಶೀಮಹಾರಾಜರ ಸಂಸ್ಥಾನಕ್ಕೆ ರಾಮನಗರವೆಂಬ ಗ್ರಾಮವನ್ನೂ ಕೂಡ ಸೇರಿಸಿಕೊಡಲು ಆಂಗ್ಲಪ್ರಭುತ್ವದವರು ಒಪ್ಪಿದರು. ಅದನ್ನು ಸಂಯುಕ್ತಪ್ರಾಂತದ ಲೆ|| ಗೌರ್ನರಾದ ಸರ್ ಹಾರ್ಕೋರ್ಟ್ ಬಟ್ಲರ್‌ರವರು ಕಳೆದ ತಿಂಗಳು ತಾ|| ೩೦ ರಲ್ಲಿ ಕೂಡಿದ್ದ ಮಹಾಸಭೆಯಲ್ಲಿ ತಿಳಿಯಪಡಿಸಿದುದಲ್ಲದೆ, ಕಳೆದ ೮ ವರ್ಷಗಳಿಂದಲೂ ಆ ಮಹಾರಾಜರು ಪ್ರಜಾರಂಜಕವಾಗಿ ರಾಜ್ಯಪರಿಪಾಲನೆ ಮಾಡಿದುದನ್ನು ಗೌರ್ನಮೆಂಟಿನವರು ಮೆಚ್ಚಿದುದರಿಂದ ಕಾಶೀಸಂಸ್ಥಾನಾಧಿಪತಿಗಳು ಇನ್ನು ಮುಂದೆ ವಂಶಪಾರಂಪರ್ಯವಾಗಿ ಮಹಾರಾಜಾ ಬಹದೂರ್ ಎಂಬ ಬಿರುದನ್ನು ಉಪಯೋಗಿಸಿಕೊಳ್ಳಬಹುದೆಂದು ಅಪ್ಪಣೆಮಾಡಿರುವುದನ್ನು ಕೂಡ ತಿಳಿಸಿದರು.

ಸಂಧಿ ಜರುಗಿದ ಗೌರವಾರ್ಥವಾಗಿ ಸರ್ ಹಾಮಿಲ್ಟನ್ ಗ್ರಾಂಟ್‌ರವರೂ ಅವರ ಪತ್ನಿಯೂ ಸಹ ಅಫ್ಘನ್ ರಾಯಭಾರಿಗಳಿಗೆ ಕಳೆದ ತಾ|| ೯ ರಲ್ಲಿ ರಾವಲ್ಪಿಂಡಿಯೊಳಗೆ ಒಂದು ಔತಣವನ್ನು ಮಾಡಿಸಿದರು. ಸಂಧಿಯು ಕುದುರಿದುದಕ್ಕಾಗಿ ಅಫ್ಘನ್ ರಾಯಭಾರಿ ನಾಯಕರಾದ ಸರ್ದಾರ್ ಅಲಿ ಅಹಮ್ಮದ್ ಖಾನರು ಸಂತೋಷವನ್ನು ವ್ಯಕ್ತಪಡಿಸಿ ಉಪನ್ಯಾಸಮಾಡಿದರು. ತಾ|| ೧೦ ರಲ್ಲಿ ಅವರೆಲ್ಲಾ ಕಾಬೂಲಿನಕಡೆಗೆ ಪ್ರಯಾಣಮಾಡಿ ಪೆಷಾವರಿಗೆ ತೆರಳಿದರು. ತಾ|| ೧೧ ರಲ್ಲಿ ಪ್ರತ್ಯೇಕವಾದ ಹೊಗೆಬಂಡಿಯಮೇಲೆ ಡಕ್ಕಾಕ್ಕೆ ಪ್ರಯಾಣಮಾಡಿದರು. ಅಲ್ಲಿಯವರೆಗೂ ಅವರ ಜತೆಯಲ್ಲಿ ಇಂಡ್ಯಾ ಸರ್ಕಾರದ ಪಕ್ಷದಿಂದ ಮಿ|| ಕನಿಂಗ್ಹಾಂರವರು ಹೋಗಿದ್ದು ಸಾಗಕಳುಹಿಸಿ ಬಂದರು.

ವಿದೇಶ ವಿಷಯಗಳು.

ನಮ್ಮ ಸಾರ್ವಭೌಮರು ಮುಖ್ಯಮಂತ್ರಿ ಲಾಯಿಡ್‌ಜಾರ್ಜ್‌ರವರಿಗೆ ಆರ್ಡರ್ ಆಫ್ ಮೆರಿಟ್ ಎಂಬ ಘನತರವಾದ ಬಿರುದನ್ನು ದಯಪಾಲಿಸಿದರು.

ಫ್ರೆಂಚರು ತಮ್ಮ ಸೈನಿಕರನ್ನೆಲ್ಲಾ ಬಲುಬೇಗನೆ ಕಡಿಮೆ ಹಾಕುತ್ತಿದ್ದಾರೆ. ಫ್ರಾನ್ಸಿನ ರಕ್ಷಣೆಗೆ ೩ ಲಕ್ಷ ಸೈನ್ಯವನ್ನು ಮಾತ್ರ ಶಾಶ್ವತವಾಗಿಟ್ಟುಕೊಂಡು ಉಳಿದುದನ್ನೆಲ್ಲಾ ಅಕ್ಟೋಬರ್ ತಾ|| ೪ ರೊಳಗಾಗಿ ತೆಗೆದುಬಿಡುವರು.

ಹಂಗೇರೀದೇಶದಲ್ಲಿ ಬೋಲ್ಷೆವಿಕ್ ಪ್ರಾಬಲ್ಯವು ತಪ್ಪಿ ಜಾತೀಯ ನೂತನಪ್ರಜಾಪ್ರಭುತ್ವವು ಸ್ಥಾಪಿತವಾಯಿತು. ಈ ಪ್ರಭುತ್ವದವರು ಮಿತ್ರಮಂಡಲೀ ಸಹಾಯವನ್ನಂಗೀಕರಿಸಿರುವರು. ನೂತನ ಮಂತ್ರಿಮಂಡಲವು ಸ್ಥಾಪಿತವಾಯಿತು. ಅಲ್ಲಿಯ ಬೋಲ್ಷೆವಿಕ್ ವಿಪ್ಲವವನ್ನಡಗಿಸುವುದಕ್ಕಾಗಿ ಯುದ್ಧಮಂತ್ರಿಯು ಸೈನಿಕಶಾಸನವನ್ನು ಪ್ರಕಟಿಸಿರುವನು.

ಅಮೇರಿಕಾದ ಚಿಕಾಗೋಪಟ್ಟಣದಲ್ಲಿ ಕಪ್ಪುಜನರೂ ಕೆಂಪುಜನರೂ ಪರಸ್ಪರ ಬಡಿದಾಡದಂತೆ ಕಾವಲುಮಾಡುವುದಕ್ಕಾಗಿ ಸರ್ಕಾರದವರು ಕೆಲವು ಸೈನ್ಯವನ್ನು ಇಟ್ಟರಷ್ಟೆ. ಇದನ್ನು ತೆಗೆದುಬಿಡದಿದ್ದರೆ ನಾವು ಮುಷ್ಕರಹಿಡಿದು ಉದ್ಯೋಗವನ್ನು ಬಿಟ್ಟುಬಿಡುತ್ತೇವೆಂದು ೧ ಲಕ್ಷ ಮಂದಿ ಬಿಳೀಜನರು ಬೆದರಿಸಿದ್ದಾರಂತೆ. ಸೇನಾಸಂರಕ್ಷಣೆಯ ಕೆಳಗೆ ೩ ಸಾವಿರ ಮಂದಿ ನೀಗ್ರೋಜನರು ಕೆಲಸಮಾಡಲಾರಂಭಿಸಿದುದರಿಂದ, ಅಲ್ಲಿದ್ದ ನೂರಾರು ಮಂದಿ ಕೆಂಪುಜನರು ಕೆಲಸವನ್ನು ಬಿಟ್ಟು ಹೋಗುತ್ತಿದ್ದಾರೆ. ದಿನದಿನಕ್ಕೆ ಕೆಂಪುಜನರು ಕೆಲಸಗಳನ್ನು ಬಿಟ್ಟು ಹಠತೊಟ್ಟು ನಿಲ್ಲುವುದು ಹೆಚ್ಚುತ್ತಿದೆ.

ರುಮೇನಿಯಾದಲ್ಲಿ ಹಿಂದಣ ಪ್ರಭುತ್ವವು ಮಿತ್ರಮಂಡಲಿಗೆ ವಿರುದ್ಧವಾದ ಪ್ರವರ್ತನವನ್ನು ತೋರಿಸಿತು. ಅದನ್ನು ಅಲ್ಲಿನ ಅನೇಕ ಪ್ರಜೆಗಳು ಒಪ್ಪಲಿಲ್ಲ. ಈಗ ನೂತನ ಜಾತೀಯಪ್ರಭುತ್ವವು ಸ್ಥಾಪಿತವಾಗಿದೆ. ರುಮೇನಿಯಾ ಸೈನಿಕರು ಡಾನ್ಯೂಬ್ ನದಿಯನ್ನು ದಾಟಿ ಬುಡಾಪೆಸ್ಟ್ ಪಟ್ಟಣವನ್ನು ಆಕ್ರಮಿಸಿಕೊಂಡಿರುವರು. ಹಂಗೇರಿಯವರೊಡನೆ ರುಮೇನಿಯನ್ನರು ಪ್ರತ್ಯೇಕ ಸಂಧಿಯನ್ನು ಜರುಗಿಸಲು ಯತ್ನಿಸಿದರು. ರುಮೇನಿಯಾದವರು ತೋರಿಸಿದ ಪ್ರವರ್ತನವು ಅಮೇರಿಕನ್ನರಿಗೆ ರೋಷವನ್ನು ಹುಟ್ಟಿಸಿದೆ. ಅವರು ಸಂಧಿನಿಬಂಧನೆಗಳಿಗನುಸಾರವಾಗಿ ನಡೆದುಕೊಳ್ಳದಿದ್ದರೆ ಅವರಿಗೆ ಕಳುಹಿಸಿಕೊಡುತ್ತಿದ್ದ ಆಹಾರ್ಯಪದಾರ್ಥಗಳನ್ನು ಕಳುಹಿಸಿಕೊಡುವುದಿಲ್ಲವೆಂದು ಬರೆದುತಿಳಿಸಿ ಹೆದರಿಸಿರುವರು.

ಅಮೇರಿಕಾದ ಕೋಟೀಶ್ವರರಲ್ಲಿ ಮುಖ್ಯಗಣ್ಯರಾಗಿ ಪ್ರಜೆಗಳ ವಿದ್ಯಾಭಿವೃದ್ಧಿ ಆರೋಗ್ಯಾಭಿವೃದ್ಧಿ ಮೊದಲಾದುವುಗಳಿಗೆ ಕೋಟಿಗಟ್ಟಲೆ ದಾನಮಾಡಿ ಜಗದ್ವಿಖ್ಯಾತರಾಗಿದ್ದ ಕಾರ್ನಿಗಿಯವರು ಸ್ವರ್ಗಸ್ಥರಾದರೆಂದು ಆಗಸ್ಟ್ ತಾ|| ೧೧ ರ ತಂತ್ರೀವಾರ್ತೆಯಿಂದ ಗೊತ್ತಾಗುತ್ತದೆ. ೧೯೧೮ ನೆ ವರ್ಷದ ಜುಲೈ ತಿಂಗಳವರೆಗೆ ಇವರು ಮಾಡಿದ್ದ ದಾನದ ಲೆಕ್ಕವು ೭ ಕೋಟಿ ಪೌನುಗಳಾಗಿದ್ದುವು. ಇವರ ಜೀವಿತಚರಿತ್ರವು ಲೋಕಾದ್ಭುತಕರವು. ಇವರ ತಂದೆಯು ನೆಯ್ಗೆ ಕಸುಬಿನವನು. ಈ ಕಾರ್ನಿಗಿಯವರು ಮೊಟ್ಟಮೊದಲು ಹತ್ತಿಯ ಯಂತ್ರಾಲಯದಲ್ಲಿ ಕೆಲಸಕ್ಕೆ ಸೇರಿದರು. ಬಳಿಕ ಟೇಲಿಗ್ರಾಂ ಆಫೀಸಿನಲ್ಲಿ ತಂತ್ರೀವಾರ್ತೆಯನ್ನು ಹಂಚುವ ಕೆಲಸಕ್ಕೆ ಸೇರಿ, ಅನಂತರ ರೈಲ್ವೆ ಟೇಲಿಗ್ರಾಫ್ ಶಾಖೆಯಲ್ಲಿ ಗುಮಾಸ್ತೆಯಾಗಿ ಸೇರಿದ್ದು ಕಡೆಗೆ ಸೀಮೆಯೆಣ್ಣೆಗಣಿಗಳ ವ್ಯಾಪಾರವನ್ನು ನಡೆಯಿಸುವುದಕ್ಕೆ ಉಜ್ಜುಗಿಸಲಾಗಿ ಅದರಲ್ಲಿ ಅದೃಷ್ಟವು ಚೆನ್ನಾಗಿ ಕುದಿರಿ, ಕೈಯ್ಯಲ್ಲಿ ಹಿಡಿದುದೆಲ್ಲಾ ಚಿನ್ನವಾಗುವುದಕ್ಕುಪಕ್ರಮಿಸಿತು. ಬರುಬರುತ್ತ ಅದರಲ್ಲಿ ವಿಪರೀತ ಲಾಭವಾಗಿ ಅನೇಕ ಮುಖದಲ್ಲಿ ವರಮಾನಗಳು ಲಭಿಸಿ, ದಿನ ೧ ಕ್ಕೆ ೫ ಸಾವಿರ ಪೌನುಗಳು ಎಂದರೆ ೭೫ ಸಾವಿರ ರೂ. ಗಳಂತೆ ವರಮಾನ ಬರಲಾರಂಭಿಸಿತು. ವರಮಾನವು ಹೆಚ್ಚುತ್ತ ಬಂದಂತೆಲ್ಲಾ ಈ ಮಹನೀಯರು ಅಮೇರಿಕಾದಲ್ಲೂ ಇಂಗ್ಲೆಂಡ್ ದೇಶದಲ್ಲೂ ಉಚಿತ ವಾಚನಾಲಯಗಳನ್ನೂ ಗ್ರಂಥಭಾಂಡಾರಗಳನ್ನೂ ಸ್ಥಾಪಿಸಲು ಕೋಟ್ಯಂತರ ರೂ. ಗಳನ್ನು ಧರ್ಮಮಾಡಿದರು. ಅಂತ್ಯಕಾಲಕ್ಕೆ ಇವರ ವಯಸ್ಸು ೮೨ ಆಗಿದ್ದಿತು. ಅಮೇರಿಕಾದ ಕುಬೇರರಲ್ಲೆಲ್ಲಾ ಇವರು ೨ ನೆಯವರಾಗಿದ್ದರು.

ಸಿಟಿ ಕೋ ಆಪರೇಟಿವ್ ಬ್ಯಾಂಕ್ (ಲಿಮಿಟೆಡ್) ಮೈಸೂರು.

ಬೇಕಾಗಿದೆ.

ಮೈಸೂರಿನಲ್ಲಿರುವ ಸಿಟಿ ಕೋ ಆಪರೇಟಿವ್ ಬ್ಯಾಂಕಿಗೆ—

ಒಬ್ಬರು ಫುಲ್‌ಟೈಂ ಸೆಕ್ರೆಟರಿ 50 ರೂ. ಇಂದ 100 ರೂ. ವರೆಗೆ ಸಂಬಳ
ಒಬ್ಬರು ಮ್ಯಾನೇಜರು 30 ,, ,, 50 ,, ,,
ಒಬ್ಬರು ಕ್ಯಾಷಿಯರ್ ಅಕೌಂಟೆಂಟ್ } 25 ,, ,, 40 ,, ,,

ಉಮೇದುವಾರರು ಮೈಸೂರು ದೇಶದವರಾಗಿಯೂ, ಕನ್ನಡ ಇಂಗ್ಲೀಷ್ ಮತ್ತು ಲೆಖ್ಖಾಚಾರಗಳನ್ನು ಚೆನ್ನಾಗಿ ಬಲ್ಲವರಾಗಿಯೂ ಇರಬೇಕಲ್ಲದೆ ಸೆಕ್ರೆಟರಿ ಕೆಲಸಕ್ಕೆ ಮಾತ್ರ S. S. L. C. ಪರೀಕ್ಷೆಯನ್ನಾಗಲೀ ಅಥವಾ ಅದಕ್ಕೆ ಸಮನಾದ ಇನ್ಯಾವ ಪರೀಕ್ಷೆಯನ್ನಾಗಲಿ ತೇರ್ಗಿರಬೇಕು. ಮತ್ತು ಸರಿಯಾದ ಸೆಕ್ಯೂರಟಿಗಳನ್ನು ಕೊಡಲೂ ಸಿದ್ಧರಾಗಿರಬೇಕು. ಅಪ್ಲಿಕೇಷನ್‌ಗಳು ಸದರಿ ಬ್ಯಾಂಕು ಸೆಕ್ರೆಟರಿಯವರಿಗೆ ಬರುವ ಸೆಪ್ಟೆಂಬರ್ ೩ನೇ ತಾರೀಖಿನೊಳಗಾಗಿ ತಲುಪತಕ್ಕದ್ದು.

ಸೂಚನೆ:—ಪ್ರಾರಂಭದಲ್ಲಿ ಸಂಬಳ ಯೋಗ್ಯತಾನುಸಾರವಾಗಿ ಏರ್ಪಡಿಸಲ್ಪಡುವುದು.

B. NARASIMHAIENGAR,
ಆನರರಿ ಸೆಕ್ರೆಟರಿ.

೩

ಪತ್ರವ್ಯವಹಾರ.

(ಶ್ರೀ ಕೇದಾರ ನಾಥಜಿ).

ಶ್ರೀ ಹಿಮವತ್ ಕೇದಾರ ಏಕೋರಾಮಾರಾಧ್ಯ ಜಗದ್ಗುರು ಶ್ರೀ ಶ್ರೀ ಶ್ರೀ ವಿಶ್ವಲಿಂಗ ರಾವಲೋಪನಾಮ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಯಿಂದ— ಸಮಸ್ತ ವೀರಶೈವ ಜನರಿಗೆ.

ಏಳಿರಿ! ಜಾಗ್ರತರಾಗಿರಿ!! ನಿಮ್ಮ ಗುರುಪೀಠವನ್ನುಳಿಸಿಕೊಳ್ಳಿರಿ!!! ಭಾರತವರ್ಷದಲ್ಲಿ ಸರ್ವಶ್ರೇಷ್ಠ ಶ್ರೀ ಹಿಮಾಲಯ ಪರ್ವತವಿದೆ. ಅದರಲ್ಲಿ ಶ್ರೀ ಕೇದಾರನಾಥಸ್ವಾಮಿ ವಿರಾಜಮಾನನಾಗಿದ್ದಾನೆ. ಆತನ ಪವಿತ್ರ ದರ್ಶನಕ್ಕಾಗಿ ನಾಲ್ಕು ವರ್ಣದ ಜನರು ಇಂಡಿಯಾ, ಸಿಲೋನ, ಟಿಬೇಟ, ಭೂತಾನ, ಕಾಶ್ಮೀರ ವಗೈರೆ ದೇಶಗಳಿಂದ ಲಕ್ಷಾವಧಿ ರೂಪಾಯಿ ಖರ್ಚುಮಾಡಿ ಅನೇಕ ಶ್ರಮಗಳನ್ನು ಪಟ್ಟು ಇಲ್ಲಿ ಬರುತ್ತಲೇ ಇದ್ದಾರೆ. ಶ್ರೀ ಕೇದಾರನಾಥಜಿಯ ಪೂಜಾ ವಗೈರೆ ಸರ್ವ ವ್ಯವಸ್ಥೆಯ ಅಧಿಕಾರವು ಮೇಲ್ಕಂಡ ಮಹಾ|| ಸನ್ನಿಧಿಯವರ ವಶದಲ್ಲಿ ಉಂಟು. ಇವಲ್ಲದೆ ಇನ್ನೂ ೨೩ ಮಠಗಳ ವ್ಯವಸ್ಥೆಯ ಅಧಿಕಾರವೂ ಇವರ ವಶದಲ್ಲಿ ಉಂಟು. ತುಂಗನಾಥ, ರುದ್ರನಾಥ, ಕಲ್ಪೇಶ್ವರ, ತ್ರಿಯುಗಿ ನಾರಾಯಣ, ಕಾಲೀಮಠ, ಗೌರೀಕುಂಡ, ಮಧ್ಯಮಹೇಶ್ವರ, ಗುಪ್ತವಾರಾಣಸೀ ಇತ್ಯಾದಿಮಠಗಳು. ಈ ಮಹಾಪೀಠದ ಸ್ಥಾವರ ಆಸ್ತಿಯಮೇಲಣ ಉತ್ಪನ್ನ ದರ ವರ್ಷ ೬-೭ ಸಾವಿರ ರೂಪಾಯಿ ಮತ್ತು ಜಂಗಮ ಆಸ್ತಿಯ ಉತ್ಪನ್ನ ಜಾತ್ರೆಯ ಜನರು ನಡೆದ ಹಾಗೆ ೬-೭ ಸಾವಿರದಿಂದ ಹತ್ತು ಹನ್ನೆರಡು ಸಾವಿರ ರೂಪಾಯಿಗಳ ವರೆಗೆ ಇರುತ್ತದೆ. ಈ ಪ್ರಾಂತದಲ್ಲಿ ೪-೬ ವರ್ಷಗಳಿಂದ ದುಷ್ಕಾಲ ಬಿದ್ದದ್ದರಿಂದಲೂ ಮತ್ತು ಜಾತ್ರೆಯ ಜನರು ಬಾರದ್ದರಿಂದಲೂ ಸಮಸ್ತ ಮಂದಿರಗಳ ರಿಪೇರಿ ಮಾಡಿಸಿದ್ದರಿಂದಲೂ ಇನ್ನೂ ಹಲವು ಕಾರಣಗಳಿಂದ ಈ ಪೀಠಕ್ಕೆ ಈಗ ೭೫ ಎಪ್ಪತ್ತೈದು ಸಾವಿರ ರೂಪಾಯಿ ಸಾಲವಾಗಿದೆ. ಆ ಕಾರಣದಿಂದ ಇಲ್ಲಿಯ ಘರವಾಲ ಜಿಲ್ಲೆಯ ಡಿಪ್ಯೂಟಿ ಕಮಿಶನರ ಇವರಿಂದ ಒಬ್ಬ ಮ್ಯಾನೇಜರನು ಇಲ್ಲಿಗೆ ಬಂದಿದ್ದಾನೆ. ಅವನು ಎಲ್ಲಾ ವ್ಯವಸ್ಥೆ ನಡೆಸಿದ್ದಾನೆ. ಈಗ ಸಾಲವನ್ನು ತೀರಿಸಿ ಮಠವನ್ನು ಉಳಿಸಿಕೊಳ್ಳದಿದ್ದರೆ ಸರ್ವಾಧಿಕಾರವೂ ವೀರಶೈವರ ಕೈತಪ್ಪಿ ಪರರ ಪಾಲಾಗುತ್ತದೆ. ನೋಡಿರಿ, ಮತ್ತು ವಿಚಾರಮಾಡಿರಿ. ಶ್ರೀ ಕಾಶೀಕ್ಷೇತ್ರದಲ್ಲಿ ವಿಶ್ವನಾಥನ ಪೂಜಾ ವಗೈರೆ ಸರ್ವ ಅಧಿಕಾರವೂ ಪೂರ್ವಕ್ಕೆ ಜಂಗಮವಾಡೀಮಠದವರ ವಶದಲ್ಲಿ ಇತ್ತು. ಕಾಲವಶದಿಂದ ಅದು ಪಂಡಾಜನರ ವಶದಲ್ಲಿ ಆಗಿರುತ್ತದೆ. ನೇಪಾಳ ಖಟಮಾಂಡುದಲ್ಲಿ ಶ್ರೀ ಪಶುಪತಿ ನಾಥಜಿಯ ಪೂಜಾ ವಗೈರೆಯ ಸರ್ವ ಅಧಿಕಾರ ಲಿಂಗಾಯತರ ವಶದಲ್ಲಿದ್ದದ್ದು ಈಗ ಅದು ಪಂಡಾಜನರ ವಶದಲ್ಲಿದೆ. ಮತ್ತು ಶ್ರೀ ಶೈಲಪರ್ವತದಲ್ಲಿ ಶ್ರೀ ಮಹಾ|| ಮಲ್ಲಿಕಾರ್ಜುನನ ಸರ್ವ ಅಧಿಕಾರವು ಲಿಂಗಾಯತ (ವೀರಶೈವ) ರ ಕೈತಪ್ಪಿ ಪುಷ್ಪಗಿರಿಮಠದವರ ವಶದಲ್ಲಿ ಹೋಯಿತು. ಆ ಕಾರಣ ಪುರುಷಾರ್ಥ ಮತ್ತು ಧರ್ಮಾಭಿಮಾನಯುಳ್ಳ ವೀರಶೈವ ಸಮಾಜದ ಜನರು ಈ ಪೀಠದ ವಿಷಯವಾಗಿ ಕಮಿಟಿ ವ ಫಂಡು ಮಾಡಿ ೭೫ ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಇಲ್ಲಿಯ ಡಿಪ್ಯೂಟಿಕಮಿಷನರಿಗೆ ಕಳಿಸಿದ್ದೇ ಆದರೆ ಅವರು ನಿಮ್ಮ ಕಡೆಗೆ ಈ ಸಂಸ್ಥಾನದ ಪೂರ್ಣ ಅಧಿಕಾರ ಕೊಡುವರು. ಇಲ್ಲದೆಹೋದರೆ ಈ ಪೀಠವು ವೀರಶೈವರ ಕೈತಪ್ಪಿಹೋಗುವುದರಲ್ಲಿ ಏನೂ ಸಂದೇಹವಿಲ್ಲ. ನಮ್ಮ ಪೂರ್ವಜರು ಗಳಿಸಿದಂಥಾ ಮಹಾಮಹಾಸ್ಥಾನಗಳು ಕೇವಲ ನಮ್ಮ ನಿರ್ಲಕ್ಷ್ಯದಿಂದ ವ ಸಂಸಾರ ವ್ಯಾಮೋಹದಿಂದ ಹೋಗುತ್ತಲಿವೆ. ಆ ಕಾರಣ ವೀರಶೈವ ಸರ್ವಜನರು ಜಾಗ್ರತರಾಗಿರಿ. ಮತ್ತು ನಿಮ್ಮ ಧರ್ಮ ವ ಪೀಠಗಳನ್ನು ಸಂರಕ್ಷಣೆ ಮಾಡಿರಿ. ಇಲ್ಲಿಯ ಸಾಲದ ಸಂಬಂಧ ವಗೈರೆ ಸರ್ವ ಹಕೀಕತ್ತು ತಿಳಿಯಬೇಕಾದರೆ ಇಲ್ಲಿಯ ಡಿಪ್ಯೂಟಿಕಮಿಷನರಿಗೂ ಮತ್ತು ರಾವಲಸಾಹೇಬರವರಿಗೂ ಪತ್ರವ್ಯವಹಾರ ಶೀಘ್ರವಾಗಿ ಇಂಗ್ಲೀಷದಲ್ಲಿ ಮಾಡಬೇಕು.

J. M. Clay Esq., I.C.S.,
Deputy Commissioner
of Garhwal U.P.

Sriman Rawal Sahib
of Sri Kedarnath
P. O. Okhimat
Dist. Garwal U.P.

ಶ್ರೀ ಸಿದ್ಧಾರ್ಥಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 35

ಈ ಪಂಚಾಂಗದಲ್ಲಿ ಯಾವದಿವಸ ಮಳೆಯು ಪ್ರವೇಶಿಸುವುದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶ ಲಗ್ನವಾಹನ ಸ್ತ್ರೀಪುಂನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವುದೆಂದು ನಿಷ್ಕರ್ಷಿಸಿ ಬರೆದಿರುವುದರಿಂದ ಸ್ವಲ್ಪ ಓದುಬರಹ ಬಲ್ಲವರಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಈ ಸಾರಿ ಕಾಗದ ಮುಂತಾದುವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರುಕೊಡಿರಿ. ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ಐದುವರ್ಷದ ಭವಿಷ್ಯತ್ಫಲಸಾರಸಂಗ್ರಹ.

ಇದು ನವೀನವಾಗಿ ತಯಾರಾದ ಅತ್ಯುಪಯುಕ್ತ ಪುಸ್ತಕವಿರುತ್ತದೆ. ಇದರಲ್ಲಿ ಶಕೆ ೧೮೪೧ ನೇ ಸಿದ್ಧಾರ್ಥಿ ನಾಮಸಂವತ್ಸರದ ಆರಭ್ಯ ಶಕೆ ೧೮೪೫ ನೇ ರುಧಿರೋದ್ಗಾರಿ ನಾಮಸಂವತ್ಸರದವರೆಗೂ ಪ್ರತಿಸಂವತ್ಸರದಲ್ಲುಂಟಾಗುವ ನವನಾಯಕರ ಫಲ, ಪ್ರತಿತಿಂಗಳಲ್ಲಿ ಜರುಗುವ ವ್ಯಾಪಾರದ ತೇಜಿಮಂದ ವಿಷಯ. ಮೇಷಾದಿ ದ್ವಾದಶರಾಶಿಯವರಿಗೆ ನಡೆಯುವ ಶುಭಾಶುಭಾದಿ ಫಲವಿಚಾರ, ಆದಾಯ ವ್ಯಯವಿಚಾರ, ಸೂರ್ಯಚಂದ್ರಾದಿ ಗ್ರಹಣ ವಿಚಾರ, ಗುರುಶುಕ್ರರ ಉದಯಾಸ್ತನಿರ್ಣಯ, ವಿವಾಹಾದಿ ಮುಹೂರ್ತ, ಮೇಘೋತ್ಪತ್ತಿ ವಿಚಾರ, ರೋಹಿಣೀ ವಾಸಸ್ಥಾನ ಇವೇ ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಸಿದ್ಧಾಂತರೀತ್ಯಾ ನಿರ್ಣಯಿಸಿ ಬರೆಯಲಾಗಿದೆ. ಈ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಮಾತ್ರವೇ ಐದು ವರ್ಷದಲ್ಲಾಗುವ ಸಕಲ ಫಲಗಳೂ ವೇದ್ಯವಾಗುವವು. ಈ ಅಪೂರ್ವ ಪುಸ್ತಕವನ್ನು ಸರ್ವರೂ ಸಂಗ್ರಹಿಸಲು ಸಾಧ್ಯವಾಗಿರಲೆಂದು ಬೆಲೆಯನ್ನಾದರೂ ಬಹಳ ಕಡಿಮೆ ಇಟ್ಟಿರುತ್ತೇವೆ. ಅಪೇಕ್ಷೆಯುಳ್ಳವರು ಶೀಘ್ರವಾಗಿ ಆರ್ಡರು ಕೊಡಿರಿ. ಬೆಲೆ ೧ಕ್ಕೆ ೧೨ ಆಣೆ. ಅಂಚೆವೆಚ್ಚ ಪ್ರತ್ಯೇಕ.

ವಿಳಾಸ—ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮದರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಕೊಡಿದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
28 ಸಾಹುಕಾರಪೇಟೆ, ಮದರಾಸ್.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 37

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾದಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷ್ನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲಿ ಬಹಳ ಕಮ್ಮಿ ಬೆಲೆ ಇಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ. ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ.)

10 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಬಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

28 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

„ವೀರಶೈವರಿಗೆ ಸಂಗ್ರಾಹ್ಯವಾದ ಫೋಟೊ"

ಶ್ರೀ ಶಿವಯೋಗಿಗಳ ಸಂಘ:—ಭಾಗ್ಯಶಾಲಿ ಜನರು ಹಣವು ಖರ್ಚು ಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಿಳೂರ, ಹಾನಗಲ್ಲ, ಹಾಳಕೇರಿ, ಬಿದರೀ, ಇಡಸೂಸಿ ಮುಂತಾದ ೧೪ ಮಹಾಸ್ವಾಮಿಗಳ ಫೋಟೊ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೪×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೊ ೧೪×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ಪ್ರತಿಗೆ ರೂ. ೧. ಸಾದಾ ೮ ಆ.

ಹೊಸ ಫೋಟೊ.

ಶ್ರೀ ವಿಷ್ಣು ಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನಚಕ್ರ ಪಡೆಕೊಂಡ ಅತ್ಯಂತ ಸುಂದರವಾದ ಫೋಟೊ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಸಂಗ್ರಹಕ್ಕೇ ಯೋಗ್ಯವಾದ ಚಿತ್ತಾನಂದದಾಯಕ ಫೋಟೊ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ವೀರಭದ್ರದೇವರು:—ವೀರಶ್ರೀಯಿಂದ ತುಂಬಿದ ತೇಜಃಪುಂಜವಾದ ಫೋಟೊ ಕ್ರಯ ಫುಲ್ಲಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಕಾಶೀಕ್ಷೇತ್ರದರ್ಶನ:—ಇದರಲ್ಲಿ ಶಿವಚಿನ್ಹಾಂಕಿತ ನಕ್ಷೆದಲ್ಲಿ ೧ ಶ್ರೀ ವಿಶ್ವನಾಥ, ಶ್ರೀ ಅನ್ನಪೂರ್ಣಾದೇವಿ, ಶ್ರೀ ಸಾಕ್ಷಿವಿನಾಯಕ, ಶ್ರೀ ಕಾಲಭೈರವ ಇವೆ ಮೊದಲಾದ ಮುಖ್ಯ ೧೫ ದೇವತಾ ಫೋಟೊ ಇದ್ದ ಮೂಲಕ ಶ್ರೀ ಕ್ಷೇತ್ರ ಕಾಶೀಯ ನಿತ್ಯದರ್ಶನ ನಿತ್ಯ ಆಗುವವು. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ. ೧೪×೧೦ ಸೈಜದ ಹಾಳೆನ ಚಿತ್ರದ ಕ್ರಯ ೪ ಆಣೆ.

ಶ್ರೀ ಗೌರಿಗಜಾನನ ವಿನೋದ:—ಅತ್ಯಂತ ಚಿತ್ತಾಕರ್ಷಕವಾದ ಪಾರ್ವತಿ ಗಣಪತಿಯರ ಮೋಹಕ ಲೀಲಾದ ಫೋಟೊ ಕ್ರಯ ಕ್ಯಾಬಿನೆಟ ೮ ಆಣೆ.

ಶ್ರೀ ವೀರಶೈವ ರಾಜಸಮೂಹ:—ಇದರಲ್ಲಿ ಕೊಡಗುದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ, ಒಡೆಯರ, ಬೆಳವಡಿ ಮಲ್ಲಮ್ಮಾಜಿ ಮಹಾರಾಣಿ, ಮತ್ತು ಸದ್ಯದ ಪುಂಗನೂರ ಮತ್ತು ಗೋವಾಪ್ರಾಂತದ ಬಾಂದೇವಾಡಿ, ಸ್ವೋಂದಾದ ಅರಸರ ಫೋಟೊ ೯ ಇರುತ್ತಾವೆ. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಫೋಟೋಲಾಕೇಟ್ಸ.

ಸಭ್ಯಗೃಹಸ್ಥರು ಗಡಿಯಾರ ಸರಗಳಿಗೆ ಹಚ್ಚಿ ಉಪಯೋಗಿಸಲಿಕ್ಕೆ ಅತ್ಯಂತ ಯೋಗ್ಯವಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿಗಳ ಫೋಟೊ ಕೂಡ್ರಿಸಿದ ಅತಿ ಫ್ಯಾಷನಿವಾದ ಬೆಳ್ಳಿ ಲಾಕೆಟಗಳೂ ಸಿಗುತ್ತವೆ. ಕ್ರಯ ಬೆಳ್ಳಿವು ಅರ್ಧ ರೂಪಾಯಿ ಆಕಾರವೂ ನಕ್ಷೆವೂ ರೂ. ೧—೧೪—೦, ಬೆಳ್ಳಿವೂ ಪಾವಲಿ ಆಕಾರ ನಕ್ಷೆವೂ ರೂ. ೧—೧೨—೦, ಬೆಳ್ಳಿವು ಪಾವಲಿ ಆಕಾರ ಸಾದಾ ಫ್ಯಾನ್ಸಿ ರೂ. ೧—೮—೦, ರೋಲಗೋಲ್ಡ ಭಂಗಾರವೂ ರೂಪಾಯಿ ಆಕಾರವೂ ಸಭೆಯ ಸನ್ಮಾನನೀಯ ಸಭಾಸದರಿಗೆ ಮತ್ತು ಸಭೆಯ ವ್ಯವಸ್ಥಾಪಕರಾದ ಹ್ಯಾಂಟ ಅರಂಗಿ ಕೋಟಿನಮೇಲೆ ಹಚ್ಚುವುದಕ್ಕೆ ಮೆಡಲದಂತೆ ಬಹು ಶೋಭಾಯಮಾನ ಇರುತ್ತವೆ. ಕ್ರಯ ೧ ಕ್ಕೆ ರೂ. ೧—೬—೦, ೧—೮—೦ ಆಣೆ.



ಫೋಟೊ ಬ್ರೂಚಪಿನ:—ಇವು ಕೋಟಿನ ಕಾಲರಮೇಲೆ ಹಚ್ಚುವವೂ ಇದ್ದು ಇವರಲ್ಲಿ ಬೇಕಾದ ದೇವರ, ಅಥವಾ ಸತ್ಪುರುಷರವೂ ೧ ಫೋಟೊ ಕೂಡ್ರಿಸಿ ಸಿಗುತ್ತದೆ. ಕ್ರಯ ಗಿಲ್ಟಬ್ರೂಚವು ೧ಕ್ಕೆ ೬ಆಣೆ, ೮ ಆ.

ಇವುಗಳ ಹೊರ್ತ ಶ್ರೀ ಸೊಲ್ಲಾಪುರ ಸಿದ್ಧರಾಮೇಶ್ವರ, ಹಂಪೆ ವಿರುಪಾಕ್ಷೇಶ್ವರ, ಕಲಬುರ್ಗ ಶರಣಬಸವೇಶ್ವರ, ಗೋಕರ್ಣದ ಮಹಾಬಲೇಶ್ವರ, ಶ್ರೀ ಭ್ರಮರಾಂಬಿಕಾದೇವಿ, ಶ್ರೀ ಕಾಶಿ ಅನ್ನಪೂರ್ಣಾ ಮುಂತಾದ ದೇವರವೂ ಮತ್ತು ಸಮಾಜಸೇವಕ್ಕೆ ಕಂಕಣಬದ್ಧರಾದ ಪ್ರಸಿದ್ಧ ಶ್ರೀಮನ್ನಿರಂಜನ ದಾವಣಗೇರಿ ಮೃತ್ಯುಂಜಯ ಶಿವಯೋಗಿ, ಶ್ರೀ ಗುರುಮಠಕಲ್ಲ ಶಾಂತವೀರಸ್ವಾಮಿ, ಮತ್ತು ೬೪ ನೇ ಪುರಾತನರೆಂಬ ಕೈ|| ಮಹಾತ್ಮಾ ಲಿಂಗಪ್ಪನವರು ಸಿರಸಂಗಿ ದೇಶಾಯಿ, ರಾ|| ಬ|| ರುದ್ರಗವುಡಾ ಅಂಟಾಳ, ವಗೈರೆ ಫೋಟೊಗಳೂ ಸಿಗುತ್ತವೆ. ಕ್ರಯ ಫುಲ್ಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಊರೂರಿಗೆ ಫೋಟೊ ಮತ್ತು ಲಾಕೇಟ ಮಾರಾಟ ಮಾಡುವ ಏಜಂಟರು ಬೇಕು. ಅಭಿಲಾಷೆವುಳ್ಳವರು ಪ್ರವೇಟ್ಟು ೬ ಪೈ. ಟಿಕೀಟ ಕಳುಹಿಸಿ ಏಜಂಟ ನಿಯಮ ತರಿಸಿಕೊಳ್ಳಿರಿ.

ಗಂಗಪ್ಪಾ ಬೀರಗೆ ಮಾಲಕ,
4 ದಿ ಶಾರದಾ ಫೋಟೊ ಕಂಪನಿ, ಸೋಲ್ಲಾಪುರ ಸಿಟಿ.

೧೯೧೯ ನೆಯ ಇಸವಿ ಆಗಸ್ಟ ತಾ|| ೧೭ ರಿಂದ ೧೯೧೯ ನೆಯ ಆಗಸ್ಟ ತಾ|| ೨೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಶ್ರಾವಣ ಬ|| ಷಷ್ಠಿಯಿಂದ ಶ್ರಾವಣ ಬ|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
17	ಭಾನು	ಷಷ್ಠಿ	18·47	ಅಶ್ವಿನಿ	23·14	1
18	[1] ಸೋಮ	ಸಪ್ತಮಿ	12·46	ಭರಣಿ	19·10	2
19	[2] ಮಂಗಳ	ಅಷ್ಟಮಿ	6·36	ಕೃತ್ತಿಕ	14·58	3
20	[3] ಬುಧ	ನವಮಿ	0·29	ರೋಹಿಣಿ	54·0	4
21	ಗುರು	ಏಕಾದ	49·1	ಮೃಗಶಿರ	7·1	5
22	ಶುಕ್ರ	ದ್ವಾದಶಿ	44·12	ಆರಿದ್ರಾ	3·41	6
23	[4] ಶನಿ	ತ್ರಯೋ	40·12	ಪುನ	1·0	7

(1) ಜನ್ಮಾಷ್ಟಮೀ, ದಶಫಲವ್ರತಂ. (2) ಮಂಗಳಗೌರೀವ್ರತಂ. (3) ತೋಳಪ್ಪರ್ ಸಂಪ್ರದಾಯಕ್ಕೆ ಮನ್ನಾರ್ ಸಂಪ್ರದಾಯಕ್ಕೆ ಅರಮನೆಗೆ ಸಹ ಕೃಷ್ಣಜಯಂತಿ. (4) ಶನಿಪ್ರದೋಷಃ, ಶ್ರಾವಣಶನಿವಾರ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

REGISTERED NO. M. 124.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷಜ್ಞ ಸಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಕೆಯಂಸದಾಪೊರೆಗೆ ಗೌರೀಶಾಸುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೨) ಮೈಸೂರ್ ಸ್ಟಾರ್ ೧೯೧೯ ನೆಯ ಇಸವಿ ಆಗಸ್ಟ ತಾರೀಖು ೨೪ ನೆಯ ಭಾನುವಾರ. (ಸಂಚಿಕೆ ೩೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸ್ತೋತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಇಂದ್ರಿಯಸ್ತಂಭನ ಮಾತ್ರೆ.

ಈ ಮಾತ್ರೆಗಳನ್ನು ಮಲಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಸೇವಿಸಿ ಸ್ವಲ್ಪ ಹಾಲನ್ನು ಕುಡಿದು ಮಲಗಿದರೆ ಧಾತು ಸ್ಖಲನವಾಗದೆ ಸಂತೋಷದಿಂದಿರುವದು.

ಕ್ರಯ ಡಬ್ಬಿ 1 ಕ್ಕೆ 1—0—0. ರೂ.

ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವದಕ್ಕು ಹಾಕುವದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಡಾಬು 1 ಕ್ಕೆ ರೂ. 3—0—0.



ವಿಳಾಸ:—ರಾಸ್ ವಾಚ್ ಅಂಡ್ ಕೊ,
29 ಇರುಳಪ್ಪನಬೀದಿ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

46 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಲಿಂಗದ ಕಾಯಿಗಳು.

ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವದು. ಈ ನಕ್ಷೆಯಲ್ಲಿ ರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.



ಕ್ರಯ 1 ಕ್ಕೆ 1—4—0. ನಂ. 2. 1—1—0.

ಕನ್ನಡಕಗಳು.

ಇದನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬದಿಗಳಿರುವದು. ಇವರ ಕಂಬಿಗಳು ಯಾವಾಗಲೂ ಬೆಳ್ಳಿಯ ಹಾಗೆ ಇರುವದು. ಇದರಲ್ಲಿ ಹಸರು, ಊದ, ಮೋಘವರ್ಣ ಮೊದಲಾದವುಗಳಿರುವದು. ಕ್ರಯ ನಂ. 1 ಕ್ಕೆ 1-0-0, ನಂ. 2 ಕ್ಕೆ 2-0-0.



ರಬ್ಬರ್ ಇಂಗ್ಲೀಷ್ ಅಕ್ಷರಗಳು.

ಈ ಅಕ್ಷರಗಳು ಸೀಮೆಯಲ್ಲಿ ತಯಾರಾದವು. ಈ ಅಕ್ಷರಗಳಿಂದ ಕಷ್ಟವಿಲ್ಲದೆ ಕಾಗದಗಳನ್ನೂ, ಕಾರಡು, ಲೆಟರು ಮುಂತಾದವುಗಳನ್ನು ನಾವೇ ಅಚ್ಚುಮಾಡಿಕೊಳ್ಳಬಹುದು. ಈ ಅಕ್ಷರಗಳ ಪೆಟ್ಟಿಗೆಯು ಒಂದು ಇದ್ದರೆ ಬೇಕಾದ ಮುದ್ರಣವನ್ನು ಒಬ್ಬರ ಸಹಾಯವಿಲ್ಲದೆ ನಾವೇ ಮಾಡಿಕೊಳ್ಳಬಹುದು. ಲಾಯರುಗಳಿಗೂ, ವರ್ತಕರಿಗೂ ಬಹು ಸಹಾಯಕಾರಿಯಾದದ್ದು. ಈ ಪೆಟ್ಟಿಗೆಯಲ್ಲಿ ಇಂಕಿ, ಪ್ಯಾಡು, ಚಿಮಟ ಮುಂತಾದವುಗಳು ಇವೆ.



170 ಅಕ್ಷರಗಳು ಇರುವ ಪೆಟ್ಟಿಗೆ	1—14—0
250 „ „	2—8—0
350 „ „	3—12—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
29 3 ಇರುಳಪ್ಪನಬೀದಿ, ಮದರಾಸ್.

„ದಲ್ಲಾಲಿ ಅಂಗಡಿ ಸೊಲ್ಲಾಪುರ"

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕ, ಶೀಗೇಕಾಯಿ, ತುಪ್ಪ, ಜೋಳ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ. ಚಹಾ, ಕಾಜು, ಆಲೂ, ಉಳ್ಳಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮಿಷನ್ನಿನ ಮೇಲೆ ಕಾಳಜಿಯಿಂದ ಬಿಕರಿಮಾಡಿ ಕೊಡುತ್ತೇವೆ. ಒಂದುವೇಳೆ ಕೇಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಷನರಿ ಸಾಮಾನುಗಳು ಕಮಿಷನ್ನಿನ ಮೇಲೆ ಸೇಯವಾರ ಮುಂಬಯದಲ್ಲಿ ಖರೀದಿಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,
1 ವಿಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಪಂಚಾಂಗ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultural subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.
2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.
3. During the time the raiyats and labourers work on the farm, they will be paid at the prevailing local rates for labour.
4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,
4 *Offg. Director of Agriculture.*

ಇನ್‌ಫ್ಲುಯೆನ್‌ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 7

ತಲೆನೋವು, ಕೆಮ್ಮು, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ: ಇವುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಸೂಚನೆ.

ಪದ್ಧತಿಯ ಪ್ರಕಾರ ಗಣೇಶನ ಹಬ್ಬದುದ್ದೇಶದಿಂದ ಆಗಸ್ಟ್ ತಾ|| ೩೧ನೆಯ 'ಮೈಸೂರ್ ಸ್ಟಾರ್' ಸಂಚಿಕೆಯು ಹೊರಡುವುದಿಲ್ಲವು. ಪ್ರ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಆಗಸ್ಟ್ ತಾ|| ೨೪ ನೆಯ ಭಾನುವಾರ.

ವಿದ್ಯಾಭ್ಯುದಯಕ್ರಮ.

ಮೂರ್ತಿಮತ್ತಾದ ಪ್ರಜಾಪುಣ್ಯ ಪರಿಪಾಕವಾಗಿರುವ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳ ಸರ್ವತೋಮುಖವಾದ ಏಳ್ಗೆಗಾಗಿ ಎಷ್ಟುಮಟ್ಟಿನ ನವನವ ಪ್ರತಿಷ್ಠಾಪನೆಗಳನ್ನು ಮಾಡಿಸುತ್ತಿರುವರೆಂಬುದು ಸರ್ವವಿದಿತವಾಗಿದೆ. ಸಂಸ್ಥಾನದಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಆಳಿಕೆಯ ಕಾಲದೊಳಗೆ ವಿದ್ಯಾಭ್ಯಾಸ ಪ್ರೋತ್ಸಾಹ ವಿಷಯದಲ್ಲಿ ಅತಿ ಘನತರವಾದ ಪ್ರಯತ್ನಗಳು ನಡೆಯುತ್ತಿವೆ. ಆ ಶಾಖೆಯ ವಾರ್ಷಿಕ ವ್ಯಯವು ೪೪ ಲಕ್ಷದವರೆಗೆ ಏರಿಸಲ್ಪಟ್ಟಿದೆ. ಬಲಾತ್ಕಾರ ಬಾಲವಿದ್ಯಾಭ್ಯಾಸ ಕ್ರಮವು ಸ್ಥಾಪಿಸಲ್ಪಟ್ಟಿದೆ. ಸ್ವತಂತ್ರ ವಿಶ್ವವಿದ್ಯಾಲಯವು ಸ್ಥಾಪಿತವಾಗಿದೆ. ಸ್ತ್ರೀ ವಿದ್ಯಾಭ್ಯಾಸ ಪಂಚಮವಿದ್ಯಾಭ್ಯಾಸಗಳಿಗೆ ಅತ್ಯುದಾರ ಪ್ರೋತ್ಸಾಹಗಳು ಜರುಗುತ್ತಿವೆ. ಇಷ್ಟಾದರೂ ವಿದ್ಯಾಭ್ಯಾಸ ಕ್ರಮವು ತೃಪ್ತಿಕರವಾಗಿಲ್ಲ. ಅದುಕಾರಣ ಈ ಶಾಖೆಯ ಕೆಲಸಗಳನ್ನು ಇನ್ನು ಯಾವಯಾವ ವಿಧದಲ್ಲಿ ವಿಸ್ತರಿಸಿ ದೇಶದಲ್ಲಿ ವಿದ್ಯಾಪ್ರಸಾರವನ್ನು ನಿರತಿಶಯವಾಗಿ ಮಾಡಿಸಬಹುದು? ಯಾವಯಾವ ಸಂಸ್ಕರಣಗಳನ್ನು ಅಭ್ಯಾಸಕ್ರಮದಲ್ಲಿ ನಡೆಯಿಸಬೇಕು? ಅದಕ್ಕೆಲ್ಲಾ ಎಷ್ಟು ವೆಚ್ಚವು ತಗಲಬಹುದು? ಎಂಬುದನ್ನು ಕುರಿತು ಒಂದು ವರದಿಯನ್ನು ಕಳುಹಿಸಿಕೊಡಬೇಕೆಂದು ಶ್ರೀಮನ್ಮಹಾರಾಜ ಪ್ರಭುತ್ವದವರು ಕಳೆದ ವರ್ಷದ ಏಪ್ರಿಲ್ ತಿಂಗಳಲ್ಲಿ ವಿದ್ಯಾಭ್ಯಾಸ ಶಾಖಾ ಮುಖ್ಯಾಧಿಕಾರಿಗಳಾದ ಮಿ|| ರಾಮಲಿಂಗರಡ್ಡಿ ಎಂ.ಎ ಯವರನ್ನು ಕೋರಿದ್ದರು. ಸ್ವದೇಶ ವಿದೇಶ ವಿದ್ಯಾಭ್ಯಾಸ ಪದ್ಧತಿಗಳ ಗುಣಾವಗುಣಗಳ ವಿಶೇಷ ಪರಿಶ್ರಮವುಳ್ಳ ಮ|| ರಡ್ಡಿಯವರ ಅನುಭವವನ್ನು ಸಂಸ್ಥಾನದ ಹಿತಕ್ಕಾಗಿ ಈ ರೀತಿಯಿಂದ ಉಪಯೋಗಿಸಿಕೊಳ್ಳಬೇಕೆಂದು ನಮ್ಮ ಪ್ರಭುತ್ವದವರು ಮಾಡಿದ ಪ್ರಯತ್ನವು ಅತ್ಯಂತ ಯುಕ್ತವಾದುದೆಂಬುದನ್ನು ಹೇಳಬೇಕಾಗಿಲ್ಲ. ಅದರ ಮೇಲೆ ಮ|| ರಡ್ಡಿಯವರು ತಮ್ಮ ಅಸಾಧಾರಣ ಮೇಧಾವಿತೆಯನ್ನು ವಿನಿಯೋಗಿಸಿ ಸಂಸ್ಥಾನದ ಬಹುಕಾಲದ ವಿದ್ಯಾಭ್ಯಾಸ ವಿಧಾನಗಳನ್ನೆಲ್ಲಾ ಪರಿಶೋಧಿಸಿ, ಅದರ ಗುಣದೋಷಗಳನ್ನೆಲ್ಲಾ ಚರ್ಚಿಸಿ, ಮಾಡಬೇಕಾದ ಸಂಸ್ಕರಣಗಳನ್ನೆಲ್ಲಾ ಸೂಚಿಸಿ, ಒಂದು ದೊಡ್ಡ ವರದಿಯನ್ನು ರಚಿಸಿ ಪ್ರಭುತ್ವದವರಿಗೆ ಒಪ್ಪಿಸಿರುತ್ತಾರೆ. ಆ ವರದಿಯಲ್ಲಿ ಕಂಡ ಅಂಶಗಳನ್ನೆಲ್ಲಾ ಗೌರ್ನಮೆಂಟಿನವರು ತಾವೇ ಅಂಗೀಕರಿಸಿ ಕಾರ್ಯರೂಪಕ್ಕೆ ತರುವುದಕ್ಕಿಂತಲೂ, ಪ್ರಜಾಕೋಟಿಯ ಹಿತಕ್ಕೆ ಸಂಬಂಧಿಸಿದ ಈ ಪ್ರಾಮುಖ್ಯ ಸಮಸ್ಯೆಯ ಗುಣಾವಗುಣಗಳನ್ನು ಪರಿಶೀಲಿಸಿ ತಕ್ಕ ಅಭಿಪ್ರಾಯಗಳನ್ನು ವಿದ್ಯಾವಂತರೂ ಅನುಭವಶಾಲಿಗಳೂ ಪ್ರಜಾಪ್ರಮುಖರೂ ಆದ ಮಹಾಜನರು ತಿಳಿಯಿಸಿದ ಬಳಿಕ ಸೂಕ್ತವಾಗಿ ತೋರಿದ ಅಂಶಗಳನ್ನು ಅನುಷ್ಠಾನಕ್ಕೆ ತರಬಹುದೆಂದು ಯೋಚಿಸಿ, ಮ|| ರಡ್ಡಿಯವರ ವರದಿಯಲ್ಲಿ ಸೂಚಿತಗಳಾಗಿರುವ ಮುಖ್ಯಾಂಶಗಳನ್ನೆಲ್ಲಾ ಸರ್ಕಾರದ ಗೆಜಿಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಇದರ ಮೇಲಣ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಯಿಸಲು ಈಗಣಿಂದ ೩ ತಿಂಗಳ ಕಾಲದ ವ್ಯವಧಿಯನ್ನು ಕೊಟ್ಟಿರುತ್ತಾರೆ. ಪ್ರಜಾಭಿಪ್ರಾಯಕ್ಕೆ ಇಷ್ಟು ಗೌರವವನ್ನು ತೋರಿಸಿರುವುದು ಈಗಣ ನಮ್ಮ ಸರ್ದಾರ್ ಕಾಂತರಾಜ ಅರಸಿನವರ ಮಂತ್ರಿತ್ವದ ಉದಾರಭಾವಕ್ಕೆ ದ್ಯೋತಕವಾಗಿ ಪ್ರಜೆಗಳನ್ನು ಸಂತೋಷಪಡಿಸತಕ್ಕುದಾಗಿದೆಯೆಂಬುದಕ್ಕೆ ಸಂಶಯವಿಲ್ಲ. ಈ ಅವಕಾಶವನ್ನು ಪ್ರಜಾಪ್ರಮುಖರು ಸಾರ್ಥಕಪಡಿಸಿಕೊಳ್ಳುವುದಕ್ಕಾಗಿ ದುರಭಿಮಾನರಾಹಿತ್ಯದಿಂದಲೂ ರಾಷ್ಟ್ರಹಿತೈಕದೃಷ್ಟಿಯಿಂದಲೂ ವಿಮರ್ಶೆಮಾಡಿ ಸ್ವಾಭಿಪ್ರಾಯಗಳನ್ನು ನಿವೇದಿಸಿಕೊಳ್ಳಬೇಕಾಗಿದೆ.

ಈಗ ಪ್ರಕಟಿತವಾಗಿರುವ ಮೆಮೊರಾಂಡಮ್ಮಿನಲ್ಲಿ ವಿದ್ಯಾಭ್ಯಾಸ ಪದ್ಧತಿಯ ಮುಖ್ಯ ಮುಖ್ಯಾಂಶಗಳೆಲ್ಲವೂ ಚರ್ಚಿಸಲ್ಪಟ್ಟಿವೆ. ಈಗಣ ಅಭ್ಯಾಸಪದ್ಧತಿಯಲ್ಲಿರುವ ಲೋಪಗಳೆಲ್ಲವೂ ವಿವರಿಸಲ್ಪಟ್ಟಿವೆ. ಅವೆಲ್ಲ ಭಾಗಗಳೂ ಬಹು ವಿಸ್ತಾರಗಳಾಗಿರುವುದರಿಂದ ಸಾಂಗವಾಗಿ ಉದ್ಧರಿಸಿ ಈ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ನಮಗೆ ಅವಕಾಶವಿಲ್ಲ. ಅದರ ಮುಖ್ಯ ಮುಖ್ಯ ಭಾಗಗಳು ಕೆಲವನ್ನು ಮುಂದಣ ಸಂಚಿಕೆಗಳಲ್ಲಿ ಪ್ರಕಟಿಸಿ ವಿಮರ್ಶಿಸಬೇಕೆಂದಿರುತ್ತೇವೆ. ಪ್ರಭುತ್ವದವರು ಈ ಮೆಮೊರಾಂಡಮನ್ನು ದೇಶಭಾಷೆಗೂ ಪರಿವರ್ತಿಸಿ ಪ್ರಕಟಿಸಿಯಾರೆಂದು ನಂಬುತ್ತೇವೆ.

ಬೆಂಗಳೂರಿಂದ ಶ್ರೀಮಜ್ಜಗದ್ಗುರುಗಳವರ ಪ್ರಯಾಣ.

ಚಿತ್ರದುರ್ಗದ ಶ್ರೀಮನ್ಮಹಾ ನಿರಂಜನ ಜಗದ್ಗುರು ಮಹಾಸ್ವಾಮಿಗಳವರು ನಿರ್ಣೀತವಾಗಿದ್ದ ಪ್ರೋಗ್ರಾಮಿನ ಪ್ರಕಾರ ಕಳೆದ ತಾ|| ೨೦ನೆ ಬುಧವಾರದ ದಿವಸ ಬೆಂಗಳೂರುಪಟ್ಟಣವನ್ನು ಬಿಟ್ಟು ಕೋಲಾರ ಡಿಸ್ಟ್ರಿಕ್ಟಿನ ಕಡೆಗೆ ಪ್ರಯಾಣವನ್ನು ಬೆಳೆಯಿಸಿದರು. ಶ್ರೀಗಳವರು ಮೇ ತಾ|| ೧೯ ರಲ್ಲಿ ಪುರಪ್ರವೇಶ ಮಾಡಿ ಆಗಸ್ಟ್ ತಾ|| ೨೦ ರ ವರೆಗೆ ಇದ್ದುದರಿಂದ ೩ ತಿಂಗಳ ಕಾಲ ಅಲ್ಲಿ ನಿಂತಂತಾಯಿತು. ಸಂಚಾರಕಾಲದಲ್ಲಿ ಇಷ್ಟು ದೀರ್ಘಕಾಲ ಒಂದು ಕಡೆ ನಿಂತುದು ವಿಶೇಷವೇ ಸರಿ. ಬೆಂಗಳೂರಿನಲ್ಲಿ ಶ್ರೀಗಳವರು ನೆರವೇರಿಸಿದ ಘನತರ ಕಾರ್ಯದ ಮತ್ತು ಅಲ್ಲಿಯ ಭಕ್ತಜನರು ತೋರಿಸಿದ ಭಕ್ತಿವಿಶೇಷದ, ಅವರು ಸಂಸ್ಥಾನ ವಿಷಯದಲ್ಲಿ ವಹಿಸಿದ್ದ ಅಭಿಮಾನದ ಮಹತ್ವಗಳೇ ಇಷ್ಟು ಕಾಲವಿಳಂಬಕ್ಕೆ ಕಾರಣಗಳಾಗಿದ್ದುವು. ಬಿನ್ನಯಿಸಿ ಶ್ರೀಗಳವರನ್ನು ತಂತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಸತ್ಕರಿಸಲು ಚೈತನ್ಯವುಳ್ಳವರಾಗಿದ್ದ ಆವೂರಿನ ಬಹುಶಃ ೨೦-೩೦ ಮಂದಿ ಭಕ್ತವರ್ಯರು ವೈಭವದಿಂದ ಸತ್ಕಾರಗಳನ್ನೂ ಸಮಾರಾಧನೆಗಳನ್ನೂ ನಡೆಯಿಸಿ ಕಾಣಿಕೆಗಳನ್ನು ಅರ್ಪಿಸಿ ಧನ್ಯರಾದರು. ಉಳಿದ ಪ್ರತಿಮನೆಯವರೂ ಸಂಧ್ಯಾಕಾಲದ ಮೇಲೆ ಶ್ರೀಗಳವರ ಬಿಡಾರಕ್ಕೆ ಬಂದು ಫಲಪುಷ್ಪಗಳನ್ನೂ ಕಾಣಿಕೆಗಳನ್ನೂ ಅರ್ಪಿಸಿ ದರ್ಶನಾಶೀರ್ವಾದಗಳನ್ನು ಪಡೆಯುತ್ತಿದ್ದುದು ಪ್ರತಿದಿನವೂ ೩ ತಿಂಗಳವರೆಗೂ ಅವಿಚ್ಛಿನ್ನವಾಗಿ ನಡೆಯುತ್ತಿದ್ದಿತು. ಬೆಂಗಳೂರು ಪಟ್ಟಣವನ್ನು ಬಿಡುವ ದಿವಸ ಪುರದ ಎಲ್ಲೆಕಟ್ಟಿಗೆ ಸ್ವಾಮಿಯು ದಯಮಾಡಿಸುವವರೆಗೂ ಇಂಥ ಭಕ್ತಿಸಮರ್ಪಣ ಕಾರ್ಯವು ನಡೆದೇ ಇದ್ದಿತು. ಬೆಂಗಳೂರು ವೀರಶೈವ ಮಹಾಜನರು ತಮ್ಮ ಪಟ್ಟಣದ ಪ್ರಸಿದ್ಧಿಗೆ ತಕ್ಕಂತೆ ಶ್ರೀಗಳವರನ್ನು ಸೇವಿಸಿ ಗೌರವಿಸಿ ಸತ್ಕರಿಸಿದುದು ಶ್ರೀಗಳವರ ಮನಸ್ಸನ್ನು ಪೂರ್ಣವಾಗಿ ಆರ್ದ್ರೀಕರಿಸಿರಬೇಕೆಂದು ಹೇಳುವಲ್ಲಿ ಸಂಶಯವಿಲ್ಲ. ಮೂರು ತಿಂಗಳ ಕಾಲ ಏಕತ್ರ ನೆಲಸಿದುದರಿಂದ ಗುರುಶಿಷ್ಯರಲ್ಲಿ ಪರಸ್ಪರ ವೃದ್ಧಿಗೊಂಡ ಭಕ್ತಿವಿಶ್ವಾಸ ಬಂಧನವು ಕಟ್ಟಕಡೆಗೆ ಒದಗಿದ ಅಗಲುವಿಕೆಯನ್ನು ದುರ್ಭರವಾಗಿ ಮಾಡಿತು. ಅಪ್ಪಣೆಕೊಟ್ಟು ತೆರಳುವ ಕಾಲದಲ್ಲಿ ಶ್ರೀಗಳು ಗದ್ಗದಕಂಠರಾದರು. ಶಿಷ್ಯಮಂಡಲಿಯ ಕಣ್ಣುಗಳು ನೀರ್ದುಂಬಿದುವು.

ಸ್ವಾಮಿಗಳನ್ನು ಸಾಗಗಳುಹಿಸಿಕೊಡುವ ದಿವಸ ಬೆಂಗಳೂರ ವೀರಶೈವ ಮಹಾಜನರು ತಮ್ಮ ಕಡೆಯದಿನದ ಸೇವೆಯನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ದೊಡ್ಡಪೇಟೆಯ ಗಂದಿಗೆ ಮಂಡಿಸಾಲಿನ ವೀರಶೈವವರ್ತಕರೇ ಸೇರಿ ಶ್ರೀಗಳವರ ಸ್ವರ್ಣರಜತದ ಪಲ್ಲಕ್ಕಿಯನ್ನು ಮನೋಹರವಾದ ಪುಷ್ಪಮಾಲಾಗುಚ್ಛಗಳಿಂದ ಅಲಂಕರಿಸಿ ದಿವ್ಯವಾದ ಪುಷ್ಪಕದಂತೆಯೇ ರಚಿಸಿದ್ದುದು ನೇತ್ರಾನಂದಕರವಾಗಿದ್ದಿತು. ಮತ್ತು ಅವರೂ ಇತರ ಪೇಟೆಗಳವರೂ ಸೇರಿ, ಶ್ರೀಗಳವರ ಬಿಡಾರದ ಸ್ಥಲದಿಂದ ಉತ್ಸವ ಹೊರಟ ಅರಳೆಪೇಟೆ ರಾಣಾಸಿಂಗನಪೇಟೆ ಮಾರಕಟ್ಟು ಚೌಕ ದೊಡ್ಡಪೇಟೆ ಅವಿನ್ಯೂಮಾರ್ಗಗಳನ್ನು ಹಿಡಿದು ಎಲಹಂಕದ ಪೊಲೀಸುಠಾಣದವರೆಗೂ ಉಭಯಪಾರ್ಶ್ವಗಳಲ್ಲೂ ಸಾಲಾಗಿ ಬಾಳೆಗಂಬಗಳನ್ನು ನಿಲ್ಲಿಸಿ ಅಲ್ಲಲ್ಲಿಗೆ ತಳಿರತೋರಣಗಳನ್ನು ಕಟ್ಟಿ ಅಲಂಕರಿಸಿದ್ದುದು ಬೀದಿಗಳನ್ನೆಲ್ಲಾ ಉದ್ಯಾನವನದಂತೆ ಕಾಣಬಹಾಗೆ ಮಾಡಿದ್ದಿತು. ಗೊತ್ತಾಗಿದ್ದ ಮೇರೆಗೆ ಶ್ರೀಗಳವರು ಪ್ರಾತಃಕಾಲ ಶಿವಾರ್ಚನವನ್ನು ಮುಗಿಸಿ ೯ ಗಂಟೆಗೆ ಪ್ರಯಾಣಸನ್ನದ್ಧರಾಗಿ ಸತ್ರದೊಳಗಣ ಹಾಲಿನಲ್ಲಿ ಸೇರಿದ್ದ ಸಭೆಯಲ್ಲಿ ಭದ್ರಾಸನವನ್ನು ಅಲಂಕರಿಸಿದ ಕೂಡಲೇ ಬೆಂಗಳೂರು ಅಶೇಷ ವೀರಶೈವ ಮಹಾಜನರ ಪಕ್ಷದಿಂದ ದಿ|| ಬ|| ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು ಈ ಕೆಳಗೆ ಪ್ರಕಟಿಸಿರುವ ವಿಜ್ಞಾಪನಪತ್ರವನ್ನು ಓದಿ ಚಿತ್ರಕೆಲಸ ಮಾಡಿದ ಶ್ರೀಗಂಧದ ಪೆಟ್ಟಿಗೆಯಲ್ಲಿಟ್ಟು ಶ್ರೀಗಳವರಿಗೆ ಸಮರ್ಪಿಸಿದರು. ಮತ್ತು ಬೆಂಗಳೂರಲ್ಲಿ ಕಟ್ಟಲ್ಪಡಲಿಕ್ಕಿರುವ ವೀರಶೈವ ವಿದ್ಯಾರ್ಥಿನಿಲಯಕ್ಕೆ ಜಗದ್ಗುರುಗಳವರು ೪೦ ಸಹಸ್ರ ರೂಪಾಯಿಗಳನ್ನು ಅನುಗ್ರಹ ಮಾಡಿರುವುದನ್ನೂ, ಹೀಗೆಯೇ ಅವರು ದಯಮಾಡಿಸಿದ ಮುಖ್ಯಮುಖ್ಯ ಸ್ಥಲಗಳಲ್ಲೆಲ್ಲಾ ವಿದ್ಯಾರ್ಥಿನಿಲಯ ಸ್ಥಾಪನೆ ಮೊದಲಾದುವುಗಳನ್ನು ನಡೆಸಿಯೂ ಮುಂದೆಯೂ ನಡೆಯಿಸತಕ್ಕ ಸತ್ಸಂಕಲ್ಪವುಳ್ಳವರಾಗಿಯೂ ಇರುವುದನ್ನೂ, ಇಂಥ ವಿದ್ಯಾಪ್ರೋತ್ಸಾಹಕರಾದ ಪೂಜ್ಯಪಾದರು ಪ್ರಕೃತದಲ್ಲಿ ದೊರೆದುದು ನಮ್ಮ ಮತದವರ ಪುಣ್ಯಪರಿಪಾಕವೆಂತಲೂ ಮೊದಲಾಗಿ ಹೇಳಿ ಸಾಷ್ಟಾಂಗಪ್ರಣಾಮವನ್ನು ಮಾಡಿದರು.

ಶ್ರೀಮನ್ನಿಖಿಲವೇದಾಗಮ ಪುರಾಣೇತಿಹಾಸ ಪ್ರತಿಪಾದಿತ ವಿಮಲ ವೀರಶೈವ ಮಹಾಮತ ಷಟ್ಸ್ಥಲಸ್ಥಾಪನಾಚಾರ್ಯವರ್ಯ ಶ್ರೀಮತ್ಪರಮಪಾವನ ಚಾರುತರ ಸನ್ಮೋಹನಾಂಗ ಮದನಮರ್ದನ ಮಾಯಾಕೋಲಾಹಲೇತ್ಯಾದಿ ಬಿರುದಾಂಕಿತ ಶ್ರೀಮದಲ್ಲಮಪ್ರಭುವರ ಪರಂಪರಾಗತ ಶ್ರೀಮಚ್ಛೂನ್ಯಮಲಾದ್ರಿ ಶೂನ್ಯಸಿಂಹಾಸನಾಸೀನ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಚರಣಸರೋಜಯುಗಳ ಸನ್ನಿಧಾನದಲ್ಲಿ —

ಬೆಂಗಳೂರು ಪುರನಿವಾಸಿಗಳಾದ ಅಶೇಷ ವೀರಶೈವ ಸಮಾಜದವರು ಸಾಷ್ಟಾಂಗ ನಮಸ್ಕಾರಪೂರ್ವಕವಾಗಿ ಸಮರ್ಪಿಸುವ ಬಿನ್ನಹಗಳು. ಮಹಾಸ್ವಾಮಿ,

ಶ್ರೀ ಮಹಾಸಂಸ್ಥಾನದ ಹಿಂದಣ ಪೂಜ್ಯಪಾದರುಗಳು ಯಾರೂ ಕಳೆದ ನೂರಾರು ವರ್ಷಗಳಿಂದ ಈ ಬೆಂಗಳೂರು ಪಟ್ಟಣಕ್ಕೆ ದಯಮಾಡಿಸಿ ನಮ್ಮನ್ನು ಅನುಗ್ರಹಿಸಿರಲಿಲ್ಲ. ಶ್ರೀ ಮಹಾಪಾದರು ಈಗ ನಮ್ಮಗಳ ಬಿನ್ನಹವನ್ನು ಕೃಪಾಪೂರ್ವಕವಾಗಿ ಅಂಗೀಕರಿಸಿ, ಈ ಪ್ರಸಿದ್ಧ ಪಟ್ಟಣಕ್ಕೆ ದಯಮಾಡಿಸಿ, ಚರಣಕಮಲವಿನ್ಯಾಸದಿಂದ ಪಾವನಗೊಳಿಸಿ, ಕರುಣಾಕಟಾಕ್ಷಾಮೃತಸೇಚನದಿಂದಲೂ ಸದ್ಬೋಧಾನುಗ್ರಹವನ್ನು ಮಾಡಿದುದರಿಂದಲೂ, ನಮ್ಮ ಬಹುಕಾಲದ ಬಯಕೆಯು ಈಡೇರಿ, ನಾವೆಲ್ಲರೂ ಕೃತಾರ್ಥರಾಗಿ ಶ್ರೀ ಪಾದಕ್ಕೆ ಚಿರಕೃತಜ್ಞತೆಯಿಂದ ಅನಂತಾನಂತ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸುವವರಾಗಿದ್ದೇವೆ.

ಶ್ರೀ ಮಹಾಸ್ವಾಮಿ ಸನ್ನಿಧಿಯು ಈ ನಗರಕ್ಕೆ ದಯಮಾಡಿಸಿದುದರಿಂದ ಪಾರಮಾರ್ಥಿಕವಾದ ಪ್ರಯೋಜನವೇ ಅಲ್ಲದೆ ನಮ್ಮ ಮತದ ವಿದ್ಯಾರ್ಥಿಗಳಿಗೆ ಭವ್ಯವಾದ ವಸತಿಗೃಹವು ಶಾಶ್ವತವಾಗಿ ದೊರೆಯುವಂತೆ ಅನುಗ್ರಹವಾಯಿತು. ಶ್ರೀ ಸನ್ನಿಧಿಗೆ ಸಮಾಜದ ವಿದ್ಯಾಭಿವೃದ್ಧಿ ವಿಷಯದಲ್ಲಿರುವ ಅಸಾಧಾರಣವಾದ ಅಭಿಮಾನವನ್ನು ಇದು ವ್ಯಕ್ತಪಡಿಸುತ್ತಿರುವುದು ಮಾತ್ರವೇ ಅಲ್ಲದೆ ಶ್ರೀ ಮಹಾಸ್ವಾಮಿಯ ಆಗಮನವನ್ನು ಚಿರಕಾಲ ಸ್ಮರಣೀಯವಾಗಿ ಮಾಡುವ ಪ್ರತಿಷ್ಠಾಪನೆಯಾಗಿ ಪರಿಣಮಿಸಿತು. ನಿರತಿಶಯವಾದ ಅಮೋಘ ಕೃಪಾಕಟಾಕ್ಷವನ್ನು ನಮ್ಮಗಳ ಮೇಲೆ ಇಟ್ಟು ಶ್ರೀ ಮಹಾಪಾದವು ಈ ಪಟ್ಟಣದಲ್ಲಿ ನೆಲಸಿದ್ದ ೩ ತಿಂಗಳ ಕಾಲವು ನಮಗೆ ೩ ದಿನಗಳಂತೆ ಪರಿಣಮಿಸಿತು. ರಾಜಾಧಿರಾಜ ಸಂಮಾನ್ಯವಾದ ಶ್ರೀಪಾದವನ್ನು ಸೇವಿಸುವಲ್ಲಿ ನಮ್ಮಗಳಿಂದ ಯಾವ ಲೋಪವು ಸಂಭವಿಸಿದ್ದರೂ ಭಕ್ತವಾತ್ಸಲ್ಯದಿಂದ ಅದನ್ನು ಕ್ಷಮಿಸುವ ಅನುಗ್ರಹವಾಗಬೇಕೆಂದು ಶತಶಃ ಪ್ರಾರ್ಥಿಸುತ್ತೇವೆ.

ಹಿಂದೆ ಶ್ರೀಮದಲ್ಲಮ ಮಹಾಪ್ರಭುವು ಕಲ್ಯಾಣಪಟ್ಟಣಕ್ಕೆ ದಯಮಾಡಿಸಿದಾಗ್ಗೆ ದ್ವಿತೀಯ ಶಂಕರರೂ ಪಂಚಸ್ಪರ್ಶಸಿದ್ಧಿಯುಳ್ಳವರೂ ಆಗಿದ್ದ ಬಸವೇಶ್ವರರು ಕೂಡ ಬಹಿಸ್ಸತ್ಕರಣಗಳಿಂದ ಆ ಮಹಾಪ್ರಭುವನ್ನು ತೃಪ್ತಿಪಡಿಸಲಾರದೆ ಹೋಗಿರುವಾಗ, ಆ ಪ್ರಭುವಿನ ಪರಾವತಾರವಾದ ಶ್ರೀ ಮಹಾಪಾದವನ್ನು ಅಲ್ಪಸಾಮರ್ಥ್ಯವುಳ್ಳ ನಾವುಗಳು ಕೈಂಕರ್ಯದಿಂದ ತೃಪ್ತಿಪಡಿಸಲು ಸಾಧ್ಯವಲ್ಲ. ಆದರೂ ಭಕ್ತಿಭಾವದಿಂದ ಮಾಡಲ್ಪಟ್ಟಿರುವ ನಮ್ಮ ಯಥಾಶಕ್ತಿ ಸೇವೆಯು ಶ್ರೀ ಪಾದಕ್ಕೆ ಅರ್ಪಿತವಾಗಿ ಶ್ರೀಪಾದಕೃಪಾಶೀರ್ವಾದಗಳು ಸದಾ ನಮ್ಮಗಳ ಮೇಲೆ ಪ್ರಸರಿಸುತ್ತಿರಬೇಕೆಂದು ಬೇಡಿ ಸಹಸ್ರಪ್ರಣಾಮಗಳನ್ನು ಮಾಡುವ,

ಬೆಂಗಳೂರು ಪುರನಿವಾಸಿಗಳಾದ ಅಶೇಷ ವೀರಶೈವ ಸಮಾಜದವರು.

ಇದಕ್ಕೆ ಪ್ರತ್ಯುತ್ತರವನ್ನು ಶ್ರೀಗಳವರು ಅಪ್ಪಣೆ ಕೊಡಿಸುವಾಗ—ಇದುವರೆಗೂ ಬೆಂಗಳೂರಿನ ವೀರಶೈವಸಮಾಜದವರೂ ಇತರರೂ ಶ್ರೀಜಗದ್ಗುರುಸಂಸ್ಥಾನದ ವಿಷಯದಲ್ಲಿ ಅಭಿಮಾನವನ್ನೂ ಭಕ್ತಿಯನ್ನೂ ವಹಿಸಿ ಮಾಡಿದ ಸತ್ಕಾರ ಗೌರವಗಳಿಗಾಗಿಯೂ ವಿತರಣೆಯಿಂದ ಕೂಡಿದ ಏರ್ಪಾಡುಗಳಿಗಾಗಿಯೂ ತಮಗುಂಟಾದ ಸಂತೋಷವನ್ನು ಪ್ರದರ್ಶನಮಾಡಿದುದಲ್ಲದೆ ವಿದ್ಯಾರ್ಥಿನಿಲಯ ಕಾರ್ಯಕ್ಕಾಗಿ ಸಂಸ್ಥಾನದ ಕಡೆಯಿಂದ ಕೊಡಲ್ಪಟ್ಟ ಧನಸಹಾಯವನ್ನು ಕುರಿತು ನೀವುಗಳು ವಿಶೇಷ ಸಂತೋಷವನ್ನು ವ್ಯಕ್ತಪಡಿಸಿರುತ್ತೀರಷ್ಟೆ. ಅವೆಲ್ಲಾ ಭಕ್ತಜನರ ಭಾಗ್ಯವೇ ಆಗಿರುತ್ತದೆ. ಸಂಸ್ಥಾನಕ್ಕೆ ಭಕ್ತರು ಸಮರ್ಪಣೆ ಮಾಡುವ ಧನರಾಶಿಯೇ ನಮ್ಮಿಂದ ಹೀಗೆ ವಿನಿಯೋಗಿಸಲ್ಪಡುತ್ತಿದೆಯೇ ಹೊರತು ಮತ್ತೇನೂ ಅಲ್ಲ. ಅದುಕಾರಣ ಇದರ ಫಲಕ್ಕೆಲ್ಲಾ ಉದಾರಚಿತ್ತರಾದ ಭಕ್ತಮಂಡಲಿಯವರೇ ಕಾರಣಭೂತರೆಂತಲೂ ನಾವು ಇಲ್ಲಿದ್ದ ೩ ತಿಂಗಳ ಕಾಲವು ೩ ದಿನಗಳಂತೆ ಪರಿಣಮಿಸಿತೆಂದು ನೀವು ವಿಜ್ಞಾಪಿಸಿರುವುದು ಭಕ್ತಮಂಡಲಿಯವರಾದ ನಿಮ್ಮಲ್ಲಿರತಕ್ಕ ಭಕ್ತಿವಿಶೇಷವನ್ನು ವ್ಯಕ್ತಪಡಿಸುತ್ತಿದೆಯೆಂತಲೂ, ವಿದ್ಯಾರ್ಥಿನಿಲಯದ ಕೆಲಸವನ್ನು ಸಮಾಜಬಾಂಧವರೆಲ್ಲರೂ ಸೇರಿ ಉತ್ಸಾಹದಿಂದ ಕೊನೆಮುಟ್ಟಿಸಬೇಕೆಂತಲೂ, ನಿಮ್ಮ ಸದ್ಭಕ್ತಿ ಸದಾಚಾರ ಶ್ರದ್ಧೆ ಸದ್ಗುಣಾತಿಶಯ ಇವುಗಳೆಲ್ಲಾ ಇತೋಪ್ಯತಿಶಯವಾಗಿ ಅಭಿವೃದ್ಧಿಗೊಳ್ಳಲೆಂತಲೂ ಅಪ್ಪಣೆಕೊಡಿಸಿ, ದಿ|| ಬ|| ಕೆ. ಪಿ. ಶೆಟ್ಟರಿಗೂ ಅಲ್ಲಿ ನೆರೆದಿದ್ದ ರೆವಿನ್ಯು ಸೆಕ್ರಟರಿ ಮಿ|| ಬಿ. ರಾಮಸ್ವಾಮಯ್ಯನವರೇ ಮೊದಲಾದ ಸರ್ಕಾರದ ಅಧಿಕಾರಿಗಳಿಗೂ, ಶೆಟ್ಟರು ಯಜಮಾನರು ಮೊದಲಾದ ಪ್ರಮುಖ ಮಹಾಜನರಿಗೂ ಪುಷ್ಪಮಾಲೆಗಳನ್ನು ಹಾಕಿಸಿ, ಮಹಾ ಜಯಘೋಷವಾಗುತ್ತಿರುವಾಗ್ಗೆ ಹೊರಕ್ಕೆ ದಯಮಾಡಿಸಿ, ಪುಷ್ಪಾಂದೋಳಿಕೆಯನ್ನು ಅಧಿರೋಹಿಸಿದರು. ಮಠದ ಸಕಲ ಬಿರುದಾವಳಿಗಳೊಡನೆಯೂ ವಾದ್ಯವೈಭವಗಳೊಡನೆಯೂ ಹಿಂದೆ ಮುಂದೆ ನೆರೆದು ಹೋಗುತ್ತಿದ್ದ ನಾಲ್ಕಾರು ಸಹಸ್ರ ಪ್ರಜಾಸಮೂಹದಿಂದಲೂ, ಸರ್ಕಾರದ ಪಕ್ಷದಿಂದ ಬಂದಿದ್ದ ಸಿಲ್ಲೇದಾರ್ ಸ್ವಾರರು ಬ್ಯಾಂಡು ಮೊದಲಾದುವುಗಳಿಂದಲೂ ಕೂಡಿದ ಉತ್ಸವವು ಸತ್ರದಿಂದ ಹೊರಟಕೂಡಲೇ ದಾರಿಯುದ್ದಕ್ಕೂ ಅಲ್ಲಲ್ಲಿಗೆ ಜನಸ್ತೋಮವು ಹೆಚ್ಚುತ್ತಾ ಉತ್ಸವವು ೩ ಫರ್ಲಾಂಗುಗಳುದ್ದಕ್ಕೆ ವ್ಯಾಪಿಸಿತು. ಉತ್ಸವದ ಹಿಂದಿನ ದಿನ ರಾತ್ರಿ ೩-೪ ಗಂಟೆಗಳ ಕಾಲ ಅತ್ಯುತ್ತಮವಾದ ಮಳೆಯು ಅನಿರೀಕ್ಷಿತವಾಗಿ ಹುಯ್ದು ಪಟ್ಟಣವನ್ನೆಲ್ಲಾ ತಂಪುಮಾಡಿದ್ದುದರಿಂದಲೂ ಉತ್ಸವದ ದಿನ ಬಿಸಿಲುಪ್ರಖರವಾಗಿರದೆ ನೆಳಲಾಗಿದ್ದುದರಿಂದಲೂ ಉತ್ಸವವು ಮತ್ತಷ್ಟು ವೈಭವದಿಂದಲೂ ಆನಂದದಿಂದಲೂ ನಡೆಯುವುದಕ್ಕೆ ಸಹಾಯವಾಯಿತು. ಅರಳೆಪೇಟೆಗೆ ಉತ್ಸವವು ಪ್ರವೇಶಿಸಿದ ಕೂಡಲೇ ಮೊಟ್ಟಮೊದಲು ತಮ್ಮ ಮನೆಯ ಮುಂಗಡೆಯಲ್ಲಿ ಮ|| ಎಂ. ಬಸವಯ್ಯನವರು ಫಲಪುಷ್ಪಾದಿಗಳನ್ನು ತಟ್ಟೆಗಳಲ್ಲಿ ಶ್ರೀಗಳವರಿಗೆ ಅರ್ಪಿಸಿ, ಆಶೀರ್ವಾದವನ್ನು ಪಡೆದರು. ಅಲ್ಲಿಂದ ಉದ್ದಕ್ಕೂ ಸ್ವಮತ ಪರಮತದವರನೇಕರು ಹೀಗೆಯೇ ಭಕ್ತಿಸಮರ್ಪಣವನ್ನು ತಂತಮ್ಮ ಅಂಗಡಿಗಳ ಮನೆಗಳ ಮುಂದೆ ಅನಂತವಿಧವಾಗಿ ನೆರವೇರಿಸಿದರು. ಮ|| ಸರಾಫ್ ಬಸಪ್ಪನವರು ಫಲಪುಷ್ಪಗಳಿಂದ ತುಂಬಿದ ಬೆಳ್ಳಿಯ ತಟ್ಟೆಯನ್ನೇ ಅರ್ಪಿಸಿದರು. ಎಲೆಕ್ಟ್ರಿಕ್ ಕಂಟ್ರಾಕ್ಟರ್ ಮ|| ವೀರಭದ್ರಪ್ಪನವರು ರೂ. ಗಳಿಂದ ತುಂಬಿದ ಒಂದು ನೂತನ ತರವಾದ ಬೆಳ್ಳಿಯ ಕೀಲಿನ ಸಂಪುಟವನ್ನು ಸಮರ್ಪಿಸಿದರು. ಕರುಣಾಕಟಾಕ್ಷದಿಂದಲೂ ಮಂದಹಾಸದಿಂದಲೂ ಆಶೀರ್ವಚನಗಳಿಂದಲೂ ಶ್ರೀಗಳವರು ಉಭಯಪಾರ್ಶ್ವದಲ್ಲೂ ಇದ್ದ ಭಕ್ತಸ್ತೋಮವನ್ನು ಅನುಗ್ರಹಿಸುತ್ತ ಪಟ್ಟಣದ ಎಲ್ಲೆಗ ಸೇರುವಹೊತ್ತಿಗೆ ಮಧ್ಯಾಹ್ನ ೧೨||| ಗಂಟೆಯ ಹೊತ್ತಾಯಿತು. ಮಧ್ಯಮಾರ್ಗದಲ್ಲಿ ಕೋರ್ಟು ಕಚೇರಿಗಳಿಗೆ ಹೋಗಬೇಕಾಗಿದ್ದ ಅಧಿಕಾರಿ ಮಂಡಲದವರನೇಕರು ಅಪ್ಪಣೆಪಡೆದು ತೆರಳಿದ್ದರು. ಸ್ವಮತದ ಶಿಷ್ಯಮಂಡಲಿಯವರೇ ಅಲ್ಲದೆ ಮ|| ಕೆ. ಎಚ್. ರಾಮಯ್ಯನವರು, ಸಿಟಿ ಮ್ಯುನ್ಸಿಪಾಲಿಟಿಯ ಚೀಫ್ ಆಫೀಸರು ಮ|| ರಾಘೋಜೆರಾವ್ ಬಿ.ಎ.ಯವರು, ವೈಸ್‌ಪ್ರೆಸಿಡೆಂಟ್ ಮಿ|| ಅಬ್ಬಾಸ್ ಖಾನ್ ರವರು, ಮ|| ಮಂಡಿ ಹರಿಯಣ್ಣನವರು, ತಾಲ್ಲೂಕು ಅಮಲ್ದಾರರು, ಮ|| ಎಂ ಸುಬ್ಬಯ್ಯ ಬಿ.ಎ. ಯವರು, ಮ|| ಆದಪ್ಪನವರೇ ಮೊದಲಾದ ದೊಡ್ಡ ಮನುಷ್ಯರುಗಳು ಕಡೆಯವರೆಗೂ ಜತೆಯಲ್ಲೇ ಇದ್ದರು. ಪೊಲೀಸ್ ಸೂಪರಿಂಟೆಂಡೆಂಟರು ಇನ್ಸ್‌ಪೆಕ್ಟರು ಮೊದಲಾದ ಅಧಿಕಾರಿಗಳು ತಮ್ಮ ಪೊಲೀಸ್ ಪರಿವಾರದೊಂದಿಗೆ ಎಲ್ಲೆಕಟ್ಟಿನವರೆಗೂ ಜತೆಯಲ್ಲೇ ಬಂದಿದ್ದು ಉತ್ಸವವನ್ನು ಶಾಂತವಾಗಿ ನೆರವೇರಿಸಿ ಶ್ರೀಗಳವರ ಆಶೀರ್ವಾದವನ್ನು ಪಡೆದು ತೆರಳಿದರು. ಆದಿನ ಕಲಾಶಾಲೆಯ ವೀರಶೈವ ಪ್ರೌಢವಿದ್ಯಾರ್ಥಿಗಳಿಗೆಲ್ಲಾ ಪ್ರಿನ್ಸಿಪಾಲರು ರಜಾಕೊಟ್ಟಿದ್ದುದರಿಂದ ವಿದ್ಯಾರ್ಥಿ ಬೃಂದವೆಲ್ಲವೂ ಉತ್ಸವದೊಡನೆ ಬಂದಿದ್ದಿತು. ಕಾಲೇಜ್ ಪ್ರೊ|| ಮಿ|| ಫುಲ್ಲರ್‌ರವರು ದಾರಿಯಲ್ಲಿ ಬಂದು ಶ್ರೀಗಳವರಿಗೆ ವಂದಿಸಿ, ವಿದ್ಯಾಪ್ರಸಾರದಲ್ಲಿ ಶ್ರೀಗಳವರಿಗೆ ಇರುವ ಅದ್ವಿತೀಯವಾದ ಅಭಿಮಾನೌದಾರ್ಯಗಳನ್ನು ಕುರಿತು ಅಭಿನಂದಿಸಿ, ತಮ್ಮ ವಂದನೆಯನ್ನು ತಿಳಿಸಿದರು. ಯಥೋಚಿತ ವಚನಗಳಿಂದ ಶ್ರೀಗಳು ಅವರಿಗೆ ಪ್ರತ್ಯುತ್ತರವನ್ನು ಕೊಟ್ಟು ಸಂಭಾವಿಸಿದರು. ಅವರಂತೆಯೇ ಮೈಸೂರು ಬ್ಯಾಂಕ್ ಮ್ಯಾನೇಜರ್ ಮಿ|| ರೋಜ್‌ರವರು, ಕಾಲೇಜ್ ಪ್ರೊಫೆಸರ್ ಮಿ|| ಸಾಂಬಶಿವಯ್ಯರ್‌ರವರೇ ಮೊದಲಾದ ಅನೇಕ ಅಧಿಕಾರಿಗಳು ಶ್ರೀಗಳವರ ವಿದ್ಯಾಪಕ್ಷಪಾತತೆಯನ್ನೂ ಸರ್ವ ಸಮದೃಷ್ಟಿಯನ್ನೂ ಪರಮತ ಸಹನೆಯನ್ನೂ ಶಾಂತಿಪ್ರಭಾವವನ್ನೂ ಕುರಿತು ಅವರಲ್ಲಿ ತಮಗಿರುವ ಗೌರವವನ್ನು ವ್ಯಕ್ತಪಡಿಸಿ ವಂದಿಸಿ ತೆರಳಿದರು. ಒಕ್ಕಲಿಗರ ಮಂಡಲಿಯವರು ವೀರಶೈವರ ವಿದ್ಯಾರ್ಥಿ ನಿಲಯದ ಕಾರ್ಯಾರಂಭಕ್ಕಿಂತಲೂ ಮೊದಲೇ ತಮ್ಮ ವಿದ್ಯಾರ್ಥಿಭವನ ನಿರ್ಮಾಣಕ್ಕೆ ಆರಂಭಿಸಿರುವವರಾದುದರಿಂದ, ಮೊದಲು ಆರಂಭಿಸಲ್ಪಟ್ಟ ಆ ಕೆಲಸವು ತನೆಯದಕ್ಕಿಂತ ಮೊದಲೇ ಮುಗಿದು ಸಿದ್ಧವಾಗುವ ಹಾಗೆ ಮಾಡಿಕೊಳ್ಳುವುದು ಅವರಿಗೆ ಭೂಷಣವೂ ಕರ್ತವ್ಯವೂ ಆಗಿರುವುದೆಂತ ಮ|| ಕೆ. ಎಚ್. ರಾಮಯ್ಯನವರೇ ಮೊದಲಾದವರಿಗೆ ಅಪ್ಪಣೆಕೊಡಿಸಿ, ಬಳಿಕ ಬೆಂಗಳೂರು ಪ್ರಜೆಗಳೆಲ್ಲರೂ ಪರಸ್ಪರ ಸಹೋದರಭಾವದಿಂದ ನಡೆದುಕೊಳ್ಳುತ್ತಿರುವುದು ಅವರಿಗೂ ದೇಶಕ್ಕೂ ಕ್ಷೇಮದಾಯಕವೆಂತಲೂ, ಸರ್ವಸದ್ಗುಣ ಮಣಿಕರಂಡಕರಾಗಿರುವ ಶ್ರೀಮನ್ಮಹಾರಾಜರ ಸದ್ಧರ್ಮಪ್ರಭುತ್ವಕ್ಕೆ ಶ್ರೀಮದ್ಯುವರಾಜರವರು ಅಗ್ರಜರ ಛಾಯಾನುವರ್ತಿಗಳಾಗಿ ಸಹಾಯಕರಾಗಿದ್ದುಕೊಂಡು ಪ್ರಜಾರಂಜಕವಾಗಿ ರಾಜ್ಯಭಾರವನ್ನು ನಡೆಯಿಸುತ್ತಿರುವ ಪ್ರಭಾವದಿಂದ ದೇಶವು ಶ್ರೇಯೋಭಾಜನವಾಗಿ ಅಭಿವೃದ್ಧಿಗೊಳ್ಳುತ್ತಿರುವುದೆಂತಲೂ, ಸಕಲ ಪ್ರಜೆಗಳೂ ಹೀಗೆಯೇ ರಾಜಭಕ್ತಿಯಿಂದ ನಡೆದುಕೊಂಡು ಇತೋಪ್ಯತಿಶಯವಾದ ಸೌಭಾಗ್ಯವೃದ್ಧಿಯನ್ನು ಪಡೆದುಕೊಳ್ಳುವವರಾಗಬೇಕೆಂತಲೂ, ಇನ್ನೂ ಎಷ್ಟೋ ವಿಷಯಗಳನ್ನು ಹೇಳಲೂ ಕೇಳಲೂಬೇಕೆಂಬ ಕುತೂಹಲವು ನಮಗಿರುವಂತೆಯೇ ಇಲ್ಲಿ ನಿಂತಿರುವ ಭಕ್ತಮಂಡಲಿಯವರಿಗೂ ಸಹ ಇರಬಹುದಾದರೂ ಕಾಲವು ಮೀರುತ್ತಬಂದುದರಿಂದ ಕೂಡಲೇ ಪ್ರಯಾಣಮಾಡಬೇಕಾಗಿದೆಯೆಂತಲೂ ಹೇಳಿ, ಎಲ್ಲರಿಗೂ ಶುಭಾಶೀರ್ವಾದಗಳನ್ನಿತ್ತು ಸರ್ವರೂಜಯಾನಂದ ಘೋಷಗಳನ್ನು ಮಾಡುತ್ತಿರುವಲ್ಲಿ ಕಂಟೋನ್ಮೆಂಟಿನ ಎಲ್ಲೆಯೊಳಕ್ಕೆ ಪ್ರವೇಶಿಸಿದರು. ಅಲ್ಲಿಯ ಪೊಲೀಸಧಿಕಾರಿಗಳೇ ಮೊದಲಾದವರು ಇದಿರ್ಗೊಂಡು ಉತ್ಸವವನ್ನು ಹಲಸೂರಿನ ಕಡೆಗೆ ಸಾಗಿಸಿದರು. ಸೂಳೆಕೆರೆ ಮತ್ತು ಹಲಸೂರಿನ ವೀರಶೈವ ಮಹಾಜನರೂ ಇತರ ಮತದ ಭಕ್ತಜನರೂ ಸಹ ಉತ್ಸವದೊಡನೆ ಹೊರಟು, ಅಲ್ಲಲ್ಲಿಗೆ ಫಲಪುಷ್ಪಾದಿಗಳನ್ನು ಭಕ್ತಿಪೂರ್ವಕ ಸಮರ್ಪಿಸಲು, ಯಥಾಪ್ರಕಾರ ಅವರನ್ನೂ ಅನುಗ್ರಹಿಸಿ, ಮಧ್ಯಾಹ್ನ ೩ ಗಂಟೆಗೆ ಕಂಟೋನ್ಮೆಂಟಿನ ಎಲ್ಲೆಯನ್ನು ಬಿಟ್ಟು ಅಟ್ಟೂರು ಮುಕ್ಕಾಮನ್ನು ಕುರಿತು ರಥಾರೂಢರಾಗಿ ದಯಮಾಡಿಸಿದರು.

ರೆವಿನ್ಯು ಸೆಕ್ರಟರಿ ಮ|| ರಾಮಸ್ವಾಮಯ್ಯನವರು ಕಡೆಯಲ್ಲಿ ಅಪ್ಪಣೆಕೊಡಿಸಿದಂತೆ ಬೆಂಗಳೂರು ಪಟ್ಟಣವು ಮೂರು ತಿಂಗಳಿಂದಲೂ ಶ್ರೀಗಳ ಸಾಮೀಪ್ಯದಿಂದ ಒಂದು ವಿಧವಾದ ಶೋಭೆಯನ್ನು ಪಡೆದು ಗಿಜಿಗಿಜಿಯೆನ್ನುತಿದ್ದಿತು. ಇನ್ನು ಬಿನ್ನೆನ್ನುತ್ತದೆ. ಶ್ರೀ ಸ್ವಾಮಿಗಳವರ ಆಗಮನದಿಂದ ಬೆಂಗಳೂರು ನಿವಾಸಿಗಳಾದ ವೀರಶೈವರು ಮಾತ್ರವೇ ಅಲ್ಲ; ಈ ದಕ್ಷಿಣಪ್ರಾಂತದ ಅನೇಕಾನೇಕ ಸಹಸ್ರ ಜನರು ದರ್ಶನಾಶೀರ್ವಾದಗಳಿಗೆ ಪಾತ್ರರಾಗಲವಕಾಶವಾಯಿತು. ಇಂಥ ಸುಯೋಗವನ್ನು ಒದಗಿಸಿಕೊಟ್ಟ ಬೆಂಗಳೂರು ಪೇಟೆಯ ಮಹಾಜನರು ಸ್ಮರಣೀಯರಾದರು. ಶ್ರೀ ಗುರುಸಾನ್ನಿಧ್ಯದಿಂದ ಭಕ್ತಮಂಡಲಿಗೆ ಧಾರ್ಮಿಕನೈತಿಕ ವಿಷಯಕಗಳಾದ ಅನೇಕ ಬೋಧೆಗಳು ಲಭಿಸಿದುವು. ಪಾರಮಾರ್ಥಿಕ ಪ್ರಯೋಜನದ ಜತೆಗೆ ಚಿರಸ್ಮರಣೀಯವಾದ ವಿದ್ಯಾರ್ಥಿನಿಲಯ ಪ್ರಾಪ್ತಿರೂಪವಾದ ಐಹಿಕ ಫಲವೂ ಲಭಿಸಿದಂತಾಯಿತು. ಇಲ್ಲಿ ಕಟ್ಟಲ್ಪಡಬೇಕಾಗಿದ್ದ ವಿದ್ಯಾರ್ಥಿ ನಿಲಯಕ್ಕೆ ೨೦ ಸಹಸ್ರ ರೂ.ಗಳನ್ನು ಅನುಗ್ರಹಿಸಬೇಕೆಂದು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದವರು ಈಗ್ಗೆ ೨ ವರ್ಷಗಳ ಕೆಳಗೆ ಶ್ರೀಗಳನ್ನು ಪ್ರಾರ್ಥಿಸಿಕೊಂಡಿದ್ದರು. ಅದಕ್ಕೆ ಆಗಲೇ ಸ್ವಾಮಿಗಳವರು ಅಂಗೀಕಾರವನ್ನಿತ್ತು ೫ ಸಹಸ್ರ ರೂ.ಗಳನ್ನು ಆ ಕೂಡಲೇ ದಯಪಾಲಿಸಿದ್ದರು. ಬೆಂಗಳೂರಿಗೆ ತಾವು ದಯಮಾಡಿಸಿದ ನಂತರ ಕಾರ್ಯದ ಘನತೆಯನ್ನು ಪ್ರತ್ಯಕ್ಷವಾಗಿ ಅರಿತುದರಿಂದ ಒಟ್ಟು ಸಂಸ್ಥಾನದ ಕಡೆಯಿಂದ ೪೦ ಸಹಸ್ರ ರೂಪಾಯಿಗಳನ್ನು ಅನುಗ್ರಹಿಸುವುದಕ್ಕೆ ಅಪ್ಪಣೆಮಾಡಿ, ಅದರಲ್ಲಿ ೩೦ ಸಹಸ್ರ ರೂ.ಗಳನ್ನು ಆಗಲೇ ಸಲ್ಲಿಸಿಬಿಟ್ಟರು. ಮ|| ಅತ್ತಿಬೆಲೆ ಸಿಡಲ ಬಸವಪ್ಪನವರು ಇದೇ ಕಟ್ಟಡದ ಕೆಲಸಕ್ಕಾಗಿ ಸಮರ್ಪಿಸಿರುವ ೧೦ ಸಹಸ್ರ ರೂ.ಗಳೂ ಸರ್ಕಾರದ ವಶದಲ್ಲಿಡಲ್ಪಟ್ಟಿರುವುವು. ಇದರಿಂದ ಕಟ್ಟಡಕ್ಕೆ ೫೦ ಸಹಸ್ರ ರೂ.ಗಳು ಕೂಡಿದಂತಾದುವು. ಇದಕ್ಕೆ ಸಮನಾದ ಭಾಗವು ಈ ಕಟ್ಟಡದ ಸಾಹಾಯ್ಯಕ್ಕೆ ಸರ್ಕಾರದವರಿಂದ ಕೊಡಲ್ಪಡಬೇಕಾಗಿರುವುದರಿಂದ ಅದೂ ಸೇರಿ ೧ ಲಕ್ಷ ರೂ.ಗಳ ವೆಚ್ಚದಿಂದ ಆಗುವ ಈ ನಿಲಯವು ಪುರಕ್ಕೆ ಅಲಂಕಾರಭೂತವೂ ನೂರಾರು ಮಂದಿ ವೀರಶೈವ ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವೂ ಆದ ಮನೋಹರ ಮಂದಿರವಾಗುವುದು. ಇದಕ್ಕೆ ತಕ್ಕ ಜಾಗವನ್ನು ಒಳ್ಳೆಯ ಅನುಕೂಲವಾದ ಸ್ಥಲದಲ್ಲಿ ೩ ಎಕರೆಯಷ್ಟನ್ನು ಸರ್ಕಾರದವರು ಅನುಗ್ರಹಿಸಿರುತ್ತಾರೆ. ಇದರ ಶಂಕುಸ್ಥಾಪನ ಮಹೋತ್ಸವವು ಶ್ರೀಗಳವರು ಬೆಂಗಳೂರಿನಲ್ಲಿರುವಾಗಲೇ ಅವರ ಪ್ರತ್ಯಕ್ಷದಲ್ಲೇ ನಡೆದಿದ್ದರೆ ಚೆನ್ನಾಗಿದ್ದಿತು. ಸಮಾಜದ ಮುಂದಾಳುಗಳು ಅದಕ್ಕೆ ಅವಕಾಶವನ್ನು ಕಲ್ಪಿಸಲಾರದೆ ಹೋದುದು ವಿಷಾದಸ್ಥಾನವು. ಇನ್ನಾದರೂ ಅದನ್ನು ತಕ್ಕ ರೀತಿಯಿಂದ ಬೇಗನೆ ಎಂದರೆ ಶ್ರೀಗಳವರು ಆ ಪ್ರಾಂತದ ಸಂಚಾರವನ್ನು ಮುಗಿಸಿಕೊಂಡು ದಯಮಾಡಿಸುವುದರೊಳಗಾಗಿ ಮುಗಿಯಿಸಿ, ಅವರಿಗೆ ಬಿನ್ನಯಿಸಿಕೊಂಡರೆ ಕಟ್ಟಡದ ಕಾರ್ಯವು ಬೇಗನೆ ಆರಂಭಿಸಲ್ಪಡಲವಕಾಶವಾಗಿ ಶ್ರೀಗಳವರ ಮನಸ್ಸೂ ತೃಪ್ತಿಗೊಳ್ಳುವುದರಲ್ಲಿ ಸಂಶಯವಿಲ್ಲ. ಶ್ರೀಗಳವರು ತಾವು ಸಂಚರಿಸಿದ ಕಡೆಗಳಲ್ಲೆಲ್ಲಾ ಮುಖ್ಯವಾಗಿ ವಿದ್ಯಾಪ್ರೋತ್ಸಾಹದ ಕಡೆಗೆ ವಿಶೇಷಾವಧಾನವನ್ನು ಕೊಡುತ್ತ ಬಂದಿರುವುದು ದೇಶವಿಖ್ಯಾತವಾಗಿರುವುದು. ಬೆಂಗಳೂರಿಗೆ ದಯಮಾಡಿಸಿ ಅವರು ನಡೆಯಿಸಿದ ಕಾರ್ಯವಾದರೊ ಅವರ ವಿದ್ಯಾಭಿಮಾನದ ಕೀರ್ತಿಯನ್ನು ದಶದಿಕ್ಕಿಗೂ ಪ್ರಸರಿಸುವಂತಾಯಿತು. ಸದ್ಯಃ ಕಾಲದಲ್ಲಿ ದೇಶಾಭ್ಯುದಯವನ್ನು ಕೋರುವವರೆಲ್ಲರೂ ಪ್ರಜೆಗಳಲ್ಲಿ ವಿದ್ಯೆಯನ್ನು ಮೊಳಲು ಹರಡಬೇಕಾಗಿರುತ್ತದೆ. ಪ್ರಭುತ್ವದವರ ಮುಖ್ಯಸಂಕಲ್ಪವಾದರೂ ಇದೇ ಆಗಿರುತ್ತದೆ. ಪ್ರಭುತ್ವದವರ ಪ್ರಯತ್ನಕ್ಕೆ ಪ್ರಜಾಪಕ್ಷದವರೂ ನೆರವಾಗುವುದಾದರೆ ಕಾರ್ಯಸಿದ್ಧಿಯು ಬೇಗನೆ ಆಗುತ್ತದೆ. ಪ್ರಜೆಗಳನ್ನು ಒಂದು ವಿಧದಲ್ಲಿ ಉದ್ಧರಿಸುವ ಭಾರವು ಪ್ರಭುಗಳ ಮೇಲೆ ಬಿದ್ದಿರುವಂತೆಯೇ ಧರ್ಮಾಚಾರ್ಯರುಗಳಾದ ಪೀಠಾಧಿಪತಿಗಳ ಮೇಲೂ ಒಂದು ವಿಧದಲ್ಲಿ ಬಿದ್ದಿರುತ್ತದೆ. ಮತಸ್ಥರು ಕಾಣಿಕೆಯ ರೂಪವಾಗಿ ಪೀಠಾಧಿಪತಿಗಳಿಗೆ ಸಲ್ಲಿಸುವ ಧನಕ್ಕೆ ಸದ್ವಿನಿಯೋಗವೆಂದರೆ ಈಗಣ ಈ ನಮ್ಮ ಜಗದ್ಗುರುಗಳು ಮಾಡುತ್ತಿರುವ ವಿತರಣ ವೈಲಕ್ಷಣ್ಯವೇ ಆಗಿರುತ್ತದೆ. ಇವರಂತೆ ಸಂಸ್ಥಾನದ ದ್ರವ್ಯೋಪಪತ್ತಿಯನ್ನು ಪ್ರಜೆಗಳ ಜ್ಞಾನಾಭಿವೃದ್ಧಿಯ ಕಡೆಗೆ ವಿಶೇಷವಾಗಿ ವಿನಿಯೋಗಿಸತಕ್ಕವರು ದೇಶದಲ್ಲಿ ಅತ್ಯಂತ ವಿರಳರು. ಯಾವ ಸಮಾಜದಲ್ಲಿ ಯಾವ ದೇಶದಲ್ಲಿ ಇಂಥ ಧಾರ್ಮಿಕ ಗುರುಗಳ ಸಂಖ್ಯೆಯು ಹೆಚ್ಚುವುದೋ ಆ ಸಮಾಜವೂ ದೇಶವೂ ಬಲುಬೇಗನೆ ಮುಂಬರಿಯುತ್ತ ಬರುವುದೆಂಬುದಕ್ಕೆ ಸಂಶಯವಿಲ್ಲ. ಇಂಥ ಗುರುಗಳು ಯಾವ ಮತದವರೇ ಆಗಿದ್ದರೂ ಲೋಕಪ್ರಿಯರೂ ಪ್ರಭುಪ್ರಿಯರೂ ಆಗಿರುವರೆಂಬುದಕ್ಕೆ ಬೆಂಗಳೂರಿಗೆ ಶ್ರೀಗಳವರು ದಯಮಾಡಿಸಿದಾಗ್ಗೆ ಸರ್ವಮತದವರ ಗೌರವಗಳಿಗೂ ಪ್ರಭುತ್ವದವರ ಮನ್ನಣೆಗೂ ಪಾತ್ರರಾಗಿದ್ದುದೇ ದೃಷ್ಟಾಂತವು. ಇಂಥ ಅಸಾಧಾರಣ ಗುಣಾತಿಶಯಗಳೂ ಘನತೆಯೂ ಈ ನಮ್ಮ ಜಗದ್ಗುರುಗಳಲ್ಲಿರುವುದರಿಂದಲೇ ಭಕ್ತಜನರು ತಾವು ತಾವಾಗಿ ಬಂದು ಬಿನ್ನಹಮಾಡಿ ತಂತಮ್ಮ ಸ್ಥಲಗಳಿಗೆ ಅವರನ್ನು ಬಿಜಮಾಡಿಸಿಕೊಂಡು ಹೋಗುವುದಲ್ಲದೆ ಮನದಣಿಯೆ ಭಿಕ್ಷೆಯನ್ನಿತ್ತು ಕನಕವೃಷ್ಟಿಯನ್ನು ಕರೆಯಿಸುತ್ತಿದ್ದಾರೆ. ನಮ್ಮ ಮತದ ಇತರ ಆಚಾರ್ಯಪೀಠಗಳೂ ಇಂಥ ವೈದುಷ್ಯಪರಿಶೋಭಿತ ವಿದ್ಯಾಭಿಮಾನಿ ದೇಶಿಕವರ್ಯರುಗಳಿಂದ ಅಲಂಕೃತವಾಗಿರುವಂತಾದರೆ ಸಮಾಜಕ್ಕೆ ಎಷ್ಟು ಫಲವಾಗುವುದೆಂಬುದನ್ನು ಹೇಳಬೇಕಾಗಿಲ್ಲ. ಜಗದೀಶಾನುಗ್ರಹದಿಂದ ಅಂಥ ಭಾಗ್ಯವು ಲಭಿಸಬೇಕು. ಶ್ರೀ ಜಯದೇವ ದೇಶಿಕೇಂದ್ರ ಮಹಾಸ್ವಾಮಿಗಳವರ ಚರಣಸೇವಾಯೋಗವು ಸಮಾಜಕ್ಕೆ ಇನ್ನೂ ಚಿರಕಾಲ ಲಭಿಸಿಕೊಂಡಿರುವಂತೆ ಜಗದೀಶ್ವರನು ಅನುಗ್ರಹಿಸಬೇಕು. ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲಗಳಾಗಿರುವ ಇನ್ನೂ ಕೆಲ ಮುಖ್ಯ ಸ್ಥಲಗಳಲ್ಲಿ ಶ್ರೀಗಳವರ ಅನುಗ್ರಹದಿಂದ ವಿದ್ಯಾರ್ಥಿನಿಲಯಗಳೂ ಪಾಠಶಾಲೆಗಳೂ ವಿದ್ಯಾಭಿವೃದ್ಧಿ ಫಂಡು ಮೊದಲಾದುವುಗಳೂ ಸ್ಥಾಪಿಸಲ್ಪಡುವಂತಾಗಬೇಕು. ಸದ್ಯಃ ಶ್ರೀಗಳವರು ಚಿತ್ತೈಸಿರುವ ಕೋಲಾರ ಡಿಸ್ಟ್ರಿಕ್ಟಿನಲ್ಲೂ ಇಂಥ ನೂತನ ಪ್ರತಿಷ್ಠಾಪನೆ ಯಾವುದಾದರೂ ನಡೆಯದೆ ಇರಲಾರದು. ಶ್ರೀಗಳವರ ಆಶ್ರಯದಿಂದ ಡಿಸ್ಟ್ರಿಕ್ಟಿಗೊಂದೊಂದರಂತೆ ನಮ್ಮ ಸಮಾಜದ ವಿದ್ಯಾನಿಲಯಗಳಿರುವ ಹಾಗೆ ಮಾಡಿಕೊಳ್ಳಲು ಅಲ್ಲಲ್ಲಿಯ ಮಹಾಜನರೆಲ್ಲರೂ ತ್ವರೆಪಡುವುದಕ್ಕೆ ಇದು ತಕ್ಕ ಸಮಯವು. ಅಂಥ ಪ್ರಯತ್ನಕ್ಕೆ ಶ್ರೀಗಳವರು ಸಂತೋಷದಿಂದ ಸಾಹಾಯ್ಯಮಾಡಿಯಾರಲ್ಲದೆ ಪ್ರಭುತ್ವದವರೂ ನೆರವಾಗುವರು. ಇಂಥ ಕಾಲವನ್ನು ಯಾರೂ ವ್ಯರ್ಥವಾಗಿ ಹೋಗಗೊಡಬಾರದು. ದೇಶಕ್ಕೆ ಹಿತಕರವಾದ ಶ್ರೀ ಜಯದೇವ ಜಗದ್ಗುರು ಮಹಾಸ್ವಾಮಿಗಳವರ ಪರ್ಯಟನ ಮಹೋತ್ಸವವು ವಿಜಯಶಾಲಿಯಾಗಿ ಚಿರಕಾಲ ನಡೆಯುತ್ತಿರಲೆಂದು ಕೋರುವೆವು.

ನೋಟೀಸ್.

ಶಿವಮೊಗ್ಗಾ ಡಿಸ್ಟ್ರಿಕ್ಟು ಹೊನ್ನಾಳಿ ತಾಲ್ಲೂಕು ಸಾಸವೆಹಳ್ಳಿ ಮಾಗಣೇಕ್ಯಾಸಿನ ಕೆರೆಯುಳ್ಳಿರುವ ಕ್ಷೌರದವರ ಮಲ್ಲಪ್ಪನ ಮಕ್ಕಳು ನಿಂಗಪ್ಪ ಮತ್ತು ಈತನ ತಮ್ಮಂದಿರು ಬಸಪ್ಪ, ಮಹದೇವಪ್ಪ ಇವರುಗಳು ಈ ಮೂಲ್ಕ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನಮ್ಮ ಖಾಸಾ ಅವಿಭಕ್ತ ಅಣ್ಣಂದಿರು ರುದ್ರಪ್ಪ ಮತ್ತು ನಾಗಪ್ಪ ಇವರುಗಳು ಶೀಘ್ರ ನಮಗೆ ಮೋಸಮಾಡಿ ತಾವು ಅನ್ಯಾಯವಾದ ಫಾಯಿದೆಹೊಂದಬೇಕೆಂಬ ದುರುದ್ದೇಶದಿಂದ ಒಟ್ಟು ಕುಟುಂಬದ ಸೊತ್ತುಗಳನ್ನು ಅಡವು ಕ್ರಯ ವಗೈರೆ ಮೂಲಕ ಪರಾಧೀನ ಮಾಡುವದರಲ್ಲಿದ್ದಾರೆ. ಕುಟುಂಬದ ಸೊತ್ತುಗಳನ್ನು ಪರಾಧೀನಮಾಡಲು ಯಾವ ಕಾರಣವೂ ಯಾ ಅವಶ್ಯಕತೆಯೂ ಇಲ್ಲದೆಯಿದ್ದಾಗ್ಯೂ, ನಮಗೆ ಮುಂದೆ ಸೊತ್ತುಗಳು ಸಿಕ್ಕಗೊಡದಂತೆ ಮಾಡಬೇಕೆಂಬ ಉದ್ದೇಶದಿಂದಲೂ, ತಾವೇ ಅವುಗಳನ್ನು ಮನಸ್ಸಿನಂತೆಯಾಗಿ ವಿಕ್ರಯಿಸಿ ಹಣಕಟ್ಟಿಕೊಳ್ಳಬೇಕೆಂಬ ದುರಾಶೆಯಿಂದಲೂ ಇವರು ಈ ರೀತಿ ಸೊತ್ತುಗಳನ್ನು ಪರಭಾರೆ ಮಾಡಲು ಅವಲಂಭಿಸಿರುತ್ತಾರೆ. ಇವರಿಂದ ಸೊತ್ತುಗಳನ್ನು ಯಾವಾದರೂ ಬರಸಿಕೊಳ್ಳುವತಕ್ಕವರಿಗೆ ಅಂಥಾ ಪರಾಧೀನವು ಯಾವಾಗ್ಯೂ ಸಿದ್ಧವಾಗಲಿಕ್ಕಿಲ್ಲವೆಂದೂ ಅದರಿಂದ ನಮಗೆ ಉಂಟಾಗುವ ಖರ್ಚು ನಷ್ಟಗಳಿಗೆ ಅವರೇ ಜವಾಬ್ದಾರರಾಗಬೇಕೆಂದೂ ಈ ಮೂಲಕ ತಿಳಿಯಪಡಿಸಿರುತ್ತೆ.

ನಿಂಗಪ್ಪನ ಹೆಬ್ಬೆರಳಿನ ರುಜು.

ಪತ್ರವ್ಯವಹಾರ.

ಗುಳೇದಗುಡ್ಡ ಲಿಂಗಾಯತಜನರ ಸಭೆ.

ಪಾತಾಲಘುರಪಿಸೇವ್ಯೋಭವತಿ ನಲ್ಪ ಸತೋಮಹಾನಪಿಸಮೃದ್ಧಃ |
ಕೂಪೋಂತಃಸ್ವಾದುಜಲಃ ಪ್ರೀತ್ಯೈಲೋಕಸ್ಯ ನ ಸಮುದ್ರಃ ||

- ಸುಭಾಷಿತ -

ಜಗತ್ತಿನ ಪ್ರತಿಯೊಂದು ಖಂಡಗಳಲ್ಲಿಯೂ ದೇಶಗಳಲ್ಲಿಯೂ ನಡೆದ ಕ್ರಾಂತಿಗಳು ಚಿಕಿತ್ಸಾರೂಪವಾದ ವಿಷಯವನ್ನೇ ಸೂಚಿಸುತ್ತವೆ. ಆದರೂ ಪ್ರತಿಯೊಂದು ಜನಾಂಗವೂ ತಮ್ಮತಮ್ಮ ಉನ್ನತಿಯನ್ನೇ ಬಯಸುತ್ತಿರುವ ಸಂಗತಿಯು ನಿರ್ವಿವಾದವಾಗಿರುವದು. ಇದರಂತೆಯೇ ಈ ನಮ್ಮ ಪ್ರಾಂತದಲ್ಲಿ ವಾಸವಾಗಿರುವ ಪ್ರತಿಯೊಂದು ಸಮಾಜವೂ ಧರ್ಮಸುಧಾರಣೆ, ವಿದ್ಯಾದೇಳ್ಗೆ, ಜ್ಞಾನದ ಪ್ರಸಾರಣೆ, ಸಂಘಶಕ್ತಿಯ ಬೆಳವಣಿಗೆ ಮೊದಲಾದ ವಿಷಯಗಳಲ್ಲಿ ಹಗಲಿರುಳೂ ಪ್ರಯತ್ನಿಸುತ್ತಿರುವ ಸಂಗತಿಯು ಯಾರಿಗೆತಾನೇ ಸಂತೋಷವನ್ನುಂಟುಮಾಡಲಿಕ್ಕಿಲ್ಲ. ವಿಜಾಪುರ ಜಿಲ್ಲೆಯಲ್ಲಿ ಜನವಸತಿಯಿಂದಲೂ ವ್ಯವಹಾರ ಉದ್ದಿಮೆಯಿಂದಲೂ ಇನೆಯದಾದ ಈ ಊರಿ (ಗುಳೇದಗುಡ್ಡ)ನಲ್ಲಿ ಈ ವರೆಗೆ ಯಾವ ಪ್ರಕಾರವಾದ ಸುಧಾರಣೆಯೂ ಇಲ್ಲದೆ ಅಂಧಕಾರಮಯವಾಗಿದ್ದಿತು. ಇದನ್ನು ಇಲ್ಲಿಯ ವೀರಶೈವ ಮುಂದಾಳುಗಳೂ ಸುಧಾರಣೆಯ ಅಭಿಲಾಷಿಗಳೂ ಆದ ಶಿ. ಚನ್ನಮಲ್ಲಯ್ಯ ಹಿರೇಮಠ, ಮಿ|| ಮುರಿಗೆಪ್ಪ ಜಿಲ್ಲ ಮಲ್ಲಪ್ಪ ಘಟ್ಟದ, ದಾನಪ್ಪ ರಾಜನಾಳ, ಸಂಗಪ್ಪ ಕಡ್ಲಿಮಟ್ಟಿ, ಗುರುಮೂರ್ತೆಪ್ಪ ಸಾನೇಗಿಲ ವಿರೂಪಾಕ್ಷಪ್ಪ ಭಾವಿ, ಸಿದ್ದಪ್ಪ ಶೀಲವಂತ, ರಾಚಪ್ಪ ಪಟ್ಟಣಶೆಟ್ಟಿ ಇವರೇ ಮೊದಲಾದವರು ಶ್ರೀಮಂತ ಸಂಕರಪ್ಪ ಸಕ್ಕರಿ, ಶಿ| ರುದ್ರಯ್ಯಸ್ವಾಮಿ ಪುರಾಣಿಕ ಆಕ್ಟಿಂಗ ಚೀಫ್ ಆಫೀಸರ ಮೊದಲಾದ ಸುಶಿಕ್ಷಿತರನ್ನು ಬರಮಾಡಿಕೊಂಡು ನಡೆಸಿದ ಆಲೋಚನೆಯ ಕಮಿಟಿಯಲ್ಲಿ ಈ ಊರಲ್ಲಿರುವ ಜನವಸತಿಯಲ್ಲಿ ⅔ ಜನರು ವೀರಶೈವರಿದ್ದು ಮುಖ್ಯ ಕೈಗಾರಿಕೆಯ ವ್ಯವಹಾರವೆಲ್ಲಾ ಇವರ ಕೈಯಲ್ಲಿಯಿತ್ತದೆ. ಸಂಘಶಕ್ತಿಯ ತತ್ವಕ್ಕನುಸಾರವಾಗಿ ನಡೆದು ಬಾಗಲಕೋಟೆ ವಿಜಾಪುರ ಮೊದಲಾದ ಸ್ಥಳಗಳಲ್ಲಿಯಂತೆ ವ್ಯವಹಾರದಲ್ಲಿ "ಧರ್ಮದಾಯ ಪದ್ಧತಿ" ಎಂಬುದನ್ನು ಇಲ್ಲಿ ಇಟ್ಟು ಅದನ್ನು ಒತ್ತಟ್ಟಿಗೆ ಕೂಡಿಸಿ ಸುಧಾರಣೆಗೆ ವಿನಿಯೋಗಿಸುತ್ತ ನಡೆದಲ್ಲಿ ಬಡವೀರಶೈವರ ಮಕ್ಕಳು ಕ್ಷಿಪ್ರದಲ್ಲಿಯೇ ಮುಂದುವರಿಯುವರು. ದೊಡ್ಡ ವ್ಯವಹಾರವಿದ್ದದ್ದರಿಂದ ೨-೩ ಸಾವಿರ ರೂ. ಗಳ ವರೆಗೆ ಪ್ರತಿವರ್ಷವೂ ಹಣ ಕೂಡುವ ಸಂಭವವಿದೆ, ಹೀಗೆ ಯಾವತ್ತರ ಅನುಮೋದನದ ಪ್ರಕಾರ ಧರ್ಮದಾಯವನ್ನು ಇಡಬೇಕೆಂದು ನಿರ್ಣಯವಾಯಿತು. ಶಿ| ರುದ್ರಯ್ಯಸ್ವಾಮಿ ಪುರಾಣಿಕಮಠ ಇವರ ಆಗಮನದ ಫಲವೇ ಇದು. ನಾಲ್ಕು ದಿವಸಗಳ ಮೊದಲು ಕೂಡಿದ ಸಭೆಯಲ್ಲಿ ವಿದ್ಯೆಯ ಬೆಳವಣಿಗೆಯ ವಿಷಯದಲ್ಲಿ ಹಗಲಿರುಳೂ ಪ್ರಯತ್ನಿಸುತ್ತಿದ್ದ ಶ್ರೀ ನಿರಂಜನ ಹುಚ್ಚಪ್ಪಯ್ಯ ಮಹಾಸ್ವಾಮಿಗಳವರ ಸ್ಮಾರಕಕ್ಕಾಗಿ ಶ್ರೀ ಹುಚ್ಚೇಶ್ವರ ವಾಚನಾಲಯ ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಗೊತ್ತಾಗಿತ್ತು. ಈ ಸ್ಮಾರಕವನ್ನು ಮಾಡುವ ವಿಷಯದಲ್ಲಿ ಶಿ| ಆರ್. ಸಿ. ಪುರಾಣಿಕಮಠ ಇವರು ಬಹಳ ಪ್ರೋತ್ಸಾಹಿಸಿದರು. ಅನುಮತದಂತೆ ಈ ಎರಡು ಕಾರ್ಯಗಳ ಸ್ಥಾಪನೆಯ ಸಮಾರಂಭಗಳೂ ತಾರೀಖು ೧೧-೮-೧೯ ನೆ ದಿವಸ ಜರುಗಿಸಲ್ಪಟ್ಟವು. ವಾಚಕರೇ! ಇದು ಎಂಥ ಸಂತೋಷಜನಕವಾದ ಸಂಗತಿ? ಇವು ಈ ಊರ ವಿದ್ಯೋದಯಗಳಲ್ಲವೆ? ಅಪೂರ್ವ ಉದಯನೆಂದು ಯಾರು ಹೇಳರು? ಸಮಾರಂಭವು ಸುಯಂತ್ರಿತವಾಗಿ ಜರುಗಿಸಲ್ಪಟ್ಟದ್ದರಿಂದ ಅದರ ೪ ಶಬ್ದಗಳನ್ನು ಬರೆದು ಲೇಖನವನ್ನು ಮುಗಿಸುವೆನು. ಮೇಲೆ ಬರೆದ ತಾರೀಖಿನ ಸಮಾರಂಭಕ್ಕೆ ಬರಬೇಕೆಂದು ಹಲಕೆಲವು ಊರುಗಳ ಪ್ರಮುಖ ಸದ್ಗೃಹಸ್ಥರುಗಳ ಕಡೆಗೆ ಆಮಂತ್ರಣ ಪತ್ರಿಕೆಗಳು ಕಳುಹಿಸಲ್ಪಟ್ಟಿದ್ದವು. ಬಾಗಲಕೋಟೆ ವಿಜಾಪುರ ಕೆರೂರ ಬದಾಮಿ ಗದಗ ಮೊದಲಾದ ಸ್ಥಳಗಳಿಂದ ಅನೇಕಜನರು ಆಗಮಿಸಿದ್ದರು. ಗದಗಿನಿಂದ ಶ್ರೀಮಂತರೂ ಮುಂದಾಳುಗಳೂ ಆದ ರಾವಸಾಹೇಬ ವೀರಪ್ಪಣ್ಣ ಮಾನ್ವಿಯವರು ಬಂದಿದ್ದರು. ಇವರೊಡನೆ ಶ್ರೀ ಶಿವಯೋಗಮಂದಿರದ ಮ್ಯಾನೇಜರರಾದ ಮಿ|| ವೀರಬಸವಶ್ರೇಷ್ಠಿ ಬಿ ಎ. ಯವರೂ ಬಂದಿದ್ದರು. ರಾವಸಾ|| ರವರು ನಿಯಮಿತವೇಳೆಗೆ ಬರಲು ಊರ ಪ್ರಮುಖರೆಲ್ಲರೂ ಮೋಟಾರ ಬಂಡಿಯೊಡನೆ ಹೋಗಿ ಬ್ಯಾಂಡ ಮೊದಲಾದ ಮಂಗಲ ವಾದ್ಯಗಳೊಡನೆ ಎದುರ್ಗೊಂಡು ಸಭಾಮಂಟಪಕ್ಕೆ ಕರೆದುಕೊಂಡು ಬಂದರು. ವೀಧಿಗಳಲ್ಲಿ ಜನಸಂದಣಿಯು ವಿಶೇಷವಾಗಿದ್ದದರಿಂದ ಮೋಟಾರಬಂಡಿಯು ಅತಿ ಸಾವಕಾಶವಾಗಿ ಬಂದಿತು. ಆಗ ಅನೇಕರು ಇಂಥ ಮಹನೀಯರ ಆಗಮನದಿಂದಲೇ ಪುರೋಭಿವೃದ್ಧಿಯಾಗತಕ್ಕದೆಂದು ಆಲೋಚಿಸುತ್ತಿದ್ದರು. ಸಭಾಮಂಟಪವು ಕದಳೀಸ್ತಂಭಗಳಿಂದಲೂ ತಳಿರತೋರಣಗಳಿಂದಲೂ ಮಹನೀಯರ ಭಾವಚಿತ್ರಗಳಿಂದಲೂ ಮನೋಹರವಾಗಿ ವಿರಾಜಮಾನವಾಗಿದ್ದಿತು. ರಾವಸಾಹೇಬ ಮಾನವಿ ಮೊದಲಾದವರು ಸಭಾಮಂಟಪವನ್ನು ಪ್ರವೇಶಿಸಲು ಕರತಾಡನೆಯ ಆನಂದದಿಂದ ಅನುಗುಣವಾದ ಸ್ಥಾನಗಳಲ್ಲಿ ಎಲ್ಲರೂ ವಿಶ್ರಮಿಸಿದರು. ೫೦೦-೬೦೦ ಕ್ಕಿಂತಲೂ ಹೆಚ್ಚಾಗಿ ಪ್ರೇಕ್ಷಕರ ಸಂದಣಿಯಾದದ್ದರಿಂದ ಜನರ ಕಲಕಲಾಟವು ಬಹಳವಾಗಿತ್ತು. ಕೂಡಲೇ ಬಂದ ಯಾವತ್ತು ಜನರ ಸ್ವಾಗತಪರವಾಗಿಯೂ ಊರ ಊರ್ಜಿತಾವಸ್ಥೆಯನ್ನು ಬಯಸುವ ಪ್ರಥಮಸಭೆಯ ಉದ್ದೇಶಪರವಾಗಿಯೂ ಭಾಷಣವನ್ನು ಮನೋವೇಧಕವಾಗಿ ಮಾಡಿದರು. ಈ ಮಹಾ ಸಭೆಯಲ್ಲಿ ವಿದ್ಯಾವಂತರೂ ಶ್ರೀಮಂತರೂ ಅಧಿಕಾರಿಗಳೂ ಮಿಲಿತರಾಗಿದ್ದರು. ಅಧ್ಯಕ್ಷಸ್ಥಾನವನ್ನು ಸರಕಾರದವರಿಂದಲೂ ಮತ್ತು ಜನರಿಂದಲೂ ಮನ್ನಣೆಯನ್ನು ಪಡೆದ ರಾವಸಾಹೇಬ ವೀರಪ್ಪಣ್ಣಾ ಮಾನ್ವಿಯವರು ವಹಿಸಬೇಕೆಂದು ಸೂಚನೆಯನ್ನು ತಂದರು. ಅದು ಮಿ|| ರಾಚಪ್ಪ ಪಟ್ಟಣಶೆಟ್ಟಿ ಮಿ|| ಹಾಲಪ್ಪ ಹಾವೇರಿ ಬಿ. ಎ, ಎಲ್. ಎಲ್. ಬಿ., ವಕೀಲ ಬಾಗಲಕೋಟೆ ಇವರೀರ್ವರೂ ಅನುಮೋದಿಸಿದರು. ಆಗ ರಾವಸಾ| ರವರು ನಿಗರ್ವಪರವಾದ ಭಾಷಣಮಾಡಿ ಅಧ್ಯಕ್ಷಸ್ಥಾನವನ್ನು ವಹಿಸಿದರು.

೧. ವೆ|| ಗುದ್ದೆಪ್ಪಶಾಸ್ತ್ರಿಗಳವರು ಲೌಕಿಕ ಪಾರಮಾರ್ಥಿಕ ವಿದ್ಯೆಗಳ ವಿಷಯವಾಗಿ ಅನೇಕ ವ್ಯಾವಹಾರಿಕ ಉದಾಹರಣಗಳಿಂದ ಪುಷ್ಟೀಕರಿಸಿ ಇಂಥಾ ಧಾರ್ಮಿಕ ಸಂಸ್ಥೆಗಳು ಸುಧಾರಣೆಗೆ ಅನುಕೂಲವೆಂದು ಭಾಷಣಮಾಡಿದರು. ೨. ಮಿ|| ವೀರಬಸವಶ್ರೇಷ್ಠಿ ಬಿ ಎ. ಯವರು ಧರ್ಮವು ಮನುಷ್ಯನಿಗೆ ಬೇಕು. ಅದು ಎಲ್ಲ ಉನ್ನತಿಗೆ ಕಾರಣಭೂತವಾಗಿದೆ. ನಮ್ಮ ಸಮಾಜದಲ್ಲಿಯ ಕಾಮುಪ್ರವೃತ್ತಿಯು ಧರ್ಮ-ವಿದ್ಯೆಗಳ ಅನುಷಂಗದಿಂದ ದೂರವಾಗುವವು.

ಮೈಸೂರು ದಸರಾ ಎಗ್ಸಿಬಿಷನ್ ಸೆಕ್ರೆಟರಿಯವರು ಎಗ್ಸಿಬಿಷನ್ ಸಮೀಪಿಸುತ್ತಿರುವುದನ್ನು ಜನಗಳ ಜ್ಞಾಪಕಕ್ಕೆ ತರಬೇಕೆಂದು ಕೋರುತ್ತಾರೆ. ಎಗ್ಸಿಬಿಷನ್ನಿಗೆ ಹೋಗತಕ್ಕ ಸಾಮಾನುಗಳೆಲ್ಲಾ ಸೆಪ್ಟೆಂಬರ್ ೧೫ ನೆ ತಾರೀಖಿನೊಳಗಾಗಿ ರವಾನಿಸಲ್ಪಡಬೇಕು. ಅವುಗಳನ್ನು ಆಯಾ ಡಿಸ್ಟ್ರಿಕ್ಟು ಎಕನಾಮಿಕ್ ಸೂಪರಿಂಟೆಂಡೆಂಟರುಗಳಿಗಾಗಲೀ ಅಥವಾ ನೇರಾ ಸೆಕ್ರೆಟರಿಯವರಿಗಾಗಲೀ ಕಳುಹಿಸಿ ಕೊಡಬಹುದು. ಈ ವರುಷ ಎಗ್ಸಿಬಿಷನ್ ಮೈಸೂರು ಸಂಸ್ಥಾನಕ್ಕೆ ಮಾತ್ರ ಓಪನ್ ಆಗಿದೆ. ಕೆಲಸಗಾರರಿಗೆಲ್ಲಾ ತಮ್ಮ ಮೆಹನತ್ತನ್ನು ತೋರಿಸಿಕೊಳ್ಳುವುದಕ್ಕೆ ಒಳ್ಳೇ ಸಮಯವಾಗಿರೋಣದರಿಂದ ಅವರುಗಳೆಲ್ಲಾ ಕೇವಲ ಮುತುವರ್ಜಿಯಿಂದ ಕೆಲಸಮಾಡಿ ಎಗ್ಸಿಬಿಷನ್ ಜಯವಾಗುವಹಾಗೆ ಮಾಡುತ್ತಾರೆಂದು ನಂಬಲ್ಪಟ್ಟಿದೆ.

ಇಂಥ ಸಂಸ್ಥೆಗಳು ಚಿರಾಯುವಾಗಿ ನಡೆಯುವದು ಅವಶ್ಯವದೆ. ಹೀಗೆ ತಮ್ಮ ಅಸ್ಖಲಿತವಾಣಿಯಿಂದ ಪರಿಣಾಮಪರವಾಗಿ ಭಾಷಣಮಾಡಿದರು. ೩. ಮುರಿಗೆಯ್ಯನವರು ಇಂಗಿನ ಸೆಕ್ರೆಟರಿ ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಫಂಡ್ ಬಾಗಲಕೋಟೆ—ಇವರು ತಮ್ಮಲ್ಲಿಯ ಫಂಡಿನ ಜೀವನತಂತ್ರವನ್ನೂ ಅದರಿಂದ ತಮ್ಮಲ್ಲಿ ಉಂಟಾದ ಸಂಸ್ಕೃತಶಾಲಾ-ಇಂಗ್ಲೀಷಶಾಲಾ-ಮಹಾಸಭೆ, ಧರ್ಮದಲ್ಲಿ ಜಾಗ್ರತೆ ಮೊದಲಾಗಿ ಆಗಿರುವ ಲಾಭಗಳನ್ನೂ ಹೇಳಿದರು. ಮತ್ತು ಧರ್ಮಾದಾಯ ಪದ್ಧತಿಯಿಂದ ತಮ್ಮಲ್ಲಿ ೩೫ ಸಾವಿರದ ಮೇಲೆ ಫಂಡು ಕೂಡಿರುವದೆಂದು ಸಮಾಜ ಅಭಿವೃದ್ಧಿ-ವಿದ್ಯೆಯ ಬೆಳವಣಿಗೆ ಇವುಗಳ ವಿಷಯದಲ್ಲಿ ನಿರಂತರವಾಗಿ ಪರಿಶ್ರಮ ವಹಿಸಿದ ಶ್ರೀ ನಿರಂಜನ ಹುಚ್ಚೇಶ್ವರ ಮಹಾಸ್ವಾಮಿಗಳ ವಿಷಯವನ್ನೂ ವಿವರಿಸಿ ಅವರ ಅವಸಾನ ಕಾಲದಲ್ಲಿ ವಿದ್ಯಾವಿಷಯದಲ್ಲಿ ಅವರಿಗೆ ಗುಳೇದಗುಡ್ಡ ಜನರು ಕೊಟ್ಟ ಅಭಿವಚನವನ್ನು ನಡೆಯಿಸತಕ್ಕದ್ದೆಂದು ಹೇಳಿದರು. ೪. ಮಿ|| ಹಾಲಪ್ಪನವರು ಸದರ ಮಹಾಸ್ವಾಮಿಗಳಿಗೆ ವಿದ್ಯಾವಿಷಯದಲ್ಲಿದ್ದ ಪ್ರೀತಿಯನ್ನು ತಿಳಿಸಿ ಹೇಳಿದರು. ಅವರು ವಿದ್ಯಾಭಿವೃದ್ಧಿಯ ಮಾರ್ಗದರ್ಶಕರಾದ್ದರಿಂದ ಅವರ ಹೆಸರಿನಿಂದಲೇ ಈ ಸಂಸ್ಥೆಯು ನಡೆಯತಕ್ಕದ್ದೆಂದು ಹೇಳಿದರು. ಅದಕ್ಕೆ ಸರ್ವರೂ ಈ ಸಂಸ್ಥೆಗೆ "ಶ್ರೀ ಹುಚ್ಚೇಶ್ವರ ಲಿಂಗಾಯತ ವಿದ್ಯಾವರ್ಧಕಸಂಘ" ಎಂದು ಕರೆಯಬೇಕೆಂದು ಹೇಳಿದರು. ಇದು ಪಾಸಾಯಿತು. ಆ ಮೇಲೆ ಈ ಹಣವು ಸಂಸ್ಕೃತ-ಇಂಗ್ಲೀಷ ವಿದ್ಯಾರ್ಜನೆ ಮಾಡುವ ವೀರಶೈವರಿಗೆ ವಿನಿಯೋಗಿಸಲ್ಪಡಬೇಕೆಂದು ಮಿ|| ಹಾಲಪ್ಪನವರೂ ಮಿ|| ದಾನಪ್ಪನವರೂ ಸೂಚಿಸಿದರು. ಈ ೨ನೆಯ ಠರಾವು ಸರ್ವಾನುಮತದಿಂದ ಪಾಸಾದದ್ದಲ್ಲದೆ ಉಳಿದ ಕೆಲವು ಠರಾವುಗಳು ಸಂಸ್ಥೆಯ ವಿಷಯವಾಗಿದ್ದವು. ಈ ಫಂಡಿನ ಕಮಿಟಿಯಲ್ಲಿ ನಿಯಮಿತ ಅಧಿಕಾರಿಗಳು—ಮಿ|| ವೀರಬಸವಶ್ರೇಷ್ಠಿ ಬಿ. ಎ., ಪ್ರಸಿಡೆಂಟ್, ಮಿ|| ದಾನಪ್ಪ ರಾಜನಾಳ, ವೈ. ಪ್ರ. ಮಿ|| ಸಂಗಪ್ಪ ಕಡ್ಲಿಮಟ್ಟಿ ಟ್ರಿಜರರ್, ಮಿ|| ರಾಚಪ್ಪ ಪಟ್ಟಣಶೆಟ್ಟಿ ಸೆಕ್ರೆಟರಿ. ೫. ಮಿ|| ಎಸ್. ಎಂ. ಪಾಟೀಲ ಬಿ. ಎ. ಚೀಫ್ ಆಫೀಸರ್ ಬಾಗಲಕೋಟೆ ಇವರು ವಾಚನಾಲಯದ ಆವಶ್ಯಕತೆಯನ್ನೂ ಲಾಭವನ್ನೂ ಕುರಿತು ಉಪನ್ಯಾಸ ಮಾಡಿದರು. ವಾಚನಾಲಯ ಪೂಜಾಸಮಾರಂಭವಾಗಿ ಅಧ್ಯಕ್ಷ ಮಹಾಶಯರಿಂದ ತೆರೆಯುವ ಕಾರ್ಯವು ಮಾಡಲ್ಪಟ್ಟಿತು. ಇದರ ಮುಂದಿನ ಕೆಲಸದ ಬಗ್ಗೆ ಮಿ|| ಸಿದ್ಧವೀರಸ್ವಾಮಿ ಪುರಾಣಿಕಮಠ ಶಾಲಾಧ್ಯಾಪಕ ಪ್ರಸಿಡೆಂಟ್, ಮಿ|| ಮಲಕಾಜಪ್ಪ ಹಾವಳಗಿ ಸೆಕ್ರೆಟರಿ ನಿಯಮಿಸಲ್ಪಟ್ಟರು. ೬. ಶ್ರೀ|| ರು. ಚ. ಪುರಾಣೀಕ ಅಕ್ಟಿಂಗ್ ಚೀಫ್ ಆಫೀಸರು ಗುಳೇದಗುಡ್ಡ ಇವರು—ವಿದ್ಯಾಪ್ರಿಯರೂ ದೀನಬಂಧುಗಳೂ ಆದ ಕೈ|| ವಾಸ ಗುಬ್ಬಿ ತೋಟದಪ್ಪನವರ ಮತ್ತು ಇಡೀ ಲಿಂಗಾಯತ ಸಮಾಜಕ್ಕೆ ತಮ್ಮ ಸಂಸ್ಥಾನವನ್ನು ಅರ್ಪಿಸಿದ ಕಲಿಕರ್ಣರಾದ ಶ್ರೀಮಂತ ಲಿಂಗಪ್ಪ ಜಯಪ್ಪ ದೇಸಾಯಿ ಶಿರಸಂಗಿಯವರ, ಮತ್ತು ಇವರಂತೆ ಕೀರ್ತಿಭಾಜನರಾದ ಶ್ರೀಮಂತ ಸಕ್ಕರೆ ಕರಡಪ್ಪನವರು ತಿಪ್ಪಯ್ಯನವರು ಮೊದಲಾದ ಮಹನೀಯರುಗಳ ದಾತೃತ್ವ-ಸಮಾಜ ಪ್ರೀತಿ ಮೊದಲಾದ ವಿಷಯವಾಗಿ ಶ್ಲಾಘಿಸಿ ರಾ|| ಸಾ|| ಮಾನವಿಯವರ ಕೀರ್ತಿ ಎಂಬ ಬೆಳದಿಂಗಳು ಬೆಳಗಿ ಯಾವತ್ತು ಸಮಾಜದವರಿಗೆ ಸುಖಾನಂದವನ್ನು ಉಂಟುಮಾಡಲೆಂದೂ ಅವರಿಗೆ ಸಾರ್ವಜನಿಕ ಕಾರ್ಯಹಿತಚಿಂತನೆಯಿಂದ ಹೆಚ್ಚೆಚ್ಚು ಬಹುಮಾನವು ಸಿಗಲೆಂದೂ ಅಭಿನಂದಿಸಿದರು. ಆ ಮೇಲೆ ಅಧ್ಯಕ್ಷ ಮಹಾಶಯರು ಈ ಸಭೆಯಿಂದ ಸ್ಥಾಪಿಸಿದ ಸಂಘದ ವಾಚನಾಲಯದ ಮಹತ್ವದ ಬಗ್ಗೆ ಹೇಳಿದರು. ಮತ್ತು ಈ ಆನಂದಪರವಾದ ಸುದ್ದಿಯನ್ನು ನಮ್ಮ ಸಮಾಜದಲ್ಲಿ ಮುಂದಾಳುಗಳಾದ ಶ್ರೀ ನಿರಂಜನ ಕುಮಾರಸ್ವಾಮಿ ಹಾನಗಲ್ಲ ಶಿವಯೋಗಮಂದಿರ, ರಾ|| ಬಾ|| ರುದ್ರಗವಡರು ಅರಟಾಳ I.S.O. ಬೆಳಗಾವ, ರಾ|| ಬಾ|| ಶಾಂತವೀರಪ್ಪ ಮೆಣಸಿನಕಾಯಿ ಧಾರವಾಡ, ಮಿ|| ಆರ್. ಎಸ್. ಹಿರೇಮಠ ಡಿ|| ಡಿ|| ಕಲೆಕ್ಟರ ವಿಜಾಪುರ-ಈ ಮಹನೀಯರಿಗೆ ತಿಳುಹಿಸಬೇಕೆಂದು ಹೇಳಿ ತಾವು ಈ ಸಂಸ್ಥೆಗೆ ೫೦೦ ರೂ. ಗಳನ್ನು ಕೊಡುತ್ತೇವೆಂದೂ ಅಥವಾ ರಕಮನ್ನು ತಮ್ಮ ಕಡೆಗೆ ಈ ಸಂಸ್ಥೆಯ ಹೆಸರಿನಿಂದ ಜಮಾ ಮಾಡಿಕೊಂಡು ಪ್ರತಿವರ್ಷ ಬಡ್ಡಿ ಕೊಡುವೆವೆಂದೂ ಮತ್ತು ತಾವು ಈ ಸಂಸ್ಥೆಯ ಮೆಂಬರಾಗುವೆನೆಂದೂ ಹೇಳಿದರು. ವಾಚಕರೇ! ಈ ಉದಾರಶ್ರೀಮಂತರ ಧರ್ಮಬುದ್ಧಿಯು ಅನುಕರಣೀಯವಲ್ಲವೆ? ಆ ಮೇಲೆ ಮಿ|| ಮುರಿಗೆಪ್ಪನವರು ಜೇರ್ಮ ಪ್ರೆಸಿಡೆಂಟ್ ಮುನಸಿಪಾಲಿಟಿ ಇವರ ವತಿಯಿಂದ ಮಿ|| ರಾಚಪ್ಪ ಪಟ್ಟಣಶೆಟ್ಟಿ ಇವರು ರಾವಸಾಹೇಬರ ಆಗಮನದ ಮತ್ತು ಉದಾರತನದ ವಿಷಯವಾಗಿ ಹೇಳಿ, ಈ ಮಹನೀಯರು ಈ ಸಭೆಯ ಕಾರ್ಯವನ್ನು ಸುಗಮವಾಗಿ ನಡಿಸಿ ಕೀರ್ತಿಭಾಜನರೂ ಸ್ಥಾಪಕರೂ ಆಗಿರುತ್ತಾರೆಂದು ಎಲ್ಲರ ವತಿಯಿಂದ ಅವರ ಆಭಾರಮನ್ನಿಸಿದರು. ಇದರಂತೆ ಮಿ|| ಬ್ಯಾಳಿ, ಮಿ|| ನಾಗರಾಳ, ಹುನಗುಂದ ಮೊದಲಾದವರ ಆಭಾರಮನ್ನಿಸಿ ಸರ್ವರಿಗೂ ಹಾರ ತುರಾಯಿ ತಾಂಬೂಲಗಳು ಸಮರ್ಪಿಸಲ್ಪಟ್ಟವು. ವಿಜಯಶಾಲಿಗಳಾದ ಜಾರ್ಜ ಬಾದಶಹರ ಮತ್ತು ರಾವಸಾಹೇಬ ಮಾನ್ವಿಯವರ ಹೆಸರುಗಳಿಂದ ತ್ರಿವಾರ ಜಯಘೋಷವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ಸಮಾಜಹಿತೈಷಿಗಳೇ! ಜನವಸತಿಯು ಹೆಚ್ಚಾಗಿರುವಂಥ ಮತ್ತು ವ್ಯವಹಾರ ಉದ್ದಿಮೆಗಳು ವಿಫುಲವಾಗಿ ನಡೆಯುವಂಥ ಸಣ್ಣಪುಟ್ಟ ಸ್ಥಳಿಕರು ಈ ತರದ ಸಂಸ್ಥೆಗಳನ್ನು ತಂತಮ್ಮಲ್ಲೂ ಮಾಡಿಕೊಳ್ಳುವದರಿಂದ ಹಿಂದೆ ಉಳಿದವರೆಲ್ಲರೂ ಮುಂದೆ ಬರಲಿಕ್ಕೆ (ಸುಧಾರಿಸಲಿಕ್ಕೆ) ಅನುಕೂಲವಾದೀತೆಂದು ಹೇಳಿ ಈ ಲೇಖನವನ್ನು ಮುಗಿಸುವೆನು.

ಸುಧಾರಣೆಯ ಅಭಿಲಾಷಿ, ಓರ್ವ ಪ್ರೇಕ್ಷಕ.

ಯುದ್ಧದ ಫೋಟೋಗಳು.

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯಿತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಕಮ್ವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ.

ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್,

ಬಲೆಯಂತಿರುವ ಬನಿಯನ್.

ಈ ಬನಿಯನ್ನುಗಳನ್ನು ಹಸನಾದ ಗಟ್ಟಿ ನೂಲಿನಿಂದ ಸೀಮೆಯಲ್ಲಿ ತಯಾರಿಸಿದ್ದು ಇವನ್ನು ಬೇಸಿಗೆಯ ಕಾಲದಲ್ಲಿ ಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವವು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು. ಎಲ್ಲಾ ಬಣ್ಣಗಳಲ್ಲಿಯೂ ಸಿಗುವವು.

ಕ್ರಯ 1 ಕ್ಕೆ 0—12—0.
12 ಕ್ಕೆ 8—0—0.

ವಿಳಾಸ—ರಾಸ್ ವಾಚ್ ಅಂಡ್ ಕೊ,
29 ಇರುಳಪ್ಪನ ಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಟಿನ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2-13.0, 25 ಕ್ಕೆ 5.3.0,

ನಮ್ಮ ವಿಳಾಸ:—ಶ್ರೀ ಸೀತಾರಾಘವ
36 ವೈದ್ಯಶಾಲಾ, ಮೈಸೂರು.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 38

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಳ್ಳೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲಿ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ಮಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ)

11 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

“ವೀರಶೈವರಿಗೆ ಸಂಗ್ರಾಹ್ಯವಾದ ಫೋಟೊ”

ಶ್ರೀ ಶಿವಯೋಗಿಗಳ ಸಂಘ:—ಭಾಗ್ಯಶಾಲಿ ಜನರು ಹಣವು ಖರ್ಚು ಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಿಳೂರ, ಹಾನಗಲ್ಲ, ಹಾಲಕೇರಿ, ಬಿಜಾಪುರ, ನಿಡಸೋಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀ ಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೋ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ಪ್ರತಿಗೆ ರೂ. ೧. ಸಾದಾ ೮ ಆ.

ಹೊಸ ಫೋಟೊ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನಚಕ್ರ ಪಡಕೊಂಡ ಅತ್ಯಂತ ಸುಂದರವಾದ ಫೋಟೊ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದದಾಯಕ ಫೋಟೊ ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ವೀರಭದ್ರದೇವರು:—ವೀರಶ್ರೀಯಿಂದ ತುಂಬಿದ ತೇಜಃಪುಂಜವಾದ ಫೋಟೊ ಕ್ರಯ ಫುಲ್ಲಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಶ್ರೀ ಕಾಶೀಕ್ಷೇತ್ರದರ್ಶನ:—ಇದರಲ್ಲಿ ಶಿವಚಿನ್ಹಾಂಕಿತ ನಕ್ಷೆದಲ್ಲಿ ೧ ಶ್ರೀ ವಿಶ್ವನಾಥ, ಶ್ರೀ ಅನ್ನಪೂರ್ಣಾದೇವಿ, ಶ್ರೀ ಸಾಕ್ಷಿವಿನಾಯಕ, ಶ್ರೀ ಕಾಲಭೈರವ ಇವೆ ಮೊದಲಾದ ಮುಖ್ಯ ೧೫ ದೇವತಾ ಫೋಟೊ ಇದ್ದ ಮೂಲಕ ಶ್ರೀ ಕ್ಷೇತ್ರ ಕಾಶೀಯ ಸಾಕ್ಷಾದ್ದರ್ಶನ ನಿತ್ಯ ಆಗುವವು. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ. ೧೪×೧೦ ಸೈಜದ ಹಾಳೆನ ಚಿತ್ರದ ಕ್ರಯ ೪ ಆಣೆ.

ಶ್ರೀ ಗೌರಿಗಜಾನನ ವಿನೋದ:—ಅತ್ಯಂತ ಚಿತ್ತಾಕರ್ಷಕವಾದ ಪಾರ್ವತಿ ಗಣಪತಿಯರ ಮೋಹಕ ಲೀಲಾದ ಫೋಟೊ ಕ್ರಯ ಕ್ಯಾಬಿನೆಟ ೮ ಆಣೆ.

ಶ್ರೀ ವೀರಶೈವ ರಾಜಸಮೂಹ:—ಇದರಲ್ಲಿ ಕೊಡುಗದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಒಡೆಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸಹ್ಯದ ಪುಂಗನೂರ ಮತ್ತು ಗೋವಾಪ್ರಾಂತದ ಬಾಂದೆವಾಡಿ, ಸೋಂದಾ ಅರಸರ ಫೋಟೊ ೯ ಇರುತ್ತಾವೆ. ಕ್ರಯ ಫುಲ್ಲ ಸೈಜ ರೂ. ೧. ಕ್ಯಾಬಿನೆಟ ೮ ಆಣೆ.

ಫೋಟೋಲಾಕೇಟ್ಸ್.

ಸದ್ಗೃಹಸ್ಥರು ಗಡಿಯಾರ ಸರಳಿಗೆ ಹಚ್ಚಿ ಉಪಯೋಗಿಸಲಿಕ್ಕೆ ಅತ್ಯಂತ ಯೋಗ್ಯವಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಅಥಣಿ ಶಿವಯೋಗಿಗಳ ಫೋಟೊ ಕೂಡ್ರಿಸಿದ ಅತಿ ಛಾಕ್ಷಾವಾದ ಬೆಳ್ಳಿ ಲಾಕೆಟಗಳೂ ಸಿಗುತ್ತವೆ. ಕ್ರಯ ಬೆಳ್ಳಿಯ ಅರ್ಧ ರೂಪಾಯಿ ಆಕಾರವೂ ನಕ್ಷೆವೂ ರೂ. ೧—೧೪—೦, ಬೆಳ್ಳಿಯ ಪಾವಲಿ ಆಕಾರ ನಕ್ಷೆವೂ ರೂ. ೧—೧೨—೦, ಬೆಳ್ಳಿಯ ಪಾವಲಿ ಆಕಾರ ಸಾದಾ ಫ್ಲಾನ್ಸಿ ರೂ. ೧—೮—೦, ರೋಲಗೋಲ್ಡ ಬಂಗಾರವೂ ರೂಪಾಯಿ ಆಕಾರವೂ ಸಭೇದ ಸನ್ಮಾನನೀಯ ಸಭಾಸದರಿಗೆ ಮತ್ತು ಸಭೇದ ವ್ಯವಸ್ಥಾಪಕರಾದ ಹ್ಯಾಂಟ ಅವರಿಗೆ ಕೋಟಿನಮೇಲೆ ಹಚ್ಚುವದಕ್ಕೆ ಮೆಡಲದಂತೆ ಬಹು ಶೋಭಾಯಮಾನ ಇರುತ್ತವೆ. ಕ್ರಯ ೧ ಕ್ಕೆ ರೂ. ೧—೬—೦, ೧—೮—೦ ಆಣೆ.

ಫೋಟೊ ಬ್ರೂಚಪಿನ:—ಇವು ಕೋಟಿನ ಕಾಲರಮೇಲೆ ಹಚ್ಚುವವೂ ಇದ್ದು ಇದರಲ್ಲಿ ಬೇಕಾದ ದೇವರ, ಅಥವಾ ಸತ್ಪುರುಷರವೂ ೧ ಫೋಟೊ ಕೂಡ್ರಿಸಿ ಸಿಗುತ್ತದೆ. ಕ್ರಯ ಗಿಲ್ಟಬ್ರೂಚವು ೧ಕ್ಕೆ ೬ಆಣೆ, ೮ ಆ.

ಇವುಗಳ ಹೊರ್ತ ಶ್ರೀ ಸೊಲ್ಲಾಪುರ ಸಿದ್ಧರಾಮೇಶ್ವರ, ಹಂಪೆ ವಿರುಪಾಕ್ಷೇಶ್ವರ, ಕಲಬುರ್ಗ ಶರಣಬಸವೇಶ್ವರ, ಗೋಕರ್ಣದ ಮಹಾಬಲೇಶ್ವರ, ಶ್ರೀ ಭ್ರಮರಾಂಬಿಕಾದೇವಿ, ಶ್ರೀ ಕಾಶಿ ಅನ್ನಪೂರ್ಣಾ ಮುಂತಾದ ದೇವರವೂ ಮತ್ತು ಸಮಾಜಸೇವಕ್ಕೆ ಕಂಕಣಬದ್ಧರಾದ ಪ್ರಸಿದ್ಧ ಶ್ರೀಮನ್ನಿರಂಜನ ದಾವಣಗೇರಿ ಮೃತ್ಯುಂಜಯ ಶಿವಯೋಗಿ, ಶ್ರೀ ಗುರುಮಠಕಲ್ಲ ಶಾಂತವೀರ ಸ್ವಾಮಿ, ಮತ್ತು ೬೪ ನೇ ಪುರಾತನರೆಂಬ ಕೈ|| ಮಹಾತ್ಮಾ ಲಿಂಗಪ್ಪನವರು ಸಿರಸಂಗಿ ದೇಸಾಯಿ, ರಾ|| ಬ|| ರುದ್ರಗವುಡಾ ಅರಟಾಳ, ವಗೈರೆ ಫೋಟೊಗಳೂ ಸಿಗುತ್ತವೆ. ಕ್ರಯ ಫುಲ್ಲಸೈಜ ರೂ. ೧ ಕ್ಯಾಬಿನೇಟ ೮ ಆಣೆ.

ಸೂಚನಾ:—ಊರೂರಿಗೆ ಫೋಟೊ ಮತ್ತು ಲಾಕೇಟ ಮಾರಾಟ ಮಾಡುವ ಏಜಂಟರು ಬೇಕು. ಅಭಿಲಾಷೆವುಳ್ಳವರು ತ್ವರೆಪಟ್ಟು ೬ ಪೈ. ಟಿಕೀಟ ಕಳುಹಿಸಿ ಏಜಂಟ ನಿಯಮ ತರಿಸಿಕೊಳ್ಳಿರಿ.

ಗಂಗಪ್ಪಾ ಜೇರಗೆ ಮಾಲಕ,
5 ದಿ ಶಾರದಾ ಫೋಟೊ ಕಂಪನಿ, ಸೋಲ್ಲಾಪುರ ಸಿಟಿ.

೧೯೧೯ ನೆಯ ಇಸವಿ ಅಗಸ್ಟ್ ತಾ|| ೨೪ ರಿಂದ ೧೯೧೯ ನೆಯ ಅಗಸ್ಟ್ ತಾ|| ೩೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಶ್ರಾವಣ ಬ|| ಚತುರ್ದಶಿಯಿಂದ ಭಾದ್ರಪದ ಶುದ್ಧ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
24	ಭಾನು	ಚತು	37-6	ಆಶ್ಲೇ	57-47	8
25	[1]ಸೋಮ	ಅಮಾ	35-16	ಮಘಾ	58-7	9
26	ಮಂಗಳ	ಪಾಡ್ಯ	34-33	ಹುಬ್ಬೆ	60	10
27	ಬುಧ	ಬಿದಿಗೆ	35-6	ಹುಬ್ಬೆ	0-10	11
28	[2]ಗುರು	ತದಿಗೆ	36-55	ಉತ್ತರೆ	2-55	12
29	[3]ಶುಕ್ರ	ಚೌತಿ	39-56	ಹಸ್ತ	0-55	13
30	[4]ಶನಿ	ಪಂಚಮಿ	43-58	ಚಿತ್ತ	11-58	14

(1) ಸರ್ವತ್ರ ಅಮಾವಾಸ್ಯಾ, ಅಮಾಸೋಮವ್ರತಂ. (2) ಸ್ವರ್ಣಗೌರೀವ್ರತಂ, ಸಾಮಗೋಪಾಕರ್ಮ. (3) ಸಿದ್ಧಿವಿನಾಯಕವ್ರತಂ. (4) ಋಷಿಪಂಚಮಿ.

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಶಿಕ್ಷಾ | ಘನಪಘಕೃತಾವತಾರಾ ಪಕ್ಷಜ್ಞ ನಕ್ಷತ ನೋಜರಾಜೀಯತಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟಪದೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಿಕೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೭) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಸೆಪ್ಟೆಂಬರ್ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೩೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ-೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕಸಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
30 ಸಾಹುಕಾರಪೇಟೆ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಕರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ದಂಪತಿಗಳ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

47 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0. ನಂ. 2. 1—1—0.

ಕನ್ನಡಕಗಳು.



ಇದನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬದಿಗೆ ಇರುವವು. ಇದರ ಕಂಬಿಗಳು ಯಾವಾಗಲೂ ಬೆಳ್ಳಿಯ ಹಾಗೆ ಇರುವವು. ಇದರಲ್ಲಿ ಹಸರು, ಊದ, ಮೋಘವರ್ಣ ಮೊದಲಾದವುಗಳಿರುವವು. ಕ್ರಯ ನಂ. 1 ಕ್ಕೆ 1-0-0, ನಂ. 2 ಕ್ಕೆ 2-0-0.

ರಬ್ಬರ್ ಇಂಗ್ಲೀಷ್ ಅಕ್ಷರಗಳು.



ಈ ಅಕ್ಷರಗಳು ಸೀಮೆಯಲ್ಲಿ ತಯಾರಾದವು. ಈ ಅಕ್ಷರಗಳಿಂದ ಕಷ್ಟವಿಲ್ಲದೆ ಕಾಗದಗಳನ್ನೂ, ಕಾರಡು, ಲೆಟರು ಮುಂತಾದವುಗಳನ್ನು ನಾವೇ ಅಚ್ಚು ಮಾಡಿಕೊಳ್ಳಬಹುದು. ಈ ಅಕ್ಷರಗಳ ಪೆಟ್ಟಿಗೆಯು ಒಂದು ಇದ್ದರೆ ಬೇಕಾದ ಮುದ್ರಣವನ್ನು ಒಬ್ಬರ ಸಹಾಯವಿಲ್ಲದೆ ನಾವೇ ಮಾಡಿಕೊಳ್ಳಬಹುದು. ಲಾಯರುಗಳಿಗೂ, ವರ್ತಕರಿಗೂ ಬಹು ಸಹಾಯಕಾರಿಯಾದದ್ದು. ಈ ಪೆಟ್ಟಿಗೆಯಲ್ಲಿ ಇಂಕಿ, ಪ್ಯಾಡು, ಚಿಮುಟ ಮುಂತಾದವುಗಳು ಇವೆ.

170 ಅಕ್ಷರಗಳು ಇರುವ ಪೆಟ್ಟಿಗೆ 1—14—0
250 ,, ,, 2—8—0
350 ,, ,, 3—12—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
30 3 ಇರುಳಪ್ಪನಬೀದಿ, ಮದರಾಸ್.

“ದಲ್ಲಾಲಿ ಅಂಗಡಿ ಸೊಲ್ಲಾಪುರ”

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕ, ಶೀಗೇಕಾಯಿ, ತುಪ್ಪ, ಕೊಬರಿ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ. ಚಹಾ, ಕಾಜು, ಆಲೂ, ಉಳ್ಳಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮಿಷನ್ನಿನ ಮೇಲೆ ಕಾಳಜಿಯಿಂದ ಬಿಕರಿಮಾಡಿ ಕೊಡುತ್ತೇವೆ. ಒಂದುವೇಳೆ ಕೇಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಷನರಿ ಸಾಮಾನುಗಳು ಕಮಿಷನ್ನಿನ ಮೇಲೆ ಸೇಯಿವಾರ ಮುಂಬಯಿದಲ್ಲಿ ಖರೀದಿ ಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,
2 ವಿಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ।	೦—೮—೦
ಶಿವಪೂಜಾವಿಧಿ।	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultural subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.

2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.

3. During the time the raiyats and labourers work on the farm, they will be paid at the prevailing local rates for labour.

4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,
5 *Offg. Director of Agriculture.*

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 8

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧವ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಚೆಂಗಸ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಟಿನ್ನು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ ಮದರಾಸು

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಸೆಪ್ಟೆಂಬರ್ ತಾ|| ೭ ನೆಯ ಭಾನುವಾರ.

ಸಂಸ್ಕರಣವಿಷಯಕ ಸಾಕ್ಷಿಗಳು.

ಭಾರತ ರಾಜಕೀಯ ಸಂಸ್ಕರಣ ಸಂಬಂಧವಾಗಿ ಭರತಖಂಡದ ಪ್ರಮುಖದೇಶಭಕ್ತರುಗಳ ಸಾಕ್ಷ್ಯವನ್ನು ಸೀಮೆಯಲ್ಲಿ ಏರ್ಪಟ್ಟಿರುವ "ಜಾಯಿಂಟ್ ಕಮಿಟಿ" ಯವರು ತೆಗೆದುಕೊಳ್ಳುತ್ತಿರುವರಷ್ಟೆ. ಇದುವರೆಗೆ ಈ ದೇಶದಿಂದ ಅಲ್ಲಿಗೆ ಹೋಗಿರುವ ಭಿನ್ನಭಿನ್ನ ಪಕ್ಷಗಳವರನೇಕರು ಸಂಸ್ಕರಣ ವಿಷಯಕವಾಗಿ ತಂತಮ್ಮ ಅಭಿಪ್ರಾಯಗಳನ್ನು ಹೇಳಿರುತ್ತಾರೆ. ಸದ್ಯಃ ಆ ಸಂಘದವರ ಕೆಲಸವು ನಿಲ್ಲಿಸಲ್ಪಟ್ಟಿದೆ. ಮುಂದೆ ಅಕ್ಟೋಬರ್ ತಿಂಗಳಲ್ಲಿ ಮರಳಿ ಕೆಲಸಕ್ಕೆ ಆರಂಭಿಸುತ್ತಾರೆ. ಈಗ ಸೀಮೆಗೆ ಹೋಗಿ ಸೇರುವುದರಲ್ಲಿರುವ ಸರ್ ಶಂಕರನ್ ನಾಯರ್, ಹಸೇನ್ ಇಮಾಂರವರೇ ಮೊದಲಾದವರ ಸಾಕ್ಷಿಗಳೆಲ್ಲಾ ಆಗ ನಡೆಯಬಹುದು. ಅಲ್ಲದೆ ಭರತಖಂಡದ ಪ್ರಾಂತಿಕ ಪ್ರಭುತ್ವಗಳ ಸಾಕ್ಷಿಗಳನ್ನು ಕೂಡ ತೆಗೆದುಕೊಳ್ಳಬೇಕೆಂಬುದು ಸಂಘದವರ ಅಭಿಪ್ರಾಯವಾಗಿರುತ್ತದೆ. ಅದೆಲ್ಲಾ ಮುಗಿದು ಈ ಸಂಬಂಧವಾದ ಬಿಲ್ಲು ಪಾರ್ಲಿಮೆಂಟಿನ ಮುಂದಕ್ಕೆ ಬರುವ ಹೊತ್ತಿಗೆ ಈಗಣ ಪಾರ್ಲಿಮೆಂಟು ಪರ್ಯಾಪ್ತವಾಗಿ ಹೊಸ ಪಾರ್ಲಿಮೆಂಟು ಏರ್ಪಡುವ ಸ್ಥಿತಿಯು ಕಾಣುತ್ತಿರುವುದರಿಂದ ಇಷ್ಟರಲ್ಲೇ ಈ ಸಂಸ್ಕರಣದ ಸ್ವರೂಪಸಿದ್ಧಿಯಾಗುವಂತೆ ತೋರುವುದಿಲ್ಲ. ಇದುವರೆಗೆ ಕೊಟ್ಟಿರುವ ಸಾಕ್ಷಿಗಳ ಗುಣಾವಗುಣಗಳನ್ನು ಕುರಿತು ಮಾ|| ಶ್ರೀನಿವಾಸಶಾಸ್ತ್ರಿಯವರು ತಮ್ಮ ಸರ್ವೆಂಟ್ ಆಫ್ ಇಂಡಿಯಾ ಪತ್ರಿಕೆಗೆ ಒಂದು ಲೇಖನವನ್ನು ಬರೆದಿರುತ್ತಾರೆ. ಅದರಲ್ಲಿ ಹೀಗೆ ತಿಳಿಯಿಸಲ್ಪಟ್ಟಿದೆ:- "ಅನಧಿಕಾರಿ ಸಾಕ್ಷಿಗಳೊಳಗೆ ಸುರೇಂದ್ರನಾಥ ಬಾನರ್ಜಿಯವರ ಮಾತುಗಳಿಗೆ ಸಂಘದವರು ಹೆಚ್ಚು ಪ್ರಾಮುಖ್ಯವನ್ನು ಕೊಟ್ಟರು. ಮಿತವಾದಿಗಳ ಅಭಿಪ್ರಾಯವನ್ನೆಲ್ಲಾ ಅವರು ಸಂಗ್ರಹವಾಗಿಯೂ ಚೊಕ್ಕಟವಾಗಿಯೂ ಹೇಳಿದರು. ಅದು ಸಂಘದವರ ಮನಸ್ಸನ್ನು ಮೆಚ್ಚಿಸಿತು. ಸಿ ಪಿ. ರಾಮಸ್ವಾಮಯ್ಯನವರ ಹೇಳಿಕೆಯು ಸಮಯೋಚಿತವಾಗಿಯೂ ಉಚಿತವಾಗಿಯೂ ಇದ್ದಿತು. ಅನಿಬೆಸೆಂಟಮ್ಮನವರ ಸಾಕ್ಷಿಯು ಅಮೂಲ್ಯವಾಗಿದ್ದಿತು. ತಿಲಕರ ಬಿರುಸೆಲ್ಲಾ ಇಲ್ಲಿ ನಿಂತುಹೋಗಿದೆ. ಇವರ ಈ ರೀತಿಯು ಅವರ ಅನುಚರರಿಗೆಲ್ಲಾ ಜುಗುಪ್ಸೆ ಹುಟ್ಟಿಸಿದೆ. ಪಟೇಲರು ಆದಿಯಿಂದ ಅಂತ್ಯದವರೆಗೂ ತಮ್ಮ ಹೇಳಿಕೆಯಲ್ಲಿ ದಾರಿತಪ್ಪಿಹೋದುದರಿಂದ ವಿಚಾರಕ ಸಂಘದವರು ಬೇಸರಪಟ್ಟುಕೊಂಡರು. ವಿ. ಪಿ. ಮಾಧವರಾಯರು ತಮ್ಮ ಹೇಳಿಕೆಯ ಕಾಲದಲ್ಲಿ ತುಂಬಾ ಪರಾಭೂತರಾದರೆಂದು ತಿಳಿಯಿಸುವುದಕ್ಕೆ ನನಗೆ ವಿಷಾದವಾಗುತ್ತದೆ. ಅವರು ಸಕಾರಣವಲ್ಲದ ಕಠಿಣ ಸಂಗತಿಗಳನ್ನು ಹೇಳುವುದಕ್ಕುಪಕ್ರಮಿಸಿ ಅದಕ್ಕೆ ಆಧಾರವೇನೆಂದು ವಿಚಾರಕ ಸಂಘದವರು ಕೇಳಿದಾಗ ತಡಬಡಿಸುತ್ತ ನಡುಗಿಹೋದರು. ಪಟೇಲರು ಮತ್ತು ಮಾಧವರಾಯರು-ಇವರಿಬ್ಬರ ಸಾಕ್ಷ್ಯದಿಂದ ಭರತಖಂಡಕ್ಕೆ ಲೇಶಮಾತ್ರವೂ ಸಹಾಯವಾಗುವುದಿಲ್ಲವೋ ಏನೋ ಎಂದು ನನಗೆ ಸಂಶಯವಾಗಿದೆ. ೩೩ ವರ್ಷಗಳ ಕಾಲ ವಿಜಯವತ್ತಾಗಿ ಕೆಲಸಮಾಡುತ್ತಬಂದ ರಾಷ್ಟ್ರೀಯ ಮಹಾಸಭೆಯ ಪ್ರಯತ್ನಗಳೆಲ್ಲವೂ ಈ ಮಹೋತ್ಕೃಷ್ಟ ಸಮಯದಲ್ಲಿ ಜಾಯಿಂಟ್ ಕಮಿಟಿಯವರ ಇದಿರಿಗೆ ಶ್ರುತಪಡಿಸಿಕೊಳ್ಳಬೇಕಾಗಿ ಬಂದ ಸಂದರ್ಭದೊಳಗೆ ಆ ಮಹಾಸಭೆಯ ಅನುಭವವೇ ಆಗಲೀ ನಿಜವಾದ ಉತ್ಸಾಹವೇ ಆಗಲೀ ಇಲ್ಲದ ಈ ಇಬ್ಬರು ಪ್ರತಿನಿಧಿಗಳು ಕೊಟ್ಟ ಸಾಕ್ಷಿಯ ಪರಿಣಾಮವು ಹೀಗಾದುದಕ್ಕಾಗಿ ಯಾರುತಾನೇ ದುಃಖಿಸುವುದಿಲ್ಲ?".

ಪ್ರತ್ಯೇಕ ಪ್ರಾತಿನಿಧ್ಯ.

ವಿಚಾರಕ ಸಂಘದವರ ಇದಿರಿಗೆ ಸಾಕ್ಷ್ಯವನ್ನು ಕೊಟ್ಟವರೊಳಗೆ ಹಿಂದುಳಿದ ಜನವರ್ಗಗಳ ಮೇಲನ್ನು ಕೋರತಕ್ಕ ಪಕ್ಷದವರೂ ಕೆಲರಿದ್ದರು. ಅವರುಗಳಲ್ಲಿ ರಾ|| ಬ|| ಕೂರ್ಮಾವೆಂಕಟರೆಡ್ಡಿನಾಯುಡುರವರ ಹೇಳಿಕೆಯು ಬಹು ಪ್ರಧಾನವಾಗಿದ್ದಿತು. ಅವರು-ಮದ್ರಾಸಾಧಿಪತ್ಯದೊಳಗೆ ಸರ್ಕಾರದಧಿಕಾರಸ್ಥಾನಗಳಲ್ಲೂ ಸಭೆಗಳಲ್ಲೂ ಬ್ರಾಹ್ಮಣಪ್ರಾಬಲ್ಯವೇ ಹೇಗೆ ಹೆಚ್ಚಿಕೊಂಡಿದೆಯೋ ಅದನ್ನೂ, ಪ್ರತ್ಯೇಕಪ್ರಾತಿನಿಧ್ಯವನ್ನು ಕೊಡಬೇಕಾದುದರ ಅವಶ್ಯಕತೆಯನ್ನೂ, ಅದಕ್ಕೆ ಮದ್ರಾಸು ಸರ್ಕಾರದವರೂ ಇಂಡಿಯಾ ಸರ್ಕಾರದವರೂ ಅನುಮೋದಿಸಿರುವುದನ್ನೂ, ಆದರೂ ಮಾಂಟಗ್ಯೂ ಚೆಲ್ಮ್ಸ್‌ಫರ್ಡ್ ವರದಿಯಲ್ಲಿ ಅದಕ್ಕೆ ವಿರುದ್ಧವಾಗಿ ಹೇಳಲ್ಪಟ್ಟಿರುವ ವಾದಗಳು ಎಷ್ಟು ಯುಕ್ತಿವಿಹೀನವಾಗಿವೆಯೋ ಅದನ್ನೂ, ದೇಶದಲ್ಲಿ ಬ್ರಾಹ್ಮಣೇತರರಾದ ಓಟರುಗಳ ಸಂಖ್ಯೆಯು ವಿಶೇಷವಾಗಿದ್ದರೂ ಅದನ್ನು ನಾನಾ ಮಾಯೋಪಾಯದಿಂದ ತದಿತರರು ಹೇಗೆ ನಿಷ್ಫಲಗೊಳಿಸುತ್ತಿರುವರೋ ಅದನ್ನೂ, ಈಗಣ ಸಂಸ್ಕರಣದಲ್ಲಿ ರಾಜಕೀಯಾಧಿಕಾರವನ್ನು ಸಕಲ ಜನವರ್ಗಕ್ಕೂ ಸಮಾನವಾಗಿ ಹಂಚಿಕೊಡದಿದ್ದರೆ ಉತ್ತರತ್ರ ಉಂಟಾಗುವ ಅನಿಷ್ಟ ಪರಿಣಾಮದ ಸ್ವರೂಪವನ್ನೂ ಸಹ ಬಹು ಸ್ಪಷ್ಟವಾಗಿ ಉದಹರಿಸಿ ಹೇಳಿದುದಲ್ಲದೆ, ಈಗಣ ಸಂಸ್ಕರಣಗಳಲ್ಲಿ ಪ್ರತ್ಯೇಕ ಸಾಂಘಿಕ ಪ್ರಾತಿನಿಧ್ಯವನ್ನು ಕೊಡದೆ ಹೋದರೆ ಭರತಖಂಡದಲ್ಲಿ ಆಂಗ್ಲಜನರ ಪರಿಪಾಲನೆಗೆ ಪ್ರತಿಯಾಗಿ ಬ್ರಾಹ್ಮಣಪ್ರಭು ಪರಿಪಾಲನೆಯನ್ನು ನೆಲೆಗೊಳಿಸಿದಂತಾಗುವುದೇ ಹೊರತು ಬಾಧ್ಯತಾಯುಕ್ತ ಪ್ರಭುತ್ವವಾಗಿ ಪರಿಣಮಿಸಿ ಊರ್ಜಿತವಾಗಲಾರದೆಂದೂ, ಜಾತಿ ವೈಷಮ್ಯಗಳು ಪ್ರಬಲಿಸಿ, ತದ್ದ್ವಾರಾ ಬಹುಸಂಖ್ಯಾಕರಾದ ಪ್ರಜೆಗಳ ಮೇಲೆಲ್ಲಾ ಸ್ವಲ್ಪ ಸಂಖ್ಯಾಕರಾದ ಜನರ ಅಧಿಕಾರವು ಪ್ರಬಲಿಸುವುದೆಂದೂ, ದೇಶದಲ್ಲಿ ಅನ್ಯಾಯವೂ ದೌರ್ಜನ್ಯವೂ ಪ್ರಬಲಿಸುವುದೆಂದೂ ಸ್ಪಷ್ಟವಾಗಿ ಹೇಳಿದರು. ಇವರ ಹೇಳಿಕೆಯು ನಡೆಯುವಾಗ ವಿಚಾರಕ ಸಂಘದ ಪ್ರತಿಯೊಬ್ಬ ಮೆಂಬರೂ ರಾ|| ಬ|| ನಾಯಿಡುಯವರನ್ನು ಬೇಕಾದಷ್ಟು "ಕ್ರಾಸು" ಪರೀಕ್ಷೆಯನ್ನು ಮಾಡಿದರು. ಅದಕ್ಕೆಲ್ಲಾ ಅವರು ತಡೆಬಿಡುವಿಲ್ಲದೆ ಸಮಂಜಸವೂ ಸಾಧಾರವೂ ಆದ ಪ್ರತ್ಯುತ್ತರಗಳನ್ನು ಕೊಟ್ಟರು. ಮತ್ತು ಪಂಚಮರ ಸ್ಥಿತಿಗತಿಯನ್ನೂ ಕೂಡ ಅವರು ಚೆನ್ನಾಗಿ ಬಿಚ್ಚಿಹೇಳಿದರು. ಕಡೆಗೆ ಸಾಂಘಿಕ ಪ್ರಾತಿನಿಧ್ಯವಿಲ್ಲದೆ ಹೋದ ಯಾವ ಸಂಸ್ಕರಣವೂ ತಮಗೆ ಇಷ್ಟವಿಲ್ಲವೆಂದೂ ಹೇಳಿದುದಲ್ಲದೆ ಭರತಖಂಡದ ಕೋಟ್ಯಪಕೋಟಿ ಸಂಖ್ಯಾಕರಾಗಿರುವ ಪಂಚಮರ, ಬಡವರ, ಗ್ರಾಮಾಂತರಜನರ, ಯುದ್ಧರಂಗಕ್ಕೆ ಹೋಗಿದ್ದು ಬಂದ ಸೈನಿಕವರ್ಗದವರ, ಪುರೋಭಿವೃದ್ಧಿ ವಿಚಾರವನ್ನು ವಿಚಾರಕಸಂಘದವರು ಮರೆಯಲಾಗದೆಂದು ಎಚ್ಚರಿಸಿದರು. ಇವರ ಹೇಳಿಕೆಯು ೩|| ಗಂಟೆಗಳಕಾಲ ನಡೆದಿತು. ಇವರಲ್ಲದೆ ದಿ|| ಬ|| ರಾಮಾರಾಯನಿ ಎಂ. ಎ. ಯವರೂ ಕೂಡ ಪ್ರತ್ಯೇಕ ಸಂಘ ಪ್ರಾತಿನಿಧ್ಯದ ಅವಶ್ಯಕತೆಯನ್ನು ಕುರಿತು ಸಾಕ್ಷಿ ಕೊಟ್ಟರು. ತುಲಸೀರಾಂ ಎಂಬ ಮತ್ತೊಬ್ಬ ಸಾಕ್ಷಿಗಾರರು ಕೂಡ ವಾಚಾ ಹೇಳಿಕೆಯನ್ನು ಕೊಟ್ಟುದಲ್ಲದೆ ತಮ್ಮ ಅಭಿಪ್ರಾಯಗಳನ್ನೆಲ್ಲಾ ವಿಜ್ಞಾಪನ ಪತ್ರದಲ್ಲಿ ಬರೆದು ಸಮರ್ಪಿಸಿದರು. ಇವರು ಕೂಡ ಪ್ರತ್ಯೇಕ ಸಂಘ ಪ್ರಾತಿನಿಧ್ಯವಿರಬೇಕೆಂತಲೂ, ಮದ್ರಾಸಾಧಿಪತ್ಯದ ವೃತ್ತಪತ್ರಿಕೆಗಳೆಲ್ಲಾ ಬ್ರಾಹ್ಮಣರ ಸ್ವಾಧೀನದಲ್ಲಿರುವುದಲ್ಲದೆ ಉಪನ್ಯಾಸಕರೆಲ್ಲಾ ಅವರೇ ಆಗಿರುವರೆಂತಲೂ, ಬ್ರಾಹ್ಮಣರ ಅಭಿಪ್ರಾಯವೇ ಭಾರತೀಯರೆಲ್ಲರ ಅಭಿಪ್ರಾಯವಾಗಿರುವುದೆಂದು ಅವರು ಲೋಕಕ್ಕೆಲ್ಲಾ ವಿಜೃಂಭಿಸಿ ಹೇಳಿಕೊಳ್ಳುತ್ತಿರುವರೆಂತಲೂ, ಚಿಕ್ಕದೊಡ್ಡ ಪ್ರಾಣಿಗಳೆಲ್ಲಾ ಇರುವ ಬೋನಿಗೆ ಆಹಾರವನ್ನು ಹಾಕಿಬಿಟ್ಟರೆ ದೊಡ್ಡವು ಚಿಕ್ಕಪ್ರಾಣಿಗಳನ್ನೆಲ್ಲಾ ಬೆದರಿಸಿ ಹತ್ತಿರಕ್ಕೆ ಬರಗೊಡಿಸದೆ ಆಹಾರವನ್ನೆಲ್ಲಾ ತಾವೇ ತಿಂದುಬಿಡುವಂತೆ ಪ್ರತ್ಯೇಕ ಪ್ರಾತಿನಿಧ್ಯವಿಲ್ಲದೆ ಕೊಡಲ್ಪಡುವ ಸಂಸ್ಕರಣಗಳ ಗತಿಯೆಲ್ಲಾ ಹಾಗೇ ಆಗುವುದೆಂತಲೂ, ಬ್ರಾಹ್ಮಣೇತರರ ಕಷ್ಟಸುಖಗಳನ್ನು ಚೆನ್ನಾಗಿ ಗಮನಿಸಿ ಸಂಸ್ಕರಣವನ್ನು ಮಾಡಬೇಕೆಂತಲೂ ಸ್ಪಷ್ಟೋಕ್ತಿಗಳಿಂದ ತಿಳಿಸಿದರು. ಇದೇ ತೆರದ ಅಭಿಪ್ರಾಯವನ್ನು ನಾನಾರೀತಿಯಿಂದ ಪುಷ್ಟೀಕರಿಸಿ ಕೋಕಾ ಅಪ್ಪಾರಾವು ನಾಯಿಡುಯವರೂ ರಾಮಸ್ವಾಮಿ ಮೊದಲಿಯಾರರೂ ಕೂಡ ಸಾಕ್ಷ್ಯವನ್ನು ಕೊಟ್ಟಿರುವರು. ಮತ್ತೂ ಹಿಂದೆ ನಮ್ಮ ಭರತಖಂಡ ಪ್ರಭುತ್ವದ ಕೋಶಾಧ್ಯಕ್ಷರಾಗಿದ್ದ ಸರ್ ವಿಲಿಯಂ ಮೇಯರ್‌ರವರು ಸಾಕ್ಷ್ಯವನ್ನು ನುಡಿಯುವಾಗಲೂ ಕೂಡ "ಈಗಣ ಸ್ಥಿತಿಗತಿಯಲ್ಲಿ ಆಂಗ್ಲೇಯರ ಅವಲಂಬನವಿಲ್ಲದೆ ಭಾರತೀಯರು ಅಭಿವೃದ್ಧಿಗೊಳ್ಳಲಾರರು. ಆಂಗ್ಲೇಯರು ಭರತಖಂಡವನ್ನು ಬಿಟ್ಟು ಹೊರಟುಬಂದರೆ ಮತ್ತೊಬ್ಬರು ಹೋಗಿ ಅದನ್ನು ಆಕ್ರಮಿಸಿಕೊಳ್ಳುವರು. ಬ್ರಾಹ್ಮಣೇತರರೂ ಕೋರುವ ಪ್ರತ್ಯೇಕ ಪ್ರಾತಿನಿಧ್ಯ ಕಾಂಕ್ಷೆಯು ಯುಕ್ತವಾಗಿರುತ್ತದೆ. ಅದು ಈಡೇರಬೇಕು" ಎಂದು ಹೇಳಿರುತ್ತಾರೆ. ಮತ್ತೂ ಮದ್ರಾಸು ಲೇಬರ್ ಸಂಘದ ಪ್ರತಿನಿಧಿಯಾಗಿ ಹೋಗಿದ್ದ ಒಬ್ಬ ದೊಡ್ಡಮನುಷ್ಯರೂ ಕೂಡ ಪರಿಶ್ರಾಮಿಕ ಜನರೆಲ್ಲರೂ ಬ್ರಾಹ್ಮಣೇತರರೇ ಆಗಿರುವುದರಿಂದ ಅವರ ಅಭಿಪ್ರಾಯಗಳನ್ನು ನಿವೇದಿಸಲು ಇತರರು ಅರ್ಹರಲ್ಲವೆಂತಲೂ, ಅದುಕಾರಣ ಪ್ರತ್ಯೇಕ ಪ್ರಾತಿನಿಧ್ಯವಿದ್ದರೇನೆಯೇ ಅವರ ಅಭಿಪ್ರಾಯಗಳನ್ನು ಅವರು ಹೇಳಿ ಸಮರ್ಥಿಸಿಕೊಳ್ಳಲು ಅನುಕೂಲವಾಗುವುದೆಂತಲೂ ಹೇಳಿದರು.

ಡಾ|| ಟಿ. ಎಂ. ನಾಯರರವರು ಇನ್ನೊಂದುದಿನ ಬದುಕಿದ್ದು ಅವರ ಸಾಕ್ಷ್ಯವೂ ನಡೆದಿದ್ದರೆ ಈ ಮೇಲಣ ಹೇಳಿಕೆಗಳಿಗೆಲ್ಲಾ ಅದು ಮುಖ್ಯ ಚೈತನ್ಯದಂತಿರುತ್ತಿದ್ದಿತೆಂಬುದಕ್ಕೆ ಸಂಶಯವಿಲ್ಲ. ಆದರೂ ಈ ಮೇಲೆಕಂಡ ದೊಡ್ಡಮನುಷ್ಯರೆಲ್ಲಾ ಶಕ್ತಿ ವಂಚನೆಯಿಲ್ಲದೆ ದೇಶ ಹಿತಾರ್ಥವಾಗಿ ಮಾಡಬೇಕಾದ ಕೆಲಸವನ್ನು ಸಾಧ್ಯವಾದಮಟ್ಟಿಗೂ ಮಾಡಿರುತ್ತಾರೆಂಬುದಕ್ಕೆ ಸಂಶಯವಿಲ್ಲ. ಮದ್ರಾಸ್ ಟೈಮ್ಸ್ ಪತ್ರಿಕೆಗೆ ಕಳೆದವಾರ ಸೀಮೆಯಿಂದ ಬಂದಿರುವ ತಂತ್ರೀವಾರ್ತೆಗಳಲ್ಲಿ "ವಿಚಾರಕ ಸಂಘದವರು ಪ್ರತ್ಯೇಕ ಪ್ರಾತಿನಿಧ್ಯ ಸಿದ್ಧಾಂತಕ್ಕೆ ಸುಮುಖತ್ವವನ್ನು ಹೊಂದಿರುವರು. ಬ್ರಾಹ್ಮಣರ ಸ್ವಾರ್ಥಪರತ್ವವು ಕಾರ್ಯಾಚರಣ ಸಮಯದಲ್ಲಿ ಈ ಸಮುಖತ್ವಕ್ಕೆ ವಿಘ್ನಕಾರಿಯಾಗಬಹುದು." ಎಂದು ಹೇಳಲ್ಪಟ್ಟಿದೆ. ಭರತಖಂಡದ ನಿಜಸ್ಥಿತಿಯನ್ನು ಮರೆಮಾಚುವವರಿಂದ ವಂಚಿತರಾದವರು ಪ್ರತ್ಯೇಕ ಪ್ರಾತಿನಿಧ್ಯ ತತ್ತ್ವವು ಅಸಾಧ್ಯವೆಂದು ಹೇಳಬೇಕೇ ಹೊರತು ಮತ್ತೆ ಬೇರೆಯಲ್ಲ. ತಕ್ಕ ಪ್ರಯತ್ನವನ್ನು ಅಪ್ರತಿಹತವಾಗಿ ನಡೆಯಿಸುತ್ತ ಬಂದರೆ ಈ ತತ್ತ್ವಕ್ಕೆ ಪ್ರಭುತ್ವದವರ ಅನುಮೋದನೆಯು ಸಿಕ್ಕೇಸಿಗುವುದು. ಹಾಗಲ್ಲದೆ ಕಡೆಗೂ ಅದು ವಿಫಲವಾಗುವುದಾದರೆ ಭರತಖಂಡದಲ್ಲಿ ಜಾತಿ ವೈಷಮ್ಯವು ಪ್ರಬಲಿಸುವುದು; ಪ್ರತ್ಯೇಕ ಪ್ರಾತಿನಿಧ್ಯ ಫಲವು ತಾನಾಗಿ ಸಿದ್ಧಿಸುವಂತೆ ಇತರರೆಲ್ಲಾ ಮಾಡಿಯೇ ಮಾಡಿಕೊಳ್ಳುವರು. ಆಗಾದರೂ ಅವರ ವಾಂಛೆಯು ಈಡೇರಿಯೇ ತೀರುವುದು. ಇತರರು ವೃಥಾ ದ್ವೇಷವನ್ನು ಬೆಳೆಯಿಸಿ ಅದರ ಫಲವನ್ನು ಕಟ್ಟಿಕೊಂಡಂತಾಗುವುದು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯಟ್ ಸೂಪರಿಂಟೆಂಡೆಂಟರಾಗಿದ್ದ ಮ|| ಟಿ. ವಿ. ತಿರುವೆಂಗಡ ಮೊದಲಿಯಾರರು ದಿವಾನರ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕೀರ್ತಿಶೇಷರಾದ ಜನರಲ್ ಬೋಥಾರವರು.

ಬೂವರರ ಯುದ್ಧದಲ್ಲಿ ಇಂಗ್ಲೀಷರಮೇಲೆ ಕೈಮಾಡುವಾಗ್ಗೆ ಅಸಾಧಾರಣ ಕೌಶಲ ಪರಾಕ್ರಮಗಳನ್ನು ತೋರಿಸಿ ಪ್ರಸಿದ್ಧ ಸೇನಾಪತಿಗಳೆನಿಸಿಕೊಂಡಿದ್ದು ಕಡೆಗೆ ಯುದ್ಧಶಾಂತಿಯೂ ಪರಸ್ಪರ ಮಿತ್ರತ್ವವೂ ಹುಟ್ಟಿದ ಬಳಿಕ ಪುನರ್ಜನ್ಮವನ್ನೇ ಪಡೆದವರಂತೆ ಆಂಗ್ಲಜನರಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟು ದಕ್ಷಿಣಾಫ್ರಿಕಾ ಪ್ರಜಾಪ್ರಭುತ್ವದಲ್ಲಿ ಮುಖ್ಯಮಂತ್ರಿತ್ವವನ್ನು ವಹಿಸಿದ್ದು ಈಗಣ ಯೂರೋಪು ಮಹಾಯುದ್ಧದಲ್ಲಿ ಆಂಗ್ಲದೇಶಕ್ಕೆ ಅಸಾಧಾರಣ ಸಾಹಾಯ್ಯವನ್ನು ಮಾಡಿ ಸಂಧಿಸಭೆಯ ಕಾಲಕ್ಕೆ ಫ್ರಾನ್ಸಿಗೆ ಹೋಗಿ ತಮ್ಮ ವಿಶೇಷ ರಾಜತಂತ್ರಜ್ಞತೆಯನ್ನು ಅನೇಕ ಮುಖವಾಗಿ ಹೊರಗೆಡಹಿ ಸರ್ವರ ಮನ್ನಣೆಗೂ ಪಾತ್ರರಾಗಿದ್ದ ಜನರಲ್ ಬೋಥಾರವರು ಇನ್‌ಫ್ಲುಯಂಜಾ ರೋಗಗ್ರಸ್ತರಾಗಿದ್ದು ಕಳೆದತಿಂಗಳು ತಾ|| ೨೭ ರಲ್ಲಿ ಪ್ರಿಟೋರಿಯಾ ಪಟ್ಟಣದೊಳಗೆ ತಮ್ಮ ೫೭ ನೆ ವಯಸ್ಸಿನಲ್ಲಿ ವಿಧಿವಶರಾದರೆಂಬ ವಾರ್ತೆಯನ್ನು ಕೇಳಿ ಅವರ ಶಕ್ತಿಸಾಮರ್ಥ್ಯಗುಣಾತಿಶಯಗಳ ಪರಿಚಯವುಳ್ಳವರೆಲ್ಲಾ ಇವರ ಮೃತಿಯಿಂದ ಆಫ್ರಿಕಾಕ್ಕೇ ಅಲ್ಲದೆ ಆಂಗ್ಲಸಾಮ್ರಾಜ್ಯಕ್ಕೂ ಪ್ರಪಂಚಕ್ಕೂ ಸಹ ನಷ್ಟವಾಯಿತೆಂದು ಹೇಳುತ್ತಿದ್ದಾರೆ. ಆಂಗ್ಲ ಮಂತ್ರಿಮಂಡಲದವರು ಮೊದಲಾಗಿ ಪ್ರಮುಖರೆಲ್ಲರೂ ಅವರ ಪತ್ನಿಯವರಿಗೆ ಸಾನುಭೂತಿಯ ತಂತ್ರೀವಾರ್ತೆಗಳನ್ನು ಕಳುಹಿಸಿರುತ್ತಾರೆ. ಇವರು ಭಾರತೀಯರಿಗೆ ಸಂಧಿಮಹಾಸಭೆಯಲ್ಲೂ ಸಾಮ್ರಾಜ್ಯ ಮಹಾಸಭೆಯಲ್ಲೂ ಪ್ರಾತಿನಿಧ್ಯಗೌರವವನ್ನು ಕೊಡಿಸುವಲ್ಲಿ ಸಾನುಭೂತಿಯನ್ನು ಪ್ರದರ್ಶಿಸಿದ್ದರು. ಮತ್ತೂ ದಕ್ಷಿಣಾಫ್ರಿಕಾದಲ್ಲಿ ಭಾರತೀಯರಿಗುಂಟಾಗಿದ್ದ ಹಿಂಸೆಗಳನ್ನು ತಗ್ಗಿಸುವುದರಲ್ಲಿಯೂ ಭಾರತೀಯರಿಗೆ ಸಹಾಯಮಾಡಿದ್ದರು. ಮುಂದೆಯೂ ನಮಗೆ ಅಂಥ ಸಹಾಯವನ್ನು ಮಾಡಬಲ್ಲವರಾಗಿದ್ದರು. ಇಂಥವರ ವಿಯೋಗವು ಭಾರತೀಯರಿಗೂ ಸಹ ನಷ್ಟಕಾರಿಯಾಯಿತೆಂಬುದನ್ನು ಹೇಳಬೇಕಾಗಿಲ್ಲ. ಯುದ್ಧಸಮಯದಲ್ಲಿ ದಕ್ಷಿಣಾಫ್ರಿಕಾದ ಜಾತೀಯ ವಾದಿಗಳು ತಮ್ಮ ದೇಶವನ್ನು ಆಂಗ್ಲ ಸಾಮ್ರಾಜ್ಯ ಬಂಧನದಿಂದ ತಪ್ಪಿಸಿ ಸ್ವತಂತ್ರವಾಗಿರುವಂತೆ ಮಾಡಿಕೊಳ್ಳಬೇಕೆಂದು ಒಂದು ಪ್ರಯತ್ನವನ್ನೆಬ್ಬಿಸಿದರು. ಅದು ಅನರ್ಥಕಾರಿಯೆಂದು ಈ ಲೂಯಿ ಬೋಥಾರವರು ತಮ್ಮ ದೇಶೀಯರಿಗೆಲ್ಲಾ ಹೇಳಿದುದಲ್ಲದೆ ದಂಡೋಪಾಯದಿಂದಲೂ ಸಮಾಧಾನಗೊಳಿಸಿದರು. ಆಗ್ಗೆ ಇವರ ಅಸಾಧಾರಣ ದೀರ್ಘದರ್ಶಿತೆಯು ಆಂಗ್ಲಲೋಕದಿಂದಲೇ ಮೆಚ್ಚುಗೆ ಪಡೆದಿತು. ಮಿತಭಾಷಿಗಳಾಗಿದ್ದ ಇವರ ಪ್ರತಿಯೊಂದು ಮಾತನ್ನೂ ಸಂಧಿಸಭೆಯ ಮಂತ್ರಿಮಂಡಲದವರು ಬಹು ಗೌರವಪುರಸ್ಸರವಾಗಿ ಲಾಲಿಸಿ ಆಮೋದಿಸುತ್ತಿದ್ದರು. ಹುಟ್ಟುತ ಇವರು ದನಕಾಯುವ ಗೊಲ್ಲರಾಗಿದ್ದರು. ಅಂತ್ಯಕಾಲದಲ್ಲಿ ಇವರು ಚಕ್ರಾಧೀಶರಿಂದಲೂ ಮನ್ನಣೆಯನ್ನು ಪಡೆಯುವ ಸ್ಥಿತಿಗೆ ಬಂದು ದೇಶೋದ್ಧಾರಕರೆಂಬ ಕೀರ್ತಿಯನ್ನು ಪಡೆದರು. ಇಂಥ ಮಹಾಪುರುಷರೇ ಲೋಕದಲ್ಲಿ ಜನಿಸಿದವರೆನ್ನಿಸಿಕೊಳ್ಳತಕ್ಕವರು.

ಪೂರ್ವಾತ್ಯ ಪಂಡಿತ ಪ್ರಥಮ ಮಹಾಸಭೆ.

ಪುನಾಪಟ್ಟಣದಲ್ಲಿರುವ ಡಾಕ್ಟರ್ ಭಂಡಾರ್ಕರರವರ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟಿನವರು ಭರತಖಂಡದಲ್ಲಿರುವ ದೇಶಭಾಷಾಪಂಡಿತಪ್ರಮುಖರ ಉದ್ದೇಶವನ್ನು ಅನುಸರಿಸಿ ಭರತಖಂಡ ಬರ್ಮಾ ಸಿಲೋನ್ ಈ ಸ್ಥಲಗಳಲ್ಲಿರುವ ಪ್ರಮುಖ ಪಂಡಿತರನ್ನೆಲ್ಲಾ ಬರಮಾಡಿಕೊಂಡು ಪುನಾ ಪಟ್ಟಣದಲ್ಲಿ ಬರುವ ನವಂಬರ್ ತಿಂಗಳು ತಾ|| ೫-೬-೭ ರಲ್ಲಿ ಒಂದು ಮಹಾಸಭೆಯನ್ನು ಸರ್ ಆರ್. ಸಿ. ಭಂಡಾರ್ಕರ್‌ರವರ ಅಧ್ಯಕ್ಷತೆಯಿಂದ ನೆರವೇರಿಸಬೇಕೆಂದು ನಿರ್ಧರಿಸಿದ್ದಾರೆ. ಈ ಕಾರ್ಯನಿರ್ವಾಹಕ್ಕಾಗಿ ಭರತಖಂಡದ ನಾನಾಭಾಗಗಳಲ್ಲಿರುವ ೨೧ ಮಂದಿ ವಿದ್ವಾಂಸರುಗಳನ್ನು ಸೇರಿಸಿ ಒಂದು ಸಂಘವನ್ನು ಮಾಡಿದ್ದಾರೆ. ಸಭೆಗೆ ಸರ್ವಭಾಗದ ವಿದ್ಯಾವಂತರೂ ವಿದ್ಯಾಭಿಮಾನಿಗಳೂ ಬರಬಹುದಾಗಿದೆ. ಪ್ರತಿನಿಧಿಗಳಿಗೆ ಪ್ರವೇಶಧನವು ೫ ರೂ. ಗಳು. ಈ ಸಭೆಯಲ್ಲಿ ಸಂಸ್ಕೃತ, ಪಾಲಿ, ಇತರ ದೇಶಭಾಷೆಗಳು ಅವುಗಳ ಸಾರಸ್ವತ ವಿಷಯ, ಆಯಾ ಭಾಷೆಗಳ ಪ್ರಾಚೀನಚರಿತ್ರ ಈಗಣ ಭಾಷೆಗಳು, ಪುರಾತನ ವಸ್ತುಶಾಸ್ತ್ರ, ಪ್ರಾಚೀನದೇಶಚರಿತ್ರೆ, ಪ್ರಾಚೀನ ಭಾಷೆಗಳ ಶಾಸ್ತ್ರ, ಪ್ರಾಚೀನ ವೈದ್ಯಶಾಸ್ತ್ರ ಸಂಗೀತಶಾಸ್ತ್ರ ಮೊದಲಾದ ಅತ್ಯಂತ ಪ್ರಮುಖವಿಷಯಗಳಲ್ಲಿ ಬೋಧಪ್ರದವಾದ ಉಪನ್ಯಾಸಗಳು ನಡೆಯುತ್ತವೆ. ತತ್ಸಂಬಂಧವಾಗಿ ಚರ್ಚೆಗಳೂ ನಡೆಯುತ್ತವೆ. ಮತ್ತು ಅಪೂರ್ವಗಳಾದ ಪ್ರಾಚೀನ ನಾಣ್ಯಗಳು, ತಾಮ್ರದ ಶಾಸನ ಮೊದಲಾದ ಐತಿಹಾಸಿಕ ವಿಷಯ ವಸ್ತುಗಳ ಪ್ರದರ್ಶನವೂ ಸಹಾ ಆ ಕಾಲಕ್ಕೆ ನಡೆಯುತ್ತದೆ. ಈ ಸಭಾಕಾರ್ಯಕ್ಕೆ ಇತರ ರಾಷ್ಟ್ರಗಳ ಸಾನುಭೂತಿಯನ್ನು ಪಡೆಯುವುದಕ್ಕಾಗಿ ಆಯಾ ಪ್ರದೇಶಗಳಿಂದ ಬೇರೆಬೇರೆ ವಿದ್ವಾಂಸರನ್ನು ಸಂಘದವರು ಆರಿಸಿಕೊಂಡಿದ್ದಾರೆ. ನಮ್ಮ ಮೈಸೂರಿನಿಂದ ಆರಿಸಿಕೊಳ್ಳಲ್ಪಟ್ಟಿರುವವರು ಮ|| ಸಿ. ರಾಮಲಿಂಗರೆಡ್ಡಿ ಎಂ. ಎ. ಯವರು ಪ್ರೊ|| ಹಿರಣ್ಣಯ್ಯ ಎಂ.ಎ. ಯವರುಗಳು ಆಗಿರುತ್ತಾರೆ. ನಾನಾವಿಧಗಳಾದ ಸಭೆಗಳು ಪ್ರತಿವರ್ಷದಲ್ಲೂ ನಮ್ಮ ಭರತಖಂಡದಲ್ಲಿ ಕೂಡುತ್ತವೆ. ಆದರೆ ನಾನಾ ಶಾಸ್ತ್ರಪರಿಚಯವುಳ್ಳ ಸಾರಸ್ವತ ಪಂಡಿತರ ಮಹಾಸಭೆಯು ಮಾತ್ರ ಕೂಡುವುದಕ್ಕೆ ಇದೇ ಮೊದಲಾಗಿರುತ್ತದೆ. ಈ ಪ್ರಯತ್ನವು ವಿದ್ಯಾಭಿಮಾನಿಗಳಿಗೆಲ್ಲಾ ವಿಶೇಷ ಸಂತೋಷಪ್ರದವಾಗಿದೆ. ಇದಕ್ಕೆ ಜಯವುಂಟಾಗಿ ಪ್ರತಿವರ್ಷವೂ ಶಾಶ್ವತವಾಗಿ ನಡೆಯುವಂತಾಗಿ, ಪೂರ್ವಾತ್ಯ ವಿಜ್ಞಾನಗಳ ಅಭಿವೃದ್ಧಿಗೆ ಈ ಸಭೆಯಿಂದ ವಿಶೇಷೋತ್ತೇಜನವುಂಟಾಗಲೆಂದೂ, ಈ ಪ್ರಯತ್ನಕ್ಕೆ ಪ್ರಭುತ್ವಗಳವರ ಮತ್ತೂ ದೇಶೀಯ ಧನಿಕರ ಸಾಹಾಯ್ಯವು ಲಭಿಸಲೆಂದೂ ಕೋರುವೆವು.

ಚಿನ್ನ.

ಎಲ್ಲ ಲೋಹಗಳ ಬೆಲೆಯೂ ಏರಿಹೋಗಿರುವುದು ಗೊತ್ತೇ ಇದೆ. ಆದರೆ ಯುದ್ಧ ಮುಗಿದಮೇಲೆ ಅವುಗಳ ಬೆಲೆಯೆಲ್ಲಾ ಇಳಿಯುತ್ತಿದೆ. ಬೆಳ್ಳಿಯ ಬೆಲೆಯು ಮಾತ್ರ ಪ್ರಪಂಚದ ಯಾವಭಾಗದಲ್ಲೂ ಇಳಿದಿಲ್ಲ; ಸದ್ಯಃ ಇಳಿಯುವ ಸಂಭವವೂ ಕಾಣುವುದಿಲ್ಲ. ಆದರೆ ಚಿನ್ನದ ಬೆಲೆಯು ಮಾತ್ರ ವಿದೇಶಗಳಲ್ಲೂ ಇಳಿಯುತ್ತಿದೆ; ನಮ್ಮ ಭರತಖಂಡದಲ್ಲೂ ಇಳಿಯುವ ಕಾಲವು ಬಂದಿದೆ. ಚಿನ್ನದ ಕೊರತೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದಕ್ಕಾಗಿ ಭರತಖಂಡದ ಸರ್ಕಾರದವರು ಅದನ್ನು ೧೫ ದಿನಗಳಿಗೊಂದಾವೃತ್ತಿ ತಮ್ಮ ಬೊಕ್ಕಸದಿಂದ ತೆಗೆದು ಮಾರಿಸುವುದಕ್ಕೆ ಏರ್ಪಡಿಸಿದ್ದಾರೆ. ತತ್ಸಂಬಂಧವಾಗಿ ಅವರು ಕೊಟ್ಟಿರುವ ಪ್ರಕಟನೆಯಲ್ಲಿ ಹೀಗೆ ತಿಳಿಯಿಸಿದ್ದಾರೆ.—ಚಿನ್ನವನ್ನು ಬೊಂಬಾಯಿ ಅಥವಾ ಕಲ್ಕತ್ತೆಯ ಟಂಕಸಾಲೆಯಲ್ಲಿ ಮಾರುವರು. ಒಂದೊಂದುಸಲಕ್ಕೆ ಎಷ್ಟೆಷ್ಟನ್ನು ಮಾರುವರೋ ಅದನ್ನು ಮುಂದಾಗಿ ತಿಳಿಯಿಸುವರು. ಮೊದಲ ಮೂರುತಿಂಗಳಲ್ಲಿ ತಿಂಗಳಿಗೆ ೧೦ ಲಕ್ಷ ಸವರನ್ನುಗಳ ತೂಕಕ್ಕೆ ಕಡಿಮೆಯಿಲ್ಲದಷ್ಟನ್ನು ಮಾರಿಸುವರು. ಕೊಳ್ಳುವ ವರ್ತಕರ ಇಷ್ಟಪ್ರಕಾರ ೫೦ ತೊಲೆಗಳ ಅಥವಾ ಹೆಚ್ಚಿನ ತೂಕದ ಗಟ್ಟಿಗಳನ್ನು ಬೇಕಾದರೆ ಮಾಡಿಸಿಕೊಡುವರು. ತೆಗೆದುಕೊಳ್ಳಲಿಷ್ಟವುಳ್ಳವರು ಈ ತಿಂಗಳು ತಾ|| ೩ ರೊಳಗಾಗಿ ಆಯಾ ಅಧಿಪತ್ಯಗಳ ಅಕೌಂಟೆಂಟ್ ಜನರಲ್‌ರವರಿಗೆ ವಿಜ್ಞಾಪನಪತ್ರಗಳನ್ನು ಬರೆದುಕೊಳ್ಳಬೇಕು. ಯಾರೊಬ್ಬರಿಗೂ ೩| ಲಕ್ಷ ತೊಲಕ್ಕೆ ಮೀರಿಯಾಗಲೀ ೫೦ ತೊಲ ತೂಕಕ್ಕೆ ಕಡಿಮೆಯಾಗಿಯಾಗಲೀ ಮಾರುವುದಿಲ್ಲ. ಕನಿಷ್ಠವಾದ ಬೆಲೆ ಪೌನು ತೂಕಕ್ಕೆ ೧೫ ರೂ. ಎಂದರೆ ತೊಲೆಯ ತೂಕಕ್ಕೆ ಬೆಲೆ ೨೩-೧೪-೪ ಆಗಿರುವುದು. ಅದಕ್ಕೆ ಕಡಿಮೆಯಾದ ಬೆಲೆಗೆ ಕೊಡುವುದಿಲ್ಲ. ಅದಕ್ಕಿಂತ ಹೆಚ್ಚಿನ ಬೆಲೆಗೆ ಯಾರು ಕೇಳುವರೋ ಅವರಿಗೆ ಕೊಡುವರು. ಈ ಏರ್ಪಾಟು ನಡೆದೀಚೆಗೆ ಬಹುಜನರು ಚಿನ್ನವನ್ನು ಕೊಂಡುಕೊಳ್ಳುತ್ತಿದ್ದಾರೆ. ಈ ಪ್ರಕಟನೆಯಾದ ದಿನದಿಂದಲೂ ಬೊಂಬಾಯಿ ಮೊದಲಾದ ಪಟ್ಟಣಗಳಲ್ಲಿ ಚಿನ್ನದ ಬೆಲೆಯು ತೊಲೆ ೧ ಕ್ಕೆ ೫-೬ ರೂ.ನಷ್ಟು ಇಳಿದು ಹೋಯಿತು. ಎಲ್ಲೆಲ್ಲೂ ಈಗ ಭಂಗಾರದ ಬೆಲೆಯು ಇಳಿಯುತ್ತಿದೆ. ಆದರೂ ಗೌರ್ನಮೆಂಟಿನವರು ಮಾಡಿರುವ ಏರ್ಪಾಟು ತೃಪ್ತಿಕರವಾದುದಲ್ಲ. ಅಮೇರಿಕಾ, ಇಂಗ್ಲೆಂಡು, ಫ್ರಾನ್ಸು ಮೊದಲಾದ ವಿದೇಶಗಳಲ್ಲಿ ಹೊರಕ್ಕೆ ಚಿನ್ನವನ್ನು ಕಳುಹಿಸಕೂಡದೆಂದು ಯುದ್ಧಕಾಲದಲ್ಲಿ ಮಾಡಿದ್ದ ನಿರ್ಬಂಧವನ್ನೆಲ್ಲಾ ಈಗ ತಪ್ಪಿಸಿಬಿಟ್ಟಿದ್ದಾರೆ. ಆ ದೇಶಗಳಲ್ಲಿ ಈಗ ತೊಲೆ ೧ ಕ್ಕೆ ೧೮ ರೂ. ನಂತೆ ಚಿನ್ನವು ದೊರೆಯುತ್ತಿದೆ. ನಮ್ಮ ಭರತಖಂಡ ಸರ್ಕಾರದವರು ಚಿನ್ನವನ್ನು ತಾವೇ ಆ ಬೆಲೆಗೆ ತರಿಸಿಕೊಂಡು ತೊಲೆಗೆ ೨೩ ಚಿಲ್ಲರೆ ರೂಪಾಯಿಗೆ ಕಡಿಮೆಯಿಲ್ಲದೆ ಇಲ್ಲಿನ ಪ್ರಜೆಗಳಿಗೆ ಮಾರಲು ಏರ್ಪಡಿಸಿದ್ದಾರೆ. ಇದರಿಂದ ಒಂದೊಂದು ತೊಲೆಗೆ ೫ ರೂ. ಗಳಿಗೆ ಕಡಿಮೆಯಿಲ್ಲದಷ್ಟು ಲಾಭವು ಅವರಿಗೆ ಬರುತ್ತಲಿದೆ ಅನ್ಯದೇಶಗಳಿಂದ ಭರತಖಂಡದವರು ಸ್ವತಂತ್ರವಾಗಿ ಚಿನ್ನವನ್ನು ತರಿಸಲಾಗದೆಂದು ಮಾಡಿರುವ ನಿರ್ಬಂಧವನ್ನು ಇವರು ತಪ್ಪಿಸಿಬಿಟ್ಟರೆ ಪ್ರಜೆಗಳು ತಮಗೆ ಬೇಕಾದಷ್ಟು ಚಿನ್ನವನ್ನು ಅಗ್ಗದ ಬೆಲೆಗೆ ವಿದೇಶಗಳಿಂದ ತರಿಸಿಕೊಳ್ಳುವರು. ಅದಕ್ಕೆ ಅವಕಾಶ ಕೊಡದೆ ಇಂಡ್ಯಾ ಸರ್ಕಾರದವರು ಮಾಡಿರುವ ಈಗಣ ಏರ್ಪಾಟು ಒಪ್ಪತಕ್ಕುದಾಗಿಲ್ಲ. ಇದರಿಂದ ಚಿನ್ನದ ಬೆಲೆಯು ಯತ್ಕಿಂಚಿತ್ ಕಡಿಮೆಯಾದೀತೇ ಹೊರತು ಪೂರ್ವದ ಸ್ಥಿತಿಗೆ ಬರಲಾರದು.

ಪರಿಶ್ರಮೋದ್ಧಾರ.

ಭರತಖಂಡದ ಪ್ರಭುತ್ವದ ಚೀಫ್ ಇಂಜನಿಯರಾದ ಜೆ. ಡಿ. ಮಿಯರ್ಸ್‌ರವರು ಈ ದೇಶದಲ್ಲಿರುವ ಹೊಳೆಗಳಿಂದಲೂ ಜಲಪಾತಗಳಿಂದಲೂ ಎಷ್ಟು ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ಅದರ ಸಾಹಾಯ್ಯದಿಂದ ಯಂತ್ರಗಳನ್ನು ನಡೆಯಿಸಿ ತನ್ಮೂಲಕ ದೇಶದ ಪರಿಶ್ರಮಗಳನ್ನು ಎಷ್ಟುಮಟ್ಟಿಗೆ ಅಭಿವೃದ್ಧಿಗೊಳಿಸಬಹುದೆಂಬುದನ್ನು ಪರಿಶೋಧಿಸಿ ಒಂದು ವರದಿಯನ್ನು ಬರೆದಿರುತ್ತಾರೆ. ಅದರಲ್ಲಿ ಹೇಳಿರುವುದೇನೆಂದರೆ—"ವಿದ್ಯುಚ್ಛಕ್ತಿಸಮುತ್ಪಾದನೆಗೆ ಜಲಪಾತಗಳೇ ಆಗಬೇಕೆಂದೂ, ಉಳಿದ ಸಾಮಾನ್ಯ ನದಿಗಳು ಕೆಲಸಕ್ಕೆ ಬಾರವೆಂದೂ ತಿಳಿಯುವುದು ತಪ್ಪು. ಸದ್ಯಃ ಭರತಖಂಡದ ಪರಿಶ್ರಮಗಳಿಗೆ ೧೦ ಲಕ್ಷ ಕುದುರೆಗಳ ಶಕ್ತಿಯು ವಿನಿಯೋಗಿಸಲ್ಪಡುತ್ತಿದೆ. ಅದರಲ್ಲಿ ೨೮೫೦೦೦ ಕುದುರೆಗಳ ಶಕ್ತಿಯಷ್ಟು ವಿದ್ಯುತ್ತು, ಆವಿ ಎಂಜಿನ್ ಮೊದಲಾದ ಸಾಧನಗಳಿಂದ ಉತ್ಪನ್ನವಾಗುತ್ತದೆ. ಸಣ್ಣಸಣ್ಣ ಹೊಳೆಗಳ ನೀರಿನಿಂದ ೧೭|| ಲಕ್ಷ ಕುದುರೆಗಳ ಶಕ್ತಿಯನ್ನು ಹುಟ್ಟಿಸಿಕೊಳ್ಳಬಹುದು. ದೊಡ್ಡ ನದಿಗಳ ಸಂಬಂಧದ ಪರಿಶೋಧನೆಯನ್ನು ಇನ್ನೂ ಮಾಡಿಲ್ಲ. ಪೂರ್ವಮುಖವಾಗಿ ಪ್ರವಹಿಸುವ ಸಿಂಧು ಮೊದಲಾದ ೭ ಮಹಾನದಿಗಳು ಹಿಮವತ್ಪರ್ವತದಿಂದ ಕೆಳಕ್ಕೆ ದುಮಿಕಿ ಹರಿಯುತ್ತಿರುವುದರಿಂದ ಅವುಗಳು ಪ್ರತಿ ಸಹಸ್ರ ಅಡಿಗೂ ೩೦ ಲಕ್ಷ ಕುದುರೆಗಳ ಶಕ್ತಿಯನ್ನು ಕೊಡಬಲ್ಲುವು" ಎಂದು ಹೇಳಿರುತ್ತಾರೆ. ಇದನ್ನು ನೋಡಲಾಗಿ ನಮ್ಮ ದೇಶದ ಪರಿಶ್ರಮಾಭ್ಯುದಯಗಳಿಗೆ ಪ್ರಕೃತಿಸಿದ್ಧವಾದ ವಸ್ತುಜಾಲದಿಂದ ಎಷ್ಟು ಸಾಹಾಯ್ಯವನ್ನು ಜಗದೀಶ್ವರನು ಅಣಿಮಾಡಿಟ್ಟಿರುವನೆಂಬುದು ವ್ಯಕ್ತವಾಗಿರುತ್ತದೆ. ನಮ್ಮ ಖನಿಜ ಸಂಪತ್ತಿಯೂ ಅಸಾಧಾರಣವಾಗಿದೆ. ಮೂಲವಸ್ತುಗಳ ಸಮೃದ್ಧಿಯು ವಾಚಾಮಗೋಚರವಾಗಿದೆ. ಪಕ್ವಮಾಡಿ ವಸ್ತುನಿರ್ಮಾಣಗೊಳಿಸಿ ಧನಾರ್ಜನೆ ಮಾಡತಕ್ಕ ಶಕ್ತಿಯು ಮಾತ್ರ ದೇಶೀಯರಲ್ಲಿ ಕಡಿಮೆಯಾಗಿದೆ. ನಾವು ದೈವದ ಮೇಲೋ ಪ್ರಭುತ್ವದವರ ಮೇಲೋ ದೋಷವನ್ನು ಹೊರಿಸುವುದರಲ್ಲಿ ಜಾಗರೂಕರಾಗಿ, ಸ್ವಕೀಯಪ್ರಯತ್ನಲೋಪವುಳ್ಳವರಾಗಿರುವುದರಿಂದ ದರಿದ್ರದಾಮೋದರರಾಗಿ ಬಾಳುತ್ತಲಿದ್ದೇವೆ. ನಮ್ಮ ಉದ್ಧಾರವನ್ನು ನಾವು ಮಾಡಿಕೊಳ್ಳಬೇಕಾದರೆ ನಮ್ಮ ದೇಶದ ಪರಿಶ್ರಮೋದ್ಧಾರವನ್ನು ಮಾಡಿಕೊಂಡಲ್ಲದೆ ಗತ್ಯಂತರವಿಲ್ಲ.

ಭರತಖಂಡದ ಶತ್ರುಗಳು.

ಈಗ ಸೀಮೆಯಲ್ಲಿ ತಿಲಕರ ಜತೆಯಲ್ಲಿರುವ ಮ|| ನರಸಿಂಹ ಚಿಂತಾಮಣಿ ಕೇಳಕರ್‌ರವರು ಪುನೆಯ ತಮ್ಮ ಕೇಸರೀಪತ್ರಿಕೆಗೆ ಈ ಕೆಳಗೆ ಕಾಣುವಂತೆ ತಂತ್ರೀವಾರ್ತೆಯನ್ನು ಕೊಟ್ಟಿದ್ದಾರೆ. ಏನೆಂದರೆ—"ಕಳೆದ ತಿಂಗಳು ತಾ|| ೧೩ ರಲ್ಲಿ ನಾರ್ತಾಂಪ್ಟನ್ನಿನಲ್ಲಿ ಜಾತೀಯ ಸಾಂಘಿಕವಾದಿಗಳ ವಾರ್ಷಿಕಸಭೆಯು ಕೂಡಿದ್ದಿತು. ಆಗ ಮಿ|| ಹಿಂಡ್‌ಮೆರ್ ರವರು ಭರತಖಂಡದ ವಿಮುಕ್ತಿಯನ್ನು ಕುರಿತು ಒಂದು ತೀರ್ಮಾನವನ್ನು ಪ್ರತಿಪಾದಿಸಲು ಅದು ಸಭೆಯಲ್ಲಿ ಅಂಗೀಕೃತವಾಯಿತು. ಭಾರತೀಯರಲ್ಲಿ ಅಧಿಕ ಸಂಖ್ಯಾಕರಾದ ಜನರ ಪ್ರತಿನಿಧಿಗಳೂ ಆಂಗ್ಲದೇಶದ ಪ್ರತಿನಿಧಿಗಳೂ ಸಹ ಸೇರಿ ಶಾಂತಭಾವದಿಂದ ಏರ್ಪಡಿಸಿಕೊಳ್ಳುವ ರೀತಿಯಿಂದ ಭರತಖಂಡಕ್ಕೆ ಶೀಘ್ರವಾಗಿ ಆಂಗ್ಲಾಧಿಕಾರದಿಂದ ವಿಮುಕ್ತಿಯು ಉಂಟಾಗಬೇಕೆಂದು ಆ ತೀರ್ಮಾನದಲ್ಲಿ ಕಾಣಿಸಲ್ಪಟ್ಟಿದ್ದಿತು". ಈ ತೀರ್ಮಾನವು ಯಾವ ಭಾರತೀಯನಿಗೆ ಪ್ರಿಯವಾಗಿರುವುದೋ ಗೊತ್ತಾಗಲಿಲ್ಲ. ಆಂಗ್ಲಛತ್ರಾಶ್ರಯದ ಕೆಳಗೆ ಯಾವ ಸೌಭಾಗ್ಯವನ್ನೂ ಪಡೆದುಕೊಳ್ಳಬೇಕೆಂಬುದು ಈ ದೇಶದ ಮುಕ್ಕಾಲು ಮೂರುವೀಸಪಾಲು ಪ್ರಜೆಗಳಿಗೆಲ್ಲಾ ಇಷ್ಟವಾಗಿರುವುದು ಖಂಡಿತ. ಮ|| ಕೇಳಕರ್‌ರವರು ಈ ತೀರ್ಮಾನಕ್ಕೆ ಸಂತೋಷಪಡುವವರಾಗಿದ್ದ ಪಕ್ಷದಲ್ಲಿ ಅವರೂ ಅವರ ಕೂಟದ ಇನ್ನು ಕೆಲಜನರು ಸಂಪೂರ್ಣ ಸ್ವಾತಂತ್ರ್ಯವನ್ನು ಕೋರುವ ವಿ. ಪಿ. ಮಾಧವರಾಯರಂಥವರು ಮಾತ್ರ ಆಂಗ್ಲಾಧಿಕಾರ ವಿಮುಕ್ತಿಯನ್ನು ಕೋರುತ್ತಿರಬಹುದು. ಹಾಗಿದ್ದರೆ ಮ|| ಹಿಂಡ್‌ಮನ್ನರನ್ನೂ ಅವರ ತೀರ್ಮಾನಕ್ಕೆ ಅನುಮೋದನ ಕೊಟ್ಟ ಪರದೇಶೀಯರನ್ನೂ ಸ್ವದೇಶೀಯರನ್ನೂ ಸಹ ಭರತಖಂಡವು ತನ್ನ ಶತ್ರುಗಳನ್ನಾಗಿಯೇ ತಿಳಿಯುವುದು.

ಒಳದೇಶದ ವೃತ್ತಾಂತಗಳು.

ಗೌರೀಗಣೇಶನ ಹಬ್ಬಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ಮತ್ತೆ ಬೆಂಗಳೂರಿಗೆ ಬಿಜಮಾಡಿಸಿದರು.

ನಂಜನಗೂಡು ತಾ|| ಬದನಾಳಿನಲ್ಲಿ ಒಂದು ಭೂಮಿಯ ಸಂಬಂಧವಾಗಿ ಶಿವಾಚಾರದವರಿಗೂ ಕಿರುಗಾಣಿಗರಿಗೂ ಜಗಳವಾಗಿ ಒಬ್ಬ ಶಿವಭಕ್ತರ ಹುಡುಗನು ಕೊಲ್ಲಲ್ಪಟ್ಟಿದ್ದಾನೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಳೆಯು ಹಿಂದೆಗೆದು ಹೋಗಿರುವುದರಿಂದ ನಿಂತಿರುವ ಬೆಳಸುಗಳೆಲ್ಲಾ ಒಣಗುತ್ತಿವೆ. ಹಲವುಕಡೆ ಜೋಳವೂ ರಾಗಿಯ ಬೆಳಸೂ ಹಾಳಾಯಿತು. ಧಾರಣೆಗಳು ಏರುತ್ತಿವೆ. ಆದರೆ ನೆನ್ನೆಯಿಂದ ಮಳೆ ಬರುವ ಚಿನ್ಹೆಯು ತೋರಹತ್ತಿದೆ.

ತಮಗೆ ಮೇಲ್ಪಟ್ಟ ಉದ್ಯೋಗಿಗಳಿಗೆ ಬರೆಯದೆ ತಾವೇ ಗ್ರಾಮಾಧಿಕಾರಿಗಳನ್ನು ೧ ತಿಂಗಳಿಗೆ ಮೇಲ್ಪಡದಂತೆ ಸಸ್ಪೆಂಡ್ ಮಾಡುವ ಮತ್ತು ಇತರರನ್ನು ಆ ಸ್ಥಳಕ್ಕೆ ನೇಮಿಸಿಕೊಳ್ಳುವ ಅಧಿಕಾರವು ಅಮಲ್ದಾರರುಗಳಿಗೆ ಇರತಕ್ಕುದಲ್ಲವೆಂದು ಸರ್ಕಾರದವರು ತಪ್ಪಿಸಿಬಿಟ್ಟಿದ್ದಾರೆ.

ರಾಜಧಾನಿಯ ಟ್ರಸ್ಟ್‌ಬೋರ್ಡಿನವರು ಊರಿಗೆ ಪಶ್ಚಿಮದಿಕ್ಕಿನಲ್ಲಿರುವ ಕುಕ್ಕರಹಳ್ಳಿ ಎಂಬ ಗ್ರಾಮವನ್ನು ೩೬ ಸಾವಿರ ರೂ. ಗಳ ಪ್ರತಿಫಲದಿಂದ ಕೊಂಡು ಒಡೆದು ಅಲ್ಲಿ ಪುರವಾಸಿಗಳಿಗೆ ಹೊಸಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಿವೇಶನಗಳನ್ನು ಒದಗಿಸಿಕೊಡಲು ನಿರ್ಧರಿಸಿದ್ದಾರೆ.

ಟಿಪ್ಪು ಸುಲ್ತಾನರು ಗತಿಸಿ ಇಲ್ಲಿಗೆ ೧೨೦ ವರುಷಗಳಾದುವು. ವರ್ಷೇ ವರ್ಷೇ ಅವರ ಗೋರಿಯ ಬಳಿಯಲ್ಲಿ ಗಂಜಾಮದೊಳಗೆ ನಡೆಯತಕ್ಕ ಉರುಸು ಈ ವರ್ಷವೂ ಕಳೆದವಾರ ನಡೆಯಿತು. ಮೈಸೂರಿನಿಂದಲೇ ಅಲ್ಲದೆ ಬೆಂಗಳೂರು ಕೋಲಾರ ಮೊದಲಾದಕಡೆಗಳಿಂದ ಎಷ್ಟೋ ಸಹಸ್ರ ಮಹಮ್ಮದೀಯ ಜನರು ಬಂದು ನೆರೆದಿದ್ದರು. ಬಹು ದೊಡ್ಡ ಜಾತ್ರೆಯಾಯಿತು. ಅ|| ಕಮಿಷನರ್ ಸಯ್ಯದ್ ತಾಜಪೀರಾನ್‌ರವರು ಅಗ್ರಗಣ್ಯರಾಗಿ ನಿಂತು ಎಲ್ಲ ಕೆಲಸಗಳನ್ನೂ ಜರುಗಿಸಿದರು.

ಟಿ. ನರಸೀಪುರದ ಬಳಿಯಲ್ಲಿ ದೋಣಿ ಮುಳುಗಿ ೧೪ ಮಂದಿಗಳು ಮೃತರಾದ ವರ್ತಮಾನವು ಮರೆಯುವುದರೊಳಗಾಗಿ ಹೆಗ್ಗಡದೇವನಕೋಟೆ ತಾಲ್ಲೋಕಿನಲ್ಲಿ ಕಪಿನೀಹೊಳೆಯಲ್ಲಿ ಮತ್ತೊಂದು ಕಡೆ ತೆಪ್ಪದಮೇಲೆ ಸಾಗಿಸಲ್ಪಡುತ್ತಲಿದ್ದ ೧೦ ಮಂದಿಗಳು ಮೃತರಾದರೆಂಬ ವರ್ತಮಾನ ಬಂದಿದೆ. ತಾಲ್ಲೂಕಧಿಕಾರಿಗಳ ಔದಾಸೀನ್ಯವನ್ನು ಇವು ಸೂಚಿಸುತ್ತಿವೆ. ದೋಣಿ ತೆಪ್ಪ ಹರಿಗೋಲುಗಳನ್ನೆಲ್ಲಾ ತಪ್ಪಿಸಿ ಸಾಧ್ಯವಾದ ಕಡೆಗಳಲ್ಲೆಲ್ಲಾ ನದಿಗಳಿಗೆ ಜಂಜಾಲುಗಳನ್ನಿಡಿಸಲು ಗೌರ್ನಮೆಂಟಿನವರು ಅಪ್ಪಣೆಮಾಡಿದರೆ ಇಂಥ ಅನರ್ಥಗಳಿಗೆ ಆಸ್ಪದವು ಕಡಿಮೆಯಾಗಬಹುದು.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಬಹು ಕೊಲೆ ಸುಲಿಗೆಗಳನ್ನೂ ಕಳ್ಳತನಗಳನ್ನೂ ನಡೆಯಿಸುತ್ತಾ ದೇಶಕಂಟಕನಾಗಿದ್ದ ರಾಮ ಎಂಬವನನ್ನು ಹಿಡಿಯುವುದಕ್ಕಾಗಿ ಬೊಂಬಾಯಿ ಪೊಲೀಸರೂ ಮೈಸೂರು ಪೊಲೀಸುಶಾಖೆಯವರೂ ಕಳೆದ ೬ ತಿಂಗಳಿಂದಲೂ ಬಹಳ ಸಾಹಸಮಾಡುತ್ತಿದ್ದರು. ಕಡೆಗೆ ಅವನು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಕನಕೊಪ್ಪ ಎಂಬ ಗ್ರಾಮದ ಬಳಿಯಲ್ಲಿ ಸಾಯುಧನಾಗಿ ನಿರ್ಲಕ್ಷ್ಯದಿಂದ ಹೋಗುತ್ತಿರುವಾಗ ಮೆಳೆಗಳಲ್ಲಿ ಅವಿತಿದ್ದ ರಿಜರ್ವ್ ಪೊಲೀಸರು ಅವನನ್ನು ಹೊಡೆದರೆಂಬ ವಾರ್ತೆಯು ಬಂದಿದೆ. ಆ ಡಿಸ್ಟ್ರಿಕ್ಟಿನವರೆಲ್ಲಾ ಈಗ ನೆಮ್ಮದಿಯಾಯಿತೆಂದು ಸಂತೋಷಿಸುತ್ತಿರುವರಂತೆ.

ಬರುವ ನವರಾತ್ರಿ ಕಾಲದಲ್ಲಿ ರಾಜಧಾನಿಯೊಳಗೆ ಪಂಚಮರ ಮಹಾಸಭೆಯು ಜರುಗುವುದಕ್ಕೆ ಏರ್ಪಾಟುಗಳು ನಡೆಯುತ್ತಿವೆ. ಈಗ ಮದ್ರಾಸು ನಿಯಮನಿರ್ಮಾಣಸಭೆಗೆ ಅನರಬಲ್ ಮೆಂಬರಾಗಿ ಹೊಸದಾಗಿ ಪಂಚಮ ವರ್ಗದಿಂದ ಆರಿಸಲ್ಪಟ್ಟವರಾಗಿರುವ ಅ|| ರಾಜನ್‌ರವರು ಇದರ ಅಧ್ಯಕ್ಷತೆಯನ್ನು ವಹಿಸಲು ಕೋರಲ್ಪಟ್ಟಿರುವರಂತೆ. ಕನ್ನಡಭಾಷೆಯನ್ನೇ ಅರಿಯದ ಅವರು ಇಲ್ಲಿಯ ಸಭೆಯ ಅಧ್ಯಕ್ಷತೆಯನ್ನು ವಹಿಸುವುದರಿಂದ ಉಭಯತ್ರ ಎಷ್ಟುಮಟ್ಟಿನ ಪ್ರಯೋಜನವಾದೀತೊ! ಈ ಸಭೆಗೆ ಬರುವ ಪ್ರತಿನಿಧಿಗಳ ದಾರಿವೆಚ್ಚವನ್ನೂ ಊಟದ ಭಾರವನ್ನೂ ಸಭಾಪಾಲಕರೇ ವಹಿಸಿಕೊಳ್ಳುವಂತೆ ಏರ್ಪಾಟಾಗಿದೆಯೆಂದು ಕೇಳುತ್ತೇವೆ.

ನಮ್ಮ ಗೌರ್ನಮೆಂಟಿನವರು ವೈಸ್ರಾಯರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ರಾಜಧಾನಿಗೆ ಅರಸೀಕೆರೆ ಮೈಸೂರು ಲೋಹಮಾರ್ಗದಮೇಲಿಂದ ಕರೆದುಕೊಂಡು ಬರಬೇಕೆಂದು ಸಂಕಲ್ಪಿಸಿರುತ್ತಾರೆ. ಆದರೆ ಈ ಮಾರ್ಗವು ಉದ್ದಕ್ಕೂ ಮಟ್ಟ ಸರಿಯಾಗಿಲ್ಲದೆ ಕಂಬಿಗಳ ಹೆಚ್ಚು ಕಡಿಮೆಯಿಂದ ಅವುಗಳಮೇಲೆ ಹೋಗುವ ಬಂಡಿಗಳು ಜಟ್ಕಾ ಬಂಡಿಗಳಂತೆ ಉರುಳಾಡುತ್ತಿರುವುದನ್ನೂ ಒಳಗೆ ಕುಳಿತ ಪ್ರಯಾಣಿಕರು ಒದರಾಡಿಸಲ್ಪಡುತ್ತಿರುವುದನ್ನೂ ಸರ್ವರೂ ಕಂಡಿದ್ದಾರೆ. ಇಂಥ ಮಾರ್ಗದಲ್ಲಿ ವೈಸ್ರಾಯರನ್ನು ಕರೆತಂದು ಇದರ ಯೋಗ್ಯತೆಯನ್ನು ಪ್ರಕಾಶಪಡಿಸುವುದಕ್ಕಿಂತಲೂ ಬೆಂಗಳೂರು ಮಾರ್ಗವಾಗಿ ಕರೆತರುವುದೇ ಲೇಸಲ್ಲವೆ? ಎಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.

ಅಂಗೀಕೃತಗಳಾದ ಸಂಘಗಳಿಂದ ಪ್ರಜಾಪ್ರತಿನಿಧಿ ಸಭೆಗೆ ಸಭಿಕರನ್ನು ಆರಿಸಿ ಕಳುಹಿಸಬೇಕಾದರೆ ಒಟ್ಟು ಸಭಿಕರ ಸಂಖ್ಯೆಯಲ್ಲಿ ಸೇಕಡಾ ೭೫ ಕ್ಕೆ ಕಡಿಮೆಯಿಲ್ಲದಷ್ಟು ಸಭಿಕರು ಸೇರಿ ಓಟಿಂಗ್ ಮಾಡಿ ಆರಿಸಿ ಕಳುಹಿಸಬೇಕೆಂದು ಮೊದಲಿದ್ದ ನಿಬಂಧನೆಯನ್ನು ಸರ್ಕಾರದವರು ಕಳೆದ ಜೂನ್ ತಿಂಗಳಲ್ಲಿ ತಿದ್ದಿ ಆ ಪರಿಮಿತಿಯನ್ನು ಸೇಕಡಾ ೫೦ ಕ್ಕೆ ಇಳಿಯಿಸಿಕೊಟ್ಟಿದ್ದರು. ಅದೂಕೂಡ ಹೆಚ್ಚೆಂದು ಒಕ್ಕಲಿಗರ ಸಂಘದವರೂ ಸೆಂಟ್ರಲ್ ಮಹಮ್ಮಡನ್ ಅಸೋಸಿಯೇಷನ್ನಿನವರು ಸಹ ಸರ್ಕಾರಕ್ಕೆ ಬಿನ್ನೈಸಿಕೊಂಡಿದ್ದುದರ ಮೇಲೆ ಗೌರ್ನಮೆಂಟಿನವರು ಉದಾರ ಚಿತ್ತವನ್ನು ತೋರಿಸಿ ಸಭಿಕರ ಸಂಖ್ಯೆಯು ೨೫ ಕ್ಕೆ ಕಡಿಮೆಯಿಲ್ಲದಿರಬೇಕು. ಅಥವಾ ಸೇಕಡಾ ೨೫ ರಷ್ಟು ಆಗಿರಬೇಕು. ಎಂದು ಅಪ್ಪಣೆಮಾಡಿರುತ್ತಾರೆ. ಪೋಸ್ಟಿನಮೂಲಕ ಓಟುಗಳನ್ನು ತರಿಸಲಾಗದೆಂದು ನಿಷೇಧಿಸಿದ್ದಾರೆ. ಇದು ಯುಕ್ತವಾಗಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿಸಭೆಯಿಂದ ಸಂಪದಭ್ಯುದಯ ಸಾಮಾನ್ಯ ಸಮಾಜಕ್ಕೆ ಇಬ್ಬರು ಪ್ರತಿನಿಧಿಗಳನ್ನೂ ವಿದ್ಯಾಭ್ಯಾಸ ಶಾಖಾಸಂಘಕ್ಕೆ ಇಬ್ಬರನ್ನೂ ವ್ಯವಸಾಯ ಕೈಗಾರಿಕೆಯ ಶಾಖಾಸಂಘಕ್ಕೆ ಇಬ್ಬರನ್ನೂ ವ್ಯಾಪಾರ ಶಾಖಾಸಂಘಕ್ಕೆ ಇಬ್ಬರನ್ನೂ ಅಂತು ಒಟ್ಟು ೮ ಮಂದಿಗಳನ್ನು ಆರಿಸಿಕೊಡಬೇಕಾದ ಕೆಲಸವು ಬರುವ ಪ್ರಜಾಪ್ರತಿನಿಧಿಸಭೆಯಲ್ಲಿ ನಡೆಯುವುದಾಗಿದೆ. ಹಾಗೆ ಆರಿಸಲ್ಪಡಲು ಉಮೇದುವಾರರಾಗಿ ನಿಲ್ಲಬೇಕೆಂದಿರುವ ಪ್ರಜಾಪ್ರತಿನಿಧಿ ಸಭಾಸಭಿಕರು ತಮ್ಮ ಅಭಿಪ್ರಾಯವನ್ನು ಲಿಖಿತಮೂಲಕವಾಗಿ ಇದೇ ತಿಂಗಳು ತಾ|| ೧೫ ರೊಳಗಾಗಿ ಸರ್ಕಾರದ ವಿದ್ಯಾಭ್ಯಾಸ ಮತ್ತು ವ್ಯವಸಾಯ ಶಾಖೆಯ ಸೆಕ್ರೆಟರಿಯವರಿಗೆ ಬರೆದು ತಿಳಿಯಿಸಿಕೊಳ್ಳಬೇಕಾಗಿದೆ. ಹೆಚ್ಚು ಓಟುಗಳನ್ನು ಪಡೆದ ೮ ಮಂದಿಗಳು ಮೇಲೆಕಂಡ ಸ್ಥಾನಗಳನ್ನು ಪಡೆದು ೧೯೨೦ ನೆ ವರ್ಷದ ಜನವರಿ ತಾ|| ೧ ರಿಂದ ಸಮಾಜದ ಮತ್ತು ಕಮಿಟಿಗಳ ಮೆಂಬರುಗಳಾಗುವರು.

ವೈಸ್ರಾಯರು ಬರುವ ಅಕ್ಟೋಬರ್ ತಿಂಗಳು ತಾ|| ೧೯ ರಲ್ಲಿ ಸಿಮ್ಲಾಪಟ್ಟಣವನ್ನು ಬಿಟ್ಟು ಹೊರಟು ಪಾಟಿಯಾಲಾ ಫೊಲ್‌ಕಿಯನ್ ಸಂಸ್ಥಾನಗಳಿಗೆ ಹೋಗಿ ಅಲ್ಲಿಂದ ಡೇರಾಡೂನಿನ ಮಾರ್ಗವಾಗಿ ದಿಲ್ಲಿ ಪಟ್ಟಣಕ್ಕೆ ಹೋಗಿ ಸಂಸ್ಥಾನಾಧೀಶರ ಸಭೆಯನ್ನು ಅಲಂಕರಿಸುವರು. ಅಲ್ಲಿಂದ ನವಂಬರ್ ತಿಂಗಳ ಮಧ್ಯಭಾಗದಲ್ಲಿ ಲಕ್ನೋಪಟ್ಟಣಕ್ಕೆ ಹೋಗಿದ್ದು ಅಲ್ಲಿಂದ ನವಂಬರ್ ತಾ|| ೨೬ ಕ್ಕೆ ನಮ್ಮ ದೇಶಕ್ಕೆ ದಯಮಾಡಿಸಿ, ಶಿವಮೊಗ್ಗದ ಮಾರ್ಗವಾಗಿ ಗೆರುಸೊಪ್ಪಾ ಜಲಪಾತ ದರ್ಶನಕ್ಕೆ ಹೋಗುವರು. ಅಲ್ಲಿಂದ ಡಿಸಂಬರ್ ತಾ|| ೧ ರಲ್ಲಿ ಮೈಸೂರು ಪಟ್ಟಣಕ್ಕೆ ಬರುವರು. ಇಲ್ಲಿ ೩ ದಿನಗಳಕಾಲ ಇದ್ದು ಇಲ್ಲಿಂದ ಕಾರಾಪುರದ ಕ್ಯಾಂಪಿಗೆ ದಯಮಾಡಿಸಿ, ಅಲ್ಲಿ ಆನೆಗಳನ್ನು ಹಿಡಿದು ಕೊಡುವುದನ್ನು ಪರಾಮರಿಸಿ ಬೇಟೆಯಾಡಿಕೊಂಡು ಅಲ್ಲಿಂದ ರಾಜಧಾನಿಗೆ ಮರಳಿಬಂದು ಶಿವನಸಮುದ್ರದ ಜಲಪಾತದರ್ಶನವನ್ನು ಮಾಡಿಕೊಂಡು ಬೆಂಗಳೂರಿಗೆ ಹೋಗಿ ಕೋಲಾರದ ಚಿನ್ನದಗಣಿಗಳನ್ನು ಪರಾಮರಿಸಿಕೊಂಡು ಡಿಸಂಬರ್ ತಾ|| ೧೩ ರಲ್ಲಿ ಅವರು ಈ ಸಂಸ್ಥಾನವನ್ನು ಬಿಟ್ಟು ತೆರಳುವರೆಂದು ಈಗಣ ಏರ್ಪಾಟಿನ ಪ್ರಕಾರ ಗೊತ್ತಾಗಿದೆ.

ವೃತ್ತಾಂತಗಳು.

ಧಾರವಾಡದ ಶುಭೋದಯ ಕರ್ತರ ಮೇಲೆ ಹುಬ್ಬಳ್ಳಿಯ ಮ|| ಅಡ್ವೋಕೇಟ್ ಸಿದ್ಧರಾಮಪ್ಪ ಪಾವಟೆಯವರು ಹೂಡಿದ್ದ ಮಾನನಷ್ಟದ ವ್ಯಾಜ್ಯದಲ್ಲಿ ಅಪರಾಧಿಗಳು ದೋಷಮುಕ್ತರಾಗಿ ಬಿಡಲ್ಪಟ್ಟರೆಂದು ಕೇಳುತ್ತೇವೆ.

ಸಾಮ್ರಾಜ್ಯ ನಿಯಮನಿರ್ಮಾಣ ಸಭೆಯು ಕಳೆದ ತಾ|| ೩ ರಲ್ಲಿ ಸಿಮ್ಲಾಪಟ್ಟಣದಲ್ಲಿ ವೈಸ್ರಾಯರ ಅಧ್ಯಕ್ಷತೆಯಿಂದ ಕೂಡಿದ್ದಿತು. ಅಧ್ಯಕ್ಷರ ಆರಂಭ ಭಾಷಣದೊಳಗೆ-ಪಂಜಾಬು ದಿಲ್ಲಿ ಬೊಂಬಾಯಿಗಳಲ್ಲಿ ಆದ ಅನಾಹುತದ ಕಾರಣ, ಅದಕ್ಕಾಗಿ ಏರ್ಪಟ್ಟಿದ್ದ ಸೈನಿಕ ವಿಚಾರಣೆ-ಇವುಗಳ ಗುಣದೋಷವನ್ನು ವಿಚಾರಿಸುವ ಸಂಘವು ಈಗ ಏರ್ಪಟ್ಟಿದೆಯೆಂದೂ, ಅದಕ್ಕೆ ಸ್ಕಾಟ್ಲಾಂಡಿನ ಸಾಲಿಸಿಟರ್ ಜನರಲ್ಲಾಗಿದ್ದ ಲಾರ್ಡ್ ಹಂಟರ್‌ರವರು ಅಧ್ಯಕ್ಷರಾಗಿಯೂ, ಜಸ್ಟಿಸ್‌ರ್‍ಯಾನ್ಕಿನ್, ಅ|| ರೈಸ್, ಸರ್ ಜಾರ್ಜ್‌ಬಾರೊ, ಸರ್ ಚಿಮನ್‌ಲಾಲ್ ಸೆಟಲ್ವಾಡ್, ಸಾಹಿಬ್ಜಾದಾ ಸುಲ್ತಾನ್ ಅಹಮ್ಮದ್‌ರವರುಗಳು ಸಭಿಕರಾಗಿರುವರೆಂದೂ, ಮುಂದಣ ತಿಂಗಳಲ್ಲಿ ಇವರು ವಿಚಾರಣೆಗಾರಂಭಿಸುವರೆಂದೂ, ವಿಚಾರಣೆಯು ಬಹಿರಂಗವಾಗಿಯೇ ಜರುಗುವುದೆಂದೂ, ಅಧ್ಯಕ್ಷರಿಗೆ ಅವಶ್ಯಕವಾಗಿ ತೋರಿದರೆ ರಹಸ್ಯವಾಗಿ ಮಾಡಬಹುದೆಂದೂ ಹೇಳಿದುದಲ್ಲದೆ, ದೇಶದಲ್ಲಿ ಉಪದ್ರವಗಳು ಹೆಚ್ಚಿದಾಗ ಅದನ್ನು ತಡೆದು ನೆಮ್ಮದಿಯನ್ನು ಕಾಪಾಡುವುದಕ್ಕಾಗಿ ಕೆಲಸಮಾಡಿದ ಅಧಿಕಾರಿಗಳ ಚರ್ಯೆಯನ್ನು ನ್ಯಾಯಸಮ್ಮತವಾದುದೆಂದು ದೃಢಪಡಿಸುವುದಕ್ಕಾಗಿ ಇಂಡೆಮ್ನಿಟಿ ಎಂಬ ಶಾಸನವನ್ನು ಹೊಸದಾಗಿ ಏರ್ಪಡಿಸಬೇಕಾಗಿದೆಯೆಂದೂ ಹೇಳಿದರು. ಸಭೆಯು ಮುಂದೆ ತಾ|| ೧೦ ರಲ್ಲಿ ಕೂಡುವುದಾಗಿದೆ.

ಪತ್ರವ್ಯವಹಾರ.

ಬೌರಿಂಗ್‌ಪೇಟೆ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಕೋಲಾರ ಡಿಸ್ಟ್ರಿಕ್ಟ್ ಬೌರಿಂಗ್‌ಪೇಟೆ ಮಾದಮಂಗಲ ಮುಂತಾದ ಸ್ಥಲಗಳ ವೀರಶೈವ ಭಕ್ತಮಾಹೇಶ್ವರ ಮಂಡಲಿಯ ಪ್ರಾರ್ಥನೆ ಪ್ರಕಾರ ಬೌರಿಂಗ್‌ಪೇಟೆ ಟವನ್ನಿಗೆ ತಾ|| ೨೩-೮-೧೯ ನೆಯ ದಿವಸ ಬೆಳಗಿನ ೧೧ ಗಂಟೆಗೆ ಸಕಲ ಬಿರುದಾವಳಿಯೊಡನೆ ಚಿತ್ತೈಸಿತು. ಸುತ್ತುಮುತ್ತಿನ ಅನೇಕ ಸಹಸ್ರ ಭಕ್ತಜನರೂ ಬೆಂಗಳೂರಿನ ಅನೇಕ ಪ್ರಮುಖರೂ ಉತ್ಸವಕಾಲಕ್ಕೆ ಬಂದು ನೆರೆದಿದ್ದರು. ತಾ|| ಅಮಲ್ದಾರರೂ ಪೊಲೀಸ್ ಇನ್ಸ್‌ಪೆಕ್ಟರೂ ಮ್ಯು|| ವೈಸ್‌ಪ್ರೆಸಿಡೆಂಟರೂ ಪುರ

ಪ್ರಮುಖರಾದ ಸಕಲ ಮತೀಯರೂ ಎಷ್ಟರ್ ಹಾಲಿನ ಹತ್ತಿರ ನಿರೀಕ್ಷಿಸಿಕೊಂಡಿದ್ದು ಶ್ರೀಗಳ ದರ್ಶನವನ್ನು ಪಡೆದುಕೊಂಡರು. ಮ್ಯು॥ ಪ್ರೆಸಿಡೆಂಟ್ ಮ॥ ಸ್ವಾಮಿರಾಯರು ಶ್ರೀಗಳವರಿಗೆ ಪುರಪ್ರಮುಖರ ಪರಿಚಯವನ್ನು ಮಾಡಿಸಿದರು. ಬಳಿಕ ಶ್ರೀಗಳು ಶೃಂಗರಿಸಲ್ಪಟ್ಟಿದ್ದ ಸುವರ್ಣ ರಥ ಹಾಂದೋಳನವನ್ನಲಂಕರಿಸಿ, ತಳಿರ್ತೋರಣ ರಂಭಾಸ್ತಂಭ ಧ್ವಜಪತಾಕ ಮೊದಲಾದವುಗಳಿಂದ ಅಲಂಕರಿಸಲ್ಪಟ್ಟಿದ್ದ ಪುರದ ಎಲ್ಲಾ ರಾಜವೀಧಿಗಳಲ್ಲಾ ಉತ್ಸವಗೊಂಡು ರಾ॥ ಬ॥ ಎಲೆ ಮಲ್ಲಪ್ಪಶೆಟ್ಟರ ಧರ್ಮಸತ್ರದಲ್ಲಿ ಏರ್ಪಡಿಸಿದ್ದ ಬಿಡಾರಕ್ಕೆ ಸ್ವಾಮಿಯು ಚಿತ್ತೈಸೋಣವಾಯ್ತು. ಅಲ್ಲಿ ನಿರ್ಮಿತವಾಗಿದ್ದ ದೊಡ್ಡ ಚಪ್ಪರದಲ್ಲಿ ಶೃಂಗರಿಸಲ್ಪಟ್ಟಿದ್ದ ಸುವರ್ಣಪೀಠದಮೇಲೆ ಶ್ರೀಗಳವರು ಮೂರ್ತಗೊಂಡಕೂಡಲೇ ಬೆಂಗಳೂರು ಗಂಜಾಂನವರ ವೈದಿಕ ಪಾಠಶಾಲಾ ಧ್ಯಾಪಕರಾದ ವೇ॥ ವೀರಪ್ಪಶಾಸ್ತ್ರಿಗಳೇ ಮೊದಲಾದವರು ವೇದಘೋಷವನ್ನು ಮಾಡಿದ ಬಳಿಕ ಬಂದಿದ್ದ ಭಕ್ತಮಂಡಲಿಯನ್ನೆಲ್ಲಾ ಶ್ರೀಗಳು ಉಚಿತವಚನಗಳಿಂದ ಆನಂದಗೊಳಿಸಿ, ಪ್ರಮುಖರಿಗೆಲ್ಲಾ ಫಲಪುಷ್ಪ ಹಾರಾದಿಗಳನ್ನು ವಿನಿಯೋಗಗೊಳಿಸಿ ಆಶೀರ್ವದಿಸಿದರು. ಅದಿನ ನೆರೆದಿದ್ದ ಸಕಲ ಭಕ್ತ ಮಹೇಶ್ವರರಿಗೂ ಬಡಬಗ್ಗರಿಗೂ ಮ॥ ಎಲೆ ಸಿದ್ದಲಿಂಗಪ್ಪಶೆಟ್ಟರೂ ಬೌರಿಂಗ್‌ಪೇಟೆ ಮಾದಮಂಗಲ ಗ್ರಾಮಗಳ ಭಕ್ತರೂ ಮೃಷ್ಟಾನ್ನ ಭೋಜನವನ್ನು ಮಾಡಿಸಿದರು. ಬಹುಶಃ ೫ ಸಹಸ್ರ ಜನಕ್ಕೆ ಅನ್ನಸಂತರ್ಪಣೆಯಾಯಿತು. ಇಲ್ಲಿಯ ಭಕ್ತಮಂಡಲಿಯವರ ಗುರುಸೇವಾಸಕ್ತಿಯೂ ಉತ್ಸಾಹವೂ ಅವರ್ಣನೀಯವಾಗಿದೆ. ೧೦-೧೨ ಮಂದಿ ಪ್ರಮುಖರುಗಳು ತಂತಮ್ಮ ಗೃಹಗಳಿಗೆ ಶ್ರೀಗಳವರನ್ನು ಬರಮಾಡಿಕೊಂಡು ಪಾದಪೂಜೆಗಳನ್ನು ನಡೆಯಿಸಲು ಬಿನ್ನಹಮಾಡಿದ್ದಾರೆ. ಪ್ರತಿದಿನವೂ ಪಾದಪೂಜ ಭಿಕ್ಷಾದಿಗಳು ನಡೆಯುತ್ತಿವೆ.

ಪ್ರತ್ಯಕ್ಷದರ್ಶಿ.

ನಂಜನಗೂಡು.

ಈ ಪ್ರಾಂತದ ವೀರಶೈವಮಂಡಲಿಯವರು, ಶ್ರೀಮನ್ನಿರಂಜನ ಜಗದ್ಗುರುಗಳವರು ಬೆಂಗಳೂರು ಪಟ್ಟಣವನ್ನು ಬಿಟ್ಟು ಮುಂಬಳಕ್ಕೆ ಪ್ರಯಾಣ ಬೆಳೆಯಿಸಿದ ದಿವಸ ಎಂದರೆ ಕಳೆದ ತಿಂಗಳು ತಾ॥ ೨೧ ರಲ್ಲಿ ಶ್ರೀಗಳವರ ಅಭಿಧಾನದಮೇಲೆ “ಶ್ರೀ ಜಗದ್ಗುರು ಮುರುಘರಾಜೇಂದ್ರ ಭವನ” ಎಂಬ ಹೆಸರಿನಿಂದ ಒಂದು ಮಠವನ್ನು ಸ್ಥಾಪಿಸಿ, ಆ ದಿವಸ ಶ್ರೀ ಶಂಕರ ದಾಸಿಮಯ್ಯನವರ ಕಲಶಾರಾಧನೆಯನ್ನು ಅಲ್ಲೇ ನಡೆಯಿಸಿ ಒಂದು ಸಹಸ್ರ ಜನರಿಗೆ ಗಣಾರಾಧನೆ ಮಾಡಿಸಿದರು. ಮರುದಿನ ತಾ॥ ೨೨ ನೆಯ ಗುರುವಾರ ಶ್ರೀ ಚಿಟ್ಟಿದಪುರದ ಮಠದ ಚರಮೂರ್ತಿ ಶ್ರೀ ಚಿಕ್ಕವೀರ ದೇಶಿಕೇಂದ್ರ ಮಹಾಸ್ವಾಮಿಯವರ ಪಾದಪೂಜೆಯನ್ನೂ ಗಣಾರಾಧನೆಯನ್ನೂ ನೆರವೇರಿಸಿ, ಅವರ ಆಂದೋಳಿಕೋತ್ಸವವನ್ನೂ ಕಲಶವಿಸರ್ಜನೆಯ ಕೆಲಸವನ್ನೂ ಬಹಳ ವೈಭವದಿಂದ ಉತ್ಸವಪೂರ್ವಕವಾಗಿ ನಡೆಸಿದ್ದಲ್ಲದೆ ಅದೇ ಸ್ವಾಮಿಗಳ ಅಧ್ಯಕ್ಷತೆಯಿಂದ ಸಭೆಸೇರಿ ನೂತನವಾಗಿ ಸ್ಥಾಪಿತವಾದ ಆ ಮಠದಲ್ಲಿ ವಾಸ್ಥಲದ ಬಡ ವಿದ್ಯಾರ್ಥಿಗಳಿಗೆ ಅನ್ನೋದಕಾದಿಗಳ ಸಹಾಯಮಾಡುವುದಕ್ಕಾಗಿ ಒಂದು ಫಂಡನ್ನು ಕೂಡಿಸಬೇಕೆಂದು ನಿರ್ಧರಿಸಲಾಯ್ತು. ಆ ಕೂಡಲೇ ಈ ಕೆಳಗೆ ಕಂಡಂತೆ ಧನಸಹಾಯವನ್ನು ಮಾಡಲು ನೆರೆದಿದ್ದವರು ಉತ್ಸಾಹದಿಂದಲೂ ಭಕ್ತಿಯಿಂದಲೂ ಒಪ್ಪಿ ಶ್ರೀಗಳವರಿಗೆ ನಮಸ್ಕರಿಸಿದರು. ಮೊಟ್ಟಮೊದಲು ಶ್ರೀ ಚಿಟ್ಟಿದಪುರದ ಮಠದ ಚಿಕ್ಕವೀರಸ್ವಾಮಿಯವರೇ ಆಶೀರ್ವದಿಸಿದುದು ೧೦೦ ರೂ. ರುದ್ರಮುನಿಸ್ವಾಮಿಗಳು ೩೦. ಶಿವಮೂರ್ತಿಸ್ವಾಮಿಗಳು ೨೫. ಮಲ್ಲನಮೂಲೆ ಕಂಬಳಿ ಸ್ವಾಮಿಗಳ ಸಿದ್ಧಪ್ಪದೇವರು ೫೦ ಆ॥ ಕೂಸಪ್ಪನವರು ೨೫. ಯಜಮಾನ್ ಬಸಪ್ಪನವರು ೫೦. ಕೆ॥ ರುದ್ರಪ್ಪನವರು ೫೦. ಡಿ॥ ಸುಬ್ಬಣ್ಣನವರು ೫೦. ಬಿ ನಂಜಪ್ಪನವರು ೨೫. ಮ॥ ಸಿದ್ಧಪ್ಪನವರು ೨೫. ಸ್ಕೂಲ್ಮಾಸ್ಟರ್ ಬಸವರಾಜಯ್ಯನವರು ೧೦. (ಇದರಲ್ಲಿ ನಗದು ಕೊಟ್ಟಿರುವುದು ೨॥ ರೂ.) ರುದ್ರದೇವರು ೧೫. ದೇ॥ ಶೇ॥ ಮಗ ಗಂಗಣ್ಣನವರು ೧೦. ಎಚ್. ಜಿ ಮಹದೇವಪ್ಪನವರು ೧೦. ಕಪಿನಯ್ಯನವರು ೧೦. ಜವಳಿ ಅಂಗಡಿ ನಂಜಮ್ಮನವರು ೧೦೦. ಜವಳಿ ಅಂಗಡಿ ಲಿಂಗಪ್ಪನವರು ೨೫. ಮೂಗೂರು ಮಲ್ಲಪ್ಪನವರು ೨೫. ಮಠದ ಮಾದಪ್ಪನವರು ೫. ಹೆಮ್ಮರಗಾಲದ ಚಿಕ್ಕಣ್ಣಶೆಟ್ಟರು ೨೦. ಎಡತೊರೆ ಬಲಿಭದ್ರಶೆಟ್ಟರು ೫೦. ಹೊಮ್ಮದ ಗುರುಕಾರ್ ಪುಟ್ಟಣ್ಣನವರು ೧೦. ಕೊಡಗು ಹೆಬ್ಬಾಲೆ ಕಂಗ್ರಬಸಪ್ಪನವರು ೫ ರೂ. ಹೀಗೆ ಉತ್ಸಾಹದಿಂದ ಆರಂಭಿಸಲ್ಪಟ್ಟಿರುವ ಈ ಸತ್ಕಾರ್ಯವು ಸ್ಥಳದ ರಕ್ಷಿಲದ ಭಕ್ತಮಹೇಶ್ವರಾದಿಗಳ ಸಹಾಯದಿಂದ ಅಭಿವೃದ್ಧಿಗೊಂಡು ಶಾಶ್ವತವಾಗಿ ಫಲಪ್ರದವಾಗಿರುವಂತೆ ಅನುಗ್ರಹಿಸಬೇಕೆಂದೂ ಅಂಥ ಧರ್ಮಮತಿಯನ್ನು ಈ ಪ್ರಾಂತದ ವೀರಶೈವ ಮಂಡಲಿಗೆಲ್ಲಾ ದಯಪಾಲಿಸಲೆಂದೂ ಭಕ್ತವತ್ಸಲನಾದ ಭವರೋಗವೈದ್ಯ ಶ್ರೀಶಂಕರನುತಿಶಯನ್ನು ಪ್ರಾರ್ಥಿಸುತ್ತೇವೆ.

ಪುರನಿವಾಸಿ.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೦೭ ನೇ ಇಸ್ವಿಯ ೨೫ ನೇ
ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನನಂತೆಯಾಗಿ ತಾ॥ ೧೦-೮-೧೯೧೮ ನೇ ಇಸ್ವಿಯಿಂದ ತಾ॥ ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಲ್ಲಿಂದ ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ಯಶವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇವೆ ರೋಗದ ಪರೀಕ್ಷೆಯು ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಜೀರ್ಣ, ಅಧ್ವ ಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಷ್ಮಿಜತ್ತು, ಗುದದ್ವಾರನವೆ, ತುರುತುರಿಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೇರು ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇದರ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,

1 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

---

2 ಯುದ್ಧದ ಫೋಟೋಗಳು.

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯಿತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಮಿಂವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ. ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುವಳ್ಳಬೀದಿ, ಮದರಾಸ್,

---

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ

ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೈಕಟ್ಟ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಔನ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ

37 ವೈದ್ಯಶಾಲಾ, ಮೈಸೂರು.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಾಗಿದೆ. ಇವರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,

30 ಇರುಳಪ್ಪನ ಬೀದಿ, ಮದರಾಸ್.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 39

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ.

ಪೋಸ್ಟ್ ಶಿರ್ಶಿ ಉತ್ತರಕನಡಾ ಡಿ॥.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ. ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಐರಾವತಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತೆ.)

12 ಜೆ. ಕೆ. ಗುರುಸಂಗಾರ್ಯ

ಪ್ಲೀಡರ್, ತುಮಕೂರು.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಬೊಡಮೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

30 ನಮ್ಮ ವಿಳಾಸ:—ವೈರಂ ಅಂಡ್ ಕೊ,

3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಸೆಪ್ಟಂಬರ್ ತಾ॥ ೭ ರಿಂದ ೧೯೧೯ ನೆಯ ಸೆಪ್ಟಂಬರ್ ತಾ॥ ೧೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಭಾದ್ರಪದ ಶು॥ ದ್ವಾದಶಿಯಿಂದ ಭಾದ್ರಪದ ಬ॥ ಚೌತಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
7	[1] ಭಾನು	ದ್ವಾದಶಿ	11-17	ಶ್ರವ	53.10	22
8	ಸೋಮ	ತ್ರಯೋ	11-30	ಧನಿ	54.10	23
9	[2] ಮಂಗಳ	ಚತು	10-16	ಶತ	53-53	24
10	[3] ಬುಧ	ಪೌರ್ಣ	7-58	ಪೂಭಾ	52.32	25
11	ಗುರು	ಪಾಡ್ಯ	4-36	ಉಭಾ	50-13	26
12	ಶುಕ್ರ	ಬಿದಿಗೆ	0-19	ರೇವ	55-23	27
13	[4] ಶನಿ	ಚೌತಿ	55-0	ಅಶ್ವಿನಿ	43-27	28

(1) ಪ್ರದೋಷಃ. (2) ಅನಂತಪದ್ಮನಾಭವ್ರತಂ, ಉಮಾಮಹೇಶ್ವರವ್ರತಂ. (3) ಅಪರಪಕ್ಷಾರಂಭಃ. (4) ಸಂಕಷ್ಟ ಚತುರ್ಥಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಲ್ಯಾಣ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಕ್ಷತ ಮೋಹರಾಜೀಯತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಕಿಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦]

[illegible]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಸೆಪ್ಟಂಬರ್ ತಾರೀಖು ೧೪ ನೆಯ ಭಾನುವಾರ. (ಸಂಚಿಕೆ ೩೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಎ. ಎ. ಎಸ್. ಪಾಣಿ ಅಂಡ್ ಕೊ,

31 ಸಾಹುಕಾರಪೇಟೆ, ಮದರಾಸ್.

ಮಹಾತ್ಮಗಾಂಧಿ.

ಅವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಜಂಪಾಣೆ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

48 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0. ನಂ. 2. 1—12—0.

[illegible] ಕನ್ನಡಕಗಳು.



[illegible] ಇವನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವವು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬಿಲ್ಲೆಗಳಿರುವವು. ಇದರ ಕಂಬಿಗಳು ಯಾವಾಗಲೂ ಬೆಳ್ಳಿಯ ಹಾಗೆ ಇರುವವು. ಇದರಲ್ಲಿ ಹಸರು, ಊದ, ಮೇಘವರ್ಣ ಮೊದಲಾದವುಗಳಿರುವವು. ಕ್ರಯ ನಂ. 1 ಕ್ಕೆ 1-8-0, ನಂ. 2 ಕ್ಕೆ 2-0-0.

ರಬ್ಬರ್ ಇಂಗ್ಲೀಷ್ ಅಕ್ಷರಗಳು.

ಈ ಅಕ್ಷರಗಳು ಸೀಮೆಯಲ್ಲಿ ತಯಾರಾದವು. ಈ ಅಕ್ಷರಗಳಿಂದ ಕಷ್ಟವಿಲ್ಲದೆ ಕಾಗದಗಳನ್ನೂ, ಕಾರಡು, ಲಿಟರು ಮುಂತಾದವುಗಳನ್ನು ನಾವೇ ಅಚ್ಚುಮಾಡಿಕೊಳ್ಳಬಹುದು. ಈ ಅಕ್ಷರಗಳ ಪೆಟ್ಟಿಗೆಯು ಒಂದು ಇದ್ದರೆ ಬೇಕಾದ ಮುದ್ರಣವನ್ನು ಒಬ್ಬರ ಸಹಾಯವಿಲ್ಲದೆ ನಾವೇ ಮಾಡಿಕೊಳ್ಳಬಹುದು. ಲಾಯರುಗಳಿಗೂ, ವರ್ತಕರಿಗೂ ಬಹು ಸಹಾಯಕಾರಿಯಾದದ್ದು. ಈ ಪೆಟ್ಟಿಗೆಯಲ್ಲಿ ಇಂಕಿ, ಪ್ಯಾಡು, ಚಿಮುಟ ಮುಂತಾದವುಗಳು ಇವೆ.

170 ಅಕ್ಷರಗಳು ಇರುವ ಪೆಟ್ಟಿಗೆ 1—14—0
250 ,, ,, 2—8—0
350 ,, ,, 3—12—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,

31 3 ಇರುಳಪ್ಪನಬೀದಿ, ಮದರಾಸ್.

“ದಲ್ಲಾಲಿ ಅಂಗಡಿ ಸೊಲ್ಲಾಪುರ”

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕ, ಶೀಗೇಕಾಯಿ, ತುಪ್ಪ, ಜೋಬರಿ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ. ಚಹಾ, ಕಾಜು, ಆಲೂ, ಉಳ್ಳಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮಿಷನ್ನಿನ ಮೇಲೆ ಕಾಳಜಿಯಿಂದ ಬಿಕರಿಮಾಡಿ ಕೊಡುತ್ತೇವೆ. ಒಂದುವೇಳೆ ಕೆಲಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಶನರಿ ಸಾಮಾನುಗಳು ಕಮಿಷನ್ನಿನ ಮೇಲೆ ಸೇಯಿವಾರ ಮುಂಬಯಿಯದರಿಂದ ಖರೀದಿಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,

3 ವಿಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹಂದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ್ಯನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultural subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.

2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.

3. During the time the raiyats and labourers work on the farm, they will be paid at the prevailing local rates for labour.

4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,

6 *Offg. Director of Agriculture.*

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 9

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧವ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,

೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸ

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಸೆಪ್ಟಂಬರ್ ತಾ|| ೧೪ನೆಯ ಭಾನುವಾರ.

ವಿದ್ಯಾಭ್ಯಾಸಕ್ರಮ ಸಂಸ್ಕರಣ.

ಈ ಸಂಬಂಧವಾಗಿ ಸರ್ಕಾರದಿಂದ ಪ್ರಕಟಿತವಾಗಿರುವ ಮೆಮೋರಾಂಡಮ್ಮಿನಲ್ಲಿ ಮೊಟ್ಟಮೊದಲು ಪ್ರಾಥಮಿಕ ವಿದ್ಯಾಭ್ಯಾಸಕ್ರಮ ಸಂಸ್ಕರಣ ವಿಷಯವು ಚರ್ಚಿಸಲ್ಪಟ್ಟಿರುತ್ತದೆ. ಇದು ಅತ್ಯಂತ ಪ್ರಧಾನ ವಿಷಯವೆಂಬುದಕ್ಕೆ ಸಂಶಯವಿಲ್ಲ. ಈ ಸಂಬಂಧವಾಗಿ ಇ|| ಜನರಲ್‌ರವರು ಹೇಳಿರುವುದೇನೆಂದರೆ— ಬಾಲತರಗತಿಯ ಪಾಠಶಾಲೆಗಳಿಗೆ ಸರ್ಕಾರದಿಂದ ಸಹಾಯದ್ರವ್ಯವನ್ನು ಕೊಟ್ಟು ಪ್ರೋತ್ಸಾಹಿಸುವ ಒಂದು ವಿಶಿಷ್ಟಪದ್ಧತಿಯು ೧೯೧೪ನೆ ವರ್ಷದಲ್ಲಿ ಆರಂಭಿಸಲ್ಪಟ್ಟಿತು. ಅದರಲ್ಲೂ ಅನೇಕ ಲೋಪಗಳಿವೆ. ಗ್ರಾಮಸ್ಥರು ಆ ಪಾಠಶಾಲೆಗಳ ಉಪಾಧ್ಯಾಯರಿಗೆ ಕೊಡಬೇಕಾದ ವೇತನದಲ್ಲಿ ಅರ್ಧಭಾಗವನ್ನು ಸರಿಯಾಗಿ ಸಲ್ಲಿಸುವುದಿಲ್ಲ. ಅದರಿಂದ ಉಪಾಧ್ಯಾಯರಿಗೆ ಸಂಬಳವು ನಿರುಪಾಧಿಕವಾಗಿ ಸಲ್ಲುವುದಿಲ್ಲ. ಅವರಿಗೆ ಶ್ರದ್ಧೆ ತಪ್ಪಿಹೋಗುವುದು. ಮತ್ತು ಪಾಠಶಾಲೆಗಳಿಗೆ ಬೇಕಾದ ಉಪಕರಣಗಳಿಗೂ ಅರ್ಧ ಹಣವು ಗ್ರಾಮಸ್ಥರಿಂದ ಒದಗುವುದಿಲ್ಲ. ಸರ್ಕಾರಿ ಇನ್‌ಸ್ಪೆಕ್ಟರ ಮೇಲ್ವಿಚಾರಣೆಯು ಇಲ್ಲ. ಉಪಾಧ್ಯಾಯರುಗಳೂ ಸಾಲರು. ಇತ್ಯಾದಿ ಕಾರಣಗಳಿಂದ ಅನೇಕ ಶಾಲೆಗಳು ಮುಚ್ಚಿಹೋಗಿವೆ. ಅನೇಕಗಳು ಇದ್ದರೂ ಇಲ್ಲದಂತಿವೆ. ಎಂದು ಮೊದಲಾಗಿ ಹೇಳಿರುತ್ತಾರೆ. ಇದೆಲ್ಲಾ ನಿಜವಾದ ಮಾತು. ಗ್ರಾಮಸ್ಥರು ನಗರನಿವಾಸಿ ಪ್ರಜೆಗಳಂತೆಯೇ ಸರ್ಕಾರಕ್ಕೆ ಭೂಗಂದಾಯ ಮೊದಲಾದುವುಗಳನ್ನು ಕೊಡುವವರಾಗಿದ್ದಾರೆ. ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನಗರನಿವಾಸಿಗಳಿಗೆ ಮಾಡಿಕೊಟ್ಟಿರುವಷ್ಟು ಅಭ್ಯಾಸಸೌಕರ್ಯಗಳು ಇವರುಗಳಿಗೆ ಇಲ್ಲದಿದ್ದರೂ, ಕೇವಲ ಬಾಲವಿದ್ಯಾಭ್ಯಾಸಕ್ಕೂ ಸಹ ಅವರು ಶಾಲೆಗಳ ಕಟ್ಟಡವನ್ನು ಮಾಡಿಸಿಕೊಡುವುದು, ಉಪಾಧ್ಯಾಯರ ಸಂಬಳದಲ್ಲಿ ಅರ್ಧವನ್ನು ತೆರುವುದು, ಮೇಲಣ ಉಪಕರಣಗಳ ಬೆಲೆಯಲ್ಲಿ ಅರ್ಧವನ್ನು ಕೊಡುವುದು–ಇತ್ಯಾದಿಗಳ ಭಾರವನ್ನು ಹೆಚ್ಚಾಗಿ ವಹಿಸಬೇಕಾದುದು ನ್ಯಾಯಸಮ್ಮತವಾಗಿರುವುದಿಲ್ಲ. ಈ ಏರ್ಪಾಟು ನಗರನಿವಾಸಿಗಳಿಗೊಂದು ಗ್ರಾಮವಾಸಿಗಳಿಗೊಂದು ತೆರವನ್ನು ಮಾಡಿದ ಪಕ್ಷಪಾತಮಯವಾಗಿರುತ್ತದೆನ್ನುವುದಕ್ಕೆ ಸಂಶಯವಿಲ್ಲ. ಎಲ್ಲ ವಿಷಯಗಳಲ್ಲೂ ಗ್ರಾಮವಾಸಿಗಳನ್ನು ಪ್ರಭುತ್ವದವರು ಅಲಕ್ಷೀಕರಿಸಿರುವಂತೆ ವಿದ್ಯಾಭ್ಯಾಸ ಸೌಕರ್ಯಕಲ್ಪನೆಯ ವಿಷಯದಲ್ಲೂ ಅವರನ್ನು ಅಲಕ್ಷಿಸುವುದು ಧರ್ಮವಲ್ಲ. ತತ್ರಾಪಿ ರಾಜಾದಾಯದ ಮುಖ್ಯಭಾಗಕ್ಕೆ ಅವರೇ ಮಹಾದ್ವಾರವಾಗಿರುವವರು ಎಂಬುದನ್ನು ನೋಡಿದರಂತೂ ಪ್ರಭುತ್ವದವರು ಅವರ ಮೇಲೆಮಾತ್ರ ವಿದ್ಯಾಭ್ಯಾಸ ಸೌಕರ್ಯಕ್ಕಾಗಿ ಹೆಚ್ಚಿನ ದ್ರವ್ಯಭಾರವನ್ನು ಹೇರುವುದು ಪರಮಾನ್ಯಾಯವೆಂಬುದು ಸಿದ್ಧವಾಗಿರುವುದು. ಇದನ್ನು ನಿಜವೆಂದು ಇ|| ಜನರಲ್‌ರವರು ಕೂಡ ತಿಳಿದಿರಬೇಕೆಂದು ಅವರ ಮಾತುಗಳಿಂದ ವ್ಯಕ್ತವಾಗುತ್ತದೆ. ಇದು ಸರ್ಕಾರಕ್ಕೂ ಮನದಟ್ಟಿರಬೇಕು. ಇಂಥ ಪದ್ಧತಿಯೇ ತಪ್ಪಬೇಕೆಂದು ಇ|| ಜನರಲ್‌ರವರು ಅಭಿಪ್ರಾಯಪಟ್ಟಿರುವುದು ನ್ಯಾಯವಾಗಿರುತ್ತದೆ. ಪಟ್ಟಣಗಳ ಪಾಠಶಾಲೆಗಳಂತೆಯೇ ಗ್ರಾಮಾಂತರಗಳ ಶಾಲೆಗಳನ್ನೂ ಪೂರ್ಣವಾಗಿ ಸರ್ಕಾರಿಯನ್ನಾಗಿಯೇ ಮಾಡಬೇಕೆಂದೂ, ಈಗಿರತಕ್ಕ ಬಾಲಪಾಠಶಾಲೆಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕೆಂದೂ, ಸಂಸ್ಥಾನದ ಪ್ರತಿ ೧·೫೪ ಚದರಮೈಲಿಗಳಿಗೂ ೬೦೦ ಮಂದಿ ಪ್ರಜೆಗಳಿಗೂ ಒಂದೊಂದು ಪಾಠಶಾಲೆಗಳಿರುವಂತೆ ಮಾಡಬೇಕೆಂದೂ, ಪ್ರತಿ ೩೦ ಮಂದಿ ವಿದ್ಯಾರ್ಥಿಗಳಿಗೆ ಒಬ್ಬೊಬ್ಬ ಕುಶಲನಾದ ಉಪಾಧ್ಯಾಯನು ಇರಬೇಕೆಂದೂ, ಪ್ರತಿ ಬಾಲಪಾಠಶಾಲೆಯಲ್ಲೂ ೪ನೆ ತರಗತಿಯವರೆಗೆ ಅಭ್ಯಾಸವು ನಡೆಯಬೇಕೆಂದೂ, ಆ ಪಾಠಶಾಲೆಗಳಿಗೆ ಬೇಕಾದ ಭೂಪಟ ಮೊದಲಾದ ಉಪಕರಣಗಳನ್ನೆಲ್ಲಾ ಸಮಗ್ರವಾಗಿ ತೆಗೆದುಕೊಡಬೇಕೆಂದೂ ಗ್ರಾಮಪಾಠಶಾಲೆ ಪಟ್ಟಣಪಾಠಶಾಲೆಗಳೆಂಬ ಭೇದವೇ ಇಲ್ಲದೆ ಬಾಲಪಾಠಶಾಲೆಗಳೆಲ್ಲಾ ಒಂದೇ ತೆರದಿಂದಿರಬೇಕೆಂದೂ, ನೂರು ಪಾಠಶಾಲೆಗಳ ಮೇಲೆ ಒಬ್ಬೊಬ್ಬ ಮೇಲ್ವಿಚಾರಣೆಯ ಇನ್‌ಸ್ಪೆಕ್ಟರು ಇರುವಂತೆ ಮಾಡಬೇಕೆಂದೂ, ಅವರು ಒಳ್ಳೆಯ ಪಂಡಿತರೂ ಶಿಕ್ಷಣಮರ್ಮಜ್ಞರೂ ಆಗಿರಬೇಕೆಂದೂ, ಆಗ್ಗೆ ಸಂಸ್ಥಾನದಲ್ಲೆಲ್ಲಾ ೧೦೦೦೦ ಬಾಲಪಾಠಶಾಲೆಗಳಾಗುವುವೆಂದೂ ಹೇಳುತ್ತಾರೆ. ಇವೆಲ್ಲಾ ಉಚಿತಗಳಾದ ಸೂಚನೆಗಳೆಂಬುದಕ್ಕೆ ಸಂಶಯವಿಲ್ಲ. ಇಷ್ಟಾಗುವುದಾದರೆ ಗ್ರಾಮಾಂತರದ ಪ್ರಜೆಗಳೆಲ್ಲಾ ಸಂತೋಷದಿಂದ ತಂತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸಲು ಅನುಕೂಲವಾಗುವುದು. ಸಂಸ್ಥಾನದಲ್ಲಿ ನಾಮಮಾತ್ರವಾಗಿರುವ ನಿರ್ಬಂಧವಿದ್ಯಾಭ್ಯಾಸ ಪದ್ಧತಿಯನ್ನು ಆಗ್ಗೆ ಸಂಸ್ಥಾನದ ಪ್ರತಿಯೊಂದು ಮೂಲೆಮೂಲೆಗಳಲ್ಲೂ ಕಾರ್ಯರೂಪಕ್ಕೆ ತರಬಹುದು. ಆದರೆ ಇಂಥ ದೊಡ್ಡ ಏರ್ಪಾಡಿಗೆ ಪ್ರಜೆಗಳ ಧನಸಹಾಯವಿಲ್ಲದೆ ಸರ್ಕಾರದ ಬೊಕ್ಕಸದಿಂದಲೇ ಹಣವನ್ನು ಒದಗಿಸುವುದೆಂದರೆ ಬಹಳ ಭಾರವಾಗುವುದು. ಇದಕ್ಕೂ ತಕ್ಕ ಸೂಚನೆಯನ್ನು ಅದರಲ್ಲಿ ಮಾಡದೆಹೋಗಿಲ್ಲ. ಅವರು ಹೇಳುವುದೇನೆಂದರೆ—ಮೇಲೆಹೇಳಿದಂತೆ ಸಂಸ್ಥಾನದಲ್ಲೆಲ್ಲಾ ಬಾಲಪಾಠಶಾಲೆಗಳನ್ನು ಸ್ಥಾಪಿಸುವ ಕೆಲಸಕ್ಕೆ ಈಗಣಿಂದ ಪ್ರಯತ್ನಪಟ್ಟರೆ ಇನ್ನು ೫ ವರ್ಷಗಳಲ್ಲಿ ಮುಗಿಯಬಹುದು. ಇದಕ್ಕೆಲ್ಲಾ ವರ್ಷಕ್ಕೆ ೨೭ ಲಕ್ಷ ರೂ. ಗಳಷ್ಟು ವೆಚ್ಚವು ಬೀಳುವುದು. ಇದನ್ನೆಲ್ಲಾ ಸರ್ಕಾರವೇ ವಹಿಸುವುದು ಸಾಧ್ಯವಲ್ಲ. ⅔ ಭಾಗವನ್ನು ಸ್ಥಳೀಯ ಸರ್ಕಾರಗಳು ಎಂದರೆ ಮ್ಯು|| ಬೋರ್ಡುಗಳು, ತಾಲ್ಲೂಕು ಡಿಸ್ಟ್ರಿಕ್ಟು ಬೋರ್ಡುಗಳು ವಹಿಸಿಕೊಳ್ಳುವಂತೆಯೂ, ಉಳಿದ ⅓ ಭಾಗವನ್ನು ಸರ್ಕಾರದವರು ಕೊಡುವಂತೆಯೂ ಆಗಬೇಕು ಎಂದು ಸೂಚಿಸಿರುತ್ತಾರೆ. ಇದೂ ಕೂಡ ನ್ಯಾಯಕ್ಕೆ ದೂರವಾಗಿರುವುದಿಲ್ಲ. ಈಗ ವಿದ್ಯೆಗಾಗಿ ಕೆಲಕೆಲ ಪ್ರಜೆಗಳು ಮಾತ್ರ ಬೇರೆ ವರಿಯನ್ನು ಕೊಡಬೇಕಾಗುತ್ತಿದ್ದಿತು. ಮುಂದೆ ಬೋರ್ಡುಗಳವರು ಭಾರವಲ್ಲದ ಸಾಮಾನ್ಯವಾದ ಎಂದರೆ ರೂ. ಗೆ ೬ ಕಾಸಿನಂತೆ ಸೆಸ್ಸನ್ನು ಎತ್ತಿ ಅದರಜತೆಗೆ ಈಗ ಕೊಡುತ್ತಿರುವ ವಿಲೇಜ್ ಸ್ಕೂಲ್‌ಫಂಡು ಮತ್ತೂ ಮೊಹತರ್ಫಾ ಆದಾಯದ ಭಾಗ ಇವುಗಳನ್ನೆಲ್ಲಾ ಕೂಡಿಸಿ ಬೋರ್ಡುಗಳಿಂದ ⅔ ಭಾಗದ ಹಣವನ್ನು ಒದಗಿಸಿಕೊಡಬಹುದು. ಆದರೆ ಈ ವಿದ್ಯಾಭ್ಯಾಸದ ಸೆಸ್ಸು ಏರ್ಪಾಡಾದರೆ ಗ್ರಾಮವಾಸಿಗಳಾದ ಭೂಗಂದಾಯ ತೆರುವವರ ಮೇಲೆಮಾತ್ರ ಬಿದ್ದು ನಗರ ನಿವಾಸಿಗಳಮೇಲೆ ಅದು ಬೀಳುವಹಾಗಿಲ್ಲವೆಂದು ಹೇಳಲು ಅವಕಾಶವಿರುವುದಿಲ್ಲ. ಆದಾಯದಮೇಲಣ ತೆರುಗೆಯು ವಿಧಿಸಲ್ಪಡುವುದರಿಂದಲೂ ಆ ಭಾಗದ ಉತ್ಪತ್ತಿಯೆಲ್ಲಾ ವಿದ್ಯಾಭ್ಯಾಸಕ್ಕೇ ವಿನಿಯೋಗಿಸಲ್ಪಡುವ ಸಂಕಲ್ಪವಿರುವುದರಿಂದಲೂ ನಾಗರಕ ಪ್ರಜೆಗಳೂ ಕೂಡ ವಿದ್ಯಾಭ್ಯಾಸಕ್ಕಾಗಿ ೧ ಸೆಸ್ಸನ್ನು ಕೊಟ್ಟಂತೆಯೇ ಆಗುವುದು. ಸಕಲ ಪ್ರಜೆಗಳಿಗೂ ಪಕ್ಷಪಾತವಿಲ್ಲದೆ ವಿದ್ಯಾಭ್ಯಾಸ ಸೌಕರ್ಯವನ್ನು ಹೆಚ್ಚಿಸಿಕೊಡುವ ಪ್ರಯತ್ನಕ್ಕಾಗಿ ಒಂದು ಹೊಸ ಕಂದಾಯವನ್ನು ಅಲ್ಪತರವಾಗಿ ಹಾಕಿದರೆ ಅದಕ್ಕಾಗಿ ಪ್ರಜೆಗಳು ಗೊಣಗುಟ್ಟುವುದು ನ್ಯಾಯವಾಗಿರಲಾರದು. ಪ್ರಯಾಣ ಸೌಕರ್ಯಾರ್ಥವಾಗಿರುವ ಡಿಸ್ಟ್ರಿಕ್ಟ್‌ಬೋರ್ಡು ಲೋಹಮಾರ್ಗ ಕಲ್ಪನೆಗಳಿಗೆ ರೈಲ್ವೆ ಸೆಸ್ಸನ್ನು ರೂ. ಗೆ ೩ ಕಾಸಿನಂತೆ ಕೊಡಲು ಸರ್ವ ಪ್ರಜೆಗಳೂ ಸಂತೋಷದಿಂದ ಒಪ್ಪಿಕೊಂಡಿರುವುದಿಲ್ಲವೆ? ವಿದ್ಯಾದಾನ ಪ್ರಯತ್ನವು ಅದಕ್ಕಿಂತಲೂ ಕಡಿಮೆಯಾದುದಲ್ಲ. ಇದು ಸರ್ವ ಪ್ರಜೆಗಳ ಸಕಲಾಭ್ಯುದಯಕ್ಕೂ ಹದಿಯಾದುದಲ್ಲವೆ? ಅದುಕಾರಣ ಈ ವಿಷಯವು ಈಸಲದ ಪ್ರಜಾಪತಿನಿಧಿ ಸಭೆಯಲ್ಲಿ ಚರ್ಚಿತವಾಗಿ ಸರ್ವ ಪ್ರಜಾಂಗೀಕಾರವನ್ನು ಪಡೆಯದೆ ಹೋಗಲಾರದೆಂದು ನಂಬುತ್ತೇವೆ. ಮುಖ್ಯವಾಗಿ ಈ ಯೇರ್ಪಾಟಿನಿಂದ ಗ್ರಾಮಾಂತರದವರ ವಿದ್ಯಾಭ್ಯಾಸಕ್ಕೆ ವಿಶೇಷ ಸಾಹಾಯ್ಯವಾಗುವುದರಿಂದ ಅವರ ಅಭ್ಯುದಯವನ್ನು ಕೋರುವವರೆಲ್ಲಾ ಈ ಯೇರ್ಪಾಟಿಗೆ ಸಂತೋಷದಿಂದನುಮತಿಯನ್ನಿತ್ತೇತೀರುವರು. ಗ್ರಾಮಾಂತರದ ಕ್ಷೇಮಚಿಂತನೆಯು ಯಾರಿಗೆ ಬೇಡ?

ಪಂಚಮೋದ್ಧಾರ.

ಭರತಖಂಡದ ಎಲ್ಲಕಡೆಯೂ ಪಂಚಮರ ಉದ್ಧಾರಕ್ಕಾಗಿ ನಾನಾ ಪ್ರಯತ್ನಗಳು ನಡೆಯುತ್ತಿರುವುದನ್ನು ನೋಡಿ ಪ್ರಾಣಿದಯಾಪರರೆಲ್ಲರೂ ಸಂತೋಷಿಸುತ್ತಿದ್ದಾರೆ. ಮನಮುಟ್ಟಿ ಅವರಿಗೆ ತ್ರಿಕರಣಶುದ್ಧಿಯಿಂದ ಸಹಾಯಮಾಡಿ ಉದ್ಧರಿಸತಕ್ಕವರು ಅನೇಕಾನೇಕರಿದ್ದಾರೆ. ಲೋಕದ ಮೆಚ್ಚುಗೆಗಾಗಿ ತಮ್ಮ ಕಾಪಟ್ಯವನ್ನು ಆಚ್ಛಾದಿಸಿಕೊಂಡು ತಾವೇ ಅಂತ್ಯಜೋದ್ಧಾರಕರೆಂದು ವಿಜೃಂಭಿಸಿಕೊಳ್ಳತಕ್ಕವರೂ ಕೆಲವರಿದ್ದಾರೆ. ಪ್ರಜೆಗಳು ಈ ಪಂಚಮೋದ್ಧಾರ ವಿಷಯದಲ್ಲಿ ಪಡುವ ಶ್ರಮವು ಸಾರ್ಥಕವಾಗಬೇಕಾದರೆ ಪ್ರಭುತ್ವಗಳ ಒತ್ತಾಸೆಯು ಅವಶ್ಯಕವಾಗಿರುತ್ತದೆ. ಪ್ರಭುತ್ವದವರು ಮಾಡತಕ್ಕ ಪ್ರಯತ್ನಗಳು ಫಲಿಸಬೇಕಾದರೂ ಪ್ರಜೆಗಳ ಒತ್ತಾಸೆಯು ಅವಶ್ಯಕವಾಗಿರುತ್ತದೆ. ಯಾವೆಡೆಯಲ್ಲಿ ಇವೆರಡಕ್ಕೂ ಸಂಯೋಗವುಂಟಾಗಿರುವುದೋ ಅಲ್ಲಿ ಪಂಚಮೋದ್ಧಾರವು ನಿಜವಾಗಿ ಸಾಗುತ್ತದೆ. ಅದಕ್ಕೆ ಬಡೋಡಾ ತಿರುವಾಂಕೂರು ಮೊದಲಾದ ಕೆಲ ದೇಶೀಯ ಸಂಸ್ಥಾನಗಳಲ್ಲಿ ನಡೆಯುತ್ತಿರುವ ಪಂಚಮೋದ್ಧಾರ ಪ್ರಯತ್ನಫಲವೇ ನಿದರ್ಶನವಾಗಿದೆ. ಬಡೋಡಾ ಸಂಸ್ಥಾನದಲ್ಲಿ ಪಂಚಮರ ಉದ್ಧಾರಕ್ಕಾಗಿ ನಡೆದಿರುವ ಕಾರ್ಯಗಳನ್ನು ಹಿಂದೊಂದು ಸಲ ನಾವು ಪ್ರಕಟಿಸಿದ್ದೇವೆ. ಈಗ ತಿರುವಾಂಕೂರು ಸಂಸ್ಥಾನದಲ್ಲಿ ಈ ಸಂಬಂಧವಾಗಿ ನಡೆದಿರುವ ಜಯಶಾಲಿಪ್ರಯತ್ನ ವಿಷಯವನ್ನು ತಿಳಿಯಿಸುವವರಾಗಿದ್ದೇವೆ.

ಆ ತಿರುವಾಂಕೂರು ಸಂಸ್ಥಾನವು ಪೂರ್ವಾಚಾರಶರಣ್ಯತೆಯಲ್ಲಿ ದಕ್ಷಿಣದೇಶದಲ್ಲೆಲ್ಲಾ ಅತ್ಯಂತ ಪ್ರಸಿದ್ಧವಾದುದು. ಅಲ್ಲಿಯ ಮೂಢಾಚಾರಜಾಲವು ಬಹು ದುರ್ಭೇದ್ಯವಾಗಿದ್ದಿತೆಂಬುದನ್ನು ಅನೇಕರು ಬಲ್ಲರು. ಅಂಥ ಸಂಸ್ಥಾನದಲ್ಲಿ ಕಾಲೋಚಿತವಾದ ಸುಧಾರಣೆಗೆ ದೇಶೀಯರೂ ಪ್ರಭುತ್ವದವರೂ ಎಷ್ಟು ಉದಾರಚಿತ್ತವನ್ನು ತೋರಿಸಿರುವರೆಂಬುದನ್ನು ಈ ಕೆಳಗಣ ವಿವರಣದಿಂದ ತಿಳಿದುಕೊಳ್ಳಬಹುದು. ಆ ಸಂಸ್ಥಾನದಲ್ಲಿ ಬಾಲತರಗತಿಯ ಪಾಠಶಾಲೆಗಳು ೨೧೨೮ ಇರುತ್ತ, ಅವುಗಳೊಳಗೆ ೨೦೧೮ ರಲ್ಲಿ ಪಂಚಮವರ್ಣದ ಬಾಲಕರು ನಿರಾಕ್ಷೇಪವಾಗಿ ಸೇರಿಸಿಕೊಳ್ಳಲ್ಪಟ್ಟು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಅಂತ್ಯಜರೆಂದು ಕರೆಯಲ್ಪಡುತ್ತಿರುವ ಹೊಲೆಯ ಮಾದಿಗ ಕುಲದವರುಗಳಿಗೆ ಸಮನಾದ ಅಲ್ಲಿರುವ ಜನರು ಪುಲಯರು, ಪರಿಯರು ಎಂಬುದಾಗಿ ಕರೆಯಲ್ಪಡುತ್ತಾರೆ. ಇವರುಗಳ ಬಾಲಕರು ಆ ದೇಶದ ಸಾವಿರಾರು ಪಾಠಶಾಲೆಗಳಲ್ಲಿ ಬಳಕೆಯಾಗಿ ಸೇರಿಕೊಂಡು ಅಭ್ಯಾಸಮಾಡಲು ಅವಕಾಶವಾಗಿರುವುದರಿಂದ, ಆ ದೇಶದಲ್ಲಿ ಯಾವ ಸಾಂಕರ್ಯಮಹಾಪಾತಕವಾಗಲೀ ಅರಿಷ್ಟಗಳಾಗಲೀ ಸಂಘಟಿಸಿದುದನ್ನು ಯಾರೂ ಕಾಣರು. ಅದಕ್ಕೆಪ್ರತಿಯಾಗಿ ಅಲ್ಲಿರುವ ಅಗ್ರವರ್ಣೀಯರ ಉದಾರಚಿತ್ತವೂ ಸಾನುಭೂತಿಯೂ ಲೋಕಕ್ಕೇ ವಿದಿತವಾಗಿ, ಅವರಘನತೆಯು ಹೆಚ್ಚುವಂತಾಗಿರುವುದು. ಆ ಸಂಸ್ಥಾನದಲ್ಲೂ ಮೊದಮೊದಲು ಪಾಠಶಾಲೆಗಳಿಗೆ ಅಂತ್ಯಜ ಬಾಲಬಾಲಿಕೆಯರನ್ನು ಸೇರಿಸುವಾಗ್ಗೆ ಕೆಲ ವಿಘ್ನಗಳೇನೊ ಬಂದುವು. ಆದರೆ ಪ್ರಭುತ್ವದವರೂ ದೂರದರ್ಶಿಗಳಾದ ದೇಶಭಕ್ತರೂ ಪಟ್ಟುಹಿಡಿದು ಕೆಲಸ ಮಾಡುತ್ತ ಬಂದುದರಿಂದ ಆ ಆತಂಕಗಳೆಲ್ಲವೂ ದಿನಕ್ರಮೇಣ ಹಾಳಾಗಿಹೋಗಿ ಸರ್ವತ್ರ ಪರಸ್ಪರ ವಿಶ್ವಾಸಗಳು ವೃದ್ಧಿಗೊಳ್ಳುತ್ತಲಿವೆ. ಈಗ್ಗೆ ೪ ವರ್ಷಗಳ ಕೆಳಗೆ ಅಲ್ಲಿಯ ಪಾಠಶಾಲೆಗಳೊಳಗೆ ೨೦೧೭ ಮಂದಿ ಪುಲಯರೂ, ೧೯೯೭ ಮಂದಿ ಪರಿಯರೂ ಅಭ್ಯಾಸಮಾಡುತ್ತಿದ್ದರು. ಈಗ ಅವರ ಸಂಖ್ಯೆಯು ಕ್ರಮವಾಗಿ ೧೭೭೫೩, ೬೭೫೫ ಆಗಿರುತ್ತವೆ. ಪಂಚಮ ಬಾಲಕರ ವಿದ್ಯಾಭ್ಯಾಸವು ಮಾತ್ರವೇ ಹೀಗೆ ವೃದ್ಧಿಯೊಂದುತ್ತಿದೆಯೆಂದು ತಿಳಿಯಬಾರದು. ಅವರ ಬಾಲಿಕೆಯರ ವಿದ್ಯಾಭ್ಯಾಸವು ಸಹ ವೃದ್ಧಿಗೊಳ್ಳುತ್ತಿದೆ. ಆ ಸಂಸ್ಥಾನದಲ್ಲೆಲ್ಲಾ ಬಾಲಿಕೆಯರ ಪಾಠಶಾಲೆಗಳು ೩೫೨ ಇರುತ್ತವೆ. ಅವುಗಳೊಳಗೆ ೧೯೭ ಶಾಲೆಗಳಲ್ಲಿ ಪಂಚಮ ಬಾಲಿಕೆಯರು ಇತರ ಬಾಲಿಕಯರೊಡನೆ ಸೇರಿ ಓದುವಂತೆ ಸೇರಿಸಿಕೊಳ್ಳಲ್ಪಟ್ಟಿದ್ದಾರೆ. ವಿದ್ಯಾವಿಷಯದಲ್ಲಿ ಇವರ ಪುರೋವೃದ್ಧಿಗೆ ಈ ತೆರವಾದ ಪ್ರೋತ್ಸಾಹವು ಕೊಡಲ್ಪಟ್ಟಿರುವುದು ಮಾತ್ರವೇ ಅಲ್ಲದೆ ಅವರ ಬಡತನವನ್ನು ನೀಗಿಸುವುದಕ್ಕಾಗಿ ಸರ್ಕಾರಿ ಬಂಜರು ಭೂಮಿಗಳನ್ನು ಅವರಿಗೆ ಪ್ರತಿಫಲವಿಲ್ಲದೆ ಕೊಡುವುದಕ್ಕೆ ಪ್ರಭುತ್ವದವರು ಏರ್ಪಾಟು ಮಾಡಿದ್ದಾರೆ. ರಾಜಕೀಯಾಂಗದಲ್ಲೂ ಅವರಿಗೆ ಪ್ರವೇಶಸೌಕರ್ಯವನ್ನು ಒದಗಿಸಿ ಮುಂದಕ್ಕೆ ತರುವುದಕ್ಕಾಗಿಯೂ ತಕ್ಕ ಏರ್ಪಾಟುಗಳನ್ನು ಮಾಡಿದ್ದಾರೆ. ಅಲ್ಲಿಯ ಶ್ರೀಮೂಲಂಪಾಪ್ಯುಲರ್ ಅಸೆಂಬ್ಲಿ ಎಂಬ ಪ್ರಜಾಪ್ರತಿನಿಧಿಸಭೆಗೆ ಆ ನಿಮ್ನಕುಲದ ೧೨ ಮಂದಿಯನ್ನು ಸಭಿಕರನ್ನಾಗಿ ಸೇರಿಸಿಕೊಂಡಿದ್ದಾರೆ. ಉಳಿದ ಉತ್ತಮವರ್ಗಗಳ ಸಭಿಕರೆಲ್ಲಾ ಆ ಸಭೆಯಲ್ಲಿ ಈ ನಿಮ್ನಕುಲಗಳ ಪ್ರತಿನಿಧಿಗಳಿಗೆ ಸಮಾನಮರ್ಯಾದೆಯನ್ನೇ ತೋರಿಸುತ್ತ ಸೌಹಾರ್ದದಿಂದ ನಡೆದುಕೊಳ್ಳುತ್ತಿದ್ದಾರೆ. ಪುಲಯ ಜನರ ಅಭಿವೃದ್ಧಿಗೆ ಸಾಧಕಗಳಾದ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಇದುವರೆಗೆ ಆ ಸಂಸ್ಥಾನದಲ್ಲಿ ೫ ಮಹಾಸಭೆಗಳು ನೆರೆದಿದ್ದುವು. ಅವುಗಳಿಗೆಲ್ಲಾ ಸಂಸ್ಥಾನದ ದಿವಾನರೇ ಅಧ್ಯಕ್ಷರಾಗಿದ್ದರು. ಅವರ ಪುರೋವೃದ್ಧಿಗೆ ಅವಶ್ಯಕವಾದ ಬುದ್ಧಿವಾದಗಳನ್ನೆಲ್ಲಾ ಅವರಿಗೆ ಅಪ್ಪಣೆ ಕೊಡಿಸಿದುದಲ್ಲದೆ ಸರ್ಕಾರದಿಂದ ಅವರ ಅಭ್ಯುದಯಕ್ಕೆ ಆಗಬೇಕಾದ ಸಾಹಾಯ್ಯಗಳನ್ನೆಲ್ಲಾ ಒದಗಿಸಿಕೊಡಲು ಸಿದ್ಧರಾಗಿರುವರು. ನೆರೆಯ ಸಂಸ್ಥಾನದಲ್ಲಿ ಪಂಚಮೋದ್ಧಾರ ಪ್ರಯತ್ನಕ್ಕೆ ಅಗ್ರವರ್ಣದವರೆನಿಸಿಕೊಳ್ಳುವವರ ಸಾನುಭೂತಿಯು ಹಾಗಿರುವಾಗ ನಮ್ಮಲ್ಲಿ ಹೇಗಿದೆ ನೋಡಿರಿ. ಸರ್ಕಾರದವರು ಕೃಪೆಯಿಂದಲೂ ಉದಾರಚಿತ್ತದಿಂದಲೂ ಮಾಡುವ ಸಾನುಭೂತಿ ಪ್ರಯತ್ನಗಳಿಗೆ ಅಸೂಯೆಯಿಂದ ಕೆಟ್ಟ ಅಪವಾದವನ್ನು ಹೊರಿಸಿ ವಿಘ್ನಗಳನ್ನು ಒಡ್ಡಲು ಸಾಹಸಪಡುತ್ತಿದ್ದಾರೆ. ಮತ್ತು ತಮ್ಮ ಹುಟ್ಟನ್ನೇ ಕೆಡಿಸಿಕೊಂಡು ಅದನ್ನು ತಿದ್ದಿಕೊಳ್ಳಲಾರದವರು ಪರರ ಮುಟ್ಟನಿಂದ ಕೆಟ್ಟುಹೋಗುತ್ತೇವೆಂದು ವಿಜೃಂಭಿಸುತ್ತಿದ್ದಾರೆ.

ಶುಭೋದಯಪ್ರಕರಣ.

ಧಾರವಾಡದ ಶುಭೋದಯ ಕರ್ತರಮೇಲೆ ಹೂಡಲ್ಪಟ್ಟಿದ್ದ ಮಾನನಷ್ಟದ ವ್ಯಾಜ್ಯದಲ್ಲಿ ಮಾಡಲ್ಪಟ್ಟ ತೀರ್ಮಾನದೊಳಗೆ–ಲೇಖನದಲ್ಲಿ ಅಲ್ಲಮಬಸವಾದಿಗಳನ್ನು ಕುರಿತು ಆಡಿರುವಮಾತುಗಳು ಅವಮಾನಕರವೆಂದು ಒಪ್ಪಿಕೊಳ್ಳಲ್ಪಟ್ಟಿದ್ದರೂ, ಅದರಿಂದ ಸಮಾಜಕ್ಕೆ ಅವಮಾನವಾಗುವುದಿಲ್ಲವೆಂತಲೂ, ಮಠದ ಒಬ್ಬಾನೊಬ್ಬ ವ್ಯಕ್ತಿಯಾದ ಫಿರ್ಯಾದಿಗೆ ಅದರಿಂದ ಗೌರವಹಾನಿಯೇನೂ ಆಗಲಿಲ್ಲವೆಂತಲೂ ಬರೆಯಲ್ಪಟ್ಟಿದೆಯೆಂದು ಧಾರವಾಡದ ಕಡೆಯ ವೃತ್ತಪತ್ರಿಕೆಗಳ ಲೇಖನಗಳಿಂದ ತಿಳಿಯಬರುತ್ತದೆ. ಹೀಗಿದ್ದರೆ ಆ ತೀರ್ಪು ಪಕ್ಷಪಾತಮಯವಾದ ಅನ್ಯಾಯದ ತೀರ್ಪೆಂದು ಹೇಳುವಲ್ಲಿ ಲೇಶವೂ ಸಂಶಯವಿಲ್ಲ. ಅಪಮಾನಕರವಾದ ಬರವಣಿಗೆಗಳಿದ್ದರೆ ಅದರಮೇಲೆ ಅಲ್ಲಮ ಬಸವೇಶ್ವರರುಗಳೇ ಬಂದು ಮಾನನಷ್ಟದ ವ್ಯಾಜ್ಯವನ್ನು ಹೂಡಬೇಕೆಂದು ಮ್ಯಾಜಿಸ್ಟ್ರೇಟರ ಅಭಿಪ್ರಾಯವಿರಬೇಕು. ಹೀಗಾದಪಕ್ಷದಲ್ಲಿ ಅನ್ಯಮತಗಳ ಆಚಾರ್ಯಾದಿಗಳಮೇಲೆ ಬೇಕಿದ್ದವರು ಬೇಕಾದ ರೀತಿಯಲ್ಲಿ ದುಷ್ಟವ್ಯಾಖ್ಯಾನಗಳನ್ನು ಎಷ್ಟು ಕೆಟ್ಟ ಉದ್ದೇಶದಿಂದ ಬರೆದು ಪ್ರಕಟಿಸಿದರೂ ಪ್ರಕಟಿಸಬಹುದಾಯಿತು. ಹೀಗಾಗುವುದು ನ್ಯಾಯಸಮ್ಮತವಾಗುವಪಕ್ಷಕ್ಕೆ ಮತದ್ವೇಷವುಕ್ಕೇರುತ್ತಿರುವ ಈ ಕಾಲದಲ್ಲಿ ದೇಶಶಾಂತಿಯು ಎಷ್ಟುಮಟ್ಟಿಗೆ ಉಳಿಯಬಹುದೆಂಬುದನ್ನು ಹೇಳಬೇಕಾಗಿಲ್ಲ. ನಿಷ್ಕಾರಣವಾಗಿ ಪರಮತಗಳ ವಿಷಯವಾಗಿ ಅಪಮಾನವನ್ನೂ ಮನೋವ್ಯಥೆಯನ್ನೂ ಹುಟ್ಟಿಸುವ ಲೇಖನಗಳನ್ನು ಬರೆದು ಜಾತಿಮತ ಮತ್ಸರಗಳನ್ನು ಹೆಚ್ಚಿಸುವ ಕೆಲಸಗಳನ್ನು ಮಾಡುವುದು ಪತ್ರಕರ್ತರಿಗೆ ಮುದ್ರಣಶಾಸನ ಪ್ರಕಾರ ದೋಷವಾಗಿರುತ್ತದೆ. ಕಾಲುಕೆರೆದು ಜಗಳಕ್ಕೆ ನಿಂತಿರುವ ಶುಭೋದಯ ಕರ್ತರಂಥವರ ವಿಷಯದಲ್ಲಿ ಆ ಶಾಸನದ ಚುರುಕು ಮುಟ್ಟದಿದ್ದರೆ ದೇಶದಲ್ಲಿ ಪರಸ್ಪರ ಮನಃಕ್ಷೋಭೆಯು ದಿನದಿನಕ್ಕೆ ಹೆಚ್ಚಿಹೋಗುವುದು ಖಂಡಿತ. ಇದನ್ನು ಬೊಂಬಾಯಿ ಸರ್ಕಾರದವರು ದೂರದೃಷ್ಟಿಯಿಟ್ಟುಗಮನಿಸುವುದು ಅತ್ಯವಶ್ಯಕ.

ಜರ್ಮನರ ವೈಖರಿ.

ನಿರ್ವಾಹವಿಲ್ಲದೆ ಸಂಧಿಪತ್ರಕ್ಕೆ ತಲೆಯೊಡ್ಡಬೇಕಾಗಿ ಬಂದಿರುವ ಜರ್ಮನರು ಸಮಯಸಾಧಿಸಿ ದ್ರೋಹಾಚರಣೆಯಿಂದಲೋ ಮತ್ತಾವ ರೀತಿಯಿಂದಲೋ ಮಿತ್ರಮಂಡಲಿಯ ಮೇಲಿರುವ ಹಗೆತನವನ್ನು ತೀರಿಸಿಕೊಳ್ಳಬೇಕೆಂದಿರುವಂತೆ ಕಾಣುತ್ತದೆ. ಎಲ್ಲ ಜರ್ಮನರಲ್ಲೂ ಇಂಥ ಉದ್ದೇಶವಿಲ್ಲದಿದ್ದರೂ ಅನೇಕಾನೇಕರಲ್ಲಿ ಇಂಥ ಅಭಿಪ್ರಾಯವಿದ್ದಿರಬೇಕೆಂಬುದಕ್ಕೆ ಅನೇಕ ನಿದರ್ಶನಗಳು ಸಿಕ್ಕುತ್ತವೆ. ಇದನ್ನು ತಿಳಿದಿರುವವರಾದ ಮಿತ್ರಮಂಡಲಿಯವರು ಜರ್ಮನರ ವಿಷಯದಲ್ಲಿ ಅಲಸರಾಗಿರುವುದಕ್ಕೆ ಅವಕಾಶವೇ ಇಲ್ಲವಾಗಿದೆ. ಈಗಾಗಲೇ ಕೆಲ ವಿಷಯಗಳಲ್ಲಿ ಜರ್ಮನರು ಸಂಧಿನಿಬಂಧನೆಗಳನ್ನು ವಿಾರಿ ವರ್ತಿಸುತ್ತಿದ್ದಾರೆ. ವಿಮಾನನಿರ್ಮಾಣವನ್ನು ನಿಲ್ಲಿಸಿ, ಸಿದ್ಧವಾಗಿದ್ದ ಮತ್ತುಆಗುತ್ತಿದ್ದ ವಿಮಾನಗಳನ್ನು ಅವರು ನಾಶಪಡಿಸಬೇಕಾಗಿದ್ದರೂ, ತಮ್ಮ ನೆರೆಯ ಡೆನ್ಮಾರ್ಕ್ ದೇಶದವರಿಗೆ ಕೆಲ ವಿಮಾನಗಳನ್ನು ಅವರು ಮಾರಿರುತ್ತಾರೆ. ಅವರು ಅಕ್ಟೋಬರ್ ತಿಂಗಳ ಆರಂಭದೊಳಗಾಗಿ ಲಿಥೂನಿಯಾ ಪ್ರಾಂತವನ್ನು ಬಿಡಬೇಕಾಗಿದ್ದರೂ ಅದಕ್ಕಾಗಿ ಯಾವ ಪ್ರಯತ್ನವನ್ನೂ ಅವರು ಮಾಡಿರುವುದಿಲ್ಲ. ಅಲ್ಲಿರುವ ಜರ್ಮನ್ ಸೈನಿಕರು ರಷ್ಯನ್ ಸೈನಿಕರ ವೇಷದಿಂದ ಅಲ್ಲೇ ಇದ್ದಾರೆ. ಅಲ್ಲಿರುವ ಇಂಗ್ಲೀಷ್ ರಾಯಭಾರಿ ವರ್ಗದವರಲ್ಲಿ ಮೂವರನ್ನು ಜರ್ಮನರು ಹಿಡಿದುಕೊಂಡಿದ್ದು ರೀಗಾದಲ್ಲಿರುವ ಆಂಗ್ಲ ರಾಯಭಾರಿಗಳು ಕಾಣಿಸಿಕೊಂಡ ಕೂಡಲೇ ಅವರನ್ನು ಬಿಟ್ಟುಕೊಟ್ಟರು. ಜರ್ಮನರಿಗೆ ಸೇರಿದ್ದ ರೈನ್ ಪ್ರಾಂತವನ್ನು ಮಿತ್ರಮಂಡಲಿ ಸೈನ್ಯಗಳು ಆಕ್ರಮಿಸಿಕೊಂಡಿವೆಯಷ್ಟೆ. ಇಂಗ್ಲಿಷ್ ಸೈನ್ಯವಿರುವ ಅಲ್ಲಿಯ ಭಾಗದಲ್ಲಿನ ಜರ್ಮನರು ದ್ರೋಹಚಿಂತನೆಯಿಂದ ಪ್ರಜಾಸ್ವಾಮಿಕ ಪ್ರಭುತ್ವವನ್ನು ಅಲ್ಲಿ ನೆಲೆಗೊಳಿಸಬೇಕೆಂದು ಯತ್ನಿಸುತ್ತಿರುವರು. ಜರ್ಮನ್ ದೇಶಾಭಿವೃದ್ಧಿ ಸಂಘವೆಂಬುವ ಸಭೆಯು ಈ ತಿಂಗಳ ಮೊದಲನೆ ತಾರೀಖಿನಲ್ಲಿ ಬರ್ಲಿನ್ ಪಟ್ಟಣದಲ್ಲಿ ಕೂಡಿದ್ದಾಗ್ಗೆ ಈಗಣ ಪ್ರಜಾಪ್ರಭುತ್ವವನ್ನು ತಪ್ಪಿಸಿ ಜರ್ಮನಿಯಲ್ಲಿ ಪೂರ್ವದಂತೆ ಏಕರಾಜ ಪ್ರಭುತ್ವವನ್ನೇ ಸ್ಥಾಪಿಸಬೇಕೆಂದು ವಿಪರೀತವಾಗಿ ವಿಜೃಂಭಿಸಿ ಉಪನ್ಯಾಸ ಮಾಡಿದರು. ಈಗಣ ಪ್ರಜಾಪ್ರಭುತ್ವದವರು ನಡೆಯಿಸಿಕೊಂಡಿರುವ ಕಾರ್ಯಗಳೆಲ್ಲಾ ದೇಶಕ್ಕೆ ಅನರ್ಥಕಾರಿಗಳೆಂದು ಖಂಡಿಸಿದರು. ಕೈಸರ್ ಚಕ್ರವರ್ತಿಯು ತನ್ನ ಪೂರ್ವವೈಭವದೊಡನೆ ಯಾವಾಗ ತಮ್ಮ ಕಣ್ಣೆದಿರಿಗೆ ಬರುವನೋ ಎಂದು ಜರ್ಮನ್ ಪ್ರಜೆಗಳು ಕುತೂಹಲಪಟ್ಟು ನಿರೀಕ್ಷಿಸುತ್ತಿರುವರೆಂದು ಒಬ್ಬ ಪ್ರಮುಖನು ಭಾಷಣಮಾಡಿದನು. ತಮ್ಮಿಂದ ಇತರರು ಅಪಹರಿಸಿಕೊಂಡಿರುವ ದೇಶವನ್ನೆಲ್ಲಾ ತಾವು ಮರಳಿ ಜೈಸಬೇಕೆಂದೂ ಅದಕ್ಕಾಗಿ ಜರ್ಮನಿಯು ಆಸ್ಟ್ರಿಯಾವನ್ನು ತನ್ನ ಜತೆಗೇ ಸೇರಿಸಿಕೊಳ್ಳಬೇಕೆಂದೂ ನಿರ್ಧರಿಸಿಕೊಂಡರು. ರಷ್ಯಾದ ಬಾಲ್ಟಿಕ್ ಪ್ರಾಂತವನ್ನು ಅವರು ಬಿಡುಗಡೆ ಮಾಡಿಲ್ಲ. ಅಲ್ಲಿ ಅವರು ಅಶಾಂತಿಯನ್ನು ಹಬ್ಬಿಸುತ್ತ ಬೋಲ್ಷೆವಿಕ್ಕರಿಗೆ ಸಹಾಯಮಾಡುತ್ತಿದ್ದಾರೆ. ಅಲ್ಲಿರುವ ಸೈನಿಕರು ಈಗಣ ಜರ್ಮನ್ ಪ್ರಭುತ್ವದ ಅಪ್ಪಣೆಯನ್ನು ಲಕ್ಷಿಸದೆ ಇರುವರೆಂದೂ, ಅವರು ಜರ್ಮನಿ ಸಂಬಂಧವನ್ನೇ ಕಡಿದುಕೊಂಡು ಒಂದು ಸ್ವತಂತ್ರ ರಾಷ್ಟ್ರವನ್ನು ಸ್ಥಾಪಿಸಿಕೊಳ್ಳಲು ನಿರ್ಧರಿಸಿರುವರೆಂದೂ, ಪೂರ್ವಪ್ರಷ್ಯಾಪ್ರಾಂತದಲ್ಲಿರುವ ೬೦ ಸಾವಿರ ಮಂದಿ ಜರ್ಮನ್ ಸೈನಿಕರು ಸಹ ಅವರೊಡನೆ ಸೇರುವವರಾಗಿದ್ದಾರೆಂದೂ ತಂತ್ರೀವಾರ್ತೆಗಳು ಹೇಳುತ್ತಿವೆ. "ಪಶ್ಚಿಮರಂಗದಲ್ಲಿ ತಮಗೆ ದೊರೆಯದೆ ಹೋದ ವಿಜಯವನ್ನು ಪೂರ್ವರಂಗದಲ್ಲಿ ಪಡೆಯಬೇಕೆಂದು ಜರ್ಮನರು ಈಗ ಪ್ರಯತ್ನಿಸುತ್ತಿದ್ದಾರೆ. ಉತ್ತರ ಸೈಲಿಸಿಯಾ, ಪೂರ್ವಪ್ರಷ್ಯಾ, ಲಿಥೂನಿಯಾಗಳಲ್ಲಿಯೂ, ಬೋಲ್ಷೆವಿಕ್ ರಣರಂಗಗಳೆಲ್ಲದರಲ್ಲಿಯೂ, ಮಿನ್‌ಸ್ಕ ಸಮೀಪದಲ್ಲೂ, ಪೋಲಿಷ್ ಸೈನ್ಯಗಳು ಶತ್ರುಸೈನಿಕರನ್ನು ಇದಿರಿಸುವಾಗ ಜರ್ಮನರು ಆ ಶತ್ರುಗಳಿಗೆ ಸಹಾಯಮಾಡುತ್ತಿರುವರು. ಪೋಲೆಂಡನ್ನು ಹೇಗಾದರೂ ಹಿಂಸೆಗೊಳಿಸಬೇಕೆಂದು ಅವರು ಬೋಲ್ಷೆವಿಕ್ಕರಿಗೆ ಸಹಾಯಮಾಡಿ ಬೋಲ್ಷೆವಿಕ್ ತತ್ವವನ್ನು ಹಬ್ಬಿಸುತ್ತಿದ್ದಾರೆ. ಇದರಿಂದ ಪೋಲರು ಎಲ್ಲಕಡೆಯಲ್ಲೂ ನೂತನ ಯುದ್ಧಕ್ಕೆ ಸನ್ನಾಹಮಾಡಿಕೊಳ್ಳಬೇಕಾಗಿ ಬಂದಿದೆ. ಈ ಯುದ್ಧವನ್ನು ಮಾಡುತ್ತಿರುವುದು ಜರ್ಮನೀ ದೇಶವಾಗಿದೆ. ಇದು ಮಿತ್ರಮಂಡಲಿಯವರ ಉದ್ದೇಶಕ್ಕೆ ವ್ಯತಿರೇಕವಾಗಿದೆ. ಯಾವ ರೀತಿಯಿಂದಾದರೂ ರಷ್ಯಾದೇಶವನ್ನು ಜಯಿಸಬೇಕೆಂಬುದು ಜರ್ಮನಿಯ ನಿಶ್ಚಯವಾಗಿದೆ. ಮಿತ್ರಮಂಡಲಿಯವರ ಪ್ರಯತ್ನವನ್ನು ಭಂಗಗೊಳಿಸಿ ಅವರ ಕೀರ್ತಿಯನ್ನು ಮಸುಳಿಸಬೇಕೆಂದು ಜರ್ಮನಿಯು ಪ್ರಯತ್ನಿಸುತ್ತಿದೆ" ಎಂಬುದಾಗಿ ಎಂ. ಫೆಡರೀಸ್ಕಿಯವರು ಹೇಳಿರುತ್ತಾರೆ. ಅದರಂತೆ ಪೋಲಂಡಿನಲ್ಲಿ ಈಗ ಜರ್ಮನರು ಯತ್ನವನ್ನು ನಡೆಸುತ್ತಿದ್ದಾರೆ. ಇದಲ್ಲದೆ ಈಗಣ ಜರ್ಮನ್ ಪ್ರಜಾಪ್ರಭುತ್ವದವರು ಏರ್ಪಡಿಸಿಕೊಂಡಿರುವ ರಾಜ್ಯಾಂಗ ವಿಧಾನದಲ್ಲಿ ೬೧ನೆಯ ನಿಬಂಧನೆಯು ಈಗಣ ಸಂಧಿನಿಬಂಧನೆಗೆ ವಿರುದ್ಧವಾಗಿದೆಯಂತೆ. ಆ ನಿಬಂಧನೆಯ ಪ್ರಕಾರ ನಡೆದರೆ ಆಸ್ಟ್ರಿಯಾ ದೇಶವು ಜರ್ಮನ್‌ಸಾಮ್ರಾಜ್ಯಕ್ಕೆ ಒಳಪಟ್ಟಿರಬೇಕಾಗಿರುತ್ತದೆ. ಜರ್ಮನ್ ರಾಜ್ಯಾಂಗಸಭೆಯಲ್ಲಿ ಆಸ್ಟ್ರಿಯಾದವರು ಸಂಬಂಧವನ್ನಿಟ್ಟುಕೊಳ್ಳಬಹುದಾಗಿರುತ್ತದೆ. ಈ ಉಭಯ ರಾಷ್ಟ್ರಗಳಿಗೂ ರಾಜಕೀಯ ಸಂಬಂಧವು ಇದ್ದಂತಾಗುವುದು. ಅದರಿಂದ ಆಸ್ಟ್ರಿಯಾ ದೇಶದ ಸ್ವಾತಂತ್ರ್ಯಕ್ಕೆ ಭಂಗಬರುವುದು. ಅದುಕಾರಣ ಆ ೬೧ ನೆಯ ನಿಬಂಧನೆಯನ್ನು ತೆಗೆದುಹಾಕಿಬಿಡಬೇಕೆಂದು ಮಿತ್ರಮಂಡಲಿಯವರು ಜರ್ಮನರಿಗೆ ಒಂದು ಲೇಖನವನ್ನು ಬರೆದು, ಅದಕ್ಕೆ ೧೫ ದಿನಗಳೊಳಗೆ ತೃಪ್ತಿಕರವಾದ ಪ್ರತ್ಯುತ್ತರವನ್ನು ಕೊಡದಿದ್ದರೆ ಮಿತ್ರಮಂಲಿಯವರು ರೈನ್ ನದೀ ಪ್ರಾಂತದಲ್ಲಿ ಮುಂದಕ್ಕೆ ಇನ್ನಷ್ಟು ಭಾಗವನ್ನು ಜರ್ಮನಿದೇಶದಲ್ಲಿ ಆಕ್ರಮಿಸಿಕೊಳ್ಳಬೇಕಾಗುವುದು. ಎಂದು ತಿಳಿಯಿಸಿದರು. ಇದಕ್ಕೆ ಜರ್ಮನ್ ಪ್ರಭುತ್ವದವರು–" ನಮ್ಮ ರಾಜ್ಯಾಂಗವಿಧಾನದಲ್ಲಿ ಏರ್ಪಡಿಸಿಕೊಂಡಿರುವ ನಿಬಂಧನೆಗಳನ್ನು ವ್ಯತ್ಯಸ್ತಪಡಿಸಬೇಕಾದ ಅವಶ್ಯಕತೆಯಿರುವುದಿಲ್ಲ. ಏಕೆಂದರೆ ಮಿತ್ರಮಂಡಲಿಯವರು ಆಟಂಕವನ್ನು ಹೇಳಿದ ಏರ್ಪಾಟು ಆಚರಣೆಗೆ ಬರದಂತೆ ನಿಲ್ಲಿಸಲ್ಪಡುವುದು. ನೀವು ರೈನ್‌ನದೀ ಪ್ರಾಂತದಲ್ಲಿ ಇನ್ನಷ್ಟು ದೇಶಾಕ್ರಮಣವನ್ನು ಮಾಡಿದರೆ ಅದು ಇದುವರೆಗೆ ನಮ್ಮ ನಿಮ್ಮಗೆ ನಡೆದಿರುವ ಸಂಧಿನಿಬಂಧನೆಗೆ ವಿರುದ್ಧವೂ ನಷ್ಟದಾಯಕವೂ ಆಗುವುದೆಂದು ಜರ್ಮನ್ ಪ್ರಭುತ್ವದವರು ಭಾವಿಸುವರು"ಎಂದು ಪ್ರತ್ಯುತ್ತರ ಕೊಟ್ಟರು. ಈಗಣ ಜರ್ಮನ್ ಪ್ರಭುತ್ವದವರ ಸ್ಥಿತಿಯು ಅಷ್ಟು ಸುಖಕರವಾಗಿಲ್ಲ: ಅಲ್ಲಿಯ ಪ್ರಜೆಗಳಲ್ಲಿ ಭಿನ್ನಪಕ್ಷಗಳು ವಿಪರೀತವಾಗಿವೆ. ಅತ್ತ ಆ ಪಕ್ಷಗಳ ತಿಕ್ಕುಮುಕ್ಕಾಟವನ್ನೂ ಮಿತ್ರಮಂಡಲಿಯವರಲ್ಲಿ ಒಪ್ಪಿಕೊಂಡಿರುವ ಸಂಧಿನಿಬಂಧನೆಗಳಂತೆ ನಡೆದುಕೊಳ್ಳಬೇಕಾದ ಇಕ್ಕಟ್ಟನ್ನೂ ತಾಳಿಕೊಂಡು ಬಾಳುವುದು ಆ ಪ್ರಭುತ್ವಕ್ಕೆ ಪರಮ ದುರ್ಘಟವಾಗಿದೆ.

ಹಂಗೇರಿ.

ಹಿಂದಣ ಪ್ರಭುಸಂಪ್ರದಾಯದ ಆರ್ಚಿಡ್ಯೂಕ್‌ರವರು ನೂತನವಾದ ಹಂಗೇರಿ ಪ್ರಭುತ್ವದ ಅಧ್ಯಕ್ಷರಾಗಿ ಕೆಲವು ಸೈನಿಕಾಧಿಕಾರಿಗಳ ಸಹಾಯದಿಂದ ಏರ್ಪಟ್ಟಿದ್ದರು. ಪ್ರಪಂಚಕ್ಕೆಲ್ಲಾ ಘೋರವಿಪತ್ತನ್ನು ತಂದು ಮಹಾಯುದ್ಧಕ್ಕೆ ಮುಖ್ಯ ಕಾರಣವಾದ ಹಾಪ್ಸ್‌ಬರ್ಗ್ ಕುಟುಂಬದವರ ಅಧ್ಯಕ್ಷತೆಯಿಂದ ಏರ್ಪಟ್ಟ ಆ ಪ್ರಭುತ್ವವನ್ನು ತಾವು ಒಪ್ಪುವುದಿಲ್ಲವೆಂದೂ, ಅವರೊಡನೆ ಮಾಡಿಕೊಳ್ಳುವ ಯಾವ ಸಂಧಿಯೂ ಶಾಶ್ವತವಾಗಿರಲಾರದೆಂದೂ, ಶಾಶ್ವತಸಂಧಿಯು ಜರುಗಬೇಕಾಗಿದ್ದರೆ ಆರ್ಚಿಡ್ಯೂಕು ರಾಜೀನಾಮೆ ಕೊಡಬೇಕೆಂದೂ ಪ್ರಜಾಪ್ರಾತಿನಿಧ್ಯದ ಪ್ರಭುತ್ವವು ಏರ್ಪಾಡಾಗಬೇಕೆಂದೂ ಮಿತ್ರಮಂಡಲಿಯವರು ತಿಳಿಯಿಸಿಬಿಟ್ಟುದರಿಂದ ಆರ್ಚಿಡ್ಯೂಕೂ ಆತನ ಪ್ರಭುತ್ವಮಂಡಲಿಯೂ ರಾಜೀನಾಮೆ ಕೊಟ್ಟರು. ಈಗ ಮಿತ್ರಮಂಡಲಿಯವರ ಸೂಚನೆಯಂತೆ ಎಲ್ಲ ಪಕ್ಷಕ್ಕೂ ಸೇರಿದ ಸಭಿಕರುಳ್ಳ ಮಂತ್ರಿಮಂಡಲವೂ ಹೇರ್‌ಪೆಡ್ರಿಕ್‌ರವರ ಮುಖ್ಯಮಂತ್ರಿತ್ವದಿಂದ ನೂತನ ಪ್ರಜಾಪ್ರಭುತ್ವವೂ ಅಲ್ಲಿ ಏರ್ಪಟ್ಟಿವೆ.

ರುಮೇನಿಯಾ.

ಹಂಗೇರಿ ದೇಶದ ಕೆಲ ಭಾಗಗಳನ್ನು ರುಮೇನಿಯಾದವರು ಆಕ್ರಮಿಸಿಕೊಂಡಿದ್ದರು. ಹೊಸದಾಗಿ ಏರ್ಪಟ್ಟ ಸಂಧಿಯ ಪ್ರಕಾರ ರುಮೇನಿಯಾದವರು ಅದನ್ನೆಲ್ಲಾ ಬಿಟ್ಟುಕೊಟ್ಟು ಹೋಗಬೇಕಾಯಿತು. ಆಗ ಅವರು ಹಂಗೇರಿಯ ಮುಖ್ಯ ಮುಖ್ಯ ಜರಾಸ್ತಿಗಳನ್ನು ದೋಚಿಕೊಂಡುಹೋಗಲು ಯತ್ನಿಸಿದರು. ಆದರೆ ಶತ್ರುದೇಶವಾಗಿದ್ದ ಹಂಗೇರಿಯ ಆಸ್ತಿಯು ನಷ್ಟಪರಿಹಾರಕ್ಕಾಗಿ ಮಿತ್ರಮಂಡಲಿಯವರಿಂದೆಲ್ಲಾ ಉಪಯೋಗಿಸಿಕೊಳ್ಳಲ್ಪಡಬೇಕಾಗಿದ್ದಿತು. ಅದರ ವಿಷಯವು ನಷ್ಟ ಪರಿಹಾರ ಸಂಘದವರಿಗೆ ಮಾತ್ರ ಸಂಬಂಧಿಸಿದುದು. ಅದಕ್ಕೆ ವಿರುದ್ಧವಾಗಿ ರುಮೇನಿಯಾದವರು ನಡೆದುಕೊಂಡುದರಿಂದ ಮಿತ್ರಮಂಡಲಿಯವರು ರುಮೇನಿಯಾದವರಿಗೆ ಒಂದು ಲೇಖನವನ್ನು ಬರೆದು ನೀವು ಯುದ್ಧಶಾಂತಿಯಾದೀಚೆಗೆ ಹಂಗೇರಿಯಿಂದ ತೆಗೆದುಕೊಂಡುಹೋಗಿರುವ ಸೊತ್ತುಗಳನ್ನೆಲ್ಲಾ ವಿವರವಾಗಿ ತಿಳಿಸಿ, ನಷ್ಟಪರಿಹಾರ ಸಂಘದವರಿಗೆ ಒಪ್ಪಿಸಿಬಿಡಬೇಕು; ಮುಂದೆ ಇಂಥ ಕೆಲಸವನ್ನು ಮಾಡಲಾಗದು. ವಿಾರಿ ನಡೆದರೆ ನಾವು ಪ್ರತಿ ಕ್ರಿಯೆಯನ್ನು ಮಾಡಬೇಕಾಗುವುದು. ಎಂದು ತಿಳಿಯಿಸಿದರು. ಇದನ್ನು ಕಳುಹಿಸಿ ಕೆಲ ದಿನಗಳಾದರೂ ರುಮೇನಿಯಾದಿಂದ ಪ್ರತ್ಯುತ್ತರವೇ ಬರಲಿಲ್ಲ, ಅದರಮೇಲೆ ಮಿತ್ರಮಂಡಲಿಯವರು ಕೆರಳಿ ರುಮೇನಿಯಾವಿಗೆ ಅಂತ್ಯ ಸಂದೇಶವನ್ನು ಕಳುಹಿಸಬೇಕೆಂದು ಯೋಚಿಸಿದ್ದರು. ಅಷ್ಟರಲ್ಲಿ ರುಮೇನಿಯಾದವರು ತಮಗೆ ಆ ಪತ್ರವೇ ಸೇರಲಿಲ್ಲವೆಂದು ತಿಳಿಯಿಸಿದರು. ಫ್ರಾನ್ಸಿನಲ್ಲಿರುವ ರುಮೇನಿಯಾ ರಾಯಭಾರಿಯು ಕೂಡ ಆ ಲೇಖನದೊಡನೆ ಕಳುಹಿಸಿದ್ದ ತನ್ನ ಕೆಲವು ಕಾಗದಪತ್ರಗಳೂ ಕೂಡ ರುಮೇನಿಯಾಕ್ಕೆ ಸೇರಲಿಲ್ಲ; ಏನಾಯಿತೋ ಗೊತ್ತಾಗಲಿಲ್ಲವೆಂದು ಹೇಳಿದನು. ಇದರಮೇಲೆ ಮಿತ್ರಮಂಡಲಿಯವರು ತಮ್ಮ ಆಗ್ರಹವನ್ನು ಶಾಂತಪಡಿಸಿಕೊಂಡು, ಮತ್ತೊಂದು ಲೇಖನವನ್ನು ಬರೆದು, ಮಿ|| ಬಾಲ್ಫರ್‌ರವರ ಕಾರ್ಯದರ್ಶಿಯಾದ ಸರ್ ಜಾರ್ಜ್ ಕ್ಲಾರ್ಕ್‌ರವರ ಹಸ್ತದಲ್ಲಿ ಕೊಟ್ಟು ರುಮೇನಿಯಾದವರ ಅಭಿಪ್ರಾಯಗಳನ್ನು ಪ್ರತ್ಯಕ್ಷವಾಗಿಯೇ ತಿಳಿದುಬರುವುದಕ್ಕೂ ಆ ಲೇಖನವನ್ನು ತಲುಪಿಸುವುದಕ್ಕೂ ಕಳುಹಿಸಿಕೊಟ್ಟಿರುವರು.

ಆಸ್ಟ್ರಿಯಾ.

ಆಸ್ಟ್ರಿಯಾ ಪ್ರಭುತ್ವದವರಿಗೆ ಸಂಧಿನಿಬಂಧನೆಯು ಕಳುಹಿಸಲ್ಪಟ್ಟಿದ್ದಿತಷ್ಟೆ. ಅದರಮೇಲೆ ಅಲ್ಲಿಯ ರಾಜ್ಯಾಂಗ ಸಭೆಯವರು ಇದುವರೆಗೂ ಚರ್ಚೆ ನಡೆಯಿಸಿದರು. ಕಡೆಗೆ ಅಲ್ಲಿಯ ಮುಖ್ಯಮಂತ್ರಿ ಹೇರ್ ವೆನ್ನರ್‌ರವರು ಸೆಂಟ್ ಜರ್ಮೆಯಿಸ್ ಪಟ್ಟಣಕ್ಕೆ ಬಂದು ಕಳೆದ ತಾ|| ೧೦ ರಲ್ಲಿ ಸಂಧಿಪತ್ರಕ್ಕೆ ಕೈಬರಹವನ್ನು ಹಾಕಲು ಏರ್ಪಡಿಸಿಕೊಂಡಿದ್ದರು. ಈ ಸಂಧಿನಿಬಂಧನೆಗಳಿಗೆ ಒಪ್ಪಬಹುದೆಂದು ಅಲ್ಲಿಯ ರಾಜ್ಯಾಂಗಸಭೆಯ ಸಭಿಕರಲ್ಲಿ ೯೭ ಮಂದಿ ಒಪ್ಪಿದರು. ೨೩ ಮಂದಿ ಮಾತ್ರ ಕೂಡದೆಂದು ಹೇಳಿದ್ದರು. ಅದುಕಾರಣ ಸಂಧಿಗೊಪ್ಪಬೇಕೆಂಬುದೇ ಪರ್ಯವಸಾನವಾಯಿತು. ಕೆಲ ಬದಲಾವಣೆಗಳಮೇಲೆ ರುಮೇನಿಯಾದವರೂ ಆಸ್ಟ್ರಿಯಾ ಸಂಧಿಪತ್ರಕ್ಕೆ ಕೈಬರೆಹವನ್ನು ಹಾಕಲು ಒಪ್ಪಿರುವರು.

ಬಲ್ಗೇರಿಯಾ ವಿಷಯಕವಾದ ಸಂಧಿಪತ್ರವು ಸಿದ್ಧವಾಗಿದೆ. ಇಷ್ಟರಲ್ಲೇ ಅದನ್ನು ಮಿತ್ರಮಂಡಲಿಯವರು ಬಲ್ಗೇರಿಯಾವಿಗೆ ಕಳುಹಿಸಿಕೊಡುವವರಾಗಿದ್ದಾರೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ಈಗ ಅಮೇರಿಕಾದ ಕಾನಡಾ ದೇಶದಲ್ಲಿ ಸಂಚರಿಸುತ್ತಿದ್ದಾರೆ. ಮುಂದಣ ವರ್ಷ ಅವರು ಭರತಖಂಡಕ್ಕೂ ಆಸ್ಟ್ರೇಲಿಯಾಕ್ಕೂ ದಯಮಾಡಿಸುವವರಾಗಿದ್ದಾರೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಿಂದ ನೀಲಗಿರಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಅಲ್ಲಿಂದ ಕಳೆದ ಬುಧವಾರ ರಾಜಧಾನಿಗೆ ದಯಮಾಡಿಸಿರುವರು.

ರಾಜಧಾನಿಯ ಶ್ರೀಮಂತ ವರ್ಧಮಾನಯ್ಯನವರಿಗೆ ಮತ್ತೊಂದುಸಲ ಪತ್ನೀವಿಯೋಗ ದುಃಖವು ಪ್ರಾಪ್ತವಾಯಿತೆಂಬುದನ್ನು ತಿಳಿಸುವುದಕ್ಕೆ ವಿಷಾದಿಸುತ್ತೇವೆ.

ನವರಾತ್ರಿಯ ಪ್ರಯುಕ್ತವಾಗಿ ಸಂಸ್ಥಾನದ ಕೋರ್ಟುಕಛೇರಿಗಳು ಪಾಠಶಾಲೆಗಳೆಲ್ಲಾ ಬರುವ ಅಕ್ಟೋಬರ್ ತಾ|| ೧ ರಿಂದ ೧೧ ದಿನಗಳವರೆಗೆ ಮುಚ್ಚಲ್ಪಡುವುವು.

ಚಿತ್ರದುರ್ಗದ ಶ್ರೀಮಜ್ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ನಿನ್ನೆ ಶನಿವಾರದ ದಿನ ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ಸಕಲ ಮರ್ಯಾದೆಗಳೊಡನೆ ದಯಮಾಡಿಸಿತು.

ರಾಜಧಾನಿಯಲ್ಲಿ ತುಂತುರುಹನಿ ವಿನಾ ದೊಡ್ಡಮಳೆಯಾಗದೆ ದಗೆಯು ಆಗುತ್ತಿದ್ದಿತು. ಆದರೆ ಮೊನ್ನೆ ಶುಕ್ರವಾರ ರಾತ್ರಿ ಒಂದು ಹದ ಮಳೆಯು ಚೆನ್ನಾಗಿ ಆದುದಲ್ಲದೆ ಇನ್ನೂ ಹೆಚ್ಚಾಗಿ ಆಗುವ ಸೂಚನೆಯಿದೆ. ಈ ಮಳೆಯಿಂದ ದೊಡ್ಡಕೆರೆಗೆ ಸ್ವಲ್ಪ ನೀರು ಬಂದಿರುತ್ತದೆ.

ನಮ್ಮ ವಿದ್ಯಾಪೀಠದ ವಾರ್ಷಿಕ ಪಟ್ಟಪ್ರದಾನ ಮಹಾಸಭೆಯು ರಾಜಧಾನಿಯಲ್ಲಿ ಬರುವ ಅಕ್ಟೋಬರ್ ತಾ|| ೧೮ರಲ್ಲಿ ಜರುಗುವುದು. ಮದ್ರಾಸ್ ಹೈಕೋರ್ಟು ನ್ಯಾಯಮೂರ್ತಿಗಳಾದ ಸರ್ ಅಬ್ದುಲ್‌ರಹೀಂರವರು ಆ ಸಭೆಯಲ್ಲಿ ಉಪನ್ಯಾಸ ಮಾಡುವವರಾಗಿದ್ದಾರೆಂದು ಪ್ರಕಟವಾಗಿದೆ.

ಒಂದು ವೇಳೆ ಇನ್‌ಫ್ಲುಯಂಜಾ ರೋಗವು ಪ್ರಬಲಿಸಿದರೆ ಅಂಥ ರೋಗಿಗಳು ನೂರುಮಂದಿಗಳನ್ನು ಇಟ್ಟು ಔಷಧೋಪಚಾರಗಳನ್ನು ನಡೆಯಿಸುವುದಕ್ಕೆ ಅನುಕೂಲಿಸುವ ವೈದ್ಯಶಾಲೆಯೊಂದನ್ನು ಡಾ|| ಆಶೀರ್ವಾದಂಯವರ ಕೈಕೆಳಗೆ ಬೆಂಗಳೂರಿನಲ್ಲಿ ಏರ್ಪಡಿಸಲು ಸರ್ಕಾರದವರು ನಿರ್ಧರಿಸಿರುವರು.

ಕಪಿನೀಹೊಳೆಗೆ ದೊಡ್ಡ ಅಣೆಕಟ್ಟನ್ನು ಹಾಕಿ ಕಲ್ಪಿಸಬೇಕೆಂದಿರುವ ಜಲಾಶಯದ ಕೆಲಸಕ್ಕೆ ೬೦ ಲಕ್ಷದಿಂದ ೧ ಕೋಟಿ ರೂ. ಗಳ ವರೆಗಾದರೂ ವೆಚ್ಚಮಾಡಲು ಸರ್ಕಾರದವರು ಉದ್ದೇಶಿಸಿರುವರೆಂದು ಕೇಳುತ್ತೇವೆ. ಈ ಪ್ರಯತ್ನದಿಂದ ಮೈಸೂರು ಡಿಸ್ಟ್ರಿಕ್ಟಿನ ದಕ್ಷಿಣಭಾಗದಲ್ಲಿ ಅನೇಕ ಫಲವತ್ತಾದ ಪ್ರದೇಶಗಳು ತರೀವ್ಯವಸಾಯಕ್ಕೆ ಬರುವುವು.

ರಾಜಧಾನಿಯ ವೀರಶೈವಾಶ್ರಮದಲ್ಲಿ ಪೂಜಿಸಲ್ಪಡುತ್ತಿದ್ದ ಶ್ರೀ ವಿಘ್ನೇಶ್ವರಸ್ವಾಮಿಯ ಮಹಾಮಂಗಳಾರತಿಯನ್ನು ಆಶ್ರಮದ ವಿದ್ಯಾರ್ಥಿಗಳು ಈ ತಾ|| ೧೨ ರ ಸಾಯಂಕಾಲದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಸ್ಥಳೀಯ ದೊಡ್ಡಮನುಷ್ಯರುಗಳನ್ನು ಬರಮಾಡಿಕೊಂಡು ಆಸ್ಥಾನ ವಿದ್ವಾನ್ ಮ|| ಬಿ. ರಾಚಪ್ಪನವರ ಇಂಪಾದ ಗಾನಶ್ರವಣದಿಂದಲೂ, ಗಂಧ ಪುಷ್ಪ ತಾಂಬೂಲ ಪ್ರಸಾದ ವಿನಿಯೋಗದಿಂದಲೂ ಸತ್ಕರಿಸಿದರು.

ಮೈಸೂರು ನಿಯಮನಿರ್ಮಾಣಸಭೆಗೆ ಪ್ರಜಾಪ್ರತಿನಿಧಿಸಭೆಯ ಸಭಿಕರುಗಳನ್ನಾರಿಸುವಾಗ್ಗೆ ಬ್ರಾಹ್ಮಣ ವರ್ಗದ ಸಭಿಕರಿಗೇ ಬ್ರಾಹ್ಮಣರ ಓಟುಗಳೆಲ್ಲಾ ಸಿಕ್ಕುವಂತೆ ಮಾಡಲ್ಪಡಬೇಕೆಂದು ಕೆಲವರು ಈಗಣಿಂದಲೂ ಬೋಧೆಗಳನ್ನೂ ಸಾಹಸಗಳನ್ನೂ ಮಾಡುತ್ತಿರುವರೆಂದು ಕೇಳುತ್ತೇವೆ. ಹಾಗಿದ್ದರೆ ಇತರರೆಲ್ಲರೂ ಎಚ್ಚತ್ತು ಅವರ ಮೇಲ್ಪಂಕ್ತಿಯನ್ನೇ ಅನುಸರಿಸಿ, ಹಿಂದುಳಿದ ಜನವರ್ಗಗಳವರಿಗೇ ತಮ್ಮ ಓಟುಗಳನ್ನು ಕೊಡುವುದರಲ್ಲಿ ಉದಾಸೀನಮಾಡತಕ್ಕುದಲ್ಲ.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಮಳೆ ತಕ್ಕಮಟ್ಟಿಗೆ ಆಗಿದೆ. ಪೈರುಗಳಿಗೆ ಇನ್ನೂ ಮಳೆ ಬೇಕಾಗಿದೆ. ಧಾನ್ಯಗಳ ಬೆಲೆಯು ಹೆಚ್ಚಿನಲ್ಲೇ ಇದೆ. ಬಡವರ ಕಷ್ಟ ಹೆಚ್ಚಾಗಿದೆ ರೋಗಾದಿಗಳಿಲ್ಲ. ತುಮಕೂರು ಪಟ್ಟಣದಲ್ಲಿ ಬಡಬಗ್ಗರು ವಾಸ ಮಾಡುವ ಅರಳೆಪೇಟೆ ಚಿಕ್ಕಪೇಟೆಗಳ ಕಡೆ ಮ್ಯುನಿಸಿಪಾಲಿಟಿಯವರ ದರ್ಶನವೇ ಇಲ್ಲ. ಪಾಕೀಜೂ ಇಲ್ಲ. ಲಾಂದ್ರಗಳನ್ನು ಸರಿಯಾಗಿ ಹಚ್ಚುವುದಿಲ್ಲ. ಪೋಲೀಸರ ಕಾವಲೂ ಸರಿಯಾಗಿಲ್ಲ. ಪಟ್ಟಣಗಳಲ್ಲಿರುವ ಬಡಬಗ್ಗರೇ ಇಷ್ಟು ನಿರ್ಲಕ್ಷ್ಯ ಮಾಡಲ್ಪಡುತ್ತಿರುವಾಗ, ಗ್ರಾಮಾಂತರಗಳಲ್ಲಿ ಅವರ ಗತಿಯು ಇನ್ನು ಹೇಗಿರಬೇಕೊ ಅದನ್ನು ಹೇಳಬೇಕಾಗಿಲ್ಲ. ಇಂಥ ಲೋಪಗಳು ಇನ್ನಾವಾಗ ತಪ್ಪುವವೊ ಎಂದು ಅಲ್ಲಿಯ ಬಾತ್ಮೀದಾರರೊಬ್ಬರು ಬರೆದಿರುತ್ತಾರೆ.

ಬೆಂಗಳೂರಲ್ಲಿ ಕೈ|| ಆನಂದರಾಯರ ಬಂಗಲೆಯ ಸಮೀಪದಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟುವುದಕ್ಕಾಗಿ ಸರ್ಕಾರದಿಂದ ನಿವೇಶನವು ಕೊಡಲ್ಪಟ್ಟಿರುವುದಲ್ಲದೆ ಈ ಕಟ್ಟಡದನಿರ್ಮಾಣಕ್ಕಾಗಿ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ೪೦,೦೦೦ ರೂ. ಗಳನ್ನು ದಯಪಾಲಿಸಿರುವರು. ಅತ್ತಿ ಬೆಲೆ ಸಾಹುಕಾರ್ ಸಿದ್ದಬಸಪ್ಪನವರು ೧೦೦೦೦ ರೂ. ಗಳನ್ನು ಕೊಟ್ಟಿರುವರು. ಮತ್ತು ಅಷ್ಟೇ ಹಣವು ಸರ್ಕಾರದಿಂದ ಕೊಡಲ್ಪಡುವುದು. ಈ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀಮದ್ಯುವರಾಜರವರು ತಮ್ಮ ಅಮೃತಹಸ್ತದಿಂದ ದಸರಾಮಹೋತ್ಸವವಾದ ಕೂಡಲೆ ನಡಿಸಲು ದಯೆಯಿಟ್ಟು ಸಮ್ಮತಿಸಿರುವರು. ಈ ಮಹೋತ್ಸವ ಕಾಲಕ್ಕೆ ಜಗದ್ಗುರುಗಳ ಸ್ವಾರಿಯೂ ಬೆಂಗಳೂರಿಗೆ ಚಿತ್ತೈಸುವುದಾಗಿ ತಿಳಿಯುತ್ತೇವೆ.

ಒಬ್ಬ ಮನುಷ್ಯನು ೧೨ ವರ್ಷಗಳ ತನಕ ಅಥವಾ ಅದಕ್ಕೆ ಹೆಚ್ಚು ಕಾಲ ಭೂಮಿಯ ಅನುಭವವನ್ನಿಟ್ಟುಕೊಂಡಿದ್ದು ಅದರ ಕಂದಾಯವನ್ನು ಸಲ್ಲಿಸಿದ್ದರೆ, ಅಥವಾ ಒಂದು ಭೂಮಿಯನ್ನು ಕ್ರಯಕ್ಕೆ ಪಡೆದುಕೊಂಡಿರುವವನು ಅದರ ರಿಜಿಸ್ಟರ್ಡ್ ಕ್ರಯಪತ್ರವನ್ನು ಹೊಂದಿದ್ದು ಭೂಮಿಯ ಅನುಭವನನ್ನು ಮಾಡುತ್ತಲಿದ್ದರೆ ಅಂಥವರುಗಳು ಆ ಭೂಮಿಯ ಖಾತೆಯನ್ನು ತಮ್ಮ ಹೆಸರಿಗೆ ಬದಲಾಯಿಸಿ ಕೊಡಬೇಕೆಂದು ಅಮಲ್ದಾರರಿಗೆ ಪತ್ರವಿಲ್ಲದೆ ಅಥವಾ ಪತ್ರದ ಸಮೇತ ಅರ್ಜಿ ಬರೆದುಕೊಳ್ಳಬಹುದೆಂದೂ, ಅದರ ಮೇಲೆ ಅಮಲ್ದಾರರು ಪೂರ್ವದ ಖಾತೆದಾರನಿಗೆ ನೋಟೀಸುಕೊಟ್ಟು ಸ್ಥಳದಲ್ಲಿ ಪ್ರಕಟನೆಮಾಡಿಸಿ ೩ ತಿಂಗಳನಂತರ ತಕ್ಕ ವಿಚಾರಣೆಯಿಂದ ಖಾತೆ ವರ್ಗಾಯಿಸುವುದನ್ನೋ ಇಲ್ಲದುದನ್ನೋ ಮಾಡಬಹುದೆಂದೂ, ಇದರ ಮೇಲೆ ಬೇಕಿದ್ದರೆ ಸಬ್‌ಡಿವಿಜನ್ ಆಫೀಸರಲ್ಲಿ ೧ನೆ ಅಪ್ಪೀಲನ್ನೂ ಡಿ|| ಕಮೀಷನರಲ್ಲಿ ೨ನೆ ಅಪ್ಪೀಲನ್ನೂ ಮಾಡಿಕೊಳ್ಳಲವಕಾಶವಿರುವುದೆಂದೂ ಸರ್ಕಾರದ ಅಪ್ಪಣೆಯಾಗಿರುತ್ತದೆ.

ಪತ್ರವ್ಯವಹಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಭೆ.

1. ವೀರಶೈವ ಬಡ ವಿದ್ಯಾರ್ಥಿಗಳು ಎಂದರೆ ಇಂಗ್ಲೀಷ್ ಹೈಸ್ಕೂಲ್ ಮತ್ತು ಕಾಲೇಜು ಕ್ಲಾಸುಗಳಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ಸ್ಕಾಲರ್‌ಷಿಪ್ ದೊರೆಯುತ್ತದೆ. ಅಪ್ಲಿಕೇಷನ್ ಫಾರಂ ಫಂಡಿನ ಸೆಕ್ರೆಟರಿಯವರಲ್ಲಿ ದೊರೆಯುವುದು. ಸೆಪ್ಟಂಬರ್ ತಿಂಗಳ ಆಖೈರಿನೊಳಗಾಗಿ ಸೆಕ್ರೆಟರಿಯವರ ವಿಳಾಸಕ್ಕೆ ಅಪ್ಲಿಕೇಷನನ್ನು ಬರೆದುಕೊಳ್ಳತಕ್ಕದ್ದು. 2 ಅಪ್ಲಿಕೇಷನ್‌ಜೊತೆಯಲ್ಲಿ ವಿದ್ಯಾರ್ಥಿಯು ಸಹಾಯವನ್ನು ಹೊಂದಲು ಅರ್ಹನೆಂಬ ಬಗ್ಗೆ ಆಯಾಯ ಸ್ಕೂಲಿನ ಮುಖ್ಯೋಪಾಧ್ಯಾಯರಿಂದಲೂ, ಸ್ಥಳೀಯ ದೊಡ್ಡ ಮನುಷ್ಯರೊಬ್ಬರಿಂದಲೂ ಒಂದೊಂದು ಸರ್ಟಿಫಿಕೇಟನ್ನು ತೆಗೆದು ಕಳುಹಿಸತಕ್ಕದ್ದು.

ಜಿ. ಪರಮಶಿವಯ್ಯ ಬಿ. ಎ. ಎಲ್. ಎಲ್. ಬಿ.
9.9.19. ಆ|| ಸೆಕ್ರೆಟರಿ.

ಶ್ರೀ ಫಕೀರಸ್ವಾಮಿ ಮಹೋತ್ಸವವು.

ಸಾಂಗ್ಲಿಸಂಸ್ಥಾನ ಪೈಕಿ ಶಿರಹಟ್ಟಿ (ಶಿಂಪುರ) ಗ್ರಾಮದಲ್ಲಿ ಅತಿ ಮಹಾತ್ಮರೆಂದೆನಿಸಿ ವಾಸವಾಗಿಕೊಂಡಿರುವ ಶ್ರೀ ಫಕೀರ ಮಹಾಸ್ವಾಮಿಯವರ ಉರಗ ಬೀಡೆಂಬ ಗದ್ದಿಗೆಯ ಪೂಜಾಸಮಾರಂಭವವು ಪರವರ್ಷಕ್ಕಿಂತಲೂ ಒಳ್ಳೇ ವಿಜೃಂಭಣದಿಂದ ಜರುಗಿತು. ಇದೇ ಗ್ರಾಮದ ಮತ್ತು ಪರಸ್ಥಳದ ಭಕ್ತಜನರು ರುದ್ರಾಭಿಷೇಕಗಳನ್ನು ಶ್ರಾವಣ ಶುದ್ಧ ೧ ರಿಂದ ಭಾದ್ರಪದ ಶುದ್ಧ ೨ ರ ವರೆಗೆ ಸಾಗಿಸಿ ಆನಂದದಿಂದ ಮುಗಿಸಿದರು. ಇಲ್ಲಿಯ ವೀರಲಿಂಗಾಯತ ಎಂಗ್‌ಮೆನ್ಸ ಯುನಿಯನ್ ಸೊಸೈಟೀ ಯವರು ಮೇಲ್ಕಂಡ ಗದ್ದಿಗೆಯ ಪೂಜಾಸಮಾರಂಭವನ್ನು ಶ್ರಾವಣ ಶುದ್ಧ ೧ ರಿಂದ ಭಾದ್ರಪದ ಶುದ್ಧ ೩ ವರೆಗೆ ಭಜನ ವ್ಯಾಖ್ಯಾನಗಳಿಂದ ನೆರವೇರಿಸಿ ಆಖೈರು ಭಾದ್ರಪದ ||೩|| ಗುರುವಾರದ ದಿವಸ ಮಹಾ ಪೂಜೆಯನ್ನು ಮಾಡಿ ಗಣಾಧೀಶ್ವರರಿಗೂ, ಗೃಹಸ್ಥರಿಗೂ, ಬಡಬಗ್ಗರಿಗೂ ತೃಪ್ತಿಪಡಿಸಿದರು. ಆಹೊತ್ತೇ ಶ್ರೀ ಫಕೀರ ಸ್ವಾಮಿಯವರ ಉತ್ಸವವು ನಗಾರಿ, ನೌಬತ್ತು, ಪಲ್ಲಕ್ಕಿ, ನಿಶಾನೆ ಅಶ್ವಗಳು ಭೂಷಿತವಾಗಿಯೂ, ಪರಾಕ, ಬಿರುದಾವಳಿಗಳಿಂದಲೂ, ಭೋರ್ಗರೆಯುವ ವೈಭವದಿಂದ ಜರುಗಿತು. ಸದರ ಸೊಸೈಟಿಯವರು ಚಿಕ್ಕವಯಸ್ಸಿನವರಿದ್ದು ಈ ಮಹಾಕಾರ್ಯವನ್ನು ನೀಗಿಸಿದ್ದರಿಂದ ಅತ್ಯಾನಂದದ ಕೆಲಸವು. ಈ ಸೊಸೈಟಿಯ ಪ್ರೆಸಿಡೆಂಟರಾದ ಮ|| ರಾ|| ರಾ|| ಫಕೀರಪ್ಪ ಸಿದ್ದಪ್ಪ ಭೋರಸೆಟ್ರು; ವ್ಹಾಯಿಸ ಪ್ರೆಸಿಡೆಂಟರಾದ ಫಕೀರಯ್ಯನವರು ಲಕ್ಮಿಂದಿಮಠ ಈ ಉಭಯರೂ ೩-೪ ವರ್ಷದ ಪೂರ್ವದಿಂದ ಕೈಕೊಂಡು ಈ ಕೆಲಸ ಸ್ಥಿತಿಗೊಳಿಸಿದರು. ಈ ಉದಾರ ಗೃಹಸ್ಥರಿಗೆ ಪರಮಾತ್ಮನು ಚಿರಾಯುರಾರೋಗ್ಯವನ್ನು ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಪುರವಾಸಿ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
38 ವೈದ್ಯಶಾಲಾ, ಮೈಸೂರು.

ಭಪತೇ ಜಾಹಿರಾತಿಗೆ ಮರುಳಾಗಬೇಡಿರಿ.

ಒಮ್ಮೆ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.
(ಗುಣವಾಗದಿದ್ದರೆ ಹಣ ಪರತ.)
ಧಾತುಪೌಷ್ಟಿಕ, ಕಾಮೋತ್ತೇಜಕ. ಇಂದ್ರಿಯಸ್ತಂಭಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದ್ದರೆ ಉತ್ತಮ ಗುಣ. ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರತ್ಯೇಕ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಿಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಿಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಿಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಲೆ, ಶಿವಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಯ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದ್ದವ್ವನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೇರ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಜೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲೀಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ಪತ್ತೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಿಫಾ,
2 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

3
ಯುದ್ಧದ ಫೋಟೋಗಳು.

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನರಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯಿತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಮಿಂವಾರಿ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ. ವಿಳಾಸ:—ಮಹರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಿಬೀದಿ, ಮದರಾಸ್,

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವುದಿಲ್ಲ. ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,
31 ಇರುಳಪ್ಪನ ಬೀದಿ, ಮದರಾಸ್.

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಪರತ.) 40
ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಶಿರ್ಶಿ ಉತ್ತರಕನಡಾ ಡಿ||.

ಸುಸಮಯ! ಜಾಗ್ರತೆಮಾಡಿ. ಸುಸಮಯ!!

ಅಪೂರ್ವವಾದ ಆಂಗ್ಲ ಕರ್ನಾಟಕ ಬಾಲನಿಘಂಟು.

ಎಂಬ ಜೇಬಿನಲ್ಲಿಟ್ಟುಕೊಳ್ಳಲು ಸಾಧ್ಯವಾದ ಹೊಸ ಪುಸ್ತಕವು ಬಾಲಕರಿಗಾಗಿಯೇ ಮುದ್ರಿತವಾಗಿದೆ. ಇಂಗ್ಲೀಷಿನಲ್ಲಿರುವ ಪಾಕೆಟ್, ಪೆನ್ನಿ ಮೊದಲಾದ ಡಿಕ್ಷ್ನರಿಗಳ ನಮೂನೆಯನ್ನನುಸರಿಸಿ ಪ್ರೈಮರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮನೋಹರವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ. ಪ್ರಿಂಟಿಂಗ್ ಕೆಲಸವು ಕಷ್ಟತರವಾಗಿರುವ ಈ ಕಾಲದಲ್ಲೂ ಬಹಳ ಕಮ್ಮಿ ಬೆಲೆಯನ್ನಿಟ್ಟಿರುವದಲ್ಲದೆ ಇದರ ಉತ್ಪತ್ತಿಯಲ್ಲಿ ಬಹುಭಾಗವನ್ನು ಸಮಾಜದ ಧರ್ಮಕಾರ್ಯಕ್ಕೆ ಉಪಯೋಗಿಸುವದಾಗುತ್ತೆ. ಇಂಥಾ ನಿತ್ಯೋಪಯೋಗದ ಪುಸ್ತಕದ ಬೆಲೆ 0—3—0 ಮಾತ್ರ. ಅಂಚೆ ವೆಚ್ಚ ಬೇರೆ (ನೋಟ್—ಶ್ರೀ ಪರಮಶಿವ ಸಂಬಂಧವಾದ ಹಾಡಿನ ಪುಸ್ತಕಗಳನ್ನು ವಾಯಿದೆಯೊಳಗೆ ಬರೆಯುವ ವೀರಶೈವರಿಗೆ ಶ್ರೀ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನಗಳು ದೊರೆಯುತ್ತ.)

13 ಜಿ. ಕೆ. ಗುರುಸಂಗಾರ್ಯ
ಪ್ಲೀಡರ್, ತುಮಕೂರು.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಾರಿ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂಡೆ, ತೊಡಮೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

31 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

೧೯೧೯ ನೆಯ ಇಸವಿ ಸೆಪ್ಟಂಬರ್ ತಾ|| ೧೪ ರಿಂದ ೧೯೧೯ ನೆಯ ಸೆಪ್ಟಂಬರ್ ತಾ|| ೨೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಭಾದ್ರಪದ ಬ|| ಪಂಚಮಿಯಿಂದ ಭಾದ್ರಪದ ಬ|| ಏಕಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿ.ಶ. ಮಾಸ
14	[1] ಭಾನು	ಪಂಚ	43-58	ಭರಣಿ	39-23	29
15	ಸೋಮ	ಷಷ್ಠಿ	37-47	ಕೃತ್ತಿಕೆ	35.9	30
16	ಮಂಗಳ	ಸಪ್ತಮಿ	31-41	ರೋಹಿಣಿ	30-58	31
17	[2] ಬುಧ	ಅಷ್ಟಮಿ	25-50	ಮೃಗಶಿರ	27-1	1
18	[3] ಗುರು	ನವಮಿ	20-30	ಆರಿದ್ರಾ	23-32	2
19	ಶುಕ್ರ	ದಶಮಿ	15-42	ಪುನ	20-41	3
20	[4] ಶನಿ	ಏಕಾದಶಿ	11-46	ಪುಷ್ಯ	18-38	4

(1) ಶ್ರೀ ಪ್ರಸನ್ನ ಕೃಷ್ಣಸ್ವಾಮಿಆರಾಧನೆ. (2) ಮಧ್ಯಾಷ್ಟಮಿ. (3) ಹರಿಹರವ್ರತಂ. (4) ಸರ್ವತ್ರಯುತಿದ್ವಾದಶಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೀಮಾಭೀಷ್ಟದಶೀಲ ವಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ರಿಲೋಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಸೆಪ್ಟಂಬರ್ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೩೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಶಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
32 ಸಾಹುಕಾರಪೇಟೆ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಸುಂದರ ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

40 ವಿಳಾಸ—ಎಂ. ಎಂ. ಸರ್ಜೇಕರ್, ದಾವಣಗೆರೆ.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುವು ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0. ನಂ. 2. 1—12—0.

ಕನ್ನಡಕಗಳು.



ಇದನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವವು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬಳಿಗಳಿರುವವು. ಇದರ ಕಂಬಿಗಳು ಯಾವಾಗಲೂ ಬೆಳ್ಳಿಯ ಹಾಗೆ ಇರುವವು. ಇದರಲ್ಲಿ ಹಸರು, ಊದ, ಮೇಘವರ್ಣ ಮೊದಲಾದವುಗಳಿರುವವು. ಕ್ರಯ ನಂ. 1 ಕ್ಕೆ 1-8-0, ನಂ. 2 ಕ್ಕೆ 2-0-0.

ರಬ್ಬರ್ ಇಂಗ್ಲೀಷ್ ಅಕ್ಷರಗಳು.



ಈ ಅಕ್ಷರಗಳು ಸೀಮೆಯಲ್ಲಿ ತಯಾರಾದವು. ಈ ಅಕ್ಷರಗಳಿಂದ ಕಷ್ಟವಿಲ್ಲದೆ ಕಾಗದಗಳನ್ನೂ, ಕಾರಡು, ಲಿಟರು ಮುಂತಾದವುಗಳನ್ನು ನಾವೇ ಅಚ್ಚುಮಾಡಿಕೊಳ್ಳಬಹುದು. ಈ ಅಕ್ಷರಗಳ ಪೆಟ್ಟಿಗೆಯು ಒಂದು ಇದ್ದರೆ ಬೇಕಾದ ಮುದ್ರಣವನ್ನು ಒಬ್ಬರ ಸಹಾಯವಿಲ್ಲದೆ ನಾವೇ ಮಾಡಿಕೊಳ್ಳಬಹುದು. ಲಾಯರುಗಳಿಗೂ, ವರ್ತಕರಿಗೂ ಬಹು ಸಹಾಯಕಾರಿಯಾದದ್ದು. ಈ ಪೆಟ್ಟಿಗೆಯಲ್ಲಿ ಇಂಕಿ, ಪ್ಯಾಡು, ಚಿಮಟ ಮುಂತಾದವುಗಳು ಇವೆ.

170 ಅಕ್ಷರಗಳು ಇರುವ ಪೆಟ್ಟಿಗೆ	1—14—0
250 ,, ,,	2—8—0
350 ,, ,,	3—12—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
32 3 ಇರುಳಪ್ಪನಬೀದಿ, ಮದರಾಸ್.

„ದಲ್ಲಾಲಿ ಅಂಗಡಿ ಸೊಲ್ಲಾಪುರ”

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕ, ಶಿಗೇಕಾಯಿ, ತುಪ್ಪ, ಜೋಬರಿ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ. ಚಹಾ, ಕಾಜು, ಆಲೂ, ಉಳಿಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮಿಷನ್ನಿನ ಮೇಲೆ ಕಾಳಜಿಯಿಂದ ಬಿಕರಿಮಾಡಿ ಕೊಡುತ್ತೇವೆ. ಒಂದುವೇಳೆ ಕೆಲಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಷನರಿ ಸಾಮಾನುಗಳು ಕಮಿಷನ್ನಿನ ಮೇಲೆ ಸೋಯಿವಾರ ಮುಂಬಯಿಯಲ್ಲಿ ಖರೀದಿಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,
4 ವಿಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultura subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.

2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.

3. During the time the raiyats and labourers work on the farm, they will be paid at the prevailing local rates for labour.

4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,
7 *Offg. Director of Agriculture.*

ಇನ್‌ಫ್ಲುಯೆನ್ಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 10

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಕೆಂಗಿಸರ ಹೊಟ್ಟೆನೋವು, ಕತ್ತಿ. ಕಲ್ಲಿನಿಂದುಂಟಾದ ಘಾಯ, ಚಳುಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲಿ ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಸೆಪ್ಟೆಂಬರ್ ತಾ|| ೨೧ನೆಯ ಭಾನುವಾರ

ವಿದ್ಯಾಭ್ಯಾಸಕ್ರಮ ಸಂಸ್ಕರಣವು.

ಭಾಗ ೨.

ಈ ಸಂಬಂಧವಾಗಿ ಸರ್ಕಾರದವರು ಪ್ರಕಟಿಸಿರುವ ಮೆಮೋರಾಂಡಮ್ಮಿನಲ್ಲಿ ಮಧ್ಯಮ ತರಗತಿಗಳ ಅಭ್ಯಾಸಸಂಬಂಧವಾಗಿ ಕೆಲವು ಸಂಸ್ಕರಣಗಳು ತಿಳಿಯಿಸಲ್ಪಟ್ಟಿವೆ. ಅವುಗಳಲ್ಲಿ ಗ್ರಾಮಗಳಲ್ಲೂ ಪಟ್ಟಣಗಳಲ್ಲೂ ಒಂದೇತೆರದ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂಬ ವಿಷಯವು ಒಂದಾಗಿರುತ್ತದೆ. ಇದು ಅವಶ್ಯಕವಾಗಿರುವುದು. ಸರ್ವಪ್ರಜೆಗಳಿಗೂ ಸಮಾನವಾಗಿ ವಿದ್ಯಾಭ್ಯಾಸಸೌಕರ್ಯವು ಒದಗುವುದಕ್ಕೆ ಇದರಿಂದ ಅನುಕೂಲವಾಗುವುದು. ಆದರೆ ಈ ಶಾಲೆಗಳಲ್ಲಿ ಆಂಗ್ಲಭಾಷೆಯಲ್ಲಿ ಬೋಧನವು ನಡೆಯುವುದನ್ನು ನಿರ್ಬಂಧವಾಗಿಡಿಸಿ, ಇತರ ಪಾಠಗಳನ್ನೆಲ್ಲಾ ಬಹುತರವಾಗಿ ದೇಶಭಾಷೆಯಲ್ಲೇ ನಡೆಯುವಂತೆ ಮಾಡಬೇಕೆಂದಿರುವ ಕ್ರಮವು ದೇಶಭಾಷಾಪ್ರಾಮುಖ್ಯಕ್ಕೆ ಪೋಷಕವಾಗಿದ್ದರೂ ಲೋವರ್ ಸೆಕೆಂಡರಿ ಪರೀಕ್ಷೆಗೆ ಹಿಡಬೇಕಾದವರು ಬರಿಯ ಕನ್ನಡವನ್ನೇ ತೆಗೆದುಕೊಳ್ಳುವುದಕ್ಕೆ ಅವಕಾಶವು ತಪ್ಪಿಹೋಗುವುದು. ಈ ತರಗತಿಗೆ ಆಂಗ್ಲಭಾಷೆಯನ್ನು ಐಚ್ಛಿಕವಾಗಿಡುವುದೇ ಅವಶ್ಯಕ. ಮುಂದೆ ಪ್ರೌಢತರಗತಿಗಳವರೆಗೂ ಬೋಧನವು ದೇಶಭಾಷೆಯಲ್ಲೇ ನಡೆಯುವಂತೆ ಉದ್ದೇಶವನ್ನಿಟ್ಟರೆ ದೇಶೀಯ ಭಾಷೆಯು ಈಗಣ ಆಂಗ್ಲ ವಿದ್ಯಾಧಿಕರಲ್ಲಿ ಪಡೆದುಕೊಂಡಿರುವ ಹೇಯಚ್ಛನ್ನತೆಯನ್ನು ಮುಂದಾದರೂ ಕಳೆದುಕೊಳ್ಳಬಹುದು. ಮತ್ತು ಆ ಭಾಷೆಯಲ್ಲಿ ಗ್ರಂಥಪುಷ್ಟಿಯು ಇನ್ನಷ್ಟು ಆಗುವುದಕ್ಕೂ ಅವಕಾಶವಾದೀತು. ದೇಶಭಾಷೆಯ ಜತೆಗೆ ಆಂಗ್ಲಭಾಷೆಯನ್ನೂ ಅಭ್ಯಾಸಮಾಡಿಸುವ ಈ ಮಾಧ್ಯಮಿಕ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಬೇಕಾದ ಅವಶ್ಯಕತೆಯು ಕೂಡ ಇದರಲ್ಲಿ ನಿರೂಪಿತವಾಗಿರುವುದಲ್ಲದೆ ಈ ತರಗತಿಗಳಲ್ಲಿ ಅನುಭವಬೋಧನೆಗಳನ್ನೂ ಪ್ರಕೃತಿಶಾಸ್ತ್ರ ಪ್ರಾರಂಭಪಾಠಗಳನ್ನು ಸಹ ಹೇಳುವಂತಾಗಬೇಕೆಂದೂ, ಈ ತರಗತಿಗಳ ಅಭ್ಯಾಸವೆಲ್ಲಾ ೪ ವರ್ಷಗಳ ಕಾಲದಲ್ಲಿ ಮುಗಿಯುವಂತಿರಬೇಕೆಂದೂ ಹೇಳಲ್ಪಟ್ಟಿದೆ. ಈ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಭವನಗಳ ಸಂಬಂಧವಾಗಿ ಮಾಡಲ್ಪಟ್ಟಿರುವ ಸೂಚನೆಗಳೊಳಗೆ ಅವುಗಳ ಆದಾಯಕ್ಕೂ ವ್ಯಯಕ್ಕೂ ಸರಿಹೋಗುವಂತೆ ಪ್ರಭುತ್ವದವರು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕೆಂತಲೂ, ಹಾಗಲ್ಲದೆಹೋದರೆ ಸ್ವತಂತ್ರವಾಗಿ ವಿದ್ಯಾರ್ಥಿಗಳಿಂದಲೋ ಪ್ರಜೆಗಳಿಂದಲೋ ಸ್ಥಾಪಿಸಿಕೊಳ್ಳಲ್ಪಟ್ಟಿರುವ ವಿದ್ಯಾರ್ಥಿನಿಲಯಗಳಿಗೆ ಸರ್ಕಾರದಿಂದ ಉಚಿತವಾದ ಸಾಹಾಯ್ಯವನ್ನು ಕೊಡಬಹುದೆಂತಲೂ ಹೇಳಲ್ಪಟ್ಟಿದೆ. ಈ ೨ನೆ ಉಪಾಯವೇ ಉತ್ತಮವಾಗಿ ತೋರುತ್ತದೆ. ಏಕೆಂದರೆ—ಅನೇಕ ಮತ ಜಾತಿಭೇದಗಳ ಕಟ್ಟುಪಾಡಿಗೊಳಪಟ್ಟಿರುವ ಈ ದೇಶದಲ್ಲಿ ಸರ್ಕಾರದವರು ಪ್ರತಿಪಂಗಡದವರಿಗೂ ಅಂಥ ವಸತಿಗೃಹಗಳನ್ನು ಸ್ವತಃ ಕಟ್ಟಿಸಿಕೊಡುವುದು ಸಾಧ್ಯವಾಗಿಲ್ಲದಿರುವುದರಿಂದಲೂ, ನಗರ ನಿವಾಸಿಗಳಿಗೆ ಅಂಥ ವಿದ್ಯಾರ್ಥಿ ವಸತಿಗೃಹಗಳನ್ನು ಕಟ್ಟಿಸಿಕೊಟ್ಟು ತಾಲ್ಲೂಕು ಮೊದಲಾದ ಸ್ಥಳಗಳಲ್ಲಿರುವ ವಿದ್ಯಾರ್ಥಿಗಳಿಗೆ ಅವನ್ನು ಕಟ್ಟಿಸಿಕೊಡದೆ ಇರುವ ಪಕ್ಷಪಾತವನ್ನು ಆಚರಿಸುತ್ತಿರಬೇಕಾಗಿರುವುದರಿಂದಲೂ, ಆ ಏರ್ಪಾಟನ್ನೇ ಬಿಟ್ಟು ಸ್ವತಂತ್ರವಾಗಿ ಆಯಾ ಜನವರ್ಗದವರು ಏರ್ಪಡಿಸಿಕೊಳ್ಳುವ ವಿದ್ಯಾರ್ಥಿ ಭವನಗಳಿಗೆ ಉಚಿತವೂ ಉದಾರವೂ ಆದ ಸಾಹಾಯ್ಯಗಳನ್ನು ಸರ್ಕಾರದವರು ಮಾಡುವುದೇ ನ್ಯಾಯವಾಗಿ ಕಾಣುತ್ತದೆ.

ಇನ್ನು ಪ್ರೌಢ ವಿದ್ಯಾಭ್ಯಾಸಕ್ರಮ ಸಂಸ್ಕರಣ ವಿಷಯವಾಗಿ ಮೆಮೋರಾಂಡಮ್ಮಿನಲ್ಲಿ ಮಾಡಲ್ಪಟ್ಟಿರುವ ಸೂಚನೆಗಳೆಂದರೆ—ಶಾಸ್ತ್ರೀಯ ಪಾಠಬೋಧನೆಗಳ ತಿದ್ದುಪಾಡುಗಳೂ, ಸಾಂಕೇತಿಕ ವಿದ್ಯೆಯನ್ನು ಈ ತರಗತಿಗಳಲ್ಲಿ ಕಲಿಸುವುದೂ, ದೇಶಭಾಷೆಯಲ್ಲೇ ಅನೇಕಪಾಠಗಳನ್ನು ಬೋಧಿಸುವುದೂ, ಶಾಸ್ತ್ರೀಯ ವಿದ್ಯಾಭ್ಯಾಸಕ್ಕೆ ಅವಶ್ಯಕವಾದ ದೊಡ್ಡದೊಡ್ಡ ಭವನಗಳು ಮೊದಲಾದುವನ್ನು ನಿರ್ಮಿಸುವುದೂ, ಲೇಬರೇಟರಿಗಳನ್ನು ಅಭಿವೃದ್ಧಿಪಡಿಸುವುದೂ, ಈಗಿಗಿಂತಲೂ ಸಮರ್ಥರಾದ ಪಂಡಿತರನ್ನು ಪಾಠಕಸ್ಥಾನಗಳಿಗೆ ನಿಯಮಿಸುವುದೂ, ಮಧ್ಯಮ ತರಗತಿಗಳಲ್ಲಿ ಆರಂಭಿಸಿರುವ ಪ್ರಾರಂಭ ಶಾಸ್ತ್ರೀಯ ಪಾಠಗಳನ್ನು ಈ ಉನ್ನತ ತರಗತಿಗಳಲ್ಲಿ ಪಕ್ವಸ್ಥಿತಿಗೆ ತರುವುದೂ ಇತ್ಯಾದಿಗಳಾಗಿರುತ್ತವೆ. ಈ ತರಗತಿಗಳಲ್ಲೂ ದೇಶಭಾಷೆಗೆ ಪ್ರಾಮುಖ್ಯವನ್ನು ಕೊಟ್ಟಿರುವುದು ಸಮಾಧಾನಕರವಾದ ಸಂಗತಿಯಾಗಿದೆ.

ಹೀಗೆ ಪುಸ್ತಕ ವಿದ್ಯಾಭಿವೃದ್ಧಿಗೇ ಎಲ್ಲ ಗಮನವನ್ನೂ ಕೊಟ್ಟು ಪ್ರಜೆಗಳೆಲ್ಲರೂ ಅದರಲ್ಲಿ ಪ್ರಾವೀಣ್ಯವನ್ನು ಸಂಪಾದಿಸಿಕೊಂಡು ಬಡುವಂತಾದರೆ ತೀರಿತೆಂದು ಪ್ರಭುತ್ವದವರು ಯೋಚಿಸಿದ್ದರೆ ಬಹಳ ನಿರಾಶೆಯಾಗುತ್ತಿದ್ದಿತು. ಹಾಗಲ್ಲದೆ ಸಾಂಕೇತಿಕ ವಿದ್ಯೆಯ ಪ್ರಸಾರದ ಕಡೆಗೂ ಅವರು ಗಮನವಿತ್ತು ಕೆಲ ಸೂಚನೆಗಳನ್ನು ಮಾಡಿರುತ್ತಾರೆ. ಮುಖ್ಯವಾಗಿ ಪ್ರಜೆಗಳಿಗೆ ಸ್ವತಂತ್ರ ಜೀವನಕ್ಕೆ ಸಾಧಕವಾಗುವಂಥ ವಿದ್ಯೆಯು ವಿಶೇಷವಾಗಿ ಪ್ರಸಾರಗೊಳ್ಳಬೇಕಾದುದು ಅತ್ಯವಶ್ಯಕವಾಗಿದೆ. ಅದರಿಂದ ದೇಶದ ಸಂಪತ್ತು ಹೆಚ್ಚಲೂ ಮಾರ್ಗವಾಗುತ್ತದೆ. ಪ್ರಜೆಗಳೆಲ್ಲರೂ ಸರ್ಕಾರದ ಉದ್ಯೋಗಗಳ ಕಡೆಗೆ ತಳ್ಳಿಕೊಂಡು ಕುಳಿತುಕೊಳ್ಳಬೇಕಾದ ಅವಶ್ಯಕತೆಯೂ ತಪ್ಪಿಹೋಗುತ್ತದೆ. ಈ ಸಂಗತಿಯನ್ನು ಪ್ರಭುತ್ವದವರು ಆಲೋಚಿಸಿಕೊಂಡೇ ವಿದ್ಯಾರ್ಥಿಗಳು ಪ್ರೌಢವಿದ್ಯೆಯನ್ನು ಅಭ್ಯಸಿಸಿದ ಬಳಿಕ ಪಾಠಶಾಲೆಗಳನ್ನು ಬಿಡುವುದರೊಳಗಾಗಿ ಯಾವುದಾದರೂ ಕೆಲವು ಪರಿಶ್ರಮಗಳಲ್ಲೂ ವ್ಯವಸಾಯದಲ್ಲೂ ಇಂಜನಿಯರಿಂಗ್ ಮೊದಲಾದ ಕುಶಲ ವಿದ್ಯೆಗಳಲ್ಲೂ ಸಹ ಪುಸ್ತಕ ವಿದ್ಯಾಭ್ಯಾಸದೇ ಅಲ್ಲದೆ ಪ್ರಯೋಗಮೂಲಕವಾದ ಅಭ್ಯಾಸವನ್ನು ಕೂಡ ಮಾಡಿ ಪಕ್ವವಾದ ಅನುಭವವನ್ನು ಪಡೆದುಕೊಳ್ಳಲು ಅನುಕೂಲಿಸುವಂತೆ ನಿದರ್ಶನಬೋಧನ ವಿದ್ಯಾಲಯಗಳನ್ನು ಸ್ಥಾಪಿಸಲು ಉದ್ದೇಶಪಟ್ಟಿರುತ್ತಾರೆ. ಇದುವರೆಗೆ ಇಂಥ ನಿದರ್ಶನ ಕ್ಷೇತ್ರಾದಿಗಳನ್ನು ಸರ್ಕಾರದವರು ಪ್ರತಿಷ್ಠಾಪಿಸಿದ್ದರೂ ಅವುಗಳು ತಕ್ಕಷ್ಟು ಫಲದಾಯಕವಾಗದಿರುವುದಕ್ಕೆ ಅವುಗಳಲ್ಲಿ ತಕ್ಕ ಉಪಾಧ್ಯಾಯರೂ ಸಂಪೂರ್ಣವಾದ ಉಪಕರಣ ಸಾಹಾಯ್ಯವೂ ಇಲ್ಲದಿರುವುದೇ ಕಾರಣವೆಂದೂ, ಉತ್ತರತ್ರ ಆ ಲೋಪಗಳನ್ನೆಲ್ಲಾ ಪರಿಹರಿಸಬೇಕಾಗಿದೆಯೆಂದೂ ಹೇಳಲ್ಪಟ್ಟಿದೆ. ಮತ್ತೂ ಈಗಿರುವ ಮೆಕಾನಿಕಲ್ ಇಂಜನಿಯರಿಂಗ್ ಶಾಲೆಯನ್ನೂ ಚಾಮರಾಜೇಂದ್ರಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನೂ ಇನ್ನಷ್ಟು ಉತ್ತಮಸ್ಥಿತಿಗೆ ತಂದು ಅವುಗಳಲ್ಲಿನ ಅಭ್ಯಾಸಕ್ರಮವು ಇನ್ನೂ ವ್ಯಾಪಕಾವಸ್ಥೆಗೆ ಬರುವಂತೆಯೂ ಆಕರ್ಷಕವಾಗಿರುವಂತೆಯೂ ಮಾಡಲ್ಪಡಬೇಕೆಂದು ಹೇಳಿರುವುದಲ್ಲದೆ, ಇವುಗಳಲ್ಲಿ ಅಭ್ಯಾಸವು ಯಾವ ಭಾಷೆಯಲ್ಲಿ ನಡೆಯಬೇಕೆಂಬ ವಿಷಯವಾಗಿ ಬಹುದೂರ ಚರ್ಚಿಸಿ, ಕಡೆಗೆ ಅಲ್ಲೂ ದೇಶಭಾಷಾ ಪ್ರಾಮುಖ್ಯವನ್ನೇ ತೋರಿಸಿರುವುದು ಅತ್ಯಂತ ಸಂಗತವಾಗಿರುತ್ತದೆ. ಸಾಂಕೇತಿಕ ವಿದ್ಯಾಭ್ಯಾಸವು ಮುಖ್ಯವಾಗಿ ಕಸಬುಗಾರ ಜನರಿಗೆ ಅತ್ಯವಶ್ಯಕವಾಗಿದೆ. ಅವರುಗಳಲ್ಲಿ ವಿದೇಶ ಭಾಷಾಪ್ರಸಾರವು ಸುತರಾಂ ಇಲ್ಲವೇ ಇಲ್ಲವೆಂದರೂ ಸಲ್ಲುವುದು. ಅಂಥವರಿಗೆಲ್ಲಾ ದೇಶಭಾಷೆಯಲ್ಲಿ ಬೋಧನೆಯನ್ನು ಮಾಡದಿದ್ದರೆ ಉದ್ದೇಶವು ಸಫಲವಾಗುವುದಿಲ್ಲ. ಆಂಗ್ಲಭಾಷೆಯಲ್ಲಿ ಸಾಂಕೇತಿಕ ವಿದ್ಯೆಯನ್ನು ಕಲಿಯುವವರು, ಅದರ ಬಲದಿಂದ ಕೈಗಾರಿಕೆಯ ಶಾಲೆಗಳು ಮೊದಲಾದುವುಗಳಲ್ಲಿ ಬೋಧಕತ್ವಕ್ಕೆ ಸೇರಿ ಜೀವಿಸಿಕೊಳ್ಳಬೇಕೆಂದು ಬಯಸಬಹುದಾದವರೇ ಹೊರತು ಈ ಕುಶಲವಿದ್ಯೆಗಳಿಂದ ತಂತಮ್ಮ ಕುಲ ಕಸಬುಗಳನ್ನು ಅಭಿವೃದ್ಧಿಪಡಿಸಿಕೊಂಡು ಜೀವಿಸಬೇಕೆಂಬುವವರಲ್ಲ. ಅದುಕಾರಣ, ಕಸಬುಗಾರ ಜನರ ಕೌಶಲವನ್ನು ಹೆಚ್ಚಿಸಬೇಕಾದ ಘನತರೋದ್ದೇಶವು ಸಫಲವಾಗಬೇಕಾದರೆ ದೇಶಭಾಷೆಯಲ್ಲೇ ಬೋಧನೆಯು ನಡೆಯಬೇಕು. ಮತ್ತೂ ಆ ಸಾಂಕೇತಿಕ ವಿದ್ಯಾಸಂಬಂಧಿಗಳಾದ ಪಾಠಗಳ ಪುಸ್ತಕಗಳೆಲ್ಲಾ ವಿದೇಶಭಾಷೆಯಿಂದ ಸ್ವದೇಶಭಾಷೆಗೆ ಪರಿವರ್ತಿತವಾಗುವಂತೆ ಮಾಡಲ್ಪಡಬೇಕು.

ಶುಭೋದಯಪ್ರಕರಣದ ತೀರ್ಪಿನಮೇಲೆ ಮುಂದಣಕರ್ತವ್ಯ.

ಧಾರವಾಡದ ಶುಭೋದಯ ಪತ್ರಸಂಪಾದಕರಾದ ಮ|| ಕೆರೂರು ವಾಸುದೇವಾಚಾರ್ಯರು ತಮ್ಮ ೧೮-೪-೧೯ ನೆ ತಾರೀಖಿನ ಸಂಚಿಕೆಯಲ್ಲಿ ಆರ್. ಶ್ರೀನಿವಾಸಾಚಾರ್ಯ ಎಂಬುವವರಿಂದ ಬರೆಯಲ್ಪಟ್ಟುದೆಂದು ಹೇಳಿ ''ಅಲ್ಲಮನ ಹಾಗೂ ಬಸವನ ವೃತ್ತಾಂತವೇನು?'' ಎಂಬ ಶಿರೋಲೇಖವುಳ್ಳ ಬರವಣಿಗೆಯನ್ನು ಪ್ರಕಟಪಡಿಸಿದರು. ಅದರಲ್ಲಿ ಆದ್ಯಂತವಾಗಿ ವೀರಶೈವಮತದ ಪೂಜ್ಯರಾದ ಅಲ್ಲಮಪ್ರಭುವನ್ನೂ ಬಸವೇಶನನ್ನೂ ಅವರ ಸಂಪ್ರದಾಯಸ್ಥರನ್ನೂ ಅಪಮಾನಗೊಳಿಸಿ ಹೀನಯಿಸುವ ಸಂಗತಿಗಳೇ ತುಂಬಿತುಳುಕುತ್ತಿರುವುವು. ಅದನ್ನೋದಿದ ಯಾವೊಬ್ಬ ವೀರಶೈವನಿಗೂ ಹೊಟ್ಟೆಯಲ್ಲಿ ಬೆಂಕಿ ಸುರಿದಷ್ಟು ಸಂತಾಪವನ್ನು ಅದು ಉಂಟುಮಾಡುತ್ತಿರುವುದು. ಪೂರ್ವದ ಕಾಲವಾಗಿದ್ದರೆ ಅತೀವಧರ್ಮಶ್ರದ್ಧಾಳುಗಳಾದ ವೀರಶೈವರು ಇಂಥ ಗುರುಜಂಗಮ ದೂಷಣೆಗೆ ಯಾವ ಪ್ರಕಾರದ ಮುಯ್ಯನ್ನು ಮಾಡುತ್ತಿದ್ದರೆಂಬುದನ್ನು ಹೇಳಬೇಕಾಗಿಲ್ಲ. ಕಾಲ ಧರ್ಮವನ್ನನುಸರಿಸಿ ಇಂಥ ತಪ್ಪಿಗೆ ಪ್ರಭುತ್ವದವರಿಂದಲೇ ಶಿಕ್ಷೆಯನ್ನು ಮಾಡಿಸುವುದು ಯುಕ್ತವಾಗಿರುವ ಕಾರಣ, ಕೇವಲ ಸ್ವಧರ್ಮಾಭಿಮಾನಿಗಳೂ ವೈದಿಕ ಲೌಕಿಕ ವಿದ್ಯಾಪ್ರವೀಣರೂ ಆದ ಹುಬ್ಬಳ್ಳಿಯ ಮ|| ಪಾವಟೆ ಸಿದ್ಧರಾಮಪ್ಪ ಬಿ.ಎ., ಎಲ್.ಎಲ್.ಬಿ. ಯವರು ಆ ಪತ್ರದ ಸಂಪಾದಕರು ಲೇಖನದ ಲೇಖಕರು ಮುದ್ರಾಪಕರು ಇವರುಗಳಮೇಲೆ ಮಾನನಷ್ಟದ ವ್ಯಾಜ್ಯವನ್ನು ಧಾರವಾಡದ ೧ನೆ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೂಡಿದರು. ಸಂತಪ್ತಚಿತ್ತವಾಗಿದ್ದ ವೀರಶೈವ ಮಂಡಲಿಯು ಈ ವ್ಯಾಜ್ಯದ ಪರ್ಯವಸಾನ ನಿರೀಕ್ಷಣೆಯಿಂದ ತಣೆದು ಕುಳಿತಿದ್ದಿತು. ಮುದ್ರಾಪಕರು ಮಧ್ಯದಲ್ಲೇ ಕ್ಷಮಾಪಣೆಯನ್ನು ಬೇಡಿಕೊಂಡು ಹೊರೆಯಾದರು. ಉಳಿದ ಅಪರಾಧಿಗಳಮೇಲೆ ಛಾರ್ಜು ಮಾಡಲ್ಪಟ್ಟಿದ್ದರೂ ವಿಚಾರಾಂತ್ಯದಲ್ಲಿ ಅವರುಗಳು ದೋಷಮುಕ್ತರಾಗಿ ತೀರ್ಮಾನಿಸಲ್ಪಟ್ಟರು. ಅದರಮೇಲೆ ವೀರಶೈವ ಸಮಾಜದವರೆಲ್ಲಾ ಈಗ ಅತ್ಯಂತವಾಗಿ ಅಸಮಾಧಾನಗೊಂಡಿದ್ದಾರೆ. ಈಗ ಆಗಿರುವತೀರ್ಪು ನ್ಯಾಯಸಮ್ಮತವಾಗಿಲ್ಲ. ಆದರೆ ಅದರ ಮೇಲೆ ಅಪ್ಪೀಲು ಮಾಡುವುದಕ್ಕೆ ಆ ಪ್ರಕಾರ ಫಿರ್ಯಾದಿಯರಿಗೆ ಅವಕಾಶವಿಲ್ಲ. ಸರ್ಕಾರದವರೇ ಇದರ ಅಪ್ಪೀಲನ್ನು ಹೈಕೋರ್ಟಿನಲ್ಲಿ ಮಾಡಬಹುದು. ಉನ್ನತ ನ್ಯಾಯಸ್ಥಾನಕ್ಕೆ ಹತ್ತಿದರೆ ನ್ಯಾಯಕ್ಕೆ ಜಯವಾಗಿಯೇ ಆಗುವುದು. ಸಮಾಜದವರು ಸ್ವತಃ ಹೈಕೋರ್ಟಿಗೆ ಹೋಗಲು ದಾರಿಯಿಲ್ಲವಾದುದರಿಂದ ಗೌರ್ನಮೆಂಟಿನವರ ಗಮನಕ್ಕೆ ಇದನ್ನು ತಂದು ಅವರಿಂದ ಮಾಡಿಸಬೇಕು.

ಏಕೆಂದರೆ-ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಲ್ಪಟ್ಟಿರುವ ತೀರ್ಪಿನೊಳಗೆ ಆ ಲೇಖನವು ಅಲ್ಲಮ ಬಸವಾದಿಗಳಿಗೆ ಅಪಮಾನಕರವಾದುದೆಂದೂ, ಇಂಥ ಲೇಖನದ ಪ್ರಕಟನದಿಂದ ಪತ್ರಕರ್ತರು ದೇಶಹಿತವನ್ನೇನೂ ಮಾಡಿದುದಿಲ್ಲವೆಂದೂ, ಇದು ಅಲ್ಲಮ ಬಸವಾದಿಗಳಿಗೆ ಸಂಬಂಧಪಟ್ಟ ಸಮಾಜದ ಧಾರ್ಮಿಕ ಭಾವನೆಗೆ ಬಾಧಾಕರವಾಗಿರುವುದೆಂದೂ, ಒಪ್ಪಿಕೊಂಡಿರುವರು ಆದರೂ ಅದರಿಂದ ವೀರಶೈವ ಸಮಾಜಕ್ಕೆ ಅಪಮಾನವೇನೂ ಆಗಿಲ್ಲವೆಂದು ತೀರ್ಮಾನಿಸಿರುವರು. ಪ್ರತಿಯೊಂದು ಸಮಾಜದ ಗೌರವಾಗೌರವಗಳಿಗೆ ಸಮಾಜದ ಜನರೇ ಬದ್ಧರಾಗಿರುವಾಗ ಅಂಥ ಸಮಾಜದ ಪೂಜ್ಯರನ್ನು ಅಪಮಾನಪಡಿಸಿದರೆ ಅದರಿಂದ ಸಮಾಜಕ್ಕೆ ಮಾನಹಾನಿಯಾಗುವುದಿಲ್ಲವೆಂದು ಹೇಳುವುದು ಎಷ್ಟುಮಟ್ಟಿಗೆ ಅನ್ಯಾಯವೆಂಬುದನ್ನು ಹೇಳಬೇಕಾಗಿಲ್ಲ. ಮನೆಯ ಯಜಮಾನನ್ನೂ ತಾಯ್ತಂದೆಗಳನ್ನೂ ಇತರರಾರಾದರೂ ಬೈದರೂ ಇನ್ನಾವ ವಿಧವಾಗಿ ಅಪಮಾನಪಡಿಸಿದರೂ ಮಕ್ಕಳು ಮರಿಗಳೆಲ್ಲಾ ಕೇಳಿಕೊಂಡು ನೋಡಿಕೊಂಡು ಸುಮ್ಮನಿರುವುದುಂಟೆ? ಶಂಕರ ಮಧ್ವಾದಿಗಳನ್ನು ಮನಬಂದಂತೆ ಇತರರು ಹಳಿದರೆ ಆಯಾ ಮತದವರು ಸುಮ್ಮನಿರುವರೆ? ಅದು ತಪ್ಪಾಗುವುದಿಲ್ಲವೆ? ತಮ್ಮ ಪರ ಮಠದ ಮುಂದೆ ಇತರ ಗುರುಗಳು ವಾಹನಾರೂಢರಾಗಿ ಹೋದರೂ ತಮಗೆ ಅಪಮಾನವಾಗುವುದೆಂದು ಈ ಮತದವರೇ ಬಡಿದುಕೊಳ್ಳುವುದೇತಕ್ಕೆ? ಈ ಕಾರಣದಿಂದಲಾದರೂ ಇಂಥ ವ್ಯಾಜ್ಯವು ಹೈಕೋರ್ಟಿನವರೆಗೂ ಹತ್ತಲಿ, ಅಲ್ಲಿ ಯಾವ ಪರಮತದವರು ಬೇಕಿದ್ದರೂ ಮತ್ತೊಂದು ಮತದ ಪ್ರಾಚೀನ ಗುರುಗಳನ್ನೇ ಆಗಲೀ ಮಹಿಮರನ್ನೇ ಆಗಲೀ ಎಷ್ಟು ದೂಷಿಸಿದರೂ ತಪ್ಪಾಗುವುದಿಲ್ಲವೆಂದು ತೀರ್ಮಾನಮಾಡಿದರೂ ಮಾಡಲಿ. ಆಗ್ಗೆ ದೇಶಶಾಂತಿಯು ಎಷ್ಟುಮಟ್ಟಿಗಿರುತ್ತದೆಯೆಂಬುದನ್ನು ಪ್ರಭುತ್ವದವರೇ ನೋಡಿ ಅನುಭವಮಾಡಿಕೊಳ್ಳಲಿ. ನಮ್ಮ ಕರ್ತವ್ಯವನ್ನು ನಾವು ಮಾಡುವ.

ಶುಭೋದಯದಲ್ಲಿ ಪ್ರಕಟವಾಗಿರುವ ಆ ಲೇಖನದಲ್ಲಿ ಅವಾಚ್ಯವಾದ ಎಷ್ಟೋ ನಿಂದಾವಚನಗಳಿರುವುವು. ಅವುಗಳಲ್ಲಿ ಕೆಲವನ್ನು ಸ್ವರೂಪ ನಿರೂಪಣಕ್ಕಾಗಿ ಇಲ್ಲಿ ಉದ್ಧರಿಸಿ ಹಾಕುತ್ತೇವೆ.

> "ಅಲ್ಲಮ ಇವನ ಚರಿತ್ರಾದಿ ವಿಷಯಗಳನ್ನು ವಿಚಾರಿಸುತ್ತಿರಲಿಕ್ಕಾಗಿ ಇವನು ಶೂದ್ರನಿದ್ದನೆಂದು ಕಂಡುಬರುತ್ತದೆ. ಅಲ್ಲಮ ಎಂಬ ಹೆಸರು ಮುಸಲ್ಮಾನ ದೇವತಾ ಸಂಕೇತವಾಗಿರುತ್ತದೆ. ಇವನ ಸಂಬಂಧವು ವಿಶೇಷವಾಗಿ ಮುಸಲ್ಮಾನರಲ್ಲಿಯೇ ಕಂಡುಬರುತ್ತದೆ. ಇವನ ಸಂಬಂಧವಾದ ಚಿತ್ರಕಲ್ಲದುರ್ಗ ಮುರಿಗಿ ಮಠದವರು ಈ ಹೊತ್ತಿನವರೆಗೂ ಮುಸಲ್ಮಾನರ ಕಡೆಯಿಂದ ನಾವು ನಿಮಗತಸಂಬಂಧಿಕರೆಂದು ಹೇಳಿ ಕಾಣಿಕೆಯನ್ನು ಎತ್ತುತ್ತಿರುವರು............ಬಸವನೆಂಬುವನು ಕಲ್ಯಾಣಪಟ್ಟಣವನ್ನು ಆಳುತ್ತಿದ್ದ ಬಿಜ್ಜಳನ ಮಂತ್ರಿಯಾಗಿ ಜಾತಿಸಂಕರವನ್ನು ಮಾಡುವ ಕಾಲಕ್ಕೆ ಇವನು ಅದರಲ್ಲಿ ಹೋಗಿ ಸೇರಬೇಕೆಂದು ಕಲ್ಯಾಣಪಟ್ಟಣಕ್ಕೆ ಬಂದು ಬಸವನ ಮತಪ್ರವಿಷ್ಟನಾದನು. ಇವನು ಬಸವನ ಮನೆಯ ಭೋಜನ ಪಂಕ್ತಿಯಲ್ಲಿ ತನ್ನ ಪೂರ್ವಜಾತಿಯ ಪದ್ಧತಿಯಂತೆ ಹೆಂಡದ ಗಡಿಗೆಯನ್ನೇ ತೆಗೆದುಕೊಂಡು ಹೊಕ್ಕನು............ಬಸವನನ್ನು ವೀರಶೈವ ಮತದ ಉದ್ಧಾರಕನೆಂದು ಹೇಳದೆ ಆ ಪವಿತ್ರ ಮತವನ್ನು ಕೆಡಿಸಿದನೆಂದು ನಿರ್ಭೀತಿಯಿಂದ ಹೇಳಬಹುದು. ಬಸವನು ತಾನು ರಾಜನಾಗಬೇಕೆಂಬ ಅಭಿಲಾಷೆಯಿಂದ ಹಿಂಡುಹಿಂಡ ಜಂಗಮರನ್ನೆಲ್ಲಾ ಸೈನಿಕರಂತೆ ತಯಾರ್ಮಾಡಿ ಅವರಿಗೆ ಅನ್ನ ಹಾಕುತ್ತಿದ್ದನೇ ಹೊರತು ಭಕ್ತಿಯಿಂದ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ ಅನ್ನವನ್ನು ಕೊಡುತ್ತಿರಲಿಲ್ಲ. ಅವನಲ್ಲಿ ನಿಜ ಭಕ್ತಿಯಿರದೆ ಅತುಲವಾದ ಯುಕ್ತಿಯಿತ್ತು. ಚೆನ್ನಬಸವ ಮೊದಲಾದ ಇವರೆಲ್ಲರ ವಿಷಯವಾಗಿ ಪುರಾಣಿಕರು ಬೇರೊಂದು ರೀತಿಯಾಗಿ ವರ್ಣನೆಮಾಡಿರುವುದು ಅತ್ಯಂತ ತಪ್ಪೆಂದು ಕಂಡುಬರುತ್ತದೆ." ಇತ್ಯಾದಿ.

ಈ ಪ್ರಕಾರವಾದ ನಿಂದಾಪ್ರಚುರಲೇಖನವನ್ನು ಮತದ್ವೇಷಾಂಧರು ಈ ಕಾಲದಲ್ಲಿ ಮತ್ತೊಬ್ಬರಮೇಲೆ ಬರೆದು ಅಗೌರವಪಡಿಸಿ ಮನನೋಯಿಸುವುದೂ, ಅಂಥ ಪುಂಡುತನವನ್ನು ನಡೆಯಿಸಿದವರು ಕೂಡ ನಿರಪರಾಧಿಗಳೆಂದು ಬಿಡಲ್ಪಡುವುದೂ ಸಹ ಸೋಜಿಗವಲ್ಲದೆ ಸಹಜವಲ್ಲ. ಈ ಪ್ರಕರಣವನ್ನು ಕೊನೆಮುಟ್ಟಿಸದೆ ಬಿಡುವುದು ವೀರಶೈವರೆಂಬ ಹೆಸರನ್ನು ತಾಳಿಕೊಂಡಿರುವವರಿಗೆ ತರವಲ್ಲ. ಅದುಕಾರಣ ಮುಂದೇನುಮಾಡಬೇಕೆಂದು ಕುದಿಕುಳಿಗೊಂಡು ಕೆಲವರು ನಮಗೆ ಪತ್ರಗಳನ್ನು ಬರೆದಿರುತ್ತಾರೆ. ಅದು ಅವರ ಮತಾಭಿಮಾನಕ್ಕೆ ಭೂಷಣವಾಗಿರುತ್ತದೆ. ಗುರುಲಿಂಗಜಂಗಮ ದೂಷಣೆಯನ್ನು ಕೇಳಿದರೆ ಅದನ್ನು ಕೂಡಲೇ ನಿವಾರಿಸಬೇಕು. ಅದಕ್ಕೆ ಶಕ್ತಿಯಿಲ್ಲದಿದ್ದರೆ ಆತ್ಮತ್ಯಾಗವನ್ನಾದರೂ ಮಾಡಿಕೊಳ್ಳಬೇಕು. ಇದು ವೀರಶೈವ ಲಕ್ಷಣವೆಂದು ಶಿವಾಗಮ ವಚನವಿದೆ. ಧರ್ಮಶಾಸ್ತ್ರವಿಹಿತವಾದ ಮಾರ್ಗವನ್ನೇ ಹಿಡಿದು ಅಂಥ ದೂಷಣ ಪ್ರತೀಕಾರವನ್ನು ಮಾಡಿಸುವುದು ಸಮಾಜಬಾಂಧವರಿಗೆಲ್ಲಾ ಅವಶ್ಯಕರ್ತವ್ಯವೇ ಆಗಿರುತ್ತದೆ. ಶುಭೋದಯವು ಹಂಚಲ್ಪಡುವ ಯಾವ ಸ್ಥಲದಲ್ಲಾದರೂ ಅದರ ಸಂಪಾದಕರು ಮೊದಲಾದವರಮೇಲೆ ೧ ವರ್ಷಕಾಲದೊಳಗಾಗಿ ಮಾನನಷ್ಟಾಭಿಯೋಗವನ್ನು ಮಾಡಿ ನಿಷ್ಪಕ್ಷಪಾತವಾದ ನ್ಯಾಯನಿರ್ಣಯವನ್ನು ಪಡೆಯಲು ಸಮಾಜಬಾಂಧವರೆಲ್ಲರಿಗೂ ಅವಕಾಶವಿರುತ್ತದೆ. ಅಲ್ಲದೆ ಈಗಣ ಧಾರವಾಡದ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟು ತೀರ್ಮಾನದ ಮೇಲೆ ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಬೇಕಾದ ಅವಶ್ಯಕತೆಯನ್ನು ಬೊಂಬಾಯಿ ಸರ್ಕಾರದವರ ಮನಸ್ಸಿಗೆ ಹತ್ತುವಂತೆ ಮಾಡುವುದೂ ಕೂಡ ವಿಹಿತವಾದ ದಾರಿಯಾಗಿರುತ್ತದೆ. ಇದಕ್ಕಾಗಿ ಒಬ್ಬರಿಬ್ಬರೋ ಒಂದೆರಡು ಕಡೆಯವರೋ ಸಾಹಸಪಟ್ಟು ಫಲವಿಲ್ಲ. ತಮ್ಮ ಮನದೊಳಗಣ ದುಗುಡವನ್ನು ಶತಮುಖವಾಗಿ ಪ್ರಭುತ್ವದವರ ಗಮನಕ್ಕೆ ಬರುವಂತೆ ಮಾಡಬೇಕು. ಊರೂರುಗಳಲ್ಲೆಲ್ಲಾ ವೀರಶೈವರು ಇದಕ್ಕಾಗಿ ಸಭೆಗಳನ್ನು ಮಾಡಿ ನಿರ್ಧಾರಗೊಳಿಸಿ ಬೊಂಬಾಯಿ ಸರ್ಕಾರಕ್ಕೆ ಶ್ರುತಪಡಿಸಿಕೊಳ್ಳಬೇಕು. ಬರುವ ೯ನೆ ವೀರಶೈವ ಮಹಾಸಭೆಯಲ್ಲೂ ಕೂಡ ಈ ವಿಷಯಕವಾದ ಒಂದು ನಿರ್ಧಾರವನ್ನು ಮಾಡುವುದು ಅತ್ಯಂತ ವಿಹಿತವಾದ ಕಾರ್ಯವಾಗಿರುತ್ತದೆ. ಹುಬ್ಬಳ್ಳಿ ಮೊದಲಾದ ಕೆಲ ಮುಖ್ಯಸ್ಥಳಗಳಲ್ಲಿ ಇಂಥ ಪ್ರಯತ್ನವು ಈಗಾಗಲೇ ಮಾಡಲ್ಪಟ್ಟಿರುವುದೆಂದು ಕೇಳಿ ಅವರನ್ನು ಅಭಿನಂದಿಸುತ್ತೇವೆ. ಉಳಿದಕಡೆಯವರೂ ಸಾವಕಾಶಮಾಡದೆ ಕರ್ತವ್ಯತತ್ಪರರಾಗಲೆಂದು ಸೂಚಿಸುತ್ತೇವೆ. ಈ ಸಂಬಂಧವಾಗಿ ನಡೆಯಿಸಬೇಕಾದ ನಡವಳಿಕೆಯನ್ನು ಕುರಿತು ಹುಬ್ಬಳ್ಳಿಯಲ್ಲಿರುವ ಮ|| ಪಾವಟೆ ಸಿದ್ಧರಾಮಪ್ಪ ಬಿ. ಎ. ಎಲ್. ಎಲ್. ಬಿ. ಯವರಿಗೆ ಬರೆದುಕೊಂಡರೆ ತಕ್ಕ ಸಲಹೆಗಳನ್ನು ಅವರು ಕೊಡಲು ಸಿದ್ಧರಾಗಿರುವರೆಂಬುದನ್ನು ಹೇಳಬೇಕಾಗಿಲ್ಲ.

ಅಫ್ಘಾನಿಸ್ಥಾನದ ರಹಸ್ಯ.

ಮೂವರು ಭಾರತೀಯರು ಹೇಗೋ ಸ್ವಲ್ಪ ದ್ರವ್ಯಸಾಹಾಯ್ಯವನ್ನು ಪಡೆದುಕೊಂಡು ೧೯೧೬ ನೆ ವರ್ಷದಲ್ಲಿ ಕಾಬೂಲ್ ಪಟ್ಟಣಕ್ಕೆ ಹೋಗಿ ಒಂದು ನಡುಬೀದಿಯಲ್ಲಿ ವಾಸಮಾಡಿಕೊಂಡು, ನಾವು ಭರತಖಂಡದ ಪ್ರಭುತ್ವವನ್ನು ತಲೆಕೆಳಗುಮಾಡುವ ಒಂದು ಗೂಢಸಂಘದ ಅಧಿಕಾರಿಗಳೆಂದು ಹೇಳಿಕೊಳ್ಳುತ್ತಿದ್ದರು. ಇವರ ಹೆಸರುಗಳು-ಒಬೇದುಲ್ಲಾ, ಅಜೀಜ್, ಬರ್ಕತುಲ್ಲಾ ಎಂಬುದಾಗಿದ್ದುವು. ಇವರಲ್ಲಿ ೧ ನೆಯವನು ಇವರು ಸ್ಥಾಪಿಸಲಿಕ್ಕಿರುವ ರಾಜ್ಯಕ್ಕೆ ಮುಖ್ಯಮಂತ್ರಿಯೆಂತಲೂ, ೨ ನೆಯವನು ೨ ನೆ ಮಂತ್ರಿಯೆಂತಲೂ ಹೇಳಿಕೊಳ್ಳುತ್ತಿದ್ದರು. ಮಹೇಂದ್ರಪ್ರತಾಪ್ ಎಂಬ ಮತ್ತೊಬ್ಬನು ಇವರಮೇಲಣ ಅಧಿಕಾರಿಯಾಗಿದ್ದನು. ಇವನು ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣದಿಂದ ಇಲ್ಲಿಗೆ ಕಳುಹಿಸಲ್ಪಟ್ಟಿದ್ದವನು. ಇವನು ಸ್ವಲ್ಪ ಮತಿಭ್ರಷ್ಟನಂತೆ ಕಾಣಿಸಿಕೊಳ್ಳುತ್ತಿದ್ದನು. ಇವನು ಕಾಬೂಲ್ ಪಟ್ಟಣವನ್ನು ೧೯೧೮ ನೆ ವರ್ಷದಲ್ಲಿ ಬಿಟ್ಟುಹೋದನು. ಇವರ ಗೂಢಪ್ರಯತ್ನಗಳನ್ನು ಕುರಿತು ಆಗಣ ಅಮೀರರಾಗಿದ್ದ ಹಬಿಬುಲ್ಲಾರವರು ತಿಳಿದಿದ್ದರೂ ಅದನ್ನು ತೃಣದಂತೆ ಗಣಿಸಿ ಉಪೇಕ್ಷಿಸಿಕೊಂಡಿದ್ದರು. ಒಂದುದಿನ ಅವರು ಕುದುರೆ ಮೇಲೆ ಕುಳಿತು ಹೋಗುತ್ತಿದ್ದಾಗ ಒಬೇದುಲ್ಲಾನು ಇದಿರಿಗೆ ಸಿಕ್ಕಲು, ನಕ್ಕು ''ಇದೋ ಭವಿಷ್ಯದ್ಭರತಖಂಡದ ರಾಜನು ಬರುತ್ತಾನೆ'' ಎಂದು ಹೇಳಿ ಹಾಸ್ಯಮಾಡಿದರಂತೆ. ಇದನ್ನು ಕೇಳಿ ಅವನು ತಲೆಬಗ್ಗಿಸಿಕೊಂಡು ಹೊರಟುಹೋದನು. ಸ್ವಲ್ಪದಿನಗಳಲ್ಲಿ ಈ ಮೂವರಿಗೂ ತಮ್ಮ ಗೂಢೋದ್ದೇಶವನ್ನು ನೆರವೇರಿಸಲಿಕ್ಕೆ ಸಮಯವು ಸಿಕ್ಕಿತು. ಆ ಕಾಲದಲ್ಲಿ ಮಹಮ್ಮದ್‌ಸಾದಿಯೆಂಬುವವನೊಬ್ಬನನ್ನು ತುರ್ಕಿಸ್ಥಾನದಲ್ಲಿ ಸೇನೆಯನ್ನು ತಿದ್ದುವುದಕ್ಕಾಗಿ ಇಟ್ಟುಕೊಂಡಿದ್ದರು. ಜರ್ಮನಿಯ ಪೂರ್ವದೇಶ ವ್ಯಾಪಾರ ಸಭಾಧಿಕಾರಿಯಾದ ಬಾರನ್ ವಾನ್ ಹಂಕರ್ನ್ ಎಂಬುವನ ಬಳಿಗೆ ಈ ಸಾದಿಯನ್ನು ತುರ್ಕಿ ಮುಖ್ಯಮಂತ್ರಿಯಾಗಿದ್ದ ಎನ್ವರ್‌ಪಾಷಾನು ದೊಡ್ಡ ವಾಕ್ಸಹಾಯದೊಡನೆ ಕಳುಹಿಸಿಕೊಟ್ಟನು. ಅವನ ಮೂಲಕ ಈ ಸಾದಿಯು ೧|| ಕೋಟಿ ರೂ. ಗಳನ್ನು ಜರ್ಮನಿಯಿಂದ ಪಡೆದು ಭರತಖಂಡದಲ್ಲಿ ಪ್ರಳಯವನ್ನುಂಟುಮಾಡಬೇಕೆಂಬ ಸಂಕಲ್ಪಕ್ಕೆ ಪ್ರೋತ್ಸಾಹಿತನಾದನು. ಆ ಕೆಲಸವನ್ನು ಹೇಗೆ ಸಾಗಿಸಬೇಕೆಂದು ಈತನು ಯೋಚಿಸುತ್ತಿರುವಾಗ ಮೇಲೆಹೇಳಿದ ತ್ರಿಮೂರ್ತಿಗಳಿಗೂ ಇವನಿಗೂ ಸಂಘಟನೆಯುಂಟಾಯಿತು. ಅವರಿಗೆ ಇವನು ಸ್ವಲ್ಪ ಹಣವನ್ನು ಕೊಟ್ಟನು. ಕೆಲ ದಿನಗಳ ಬಳಿಕ ಈ ಸಾದಿಗಿಂತಲೂ ಬಲು ಕೆಟ್ಟವನಾದ ಮಹಮ್ಮದ್‌ತರಾಯಿಯೆಂಬುವವನು ಈ ರಾಜದ್ರೋಹಿಗಳ ಗುಂಪಿಗೆ ಸೇರಿಕೊಂಡನು. ಈತನು ಅಫ್ಘಾನಿಸ್ಥಾನದ ಹಿಂದಣ ಅಮೀರರಾದ ಅಬ್ದುಲ್ ರಹಿಮಾನರಿಂದ ದೇಶಭ್ರಷ್ಟತೆಯನ್ನು ಹೊಂದಿ ತುರ್ಕಿಸ್ಥಾನಕ್ಕೆ ಹೋಗಿ ವಾಸಮಾಡಿಕೊಂಡಿದ್ದು, ಆ ಅಮೀರರು ಸತ್ತನಂತರ ಕಾಬೂಲಿಗೆ ಮರಳಿ ಬಂದು, ಅಮೀರ್ ಹಬಿಬುಲ್ಲಾರವರ ದಯೆಯನ್ನು ಸಂಪಾದಿಸಿಕೊಂಡು ಅವರ ಮಚ್ಚುಗೆಗೆ ಪಾತ್ರವಾದ ಒಂದು ವಾರ್ತಾಪತ್ರಿಕೆಯನ್ನು ಸಾಗಿಸುತ್ತಿದ್ದನು. ಇವನ ಜತೆಯಲ್ಲಿ ಅಬ್ದುಲ್‌ಗನಿಯೆಂಬ ಮತ್ತೊಬ್ಬನು ಆ ಪತ್ರಿಕೆಯ ಉಪಸಂಪಾದಕನಾಗಿದ್ದನು. ಈತನು ಪಂಜಾಬಿನಲ್ಲಿ ವಿದ್ಯಾಭ್ಯಾಸ ಶಾಖೆಯ ಒಂದು ದೊಡ್ಡ ಉದ್ಯೋಗದಲ್ಲಿದ್ದು ಕಾಬೂಲ್ ಅಮೀರರ ಇಷ್ಟಪ್ರಕಾರ ಆ ದೇಶಕ್ಕೆ ಹೋದವನು. ಈತನು ಮೇಲೆ ಕಂಡ ವಾರ್ತಾಪತ್ರಿಕೆಯಲ್ಲಿ ಒಂದುಸಲ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯ ಆಧಿಕ್ಯವನ್ನು ಕುರಿತು ಬರೆವಣಿಗೆಯನ್ನು ಬರೆದಿದ್ದುದಕ್ಕಾಗಿ ಅಮೀರರಿಂದ ಶಿಕ್ಷಿತನಾಗಿ ಕಾರಾಗೃಹವಾಸವನ್ನನುಭವಿಸುತ್ತಿದ್ದನು. ಹಬೀಬುಲ್ಲಾರವರು ಕೊಲ್ಲಲ್ಪಟ್ಟನಂತರ ಇವನು ಅಮೀರ್ ಅಮಾನುಲ್ಲಾರವರಿಂದ ಕಾರಾಗೃಹ ವಿಮುಕ್ತನಾಗಿ, ಮಂತ್ರಿಯಾಗಿ ಸೇರಿಸಿಕೊಳ್ಳಲ್ಪಟ್ಟಿರುವನು. ರಾವಲ್ಪಿಂಡಿಯಲ್ಲಿ ಇಂಗ್ಲೀಷರಿಗೂ ಅಫ್ಘನ್ ಪ್ರಭುತ್ವದವರಿಗೂ ಮೊನ್ನೆ ಸಂಧಿ ನಡೆವಾಗ್ಗೆ ಅಫ್ಘನ್ ರಾಯಭಾರಿಗಳಾಗಿ ಬಂದಿದ್ದವರಲ್ಲಿ ಈತನೂ ಒಬ್ಬನಾಗಿದ್ದನು. ಈತನು ಬಹಳ ನೆಮ್ಮದಿಯಾದವನೂ ಯೋಗ್ಯನೂ ವೃದ್ಧನೂ ಆಗಿರುವನು. ಮಹಮ್ಮದ್ ತರಾಯಿಯು ವೃತ್ತಪತ್ರಿಕೆಯಲ್ಲಿ ಅಂಥ ವಿರುದ್ಧ ಸಂಗತಿಯು ಪ್ರಕಟವಾದುದಕ್ಕೆ ಹಬೀಬುಲ್ಲಾರವರ ಕ್ಷಮೆಯನ್ನು ತಾನು ಕೇಳಿಕೊಂಡು, ಮಹಮ್ಮದ್‌ಗನಿಯೇ ಅದಕ್ಕೆ ಬಾಧ್ಯನೆಂದು ತೋರಿಸಿಬಿಟ್ಟು ತಾನು ಅಮೀರರ ಕೃಪೆಗೆ ಪಾತ್ರನಾಗಿ ಆದೇಸಮಯದಲ್ಲಿ ತನ್ನ ಮಗಳನ್ನು ಅಮೀರರ ಮಗನಾದ ಅಮಾನುಲ್ಲಾರವರಿಗೆ ಕೊಟ್ಟು ಮದುವೆಮಾಡಿದನು. ಆಗ ಆತನ ಪದವಿಯು ಬಹಳ ದೃಢವಾಯಿತು. ಈ ತರಾಯಿಯು ೧೯೧೭ ನೆ ವರ್ಷದಲ್ಲಿ ಯಾವುದೋ ಒಂದು ರಹಸ್ಯಕಾರ್ಯಕ್ಕಾಗಿ ಕಾಬೂಲನ್ನು ಬಿಟ್ಟುಹೋದನು. ೧೯೧೮ ನೆ ವರ್ಷದಲ್ಲಿ ಮಹಮ್ಮದ್ ತರ್ಜಿಯೆಂಬ ಹೆಸರನ್ನು ಧರಿಸಿ, ತಲೆಯ ಮೇಲೆ ಒಂದು ತುರ್ಕಿ ಟೊಪ್ಪಿಗೆಯನ್ನು ಧರಿಸಿಕೊಂಡು ಬಲು ಡಬ್ಬಿನಿಂದ ಬೋಲ್ಷೆವಿಕ್ಕರ ಪ್ರೋತ್ಸಾಹವನ್ನು ಹೊಂದಿ ಭರತಖಂಡದಲ್ಲಿ ಹಣವನ್ನು ಚೆಲ್ಲಿ ಇಲ್ಲಿಯ ಆಂಗ್ಲ ಪ್ರಭುತ್ವದ ಮೇಲೆ ವಿರುದ್ಧವಾಗಿ ಕಾರ್ಯಭಾರ ನಡೆಯಿಸಲು ಉದ್ದೇಶಿಸಿ ಮೇಲೆಹೇಳಿದ ತ್ರಿಮೂರ್ತಿಗಳೊಡನೆ ಸೇರಿದನು. ಭರತಖಂಡಕ್ಕೆ ಹಣವನ್ನು ಆಗಿಂದಾಗ್ಗೆ ಕಳುಹಿಸುತ್ತ ರಾಜದ್ರೋಹ ಮೊದಲಾದ ಅನರ್ಥಗಳನ್ನು ಹಬ್ಬಿಸುವುದಕ್ಕೆ ಆರಂಭಿಸಿದನು. ಆದರೆ ತುರ್ಕಿಯ ಎನ್ವರ್‌ಪಾಷಾನಿಗೂ ಜರ್ಮನಿಯವನಾದ ಕುಮರಾಫನಿಗೂ ಈ ರಹಸ್ಯ ಕೂಟದವರು ಮಾಡುತ್ತಿದ್ದ ಅಲ್ಪಪ್ರಯತ್ನಗಳಿಂದ ತೃಪ್ತಿಯುಂಟಾಗಲಿಲ್ಲ. ಅಫ್ಘಾನಿಸ್ಥಾನದವರಿಂದ ಭರತಖಂಡದಮೇಲೆ ದಂಡೆತ್ತಿಸುವಂತೆ ಮಾಡಬೇಕೆಂದು ಅವರು ಮಹಮ್ಮದ್‌ತರ್ಜಿ ಮೊದಲಾದ ಕೂಟದವರಿಗೆ ಅಪ್ಪಣೆಮಾಡಿದರು. ಆದರೆ ಆಗಣ ಅಮೀರರಾದ ಹಬ್ಬೀಬುಲ್ಲಾರವರು ಇವರ ವಿಷಯದಲ್ಲಿ ಅನುಕೂಲವಾಗಿ ಮಾತನಾಡುತ್ತಿದ್ದರೂ ಅವರು ಹೇಳಿದಂತೆ ಕಾರ್ಯವನ್ನು ಸಾಗಿಸಲು ಮಾತ್ರ ಲೇಶವೂ ಸಾಹಸಪಡಲಿಲ್ಲ. ಬಳಿಕ ಆ ಹಬಿಬುಲ್ಲಾರವರು ಕೊಲ್ಲಲ್ಪಟ್ಟರು. (ಆ ಕೊಲ್ಲಲ್ಪಟ್ಟ ಸಂಗತಿಯನ್ನು ವಾಚಕರು ಇನ್ನೂ ಮರೆದಿರಲಾರರು) ಅವರನ್ನು ಕೊಂದವರಲ್ಲಿ ಈ ಮೇಲೆಕಂಡ ರಹಸ್ಯಕೂಟದವರ ಸಂಬಂಧವೂ ಇದ್ದಿತೆಂಬುದರಲ್ಲಿ ಸಂಶಯವೇನೂ ಇಲ್ಲ. ಏಕೆಂದರೆ-ಅಮೀರ್ ಹಬೀಬುಲ್ಲಾರವರು ಸತ್ತ ಬಳಿಕ ನಸ್ರುಲ್ಲಾಖಾನರು ಅಮೀರರಾಗಬೇಕೆಂದು ಪ್ರಯತ್ನಿಸಲಾಗಿ ಈ ರಹಸ್ಯಕೂಟದವರು ಅವರನ್ನು ತಪ್ಪಿಸಿ ಅಮಾನುಲ್ಲಾಖಾನನನ್ನು ಅಮೀರನನ್ನಾಗಿ ಮಾಡುವುದಕ್ಕೆ ಪ್ರಯತ್ನಿಸಿದರು. ಈ ಗುಂಪಿನ ಪಕ್ಷದವರಿಗೆ ಬೇಕಾದಷ್ಟು ಹಣವನ್ನು ಕೊಡಲು ಅಮಾನುಲ್ಲಾಖಾನನ ತಾಯಿಯು ಸಿದ್ಧಳಾಗಿದ್ದಳು. ಆ ಬಲದಿಂದ ಅಫ್ಘನ್ ಸೈನ್ಯವು ಇವರಿಗೆ ಸಹಾಯವಾಗಿ ನಿಲ್ಲುವಂತಾಯಿತು. ಅಮೀರನಾದ ಅಮಾನುಲ್ಲಾಖಾನನು ಜನ್ಮಾರಭ್ಯ ಪರದೇಶಗಳಿಗೆಲ್ಲಿಗೂ ಹೋಗಿ ಬಂದವನಲ್ಲ. ಅನುಭವದಲ್ಲೂ ಇವನು ಯಥಾಜಾತನಾಗಿರುತ್ತ ಮೇಲೆ ಕಂಡ ಸೂತ್ರಧಾರಕರ ಕೈಬೊಂಬೆಯಂತಿರುತ್ತಾನೆ. ಈತನು ಮಹಮ್ಮದ್ ತರ್ಜಿಯ ದುರ್ಬೋಧೆಗೆ ಕಿವಿಗೊಟ್ಟು ಭರತಖಂಡದ ಪ್ರಜೆಗಳೆಲ್ಲಾ ಆಂಗ್ಲಪ್ರಭುತ್ವದಮೇಲೆ ಅಸಂತುಷ್ಟರಾಗಿರುವರೆಂದೂ ಅಲ್ಲಿ ವಿಪ್ಲವ ಪ್ರಯತ್ನಗಳು ನಡೆಯುತ್ತಿರುವುವೆಂದೂ ಈಗ ನಾವು ಅದರ ಮೇಲೆ ದಂಡೆತ್ತಿಹೋದರೆ ಭಾರತೀಯರೆಲ್ಲಾ ನಮಗೆ ಸಹಾಯಭೂತರಾಗುವಕಾರಣ ಸುಲಭವಾಗಿ ಭರತಖಂಡವು ನಮ್ಮ ಕೈವಶವಾಗಿ ಹೋಗುವುದೆಂದೂ, ಬಳಿಕ ನಾವು ಮಧ್ಯಾಸ್ಯಾ ಭರತಖಂಡ ಮೊದಲಾದುವುಗಳಲ್ಲೆಲ್ಲಾ ವ್ಯಾಪಕತೆಯನ್ನು ಪಡೆದು ಭೋಗಭಾಗ್ಯಯಶೋವೈಭವಗಳನ್ನು ಲೋಕೋತ್ತರವಾಗಿ ಅನುಭವಿಸಬಹುದೆಂದೂ ಸವಿಮಾತುಗಳನ್ನು ಹೇಳಿ ಉತ್ಸಾಹಪಡಿಸಲಾಗಿ, ಅಮಾನುಲ್ಲಾಖಾನನು ಇದೆಲ್ಲವೂ ನಿಜವೆಂದು ನಂಬಿ ಮನಸ್ಸಿನ ಮಂಡಿಗೆಯನ್ನು ತಿನ್ನುತ್ತ ಈ ರಹಸ್ಯಕೂಟದವರಿಗೆ ಬೇಕಾದ ಸಾಹಾಯ್ಯಗಳನ್ನು ತಾನು ಮಾಡುವುದಕ್ಕೂ ಬೊಕ್ಕಸದ ಹಣವನ್ನೆಲ್ಲಾ ಅವರ ಉದ್ದೇಶಸಾಧನೆಗಾಗಿ ಸೂರೆಕೊಡುವುದಕ್ಕೂ ನಿಶ್ಚಯಿಸಿ ಅಪ್ಪಣೆಮಾಡಿಬಿಟ್ಟನು. ಅದರ ಮೇಲೆ ಅಫ್ಘಾನಿಸ್ಥಾನದ ಸೈನ್ಯವು ಭರತಖಂಡದ ಮೇಲೆ ಸಾಗಲುಪಕ್ರಮಿಸಿತು. ಮತ್ತೂ ಹೀಗೆ ದಂಡನ್ನು ಕಳುಹಿಸುವುದಕ್ಕೆ ಮುಂಚೆಯೇ ಭರತಖಂಡದಲ್ಲಿ ವಿಪ್ಲವವನ್ನು ಹೆಚ್ಚಿಸುವುದು ಅವಶ್ಯಕವೆಂದು ರಹಸ್ಯಕೂಟದವರು ಆಲೋಚಿಸಿ, ಅದಕ್ಕಾಗಿ ಬಹಳ ಹಣವನ್ನು ವೆಚ್ಚಮಾಡಿದರು. ಈ ನಿಮಿತ್ತವಾಗಿಯೇ ಸಿಮ್ಲಾದಲ್ಲಿ ಅಫ್ಘನ್ ರಾಯಭಾರಿಯಾಗಿದ್ದ ಅಬ್ದುಲ್ ರಹಿಮಾನ್ ಎಂಬುವನನ್ನೂ ಪೆಶಾವರಿನಲ್ಲಿ ಪೋಸ್ಟ್‌ಮ್ಯಾಸ್ಟರಾಗಿದ್ದ ಗುಲಾಂ ಹೈದರ್ ಎಂಬುವನನ್ನೂ ಇವರು ನಿಯೋಗಿಸಿದ್ದರು. ಆದರೆ ಇವರಿಬ್ಬರಲ್ಲಿ ಮೊದಲನೆಯವನು ಭಯಪಟ್ಟು ಈ ಪ್ರಯತ್ನಕ್ಕೆ ಸಿಲ್ಕದೆ ದೂರಸ್ಥನಾದನು. ೨ ನೆ ಗುಲಾಂ ಹೈದರನು ಪ್ರಳಯ ಪ್ರಭುತ್ವಕ್ಕೆ ಅನುಮೋದಿಸಿ ಅದರಲ್ಲಿ ಸಾಹಸಪಡುವುದಕ್ಕೆ ಸಿದ್ಧನಾದನು. ರತ್ನಕಂಬಳಿಗಳನ್ನು ಕೊಳ್ಳುವವನಂತೆ ನಟಿಸುತ್ತ ಗುಟ್ಟಾಗಿ ನಾನಾತರದ ಪ್ರಜೆಗಳಲ್ಲಿ ಸಂಭಾಷಿಸುತ್ತ ಅವರಿಗೆ ಬೇಕಾದಷ್ಟು ಉದಾರವಾಗಿ ಹಣವನ್ನು ಕೊಡುತ್ತಾ ಕಡೆಗೆ ಆ ಪ್ರಾಂತದ ಪಠಾನರನ್ನೂ ಅಫ್ಘಾನಿಗಳನ್ನೂ ಆಂಗ್ಲಸೇನೆಯಮೇಲೆ ಬೀಳುವಂತೆಯೂ ಹಾಗೆ ಬಿದ್ದ ರಾತ್ರಿಯೇ ಖೈಬರ್ ಕಣಿವೆಯ ಮಾರ್ಗದಿಂದ ಅಫ್ಘನ್‌ಸೈನ್ಯವು ಭರತಖಂಡದ ಎಲ್ಲೆಯೊಳಕ್ಕೆ ನುಗ್ಗಿ ಬರುವಂತೆಯೂ ಏರ್ಪಡಿಸಿದನು. ಆ ಸಮಯದಲ್ಲೇ ಭರತಖಂಡದೊಳಗೆ ಕೆಲ ರಾಜದ್ರೋಹಿಗಳೂ ಅದೂರದರ್ಶಿಗಳೂ ಸ್ವಾರ್ಥೈಕಸಾಧಕರೂ ದೇಶದ್ರೋಹಿಗಳೂ ಆದ ಜನರು ಏನಾದರೊಂದು ವಿರುದ್ಧ ಕಾರ್ಯಭಾಗ ಮಾಡಬೇಕೆಂದು ಯೋಚಿಸುತ್ತಲಿದ್ದರು. ಕೆಲವರು ರೌಲತ್‌ಬಿಲ್ಲಿನ ವಿಷಯವಾಗಿ ಆಗ್ರಹಪರವಶರಾಗಿ ಪ್ರಭುತ್ವದವರ ವಿರುದ್ಧವಾಗಿ ವಿಪ್ಲವವನ್ನೆಬ್ಬಿಸಲು ಸಾಹಸಪಡುತ್ತಿದ್ದರು. ಆದರೆ ಇವರುಗಳಿಗೆಲ್ಲಾ ಕಾಬೂಲಿನಲ್ಲಿ ನಡೆದಿರುವ ರಹಸ್ಯಪ್ರಯತ್ನಗಳ ಗಂಧವೇ ಗೊತ್ತಿರಲಿಲ್ಲ. ಮೇಲೆಕಂಡ ಕಾಬೂಲ್ ರಹಸ್ಯಕೂಟದವರು ಮೇ ತಿಂಗಳಲ್ಲಿ ಭರತಖಂಡದ ಮೇಲೆ ದಂಡಯಾತ್ರೆಯನ್ನು ಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದರು. ಭರತಖಂಡದಲ್ಲಿ ರೌಲತ್‌ಬಿಲ್ಲಿನ ವಿಷಯವಾದ ಗದ್ದಲವು ಏಪ್ರಿಲ್ ತಿಂಗಳಲ್ಲೇ ಆರಂಭಿಸಿದ್ದಿತು. ಅದರಮೇಲೆ ಕಾಬೂಲ್ ರಹಸ್ಯಕೂಟದವರು ತಮ್ಮ ದಂಡಯಾತ್ರೆಯನ್ನು ಆ ಕೂಡಲೇ ಸಾಗಿಸುವುದಕ್ಕೆ ಯತ್ನಿಸಿದರು. ಆಗ ಅಮೀರ್ ಅಮಾನುಲ್ಲಾಖಾನರು ಒಂದು ದರ್ಬಾರನ್ನು ಮಾಡಿದರೆಂತಲೂ, ಭರತಖಂಡವು ಈಗ ದಿಕ್ಕಿಲ್ಲದೆ ನಿಂತಿರುವುದರಿಂದ ನಾವು ಅದರಮೇಲೆ ಬಿದ್ದು ನೋಚಿಕೊಳ್ಳುವುದಕ್ಕೆ ಇದೇ ತಕ್ಕ ಸಮಯವೆಂದು ಉಪನ್ಯಾಸಮಾಡಿದರೆಂತಲೂ ವರ್ತಮಾನಬಂದಿದ್ದಿತು. ಮತ್ತು ಭಾರತೀಯ ಪ್ರಜೆಗಳು ಈಗ ನಾನಾತೆರದಲ್ಲಿ ಹಿಂಸೆಗೊಳ್ಳುತ್ತಿರುವುದರಿಂದ ಅವರನ್ನು ರಕ್ಷಿಸುವುದಕ್ಕಾಗಿ ನಾವು ಭರತಖಂಡದ ಮೇಲೆ ದಂಡಯಾತ್ರೆಯನ್ನು ಸಾಗಿಸಬೇಕಾಗಿ ಬಂದಿದೆಯೆಂದು ಅಫ್ಘನ್ನರು ಹೇಳಿಕೊಳ್ಳುತ್ತಿದ್ದರಂತೆ! ಬಳಿಕ ರಹಸ್ಯಕೂಟದವರು ಮೇ ತಿಂಗಳು ತಾ|| ೧೦ ರಲ್ಲಿ ತಮ್ಮ ದಂಡಯಾತ್ರೆಯನ್ನು ಆರಂಭಿಸಿದರು. ಪೇಷಾವರ್ ಪಟ್ಟಣದಲ್ಲಿದ್ದ ಆಂಗ್ಲೇಯರನ್ನು ಕೊಂದು ಖೈಬರ್‌ಕಣಿವೆಯ ಮಾರ್ಗವಾಗಿ ನುಗ್ಗಬೇಕೆಂದು ಯೋಚಿಸಿಕೊಂಡು ಹೊರಟರು. ಆದರೆ ಈ ರಹಸ್ಯಾಲೋಚನ ಸಂಘದಲ್ಲಿ ಅನೇಕರಿದ್ದುದರಿಂದ ಗುಟ್ಟು ಬೇಗನೆ ಹೊರಬಿದ್ದಿತು. ಅದರಮೇಲೆ ಪೆಷಾವರಿನಲ್ಲಿದ್ದ ಆಂಗ್ಲಾಧಿಕಾರಿಗಳು ಎಚ್ಚತ್ತು ತಕ್ಕ ಸನ್ನಾಹವನ್ನು ಮಾಡಿಕೊಂಡರು. ಶನಿವಾರದ ದಿನ ಶತ್ರುಗಳು ತಮ್ಮಮೇಲೆ ದುರಾಲೋಚನೆಯ ಕಾರ್ಯಭಾಗಗಳನ್ನು ನಡೆಯಿಸುವವರಾಗಿದ್ದಾರೆಂದು ಗೊತ್ತಾಗಲು, ಅದಕ್ಕೆ ಮುಂದಿನ ಶುಕ್ರವಾರದ ದಿನವೇ ಪೇಷಾವರ್ ಪಟ್ಟಣದ ಸುತ್ತಲೂ ಕಾವಲುಹಾಕಿ ಗುಲಾಂ, ಹೈದರ್ ಮೊದಲಾದ ರಹಸ್ಯಕೂಟಪಕ್ಷದ ಜನರನ್ನು ಹಿಡಿದು ರಂಗೂನಿಗೆ ಸಾಗಿಸಿಬಿಟ್ಟರು. ಈ ಸಂಗತಿಯು ಗೊತ್ತಾದಕೂಡಲೇ ಖೈಬರ್ ಕಣಿವೆಯ ಮಾರ್ಗವಾಗಿ ಬರಬೇಕಾಗಿದ್ದ ಅಫ್ಘನ್‌ಸೈನ್ಯವು ಅಲ್ಲೇ ಧೈರ್ಯಗುಂದಿ ನಿಂತಿತು. ಮುಂದೆ ಅಫ್ಘಾನಿಸ್ಥಾನಕ್ಕೂ ಭಾರತ ಪ್ರಭುತ್ವದವರಿಗೂ ಯುದ್ಧನಡೆದುದೂ, ಕಡೆಗೆ ಸಂಧಿಯಾದುದೂ ಇವೆಲ್ಲಾ ನಮ್ಮ ಪತ್ರಿಕಾವಾಚಕರಿಗೆ ತಿಳಿದೇ ಇವೆ. ಮೇಲೆಕಂಡ ರಹಸ್ಯಕೂಟದ ಮುಖಂಡರಾದ ತರ್ಜಿ ಸಾದಿ ಮೊದಲಾದವರುಗಳು ಇನ್ನೂ ಸಿಕ್ಕಿಲ್ಲ. ಅವರಿಗೆ ತಲೆತಪ್ಪಿಸಿಕೊಂಡಿರುವ ಎನ್ವರ್‌ಪಾಷಾ ಮೊದಲಾದವರೂ ಬೋಲ್ಷೆವಿಕ್ಕರೂ ಸಹ ಅಂತರಂಗ ಸಹಾಯಕರಾಗಿಯೂ ಪ್ರೋತ್ಸಾಹಕರಾಗಿಯೂ ಇದ್ದಾರೆ. ಯಾವಗಳಿಗೆಯಲ್ಲಿ ಯಾವತೆರದ ವಿದ್ರೋಹವಿಪ್ಲವಾದಿಗಳನ್ನು ಅವರು ಹಬ್ಬಿಸುವರೆಂಬುದು ಗೊತ್ತಿಲ್ಲ. ಇಂಥವರುಗಳಿಗೆ ಇಂಬುಗೊಡತಕ್ಕ ವಿದ್ರೋಹಿಗಳು ಕೂಡ ಕೆಲಕೆಲರು ಭರತಖಂಡದಲ್ಲಿ ಇದ್ದರೂ ಇರಬಹುದು. ಆದರೆ ಇಂಥವರ ಸುಳಿವನ್ನೆಲ್ಲಾ ಭೇದಿಸಲು ಭಾರತ ಪ್ರಭುತ್ವದವರು ಸಹಸ್ರಾಕ್ಷರಾಗಿರುತ್ತಾರೆಂಬುದಕ್ಕೆ ಸಂಶಯವಿಲ್ಲ.

ಮೈಸೂರು ಮಹಾರಾಜಾ ಕಾಲೇಜಿನ ಜನ್ಮದಿನೋತ್ಸವವು (ಕಾಲೇಜ್ ಡೆ) ಬರುವ ಅಕ್ಟೋಬರ್ ತಾ|| ೨ ರಲ್ಲಿ ಜರುಗುವುದು. ಆ ಕಾಲದಲ್ಲಿ ಕಾಲೇಜಿನ ಪೂರ್ವದ ವಿದ್ಯಾರ್ಥಿಗಳೆಲ್ಲರೂ ಜನ್ಮದಿನೋತ್ಸವದ ಸಂಘದ ಅಧ್ಯಕ್ಷರಾದ ಸರದಾರ್ ಎಂ. ಕಾಂತರಾಜ ಅರಸಿನವರನ್ನು ಬರಮಾಡಿಕೊಂಡು ಅವರಿಗೆ ಸಂಸ್ಥಾನದ ಮಂತ್ರಿಪದವಿಯು ದೊರೆದುದಕ್ಕಾಗಿ ತಮ್ಮ ಅಭಿನಂದನವನ್ನು ತಿಳಿಸುವರು. ಈ ಸಮಾರಂಭಕ್ಕೆ ಕಾಲೇಜಿನ ಪೂರ್ವದ ವಿದ್ಯಾರ್ಥಿಗಳೆಲ್ಲರೂ ದಯಮಾಡಿಸಬೇಕಲ್ಲದೆ ತಂತಮ್ಮ ಚಂದಾ ದ್ರವ್ಯವನ್ನು ಟ್ರೆಜರರಾದ ಕಾಲೇಜಿನ ಪ್ರಿನ್ಸಿಪಾಲ್ ಮ|| ಎಚ್. ಎಸ್. ಸುಬ್ಬರಾಯರಲ್ಲಿಗೆ ಕಳುಹಿಸಿಕೊಡಬೇಕಾಗಿ ಸಂಘದ ಸೆಕ್ರೆಟರಿಗಳು ಪ್ರಾರ್ಥಿಸುತ್ತಾರೆ.

ಪತ್ರವ್ಯವಹಾರ.

೯ ನೆಯ ವೀರಶೈವ ಮಹಾಸಭೆ.

ಬೀರೂರಿನ ವೀರಶೈವ ಮಹಾಜನರು ೯ ನೆಯ ವೀರಶೈವಮಹಾಸಭೆಯನ್ನು ತಮ್ಮಲ್ಲಿ ಕೂಡಿಸುತ್ತೇವೆಂದು ವಹಿಸಿಕೊಂಡಿದ್ದರಷ್ಟೆ. ಈ ಕಾರ್ಯವನ್ನು ಅವರು ಕಳೆದವರ್ಷ ಮಾಡಲು ಅನಾನುಕೂಲವಾಯಿತು. ಆದರೆ ಈ ಸಾರಿ ಮಾಡುತ್ತಾರೆಯೋ ಇಲ್ಲವೋ ಎಂಬುದು ಇನ್ನೂ ಪ್ರಕಟವಾಗಿಲ್ಲ. ಕಾಲವೇನೋ ಸಮೀಪಿಸಿತು. ಮೈಸೂರಿನ ವೀರಶೈವ ಮಹಾಜನಗಳು ತಮ್ಮಲ್ಲಿ ಈ ಸಾರಿ ಮಹಾಸಭೆಯನ್ನು ಕೂಡಿಸುವ ಯೋಚನೆಯಲ್ಲಿದ್ದಾರೆಂದು ಈ ಮುಂಚೆ ಪ್ರಕಟವಾಗಿದ್ದಿತು. ಆ ವಿಷಯವು ಏನಾಯಿತೋ ತಿಳಿಯಲಿಲ್ಲ.

ಬೀರೂರಿನ ವೀರಶೈವ ಮಹಾಜನಗಳಿಂದ ಈಸಾರಿಯಾದರೂ ಮಹಾಸಭಾಕಾರ್ಯವು ನಡೆದರೆ ಸಂತೋಷವೇ ಸರಿ. ಇಲ್ಲವಾದರೆ ಅನ್ಯರು ಮಾಡಲಿಕ್ಕಾದರೂ ಅವಕಾಶವಿರುವಂತೆ ಮಾಡುವುದು ಉತ್ತಮ. ಸಮಾಜದ ಈ ಮಹತ್ಕಾರ್ಯದ ವಿಷಯದಲ್ಲಿ ಬೀರೂರಿನ ಮಹಾಜನಗಳಮೇಲೆ ವಿಶೇಷವಾದ ''ಜವಾಬ್ದಾರಿ'' ಇರುವುದರಿಂದ ಅವರು ಬರುವ ವಾರದಲ್ಲಿಯೇ ತಮ್ಮ ಉದ್ದೇಶವನ್ನು ಪ್ರಕಟಿಸಬೇಕಾಗಿ ಪ್ರಾರ್ಥನೆ. ಎಚ್.

ತಮ್ಮಲ್ಲಿ ನಡೆಯಿಸುವುದಕ್ಕೆ ಅವಕಾಶಕೊಡಬೇಕೆಂದು ರಾಜಧಾನಿಯ ವೀರಶೈವ ಮಹಾಜನರು ಬೀರೂರಿನವರಿಗೂ ಸ್ಟಾಂಡಿಂಗ್ ಕಮಿಟಿ ಚೇರ್ಮನ್ನರಿಗೂ ಬರೆದುಕೊಂಡ ಪತ್ರಕ್ಕೆ ಎರಡುಕಡೆಯವರ ಉತ್ತರವೂ ಇನ್ನೂ ಬಂದಿಲ್ಲವೆಂಬುದನ್ನು ನಾವು ಬಲ್ಲೆವು. ತಡವಾದಮೇಲೆ ಕಾರ್ಯ ನಿರ್ಧಾರವಾದರೆ ನಿರ್ವಾಹಕರಿಗೆ ಶ್ರಮ ಹೆಚ್ಚುವುದು. ಪ. ಪ್ರ.

ಚಿತ್ರದುರ್ಗದ ತಾ|| ಬೋರ್ಡಿನಿಂದ ಪ್ರಜಾಪ್ರತಿನಿಧಿಸಭೆಗೆ ೨ ನೇ ಸಲ ಮೆಂಬರ ಚುನಾವಣೆ.

ಈ ತಾ|| ಗ್ರಾಮಾಂತರಗಳಿಂದ ಭಾರಿ ಭಾರಿ ರೈತಾಪಿಜನರು ವರ್ತಕರೇ ಮುಂತಾದವರನ್ನು ಕಳೆದ ತಿಂಗಳಲ್ಲಿ ಚಿತ್ರದುರ್ಗಕ್ಕೆ ಬರಮಾಡಿಕೊಂಡು ಪ್ರಜಾಪ್ರತಿನಿಧಿಸಭೆಗೆ ಹೋಗಲರ್ಹರಾದ ಮತ್ತು ನಿಷ್ಪಕ್ಷಪಾತಿಗಳಾದ ಅಡ್ವೋಕೇಟ್ ಮ|| ಎಂ. ಅನಂತಯ್ಯಶೆಟ್ಟರನ್ನೂ ಗುಂಟನೂರು ಗೌಡರ ಮ|| ಬಸಪ್ಪನವರನ್ನೂ ತಾ|| ಬೋರ್ಡಿನಿಂದ ಸರ್ವಸಮ್ಮತವಾಗಿ ಚುನಾಯಿಸಲ್ಪಟ್ಟಿತ್ತು. ಆಗಲೇ ಆ ದೊಡ್ಡಮನುಷ್ಯರು ದೇಶದೇಶಿಗೆಯ ಮತ್ತು ಜನೋಪಯೋಗವಾದ (ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿಗೆ ಸರ್ವರನ್ನೂ ಸೇರಿಸುವಂತಾಗಬೇಕು ಎಂಬ ವಗೈರೆ) ಪ್ರಶ್ನೆಗಳನ್ನು ಆ ಮಹಾಸಭೆಗೆ ಕಳುಹಿಸಿಕೊಟ್ಟದ್ದೂ ಆಯಿತು. ತೆಗೆದಂಲ್ಲಾ ಎಂಬ ಆಗ್ರಹದಿಂದಲೋ ಅಥವಾ ತಮಗೆ ಹೆಚ್ಚಾದ ಓಟ್ ಬರಲಿಲ್ಲವೆಂಬ ಅಸೂಯೆಯಿಂದಲೋ ಕ್ಯಾಂಡಿಡೇಟುಗಳಿಗೆ ತಮ್ಮ ಹೆಸರನ್ನು ಓಟುಗಳನ್ನು ಮಾಡಿಕೊಳ್ಳುವುದಕ್ಕೆ ಅಮಲ್ದಾರರವರು ಅವಕಾಶ ಕೊಡದೇ ಹೋದ್ದರಿಂದ ಚುನಾವಣೆ ದಕ್ರಮ ಸರಿಯಾಗಿ ನಡೆಯಲಿಲ್ಲವೆಂಬ ಅಲ್ಪಕಾರಣವನ್ನು ಹುಡುಕಿ ಅಡ್ವೋಕೇಟ್ ಮ|| ಚನ್ನಕೇಶವಯ್ಯನವರು ಗೌರ್ನಮೆಂಟಿಗೆ ಅಪ್ಪೀಲ್ ಮಾಡಿ ೨ ನೇ ಚುನಾವಣೆಗೆ ಆರ್ಡರು ಮಾಡಿಕೊಂಡು ಬಂದಿರುವಂತೆಯೂ, ಈ ೨ ನೇ ಚುನಾವಣೆಗೆ ಈ ಮಾಹೆ ೨೬ ಕ್ಕೆ ಹಿಯರಿಂಗ್ ಇಟ್ಟು [illegible] ತಾ|| [illegible] ಇರುವ ಓಟರುಗಳಿಗೆ ಅಮಲ್ದಾರರವರು ನೋಟೀಸ್ ಮಾಡಿರುವಂತೆಯೂ ತಿಳಿಯಬರುತ್ತದೆ. ವಾಚಕಮಹಾಶಯರೇ! ಸ್ವಲ್ಪ ಕ್ರಮತಪ್ಪಿದರೂ ಎಷ್ಟು ಕಷ್ಟವಾಗುತ್ತದೆ ನೋಡಿರಿ. ಓಟರ್ ಮಹಾಜನಗಳಿರಾ! ವೃಥಾ ತೊಂದರೆ ಎಂದು ತಿಳಿದುಕೊಳ್ಳದೆ, ಉದಾಸೀನಮಾಡದೆ, ಕಷ್ಟವಾದರೂ ಚಿಂತೆಯಿಲ್ಲ, ಎಷ್ಟು ಕೆಲಸಗಳಿದ್ದರೂ ಬಿಟ್ಟು, ಇದು ಮುಖ್ಯವಾದ ನಮ್ಮ ಕೆಲಸವೆಂದು ಭಾವಿಸಿ ಮೇಲ್ಕಂಡ ಹಿಯರಿಂಗ್ ಡೇಟಿಗೆ ದಯಮಾಡಿ ಬಂದು ತಮ್ಮ ಹೆಸರು ಖಾತೆ ಮಾಡಿಕೊಳ್ಳುವುದುತ್ತಮವೆಂದು ಅಪೇಕ್ಷಿ

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಸೆಪ್ಟಂಬರ್ ತಾ|| ೨೧ನೆಯ ಭಾನುವಾರ

ವಿದ್ಯಾಭ್ಯಾಸಕ್ರಮ ಸಂಸ್ಕರಣವು.

ಭಾಗ ೨.

ಈ ಸಂಬಂಧವಾಗಿ ಸರ್ಕಾರದವರು ಪ್ರಕಟಿಸಿರುವ ಮೆಮೋರಾಂಡಮ್ಮಿನಲ್ಲಿ ಮಧ್ಯಮ ತರಗತಿಗಳ ಅಭ್ಯಾಸಸಂಬಂಧವಾಗಿ ಕೆಲವು ಸಂಸ್ಕರಣಗಳು ತಿಳಿಯಿಸಲ್ಪಟ್ಟಿವೆ. ಅವುಗಳಲ್ಲಿ ಗ್ರಾಮಗಳಲ್ಲೂ ಪಟ್ಟಣಗಳಲ್ಲೂ ಒಂದೇತೆರದ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂಬ ವಿಷಯವು ಒಂದಾಗಿರುತ್ತದೆ. ಇದು ಅವಶ್ಯಕವಾಗಿರುವುದು. ಸರ್ವಪ್ರಜೆಗಳಿಗೂ ಸಮಾನವಾಗಿ ವಿದ್ಯಾಭ್ಯಾಸಸೌಕರ್ಯವು ಒದಗುವುದಕ್ಕೆ ಇದರಿಂದ ಅನುಕೂಲವಾಗುವುದು. ಆದರೆ ಈ ಶಾಲೆಗಳಲ್ಲಿ ಆಂಗ್ಲಭಾಷೆಯಲ್ಲಿ ಬೋಧನವು ನಡೆಯುವುದನ್ನು ನಿರ್ಬಂಧವಾಗಿರಿಸಿ, ಇತರ ಪಾಠಗಳನ್ನೆಲ್ಲಾ ಬಹುತರವಾಗಿ ದೇಶಭಾಷೆಯಲ್ಲೇ ನಡೆಯುವಂತೆ ಮಾಡಬೇಕೆಂದಿರುವ ಕ್ರಮವು ದೇಶಭಾಷಾಪ್ರಾಮುಖ್ಯಕ್ಕೆ ಪೋಷಕವಾಗಿದ್ದರೂ ಲೋವರ್ ಸೆಕೆಂಡರಿ ಪರೀಕ್ಷೆಗೆ ಹಿಡಬೇಕಾದವರು ಬರಿಯ ಕನ್ನಡವನ್ನೇ ತೆಗೆದುಕೊಳ್ಳುವುದಕ್ಕೆ ಅವಕಾಶವು ತಪ್ಪಿಹೋಗುವುದು. ಈ ತರಗತಿಗೆ ಆಂಗ್ಲಭಾಷೆಯನ್ನು ಐಚ್ಛಿಕವಾಗಿಡುವುದೇ ಅವಶ್ಯಕ. ಮುಂದೆ ಪ್ರೌಢತರಗತಿಗಳವರೆಗೂ ಬೋಧನವು ದೇಶಭಾಷೆಯಲ್ಲೇ ನಡೆಯುವಂತೆ ಉದ್ದೇಶವನ್ನಿಟ್ಟರೆ ದೇಶೀಯ ಭಾಷೆಯು ಈಗಣ ಆಂಗ್ಲ ವಿದ್ಯಾಧಿಕರಲ್ಲಿ ಪಡೆದುಕೊಂಡಿರುವ ದೀನಾವಸ್ಥೆಯನ್ನು ಮುಂದಾದರೂ ಕಳೆದುಕೊಳ್ಳಬಹುದು. ಮತ್ತು ಆ ಭಾಷೆಯಲ್ಲಿ ಗ್ರಂಥವೃದ್ಧಿಯು ಇನ್ನಷ್ಟು ಆಗುವುದಕ್ಕೂ ಅವಕಾಶವಾದೀತು. ದೇಶಭಾಷೆಯ ಜತೆಗೆ ಆಂಗ್ಲಭಾಷೆಯನ್ನೂ ಅಭ್ಯಾಸಮಾಡಿಸುವ ಈ ಮಾಧ್ಯಮಿಕ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಬೇಕಾದ ಅವಶ್ಯಕತೆಯು ಕೂಡ ಇದರಲ್ಲಿ ನಿರೂಪಿತವಾಗಿರುವುದಲ್ಲದೆ ಈ ತರಗತಿಗಳಲ್ಲಿ ಅನುಭವಬೋಧನೆಗಳನ್ನೂ ಪ್ರಕೃತಿಶಾಸ್ತ್ರ ಪ್ರಾರಂಭಪಾಠಗಳನ್ನು ಸಹ ಹೇಳುವಂತಾಗಬೇಕೆಂದೂ, ಈ ತರಗತಿಗಳ ಅಭ್ಯಾಸವೆಲ್ಲಾ ೪ ವರ್ಷಗಳ ಕಾಲದಲ್ಲಿ ಮುಗಿಯುವಂತಿರಬೇಕೆಂದೂ ಹೇಳಲ್ಪಟ್ಟಿದೆ. ಈ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಭವನಗಳ ಸಂಬಂಧವಾಗಿ ಮಾಡಲ್ಪಟ್ಟಿರುವ ಸೂಚನೆಗಳೊಳಗೆ ಅವುಗಳ ಆದಾಯಕ್ಕೂ ವ್ಯಯಕ್ಕೂ ಸರಿಹೋಗುವಂತೆ ಪ್ರಭುತ್ವದವರು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕೆಂತಲೂ, ಹಾಗಲ್ಲದೆಹೋದರೆ ಸ್ವತಂತ್ರವಾಗಿ ವಿದ್ಯಾರ್ಥಿಗಳಿಂದಲೋ ಪ್ರಜೆಗಳಿಂದಲೋ ಸ್ಥಾಪಿಸಿಕೊಳ್ಳಲ್ಪಟ್ಟಿರುವ ವಿದ್ಯಾರ್ಥಿನಿಲಯಗಳಿಗೆ ಸರ್ಕಾರದಿಂದ ಉಚಿತವಾದ ಸಾಹಾಯ್ಯವನ್ನು ಕೊಡಬಹುದೆಂತಲೂ ಹೇಳಲ್ಪಟ್ಟಿದೆ. ಈ ೨ನೆ ಉಪಾಯವೇ ಉತ್ತಮವಾಗಿ ತೋರುತ್ತದೆ. ಏಕೆಂದರೆ—ಅನೇಕ ಮತ ಜಾತಿಭೇದಗಳ ಕಟ್ಟುಪಾಡಿಗೊಳಪಟ್ಟಿರುವ ಈ ದೇಶದಲ್ಲಿ ಸರ್ಕಾರದವರು ಪ್ರತಿ ಸಂಗಡದವರಿಗೂ ಅಂಥ ವಸತಿಗೃಹಗಳನ್ನು ಸ್ವತಃ ಕಟ್ಟಿಸಿಕೊಡುವುದು ಸಾಧ್ಯವಾಗಿಲ್ಲದಿರುವುದರಿಂದಲೂ, ನಗರ ನಿವಾಸಿಗಳಿಗೆ ಅಂಥ ವಿದ್ಯಾರ್ಥಿ ವಸತಿಗೃಹಗಳನ್ನು ಕಟ್ಟಿಸಿಕೊಟ್ಟು ತಾಲ್ಲೂಕು ಮೊದಲಾದ ಸ್ಥಳಗಳಲ್ಲಿರುವ ವಿದ್ಯಾರ್ಥಿಗಳಿಗೆ ಅವನ್ನು ಕಟ್ಟಿಸಿಕೊಡದೆ ಇರುವ ಪಕ್ಷಪಾತವನ್ನು ಆಚರಿಸುತ್ತಿರಬೇಕಾಗಿರುವುದರಿಂದಲೂ, ಆ ಏರ್ಪಾಟನ್ನೇ ಬಿಟ್ಟು ಸ್ವತಂತ್ರವಾಗಿ ಆಯಾ ಜನವರ್ಗದವರು ಏರ್ಪಡಿಸಿಕೊಳ್ಳುವ ವಿದ್ಯಾರ್ಥಿ ಭವನಗಳಿಗೆ ಉಚಿತವೂ ಉದಾರವೂ ಆದ ಸಾಹಾಯ್ಯಗಳನ್ನು ಸರ್ಕಾರದವರು ಮಾಡುವುದೇ ನ್ಯಾಯವಾಗಿ ಕಾಣುತ್ತದೆ.

ಇನ್ನು ಪ್ರೌಢ ವಿದ್ಯಾಭ್ಯಾಸಕ್ರಮ ಸಂಸ್ಕರಣ ವಿಷಯವಾಗಿ ಮೆಮೋರಾಂಡಮ್ಮಿನಲ್ಲಿ ಮಾಡಲ್ಪಟ್ಟಿರುವ ಸೂಚನೆಗಳೆಂದರೆ—ಶಾಸ್ತ್ರೀಯ ಪಾಠಬೋಧನೆಗಳ ತಿದ್ದುಪಾಡುಗಳೂ, ಸಾಂಕೇತಿಕ ವಿದ್ಯೆಯನ್ನು ಈ ತರಗತಿಗಳಲ್ಲಿ ಕಲಿಸುವುದೂ, ದೇಶಭಾಷೆಯಲ್ಲೇ ಅನೇಕಪಾಠಗಳನ್ನು ಬೋಧಿಸುವುದೂ, ಶಾಸ್ತ್ರೀಯ ವಿದ್ಯಾಭ್ಯಾಸಕ್ಕೆ ಅವಶ್ಯಕವಾದ ದೊಡ್ಡದೊಡ್ಡ ಭವನಗಳು ಮೊದಲಾದುವನ್ನು ನಿರ್ಮಿಸುವುದೂ, ಲೇಬರೇಟರಿಗಳನ್ನು ಅಭಿವೃದ್ಧಿಪಡಿಸುವುದೂ, ಈಗಿಗಿಂತಲೂ ಸಮರ್ಥರಾದ ಪಂಡಿತರನ್ನು ಪಾಠಕಸ್ಥಾನಗಳಿಗೆ ನಿಯಮಿಸುವುದೂ, ಮಧ್ಯಮ ತರಗತಿಗಳಲ್ಲಿ ಆರಂಭಿಸಿರುವ ಪ್ರಾರಂಭ ಶಾಸ್ತ್ರೀಯ ಪಾಠಗಳನ್ನು ಈ ಉನ್ನತ ತರಗತಿಗಳಲ್ಲಿ ಪಕ್ವಸ್ಥಿತಿಗೆ ತರುವುದೂ ಇತ್ಯಾದಿಗಳಾಗಿರುತ್ತವೆ. ಈ ತರಗತಿಗಳಲ್ಲೂ ದೇಶಭಾಷೆಗೆ ಪ್ರಾಮುಖ್ಯವನ್ನು ಕೊಟ್ಟಿರುವುದು ಸಮಾಧಾನಕರವಾದ ಸಂಗತಿಯಾಗಿದೆ.

ಹೀಗೆ ಪುಸ್ತಕ ವಿದ್ಯಾಭಿವೃದ್ಧಿಗೇ ಎಲ್ಲ ಗಮನವನ್ನೂ ಕೊಟ್ಟು ಪ್ರಜೆಗಳೆಲ್ಲರೂ ಅದರಲ್ಲಿ ಪ್ರಾವೀಣ್ಯವನ್ನು ಸಂಪಾದಿಸಿಕೊಂಡು ಬಿಡುವಂತಾದರೆ ತೀರಿತೆಂದು ಪ್ರಭುತ್ವದವರು ಯೋಚಿಸಿದ್ದರೆ ಬಹಳ ನಿರಾಶೆಯಾಗುತ್ತಿದ್ದಿತು. ಹಾಗಲ್ಲದೆ ಸಾಂಕೇತಿಕ ವಿದ್ಯೆಯ ಪ್ರಸಾರದಕಡೆಗೂ ಅವರು ಗಮನವಿತ್ತು ಕೆಲ ಸೂಚನೆಗಳನ್ನು ಮಾಡಿರುತ್ತಾರೆ. ಮುಖ್ಯವಾಗಿ ಪ್ರಜೆಗಳಿಗೆ ಸ್ವತಂತ್ರ ಜೀವನಕ್ಕೆ ಸಾಧಕವಾಗುವಂಥ ವಿದ್ಯೆಯು ವಿಶೇಷವಾಗಿ ಪ್ರಸಾರಗೊಳ್ಳಬೇಕಾದುದು ಅತ್ಯವಶ್ಯಕವಾಗಿದೆ. ಅದರಿಂದ ದೇಶದ ಸಂಪತ್ತು ಹೆಚ್ಚಲೂ ಮಾರ್ಗವಾಗುತ್ತದೆ. ಪ್ರಜೆಗಳೆಲ್ಲರೂ ಸರ್ಕಾರದ ಉದ್ಯೋಗಗಳ ಕಡೆಗೆ ತಲ್ಲಿರಿದು ಕುಳಿತುಕೊಳ್ಳಬೇಕಾದ ಅವಶ್ಯಕತೆಯೂ ತಪ್ಪಿಹೋಗುತ್ತದೆ. ಈ ಸಂಗತಿಯನ್ನು ಪ್ರಭುತ್ವದವರು ಆಲೋಚಿಸಿಕೊಂಡೇ ವಿದ್ಯಾರ್ಥಿಗಳು ಪ್ರೌಢವಿದ್ಯೆಯನ್ನು ಅಭ್ಯಸಿಸಿದ ಬಳಿಕ ಪಾಠಶಾಲೆಗಳನ್ನು ಬಿಡುವುದರೊಳಗಾಗಿ ಯಾವುದಾದರೂ ಕೆಲವು ಪರಿಶ್ರಮಗಳಲ್ಲೂ ವ್ಯವಸಾಯದಲ್ಲೂ ಇಂಜನಿಯರಿಂಗ್ ಮೊದಲಾದ ಕುಶಲ ವಿದ್ಯೆಗಳಲ್ಲೂ ಸಹ ಪುಸ್ತಕ ವಿದ್ಯಾಭ್ಯಾಸವೇ ಅಲ್ಲದೆ ಪ್ರಯೋಗಮೂಲಕವಾದ ಅಭ್ಯಾಸವನ್ನು ಕೂಡ ಮಾಡಿ ಪಕ್ವವಾದ ಅನುಭವವನ್ನು ಪಡೆದುಕೊಳ್ಳಲು ಅನುಕೂಲಿಸುವಂತೆ ನಿದರ್ಶನಬೋಧನ ವಿದ್ಯಾಲಯಗಳನ್ನು ಸ್ಥಾಪಿಸಲು ಉದ್ದೇಶಪಟ್ಟಿರುತ್ತಾರೆ. ಇದುವರೆಗೆ ಇಂಥ ನಿದರ್ಶನ ಕ್ಷೇತ್ರಾದಿಗಳನ್ನು ಸರ್ಕಾರದವರು ಪ್ರತಿಷ್ಠಾಪಿಸಿದ್ದರೂ ಅವುಗಳು ತಕ್ಕಷ್ಟು ಫಲದಾಯಕವಾಗದಿರುವುದಕ್ಕೆ ಅವುಗಳಲ್ಲಿ ತಕ್ಕ ಉಪಾಧ್ಯಾಯರೂ ಸಂಪೂರ್ಣವಾದ ಉಪಕರಣ ಸಾಹಾಯ್ಯವೂ ಇಲ್ಲದಿರುವುದೇ ಕಾರಣವೆಂದೂ, ಉತ್ತರೋತ್ತರ ಆ ಲೋಪಗಳನ್ನೆಲ್ಲಾ ಪರಿಹರಿಸಬೇಕಾಗಿದೆಯೆಂದೂ ಹೇಳಲ್ಪಟ್ಟಿದೆ. ಮತ್ತೂ ಈಗಿರುವ ಮೆಕಾನಿಕಲ್ ಇಂಜನಿಯರಿಂಗ್ ಶಾಲೆಯನ್ನೂ ಚಾಮರಾಜೇಂದ್ರಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನೂ ಇನ್ನಷ್ಟು ಉತ್ತಮಸ್ಥಿತಿಗೆ ತಂದು ಅವುಗಳಲ್ಲಿನ ಅಭ್ಯಾಸಕ್ರಮವು ಇನ್ನೂ ವ್ಯಾಪಕಾವಸ್ಥೆಗೆ ಬರುವಂತೆಯೂ ಆಕರ್ಷಕವಾಗಿರುವಂತೆಯೂ ಮಾಡಲ್ಪಡಬೇಕೆಂದು ಹೇಳಿರುವುದಲ್ಲದೆ, ಇವುಗಳಲ್ಲಿ ಅಭ್ಯಾಸವು ಯಾವ ಭಾಷೆಯಲ್ಲಿ ನಡೆಯಬೇಕೆಂಬ ವಿಷಯವಾಗಿ ಬಹುದೂರ ಚರ್ಚಿಸಿ, ಕಡೆಗೆ ಅಲ್ಲೂ ದೇಶಭಾಷಾಪ್ರಾಮುಖ್ಯವನ್ನೇ ತೋರಿಸಿರುವುದು ಅತ್ಯಂತ ಸಂಗತವಾಗಿರುತ್ತದೆ. ಸಾಂಕೇತಿಕ ವಿದ್ಯಾಭ್ಯಾಸವು ಮುಖ್ಯವಾಗಿ ಕಸಬುಗಾರ ಜನರಿಗೆ ಅತ್ಯವಶ್ಯಕವಾಗಿದೆ. ಅವರುಗಳಲ್ಲಿ ವಿದೇಶ ಭಾಷಾಪ್ರಸಾರವು ಸುತರಾಂ ಇಲ್ಲವೇ ಇಲ್ಲವೆಂದರೂ ಸಲ್ಲುವುದು. ಅಂಥವರಿಗೆಲ್ಲಾ ದೇಶಭಾಷೆಯಲ್ಲಿ ಬೋಧನೆಯನ್ನು ಮಾಡದಿದ್ದರೆ ಉದ್ದೇಶವು ಸಫಲವಾಗುವುದಿಲ್ಲ. ಆಂಗ್ಲಭಾಷೆಯಲ್ಲಿ ಸಾಂಕೇತಿಕ ವಿದ್ಯೆಯನ್ನು ಕಲಿಯುವವರು, ಅದರ ಬಲದಿಂದ ಕೈಗಾರಿಕೆಯ ಶಾಲೆಗಳು ಮೊದಲಾದುವುಗಳಲ್ಲಿ ಬೋಧಕತ್ವಕ್ಕೆ ಸೇರಿ ಜೀವಿಸಿಕೊಳ್ಳಬೇಕೆಂದು ಬಯಸಬಹುದಾದವರೇ ಹೊರತು ಈ ಕುಶಲವಿದ್ಯೆಗಳಿಂದ ತಂತಮ್ಮ ಕುಲ ಕಸಬುಗಳನ್ನು ಅಭಿವೃದ್ಧಿಪಡಿಸಿಕೊಂಡು ಜೀವಿಸಬೇಕೆಂಬುವವರಲ್ಲ. ಅದುಕಾರಣ, ಕಸಬುಗಾರ ಜನರ ಕೌಶಲವನ್ನು ಹೆಚ್ಚಿಸಬೇಕಾದ ಘನತರೋದ್ದೇಶವು ಸಫಲವಾಗಬೇಕಾದರೆ ದೇಶಭಾಷೆಯಲ್ಲೇ ಬೋಧನೆಯು ನಡೆಯಬೇಕು. ಮತ್ತೂ ಆ ಸಾಂಕೇತಿಕ ವಿದ್ಯಾಸಂಬಂಧಿಗಳಾದ ಪಾಠಗಳ ಪುಸ್ತಕಗಳೆಲ್ಲಾ ವಿದೇಶಭಾಷೆಯಿಂದ ಸ್ವದೇಶಭಾಷೆಗೆ ಪರಿವರ್ತಿತವಾಗುವಂತೆ ಮಾಡಲ್ಪಡಬೇಕು.

ಶುಭೋದಯಪ್ರಕರಣದ ತೀರ್ಪಿನಮೇಲೆ ಮುಂದಣಕರ್ತವ್ಯ.

ಧಾರವಾಡದ ಶುಭೋದಯ ಪತ್ರಸಂಪಾದಕರಾದ ಮ|| ಕೆರೂರು ವಾಸುದೇವಾಚಾರ್ಯರು ತಮ್ಮ ೧೮-೪-೧೯ ನೆ ತಾರೀಖಿನ ಸಂಚಿಕೆಯಲ್ಲಿ ಆರ್. ಶ್ರೀನಿವಾಸಾಚಾರ್ಯ ಎಂಬುವವರಿಂದ ಬರೆಯಲ್ಪಟ್ಟುದೆಂದು ಹೇಳಿ "ಅಲ್ಲಮನ ಹಾಗೂ ಬಸವನ ವೃತ್ತಾಂತವೇನು?" ಎಂಬ ಶಿರೋಲೇಖನವುಳ್ಳ ಬರವಣಿಗೆಯನ್ನು ಪ್ರಕಟಪಡಿಸಿದರು. ಅದರಲ್ಲಿ ಆದ್ಯಂತವಾಗಿ ವೀರಶೈವಮತದ ಪೂಜ್ಯರಾದ ಅಲ್ಲಮಪ್ರಭುವನ್ನೂ ಬಸವೇಶನನ್ನೂ ಅವರ ಸಂಪ್ರದಾಯಸ್ಥರನ್ನೂ ಅಪಮಾನಗೊಳಿಸಿ ಹೀನಯಿಸುವ ಸಂಗತಿಗಳೇ ತುಂಬಿತುಳುಕುತ್ತಿರುವುವು. ಅದನ್ನೋದಿದ ಯಾವೊಬ್ಬ ವೀರಶೈವನಿಗೂ ಹೊಟ್ಟೆಯಲ್ಲಿ ಬೆಂಕಿ ಸುರಿದಷ್ಟು ಸಂತಾಪವನ್ನು ಅದು ಉಂಟುಮಾಡುತ್ತಿರುವುದು. ಪೂರ್ವದ ಕಾಲವಾಗಿದ್ದರೆ ಅತೀವಧರ್ಮಶ್ರದ್ಧಾಳುಗಳಾದ ವೀರಶೈವರು ಇಂಥ ಗುರುಜಂಗಮ ದೂಷಣೆಗೆ ಯಾವ ಪ್ರಕಾರದ ಮುಯ್ಯನ್ನು ಮಾಡುತ್ತಿದ್ದರೆಂಬುದನ್ನು ಹೇಳಬೇಕಾಗಿಲ್ಲ. ಕಾಲ ಧರ್ಮವನ್ನನುಸರಿಸಿ ಇಂಥ ತಪ್ಪಿಗೆ ಪ್ರಭುತ್ವದವರಿಂದಲೇ ಶಿಕ್ಷೆಯನ್ನು ಮಾಡಿಸುವುದು ಯುಕ್ತವಾಗಿರುವ ಕಾರಣ, ಕೇವಲ ಸ್ವಧರ್ಮಾಭಿಮಾನಿಗಳೂ ವೈದಿಕ ಲೌಕಿಕ ವಿದ್ಯಾಪ್ರವೀಣರೂ ಆದ ಹುಬ್ಬಳ್ಳಿಯ ಮ|| ಪಾವಟೆ ಸಿದ್ಧರಾಮಪ್ಪ ಬಿ.ಎ., ಎಲ್. ಎಲ್.ಬಿ. ಯವರು ಆ ಪತ್ರದ ಸಂಪಾದಕರು ಲೇಖನದ ಲೇಖಕರು ಮುದ್ರಾಪಕರು ಇವರುಗಳಮೇಲೆ ಮಾನನಷ್ಟದ ವ್ಯಾಜ್ಯವನ್ನು ಧಾರವಾಡದ ೧ನೆ ತರಗತಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೂಡಿದರು. ಸಂತಪ್ತಚಿತ್ತವಾಗಿದ್ದ ವೀರಶೈವ ಮಂಡಲಿಯು ಈ ವ್ಯಾಜ್ಯದ ಪರ್ಯವಸಾನ ನಿರೀಕ್ಷಣೆಯಿಂದ ತಣಿದು ಕುಳಿತಿದ್ದಿತು. ಮುದ್ರಾಪಕರು ಮಧ್ಯದಲ್ಲೇ ಕ್ಷಮಾಪಣೆಯನ್ನು ಬೇಡಿಕೊಂಡು ಹೊರೆಯಾದರು. ಉಳಿದ ಅಪರಾಧಿಗಳಮೇಲೆ ಛಾರ್ಜು ಮಾಡಲ್ಪಟ್ಟಿದ್ದರೂ ವಿಚಾರಾಂತ್ಯದಲ್ಲಿ ಅವರುಗಳು ದೋಷಮುಕ್ತರಾಗಿ ತೀರ್ಮಾನಿಸಲ್ಪಟ್ಟರು. ಅದರಮೇಲೆ ವೀರಶೈವ ಸಮಾಜದವರೆಲ್ಲಾ ಈಗ ಅತ್ಯಂತವಾಗಿ ಅಸಮಾಧಾನಗೊಂಡಿದ್ದಾರೆ. ಈಗ ಆಗಿರುವತೀರ್ಪು ನ್ಯಾಯಸಂಮತವಾಗಿಲ್ಲ. ಆದರೆ ಅದರ ಮೇಲೆ ಅಪ್ಪೀಲು ಮಾಡುವುದಕ್ಕೆ ಲಾ ಪ್ರಕಾರ ಫಿರ್ಯಾದಿಯರಿಗೆ ಅವಕಾಶವಿಲ್ಲ. ಸರ್ಕಾರದವರೇ ಇದರ ಅಪ್ಪೀಲನ್ನು ಹೈಕೋರ್ಟಿನಲ್ಲಿ ಮಾಡಬಹುದು. ಉನ್ನತ ನ್ಯಾಯಸ್ಥಾನಕ್ಕೆ ಹತ್ತಿದರೆ ನ್ಯಾಯಕ್ಕೆ ಜಯವಾಗಿಯೇ ಆಗುವುದು. ಸಮಾಜದವರು ಸ್ವತಃ ಹೈಕೋರ್ಟಿಗೆ ಹೋಗಲು ದಾರಿಯಿಲ್ಲವಾದುದರಿಂದ ಗೌರ್ನಮೆಂಟಿನವರ ಗಮನಕ್ಕೆ ಇದನ್ನು ತಂದು ಅವರಿಂದ ಮಾಡಿಸಬೇಕು.

ಏಕೆಂದರೆ-ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಲ್ಪಟ್ಟಿರುವ ತೀರ್ಪಿನೊಳಗೆ ಆ ಲೇಖನವು ಅಲ್ಲಮ ಬಸವಾದಿಗಳಿಗೆ ಅಪಮಾನಕರವಾದುದೆಂದೂ, ಇಂಥ ಲೇಖನದ ಪ್ರಕಟನದಿಂದ ಪತ್ರಕರ್ತರು ದೇಶಹಿತವನ್ನೇನೂ ಮಾಡಿದುದಿಲ್ಲವೆಂದೂ, ಇದು ಅಲ್ಲಮ ಬಸವಾದಿಗಳಿಗೆ ಸಂಬಂಧಪಟ್ಟ ಸಮಾಜದ ಧಾರ್ಮಿಕ ಭಾವನೆಗೆ ಬಾಧಾಕರವಾಗಿರುವುದೆಂದೂ, ಒಪ್ಪಿಕೊಂಡಿರುವರು ಆದರೂ ಅದರಿಂದ ವೀರಶೈವ ಸಮಾಜಕ್ಕೆ ಅಪಮಾನವೇನೂ ಆಗಿಲ್ಲವೆಂದು ತೀರ್ಮಾನಿಸಿರುವರು. ಪ್ರತಿಯೊಂದು ಸಮಾಜದ ಗೌರವಾಗೌರವಗಳಿಗೆ ಸಮಾಜದ ಜನರೇ ಬದ್ಧರಾಗಿರುವಾಗ ಅಂಥ ಸಮಾಜದ ಪೂಜ್ಯರನ್ನು ಅಪಮಾನಪಡಿಸಿದರೆ ಅದರಿಂದ ಸಮಾಜಕ್ಕೆ ಮಾನಹಾನಿಯಾಗುವುದಿಲ್ಲವೆಂದು ಹೇಳುವುದು ಎಷ್ಟುಮಟ್ಟಿಗೆ ಅನ್ಯಾಯವೆಂಬುದನ್ನು ಹೇಳಬೇಕಾಗಿಲ್ಲ. ಮನೆಯಜಮಾನನನ್ನೂ ತಾಯ್ತಂದೆಗಳನ್ನೂ ಇತರರಾರಾದರೂ ಬೈದರೂ ಇನ್ನಾವ ವಿಧವಾಗಿ ಅಪಮಾನಪಡಿಸಿದರೂ ಮಕ್ಕಳು ಮರಿಗಳೆಲ್ಲಾ ಕೇಳಿಕೊಂಡು ನೋಡಿಕೊಂಡು ಸುಮ್ಮನಿರುವುದುಂಟೆ? ಶಂಕರ ಮಧ್ವಾದಿಗಳನ್ನು ಮನಬಂದಂತೆ ಇತರರು ಹಳಿದರೆ ಆಯಾ ಮತದವರು ಸುಮ್ಮನಿರುವರೆ? ಅದು ತಪ್ಪಾಗುವುದಿಲ್ಲವೆ? ತಮ್ಮವರ ಮಠದ ಮುಂದೆ ಇತರ ಗುರುಗಳು ವಾಹನಾರೂಢರಾಗಿ ಹೋದರೂ ತಮಗೆ ಅಪಮಾನವಾಗುವುದೆಂದು ಆ ಮತದವರೇ ಬಡಿದುಕೊಳ್ಳುವುದೇತಕ್ಕೆ? ಈ ಕಾರಣದಿಂದಲಾದರೂ ಇಂಥ ವ್ಯಾಜ್ಯವು ಹೈಕೋರ್ಟಿನವರೆಗೂ ಹತ್ತಲಿ, ಅಲ್ಲಿ ಯಾವ ಪರಮತದವರು ಬೇಕಿದ್ದರೂ ಮತ್ತೊಂದು ಮತದ ಪ್ರಾಚೀನ ಗುರುಗಳನ್ನೇ ಆಗಲೀ ಮಹಿಮರನ್ನೇ ಆಗಲೀ ಎಷ್ಟು ದೂಷಿಸಿದರೂ ತಪ್ಪಾಗುವುದಿಲ್ಲವೆಂದು ತೀರ್ಮಾನಮಾಡಿದರೂ ಮಾಡಲಿ. ಆಗ್ಗೆ ದೇಶಶಾಂತಿಯು ಎಷ್ಟುಮಟ್ಟಿಗಿರುತ್ತದೆಯೆಂಬುದನ್ನು ಪ್ರಭುತ್ವದವರೇ ನೋಡಿ ಅನುಭವಮಾಡಿಕೊಳ್ಳಲಿ. ನಮ್ಮ ಕರ್ತವ್ಯವನ್ನು ನಾವು ಮಾಡುವ.

ಶುಭೋದಯದಲ್ಲಿ ಪ್ರಕಟವಾಗಿರುವ ಆ ಲೇಖನದಲ್ಲಿ ಅವಾಚ್ಯವಾದ ಎಷ್ಟೋ ನೀಚವಚನಗಳಿರುವುವು. ಅವುಗಳಲ್ಲಿ ಕೆಲವನ್ನು ಸ್ವರೂಪ ನಿರೂಪಣಕ್ಕಾಗಿ ಇಲ್ಲಿ ಉದ್ಧರಿಸಿ ಹಾಕುತ್ತೇವೆ.

> "ಅಲ್ಲಮ ಇವನ ಚರಿತ್ರಾದಿ ವಿಷಯಗಳನ್ನು ವಿಚಾರಿಸುತ್ತಿರಲಿಕ್ಕಾಗಿ ಇವನು ಶೂದ್ರನಿದ್ದನೆಂದು ಕಂಡುಬರುತ್ತದೆ. ಅಲ್ಲಮ ಎಂಬ ಹೆಸರು ಮುಸಲ್ಮಾನ ದೇವತಾ ಸಂಕೇತವಾಗಿರುತ್ತದೆ. ಇವನ ಸಂಬಂಧವು ವಿಶೇಷವಾಗಿ ಮುಸಲ್ಮಾನರಲ್ಲಿಯೇ ಕಂಡುಬರುತ್ತದೆ. ಇವನ ಸಂಬಂಧವಾದ ಚಿತ್ರಕಲ್ಲದುರ್ಗ ಮುರಿಗೆ ಮಠದವರು ಈ ಹೊತ್ತಿನವರೆಗೂ ಮುಸಲ್ಮಾನರ ಕಡೆಯಿಂದ ನಾವು ನಿಮಗತಿಸಂಬಂಧಿಕರೆಂದು ಹೇಳಿ ಕಾಣಿಕೆಯನ್ನು ಎತ್ತುತ್ತಿರುವರು............ಬಸವನೆಂಬುವನು ಕಲ್ಯಾಣಪಟ್ಟಣವನ್ನು ಆಳುತ್ತಿದ್ದ ಬಿಜ್ಜಳನ ಮಂತ್ರಿಯಾಗಿ ಜಾತಿಸಂಕರವನ್ನು ಮಾಡುವ ಕಾಲಕ್ಕೆ ಇವನು ಅದರಲ್ಲಿ ಹೋಗಿ ಸೇರಬೇಕೆಂದು ಕಲ್ಯಾಣಪಟ್ಟಣಕ್ಕೆ ಬಂದು ಬಸವನ ಮತಪ್ರವಿಷ್ಟನಾದನು. ಇವನು ಬಸವನ ಮನೆಯ ಭೋಜನ ಪಂಗ್ತಿಯಲ್ಲಿ ತನ್ನ ಪೂರ್ವಜಾತಿಯ ಪದ್ಧತಿಯಂತೆ ಹೆಂಡದ ಗಡಿಗೆಯನ್ನೇ ತೆಗೆದುಕೊಂಡು ಹೊಕ್ಕನು............ಬಸವನನ್ನು ವೀರಶೈವ ಮತದ ಉದ್ಧಾರಕನೆಂದು ಹೇಳದೆ ಆ ಪವಿತ್ರ ಮತವನ್ನು ಕೆಡಿಸಿದನೆಂದು ನಿರ್ಭೀತಿಯಿಂದ ಹೇಳಬಹುದು. ಬಸವನು ತಾನು ರಾಜನಾಗಬೇಕೆಂಬ ಅಭಿಲಾಷೆಯಿಂದ ಹಿಂಡುಹಿಂಡ ಜಂಗಮರನ್ನೆಲ್ಲಾ ಸೈನಿಕರಂತೆ ತಯಾರ್ಮಾಡಿ ಅವರಿಗೆ ಅನ್ನ ಹಾಕುತ್ತಿದ್ದನೇ ಹೊರತು ಭಕ್ತಿಯಿಂದ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ ಅನ್ನವನ್ನು ಕೊಡುತ್ತಿರಲಿಲ್ಲ. ಅವನಲ್ಲಿ ನಿಜ ಭಕ್ತಿಯಿರದೆ ಅತುಲವಾದ ಯುಕ್ತಿಯಿತ್ತು. ಚೆನ್ನಬಸವ ಮೊದಲಾದ ಇವರೆಲ್ಲರ ವಿಷಯವಾಗಿ ಪುರಾಣಿಕರು ಬೇರೊಂದು ರೀತಿಯಾಗಿ ವರ್ಣನೆಮಾಡಿರುವುದು ಅತ್ಯಂತ ತಪ್ಪೆಂದು ಕಂಡುಬರುತ್ತದೆ." ಇತ್ಯಾದಿ.

ಈ ಪ್ರಕಾರವಾದ ನಿಂದಾ ಪ್ರಚುರಲೇಖನವನ್ನು ಮತದ್ವೇಷಾಂಧರು ಈ ಕಾಲದಲ್ಲಿ ಮತ್ತೊಬ್ಬರಮೇಲೆ ಬರೆದು ಅಗೌರವಪಡಿಸಿ ಮನನೋಯಿಸುವುದೂ, ಅಂಥ ಪುಂಡುತನವನ್ನು ನಡೆಯಿಸಿದವರು ಕೂಡ ನಿರಪರಾಧಿಗಳೆಂದು ಬಿಡಲ್ಪಡುವುದೂ ಸಹ ಸೋಜಿಗವಲ್ಲದೆ ಸಹಜವಲ್ಲ. ಈ ಪ್ರಕರಣವನ್ನು ಕೊನೆಮುಟ್ಟಿಸದೆ ಬಿಡುವುದು ವೀರಶೈವರೆಂಬ ಹೆಸರನ್ನು ತಾಳಿಕೊಂಡಿರುವವರಿಗೆ ತರವಲ್ಲ. ಅದುಕಾರಣ ಮುಂದೇನುಮಾಡಬೇಕೆಂದು ಕುದಿಕುಳಿಗೊಂಡು ಕೆಲವರು ನಮಗೆ ಪತ್ರಗಳನ್ನು ಬರೆದಿರುತ್ತಾರೆ. ಅದು ಅವರ ಮತಾಭಿಮಾನಕ್ಕೆ ಭೂಷಣವಾಗಿರುತ್ತದೆ. ಗುರುಲಿಂಗಜಂಗಮ ದೂಷಣೆಯನ್ನು ಕೇಳಿದರೆ ಅದನ್ನು ಕೂಡಲೇ ನಿವಾರಿಸಬೇಕು. ಅದಕ್ಕೆ ಶಕ್ತಿಯಿಲ್ಲದಿದ್ದರೆ ಆತ್ಮತ್ಯಾಗವನ್ನಾದರೂ ಮಾಡಿಕೊಳ್ಳಬೇಕು. ಇದು ವೀರಶೈವ ಲಕ್ಷಣವೆಂದು ಶಿವಾಗಮ ವಚನವಿದೆ. ಧರ್ಮಶಾಸ್ತ್ರವಿಹಿತವಾದ ಮಾರ್ಗವನ್ನೇ ಹಿಡಿದು ಅಂಥ ದೂಷಣ ಪ್ರತೀಕಾರವನ್ನು ಮಾಡಿಸುವುದು ಸಮಾಜಬಾಂಧವರಿಗೆಲ್ಲಾ ಅವಶ್ಯಕರ್ತವ್ಯವೇ ಆಗಿರುತ್ತದೆ. ಶುಭೋದಯವು ಹಂಚಲ್ಪಡುವ ಯಾವ ಸ್ಥಳದಲ್ಲಾದರೂ ಅದರ ಸಂಪಾದಕರು ಮೊದಲಾದವರಮೇಲೆ ೧ ವರ್ಷಕಾಲದೊಳಗಾಗಿ ಮಾನನಷ್ಟಾಭಿಯೋಗವನ್ನು ಮಾಡಿ ನಿಷ್ಪಕ್ಷಪಾತವಾದ ನ್ಯಾಯನಿರ್ಣಯವನ್ನು ಪಡೆಯಲು ಸಮಾಜಬಾಂಧವರೆಲ್ಲರಿಗೂ ಅವಕಾಶವಿರುತ್ತದೆ. ಅಲ್ಲದೆ ಈಗಣ ಧಾರವಾಡದ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟ ತೀರ್ಮಾನದ ಮೇಲೆ ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಬೇಕಾದ ಅವಶ್ಯಕತೆಯನ್ನು ಬೊಂಬಾಯಿ ಸರ್ಕಾರದವರ ಮನಸ್ಸಿಗೆ ಹತ್ತುವಂತೆ ಮಾಡುವುದೂ ಕೂಡ ವಿಹಿತವಾದ ದಾರಿಯಾಗಿರುತ್ತದೆ. ಇದಕ್ಕಾಗಿ ಒಬ್ಬರಿಬ್ಬರೋ ಒಂದೆರಡು ಕಡೆಯವರೋ ಸಾಹಸಪಟ್ಟು ಫಲವಿಲ್ಲ. ತಮ್ಮ ಮನದೊಳಗಣ ದುಗುಡವನ್ನು ಶತಮುಖವಾಗಿ ಪ್ರಭುತ್ವದವರ ಗಮನಕ್ಕೆ ಬರುವಂತೆ ಮಾಡಬೇಕು. ಊರೂರುಗಳಲ್ಲೆಲ್ಲಾ ವೀರಶೈವರು ಇದಕ್ಕಾಗಿ ಸಭೆಗಳನ್ನು ಮಾಡಿ ನಿರ್ಧಾರಗೊಳಿಸಿ ಬೊಂಬಾಯಿ ಸರ್ಕಾರಕ್ಕೆ ಶ್ರುತಪಡಿಸಿಕೊಳ್ಳಬೇಕು. ಬರುವ ೯ನೆ ವೀರಶೈವ ಮಹಾಸಭೆಯಲ್ಲೂ ಕೂಡ ಈ ವಿಷಯಕವಾದ ಒಂದು ನಿರ್ಧಾರವನ್ನು ಮಾಡುವುದು ಅತ್ಯಂತ ವಿಹಿತವಾದ ಕಾರ್ಯವಾಗಿರುತ್ತದೆ. ಹುಬ್ಬಳ್ಳಿ ಮೊದಲಾದ ಕೆಲ ಮುಖ್ಯಸ್ಥಳಗಳಲ್ಲಿ ಇಂಥ ಪ್ರಯತ್ನವು ಈಗಾಗಲೇ ಮಾಡಲ್ಪಟ್ಟಿರುವುದೆಂದು ಕೇಳಿ ಅವರನ್ನು ಅಭಿನಂದಿಸುತ್ತೇವೆ. ಉಳಿದಕಡೆಯವರೂ ಸಾವಕಾಶಮಾಡದೆ ಕರ್ತವ್ಯತತ್ಪರರಾಗಲೆಂದು ಸೂಚಿಸುತ್ತೇವೆ. ಈ ಸಂಬಂಧವಾಗಿ ನಡೆಯಿಸಬೇಕಾದ ನಡವಳಿಕೆಯನ್ನು ಕುರಿತು ಹುಬ್ಬಳ್ಳಿಯಲ್ಲಿರುವ ಮ|| ಪಾವಟೆ ಸಿದ್ಧರಾಮಪ್ಪ ಬಿ. ಎ. ಎಲ್. ಎಲ್. ಬಿ. ಯವರಿಗೆ ಬರೆದುಕೊಂಡರೆ ತಕ್ಕ ಸಲಹೆಗಳನ್ನು ಅವರು ಕೊಡಲು ಸಿದ್ಧರಾಗಿರುವರೆಂಬುದನ್ನು ಹೇಳಬೇಕಾಗಿಲ್ಲ.

ಅಫ್ಘಾನಿಸ್ಥಾನದ ರಹಸ್ಯ.

ಮೂವರು ಭಾರತೀಯರು ಹೇಗೋ ಸ್ವಲ್ಪ ದ್ರವ್ಯಸಾಹಾಯ್ಯವನ್ನು ಪಡೆದುಕೊಂಡು ೧೯೧೬ ನೆ ವರ್ಷದಲ್ಲಿ ಕಾಬೂಲ್ ಪಟ್ಟಣಕ್ಕೆ ಹೋಗಿ ಒಂದು ನಡುಬೀದಿಯಲ್ಲಿ ವಾಸಮಾಡಿಕೊಂಡು, ನಾವು ಭರತಖಂಡದ ಪ್ರಭುತ್ವವನ್ನು ತಲೆಕೆಳಗುಮಾಡುವ ಒಂದು ಗೂಢಸಂಘದ ಅಧಿಕಾರಿಗಳೆಂದು ಹೇಳಿಕೊಳ್ಳುತ್ತಿದ್ದರು. ಇವರ ಹೆಸರುಗಳು-ಒಬೇದುಲ್ಲಾ, ಅಜೀಜ್, ಬರ್ಕತುಲ್ಲಾ ಎಂಬುದಾಗಿದ್ದುವು. ಇವರಲ್ಲಿ ೧ ನೆಯವನು ಇವರು ಸ್ಥಾಪಿಸಲಿಕ್ಕಿರುವ ರಾಜ್ಯಕ್ಕೆ ಮುಖ್ಯಮಂತ್ರಿಯೆಂತಲೂ, ೨ ನೆಯವನು ೨ ನೆ ಮಂತ್ರಿಯೆಂತಲೂ ಹೇಳಿಕೊಳ್ಳುತ್ತಿದ್ದರು. ಮಹೇಂದ್ರಪ್ರತಾಪ್ ಎಂಬ ಮತ್ತೊಬ್ಬನು ಇವರಮೇಲಣ ಅಧಿಕಾರಿಯಾಗಿದ್ದನು. ಇವನು ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣದಿಂದ ಇಲ್ಲಿಗೆ ಕಳುಹಿಸಲ್ಪಟ್ಟಿದ್ದವನು. ಇವನು ಸ್ವಲ್ಪ ಮತಿಭ್ರಷ್ಟನಂತೆ ಕಾಣಿಸಿಕೊಳ್ಳುತ್ತಿದ್ದನು. ಇವನು ಕಾಬೂಲ್ ಪಟ್ಟಣವನ್ನು ೧೯೧೮ ನೆ ವರ್ಷದಲ್ಲಿ ಬಿಟ್ಟುಹೋದನು. ಇವರ ಗೂಢಪ್ರಯತ್ನಗಳನ್ನು ಕುರಿತು ಆಗಣ ಅಮೀರರಾಗಿದ್ದ ಹಬಿಬುಲ್ಲಾರವರು ತಿಳಿದಿದ್ದರೂ ಅದನ್ನು ತೃಣದಂತೆ ಗಣಿಸಿ ಉಪೇಕ್ಷಿಸಿಕೊಂಡಿದ್ದರು. ಒಂದುದಿನ ಅವರು ಕುದುರೆ ಮೇಲೆ ಕುಳಿತು ಹೋಗುತ್ತಿದ್ದಾಗ ಒಬೇದುಲ್ಲಾನು ಇದಿರಿಗೆ ಸಿಕ್ಕಲು, ನಕ್ಕು "ಇದೋ ಭವಿಷ್ಯದ್ಭರತಖಂಡದ ರಾಜನು ಬರುತ್ತಾನೆ" ಎಂದು ಹೇಳಿ ಹಾಸ್ಯಮಾಡಿದರಂತೆ. ಇದನ್ನು ಕೇಳಿ ಅವನು ತಲೆಬಗ್ಗಿಸಿಕೊಂಡು ಹೊರಟುಹೋದನು. ಸ್ವಲ್ಪದಿನಗಳಲ್ಲಿ ಈ ಮೂವರಿಗೂ ತಮ್ಮ ಗೂಢೋದ್ದೇಶವನ್ನು ನೆರವೇರಿಸಲಿಕ್ಕೆ ಸಮಯವು ಸಿಕ್ಕಿತು. ಆ ಕಾಲದಲ್ಲಿ ಮಹಮ್ಮದ್‌ಸಾದಿಯೆಂಬುವವನೊಬ್ಬನನ್ನು ತುರ್ಕಿಸ್ಥಾನದಲ್ಲಿ ಸೇನೆಯನ್ನು ತಿದ್ದಿಸುವುದಕ್ಕಾಗಿ ಇಟ್ಟುಕೊಂಡಿದ್ದರು. ಜರ್ಮನಿಯ ಪೂರ್ವದೇಶ ವ್ಯಾಪಾರ ಸಭಾಧಿಕಾರಿಯಾದ ಬಾರನ್‌ವಾನ್ ಹಂಕರನ್ ಎಂಬುವನ ಬಳಿಗೆ ಈ ಸಾದಿಯನ್ನು ತುರ್ಕಿ ಮುಖ್ಯಮಂತ್ರಿಯಾಗಿದ್ದ ಎನ್ವರ್‌ಪಾಷಾನು ದೊಡ್ಡ ವಾಕ್ಸಹಾಯದೊಡನೆ ಕಳುಹಿಸಿಕೊಟ್ಟನು. ಅವನ ಮೂಲಕ ಈ ಸಾದಿಯು ೧|| ಕೋಟಿ ರೂ. ಗಳನ್ನು ಜರ್ಮನಿಯಿಂದ ಪಡೆದು ಭರತಖಂಡದಲ್ಲಿ ಪ್ರಳಯವನ್ನುಂಟುಮಾಡಬೇಕೆಂಬ ಸಂಕಲ್ಪಕ್ಕೆ ಪ್ರೋತ್ಸಾಹಿತನಾದನು. ಆ ಕೆಲಸವನ್ನು ಹೇಗೆ ಸಾಗಿಸಬೇಕೆಂದು ಈತನು ಯೋಚಿಸುತ್ತಿರುವಾಗ ಮೇಲೆಹೇಳಿದ ತ್ರಿಮೂರ್ತಿಗಳಿಗೂ ಇವನಿಗೂ ಸಂಘಟನೆಯುಂಟಾಯಿತು. ಅವರಿಗೆ ಇವನು ಸ್ವಲ್ಪ ಹಣವನ್ನು ಕೊಟ್ಟನು. ಕೆಲ ದಿನಗಳ ಬಳಿಕ ಈ ಸಾದಿಗಿಂತಲೂ ಬಲು ಕೆಟ್ಟವನಾದ ಮಹಮ್ಮದ್‌ತರಾಯಿಯೆಂಬುವವನು ಈ ರಾಜದ್ರೋಹಿಗಳ ಗುಂಪಿಗೆ ಸೇರಿಕೊಂಡನು. ಈತನು ಅಫ್ಘಾನಿಸ್ಥಾನದ ಹಿಂದಣ ಅಮೀರರಾದ ಅಬ್ದುಲ್ ರಹಿಮಾನರಿಂದ ದೇಶಭ್ರಷ್ಟತೆಯನ್ನು ಹೊಂದಿ ತುರ್ಕಿಸ್ಥಾನಕ್ಕೆ ಹೋಗಿ ವಾಸಮಾಡಿಕೊಂಡಿದ್ದು, ಆ ಅಮೀರರು ಸತ್ತನಂತರ ಕಾಬೂಲಿಗೆ ಮರಳಿ ಬಂದು, ಅಮೀರ್ ಹಬಿಬುಲ್ಲಾರವರ ದಯೆಯನ್ನು ಸಂಪಾದಿಸಿಕೊಂಡು ಅವರ ಮೆಚ್ಚುಗೆಗೆ ಪಾತ್ರವಾದ ಒಂದು ವಾರ್ತಾಪತ್ರಿಕೆಯನ್ನು ಸಾಗಿಸುತ್ತಿದ್ದನು. ಇವನ ಜತೆಯಲ್ಲಿ ಅಬ್ದುಲ್‌ಗನಿಯೆಂಬ ಮತ್ತೊಬ್ಬನು ಆ ಪತ್ರಿಕೆಯ ಉಪಸಂಪಾದಕನಾಗಿದ್ದನು. ಈತನು ಪಂಜಾಬಿನಲ್ಲಿ ವಿದ್ಯಾಭ್ಯಾಸ ಶಾಖೆಯ ಒಂದು ದೊಡ್ಡ ಉದ್ಯೋಗದಲ್ಲಿದ್ದು ಕಾಬೂಲ್ ಅಮೀರರ ಇಷ್ಟಪ್ರಕಾರ ಆ ದೇಶಕ್ಕೆ ಹೋದವನು. ಈತನು ಮೇಲೆ ಕಂಡ ವಾರ್ತಾಪತ್ರಿಕೆಯಲ್ಲಿ ಒಂದುಸಲ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯ ಆಧಿಕ್ಯವನ್ನು ಕುರಿತು ಬರವಣಿಗೆಯನ್ನು ಬರೆದಿದ್ದುದಕ್ಕಾಗಿ ಅಮೀರರಿಂದ ಶಿಕ್ಷಿತನಾಗಿ ಕಾರಾಗೃಹವಾಸವನ್ನನುಭವಿಸುತ್ತಿದ್ದನು. ಹಬೀಬುಲ್ಲಾರವರು ಕೊಲ್ಲಲ್ಪಟ್ಟನಂತರ ಇವನು ಅಮೀರ್ ಅಮಾನುಲ್ಲಾರವರಿಂದ ಕಾರಾಗೃಹ ವಿಮುಕ್ತನಾಗಿ, ಮಂತ್ರಿಯಾಗಿ ಸೇರಿಸಿಕೊಳ್ಳಲ್ಪಟ್ಟಿರುವನು. ರಾವಲ್ಪಿಂಡಿಯಲ್ಲಿ ಇಂಗ್ಲೀಷರಿಗೂ ಅಫ್ಘನ್ ಪ್ರಭುತ್ವದವರಿಗೂ ಮೊನ್ನೆ ಸಂಧಿ ನಡೆವಾಗ್ಗೆ ಅಫ್ಘನ್ ರಾಯಭಾರಿಗಳಾಗಿ ಬಂದಿದ್ದವರಲ್ಲಿ ಈತನೂ ಒಬ್ಬನಾಗಿದ್ದನು. ಈತನು ಬಹಳ ನೆಮ್ಮದಿಯಾದವನೂ ಯೋಗ್ಯನೂ ವೃದ್ಧನೂ ಆಗಿರುವನು. ಮಹಮ್ಮದ್ ತರಾಯಿಯು ವೃತ್ತಪತ್ರಿಕೆಯಲ್ಲಿ ಅಂಥ ವಿರುದ್ಧ ಸಂಗತಿಯು ಪ್ರಕಟವಾದುದಕ್ಕೆ ಹಬೀಬುಲ್ಲಾರವರ ಕ್ಷಮೆಯನ್ನು ತಾನು ಕೇಳಿಕೊಂಡು, ಮಹಮ್ಮದ್‌ಗನಿಯೇ ಅದಕ್ಕೆ ಬಾಧ್ಯನೆಂದು ತೋರಿಸಿಬಿಟ್ಟು ತಾನು ಅಮೀರರ ಕೃಪೆಗೆ ಪಾತ್ರನಾಗಿ ಅದೇಸಮಯದಲ್ಲಿ ತನ್ನ ಮಗಳನ್ನು ಅಮೀರರ ಮಗನಾದ ಅಮಾನುಲ್ಲಾರವರಿಗೆ ಕೊಟ್ಟು ಮದುವೆಮಾಡಿದನು. ಆಗ ಆತನ ಪದವಿಯು ಬಹಳ ದೃಢವಾಯಿತು. ಈ ತರಾಯಿಯು ೧೯೧೭ ನೆ ವರ್ಷದಲ್ಲಿ ಯಾವುದೋ ಒಂದು ರಹಸ್ಯಕಾರ್ಯಕ್ಕಾಗಿ ಕಾಬೂಲನ್ನು ಬಿಟ್ಟುಹೋದನು. ೧೯೧೮ ನೆ ವರ್ಷದಲ್ಲಿ ಮಹಮ್ಮದ್ ತರ್ಜಿಯೆಂಬ ಹೆಸರನ್ನು ಧರಿಸಿ, ತಲೆಯ ಮೇಲೆ ಒಂದು ತುರ್ಕಿ ಟೊಪ್ಪಿಗೆಯನ್ನು ಧರಿಸಿಕೊಂಡು ಬಲು ಡಬ್ಬಿನಿಂದ ಬೋಲ್ಷೆವಿಕ್ಕರ ಪ್ರೋತ್ಸಾಹವನ್ನು ಹೊಂದಿ ಭರತಖಂಡದಲ್ಲಿ ಹಣವನ್ನು ಚೆಲ್ಲಿ ಇಲ್ಲಿಯ ಆಂಗ್ಲ ಪ್ರಭುತ್ವದ ಮೇಲೆ ವಿರುದ್ಧವಾಗಿ ಕಾರ್ಯಭಾರ ನಡೆಯಿಸಲು ಉದ್ದೇಶಿಸಿ ಮೇಲೆಹೇಳಿದ ತ್ರಿಮೂರ್ತಿಗಳೊಡನೆ ಸೇರಿದನು. ಭರತಖಂಡಕ್ಕೆ ಹಣವನ್ನು ಆಗಿಂದಾಗ್ಗೆ ಕಳುಹಿಸುತ್ತ ರಾಜದ್ರೋಹ ಮೊದಲಾದ ಅನರ್ಥಗಳನ್ನು ಹಬ್ಬಿಸುವುದಕ್ಕೆ ಆರಂಭಿಸಿದನು. ಆದರೆ ತುರ್ಕಿಯ ಎನ್ವರ್‌ಪಾಷಾನಿಗೂ ಜರ್ಮನಿಯವನಾದ ಕುಮರಾಘನಿಗೂ ಈ ರಹಸ್ಯ ಕೂಟದವರು ಮಾಡುತ್ತಿದ್ದ ಅಲ್ಪಪ್ರಯತ್ನಗಳಿಂದ ತೃಪ್ತಿಯುಂಟಾಗಲಿಲ್ಲ. ಅಫ್ಘಾನಿಸ್ಥಾನದವರಿಂದ ಭರತಖಂಡದಮೇಲೆ ದಂಡೆತ್ತಿಸುವಂತೆ ಮಾಡಬೇಕೆಂದು ಅವರು ಮಹಮ್ಮದ್‌ತರ್ಜಿ ಮೊದಲಾದ ಕೂಟದವರಿಗೆ ಅಪ್ಪಣೆಮಾಡಿದರು. ಆದರೆ ಆಗಣ ಅಮೀರರಾದ ಹಬ್ಬೀಬುಲ್ಲಾರವರು ಇವರ ವಿಷಯದಲ್ಲಿ ಅನುಕೂಲವಾಗಿ ಮಾತನಾಡುತ್ತಿದ್ದರೂ ಅವರು ಹೇಳಿದಂತೆ ಕಾರ್ಯವನ್ನು ಸಾಗಿಸಲು ಮಾತ್ರ ಲೇಶವೂ ಸಾಹಸಪಡಲಿಲ್ಲ. ಬಳಿಕ ಆ ಹಬಿಬುಲ್ಲಾರವರು ಕೊಲ್ಲಲ್ಪಟ್ಟರು. (ಆ ಕೊಲ್ಲಲ್ಪಟ್ಟ ಸಂಗತಿಯನ್ನು ವಾಚಕರು ಇನ್ನೂ ಮರೆದಿರಲಾರರು) ಅವರನ್ನು ಕೊಂದವರಲ್ಲಿ ಈ ಮೇಲೆಕಂಡ ರಹಸ್ಯಕೂಟದವರ ಸಂಬಂಧವೂ ಇದ್ದಿತೆಂಬುದರಲ್ಲಿ ಸಂಶಯವೇನೂ ಇಲ್ಲ. ಏಕೆಂದರೆ-ಅಮೀರ್ ಹಬೀಬುಲ್ಲಾರವರು ಸತ್ತ ಬಳಿಕ ನಸ್ರುಲ್ಲಾಖಾನರು ಅಮೀರರಾಗಬೇಕೆಂದು ಪ್ರಯತ್ನಿಸಲಾಗಿ ಈ ರಹಸ್ಯಕೂಟದವರು ಅವರನ್ನು ತಪ್ಪಿಸಿ ಅಮಾನುಲ್ಲಾಖಾನನನ್ನು ಅಮೀರನನ್ನಾಗಿ ಮಾಡುವುದಕ್ಕೆ ಪ್ರಯತ್ನಿಸಿದರು. ಈ ಗುಂಪಿನ ಪಕ್ಷದವರಿಗೆ ಬೇಕಾದಷ್ಟು ಹಣವನ್ನು ಕೊಡಲು ಅಮಾನುಲ್ಲಾಖಾನನ ತಾಯಿಯು ಸಿದ್ಧಳಾಗಿದ್ದಳು. ಆ ಬಲದಿಂದ ಅಫ್ಘನ್ ಸೈನ್ಯವು ಇವರಿಗೆ ಸಹಾಯವಾಗಿ ನಿಲ್ಲುವಂತಾಯಿತು. ಅಮೀರನಾದ ಅಮಾನುಲ್ಲಾಖಾನನು ಜನ್ಮಾರಭ್ಯ ಪರದೇಶಗಳಿಗೆಲ್ಲಿಗೂ ಹೋಗಿ ಬಂದವನಲ್ಲ. ಅದುಕಾರಣ ಇವನು ಯಥಾಜಾತನಾಗಿರುತ್ತ ಮೇಲೆ ಕಂಡ ಸೂತ್ರಧಾರಕರ ಕೈಗೊಂಬೆಯಂತಿರುತ್ತಾನೆ. ಈತನು ಮಹಮ್ಮದ್ ತರ್ಜಿಯ ದುರ್ಬೋಧೆಗೆ ಕಿವಿಗೊಟ್ಟು ಭರತಖಂಡದ ಪ್ರಜೆಗಳೆಲ್ಲಾ ಆಂಗ್ಲಪ್ರಭುತ್ವದಮೇಲೆ ಅಸಂತುಷ್ಟರಾಗಿರುವರೆಂದೂ ಅಲ್ಲಿ ವಿಪ್ಲವ ಪ್ರಯತ್ನಗಳು ನಡೆಯುತ್ತಿರುವುವೆಂದೂ ಈಗ ನಾವು ಅದರ ಮೇಲೆ ದಂಡೆತ್ತಿಹೋದರೆ ಭಾರತೀಯರೆಲ್ಲಾ ನಮಗೆ ಸಹಾಯಭೂತರಾಗುವಕಾರಣ ಸುಲಭವಾಗಿ ಭರತಖಂಡವು ನಮ್ಮ ಕೈವಶವಾಗಿ ಹೋಗುವುದೆಂದೂ, ಬಳಿಕ ನಾವು ಮಧ್ಯಾಸ್ಯಾ ಭರತಖಂಡ ಮೊದಲಾದುವುಗಳಲ್ಲೆಲ್ಲಾ ವ್ಯಾಪಕತೆಯನ್ನು ಪಡೆದು ಭೋಗಭಾಗ್ಯಯಶೋವೈಭವಗಳನ್ನು ಲೋಕೋತ್ತರವಾಗಿ ಅನುಭವಿಸಬಹುದೆಂದೂ ಸವಿಮಾತುಗಳನ್ನು ಹೇಳಿ ಉತ್ಸಾಹಪಡಿಸಲಾಗಿ, ಅಮಾನುಲ್ಲಾಖಾನನು ಇದೆಲ್ಲವೂ ನಿಜವೆಂದು ನಂಬಿ ಮನಸ್ಸಿನ ಮಂಡಿಗೆಯನ್ನು ತಿನ್ನುತ್ತ ಈ ರಹಸ್ಯಕೂಟದವರಿಗೆ ಬೇಕಾದ ಸಾಹಾಯಗಳನ್ನು ತಾನು ಮಾಡುವುದಕ್ಕೂ ಬೊಕ್ಕಸದ ಹಣವನ್ನೆಲ್ಲಾ ಅವರ ಉದ್ದೇಶಸಾಧನೆಗಾಗಿ ಸೂರೆಕೊಡುವುದಕ್ಕೂ ನಿಶ್ಚಯಿಸಿ ಅಪ್ಪಣೆಮಾಡಿಬಿಟ್ಟನು. ಅದರ ಮೇಲೆ ಅಫ್ಘಾನಿಸ್ಥಾನದ ಸೈನ್ಯವು ಭರತಖಂಡದ ಮೇಲೆ ಸಾಗಲುಪಕ್ರಮಿಸಿತು. ಮತ್ತೂ ಹೀಗೆ ದಂಡನ್ನು ಕಳುಹಿಸುವುದಕ್ಕೆ ಮುಂಚೆಯೇ ಭರತಖಂಡದಲ್ಲಿ ವಿಪ್ಲವವನ್ನು ಹೆಚ್ಚಿಸುವುದು ಅವಶ್ಯಕವೆಂದು ರಹಸ್ಯಕೂಟದವರು ಆಲೋಚಿಸಿ, ಅದಕ್ಕಾಗಿ ಬಹಳ ಹಣವನ್ನು ವೆಚ್ಚಮಾಡಿದರು. ಈ ನಿಮಿತ್ತವಾಗಿಯೇ ಸಿಮ್ಲಾದಲ್ಲಿ ಅಫ್ಘನ್ ರಾಯಭಾರಿಯಾಗಿದ್ದ ಅಬ್ದುಲ್ ರಹಿಮಾನ್ ಎಂಬುವನನ್ನೂ ಪೆಶಾವರಿನಲ್ಲಿ ಪೋಸ್ಟ್‌ಮ್ಯಾಸ್ಟರಾಗಿದ್ದ ಗುಲಾಂ ಹೈದರ್ ಎಂಬುವನನ್ನೂ ಇವರು ನಿಯೋಗಿಸಿದ್ದರು. ಆದರೆ ಇವರಿಬ್ಬರಲ್ಲಿ ಮೊದಲನೆಯವನು ಭಯಪಟ್ಟು ಈ ಪ್ರಯತ್ನಕ್ಕೆ ಸಿಲ್ಕದೆ ದೂರಸ್ಥನಾದನು. ೨ ನೆ ಗುಲಾಂ ಹೈದರನು ಪ್ರಳಯ ಪ್ರಭುತ್ವಕ್ಕೆ ಅನುಮೋದಿಸಿ ಅದರಲ್ಲಿ ಸಾಹಸಪಡುವುದಕ್ಕೆ ಸಿದ್ಧನಾದನು. ರತ್ನಕಂಬಳಿಗಳನ್ನು ಕೊಳ್ಳುವವನಂತೆ ನಟಿಸುತ್ತ ಗುಟ್ಟಾಗಿ ನಾನಾತರದ ಪ್ರಜೆಗಳಲ್ಲಿ ಸಂಭಾಷಿಸುತ್ತ ಅವರಿಗೆ ಬೇಕಾದಷ್ಟು ಉದಾರವಾಗಿ ಹಣವನ್ನು ಕೊಡುತ್ತಾ ಕಡೆಗೆ ಆ ಪ್ರಾಂತದ ಪಠಾಣರನ್ನೂ ಅಫ್ಘಾನಿಗಳನ್ನೂ ಆಂಗ್ಲ ಸೇನೆಯಮೇಲೆ ಬೀಳುವಂತೆಯೂ ಹಾಗೆ ಬಿದ್ದ ರಾತ್ರಿಯೇ ಖೈಬರ್ ಕಣಿವೆಯ ಮಾರ್ಗದಿಂದ ಅಫ್ಘನ್ ಸೈನ್ಯವು ಭರತಖಂಡವ ಎಲ್ಲೆಯೊಳಕ್ಕೆ ನುಗ್ಗಿ ಬರುವಂತೆಯೂ ಏರ್ಪಡಿಸಿದನು. ಆ ಸಮಯದಲ್ಲೇ ಭರತಖಂಡದೊಳಗೆ ಕೆಲ ರಾಜದ್ರೋಹಿಗಳೂ ಅದೂರದರ್ಶಿಗಳೂ ಸ್ವಾರ್ಥೈಕಸಾಧಕರೂ ದೇಶದ್ರೋಹಿಗಳೂ ಆದ ಜನರು ಏನಾದರೊಂದು ವಿರುದ್ಧಕಾರ್ಯಭಾಗವಾಡಬೇಕೆಂದು ಯೋಚಿಸುತ್ತಲಿದ್ದರು. ಕೆಲವರು ರೌಲತ್‌ಬಿಲ್ಲಿನ ವಿಷಯವಾಗಿ ಆಗ್ರಹಪರವಶರಾಗಿ ಪ್ರಭುತ್ವದವರ ವಿರುದ್ಧವಾಗಿ ವಿಪ್ಲವವನ್ನೆಬ್ಬಿಸಲು ಸಾಹಸಪಡುತ್ತಿದ್ದರು. ಆದರೆ ಇವರುಗಳಿಗೆಲ್ಲಾ ಕಾಬೂಲಿನಲ್ಲಿ ನಡೆದಿರುವ ರಹಸ್ಯಪ್ರಯತ್ನಗಳ ಗಂಧವೇ ಗೊತ್ತಿರಲಿಲ್ಲ. ಮೇಲೆಕಂಡ ಕಾಬೂಲ್ ರಹಸ್ಯಕೂಟದವರು ಮೇ ತಿಂಗಳಲ್ಲಿ ಭರತಖಂಡದ ಮೇಲೆ ದಂಡಯಾತ್ರೆಯನ್ನು ಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದರು. ಭರತಖಂಡದಲ್ಲಿ ರೌಲತ್‌ಬಿಲ್ಲಿನ ವಿಷಯವಾದ ಗದ್ದಲವು ಏಪ್ರಿಲ್ ತಿಂಗಳಲ್ಲೇ ಆರಂಭಿಸಿದ್ದಿತು. ಅದರಮೇಲೆ ಕಾಬೂಲ್ ರಹಸ್ಯಕೂಟದವರು ತಮ್ಮ ದಂಡಯಾತ್ರೆಯನ್ನು ಆ ಕೂಡಲೇ ಸಾಗಿಸುವುದಕ್ಕೆ ಯತ್ನಿಸಿದರು. ಆಗ ಅಮೀರ್ ಅಮಾನುಲ್ಲಾಖಾನರು ಒಂದು ದರ್ಬಾರನ್ನು ಮಾಡಿದರೆಂತಲೂ, ಭರತಖಂಡವು ಈಗ ದಿಕ್ಕಿಲ್ಲದೆ ನಿಂತಿರುವುದರಿಂದ ನಾವು ಅದರಮೇಲೆ ಬಿದ್ದು ದೋಚಿಕೊಳ್ಳುವುದಕ್ಕೆ ಇದೇ ತಕ್ಕ ಸಮಯವೆಂದು ಉಪನ್ಯಾಸಮಾಡಿದರೆಂತಲೂ ವರ್ತಮಾನಬಂದಿದ್ದಿತು. ಮತ್ತು ಭಾರತೀಯ ಪ್ರಜೆಗಳು ಈಗ ನಾನಾತೆರದಲ್ಲಿ ಹಿಂಸೆಗೊಳ್ಳುತ್ತಿರುವುದರಿಂದ ಅವರನ್ನು ರಕ್ಷಿಸುವುದಕ್ಕಾಗಿ ನಾವು ಭರತಖಂಡದ ಮೇಲೆ ದಂಡಯಾತ್ರೆಯನ್ನು ಸಾಗಿಸಬೇಕಾಗಿ ಬಂದಿದೆಯೆಂದು ಅಫ್ಘನ್ನರು ಹೇಳಿಕೊಳ್ಳುತ್ತಿದ್ದರಂತೆ! ಬಳಿಕ ರಹಸ್ಯಕೂಟದವರು ಮೇ ತಿಂಗಳು ತಾ|| ೧೦ ರಲ್ಲಿ ತಮ್ಮ ದಂಡಯಾತ್ರೆಯನ್ನು ಆರಂಭಿಸಿದರು. ಪೆಶಾವರ್ ಪಟ್ಟಣದಲ್ಲಿದ್ದ ಆಂಗ್ಲೇಯರನ್ನು ಕೊಂದು ಖೈಬರ್‌ಕಣಿವೆಯ ಮಾರ್ಗವಾಗಿ ನುಗ್ಗಬೇಕೆಂದು ಯೋಚಿಸಿಕೊಂಡು ಹೊರಟರು. ಆದರೆ ಈ ರಹಸ್ಯಾಲೋಚನ ಸಂಘದಲ್ಲಿ ಅನೇಕರಿದ್ದುದರಿಂದ ಗುಟ್ಟು ಬೇಗನೆ ಹೊರಬಿದ್ದಿತು. ಅದರಮೇಲೆ ಪೆಶಾವರಿನಲ್ಲಿದ್ದ ಆಂಗ್ಲಾಧಿಕಾರಿಗಳು ಎಚ್ಚತ್ತು ತಕ್ಕ ಸನ್ನಾಹವನ್ನು ಮಾಡಿಕೊಂಡರು. ಶನಿವಾರದ ದಿನ ಶತ್ರುಗಳು ತಮ್ಮಮೇಲೆ ದುರಾಲೋಚನೆಯ ಕಾರ್ಯಭಾಗಗಳನ್ನು ನಡೆಯಿಸುವವರಾಗಿದ್ದಾರೆಂದು ಗೊತ್ತಾಗಲು, ಅದಕ್ಕೆ ಮುಂದಿನ ಶುಕ್ರವಾರದ ದಿನವೇ ಪೆಶಾವರ್ ಪಟ್ಟಣದ ಸುತ್ತಲೂ ಕಾವಲುಹಾಕಿ ಗುಲಾಂ, ಹೈದರ್ ಮೊದಲಾದ ರಹಸ್ಯಕೂಟಪಕ್ಷದ ಜನರನ್ನು ಹಿಡಿದು ರಂಗೂನಿಗೆ ಸಾಗಿಸಿಬಿಟ್ಟರು. ಈ ಸಂಗತಿಯು ಗೊತ್ತಾದಕೂಡಲೇ ಖೈಬರ್ ಕಣಿವೆಯ ಮಾರ್ಗವಾಗಿ ಬರಬೇಕಾಗಿದ್ದ ಅಫ್ಘನ್ ಸೈನ್ಯವು ಅಲ್ಲೇ ಧೈರ್ಯಗುಂದಿ ನಿಂತಿತು. ಮುಂದೆ ಅಫ್ಘಾನಿಸ್ಥಾನಕ್ಕೂ ಭಾರತ ಪ್ರಭುತ್ವದವರಿಗೂ ಯುದ್ಧನಡೆದುದೂ, ಕಡೆಗೆ ಸಂಧಿಯಾದುದೂ ಇವೆಲ್ಲಾ ನಮ್ಮ ಪತ್ರಿಕಾವಾಚಕರಿಗೆ ತಿಳಿದೇ ಇವೆ. ಮೇಲೆಕಂಡ ರಹಸ್ಯಕೂಟದ ಮುಖಂಡರಾದ ತರ್ಜಿ ಸಾದಿ ಮೊದಲಾದವರುಗಳು ಇನ್ನೂ ಸಿಕ್ಕಿಲ್ಲ. ಅವರಿಗೆ ತಲೆತಪ್ಪಿಸಿಕೊಂಡಿರುವ ಎನ್ವರ್‌ಪಾಷಾ ಮೊದಲಾದವರೂ ಬೋಲ್ಷೆವಿಕ್ಕರೂ ಸಹ ಅಂತರಂಗ ಸಹಾಯಕರಾಗಿಯೂ ಪ್ರೋತ್ಸಾಹಕರಾಗಿಯೂ ಇದ್ದಾರೆ. ಯಾವಗಳಿಗೆಯಲ್ಲಿ ಯಾವತೆರದ ವಿದ್ರೋಹವಿಪ್ಲವಾದಿಗಳನ್ನು ಅವರು ಹಬ್ಬಿಸುವರೆಂಬುದು ಗೊತ್ತಿಲ್ಲ. ಇಂಥವರುಗಳಿಗೆ ಇಂಬುಗೊಡತಕ್ಕ ವಿದ್ರೋಹಿಗಳು ಕೂಡ ಕೆಲಕೆಲರು ಭರತಖಂಡದಲ್ಲಿ ಇದ್ದರೂ ಇರಬಹುದು. ಆದರೆ ಇಂಥವರ ಸುಳಿವನ್ನೆಲ್ಲಾ ಭೇದಿಸಲು ಭಾರತ ಪ್ರಭುತ್ವದವರು ಸಹಸ್ರಾಕ್ಷರಾಗಿರುತ್ತಾರೆಂಬುದಕ್ಕೆ ಸಂಶಯವಿಲ್ಲ.

ಮೈಸೂರು ಮಹಾರಾಜಾ ಕಾಲೇಜಿನ ಜನ್ಮದಿನೋತ್ಸವವು (ಕಾಲೇಜ್ ಡೆ) ಬರುವ ಅಕ್ಟೋಬರ್ ತಾ|| ೨ ರಲ್ಲಿ ಜರುಗುವುದು. ಆ ಕಾಲದಲ್ಲಿ ಕಾಲೇಜಿನ ಪೂರ್ವದ ವಿದ್ಯಾರ್ಥಿಗಳೆಲ್ಲರೂ ಜನ್ಮದಿನೋತ್ಸವದ ಸಂಘದ ಅಧ್ಯಕ್ಷರಾದ ಸರದಾರ್ ಎಂ. ಕಾಂತರಾಜ ಅರಸಿನವರನ್ನು ಬರಮಾಡಿಕೊಂಡು ಅವರಿಗೆ ಸಂಸ್ಥಾನದ ಮಂತ್ರಿಪದವಿಯು ದೊರೆದುದಕ್ಕಾಗಿ ತಮ್ಮ ಅಭಿನಂದನವನ್ನು ತಿಳಿಸುವರು. ಈ ಸಮಾರಂಭಕ್ಕೆ ಕಾಲೇಜಿನ ಪೂರ್ವದ ವಿದ್ಯಾರ್ಥಿಗಳೆಲ್ಲರೂ ದಯಮಾಡಿಸಬೇಕಲ್ಲದೆ ತಂತಮ್ಮ ಚಂದಾದ್ರವ್ಯವನ್ನು ಟ್ರಿಜರಾದ ಕಾಲೇಜಿನ ಪ್ರಿನ್ಸಿಪಾಲ್ ಮ|| ಎಚ್. ಎಸ್. ಸುಬ್ಬರಾಯರಲ್ಲಿಗೆ ಕಳುಹಿಸಿಕೊಡಬೇಕಾಗಿ ಸಂಘದ ಸೆಕ್ರೆಟರಿಗಳು ಪ್ರಾರ್ಥಿಸುತ್ತಾರೆ.

ಪತ್ರವ್ಯವಹಾರ.

೯ ನೆಯ ವೀರಶೈವ ಮಹಾಸಭೆ.

ಬೀರೂರಿನ ವೀರಶೈವ ಮಹಾಜನರು ೯ ನೆಯ ವೀರಶೈವಮಹಾಸಭೆಯನ್ನು ತಮ್ಮಲ್ಲಿ ಕೂಡಿಸುತ್ತೇವೆಂದು ವಹಿಸಿಕೊಂಡಿದ್ದರಷ್ಟೆ. ಈ ಕಾರ್ಯವನ್ನು ಅವರು ಕಳೆದವರ್ಷ ಮಾಡಲು ಅನಾನುಕೂಲವಾಯಿತು. ಆದರೆ ಈ ಸಾರಿ ಮಾಡುತ್ತಾರೆಯೋ ಇಲ್ಲವೋ ಎಂಬುದು ಇನ್ನೂ ಪ್ರಕಟವಾಗಿಲ್ಲ. ಕಾಲವೇನೋ ಸಮೀಪಿಸಿತು. ಮೈಸೂರಿನ ವೀರಶೈವ ಮಹಾಜನಗಳು ತಮ್ಮಲ್ಲಿ ಈ ಸಾರಿ ಮಹಾಸಭೆಯನ್ನು ಕೂಡಿಸುವ ಯೋಚನೆಯಲ್ಲಿದ್ದಾರೆಂದು ಈ ಮುಂಚೆ ಪ್ರಕಟವಾಗಿದ್ದಿತು. ಆ ವಿಷಯವು ಏನಾಯಿತೋ ತಿಳಿಯಲಿಲ್ಲ.

ಬೀರೂರಿನ ವೀರಶೈವ ಮಹಾಜನಗಳಿಂದ ಈಸಾರಿಯಾದರೂ ಮಹಾಸಭಾಕಾರ್ಯವು ನಡೆದರೆ ಸಂತೋಷವೇ ಸರಿ. ಇಲ್ಲವಾದರೆ ಅನ್ಯರು ಮಾಡಲಿಕ್ಕಾದರೂ ಅವಕಾಶವಿರುವಂತೆ ಮಾಡುವುದು ಉತ್ತಮ. ಸಮಾಜದ ಈ ಮಹತ್ಕಾರ್ಯದ ವಿಷಯದಲ್ಲಿ ಬೀರೂರಿನ ಮಹಾಜನಗಳಮೇಲೆ ವಿಶೇಷವಾದ "ಜವಾಬ್ದಾರಿ" ಇರುವುದರಿಂದ ಅವರು ಬರುವ ವಾರದಲ್ಲಿಯೇ ತಮ್ಮ ಉದ್ದೇಶವನ್ನು ಪ್ರಕಟಿಸಬೇಕಾಗಿ ಪ್ರಾರ್ಥನೆ. ಎಚ್.

ತಮ್ಮಲ್ಲಿ ನಡೆಯಿಸುವುದಕ್ಕೆ ಅವಕಾಶಕೊಡಬೇಕೆಂದು ರಾಜಧಾನಿಯ ವೀರಶೈವ ಮಹಾಜನರು ಬೀರೂರಿನವರಿಗೂ ಸ್ಟಾಂಡಿಂಗ್ ಕಮಿಟಿ ಚೇರ್ಮನ್ನರಿಗೂ ಬರೆದುಕೊಂಡ ಪತ್ರಕ್ಕೆ ಎರಡುಕಡೆಯವರ ಉತ್ತರವೂ ಇನ್ನೂ ಬಂದಿಲ್ಲವೆಂಬುದನ್ನು ನಾವು ಬಲ್ಲೆವು. ತಡವಾದಮೇಲೆ ಕಾರ್ಯ ನಿರ್ಧಾರವಾದರೆ ನಿರ್ವಾಹಕರಿಗೆ ಶ್ರಮ ಹೆಚ್ಚುವುದು. ವ. ಪ್ರ.

ಚಿತ್ರದುರ್ಗದ ತಾ|| ಬೋರ್ಡಿನಿಂದ ಪ್ರಜಾಪ್ರತಿನಿಧಿಸಭೆಗೆ ೨ ನೇ ಸಲ ಮೆಂಬರ ಚುನಾವಣೆ.

ಈ ತಾ|| ಗ್ರಾಮಾಂತರಗಳಿಂದ ಭಾರಿ ಭಾರಿ ರೈತಾಬಿಜನರು ವರ್ತಕರೇ ಮುಂತಾದವರನ್ನು ಕಳೆದ ತಿಂಗಳಲ್ಲಿ ಚಿತ್ರದುರ್ಗಕ್ಕೆ ಬರಮಾಡಿಕೊಂಡು ಪ್ರಜಾಪ್ರತಿನಿಧಿಸಭೆಗೆ ಹೋಗಲರ್ಹರಾದ ಮತ್ತು ನಿಷ್ಪಕ್ಷಪಾತಿಗಳಾದ ಅಡ್ವೋಕೇಟ್ ಮೆ|| ಎಂ. ಅನಂತಯ್ಯಶೆಟ್ಟರನ್ನೂ ಗುಂಟನೂರು ಗೌಡರ ಮೆ|| ಬಸಪ್ಪನವರನ್ನೂ ತಾ|| ಬೋರ್ಡಿನಿಂದ ಸರ್ವಸಮ್ಮತವಾಗಿ ಚುನಾಯಿಸಲ್ಪಟ್ಟಿತ್ತು. ಆಗಲೇ ಆ ದೊಡ್ಡಮನುಷ್ಯರು ದೇಶದೇಳಿಗೆಯ ಮತ್ತು ಜನೋಪಯೋಗವಾದ (ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿಗೆ ಸರ್ವರನ್ನೂ ಸೇರಿಸುವಂತಾಗಬೇಕು ಎಂಬ ವಗೈರೆ) ಪ್ರಶ್ನೆಗಳನ್ನು ಆ ಮಹಾಸಭೆಗೆ ಕಳುಹಿಸಿಕೊಟ್ಟದ್ದೂ ಆಯಿತು. ತೆಗೆದಲ್ಲಾ ಎಂಬ ಅನ್ಯಾಗ್ರಹದಿಂದಲೋ ಅಥವಾ ತಮಗೆ ಹೆಚ್ಚಾದ ಓಟ್ಸ್ ಬರಲಿಲ್ಲವೆಂಬ ಅಸೂಯೆಯಿಂದಲೋ ಕ್ಯಾಂಡಿಡೇಟುಗಳಿಗೆ ತಮ್ಮ ಹೆಸರನ್ನು ಓಟುಗಳನ್ನು ಮಾಡಿಕೊಳ್ಳುವುದಕ್ಕೆ ಅಮಲ್ದಾರರವರು ಅವಕಾಶ ಕೊಡದೇ ಹೋದ್ದರಿಂದ ಚುನಾವಣೆ ದ ಕ್ರಮ ಸರಿಯಾಗಿ ನಡೆಯಲಿಲ್ಲವೆಂಬ ಅಲ್ಪಕಾರಣವನ್ನು ಹುಡುಕಿ ಅಡ್ವೋಕೇಟ್ ಮೆ|| ಚನ್ನಕೇಶವಯ್ಯನವರು ಗೌರ್ನಮೆಂಟಿಗೆ ಅಪ್ಪೀಲ್ ಮಾಡಿ ೨ ನೇ ಚುನಾವಣೆಗೆ ಆರ್ಡರು ಮಾಡಿಕೊಂಡು ಬಂದಿರುವಂತೆಯೂ, ಈ ೨ ನೇ ಚುನಾವಣೆಗೆ ಈ ವಾರ ೨೭ ಕ್ಕೆ ಹೀರಿಂಗ್ ಇಟ್ಟು [illegible] ತಾ|| ಮೇಲೆ ಇರುವ ಓಟರುಗಳಿಗೆ ಅಮಲ್ದಾರ್‌ರವರು ನೋಟೀಸ್ ಮಾಡಿರುವಂತೆಯೂ ತಿಳಿಯಬರುತ್ತದೆ. ವಾಚಕಮಹಾಶಯರೇ! ಸ್ವಲ್ಪ ಕ್ರಮತಪ್ಪಿದರೂ ಎಷ್ಟು ಕಷ್ಟವಾಗುತ್ತದೆ ನೋಡಿರಿ. ಓಟರ್ ಮಹಾಜನಗಳೇ! ವೃಥಾ ತೊಂದರೆ ಎಂದು ತಿಳಿದುಕೊಳ್ಳದೆ, ಉದಾಸೀನಮಾಡದೆ, ಕಷ್ಟವಾದರೂ ಚಿಂತೆಯಿಲ್ಲ, ಎಷ್ಟು ಕೆಲಸಗಳಿದ್ದರೂ ಬಿಟ್ಟು, ಇದು ಮುಖ್ಯವಾದ ನಮ್ಮ ಕೆಲಸವೆಂದು ಭಾವಿಸಿ ಮೇಲ್ಕಂಡ ಹೀರಿಂಗ್ ದಿನಕ್ಕೆ ದಯಮಾಡಿ ಬಂದು ನಿಮ್ಮ ಕೆಲಸ ಹಾಗೇ ಮಾಡಿಕೊಳ್ಳುವುದುತ್ತಮವೆಂಬ ಅಪೇಕ್ಷೆ

ಯಂತೆ, ನಮ್ಮ ಕೆಲಸ ಸರಿಯಾಗಿ ಮಾಡಲರ್ಹರಾದ ನಮ್ಮವರು ಇವರೇ ಬಂದು ಹಿಂದೆ ಹೇಗೆ ನಿರ್ಧರಿಸಿ ಮೊದಲೇ ಚುನಾವಣೆ ನಿಶ್ಚಯಿಸಿ ಹೋದಿರೋ ಹಾಗೆಯೆ ಅದಕ್ಕೆ ಚ್ಯುತಿಬಾರದಂತೆ ಈಗಲೂ ಅದನ್ನು ಬದಲಾಯಿಸದೆ ಅವರನ್ನೇ ಚುನಾಯಿಸಿ ನಮ್ಮಗಳ ದೃಢಚಿತ್ತತೆ ಮತ್ತು ಸಂಕಲ್ಪ ಪ್ರಕಾಶಪಡಿಸಿಕೊಳ್ಳತಕ್ಕದ್ದು ಯುಕ್ತವೆಂಬುದು ಜಾತೀಯ ಬಾಂಧವರಾದ ತಮ್ಮೆಲ್ಲರಿಗೂ ಜ್ಞಾಪಕಕ್ಕಾಗಿ ಈ ಮೂಲಕ ಅರಿಕೆ ಮಾಡುವ.

ದೇಶಸೇವಕ

ಕೋಲಾರ ಟೌನ್ಗೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಯವರ ಆಗಮನೋತ್ಸವವು

ಈ ತಿಂಗಳು ತಾ|| ೧೩ ನೆ ಶನಿವಾರ ಪ್ರಾತಃಕಾಲ ಶ್ರೀಯವರ ಸ್ವಾರಿಯು ಬೌರಿಂಗ್‍ಪೇಟೆಯಿಂದ ಹೊರಟು ೧೦ ಘಂಟೆಗೆ ಕೋಲಾರದ ವೀರಶೈವ ಮಹಾಜನರಿಂದ ಹಾಕಲ್ಪಟ್ಟಿದ್ದ ಸುಂದರವಾದ ಚಪ್ಪರಕ್ಕೆ ಚಿತ್ತೈಸಿ ಅಲ್ಲಿ ನೆರೆದಿದ್ದ ಹ|| ಡೆಪ್ಯುಟಿ ಕಮಿಷನರ್ ಸಾಹೇಬರವರು ಡಾಕ್ಟರ್ ದೇವಿಡ್ ರವರು, ಟೌನ್ ಪ್ರೆಸಿಡೆಂಟರು, ಮುನ್ಸೀಫ್‍ರವರು, ಟ್ರೆಜರಿ ಅಸಿಸ್ಟೆಂಟ್ ಮತ್ತು ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳು, ತಾ|| ಅಮಲ್ದಾರರೇ ಮೊದಲಾದ ಪ್ರಮುಖ ಆಫೀಸರುಗಳು ಮತ್ತು ದೊಡ್ಡ ಮನುಷ್ಯರುಗಳಿಗೆ ದರ್ಶನವನ್ನಿತ್ತು ನೆರೆದಿದ್ದ ಅಶೇಷ ವೀರಶೈವ ಜನಾಂಗದವರಿಂದ ಮತ್ತು ಇತರ ಜನರಿಂದ ಒಪ್ಪಿಸಲ್ಪಟ್ಟ ಫಲಪುಷ್ಪಾದಿಗಳನ್ನು ಸ್ವೀಕರಿಸಿ, ಆಂದೋಳನಾರೋಹಣಂಗೈದು ಮುಖ್ಯ ರಾಜಬೀದಿಗಳಲ್ಲಿ ರಚಿಸಿದ್ದ ಚಪ್ಪರಗಳಲ್ಲಿ ಸಮರ್ಪಿಸಲ್ಪಟ್ಟ ಫಲಪುಷ್ಪಾದಿಗಳನ್ನು ಸ್ವೀಕರಿಸುತ್ತಾ ಸಕಲ ವಿಜೃಂಭಣೆಯಿಂದ ಅರಳೀಪೇಟೆಯಲ್ಲಿರುವ ಶ್ರೀ ಬಸವೇಶ್ವರದೇವಾಲಯದ ಮುಂಗಡೆಯಲ್ಲಿ ರಚಿಸಿದ್ದ ದಿವ್ಯವಾದ ಮಂಟಪಕ್ಕೆ ಚಿತ್ತೈಸಿ ಅಲ್ಲಿ ಸಿಂಹಾಸನಾರೂಢರಾದ ಬಳಿಕ ಮಹಾ ಸಂಸ್ಥಾನದ ಸುಬೇದಾರ್ ಸಿದ್ಧರಾಮಯ್ಯನವರು ಶ್ರೀಯವರಿಂದ ಪ್ರೇರಿತರಾಗಿ ಸಕಲ ಜನ ಸಂತೋಷಪ್ರದವಾದ ಭಾಷಣಂಗೈದ ನಂತರ ಶ್ರೀ ಮಹಾಸ್ವಾಮಿಗಳವರು ಕಾಲೋಚಿತವಾದ ಒಂದು ಚಿಕ್ಕ ಭಾಷಣವನ್ನು ಮಾಡಿ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರ್‍ರವರಿಗೂ ಶ್ರೀಮದ್ ಯುವರಾಜರವರಿಗೂ ಸಕಲ ರಾಜ ಬಂಧುವರ್ಗದವರಿಗೂ ಆಯುರಾರೋಗ್ಯವನ್ನು ಕೋರಿದರು. ಸಕಲ ಸಭಿಕರು ಆನಂದಮೊದನೆ ಜಯಘೋಷದಿಂದ ಕರತಾಡನಂಗೈದನಂತರ ನೆರೆದಿದ್ದ ಆಫೀಸರುಗಳೇ ಮೊದಲಾದ ಸಭಾಸದರಿಗೆ ಕೋಲಾರದ ವೀರಶೈವ ಮಹಾಜನಗಳಿಂದ ಪುಷ್ಪಮಾಲಿಕೆಗಳು ಒಪ್ಪಿಸಲ್ಪಟ್ಟು ಸಭೆಯು ಬರಖಾಸ್ತಾದ ಬಳಿಕ 4-5 ಸಹಸ್ರ ಪ್ರಜೆಗಳು ಭೋಜನದಿಂದ ತೃಪ್ತಿಗೊಳಿಸಲ್ಪಟ್ಟರು.

ಉತ್ಸವಕ್ಕೆ ಮೊದಲು ಉತ್ಸವ ವಿಚಾರದಲ್ಲಿ ನಡೆದ ಆಕ್ಷೇಪಣೆಯ ಸಮಾಧಾನಗಳು.

ಕೋಲಾರ ವೀರಶೈವ ಪ್ರಮುಖರು ರಚಿಸಿದ್ದ ಪ್ರತಿಯೊಂದು ಚಪ್ಪರದ ಮೇಲ್ಗಡೆ "ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿ ವಿಜಯತೇ" ಎಂದು ಬರೆಯಲ್ಪಟ್ಟಿದ್ದ ವಿಚಾರದಲ್ಲಿ ಕೆಲವರು ಆಕ್ಷೇಪಣೆ ಮಾಡಲು, ಹ|| ಡೆಪ್ಯುಟಿ ಕಮಿಷನರ್ ಸಾಹೇಬರವರು ತಮ್ಮ ಬಂಗಲೆಗೆ ಇತರ ಆಫೀಸರುಗಳನ್ನೂ ವೀರಶೈವ ಪ್ರಮುಖರನ್ನೂ ಬರಮಾಡಿಕೊಂಡು ಈ ರೀತಿ ಚಪ್ಪರಗಳಮೇಲೆ ಬರೆಯಲು ತಕ್ಕ ಆಧಾರವಾಗಿದ್ದ ರಿಕಾರ್ಡುಗಳನ್ನು ತರಿಸಿ ನೋಡಿ ಈ ವಿಚಾರವು ನಿರಾಕ್ಷೇಪಣೆಯದೆಂದು ಸಕಲ ಆಫೀಸರುಗಳ ಒಪ್ಪಿಗೆಯಿಂದ ತಿಳಿಸಿ ಸಂತುಷ್ಟರಾದ ಬಳಿಕ ಉತ್ಸವವು ನಿರ್ವಿಘ್ನವಾಗಿ ನೆರವೇರಿಸುದರಿಂದ ಈ ಉತ್ಸವ ಸಮಾರಂಭಕ್ಕಾಗಿ ನೆರೆದಿದ್ದ ೪-೫ ಸಹಸ್ರ ಪ್ರಜೆಗಳು ಅತ್ಯಾನಂದಪಟ್ಟರು.

ಓರ್ವ ಪ್ರತ್ಯಕ್ಷದರ್ಶಿ.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 41

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ದರ್ಬಾರ್ ಸೋಪು.



ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

33 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರುಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಬ್ಬಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
39 ವೈದ್ಯಶಾಲಾ, ಮೈಸೂರು.

---

4 ಯುದ್ಧದ ಫೋಟೋಗಳು.

ಬ್ರಿಟಿಷರಿಗೂ, ಶತ್ರುಗಳಾದ ಜರ್ಮನಿಗೂ, ಕಳೆದ 4 ವರ್ಷಗಳಿಂದಲೂ ನಡೆದ ಯುದ್ಧದ ಫೋಟೋಗಳು ವಿಲಾಯಿತಿಯಿಂದ ಬಂದಿರುತ್ತೆ. ಇದರಲ್ಲಿ ವಿಮಾನ, ಫಿರಂಗಿಯುದ್ಧ, ಜಹಜುಗಳ ಜಗಳ, ಸೈನ್ಯಗಳ ಕದನ ಮುಂತಾದ ರಮಣಿಯವಾದ 80 ಯುದ್ಧದ ಫೋಟೋಗಳು ಅಡಗಿರುವ ಸೆಟ್ ಕ್ರಯ 1 ರೂ. ವಿಳಾಸ:—ಮಹಾರಾಟ ಟ್ರೇಡಿಂಗ್ ಕಂಪೆನಿ, 16 ತಿರುಪಳ್ಳಬೀದಿ, ಮದರಾಸ್,

---

ಛಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಕರಿಸಿ. **ಸತ್ಯಮೇವ ಜಯತೇ.** ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. **ಇಂದ್ರಿಯಸ್ತಂಭನ ಗುಳಿಗೆ.** ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿ ಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
2 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇವರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವವರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವುದಿಲ್ಲ. ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,
32 ಇರುಳಪ್ಪನ ಬೀದಿ, ಮದರಾಸ್.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವ್ಯಶವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಅದ್ಧಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರ್ದಲೆಶೂಲಿ, ನಡಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುದದ್ವ್ಯಾಮಬೇನೆ, ಹುರುಕುಕಜ್ಜ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಪಡದನಂಜು, ಸಣ್ಣಕೂಸುಗಳ ಬಾಲಗ್ರಹ, ಆರವಿ, ಮುಟ್ಟಿದೋಷ, ಹೊಟ್ಟೆದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಕ್ಕ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
3 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ಸೆಪ್ಟೆಂಬರ್ ತಾ|| ೨೧ ರಿಂದ ೧೯೧೯ ನೆಯ ಸೆಪ್ಟೆಂಬರ್ ತಾ|| ೨೭ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಭಾದ್ರಪದ ಬ|| ದ್ವಾದಶಿಯಿಂದ ಆಶ್ವೀಜ ಶು|| ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
21	[1]ಭಾನು	ದ್ವಾದಶಿ	8-47	ಆಶ್ಲೇಷ	17-34	5
22	ಸೋಮ	ತ್ರಯೋ	6-53	ಮಖಾ	17.35	6
23	[2]ಮಂಗಳ	ಚತು	6-12	ಹುಬ್ಬ	18-49	7
24	ಬುಧ	ಅಮಾ	6-47	ಉತ್ತರೆ	21-16	8
25	[3]ಗುರು	ಪಾಡ್ಯ	8-14	ಹಸ್ತ	24-57	9
26	ಶುಕ್ರ	ಬಿದಿಗೆ	11-45	ಚಿತ್ತ	29-45	10
27	[4]ಶನಿ	ತದಿಗೆ	15-49	ಸ್ವಾತಿ	35-26	11

(1) ಪ್ರದೋಷ. (2) ಸರ್ವಪಿತ್ರಮಹಾಲಯಾಮಾವಾಸ್ಯ. (3) ನವರಾತ್ರಾರಂಭ, ಜಯಲಕ್ಷ್ಮೀವ್ರತಂ, ಮೊಹರಂಪ್ರಾರಂಭ. (4) ಗಜಗೌರೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಶೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಯೆಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

REGISTERED NO. M. 124.

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಸೆಪ್ಟೆಂಬರ್ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೩೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,
33 ಸಾಹುಕಾರಪೇಟೆ, ಮದರಾಸ್.

ಮಹಾತ್ಮಗಾಂಧಿ.

ಇವರ ಅದ್ಭುತವಾದ ಚರಿತ್ರೆ, ಬೋಧಪರವಾದ ಧಾರ್ಮಿಕಾದಿ ಎಲ್ಲಾ ವಿಷಯಗಳ ೨೦ ಲೇಖನ ಮತ್ತು ಭಾಷಣಗಳು ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. [illegible] ಭಾವಚಿತ್ರವೂ ಇದೆ. ಕ್ರಯ ೧೨ ಆಣೆ.

60 ವಿಳಾಸ—ಎಂ. ಎಂ. ಹರ್ಡೇಕರ್, ದಾವಣಗೆರೆ.

ಲಿಂಗದ ಕಾಯಿಗಳು.

ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೇಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.



ಕ್ರಯ 1 ಕ್ಕೆ 1—4—0. ನಂ. 2. 1—12—0.

ಕನ್ನಡಕಗಳು.

ಇವನ್ನು ದೊಡ್ಡವರು ಚಿಕ್ಕವರು ಸಹಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವವು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬಿಲ್ಲೆಗಳಿರುವವು. ಇದರ ಕಂಬಿಗಳು ಯಾವಾಗಲೂ ಬೆಳ್ಳಿಯ ಹಾಗೆ ಇರುವವು. ಇದರಲ್ಲಿ ಹಸುರು, ಊದ, ಮೋಘವರ್ಣ ಮೊದಲಾದವುಗಳಿರುವವು. ಕ್ರಯ ನಂ. 1 ಕ್ಕೆ 1-8-0, ನಂ. 2 ಕ್ಕೆ 2-0-0.



ರಬ್ಬರ್ ಇಂಗ್ಲೀಷ್ ಅಕ್ಷರಗಳು.

ಈ ಅಕ್ಷರಗಳು ಸೀಮೆಯಲ್ಲಿ ತಯಾರಾದವು. ಈ ಅಕ್ಷರಗಳಿಂದ ಕಷ್ಟವಿಲ್ಲದೆ ಕಾಗದಗಳನ್ನೂ, ಕಾರಡು, ಲೆಟರು ಮುಂತಾದವುಗಳನ್ನು ನಾವೇ ಅಚ್ಚುಮಾಡಿಕೊಳ್ಳಬಹುದು. ಈ ಅಕ್ಷರಗಳ ಪೆಟ್ಟಿಗೆಯು ಒಂದು ಇದ್ದರೆ ಬೇಕಾದ ಮುದ್ರಣವನ್ನು ಒಬ್ಬರ ಸಹಾಯವಿಲ್ಲದೆ ನಾವೇ ಮಾಡಿಕೊಳ್ಳಬಹುದು. ಲಾಯರುಗಳಿಗೂ, ವರ್ತಕರಿಗೂ ಬಹು ಸಹಾಯಕಾರಿಯಾದದ್ದು. ಈ ಪೆಟ್ಟಿಗೆಯಲ್ಲಿ ಇಂಕಿ, ಪ್ಯಾಡು, ಚಿಮುಟ ಮುಂತಾದವುಗಳು ಇವೆ.



170 ಅಕ್ಷರಗಳು ಇರುವ ಪೆಟ್ಟಿಗೆ			1—14—0
250	,,	,,	2—8—0
350	,,	,,	3—12—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,
33 3 ಇರುಳಪ್ಪನಬೀದಿ, ಮದರಾಸ್.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ನೊಡವೆ, ಖಜ್ಜಿ, ತುರಿ. ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

33 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultural subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.
2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.
3. During the time the raiyats and labourers work on the farm, they will be paid at the prevailing local rates for labour.
4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,
8 *Offg. Director of Agriculture.*

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 11

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ. ಕಲ್ಲಿನಿಂದುಂಟಾದ ಘಾಯ, ಇಸಬು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜು ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ,

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಜಾರ್ಜ್‌ಟೌನ್ ಮದರಾಸು

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಸೆಪ್ಟೆಂಬರ್ ತಾ|| ೨೮ನೆಯ ಭಾನುವಾರ

ನಿಯಮನಿರ್ಮಾಣ ಸಭಾಸಭಿಕರ ಆರಿಸುವಿಕೆ.

ಮೂರು ವರ್ಷಕ್ಕೊಂದು ಸಲದಂತೆ ನಡೆಯಬೇಕಾದ ಪ್ರಜಾಪ್ರತಿನಿಧಿಸಭಾ ಸಭಿಕರ ಆರಿಸುವಿಕೆಯು ಸಂಸ್ಥಾನದ ಎಲ್ಲ ಭಾಗಗಳಲ್ಲೂ ಈಗ ನಡೆದು ಮುಗಿದಿದೆ. ಬರುವ ಅಕ್ಟೋಬರ್ ತಾ|| ೬ ರಿಂದ ರಾಜಧಾನಿಯಲ್ಲಿ ಕೂಡಲಿಕ್ಕಿರುವ ಪ್ರಜಾಪ್ರತಿನಿಧಿ ಸಭೆಗೆ ಹೊಸದಾಗಿ ಆರಿಸಲ್ಪಟ್ಟು ದಯಮಾಡಿಸುವ ಪ್ರತಿನಿಧಿಗಳನ್ನೆಲ್ಲಾ ನೂತನ ಮಂತ್ರೀಶ್ವರರಾದ ಸರ್ದಾರ್ ಎಂ. ಕಾಂತರಾಜ ಅರಸಿನವರು ಸ್ವಾಗತಿಸುವವರಾಗಿದ್ದಾರೆ. ಈ ಸಲದ ಸಭಾಕಾರ್ಯಗಳೊಳಗೆ ನಿಯಮನಿರ್ಮಾಣಸಭೆಗೆ ಪ್ರಜಾಪ್ರತಿನಿಧಿ ಸಭೆಯ ಪಕ್ಷದಿಂದ ನಾಲ್ಕುಮಂದಿ ಸಭಿಕರನ್ನು ಆರಿಸಿ ಕಳುಹಿಸುವ ಕಾರ್ಯವೂ ಒಂದಾಗಿರುತ್ತದೆ. ಆದುಕಾರಣ ಆ ಸಂಬಂಧವಾಗಿ ಕೆಲ ವಿಚಾರಗಳನ್ನು ಈ ಸಂಚಿಕೆಯ ಮೂಲಕ ಪ್ರಜಾಪ್ರತಿನಿಧಿ ಸಭಿಕ ಮಹಾಶಯರುಗಳ ಅವಗಾಹನಕ್ಕೆ ತರುವವರಾಗಿದ್ದೇವೆ.

ಸಂಸ್ಥಾನದ ೬೦ ಲಕ್ಷ ಪ್ರಜೆಗಳ ಪ್ರಾತಿನಿಧ್ಯವು ಈ ಸಭೆಗೆ ಇರುವುದರಿಂದ ಇದರ ಘನತೆಯನ್ನು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ. ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಕೂಡ ಈ ಸಭಾಭಿಪ್ರಾಯ ವಿಷಯದಲ್ಲಿ ಇಟ್ಟಿರುವ ಗೌರವಬುದ್ಧಿಯೂ ಆದರವೂ ಸರ್ವವಿದಿತವೇ ಆಗಿದೆ. ಈ ಸಭೆಯಿಂದ ನಿಯಮನಿರ್ಮಾಣಸಭೆಗೆ ಪ್ರತಿನಿಧಿಗಳನ್ನಾರಿಸಿ ಕಳುಹಿಸಿಕೊಡಲು ಏರ್ಪಡಿಸಿರುವುದೂ, ವರ್ಷಕ್ಕೆರಡು ಸಲ ಈ ಸಭಾ ಸಮಾವೇಶವು ನಡೆಯುವಂತೆ ಮಾಡಿರುವುದೂ ಕೂಡ ಅದಕ್ಕೆ ಯಾವತ್ಪ್ರಮಾಣಭೂತ ದೃಷ್ಟಾಂತವಾಗಿರುತ್ತವೆ. ಹೀಗೆ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಈ ಸಭೆಯ ವಿಷಯದಲ್ಲಿ ಇಟ್ಟಿರುವ ಭರವಸೆಯೂ ಪ್ರೀತಿಯೂ ಸಾರ್ಥಕವಾಗಬೇಕಾದರೆ ಸಭೆಗೆ ಪ್ರತಿನಿಧಿಗಳಾಗಿ ಬರತಕ್ಕ ಪ್ರಜೆಗಳ ಕಾರ್ಯತತ್ಪರತೆಯೂ ಸಾಮರ್ಥ್ಯವೂ ಮುಖ್ಯ ಸಾಧನಗಳಾಗಿರುತ್ತವೆ. ಪ್ರಜಾಪ್ರತಿನಿಧಿ ಸಭೆಯೇ ಆಗಲೀ ನಿಯಮನಿರ್ಮಾಣ ಸಭೆಯೇ ಆಗಲೀ ಕಲ್ಪಿಸಲ್ಪಟ್ಟಿರುವುದು ದೇಶದ ಸಕಲಪ್ರಜೆಗಳ ಹಿತಕ್ಕೋಸ್ಕರವೇ ಹೊರತು ಯಾವೊಂದು ಕೆಲಜನರ ಸೌಭಾಗ್ಯಕ್ಕೆಂದಿಗೂ ಅಲ್ಲ. ಆದುಕಾರಣವೇ ಈ ಸಭೆಯೂ ಇದರ ಪ್ರಯೋಜನಗಳೂ ಸಕಲ ಪ್ರಜೆಗಳಿಗೂ ಸಮನಾಗಿ ಬಾಯಿ ತೆರೆದಿಡಲ್ಪಟ್ಟಿರುವುವು. ಇಂಥ ಸಭೆಯಿಂದ ಆಗಬೇಕಾದ ಪ್ರಯೋಜನಗಳನ್ನು ಯಾವ ರೀತಿಯಲ್ಲಿ ಸಾಧಿಸಿಕೊಳ್ಳಬೇಕೆಂದು ಅರಿತು ಯಾವ ಜನರು ನಡೆದುಕೊಳ್ಳುವರೋ ಅವರು ಸುಖಪಡುವರು. ಅದನ್ನು ಅರಿಯದವರೂ ಅರಿತೂ ಮರೆತವರೂ ನಷ್ಟಕಷ್ಟಗಳನ್ನು ಪಡುವರು.

ಯಾರ ದುರದೃಷ್ಟದಿಂದಲೋ ಜಾತಿಮತದ್ವೇಷಗಳು ಉಕ್ಕೇರುತ್ತಿರುವ ಈಗಣ ಕಾಲದಲ್ಲಿ ತಂತಮ್ಮ ಜನವರ್ಗಗಳ ಕ್ಷೇಮವನ್ನು ತಾವುತಾವೇ ನೋಡಿಕೊಳ್ಳಬೇಕಾದ ಅವಸ್ಥೆಯು ದೇಶದಲ್ಲಿ ಪ್ರಾಪ್ತವಾಗಿರುತ್ತದೆ. ಈ ಕಾರಣದಿಂದಲೇ ನಿಂನಿಮಗೆ ಬೇಕಾದ ಜನರಿಗೆ ನೀವು ಓಟುಗಳನ್ನು ಕೊಟ್ಟು ನಿಮ್ಮಗಳಿಗೆ ಸರಿಯಾದ ಪ್ರಾತಿನಿಧ್ಯವಿರುವಂತೆ ಮಾಡಿಕೊಳ್ಳುವ ಕೆಲಸವು ನಿಮ್ಮ ಕೈಯಲ್ಲೇ ಇದೆಯೆಂದು ಶ್ರೀಮನ್ಮಹಾರಾಜರವರು ಹಿಂದುಳಿದ ಜನವರ್ಗಗಳ ಡೆಪ್ಯುಟೇಷನ್ನಿಗೆ ಉತ್ತರವನ್ನು ಕೊಡುವಾಗ್ಗೆ ಬೋಧಿಸಿರುತ್ತಾರೆ. ತ್ರಿಮತಸ್ಥ ಬ್ರಾಹ್ಮಣರ ವಕೀಲನಾಗಿರುವ ಸಂಪದಭ್ಯುದಯ ಪತ್ರಿಕೆಯೂ ಕೂಡ ಇದೇ ತಿಂಗಳ ತಾ|| ೨೦ರ ಸಂಚಿಕೆಯಲ್ಲಿ "ಒಬ್ಬರ ಪ್ರಯತ್ನದಿಂದ ಮತ್ತೊಬ್ಬರು ಉದ್ಧರಿಸಲ್ಪಡುವುದು ಶುದ್ಧ ಸುಳ್ಳು. ಹಿಂದುಳಿದವರು ಮುಂದಕ್ಕೆ ಬರಬೇಕೆಂದು ಸ್ವಯಂಪ್ರಯತ್ನ ಮಾಡದಿದ್ದರೆ ಚಕ್ರವರ್ತಿಗಳೇ ಆಗಲೀ ಪ್ರಭುಗಳೇ ಆಗಲೀ ಯಾರೂ ಅವರನ್ನು ಮುಂದಕ್ಕೆ ತರುವುದಕ್ಕೆ ಆಗುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಇದನ್ನೆಲ್ಲಾ ನೋಡಿದರೆ ಕೇಳಿದರೆ ತಂತಮ್ಮ ಉದ್ಧಾರವನ್ನು ತಾವುತಾವೇ ಮಾಡಿಕೊಳ್ಳಬೇಕೆಂಬುದು ಚೆನ್ನಾಗಿ ಸಿದ್ಧವಾಗುತ್ತದೆ. ಹೀಗಿರುವಾಗ ನಮ್ಮ ಹಿತವನ್ನು ನಮ್ಮ ಹಗೆಗಳಿಂದಲೂ ನಮ್ಮಲ್ಲಿ ಉದಾಸೀನರಾದವರಿಂದಲೂ ಮಾಡಿಸಿಕೊಳ್ಳುತ್ತೇವೆಂದು ಯಾರಾದರೂ ನೆನಸಿದರೆ ಅವರಿಗಿಂತಲೂ ದಡ್ಡರು ಲೋಕದಲ್ಲಿ ಮತ್ತಾರಾದರೂ ಇರುವುದುಂಟೆ?

ಬಹು ಕಾಲಾನಂತರದಿಂದ ವಿದ್ಯೆಯಲ್ಲಿ ಹಿಂದೆ ಬಿದ್ದಿರುವ ಸಂಸ್ಥಾನದ ಮುಕ್ಕಾಲು ಮೂರುವೀಸ ಪಾಲು ಜನರೆಲ್ಲರ ವಿದ್ಯಾಪ್ರೋತ್ಸಾಹಕ್ಕಾಗಿ ನಮ್ಮ ಸರ್ಕಾರದವರು ದಯೆಯಿಟ್ಟು ಎಲ್ಲೋ ಸ್ವಲ್ಪ ಎಂದರೆ ೧|| ಲಕ್ಷ ರೂ. ಗಳಷ್ಟು ಹಣವನ್ನು "ಬ್ಯಾಕ್ವರ್ಡ್ ಕ್ಲಾಸ್ ಸ್ಕಾಲರ್ಷಿಪ್ಪಿಗೆ" ಎಂದು ಪ್ರತ್ಯೇಕವಾಗಿ ವಿನಿಯೋಗಿಸುವುದಕ್ಕೆ ಆರಂಭಮಾಡಿದ ಮಾತ್ರದಿಂದಲೇ ಅದನ್ನು ಕೇಳಿ ಸೈರಿಸಲಾರದೆ ವಿದ್ಯಾಧಿಕರಾದ ಕೆಲ ಜನರು ಸಕಲೇಂದ್ರಿಯಗಳಿಂದಲೂ ಸಕಲ ಮುಖವಾಗಿಯೂ ಕಕ್ಕಿದ ಅಸೂಯಾಗ್ನಿಯನ್ನು ಯಾರು ತಾನೇ ಕಾಣರು? ಸಂಪದಭ್ಯುದಯದ ಹೊಟ್ಟೆಯುರಿಯಂತೂ ಇನ್ನೂ ನಿಂತೇ ಇಲ್ಲ. ಅದರ ಇದೇ ತಿಂಗಳು ತಾ|| ೨೦ ರ ಸಂಚಿಕೆಯಲ್ಲಿ ಬರೆದಿರುವ ಒಂದು ಲೇಖನದಲ್ಲಿ—"ವಿದ್ಯಾಭ್ಯಾಸದಲ್ಲಿ ಬ್ಯಾಕ್ವರ್ಡ್ ಮತ್ತು ಡಿಪ್ರೆಸ್ಡ್ ಕ್ಲಾಸಸ್ ಸ್ಕಾಲರ್ಷಿಪ್ ಬೇಕೆಂದು ಗುದ್ದಾಡಿ ಮ|| ರೆಡ್ಡಿಯವರೂ, ಮಿ|| ಹಂಜಾಮುನ್ಸೀ ರವರೂ, ಮಿ|| ಚಾಂಡಿಯವರೂ, ಮಿ|| ಮ್ಯಾಥ್ಯೂ ರವರೂ, ಮಿ|| ಡಿಸೌಜಾರವನೂ ಇವರೇ ಮೊದಲಾದ ದೊಡ್ಡಮನುಷ್ಯರು ಬ್ರಾಹ್ಮಣೇತರರಿಗೆ ೧|| ಲಕ್ಷ ರೂಪಾಯಿ ವೇತನದ್ರವ್ಯವು ಸಿಕ್ಕುವಂತೆ ಮಾಡಿದರು. ಈ ದ್ರವ್ಯವು ಎಲ್ಲಿಯದು?" ಎಂದು ಬರೆಯಲ್ಪಟ್ಟು ಪರೋತ್ಕರ್ಷಾಸಹನೆಯ ಪರಿಪಕ್ವಾವಸ್ಥೆಯು ತೋರಿಸಲ್ಪಟ್ಟಿರುವುದು. ದೇಶದ ಸಕಲಾದಾಯಕ್ಕೂ ಮೂಲಭೂತರಾದ ೫೮ ಲಕ್ಷ ಪ್ರಜೆಗಳ ವಿದ್ಯಾಭ್ಯುದಯಕ್ಕಾಗಿ "ಆನೆಹೊಟ್ಟೆಗೆ ಅರಕಾಸಿನ ಮಜ್ಜಿಗೆ" ಎಂಬ ಗಾದೆಯಂತೆ ಎಲ್ಲೋ ಅತ್ಯಲ್ಪ ದ್ರವ್ಯವನ್ನು ಸರ್ಕಾರದವರು ಪೃಥಕ್ಕರಿಸಿ ಕೊಟ್ಟರೆ ಅದನ್ನೂ ಸೈರಿಸಲಾರದೆ, ಹಿಂದುಳಿದವರಿಗೂ ಹೊಲೆಯ ಮಾದಿಗರಿಗೂ ಪ್ರಭುತ್ವದವರು ವಿದ್ಯಾಪ್ರೋತ್ಸಾಹ ಮಾಡುತ್ತಾರಲ್ಲಾ! ಎಂಬ ಅಸಹನೆಯಿಂದ, ಮಿ|| ಹಂಜಾಮುನ್ಸೀರವರೇ ಮೊದಲಾದ ದೀನದಯಾಳುಗಳಾದ ಅಧಿಕಾರಿಗಳನ್ನೂ ದೊಡ್ಡಮನುಷ್ಯರನ್ನೂ ದ್ವೇಷಿಸತಕ್ಕ ಜನರು, ಈ ಹಿಂದುಳಿದವರ ಪ್ರೋತ್ಸಾಹದ ಏರ್ಪಾಟಿಗೆ ಅನುಮೋದಿಸಿದ ಶ್ರೀಮನ್ಮಹಾರಾಜ ಸಹೋದರರನ್ನು ಕೂಡ ದ್ವೇಷಿಸದೆಯೂ ನಿಂದಿಸದೆಯೂ ಇರುವರೆಂದು ನಂಬಲಾದೀತೆ? ರಾಜಾಗ್ರಹ ಭೀತಿಯಿಂದ ಅವರುಗಳನ್ನು ಬೈಲಿಗೆಳೆಯದೆ ಬಿಟ್ಟಿರಬೇಕೆಂದು ತೋರುತ್ತದೆ.

ಹಿಂದುಳಿದ ಜನವರ್ಗಗಳ ಅಭ್ಯುದಯದಲ್ಲಿ ಇಷ್ಟುಮಟ್ಟಿಗೆ ಅಭಿಮಾನವುಳ್ಳ ಜನರುಗಳನ್ನು ನಮ್ಮಗಳ ಪ್ರತಿನಿಧಿಗಳೆಂದು ನಾವುಗಳು ನಂಬುವುದಾದರೆ ನಮ್ಮ ಗತಿ ಹೇಗಾಗಬಹುದೆಂಬುದನ್ನು ಈಗಲಾದರೂ ಯೋಚಿಸಿಕೊಳ್ಳಬೇಡವೆ? ಪರರನ್ನು ನಂಬದೆ ನಮ್ಮ ಹಿತವನ್ನು ನಾವು ಮಾಡಿಕೊಳ್ಳಬೇಕಾದರೆ ಮೊದಲಿನಿಂದಲೂ ನಾವು ಎಚ್ಚತ್ತು ನಡೆಯಬೇಕು. ಸರ್ಕಾರವಿರುವುದು ನಮ್ಮೆಲ್ಲರಿಗೋಸ್ಕರವೂ ಅಲ್ಲದೆ ಸ್ವರ್ಗಲೋಕದಿಂದ ಇಳಿದುಬಂದೆವೆನ್ನುವ ಕೆಲವರಿಗೆ ಮಾತ್ರವೇ ಅಲ್ಲ. ಸರ್ಕಾರದ ಪರಿಮುಖದಿಂದ ನಂನಮ್ಮ ಇಷ್ಟಾರ್ಥಗಳಾವುವು ಕೈಗೂಡಬೇಕಾದರೂ ಆ ನಮ್ಮ ಭಿಲಾಷೆಗಳು ಮೊಟ್ಟಮೊದಲು ತಾಲ್ಲೂಕುಬೋರ್ಡು, ಡಿಸ್ಟ್ರಿಕ್ಟುಬೋರ್ಡು, ಮ್ಯುನಿಸಿಪಲ್ ಬೋರ್ಡು ಮೊದಲಾದ ಸ್ಥಳಿಕ ಸರ್ಕಾರಗಳಲ್ಲಿ ನೆಲೆಗೊಂಡು ಮೂಲವಸ್ತುಗಳಾಗಿ ಸಿದ್ಧವಾಗಬೇಕು. ಬಳಿಕ ಅವು ಪ್ರಜಾಪ್ರತಿನಿಧಿ ಸಭೆಯೆಂಬ ದೊಡ್ಡ ಯಂತ್ರಾಲಯದಲ್ಲಿ ಹದಗೊಳ್ಳಬೇಕು. ಅನಂತರ ಅವು ನಿಯಮನಿರ್ಮಾಣ ಸಭೆಯೆಂಬ ಕರುವಿನಲ್ಲಿ ಎರಕನೆರೆಯಲ್ಪಟ್ಟು ಶ್ರೀಮನ್ಮಹಾರಾಜರ ಸನ್ನಿಧಿಯಲ್ಲಿ ಮುದ್ರೆಗೊಂಡು ಬಳಕೆಗೆ ಬರಬೇಕಾಗಿರುತ್ತವೆ. ಹೀಗಿರುವಾಗ ಅಣಿಯಾಗುವ ವಸ್ತುಗಳನ್ನೆಲ್ಲಾ ನಂನಮ್ಮ ಉಪಯೋಗಕ್ಕೆ ಅನುಕೂಲವಾಗಿರುವಂತೆ ಮಾಡಿಕೊಳ್ಳಬೇಕಾದರೆ ಮೊಳಕೆಯ ಅವಸ್ಥೆಯಿಂದಲೂ ನಾವು ಅವುಗಳ ಆರೈಕೆಯ ಮೇಲೆ ಇರುವುದು ಅವಶ್ಯಕವಾಗಿರುತ್ತದೆ. ಎಂದರೆ ತಾಲ್ಲೂಕು ಬೋರ್ಡುಗಳು ಮೊದಲುಗೊಂಡು ನಿಯಮನಿರ್ಮಾಣ ಸಭೆಯವರೆಗೂ ನಂನಮ್ಮ ಹಿತವನ್ನು ನಿಜವಾಗಿ ಕೋರುವ ನಂಬುಗೆಯಾದ ಜನರೇ ಆಯಾ ಸ್ಥಲಗಳಲ್ಲಿ ನಮ್ಮ ಪ್ರತಿನಿಧಿಗಳಾಗಿರುವಂತೆ ಮಾಡಿಕೊಳ್ಳುವಲ್ಲಿ ಎಚ್ಚರುಗೊಂಡಿರಬೇಕಾಗುತ್ತದೆ. ಅಷ್ಟೇ ಅಲ್ಲದೆ ಇಂಥ ನಮ್ಮ ಪ್ರಯತ್ನಗಳಿಗೆ ಹಸ್ತಾವಲಂಬನವನ್ನು ಕೊಡತಕ್ಕ ಜನರುಗಳು ಅಧಿಕಾರಸ್ಥಾನಗಳಲ್ಲಿರಬೇಕಾದ ಅವಶ್ಯಕತೆಯನ್ನೂ ನಾವು ಮರೆಯದೆ ಇಟ್ಟುಕೊಂಡು ಕೆಲಸ ಮಾಡಬೇಕಾಗಿರುತ್ತದೆ. ಇಷ್ಟು ನಮ್ಮ ಸದುದ್ದೇಶವಲ್ಲದೆ ಯಾರನ್ನೂ ಹಗೆಮಾಡುವುದಾಗಲೀ ನಿಂದಿಸುವುದಾಗಲೀ ಸರ್ವಥಾ ನಮ್ಮ ಕಾರ್ಯವಾಗಿರಕೂಡದು. ನಮ್ಮ ಸತ್ಪ್ರಯತ್ನದಲ್ಲಿ ನಾವು ನಿಮಗ್ನಚಿತ್ತರಾಗಿರುವಾಗ ನಮ್ಮ ಉದ್ದೇಶಕ್ಕೆ ಭಂಗಕಾರಿಗಳಾಗಿ ಬರತಕ್ಕವರನ್ನು ಎಷ್ಟುಮಾತ್ರಕ್ಕೂ ನಾವು ಲಕ್ಷಿಸಬಾರದು. ಆ ವಿಘ್ನಗಳನ್ನು ಒತ್ತರಿಸುವುದರಲ್ಲಿ ನಮ್ಮ ದೃಢಯತ್ನಗಳನ್ನು ಐಕಮತ್ಯ ಬಲವುಳ್ಳವುಗಳಾಗಿರುವಂತೆ ಮಾಡಿಕೊಂಡಿರಬೇಕು.

ಪ್ರಕೃತದಲ್ಲಿ ಹಿಂದುಳಿದ ಜನವರ್ಗಗಳವರು ಎಷ್ಟೋಮಟ್ಟಿಗೆ ಎಚ್ಚರುಗೊಂಡು ನಡೆಯುತ್ತಿರುವುದು ಅವರ ಅಭ್ಯುದಯಕ್ಕೆ ಶುಭಸೂಚನೆಯಾಗಿರುತ್ತದೆ. ಸರ್ಕಾರದವರು ಕೂಡ ಸ್ಥಳಿಕ ಸಂಘ ಮೊದಲಾದುವುಗಳಲ್ಲಿ ನಾಮಿನೇಷನ್ನಿನ ಮೂಲಕ ಹಿಂದುಳಿದವರ ಪ್ರಾತಿನಿಧ್ಯವನ್ನು ಬಲುಮಟ್ಟಿಗೆ ಪುಷ್ಟೀಕರಿಸಿಕೊಟ್ಟಿರುತ್ತಾರೆ. ಪ್ರಜಾಪ್ರತಿನಿಧಿ ಸಭೆಗೆ ಹಿಂದುಳಿದ ಜನವರ್ಗಗಳವರ ಪ್ರಾತಿನಿಧ್ಯವು ಅವರ ಸಂಖ್ಯಾಪ್ರಮಾಣಕ್ಕೆ ಅನುಗುಣವಾದಷ್ಟು ಬರದಿದ್ದರೂ ನಿರಾಶಾಜನಕವಾಗಿರುವುದಿಲ್ಲ. ಈಗ ಪ್ರತಿನಿಧಿಗಳಾಗಿ ಬಂದಿರುವವರೆಲ್ಲಾ ತಂತಮ್ಮ ಧ್ಯೇಯವನ್ನು ಸಾಧಿಸುವಲ್ಲಿ ಒಗ್ಗಟ್ಟಿನಿಂದಲೂ ದೂರಾಲೋಚನೆಯಿಂದಲೂ ನಡೆದು ಕೃತಕೃತ್ಯರಾಗಬೇಕು. ಸದ್ಯಃ ಪ್ರಜಾಪ್ರತಿನಿಧಿ ಸಭೆಯಿಂದ ನಿಯಮನಿರ್ಮಾಣ ಸಭೆಗೆ ಪ್ರತಿನಿಧಿ ಸಭಿಕರನ್ನು ಕಳುಹಿಸಿಕೊಡಬೇಕಾದ ಕಾರ್ಯವು ತಟಸ್ಥವಾಗಿರುತ್ತದೆ. ಈ ಸಮಯದಲ್ಲಿ ಎಚ್ಚತ್ತು ಹಿಂದುಳಿದ ಸಭಿಕರೆಲ್ಲರೂ ಕಾರ್ಯಮಾಡಬೇಕು. ಇದುವರೆಗೆ ಹಿಂದುಳಿದವರ ಹಿತಕ್ಕಾಗಿ ನಿಯಮನಿರ್ಮಾಣ ಸಭೆಮೊದಲಾದುವುಗಳಲ್ಲಿ ಗುದ್ದಾಡಿ ಯಾರು ದೇಶಕ್ಷೇಮವನ್ನು ಸಾಧಿಸಿರುವರೆಂಬುದನ್ನು ನೆನೆದುಕೊಳ್ಳಬೇಕು. ಈಗ ಯಾರಿಗೆ ತಮ್ಮ ಓಟನ್ನು ಕೊಟ್ಟರೆ ಅವರು ತಮ್ಮ ಪ್ರತಿನಿಧಿಗಳಾಗಿ ಮೋಸವಿಲ್ಲದೆ ಕೆಲಸ ಮಾಡುವರೆಂಬುದನ್ನು ಆಲೋಚಿಸಿಕೊಳ್ಳಬೇಕು. ಸ್ವಕಾರ್ಯ ಸಾಧನೆಗೋಸ್ಕರ ಓಟನ್ನು ಪಡೆದುಕೊಳ್ಳುವವರೆಗೂ ಬೆಣ್ಣೆಮಾತನ್ನಾಡಿ, ಬೆಟ್ಟದಗಾತ್ರದ ಮರ್ಯಾದೆಯನ್ನೂ, ಸಮುದ್ರದಷ್ಟು ಅಭಿಮಾನವನ್ನೂ, ಹೊಳೆಯ ನೀರಿನಷ್ಟು ದಾಕ್ಷಿಣ್ಯವನ್ನೂ ತೋರಿಸಿಬಿಟ್ಟು, ಹಿಂದುಮುಂದೆ ಸುತ್ತಾಡಿ, ಬಳಿಕ ತಮ್ಮ ದಾರಿ ತಾವು ನೋಡಿಕೊಳ್ಳುವ ಗೋಮುಖವ್ಯಾಘ್ರಗಳ ಮೋಸಕ್ಕೆ ಒಳಗಾಗಬಾರದು. ಇದುವರೆಗಿಣ ಅನುಭವದಲ್ಲಿ ಸರ್ಕಾರಿಯ ಸಭೆ ಮೊದಲಾದುವುಗಳಲ್ಲಿ ಹಿಂದುಳಿದವರ ಕ್ಷೇಮಕ್ಕಾಗಿ ತಮ್ಮ ಯಾವಚ್ಛಕ್ತಿಸಾಹಸಗಳನ್ನೂ ಉಪಯೋಗಿಸಿ ಕೆಲಸ ಮಾಡುತ್ತಿರುವವರಾರಾರೆಂಬುದನ್ನು ಪ್ರಜಾಪ್ರತಿನಿಧಿಗಳು ತಿಳಿದೇ ಇದ್ದಾರೆ. ಆದರೂ ಪ್ರಸಂಗಾನುಸಾರ ನಾವೂ ಅವರ ಸ್ಮರಣವನ್ನು ಮಾಡಿಕೊಡುವುದು ಅವಶ್ಯಕವೆಂದು ತಿಳಿಯುತ್ತೇವೆ.

ನಾವುಗಳು ತಿಳಿದಿರುವಮಟ್ಟಿಗೂ ಹಿಂದುಳಿದ ಜನವರ್ಗಗಳಿಗೆ ಸೇರಿ ಅವರ ಹಿತಕ್ಕಾಗಿ ರಾಜಕೀಯ ಸಭೆಗಳಲ್ಲೂ ಹೊರಗೂ ಗುದ್ದಾಡಿ ಕೆಲಸಮಾಡತಕ್ಕ ಅನಧಿಕಾರಿ ದೊಡ್ಡಮನುಷ್ಯರುಗಳಲ್ಲಿ ಮ|| ಗಳಾದ ಎಂ. ಬಸವಯ್ಯನವರು, ಎಂ. ಸುಬ್ಬಯ್ಯನವರು ರಾ|| ಸಾ|| ಸಿ. ಚನ್ನಯ್ಯನವರು, ಕಲಾಮಿಯವರುಗಳಾಗಿರುತ್ತಾರೆ. ಇವರುಗಳಲ್ಲಿ ರಾ|| ಸಾ|| ಚೆನ್ನಯ್ಯನವರೂ ಮಿ|| ಗುಲಾಂ ಮಹಮ್ಮದ್ ಕಲಾಮಿಯವರೂ ಸಹ ಸರ್ಕಾರದವರಿಂದ ನಾಮಿನೇಷನ್ನಿನ ಮೂಲಕ ನಿಯಮನಿರ್ಮಾಣ ಸಭೆಯ ಸಭಿಕರಾಗಿ ಸೇರಿಸಿಕೊಳ್ಳಲ್ಪಟ್ಟು ಹಿಂದುಳಿದವರ ಪುರೋವೃದ್ಧಿಗಾಗಿ ಕೆಲಸಮಾಡಿ ನಮ್ಮೆಲ್ಲರ ಕೃತಜ್ಞತೆಗೆ ಪಾತ್ರರಾಗಿರತಕ್ಕವರು. ಮ|| ಬಸವಯ್ಯನವರಾದರೊ ಕಳೆದ ೬ ವರ್ಷಗಳಿಂದ ಪ್ರಜಾಪ್ರತಿನಿಧಿಸಭೆಯಲ್ಲಿ ಸಭಿಕರಾಗಿರುವುದು ಮಾತ್ರವೇ ಅಲ್ಲದೆ, ಅಲ್ಲಿಯ ಪ್ರತಿನಿಧಿಗಳಿಂದ ನಿಯಮನಿರ್ಮಾಣಸಭೆಗೆ ಆರಿಸಲ್ಪಟ್ಟು, ಕಳೆದ ೪ ವರ್ಷಗಳಿಂದ ಹಿಂದುಳಿದವರ ಉದ್ಧಾರಕ್ಕಾಗಿ ಅಸಾಧಾರಣವಾದ ಪ್ರತಿಪಕ್ಷದ ತೊಡಕುಗಳನ್ನೂ ನಿಷ್ಠುರಗಳನ್ನೂ ಕಷ್ಟನಷ್ಟಗಳನ್ನೂ ಕೂಡ ಲಕ್ಷಿಸದೆ ತಮ್ಮ ಸಾಮರ್ಥ್ಯವನ್ನೆಲ್ಲಾ ವಿನಿಯೋಗಿಸಿ ಕಾರ್ಯಮಾಡುತ್ತ ಬಂದಿರುವುದನ್ನು ಸರ್ವರೂ ಕಂಡಿರುತ್ತಾರೆ. ಇವರ ನಿಜಸಾಮರ್ಥ್ಯವು ಪ್ರಭುತ್ವದವರಿಗೂ ತಿಳಿಯದೆ ಇಲ್ಲ. ಸರ್ಕಾರಿ ಕಾರ್ಯಭಾಗಗಳಿಗೆ ಸಂಬಂಧಪಟ್ಟ ಫೈನಾನ್ಷಿಯಲ್ ಕಮಿಟಿ ಮೊದಲಾದ ಅನೇಕಾನೇಕ ಉಪಸಂಘಗಳಲ್ಲಿ ಇವರನ್ನು ಸಭಿಕರನ್ನಾಗಿ ಸೇರಿಸಿ ಇವರ ಸಲಹೆಗಳ ಪ್ರಯೋಜನಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಹಿಂದುಳಿದ ಜನವರ್ಗಗಳ ವಿದ್ಯಾರ್ಥಿವೇತನವು ಏರ್ಪಡುವಂತಾಗುವುದಕ್ಕೆ ಮುಖ್ಯವಾಗಿ ಮ|| ಬಸವಯ್ಯನವರೇ ಮೊದಲಾದವರ ದೃಢಪ್ರಯತ್ನವೇ ಹದಿಯಾಗಿದ್ದಿತೆಂಬುದನ್ನು ನೆನಸಿಕೊಂಡರೆ ಇಂಥವರು ನಿಯಮನಿರ್ಮಾಣಸಭೆ ಮೊದಲಾದುವುಗಳಲ್ಲಿ ಇರುವುದು ಎಷ್ಟು ಅವಶ್ಯಕವೆಂಬುದು ಸರ್ವರಿಗೂ ಗೊತ್ತಾಗದೆ ಇರಲಾರದು. ಸಮರ್ಥರಾದ ಅಡ್ವೋಕೇಟರಾಗಿರುವ ಇವರು ತಮ್ಮ ಸ್ವಾರ್ಥದಲ್ಲೇ ಮಗ್ನರಾಗಿದ್ದರೆ ತಿಂಗಳಿಗೆ ತಮ್ಮ ಉದ್ಯೋಗದಲ್ಲಿ ೧ ಸಾವಿರ ರೂ. ಗಳಿಗೆ ಕಡಿಮೆಯಿಲ್ಲದೆ ಸಂಪಾದಿಸಬಲ್ಲವರಾಗಿರುವರು. ಆದರೂ ಅದನ್ನು ಗೌಣವಾಗಿ ಕಂಡು, ಸ್ವಪ್ರಯೋಜನವನ್ನು ತೃಣೀಕರಿಸಿ ಅಹರ್ನಿಶಿಯೂ ಸ್ವದೇಶಬಾಂಧವರ ಹಿತಸಾಧನೆಯನ್ನೇ ತಪಸ್ಸನ್ನಾಗಿಟ್ಟುಕೊಂಡು ದುಡಿಯುತ್ತಿರುವರು. ಹಿಂದುಳಿದವರ ವಿರೋಧಿಗಳು ಇವರನ್ನು ತಮ್ಮ ಕಂಠೇಗಡುವನ್ನಾಗಿ ತಿಳಿದುಕೊಂಡಿರುವರು. ಇವರು ಎಷ್ಟುಕಾಲ ನಮ್ಮ ಮುಂದಾಳುಗಳಾಗಿ ನಮ್ಮ ರಾಜಕೀಯ ಸಭೆಗಳಲ್ಲಿ ನಮ್ಮ ಪ್ರತಿನಿಧಿಗಳಾಗಿರುವರೋ ಅಲ್ಲಿಯವರೆಗೂ ನಮ್ಮ ಭಾಗ್ಯಲತೆಯು ಕುಡಿವಡೆದು ನಡೆಯುತ್ತಲಿರುವುದೆಂಬುದಕ್ಕೆ ಸಂಶಯವೇ ಇಲ್ಲ. ಆದುಕಾರಣ ಇವರು ಬೇಡವೆಂದರೂ ಇವರಿಗೆ ಪ್ರತಿನಿಧಿತ್ವವನ್ನು ಕೊಟ್ಟು ನಿಯಮನಿರ್ಮಾಣಸಭೆಗೆ ಕಳುಹಿಸಿಕೊಡಲು ಸಿದ್ಧರಾಗಬೇಕು. ೧೯೧೫ ನೆ ವರ್ಷದಲ್ಲಿ ಪ್ರಜಾಪ್ರತಿನಿಧಿ ಸಭೆಯಿಂದ ಮೊಟ್ಟಮೊದಲು ನಿಯಮನಿರ್ಮಾಣಸಭೆಗೆ ಆರಿಸಲ್ಪಟ್ಟಾಗ ರಾಜಧಾನಿಯ ಸಮಾಜಬಾಂಧವರು ಇವರಿಗೆ ಒಂದು ಎಂಟರ್ಟೈನ್‌ಮೆಂಟನ್ನು ಕೊಟ್ಟು ಸತ್ಕರಿಸಿದಾಗ ಕೊಟ್ಟ ಅಡ್ರಸ್ಸಿನಲ್ಲಿ—"ಹಿಂದುಳಿದ ಜನವರ್ಗಗಳ ಪುರೋವೃದ್ಧಿ ವಿಷಯದಲ್ಲಿ ನ್ಯಾಯವಾಗಿ ಮಾಡಬೇಕಾದ ಪ್ರಯತ್ನಗಳನ್ನು ಮುಂದೆಯೂ ವಿಳಂಬವಿಲ್ಲದೆ ನಡೆಯಿಸುವಿರೆಂದು ನಂಬಿ ನಿರೀಕ್ಷಿಸುತ್ತೇವೆ" ಎಂದು ಸೂಚಿಸಿದ್ದುದಕ್ಕೆ ಮ|| ಬಸವಯ್ಯನವರು ಉತ್ತರಕೊಡುವಾಗ್ಗೆ—"ಹಿಂದುಳಿದ ಜನರ ಸೌಕರ್ಯಕ್ಕಾಗಿಯೇ ನಾನು ವಿಶೇಷಪ್ರಯತ್ನವನ್ನು ಮಾಡುತ್ತಿರುವೆನು" ಎಂದು ಅಭಿವಚನವನ್ನಿತ್ತಿದ್ದರು. ಅದನ್ನು ಇವರು ಅನುಷ್ಠಾನದಲ್ಲಿ ಜನರ ನಿರೀಕ್ಷಣೆಗಿಂತಲೂ ದ್ವಿಗುಣವಾಗಿ ಮಾಡಿ ಅವರುಗಳು ತಮ್ಮಲ್ಲಿಟ್ಟಿದ್ದ ಭರವಸೆಯನ್ನು ಸಾರ್ಥಕಪಡಿಸಿರುತ್ತಾರೆ. ಈಗ ಇವರು ಬೆಂಗಳೂರು ಮ್ಯುನ್ಸಿಪಾಲಟಿಯಿಂದ ಪ್ರಜಾಪ್ರತಿನಿಧಿಸಭೆಗೆ ಆರಿಸಲ್ಪಟ್ಟು ಬಂದಿದ್ದಾರೆ. ಹಿಂದುಳಿದವರ ಹಿತವನ್ನು ಕೋರುವ ಪ್ರತಿನಿಧಿಗಳೆಲ್ಲರೂ ಇವರಿಗೆ ತಮ್ಮ ಓಟನ್ನುಕೊಡಲು ಎಂದಿಗೂ ಮರೆಯಲಾಗದೆಂದು ಶ್ರುತಪಡಿಸುತ್ತೇವೆ. ಇವರಲ್ಲದೆ ಮ|| ಎಂ ಸುಬ್ಬಯ್ಯನವರೂ ಕೂಡ ಬೆಂಗಳೂರು ಮ್ಯುನ್ಸಿಪಾಲಟಿಯ ಪಕ್ಷದಿಂದ ಪ್ರಜಾಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುತ್ತಾರೆ. ಇವರ ದೇಶಾಭಿಮಾನವೂ ಕೂಡ ಪ್ರಖ್ಯಾತವಾಗಿಯೇ ಇದೆ. ಇವರೂಕೂಡ ಸರ್ಕಾರಿ ಉದ್ಯೋಗದ ಸಂಕಲೆಗೆ ತಗುಲಿಬೀಳದೆ ಸ್ವತಂತ್ರೋದ್ಯೋಗವನ್ನು ಮಾಡಿಕೊಂಡು ಪ್ರಜಾಪ್ರತಿನಿಧಿಸಭೆ, ಮ್ಯುನ್ಸಿಪಲ್‌ಸಭೆ ಮೊದಲಾದವುಗಳಲ್ಲಿ ಪ್ರಜಾಸೇವೆಯನ್ನು ನಿರ್ಭಯವಾಗಿಯೂ ದೃಢಚಿತ್ತದಿಂದಲೂ ಅಭಿಮಾನದಿಂದಲೂ ನೆರವೇರಿಸುತ್ತಲಿರುವವರಾಗಿದ್ದಾರೆ. ಇವರು ಒಕ್ಕಲಿಗರ ಸಂಘದ ಜನರಲ್ ಸೆಕ್ರಟೆರಿಯಾಗಿರುವುದು ಮಾತ್ರವೇ ಅಲ್ಲದೆ ವ್ಯವಸಾಯ ವಿಷಯದಲ್ಲಿ ಪ್ರತ್ಯಕ್ಷಾನುಭವವುಳ್ಳವರಾಗಿದ್ದುಕೊಂಡು ಒಂದೆರಡು ಗ್ರಂಥಗಳನ್ನೂ ಕೂಡ ದೇಶೀಯರ ಹಿತಕ್ಕೋಸ್ಕರ ರಚಿಸಿದವರಾಗಿದ್ದಾರೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಇವರು ಹಿಂದುಳಿದ ಜನವರ್ಗಗಳ ಹಿತಕ್ಕಾಗಿ ಎಷ್ಟು ಮಟ್ಟಿಗೆ ಗುದ್ದಾಡುತ್ತ ಬಂದಿರುವರೆಂಬುದು ಬಹು ಜನರ ಅನುಭವಕ್ಕೆ ಬಂದ ಸಂಗತಿಯಾಗಿದೆ. ಇವರೂ ಕೂಡ ನಿಯಮನಿರ್ಮಾಣ ಸಭಾ ಸಭಿಕರಾಗಿ ಪ್ರಜಾಪ್ರತಿನಿಧಿ ಸಭಿಕ ಪಕ್ಷದಿಂದ ಆರಿಸಲ್ಪಡುವುದಕ್ಕೆ ಸರ್ವವಿಧದಿಂದಲೂ ಅರ್ಹರಾಗಿರುತ್ತಾರೆ. ಈ ಮಹಾಶಯರಿಬ್ಬರೂ ಉಮೇದುವಾರರಾಗಿ ನಿಂತಿದ್ದರೆ ಅದು ಸಂತೋಷವೇ ಸರಿ. ಅದನ್ನು ಸಫಲ

ಮಾಡುವ ಭಾರವು ಮುಖ್ಯವಾಗಿ ಹಿಂದುಳಿದ ಜನವರ್ಗ ಪ್ರತಿನಿಧಿಗಳ ಮೇಲೆ ವಿಶೇಷವಾಗಿ ಬಿದ್ದಿರುತ್ತದೆ. ರಾ|| ಸಾ|| ಚನ್ನಯ್ಯನವರೂ, ಮಿ|| ಕಲಾಮಿಯವರೂ ಪ್ರತಿನಿಧಿಸಭಾ ಸಭಿಕರಾಗಿಲ್ಲವಾದುದರಿಂದ ಅವರ ವಿಷಯವನ್ನು ಇಲ್ಲಿ ಎತ್ತಬೇಕಾದುದು ಅಪ್ರಕೃತವಾಗಿದೆ. ಹಿಂದುಳಿದ ಜನವರ್ಗ ಪ್ರತಿನಿಧಿಗಳಲ್ಲಿ ಇನ್ನು ಯಾರು ಯಾರು ನಿಯಮನಿರ್ಮಾಣ ಸಭಾ ಸಭಿಕತ್ವವನ್ನು ಪಡೆಯಲು ನಿಂತಿರುವರೆಂಬುದನ್ನು ತಿಳಿದು ಮುಂದೆ ಅವರ ವಿಷಯವನ್ನು ಪ್ರಸ್ತಾಪಿಸಬೇಕೆಂದಿರುತ್ತೇವೆ.

ನವರಾತ್ರಿ ಮಹೋತ್ಸವಗಳು.

ನಮ್ಮ ಶ್ರೀಮನ್ಮಹಾರಾಜರವರು ಕಳೆದ ಗುರುವಾರ ಪ್ರಾತಃಕಾಲ ೬|| ಗಂಟೆಗೆ ಸರಿಯಾದ ಕನ್ಯಾ ಲಗ್ನದ ಸುಮುಹೂರ್ತದಲ್ಲಿ ಸಿಂಹಾಸನಾರೋಹಣವನ್ನು ಮಾಡಿದರು. ಪದ್ಧತಿಯಂತೆ ಸಭಾಂಗಣವು ರಾಜಪಿಂಡೆಯವರು ವೈದಿಕರುಗಳು ದಿವಾನರು ಕೌನ್ಸಿಲರು ಮುಖ್ಯಾಧಿಕಾರಿಗಳು ಪುರಪ್ರಮುಖರು ಮೊದಲಾದ ಸಹಸ್ರಾರು ಮಂದಿ ಸಭಿಕರಿಂದ ಮನೋಹರವಾಗಿ ವಿರಾಜಿಸುತ್ತಿದ್ದಿತು. ಅರಮನೆಯ ಮುಂಗಡೆಯು ತಳಿರುತೋರಣದಿಂದಲೂ ರಂಭಾಸ್ತಂಭಗಳಿಂದಲೂ ಅಲಂಕೃತವಾಗಿ ಚತುರಂಗ ಸೈನ್ಯದಿಂದ ಸುಶೋಭಿತವಾಗಿದ್ದಿತು. ೨೧ ಗುಂಡುಗಳು ಹಾರಿಸಲ್ಪಟ್ಟುವು. ಸೈನಿಕರ ಸುರೂಟುಗಳು ನಡೆದುವು. ಸಭೆಯಲ್ಲಿ ನಜರುಗಳೂ ಸಭಿಕರಿಗೆ ಮರ್ಯಾದೆಗಳೂ ಪದ್ಧತಿಯಂತೆ ನಡೆದುವು. ಆ ದಿನ ಸಾಯಂಕಾಲ ಪಟ್ಟದಾನೆ ಪಟ್ಟದ ಕುದುರೆಗಳು ಕೆರೆಗೆ ಬಿಜಮಾಡಿಸಿದ ಬಳಿಕ ರಾತ್ರಿ ದೇದೀಪ್ಯಮಾನವಾಗಿ ವಿದ್ಯುಚ್ಛಕ್ತಿ ದೀಪಾಲಂಕಾರವು ಅರಮನೆಯನ್ನೂ ಕೋಟೆಯ ಆವರಣವನ್ನೂ ಕೋಟೆ ಬಾಗಿಲುಗಳನ್ನೂ ಕಲ್ಯಾಣಿಮೈದಾನವನ್ನೂ ಸಹ ಅತಿ ಮನೋಹರವಾಗಿ ಬೆಳಗುತ್ತಿರುವಾಗ್ಗೆ ಸಕಲ ವಾದ್ಯಗಳೂ ಭೋರ್ಗರೆಯುತ್ತಿರುವಾಗ ತುಂಬಿದ ಸಭಾಮಧ್ಯದಲ್ಲಿ ದೇದೀಪ್ಯಮಾನವಾಗಿದ್ದ ಸುವರ್ಣಸಿಂಹಾಸನವನ್ನು ಶ್ರೀಮನ್ಮಹಾರಾಜರವರು ಅಲಂಕರಿಸಲು, ಅರಮನೆಯ ಮುಂಗಡೆಯಲ್ಲಿ ಜಟ್ಟಿಕಾಳಗ, ಸೈನಿಕರ ಕವಾಯತ್ತು ಮೊದಲಾದುವುಗಳೂ ಬಾಣಗಾರಿಕೆಯೂ ನಡೆಯುತ್ತಿರುವಾಗ್ಗೆ ಪದ್ಧತಿಯಂತೆ ಸಭಿಕರಲ್ಲಿ ಗೊತ್ತಾದವರ ನಜರುಗಳು ನಡೆಯಲಾಗಿ, ಸರ್ವರಿಗೂ ಪುಷ್ಪಹಾರ ತಾಂಬೂಲಾದಿ ವಿನಿಯೋಗವಾದ ಬಳಿಕ ಸಭಾವಿಸರ್ಜನೆಯು ನಡೆದಿತು. ಪ್ರತಿದಿನವೂ ಈಗ ಬೆಳಗಿನ ಹೊತ್ತು ಅರಮನೆಯ ಮುಂದೆ ಟಗರು ಗೂಳಿ ಮೊದಲಾದ ಪ್ರಾಣಿಗಳ ಕಾಳಗವೂ, ಸಾಯಂಕಾಲದ ಹೊತ್ತು ದರ್ಬಾರುಗಳೂ ಯಥಾಪ್ರಕಾರ ಜರುಗುತ್ತಿವೆ. ಪರಸ್ಥಲಗಳ ಜನರು ಬರುವುದಕ್ಕೆ ಆರಂಭವಾಗಿದೆ. ದಿವಾನರೇ ಮೊದಲಾದ ಅಧಿಕಾರಿಗಳನೇಕರು ರಾಜಧಾನಿಗೆ ದಯಮಾಡಿಸಿದ್ದಾರೆ. ಬರುವ ಶುಕ್ರವಾರ ಸಾಯಂಕಾಲ ಇಂಗ್ಲೀಷ್ ದರ್ಬಾರು ನಡೆಯುವುದಾಗಿದೆ. ಶನಿವಾರ ವಿಜಯದಶಮಿ ಮಹೋತ್ಸವವು ಜರುಗುತ್ತದೆ. ಆ ದಿನ ಬೆಳಗಿನ ೯ ಗಂಟೆಗೆ ಆಯುಧಗಜಾಶ್ವಾದಿಗಳು ಬನ್ನೀಮಂಟಪಕ್ಕೆ ಸಕಲ ಮರ್ಯಾದೆಗಳೊಡನೆ ಉತ್ಸವಪೂರ್ವಕವಾಗಿ ತೆರಳುವುವು. ಸಾಯಂಕಾಲ ಶ್ರೀಮನ್ಮಹಾರಾಜ ಸಹೋದರರು ಭಂಗಾರದ ಅಂಬಾರಿಯನ್ನೇರಿ ಉತ್ಸವಪೂರ್ವಕವಾಗಿ ಬನ್ನೀಮಂಟಪಕ್ಕೆ ತೆರಳುವರು. ಆ ದಿನ ರಾತ್ರಿಯೂ ಅದರ ಮಾರನೆ ೨ ರಾತ್ರಿಗಳೂ ಸಹ ಅಂಬಾವಿಲಾಸದಲ್ಲಿ ದರ್ಬಾರಾಗಿ ನಜರುಗಳು ನಡೆಯುವುವು. ಅದರಿಂದಾಚೆಗೆ ತಾ|| ೬ನೆ ಸೋಮವಾರದಿಂದ ಪ್ರಜಾಪ್ರತಿನಿಧಿ ಸಭಾಕಾರ್ಯಗಳಿಗೆ ಆರಂಭವಾಗುವುದು.

ಈ ವಾರವೆಲ್ಲಾ ರಾಜಧಾನಿಯು ಉತ್ಸವಮಯವಾಗಿರುವುದು. ಕಾಲಸ್ಥಿತಿಯು ಈಗ್ಗೆ ೧ ಪಕ್ಷದ ಹಿಂದೆ ಭೀತಿಯನ್ನುಂಟುಮಾಡುವಂತಿದ್ದಿತು. ೨ ತಿಂಗಳ ಕಾಲ ಸಂಸ್ಥಾನದ ಹಲವು ಕಡೆಗಳಲ್ಲಿ ಮಳೆಗಳು ಇಲ್ಲದೆ ಪೈರುಪಚ್ಚೆಗಳು ಒಣಗಿ ಕ್ಷಾಮಭೀತಿಯು ತಲೆದೋರಿದ್ದಿತು. ೧೫ ದಿನಗಳಿಂದ ಎಲ್ಲ ಕಡೆಯೂ ಮಳೆಗಳಾಗಿ ಪೈರುಗಳು ಪಚ್ಚೆಬಣ್ಣಕ್ಕೆ ತಿರುಗಿ ಪಲ್ಲವಿಸುತ್ತ ಕೆರೆಕಟ್ಟೆಗಳು ತುಂಬಿ ಪ್ರಜೆಗಳನ್ನು ಆನಂದಪಡಿಸುತ್ತಿರುವುವು. ಇಂಥ ಸಮಯದಲ್ಲಿ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣವನ್ನು ಮಾಡಿ ನವರಾತ್ರಿಮಹೋತ್ಸವಗಳನ್ನು ಜರುಗಿಸುತ್ತಿರುವುದು ಪ್ರಜೆಗಳಿಗೆ ವಿಶೇಷ ಸಂತೋಷಪ್ರದವಾಗಿರುವುದು. ಕಳೆದ ವರ್ಷ ಇಂಥ ಕಾಲದಲ್ಲಿ ಇನ್‌ಫ್ಲುಯಂಜಾ ರೋಗವು ಹರಡಿ ದೇಶವನ್ನೆಲ್ಲಾ ತತ್ತರಗೊಳಿಸಿದ್ದುದರಿಂದ ನವರಾತ್ರಿ ಉತ್ಸವಗಳೂ ಆ ಕಾಲದಲ್ಲಿ ನಡೆಯಬೇಕಾಗಿದ್ದ ಇತರ ರಾಜಕೀಯ ಸಭಾಕಾರ್ಯಗಳೂ ಸಂಕೋಚಗೊಂಡುವು. ಈ ವರ್ಷ ಅದರ ಭೀತಿಯೂ ಕೂಡ ಇಲ್ಲದಂತೆ ಜಗದೀಶ್ವರನು ಅನುಗ್ರಹಿಸಿರುವುದರಿಂದ ಪ್ರಭುಸೇವೆಯೂ ದೇಶಸೇವೆಯೂ ಸಾಂಗವಾಗಿ ಜರುಗಲು ಅವಕಾಶವಾಗಿರುವುದು. ಇದರ ಮೇಲೆ ನಮ್ಮ ರಾಜವಂಶದಲ್ಲಿ ಸತ್ಪುತ್ರ ರತ್ನೋದಯವಾಗಿ ಅರಮನೆಯಲ್ಲಿ ವಿಶೇಷಾನಂದವನ್ನುಂಟುಮಾಡಿರುವುದರಿಂದ ಈ ವರ್ಷಮುತ್ಸವವು ಇನ್ನಷ್ಟು ಮಿಗಿಲಾಗಿರುವುದೆಂಬುದಕ್ಕೆ ಸಂಶಯವಿಲ್ಲ. ರೋಗಾದ್ಯುಪದ್ರವಗಳ ಹಾವಳಿಯೇನೂ ಇಲ್ಲದಿರುವುದರಿಂದ ಉತ್ಸವಕ್ಕೆ ಪರಸ್ಥಲದ ಜನರು ತಕ್ಕಮಟ್ಟಿಗೆ ಸೇರಬಹುದೆಂದು ಕಾಣುತ್ತದೆ. ಊರಿನ ಶುಚೀಕರಣಾದಿಗಳ ಏರ್ಪಾಟನ್ನು ಮ್ಯುನಿಸಿಪಾಲಿಟಿಯವರೂ ಕಳ್ಳಕಾಕರ ಉಪದ್ರವವಿಲ್ಲದಂತಹ ರಕ್ಷಣೆಯನ್ನು ಪೊಲೀಸರೂ ತಕ್ಕ ರೀತಿಯಲ್ಲಿ ಮಾಡುವುದು ಅವಶ್ಯಕವಾಗಿದೆ. ಉತ್ಸವಸಂಬಂಧದ ಸಕಲ ಕಾರ್ಯಗಳೂ ದೇಶಹಿತೋದ್ದೇಶದ ಸರ್ವಸಭಾಕಾರ್ಯಗಳೂ ಉತ್ಸಾಹಪ್ರದವಾಗಿ ನಡೆಯಲೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಮ|| ಕೆ. ಹೆಚ್. ರಾಮಯ್ಯ ಬಿ. ಎ., ಬ್ಯಾ|| ಅಟ್ಲಾಯವರು ವ್ಯಾಪಾರಶಾಖೆಯ ಅ|| ಡೆಪ್ಯುಟಿ ಡೈರೆಕ್ಟರಾಗಿ ನಿಯಮಿಸಲ್ಪಟ್ಟಿರುವರು.

ಮಹಾನವಮಿ ಮಹೋತ್ಸವ ಸಂಬಂಧದಲ್ಲಿ ನಡೆಯತಕ್ಕ ಜಂಬೂನಾಪಂದ್ಯಗಳು ಬರುವತಿಂಗಳು ತಾ|| ೬ ಮತ್ತು ೯ರಲ್ಲಿ ಕುದುರೆಜೂಜಿನ ಬಯಲಿನಲ್ಲಿ ನಡೆಯುವುವು.

ಹುಬ್ಬೆಯ ಮಳೆಯು ಸಂಸ್ಥಾನದ ಎಲ್ಲ ಕಡೆಯೂ ನಡೆಯುತಿರುವಂತೆ ವರ್ತಮಾನಗಳು ಬಂದಿವೆ. ರಾಜಧಾನಿಯಲ್ಲೂ ಕೆರೆ ಕಟ್ಟೆಗಳು ತುಂಬುವಂಥ ಮಳೆಗಳು ಹುಯ್ದು ವಾಯುಗುಣವು ಮನೋಹರವಾಗಿದೆ.

ರಾಜಧಾನಿಯ ಕಸಕುಪ್ಪೆ ಪೈರುಗಳನ್ನು ಪ್ರತಿದಿನವೂ ಹೊರಕ್ಕೆ ಬೇಗನೆ ಸಾಗಿಸುವುದಕ್ಕೆ ಅನುಕೂಲಿಸುವಂತೆ ೨ ಮೋಟಾರ್ ಗಾಡಿಗಳನ್ನು ಕೊಂಡು ಇಟ್ಟುಕೊಳ್ಳಬೇಕೆಂದು ಇಲ್ಲಿಯ ಮ್ಯುನ್ಸಿಪಾಲಟಿಯವರು ತೀರ್ಮಾನಿಸಿದ್ದಾರೆ.

ಮೈಸೂರಿನಲ್ಲಿ ಸ್ಥಾಪಿತವಾಗಿರುವ ಶ್ರೀ ಮಹಾವೀರ ವಿದ್ಯಾವರ್ಧಕ ಫಂಡಿನ ಪ್ರಥಮ ವಾರ್ಷಿಕಾಧಿವೇಶನವು ಬರುವ ಅಕ್ಟೋಬರ್ ತಾ|| ೫ರಲ್ಲಿ ಎಂ. ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿನಿಲಯದಲ್ಲಿ ಶ್ರೀಮಂತ ಮೋತಿಖಾನಾ ಅನಂತರಾಜಯ್ಯನವರ ಅಧ್ಯಕ್ಷತೆಯಲ್ಲಿ ಜರುಗುವುದು.

ಸಹಕಾರಸಂಘಗಳ ವಾರ್ಷಿಕ ಮಹಾಸಭೆಯು ಬರುವ ಅಕ್ಟೋಬರ್ ತಾ|| ೨ ರಲ್ಲಿ ರಾಜಧಾನಿಯ ಟೌನ್‌ಹಾಲಿನಲ್ಲಿ ಕೂಡುವುದು. ಶ್ರೀಮದ್ಯುವರಾಜರವರು ಅದರ ಪ್ರಾರಂಭ ಮಹೋತ್ಸವವನ್ನು ಜರುಗಿಸುವರು. ಸರ್ವೆಂಟ್ಸ್ ಆಫ್ ಇಂಡ್ಯಾ ಸೊಸೈಟಿಯ ವೈಸ್‌ಪ್ರಸಿಡೆಂಟರಾದ ಮ|| ದೇವಧಾರ್ ಎಂ. ಎ ಯವರು ಸಭಾಧ್ಯಕ್ಷರಾಗಿ ಕೆಲಸವನ್ನು ನಡೆಯಿಸುತ್ತಾರೆ.

ರಾಜಧಾನಿಯಲ್ಲಿ ವಸ್ತುಪ್ರದರ್ಶನ ಶಾಲೆಯು ಬರುವ ತಿಂಗಳು ತಾ|| ೧ ರಿಂದ ಆರಂಭಿಸಲ್ಪಟ್ಟು ೧೫ ದಿನಗಳವರೆಗೆ ಸಾಯಂಕಾಲ ೪ ಗಂಟೆಯಿಂದ ೮ಗಂಟೆವರೆಗೆ ತೆರೆಯಲ್ಪಟ್ಟಿರುವುದು. ನೋಟಕರಿಗೆ ೧ ಆಣೆಯಂತೆ ಟಿಕೆಟ್ ದರವೂ, ಸೀಜನ್ ಟಿಕೆಟ್ಟಿಗೆ ೮ ಆಣೆಯಂತೆ ದರವೂ ವಿಧಿಸಲ್ಪಟ್ಟಿದೆ. ತಾ|| ೪-೫ ರಲ್ಲಿ ಮಾತ್ರ ನೋಡುವ ಜನರಿಗೆ ಅವಕಾಶಕೊಡುವುದಿಲ್ಲ.

ರಂಗೂನಕ್ಕಿಯ ಅನ್ನವನ್ನು ತಿನ್ನುವುದರಿಂದ ಆಮಶಂಕೆ ಮೊದಲಾದ ಉಪದ್ರವವುಂಟಾಗುತ್ತದೆಂದು ಜನರು ತಿಳಿದುಕೊಂಡಿದ್ದಾರೆ. ಈ ಅಕ್ಕಿಯನ್ನು ಉಳಿದ ಅಕ್ಕಿಯಂತೆ ತಣ್ಣೀರಿನಲ್ಲಿ ನೆನೆಹಾಕದೆ ಬಿಸಿನೀರಿನಲ್ಲಿ ನೆನೆಹಾಕಿ ಚೆನ್ನಾಗಿ ತೊಳೆದು ಕುದಿಯುತ್ತಿರುವ ಬಿಸಿನೀರಿನಲ್ಲಿ ಹಾಕಿ ನೀರೆಲ್ಲಾ ಇಂಗುವವರೆಗೆ ಬೇಯಿಸಿದಲ್ಲಿ ಅನ್ನವು ಬಹಳ ಮೃದುವಾಗಿಯೂ ರುಚಿಕರವಾಗಿಯೂ ಇರುವುದು ಎಂದು ಕಲಕತ್ತಾ ಮ್ಯುನಿಸಿಪಲ್ ಕಮಿಷನರ್ ಮಿ|| ವಿಬ್ಲಿಯವರು ಪ್ರಕಟಿಸಿರುತ್ತಾರೆ.

ನವರಾತ್ರಿಯಕಾಲದಲ್ಲಿ ರಾಜಧಾನಿಗೆ ವಿಶೇಷವಾಗಿ ಪರಸ್ಥಳದ ಜನರು ಬರುವ ಸಂಭವವಿರುವುದರಿಂದ ಅಕ್ಕಿಯು ಎಲ್ಲೆಲ್ಲೂ ಸುಲಭವಾಗಿ ದೊರೆಯುವಂತೆ ಮಾಡುವುದಕ್ಕಾಗಿ ಮ್ಯುನ್ಸಿಪಾಲಟಿಯವರು ಧಾರಾಳವಾಗಿ ಅನೇಕ ವರ್ತಕರಿಗೆ ರಂಗೂನ್ ಮೊದಲಾದ ಕಡೆಗಳ ಅಕ್ಕಿಯನ್ನು ಮಾರಲು ಅಪ್ಪಣೆಚೀಟಿ ಕೊಟ್ಟು ಅಕ್ಕಿಯನ್ನು ಒದಗಿಸುತ್ತಿದ್ದಾರೆ. ೧ ರೂ. ಗೆ ೫ ಸೇರಿನಂತೆ ಅಕ್ಕಿಯು ಮಾರಲ್ಪಡುತ್ತದೆ. ಜೋಳದ ಬೆಲೆಯು ಇಳಿದಿರುವುದರಿಂದ ಅದೂಕೂಡ ರೂ. ಗೆ ೬|| ಸೇರಿನಂತೆ ದೊರೆಯುತ್ತಿದೆ.

ಮೈಸೂರು ಪೌರಸಾಮಾಜಿಕ ಸಂಘದವರು ಅಕ್ಟೋಬರ್ ೧-೨ ನೈ ತಾರೀಖುಗಳಲ್ಲಿ ಪಂಚಮರ ಸಮ್ಮೇಳನವು ಮೈಸೂರು ಟೌನ್‌ಹಾಲಿನಲ್ಲಿ ನಡೆಯುವಂತೆ ಏರ್ಪಡಿಸಿದ್ದಾರೆ. ಎಲ್ಲಾ ತಾಲ್ಲೂಕುಗಳಿಂದಲೂ ಪಂಚಮರ ಮೆಂಬರುಗಳನ್ನು ಕಳುಹಿಸಬೇಕೆಂದು ಏರ್ಪಾಟಾಗಿದೆ. ಇವರ ಊಟ ಉಪಚಾರಗಳಿಗಾಗಿ ಸೆಂಟ್ರಲ್ ಪಂಚಮ ಇನ್‌ಸ್ಟಿಟ್ಯೂಟಿನಲ್ಲಿ ಅನುಕೂಲ ಪಡಿಸಿದ್ದಾರೆ. ಈ ಜನಗಳ ಏಳಿಗೆಯಲ್ಲಿ ಅಭಿಮಾನವುಳ್ಳ ಮಹನೀಯರು ದಯಮಾಡಿಸಿ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಶಿಡ್ಲಘಟ್ಟದ ತಾಲ್ಲೂಕು ಬೋರ್ಡು ಮೆಂಬರುಗಳೆಲ್ಲರೂ ಸೇರಿ ಈ ತಿಂಗಳು 3 ನೇಯ ತಾರೀಖಿನ ದಿನ ವೋಟಿಂಗ್ ನಡೆಸಿದ್ದರಲ್ಲಿ ಹೆಚ್ಚು ಸಮ್ಮತಿಗಳನ್ನು ಪಡೆದ ಜಮಿನ್ದಾರ್ ಮತ್ತು ವರ್ತಕರಾದ ಮ|| ಎಸ್. ಹಂಪಯ್ಯನವರು, ಶ್ಯಾ|| ಲಕ್ಷ್ಮಯ್ಯನವರು ಇವರಿಬ್ಬರೂ ಕೋಲಾರದ ಡಿಸ್ಟ್ರಿಕ್ಟ್ ಬೋರ್ಡಿಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುವುದು ಸಂತೋಷಕರವಾಗಿದೆ. ಇವರು ನಮ್ಮ ತಾಲ್ಲೂಕಿನ ಹಿತಚಿಂತನೆಯಲ್ಲಿ ಮುತುವರ್ಜಿ ಮಾಡಿಯಾರೆಂದು ನಿರೀಕ್ಷಿಸುತ್ತೇವೆ ಎಂದು ಒಬ್ಬ ಚಂದಾದಾರರು ಬರೆದಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಲ್ಲಿ ಒಬ್ಬರಾದ ಮ|| ಯಂ. ಯಸ್. ಕೃಷ್ಣರಾವ್, ಬಿ.ಎ.,ಬಿ.ಎಲ್.ರವರು ವೈಸ್‌ಪ್ರೆಸಿಡೆಂಟರಾಗಿ ಸರ್ಕಾರದವರಿಂದ ನೇಮಿಸಲ್ಪಟ್ಟಿರುವರೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಇವರು ಯಾವಾಗಲೂ ಧೈರ್ಯದಿಂದಲೂ ನಿರ್ದಾಕ್ಷಿಣ್ಯದಿಂದಲೂ ನಿಷ್ಪಕ್ಷಪಾತತೆಯಿಂದಲೂ ಕೆಲಸಮಾಡತಕ್ಕ ಸ್ವಭಾವದವರಾದುದರಿಂದ ಈ ಹೊಸ ಉದ್ಯೋಗದಲ್ಲಿ ಪಕ್ಷಪಾತವಿಲ್ಲದೆ ಸರ್ಕಾರದವರಿಗೂ ಪ್ರಜೆಗಳಿಗೂ ಸಮ್ಮತವಾಗಿರುವಂತೆ ಕೆಲಸಮಾಡಿ ಉಭಯರ ಮೆಚ್ಚುಗೆಗೂ ಪಾತ್ರರಾಗುವವರಾಗಲೆಂದು ಆಪೇಕ್ಷಿಸುತ್ತೇವೆ.

ಕೆಲ ಪದಾರ್ಥಗಳು ಸಿವಿಲ್‌ಸಪ್ಲೈ ಡೈರೆಕ್ಟರುಗಳಿಂದ ಪ್ರಯಾರಿಟಿ ಸರ್ಟಿಫಿಕೇಟ್ ಕೊಡಲ್ಪಟ್ಟವಿನಾ ರೈಲುಮಾರ್ಗವಾಗಿ ಸ್ಥಳದಿಂದ ಸ್ಥಳಕ್ಕೆ ಸಾಗಿಸಲ್ಪಡಕೂಡದೆಂಬ ನಿರ್ಬಂಧವಿದ್ದಿತಷ್ಟೆ. ಈಗ ಆಹಾರದ ದಿನಸಿಗಳು ಮೇವು, ಹತ್ತಿಯಬಟ್ಟೆ (ವಿಶೇಷ ಸಂದರ್ಭದಲ್ಲಿ ಮಾತ್ರ) ಉಪ್ಪು ಮತ್ತು ಬರಿಯಚೀಲಗಳು, ಇವುಗಳು ವಿನಾ ಉಳಿದ ಎಲ್ಲಾ ಪದಾರ್ಥಗಳೂ ಪ್ರಯಾರಿಟಿ ಸರ್ಟಿಫಿಕೇಟ್ ಇಲ್ಲದೆ ಸಾಗಿಸಲ್ಪಡಬಹುದೆಂದು ಸಿವಿಲ್‌ಸಪ್ಲೈ ಡೈರೆಕ್ಟರವರು ಅಪ್ಪಣೆಮಾಡಿರುತ್ತಾರೆ. ಹಿಟ್ಟು, ರವೆ, ಗೋದುವೆ ಹೊಟ್ಟು ಇವುಗಳು ೬ ಪೌಂಡಿಗೆ ಹೆಚ್ಚಿಲ್ಲದಷ್ಟು ಸರ್ಟಿಫಿಕೇಟ್ ಇಲ್ಲದೆ ರೈಲುಬಂಡಿಯಲ್ಲಿ ಸಾಗಿಸಲ್ಪಡಬಹುದಾಗಿದೆ.

ಮ|| ರಾಮಲಿಂಗರೆಡ್ಡಿಯವರ ಮೇಲೆ ಆರುಳುಮರುಳಾದ ಸಂಪದಭ್ಯುದಯ ಪತ್ರಿಕೆಯ ಅಸೂಯಾರೋಗವು ಈಗ ಮತ್ತೆ ಕೆರಳಿಕೊಂಡಂತೆ ಕಾಣುತ್ತಿದೆ. ಕೆಲ ರೋಗಗಳು ಹೀಗೆಯೇ ಪರ್ವಕಾಲಗಳಲ್ಲೂ ಮುಂಗಾರಿನಲ್ಲೂ ಕೆರಳುವುದು ಸ್ವಭಾವ. ಮ|| ರೆಡ್ಡಿಯವರ ಸ್ಥಾನಕ್ಕೆ ಮ|| ವೆಂಕಟಕೃಷ್ಣಯ್ಯನವರನ್ನು ಗೌರ್ನಮೆಂಟಿನವರು ದಯವಿಟ್ಟು ನಿಯಮಿಸಿಕೊಟ್ಟರೆ ಸಂಪದಭ್ಯುದಯದ ಈ ರೋಗವು ನಿವೃತ್ತಿಯಾದೀತೆಂದೂ ಆದರಿಂದ ಈ ಬಗೆಯ ರೋದನವನ್ನು ಕೇಳಿ ಕೇಳಿ ಬೇಸತ್ತಿರುವ ಪ್ರಜಾವರ್ಗದವರಿಗೆ ಸರ್ಕಾರದವರು ಉಪಕಾರಮಾಡಿದಂತಾಗುವುದೆಂದೂ ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ. ಇದು ಸಾಧ್ಯವೆ? ಮ|| ವೆಂಕಟಕೃಷ್ಣಯ್ಯನವರು ಅದಕ್ಕೆ ಒಪ್ಪುತ್ತಾರೆಯೆ?

ರತನ್‌ಜಿ ಎಂಬ ಪಾರ್ಸಿಗೃಹಸ್ಥರ ಕುಮಾರಿಯಾದ ಮಣಿಯಮ್ಮನು ಕಳೆದ ತಾ|| ೨೩ ರಲ್ಲಿ ಮದ್ರಾಸಿನ ಆಂಧ್ರಪತ್ರಿಕಾ ಕಾರ್ಯಾಲಯದಲ್ಲಿ ಆರ್ಯಸಮಾಜಿಕರ ಶುದ್ಧಿಕ್ರಮದ ಮೇರೆಗೆ ಸಂಸ್ಕಾರಗೊಂಡು ಸುಶೀಲಾದೇವಿ ಎಂಬ ಹೆಸರನ್ನು ಹೊಂದಿ ತಾ|| ೨೪ ನೆ ಬುಧವಾರದ ದಿವಸ ಅದೇ ಕಾರ್ಯಾಲಯದಲ್ಲಿ ಮೈಸೂರು ರಾಜಬಂಧುವರ್ಗಕ್ಕೆ ಸೇರಿದ ಅ|| ಕಮಿಷನರ್ ಮ|| ಪಿ. ಗೋಪಾಲರಾಜ ಅರಸಿನವರ ಪಾಣಿಗ್ರಹಣವನ್ನು ಆರ್ಯಸಾಮಾಜಿಕ ವೈದಿಕಪದ್ಧತಿಯಿಂದ ಮಾಡಿಕೊಂಡಳು. ಈ ವಿವಾಹಕ್ಕೆ ಅಲ್ಲಿಯ ನ್ಯೂಇಂಡಿಯಾ ಪತ್ರಿಕಾ ಸಂಪಾದಕರಾದ ಮಿ|| ಆರುಂಡೇಲ್‌ರವರೂ ಮ|| ಎ. ಮಹಾದೇವಶಾಸ್ತ್ರಿಗಳು ಮೊದಲಾದ ಅನೇಕ ದೊಡ್ಡಮನುಷ್ಯರು ಸೇರಿದ್ದರು. ನಮ್ಮ ರಾಜಮನೆತನದವರು ಇಂಥ ಸಂಬಂಧವನ್ನು ಮಾಡಿಕೊಂಡುದು ಅವರ ಪೂರ್ವಪರಿಚಯವುಳ್ಳ ನಮ್ಮಂಥವರಿಗೆ ವಿಷಾದಕರವಲ್ಲದೆ ಸಂತೋಷಕರವಾಗಿಲ್ಲ.

ಪ್ರಕಟನೆ.

ಚಾಮರಾಜೇಂದ್ರ ನಾಟಕ ಸಂಘವೆಂದು ಪ್ರಸಿದ್ಧವಾಗಿದ್ದು ಈಗ ಶ್ರೀ ಶಾಕುಂತಲ ನಾಟಕಸಂಘವೆಂದು ಮಾರ್ಪಟ್ಟಿರುವ ನಾಟಕ ಮಂಡಲಿಯವರು ತಮ್ಮ ಪ್ರಸಿದ್ಧವಾದ ನಾಟಕಗಳನ್ನು ಈ ದಸರಾ ಮಹೋತ್ಸವಕಾಲದಲ್ಲಿ ಮೈಸೂರು ಟವನ್ ಹಾಲಿನಲ್ಲಿ ಕೆಳಗೆ ಕಂಡ ಪ್ರಕಾರ ಪ್ರಯೋಗಿಸುವವರಾಗಿರುವರು.

ಚಂದ್ರಹಾಸಚರಿತ್ರೆ	ತಾ|| 27-9-19.
ವೀರಸಿಂಹಚರಿತ್ರೆ	,, 3-10-19.
ಶಶಿರೇಖಾಪರಿಣಯ	,, 4-10-19.
(ಮ್ಯಾಟಿನಿ ಸಾಯಂಕಾಲ 6 ಗಂಟೆಯಿಂದ).	
ಗಯಚರಿತ್ರೆ (ರಾತ್ರಿ 10 ಗಂ.)	ತಾ|| 4-10-19.
ರುಕ್ಮಾಂಗದಚರಿತ್ರೆ	,, 5-10-19.

ಭರತಖಂಡದ ವೃತ್ತಾಂತಗಳು.

ಇಂಡ್ಯಾ ಸರ್ಕಾರದವರು ಕಳೆದ ತಿಂಗಳಿಂದ ಆಗಸ್ಟ್ ತಿಂಗಳ ಕೊನೆಯೊಳಗಾಗಿ ೩೪೬೦೦೦೨೩ ರೂ. ಗಳನ್ನು ಟಂಕಸಾಲೆಗಳಲ್ಲಿ ಮುದ್ರಿಸಿದ್ದಾರೆ.

ಸೀಮೆಯೆಣ್ಣೆ ಮಾರುವ ಸ್ಟ್ಯಾಂಡರ್ಡ್ ಆಯಿಲ್ ಕಂಪೆನಿಯವರಿಗೆ ೧೯೧೨ ವರ್ಷದಿಂದ ೧೯೧೮ ನೆ ವರ್ಷದವರೆಗೆ ೯ ಕೋಟಿ ೧೦ ಲಕ್ಷ ಪೌನುಗಳ ಲಾಭವು ಬಂದಿದೆ. ಆದರಲ್ಲಿ ೨|| ಕೋಟಿ ಪೌನುಗಳನ್ನು ಭಾಗಸ್ಥರುಗಳಿಗೆ ಹಂಚಿಕೊಟ್ಟಿದ್ದಾರೆ.

ಭರತಖಂಡದಲ್ಲೆಲ್ಲಾ ವಿಜಯ ಮಹೋತ್ಸವವನ್ನು ಬರುವ ಡಿಶಂಬರ್ ತಾ|| ೧೩ ರಿಂದ ೪ ದಿನಗಳ ವರೆಗೆ ನಡೆಯಿಸತಕ್ಕದ್ದೆಂದೂ, ಆ ನಾಲ್ಕು ದಿನಗಳೂ ರಜಾ ದಿನಗಳಾಗಿರತಕ್ಕದ್ದೆಂದೂ ಆ ಮಧ್ಯದಲ್ಲಿ ಬರುವ ಭಾನುವಾರದ ದಿವಸ ಸಕಲ ಮತಸ್ಥರ ದೇವಾಲಯಗಳಲ್ಲೂ ಪೂಜಾಪ್ರಾರ್ಥನಾದಿಗಳು ನಡೆಯತಕ್ಕದ್ದೆಂದೂ ಇಂಡ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ವಿದ್ಯೆಯಲ್ಲೂ ಸಂಪತ್ತಿನಲ್ಲೂ ಸೌಂದರ್ಯದಲ್ಲೂ ವ್ಯಾಪಾರದಲ್ಲೂ ಪರಿಶ್ರಮದಲ್ಲೂ ನಮ್ಮ ಭರತಖಂಡದಲ್ಲೆಲ್ಲಾ ಪಾರ್ಸಿಯವರು ಮುಂದಾಗಿರುತ್ತಾರೆ. ಅವರು ವರ್ಷಕ್ಕೊಂದು ಸಲ ತಮ್ಮ ನೂತನ ವತ್ಸರಾದಿಯ ದಿವಸ ಮಹೋತ್ಸವವನ್ನು ಜರುಗಿಸಿ ಸಭೆ ಮಾಡುವುದುಂಟು. ಆಗ್ಗೆ ತಮ್ಮ ಅಭ್ಯುದಯ ಮಾರ್ಗದ ಸಿಂಹಾವಲೋಕನವನ್ನು ಮಾಡಿ, ಮುಂದಣ ಕರ್ತವ್ಯವನ್ನು ನಿರ್ಧರಿಸಿಕೊಳ್ಳುತ್ತಾರೆ. ಕಳೆದ ವರ್ಷ ಅವರುಗಳು ಮಾಡಿದ ಕೆಲಸಗಳಲ್ಲಿ ಅವರಲ್ಲಿ ಶ್ರೀಮಂತರಾದ ೬-೮ ಮಂದಿಗಳೇ ವಿದ್ಯಾಭಿವೃದ್ಧಿಗೂ ವೈದ್ಯಸಾಹಾಯ್ಯಕ್ಕೂ ೫೦ ಲಕ್ಷ ರೂ. ಗಳನ್ನು ಧರ್ಮಾರ್ಥವಾಗಿ ದಾನಮಾಡಿರುವರೆಂದು ಗೊತ್ತಾಯಿತು. ವರ್ಧಿಷ್ಣುಗಳೆಲ್ಲಾ ಇವರ ಮೇಲ್ಪಂಕ್ತಿಯನ್ನನುಸರಿಸಬೇಕು.

ರಷ್ಯಾ ರಾಜಧಾನಿಯಾದ ಪೆಟ್ರೋಗ್ರೇಡ್ ಪಟ್ಟಣದಿಂದ ದಿಲ್ಲಿಯಲ್ಲಿರುವ ರಾಜದ್ರೋಹಿಗಳ ಗುಂಪಿನೊಡನೆ ಜರಗುತ್ತಿದ್ದ ಪತ್ರವ್ಯವಹಾರಗಳಿಗೆ ಮಹಮ್ಮದ್ ಹಾಜಿಲಾಸೆರ್, ಎಂಬುವವನು ಏಜಂಟಾಗಿದ್ದನು. ಅವನ ಬಳಿಯಲ್ಲಿ ಸಿಕ್ಕಿದ ಒಂದು ಕಾಗದದಿಂದ ಭರತಖಂಡದಲ್ಲಿರುವ ವಿಪ್ಲವಕಾರರಿಗೂ ರಷ್ಯಾದ ಬೋಲ್ಷೆವಿಕ್ಕರಿಗೂ ಇದ್ದ ಸಂಬಂಧವು ವಿದಿತವಾಗಿರುತ್ತದೆ. ಇವನ ಸಾಹಸವು ಸ್ವೀಡನ್ನಿನಲ್ಲಿ ದೊಡ್ಡದಾಗಿ ಸಾಗುತ್ತಿದ್ದಿತಂತೆ. ಇವನ ಜತೆಗೆ ಭಾರತೀಯರು ೧೨ ಮಂದಿಗಳು ಸೇರಿರುವರು; ಅವರಲ್ಲಿ ೮ ಮಂದಿಗಳು ದಿಲ್ಲಿಯವರು. ಸ್ಟಾಕ್‌ಹಾಮಿನಲ್ಲಿ ಮಾಡಲ್ಪಟ್ಟ ಹತ್ಯೆಗೆ ಇವರು ಸಂಬಧಿಸಿದವರೆಂತೆ. ಇಂಥ ನೀಚತನದ ದುರ್ವಾಸನೆಯು ಭರತಖಂಡದಲ್ಲಿ ಬಡಿಯುತ್ತಿರುವುದರಿಂದಲೇ ಪ್ರಭುತ್ವದವರು ಕಠಿನ ಶಾಸನಾಯುಧಗಳನ್ನು ಹೊಸಹೊಸದಾಗಿ ಸಿದ್ಧಪಡಿಸುತ್ತಲಿದ್ದಾರೆ.

ವಿದೇಶದ ವೃತ್ತಾಂತಗಳು.

ಆಸ್ಟ್ರಿಯಾ ಪ್ರಭುತ್ವದವರು ಸಂಧಿಪತ್ರಕ್ಕೆ ಒಪ್ಪಿ ಕೈ ಬರೆಹವನ್ನು ಹಾಕುವ ಕೆಲಸವು ಮುಗಿದಿತು.

ಈಗಣ ರಷ್ಯಾ ಪ್ರಭುತ್ವದವರು ಮಿತ್ರಮಂಡಲಿಯವರೊಡನೆ ಸಂಧಿಮಾಡಿಕೊಳ್ಳಲು ಉಜ್ಜುಗಿಸಿದ್ದಾರೆ.

ನಾವು ಸಬ್‌ಮೆರೀನುಗಳ ಯುದ್ಧವನ್ನು ಒಂದೇಸಮನಾಗಿ ಹೆಚ್ಚಿಸಿದ್ದರೂ ಮೊಟ್ಟಮೊದಲೇ ಇಂಗ್ಲೀಷರಮೇಲೆ ನೌಕಾಯುದ್ಧಕ್ಕೆ ಬಿದ್ದಿದ್ದರೂ ನಮಗೆ ಈಗಣಂಥ ಅಪಜಯವು ಸಂಭವಿಸುತ್ತಿರಲಿಲ್ಲವೆಂದು ಜರ್ಮನರ ನೌಕಾ ಸೇನಾಧ್ಯಕ್ಷರಾಗಿದ್ದ ಅಡ್ಮಿರಲ್ ಟರ್ಪಿಟ್ಜಯವರು ಒಂದು ಗ್ರಂಥದಲ್ಲಿ ಬರೆದು ಪ್ರಕಟಿಸಿಕೊಂಡಿದ್ದಾರೆ.

ಇನ್ನುಮುಂದೆ ಫ್ರಾನ್ಸಿನವರು ಶಾಂತಿ ಸಮಯದಲ್ಲಿ ೨|| ಲಕ್ಷ ಸೈನ್ಯವನ್ನೂ ಕೋರಿದಾಗ ಸೈನ್ಯಕ್ಕೆ ಬಂದು ಸೇರಿಕೊಳ್ಳುವಂತೆ ಇನ್ನು ೧|| ಲಕ್ಷ ಮಂದಿಗಳನ್ನೂ ಇರುವಂತೆ ಮಾಡಲು ನಿರ್ಧರಿಸಿದ್ದಾರೆ. ದೇಶೀಯರೆಲ್ಲಾ ೧ ವರ್ಷ ಕಾಲ ನಿರ್ಬಂಧವಾಗಿ ಸೈನ್ಯಕ್ಕೆ ಸೇರಿ ಶಿಕ್ಷೆಯನ್ನು ಹೊಂದಿರಬೇಕೆಂದೂ ಯುದ್ಧವೇನಾದರೂ ಸಂಭವಿಸಿದರೆ ಕರೆದಕೂಡಲೇ ೨೦ ಲಕ್ಷ ಸೈನ್ಯವು ಕೂಡುವಂತೆ ಇರಬೇಕೆಂದೂ ಏರ್ಪಡಿಸಿಕೊಳ್ಳುವವರಾಗಿದ್ದಾರೆ

ಇಟಲಿಪ್ರಭುಗಳು ತಮ್ಮ ಆಸ್ತಿಯಲ್ಲಿ ಬಹು ಭಾಗವನ್ನು ಕಳೆದ ಯುದ್ಧದಲ್ಲಿ ದೇಶರಕ್ಷಣೆಗಾಗಿ ಸಹಾಯಮಾಡಿದ ಸೈನಿಕರಿಗಾಗಿ ಕೊಟ್ಟುಬಿಡಲು ನಿರ್ಧರಿಸಿ ಪ್ರಕಟಿಸಿರುವರು. ಮತ್ತು ವರ್ಷಕ್ಕೆ ತಮಗೆ ಸರ್ಕಾರಿ ಖಜಾನೆಯಿಂದ ಸಲ್ಲುತ್ತಿದ್ದ ಹಣದಲ್ಲಿ ೩೦ ಲಕ್ಷ ನಾಣ್ಯಗಳನ್ನು ಕೂಡ ತನಗೆ ಕೊಡಬೇಕಾದವಶ್ಯಕವಿಲ್ಲವೆಂದು ತಿಳಿಯಿಸಿಬಿಟ್ಟುದಲ್ಲದೆ ತನ್ನ ಅರಮನೆಗಳಲ್ಲಿ ಒಂದೆರಡನ್ನು ಸ್ವಂತಕ್ಕೆ ಉಳಿಸಿಕೊಂಡು ಉಳಿದುದನ್ನೆಲ್ಲಾ ಪ್ರಜೆಗಳಿಗೆ ಕೊಟ್ಟುಬಿಡಲು ಏರ್ಪಡಿಸಿರುವರು. ಈ ಔದಾರ್ಯವನ್ನು ಕೇಳಿ ಆ ದೇಶೀಯರೆಲ್ಲಾ ಆಹ್ಲಾದಪಟ್ಟು ಕೊಂಡಾಡುತ್ತಿರುವರು.

ಸ್ವೀಕಾರ.

ಶ್ರೀ|| ವೈ. ವೀರಸಂಗಪ್ಪನವರ ಅಗ್ರತಾಂಬೂಲ ಬಗೆಗೆ ತೆಗೆಯಲ್ಪಟ್ಟ ಈ ಕೆಳಗೆ ಹೇಳಿರುವ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸುತ್ತೇವೆ—ಗುಬ್ಬಿ ತಾ|| ನಿಟ್ಟೂರು ಬೀದಿ ಮನೆ ಮ|| ಸಂಗಪ್ಪನವರ ಮಗ ರಾ|| ಕಂಬಸವಯ್ಯನವರ ಲಗ್ನದಲ್ಲಿ ೧ ರೂ., ಪುರದ ವೀರಭದ್ರಪ್ಪನವರ ಮಗ ರಾ|| ವೀರಪ್ಪನವರ ಲಗ್ನದಲ್ಲಿ ೧ ರೂ. ಒಟ್ಟು ೨ ರೂ. ಮ|| ಶಿವ

ರು ಶೆಟ್ಟರು ಬಸಪ್ಪನವರ ಮೂಲಕ; ಗುಬ್ಬಿ ತಾ|| ಸಂತೆಗೆ ಗ್ರಾಮದ ಮ|| ಗುರುಸಿದ್ದೇವರ ಮನೆಯಲ್ಲಿ ನಡೆದ ಲಗ್ನದಲ್ಲಿ ೧ ರೂ. ಮ|| ಶೆಟ್ಟಿಕೆರೆ ಶಿವಲಿಂಗಪ್ಪನವರ ಪುತ್ರಿ ಸೌ|| ದೇವರಾಜಮ್ಮನನ್ನು ಹೆಬ್ಬೂರು ಮ|| ಯಜಮಾನ್ ಸುಬ್ಬಣ್ಣನವರ ಮಗ ರಾ|| ಭದ್ರಯ್ಯನವರಿಗೆ ಕೊಟ್ಟ ಲಗ್ನದಲ್ಲಿ ೧ ರೂ. ವರನ ತಂದೆಯವರ ಮೂಲಕ; ತೀರ್ಥಹಳ್ಳಿ ತಾ|| ಸೇದುಗಾರ್ ಮ|| ಶೆಟ್ಟರ ರುದ್ರಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ೨|| ರೂ. ಮ|| ಸೇದುಗಾರ್ ಹಾಲಪ್ಪನವರ ಮೂಲಕ; ಕನ್ನಂಬಾಡಿ ಮ|| ಬಸೆಟ್ಟರ ಮಗ ರಾ|| ಚೆನ್ನಬಸಪ್ಪನವರಿಗೂ ಮ|| ಚಂದ್ರಶೆಟ್ಟರಮಗಳು ಸೌ|| ಗೌರಮ್ಮನಿಗೂ ನಡೆದ ಲಗ್ನದಲ್ಲಿ ೧ ರೂ., ಅಂಗಡಿ ಮ|| ಸೋಮಶೆಟ್ಟರ ಮಗಳು ಸೌ|| ಗುರಮ್ಮನಿಗೂ ಮ|| ವೀರಶೆಟ್ಟರ ಮಕ್ಕಳು ರಾ|| ಸಿದ್ದೇರಯ್ಯನವರಿಗೂ ನಡೆದ ಲಗ್ನದಲ್ಲಿ ೧ ರೂ. ಒಟ್ಟು ೨ ರೂ. ಬೂಕನಕೆರೆ ಮಠದ ವೇ|| ಗುರುಬಸವಶಾಸ್ತ್ರಿಗಳ ಮೂಲಕ.

ಪತ್ರವ್ಯವಹಾರ.

ಶೃಂಗೇರಿ ಮತ್ತು ಚಿತ್ರದುರ್ಗದ, ಎ. ವಿ. ಸ್ಕೂಲುಗಳು.

೨೦ ನೇ ಸೆಪ್ಟಂಬರ್ ಸಂಪದಭ್ಯುದಯ ಪತ್ರಿಕೆಯಲ್ಲಿ ಶೃಂಗೇರಿ ಎ.ವಿ. ಸ್ಕೂಲ್ ಎಂಬ ಶಿರೋನಾಮದ ಸತ್ಯವಾದಿಯು ಲೇಖನವನ್ನು ಸ್ವಲ್ಪ ಯೋಚಿಸೋಣ:—ಇವರು ತಮ್ಮ ಲೇಖನದಲ್ಲಿ ಶಾಸ್ತ್ರಕ್ಕಿಂತಲೂ ಮಹಾಮಹಿಮ ಪದ್ಧತಿಗಳನ್ನು ಹೆಚ್ಚು ಗೌರವವೆಂತ ಬರೆಯುತ್ತಾರೆ. ಅಂದ ಮೇಲೆ ಭಗವದ್ಗೀತೆ, ವೇದಗಳು, ಉಪನಿಷತ್ತುಗಳು ಅಷ್ಟು ಮುಖ್ಯವಾದವುಗಳಲ್ಲವೆಂತಲೂ ಈಚೆಗೆ ಕಾರಣಾಂತರದಿಂದ ಮಾಡಿಕೊಂಡಿರುವ ಪದ್ಧತಿಗಳೇ ಅತಿಮುಖ್ಯವೆಂತಲೂ, ದೇವರನ್ನು ಮರೆತು ನಾಸ್ತಿಕಾಭಿಪ್ರಾಯ ಜನಗಳಿಗೆ ಬೋಧಿಸಿರುತ್ತಾರೆ. ಶೃಂಗೇರಿ ಎ. ವಿ. ಸ್ಕೂಲಿಗೆ ಹಳೇ ವೈಶ್ಯರು ಸೇರಿದ್ದರಿಂದ ಈ ಸ್ಕೂಲಿಗೆ ಇತರರು ಬರುತ್ತಿಲ್ಲವೆಂದು ಸೂಚಿಸುತ್ತಾರೆ. ಇದನ್ನು ನೋಡಿದರೆ ಅಲ್ಲಿನ ಜನ ಬಾಹುಳ್ಯಕ್ಕೆ ಇಂಥಾ ನಾಸ್ತಿಕಬೋಧನೆ ಹೆಚ್ಚಾದಂತೆ ತೋರುತ್ತೆ. ಇವರು ಇಂಥ ನಾಸ್ತಿಕ ಬೋಧನೆ ಈಗ ಎಲ್ಲಾ ಕಡೆಯು ಕೇಳುತ್ತಾರೆಂತ ಭ್ರಮೆಗೊಂಡಿದ್ದಾರೆ. ಶಾಸ್ತ್ರಗಳೇ ಮುಖ್ಯವೆಂತ ನಂಬಿ, ದೇವರನ್ನು ಮರೆಯದೆ ಚಿತ್ರದುರ್ಗದವರು ಪಂಚಮರಿಗೆ ಪ್ರೋತ್ಸಾಹಿಸುತ್ತಾ ತಮ್ಮ ಮಕ್ಕಳ ಜೊತೆಯಲ್ಲಿ ಆ ಬಡ ಹುಡುಗರನ್ನು ಅಕ್ಕರೆಯಿಂದ ಇಲ್ಲಿನ ಎ. ವಿ. ಸ್ಕೂಲಿಗೆ ಸೇರಿಸಿಕೊಳ್ಳುತ್ತಾ ಇದ್ದಾರೆಂಬುವುದು ಇವರಿಗೆ ತಿಳಿಯದು. ಈಗ ಹಾಲೀ ಇಲ್ಲಿನ ಎ.ವಿ. ಸ್ಕೂಲಿನಲ್ಲಿ ೨೦ ಜನ ಹೊಲೆಯಮಾದಿಗರ ವಿದ್ಯಾರ್ಥಿಗಳು ಇರುತ್ತಾರೆ. ಏನೂರು ಜನ ಇತರ ಹಿಂದೂ, ಮುಸಲ್ಮಾನ ಮೊದಲಾದ ವಿದ್ಯಾರ್ಥಿಗಳು ಬೆರಕೆಯಾಗಿ ಸಂತೋಷದಿಂದ ಓದುತ್ತಾ ಇದ್ದಾರೆ. ಈ ಸತ್ಯವಾದಿಗಳು! ವೇದ ಮತವನ್ನು ದ್ವೇಷಿಸತಕ್ಕ ನಾಸ್ತಿಕರಾಗಿದ್ದಾರೆ ಮತ್ತು ಸ್ವಾರ್ಥಪರರಾಗಿದ್ದಾರೆ. ಇವರು ಯಾವ ಮತದ್ವೇಷಿಗಳೆಂದು ಅರಿಯದೆ ತಮ್ಮ ಲೇಖನದಲ್ಲಿ ಮತದ್ವೇಷಜಾತಿದ್ವೇಷವೆನ್ನುವ ಶಬ್ದವನ್ನು ಪದೇಪದೇ ಉಪಯೋಗಿಸಿರುವುದೂ ನಿಷ್ಪಕ್ಷಪಾತಿಗಳೂ, ಅಸಾಧಾರಣ ವಿದ್ಯಾವಂತರೂ, ಸರ್ವ ಸಮದೃಷ್ಟಿಯುಳ್ಳವರೂ ನಮ್ಮ ಮಹಾರಾಜರವರ ಆಜ್ಞಾಧಾರಕರೂ ಆದ ನಮ್ಮ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ಮ|| ಸಿ. ಆರ್. ರೆಡ್ಡಿಯವರನ್ನು ದೂಷಿಸಿರುವುದೂ ಬಹು ಭಾಗದ ಜನಕ್ಕೆ ಬಹು ಶೋಚನೀಯವಾದದ್ದಾಗಿದೆಯಲ್ಲದೆ ಇಂಥ ಬರವಣಿಗೆಗೆ ಎಡಿಟರವರು ಅಸ್ಪದ ಕೊಡುತ್ತಾರೆಲ್ಲ ಎಂತ ಬಹು ವಿಷಾದಿಸಬೇಕಾಗಿದೆ.

ಆರ್ಯಧರ್ಮಸೇವಕ.

ಬೌರಿಂಗ್‌ಪೇಟೆ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಬೆಂಗಳೂರಿಂದ ದಯಮಾಡಿಸಿ ವೀರಶೈವ ಭಕ್ತ ಮಂಡಲಿಗೆ ದರ್ಶನಾಶೀರ್ವಾದಗಳನನುಗ್ರಹಿಸಿದ ಅಂಶವು ಹಿಂದಿನ ವಾರದ ಪತ್ರಿಕೆಯಲ್ಲಿ ಪ್ರಕಟವಾಗಿರುವುದಷ್ಟೆ. ಇಲ್ಲಿಗೆ ಸಮೀಪದ ರಮ ಮಾದಮಂಗಲ ಮುಂತಾದ ಗ್ರಾಮಗಳ ಭಕ್ತಮಂಡಲಿಯ ಪ್ರಾರ್ಥನೆಯಂತೆ ಶ್ರೀಗಳವರು ಪರಿವಾರದೊಡನೆ ಅಲ್ಲಲ್ಲಿ ಸ್ವಾರಿ ಚೇಸಿ ಅವರಿಗನುಗ್ರಹಿಸಿ ಇಲ್ಲಿಗೆ ದಯಮಾಡಿಸಿದರು. ಪುರವಾಸಿಗಳ ಪ್ರಾರ್ಥನೆಯಂತೆ ೫ ನೇ ತಾ|| ಶುಕ್ರವಾರ ಸಾಯಂತ್ರ ಸನ್ನಿಧಿಯಲ್ಲಿ ವಿಸ್ತಾರವಾದ ಸಭೆಯು ನೆರೆದು ಮೃದುವಾದ ಶ್ರೀಗಳವರ ಮಹೋಪನ್ಯಾಸವನ್ನು ಶ್ರವಣಮಾಡಿದವರೆಲ್ಲರೂ ಆನಂದವನ್ನು ಹೊಂದಿದರು. ಈ ದಿನ ಶ್ರೀಗಳವರ ಅಭಿಪ್ರಾಯದಂತೆ ಬೆಂಗಳೂರು ಮ|| ರಾ|| ಎಲೆ ಸಿದ್ದಲಿಂಗಪ್ಪಶೆಟ್ಟರು ಸಹಸ್ರಾರು ಮಂದಿ ಬಡಬಗ್ಗರಿಗೆ ದಂಡೋರೆ ಮೂಲಕ ಸಾರಿಸಿ ಅನ್ನವನ್ನು ನೀಡಿಸಿದರು. ತಾ|| ೧೧ ರಲ್ಲಿ ಬೌರಿಂಗ್‌ಪೇಟೆ ಮಾದಮಂಗಲ ಮುಂತಾದ ಸಮಸ್ತ ಭಕ್ತಮಂಡಲಿಯು ಸನ್ನಿಧಿಯ ಅಪ್ಪಣೆಯ ಪ್ರಕಾರ ಟೌನ್ನಿನಲ್ಲಿ ಡಂಗೋರೆ ಮೂಲಕ ಪ್ರಕಟಿಸಿ ಸುಮಾರು ೩೦೦೦ ಬಡ ಜನರಿಗೆ ಅನ್ನವನ್ನು ನೀಡಿಸಿದರು. ಈದಿನ ಸಾಯಂತ್ರ ಸನ್ನಿಧಿಯಲ್ಲಿ ನೆರೆದ ಸಭೆಯಲ್ಲಿ ಶ್ರೀಗಳವರು ತತ್ವವಿಚಾರವಾಗಿಯೂ ವಿದ್ಯಾವಿಷಯಕವಾಗಿಯೂ ಸರ್ವ ಮನೋರಂಜಕವಾಗಿ ಉಪನ್ಯಾಸ ಮಾಡಿದುದನ್ನು ಸಭ್ಯರು ಭಕ್ತಿಪೂರ್ವಕವಾಗಿ ಶ್ರವಣಮಾಡಿ ಆಗಾಗ್ಗೆ ಆನಂದ ವಿಶೇಷದಿಂದ ಕರತಾಡನ ಮಾಡುತ್ತಿದ್ದರು. ದಾವಣಗೆರೆ ಶ್ರೀಮೃತ್ಯುಂಜಯ ಸ್ವಾಮಿಗಳು ಧಾರ್ಮಿಕ ವಿಷಯವನ್ನು ಕುರಿತು ಸರಸವಾಗಿ ಉಪನ್ಯಾಸ ಮಾಡಿದರು. ನಂತರ ಸಂಘದ ಪರವಾಗಿ ದೇಸಾಯಿ ಮ|| ಆದೆಪ್ಪಶೆಟ್ಟರೂ ಮುನ್ಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಯಂ. ಜಿ. ತಾಮರಾಯರವರೂ ಸಂಘಕ್ಕೆ ಬಹುಮುಖವಾಗಿ ಮಾಡಿದ ಸಹಾಯವನ್ನು ಕುರಿತು ಉಪನ್ಯಾಸಮಾಡಿದ ಬಳಿಕ ಸಭೆಯು ಭರಖಾಸ್ತಾಯಿತು. ೧೨ ನೇ ತಾ|| ಮಹಾಪಾದ ಭಕ್ಷ್ಯ ನಡೆಸಲ್ಪಟ್ಟಿತು. ಭಕ್ತಮಂಡಲಿಯ ಪ್ರಾರ್ಥನೆಯಂತೆ ಶ್ರೀಗಳವರು ೧೩ ನೇ ತಾ|| ಶನಿವಾರ ಪ್ರಾತಃಕಾಲ ಇಲ್ಲಿಯ ಸಂಘದವರು ಸಲ್ಲಿಸಿದ ಫಲ ಪುಷ್ಪಹಾರಾದಿಗಳನ್ನು ಕೈಗೊಂಡಾಶೀರ್ವದಿಸಿ ಮಂಗಳ ವಾದ್ಯಗಳು ಮೊಳಗುತ್ತಿರಲು ಕೋಲಾರಕ್ಕೆ ಪ್ರಯಾಣ ಬೆಳೆಸಿದರು.

ಪ್ರತ್ಯಕ್ಷದರ್ಶಿ.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,

ಕ್ರಯ 1 ಕ್ಕೆ 5—8—0.

ವಿಳಾಸ:—ರಾಸ್ ವಾಚ್ ಅಂಡ್ ಕೊ,

33 ಇರುಳಪ್ಪನ ಬೀದಿ, ಮದರಾಸ್.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 42

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.

ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಮ್ಮಿ ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ

40 ವೈದ್ಯಶಾಲಾ, ಮೈಸೂರು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಕರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ

ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬೊಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಯೆ ನಮ್ಮ ಇಂದ್ರಿಯಸ್ತಂಭನತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2-8-0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಜಾಪಟ

3 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದಲ್ಲಿ ಸನ್ ೧೯೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಆದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅನ್ನುಭವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಲೆ, ಕಿವಿಶೂಲೆ, ಮೂಗಿನೊಳಗಿನ ಪಿನಿಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಷ್ಮಿಜಡ್ಡು, ಗುದ್ದಪ್ಪನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೋಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,

4 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ಸೆಪ್ಟಂಬರ್ ತಾ|| ೨೮ ರಿಂದ ೧೯೧೯ ನೆಯ ಅಕ್ಟೋಬರ್ ತಾ|| ೪ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೨ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಶ್ವಯುಜ ಶು|| ಚೌತಿಯಿಂದ ಆಶ್ವಯುಜ ಶು|| ದಶಮಿವರಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
28	ಭಾನು	ಚೌತಿ	20-39	ವಿಶಾಖಾ	41-47	12
29	ಸೋಮ	ಪಂಚ	25-51	ಅನೂ	48-25	13
30	ಮಂಗಳ	ಷಷ್ಠಿ	31-1	ಜ್ಯೇಷ್ಠ	54-51	14
1	¹ ಬುಧ	ಸಪ್ತಮಿ	35-44	ಮೂಲ	60	15
2	² ಗುರು	ಅಷ್ಟಮಿ	39-38	ಮೂ	0-26	16
3	³ ಶುಕ್ರ	ನವಮಿ	42-27	ಪೂಷಾ	5-15	17
4	⁴ ಶನಿ	ದಶಮಿ	44-0	ಉಷಾ	8-59	18

(1) ಕಾಳರಾತ್ರಿ, ಮಹಿಷಾಸುರ ಸಂಹಾರ, ಸರಸ್ವತೀಪೂಜಾ. (2) ದುರ್ಗಾಷ್ಟಮಿ. (3) ಮಹಾನವಮಿ, ಆಯುಧಗಜಾಶ್ವಪೂಜಾ, ಅಮಲದೇವತಾಪೂಜಾ, ಹಯಗ್ರೀವಪೂಜಾ. (4) ವಿಜಯದಶಮಿ, ಶಮೀಪೂಜಾ, ತಿರುಪತಿ ವೆಂಕಟಾಚಲಸ್ವಾಮಿರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀಕ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಯೆಷಾ | ಘನಪಥಕೃತಾವತಾರಾ ಪಕ್ಕಜ ನಪ್ತ್ರತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೯ ನೆಯ ಇಸವಿ ಅಕ್ಟೋಬರ್ ತಾರೀಖು ೫ ನೆಯ ಭಾನುವಾರ. (ಸಂಚಿಕೆ ೪೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಸಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಸೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ವಿ. ಎ. ಎಸ್. ಪಾಣಿ ಅಂಡ್ ಕೊ,

34 ಸಾಹುಕಾರಪೇಟೆ, ಮದರಾಸ್.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವುದಿಲ್ಲ. ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,

ಕ್ರಯ 1 ಕ್ಕೆ 5—8—0

ವಿಳಾಸ:—ರಾಸ್ ವಾಚ್ ಅಂಡ್ ಕೊ,

34 ಇರುಳಪ್ಪನ ಬೀದಿ, ಮದರಾಸ್.

ಲಿಂಗದ ಕಾಯಿಗಳು.

ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೆಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.



ಕ್ರಯ 1 ಕ್ಕೆ 1—4—0. ನಂ. 2. 1—12—0.

ಕನ್ನಡಕಗಳು.

ಇದನ್ನು ದೊಡ್ಡವರು ಚಿಕ್ಕವರು ಸಹಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬದಿಗಳಿರುವದು. ಇದರ ಕಂಬಿಗಳು ಯಾವಾಗಲೂ ಬೆಳ್ಳಿಯ ಹಾಗೆ ಇರುವದು. ಇದರಲ್ಲಿ ಹಸರು, ಊದ, ಮೋಘವರ್ಣ ಮೊದಲಾದವುಗಳಿರುವವು.



ಕ್ರಯ ನಂ. 1 ಕ್ಕೆ 1-8-0, ನಂ. 2 ಕ್ಕೆ 2-0-0.

ರಬ್ಬರ್ ಇಂಗ್ಲೀಷ್ ಅಕ್ಷರಗಳು.

ಈ ಅಕ್ಷರಗಳು ಸೀಮೆಯಲ್ಲಿ ತಯಾರಾದವು. ಈ ಅಕ್ಷರಗಳಿಂದ ಕಷ್ಟವಿಲ್ಲದೆ ಕಾಗದಗಳನ್ನೂ, ಕಾರಡು, ಲೆಟರು ಮುಂತಾದವುಗಳನ್ನು ನಾವೇ ಅಚ್ಚುಮಾಡಿಕೊಳ್ಳಬಹುದು. ಈ ಅಕ್ಷರಗಳ ಪೆಟ್ಟಿಗೆಯು ಒಂದು ಇದ್ದರೆ ಬೇಕಾದ ಮುದ್ರಣವನ್ನು ಒಬ್ಬರ ಸಹಾಯವಿಲ್ಲದೆ ನಾವೇ ಮಾಡಿಕೊಳ್ಳಬಹುದು. ಲಾಯರುಗಳಿಗೂ, ವರ್ತಕರಿಗೂ ಬಹು ಸಹಾಯಕಾರಿಯಾದದ್ದು. ಈ ಪೆಟ್ಟಿಗೆಯಲ್ಲಿ ಇಂಕಿ, ಪ್ಯಾಡು, ಚಿಮಟ ಮುಂತಾದವುಗಳು ಇವೆ.



170 ಅಕ್ಷರಗಳು ಇರುವ ಪೆಟ್ಟಿಗೆ 1—14—0
250 „ „ 2—8—0
350 „ „ 3—12—0

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕೊ,

34 3 ಇರುಳಪ್ಪನಬೀದಿ, ಮದರಾಸ್.

ದರ್ಬಾರ್ ಸೋಪು.

DURBAR SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಧಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ತೊಡಮೆ, ಖಜ್ಜಿ, ಕುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ 1—10—0.

34 ನಮ್ಮ ವಿಳಾಸ:—ವೈರಂ ಅಂಡ್ ಕೊ,

3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿ	೦—೮—೦
ಶಿವಪೂಜಾವಿಧಿ	೦—೧೦—೦
ಚಾರುಶೀಲೆಚರಿತ್ರೆ	೦—೫—೦
ಹರಿವಾಸಿ	೦—೯—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultura subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.
2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.
3. During the time the raiyats and labourers work on the farm, they will be paid at the prevailing local rates for labour.
4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,

9 *Offg. Director of Agriculture.*

ಇನ್‌ಫ್ಲುಯನ್‌ಜಾ, ಕಾಲರಾ, ಪ್ಲೇಗು ಅವುಗಳಿಗೆ ಖಾತ್ರಿಯಾದಮದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 12

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ನೋವು, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜ ೦—೪—೦.

ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.

೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜ ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,

೨/೪ ಸಿಂಗಣ್ಣನ ಬೀದಿ, ಪಾರ್ಕಟೌನ್ ಮದರಾಸು

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಅಕ್ಟೋಬರ್ ತಾ|| ೫ನೆಯ ಭಾನುವಾರ

ಪಂಚಮರ ಮಹಾಸಭೆ.

ಮೈಸೂರು ಪೌರಸಾಮಾಜಿಕ ಸಂಘದವರು ಏರ್ಪಡಿಸಿದ್ದ ಮೇರೆಗೆ ಈ ಸಭೆಯು ಕಳೆದ ತಾ|| ೧ ನೆ ಬುಧವಾರ ಮಧ್ಯಾಹ್ನ ೩ ಗಂಟೆಗೆ ರಾಜಧಾನಿಯ ಟೌನ್‌ಹಾಲಿನಲ್ಲಿ ಸೇರಿದ್ದಿತು. ದಿವಾನ್ ಕಾಂತರಾಜಅರಸ್ ಸಿ.ಎಸ್.ಐ. ರವರು, ಕೌನ್ಸಿಲರ್ ಮಿ|| ಮಿರ್ ಹಂಜಾಹುಸೇನ್ ಸಾಹೇಬರು, ದಿ||ಬ|| ಕೆ.ಪಿ. ಪುಟ್ಟಣ್ಣಶೆಟ್ಟಿ ಸಿ.ಐ.ಇ. ಯವರು, ದಿ||ಬ|| ಜೆ. ಎಸ್. ಚಕ್ರವರ್ತಿಯವರು, ಮಿ|| ಗಳಾದ ಕಣಾಂಬಿಯವರು, ಚಾಂಡಿಯವರು, ದೊರೆಸಾಮಯ್ಯರು, ಸಿ. ಆರ್. ರೆಡ್ಡಿಯವರು, ಬಾಲಸುಂದರಂ ಅಯ್ಯರವರು, ಡಿಸೌಜಾರವರು, ಬ್ಯಾ|| ನಾಗಪ್ಪನವರು, ರಂಗನಾಥರಾವ್ ಸಾಹೇಬರು, ಎ. ಆರ್. ನರಸಿಂಹಯ್ಯಂಗಾರರು, ಬಿ. ನಂಜುಂಡರಾಜಅರಸಿನವರು, ಬಿ. ಸುಬ್ಬರಾಯರು, ಡಾ|| ಸಾಣೆಯವರು, ಮೆಥ್ಯಾರವರು, ಆರ್. ಸಿ. ಮುಕರ್ಜಿಯವರು, ಜಹಿರುದ್ದೀನ್ ಮೆಕ್ಕಿಯವರೇ ಮೊದಲಾದ ಕೆಲಮಂದಿ ಡಿ|| ಕಮಿಷನರುಗಳು ಅಸಿಸ್ಟೆಂಟ್ ಕಮಿಷನರುಗಳು, ಮ|| ಎಂ. ಬಸವಯ್ಯನವರೇ ಮೊದಲಾದ ಕೆಲಮಂದಿ ನಿಯಮನಿರ್ಮಾಣ ಸಭಾಸಭಿಕರು ಮ್ಯು|| ಕೌನ್ಸಿಲರುಗಳೇ ಮೊದಲಾದ ಅನೇಕ ಮಂದಿ ಪುರಪ್ರಮುಖರುಗಳು ಸಭೆಯನ್ನಲಂಕರಿಸಿದ್ದರು. ಸ್ಥಲಸ್ಥಲದ ಪಂಚಮ ಪ್ರಜೆಗಳು ಬಹುಶಃ ೩೦೦ ಮಂದಿಗಳವರೆಗೆ ಸೇರಿದ್ದರು. ಸಭಾಧ್ಯಕ್ಷತೆಯನ್ನು ವಹಿಸಲು ಮದ್ರಾಸಿನಿಂದ ಅಂದೇ ದಿನ ಬೆಳಗ್ಗೆ ರಾಜಧಾನಿಗೆ ಬಂದಿದ್ದ ಆ|| ಎಂ. ಸಿ. ರಾಜಾರವರು ಟೌನ್‌ಹಾಲಿಗೆ ಬಂದಕೂಡಲೇ ರಾ|| ಬ|| ಸುಬ್ಬರಾಯರೂ, ಲೋಕಹಿತೈಷಿ ನಂಜುಂಡರಾಜ ಅರಸಿನವರೂ ಪೌರಸಾಮಾಜಿಕ ಸಂಘದ ಸೆಕ್ರಟರಿ ಮಿ|| ರಾಮರಾಯರೂ ದ್ವಾರದ ಬಳಿಯಲ್ಲಿ ಇದಿರ್ಗೊಂಡು ಸಭೆಗೆ ಕರೆತಂದರು. ಮೊಟ್ಟಮೊದಲು ಪಂಚಮ ಪಾಠಶಾಲೆಯ ಬಾಲಕರು ಹಾರ್ಮೋನಿಯಂ ಶ್ರುತಿಯ ಮೇಲೆ ದೇವತಾಸ್ತುತಿಪರವಾದ ಹಾಡುಗಳನ್ನು ಇಂಪಾಗಿ ಹಾಡಿದರು. ಬಳಿಕ ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನಪರವಾದ ಹಾಡುಗಳನ್ನು ಕೆಲಮಂದಿ ಪಂಚಮ ಬಾಲಿಕೆಯರು ಮಧುರವಾಗಿ ಹಾಡಿದರು. ಇವೆರಡೂ ಶ್ರಾವ್ಯವಾಗಿಯೂ ಶುದ್ಧವಾಗಿಯೂ ಇದ್ದುವು. ಕೇಳಿದ ಸಭಿಕರು ಸಂತೋಷಪಟ್ಟು ಕರತಾಡನಗಳನ್ನು ಮಾಡಿದರು. ಬಳಿಕ ಒಬ್ಬ ಪಂಚಮ ವಿದ್ಯಾರ್ಥಿಯು ಆ|| ರಾಜಾರವರನ್ನು ಕುರಿತು ಸುಸ್ವಾಗತವನ್ನು ಮಾಡುವ ವಿಜ್ಞಾಪನ ಪತ್ರವನ್ನು ಆಂಗ್ಲಭಾಷೆಯಲ್ಲಿ ಸ್ಫುಟವಾಗಿ ಓದಿದನು. ಅದನ್ನೇ ಮತ್ತೊಬ್ಬ ಬಾಲಕನು ಕನ್ನಡದಲ್ಲಿ ಓದಿದನು. ಬಳಿಕ ಸಂಸ್ಥಾನದ ಪೌರಸಾಮಾಜಿಕ ಸಂಘಾಧ್ಯಕ್ಷರಾದ ಮ|| ಕೆ.ಪಿ. ಪುಟ್ಟಣ್ಣಶೆಟ್ಟರು ಆ|| ರಾಜಾರವರ ಯೋಗ್ಯತಾವಿಶೇಷಗಳನ್ನು ಸಭಿಕರಿಗೆ ಪರಿಚಯಮಾಡಿಸುವಾಗ್ಗೆ—ಇವರು ಪಂಚಮ ಜನವರ್ಗದಲ್ಲಿ ಜನಿಸಿ ವಿದ್ಯಾಬುದ್ಧಿ ವಿಶೇಷಗಳಿಂದ ಮದ್ರಾಸಿನಲ್ಲಿ ದೀರ್ಘಕಾಲ ಆಂಗ್ಲೋಪಾಧ್ಯಾಯರಾಗಿದ್ದುಕೊಂಡು ಕೆಲಕಾಲ ಆನರರಿ ಬೆಂಚ್ ಮ್ಯಾಜಿಸ್ಟ್ರೇಟರಾಗಿದ್ದು ಈಗ ಮದ್ರಾಸು ಸರ್ಕಾರದವರಿಂದ ಅಲ್ಲಿಯ ನಿಯಮನಿರ್ಮಾಣ ಸಭೆಯ ಸಭಿಕರಾಗಿ ನೇಮಿಸಿಕೊಳ್ಳಲ್ಪಟ್ಟಿರುವುದೇ ಮೊದಲಾದ ಸಂಗತಿಗಳನ್ನೆಲ್ಲಾ ವಿವರಿಸಿ, ಪಂಚಮರ ಅಭ್ಯುನ್ನತಿಯನ್ನು ಕೋರಿ ನೆರೆದಿರುವ ಈ ಸಭೆಗೆ ಅವರ ಜನವರ್ಗಕ್ಕೆ ಸೇರಿ ಮಾರ್ಗದರ್ಶಕರಾಗಿರುವ ರಾಜಾರವರು ಸಭಾಧ್ಯಕ್ಷತೆಯನ್ನು ವಹಿಸುವುದರಲ್ಲಿ ಸಭಿಕರೆಲ್ಲರಿಗೂ ಇರುವ ಕುತೂಹಲವನ್ನು ವಿಶದಪಡಿಸಿ, ಅಧ್ಯಕ್ಷಪೀಠವನ್ನಂಗೀಕರಿಸಲಿಕ್ಕೆ ರಾಜಾರವರಿಗೆ ಸೂಚಿಸಿದರು. ಮೈಸೂರಿನ ಪೌರ ಸಾಮಾಜಿಕ ಸಂಘದ ಅಧ್ಯಕ್ಷರಾದ ರಾ||ಬ|| ಬಿ. ಸುಬ್ಬರಾಯರು ಅದನ್ನು ಪುಷ್ಟೀಕರಿಸಿದಬಳಿಕ ರಾಜಾರವರು ಅಧ್ಯಕ್ಷಪೀಠವನ್ನಲಂಕರಿಸಿ, ಆಂಗ್ಲಭಾಷೆಯಲ್ಲಿ ತಮ್ಮ ಭಾಷಣವನ್ನು ೧|| ಗಂಟೆಯ ಹೊತ್ತಿನವರೆಗೆ ಸ್ಫುಟೋಚ್ಚಾರಣೆಯಿಂದ ಓದಿಮುಗಿಸಿದರು. ಬಳಿಕಪೌರಸಾಮಾಜಿಕ ಸಂಘದವರು ದಿವಾನರೇ ಮೊದಲಾದ ಸಭಿಕರಿಗೆಲ್ಲಾ ಪುಷ್ಪಹಾರಗಳನ್ನಿತ್ತು ಗೌರವಿಸಿದರು. ಅನಂತರ ಅಧ್ಯಕ್ಷರ ಭಾಷಣವು ಕನ್ನಡದಲ್ಲಿ ಒಬ್ಬ ಪಂಚಮ ವಿದ್ಯಾರ್ಥಿಯಿಂದ ಓದಲ್ಪಟ್ಟಿತು. ಮಧ್ಯದಲ್ಲಿ ದಿವಾನರೇ ಮೊದಲಾದ ಅಧಿಕಾರಿವರ್ಗದವರನೇಕರು ಕಾರ್ಯಾಂತರಗಳಿಗಾಗಿ ತೆರಳಲು, ಸಭೆಯ ಕೊನೆಯವರೆಗೂ ದಿ|| ಬ|| ಕೆ. ಪಿ. ಶೆಟ್ಟರು, ಮ|| ಗಳಾದ ಚಾಂಡಿ, ರೆಡ್ಡಿ, ಮೆಕ್ಕಿ, ಡಿಸೌಜಾ, ಎಂ. ಬಸವಯ್ಯ, ಮಹಮ್ಮದ್ ಜಾಫರ್ ಸಾಹೇಬರು ಮೊದಲಾದವರನೇಕರು ಇದ್ದು ಸಭಾಕಾರ್ಯವನ್ನು ಸಾಂಗಗೊಳಿಸಿದರು. ಮರುದಿನ ಬೆಳಗ್ಗೆ ಸಭೆಗೂಡಿ ಪಂಚಮರ ಏಳ್ಗೆಗೆ ಸಂಬಂಧಪಟ್ಟ ಅನೇಕ ನಿರ್ಧಾರಗಳುಮಾಡಲ್ಪಟ್ಟುವು.

ರಾಜಧಾನಿಯ ಟೌನ್‌ಹಾಲಿನಂಥ ಪ್ರಮುಖಸ್ಥಲದಲ್ಲಿ ತಮ್ಮವರ ಮಹಾಸಭೆಯು ನಡೆದು ತಾವೂ ಇತರ ಜನವರ್ಗದವರಂತೆ ತಮ್ಮ ಅಭ್ಯುದಯವನ್ನು ಚಿಂತನೆಮಾಡಿಕೊಳ್ಳಲು ಇಂಥ ಸುಯೋಗವನ್ನು ತಮಗೆ ಒದಗಿಸಿಕೊಟ್ಟ ಪೌರಸಾಮಾಜಿಕ ಸಂಘದವರಿಗೂ ಮುಖ್ಯವಾಗಿ ಅದರ ಸೆಕ್ರೆಟರಿಗಳಾದ ಮ|| ಬಿ. ರಾಮರಾಯರಿಗೂ ಪಂಚಮರು ವಿಶೇಷತಃ ಕೃತಜ್ಞರಾಗಿರುವರು. ಪಂಚಮಜನರು ಇಷ್ಟುಮಟ್ಟಿನ ಸ್ಥಿತಿಗೆ ಬಂದುದನ್ನು ಕುರಿತೂ ಅವರಿಗೆ ಇಷ್ಟೆಲ್ಲಾ ಪ್ರೋತ್ಸಾಹಮಾಡುತ್ತಿರುವವರನ್ನು ಕುರಿತೂ ನಾನಾಪ್ರಕಾರವಾಗಿ ಆಡಿಕೊಳ್ಳುವವರು ಈಗ ಅನೇಕಾನೇಕರು ಇರುವರೆಂಬುದಕ್ಕೆ ಸಂಶಯವಿಲ್ಲ. ಹಾಗಿರುವುದೇನೂ ಆಶ್ಚರ್ಯವಲ್ಲ. ನೂತನ ವೈಲಕ್ಷಣ್ಯವು ದೃಗ್ಗೋಚರವಾದಾಗ ಚಕಿತರಾಗತಕ್ಕುದು ಪ್ರಾಣಿಸಾಮಾನ್ಯಧರ್ಮವೇ ಆಗಿರುತ್ತದೆ. ತಮ್ಮ ಅಭ್ಯುದಯಚಿಂತೆಯು ಈ ಪಂಚಮ ಜನರಲ್ಲಿ ನಿಶಿತವಾಗಿ ನಿಂತು, ತಮ್ಮ ಅವನತಿಗೂ ಹೀನಭಾವಕ್ಕೂ ಕಾರಣಗಳಾಗಿರುವ ಲೋಪದೋಷಗಳನ್ನೆಲ್ಲಾ ಅವರು ತಿದ್ದಿಕೊಳ್ಳುತ್ತ ಬಂದರೆ ಕ್ರಮೇಣ ಅವರು ಮಾನವವರ್ಗದ ಸೌಭ್ರಾತೃತ್ವಕ್ಕೆ ಅರ್ಹರಾಗಿ ಇತರ ಸಂಘಗಳಿಂದೆಲ್ಲಾ ಗಣಿಸಲ್ಪಡುವುದರಲ್ಲೇನೂ ಸಂಶಯವಿಲ್ಲ. ಅವರ ಅಂಥ ಸ್ವಕೀಯ ಪ್ರಯತ್ನಗಳು ವಿಶೇಷವಾಗಿ ಫಲೋನ್ಮುಖವಾಗಬೇಕಾದರೆ ಸದ್ಯಃಕಾಲದಲ್ಲಿ ಪ್ರಭುತ್ವದವರ ಒತ್ತಾಸೆಯೂ ಪ್ರೋತ್ಸಾಹವೂ ವಿಶೇಷವಾಗಿ ಬೇಕಾಗಿರುತ್ತವೆ. ಏಕೆಂದರೆ ಅವರ ಅಭ್ಯುದಯ ಯತ್ನಗಳಿಗೆ ಕಂಟಕ ಸಾಮಗ್ರಿಗಳು ಈಗ ವಿಶೇಷವಾಗಿರುತ್ತವೆ. ಅವನ್ನು ಉತ್ತರಿಸುವ ಬಲವು ಪ್ರಭುತ್ವದಕಡೆಯಿಂದ ಒದಗಬೇಕಾಗಿರುತ್ತದೆ. ಮೇಲ್ಕೋಟೆಯಲ್ಲಿ ಇದುವರೆಗೆ ಪಂಚಮರ ಸಭೆಗಳು ಮೂರು ನಾಲ್ಕಾವೃತ್ತಿ ನಡೆದಿದ್ದರೂ ತಮ್ಮ ಜನವರ್ಗದವರೊಬ್ಬರ ಅಧ್ಯಕ್ಷತೆಯಿಂದ ಅವರ ಸಭೆಯು ನಡೆದುದರಲ್ಲಿ ಇದೇ ಮೊದಲನೆಯದಾಗಿದೆ. ಇದರಿಂದ ಆ ಜನವರ್ಗದವರ ಉತ್ಸಾಹವು ಇಮ್ಮಡಿಯಾಯಿತೆಂಬುದಕ್ಕೆ ಸಂಶಯವಿಲ್ಲ. ಇಂಥ ಸಾಧಾರಣ ಪಂಥಕ್ಕೆ ಪಂಚಮ ಜನವರ್ಗದವರು ಹತ್ತಿರುವುದು ನಮಗೆ ಸಂತೋಷಕರವಾಗಿದೆ.

ಸಭಾಧ್ಯಕ್ಷರಾದ ರಾಜಾರವರು ತಮ್ಮ ಭಾಷಣದಲ್ಲಿ ಕೊಟ್ಟಿರುವ ಕೆಲ ಅಭಿಪ್ರಾಯಗಳು ಪಂಚಮರ ಏಳ್ಗೆಯನ್ನು ಕೋರುವವರೆಲ್ಲರಿಗೂ ಅಭಿನಂದನೀಯಗಳಾಗಿರುತ್ತವೆ. ಇವರು ತಮ್ಮ ಭಾಷಣದಲ್ಲಿ ಶ್ರೀಮನ್ಮಹಾರಾಜ ಸಹೋದರರೂ ಅವರ ಸರ್ಕಾರದವರೂ ಪಂಚಮರ ಏಳ್ಗೆಗಾಗಿ ಮಾಡಿರುವ ನಾನಾ ವಿಧಗಳಾದ ಪ್ರೋತ್ಸಾಹಗಳಿಗಾಗಿ ತಮ್ಮ ಕೃತಜ್ಞತೆಯನ್ನು ತೋರಿಸಿ, ಸಂಸ್ಥಾನದ ಪ್ರಜಾ ಸಮುದಾಯದಲ್ಲಿ ⅙ ಭಾಗದಷ್ಟಾಗಿರುವ ತನ್ನ ಜನರ ಅಭ್ಯುನ್ನತಿಯನ್ನು ಸಾಧಿಸಲು ಮದ್ರಾಸು ಸರ್ಕಾರದವರು ಒಬ್ಬ ಪ್ರತ್ಯೇಕಾಧಿಕಾರಿಯನ್ನು ನಿಯಮಿಸಿರುವಂತೆ ಇಲ್ಲಿ ಪ್ರತ್ಯೇಕವಾದ ಒಂದು ಶಾಖೆಯನ್ನೇ ನಿಯಮಿಸಿ, ಅದಕ್ಕೆ ನಿಜವಾಗಿ ಪಂಚಮಾಭ್ಯುದಯವನ್ನು ಕೋರುವ ಅಧಿಕಾರಿಗಳೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ, ಸರ್ಕಾರದವರು ಸ್ವತಃ ನಮ್ಮ ಕ್ಷೇಮಾಭ್ಯುದಯಗಳನ್ನು ಚಿಂತಿಸಿ ಕೆಲಸಮಾಡುವಂತಾಗಬೇಕೆಂದು ಕೋರಿರುತ್ತಾರೆ. ಸರ್ಕಾರಿ ಸ್ಕೂಲುಗಳಲ್ಲಿ ಇತರ ಜನವರ್ಗಗಳಂತೆಯೇ ತಮ್ಮವರ ಬಾಲಬಾಲಿಕೆಯರನ್ನೂ ಸೇರಿಸುವುದಕ್ಕೆ ಗೌರ್ನಮೆಂಟಿನವರು ಅಪ್ಪಣೆಮಾಡಿದುದನ್ನೂ ಅದರಂತೆಯೇ ನಡೆಯುತ್ತಿರುವುದನ್ನೂ ಕುರಿತು ಕೃತಜ್ಞತೆಯನ್ನು ತೋರಿಸಿ, ಅಂಥ ಪೂರ್ವದ ಅಪ್ಪಣೆಗೆ ವಿರುದ್ಧವಾಗಿ ಮತ್ತೊಂದಪ್ಪಣೆಯು ಈಚೆಗೆ ಹುಟ್ಟಿರುವುದಾಗಿ ಕೇಳಿರುವುದಕ್ಕೆ ವಿಷಾದಪಟ್ಟು, ಹಾಗೆ ಸರ್ಕಾರದವರು ಭೇದಭಾವಗಳಿಗೆ ಸಮ್ಮತಿಸುವುದಾದರೆ "ನ್ಯಾಯ ನಿರ್ಮಾಣ ಮೊದಲಾದ ಎಲ್ಲಾ ಸರ್ಕಾರಿ ಕೆಲಸಗಳಲ್ಲಿಯೂ ಈ ಭೇದವನ್ನು ಒಪ್ಪಬೇಕಾಗುವುದು. ದೇಶವನ್ನು ಬೇರೆ ಬೇರೆ ಕೂಡಡಿಗಳಂತೆ ಏರ್ಪಡಿಸಿ ನನ್ನ ಜನಗಳ ಸಂಖ್ಯಾನುಗುಣವಾಗಿ ಸರ್ಕಾರದ ಹಣವನ್ನು ಹಂಚಬೇಕಾಗುವುದು" ಎಂದು ಎಚ್ಚರಿಸಿರುವರು. ವಿದ್ಯಾಭ್ಯಾಸ ವಿಷಯದಲ್ಲಿ ಈಗಣ ಮೆಮೋರಾಂಡಮ್ಮಿನಲ್ಲಿ ಕಂಡ ತತ್ವಗಳನ್ನೆಲ್ಲಾ ನ್ಯಾಯವಾದುವುಗಳೆಂದು ಇವರು ಸಮರ್ಥಿಸಿರುವುದಲ್ಲದೆ ಗೌರ್ನಮೆಂಟಿನವರು ಅದರಂತೆಯೇ ಒಪ್ಪಿ ನಡೆಯಿಸಿಕೊಡುವುದು ವಿಹಿತವೆಂಬುದನ್ನು ಒತ್ತಿ ಹೇಳಿರುತ್ತಾರೆ. ಮತ್ತೂ ತಮ್ಮ ಅಭ್ಯುನ್ನತಿಗಾಗಿ ಸರ್ಕಾರದವರು ಮಾಡುತ್ತಿರುವ ಪ್ರೋತ್ಸಾಹಗಳನ್ನು ವಿವರಿಸುವಾಗ—ಮುರುಗೇಶಂಪಿಳ್ಳೆಯೆಂಬ ತಮ್ಮ ಜಾತಿಯವರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಸಭಿಕರಾಗಿ ತೆಗೆದುಕೊಂಡುದಕ್ಕಾಗಿ ಅಭಿನಂದಿಸಿ, ಪ್ರಜಾಪ್ರತಿನಿಧಿಸಭೆ, ನಿಯಮನಿರ್ಮಾಣಸಭೆ ಮೊದಲಾದುವುಗಳಲ್ಲೆಲ್ಲಾ ತಮ್ಮ ಜನವರ್ಗದ ಪ್ರತಿನಿಧಿಗಳಿರುವಂತೆ ಮಾಡಿಕೊಡಬೇಕೆಂದೂ, ಹಾಗೆಮಾಡಿದರೇನೆಯೇ ಪ್ರಜಾಪ್ರತಿನಿಧಿಸಭೆಯೆಂಬ ಹೆಸರು ಅದಕ್ಕೆ ಅನ್ವರ್ಥವಾಗುವುದೆಂದೂ, ಹಿಂದೂಮತದ ಕೆಳಗಿನ ಜಾತಿಯವರ ಕೋರಿಕೆಗಳು ಸರಿಯಾಗಿ ಈಡೇರದಿದ್ದರೆ ಜಾತಿ ವೈಷಮ್ಯಗಳು ಹೆಚ್ಚುವುದು ನಿಶ್ಚಯವೆಂದೂ, ಕೊನೆಗೆ ಪರ್ಯವಸಾನವು ಹೇಗಾಗುವುದೋ ಹೇಳಲಾಗುವುದಿಲ್ಲವೆಂದೂ ಸಹ ಎಚ್ಚರಿಸಿರುತ್ತಾರೆ. ಮತ್ತೂ ತಮ್ಮ ಜನರಿಗೆ ವಿದ್ಯೆಯೊಂದೇ ಅಲ್ಲದೆ ಶುಚಿಯಾದ ಪಾನೀಯ ಉತ್ತಮವಾದ ವಾಸಸ್ಥಲ ಜೀವನ ಸಾಧನ ಇವುಗಳಿಗೆಲ್ಲಾ ತಕ್ಕ ಏರ್ಪಾಡುಗಳು ಮಾಡಲ್ಪಡಬೇಕೆಂದೂ, ಈ ಮಾದರಿ ಸಂಸ್ಥಾನವು ಉಳಿದ ಸಕಲ ವಿಷಯಗಳಲ್ಲಿಯೂ ಭರತಖಂಡದಲ್ಲೆಲ್ಲಾ ಪ್ರಸಿದ್ಧವಾಗಿದ್ದರೂ ಇದರ ಅಧಿಕಾರ ಸ್ಥಾನಗಳಲ್ಲಿ ಒಬ್ಬನಾದರೂ ಪಂಚಮ ನಿಲ್ಲದಿರುವುದು ಆಶ್ಚರ್ಯಕರವೆಂದೂ, ಸ್ವದೇಶ ಪರದೇಶ ಭೇದಗಳನ್ನಿಡದೆ ವಿದ್ಯಾವಂತರಾದ ಪಂಚಮರಿಗೆ ಕೆಲವರಿಗೆ ಇಲ್ಲಿ ಸರ್ಕಾರದ ಹುದ್ದೆಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಿರುವುದಲ್ಲದೆ "ಪೂರ್ವಕಾಲದಲ್ಲಿ ಪುರೋಹಿತರಿಂದ ಮೋಸಪಡಿಸಲ್ಪಟ್ಟ ಪ್ರಭುಗಳು ವರ್ಣಾಶ್ರಮ ಧರ್ಮವೆಂದು ಹೆಸರುಟ್ಟುಕೊಂಡು ನಮ್ಮನ್ನು ದಯೆಯಿಲ್ಲದೆ ತುಳಿದರು. ಇದನ್ನು ಮಾಡಿದವರು ತಾವು ಮಾಡಿದ ಕೆಡಕನ್ನು ಸರಿಪಡಿಸುವುದು ಇತರರ ಕೆಲಸವೆಂದು ಈಗ ಹೇಳುವುದು ಸರಿಯಲ್ಲ.........ಹಿಂದೆ ನಮಗೆ ಸೌಕರ್ಯಮಾಡಿಕೊಡುವುದನ್ನು ಬಹುಕಾಲ ಮರೆತುಬಿಟ್ಟಿದ್ದುದಕ್ಕೆ ಪರಿಹಾರರೂಪವಾಗಿ ಈಗ ಹೆಚ್ಚು ಖರ್ಚುಮಾಡಿ ನಮ್ಮ ಉದ್ಧಾರದ ಕೆಲಸವನ್ನು ಅವರು ಮಾಡಿಕೊಡಬೇಕು." ಎಂದು ಕೇಳಿಕೊಂಡಿರುತ್ತಾರೆ.

ನೋಟೀಸ್.

ಮೈಸೂರು ಮಂಡಿಮೊಹಲ್ಲಾ ಚಿಕ್ಕಮಾರ್ಕಟ್ಟಿನಲ್ಲಿರುವ ಚಕ್ಕಳದ ಮಂಡಿ ಮಹಮ್ಮದ್‌ಪೀರ್ ಸಾಬರು ತಿಳಿಸುವುದೇನೆಂದರೆ:—ಈ ಕೆಳಗ ಕಂಡ 300 ರೂಪಾಯಿಗಳ ಬೊಂಬಾಯಿ ಅರ್ಧ ನೋಟುಗಳು ಗೈರ್ಹಿಲೆಯಾಗಿವೆ. ಇವನ್ನು ಯಾರಾದರೂ ತಂದುಕೊಟ್ಟಲ್ಲಿ 100ಕ್ಕೆ 10 ರೂ. ನಂತೆ ಬಹುಮಾನ ಕೊಡಲ್ಪಡುವುದು.

1. 58643 ನೇ ಸಂ. 100 ರೂ.ನ ಅರ್ಧನೋಟು.
2. 58644 ,, ಡಿಟೊ
3. 58645 ,, ಡಿಟೊ

ಒಳದೇಶದ ವೃತ್ತಾಂತಗಳು.

ಮುನ್‌ಸೀಫ್ ಮ|| ಕೆ. ವೀರಬಸವಯ್ಯನವರು ೫ ನೆ ತರಗತಿಯಿಂದ ೪ ನೆ ತರಗತಿಗೆ ಹೆಚ್ಚಿಸಲ್ಪಟ್ಟಿದ್ದಾರೆ.

ವಸ್ತುಪ್ರದರ್ಶನಶಾಲೆಯು ೧ ನೆ ತಾರೀಖಿನಿಂದ ತೆರೆಯಲ್ಪಟ್ಟಿದೆ. ಆಡಂಬರಗಳೂ ವಸ್ತುಸಂಖ್ಯೆಗಳೂ ಕಡಿಮೆ.

ಸಹಕಾರ ಸಂಘಗಳ ವಾರ್ಷಿಕಾಧಿವೇಶನವು ಕಳೆದ ಗುರುವಾರ ಮಧ್ಯಾಹ್ನ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಟ್ಟಿತು. ಮ|| ದೇವಧಾರ್‌ರವರು ಅಧ್ಯಕ್ಷರಾಗಿ ತಮ್ಮ ಭಾಷಣವನ್ನು ಆಂಗ್ಲಭಾಷೆಯಲ್ಲಿ ಮಾಡಿದರು. ಸಭಾಕಾರ್ಯಗಳು ೩ ದಿನಗಳವರೆಗೆ ನಡೆದು ಮುಗಿದುವು.

ಮೈಸೂರು ವಿದ್ಯಾಭ್ಯಾಸ ಸಂಸ್ಕರಣ ವಿಷಯವಾಗಿ ಪ್ರಕಟಿತವಾಗಿರುವ ಮೆಮೋರಾಂಡಮ್ಮಿನಮೇಲೆ ಪ್ರಜೆಗಳು ಕೊಡಬಹುದಾದ ಅಭಿಪ್ರಾಯವನ್ನು ತಿಳಿಯಿಸುವ ಗಡುವನ್ನು ಈ ವರ್ಷದ ಡಿಸೆಂಬರ್ ಕಡೆಯವರೆಗೂ ಸರ್ಕಾರದವರು ಹೆಚ್ಚಿಸಿಕೊಟ್ಟಿರುತ್ತಾರೆ.

ಕಳೆದವಾರ ರಾಜಧಾನಿಯಲ್ಲೂ ಈ ದಕ್ಷಿಣಪ್ರಾಂತದಲ್ಲೂ ಮಳೆಯು ಕಡಿಮೆ. ಬೆಂಗಳೂರು ಪಟ್ಟಣದಲ್ಲಿ ಕಳೆದವಾರವೂ ಸಮೃದ್ಧವಾಗಿ ಮಳೆಯಾಗಿದೆ. ರಾಜಧಾನಿಯಲ್ಲಿ ಜೋಳದ ಬೆಲೆಯು ಪಲ್ಲಾ ೧ ಕ್ಕೆ ೧೦-೧೦|| ರೂ. ನಂತೆ ಆಗಿದೆ. ನಿಂತಿರುವ ಪೈರುಗಳೆಲ್ಲಾ ಚೆನ್ನಾಗಿವೆ.

ಮ|| ಕೆ. ಆರ್. ಕೃಷ್ಣಸ್ವಾಮಯ್ಯಂಗಾರ್ ಎಂ. ಎ. ಬಿ. ಎಲ್ ರವರು ಅಸಿಸ್ಟೆಂಟ್ ಕಂಟ್ರೋಲರ್ ಕೆಲಸದಿಂದ ಚೀಫ್ ಕಮ್ಯಾಂಡೆಂಟರ ಟೆಂಪರರಿ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುವುದರಿಂದ ಅವರ ಸ್ಥಲಕ್ಕೆ ಇದುವರೆಗೆ ಚೀಫ್ ಕಮ್ಯಾಂಡೆಂಟರ ಅಸಿಸ್ಟೆಂಟರಾಗಿದ್ದ ಮ|| ಎನ್ ಕೃಷ್ಣಸ್ವಾಮಿರಾವ್ ಬಿ. ಎ. ಬಿ. ಎಲ್ ರವರು ನಿಯಮಿಸಲ್ಪಟ್ಟಿದ್ದಾರೆ.

ಬೀರೂರಿನಲ್ಲೇ ೯ ನೆ ವೀರಶೈವ ಮಹಾಸಭೆಯನ್ನು ನಡೆಯಿಸಲು ಏರ್ಪಾಡು ಜರುಗಿಹೋಗಿದೆಯೆಂಬುದಾಗಿ ಬೀರೂರಿನ ಸತ್ಕಾರಕ ಸಂಘದವರೂ ಧಾರವಾಡದಿಂದ ಸ್ಟ್ಯಾಂಡಿಂಗ್ ಕಮಿಟಿ ಚೇರ್ಮನ್ನರೂ ಬರೆದು ತಿಳಿಯಿಸಿರುವುದರಿಂದ, ರಾಜಧಾನಿಯಲ್ಲಿ ಅದನ್ನು ನೆರೆಯಿಸಬೇಕೆಂದಿದ್ದ ಉದ್ದೇಶವನ್ನು ಇಲ್ಲಿಯ ವೀರಶೈವ ಮಹಾಜನರು ಅತ್ಯಂತ ವಿಷಾದದಿಂದ ವಿರಮಿಸಿಕೊಳ್ಳಬೇಕಾಗಿ ಬಂದಿತು.

ಮಹಾನವಮೀ ಮಹೋತ್ಸವದ ನೋಟಕ್ಕೆ ಈಸಲ ಬಹಳ ಜನರು ಬಂದಿರುತ್ತಾರೆ. ಕಾಲಸ್ಥಿತಿಯು ಸುಮುಖವಾಗಿಯೂ ರೋಗಾದಿಗಳ ಹಾವಳಿಯಿಲ್ಲದೆಯೂ ಇರುವುದೇ ಜನರು ಇಷ್ಟುಮಟ್ಟಿಗೆ ಸೇರುವುದಕ್ಕೆ ಅವಕಾಶವಾಗಿದೆ. ನಿನ್ನೆಯದಿನ ಪದ್ಧತಿಯಂತೆ ವಿಜಯದಶಮೀ ಮಹೋತ್ಸವವು ನೇತ್ರಾನಂದಕರವಾಗಿ ಜರುಗಿತು. ಮಳೆಯು ಕಳೆದವಾರವೆಲ್ಲಾ ವಿಶ್ರಾಂತಿ ತೆಗೆದುಕೊಂಡಿದ್ದುದರಿಂದ ಪರಸ್ಥಳಿಕರಿಗೆ ಬಹಳ ಸಹಾಯವಾಯಿತು.

ನಿಯಮನಿರ್ಮಾಣಸಭೆಗೆ ಎರಡೆರಡು ಡಿಸ್ಟ್ರಿಕ್ಟುಗಳಿಗೆ ಒಬ್ಬೊಬ್ಬರಂತೆ ನಾಲ್ವರು ಪ್ರಜಾಪ್ರತಿನಿಧಿಗಳು ಆರಿಸಲ್ಪಡುವ ಪದ್ಧತಿಯಿದ್ದಿತಷ್ಟೆ. ಅದನ್ನು ತಪ್ಪಿಸಿ ಡಿಸ್ಟ್ರಿಕ್ಟಿಗೊಬ್ಬೊಬ್ಬರಂತೆ ೮ ಜನರನ್ನು ಆರಿಸಿ ಕಳುಹಿಸುವಹಾಗೆ ಏರ್ಪಡಿಸಿಕೊಡಬೇಕೆಂದು ಪ್ರಜಾಪ್ರತಿನಿಧಿಗಳು ಪ್ರಾರ್ಥನೆಮಾಡಿಕೊಂಡಿದ್ದರು. ಸರ್ಕಾರದವರು ಅವರಿಷ್ಟದಂತೆಯೇ ಈಸಲದಿಂದ ನಡೆಯಿಸಲು ಅಪ್ಪಣೆಮಾಡಿದ್ದಾರೆ. ಅಲ್ಲದೆ ಪ್ರಜಾಪ್ರತಿನಿಧಿಸಭೆಯಿಂದಲೂ ಎಂದಿನಂತೆ ನಾಲ್ವರು ಆರಿಸಲ್ಪಡುವವರಾಗಿದ್ದಾರೆ.

ರಾಜಧಾನಿಯ ಶ್ರೀಮಂತ ಪೋತೀಖಾನೆ ಅನಂತರಾಜಯ್ಯನವರಿಗೆ ಈಸಲದ ದರ್ಬಾರಿನಲ್ಲಿ ಖಾಸಾ ಹೂವಿನ ಹಾರದ ಮರ್ಯಾದೆಯು ಶ್ರೀಮನ್ಮಹಾರಾಜರವರಿಂದ ದಯಪಾಲಿಸಲ್ಪಟ್ಟಿತೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಈ ಶ್ರೀಮಂತರು ಕಳೆದ ೨೦ ವರ್ಷಗಳಿಂದಲೂ ಮ್ಯುನಿಸಿಪಲ್ ಕೌನ್ಸಿಲರಾಗಿಯೂ ಟ್ರಸ್ಟ್‌ಬೋರ್ಡ್ ಹುಟ್ಟಿದಾರಭ್ಯ ಅದರ ಮೆಂಬರಾಗಿಯೂ ಇದ್ದುಕೊಂಡು ಈ ನಗರವಾಸಿಗಳಿಗೆ ತಮ್ಮ ಕೈಲಾದಮಟ್ಟಿಗೂ ಉಪಕಾರವನ್ನು ಮಾಡುತ್ತ ಅವರುಗಳ ಅನುರಾಗಕ್ಕೂ ಕೃತಜ್ಞತೆಗೂ ಪಾತ್ರರಾಗಿರುತ್ತಾರೆ.

ಕಳ್ಳ ನೋಟುಗಳನ್ನು ನಿರ್ಮಿಸುತ್ತಿದ್ದ ಅಪರಾಧಕ್ಕೆ ಗುರಿಯಾಗಿ ಮೈಸೂರು ಸೆಷನ್ ಕೋರ್ಟಿನಲ್ಲಿ ವಿಚಾರಣೆಗೊಳಪಟ್ಟಿದ್ದ ಅಪರಾಧಿಗಳಲ್ಲಿ ೧ ನೆ ಅಪರಾಧಿ ನಾರಾಯಣಶಾಸ್ತ್ರಿಗೆ ೩ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆ, ೭೫ ರೂ. ಅರ್ಥದಂಡ; ೨ ನೆ ಅಪರಾಧಿ ಕೃಷ್ಣಪ್ಪನಿಗೆ ೫ ವರ್ಷ ಕಠಿನ ಕಾರಾ

ಗೃಹವಾಸಶಿಕ್ಷೆ, ೧೦೦ ರೂ. ಅರ್ಥದಂಡ; ೩ ನೆ ಅಪರಾಧಿ ಹೊನ್ನಾಚಾರಿಗೆ ೫ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆ, ೧೦೦ ರೂ. ಅರ್ಥದಂಡ; ೪ ನೆ ಅಪರಾಧಿ ಗಂಗಾಚಾರಿಗೆ ೩ ವರ್ಷ ಕಾರಾಗೃಹವಾಸಶಿಕ್ಷೆ, ೭೫ ರೂ. ಅರ್ಥದಂಡ ವಿಧಿಸಲ್ಪಟ್ಟಿತು. ೫ ನೆ ಅಪರಾಧಿ ಲಕ್ಷ್ಮೀನರಸಪ್ಪ ೬ ನೆ ಅಪರಾಧಿ ಅಪ್ರೂವರ್ ಪುಟ್ಟಶಾಮಾಚಾರಿ ಇವರಿಬ್ಬರೂ ಬಿಡಲ್ಪಟ್ಟರು.

ಭರತಖಂಡದ ವೃತ್ತಾಂತಗಳು.

ನಮ್ಮ ಪೂರ್ವದೇಶಗಳಿಗೆ ಕಳುಹಿಸಿಕೊಡುವುದಕ್ಕಾಗಿ ಅಮೇರಿಕಾದಲ್ಲಿ ೨೦೦೦೦ ಡಾಲರು ಭಂಗಾರವು ಕೊಳ್ಳಲ್ಪಟ್ಟಿದೆ.

ಭರತಖಂಡದ ಸರ್ಕಾರದವರು ಕಳೆದ ಏಪ್ರೆಲ್ ತಿಂಗಳಿಂದ ಜುಲೈ ಕೊನೆಯವರೆಗೆ ಒಟ್ಟು ೨೨೨೯೦೦೧೧೬ ರೂ. ನಾಣ್ಯಗಳನ್ನು ಮುದ್ರಿಸಿದ್ದಾರೆ.

ಬೊಂಬಾಯಿಯಲ್ಲಿ ಒಂದು ಉಣ್ಣೆಯ ಯಂತ್ರಾಲಯವು ೧ ಕೋಟಿ ರೂ ಗಳ ಬಂಡವಾಳದಿಂದ ಏರ್ಪಡಿಸಲ್ಪಟ್ಟಿದೆ. ಭಾಗಕ್ಕೆ ೧೦೦ ರೂ.ಗಳ ಪ್ರಕಾರ ೧ ಲಕ್ಷ ಭಾಗಗಳು ಏರ್ಪಟ್ಟಿರಲಾಗಿ, ಅದಕ್ಕಿಂತ ಹೆಚ್ಚಾಗಿಯೇ ಷೇರುಗಳ ಮಾರಾಟವಾಯಿತು.

ಕೀರ್ತಿಶೇಷರಾದ ಡಾಕ್ಟರ್ ನಾಯರ್‌ರವರ ಸ್ಮಾರಕ ಚಿಹ್ನವನ್ನೇರ್ಪಡಿಸಬೇಕೆಂದು ಮದ್ರಾಸಿನ ಜನರು ನಿರ್ಧರಿಸಿ ಒಂದು ಫಂಡನ್ನು ಕೂಡಿಸುತ್ತಿದ್ದಾರೆ. ಅದಕ್ಕೆ ಇದುವರೆಗೆ ೫೬೪೪ ರೂ.ಗಳು ಸೇರಿರುತ್ತವೆ. ಮದ್ರಾಸಿನ ಗುರುಬಸವ ಅಂಡ್ ಕಂಪೆನಿಯವರು ಇದಕ್ಕೆ ೨೫೧ ರೂ.ಗಳನ್ನು ಕೊಟ್ಟಿರುತ್ತಾರೆ.

ಕಲ್ಕತ್ತಾದಲ್ಲಿರುವ ಗೋಣಿನಾರಿನ ಯಂತ್ರಾಲಯಗಳ ಯಜಮಾನರುಗಳಿಗೆ ಯುದ್ಧಕಾಲದಲ್ಲಿ ವಿಪರೀತವಾದ ಲಾಭವು ಬಂದಿತು. ಯುದ್ಧ ನಿಂತಮೇಲೆ ಲಾಭವು ಕಡಿಮೆಯಾಗುವುದೆಂದು ಅನೇಕರು ಯೋಚಿಸುತ್ತಿದ್ದರು. ಆದರೆ ಕಳೆದ ೬ ತಿಂಗಳಲ್ಲಿ ಬಂದಿರುವ ಲಾಭವು ಹಿಂದಣ ೨ ವರ್ಷಗಳ ೬ ತಿಂಗಳ ಕಾಲದಲ್ಲಿ ಆಗುತ್ತಿದ್ದ ಲಾಭಕ್ಕಿಂತಲೂ ಮಿಗಿಲಾಗಿ ಬಂದಿರುವುದೆಂದು ಪ್ರಕಟವಾಗಿದೆ.

ನಮ್ಮ ಭರತಖಂಡದಲ್ಲಿ ೧೯೧೭ ನೆ ವರ್ಷದಲ್ಲಿ ಎಲ್ಲ ಗಣಿಗಳಿಂದಲೂ ೨೨೯೯೧ ಔನ್ಸುಗಳ ಭಂಗಾರವು ಉತ್ಪನ್ನವಾಗಿದ್ದಿತು. ೧೯೧೮ ರಲ್ಲಾದರೋ ಅದರಲ್ಲಿ ಸೇಕಡಾ ೧೩ ರಷ್ಟು ಕಡಿಮೆಯಾಗಿ ಉತ್ಪನ್ನವಾಯಿತು. ನಮ್ಮ ದೇಶದಲ್ಲಿ ವಜ್ರಗಳ ಉತ್ಪತ್ತಿಯು ಹಾಗೆಯೇ ಕಳೆದ ವರ್ಷ ಕಡಿಮೆಯಾಗಿದೆ. ಮೊನ್ನೆ ವರ್ಷದಲ್ಲಿ ೧೯೮೨೦೦೦ ಕ್ಯಾರಟ್ಟಿನಷ್ಟು ಉತ್ಪನ್ನವಾಗಿದ್ದುದಕ್ಕೆ ಕಳೆದ ವರ್ಷದಲ್ಲಿ ೧೬೪೧೧೫ ಕ್ಯಾರಟ್ಟುಗಳಷ್ಟು ಉತ್ಪನ್ನವಾಗಿವೆ.

ಉತ್ತಮವಾದ ೧೬೦೩ ನೆ ನಂಬರ್ ಮಲ್‌ಬಟ್ಟೆಯು ಭರತಖಂಡಕ್ಕೆ ಗ್ಲಾಸ್ಗೋ ಪಟ್ಟಣದಿಂದ ಬರುತ್ತಿದ್ದಿತು. ಅದು ಕಳೆದ ೫ ವರ್ಷಗಳಿಂದಲೂ ಭರತಖಂಡಕ್ಕೆ ಎಲ್ಲೋ ಸ್ವಲ್ಪವಾಗಿ ಬರುತ್ತಿದ್ದುದರಿಂದ, ಅದರ ಬೆಲೆಯು ಥಾನು ೧ಕ್ಕೆ ೨೦ ರೂ.ನ ವರೆಗೂ ಹೆಚ್ಚಿಹೋಗಿದ್ದಿತು. ಈಗ ಗ್ಲಾಸ್ಗೋವಿನಿಂದ ಒಂದು ಹಡಗಿನಲ್ಲಿ ಕಲ್ಕತ್ತಾಪಟ್ಟಣಕ್ಕೆ ೪೦೪೫ ಬೇಲುಗಳ ಮಲ್‌ಬಟ್ಟೆಯು ಬಂದಿಳಿದಿರುತ್ತದೆ. ಇನ್ನುಮೇಲೆ ಇದರಬೆಲೆಯು ಇಳಿದುಹೋಗಬಹುದು.

ಒಂದು ಆಂಗ್ಲ ವ್ಯಾಪಾರ ಸಂಘದವರು ನಮ್ಮ ದೇಶದಲ್ಲಿ ಹಡಗುಗಳನ್ನು ಕಟ್ಟಿಸುವುದಕ್ಕಾಗಿ ಕಲ್ಕತ್ತಾದ ಸಮೀಪದೊಳಗೆ ಒಂದು ಕರ್ಮಾಗಾರವನ್ನು ಸ್ಥಾಪಿಸುವವರಾಗಿದ್ದಾರೆ. ಹಡಗುಗಳ ನಿರ್ಮಾಣಕ್ಕೆ ಬೇಕಾದ ಉಪಕರಣ ಸಾಮಗ್ರಿಗಳ ನಿರ್ಮಾಣಕ್ಕಾಗಿ ತಾತಾರವರ ಉಕ್ಕಿನ ಯಂತ್ರಾಲಯದ ಬಳಿಯಲ್ಲೇ ಇವರೂ ಒಂದು ಕರ್ಮಾಗಾರವನ್ನು ಸ್ಥಾಪಿಸುವವರಾಗಿದ್ದಾರೆ. ಈ ಸ್ಥಾಪನೆಗಳಿಗಾಗಿ ಇವರು ೪೫ ಕೋಟಿ ರೂ.ಗಳ ಮೂಲಧನವನ್ನು ಹಾಕುತ್ತಾರೆ.

ಸಿಂಗಪೂರಿನಲ್ಲಿ ಸವರನ್ನು ೧ ಕ್ಕೆ ೧೫ ರೂ. ಬೆಲೆಯಂತೆ ಮಾರಲ್ಪಡುತ್ತಿದೆ. ಅಲ್ಲಿಗೆ ಹೋದ ಕೆಲವರ್ತಕರು ಅನೇಕಾನೇಕ ಸವರನ್ನುಗಳನ್ನು ಆ ಬೆಲೆಗೆ ಕೊಂಡು ಭರತಖಂಡಕ್ಕೆ ಬಂದು ೧೭-೧೮ ರೂ.ಗಳಿಗಿಂತಲೂ ಹೆಚ್ಚಿನ ಬೆಲೆಗೆ ಅದೇ ಸವರನ್ನುಗಳನ್ನು ಮಾರುತ್ತಿದ್ದರು. ಈ ವಿಷಯವು ಪುದುಚೇರಿಯಲ್ಲಿರುವ ಫ್ರೆಂಚ್ ಪ್ರಭುತ್ವದವರಿಗೆ ತಿಳಿಯಲು, ಅಲ್ಲಿಗೆ ಸಿಂಗಪೂರಿನಿಂದ ಬಂದ ಒಂದು ಹಡಗನ್ನು ಪರಿಶೋಧನೆ ಮಾಡಿಸಲಾಗಿ, ಅದರಲ್ಲಿದ್ದ ವರ್ತಕರ ಬಳಿಯಲ್ಲಿ ೪-೫ ಸಾವಿರ ಸವರನ್ನುಗಳು ದೊರೆದುವು. ಅವರು ಅವುಗಳಿಗೆಲ್ಲಾ ತಮ್ಮ ಫ್ರಾನ್ಸ್ ಪ್ರಭುತ್ವದ ಬೆಲೆಯ ಪ್ರಕಾರ ಎಂದರೆ ಸವರನ್ನು ೧ ಕ್ಕೆ ೧೧|| ರೂ.ನ ಪ್ರಕಾರ ಹಣಕೊಟ್ಟು ಬಲವಂತವಾಗಿ ತೆಗೆದುಕೊಂಡು ಬಿಟ್ಟರು.

ನಮ್ಮ ಭರತಖಂಡದಿಂದ ಫ್ರಾನ್ಸು ಮೊದಲಾದ ಕಡೆಗೆ ನೆಲಗಡಲೆಕಾಯಿಯು ವಿಶೇಷವಾಗಿ ಸಾಗಿಹೋಗುತ್ತದೆ. ಆದರೆ ಅವನ್ನು ಬಿಡಿದೋ ಉಜ್ಜಿಯೋ ಸಿಪ್ಪೆಯನ್ನು ತೆಗೆದ ಬೀಜಗಳನ್ನು ಕಳುಹಿಸಿಕೊಡುವುದರಿಂದ ಅವು ಸಾಗಿ ಸ್ಥಲವನ್ನು ಸೇರುವುದರೊಳಗೆ ಕೆಟ್ಟುಹೋಗುತ್ತಿರುವುದರಿಂದ ವಿದೇಶಗಳವರು ಈ ಬೀಜಗಳನ್ನು ಆಹಾರ್ಯವಸ್ತುಗಳಿಗಾಗಿ ಉಪಯೋಗಿಸಿಕೊಳ್ಳದೆ ಸಾಬೂನುಗಳನ್ನು ಮಾಡುವುದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರಿಂದ ಅದರ ಬೆಲೆಯು ಕಡಿಮೆಯಾಗಿ ಹೋಗುತ್ತಿದೆ. ಸಿಪ್ಪೆಯನ್ನು ಯಂತ್ರಗಳಿಂದ ಬಿಡಿಸಿ ನಲುಗದಿರುವಂತೆ ಬೀಜಗಳನ್ನು ಬೇರ್ಪಡಿಸಿ ಕಳುಹಿಸಿಕೊಟ್ಟರೆ ಬೆಲೆಯು ಹೆಚ್ಚಾಗಿ ಬರುವುದಂತೆ. ಆದುಕಾರಣ ಈಗ ಅದಕ್ಕೆ ತಕ್ಕಯಂತ್ರವನ್ನು ಕಂಡುಹಿಡಿದಿದ್ದಾರೆ. ಇನ್ನು ಮೇಲೆ ಮದ್ರಾಸಾಧಿಪತ್ಯದ ಅನೇಕ ಜಿಲ್ಲೆಗಳಲ್ಲಿ ಅವುಗಳನ್ನುಪಯೋಗಿಸಲು ಯೋಚಿಸಿದ್ದಾರೆ.

ಮದ್ರಾಸು ಪಟ್ಟಣದಲ್ಲಿ ಕಂಟ್ರಾಕ್ಟರ್ ಅಪ್ಪಾದೊರೆ ಮೊದಲಿಯಾರ್ ಎಂಬುವನು ಅಲ್ಲಿನ ನೇಪಿಯರ್‌ಪಾರ್ಕಿನಲ್ಲಿ ವಾಸವಾಗಿರುವ ಕರ್ರಿ ಎಂಬ ಆಂಗ್ಲಮನುಷ್ಯರ ಪತ್ನಿಯನ್ನು ಗಾಳಿ ಸ್ವಾರಿಗಾಗಿ ತಮ್ಮ ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಹೋಗಿ, ಇಬ್ಬರೂ ಚೆನ್ನಾಗಿ ಕುಡಿದು ರಾತ್ರಿ ೧೧ ಗಂಟೆಗೆ ಮನೆ ಬಳಿಗೆ ಬರಲು, ಗಂಡನು ತನ್ನ ಪತ್ನಿಗೆ ಆಗಿರುವ ಅವಸ್ಥೆಯನ್ನು ನೋಡಿ ಕೋಪಿಸಿಕೊಳ್ಳಲಾಗಿ, ಆಕೆ ಥಟ್ಟನೆ ಮನೆಯನ್ನು ಬಿಟ್ಟು ಮೊದಲಿಯಾರರ ಬಂಡಿಯಲ್ಲೇ ಕುಳಿತಳು. ಗಂಡನು ಹಿಡಿದೆಳೆಯುತ್ತಿರಲು ಮೊದಲಿಯಾರರು ಒರಟುತನದಿಂದ ಬಿಡಿಸಿ ಒಡನೆಯೇ ಆಕೆಯನ್ನೂ ಕರೆದುಕೊಂಡುಹೋದರಂತೆ. ಈಗ ತನ್ನ ದೊರೆಸಾನಿಯು ೪ ಸಾವಿರ ರೂ.ಗಳ ನಗಗಳ ಪೆಟ್ಟಿಗೆಯನ್ನು ಮೊದಲಿಯಾರರ ವಶಪಡಿಸಿರುವಳೆಂದು ಆಕೆಯ ಗಂಡನು ವ್ಯಾಜ್ಯವನ್ನು ಹೂಡಿರುವನು. ಮದ್ರಾಸು ರೈಲ್ವೆಯಲ್ಲಿ ಗಾರ್ಡಾಗಿರುವ ರಾಬರ್ಟ್ಸ್ ಎಂಬ ಆಂಗ್ಲಮನುಷ್ಯನ ಪತ್ನಿಯು ಅದೇ ಕಂಪೆನಿಯ ಕೆಲಸದಲ್ಲಿರುವ ಮಹಮ್ಮದ್ ಇಸ್ಮಾಯಿಲ್ ಎಂಬುವವನೊಡನೆ ವ್ಯಭಿಚರಿಸುತ್ತಿರುವಳೆಂದೂ ಆದುಕಾರಣ ಅವಳ ವಿವಾಹಸಂಬಂಧವನ್ನು ತನಗೆ ತಪ್ಪಿಸಿಕೊಡಬೇಕೆಂದೂ, ನಷ್ಟಕ್ಕಾಗಿ ಆತನಿಂದ ೫೦೦೦ ರೂ.ಗಳನ್ನು ಕೊಡಿಸಿಕೊಡಬೇಕೆಂದೂ ಗಂಡನು ವ್ಯಾಜ್ಯಹೂಡಿ, ವಿಚಾರಣೆಯ ಕಾಲದಲ್ಲಿ ಹಣದ ಮಾತನ್ನು ಹಿಂದೆಗೆದುಕೊಂಡು ಸಂಬಂಧಪರಿತ್ಯಾಗವನ್ನು ಮಾಡಿಸಿಕೊಂಡನು. ಹೆಂಗುಸರಿಗೆ ಪಾಶ್ಚಾತ್ಯರಂತೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಬಡಿದುಕೊಳ್ಳುವ ಪರಮ ಕೃಪಾಳುಗಳು ಈ ಚರಿತ್ರೆಗಳನ್ನು ನೋಡಿ ತೃಪ್ತಿಪಡಬೇಕು.

ಪತ್ರವ್ಯವಹಾರ.

೯ ನೇಯ ವೀರಶೈವ ಮಹಾಸಭೆ.

ಬೀರೂರಿನ ವೀರಶೈವ ಮಹಾಜನಗಳು ತಮ್ಮಲ್ಲಿ ಈ ಸಾರಿ ೯ ನೇಯ ಶ್ರೀಮದ್ವೀರಶೈವ ಮಹಾಸಭೆಯನ್ನು ಕೂಡಿಸಲು ನಿರ್ಧರಿಸಿರುವರೆಂಬ ಸಂಗತಿಯು ಸಂತೋಷಕರವಾದದ್ದೇ ಸರಿ. ಆದರೆ ಈ ಮಹಾಸಭೆಗೆ ನಮ್ಮ ಸಮಾಜದ ಮುಖಂಡರಾದ ಶ್ರೀಮಂತ ಶಿವಲಿಂಗರಾವ್ ಜಗದೇವರಾವ್ ದೇಶಮುಖ ಆಲನೇಲಿಕರವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಈ ಮುಂಚೆ ಇವರು ತೀರ್ಮಾನಿಸಿದ್ದನ್ನು ಈಗ ಬಿಟ್ಟು ಹೊಸದಾಗಿ ಬೇರೆಯವರನ್ನು ಆರಿಸುವರೆಂಬ ಸಮಾಚಾರವುಮಾತ್ರ ವಿಷಾದಕರವಾದುದ್ದಾಗಿದೆ. ಆದುದರಿಂದ ಬೀರೂರಿನ ಮಹಾ ಜನಗಳು ಆ ರೀತಿ ಮಾಡಬಾರದಾಗಿಯೂ, ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರರು ಶ್ರೀಮಂತ ಆಲನೇಲ್ ದೇಶಮುಖರವರನ್ನೇ ೯ ನೇಯ ಮಹಾಸಭೆಗೆ ಅಧ್ಯಕ್ಷರನ್ನಾಗಿ ಆರಿಸಬೇಕಾಗಿಯೂ ಕೋರಿಕೆ,

-ಸಮಾಜ ಹಿತೈಷಿ.

ಸಂಪದಭ್ಯುದಯದ ಬೊಬ್ಬೆ.

ಸ್ವಾಮಿ,

ತಾ|| ೨೯-೯-೧೯ ನೆ ಸಂಪದಭ್ಯುದಯ ಪತ್ರಿಕೆಯಲ್ಲಿ ಬಂದಿರುವ ಒಂದು ಲೇಖನದಲ್ಲಿ "ಬ್ಯಾಕ್‌ವರ್ಡ್ ಮತ್ತೂ ಡಿಪ್ರೆಸ್ಡ್ ಸ್ಕಾಲರ್‌ಶಿಪ್ಪುಗಳು ಎಲ್ಲಾ ಜಾತಿಯವರಿಗೂ ಕೊಟ್ಟು ಬ್ರಾಹ್ಮಣರಿಗೆ ಮಾತ್ರ ಕೊಡುವುದಿಲ್ಲವೆಂದು ಒಬ್ಬ ಅಜ್ಞಾತಕುಲಗೋತ್ರನು ಹೇಳಿದ ಮಾತ್ರದಿಂದಲೇ ಮತದ್ವೇಷದಿಂದಲೂ ಉನ್ಮತ್ತತೆಯಿಂದಲೂ, ಮಾಡಲ್ಪಟ್ಟ ಪಬ್ಲಿಕ್ ಫಂಡಿಗೆ ಯಾವ್ಯಾವ ದ್ರವ್ಯವನ್ನು ಒದಗಿಸುವರೋ ಅವರೆಲ್ಲರೂ ಅದರ ಪ್ರಯೋಜನಕ್ಕೆ ಪಾತ್ರರಲ್ಲವೆ? ಲೋಕದಲ್ಲಿರುವ ಎಲ್ಲಾ ಪಂಗಡದವರೂ ಪಬ್ಲಿಕ್ ಫಂಡಿಗೆ ಪಾತ್ರರೆಂಬದಾಗಿಯೂ, ಬ್ರಾಹ್ಮಣರು ಮಾತ್ರ ಅಪಾತ್ರರೆಂಬದಾಗಿಯೂ ವಿವೇಕವಿಲ್ಲದೆ ಯಾರಾದರೂ ಹೇಳಬಹುದೆ? ಹಾಗೆ ಮಾಡಿದರೆ ಅವರಿಗೆ ಸರ್ವ ಸಮದೃಷ್ಟಿಯುಳ್ಳವರು ಎಂಬ ಬಿರುದು ಸಲ್ಲುವುದೆ? ಆ ಬಿರುದನ್ನು ಕಳೆದುಕೊಂಡ ದೇಶದಲ್ಲಿ ಸತ್ಯವೂ ಧರ್ಮವೂ ಇರುವುದೆ? ಇಂಥಾ ದೇಶಗಳಲ್ಲಿ ಇರುವುದಕ್ಕಿಂತ ಗಡೀಪಾರೂ ವನವಾಸವೂ ಮೇಲೆಂದು ಭಾವಿಸಲ್ಪಡುವುದಕ್ಕೆ ಅವಕಾಶವಾಗುವುದಿಲ್ಲವೆ? ಹೀಗೆ ಮಾಡಿದವರ ಮೇಲೆ ಡ್ಯಾಮೇಜ್‌ಸೂಟು ಇರುವುದಿಲ್ಲವೆ?" ಎಂದು ಸಮೂದಿಸಲ್ಪಟ್ಟಿದೆ. ಇದರಿಂದ ವಿದ್ಯಾಭ್ಯಾಸದ ಫಂಡಿಗೆ ದೇಶದ ಎಲ್ಲಾ ಪ್ರಜೆಗಳೂ ಕೊಟ್ಟ ಕಂದಾಯವು ಸೇರಿರುವಾಗ ಅಂಥ ಹಣದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಸ್ಕಾಲರ್‌ಶಿಪ್ಪಿಗೆಂದು ಸ್ವಲ್ಪ ಭಾಗವನ್ನು ಬೇರೆ ತೆಗೆದುಕೊಟ್ಟು, ಅದನ್ನು ಬ್ರಾಹ್ಮಣವರ್ಗದ ವಿದ್ಯಾರ್ಥಿಗಳಿಗೆ ಕೊಡದಿರುವುದು ಅನ್ಯಾಯವೆಂದೂ, ಹಾಗೆ ಮಾಡಿರುವವರು ಅಜ್ಞಾತಕುಲಗೋತ್ರರೆಂದೂ ಸ್ಪೆಷಲ್ ಬೋರ್ಡಿಂಗ್ ಸ್ಕೂಲುಗಳನ್ನು ಕೆಲವರಿಗೆಮಾತ್ರ ಮಾಡಿರುವುದು ಅನ್ಯಾಯವೆಂದೂ, ಹೀಗೆ ಮಾಡಿರುವ ದೇಶದಲ್ಲಿ ಸತ್ಯವೂ ಧರ್ಮವೂ ಇಲ್ಲವೆಂದೂ, ಈ ದೇಶದಲ್ಲಿರುವುದಕ್ಕಿಂತ ಗಡೀಪಾರಾಗಿ ಹೋಗುವುದು ಲೇಸೆಂದೂ ಈ ಲೇಖಕರು ಅಭಿಪ್ರಾಯಪಟ್ಟಂತಾಯಿತು. ಇದರಮೇಲೆ ಇನ್ನೂ ಏನೇನನ್ನೋ ಬರೆದುಕೊಂಡಿದ್ದಾರೆ. ಸಂಸ್ಥಾನದ ಉತ್ಪತ್ತಿಯಲ್ಲಿ ಮುಕ್ಕಾಲು ಪಾಲೆಲ್ಲಾ ನಾನಾರೀತಿಯಲ್ಲಿ ಬ್ರಾಹ್ಮಣವರ್ಗದವರ ಜೋಬಿಗೇ ತುಂಬುತ್ತಿದ್ದರೂ, ಪ್ರಜರಿಗೆ ಧರ್ಮಯಾಗುವ ಹೂಡ ಬಹುಭಾಗಕ್ಕೆಲ್ಲಾ ಮೂಲಭೂತರಾಗಿರುವ ೫೮ ಲಕ್ಷ ಪ್ರಜೆಗಳು ಅವಿದ್ಯಾಪಂಕದಲ್ಲಿಬಿದ್ದು ನರಳುತ್ತಿರುವಾಗ, ಅವರಿಗೆ ವಿದ್ಯಾದಾನ ಮಾಡಿಸಬೇಕೆಂದು ಪ್ರೋತ್ಸಾಹಪಡಿಸುವುದಕ್ಕೋಸ್ಕರ ವರ್ಷಕ್ಕೆ ೧-೧|| ಲಕ್ಷದಷ್ಟನ್ನು ಪ್ರತ್ಯೇಕವಾಗಿ ಪ್ರಭುತ್ವದವರು ಕೊಟ್ಟ ಮಾತ್ರಕ್ಕೇ ಅದನ್ನು ನೋಡಿ ಸೈರಿಸಲಾರದೆ ಇಷ್ಟು ಬಾಯ್ಬಿಡುಕೊಳ್ಳತಕ್ಕವರನ್ನು ಎಷ್ಟು ದಯಾವಂತರೆಂದು ಹೇಳಬಹುದು! ಇವರು "ಸರ್ವೇಜನಾಸ್ಸುಖಿನೋಭವಂತು" ಎಂದು ಕೋರತಕ್ಕವರೊ? "ಸರ್ವೇಜನಾವಿನಶ್ಯಂತು ಭವಾಮಸ್ತುಖಿನೋವಯಂ" ಎಂದು ಕೋರತಕ್ಕವರೋ? ವಾಚಕರೇ ಯೋಚಿಸಬೇಕು. ಈ ಬ್ಯಾಕ್‌ವರ್ಡ್ ಕ್ಲಾಸ್ ಸ್ಕಾಲರ್‌ಶಿಪ್ ಕೊಡಿಸುವಲ್ಲಿ ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಅವರ ಸರ್ಕಾರದವರೂ ನಿಯಮ ನಿರ್ಮಾಣಸಭೆಯ ಕೆಲ ಸಭಿಕರೂ ಸಂಪದಭ್ಯುದಯ ಸಮಾಜದ ಕೆಲ ಸಭಿಕರೂ ಸಹ ತೋರಿಸಿದ ದಯೆಯೂ ನ್ಯಾಯದೃಷ್ಟಿಯೂ ಕಾರಣಗಳಾಗಿರುತ್ತವೆ. ಹೀಗಿರುವಾಗ ಅವರೆಲ್ಲಾ ಈ ಲೇಖಕರ ದುರ್ವಚನದಂತೆ ಅಜ್ಞಾತ ಕುಲಗೋತ್ರರೇ ಆಗಬೇಕಾಯಿತು. ಅಂಥ ದುರ್ಭಾಷಣೆಗಳನ್ನಾಡತಕ್ಕ ರಾಜದ್ವೇಷಿಗಳು ನಮ್ಮ ಮಧ್ಯದಲ್ಲಿರಬಹುದೆ? ಇವರು ದೇಶಕಂಟಕರಲ್ಲವೆ? ಇಂಥ ನರರಾಕ್ಷಸರು ಇರುವ ದೇಶದಲ್ಲಿ ಮಳೆ ಬೆಳೆಗಳು ಸರಿಯಾಗಿ ಆಗುವುದುಂಟೆ? ಇಂಥವರು ಗಡೀಪಾರಾಗಿ ಹೋದದಿವಸವೇ ದೇಶದಲ್ಲಿ ಶಾಂತಿಯೂ ಸದ್ಧರ್ಮವೂ ಸಕಲ ಪ್ರಜಾಸಮೃದ್ಧಿಯೂ ಉಂಟಾಗುವುವು. ಪ್ರಭುತ್ವದವರು ಹಾಗೆ ಮಾಡಿಸದಿದ್ದರೆ ಕಾಲವಾದರೂ ಹಾಗೆ ಮಾಡಿಯೇ ಮಾಡಿಸುವುದು. ೫೮ ಲಕ್ಷ ಪ್ರಜಾವರ್ಗಗಳ ವಿದ್ಯಾಭಿವೃದ್ಧಿಗಾಗಿ ಮೊನ್ನೆತಾನೇ ಗೌರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುವ ಸ್ವಲ್ಪ ಹಣಕ್ಕಾಗಿ ಕೆಲ ಜನರು ಇಷ್ಟು ಅಸೂಯೆಪಟ್ಟರೆ, ಸಕಲ ಜನರೂ ಕಂದಾಯದ ರೂಪದಲ್ಲಿ ಕೊಟ್ಟ ಹಣದಲ್ಲಿ ವರ್ಷ ೧ ಕ್ಕೆ ೭೫ ಸಾವಿರ ರೂ. ಗಳನ್ನು ನುಂಗುತ್ತಿರುವ ಸಂಸ್ಕೃತ ಪಾಠಶಾಲೆಗಳಲ್ಲಿ ಇತರರ್ಯಾರನ್ನೂ ಸೇರಿಸದೆ ಕೆಲವರುಮಾತ್ರ ಎಷ್ಟೋ ಕಾಲದಿಂದ ಅದರ ಫಲವನ್ನು ಅನುಭವಿಸುತ್ತಿದ್ದಾರಲ್ಲಾ! ಅದಕ್ಕೇನು ಹೇಳುವರು? ಇದೂ ಪಕ್ಷಪಾತವಲ್ಲವೆ? ಇದರಲ್ಲಿ ಆತ್ಮಲಾಭವಿರುವುದರಿಂದ ಇದು ಈ ಲೇಖಕರಿಗೆ ನ್ಯಾಯಸಮ್ಮತವಾಗಿಯೇ ಇರಬಹುದು. ಸಂಪದಭ್ಯುದಯದಲ್ಲಿ ಇಂಥ ಅಸೂಯೆಯ ಬೊಬ್ಬೆಗಳು ಪದೇಪದೇ ಏಳುತ್ತಿರುವುದರಿಂದಲೇ ನಮ್ಮ ದೇಶದಲ್ಲಿ ಜಾತಿ ಮತದ್ವೇಷಗಳು ಬೆಳೆಯುವುದಕ್ಕೆ ಕಾರಣವಾಗಿದೆ. ಇದನ್ನು ನೋಡಿಕೊಂಡು ಗೌರ್ನಮೆಂಟಿನವರು ಸುಮ್ಮನಿರುವದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಯಥಾರ್ಥವಾದಿ.

ಸ್ಟಾರ್ ಪತ್ರಿಕಾ ಎಡಿಟರವರ ಸ|| ಕ್ಕೆ.

ಕಲಿಕಾಲ ವೈಚಿತ್ರ್ಯ.

ಕಂ|| ಬೆಳಕೆಂದು ನನ್ನ ಪಕ್ಕದೊ |
ಳೊಳವೆನ್ನಿಂ ಮಿಗಿಲೆ ವಿದ್ಯುದಾಭ ಮೆನುತ್ತುಂ ||
ಗಳಹಿದೊಡೆ ಮಿಂಚುಬುಳು ತಾ |
ನಿಳೆ ಕೈಪೊಯ್ದುಹಹ ಎಂದು ನಗದಿರ್ಪುದೆ ಪೇಳ್ ||

ಸ್ವಾಮಿ,

ಜಗತ್ತಿಗೇ ದಂಗುಬಡಿಯುವಂತೆ ಎಲೆಕ್ಟ್ರಿಕ್ ದೀಪ ಪ್ರಕಾಶವು ಮೆರೆಯುವದನ್ನು ಕಂಡು ಲೋಕದ ಜನರು ಆಹ್ಲಾದಪಡುತ್ತಿರುವಾಗ, ಹರಳೆಣ್ಣೆಯ ಹೊಂಗೆಯೆಣ್ಣೆಯ ಬೇವಿನೆಣ್ಣೆಯ ಎಳ್ಳೆಣ್ಣೆಯ ದೀಪಗಳೆಲ್ಲಾ ಅಸೂಯೆಪಟ್ಟು ಎಲೆಕ್ಟ್ರಿಕ್ ದೀಪದಮೇಲೆ ದಂಡೆತ್ತಿ ಹೊರಡಲು ಪ್ರಯತ್ನಪಟ್ಟರೆ ಅದು ಅಷ್ಟು ಆಶ್ಚರ್ಯವಾಗಿರಲಾರದು. ಆದರೆ "ನನ್ನ ಪಕ್ಕದಲ್ಲಿ ಯಾವಾಗಲೂ ಬೆಳಕು ಸ್ವಭಾವಸಿದ್ಧವಾಗಿದೆ; ವಿದ್ಯುಚ್ಛಕ್ತಿ ದೀಪವು ಕ್ಷಣಿಕವಾದದ್ದು; ಆದಕಾರಣ ಅದು ನನಗಿಂತ ದೊಡ್ಡದೆ?" ಎಂದು ಮಿಂಚಿನ ಹುಳುವು ಕೂಗಲಿಕ್ಕೆ ಆರಂಭಿಸಿದರೆ ಜಗತ್ತೆಲ್ಲಾ ಚಪ್ಪಾಳೆಕುಟ್ಟಿ ನಗುವುದಿಲ್ಲವೆ? ಶ್ರೀ ಚಿತ್ರದುರ್ಗದ ಜಗದ್ಗುರು ಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಿ ವಿಶೇಷವಾದ ವೈಭವಗೌರವಗಳನ್ನು ಪ್ರಜಾಮಂಡಲಿಯಿಂದಲೂ ಸರ್ಕಾರದಿಂದಲೂ ಹೊಂದಿ ಹೋದದ್ದು ಕೆಲವು ಅಸೂಯಾಳುಗಳಿಗೆ ಕಣ್ಣನ್ನೂ ಕಿವಿಯನ್ನೂ ಕುಕ್ಕಿದಂತೆ ಆಗಿದೆಯೆಂದು ಕಾಣುತ್ತೆ. ಅಂಥವರಲ್ಲಿ ಒಬ್ಬನಾದ ಚೈತನ್ಯಪಂಡಿತ ಎಂಬುವರು ಕೆಲವುವಾರಗಳಕೆಳಗೆ ಮೈಸೂರಿನ ಸಂಪದಭ್ಯುದಯ ಪತ್ರಿಕೆಗೆ ಒಂದು ವಿಚಿತ್ರಲೇಖನವನ್ನು ಬರೆದಿದ್ದುದು ನಿಮಗೆ ಗೊತ್ತೇ ಇದೆಯಷ್ಟೆ. ಅದರ ಖಂಡನೆಯನ್ನು ಕುರಿತು ನಾನು ೨೬ ನೆ ಜೂನ್ ತಾರೀಖಿನಲ್ಲಿ ಬರೆದ ಪತ್ರಕ್ಕೆ- ಸ್ವಮತದಲ್ಲಿ ಪರಸ್ಪರ ಕಲಹವನ್ನು ಬೆಳೆಸತಕ್ಕ ಉದ್ಯಮಕ್ಕೆ ಪ್ರವರ್ತಿಸುವುದು ವಿಹಿತವಲ್ಲವೆಂದು ನೀವು ಉತ್ತರ ಕೊಟ್ಟಿದ್ದನ್ನುನೋಡಿ ಅಸ್ಮದಾದಿಗಳು ಆಗ್ಯೆ ತಟಸ್ಥರಾದೆವು. ಹೀಗಾಗಿ ಯಾವುದೊಂದು ಬಾಧಕವೂ ತಮ್ಮ ಮೇಲೆ ಬೀಳದಿದ್ದ ಕಾರಣ ಅಸೂಯಾಳುಗಳು ತಮಗೆ ಇದಿರೇ ಇಲ್ಲವೆಂದು ಭ್ರಮಿಸಿಹೋದುದರಿಂದ ಅವರ ತಲೆಯು ತಿರುಗಿಹೋದಂತೆ ಕಾಣುತ್ತೆ. ಆದಕಾರಣವೇ ತತ್ಸಂಬಂಧವಾಗಿ ಈಚೆಗೆ ಅದೇ ಪತ್ರದಲ್ಲಿ ಪುನಃ ಒಂದೆರಡು ಲೇಖನಗಳನ್ನು ಬರೆದು ಮೊಳದುದ್ದ ಮಾರುದ್ದದ ನಾಲಿಗೆಗಳನ್ನು ಚಾಚಿ ಅರಚುವದಕ್ಕೆ ತೊಡಗಿದ್ದಾರೆ. ಒಬ್ಬರಿಗೊಬ್ಬರಿಗೆ ಬಡಿದಾಟವನ್ನು ಹಚ್ಚಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದು ಹೊಂಚಿಹಾಕಿಕೊಂಡು ಅದಕ್ಕಾಗಿಯೇ ಅಂಗಡಿಯಿಕ್ಕಿಕೊಂಡಿರುವ ಸಂಪದಭ್ಯುದಯದಲ್ಲಿ ಇಂಥ ಗಿರಾಕಿಗಳಿಗೆ ಬಾಗಿಲು ತೆರೆದೇ ಇಡಲ್ಪಟ್ಟಿದೆಯಷ್ಟೆ. ಇದರ ಒಳಿಯ ಸ್ವಭಾವವನ್ನು ಕಾಣದೆ ಅನೇಕರು ಹೀಗಿಯೇ ಪತಂಗಗಳಂತೆ ಬಿದ್ದು ಆತ್ಮವಿನಾಶಮಾಡಿಕೊಳ್ಳುತ್ತಿರುವದನ್ನು ನೋಡಿ ವ್ಯಸನಪಡಬೇಕಾಗಿದೆ. ಲಿಂಗಧಾರಿಗಳೆನ್ನಿಸಿಕೊಂಡಿರುವ ಯಾರೇ ಆಗಲಿ ಒಳಗೊಳಗೇ ಹ್ಯಾಗೆ ಗುದ್ದಾಡಿದ್ದರೂ ಪರಸ್ಪರ ಎಷ್ಟು ದೂಷಿಸಿಕೊಂಡಿದ್ದರೂ ಅದೇನೂ ಅಷ್ಟು ಹೆಚ್ಚಿನದಲ್ಲ; ಪ್ರಮಾದಕರವೂ ಅಲ್ಲ. ಈ ಅಸೂಯಾಳುವಾದರೊ ಪರಮತದ ಸಂಪದಭ್ಯುದಯದ ಶರಣುಹೊಕ್ಕು ವೀರಶೈವ ಮತದ ಪಂಚಾಚಾರ್ಯಾದಿ ಗುರುಮಂಡಲಿಯನ್ನೆಲ್ಲಾ ದೂಷಿಸುವುದಕ್ಕೆ ಉದ್ಯುಕ್ತವಾಗಿರುವದರಿಂದ, ಉದಾಸೀನನನ್ನು ಶತ್ರುಗಿಂತ ಕೆಟ್ಟವನೆಂದು ತಿಳಿಯಬೇಕೆಂಬ ನ್ಯಾಯವನ್ನನುಸರಿಸಿ ಈ ಅಸೂಯಾಳುವಿನ ಲೇಖನದ ಪ್ರತಿಕ್ರಿಯೆಗೆ ಪ್ರವರ್ತಿಸುವದು ಮತಸ್ಥರಿಗೆಲ್ಲಾ ಕರ್ತವ್ಯವೇ ಆಗಿರುವುದು. ಆದಕಾರಣ ನೀವು ನಿಮ್ಮ ಶಾಂತಿಮಾರ್ಗವನ್ನು ಸ್ವಲ್ಪಕಾಲ ಕಟ್ಟಿಟ್ಟು ಈಗಲಾದರೂ ನನ್ನ ಲೇಖನಕ್ಕೆ ಪತ್ರಿಕೆಯಲ್ಲಿ ಅವಕಾಶಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಲೇಖನವು ದೊಡ್ಡದಾಗಿರುವುದು ನಿಜ. ಅಷ್ಟನ್ನು ಬರೆಯುವಿದ್ದರೆ ಯತ್ನವಿಲ್ಲ. ಆದಕಾರಣ ಸ್ಟಾರ್ ಪತ್ರವು ಚಿಕ್ಕಸೈಜಿನದೆಂಬ ಕಾರಣವನ್ನು ಹೇಳಿ ನಿರಾಕರಿಸದೆ, ಮತ್ತು ನನ್ನ ಲೇಖನದಲ್ಲಿ ಯಾವುದೊಂದು ಭಾಗವನ್ನೂ ಕಿತ್ತುಹಾಕಿ ಸಂಕೋಚಮಾಡದೆ, ವಾರವಾರಕ್ಕೆ ಸ್ಥಲ ಸಿಕ್ಕಿದಷ್ಟನ್ನಾದರೂ ಸಶೇಷಮಾಡಿ ಹಾಕಿ, ಪೂರೈಸಬೇಕೆಂದು ಸಹಸ್ರ ಪ್ರಕಾರವಾಗಿ ಬೇಡುತ್ತೇನೆ.

ಗಜರಾಜನು ವೈಯ್ಯಾರದಿಂದ ಜಗ್ಗು ಹಾಕುತ್ತ ಹೋಗುತ್ತಿರುವಾಗ ಗ್ರಾಮಸಿಂಹಗಳು ಬೊಗಳುವದಕ್ಕುಪಕ್ರಮಿಸಿ ಆ ಕುಂಜರೇಶ್ವರನು ಅದನ್ನು ಲೇಶವೂಲಕ್ಷಿಸದೆ ಹೋದರೆ, ನಮಗೆ ಹೆದರಿ ಆನೆಯು ಓಡಿಹೋಗುವುದೆಂದು ತಿಳಿದು ಗ್ರಾಮಸಿಂಹಗಳು ಮತ್ತಷ್ಟು ಬೊಗಳುವುದಕ್ಕೂ ವಿಕಾರಸ್ವರದಿಂದ ಅರಚುವುದಕ್ಕೂ ತೊಡಗುವುವು. ಆದರೆ ಈ ಗದ್ದಲದಿಂದ ಪುರನಿವಾಸಿಗಳ ಶಾಂತಿಸುಖಭಂಗವಾಗಿ ಬೇಸರಿಕೆ ಹುಟ್ಟುವುದರಿಂದ ಅವರು ಕಲ್ಲಿನಿಂದಲಿಟ್ಟು ಗ್ರಾಮಸಿಂಹಗಳ ಅಬ್ಬರವನ್ನು ಅಣಗಿಸದೆ ಬಿಡುವುದಿಲ್ಲ. ಹೀಗೆ ಲೋಕಸ್ವಭಾವವಿರುವಾಗ, ಯುಕ್ತಾಯುಕ್ತ ವಿಚಾರಶಕ್ತಿಯುಳ್ಳ ಮಾನವಕುಲಕ್ಕೆ ಸೇರಿದ ಒಬ್ಬಾನೊಬ್ಬನು ಅವಿಚಾರದಿಂದಲೋ ದುಷ್ಪ್ರೇರಣೆಯಿಂದಲೋ ಅಸೂಯೆಯಿಂದಲೋ ಒಂದು ಮತದ ಆಚಾರ್ಯ ಪೀಠಾಧಿಪತಿಗಳನ್ನೆಲ್ಲಾ ಹಳಿಯುವುದಕ್ಕೆ ತೊಡಗಿದರೆ ಅವನಿಗೆ ತಕ್ಕರೀತಿಯಿಂದ ಬುದ್ಧಿಕಲಿಸದೆ ಬಿಡುವುದಕ್ಕಾಗಲಾರದು.

ಈ ಅಸೂಯಾಳುವು ಬರೆದಿರುವ ಕರೆಸ್ಪಾಂಡೆನ್ಸಿನ ಪ್ರತಿಯೊಂದು ಪ್ಯಾರಾವನ್ನೂ ಹಿಡಿದು ಖಂಡಿಸಿ ಬರೆಯಲಿಕ್ಕೆ ಹಿಡಿದರೆ ಒಂದು ದೊಡ್ಡ ಗ್ರಂಥವೇ ಆಗುತ್ತೆ. ಆದಕಾರಣ ಮುಖ್ಯಮುಖ್ಯವಾಗಿರುವ ಪ್ರಲಾಪವನ್ನು ಎತ್ತಿ ಹಿಡಿದು ಖಂಡಿಸುತವನಾಗಿದ್ದೇನೆ.

[ಸಶೇಷ].

ಆರಾಧ್ಯಸುತ.

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಅಕ್ಟೋಬರ್ ತಾ|| ೫ನೆಯ ಭಾನುವಾರ

ಪಂಚಮರ ಮಹಾಸಭೆ.

ಮೈಸೂರು ಪೌರಸಾಮಾಜಿಕ ಸಂಘದವರು ಏರ್ಪಡಿಸಿದ್ದ ಮೇರೆಗೆ ಈ ಸಭೆಯು ಕಳೆದ ತಾ|| ೧ ನೆ ಬುಧವಾರ ಮಧ್ಯಾಹ್ನ ೩ ಗಂಟೆಗೆ ರಾಜಧಾನಿಯ ಟೌನ್‌ಹಾಲಿನಲ್ಲಿ ಸೇರಿದ್ದಿತು. ದಿವಾನ್ ಕಾಂತರಾಜಅರಸ್ ಸಿ.ಎಸ್.ಐ. ರವರು, ಕೌನ್ಸಿಲರ್ ಮಿ|| ಮಿರ್ ಹಂಜಾಹುಸೇನ್ ಸಾಹೇಬರು, ದಿ||ಬ|| ಕೆ.ಪಿ. ಪುಟ್ಟಣ್ಣಶೆಟ್ಟಿ ಸಿ.ಐ.ಇ. ಯವರು, ದಿ||ಬ|| ಜೆ. ಎಸ್. ಚಕ್ರವರ್ತಿಯವರು, ಮಿ|| ಗಳಾದ ಕಣಾಂಬಿಯವರು, ಚಾಂಡಿಯವರು, ದೊರೆಸ್ವಾಮಯ್ಯರು, ಸಿ. ಆರ್. ರಡ್ಡಿಯವರು, ಬಾಲಸುಂದರಂ ಅಯ್ಯರವರು, ಡಿಸೌಜಾರವರು, ಬ್ಯಾ|| ನಾಗಪ್ಪನವರು, ರಂಗನಾಥರಾವ್ ಸಾಹೇಬರು, ವಿ. ಪಿ. ನರಸಿಂಹಯ್ಯಂಗಾರರು, ಬಿ. ನಂಜುಂಡರಾಜಅರಸಿನವರು, ಬಿ. ಸುಬ್ಬರಾಯರು, ಡಾ|| ಸಾಣೆಯವರು, ಮೆಥ್ಯಾರವರು, ಆರ್. ಸಿ. ಮುಕರ್ಜಿಯವರು, ಜಸ್ಟಿಸ್‌ವೀರ್ ಮೆಕ್ಕೆಯವರೇ ಮೊದಲಾದ ಕೆಲಮಂದಿ ಡಿ|| ಕಮಿಷನರುಗಳು ಅಸಿಸ್ಟೆಂಟ್ ಕಮಿಷನರುಗಳು, ಮ|| ಎಂ. ಬಸವಯ್ಯನವರೇ ಮೊದಲಾದ ಕೆಲಮಂದಿ ನಿಯಮನಿರ್ಮಾಣ ಸಭಾಸಭಿಕರು ಮ್ಯು|| ಕೌನ್ಸಿಲರುಗಳೇ ಮೊದಲಾದ ಅನೇಕ ಮಂದಿ ಪುರಪ್ರಮುಖರುಗಳು ಸಭೆಯನ್ನಲಂಕರಿಸಿದ್ದರು. ಸ್ಥಲವಸ್ಥಲದ ಪಂಚಮ ಪ್ರಜೆಗಳು ಬಹುಶಃ ೩೦೦ ಮಂದಿಗಳವರೆಗೆ ಸೇರಿದ್ದರು. ಸಭಾಧ್ಯಕ್ಷತೆಯನ್ನು ವಹಿಸಲು ಮದ್ರಾಸಿನಿಂದ ಆನೇ ವಿಶ್ವಾಸಿಗಳೆಗ್ಗೆ ರಾಜಧಾನಿಗೆ ಬಂದಿದ್ದ ಆ|| ಎಂ. ಸಿ. ರಾಜಾರವರು ಟೌನ್‌ಹಾಲಿಗೆ ಬಂದಕೂಡಲೇ ರಾ|| ಬ|| ಸುಬ್ಬರಾಯರೂ, ಲೋಕಹಿತೈಷಿ ನಂಜುಂಡರಾಜ ಅರಸಿನವರೂ ಪೌರಸಾಮಾಜಿಕ ಸಂಘದ ಸೆಕ್ರಟರಿ ಮಿ|| ರಾಮರಾಯರೂ ದ್ವಾರದ ಬಳಿಯಲ್ಲಿ ಇದಿರ್ಗೊಂಡು ಸಭೆಗೆ ಕರೆತಂದರು. ಮೊಟ್ಟಮೊದಲು ಪಂಚಮ ಪಾಠಶಾಲೆಯ ಬಾಲಕರು ಹಾರ್ಮೋನಿಯಂ ಶ್ರುತಿಯ ಮೇಲೆ ದೇವಸ್ತುತಿಪರವಾದ ಹಾಡುಗಳನ್ನು ಇಂಪಾಗಿ ಹಾಡಿದರು. ಬಳಿಕ ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನಪರವಾದ ಹಾಡುಗಳನ್ನು ಕೆಲಮಂದಿ ಪಂಚಮ ಬಾಲಿಕೆಯರು ಮಧುರವಾಗಿ ಹಾಡಿದರು. ಇವೆರಡೂ ಶ್ರಾವ್ಯವಾಗಿಯೂ ಶುದ್ಧವಾಗಿಯೂ ಇದ್ದುವು. ಕೇಳಿದ ಸಭಿಕರು ಸಂತೋಷಪಟ್ಟು ಕರತಾಡನಗಳನ್ನು ಮಾಡಿದರು. ಬಳಿಕ ಒಬ್ಬ ಪಂಚಮ ವಿದ್ಯಾರ್ಥಿಯು ಆ|| ರಾಜಾರವರನ್ನು ಕುರಿತು ಸುಸ್ವಾಗತವನ್ನು ಮಾಡುವ ವಿಜ್ಞಾಪನ ಪತ್ರವನ್ನು ಆಂಗ್ಲಭಾಷೆಯಲ್ಲಿ ಸ್ಫುಟವಾಗಿ ಓದಿದನು. ಅದನ್ನೇ ಮತ್ತೊಬ್ಬ ಬಾಲಕನು ಕನ್ನಡದಲ್ಲಿ ಓದಿದನು. ಬಳಿಕ ಸಂಸ್ಥಾನದ ಪೌರಸಾಮಾಜಿಕ ಸಂಘಾಧ್ಯಕ್ಷರಾದ ಮ|| ಕೆ.ಪಿ. ಪುಟ್ಟಣ್ಣಶೆಟ್ಟರು ಆ|| ರಾಜಾರವರ ಯೋಗ್ಯತಾವಿಶೇಷಗಳನ್ನು ಸಭಿಕರಿಗೆ ಪರಿಚಯಮಾಡಿಸುವಾಗ್ಗೆ-ಇವರು ಪಂಚಮ ಜನವರ್ಗದಲ್ಲಿ ಜನಿಸಿ ವಿದ್ಯಾಬುದ್ಧಿ ವಿಶೇಷಗಳಿಂದ ಮದ್ರಾಸಿನಲ್ಲಿ ದೀರ್ಘಕಾಲ ಆಂಗ್ಲೋಪಾಧ್ಯಾಯರಾಗಿದ್ದುಕೊಂಡು ಕೆಲಕಾಲ ಆನರರಿ ಬೆಂಚ್‌ಮ್ಯಾಜಿಸ್ಟ್ರೇಟರಾಗಿದ್ದು ಈಗ ಮದ್ರಾಸು ಸರ್ಕಾರದವರಿಂದ ಅಲ್ಲಿಯ ನಿಯಮನಿರ್ಮಾಣ ಸಭೆಯ ಸಭಿಕರಾಗಿ ಸೇರಿಸಿಕೊಳ್ಳಲ್ಪಟ್ಟಿರುವುದೇ ಮೊದಲಾದ ಸಂಗತಿಗಳನ್ನೆಲ್ಲಾ ವಿವರಿಸಿ, ಪಂಚಮರ ಅಭ್ಯುನ್ನತಿಯನ್ನು ಕೋರಿ ನೆರೆದಿರುವ ಈ ಸಭೆಗೆ ಅವರ ಜನವರ್ಗಕ್ಕೆ ಸೇರಿ ನಾಯಕರಾಗಿರುವ ರಾಜಾರವರು ಸಭಾಧ್ಯಕ್ಷತೆಯನ್ನು ವಹಿಸುವದರಲ್ಲಿ ಸಭಿಕರೆಲ್ಲರಿಗೂ ಇರುವ ಕುತೂಹಲವನ್ನು ವಿಶದಪಡಿಸಿ, ಅಧ್ಯಕ್ಷಪೀಠವನ್ನಂಗೀಕರಿಸಲಿಕ್ಕೆ ರಾಜಾರವರಿಗೆ ಸೂಚಿಸಿದರು. ಮೈಸೂರಿನ ಪೌರ ಸಾಮಾಜಿಕ ಸಂಘದ ಅಧ್ಯಕ್ಷರಾದ ರಾ||ಬ|| ಬಿ. ಸುಬ್ಬರಾಯರು ಅದನ್ನು ಪುಷ್ಟೀಕರಿಸಿದಬಳಿಕ ರಾಜಾರವರು ಅಧ್ಯಕ್ಷಪೀಠವನ್ನಲಂಕರಿಸಿ, ಆಂಗ್ಲಭಾಷೆಯಲ್ಲಿ ತಮ್ಮ ಭಾಷಣವನ್ನು ||| ಗಂಟೆಯ ಹೊತ್ತಿನವರೆಗೆ ಸ್ಫುಟೋಚ್ಚಾರಣೆಯಿಂದ ಓದಿಮುಗಿಸಿದರು. ಬಳಿಕಪೌರಸಾಮಾಜಿಕ ಸಂಘದವರು ದಿವಾನರೇ ಮೊದಲಾದ ಸಭಿಕರಿಗೆಲ್ಲಾ ಪುಷ್ಪಹಾರಗಳನ್ನಿತ್ತು ಗೌರವಿಸಿದರು. ಆನಂತರ ಅಧ್ಯಕ್ಷರ ಭಾಷಣವು ಕನ್ನಡದಲ್ಲಿ ಒಬ್ಬ ಪಂಚಮ ವಿದ್ಯಾರ್ಥಿಯಿಂದ ಓದಲ್ಪಟ್ಟಿತು. ಮಧ್ಯದಲ್ಲಿ ದಿವಾನರೇ ಮೊದಲಾದ ಅಧಿಕಾರಿವರ್ಗದವರನೇಕರು ಕಾರ್ಯಾಂತರಗಳಿಗಾಗಿ ತೆರಳಲು, ಸಭೆಯ ಕೊನೆಯವರೆಗೂ ದಿ|| ಬ|| ಕೆ. ಪಿ. ಶೆಟ್ಟರು, ಮ|| ಗಳಾದ ಚಾಂಡಿ, ರೆಡ್ಡಿ, ಮೆಕ್ಕೆ, ಡಿಸೌಜಾ, ಎಂ. ಬಸವಯ್ಯ, ಮಹಮ್ಮದ್ ಜಾಫರ್ ಸಾಹೇಬರು ಮೊದಲಾದವರನೇಕರು ಇದ್ದು ಸಭಾಕಾರ್ಯವನ್ನು ಸಾಂಗಗೊಳಿಸಿದರು. ಮರುದಿನ ಬೆಳಗ್ಗೆ ಸಭೆಗೂಡಿ ಪಂಚಮರ ಏಳ್ಗೆಗೆ ಸಂಬಂಧಪಟ್ಟ ಅನೇಕ ನಿರ್ಧಾರಗಳುಮಾಡಲ್ಪಟ್ಟುವು.

ರಾಜಧಾನಿಯ ಟೌನ್‌ಹಾಲಿನಂಥ ಪ್ರಮುಖಸ್ಥಲದಲ್ಲಿ ತಮ್ಮವರ ಮಹಾಸಭೆಯು ನಡೆದು ತಾವೂ ಇತರ ಜನವರ್ಗದವರಂತೆ ತಮ್ಮ ಅಭ್ಯುದಯವನ್ನು ಚಿಂತನೆಮಾಡಿಕೊಳ್ಳಲು ಇಂಥ ಸುಯೋಗವನ್ನು ತಮಗೆ ಒದಗಿಸಿಕೊಟ್ಟ ಪೌರಸಾಮಾಜಿಕ ಸಂಘದವರಿಗೂ ಮುಖ್ಯವಾಗಿ ಅದರ ಸೆಕ್ರೆಟರಿಗಳಾದ ಮ|| ಬಿ. ರಾಮರಾಯರಿಗೂ ಪಂಚಮರು ವಿಶೇಷತಃ ಕೃತಜ್ಞರಾಗಿರುವರು. ಪಂಚಮಜನರು ಇಷ್ಟುಮಟ್ಟಿನ ಸ್ಥಿತಿಗೆ ಬಂದುದನ್ನು ಕುರಿತೂ ಅವರಿಗೆ ಇಷ್ಟೆಲ್ಲಾ ಪ್ರೋತ್ಸಾಹಮಾಡುತ್ತಿರುವವರನ್ನು ಕುರಿತೂ ನಾನಾಪ್ರಕಾರವಾಗಿ ಆಡಿಕೊಳ್ಳುವವರು ಈಗ ಅನೇಕಾನೇಕರು ಇರುವರೆಂಬುದಕ್ಕೆ ಸಂಶಯವಿಲ್ಲ. ಹಾಗಿರುವುದೇನೂ ಆಶ್ಚರ್ಯವಲ್ಲ. ನೂತನ ವೈಲಕ್ಷಣ್ಯವು ದೃಗ್ಗೋಚರವಾದಾಗ ಚಕಿತರಾಗತಕ್ಕುದು ಪ್ರಾಣಿಸಾಮಾನ್ಯಧರ್ಮವೇ ಆಗಿರುತ್ತದೆ. ತಮ್ಮ ಅಭ್ಯುದಯಚಿಂತೆಯು ಈ ಪಂಚಮ ಜನರಲ್ಲಿ ನಿಶಿತವಾಗಿ ನಿಂತು, ತಮ್ಮ ಅವನತಿಗೂ ಹೀನಭಾವಕ್ಕೂ ಕಾರಣಗಳಾಗಿರುವ ಲೋಪದೋಷಗಳನ್ನೆಲ್ಲಾ ಅವರು ತಿದ್ದಿಕೊಳ್ಳುತ್ತ ಬಂದರೆ ಕ್ರಮೇಣ ಅವರು ಮಾನವವರ್ಗದ ಸೌಭ್ರಾತೃತ್ವಕ್ಕೆ ಅರ್ಹರಾಗಿ ಇತರ ಸಂಘಗಳಿಂದೆಲ್ಲಾ ಗಣಿಸಲ್ಪಡುವುದರಲ್ಲೇನೂ ಸಂಶಯವಿಲ್ಲ. ಅವರ ಅಂಥ ಸ್ವಕೀಯ ಪ್ರಯತ್ನಗಳು ವಿಶೇಷವಾಗಿ ಫಲೋನ್ಮುಖವಾಗಬೇಕಾದರೆ ಸದ್ಯಃಕಾಲದಲ್ಲಿ ಪ್ರಭುತ್ವದವರ ಉತ್ಸಾಹವೂ ಪ್ರೋತ್ಸಾಹವೂ ವಿಶೇಷವಾಗಿ ಬೇಕಾಗಿರುತ್ತವೆ. ಏಕೆಂದರೆ ಅವರ ಅಭ್ಯುದಯ ಯತ್ನಗಳಿಗೆ ಕಂಟಕ ಸಾಮಗ್ರಿಗಳು ಈಗ ವಿಶೇಷವಾಗಿರುತ್ತವೆ. ಅವನ್ನು ಉತ್ತರಿಸುವ ಬಲವು ಪ್ರಭುತ್ವದಕಡೆಯಿಂದ ಒದಗಬೇಕಾಗಿರುತ್ತದೆ. ವೇಲ್ಲೋಟಿಯಲ್ಲಿ ಇದುವರೆಗೆ ಪಂಚಮರ ಸಭೆಗಳು ಮೂರು ನಾಲ್ಕಾವೃತ್ತಿ ನಡೆದಿದ್ದರೂ ತಮ್ಮ ಜನವರ್ಗದವರೊಬ್ಬರ ಅಧ್ಯಕ್ಷತೆಯಿಂದ ಅವರ ಸಭೆಯು ನಡೆದುದರಲ್ಲಿ ಇದೇ ಮೊದಲನೆಯದಾಗಿದೆ. ಇದರಿಂದ ಆ ಜನವರ್ಗದವರ ಉತ್ಸಾಹವು ಇಮ್ಮಡಿಯಾಯಿತೆಂಬುದಕ್ಕೆ ಸಂಶಯವಿಲ್ಲ. ಇಂಥ ಸಾಧಾರಣ ಪಂಥಕ್ಕೆ ಪಂಚಮ ಜನವರ್ಗದವರು ಹತ್ತಿರುವುದು ನಮಗೆ ಸಂತೋಷಕರವಾಗಿದೆ.

ಸಭಾಧ್ಯಕ್ಷರಾದ ರಾಜಾರವರು ತಮ್ಮ ಭಾಷಣದಲ್ಲಿ ಕೊಟ್ಟಿರುವ ಕೆಲ ಅಭಿಪ್ರಾಯಗಳು ಪಂಚಮರ ಏಳ್ಗೆಯನ್ನು ಕೋರುವವರೆಲ್ಲರಿಗೂ ಅಭಿನಂದನೀಯಗಳಾಗಿರುತ್ತವೆ. ಇವರು ತಮ್ಮ ಭಾಷಣದಲ್ಲಿ ಶ್ರೀಮನ್ಮಹಾರಾಜ ಸಹೋದರರೂ ಅವರ ಸರ್ಕಾರದವರೂ ಪಂಚಮರ ಏಳ್ಗೆಗಾಗಿ ಮಾಡಿರುವ ನಾನಾವಿಧಗಳಾದ ಪ್ರೋತ್ಸಾಹಗಳಿಗಾಗಿ ತಮ್ಮ ಕೃತಜ್ಞತೆಯನ್ನು ತೋರಿಸಿ, ಸಂಸ್ಥಾನದ ಪ್ರಜಾ ಸಮುದಾಯದಲ್ಲಿ ⅙ ಭಾಗದಷ್ಟಾಗಿರುವ ತನ್ನ ಜನರ ಅಭ್ಯುನ್ನತಿಯನ್ನು ಸಾಧಿಸಲು ಮದ್ರಾಸು ಸರ್ಕಾರದವರು ಒಬ್ಬ ಪ್ರತ್ಯೇಕಾಧಿಕಾರಿಯನ್ನು ನಿಯಮಿಸಿರುವಂತೆ ಇಲ್ಲಿ ಪ್ರತ್ಯೇಕವಾದ ಒಂದು ಶಾಖೆಯನ್ನೇ ನಿಯಮಿಸಿ, ಅದಕ್ಕೆ ನಿಜವಾಗಿ ಪಂಚಮಾಭ್ಯುದಯವನ್ನು ಕೋರುವ ಅಧಿಕಾರಿಗಳೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ, ಸರ್ಕಾರದವರು ಸ್ವತಃ ನಮ್ಮ ಕ್ಷೇಮಾಭ್ಯುದಯಗಳನ್ನು ಚಿಂತಿಸಿ ಕೆಲಸಮಾಡುವಂತಾಗಬೇಕೆಂದು ಕೋರಿರುತ್ತಾರೆ. ಸರ್ಕಾರಿ ಸ್ಕೂಲುಗಳಲ್ಲಿ ಇತರ ಜನವರ್ಗಗಳಂತೆಯೇ ತಮ್ಮವರ ಬಾಲಬಾಲಿಕೆಯರನ್ನೂ ಸೇರಿಸುವುದಕ್ಕೆ ಗೌರ್ನಮೆಂಟಿನವರು ಅಪ್ಪಣೆಮಾಡಿದುದನ್ನೂ ಅದರಂತೆಯೇ ನಡೆಯುತ್ತಿರುವುದನ್ನೂ ಕುರಿತು ಕೃತಜ್ಞತೆಯನ್ನು ತೋರಿಸಿ, ಅಂಥ ಪೂರ್ವದ ಅಪ್ಪಣೆಗೆ ವಿರುದ್ಧವಾಗಿ ಮತ್ತೊಂದಪ್ಪಣೆಯು ಈಚೆಗೆ ಹುಟ್ಟಿರುವುದಾಗಿ ಕೇಳಿರುವುದಕ್ಕೆ ವಿಷಾದಪಟ್ಟು, ಹಾಗೆ ಸರ್ಕಾರದವರು ಭೇದಭಾವಗಳಿಗೆ ಸಮ್ಮತಿಸುವುದಾದರೆ " ನ್ಯಾಯ ನಿರ್ಮಾಣ ಮೊದಲಾದ ಎಲ್ಲಾ ಸರ್ಕಾರಿ ಕೆಲಸಗಳಲ್ಲಿಯೂ ಈ ಭೇದವನ್ನು ಒಪ್ಪಬೇಕಾಗುವುದು. ದೇಶವನ್ನು ಬೇರೆ ಬೇರೆ ಕೊಠಡಿಗಳಂತೆ ವಿಭಾಗಿಸಿ ನನ್ನ ಜನಗಳ ಸಂಖ್ಯಾನುಗುಣವಾಗಿ ಸರ್ಕಾರದ ಹಣವನ್ನು ಹಂಚಬೇಕಾಗುವುದು " ಎಂದು ಎಚ್ಚರಿಸಿರುವರು. ವಿದ್ಯಾಭ್ಯಾಸ ವಿಷಯದಲ್ಲಿ ಈಗಣ ಮೆಮೋರಾಂಡಮ್ಮಿನಲ್ಲಿ ಕಂಡ ತತ್ವಗಳನ್ನೆಲ್ಲಾ ನ್ಯಾಯವಾದುವುಗಳೆಂದು ಇವರು ಸಮರ್ಥಿಸಿರುವುದಲ್ಲದೆ ಗೌರ್ನಮೆಂಟಿನವರು ಅದರಂತೆಯೇ ಒಪ್ಪಿ ನಡೆಯಿಸಿಕೊಡುವುದು ಉಚಿತವೆಂಬುದನ್ನು ಒತ್ತಿ ಹೇಳಿರುತ್ತಾರೆ. ಮತ್ತೂ ತಮ್ಮ ಅಭ್ಯುನ್ನತಿಗಾಗಿ ಸರ್ಕಾರದವರು ಮಾಡುತ್ತಿರುವ ಪ್ರೋತ್ಸಾಹಗಳನ್ನು ವಿವರಿಸುವಾಗ-ಮುರುಗೇಶಂಪಿಳ್ಳೆಯೆಂಬ ತಮ್ಮ ಜಾತಿಯವರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಸಭಿಕರಾಗಿ ತೆಗೆದುಕೊಂಡುದಕ್ಕಾಗಿ ಅಭಿನಂದಿಸಿ, ಪ್ರಜಾಪ್ರತಿನಿಧಿಸಭೆ, ನಿಯಮನಿರ್ಮಾಣಸಭೆ ಮೊದಲಾದುವುಗಳಲ್ಲೆಲ್ಲಾ ತಮ್ಮ ಜನವರ್ಗದ ಪ್ರತಿನಿಧಿಗಳಿರುವಂತೆ ಮಾಡಿಕೊಡಬೇಕೆಂದೂ, ಹಾಗೆಮಾಡಿದರೇನೆಯೇ ಪ್ರಜಾಪ್ರತಿನಿಧಿಸಭೆಯೆಂಬ ಹೆಸರು ಅದಕ್ಕೆ ಅನ್ವರ್ಥವಾಗುವುದೆಂದೂ, ಹಿಂದೂ ಮತದ ಕೆಳಗಿನ ಜಾತಿಯವರ ಕೋರಿಕೆಗಳು ಸರಿಯಾಗಿ ಈಡೇರದಿದ್ದರೆ ಜಾತಿ ವೈಷಮ್ಯಗಳು ಹೆಚ್ಚುವುದು ನಿಶ್ಚಯವೆಂದೂ, ಕೊನೆಗೆ ಪರ್ಯವಸಾನವು ಹೇಗಾಗುವುದೋ ಹೇಳಲಾಗುವುದಿಲ್ಲವೆಂದೂ ಸಹ ಎಚ್ಚರಿಸಿರುತ್ತಾರೆ. ಮತ್ತೂ ತಮ್ಮ ಜನರಿಗೆ ವಿದ್ಯೆಯೊಂದೇ ಅಲ್ಲದೆ ಶುಚಿಯಾದ ಪಾಸೀಯ ಉತ್ತಮವಾದ ವಾಸಸ್ಥಲ ಜೀವನ ಸಾಧನ ಇವುಗಳಿಗೆಲ್ಲಾ ತಕ್ಕ ಏರ್ಪಾಡುಗಳು ಮಾಡಲ್ಪಡಬೇಕೆಂದೂ, ಈ ಮಾದರಿ ಸಂಸ್ಥಾನವು ಉಳಿದ ಸಕಲ ವಿಷಯಗಳಲ್ಲಿಯೂ ಭರತಖಂಡದಲ್ಲೆಲ್ಲಾ ಪ್ರಸಿದ್ಧವಾಗಿದ್ದರೂ ಇದರ ಅಧಿಕಾರ ಸ್ಥಾನಗಳಲ್ಲಿ ಒಬ್ಬನಾದರೂ ಪಂಚಮ ನಿಲ್ಲದಿರುವುದು ಆಶ್ಚರ್ಯಕರವೆಂದೂ, ಸ್ವದೇಶ ಪರದೇಶ ಭೇದಗಳನ್ನೆಣಿಸದೆ ವಿದ್ಯಾವಂತರಾದ ಪಂಚಮರಿಗೆ ಕೆಲವರಿಗೆ ಇಲ್ಲಿ ಸರ್ಕಾರದ ಹುದ್ದೆಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಿರುವುದಲ್ಲದೆ " ಪೂರ್ವಕಾಲದಲ್ಲಿ ಪುರೋಹಿತರಿಂದ ಮೋಸಪಡಿಸಲ್ಪಟ್ಟ ಪ್ರಭುಗಳು ವರ್ಣಾಶ್ರಮ ಧರ್ಮವೆಂದು ಹೆಸರಿಟ್ಟುಕೊಂಡು ನಮ್ಮನ್ನು ದಯೆಯಿಲ್ಲದೆ ತುಳಿದರು. ಇದನ್ನು ಮಾಡಿದವರು ತಾವು ಮಾಡಿದ ಕೆಡಕನ್ನು ಸರಿಪಡಿಸುವುದು ಇತರರ ಕೆಲಸವೆಂದು ಈಗ ಹೇಳುವುದು ಸರಿಯಲ್ಲ.........ಹಿಂದೆ ನಮಗೆ ಸೌಕರ್ಯಮಾಡಿಕೊಡುವುದನ್ನು ಬಹುಕಾಲ ಮರೆತುಬಿಟ್ಟಿದ್ದುದಕ್ಕೆ ಪರಿಹಾರರೂಪವಾಗಿ ಈಗ ಹೆಚ್ಚು ಖರ್ಚುಮಾಡಿ ನಮ್ಮ ಉದ್ಧಾರದ ಕೆಲಸವನ್ನು ಅವರು ಮಾಡಿಕೊಡಬೇಕು." ಎಂದು ಕೇಳಿಕೊಂಡಿರುತ್ತಾರೆ.

ನೋಟೀಸ್.

ಮೈಸೂರು ಮಂಡಿಮೊಹಲ್ಲಾ ಚಿಕ್ಕಮಾರ್ಕೆಟ್ಟಿನಲ್ಲಿರುವ ಜಕ್ಕಳದ ಮಂಡಿ ಮಹಮ್ಮದ್‌ಪೀರ್ ಸಾಬರು ತಿಳಿಸುವುದೇನೆಂದರೆ:—ಈ ಕೆಳಗೆ ಕಂಡ 300 ರೂಪಾಯಿಗಳ ಬೊಂಬಾಯಿ ಅರ್ಧ ನೋಟುಗಳು ಗೈರ್ವಿಲೆಯಾಗಿವೆ. ಇವನ್ನು ಯಾರಾದರೂ ತಂದುಕೊಟ್ಟಲ್ಲಿ 100ಕ್ಕೆ 10 ರೂ. ನಂತೆ ಬಹುಮಾನ ಕೊಡಲ್ಪಡುವುದು.

1. 58643 ನೇ ನಂ. 100 ರೂ.ನ ಅರ್ಧನೋಟು.
2. 58644 ,, ಡಿಟೊ
3. 58645 ,, ಡಿಟೊ

ಒಳದೇಶದ ವೃತ್ತಾಂತಗಳು.

ಮುನ್ಸೀಫ್ ಮ|| ಕೆ. ವೀರಬಸವಯ್ಯನವರು ೫ ನೆ ತರಗತಿಯಿಂದ ೪ ನೆ ತರಗತಿಗೆ ಹೆಚ್ಚಿಸಲ್ಪಟ್ಟಿದ್ದಾರೆ.

ವಸ್ತುಪ್ರದರ್ಶನಶಾಲೆಯು ೧ ನೆ ತಾರೀಖಿನಿಂದ ತೆರೆಯಲ್ಪಟ್ಟಿದೆ. ಆಡಂಬರಗಳೂ ವಸ್ತುಸಂಖ್ಯೆಗಳೂ ಕಡಿಮೆ.

ಸಹಕಾರ ಸಂಘಗಳ ವಾರ್ಷಿಕಾಧಿವೇಶನವು ಕಳೆದ ಗುರುವಾರ ಮಧ್ಯಾಹ್ನ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಟ್ಟಿತು. ಮ|| ದೇವಧಾರ್‌ರವರು ಅಧ್ಯಕ್ಷರಾಗಿ ತಮ್ಮ ಭಾಷಣವನ್ನು ಆಂಗ್ಲಭಾಷೆಯಲ್ಲಿ ಮಾಡಿದರು. ಸಭಾಕಾರ್ಯಗಳು ೩ ದಿನಗಳವರೆಗೆ ನಡೆದು ಮುಗಿದುವು.

ಮೈಸೂರು ವಿದ್ಯಾಭ್ಯಾಸ ಸಂಸ್ಕರಣ ವಿಷಯವಾಗಿ ಪ್ರಕಟಿತವಾಗಿರುವ ಮೆಮೋರಾಂಡಮ್ಮಿನಮೇಲೆ ಪ್ರಜೆಗಳು ಕೊಡಬಹುದಾದ ಅಭಿಪ್ರಾಯವನ್ನು ತಿಳಿಯಿಸುವ ಗಡುವನ್ನು ಈ ವರ್ಷದ ಡಿಸೆಂಬರ್ ಕಡೆಯವರೆಗೂ ಸರ್ಕಾರದವರು ಹೆಚ್ಚಿಸಿಕೊಟ್ಟಿರುತ್ತಾರೆ.

ಕಳೆದವಾರ ರಾಜಧಾನಿಯಲ್ಲೂ ಈ ದಕ್ಷಿಣಪ್ರಾಂತದಲ್ಲೂ ಮಳೆಯು ಕಡಿಮೆ. ಬೆಂಗಳೂರು ಪಟ್ಟಣದಲ್ಲಿ ಕಳೆದವಾರವೂ ಸಮೃದ್ಧವಾಗಿ ಮಳೆಯಾಗಿದೆ. ರಾಜಧಾನಿಯಲ್ಲಿ ಜೋಳದ ಬೆಲೆಯು ಪಲ್ಲಾ ೧ ಕ್ಕೆ ೧೦-೧೦|| ರೂ. ನಂತೆ ಆಗಿದೆ. ನಿಂತಿರುವ ಪೈರುಗಳೆಲ್ಲಾ ಚೆನ್ನಾಗಿವೆ.

ಮ|| ಕೆ. ಆರ್. ಕೃಷ್ಣಸ್ವಾಮಯ್ಯಂಗಾರ್ ಎಂ. ಎ. ಬಿ. ಎಲ್. ರವರು ಅಸಿಸ್ಟೆಂಟ್ ಕಂಟ್ರೋಲರ್ ಕೆಲಸದಿಂದ ಚೀಫ್ ಕಮ್ಯಾಂಡೆಂಟರ ಟೆಂಪರರಿ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುವುದರಿಂದ ಅವರ ಸ್ಥಲಕ್ಕೆ ಇದುವರೆಗೆ ಚೀಫ್ ಕಮ್ಯಾಂಡೆಂಟರ ಅಸಿಸ್ಟೆಂಟರಾಗಿದ್ದ ಮ|| ಎಚ್ ಕೃಷ್ಣಸ್ವಾಮಿರಾವ್ ಬಿ. ಎ. ಬಿ. ಎಲ್ ರವರು ನಿಯಮಿಸಲ್ಪಟ್ಟಿದ್ದಾರೆ.

ಬೀರೂರಿನಲ್ಲೇ ೯ ನೆ ವೀರಶೈವ ಮಹಾಸಭೆಯನ್ನು ನಡೆಯಿಸಲು ಏರ್ಪಾಡು ಜರುಗಿಹೋಗಿದೆಯೆಂಬುದಾಗಿ ಬೀರೂರಿನ ಸತ್ಕಾರಕ ಸಂಘದವರೂ ಧಾರವಾಡದಿಂದ ಸ್ಟಾಂಡಿಂಗ್ ಕಮಿಟಿ ಚೇರ್ಮನ್ನರೂ ಬರೆದು ತಿಳಿಯಿಸಿರುವುದರಿಂದ, ರಾಜಧಾನಿಯಲ್ಲಿ ಅದನ್ನು ನೆರೆಯಿಸಬೇಕೆಂದಿದ್ದ ಉದ್ದೇಶವನ್ನು ಇಲ್ಲಿಯ ವೀರಶೈವ ಮಹಾಜನರು ಅತ್ಯಂತ ವಿಷಾದದಿಂದ ವಿರಮಿಸಿಕೊಳ್ಳಬೇಕಾಗಿ ಬಂದಿತು.

ಮಹಾನವಮಿ ಮಹೋತ್ಸವದ ನೋಟಕ್ಕೆ ಈಸಲ ಬಹಳ ಜನರು ಬಂದಿರುತ್ತಾರೆ. ಕಾಲಸ್ಥಿತಿಯು ಸುಮುಖವಾಗಿಯೂ ರೋಗಾದಿಗಳ ಹಾವಳಿಯಿಲ್ಲದೆಯೂ ಇರುವುದೇ ಜನರು ಇಷ್ಟುಮಟ್ಟಿಗೆ ಸೇರುವುದಕ್ಕೆ ಅವಕಾಶವಾಗಿದೆ. ನಿನ್ನೆಯದಿನ ಪದ್ಧತಿಯಂತೆ ವಿಜಯದಶಮಿ ಮಹೋತ್ಸವವು ನೇತ್ರಾನಂದಕರವಾಗಿ ಜರುಗಿತು. ಮಳೆಯು ಕಳೆದವಾರವೆಲ್ಲಾ ವಿಶ್ರಾಂತಿ ತೆಗೆದುಕೊಂಡಿದ್ದುದರಿಂದ ಪರಸ್ಥಳಿಕರಿಗೆ ಬಹಳ ಸಹಾಯವಾಯಿತು.

ನಿಯಮನಿರ್ಮಾಣಸಭೆಗೆ ಎರಡೆರಡು ಡಿಸ್ಟ್ರಿಕ್ಟುಗಳಿಗೆ ಒಬ್ಬೊಬ್ಬರಂತೆ ನಾಲ್ವರು ಪ್ರಜಾಪ್ರತಿನಿಧಿಗಳು ಆರಿಸಲ್ಪಡುವ ಪದ್ಧತಿಯಿದ್ದಿತಷ್ಟೆ. ಅದನ್ನು ತಪ್ಪಿಸಿ ಡಿಸ್ಟ್ರಿಕ್ಟಿಗೊಬ್ಬೊಬ್ಬರಂತೆ ೮ ಜನರನ್ನು ಆರಿಸಿ ಕಳುಹಿಸುವಹಾಗೆ ಏರ್ಪಡಿಸಿಕೊಡಬೇಕೆಂದು ಪ್ರಜಾಪ್ರತಿನಿಧಿಗಳು ಪ್ರಾರ್ಥನೆಮಾಡಿಕೊಂಡಿದ್ದರು. ಸರ್ಕಾರದವರು ಅವರಿಷ್ಟದಂತೆಯೇ ಈಸಲದಿಂದ ನಡೆಯಿಸಲು ಅಪ್ಪಣೆಮಾಡಿದ್ದಾರೆ. ಅಲ್ಲದೆ ಪ್ರಜಾಪ್ರತಿನಿಧಿಸಭೆಯಿಂದಲೂ ಎಂದಿನಂತೆ ನಾಲ್ವರು ಆರಿಸಲ್ಪಡುವವರಾಗಿದ್ದಾರೆ.

ರಾಜಧಾನಿಯ ಶ್ರೀಮಂತ ಪೋತೀಖಾನೆ ಅನಂತರಾಜಯ್ಯನವರಿಗೆ ಈಸಲದ ದರ್ಬಾರಿನಲ್ಲಿ ಖಾಸಾ ಹೂವಿನ ಹಾರದ ಮರ್ಯಾದೆಯು ಶ್ರೀಮನ್ಮಹಾರಾಜರವರಿಂದ ದಯಪಾಲಿಸಲ್ಪಟ್ಟಿತೆಂದು ತಿಳಿಯಿಸಲು ಸಂತೋಷಿಸುತ್ತೇವೆ. ಈ ಶ್ರೀಮಂತರು ಕಳೆದ ೨೦ ವರ್ಷಗಳಿಂದಲೂ ಮ್ಯುನ್ಸಿಪಲ್ ಕೌನ್ಸಿಲರಾಗಿಯೂ ಟ್ರಸ್ಟ್‌ಬೋರ್ಡು ಹುಟ್ಟಿದಾರಭ್ಯ ಅದರ ಮೆಂಬರಾಗಿಯೂಇದ್ದುಕೊಂಡು ಈ ನಗರವಾಸಿಗಳಿಗೆ ತಮ್ಮ ಕೈಲಾದಮಟ್ಟಿಗೂ ಉಪಕಾರವನ್ನು ಮಾಡುತ್ತ ಅವರುಗಳ ಅನುರಾಗಕ್ಕೂ ಕೃತಜ್ಞತೆಗೂ ಪಾತ್ರರಾಗಿರುತ್ತಾರೆ.

ಕಳ್ಳ ನೋಟುಗಳನ್ನು ನಿರ್ಮಿಸುತ್ತಿದ್ದ ಅಪರಾಧಕ್ಕೆ ಗುರಿಯಾಗಿ ಮೈಸೂರು ಸೆಷನ್ ಕೋರ್ಟಿನಲ್ಲಿ ವಿಚಾರಣೆಗೊಳಪಟ್ಟಿದ್ದ ಅಪರಾಧಿಗಳಲ್ಲಿ ೧ ನೆ ಅಪರಾಧಿ ನಾರಾಯಣಶಾಸ್ತ್ರಿಗೆ ೩ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆ ೭೫ ರೂ. ಅರ್ಥದಂಡ; ೨ ನೆ ಅಪರಾಧಿ ಕೃಷ್ಣಪ್ಪನಿಗೆ ೫ ವರ್ಷ ಕಠಿನ ಕಾರಾಗೃಹವಾಸಶಿಕ್ಷೆ ೧೦೦ ರೂ. ಅರ್ಥದಂಡ; ೩ ನೆ ಅಪರಾಧಿ ಹೊನ್ನಾಚಾರಿಗೆ ೫ ವರ್ಷ ಕಠಿನ ಕಾರಾಗೃಹವಾಸ ಶಿಕ್ಷೆ ೧೦೦ ರೂ. ಅರ್ಥದಂಡ; ೪ ನೆ ಅಪರಾಧಿ ಗಂಗಾಚಾರಿಗೆ ೩ ವರ್ಷ ಕಾರಾಗೃಹವಾಸಶಿಕ್ಷೆ ೭೫ ರೂ. ಅರ್ಥದಂಡ ವಿಧಿಸಲ್ಪಟ್ಟಿತು. ೫ ನೆ ಅಪರಾಧಿ ಲಕ್ಷ್ಮೀನರಸಪ್ಪ ೬ ನೆ ಅಪರಾಧಿ ಅಪ್ರೂವರ್ ಪುಟ್ಟಶಾಮಾಚಾರಿ ಇವರಿಬ್ಬರೂ ಬಿಡಲ್ಪಟ್ಟರು.

ಭರತಖಂಡದ ವೃತ್ತಾಂತಗಳು.

ನಮ್ಮ ಪೂರ್ವದೇಶಗಳಿಗೆ ಕಳುಹಿಸಿಕೊಡುವುದಕ್ಕಾಗಿ ಅಮೇರಿಕಾದಲ್ಲಿ ೨೦೦೦೦ ಡಾಲರು ಭಂಗಾರವು ಕೊಳ್ಳಲ್ಪಟ್ಟಿದೆ.

ಭರತಖಂಡದ ಸರ್ಕಾರದವರು ಕಳೆದ ಏಪ್ರಿಲ್ ತಿಂಗಳಿಂದ ಜುಲೈ ಕೊನೆಯವರೆಗೆ ಒಟ್ಟು ೨೨೨೯೦೦೧೧೮ ರೂ. ನಾಣ್ಯಗಳನ್ನು ಮುದ್ರಿಸಿದ್ದಾರೆ.

ಬೊಂಬಾಯಿಯಲ್ಲಿ ಒಂದು ಉಣ್ಣೆಯ ಯಂತ್ರಾಲಯವು ೧ ಕೋಟಿ ರೂಗಳ ಬಂಡವಾಳದಿಂದ ಏರ್ಪಡಿಸಲ್ಪಟ್ಟಿದೆ. ಭಾಗಕ್ಕೆ ೧೦೦ ರೂ.ಗಳ ಪ್ರಕಾರ ೧ ಲಕ್ಷ ಭಾಗಗಳು ಏರ್ಪಟ್ಟಿರಲಾಗಿ, ಅದಕ್ಕಿಂತ ಹೆಚ್ಚಾಗಿಯೇ ಷೇರುಗಳ ಮಾರಾಟವಾಯಿತು.

ಕೀರ್ತಿಶೇಷರಾದ ಡಾಕ್ಟರ್ ನಾಯರ್‌ರವರ ಸ್ಮಾರಕ ಚಿಹ್ನವನ್ನೇರ್ಪಡಿಸಬೇಕೆಂದು ಮದ್ರಾಸಿನ ಜನರು ನಿರ್ಧರಿಸಿ ಒಂದು ಫಂಡನ್ನು ಕೂಡಿಸುತ್ತಿದ್ದಾರೆ. ಅದಕ್ಕೆ ಇದುವರೆಗೆ ೫೬೪೪ ರೂ.ಗಳು ಸೇರಿರುತ್ತವೆ. ಮದ್ರಾಸಿನ ಗುರುಬಸವ ಅಂಡ್ ಕಂಪೆನಿಯವರು ಇದಕ್ಕೆ ೨೫೧ ರೂ.ಗಳನ್ನು ಕೊಟ್ಟಿರುತ್ತಾರೆ.

ಕಲ್ಕತ್ತಾದಲ್ಲಿರುವ ಗೋಣಿನಾರಿನ ಯಂತ್ರಾಲಯಗಳ ಯಜಮಾನರುಗಳಿಗೆ ಯುದ್ಧಕಾಲದಲ್ಲಿ ವಿಪರೀತವಾದ ಲಾಭವು ಬಂದಿತು. ಯುದ್ಧ ನಿಂತಮೇಲೆ ಲಾಭವು ಕಡಿಮೆಯಾಗುವುದೆಂದು ಅನೇಕರು ಯೋಚಿಸುತ್ತಿದ್ದರು. ಆದರೆ ಕಳೆದ ೬ ತಿಂಗಳಲ್ಲಿ ಬಂದಿರುವ ಲಾಭವು ಹಿಂದಣ ೨ ವರ್ಷಗಳ ೬ ತಿಂಗಳ ಕಾಲದಲ್ಲಿ ಆಗುತ್ತಿದ್ದ ಲಾಭಕ್ಕಿಂತಲೂ ಮಿಗಿಲಾಗಿ ಬಂದಿರುವುದೆಂದು ಪ್ರಕಟವಾಗಿದೆ.

ನಮ್ಮ ಭರತಖಂಡದಲ್ಲಿ ೧೯೧೭ ನೆ ವರ್ಷದಲ್ಲಿ ಎಲ್ಲ ಗಣಿಗಳಿಂದಲೂ ೨೨೪೯೧ ಔನ್ಸುಗಳ ಭಂಗಾರವು ಉತ್ಪನ್ನವಾಗಿದ್ದಿತು. ೧೯೧೮ ರಲ್ಲಾದರೋ ಅದರಲ್ಲಿ ಸೇಕಡಾ ೧೩ ರಷ್ಟು ಕಡಿಮೆಯಾಗಿ ಉತ್ಪನ್ನವಾಯಿತು. ನಮ್ಮ ದೇಶದಲ್ಲಿ ವಜ್ರಗಳ ಉತ್ಪತ್ತಿಯು ಹಾಗೆಯೇ ಕಳೆದ ವರ್ಷ ಕಡಿಮೆಯಾಗಿದೆ. ಮೊನ್ನೆ ವರ್ಷದಲ್ಲಿ ೧೯೮೨೦೦೦ ಕ್ಯಾರಟ್ಟಿನಷ್ಟು ಉತ್ಪನ್ನವಾಗಿದ್ದುದಕ್ಕೆ ಕಳೆದ ವರ್ಷದಲ್ಲಿ ೧೬೪೧೧೫ ಕ್ಯಾರಟ್ಟುಗಳಷ್ಟು ಉತ್ಪನ್ನವಾಗಿವೆ.

ಉತ್ತಮವಾದ ೧೭೦೩ ನೆ ನಂಬರ್ ಮಲ್‌ಬಟ್ಟೆಯು ಭರತಖಂಡಕ್ಕೆ ಗ್ಲಾಸ್ಗೋ ಪಟ್ಟಣದಿಂದ ಬರುತ್ತಿದ್ದಿತು. ಅದು ಕಳೆದ ೫ ವರ್ಷಗಳಿಂದಲೂ ಭರತಖಂಡಕ್ಕೆ ಎಲ್ಲೋ ಸ್ವಲ್ಪವಾಗಿ ಬರುತ್ತಿದ್ದುದರಿಂದ, ಅದರ ಬೆಲೆಯು ಥಾನು ೧ಕ್ಕೆ ೨೦ ರೂ.ನ ವರೆಗೂ ಹೆಚ್ಚಿಹೋಗಿದ್ದಿತು. ಈಗ ಗ್ಲಾಸ್ಗೋವಿನಿಂದ ಒಂದು ಹಡಗಿನಲ್ಲಿ ಕಲ್ಕತ್ತಾಪಟ್ಟಣಕ್ಕೆ ೪೦೪೫ ಬೇಲುಗಳ ಮಲ್‌ಬಟ್ಟೆಯು ಬಂದಿಳಿದಿರುತ್ತದೆ. ಇನ್ನುಮೇಲೆ ಇದರಬೆಲೆಯು ಇಳಿಮುಹೋಗಬಹುದು.

ಒಂದು ಆಂಗ್ಲ ವ್ಯಾಪಾರ ಸಂಘದವರು ನಮ್ಮ ದೇಶದಲ್ಲಿ ಹಡಗುಗಳನ್ನು ಕಟ್ಟಿಸುವುದಕ್ಕಾಗಿ ಕಲ್ಕತ್ತಾದ ಸಮೀಪದೊಳಗೆ ಒಂದು ಕರ್ಮಾಗಾರವನ್ನು ಸ್ಥಾಪಿಸುವವರಾಗಿದ್ದಾರೆ. ಹಡಗುಗಳ ನಿರ್ಮಾಣಕ್ಕೆ ಬೇಕಾದ ಉಪಕರಣ ಸಾಮಗ್ರಿಗಳ ನಿರ್ಮಾಣಕ್ಕಾಗಿ ತಾತಾರವರ ಉಕ್ಕಿನ ಯಂತ್ರಾಲಯದ ಬಳಿಯಲ್ಲೇ ಇವರೂ ಒಂದು ಕರ್ಮಾಗಾರವನ್ನು ಸ್ಥಾಪಿಸುವವರಾಗಿದ್ದಾರೆ. ಈ ಸ್ಥಾಪನೆಗಳಿಗಾಗಿ ಇವರು ೪೫ ಕೋಟಿ ರೂ.ಗಳ ಮೂಲಧನವನ್ನು ಹಾಕುತ್ತಾರೆ.

ಸಿಂಗಪೂರಿನಲ್ಲಿ ಸವರನ್ನು ೧ ಕ್ಕೆ ೧೫ ರೂ. ಬೆಲೆಯಂತೆ ಮಾರಲ್ಪಡುತ್ತಿದೆ. ಅಲ್ಲಿಗೆ ಹೋದ ಕೆಲವರ್ತಕರು ಅನೇಕಾನೇಕ ಸವರನ್ನುಗಳನ್ನು ಆ ಬೆಲೆಗೆ ಕೊಂಡು ಭರತಖಂಡಕ್ಕೆ ಬಂದು ೧೭-೧೮ ರೂ.ಗಳಿಗಿಂತಲೂ ಹೆಚ್ಚಿನ ಬೆಲೆಗೆ ಅದೇ ಸವರನ್ನುಗಳನ್ನು ಮಾರುತ್ತಿದ್ದರು. ಈ ವಿಷಯವು ಪುದುಚೇರಿಯಲ್ಲಿರುವ ಫ್ರೆಂಚ್ ಪ್ರಭುತ್ವದವರಿಗೆ ತಿಳಿಯಲು, ಅಲ್ಲಿಗೆ ಸಿಂಗಪೂರಿನಿಂದ ಬಂದ ಒಂದು ಹಡಗನ್ನು ಪರಿಶೋಧನೆ ಮಾಡಿಸಲಾಗಿ, ಅದರಲ್ಲಿದ್ದ ವರ್ತಕರ ಬಳಿಯಲ್ಲಿ ೪-೫ ಸಾವಿರ ಸವರನ್ನುಗಳು ದೊರೆದುವು. ಅವರು ಅವುಗಳಿಗೆಲ್ಲಾ ತಮ್ಮ ಫ್ರಾನ್ಸ್ ಪ್ರಭುತ್ವದ ಬೆಲೆಯ ಪ್ರಕಾರ ಎಂದರೆ ಸವರನ್ನು ೧ ಕ್ಕೆ ೧೧|| ರೂ.ನ ಪ್ರಕಾರ ಹಣಕೊಟ್ಟು ಬಲವಂತವಾಗಿ ತೆಗೆದುಕೊಂಡು ಬಿಟ್ಟರು.

ನಮ್ಮ ಭರತಖಂಡದಿಂದ ಫ್ರಾನ್ಸು ಮೊದಲಾದ ಕಡೆಗೆ ನೆಲಗಡಲೆಕಾಯಿಯು ವಿಶೇಷವಾಗಿ ಸಾಗಿಹೋಗುತ್ತದೆ. ಆದರೆ ಅವನ್ನು ಬಿಡಿದೋ ಉಜ್ಜಿಯೋ ಸಿಪ್ಪೆಯನ್ನು ತೆಗೆದ ಬೀಜಗಳನ್ನು ಕಳುಹಿಸಿಕೊಡುವುದರಿಂದ ಅವು ಸಾಗಿ ಸ್ಥಲವನ್ನು ಸೇರುವುದರೊಳಗೆ ಕೆಟ್ಟುಹೋಗುತ್ತಿರುವುದರಿಂದ ವಿದೇಶಗಳವರು ಈ ಬೀಜಗಳನ್ನು ಆಹಾರ್ಯವಸ್ತುಗಳಿಗಾಗಿ ಉಪಯೋಗಿಸಿಕೊಳ್ಳದೆ ಸಾಬೂನುಗಳನ್ನು ಮಾಡುವುದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರಿಂದ ಅದರ ಬೆಲೆಯು ಕಡಿಮೆಯಾಗಿ ಹೋಗುತ್ತಿದೆ. ಸಿಪ್ಪೆಯನ್ನು ಯಂತ್ರಗಳಿಂದ ಬಿಡಿಸಿ ನಲುಗದಿರುವಂತೆ ಬೀಜಗಳನ್ನು ಬೇರ್ಪಡಿಸಿ ಕಳುಹಿಸಿಕೊಟ್ಟರೆ ಬೆಲೆಯು ಹೆಚ್ಚಾಗಿ ಬರುವುದಂತೆ. ಅದುಕಾರಣ ಈಗ ಅದಕ್ಕೆ ತಕ್ಕಯಂತ್ರವನ್ನು ಕಂಡುಹಿಡಿದಿದ್ದಾರೆ. ಇನ್ನು ಮೇಲೆ ಮದ್ರಾಸಾಧಿಪತ್ಯದ ಅನೇಕ ಜಿಲ್ಲೆಗಳಲ್ಲಿ ಅವುಗಳನ್ನುಪಯೋಗಿಸಲು ಯೋಚಿಸಿದ್ದಾರೆ.

ಮದ್ರಾಸು ಪಟ್ಟಣದಲ್ಲಿ ಕಂಟ್ರಾಕ್ಟರ್ ಅಪ್ಪಾದೊರೆ ಮೊದಲಿಯಾರ್ ಎಂಬುವನು ಅಲ್ಲಿನ ನೇಪಿಯರ್‌ಪಾರ್ಕಿನಲ್ಲಿ ವಾಸವಾಗಿರುವ ಕರ್ರಿ ಎಂಬ ಆಂಗ್ಲಮನುಷ್ಯರ ಪತ್ನಿಯನ್ನು ಗಾಳಿ ಸ್ವಾರಿಗಾಗಿ ತಮ್ಮ ಮೊಟಾರಿನಲ್ಲಿ ಕುಳ್ಳಿರಿಸಿಕೊಂಡು ಹೋಗಿ, ಇಬ್ಬರೂ ಚೆನ್ನಾಗಿ ಕುಡಿದು ರಾತ್ರಿ ೧೧ ಗಂಟೆಗೆ ಮನೆಬಳಿಗೆ ಬರಲು, ಗಂಡನು ತನ್ನ ಪತ್ನಿಗೆ ಆಗಿರುವ ಅವಸ್ಥೆಯನ್ನು ನೋಡಿ ಕೋಪಿಸಿಕೊಳ್ಳಲಾಗಿ, ಆಕೆ ಥಟ್ಟನೆ ಮನೆಯನ್ನು ಬಿಟ್ಟು ಮೊದಲಿಯಾರರ ಬಂಡಿಯಲ್ಲೇ ಕುಳಿತಳು. ಗಂಡನು ಹಿಡಿದೆಳೆಯುತ್ತಿರಲು ಮೊದಲಿಯಾರರು ಒರಟುತನದಿಂದ ಬಿಡಿಸಿ ಒಡನೆಯೇ ಆಕೆಯನ್ನೂ ಕರೆದುಕೊಂಡುಹೋದರಂತೆ. ಈಗ ತನ್ನ ದೊರೆಸಾನಿಯು ೪ ಸಾವಿರ ರೂ.ಗಳ ನಗಗಳ ಪೆಟ್ಟಿಗೆಯನ್ನು ಮೊದಲಿಯಾರರ ವಶಪಡಿಸಿರುವಳೆಂದು ಆಕೆಯ ಗಂಡನು ವ್ಯಾಜ್ಯವನ್ನು ಹೂಡಿರುವನು. ಮದ್ರಾಸು ರೈಲ್ವೆಯಲ್ಲಿ ಗಾರ್ಡಾಗಿರುವ ರಾಬರ್ಟ್ಸ್ ಎಂಬ ಆಂಗ್ಲಮನುಷ್ಯನ ಪತ್ನಿಯು ಅದೇ ಕಂಪೆನಿಯ ಕೆಲಸದಲ್ಲಿರುವ ಮಹಮ್ಮದ್ ಇಸ್ಮಾಯಿಲ್ ಎಂಬುವವನೊಡನೆ ವ್ಯಭಿಚರಿಸುತ್ತಿರುವಳೆಂದೂ ಅದುಕಾರಣ ಅವಳ ವಿವಾಹಸಂಬಂಧವನ್ನು ತನಗೆ ತಪ್ಪಿಸಿಕೊಡಬೇಕೆಂದೂ, ನಷ್ಟಕ್ಕಾಗಿ ಆತನಿಂದ ೫೦೦೦ ರೂ.ಗಳನ್ನು ಕೊಡಿಸಿಕೊಡಬೇಕೆಂದೂ ಗಂಡನು ವ್ಯಾಜ್ಯಹೂಡಿ, ವಿಚಾರಣೆಯ ಕಾಲದಲ್ಲಿ ಹಣದ ಮಾತನ್ನು ಹಿಂದೆಗೆದುಕೊಂಡು ಸಂಬಂಧಪರಿತ್ಯಾಗವನ್ನು ಮಾಡಿಸಿಕೊಂಡನು. ಹೆಂಗುಸರಿಗೆ ಪಾಶ್ಚಾತ್ಯರಂತೆ ಸ್ವಾತಂತ್ರ್ಯವನ್ನುಕೊಡಬೇಕೆಂದು ಬಡಿದುಕೊಳ್ಳುವ ಪರಮ ಕೃಪಾಳುಗಳು ಈ ಚರಿತ್ರೆಗಳನ್ನು ನೋಡಿ ತೃಪ್ತಿಪಡಬೇಕು.

ಪತ್ರವ್ಯವಹಾರ.

೯ ನೇಯ ವೀರಶೈವ ಮಹಾಸಭೆ.

ಬೀರೂರಿನ ವೀರಶೈವ ಮಹಾಜನಗಳು ತಮ್ಮಲ್ಲಿ ಈ ಸಾರೆ ೯ ನೇಯ ಶ್ರೀಮದ್ವೀರಶೈವ ಮಹಾಸಭೆಯನ್ನು ಕೂಡಿಸಲು ನಿರ್ಧರಿಸಿರುವರೆಂಬ ಸಂಗತಿಯು ಸಂತೋಷಕರವಾದದ್ದೇ ಸರಿ. ಆದರೆ ಈ ಮಹಾಸಭೆಗೆ ನಮ್ಮ ಸಮಾಜದ ಮುಖಂಡರಾದ ಶ್ರೀಮಂತ ಶಿವಲಿಂಗರಾವ್ ಜಗದೇವರಾವ್ ದೇಶಮುಖ ಆಲನೋಲರವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಈ ಮುಂಚೆ ಇವರು ತೀರ್ಮಾನಿಸಿದ್ದನ್ನು ಈಗ ಬಿಟ್ಟು ಹೊಸದಾಗಿ ಬೇರೆಯವರನ್ನು ಆರಿಸುವರೆಂಬ ಸಮಾಚಾರವುಮಾತ್ರ ವಿಷಾದಕರವಾದುದ್ದಾಗಿದೆ. ಆದುದರಿಂದ ಬೀರೂರಿನ ಮಹಾ ಜನಗಳು ಆ ರೀತಿ ಮಾಡಬಾರದಾಗಿಯೂ, ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರರು ಶ್ರೀಮಂತ ಆಲನೋಲ್ ದೇಶಮುಖರವರನ್ನೇ ೯ ನೇಯ ಮಹಾಸಭೆಗೆ ಅಧ್ಯಕ್ಷರನ್ನಾಗಿ ಆರಿಸಬೇಕಾಗಿಯೂ ಕೋರಿಕೆ,

-ಸಮಾಜ ಹಿತೈಷಿ.

ಸಂಪದಭ್ಯುದಯದ ಬೊಬ್ಬೆ.

ಸ್ವಾಮಿಾ,

ತಾ|| ೨೯-೯-೧೯ ನೆ ಸಂಪದಭ್ಯುದಯ ಪತ್ರಿಕೆಯಲ್ಲಿ ಬಂದಿರುವ ಒಂದು ಲೇಖನದಲ್ಲಿ - ಬ್ಯಾಕ್‌ವರ್ಡ್ ಮತ್ತೂ ಡಿಪ್ರೆಸ್ಡ್ ಸ್ಕಾಲರ್ಷಿಪ್ಪುಗಳು ಎಲ್ಲಾಜಾತಿಯವರಿಗೂ ಕೊಟ್ಟು ಬ್ರಾಹ್ಮಣರಿಗೆ ಮಾತ್ರ ಕೊಡುವುದಿಲ್ಲವೆಂದು ಒಬ್ಬ ಅಜ್ಞಾತಕುಲಗೋತ್ರನು ಹೇಳಿದ ಮಾತ್ರದಿಂದಲೇ ಮತದ್ವೇಷದಿಂದಲೂ ಉನ್ಮತ್ತತೆಯಿಂದಲೂ, ಮಾಡಲ್ಪಟ್ಟ ಪಬ್ಲಿಕ್ ಫಂಡಿಗೆ ಯಾವ್ಯಾವ ದ್ರವ್ಯವನ್ನು ಒದಗಿಸುವರೋ ಅವರೆಲ್ಲರೂ ಅದರ ಪ್ರಯೋಜನಕ್ಕೆ ಪಾತ್ರರಲ್ಲವೆ ? ಲೋಕದಲ್ಲಿರುವ ಎಲ್ಲಾ ಪಂಗಡದವರೂ ಪಬ್ಲಿಕ್ ಫಂಡಿಗೆ ಪಾತ್ರರೆಂಬದಾಗಿಯೂ, ಬ್ರಾಹ್ಮಣರು ಮಾತ್ರ ಅಪಾತ್ರರೆಂಬದಾಗಿಯೂ ವಿವೇಕವಿಲ್ಲದೆ ಯಾರಾದರೂ ಹೇಳಬಹುದೆ ? ಹಾಗೆ ಮಾಡಿದರೆ ಅವರಿಗೆ ಸರ್ವ ಸಮದೃಷ್ಟಿಯುಳ್ಳವರು ಎಂಬ ಬಿರುದು ಸಲ್ಲುವದೆ ? ಆ ಬಿರುದನ್ನು ಆಳಿದುಕೊಂಡ ದೇಶದಲ್ಲಿ ಸತ್ಯವೂ ಧರ್ಮವೂ ಇರುವುದೆ ? ಇಂಥಾ ದೇಶಗಳಲ್ಲಿ ಇರುವುದಕ್ಕಿಂತ ಗಡೀಪಾರೂ ವನವಾಸವೂ ಮೇಲೆಂದು ಭಾವಿಸಲ್ಪಡುವುದಕ್ಕೆ ಅವಕಾಶವಾಗುವುದಿಲ್ಲವೆ ? ಹೀಗೆ ಮಾಡಿದವರ ಮೇಲೆ ಡ್ಯಾಮೇಜ್‌ಸೂಟು ಇರುವುದಿಲ್ಲವೆ ? ಎಂದು ನಮೂದಿಸಲ್ಪಟ್ಟಿದೆ. ಇದರಿಂದ ವಿದ್ಯಾಭ್ಯಾಸದ ಫಂಡಿಗೆ ದೇಶದ ಎಲ್ಲಾ ಪ್ರಜೆಗಳೂ ಕೊಟ್ಟ ಕಂದಾಯವು ಸೇರಿರುವಾಗ ಅಂಥ ಹಣದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಸ್ಕಾಲರ್ಷಿಪ್ಪಿಗೆಂದು ಸ್ವಲ್ಪ ಭಾಗವನ್ನು ಬೇರೆ ತೆಗೆದುಕೊಟ್ಟು, ಅದನ್ನು ಬ್ರಾಹ್ಮಣ ವರ್ಗದ ವಿದ್ಯಾರ್ಥಿಗಳಿಗೆ ಕೊಡದಿರುವುದು ಅನ್ಯಾಯವೆಂದೂ, ಹಾಗೆ ಮಾಡಿರುವವರು ಅಜ್ಞಾತಕುಲಗೋತ್ರರೆಂದೂ ಸ್ಪೆಷಲ್ ಬೋರ್ಡಿಂಗ್ ಸ್ಕೂಲುಗಳನ್ನು ಕೆಲವರಿಗೆಮಾತ್ರ ಮಾಡಿರುವುದು ಅನ್ಯಾಯವೆಂದೂ, ಹೀಗೆ ಮಾಡಿರುವ ದೇಶದಲ್ಲಿಸತ್ಯವೂ ಧರ್ಮವೂ ಇಲ್ಲವೆಂದೂ, ಈ ದೇಶದಲ್ಲಿರುವುದಕ್ಕಿಂತ ಗಡೀಪಾರಾಗಿ ಹೋಗುವುದು ಲೇಸೆಂದೂ ಈ ಲೇಖಕರು ಅಭಿಪ್ರಾಯಪಟ್ಟಂತಾಯಿತು. ಇದರಮೇಲೆ ಇನ್ನೂ ಏನೇನನ್ನೋ ಬರೆದುಕೊಂಡಿದ್ದಾರೆ. ಸಂಸ್ಥಾನದ ಉತ್ಪತ್ತಿಯಲ್ಲಿ ಮುಕ್ಕಾಲು ಪಾಲೆಲ್ಲಾ ನಾನಾರೀತಿಯಲ್ಲಿ ಬ್ರಾಹ್ಮಣ ವರ್ಗದವರ ಜೋಬಿಗೇ ತುಂಬುತ್ತಿದ್ದರೂ, ಬ್ರಿಟಿಷರಿಗೆ ಭರ್ತಿಯಾಗುವ ಹಣದ ಬಹುಭಾಗಕ್ಕೆಲ್ಲಾ ಮೂಲಭೂತ ರಾಗಿರುವ ೫೮ ಲಕ್ಷ ಪ್ರಜೆಗಳು ಅವಿದ್ಯಾಕೂಪದಲ್ಲಿಬಿದ್ದು ನರಳುತ್ತಿರುವಾಗ, ಅವರಿಗೆ ವಿದ್ಯಾದಾನ ಮಾಡಬೇಕೆಂದು ಪ್ರೋತ್ಸಾಹಪಡಿಸುವುದಕ್ಕೋಸ್ಕರ ವರ್ಷಕ್ಕೆ ೧-೧|| ಲಕ್ಷದಷ್ಟನ್ನು ಪ್ರತ್ಯೇಕವಾಗಿ ಪ್ರಭುತ್ವದವರು ಕೊಟ್ಟ ಮಾತ್ರಕ್ಕೇ ಅದನ್ನು ನೋಡಿ ಸೈರಿಸಲಾರದೆ ಇಷ್ಟು ಬಾಯ್ಬಿಡುಕೊಳ್ಳತಕ್ಕವರನ್ನು ಎಷ್ಟು ದಯಾವಂತರೆಂದು ಹೇಳಬಹುದು ! ಇವರು " ಸರ್ವೇಜನಾಸ್ಸುಖಿನೋಭವಂತು " ಎಂದು ಕೋರತಕ್ಕವರೊ ? " ಸರ್ವೇಜನಾವಿನಶ್ಯಂತು ಭವಾಮುಸ್ತುಸುಖಿನೋವಯಂ " ಎಂದು ಕೋರತಕ್ಕವರೋ ? ವಾಚಕರೇ ಯೋಚಿಸಬೇಕು. ಈ ಬ್ಯಾಕ್‌ವರ್ಡ್ ಕ್ಲಾಸ್ ಸ್ಕಾಲರ್ಷಿಪ್ ಕೊಡಿಸುವಲ್ಲಿ ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಅವರ ಸರ್ಕಾರದವರೂ ನಿಯಮ ನಿರ್ಮಾಣಸಭೆಯ ಕೆಲ ಸಭಿಕರೂ ಸಂಪದಭ್ಯುದಯ ಸಮಾಜದ ಕೆಲ ಸಭಿಕರೂ ಸಹ ತೋರಿಸಿದ ದಯೆಯೂ ನ್ಯಾಯದೃಷ್ಟಿಯೂ ಕಾರಣಗಳಾಗಿರುತ್ತವೆ. ಹೀಗಿರುವಾಗ ಅವರೆಲ್ಲಾ ಈ ಲೇಖಕರ ದುರ್ವಚನದಂತೆ ಅಜ್ಞಾತ ಕುಲಗೋತ್ರರೇ ಆಗಬೇಕಾಯಿತು. ಅಂಥ ದುರ್ಭಾಷಣೆಗಳನ್ನಾಡತಕ್ಕ ರಾಜದ್ವೇಷಿಗಳು ನಮ್ಮ ಮಧ್ಯದಲ್ಲಿರಬಹುದೆ ? ಇವರು ದೇಶಕಂಟಕರಲ್ಲವೆ ? ಇಂಥ ನರರಾಕ್ಷಸರು ಇರುವ ದೇಶದಲ್ಲಿ ಮಳೆ ಬೆಳೆಗಳು ಸರಿಯಾಗಿ ಆಗುವುದುಂಟೆ ? ಇಂಥವರು ಗಡೀಪಾರಾಗಿ ಹೋದದಿವಸವೇ ದೇಶದಲ್ಲಿ ಶಾಂತಿಯೂ ಸದ್ಧರ್ಮವೂ ಸಕಲ ಪ್ರಜಾಸಮೃದ್ಧಿಯೂ ಉಂಟಾಗುವುವು. ಪ್ರಭುತ್ವದವರು ಹಾಗೆ ಮಾಡಿಸದಿದ್ದರೆ ಕಾಲವಾದರೂ ಹಾಗೆ ಮಾಡಿಯೇ ಮಾಡಿಸುವುದು. ೫೮ ಲಕ್ಷ ಪ್ರಜಾವರ್ಗಗಳ ವಿದ್ಯಾಭಿವೃದ್ಧಿಗಾಗಿ ಮೊನ್ನೆತಾನೇ ಗೌರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುವ ಸ್ವಲ್ಪ ಹಣಕ್ಕಾಗಿ ಕೆಲ ಜನರು ಇಷ್ಟು ಅಸೂಯೆಪಟ್ಟರೆ, ಸಕಲ ಜನರೂ ಕಂದಾಯದ ರೂಪದಲ್ಲಿ ಕೊಟ್ಟ ಹಣದಲ್ಲಿ ವರ್ಷ ೧ ಕ್ಕೆ ೬೫ ಸಾವಿರ ರೂ. ಗಳನ್ನು ನುಂಗುತ್ತಿರುವ ಸಂಸ್ಕೃತ ಪಾಠಶಾಲೆಗಳಲ್ಲಿ ಇತರರ್ಯಾರನ್ನೂ ಸೇರಿಸದೆ ಕೆಲವರುಮಾತ್ರ ಎಷ್ಟೋ ಕಾಲದಿಂದ ಅದರ ಫಲವನ್ನು ಅನುಭವಿಸುತ್ತಿದ್ದಾರಲ್ಲಾ ! ಅದಕ್ಕೇನು ಹೇಳುವರು? ಇದೂ ಪಕ್ಷಪಾತವಲ್ಲವೆ? ಇದರಲ್ಲಿ ಆತ್ಮಲಾಭವಿರುವುದರಿಂದ ಇದು ಈ ಲೇಖಕರಿಗೆ ನ್ಯಾಯಸಮ್ಮತವಾಗಿಯೇ ಇರಬಹುದು. ಸಂಪದಭ್ಯುದಯದಲ್ಲಿ ಇಂಥ ಅಸೂಯೆಯ ಬೊಬ್ಬೆಗಳು ಪದೇಪದೇ ಏಳುತ್ತಿರುವುದರಿಂದಲೇ ನಮ್ಮ ದೇಶದಲ್ಲಿ ಜಾತಿ ಮತದ್ವೇಷಗಳು ಬೆಳೆಯುವುದಕ್ಕೆ ಕಾರಣವಾಗಿದೆ. ಇದನ್ನು ನೋಡಿಕೊಂಡು ಗೌರ್ನಮೆಂಟಿನವರು ಸುಮ್ಮನಿರುವದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಯಥಾರ್ಥವಾದಿ.

ಸ್ಟಾರ್ ಪತ್ರಿಕಾ ಎಡಿಟರವರ ಸ|| ಕ್ಕೆ.

ಕಲಿಕಾಲ ವೈಚಿತ್ರ್ಯ.

ಕಂ|| ಬೆಳಕೆಂದು ನಿನ್ನ ಪುಕ್ಕದೊ |
ಳೊಳವೆನ್ನಿಂ ಮಿಗಿಲೆ ವಿದ್ಯುದಾಭ ಮೆನುತ್ತುಂ ||
ಗಳಹಿದೊಡೆ ಮಿಂಚುಬುಳು ತಾ |
ನಳೆ ಕೈಪ್ರೊಯ್ದಹಹ ಎಂದು ನಗದಿರ್ಪರೆ ಪೇಳ್ ||

ಸ್ವಾಮಿಾ,

ಜಗತ್ತಿಗೇ ದಂಗುಬಡಿಯುವಂತೆ ಎಲೆಕ್ಟ್ರಿಕ್ ದೀಪ ಪ್ರಕಾಶವು ಮೆರೆಯುವದನ್ನು ಕಂಡು ಲೋಕದ ಜನರು ಆಹ್ಲಾದಪಡುತ್ತಿರುವಾಗ, ಹರಳೆಣ್ಣೆಯ ಹೊಂಗೆಯೆಣ್ಣೆಯ ಬೇವಿನೆಣ್ಣೆಯ ಎಳ್ಳೆಣ್ಣೆಯ ದೀಪಗಳೆಲ್ಲಾ ಅಸೂಯೆಪಟ್ಟು ಎಲೆಕ್ಟ್ರಿಕ್ ದೀಪದಮೇಲೆ ದಂಡೆತ್ತಿ ಹೊರಡಲು ಪ್ರಯತ್ನಪಟ್ಟರೆ ಅದು ಅಷ್ಟು ಆಶ್ಚರ್ಯವಾಗಿರಲಾರದು. ಆದರೆ "ನನ್ನ ಪಕ್ಕದಲ್ಲಿ ಯಾವಾಗಲೂ ಬೆಳಕು ಸ್ವಭಾವಸಿದ್ಧವಾಗಿದೆ; ವಿದ್ಯುಚ್ಛಕ್ತಿ ದೀಪವು ಕ್ಷಣಿಕವಾದದ್ದು; ಆದಕಾರಣ ಅದು ನನಗಿಂತ ದೊಡ್ಡದೆ ? " ಎಂದು ಮಿಂಚಿನ ಹುಳುವು ಕೂಗಲಿಕ್ಕೆ ಆರಂಭಿಸಿದರೆ ಜಗತ್ತೆಲ್ಲಾ ಚಪ್ಪಾಳೆಕುಟ್ಟಿ ನಗುವುದಿಲ್ಲವೆ ? ಶ್ರೀ ಚಿತ್ರದುರ್ಗದ ಜಗದ್ಗುರು ಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಿ ವಿಶೇಷ ವಾದ ವೈಭವಗೌರವಗಳನ್ನು ಪ್ರಜಾಮಂಡಲಿಯಿಂದಲೂ ಸರ್ಕಾರದಿಂದಲೂ ಹೊಂದಿ ಹೋದದ್ದು ಕೆಲವು ಅಸೂಯಾಳುಗಳಿಗೆ ಕಣ್ಣನ್ನೂ ಕಿವಿಯನ್ನೂ ಕುಕ್ಕಿದಂತೆ ಆಗಿದೆಯೆಂದು ಕಾಣುತ್ತೆ. ಅಂಥವರಲ್ಲಿ ಒಬ್ಬನಾದ ಚೈತನ್ಯಪಂಡಿತ ಎಂಬುವರು ಕೆಲವುವಾರಗಳಕೆಳಗೆ ಮೈಸೂರಿನ ಸಂಪದಭ್ಯುದಯ ಪತ್ರಿಕೆಗೆ ಒಂದು ವಿಚಿತ್ರಲೇಖನವನ್ನು ಬರೆದಿದ್ದುದು ನಿಮಗೆ ಗೊತ್ತೇಇದೆಯಷ್ಟೆ. ಅವರ ಖಂಡನೆಯನ್ನು ಕುರಿತು ನಾನು ೨೭ ನೆ ಜೂನ್ ತಾರೀಖಿನಲ್ಲಿ ಬರೆದ ಪತ್ರಕ್ಕೆ- ಸ್ವಮತದಲ್ಲಿ ಪರಸ್ಪರ ಕಲಹವನ್ನು ಬೆಳೆಸತಕ್ಕ ಉದ್ಯಮಕ್ಕೆ ಪ್ರವರ್ತಿಸುವುದು ಉಚಿತವಲ್ಲವೆಂದು ನೀವು ಉತ್ತರ ಕೊಟ್ಟದ್ದನ್ನುನೋಡಿ ಅಸ್ಮದಾದಿಗಳು ಆಗ್ಯೆ ತಟಸ್ಥರಾದೆವು. ಹೀಗಾಗಿ ಯಾವುದೊಂದು ಬಾಧಕವೂ ತಮ್ಮ ಮೇಲೆ ಬೀಳದಿದ್ದ ಕಾರಣ ಅಸೂಯಾಳುಗಳು ತಮಗೆ ಇದಿರೇ ಇಲ್ಲವೆಂದು ಭ್ರಮಿಸಿಹೋದುದರಿಂದ ಅವರ ತಲೆಯು ತಿರುಗಿಹೋದಂತೆ ಕಾಣುತ್ತೆ. ಆದಕಾರಣವೇ ತತ್ಸಂಬಂಧವಾಗಿ ಈಚೆಗೆ ಅದೇ ಪತ್ರದಲ್ಲಿ ಪುನಃ ಒಂದೆರಡು ಲೇಖನಗಳನ್ನು ಬರೆದು ಮೊಳದುದ್ದ ಮಾರುದ್ದದ ನಾಲಿಗೆಗಳನ್ನು ಚಾಚಿ ಅರಚುವದಕ್ಕೆ ತೊಡಗಿದ್ದಾರೆ. ಒಬ್ಬರಿಗೊಬ್ಬರಿಗೆ ಬಡಿದಾಟವನ್ನು ಹಚ್ಚಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದು ಹೊಂಚಿಹಾಕಿಕೊಂಡು ಅದಕ್ಕಾಗಿಯೇ ಅಂಗಡಿಯಿಕ್ಕಿಕೊಂಡಿರುವ ಸಂಪದಭ್ಯುದಯದಲ್ಲಿ ಇಂಥ ಗಿರಾಕಿಗಳಿಗೆ ಬಾಗಿಲು ತೆರೆದೇ ಇಡಲ್ಪಟ್ಟಿದೆಯಷ್ಟೆ. ಇವರ ಬಲೆಯ ಸ್ವಭಾವವನ್ನು ಕಾಣದೆ ಅನೇಕರು ಹೀಗಿಯೇ ಪಶುಗಳಂತೆ ಬಿದ್ದು ಆತ್ಮವಿನಾಶಮಾಡಿಕೊಳ್ಳುತ್ತಿರುವದನ್ನು ನೋಡಿ ವ್ಯಸನಪಡಬೇಕಾಗಿದೆ. ಲಿಂಗಧಾರಿಗಳೆನ್ನಿಸಿಕೊಂಡಿರುವ ಯಾರೇ ಆಗಲಿ ಒಳಗೊಳಗೇ ಹ್ಯಾಗೆ ಗುದ್ದಾಡಿದ್ದರೂ ಪರಸ್ಪರ ಎಷ್ಟು ದೂಷಿಸಿಕೊಂಡಿದ್ದರೂ ಅದೇನೂ ಅಷ್ಟು ಹೆಚ್ಚಿನದಲ್ಲ; ಪ್ರಮಾದಕರವೂ ಅಲ್ಲ. ಈ ಅಸೂಯಾಳುವಾದರೊ ಪರಮತದ ಸಂಪದಭ್ಯುದಯದ ಶರಣುಹೊಕ್ಕು ವೀರಶೈವ ಮತದ ಪಂಚಾಚಾರ್ಯಾದಿ ಗುರುಮಂಡಲಿಯನ್ನೆಲ್ಲಾ ದೂಷಿಸುವುದಕ್ಕೆ ಉದ್ಯುಕ್ತವಾಗಿರುವದರಿಂದ, ಉದಾಸೀನನನ್ನು ಶತ್ರುಗಿಂತ ಕೆಟ್ಟವನೆಂದು ತಿಳಿಯಬೇಕೆಂಬ ನ್ಯಾಯವನ್ನನುಸರಿಸಿ ಈ ಅಸೂಯಾಳುವಿನ ಲೇಖನದ ಪ್ರತಿಕ್ರಿಯೆಗೆ ಪ್ರವರ್ತಿಸುವದು ಮತಸ್ಥರಿಗೆಲ್ಲಾ ಕರ್ತವ್ಯವೇ ಆಗಿರುವುದು. ಆದಕಾರಣ ನೀವು ನಿಮ್ಮ ಶಾಂತಿಮಾರ್ಗವನ್ನು ಸ್ವಲ್ಪಕಾಲ ಕಟ್ಟಿಟ್ಟು ಈಗಲಾದರೂ ನನ್ನ ಲೇಖನಕ್ಕೆ ಪತ್ರಿಕೆಯಲ್ಲಿ ಅವಕಾಶಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಲೇಖನವು ದೊಡ್ಡದಾಗಿರುವುದು ನಿಜ. ಅಷ್ಟನ್ನುಬರೆಯುವಿದ್ದರೆ ಯತ್ನವಿಲ್ಲ. ಆದಕಾರಣ ಸ್ಟಾರ್ ಪತ್ರವು ಚಿಕ್ಕದೆಂಬ ಕಾರಣವನ್ನು ಹೇಳಿ ನಿರಾಕರಿಸದೆ, ಮತ್ತು ನನ್ನ ಲೇಖನದಲ್ಲಿ ಯಾವುದೊಂದು ಭಾಗವನ್ನೂ ಕಿತ್ತುಹಾಕಿ ಸಂಕೋಚಮಾಡದೆ, ವಾರವಾರಕ್ಕೆ ಸ್ಥಲ ಸಿಕ್ಕಿದಷ್ಟನ್ನಾದರೂ ಸಶೇಷಮಾಡಿ ಹಾಕಿ, ಪೂರೈಸಬೇಕೆಂದು ಸಹಸ್ರ ಪ್ರಕಾರವಾಗಿ ಬೇಡುತ್ತೇನೆ.

ಗಜರಾಜನು ವೈಯ್ಯಾರದಿಂದ ಜಗ್ಗುಹಾಕುತ್ತ ಹೋಗುತ್ತಿರುವಾಗ ಗ್ರಾಮಸಿಂಹಗಳು ಬೊಗಳುವದಕ್ಕಾರಂಭಿಸಿ ಆ ಕುಂಜರೇಶ್ವರನು ಅದನ್ನು ಲೆಕ್ಕಿಸದೆ ಹೋದರೆ, ನಮಗೆ ಹೆದರಿ ಆನೆಯು ಓಡಿಹೋಗುವುದೆಂದು ತಿಳಿದು ಗ್ರಾಮಸಿಂಹಗಳು ಮತ್ತಷ್ಟು ಬೊಗಳುವುದಕ್ಕೂ ವಿಕಾರಸ್ವರದಿಂದ ಅಳುವುದಕ್ಕೂ ತೊಡಗುವುವು. ಆದರೆ ಈ ಗದ್ದಲದಿಂದ ಪುರನಿವಾಸಿಗಳ ಶಾಂತಿಸುಖಭಂಗವಾಗಿ ಬೇಸರಿಕೆ ಹುಟ್ಟುವುದರಿಂದ ಅವರುಕಲ್ಲಿನಿಂದಲ್ಲಿಟ್ಟು ಗ್ರಾಮಸಿಂಹಗಳ ಅಬ್ಬರವನ್ನು ಅಡಗಿಸದೆ ಬಿಡುವುದಿಲ್ಲ. ಹೀಗೆ ಲೋಕಸ್ವಭಾವವಿರುವಾಗ, ಯುಕ್ತಾಯುಕ್ತ ವಿಚಾರಶಕ್ತಿಯುಳ್ಳ ಮಾನವಕುಲಕ್ಕೆ ಸೇರಿದ ಒಬ್ಬಾನೊಬ್ಬನು ಅವಿಚಾರದಿಂದಲೋ ದುಷ್ಪ್ರೇರಣೆಯಿಂದಲೋ ಅಸೂಯೆಯಿಂದಲೋ ಒಂದು ಮತದ ಆಚಾರ್ಯ ಪೀಠಾಧಿಪತಿಗಳನ್ನೆಲ್ಲಾ ಹಳಿಯುವುದಕ್ಕೆ ತೊಡಗಿದರೆ ಅವನಿಗೆ ತಕ್ಕರೀತಿಯಿಂದ ಬುದ್ಧಿಕಲಿಸದೆ ಬಿಡುವುದಕ್ಕಾಗಲಾರದು.

ಈ ಅಸೂಯಾಳುವು ಬರೆದಿರುವ ಕರೆಸ್ಪಾಂಡೆನ್ಸಿನ ಪ್ರತಿಯೊಂದು ಪ್ಯಾರಾವನ್ನೂ ಹಿಡಿದು ಖಂಡಿಸಿ ಬರೆಯಲಿಕ್ಕೆ ಹಿಡಿದರೆ ಒಂದು ದೊಡ್ಡ ಗ್ರಂಥವೇ ಆಗುತ್ತೆ. ಆದಕಾರಣ ಮುಖ್ಯಮುಖ್ಯವಾಗಿರುವ ಪ್ರಸ್ತಾಪವನ್ನು ಎತ್ತಿ ಹಿಡಿದು ಖಂಡಿಸುತ್ತಿರುವವನಾಗಿದ್ದೇನೆ.

[ಸಶೇಷ].

ಆರಾಧ್ಯಸುತ.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 43

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಥಟ್ಟನೆ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ವಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.



5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರತಕ್ಕುವಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ಸು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8.0, 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
41 ವೈದ್ಯಶಾಲಾ, ಮೈಸೂರು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ನಮ್ಮ ಕರಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.
(ಗುಣವಾಗದಿದ್ದರೆ ಹಣ ಪರತ.)
ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ
ಪಕ್ಕಾ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಟ್ಟಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಟಮಾರ್ಗದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಥಟ್ಟನೆ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
4 ಪಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

„ದಲ್ಲಾಲಿ ಅಂಗಡಿ ಸೊಲ್ಲಾಪುರ"

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕ, ಶಿಗೇಕಾಯಿ, ತುಪ್ಪ, ಜೋಳ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ. ಚಹಾ, ಕಾಜು, ಆಲೂ, ಉಳ್ಳಿಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮಿಷನ್ನಿನ ಮೇಲೆ ಕಾಳಜಿಯಿಂದ ಬಿಕರಿಮಾಡಿ ಕೊಡುತ್ತೇವೆ. ಒಂದುವೇಳೆ ಕೆಲಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಷನರಿ ಸಾಮಾನುಗಳು ಕಮಿಷನ್ನಿನ ಮೇಲೆ ಸೋಯವಾರ ಮುಂಬಯದಲ್ಲಿ ಖರೀದಿಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,
1 ವಿಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

ಎಲ್ಲಾ ಅಂಜನಗಳಂತೆ ಇದನ್ನು ತಿಳಿದಿರುವಿರೋ?

ಎಂದಿಗೂ ಅಲ್ಲ.

ಈ ಸುಧಾ ಲಲಿತಾಂಜನವು.

ನಮ್ಮ ಪೇಟೆಯಲ್ಲಿ ಸಿಕ್ಕುವ ಇತರ ಅಂಜನಗಳಂತೆ ಉರಿಯುವುದಿಲ್ಲ. ಬಂಕೆಯಾಗಿಲ್ಲ. ಈ ಅಂಜನವು ಸಕಲ ವಿಧವಾದ ವಾಯುನೋವು, ತಲೆನೋವು, ತಲೆ ಶೂಲೆ, ನಾನಾತರದ ಕಜ್ಜಿಗಳು, ಹುಳುಕಡ್ಡಿ, ಮುಂತಾದವುಗಳಮೇಲೆ ಇದೊಂದೇ ಖಾತ್ರಿಯಾದ ಔಷಧಿ.

ಬೆಲೆ ತೊಲೆ 1 ಕ್ಕೆ. 0—6—0.

ನಮ್ಮಲ್ಲಿ ತಯಾರಾಗುವ ಎಲ್ಲಾ ತರಹ ತಾಯಿಗಳ, ಷರಬತ್ತುಗಳ, ಸುಗಂಧದ್ರವ್ಯಗಳ ಕ್ಯಾಟಲಾಗಿಗೆ ಈದಿನವೇ ಅರುಕಾಸಿನ ಸ್ಟಾಂಪು ರವಾನಿಸಿ ಎಲ್ಲಾ ಕಡೆಯಲ್ಲೂ ಏಜಂಟರು ಬೇಕು. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಬೋರ್ಡು ಮಾಫಿ ಫಾಯದೆ ಕರವಾದ ರಿಯಾಯ್ತಿ ದರ. ಇತ್ಯಾದಿ ಸೌಕರ್ಯಗಳುಂಟು. ಒಂದು ರೂಪಾಯಿಗಿಂತ ಕಡಮೆ ಆರ್ಡರುಗಳಿಗೆ ನಿಗಾಕೊಡುವದಿಲ್ಲಾ. ಈದಿನವೇ ಬರೆಯಿರಿ.

ದಿ ಮ್ಯಾನೇಜರ್, ಟಿ. ಎಲ್. ಎಸ್. ಕಂಪೆನಿ
ತಿಪ್ಟೂರು (ಮೈಸೂರು ಪ್ರಾವಿನ್ಸ್).

ನೂತನಜವಳಿಗಳು.

ಹೊಸಸಾಮಾನುಗಳು ಬರುತ್ತಲಿರುವದರಿಂದ ಈ ಕೆಳಗಣ ಸಾಮಾನುಗಳನ್ನು ಕೆಲವು ದಿನಗಳವರೆಗೆ ಮಾತ್ರ ಕಮ್ಮಿ ಕ್ರಯಕ್ಕೆ ಕೊಡಲ್ಪಡುತ್ತ.

ಸರಟುಗಳು.

ದೊಡ್ಡಸೈಜು ಕ್ರಯ ರೂ. 1—15—0.
ಚಿಕ್ಕ ಸೈಜು ಕ್ರಯ ರೂ. 1—10—0.

ಇದರಲ್ಲಿ ೧೦ ತರಹ ರಂಗುಗಳಿರುತ್ತ. ಯಾವರಂಗಿಗಾದರೂ ಸರಿ ಒಂದೇ ಕ್ರಯ ಇದು ನೋಟಕ್ಕೆ ನಯವಾಗಿಯೂ ಉಪಯೋಗಿಸಲು ಲಾಯಕ್ಕಾಗಿಯೂ, ಘಟ್ಟಿ ರಂಗುಳ್ಳದ್ದಾಗಿಯೂ ಇರುತ್ತ. ಇಷ್ಟು ಕಮ್ಮಿಕ್ರಯಕ್ಕೆ ಎಲ್ಲಿಯೂ ದೊರೆಯಲಾರದು. ದರಕಾಸ್ತು ಕೊಡುವವರು ಕತ್ತಿನ ಅಳತೆಯನ್ನು ಕಳಿಸಿರಿ.

ಅಮದಾಬಾದ್ ಅಂಗೊಸ್ತ್ರಗಳು.

3 ಮೊಳ ಅಗಲ 6 ಮೊಳ ಉದ್ದ ಜತೆ 1 ಕ್ಕೆ 2—12—0.
$2\frac{1}{3}$ ಮೊಳ ಅಗಲ $5\frac{1}{3}$ ಮೊಳ ಉದ್ದ ಜತೆ 1 ಕ್ಕೆ 2—9—0.
$2\frac{1}{3}$ ಮೊಳ ಅಗಲ 6 ಮೊಳ ಉದ್ದ ಜತೆ 1 ಕ್ಕೆ 4—0—0.

ಇವರ ಸುತ್ತಲೂ ಮತ್ತು ಪೂರಾ ಗುಲಾಬಿ ರಂಗುಳ್ಳದ್ದು—ರಂಗಿಗೆ ನಾವು ಜವಾಬ್ದಾರರು. $2\frac{1}{4}$ ಮೊಳ ಅಗಲ 4 ಮೊಳ ಉದ್ದ 2 ಕ್ಕೆ 3—0—0
3 ಮೊಳ ಅಗಲ 8 ಮೊಳ ಉದ್ದ ಜತೆ 1 ಕ್ಕೆ 4—8—0.

ತಾಜಾಕಲಂ—ಭಾರಿಯಾಗಿ ಆರ್ಡರ್ ಕೊಡುವ ವರ್ತಕರುಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುತ್ತ.

ವಿಳಾಸ—ಸ್ವಾಮಿಕಂಪೆನಿ, ಜವಳಿ ವ್ಯಾಪಾರಿ,
ಮಿಂಟ್‌ಬಿಲ್ಡಿಂಗ್ ಮದ್ರಾಸು.

ಇಂಡಿಯನ್ ಪೀನಲ್‌ಕೋಡ್

ಛಾಪಾ ಆಗುತ್ತಲಿದೆ!

ಅನೇಕ ಕನ್ನಡಿಗರ ಉಪಯೋಗಕ್ಕಾಗಿ ಸಂಬಂಧ ಶೈಲಿಯಲ್ಲಿ ಪ್ರಕರಣಗಳು, ಟಿಪ್ಪಣಿಗಳು ಮತ್ತು ಘನ ಹೊಂದಿದ ಮೈಸೂರು ಚೀಫ್‌ಕೋರ್ಟಿನಲ್ಲಿ ಫೈಸಲಾದ ಮೊಖದ್ದಮೆಗಳು ಸಹ ಈ ಪುಸ್ತಕದಲ್ಲಿ ಅಡಕವಾಗಿರುತ್ತವೆ. ಪೋಲೀಸಿನವರಿಗೂ, ಬೆಂಚ್ ಮಾಜಿಸ್ಟ್ರೇಟ್‌ರವರುಗಳಿಗೂ, ಪಟೇಲ್, ಶಾನುಭೋಗರುಗಳಿಗೂ ಬಹಳ ಉಪಯೋಗಕರ.

ಈ ಪುಸ್ತಕವನ್ನು 4 ಭಾಗಗಳಾಗಿ ಮುಗಿಸಲ್ಪಡುತ್ತದೆ.

1 ನೆ ಭಾಗ (1 ರಿಂದ 120) ಪ್ರಕರಣಗಳು.	2	8	0
2 ನೆ ಭಾಗ (121 ರಿಂದ 299) ಪ್ರಕರಣಗಳು.	2	8	0
3 ನೆ ಭಾಗ (300 ರಿಂದ 462) ಪ್ರಕರಣಗಳು.	2	8	0
4 ನೆ ಭಾಗ (463 ರಿಂದ 511) ಪ್ರಕರಣಗಳು.	2	8	0

ಗಮನಿಸಿ:-ಎಲ್ಲಾ ಭಾಗಗಳಿಗೂ ಮೊದಲೇ ಚಂದಾದಾರರಾಗತಕ್ಕವರಿಗೆ (8—0—0)

ಪುಸ್ತಕಗಳನ್ನಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ರತ್ನಾಕರ್ ಅಂಡ್ ಕೊ., ಪಬ್ಲಿಷರ್ಸ್,
ತುಮಕೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರೇಶ್ಮಿಜಡ್ಡು, ಗುಪ್ತವ್ಯಸನಬೇನೆ, ಹುರುಳುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೋಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಬೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
5 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ಅಕ್ಟೋಬರ್ ತಾ|| ೫ ರಿಂದ ೧೯೧೯ ನೆಯ ಅಕ್ಟೋಬರ್ ತಾ|| ೧೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಶ್ವಯುಜ ಶು|| ಏಕಾದಶಿಯಿಂದ ಆಶ್ವಯುಜ ಬ|| ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
5	ಭಾನು	ಏಕಾದಶಿ	44-12	ಶ್ರವ	11-28	19
6	ಸೋಮ	ದ್ವಾದ	43-9	ಧನಿ	12-42	20
7	[1] ಮಂಗಳ	ತ್ರಯೋ	40-53	ಶತ	12-44	21
8	[2] ಬುಧ	ಚತು	37-32	ಪೂಭಾ	11-39	22
9	ಗುರು	ಪೌರ್ಣ	33-18	ಉಭಾ	9-36	23
10	ಶುಕ್ರ	ಪಾಡ್ಯ	28-19	ರೇವತಿ	6-45	24
11	[3] ಶನಿ	ಬಿದಿಗೆ	22-47	ಅಶ್ವಿನಿ	3-17	25

(1) ಪ್ರದೋಷ. (2) ಚಿಟ್ಟದಲ್ಲಿ ಚಾಮರಾಜ ಮುಡೀ ಉತ್ಸವ. (3) ಶ್ರೀ ಚಾಮುಂಡೇಶ್ವರೀ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಶ್ಯಾವತಾರಾ ಪಶ್ಯಜ ನಕ್ಷತ್ರ ಮೋಹರಾಜೀಯಾಷ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾರಾಕಳಂ | ಪ್ರೇಮಂಚೆತ್ತಿಳಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸೆ ೧೯೧೯ ನೆಯ ಇಸವಿ ಅಕ್ಟೋಬರ್ ತಾರೀಖು ೧೨ ನೆಯ ಭಾನುವಾರ. (ಸಂಚಿಕೆ ೪೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು. ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚಾಚಾರ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕನಕಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮದರಾಸ್ ಗೌರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆ.

ಕ್ರಯ ಶೀಸೆ 1 ಕ್ಕೆ 8 ಆಣೆ. ಡಜನ್ 1 ಕ್ಕೆ 5 ರೂಪಾಯಿ.

ನಮ್ಮ ವಿಳಾಸ:—ಏ. ಎ. ಎಸ್. ಪಾಣೆ ಅಂಡ್ ಕೊ,
35 ಸಾಹುಕಾರಪೇಟೆ, ಮದರಾಸ್.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕಾಲವನ್ನು ಕೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡುವುದಿಲ್ಲ. ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟುಕೆಲಸಮಾಡಿದಾಗೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ,



ಕ್ರಯ 1 ಕ್ಕೆ 5—8—0.

ವಿಳಾಸ:—ರಾಸ್ ವಾಚ್ ಅಂಡ್ ಕೊ.
35 ಇರುಳಪ್ಪನ ಬೀದಿ, ಮದರಾಸ್.

ಲಿಂಗದ ಕಾಯಿಗಳು.



ಈ ಲಿಂಗದ ಕಾಯಿಗಳು ಸಾಚಾ ಜರ್ಮನ್ ಬೆಳ್ಳಿಯಿಂದ ತಯಾರಾದವು. ಇವುಗಳ ಬಣ್ಣವು ಹೋಗದ ಹಾಗೆ ಬೊಂಬಾಯಿ ಬೆಳ್ಳಿಯ ಗಿಲೀಟು ಮಾಡಿರುವುದು. ಈ ನಕ್ಷೆಯಲ್ಲಿರುವಂತೆಯೂ ಇನ್ನೂ ಅನೇಕ ತರದಲ್ಲಿಯೂ ಇರುವುದು. ಭಾರವಿರುವುದಿಲ್ಲ. ನೋಡಲು ಅಂದವಾಗಿರುವುದು.

ಕ್ರಯ 1 ಕ್ಕೆ 1—4—0. ನಂ. 2. 1—12—0.

ಕನ್ನಡಕಗಳು.



ಇವನ್ನು ದೊಡ್ಡವರು ಚಿಕ್ಕವರು ಸಹಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬದಿಗಳಿರುವದು. ಇದರ ಕಂಬಿಗಳು ಯಾವಾಗಲೂ ಬೆಳ್ಳಿಯ ಹಾಗೆ ಇರುವದು. ಇದರಲ್ಲಿ ಹಸರು, ಊದ, ಮೋಘವರ್ಣ ಮೊದಲಾದವುಗಳಿರುವದು. ಕ್ರಯ ನಂ. 1 ಕ್ಕೆ 1-8-0, ನಂ. 2 ಕ್ಕೆ 2.0.0.

ರಬ್ಬರ್ ಇಂಗ್ಲೀಷ್ ಅಕ್ಷರಗಳು.



ಈ ಅಕ್ಷರಗಳು ಸೀಮೆಯಲ್ಲಿ ತಯಾರಾದವು. ಈ ಅಕ್ಷರಗಳಿಂದ ಕಷ್ಟವಿಲ್ಲದೆ ಕಾಗದಗಳನ್ನೂ, ಕಾರಡು, ಲೆಟರು ಮುಂತಾದವುಗಳನ್ನು ನಾವೇ ಅಚ್ಚು ಮಾಡಿಕೊಳ್ಳಬಹುದು. ಈ ಅಕ್ಷರಗಳ ಪೆಟ್ಟಿಗೆಯು ಒಂದು ಇದ್ದರೆ ಬೇಕಾದ ಮುದ್ರಣವನ್ನು ಒಬ್ಬರ ಸಹಾಯವಿಲ್ಲದೆ ನಾವೇ ಮಾಡಿಕೊಳ್ಳಬಹುದು. ಲಾಯರುಗಳಿಗೂ, ವರ್ತಕರಿಗೂ ಬಹು ಸಹಾಯಕಾರಿಯಾದದ್ದು. ಈ ಪೆಟ್ಟಿಗೆಯಲ್ಲಿ ಇಂಕಿ, ಪ್ಯಾಡು, ಚಿಮುಟ ಮುಂತಾದವುಗಳು ಇವೆ.

170 ಅಕ್ಷರಗಳು ಇರುವ ಪೆಟ್ಟಿಗೆ			1—14—0
250	,,	,,	2—8—0
350	,,	,,	3—12—0

ವಿಳಾಸ—ಧೈರ್ಯಲಕ್ಷ್ಮೀ ಅಂಡ್ ಕೊ,
35 3 ಇರುಳಪ್ಪನಬೀದಿ, ಮದರಾಸ್.

ದರ್ಬಾರ್ ಸೋಪು.

DURBAR
SOAP

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಘಮಿಷ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು

ಗಂದೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	1—10—0.

35 ನಮ್ಮ ವಿಳಾಸ:—ವೈರಂ ಅಂಡ್ ಕೊ,
3. ಇರುಳಪ್ಪನಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಶಿವಪೂಜಾವಿಧಿಃ	೦—೧೦—೦
ಚಾರುಶೀಲಚರಿತ್ರೆ	೦—೫—೦
[illegible]	೦—೪—೦
ಷಟ್‌ಸ್ಥಲ ವಿದ್ಯಾ (ಮುಕ್ತಿಸಾಧ)ನ	೦—೨—೦
ಗುರುಶಂಕರೇಶ್ವರ ಶತಕಂ	೦—೧—೦

ಅಂಚೆಯವೆಚ್ಚ ಬೇರೆ.

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultura subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.

2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.

3. During the time the raiyats and labourers work on the farm, they will be paid at the prevailing local rates for labour.

4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,
10 *Offg. Director of Agriculture.*

ಇನ್‌ಫ್ಲುಯೆಂಜಾ, ಕಾಲರಾ, ಪ್ಲೇಗು ಇವುಗಳಿಗೆ ಖಾತ್ರಿಯಾದದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 13

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಹಪ್ಪೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ, ಕಲ್ಲಿನಿಂದುಂಟಾದ ಘಾಯ, ಜಖಮು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ. ಚಾರ್ಜ ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ರೂ. ೨—೮—೦. ವಿ. ಪಿ. ಚಾರ್ಜ ರೂ. ೦—೧೨—೦.
೨೪ ಔನ್ಸು ಬಾಟ್ಲಿ ೧ಕ್ಕೆ ರೂ. ೨-೮ ೦ ವಿ.ಪಿ. ಚಾರ್ಜ ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗ್ಣಾಸಿ ಬೀದಿ, ಜಾರ್ಜಟೌನ್ ಮದರಾಸು

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಅಕ್ಟೋಬರ್ ತಾ|| ೧೨ನೆಯ ಭಾನುವಾರ

ಪ್ರಜಾಪ್ರತಿನಿಧಿಸಭೆ.

ಕಳೆದ ತಾ|| ೬ನೆ ಸೋಮವಾರ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಈ ಸಭೆಯು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಮೂಡದ ಮೇಲಣ ಸಭಾಂಗಣದಲ್ಲಿ ಆರಂಭಿಸಲ್ಪಟ್ಟಿತು. ಕಾಲಸ್ಥಿತಿಯ ಸುಮುಖತೆಯಿಂದಲೂ ಸ್ವದೇಶೀಯ ರಾಜಬಂಧು ನೂತನಮಂತ್ರಿವರ್ಯರು ದೊರೆದರೆಂಬ ಸಂತೋಷದ ಆಧಿಕ್ಯದಿಂದಲೂ ಈ ಸಲದ ಸಭೆಗೆ ನೆರೆದಿದ್ದಷ್ಟು ಪ್ರಜಾಪ್ರತಿನಿಧಿ ಸಭಿಕರು ಕಳೆದ ನಾಲ್ಕಾರು ವರ್ಷಗಳಿಂದಲೂ ಬಂದುದಿಲ್ಲ. ಪ್ರೇಕ್ಷಕರೂ ಅತಿಶಯವಾಗಿದ್ದರು. ಆದರಿಂದ ಸಭಾಮಂದಿರವೆಲ್ಲವೂ ಕಿಕ್ಕಿರಿಯುವಂತೆ ತುಂಬಿದ್ದಿತು. ದಿವಾನ್ ಸರ್ದಾರ್ ಎಂ. ಕಾಂತರಾಜ ಅರಸ್, ಬಿ. ಎ., ಸಿ. ಎಸ್. ಐ, ಯವರು ಅಧ್ಯಕ್ಷಪೀಠವನ್ನಲಂಕರಿಸಿದ್ದರು. ಕೌನ್ಸಿಲರುಗಳಾದ ಮ|| ಪಿ. ರಾಘವೇಂದ್ರರಾಯರು, ಮಿ|| ಮಿರ್ ಹಂಜಾಹುಸೇನ್ ಸಾಹೇಬರು, ಮ|| ಕೆ. ಶ್ರೀನಿವಾಸಯ್ಯಂಗಾರರೂ, ಚೀಫ್ ಕೋರ್ಟ ನ್ಯಾಯಮೂರ್ತಿಗಳೂ, ಶ್ರೀಮನ್ಮಹಾರಾಜರ ಪ್ರೈವೇಟ್ ಮತ್ತು ಹುಜೂರ್ ಸೆಕ್ರೆಟರಿಗಳೂ, ರೆ|| ಕಮಿಷನರೇ ಮೊದಲಾದ ಎಲ್ಲಾ ಶಾಖಾ ಮುಖ್ಯಾಧಿಕಾರಿಗಳೂ, ಡಿಸ್ಟ್ರಿಕ್ಟ ಡಿ|| ಕಮಿಷನರುಗಳೂ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರೇ ಮೊದಲಾದ ಕೆಲಮಂದಿ ಪೆನ್ಷನ್ಡ್ ಆಫೀಸರುಗಳೂ ಸಹ ದಿವಾನರ ಎಡಪಕ್ಕ ಬಲಪಕ್ಕ ಹಿಂಗಡೆಗಳಲ್ಲಿ ಉಚ್ಚಾಸನಗಳನ್ನಲಂಕರಿಸಿದ್ದರು. ದಿವಾನರು ಎದ್ದುನಿಂತು ತಮ್ಮ ಭಾಷಣವನ್ನು ಓದಿ ಮುಗಿಸುವುದಕ್ಕೆ ಒಂದೂಕಾಲುಗಂಟೆ ಹಿಡಿಯಿತು. ಬಳಿಕ ಬೇರೆಬೇರೆ ಸಂಘಗಳ ವಿಜ್ಞಾಪನ ಪತ್ರಗಳು ಓದಿ ಒಪ್ಪಿಸಲ್ಪಟ್ಟುವು. ಕೋಲಾರದ ಚಿನ್ನದ ಗಣಿಗಳ ಸಂಘದ ಪರವಾಗಿ ಲೆ|| ಕರ್ನಲ್ ಸಿ. ಎಚ್. ರಿಚರ್ಡ್ಸ್‌ರವರೂ, ಸೆಂಟರಲ್ ಮಹಮ್ಮದನ್ ಅಸೋಸಿಯೇಷನ್ ಪಕ್ಷವಾಗಿ ಮಿ|| ಮಹಮದ್ ಅಬ್ಬಾಸ್‌ಖಾನರವರೂ, ಮಲ್ನಾಡ್ ಸಂಘದ ಪರವಾಗಿ ಮಿ|| ಎಚ್. ಕೃಷ್ಣರಾವ್‌ರವರೂ, ಚಿಕ್ಕಮಗಳೂರು ಅಂಜುಮಾನೆ ಇಸ್ಲಾಮಿಯಾ ಪಕ್ಷದಿಂದ ಮಿ|| ಸಿ. ರಸೂಲ್‌ಖಾನರೂ, ಮೈಸೂರು ದಕ್ಷಿಣ ನೇಟಿವ್ ಪ್ಲಾಂಟರ್ಸ್ ಸಂಘದ ಪಕ್ಷವಾಗಿ ಮ|| ಮಳಲಿ ವೆಂಕಟರಾಮಯ್ಯನವರೂ, ತರೀಕೆರೆ ಮುಸ್ಲಿಂ ಅಸೋಸಿಯೇಷನ್ನಿನ ಪರವಾಗಿ ಮಿ|| ಟಿ. ಸಯ್ಯದ್ ಖಾಜಾಪೀರ್‌ಖಾನರವರೂ, ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಪರವಾಗಿ ಮ|| ಜಿ. ಪರಮಶಿವಯ್ಯ, ಬಿ. ಎ., ಎಲ್ ಎಲ್. ಬಿ., ಯವರೂ, ಒಕ್ಕಲಿಗರ ಸಂಘದ ಪರವಾಗಿ ಮ|| ಬಿ. ಎನ್. ವಿಜಯದೇವ, ಎಂ. ಎ., ಬಾರ್ ಅಟ್ಲಾಯವರೂ, ವೈಶ್ಯರ ಸಂಘದ ಪರವಾಗಿ ಮ|| ಸುಬ್ರಾಯಸೆಟ್ಟರೂ, ಮ|| ಎಂ. ಶ್ಯಾಮರಾಯರು ಮೈಸೂರು ವಿದ್ಯಾಪೀಠದ ಪರವಾಗಿಯೂ, ಮ|| ಎಂ. ವೆಂಕಟಕೃಷ್ಣಯ್ಯನವರು ಪ್ರಜಾಪ್ರತಿನಿಧಿಗಳ ಪಕ್ಷವಾಗಿಯೂ ವಾಚಾ ಭಾಷಣವನ್ನು ಮಾಡಿದರು. ಇವುಗಳಲೆಲ್ಲಾ ಸಾಧಾರಣವಾಗಿ ಸರ್ದಾರ್ ಕಾಂತರಾಜ ಅರಸಿನವರಿಗೆ ಆರೋಗ್ಯಭಾಗ್ಯವುಂಟಾಗಿ ಅವರು ಮಂತ್ರಿತ್ವಕ್ಕೆ ಬಂದುದಕ್ಕಾಗಿಯೂ, ಶ್ರೀಮದ್ಯುವರಾಜರವರಿಗೆ ಪುತ್ರೋತ್ಸವವಾದುದಕ್ಕಾಗಿಯೂ ಸಂತೋಷವು ತಿಳಿಯಿಸಲ್ಪಟ್ಟಿದ್ದಿತು. ಮತ್ತು ಆಯಾ ಸಂಘಗಳವರು ತಂತಮ್ಮ ಇಷ್ಟಾರ್ಥಗಳು ಕೆಲವನ್ನು ನೆರವೇರಿಸಿ ಕೊಡಬೇಕೆಂಬ ಪ್ರಾರ್ಥನೆಯನ್ನೂ ಮಾಡಿಕೊಂಡಿದ್ದರು. ಪ್ರಜೆಗಳ ಹಿತಾರ್ಥವಾಗಿ ಮಿಡಲ್ ಸ್ಕೂಲಿನವರೆಗೆ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡಿಸುವುದು, ವಿದ್ಯಾರ್ಥಿವೇತನಗಳಿಗಾಗಿ ೩ ಲಕ್ಷ ರೂ.ಗಳನ್ನು ಕೊಡಿಸುವುದು, ನಿಯಮನಿರ್ಮಾಣಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಕಳುಹಿಸಿ ಕೊಡಬೇಕಾದ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಟ್ಟಿರುವುದು ಇವೇ ಮೊದಲಾದ ಶ್ರೀಮನ್ಮಹಾರಾಜರವರ ಕೆಲವು ಹೊಸ ಅಪ್ಪಣೆಗಳನ್ನು ಕುರಿತು ಪ್ರಜೆಗಳ ಕೃತಜ್ಞತೆಯನ್ನೂ ಆನಂದವನ್ನೂ ಮ|| ವೆಂಕಟಕೃಷ್ಣಯ್ಯನವರು ವಿವರಿಸಿ, ಶ್ರೀಮನ್ಮಹಾರಾಜರವರಿಗೆ ಪ್ರಜಾಪರವಾದ ವಂದನೆಯನ್ನು ತಿಳಿಯಿಸಬೇಕೆಂದು ಶ್ರುತಪಡಿಸಿದರು. ಕಡೆಗೆ ದಿವಾನರವರು ಇವುಗಳಲ್ಲೆಲ್ಲಾ ಕಂಡ ಸಾಮಾನ್ಯ ವಿಷಯಗಳಿಗೆ ತಮ್ಮ ವಂದನೆಯನ್ನು ತಿಳಿಯಿಸಿ, ವಿಶೇಷ ವಿಷಯಗಳನ್ನೆಲ್ಲಾ ಶ್ರೀಮನ್ಮಹಾರಾಜರವರಲ್ಲಿ ಅರಿಕೆಮಾಡಿ ಉತ್ತರವನ್ನು ತಿಳಿಯಿಸುವುದಾಗಿ ಅಪ್ಪಣೆಕೊಡಿಸಿದರು. ಯೂರೋಪಿಯನ್ ಸಭಿಕರುಗಳು ತೆರಳಿದರು. ಬಳಿಕ ದಿವಾನರ ಭಾಷಣದ ಪರಿವರ್ತನವನ್ನು ರೆವಿನ್ಯೂ ಸೆಕ್ರೆಟರಿ ಮ|| ಬಿ. ರಾಮಸ್ವಾಮಯ್ಯನವರು ಓದಿದರು. ಆ ದಿನದ ಸಭಾಕಾರ್ಯಗಳು ಮುಗಿದುವು. ಮರುದಿನದಿಂದ ಪ್ರತಿನಿಧಿಗಳು ಅರಿಕೆಮಾಡುವ ವಿಷಯಗಳ ವಿಮರ್ಶೆಯೂ ಉತ್ತರವೂ ನಡೆಯುತ್ತಲಿವೆ.

೨ನೆ ದಿನ ಸಭೆಸೇರಿದಾಗ ಮೊಟ್ಟಮೊದಲು ದಿವಾನರು— ಈ ಸಲದ ಪರ್ಯಾಲೋಚನೆಗೆ ೩೪೮ ವಿಷಯಗಳು ಇಡಲ್ಪಟ್ಟಿರುವುವೆಂದೂ, ತಾ|| ೧೪ರ ವರೆಗೆ ಸಭಾಕಾರ್ಯಗಳು ನಡೆಯಬೇಕಾಗಿರುವುದರಿಂದ ಅದುವರೆಗೆ ಆಗುವ ಒಟ್ಟು ೨೫ ಗಂಟೆಗಳ ಕಾಲದಲ್ಲಿ ಇಷ್ಟು ವಿಷಯಗಳೂ ಚರ್ಚಿಸಲ್ಪಟ್ಟು ತೀರ್ಮಾನಗೊಳ್ಳುವಂತೆ ಸಭಿಕರೆಲ್ಲರೂಕೆಲಸವನ್ನು ಸಾಗಿಸಬೇಕೆಂದೂ ತಿಳಿಯಪಡಿಸಿದರು. ವಿದ್ಯಾಭ್ಯಾಸದ ಮೆಮೊರಾಂಡಮ್ಮಿನ ಚರ್ಚೆಯ ವಿಷಯವು ಹೇಗೆ ಆಗಬೇಕೆಂಬುದನ್ನು ಮ|| ಎಂ. ಸುಬ್ಬಯ್ಯನವರು ಪ್ರಶ್ನಿಸಿದರು. ಅದರ ಮೇಲೆ ಒಂದು ಗಂಟೆಯ ಹೊತ್ತು ಚರ್ಚೆನಡೆಯಿತು. ಮ|| ಸಿ. ಶ್ರೀನಿವಾಸರಾಯರು— ಈಗಣ ಮೆಮೊರಾಂಡಮ್ಮಿನಲ್ಲಿ ವಿದ್ಯಾಭ್ಯಾಸಶಾಖೆಯ ಇನ್|| ಜನರಲ್‌ರವರ ವರದಿಯು ಮುದ್ರಿಸಲ್ಪಟ್ಟಿಲ್ಲ, ಅದನ್ನು ಕೊಡಿಸಿಕೊಡಬೇಕೆಂದು ಕೇಳಿದರು. ಅದು ಅನವಶ್ಯಕವೆಂದೂ ಸರ್ಕಾರಿ ಮೆಮೊರಾಂಡಮ್ಮಿನ ಮೇಲೆಯೇ ಚರ್ಚಿಸಬಹುದೆಂದೂ ದಿವಾನರೂ, ಕೌನ್ಸಿಲರ್ ಮಿ|| ಹಂಜಾಹುಸೇನ್ ಸಾಹೇಬರೂ ಅಪ್ಪಣೆಕೊಡಿಸಿದರು. ಇದನ್ನು ವಿಮರ್ಶೆಮಾಡಿ ವರದಿಮಾಡುವುದಕ್ಕೆ ಒಂದು ಸಬ್‌ಕಮಿಟಿಯನ್ನು ಈಗಲೇ ಏರ್ಪಡಿಸಿ, ಅದಕ್ಕೆ ಮ|| ಎಂ. ಸಿ. ರಂಗಯ್ಯಂಗಾರರನ್ನೋ ಮ|| ಎಂ. ಶ್ಯಾಮರಾಯರನ್ನೋ ಅಧ್ಯಕ್ಷರನ್ನಾಗಿ ಮಾಡಿ, ಅವರುಗಳ ವರದಿಯನ್ನು ಬರಮಾಡಿಕೊಂಡು ಮುಂದಣ ಏಪ್ರಿಲ್ ತಿಂಗಳ ಸಭಾಕಾಲದಲ್ಲಿ ಚರ್ಚೆನಡೆಯಿಸಿ ತೀರ್ಮಾನಿಸಬಹುದೆಂದು ಮ|| ಅಣ್ಣಯ್ಯಪಂಡಿತರೂ ಮ|| ಸಿ. ನರಸಿಮ್ಮಯ್ಯನವರೂ ಹೇಳಿದರು. ಮೊನ್ನೆತಾನೇ ಮೆಮೊರಾಂಡಮ್ಮಿನ ಕನ್ನಡದ ಕಾಪಿಯು ಬಂದಿರುವುದರಿಂದಲೂ, ಅದನ್ನು ಓದಿಕೊಂಡು ಅಭಿಪ್ರಾಯ ಕೊಡಲಿಕ್ಕೆ ಕಾಲವು ಸಾಲದಿರುವುದರಿಂದಲೂ, ಅಲ್ಲದೆ ಇಲ್ಲಿರುವ ಪ್ರತಿನಿಧಿಗಳು ತಮಗೆ ಓಟುಕೊಟ್ಟು ಕಳುಹಿಸಿರುವ ಪ್ರಜೆಗಳೆಲ್ಲರ ಅಭಿಪ್ರಾಯವನ್ನೂ ತಿಳಿದು ಸರ್ಕಾರಕ್ಕೆ ಅರಿಕೆಮಾಡಬೇಕಾಗಿರುವುದರಿಂದಲೂ ಮುಂದಣ ಸಭಾಕಾಲಕ್ಕೆ ಇಟ್ಟುಕೊಳ್ಳಬೇಕೆಂದು ಇನ್ನು ಒಬ್ಬಿಬ್ಬರು ಹೇಳಿದರು. ಅದರ ಮೇಲೆ ಮ||ಗಳಾದ ಎಂ. ಸುಬ್ಬಯ್ಯನವರು, ಎಂ. ಬಸವಯ್ಯನವರು, ಎಚ್. ಕೃಷ್ಣಶಾಸ್ತ್ರಿಗಳು ಮೊದಲಾದ ಕೆಲವರು ಇಂಥ ಮುಖ್ಯವಿಷಯವು ಸಾವಕಾಶವಿಲ್ಲದೆ ಈ ಮಹಾಸಭೆಯಲ್ಲೇ ಚರ್ಚಿಸಲ್ಪಡತಕ್ಕುದು ಅವಶ್ಯಕವೆಂದೂ, ಸ್ಪೆಷಲ್ ಕಮಿಟಿಗೆ ಹಾಕಿಬಿಟ್ಟು ಅವರಭಿಪ್ರಾಯಗಳನ್ನು ಮಾತ್ರ ತೆಗೆದುಕೊಂಡರೆ ಆ ೮-೧೦ ಜನರ ಅಭಿಪ್ರಾಯವು ಸರ್ಕಾರಕ್ಕೆ ತಿಳಿಯುವುದೇ ಹೊರತು ಸಂಸ್ಥಾನಕ್ಕೆಲ್ಲಾ ಪ್ರತಿನಿಧಿಗಳಾಗಿ ಬಂದಿರುವ ಎಲ್ಲರ ಅಭಿಪ್ರಾಯವನ್ನೂ ತಿಳಿದುಕೊಂಡಂತಾಗುವುದಿಲ್ಲವೆಂದೂ, ಸಕಲ ಪ್ರಜೆಗಳಿಗೂ ಪ್ರತಿನಿಧಿಗಳಾಗಿ ಬಂದಿರುವ ಈ ಸಭಿಕರು ಉಳಿದ ವಿಷಯಗಳಲ್ಲೆಲ್ಲಾ ಸಕಲ ಪ್ರಜೆಗಳ ಅಭಿಮತವನ್ನೇ ತಿಳಿಯಿಸಲು ಶಕ್ಯತೆಯನ್ನು ಪಡೆದುಕೊಂಡಿರುವಾಗ, ಈ ವಿಷಯಕ್ಕೆ ಮಾತ್ರ ಪ್ರಜೆಗಳ ಅಭಿಪ್ರಾಯವನ್ನು ಕೇಳಿಕೊಂಡು ಬರಬೇಕೆಂದು ಹೇಳುವುದು ಯುಕ್ತಿಯುಕ್ತವಲ್ಲವೆಂತಲೂ, ಮೆಮೊರಾಂಡಮನ್ನು ಒಂದೆರಡು ದಿನಗಳು ಚೆನ್ನಾಗಿ ಓದಿಕೊಂಡರೆ ಅದರ ಗುಣದೋಷಗಳನ್ನೆಲ್ಲಾ ತಿಳಿದು ಈಗಲೇ ಚರ್ಚಿಸಬಹುದೆಂತಲೂ, "ಶುಭಸ್ಯಶೀಘ್ರಂ" ಎನ್ನುವಂತೆ ಪ್ರಜೆಗಳ ವಿದ್ಯಾಭ್ಯಾಸ ಸೌಕರ್ಯಕಲ್ಪನೆಯ ಸದುದ್ದೇಶದಿಂದ ಹುಟ್ಟಿರುವ ಈ ಯೋಜನೆಯು ಬೇಗನೆ ಕಾರ್ಯರೂಪಕ್ಕೆ ಬರುವಂತೆ ಮಾಡುವುದು ನಮಗೆಲ್ಲಾ ಕರ್ತವ್ಯವೆಂತಲೂ, ಪ್ರತ್ಯೇಕವಾದ ಕಮಿಟಿಯನ್ನು ಕಲ್ಪಿಸುವುದು ಅನವಶ್ಯಕವೆಂತಲೂ ಬಿನ್ನಯಿಸಿದರು. ಕಡೆಗೆ ಎಂ. ವೆಂಕಟಕೃಷ್ಣಯ್ಯನವರು ಸಹ ಸ್ಪೆಷಲ್ ಕಮಿಟಿಯನ್ನು ಏರ್ಪಡಿಸಿ ಅದರ ವಿಮರ್ಶೆಗೆ ಮೆಮೊರಾಂಡಮ್ಮನ್ನು ಕೊಡಬೇಕೆಂದೂ, ಮುಂದಣ ಸಭೆಗೆ ಇದರ ವಿಚಾರಣೆಗೆ ಇಟ್ಟುಕೊಳ್ಳಬಹುದೆಂದೂ ಶ್ರುತಪಡಿಸಿದರು. ಅದರ ಮೇಲೆ ಸಭಾಧ್ಯಕ್ಷರು ಸ್ಪೆಷಲ್ ಕಮಿಟಿಯನ್ನು ಏರ್ಪಡಿಸುವುದಕ್ಕೆ ಒಪ್ಪದೆ ಇರತಕ್ಕ ಸಭಿಕರೆಲ್ಲಾ ಕಯ್ಯೆತ್ತಿರಿ ಎಂದು ಸೂಚಿಸಲಾಗಿ ಮುಕ್ಕಾಲುಪಾಲಿಗಿಂತಲೂ ಹೆಚ್ಚಾದಷ್ಟು ಸಭಿಕರು ಕಯ್ಯೆತ್ತಿದರು. ಅನಂತರ ಕಮಿಟಿಯೇರ್ಪಾಟಿಗೆ ಅನುಮೋದಿಸತಕ್ಕವರೆಲ್ಲಾ ಕಯ್ಯೆತ್ತಿರಿ ಎಂದು ಹೇಳಲಾಗಿ ಮ|| ಎಂ. ವೆಂಕಟಕೃಷ್ಣಯ್ಯನವರೇ ಮೊದಲಾದ ೨೦-೩೦ ಮಂದಿಗಳು ಮಾತ್ರ ಕಯ್ಯೆತ್ತಿದರು. ಅದನ್ನು ನೋಡಿ ಜನರಲ್ ಸೆಕ್ರೆಟರಿ ಮಿ|| ಬಾಲಸುಂದರಂ ಅಯ್ಯರವರು-ಕಮಿಟಿಯ ಅವಶ್ಯಕತೆಯಿಲ್ಲವೆಂಬುದೇ ಸಿದ್ಧವಾಯಿತು ಎಂದು ತಿಳಿಸಿಬಿಟ್ಟರು. ೧೩ನೆ ತಾ|| ಸೋಮವಾರದ ಸಭೆಯಲ್ಲಿ ಎಲ್ಲಸಭಿಕರೂ ಈ ಮೆಮೊರಾಂಡಮ್ಮನ್ನು ಕುರಿತು ಚರ್ಚಿಸುವುದಕ್ಕೆ ೫ ಗಂಟೆಗಳ ಕಾಲವನ್ನು ವಿನಿಯೋಗಿಸತಕ್ಕುದೆಂದು ದಿವಾನರು ಅಪ್ಪಣೆಕೊಡಿಸಿದರು.

ತದನಂತರ ನಿಯಮನಿರ್ಮಾಣಸಭೆ ಮೊದಲಾದವುಗಳಿಗೆ ಪ್ರಜಾಪ್ರತಿನಿಧಿಸಭಾ ಪಕ್ಷದಿಂದ ಸಭಿಕರನ್ನು ಆರಿಸಿ ಕಳುಹಿಸುವ ಕೆಲಸವನ್ನು ಯಾವ ದಿನ ನಡೆಯಿಸಬೇಕೆಂಬುದು ಚರ್ಚೆಗೆ ಬಂದಿತು. ಈಗ ಗೊತ್ತುಮಾಡಿರುವ ೧೨ನೆ ತಾರೀಖಿನ ದಿನವು ದೂರವಾಗಿರುವುದರಿಂದಲೂ ಅಷ್ಟರಲ್ಲಿ ಕೆಲಸಭಿಕರು ಹೊರಟುಹೋಗುವುದರಿಂದಲೂ ಇನ್ನೂ ಮುಂಚಿತವಾಗಿಯೇ ಇಡುವುದು ಉತ್ತಮವೆಂದು ಮ|| ಎಂ. ಬಸವಯ್ಯನವರು ಸೂಚಿಸಿದರು. ಸ್ವಲ್ಪ ಚರ್ಚೆನಡೆದು ತಾ|| ೯ನೆ ಗುರುವಾರದಲ್ಲಿ ನಡೆಯತಕ್ಕುದೆಂದು ಅಪ್ಪಣೆಯಾಯಿತು.

ಸಭೆಯಲ್ಲಿ ನಡೆದ ಪ್ರಶ್ನೋತ್ತರಗಳನ್ನೆಲ್ಲಾ ಮುಂದೆ ಸಂಕ್ಷೇಪವಾಗಿ ನಮ್ಮ ವಾಚಕರ ಅವಗಾಹನೆಗಾಗಿ ಪ್ರಕಟಿಸುವವರಾಗಿದ್ದೇವೆ. ಈಗ ನಡೆಯುತ್ತಿರುವ ಸಭಾಕಾರ್ಯದಲ್ಲಿ ದಿವಾನರೂ ಕೌನ್ಸಿಲರುಗಳೂ ಶಾಖಾಮುಖ್ಯಾಧಿಕಾರಿಗಳೂ ಸಹ ತಂತಮ್ಮ ಶಾಖೆಗಳಿಗೆ ಸಂಬಂಧಪಟ್ಟ ಪ್ರಶ್ನಾವಿಷಯಗಳಿಗೆ ಶಾಂತಭಾವದಿಂದಲೂ ಸರಸವಾಗಿಯೂ ಸಭಿಕರಿಗೆ ಸಮಾಧಾನವಾಗುವಂತೆ ಉತ್ತರಗಳನ್ನು ಕೊಡುತ್ತಿದ್ದಾರೆ. ಅದರಲ್ಲೂ ದಿವಾನರ ಪ್ರಜಾಭಿಮಾನವೂ ದಯಾರ್ದ್ರಹೃದಯದ ಉದಾರತ್ವವೂ ಅತಿಶಯವಾಗಿ ಪ್ರಕಟಿತವಾಗುತ್ತಿವೆ. ಆ ಸಾರಳ್ಯದಿಂದ ಅನೇಕ ಸಭಿಕರು ತಮಗೆ ಸಂಬಂಧಪಡದ ವಿಷಯಗಳಲ್ಲೂ ಪದೇಪದೇ ಪ್ರವೇಶಿಸಿ ಹೆಚ್ಚುಕಾಲ ಮಾತನಾಡಿ ಸಭಾಕಾಲವನ್ನು ವ್ಯರ್ಥಪಡಿಸಲು ಅವಕಾಶವಾಗಿರುತ್ತದೆ. ಅನೇಕ ವಿಷಯಗಳಿಗೆ "ಗುರ್ತುಮಾಡಿಕೊಂಡಿದ್ದೇವೆ, ನೋಡೋಣ" ಇತ್ಯಾದಿಯಾದ ಉತ್ತರಗಳನ್ನು ಹೇಳಿ ದಬ್ಬಿಕೊಂಡುಹೋಗದೆ ದಿವಾನರವರು ತಮ್ಮ ಸಹೋದ್ಯೋಗಿಗಳ ಅಭಿಪ್ರಾಯವನ್ನು ಅಲ್ಲೇ ತಿಳಿದುಕೊಂಡು "ಆಗುತ್ತದೆ, ಅಥವಾ ಆಗುವುದಿಲ್ಲ" ವೆಂಬುದಾಗಿ ಉತ್ತರವನ್ನು ಆಗಾಗಲೇ ಕೊಟ್ಟು ಮುಗಿಸುತ್ತಿರುವುದೇ ಹೆಚ್ಚಾಗಿರುವ ಕಾರಣ ಇದು ಸಭಿಕರಿಗೆ ಸಂತೋಷಕರವಾಗಿದೆ. ಪರ್ಯಾಲೋಚನೆಯಿಂದ ಬೇಗನೆ ಅನುಕೂಲ ಮಾಡಿಕೊಡಬೇಕೆಂದು ನಿರ್ಧರಿಸಿದ ವಿಷಯಗಳನ್ನು ಮಾತ್ರ ಪರ್ಯಾಲೋಚನೆಗೆಂದು ಇಟ್ಟುಕೊಳ್ಳುತ್ತಿದ್ದಾರೆ. ಸಭಾಕಾರ್ಯಗಳೆಲ್ಲಾ ಸಲಕ್ಷಣವಾಗಿಯೂ ಪ್ರಯೋಜಕವಾಗಿಯೂ ನೆರವೇರುತ್ತಿರುವುದು ಅಭಿನಂದನೀಯವಾಗಿದೆ.

ಸರ್ದಾರ್ ಕಾಂತರಾಜ ಅರಸಿನವರ ದಿವಾನಗಿರಿಯು ಸಂಸ್ಥಾನಕ್ಕೆ ಎಷ್ಟು ಉಪಕಾರಕವಾಗಿ ಪರಿಣಮಿಸುವುದೆಂಬುದನ್ನು ಸೂಚಿಸುವುದಕ್ಕೆ ಅವರ ಮಂತ್ರಿತ್ವದ ಪ್ರಾರಂಭದಶೆಯಲ್ಲಿ ಈ ಸಲ ಮಾಡಿರುವ ಭಾಷಣದೊಳಗೆ ಕಂಡಿರುವ ಮುಖ್ಯಾಂಶಗಳು ಸಾಧಕಗಳಾಗಿವೆ. ದೇಶದ ಪ್ರಜೆಗಳು ತಮ್ಮವರು; ಅವರ ಹಾನಿವೃದ್ಧಿಗಳೇ ತಮ್ಮ ಹಾನಿವೃದ್ಧಿಗಳು ಎಂದು ಅವರು ತ್ರಿಕರಣಪೂರ್ವಕವಾಗಿ ತಿಳಿದು ಕಾರ್ಯಮಾಡಲು ಸಂಕಲ್ಪಿಸಿರುವರೆಂಬುದಕ್ಕೆ ಅವರ ಮನೋವಾಕ್ಕಾಯಗಳೆಲ್ಲಾ ಸಭಾಮುಖದಲ್ಲೇ ಅಪ್ರಚೋದಿತವಾಗಿ ಸಾಕ್ಷ್ಯಗಳನ್ನು ಕೊಟ್ಟಿರುವುವು. ಭಾಷಣದ ಕೊನೆಯಲ್ಲಿ "ನಾವು ನಿಮ್ಮಲ್ಲಿ ಒಬ್ಬರಾಗಿದ್ದು ನಿಮ್ಮ ನಡುವೆ ಹುಟ್ಟಿ ಬೆಳೆದು ಅನೇಕ ಸರ್ಕಾರಿ ಉದ್ಯೋಗಗಳಲ್ಲಿ ನಿಮ್ಮಗಳ ಸೇವೆಯನ್ನು ಮಾಡಿರುವುದರ ಮೂಲಕ ಉಂಟಾದ ಪೂರ್ವಪರಿಚಯದ ಬಲದಿಂದ ಮುಂದೆ ಕೆಲವು ವರ್ಷಗಳ ಪರ್ಯಂತವೂ ನಾವು ನಿರ್ವಹಿಸಬೇಕಾದ ವಿಷಯಗಳನ್ನು ಕುರಿತು ಮರೆಮಾಚದೆ ಸ್ಪಷ್ಟವಾಗಿ ಮಾತನಾಡುವ ಸ್ವಾತಂತ್ರ್ಯವನ್ನು ತಾಳಿರುವೆವು" ಎಂಬ ಮಾತುಗಳನ್ನು ಆಡುವಾಗ್ಗೆ ಅವರ ನೇತ್ರಗಳು ಅಶ್ರುಪೂರಿತವಾದುವು; ಕಂಠವು ಗದ್ಗದಿಸಿತು; ಮಾತುಗಳೇ ೧-೨ ನಿಮಿಷಗಳ ಕಾಲ ಕಟ್ಟಾದುವು. ಅದನ್ನು ಕಂಡು ಸಭಿಕರೆಲ್ಲರ ಚಿತ್ತವೂ ಕರಗಿಹೋಯಿತು. ಹಿಂದೆ ಸಂಸ್ಥಾನದ ಮಂತ್ರಿಪದವಿಯನ್ನಲಂಕರಿಸಿದ್ದ ಅನೇಕರಲ್ಲಿ ವಿಧವಿಧವಾಗಿ ದೇಶಾಭ್ಯುದಯದ ಚಿಂತನೆಯು ಇದ್ದರೂ, ಇಂಥ ಪರಾಕಾಷ್ಠದಶೆಯು ಅವರುಗಳಾರಲ್ಲೂ ವ್ಯಕ್ತವಾದುದಿಲ್ಲ. ಪ್ರಭುಗಳಲ್ಲಿ ರಾಜ್ಯಹಿತಾಹಿತಸಂಬಂಧ ದೃಷ್ಟಿಯು ಎಷ್ಟು ಗಾಢವಾಗಿದೆಯೋ ಅವರ ಬಂಧುವರ್ಗದವರಲ್ಲೂ ಹಾಗೆಯೇ ಇರುವುದೆಂಬುದಕ್ಕೆ ಇದೊಂದು ಪ್ರಬಲ ದೃಷ್ಟಾಂತವು. ಈ ಕಾರಣದಿಂದಲೇ ನಮ್ಮ ರಾಜಬಂಧುವರ್ಗದವರೊಬ್ಬರು ಮಂತ್ರಿಪದವಿಗೆ ಬಂದುದಕ್ಕಾಗಿ ದೇಶೀಯರು ಅಭೂತಪೂರ್ವವಾದ ಆನಂದವನ್ನು ವ್ಯಕ್ತಪಡಿಸುತ್ತಿರುವುದು ಯುಕ್ತವಾಗಿರುತ್ತದೆ. ನಮ್ಮ ಸರ್ದಾರ್ ಕಾಂತರಾಜ ಅರಸಿನವರ ಕೃಪಾರ್ದ್ರಶುದ್ಧಾಂತಃಕರಣವು ತನ್ನ ಸತ್ಸಂಕಲ್ಪಾನುಸಾರವಾದ ಫಲಗಳನ್ನು ಕಾರ್ಯರೂಪವಾಗಿ ದೇಶಮಧ್ಯದಲ್ಲಿ ಪ್ರಸರಿಸುವುದಕ್ಕೆ ತಕ್ಕಷ್ಟು ಅವಕಾಶವನ್ನು ಸಂಪೂರ್ಣವಾಗಿ ಹೊಂದಿರಲಿ ಎಂದು ಪ್ರತಿಯೊಬ್ಬ ಪ್ರಜೆಯೊಡನೆ ನಾವೂ ಕೋರುವೆವು.

ಪ್ರಜೆಗಳ ಅಭ್ಯುದಯಕ್ಕಾಗಿ ಶ್ರೀಮನ್ಮಹಾರಾಜರವರಿಂದ ಈಗತಾನೇ ಅನುಗ್ರಹಿಸಲ್ಪಟ್ಟಿರುವ ಕೆಲವು ವರದಾನಗಳು ಸರ್ದಾರರ ಮಂತ್ರಿಪದವಿಯ ಆರಂಭಕಾಲವನ್ನು ಮತ್ತಷ್ಟು ಚಿರಸ್ಮರಣೀಯವಾಗಿಯೂ ತೇಜೋಭರಿತವಾಗಿಯೂ ಇರುವಂತೆ ಮಾಡಲು ಸಾಧಕವಾಗಿರುವುವು. ಪ್ರಜಾರಂಜನೈಕಪರಾಯಣರಾದ ಶ್ರೀಮನ್ಮಹಾರಾಜರವರಿಗೆ ಇಂಥ ವರದಾನದ ಉದಾರಚಿತ್ತವು ನಿಸರ್ಗವಾಗಿದ್ದರೂ, ಅದರಲ್ಲೂ ನಮ್ಮ ಸರ್ದಾರರ ಸೂಚನಪ್ರೇರಣಗಳು ನಿಗೂಢವಾಗಿಲ್ಲದೆ ಇರಲಾರವು. ಆದುಕಾರಣ ಈ ನೂತನ ವರಪ್ರದಾನಗಳನ್ನು ಕುರಿತು ಶ್ರೀಮನ್ಮಹಾರಾಜರಿಗೂ ನೂತನಮಂತ್ರಿವರ್ಯರಿಗೂ ಪ್ರಜೆಗಳೆಲ್ಲರೂ ಕೃತಜ್ಞತಾವಂದನೆಗಳನ್ನರ್ಪಿಸುತ್ತ, ಈ ಸತ್ಪರಿಪಾಲನಾಶ್ರಯವು ಚಿರಕಾಲ ತಮಗೆ ಲಭ್ಯವಾಗಿರುವಂತೆ ಮಾಡಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತಲಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಈಗ ಅನುಗ್ರಹಿಸಲ್ಪಟ್ಟಿರುವ ವರಗಳೊಳಗೆ ಸಂಸ್ಥಾನದಲ್ಲಿರತಕ್ಕ ಹೈಸ್ಕೂಲು ಕೆಳಗಣ ಎಲ್ಲಾ ತರಗತಿಗಳಲ್ಲೂ ಫೀಜನ್ನು ತೆಗೆದುಕೊಳ್ಳದೆ ಉಚಿತವಾಗಿ ಪಾಠಗಳು ಹೇಳಲ್ಪಡುವಂತೆ ಮಾಡುವುದೂ, ಹಿಂದುಳಿದವರಿಗಾಗಿ ಕೊಡಲ್ಪಡುತ್ತಿರುವ ವಿದ್ಯಾರ್ಥಿವೇತನವನ್ನು ೧|| ಲಕ್ಷದಿಂದ ೩ ಲಕ್ಷಕ್ಕೆ ಹೆಚ್ಚಿಸುವುದೂ ಅತ್ಯುದಾರವಾದ ಅಪ್ಪಣೆಗಳಾಗಿರುತ್ತವೆ. ಮತ್ತು ಮಿಡಲ್ ಸ್ಕೂಲುಗಳಿಂದ ಮೇಲಣ ಎಲ್ಲ ತರಗತಿಗಳಲ್ಲೂ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಕೊಡುವುದರ ಜತೆಗೆ ಇತರ ವರ್ಗಗಳ ಬಡಹುಡುಗರ ಪ್ರೋತ್ಸಾಹಕ್ಕಾಗಿಯೂ ಫ್ರೀಷಿಪ್ಪು ಸ್ಕಾಲರ್ಷಿಪ್ಪುಗಳನ್ನು ಉದಾರವಾಗಿ ಕೊಡುವ ಪದ್ಧತಿಯು ಮುಂದೆಯೂ ಇರುವುದೆಂದು ತಿಳಿಯಿಸಿರುತ್ತಾರೆ. ಆದುಕಾರಣ ಇದರಿಂದ ಬಡವಿದ್ಯಾರ್ಥಿಗಳಿಗೆ ಪ್ರೌಢತರಗತಿಗಳಲ್ಲೂ ತಕ್ಕಷ್ಟು ಸಾಹಾಯ್ಯವು ಕಲ್ಪಿಸಲ್ಪಟ್ಟಿರುವಂತೆಯೇ ಆಯಿತು. ಈ ವಿಧವಾದ ವಿದ್ಯಾಪ್ರಸಾರ ಪ್ರೋತ್ಸಾಹಗಳು ಕಾಲಕ್ರಮೇಣ ಇನ್ನೂ ಹೆಚ್ಚಿಸಲ್ಪಡುವುವೆಂಬುದನ್ನು ಇದುವರೆಗಣ ಸಕ್ರಮಾಭಿವೃದ್ಧಿಯು ನಿದರ್ಶನಪಡಿಸುತ್ತ ಪ್ರಜೆಗಳಿಗೆ ಸಂತೋಷಪ್ರದವಾಗಿರುವುದು.

ರಾಜಕೀಯ ವ್ಯವಹಾರದಲ್ಲಿ ಪ್ರಜಾಭಿಪ್ರಾಯ ಪ್ರಾಮುಖ್ಯವನ್ನು ಹೆಚ್ಚಿಸುವುದಕ್ಕಾಗಿ ಮಹಾಪ್ರಭುಗಳು ಅನುಗ್ರಹಿಸಿರುವ ಇನ್ನೆರಡು ವರಗಳು ಈ ಭಾಷಣದಲ್ಲಿ ತಿಳಿಯಿಸಲ್ಪಟ್ಟಿವೆ. ಅವುಗಳಲ್ಲಿ ೧ನೆಯದು-ನಿಯಮನಿರ್ಮಾಣಸಭೆಯ ಸಭಿಕರ ಸಂಖ್ಯೆಯನ್ನು ೨೧ ರಿಂದ ೩೦ ಕ್ಕೆ ಹೆಚ್ಚಿಸಿಕೊಟ್ಟಿರುವುದಾಗಿರುತ್ತದೆ. ೮ ಡಿಸ್ಟ್ರಿಕ್ಟುಗಳಿಂದಲೂ ಎರಡೆರಡಕ್ಕೆ ಒಬ್ಬೊಬ್ಬ ಸಭಿಕರಂತೆ ಇದುವರೆಗೆ ಆರಿಸಿ ಕಳುಹಿಸುತ್ತಿದ್ದ ಪದ್ಧತಿಯನ್ನು ತಪ್ಪಿಸಿ, ಪ್ರತಿ ಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸಿ ಕಳುಹಿಸಿಕೊಡುವಂತೆ ಅಪ್ಪಣೆ ಮಾಡಬೇಕೆಂದು ಪ್ರಜಾಪ್ರತಿನಿಧಿಗಳು ಮಾಡುತ್ತಿದ್ದ ಪ್ರಾರ್ಥನೆಯನ್ನು ನಡೆಸಿಕೊಟ್ಟಿರುವುದಲ್ಲದೆ, ಮೈಸೂರು ವಿದ್ಯಾಪೀಠದಿಂದ ಒಬ್ಬ ಪ್ರತಿನಿಧಿಯೂ, ನಾಮಿನೇಷನ್ನಿನ ಮೂಲಕ ಸರ್ಕಾರದವರೇ ಪ್ರಜಾಪ್ರಮುಖರಿಂದ ಆರಿಸಿ ಸೇರಿಸುವ ಇನ್ನು ನಾಲ್ಕುಮಂದಿಗಳೂ ಸೇರಿ ಒಟ್ಟಿಗೆ ೯ ಮಂದಿಗಳು ಇನ್ನುಮುಂದೆ ಹೆಚ್ಚಿಗೆ ನಿಯಮನಿರ್ಮಾಣ ಸಭೆಗೆ ಸೇರುವಂತಾಯಿತು. ಆದರೆ ಪ್ರಜಾಭಿಪ್ರಾಯ ಶಕ್ತಿಯನ್ನು ಬಲಪಡಿಸುವುದಕ್ಕಾಗಿ ಈ ರೀತಿ ಕೊಡಲ್ಪಟ್ಟಿರುವ ಅವಕಾಶತ್ರ ನಿಜವಾಗಿ ಸಾರ್ಥಕವಾಗಬೇಕಾಗಿದ್ದರೆ ಸಾಂಘಿಕಪ್ರಾತಿನಿಧ್ಯವು ಆವಶ್ಯಕವು. ಪ್ರಭುತ್ವದವರ ಅಭಿಪ್ರಾಯವೂ ಹೀಗಿದ್ದುದರಿಂದಲೇ ವಿಶೇಷಾವಕಾಶವನ್ನು ಈ ಹೊಸ ಅಪ್ಪಣೆಯಿಂದ ಕಲ್ಪಿಸಿಕೊಟ್ಟಿದ್ದಾರೆಂದು ನಾವು ತಿಳಿಯುತ್ತೇವೆ. ಅದಿಲ್ಲದೆ ಒಮ್ಮುಖವಾದ ಅಭಿಪ್ರಾಯದ ಒಂದೇ ಒಂದು ಜನವರ್ಗಕ್ಕೇ ಈ ವಿಶೇಷಾವಕಾಶವೆಲ್ಲಾ ದೊರೆದುಹೋಗುವಂತಾದರೆ ಇದರಿಂದ ಫಲಾತಿಶಯವಾಗುವುದಕ್ಕೆ ಪ್ರತಿಯಾಗಿ ಸಾಮಾನ್ಯಪ್ರಜಾವರ್ಗಕ್ಕೆ ದುಷ್ಫಲವೇ ವಿಶೇಷವಾದೀತು. ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸಕಲ ಪ್ರಜಾವರ್ಗಗಳವರೂ ಎಚ್ಚತ್ತು ಪ್ರತಿಡಿಸ್ಟ್ರಿಕ್ಟುಗಳಿಂದಲೂ ನಿಯಮನಿರ್ಮಾಣಸಭೆಗೆ ಒಬ್ಬೊಬ್ಬ ಸಭಿಕರನ್ನು ಆರಿಸಿ ಕಳುಹಿಸುವಾಗ್ಗೆ ಉಮೇದುವಾರರುಗಳಲ್ಲಿ ತಂತಮ್ಮ ಹಿತವನ್ನು ಕೋರಿ ಕೆಲಸಮಾಡುವರೆಂಬ ಬರವಸೆಗೊಳಗಾದ ದೊಡ್ಡಮನುಷ್ಯರನ್ನೇ ಗುರ್ತುಹಿಡಿದು ಅವರುಗಳಿಗೇ ತಂತಮ್ಮ ಓಟುಗಳನ್ನು ಕೊಟ್ಟು ಅವರು ಜಯಶೀಲರಾಗಿ ಬರುವಂತೆ ಮಾಡಿಕೊಳ್ಳಬೇಕು. ಹಾಗಿಲ್ಲದೆಹೋದರೆ ಶ್ರೀಮನ್ಮಹಾರಾಜರವರು ಪ್ರಜೆಗಳ ಅಭ್ಯುದಯಕ್ಕಾಗಿಯೆಂದು ಕಲ್ಪಿಸಿಕೊಟ್ಟ ಈ ವಿಶೇಷಾವಕಾಶವನ್ನು ಅವರು ತಮ್ಮ ಆಪ್ತಹಿತಕ್ಕಾಗಿಯೋ ಅಥವಾ ಸ್ವಪ್ರಯೋಜನಕ್ಕಾಗಿಯೋ ವಿನಿಯೋಗಿಸಿಕೊಂಡಂತಾಗುವುದು. ತಕ್ಕಷ್ಟು ತಿಳಿವೂ ಎಚ್ಚರಿಕೆಯೂ ಇಲ್ಲದ ಪ್ರಜೆಗಳಿಂದ ಈ ನೂತನಾವಕಾಶವು ಸಕ್ರಮವಾಗಿ ವಿನಿಯೋಗಿಸಿಕೊಳ್ಳಲ್ಪಡದಿರುವುದರಿಂದಲೋ ಅಥವಾ ಇತರ ತಂತ್ರಾದಿಗಳಿಂದ ಅವರ ಯತ್ನಗಳು ನಿರರ್ಥಕವಾಗಿ ಹೋಗಬಹುದಾದುದರಿಂದಲೋ ವಿವಿಧ ಪ್ರಜಾವರ್ಗಪ್ರಾತಿನಿಧ್ಯವು ನಿಯಮನಿರ್ಮಾಣ ಸಭೆಯಲ್ಲಿ ಈಗಲೂ ದೊರೆಯದೆಹೋಗುವಂತಾದರೆ ನಾಮಿನೇಷನ್ನಿನ ಮೂಲಕ ಕಲ್ಪಿಸಲ್ಪಡುವ ಅವಕಾಶವನ್ನೆಲ್ಲಾ ಸರ್ಕಾರದ ಪಕ್ಷಾಭಿಮಾನವುಳ್ಳ ಪೆನ್ಷನ್ಡ್ ಆಫೀಸರಂಥವರ ಭಾಗಕ್ಕೇ ಬಿಡದೆ, ಹಿಂದುಳಿದ ಜನವರ್ಗಗಳವರ ಭಾಗಕ್ಕೆ ವಿನಿಯೋಗಿಸುವುದು ದುರ್ನಿವಾರವಾಗಿರುತ್ತದೆಂಬುದನ್ನು ಹೇಳಬೇಕಾಗಿಲ್ಲ. ಹಾಗೆ ಮಾಡಿದರೇನೆಯೇ ಈ ನೂತನವರವು ಸಫಲವಾಗಿ ಪ್ರಜಾಬಾಹುಳ್ಯ ಸಂತೋಷಕ್ಕೆ ಕಾರಣವಾಗುವುದು.

ಬಜೆಟ್ ಫೈನಾನ್ಸ್ ಕಮಿಟಿಯನ್ನು ಕೂಡ ಪ್ರಜಾಭಿಪ್ರಾಯ ಸಾಹಾಯ್ಯದಿಂದ ಬಲಪಡಿಸುವುದಕ್ಕಾಗಿ ಈಗ ಮಾಡಲ್ಪಟ್ಟಿರುವ ಉದಾರವಾದ ಅಪ್ಪಣೆಯು ವಿಶೇಷವಾಗಿ ಅಭಿನಂದನೀಯವಾಗಿದೆ. ಇದರಲ್ಲಿ ೧೨ ಮಂದಿ ಸಭಿಕರಿರುವಂತೆಯೂ ಅವರಲ್ಲಿ ಅನೌದ್ಯೋಗಿಕ ಸಭಿಕರೇ ಸಮರ್ಥವಾಗಿರುವಂತೆಯೂ ಮಾಡಲ್ಪಟ್ಟಿದೆ. ಅದಕ್ಕೂ ಕೂಡ ಪ್ರಜಾಪ್ರತಿನಿಧಿ ಸಭೆಯಿಂದ ಇಬ್ಬರು ಸಭಿಕರನ್ನೂ ನಿಯಮನಿರ್ಮಾಣ ಸಭೆಯಿಂದ ಒಬ್ಬರನ್ನೂ ಆರಿಸಿ ಕಳುಹಿಸಿಕೊಡಬಹುದಾಗಿದೆ. ಇನ್ನೆಲ್ಲಾ ಪ್ರಜಾಧಿಕಾರಕ್ಕೇ ಬಿಡಲ್ಪಟ್ಟಿದೆ. ಅಲ್ಲದೆ ಪ್ರಜಾಪಕ್ಷದಿಂದ ಇನ್ನು ಮೂವರನ್ನು ಸರ್ಕಾರದವರೇ ನಾಮಿನೇಷನ್ನಿನ ಮೂಲಕ ಆರಿಸಿ ಸೇರಿಸುವರು. ಸರ್ಕಾರದ ಆಯವ್ಯಯ ಪರಿಶೀಲನೆಗೆ ತಕ್ಕಷ್ಟು ಸಾಮರ್ಥ್ಯವುಳ್ಳವರನ್ನು ತಮ್ಮ ಪಕ್ಷದಿಂದ ಆರಿಸಿ ಕಳುಹಿಸಿಕೊಡಬೇಕಾದ ಈ ಅವಕಾಶವನ್ನು ಫಲಪ್ರದವಾಗುವಂತೆ ವಿನಿಯೋಗಿಸಿಕೊಳ್ಳುವುದು ಕೂಡ ಪ್ರಜಾಪ್ರತಿನಿಧಿಗಳ ಕೈಯಲ್ಲಿದೆ. ಸರ್ಕಾರದ ಆಯವ್ಯಯಗಳ ರೀತಿಯನ್ನು ಕೇಳಿದರೆ ದಿಗಿಲಾಗುತ್ತಿರುವ ಈಗಣ ಸಂದರ್ಭದಲ್ಲಿ ಈ ಫೈನಾನ್ಸ್ ಕಮಿಟಿಯು ಅತ್ಯವಶ್ಯಕವಾದುದು. ಇದು ಸಾಮರ್ಥ್ಯದಿಂದ ಕೆಲಸಮಾಡಿ ಸರ್ಕಾರಕ್ಕೆ ತಕ್ಕಂತೆ ದಿಕ್ಪ್ರದರ್ಶನ ಮಾಡಿಕೊಟ್ಟು ಸಾಹಾಯ್ಯಗೊಳಿಸಬೇಕಾಗಿದೆ. ಪ್ರಜೆಗಳು ಕೊಡುವ ಹಣವು ಸರ್ಕಾರದ ಉದ್ಯೋಗಿಗಳಿಂದ ಅತ್ಯವಶ್ಯಕವಲ್ಲದ ವಿಷಯಗಳಿಗೆಲ್ಲಾ ದುಂದಾಗಿ ವಿನಿಯೋಗಿಸಲ್ಪಟ್ಟು ಅವಶ್ಯಕವಾದ ವಿಷಯಗಳಿಗೆ ಕೊರತೆಬಿದ್ದುಹೋಗುವುದನ್ನೂ, ಅಥವಾ ಸರ್ಕಾರವು ಸಾಲಸೋಲಗಳಿಗೆ ಈಡಾಗಿಹೋಗುವುದನ್ನೂ ನಿರೋಧಿಸುವುದಕ್ಕೆ ಫೈನಾನ್ಸ್ ಕಮಿಟಿಯನ್ನು ಪ್ರಜಾಮತ ಬಾಹುಳ್ಯದಿಂದ ಇನ್ನಷ್ಟು ಬಲಪಡಿಸುವುದು ಕೂಡ ಅವಶ್ಯಕವಾಗಿದೆ. ಆದುಕಾರಣ ಸರ್ಕಾರದ ಪಕ್ಷದ ಸಭಿಕರ ಸಂಖ್ಯೆಗಿಂತಲೂ ಪ್ರಜಾಪಕ್ಷದ ಸಭಿಕರ ಸಂಖ್ಯೆಯು ಇದರಲ್ಲಿ ಹೆಚ್ಚಾಗಿರುವಂತೆಯೂ, ಈ ಕಮಿಟಿಯವರ ತೀರ್ಮಾನವು ಪ್ರಭುತ್ವದವರಿಂದ ಅನುಲ್ಲಂಘನೀಯವಾಗಿರುವಂತೆಯೂ ಮಾಡಿಡುವುದು ಫಲಪ್ರದವೆಂದು ತಿಳಿಯುತ್ತೇವೆ.

ದಿವಾನರ ಉಪನ್ಯಾಸದಲ್ಲಿ ಕಂಡಿರುವ ರಾಜ್ಯಾಡಳಿತದ ಇನ್ನು ಕೆಲಮುಖ್ಯಭಾಗಗಳನ್ನು ಕುರಿತು ಮುಂದೆ ಅವಕಾಶ ದೊರೆದಂತೆ ಬೇರೆಬೇರೆಯಾಗಿ ವಿಚಾರಮಾಡಬೇಕೆಂದಿದ್ದೇವೆ. ಸದ್ಯಃ ಪ್ರಜೆಗಳ ಮನಸ್ಸನ್ನೆಲ್ಲಾ ಚಿಂತಾಪಂಕದಲ್ಲಿ ಮುಳುಗಿಸುವಂತಿರುವ ವಿಚಾರವೊಂದನ್ನು ತಿಳಿಯಿಸಿ ಈ ಲೇಖನವನ್ನು ಮುಗಿಸುತ್ತೇವೆ. ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯು ದೇಶಾಭ್ಯುದಯ ದೃಷ್ಟಿಯಿಂದ ತೇಜೋವತ್ತಾಗಿ ನಡೆದರೂ ಪರ್ಯವಸಾನವು ಸಂತೋಷಪ್ರದವಾಗಿ ತೇಲಲಿಲ್ಲವೆಂಬುದನ್ನು ಈ ವಿಚಾರವು ದೃಢಪಡಿಸುತ್ತಲಿದೆ. ಅವರ ಕಾರ್ಯಭಾರಗಳು ಕೆಲ ವಿಷಯಗಳಲ್ಲಿ ದುಂದಿನಮಯವಾಗಿರುವುವೆಂದು ಅವರಿದ್ದಾಗಲೇ ಆಕ್ಷೇಪಾಕರವಾಗಿದ್ದುವು. ಈಗ ವ್ಯಕ್ತವಾಗಿರುವಂಶಗಳು ಅದನ್ನು ಪ್ರಮಾಣೀಕರಿಸಿರುತ್ತವೆಂಬುದನ್ನು ವಿಷಾದದಿಂದ ತಿಳಿಯಿಸಬೇಕಾಗುತ್ತದೆ.

ದಿವಾನ್ ಕಾಂತರಾಜ ಅರಸಿನವರು ಬೊಕ್ಕಸದ ಸ್ಥಿತಿಯನ್ನು ಕುರಿತು ಭಾಷಣಮಾಡಿದುದರಲ್ಲಿ—ಹಿಂದಣ ದಿವಾನರು ಲಾಭನಿರೀಕ್ಷಣೆಯಿಂದ ಅನೇಕ ಕಾರ್ಯಗಳಿಗೆ ವಿಶೇಷದ್ರವ್ಯವನ್ನು ವ್ಯಯಮಾಡಿದರು. ಆದರೆ ಫಲವು ಮಾತ್ರ ನಿರೀಕ್ಷಣೆಯಂತೆ ಆಗಲಿಲ್ಲ. ಮುಂದೆ ಕೆಲಕಾಲದವರೆಗೂ ಆಗುವ ಹಾಗೂ ಇಲ್ಲ. ಮತ್ತು ಅವು ಫಲಪ್ರದವಾಗುವ ಸ್ಥಿತಿಗೆ ಬರಬೇಕಾದರೆ ಇನ್ನೂ ಹೇರಳವಾಗಿ ಹಣವನ್ನು ಆ ಸ್ಥಾಪನೆಗಳಿಗಾಗಿ ವೆಚ್ಚಮಾಡಬೇಕಾಗಿರುತ್ತದೆ. ಬೊಕ್ಕಸದಲ್ಲಿ ಹಣವಿಲ್ಲ. ಅದಕ್ಕಾಗಿ ಸಾಲವನ್ನು ಮಾಡಿಯೇ ತೀರಬೇಕಾಗುತ್ತದೆ. ಸಂಸ್ಥಾನದ ಆಯವ್ಯಯ ಸ್ಥಿತಿಗಳನ್ನು ನೋಡಿದರೊ ಆದಾಯಕ್ಕಿಂತ ವ್ಯಯವೇ ವರ್ಷಕ್ಕೆ ೨೦ ಲಕ್ಷದಷ್ಟು ಮಿಗಿಲಾಗುತ್ತಿದೆ. ಆದುಕಾರಣ ಹೊಸದಾಗಿ ಕೆಲವು ತೆರುಗೆಗಳನ್ನು ವಿಧಿಸಿದಲ್ಲದೆ ನಿರ್ವಾಹವಾಗುವಂತಿಲ್ಲ. ಹೀಗೆ ಮಾಡಿದರೂ ವೆಚ್ಚಕ್ಕೆ ತಕ್ಕಷ್ಟು ಆದಾಯವು ಕೂಡಿದಂತಾಗುವುದಿಲ್ಲ" ಎಂಬರ್ಥವನ್ನು ವ್ಯಕ್ತಪಡಿಸಿದ್ದಾರೆ. ಸರ್ ಪಿ. ಎನ್. ಕೃಷ್ಣಮೂರ್ತಿಗಳವರು ತಮ್ಮ ಮಂತ್ರಿತ್ವಕಾಲದಲ್ಲಿ ಮಿತವ್ಯಯದೃಷ್ಟಿಯನ್ನಿಟ್ಟು ಬೊಕ್ಕಸದಲ್ಲಿ ಕೋಟ್ಯಂತರ ದ್ರವ್ಯವನ್ನು ಶೇಖರಿಸಿಟ್ಟುಹೋದರು. ಮ|| ಮಾಧವರಾಯರು ಬಂದು ದುಂದಿಗೆ ದಾರಿಹಾಕಿದರು. ಅವರ ಜತೆಗೆ ಮ|| ಟಿ. ಆನಂದರಾಯರು ಕೃಷ್ಣಮೂರ್ತಿಯವರ ಮೇಲುಪಂತಿಯನ್ನೇ ಹಿಡಿದು ಆಡಂಬರಕ್ಕೆ ಇಂಬುಗೊಡದೆ ೨ ಕೋಟಿಯ ಮೇಲೆಯೇ ಹಣವನ್ನು ಕೂಡಹಾಕಿದ್ದರು. ಆದು ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಬರಿದಾಗಿ ಸಂಸ್ಥಾನವು ಸಾಲವನ್ನು ಮಾಡಿಕೊಳ್ಳಬೇಕಾದ ಅವಸ್ಥೆಗೆ ನಿಂತಿತೆಂಬುದನ್ನು ಕೇಳಿದರೆ ಯಾವಪ್ರಜೆಗೆತಾನೇ ವಿಷಾದವಾಗುವುದಿಲ್ಲ? ನವನವ ಪ್ರತಿಷ್ಠಾಪನೆಗಳ ಪ್ರಖ್ಯಾಪನೆಯಲ್ಲಿಯೇ ವಿಶೇಷ ದೃಷ್ಟಿಕೊಟ್ಟಿದ್ದ ಸರ್ ವಿಶ್ವೇಶ್ವರಯ್ಯನವರ ಕಾರ್ಯಭಾರದಿಂದ ಇಂಥ ಪರ್ಯವಸಾನವಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಅವರು ಸಂಸ್ಥಾನಕ್ಕೆ ಅಹಿತವನ್ನು ಮಾಡಬೇಕೆಂಬ ಸಂಕಲ್ಪದಿಂದ ಮಾಡಿದರೆಂದು ಹೇಳಲು ಯಾರಿಗೂ ಸಾಧ್ಯವೂ ಇಷ್ಟವೂ ಆಗಿಲ್ಲದಿದ್ದರೂ "ಹಾಸುಗೆಯಿದ್ದಷ್ಟು ಕಾಲು ನೀಡಲಿಲ್ಲ" ವೆಂಬುದನ್ನು ಮಾತ್ರ ಹೇಳಿದಲ್ಲದೆ ತೀರದು. ಕನ್ನಂಬಾಡಿ ಕೃಷ್ಣರಾಜಸಾಗರ ಪ್ರತಿಷ್ಠಾಪನೆಯ ಏರ್ಪಾಟು ಮ|| ಮಾಧವರಾಯರ ಕಾಲದಲ್ಲೇ ಉದಿಸಿದರೂ "ವಿಶೇಷ ಧನವ್ಯಯವಾಗುವುದು, ಅನಾರೋಗ್ಯಕ್ಕೀಡಾಗುವುದು" ಎಂಬುದೇ ಮೊದಲಾದ ಆಕ್ಷೇಪಗಳಿಂದ ಆಗ ಅದು ತಡೆಯಲ್ಪಟ್ಟು, ಅದೇ ಯತ್ನವು ಸರ್ ವಿಶ್ವೇಶ್ವರಯ್ಯರ ಕಾಲದಲ್ಲಿ ಪ್ರಶಸ್ತಯತ್ನವೆಂದೂ ೧ ಕೋಟಿ ಧನವ್ಯಯದಿಂದ ಸಾಧ್ಯವೆಂದೂ ಪರಿಗ್ರಹಿಸಲ್ಪಟ್ಟಿತು. ಈಗ ಅದಕ್ಕಾಗಿ ೧|| ಕೋಟಿಯ ಮೇಲೆಯೇ ವೆಚ್ಚಮಾಡಿದುದಾಗಿದೆ. ಅದು ಕೊನೆಮುಟ್ಟಬೇಕಾಗಿದ್ದರೆ ಇನ್ನೂ ೧| ಕೋಟಿಗಿಂತಲೂ ಮಿಗಿಲಾಗಿಯೇ ಬೇಕಾಗುವುದೆಂದು ಗೊತ್ತಾಗುತ್ತದೆ. ಹೀಗೆಯೇ ಇನ್ನು ಕೆಲ ಪ್ರತಿಷ್ಠಾಪನೆಗಳ ಅವಸ್ಥೆಯೂ ಆಗಬಹುದಾಗಿದೆ. ಹೀಗಿರುವುದರಿಂದ ಈಗಣ ರಾಜ್ಯಭಾರ ನಿರ್ವಾಹದಲ್ಲಿ ಬಿರುಗಾಳಿಯ ಬಡಿತದಿಂದ ಉಲ್ಲೋಲಕಲ್ಲೋಲವಾಗಿರುವ ಪಾರಾವಾರದ ಮಧ್ಯದಲ್ಲಿ ತೂಗಾಡುತ್ತಿರುವ ಹಡಗನ್ನು ಬಹಳ ನೇರ್ಪಿನಿಂದ ಸಾಗಿಸಿ ದಡವನ್ನು ಸೇರಿಸಬೇಕಾದ ಸಹನವಂತನೂ ಧೈರ್ಯಶಾಲಿಯೂ ಆದ ಕೇಪ್ಟನ್ನಿನ ಸ್ಥಿತಿಯು ಸರ್ದಾರ್ ಕಾಂತರಾಜ ಅರಸರವರಿಗೂ, ಅವರ ಉಪಮಂತ್ರಿ ಮಂಡಲಕ್ಕೂ ಪ್ರಾಪ್ತವಾಗಿದೆಯೆಂದು ಹೇಳಬೇಕಾಗುವುದು. ಸಂಸ್ಥಾನದ ಬೊಕ್ಕಸವು ದಿವಾಳಿಯಾಗದಂತೆಯೂ, ಪ್ರಜೆಗಳು ನಿರ್ವಾಹವಿಲ್ಲದೆ ದುರ್ಭರವಾದ ಹೊಸಹೊಸ ಕಂದಾಯಗಳ ಪರಂಪರೆಯನ್ನು ಹೊತ್ತುಕೊಳ್ಳಬೇಕಾದ ಕಷ್ಟಕ್ಕೆ ಸಿಲ್ಕದಂತೆಯೂ ಮಾಡಿ, ರಾಜ್ಯರಥವನ್ನು ಸಾಗಿಸಿಕೊಂಡು, ಶಾಶ್ವತಕೀರ್ತಿಯನ್ನೂ ಪ್ರಭುಶ್ಲಾಘನೆಯನ್ನೂ ಪಡೆದುಕೊಳ್ಳುವಲ್ಲಿ ಸಕಲ ವಿಧವಾದ ಶಕ್ತಿಯನ್ನೂ ಅವರಿಗೂ ಅವರ ಉಪಮಂತ್ರಿ ಮಂಡಲಿಯವರಿಗೂ ಜಗದೀಶ್ವರನು ಅನುಗ್ರಹಿಸಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ಈ ತಾ|| ೨೯ ರಲ್ಲಿ ಬೆಂಗಳೂರಿನಲ್ಲಿ ನಿಯಮನಿರ್ಮಾಣ ಸಭೆಯು ಕೂಡುವುದು.

ಬರುವ ಜನವರಿ ತಿಂಗಳಿಂದ ದಾವಣಗೆರೆಯಲ್ಲಿ ಒಂದು ಮುನ್ಸೀಫ್ ಕೋರ್ಟು ಸ್ಥಾಪಿಸಲ್ಪಡುವುದಾಗಿದೆ.

ಪ್ರಜಾಪ್ರತಿನಿಧಿಗಳಿಗೆಲ್ಲಾ ಕಳೆದಬುಧುವಾರ ಕೋಮುವಾರಾಗಿ ಬೇರೆ ಬೇರೆ ಕಡೆ ಸರ್ಕಾರದ ಔತಣವು ನಡೆದಿತು.

ಈಸಲ ನವರಾತ್ರಿಯ ಕಾಲದಲ್ಲಿ ಬಳಂಗು ಮೊದಲಾದ ಜೂಜಾಟಗಳಿಗೆ ಲೈಸೆನ್ಸನ್ನು ಕೊಡದಿದ್ದುದು ಬಹಳ ಕ್ಷೇಮವಾಯಿತು.

ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳವರ ಸ್ವಾರಿಯು ತಾ|| ೧೩ ಕ್ಕೆ ಹೊಸಕೋಟೆ ಮುಕ್ಕಾಮಿಗೆ ದಯಮಾಡಿಸುವುದಾಗಿದೆ.

ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಬೆಂಗಳೂರು ಮ್ಯುನ್ಸಿಪಾಲಿಟಿ ಆ|| ಪ್ರೆಸಿಡೆಂಟ್‌ಗಿರಿಯ ಅವಧಿಯು ಬರುವ ಜನವರಿ ತಿಂಗಳ ಕಡೆಯವರೆಗೂ ಹೆಚ್ಚಿಸಲ್ಪಟ್ಟಿರುತ್ತದೆ.

ಬರುವ ತಾ|| ೧೫ ನೆ ಸಾಯಂಕಾಲ ರಾಜಧಾನಿಯ ಮಹಾಜನರು ಟೌನ್‌ಹಾಲಿನಲ್ಲಿ ದಿವಾನ್ ಕಾಂತರಾಜೆ ಅರಸಿನವರಿಗೆ ವಿಜ್ಞಾಪನಪತ್ರವನ್ನೊಪ್ಪಿಸಿ ತಮ್ಮ ಸಂತೋಷವನ್ನು ತೋರ್ಪಡುವವರಾಗಿದ್ದಾರೆ.

ಕಳೆದ ೧ ಪಕ್ಷದಿಂದಲೂ ಮಳೆಯಿಲ್ಲ. ಸದ್ಯಃ ಬಿತ್ತಿರುವ ಹುರುಳಿ ಪೈರಿಗೆ ಮಳೆಯು ಬೇಕಾಗಿದೆ. ಸರೋಗಾದ್ಯುಪದ್ರವಗಳೇನೂ ಇಲ್ಲದುದರಿಂದ ನವರಾತ್ರಿಯ ಸಕಲ ಮಹೋತ್ಸವಗಳೂ ವೈಭವದಿಂದ ಜರುಗಿದುವು.

ಬರುವ ದೀವಳಿಗೆಯ ಸಮಯದಲ್ಲಿ ಹುಬ್ಬಳ್ಳಿಯಲ್ಲಿ ಒಂದು ಪ್ರಾಂತಿಕಮಹಾಸಭೆಯನ್ನು ನಡೆಯಿಸಲು ಅಲ್ಲಿಯ ವೀರಶೈವ ಮಹಾಜನರು ಪ್ರಯತ್ನಿಸಿದ್ದಾರೆ ಅದರಲ್ಲಿ ಶುಭೋದಯ ಪ್ರಕರಣವೇ ಮೊದಲಾದ ಸಾಮಾಜಿಕ ವಿಷಯಗಳು ಚರ್ಚಿಸಲ್ಪಡುವುವು.

ಚಿಕ್ಕಮಗಳೂರಿನಲ್ಲಿ ಸ್ಥಾಪಿತವಾಗಿರುವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ಈಗ ಸೇರಿರುವ ವಿದ್ಯಾರ್ಥಿಗಳಲ್ಲದೆ ಇನ್ನೂ ೩೦ ಮಂದಿಗಳು ಬಂದು ಸೇರಬಹುದಾಗಿದೆಯೆಂದೂ ಇಷ್ಟವಿದ್ದ ವಿದ್ಯಾರ್ಥಿಗಳು ಅಲ್ಲಿಯ ಸೆಕ್ರೆಟರಿಗಳಿಗೆ ಬರೆದು ಸೇರಿಕೊಳ್ಳಬಹುದೆಂದೂ ತಿಳಿಯಪಡಿಸಿದ್ದಾರೆ.

ಏಪ್ರೀಲ್‌ತಿಂಗಳಲ್ಲಿ ಪ್ರತಿವರ್ಷವೂ ನಡೆಯುತ್ತಿದ್ದ ಪ್ರಜಾಪ್ರತಿನಿಧಿಸಭೆಯ ೨ನೆ ಅಧಿವೇಶನವನ್ನು ಇನ್ನುಮುಂದೆ ವರ್ಧಂತೀ ಮಹೋತ್ಸವ ನಡೆಯುವ ಜೂನ್ ತಿಂಗಳಲ್ಲಿ ನಡೆಯಿಸಬೇಕೆಂಬ ಯೋಚನೆಯನ್ನು ಸರ್ಕಾರದವರು ಮಾಡುತ್ತಿರುವುದಾಗಿ ದಿವಾನರವರ ಅಪ್ಪಣೆಯಿಂದ ಗೊತ್ತಾಗುತ್ತದೆ.

ದಿವಾನ್ ಸರ್ದಾರ್ ಎಂ. ಕಾಂತರಾಜ ಅರಸಿನವರು ಸರ್ಕಾರಿಯಧಿಕಾರಿಗಳನ್ನೂ ಪ್ರಮುಖಜನರನ್ನೂ ಲೇಕ್‌ವ್ಯೂ ಬಂಗಲೆಗೆ ಈ ತಾ|| ೧೪ ನೆಯ ಮಂಗಳವಾರದ ಸಾಯಂಕಾಲ ೫ ಗಂಟೆಗೆ ಬರಮಾಡಿಕೊಂಡು ಟೆನ್ನಿಸ್, ಗಾಲ್ಫ್ ಮೊದಲಾದ ವಿಹಾರೋತ್ಸವಗಳಿಂದ ಸತ್ಕರಿಸುವವರಾಗಿರುವರು.

ಬೆಂಗಳೂರು ಅಮಚೂರು ಡ್ರಮಾಟಿಕ್ ಕಂಪೆನಿಯವರು ಕಳೆದ ಶುಕ್ರವಾರ ರಾತ್ರಿ ರತ್ನಾವಳಿ ನಾಟಕಶಾಲೆಯಲ್ಲಿ ರಾಮದಾಸ ಚರಿತ್ರೆ ಎಂಬ ನಾಟಕವನ್ನು ತೆಲುಗಿನಲ್ಲಿ ಅಭಿನಯಿಸಿದರು. ಅಗ್ಗೆ ಶ್ರೀಮದ್ಯುವರಾಜರವರೂ ದಯಮಾಡಿಸಿದ್ದರು. ಶಾಲೆಯೆಲ್ಲಾ ಪ್ರೇಕ್ಷಕರಿಂದ ಬಹು ನಿಬಿಡವಾಗಿದ್ದಿತು. ವಿದ್ಯಾವಂತರೇ ಸೇರಿ ಸಲಕ್ಷಣವಾಗಿ ನಡೆಯಿಸಿದ ಈ ಪ್ರಯೋಗವು ಪ್ರಶಂಸನೀಯವಾಗಿದ್ದಿತು.

ನಿನ್ನೆ ಶನಿವಾರ ದಿವಸ ಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿಯ ಜಾತ್ರೆಯು ವೈಭವದಿಂದ ನಡೆದಿತು. ರಥೋತ್ಸವಕಾಲಕ್ಕೆ ಶ್ರೀಮನ್ಮಹಾರಾಜರೇ ಮೊದಲಾದ ರಾಜವರ್ಗದವರು ದಯಮಾಡಿಸಿದ್ದರು. ರಥವು ಹಿಂದು ಸ್ಥಾನಕ್ಕೆ ಸೇರಿದಕೂಡಲೇ ೨೧ ಗುಂಡುಗಳು ಹಾರಿಸಲ್ಪಟ್ಟುವು. ಅರಮನೆಯ ಬಿರುದಾವಳಿಗಳೆಲ್ಲಾ ಹೋಗಿದ್ದುವು. ನಾಳೆ ಸೋಮವಾರ ರಾತ್ರಿ ತೆಪ್ಪೋತ್ಸವವು ದೇವೀಕೆರೆಯಲ್ಲಿ ನಡೆಯುತ್ತದೆ.

ನ್ಯಾಯಮೂರ್ತಿ ಸರ್ ಅಬ್ದುಲ್ ರಹೀಂರವರು ಕಳೆದ ಗುರುವಾರದ ಮೇಲ್‌ಟ್ರೇನಿನಲ್ಲಿ ತಮ್ಮ ಕುಮಾರರು ಮತ್ತು ಅಳಿಯಂದಿರೊಡನೆ ರಾಜಧಾನಿಗೆ ದಯಮಾಡಿಸಿದರು. ವಿದ್ಯಾಪೀಠದ ಮುಖ್ಯಾಧಿಕಾರಿಗಳೂ ಕೌನ್ಸಿಲರ್ ಮಿ|| ಹಂಜಾಹುಸೇನ್ ಸಾಹೇಬರೇ ಮೊದಲಾದ ಅನೇಕ ಮಹಮ್ಮದೀಯ ಪ್ರಮುಖರೂ ನಿಲ್ದಾಣದಲ್ಲಿ ಇದಿರ್ಗೊಂಡು ಮರ್ಯಾದಿಸಿ ಗೆಸ್ಟ್ ಕ್ವಾರ್ಟರಿನಲ್ಲಿಳುಹಿಸಿದರು. ಇವರು ಶ್ರೀಮನ್ಮಹಾರಾಜರವರ ಆತಿಥ್ಯದಲ್ಲಿರುವರು.

ಕಾಲೇಜು ಬಯಲಿನಲ್ಲಿ ವಿದ್ಯಾರ್ಥಿಗಳ ಅಂಗಸಾಧನೆಗಳ ಕ್ರಿಕೆಟ್ ಚಂಡಾಟದ ಸ್ಕ್ಯಾಟ್ ಏರ್ಪಾಡಿನ ಪಂದ್ಯಗಳು ಕುಸ್ತಿಗಳು ಅಂಗಸಾಧನೆಗಳು ಇತ್ಯಾದಿಗಳು ವಿನೋದಕರವಾಗಿ ಕಳೆದ ವಾರವೆಲ್ಲಾ ನಡೆದುವು. ಬೆಂಗಳೂರು, ತುಮಕೂರು, ಕೋಲಾರಗಳಿಂದ ಅನೇಕ ವಿದ್ಯಾರ್ಥಿಗಳು ಬಂದಿದ್ದರು. ಜಯಶಾಲಿಗಳಾದ ಸಂಘಗಳಿಗೆ ಬಹುಮಾನ ಪಾತ್ರಗಳನ್ನು ಶ್ರೀಮದ್ಯುವರಾಜರೂ ಸರ್ದಾರ್ ಕಾಂತರಾಜ ಅರಸರವರೂ ದಯಪಾಲಿಸಿದರು.

ಕಳೆದ ತಾ|| ೫ ನೆಯದಿವಸ ರಾಜಧಾನಿಯ ಜೈನವಿದ್ಯಾಲಯದಲ್ಲಿ ದಾವಣಗೆರೆಯ ಪ್ರಸಿದ್ಧವರ್ತಕರಾದ ಬ್ರಹ್ಮಪ್ಪ ತವನಪ್ಪನವರ ಅಧ್ಯಕ್ಷತೆಯಿಂದ ಜೈನಸಭೆ ಸೇರಿದ್ದಿತು. ಮೈಸೂರು ದೇಶದ ಹಲವು ಕಡೆಗಳಿಂದಲ್ಲದೆ ಬೆಳಗಾಂ ಕೊಲ್ಹಾಪುರ ಮೊದಲಾದ ಕಡೆಗಳಿಂದಲೂ ಅನೇಕ ಜೈನಮತಸ್ಥರು ಸಭೆಗೆ ಬಂದಿದ್ದರು. ಸ್ವಜನರ ವಿದ್ಯಾಭಿವೃದ್ಧಿಗಾಗಿ ಒಂದು ಫಂಡನ್ನು ಸೇರಿಸಲು ನಿರ್ಧಾರವಾಗಿ, ಒಂದು ಸಂಘವನ್ನು ಅದಕ್ಕಾಗಿ ಸ್ಥಾಪಿಸಿ ರಿಜಿಸ್ಟರ್ಮಾಡಿಸಬೇಕೆಂದು ತೀರ್ಮಾನಿಸಿದರು. ನೆರೆದಿದ್ದ ಸಭಿಕರಿಂದ ಆ ದಿನವೇ ೨೦೦೦ ರೂ.ಗಳವರೆಗೆ ಚಂದಾ ಕೂಡಿತು.

ಕಳೆದ ಶುಕ್ರವಾರದ ದಿನ ಕಾಲೇಜು ಬಯಲಿನಲ್ಲಿ ಏರ್ಪಡಿಸಿದ್ದ ಸಭಾಮಂಟಪದಲ್ಲಿ ಮೈಸೂರು ವಿದ್ಯಾಪೀಠದ ದ್ವಿತೀ

ಯ ಪಟ್ಟಪ್ರದಾನಮಹಾಸಭೆಯು ವಿಜೃಂಭಣೆಯಿಂದ ಸಾಗಿತು. ಚಾನ್ಸಲರಾದ ಶ್ರೀಮನ್ಮಹಾರಾಜರೂ ಪ್ರೊ|| ವೈಸ್ ಚಾನ್ಸಲರಾದ ಶ್ರೀಮದ್ಯುವರಾಜರೂ ದಯಮಾಡಿಸಿದ್ದರು. ಸರ್ ಅಬ್ದುಲ್‌ರಹೀಂರವರು ಅಮೌಲ್ಯಹಿತೋಪದೇಶ ಗರ್ಭಿತವಾದ ಉಪನ್ಯಾಸವನ್ನು ಮಾಡಿ ಸಭಿಕರನ್ನೆಲ್ಲಾ ಆನಂದಪಡಿಸಿದರು. ಪರೀಕ್ಷೆಯಲ್ಲಿ ಜಯಶೀಲರಾಗಿದ್ದ ವಿದ್ಯಾರ್ಥಿಗಳಿಗೆಲ್ಲಾ ಶ್ರೀಮನ್ಮಹಾರಾಜರವರು ಸ್ವಹಸ್ತದಿಂದ ಪಟ್ಟಪ್ರದಾನವನ್ನು ಮಾಡಿದರು.

ಧಾರವಾಡದ ಶುಭೋದಯ ಪ್ರಕರಣದ ತೀರ್ಪಿನಮೇಲೆ ಸರ್ಕಾರದವರು ಹೈಕೋರ್ಟಿನಲ್ಲಿ ಅಪೀಲ್ ಮಾಡಬೇಕೆಂಬ ನಿರ್ಧಾರವನ್ನು ಈ ಕೆಳಗೆ ಕಂಡ ಸ್ಥಲಗಳವರು ಸಭಾಮೂಲಕ ಮಾಡಿ ಕಳುಹಿಸಿದ್ದಾರೆ.—ಬೊಂಬಾಯಿ ಕರ್ನಾಟಕದಲ್ಲಿ— ಹುಬ್ಬಳ್ಳಿ, ಧಾರವಾಡ, ಕುಂದಗೋಳ, ಹಾಂಸಭಾಂವಿ, ಹಾವೇರಿ, ಮೇಣ್ಣೇರಿ, ರಬಕವಿ, ಬನಹಟ್ಟಿ, ಬೆಳಗಾವ, ರಾಣಿಬೆನ್ನೂರ, ಬಾಸಂಗ, ಹಿರೆಕೆರೂರುಗಳು. ಮೈಸೂರು ದೇಶದಲ್ಲಿ— ಶಿರಾಳಕೊಪ್ಪ, ಜಗಳೂರು, ಬಿಳಿಚೋಡು, ಅಸಗೋಡು, ಪಲ್ಲಾಗಟ್ಟೆ ದೇವಿಕರೆ, ಮೆದಕೇರಹಳ್ಳಿ, ಸೂರಡ್ಡಿಹಳ್ಳಿ, ಕಾಟೀನಹಳ್ಳಿ, ಮಾದನಹಳ್ಳಿ ಮುಗ್ಗಿದರಾಗಿಹಳ್ಳಿ, ಹೆಮ್ಮನಬೇತೂರು.

ಮಹಾರಾಜ್ಞೀ ಕಲಾಶಾಲಾಭವನದಲ್ಲಿ ಕಳೆದ ತಾ|| ೮ನೆ ಮಧ್ಯಾಹ್ನ ಸ್ತ್ರೀಯರ ದ್ವಿತೀಯ ವಾರ್ಷಿಕಸಭೆಯು ಮ|| ಡೆಪ್ಯುಟಿಕಮಿಷನರ್ ಅರುವಾಮುದಯ್ಯಂಗಾರರ ಧರ್ಮಪತ್ನಿ ಶ್ರೀಮತಿ ರಂಗಮ್ಮಾಳ್‌ಯವರ ಅಧ್ಯಕ್ಷತೆಯಿಂದ ನಡೆಯಿತು. ಆ ಕಲಾಶಾಲೆಯ ಲೇಡಿ ಸೂಪರಿಂಟೆಂಡೆಂಟರಾದ ಶ್ರೀಮತಿ ರುಕ್ಮಿಣಿಯಮ್ಮನವರು ಒಂದು ವಿಜ್ಞಾಪನಪತ್ರವನ್ನು ಅರ್ಪಿಸಿದರು. ಅಧ್ಯಕ್ಷಿಯರು ಕನ್ನಡದಲ್ಲಿ ಮಾಡಿದ ಭಾಷಣದೊಳಗೆ-ಕನ್ನಡವನ್ನು ಮುಖ್ಯ ಭಾಷೆಯನ್ನಾಗಿಯೂ ಇಂಗ್ಲೀಷನ್ನು ಉಪಭಾಷೆಯನ್ನಾಗಿಯೂ ಇಟ್ಟು ಬಾಲಿಕೆಯರ ಪಾಠಗಳು ಪಾಠಶಾಲೆಗಳಲ್ಲಿ ನಡೆಯಬೇಕೆಂದು ಸರ್ಕಾರದವರು ಮಾಡಿರುವ ಅಪ್ಪಣೆಯು ಸರಿಯಲ್ಲವೆಂದೂ, ಕನ್ನಡದಲ್ಲಿ ತಕ್ಕಷ್ಟು ಗ್ರಂಥಗಳಿಲ್ಲವೆಂದೂ ಪ್ರತಿಪಾದಿಸಿದ್ದುದಲ್ಲದೆ, ತಮ್ಮ ಹಿತಸಾಧನೆಗಳಿಗಾಗಿ ಸ್ತ್ರೀಯರು ಒಂದು ಶಾಶ್ವತ ಸಂಘವನ್ನೇರ್ಪಡಿಸಿಕೊಂಡು, ಎಲ್ಲ ಕಡೆಯೂ ಅದರ ಉಪಸಂಘಗಳಿರುವಂತೆ ಮಾಡಿಕೊಳ್ಳಬೇಕೆಂದು ಮೊದಲಾಗಿ ಹೇಳಿದರು.

ಕಳೆದ ಗುರುವಾರ ಮಧ್ಯಾಹ್ನ ನಿಯಮನಿರ್ಮಾಣಸಭೆಗೂ ಸಂಪದಭ್ಯುದಯ ಸಮಾಜದ ಸೆಂಟರಲ್ ಬೋರ್ಡುಗಳಿಗೂ, ಫೈನಾನ್ಸ್ ಕಮಿಟಿಗೂ ಪ್ರಜಾಪ್ರತಿನಿಧಿ ಸಭೆಯಿಂದ ಸಭಿಕರನ್ನು ಆರಿಸುವ ಕೆಲಸವು ನಡೆಯಿತು. ನಿಯಮನಿರ್ಮಾಣಸಭೆಯ ಮೆಂಬರರಾಗಲು ನಿಂತಿದ್ದ ೧೭ ಜನರಲ್ಲಿ ಮ||ಗಳಾದ ಎಂ. ಬಸವಯ್ಯ, ಬಿ.ಎ.,ಬಿ.ಎಲ್., ರವರು, ಬ್ಯಾರಿಸ್ಟರ್ ವಿಜಯದೇವ, ಎಂ.ಎ., ಯವರು, ಅಬ್ಬಾಸ್‌ಖಾನರವರು ಮತ್ತು ಎಂ. ಸುಬ್ಬಯ್ಯ, ಬಿ.ಎ.,ಯವರು; ಸೆಂಟರಲ್ ಬೋರ್ಡುಗಳಿಗೆ ಮೆಂಬರರಾಗಲು ನಿಂತಿದ್ದ ೪೫ ಜನರಲ್ಲಿ ಮ|| ಗಳಾದ ಎಂ. ಬಸವಯ್ಯನವರು, ಹೊಸಕೊಪ್ಪದ ಕೃಷ್ಣರಾಯರು, ಅಡ್ವೊಕೇಟ್ ಜಿ. ಪರಮಶಿವಯ್ಯ, ಬಿ. ಎ., ಎಲ್‌ಎಲ್. ಬಿ., ಯವರು, ಕೆ. ಕೃಷ್ಣಶಾಸ್ತ್ರಿಗಳು, ಅಡ್ವೊಕೇಟ್ ಎಸ್. ಆರ್. ಬಾಲಕೃಷ್ಣರಾವ್, ಬಿ.ಎ., ಎಲ್‌ಎಲ್.ಬಿ., ಯವರು, ಮತ್ತು ಮಿರ್ಜಾ ಮಹಮ್ಮದ್ ಸಾಹೇಬರು; ಫೈನಾನ್ಸ್ ಕಮಿಟಿ ಮೆಂಬರರಾಗಲು ನಿಂತಿದ್ದ ೧೪ ಜನರಲ್ಲಿ ಮ|| ಗಳಾದ ಎಂ. ಸುಬ್ಬಯ್ಯ, ಬಿ. ಎ., ಯವರು ಮತ್ತು ಕೆ. ಸುಬ್ರಾಯಸೆಟ್ಟಿ [illegible] ಎಲ್‌ಎಲ್.ಬಿ., ಯವರು, ಹೆಚ್ಚುಮತ (ಓಟು) [illegible] ದು ಉತ್ತೀರ್ಣರಾಗಿರುವರೆಂದು ಆನಂದದಿಂದ ತಿಳಿಸುತ್ತೇವಲ್ಲದೆ, ಜಯಶೀಲರಾದುದಕ್ಕಾಗಿ ನಾವು ಅವರುಗಳನ್ನು ಅಭಿನಂದಿಸುತ್ತೇವೆ.

ಅಂಬಾವಿಲಾದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಖಾನ್ ಬಹದ್ದೂರ್ ಹಾಜೀ ಇಸ್ಮಾಯಿಲ್ ಸೇಟರಿಗೆ "ಫಕರುತ್ ತುಜ್ಜಾರ್" (ವಣಿಗ್ರತ್ನ) ಎಂಬ ಬಿರುದನ್ನೂ, ಸಿತಾರನ್ನು ನುಡಿಯಿಸುವುದರಲ್ಲಿ ವಿಶೇಷ ಪಾಂಡಿತ್ಯವುಳ್ಳ ಬರ್ಕತ್ ವುಲ್ಲಾಖಾನರಿಗೆ "ಆಫ್ ತಾಬೆಸಿತಾರ್" ಎಂಬ ಬಿರುದನ್ನು ತಕ್ಕ ವಸ್ತ್ರಾದಿ ಮರ್ಯಾದೆಗಳೊಡನೆ ಅನುಗ್ರಹಿಸಿದುದಲ್ಲದೆ ವಿದ್ಯಾಭಿವೃದ್ಧಿಗಾಗಿ ಧರ್ಮಬುದ್ಧಿಯಿಂದ ಸಹಾಯಮಾಡಿದ ಚಿತ್ರದುರ್ಗದ ಜಗದ್ಗುರು ಶ್ರೀಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೂ, ಕ್ಯಾಸಂದ್ರದ ಹಜರತ್ ಸಯ್ಯದ್ ಅಬ್ದುಲ್ಲಾ ಸಾಹೇಬರಿಗೂ, ಕೋಲಾರದ ಮ|| ಬೊಗ್ಗರಂ ಮುನಿನಾರಾಯಣಸೆಟ್ಟರಿಗೂ, ಬೆಂಗಳೂರು ಬಾಲಿಕಾ ಪಾಠಶಾಲೆಗಳ ಇನ್ಸ್‌ಪೆಕ್ಟರಾದ ಶ್ರೀಮತಿ ಎಸ್ ರಂಗಮ್ಮನವರಿಗೂ, ಬೆಂಗಳೂರು ಮಹಿಳಾಸೇವಾಸಮಾಜದ ಕಾರ್ಯದರ್ಶಿನಿ ಸೌ|| ರಂಗಮ್ಮಾಳ್ (ಮ|| ಅರುವಾಮುದಯ್ಯಂಗಾರರ ಪತ್ನಿ) ರವರಿಗೂ, ಗುಂಡಲುಪೇಟೆ ತಾ|| ಕಬ್ಬಳ್ಳಿ ಪಟೇಲ್ ಮ|| ಕೆ. ಎಸ್. ಚನ್ನಬಸಪ್ಪನವರಿಗೂ, ಚನ್ನಪಟ್ಟಣದ ಮ|| ಡಿ. ವಿ. ರಾಮಸಂಜೀವರೆಡ್ಡಿಯವರಿಗೂ, ಹಲ್ಕೂರು ಮ|| ಸಾ|| ಮರುಳಸಿದ್ದಪ್ಪನವರಿಗೂ, ಶಿಕಾರಿಪುರದ ಮ|| ರುದ್ರಪ್ಪನವರಿಗೂ, ದಾವಣಗೆರೆಯ ಮ|| ಜಿಗಳೀರಿ ಮುರಿಗಪ್ಪನವರಿಗೂ, ಮ|| ಕಗಟೆ ಅಪ್ಪಾಜಿರೆಡ್ಡಿಯವರಿಗೂ, ಗಂಡಭೇರುಂಡಾಂಕಿತ ಭಂಗಾರದ ಬಿರುದಿನ ಪದಕಗಳನ್ನು ತಕ್ಕ ವಸ್ತ್ರ ಮರ್ಯಾದಾಸಮೇತದ ದಯಪಾಲಿಸಿರುತ್ತಾರೆ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ದಸರಾ ಸಮ್ಮೇಳನದಲ್ಲಿ ದಿವಾನರವರು ಮಾಡಿದ ಉಪನ್ಯಾಸ.

1919 ನೆಯ ಅಕ್ಟೋಬರ್ 6.

ಮಹಾಶಯರೇ.—

ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರರವರ ಅನುಗ್ರಹಪೂರ್ವಕವಾದ ಆಜ್ಞಾನುಸಾರ ಪ್ರಜಾಪ್ರತಿನಿಧಿಸಭೆಯ ಈ ಮುವ್ವತ್ತಾರನೆಯ ದಸರಾ ಅಧಿವೇಶನಕ್ಕೆ ತಮ್ಮಗಳನ್ನು ಬರಮಾಡಿಕೊಂಡು, ಕಳೆದ ವರುಷದಲ್ಲಿ ನಡೆದ ಸಂಸ್ಥಾನದ ಆಡಳಿತವನ್ನೂ, ತ್ವರೆಯಲ್ಲಿ ವ್ಯವಸ್ಥೆಯನ್ನಪೇಕ್ಷಿಸುತ್ತಿರುವ ಪ್ರಕೃತ ಆಡಳಿತದ ವಿಚಾರಗಳನ್ನೂ ನಿಮ್ಮ ಮುಂದಿಡುವ ಅತುಲ್ಯವಾದ ಸಂತೋಷವು ಈ ವರುಷ ನನ್ನದಾಗಿದೆ.

ಶ್ರೀಮನ್ಮಹಾರಾಜರವರ ಪ್ರಜೆಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಈ ಸಭೆಯಲ್ಲಿ ಉಪನ್ಯಾಸವನ್ನು ಮಾಡುವ ಗೌರವವು ನನಗೆ ಕೊಡಲ್ಪಟ್ಟ ಮೇಲೆ ತಮ್ಮಗಳನ್ನು ಕಾಣುವುದು ಇದೇ ಮೊದಲನೆಯ ಸಂದರ್ಭವಾದ ಕಾರಣ, ಸಭೆಯ ಕಾರ್ಯಗಳನ್ನು ಪ್ರಾರಂಭಿಸುವುದಕ್ಕೆ ಮೊದಲು, ಈ ಗೌರವವನ್ನು ನಾವು ಎಷ್ಟು ಅತಿಶಯವಾದದ್ದೆಂದು ಭಾವಿಸುತ್ತೇನೆಂಬುದನ್ನೂ, ಮತ್ತು ಉದಾರಚರಿತರಾದ ನಮ್ಮ ಮಹಾಸ್ವಾಮಿಗಳವರ ವಿಶ್ವಾಸಕ್ಕೆ ಅರ್ಹರಾಗುವದಕ್ಕೂ ಅವರ ಪ್ರಜೆಗಳ ಸೌಮನಸ್ಯವನ್ನು ಸಂಪಾದಿಸುವುದಕ್ಕೂ ನಮ್ಮ ಮುಂದಿರುವ ಕಾರ್ಯಗಳಲ್ಲಿ ನಾವು ಎಷ್ಟುಮಟ್ಟಿಗೆ ಪ್ರಯತ್ನಪಡುವೆನೆಂಬುದನ್ನೂ ತಿಳಿಯಪಡಿಸುವುದಕ್ಕೋಸ್ಕರ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ನಮ್ಮ ಸಭೆಯು ಅನೇಕ ವರುಷಗಳ ಕಾಲದಿಂದ ಪ್ರಜಾಕ್ಷೇಮಕ್ಕಾಗಿ ಬಹಳ ಶ್ರಮವನ್ನು ತೆಗೆದುಕೊಂಡು ಶ್ರೀಮನ್ಮಹಾರಾಜರವರ ಪ್ರಜೆಗಳ ಕಡೆಯ ನಿಜವಾದ ಪ್ರತಿನಿಧಿಯೆಂದು ಅಂಗೀಕರಿಸಲ್ಪಡಲು ಬಾಧ್ಯತೆಯನ್ನು ಸ್ಥಾಪಿಸಿರುವುದು. ಮಹಾಸ್ವಾಮಿಯವರ ದಿವಾನರಾಗಿ ಪ್ರಜೆಗಳ ಯೋಗಕ್ಷೇಮಗಳನ್ನು ಎಲ್ಲಾ ವಿಧಗಳಲ್ಲಿಯೂ ಹೆಚ್ಚಿಸಬೇಕೆಂಬ ನಮ್ಮ ಶ್ರೀಮನ್ಮಹಾರಾಜರವರ ಮುಖ್ಯವಾದ ಅಪೇಕ್ಷೆಯನ್ನು ಕೈಲಾದಮಟ್ಟಿಗೂ ನೆರವೇರಿಸಲು ಸಾಧ್ಯವಾಗುವಂತೆ ನಮ್ಮ ವ್ಯವಸ್ಥೆಗೆ ಬರುವ ಅನೇಕ ಕಷ್ಟವಾದ ವಿಷಯಗಳನ್ನು ಫೈಸಲಾತಿಗೆ ತರುವುದರಲ್ಲಿ ನೀವು ನನಗೆ ಸಹಾಯಮಾಡಬೇಕೆಂದು ಸಭೆಯ ಕಾರ್ಯವನ್ನು ಉಪಕ್ರಮಿಸುವ ಈ ಸಮಯದಲ್ಲಿ ನಿಮ್ಮನ್ನು ಆದರದಿಂದ ಕೇಳಿಕೊಳ್ಳುವೆನು.

2. ಈ ಸಭೆಯ ಕಳೆದ ದಸರಾ ಅಧಿವೇಶನವು ಸ್ವಲ್ಪಮಟ್ಟಿಗೆ ದುಃಖಕರವಾದ ಸಂದರ್ಭಗಳು ಒದಗಿದ್ದ ಕಾಲದಲ್ಲಿ ನಡೆಯಿತು. ಆಗ್ಗೆ ಯುದ್ಧವು ಅಖೈರಾಗುವಸ್ಥಿತಿಗೆ ಬಂದಿದ್ದರೂ ಇನ್ನೂ ನಡೆಯುತ್ತಲೇ ಇತ್ತು. ಅಲ್ಲದೆ ಅದರ ಅಸಾಧ್ಯವಾದ ಭಾರವು ರಾಜಾಡಳಿತದ ಪ್ರತಿಯೊಂದು ಅಭಿವರ್ಧಕಶಾಖೆಯಮೇಲೂ ಮತ್ತು ಜನರ ದಿನಚರಿಯ ಜೀವನ ಮತ್ತು ಮುಂದಿನ ಯೋಗಕ್ಷೇಮ ಇವುಗಳಮೇಲೂ ಸ್ವಲ್ಪವೂ ಕಮ್ಮಿಯಾಗದಂತೆ ಇದ್ದಿತು.

ಇನ್‌ಫ್ಲುಯಂಜಾ ಸಾಂಕ್ರಾಮಿಕವ್ಯಾಧಿಯು ದೇಶದ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸುತ್ತಾ ಪ್ರತಿಯೊಂದು ಊರನ್ನೂ ಗ್ರಾಮವನ್ನೂ ಪ್ರವೇಶಿಸಿ ಅನೇಕ ಕುಟುಂಬಗಳಲ್ಲಿ ಸಾವನ್ನೂ ನಾಶನವನ್ನೂ ವ್ಯಾಪಿಸುತ್ತಿತ್ತು. ಈ ರೋಗದಿಂದ ಸಂಸ್ಥಾನದಲ್ಲಿ ಸುಮಾರು ಎರಡುಲಕ್ಷ ಜನರು ಮೃತಪಟ್ಟಂತೆ ತಿಳಿಯಬಂದಿದೆ. ಆದರೆ ಆ ಕಾಲದಲ್ಲಿ ಜನರು ಅನುಭವಿಸಿದ ಕಷ್ಟಗಳನ್ನು ಮೃತಪಟ್ಟವರ ಸಂಖ್ಯೆಯು ಸಂಪೂರ್ಣವಾಗಿ ಸೂಚಿಸಲಾರದು. ಇದರ ಮೇಲೆ ದುರ್ಭಿಕ್ಷವು ಬಂದೊದಗಿತ್ತು. ಮಳೆ ಬಹಳ ಕಮ್ಮಿಯಾಗಿತ್ತು. ಆಹಾರಪದಾರ್ಥಗಳ ಬೆಲೆಗಳು ಉತ್ಕಟವಾಗಿ ಹೆಚ್ಚಿದ್ದವು.

ಅದೃಷ್ಟವಶಾತ್ ಈಗ ನಾವುಗಳು ಈ ಬಹುವಿಧದ ತೊಂದರೆಗಳಿಂದ ಬಿಡುಗಡೆಯನ್ನು ಹೊಂದುತ್ತಿರುವೆವು. ಮತ್ತು ಸುಭಿಕ್ಷಕಾಲವನ್ನು ಭರವಸೆಯಿಂದ ಎದುರುನೋಡುತ್ತಲಿರುವೆವು.

ಯುದ್ಧವು.—ನಾಲ್ಕುವರುಷಗಳ ಕಾಲ ಅವಿಚ್ಛಿನ್ನವಾದ ಕೊರತೆಯನ್ನು ಅನುಭವಿಸಿದ ಮೇಲೆ ಮಿತ್ರಮಂಡಲಿಯವರ ಸೈನ್ಯಗಳಿಗೆ ಜಯಪ್ರದಗಳು ಒಂದರಮೇಲೊಂದು ಒದಗಿ ಕಳೆದ ನವೆಂಬರ್ ತಿಂಗಳಲ್ಲಿ ಯುದ್ಧವಿಶ್ರಾಂತಿಯು ಸಾರಲ್ಪಟ್ಟಾಗ ಪ್ರಪಂಚವೆಲ್ಲವೂ ನಿಶ್ಚಿಂತೆಯನ್ನು ಹೊಂದಿತು. 1919 ನೇ ಜೂನ್ ತಿಂಗಳಲ್ಲಿ ಸಂಧೀಕರಾರು ಆದಮೇಲೆ ಚರಿತ್ರೆಯಲ್ಲಿ ಅತ್ಯಂತಮಹತ್ತರವಾದ ಯುದ್ಧವು ಮುಕ್ತಾಯಕ್ಕೆ ಬಂದಂತೆಯಾಯಿತು. ಇಂಡಿಯಾ ಸಾಮ್ರಾಜ್ಯದ ಎಲ್ಲಾ ಕಡೆಯೂ ಏರ್ಪಾಡಾದ ಸಮಾಧಾನ ಪ್ರಯುಕ್ತವಾದ ಶುಭಸಂತೋಷಗಳಲ್ಲಿ ನಾವು ಭಾಗಿಗಳಾಗುವ ಮತ್ತು ಇಂಗ್ಲೆಂಡು ದೇಶದಲ್ಲಿ ನಡೆದ ಸಂಧಿಪ್ರಯುಕ್ತವಾದ ಉತ್ಸವಗಳಲ್ಲಿ ಹಾಜರಾಗಲು ನಮ್ಮ ಸೈನ್ಯದಕಡೆಯವರನ್ನು ಕಳುಹಿಸಿಕೊಡುವ ಭಾಗ್ಯವು ನಮಗೆ ಈಚೆಗೆ ಉಂಟಾಯಿತು.

ಈ ವಿಷಯವನ್ನು ಕುರಿತು ಪ್ರಸ್ತಾಪಮಾಡುವುದಕ್ಕೆ ಇದೇ ಕೊನೆಯ ಸಂದರ್ಭವಾಗಿರುವ ಕಾರಣ ಯುದ್ಧದಲ್ಲಿ ನಮ್ಮ ಸಂಸ್ಥಾನವು ಮಾಡಿದ ಸಹಾಯಗಳನ್ನು ಸಂಕ್ಷೇಪವಾಗಿ ಇಲ್ಲಿ ವರ್ಣಿಸುವುದು ಅಪ್ರಕೃತವೆಂದು ಪ್ರಾಯಶಃ ಭಾವಿಸಲ್ಪಡಲಾರದು.

4. ಇಂಪೀರಿಯಲ್ ಸರ್ವಿಸ್ ಲಾನ್ಸರುಗಳು.—ಯುದ್ಧ ಪ್ರಾರಂಭವಾದ ಕೂಡಲೇ ಮೈಸೂರು ಸಂಸ್ಥಾನದ ಸೈನ್ಯದ ಮತ್ತು ಇತರ ಉಪಪತ್ತಿಯ ಮೂಲಕವಾದ ಸಾಹಾಯ್ಯವನ್ನು ಸಾರ್ವಭೌಮರ ಉಪಯೋಗಕ್ಕಾಗಿ ಅರ್ಪಿಸಿದ್ದಾಯಿತು. ಈಜಿಪ್ಟಿನಲ್ಲಿ ಸರ್ವಿಸ್ ಮಾಡುವ ಬಗ್ಗಾಗಿ ಇಂಪೀರಿಯಲ್ ಸರ್ವಿಸ್ ಲಾನ್ಸರುಗಳ ಸೈನ್ಯವನ್ನು ಜಮಾಯಿಸಬೇಕೆಂದು 1914 ನೆ ಸೆಪ್ಟಂಬರು ತಿಂಗಳಲ್ಲಿ ಅನುಜ್ಞೆಯು ಬಂತು. ಈ ರೆಜಿಮೆಂಟಿನಲ್ಲಿ 29 ಆಫೀಸರುಗಳು, 444 ನಾನ್ ಕಮಿಷನ್ಡ್ ಆಫೀಸರುಗಳು ಮತ್ತು ಯೋಧರು, 526 ಕುದುರೆಗಳು 49 ಹೇಸರುಕತ್ತೆಗಳು ಮತ್ತು 132 ಮಂದಿ ಪರಿವಾರದವರು ಇದ್ದರು. ಈ ಸೈನ್ಯವು 1914 ನೇ ಅಕ್ಟೋಬರು 13 ನೇ ತಾರೀಖಿನ ದಿನ ಈಗ ಮೇಜರ್ ಸರದಾರ ಬಹಾದೂರ್‌ರಾಗಿರುವ ರೆಜಿಮೆಂಟ್‌ದಾರ್ ಬಿ. ಚಾಮರಾಜೇಅರಸ್ ಬಹಾದೂರ್‌ರವರ ನಾಯಕತ್ವದಲ್ಲಿ ಬೆಂಗಳೂರನ್ನು ಬಿಟ್ಟಿತು. ಕರ್ನಲ್ ಜೆ. ದೇಶರಾಜೇಅರಸ್ ಸಿ. ಐ. ಈ., ಯಂ. ವಿ. ಓ. ಯವರು ಸರ್ಕಾರದವರ ಪರವಾಗಿ ರೆಜಿಮೆಂಟಿನೊಡನೆ ತೆರಳಿದರು. ಅವರ ಸಹಾಯ ಭರ್ತಿಗಾಗಿ ಒಟ್ಟು ಮೂರು ಮಂದಿ ಆಫೀಸರುಗಳು, 426 ಮಂದಿ ಇತರ ದರ್ಜೆಯವರು ಮತ್ತು 49 ಮಂದಿ ಪರಿವಾರದವರು ಆಗಿಂದಾಗ್ಗೆ 15 ಪಂಗಡಗಳಲ್ಲಿ ಕಳುಹಿಸಲ್ಪಟ್ಟರು. ಈ ಸೇನೆಯವರು 1915 ನೇ ನವೆಂಬರು ತಿಂಗಳಲ್ಲಿ ಸೂಯಜ್ ಕಾಲುವೆ ಪ್ರಾಂತ್ಯದಲ್ಲಿ ಶತ್ರುವಿನೊಡನೆ ಮೂರು ಕದನದಲ್ಲಿ ಸಂಧಿಸಿದರು ; ಮತ್ತು 1917 ನೇ ನವೆಂಬರು ತಿಂಗಳಲ್ಲಿ ಪಾಲೆಸ್ಟೀನ್ ದೇಶದಲ್ಲಿರುವ ಗಾಜಾಪಟ್ಟಣದ ಮುತ್ತಿಗೆಯಲ್ಲಿ ಸೇರಿದ್ದರು. ಯುದ್ಧ ವಿಶ್ರಾಂತಿಯ ಒಡಂಬಡಿಕೆಯಾಗುವುದಕ್ಕೆ ಕೆಲವು ದಿನಗಳಿಗೆ ಪೂರ್ವದಲ್ಲಿ ರೆಜಿಮೆಂಟು ಅಲೆಪ್ಪೊ ಪಟ್ಟಣದ ಮುತ್ತಿಗೆಯಲ್ಲಿ ಸೇರಿ ಖ್ಯಾತಿಕರವಾಗಿ ನಡೆದುಕೊಂಡಿತು. ಈ ಸಮಯಗಳಲ್ಲಿ ಈ ಸೈನಿಕರು ಪ್ರತಾಪದೊಡನೆ ನಡೆದುಕೊಂಡದ್ದು ಅಲ್ಲಿಂದ ಬಂದ ಮಿಲಿಟರಿ ರಿಪೋರ್ಟುಗಳಲ್ಲಿ ಕೊಂಡಾಡಲ್ಪಟ್ಟಿರುವುದು.

ಟ್ರಾನ್ಸ್‌ಪೋರ್ಟು ಕೋರು.—1915 ರಲ್ಲಿ ಮೈಸೂರು ಟ್ರಾನ್ಸ್‌ಪೋರ್ಟ್ ಕೋರು ಸೈನ್ಯವು ಯುದ್ಧ ನೌಕರಿಗಾಗಿ ಸನ್ನದ್ಧವಾಯಿತು. ಈ ಕೋರಿನ ಪೈಕಿ ಆರು ಟ್ರೂಪುಗಳನ್ನು ಎಂದರೆ 12 ಆಫೀಸರುಗಳು, 321 ಮಂದಿ ಜನರು, 49 ಮಂದಿ ಪರಿವಾರದವರು, 210 ಗಾಡಿಗಳು, 2 ಅಂಬ್ಯುಲೆನ್ಸ್ ಗಾಡಿಗಳು, 468 ಎತ್ತುಗಳು, 7 ಹೇಸರಕತ್ತೆಗಳು, 35 ಕುದುರೆಗಳು ಇವುಗಳನ್ನು 1916 ನೇ ಸೆಪ್ಟೆಂಬರು ತಿಂಗಳಲ್ಲಿ ರವಾನೆ ಮಾಡಲಾಯಿತು. ಈ ಕೋರಿಗೆ ಮಂಜೂರಾಗಿರುವ ಇಸಂ ಸಂಖ್ಯೆಯನ್ನು ಭರ್ತಿಯಾಗಿಡುವ ಉದ್ದೇಶದಿಂದ ಒಂಭತ್ತು ಸ್ಥಳದಲ್ಲಿ 4 ಮಂದಿ ಆಫೀಸರುಗಳು, 133 ಮಂದಿ ಜನರು, 37 ಮಂದಿ ಪರಿವಾರದವರು ಎತ್ತುಗಳ ಸಹಿತ ಕಳುಹಿಸಲ್ಪಟ್ಟರು. ಈ ದಳವು ಮೆಸಪೊಟೋಮಿಯಾದಲ್ಲಿರುವ ಸನ್ನಿಯಾತ್ ಮತ್ತು ಕ್ವೈ ಎಂಬ ರಣರಂಗದಲ್ಲಿ ಶ್ಲಾಘ್ಯವಾದ ಮಹತ್ತನ್ನು ಮಾಡಿರುವಂತೆ ತಿಳಿದುಬಂದಿದೆ.

ಸೈನ್ಯಕ್ಕೆ ಜನರನ್ನು ಜಮಾಯಿಸಿದುದು.—ಸಾರ್ವಭೌಮ ಸರ್ಕಾರದವರಿಗೆ ಮತ್ತು ಇಲ್ಲಿ ನಮಗೆ ಅವಶ್ಯಕವಾಗಿದ್ದ ಸೈನಿಕ ಜನಸಂಪತ್ತಿಯನ್ನು ಒದಗಿಸುವುದಕ್ಕಾಗಿಯೂ ಈ ಸಂಸ್ಥಾನಕ್ಕೆ ಒಂದು ಸೆಂಟ್ರಲ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ನೇಮಿಸಿ ರಿಕ್ರೂಟಿಂಗ್ ಡೈರೆಕ್ಟರ್ ಎಂಬ ಒಂದು ಅಧಿಕಾರವನ್ನು ಏರ್ಪಾಡು ಮಾಡಲಾಯಿತು. ಮತ್ತು ಡಿಸ್ಟ್ರಿಕ್ಟುಗಳಲ್ಲಿ ಜನರಜಮಾವಣೆಗೆ ಸಿಬ್ಬಂದಿಯನ್ನು ಏರ್ಪಡಿಸಿದ್ದಾಯಿತು. ಸುಧಾರಿಸಬೇಕಾದ ಕಷ್ಟಗಳು ಬಹಳವಾಗಿದ್ದರೂ ಯುದ್ಧವಿಶ್ರಾಂತಿಯ ಒಡಂಬಡಿಕೆಯ ರುಜುವಾಗುವುದರ ಒಳಗಾಗಿ ನಮ್ಮಿಂದ ಬೇಕಾಗಿದ್ದ ಒಟ್ಟು 5,000 ಮಂದಿ ಜನರನ್ನು ಸ್ವಲ್ಪ ಹೆಚ್ಚು ಕಡಮೆಯಾಗಿ ಜಮಾಯಿಸಲು ಸಾಧ್ಯವಾಯಿತು

ದ್ರವ್ಯಸಹಾಯ.—1914 ನೇ ಆಗಸ್ಟು 20 ರಲ್ಲಿ ಇಂಡಿಯಾ ದೇಶದಿಂದ ಯೂರೋಪ್ ಖಂಡದಲ್ಲಿ ಯುದ್ಧಮಾಡುವುದಕ್ಕೆ ಹೋದ ಸೈನ್ಯದ ಖರ್ಚಿಗಾಗಿ 50 ಲಕ್ಷ ರೂಪಾಯಿಗಳನ್ನು ಶ್ರೀಮನ್ಮಹಾರಾಜರವರು ಸಹಾಯವಾಗಿ ಕೊಟ್ಟರು. ಯುದ್ಧ ಪ್ರಾರಂಭವಾದಮೇಲೆ ಮೊದಲು ಮಾಡಿದ ಈ ಧನಸಹಾಯದ ತರುವಾಯ ಇತರ ಪ್ರಕಾರಗಳಲ್ಲಿಯೂ ಸಹಾಯ ಮಾಡಲಾಯಿತು. ಕೇವಲ ಸಹಾಯದ್ರವ್ಯವಾಗಿ ಕೊಟ್ಟದ್ದು 10 ಲಕ್ಷ ರೂಪಾಯಿಗಳು. ರಿಲೀಫ್ ಫಂಡುಗಳಿಗೆ ಕೊಟ್ಟ ಚಂದಾ 14ಲಕ್ಷ ರೂಪಾಯಿಗಳು, ಯುದ್ಧದ ಸಾಲಕ್ಕೆಕೊಟ್ಟ ಚಂದಾ 65 ಲಕ್ಷ ರೂಪಾಯಿಗಳು, (ಬ್ರಿಟಿಷ್) ಖಜಾನೆ ಬಿಲ್ಲುಗಳಮೇಲೆ ಕೊಟ್ಟದ್ದು 21 ಲಕ್ಷ ರೂಪಾಯಿಗಳು, (ಇಂಡಿಯಾ ಸರ್ಕಾರದ) ಖಜಾನೆ ಬಿಲ್ಲುಗಳಮೇಲೆ ಕೊಟ್ಟದ್ದು 19½ ಲಕ್ಷ ರೂಪಾಯಿಗಳು.

ಸಂಸ್ಥಾನದ ಮತ್ತು ಸಾರ್ವಭೌಮ ಸರ್ಕಾರದವರ ಯುದ್ಧದ ಸಾಲಗಳಿಗೂ ಫಂಡುಗಳಿಗೂ ಜನರ ಸಹಾಯವನ್ನು ಪಡೆಯುವುದಕ್ಕೆ ಮಾಡಿದ ಪ್ರಯತ್ನಗಳಿಂದ ಒಟ್ಟು 45 ಲಕ್ಷ ರೂಪಾಯಿಗಳಷ್ಟು ಜಮಾಯಿಸಿದಂತಾಯಿತು. ಮೈಸೂರು ಸೀಮೆಯ ಸರ್ಕಾರದವರೂ ಪ್ರಜೆಗಳೂ ಸೇರಿ ಯುದ್ಧದ ಜಯಕ್ಕೆ ಸಹಾಯವಾಗಿ ಕೊಟ್ಟದ್ದೂ ಒದಗಿಸಿಕೊಟ್ಟದ್ದೂ ಸುಮಾರು ಎರಡುಕೋಟಿ ರೂಪಾಯಿಗಳಾದವು.

ನಮ್ಮ ಸೈನಿಕರನ್ನು ಯುದ್ಧಕ್ಕೆ ಹೊರಡುವುದಕ್ಕೆ ಸಜ್ಜುಗೊಳಿಸಲು ತಗಲಿದ 11 ಲಕ್ಷ ರೂಪಾಯಿಗಳಷ್ಟರ ಖರ್ಚನ್ನು ವಾಪಸು ಕೊಡುವುದಾಗಿ ಈಚೆಗೆ ಇಂಡಿಯಾ ಸರ್ಕಾರದವರು ಹೇಳಿದರು. ಆದರೆ ಶ್ರೀಮನ್ಮಹಾರಾಜರವರು ಈ ಉದಾರವಾದ ವಾಗ್ದಾನಕ್ಕೆ ಸಂತೋಷಿಸಿದ್ದಾಗ್ಯೂ ಯುದ್ಧದ ಸಹಾಯಕ್ಕಾಗಿ ಸಂಸ್ಥಾನದಿಂದ ಕೊಡಲ್ಪಟ್ಟ ಇತರ ಸಹಾಯಗಳ ಜತೆಗೆ ಸೈನ್ಯವನ್ನು ಸಿದ್ಧಪಡಿಸುವ ಖರ್ಚುಗಳೂ ಸೇರತಕ್ಕದ್ದು ಉತ್ತಮವೆಂದು ಭಾವಿಸಿ ಹಣ ವಾಪಸು ಮಾಡುವುದನ್ನು ಅಂಗೀಕರಿಸಲಿಲ್ಲ.

ಇವುಗಳ ಜತೆಗೆ ಸಾರ್ವಭೌಮ ಸರ್ಕಾರದವರ ಕೋರಿಕೆಯಮೇಲೆ ಯುದ್ಧೋಪಯೋಗಗಳಾದ ಅನೇಕ ಚಿಲ್ಲರೆ ಕೆಲಸಗಳನ್ನು ನಮ್ಮ ಸಂಸ್ಥಾನದಲ್ಲಿ ನಡೆಸಲಾಯಿತು. ಚರ್ಮ ಹದಮಾಡುವುದರಲ್ಲಿ ಉಪಯೋಗವಾಗುವ ಚೆಕ್ಕೆಗಳೆಲ್ಲವನ್ನೂ ಸಂಗ್ರಹಿಸಿ ಸೈನ್ಯದ ಉಪಯೋಗಕ್ಕೆ ಜರೂರಾಗಿ ಬೇಕಾದ ಚರ್ಮಗಳ ಹದಕ್ಕೆ ಬಳಸುವ ಉದ್ದೇಶದಿಂದ 1917 ನೇ ವರ್ಷದ ಅಂತ್ಯಭಾಗದಲ್ಲಿ ಚರ್ಮ ಹದಮಾಡುವುದನ್ನು ಅಡ್ಡಮಾಡಲಾಯಿತು. ಮತ್ತು ನಿಬಂಧನೆಯನ್ನು ತಪ್ಪಿಸಿಕೊಳ್ಳುವ ಪ್ರಯತ್ನ ನಡೆದರೆ ಅದನ್ನು ತಡೆಯುವುದಕ್ಕಾಗಿ ಪ್ರತ್ಯೇಕವಾಗಿ ಒಂದು ಪೋಲೀಸು ಸಿಬ್ಬಂದಿಯನ್ನು ಏರ್ಪಾಡುಮಾಡಿತ್ತು. ಚರ್ಮವನ್ನು ಹದಮಾಡುವ ಲಾಭಕರವಾದ ಕೆಲಸವನ್ನು ನಡೆಸಕೊಡದ್ದರಿಂದ ಜನರಿಗೆ ಅನಿವಾರ್ಯವಾಗಿ ಉಂಟಾದ ಭಾರೀ ನಷ್ಟವನ್ನು ಅವರು ಯುದ್ಧಕ್ಕೆ ಸಹಾಯಮಾಡುವುದಕ್ಕಾಗಿ ಸಂತೋಷದೊಡನೆ ಸಹಿಸಿದರು. ಹದದ ಚೆಕ್ಕೆಗಳನ್ನು ಸರಬರಾಯಿ ಮಾಡುವ ಕೆಲಸವನ್ನು ಸರ್ಕಾರದ ಹತೋಟಿಗೆ ತೆಗೆದುಕೊಳ್ಳಲಾಯಿತು. ಅಲ್ಲದೆ ಚರ್ಮ ಹದಮಾಡುವವರು ಚೆಕ್ಕೆಯನ್ನು ನ್ಯಾಯವಾದ ಖರೀದಿಗೆ ಪಡೆಯತಕ್ಕ ಬಗ್ಗೆ ಗುತ್ತಿಗೆದಾರರಿಗೆ 5 ಲಕ್ಷ ರೂಪಾಯಿ ಬೆಲೆಯ ಭಾರಿ ರಿಯಾಯಿತಿಯನ್ನು ತೋರಿಸಲಾಯಿತು. ಇಂಡಿಯನ್ ಮ್ಯೂನಿಷನ್ಸ್ ಬೋರ್ಡಿಗೆ ಸುಮಾರು 19 ಸಾವಿರ ಸೈನ್ಯದ ಕಂಬಳಿಯನ್ನು ಸರಬರಾಯಿ ಮಾಡಲಾಯಿತು. ಒಂದು ಲಕ್ಷ ಮತ್ತು ಐವತ್ತು ಸಾವಿರ ಘನ ಅಡಿಯ ಬೀಟೆ ಮರವನ್ನು ಮೈಸೂರು ಸರ್ಕಾರದ ಫಾರೆಸ್ಟ್ ಇಲಾಖೆಯಿಂದ ಜಬ್ಬಲ್‌ಪುರದಲ್ಲಿರುವ ಫಿರಂಗಿಗಳ ಕಾರ್ಖಾನೆಗೆ ಸರಬರಾಯಿ ಮಾಡಲಾಯಿತು. ಮತ್ತು ಮೆಸೊಪೊಟೋಮಿಯಾದಲ್ಲಿ ರೈಲ್ವೆಯನ್ನು ಹಾಕುವುದಕ್ಕಾಗಿ 30 ಸಾವಿರ ತ್ಯಾಗದಮರದ ಮೀಟರ್‌ಗೇಜು ಸ್ಲೀಪರುಗಳನ್ನು ಕಳುಹಿಸಿಕೊಡಲಾಯಿತು. ಅಲ್ಲದೆ ಹುಲ್ಲನ್ನು ಬೆಳಸುವುದಕ್ಕಾಗಿ ಬ್ರಿಟಿಷ್ ಗ್ರಾಸ್‌ಫಾರಮ್ಮಿಗೆ 20 ಸಾವಿರ ಎಕರೆಗಳ ಪ್ಲಾಂಟೇಷನ್ ಮತ್ತು ಕಾವಲು ಜಮೀನುಗಳನ್ನು ಗುತ್ತಿಗೆಗೆ ಕೊಡಲಾಯಿತು.

ಮೈಸೂರು ಆಫೀಸರುಗಳಿಗೂ ಮತ್ತು ಇತರ ಜನರಿಗೂ ಕೊಟ್ಟ ಗೌರವಗಳು.—ಚಕ್ರವರ್ತಿ ಸಾರ್ವಭೌಮರವರು ಕರ್ನಲ್ ಜೆ. ದೇಶರಾಜ ಅರಸ್, ಸಿ. ಐ. ಇ., ಯಂ. ವಿ. ಓ. ಯವರಿಗೆ ಬ್ರಿಟಿಷ್ ಬಿರುದಾದ ಆನರರಿ ಲೆಫ್ಟನೆಂಟ್ ಕರ್ನಲ್ ಎಂಬ ಗೌರವವನ್ನು ಕೊಟ್ಟರು. ಮೇಜರ್ ಬಿ. ಚಾಮರಾಜ ಅರಸರವರು ಮೊದಲನೆ ತರಗತಿಯ ' ಆರ್ಡರ್ ಆಫ್ ಬ್ರಿಟಿಷ್ ಇಂಡಿಯಾ ' ಎಂಬ ಗೌರವವನ್ನು ಸರದಾರ್ ಬಹದ್ದೂರ್ ಎಂಬ ಬಿರುದಿನೊಡನೆ ಹೊಂದಿದರು. ಇಬ್ಬರು ಆಫೀಸರಿಗೆ ಎರಡನೇ ತರಗತಿ ' ಆರ್ಡರ್ ಆಫ್ ಬ್ರಿಟಿಷ್ ಇಂಡಿಯಾ ' ಎಂಬ ಗೌರವವೂ, ಮತ್ತಿಬ್ಬರಿಗೆ ಎರಡನೇ ತರಗತಿಯ ' ಇಂಡಿಯನ್ ಆರ್ಡರ್ ಆಫ್ ಮೆರಿಟ್ ' ಎಂಬ ಗೌರವವೂ, 18 ಜನ ಆಫೀಸರುಗಳಿಗೂ ಮತ್ತು ಯೋಧರಿಗೂ ಇಂಡಿಯನ್ ಡಿಸ್ಟಿಂಗ್ವಿಷ್‌ಡ್ ಸರ್ವಿಸ್ ಮೆಡಲ್ ಎಂಬ ಪದಕವೂ, ಇಬ್ಬರು ಆಫೀಸರಿಗೆ ಇಂಡಿಯನ್ ಮೆರಿಟೋರಿಯಸ್ ಸರ್ವಿಸ್ ಮೆಡಲ್ ಎಂಬ ಪದಕವೂ ಕೊಡಲ್ಪಟ್ಟವು. ಘನವನ್ನು ಹೊಂದಿದ ಸರ್ವಿಯಾದೇಶದ ದೊರೆಗಳಿಂದ ಇಬ್ಬರು ಆಫೀಸರಿಗೆ ' ಆರ್ಡರ್ ಆಫ್ ದಿ ವೈಟ್ ಈಗಲ್ ಆಫ್ ಸರ್ವಿಯಾ ' ಎಂಬ ಗೌರವವು ಲಭಿಸಿತು. ಮೂರನೆಯವರು ಮೊದಲನೇತರಗತಿ ' ಕ್ರಾಸ್ ಆಫ್ ಕರಜಾರ್ಜ್ ಸರ್ವಿಯಾ ' ಎಂಬ ಗೌರವವನ್ನೂ ಕತ್ತಿಗಳನ್ನೂ ಪಡೆದರು. ಹದಿನಾರು ಜನ ಮೈಸೂರು ಆಫೀಸರುಗಳ ಹೆಸರು ಡಿಸ್ಪ್ಯಾಚುಗಳಲ್ಲಿ ಗೌರವದೊಡನೆ ನಮೂದಾಯಿತು; ಅಪ್ಪೈಕಿ ಇಬ್ಬರ ಹೆಸರು ಎರಡಾವರ್ತಿ ನಮೂದಿಸಲ್ಪಟ್ಟಿತು. ಈ ರೀತಿ ಪ್ರತ್ಯೇಕವಾದ ಗೌರವಗಳಲ್ಲದೆ ರಣರಂಗದಲ್ಲಿ ನಮ್ಮ ಸೈನಿಕರು ತೋರಿಸಿದ ಶೌರ್ಯಪರಾಕ್ರಮಗಳು ಮಿಲಿಟರಿ ಡಿಸ್‌ಪ್ಯಾಚುಗಳಲ್ಲಿ ಆದರದಿಂದ ಮತ್ತು ಪದೇಪದೇ ಶ್ಲಾಘಿಸಲ್ಪಟ್ಟಿವೆ. ಈರೀತಿಯಾಗಿ ನಮ್ಮ ಸೈನಿಕರು ಅತಿಸಾಮರ್ಥ್ಯದಿಂದ ಮಾಡಿರುವ ಯಶಸ್ಕರವಾದ ಅನೇಕ ಸಾಹಸಕಾರ್ಯಗಳನ್ನು ಮೈಸೂರು ದೇಶದ ಜನಗಳು ಯುಕ್ತವಾದ ದೇಶೀಯಾಭಿಮಾನದಿಂದ ಚಿರಕಾಲ ಸ್ಮರಿಸುವರೆಂಬ ವಿಷಯದಲ್ಲಿ ಯಾವಸಂದೇಹವೂ ಇಲ್ಲ.

ಆದರೆ ನಮ್ಮವರ ಪೈಕಿ ಯುದ್ಧಕ್ಕೆ ಹೋದವರಲ್ಲನೇಕರು ಹಿಂದಿರುಗಿ ಬಂದಿದ್ದರೂ ಅಥವಾ ಕ್ಷೇಮವಾಗಿ ನಮ್ಮಲ್ಲಿಗೆ ಹಿಂದಿರುಗಿ ಬರುವವರಾಗಿದ್ದರೂ, ಶ್ರೇಷ್ಠವಾದ ತಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಅನೇಕರು ತಮ್ಮ ಪ್ರಾಣಸಮರ್ಪಣೆ ಮಾಡಿದರೆಂಬ ಮನಃಖೇದವು ಈ ಸಂತೋಷದಲ್ಲಿ ಮಿಶ್ರಿತವಾಗಿದೆ. ಈ ಪರಾಕ್ರಮಶಾಲಿಗಳಾದ ಆಫೀಸರರ ಮತ್ತು ಯೋಧರ ವಿಯೋಗದಿಂದ ದುಃಖಪಡುತ್ತಿರುವ ಕುಟುಂಬಗಳಿಗೂ ಮತ್ತು ಅಂಗ ವಿಹೀನರಾದ ಅವರ ಪಕ್ಕದಲ್ಲಿ ನಿಂತು ಯುದ್ಧಮಾಡಿದ ಯೋಧರಿಗೂ ನಮ್ಮಿಂದ ಅನುಲ್ಲಂಘನೀಯವಾದ ಸಹಾಯವು ಆಗಬೇಕಾಗಿದೆಯೆಂಬ ಅಂಶವನ್ನು ನಾವು ಮರೆಯಕೂಡದು.

ಆಹಾರ ಸಾಮಗ್ರಿಗಳ ಸ್ಥಿತಿ.—ಕ್ಷಿಪ್ರದಲ್ಲೇ ಆಹಾರ ಸಾಮಗ್ರಿಗಳ ಸ್ಥಿತಿಯು ಮೇಲಾಗಬಹುದೆಂಬ ಸೂಚನೆಗಳಿದ್ದರೂ ಅದು ಇನ್ನೂ ಸರ್ಕಾರದವರಿಗೆ ಚಿಂತೆಗೆ ಕಾರಣವಾದ ವಿಚಾರವಾಗಿಯೇ ಇರುವುದು. ಆಫೀಷಿಯೇಟಿಂಗ್ ದಿವಾನರಾಗಿದ್ದ ಮಿ|| ಎ. ಆರ್. ಬಾನರ್ಜಿಯವರು ಮಾರ್ಚಿ ತಿಂಗಳಲ್ಲಿ ನಡೆದ ಲೆಜಿಸ್ಲೇಟೀವ್ ಕೌನ್ಸಿಲಿನಲ್ಲಿ ಮಾಡಿದ ಭಾಷಣೆಯಲ್ಲಿ ಅವುಗಳ ವಿಷಯದಲ್ಲಿದ್ದ ತೊಂದರೆಗಳನ್ನೂ ಅವುಗಳನ್ನು ನಿವಾರಿಸುವುದಕ್ಕೆ ಆಯಾಯ ಕಾಲಕ್ಕೆ ತಕ್ಕಂತೆ ಮಾಡಿದ ಏರ್ಪಾಡುಗಳನ್ನೂ ವಿಸ್ತಾರವಾಗಿ ವಿವರಿಸಿರುತ್ತಾರೆ. ಜೀವನಕ್ಕೆ ಮುಖ್ಯವಾಗಿ ಬೇಕಾದ ಸಾಮಾನುಗಳ ಬೆಲೆಯನ್ನು ಹೆಚ್ಚಿಸಿದ ಪ್ರಪಂಚಕ್ಕೆಲ್ಲ ಸಮನಾದ ಕಾರಣಗಳ ಜೊತೆಗೆ ನಮ್ಮ ಸೀಮೆಯಲ್ಲಿ 1918 ನೇ ಸಾಲಿನಲ್ಲಿ ಅತಿ ಸ್ವಲ್ಪವಾಗಿ ಮಳೆ ಬಿತ್ತು ; ಅದರಿಂದ ಸಂಸ್ಥಾನದಲ್ಲಿ ಸಾಗುವಳೀ ವಿಸ್ತೀರ್ಣವು ಸಹ ಕುಗ್ಗಿಹೋಯಿತು. ಬೆಳೆಗಳು ಸಾಧಾರಣ ಬೆಳೆಯಲ್ಲಿ ಅರ್ಧಕ್ಕಿಂತ ಕಡಿಮೆಯಾದವು. ಇದರಿಂದ ಆಹಾರಸಾಮಗ್ರಿಗಳ ಸ್ಥಳೀಯ ದಾಸ್ತಾನುಗಳು ಕಮ್ಮಿಯಾಗುವುದನ್ನು ನಿಲ್ಲಿಸಬೇಕಾದದ್ದು ಅವಶ್ಯಕವಾಯಿತು. ಆದ್ದರಿಂದ 1918 ನೇ ಇಸವಿ ಆಗಸ್ಟು ತಿಂಗಳಿನಿಂದ ಆಹಾರ ಧಾನ್ಯಗಳ ರಫ್ತನ್ನು ಹತೋಟಿಯಲ್ಲಿಡುವದಕ್ಕಾಗಿ ಏರ್ಪಾಡು ಮಾಡಲ್ಪಟ್ಟಿತು. ಈ ಏರ್ಪಾಡುಗಳನ್ನು ಕೇವಲ ಅವಶ್ಯಕವಾದ ಕಾಲದಲ್ಲೇ ಮಾಡಿದಹಾಗಾಯಿತು. ರೂಲ್ಸುಗಳಿಗೆ ವ್ಯತಿರಿಕ್ತವಾಗಿ ನಡೆಯಲು ಕೆಲವರು ಪ್ರಯತ್ನಪಟ್ಟರೂ ಒಟ್ಟಿನಲ್ಲಿ ರೂಲ್ಸಿಗೆ ವಿರೋಧವಾದ ರಫ್ತನ್ನು ನಿಲ್ಲಿಸುವುದಕ್ಕೆ ಮಾಡಿದ ಮುಂಜಾಗ್ರತೆಯ ಏರ್ಪಾಡುಗಳ ಉದ್ದೇಶವು ನೆರವೇರಿತೆಂದೇ ಹೇಳಬೇಕು.

ಆದರೆ ನಮ್ಮದೇಶದಲ್ಲಿ ಸಿಕ್ಕಬಹುದಾದ ಆಹಾರಧಾನ್ಯಗಳು ಅತ್ಯಂತ ಜಾಗ್ರತೆಯಿಂದ ಶೇಖರಿಸಿ ಇಡಲ್ಪಟ್ಟರೂ 1919ನೇ ಸಾಲಿನ ಜುಲೈ ಯಾ ಆಗಸ್ಟ್ ತಿಂಗಳ ಆಚೆಗೆ ನಿಲ್ಲಲು ಸಾಲದೇಹೋಗುವಂತಿದ್ದದ್ದರಿಂದ ಮುಂದಿನ ಸುಗ್ಗಿಯಕಾಲದವರೆಗೂ ಆಹಾರ ಸಾಮಗ್ರಿಯನ್ನು ಆಮದು ಮಾಡಬೇಕಾದ ಅವಶ್ಯಕತೆಯುಂಟಾಯಿತು. ಅದರಂತೆ ಬರ್ಮಾದೇಶದಿಂದಲೂ ಬ್ರಿಟಿಷ್ ಇಂಡಿಯಾದಲ್ಲಿನ ಇತರಪ್ರಾಂತ್ಯಗಳಿಂದಲೂ ಅಕ್ಕಿಯನ್ನು ಆಮದು ಮಾಡುವುದಕ್ಕಾಗಿ ಏರ್ಪಾಡುಗಳು ಮಾಡಲ್ಪಟ್ಟವು, 1919ನೇ ಇಸವಿ ಜೂನ್ ಆಖೈರುವರೆಗೆ ತರಿಸಿದ ಒಟ್ಟು ಅಕ್ಕಿ ಬರ್ಮಾದಿಂದ 13,150 ಟನ್ನುಗಳು, ಬಂಗಾಳದಿಂದ 1,200 ಟನ್ನುಗಳು, ಮದ್ರಾಸ್ ಆಧಿಪತ್ಯದಿಂದ 1,500 ಟನ್ನುಗಳು ಆಗಿವೆ. ಮದರಾಸು ಆಧಿಪತ್ಯದಿಂದ ತರಿಸಿಕೊಂಡ ಅಕ್ಕಿಗೆ ಬದಲಾಗಿ ಸದರೀ ಆಧಿಪತ್ಯಕ್ಕೆ ಮೈಸೂರಿಂದ ಅದರಷ್ಟು ಜೋಳ ರಾಗಿ ಮತ್ತು ದ್ವಿದಳಧಾನ್ಯಗಳನ್ನು ಕಳುಹಿಸಿದ್ದಾಯಿತು. ಆಮದಾದ ಅಕ್ಕಿಯಪೈಕಿ ಕೋಲಾರದ ಚಿನ್ನದ ಗಣಿಗೂ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿಗೂ ಬೇಕಾದಷ್ಟು ಅಕ್ಕಿಯನ್ನು ತೆಗೆದಿಟ್ಟು ಮಿಕ್ಕದ್ದನ್ನು ಡಿಸ್ಟ್ರಿಕ್ಟುಗಳಲ್ಲಿ ಹಂಚುವುದಕ್ಕಾಗಿ ಒದಗಿಸಿದೆ.

ಮೊದಲು ಬರ್ಮಾ ಅಕ್ಕಿಯನ್ನು ಉಪಯೋಗಿಸುವ ವಿಷಯದಲ್ಲಿ ನಿಷ್ಕಾರಣವಾದ ತಿರಸ್ಕಾರಬುದ್ಧಿ ಒಂದು ಜನರಲ್ಲಿ ಇದ್ದದ್ದರಿಂದ, ಮೊದಲು ಯೋಚಿಸಿದ್ದಂತೆ ಜನರು ಅದನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳಲಿಲ್ಲ. ಆದರೆ ಸ್ಥಳೀಯ ಸರಬರಾಯಿ ನಿಂತುಹೋದಾಗ ಬರ್ಮಾಅಕ್ಕಿಯನ್ನು ಅಧಿಕವಾಗಿ ದಿನೇದಿನೇ ಜನರು ಅಪೇಕ್ಷಿಸಲು ಪ್ರಾರಂಭಿಸಿದರು. ಈಗ ಆ ಅಕ್ಕಿಯೇ ಸಂಸ್ಥಾನದಲ್ಲಿ ಮುಖ್ಯ ಆಧಾರವಾಗಿದೆ. ತಥಾಪಿ ಕೋಲಾರ, ಶಿವಮೊಗ್ಗಾ ಪ್ರಾಂತ್ಯಗಳಲ್ಲಿ ಮಿಕ್ಕಕಡೆಗಿಂತ ಹೆಚ್ಚಾಗಿ ಜನರಿಗೆ ಮುಖ್ಯ ಆಧಾರವಾಗಿದೆ. ಅವಶ್ಯಕವಾಗಿಯೂ ಶಕ್ಯವಾಗಿಯೂ ಇದ್ದಂತೆ ತೋರಿದಷ್ಟು ಅಕ್ಕಿಯನ್ನು ಬ್ರಿಟಿಷ್ ಪ್ರಾವಿನ್ಸುಗಳಿಂದ ನಾವು ಆಮದಾಗಿ ತೆಗೆದುಕೊಳ್ಳಲಿಕ್ಕೆ ಒಪ್ಪಿದ ಇಂಡಿಯಾ ಗೌರ್ನಮೆಂಟಿನವರ ಔದಾರ್ಯದಿಂದ ನಾವು ಇಲ್ಲಿಯವರೆಗೆ ಕಷ್ಟವನ್ನು ದೂರಮಾಡಲು ಶಕ್ತರಾದೆವು. ಇಂಡಿಯಾ ಗೌರ್ನಮೆಂಟಿಗೂ ಬ್ರಿಟಿಷ್ ರೆಸಿಡೆಂಟರಾದ ಆನರಬಲ್ ಮಿ|| ಕಾಬ್‌ರವರಿಗೂ ಅವರು ಸಕಾಲದಲ್ಲಿ ಮಾಡಿದ ಅತ್ಯುದಾರವಾದ ಸಹಾಯಕ್ಕೆ ನಾವು ಎಷ್ಟು ಕೃತಜ್ಞರಾಗಿದ್ದರೂ ತೀರದು. ಅಲ್ಲದೆ ಆಹಾರ ಸಾಮಗ್ರಿ ಸಂಬಂಧವಾದ ಬೇರೆ ಬೇರೆ ಪ್ರಾಂತ್ಯಗಳ ಪರಸ್ಪರ ಆಮದು ಮತ್ತು ರಫ್ತಿನ ವ್ಯವಸ್ಥೆಯನ್ನು ಕ್ರಮಪಡಿಸುವುದರಲ್ಲಿ ಸೌಹಾರ್ದಹೃದಯರಾಗಿ ನಮಗೆ ಸಹಾಯಮಾಡಿದ ಪ್ರಾವಿನ್ಷಲ್ ಗೌರ್ನಮೆಂಟುಗಳ ಆಫೀಸರುಗಳಿಗೂ ಸಹ ನಾವು ನಮ್ಮ ವಂದನೆಗಳನ್ನು ಕೊಡಬೇಕು.

ಇನ್ನು ಮುಂದೆಯಾದರೋ, ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಈಗ ತಾನೇ ಬಿದ್ದಿರುವ ಮಳೆಗಳು ಒಳ್ಳೆಯ ಬೆಳೆಯನ್ನು ಕೊಡುತ್ತವೆಯೆಂದು ನಾವು ನಂಬಬಹುದು. ರೈಲ್ ಮಾರ್ಗದಿಂದ ಸಾಮಾನು ಕಳುಹಿಸುವುದಕ್ಕೆ ಇಲ್ಲಿಯವರೆಗೂ ಇದ್ದ ಕಷ್ಟಗಳೂ ಸಹ ಕಡಮೆಯಾಗುತ್ತಾ ಇವೆ. ಈ ವರುಷದ ಅಂತ್ಯದೊಳಗೆ ಈಗಿನಂತೆಯೇ ಮಳೆಗಳು ಅನುಕೂಲವಾಗಿ ಬಂದರೆ, ಹಿಂದಿನ ಸಾಧಾರಣ ಧಾರಣೆಗಳನ್ನೂ ಜನರ ಕ್ಷೇಮಲಾಭವನ್ನೂ ಪೂರ್ವಸ್ಥಿತಿಗೆ ತರುವುದು ಸಾವಕಾಶ ಸಾಧ್ಯವಾದ ಕೋರಿಕೆಯಾದರೂ ಸರಿಯಾಗಿ ನೋಡಿದರೆ ಸ್ತಿಮಿತವಾದ ಕಾಲವು ಬರುವದೆಂದು ನಾವು ಯೋಚಿಸಬಹುದು.

ಕಷ್ಟನಿವಾರಣೆಯು ಬಹಳ ದೂರವಾಗಿಲ್ಲದಿದ್ದರೂ ಸದ್ಯದಲ್ಲಿ ಕೆಲವು ತಿಂಗಳುಗಳವರೆಗೂ ವಾಸ್ತವವಾಗಿಯೂ ಮನಸ್ಸಿನಲ್ಲಿ ಚಿಂತೆಗೆ ಆಸ್ಪದವುಂಟೆಂದು ನಾವು ತಿಳಿಯಬೇಕು. ನಾವು ಶೇಖರಿಸಿದ್ದ ಸಾಮಗ್ರಿಗಳು ಮುಗಿಯುತ್ತಾ ಬಂದಿವೆ. ಹೊರಗಿನಿಂದ ತರಿಸೋಣವೆಂದರೆ ಧಾನ್ಯಗಳು ತಿಳಿದಹಾಗೆಯೇ ಪರಿಮಿತವಾಗಿವೆ. ಮುಂದಿನ ಬೆಳೆಯನ್ನು ಸಂಗ್ರಹಿಸುವವರೆಗೂ ಆಹಾರಸಾಮಗ್ರಿಗಳನ್ನು ಉಪಯೋಗಿಸುವುದರಲ್ಲಿ ಬಹಳ ಮಟ್ಟಿಗೆ ಮಿತವಾಗಿರಬೇಕಾದದ್ದು ಅತ್ಯವಶ್ಯಕವಾಗಿದೆ.

ಯುವರಾಜರಿಗೆ ಪುತ್ರೋತ್ಸವ.—1919 ನೆ ಇಸವಿ ಜುಲೈ 18 ನೇ ತಾರೀಖಿನ ದಿವಸ ಶ್ರೀಮದ್ಯುವರಾಜ ಸೀಮಂತಪುತ್ರ ಶ್ರೀಜಯಚಾಮರಾಜ ಒಡೆಯರವರು ಜನಿಸಿದಾಗ ನಮ್ಮ ಸಂಸ್ಥಾನದಲ್ಲಿ ರಾಜಭಕ್ತ್ಯುತ್ಸಾಹಗಳ ಸಂತೋಷಯುಕ್ತವಾದ ನಿದರ್ಶನಗಳು ಸರ್ವತ್ರ ಪ್ರಕಟವಾದವು. ಈ ಪುತ್ರೋತ್ಸವವು, ಅದುವರೆಗೆ ಅನೇಕವಿಧವಾದ ತೊಂದರೆಗಳಿಗೆ ಸಿಲುಕಿದ್ದು ಆಗತಾನೇ ಬಿಡುಗಡೆಯನ್ನು ಹೊಂದಿದ್ದ ಮೈಸೂರು ಜನರಿಗೆ ಸಾಧಾರಣವಾದ ಕ್ಷೇಮಕಾಲದ ಪುನರಾಗಮನವನ್ನು ಸೂಚಿಸಿತು. ಅವರ ' ಜಯ ' ಎಂಬ ಅಭಿಧಾನವು ಮಹಾಯುದ್ಧದಲ್ಲಿ ಚಕ್ರಾಧಿಪತ್ಯಕ್ಕೆ ಪ್ರಾಪ್ತವಾದ ಜಯದ ಸ್ಮಾರಕವಾಗಿದೆ. ಈ ಅತ್ಯಂತ ಶುಭಪ್ರದವಾದ ಸಂದರ್ಭದಲ್ಲಿ ಶ್ರೀಮದ್ಯುವರಾಜರಿಗೆ ನಮ್ಮ ವಿನಯಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸಲು ಈ ಸಭೆಯ ಮೆಂಬರುಗಳು ನಮ್ಮನ್ನು ಅಪೇಕ್ಷಿಸುವರೆಂದು ನಾವು ದೃಢವಾಗಿಯೂ ನಂಬುತ್ತೇವೆ.

ಘನತೆಯುಳ್ಳ ಶ್ರೀಮಂತ ವೈಸರಾಯಿಗಳ ಆಗಮನ.—ಘನತೆಯುಳ್ಳ ಶ್ರೀಮಂತ ವೈಸರಾಯಿ ಲಾರ್ಡ್ ಚೆಮ್ಸ್‌ಫರ್ಡ್‌ರವರ ಆಗಮನವು ನಿಮಗೆ ನಿಜವಾಗಿಯೂ ಸಂತೋಷವನ್ನು ಉಂಟುಮಾಡುವ ಮತ್ತೊಂದು ವಿಷಯವಾಗಿದೆ. ಮುಂದಿನ ತಿಂಗಳಲ್ಲಿ ನಮ್ಮ ಸೀಮೆಗೆ ಆ ಮಹನೀಯರನ್ನು ಬರಮಾಡಿಕೊಳ್ಳುವ ಸೌಭಾಗ್ಯಸಂದರ್ಭವು ನಮಗೆ ಒದಗುವದಾಗಿದೆ. ಅವರು ಬಂದಾಗ್ಯೆ ಸೀಮೆಯ ಎಲ್ಲಾ ಕಡೆಗಳಲ್ಲೂ ಅವರನ್ನು ಚಕ್ರವರ್ತಿಯ ಪ್ರತಿನಿಧಿಗಳಿಗೆ ಸಲ್ಲುವ ಭಕ್ತಿವಿಶ್ವಾಸಗಳಿಂದ ಜನರು ಕಾಣುವರೆಂದು ನಾವು ದೃಢವಾಗಿ ನಂಬಿದೇವೆ.

ಪ್ರತಿನಿಧಿ ಸಭೆಗಳು.

ಪ್ರತಿನಿಧಿ ಸಭೆ.—ಪ್ರತಿನಿಧಿ ಸಭೆಯ ಮೆಂಬರುಗಳನ್ನು ಚುನಾಯಿಸುವುದಕ್ಕೂ ಮೆಂಬರಾಗಿ ಚುನಾಯಿಸಲ್ಪಡಲಿಕ್ಕೂ ಜಮೀನುಕಂದಾಯ ಮತ್ತು ಮೊಹತರ್ಫಾ ಬಾಬುಗಳಿಗಾಗಿ 50 ರೂಪಾಯಿಗಳನ್ನು ಕೊಡುವವನೆಂಬ ಒಂದೇವಿಧವಾದ ಯೋಗ್ಯತೆಯನ್ನು ಎಲ್ಲಾ ತಾಲ್ಲೂಕುಗಳಲ್ಲಿಯೂ ಅನುಸರಿಸುವುದರಮೂಲಕ ಮತಕೊಡುವವರ ಸಂಖ್ಯೆಯನ್ನು ಹೆಚ್ಚಿಸಿದ 1918 ನೇ ಏಪ್ರಿಲ್ ತಿಂಗಳ ಸರ್ಕಾರಿ ಹುಕುಮನ್ನು ಈ ವರುಷದಲ್ಲಿ ಜಾರಿಯಲ್ಲಿ ತರಲಾಯಿತು. ಮತ್ತು ಕಳೆದ ಏಪ್ರಿಲ್ ಅಧಿವೇಶನದಲ್ಲಿ ಈ ಸಭೆಯಲ್ಲಿ ವ್ಯಕ್ತಪಡಿಸಲ್ಪಟ್ಟ ಅಭಿಪ್ರಾಯಗಳಿಗನುಸಾರವಾಗಿ, ಮುನಿಸಿಪಾಲಿಟಿಗಳಿಗೆ ಪ್ರತಿನಿಧಿಗಳನ್ನು ಹೆಚ್ಚಾಗಿ ಕಳುಹಿಸಿಕೊಡಲು ಅವಕಾಶಕೊಡಬೇಕೆಂಬ ಉದ್ದೇಶದಿಂದ, ಚುನಾವಣೆ ಸ್ಥಾನಗಳಿಗೆ ಏರ್ಪಟ್ಟಿದ್ದ ಪ್ರತಿನಿಧಿಗಳ ಸಂಖ್ಯೆಯನ್ನು ಈಚೆಗೆ ಪುನಃ ಹಂಚಿಗೆ ಮಾಡಲಾಯಿತು. ಕಳೆದ ಸಲ ಮೆಂಬರುಗಳು ಸಾಮಾನ್ಯವಾಗಿ ಅಭಿಪ್ರಾಯಪಟ್ಟಂತೆ ಈ ಸಭೆಯ ಮೆಂಬರುಗಳ ಒಟ್ಟು ಸಂಖ್ಯೆಯನ್ನು ಕಡಮೆಮಾಡದೆ ಹಿಂದೆ ಇದ್ದಂತೆಯೇ ಇರಿಸಿದೆ.

ಸಂಪದಭ್ಯುದಯ ಸಮಾಜ.—ಸಂಪದಭ್ಯುದಯ ಸಮಾಜವನ್ನು ಕಾಯಂಮಾಡಲಾಯಿತು. ಅದರ ರಚನಾಕ್ರಮದಲ್ಲಿ ಬಹುದೂರಕ್ಕೆ ವ್ಯಾಪಿಸುವ ಬದಲಾವಣೆಗಳನ್ನು ಮಾಡಿದೆ. ಮುಂದೆ ಈ ಸಮಾಜದ ರಚನೆಯೊಳಗೆ (1) ಇತರ ಸಂಸ್ಥೆಗಳ ಕೆಲಸಗಳನ್ನು ಕ್ರಮಪಡಿಸಿ ಪರಸ್ಪರ ಸಮಂಜಸವನ್ನುಂಟುಮಾಡುವುದಕ್ಕೆ ಈಗಿರುವ ಸ್ಟ್ಯಾಂಡಿಂಗ್ ಕಮಿಟಿಗೆ ಬದಲಾಗಿ ಒಂದು ಸೆಂಟ್ರಲ್ ಎಕನಾಮಿಕ್ ದೆವಲಪ್‌ಮೆಂಟ್ ಬೋರ್ಡ್ ಎಂಬ ಸಂಘ, (2) ಈಗಿರುವ ಮೂರು ಸೆಂಟ್ರಲ್ ಕಮಿಟಿಗಳಿಗೆ ಸಮನಾಗಿ ವಿದ್ಯಾಭ್ಯಾಸಕ್ಕೆ ಒಂದು, ವ್ಯವಸಾಯಕ್ಕೆ ಒಂದು, ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಒಂದು ಈರೀತಿ ಮೂರು ಬೋರ್ಡುಗಳು, ಮತ್ತು (3) ಶಾಸ್ತ್ರೀಯ ಶೋಧನೆ ಕರ್ತವ್ಯಸೂಚನೆಗಾಗಿ ಒಂದು ಬೋರ್ಡು ಇವುಗಳು ಅಡಗಿರುವವು. ಡಿಸ್ಟ್ರಿಕ್ಟುಗಳಲ್ಲಿ ಮಾಡಬೇಕಾದ ಕೆಲಸಗಳನ್ನು, ಹೊಸ ಸ್ಥಳೀಯ ಪ್ರಜಾಸ್ವಾತಂತ್ರ್ಯ ಕ್ರಮವನ್ನು ಅನುಸರಿಸಿ ಅಲ್ಲಿಯ ಕಾನೂನು ಮೂಲಕ ಸ್ಥಾಪಿತಗಳಾದ ಸಭೆಗಳಿಗೆ ಒಪ್ಪಿಸಿ, ಪ್ರತ್ಯೇಕ ಸಬ್ ಕಮಿಟಿಗಳಮೂಲಕ ನಡೆಸಲಾಗುವದು. ಆಡಳಿತದ ನೀತಿಯ ವಿಚಾರದಲ್ಲಿ ಸಲಹೆಗಳನ್ನೂ ಶಿಫಾರಸುಗಳನ್ನೂ ಮಾಡುವುದಕ್ಕಾಗಿ ಸೆಂಟ್ರಲ್ ಬೋರ್ಡುಗಳೂ ಮತ್ತು ಇತರ ಚುನಾಯಿಸಿದ ಪ್ರತಿನಿಧಿಗಳೂ ವರುಷಕ್ಕೆ ಒಂದುಸಲ ಒಟ್ಟಾಗಿ ಸೇರುವುದು ಸಾಲಿಯಾನಾ ಸಮ್ಮೇಳನವೆನಿಸುವುದು.

ಬೋರ್ಡು ಯಾ ಸೆಂಟ್ರಲ್ ಕಮಿಟಿಗೆ ಅವರವರಿಗೆ ಗೊತ್ತಾಗಿರುವ ಕಾರ್ಯಗಳಲ್ಲಿ ಹೆಚ್ಚಾದ ಸ್ವಾತಂತ್ರ್ಯವನ್ನು ಕೊಡುವುದೇ ಈ ಬದಲಾವಣೆಗಳ ಮುಖ್ಯ ಉದ್ದೇಶವಾಗಿರುತ್ತದೆ. ಇನ್ನುಮೇಲೆ ಇವು ಒಂದು ಸೆಂಟ್ರಲ್ ಸಂಸ್ಥೆಯ ಎಂದರೆ ಕಾನ್‌ಫರೆನ್ಸಿನ ಅಂಗಗಳಾಗಿ ಅದರಿಂದ ಉಂಟಾದ ಅಧಿಕಾರ ಮತ್ತು ಕರ್ತವ್ಯಗಳನ್ನುಳ್ಳವಾಗಿರುವುದಿಲ್ಲ. ಇದಲ್ಲದೆ ಇವುಗಳಿಗೆ ಸಂಪದಭಿವೃದ್ಧಿಕಾರ್ಯದಲ್ಲಿ ಕಾನೂನುಮೂಲಕ ಸ್ಥಾಪಿತಗಳಾದ ಸಭೆಗಳ ಸಹಾಯವನ್ನು ಒದಗಿಸಿಕೊಡುವ ಉದ್ದೇಶವೂ ಒಂದಾಗಿರುವುದು. ಮುಂದೆ ಸ್ಥಳೀಯ ಪ್ರಜಾ ಸ್ವಾತಂತ್ರ್ಯದ ಏರ್ಪಾಡಿನಲ್ಲಿ ಸಂಪದಭಿವೃದ್ಧಿಕಾರ್ಯವು ಸೇರಿದ ಭಾಗವಾಗಿರತಕ್ಕದ್ದು.

ಫೈನಾನ್ಸ್.—ಕಳೆದ ಜೂನ್ ತಿಂಗಳೊಡನೆ ಆಖೈರಾದ ವರುಷಕ್ಕೆ ಸಂಬಂಧಪಟ್ಟ ತಿದ್ದುಪಡಿಯಾದ ಅಂದಾಜಾಗಳನ್ನೂ ಚಾಲ್ತಿವರುಷದ ಬಜೆಟ್ ಅಂದಾಜಾಗಳನ್ನೂ ಈ ಸಭೆಯ ಕಳೆದ ಅಧಿವೇಶನದಲ್ಲಿ ತಪಶೀಲಾಗಿ ಪರ್ಯಾಲೋಚಿಸುವುದರಿಂದ ಈಗ ಪುನಃ ಅದನ್ನು ವಿಚಾರಮಾಡುವುದು ಅನಾವಶ್ಯಕವಾಗಿರುವುದು. ಆದರೆ ನಮ್ಮ ದ್ರವ್ಯೋಪಪತ್ತಿಯ ಸ್ಥಿತಿಯನ್ನು ಬಹಳವಾಗಿ ವ್ಯತ್ಯಾಸಪಡಿಸಿದ ಒಂದಂಶವನ್ನು ಮಾತ್ರ ತಿಳಿಸಬೇಕಾದುದು ಅವಶ್ಯಕವಾಗಿರುತ್ತದೆ. ಚಾಲತೀ ವರುಷದ ಜಮಾಖರ್ಚು ಅಂದಾಜಾಗಳನ್ನು ತಯಾರುಮಾಡಿದಾಗ ರೂಪಾಯಿಯ ಬದಲುದರವು 1 ಶಿಲಿಂಗು 6 ಪೆನ್ನಿಗಳಾಗಿದ್ದುದು ಈಗ 2 ಶಿಲಿಂಗುಗಳಿಗೆ ಹೆಚ್ಚಿದೆ. ಈ ಕಾರಣದಿಂದ ಇಂಗ್ಲೀಷ್ ನಾಣ್ಯಗಳಲ್ಲಿ ವಸೂಲಾಗುವ ನಮ್ಮ ಗಣಿಗಳ, ವಿದ್ಯುಚ್ಛಕ್ತಿಯ ಮತ್ತು ಗಂಧದ ಎಣ್ಣೆಯ ಮೂಲಕವಾದ ಹುಟ್ಟುವಳಿಯು 15 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಕಡಮೆ ಬೀಳಬಹುದೆಂದು ತೋರುತ್ತದೆ. ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದ 64,000 ರೂಪಾಯಿಗಳ ಕಮ್ಮಿ ಹುಟ್ಟುವಳಿಯು ಈಗ 16 ಲಕ್ಷದಷ್ಟು ಆಗುವಂತೆಯಿದೆ. ಆದ್ದರಿಂದ, ಸಾವಕಾಶವಾಗಿ ನಡಿಸಿದರೆ ಬಾಧಕವಿಲ್ಲವೆಂದು ತಿಳಿದುಬರುವಂಥ ಬಾಬುಗಳನ್ನು ಮುಂದಿನ ವರುಷಗಳಿಗೆ ಇಟ್ಟುಕೊಳ್ಳುವ ದೃಷ್ಟಿಯಿಂದ, ಖರ್ಚುಬಾಬುಗಳ ಕಾರ್ಯಕ್ರಮದ ಪಟ್ಟಿಯನ್ನು ಮರೀ ಪರ್ಯಾಲೋಚಿಸಬೇಕಾಗಿದೆ.

ಸಂಸ್ಥಾನದ ಹಣಕಾಸಿನ ಸ್ಥಿತಿಯ ವಿಷಯದಲ್ಲಿ ಕಳೆದ 10 ವರುಷಗಳ ಕಾಲದ ಜಮಾಖರ್ಚಿನ ವಿಮರ್ಶೆಯನ್ನೂ ಮತ್ತು ಮುಂದಿನ ಐದುವರುಷಗಳ ಜಮಾಖರ್ಚುಗಳ ಅಂದಾಜಾವನ್ನೂ ಒಳಕೊಳ್ಳುವಂತೆ ತಯಾರ್ಮಾಡಲ್ಪಟ್ಟ ಒಂದು ಮೆಮೊರಾಂಡಮನ್ನು ಈಚೆಗೆ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲಾಗಿದೆ. ಅದರಲ್ಲಿ ನಮ್ಮ ಹಣಕಾಸಿನ ಈಗಿನ ಸ್ಥಿತಿಯನ್ನೂ ಮುಂದಿನ ಸಂಭವಗಳನ್ನೂ ಪೂರ್ಣವಾಗಿ ವಿಚಾರಮಾಡಲಾಗಿರುವುದು. ಈಗಿನ ಖರ್ಚಿನ ಸ್ಟ್ಯಾಂಡರ್ಡ್‌ಪ್ರಕಾರ ಹುಟ್ಟುವಳಿಯು ಖರ್ಚಿಗೆ ಸಾಲದೆ ಹೋಗುವದರಿಂದ ಸಾವಕಾಶವಾಗದೆ ಕೂಡಲೆ ನಮ್ಮ ವರಮಾನವನ್ನು ಹೆಚ್ಚಿಸಬೇಕಾದದ್ದು ಅವಶ್ಯಕವೆಂಬ ಅಂಶವು ಈ ಮೆಮೊರಾಂಡಂನಿಂದ ತಮಗೆಲ್ಲ ವ್ಯಕ್ತವಾಗಿರಬೇಕು.

ಈ ಫೈನಾನ್ಷಲ್ ಮೆಮೊರಾಂಡಂ ಯಾ ದ್ರವ್ಯೋಪಪತ್ತಿಯ ವಿವರಣವನ್ನು ನೋಡಿದರೆ ಸರ್ಕಾರದವರು ಸಾಲತೆಗೆಯದೇ ನಮ್ಮ ಪ್ರೋಗ್ರಾಮಿನ ಮೇರೆಗೆ ಲಾಭಕರವಾದ ಕಾಂಗಾರಿಗಳನ್ನು ಮುಂದೆ ನಡೆಸುತ್ತಾ ಬರಲು ಸಾಧ್ಯವಿಲ್ಲವೆಂಬುದೂ ನಿಮಗೆ ತಿಳಿಯಬರುವುದು. ನಗದುಹಣಕ್ಕೆ ಬದಲಾಯಿಸಬಹುದಾದ ಸಂಸ್ಥಾನದ ಆಸ್ತಿಗಳು ಶೀಘ್ರದಲ್ಲೇ ಇನ್ನುತಗ್ಗಿಸಕೂಡದಂಥ ಅಲ್ಪಪ್ರಮಾಣಕ್ಕೆ ಇಳಿಯುವುವು. ಆದುದರಿಂದ ಬಂಡವಾಳದ ಕಾಂಗಾರಿಗಳಿಗೆ ಹಣ ಒದಗಿಸುವುದಕ್ಕಾಗಿ ಮೊದಲನೆ ಕೆಲಸವಾಗಿ 1921 ನೇ ವರುಷದ ಅಕ್ಟೋಬರು ತಿಂಗಳಲ್ಲಿ ಪಾವತಿಬಗ್ಗೆ ಅವಧಿಬೀಳುವ 1906-07 ನೇ ವರುಷದ ಸೇಕಡಾ 4 ರ ಬಡ್ಡಿಯುಳ್ಳ ಮೈಸೂರು ಸರ್ಕಾರದ ಸಾಲವನ್ನು 1919 ನೇ ಅಕ್ಟೋಬರು 1 ನೇ ತಾರೀಖು ಲಾಗಾಯತು ನಡೆದು ಬರತಕ್ಕಂಥ ಸೇಕಡಾ 5½ ಯ ಬಡ್ಡಿಯುಳ್ಳ ಹೊಸ ಸಾಲವನ್ನಾಗಿ ಬದಲಾಯಿಸಬೇಕೆಂದು ನಿಶ್ಚಯಿಸಲಾಯಿತು.

ಲ್ಯಾಂಡ್ ರೆವಿನ್ಯೂ

ಕಳೆದ ವರುಷದಲ್ಲಿ ಕಾಲಸ್ಥಿತಿಗಳು ಕೇವಲ ಅಸಮಾಧಾನಕರವಾಗಿದ್ದ ಕಾರಣ ಕೋಲಾರ ಡಿಸ್ಟ್ರಿಕ್ಟಿನ ಎಲ್ಲಾ ಕಡೆಗಳಲ್ಲೂ ಬೆಂಗಳೂರು ತುಮಕೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿಯೂ ತರೀ ಜಮೀನುಗಳಿಗೆ ಕಂದಾಯದ ರಿಮಿಷನ್ ಕೊಡಬೇಕಾಯಿತು. ಈ ಪ್ರಕಾರ ಇದುವರೆಗೂ 3½ ಲಕ್ಷ ರೂಪಾಯಿಗಳಷ್ಟು ರಿಮಿಷನ್ ಕೊಡೋಣಾಗಿದೆ. ವ್ಯವಸಾಯದ ದುಃಸ್ಥಿತಿಯ ನಿವಾರಣೆಗಾಗಿ ಮಾಡಿದ ಇತರ ಏರ್ಪಾಡುಗಳಲ್ಲಿ ತಕಾವಿ ಮತ್ತು ಜಮೀನು ಆಬಾದು ಸಾಲಗಳನ್ನು ಕೊಡುವುದಕ್ಕಾಗಿ ಧಾರಾಳವಾಗಿ ಹಣ ಒದಗಿಸಿ ಕೊಟ್ಟಿರುವುದೂ, ಮತ್ತು ಕೊಂಚಕೊಂಚವಾಗಿ ಬೆಲೆಯನ್ನು ವಾಪಸು ಕೊಡುವ ಷರತ್ತಿನಮೇಲೆ ಬೀಜದ ಕಾಳುಗಳನ್ನು ರೈತರಿಗೆ ಹಂಚುವುದಕ್ಕೆ ಏರ್ಪಾಡು ಮಾಡಿರುವುದೂ ಸೇರಿವೆ. ಶೀಘ್ರದಲ್ಲಿ ಕೈಗೆಬರುವ ಫಸಲುಗಳನ್ನು ಬಂಜರು ಜಮೀನುಗಳಲ್ಲಿ ಕಂದಾಯವಿಲ್ಲದೇ ಪೈರು ಇಡುವುದಕ್ಕಾಗಿ ರಿಯಾಯಿತಿಗಳು ಕೊಡಲ್ಪಟ್ಟವು. ಕೃಷ್ಣರಾಜಸಾಗರ ವಾಣೀವಿಲಾಸ ಸಾಗರ ಮತ್ತು ಶ್ರೀರಾಮದೇವರ ಅಣೆಗಳಿಂದ ನೀರಾವರಿ ಪೈರುಗಳಿಗೆ ನೀರು ಸರಬರಾಯಿ ಮಾಡುವದಕ್ಕಾಗಿ ವಿಶೇಷವಾದ ಸೌಕರ್ಯಗಳು ತೋರಿಸಲ್ಪಟ್ಟವು. ದನಗಳನ್ನು ಮುಫತ್ತಾಗಿ ಮೇಯಿಸುವುದಕ್ಕೆ ಮನ್ನಾ ಜಂಗಲುಗಳು ಖುಲ್ಲಾ ಮಾಡಲ್ಪಟ್ಟವು.

ಲ್ಯಾಂಡ್ ರೆವಿನ್ಯೂ ಇಲಾಖೆಯ ಅಭಿವೃದ್ಧಿ ಕಾರ್ಯಕ್ಕೆ ಅವಿಚ್ಛಿನ್ನವಾಗಿ ಗಮನಕೊಡುತ್ತಲಿದೆ. ಡೆಪ್ಯುಟಿಕಮಿಷನರುಗಳಿಗೆ ತಾಲ್ಲೂಕುಗಳ ಮೇಲಿನ ಖುದ್ದು ವಿಚಾರಣೆಯನ್ನು ತಪ್ಪಿಸಿ ಅವರ ಎಲ್ಲಾ ಕಾಲವನ್ನು ಡಿಸ್ಟ್ರಿಕ್ಟು ಒಟ್ಟು ಆಡಳಿತದ ಮೇಲ್ವಿಚಾರಣೆಯಲ್ಲಿ ವಿನಿಯೋಗಿಸುವಂತೆ ಮಾಡುವುದಕ್ಕೆ ಹಾಸನ, ಕೋಲಾರ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಮೂರು ಹೊಸ ಸಬ್‌ಡಿವಿಜನ್‌ಗಳು ಏರ್ಪಡಿಸಲ್ಪಟ್ಟವು. ಬಹುಕಾಲವಾಗಿ ವಜಾಮಾಡಬೇಕೆಂದು ವಿಚಾರದಲ್ಲಿದ್ದ ಸಬ್‌ತಾಲ್ಲೂಕುಗಳ ಅಸಂಗತವಾದ ಏರ್ಪಾಡನ್ನು ವ್ಯವಸ್ಥೆ ಮಾಡಲಾಯಿತು. ಈಗ ನಿಶ್ಚಯಿಸಿರುವಂತೆ ಗುಡಿಬಂಡೆಮತ್ತು ಫ್ರೆಂಚುರಾಕ್ಸ್ ಇವುಗಳನ್ನು ಪಕ್ಕದಲ್ಲಿರುವ ತಾಲ್ಲೂಕುಗಳಿಗೆ ಸೇರಿಸಿಬಿಡುವುದಾಗಿ ಉದ್ದೇಶಿಸಿದೆ. ಮತ್ತು ಉಳಿದ ಸಬ್‌ತಾಲ್ಲೂಕುಗಳನ್ನು ವಜಾಮಾಡುವುದರಿಂದಲೂ ಮತ್ತು ಅದಕ್ಕೆ ಸೇರಿದಂತೆ ಸ್ಥಳಾಧಿಕಾರಿಗಳ ಹಂಚಿಕೆಯಿಂದಲೂ ಎಂಟು ಹೊಸತಾಲ್ಲೂಕುಗಳನ್ನು ಸ್ಥಾಪಿಸಿದಂತಾಗುವುದು. ತಾಲ್ಲೂಕು ಸಿಬ್ಬಂದಿಗಳ ಸಂಬಳಗಳನ್ನು ಹೆಚ್ಚಿಸಿದೆ. ಮತ್ತು ಶೇಕದಾರರಿಗೆ ಕೆಲಸ ಕಲಿಸುವುದಕ್ಕಾಗಿ ಒಂದು ಸ್ಕೂಲನ್ನು ಸ್ಥಾಪಿಸಿದೆ.

ರೆವಿನ್ಯೂ ಸರ್ವೆ ಮತ್ತು ಇನಾಂ ಇಲಾಖೆಗಳು.—ರೆವಿನ್ಯೂಸರ್ವೆ ಇಲಾಖೆಯ ಸಿಬ್ಬಂದಿಯನ್ನು ಪುನರ್ವ್ಯವಸ್ಥೆಮಾಡುವ ಬಗ್ಗೆ ಹುಕುಂ ಸಾದರಾಗಿದೆ. ಇದರಿಂದ ಸಾಲಿಯಾನಾ 60,000 ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚು ಹೆಚ್ಚುವುದು. ಆದರೆ ಈ ಇಲಾಖೆಯಲ್ಲಿ ಈಗ ಜಾರಿಯಲ್ಲಿರುವ ಅತ್ಯಂತ ಕಡಮೆಯಾದ ಸಂಬಳಗಳ ದರಗಳು ಇತರ ಇಲಾಖೆಗಳಲ್ಲಿ ಜಾರಿಯಲ್ಲಿರುವ ಸಂಬಳಗಳ ದರಗಳಿಗೆ ಸಮನಾಗಿ ಮಾಡಲ್ಪಡುವವು. ಪ್ರಸಕ್ತ ವರುಷದಲ್ಲಿ ನೆಲಮಂಗಲ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ರಿವಿಜನ್ ಸೆಟಲ್‌ಮೆಂಟನ್ನು ಜಾರಿಯಲ್ಲಿ ತಂದದ್ದರಿಂದ ಒಟ್ಟಿನಲ್ಲಿ ಸಾಲೀಯಾನಾ 16,948 ರೂಪಾಯಿಗಳಷ್ಟು ವರಮಾನವು ಹೆಚ್ಚಿರುವುದು. ಮಾಗಡಿ ಗೋರಿಬಿದನೂರು ಮತ್ತು ಮಾಜೀ ಲಕ್ಕವಳ್ಳಿತಾಲ್ಲೂಕುಗಳಲ್ಲಿ ರೀ ಸೆಟಲ್‌ಮೆಂಟು ನಡೆಸುವ ವಿಚಾರದಲ್ಲಿ ಸಲಹೆಗಳು ಪರ್ಯಾಲೋಚನೆಯಲ್ಲಿರುವವು. ರೀ ಸೆಟಲ್‌ಮೆಂಟು ಬಾಕಿಬಿದ್ದಿರುವ ಅನೇಕ ತಾಲ್ಲೂಕುಗಳಲ್ಲಿ ಕೆಲಸ ತ್ವರೆಯಾಗಿ ಜರುಗುವಂತೆ ಮಾಡುವುದಕ್ಕಾಗಿ ಸರ್ವೆಕೆಲಸವನ್ನು ಸುಲಭಮಾಡುವ ವಿಚಾರಕ್ಕೆ ಗಮನಕೊಡುತ್ತಲಿದೆ. ತಿದ್ದುಪಡಿಯಾದ ಸೆಟಲ್‌ಮೆಂಟು ದರಗಳ ವಿಷಯದಲ್ಲಿ ತಮಗೆ ಆಕ್ಷೇಪಣೆಗಳು ಏನಾದರೂ ಇದ್ದರೆ ಅವುಗಳನ್ನು ತಿಳಿಸಲು ಸಾಕಾದಷ್ಟು ಅವಕಾಶ ರೈತರಿಗೆ ದೊರೆಯುವುದಿಲ್ಲವೆಂಬದಾಗಿ ಈ ಸಭೆಯಲ್ಲಿ ಬಾರಿಬಾರಿಗೂ ತಿಳಿಸಲಾಗಿದೆ. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ, ರೀ ಸೆಟಲ್‌ಮೆಂಟ್ ಸಲಹೆಗಳನ್ನು ಆಖೈರಾಗಿ ಮಂಜೂರ್‌ಮಾಡುವುದಕ್ಕೆ ಮುಂಚೆಯೇ ಶರಾಯಿಸಬೇಕೆಂದು ಉದ್ದೇಶಿಸಿರುವ ಪರಮಾವಧಿಯ ಮತ್ತು ಕನಿಷ್ಠ ದರಗಳನ್ನೂ ಗ್ರಾಮಗಳನ್ನು ಗುಂಪುಮಾಡಿಸಿರುವ ರೀತಿಯನ್ನೂ ಕ್ರಮವಾಗಿ ಪ್ರಸಿದ್ಧಪಡಿಸತಕ್ಕದೆಂದು ಹುಕುಂ ಮಾಡಲಾಗಿದೆ.

ಎಕ್ಸೈಜು ಯಾ ಅಬ್ಕಾರಿ. ಈ ವರ್ಷದಲ್ಲಿ 150 ದುಕಾನ್‌ಗಳಿಗಿಂತಲೂ ಹೆಚ್ಚಾಗಿಯೇ ಮುಚ್ಚಲ್ಪಟ್ಟವು. 4 ದುಕಾನ್‌ಗಳನ್ನು ಮಾತ್ರ ಹೊಸದಾಗಿ ಇಡಲಾಯಿತು. ಶೇಂದಿ ಉತಾರ್‌ಮಾಡುವ ಗಿಡಗಳ ಮೇಲಿನ ಮರತೆರಿಗೆ ದರಗಳನ್ನು ಹೆಚ್ಚಿಸಲಾಯಿತು. ಗಾಂಜಾಮೇಲಿನ ಡ್ಯೂಟಿಯನ್ನು ಸೇರುಒಂದಕ್ಕೆ ರೂಪಾಯಿ 12-8-0 ಯಿಂದ 15 ರೂಪಾಯಿಗೆ ಹೆಚ್ಚಿಸಲಾಯಿತು. (ಈಚೆಗೆ ಇದನ್ನು 17-8-0 ರೂಪಾಯಿಗೆ ಹೆಚ್ಚಿಸಿದೆ.) ಅಲ್ಲದೆ ಅಫೀಮಿನ ಸರ್ಕಾರಿ ಖರೀದಿಯನ್ನು ರೂಪಾಯಿ 41-8-0 ಯಿಂದ 45 ರೂಪಾಯಿಗಳಿಗೂ ಈಚೆಗೆ 50 ರೂಪಾಯಿಗಳಿಗೂ ಹೆಚ್ಚಿಸಿದೆ. ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಮಾಡುವ ಘಂಟೆಗಳ ಕಾಲದಲ್ಲಿ 2 ಘಂಟೆ ತಗ್ಗಿಸಿದೆ. ಬೆಂಗಳೂರು, ಮೈಸೂರು ಮತ್ತು ಕೋಲಾರದ ಚಿನ್ನದಗಣಿಗಳಲ್ಲಿ ಲೈಸೆನ್ಸುಕೊಡುವ ಬೋರ್ಡುಗಳನ್ನು ಸ್ಥಾಪಿಸಿರುವುದರ ಜತೆಗೆ ಉಳಿದ ಎಲ್ಲಾ ಡಿಸ್ಟ್ರಿಕ್ಟ್ ಕಸಬೆ ಸ್ಟೇಷನ್‌ಗಳಲ್ಲಿಯೂ ಅಡ್ವೈಜರಿ ಕಮಿಟಿಗಳನ್ನು ಏರ್ಪಡಿಸಿದೆ. ಆದರೆ ಇಷ್ಟು ಏರ್ಪಾಡುಗಳನ್ನು ಮಾಡಿದರೂಕೂಡ ಅಬ್ಕಾರಿ ಹುಟ್ಟುವಳಿಯು ಹೆಚ್ಚುತ್ತಲೇ ಇದೆ. ಈ ವರ್ಷದಲ್ಲಿ ಆದ 70,64,000 ದಷ್ಟು ಜಾಸ್ತಿ ಹುಟ್ಟುವಳಿಯು ಹಿಂದೆ ಯಾವ ವರ್ಷದಲ್ಲಿಯೂ ಆಗಿರುವುದಿಲ್ಲ. ಷರಾಬು ಮತ್ತು ಅಫೀಮು ಸೇವನೆಯಲ್ಲಿ ಸ್ವಲ್ಪ ಜಾಸ್ತಿ ಹುಟ್ಟುವಳಿಯಾಗಿರುತ್ತದೆ. ಆದರೆ ಶೇಂದಿ ಮತ್ತು ಗಾಂಜಾ ಬಾಬಿನಲ್ಲಿ ಕಮ್ಮಿ ಹುಟ್ಟುವಳಿಯಾಗಿರುತ್ತದೆ.

ಕಳೆದ ಕೆಲವು ವರ್ಷಗಳಿಂದ ದುಕಾನುಗಳ ಸಂಖ್ಯೆಯನ್ನು ಕಡಮೆ ಮಾಡುವುದು, ಡ್ಯೂಟಿಯ ಮತ್ತು ಖರೀದಿಯದರವನ್ನು ಹೆಚ್ಚಿಸುವುದು ಮತ್ತು ಇತರ ಅಂಗೀಕೃತವಾದ ಮಾರ್ಗಗಳಲ್ಲಿ ನಿಷಾ ಪದಾರ್ಥಗಳ ಸೇವನೆಯನ್ನು ನಿರುತ್ಸಾಹಪಡಿಸುವುದೇ ಸರ್ಕಾರದವರ ಉದ್ದೇಶವಾಗಿದ್ದಿದೆ. ಆದರೆ ಈ ಏರ್ಪಾಡುಗಳಿಂದ ಹೆಚ್ಚು ಪ್ರಯೋಜನವಾಗಿರುತ್ತೆಂದು ಹೇಳುವುದಕ್ಕಾಗುವುದಿಲ್ಲ. ಈ ದುರಭ್ಯಾಸದ ನಿವಾರಣೋಪಾಯವು ವಿಶೇಷವಾಗಿ ಬುದ್ಧಿವಂತರಾದ ಜನಗಳ ವಶದಲ್ಲಿಯೇ ಇರುವುದರಿಂದ ಈ ಕೆಡಕನ್ನು ನಿಲ್ಲಿಸುವುದಕ್ಕಾಗಿ ಜನರಲ್ಲಿ ಮುಖಂಡರು ಕಾರ್ಯಕಾರಿಯಾದ ಏರ್ಪಾಡುಗಳನ್ನು ಶೀಘ್ರದಲ್ಲಿ ಮಾಡಿದರೆ ಒಳ್ಳೆಯದಾಗಿ ಇರುತ್ತದೆ.

ಫಾರೆಸ್ಟು.—ಫಾರೆಸ್ಟು ಆಡಳಿತದಲ್ಲಿ ವ್ಯಾಪಾರ ಸಂಬಂಧವಾದ ಮತ್ತು ಅರ್ಥೋತ್ಪತ್ತಿ ಸಂಬಂಧವಾದ ವಿಷಯಗಳು ಹೆಚ್ಚುಹೆಚ್ಚಾಗಿ ಗಣನೆಗೆ ಬರುತ್ತಿವೆ. ಸರ್ಕಾರದವರು ಅಂಜನಿಯರಿಂಗ್, ಕೆಮಿಸ್ಟ್ರಿ, ಎಕನಾಮಿಕ್, ಫಾರೆಸ್ಟ್ರೀ ಬಾಬುಗಳಲ್ಲಿ ಅಭಿಜ್ಞರಾದವರ ನೌಕರಿಯನ್ನು, ಸದರಿ ಇಲಾಖೆಯನ್ನು ಕ್ರಮಪಡಿಸಿ ಅಭಿವೃದ್ಧಿಪಡಿಸುವುದಕ್ಕೋಸ್ಕರ ಮಂಜೂರು ಮಾಡಿರುತ್ತಾರೆ.

ಡಿಸ್ಟ್ರಿಕ್ಟುಗಳ ಡೆಪ್ಯುಟಿಕಮಿಷನರುಗಳಿಗೆ ತಮ್ಮ ಡಿಸ್ಟ್ರಿಕ್ಟುಗಳಲ್ಲಿನ ಫಾರೆಸ್ಟುಗಳ ಆಡಳಿತದ ಸ್ವಂತ ಜವಾಬ್ದಾರಿಯನ್ನು ತಪ್ಪಿಸಿದೆಯಲ್ಲದೆ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರುಗಳನ್ನೂ ಡಿಸ್ಟ್ರಿಕ್ಟುಗಳಲ್ಲಿನ ನೌಕರಿ ಸಿಬ್ಬಂದಿಗಳನ್ನೂ ಫಾರೆಸ್ಟ್ ಕನ್ಸರ್ವೇಟರ ನೇರಾ ತಾಬೆ ಮತ್ತು ಸಂಪೂರ್ಣವಾದ ಅಧೀನದಲ್ಲಿ ಇಡಲಾಗಿದೆ. ಈ ಏರ್ಪಾಡಿನಿಂದ ಜನಗಳ ಅನುಕೂಲ್ಯಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಡೆಪ್ಯುಟಿಕಮಿಷನರ ಅಭಿಪ್ರಾಯದ ಪ್ರಯೋಜನವು ತಪ್ಪದೆ ಇಲಾಖೆಯ ರಚನಾಕ್ರಮವು ಹೆಚ್ಚಾಗಿ ವೃಥಪಡುವುದೆಂದು ನಿರೀಕ್ಷಿಸಿದೆ.

ಫಾರೆಸ್ಟು ಸ್ಕೂಲಿನಲ್ಲಿ ಪ್ರಯೋಜನಕರವಾದ ಕೆಲಸವು ನಡೆಯುತ್ತಲಿದೆ.

ಎಲ್ಲಾ ಬಾಬುಗಳಿಂದಲೂ ಈ ವರ್ಷ ಒಟ್ಟು 47½ ಲಕ್ಷ ರೂಪಾಯಿಗಳ ಹುಟ್ಟುವಳಿಯಾಗಿದೆ.

ರಕ್ಷಣೆ ಮತ್ತು ಇತರ ಇಲಾಖೆಗಳು.

ಜುಡಿಷಲ್.—ಈ ಸಭೆಯ ಹಿಂದಿನ ಭಾಷಣಗಳಲ್ಲಿ ನಮೂದು ಮಾಡಿರುವ ಜುಡಿಷಲ್ ಮತ್ತು ಎಗ್ಸಿಕ್ಯುಟಿವ್ ಅಧಿಕಾರಗಳನ್ನು ಬೇರೆ ಮಾಡುವ ಏರ್ಪಾಡು ಚಾಲ್ತಿ ಕ್ಯಾಲೆಂಡರ್ ವರ್ಷದ ಆದಿಭಾಗದಲ್ಲಿ ಬೆಂಗಳೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ಬಂತು. ಈ ಏರ್ಪಾಡು ಮುಂದಿನ ಜನವರಿ 1ನೆಯ ತಾರೀಖಿನ ಲಾಗಾಯತು ಮೈಸೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ಬರತಕ್ಕದ್ದೆಂದು ಹುಕುಂ ಕೊಡಲಾಗಿದೆ. ಸದರಿ ಏರ್ಪಾಡಿನ ಪ್ರಯೋಜನದ ವಿಷಯದಲ್ಲಿ ಜನಗಳು ಇನ್ನೂ ಭಿನ್ನಾಭಿಪ್ರಾಯವುಳ್ಳವರಾಗಿಯೇ ಇರುತ್ತಾರೆ. ಆದರೆ ಜುಬಿ ಅನಾನುಕೂಲಗಳಿದ್ದಾಗ್ಯೂ ಈ ಹೊಸ ಏರ್ಪಾಡುಗಳು ಹಳೆಯ ಕ್ರಮಕ್ಕಿಂತ ನಿಶ್ಚಿತವಾಗಿ ಉತ್ತಮವಾದುದೆಂಬ ತಮ್ಮ ಅಭಿಪ್ರಾಯವನ್ನು ಬದಲಾಯಿಸಲು ಸರ್ಕಾರದವರಿಗೆ ಯಾವ ಕಾರಣವೂ ಕಂಡುಬಂದಿಲ್ಲ.

ಬೆಂಗಳೂರು ಮತ್ತು ಮೈಸೂರು ಡಿವಿಜನುಗಳಲ್ಲಿ ಹಂಗಾಮಿಯಾಗಿ ಜಾರಿಗೆ ತಂದಿರುವ ಜೂರಿಯ ಮೂಲಕ ವಿಚಾರಣೆಮಾಡುವ ಕ್ರಮವನ್ನು 1919 ನೆಯ ಜುಲೈ 1 ನೆಯ ತಾರೀಖಿನ ಲಾಗಾಯತು ಇನ್ನೂ ಎರಡು ವರ್ಷಗಳವರೆಗೆ ಜಾರಿಯಲ್ಲಿಡತಕ್ಕದ್ದೆಂದು ಹುಕುಂ ಮಾಡಲಾಗಿದೆ.

ಪೊಲೀಸು.—ಭಾರೀ ಡಿಸ್ಟ್ರಿಕ್ಟುಗಳ ಸೂಪರಿಂಟೆಂಡೆಂಟರುಗಳಿಗೆ ಕೆಲಸದಲ್ಲಿ ಸಹಾಯಕೊಡುವುದಕ್ಕಾಗಿಯೂ ಲಾಯಖಾದ ಕೆಳನೌಕರರಿಗೆ ಇಲಾಖೆಯಲ್ಲಿ ಗೆಜೆಟೆಡ್ ಆಫೀಸರರ ಪದವಿಗೆ ಬರಲು ಅವಕಾಶವನ್ನು ಉಂಟುಮಾಡುವುದಕ್ಕಾಗಿಯೂ ಬೆಂಗಳೂರು ಸಿಟಿ, ಚಿಕ್ಕಬಳ್ಳಾಪುರ ಸಬ್‌ಡಿವಿಜನ್, ದಾವಣಗೆರೆ ಸಬ್‌ಡಿವಿಜನ್ ಮತ್ತು ಸಾಗರ ಸಬ್‌ಡಿವಿಜನ್ನುಗಳ ಚಾರ್ಜಿಗೆ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ದರ್ಜೆಯ 4 ಸ್ಥಾನಗಳನ್ನು ಸರ್ಕಾರದವರು ಮಂಜೂರ್ಮಾಡಿರುತ್ತಾರೆ.

ಕೋಲಾರದ ಚಿನ್ನದಗಣಿಯಲ್ಲಿ ಇಟ್ಟಿರುವ ಪೊಲೀಸು ಸೈನ್ಯದ ಸಂಖ್ಯೆಯನ್ನು ಹೆಚ್ಚಿಸಿ ಸರ್ಕಾರದವರು ಸದರಿ ಗಣಿಗಳ ಬೋರ್ಡಿನ ಇಷ್ಟವನ್ನು ನೆರವೇರಿಸಿದ್ದಾರೆ. ಈ ವರ್ಷದ ಕಾಲಸ್ಥಿತಿಗಳೂ, ಆಹಾರ ಪದಾರ್ಥಗಳನ್ನು ಕಳ್ಳತನದಿಂದ ರಫ್ತು ಮಾಡುವುದನ್ನು ತಪ್ಪಿಸುವುದಕ್ಕೆ ಸರಹದ್ದುಗಳಲ್ಲಿ ಕಾದುಕೊಂಡಿರುವ ಕೆಲಸವೂ, ಪೊಲೀಸಿನವರಿಗೆ ಬಹಳ ಕಷ್ಟವನ್ನು ಕೊಟ್ಟವು. ಆದರೆ ಈ ವರ್ಷದ ಕೆಲಸದ ಫಲಿತಾಂಶಗಳು ತೃಪ್ತಿಕರವಾಗಿವೆ. ತೀರ್ಮಾನವಾದ ಮೊಕದ್ದಮೆಗಳ ಪೈಕಿ ತಪ್ಪು ಸಾಬೀತಾದ ಮೊಕದ್ದಮೆಗಳ ಸಂಖ್ಯೆಯು 1917-18 ರಲ್ಲಿ ಶೇಕಡಾ 76·7 ಇದ್ದದ್ದು, ಪ್ರಸಕ್ತ ವರ್ಷದಲ್ಲಿ 91·31 ಕ್ಕೆ ಹೆಚ್ಚಿತು. ಒಳ್ಳೆಯ ಕೆಲಸದ ಪ್ರೋತ್ಸಾಹಕ್ಕಾಗಿ, ಅಸಾಧಾರಣವಾದ ಅಥವಾ ಚಾತುರ್ಯಯುಕ್ತವಾದ ಕೆಲಸಗಳನ್ನು ಮಾಡಿದಂಥ ಅಥವಾ ತಮ್ಮ ಕರ್ತವ್ಯಗಳನ್ನು ಮಾಡುವದರಲ್ಲಿ ವಿಶೇಷ ಶ್ರದ್ಧೆಯನ್ನು ತೋರಿಸಿರುವಂಥ ಪೊಲೀಸು ಜನರಿಗೆ ದಸರಾ ದರ್ಬಾರಿನಲ್ಲಿ ಬಹುಮಾನವಾಗಿ ಕೊಡಲು ಮಹಾರಾಜರ ಪೊಲೀಸು ಮೆಡಲೆಂಬ ಒಂದು ಬಹುಮಾನ ಪದಕವನ್ನು ಇಡಲಾಗಿದೆ.

ಮೆಡಿಕಲ್ ಯಾ ವೈದ್ಯ.—ಸಬ್ ಅಸಿಸ್ಟೆಂಟ್ ಸರ್ಜನರುಗಳ ಕನಿಷ್ಠ ಪಕ್ಷದ ಸಂಬಳವನ್ನು 35 ರಿಂದ 45 ರೂಪಾಯಿಗಳಿಗೆ ಹೆಚ್ಚಿಸಿದೆಯಲ್ಲದೆ ವೈದ್ಯದ ಇಲಾಖೆಯ ನೌಕರಿಯ ಅನೇಕ ದರ್ಜೆಗಳಿಗೆ ಯೋಗ್ಯರಾಗಬೇಕೆಂದು ಬರುವ ಉಮೇದ್ವಾರರಿಗೆ ಉತ್ತಮ ದರದ ವಿದ್ಯಾರ್ಥಿವೇತನಗಳನ್ನು ಮಂಜೂರುಮಾಡಲಾಗಿದೆ. ಕಾಂಪೌಂಡರುಗಳ ಸಂಬಳವನ್ನು ಹೆಚ್ಚಿಸಿದೆಯಲ್ಲದೆ, ಕೆಲವು ಮುಖ್ಯ ವೈದ್ಯಶಾಲೆಗಳ ಸಿಬ್ಬಂದಿಗಳನ್ನು ಜಾಸ್ತಿಮಾಡಿದೆ. ವೈದ್ಯಸಹಾಯವನ್ನು ಹೆಚ್ಚಿಸುವ ವಿಷಯವನ್ನು ಈಚೆಗೆ ಒಂದು ಕಮಿಟಿಯವರು ಪರಿಶೀಲಿಸಿದ್ದಾರೆ. ಮತ್ತು ಅವರ ರಿಪೋರ್ಟಿನ ವಿಷಯದಲ್ಲಿ ಮುಂದೆ ನಾವು ವಾಚನಮಾಡುವ ಸಂಭವಬರುತ್ತದೆ. (ಸಶೇಷ).

„ ದಲ್ಲಾಲಿ ಅಂಗಡಿ ಸೊಲ್ಲಾಪುರ „

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕು, ಶಿಗೇಕಾಯಿ, ತುಪ್ಪ, ಕೊಬರಿ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ. ಚಹಾ, ಕಾಜು, ಆಲೂ, ಉಳ್ಳಾಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮಿಷನ್ನಿನ ಮೇಲೆ ಕಾಳಜಿಯಿಂದ ಖರೀದಿಮಾಡಿ ಕೊಡುತ್ತೇವೆ. ಒಂದುವೇಳೆ ಕೆಲಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಷನರಿ ಸಾಮಾನುಗಳು ಕಮಿಷನ್ನಿನ ಮೇಲೆ ಸೊಲ್ಲಾಪುರ/ಮುಂಬಯಿಯಲ್ಲಿ ಖರೀದಿಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,
2 ವಿಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

ಎಲ್ಲಾ ಅಂಜನಗಳಂತೆ ಇದನ್ನು ತಿಳಿದಿರುವಿರೋ?
. ಎಂದಿಗೂ ಅಲ್ಲ.
ಈ ಸುಧಾ ಲಲಿತಾಂಜನವು.

ನಮ್ಮ ಪೇಟೆಯಲ್ಲಿ ಸಿಕ್ಕುವ ಇತರ ಅಂಜನಗಳಂತೆ ಉರಿಯುವುದಿಲ್ಲ. ಬಂಕೆಯಾಗಿಲ್ಲ. ಈ ಅಂಜನವು ಸಕಲ ವಿಧವಾದ ವಾಯುನೋವು, ತಲೆನೋವು, ತಲೆ ಶೂಲೆ, ನಾನಾತರಹ ಕಜ್ಜಿಗಳು, ಹುರುಕಡ್ಡಿ, ಮುಂತಾದವುಗಳ ಮೇಲೆ ಇದೊಂದೇ ಖಾತ್ರಿಯಾದ ಔಷಧಿ.

ಬೆಲೆ ಶೀಸೆ 1 ಕ್ಕೆ. 0—6—0.

ನಮ್ಮಲ್ಲಿ ತಯಾರಾಗುವ ಎಲ್ಲಾ ತರಹ ಕಾಯಿಗಳ, ಶರಬತ್ತುಗಳ, ಸುಗಂಧದ್ರವ್ಯಗಳ ಕ್ಯಾಟಲಾಗಿಗೆ ಈದಿನವೇ ಅರುಕಾಸಿನ ಸ್ಟಾಂಪು ರವಾನಿಸಿ. ಎಲ್ಲಾ ಕಡೆಯಲ್ಲೂ ಏಜಂಟರು ಬೇಕು. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಬೋರ್ಡು ಮಾಫಿ ಫಾಯಿದೆ ಕರವಾದ ರಿಯಾಯ್ತಿ ದರ. ಇತ್ಯಾದಿ ಸೌಕರ್ಯಗಳುಂಟು. ಒಂದು ರೂಪಾಯಿಗಿಂತ ಕಡಮೆ ಆರ್ಡರುಗಳಿಗೆ ಖಾತೆಕೊಡುವದಿಲ್ಲಾ. ಈದಿನವೇ ಬರೆಯಿರಿ.

ದಿ ಮ್ಯಾನೇಜರ್, ಟಿ. ಎಲ್. ಎ. ಕಂಪೆನಿ
2 ತಿಪ್ಟೂರು (ಮೈಸೂರು ಪ್ರಾನ್ಸ್).

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಪರತ.) 44
ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧ ಸಂಗಡ. ಟಪಾಲಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ—ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತ್ತವೆ. ಕಾಲು ಡಿಸ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2.13.0, 25 ಕ್ಕೆ 5.3.0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
42 ವೈದ್ಯಶಾಲಾ, ಮೈಸೂರು.

ಭಪಕೇ ಜಾಹಿರಾತಿಗೆ ಮರುಳಾಗಬೇಡಿರಿ.

ಒಮ್ಮೆ ತರಿಸಿ. ಸತ್ಯಮೇವ ಜಯತೇ. ಸೇವಿಸಿ ನೋಡಿರಿ.
(ಗುಣವಾಗದಿದ್ದರೆ ಹಣ ಪರತ.)
ಧಾತುಪೌಷ್ಟಿಕ, ಕಾಮೋತ್ತೇಜಕ. ವೀರ್ಯವರ್ಧಕವಾದ
ಪಥ್ಯ. ಇಂದ್ರಿಯಸ್ತಂಭನ ಗುಳಿಗೆ. ಇಲ್ಲಾ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೪ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೪ ಗುಳಿಗೆಗಳಿಗೆ ೪ ರೂಪಾಯಿ. ಈ ಗುಳಿಗೆ ಸೇವಿಸುವಾಗ್ಗೆ ನಮ್ಮ ಇಂದ್ರಿಯಸ್ತಂಭಕತೈಲ ಉಪಯೋಗಿಸಿದರೆ ಉತ್ತಮ.

ಇಂದ್ರಿಯಸ್ತಂಭನ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಇಂದ್ರಿಯಸ್ತಂಭಗುಳಿಗೆಯನ್ನು ಸೇವಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ 1 ಕ್ಕೆ 2.8.0 ಟ. ಖ. ಬೇರೆ ಅನುಪಾನಪತ್ರಿಕೆ ಔಷಧ ಸಂಗಡ ಪ್ರಕೃತಿ ತಿಳಿಸಿದರೆ ಉತ್ತಮ ಔಷಧ ತಯಾರಿಸಿ ಕಳುಹಿಸುವೆವು.

ವಿಳಾಸ:—ಎಸ್ ಭುಜಂಗರಾವ್ ಬಾಪಟ
8 ಬಿ. ಪೋಸ್ಟ್. ಶಿರ್ಶಿ, ಉತ್ತರಕಾನಡಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.
ಇಂಡಿಯಾ ಸರಕಾರದಲ್ಲಿ ಸನ್ ೧೮೬೭ ನೇ ಇಸ್ವಿಯ ೨೫ ನೇ
ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ
ಅರ್ಕಶಫಾ ಅಥವಾ ಆರೋಗ್ಯಬಿಂದು

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ|| ೧೦-೮-೧೯೧೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ್ದು ಅದೆ ಇದು ಯಾವತ್ತರು ತಾನೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದುಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇವೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಅದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾರಶೂಲಿ, ರಕ್ತಿಜಡ್ಡು, ಗುದದ್ವಾನಬೇನೆ, ಹುರುಕುಕಜ್ಜಿ, ಗಜಕರ್ಣ, ಇಸಬು, ತದ್ದು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಆರವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಿಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೋಲ ಬಾಟಲಿ ಒಂದಕ್ಕೆ ಎರಡು ರೂಪಾಯಿ. ನಮೂನೆ ಉದ್ದಿಶ್ಯ ಐದು ಆಣೆ ತೂಕದ ಬಾಟಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟಲಿಗಳು ತಕ್ಕೊಂಡರೆ ನಾಲ್ಕು ಬಾಟಲುಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಲಗತ ಇಡದ ಹೊರ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
6 ಹೆಡ್ ಆಫೀಸ್ ಶಾಹಾಪೂರ, ಬೆಳಗಾಂವ.

೧೯೧೯ ನೆಯ ಇಸವಿ ಅಕ್ಟೋಬರ್ ತಾ|| ೧೨ ರಿಂದ ೧೯೧೯ ನೇಯ ಅಕ್ಟೋಬರ್ ತಾ|| ೧೮ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಶ್ವಯುಜ ಬ|| ತದಿಗೆಯಿಂದ ಆಶ್ವಯುಜ ಬ|| ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
12	ಭಾನು	ತದಿಗೆ	16-39	ಕೃತ್ತಿ	55-18	26
13	ಸೋಮ	ಚೌತಿ	10-51	ರೋಹಿ	51-1	27
14	ಮಂಗಳ	ಪಂಚ	4-51	ಮೃಗ	54-8	28
15	ಬುಧ	ಸಪ್ತ	53-33	ಆರ್ದ್ರಾ	43-18	29
16	ಗುರು	ಅಷ್ಟ	48-50	ಪುನ	40-15	30
17	ಶುಕ್ರ	ನವಮಿ	44-57	ಪುಷ್ಯ	37-59	1
18	¹ಶನಿ	ದಶ	42-1	ಆಶ್ಲೇ	36-38	2

(1) ಶ್ರೀರಂಗಪಟ್ಟಣದಲ್ಲಿ ಅಷ್ಟ ತೀರ್ಥೋತ್ಸವ.

ಮೈಸೂರ್: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾಶ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಕೀರ್ತ್ಯಾತೀತಯಶಃಪ್ರತಾಪವಿಭುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೆಯಂಸದಾಪುರಿಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಅಕ್ಟೋಬರ್ ತಾರೀಖು ೧೯ ನೆಯ ಭಾನುವಾರ. (ಸಂಚಿಕೆ ೪೦

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultura subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.

2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.

3. During the time the raiyats and labourers work on the farm, they will be paid at the prevailing local rates for labour.

4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,
11 *Offg. Director of Agriculture.*

ಮೈಸೂರು ಸ್ಟಾರ್.

೧೯೧೯ನೆಯ ಇಸವಿ ಅಕ್ಟೋಬರ್ ತಾ|| ೧೯ನೆಯ ಭಾನುವಾರ

ವಿದ್ಯಾಭ್ಯಾಸಕ್ರಮ ಸುಧಾರಣೆ

ನಮ್ಮ ಸಂಸ್ಥಾನದ ವಿದ್ಯಾಭ್ಯಾಸಕ್ರಮ ಪದ್ಧತಿಯ ನ್ಯೂನಾತಿರೇಕಗಳನ್ನು ಹೋಗಲಾಡಿಸಿ ತಕ್ಕ ಸುಧಾರಣೆಗಳನ್ನು ಮಾಡಬೇಕೆಂಬ ಉದ್ದೇಶದಿಂದ ಆ ಶಾಖಾಧ್ಯಕ್ಷರಾದ ಮ|| ಸಿ. ರಾಮಲಿಂಗರೆಡ್ಡಿಯವರು ಹೊಸದಾಗಿ ಒಂದು ವರದಿಯನ್ನು ನಿರ್ಮಿಸಿ ಸರ್ಕಾರಕ್ಕೆ ಕೊಟ್ಟುದರ ಮೇಲೆ, ಅವರು ಅದರ ಮೇಲೆ ತಮ್ಮ ಅಭಿಪ್ರಾಯಗಳನ್ನು ಮುದ್ರಿಸಿ, ಪ್ರಜಾಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಬರುವ ಡಿಶಂಬರ್ ತಿಂಗಳವರೆಗೆ ಅವಕಾಶ ಕೊಟ್ಟು ಆ ಮೆಮೊರಾಂಡಮನ್ನು ಪ್ರಕಟಿಸಿದ್ದಾರಷ್ಟೆ. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಕಾರ್ಯಗಳೊಳಗೆ ಇದರ ವಿಷಯವಾಗಿ ಪ್ರತಿನಿಧಿಗಳ ಅಭಿಪ್ರಾಯವನ್ನು ತಿಳಿಯುವುದು ಒಂದು ಮುಖ್ಯಕಾರ್ಯವಾಗಿದ್ದಿತು. ಇದಕ್ಕಾಗಿ ೧೩ನೆ ತಾರೀಖಿನ ಸಭೆಯಲ್ಲಿ ೩ ಗಂಟೆಗಳ ಕಾಲವು ವಿನಿಯೋಗಿಸಲ್ಪಟ್ಟಿತು. ಅದಕ್ಕೆ ಮುಂಚಿನ ದಿವಸಗಳಲ್ಲೇ ಪ್ರತಿನಿಧಿಗಳು ಮ|| ಡಿಸೌಜಾ, ಮ|| ರಾಮಲಿಂಗರಡ್ಡಿಯವರನ್ನು ಪ್ರತ್ಯಕ್ಷವಾಗಿಟ್ಟುಕೊಂಡು ಗುಣದೋಷ ವಿಷಯವಾಗಿ ಚರ್ಚೆನಡೆಯಿಸಿ ಕೆಲ ನಿರ್ಧಾರಗಳನ್ನು ಮಾಡಿಕೊಂಡಿದ್ದರು. ಸಭಾಧ್ಯಕ್ಷರಾದ ದಿವಾನರವರು ತಾ|| ೧೩ನೆ ದಿನದ ಸಭೋಪಕ್ರಮ ಕಾಲದಲ್ಲಿ ಪೂರ್ವದಿನದ ನಿರ್ಧಾರಗಳನ್ನು ಒಂದೊಂದನ್ನಾಗಿ ತೆಗೆದುಕೊಂಡು ಸಭಿಕರು ಚರ್ಚಿಸಬಹುದೆಂದು ಅಪ್ಪಣೆ ಮಾಡಿದರು.

(೧) ಗ್ರಾಂಟಿನೇಡ್ ಪ್ರೈಮರಿ ಸ್ಕೂಲುಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳಬಹುದೋ ಬೇಡವೋ ಎಂಬ ವಿಷಯವು ಮೊದಲನೆಯದಾಗಿದ್ದಿತು. ಹೀಗೆ ಮಾಡದೆ ಲೋಕಲ್‌ಬೋರ್ಡುಗಳ ಅಧೀನದಲ್ಲೇ ಅವು ಇರುವಂತೆ ಮಾಡುವುದು ಒಳ್ಳೆಯದೆಂದು ಮ|| ಅಣ್ಣಯ್ಯಪಂಡಿತರು ವಾದಿಸಿದರು. ಈ ಪಾಠಶಾಲೆಗಳನ್ನೆಲ್ಲಾ ಸರ್ಕಾರಿಯಾಗಿ ಮಾಡಿಕೊಳ್ಳುವುದು ಸಾಧ್ಯವೆ? ಅಸಾಧ್ಯವೆ? ಎಂಬುದನ್ನು ಸಾವಧಾನವಾಗಿ ಪರ್ಯಾಲೋಚಿಸಬೇಕು. ಅದಕ್ಕಾಗಿ ಒಂದು ಕಮಿಟಿಯನ್ನೇರ್ಪಡಿಸುವುದು ಒಳ್ಳೆಯದು ಎಂದು ಮ|| ವೆಂಕಟಕೃಷ್ಣಯ್ಯನವರು ಅಭಿಪ್ರಾಯಪಟ್ಟರು. ಹೀಗೆ ಸರ್ಕಾರಿಯಾಗಬೇಕೆಂದು ನಾವುಗಳು ೪-೫ ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದೆವು. ಈಗ ಅದರಂತೆ ಸಿದ್ಧಿಸಿದೆ. ಹೀಗೆ ಆಗುವುದೇ ಉತ್ತಮ. ಕಮಿಟಿಯನ್ನೇರ್ಪಡಿಸುವುದು ಅನವಶ್ಯಕವೆಂದು ಮ|| ಎಂ. ಸುಬ್ಬಯ್ಯನವರು ಹೇಳಿದರು. ಈ ಸಂಬಂಧವಾಗಿ ನಾವು ಈ ಮುಂಚೆ ವಿಾಟಿಂಗ್ ಮಾಡಿ ಚರ್ಚಿಸುವಾಗ್ಗೆ ಸರ್ಕಾರಿಯಾಗುವುದೇ ಉತ್ತಮವೆಂದು ನಿರ್ಧರವಾಗಿರುವುದರಿಂದ ಹಾಗೆ ಆಗುವುದೇ ಅನುಕೂಲವೆಂದು ಮ|| ಸಿ. ಶ್ರೀನಿವಾಸರಾಯರು ಹೇಳಿದರು. ಕಡೆಗೆ ಏಕಮತ್ಯದಿಂದ ಇದೇ ನಿರ್ಧರವಾಯಿತು.

(೨) ಮಿಡಲ್ ಸ್ಕೂಲಿನಲ್ಲಿ ೨ ಭಾಷೆಗಳಿರಬೇಕು. ಮಾತೃಭಾಷೆಯಲ್ಲಿ ಎಲ್ಲಪಾಠಗಳೂ ನಡೆಯಬೇಕು. ಇಂಗ್ಲೀಷು ನಿರ್ಬಂಧವಾಗಿ ಕಲಿಸಲ್ಪಡಬೇಕು. ಈ ವಿಷಯವಾಗಿ ಮ|| ರಡ್ಡಿಯವರು ಪ್ರತಿಪಾದನೆ ಮಾಡಿದುದರಲ್ಲಿ—ಬಾಲತರಗತಿ ಪಾಠಗಳೆಲ್ಲಾ ಕನ್ನಡದಲ್ಲಿ ಆಗಿ ಮುಗಿದ ಬಳಿಕ ಮುಂದಕ್ಕೆ ಇಂಗ್ಲೀಷು ನಿರ್ಬಂಧವಾಗಿ ಪ್ರತಿಯೊಬ್ಬರಿಗೂ ಕಲಿಸಲ್ಪಡುವಂತಾಗಬೇಕು. ಬಾಲತರಗತಿ ಪಾಠಗಳು ೩ ವರ್ಷಗಳಲ್ಲಿ ಮುಗಿಯಬೇಕು. ಅದರ ಮುಂದಕ್ಕೆಲ್ಲಾ ೨ ಭಾಷೆಗಳಲ್ಲೂ ಪಾಠಗಳು ಜರುಗಬೇಕು. ಲೋ|| ಸೆಕೆಂಡರಿ ತರಗತಿಯಲ್ಲಿ ಇಂಗ್ಲೀಷು ಮತ್ತು ಲೆಕ್ಕ ಇವೆರಡೂ ಆಂಗ್ಲಭಾಷೆಯಲ್ಲಿ ಕಲಿಸಲ್ಪಡಬೇಕು. ಉಳಿದ ಪಾಠಗಳೆಲ್ಲಾ ಮಾತೃಭಾಷೆಯಲ್ಲೇ ಆಗಬೇಕು. ಆದರೆ ಹೀಗೆ ಮಾಡುವುದರಲ್ಲಿ ಇಂಗ್ಲೀಷು ಭಾಷೆಗೆ ಈಗಿರತಕ್ಕ ಸ್ಟಾಂಡರ್ಡು ಸ್ವಲ್ಪವೂ ಕಡಿಮೆ ಮಾಡಲ್ಪಡುವುದಿಲ್ಲ ಎಂದು ಹೇಳಿದರು. ಕಡೆಗೆ ಇದು ಸರ್ವಾನುಮತದಿಂದ ಒಪ್ಪಲಾಯಿತು.

(೩) ಬಾಲತರಗತಿ ಮಧ್ಯಮತರಗತಿ ಪಾಠಗಳೆಲ್ಲಾ ೮ ವರ್ಷಗಳಲ್ಲಿ ಮುಗಿಯಬೇಕು. ಎಂದರೆ ಬಾಲತರಗತಿಗಳಿಗೆ ೫ ವರ್ಷ ಮಿಡಲ್ ತರಗತಿಗಳಿಗೆ ೩ ವರ್ಷಗಳು ಅಭ್ಯಾಸ ಕಾಲವಾಗಿರಬೇಕು. ಇದನ್ನು ಒಟ್ಟು ೭ ವರ್ಷಕ್ಕೆ ನಿಲ್ಲಿಸಬೇಕೆಂದು ಕೆಲರೂ, ೭ ವರುಷಕ್ಕೆ ನಿಲ್ಲಿಸಬೇಕೆಂದು ಕೆಲವರೂ ವಾದಿಸಿದ ಬಳಿಕ, ಸಭಾಧ್ಯಕ್ಷರವರು ಈಗಿರುವಂತೆಯೇ ಇವೆರಡು ಭಾಗಗಳೂ ೭ ವರ್ಷಕಾಲಿಕವಾಗಿ ಇರಬಹುದಲ್ಲವೇ ಎಂದು ಪ್ರಶ್ನೆ ಮಾಡಲಾಗಿ ಸರ್ವರೂ ಆಗಬಹುದೆಂದು ಒಪ್ಪಿದರು.

(೪) ಮಿಡಲ್ ಸ್ಕೂಲುಗಳಲ್ಲಿ ಕೈಗಾರಿಕೆಯನ್ನು ನಿರ್ಬಂಧವಾಗಿ ಕಲಿಸುವಂತೆಯೂ ವ್ಯವಸಾಯವನ್ನು ಐಚ್ಛಿಕವಾಗಿರುವಂತೆಯೂ ಮಾಡಬೇಕು. ಏಕಮತ್ಯದಿಂದ ಒಪ್ಪಲಾಯಿತು.

(೫) ಹೈಸ್ಕೂಲು ತರಗತಿಗಳಲ್ಲಿ ಎಲ್ಲಾ ಪಾಠಗಳನ್ನೂ ಇಂಗ್ಲೀಷಿನಲ್ಲೇ ಹೇಳಬೇಕು. ಮಾತೃಭಾಷೆಯನ್ನು ಐಚ್ಛಿಕವಾಗಿಡಬೇಕು. ಇದರ ಮೇಲೆ ಬಹಳ ಚರ್ಚೆನಡೆಯಿತು. ಮ|| ಕೆ. ಟಿ. ಶೇಷಯ್ಯನವರು ದೇಶಭಾಷಾಭಿಮಾನದಿಂದ ಬಹಳವಾಗಿ ವಾದಿಸಿದರು. ವಿದೇಶಭಾಷೆಯಲ್ಲೇ ಅಭ್ಯಾಸಮಾಡುವುದಾದರೆ ಭಾಷಾಜ್ಞಾನ ವಿಷಯಜ್ಞಾನಗಳೆರಡನ್ನೂ ಹೊಂದಬೇಕಾದ ಭಾರವು ವಿದ್ಯಾರ್ಥಿಗಳಿಗೆ ಬೀಳುತ್ತದೆ. ದೇಶಭಾಷೆಯಲ್ಲಾದರೆ ಒಂದೇ ಭಾರವು ಬೀಳುತ್ತದೆ. ಪರದೇಶ ಭಾಷೆಗಳಲ್ಲಿ ಶಾಸ್ತ್ರಪಾಠಾದಿಗಳನ್ನು ನಡೆಯಿಸುತ್ತಿರುವುದರಿಂದಲೇ ನಮ್ಮಲ್ಲಿ ಪಾಶ್ಚಾತ್ಯಪರಿಣತ ಪಂಡಿತರಂಥ ಬೋಧಕರೂ ಪಂಡಿತರೂ ಹೊರಪಡುತ್ತಲಿಲ್ಲ. ಕನ್ನಡದಲ್ಲಿ ಪಾರಿಭಾಷಿಕಶಬ್ದಸಮೃದ್ಧಿಯಾಗಲೀ ಅವಶ್ಯಕ ಗ್ರಂಥಗಳಾಗಲೀ ಇಲ್ಲವೆನ್ನುವುದಾದರೆ ಬೇರೆ ಬೇರೆ ಭಾಷೆಗಳಿಂದೆಲ್ಲಾ ಪಾರಿಭಾಷಿಕ ಶಬ್ದಗಳನ್ನು ಆರಿಸಿ ಕನ್ನಡಕ್ಕೆ ಸೇರಿಸಿಕೊಳ್ಳಬಹುದು. ದಿನಕ್ರಮೇಣ ಅವಶ್ಯಕವಾದ ಗ್ರಂಥಗಳನ್ನೆಲ್ಲಾ ಕನ್ನಡಕ್ಕೆ ಬರೆಯಿಸಬಹುದು. ಆದರಿಂದ ಭಾಷಾಪೋಷಣೆಯು ಚೆನ್ನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಪ್ರಪಂಚದ ಯಾವ ಯೂನಿವರ್ಸಿಟಿಯಲ್ಲೂ ಅನ್ಯಭಾಷೆಯನ್ನು ನಿರ್ಬಂಧವಾಗಿಟ್ಟುಕೊಂಡಿರುವುದಿಲ್ಲ ಎಂದು ಮೊದಲಾಗಿ ಪ್ರತಿಪಾದಿಸಿದರು. ಆದರೆ ಇದನ್ನು ಬಲಪಡಿಸುವವರು ಆ ಸಭೆಯಲ್ಲಿ ಯಾರೂ ಇದ್ದಂತೆ ಕಂಡುಬರಲಿಲ್ಲ. ಕನ್ನಡನಾಡಿನಲ್ಲಿ ಕನ್ನಡಬಾಷೆಗೆ ಈ ಗತಿಯೆ? ಅಯ್ಯೋ ದುರ್ದೈವಿ ಕರ್ನಾಟ ಮಾತೆಯೆ? ನಿನ್ನ ನಿಟ್ಟುಸುರು ಎಲ್ಲಿಗೆ ಮುಟ್ಟುವುದು? ಮ|| ಎಚ್. ಕೃಷ್ಣಶಾಸ್ತ್ರಿಗಳು—ನಮ್ಮಲ್ಲಿ ಮೊದಲಿಂದ ಕಲಾಶಾಲಾ ತರಗತಿಗಳವರೆಗೂ ನಿರ್ಬಂಧವಾಗಿ ಕನ್ನಡವನ್ನೇ ಹೇಳುತ್ತಿದ್ದರೆ ಹೈಸ್ಕೂಲಿನಲ್ಲೂ ಅದನ್ನು ನಿರ್ಬಂಧವಾಗಿ ಕಲಿಸಬಹುದಾಗಿದ್ದಿತು. ಈಗ ನಾವು ಹಾಕಿಕೊಂಡಿರುವ ಮಾರ್ಗವನ್ನು ನೋಡಿದರೆ ಕನ್ನಡವನ್ನು ನಿರ್ಬಂಧವಾಗಿಡುವುದು ಸಮಂಜಸವಾಗುವುದಿಲ್ಲ. ರಾಜಭಾಷೆಯೇ ನಮಗೆ ಇಹಪರ ಸಾಧನವಾಗಿದೆ. ಸಾಹಿತ್ಯಪರಿಷತ್ತನ್ನು ಇಟ್ಟುಕೊಂಡು ೪ ವರ್ಷದಿಂದಲೂ ಶಬ್ದರೂಪಕಲ್ಪನೆಗೇ ಇನ್ನೂ ಬಡಿದಾಡುತ್ತಿದ್ದಾರೆ. ನಮ್ಮಲ್ಲಿ ಗ್ರಂಥಸಮೃದ್ಧಿಯಿಲ್ಲ, ಎಂದು ಮೊದಲಾಗಿ ಆಡಿ ಕನ್ನಡಕ್ಕೆ ಆರತಿಯೆತ್ತಿ ಮೂದೇವಿಮಾಡಿ ಕುಳ್ಳಿರಿಸಿಬಿಟ್ಟರು. ಮತ್ತೊಬ್ಬ ಪ್ರತಿನಿಧಿಯು ಕನ್ನಡವು ಉತ್ತಮವಾದ ಭಾಷೆಯಲ್ಲ ಎಂದು ಹೇಳಿ ತಮ್ಮ ಸರ್ವಜ್ಞತ್ವವನ್ನು ಮೆರೆಯಿಸಿಕೊಂಡರು. ಇವರಿಗೆ ಕನ್ನಡದಲ್ಲಿ ಸರಿಯಾಗಿ ಕಾಗುಣಿತವನ್ನು ಬರೆಯುವುದಕ್ಕೂ ಬರುವುದೋ ಇಲ್ಲವೋ ತಿಳಿಯದು. ಕಡೆಗೆ ಕನ್ನಡವು ಐಚ್ಛಿಕವಾಗಿರಬೇಕೆಂಬ ನಿರ್ಧಾರವೇ ಕೊನೆಮುಟ್ಟಿತು. ಮಾತುಮಾತಿಗೂ ಜಪಾನು ಮೊದಲಾದ ಪರದೇಶಗಳ ಹೋಲಿಕೆಯನ್ನು ಎತ್ತಿಕೊಂಡು ತಮ್ಮನ್ನು ಹೀನಯಿಸಿಕೊಂಡು ಹುರಿಯೆಬ್ಬಿಸಲು ಪ್ರಯತ್ನಿಸುತ್ತಿರುವ ನಮ್ಮ ವಿದ್ಯಾಧಿಕಜನರು, ಜಪಾನರು ಸ್ವಾಭಿವೃದ್ಧಿಗಾಗಿ ಹೇಗೆ ಹೇಗೆ ನಡೆದುಕೊಂಡರೆಂಬುದನ್ನು ಪರಿಶೀಲಿಸಬೇಡವೆ? ಅವರಲ್ಲಿ ಶಾಸ್ತ್ರೀಯಭ್ಯಾಸಕ್ಕೆಲ್ಲಾ ಜಾಪಾನ ಗ್ರಂಥಗಳೇ ಮೊದಲಿಂದಲೂ ಇದ್ದುವೆ? ಈಗಲೂ ವಿದೇಶೀಯ ಭಾಷಾಗ್ರಂಥಗಳನ್ನೇ ಅವರು ಇಟ್ಟುಕೊಂಡು ಓದುತ್ತಿದ್ದಾರೆಯೆ? ಎಂಬುದನ್ನು ವಿಚಾರಮಾಡಬೇಡವೆ? ಸಿದ್ಧವಾಗಿರುವ ಬಾಡಿಗೆ ಮನೆಯಲ್ಲೇ ಕಾಲಕಳೆಯುವುದು ಸುಲಭವೆಂದು ಯೋಚಿಸಿ ಸ್ವಂತದ ಮನೆಯನ್ನು ಕಟ್ಟಿಕೊಳ್ಳದಿರುವವರು ನಮ್ಮ ಪ್ರಜಾಪ್ರತಿನಿಧಿಗಳಲ್ಲಿ ಎಷ್ಟು ಮಂದಿಗಳಿರಬಹುದೆಂಬುದನ್ನು ತಿಳಿಯಬೇಕಾಗಿರುವುದು. ನೆರೆಯ ಹೈದರಾಬಾದ್ ಸಂಸ್ಥಾನದವರು ತಾವು ಸ್ವತಂತ್ರ ವಿಶ್ವವಿದ್ಯಾಲಯವನ್ನು ಈಚೆಗೆ ಸ್ಥಾಪಿಸಿಕೊಂಡರೂ ಅವರು ಉರುದಿನಲ್ಲೇ ಎಲ್ಲ ವಿದ್ಯಾಭ್ಯಾಸವನ್ನೂ ನಿರ್ಬಂಧವಾಗಿ ಮಾಡಿಸುವುದು ಸಾಧ್ಯವೆಂದು ಯೋಚಿಸಿರುವಾಗ, ಅವರಿಗಿಂತ ಮುಂಚೆ ವಿದ್ಯಾಪೀಠವನ್ನು ಸ್ಥಾಪಿಸಿಕೊಂಡ ನಾವು ಅದನ್ನು ಅಸಾಧ್ಯವೆಂದು ಇನ್ನೂ ಹೇಳಿಕೊಳ್ಳುತ್ತಿರುವುದು ಹೇಡಿತನದ ಅಥವಾ ದುರಭಿಮಾನದ ಕುರುಹೇ ಹೊರತು ಬೇರೊಂದಲ್ಲ.

(೬) ಸ್ತ್ರೀ ವಿದ್ಯಾಭ್ಯಾಸವು ಮಿಡಲ್ ಸ್ಕೂಲಿನ ಮೇಲಕ್ಕೆಲ್ಲಾ ಇಂಗ್ಲೀಷು ಮತ್ತು ದೇಶಭಾಷೆಗಳೆರಡರಲ್ಲೂ ಮಾಡಿಸಲ್ಪಡಬೇಕು. ಇಂಗ್ಲೀಷು ಒಂದು ಐಚ್ಛಿಕವಿಷಯದಂತಿರಬೇಕು. ಅದರ ಕೆಳಗಣ ತರಗತಿಗಳಲ್ಲೆಲ್ಲಾ ಕನ್ನಡದಲ್ಲೇ ಓದಬೇಕು. ಇದನ್ನು ಕುರಿತು ಮ|| ರಡ್ಡಿಯವರು ವಿವರಣೆ ಮಾಡುವಾಗ "ಪುರುಷರಿಗೂ ಸ್ತ್ರೀಯರಿಗೂ ಏಕರೂಪವಾದ ವಿದ್ಯಾಭ್ಯಾಸವಿರಕೂಡದು. ಅವರ ಗೃಹಕೃತ್ಯ ಆರೋಗ್ಯಶಿಕ್ಷಣ ಮೊದಲಾದುವುಗಳಿಗೆ ಅವಶ್ಯಕವಾದ ವಿದ್ಯೆಯ ಅಭ್ಯಾಸ ಮಾಡಿಸಲ್ಪಡಬೇಕು. ಯಾರಾದರೂ ಗಂಡುಸರಂತೆ ಸಾಮಾನ್ಯವಿದ್ಯಾಭ್ಯಾಸವು ತಮಗೂ ಬೇಕೆಂದು ಕೇಳಿದರೆ ಅಂಥವರಿಗೆ ಅದನ್ನು ಕಲಿಯಲು ನಿರ್ಬಂಧವೇನೂ ಇರುವುದಿಲ್ಲ. ಬಿ. ಎ. ತರಗತಿಯವರೆಗೂ ಎಲ್ಲ ಸಬ್ಜೆಕ್ಟುಗಳನ್ನೂ ಕನ್ನಡದಲ್ಲೇ ಕಲಿಯಲು ಅನುಕೂಲಿಸುವಂತೆ ಏರ್ಪಡಿಸುತ್ತೇವೆ" ಎಂದು ಹೇಳಿದರು. ಮ|| ಸಿ. ಶ್ರೀನಿವಾಸರಾಯರು—ಗಂಡುಸರಂತೆ ಸ್ತ್ರೀಯರೂ ತಮ್ಮ ವಿದ್ಯಾಭ್ಯಾಸವೆಲ್ಲಾ ಇಂಗ್ಲೀಷಿನಲ್ಲೇ ಆಗಬೇಕೆಂದು ಅಪೇಕ್ಷಿಸುತ್ತಾರೆ. ಅವರ ಕಾನ್ಫರೆನ್ಸಿನಲ್ಲೂ ಹಾಗೆಯೇ ನಿರ್ಧಾರ ಮಾಡಿಕೊಂಡಿದ್ದಾರೆ ಎಂದು

ಹೇಳಿದರು. ಮ|| ಗೋಪಾಲಸ್ವಾಮಯ್ಯರು-ಇಂಗ್ಲೀಷು ಕಲಿತ ಗಂಡನೊಡನೆ ಅದನ್ನು ಅರಿಯದ ಹೆಂಡತಿಯು ಸೇರಿದರೆ ದಾಂಪತ್ಯಸೌಖ್ಯವು ಚೆನ್ನಾಗಿರುವುದಿಲ್ಲ. ಪುರುಷರಂತೆ ವೈದ್ಯ ಮೊದಲಾದ ಶಾಸ್ತ್ರಗಳನ್ನು ಕಲಿತು ಧನಸಂಪಾದನೆ ಮಾಡಬೇಕೆಂದು ಅಪೇಕ್ಷಿಸುವ ಸ್ತ್ರೀಯರು ಅನೇಕರಿರುತ್ತಾರೆ. ಅಂಥವರಿಗೆಲ್ಲಾ ಉತ್ಸಾಹಭಂಗವಾಗದಂತೆ ವಿದ್ಯಾಭ್ಯಾಸದ ಏರ್ಪಾಟಿರಬೇಕು ಎಂದು ಹೇಳಿದರು. ಮ|| ಮಾಲೂರು ರಾಮರೆಡ್ಡಿಯವರು-ಸ್ತ್ರೀಪುರುಷ ಭೇದವನ್ನು ದೇವರೇ ಕಲ್ಪಿಸಿದ್ದಾನೆ. ವಿದ್ಯಾಭ್ಯಾಸದಲ್ಲೂ ಭೇದವು ಇದ್ದೇತೀರಬೇಕು. ಪುರುಷರ ವಿದ್ಯಾಭ್ಯಾಸವೇ ಸ್ತ್ರೀಯರಿಗೆ ಮುಖ್ಯವಲ್ಲ. ಅವಶ್ಯಕವೆನ್ನುವವರಿಗೆ ಅದರ ಸೌಕರ್ಯವಿರಬಹುದು ಎಂದು ಹೇಳಿದ ಬಳಿಕ, ಪ್ರತಿಯೊಂದು ಬಾಲಿಕಾಶಾಲೆಯಲ್ಲೂ ಸ್ತ್ರೀಯರಿಗೆ ಅವಶ್ಯಕವಾದ ವಿದ್ಯೆಯ ಅಭ್ಯಾಸಕ್ರಮ ೧, ಸಾಮಾನ್ಯವಿದ್ಯಾಭ್ಯಾಸಕ್ರಮ ೧, ಹೀಗೆ ೨ ವಿಧಗಳಿಗೂ ಏರ್ಪಾಟು ಮಾಡಲ್ಪಡುವುದು ಎಂದು ಸರ್ಕಾರದ ಪಕ್ಷದಿಂದ ಹೇಳಲ್ಪಟ್ಟ ಬಳಿಕ ಆಗಬಹುದೆಂದು ಸರ್ವಾನುಮತವಾಯಿತು.

(೭) ಲೋ|| ಸೆಕೆಂಡರಿ ಶಾಲೆಗಳಿರುವ ಕಡೆಗಳಲ್ಲೆಲ್ಲಾ ಹಾಸ್ಟಲ್ಲುಗಳಿರಬೇಕು. ಈ ವಿಷಯವು ಚರ್ಚೆಗೆ ಬಂದಾಗ ಮ|| ಸಿ. ನರಸಿಂಹಯ್ಯನವರು-ಹೈಸ್ಕೂಲುಗಳಿರುವ ಕಡೆಯಲ್ಲೂ ಹಾಸ್ಟಲ್ಲುಗಳಿರುವಂತೆ ಆಗಬೇಕೆಂದು ಸೇರಿಸಬೇಕು ಎಂದು ಸೂಚಿಸಿದರು. ಸಭಾಧ್ಯಕ್ಷರು ಆಗಬಹುದು ಎಂದರು. ಪ್ರತಿ ಹಾಸ್ಟಲಿನಲ್ಲೂ ೨-೩ ಪಾಕಗೃಹಗಳಿರುವಂತೆ ಏರ್ಪಡಿಸಬೇಕೆಂದು ಮ|| ಎಂ. ಬಸವಯ್ಯನವರು ಸೂಚಿಸಿದರು.

(೮) ಬಾಲತರಗತಿಯಭ್ಯಾಸವೆಲ್ಲಾ ಸರ್ಕಾರದಧೀನಕ್ಕೆ ಒಳಪಡಬೇಕು.-ಇದರ ಮೇಲೆ ವಿಶೇಷವಾಗಿ ಚರ್ಚೆ ನಡೆಯಿತು. ಇದರಧಿಕಾರವನ್ನು ಲೋಕಲ್‌ಬೋರ್ಡುಗಳಿಗೆ ವಹಿಸಿರಿ. ಇಲ್ಲದಿದ್ದರೆ ಸರ್ಕಾರದವರು ಸ್ವಕೀಯವಾಗಿಟ್ಟುಕೊಳ್ಳಲಿ, ಅದರ ಹೊರತು ವಿದ್ಯಾಶಾಖೆಯ ಅಧೀನಕ್ಕೆ ಕೊಡಬಾರದು. ಏಕೆಂದರೆ ಗೌರ್ನಮೆಂಟ್ ಪಾಲಿಸಿಯೇ ಬೇರೆಯಾಗುವುದು; ಡಿಪಾರ್ಟ್‌ಮೆಂಟಿನವರ ಕೆಲಸವೇ ಬೇರೆತೆರನಾಗುವುದು ಎಂದು ಮ|| ನರಸಿಂಹಯ್ಯನವರು ಹೇಳಿದರು. ಮ|| ರಾಮರಡ್ಡಿಯವರು-ನಮ್ಮ ಲೋಕಲ್ ಬೋರ್ಡುಗಳ ಸ್ಥಿತಿಯು ಇನ್ನೂ ಕಾರ್ಯದಕ್ಷವಾಗಿಲ್ಲ. ಅವುಗಳಲ್ಲಿ ಮೀಟಿಂಗ್ ಕೋರಮನ್ನು ಕೂಡಿಸುವುದೇ ಈಗ ಎಷ್ಟೋ ಕಷ್ಟವಾಗುತ್ತಿದೆ. ಆದುಕಾರಣ ಗೌರ್ನಮೆಂಟಿನವರೇ ಇವುಗಳ ಮೇಲಣ ಅಧಿಕಾರವನ್ನು ವಹಿಸಿಕೊಂಡು ಇಲಾಖೆಯ ಮೂಲಕ ನಡೆಯಿಸುವಂತೆ ಮಾಡಿಸಬೇಕು ಎಂದು ಹೇಳಿದರು. ಲೋಕಲ್ ಬೋರ್ಡುಗಳು ಈಗ ನಾನಾ ಇಲಾಖೆಗಳ ಮೇಲಣ ವಿಚಾರಣೆ ನಡೆಯಿಸುತ್ತಲಿವೆ. ಅವು ಈ ಬಾಲತರಗತಿಗಳ ಮೇಲಣ ವಿಚಾರಭಾರವನ್ನು ವಹಿಸಲು ಯೋಗ್ಯತೆಯುಳ್ಳವುಗಳಾಗಿಲ್ಲವೆಂದು ಹೇಳಿಕೊಳ್ಳುವುದು ಗೌರವವಲ್ಲ ಎಂದು ಮ|| ಗೋಪಾಲಸ್ವಾಮಯ್ಯರು ಹೇಳಿದರು. ಮಿ|| ಅಬ್ಬಾಸ್‌ಖಾನರು-ಈಗ ಬೆಂಗಳೂರು ಮೈಸೂರು ಮ್ಯು|| ಕೌನ್ಸಿಲುಗಳು ಈ ಪಾಠಶಾಲೆಗಳ ಮೇಲಣ ಅಧಿಕಾರವನ್ನು ವಹಿಸಿಕೊಂಡಿವೆಯಷ್ಟೆ. ಅವುಗಳು ಮಾಡುವ ವಿಚಾರಣೆಯು ಎಷ್ಟುಮಟ್ಟಿಗಿದೆಯೆಂಬುದು ಗೊತ್ತೇ ಇದೆ. ಆದುಕಾರಣ ಇನ್ನು ಕೆಲಕಾಲ ಈ ಪ್ರೈಮರಿಶಾಲೆಗಳು ಸರ್ಕಾರಿ ಶಾಖೆಯ ಮೇಲ್ವಿಚಾರಣೆಗೊಳಪಟ್ಟಿರುವುದೇ ಉತ್ತಮ ಎಂದು ಹೇಳಿದರು. ಮ|| ಎಂ. ವೆಂಕಟಕೃಷ್ಣಯ್ಯನವರು-ಸರ್ಕಾರಿ ಮೇಲ್ವಿಚಾರಣೆಯೆಂದರೆ ಇನ್|| ಜನರಲ್‌ರವರು ಅಥವಾ ಅವರ ಕೈಕೆಳಗಣ ಇನ್ಸ್‌ಪೆಕ್ಟರುಗಳು ವರ್ಷಕ್ಕೆ ಎಲ್ಲೋ ಒಂದು ಸಲ ಬಂದು ಇನ್ಸ್‌ಪೆಕ್ಷನ್ ಮಾಡಿಕೊಂಡು ಹೋಗುತ್ತಾರೆ. ಸ್ಥಳಿಕಗಳಾದ ಬೋರ್ಡುಗಳಾದರೊ ಸದಾ ಅಲ್ಲೇ ಇರುವ ಕಾರಣ ಪದೇಪದೇ ವಿಚಾರಣೆ ತೆಗೆದುಕೊಳ್ಳಲು ಸಾಧ್ಯವಾಗಿರುತ್ತದೆ. ರಾಜಧಾನಿಯ ದಳವಾಯಿ ಎ. ವಿ. ಸ್ಕೂಲು ಒಬ್ಬರ ಮೇಲ್ವಿಚಾರಣೆಗೊಳಪಟಿದ್ದಾಗ ಅದಕ್ಕೆ ೩೦ ವರ್ಷಗಳಿಂದ ಗ್ರಾಂಟು ಬರುತ್ತಿದ್ದಿತು. ಅದರ ಮೇಲ್ವಿಚಾರಣೆಗೆ ಒಂದು ಕಮಿಟಿಯೇರ್ಪಾಟಾದ ಮೇಲೆ ಗ್ರಾಂಟು ನಿಲ್ಲಿಸಲ್ಪಟ್ಟಿತು. ಇನ್ನೊಂದು ಸ್ಕೂಲಿಗೆ ಗ್ರಾಂಟನ್ನು ಕೇಳಿದರೆ ಸರಿಯಾದ ರೆಕಗ್ನೈಜು ಇಲ್ಲವೆಂದು ಇನ್|| ಜನರಲ್‌ರವರು ಹೇಳಿ ಸತಾಯಿಸುತ್ತಿದ್ದಾರೆ. ಇಲಾಖೆಯ ಮೇಲ್ವಿಚಾರಣೆಯೆಂದರೆ ಹೀಗೆಲ್ಲಾ ಆಗುತ್ತದೆ. ಆದಕಾರಣ ಸ್ಕೂಲುಗಳು ಸ್ವತಃ ಸರ್ಕಾರಿ ವಿಚಾರಣೆ ಮತ್ತು ಲೋಕಲ್‌ಬೋರ್ಡ್ ವಿಚಾರಣೆ ಇವೆರಡಕ್ಕೂ ಒಳಪಟ್ಟಿರುವಂತೆ ಮಾಡಬಹುದು ಎಂದರು. ತಿ|| ನರಸಿಂಹಪುರದ ಮ|| ಶ್ಯಾಮಯ್ಯಂಗಾರರೂ ಹೀಗೆಯೇ ಅಭಿಪ್ರಾಯಪಟ್ಟರು. ಮ|| ಎಂ. ಸುಬ್ಬಯ್ಯನವರು-ಇವುಗಳನ್ನು ಡಿಪಾರ್ಟ್‌ಮೆಂಟಿಗೇ ವಹಿಸುವುದು ಉತ್ತಮವೆಂದು ವಾದಿಸಿದರು. ಮ|| ಸಿ. ಶ್ರೀನಿವಾಸರಾಯರು- ೧೦ ಸಾವಿರ ಸ್ಕೂಲುಗಳನ್ನೆಲ್ಲಾ ಇನ್|| ಜನರಲ್‌ರವರೂ ಅವರ ಅಸಿಸ್ಟೆಂಟರುಗಳೂ ಇನ್ಸ್‌ಪೆಕ್ಟರುಗಳೂ ಇನ್ಸ್‌ಪೆಕ್ಷನ್ ಮಾಡುವುದಕ್ಕಾಗುತ್ತದೆಯೆ? ಬೋರ್ಡುಗಳ ಏರ್ಪಾಟಾಗಿ ೩೭ ವರ್ಷಗಳಾಗಿವೆ ಅವುಗಳು ಇನ್ನೂ ಮೇಲ್ವಿಚಾರಣೆ ಮಾಡಲಾರವೆಂದು ಹೇಳುವುದು ಉಚಿತವಲ್ಲ. ನಮ್ಮ ನೆರೆಹೊರೆಯವರೆಲ್ಲಾ ನಮಗೆ ಹೋಂರೂಲು ಬೇಕೆಂದು ಸೀಮೆಗೆ ಹೋಗಿ ಹೊಡೆದಾಡುತ್ತಿದ್ದಾರೆ. ನಾವುಗಳು ಸ್ಕೂಲು ಮ್ಯಾನೇಜುಮೆಂಟಿಗೂ ಯೋಗ್ಯರಾಗಿಲ್ಲವೆಂದು ಹೇಳಿಕೊಳ್ಳುವುದು ನಾಚಿಕೆಯಾಗಿದೆ. ಈಗ ನಮ್ಮ ಬೋರ್ಡುಗಳಿಗೆ ಯಾವ ಸ್ವತಂತ್ರಾಧಿಕಾರ ಕೊಟ್ಟಿದ್ದಾರೆ? ತಕ್ಕ ಸ್ವಾತಂತ್ರ್ಯವನ್ನು ಕೊಡಿ. ನಮ್ಮ ಮೇಲ್ವಿಚಾರಣೆಯ ಮೇಲೆ ಇನ್|| ಜನರಲ್‌ರವರ ಗಮನವೂ ಇರಲಿ. ತಪ್ಪಿರುವಕಡೆ ಅವರು ತಿದ್ದಲಿ. ಹೇಳಿದ ಮೇಲೂ ೧-೨ ಸಲವೂ ಬೋರ್ಡುಗಳು ತಪ್ಪುಮಾಡಿದರೆ ಆಗ ಅವರ ಕೈಯಿಂದ ಅಧಿಕಾರವನ್ನು ಕಿತ್ತುಕೊಳ್ಳಲಿ ಎಂದು ಹೇಳಿದರು. ಮ|| ಎಚ್. ಕೃಷ್ಣಶಾಸ್ತ್ರಿಗಳು-ಗೌರ್ನಮೆಂಟಿನವರು ೫ ವರ್ಷಗಳವರೆಗೂ ಈ ಶಾಲೆಗಳ ಕ್ರಮವನ್ನೆಲ್ಲಾ ಸುಸ್ಥಿತಿಗೆ ತಂದು ಆ ಬಳಿಕ ಬೋರ್ಡುಗಳಿಗೆ ವಹಿಸಬಹುದು ಎಂದರು. ಮ|| ಎಂ. ಬಸವಯ್ಯನವರು-ಈ ಜವಾಬ್ದಾರಿಯನ್ನು ಎಷ್ಟು ಮ್ಯುನಿಸಿಪಾಲಿಟಿಗಳು ವಹಿಸಿಕೊಳ್ಳುತ್ತವೋ ಎಷ್ಟು ಒಲ್ಲೆವೆನ್ನುತ್ತವೋ ನಮಗೆ ಗೊತ್ತಿಲ್ಲ. ಯುದ್ಧವು ನಡೆಯುತ್ತಿದ್ದಾಗ ನಮಗೆ ಹೋಂರೂಲು ಬೇಕೆಂದು ನಮ್ಮ ನೆರೆಹೊರೆಯವರು ಬಹಳವಾಗಿ ಆತುರಪಡುತ್ತಿದ್ದರು. ಯುದ್ಧನಿಂತಮೇಲೆ ಅವರ ಆತುರವು ಕಡಿಮೆಯಾಗಿದೆ. ಸ್ಕೂಲುಗಳ ಸ್ಥಿತಿಯನ್ನೆಲ್ಲಾ ಡಿಪಾರ್ಟ್‌ಮೆಂಟಿನವರು ಕ್ರಮಪಡಿಸಿದ ಬಳಿಕ ಬೋರ್ಡುಗಳಿಗೆ ವಹಿಸಿಕೊಡಬೇಕು. ಗ್ರಾಮಾಂತರದವರು ತಮಗೆ ಸರ್ಕಾರಿ ಸ್ಕೂಲುಗಳು ಬೇಕೆನ್ನುತ್ತಾನೆಯೇ ಹೊರತು ಸ್ಕೂಲುಗಳನ್ನು ತಮ್ಮ ಅಧೀನಕ್ಕೆ ಕೊಡಬೇಕೆಂದು ಕೇಳುವವರು ಯಾರನ್ನೂ ಕಾಣಲಿಲ್ಲ. ಬೇಕಿದ್ದರೆ ಪಟ್ಟಣದ ಶಾಲೆಗಳ ಮೇಲ್ವಿಚಾರಣೆಯನ್ನು ಬೋರ್ಡುಗಳಿಗೆ ೫ ವರ್ಷ ಕಾಲ ಕೊಟ್ಟು, ಆ ೫ ವರ್ಷಕಾಲ ಗ್ರಾಮಾಂತರದ ಶಾಲೆಗಳ ಮೇಲ್ವಿಚಾರಣೆಯನ್ನು ಸರ್ಕಾರಿ ಶಾಖೆಗೆ ಇಟ್ಟುಕೊಂಡು ಎರಡು ಕಡೆಯ ಫಲಿತಾಂಶವನ್ನೂ ಪರೀಕ್ಷಿಸಿನೋಡಬೇಕು ಎಂದು ಹೇಳಿದರು. ಕಡೆಗೆ ಸಭಿಕರ ಓಟುಗಳನ್ನು ತೆಗೆದುಕೊಳ್ಳಲು ದಿವಾನರು ಅಪ್ಪಣೆ ಮಾಡಲಾಗಿ ಈ ಬಾಲತರಗತಿ ಪಾಠಶಾಲೆಗಳನ್ನು ಡಿಪಾರ್ಟ್‌ಮೆಂಟಿಗೆ ವಹಿಸಿಕೊಳ್ಳಬೇಕೆಂಬುದಕ್ಕೆ ೬೫ ಮಂದಿಗಳೂ, ಬೋರ್ಡುಗಳಿಗೆ ವಹಿಸಿಕೊಡಬೇಕೆಂಬುದಕ್ಕೆ ೩೮ ಮಂದಿ ಸಭಿಕರೂ ಕೈಯೆತ್ತಿದುದರಿಂದ, ಸರ್ಕಾರಿ ವಿದ್ಯಾಶಾಖೆಗೆ ವಹಿಸಬೇಕೆಂಬುದೇ ತೀರ್ಮಾನವಾಯಿತು. ನಮ್ಮ ಲೋಕಲ್‌ಬೋರ್ಡುಗಳ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿದರೆ ಸದ್ಯಕ್ಕೆ ಹೀಗಿರುವುದೇ ಉಚಿತವೆಂದು ಹೇಳದಲ್ಲದೆ ತೀರದು.

(೯) ಹಿಂದೂಸ್ಥಾನಿ ಎ. ವಿ. ಸ್ಕೂಲುಗಳನ್ನು ಪ್ರತ್ಯೇಕವಾಗಿಡುವುದು. ಮಿ|| ಅಬ್ಬಾಸ್‌ಖಾನರು—ಎ. ವಿ. ಸ್ಕೂಲು ಹಿಂದೂಹೆಡ್ಮಾಸ್ಟರು ಅಟೆಂಡೆನ್ಸ್ ಮೊದಲಾದ ವಿಷಯಗಳಲ್ಲಿ ಹಿಂದೂಸ್ಥಾನಿ ಸ್ಕೂಲುಗಳ ಮೇಲ್ವಿಚಾರಕರಾಗಿರುವುದು ಉತ್ತಮ. ಆದುಕಾರಣ ಆ ಏರ್ಪಾಟು ಒಳ್ಳೆಯದು ಎಂದರು. ಮಿ|| ಕಲಾಮಿಯವರು ನಾವು ನಮ್ಮ ಹಿಂದೂ ಸಹೋದರರೊಡನೆ ಇದ್ದು ಅಭ್ಯಾಸಮಾಡಲು ಸಂತೋಷಪಡುತ್ತೇವೆ. ನಮ್ಮ ಸ್ಕೂಲುಗಳಲ್ಲಿ ಮಿಡಲ್‌ಸ್ಕೂಲಿನವರೆಗೆ ಹಿಂದೂಸ್ಥಾನಿಯಲ್ಲೂ ಅಲ್ಲಿಂದಾಚೆಗೆ ಇಂಗ್ಲೀಷಿನಲ್ಲೂ ಅಭ್ಯಾಸವು ನಡೆಯುವಂತೆ ಆಗಬೇಕು. ಮತ್ತು ಅದು ಐಚ್ಛಿಕವಾಗಿರಬೇಕು ಎಂದರು. ಮ|| ರಡ್ಡಿಯವರು-ನಿಮ್ಮಿಷ್ಟದಂತೆಯೇ ಹಿಂದೂ ಹೆಡ್ಮಾಸ್ಟರನ್ನು ನಿಮ್ಮ ಸ್ಕೂಲುಗಳ ಮೇಲ್ವಿಚಾರಣೆಗೆ ಏರ್ಪಡಿಸಬೇಕೆಂದು ಗೌರ್ನಮೆಂಟಿನವರು ಯೋಚಿಸಿದ್ದಾರೆಂದು ಹೇಳಿದರು.

(೧೦) ಬಲಾತ್ಕಾರ ವಿದ್ಯಾಭ್ಯಾಸವನ್ನು ಇತಃಪರಃ ಯಾವಸ್ಥಲದವರು ಅದಕ್ಕೆ ತಗಲುವ ವೆಚ್ಚವನ್ನು ಕೊಡಲು ಒಪ್ಪುತ್ತಾರೋ ಆ ಸ್ಥಲಗಳಲ್ಲಿ ಮಾತ್ರ ಸ್ಥಾಪಿಸಿಕೊಡುತ್ತೇವೆ. ಇದರಮೇಲೂ ವಿಶೇಷ ಚರ್ಚೆ ನಡೆಯಿತು. ಇದನ್ನು ಕುರಿತು ಮ|| ರಡ್ಡಿಯವರು ವಿವರಿಸುವಾಗ—ಹಲವುಕಡೆ ಬಲಾತ್ಕಾರ ವಿದ್ಯಾಭ್ಯಾಸಕ್ರಮವನ್ನು ಸ್ಥಾಪಿಸಿಕೊಡಲಿಕ್ಕೆ ಗೌರ್ನಮೆಂಟಿನವರಿಗೆ ಸಾಧ್ಯವಲ್ಲ. ಮತ್ತು ಸಂಸ್ಥಾನದಲ್ಲಿ ಕೆಲವುಕಡೆ ಗ್ರಾಂಟಿನೇಡ್ ಶಾಲೆಗಳೂ ಕೆಲವುಕಡೆ ಬಲಾತ್ಕಾರ ವಿದ್ಯಾಭ್ಯಾಸಶಾಲೆಗಳೂ ಇರುವುದು ನ್ಯಾಯವಲ್ಲ. ಆದಕಾರಣ ಸರ್ಕಾರದವರು ಈ ಪಕ್ಷಪಾತವನ್ನು ಮಾಡದೆ ಯಾರು ಬಲಾತ್ಕಾರವಿದ್ಯಾಭ್ಯಾಸವು ಬೇಕೆಂದು ಅಪೇಕ್ಷಿಸುತ್ತಾರೋ ಅವರು ಅದರ ವೆಚ್ಚವನ್ನು ವಹಿಸಿಕೊಳ್ಳಲೊಪ್ಪಿದರೆ ಅಲ್ಲಿಗೆ ಏರ್ಪಡಿಸಿಕೊಡುತ್ತಾರೆ. ಪ್ರತಿಯೊಂದು ಹಳ್ಳಿಯವರೂ ಬಲಾತ್ಕಾರವಿದ್ಯಾಭ್ಯಾಸ ಶಾಲೆಯು ತಮಗೆ ಬೇಕೆಂದು ಕೇಳುವುದಕ್ಕುಪಕ್ರಮಿಸಿದರೆ ಏರ್ಪಡಿಸಿಕೊಡುವುದು ಸಾಧ್ಯವೆ? ಎಂದು ಹೇಳಿದರು. ಎಂ. ಸುಬ್ಬಯ್ಯನವರು-೧ ಕಣ್ಣಿಗೆ ಸುಣ್ಣ ೧ ಕಣ್ಣಿಗೆ ಬೆಣ್ಣೆಯಿಡುವುದು ಸರಿಯಲ್ಲ. ಎಲ್ಲರಿಗೂ ಸಮನಾದ ಫಲವೂ ಸೌಕರ್ಯವೂ ಇರಬೇಕು. ಈ ಬಲಾತ್ಕಾರ ಪದ್ಧತಿಯನ್ನು ಎಲ್ಲಕಡೆಗೂ ಇಟ್ಟುಕೊಡಬೇಕು. ಇಲ್ಲದಿದ್ದರೆ ಎಲ್ಲಕಡೆಯೂ ತೆಗೆದುಬಿಡಬೇಕು. ಈಗ ಬಲಾತ್ಕಾರವಿದ್ಯಾಭ್ಯಾಸ ಪದ್ಧತಿಯು ನಮ್ಮಲ್ಲಿ ನಾಮಮಾತ್ರಕ್ಕೆ ಇದೆ. ಅದು ವ್ಯವಹಾರದಲ್ಲಿರುವ ಕಡೆಗಳಲ್ಲಿ ಹುಡುಗರು ಶಾಲೆಗಳಿಗೆ ಬರದೆಇದ್ದರೂ ಅವರ ಪೋಷಕರಮೇಲೆ ವ್ಯಾಜ್ಯಹೂಡಿ ಶಿಕ್ಷೆಯನ್ನು ಮಾಡಿಸುತ್ತಲಿಲ್ಲ. ಅಲ್ಲದೆ ಅಪೇಕ್ಷಿಸದೆಇದ್ದರೂ ಪಟ್ಟಣವಾಸಿಗಳಿಗೆ ಬಲಾತ್ಕಾರವಿದ್ಯಾಭ್ಯಾಸಶಾಲೆಗಳನ್ನು ಸರ್ಕಾರಿ ವೆಚ್ಚದಿಂದ ಸ್ಥಾಪಿಸಿಕೊಟ್ಟು, ಅದನ್ನು ತಮಗೆ ಕೊಡಿರೆಂದು ಗ್ರಾಮಸ್ಥರು ಕೇಳಿದರೆ ಅದಕ್ಕೆ ತಗಲುವ ವೆಚ್ಚವನ್ನು ಕೊಡಿರೆಂದು ಅವರನ್ನು ಕೇಳುವುದು ಯಾವಧರ್ಮ? ಎಂದರು. ಮ|| ಶ್ಯಾಮಯ್ಯಂಗಾರರು-ಹಣಕೊಟ್ಟರೆ ಬಲಾತ್ಕಾರ ವಿದ್ಯಾಭ್ಯಾಸಶಾಲೆಗಳನ್ನು ಸ್ಥಾಪಿಸಿಕೊಡುತ್ತೇವೆಂದು ಹೇಳಿದರೆ ಯಾರೂ ಅದಕ್ಕೆ ಮುಂದಾಗಿ ಬರುವುದೇ ಇಲ್ಲ. ಸರ್ಕಾರದವರು ತಮ್ಮ ಈಗಣ ಉದ್ದೇಶದಂತೆ ಬಾಲವಿದ್ಯಾಭ್ಯಾಸವನ್ನೆಲ್ಲಾ ಉಚಿತವಾಗಿಯೇ ಮಾಡಿಸಿ, ಅದನ್ನು ಬಲಾತ್ಕಾರ ಪದ್ಧತಿಯನ್ನಾಗಿ ಏರ್ಪಡಿಸುವುದು ಉತ್ತಮ ಎಂದರು. ಅದರಮೇಲೆ ಮ|| ರಡ್ಡಿಯವರು—ಸರ್ಕಾರದ ವಿಧಿಯು ಎಲ್ಲ ಸ್ಥಲಗಳಿಗೂ ಸಮನಾಗಿ ಅನ್ವಯಿಸುವಂತಿರಬೇಕು. ಯಾವ ಲೋಕಲ್ ಬೋರ್ಡಿನವರು ತಮಗೆ ಬಲಾತ್ಕಾರವಿದ್ಯಾಭ್ಯಾಸಪದ್ಧತಿಯು ಬೇಕೆಂದು ಅಪೇಕ್ಷಿಸುವರೋ ಅವರು ಅದಕ್ಕಾಗಿ ವೆಚ್ಚದ ಸ್ವಲ್ಪಭಾಗವನ್ನು ಕೊಡುವುದಾದರೆ ಸರ್ಕಾರದವರು ಏರ್ಪಡಿಸಿ ಕೊಡುತ್ತಾರೆ. ಇಲ್ಲದಿದ್ದರೆ ಮಾಡಿಕೊಡುವುದು ಸಾಧ್ಯವಲ್ಲ. ಈಗ ಇರುತ್ತಿರುವ ಬಲಾತ್ಕಾರಶಾಲೆಗಳನ್ನು ಲೋ||ಬೋರ್ಡುಗಳಿಗೆ ವಹಿಸಿಕೊಡುವ ಸಂದರ್ಭದಲ್ಲಿ ಆ ಬೋರ್ಡುಗಳು ವೆಚ್ಚದ ಭಾರವನ್ನು ವಹಿಸಿಕೊಳ್ಳಬೇಕಾಗುತ್ತದೆ ಎಂದರು. ವಿದ್ಯಾಭ್ಯಾಸಶಾಖಾ ಸೆಕ್ರೆಟರಿ ಡಿಸ್ಸಾಜಾರವರು-ಈಗ ಸಂಸ್ಥಾನದಲ್ಲಿ ೬೮ ಸ್ಥಲಗಳಲ್ಲಿ ಈ ಬಲಾತ್ಕಾರಶಾಲೆಗಳು ಸ್ಥಾಪಿಸಲ್ಪಟ್ಟಿವೆ. ಇಷ್ಟಕ್ಕೇ ೪-೫ ಲಕ್ಷ ರೂಗಳ ವೆಚ್ಚವು ತಗುಲುತ್ತಿದೆ. ಎಲ್ಲಕಡೆಯಲ್ಲೂ ಈ ಪದ್ಧತಿಯನ್ನು ಸ್ಥಾಪಿಸುವುದು ಸರ್ಕಾರಕ್ಕೆ ಸಾಧ್ಯವೇ? ಪರ್ಯಾಲೋಚಿಸಿ ನೋಡಿ ಎಂದರು. ಬಳಿಕ ಸರ್ಕಾರದ ಉತ್ತರಃ-ಈಗ ಇರುವ ಬಲಾತ್ಕಾರ ಶಾಲೆಗಳು ಸದ್ಯಃ ಇದ್ದುಕೊಂಡಿರಲಿ; ಇನ್ನುಮೇಲೆ ಸಂಸ್ಥಾನದಲ್ಲಿ ಗ್ರಾಮಾಂತರದ ಶಾಲೆಗಳ ಏರ್ಪಾಟೆಲ್ಲಾ ಸಮಗ್ರವಾಗಿ ಆದಹೊರತು ಬಲಾತ್ಕಾರಶಾಲಾ ಸ್ಥಾಪನೆಯನ್ನು ಹೊಸದಾಗಿ ನಡೆಯಿಸುವುದಿಲ್ಲ. ಯಾವಸ್ಥಲದವರಾದರೂ ವೆಚ್ಚಕೊಟ್ಟು ಅದನ್ನು ಕೇಳಿದರೆ ಅಲ್ಲಿಗೆ ಮಾತ್ರ ಏರ್ಪಡಿಸಿಕೊಡುತ್ತೇವೆ ಎಂದು ಹೇಳಿದರು. ಅದರಮೇಲೆ ಮ|| ರಾಮರಡ್ಡಿಯವರು-ಈಗ ಎಲ್ಲಿ ಬಲಾತ್ಕಾರಶಾಲೆಗಳಿರುವುವೋ ಅಲ್ಲಿಯವರಿಂದಲೂ ಸರ್ಕಾರದವರು ಗ್ರಾಂಟನ್ನು ಕೇಳಬೇಕು. ಹೊಸದಾಗಿ ಬೇಕೆನ್ನುವವರಿಂದ ಗ್ರಾಂಟನ್ನು ಕೇಳಿ, ಅವುಗಳ ಪ್ರಯೋಜನವನ್ನು ಹಿಂದಣಿಂದ ಅನುಭವಿಸುತ್ತಿರುವ ಸ್ಥಲಗಳವರಿಂದ ಅದನ್ನು ಕೇಳದಿರುವುದು ಪಕ್ಷಪಾತವಾಗುತ್ತದೆ. ಹಿಂದಣವರು ಗ್ರಾಂಟನ್ನು ಕೊಡದಿದ್ದರೆ ಅಲ್ಲಿಯ ಬಲಾತ್ಕಾರ ಪಾಠಶಾಲೆಗಳನ್ನು ಮುಚ್ಚಿಬಿಡುವುದು ಒಳ್ಳೆಯದು ಎಂದು ಹೇಳಿದರು. ಮ|| ಎಂ. ಬಸವಯ್ಯನವರು—ಇದುವರೆಗೆ ಎಷ್ಟೋ ಗ್ರಾಮಗಳಲ್ಲಿ ಪಾಠಶಾಲೆಗಳೇ ಇಲ್ಲ. ಹಾಗೆ ಮಾಡಿಬಿಟ್ಟದ್ದುದಕ್ಕಾಗಿ ಗ್ರಾಮಾಂತರಗಳಲ್ಲಿ ಉಚಿತ ಪಾಠಶಾಲೆಗಳನ್ನೇರ್ಪಡಿಸಿಕೊಟ್ಟು, ಪಟ್ಟಣಗಳಲ್ಲಿರುವ ಬಲಾತ್ಕಾರಶಾಲೆಗಳಿಗಾಗಿ ಸ್ವಲ್ಪ ಗ್ರಾಂಟನ್ನು ಅಲ್ಲಿನವರಿಂದ ಇನ್ನು ಕೆಲಕಾಲದವರೆಗೆ ತೆಗೆದುಕೊಳ್ಳುವಂತೆ ಮಾಡಬೇಕು ಎಂದರು. ವಿಷಯವು ಅಲ್ಲಿಗೆ ಕೊನೆಗಂಡಿತು.

(೧೧) ವಿದ್ಯಾಭ್ಯಾಸಕ್ಕಾಗಿ ವರ್ಷಕ್ಕೆ ೩೦ ಲಕ್ಷದಿಂದ ೬೪ ಲಕ್ಷದವರೆಗೂ ವೆಚ್ಚಕ್ಕೆ ಬೇಕಾಗುವ ಕಾರಣ ಅದಕ್ಕಾಗಿ ವರಮಾನದ ಮೇಲಣ ತೆರುಗೆಯನ್ನು ವಿಧಿಸಬೇಕು. ಈ ವಿಷಯದಮೇಲೆ ಮ|| ಎಂ. ಬಸವಯ್ಯನವರು ಮಾತನಾಡುವಾಗ್ಗೆ ಸರ್ಕಾರದವರು ನಾನಾಶಾಖೆಗಳಲ್ಲಿ ಮಾಡುತ್ತಿರುವ ವ್ಯಯಭಾರವನ್ನು ಸಂಕೋಚಪಡಿಸುವ ಕೆಲಸವನ್ನು ಮೊದಲುಮಾಡಬೇಕು. ಆಗಲೂ ವಿದ್ಯಾಭ್ಯಾಸಕ್ಕೆ ಹಣವು ಸಾಲದಿದ್ದರೆ ವರಮಾನದ ತೆರುಗೆಯನ್ನು ಹಾಕಬಹುದು. ಆದುಕಾರಣ ರಿಟ್ರೆಂಚ್‌ಮೆಂಟ್ ಮೊದಲು ಆಗಬೇಕು ಎಂದರು. ಮ|| ಎಂ. ಸುಬ್ಬಯ್ಯನವರಾದರೊ ಅನೇಕ ಪ್ರಜೆಗಳು ಅಧಿಕವಾಗಿ ದ್ರವ್ಯಾರ್ಜನೆ ಮಾಡುತ್ತಿದ್ದರೂ ಸರ್ಕಾರಕ್ಕೆ ೧ ಕಾಸು ತೆರುಗೆಯನ್ನೂ ಕೊಡುತ್ತಿರುವುದಿಲ್ಲ. ಆದುಕಾರಣ ಮೊದಲು ವರಮಾನದ ತೆರುಗೆಯನ್ನು ವಿಧಿಸಿ ಬಳಿಕ ರಿಟ್ರೆಂಚ್‌ಮೆಂಟ್ ಮಾಡಬೇಕು ಎಂದರು. (ಒಂದು ನೊಗವನ್ನೇ ಹೊತ್ತಿರುವ ಇವರಿಬ್ಬರೂ ಒಂದೇ ವಿಷಯದಲ್ಲಿ ಹೀಗೆ ಭಿನ್ನಾಭಿಪ್ರಾಯಪಟ್ಟಿರುವುದಕ್ಕೆ ಮೊದಲನೆಯವರು ವಕೀಲರಾಗಿಯೂ ಎರಡನೆಯವರು ರೈತವರ್ಗದವರಾಗಿಯೂ ಇರುವುದೇ ಕಾರಣವೇ? ಎಂದು ಆಗಲೇ ಕೆಲವರು ಎಂದುಕೊಂಡರು.) ಬಳಿಕ ಮ|| ರಾಮರೆಡ್ಡಿಯವರು-ರೈತರಮೇಲೆ ಈಗಲೇ ತೆರುಗೆಯ ಭಾರವು ಅಧಿಕವಾಗಿರುವುದರಿಂದ ಅವರ ಮೇಲೆ ಇನ್ನುಮುಂದೆ ಯಾವ ಸೆಸ್ಸಿನ ಭಾರವನ್ನೂ ಹೇರದೆ ಇತರರಮೇಲೆ ಬೇಕಾದಷ್ಟು ಸೆಸ್ಸನ್ನು ಹಾಕಿ ವೆಚ್ಚಕ್ಕೆ ಒದಗಿಸಿಕೊಳ್ಳಬೇಕು ಎಂದರು.

(೧೨) ಮೇಲೆಕಂಡ ೨ ರೀತಿಯಿಂದಲೂ ತಕ್ಕಷ್ಟು ಹಣವು ಒದಗದಿದ್ದರೆ ಪ್ರಜೆಗಳು ತೆರುವ ಕಂದಾಯದ ಮೇಲೆ ರೂ. ೧ಕ್ಕೆ ೬ ಕಾಸಿನಂತೆ ವಿದ್ಯಾಭ್ಯಾಸದ ಸೆಸ್ಸನ್ನು ಹಾಕಿ ಎತ್ತಬೇಕು. ಈ ವಿಷಯವೂ ಮೇಲೆ ಕಂಡಂತೆಯೇ ಒಪ್ಪಲಾಯಿತು. ಮೆಮೋರಾಂಡಮ್ಮಿನ ಚರ್ಚೆಯೆಲ್ಲಾ ಇಲ್ಲಿಗೆ ಕೊನೆಗಂಡಿತು.

ಗೌರ್ನಮೆಂಟಿನವರು ಬಹು ಧನವ್ಯಯ ಸಾಧ್ಯವಾದ ವಿದ್ಯಾಭ್ಯಾಸವನ್ನು ಬಹುದೂರದವರೆಗೂ ಉಚಿತವಾಗಿಯೇ ಮಾಡಿಸುವುದಕ್ಕೆ ವರದಾನಮಾಡಿ, ಸಂಸ್ಥಾನದಲ್ಲಿ ಸರ್ವತ್ರ ಸಮವಾದ ವಿದ್ಯಾಭ್ಯಾಸ ಸೌಕರ್ಯಗಳನ್ನು ಒದಗಿಸಿಕೊಡಲು ಸಂಕಲ್ಪಿಸಿರುವಾಗ, ಅದು ಪ್ರಜೆಗಳ ಹಿತಕ್ಕೇ ಅತ್ಯವಶ್ಯಕವಾಗಿರುವಾಗ, ಅದಕ್ಕೆ ಬೀಳುವ ಹೆಚ್ಚು ವೆಚ್ಚವನ್ನು ಹೊತ್ತುಕೊಳ್ಳಲು ಹಿಂದೆಗೆಯುವುದು ಪ್ರಜೆಗಳ ಧರ್ಮವಲ್ಲ. ಅದಕ್ಕಾಗಿ ಆದಾಯದ ವರಮಾನದ ಸೆಸ್ಸನ್ನೂ ಅವಶ್ಯಕವಾದರೆ ವಿದ್ಯಾಭ್ಯಾಸದ ಸೆಸ್ಸನ್ನೂ ಕೂಡ ಸರ್ಕಾರದವರು ವಿಧಿಸುವುದಾದರೆ ಸಂತೋಷದಿಂದ ಒಪ್ಪಿಕೊಳ್ಳಲೇಬಹುದು. ಪ್ರತಿಯೊಬ್ಬ ಪ್ರಜೆಯೂ ತಂತಮ್ಮ ಮಕ್ಕಳಿಗೆ ಲೋ|| ಸೆಕೆಂಡರಿ ಮುಗಿಯುವವರೆಗೂ ಸ್ಕೂಲು ಫೀಗಾಗಿ ಎಷ್ಟು ಹಣವನ್ನು ತೆರುತ್ತಿರುವನೆಂಬುದನ್ನು ಲೆಕ್ಕಹಾಕಿ ನೋಡಿದರೆ, ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸ್ವಲ್ಪ ಸೆಸ್ಸನ್ನು ಪ್ರತಿಯೊಬ್ಬರೂ ಕೊಟ್ಟುಬಿಡುವುದು ಬಹು ಸುಲಭವಲ್ಲವೆ? ಇದನ್ನು ಸರ್ವರೂ ಪರ್ಯಾಲೋಚಿಸಬೇಕು. ವರಮಾನದ ತೆರುಗೆಯ ವಿಷಯವು ಹಿಂದೆಯೇ ಕೊನೆಗಂಡು ಇದೆ. ತಿಂಗಳಿಗೆ ೨೦೦ ರೂ.ಗಳ ಮೇಲ್ಪಟ್ಟ ವರಮಾನವಿದ್ದವರಮೇಲೆಯೇ ಅದು ಬೀಳುವುದು. ಬಡಬಗ್ಗರನ್ನೂ ರೈತರನ್ನೂ ಅದು ಬಾಧಿಸುವುದಿಲ್ಲ.

ಅಂತು ಬಲು ಸಿಕ್ಕುಳ್ಳದೆಂದು ಕೂಗಿಸಿಕೊಳ್ಳುತ್ತಿದ್ದ ವಿದ್ಯಾಭ್ಯಾಸದ ಮೆಮೋರಾಂಡಮು ಪ್ರಜಾಪ್ರತಿನಿಧಿಸಭೆಯಲ್ಲಿ ಇಷ್ಟು ಸುಕರವಾಗಿ ಇತ್ಯರ್ಥವಾಗಿ ಮುಗಿದುದು ಸಂತೋಷಕರವೇ ಸರಿ. ಈ ಸ್ಕೀಮು ನಮ್ಮ ದೇಶದ ವಿದ್ಯಾಪ್ರಸರಣೆಗೆ ಬಹು ವಿಧದಲ್ಲಿ ಉಪಕರಿಸುವುದೆಂಬುದರಲ್ಲಿ ಅಡ್ಡಿಯಿಲ್ಲ. ಸರ್ವಪ್ರಜೆಗಳಿಗೂ ಸಮವಾದ ಸೌಕರ್ಯವನ್ನೂ ಅವಕಾಶವನ್ನೂ ಇದು ಉಂಟುಮಾಡಿಕೊಡುವುದು. ನಮ್ಮಲ್ಲಿನ ಬಲಾತ್ಕಾರ ವಿದ್ಯಾಭ್ಯಾಸಪದ್ಧತಿಯು ಹೊರಗಣ ಪಟಾಟೋಪಕ್ಕೂ ಒಳಗಣ ವೃಥಾಧನವ್ಯಯಕ್ಕೂ ಆಕರವಾಗಿದ್ದಿತು. ಮುಖ್ಯವಾಗಿ ಬಲಾತ್ಕರಿಸಿ ವಿದ್ಯೆಯನ್ನು ಕಲಿಸಬೇಕಾದುದು ಗ್ರಾಮಾಂತರದವರಿಗೋಸ್ಕರವಾಗಿರುವಲ್ಲಿ ಈ ಪದ್ಧತಿಯು ಅವರಿಗೆ ಸೋಂಕಿಯೇ ಇರಲಿಲ್ಲ. ಯಾರು ವಿದ್ಯಾಪ್ರಯೋಜನವನ್ನು ಅರಿತವರಾಗಿ ಶಾಲೆಗಳಿಗೆ ತಮ್ಮ ಮಕ್ಕಳುಗಳನ್ನು ಕಳುಹಿಸುವವರಾಗಿದ್ದರೋ ಅಂಥ ಪಟ್ಟಣವಾಸಿಗಳ ಬಳಿಯಲ್ಲಿಯೇ ಈ ಬಲಾತ್ಕಾರ ಪದ್ಧತಿಯು ಸ್ಥಾಪಿಸಲ್ಪಟ್ಟಿದ್ದಿತು. ಈ ದೋಷವು ಸಂಪೂರ್ಣವಾಗಿ ತೊಲಗಬೇಕಾದರೆ ಈಗಣ ಬಲಾತ್ಕಾರ ಶಾಲೆಗಳನ್ನು ತೆಗೆದುಬಿಡುವುದೇ ಮೇಲು. ಹಾಗೆ ಮಾಡಿದರೆ ಅವುಗಳಿಗೆ ಆಗುತ್ತಿದ್ದ ವೆಚ್ಚದ ಹಣವು ಬೇರೆ ಕಡೆಗೆ ಒದಗುವುದು. ಗ್ರಾಮಾಂತರದವರೆಲ್ಲಾ ಗ್ರಾಂಟನ್ನು ಕೇಳದೆ ಪ್ರಜಾಸಂಖ್ಯಾನುಗುಣವಾಗಿ ಎಲ್ಲ ಕಡೆಯೂ ಪಾಠಶಾಲೆಗಳ ಸ್ಥಾಪನೆಯನ್ನು ಮಾಡಿಕೊಡುವ ಈಗಿನ ಉದ್ದೇಶವು ಎಷ್ಟು ಉದಾರವೂ ಘನತರವೂ ನಿಷ್ಪಕ್ಷಪಾತವೂ ಆಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ಹೀಗೆಯೇ ವಿಚಾರಮಾಡಿದರೆ ಇದರ ಗುಣಗಳು ಅನೇಕ ವಿಧವಾಗಿ ವ್ಯಕ್ತವಾಗುವುವು. ಮ|| ರಡ್ಡಿಯವರು ಮೈಸೂರಿನವರಲ್ಲದಿದ್ದರೂ ಮೈಸೂರು ದೇಶದವರು ಮಾಡದಿದ್ದಷ್ಟು ಉಪಕಾರವನ್ನು ಈ ಸ್ಕೀಮಿನಮೂಲಕ ನಮ್ಮ ದೇಶಕ್ಕೆ ಕಲ್ಪಿಸಿಕೊಟ್ಟು ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಸ್ಕೀಮಿನಿಂದ ಅವರ ಇನ್|| ಜನರಲ್ ಪದವಿಯು ನಮ್ಮ ದೇಶದಲ್ಲಿ ಚಿರಸ್ಮರಣೀಯವಾಗುವುದೆಂದು ಹೇಳದೆ ಇರಲಾರೆವು. ಗೌರ್ನಮೆಂಟಿನವರು ಸಾಧ್ಯವಾದಷ್ಟು ಬೇಗನೆ ಇದನ್ನು ವ್ಯವಹಾರಕ್ಕೆ ತರುವವರಾಗಬೇಕು.

ದಿವಾನ್ ಸರ್ದಾರ್ ಕಾಂತರಾಜ ಅರಸರವರ ಸನ್ಮಾನಸಮಾರಂಭ.

ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್ ಬಿ. ಎ., ಸಿ. ಎಸ್. ಐ. ರವರಿಗೆ ಸಂಸ್ಥಾನದ ಮಂತ್ರಿಪದವಿಯು ದೊರೆದುದಕ್ಕಾಗಿ ಮೈಸೂರು ಪುರನಿವಾಸಿಗಳು ತಮಗೆ ಉಂಟಾದ ಆನಂದವನ್ನು ಪ್ರದರ್ಶನಪಡಿಸುವ ಮಹೋತ್ಸವವನ್ನು ಕಳೆದ ಬುಧವಾರದ ದಿನ ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಅತ್ಯಂತ ವೈಭವದಿಂದ ನಡೆಯಿಸಿದರು. ಇದಕ್ಕಾಗಿ ಆ ಭವನದ ಒಳಗೂ ಹೊರಗೂ ದರ್ಶನೀಯವಾದ ಅಲಂಕಾರಗಳು ಮಾಡಲ್ಪಟ್ಟಿದ್ದುವು. ಕ್ಲಾಕ್‌ಟವರೂ ಟೌನ್‌ಹಾಲಿನ ಘುಮ್ಮಟವೂ ವಿದ್ಯುದ್ದೀಪಾವಳಿಯಿಂದ ಬೆಳಗುತ್ತಿದ್ದುವು. ಮುಂಗಡೆಯಲ್ಲಿರುವ ಜನರಲ್ ಪೋಸ್ಟಾಫೀಸು ಮೊದಲಾದ ದೊಡ್ಡದೊಡ್ಡ ಕಟ್ಟಡಗಳೆಲ್ಲಾ ದೀಪಾವಳಿಯಿಂದ ವಿರಾಜಿಸುತ್ತ ಆಬಯಲೆಲ್ಲಾ ಹಗಲಾಗಿದ್ದಿತು. ಟೌನ್‌ಹಾಲಿನೊಳಗೆ ಗ್ಯಾಲರಿಯನ್ನು ತೆಗೆದುಹಾಕಿ ತುಂಬಾ ಕುರ್ಚಿಗಳನ್ನು ಹಾಕಿ ಮಧ್ಯಭಾಗದಲ್ಲಿ ದಿವಾನರವರ ಆಸನವನ್ನು ಎತ್ತರವಾಗಿ ಏರ್ಪಡಿಸಿದ್ದುದು ನೂತನತರವಾಗಿದ್ದಿತು. ಆಹೂತರಾಗಿದ್ದ ರಾಜಬಂಧುವರ್ಗದವರು, ಕೌನ್ಸಿಲರುಗಳು, ಡಿ|| ಕಮಿಷನರುಗಳು, ಸ್ಥಳಿಕಾಧಿಕಾರಿಗಳು, ಅನೇಕಮಂದಿ ಪ್ರಜಾಪ್ರತಿನಿಧಿಸಭಿಕರು, ಪುರಪ್ರಮುಖರುಗಳೆಲ್ಲಾ ಕಿಕ್ಕಿರಿದು ನೆರೆದಿದ್ದರು. ಮೇಲ್ಗಡೆಯಲ್ಲೆಲ್ಲಾ ಶಾಲಾವಿದ್ಯಾರ್ಥಿಗಳು ತುಂಬಿದ್ದರು. ಸ್ಥಲವು ಸಾಲದಕಾರಣದಿಂದ ವಿಶೇಷಜನ ಪ್ರವೇಶಕ್ಕೆ ಅವಕಾಶ ಕೊಡದಂತೆ ಪೊಲೀಸು ನಿರ್ಬಂಧವನ್ನು ಬಲವಾಗಿ ಏರ್ಪಡಿಸಬೇಕಾಯಿತು. ಸರ್ದಾರ್ ಕಾಂತರಾಜ ಅರಸಿನವರು ೬ ಘಂಟೆಗೆ ಸರಿಯಾಗಿ ದಯಮಾಡಿಸಿದ ಕೂಡಲೇ ಹೊರಗೆ ಸಿದ್ಧವಾಗಿದ್ದ ಅರಮನೆಯ ಬ್ಯಾಂಡಿನವರು ರಾಷ್ಟ್ರಗೀತವನ್ನು ಬಾಜಿಸಿದರು. ಸತ್ಕಾರಕ ಸಂಘದ ಪ್ರಮುಖರಾದ ಮಿ|| ಮಹಮ್ಮದ್ ಸೇಟರು ಸಾ|| ವರ್ಧಮಾನಯ್ಯದವರು ಸಾ|| ಬಸುಮಯ್ಯನವರು, ಸಾ|| ತಿಮ್ಮಯ್ಯನವರು, ಮೊದಲಾದವರು ಬಾಗಿಲಲ್ಲಿ ಕಾದಿದ್ದು ಇದಿರ್ಗೊಂಡರು. ಸಭಿಕರೆಲ್ಲರೂ ಕರಾಸ್ಫಾಲನವನ್ನು ಮಾಡಿ ಸಂತೋಷದಿಂದ ಸ್ವಾಗತಿಸಿದರು. ದಿವಾನರು ತಮಗಾಗಿ ಸಿದ್ಧವಾಗಿದ್ದ ಅಗ್ರಪೀಠವನ್ನಲಂಕರಿಸಿದಕೂಡಲೇ ರಂಗಸ್ಥಲದಲ್ಲಿ ಏರ್ಪಡಿಸಿದ್ದ ಕಾರ್ಯಗಳು ಒಂದೊಂದಾಗಿ ನಡೆದುವು. ಮೊದಲು ಸಂಗೀತವಿದ್ವಾನ್ ವಾಸುದೇವಾಚಾರ್ಯರು-ಶ್ರೀಮನ್ಮಹಾರಾಜರ ಮತ್ತೂ ಸರ್ದಾರ್ ಕಾಂತರಾಜ ಅರಸರ ಗುಣಾವಳಿಗಳನ್ನು ವಿವರಿಸಿ ಅವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ರಚಿಸಲ್ಪಟ್ಟಿದ್ದ ಕೆಲವು ಶ್ಲೋಕಗಳನ್ನು ನಾನಾರಾಗಗಳಿಂದ ಬಹು ಶ್ರಾವ್ಯವಾಗಿ ಓದಿದರು. ಶ್ಲೋಕಗಳು ಬಹಳ ಲಲಿತಗಳಾಗಿಯೂ ಭಾವಪ್ರಕರ್ಷವುಳ್ಳವಾಗಿಯೂ ಇದ್ದುವು. ಸ್ಥಲಸಂಕೋಚದಿಂದ ಅವನ್ನು ಇಲ್ಲಿ ಪ್ರಕಟಿಸಲಾಗಲಿಲ್ಲ. ಬಳಿಕ ರಾಮ್ನಾಡಿನ ಮ|| ಜಗನ್ನಾಥಪಿಳ್ಳೆಯವರು ಕೊಳಲನ್ನು ಇಂಪಾಗಿ ಸ್ವಲ್ಪಕಾಲ ನುಡಿಸಿದರು. ಅನಂತರ ಮಿ|| ಈಸಾಸೇಟರು ಅತಿ ಕೋಮಲವಾದ ತಮ್ಮ ಕಂಠಸ್ವರದಿಂದ ಉರುದುವಿನಲ್ಲಿ ಶ್ರೀಮಾನ್ ಕಾಂತರಾಜ ಅರಸರವರ ಪ್ರಶಂಸಾಪರವಾಗಿ ರಚಿಸಿದ್ದ ಪದ್ಯಗಳನ್ನು ಮನೋಹರವಾಗಿ ಹಾಡಿ ಸಭೆಯನ್ನೆಲ್ಲಾ ಆನಂದಪಡಿಸಿದರು. ತದನಂತರ ಶ್ರೀಮನ್ಮಹಾರಾಜರಿಂದ ಕಳೆದ ದರ್ಬಾರನಲ್ಲಿ ಆಫ್ತಾಬೆಸಿತಾರ್ ಎಂಬ ಪ್ರಶಸ್ತಿಯನ್ನು ಪಡೆದು ಸನ್ಮಾನಿತರಾದ ಮಿ|| ಬರ್ಕತ್ತುಲ್ಲಾ ಖಾನರು ಸಿತಾರನ್ನು ಕರ್ಣಾನಂದಕರವಾಗಿ ನುಡಿಸಿದರು. ಆ ಬಳಿಕ ರತ್ನಾವಳೀ ನಾಟಕ ಕಂಪೆನಿಯವರು ಶಾಕುಂತಳ ನಾಟಕದಲ್ಲಿ ಒಂದು ಸೀನನ್ನು ಗಂಭೀರವಾಗಿ ಪ್ರದರ್ಶಿಸಿದರು. ಇವುಗಳೆಲ್ಲಾ ಮುಗಿದಬಳಿಕ ವಿಜ್ಞಾಪನ ಪತ್ರಗಳ ಪಠನಕ್ಕೆ ಆರಂಭವಾಯಿತು. ಮ|| ಎ. ಸಿ. ಲಿಂಗರಾಜ ಅರಸರವರು ಇಂಗ್ಲೀಷಿನ ವಿಜ್ಞಾಪನಪತ್ರವನ್ನೂ ಮ|| ಸಾ|| ಬಸಮಯ್ಯನವರು ಕನ್ನಡದ ಪತ್ರವನ್ನೂ ಮಿ|| ಮಹಮ್ಮದ್‌ಸೇಟರು ಉರುದಿನ ಪತ್ರವನ್ನೂ ಓದಿದರು. ಇವುಗಳನ್ನೆಲ್ಲಾ ಒಂದು ಸುಂದರವಾದ ಬೆಳ್ಳಿಪೆಟ್ಟಿಗೆಯಲ್ಲಿಟ್ಟು, ಅದನ್ನು ಲೋಕಹಿತೈಷಿ ಮ|| ಎಚ್. ನಂಜುಂಡರಾಜ ಅರಸರವರು ದಿವಾನರಿಗೆ ಅರ್ಪಿಸಿದರು. ಅವರು ಅದನ್ನು ಅಭ್ಯುತ್ಥಾನಪೂರ್ವಕವಾಗಿ ಸ್ವೀಕರಿಸಿದರು. ಸಾ|| ತಿಮ್ಮಯ್ಯನವರು ಪುಷ್ಪಮಾಲಿಕೆಯನ್ನು ಸಮರ್ಪಿಸಿದರು. ಸಾ|| ವರ್ಧಮಾನಯ್ಯನವರು ಮಿ|| ಅಜೀಜ್ ಪಾಚ್ಛಾ ಸಾಬರು ಸುಬ್ರಾಯಸೆಟ್ಟರು ಮ|| ಜಾವಾಜಿಯವರು ಮೊದಲಾದವರು ಪುಷ್ಪಗುಚ್ಛ ಪನ್ನೀರು ತಾಂಬೂಲ ಮೊದಲಾದುವುಗಳನ್ನು ಅರ್ಪಿಸಿದರು. ಸಭಿಕರೆಲ್ಲರೂ ಕರಾಸ್ಫಾಲನಗಳ ಮೂಲಕ ತಮ್ಮ ಆನಂದಾಭಿನಂದನಗಳನ್ನು ಅರ್ಪಿಸಿದರು.

ಒಪ್ಪಿಸಿದ ವಿಜ್ಞಾಪನಪತ್ರಕ್ಕೆ ದಿವಾನರು ಇಂಗ್ಲೀಷಿನಲ್ಲಿ ಪ್ರತ್ಯುತ್ತರವನ್ನು ಕೊಟ್ಟರು. ಅದರಲ್ಲಿ-ನಾವೆಲ್ಲಾ ಒಂದು ಮನೆಯವರಂತೆ ಇರುವೆವಾದಕಾರಣ ಪರಸ್ಪರ ವಿಶ್ವಾಸದಿಂದ ನೀವುಗಳು ಈದಿವಸ ಮಾಡಿದ ಸನ್ಮಾನಕ್ಕಾಗಿ ನಾನು ವಂದಿಸುತ್ತೇನೆಂದು ತಿಳಿಯಿಸಿದುದಲ್ಲದೆ, ಪ್ರಜಾಭಿವೃದ್ಧಿಗಾಗಿ ಇದುವರೆಗೆ ಮಾಡಲ್ಪಟ್ಟಿರುವ ಯತ್ನಗಳಿಗಿಂತ ವಿಶೇಷವಾಗಿ ಮುಂದೆ ನಾವೆಲ್ಲರೂ ಸೇರಿ ಮಾಡಬೇಕೆಂಬ ತಮ್ಮ ಸಹಜ ಸರಳೋದಾರ ಭಾವಗಳನ್ನು ವ್ಯಕ್ತಪಡಿಸಿದರು. ಅತ್ಯಂತ ಪ್ರಜಾವಾತ್ಸಲ್ಯದಿಂದ ತುಂಬಿತುಳುಕುತ್ತಿದ್ದ ಈ ಭಾಷಣದಲ್ಲಿ ಹೊರಬಿದ್ದ ಸರ್ದಾರರ ಕರುಣಾಮಯವಾದ ನೈಜಸ್ವಭಾವವನ್ನು ಕಂಡು ಸಭಿಕರೆಲ್ಲಾ ಅತ್ಯಾನಂದಗೊಂಡು ಕರಾಸ್ಫಾಲನಮಾಡಿದರು. ಸಭಿಕರುಗಳಿಗೆ ಪುಷ್ಪಗುಚ್ಛಾದಿಗಳ ಸಮರ್ಪಣವಾದ ಬಳಿಕ ಸರ್ವರೂ ಎದ್ದುನಿಂತು ಶ್ರೀಮನ್ಮಹಾರಾಜರವರಿಗೂ ದಿವಾನ್ ಕಾಂತರಾಜ ಅರಸರವರಿಗೂ ಜಯಚಾಮರಾಜ ಒಡೆಯರವರಿಗೂ ಶ್ರೇಯಃಪ್ರಾರ್ಥನೆಗಳನ್ನು ಮಾಡಿದರು. ಅತ್ಯಂತ ರಮಣೀಯವಾಗಿದ್ದ ಈ ಮಹೋತ್ಸವವು ಈ ವರ್ಷದ ನವರಾತ್ರಿ ಮಹೋತ್ಸವಗಳಲ್ಲೆಲ್ಲಾ ತುತ್ತತುದಿಯಾಗಿ ಸಂತೋಷಮಯವಾಗಿ ನೆರವೇರಿತು. ಈ ಕಾರ್ಯವನ್ನು ಸಲಕ್ಷಣವಾಗಿ ನಡೆಯಿಸುವಲ್ಲಿ ಮಿ|| ಮಹಮ್ಮದ್‌ಸೇಟರು, ಮ|| ವರ್ಧಮಾನಯ್ಯನವರೇ ಮೊದಲಾದವರು ವಹಿಸಿದ ಶ್ರಮಕ್ಕಾಗಿ ಪುರಜನರ ಕೃತಜ್ಞತೆಗೆ ಭಾಜನರು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಕಳೆದ ಬುಧವಾರ ರಾಜಧಾನಿಯಿಂದ ನೀಲಗಿರಿಗೆ ದಯಮಾಡಿಸಿದರು.

ನಮ್ಮ ವಿದ್ಯಾಪೀಠದ ಸೆನೇಟ್ ಮೀಟಿಂಗು ವೈಸ್‌ಛಾನ್ಸಲರ ಅಧ್ಯಕ್ಷತೆಯಲ್ಲಿ ತಾ|| ೧೪-೧೫ ರಲ್ಲಿ ನಡೆಯಿತು.

ಮೈಸೂರು ಬೆಂಗಳೂರು ಮಧ್ಯದಲ್ಲಿ ರಾತ್ರಿಹೊತ್ತು ಹೋಗಿಬರುವ ಹೊಗೆಬಂಡಿಯಲ್ಲೂ ಅಂಚೆಯಬಂಡಿಯೊಂದನ್ನು ಸೇರಿಸಿಬಿಡುವುದಕ್ಕೆ ಈ ತಿಂಗಳ ಮೊದಲಿನಿಂದಲೂ ಏರ್ಪಡಿಸಿದ್ದಾರೆ.

ರಾಜಧಾನಿಯಲ್ಲಿ ಕಳೆದ ವಾರ ೨-೩ ಹದ ಒಳ್ಳೆಯ ಮಳೆಗಳಾದುವು. ಸುತ್ತಮುತ್ತಣ ಗ್ರಾಮಾಂತರಗಳಲ್ಲೂ ಆಗಿರುವ ಸುದ್ದಿಬಂದಿದೆ. ಇನ್ನೂ ಮಳೆಬರುವ ಲಕ್ಷಣವಿದೆ. ಕ್ಷಾಮಭೀತಿಯು ತಪ್ಪಿತು. ಸುಭಿಕ್ಷವು ದೂರವಾಗಿಲ್ಲ.

ಸಂಸ್ಥಾನದ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್ ಪದವಿಗೆ ಮ|| ಸಿ. ರಾಮಲಿಂಗರೆಡ್ಡಿಯವರೂ, ವಿದ್ಯಾಭ್ಯಾಸ ಶಾಖಾಧ್ಯಕ್ಷ ಪದವಿಗೆ ಮ|| ಸಿ. ಎಸ್. ಬಾಲಸುಂದರಂ ಅಯ್ಯರ್‌ರವರೂ, ಜನರಲ್ ಸೆಕ್ರೆಟರಿ ಕೆಲಸಕ್ಕೆ ಮ|| ಕೆ. ಮೆಥಾನ್‌ರವರೂ ತರಲ್ಪಡುವರೆಂಬ ವಾರ್ತೆಯು ಈಗ ಬಲವಾಗಿದೆ.

ಸರ್ದಾರ್ ಕಾಂತರಾಜ ಅರಸಿನವರಿಗೆ ದಿವಾನ್‌ಗಿರಿಯು ಪ್ರಾಪ್ತವಾದುದರಿಂದ ತಮಗುಂಟಾದ ಸಂತೋಷವನ್ನು ವಿಜ್ಞಾಪನಪತ್ರ ಸಮರ್ಪಣಮೂಲಕ ನಿವೇದಿಸಲು ಬೆಂಗಳೂರು ಪುರನಿವಾಸಿಗಳು ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಿಂದ ಕೂಡಿದ್ದ ಸಭೆಯಲ್ಲಿ ನಿರ್ಧರಿಸಿರುವರು. ಆಗಲೇ ಸಾವಿರ ರೂ.ಗಳ ಮೇಲೆಯೇ ಚಂದಾಕೂಡಿರುವುದು.

ಬೆಂಗಳೂರಿನಲ್ಲಿ ಶ್ರೀಮಜ್ಜಗದ್ಗುರು ಮಹಾಸ್ವಾಮಿಗಳ ಧನಸಾಹಾಯ್ಯದಿಂದ ಕಟ್ಟಲ್ಪಡಲಿಕ್ಕಿರುವ ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನ ಮಹೋತ್ಸವವನ್ನು ಶ್ರೀಮದ್ಯುವರಾಜರವರು ನಾಳೆ ತಾ|| ೨೦ ನೆ ಸೋಮವಾರ ಹಗಲು ೯.| ಗಂಟೆಗೆ ನಡೆಯಿಸುವವರಾಗಿದ್ದಾರೆ. ಆ ಕಾಲಕ್ಕೆ ಮಹಾಸ್ವಾಮಿಗಳವರೂ ಕೂಡ ದಯಮಾಡಿಸುವವರಾಗಿದ್ದಾರೆಂದು ತಿಳಿಯುತ್ತೇವೆ.

ಶ್ರೀಮನ್ನಿರಂಜನ ಜಗದ್ಗುರುಗಳವರು ತಮ್ಮ ಕೈಂಕರ್ಯವನ್ನು ಸ್ವೀಕರಿಸಲವಕಾಶ ಕೊಡಲಿಲ್ಲವೆಂಬ ವಿಷಯವಾಗಿ ಬೆಂಗಳೂರು ಸಿವಿಲ್‌ಕೋರ್ಟಿನಲ್ಲಿ ಹೂಡಲ್ಪಟ್ಟಿದ್ದ ವ್ಯಾಜ್ಯವು ವಾದಿಗಳಿಂದ ಹಿಂದಿರುಗಿಸಿಕೊಳ್ಳಲ್ಪಟ್ಟಿತು. ದುಷ್ಪ್ರೇರಣೆಯಿಂದ ನಡೆದಿದ್ದ ಈ ವ್ಯಾಜ್ಯವನ್ನು ಅವರು ಹೀಗೆ ವಿರಮಿಸಿಕೊಂಡುದು ಅವರಿಗೆ ಭೂಷಣವೂ ವಿವೇಕವೂ ಆಯಿತು. ಮತ್ತೊಂದು ವ್ಯಾಜ್ಯವೂ ಹೀಗೆಯೇ ಪರ್ಯವಸನ್ನವಾದೀತೆಂದು ನಿರೀಕ್ಷಿಸುತ್ತೇವೆ.

ಹೇಮಾವತೀ ನದಿಗೆ ಸೇತುವನ್ನು ಮಂದಗೆರೆಯ ಬಳಿಯಲ್ಲೋ ಅಥವಾ ಅಕ್ಕಿಹೆಬ್ಬಾಳಿನ ಹತ್ತಿರವೋ ಕಟ್ಟತಕ್ಕುದು ಅವಶ್ಯಕವೆಂಬುದನ್ನೂ ಕಾವೇರೀ ನದಿಗೆ ಸೇತುವನ್ನು ಗರ್ಗೇಶ್ವರಿಯ ಮುಂದೆಯೋ ಅಥವಾ ಬನ್ನೂರಿನ ಹತ್ತಿರವೋ ಕಟ್ಟತಕ್ಕುದು ಅವಶ್ಯಕವೆಂಬುದನ್ನೂ ಆಯಾ ಸ್ಥಲನಿವಾಸಿಗಳ ಹೇಳಿಕೆಯ ಮತ್ತು ಸ್ಥಲ ಶೋಧನೆಯ ಮೂಲಕ ಪ್ರತ್ಯಕ್ಷವಾಗಿ ತಿಳಿದುಬರುವುದಕ್ಕಾಗಿ ೧ನೆ ಕೌನ್ಸಿಲರ್ ಮ|| ಪಿ. ರಾಘವೇಂದ್ರರಾಯರವರು ಕಳೆದ ತಾ|| ೧೬ ರಲ್ಲಿ ಪ್ರಯಾಣಮಾಡಿದರು.

ಇತಃಪರಃ ಪ್ರಜಾಪ್ರತಿನಿಧಿ ಸಭೆಯ ೨ನೆಯ ಅಧಿವೇಶನವು ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ವರ್ಧಂತೀಮಹೋತ್ಸವಕ್ಕೆ ಮುಂಚೆ ೫ ದಿನಗಳ ಕಾಲ ನಡೆಯತಕ್ಕುದೆಂದೂ ಅದರಲ್ಲಿ ಬಜೆಟ್ ಚರ್ಚೆಯೂ, ೧೦೦ ಸಬ್ಜಕ್ಟುಗಳ ಚರ್ಚೆಯೂ ಆಗತಕ್ಕುದೆಂದೂ, ವರ್ಧಂತಿಯು ಮುಗಿದ ಬಳಿಕ ಸಂಪದಭ್ಯುದಯ ಸಮಾಜದ ವಾರ್ಷಿಕಾಧಿವೇಶನವು ೩ ದಿನಗಳ ಕಾಲವೂ ತದನಂತರ ನಿಯಮನಿರ್ಮಾಣಸಭೆಯ ಕಾರ್ಯಗಳು ನಡೆಯತಕ್ಕುದೆಂದೂ ಶ್ರೀಮನ್ಮಹಾರಾಜರವರು ಅನುಮತಿ ಕೊಟ್ಟಿರುವರು.

ಕಳೆದ ಮಂಗಳವಾರ ಮಧ್ಯಾಹ್ನ ೧೨ ಗಂಟೆಗೆ ಪ್ರಜಾಪ್ರತಿನಿಧಿಸಭಾ ಕಾರ್ಯಗಳೆಲ್ಲಾ ಮುಗಿದುವು. ದಿವಾನರವರ ಉಪಸಂಹಾರಭಾಷಣವಾದ ಕೂಡಲೇ ಸಭಿಕರೆಲ್ಲರೂ ಎದ್ದುನಿಂತು ಶ್ರೀಮನ್ಮಹಾರಾಜರವರಿಗೂ ದಿವಾನ್ ಕಾಂತರಾಜ ಅರಸಿನವರಿಗೂ ಪ್ರಿನ್ಸ್ ಜಯಚಾಮರಾಜ ಒಡೆಯರವರಿಗೂ ಶ್ರೇಯಃಪ್ರಾರ್ಥನಮಾಡಿ ತ್ರಿವಾರ ಜಯಘೋಷಗಳನ್ನು ಮಾಡಿದರು. ಅದೇದಿನ ಮಧ್ಯಾಹ್ನೋತ್ತರ ೪ ಗಂಟೆಗೆ ದಿವಾನರವರು ಲೇಕ್‌ವ್ಯೂ ಬಂಗಲೆಗೆ ಪ್ರಜಾಪ್ರತಿನಿಧಿಗಳನ್ನೂ ಸರ್ಕಾರಿ ಅಧಿಕಾರಿಗಳನ್ನೂ ಪುರಪ್ರಮುಖರು ಮೊದಲಾದವರನ್ನೂ ಬರಮಾಡಿಕೊಂಡು ದಿವ್ಯವಾದ ಫಲಾಹಾರಾದಿಗಳಿಂದಲೂ ಚಂಡಾಟ ಮೊದಲಾದ ವಿನೋದಗಳಿಂದಲೂ ಸತ್ಕರಿಸಿ ಸಂತೋಷಪಡಿಸಿದರು.

ಈಗಣ ಸಂಧಿನಿಬಂಧನೆಯ ಏರ್ಪಾಟುಗಳಲ್ಲಿ ತುರ್ಕಿ ಸಾಮ್ರಾಜ್ಯವು ಪೂರ್ವದಂತೆಯೇ ಸ್ವತಂತ್ರ ಚಕ್ರಾಧಿಪತ್ಯವಾಗಿ ಉಳಿಯುವಂತೆ ಅನುಗ್ರಹಿಸಲೆಂಬುದಕ್ಕಾಗಿ ಮಹಮ್ಮದೀಯ ಪ್ರಪಂಚವೆಲ್ಲವೂ ಕಳೆದಶುಕ್ರವಾರ ಉಪವಾಸವಿದ್ದು ಎಲ್ಲ ಮಸ್ಜಿದಿಗಳಲ್ಲೂ ದೇವತಾಪ್ರಾರ್ಥನೆಯನ್ನು ಮಾಡಲು ಏರ್ಪಡಿಸಿಕೊಂಡಿದ್ದರು. ಈಕಾರ್ಯದಲ್ಲಿ ತಮ್ಮ ಮಹಮ್ಮದೀಯ ಸಹೋದರ ಅಭಿಪ್ರಾಯದೊಡನೆ ತಾವೂ ಏಕೀಭವಿಸಿರುವುದನ್ನು ವ್ಯಕ್ತಪಡಿಸಬೇಕೆಂದು ಮ|| ಗಾಂಧಿಯವರು ಸೂಚನೆಕೊಟ್ಟಿರುವರು. ಈ ಕಾರ್ಯಕ್ಕಾಗಿ ಮೊನ್ನೆಯದಿವಸ ಭರತಖಂಡದ ಅನೇಕಾನೇಕ ಸ್ಥಲಗಳಲ್ಲಿಹಿಂದೂ ಮಹಮ್ಮದೀಯರು ಏಕವಾಗಿ ತಮ್ಮ ಅಂಗಡಿ ಮುಂಗಟ್ಟುಗಳನ್ನೆಲ್ಲಾ ಮುಚ್ಚಿ ದೇವತಾಪ್ರಾರ್ಥನೆಗಳನ್ನು ನಡೆಯಿಸಿದರು. ರಾಜಧಾನಿಯಲ್ಲಿಯೂ ಈ ಏರ್ಪಾಟು ನಡೆಯಿತು.

ಪತ್ರವ್ಯವಹಾರ.

೯ ನೆ ವೀರಶೈವ ಮಹಾಸಭೆ.

ಈ ವರ್ಷದ ಡಿಸೆಂಬರ್ ತಿಂಗಳು ತಾ|| 27-28-29 ರಲ್ಲಿ 9 ನೇ ಶ್ರೀಮದ್ವೀರಶೈವ ಮಹಾಸಭೆಯನ್ನು ಬೀರೂರಿನಲ್ಲಿ ನಡೆಯಿಸುವುದಾಗಿ ಈ ಮೊದಲೇ ತಿಳಿಸಿದೆಯಷ್ಟೆ.

ಮಹಾ ಸಭಾಧ್ಯಕ್ಷರು ಇಂಥವರೆಂಬುವುದೂ ಮತ್ತು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಸಹ ಸದ್ಯದಲ್ಲಿಯೇ ಪ್ರಕಟಿಸಲ್ಪಡುತ್ತವೆ. ಈ ಬೀರೂರುಗ್ರಾಮವು ರೈಲ್ವೆ ಜಂಕ್ಷನ್ ಸ್ಥಳವಾಗಿಯೂ ಮದ್ರಾಸ್ ಪ್ರೆಸಿಡೆನ್ಸಿಗೂ ಬೊಂಬಾಯಿ ಪ್ರೆಸಿಡೆನ್ಸಿಗೂ ಕೊಡಗು ಮತ್ತು ಮೈಸೂರು ಭಾಗಗಳಿಗೂ ಮಧ್ಯರಾಷ್ಟ್ರವಾಗಿದೆ. ಇದಕ್ಕೆ ಸಮೀಪದಲ್ಲಿ ಕಲ್ಹತ್ತಗಿರಿ, ಹೋಗರೇಖಾನ್‌ಗಿರಿ, ಬಾಬಾಬುಡನ್‌ಗಿರಿ, ಯಗಟೀ [illegible]ಮಠ ಮುಂತಾದ ಪುಣ್ಯಕ್ಷೇತ್ರಗಳಿವೆ. ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯ ಶ್ರೀಮದ್ರೇಣುಕಾಚಾರ್ಯರ ಪೀಠಸ್ಥಲವಾದ ಬಾಳೇಹೊನ್ನೂರಿಗೂ ಅದ್ಭುತ ಪ್ರಕೃತಿಸೌಂದರ್ಯವುಳ್ಳ ಗೇರುಸೊಪ್ಪೆ ಜಲಪಾತಕ್ಕೂ ಇಲ್ಲಿಂದ ಹೋಗಲು ಅನುಕೂಲತೆಯುಂಟು. ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯವರ್ಯರಾದ ಪಂಚಪೀಠಾಧೀಶ್ವರರನ್ನೂ ಈ ಮಹಾಸಭೆಗೆ ಬಿಜಯಂಗೈಸಿಕೊಂಡು ಬರುವ ಏರ್ಪಾಡು ನಡೆಯುತ್ತಲಿದೆ. ಈ ಮಹತ್ತರವಾದ ಕಾರ್ಯಕ್ಕೆ ಅಖಿಳ ವೀರಶೈವ ಮಹಾಜನರೂ ಸಹಾಯಭೂತರಾಗಬೇಕಾಗಿ ಪ್ರಾರ್ಥನೆ.

ಯಂ. ವಿ. ಮರುಳಸಿದ್ದಯ್ಯ ಸೆಕ್ರೆಟರಿ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ದಸರಾ ಸಮ್ಮೇಳನದಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.

[ಕಳೆದವಾರದ ಶೇಷ.]

ಟೆಕ್ನಿಕಲ್ ಇಲಾಖೆಗಳು.

ಪಬ್ಲಿಕ್ ವರ್ಕ್ಸ್.—ಮರಮತ್ತು ಇಲಾಖೆಯ ಎಲ್ಲಾ ಬಾಬುಗಳ ಒಟ್ಟು ಖರ್ಚು 1918-19 ರಲ್ಲಿ 62 ಲಕ್ಷ ರೂಪಾಯಿಯಾಯಿತು. ಇದುವರೆಗೆ ಮೈಸೂರು ಸರ್ಕಾರದವರು ಕೈಗೊಂಡಿರುವ ನೀರಾವರಿ ಕಾಮಗಾರಿಗಳಲ್ಲಿ ಅತ್ಯಂತ ದೊಡ್ಡದಾದ ಕೃಷ್ಣರಾಜ ಸಾಗರದ ಅಣೆಕಟ್ಟಿನ ಕಟ್ಟಡವು ತೃಪ್ತಿಕರವಾಗಿ ನಡೆದಿದೆ ಅಣೆಕಟ್ಟು ಪಕ್ಕಗಳಲ್ಲಿ 107 ಅಡಿಯವರೆಗೆ ಎತ್ತರಿಸಲ್ಪಟ್ಟಿದೆ; ತಗ್ಗುಮಟ್ಟದ ನಾಲೆಗಳ ಮತ್ತು ಇತರ ನಾಲೆಗಳ ಕಾಂಗಾರಿಗಳನ್ನು ನಡೆಸುತ್ತಲಿದೆ. ಈ ವರ್ಷ ಈ ಕಾಂಗಾರಿಗಳಿಗೆ 15 ಲಕ್ಷ ರೂಪಾಯಿಗಳು ಖರ್ಚು ತಗಲಿ ಒಟ್ಟು ಇದುವರೆಗೆ 150 ಲಕ್ಷ ರೂಪಾಯಿಗಳ ಖರ್ಚು ಆಗಿದೆ.

ರೈಲ್ವೆ ಇಲಾಖೆ.—ಒಟ್ಟು ಸುಮಾರು 140 ಮೈಲಿಗಳ ಫಾಸಲೆಯುಳ್ಳ ನಂಜನಗೂಡು-ಬೆಂಗಳೂರು ಮತ್ತು ಬೀರೂರು-ಶಿವಮೊಗ್ಗ ಸೆಕ್ಷನ್‌ಗಳನ್ನು 1919 ನೇ ಅಕ್ಟೋಬರು 1 ನೆಯ ತಾರೀಖಿನ [illegible] ವಾಪಸು ತೆಗೆದುಕೊಂಡುದರ ಫಲಿತಾಂಶವಾಗಿ ನಮ್ಮ ರೈಲ್ವೆ ಕಾರ್ಯಗಳು ವಿಶೇಷವಾಗಿ ಹೆಚ್ಚುತ್ತವೆಯೆಂದು ನಿರೀಕ್ಷಿಸಿದೆ.

48 ಮೈಲಿಗಳ ಫಾಸಲೆಯುಳ್ಳ ಮೀಟರ್‌ಗೇಜ್ ಲೈನುಗಳನ್ನೂ 56 ಮೈಲಿಗಳ ಫಾಸಲೆಯುಳ್ಳ 2ಅಡಿ ಗೇಜಿನ ಟ್ರಾಂಲೈನುಗಳನ್ನೂ ಹಾಕುತ್ತಿದೆ. ನಂಜನಗೂಡು-ಚಾಮರಾಜನಗರದ ಸೆಕ್ಷನ್ನನ್ನು ಮುಂದಿನ ನವೆಂಬರ್ ತಿಂಗಳಲ್ಲಿ ಹಾಕುವುದಕ್ಕೆ ಪ್ರಾರಂಭಿಸಲು ಪ್ರಯತ್ನಗಳು ನಡೆಯುತ್ತಿವೆ.

ಗಣಿಗಳು ಮತ್ತು ಭೂಗರ್ಭಶೋಧನೆ ಇಲಾಖೆ.—[illegible] ವರ್ಷದಂತೆಯೇ ಕೋಲಾರದ ಚಿನ್ನದಗಣಿಗಳ ಕೆಲಸವು [illegible]

ವಶ್ಯಕವಾದ ಸಾಮಾನುಗಳನ್ನು ತರಿಸಿಕೊಳ್ಳುವ ಕಷ್ಟದಿಂದಲೂ ಕೆಲಸ ತಿಳಿದ ಕೂಲಿಗಳು ಕಡಮೆ ಬಿದ್ದುದರಿಂದಲೂ ಹಿಂದಾಯಿತು. 1918-19ರಲ್ಲಿ ಸುಮಾರು 239,01,053 ರೂಪಾಯಿಗಳ ಬೆಲೆ ಬಾಳುವ 4,87,484 ಔನ್ಸುಗಳ ತೂಕದಷ್ಟು ಚಿನ್ನವು ಗಣಿಯಿಂದ ತೆಗೆಯಲ್ಪಟ್ಟಿತು. ಇದನ್ನು 1917-18 ನೆಯ ವರ್ಷದ 301,45,365 ರೂಪಾಯಿಗಳ ಬೆಲೆಬಾಳುವ 5,24,264 ಔನ್ಸುಗಳ ತೂಕದ ಭಂಗಾರದೊಡನೆ ಹೋಲಿಸಿ ನೋಡಿದರಲ್ಲಿ 1918 19ರಲ್ಲಿ 42,44,312 ರೂಪಾಯಿಗಳ ಬೆಲೆಬಾಳುವ 36,780 ಔನ್ಸುಗಳ ತೂಕದಷ್ಟು ಚಿನ್ನವು ಕಡಮೆಯಾಗಿದೆಯೆಂದು ಗೊತ್ತಾಗುತ್ತದೆ. 1918-19ನೆಯ ವರ್ಷಕ್ಕಾಗಿ ಸರ್ಕಾರಕ್ಕೆ ಬರತಕ್ಕ ಒಟ್ಟು ರಾಜಾಯವು ಹಿಂದಿನ ವರ್ಷ 17,23,943 ರೂಪಾಯಿಗಳು ಇದ್ದುದು ಈ ವರ್ಷ 14,54,285 ರೂಪಾಯಿಗಳಾಗಿದೆ.

ಈ ವರ್ಷ ಈ ಇಲಾಖೆಯ ಮುಖ್ಯ ಕೆಲಸವು ಕಬ್ಬಿಣದ ಏರ್ಪಾಡಿಗೆ ಬೇಕಾದ ಸಾಮಾನುಗಳನ್ನು ಒದಗಿಸುವುದಕ್ಕೆ ಸಂಬಂಧಪಟ್ಟಿರುತ್ತದೆ.

ಬಹಳ ಈಚೆಗೆ ಜಿಯಲಾಜಿಕಲ್ ಸರ್ವೆ ಕೆಲಸಕ್ಕೂ ತಕ್ಕಷ್ಟು ಅನುಕೂಲವನ್ನು ಹೆಚ್ಚಿಸುವ ಉದ್ದೇಶದಿಂದ ಈ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡಿದೆ.

ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ.

ವಿದ್ಯಾಭ್ಯಾಸ.—ಈವರ್ಷ ಸರ್ಕಾರೀ ಸ್ಕೂಲುಗಳ ಸಂಖ್ಯೆಯು 790 ರವರೆಗೆ ಹೆಚ್ಚಿದ್ದಾಗ್ಯೂ ಸ್ಕೂಲುಗಳಲ್ಲಿನ ಹಾಜರಿಯು 3,38 872 ರಿಂದ 3,21,150 ಕ್ಕೆ ಇಳಿದಿರುವುದು, 13,722 ಮಂದಿ ವಿದ್ಯಾರ್ಥಿಗಳು ಕಡಮೆಯಾದುದನ್ನು ತೋರಿಸುತ್ತದೆ. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಹುಡುಗರ ಪೈಕಿ ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿದ್ದವರ ಸಂಖ್ಯೆಯು ಶೇಕಡಾ 68·0 ರಿಂದ 55·27 ಕ್ಕೆ ಇಳಿಯಿತು; ಮತ್ತು ಸ್ಕೂಲಿಗೆ ಹೋಗುವ ವಯಸ್ಸುಳ್ಳ ಹುಡುಗಿಯರ ಸಂಖ್ಯೆಯು ಶೇಕಡಾ 14·9 ರಿಂದ 11·25 ಕ್ಕೆ ಇಳಿಯಿತು. ಮತ್ತು ಸ್ಕೂಲಿಗೆ ಹೋಗುವ ವಯಸ್ಸುಳ್ಳ ಒಟ್ಟು ಜನಸಂಖ್ಯೆಯ ಪೈಕಿ ಹುಡುಗರ ಮತ್ತು ಹುಡುಗಿಯರ ಸಂಖ್ಯೆಯು ಶೇಕಡಾ 41·2 ರಿಂದ 39·3 ಕ್ಕೆ ಇಳಿಯಿತು. ಈ ವರ್ಷ ಇನ್ಫ್ಲುಯೆಂಜಾ ರೋಗವು ಹರಡಿದ್ದೂ ಆಹಾರಪದಾರ್ಥಗಳ ಬೆಲೆಯು ಹೆಚ್ಚಿ ಬಡಜನಗಳು ತಮ್ಮ ಮಕ್ಕಳುಗಳನ್ನು ಕೆಲಸಕ್ಕೆ ಹಾಕಿ ಸಂಸಾರವನ್ನು ನಡೆಸುವುದಕ್ಕಾಗಿ ಅವರು ಸ್ಕೂಲಿಗೆ ಹೋಗುವುದನ್ನು ನಿಲ್ಲಿಸಿದ್ದೂ, ಹಾಜರಿ ಕಡಿಮೆಯಾದುದಕ್ಕೆ ಮುಖ್ಯಕಾರಣಗಳಾಗಿವೆಯೆಂದು ತಿಳಿದುಬರುತ್ತದೆ.

ಸೆಕೆಂಡರಿ ವಿದ್ಯಾಭ್ಯಾಸ.—ಹೈಸ್ಕೂಲುಗಳಿಗೆ ಮತ್ತು ಮಿಡಲ್ ಸ್ಕೂಲುಗಳಿಗೆ ಜರೂರಾಗಿ ಅವಶ್ಯಕವಾದ ಸಿಬ್ಬಂದಿಯನ್ನು ವರ್ಷೇವರ್ಷೇ 37,000 ರೂಪಾಯಿಗಳು ಖರ್ಚನ್ನು ಮುಟ್ಟಿಸಿ ಒದಗಿಸಿದೆ. ಎಸ್.ಎಸ್.ಎಲ್.ಸಿ. ವ್ಯಾಸಂಗದ ಪ್ರಯೋಜನವನ್ನೂ ಮತ್ತು ಅದರ ಕೊನೆಯ ಪರೀಕ್ಷೆಯ ಸ್ಟಾಂಡರ್ಡನ್ನೂ ಮೇಲುಪಡಿಸುವ ಉದ್ದೇಶದಿಂದಲೂ ಮತ್ತು ಹೈಸ್ಕೂಲು ಮತ್ತು ಕಾಲೇಜು ಕೋರ್ಸುಗಳಿಗೆ ಹೆಚ್ಚಾಗಿ ಹೊಂದಿಕೆಯನ್ನು ಮಾಡುವ ಉದ್ದೇಶದಿಂದಲೂ ಈ ಕೋರ್ಸಿನ ನಿಬಂಧನೆಗಳನ್ನು ತಿದ್ದುಪಡಿ ಮಾಡಲಾಯಿತು. ಸ್ಕೌಟಿನ ಏರ್ಪಾಡು ಚೆನ್ನಾಗಿ ನಡೆಯುತ್ತಿರುವುದಲ್ಲದೆ ಕಳೆದ ಜೂನ್ ತಿಂಗಳಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತೀಮಹೋತ್ಸವದಲ್ಲಿ ಒಂದು ತೃಪ್ತಿಕರವಾದ ಸ್ಕೌಟುಗಳ ವಿನೋದಕೂಟವು ಮೈಸೂರಿನಲ್ಲಿ ನೆರೆದಿತ್ತು.

ಪ್ರೈಮರಿ ಯಾ ಪ್ರಾಥಮಿಕ ವಿದ್ಯಾಭ್ಯಾಸ.—ಸಾಲಿಯಾನಾ 39,360 ರೂಪಾಯಿಗಳ ಒಟ್ಟು ಖರ್ಚು ತಗಲುವಂತೆ ಸರ್ಕಾರೀ ಪ್ರೈಮರಿ ಸ್ಕೂಲುಗಳ ಸಿಬ್ಬಂದಿಯ ಸಂಬಳದ ಸ್ಕೇಲನ್ನು ಏಕರೀತಿಯಾಗಿರುವಂತೆ ಮಾಡಿದ್ದಲ್ಲದೆ ಸದರಿ ಸ್ಕೂಲುಗಳಿಗೆ ಹೆಚ್ಚು ಸಾಮಾನುಗಳನ್ನು ಒದಗಿಸುವುದಕ್ಕೆ ಅವಕಾಶಕೊಟ್ಟಿದೆ. ನಿರ್ಬಂಧ ವಿದ್ಯಾಭ್ಯಾಸದ ಏರ್ಪಾಡಿನಲ್ಲಿ 238 ಮಧ್ಯರಂಗಸ್ಥಳಗಳನ್ನು ಪ್ರಕಟಿಸಿದ್ದರೂ 68 ಸ್ಥಳಗಳಲ್ಲಿ ಮಾತ್ರ ಅದು ಕಾರ್ಯತಃ ಜಾರಿಯಲ್ಲಿದೆ. ಈ ಏರ್ಪಾಡನ್ನು ತೃಪ್ತಿಕರವಾದ ಆಧಾರದ ಮೇಲೆ ನಡೆಸುವ ಮತ್ತು ಸ್ಥಳೀಯ ಸಂಘಗಳಿಗೆ ಹೆಚ್ಚು ಜವಾಬ್ದಾರಿಯನ್ನು ವಹಿಸುವ ವಿಷಯವು ಪರ್ಯಾಲೋಚನೆಯಲ್ಲಿದೆ.

ಸ್ತ್ರೀವಿದ್ಯಾಭ್ಯಾಸ.—ಮಹಾರಾಣಿಯವರ ಕಾಲೇಜಿನ ಕಾಲೇಜು ಮತ್ತು ಕೊಲಿಜಿಯೇಟ್ ಹೈಸ್ಕೂಲಿನ ತರಗತಿಗಳನ್ನು ಹೈಸ್ಕೂಲಿನಿಂದ ಬೇರೆಮಾಡಿ ಯೂನಿವರ್ಸಿಟಿಯ ಸ್ವಾಧೀನಕ್ಕೆ ಕೊಡಲಾಯಿತು. ಬೆಂಗಳೂರು ವಾಣೀವಿಲಾಸದ ಇನ್ಸ್ಟಿಟ್ಯೂಟಿಗೆ ಸೇರಿದಂತೆ ಉಪಾಧ್ಯಾಯಿನಿಯರಿಗೆ ಒಂದು ಸೆಂಟ್ರಲ್ ಕೈಗಾರಿಕೆ ಸ್ಕೂಲನ್ನೂ ಒಂದು ಸರ್ಕಾರಿ ಹಾಸ್ಟಲನ್ನೂ ಇಡಲಾಯಿತು. ಮತ್ತು ಸಾಲೀಯಾನಾ ಸುಮಾರು 11,000 ರೂಪಾಯಿಗಳ ಖರ್ಚು ತಗಲುವ ತಿದ್ದುಪಾಟಾದ ವಿದ್ಯಾರ್ಥಿವೇತನದ ಏರ್ಪಾಡೊಂದನ್ನು ಡಿಸ್ಟ್ರಿಕ್ಟು ಕಸಬೆಗಳಲ್ಲಿನ ಬಾಲಿಕಾ ಪಾಠಶಾಲೆಗಳಲ್ಲಿ ಜಾರಿಗೆ ತರಲಾಯಿತು. ಬಾಲಿಕಾ ಪಾಠಶಾಲೆಗಳ ಇನ್ಸ್ಪೆಕ್ಟರುಗಳ ಸಿಬ್ಬಂದಿಯನ್ನು ಪುನರ್ವ್ಯವಸ್ಥೆ ಮಾಡಲಾಯಿತು. ಸ್ತ್ರೀಗ್ರಾಜುಯೇಟ್ ಉಪಾಧ್ಯಾಯರುಗಳಿಗೆ ವಿಶೇಷ ದರ್ಜೆಗಳನ್ನು ಮಂಜೂರು ಮಾಡಿದೆಯಲ್ಲದೆ ನಾಲ್ಕು ಮಂದಿ ಸ್ತ್ರೀಗ್ರಾಜುಯೇಟ್ ಉಪಾಧ್ಯಾಯಿನಿಯರನ್ನು ಹೊಸದಾಗಿ ಮೊಕರರು ಮಾಡಿದೆ. ಎಲ್ಲಾ ದರ್ಜೆಯ ಬಾಲಿಕಾ ಪಾಠಶಾಲೆಗಳಲ್ಲಿಯೂ ಗಂಡಸರಿಗೆ ಪ್ರತಿಯಾಗಿ ಉಪಾಧ್ಯಾಯಿನಿಯರನ್ನು ಕ್ರಮಕ್ರಮವಾಗಿ ನೇಮಿಸಲು ಪ್ರಯತ್ನಗಳನ್ನು ನಡೆಸುತ್ತಲಿದೆ.

ಹಿಂದುಳಿದ ಪಂಗಡಗಳ ವಿದ್ಯಾಭ್ಯಾಸ.—ಮಹಮದೀಯರಿಗಾಗಿ 28 ಸಂಬಳದ ಗ್ರಾಂಟುಸ್ಕೂಲುಗಳನ್ನು ಇಡಲಾಯಿತು. ಹೆಚ್ಚು ಮಂದಿ ಮಹಮದೀಯ ಉಪಾಧ್ಯಾಯರನ್ನೂ ಸ್ಕೂಲು ಉಪಾಧ್ಯಾಯಿನಿಯರನ್ನೂ ತರಬಿಯತ್ ಮಾಡಲು ಏರ್ಪಾಡುಮಾಡಿದೆ. ಈ ಸಭೆಯ ಮಹಮದೀಯ ಮೆಂಬರುಗಳು ಪದೇಪದೇ ಕೇಳಿಕೊಂಡಂತೆ ಹಿಂದೂಸ್ಥಾನಿ ಬಾಲಿಕಾಪಾಠಶಾಲೆಗಳಿಗೆ ಕೊಟ್ಟಿರುವ ಬಂಡಿಬಾಡಿಗೆಯ ದರವನ್ನು ತಕ್ಕಂತೆ ಹೆಚ್ಚಿಸಿದೆ. ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್‌ರವರು ನಡೆಸಿದ ಒಂದು ವಿಶೇಷವಾದ ಸಮ್ಮೇಳನದಲ್ಲಿ ಮಹಮದೀಯರ ವಿದ್ಯಾಭ್ಯಾಸದ ಅವಶ್ಯಕತೆಗಳನ್ನು ಕುರಿತು ಆಲೋಚಿಸಿದ್ದಲ್ಲದೆ ಆ ಸಮ್ಮೇಳನದ ಸಲಹೆಗಳು ಪರ್ಯಾಲೋಚನೆಯಲ್ಲಿವೆ.

ಹಿಂದುಳಿದ ಪಂಗಡಗಳಿಗೆ ಮಂಜೂರಾಗಿರುವ ಸ್ಪೆಷಲ್ ವಿದ್ಯಾರ್ಥಿವೇತನಗಳನ್ನು ಸಂಬಂಧಪಟ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಈಗಿರುವುದಕ್ಕಿಂತ ನ್ಯಾಯವಾಗಿ ಹಂಚುವಂತೆ ಮಾಡುವುದಕ್ಕಾಗಿ ನಿಬಂಧನೆಗಳನ್ನು ತಿದ್ದುಪಾಟು ಮಾಡಲಾಗಿದೆ.

ಪಂಚಮರ ವಿದ್ಯಾಭ್ಯಾಸಕ್ಕೆ ಸಂತತವಾದ ಗಮನಕೊಡುತ್ತಲಿದೆ. ಮೈಸೂರಿನ ಸೆಂಟ್ರಲ್ ಪಂಚಮ ಬೋರ್ಡಿಂಗ್ ಸ್ಕೂಲನ್ನು ಒಂದು ಕನ್ನಡ ಹೈಸ್ಕೂಲಿನ ದರ್ಜೆಗೆ ಹೆಚ್ಚಿಸಿ, ಅದರಲ್ಲಿ ಕೈಗಾರಿಕೆ ಮತ್ತು ನಾರ್ಮಲ್ ಟ್ರೈನಿಂಗ್ ಭಾಗಗಳನ್ನು ಸೇರಿಸಲಾಯಿತು. ತುಮಕೂರು ಮತ್ತು ಚಿಕ್ಕಮಗಳೂರಿನಲ್ಲಿ ಲೋವರ್‌ಸೆಕೆಂಡರಿ ದರ್ಜೆಯ ಬೋರ್ಡಿಂಗ್‌ಸ್ಕೂಲುಗಳನ್ನು ಇಡಲಾಯಿತು. 12 ಪಂಚಮ ಸ್ಕೂಲುಗಳಿಗೆ ನೆಯಗೆ ತರಗತಿಗಳನ್ನು ಮಂಜೂರು ಮಾಡಿದೆ. ಪಂಚಮರಲ್ಲಿ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದಕ್ಕೆ, ವಿದ್ಯಾರ್ಥಿವೇತನಗಳು, ಇಂಗ್ಲಿಷ್ ಕಲಿಯುವ ವಿದ್ಯಾರ್ಥಿಗಳಿಗೆ ಸ್ಕೂಲಿಗೆ ಹೋಗುವುದಕ್ಕೂ ಬರುವುದಕ್ಕೂ ಪ್ರಯಾಣದ ಖರ್ಚು, ಪುಸ್ತಕಗಳು ಮತ್ತು ಸ್ಲೇಟುಗಳು, ಮತ್ತು ತಾಯಿತಂದೆಗಳಿಗೆ ಭಕ್ಷ್ಯ, ಇವುಗಳನ್ನು ಕೊಟ್ಟು ವಿಶೇಷ ರಿಯಾಯಿತಿಯನ್ನು ತೋರಿಸಿದೆ.

ವಿಶೇಷ ವಿದ್ಯಾಭ್ಯಾಸ.—ಎರಡು ಕನ್ನಡ ಹೈಸ್ಕೂಲುಗಳಿಗೆ ಅಪ್ಪರ್‌ಸೆಕೆಂಡರಿ ಟ್ರೈನಿಂಗ್ ತರಗತಿಗಳನ್ನು ಮಂಜೂರು ಮಾಡಲಾಯಿತು. ಅಲ್ಲದೆ ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲುಗಳ ಉಪಾಧ್ಯಾಯರುಗಳನ್ನು ತರಬಿಯತ್ ಮಾಡುವುದಕ್ಕಾಗಿ 200 ವಿದ್ಯಾರ್ಥಿ ವೇತನಗಳನ್ನು ಒದಗಿಸಿದೆ. ಹಾಸನ, ಚಿಕ್ಕಮಗಳೂರು ಮತ್ತು ಚನ್ನಪಟ್ಟಣದ ಹೈಸ್ಕೂಲುಗಳಲ್ಲಿ ಕಮರ್ಸಿಯಲ್ ಯಾ ವ್ಯಾಪಾರ ಸಂಬಂಧವಾದ ತರಗತಿಗಳನ್ನು ಇಡಲಾಯಿತು. ನೆಯಗೆ ಸ್ಕೂಲುಗಳನ್ನು ಬೇರೆ ಮಾದರಿಯಲ್ಲಿಡುವುದನ್ನು ಪ್ರಾರಂಭಿಸಿದೆ.

ಈ ವರ್ಷದಲ್ಲಿ ಮಂಜೂರು ಮಾಡಿದ ಇತರ ಏರ್ಪಾಡುಗಳಲ್ಲಿ ಇನ್ಸ್ಪೆಕ್ಟರುಗಳ ಸಿಬ್ಬಂದಿಯ ಪುನರ್ವ್ಯವಸ್ಥೆ, ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್‌ರವರ ಆಫೀಸಿನ ಪುನರ್ವ್ಯವಸ್ಥೆ, ವಿಜುಯಲ್ ಇನ್ಸ್ಟ್ರಕ್ಷನ್ ಯಾ ಚಾಕ್ಷುಷ ಬೋಧನಾಕ್ರಮವನ್ನು ಜಾರಿಗೆ ತಂದುದು ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಲ್ಲಿ ಪುಸ್ತಕಭಂಡಾರವನ್ನು ಮೇಲುಪಡಿಸಿದುದು, ಇವುಗಳನ್ನು ನಮೂದಿಸಬಹುದು.

ಮೈಸೂರು ಯೂನಿವರ್ಸಿಟಿ.—ಡಿಗ್ರಿಗಳನ್ನು ಕೊಡುವುದಕ್ಕಾಗಿ ಯೂನಿವರ್ಸಿಟಿಯ ಮೊದಲನೆಯ ಕಾನ್ವೊಕೇಷನ್ ಸಭೆಯು 1918 ನೆಯ ಅಕ್ಟೋಬರ್ 19 ನೆಯ ತಾರೀಖಿನ ದಿನ ನಡೆಯಿತು. ಅದರಲ್ಲಿ ಛಾನ್ಸೆಲರಾದ ಶ್ರೀಮನ್ ಮಹಾರಾಜರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮತ್ತು ಸರ್ ಅಶುತೋಷಮುಖರ್ಜಿಯವರು ಕಾನ್ವೊಕೇಷನ್ ಸಭೆಯ ಭಾಷಣವನ್ನು ಮಾಡಿದರು. ಯೂನಿವರ್ಸಿಟಿಯ ಅಭಿವೃದ್ಧಿಯು ನಿರಂತರವಾಗಿ ಜರುಗುತ್ತಲಿದೆ. ಮೆಕ್ಯಾನಿಕಲ್ ಮತ್ತು ಸಿವಿಲ್ ಇಂಜನಿಯರಿಂಗ್ ಸೆಕ್ಷನ್‌ಗಳನ್ನು ಸಂಪೂರ್ಣವಾಗಿ ಏರ್ಪಡಿಸಲಾಯಿತು. ಇತರ ವಿದ್ಯಾಶಾಖೆಗಳನ್ನೂ ವ್ಯಾಸಂಗಗಳನ್ನೂ ಸ್ಥಾಪಿಸುವ ಏರ್ಪಾಡುಗಳಿಗೆ ಗಮನ ಕೊಡುತ್ತಿದೆ. ಮೈಸೂರು, ಬೆಂಗಳೂರು, ತುಮಕೂರು, ಶಿವಮೊಗ್ಗ, ಕೋಲಾರ, ಹಾಸನ ಮತ್ತು ನಂಜನಗೂಡುಗಳಲ್ಲಿ ಅನೇಕ ಎಕ್ಸ್ಟೆನ್ಷನ್ ಲೆಕ್ಚರರುಗಳನ್ನು ಕೊಡಲಾಯಿತು. ಶಾಸ್ತ್ರ ಮತ್ತು ಇತರ ನವೀನ ವಿಷಯಗಳ ಮೇಲೆ ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುವುದನ್ನು ಪ್ರೋತ್ಸಾಹಿಸುವ ಏರ್ಪಾಡು ವಿಶೇಷವಾಗಿ ಫಲಕಾರಿಯಾಗಿದೆ.

ಒಟ್ಟು ಸುಮಾರು 40,000 ರೂಪಾಯಿಗಳು ಬಾಳುವ ಏಳು ಧರ್ಮಶುಲ್ಕಗಳನ್ನು ಈ ವರ್ಷ ಅಂಗೀಕರಿಸಲಾಯಿತು.

ವ್ಯವಸಾಯ.—ಒಂದು ಸಾವಿರದ ಇನ್ನೂರೈವತ್ತು ನಿದರ್ಶನಗಳನ್ನು ತೋರಿಸಿದ್ದಲ್ಲದೆ 38,000 ರೂಪಾಯಿ ಬಾಳುವ ಮುಟ್ಟುಗಳು ಮತ್ತು ಅವುಗಳ ಬಿಡಿಬಿಡಿ ಭಾಗಗಳನ್ನು ಮಾರಲಾಯಿತು. ರಾಗಿಯಲ್ಲಿ ಮೇಲಾದ ಜಾತಿಯನ್ನು ಬೆಳಸುವುದಕ್ಕೂ ಉತ್ತಮ ತರಹೆಯ ಕಬ್ಬನ್ನು ಬೆಳೆಯುವ ಪ್ರದೇಶಗಳನ್ನು ಬಡಾಯಿಸುವುದಕ್ಕೂ ವಿಶೇಷ ಗಮನ ಕೊಡಲಾಯಿತು. ಗೊಬ್ಬರವಾಗಿ ಉಪಯೋಗಿಸುವುದಕ್ಕೆ 45,000 ರೂಪಾಯಿ ಬಾಳುವ ಹಿಂಡಿಯನ್ನು ಈ ವರ್ಷ ಬಿಕರಿಮಾಡಲಾಯಿತು. ಈ ಇಲಾಖೆಯು ತನ್ನ ವಾಡಿಕೆಯಾದ ಕೆಲಸದ ಜೊತೆಗೆ, ಈಚೆಗೆ ಸಂಭವಿಸಿದ್ದ ಕ್ಷಾಮಗಾಲದಲ್ಲಿ ಆಹಾರಪದಾರ್ಥಗಳ ಉತ್ಪತ್ತಿಯನ್ನು ಶೀಘ್ರವಾಗಿ ಪ್ರೋತ್ಸಾಹಿಸುವ ಉದ್ದೇಶದಿಂದ ರೈತರಿಗೆ ವಿಶೇಷವಾಗಿ ಬೀಜಗಳ ಸರಬರಾಯಿ ಮಾಡುವ ಕೆಲಸವನ್ನು ಕೈಗೊಂಡಿತು.

ಕೈಗಾರಿಕೆ ಮತ್ತು ವಾಣಿಜ್ಯ.—ಯಂತ್ರಗಳ ಹೆಚ್ಚು ಬೆಲೆ ಮತ್ತು ಇತರ ಅಸಾಧಾರಣವಾದ ಸ್ಥಿತಿಗತಿಗಳಿಂದ ಕೈಗಾರಿಕೆಯ ಅಭಿವೃದ್ಧಿಗೆ ಅಡಚಣೆಯಾಯಿತು. ಮಣ್ಣಿನ ಕೆಲಸಗಳು, ಚರ್ಮದ ತಯಾರಿ ಮೊದಲಾದ ಕೆಲವು ಹೊಸ ಏರ್ಪಾಡುಗಳನ್ನು ಪರೀಕ್ಷಿಸಲಾಯಿತು. ರಸಾಯನಶಾಸ್ತ್ರ ಸಂಬಂಧವಾದ ಕೈಗಾರಿಕೆಗಳನ್ನು (Chemical Industries) ಅಭಿವೃದ್ಧಿಮಾಡುವುದಕ್ಕೂ ಮತ್ತು ಸ್ಥಳೀಯ ಗ್ರಾಜುಯೇಟರುಗಳನ್ನು ರಾಸಾಯನಿಕ ಕ್ರಿಯೆಗಳಲ್ಲಿ ತರಬಿಯತ್ತು ಮಾಡುವುದಕ್ಕೂ ವಿಶೇಷ ಗಮನಕೊಡುವ ಉದ್ದೇಶದಿಂದ ಈ ವರ್ಷ ಶಾಸ್ತ್ರೀಯ ಅನ್ವೇಷಣಕ್ಕಾಗಿಯೂ ಸೂಚನೆಗಳಿಗಾಗಿಯೂ ಒಂದು ಸಂಘವನ್ನು ಏರ್ಪಡಿಸಲಾಯಿತು. ಈಚೆಗೆ ಹೆಚ್ಚು ಯಂತ್ರಗಳನ್ನು ತರಿಸಿಟ್ಟಿರುವುದರಿಂದ ಸೆಂಟ್ರಲ್ ಕೈಗಾರಿಕೆಯ ಕಾರ್ಖಾನೆಯಲ್ಲಿ ತಯಾರ್ಮಾಡಲ್ಪಟ್ಟ ವಸ್ತುಗಳು ತಕ್ಕಮಟ್ಟಿಗೆ ಹೆಚ್ಚಿದೆ. ಯಂತ್ರಗಳ ರಿಪೇರಿ ಮತ್ತು ತಯಾರಿ ಬಗ್ಗೆ ಈ ವರ್ಷ ನಡೆದಿರುವ ಕೆಲಸದ ಕಿಮ್ಮತ್ತು ಸುಮಾರು ಒಂದೂವರೆ ಲಕ್ಷ ರೂಪಾಯಿಯಾಗುತ್ತದೆ. ಶಿವಮೊಗ್ಗಾದಲ್ಲಿನ ಡಿಸ್ಟ್ರಿಕ್ಟು ಕಾರ್ಖಾನೆಗೆ ಬೇಕಾದ ಸಾಮಾನುಗಳನ್ನು ಒದಗಿಸಿ ಈಚೆಗೆ ಕೆಲಸವನ್ನು ಆರಂಭಿಸಿದೆ.

ಸರ್ಕಾರಿ ಸಾಬೂನು ಕಾರ್ಖಾನೆಯಲ್ಲಿ 90,000 ರೂಪಾಯಿ ಬೆಲೆಬಾಳುವ ಮಾರುವುದಕ್ಕೆ ಯೋಗ್ಯವಾದ ಸಾಬೂನು ತಯಾರಾಯಿತು. ಈ ಕಾರ್ಖಾನೆಯನ್ನು ಬಡಾಯಿಸುವುದನ್ನೂ 50,000 ರೂಪಾಯಿ ಮುಟ್ಟಿಸಿ ಗ್ಲಿಸರೀನ್ ಎಂಬ ದ್ರವಪದಾರ್ಥವನ್ನು ತೆಗೆಯುವುದಕ್ಕೆ ಯಂತ್ರಗಳನ್ನಿಡುವುದನ್ನೂ ಹೊಸದಾಗಿ ಮಂಜೂರ್ಮಾಡಿದೆ.

ಸರ್ಕಾರಿ ಲೋಹಕಾರ್ಖಾನೆ (ಮೆಟಲ್ ಫ್ಯಾಕ್ಟರಿ) ಯಲ್ಲಿ ಸುಮಾರು 37,000 ರೂಪಾಯಿ ಬಾಳುವ ಸಾಮಾನುಗಳು ತಯಾರಾದವು. ಕೈಗಾರಿಕೆ ಕಾರ್ಖಾನೆಯ ಉಪಕರಣಗಳ ಶಾಖೆಯನ್ನು ಅಭಿವೃದ್ಧಿಪಡಿಸಿ ಮೆಟಲ್ ಕಾರ್ಖಾನೆಗೆ ಸೇರಿಸಿತು. ಮತ್ತು ಅದರಿಂದ ಸುಮಾರು 20,000 ರೂಪಾಯಿ ಬೆಲೆ ಬಾಳುವ ಶಾಸ್ತ್ರೀಯವಾದ ಉಪಕರಣಗಳು, ಹಿತ್ತಾಳೆ ಯಂತ್ರ ಭಾಗಗಳು ಮೊದಲಾದುವನ್ನು ತಯಾರ್ಮಾಡಲಾಯಿತು.

ಈ ವರ್ಷ ಸರ್ಕಾರೀ ನೆಯ್ಗೆ ಕಾರ್ಖಾನೆಯನ್ನು ಪರಿಷ್ಕರಿಸಲಾಯಿತು. ಮತ್ತು ಡಿಮಾನ್ಸ್ಟ್ರೇಟರುಗಳನ್ನು ತರಬಿಯತ್ತು ಮಾಡುವುದಕ್ಕೂ ನೆಯ್ಗೆ ಕೆಲಸದ ಪ್ರದರ್ಶನಶಾಲೆಯನ್ನು ಏರ್ಪಡಿಸುವುದಕ್ಕೂ ಸಂಸ್ಥಾನದಲ್ಲಿ ತಯಾರಾದ ಬಟ್ಟೆಯನ್ನು ಮಾರಾಟಕ್ಕಿಡುವ ವಿಷಯಕ್ಕೂ ಗಮನಕೊಡಲಾಯಿತು.

ಕೈಗಾರಿಕೆ ಉದ್ದೇಶಗಳಿಗಾಗಿ 1,07,000 ರೂಪಾಯಿಗಳಷ್ಟು ಸಾಲಗಳನ್ನು ಈ ವರ್ಷ ಮಂಜೂರುಮಾಡಿದೆ. 31 ಯಂತ್ರಗಳ ಸ್ಥಾಪನೆಯನ್ನು ಮಾಡಲಾಯಿತು. ಈ ಪೈಕಿ 13 ಪೂರೈಸಿರುತ್ತದೆ. ಅಂತು ಇದುವರಿಗೆ ಈ ಇಲಾಖೆಯಿಂದ ಮಾಡಲ್ಪಟ್ಟ ಸ್ಥಾಪನೆಗಳ ಒಟ್ಟು ಸಂಖ್ಯೆಯು 183 ಕ್ಕೆ ಬಂದಿತು.

ಸಿವಿಲ್ ಸಪ್ಲೈಗಳ ಮತ್ತು ರೈಲ್ವೆ ಆಮದು ರಫ್ತಿನ ಹತೋಟಿಗೆ ಸಂಬಂಧಪಟ್ಟ ಏರ್ಪಾಡುಗಳು ಈ ಇಲಾಖಾ ವಾಣಿಜ್ಯಶಾಖೆಯ ಮುಖ್ಯ ಕೆಲಸಗಳಾಗಿದ್ದುವು. ಆದಾಗ್ಯೂ ವ್ಯಾಪಾರ ಮತ್ತು ಧಾರಣೆಗಳ ಲೆಕ್ಕಗಳನ್ನು ತಯಾರುಮಾಡುವುದರಲ್ಲಿಯೂ ವಿಶೇಷ ಕೆಲಸ ನಡೆದಿದೆ. ವ್ಯಾಪಾರ ಸಂಬಂಧವಾದ ಸರ್ವವಸ್ತುಪ್ರದರ್ಶನ ಶಾಲೆಯೊಂದನ್ನು ಏರ್ಪಡಿಸುವುದಕ್ಕೆ ಆರಂಭಿಸಿದೆ.

ಮೈಸೂರು ಕಬ್ಬಿಣದ ಕಾರ್ಖಾನೆ.—ಸರ್ ಎಂ. ವಿಶ್ವೇಶ್ವರಯ್ಯನವರು 1917ನೆಯ ವರ್ಷದ ಏಪ್ರಿಲ್ ತಿಂಗಳಲ್ಲಿ ಈ ಸಭೆಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಬಾಬಾಬುಡನ್ ಬೆಟ್ಟದಲ್ಲಿ ದೊರೆಯುವ ಕಬ್ಬಿಣದ ಅದುರುಗಳಿಂದ ಕಬ್ಬಿಣವನ್ನು ತಯಾರುಮಾಡುವುದಕ್ಕೆ ನಡೆಸಿರುವ ಏರ್ಪಾಡುಗಳನ್ನು ವಿವರಿಸಿರುವರು. ಈ ಕೆಲಸವನ್ನು ಪ್ರಾರಂಭಿಸುವುದಕ್ಕೆ ವಿದೇಶಗಳಿಂದ ಯಂತ್ರಗಳನ್ನು ತರಿಸಲು ಇದ್ದ ತೊಂದರೆಯಿಂದ ತಡವಾಯಿತು. ಆದರೆ ಕಳೆದ ಏಪ್ರೆಲಿನಿಂದ ಈಚೆಗೆ ನೆಲವನ್ನು ಸಮಮಾಡುವುದು, ಕಟ್ಟಡಗಳನ್ನು ಕಟ್ಟುವುದು ಇವೇ ಮೊದಲಾದುದಕ್ಕೆ ಸೇರಿದ ಪ್ರಾಥಮಿಕ ಕಾಂಗಾರಿಗಳನ್ನು ಸಾಧ್ಯವಾದಷ್ಟು ತ್ವರಿತದಿಂದ ನಡೆಸುತ್ತಲಿದೆ. ಕಾರ್ಖಾನೆಗೆ ಬೇಕಾದ ಯಂತ್ರಗಳಲ್ಲಿ ಕೊಂಚಭಾಗವನ್ನು ಆಗಲೇ ತರಿಸಿಕೊಂಡಿದೆಯಲ್ಲದೆ ಈ ಕಾರ್ಖಾನೆಯ ಸ್ಥಾಪನೆಯ ಕೆಲಸವನ್ನು ಮುಗಿಸಿ ಕಬ್ಬಿಣ ಕರಗಿಸುವ ಕೆಲಸವನ್ನು 1921ನೆಯ ವರ್ಷದಲ್ಲಿ ಪ್ರಾರಂಭಿಸಬಹುದೆಂದು ನಿರೀಕ್ಷಿಸಿದೆ.

ಗಂಧದ ಎಣ್ಣೆಯ ಕಾರ್ಖಾನೆಗಳು.—ಗಂಧದ ಎಣ್ಣೆಯ ಕಾರ್ಖಾನೆಗಳ ಉತ್ಪತ್ತಿಯು ತೃಪ್ತಿಕರವಾಗಿತ್ತು. ಆದರೆ ಹಡಗಿನಲ್ಲಿ ಸಾಗಿಸುವುದಕ್ಕೆ ಇರುವ ತೊಂದರೆಗಳಿಂದ ಎಣ್ಣೆಯ ಮಾರಾಟಕ್ಕೆ ನಿರ್ಬಂಧ ಉಂಟಾಗಿದೆ. ಮತ್ತು ಅದರಿಂದ ಬಂದ ಉತ್ಪತ್ತಿಯು, ರೂಪಾಯಿಯ ಎಕ್ಸ್‌ಚೇಂಜ್ ಬೆಲೆಯ ದರವು ಅಸಾಧಾರಣವಾಗಿ ಹೆಚ್ಚಿದುದರಿಂದ, ಕಡಮೆಯಾಗಿದೆ.

ಪರಸ್ಪರ ಸಹಾಯಸಂಘಗಳು.—ಈ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡಿ, ಶಿವಮೊಗ್ಗ ಮತ್ತು ಮೈಸೂರು ಕಸಬಾಸ್ಥಳವಾಗಿ ಉಳ್ಳ ಇಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರುಗಳ ಚಾರ್ಜಿನಲ್ಲಿ ಎರಡು ಸಬಾರ್ಡಿನೇಟು ಕೋಆಪರೇಟಿವ್ ಡಿವಿಜನುಗಳನ್ನು ಏರ್ಪಾಡುಮಾಡಿದೆ.

ಈ ವರ್ಷದ ಅಖೈರಿನಲ್ಲಿ 90,000 ಮೆಂಬರುಗಳನ್ನೂ 75 ಲಕ್ಷ ರೂಪಾಯಿಗಳ ಬಂಡವಾಳವನ್ನೂ ಉಳ್ಳ 1,233 ಪರಸ್ಪರ ಸಹಾಯಸಂಘಗಳು ಕೆಲಸ ನಡೆಸುತ್ತಿದ್ದವು.

ವ್ಯವಸಾಯ ಮತ್ತು ಕೈಗಾರಿಕೆಗಳಲ್ಲಿ ಪರಸ್ಪರ ಸಹಾಯವು ನಿಧಾನವಾದದ್ದಾದರೂ ದೃಢವಾದ ಅಭಿವೃದ್ಧಿಯನ್ನು ತೋರಿಸುತ್ತಿದೆ. ಮತ್ತು ಸಾಲಕೊಡುವ ಸಂಘಗಳು (Credit Societies) ಗ್ರಾಮಾಂತರಗಳಲ್ಲಿ ಬೀಜ, ಗೊಬ್ಬರ ಮತ್ತು ವ್ಯವಸಾಯದ ಮುಟ್ಟುಗಳನ್ನು ಒದಗಿಸುವುದಕ್ಕಾಗಿ ಮುಂದಕ್ಕೆ ಬರುತ್ತಿವೆ. ಮೆಂಬರುಗಳಿಗೆ ಮತ್ತು ಮೆಂಬರಲ್ಲದವರಿಗೆ ಸಹ ಆಹಾರಪದಾರ್ಥಗಳನ್ನು ನ್ಯಾಯವಾದ ಬೆಲೆಗೆ ಮಾರಿ ಆಹಾರ ಧಾನ್ಯಗಳ ಸಂಬಂಧದ ದುಸ್ಥಿತಿಯನ್ನು ನಿವಾರಣೆಮಾಡುವುದರಲ್ಲಿಯೂ ಸಹ ಈ ಸಂಘಗಳು ಸಹಾಯಮಾಡುತ್ತಿವೆ.

ನೇಯಿಗೆ ಸಂಘಗಳಿಗೆ ಹಣ ಒದಗಿಸುವ ಬಗ್ಗೆ ರಿಜಿಸ್ಟ್ರಾರರವರ ವಶಕ್ಕೆ 50,000 ರೂಪಾಯಿಗಳನ್ನು ಕೊಡಲಾಯಿತು.

ಶ್ರೀಮನ್ ಯುವರಾಜರವರು ಹತ್ತು ಬಹುಮಾನಗಳನ್ನು ದಯಪಾಲಿಸಿರುವರು. ಇವುಗಳಲ್ಲಿ ಒಂದು ಶ್ರೀಮನ್ ಮಹಾರಾಜರವರ ಹೆಸರಿನಲ್ಲಿ ಅತ್ಯುತ್ತಮವಾದ ಕೈಗಾರಿಕೆಯ ಸಂಘಕ್ಕೆ, ಮತ್ತೊಂದು ಅತ್ಯುತ್ತಮವಾದ ವ್ಯವಸಾಯದ ಸಂಘಕ್ಕೆ, ಉಳಿದ ಎಂಟು, ಎಂಟು ಡಿಸ್ಟ್ರಿಕ್ಟುಗಳಲ್ಲಿ ಪ್ರತಿಯೊಂದರಲ್ಲಿನ ಅತ್ಯುತ್ತಮವಾದ ಕ್ರೆಡಿಟ್ ಯಾ ಸಾಲಕೊಡುವ ಸಂಘಕ್ಕೆ ಕೊಡಲಾಗಿವೆ. ಈ ಕ್ರಮದಿಂದ ಪರಸ್ಪರ ಸಹಾಯಸಂಘಗಳು ಸ್ಥಿರವಾದ ಬಂಡವಾಳದ ಮೇಲೆ ಕಷ್ಟಪಟ್ಟು ಕೆಲಸನಡೆಸುವುದಕ್ಕೆ ಅಮೂಲ್ಯವಾದ ಪ್ರೋತ್ಸಾಹವು ಉಂಟಾಗಿದೆ.

ರೇಷ್ಮೆಯ ವ್ಯವಸಾಯ.—ಮೈಸೂರು ದೇಶದಲ್ಲಿ ರೇಷ್ಮೆ ಕೈಗಾರಿಕೆಯು ತುಂಬಾ ಅಭಿವೃದ್ಧಿಗೆ ಸಾಧ್ಯವಾದದ್ದಾಗಿದೆ. ಹಿಪ್ಪೆನೇರಳೆಗಿಡದ ವ್ಯವಸಾಯವು ಈಚೀಚೆಗೆ ಹರಡುತ್ತಿದೆಯಲ್ಲದೆ ಹಿಂದೆ ಅದು ಗೊತ್ತೇ ಇಲ್ಲದ ತಾಲ್ಲೂಕುಗಳಲ್ಲಿ ಸಹ ಜಾರಿಗೆ ಬರುತ್ತಿದೆ. ರೋಗವಿಲ್ಲದ ಬೀಜಗಳನ್ನು ವೃದ್ಧಿಮಾಡುವುದಕ್ಕಾಗಿ ಬೇರೆ ಕ್ಷೇತ್ರಗಳನ್ನು ಏರ್ಪಡಿಸುವುದಕ್ಕೆ ರೇಷ್ಮೆವ್ಯವಸಾಯದ ಇಲಾಖೆಯವರು ಗಮನಕೊಡುತ್ತಲಿದಾರೆಯಲ್ಲದೆ, ಚನ್ನಪಟ್ಟಣ, ಮೈಸೂರು, ಕೋಲಾರ ಮತ್ತು ಚಿಕ್ಕಮಗಳೂರು ಇವುಗಳಿಂದ 1,27,000 ಒಳ್ಳೆಯ ಬೀಜ ಕೊಡುವ ಮೊಟ್ಟೆಗಳನ್ನು ಕೊಡಲಾಯಿತು. ನವೀನ ತರಹೆಯಲ್ಲಿ ರೇಷ್ಮೆನೂಲನ್ನು ತೆಗೆಯುವುದಕ್ಕೆ ಸರಿಯಾದ ಸಾಮಾನುಗಳನ್ನುಳ್ಳ ಒಂದು ಕಾರ್ಖಾನೆಯನ್ನು ಇಡುವ ವಿಷಯಕ್ಕೆ ಗಮನಕೊಡುತ್ತಲಿದೆ. ರೇಷ್ಮೆವ್ಯವಸಾಯದ ಸಾಮಾನ್ಯ ಅಭಿವೃದ್ಧಿಗಾಗಿ ಜಪಾನ್ ದೇಶದಿಂದ ರೇಷ್ಮೆವ್ಯವಸಾಯದ ನಿಪುಣರೊಬ್ಬರನ್ನು ಕರೆಸಿಕೊಂಡು ಮೊಕರರು ಮಾಡಿದೆ.

ಸ್ಥಳೀಯ ಪ್ರಜಾಧಿಕಾರ.

ತಾಲ್ಲೂಕು ಮತ್ತು ಡಿಸ್ಟ್ರಿಕ್ಟುಬೋರ್ಡುಗಳ ರಚನಾಕ್ರಮವನ್ನು 1918 ನೆಯ ವರ್ಷದ VI ನೆಯ ನಂಬರಿನ ಸ್ಥಳೀಯ ಬೋರ್ಡುಗಳು ಮತ್ತು ಗ್ರಾಮಪಂಚಾಯಿತಿಗಳ ರೆಗ್ಯುಲೇಷನ್ನಿನ ನಿಯಮಗಳಿಗನುಸಾರವಾಗಿ ವಿವರಿಸಲಾಯಿತು. ಮತ್ತು ಸದರಿ ಬೋರ್ಡುಗಳಲ್ಲಿ ಮುಖ್ಯವಾದ ಪಂಗಡಗಳ ಪ್ರತಿನಿಧಿಗಳು ಬರುವುದಕ್ಕೆ ತಕ್ಕಂತೆ ಅವಕಾಶ ಕೊಟ್ಟು ನಿಬಂಧನೆಗಳನ್ನು ಮಾಡಲಾಯಿತು. ಹೊಸ ರೆಗ್ಯುಲೇಷನ್ನಿನ ಮೇರೆಗೆ 858 ಗ್ರಾಮಪಂಚಾಯಿತಿಗಳನ್ನು ಪ್ರಕಟಿಸಲಾಯಿತು. ಹದಿನೈದು ತಾಲ್ಲೂಕು ಬೋರ್ಡುಗಳು ಸರ್ಕಾರಿ ನೌಕರರಲ್ಲದ ವೈಸ್‌ಪ್ರೆಸಿಡೆಂಟರನ್ನು ಚುನಾಯಿಸಿರುವುವು.

ರೆಗ್ಯುಲೇಷನ್ನಿಗೊಳಪಡದ ಮ್ಯುನಿಸಿಪಾಲಿಟಿಗಳು 1918 ನೆಯ ಜುಲೈ 1 ನೆಯ ತಾರೀಖಿನ ಲಾಗಾಯಿತು ನಿವೃತ್ತವಾದವು. ಮತ್ತು 1918 ನೆಯ ಜುಲೈ 1 ನೆಯ ತಾರೀಖಿನ ಲಾಗಾಯಿತು 2 ಸಿಟಿ ಯಾ ನಗರ, 29 ಟೌನ್, 71 ಮೈನರ್ ಮ್ಯುನಿಸಿಪಾಲಿಟಿಗಳನ್ನು ಏರ್ಪಡಿಸಿದ್ದಾಯಿತು. ಎಲ್ಲಾ ಪಂಗಡಗಳ ಪ್ರತಿನಿಧಿಗಳೂ ಬರಲು ಅವಕಾಶ ಕೊಡುವ ಹಾಗೆ ಮ್ಯುನಿಸಿಪಾಲಿಟಿಗೆ ಮೆಂಬರನ್ನು ಚುನಾಯಿಸುವ ಹಕ್ಕನ್ನು ಹೆಚ್ಚು ಮಂದಿಗೆ ಕೊಡುವ ಉದ್ದೇಶದಿಂದ ಈ ಬಗ್ಗೆ ತಿದ್ದುಪಾಟಾದ ನಿಬಂಧನೆಗಳನ್ನು ಸಾದರ್ಮಾಡಲಾಯಿತು. ಅನೇಕ ಟೌನ್ ಮತ್ತು ಮೈನರ್ ಮ್ಯುನಿಸಿಪಲ್ ಕೌನ್ಸಿಲುಗಳಿಗೆ ತಮ್ಮ ಸ್ವಂತ ವೈಸ್‌ಪ್ರೆಸಿಡೆಂಟರನ್ನು ಚುನಾಯಿಸಿಕೊಳ್ಳಲು ಅಪ್ಪಣೆ ಕೊಡಲಾಯಿತು.

ಸರ್ ಎಂ. ವಿಶ್ವೇಶ್ವರಯ್ಯನವರ ಆಡಳಿತವು ಮೈಸೂರು ಸೀಮೆಯಲ್ಲಿನ ಕೈಗಾರಿಕೆ ಮತ್ತು ವಿದ್ಯಾಸಂಬಂಧವಾದ ವ್ಯವಹಾರಗಳನ್ನು ಅಭಿವೃದ್ಧಿಪಡಿಸಲು ಮಾಡಿದ ಸಾಹಸಿಕವಾದ ಪ್ರಯತ್ನವಾಗಿದೆ. ಈ ದೇಶದ ಜನರು ತೀವ್ರವಾದ ದಾರಿದ್ರ್ಯವನ್ನು ಅನುಭವಿಸುತ್ತಾ ಸರ್ವಪ್ರಕಾರದಲ್ಲಿಯೂ ಅಸಮರ್ಥರಾಗಿರುವುದನ್ನು ನೋಡಿ ಅವರು ವ್ಯಥಿಸುತ್ತಿದ್ದುದನ್ನು ಪಾಶ್ಚಾತ್ಯದೇಶಗಳಲ್ಲಿಯೂ ಬ್ರಿಟಿಷ್ ಸಾಮ್ರಾಜ್ಯದಿಂದ ಅನುಗ್ರಹೀತವಾದ ಕಾಲನಿಗಳಲ್ಲಿಯೂ ಇರುವ ಅಧಿಕ ಭಾಗ್ಯಶಾಲಿಗಳಾದ ಜನರ ಸ್ಥಿತಿಗತಿಗಳೊಡನೆ ನಮ್ಮ ದೇಶದ ಜನಗಳ ಸ್ಥಿತಿಗತಿಗಳನ್ನು ಅವರು ಪುನಃಪುನಃ ಬೇಸರಗೊಳ್ಳದೆ ಹೋಲಿಸುತ್ತಿದ್ದದ್ದನ್ನು ಈ ಸಭೆಯಲ್ಲಿ ನಾವೆಲ್ಲರೂ ಮತ್ತೆಮತ್ತೆ ಕೇಳಿದ್ದೇವೆ. ಜನರ ಆರ್ಥಿಕಸಮೃದ್ಧಿಯೂ ಅವರ ವಿದ್ಯಾರ್ಜನಕ್ಕೆ ಅನುಕೂಲ್ಯಸಂಪತ್ತಿಗಳನ್ನು ಹೆಚ್ಚಿಸುವುದೂ ಅವರ ಕರ್ತವ್ಯದ ತತ್ವವಾಗಿತ್ತು. ಇದಕ್ಕಾಗಿ ಅವರು, ತಮ್ಮ ಪೂರ್ವಾಧಿಕಾರಿಗಳು ಶೇಖರಿಸಿದ್ದ ಸಮಸ್ತ ಸಹಾಯ ಸಂಪತ್ತಿಯನ್ನೂ ಸಂಸ್ಥಾನದ ಬಂಡವಾಳದ ಐಶ್ವರ್ಯವನ್ನು ಹೆಚ್ಚಿಸಲು ತಾವು ಮಾಡಿದ ಪ್ರಯತ್ನಗಳಲ್ಲಿ ಸಮಗ್ರವಾಗಿ ಪ್ರಯೋಗಿಸಿದರು.

ನಾವು ಹಿಂದೆಯೇ ಹೇಳಿರುವಂತೆ ಪ್ರಕೃತದ ಆಡಳಿತಕ್ಕೆ ಬೇಕಾದ ಧನಕ್ಕೆ ತೊಂದರೆಪಡದೆ ಇರಬೇಕಾದರೆ ಶೇಖರಿಸಿರುವ ದ್ರವ್ಯಾವಶೇಷವನ್ನು ಇನ್ನು ಕಡಮೆ ಮಾಡಕೂಡದಾಗಿದೆ. ಆದರೆ ಇದುವರೆಗೆ ಏರ್ಪಟ್ಟಿರುವ ಬಂಡವಾಳದ ಖರ್ಚಿನಲ್ಲಿ ಹೆಚ್ಚು ಭಾಗವನ್ನು ನಿಲ್ಲಿಸುವುದೂ ಕೂಡ ಹೇಗೆ ಅಸಾಧ್ಯವಾಗಿದೆ. ಅದ್ದರಿಂದ ನಮ್ಮ ಸಂಸ್ಥಾನದಲ್ಲಿ ಈಗಲೇ ಮೊದಲಿಸಲಕ್ಕೆ ನಮ್ಮ ಬಂಡವಾಳದ ಕಾರ್ಯಕ್ರಮವನ್ನು ನೆರವೇರಿಸಬೇಕಾದರೆ ಹೆಚ್ಚು ಮೊಬಲಗನ್ನು ಸಾಲವಾಗಿ ತೆಗೆದುಕೊಳ್ಳುವ ಜರೂರಾತಿಯು ಬಂದೀತಾಗಿದೆ. ಅದ್ದರಿಂದ ಸಾಲವಾಗಿ ತೆಗೆದುಕೊಂಡ ದ್ರವ್ಯಕ್ಕೆ ಖಂಡಿತವಾಗಿ ಪ್ರತಿಫಲವನ್ನು ಕೊಡುವಂತೆ ಕಾಣಬರದ ಕೆಲಸಗಳಲ್ಲಿ ಹಣವನ್ನು ಖರ್ಚು ಮಾಡದೆ ಇರುವುದಕ್ಕಾಗಿ ಈ ಬಂಡವಾಳದ ಕೆಲಸಗಳ ಪಟ್ಟಿಯನ್ನು ಅತ್ಯಂತ ಜಾಗ್ರತೆಯಿಂದ ಸಾಧ್ಯವಾದಷ್ಟುಮಟ್ಟಿಗೂ ಪರಿಶೀಲಿಸಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಇದು ಅವಶ್ಯಕವೆನ್ನುವುದಕ್ಕೆ ಇನ್ನೂ ಒಂದು ಕಾರಣವುಂಟು. ಇರುವ ಮಾತನ್ನು ಹೇಳುವುದಾದರೆ, ಹಿಂದೆ ಲಾಭಪ್ರದವೆಂದು ತಿಳಿದಿದ್ದ ಕಾರ್ಯಗಳಿಗಾಗಿ ನಾವು ಮಾಡಿದ ಖರ್ಚು, ಮೊದಲು ನಾವು ಭಾವಿಸಿದ್ದಂತೆ ಪ್ರತಿಫಲವನ್ನು ಕೊಡಲಿಲ್ಲವೆಂದು ಒಪ್ಪಿಕೊಳ್ಳಬೇಕಾಗಿದೆ.—ಅಲ್ಲದೆ ಈಗ ತಾನೇ ಪ್ರಕಟಿಸಿದ ಫೈನಾನ್ಷಿಯಲ್ ರಿವ್ಯೂವನ್ನು ನೋಡಿದರೆ ಹುಟ್ಟುವಳಿಯ ಸಾಧಾರಣ ಭಾಗಗಳಿಂದ ಪ್ರಾಪ್ತವಾಗಬಹುದಾದ ಹೆಚ್ಚು ವರಿಯು 31 ಲಕ್ಷ ರೂಪಾಯಿಗಳಾಗಿರುವಲ್ಲಿ ಫಲದಾಯಕವಾದ ಕಾರ್ಯಗಳಿಂದ ಕೆಲವು ವರ್ಷಗಳವರೆಗೂ ಲಭ್ಯವಾಗುವ ಹುಟ್ಟುವಳಿಯಲ್ಲಿ ಪ್ರತಿವರ್ಷವೂ ಹೆಚ್ಚುವ ಭಾಗವು 1·63 ಲಕ್ಷ ರೂಪಾಯಿಗಳು ಮಾತ್ರ ಆಗುವುದೆಂದು ಅಂದಾಜಾಗಿರುವ ವಿಷಯವು ನಿಮಗೆ ತಿಳಿಯಬರುವುದು.

ಅನೇಕ ವರುಷಗಳವರೆಗೂ ನಮ್ಮ ಬಂಡವಾಳಕಾರ್ಯಗಳಿಂದ ಸರಿಯಾದ ಉತ್ಪನ್ನವಿರಲಾರದೆಂಬುದೂ ಆದರೂ ಹುಟ್ಟುವಳಿ ಮತ್ತು ಖರ್ಚು ಬಾಬುಗಳಿಗೆ ಸಮಸ್ಥಿತಿಯನ್ನು ಪುನಃಸ್ಥಾಪಿಸಬೇಕಾದರೆ ಹುಟ್ಟುವಳಿಯನ್ನು ಹೆಚ್ಚಿಸಬೇಕಾದ್ದು ಪಕ್ಷತದಲ್ಲಿ ಅತ್ಯವಶ್ಯಕವೆಂಬುದೂ ಮಿ॥ ಬ್ಯಾನರ್ಜಿಯವರಿಂದ ಪ್ರಾರಂಭಿಸಲ್ಪಟ್ಟ ನಮ್ಮ ಕೋಶದ ಈಗಿನ ಸ್ಥಿತಿಯನ್ನು ಜಾಗರೂಕತೆಯಿಂದ ಪರಿಶೀಲಿಸಿರುವ "ಫೈನಾನ್ಷಿಯಲ್ ರಿವ್ಯೂ ಮತ್ತು ಫೋರ್‌ಕ್ಯಾಸ್ಟ್" ಎಂಬ ಪತ್ರದಿಂದ ವ್ಯಕ್ತಪಡುತ್ತದೆ. ಎಕ್ಸ್‌ಛೇಂಜ್ ದರ ಹೆಚ್ಚಿದ್ದರಿಂದಲೂ ಭಂಗಾರನಾಣ್ಯಗಳಲ್ಲಿ ಬರುವ ಹುಟ್ಟುವಳಿಯು ತನ್ನೂಲಕ ಕಡಿಮೆಯಾದ್ದರಿಂದಲೂ ಸದ್ಯದಲ್ಲಿನ ಸ್ಥಿತಿಯು ಈ ಸರ್ಕಾರಿ ಸಾಲಿನ ಅದಿಭಾಗ ಎಂದರೆ ಹೋದ ಜುಲೈಯಲ್ಲಿದ್ದದ್ದಕ್ಕಿಂತಲೂ ಬೀಳಾಗಿದೆ. ಭಂಗಾರನಾಣ್ಯದ ಬೆಲೆಯು ಕಡಿಮೆಯಾದ್ದರಿಂದ ಈ ವರುಷದಲ್ಲಿ ಈ ಮೂಲಕವಾಗಿ ಹುಟ್ಟುವಳಿಯು ಅಂದಾಜಿಗಿಂತ 15 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗುವುದೆಂದು ತೋರುತ್ತದೆ. ಬರುವ ಕೆಲವು ವರುಷಗಳವರೆಗೂ ಅತ್ಯವಶ್ಯಕವಾದ ಖರ್ಚಿನ ದರ್ಜೆಯನ್ನು ಹೋಲಿಸಿನೋಡಿದರೆ ಸಾಲಿಯಾನಾ ಹುಟ್ಟುವಳಿಯು ಖರ್ಚಿಗಿಂತ ಸುಮಾರು 20 ಲಕ್ಷದಷ್ಟು ಕಮ್ಮಿಯಾಗುವಂತಿದೆ.

ಅದ್ದರಿಂದ ಫೈನಾನ್ಷಿಯಲ್ ಸ್ಥಿತಿಯಲ್ಲಿ ಸಾಮ್ಯವನ್ನು ಪುನಃ ಏರ್ಪಡಿಸುವುದಕ್ಕೆ ಅನುಕೂಲವಾಗುವ ಅಂಶಗಳನ್ನು ಈಗ ಸದ್ಯದಲ್ಲಿ ಯೋಚಿಸಬೇಕಾದದ್ದು ಸರ್ಕಾರದವರ ಅತ್ಯಂತ ಜರೂರಾದ ಕರ್ತವ್ಯವಾಗಿದೆ. ಈಗಿರುವ ತೆರಿಗೆಯ ಜೊತೆಗೆ ಪುನಃ ತೆರಿಗೆ ಹಾಕದೇಯಿದ್ದರೆ ನಿರ್ವಾಹವಿಲ್ಲವಾಗಿದೆ. ಜನರ ವಿದ್ಯಾ ಮತ್ತು ಕೈಗಾರಿಕೆಗಳ ವಿಚಾರದಲ್ಲಿ ಹಿಂದಿರುಗಿ ಹೋಗದೇ ಇರಬೇಕಾದರೆ ಇಷ್ಟಕ್ಕೇ ನಿಲ್ಲಿಸಕೂಡದಾಗಿರುವುದರಿಂದ ಅವುಗಳ ಅಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಬಿಡದೆ ನಡೆಸಿಕೊಂಡು ಬರುವುದು ಅವಶ್ಯಕವಾಗಿರುವುದು. ನಮ್ಮ ಜನಗಳಲ್ಲಿ ಮುಖಂಡರಾದ ದೇಶಸೇವಾಸಕ್ತರರು ಸರ್ಕಾರದವರು ಪ್ರಯಾಸದಿಂದ ಅಂಗೀಕರಿಸಬೇಕಾಗಿರುವ ಏರ್ಪಾಡುಗಳಿಗೆ ಒಪ್ಪುವಂತೆ ಮಾಡುವರೆಂದೂ ಅವರು ಮನಃಪೂರ್ವಕವಾಗಿ ಈ ಏರ್ಪಾಡುಗಳಲ್ಲಿ ತಮ್ಮ ಸಹಾಯದನ್ನು ಕೊಟ್ಟಾರೆಂದೂ ಸರ್ಕಾರದವರು ನಂಬಿದಾರೆ.

ಅದ್ದರಿಂದ ಸರ್ಕಾರದವರು ಇನ್‌ಕಂಟ್ಯಾಕ್ಸ್ ಬಿಲ್ಲನ್ನು ಜಾರಿಯಲ್ಲಿ ತರಬೇಕೆಂಬ ತಮ್ಮ ಉದ್ದೇಶವನ್ನು ಮತ್ತೊಂದಾವರ್ತಿ ಸೂಚಿಸುತ್ತಾರೆ. ಅದು ಹೋದ ಏಪ್ರಿಲ್ ತಿಂಗಳಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ಪ್ರವರ್ತಿಸಲ್ಪಟ್ಟದ್ದು ಸಂಸ್ಥಾನದ ಫೈನಾನ್ಸ್‌ಗಳ ವಿಚಾರದಲ್ಲಿ ತಯಾರಾಗುವಂತೆ ನಿರ್ಧರವಾದ ಮೆಮೋರಾಂಡಮ್ಮಿನ ನಿರೀಕ್ಷಣೆಯಲ್ಲಿ ಇಲ್ಲಿಯವರೆಗೂ ಸಾವಕಾಶ ಮಾಡಲ್ಪಟ್ಟಿದೆ. ಪ್ರೈಮರಿ ವಿದ್ಯಾಭ್ಯಾಸಕ್ಕಾಗುವ ಖರ್ಚಿನಲ್ಲಿ ಹೆಚ್ಚಾದ ಭಾಗವನ್ನು ಸ್ಥಳೀಯ ಸಂಸ್ಥೆಯವರು ಹೊರಬೇಕಾಗಿರುವುದರಿಂದ ಜಮೀನ್ ಹುಟ್ಟುವಳಿಯಲ್ಲಿ ರೂಪಾಯಿ ಒಂದಕ್ಕೆ ಅರ್ಧಾಣೆಗೆ ಹೆಚ್ಚದಂತೆ ವಿದ್ಯಾಭ್ಯಾಸದ ತೆರಿಗೆಯೊಂದನ್ನು ಹಾಕುವುದಕ್ಕೆ ಅವರಿಗೆ ಅಧಿಕಾರ ಕೊಡುವಂತೆ ಸೂಚಿತವಾಗಿದೆ.

ಸಾಧ್ಯವಾದ ಕಡೆಗಳಲ್ಲೆಲ್ಲಾ ಖರ್ಚುಭಾಗವನ್ನು ಖಂಡಿಸುವ ಉದ್ದೇಶದಿಂದ ಹಾಲಿ ನಡಿಯುತ್ತಿರುವ ಖರ್ಚನ್ನು ನ್ಯಾಯವಾಗಿ ಪರೀಕ್ಷಿಸಕೂಡದೆಂದು ಸರ್ಕಾರದವರ ಅಭಿಪ್ರಾಯವಲ್ಲವೆಂದು ಇಲ್ಲಿ ನಾವು ಹೇಳಬಹುದು. ಅಷ್ಟೆ ಅಲ್ಲದೆ, ಅಂತಹ ಪರೀಕ್ಷೆಯನ್ನು ಸರ್ಕಾರಿ ನೌಕರರಲ್ಲದವರ ಸಹಾಯದಿಂದ ನಡೆಸಬೇಕೆಂಬ ವಿಷಯದಲ್ಲಿ ಸರ್ಕಾರದವರಿಗೆ ಮನಸ್ಸಿಲ್ಲದೇ ಇಲ್ಲ. ನಾವೂ ಕೂಡ ಖರ್ಚುಭಾಗವನ್ನು ಕಡಿಮೆ ಮಾಡುವುದಕ್ಕೆ ಬರುವ ಸಮಸ್ತವಾದ ಸೂಚನೆಗಳನ್ನೂ ಆದರದಿಂದ ಸ್ವೀಕಾರಮಾಡಿ, ಅವುಗಳ ಅವಲಂಬನದಿಂದ ಶ್ರೀಮನ್ಮಹಾರಾಜರವರ ಆಡಳಿತವೂ ರಾಜ್ಯಸ್ಥಿತಿಯ ಅಭಿವೃದ್ಧಿಯ ಭರವಸೆಯೂ ಕುಂದದೇ ಇರುವುದಾದರೆ ಅವುಗಳಿಗೆ ನಮ್ಮ ಸಂಪೂರ್ಣವಾದ ಒತ್ತಾಸೆಯನ್ನು ಕೊಡುವದಾಗಿ ನಿರ್ಧರದಿಂದ ಹೇಳುತ್ತೇವೆ. ಶ್ರೀಮನ್ಮಹಾರಾಜರವರ ಸರ್ಕಾರದ ಆಫೀಸರರಂತೆಯೇ ಜನಗಳ ಪರವಾದ ದೇಶವತ್ಸಲರಿಗೂ ಕೂಡ ಆಡಳಿತವು ವಿಚಕ್ಷಣವಾಗಿರಬೇಕೆಂಬ ಅವಶ್ಯಕತೆಯು ಮನಸ್ಸಿನಲ್ಲಿರುವುದೇ ಅಲ್ಲದೆ ಖಾವಂದರವ ಪ್ರಜೆಗಳ ಸ್ಥಿತಿಗತಿವ್ಯವಹಾರಗಳನ್ನು ಶಕ್ಯವಾದಷ್ಟು ಅಭಿವೃದ್ಧಿಪಡಿಸುವುದೇ ತಮ್ಮ ಕರ್ತವ್ಯವಾಗಿ ಅವರು ತಿಳಿದಿರುವರೆಂದೂ ನಾವು ನಿಶ್ಚಯಿಸಿರುವೆವು. ಸರ್ಕಾರಿ ನೌಕರರೂ ನೌಕರರಲ್ಲದವರೂ ಈ ವಿಷಯಗಳಲ್ಲಿ ಸರಳವಾಗಿಯೂ ನಿಷ್ಕಪಟವಾಗಿಯೂ ಚರ್ಚೆಮಾಡುವುದರಿಂದ ಪ್ರತಿಯೊಬ್ಬರೂ ತಮ್ಮ ಶಕ್ತ್ಯನುಸಾರ ಸರ್ವಜನೋಪಯೋಗಕ್ಕಾಗಿ ತಮ್ಮತಮ್ಮ ಕರ್ತವ್ಯಾಂಶಗಳನ್ನು ಮನಃಪೂರ್ವಕವಾಗಿ ವಹಿಸಲು ಅನುಕೂಲವಾಗುವುದೆಂಬ ನಂಬಿಕೆಯು ನಮಗಿದೆ.

ಕೈಗಾರಿಕೆಯ ಮತ್ತು ವ್ಯಾಪಾರದ ಅಭಿವೃದ್ಧಿ.

ಇಂಡಿಯನ್ ಇಂಡಸ್ಟ್ರಿಯಲ್ ಕಮಿಷನ್‌ರವರು ಮಾಡಿರುವ ಶಿಫಾರಸ್ಸುಗಳು ಬಹಳಮಟ್ಟಿಗೆ ಕಳೆದ ಆರುವರುಷಗಳಲ್ಲಿ ನಮ್ಮ ಸರ್ಕಾರದವರು ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಅವಲಂಬಿಸಿದ ಕಾರ್ಯತತ್ವದಲ್ಲಿ ಅಡಗಿವೆ. ಇಂಡಿಯಾದೇಶದಲ್ಲಿ ಪ್ರತಿಯೊಂದು ಮೇಜರ್ ಪ್ರಾವಿನ್ಸಿನಲ್ಲೂ ಸಮಸ್ತ ಸಲಕರಣೆಗಳಿಂದ ಒಪ್ಪಿದ ಕೈಗಾರಿಕೆ ಇಲಾಖೆಯೊಂದಿದೆ. ಮತ್ತು ಈಗ ಕೈಗಾರಿಕೆಯ ಅಭಿವೃದ್ಧಿಗೆ ಉತ್ತೇಜನ ಕೊಡುವುದು ಸರ್ಕಾರದ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆಯೆಂದು ಚೆನ್ನಾಗಿ ನಿರ್ಣಯಿಸಲ್ಪಟ್ಟಿದೆ.

ಎಕನಾಮಿಕ್ ಕಾನ್ಫರೆನ್ಸಿನ ಪ್ರತಿಷ್ಠೆಯಿಂದ ವಾಣಿಜ್ಯ ಮತ್ತು ಕೈಗಾರಿಕೆಗಳ ವಿಷಯಗಳಲ್ಲಿ ಚರ್ಚೆ ನಡೆಸಲು ಬೇಕಾದಷ್ಟು ಪ್ರೋತ್ಸಾಹವು ಕೊಡಲ್ಪಟ್ಟಿತು. ಮತ್ತು ಯುದ್ಧದಿಂದ ಎಲ್ಲಾ ಕೈಗಾರಿಕೆಯ ವ್ಯವಹಾರಗಳಿಗೂ ಪ್ರಾಪ್ತವಾದ ನಿರ್ಬಂಧಗಳಿಲ್ಲದಿದ್ದರೆ ಕೈಗಾರಿಕೆ ಸಂಬಂಧವಾದ ಉದ್ಯಮಗಳಲ್ಲಿ ಈಗ ಕಾಣುವುದಕ್ಕಿಂತ ಚನ್ನಾಗಿರುವ ಅಭಿವೃದ್ಧಿಯನ್ನು ನಾವು ನೋಡುತ್ತಿದ್ದೆವೆಂಬ ವಿಷಯದಲ್ಲಿ ಅನುಮಾನವೇನೂ ಇರಲಾರದು. ಹೀಗಿದ್ದರೂ ನಿರ್ವಹಿಸಲ್ಪಟ್ಟಿರುವ ಕಾರ್ಯದಲ್ಲಿ ಅದೂ ಕಣ್ಣೆದುರಿಗೆ ಇರುವಾಗ ನಾವು ಅತೃಪ್ತರಾಗಿರಲು ತಕ್ಕ ಕಾರಣವೇನೂ ಇಲ್ಲ. ವಾಣಿಜ್ಯವನ್ನು ಹೆಚ್ಚಿಸುವುದರಲ್ಲಿ ಮೈಸೂರು ಬ್ಯಾಂಕು ಕೊಡುತ್ತಿರುವ ಸಹಾಯ ಸಂಪತ್ತಿಯು ಅದನ್ನು ಸ್ಥಾಪಿಸುವುದಕ್ಕೆ ಸರ್ಕಾರದವರು ಮಾಡಿರುವ ಸರ್ವಸಹಾಯವನ್ನು ನ್ಯಾಯವಾಗಿ ತೋರಬೇಕಾದ್ದಕ್ಕಿಂತಲೂ ಹೆಚ್ಚಾಗಿಯೇ ಸಾರ್ಥಕಪಡಿಸಿದೆ. ಯುದ್ಧದ ಪ್ರತ್ಯಕ್ಷಫಲವಾದ ಗಂಧದಮರದ ಎಣ್ಣೆ ಕಾರಖಾನೆಯು ಯುದ್ಧದ ದಿನದಲ್ಲಿ ಬಹಳಮಟ್ಟಿಗೆ ನಷ್ಟವಾಗುವುದೆಂಬ ಭಯಕ್ಕೆ ಆಕರವಾಗಿದ್ದ ಅಮೂಲ್ಯವಾದ ಹುಟ್ಟುವಳಿ ಬಾಬನ್ನು ಕಾಪಾಡಿದ್ದೇ ಅಲ್ಲದೆ ದೇಶೀಯ ಕಾಲೇಜುಗಳಲ್ಲಿ ತರಬಿಯತ್ತನ್ನು ಹೊಂದಿದ ರಸಾಯನ ಶಾಸ್ತ್ರಜ್ಞರ ಸಹಾಯದಿಂದ ಅತ್ಯಂತ ಶುದ್ಧವಾದದ್ದೂ ಔಷಧಗಳಿಗೆ ಉಪಯೋಗವಾದದ್ದೂ ಆದ ಎಣ್ಣೆಯನ್ನು ತಯಾರುಮಾಡುವ ರಸಾಯನ ಕೈಗಾರಿಕೆಯನ್ನು ನಾವೇ ಮಾಡುವುದು ಸಾಧ್ಯವೆಂದು ವ್ಯಕ್ತಪಡಿಸಿದೆ. ಈಗ ಕೈಗಾರಿಕೆಗಳ ಇಲಾಖೆಯು ನಡಿಸಿಕೊಂಡು ಬರುವ ಸಾಬೂನಿನ ಮತ್ತು ಲೋಹದ ಕಾರಖಾನೆಗಳು ಸಫಲವಾದ ವಾಣಿಜ್ಯವ್ಯವಹಾರಗಳಿಗಾಗಿ ಕಾಣಬರುತ್ತವೆ. ಸರ್ಕಾರದವರಿಂದ ಮೈಸೂರು ಟ್ಯಾನರಿಗೆ ಕೊಡಲ್ಪಟ್ಟ ದ್ರವ್ಯಸಹಾಯವು ಅದನ್ನು ಅಭಿವರ್ಧಕವಾದ ಅಸ್ತಿಭಾರದಮೇಲೆ ಸ್ಥಾಪಿಸುವುದರಲ್ಲಿ ಬಹಳಮಟ್ಟಿಗೆ ಉಪಯೋಗವಾಯಿತೆಂಬ ಅಂಶವು ಈಗ ತೋರಿಬಂದಿದೆ. ಮತ್ತು ಕೈಗಾರಿಕೆಯ ಇಲಾಖೆಯಿಂದ ದೇಶೀಯ ಸಿಂಡಿಕೇಟು ಒಂದಕ್ಕೆ ಕೊಂಚಕಾಲ ಅಲ್ಲಿ ಕೆಲಸಮಾಡಲು ಕಳುಹಲ್ಪಟ್ಟ ಒಬ್ಬ ಆಫೀಸರ ಮೆಹನತ್ತಿನಿಂದ ಬಹಳಮಟ್ಟಿಗೆ ವ್ಯಾಪಾರದಲ್ಲಿ ಉಪಯೋಗಪಡುವ ಕಲ್ನಾರಿನ ಸಂಬಂಧವಾದ ಅನೇಕ ಪದಾರ್ಥಗಳನ್ನು ತಯಾರುಮಾಡುವ ಕಾರಖಾನೆಯು ಸ್ಥಾಪಿಸಲ್ಪಡುವದೆಂಬ ಭರವಸೆಯು ಇದೆ.

ನಮ್ಮ ಪ್ರಯತ್ನಗಳು ಸಫಲವಾಗಿರುವುದು ಮಹಾ ಉದ್ಯೋಗಗಳಲ್ಲಿ ಮಾತ್ರವೇ ಅಲ್ಲ; ನಮ್ಮ ಜನರಿಗೆ ದೇಹ ಪರಿಶ್ರಮವನ್ನು ತಪ್ಪಿಸುವ ಯಂತ್ರಗಳು ಪ್ರತಿನಿತ್ಯವೂ ಅವರ ಕಣ್ಣಿಗೆ ಬೀಳುವಂತೆ ಅನೇಕ ಚಿಕ್ಕ ಕೈಗಾರಿಕೆಯ ಸಂಬಂಧವಾದ ಸಣ್ಣ ಕಾರ್ಖಾನೆಗಳು ಪ್ರತಿಷ್ಠಿಸಲ್ಪಟ್ಟಿವೆ. ವಿದ್ಯುಚ್ಛಕ್ತಿಯ ದರಗಳನ್ನು ಕಮ್ಮಿಮಾಡಿದ್ದರಿಂದ ಬೆಂಗಳೂರಿನಲ್ಲಿಯೂ ಮೈಸೂರಿನಲ್ಲಿಯೂ ಅನೇಕ ಚಿಕ್ಕ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಅಧಿಕವಾಗಿ ಉತ್ತೇಜನವು ಉಂಟಾಗಿದೆ. ಮತ್ತು ಕೈಗಾರಿಕೆಯ ಅಭಿವೃದ್ಧಿಗಾಗಿ ಉತ್ತಮವಾದ ಏರ್ಪಾಡುಗಳನ್ನು ಆರಂಭಿಸುವುದಕ್ಕೆ ಅವಶ್ಯಕವಾದ ಕೈಗಾರಿಕೆಯ ಅಭಿರುಚಿಯು ಸರ್ವತೋಮುಖವಾಗಿ ವ್ಯಾಪಿಸುವಂತೆ ಸ್ಥಿರವಾಗಿ ನಿರ್ಮಿಸಲ್ಪಟ್ಟಿದೆ.

ಮಹಾಶಯರೇ, ಬೊಂಬಾಯಿ ಪಟ್ಟಣದ ಕಾರ್ಖಾನೆಗಳ ನಫೆಯು ಇಂಡಿಯಾದೇಶದ ಕಬ್ಬಿಣದ ಮತ್ತು ಉಕ್ಕಿನ ಕೈಗಾರಿಕೆಗಳಿಗೆ ಆಧಾರಭೂತವಾಯಿತೆಂಬುದು ಸಕಲರಿಗೂ ತಿಳಿದ ವಿಷಯವಾಗಿದೆ. ಆಧುನಿಕ ಲೋಹಶೋಧನಾ ಕ್ರಮಗಳಿಗೆ ಬೇಕಾದ ಭಾರೀ ಬಂಡವಾಳಗಳನ್ನು ಒದಗಿಸಿದ್ದು ಈ ದೊಡ್ಡ ಪಶ್ಚಿಮಾಧಿಪತ್ಯದ ವ್ಯಾಪಾರಾಭಿವೃದ್ಧಿಯೇ ಸರಿ. ಆದುದರಿಂದ ವ್ಯಾಪಾರದ ನಫೆಯು ನಮ್ಮ ದೇಶದಲ್ಲಿಯೇ ಉಳಿಯುವಂತೆ ಸಂಸ್ಥಾನದ ವ್ಯಾಪಾರವನ್ನು ಮೈಸೂರುದೇಶದ ವರ್ತಕರು ವಶಪಡಿಸಿಕೊಳ್ಳುವ ಹಾಗೆ ಮಾಡುವುದಕ್ಕೆ ನಮ್ಮ ಕೈಯಲ್ಲಿರುವ ನ್ಯಾಯವಾದ ಎಲ್ಲಾ ಉಪಾಯಗಳನ್ನೂ ಅವಲಂಬಿಸುವುದೂ ವ್ಯಾಪಾರವನ್ನು ಅಭಿವೃದ್ಧಿಪಡಿಸುವುದೂ ಅವಶ್ಯಕವಾಗಿದೆ. ಈ ವರ್ಷ ಆರಂಭಿಸಬೇಕೆಂದಿರುವ ನಂಜನಗೂಡು—ಈರೋಡು ರೈಲ್ವೆಯು ಸಂಪೂರ್ಣವಾದರೆ ಬೊಂಬಾಯಿ ಮತ್ತು ದಕ್ಷಿಣ ಇಂಡಿಯಾದ ಭಾರೀ ವ್ಯಾಪಾರಸ್ಥಳಗಳ ನೀದಾದಾರಿಯಲ್ಲಿ ನಮ್ಮ ಸಂಸ್ಥಾನವನ್ನು ಇರಿಸಿ ಹೆಚ್ಚು ವ್ಯಾಪಾರಕ್ಕೆ ದಾರಿ ಕೊಡುತ್ತದೆಂಬುದನ್ನು ವಿವರಿಸಿ ಹೇಳಬೇಕಾದ್ದಿಲ್ಲ.

ಯುದ್ಧಕ್ಕೆ ಮದ್ದುಗುಂಡುಗಳನ್ನು ಒದಗಿಸುವುದಕ್ಕೆ ಸಂಬಂಧಪಟ್ಟ ಕೆಲಸಗಳು ಇಂಡಿಯಾದೇಶದಲ್ಲಿ ಅನೇಕ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ಕೊಟ್ಟಿವಲ್ಲದೆ ಇನ್ನೂ ಅವಕಾಶಕೊಡುತ್ತಲಿವೆ. ಅನೇಕ ವಿಷಯಗಳಮೇಲೆ ಪ್ರವೀಣರ ಅಭಿಪ್ರಾಯವೂ ಕಾರ್ಯದ ಅನುಭವವೂ ಈಗ ಸುಲಭವಾಗಿ ದೊರಕುವುದಲ್ಲದೆ, ಸ್ಥಳದಲ್ಲಿ ತಯಾರಾದ ಸಾಮಾನುಗಳ ಮೇಲಿನ ಅನಾದರಣೆಯು ಕಡಮೆಯಾಗುತ್ತಲಿದೆ. 'ಇಂಡಿಯಾದೇಶದ ಮುಂದಣ ಕೈಗಾರಿಕೆಯ ಅಭಿವೃದ್ಧಿಯು ಕೇವಲ ಭರವಸೆಯಿಂದ ತುಂಬಿದ್ದಾಗಿದೆ ಮತ್ತು ಮೈಸೂರು ಸೀಮೆಯಲ್ಲಿ ನಾವು ಸಂಪದಭ್ಯುದಯ ಸಮಾಜದ ಏರ್ಪಾಡುಗಳಿಂದ ಇಂಥಾ ಅಭಿವೃದ್ಧಿಗೆ ಆಗಲೇ ಹೆಚ್ಚುತ್ತಿರುವ ಅಭಿಲಾಷೆಯುಳ್ಳವರಾಗಿರುವುದರಿಂದ ಭರವಸೆಯ ಆ ಸುದಿನವು ಖಂಡಿತವಾಗಿಯೂ ಬರುವುದೆಂದು ನಿರೀಕ್ಷಿಸಬಹುದು. ಫಾರೆಸ್ಟು ಸಂಬಂಧವೂ ವ್ಯವಸಾಯ ಸಂಬಂಧವೂ ಮತ್ತು ಖನಿಜ ಸಂಬಂಧವೂ ಆದ ಸಂಪತ್ತುಗಳ ರೂಪದಲ್ಲಿ ಸಾಮಗ್ರಿಧನವನ್ನುಳ್ಳ ನಮ್ಮ ಮೈಸೂರುದೇಶದಲ್ಲಿ ಮುಂದಿನ ಕೆಲವು ವರ್ಷಗಳಲ್ಲಿ ಅಧಿಕವಾದ ಕೈಗಾರಿಕೆಗಳು ತಲೆದೋರುವುವೆಂಬುದರಲ್ಲಿ ಏನೇನೂ ಸಂದೇಹವಿರುವುದಿಲ್ಲ. ಕೈಗಾರಿಕೆಯ ಅಭಿವೃದ್ಧಿಯನ್ನು ನ್ಯಾಯವಾಗಿ ಹೆಚ್ಚಿಸುವುದು ತಮ್ಮ ಒಂದು ಅತ್ಯಂತ ಮುಖ್ಯಕರ್ತವ್ಯವೆಂದು ಸರ್ಕಾರದವರು ಯಾವಾಗಲೂ ಪರಿಭಾವಿಸುವರೆಂಬುದನ್ನೂ ಈ ಸಭೆಯ ಮೆಂಬರುಗಳಿಗೆ ನಾವು ದೃಢಪಡಿಸಬೇಕಾದುದಿಲ್ಲವೆಂದು ಭಾವಿಸುತ್ತೇವೆ.

ವಿದ್ಯಾಭ್ಯಾಸ.—ವಿದ್ಯಾಭ್ಯಾಸವಿಚಾರವು ನಮ್ಮ ಪರ್ಯಾಲೋಚನೆಗೆ ಮುಂದೊದಗಿರುವ ಮತ್ತೊಂದು ವಿಷಯವು. ಅರ್ಧ ಶತಮಾನದ ಕಾಲದಿಂದ ನಿಧಾನವಾಗಿ ಪ್ರವರ್ಧಮಾನಕ್ಕೆ ತರಲ್ಪಟ್ಟ ವಿದ್ಯಾಭ್ಯಾಸದ ಕ್ರಮವು ಈಚೆಗೆ ಐದು ಆರು ವರುಷಗಳಲ್ಲಿ ಅತಿ ಶೀಘ್ರವಾಗಿ ವಿಸ್ತಾರವಾಯಿತು. ಈ ಸ್ವಲ್ಪಕಾಲದಲ್ಲಿ ವಿದ್ಯಾಶಾಲೆಗಳ ಸಂಖ್ಯೆಯು 5134 ರಿಂದ 11530 ಕ್ಕೆ ಹೆಚ್ಚಿತು; ಮತ್ತು ವಿದ್ಯಾವ್ಯಾಸಂಗದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯು ಸುಮಾರು ಒಂದಕ್ಕೆರಡಾಯಿತು. ಪ್ರಾಥಮಿಕ ವಿದ್ಯಾಭ್ಯಾಸವು ದೇಶದ ಮೂಲೆಮೂಲೆ ಗ್ರಾಮಗಳಿಗೆಲ್ಲಾ ಹರಡಿರುವುದು, ಮತ್ತು ಅನೇಕ ಸ್ಥಳಗಳಲ್ಲಿ ವಿದ್ಯಾಭ್ಯಾಸವು ಬಲಾತ್ಕಾರದಿಂದ ನಡೆಯುವಂತೆ ಮಾಡಿದೆ. ಸೆಕೆಂಡರಿ ವಿದ್ಯಾಭ್ಯಾಸವು, ಸ್ತ್ರೀವಿದ್ಯಾಭ್ಯಾಸವು, ಕಸಬುದಾರಿ ವಿದ್ಯಾಭ್ಯಾಸವು, ಇವೆಲ್ಲವೂ ಸಮಾನವಾಗಿ ಈ ಅಭ್ಯುತ್ಥಾನದ ವೇಗಕ್ಕೆ ಒಳಗಾಗಿವುವು. ಪಾಠಕ್ರಮಗಳೆಲ್ಲವನ್ನೂ ಬದಲಾಯಿಸಿದೆ; ವಿದ್ಯಾಭ್ಯಾಸದ ಎಲ್ಲಾ ವರ್ಗಗಳಲ್ಲೂ ಅಭಿವೃದ್ಧಿಯು ಮುಖ್ಯ ಬದಲಾವಣೆಗಳನ್ನು ಮಾಡಿರುತ್ತೆ. ಮೈಸೂರು ಯೂನಿವರ್ಸಿಟಿಯನ್ನು ಸ್ಥಾಪಿಸಿರುವದು ಒಂದು ದೊಡ್ಡ ಕೆಲಸವಾಗಿರುತ್ತದೆ.

ನಮ್ಮ ಪ್ರಕೃತ ಸ್ಥಿತಿಗತಿಗಳನ್ನು ತಿಳಿದು ಈಗ ಇರುವ ಹೆಚ್ಚು ಕಡಮೆಗಳನ್ನು ಹೋಗಲಾಡಿಸಿ ಈ ಶಾಖೆಯನ್ನು ಬಲಪಡಿಸುವುದರಿಂದ ವಿಶೇಷವಾಗಿ ಮತ್ತು ಸ್ತಿಮಿತವಾಗಿ ಅದರ ಕಾರ್ಯವು ವಿಸ್ತರಿಸುವುದಕ್ಕೆ ದಾರಿಯನ್ನು ಸುಲಭವನ್ನಾಗಿ ಮಾಡಲು ಇದು ಸಕಾಲವಾಗಿರುವುದು. ಸರ್ಕಾರದವರು, ಹುಂಗಾಮಿಯಾಗಿ ಅಂಗೀಕರಿಸಲ್ಪಟ್ಟಿರುವ ಅಭಿವೃದ್ಧಿಮಾರ್ಗಗಳನ್ನು ಸೂಚಿಸಿ, ಒಂದು ಯದಾಸ್ತನ್ನು ಪ್ರಸಿದ್ಧಪಡಿಸಿ ಅದರ ವಿಷಯದಲ್ಲಿ ಪ್ರಜೆಗಳಿಂದ ಗುಣದೋಷಪರಾಮರ್ಶಪೂರ್ವಕವಾದ ಸಲಹೆಗಳನ್ನು ಕೇಳಿರುವರು. ಇದರಲ್ಲಿ ಸೂಚಿಸಿರುವ ಪರಿಷ್ಕರಣಗಳಲ್ಲಿ ಸಂಸ್ಥಾನದಲ್ಲೆಲ್ಲಾ ಕಡೆಯೂ ಒಂದೇ ಸರಿಯಾಗಿ ಹಂಚಿ 10,000 ಪ್ರಾಥಮಿಕ ವಿದ್ಯಾಶಾಲೆಗಳನ್ನು ಸ್ಥಾಪಿಸಬೇಕೆಂದೂ ಮಿಡಲ್ ತರಗತಿಯ ವಿದ್ಯಾಭ್ಯಾಸವನ್ನು ಮುಖ್ಯವಾಗಿ ಕೊಡುವ ಉದ್ದೇಶದಿಂದ ಮಧ್ಯಮಶಾಲೆಗಳನ್ನು 600 ಕ್ಕೆ ಹೆಚ್ಚಿಸಬೇಕೆಂದೂ ಹೈಸ್ಕೂಲುಗಳಲ್ಲಿ ಹೆಚ್ಚಾಗಿ ಸ್ಥಳ ಒದಗಿಸಿ ಸಲಕರಣೆಗಳನ್ನು ಹೆಚ್ಚಿಸಬೇಕೆಂದೂ ಕಸಬುದಾರಿಯ ವಿದ್ಯಾಭ್ಯಾಸವನ್ನು ಮರಳಿ ವ್ಯವಸ್ಥೆಮಾಡಬೇಕೆಂದೂ ಉದ್ದೇಶಿಸಿದೆ. ಸ್ತ್ರೀಯರ ವಿದ್ಯಾಭ್ಯಾಸದ ವಿಷಯದಲ್ಲಿ ಅರ್ಹರಾದ ಉಪಾಧ್ಯಾಯಿನಿಯರನ್ನು ಸಂಪಾದಿಸುವಬಗ್ಗೆ, ಮತ್ತು ಸ್ತ್ರೀವಿದ್ಯಾಶಾಲೆಗಳಿಗಾಗಿಯೇ ಪ್ರತ್ಯೇಕವಾಗಿ ಇನ್ಸ್ಪೆಕ್ಟರ ವರ್ಗವನ್ನು ಸ್ಥಾಪಿಸುವುದಕ್ಕೂ ಪ್ರಯತ್ನಗಳನ್ನು ಮಾಡಲಾದೀತು. ಈ ಯಾದಾಸ್ತಿನಲ್ಲಿ ಮುಸಲ್ಮಾನರ ಮತ್ತು ಹಿಂದುಳಿದ ಪಂಗಡದವರ ವಿದ್ಯಾಭ್ಯಾಸದ ವಿಷಯದಲ್ಲಿ ಸೂಚನೆಗಳೂ ಅಡಗಿರುವವು. ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದಕ್ಕೆ ಉತ್ತಮವಾದ ಮತ್ತು ವಿಶೇಷವಾದ ಸೌಲಭ್ಯಗಳನ್ನುಂಟುಮಾಡುವುದೂ ಇನ್ಸ್ಪೆಕ್ಷನ್ ಸಿಬ್ಬಂದಿಯನ್ನು ಪರಿಷ್ಕರಿಸುವುದೂ ಇದರಲ್ಲಿ ಸೂಚಿಸಲ್ಪಟ್ಟಿದೆ. ಆಯಾ ಸ್ಥಳೀಯ ಸಭೆಗಳಿಂದಲೂ ವಿದ್ಯಾವಿಷಯದ ಸಂಸ್ಥೆಗಳಿಂದಲೂ ಪ್ರಜೆಗಳಿಂದಲೂ ಅಪೇಕ್ಷಿಸಿರುವ ಅಭಿಪ್ರಾಯಗಳು ಬಂದು ಸೇರಿದ ತರುವಾಯ ಈ ಸೂಚನೆಗಳು ಅಖೈರಾಗಿ ಪರ್ಯಾಲೋಚಿಸಲ್ಪಡುವುವು. ಈ ಮಧ್ಯೆ ಈ ಯಾದಾಸ್ತಿನಲ್ಲಿ ಸೂಚಿಸಲ್ಪಟ್ಟಿರುವ ಕೆಲವು ಮುಖ್ಯಗಳಾದ ಪರಿಷ್ಕರಣಗಳು ಈಗಾಗಲೇ ಜಾರಿಯಲ್ಲಿ ತರಲ್ಪಟ್ಟಿರುವುವು. ಸ್ತ್ರೀಯರ ವಿದ್ಯಾಶಾಲೆಗಳಿಗೆ ಪ್ರತ್ಯೇಕ ಇಂಸ್ಪೆಕ್ಟರ್ ವರ್ಗವು ಸ್ಥಾಪಿಸಲ್ಪಟ್ಟಿರುವುದು; ಮತ್ತು ಹೆಚ್ಚಾಗಿ ಉಪಾಧ್ಯಾಯಿನಿಯರನ್ನು ಸಂಪಾದಿಸುವುದಕ್ಕೆ ಪ್ರಯತ್ನ ನಡೆಯುತ್ತಲಿದೆ. ಇಷ್ಟರಲ್ಲೆ ಮಿಡಲ್ ಪಾಠಶಾಲೆಗಳಲ್ಲಿ ಫೀಜುಗಳನ್ನು ಮಜಾಮಾಡುವ ವಿಷಯವನ್ನೂ ಇಂದು ತಿಳಿಸುವೆವು.

ಕಲ್ಕತ್ತೆ ಯೂನಿವರ್ಸಿಟಿ ಕಮಿಷನಿನ ರಿಪೋರ್ಟು ಪ್ರಸಿದ್ಧಪಡಿಸಿದುದರಮೂಲಕ ಜನರಿಗೆ ಹುಟ್ಟಿದ ವಿದ್ಯಾವಿಷಯದಲ್ಲಿನ ಆಸಕ್ತಿಯು ಹೊರಡುವುದಕ್ಕೆ ಸರಿಯಾಗಿ ನಮ್ಮ ಸಲಹೆಗಳು ಪ್ರಸಿದ್ಧವಾದದ್ದು ಅದೃಷ್ಟವಶವೆಂದು ಹೇಳಬೇಕು. ಆ ಕಮಿಷನಿನವರು ಯೂನಿವರ್ಸಿಟಿ ವಿದ್ಯಾವ್ಯಾಸಂಗವನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದವರಾದರೂ ಸೆಕೆಂಡರಿ ವಿದ್ಯಾಭ್ಯಾಸದ ಪುನರ್ವ್ಯವಸ್ಥೆಯ ವಿಷಯದಲ್ಲಿ ಬಹುದೂರ ಮುಟ್ಟುವ ಸಲಹೆಗಳನ್ನು ಮಾಡಿರುವರು. ನಮ್ಮ ಸಂಸ್ಥಾನದ ವಿಶೇಷ ಸಂದರ್ಭದಲ್ಲಿ ಅವುಗಳು ಎಷ್ಟುಮಟ್ಟಿಗೆ ಹಿತಕರವಾಗಿರುವವೆಂಬಂಶವನ್ನು ನಾವು ಚೆನ್ನಾಗಿ ಪರ್ಯಾಲೋಚಿಸಬೇಕಾಗಿದೆ. ಕೆಲವು ಮುಖ್ಯವಾದ ಬಾಬುಗಳಲ್ಲಿ ಎಂದರೆ ಯೂನಿವರ್ಸಿಟಿಯ ರಚನಾಕ್ರಮ, ಸೆಕೆಂಡರಿ ಸ್ಕೂಲಿನಲ್ಲಿಯ ವ್ಯಾಸಂಗಕಾಲ ಹಾಸ್ಟಲ್ ವಿದ್ಯಾರ್ಥಿಗೃಹಗಳನ್ನು ಉತ್ತಮಸ್ಥಿತಿಗೆ ತರುವುದು, ವ್ಯಾಯಾಮಾಭ್ಯಾಸ ಸ್ತ್ರೀ ವಿದ್ಯಾಭ್ಯಾಸ ಉಪಾಧ್ಯಾಯರ ಶಿಕ್ಷಣ ಇವುಗಳಲ್ಲಿ ಈ ಯೂನಿವರ್ಸಿಟಿ ಕಮಿಷನ್ನವರಿಗೆ ಉಚಿತವೆಂದು ತಿಳಿದುಬಂದ ಸಿದ್ಧಾಂತಗಳನ್ನೇ ನಾವು ಅನುಸರಿಸುತ್ತಿರುವೆನೆಂಬುದನ್ನು ನೋಡಿ ಸಂತೋಷಪಡಬಹುದಾಗಿದೆ.

ವೈದ್ಯ ಸಹಾಯ.—ಕಳೆದವರ್ಷದಲ್ಲಿ ನಮ್ಮ ಸೀಮೆಯಲ್ಲೆಲ್ಲಾ ಹರಡಿದ ಇನ್ಫ್ಲುಯಂಜಾ ಸಾಂಕ್ರಾಮಿಕ ರೋಗದಿಂದ ಉಂಟಾದ ಅನಾಹುತದೆಸೆಯಿಂದ ಈಗಿರುವ ಆಸ್ಪತ್ರೆಗಳಿಂದಾಗುವ ಪರಿಹಾರವನ್ನು ಪರಿಶೋಧನೆ ಮಾಡುವುದು ಅವಶ್ಯಕವಾಗಿದೆ. ಈಗ ನಮ್ಮ ಸಂಸ್ಥಾನದಲ್ಲಿ 179 ಆಸ್ಪತ್ರೆಗಳಿವೆ. ಅಂದರೆ 169 ಚದರಮೈಲಿಗೂ, 32,800 ಪ್ರಜಾಸಂಖ್ಯೆಗೂ ಒಂದೊಂದು ಆಸ್ಪತ್ರೆಯು ಇದೆ. ಇಂಡಿಯಾದೇಶದ ಇತರ ಭಾಗಗಳಲ್ಲಿನ ಈ ತರಹದ ಲೆಕ್ಕವನ್ನು ನೋಡಿದಲ್ಲಿ ಇವು ಅವಕ್ಕಿಂತ ಬಹಳ ಬೀಳಾಗಿ ತೋರದಿದ್ದರೂ ಇಲ್ಲಿನ ಈಗಿರುವ ವೈದ್ಯದ ಏರ್ಪಾಡಿನಿಂದ ಆಗುವ ಪರಿಹಾರವು ತೀರಾ ಸಾಲದೆಂಬ ವಿಷಯದಲ್ಲಿ ಸಂದೇಹವಿಲ್ಲ. ಆಸ್ಪತ್ರೆಗಳ ಬಡಾವಣೆ, ಹೆಂಗಸರಿಗೆ ವೈದ್ಯಸಹಾಯವನ್ನು ಹೆಚ್ಚಿಸುವುದು, ವೈದ್ಯಶಾಸ್ತ್ರದಲ್ಲಿ ಶಿಕ್ಷಣಕ್ಕೆ ಅವಕಾಶವನ್ನು ಹೆಚ್ಚಿಸುವುದು, ಇದಕ್ಕೆ ಸಂಬಂಧಪಟ್ಟ ಇತರ ವಿಷಯಗಳು, ಎಲ್ಲವನ್ನೂ ಹಿಂದೆ ಹೇಳಿದಂತೆ ಒಂದು ಸ್ಪೆಷಲ್ ಕಮಿಟಿಯವರು ಪರ್ಯಾಲೋಚಿಸಿ ವಿಮರ್ಶೆಯಿಂದ ಮಾಡಿದ ರಿಪೋರ್ಟನ್ನು ಆಗಲೇ ಎಲ್ಲರಿಗೂ ತಿಳಿಯುವಂತೆ ಪ್ರಕಟಿಸಿದೆ. ಈ ರಿಪೋರ್ಟಿನಲ್ಲಿ ಕ್ಷಿಪ್ರದಲ್ಲಿಯೇ 110 ಹೊಸ ಆಸ್ಪತ್ರೆಗಳನ್ನು ಸ್ಥಾಪಿಸಬೇಕೆಂತಲೂ, ಮೈಸೂರು ಯೂನಿವರ್ಸಿಟಿಯಲ್ಲಿ ಒಂದು ವೈದ್ಯಶಾಖೆಯನ್ನು ಏರ್ಪಡಿಸಬೇಕೆಂದೂ, ಇತರ ದೊಡ್ಡ ಏರ್ಪಾಡುಗಳನ್ನೂ ನಮೂದಿಸಿರುತ್ತಾರೆ. ಇವುಗಳಿಗೆ ಒಟ್ಟು 10 ಲಕ್ಷಕ್ಕೆ ಮೇಲ್ಪಟ್ಟು ಖರ್ಚಾಗುತ್ತದೆ. ಖಾಯಿಲೆಯು ಬಹಳಮಟ್ಟಿಗೆ ಹೆಚ್ಚಾಗಿರುವ ಮಲೆನಾಡು ಪ್ರದೇಶದಲ್ಲಿ ಕ್ಷಿಪ್ರದಲ್ಲಿಯೇ ಕೆಲವು ಹೊಸ ಆಸ್ಪತ್ರೆಗಳನ್ನು ಏರ್ಪಡಿಸುವುದು ಅವಶ್ಯಕವೆಂಬ ವಿಷಯದಲ್ಲಿ ಅನುಮಾನವಿಲ್ಲ. ಮೆಡಿಕಲ್ ಕಾಲೇಜನ್ನು ಸ್ಥಾಪಿಸುವ ವಿಷಯದಲ್ಲಿ 1917 ನೇ ಇಸವಿಯ ಅಕ್ಟೋಬರ್ ಸೆಷನ್ನಿನಲ್ಲಿ ಸರ್ ವಿಶ್ವೇಶ್ವರಯ್ಯನವರು ಇಲ್ಲಿ ಮಾಡಿದ ಉಪನ್ಯಾಸದಲ್ಲಿ - ಈ ಸಲಹೆಯ ವಿಷಯದಲ್ಲಿ ಸರ್ಕಾರದವರು ಸುಮುಖರಾಗಿದ್ದರೂ, ಸಂಸ್ಥಾನದೊಳಗೆ ಭಾರೀ ಸಂಬಳದ ವೈದ್ಯರಿಗೆ ಅಷ್ಟು ಅವಕಾಶವಿಲ್ಲದಿರುವದರಿಂದ ಒಂದು ಮೆಡಿಕಲ್ ಕಾಲೇಜನ್ನು ಏರ್ಪಡಿಸುವುದಕ್ಕಾಗಿ ಪ್ರಕೃತದಲ್ಲಿ ಭಾರೀ ಖರ್ಚನ್ನು ಮಾಡುವುದು ಯುಕ್ತವಲ್ಲವೆಂಬದಾಗಿ ಸರ್ಕಾರದವರು ಅಭಿಪ್ರಾಯಪಡುತ್ತಾರೆ" ಎಂದು ಹೇಳಿದರು. ಈಗಿನ ವೈದ್ಯನಿಂದಾಗುವ ಪರಿಹಾರವು ಸಮರ್ಪಕವಿಲ್ಲದಿರುವ ಅಂಶವನ್ನು ಹೋದವರುಷದಲ್ಲಿ ಪ್ರಾಪ್ತವಾದ ಸಾಂಕ್ರಾಮಿಕ ರೋಗದಿಂದ ಕಂಡಿರುವದರಿಂದ ಈಗ ಆ ಅಭಿಪ್ರಾಯವನ್ನು ಪುನರ್ವಿಮರ್ಶೆಮಾಡಲು ಅವಕಾಶವಿರುವದೆಂದು ಕಂಡುಬರುತ್ತದೆ.

ದೇಶೀಯ ವೈದ್ಯಶಾಲೆಗಳನ್ನು ಹೆಚ್ಚಿಸುವ ವಿಷಯದಲ್ಲಿ ಬಹಳ ಜನರು ಸಮ್ಮತಿಸುವಂತೆ ತೋರುತ್ತದೆ. ದೇಶೀಯ ವೈದ್ಯಶಾಸ್ತ್ರಗಳಲ್ಲಿ ತಯಾರಾಗಿ ಯೋಗ್ಯತೆಯನ್ನು ಪಡೆದ ಜನಗಳು ದೊರೆಯದಿರುವುದೂ, ಆಯುರ್ವೇದವನ್ನು ನವೀನ ಶಾಸ್ತ್ರಾಧಾರಗಳಮೇಲೆ ಮಾರ್ಪಡಿಸುವುದು ಕಷ್ಟವಾಗಿರುವುದೂ ಈ ವಿಷಯದಲ್ಲಿ ಇರುವ ಮುಖ್ಯವಾದ ತೊಂದರೆಗಳಾಗಿವೆ. ಮೈಸೂರಲ್ಲಿರುವ ಆಯುರ್ವೇದದ ಕಾಲೇಜು ಪುನರ್ವ್ಯವಸ್ಥೆಯಾದರೆ ಈ ತೊಂದರೆಯು ಸ್ವಲ್ಪಮಟ್ಟಿಗೆ ಕಡಮೆಯಾಗಬಹುದೆಂದು ತೋರಿದೆ. ಈ ವಿಚಾರದಲ್ಲಿ ಸಾಲೀಯಾನ 30,000ರೂಪಾಯಿ ಖರ್ಚು ಆಗುವ ಕೆಲವು ಏರ್ಪಾಡುಗಳನ್ನು ಹುಂಗಾಮಿಯಾಗಿ ಮಂಜೂರು ಮಾಡಿದೆ. ಇದರಲ್ಲಿ ಈ ಕಾಲೇಜಿನಲ್ಲಿ ಪಾಠಕ್ರಮದ ವಿಧಾನಗಳನ್ನು ಮೇಲುಪಡಿಸುವುದೂ ವಿದ್ಯಾರ್ಥಿಗಳನ್ನು ಆಕರ್ಷಿಸುವಷ್ಟು ವೇತನಗಳನ್ನು ಏರ್ಪಡಿಸುವುದೂ, ಚಿಕಿತ್ಸೆಗಳಿಗೆ ಅನುಕೂಲವಾಗುವಂತೆ ಇನ್-ಪೇಷಂಟ್ ವಾರ್ಡುಗಳನ್ನುಳ್ಳ ಒಂದು ದೊಡ್ಡ ಆಸ್ಪತ್ರೆಯನ್ನು ಸ್ಥಾಪಿಸುವುದೂ ಮುಖ್ಯವಾದವು. ಈ ಕಾಲೇಜಿನಲ್ಲಿ ಯುನಾನಿ ವೈದ್ಯದಲ್ಲಿನ ಶಿಕ್ಷಾಕ್ರಮವನ್ನು ಸಹ ಸೇರಿಸಿದೆ. ಈ ಏರ್ಪಾಡು ಕ್ರಮಪ್ರಕಾರ ನಡೆಯುವುದಕ್ಕೆ ಪ್ರಾರಂಭವಾದಾಗ ಹಳ್ಳಿಗಳಲ್ಲು ಬಹಳ ಅವಶ್ಯವಾಗಿರುವ ಸಹಾಯವನ್ನು ಕೊಡುತ್ತ ಇತರ ವೈದ್ಯ ಸಂಪ್ರದಾಯದಿಂದ ಆಗುವ ಪರಿಹಾರಕ್ಕೆ ಸಹಕಾರಿಯಾಗಿರುವ ಒಂದು ವೈದ್ಯ ಸಮುದಾಯವು ಸಿದ್ಧವಾಗುವದೆಂದು ನಂಬಿದೆ.

ಆಹಾರಪದಾರ್ಥಗಳ ಸರಬರಾಯಿಯನ್ನು ಹೆಚ್ಚಿಸುವುದು.

—ಆಹಾರಪದಾರ್ಥಗಳ ಸರಬರಾಯಿ ವಿಚಾರದಲ್ಲಿ ಕಳೆದವರ್ಷ ಪ್ರಾಪ್ತವಾಗಿ ಈಗಲೂ ಕೊನೆಯಾಗದಿರುವ ತೊಂದರೆಯ ನಿವಾರಣೆ ಬಗ್ಗೆ ಇಂಡಿಯಾ ಸರ್ಕಾರದವರು ಮಾಡಿದ ಸಹಾಯದ ವಿಚಾರದಲ್ಲಿ ಅವರಿಗೆ ನಮ್ಮ ಕೃತಜ್ಞತೆಯನ್ನು ನಾವು ಆಗಲೇ ತಿಳಿಸಿದ್ದೇವೆ. ನಮ್ಮ ಸೀಮೆಯ ಸರಹದ್ದಿನ ಹೊರಗೆ ಧಾರಣೆಗಳು ಹೆಚ್ಚಿದ ಪ್ರಯುಕ್ತ ಆಹಾರಧಾನ್ಯಗಳು ವಿಶೇಷವಾಗಿ ರಫ್ತು ಆಗುತ್ತಿರುವ ಕಾಲದಲ್ಲಿ ಮುಂಗಾರು ಹಿಂಗಾರು ಮಳೆಗಳೆರಡೂ ಹುದ್ಧಾಂಗವಾಗಿ ತಪ್ಪಿಹೋದ್ದರಿಂದ ಅತ್ಯಧಿಕವಾದ ಸ್ಥಿತಿಯು ಪ್ರಾ

ಪ್ರವಾಯಿತೆಂಬುದೇನೋ ನಿಜ. ಅನೇಕ ಕಷ್ಟಗಳು ಏಕಕಾಲದಲ್ಲಿ ಸಂಭವಿಸುವ ಅಂಥಾ ಸಂದರ್ಭಕ್ಕೆ ನಿವಾರಣೋಪಾಯಗಳನ್ನು ಒದಗಿಸುವುದು ಸುಲಭವಲ್ಲ. ಆದರೆ ಸಾಧಾರಣ ವರ್ಷಗಳಲ್ಲಿ ಸಾಕಾದಷ್ಟು ಆಹಾರಧಾನ್ಯಗಳನ್ನು ಬೆಳೆಯುವುದೂ, ಮಳೆ ಬಾರದಿದ್ದಾಗ ಪ್ರತಿಸಲವೂ ಬ್ರಿಟಿಷ್ ಇಂಡಿಯಾದಲ್ಲಿರುವ ನಮ್ಮ ನೆರೆಹೊರೆ ಜನರ ಸಹಾಯವನ್ನು ಅಪೇಕ್ಷಿಸದಂತೆ ನಮ್ಮ ದೇಶದಲ್ಲೇ ತಕ್ಕಷ್ಟು ಆಹಾರಧಾನ್ಯಗಳನ್ನು ಯಾವಾಗಲೂ ದಾಸ್ತಾನು ಇಟ್ಟುಕೊಳ್ಳುವುದೂ ನಮ್ಮ ಮೇಲೆ ಬಿದ್ದ ಭಾರವಾಗಿದೆ. ನವೀನ ಅಭಿಪ್ರಾಯಗಳು ವಾಡಿಕೆಗೆ ಬಂದಿರುವುದರಿಂದ ನಮ್ಮ ರೈತರು ಧಾನ್ಯಗಳನ್ನು ಹಗೇವುಗಳಲ್ಲಿ ಕೂಡಿಹಾಕುವ ತಮ್ಮ ಪೂರ್ವಿಕರ ಪದ್ಧತಿಯನ್ನು ಬಿಟ್ಟಿರುವಂತೆ ತೋರುತ್ತದೆ. ಕಳೆದವರ್ಷದ ಆದಿಭಾಗದಲ್ಲಿ ನಮ್ಮ ರೈತರು ಬೆಳೆದ ರಾಗಿಯನ್ನು ಬೊಂಬಾಯಿ ಅಧಿಪತ್ಯದ ಸೀಮೆಗಳಿಗೆ ಅಲ್ಲಿನ ಹೆಚ್ಚು ಬೆಲೆಯ ದೆಸೆಯಿಂದ ರೈಲಿನಲ್ಲಿ ರಫ್ತುಮಾಡಿದ ಅಂಶವು ತಮ್ಮಗಳಿಗೆ ತಿಳಿದೇಯಿರಬೇಕು. ಇದರ ಫಲವೇನೆಂದರೆ 1918 ನೆ ಡಿಸಂಬರ್ ತಿಂಗಳಲ್ಲಿ ಲೆಕ್ಕವನ್ನು ವನ್ನು ತೆಗೆದಾಗ ಇಲ್ಲಿದ್ದ ರಾಗಿಯು ಸುಮಾರು 1,58,000 ಟನ್ನುಗಳಾಗಬಹುದೆಂದು ಗೊತ್ತಾಯಿತು. ಈ ಪರಿಮಾಣವು ವರುಷದ ಕಡೆಯವರಿಗೂ ಬೇಕಾದ್ದರಲ್ಲಿ ನಾಲ್ಕರಲ್ಲಿ ಒಂದು ಭಾಗವು. ಮಹನೀಯರೇ, ನೀವುಗಳೆಲ್ಲರೂ ಕೈಲಾದಮಟ್ಟಿಗೆ ನಮ್ಮ ರೈತರುಗಳನ್ನು ಪ್ರಾಜ್ಞರಾದ ಹಿರಿಯರ ಪದ್ಧತಿಯನ್ನನುಸರಿಸುವಂತೆಯೂ ಕ್ಷಾಮಕಾಲಕ್ಕೆ ಒದಗುವಂತೆ ರಾಗಿಯನ್ನು ಕೂಡಿಹಾಕುವಂತೆಯೂ ಪ್ರೋತ್ಸಾಹಪಡಿಸಬೇಕೆಂದು ಸೂಚಿಸುತ್ತೇವೆ. ಇದಲ್ಲದೆ ಮತ್ತೊಂದು ಮುಖ್ಯ ಆಹಾರಧಾನ್ಯ ಅಂದರೆ ಅಕ್ಕಿಯ ವಿಚಾರದಲ್ಲಿ ರೈಲಿನಮೂಲಕ ನಡೆದ ವ್ಯಾಪಾರವನ್ನು ನೋಡಿದಲ್ಲಿ ನಮಗೆ ಬೇಕಾದಷ್ಟು ಅಕ್ಕಿಯು ನಮ್ಮ ಸೀಮೆಯಲ್ಲಿ ಬೆಳೆಯದೇ ಇರುವುದೆಂತಲೂ ಇದರಿಂದ ಹೊರಗೆ ಸಾಗಿಸುವದಕ್ಕಿಂತ ಹೆಚ್ಚಾಗಿ ಹೊರಗಿನಿಂದ ಅಕ್ಕಿಯನ್ನು ತರಿಸಿಕೊಳ್ಳುತ್ತಿದ್ದೇವೆಂತಲೂ ವ್ಯಕ್ತವಾಗುತ್ತದೆ. ತರಾಸರಿ ಅದುದು ಸುಮಾರು 20,000 ಟನ್ನುಗಳು ಆಗುತ್ತೆ. ಇದು ಒಟ್ಟು ಸಾಲಿಯಾನಾ ಉತ್ಪತ್ತಿಯಲ್ಲಿ ಸೇಕಡ 10 ರಷ್ಟು ಆಗುತ್ತದೆ. ಈ ಸ್ಥಿತಿಯು ಬಹಳಮಟ್ಟಿಗೆ ಸಮರ್ಪಕವಲ್ಲದ್ದಾಗಿದೆಯೆಂದು ಎಲ್ಲರೂ ಒಪ್ಪುವಿರಿ. ಸಾಧಾರಣಕಾಲದಲ್ಲಿಯಾದರೂ ಆಹಾರಧಾನ್ಯಗಳನ್ನು ಹೊರಗಿನಿಂದ ತರಿಸುವ ಆವಶ್ಯಕತೆ ಇಲ್ಲದಷ್ಟು ನಮ್ಮ ಸಂಸ್ಥಾನದಲ್ಲಿ ಆಹಾರದ ಉತ್ಪತ್ತಿಯನ್ನು ಹೆಚ್ಚಿಸಿದ್ದಾದರೆ ಈಗ ಪ್ರಾಪ್ತವಾದ ಕ್ಷಾಮವನ್ನು ಅನುಭವಿಸಿದ ಕಷ್ಟದಿಂದ ಬುದ್ಧಿ ಕಲಿತಂತಾದೀತು. ಡಾಕ್ಟರ್ ಕೋಲ್ಮನ್ನರವರು ವ್ಯವಸಾಯದ ಉತ್ಪನ್ನವನ್ನು ಹೆಚ್ಚುಮಾಡುವ ವಿಷಯದಲ್ಲಿ ಬರೆದಿರುವ ನೋಟಿನಲ್ಲಿ ನಾವು ಬೆಳೆಯುವುದಕ್ಕೂ ನಮಗೆ ಬೇಕಾದುದಕ್ಕೂ ವ್ಯತ್ಯಾಸವು ಬಹಳವಾಗಿಲ್ಲವೆಂತಲೂ ಎಕರೆವಾರು ಬೆಳೆಯನ್ನು ಹೆಚ್ಚುಮಾಡಿ ನಮ್ಮ ದೇಶವನ್ನು ಸ್ವಾಶ್ರಯವಾಗಿ ಮಾಡುವುದು ಸಾಧ್ಯವೆಂದೂ ತಿಳಿಸಿರುತ್ತಾರೆ. ಸಾಧಾರಣ ವರ್ಷಗಳಲ್ಲಿಯಾದರೂ ನಮ್ಮ ಸೀಮೆಯು ಸ್ವಾಶ್ರಯವಾಗುವಂತೆ ಆಹಾರಧಾನ್ಯಗಳ ಬೆಳೆಯನ್ನು ವೃದ್ಧಿಪಡಿಸುವುದು ಇನ್ನು ಕೆಲವು ವರ್ಷಗಳು ಸರ್ಕಾರದವರ ಪ್ರಯತ್ನವಾಗಿರುವುದು.

ಜನಗಳಸ್ಥಿತಿಯನ್ನು ಮೇಲುಪಡಿಸುವುದು.—ನಮ್ಮ ಮಹಾರಾಜರವರ ಪ್ರಜೆಗಳಲ್ಲಿ ಮುಖ್ಯವಾಗಿ ಪುರೋವೃದ್ಧಿಗಾಗಿ ಸಹಾಯವನ್ನು ಹೊಂದಬೇಕಾಗಿರುವವರಲ್ಲಿಯೂ ಹೊಂದಲು ಅರ್ಹರಾಗಿರುವವರಲ್ಲಿಯೂ ಪಂಚಮರೆಂದು ಕರೆಯಲ್ಪಡುವ ಜನದಂತೆ ಜನವು ಯಾವುದೂ ಇಲ್ಲವೆಂದು ನಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ಈ ಪಂಗಡದವರು ನಮ್ಮ ಸೀಮೆಯಲ್ಲಿ 10 ಲಕ್ಷ ಜನರಿರುವರು. ಇವರು ಸೀಮೆಯ ಜನಸಂಖ್ಯೆಯಲ್ಲಿ $\frac{1}{6}$ ಭಾಗವಾಗಿರುವರು. ಇವರು ಕೇವಲ ದರಿದ್ರರಾಗಿಯೂ ಕೇವಲ ಅವಿದ್ಯಾವಂತರಾಗಿಯೂ ಈಗ್ಗಿಂತ ಉತ್ತಮಸ್ಥಿತಿಗೆ ಬರಲು ಸಹಾಯವಿಲ್ಲದೆಯೂ ಪ್ರಾಯಶಃ ಆಸೆಯೂ ಇಲ್ಲದವರಾಗಿಯೂ ಇರುತ್ತಾರೆ. ನಮ್ಮ ಜೊತೆ ಪ್ರಜೆಗಳಲ್ಲಿ ಇಷ್ಟುಮಂದಿಯು ಇಷ್ಟು ಶೋಚನೀಯ ಸ್ಥಿತಿಯಲ್ಲಿರುವುದು ನಮ್ಮ ಕರುಣೆಗೆ ಪಾತ್ರವಾದ ವಿಷಯವು. ಇದನ್ನು ಬಿಟ್ಟರೂ ಈ ಸ್ಥಿತಿಯು ಮುಖ್ಯವಾಗಿ ದೇಶದ ಸಂಪದಭಿವೃದ್ಧಿಗೆ ಕುಂದಕವಾಗಿದೆ ಎಂಬುದನ್ನು ನಾವು ತಿಳಿಸಬೇಕಾದ್ದಿದೆ. ಇವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿರುವಂತೆ ಕೆಲವು ವರ್ಷಗಳಿಂದ ಈಚೆಗೆ ಏರ್ಪಾಡುಗಳು ನಡೆದು ಸರ್ಕಾರಿ ಪಾಠಶಾಲೆಗಳಲ್ಲಿ ಇವರನ್ನು ಸೇರಿಸುವ ಏರ್ಪಾಡು ಸಹ ಆಗಿರುತ್ತದೆ, ಇವುಗಳೆಲ್ಲಾ ಮಾಡಬೇಕಾದ ಕೆಲಸಗಳಾದರೂ ಯಾವಾಗಲೂ ಬಡತನದಲ್ಲಿಯೇ ಇರುವ ಈ ಪಂಗಡದವರಿಗೆ ಇನ್ನು ಕೆಲವು ಸೌಕರ್ಯಗಳನ್ನು ಕಲ್ಪಿಸಬೇಕಾಗಿರುವುದು. ಈಗ ವಿದ್ಯಾರ್ಥಿಗಳಾಗಿರುವರು ಅರ್ಜನೆ ಯೋಗ್ಯತೆಯನ್ನು ಸಂಪಾದಿಸುವುದಕ್ಕೆ ಸ್ವಲ್ಪಕಾಲ ಸಾವಕಾಶವಾಗುವುದರಿಂದ, ಆಕಾಲ ಒದಗುವವರಿಗೂ ಇತರರ ಸಂಗಡ ಪೋಟಿಗೆ ಸಮನಾಗಿ ಇವರನ್ನು ನಿಲ್ಲಿಸುವುದು ಯುಕ್ತವಲ್ಲ. ಈ ವಿಷಯವು ಬಹಳ ತೊಡಕಾದದ್ದೆಂದು ನಾವು ಬಲ್ಲೆವು, ಆದರೆ ಇವರ ಸಾಮಾಜಿಕ ಸಂಪದಭಿವೃದ್ಧಿಯನ್ನುಂಟುಮಾಡುವುದಕ್ಕೆ ತಕ್ಕ ಆಸಕ್ತಿಯಿಂದ ಕೂಡಿದ ಪ್ರಯತ್ನಗಳನ್ನು ಮಾಡಬೇಕೆಂದು ಸರ್ಕಾರದವರಿಗೆ ಅಭಿಪ್ರಾಯವಿದೆ. ಇದನ್ನು ಯಾವಾಗಲೂ ಅವರು ಗಮನದಲ್ಲಿಡಬೇಕೆಂದು ಉದ್ದೇಶಿಸಿದಾರೆ.

ಈ ವಿಷಯವನ್ನು ಬಿಡುವುದಕ್ಕೆ ಮೊದಲು ಈ ವಿಚಾರದಲ್ಲಿ ಒಂದು ತಪ್ಪಾದ ಅಭಿಪ್ರಾಯವನ್ನು ಹೋಗಲಾಡಿಸುವುದು ಅವಶ್ಯಕವೆಂದು ತೋರುತ್ತಿದೆ. ಪಂಚಮರ ಸ್ಥಿತಿಯನ್ನು ಉತ್ತಮಪಡಿಸಬೇಕೆಂಬ ಕುತೂಹಲವುಂಟಾಗಿರುವುದರಿಂದ ತಮ್ಮ ತಮ್ಮ ಸಾಹಸದಿಂದ ಅಭಿವೃದ್ಧಿಹೊಂದಿದ ಹೆಚ್ಚು ಅದೃಷ್ಟವುಳ್ಳ ಇತರ ಪಂಗಡದವರ ಪುರೋಭಿವೃದ್ಧಿಗೆ ಕುಂದಕವನ್ನುಂಟುಮಾಡಬೇಕೆಂಬ ಕುಟಿಲವಾದ ಅಭಿಪ್ರಾಯವು ಸರ್ಕಾರದವರಿಗೆ ಇದೆ ಎಂದು ತಿಳಿಯಕೂಡದು. ಇಂಡಿಯಾ ದೇಶದ ಇತರ ಭಾಗಗಳಲ್ಲಿ ಈ ವಿಷಯವನ್ನು ವಿಚಾರಮಾಡುವುದರಲ್ಲಿ ಜನರು ಅನ್ಯಾಯವಾಗಿ ದ್ವೇಷಾಸೂಯೆಗಳನ್ನು ತೋರಿಸುತ್ತಿರುವುದರಿಂದ, ಈ ಅದೃಷ್ಟಹೀನರಾದ ಪಂಗಡದವರಿಗೆ ವಿಶೇಷವಾದ ಸಹಾಯಗಳನ್ನು ಮಾಡಬೇಕೆಂದು ಅಭಿಪ್ರಾಯಪಟ್ಟರೆ ಅದರ ಯಾವದೋ ಪಂಗಡಕ್ಕೆ ಸೇರಿ ಮಾತನಾಡುವನೆಂದು ಭಾವಿಸುವುದಕ್ಕೆ ಅವಕಾಶವುಂಟಾಗಿದೆ. ನಮ್ಮ ಮೈಸೂರು ದೇಶದಲ್ಲಿ ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಇಂತಹ ಪ್ರಭೇದಗಳನ್ನು ಯೋಚಿಸುವುದಕ್ಕೆ ಯಾವುದೊಂದು ನಿಮಿತ್ತವೂ ಕಂಡುಬರುವುದಿಲ್ಲ. ಕಳೆದ ವರ್ಷದ ಜೂನ್ ತಿಂಗಳಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಬ್ರಾಹ್ಮಣೇತರರ ಪ್ರತಿನಿಧಿಗಳಿಗೆ ಅಪ್ಪಣೆಕೊಡಿಸಿದ ಅಮೂಲ್ಯವಾದ ಬುದ್ಧಿವಾದವನ್ನು ತಮ್ಮ ಲಕ್ಷ್ಯಕ್ಕೆ ಈಗ ತೆಗೆದುಕೊಳ್ಳಬೇಕೆಂದು ನಾವು ಬಹು ಶ್ರದ್ಧೆಯಿಂದ ಕೋರುತ್ತೇವೆ. ಅವರು ಅಪ್ಪಣೆ ಕೊಡಿಸಿದ್ದೇನೆಂದರೆ:—"ಈ ದೇಶದಲ್ಲಿನ ಎಲ್ಲಾ ಜಾತಿ ಪಂಗಡದ ವಿಷಯದಲ್ಲೂ ಒಂದೇ ಮಾರ್ಗವನ್ನು ಅವಲಂಬಿಸಿ ಯಾವದೊಂದು ಪಂಗಡವನ್ನಾಗಲಿ ಅತಿಯಾಗಿ ಅನುಗ್ರಹಿಸದೆಯೂ ಅತಿಯಾಗಿ ತಗ್ಗಿಸದೆಯೂ ರಾಜ್ಯದ ಶಾಶ್ವತವಾದ ಶ್ರೇಯಸ್ಸಿಗಾಗಿ ಎಲ್ಲರನ್ನೂ ಉತ್ತಮಸ್ಥಿತಿಗೆ ತರಬೇಕೆಂಬುದೇ ನಮ್ಮ ಲಕ್ಷ್ಯವಾಗಿದೆ." ಮಹಾಶಯರೆ, ನಮ್ಮ ದೇಶದಲ್ಲಿನ ಬ್ರಾಹ್ಮಣರು ಬ್ರಾಹ್ಮಣೇತರರು ಪ್ರತಿ ಒಬ್ಬರಿಗೂ ಈ ಮಾತನ್ನು ಅವಧರಿಸಬೇಕೆಂದೂ, ಸಾಮಾಜಿಕ ಉದ್ಧಾರದ ವಿಷಯವನ್ನು ಚರ್ಚಿಸುವಾಗ ಅದನ್ನು ಜ್ಞಾಪಕದಲ್ಲಿಡಬೇಕೆಂದೂ ಬಹಳ ಆಸಕ್ತಿಯಿಂದ ಬೇಡುತ್ತೇನೆ. ಮೈಸೂರು ದೇಶದಲ್ಲಿನ ಸರ್ಕಾರಿ ನೌಕರರೂ ನೌಕರೇತರರೂ ಸಹ—ಈಗಿನ ನೌಕರರು, ಹಳೆ ನೌಕರರಲ್ಲ—ಒಂದೇ ಮಾತೃಭೂಮಿಗೆ ಸೇರಿದ ಎಲ್ಲಾ ಜಾತಿ ಪಂಗಡದವರೂ, [illegible] ಪಡೆದು ದಯ ಮತ್ತು ಸಾಮಾಜಿಕ ಪುರೋವೃದ್ಧಿಗಾಗಿ ಏಕಚಿತ್ತವಾದ ಸ್ನೇಹಭಾವದಿಂದ ಕೆಲಸಮಾಡುವ ವಿಧಾನವೊಂದನ್ನು ನಿಶ್ಚಯಿಸಿದಲ್ಲಿ ಇಂಡಿಯಾ ದೇಶದ ಇತರ ಕಡೆಯವರಿಗೆ ನಿದರ್ಶನವಾಗುವಂತೆ ನಡೆದುಕೊಂಡೇವೆಂದು ನನಗೆ ತೋರುತ್ತದೆ.

ಇತರ ಮುಖ್ಯವಿಚಾರಗಳು.—ಕೈಗಾರಿಕೆ, ವಿದ್ಯಾಭ್ಯಾಸ, ಆಹಾರಧಾನ್ಯಕೃಷಿ, ಸಾಮಾಜಿಕ ಅಭಿವೃದ್ಧಿ, ವೈದ್ಯಸಹಾಯ ಇವುಗಳಲ್ಲದೆ ಸರ್ಕಾರದ ಪರ್ಯಾಲೋಚನೆಯಲ್ಲಿರುವ ಕೆಲವು ಲಘುತರ ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ.

ಸಣ್ಣಕೆರೆಗಳ ದುರಸ್ತಿಗಾಗಿ ಮಾಡಿದ ಏರ್ಪಾಡು ಸಮರ್ಪಕವಾದ ಅಭಿವೃದ್ಧಿಯನ್ನು ತೋರಿಸುವುದಕ್ಕೆ ರೈತರು ಕಾನೂನು ಪ್ರಕಾರ ಕಂಟ್ರಿಬ್ಯೂಷನ್ ಕೊಡುವುದಕ್ಕೆ ಮನಸ್ಸಿಲ್ಲದೆ ಇರುವುದೇ ಕಾರಣವೆಂದು ಸಾಮಾನ್ಯವಾಗಿ ಹೇಳುವರು. ಈ ಕಂಟ್ರಿಬ್ಯೂಷನನ್ನು ಒಟ್ಟು ಖರ್ಚಿನಲ್ಲಿ ನಾಲ್ಕನೇ ಒಂದು ಭಾಗಕ್ಕೆ ಇಳಿಸಿ ಅದನ್ನು ಬಲಾತ್ಕಾರದಿಂದ ವಸೂಲು ಮಾಡುವ ವಿಚಾರವು ಆಲೋಚನೆಯಲ್ಲಿದೆ.

ಈ ಸಭೆಯಲ್ಲಿ ಪದೇಪದೇ ವಿಚಾರಮಾಡಿದ ಇಂಗಿರೇಷನ್ ಸೆಸ್ಸಿನ ವಸೂಲಾತಿ ವಿಷಯದಲ್ಲಿ ವ್ಯತ್ಯಾಸಗಳನ್ನು ಸಮಾಧಾನಪಡಿಸುವುದೂ ಪರ್ಯಾಲೋಚನೆಯಲ್ಲಿದೆ.

ಗ್ರಾಮನೌಕರರ ಪೋಟಿಗೆಯನ್ನು ಈಗಲೇ ಪುನರ್ವಿಮರ್ಶೆಮಾಡಲು ಅನುಕೂಲವಿಲ್ಲವಿದ್ದರೂ ಸದ್ಯದಲ್ಲಿ ಸಣ್ಣ ಶ್ಯಾನುಭೋಗಿ ಚಾವಡಿಗಳನ್ನು ಒಟ್ಟು ಸೇರಿಸಿಯೂ ವೇತನದ ಕನಿಷ್ಠದರ್ಜೆಯನ್ನು ಸ್ವಲ್ಪ ಹೆಚ್ಚಾಗಿರುವಂತೆ ನಿಷ್ಕರ್ಷಿಸಿಯೂ, ಸಾದಿಲ್ವಾರು ಖರ್ಚನ್ನು ಹೆಚ್ಚಿಸಿಯೂ ಅವರಿಗೆ ಬರುವ ಆದಾಯವನ್ನು ಹೆಚ್ಚಿಸುವ ವಿಚಾರವು ಗಮನದಲ್ಲಿದೆ.

ಸಿವಿಲ್ ಸರ್ವಿಸ್ಸನ್ನು ಪುನರ್ವಿಮರ್ಶೆ ಮಾಡುವುದು ಮತ್ತೊಂದು ವಿಷಯವಾಗಿದೆ. ಇತರ ಇಲಾಖೆಗಳನ್ನು ಪುನರ್ವಿಮರ್ಶೆಮಾಡಿದ್ದರಲ್ಲಿ ಸಂಬಳಗಳು ತಪ್ಪದೆ ಹೆಚ್ಚಿರುತ್ತದೆ. ಆದರೆ ಅಡ್ಮಿನಿಸ್ಟ್ರೇಟಿವ್ ಮತ್ತು ಎಕ್ಸಿಕ್ಯೂಟಿವ್ ಸರ್ವಿಸ್ಸನ್ನು ಒಳಕೊಂಡಿರುವ ಸಿವಿಲ್‌ಸರ್ವಿಸ್ಸು ನಿಬಂಧನೆಗಳನ್ನು ಬದಲಾಯಿಸಿದಾಗಲೆಲ್ಲಾ ಬಡ್ತಿಯಸಂಭವಗಳು ಕಂಡಹಾಗೆ ಕಮ್ಮಿಮಾಡಲ್ಪಟ್ಟಿವೆ. ಇದರಿಂದ ಈ ಸಿವಿಲ್‌ಸರ್ವಿಸ್ಸಿಗೆ ಸೇರಿದ ನೌಕರರಿಗೆ ನಷ್ಟವುಂಟಾಗಿರುತ್ತದೆ. ಹಾಲಿ ಇರುವ ಸಿವಿಲ್‌ಸರ್ವಿಸ್ ಏರ್ಪಾಡಿನಲ್ಲಿ ಉದಾರವಲ್ಲದ ಕಾಲಕಾಲದ ಬಡ್ತಿಯು ಮತ್ತು ಒಂದೇ ಗ್ರೇಡಿನಲ್ಲಿ ದೀರ್ಘಕಾಲ ನಿಲ್ಲುವುದು ಇವೆರಡೂ ಮುಖ್ಯಲಕ್ಷಣಗಳಾಗಿವೆ.

ಬಹು ದೊಡ್ಡ ಸಿಬ್ಬಂದಿಯುಳ್ಳ ಎಕ್ಸೈಜು ಇಲಾಖೆಯ ಪುನರ್ವ್ಯವಸ್ಥೆಯು ಬಹಳ ದಿನಗಳಿಂದಲೂ ಬಾಕಿ ಇದೆ.

ಪ್ರಕಟನೆಗಳು.

ಕಳೆದ ಕೆಲವು ವಾರಗಳಲ್ಲಿ ಪ್ರಜಾಕ್ಷೇಮಕ್ಕಾಗಿ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರು ಮಂಜೂರು ಮಾಡಿರುವ ಕೆಲವು ಮುಖ್ಯ ಏರ್ಪಾಡುಗಳನ್ನು ಈ ಸಭೆಗೆ ತಿಳಿಯಪಡಿಸುವುದು ಮಾತ್ರ ಇನ್ನೂ ಉಳಿದಿದೆ.

ಸರ್ಕಾರದ ಆಡಳಿತದ ವಿಷಯದಲ್ಲಿ ಜನಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕಾಗಿ ಸಂಪೂರ್ಣವಾಗಿ ಅವರಿಗೆ ಅವಕಾಶಗಳನ್ನು ಕೊಡಬೇಕೆಂಬುವದು ಸರ್ವದಾ ಶ್ರೀಮನ್ಮಹಾರಾಜರವರ ಉದ್ದೇಶವಾಗಿದ್ದಿದೆ. ಇದರಿಂದಲೇ ಈಚೆಗೆ ಈ ಸಭೆಗೂ ಮತ್ತು ನ್ಯಾಯವಿಧಾಯಕ ಸಭೆಗೂ ಸಹಾ ಬಜೆಟ್ಟನ್ನು ಚರ್ಚೆಮಾಡುವುದಕ್ಕೂ ಮತ್ತು ಪ್ರಜಾಕ್ಷೇಮಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೂ ಸಹ ಅಧಿಕಾರವನ್ನೂ ಇತರ ರಿಯಾಯಿತಿಗಳನ್ನೂ ಶ್ರೀಮನ್ಮಹಾರಾಜರವರು ದಯಪಾಲಿಸಿರುತ್ತಾರೆ. ಬಜೆಟ್ಟುಹೊರತು ಇತರ ವಿಷಯಗಳಲ್ಲಿ ತಮ್ಮ ತೀರ್ಮಾನಗಳನ್ನು ತರುವುದಕ್ಕೆ ನ್ಯಾಯವಿಧಾಯಕ ಸಭೆಯ ಮೆಂಬರುಗಳು ಅಧಿಕಾರವನ್ನು ಹೊಂದಿರುತ್ತಾರೆ. ಸರ್ಕಾರದ ಆಡಳಿತವು ಎಲ್ಲಾ ಭಾಗದಲ್ಲಿಯೂ ಕ್ಲಿಷ್ಟವಾಗುತ್ತಲಿರುವುದರಿಂದಲೂ ಮತ್ತು ಹೆಚ್ಚಾಗುತ್ತಲಿರುವ ತೆರಿಗೆ ಶರಾವಣೆಯನ್ನು ಒಳಗೊಂಡಿರುವ ಕಂದಾಯದ ವಿಷಯಗಳು ಮುಖ್ಯವಾಗುತ್ತಲಿರುವುದರಿಂದಲೂ, ಆಡಳಿತದ ವಿಚಾರದಲ್ಲಿ ಸಾಮಾನ್ಯ ಜನಗಳ ಅಭಿಪ್ರಾಯವನ್ನು ಮುಂದಕ್ಕೆ ಇನ್ನೂ ಹೆಚ್ಚಾಗಿ ಉಪಯೋಗಿಸಿಕೊಳ್ಳುವುದು ಅವಶ್ಯಕವೆಂದು ಶ್ರೀಮನ್ಮಹಾರಾಜರವರು ಅಭಿಪ್ರಾಯಪಡುತ್ತಾರೆ. ಆದುದರಿಂದ ನ್ಯಾಯವಿಧಾಯಕ ಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂತಲೂ ಎರಡು ಡಿಸ್ಟ್ರಿಕ್ಟುಗಳಿಗೆ ಬದಲಾಗಿ ಒಂದೊಂದು ಡಿಸ್ಟ್ರಿಕ್ಟಿಗೆ ಒಬ್ಬೊಬ್ಬ ಪ್ರತಿನಿಧಿಯನ್ನು ಕಳುಹಿಸಿಕೊಡುವ ಅಧಿಕಾರವನ್ನು ಜನರಿಗೆ ಕೊಡಬೇಕೆಂತಲೂ ತೀರ್ಮಾನಿಸಿರುತ್ತಾರೆ. ಈ ಸಭೆಯಲ್ಲಿ ಅನೇಕಾವರ್ತಿ ಈ ತಿದ್ದುಪಾಟನ್ನು ಕೇಳಿಕೊಂಡ ಮೇರೆಗೆ ನಿಮ್ಮ ಅಭಿಲಾಷೆಯನ್ನು ನೆರವೇರಿಸುವುದಕ್ಕೆ ಈಗ ಸಾಧ್ಯವಾದದ್ದಕ್ಕಾಗಿ ಶ್ರೀಮನ್ಮಹಾರಾಜರವರು ಬಹಳ ಸಂತೋಷಪಡುತ್ತಾರೆ. ಮೈಸೂರು ಯೂನಿವರ್ಸಿಟಿಗಾಗಿ ಒಂದು ಸ್ಥಾನವನ್ನು ಏರ್ಪಾಡುಮಾಡುವುದು ಮತ್ತು ನೇಮಕದಿಂದ ಭರ್ತಿಮಾಡುವುದಕ್ಕೆ 4 ಸ್ಥಾನಗಳನ್ನು ಏರ್ಪಡಿಸುವುದು. ಇವೇ ನ್ಯಾಯವಿಧಾಯಕಸಭೆಯ ಇತರ ಬದಲಾವಣೆಗಳಾಗಿವೆ. ಈ ಏರ್ಪಾಡುಗಳ ಫಲಿತಾಂಶಕ್ಕಾಗಿ ನ್ಯಾಯವಿಧಾಯಕ ಸಭೆಯು ಈಗ 21 ಮೆಂಬರುಗಳನ್ನುಳ್ಳದ್ದು ಇನ್ನು ಮುಂದೆ 30 ಮೆಂಬರುಗಳನ್ನುಳ್ಳದ್ದಾಗುತ್ತದೆ.

ಸರ್ಕಾರದ ಜವಾಬ್ದಾರರಾದ ಅಧಿಕಾರಿಗಳೆಡೆಸೆ ಸಾಮಾನ್ಯ ಜನಗಳು ಸರ್ಕಾರದ ವ್ಯಯಗಳನ್ನು ವಿಮರ್ಶೆಮಾಡುವುದಕ್ಕಾಗಿ ತಕ್ಕ ಏರ್ಪಾಡುಗಳನ್ನು ಇನ್ನೂ ಹೆಚ್ಚಾಗಿ ಮಾಡಬೇಕೆಂಬುದು ಸಹ ಶ್ರೀಮನ್ಮಹಾರಾಜರವರ ಇಷ್ಟವಾಗಿರುತ್ತದೆ. ಆದಕಾರಣ ಬಡ್ಜೆಟ್ ಫೈನಾನ್ಸ್ ಕಮಿಟಿಯನ್ನು ಬಲಪಡಿಸಿ ಪುನರ್ವ್ಯವಸ್ಥೆ ಮಾಡಲಾಗುತ್ತದೆ. ಕಮಿಟಿಯು 6 ಜನ ಸರ್ಕಾರದ ನೌಕರರನ್ನು ಮತ್ತು ಅದೇಸಂಖ್ಯೆಯ ನೌಕರರಲ್ಲದ ಮೆಂಬರುಗಳನ್ನು ಒಳಕೊಂಡು ಒಬ್ಬರು ಕೌನ್ಸಿಲ್‌ಮೆಂಬರರನ್ನು ಚೇರ್‌ಮೆನ್ನರನ್ನಾಗಿ ಉಳ್ಳದ್ದಾಗಿರತಕ್ಕದ್ದು. 6 ಜನ ಸಾಮಾನ್ಯ ಮೆಂಬರುಗಳಪೈಕಿ ಇಬ್ಬರು ಪ್ರಜಾಪ್ರತಿನಿಧಿಸಭೆಯಿಂದಲೂ ಒಬ್ಬರು ನ್ಯಾಯವಿಧಾಯಕಸಭೆಯಿಂದಲೂ ಚುನಾಯಿಸಲ್ಪಡತಕ್ಕದ್ದು. ಉಳಿದ 3 ಜನ ಅದೇ ದಾಮಾಷಾಯಮೇರೆ ಆ ಸಭೆಗಳ ಮೆಂಬರುಗಳಪೈಕಿ ಸರ್ಕಾರದವರಿಂದ ನೇಮಕಮಾಡಲ್ಪಡತಕ್ಕದ್ದು. ವಿಶೇಷವಿಷಯಗಳನ್ನು ಪರ್ಯಾಲೋಚಿಸುವುದಕ್ಕಾಗಿ ಇಲಾಖೆಯ ಮೊಖ್ತೇಸರರುಗಳನ್ನೂ ಮತ್ತು ಸರ್ಕಾರದ ಸೆಕ್ರೆಟರಿಗಳನ್ನೂ ಮೆಂಬರುಗಳನ್ನಾಗಿ ಸೇರಿಸಿಕೊಳ್ಳುವುದಕ್ಕೆ ಕಮಿಟಿಯು ಅಧಿಕಾರವನ್ನು ಉಳ್ಳದ್ದಾಗಿರತಕ್ಕದ್ದು. ಖರ್ಚನ್ನು ಕಮ್ಮಿಮಾಡುವುದಕ್ಕೂ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೂ ಸಲಹೆಗಳನ್ನು ಕಳುಹಿಸುವುದೇ ಕಮಿಟಿಯ ಮುಖ್ಯವಾದ ಕಾರ್ಯವಾಗಿರುವುದು. ಕಮಿಟಿಯು ಅವಶ್ಯಕವಿದ್ದಲ್ಲಿ ಮೂರುತಿಂಗಳಿಗೊಂದು ಸಲ ಸೇರುತ್ತದೆ. ಫೈನಾನ್ಷಿಯಲ್ ಸೆಕ್ರೆಟೆರಿಯಟ್ಟಿನ ಒಬ್ಬ ಅಧಿಕಾರಿಯನ್ನು ಅದಕ್ಕೆ ಸೆಕ್ರೆಟರಿಯಾಗಿ ಕೆಲಸಮಾಡುವುದಕ್ಕೆ ಕೊಡಲಾಗುವುದು. ಈ ಏರ್ಪಾಡುಗಳಿಂದ ಕಮಿಟಿಯು ಬಲವುಳ್ಳದ್ದಾಗುವುದಕ್ಕೂ ಅದರ ಕೆಲಸಕಾರ್ಯಗಳು ತಡೆಯಿಲ್ಲದೆ ನಡೆಯುವುದಕ್ಕೂ ಮತ್ತು ಅದರ ಸಂಕಲ್ಪಗಳು ಗೌರವವುಳ್ಳವಾಗುವುದಕ್ಕೂ ಸಾಧ್ಯವಾಗುತ್ತದೆ.

ಅಲ್ಲದೆ ಶ್ರೀಮನ್ಮಹಾರಾಜರವರ ಪ್ರಜೆಗಳೆಲ್ಲರೂ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಸೌಕರ್ಯಗಳನ್ನು ಬಹಳವಾಗಿ ಅಪೇಕ್ಷಿಸುತ್ತಾರೆಂಬ ವಿಷಯವು ನಮಗೆ ತಿಳಿದಿರುವದರಿಂದ ಶ್ರೀಮನ್ಮಹಾರಾಜರವರ ಸಂತೋಷಪೂರ್ವಕವಾದ ಇನ್ನೊಂದು ಪ್ರಕಟನೆಯನ್ನು ನೀವು ಉತ್ಸಾಹದಿಂದ ಕೇಳುವಿರಿ. ಮಿಡಲ್‌ಸ್ಕೂಲ್ ತರಗತಿಗಳಲ್ಲಿ ಎಲ್ಲಾ ಫೀಜುಗಳನ್ನೂ ತೆಗೆದುಹಾಕುವುದಲ್ಲದೆ ಹೈಸ್ಕೂಲ್ ತರಗತಿಯ ಕೆಳಗೆ ಎಲ್ಲಾ ವಿದ್ಯಾಭ್ಯಾಸವು ಸುತರಾಂ ಮುಫತಾಗಿ ಕೊಡಬೇಕೆಂದು ಶ್ರೀಮನ್ಮಹಾರಾಜರವರ ಇಷ್ಟವಾಗಿದೆ. ಹಿಂದುಳಿದ ಪಂಗಡಗಳಿಗೆ ಕೊಟ್ಟಿರುವ ವಿಶೇಷವಾದ ಪ್ರೋತ್ಸಾಹದ ಜತೆಗೆ ಎಲ್ಲಾ ಜಾತಿಯ ಬಡಜನರಿಗೂ ಪ್ರೌಢವಿದ್ಯಾಭ್ಯಾಸಕ್ಕೆ ಫ್ರೀಷಿಪ್ಪುಗಳನ್ನೂ ಸ್ಕಾಲರ್‌ಷಿಪ್ಪುಗಳನ್ನೂ ಧಾರಾಳವಾಗಿ ಕೊಡುವುದರ ಮೂಲಕ ಇನ್ನೂ ಅತಿಶಯವಾದ ಸೌಕರ್ಯಗಳನ್ನು ಉಂಟುಮಾಡಬೇಕೆಂಬುದು ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿರುತ್ತೆ. ಹೈಸ್ಕೂಲುಗಳಲ್ಲಿಯೂ ಮೇಲ್ಪಟ್ಟ ತರಗತಿಗಳಲ್ಲಿಯೂ ಒದಗಿಸಿರುವ ಸೇಕಡ 20 ರಿಂದ 40 ರವರೆಗಿನ ಫ್ರೀಷಿಪ್ಪುಗಳು ಜಾರಿಯಲ್ಲಿಯೇ ಇರುವವು; ಅಲ್ಲದೆ ಸಂಸ್ಥಾನದಲ್ಲಿ ವಿವಿಧವರ್ಗದ ಸ್ಕಾಲರ್‌ಷಿಪ್ಪುಗಳಿಗಾಗಿ ಒದಗಿಸಿರುವ ಹಣವನ್ನು 3 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗುವುದು.

ಉಪಸಂಹಾರ.

ಮಹಾಶಯರೇ! ನಾವು ಮೊದಲು ಉದ್ದೇಶಿಸಿದ್ದಕ್ಕಿಂತಲೂ ಬಹಳ ಹೆಚ್ಚುಕಾಲ ತೆಗೆದುಕೊಂಡಿದ್ದೇವೆ. ನಾವು ನಿಮ್ಮಲ್ಲಿ ಒಬ್ಬರಾಗಿದ್ದು ನಿಮ್ಮ ನಡುವೆ ಹುಟ್ಟಿ ಬೆಳೆದು ಅನೇಕ ಸರಕಾರಿ ಉದ್ಯೋಗಗಳಲ್ಲಿ ನಿಮ್ಮಗಳ ಸೇವೆಯನ್ನು ಮಾಡಿರುವುದರ ಮೂಲಕ ಉಂಟಾದ ಪೂರ್ವ ಪರಿಚಯದ ಬಲದಿಂದ ಮುಂದೆ ಕೆಲವು ವರುಷಗಳ ಪರ್ಯಂತವೂ ನಾವು ನಿರ್ವಹಿಸಬೇಕಾದ ವಿಷಯಗಳನ್ನು ಅಂಜಿಕೆ ಮರೆಮಾಚದೆ ಸ್ಪಷ್ಟವಾಗಿ ಮಾತನಾಡುವ ಸ್ವಾತಂತ್ರ್ಯವನ್ನು ತಾಳಿರುವೆವು. ಯುದ್ಧದ ಕೊನೆಗಾಲದಲ್ಲಿ ವಿಪರೀತ ಸಾಹಸಮಾಡಬೇಕಾಗಿ ಬಂದದ್ದು, ಘೋರವಾದ ಇನ್‌ಫ್ಲುಯಂಜಾ ಸಾಂಕ್ರಾಮಿಕ ವ್ಯಾಧಿಯು ಸಂಭವಿಸಿದ್ದು, ಆಹಾರ ಪದಾರ್ಥಗಳು ಬಹಳವಾಗಿ ಕಡಮೆಬಿದ್ದದ್ದು, ಈ ಎಲ್ಲಾ ಕಷ್ಟದಲ್ಲೂ ಮುಳುಗಿದ್ದು ಈಗತಾನೇ ಉಳಿದೇಳುವುದಕ್ಕೆ ತೊಡಗಿದ್ದೇವೆ. ಭಗವಂತನ ಕೃಪೆಯಿಂದ ಈಚೆಗೆ ಒಳ್ಳೇ ಮಳೆಗಳಾಗಿ ಆಹಾರ ಪದಾರ್ಥಗಳ ಕಷ್ಟವು ಬಹುಬೇಗನೆ ವ್ಯವಸ್ಥೆಗೆ ಬರುವಂತಿದೆ. ಇನ್‌ಫ್ಲುಯಂಜಾ ವ್ಯಾಧಿಯು ಪುನಃ ಕಾಣಿಸಿಕೊಳ್ಳುವುದೆಂಬ ಭಯವು ದೈವವಶಾತ್ ತೊಲಗಿಹೋಗುವುದೆಂದು ನಮಗೆ ನಂಬಿಕೆ ಉಂಟು. ಯುದ್ಧವು ನಿಂತು ಕರಾರು ಆಗಿರುವುದರಿಂದ ಇನ್ನು ಮುಂದೆ ಕೈಗಾರಿಕೆಗಳೂ ವ್ಯಾಪಾರಗಳೂ ಪ್ರಬಲವಾಗುವವೆಂಬ ಭರವಸೆಯು ಕಂಡುಬರುತ್ತದೆ. ಈ ಶುಭಕಾಲದಲ್ಲಿ ಭ್ರಾತೃಭಾವದಮೇಲೂ ಪರಸ್ಪರಾಭ್ಯುದಯದಮೇಲೂ ದೃಷ್ಟಿಯಿಟ್ಟು ಸರಳಮನಸ್ಸಿನಿಂದ ಈ ಸಮಯವನ್ನು ಉಪಯೋಗಿಸಿಕೊಳ್ಳುವಪಕ್ಷಕ್ಕೆ ಚಿರಸ್ಥಾಯಿಯಾದ ಸಮಾಜೋನ್ನತಿಗೂ ಸಂಪದಭಿವೃದ್ಧಿಗೂ ಅಸ್ತಿಭಾರವನ್ನು ಹಾಕುವ ಅವಕಾಶವು ಇಂಡಿಯಾದೇಶದ ಇತರಭಾಗಗಳಲ್ಲಿರುವ ಜನರೊಂದಿಗೆ ನಮಗೂ ಉಂಟಾಗುವುದು. ಎಕ್ಸ್‌ಚೇಂಜ್ ದರವು ಆಕಸ್ಮಿಕವಾಗಿ ಹೆಚ್ಚಿದ್ದರಿಂದ ನಮ್ಮ ಸಂಸ್ಥಾನದಲ್ಲಿ ಭಂಗಾರದ ನಾಣ್ಯಗಳ ಹುಟ್ಟುವಳಿಯ ಬಾಬು ಬಹಳವಾಗಿ ಕಡಮೆಯಾಗಿರುವ ಪ್ರಯುಕ್ತ ಆಯವ್ಯಯದ ವಿಷಯದಲ್ಲಿ ಸ್ವಲ್ಪ ಚಿಂತೆಗೆ ಕಾರಣವಾಗಿರುತ್ತೆಂಬುದು ನಿಜ. ಆದರೆ ನಮ್ಮ ಸಂಸ್ಥಾನದ ಪ್ರಜೆಗಳು ಪರಸ್ಪರ ಹಿತೈಷಿಗಳಾಗಿಯೂ ದೇಶಾಭಿಮಾನಿಗಳಾಗಿಯೂ ಇರುವರೆಂದು ನಾವು ಚೆನ್ನಾಗಿ ಬಲ್ಲೆವಾದುದರಿಂದ ನಮ್ಮ ಸಂಸ್ಥಾನದ ಸ್ವಾಭಾವಿಕ ದ್ರವ್ಯೋತ್ಪತ್ತಿಯ ಸಾಧನಗಳೂ ಅದರ ವಿಷಯದಲ್ಲಿ ನಂಬಿಕೆಯೂ ಸಂಭವಿಸಬಹುದಾದ ಎಂಥ ಸ್ಥಿತಿಯಲ್ಲಿಯೂ ನಮ್ಮನ್ನು ಕಾಪಾಡಲು ಸಾಕಾಗುವುದೆಂದು ದೃಢವಾಗಿ ನಂಬುವಂತೆ ನಮಗೆ ಧೈರ್ಯ ಉಂಟು. ಮಹನೀಯರೇ! ರಾಜನೀತಿವಿಶಾರದರಾದ ಪಾಶ್ಚಾತ್ಯದೇಶೀಯ ಮಹನೀಯರೊಬ್ಬರು ತಮ್ಮ ದೇಶದ ಪ್ರಜಾಪ್ರತಿನಿಧಿಗಳಿಗೆ ಹೇಳಿರುವ ಮಾತುಗಳು ಈಗ ನಮಗೆ ತೋರುವ ಅಭಿಪ್ರಾಯಗಳನ್ನೇ ಸ್ವಲ್ಪಮಟ್ಟಿಗೆ ಸೂಚಿಸುವುವಾದ್ದರಿಂದ, ಅವರು ಹೇಳಿದ ಮಾತುಗಳನ್ನು ವ್ಯವಹರಿಸಿ ಈ ಉಪನ್ಯಾಸವನ್ನು ಪೂರೈಸುವೆವು. "ನಾವು ಮಾಡಬೇಕಾದ ಕೆಲಸವು ರಾಜತಂತ್ರ ವಿಷಯಕವಾದ ಕಾರ್ಯಮಾತ್ರವೇ ಅಲ್ಲ, ನಮ್ಮ ಯೋಗ್ಯತೆಯನ್ನು ಕೂಲಂಕಷವಾಗಿ ಪರೀಕ್ಷಿಸತಕ್ಕ ಕಾರ್ಯವಾಗಿದೆ ಎಂದರೆ ನಮ್ಮ ಕಾಲಸ್ಥಿತಿಯನ್ನೂ ನಮ್ಮ ಜನಗಳ ಆವಶ್ಯಕತೆಯನ್ನೂ ತಿಳಿದುಕೊಳ್ಳಲು ನಮಗೆ ಶಕ್ತಿ ಉಂಟೇ? ನಾವು ನಿಜವಾಗಿಯೂ ಅವರ ಮನೋಗತವನ್ನೇ ಹೊರಪಡಿಸಿ ತಿಳಿಸತಕ್ಕವರಾಗಿದ್ದೇವೆಯೆ? ನಮ್ಮ ಉತ್ಕೃಷ್ಟವಾದ ಕಾರ್ಯಮಾರ್ಗವನ್ನು ತಿಳಿಯುವುದಕ್ಕೆ ಬೇಕಾದ ಶುದ್ಧಾಂತಃಕರಣವೂ ಅದನ್ನು ಅನುಸರಿಸಲು ಬೇಕಾದ ಋಜುಬುದ್ಧಿಯೂ ನಮಗೆ ಇರುವುದೇ ಎಂದು ಪರೀಕ್ಷಿಸತಕ್ಕದ್ದೆಂಬುದನ್ನು ನಾವು ಬಲ್ಲೆವು. ಇದು ಕೇವಲ ಜಯಮಹೋತ್ಸವದ ದಿನವಲ್ಲ, ಆತ್ಮಸಮರ್ಪಣದ ದಿನವು. ಶ್ರದ್ಧಾಳುಗಳಾದ, ದೇಶವತ್ಸಲರಾದ ಮತ್ತು ಭವಿಷ್ಯಚ್ಚಕ್ಷುಗಳಾದ ಎಲ್ಲರನ್ನೂ ನನ್ನ ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುವೆನು. ಇವರುಗಳೆಲ್ಲಾ ನನಗೆ ಸರಿಯಾದ ಸಲಹೆಯನ್ನು ಕೊಟ್ಟು ಬೆಂಬಲವಾಗಿ ನಿಂತರೆ ಭಗವಂತನ ಕೃಪೆಯಿಂದ ಅವರ ಮನೋಗತವನ್ನು ನೆರವೇರಿಸದೇ ಇರಲಾರೆನು."

ಎಂ. ಕಾಂತರಾಜ ಅರಸ್,
ಮೈಸೂರು ಸಂಸ್ಥಾನದ ದಿವಾನ್‌ರವರು.

೧೯೧೯ ನೆಯ ಇಸವಿ ಅಕ್ಟೋಬರ್ ತಾ|| ೧೯ ರಿಂದ ೧೯೧೯ ನೇಯ ಅಕ್ಟೋಬರ್ ತಾ|| ೨೫ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೧ ನೆಯ ಸಿದ್ಧಾರ್ಥಿನಾಮ ಸಂವತ್ಸರದ ಆಶ್ವಯುಜ ಬ|| ಏಕಾದಶಿಯಿಂದ ಕಾರ್ತಿಕ ಶು|| ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
19	ಭಾನು	ಏಕಾ	40-11	ಮಖ	36-21	3
20	ಸೋಮ	ದ್ವಾದ	39-35	ಪುಬ್ಬ	37-16	4
21	[1] ಮಂಗಳ	ತ್ರಯೋ	40-21	ಉತ್ತ	39-29	5
22	ಬುಧ	ಚತು	42-19	ಹಸ್ತ	42-52	6
23	[2] ಗುರು	ಅಮಾ	45-28	ಚಿತ್ತ	47-24	7
24	[3] ಶುಕ್ರ	ಪಾಡ್ಯ	49-42	ಸ್ವಾತಿ	52-56	8
25	ಶನಿ	ಬಿದಿಗೆ	54-40	ವಿಶಾ	59-10	9

(1) ಪ್ರದೋಷ, ನರಕಚತುರ್ದಶಿ ಪ್ರಯುಕ್ತ ನೀರುತುಂಬೋಹಬ್ಬ. (2) ಸರ್ವತ್ರ ಅಮಾವಾಸ್ಯೆ, ಕೇದಾರೇಶ್ವರವ್ರತಂ. (3) ದೀಪಾವಳಿ, ಬಲೀಂದ್ರಪೂಜಾ, ಕಾಮಧೇನುಪೂಜಾ, ಚಂದ್ರದೀಪದಾನಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಧರಿಣೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಹಾರಾ ಪಶ್ಯನ್ನಪತ್ರ ಮನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ||
ಶೀವಶೀತಯಶಃಪ್ರತಾಪವಿಪುಲಂ ಸದ್ವೃತ್ತವಾರಾಕುಲಂ | ಪ್ರೇಮಂಬಿಭ್ರತಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೬-೦] [ಅಂಚೆವೆಚ್ಚ ಸೇರಿ ೨-೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೯ ನೆಯ ಇಸವಿ ಅಕ್ಟೋಬರ್ ತಾರೀಖು ೨೬ ನೆಯ ಭಾನುವಾರ. (ಸಂಚಿಕೆ ೪೩

MYSORE GOVERNMENT ADVERTISEMENTS.

DEPARTMENT OF AGRICULTURE, MYSORE STATE.

NOTICE.

The Agricultural School on the Hebbal Farm has been established for imparting instruction in the theory and practice of Agriculture to young men who hold lands in Mysore. Tuition and lodging are free but boarding has to be paid for. This will on an average amount to Rs. 15 to 18/- per student per month. The students will have to reside on the Farm where suitable hostel accommodation has been arranged.

The School provides a two-year course and usually opens in the beginning of July.

Before admission is given the intending students have to undergo an entrance examination the date of which will be announced in the Mysore Gazette and in Local newspapers, to test if their knowledge in English and Arithmetic is sufficient to enable them to follow the lectures given in the School with profit.

Two Government scholarships of Rs. 15/- each are granted every year to the best students of the first and second year classes. Besides these, other scholarships are granted by various Taluk and District Committees of the State.

Practical instruction in selected agricultural subjects is periodically given in the Government Farms to sons of ryots by short courses arranged from time to time. These courses will be announced in the Mysore Gazette and local news papers in good time to enable the intending visitors to attend. Government have ordered the grant of the following concessions to those attending these short courses.—

1. Government will bear half the expense of the railway fare to and from the Farm. Of the remainder a portion not exceeding quarter of the total may be met from the Taluk Progress Committee Funds, the balance to be met by the raiyats or from private subscription.
2. Accommodation will be provided free of charge to the raiyats, who are expected to make their own arrangements for food, provided that in the case of persons attending the Marthus Farm those who have received no financial help to meet the cost of travelling under clause (1) will be given their boarding charges in the same proportions from the respective sources mentioned in that clause.
3. During the time the raiyats and labourers work on the farm, they will be paid at the prevailing local rates for labour.
4. An allowance of one anna per mile will be paid for road journeys made by raiyats attending the short course, who are really poor or who are recommended by the Taluk Progress Committees or some responsible person or authority.

Intimation from those intending to attend should be sent to the Managers of the respective farms, at least one weak in advance.

H. V. KRISHNAIYA,
Offg. Director of Agriculture.

12

ಇನ್‌ಫ್ಲುಯನ್‌ಜಾ, ಕಾಲರಾ. ಪ್ಲೇಗು ಇವುಗಳಿಗೆ ಖಾತ್ರಿಯಾದುದ್ದು.

ಸ್ವಚ್ಛವಾದ ಯುಕಲಿಪ್ಟಸ್ ಆಯಿಲ್.

(ನೀಲಗಿರಿ ಎಣ್ಣೆ) 14

ತಲೆನೋವು, ಕಣ್ಣುಉರಿ, ಸಕಲ ವಿಧದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ವಾಂತಿಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧದ ಬಿಳುಪು ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು; ಸಕಲ ವಿಧದ ಛಳಿಜ್ವರ (ಮಲೇರಿಯಾ), ಹೆಂಗಸರ ಹೊಟ್ಟೆನೋವು, ಕತ್ತಿ. ಕಲ್ಲಿನಿಂದುಂಟಾದ ಘಾಯ, ಉಳುಕು, ಮೊದಲಾದ ಸರ್ವವಿಧದ ರೋಗಗಳಿಗೆ ದಿವ್ಯೌಷಧಿ.

ಬಾಟ್ಲಿ ೧ಕ್ಕೆ ೦—೪—೦ ವಿ. ಪಿ ಚಾರ್ಜು ೦—೪—೦.
ಡಜನ್ ೧ (ಬಾಟ್ಲಿಗಳು ೧೨) ಕ್ಕೆ ತರೂ. ೨—೮—೦. ವಿ. ಪಿ. ಚಾರ್ಜು ರೂ. ೦—೧೨—೦.
೨೪ ಔನ್ಸು ಬಾಟ್ಲು ೧ಕ್ಕೆ ರೂ. ೨-೮-೦ ವಿ.ಪಿ. ಚಾರ್ಜು ೧ ರೂ.

ವಿಳಾಸ—ಟಿ. ಸಿ. ನಾಗಲಿಂಗಪ್ಪಾ ಮತ್ತು ಕಂಪೆನಿ,
೨/೪ ಸಿಂಗಣ್ಣನ ಬೀದಿ, ಪಾರ್ಕ್‌ಟೌನ್ ಮದರಾಸು

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
2. ಶ್ರೀನಿವಾಸತೈಲ—ಪ್ಲೇಗಿನಗೆಡ್ಡೆ ಕರಗುತ್ತದೆ. ಸಂದುಗಳ ನೋವು ಸೀದಲು ಹೋಗುತ್ತದೆ. ಸೀಸೆಗೆ 8 ಆಣೆ. 5 ಕ್ಕೆ 1 ಇನಾಂ.
3. ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1 ರೂ. 5 ಕ್ಕೆ 1 ಇನಾಂ.
4. ಬಾಲಸುಬೋಧಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು—ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕೆಮ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ, ಚಳಿಜ್ವರ, ದುರ್ಬಲ ಹವಾ ವ್ಯತ್ಯಾಸದಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಡಿಸ್ನು ಸೀಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೀಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0.

ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

42

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ಪರತ.) 45

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ, ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ. ಟಪಾಲುಖರ್ಚು ಬೇರೆ.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||

"ದಲ್ಲಾಲಿ ಅಂಗಡಿ ಸೊಲ್ಲಾಪುರ"

ನಮ್ಮಲ್ಲಿ ಅರಿಶಿನ, ಅಡಿಕೆ, ತಂಬಾಕ, ಶಿಗೇಕಾಯಿ, ಕುಸ್ಬಿ, ಕೊಬರಿ, ಎಣ್ಣೆ, ಬೆಲ್ಲ, ಸಕ್ಕರೆ, ಅಕ್ಕಿ. ಚಹಾ, ಕಾಜು, ಆಲೂ, ಶೇಂಗಡ್ಡೆ, ಮೆಣಸಿನಕಾಯಿ, ತೆಂಗು ಮುಂತಾದ ಯಾವತ್ತು ಜಿನಸು ಕಮೀಷನ್ನಿನ ಮೇಲೆ ಕಾಳಜಿಯಿಂದ ಖರೀದಿಮಾಡಿ ಕೊಡುತ್ತೇವೆ. ಒಂದುವೇಳೆ ಕೆಲಸ ಕೊಟ್ಟು ಅನುಭವ ತೆಗೆದುಕೊಳ್ಳಬೇಕು. ಸೂಚನೆ—ಯಾವತ್ತು ಮಿಷಿನರಿ ಸಾಮಾನುಗಳು ಕಮೀಷನ್ನಿನ ಮೇಲೆ ಸೇಯಿವಾರ ಮುಂಬಯಿಯಲ್ಲಿ ಖರೀದಿಮಾಡಿ ಕೊಡುತ್ತೇವೆ.

ನಮ್ಮ ವಿಳಾಸ—ಬಳವಂತರಾವ್, ಕೇಶವ, ಜಾಧವ,
3 ಎಕ್ಟೋರಿಯಾ ಮಾರ್ಕೆಟ್ ರೋಡು, ಸೊಲ್ಲಾಪುರ.

ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

1918-19 ನೇ ಸಾಲ್ ಸಿವಿಲ್-ಮಿಸ್ ನಂ. 70.

ಅರ್ಜಿದಾರ್—ರುದ್ರಪ್ಪ.

ಅಪೋನೆಂಟ್‌ಗಳು — ಗೌರಮ್ಮ ಮತ್ತು ಇತರ ಆರುಜನಗಳು.

ಹಾಸನದ ವಾಸಸ್ಥ ಬಸೆಟ್ಟಪ್ಪನವರ ಮಕ್ಕಳು ಮೈಸೂರು ಶಿವನಂಜಪ್ಪನವರ ಆಸ್ತಿ ವಿಚಾರದಲ್ಲಿ—

ವಿಕ್ರಯದ ಬಾಬ್ತು ಇಸ್ತಿಹಾರ್.

1. ಮೈಸೂರು ಡಿಸ್ಟ್ರಿಕ್ಟು ಜಡ್ಜರವರು 1911 ನೇ ಇಸವಿ 5 ನೇ ರೆಗ್ಯುಲೇಷನ್ ಅಂದರೆ ಗಾರ್ಡಿಯನ್‌ಗಳ ಮತ್ತು ವಾರ್ಡ್‌ಗಳ ರೆಗ್ಯುಲೇಷನ್ ಅನುಸರಿಸಿ 16-9-1919 ನೆ ಮರ್ಕುಂನಲ್ಲಿ ಒಬ್ಬ ರಿಸೀವರನ್ನು ನೋಕರೂರು ಮಾಡಿರುವುದಾಗಿಯೂ ಮತ್ತು ಸದರಿ ಮೈನರಿಗೆ ಸಂಬಂಧಪಟ್ಟ ಚರಸ್ವತ್ತುಗಳನ್ನು ಅಂದರೆ-ವಜ್ರ, ಕೆಂಪು ಮತ್ತು ಇತರ ರತ್ನಗಳಿಂದ ಕೆತ್ತಲ್ಪಟ್ಟದ್ದೇ ಮೊದಲಾದ ಬಹಳ ಬೆಲೆಯುಳ್ಳ ಚಿನ್ನ ಮತ್ತು ಬೆಳ್ಳಿ ಒಡವೆಗಳನ್ನು ಮತ್ತು ಮುತ್ತು, ಹವಳ ಮೊದಲಾದವುಗಳಿಂದೊಡಗೂಡಿದ ಆಭರಣಗಳು ವಗೈರೆ ಮಾಲುಗಳು ಮತ್ತು ಸಾಧಾರಣವಾಗಿ ಹಿಂದೂ ಮತ್ತು ಮಹಮ್ಮದೀಯರ ಕುಟುಂಬಗಳಲ್ಲಿ ಧರಿಸುವುದಕ್ಕೆ ಮತ್ತು ಪೂಜೆಗೆ ಉಪಯೋಗಿಸಲ್ಪಡುವ ಇತರ ಚರಸ್ವತ್ತುಗಳನ್ನು ವಿಕ್ರಯಮಾಡಲು ಈ ರಿಸೀವರಿಗೆ ಅಪ್ಪಣೆಯನ್ನು ಕೊಟ್ಟಿರುವುದಾಗಿ ಹುಕುಂ ಮಾಡಿರುತ್ತಾರೆಂದು ಇದರಿಂದ ನೋಟೀಸು ಕೊಡಲಾಗಿದೆ.

2. ಸದರಿ ಚರಸ್ವತ್ತುಗಳು 1919 ನೆ ಇಸವಿ ನವೆಂಬರು 14 ನೇ ತಾರೀಖು ಶುಕ್ರವಾರ ಮತ್ತು ಮರುದಿನಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನ ಬಳಿಯಲ್ಲಿ ಪ್ರತಿ ದಿನವೂ ದಿವಿ 11 ಘಂಟೆಗೆ ಉಪಕ್ರಮವಾಗಿ ಸಾಯಂಕಾಲ 5 ಘಂಟೆವರಿವಿಗೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವುದು.

3, ಈ ಸೊತ್ತುಗಳನ್ನು ಒಂದು ಐಟಂ ನಂತರ ಮತ್ತೊಂದು ಐಟಂ ಅಥವಾ ರಿಸೀವರಿಗೆ ಅವಶ್ಯಕ ತೋರಿಬರುವ ರೀತಿ ಲಾಟುಗಳ ಪ್ರಕಾರ ಹರಾಜಿಗೆ ಇಡಲ್ಪಡುವುದು. ಮತ್ತು ಅತ್ಯಧಿಕ ಮೊಬಲಗಿಗೆ ದರಖಾಸ್ತು ಮಾಡುವವನನ್ನು ಅಂಥಾ ಐಟಂ ಅಥವಾ ಲಾಟುಗಳ ಖರೀದಿದಾರನಾಗಿ ಪ್ರಕಟಿಸಲ್ಪಡುತ್ತೆ, ಆದರೆ ಆತನು ಕೊಡುತ್ತೇನೆಂಬ ಕ್ರಯವು ಅಂಗೀಕರಿಸಲಿಕ್ಕೆ ಯುಕ್ತವಾಗದಷ್ಟು ಕಡಮೆಯಾಗಿದೆ ಎಂದು ಸ್ಪಷ್ಟವಾಗಿ ತೋರಿಬಂದರೆ ಅತ್ಯಧಿಕ ದರಖಾಸ್ತನ್ನಾದರೂ ಅಂಗೀಕರಿಸದೆ ನಿರಾಕರಿಸುವುದು ಸಂಪೂರ್ಣವಾಗಿ ಕೋರ್ಟಿನ ಮುನಾಸಬ್ ಮೇರಿಗೆ ಇರುತ್ತೆ.

4. ಎಲ್ಲಾ ಜನರೂ ಖುದ್ದಾಗಿ ಅಥವಾ ಕ್ರಮವಾಗಿ ಅಧಿಕಾರಗೊಳಿಸಲ್ಪಟ್ಟ ಮುತಾಲೀಕರ ಮೂಲಕ ದರಖಾಸ್ತು ಮಾಡಬಹುದು, ಆದರೆ ಅಂಥಾ ಮುತಾಲೀಕರು ತಮ್ಮ ಅಧಿಕಾರ ಪತ್ರಗಳನ್ನು ದರಖಾಸ್ತು ಮಾಡುವುದಕ್ಕೆ ಮುಂಚೆ ರಿಸೀವರಲ್ಲಿ ದಾಖಲ್ಮಾಡಬೇಕು.

5. ಪ್ರತಿ ಐಟಂ ಅಥವಾ ಲಾಟಿನ ಕ್ರಯವನ್ನು ಪೂರ್ತಿಯಾಗಿ ವಿಕ್ರಯದ ಕಾಲದಲ್ಲಾದರೂ ರಿಸೀವರು ಆಜ್ಞಾಪಿಸುವ ಮೇರೆಗೆ ತದನಂತರ ಯಾವ ಸಮೀಪದ ಕಾಲದಲ್ಲಾದರೂ ಪಾವತಿ ಮಾಡಬೇಕು. ಮತ್ತು ಪಾವತಿ ಮಾಡಲಿಕ್ಕೆ ತಪ್ಪಿದರೆ ಆ ಸೊತ್ತನ್ನು ಕೂಡಲೆ ಇನ್ನೊಂದುಸಲ ಹರಾಜು ಹಾಕಿ ಪುನಃ ವಿಕ್ರಯಿಸುತ್ತೆ. ಪುನರ್ ವಿಕ್ರಯದಲ್ಲಿ ಮೊದಲಿನ ಖರೀದಿಗಿಂತ ಏನಾದರೂ ಕಡಮೆ ಬಿದ್ದರೆ ಆ ಕಡಮೆ ಹಣವನ್ನು ಕ್ರಯದ ಮೊಬಲಗು ಸಂದಾಯಮಾಡದೆ ತಪ್ಪಿದವನಿಂದ ವಸೂಲ್ಮಾಡಲ್ಪಡುತ್ತೆ. ಮತ್ತು ಆತನಿಗೆ ಆ ಸೊತ್ತಿಗಾಗಿಯಾಗಲಿ ಅಥವಾ ಹಾಗೆ ಮಾಡಿದ್ದರಿಂದ ಬಂದ ಹಣದಲ್ಲಿಯಾಗಲಿ ಎಷ್ಟುಮಾತ್ರಕ್ಕಾಗಲಿ ಎಷ್ಟುಮಾತ್ರವೂ ಹಕ್ಕು ಇರುವುದಿಲ್ಲ.

6. ಸದರಿ ಮೈನರುನ ಸದರಿ ಸೊತ್ತುಗಳಿಗೆ ಸಂಬಂಧಪಟ್ಟ ಏನಾದರೂ ಹಕ್ಕುಬಾಧ್ಯತೆಗಳು ಅಥವಾ ಜವಾಬ್ದಾರಿಗಳು ಇದ್ದರೆ ಅವುಗಳನ್ನು ಡಿಸ್ಟ್ರಿಕ್ಟು ಜಡ್ಜರವರಲ್ಲಿ ಹರಾಜು ತಾರೀಖಿಗೆ ೨ ವಾರಕ್ಕಿಂತಲಾದರೂ ಮುಂಚೆ ದಾಖಲ್ಮಾಡಬೇಕು.

ಷರಾ:—ಈ ಸೊತ್ತುಗಳು 20,000 ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಮೆ ಇಲ್ಲದ ಬೆಲೆಯುಳ್ಳವುಗಳಾಗಿ ತೋರುತ್ತವೆ.

ಹಾಸನ, ಎಚ್. ಮಹಲಿಂಗಣ್ಣ,
ತಾ|| 16-10-1919. ರಿಸೀವರ್.